ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 18

NAVAYUGA

7—1—1971

ಕನ್ನಡ ಸಾಹಿತ್ಯ ಸಮ್ಮೇಳನ:

ದೇಶೀಯತೆಗೆ ಶರಣಾಗಬೇಕು

ಸಾಹಿತ್ಯ ಪರಿಷತ್ತಿಗೆ ಭವ್ಯವಾದ ಕಟ್ಟಡಗಳಿಲ್ಲ. ಪ್ರಶಸ್ತವಾದ ಗ್ರಂಥಾಲಯವಿಲ್ಲ. ಲಕ್ಷಗಟ್ಟಲೆ ನಿಧಿಯಿಲ್ಲ. ಸಿಬಂದಿ ವರ್ಗ ದೊಡ್ಡದಿಲ್ಲ. ಒಟ್ಟಿನಲ್ಲಿ ಅದು ಮೇಲುನೋಟಕ್ಕೆ ಕಾಣುವಂಥದಲ್ಲ.

ಆದರೆ, ಅದರ ಇತಿಹಾಸದ ಕಡೆಗೆ ಕಣ್ಣು ಹಾಯಿಸಿದಾಗ, ಅದರ ಅಭ್ಯುದಯಕ್ಕಾಗಿ ದುಡಿದವರ ಹೆಸರುಗಳನ್ನು ಸ್ಮರಿಸಿಕೊಂಡಾಗ, ಪರಿಷತ್ತೆಂದರೆ ಕಲ್ಲು—ಇಟ್ಟಿಗೆ—ಗಾರೆಗಳ ಬರಿಯ ಕಟ್ಟಡವಲ್ಲ; ಕನ್ನಡ ನಾಡಿನ ಏಕೀಕರಣವನ್ನು ಸಾಧಿಸಿ, ಕನ್ನಡ ಜನಪದವನ್ನೊಂದು ಮಾಡಿ ಕನ್ನಡ ಸಂಸ್ಕೃತಿಯ ಮಹಾಜ್ಯೋತಿಯಾಗಿ ಸ್ನೇಹಮಂಟಪವಾಗಿ ಕನ್ನಡವಿರುವೆಡೆಯಲ್ಲೆಲ್ಲ ರಾರಾಜಿಸುವ ಮಹಾಶಕ್ತಿಯೆಂದು ವೇದ್ಯವಾಗದಿರದು.

○ ○ ○

ಸಾಹಿತ್ಯ ಪರಿಷತ್ತು ಆಗ ಮತ್ತು ಈಗ ತನ್ನ ಮುಂದಿರಿಸಿಕೊಂಡಿರುವ ಧ್ಯೇಯೋದ್ದೇಶಗಳು ಹಲವು. ಅವುಗಳನ್ನೆಲ್ಲ ತಾವೇ ಏಕಾಕಿಯಾಗಿ ಕಾರ್ಯಗತಗೊಳಿಸಬೇಕೆಂಬ ದೃಷ್ಟಿಯಿರಲಾರದು. ನಾಡು ನುಡಿಗಳ ಏಳ್ಗೆಗಾಗಿ ದುಡಿಯುತ್ತಿರುವ ನಾನಾ ಸಂಘ—ಸಂಸ್ಥೆಗಳಿಗೆ, ಮಹಾವಿದ್ಯಾಲಯಗಳಿಗೆ ಪೂರಕ ಶಕ್ತಿಯಾಗಿ, ಸ್ಫೂರ್ತಿ ಶಕ್ತಿಯಾಗಿ ಆ ಮೂಲಕ ತನ್ನ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳುವ ಪೋಷಕಶಕ್ತಿಯಾಗಿ ನೆರವಾಗಬೇಕಾಗಿದೆ. ಪರಿಷತ್ತು ಈ ವರೆಗೆ ಮಾಡಿರುವ ಕೆಲಸ ಗಾತ್ರದ ದೃಷ್ಟಿಯಿಂದ ಕಡಿಮೆಯಾದರೂ ಕೂಡಿಸಿರುವ ಕೆಲಸ ಅಗಾಧ.

ಕನ್ನಡ ಸಾಹಿತ್ಯ

ಕನ್ನಡ ಭಾಷಾ ಸಾಹಿತ್ಯದಂತೆ ಪ್ರಬಲವೂ ವೈವಿಧ್ಯಮಯವೂ ಸಂಪನ್ನವೂ ಆದ ಸುದೀರ್ಘ ಇತಿಹಾಸವುಳ್ಳ ಭಾಷಾಸಾಹಿತ್ಯಗಳು ಜಗತ್ತಿನಲ್ಲೇ ಅತಿ ವಿರಳ. ಕನ್ನಡ ಜನದ ಆಶೆ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತ, ಜನ ಜೀವನವನ್ನು ರೂಪಿಸುತ್ತ ಕನ್ನಡ ಸಾಹಿತ್ಯ ಮಹಾಪೂರವಾಗಿ ಹರಿದು ಬಂದಿದೆ; ಕನ್ನಡ ಭಾಷೆ ಶ್ರೀಮಂತವಾಗಿ ವಿಕಾಸಗೊಂಡಿದೆ. ಸ್ವಾತಂತ್ರ್ಯ ಚಳವಳಿಯ ಫಲವಾಗಿ, ಪಾಶ್ಚಾತ್ಯ ಸಂಪರ್ಕದ ಪರಿಣಾಮವಾಗಿ ಕನ್ನಡ ಸಾಹಿತ್ಯ ವೃಕ್ಷ ಶಾಖೋಪಶಾಖೆಗಳಾಗಿ ಒಡೆದು ಫಲಪುಷ್ಪಗಳಿಂದ ಸಮೃದ್ಧವಾಗಿದೆ. ಬಹುಶಃ ಒಂದೆರಡು ಭಾಷೆಗಳ ಸಾಹಿತ್ಯವನ್ನು ಬಿಟ್ಟರೆ ಗಾತ್ರ ವಿಸ್ತಾರ ವೈವಿಧ್ಯ ಶ್ರೀಮಂತಿಕೆಗಳಲ್ಲಿ ಪ್ರಪಂಚದ ಯಾವ ಭಾಷೆಯ ಸಾಹಿತ್ಯದೊಡನೆಯಾದರೂ ಹೆಗಲೆಣೆಯಾಗಿ ಇದು ನಿಲ್ಲಬಲ್ಲುದೆಂದು ಧೈರ್ಯವಾಗಿ ಹೇಳಬಹುದು.

ಗುಂಪುಗಾರಿ ಸಾಹಿತ್ಯ

....ಹಾನಿಕರವಾದ ಗುಂಪುಗಾರಿಕೆ ನಮ್ಮ ಸಾಹಿತ್ಯ ಕ್ಷೇತ್ರಕ್ಕೆ ಹಬ್ಬುತ್ತಿರುವುದು ಯಾವ ದೃಷ್ಟಿಯಿಂದಲೂ ಶ್ರೇಯಸ್ಕರವಲ್ಲ. ಹಳೆಯದನ್ನೆಲ್ಲ ಅಳಿಸಿ ಹಿರಿಯರ ಬುನಾದಿಯ ಮೇಲೆ ಹೊಸದನ್ನು ಬೆಳೆಸುವ, ಎಳೆಯರನ್ನು ನೆಲೆಗೊಳಿಸುವ ಧ್ರುವಮತ ಬುದ್ಧಿ ತ್ಯಾಜ್ಯ. ಸಾಹಿತ್ಯಕೃತಿ ಸ್ವಸಾಮರ್ಥ್ಯದ ಮೇಲೆ ನಿಲ್ಲಬೇಕೇ ಹೊರತು ಗುಂಪುಗಾರಿಕೆಯ ಆಧಾರದ ಮೇಲೆ ಹಬ್ಬುವುದು ಸಾಧ್ಯವಿಲ್ಲ. ಮತ್ತೊಬ್ಬನ ಗೋರಿಯ ಮೇಲೆ ತನ್ನ ಕೀರ್ತಿಲತೆಯನ್ನು ಹಬ್ಬಿಸ ಯತ್ನಿಸುವ ಸಾಹಿತಿ ಎಗ್ಗನೇ ಸರಿ.

ರಮ್ಯ—ನವ್ಯ

ಇಂದು ರಮ್ಯ—ನವ್ಯಗಳ ನಡುವೆ ಅಗ್ಗದ ಮುನಿಸು ನಡೆದಿದೆ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ರಮ್ಯ ಪಂಥ ಸುವರ್ಣ ಯುಗವನ್ನು ನಿರ್ಮಿಸಿತೆಂಬ, ಅದರಿಂದ ಕನ್ನಡದ ಶ್ರೀಮಂತಿಕೆ ಮುಗಿಲು ಮುಟ್ಟಿತೆಂಬ, ಅದು ಕನ್ನಡದ ಜನದ ಮನಸ್ಸನ್ನು ಸೂರೆಗೊಂಡಿತೆಂಬ ವಾಸ್ತವ ಸಂಗತಿಯನ್ನು ಯಾರೂ ಮರೆಯುವಂತಿಲ್ಲ..... ಆ ಕಾಲಕ್ಕೆ ಅದು ಕ್ರಾಂತಿ ಪಂಥವೇ ಆಗಿತ್ತು. ಅದು ತನ್ನ ಕರ್ತವ್ಯವನ್ನು ಸಂಪೂರ್ಣವಾಗಿ ಪೂರೈಸಿತು. ಕಾಲ ಬದಲಾವಣೆಗೊಂಡಂತೆಲ್ಲ ರಮ್ಯಕವಿತೆ ಸವಕಲಾದದ್ದನ್ನು ಗಮನಿಸಬಹುದು. ಎಲ್ಲ ಸಾಹಿತ್ಯ ಪಂಥಗಳ ಗುರಿ ಸೌಂದರ್ಯೋಪಾಸನೆ. ರಮ್ಯವಾಗಲಿ ನವ್ಯವಾಗಲಿ ಸೌಂದರ್ಯಾಂಶವಿಲ್ಲದ ಕಾವ್ಯ ತ್ಯಾಜ್ಯವಾಗುತ್ತದೆ. ರಸಾಸ್ವಾದನೆಯೇ ಎಲ್ಲ ಸಾಹಿತ್ಯದ ಗುರಿಯೆನ್ನುವುದಾದರೆ, ಘರ್ಷಣೆ ಅನಾವಶ್ಯಕ. ಆದ್ದರಿಂದ ರಮ್ಯ—ನವ್ಯಗಳ ಭಿನ್ನತೆ ಬಾಹ್ಯ ಶರೀರಕ್ಕೆ ಸಂಬಂಧಿಸಿದ್ದೇ ಹೊರತು ಅಂತರಂಗಕ್ಕಲ್ಲ.

ನವ್ಯ ಪಂಥ

ಪರಂಪರೆಯ ನೆಲಗಟ್ಟಿಲ್ಲದ ಪ್ರಗತಿ ಕುಸಿದು ಬೀಳುತ್ತದೆ. ನವ್ಯ ಮಾರ್ಗದ ಪ್ರವರ್ತಕರಾದ ಗೋಕಾಕರು ಹೇಳಿದಂತೆ —"ಕಾವ್ಯವು ನವ್ಯವಾಗುವುದು ಸ್ಪರ್ಧೆಗೆಂದಲ್ಲ; ಪೂರಕವೆಂದು. ಬರಿಯ ಶೂನ್ಯತಾವಾದವೇ ನವ್ಯತೆಯಾಗಲಿ, ಇಲ್ಲವೆ ಇಂದ್ರಿಯಕ ಜೀವನದ ವಿಕೃತಿಯನ್ನೇ ತೋರಿಸುವ ಚಿತ್ರಸೃಷ್ಟಿ ನೂತನ ಮಾರ್ಗವೆಂದಾಗಲೀ ನಾವು ತಿಳಿಯದಿರೋಣ. ಒಂದು ಕಾವ್ಯ ಮಾರ್ಗದ ನವ್ಯತೆ ಅದರ ವಿಶಾಲ ದರ್ಶನದಲ್ಲಿದೆ; ವಿಕೃತಿ ಪ್ರದರ್ಶನದಲ್ಲಲ್ಲ."

ನವ್ಯತೆ ಯಾರೋ ಕೆಲವು ಕವಿಗಳ ಸ್ವತ್ತಲ್ಲ. ದುರ್ಬೋಧತೆ ಅಥವಾ ದುರ್ಜ್ಞೇಯತೆ ಅದರ ಪರ್ಯಾಯ ನಾಮವೂ ಅಲ್ಲ. ಅತಿ ಸ್ಪಷ್ಟತೆ ಅಥವಾ ಅತಿ ಸ್ಫುಟತ್ವ ಹೇಗೆ ಅಗ್ರಾಹ್ಯವೋ ಹಾಗೆಯೇ ಅಸ್ಪಷ್ಟತೆ ಮತ್ತು ಅಸ್ಫುಟತ್ವಗಳೂ ಅಗ್ರಾಹ್ಯ.

ದೇಶೀಯತೆಗೆ ಶರಣು

....ಪದ್ಯ ಗದ್ಯಗಳ ನಡುವಣ ಕಮರಿಯನ್ನು (ನವ್ಯ) ಈ ಪಂಥ ಕಿರಿದುಗೊಳಿಸಿದ್ದು ದೊಡ್ಡ ಸಾಧನೆ. ಪದ್ಯದ ಭಾಷೆಯನ್ನು ಆಡುಮಾತಿನ ಹತ್ತಿರಕ್ಕೆ ತಂದದ್ದು ಅದರ ಮತ್ತೊಂದು ಮಹಾಸಾಧನೆ.

ಹಳೆಯ ತಲೆಮಾರಿನ ಕವಿಗಳೂ ನವ್ಯತೆಯ ಧಾಟಿಯಲ್ಲಿ ಕವನಗಳನ್ನು ರಚಿಸಿರುವುದು ಗಮನಾರ್ಹ ವಿಷಯ. ವಾಸ್ತವತೆ, ಸಹಜತೆ, ಆತ್ಮಸ್ತವತೆ, ಪ್ರತೀಕತೆ, ಪ್ರತಿಮಾವಾದ ಮೊದಲಾದ ಪಾಶ್ಚಾತ್ಯ ವಾದಗಳು ನಮ್ಮ ಕಡೆಗೂ ಹರಿದುಬರುತ್ತಿವೆ. ಅವು ಭಾರತೀಯ ಧ್ವನಿಯಾಗಿ ಪರಿವರ್ತನೆಗೊಂಡು ಬರಬೇಕು. ಭಾರತೀಯತ್ವವನ್ನೇ ಅಲ್ಲಗಳೆಯುವಂಥ ವಾದ ಎಷ್ಟೇ ಉತ್ತಮವಾದುದಾಗಿರಲಿ, ಶ್ರೇಯಸ್ಕರವಲ್ಲ. ವಿದೇಶೀಯತೆ ದೇಶೀಯತೆಗೆ ಶರಣಾಗಿ ಬಂದಾಗ ಮಾತ್ರ ಅದು ಪುರಸ್ಕಾರ ಯೋಗ್ಯವಾಗುತ್ತದೆ. ಯಾವ ವಾದವೇ ಬರಲಿ, ಯಾವ ಪಂಥವೇ ಇರಲಿ, ಅದು ಜನಾಂಗದ ಜಾಯಮಾನಕ್ಕನುಗುಣವಾಗಿರಬೇಕು; ಅದರಲ್ಲಿ ನೆಲದ ಕಂಪು ಎರಚುತ್ತಿರಬೇಕು.

ಅಸ್ಪಷ್ಟತೆ

ಅಸ್ಪಷ್ಟತೆಯು ಕಾವ್ಯದ ಒಂದು ಗುಣ ನಿಜ. ಆದರೆ ಅದಕ್ಕೆ ಮಿತಿಯೊಂದಿರಬೇಕು. ಕವಿಯ ಹೃದಯದಲ್ಲೆದ್ದ ಭಾವವೀಚಿ ಸಹೃದಯನ ಹೃದಯದಲ್ಲಿ ತನ್ಮಯವಾದಾಗ ಮಾತ್ರ ಅದು ಕಾವ್ಯವಾಗುತ್ತದೆ, ಕವಿಯೊಬ್ಬನಿಗೆ ಮಾತ್ರ ಅರ್ಥವಾಗುವ ಮಾತು ಒಗಟಾಗುತ್ತದೆ; ಜಡ ಗಿಳಿವಚನವಾಗುತ್ತದೆ. ಎಷ್ಟು ಪ್ರಯತ್ನಿಸಿದರೂ ಅವುಗಳ ಅರ್ಥ ನಿಗೂಢವಾಗಿಯೇ ಉಳಿಯುತ್ತದೆ. ಅನೇಕ ಹೃದಯಗಳನ್ನು ಅಪ್ಪಿಕೊಳ್ಳದ ಕಾವ್ಯ ಸಾರ್ಥಕ ಕಾವ್ಯವಾಗುವುದಿಲ್ಲ.

ಗದ್ಯದ ಹಿರಿಮೆ

ಹಿಂದಿನಂತೆ ಇಂದೂ ಗದ್ಯ ಕವಿಗಳಿಗೆ ನಿಕಷಪ್ರಾಯವಾಗಿದೆ. ಪದ್ಯವು ಗದ್ಯಕ್ಕೆ ತನ್ನ ಸ್ಥಾನವನ್ನು ಬಿಟ್ಟುಕೊಡಲೇಬೇಕು. ಮಹಾಕಾವ್ಯ ಮಹಾಕಾದಂಬರಿಗೆ, ಭಾವಗೀತೆ ಸಣ್ಣ ಕತೆಗೆ ಪದ್ಯನಾಟಕ ಗದ್ಯನಾಟಕಕ್ಕೆ ಜಾಗ ಬಿಟ್ಟುಕೊಟ್ಟದ್ದನ್ನು ಎಲ್ಲ ಭಾಷೆಗಳಲ್ಲೂ ಕಾಣಬಹುದು. ಶ್ರೀಸಾಮಾನ್ಯನಿಗೆ ಆಧುನಿಕ ಜಗತ್ತನ್ನು ಪರಿಚಯಿಸಿಕೊಡುವ ಪರಮ ಶಕ್ತಿಯೇ ಗದ್ಯ. ವಿಶ್ವದ ಹಲವಾರು ಕಡೆಗಳಿಂದ ದಿನದಿನವೂ ಅಲೆ ಅಲೆಯಾಗಿ ಅಲೆದು ಬರುತ್ತಿರುವ ಹೊಸ ಭಾವನೆಗಳಿಗೆ, ಕಲ್ಪನೆಗಳಿಗೆ, ಆಲೋಚನೆಗಳಿಗೆ, ವಿಚಾರಧಾರೆಗೆ ರೂಪ ನೀಡುವ ಕರ್ತವ್ಯ ಗದ್ಯದ್ದು. ಪದ್ಯಕ್ಕಿಂತ ಗದ್ಯ ಹೆಚ್ಚು ವ್ಯಾಪಕವಾಗಬೇಕಾಗಿದೆ; ಶೀಘ್ರಗಾಮಿಯಾಗಬೇಕಾಗಿದೆ; ದಿನದಿನವೂ ಹೊಸತಾಗಬೇಕಾಗಿದೆ; ಸರ್ವತ್ರ ಮೆರೆದಾಡಬೇಕಾಗಿದೆ; ಆಧುನಿಕ ಯುಗದ ಪ್ರಜಾಸತ್ತೆಯಲ್ಲಿ ಇದಕ್ಕೇ ಮಹಾ ಪ್ರಭುತ್ವ ಸಂಭವಿಸಬೇಕಾಗಿದೆ; ಅದು ಪದ್ಯವನ್ನು ಕೈ ಹಿಡಿದು ನಡೆಸಿಕೊಂಡು ಹೋಗಬೇಕಾಗಿದೆ; ಹೊಸ ಸ್ಫೂರ್ತಿಯನ್ನು ಕೊಡಬೇಕಾಗಿದೆ; ಹೊಸ ಭಾವಾನುಭವ ವಿಚಾರಗಳನ್ನು ಆಡಬೇಕಾಗಿದೆ. ಕನ್ನಡ ಗದ್ಯ ಈಗ ಸಾಹಿತ್ಯ ಕ್ಷೇತ್ರದಲ್ಲಿ ದಾಪುಗಾಲು ಹಾಕುತ್ತಿದೆ.

(ಪ್ರೊ| ಜವರೇ ಗೌಡರ ಅಧ್ಯಕ್ಷ ಭಾಷಣದಿಂದ ಆಯ್ದ ಭಾಗ)

ಖುಷ್ಕಿ ಜಮೀನಿನಿಂದ ಹೆಚ್ಚು ಇಳುವರಿ

ನಮ್ಮ ದೇಶದಲ್ಲಿ ಈಚೆಗೆ ಬಂದಿರುವ ಹೆಚ್ಚಿನ ಆಹಾರೋತ್ಪಾದನೆ ನೀರಾವರಿ ಸ್ಥಳಗಳಲ್ಲಿ ಅಂದರೆ ವ್ಯವಸಾಯ ನಡೆಸುತ್ತಿರುವ ಜಮೀನಿನ ಸುಮಾರು ಶೇಕಡ 20ರಷ್ಟು ಜಮೀನಿನಲ್ಲಿ ಸುಧಾರಿಸಿದ ಪದ್ಧತಿಗಳನ್ನು ಅನುಸರಿಸುವುದರಿಂದ ಬಂದಿದೆ.

ಇದರಿಂದ ಉಳಿದ ಶೇಕಡ 80ರಷ್ಟು ಜಮೀನು ಖುಷ್ಕಿ ಜಮೀನೆಂತಲೂ ಮತ್ತು ಆದರಿಂದ ನೀರಾವರಿ ಜಮೀನಿಗಿಂತಲೂ ಕಡಿಮೆ ಇಳುವರಿ ಬಂದಿದೆ ಎಂತಲೂ ತಿಳಿದು ಬರುತ್ತದೆ.

ಖುಷ್ಕಿ ಜಮೀನಿನಿಂದ ಒಳ್ಳೆಯ ಇಳುವರಿ ಪಡೆಯಲು ಸಾಧ್ಯವೇ? ಹೊಸ ದೆಹಲಿಯಲ್ಲಿ ನಡೆದ ಚರ್ಚಾಕೂಟವೊಂದರಲ್ಲಿ ಈ ಪ್ರಶ್ನೆಯನ್ನು ಕೇಳಲಾಯಿತು.

ವಿಜ್ಞಾನಿಗಳು ಈ ಪ್ರಶ್ನೆಗೆ ಖಚಿತವಾದ ಉತ್ತರವನ್ನಿತ್ತರು. ಭಾರತೀಯ ಕೃಷಿ ಅನುಸಂಧಾನ ಶಾಲೆಯ ಡೈರೆಕ್ಟರ್ ಡಾ| ಎಂ. ಎಸ್. ಸ್ವಾಮಿನಾಥನ್ ಖುಷ್ಕಿ ಜಮೀನಿನಿಂದ ಹೆಚ್ಚು ಇಳುವರಿ ಪಡೆಯಲು ನಾಲ್ಕು ಸಲಹೆಗಳನ್ನಿತ್ತರು.

ತಳಿಶಾಸ್ತ್ರಜ್ಞರು ಈಗ ಹೊಸ ತಳಿಗಳನ್ನು ತಯಾರಿಸಿದ್ದಾರೆ. ಅವು ಹಿಂದಿನ ತಳಿಗಳಂತೆ ಅವುಗಳ ಕಾಲದಲ್ಲಿಯೇ ಬೆಳೆಯಬೇಕಾಗಿಲ್ಲ. ಈ ಹೊಸ ತಳಿಗಳನ್ನು ಖುಷ್ಕಿ ಜಮೀನಿನ ಬೆಳೆ ಸರದಿಯಲ್ಲಿ ಸರಿಯಾಗಿ ಹೊಂದಿಸಿಕೊಳ್ಳಬಹುದು.

ಭಾರತೀಯ ಕೃಷಿ ಅನುಸಂಧಾನ ಶಾಲೆ ಖುಷ್ಕಿ ಜಮೀನಿಗೆ ಸರಿ ಹೊಂದುವ ಸಿ. ಎಸ್. ಎಚ್-1, ಸಿ. ಎಸ್. ಎಚ್-3 ಜೋಳ, ಅರುಣಾ ಹರಳು, ಪೂಸಾ ಅಗೇತಿ ತೊಗರಿ, ಪೂಸಾ ವೈಶಾಖಿ ಹೆಸರು, ಸುಫಾಲ ಸಾಸುವೆ, ರತ್ನ ಬಾರ್ಲಿ, ಕಲ್ಯಾಣ್ ಸೋನಾ ಗೋದಿ, ಪೂಸಾ 2-21 ಭತ್ತ, ಪಿ. ಆರ್. ಎಸ್; ಹತ್ತಿ ಈ ತಳಿಗಳನ್ನು ರೈತರು ಬೆಳೆಯಲು ಬಿಡುಗಡೆ ಮಾಡಿದ್ದಾರೆ.

ಖುಷ್ಕಿ ಜಮೀನಿನಲ್ಲಿ ರೈತರು ಪ್ರತಿಯೊಂದು ತೊಟ್ಟು ನೀರನ್ನು ಶೇಖರಿಸಿಡಬೇಕು. ಭಾರತೀಯ ಕೃಷಿ ಅನುಸಂಧಾನ ಶಾಲೆಯಲ್ಲಿ ಜಮೀನನ್ನು ತಯಾರಿಸಿ ಅದರಲ್ಲಿ ನೀರನ್ನು ಸರಿಯಾಗಿ ಶೇಖರಿಸಿಡುವಂತಹ ಸುಲಭವಾದ ಯಂತ್ರಗಳನ್ನು ತಯಾರಿಸಿದ್ದಾರೆ. ಅಲ್ಲದೆ ವೈಜ್ಞಾನಿಗಳು ಮಳೆ ಬೆಳೆಗಳನ್ನು ಸಾಲುಗಳ ನಡುವಿನ ದಿಂಡುಗಳ ಮೇಲೆ ಬೆಳೆಸಿದರೆ ಸಾಲುಗಳ ಮಧ್ಯೆ ಇಂಗುವ ನೀರಿನಿಂದ ಮುಂದಿನ ರಾಬಿ ಫಸಲನ್ನು ಚೆನ್ನಾಗಿ ಬೆಳೆಸಬಹುದು ಎಂದು ಸಾಧಿಸಿದ್ದಾರೆ. ಖುಷ್ಕಿ ಜಮೀನಿನಲ್ಲಿ ಬೆಳೆ ತೆಗೆಯುವವರು ಮಳೆನೀರನ್ನು ಶೇಖರಿಸಿಕೊಂಡು ಅದರಿಂದ ಬೆಳೆ ತೆಗೆಯುವುದಕ್ಕೋಸ್ಕರ ಕಡಿಮೆ ಬೆಲೆಯಲ್ಲಿ ಕೆರೆಗಳನ್ನು ನಿರ್ಮಿಸಲೂ ಬಹುದು.

ಭಾರತೀಯ ಕೃಷಿ ಅನುಸಂಧಾನ ಶಾಲೆ ರಸಾಯನಿಕ ಗೊಬ್ಬರವನ್ನು ಆಳದಲ್ಲಿ ಹಾಕಲು ಯಂತ್ರಗಳನ್ನು ತಯಾರಿಸಿದ್ದಾರೆ. ಇದರಿಂದ ಖುಷ್ಕಿ ಬೆಳೆ ಸುಲಭವಾಗಿ ಸತ್ವಾಹಾರ ವಸ್ತುಗಳನ್ನು ಜಮೀನಿನಿಂದ ಪಡೆಯುತ್ತವೆ.

ಈ ಸ್ಥಳಗಳಲ್ಲಿ ರಸಾಯನಿಕ ಗೊಬ್ಬರವನ್ನು ನೀರಿನಲ್ಲಿ ಬೆರೆಸಿ ಎಲೆಗಳ ಮೇಲೆ ಸಿಂಪಡಿಸುವುದರಿಂದಲೂ ತುಂಬಾ ಅನುಕೂಲವಿದೆ.

ನಮ್ಮ ದೇಶದಲ್ಲಿ ನೆಲಗಡಲೆ, ದ್ವಿದಳ ಧಾನ್ಯಗಳು ಹೆಚ್ಚಾಗಿ ಖುಷ್ಕಿ ಜಮೀನಿನಿಂದ ಬರುತ್ತವೆ. ದ್ವಿದಳ ಧಾನ್ಯದ ಬೆಳೆಗಳು ಗಾಳಿಯಲ್ಲಿರುವ ಸಾರಜನಕವನ್ನು ಪಡೆದು ಜಮೀನಿನಲ್ಲಿ ಹುದುಗಿಡುತ್ತವೆ. ಇದಕ್ಕಾಗಿ ಒಂದು ತರಹದ ಸೂಕ್ಷ್ಮ ಕ್ರಿಮಿಗಳ ಆವಶ್ಯಕತೆ ಇದೆ. ಇಂತಹ ಒಳ್ಳೆಯ ಸೂಕ್ಷ್ಮ ಕ್ರಿಮಿಗಳ ತಳಿಗಳನ್ನು ತಯಾರಿಸಿ ಅವುಗಳನ್ನು ಪಾಲನೆ ಮಾಡಿರುತ್ತಾರೆ; ಉಪ್ಪು ಜಮೀನಿಗೇ ಆಗಲೀ ಇಲ್ಲ ಹುಳಿ ಜಮೀನಿಗೇ ಆಗಲಿ ಈ ಕ್ರಿಮಿಗಳಿರುವ ಮಣ್ಣನ್ನು ಈಗ ರೈತರು ಪಡೆಯಬಹುದು.

ಖುಷ್ಕಿ ಜಮೀನಿನಲ್ಲಿ ಕೀಟ ಮತ್ತು ರೋಗಗಳನ್ನು ತಡೆಯಲು ಅನೇಕ ಪದ್ಧತಿಗಳನ್ನು ಈಗ ತಯಾರಿಸಿದ್ದಾರೆ. 'ಪೂಸಾ ಬಿನ್'ನನ್ನು ಪಡೆದು ಇಂತಹ ಸ್ಥಳಗಳಲ್ಲಿ ಧಾನ್ಯವನ್ನು ಶೇಖರಿಸಬಹುದು.

ಅಲ್ಲದೆ ಭೂಮಿಯಲ್ಲಿ ಹುದುಗಿರುವ ನೀರನ್ನು ತೆಗೆದು ಖುಷ್ಕಿ ಜಮೀನನ್ನು ನೀರಾವರಿ ಮಾಡಲು ಅನೇಕ ಯೋಜನೆಗಳು ಈಗ ನಡೆಯುತ್ತಿವೆ. ಇದರಿಂದ ಖುಷ್ಕಿ ಜಮೀನಿನಿಂದ ಆಶ್ರಯ ಪಡುತ್ತಿರುವ ಅನೇಕ ರೈತರು ಅಭಿವೃದ್ಧಿ ಹೊಂದಲು ಅನುಕೂಲವಾಗುತ್ತಿದೆ.



ಖುಷ್ಕಿ ಜಮೀನಿನಲ್ಲಿ ಬೆಳೆದ ಒಳ್ಳೆಯ ಜೋಳದ ಬೆಳೆ.

ಪ್ರಗತಿವಾದದ ಹೆಸರಲ್ಲಿ

ಕಮ್ಯೂನಿಜಂ ಬೆಳವಣಿಗೆ

ಲೋಕ ಸಭೆಯನ್ನು ವಿಸರ್ಜಿಸುವ, ಮರು ಚುನಾವಣೆ ನಡೆಸುವ ಸಲಹೆಯನ್ನು ಪ್ರಧಾನಿ ಇಂದಿರಾ ಗಾಂಧಿಯವರು ರಾಷ್ಟ್ರಪತಿಗೆ ನೀಡಿದರು, ರಾಷ್ಟ್ರಪತಿ ಸಾಕಷ್ಟು ವಿಚಾರ ಮಾಡಿ, ಪರ್ಯಾಲೋಚಿಸಿ ಆ ಸಲಹೆಗಳನ್ನು ಸ್ವೀಕರಿಸಿ ಆಜ್ಞೆ ಹೊರಡಿಸಿದರು.

ಪ್ರಧಾನಿ ಸಲಹೆಯಾಗಲೀ ರಾಷ್ಟ್ರಪತಿ ಸ್ವೀಕಾರವಾಗಲೀ ಅನಿರೀಕ್ಷಿತವಲ್ಲ; ಆಶ್ಚರ್ಯಕಾರಕವಲ್ಲ.

ಮೂರು ತಿಂಗಳುಗಳ ಮೊದಲೇ ಶ್ರೀ ಎಸ್ಸೆನ್ ರ್‍ಯಾಲಿ ನೈನಿತಾಲ್‌ನಲ್ಲಿ ಮಧ್ಯಕಾಲೀನ ಚುನಾವಣೆಗಳು ನಡೆಯಲಿವೆ ಎಂಬುದಾಗಿ ಹೇಳಿದ್ದರು. ನಂಬಲರ್ಹವಾದ ಮೂಲಗಳಿಂದಲೇ ಈ ಸಂಗತಿ ತಿಳಿದುಬಂದಿದೆಯೆಂದು ಉಗ್ಗಡಿಸಿದ್ದರು.

ಆದರೆ, ಅಂದಿನಿಂದ ಲೋಕಸಭೆಯ ಅಧಿವೇಶನ ಅನಿರ್ದಿಷ್ಟಾವಧಿಯ ವರೆಗೆ, ಮುಂದ ವರಿಯುವ ದಿನದ ವರೆಗೂ ಪ್ರಧಾನಿಯವರ ಅವರ ಅನುಯಾಯಿಗಳೂ ಹಲವು ಬಾರಿ ಈ "ಸಂಭಾವ್ಯ" ಸ್ಪಷ್ಟ ಮಾತುಗಳಿಂದ ಅಲ್ಲಗಳೆದರು; ತಳ್ಳಿಹಾಕಿದರು.

ಸಂಸತ್ತು ಅಧಿವೇಶನದ ಕೊನೆಯ ದಿವಸವೇ ವಿಸರ್ಜನೆಯ ಘೋಷಣೆ ನಡೆಯುವುದೆಂದು ದಟ್ಟ ವರದಿ ಹರಡಿತ್ತು. ಅದನ್ನೂ ಪ್ರಧಾನಿ ಸುಳ್ಳುಮಾಡಿದರು. ಆದರೆ, ಮತ್ತೆ ಹತ್ತೇ ದಿನಗಳಲ್ಲಿ ಅಂತಹ ನಿರ್ಧಾರಕ್ಕೆ ಬಂದರು.

ತನ್ನ ವಿರೋಧಿಗಳ ಮಾತುಗಳನ್ನು ಒಮ್ಮೆಗೆ ಸುಳ್ಳುಮಾಡುವುದಷ್ಟೆ ಅದರ ಉದ್ದೇಶವಿದ್ದಿರಬಹುದು; ಆದರೂ ಅವರ ಪ್ರಬಲ ಶತ್ರು ಎಸ್ಸೆನ್ ಅಂದಿದ್ದಂತೆ ಧೈರ್ಯ ವರಿಯಲ್ಲೇ ಚುನಾವಣೆ ನಡೆಯುತ್ತದೆ.

ಸಂಸದಧಿವೇಶನ ಮುಕ್ತಾಯಗೊಂಡ ವೇಳೆ ರಾಷ್ಟ್ರಪತಿಯವರು ದಿಲ್ಲಿಯಲ್ಲಿ ಇರಲಿಲ್ಲವೆಂಬುದನ್ನು ಮರೆಯಬಾರದು. ಕೊಟ್ಟೆಯಲ್ಲಿಗೋ ಮತ್ತೆಲ್ಲಿಗೋ ಸಲಹೆಯೊಯ್ದು ಅದನ್ನು ಸ್ವೀಕರಿಸ ಮಂಜೂರು ಮಾಡಲು ಅದೇಕೋ ಅವರು ಮುಂದುವರಿಯಲಿಲ್ಲ. ವಿದೇಶೀ ನೆಲದಲ್ಲಿ ಕುಳಿತು ದೇಶೀ ಆಜ್ಞೆಗೆ ಸಹಿ ಹಾಕಿದವರು ಹಾಗೆ ಸಹಿ ಹಾಕುವುದು ಅಗೌರವವೆನಿಸಿತೋ ಏನೋ!

ಆದುದರಿಂದಲೇ ತನ್ನ ನೇದಿಕೆಯನ್ನು ಸಿಂಗರಿಸಿಟ್ಟು ಈ ಕಾರ್ಯ ನೆರವೇರಿಸಿದರು.

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು—1

ನವಯುಗ

ಸಂಪುಟ: 50 ಸಂಚಿಕೆ: 18

7—1—1971

ಚುನಾವಣೆಯೋ ಅಥವಾ ಛೀಮಾವಣೆಯೆ?

ಸದ್ಯ ಲೋಕ ಸಭೆಗೆ ನಡೆಯಲಿರುವ ಮಹಾಚುನಾವಣೆಗಳ ಆರಂಭ ಬಹಳ ಸೋಜಿಗವಾಗೇ ಇದೆ. ಇಲ್ಲಿಯೂ ಪ್ರಧಾನಿ ಗಾಂಧಿಯವರು ಯಶಗಳಿಸಿದರೆನ್ನಬೇಕು. ಇತ್ತೀಚಿನ ಕೆಲವು ದಿನಗಳಲ್ಲಿ ಪಕ್ಷಾಂತರ ಪಿಡುಗು ದೇಶವ್ಯಾಪಿ ಹಬ್ಬತೊಡಗಿರುವುದನ್ನು ಕಾಣುವಾಗ, ನಮ್ಮ ರಾಜ್ಯನೀತಿಯು ಎಷ್ಟರ ಮಟ್ಟಿಗೆ ದಿವಾಳಿಯಾಗಿದೆಯೆಂದು ಅಭಿವ್ಯಕ್ತವಾಗುತ್ತದೆ. ಪಕ್ಷಾಂತರದ ಕಾರಣಗಳು ಏನೇ ಇದ್ದರೂ ಈ ಲಕ್ಷಣಗಳಿಗೆ ಕೊನೆಯಿರುವ ತನಕ ದೇಶದಲ್ಲಿ ರಾಜಕೀಯ ಸ್ಥಿರತೆ ಅಸಾಧ್ಯವೆಂದು ಖಂಡಿತವಾಗಿ ಹೇಳಬಹುದು.

ಸಿಂಡಿಕೇಟಿನ ಚುನಾವಣಾ ಹೊಂದಾಣಿಕೆಯ ನೀತಿ ಲಖನೌನ ಅಧಿವೇಶನದಲ್ಲಿ ಸ್ವೀಕೃತವಾದೊಡನೆಯೇ ಈ ಗೊತ್ತುವಳಿಯನ್ನು ವಿರೋಧಿಸಿ ಗುಜರಾತದಲ್ಲಿ ನಡೆದ ವಿದ್ಯಮಾನಗಳು ನೀತಿಗೆ ಸಂಬಂಧಪಟ್ಟವು. ಹೊಂದಾಣಿಕೆಯನ್ನು ಒಪ್ಪದವರು ಪಕ್ಷಕ್ಕೆ ರಾಜಿನಾಮೆ ನೀಡಿ ಹೊರಬಂದರು; ಹಾಗಂದವರು ಯಾವುದೇ ಪಕ್ಷ ಸೇರಿಕೊಳ್ಳಲಿ, ಆ ಮಾತು ಬೇರೆ. ಗುಜರಾತದಲ್ಲಿನ ರಾಜಿನಾಮೆಯು ಒಂದು ರೀತಿ ಮಾಗಿಯ ಫಲದಕ್ಕು ಲೋಕ ಸಭೆ ವಿಸರ್ಜಿತವಾಗ ದ್ದಾಗಲ್ಲಿ ತಾಳಿ ಂತಿ ಉದ್ದೇದ ಕಾರ್ಯೊಂದು ರಾಜನ ... ಹನ್ ... ಕ ಆರಂಭವಾಯಿತು. ರಾಜಿನಾಮೆ ನೀಡಿಯೋ ನೀಡದೆಯೋ ಪಕ್ಷಾಂತರಗೊಂಡವರು ಇಂಡಿಕೇಟ್ ಸೇರಿದರು. ಹೊಸತಾಗಿ ಇಂಡಿಕೇಟುಗಂಡವರಲ್ಲಿ ಸಿಂಡಿಕೇಟಿಗರೂ ಪ್ರಸವಾ ಪಕ್ಷದವರೂ ಪ್ರಮುಖರು.

ಇಲ್ಲಿ ಗಮನೀಯವಾದ ಅಂಶವುಂಟು. ಪ್ರಸವಾ ಪಕ್ಷವು ಇಂಡಿಕೇಟಿನಲ್ಲಿ ವಿಲೀನಗೊಳ್ಳುವ ಮಾತುಕತೆ ನಡೆಯುತ್ತಿದ್ದಂತೆ, ಅದು ಸಫಲಗೊಳ್ಳುವ ಆಶಯ ದೂರವಾದಂತೆ ಪಕ್ಷದ ಒಂದು ಗುಂಪು ಇಂಡಿಕೇಟಿಗೆ ಸೇರಿಕೊಂಡ ಬಗ್ಗೆ ಹೇಳಿಕೆ ಹೊರಟಿತು. ಇದೇ ಗುಂಪು ಕೆಲ ಸಮಯಕ್ಕೆ ಮೊದಲು ಪಕ್ಷಾಂತರ ಯೋಜನೆಯ ಬಗ್ಗೆ ಹರಡಿದ್ದ ವದಂತಿಗಳನ್ನು ಸ್ಪಷ್ಟವಾಗಿ ನಿರಾಕರಿಸಿತ್ತು. ಅವಿಭಜಿತ ಕಾಂಗ್ರೆಸ್ಸಿನ ಅತಿರಥ-ಮಹಾರಥರೆಂದು ಹೆಸರಾದ ಕೆಲವು ನಾಯಕರು ನಿನ್ನೆಯ ವರೆಗೆ ಸಿಂಡಿಕೇಟಿನಲ್ಲಿದ್ದು, ಅಭ್ಯರ್ಥಿಗಳ ಆಯ್ಕೆಯಾಗುವ ಪೂರ್ವಸಂಧ್ಯೆಯಲ್ಲಿ ಶ್ರೀಮತಿ ಗಾಂಧಿಯ ಪ್ರಗತಿಪರ ಕಾರ್ಯಕ್ರಮ ಯಶಸ್ಸಿನಿಂದ ಆಕರ್ಷಿತರಾಗಿ ಪಕ್ಷಾಂತರ ಮಾಡಿದರು. ಇನ್ನು ಫೆಬ್ರವರಿ—ಮಾರ್ಚಿ ತಿಂಗಳುಗಳಲ್ಲಿ ಚುನಾವಣೆಗಳು ನಡೆದು ಕೇಂದ್ರದಲ್ಲಿ ಸಚಿವ ಸಂಪುಟ ರಚನೆಗೊಳ್ಳುವ ತನಕವೂ ಇದೇ ರೋಗ ಮುಂದುವರಿಯಬಹುದು. ಸಮಾಚಾರ ಪತ್ರಗಳಲ್ಲಿ 'ಪಕ್ಷಾಂತರ ಕಲವೆ?' ಕೆಲವು ಕಾಲ ಪ್ರಕಟವಾಗಬಹುದು.

ಈ ಪಕ್ಷಾಂತರದ ಹಿನ್ನೆಲೆ ಅಸ್ಪಷ್ಟ. ಕಾಪು ಕ್ಷೇತ್ರದ ಎಂ.ಎಲ್.ಎ. ಶ್ರೀ ಭಾಸ್ಕರ ಶೆಟ್ಟಿ ಮೊದಲಾದವರು ಇಂಡಿಕೇಟ್ ಸೇರುವ ಪ್ರಶ್ನೆ ಬಂದಿತ್ತೆಂದೂ ಆಗ ರೆ ಮುಂದಿನ ಚುನಾವಣೆಗಳಲ್ಲಿ ತಮ್ಮ ಈಗಿನ ಕ್ಷೇತ್ರಗಳಲ್ಲಿ ತಮಗೇ ಟಿಕೇಟು ನೀಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟದ್ದರಿಂದ ಪ್ರಶ್ನೆ ಮುಂದುವರಿಯಿತೆಂದೂ ಇಂಡಿಕೇಟ್ ಸಂಚಾಲಕರು ಹಿಂದೊಮ್ಮೆ ಹೇಳಿಕೆ ನೀಡಿದ್ದು ಇನ್ನು ಅಂದು ಶ್ರೀ ಶೆಟ್ಟರ ಆಂಶಿಕವಾಗಿ ತಿರಸ್ಕರಿಸಿದ್ದರು. ವಿಧಾನ ಸಭೆಗೂ ಚುನಾವಣೆ ನಡೆಸಬಹುದೆಂಬ ಸಂದೇಹದಿಂದಲೋ ಎಂಬಂತೆ ತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳುವ ಉದ್ದೇಶದಿಂದಲೇ ಈಗಿನ ಪ್ರಸವಾ ಸದಸ್ಯರು ಪಕ್ಷಾಂತರ ಮಾಡಿದ್ದಾರೆಂದರೆ ಅತಿಶಯೋಕ್ತಿಯಾಗಲ್ಲ. ಏಕೆಂದರೆ, ಉನ್ನತ ಮಟ್ಟದಲ್ಲಿ ವಿಲೀನದ ಮಾತುಕತೆ ನಡೆಯುತ್ತಿರುವ ಮಧ್ಯದಲ್ಲೇ ರಾಜ್ಯದ ಹಲವು ಪ್ರಸವಾ, ಎಂ.ಎಲ್.ಎ.ಗಳ ಈ ಪಕ್ಷಾಂತರಕ್ಕೆ ಅಧಿಕಾರದ ಮೋಹವೊಂದನ್ನುಳಿದು ಮತ್ತಾವ ಕಾರಣವೂ ಅಸ್ಪಷ್ಟ.

ಇದೇ ಮಾತನ್ನು ಸಿಂಡಿಕೇಟಿನಿಂದ ಇಂಡಿಕೇಟ್ ಆದವರ ಬಗ್ಗೆಯೂ ಹೇಳಬೇಕಾಗುತ್ತದೆ. ಇಂಡಿಕೇಟಿನ ಕೈಯಲ್ಲಿ ೫೨೦ ಟಿಕೇಟುಗಳಿದ್ದು ಅವುಗಳಲ್ಲಿ ೨೩೦ ನಿಸಲಿಂತ ಲೋಕ ಸಭಾ ಸದಸ್ಯರಿಗೇ ಕೊಟ್ಟ ಮೇಲೆ ೨೯೦ ಟಿಕೇಟುಗಳು ಉಳಿಯುತ್ತವೆ. ಸಿಂಡಿಕೇಟು ಚುನಾವಣಾ ನೈತಿಕ-ಹೊಂದಾಣಿಕೆಗಳ ಹೆಸರಲ್ಲಿ ತನಗೆ ಅನ ದಾರವಾಗಿ ಮರೆಸುತ್ತದೆಂಬ ನಿಷ್ಟೆಯುಕ್ಕೆ ಬಂದವರ ಕೇವಲ ಟಿಕೇಟಿನ ಹಂಬಲದಿಂದಲೇ ಈಗ ಶಿಬಿರ ಬದಲಾಗ ಹಾಕಿದರು ಎಂಬುದರಲ್ಲಿ ನೂರಕ್ಕೆ ನೂರು ಸತ್ಯಾಂಶವಿದೆ. ಇಂಡಿಕೇಟು ತನ್ನ ಹುದ್ದರಿ

(ಹತ್ತನೇ ಪುಟ ನೋಡಿರಿ)

ವಿಜಯ ಬ್ಯಾಂಕಿನ

ದ್ವಿವಿಧ ಸೌಲಭ್ಯಯೋಜನೆ

ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತಮ ಸಾಧನ

I am interested in your double benefit scheme. Please send me a free leaflet:

NAME..........

ADDRESS..........

THE VIJAYA BANK LTD.

ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನೀವು ಉಳಿಸಿದ ಹಣದಿಂದ ಖರ್ಚು ಮಾಡಬೇಕಾಗಿಲ್ಲ. ಇದಕ್ಕಾಗಿ ನಿಮಗೆ ಪ್ರತಿ ತಿಂಗಳೂ ಆದಾಯ ದೊರೆಯುವಂತೆ ನಾವು ವ್ಯವಸ್ಥೆ ಮಾಡುತ್ತೇವೆ.
ವಿಜಯ ಬ್ಯಾಂಕಿನ ವಿಶಿಷ್ಟವಾದ ದ್ವಿವಿಧ ಸೌಲಭ್ಯಯೋಜನೆಯು, ನಿಮ್ಮ ಠೇವಣಿಗಳನ್ನು ಹಾಗೆಯೇ ಇಡುವುದರಿಂದ, ನಿಮಗೆ ಹೆಚ್ಚಿನ ಭದ್ರತೆ ನೀಡುವುದು.
ಉಚಿತ ಕರಪತ್ರ ಪಡೆಯಲು ದಯವಿಟ್ಟು ಈ ಕೂಪನ್ ಭರ್ತಿಮಾಡಿ ನಮಗೆ ಕಳುಹಿಸಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ಮಂಗಳೂರು-3.
ಆಡಳಿತ ಕಚೇರಿ: ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
ಛೇರ್ಮನ್: ಎಂ. ಸುಂದರ್‌ರಾಮ್ ಶೆಟ್ಟಿ

ont 1748-KAN

ಇಂದಿರಾ ವಿರೋಧಿಗಳು

ತಿಳಿ ಭಾಷೆಯಲ್ಲಿ ನೀತಿ ಮಂಡಿಸಲಿ

ಲೋಕ ಸಭೆಗೆ ಮತ್ತೆ ಚುನಾವಣೆ ನಡೆಯುತ್ತಲಿದೆ; ಜತೆಗೆ ಕೆಲವೆಡೆ ರಾಜ್ಯ ವಿಧಾನ ಸಭೆಗೂ ಚುನಾವಣೆ ನಡೆಯಬಹುದು.

ತನ್ನ "ಪ್ರಗತಿಶೀಲ ಸಮಾಜವಾದಿ" ಕಾರ್ಯಕ್ರಮಗಳಿಗೆ ಪ್ರಧಾನಿ ಗಾಂಧಿ ಜನತೆಯ ಸ್ಪಷ್ಟ ಆದೇಶ ಬಯಸಿದ್ದಾರೆ; ಜನತೆ ತಮಗೆ ಅಂತಹ ಆದೇಶ ನೀಡುವುದೆಂದು ಅವರು ವಿಶ್ವಾಸವಿಟ್ಟಿದ್ದಾರೆ.

ತನ್ನದು ಸರ್ವಾಧಿಕಾರವಲ್ಲ; ಪ್ರಜಾಪ್ರಭುತ್ವಾತ್ಮಕ ಅಧಿಕಾರವೆನ್ನುತ್ತಾರೆ ಪ್ರಧಾನಿ ಗಾಂಧಿ. ಸಮಾಜವಾದವೇ ತನ್ನ ವಾದವೆನ್ನುತ್ತಾರೆ ಅವರು. ಜನ ತನ್ನ ಕೈ ಹಿಡಿದು ಎತ್ತುತ್ತದೆ ಎಂದು ನಂಬಿದ್ದಾರೆ ಅವರು.

ಪ್ರಧಾನಿಯದು ಸರ್ವಾಧಿಕಾರ, ಆಕೆಯದು ಬೇಗವಾದ ಸೋಗಿನ ಸಮಾಜವಾದ; ಜನ ಆಕೆಯನ್ನು ಎತ್ತುವುದಿಲ್ಲ, ಎತ್ತಲೂ ಬಾರದು - ಎನ್ನುತ್ತಾರೆ ಆಕೆಯ ವಿರೋಧಿಗಳು.

ಅಧಿಕೃತ ವಿರೋಧದಳ ಸಿಂಡಿಕೇಟ್ ಅಧ್ಯಕ್ಷರು ಪ್ರಧಾನಿ ಗಾಂಧಿಯ ಸರ್ವಾಧಿಕಾರದ ವಿರುದ್ಧ ಹೋರಾಟ ತಮ್ಮದು ಎನ್ನುತ್ತಾರೆ. ಜನಸಂಘದ ವಾಜಪೇಯಿ ಸ್ವತಂತ್ರದ ರಂಗಾ ಇದನ್ನೇ ಪುನರುಚ್ಚರಿಸುತ್ತಾರೆ.

ಪ್ರಧಾನಿ ಗಾಂಧಿಯನ್ನು ಗದ್ದುಗೆಯಿಂದ ಇಳಿಸುವುದರಿಂದಲೇ ಭಾರತದಲ್ಲಿ ಪ್ರಜಾತಂತ್ರದ ದಬ್ಬಿದ ಗಂಟಲು ನೇರವಾಗುತ್ತದೆ ಎಂಬುದು ಇಂಡಿಕೇಟ್ ಮತ್ತದರ ಶುಭಚಿಂತನೆಗೆ ಹೊರಗಾದವರ ಅಂಬೋಣ.

ಇದ ನಿಜವಿರಲೂ ಬಹುದು: ಪ್ರಧಾನಿಯ ಗತ ಒಂದೂವರೆ ವರ್ಷದ ಹಲವಾರು ಕೃತ್ಯಗಳು ಇದನ್ನು ಪ್ರತಿನಿಧಿಸುತ್ತಿವೆಯೆಂದೆನಿಸುತ್ತದೆ.

ಆದರೆ, ಸರ್ವಾಧಿಕಾರದ ವಿರುದ್ಧ ತಮ್ಮ ಹೋರಾಟ ಹೇಗೆ ನಡೆಯಬೇಕು; ಹೇಗೆ ನಡೆಯುತ್ತಿದೆ ಎಂಬುದನ್ನು ಯಾರಾದರೂ ಚಿಂತಿಸಿದ್ದಾರೆಯೆ?

ಸಿಂಡಿಕೇಟಿನ ವ್ಯಕ್ತಿ ಅಥವಾ ಹೊಂದಾಣಿಕೆಯ ಮಾತಿಗೆ ಅದೇ ಪಕ್ಷದವರು ಸೆಟೆದು ನಿಂತರು. ರಾಜ್ಯ ಘಟಕಕ್ಕೇ ವ್ಯಕ್ತಿ ಅಥವಾ ಹೊಂದಾಣಿಕೆಯ ಅಧಿಕಾರವನ್ನು ಬಿಟ್ಟುಕೊಡುವುದು ಅಗತ್ಯವಾಯ್ತು.

ಈ ಬಗೆಯ ಕೇಪೆಯ ವ್ಯಕ್ತಿ ತಮಗೆ ಬೇಕಾಗಿಲ್ಲವೆಂದು ವಾಜಪೇಯಿ ಎಂದೋ ಅಂದು ಬಿಟ್ಟಿದ್ದಾರೆ. ರಂಗಾ ಸದ್ಯವೇನೋ ಸುಮ್ಮನಿದ್ದಾರೆ. ಚರಣಸಿಂಗರಾದಿಯ ಮನೋಗತ ಭಗವಂತನಿಗೇ ಹೃದಯಗತ.

ಲೋಕಸಭೆಯ ಉದ್ದೇಶಗಳನ್ನು ಆಯಾಯ ಪಕ್ಷಗಳಿಗೆ ಇನ್ನು ಬಹುದಿನವಿಲ್ಲ. ಪ್ರಧಾನಿ ಗಾಂಧಿಯ ಮೇಲೆ ಮೇಲಾತ್ತ ಬಿಡುವುದರಲ್ಲೇ ನಿರತರಾದ ವಿರೋಧಿ ಪಕ್ಷಗಳು ಹುದ್ದರಿ ಆಯ್ಕೆಗೆ ಗಮನ ಹರಿಸಬೇಕಾದ ಅಗತ್ಯ ಈಗಿದೆ.

ಒಬ್ಬನನ್ನು ಅಥವಾ ಒಂದು ಪಕ್ಷವನ್ನು ಕೀಳು ಮಾಡುವುದರಿಂದಲೇ ಜನತೆಯನ್ನು ಒಲಿಸಿಕೊಳ್ಳಬಹುದೆಂದು ನಂಬಿದರೆ, ಅದು ಮಹಾಪ್ರಮಾದವಾಗುತ್ತದೆ.

ಮಹಾಕಾವ್ಯಗಳಲ್ಲಿ ನಾಯಕನ ಗುಣಾತಿಶಯವನ್ನು ಹೊಗಳುವ ಎರಡು ಮಾರ್ಗಗಳಿವೆ.

ನಾಯಕನನ್ನು ಪರ್ವತವನ್ನಾಗಿಸುವುದು; ಪ್ರತಿನಾಯಕನನ್ನು [illegible]ವಾಗಿಸುವುದು ಒಂದು ಬಗೆ.

ಪ್ರತಿನಾಯಕನನ್ನೇ ಪರ್ವತವೆಂದು ಹೇಳುತ್ತ ನಾಯಕನು ಅವನಿಗೂ ಹಿರಿಯನೆನ್ನುವುದು ಎರಡನೆಯ ವಿಧಾನ.

ಎರಡನೆಯದೇ ಹೆಚ್ಚು ಹೃದಯಸ್ಪರ್ಶಿ ಎಂಬುದು ಕಾವ್ಯಶಾಸ್ತ್ರ ವಿನೋದಪ್ರಿಯರ ಅಂಬೋಣ.

ರಾಜಕೀಯದಲ್ಲೂ ಎರಡನೆಯ ಮಾರ್ಗ ಪ್ರಭಾವಶಾಲಿಯಾಗದೇನೆ? ವ್ಯಕ್ತಿನಿಂದೆಯನ್ನು ಪಕ್ಷನಿಂದೆಯನ್ನು ಕುಟ್ಟಿಗೋಲು ಹಾಕಿ ತಮ್ಮ ನೀತಿ—ನಡಾವಳಿಗಳನ್ನು ಜನ ಜನಕ್ಕೆ ಸ್ಪಷ್ಟಪಡಿಸುವುದು ಉಚಿತವಾಗದೇನು?

ಸಿಂಡಿಕೇಟ್ ಮಿತ್ರರೊಡನೆ ಪ್ರಧಾನಿ ಗಾಂಧಿಯ ಸರ್ವಾಧಿಕಾರವನ್ನು, ಸಂವಿಧಾನ ವಿರೋಧಿ ಕ್ರಮಗಳನ್ನು ಸಹಿಸದವರೂ—

ಚುನಾವಣೆಯಲ್ಲಿ ಸ್ಥಾನಗಳನ್ನು ಹಂಚಿಕೊಳ್ಳುವದರಲ್ಲಿ ಹೊಂದಾಣಿಕೆಯನ್ನು ಸಾಧಿಸುವಲ್ಲಿ ಸಮರ್ಥರಾಗುತ್ತಾರೆಯೆ?

(ಕೇರಳದಲ್ಲಿ ಒಂದಾಗಿ ಕರ್ನಾಟಕದಲ್ಲಿ ಅವರವರೇ ಹೊಡೆದಾಡಿಕೊಳ್ಳಲು ಮನಮಾಡುತ್ತಾರೆಯೆ?)

ಪ್ರಧಾನಿ ಗಾಂಧಿಯ ಸಮಾಜವಾದ ಸೋಗಿನದೆಂದು, ಬೋಗಸ ಸಮಾಜವಾದವೆಂದು ಅನುಕೂಲಸಿಂಧು ಸಮಾಜವಾದವೆಂದು ಜರೆಯುವವರು ತಮ್ಮ "ಸಮಾಜವಾದ"ದ ಸ್ಪಷ್ಟ ಪರಿಭಾಷೆಯನ್ನು ನೀಡಲು ಸಿದ್ಧರಿದ್ದಾರೆಯೆ?

ಪ್ರಧಾನಿ ಗಾಂಧಿಯ ಆರ್ಥಿಕ ನೀತಿ ದೇಶವನ್ನು ದಿವಾಳಿತಿಗೆಳೆಯುತ್ತದೆ ಎಂದು ಡಂಗುರ ಸಾರುವವರು ತಮ್ಮ ಆರ್ಥಿಕ ನೀತಿಯೇನು ಎಂಬುದನ್ನು ಸ್ಪಷ್ಟಪಡಿಸಿಯಾರೆ?

ಪ್ರಧಾನಿ ಗಾಂಧಿಯ ವಿದೇಶ ನೀತಿ ದೇಶದ ಮುಖಕ್ಕೆ ಮಸಿ ಬಳಿದಿದೆಯೆನ್ನುವವರು ತಮ್ಮ ವಿದೇಶ ನೀತಿಯೇನು ಎಂಬುದನ್ನು ತಿಳಿ ಹೇಳುತ್ತಾರೆಯೆ?

ರಾಜಧನಾದಿ ರದ್ದತಿಯನ್ನು ಒಪ್ಪಿ ಸಂಸತ್ತಿನಲ್ಲಿ ಪ್ರಧಾನಿ ಗಾಂಧಿ ತಂದ ಸಂವಿಧಾನ ತಿದ್ದುಪಡಿ ಮಸೂದೆಗೆ ವಿರುದ್ಧ ಮತ ನೀಡಿದವರು—ರದ್ದತಿಯ ಕ್ರಮ ಸರಿಯಲ್ಲವೆಂದು—ತಾವು ಅದಾವ ರೀತಿ ರಾಜಧನಾದಿಗಳನ್ನು ರದ್ದು ಮಾಡುತ್ತೇವೆ ಎಂಬುದನ್ನು ವಿಶದೀಕರಿಸುತ್ತಾರೆಯೆ?

ಇವೇ ಮೊದಲಾದ ಹತ್ತಾರು ಪ್ರಶ್ನೆಗಳಿಗೆ ಅವರು ಉತ್ತರ ಕೊಡಬೇಕಾಗುತ್ತದೆ.

ಅಧಿಕಾರ ಲಾಲಸೆ ತಮಗಿಲ್ಲವೆಂದು ಆಡುವವರು ಹಿಂದೆ ನಿಂತು ಹೊಸಹೊಸ ಮುಖಗಳಿಗೆ ಚುನಾವಣೆಗಳಲ್ಲಿ ಸ್ಪರ್ಧಿಸುವ ಅವಕಾಶ ಒದಗಿಸಿಕೊಡಬೇಕು. ಯುವ ಜನಾಂಗದ ಅತೃಪ್ತಿಯನ್ನು ನೀಗಿಸಲು ಹೆಚ್ಚೆಚ್ಚು ಸ್ಥಾನಗಳನ್ನು ಅವರಿಗೆ ನೀಡಬೇಕು.

ತಮ್ಮ 'ಪ್ರಗತಿವಾದ'ದ ಬಗ್ಗೆ ವೇಗದಲ್ಲಿ ಜನಾಭಿಪ್ರಾಯ ಮೂಡಿಸಬೇಕು. ದೇಶದ ಆರ್ಥಿಕ, ರಾಜನೈತಿಕ, ಸಾಮಾಜಿಕ ನೀತಿ—ನಡಾವಳಿಗಳ ಬಗ್ಗೆ ಸ್ಪಷ್ಟರೂಪ ಜನತೆಯ ಮುಂದಿಡಬೇಕು.

"ಸಾರ್ವಜನಿಕ ಉದ್ದಿಮೆಗಳನ್ನೂ ರಾಷ್ಟ್ರೀಕರಣ ನೀತಿಯನ್ನೂ ವಿರೋಧಿಸುವವರು ಖಾಸಗಿ ಕ್ಷೇತ್ರವು ಸಮಾಜವಾದಕ್ಕೆ ಹೇಗೆ ನೆರವಾಗುತ್ತದೆ ಎಂಬುದನ್ನು ಸಮರ್ಥಿಸಬೇಕು. ನಿರುದ್ಯೋಗ, ವಿದ್ಯಾರ್ಥಿ ಅಶಿಸ್ತು, ರಾಜಕೀಯ ಅಸ್ಥಿರತೆ ಮೊದಲಾದ ಜ್ವಲಂತ ಸಮಸ್ಯಾತ್ಮಕ ಪ್ರಶ್ನೆಗಳಿಗೆ ತಮ್ಮ ಸ್ಪಷ್ಟ ಉತ್ತರ ನೀಡಬೇಕು.

ಘೋಷಣೆಗಳಿಂದ ಏನೂ ಸಾಧ್ಯವಾಗುವುದಿಲ್ಲವೆಂಬುದನ್ನು ಕಳೆದ ಒಂದೂವರೆ ವರ್ಷದ ಇತಿಹಾಸ ನಮಗೆ ತೋರಿಸಿಕೊಟ್ಟಿದೆ. ಕಾಲಕ್ಕೆ ತಕ್ಕಂತೆ ಕೋಲ ಕಟ್ಟಿಕೊಂಡು ಪ್ರಧಾನಿ ಗಾಂಧಿ ತಮ್ಮ ಸಿಂಹಾಸನವನ್ನು ಮಾತ್ರ ಉಳಿಸಿಕೊಂಡರು.

ಹೆಚ್ಚುತ್ತಿರುವ ನಿರುದ್ಯೋಗ, ಏರುತ್ತಿರುವ ಪೇಟೆ ಧಾರಣೆ, ಮಿತಿಮೀರುತ್ತಿರುವ ಕಾನೂನು—ಶಿಸ್ತುಭಂಗ, ಜಾತೀಯವಾದ, ಗುಂಪುಗಾರಿಕೆ, ಹಿಂಸಾತ್ಮಕ ಚಟುವಟಿಕೆ; ನಕ್ಸಲೀಯ ಚಟುವಟಿಕೆ, ಕುಗ್ಗುತ್ತಿರುವ ಭಾವೈಕ್ಯ, ವಿದೇಶೀಯ ಮನ್ನಣೆ, ಜಾಗತಿಕ ಸ್ಥಾನಮಾನ, ಉದ್ಯಮ, ಉದ್ಯೋಗ ಸಾಧನೋಪಕರಣಗಳು, ವ್ಯಾಪಾರಿಕ ಆರ್ಥಿಕ ದಿಸೆ, ರಾಜ್ಯನೀತಿ—ಮೊದಲಾದುವುಗಳನ್ನು ತಾವೆಂತು ಎದುರಿಸುತ್ತೇವೆ ಎಂಬ ಸ್ಪಷ್ಟ ಸೂಚನೆ ನೀಡಬೇಕು.

ಪರನಿಂದೆ—ಆತ್ಮಪ್ರಶಂಸೆಗಳಿಂದ ಇವು ನಡೆಯದ ಕಾರ್ಯಗಳು.

ಪ್ರಧಾನಿ ಗಾಂಧಿ ನಡೆಸಿದ [illegible] ಯಿರಲಿ, ತಪ್ಪಿರಲಿ, ಜನತೆ [illegible] ಇದೆ; ಅದನ್ನವರ [illegible]ಂದೇ [illegible] ದೋ ತಿಳಿದಿದ್ದಾರೆ.

ಆಕೆ [illegible] ವಿರೋಧಿಗಳು ಇನ್ನು [illegible] ಬರಿಯ ಭಾಷಣಗಳ ದಾರಿ [illegible]ಟ್ಟರೆ. ಈ ಭಾಷಣಗಳಿಂದ ಏಕವ್ಯಕ್ತಿಯ ಹಿಂದೆ [illegible].

ಅವರು [illegible]ನ್ನು ಬಿಟ್ಟು ತಮ್ಮ 'ನೀತಿ'ಯನ್ನು, ತಮ್ಮ 'ಪ್ರಣಾಳಿಕೆ'ಯನ್ನು ಜನತೆಯ ಮುಂದೆ ತಿಳಿಯಾದ ಭಾಷೆಯಲ್ಲಿಡಬೇಕು.

ಜನ ಸಮಾಧಾನಗೊಂಡರೆ ಆಗಬಹುದು.

ಘೋಷಣಾಪ್ರಿಯರನ್ನು ಜನತೆ ಮೆಚ್ಚದು; ಪೋಷಕರ ಅಭಾವದಲ್ಲಿ ಘೋಷಣಾಪ್ರಿಯರನ್ನು ಅದು ಮೆಚ್ಚುತ್ತದೆ.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಮಾನ್ಯರೆ,

ಇಂದಿನ ಸನ್ನಿವೇಶದಲ್ಲಿ ನಮ್ಮ ಜನರಲ್ಲಿ ತಕ್ಕ ರಾಜಕೀಯ ಜಾಗೃತಿ ಹಾಗೂ ದೇಶದ ಸಾಂಸ್ಕೃತಿಕ ಜೀವನದ ಸಂಚಯವನ್ನು ಮೂಡಿಸುವುದು ತಿಳಿದವರೆಲ್ಲರ ಕರ್ತವ್ಯವಾಗಿದ್ದು, ಈ ದಿಸೆಯಲ್ಲಿ ದೇಶದ ಪತ್ರಿಕೆಗಳು ಅವಶ್ಯವಾಗಿಯೂ ದುಡಿಯಲೇಬೇಕು ಎಂಬ ಧ್ಯೇಯ ಧೋರಣೆಗಳನ್ನು ತಳೆದು, ಕೀ. ಶೇ. ಮಾನ್ಯ ಎ. ಬಿ. ಶೆಟ್ಟರು ತಮ್ಮೆಲ್ಲರ ಮೆಚ್ಚುಗೆಯ 'ನವಯುಗ' ಪತ್ರಿಕೆಯನ್ನು ಸ್ಥಾಪಿಸಿ ಇದೀಗ ಐವತ್ತು ವರ್ಷಗಳಾದುವು. ಜನರನ್ನು ಎಚ್ಚರಿಸುವಲ್ಲಿ, ಅವರಲ್ಲಿ ತಕ್ಕ ಕರ್ತವ್ಯಪ್ರಜ್ಞೆಯನ್ನು ಮೂಡಿಸುವಲ್ಲಿ, ಈ ಪತ್ರಿಕೆ ತನ್ನ ಅಳಿಲಸೇವೆಯನ್ನು ಈಗಲೂ ಸಲ್ಲಿಸುತ್ತಲಿದೆ.

ಎಂದಿನಂತೆ ಬರುವ ಜನವರಿ 26, 1971ರಲ್ಲಿ ಪ್ರಕಟವಾಗುವ 'ಗಣರಾಜ್ಯ ಸ್ಥಾಪನೆ'ಯ ಸ್ಮಾರಕ ಸಂಚಿಕೆಯಲ್ಲಿ ನಾಮಾಂಕಿತ ಬರಹಗಾರರ ಲೇಖನಗಳನ್ನು ಪ್ರಕಟಿಸಿ ತನ್ನ ಸೇವೆ ಮಾಡುವುದರೊಡನೆ, ರಾಜ್ಯದ—ದೇಶದ—ಸರ್ವಾಂಗೀನ ಪ್ರಗತಿಗೆ ಕಾರಣವಾದ ನಮ್ಮ ಉದ್ದಿಮೆಗಳು ಏನನ್ನು ತಯಾರಿಸುತ್ತಲಿವೆ? ಏನನ್ನು ಒದಗಿಸುತ್ತಲಿವೆ? ಎಂಬುದನ್ನೂ ಪ್ರಕಟಿಸುವುದು ನಮ್ಮ ಘನ ಉದ್ದೇಶವಾಗಿದ್ದು, ಈ ಬಗ್ಗೆ ತಕ್ಕ ಜಾಹಿರಾತುಗಳನ್ನು ತಾವು ಒದಗಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತೇವೆ. ಸಿದ್ಧ ವಸ್ತುಗಳ ಬಗ್ಗೆ ತಕ್ಕಷ್ಟು ಪ್ರಚಾರ ಕೈಕೊಂಡರೇನೇ ಇವುಗಳ ವಿತರಣೆ ಹಾಗೂ ಮುಂದೆ ಇವುಗಳ ಸುಧಾರಣೆಗೂ ಅವಕಾಶವಿದೆ ಎಂಬುದನ್ನು ಬೇರೆ ಹೇಳಬೇಕೆ?

ಎಂತಲೇ, ಆದಷ್ಟು ತ್ವರಿತವಾಗಿ 10—1—1971ರೊಳಗೆ ಜಾಹೀರಾತುಗಳು ನಮಗೆ ಮುಟ್ಟುವಂತೆ ಕಳುಹಿಸಿರಿ, ಹಾಗೂ ನಮ್ಮೊಡನೆ ಸಹಕರಿಸಿರಿ ಎಂದು ಪ್ರಾರ್ಥನೆ.

ನವಯುಗದ 1971ರ ಪ್ರಜಾರಾಜ್ಯ ಸಂಚಿಕೆ—

ನಿಮ್ಮ ಸಂಸ್ಥೆಯ ಜಾಹೀರಾತಿಗೆ ಉತ್ತಮ ಸಾಧನವಾಗಿದೆ.

ದಯಮಾಡಿ

ನಿಮ್ಮ ಬಾಕಿ ಚಂದಾ

ಹಣವನ್ನು ಕಳುಹಿಸಿರಿ

ಸ್ವತಂತ್ರ ಪಾರ್ಟಿ - ದ್ರಾ. ಮು. ಕಳಗಂ ಕಟಿಪಿಟಿ

ಚಕ್ರವರ್ತಿ ರಾಜಗೋಪಾಲಾಚಾರಿಯವರನ್ನು ಕೆಲವರು ಚಾಣಕ್ಯನೆನ್ನುವದುಂಟು. ಅದಕ್ಕೆ ಕಾರಣವಿಲ್ಲವೆಂದಲ್ಲ. ಹೆಸರೇನೋ ಕ್ಷೀರಸಾಗರ ಭಟ್ಟ—ಆದರೆ ಕುಡಿಯಲಿಕ್ಕೆ ಮಜ್ಜಿಗೆಗೂ ಗತಿ ಇಲ್ಲ ಎನ್ನುವಂತಲ್ಲ. ರಾಜಾಜಿಯವರನ್ನು ಚಾಣಕ್ಯನೆಂದಲ್ಲಿ ಆ ಚಾಣಕ್ಯನಿಗೆ ಅಪಮಾನ ಮಾಡಿದಂತೆ, ಹಾಸ್ಯಗೈದಂತೆ ಎನ್ನುವವರೂ ಇದ್ದಾರೆ. ಈ ಎರಡು ಅಭಿಪ್ರಾಯಗಳ ಸಂಘರ್ಷಣದಲ್ಲಿದ್ದಾರೆ ರಾಜಾಜಿ. ತನ್ನ ಶತ್ರುವಿನ ವೈರಿ ತನಗೆ ಸ್ನೇಹಿತನೆಂದಿದ್ದನಂತೆ ಅಂದು ಆ ಚಾಣಕ್ಯ. ಹಾಗೆಂದ ಚಾಣಕ್ಯ ನಂದರನ್ನು ಕಾಳಗದಲ್ಲಿ ಯವನರನ್ನು ಬರಮಾಡಿಸಿಕೊಳ್ಳಲಿಲ್ಲ; ಅವನು ಚಂದ್ರಗುಪ್ತನನ್ನು ಸಿದ್ಧಗೊಳಿಸಿ ಆ ಚಾಣಕ್ಯನಾದ. ರಾಜಾಜಿಯವರು ಹಾಗಲ್ಲ. ಅವನ ಮಾತನ್ನು ಹಾಗೆಯೇ ಉಚ್ಚರಿಸಿದರು. ತನ್ನ ಶತ್ರು—ಕಾಂಗ್ರೆಸ್ಸಿನ ವೈರಿ ಯಾರಾಗಿದ್ದರಿ ಅನ್ನುವದಕ್ಕಿಂತಲೂ ವೈರಿಗಳೆನ್ನುವದೇ ಸಂಶಯೋದಿತ. ತನ್ನ ಕಾರದಲ್ಲಿ ಯಾರಿದ್ದಾರೆ? ಪ್ರಧಾನಿ ಪಂಡಿತ ಜವಾಹರಲಾಲ ನೆಹರೂಯವರಿಗೆ ಕಪ್ಪು ಬಟ್ಟೆ ತೋರಿಸಿದವರು ಯಾರು? ಭಾರತದಿಂದ ಪ್ರತ್ಯೇಕ ದೇಶ ಬೇಕೆನ್ನುವವರು ಯಾರು? ಸಂವಿಧಾನಕ್ಕೆದುರಾಗಿ ಚಳುವಳಿ ಹೂಡಿದವರು ಯಾರು? ತಮಿಳುನಾಡಿನಲ್ಲಿ ಕಟ್ಟನೆ ಅವರಿಗೆ ಪಕ್ಷಕ್ಕೆ ಬಂದದ್ದು ದ್ರಾವಿಡ ಮುನ್ನೇತ್ರ ಕಳಗದವರ ಹೆಸರು. ಅದರ ಧುರೀಣ ಅಣ್ಣಾದೊರೈಯವರು ಒಂದು ರೀತಿಯ ಜನಗಳ ಜನನನ್ನು ಆಕರ್ಷಿಸಿದ್ದರು. ಅವರ ಹಿಂದೆ ಡಿ ಎಂ ಕೆ ಚಲಚಿತ್ರ—ಪತ್ರಿಕೆಗಳ ಪ್ರಚಾರದಿಂದ ಅಂತಹ ಪ್ರಚಾರವನ್ನು ಬಗ್ಗು ಬಡಿಯಬಹುದಾಗಿತ್ತು. ಹಾಗಿದ್ದರೂ ವಿಚಾರಶೀಲರು ದ್ರಾ. ಮು. ಕ. ಕ್ಕೆ ಸೇರಲು ಹೇಸುತ್ತಿದ್ದರು. ತಮಿಳ ತಂತ್ರೆಂಬ ತವ ಟೀಕು ನಾದ ಶೀಘ್ರ ಆಕರ್ಷಿತರಾಗಿದ್ದ ವಿಚಾರಶೀಲರೂ ದೂರ ಬರುತ್ತಿದ್ದರು. ಇಂತಹ ವಿಚಾರಶೀಲ ಅಥವಾ ಅದಕ್ಕಿಂತಲೂ ಕಲಿತವರನ್ನು ಕಲೆ ಹಾಕಲು ತನಗೇನೂ ಕಷ್ಟವಾಗಲಾರದೆಂದು ರಾಜಾಜಿ ಭಾವಿಸಿದರು. ಅಣ್ಣಾದೊರೈಯವರೊಂದಿಗೆ ತನ್ನ ಶತ್ರುವಿನ ವೈರಿಯೊಂದಿಗೆ ರಾಜಾಜಿ ಕೈ ಮಿಲಾಯಿಸಿಕೊಂಡರು. ಅದಕ್ಕೆ ಸಂಬಂಧಿಸಿ ಕಾಂಗ್ರೆಸ್ ಜಿರೋಧದ ಚಂಡಮಾರುತ ಎದ್ದಿತು. ತಮಿಳುನಾಡಿನಲ್ಲಿ ಕಾಂಗ್ರೆಸ್ಸಿನ ಕಾಲು ಜಾರಿತು. ಇಲ್ಲೇ ಪಕ್ಷಕ್ಕೆ ಬಗುವದು ರಾಜಾಜಿಯವರು ಮದ್ರಾಸಿನ ಮುಖ್ಯಮಂತ್ರಿಯಾದಾಗಿನ ಸ್ಥಿತಿ. ಕಾಂಗ್ರೆಸ್ಸಿನ ಕಾಲು ಜಾರಿದೆಂಬುದನ್ನರಿತು ಕಾಂಗ್ರೆಸ್ಸಿನ ಪ್ರಮುಖರು ಕಾಂಗ್ರೆಸ್ಸಿನ ಉಳಿವಿಗಾಗಿ ರಾಜಾಜಿಯವರನ್ನು ಹಿಂದಿನ ಬಾಗಿಲಿನಿಂದ ಒಳತಂದು ಮುಖ್ಯಮಂತ್ರಿಯಾಗಿಸಿದರು. ಅಪಾಯದ ಭಯ ದಾಟಿದ ಮೇಲೆ, ಕಾಮರಾಜರಿಗಾಗಿ ರಾಜಾಜಿಯವರನ್ನು ಗದ್ದುಗೆಯಿಂದ ಕೆಳಗಿಳಿಸಲು ಕಾಂಗ್ರೆಸ್ಸಿನ ಧುರೀಣರು ಹೇಸಲಿಲ್ಲ. ಆದರ ಪರಿಣಾಮ ಕಾಂಗ್ರೆಸ್ಸಿನ ಕಾಲು ಕುಸಿಯಿತು. ತನ್ನನ್ನು ಗದ್ದುಗೆಯಿಂದ ಕೆಳಗಿಳಿಸಿದ ಕಾಂಗ್ರೆಸ್ ವೈರಿಯು ಹುಟ್ಟಡಗಿಸಲು ಅದರ ಶತ್ರುವಾಗಿದ್ದ ದ್ರಾ. ಮು. ಕ. ದೊಂದಿಗೆ ರಾಜಾಜಿ ಸೇರಿಕೊಂಡರು. ದ್ರಾ. ಮು. ಕ. ದ ಪರಿಚಯ ಇರುವವರು ಅವರನ್ನು ಅದೆಂತು ಚಾಣಕ್ಯನೆಂದಾರು? ಚಾಣಕ್ಯನೇನೋ ಸರಿ. ಇಲ್ಲದಿದ್ದಲ್ಲಿ ಕಾಂಗ್ರೆಸ್ಸನ್ನು ಬೀಳಿಸಲು ಅವರಿಂದ ಸಾಧ್ಯವಾಗುತ್ತಿರಲಿಲ್ಲ. ಇದ್ದರೂ ಇಂತಹ ಮೈತ್ರಿ ಅದೆಷ್ಟು ಕಾಲ? ಸೂರ್ಯನೂ ನಕ್ಷತ್ರವೂ ಒಂದಾಗಿರಲು ಸಾಧ್ಯವೇನು?

ದ್ರಾ.ಮು.ಕದ ಧುರೀಣರಿಗೆ ಮಂತ್ರಿಗಳಾಗಬೇಕಾಗಿತ್ತು. ಅಧಿಕಾರದ ಆಸೆ ಆದ್ಯಾವ ರಾಜಕೀಯ ಪಕ್ಷಕ್ಕಿಲ್ಲ? ರಾಜಾಜಿಯವರ ರಾದ್ಧಾಂತವಾದರೂ ಏತಕ್ಕಾಗಿ? ಹಂತ್ರಶಾಲಿ ರಾಜಾಜಿಯವರ ನೇತೃತ್ವದಲ್ಲಿ ಅವರು ಅಂತಸ್ತನ್ನೇರಿದರು. ಸಿಂಹಾಸನದ ಮೇಲೆ ಕೂತುಕೊಂಡ ಮೇಲೆ ಬೆಳಗ್ಗೆ ಎದ್ದೊಡನೆ ಬೋಳು ಮಂಡೆಯ ಹಾರುವನ ಮುಖವನ್ನು ನೋಡಬೇಕೇನ? ಇಷ್ಟು ಸನ್ಯ ಯ ಬ್ರಾಹ್ಮಣರಿಗೆ ಬೈಯುತ್ತಾ ಬಂದಿದ್ದು ಇದೀಗ ಆ ಅಭ್ಯಾಸವನ್ನು ಬಿಟ್ಟುಕೊಡಲು ಸಾಧ್ಯವೇನು? ಅದ ದ್ರಾ.ಮು.ಕ.ದ ಹುಟ್ಟು ಗುಣ ಅಲ್ಲವೆ? ತಮ್ಮ ಕೆಲಸವಾಗುವ ವರೆಗೆ ರಾಜಾಜಿಯವರನ್ನು ಆಚಾರ್ಯ— ಚಾಣಕ್ಯ.... ಏನೇನೋ ಅನ್ನುತ್ತಿದ್ದರು. ಕಾರ್ಯಕ್ಕಾಗಿ ಕತ್ತೆಯ ಕಾಲೂ ಹಿಡಿಯುತ್ತಾರಂತಲ್ಲವೆ? ಹಾಗೆನೇ ದ್ರಾ.ಮು.ಕ.ದವರು ಈ ಹಾರುವನ ಕಾಲು ಹಿಡಿಯಲೂ ಹೇಸಲಿಲ್ಲ. ಹಿಡಿದ ಕಾಲನ್ನು ಆಶೀರ್ವಾದ ದೊರೆತ ಮೇಲೆ, ಹಿಡಿದಿಳಿಸಬಾರದೆಂದೇನೂ ಒಪ್ಪಂದವಾಗಿದೆ? ತಮ್ಮ ಕೆಲಸವಾದ ಮೇಲೆ ದ್ರಾ.ಮು.ಕ. ವಿಷಜಂತು ರೋಸಪಡಿಸಲಾರಂಭಿಸಿತು. ಸ್ವತಂತ್ರ ಪಾರ್ಟಿಯನ್ನು ಕಡೆಗಣಿಸಲಾರಂಭಿಸಿತು. ಹಾಗಿದರೂ ಅಣ್ಣಾದೊರೈಯವರು ಎಲ್ಲವನ್ನೂ ಸಂದೂಗಿಸಿಗೊಂಡು ಹೋಗುತ್ತಿದ್ದರು. ಇತ್ತ ತನ್ನ ತಮ್ಮಂದಿರ ಮನ ನೋಯದಂತೆಯೂ ಅತ್ತ ಆಚಾರ್ಯರಿಗೆ ಅತೃಪ್ತಿಯಾಗದಂತೆಯೂ ಮಧ್ಯಮ ಮಾರ್ಗವನ್ನು ಅಣ್ಣಾದೊರೈಯವರು ವಹಿಸಿದರು. ದ್ರಾ.ಮು.ಕದವರಿಗೆ ಅದು ಬೇಡವಾಗಿತ್ತು. ರೋಗ ಬಳಲಿಸಿದ್ದೂ ಹಾಲು, ದೊರೆತದ್ದೂ ಹಾಲೆಂಬಂತೆ ಅಣ್ಣಾದೊರೈಯವರ ಅಕಾಲ ಮೃತ್ಯು ಸಂಭವಿಸಿತು. ಚಕ್ರವರ್ತಿ ಸಾಕ್ಷ್ಯದೊರೈಯವರ ತಡುವೆ ಕಂದಕ ಉಂಟಾಯಿತು. ದ್ರಾ.ಮು.ಕದ ಉಕ್ಕಿನ ಮನುಷ್ಯ ಕರುಣಾನಿಧಿ ಆಸನವನ್ನೇರಿದರು. ಅವರ ಹೆಸರೇನೋ ಕರುಣಾನಿಧಿ—ಹೆಸರೇನೋ ಲಕ್ಷ್ಮೀಕಾಂತ, ಲಕ್ಷ್ಮೀಪತಿ, ಧನಪಾಲ .... ಬೇಡಿದರೂ ಕಾಸು ಕೊಡುವಂತಿಲ್ಲ. ರಾಜಾಜಿಯವರ ಕರುಣೆಯ ನಿಧಿ ಬರಿದಾಗುತ್ತ ಬಂತು. ರಾಮಾಯಣ—ಮಹಾಭಾರತಗಳನ್ನು ತಮಿಳಿನಲ್ಲಿ ಬರೆದಿರುವ ರಾಜಾಜಿ, ದೇವರಲ್ಲಿ ನಂಬಿಕೆ ಇರುವ ರಾಜಾಜಿ, ಮೂರ್ತಿಪೂಜೆ ಮಾಡುತ್ತಿರುವ ರಾಜಾಜಿ ದ್ರಾ.ಮು.ಕ.ದವರು ಆಳುವದ ಅಹಂಕಾರದಿಂದ ಫೋಟೋ-ಫಲಕಗಳ ಅಪ್ಪಂದಿರಾಗಲು ಪ್ರಯತ್ನಿಸಿದಾಗಲೂ, ಕೌರವರಿಗೆ ಭೀಷ್ಮಾಚಾರ್ಯ—ದ್ರೋಣಾಚಾರ್ಯರು ಸಹಾಯ ಮಾಡಿದಂತೆಯೇ, ಈ ಆಚಾರ್ಯರೂ ದ್ರಾ.ಮು.ಕ.ದವರಿಗೆ ಸಹಾಯ ಮಾಡುತ್ತ ಬಂದರ. ದೇವರ

(ಎಂಟನೇ ಪುಟ ನೋಡಿರಿ)



ಬರೇ 5 ಪೈಸೆಯಲ್ಲಿ ನಿಮಗೆ ಸಂತಾನ ನಿರೋಧ ಶಕ್ತಿ

ನಿರೋಧ್ ಉಪಯೋಗಿಸಿರಿ

ಕುಟುಂಬ ಯೋಜನೆಗೆ ಅತ್ಯುತ್ತಮ ರಬ್ಬರ್ ಸಾಧನ

15 ಪೈಸೆಗೆ 3

ಸರ್ಕಾರದ ಸಹಾಯಧನದಿಂದಾಗಿ ಕಡಿಮೆ ಬೆಲೆ

ಬಯಸಿದಾಗ ದೊರೆಕುವ ಮಕ್ಕಳು

ನಿರೋಧ್ ಉಪಯೋಗಿಸುವುದರಿಂದ ನಿಮಗೆ ಇಷ್ಟಸಂತಾನ ಪ್ರಾಪ್ತಿ. ಅಂದರೆ, ಬೇಕಾದಾಗ ಮಾತ್ರ ಮಕ್ಕಳನ್ನು ಪಡೆಯುವ ಸೌಭಾಗ್ಯ.

ತಾಯಿ ಮತ್ತು ಮಗುವಿನ ಆರೋಗ್ಯ

ಪ್ರತಿ ಮಗುವಿಗೆ ಮೊದಲಿನ ಮೂರು ನಾಲ್ಕು ವರ್ಷ ವಿಶೇಷ ಆರೈಕೆಯ ಆವಶ್ಯಕವಿದೆ ಎಂದು ಡಾಕ್ಟರುಗಳು ಹೇಳುತ್ತಾರೆ. ಹೆರಿಗೆಯಾದ ಮೇಲೆ ಸ್ವಲ್ಪ ಸಮಯ ತಾಯಿಗೂ ವಿಶ್ರಾಂತಿ ಬೇಕು. ಅದಕ್ಕಾಗಿ ಎರಡು ಮಕ್ಕಳ ಜನನದ ನಡುವೆ ಸಾಕಷ್ಟು ಅಂತರವಿರುವಂತೆ ಮಾಡಬೇಕು.

ನಿರೋಧ್—ಗಂಡಸರು ಉಪಯೋಗಿಸುವ ಅತ್ಯುತ್ತಮ ಗುಣಮಟ್ಟದ ಗರ್ಭನಿರೋಧಕ ರಬ್ಬರು ಚೀಲ. ಇದನ್ನು ಪ್ರಪಂಚದಾದ್ಯಂತ ಉಪಯೋಗಿಸುತ್ತಿದ್ದಾರೆ. ಸರಳ, ಸುಲಭ ಹಾಗೂ ಸುರಕ್ಷಿತ ಸಾಧನವಿದು. ನಿರೋಧ್ ಉಪಯೋಗಿಸುವುದರಿಂದ ಪತಿ ಪತ್ನಿಯರ ಆರೋಗ್ಯಕ್ಕೆ ಏನೂ ಹಾನಿಯಾಗುವುದಿಲ್ಲ.

ನಿರೋಧ್ ದಿನಬಳಕೆ ವಸ್ತುಗಳನ್ನು ಮಾರುವ ಅಂಗಡಿಗಳಲ್ಲಿ, ಔಷಧಿ ವ್ಯಾಪಾರಿಗಳಲ್ಲಿ, ಬೀಡಾ ಅಂಗಡಿಗಳಲ್ಲಿ ಮತ್ತು ಇತರ ಸಾಮಾನುಗಳ ಮಾರಾಟಗಾರರಲ್ಲಿ ಮಾರಾಟವಾಗುತ್ತಿದೆ.

70/61

ಕೇಂದ್ರ ನಮ್ಮನ್ನು ಹೇಗೆ ನೋಡುತ್ತದೆ?

ಸೇನೆಯ ಆಸಕ್ತಿಯೇ ಇದಕ್ಕೆ ನೇರಗನ್ನಡಿ ಹಿಡಿಯುತ್ತದೆ

ಉತ್ತರ ಕರ್ನಾಟಕದಲ್ಲಿ ಮಹಾಜನ ವರದಿಯನ್ನು ಸಂಸತ್ತಿನ ಮುಂದೆ ಮಂಡಿಸಿದ ಪ್ರಧಾನಿ ಕೃತಿಯನ್ನು ವಿರೋಧಿಸಿದ ಸಂದರ್ಭ.

ಪ್ರದರ್ಶನ, ಮೆರವಣಿಗೆ, ಬಂದು ಮೊದಲಾದ ಸಹಜ ಪ್ರಚಲಿತ ಕ್ರಮಗಳು ಅಂಚೆ ಕಛೇರಿ, ರೈಲು ಬೋಗಿಗಳಿಗೆ ಬೆಂಕಿಯಿಡುವ ಹಂತಕವೂ ಮುಂದುವರಿದುವು. ಸತ್ಯಾಗ್ರಹವುದು ಹಿನ್ನಿಂದ ಮತ್ತಾಗುವುದು ಪನ್ನಿಂದ ಎಂಬಂತೆ ಕೆಲವೆಡೆ ಹಿಂಸೆಯು ನಡೆದೇ ಹೋಯಿತು.

ಸರ್ವೇ ಸಾಧಾರಣವಾಗಿ ಸಂಯಮದಿಂದ ವರ್ತಿಸುತ್ತಿರುವ ಕನ್ನಡಿಗರ ಸಂಯಮವೂ ತನಗೊಂದು ಮಿತಿಯೊಂದಿದೆಯೆಂದು ಹೇಳಿ ಬಿಟ್ಟಿತ.

ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರಾದಿ ನಾಯಕಾಗ್ರಣಿಗಳು ಬಗೆಬಗೆಯ ವಿನಂತಿ ಹೊರಡಿಸಿದರೂ ತಕ್ಷಣ ಕೊಚ್ಚಿಗೆದ್ದಿದ್ದ ಜನ ಶಾಂತವಾಗಲಿಲ್ಲ.

ಕಾಯಿದೆ ವ್ಯವಸ್ಥೆಗಳನ್ನು ಸಂರಕ್ಷಿಸಿಕೊಂಡು ಬರುವುದು ರಾಜ್ಯ ಸರಕಾರದ ಕರ್ತವ್ಯ. ಕನ್ನಡ ಸರಕಾರವೇ ಕನ್ನಡದ ಉಳಿವಿಗಾಗಿ ಚಳುವಳಿ ಹೂಡಿದ ಕನ್ನಡ ಪಾಳ್ಯದ ಮೇಲೆ ಕನ್ನಡ ಪೊಲೀಸರಿಂದಲೇ ಕ್ರಮ ಕೈಗೆತ್ತಿಕೊಂಡಿತು–ಇದು ಅದರ ಕರ್ತವ್ಯ.

ನಿಗಂತರ ಮನವಿಯ ನಂತರ ಹಿಂಸಾಚಾರ ನಿಂತು ಹೋಯಿತು.

ನಾಗರಿಕ ಅಧಿಕಾರಿಗಳು ಹಿಂಸೆಯನ್ನು ತಡೆಗಟ್ಟಲು ಹಲವಾರು ಬಗೆಯ ಪ್ರಯತ್ನ ನಡೆಸಿದ್ದರು; ಹೆಚ್ಚಿನವು ಫಲಪ್ರದವಾಗಿದ್ದುವು; ಒಂದೆರಡು ಅವರ ಕೈಗಳನ್ನು ಮೀರಿ ಹೋಗಿತ್ತು.

ಈ ನಡುವೆ ರಾಜ್ಯದ ಆಂತರಿಕ ವ್ಯವಹಾರದಲ್ಲಿ ಕೇಂದ್ರ ಸರಕಾರ ತೀವ್ರ ತಲೆಹಾಕಿದ ವಾರ್ತೆಗಳು ಬಂದುವು. ರಕ್ಷಣಾ ಶಾಖೆಯ ಸ್ಪಷ್ಟೀಕರಣ ಕೇಂದ್ರದ ಹಸ್ತಕ್ಷೇಪವನ್ನು ದೃಢ ಪಡಿಸಿತು.

ಸೈನಿಕ ಅಧಿಕಾರಿಗಳು ಶಾಂತಿಯನ್ನು ನೆಲೆಗೊಳಿಸುವಲ್ಲಿ ತಮ್ಮ ನೆರವು ಪಡೆಯುವಂತೆ ನಾಗರಿಕ ಅಧಿಕಾರಿಗಳನ್ನು ಕೇಳಿಕೊಂಡರಂತೆ.

ರಾಜ್ಯ ಸರಕಾರ ಬಯಸದೆ ಸೈನಿಕ ಅಧಿಕಾರಿಗಳು ನೆರವಿಗೆ ಮುಂದಾಗುವುದು ಪ್ರಾಯಃ ಕನ್ನಡ ನಾಡಿನಲ್ಲಿ ಮಾತ್ರವೆನಿಸುತ್ತದೆ.

ಕೇಂದ್ರದ ವಿಷಯವು ಪೋಲೀಸು ಪಡೆಯನ್ನು ರಾಜ್ಯದಿಂದ ಮರಳಿ ಕರೆದುಕೊಳ್ಳಬೇಕು ಎಂದು ಶ್ರೀ ನಂಬೂದಿರಿಪಾದರು ಕೇರಳದ ಮುಖ್ಯಮಂತ್ರಿಯಾಗಿದ್ದಾಗ ಕೇಳಿದ್ದುಂಟು.

ಶಿವಸೇನೆಯ ಉಪಟಳದಿಂದ ದಕ್ಷಿಣ ಭಾರತೀಯರು ಹಿಂಸೆಗೀಡಾಗಿದ್ದಾಗ ಮುಂಬಯಿಯಲ್ಲಿ ಸೈನಿಕ ಅಧಿಕಾರಿಗಳು ನಿದ್ರೆ ಮಾಡುತ್ತಿದ್ದರು.

ಪಶ್ಚಿಮ ಬಂಗಾಳದ ಬೀದಿ ಬೀದಿಯಲ್ಲಿ ಕೊಲೆ–ಸುಲಿಗೆ ಮಾನಾಪಹರಣಗಳು ಪ್ರತಿಕ್ಷಣವೆಂಬಂತೆ ನಡೆಯುತ್ತಿರುವಾಗಲೂ ಸೈನಿಕ ಅಧಿಕಾರಿಗಳು ತೆಪ್ಪಗಿದ್ದಾರೆ.

ಇವುಗಳನ್ನೂ ಇನ್ನೂ ಹಲವಾರನ್ನು ತುಲನೆ ಮಾಡಿದಾಗ, ಉತ್ತರ ಕರ್ನಾಟಕದ ಘಟನೆಗಳು ತೆಂಗಿನ ಮುಂದೆ ತುಂಬೆ ಮಾತ್ರ.

ರಾಜ್ಯ ಸರಕಾರ ನಾಗರಿಕ ಅಧಿಕಾರಿಗಳ ಮೂಲಕ ಶಾಂತಿ–ಸುವ್ಯವಸ್ಥೆಗಳನ್ನು ಸಂರಕ್ಷಿಸುತ್ತಿದ್ದಂತೆಯೇ ಕೇಂದ್ರದ ರಕ್ಷಣಾ ಶಾಖೆಗೆ ಇಲ್ಲಿ ತಲೆಹಾಕುವ ಅಗತ್ಯವೇನಿತ್ತು?

ಮುಖ್ಯಮಂತ್ರಿ ಶ್ರೀ ಪಾಟೀಲರು ಕೇಳುತ್ತಾರೆ–ರಾಜ್ಯದಲ್ಲಿ ಅರಾಜಕತೆ ಮೂಡಿದೆ ಎಂಬ ತಪ್ಪು ಕಲ್ಪನೆಯನ್ನು ಹರಡಿಸಿ ಕೇಂದ್ರದ ಹಸ್ತಕ್ಷೇಪಕ್ಕೆ ನಾಂದಿ ಮಾಡುವ ಕುತಂತ್ರವಿದು.

ಈ ತಂತ್ರದಲ್ಲಿ ಯಾರ್ಯಾರ ಕೈವಾಡವಿದೆ? ಮರಾಠಿಗರದ್ದು ಇರಬಹುದು; ಪ್ರಧಾನಿಯದ್ದು ಇರಬಹುದು.

ಅವರಾರಿದ್ದರೂ ಕಾಣಿಸದ ಕೊಡಲಿಯಿಂದ ಮರೆಯಾಗದು.

ರಾಜ್ಯ ಇಂಡಿಕೇಟಿಗರೂ ಇದ್ದಾರೆಯೇ ಎಂಬ ಸಂದೇಹ.

ಮೊದಲಿನಿಂದಲೂ ದ್ವಿಕರ್ನಾಟಕವಾದಿಗಳಾಗಿದ್ದರೇ ತುಂಬಿ ತುಳುಕಾಡುತ್ತಿರುವ ರಾಜ್ಯದ ಇಂಡಿಕೇಟರು ಪ್ರಧಾನಿಯ ಕೃತಿ ಕೃತಿಯನ್ನೂ ಸಮರ್ಥಿಸುವ ಸಂಗಿನಲ್ಲಿ ಬೆಳಗಾಂವಿಯ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಶಾಂತರಾಗಿರಲು ಜನತೆಯನ್ನು ಯಾರೂ ಕೇಳಿಕೊಳ್ಳಲಿಲ್ಲ.

ಬೆಂಗಳೂರು ಕಾರ್ಪೊರೇಶನ್‌ನ ಅದ್ಭುತ ವಿಜಯ ಮತ್ತು ಮುನ್ಸಿಪಲ್ ಚುನಾವಣೆಗಳ ದಿಗ್ವಿಜಯದಿಂದವರ ಉತ್ಸಾಹದಲ್ಲೇ ರಾಜ್ಯದಲ್ಲಿ ಕೇಂದ್ರದ ಹಸ್ತಕ್ಷೇಪ ನಡೆಸಿ ಮಧ್ಯಾವಧಿ ಚುನಾವಣೆ ನಡೆಸುವ ಗತ್ತುಗಾರಿಕೆ ತೋರಿಸುತ್ತಿರಬಹುದೆ?

ಅಷ್ಟು ದೂರ ಹೋಗುವುದು ಕಲ್ಪನೆಯ ಕುದುರೆಯು ಲಗಾಮು ಕಳಚಿದಂತಾದೀತು.

ದೇ. ಜ. ಗೌ. ಮೊಳಗಿದ

ಕನ್ನಡ ಪಾಂಚಜನ್ಯ

ಆಡಳಿತ ಭಾಷೆ

ಕನ್ನಡ ಗದ್ಯದ ಬೆಳವಣಿಗೆ ಶಿಕ್ಷಣ ಮಾಧ್ಯಮವನ್ನವಲಂಬಿಸಿದೆ. ಶಿಕ್ಷಣ ಮಾಧ್ಯಮದ ಯಶಸ್ಸು ಆಡಳಿತ ಮಾಧ್ಯಮವನ್ನವಲಂಬಿಸಿದೆ. ಆಡಳಿತ ಮಾಧ್ಯಮದ ಅನುಷ್ಠಾನ ಹಿಡಿ ಮಂದಿ ಅಧಿಕಾರಿಗಳ ಮನೋಧರ್ಮವನ್ನವಲಂಬಿಸಿದೆ. ಪರಭಾಷೆಯು ಆಡಳಿತ ಮಾಧ್ಯಮವು ಪ್ರಜಾಸತ್ತೆಯು ಮಾಡಿಕೊಳ್ಳುವ ಅವಹೇಳನ. ಪರಭಾಷಾ ಶಿಕ್ಷಣ ಮಾಧ್ಯಮದ ಮುಂದುವರಿಕೆ ಶಿಕ್ಷಣ ಕ್ಷೇತ್ರದ ಅಸ್ತಿತ್ವವನ್ನೇ ಪ್ರಶ್ನಿಸುವ, ಅದರ ವಿಫಲತೆಯನ್ನು ಸಾರುವ ಅನಿಷ್ಟ. ಜಗತ್ತಿನ ಯಾವ ಸ್ವತಂತ್ರ ರಾಷ್ಟ್ರದಲ್ಲಿಯೂ ಇಂಥ ಶೋಚನೀಯ ಪರಿಸ್ಥಿತಿಯಿಲ್ಲ. ಗುರು ಶಿಷ್ಯರಿಗೆ ಹಾಗೂ ಮಂತ್ರಿ ಪ್ರಜೆಗಳಿಗೆ ಹೃದಯ ಸಂವಾದವಿಲ್ಲವಾದಾಗ, ಶಿಷ್ಯನ ಏಳಿಗೆಯಾಗಲಿ, ಪ್ರಜೆಯ ಕ್ಷೇಮ ಸಾಧನೆಯಾಗಲಿ ಸಾಧ್ಯವಾಗುವುದಿಲ್ಲ. ಈ ಹೃದಯ ಸಂವಾದ ಸ್ವಭಾಷೆಯ ಮೂಲಕ ಸಾಧ್ಯ. ದೇಶ ಭಾಷೆಯಲ್ಲಿ ಪಾಠ ಕಲಿಯುವುದೆಂತು ವಿದ್ಯಾರ್ಥಿಯ ಹಕ್ಕೋ ಅಂತೆಯೇ ಆ ಮೂಲಕ ತನಗೆ ಆಡಳಿತ ಬೇಕೆಂದು ಕೇಳುವುದು ಪ್ರಜೆಯ ಹಕ್ಕು.

ಕೇಂದ್ರ ಸರ್ಕಾರಕ್ಕೆ ಕನ್ನಡಿಗರೂ ಕರ್ನಾಟಕವೂ ಎಷ್ಟು ಚಿಕ್ಕದಾಗಿ ತೋರುತ್ತಾರೆಂಬುದಕ್ಕೆ ಈ ಘಟನೆ ಸಾಕ್ಷಿ.

ಜೂಕೆ ಹೇಗೆ?

ಒಂದು ಕಾಲದಲ್ಲಿ ವಿಶಾಲ ಮನೋವೃತ್ತಿಯುಳ್ಳವರಾದ ಕನ್ನಡಿಗರು ಇಂದು ಸಂಕುಚಿತ ಬುದ್ಧಿಯನ್ನು ತೋರಿಸುತ್ತಿದ್ದಾರೆಯೆ?

ಊರಿಗೆ ಹಾದಿ ಬಿದ್ದರೇನು, ಕಷ್ಟ ರೊಟ್ಟಿ ತುಪ್ಪಕ್ಕೆ ಬಿದ್ದರೆ ಸಾಕು ಎಂಬ ನೀಚ ಮನೋಭಾವ ನಮ್ಮದೆ?

ಶ್ರೀ ಕೆಂಗಲ್ ಮೊದಲಾದ ಕೇಂದ್ರ ನಾಯಕರ ವರ್ತನೆ ಇದನ್ನೇ ಪುಷ್ಟೀಕರಿಸುತ್ತದೆ.

ವೈಗಳ್ಳ ವಿಜ್ಞಾನಿಗಳ

ಕನ್ನಡ ನಾಡಿನ ವಿಜ್ಞಾನ ಕ್ಷೇತ್ರದಲ್ಲಿ ತಪ್ಪಿಗಾಗಿ ಹಾಕುತ್ತಿದೆ. ವಿದೇಶೀ ಶಿಕ್ಷಣ ಪದ್ಧತಿಯಿಂದ ಆತ್ಮವಿಶ್ವಾಸವನ್ನು ಕಳೆದುಕೊಂಡಿರುವ ಭಾರತೀಯರಲ್ಲಿ ಸ್ವತಂತ್ರ ವಿಚಾರಧಾರೆಗಳಾಗಲೀ, ವ್ಯವಸ್ಥಿತವಾದ ಸಂಶೋಧನೆಗಳಾಗಲೀ ಕಾಣಬರಲಿಲ್ಲ. ಪರಭಾಷಾ ಮಾಧ್ಯಮ ಜನರ ಪ್ರತಿಭೆಯನ್ನು ಹಿಂಗಿಸಿತು; ಕಲ್ಪನಾಸಾಮರ್ಥ್ಯವನ್ನು ಬಂಜೆಗೊಳಿಸಿತು; ಬುದ್ಧಿಶಕ್ತಿಯನ್ನು ಕುಬ್ಜಗೊಳಿಸಿತು. ಇದರಿಂದ ಇಂದಿನವರಲ್ಲೇ ವಿಜ್ಞಾನ ಪ್ರಜ್ಞೆ ಮೂಡಲಿಲ್ಲ, ವೈಜ್ಞಾನಿಕ ಮನೋಭಾವ ಜನಜೀವನಕ್ಕಿಳಿಯಲಿಲ್ಲ. ಪರಭಾಷೆ ಸ್ವತಂತ್ರಾಲೋಚನೆಗೆ ಮಾರಕ; ವಿಚಾರಶಕ್ತಿಗೆ ಬಾಧಕ. ಹೊಸ ಕ್ಷೇತ್ರಗಳಲ್ಲಾಗಲೀ ವ್ಯಾಕರಣ, ಬೋಧ, ಚರ್ಚೆ, ಚಿಂತನ, ಮಂಥನ, ಭಾಷಣ ಮೊದಲಾದವುಗಳಿಂದ ನಡೆದದ್ದಾಗಲಿ, ಇದಕ್ಕೆ ಸಂಬಂಧಿಸಿದ ಭಾಷೆ ಸಂಸ್ಕಾರಗೊಳ್ಳುತ್ತದೆ. ಆ ಧರ್ಮಾಭ್ಯಾಸಗಳಿಂದ ಪ್ರತಿಭೆಯನ್ನು ವಿಕಸಿತಗೊಳಿಸಿಕೊಂಡ ಜ್ಞಾನಸಂಪತ್ತನ್ನು ವ್ಯಕ್ತಿಸಿಕೊಂಡ ಜೀವನದರ್ಶ ವೈಜ್ಞಾನಿಕ ಸಾಹಿತ್ಯವನ್ನು ನಿರ್ಮಾಣ ಮಾಡಿ ಸೃಷ್ಟಿಸಬಹುದು. ಕನ್ನಡದಲ್ಲಿ ವೈಜ್ಞಾನಿಕ ಗ್ರಂಥಗಳಿಲ್ಲ; ಇದಕ್ಕೆ ನಮ್ಮ ಪಂಡಿತರೇ ಕಾರಣ.

ಶಬ್ದ ಸೃಷ್ಟಿ ಹೇಗೆ?

ಪ್ರತಿಭಾ ಸಾಮರ್ಥ್ಯವಿದ್ದು, ಶಬ್ದಾಭಿರುಚಿಯಿದ್ದು, ಜ್ಞಾನಾರ್ಜನೆಯ ಕುತೂಹಲವಿದ್ದು ತಾನು ತಿಳಿದುದನ್ನು ಮತ್ತೊಬ್ಬನಿಗೆ ತಿಳಿಸಬೇಕೆಂಬ ಹಂಬಲವಿದ್ದರೆ, ಶಬ್ದಗಳು ತಮಗೆ ತಾವೇ ಸೃಷ್ಟಿಯಾಗುತ್ತವೆ. ಈಗ ನಮಗೆ ಬೇಕಾಗಿರುವುದು ಶಬ್ದಗಳಲ್ಲ; ಶಬ್ದಗಳನ್ನು ಸೃಷ್ಟಿಸುವ ವಿದ್ವಾಂಸರು ... ಭಿಮಾನ ... ಭಾಷಾಭಿಮಾನ ... ಬೇಕಾಗಿದೆ.

ಜಾನಪದ ಖನಿ

ಕನ್ನಡ ಸಂಸ್ಕೃತಿಯ ಅಧ್ಯಯನಕ್ಕೆ ಹಾಗೂ ಅದರ ಸಂಶೋಧನೆಯಲ್ಲಿ ಗಣ್ಯ ಪಾತ್ರ ವಹಿಸಬೇಕಾದ ಜಾನಪದ ಜನನ್ನು ನಿರ್ಲಕ್ಷಿಸಲಾಗುತ್ತಿರುವುದು ದುರ್ದೈವ. ಅನೇಕ ಜ್ಞಾನ ವಿಜ್ಞಾನ ಶಾಖೆಗಳಿಗೆ ಮೂಲ ಸ್ರೋತವಾದ ಜಾನಪದ ಸಾಹಿತ್ಯವನ್ನು ಸಮರ್ಥವಾಗಿ ಬಳಸಿಕೊಳ್ಳುವ ತನಕ ಸಂಸ್ಕೃತಿ, ಸಾಹಿತ್ಯ, ಮಾನವಶಾಸ್ತ್ರಗಳನ್ನು ಕುರಿತ ಅಧ್ಯಯನ ಸಂಪೂರ್ಣವಾಗುವುದಿಲ್ಲ. ನಮ್ಮ ಕಲೆ ಹಾಗೂ ವಿಜ್ಞಾನದ ಬೇರುಗಳು ಜಾನಪದದ ಬಸಿರಲ್ಲಿ ಗುರುತಿಸಬಹುದಾಗಿದೆ. ಆಧುನಿಕ ನಾಗರಿಕತೆಯ ಮಾಯೆ ಕಾಲುಬೆಗೆ ಸಿಕ್ಕಿ ಅನಾದರಕ್ಕೊಳಗಾಗಿರುವ ಮುನ್ನ, ಜೀವನದ ಮೌಲ್ಯಗಳೆಲ್ಲ ರೂಪಾಂತರ ಹೊಂದಿ, ಅದು ವಿಸ್ಮೃತಿಯ ಗರ್ಭದಲ್ಲಿ ಹುದುಗಿಹೋಗುವ ಮುನ್ನ, ಅವನ್ನು ಸಂಗ್ರಹಿಸಿ, ವಿಶ್ಲೇಷಿಸಿ, ವ್ಯವಸ್ಥೆಗೊಳಿಸಬೇಕಾದುದು ನಾಡಿನ ಆದ್ಯ ಕರ್ತವ್ಯ. ಈಗಾಗಲೇ ಈ ನಿಟ್ಟಿನಲ್ಲಿ ತಕ್ಕ ಮಟ್ಟಿಗೆ ಕೆಲಸ

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಪಡೆಯಾಗಿ ಘೋಷ; ಅವರ ನಡೆಗೆ ಬೇಕಾದ ಹತ್ತು ಸಾವಿರ ಸಹಿ ಪಡೆಯಲಾಗಿದೆ.

ತಾಯಿಗೆ ಗೌರವ ನೀಡಿ

ನಮ್ಮ ತಾಯಿಗೆ ನಾವಲ್ಲದೆ ಹೊರಗಿನವರು ಗೌರವ ಕೊಡಲು ಸಾಧ್ಯವುಂಟೆ? ನಮ್ಮ ಭಾಷೆಗೆ ನಾವೇ ಪುರಸ್ಕಾರ ನೀಡದಿದ್ದರೆ ವಿದೇಶೀಯರಿರಲಿ, ಕೇಂದ್ರ ಸರಕಾರವೂ ಅದರ ಕಡೆ ತಿರುಗಿ ನೋಡುವುದಿಲ್ಲ.

ಆಕಾಶವಾಣಿ, ಯೋಜನಾ ಮೊದಲಾದ ಕೇಂದ್ರ ಸರಕಾರದ ಪತ್ರಿಕೆಗಳು ಬೇರೆ ಭಾಷೆಗಳಲ್ಲಿ ಪ್ರಕಟವಾಗುತ್ತಿರುವಂತೆ ಕನ್ನಡದಲ್ಲಿ ಆಗುತ್ತಿಲ್ಲ. ಕನ್ನಡದಲ್ಲಿ ಅವು ಪ್ರಕಟವಾಗುವವರೆಗೆ ಅವುಗಳನ್ನು ಮಾತ್ರವಲ್ಲ, ಕೇಂದ್ರ ಸರಕಾರದ ಎಲ್ಲ ಪ್ರಕಟಣೆಗಳನ್ನೂ ಬಹಿಷ್ಕರಿಸಬೇಕು. ಇದಕ್ಕೂ ಮಣಿಯದಿದ್ದಲ್ಲಿ ನೇರ ಕ್ರಮ ಅನಿವಾರ್ಯವಾಗುತ್ತದೆ.

ಕನ್ನಡದ ಶ್ರೀಮಂತಿಕೆ ಹೊರಗಿನವರಿಗೆ ಅರಿವಾಗಬೇಕಾದರೆ ಹೊರನಾಡ ಕನ್ನಡಿಗರು ಕನ್ನಡದ ರಾಯಭಾರಿಗಳಾಗಬೇಕು. ಜತೆಗೆ ಇಂಗ್ಲಿಷಿನಲ್ಲಿ ಕನ್ನಡ ಭಾಷಾ ಸಾಹಿತ್ಯಗಳ ಹಾಗೂ ಕರ್ನಾಟಕ ಚರಿತ್ರೆಯ ಸ್ಥೂಲ ರೂಪರೇಖೆಗಳನ್ನಾದರೂ ಪರಿಚಯಿಸಿಕೊಡಬೇಕು. ಕನ್ನಡದ ಶ್ರೇಷ್ಠ ಗ್ರಂಥಗಳನ್ನೂ ಇಂಗ್ಲಿಷಿಗೆ ತರ್ಜುಮೆ ಮಾಡಬೇಕು.

ನಿಮ್ಮ ಹಣ ನನ್ನ ಜೇಬಿಗೆ

ಬೆಳಗಾಂವಿ ಎಲ್ಲಿದ್ದರೇನು, ಕಾಸರಗೋಡು ಎಲ್ಲಿದ್ದರೇನು? ಎಂತಿದ್ದರೂ ಅವು ಭಾರತದ ಭಾಗಗಳೇ ಎಂದು ಪ್ರಶ್ನಿಸುವವರು ನಮ್ಮಲ್ಲಿದ್ದಾರೆ. ಹಣ ಎಲ್ಲಿದ್ದರೇನಂತೆ? ನಿಮ್ಮ ಜೇಬಿನಲ್ಲಿದ್ದರೇನು? ನನ್ನ ಜೇಬಿನಲ್ಲಿದ್ದರೇನು? ಎಂದು ಕೇಳಿದರೆ, ಅವರೇನು ಉತ್ತರ ಹೇಳುತ್ತಾರೆಯೋ ಕಾಣೆ.

ದುರ್ಬಲ ಸರಕಾರ

ಉಭಯ ಪಕ್ಷಗಳ ಸಮ್ಮತಿಯಿಂದ ರಚನೆಗೊಂಡ ಮಹಾಜನ ಆಯೋಗದ ವರದಿಯನ್ನು ಜಾರಿಗೆ ತರಲಾಗದ್ದು ಸರಕಾರದ ದೌರ್ಬಲ್ಯಕ್ಕೆ ಸಾಕ್ಷಿ. ಕನ್ನಡಿಗರ ಮುಖಕ್ಕೆಸೆದ ಸವಾಲಾಗಿದೆ.

ಇಂದು ಬೆಳಗಾವಿ ನಾಳೆ....?

ಕನ್ನಡಿಗರು ತಂತಮ್ಮ ಭಿನ್ನತೆಯನ್ನು ತೊರೆದು, ಸ್ವಾರ್ಥವನ್ನು ಮರೆತು, ಒಟ್ಟುಗೂಡಿ ಧೈರ್ಯದಿಂದ ವರ್ತಿಸದಿದ್ದರೆ, ಬೆಳಗಾಂ ಕಳೆದು ಹೋದೀತು. ಅದರ ಹಿಂದೆ ಒಂದಾದ ಮೇಲೊಂದು ಜಿಲ್ಲೆಗಳು, ನಗರಗಳು ಕೈಬಿಟ್ಟಾವು.

(ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ)

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 1616/70

Between:

ಶಂಭು ಉಪಾಧ್ಯಾಯ ವಗೈರಾ — ಅರ್ಜಿದಾರರು

ಮತ್ತು

ಶಾಂತ ಗೌಡ ವಗೈರಾ — ಎದುರು ಕಕ್ಷಿ

ಎದುರಿಗೆ— ರಾಮಣ್ಣ, ಶಾಂತ ಗೌಡರ ಮಗಳು, ಆರ್ಲಪದವು ಗ್ರಾಮ, ಪುತ್ತೂರು ತಾಲೂಕು.

ಮೇಲಿನ ನಂಬ್ರದ ಕೇಸು ಬಾಕಿ ಬಗ್ಗೆ ಅರ್ಜಿದಾರರು ಅರ್ಜಿ ಮಾಡಿಕೊಂಡಿರುತ್ತಾರೆ. ಅದರ ವಿಚಾರಣೆಯು ತಾರೀಕು 11-1-71ಕ್ಕೆ ಇಟ್ಟಿರುತ್ತದೆ. ಆ ದಿವಸ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ಏಕಪಕ್ಷ ತೀರ್ಮಾನ ಮಾಡಿ ದಾವೆಯನ್ನು ತೀರ್ಮಾನಿಸಲಾಗುವುದೆಂದು ಕೋರ್ಟಿನ ಹುಕುಂ ಮೇರೆಗೆ ನಿಮಗೆ ಈ ಮೂಲಕ ತಿಳಿಯಪಡಿಸಲಾಗಿದೆ.

Sd/ K. T. Bhat
Adv. for Petitioners

Puttur, S. K. 11—12—70.

ಕಡಲೆ ಕಾಳುಗಳು

ಚುನಾವಣೆಗಳಲ್ಲಿ ಗೆದ್ದು ಬಂದರೆ, ತಮ್ಮ ಸರಕಾರವು ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುವುದೆಂಬ ವಿರೋಧಿ ಪಕ್ಷಗಳ ಆಪಾದನೆಯನ್ನು ಪ್ರಧಾನಿ ಶ್ರೀಮತಿ ಗಾಂಧಿಯವರು ನಿರಾಕರಿಸಿದರು.

—ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಹೇಳುವುದೆಂದೂ ಕೂಡ ಸರಿಯೆನ್ನೋಣವೆ ಎಂಬುದಕ್ಕೆ ಈ ಐದು ವರ್ಷಗಳಲ್ಲಿ ಸಾಕಷ್ಟು ನಿದರ್ಶನಗಳವೆಯಲ್ಲವೇನು?

—ಲೋಕಸಭೆಗೆ ವಿಸರ್ಜನೆಯಿಲ್ಲವೆಂದು ಕೊನೆಯ ದಿನದ ವರೆಗೂ ಉದ್ಘೋಷಿಸಿ ವಿರೋಧಿ ಪಕ್ಷಗಳ ಊಹನೆಯನ್ನು ಬರಿಯ ಭ್ರಾಂತ ಕಲ್ಪನೆಯೆಂದದ್ದನ್ನು ಹೇಗೆ ಮರೆಯೋಣ?

—ಸಂವಿಧಾನ ತಿದ್ದುಪಡಿ ಕೂಡ ನಮ್ಮ "ಜಯ" ತಮಗೆ ಲಭಿಸುವುದಿಲ್ಲವೆಂದು ಅಳೆಯ ಭವಿಷ್ಯ ಸೂಚನೆಯೇ ಇದ?

—ನಗರ ಮತ್ತು ಗ್ರಾಮಗಳಲ್ಲಿ ಜೊಂಡಿನಟಾದ ಆಸ್ತಿಯ ಮೇಲೆ ಮಿತಿ ಹೇರಬಯಸುವ ಇರಾದೆ ಮಾತ್ರ ಆಳಿಗದೆಯಂತೆ.

—ಜತೆಗೆ "ಆಸ್ತಿ" ಪದಕ್ಕೆ ತನಗೆ ಯುಕ್ತ ಕಂಡಂತೆ ಅರ್ಥ ಕೊಡುವ ಶಕ್ತಿಯೂ ಇದೆ.

—ಇದನ್ನು ಸಾಧಿಸಲು ಅದ ಕೇವಲ ಬಹುಮತ ಗಳಿಸಿದರೆ ಸಾಕು. ಅದು ಯಾವ ರೀತಿಯಾದರೂ ಇರಬಹುದು.

೦ ೦ ೦

ಶ್ರೀ ನೀಲಂ ಸಂಜೀವ ರೆಡ್ಡಿಯವರಿಗೆ "ನನಗ್ಯಾಕೆ ಇನ್ನೇನಾಗಿದೆ" ಎಂದು ಸಮಸ್ಯೆ. ಹಳೆಯರು ಅಧಿಕಾರ ಬಿಟ್ಟುಕೊಡಲು ಸಿದ್ಧರಿಲ್ಲ ಎಂಬ ಭಾವನೆ ಯುವಕರಲ್ಲಿ ತುಂಬಿದೆ ಎಂದೇ ಅವರ ಉತ್ತರ.

—ಆ ಭಾವನೆಯನ್ನು ಹೋಗಲಾಡಿಸಲು ತಾವು ಮುಂದೆ ಚುನಾವಣೆಗಳಲ್ಲಿ ಸ್ಪರ್ಧಿಸುವುದಿಲ್ಲ ಎಂಬ ಅಭಯದಾನ.

—ಶ್ರೀ ಎಸ್ಸೆನ್ನರೂ ಅಂಥದೇ ಭರವಸೆ ನೀಡಿದ್ದಾರೆ.

—ಶ್ರೀ ಕಾಮರಾಜರದು ಪಾತಾಳಲೋಕದಲ್ಲೇ ಉಳಿದಿದೆ.

—ಶ್ರೀ ಎಸ್. ಕೆ. ಪಾಟೀಲರಂತೂ ಇನ್ನು ಒಂದು ಬಾರಿಯಾದರೂ, ಚುನಾವಣೆಗಳಲ್ಲಿ, ಗೆದ್ದು ಮುಂಬಯಿಯ ಜನರಿಂದಲೇ ಅವರೇ ಹಚ್ಚಿದ ಮಸಿಯನ್ನು ತೊಳೆಸಬೇಡವೆ?

—ಶ್ರೀ ಮೊರಾರ್ಜಿ ಭಾಯಿ ಪ್ರಧಾನಿ ಗಾಂಧಿಗೆ ಪ್ರಬಲ ಪ್ರತಿಸ್ಪರ್ಧಿಯಾಗಿರುವುದರಿಂದ ಅಷ್ಟು ಬೇಗನೆ ಚುನಾವಣೆಗಳಿಂದ ನಿವೃತ್ತರಾದರೆ ಹೇಗೆ?

—ಮತ್ತೆ ಉಳಿದವರು? ಪ್ರಗತಿಗಾಗಿ ಗಾಂಧಿಯವರೇ ಅವರ ಪಾಲಿನ [illegible] ಯರುಗಳೆಲ್ಲರಿಗೂ ಟಿಕೇಟು ನೀಡಲು ನಿರಾಕರಿಸಿರುವಾಗ, ಇವರೂ ಟಿಕೇಟು ಕೇಳದೆ ಬಾರದೇಕೆ?

೦ ೦ ೦

ಇಂಡಿಕೇಟಿನಲ್ಲಿ ಬಹುಶಃ ಎಲ್ಲ ಚುನಾವಣೆ ಟಿಕೇಟು ದೊರೆಯಲಿದೆ. ಆದ್ದರಿಂದ ಚುನಾವಣಾ ರಂಗಕ್ಕಿಳಿಯುವ ಟಿಕೇಟಿನ ಬೆಲೆ ಕಡಿಮೆಯಾಗಲಿದೆ [illegible] ದೊರೆಯುವ ನಿರೀಕ್ಷೆ.

—ಲೋಕಸಭೆಯ ೫೨೫ ಸ್ಥಾನಗಳಲ್ಲೂ ಅದು ತನ್ನ ಹುರಿಯಾಳುಗಳನ್ನು ಸ್ಪರ್ಧಿಸಲು ಅವಕಾಶ ನೀಡುವುದು.

—ಹಾಲಿ ಇರುವ ೨೨೦ ಸದಸ್ಯರ ಪೈಕಿ ಹಳೆಯ ಟಿಕೇಟುಗಳನ್ನೇ [illegible] ನೀಡಬೇಕಾಗಿದೆ. ಮಿಕ್ಕ ೩೦೦ ಟಿಕೇಟುಗಳು ಉಳಿಯುತ್ತವೆ.

ಈ ಸಂಖ್ಯೆ ಕಳೆದ ಚುನಾವಣೆಗಿಂತ ಹೆಚ್ಚು.

—ಹಿಂದೆ ಬಯಸಿದವರಿಗೂ ಹೆಚ್ಚಿದ್ದನ್ನು ನೀಡಿ.

—ಅದು ನಿಜವಾದರೂ [illegible] ಪ್ರಧಾನಿ ಗಾಂಧಿಗೆ ಸೇರಿಗೆ, ಸಮಾಜ[illegible]ವಾದದಿಂದ ಆಕರ್ಷಿತರಾದ [illegible] ಸಮಾಜವಾದಿಗಳೂ, ಬೇರೆ [illegible]ಗಳೂ ಇದ್ದಾರೆ.

—ಆದರೂ, ಇಂಡಿಕೇಟ [illegible] ಉದಾರವಾಗಿ ಟಿಕೇಟು ಮಾರುವ [illegible] ಇದೆ.

—ಉಳಿದ ಪಕ್ಷಗಳು [illegible] ಕೆಲ ಹೆಸರಲ್ಲಿ ಟಿಕೇಟು [illegible] ಗಿನ್ನೂ ಮಾಡಿಕೊಂಡಿವೆ.

ಮಾಸ, ಎಸ್ [illegible]

—ಸರಕಾರಿ ಬೊಕ್ಕಸಕ್ಕೆ ಎಷ್ಟು ನಷ್ಟ!

ಸಂದರ್ಶಿಸಿರಿ—ಸಂತೃಪ್ತರಾಗಿರಿ!!

ಚಿನ್ನ ಬೆಳ್ಳಿ ವಜ್ರ ಗಳಿಗೆ, ಆಧುನಿಕ ಫ್ಯಾಷನ್‌ನ ಆಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಾಫಿ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಾಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಓರ್ವೊ ಫಿಲ್ಮುಗಳ ಅಧಿಕೃತ ವ್ಯಾಪಾರಿಗಳು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res;3272

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಮನೆ-ಮದ್ದು

ಗೃಹವೈದ್ಯ — ರೂ.2.00

ಪ್ರತಿಯೋರ್ವನೂ ನಿತ್ಯ ಓದಿ ಬೋಧಪಡೆಯಬೇಕಾದ

ಗೀತೆಯ ಕೈಗನ್ನಡಿ

ರೂ. 1.50

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ.2.00

ಸುಲಭದಲ್ಲಿ ಪತ್ರಲೇಖನ

Letter Writing Made Easy

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನನಿತ್ಯ ಪತ್ರ ಸಂಕಲನ — ಬೆಲೆ ರೂ. 1-50

ನವಭಾರತ ಪುಸ್ತಕ ಭಂಡಾರ

ಉಡುಪಿ. ದ. ಕ.

ಸ್ವತಂತ್ರ ಪಾರ್ಟಿ—ದ್ರಾ.ಮು.ಕಳ್ರಗಂ ಕಟಿಪಿಟಿ

(ಐದನೇ ಪುಟದಿಂದ)

ಷ್ಟು ನಂಬುವವರು ಮುಟ್ಟಾಳರೆಂದು ದ್ರಾ.ಮು.ಕ.ದವರೆಂದಾಗಲೂ ಅವರು ಕರುಣಾನಿಧಿಯೂ ಸ್ಪೈ ಬಿಡಲಿಲ್ಲ. ದೇವಸ್ಥಾನದಲ್ಲಿ ಅಣ್ಣಾದೊರೈಯವರ ಭಾವಚಿತ್ರವನ್ನು ಇಟ್ಟಾಗಲೂ ಆಚಾರ್ಯರು ಅದು ತಪ್ಪೆನ್ನಲಿಲ್ಲ. ದೇವಸ್ಥಾನಗಳ ಆಡಳಿತ ನಡೆಸಲು ಧರ್ಮವಿರೋಧಿ ದ್ರಾ.ಮು.ಕ.ದವರನ್ನು ವಿಶ್ವಸ್ಥರನ್ನಾಗಿ ದ್ರಾ.ಮು.ಕ. ಸರಕಾರ ನೇಮಿಸಿದಾಗಲೂ ಅದನ್ನು ರಾಜಾಜಿ ಖಂಡಿಸಲಿಲ್ಲ. ತಮಿಳ್ನಾಡಿನಲ್ಲೆಲ್ಲ ಅಣ್ಣಾದೊರೈಯವರ ವಿಗ್ರಹಗಳನ್ನಿಟ್ಟಾಗಲೂ ರಾಜಾಜಿ ತುಟಿ ಎರಡು ಮಾಡಲಿಲ್ಲ. ಇಷ್ಟಾದರೂ ರಾಜಾಜಿಯವರಿಗೆ ಮನೋವೇದನೆಯಾಗಲಿಲ್ಲವೆಂದು ಕಾಣುತ್ತೆ. ಆದರೆ ದ್ರಾ.ಮು.ಕ.ವು ಇಂದಿರಾಜಿಯವರೊಡನೆ ಸೇರಿಕೊಂಡಾಗ ಮನಸ್ಸಿಗೆ ಕಷ್ಟವಾಯಿತು. ಅರರೇ! ತಾನು ಸಾಕಿ ಸಲಹಿದ ನನ್ನ ಕರುವಾರಿ ಬೇರೊಬ್ಬ ಕಸಾಯಿ ಗಾರರ ಹತ್ತಿರ ಹೋಗುತ್ತಿದೆಯಲ್ಲವೇ! ಅದು ಕುರಿಮರಿಯಲ್ಲ, ತೋಳದ ಮರಿಯೆಂಬುದು ಹಗೆಯ ಹೊಗೆಯಲ್ಲಿ ಕಣ್ಣು ಮುಚ್ಚಿಕೊಂಡಿದ್ದ ರಾಜಾಜಿಯವರಿಗೆ ಗೊತ್ತಾಗಲಿಲ್ಲವೋ.... ತಿಳಿದೂ ತನ್ನ ವೈರಿಯನ್ನದು ತಿನ್ನಬೇಕೆಂಬ ಆಶೆಯಿಂದ ಸಾಕಿ ಸಲಹುವ ಎದ್ದಿತ್ತರೋ, ಏನೋ? ರಾಜಾಜಿಯವರ ಮನಸ್ಸಿನ ಲ್ಲೇನಿದೆನ್ನುವದು ಬಹಳ ಕಷ್ಟ.

ರೌಂಡಿಕ ದಕಿಶ್ಯಾಸನವನ್ನು ಕಂಡು ಆಚಾರ್ಯರು ತುಟಿ ಎರಡು ಮಾಡದೆ ಇರಲಿಲ್ಲವೇ? ಅದೇ ರೀತಿ ದ್ರಾ. ಮು. ಕ. ಸುರಾಡಳಿತ ದಕಿಶ್ಯಾಸನವನ್ನು ಕಂಡು ಆಚಾರ್ಯರು ತುಟಿ ಎರಡು ಮಾಡಲಿಲ್ಲ. ರಾಷ್ಟ್ರಾಧ್ಯಕ್ಷ ಚುನಾವಣೆ, ರಾಜಧನ ರದ್ದು ರಾಡ್ದಾಂತಗಳ ಸಮಯ ದ್ರಾ. ಮು. ಕ. ದುಡುಕಿದ ರೀತಿ ಕಂಡ ಡಿಲ್ಲಿಯ ಆಚಾರ್ಯರಿಗೆ (ರಂಗಾರವರಿಗೆ) ಹೀಗು ಹಿಂದಂತಾಯಿತು. ಇತ್ತ ತಮಿಳ್ನಾಡಿನಲ್ಲೇ ಅಂಡೆಯ ಬಾಯಿ ಕಟ್ಟಬಹುದು. ಜನರ ದೊಂಡೆ ರು ಬಾಯಿ ಕಟ್ಟಲಿ ಸಾಧ್ಯವಿಲ್ಲವೆಂಬುದನ್ನು ಕಂಡ ಹಿಂದೆಯಂತಹವರು ಹೌಹಾರಲಾರಂಭಿಸಿದರು. ಅವರ ತಾಳ್ಮೆ ಎಸೀಮೆಯ ಕಟ್ಟೆಯೊಡೆಯಿತು. ಅವರು ತಮ್ಮ ಅತೃಪ್ತಿಯನ್ನು ನಾಜೂಕಾಗಿ ರಾಜಾಜಿಯವರಿಗೆ ತಿಳಿಸಿದರು. ಮೆಲ್ಲ ಮೆಲ್ಲನೆ ಅತೃಪ್ತ ಸ್ವತಂತ್ರದವರು ದ್ರಾ.ಮು. ಕ. ವನ್ನು ಟೀಕಿಸಲಾರಂಭಿಸಿದರು.

ತಮಿಳ್ನಾಡು ವಿಧಾನ ಸಭೆಯಲ್ಲಿ (ಸಚ್ಚಿ ಸಭೆಯಲ್ಲಿ) ದ್ರಾ. ಮು. ಕ. ದ ಪೋಲೆ ಅಬಕಾರಿನೀತಿಯ ಗೊತ್ತುವಳಿಯನ್ನು ಮಂಡಿಸಲಾಗಿತ್ತು. ಆಗ ಸ್ವತಂತ್ರ ಪಾರ್ಟಿಯ ವಿಧಾನ ಸಭಾ ಮುಂದಾಳು ಸೀ ಬಸ್ವಾಮಿ (ಚೇಮಾಯ್ ಪಾವಿ) ಯವರು ಮಾತಾಡುತ್ತ, ಸರ್ವಾಧಿಕಾರಿ ಕೇಂದ್ರ ಸರಕಾರಕ್ಕೆ ದ್ರಾ. ಮು. ಕ. ಸರಕಾರ ಬೆಂಬಲ ಕೊಡುವದನ್ನು ಮುಂದರಿಸಿದಲ್ಲಿ ತನ್ನ ಪಕ್ಷವು ದ್ರಾ. ಮು. ಕ. ಕ್ಕೆ ಬೆಂಬಲಕೊಡುವುದನ್ನು ಹಿಂತೆಗೆದುಕೊಳ್ಳಬೇಕಾಗುತ್ತದೆಂದರು. ಆಗ ಒಡನೆ ಕರುಣಾನಿಧಿಯವರು, ರಾಜಾಜಿಯವರ ಅಭಿಪ್ರಾಯ ನನಗೆ ಮೊದಲು ಗೊತ್ತಾಗಬೇಕು. ತಲೆ ಆದೇನು ಮಾಡುತ್ತದೆಂಬುದರತ್ತ ನನ್ನ ಲಕ್ಷ್ಯ. ವಿನಃ ಬಾಲ ಹೇಗೆ ಆಡುತ್ತದೆಂಬುದರತ್ತವಲ್ಲವೆಂದರು. ಕೆಲ ದಿನಗಳಲ್ಲಿ ಅದು ಗೊತ್ತಾಗುತ್ತದೆಂದು ಸೀಮೆಸ್ವಾಮಿಯವರು ಹೇಳುತ್ತಿದ್ದರು. ಹೀಗೆಯೇ ನನ್ನವೆಂದು ಕೀರ್ತನವಿತ್ತರು ಕರುಣಾನಿಧಿಯವರು. ಸ್ವತಂತ್ರ ಪಾರ್ಟಿಯವರಿಗೆ ದ್ರಾ. ಮು. ಕ. ದ ಕಹಿಯ ಅನುಭವವಾಗಿರ ವದನ್ನು, ದ್ರಾ. ಮು. ಕ. ಸ್ವತಂತ್ರ ಪಾರ್ಟಿಯತ್ತ ಇರಿಸ ತುಚ್ಛ ಭಾವನೆಗೆ ಇದೊಂದು ಕೈಗನ್ನಡಿ.

ರಾಜಾಜಿಯವರಿಗೆ ನುಂಗಲಾಗದ ತುತ್ತಾಯಿತು. ಉಗುಳಬೇಕಲ್ಲೇ ದ್ರಾ.ಮು.ಕದ ದೂರ ಹೋಗುತ್ತದೆ. ನುಂಗಲೇ ತನ್ನ ಪಕ್ಷದವರು ಸಮ್ಮತಿಸುವುದಿಲ್ಲ. ಅತ್ತ ದಾವೂ ಸಾಯಬೇಕು, ಇತ್ತ ಕೋಲೂ ಮುರಿಯಬಾರದೆನ್ನುವಂತೆ ಚಾಣಾಕ್ಷ ರೀತಿಯಿಂದ ತಮ್ಮ ಮುಖಪತ್ರಿಕೆ "ಸ್ವರಾಜ್ಯ"ದಲ್ಲಿ "ವಿಸನದ" ಕುರಿತು ಬರೆಯುತ್ತ, ಇದು ಲಾಭ-ನಷ್ಟದ ಸಂಗತಿಯಲ್ಲ, ದಾ ಮು ಕ ಇಂದಿರಾ ಸರಕಾರಕ್ಕೆ ಸಹಾಯ ಮಾಡುವುದನ್ನು ಸ್ವಪಾರ್ಟಿಯ ಸದಸ್ಯರು ಸಹಿಸ ಬಹುದಿಲ್ಲ. ದ-ಮು-ಕ ಮೈತ್ರಿಯನ್ನವರು ಒಪ್ಪಿಕೊಳ್ಳುವಂತಿಲ್ಲವೆಂದು ಸದಸ್ಯರ ಕಲೆಯ ಮೇಲೆ ಭಾರ ಹಾಕಿ ತನ್ನ ಅತೃಪ್ತಿಯನ್ನು ರಾಜಾಜಿಯವರು ಪ್ರಕಟಪಡಿಸಿದರು. ಆನೆ ಬರುವ ಮೊದಲೇ ಘಂಟಾನಾದ, ಗೆಜ್ಜೆಯ ಧ್ವನಿ ಕೇಳಿಬರುವಂತೆ ಮುಂದಿನ ಸಂಭವದ ಮುನ್ಸೂಚನೆ ಇದಾಯಿತು. ರಾಜಾಜಿಯವರ ತಲೆ ಹೇಗಿದೆಂಬುದು ಕರುಣಾನಿಧಿಗೆ ಗೊತ್ತಾಯಿತೋ, ಇಲ್ಲವೋ ಸ್ವ. ಪಾರ್ಟಿಯವರಿಗೆ ಸಂಕೇತ ಸಿಕ್ಕಿದಂತಾಯಿತು.

ದ್ರಾ-ಮು.ಕ.ದ ಸಂಬಂಧವನ್ನು ಕಡಿದುಕೊಳ್ಳುವ ಮನಸ್ಸು ತನಗಿಲ್ಲವೆಂದೂ, ಆದರೆ, ತನ್ನ ಪಾರ್ಟಿಯ ಇತರ ಪ್ರಮುಖರು ಪಿರಿಪಿರಿ ಮಾಡುತ್ತಿದ್ದಾರೆಂಬುದನ್ನೂ ಸ್ವರಾಜ್ಯದ ಮೂಲಕ ಪ್ರಕಟಪಡಿಸಿದರು. ಕರುಣಾನಿಧಿಯವರ ಮಾತಿಗೆ ತಲೆಯ ಪ್ರತಿಕ್ರಿಯೆ ಇದು. ತಮಿಳ್ನಾಡಿನ ದೃಷ್ಟಿಯಿಂದ ರಾಜಾಜಿಯವರು ದ್ರಾ. ಮು. ಕ. ಕ್ಕೆ ಸಹಾಯ ಮಾಡಿ, ಕಾಮರಾಜರು ಕಾಲೂರದಂತೆ ಮಾಡಬಹುದಾದರೂ ಉಳಿದ ಭಾರತದಲ್ಲಿ ಅದಕ್ಕೆ ವಿರುದ್ಧವಾಗಿ ಅದೇ ಕಾಮರಾಜರೊಂದಿಗೆ ಸ್ವಪಾರ್ಟಿಯವರು ಸಂಬಂಧ ಬೆಳೆಸಿಕೊಂಡು ಇಂದಿರಾ ಸರಕಾರವನ್ನುರುಳಿಸಬೇಕಾಗಿದೆ. ರಾಜಾಜಿಯವರು ಈ ರೀತಿ ಇಕ್ಕಟ್ಟಿನಲ್ಲಿ ಸಿಲುಕಿಕೊಂಡರು. ಅವರನ್ನು ರಾಜಕೀಯ ನರಿಯೆಂದು ಹೇಳುತ್ತಿದ್ದರು. ನರಿಯ ತಂತ್ರ ಪ್ರಕಟವಾಗುವ ಪರೀಕ್ಷಾ ಕಾಲ ಅದಾಯಿತು.

—ಶ್ರೀ ಶಿವಶಂಕರ

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕೊಲಿಟಿಯಲ್ಲಿ, ಸ್ಟೈಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ವಿವಾಹದಿಂದ ಬರುತ್ತಿರುವ ವಿಪತ್ತು

ಲಗ್ನ ಕಾರ್ಯಗಳ ನಿಮಿತ್ತವಾಗಿ ಇಡೀ ಭಾರತದಲ್ಲಿ ಪ್ರತಿವರ್ಷ ಎಷ್ಟೊಂದು ಅಪಾರ ಸಂಪತ್ತು ಹಳ್ಳಿಗಳಿಂದ ಶಹರಗಳಿಗೆ ಹರಿಯುತ್ತದೆ. ಬಡವನ ಮನೆಯಿಂದ ಹೊರಬಿದ್ದು ಶ್ರೀಮಂತರ ಮನೆ ಸೇರುತ್ತದೆ ಎಂಬುದರ ಲೆಕ್ಕ ಹಾಕಿ ನೋಡಿದರೆ ತಲೆತಿರುಗುತ್ತದೆ! ಆದರೆ ಈ ಲೆಕ್ಕ ಮಾಡುವವರು ಯಾರಾದರೂ ಇದ್ದಾರೆಯೇ? ಮದುವೆಯ ನಿಮಿತ್ತದಿಂದ ಎಷ್ಟೊಂದು ಕುಟುಂಬಗಳ ಭೂಮಿ ಮಾರಿ ಹೋಗುತ್ತದೆ. ಮನೆಯಲ್ಲಿಯ ಆಭರಣಗಳೆಲ್ಲ ಹೋಗುತ್ತವೆ. ಎಷ್ಟೋ ಜನರು ಆಭರಣ ಸಾಲದ ಹೊರೆ ಹೊರಬೇಕಾಗಿ ಬರುತ್ತದೆ. ಒಕ್ಕಲಿಗನಿಗಂತೂ ಉತ್ಪಾದಕ ಧಂದೆಗಳಿಗೂ, ಇನ್ನಿತರ ಅವಶ್ಯಕ ಕೆಲಸಗಳಿಗೂ ದುಡ್ಡು ಕೂಡಿಸುವದು ಕಷ್ಟ. ವಿಸ್ತರದ ಮದುವೆಯ ಬಗ್ಗೆ ದುಡ್ಡು ಕೂಡಿಸಲೇ ಬೇಕಾಗುತ್ತದೆ. ಸಾಹುಕಾರರೂ ವ್ಯಾಪಾರಿಗಳೂ ಮದುವೆ ಹಂಗಾಮವನ್ನೇ ಎದುರು ನೋಡುತ್ತಿರುತ್ತಾರೆ. ಇದೆಲ್ಲವೂ ಬರಿ ಆಡಂಬರ, ಪ್ರದರ್ಶನ ಹಾಗೂ ರೀತಿ ರಿವಾಜುಗಳ ಹೆಸರಿನಲ್ಲಿ ನಡೆಯುತ್ತದೆ. ವಿವಾಹದ ಹೆಸರಿನಲ್ಲಿ ನಾವು ಬುದ್ಧಿಪುರಸ್ಸರವಾಗಿ ನಮ್ಮ ಹಾಗೂ ನಮ್ಮ ಕುಟುಂಬದ ಸರ್ವನಾಶ ಮಾಡಿಕೊಳ್ಳುತ್ತಿದ್ದೇವೆ. ಬಡವರು ಶ್ರೀಮಂತರು, ಹಿಂದೂ ಮುಸಲ್ಮಾನರು, ಮೊದಲಾದ ಯಾವುದೇ ಭಿನ್ನ ಭೇದ ಮಾಡದೆ ಎಲ್ಲರಿಗೂ ಬಡಿದಿರುವ ಭಯಂಕರವಾದ ರೋಗ ಇದಾಗಿದೆ. ಬಡವರೂ ಶ್ರೀಮಂತರನ್ನು ಅನುಕರಿಸುತ್ತಾರೆ. ದೊಡ್ಡವರೆನಿಸಿಕೊಳ್ಳಲಿಕ್ಕೆ ಇದೇ ಉಪಾಯವೆಂದು ಅವರ ತಿಳಿಯುತ್ತಾರೆ. ಸುಶಿಕ್ಷಿತ ಜನರು, ದೊಡ್ಡ ದೊಡ್ಡವರೆನಿಸುವವರು ಎಲ್ಲರೂ ವಿನಾಶದ ಮಟ್ಟಿಗೆ ಒಂದೇ ದಾರಿಯನ್ನು ತುಳಿಯುತ್ತಿದ್ದಾರೆ.

ದೇವರು ನಮಗೆ ಕೈಗಳನ್ನು ಕೊಟ್ಟಿರುವದು ಸೇರಿ ಮಾಡಲಿಕ್ಕೆ ಪರರಿಗೆ ಕೈ ಕೊಟ್ಟಿಲ್ಲ. ಸೇವೆ ಮಾಡಲಿ. ದಾನವಾಗಲಿ, ಬಿದ್ದವಗೆ ಎತ್ತಲು, ಮುಳುಗುವವನಿಗೆ ಬದುಕಿಸಲು ಎಂದೇ ನಮಗೆ ಕೈಗಳನ್ನು ಕೊಟ್ಟಿದ್ದಾನೆ. ಆದರೆ ಅವೇ ಕೈಗಳಿಂದ ಕೆಟ್ಟಗೆ ಎಸಲೂ ಬರುತ್ತದೆ. ಕೊಲೆಯನ್ನು ಮಾಡಲಿಕ್ಕೂ ಬರುತ್ತದೆ. ಚಲೋ ಕೆಲಸಬೇಕಾದರೂ ಮಾಡಬಹುದು. ನಾವು ಕೆಟ್ಟ ಕೆಲಸ ಮಾಡಿದರೆ ದೇವನು ನಮ್ಮ ಕೈಗಳನ್ನು ಕಡಿದು ಕೊಂಡು ನಶ್ವರನಕ್ಕೆ ನೂಕುವನು. ಎರಡನೆಯವನಿಗೆ ಉಣ್ಣಿಸಿ ಅನಂತರ ಉಣ್ಣುವುದು, ಅವನಿಗೆ ಕುಡಿಸಿ ಕೊನೆಗೆ ನಾವು ಕುಡಿಯುವುದು, ಬೇರೆಯವರಿಗೆ ಮಲಗಿಸಿ ಅನಂತರ ನಾವು ಮಲಗುವುದು ಇದೇ ಮನುಷ್ಯ ಧರ್ಮವು. ಇದರಲ್ಲಿಯೇ ಮನುಷ್ಯತ್ವವಿದೆ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ. ೧೦.

ಹಿಂಸಾಚರಣೆ ತಡೆಯುವಲ್ಲಿ ನೆರವು ನೀಡಿ
davp

(ಮೂರನೇ ಪುಟದಿಂದ)

ಗಳನ್ನು ಹುಡುಕಲು ಆರಂಭ ಮಾಡಿದೊಡನೆಯೇ ತಾವಿದ್ದೇವೆಂದು ಆರಂಭವಾದ ಈ ಪಕ್ಷಾಂತರಕ್ಕೆ ಬೇರಾವುದಾದರೂ ಅರ್ಥ ಕಟ್ಟುವುದು ಅಸಮಂಜಸ. ಅಂದರೆ, ಅಧಿಕಾರ—ಪದವಿಗಳನ್ನು ನೀಡುವವರೂ ಪಡೆಯುವವರೂ ಒಂದಾಗಿ ಶ್ರೀ ಸಾಮಾನ್ಯನನ್ನು ಸದ್ಯ ವಂಚಿಸಹೊರಟಿದ್ದಾರೆ.

ಇದರ ಪರಿಣಾಮವೇನಾಗುತ್ತದೆ? ಮತ್ತೆ ಪ್ರಭಾವಶಾಲಿ "ಹಳಬರೇ" ಚುನಾವಣೆಗಳಲ್ಲಿ ಸ್ಪರ್ಧಿಸುತ್ತಾರೆ. ತಮ್ಮ ವೈಯಕ್ತಿಕ ಪ್ರಭಾವದಿಂದಲೇ ಗೆದ್ದು ಬರಲು ಪ್ರಯತ್ನಿಸುತ್ತಾರೆ. (ಅವರ ಪಕ್ಷಾಂತರಕ್ಕೆ ಪಟ ನೀಡಿದ್ದಾದರೂ ಹೊಸ ಪಕ್ಷದ ನೀತಿಯಲ್ಲ; ತಮ್ಮ ವ್ಯಕ್ತಿಗತ ಪ್ರಭಾವದ ಮೇಲಿರುವ ವಿಶ್ವಾಸ.) ಗೆದ್ದೂ ಬರಬಹುದು. ಆಗ ರಚನೆಯಾಗುವ ಲೋಕಸಭೆ ಹೇಗಿರಬಹುದು? ಅವೇ ಹಳೆಯ ಮುಖಗಳು. ಆದರೆ ಅವುಗಳ ಹಣೆ ಹಚ್ಚಿದ ಪಕ್ಷದ ಲೇಬಲ್ ಮಾತ್ರ ಬದಲು. ಅಂದು ಸಿಂಡಿಕೇಟೋ ಪ್ರಸವಾವ್ರೋ ಮತ್ತೇನೋ—ಇಂದು ಇಂಡಿಕೇಟ್—ಒಂದಂಗಿ ಕಳಚಿ ಹಾಕಿ ಮತ್ತೊಂದಂಗಿ ತೊಟ್ಟೊಡನೆಯೇ ವ್ಯಕ್ತಿಯ ವಿಚಾರಧಾರೆ ಬದಲಾಗುವುದೆಂಬ ಅಂಧ ವಿಶ್ವಾಸ ನಮ್ಮ ಮತದಾರರಲ್ಲಿ ಇರುವವರೆಗೆ ಅಧಿಕಾರ ಲೋಲುಪರು ಈ ಬಗೆಯ ಪಕ್ಷಾಂತರ ನಾಟಕವಾಡಿ ಜನರನ್ನು ಮೋಸಗೊಳಿಸುತ್ತಾ ಮುಂದುವರಿಯುತ್ತಿರುತ್ತಾರೆ. ಆದುದರಿಂದ ಶ್ರೀ ಮತದಾರರು ಇಂಥ ಸೋಗಿನ ಭೋಗಿಗಳ ಇಂದ್ರಜಾಲಕ್ಕೆ ಆಸ್ಪದ ಕೊಡಬಾರದು. ಆದರೆ, ಇಂತಹ ಪ್ರಜ್ಞೆ ಎಷ್ಟು ಮತದಾರರಲ್ಲಿದೆ? ಈ ಪ್ರಜ್ಞೆ ಮೂಡದೆ ಹೋದರೆ ನಡೆಯುವುದು ಮಧ್ಯಾವಧಿ ಚುನಾವಣೆಯಾಗುವುದಿಲ್ಲ. ಮಹಾ ಭಿಪಾವಣೆಯಾಗುತ್ತದೆ.

ಸ್ತುತ್ಯ ಕ್ರಮ

ಕನ್ನಡ ಪಂಡಿತ ಪರೀಕ್ಷೆ ಉತ್ತೀರ್ಣರಾದವರಿಗೆ (ಎಸ್. ಎಸ್.ಎಲ್.ಸಿ. ಆಗಿ) ಬಿ. ಎಡ್. ತರಗತಿಗೆ ಪ್ರವೇಶ ನೀಡಲು ಮೈಸೂರು ವಿಶ್ವವಿದ್ಯಾಲಯ ನೀಡಿದ ವರದಿ ಪ್ರಕಟವಾಗಿದೆ. ಇದುವರೆಗೂ ದ್ವಿತೀಯ ವರ್ಗದ ಅಧ್ಯಾಪಕರೆಂದು ಪರಿಗಣಿತರಾದ ಪ್ರೌಢ ಶಾಲಾ ಪಂಡಿತರ ಒಂದು ವರ್ಗಕ್ಕೆ ಇದರಿಂದ ಉಪಕಾರವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣೋತ್ಸವದ ಉಡುಗೊರೆಯಿದು ಎನ್ನುವುದು ಸಮಂಜಸ. ಇದರ ಜತೆಯಲ್ಲೇ ವಿಶ್ವವಿದ್ಯಾಲಯ ಮಾಡಬೇಕಾದ್ದು ಇನ್ನೂ ಒಂದು ಕೆಲಸವಿದೆ. ಇಂಥಹುದೇ ಸೌಲಭ್ಯವನ್ನು ರಾಜ್ಯದಲ್ಲಿ ಬೋಧಿಸಲಾಗುವ ಇನ್ನಿತರ ಭಾಷಾ ಪಂಡಿತರಿಗೂ ಒದಗಿಸಬೇಕು. ಎಲ್ಲ ಭಾಷಾ ಪಂಡಿತರಿಗೂ ವಿಶ್ವವಿದ್ಯಾಲಯದ ಎಂ. ಎ. ಪರೀಕ್ಷೆಗೆ ಕೂತುಕೊಳ್ಳುವ ಅವಕಾಶ ನೀಡಬೇಕು. ಮೈಸೂರು ವಿಶ್ವವಿದ್ಯಾಲಯದ ಮಾದರಿಯನ್ನೂ ಉಳಿದ ವಿಶ್ವವಿದ್ಯಾಲಯಗಳೂ ಅನುಸರಿಸಬೇಕು.

ಗೇಹರಾಜ್ಯದಲ್ಲಿ

ತ್ಯಾಗಿಗಳು ಬೇಕಾಗಿದ್ದಾರೆ

"ಏನು, ಈ ದಿನ ಭಾರೀ ಹೊತ್ತು ...."

"ಹೊತ್ತು ಏನು ಬಂತೆ? ಅದ್ರ ಮೇಲೆ ಚುನಾವಣೆ ಬೇರೆ ಬಂತ ...'

"ಲೋಕ ಸಭೆಗೆ?"

"ಹ್ಞೂಂ...ಜತೆಗೆ ವಿಧಾನಸಭೆಗೂ ಆದರೆ ಆಗಬಹುದು...."

"ಅಲ್ಲ, ವಿಧಾನ ಸಭೆಯಲ್ಲಿ ಬಹುಮತವಿದ್ದಾಗ ಚುನಾವಣೆ ಯಾಕೇಂತ?'

"ಅದು ಹೌದೂನ್ನಿ. ಇಂಡಿಕೇಟ್ ನೇತೃತ್ವದಲ್ಲಿರುವ ರಾಜ್ಯಗಳಲ್ಲಿ ಈಗ ಚುನಾವಣೆ ಬೇಡವಂತೆ; ಉಳಿದವರಿಗೇಕೆ?"

"ಅದ್ರೆ ಒಂದು ದೃಷ್ಟಿಯಿಂದ ಎಲ್ಲೆಡೆಯೂ ಚುನಾವಣೆ ನಡೀಬೇಕು; ಅದ್ರಲ್ಲೂ ಮುಖ್ಯವಾಗಿ ಇಂಡಿಕೇಟ್ ನೇತೃತ್ವದ ವಿಧಾನ ಸಭೆಗಳು ಬರಖಾಸ್ತಾಗಬೇಕು."

'ಯಾಕೆ?'

"ನೋಡಿ, ಇವರೆಲ್ಲ ಗೆದ್ದುಬಂದದ್ದು ಕಾಂಗ್ರೆಸ್ಸು ಟಿಕೇಟಿನಿಂದ. ಅಂದ್ರೆ ಜನಮತ ನೀಡಿದ್ದು ಕಾಂಗ್ರೆಸ್ಸಿಗೇ. ಆಮೇಲೆ ಇಂಡಿಕೇಟ್ ಕಟ್ಟಿಕೊಂಡರು. ನ್ಯಾಯವಾಗಿ ಅದೇ ಸಮಯ ರಾಜೀನಾಮೆ ನೀಡಬೇಕಾಗಿತ್ತು. ತಮ್ಮ ಪಕ್ಷಾಂತರಕ್ಕೆ ಜನರ ಆದೇಶ ಪಡೆಯುವುದು ಧರ್ಮ."

"ತಮ್ಮ ಪ್ರಗತಿಶೀಲ ಸಮಾಜವಾದಿ ಕಾರ್ಯಕ್ರಮಗಳಿಗೆ ಪ್ರಧಾನಿಗಳು ಆದೇಶ ಬಯಸಿದಂತೆ."

"ಅಲ್ಲಾರೀ, ಆಕೆಗೂದ್ರೆ ಇಂದು ಮಾಡಿದ ಕೆಲಸವನ್ನ ಒಂದು ವರ್ಷ ಹಿಂದೆಯೇ ಮಾಡಿದ್ರೆ ಪ್ರಾಯಃ ಖಂಡಿತವಾಗಿಯೂ ಗೆಲ್ಲುತಿದ್ದಳು...."

"ಇಂದೇನಾಯ್ತು?"

"ಆಗೋದೇನೂ ಇಲ್ಲಾನ್ನಿ. ಆದ್ರೂ ಒಂದು ವರ್ಷದ ಹಿಂದೆ ಇದ್ದ ಬಿಸಿನೆತ್ತರಿನ ಉತ್ಸಾಹ ಈಗ ತಣ್ಣಗಾಗಿದೆ."

"ಅಂದ್ರೆ ಆಕೆ ಸ್ಪಷ್ಟ ಬಹುಮತ ಪಡೆಯುವುದಿಲ್ಲ ಅನ್ನೋದೇ ಏನು?"

"ನಾನ್ಯಾಕೆ ಹಾಗೆನ್ನಲಿ? ಪಡೆಸುಬಹುದು; ಪಡೆಯದಿರಬಹುದು. ವಿರೋಧ ಪಕ್ಷಗಳ ಸಂಘಟನೆ—ಹೊಂದಾಣಿಕೆಗಳ ಮೇಲೆ ಇದು ನಿಂತಿದೆ...."

"ಮಂಗಳೂರು— ಕೊಡಗು ವಿಭಾಗದಿಂದ ಪೂಣಚ್ಚರು ತಮ್ಮ ಮೊದಲಿನ ಸ್ಥಾನ ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರಂತೆ..."

"ಅದು ಸರಿಯೇ ಅನ್ನಿ. ಕೊಡಗಿನಲ್ಲಿ ಅವರಿಗೆ ಬೆಂಬಲವಿದೆ."

"ಇದೆಯೆಂದು ಹೇಗನ್ನುವುದು? ಇವರು ಸಿಂಡಿಕೇಟಿನವರಾಯ್ತು. ಇನ್ನು ಸ್ವತಂತ್ರ — ಜನಸಂಘದವರು ಯಾರೂಂತ ನೋಡಬೇಕಷ್ಟೆ...."

"ಇಂಡಿಕೇಟಿನಿಂದ....?"

"ಅದೇ ಕೆ. ಕೆ. ಶೆಟ್ಟರನ್ನು ಹುರಿದುಂಬಿಸುತ್ತಾರೆಂದು ಸುದ್ದಿ..."

"ಅಯ್ಯೊ. ಇದೆಂಥದು!

"ಯಾಕೆ?"

"ಅಲ್ಲ, ಅವರೀ ವಿಧಾನ ಪರಿಷತ್ತಿನ ಅಧ್ಯಕ್ಷರಾದದ್ದು..."

"ಹೌದು. ಈಗ ನಿವೃತ್ತರಲ್ಲಾ?"

"ನಿವೃತ್ತರಾದರೆ?"

"ಏನಾದರೂ ಬೇಕಲ್ಲ!"

"ಅಂದರೆ, ಪಕ್ಷಾಂತರ?"

"ಛೆ, ಹಾಗನ್ನಬಾರದು. ಈ ವರದಿಗಳು ಇನ್ನೂ ದೃಢಪಟ್ಟಿಲ್ಲ. ಒಂದು ವೇಳೆ ಹೌದಾದರೂ ಏನಾಯ್ತು? ಶ್ರೀ ಶೆಟ್ಟರದು ಕ್ರಾಂತಿಕಾರಿ ಜೀವನ; ಸೋಮಾರಿಯಾಗಿ ಕೈಕಟ್ಟಿ ಕುಳಿತಿರಲಾರರು. ಆದುದರಿಂದ ಅವರು ಪಕ್ಷಾಂತರಗೊಂಡರೆ, ಅದು ಕ್ರಾಂತಿ ಪಥದ ಮತ್ತೊಂದು ಹೆಜ್ಜೆ....'

"ಹ್ಞೂ....ಎಲ್ಲಾನೂ ಹೀಗೇ. ಅಧಿಕಾರ ಬೇಡ ಬೇಡಾಂತ ಬಾಯಲ್ಲಿ ಹೇಳೋದು; ಹಿಂದುಗಡೆ ಅದಕ್ಕಾಗಿ ಜೊಲ್ಲು ಸುರಿಸೋದು. ಹೀಗೆಲ್ಲಾ ಆಗಿಯೇ ಯುವಕರು ಹೆದರೋದು...."

"ಇಲ್ಲಿ ನಡೆದದ್ದು ಅದಲ್ಲ...."

"ನಡೆದದ್ದು ಅಲ್ಲ, ನಡೆಯುವುದು ಅದೇ. ಇಂಡಿಕೇಟಿಗೊಬ್ಬ ಬೇಕಾಗಿತ್ತು; ಏನೇನೋ ಮಾಡಿದರು.

"ಅಲ್ಲೀ ಇದೆಲ್ಲ ಯಾಕೆ ಯೋಚ್ನೆ, ಪೂರ್ಣ ಸತ್ಯ ಆಗಿಲ್ಲ.?"

"ಸರಿ, ಮತ್ತೆ ಉಡುಪಿ?"

"ಇಲ್ಲಿಯೂ ಅದೇ ಕತೆ, ಲೋಬೊ ಪ್ರಭುಗಳು ತಮ್ಮ ಸ್ಥಾನಕ್ಕೆ ಅಂಟಿಕೊಂಡಿದ್ದಾರೆ. ಸಿಂಡಿಕೇಟಿನಿಂದ ಕಳ್ಳಿಬೈಲ್ ಇಂಡಿಕೇಟಿನಿಂದ ಟಿ. ಎ. ಪೈ...."

"ಪ್ರಾಯಃ ಟಿ. ಎ. ಪೈ. ನಿಂತರೆ, ಅವರನ್ನು ಲೋಬೋ ಪ್ರಭು ಎದುರಿಸಬಹುದು. ಸಿಂಡಿಕೇಟು ಇಲ್ಲಿ ಟಿಕೇಟು ತ್ಯಾಗ ಮಾಡಬೇಕಾಗುತ್ತದೆ."

"ಹ್ಞೂಂ...."

'ಹಾಗಾದರೆ, ಜನಸಂಘಕ್ಕೆ ಸೀಟು?'

"ಅದೂ ತ್ಯಾಗ ಮಾಡಬೇಕು."

"ಅದು ಹೇಗೆ ಸಾಧ್ಯಾಂತ?"

"ಯಾಕೆ?"

"ಅಲ್ಲಾರೀ, ದಕ್ಷಿಣ ಕನ್ನಡ—ಕೊಡಗುಗಳಲ್ಲಿ ದಿನೇ ದಿನೇ ಪ್ರಬಲವಾಗುತ್ತಿರುವ ಜನ ಬೆಂಬಲ ಹೆಚ್ಚುತ್ತಿರುವ ಜನಸಂಘ ತ್ಯಾಗ ಮಾಡಬೇಕೆಂದರೆ?"

'ಹಾಗಾದರೆ, ಅದು ಮಂಗಳೂರಿಗೆ...'

"ಇಂಡಿಕೇಟು?"

"ಅದು ತ್ಯಾಗಕ್ಕೆ ಸಿದ್ಧವಾಗಲಿ."

"ಅದಾಗೋದಿಲ್ಲ. ಮೊದಲಿಂದಲೂ ಅದು "ಸಿಂಡಿಕೇಟ್" ಸೀಟು. ಅದ್ರ ಮೇಲೆ ಕೊಡಗರಿಗೆ ಲೋಕ ಸಭೆಯಲ್ಲಿ ಪ್ರಾತಿನಿಧ್ಯ ಬೇಡವೆ? ಕರ್ನಾಟಕ ಸಿಂಡಿಕೇಟಿನ ಗಂಡುಭೂಮಿ. ಇಲ್ಲಿ ಇದ್ದ ಸೀಟನ್ನೂ ತ್ಯಾಗ ಮಾಡುತ್ತಾ ಹೋದರೆ, ಟಿಕೇಟು ನಿರಾಕೃತರ ಉಪಟಳ ಹೆಚ್ಚಾಗುತ್ತದೆ..."

"ಇಂದಿರಾ ಗಾಂಧಿಯ ಸರ್ವಾಧಿಕಾರ ವಿರೋಧ ಬಾಯಿ ಮಾತಿನ ವಿರೋಧ ಮಾತ್ರವಾಗಿ ಆರೆಯ ಆಡಳಿತ ಪಕ್ಷಿಂತವಾಗುತ್ತದೆ."

"ಯಾರಿಗೆ?"

"ಅವರಿಗೆ?"

"ಮತ್ತೆ ನಮಗೆ?"

"ನಮಗಿದ್ದೇ ಇದೆಯಲ್ಲ? ರಾಧಮ್ಮನಿಗೆ ರಾಗಿ ಬೀಸೋದು ತಪ್ಪೋದಿಲ್ಲಾಂತ..."

"ಹ್ಹ..ಹ್ಹ..ಹ್ಹ..."

"..........." —ಗೋರಾ.

ನವ ವರುಷದ ಗೌರವ–ಸನ್ಮಾನ

ಉಡುಪಿ, ಜ, 1 ಬೇರೆ ಬೇರೆ ರಂಗಗಳಲ್ಲಿ ಸೇವೆ ಸಲ್ಲಿಸಿ ಗಣ್ಯರಾದ ಜಿಲ್ಲೆಯ ನಾಲ್ವರು ಹಿರಿಯರನ್ನು ಮಣಿಪಾಲ ಅಕಾಡೆಮಿ ಆಫ್ ಜನರಲ್ ಎಜ್ಯುಕೇಷನ್ ಮತ್ತು ರೋಟರಿ ಕ್ಲಬ್‌ಗಳು ಸಂಯುಕ್ತವಾಗಿ ಗೌರವಿಸಿ ಸನ್ಮಾನಿಸಿದವು. ಧಾರ್ಮಿಕ ಕ್ಷೇತ್ರದ ಆದಿದೇವಾನಂದರು, ಶೈಕ್ಷಣಿಕ ಕ್ಷೇತ್ರದ ಪ್ರೊ| ಪಿ. ಎಲ್. ಡಿಸೋಜಾ, ಇಂಜಿನಿಯರಿಂಗ್ ಕ್ಷೇತ್ರದ ಶ್ರೀ ಯು. ಆನಂದರಾವ್ ಮತ್ತು ವೈದ್ಯಕೀಯ ರಂಗದ ಶ್ರೀ ಬಿ. ಮಾಧವಶೆಟ್ಟಿ ಇವರೇ ಗೌರವಾನ್ವಿತರಾದ ನಾಲ್ವರು ಮಹನೀಯರು. ಶ್ರೀ ಟಿ. ಆರ್. ಎ. ಪೈ, ಡಾ| ಶಾಂತಾರಾಮ್, ಶ್ರೀ ಪಿ. ಎಸ್. ಆಚಾರ್ಯ, ಶ್ರೀ ಎಚ್. ಪಿ. ಕಾಮತ್ ಇವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷತೆ ವಹಿಸಿದ ಅಕಾಡೆಮಿಯ ಅಧ್ಯಕ್ಷ ಡಾ| ಟಿ. ಎಂ. ಎ. ಪೈಯವರು ಸನ್ಮಾನಿತರಿಗೆ ಪ್ರಶಸ್ತಿ ಪತ್ರಗಳನ್ನಿತ್ತು ಗೌರವಿಸಿದರು. ಅತಿಥಿಗಳು ಸಮಾಗಿತ ಗೌರವಕ್ಕಾಗಿ ಅಭಾರ ಸಲ್ಲಿಸಿದರು. ರೋಟರಿ ಗವರ್ನರ್ ಶ್ರೀ ಟಿ. ಮೋಹನ ಪೈಯವರು ಧನ್ಯವಾದಗಳನ್ನರ್ಪಿಸಿದರು.

ಕೊರೆನೆಟ್‌ನ ಅದ್ವಿತೀಯ ಮಳಿಗೆ

ಉಡುಪಿಯ ಕೊರೆನೆಟ್ ಪ್ಯಾಕಿಂಗ್ ಕಂಪೆನಿಯು [illegible] ಉತ್ಪನ್ನಗಳ ರಫ್ತಿನಲ್ಲಿ [illegible] ಸಲ್ಲಿಸಿದ [illegible] ನೀಡಿದ [illegible] ಫಲಕವನ್ನು ಗಳಿಸಿದೆ.

1970ರ ಆಹಾರ [illegible] ನ ಉತ್ಪನ್ನಗಳ ರಫ್ತಿಗಾಗಿ ನೀಡಲಾಗುವ ಫಲಕ ಪ್ರಶಸ್ತಿಯನ್ನು ಕೊರೆನೆಟ್ ಪ್ಯಾಕಿಂಗ್ ಕಂಪೆನಿ ಪಡೆದಿದೆ. ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಇದೇ ತಾ. 20ರಂದು ಬೆಂಗಳೂರಿನಲ್ಲಿ ನಡೆದ ಆಕರ್ಷಕ ಸಮಾರಂಭದಲ್ಲಿ ಕಂಪೆನಿಯ ಪಾಲುದಾರರಾದ ಶ್ರೀ ಮತ್ತಿ ಮಧ್ವರಾಜರಿಗೆ ಪ್ರಶಸ್ತಿಯನ್ನು ನೀಡಿರುವರು.

ಕಮಲಾ ಎ. ಬಾಳಿಗಾರ ನಿಧನ

ಭಾರತದ ಪ್ರಸಿದ್ಧ ಸರ್ಜನ್‌ರಾಗಿದ್ದ ದಿ| ಡಾ|| ಎ.ವಿ. ಬಾಳಿಗಾರ ಧರ್ಮಪತ್ನಿ ಶ್ರೀಮತಿ ಕಮಲಾ ಎ. ಬಾಳಿಗಾರು ಕೆಲಕಾಲ ಅಸ್ವಸ್ಥರಾಗಿದ್ದು ಡಿಸೆಂಬರ್ 18ರಂದು ತಮ್ಮ ೮೮ನೇ ವಯಸ್ಸಿನಲ್ಲಿ ಮುಂಬಯಿಯ ಮೆರೀನ್ ಡ್ರೈವ್‌ನಲ್ಲಿರುವ ತಮ್ಮ ನಿವಾಸದಲ್ಲಿ ಸ್ವರ್ಗಸ್ಥರಾದರು.

ದಿವಂಗತರು ಡಾ|| ಬಾಳಿಗಾರೊಡನೆ ಗತ್ಯ ಅಮೆರಿಕ, ಚೀನ ಮೊದಲಾದ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿದ್ದಲ್ಲದೆ ತಮ್ಮ ಜಾತಿಯ ರಾಷ್ಟ್ರದ ಮುನ್ನಡೆಯಲ್ಲಿ ತೀವ್ರ ಆಸಕ್ತಿಯುಳ್ಳ ವಿಶಾಲ ಹೃದಯಿಯಾಗಿದ್ದರು.

ತುಳಸೀ— ಜಲಂಧರ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ನಾಟಕ ಸಭಾದವರು ತಾ. 6—1—71ರಂದು ತುಳಸೀ—ಜಲಂಧರ ಎನ್ನುವ ಪೌರಾಣಿಕ ಕಥಾ ಭಾಗವನ್ನು ಆದಿಉಡುಪಿ ಶಾಲಾ ಹಳೇ ವಿದ್ಯಾರ್ಥಿ ಸಂಘದ ಸಹಾಯಾರ್ಥ ಆದಿಉಡುಪಿ ಮೈದಾನದಲ್ಲಿ ಹಾಕಲಾದ ಸ್ಟೀಲಿನ ಭವ್ಯ ರಂಗಮಂಟಪದಲ್ಲಿ ಯಶಸ್ವಿಯಾಗಿ ಅಭಿನಯಿಸಿದರು.

ಕಮ್ಯುನಿಜಂ ಬೆಳವಣಿಗೆ

(ಎರಡನೇ ಪುಟದಿಂದ)

ಶ್ರೀಮತಿ ಗಾಂಧಿಯವರದ್ದು ಅಲ್ಪಮತೀಯ ಸರಕಾರ. ಆಕೆ ಪಾರ್ಲಿಮೆಂಟಿನಲ್ಲಿ ಬಹುಮತವನ್ನು ಉಳಿಸಿಕೊಂಡದ್ದು ಹೇಗೆ? ಆದರೆ ಕೆಲವು ಪಕ್ಷಗಳು ಆಕೆಯ ಶ್ರೀರಕ್ಷೆಯ ಮುಂದುವರಿಕೆಗೆ ಬೆಂಬಲ ನೀಡುತ್ತವೆ. ಅಷ್ಟರಿಂದ ಆಕೆಯ ಸಲಹೆ ಒಪ್ಪಬಾರದು. ಇದು ಕೆಲವರ ಅಭಿಪ್ರಾಯ.

ಪ್ರಧಾನಿ ಲೋಕಸಭೆಯನ್ನು ವಿಸರ್ಜಿಸುವ ಸಲಹೆ ನೀಡಿದರೆ, ಆಕೆಗೆ ರಾಜೀನಾಮೆ ನೀಡಬೇಕೆಂದು ಪರ್ಯಾಯ ಸರಕಾರ ರಚನೆಯ ಬಗ್ಗೆ ರಾಷ್ಟ್ರಪತಿಗಳು ಪ್ರಯತ್ನಿಸಬೇಕು—ಇದೂ ಒಂದು ಸಲಹೆ.

ಒಂದು ವೇಳೆ ಪ್ರಧಾನಿ ಸಲಹೆಯಂತೆ ಲೋಕಸಭೆಯನ್ನು ವಿಸರ್ಜಿಸುವುದಾದರೆ, ಶ್ರೀಮತಿ ಗಾಂಧಿ ಸರಕಾರವೇ ಹೋಗಿ ತಾತ್ಕಾಲಿಕ ಸರಕಾರವಾಗಿ ಮುಂದುವರಿಯಬಾರದು. ಬದಲಾಗಿ ರಾಷ್ಟ್ರೀಯ ಸರಕಾರವೊಂದನ್ನು ರಚಿಸಬೇಕು—ಇದು ಇನ್ನು ಕೆಲವರ ಅಂಬೋಣ.

ಸಂಸತ್ತನ್ನು ವಿಸರ್ಜಿಸುವ ವಿಷಯದಲ್ಲಿ ಚರ್ಚಿಸಲು ವಿಶೇಷ ಅಧಿವೇಶನ ಕರೆಯಬೇಕು—ಶ್ರೀ ಕೃಪಾಲಾನಿಯವರ ಖಚಿತ ಅಭಿಪ್ರಾಯ.

ಆದರೆ, ಪ್ರಧಾನಿ ಗಾಂಧಿ ಹಾಕಿದ ಗಂಟನ್ನು ಬಿಡಿಸುವ ಮನಸ್ಸು ರಾಷ್ಟ್ರಪತಿ ಮಾಡಲಿಲ್ಲ. ಮಾಡಬೇಕೆಂದು ಅವರಿಗೆ ಅನ್ನಿಸಲಿಲ್ಲ.

ರಾಷ್ಟ್ರಪತಿ ಗಿರಿಯವರು ಪ್ರಧಾನಿ ಗಾಂಧಿಯ ಕೈಗೊಂಬೆಯೆಂಬುದನ್ನು ಮತ್ತೊಮ್ಮೆ ಲೋಕಕ್ಕೆ ತೋರಿಸಿಕೊಟ್ಟರು.

ಅಂತೂ ಲೋಕಸಭೆ ವಿಸರ್ಜನೆಗೊಂಡಿತು; ಮರುಚುನಾವಣೆಗಳಿಗೆ ಆಜ್ಞೆಯಾಯಿತು. ಶ್ರೀಮತಿ ಗಾಂಧಿಯವರದ್ದೇ ಕಾವಲು ಸರಕಾರವಾಗಿ ಉಳಿಯಿತು.

ಪ್ರಧಾನಿ ರಾತ್ರಿ ಒಂಬತ್ತೂವರೆಯಾಗಿ ಜನತೆಗೊಂದು ಸಂದೇಶವನ್ನು ಆಕಸ್ಮಿಕವಾಗಿ ನೀಡಿದರು.

ತಮ್ಮ ಪ್ರಗತಿ ಕಾರ್ಯಕ್ರಮಗಳಿಗೆ ಪದೇ ಪದೇ ಆತಂಕಗಳು ಒದಗಿಬರುವುದನ್ನು ಉಲ್ಲೇಖಿಸಿದರು, ರಾಜಧನಾದಿ ರದ್ದತಿಯು ಸಂವಿಧಾನ ವಿರೋಧಿಯೆಂದು ನ್ಯಾಯಾಲಯ ತೀರ್ಮಾನಿಸಿದ್ದಕ್ಕೆ ಮರುಗಿದರು. ಅದಕ್ಕಾಗಿ ಜನತೆಯ ಮುಂದೆಯೇ ಪ್ರಗತಿ ಕಾರ್ಯಕ್ರಮಗಳ ಬಗ್ಗೆ ಮತ ಯಾಚಿಸಿ ಮಾಡುವುದಾಗಿ ತೀರ್ಮಾನಿಸಿಕೊಂಡರು.

ಪ್ರಧಾನಿಯವರು ಮೂರು ತಿಂಗಳಿಂದ ತಿಂದ ಹೊಡೆತ ರಾಜಧನ ರದ್ದತಿಯ ಆಜ್ಞೆಯಿಂದ ಮಾತ್ರ.

ರಾಜಧನವಾದಿಗಳು ರಾಜರ ಆಸ್ತಿಯೆಂಬ ನ್ಯಾಯಾಲಯದ ಅಭಿಪ್ರಾಯ. ಆಸ್ತಿಯ ಮೇಲಿನ ಹಕ್ಕು ಮೂಲಭೂತ ಹಕ್ಕು. ಇದನ್ನು ಮೊಟಕು ಮಾಡುವುದು ಸಾಧ್ಯವಿಲ್ಲ—ಮಾಡಿದರೆ ಸಂವಿಧಾನ ವಿರೋಧಿ.

ಆದ್ದರಿಂದ ಪ್ರಧಾನಿ ಗಾಂಧಿಯವರು ತನ್ನ "ಪ್ರಗತಿವಾದಿ" ಕಾರ್ಯಕ್ರಮಗಳನ್ನು ರೂಢಿಸಿಕೊಂಡು ಹೋಗಲು ಸಂವಿಧಾನವನ್ನೇ ಬುಡಮೇಲು ಮಾಡಬಯಸುತ್ತಾರೆ.

ತನ್ನ ಹಿಡಿದ ಹಟವನ್ನು ಯೇನಕೇನ ಸಾಧಿಸಿಕೊಳ್ಳಲು ಆಕೆ ಸಂವಿಧಾನವನ್ನೇ ಬದಲಿಸುವ ಸಾಹಸಕ್ಕೆ ಇಳಿದಿದ್ದಾರೆ.

ಭಾರತದ ಕೈಗಾರಿಕಾ ಮುನ್ನಡೆ

ದೇಶದಲ್ಲಿ ಇತ್ತೀಚೆಗೆ ಕೈಗಾರಿಕಾ ಉತ್ಪನ್ನ ಹೆಚ್ಚು ವಿಕಾಸಗೊಂಡಿದೆ. ಕೈಗಾರಿಕಾ ಉತ್ಪಾದನೆ 1968ರಲ್ಲಿ ಶೇಕಡ 6.4ರಷ್ಟು ಹೆಚ್ಚಿತು. ಇದು 1969ರ ವೇಳೆಗೆ 7.1ರಷ್ಟಕ್ಕೆ ಏರಿದೆ. ಕಳೆದ ಎರಡು ವರ್ಷಗಳಲ್ಲಿ ದೇಶದಲ್ಲಿ ರಜಿಸ್ಟರಾದ ಕೈಗಾರಿಕಾ ಘಟಕಗಳ ಸಂಖ್ಯೆ 130273ರಿಂದ 178901ರಷ್ಟಕ್ಕೆ ಏರಿತು. ಅಂದರೆ ನೂರಕ್ಕೆ ಮೂವತ್ತರಷ್ಟು ಹೆಚ್ಚಳ ಕಂಡುಬಂದಿದೆ.

ಆಹಾರ ಮತ್ತು ಇತರ ವಸ್ತುಗಳನ್ನು ತಯಾರಿಸುವ ಕೈಗಾರಿಕೆಗಳ ಉತ್ಪನ್ನ ಗಣನೀಯವಾಗಿ ಏರಿದೆ. ಸಣಬು ಮತ್ತು ಹತ್ತಿಬಟ್ಟೆ ಕೈಗಾರಿಕೆಯಲ್ಲೂ ಪ್ರಗತಿ ಗಮನಾರ್ಹ. ಯಂತ್ರೋಪಕರಣಗಳ ಉತ್ಪಾದನೆ ನೂರರಷ್ಟು ಹೆಚ್ಚಿದೆ. ಇವುಗಳ ಒಟ್ಟಿನ ಉತ್ಪಾದನೆ 1961ರಲ್ಲಿ 161 ಕೋಟಿ ರೂ. ಗಳಷ್ಟಿದ್ದು, 1970ರ ವೇಳೆಗೆ 449.9ಕೋಟಿ ರೂ.ಗಳಿಗೆ ಏರಿದೆ. ಯಂತ್ರೋಪಕರಣಗಳಿಗೆ ಅಗತ್ಯವಾಗುವ ಸಣ್ಣಪುಟ್ಟ ಉಪಕರಣಗಳ ಉತ್ಪನ್ನವೂ ಈ ವರ್ಷ ಶೇಕಡ 43ರಷ್ಟು ಹೆಚ್ಚಿದೆ.

ರಸಾಯನ ಕೈಗಾರಿಕೆಗಳ ಉತ್ಪನ್ನ ಈಗಾಗಲೇ 250ಕೋಟಿ ರೂ.ಗಳನ್ನು ಮೀರಿದೆ.

ಇಲೆಕ್ಟ್ರಾನಿಕ್ ಕಾರ್ಖಾನೆಗಳ ಉತ್ಪನ್ನ ಇತ್ತೀಚೆಗೆ ನಾಲ್ಕರಷ್ಟು ಹೆಚ್ಚಿದೆ. ಐದು ವರ್ಷಗಳ ಹಿಂದೆ ಈ ಕಾರ್ಖಾನೆಗಳಲ್ಲಿನ ಉತ್ಪನ್ನ 30.5ಕೋಟಿ ರೂ.ಗಳಷ್ಟಿತ್ತು. ಇದು ಈಗ 138ಕೋಟಿ ರೂ.ಗಳಿಗೆ ಹೆಚ್ಚಿದೆ. ಸೀಮೆಎಣ್ಣೆ ಉತ್ಪಾದನೆಯಲ್ಲಿ ಭಾರತ ಸ್ವಾವಲಂಬನವನ್ನು ಸಾಧಿಸಿದೆ.

ದೇಶದಲ್ಲಿ ಔಷಧಿ ಮತ್ತು ಇತರ ಆರೋಗ್ಯ ಸುಧಾರಣಾ ವಸ್ತುಗಳ ಉತ್ಪಾದನೆಯೂ ಏರಿದೆ. ಕಳೆದ 20ವರ್ಷಗಳಲ್ಲಿ ಈ ವಸ್ತುಗಳ ಉತ್ಪಾದನೆ 17ರಷ್ಟು ಏರಿದೆ. ಇವುಗಳ ಉತ್ಪಾದನೆ ಈಗ ವರ್ಷಕ್ಕೆ ಸುಮಾರು 20ಕೋಟಿ ರೂ.ಗಳಷ್ಟಿದೆ.

ಆಸ್ತಿಯ ಮೇಲಿನ ಹಕ್ಕನ್ನೇ ಮೊಟಕುಗೊಳಿಸಬೇಕು—ಎಂದು ಪ್ರಗತಿ ಲೇಬಲ್‌ಧಾರಿ ಮಿತ್ರರು ಒತ್ತಾಯ ಹೇರುತ್ತಿದ್ದಾರೆ.

ಶ್ರೀಮತಿ ಗಾಂಧಿಯವರ ಪಕ್ಷ ಮಧ್ಯಾವಧಿ ಚುನಾವಣೆಯಲ್ಲಿ ಗೆಲ್ಲಬಹುದು. ಗೆಲ್ಲದೆಯೂ ಉಳಿಯಬಹುದು. ತನ್ನ ಉಳಿವು—ಅಳಿವಿನ ಪ್ರಶ್ನೆಯನ್ನು ಆಕೆ ದಿಟ್ಟತನದಿಂದಲೇ ಉತ್ತರಿಸುತ್ತಾರೆ.

ಆದರೆ, ಪ್ರಗತಿಯ ಹೆಸರಲ್ಲಿ ಜನತಾ ಜನಾರ್ದನನನ್ನು ಪ್ಲಾಸ್ಟಿಕ್ ಛತ್ರಪತಿಯನ್ನಾಗಿ ಪರಿವರ್ತಿಸುವುದು ಸಾಧ್ಯವಾದೀತೆ?

ಆಸ್ತಿಯ ಮೇಲಿನ ಹಕ್ಕನ್ನು ಮನ್ನಾ ಮಾಡಿದರೆ, ಮತ್ತೆ ವ್ಯಕ್ತಿಗೆ ಏನು ಸ್ವಾತಂತ್ರ್ಯ?

ನಡುಗಾಲದ ಚುನಾವಣೆಗಳಲ್ಲಿ ಪ್ರಗತಿಶೀಲ ಮತದಾರರು ಚಿಂತಿಸಬೇಕಾದುದು ಈ ಮುಖ್ಯ ಸಂಗತಿಯನ್ನು—ನಾವು ಕಮ್ಯುನಿಸ್ಟರಾಗಬೇಕೆ, ಭಾರತೀಯರಾಗೇ ಉಳಿಯಬೇಕೆ?

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು



ಮಧ್ಯಪ್ರದೇಶದ ಉಕ್ಕಿನ ಕಾರ್ಖಾನೆಯಲ್ಲಿ ಉಕ್ಕಿನ ಗಟ್ಟಿಯನ್ನು ನೆಲವಾಗಿಸುವ ನೋಟ.

NAVAYUGA 7—1—1971
Registered with the Registrar of News Papers for India under No. R. N. 3546/'57

REGD. No. B. Gr 176
LICENCE No. 33.
Licensed to Post without Prepayment

ವ್ಯಾಸ ತೇಜೋಂಶ ಸಂಭವರು

"ವ್ಯಾಸೋಚ್ಛಿಷ್ಟಂ ಜಗತ್ಸರ್ವಂ" ಎಂಬ ಹಾಗಿನವರು ನಮ್ಮ ಊರಿನ ದೊಡ್ಡ ಸಾಹಿತಿಗಳಾದ ಶ್ರೀಮಾನ್ ವ್ಯಾಸರು, ಮಹಾಭಾರತ ಪ್ರಣೇತೃಗಳಾದ ವ್ಯಾಸರೇ ಹೀಗೆ ಪುನರವತಾರವೆತ್ತಿರಬೇಕು.

ಸಾಹಿತಿ ವ್ಯಾಸರೆಂದರೆ ಆಬಾಲಗೋಪಾಲರಿಗೂ ಗೊತ್ತು. ಅನೇಕ ವರ್ಷಗಳ ಹಿಂದೆ ಅವರು ತಮ್ಮ ಯೌವನ ಪ್ರಾಯದಲ್ಲಿ ಬರೆದ ಕತೆ ಕಾದಂಬರಿ ನಾಟಕ ಮೊದಲಾದ ಸಾಹಿತ್ಯ ಪ್ರಕಾರಗಳು ಎಷ್ಟೆಂದು ಖ್ಯಾತವಾಗಿವೆಯೆಂದರೆ, ಕೆಲವು ಅನೇಕ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟಿವೆ; ರಾಜ ಬಹುಮಾನಗಳಿಸಿವೆ. ಹೆಚ್ಚೇಕೆ? ಇವರಂಥವರು ಸಾವಿರ ಸಾಹಿತಿಗಳಲ್ಲೊಬ್ಬರೆಂದರೆ ಸಾಕು.

ಅವರ ದೃಷ್ಟಿ ಸಾಹಿತಿಗೆ ಬೇಕಾದ ದೃಷ್ಟಿ. ಜನಜೀವನವನ್ನು ಅವರು ನೋಡುವುದು ಅಂತಹ ದೃಷ್ಟಿಯಿಂದಲೇ. ಅಂತೆಯೇ ಪ್ರತಿಯೊಂದು ಕ್ಷೇತ್ರದಲ್ಲಿಯೂ ಒಳ್ಳೇ ಅನುಭವಿಗಳಾಗಿದ್ದಾರೆ.

ಪಾಂಡಿತ್ಯದಲ್ಲಿ ಸಂಸ್ಕೃತ ಬಲ್ಲವರು. ವಿಶ್ವವಿದ್ಯಾಲಯದ ಡಿಗ್ರಿ ಪಡೆದವರು. ವೇದ ಪುರಾಣಗಳಲ್ಲಿ ಕೈಯಾಡಿಸಿ ತಿಳಿದವರು. ಭಗವದ್ಗೀತೆಯನ್ನು ನಾಲಗೆಯಲ್ಲಿ ಅಂಟಿಸಿಕೊಂಡವರು.

ಅಷ್ಟೆಲ್ಲ ತಿಳಿದವರಾಗಿ ಎಲ್ಲಾ ಬಲ್ಲವರೆನಿಸಿದುದರಿಂದಲೇ ಅವರ ಮನೆಯಲ್ಲಿ ದೇವ ದಿಂಡರುಗಳ ಕುರುಹುಗಳಾವುದೂ ಕಾಣುವುದಿಲ್ಲ. "ದೇವರ ನಂಬುಗೆ ಪಾಮರರ ಗುರ್ತು. ನಾನು ಪಾಮರನಲ್ಲ, ಪಂಡಿತ" ಎಂಬ ಆತ್ಮವಿಶ್ವಾಸ ಅವರಿಗೆ ಗಾಢವಾಗಿದೆ. ಬ್ರಹ್ಮ ವಿಷ್ಣು ಮಹೇಶ್ವರಾದಿಗಳೆಲ್ಲ ಸಾಹಿತ್ಯದೊಳಗೆ ಬರುವ ಕಥಾ ಪಾತ್ರಗಳು ಎಂದು ಅವರು ಗೆಳೆಯರ ಮುಂದೆ ವ್ಯಾಖ್ಯಾನಿಸುವುದನ್ನು ಆಗಾಗ ಕೇಳಬಹುದು. ಆದರೆ ಅದನ್ನು ಅವರು ಪ್ರಚಾರ ಪಡಿಸುವುದಿಲ್ಲ. ಯಾರಿಗೆ ಯಾವ ನಂಬುಗೆಯು ಒಪ್ಪಿತೋ ಆ ನಂಬುಗೆಯನ್ನು ಹಿಡಿದುಕೊಂಡು ಮೇಲೆ ಬರಬೇಕು ಎನ್ನುತ್ತಾರೆ. ದೇವಸ್ಥಾನಗಳಲ್ಲಿ ನಡೆಯುವ ಧರ್ಮ ಕೈಂಕರ್ಯಗಳಿಗೂ ಕಾಣಿಕೆ ಕೊಡುತ್ತಾರೆ. ಪ್ರಸಾದ ಕೊಟ್ಟರೆ ರುಚಿ ಹಿಡಿದು ತಿನ್ನುತ್ತಾರೆ. ಆದರೆ ತಾವು ದೇವರ ಹೆಸರಿನಲ್ಲಿ ಎಲ್ಲಿಯೂ ಕೈ ಮುಗಿದು ಬಾಗುವುದಿಲ್ಲ. ಅಂತಲೇ ಅವರು ಪರಿಪೂರ್ಣರು.

ಪರಿಪೂರ್ಣರಾಗಿ ಇರುವುದರಿಂದಲೇ ಅವರಲ್ಲಿ ಯಾವ ಬಗೆಯ ಭಾವೋದ್ವೇಗವೂ ಕಾಣಲಾರದು. ನಮಗೆ ರಾಮಾಯಣವನ್ನೋದುವಾಗ ಅನೇಕ ಕಡೆ ಕಣ್ಣೀರು ತುಂಬುತ್ತದೆ. ಕತೆ ಕಾದಂಬರಿಗಳನ್ನೋದುವಾಗ, ನಾಟಕ ಸಿನಿಮಾ ನೋಡುವಾಗ ಅಳುತ್ತೇವೆ, ನಗುತ್ತೇವೆ. ಕೋಪದಿಂದ ಹಲ್ಲು ಕಡಿಯುತ್ತೇವೆ, ಎಲ್ಲಾ ಭಾವನೆಗಳಿಗೂ ಒಳಗಾಗುತ್ತೇವೆ. ಆದರೆ ಸಾಹಿತಿ ವ್ಯಾಸರಲ್ಲಿ ಯಾವ ಭಾವವೂ ಕಾಣಲಾರದು. ಅಹಾ ಎಂಬ ಉದ್ಗಾರ ಸಹಾ ಹೊರಡದು. ಕಾರಣ ಅವರು ಅಂತಹ ಸಾಹಿತ್ಯವನ್ನು ಓದಿ ಓದಿ, ಬರೆದು ಬರೆದು, ರಚಿಸಿ ರಚಿಸಿ, ಭಾವನೆಗಳನ್ನು ಅರಳಿಸಿ ಅರಳಿಸಿ ಸುಸ್ತಾಗಿ ಹೋದವರು. ಯಾವ ಕವಿತೆಯೂ ಎಂತಹ ಸುರಸ ಕಾದಂಬರಿಯೂ ಕತೆಯೂ ಅವರಿಗೆ ಸಪ್ಪೆಯೇ, ಸಾಧಾರಣವೆ. ಮದುವೆಯಾದಾಗ ಹೆಂಡತಿಯಲ್ಲಿ ಬಗೆಬಗೆಯ ಸೌಂದರ್ಯರಸಗಳನ್ನು ಕಂಡುಕಂಡು, ಅನುಭವ ಹೆಚ್ಚಾದಂತೆ ಸಪ್ಪೆಯಾಗಿ ಹೋಗಿಬಿಡುತ್ತದೆ; ಹೊಸದೇನೂ ಇಲ್ಲವೆನಿಸುತ್ತದೆ. ಹಾಗೆಯೇ ವ್ಯಾಸರಿಗೆ ಯಾವುದನ್ನು ಓದಿದರೂ ಸಪ್ಪೆಯೇ, ಹಳೆಯದೇ, ಸಾಧಾರಣವೇ. ಅದಕ್ಕೇ ಅವರನ್ನು, ತುಂಬ ಸರ್ಕ್ಯುಲೇಷನ್ ಇರುವ ಪತ್ರಿಕೆಯ ಸಂಪಾದಕತ್ವದಿಂದ ಬಹು ಗೌರವಪೂರ್ವಕವಾಗಿ ತೊಲಗಬೇಕಾಯಿತಂತೆ.

ಹೌದು, ಇವರು ಹೊಟ್ಟೆಗಾಗಿ ಮಾಡಿದ ಉದ್ಯೋಗದಿಂದ ನಿವೃತ್ತಿ ಹೊಂದಿದ ಮೇಲೆ ಒಂದು ಪ್ರಸಿದ್ಧ ಪತ್ರಿಕೆಯ ಸಂಪಾದಕರಾಗಿ ಸ್ವಲ್ಪ ಕಾಲವಿದ್ದರು. "ಪುಟ ತುಂಬಿಸುವ ಕೆಲಸವೇ ಹೊರತು, ಯಾವ ಲೇಖನವೂ ರುಚಿಯಿಲ್ಲ. ಬರೀ ಸಪ್ಪೆ" ಎನ್ನುವುದು ಅವರ ಮೂಲ ಮಂತ್ರವಾಯಿತು ಆಗ. "ಆ ಕತೆ ಒಳ್ಳೆಯದಿತ್ತು; "ಇಂಥ ಲೇಖನ ಅದ್ಭುತವಾಗಿತ್ತು" ಎಂದು ಮುಂತಾಗಿ ವಾಚಕ ಲೋಕದಿಂದ ಕಾಗದಗಳು ಬಂದರೆ ಅವರು ಆಶ್ಚರ್ಯಪಡುತ್ತಾರೆ. ಆ ಪತ್ರಿಕೆಯಲ್ಲಿ ಬರುವ ಅವರ ವಿಮರ್ಶೆಗಳು, ಯಾವ ಪುಸ್ತಕವೇ ಆಗಲಿ, ಅವರ ದೃಷ್ಟಿಯಲ್ಲಿ "ಸಾಮಾನ್ಯ ಕೃತಿ".

ಎಷ್ಟೋ ಮಂದಿ ಸಾಮಾನ್ಯ ಸಾಹಿತಿಗಳು ಅವರ ಸಂದರ್ಶನ ತೆಗೆದುಕೊಂಡು, ಅವರ ಅಭಿಪ್ರಾಯ ಆಶೀರ್ವಾದಗಳನ್ನು ತೆಗೆದುಕೊಂಡು ಹೋಗುವುದನ್ನು ಕಾಣಬಹುದು.

ಭಾರತದ ಮಹರ್ಷಿ ವ್ಯಾಸರ ಹತ್ತಿರ ನಾವೇನಾದರೂ ಬರೆದು ಕೊಟ್ಟು "ಹೇಗಿದೆ ಸ್ವಾಮಿ" ಎಂದು ಕೇಳಿದರೆ ಅವರೇನು ಹೇಳಿಯಾರು? ತಮ್ಮ ಹಾಗೆ ಪರಿಪೂರ್ಣರ ಅಪೂರ್ಣ ಎಷ್ಟು ಬಲ್ಲರೆ? "ಪರವಾಯಿಲ್ಲ; ಹೀಗೇ ಮುಂದುವರಿಸಿ, ಲೇಖನ ವ್ಯವಸಾಯವನ್ನು ಪಳಗಿಸಿಕೊಳ್ಳಿ" ಎಂದಾರು. ಹಾಗೆಯೇ ಇವರೂ.

ಇತ್ತೀಚೆಗೆ ಅವರು ಬರೆದ ಲೇಖನಗಳು ಬಹಳ ಮಹತ್ವವೆಂದು ಪ್ರಕಟವಾಗುತ್ತಿವೆಯಾದರೂ, ಸಾಮಾನ್ಯರಾರೂ ಅದನ್ನು ಓದುವುದಿಲ್ಲ. ಓದಿದವರಿಗೆ ಅರ್ಥವಾಗುವುದಿಲ್ಲವಂತೆ. ಆದರೆ ಅದನ್ನು ಬಾಯಿ ತೆರೆದು ಹೇಳುವುದೂ ಇಲ್ಲ. ಅಷ್ಟು ದೊಡ್ಡ ಸಾಹಿತಿಗಳ ಲೇಖನವನ್ನು ಅರ್ಥಮಾಡಿಕೊಳ್ಳುವ ಪರಿಪಕ್ವತೆ ತಮಗಿಲ್ಲವೆಂಬುದು. ಅದನ್ನು ಪ್ರಕಟಿಸಿದವರಿಗೂ ಓದಿದವರಿಗೂ ಗೊತ್ತಿರುತ್ತದೆ.

ಇಂತೆನ್ನುತ್ತಾ ಅವರ ಜನ್ಮದಿನ ಸಮಾರಂಭದ ಈ ಸಂದರ್ಭದಲ್ಲಿ ಸಂಸ್ಕೃತಿ ಜ್ಞಾನರೂಪದ ಈ ಸಣ್ಣ ಪುಷ್ಪ ಮಾಲಿಕೆಯನ್ನು ಅವರ ಕೊರಳಿಗೆ ಸಮರ್ಪಿಸುತ್ತೇನೆ—ಪ್ರಸನ್ನನಲ್ಲೇ.

—ಶ್ರೀ ಎಂ. ರಂಗರಾವ್.

ನಗೆಗಡಲು

"ಮಗ ನಿನ್ನ ಮೊದಲ ಹುಟ್ಟು ಹಬ್ಬಕ್ಕೆ ಏನು ಉಡುಗೊರೆ ತಂದಿರಿ?"

"ನಾವು ಅದರ ಹಣದ ಪೆಟ್ಟಿಗೆ ತೆರೆದು, ಪಟ್ಟ ವಾಚನಿಗಾಗಿ ಒಂದು ಕಸ್ತ್ರಿ ಪೆಟ್ಟಿಗೆ ತಂದೆವು."

○ ○ ○

"ಮಗು, ನಿನ್ನ ತಮ್ಮನೇಕೆ ಕೂಗುತ್ತಿದ್ದಾನೆ?"

"ನಾನು ನನ್ನ ದೋಸೆಯನ್ನು ಅವನಿಗೆ ಕೊಡದೇ ತಿನ್ನುತ್ತಿದ್ದೇನೆಂದು ಅವ್ವ...."

"ಏನು, ಅವನ ದೋಸೆಯನ್ನು ತಿಂದು ಬಿಟ್ಟಾಯಿತೇನು?"

'ಹೌದಮ್ಮ, ಅದನ್ನು ನಾನು ಮೊದಲೇ ತಿಂದಾಯಿತು...."

○ ○ ○

ತಂದೆ— ನಿನಗಿಂತ ಚಿಕ್ಕವನಾದವನನ್ನು ನೀನು ಹೊಡೆದೆಯಂತೆ. ಹೌದೆ?

ಮಗ— ಹೌದಪ್ಪ.

ತಂದೆ— ಸರಿ, ಹಾಗಾದರೆ, ನಾನು ನಿನಗೆ ದಂಡನೆ ಕೊಡಬೇಕು.

ಮಗ— ನಾನು ನಿನಗಿಂತ ಚಿಕ್ಕವನಲ್ಲವೇನಪ್ಪಾ?

○ ○ ○

ಒಬ್ಬ— ನಾನು ಸಿನೆಮಾ ನಟಿಯನ್ನೇ ಲಗ್ನವಾಗಬೇಕೆಂದಿದ್ದೇನೆ.

ಇನ್ನೊಬ್ಬ— ಅಗತ್ಯವಾಗಿ. "ಹೊಸ ಮುಖಗಳು ಬೇಕಾಗಿವೆ" ಜಾಹೀರಾತು ನಿನ್ನೆ ತಾನೇ ಬಂದಿದೆ.

○ ○ ○

ರಾಮು— ದನದ ಹಾಲಿಗಿಂತ ಎಮ್ಮೆಯ ಹಾಲು ದಪ್ಪ ಏಕೆ?

ಸೋಮು— ದನಕ್ಕಿಂತ ಎಮ್ಮೆ ದಪ್ಪ

ರಾಮು— ದನಕ್ಕಿಂತ ಎಮ್ಮೆ ಹೆಚ್ಚು ಹಾಲು ಕೊಡಲು ಕಾರಣ?

ಸೋಮು— ಅದರ ಹೊಟ್ಟೆ ದೊಡ್ಡದು, ಹೆಚ್ಚು ನೀರು ಕುಡಿಯುತ್ತದೆ.

○ ○ ○

ಒಬ್ಬ— ಜಾತೀಯ ಸಂಘಟನೆಗಳನ್ನು ಬಹಿಷ್ಕರಿಸಿದರೆ?

ಇನ್ನೊಬ್ಬ— ಬಹಿಷ್ಕೃತ ಜಾತೀಯ ಸಂಘಟನೆಗಳು ಮತ್ತು ಪುರಸ್ಕೃತ ಜಾತೀಯ ಸಂಘಟನೆಗಳು ಎಂದು ಎರಡು ಪಕ್ಷವಾಗುತ್ತದೆ.

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು—4

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—
ಹೋಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ
ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾರ್ಟಿಯವರ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೇಲ್
Please Visit ಫೋನ್: 77
HOTEL SHIVAPRASAD
High Class Boarding, Lodging & Restaurant
COONDAPUR, S. K.

READ &
ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 19

NAVAYUGA

14—1—1971

ಪ್ರಗತಿಯ ಗಾಳಿಪಟವನ್ನು ತಂದುಕೊಡುವವರು ಯಾರು?

ಲೋಕಸಭೆಯ ವಿಸರ್ಜನೆಯನ್ನು ಪ್ರಧಾನಿ ಗಾಂಧಿ ಮಾಡಿದ ಉದ್ದೇಶ ಒಂದೇ ಒಂದು—ತನ್ನ ಪ್ರಗತಿಪರ ಕಾರ್ಯಕ್ರಮಗಳಿಗೆ ಬಂದ ಅಡೆತಡೆಗಳನ್ನು ನಿವಾರಿಸಲು ಜನತೆಯ ನೇರ ಆದೇಶ ಪಡೆಯುವುದು.

ಆಕೆಯ ಪ್ರಗತಿಯ ಕಾರ್ಯಕ್ರಮಗಳು ಯಾವುವು? ಯಾವುದಕ್ಕೆ ಅಡೆತಡೆಗಳು ಉಂಟಾದವು?

ಪ್ರಧಾನಿ ಗಾಂಧಿ ಅವರ ಎಲ್ಲ ರಾಜ್ಯನೀತಿ ಹೋರಾಟಗಳೂ ಪ್ರಗತಿಪರವೇ ಎಂದು ಆಕೆ ಅಂದುಕೊಳ್ಳುತ್ತಾರೆ; ಕೋಲೇ ಬಸವಣ್ಣನವರು ಅವರ ಮುಂದೆ ತಲೆದೂಗುತ್ತಾರೆ. ರಾಜಧನವಾದಿ ರದ್ದತಿ ಮುಂತಾದವು ಆಕೆಯ ಪ್ರಗತಿಪರ ಕಾರ್ಯಕ್ರಮ.

ಇದು ಅನ್ಯಾಯ, ಸಂವಿಧಾನ ವಿರೋಧಿಯೆಂದು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಪ್ರಧಾನಿಯ ಉದ್ಗಾರಗಳು ಪರ್ಯಾಲೋಚನೀಯ.

ಸಂವಿಧಾನವೆಂಬುದು ಶಾಶ್ವತವಾದ ಕಾಗದವಲ್ಲ; ಅದು ಸಾಮಯಿಕ ಅನುಕೂಲಕ್ಕೆ ತಕ್ಕಂತೆ ತಿದ್ದುಪಡಿ ಹೊಂದಿದರೆ ತಪ್ಪಿಲ್ಲ—ಇದು ಪ್ರಧಾನಿ ಗಾಂಧಿಯವರ ಖಚಿತ ಅಭಿಪ್ರಾಯ.

ಮೊನ್ನೆ ತಾನೆ ಕಾಮನ್‌ವೆಲ್ತ್‌ಗೆ ಸಂಬಂಧಿಸಿದ ಸಮ್ಮೇಳನವೊಂದು ನವದೆಹಲಿಯಲ್ಲಿ ನಡೆಯಿತು. ಇದನ್ನು ಉದ್ಘಾಟಿಸುತ್ತ ರಾಷ್ಟ್ರಪತಿ ಗಿರಿಯವರೂ ಇದೇ ಅಭಿಪ್ರಾಯವನ್ನು ಅಭಿವ್ಯಕ್ತಗೊಳಿಸಿದರು.

ಪ್ರಧಾನಿ ಗಾಂಧಿಗೂ ರಾಷ್ಟ್ರಪತಿ ಗಿರಿಗೂ ಯಾವುದೇ ವಿಷಯದಲ್ಲೂ ಸಂಘರ್ಷವಿಲ್ಲವೆಂಬುದಕ್ಕೆ ಈಗ ಇನ್ನೊಂದು ಪ್ರಮಾಣವೂ ಸಿಕ್ಕಿತು.

ದೇಶದ ಜನತೆಯ ಆಶೋತ್ತರಗಳ ಪ್ರತಿರೂಪವಾದ ಸಂವಿಧಾನ ಈ ನಾಯಕರಿಗೆ ನಶ್ವರವಾದ ಕಾಗದವಾಗಿ ಕಂಡು ಬಂತು. ಅದನ್ನು ತಮಗೆ ಬೇಕಾದಾಗ ಬೇಕಾದಂತೆ ಪರಿವರ್ತಿಸುವ ಅರ್ಥ ಕಟ್ಟುವ ಹವಣಿಕೆ ಅವರದ್ದಾಗಬಹುದು.

ರಾಜಧನಾದಿ ರದ್ದತಿಯ ಆಜ್ಞೆಯನ್ನು ಸಂವಿಧಾನಬಾಹಿರವೆಂದು ನ್ಯಾಯಾಂಗ ತೀರ್ಪಿತ್ತ ಮೇಲೆ ನ್ಯಾಯಾಂಗದ ಮೇಲೆಯೂ ಕೆಲವರು ಹರಿ ಹಾಯತೊಡಗಿದ್ದಾರೆ.

ಕಾನೂನಿನ ನ್ಯಾಯದಾನ ಬೇಡ, ಸಾಮಾಜಿಕ ನ್ಯಾಯದಾನ ಬೇಕು ಎಂದು ಮುಂತಾಗಿ ಕೆಲವರು ಹೇಳಿದ್ದುಂಟು.

ನ್ಯಾಯಾಂಗವು ಸಂವಿಧಾನದ ಅನುಚ್ಛೇದಗಳಿಗೆ ಅರ್ಥ ಕಟ್ಟುವಾಗ ಅದರ ಜನಕರ ಆಶಯವನ್ನು ಅರಿತುಕೊಳ್ಳಬೇಕು ಎಂದು ಹೇಳಿದ್ದುಂಟು.

ಜನತಾ ನ್ಯಾಯಾಲಯ ತನ್ನ ತೀರ್ಪನ್ನು ಇನ್ನು ನೀಡಬೇಕಷ್ಟೆ ಎಂದು ಮುಖಸೊಟ್ಟಗೆ ಮಾಡಿದ್ದುಂಟು.

ಪ್ರಗತಿಪರ ಕಾರ್ಯಕ್ರಮಗಳಿಗೆ ನ್ಯಾಯಾಲಯಗಳು ಅಡ್ಡ ಬರುವುದುಂಟು ಎಂದು ಅಂದವರೂ ಉಂಟು.

ಬಿಟ್ಟನಲ್ಲಿ ಸಂವಿಧಾನ ತಿದ್ದುಪಡಿ ಮಾಡಬೇಕು, ಇಲ್ಲವೇ ನ್ಯಾಯಾಂಗದ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬೇಕು.

ಶಾಸಕಾಂಗವು ಜನರಿಂದ ಆಯ್ಕೆಗೊಂಡ ಪ್ರತಿನಿಧಿಗಳಿಂದ ನಿರ್ಮಾಣಗೊಳ್ಳುತ್ತದೆ. ಜನಾಭಿಪ್ರಾಯವೇನು, ಅವರ ಆಶೋತ್ತರಗಳೇನು, ಅವರ ಸಾಮಾಯಿಕ ನಿಲುವೆಯೇನು ಎಂಬುದನ್ನು ಈ ಪ್ರತಿನಿಧಿಗಳು ತಿಳಿದುಕೊಂಡಿದ್ದಾರೆ ಎಂದು ಅರ್ಥ.

ಆದ್ದರಿಂದ ಅವರ ನಿರ್ಣಯಗಳು ಜನತೆಯ ನಿರ್ಣಯಗಳೇ ಸರಿ. ಅದನ್ನು ನ್ಯಾಯಾಂಗಕ್ಕೆ ಒಯ್ಯುವ ಅವಕಾಶವನ್ನೇ ಇಲ್ಲದಂತೆ ಮಾಡುವ ಬಗ್ಗೆಯೂ ಯೋಜನೆಗಳು ಹರಿದವು.

ಮತ್ತೆ ನ್ಯಾಯಾಂಗದ ಅಗತ್ಯವಾದರೂ ಏನು?

ಕಾಯಿದೆ — ಶಾಸನಗಳ ಅಗತ್ಯವೇನು? ಕಾರ್ಯಾಂಗದ ಸುಗ್ರೀವಾಜ್ಞೆಯೊಂದರಿಂದಲೇ ಎಲ್ಲವೂ ನಡೆಯಬಹುದು.

ಜನತೆಗೆ ನ್ಯಾಯ ನೀಡುವ ಅಧಿಕಾರವೇ ಇಲ್ಲ. ಶಾಸಕಾಂಗ ಮಾಡಿದ್ದೆಲ್ಲವೂ ನ್ಯಾಯ ಎಂಬಾಗ ಅನ್ಯಾಯದ ಮಾತೆಲ್ಲಿ?

ಅಂದರೆ, ತಮ್ಮ ಮೂಗಿಗೆ ದಾರ ಬಿಗಿದುಕೊಂಡು, ಅದನ್ನು ಶಾಸಕಾಂಗದ ಕೈಗಳಿಗೆ ಒಪ್ಪಿಸಿಕೊಡಬೇಕು. ಅಂದರೆ, ಸ್ವತಂತ್ರ ದೇಶದಲ್ಲಿ ವ್ಯಕ್ತಿ ಪರತಂತ್ರನಾದಂತೆ.

ನ್ಯಾಯಾಂಗವನ್ನು ಶಾಸಕಾಂಗ ಮತ್ತು ಕಾರ್ಯಾಂಗಗಳಿಂದ ಪ್ರತ್ಯೇಕಿಸಿ ಅದರ ಸ್ವಾಯತ್ತತೆಯನ್ನು ಉಳಿಸಿಕೊಂಡು ಬಂದ ಗೌರವ ಭಾರತಕ್ಕೆ ಸಲ್ಲಬೇಕು.

ನ್ಯಾಯಾಂಗವು ಕೆಲವಾರು ಸರಕಾರಿ ಕಾಯಿದೆ—ಕಲಮುಗಳನ್ನು ಕಿತ್ತು ಹಾಕಿದ್ದ ಉದಾಹರಣೆಗಳುಂಟು.

ಬಹುಮತದ ಮೂಲಕ ಮಂಜೂರಾಗುವ ಕಾಯಿದೆ—ಕಾನೂನುಗಳು "ಹುಚ್ಚು ಬಹುಮತ"ದಿಂದ ಸಂವಿಧಾನ ವಿರೋಧಿಯಾಗುವುದು ಅಪರೂಪವಲ್ಲ.

ಶಾಸನವಾದೊಡನೆಯೇ ಅದು ಪವಿತ್ರವಾಗುವುದಿಲ್ಲ. "ಕೋಲೇ ಬಸವ ಬಹುಮತ" ಪಕ್ಷೀಯ ಆಡಳಿತದಲ್ಲಿ ಸರ್ವೇ ಸಾಮಾನ್ಯ.

ಸಾಮಾಜಿಕ ಮತ್ತು ಸಾಮಾಯಿಕ ನ್ಯಾಯ ಎಂಬುದು ಅವಕಾಶ ಸಿಂಧು ನ್ಯಾಯಕ್ಕೆ ಹತ್ತಿರವಾಗುತ್ತದೆ. ಆಗ ಇಂದ ನ್ಯಾಯವಾದುದು ನಾಳೆ ಅನ್ಯಾಯವಾಗುತ್ತದೆ. ಪರಿಣಾಮ ಸ್ವೇಚ್ಛೆಯಲ್ಲಿ ಪರ್ಯವಸಾನ ಹೊಂದುತ್ತದೆ.

ರಾಷ್ಟ್ರಕ್ಕೊಂದು ಸಂವಿಧಾನವಿರುವುದು ಈ ಸ್ವೇಚ್ಛೆಯಿಂದ. [illegible] ಹೊಂದಿಲ್ಲವಾದರೆ, ಅಧಿಕಾರಿಗಳು ಜನತೆಯನ್ನು ಎಂದೋ ನುಂಗಿ ಬಿಡುತ್ತಿದ್ದರು.

ಆದರೆ ಸಂವಿಧಾನ ಸ್ವರೂಪ ಅಪರಿವರ್ತನೀಯವೆಂದು ಅರ್ಥವಲ್ಲ. ಅನಿವಾರ್ಯ ಪ್ರಸಂಗದಲ್ಲಿ ಅವಶ್ಯವೆನಿಸಿದ [illegible] ಅದನ್ನು ತಿದ್ದುವುದು ಸಾಧ್ಯ—ಹೀಗೆ ತಿದ್ದುವ ವಿಧಿ ನಮ್ಮ ಸಂವಿಧಾನವೇ ಹೇಳುತ್ತದೆ.

ಸಂವಿಧಾನದ ತಿದ್ದುಪಡಿ [illegible] ಸಾಮಾಜಿಕ ಪರಿಸ್ಥಿತಿಗಳಿಗೆ ಹೊಂದಿಕೊಂಡು ನಡೆಯಬೇಕು. ಮೌಲಿಕ ಅಧಿಕಾರವನ್ನೇ ಕಿತ್ತುಕೊಳ್ಳುವುದಲ್ಲ.

ತಿದ್ದುಪಡಿ ಮಾಡುವ ಅಧಿಕಾರವಿದೆಯೆಂದು ಅದನ್ನು ಕ್ರೀಡಾಂಗಣದ ಚೆಂಡನ್ನಾಗಿ ಮಾಡುವುದಕ್ಕಲ್ಲ.

ಪ್ರಧಾನಿ ಗಾಂಧಿಯವರು ಈ ರಾಷ್ಟ್ರದ ಬೆನ್ನೆಲುಬನ್ನು ಬರಿಯ ಕಾಗದವೆಂದು ಗಾಳಿಪಟ ಮಾಡಿದ್ದಾರೆ. ಬೆನ್ನೆಲುಬಿನ ಒಂದು ಹುರಿ ಅಶಕ್ತವಾದರೆ, ಈ ಆಧುನಿಕ ಕಾಲದಲ್ಲಿ ಶಸ್ತ್ರ ಚಿಕಿತ್ಸೆ ನಡೆಸಿ ಬೇರೆ ಹುರಿಯನ್ನು ಜೋಡಿಸಬಹುದು.

ಬೆನ್ನೆಲುಬನ್ನೇ ಮುರಿದು ಬಿಡುವ, ಅಥವಾ ಅದನ್ನು ಕಿರಿದು ಮಾಡುವ ಹವ್ಯಾಸ ಕೆಟ್ಟದ್ದು.

ಅತ್ತ ಪೋಲಿಸ ಅಧಿಕಾರವನ್ನು ತಾನು ಕಸಿದುಕೊಳ್ಳುವದಿಲ್ಲವೆಂದು ಪ್ರಧಾನಿ ಗಾಂಧಿ ಚುನಾವಣಾ ಭಾಷಣ ಮಾಡಿದ್ದಾರೆ. ಆದರೆ, ಇದಕ್ಕೆ ಯಾವ ಭರವಸೆಯೂ ಇಲ್ಲ.

ರಾಜ—ಮಹಾರಾಜರಿಗೆ ಇದ್ದ ಹಕ್ಕು ಕೊಟ್ಟಿದ್ದ ಒಡಂಬಡಿಕೆಗಳನ್ನು ಕಿತ್ತು ಹಾಕಿದವರು ಚುನಾವಣಾ ಭಾಷಣದಲ್ಲಿ ನೀಡುವ ಭರವಸೆಗಳನ್ನು ನೆಚ್ಚುವುದುಂಟೆ?

ಇಂದು ಇಲ್ಲವೆಂದವರೆ ನಾಳೆ ಜನಸಮುದಾಯದ ಜುಟ್ಟು ಹಿಡಿದು [illegible]ದೆಯುವುದು ಶುದ್ಧ ಸಂಭವನೀಯ.

ಪ್ರಧಾನಿ ಗಾಂಧಿ ಅವರ ದಿಟ್ಟತನ—ಎದೆಗಾರಿಕೆಗಳು ನಿಜಕ್ಕೂ ಪ್ರಶಂಸಾರ್ಹ. ಆದರೆ, ಮುಂದೆ ಗಟ್ಟಿತನವನ್ನು ಗುಂಡಿಗೆ ಹೊಡೆದುಕೊಳ್ಳುವಂತೆ ಆಕೆ ವರ್ತಿಸುತ್ತಿದ್ದಾರೆ.

ಆಕೆಯ ದಿಟ್ಟತನ—ಎದೆಗಾರಿಕೆಗಳು ಹುಚ್ಚು ಕುದುರೆಯಾಗಿ [illegible] ತಪ್ಪುವುದರಿಂದಲೇ ಎಲ್ಲರಿಗೂ ಚಿಂತೆ—ಕಳವಳ. ಇದು ದಡಗಳ ನಡುವೆ ರಭಸವಾಗಿ ಹರಿದರೆ ಯಾರಿಗೂ ಬಾಧಕವಿಲ್ಲ; [illegible]ಗೆ ಭೀತಿಯೂ ಇಲ್ಲ; ಬೆಳೆಗೂ ಉಪಯೋಗ.

[illegible] ಹೆಚ್ಚಿ [illegible] ಹಾದಿ ದಿನಗಳ ನೇರ ಬರುತ್ತದೆ. ಆಗ [illegible] ಕಾಲಕ್ಕೆ ತಾವ ನಡೆ [illegible] ನಿಗದಿಯಿಲ್ಲ.

ಶ್ರೀಮತಿ ಗಾಂಧಿ ಅವರ ಕಾರ್ಯಕ್ರಮಗಳ ಅನುಷ್ಠಾನ [illegible] ಹೆಚ್ಚಿನ ವೇಗಗಳಿಂದ ಬೇರೆ [illegible] ಅವುಗಳಲ್ಲಿ ಪ್ರಗತಿಪರತೆಯಿದೆಯೆನ್ನುವ "ಪ್ರಗತಿ"ಯು [illegible] ಹುರುಳನ್ನು ನೀಡದೇ ಹೋಗುತ್ತದೆ.

ಏಕೆಂದರೆ, ಮಾಡಿದ್ದೇನೆ ಎಂದವರು ಮಾಡಿದ್ದು ಒಂದೂ ಕಣ್ಣಿಗೆ ತೋರುವುದಿಲ್ಲ!

ಪ್ರಗತಿಯ ಗಾಳಿಪಟ ಗಗನದೆತ್ತರದಲ್ಲಿ ಹಾರಾಡುತ್ತಿದೆ. ಅದರ ಹಗ್ಗ ತನ್ನ ಕೈಯಲ್ಲಿದೆಯೆನ್ನುತ್ತಾರೆ ಪ್ರಧಾನಿ ಗಾಂಧಿ. ಅದು [illegible]ನ್ನುತ್ತಾರೆ ರಷ್ಯಾದ [illegible] ಮತ್ತಿತರರು.

ಶ್ರೀ ಸಾಮಾನ್ಯನಿಗೆ ಅಗತ್ಯವೇ [illegible]ವುದಿಲ್ಲ; ಕೈಗೆಟುಕದ ಗಾಳಿಪಟ ಎತ್ತರದಲ್ಲಿ ಹಾರುತ್ತಿರುವುದು ಮಾತ್ರ ಗೋಚರವಾಗುತ್ತದೆ. ಅದನ್ನು ತಂದು ಕೊಡುವ ಶಕ್ತಿ ಸಾಮರ್ಥ್ಯ [illegible] ಇಲ್ಲ; ಬತ್ತದ ಹೊಳೆಗೂ ಇಲ್ಲ. [illegible]

ಪರ ಪಕ್ಷಗಳ ಸಹಾಯ

ಒಮ್ಮೆ ದೇವಾಸುರರು ಒಂದಾಗಿ ಬ್ರಹ್ಮನ ಬಳಿ ಹೋಗಿ ಕೇಳಿದರು—"ನಮ್ಮ ನಮ್ಮ ಈ ಹೋರಾಟದಲ್ಲಿ ವಿಜಯಲಕ್ಷ್ಮಿ ಯಾರ ಕೊರಳಿಗೆ ಹೂಮಾಲೆ ಹಾಕುವಳು ?"

"ಯಾರ ಪಕ್ಷದಲ್ಲಿ ರಜಿ ರಾಜನು ಸೇರಿಕೊಳ್ಳುತ್ತಾನೋ ಅದು ಜಯಶಾಲಿಯಾಗುವುದು"—ಬ್ರಹ್ಮನು ನೇರಾಗಿಯೇ ಉತ್ತರಿಸಿದನು.

ದೈತ್ಯರು ಕೂಡಲೆ ರಾಜ ರಜಿಯ ಬಳಿಗೈದಿದರು. "ಮಹಾರಾಜ, ದೇವತೆಗಳು ನಮ್ಮನ್ನು ಸದಾ ಕಷ್ಟಕ್ಕೆ ಗುರಿಮಾಡುತ್ತಿರುತ್ತಾರೆ. ಇದರಿಂದ ವಿವಶರಾದ ನಾವೀಗ ಅವರೊಡನೆ ಯುದ್ಧ ಘೋಷಿಸುವ ಅನಿವಾರ್ಯ ನಿರ್ಧಾರಕ್ಕೆ ಬಂದಿದ್ದೇವೆ. ಆದರೂ ಏಕಾಕಿಯಾಗಿ ಹೋರಾಡುವ ಧೈರ್ಯ ನಮಗಿಲ್ಲ. ವಿಶ್ವಶಾಂತಿಯ ನಮ್ಮ ಪ್ರಯತ್ನದಲ್ಲಿ ನೀನು ನಮ್ಮ ಬಲಕ್ಕೆ ನಿಂತು ನಮಗೆ ವಿಜಯ ತಂದುಕೊಡಬೇಕು." ನಮ್ರರಾಗಿ ಪ್ರಾರ್ಥಿಸಿದರು.

"ರಜಿ ರಾಜನು ಹೇಳಿದನು— "ನೀವು ಶಾಂತಿಗಾಗಿ ಹೋರಾಡುತ್ತಿಲ್ಲ; ಲೋಭಕ್ಕಾಗಿ ಸಮರೋದ್ಯತರಾಗಿದ್ದೀರೆಂದು ನನಗೆ ಗೊತ್ತು. ಶಾಂತಿಯ ನಾಮೋಚ್ಚಾರ ಮಾಡುತ್ತ ಅಧಿಕಾರ ಮತ್ತು ವೈಭವಗಳಿಗಾಗಿ ನೀವು ಯುದ್ಧಕ್ಕಾರಂಭಿಸಿದ್ದೀರಿ."

ದೈತ್ಯರು ನುಡಿದರು: "ಮಹಾರಾಜ, ಅಧಿಕಾರ ಲೋಲುಪರು ನಾವಲ್ಲ; ವೈಭವ—ಭೋಗವಿಲಾಸಗಳು ನಮಗೆ ತೃಣಸಮಾನ. ವಿಶ್ವಶಾಂತಿಯೇ ನಮ್ಮ ಹೋರಾಟದ ಏಕಮಾತ್ರ ಉದ್ದೇಶ. ನಮ್ಮ ಮಾತನ್ನು ನಂಬು".

ರಜಿ ಉತ್ತರಿಸಿದನು: "ನಿಜವಾಗಿ ನಿಮಗೆ ಅಧಿಕಾರ — ಒಡೆತನಗಳ ಆಸೆಯಿಲ್ಲವಾದರೆ, ಭೋಗ—ವಿಲಾಸಾಸಕ್ತಿ ಶೂನ್ಯವಾಗಿರುವುದಾದರೆ, ಲೋಕ ಶಾಂತಿಗಾಗಿಯೇ ನೀವು ದೇವತೆಗಳೊಡನೆ ಹೋರಾಡುವುದಾದರೆ, ನಾನು ನಿಮ್ಮ ಪಕ್ಷದಲ್ಲಿರುತ್ತೇನೆ. ಆದರೆ ಒಂದು ಶರ್ತ—ನೀವು ಗೆದ್ದಿರೆಂದರೆ, ನನ್ನನ್ನು ನಿಮ್ಮ ಇಂದ್ರನಾಗಿ ನೇಮಿಸಬೇಕು."

ಇದನ್ನು ಕೇಳಿದ ದೈತ್ಯರು ಹೇಳಿದರು: "ಮಹಾರಾಜ, ನಾವೆಂದೂ ಸುಳ್ಳರಲ್ಲ. ಆದುದರಿಂದ ಹೇಳುತ್ತಿದ್ದೇವೆ. ನಾವು ನಿನ್ನನ್ನು ಇಂದ್ರನೆಂದು ನೇಮಿಸಲಾರೆವು. ನಮ್ಮ ಜಾತಿಯವನಾದ ಪ್ರಹ್ಲಾದನೇ ನಮ್ಮ ಇಂದ್ರನಾಗುವವನು. ಇದಕ್ಕಾಗಿಯೇ ನಾವು ರಕ್ತಬೆವರೊಂದು ಮಾಡುತ್ತಿದ್ದೇವೆ."

"ನಾನು ನಿಮ್ಮ ಶಾಂತಿಯ ರಹಸ್ಯವನ್ನು ಸ್ಪಷ್ಟವಾಗಿ ತಿಳಿದುಬಿಟ್ಟೆ. ನೀವಿನ್ನು ಹೋಗಬಹುದು; ನಾನು ನಿಮ್ಮ ಪಕ್ಷವಹಿಸುವುದು ಎಂದಿಗೂ ಸಾಧ್ಯವಾಗದ ಮಾತು" ರಜಿ ಆಜ್ಞಾಪಿಸಿದನು.

ದೈತ್ಯರು ಅಪಮಾನಿತರಾಗಿ ಹೊರಟರು.

ಅಷ್ಟರಲ್ಲಿ ದೇವತೆಗಳು ರಜಿ ಮಹಾರಾಜನ ಬಳಿಗಾಗಮಿಸಿದರು. ರಾಜನ ನೆರವನ್ನು ಬಯಸಿದರು. ಅವರಿಗೂ ರಜಿ ತನ್ನನ್ನು ಇಂದ್ರನನ್ನಾಗಿ ಮಾಡುವ ಶರ್ತದ ಮೇಲೆ ಸಹಾಯ ನೀಡುವುದಾಗಿ ಭರವಸೆ ನೀಡಿದನು. ದೇವತೆಗಳು ಒಪ್ಪಿದರು. ರಜಿಯು ದೇವ ಪಕ್ಷವನ್ನು ಸೇರಿ ಅಸುರರೊಡನೆ ಹೋರಾಡಿದನು. ಅಸುರ ಸೇನೆ ಇನ್ನಿಲ್ಲವೆಂಬಂತಾಯಿತು. ದೈತ್ಯರು ಸೋತರು; ದೇವತೆಗಳು ಗೆದ್ದರು.

ದೇವರಾಜ ಇಂದ್ರನು ಮಹಾರಾಜ ರಜಿಯ ಪಾದಗಳಿಗೆ ತಲೆ ಚಾಚಿದನು— "ಭಯದಿಂದ ರಕ್ಷಣೆ ಮತ್ತು ಅನ್ನದಾನ ಮಾಡಿದ್ದರಿಂದ ನೀನು ನಮಗೆ ತಂದೆಯಾಗಿರುವೆ. ನೀನು ಸರ್ವಲೋಕಗಳಲ್ಲೂ ಸರ್ವೋತ್ತಮನು. ಮೂರು ಲೋಕಗಳ ಇಂದ್ರನಾದ ನಾನು ನಿನ್ನ ಮಗನಾದೆನು." ಇಂದ್ರನ ಈ ಮಾತುಗಳನ್ನು ಕೇಳಿದ ರಜಿಯು ಮುಗುಳ್ನಗುತ್ತ ಹೇಳಿದನು— "ಸರಿ, ಬಿಡು. ಶತ್ರುಪಕ್ಷದವರು ಅನುನಯ ವಿನಯ ತೋರಿಸಬಂದಾಗ, ಬಾಹ್ಯಬಲ ತೋರಿಸಲೆಂದು ಉಪಚಾರದ ಮಾತಾಡುವಾಗ, ಅವರನ್ನು ಅತಿಕ್ರಮಿಸುವುದೇ ಅನುಚಿತವೆಂದಿರುವಾಗ, ನನ್ನ ಪಕ್ಷದವನೇ ಆದ ನಿನ್ನ ಮಾತನ್ನು ತಳ್ಳಿಹಾಕುವುದು ಹೇಗೆ ಸಾಧ್ಯ?"

ಹೀಗೆನುಡಿದ ರಜಿಯು ತನ್ನ ರಾಜಧಾನಿಗೆ ಹಿಂದಿರುಗಿದನು. ಶತಕ್ರತುವೇ ಇಂದ್ರ ಪದವಿಯಲ್ಲಿ ವಿರಾಜಿಸಿದನು. ರಜಿಯ ತ್ಯಾಗ ಮತ್ತು ಪ್ರಭಾವಗಳಿಂದ ಆತನು ಜೀವಂತವಿರುವಷ್ಟು ಸಮಯ ಲೋಕದಲ್ಲಿ ಶಾಂತಿ ನೆಲಸಿತು. ರಜಿಯು ಮೃತ್ಯುಮುಖನಾದ ಬಳಿಕ ನಾರದ ಮಹರ್ಷಿಯು ರಜಿ ಪುತ್ರರನ್ನು ಕೆಣಕಿ ಉಬ್ಬಿಸಿದನು. ಅವರು ಇಂದ್ರನನ್ನು ಭೆಟ್ಟಿಯಾಗಿ ಹೇಳಿದರು: "ನೀನು ನಮ್ಮ ತಂದೆ ರಜಿಯ ಮಗನಾಗಿ ಅವನು ಗೆದ್ದ ರಾಜ್ಯವನ್ನು ಅನುಭವಿಸುತ್ತಿದ್ದೀಯೆ, ನಾವೂ ಅದೇ ತಂದೆಯ ಮಕ್ಕಳು. ತಂದೆಯ ಮರಣಾನಂತರ ಆತನ ಸಂಪತ್ತನ್ನು ಮಕ್ಕಳು ತಮ್ಮತಮ್ಮೊಳಗೆ ಹಂಚಿಕೊಳ್ಳುವುದು ಶಾಸ್ತ್ರಸಮ್ಮತ. ಆದುದರಿಂದ ನಮ್ಮ ತಂದೆಯ ಈ ರಾಜ್ಯದಲ್ಲೂ ನಾವು ಪಾಲು ಬಯಸುವುದು ಸಹಜ ತಾನೆ?"

ಇಂದ್ರನು ರಜಿ ಪುತ್ರರ ಈ ವಾದವನ್ನು ಒಪ್ಪಲಿಲ್ಲ. ಪರಿಣಾಮ, ಯುದ್ಧಾರಂಭವಾಯಿತು. ಶಕ್ತಿಶಾಲಿ ರಜಿ ಪುತ್ರರು ದೇವಸೇನೆಯೊಡನೆ ಹೋರಾಡಿ, ಇಂದ್ರನನ್ನು ಪದಚ್ಯುತಗೊಳಿಸಿದರು. ಇಂದ್ರನು ನಿರುಪಾಯನಾಗಿ ಸ್ವರ್ಗ ತ್ಯಜಿಸಿ ದೇವಲೋಕದಿಂದ ಪಲಾಯನ ಮಾಡಿದನು. ಶತಕ್ರತುವು ಇಂದ್ರಪದ ಭ್ರಷ್ಟನಾದ್ದರಿಂದ, ಆತನಿಗೆ ಯಜ್ಞಭಾಗ ದೊರೆಯುವುದು ನಿಂತು ಹೋಯಿತು.

ಹಲವು ವರ್ಷ ಕಳೆದುವು. ಒಂದು ದಿನ ದೇವಗುರು ಬೃಹಸ್ಪತಿಯು ಏಕಾಕಿಯಾಗಿ ಕುಳಿತಿರುವುದನ್ನು ಕಂಡ ಯಜ್ಞಭಾಗವಂಚಿತ ಶತಕ್ರತುವು ಗುರುವಿನ ಮುಂದೆ ನಿಂತು ಹೇಳಿದನು— "ನನ್ನ ತೃಪ್ತಿಗಾಗಿ ಬುಗರಿ ಹಣ್ಣಿನಷ್ಟು ಪುರೋಡಾಶವನ್ನಾದರೂ ನನಗೆ ನೀಡಬಲ್ಲಿರಾ?"

ದಯಾಳು ಬೃಹಸ್ಪತಿ ನುಡಿದನು; "ನೀನು ಮೊದಲೇ ನನ್ನೊಡನೆ ಏಕೆ ಹೇಳಲಿಲ್ಲ? ನಿನಗಾಗಿ ನಾನು ಏನನ್ನು ಮಾಡಲು ಸಿದ್ಧನಿಲ್ಲ? ಆದದ್ದಾಯಿತು, ಇಷ್ಟು ಕೆಲಸಮಯದಲ್ಲೇ ನಿನ್ನ ಕಳೆದುಕೊಂಡ ಇಂದ್ರಪದವನ್ನು ನಿನಗೆ ಕೊಡಿಸುತ್ತೇನೆ."

ರಜಿಯ ಪುತ್ರರು ಭೋಗ—ವಿಲಾಸಾಲಿಪ್ತರಾಗಿ ಮದೋನ್ಮತ್ತರಾದರು. ಅವರ ಸದಾಚಾರ ಭ್ರಷ್ಟವಾಯಿತು; ಆಚಾರಹೀನರಾದ ಅವರನ್ನು ಶತಕ್ರತು ಕೊಂದು ಹಾಕಿದನು; ಮತ್ತು ತಾನು ಪುನಃ ಇಂದ್ರಪದವಿಯನ್ನು ಸಂಪಾದಿಸಿ ಸ್ವರ್ಗರಾಜನೆನಿಸಿಕೊಂಡನು.

ಉತ್ತಮ ಸಂಪಾದನೆ

$6\frac{3}{4}\%$

7 ವರ್ಷದ
ಪೋಸ್ಟ್ ಆಫೀಸ್ ನಿಶ್ಚಿತ ಕಾಲಾವಧಿ ಠೇವಣಿಗಳು

3 ವರ್ಷದ ಠೇವಣಿಗಳು $6\frac{1}{4}\%$ 1 ವರ್ಷದ ಠೇವಣಿಗಳು $5\frac{1}{2}\%$

ಈ ಸರ್ಟಿಫಿಕೇಟುಗಳಲ್ಲಿ ಹಾಗೂ ಇತರ ತೆರಿಗೆರಹಿತವಾದ ಸೆಕ್ಯೂರಿಟಿಗಳಲ್ಲಿ ತೊಡಗಿಸಿದ ಹಣದ ಮೇಲಿನ ಬಡ್ಡಿಯು ರೂ. 3000 ವರೆಗೆ ವರಮಾನ ತೆರಿಗೆ ವಿನಾಯಿತಿ ಪಡೆಯುತ್ತದೆ.

ವಿವರಗಳನ್ನು ಸಮೀಪವಿರುವ ಪೋಸ್ಟ್ ಆಫೀಸಿನಿಂದ ಪಡೆಯಿರಿ.

ರಾಷ್ಟ್ರೀಯ ಉಳಿತಾಯ ಸಂಸ್ಥೆ

davp 70/370

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 19

ಸಂಸ್ಥಾಪಕರು :
ಡಾ। ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦—೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವುದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಇವನ್ನು ಜನ ಬಯಸುತ್ತದೆ

ಒಂದುವಾರ ಮುಂದೆಯೊ ಹಿಂದೆಯೊ ಲೋಕಸಭೆಗೆ ಚುನಾವಣೆಗಳು ನಡೆಯಲಿವೆಯಾದ್ದರಿಂದ ಇದೀಗ ರಾಜ್ಯಕೀಯ ಪಕ್ಷಗಳು ಚುನಾವಣಾ ಹೋರಾಟಕ್ಕೆ ಬದ್ಧಕಂಕಣವಾಗಿವೆ. ಕೇರಳದ ಚುನಾವಣೆಯಲ್ಲಿ ಬಲ ಕಮ್ಯೂನಿಸ್ಟ್ ಮತ್ತು ಮುಸ್ಲಿಂ ಲೀಗುಗಳೊಡನೆ ಸಾರ್ವಜನಿಕ ಮೈತ್ರಿ ಸಾಧಿಸಿದ್ದರಿಂದ ಸಾಕಷ್ಟು ಅಪವಿತ್ರವಾದ ಇಂಡಿಕೇಟ್ ಈ ಬಾರಿ ಸ್ವತಂತ್ರವಾಗಿಯೇ ಚುನಾವಣೆಗಿಳಿಯಲಿದೆ. ಪ್ರಜಾ ಸಮಾಜವಾದಿ, ಬಂಗ್ಲಾ ಕಾಂಗ್ರೆಸ್ ಮೊದಲಾದ ಕೆಲವು ಪಕ್ಷಗಳೊಡನೆ ಚುನಾವಣಾ ಹೊಂದಾಣಿಕೆಗೆ ಅದು ಆಸಕ್ತಿ ತೋರಿ ಮುಂದುವರಿದಿದ್ದರೂ ತನ್ನ ಪ್ರಭುತ್ವವನ್ನು ಅವುಗಳು ಒಪ್ಪಿಕೊಳ್ಳಲೇಬೇಕೆಂದ ಅದರ ನಾಯಕರ ಭಾತಿಯಿಂದಾಗಿ ಮಾತುಕತೆಗಳು ವಿಫಲವಾದುವು. ಆದೇನಿದ್ದರೂ ಇಂಡಿಕೇಟು ಕೆಲವಾರು ರಾಜ್ಯಗಳಲ್ಲಿ ವಿವಿಧ ಪಕ್ಷ—ಸಂಗಡಗಳೊಡನೆ ರಹಸ್ಯ ಮೈತ್ರಿಯನ್ನೂ ಮಾಡಿಕೊಂಡಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗುದಿಲ್ಲ. ಕೆಲವೆಡೆ, ಉದಾಹರಣೆಗೆ ತಮಿಳುನಾಡಿನಲ್ಲಿ, ಇದು ಬಹಿರಂಗವಾದುದಿದೆ.

ಇದಕ್ಕೆ ಪ್ರತಿಯಾಗಿ ಉಳಿದ ವಿರೋಧಿ ಪಕ್ಷಗಳು ಒಂದು ಸಂಯುಕ್ತರಂಗವನ್ನು ರಚಿಸಿಕೊಳ್ಳುವಲ್ಲಿ ಸಫಲವಾದುದು ಮಹತ್ವಾಚಾರವೆನ್ನಲಾಗಬಾರದರೂ ಕಡಿಮೆ ಮಹತ್ವದ್ದೆಂದು ಕಡೆಗಣಿಸುವಂತೆಯೂ ಇಲ್ಲ. ಸಿಂಡಿಕೇಟು—ಜನಸಂಘ—ಸ್ವತಂತ್ರ—ಸಂಯುಕ್ತ ಸಮಾಜವಾದಿ ಪಕ್ಷ—ಶಿವಸೇನೆ ಹೀಗೆ ಹಲವಾರು ಪಕ್ಷ—ಸಂಗಡಗಳು ಒಗ್ಗೂಡಿರುವುದು ದೇಶದ ರಾಜ್ಯಕೀಯ ಮಹತ್ವ ಹರಿದಿದೆಯೆಂಬುದನ್ನು ತೋರಿಸುತ್ತದೆ. ಸಂಯುಕ್ತರಂಗದ ಸಾಮಾನ್ಯೋದ್ದೇಶ - ಶ್ರೀಮತಿ ಗಾಂಧಿಯವರನ್ನು ಅಧಿಕಾರದಿಂದ ಇಳಿಸುವುದು— ಈ ಸಾಮಾನ್ಯ ನೀತಿಯ ಮೇಲೆ ಸಂಯುಕ್ತರಂಗ ಚುನಾವಣೆಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತದೆ. ಇದು ರಹಸ್ಯವಾಗಿರುವುದಿಲ್ಲ. ಇನ್ನು ಬಿ. ಕೆ. ಡಿ. ಯಂತಹ ಒಂದೆರಡು ಪ್ರಾದೇಶಿಕ ಪಕ್ಷಗಳು ತಮಗೆ ಸ್ವತಂತ್ರವಾಗಿಯೇ ಹೆಚ್ಚು ಸ್ಥಾನ ಗೆಲ್ಲಬಹುದೆಂಬ ಆಶೆಯಿಂದ ಮುಂದಿನ ರಾಜ್ಯಕೀಯ ಚದುರಂಗದಾಟಕ್ಕೆ ದಾಳಗಳಾಗಿಯೇ ಉಳಿಯಲು ನಿರ್ಧರಿಸಿವೆ. ಇವುಗಳೂ ಇನ್ನು ಕೆಲವಾರೂ ಚುನಾವಣೆಗಳು ಹತ್ತಿರ ಬಂದಂತೆ ಯಾವುದಾದರೊಂದು ಕಡೆಗೆ ವಾಲಿದರೂ ಅಸಹಜವಲ್ಲ.

ಇಂದಿರಾ ವಿರೋಧಿಗಳೂ ಪರರೂ ತಾವು ಬಹುಮತ ಪಡೆಯುತ್ತೇವೆಂದು ಹೇಳುತ್ತಾರೆ. ಇದು ಅಸಹಜವೂ ಅಸಂಭಾವ್ಯವೂ ಅಲ್ಲ. ವಿರೋಧಿಸಂಯುಕ್ತರಂಗದ ವಿವಿಧ ಪಕ್ಷಗಳು ತಂತಮ್ಮ ಬೇರೆ ಬೇರೆ ಪ್ರಣಾಳಿಕೆಯನ್ನು ಹೊಂದಿರುತ್ತವೆ. ಮುಂದೆ ಒಂದು ವೇಳೆ ಸರಕಾರ ರಚಿಸುವ ಸಂದರ್ಭ ಇದಕ್ಕೊದಗಿದರೆ, ಆಗ ಸಾಮಾನ್ಯ ಕಾರ್ಯಕ್ರಮವೊಂದು ರೂಪಿತವಾಗುತ್ತದೆ. ವಿಚಿತ್ರಾತಿವಿಚಿತ್ರವೆಂದರೆ, ಇಂಡಿಕೇಟೂ ಸೇರಿದಂತೆ ಎಲ್ಲ ರಾಜ್ಯಕೀಯ ಪಕ್ಷಗಳೂ ಸಮಾಜವಾದ—ಅಸಮತೆಯ ನಿರ್ಮೂಲನಗಳತ್ತ ಹೆಚ್ಚು ಗಮನ ಕೊಡುತ್ತವೆ. ಹಲವು ಸನ್ನಿಗಾರರು ಚರ್ಚಿಸಿ ಹದಗೆಡಿಸಿದಂತೆ ಹಲವರು ರಾಜ್ಯಕೀಯ ಪಕ್ಷಗಳ ನಡುವೆ ಸನಿಗದಿಗೆ ಬಿದ್ದ ಸಮಾಜವಾದ ತನ್ನ ವಸ್ತುಸ್ಥಿತಿಗೇ ಎರವಾಗಿದೆ. ಸಮಾಜವಾದಕ್ಕೆ ಮಾಡಿದ ಅದ್ದೂರಿಯ ವೇಷ—ಭೂಷಣ—ಅಲಂಕಾರ—ಪ್ರಭಾವಂಗಳ ನಡುವೆ ಅದರ ಮೂಲ ವಿಗ್ರಹವೇ ನಾಪತ್ತೆಯಾಗಿದೆ.

ಇಂಡಿಕೇಟು ತನ್ನ ಚುನಾವಣಾ ಘೋಷಣೆಯಲ್ಲಿ ಆಸ್ತಿ ಹಕ್ಕನ್ನು ರದ್ದುಗೊಳಿಸುವುದಿಲ್ಲವೆಂದು ಸ್ಪಷ್ಟಪಡಿಸುತ್ತದೆ. ಸಮಾಜವಾದ, ಸ್ಥಾಪನೆ, ಅಸಮತೆಯ ನಿರ್ಮೂಲನ, ನಿರುದ್ಯೋಗ ನಿವಾರಣ, ರಾಜಧನಾದಿ ರದ್ದತಿ— ಇವು ಅದರ ಇನ್ನಿತರ ಸ್ವೀಕೃತ ನೀತಿಗಳು. ಆದರೆ ರಾಜಧನ ರದ್ದತಿಯನ್ನು ಏನಕೇನ ಮಾಡಲು ಇಂಡಿಕೇಟು ಆತುರದಿಂದಿದೆ. ತನ್ನ ಮುಂದಿನ ಮಾರ್ಗವನ್ನು ಸೇರಗೊಳಿಸ, ಇದು ಅದಕ್ಕೆ ಅನಿವಾರ್ಯವೆನಿಸಿದೆ. ಆ ಕಾರ್ಯ ಸಿದ್ಧಿಸಿದರೆ ಮಾತ್ರವೇ ಸಮಾಜವಾದದ ಸ್ಥಾಪನೆಯಾಯಿತು ಎಂದು ಅದು ಭಾವಿಸಿದಂತಿದೆ. ದ್ವಿಪಕ್ಷೀಯ ಮಾತುಕತೆ ಪ್ರಧಾನಿ ಗಾಂಧಿಯ ಘನತೆಗೆ ಕುಂದು; ರಾಜಮಹಾರಾಜರೂ ಈಗ ಸಿದ್ಧರಿಲ್ಲ. ಆದ್ದರಿಂದ ಸಂವಿಧಾನ ತಿದ್ದುಪಡಿ ಅನಿವಾರ್ಯ. ಈ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಿಂದ ನೋಡುವುದಾದರೆ, ಆಸ್ತಿಯ ಮೇಲಿನ ಹಕ್ಕನ್ನು ಮೊಟಕು ಮಾಡುವುದು ಅನಿವಾರ್ಯ. ನಗರ ಪ್ರದೇಶದ ಕೆಲವೊಂದು ಗ್ರಾಮೀಣ ಸಂಪತ್ತು—ಆಸ್ತಿಯ ಮೇಲೆ ಮಿತಿ ಹೇರುವ ಇಂಡಿಕೇಟ್ ನೀತಿ ಇದರ ಮುಂದಿನೊಂದು ರೂಪವೆನಿಸಬಹುದು. ಆಳಿಯುವಲ್ಲ; ನಗರ ಗಂಡನೆಂಬ ಈ ನೀತಿ ಮತದಾರರನ್ನು ಒಮ್ಮೆಗೆ ವಂಚಿಸಲು ಸಾಕಾಗ ಬಹುದಾಯಿತು.

ಉಳಿದವರ ನೀತಿಗಳು ಪ್ರತಿಕ್ರಿಯಾತ್ಮಕವಾಗಿವೆ. ಅವಿನ್ನೂ ಬಹಿರಂಗವಾಗಿಲ್ಲ. ರಾಜ್ಯಧನಾದಿಗಳನ್ನು ನ್ಯಾಯೋಚಿತ ವಿಧಾನಗಳಿಂದ ರದ್ದುಗೊಳಿಸಲು, ದೇಶಾಂತರ ಆರ್ಥಿಕನೀತಿಯನ್ನು ಅನುಸಾರಕ್ಕೆ ತರಲು ಸಿಂಡಿಕೇಟು ಸಿದ್ಧವಾಗುವುದು ಸ್ವಾಭಾವಿಕವೇ. ಉಳಿದವರೂ ಇಂಥದೇ ರೀತಿಯ ಅಥವಾ ಇದನ್ನೇ ಹೋಲುವ ಘೋಷಣೆ ಹೊರಡಿಸಬಹುದು. ಆದರೆ, ಭಾರತೀಯ ಜನಗಿಂದು ಬೇಕಾದುದು ರಾಜಧನ ರದ್ದತಿಯಲ್ಲ; ಸಂವಿಧಾನತಿದ್ದುಪಡಿಯೂ ಅಲ್ಲ. ಆತ ಸರಕಾರದಿಂದ ಬಯಸುವ ಸೇವೆಗಳು ಮುಖ್ಯವಾಗಿ ಇವು: ೧. ನಿರ್ಭಯವಾಗಿ ಬದುಕುವ ಅವಕಾಶ. ೨. ಉತ್ಪಾದನೆಗೆ ಉತ್ತೇಜನ; ಆದರ ಮಾರಕ ಶಕ್ತಿಗಳ ನಿರ್ಮೂಲನ. ೩. ಬೆಲೆಯೇರಿಕೆಗೊಂದು ಲಗಾಮು. ೪. ದುಡಿಯಬಯಸುವವರಿಗೆಲ್ಲ ಉದ್ಯೋಗಾವಕಾಶ. ೫. ಹಣದುಬ್ಬರಕ್ಕೊಂದು ತಡೆ. ೬. ಅಶನ — ವಸನ — ವಸತಿ — ಶಿಕ್ಷಣ — ಆರೋಗ್ಯಗಳ ಪೂರೈಕೆಯಲ್ಲಿ ನಿರ್ವಂಚನೆ. ೭. ಭ್ರಷ್ಟಾಚಾರ ಭಸ್ಮಾಸುರ ದಮನ. ೮. ವಿದೇಶಗಳೊಡನೆ ಸ್ನೇಹ. ೯. ಸ್ವದೇಶಿಗಳಲ್ಲಿ ಸಹೋದರ ವ್ಯವಹಾರ. ಮತ್ತು ೧೦. ದೇಶದುನ್ನತಿಯಲ್ಲಿ ರಾಷ್ಟ್ರೀಯ ಹಿತ ದೃಷ್ಟಿ—ಅಧಿಕಾರ ದರ್ಪ ನಿವೃತ್ತಿ.—ಇವುಗಳತ್ತ ಜನನಾಯಕರ ಗಮನ ಹರಿಯದೆ ನಾವು ಒಳ್ಳೆಯವರಾಗುವುದಿಲ್ಲ; ಪ್ರಗತಿಶೀಲರಾಗುವುದಿಲ್ಲ. ವ್ಯಾವಹಾರಿಕ ಮತ್ತು ಪ್ರಸಂಗೋಚಿತ ನವ ನೈತಿಕತೆ ಬರದಿದ್ದರಿಂದಲೇ ನಾವಿನ್ನೂ ಹೀಗೆ ಉತ್ತರ ಕುಮಾರರಾಗಿ ಉಳಿದಿದ್ದೇವೆಂಬುದನ್ನು ಮರೆಯಬಾರದು.

ರಾಜ್ಯಕೀಯ ನಿರ್ಣಯಗಳು

ಕಾಶ್ಮೀರದಲ್ಲಿನ ಅವಿಭಜಿತ ಕಾಂಗ್ರೆಸ್ಸು ಶ್ರೀಮತಿ ಗಾಂಧಿಯವರಿಗೆ ಬೆಂಬಲವಾಗಿ ನಿಂತದ್ದರಿಂದ ಅದು ಇಂಡಿಕೇಟಾಯಿತು. ಚುನಾವಣೆಯ ವೇಳೆ ಇಂಡಿಕೇಟ್ ಜಮ್ಮು-ಕಾಶ್ಮೀರದ ಎಲ್ಲ ಸ್ಥಾನಗಳನ್ನೂ ತಾನೊಂದೇ ಕಬಳಿಸುವ ಆಶೆಯನ್ನು ಹೊಂದಿದೆ. ಆದರೆ, ಇದಕ್ಕೆ ಮಾರಕವಾದುದು ಶೇಖ್ ಅಬ್ದುಲ್ಲಾ ಮತ್ತು ಜನಮತಗಣನಾ ರಂಗ. ಶೇಖ್ ಅಬ್ದುಲ್ಲಾರೂ ಅವರ ಅನುಯಾಯಿಗಳೂ ಜನಮತ ಗಣನೆಗೆ ಬೆಂಬಲ ನೀಡುತ್ತಿರುವುದು ಇಂದು ನಿನ್ನೆಯ ಸಂಗತಿಯಲ್ಲ. ಅವರ ದೇಶದ್ರೋಹಿ ಕೃತ್ಯಗಳು ಉದ್ಗಾರಗಳೂ ಹಿಂದಿನಿಂದಲೂ ನಡೆಯುತ್ತ ಬಂದಿವೆ. ಆದರೂ ಅವರ ಮೇಲೆ ಇದುವರೆಗೂ ಯಾವ ಗಮನವನ್ನೂ ಹರಿಸದ ಸರಕಾರ ಚುನಾವಣೆ ಸಮೀಪಿಸಿದಾಗ ರಕ್ಷಣಾ ಕಾಯಿದೆಯ ಬಲದಿಂದ ಬಂಧಿಸಿದ್ದು, ಶೇಖ್ ಅಬ್ದುಲ್ಲರಿಗೆ ಪ್ರವೇಶ ನಿರ್ಬಂಧಿಸಿದ್ದು ರಾಜ್ಯಕೀಯ ನಿರ್ಣಯಗಳೇ ಸರಿ.

ರಾಷ್ಟ್ರಪತಿ ಆಳಿಕೆಯಿರುವ ಪಶ್ಚಿಮ ಬಂಗಾಳದ ಭಯಂಕರ ಸ್ಥಿತಿಗತಿಯಲ್ಲಿ ಲೋಕಸಭಾ ಚುನಾವಣೆಯೊಂದಿಗೇನೇ ವಿಧಾನಸಭೆಗೂ ಚುನಾವಣೆ ನಡೆಸಲು ಪ್ರಧಾನಿ ಗಾಂಧಿ ನಿರ್ಧಾರ ಮಾಡಿದ್ದು ಮತ್ತೊಂದು ರಾಜ್ಯಕೀಯ ನಿರ್ಣಯ. ಗಳಿಗೆ ಗಳಿಗೆಗೂ ನಾಗರಿಕ ಜೀವನ ದೂರ ಹೋಗುತ್ತಿರುವ ಅಲ್ಲಿ, ಮತಪೆಟ್ಟಿಗೆಗಳನ್ನು ಬಹಿಷ್ಕರಿಸುವ ಘೋಷಣೆ ಪ್ರತಿಧ್ವನಿಸುವಲ್ಲಿ ಸಾರ್ವತ್ರಿಕ ಚುನಾವಣೆಗಳು ಹೇಗೆ ನಡೆದಾವೆಂದು ರಾಜ್ಯಕೀಯ ತಂತ್ರಜ್ಞರಿಗೇ ಗೊತ್ತು.

ಈ ನಡುವೆ ತಾ. ೧೫ರಂದು ವಿಧಾನಸಭೆಯನ್ನು ವಿಸರ್ಜಿಸಲು ಸಿದ್ಧರಾದ ಒರಿಸ್ಸಾದ ಮುಖ್ಯಮಂತ್ರಿ, ಸಿಂಗದೇವರು ರಾಜೀನಾಮೆ ನೀಡಿದ್ದು (ಮೊದಲು ನಿರಾಕರಿಸಿದ್ದರಿಂದ) ಮತ್ತೊಂದು ರಾಜ್ಯಕೀಯ ನಿರ್ಣಯವೇ? ——

ಬರುವ ವಾರ ರಜೆ

ಪ್ರಜಾರಾಜ್ಯ ವಿಶೇಷ ಸಂಚಿಕೆಯ ಕೆಲಸದ ಒತ್ತಡದಿಂದಾಗಿ ಬರುವ ವಾರದ (ತಾ. 21—1—1971ರ) ಸಂಚಿಕೆಯನ್ನು ನಿಲ್ಲಿಸಲಾಗಿದೆ. ವಾಚಕರು ದಯಮಾಡಿ ಗಮನಿಸಬೇಕಾಗಿ ವಿನಂತಿ.

ತಾ. 28—1—1971ರ ಸಂಚಿಕೆಯು ತಾ. 26ರಂದೇ ಪ್ರಕಟವಾಗುವುದು. —ಮೆನೇಜರ್

ಗೋಹರಾಜ್ಯದಲ್ಲಿ

ಮಂತ್ರಿಧನಾದಿಗೊಂದು ಮಿತಿ ಬೇಡವೆ?

"ಅಲ್ಲ, ಫೆಬ್ರವರಿ ೨೪ರಿಂದ ಆರಂಭವಾಗುವುದೆಂದು ಹೇಳಿದ ಲೋಕಸಭಾ ಚುನಾವಣೆಗಳು ಮಾರ್ಚ್ ಒಂದರಿಂದ ತೊಡಗುವುವಂತೆ. ನಮ್ಮ ಚುನಾವಣಾ ಆಯೋಗಕ್ಕೂ ಒಂದು ಗೊತ್ತು ಗುರಿ ಇಲ್ಲ ಅಂದಂತಾಯ್ತು."

"ವಿವಿಧ ಪಕ್ಷಗಳಿಗೆ ಪ್ರಚಾರಾವಕಾಶ ಸರಿಯಾಗಿ ದೊರೆಯಬೇಕೆಂಬ ಸದಾಶಯದಿಂದ ಹೀಗೆ ಮಾಡಲಾಯ್ತಂತೆ. ಇದರಲ್ಲಿ ಹುರುಳೂ ಇದೇನು."

"ಹಾಗಲ್ಲಾರಿ, ಫೆಬ್ರವರಿ ೨೪ ಎಂದು ಹೇಳಿದ ಮರುದಿನವೇ ಈ ಬದಲಾವಣೆಯೆಂದರೆ...."

"ಸರಿ. ಒಪ್ಕೊಂಡೆ. ಆದರೆ, ಚುನಾವಣೆಗಳ ಬಗ್ಗೆ ರಾಷ್ಟ್ರಪತಿಗಳ ಘೋಷಣೆ ಹೊರಡುವ ವರೆಗೆ ಎಲ್ಲ ದಿನಗಳೂ ತಾತ್ಕಾಲಿಕವೇ..."

"ಅಂದರೆ, ಇನ್ನೂ ಬದಲಾಗಲಿದೆಯೆಂದರ್ಥವೆ?"

"ಆಗಬಹುದು; ಆಗದೆ ಇರಬಹುದು ಅದಕ್ಕೆಲ್ಲ ನಾನ್ಯಾಕೆ ತಲೆಕೆಡಿಸಿಕೊಳ್ಳಬೇಕು?"

"ಮತ್ತೇನಲ್ಲ. ಸಿ. ಡಿ. ಇಲ್ಲಿ ಕೊನೆಗೂ ಎಸ್ಸೆನ್ ಸೋತು ಹೋದರು."

"ಯಾಕೆ?"

"ಎಸ್ಸೆನ್ ಫೆಬ್ರವರಿ ತಿಂಗಳಲ್ಲಿ ಚುನಾವಣೆ ನಡೆಸುವುದು ಎಂದು ಮೂರು ತಿಂಗಳು ಹಿಂದೆಯೇ ಅಂದಿದ್ದರಲ್ಲಾ? ಅದು ಸುಳ್ಳು ಎಂದು ಪ್ರಧಾನಿ ಗಾಂಧಿ ಅಂದರಲ್ಲಾ...."

"ಹ್ಞಂ...ಅದೂ ಮೊದಲ ಸೋಲು ಮುಂದಿನ ಸೋಲಿಗೆ ನಾಂದಿಯಾಗಬಹುದು."

"ಬಹುದು ಯಾಕೆ? ಆಗುತ್ತೆ ಎನ್ನಿಸುತ್ತೆ."

'ಹ್ಞಂ....ಆಗಲಿ. ಎಸ್ಸೆನ್ ಪಾಳ್ಯದವರು ಅದಕ್ಕೆಂದೇ ಹಗಲಿರುಳು ಒಂದಾಗಿ ದುಡಿಯತೊಡಗಿದ್ದಾರೆ.'

"ಅಲ್ಲಾರಿ, ಸಿಂಡಿಕೇಟು, ಜನಸಂಘ, ಎಸ್ಸೆಸ್ಪಿಗಳ ಹೊಂದಾಣಿಕೆಯ ಕೂಟಕ್ಕೆ ಸ್ವತಂತ್ರ ಪಕ್ಷವೂ ಸೇರಿತಂತೆ."

"ಕೊನೆಗೂ ಸೇರಿತು ಅನ್ನು. ಇನ್ನೂ ಅಲ್ಲಲ್ಲಿ ಕೆಲವರು ಸೇರಬಹುದು."

"ಒಂದು ಭಾರೀ ತಮಾಷೆ."

'ಏನು?'

"ಹಿಂದಿನ ಚುನಾವಣೆಗಳ ವೇಳೆ ಕಾಂಗ್ರೆಸ್ಸನ್ನು ಗದ್ದುಗೆಯಿಂದ ಇಳಿಸಲು ಎಡ ಪಕ್ಷಗಳು ಒಂದಾದುವು; ಬಲ ಪಕ್ಷಗಳು ಒಂದಾದುವು. ಕೆಲವೆಡೆ ಇವು ಸಫಲವೂ ಆದವು...."

"ಕೇಂದ್ರದಲ್ಲಿ ಆಗಲಿಲ್ಲ..."

"ಈಗ, ಪ್ರಧಾನಿ ಗಾಂಧಿಯನ್ನು ಮಾಜಿ ಪ್ರಧಾನಿ ಮಾಡುವ ಏಕಮೇವ ಉದ್ದೇಶದಿಂದ ವಾಮಪಕ್ಷಗಳನ್ನೂ ಹಾಗೆಂದು ಅಂದುಕೊಳ್ಳುವವರನ್ನೂ ಬಿಟ್ಟು ಉಳಿದವರು ಒಂದಾಗಹೊರಟಿದ್ದಾರೆ."

'ಹ್ಞಂ. ಇದೂ ಸರಿಯೇ. ಆದರೆ, ಎಡ—ಬಲ ಎಂದರೇನೆಂದು ಯಾರಿಗೂ ಗೊತ್ತಿಲ್ಲ. 'ಪ್ರಗತಿ'ಯ ಜಪ ಹೆಚ್ಚಿದಂತೆ ಅದರ ಬೆಲೆಯೂ ಕಮ್ಮಿಯಾಗಿದೆ.'

"ಅಂದ್ರೆ, ಶ್ರೀಮತಿ ಗಾಂಧಿಯನ್ನು ಬೆಂಬಲಿಸುವವರು ವಾಮ ಪಂಥೀಯರು; ಪ್ರಗತಿ ಶೀಲರು."

"ಇದೊಳ್ಳೆ ತಮಾಷೆಯಾಯ್ತು."

"ಏಕೆ?"

"ಪ್ರಗತಿ ಎನ್ನುವುದು ಬಹುಮತದಿಂದ ನಿರ್ಧರಿಸುವ ವಸ್ತುವೇನ?"

"ಇಲ್ಲಾಂತಂದುಕೊಳ್ಳಿ...."

"ಮತ್ತೆ ಶ್ರೀಮತಿ ಗಾಂಧಿ ಏನು ಮಾಡಿದ್ದಾರೆ? ಕಾಗದದ ಹುಲಿಗಳನ್ನು ತಯಾರಿಸಿ ಬಿಟ್ಟರೆ ಮುಗಿಯಿತೇನು?"

'ಅಲ್ಲಾರೀ, ಅವರೇ ಅಂದಿದ್ದಾರಲ್ಲಾ, ಪ್ರಗತಿಪರ ಕ್ರಮಗಳಿಗೆ ಅಡ್ಡ ಅಡಚಣೆಗಳು ಬಂದುವೆಂದು....?"

"ಯಾವ ಅಡಚಣೆಯಂತೆ?"

"ರಾಜಧನಾದಿಗಳ ರದ್ದತಿ...."

"ಅದಕ್ಕೇನಂತೆ, ಮತ್ತೆ ನಮ್ಮ ಸಂವಿಧಾನ ತಿದ್ದುಪಡಿ ಮಸೂದೆ ತರಬಾರದಾಗಿತ್ತೇನು? ಅವಸರ ಮಾಡಿ ಸಂಸತ್ತಿಗೂ ತಾನೇ ಮೇಲೆಂದು ಕೊಬ್ಬಿ ಹಠಸಾಧಿಸಿಕೊಳ್ಳುವ ಅಗತ್ಯವೇನಿತ್ತು? ಅದರ ಮೇಲೆ ಆ ಮಸೂದೆಯನ್ನು ಅನುಷ್ಠಾನಗೊಳಿಸಿದ್ದ ರೀತಿ ಸರಿಯಲ್ಲವೆಂದು ಅದು ಬಿದ್ದು ಹೋಯಿತು ಅಷ್ಟೆ. ಕುರುಡ ಹಿಡಿದದ್ದೇ ಬಡಿಗೆ ಎಂಬಂತೆ ಆಕೆ ಮಾಡಿದ್ದೇ ಪ್ರಗತಿಯೆಂದರೆ ಯಾರು ಕೇಳ್ತಾರೆ?"

'ಮತ್ತೆ ಬ್ಯಾಂಕುಗಳ ರಾಷ್ಟ್ರೀಕರಣ?"

"ಅದ್ರಲ್ಲೇನು ಅಂತಹ? ರಾಷ್ಟ್ರೀಕರಣ ಶಾಸನವಾಗಿ ಒಂದು ವರ್ಷ ಕಳೆಯಿತು. ಜನಕ್ಕೆ ಏನು ಪ್ರಯೋಜನ ಸಿಕ್ಕಿತು? ಮೊದಲು ಐದು-ಹತ್ತು ನಿಮಿಷಗಳಲ್ಲಿ ಚೆಕ್ಕು ಕ್ಯಾಶ್ ಮಾಡಬಹುದಾಗಿದ್ದರೆ ಇಂದು ಅರ್ಧ ತಾಸು ಕಳೆಯಬೇಕು. ನಿಧಾನ-ನಿಧಾನ. ಶ್ರೀ ಸಾಮಾನ್ಯನಿಗೆ ಆರ್ಥಿಕ ನೆರವು ನೀಡುವ ಘೋಷಣೆಗಳ ನಡುವೆ ಮಧ್ಯಮ ವರ್ಗದ ಕೂಗನ್ನು ಕೇಳುವವರೇ ಇಲ್ಲ ಅಂದಂತಾಯ್ತು."

"ಮತ್ತೇನು?"

'ಈಗ ಒಂದು ವರ್ಷದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಉದಾರವಾಗಿ ಶಾಖೆಗಳನ್ನು ತೆರೆಯುವುದೊಂದನ್ನು ಬಿಟ್ಟರೆ ಮತ್ತಾವ ಪ್ರಗತಿಯೂ ಕಾಣಿಸದು.'

"ಅದಾದರೂ ಆಯ್ತಲ್ಲ? ಮೊದಲು ಇದೂ ಇರಲಿಲ್ಲ."

'ಹೌದಪ್ಪ, ನಮ್ಮ ಬ್ಯಾಂಕರರು ಬೋಳೇ ಸ್ವಭಾವದವರಲ್ಲ. ಒಂದು ಶಾಖೆ ನಡೆಸಬೇಕಾದರೆ ಇಂತಿಷ್ಟು ವ್ಯವಹಾರ ನಡೆಯಬೇಕೆಂದು ಲೆಕ್ಕಾಚಾರ ಮಾಡಿಟ್ಟಿದ್ದಾರೆ. ಅಷ್ಟು ಆಗುವ ಭರವಸೆ ಬಂದರೆ ಮಾತ್ರ ಹೊಸ ಶಾಖೆ ತೆರೆಯುತ್ತಿದ್ದರು."

'ಇಂದು?'

"ಇಂದೇನು? ಹಳ್ಳಿಹಳ್ಳಿಗೂ ಬ್ಯಾಂಕಿಂಗ್ ಸೌಕರ್ಯ. ಅದು ವಾಣಿಜ್ಯ ವ್ಯವಹಾರವಾಗಿಲ್ಲ; ಸೇವೆಯಾಗಿದೆ. ಸೇವೆಯಿಂದ ಮೇಲೆ ನಷ್ಟ ಸಂಭವಿಸುವುದೆಂದು ಹಿಂಜರಿಯಲಾದೀತೆ?"

"ಅದು ಸರೀನ್ನಿ."

'ಎಲ್ಲ ಸರಿಯೇ. ಈ ಸೇವೆಯಿಂದಾಗಿ ಉಂಟಾಗುವ ನಷ್ಟವನ್ನು ನಾವೇ ತುಂಬಿಕೊಡಬೇಕಾಗಿ ಬಂದಾಗ?"

"ಓ.... ಹಾಗೂ ಉಂಟೆ?"

'ಮತ್ತೆ ಸರಕಾರ ಎಲ್ಲಿಂದ ಹಣ ತರಬೇಕು?'

'ಹೋಗಲಿ ಬಿಡಿ....'

'ನೋಡು, ಬಡ್ಡಿ ದರ ಏರಿತೆಂದು ಬೇರೆ, ಸಾಲದ ಮೇಲಿನ ಬಡ್ಡಿಯೂ ಹೆಚ್ಚಿತೆಂತ ಅರ್ಥ. ಬ್ಯಾಂಕುಗಳ ಮೂಲಕ ಸಾಲ ತೆಗೆದು ವ್ಯವಹಾರ ನಡೆಸುವವರು ಮಾಲಿನ ಬೆಲೆಯೇರಿಸುವುದು ಸಹಜವೇ. ಅಂದರೆ, ಬೆಲೆಯೇರಿಕೆ ಅನಿವಾರ್ಯ.'

'ಏನಂತೀಯ? ಈ ವರ್ಷದ ಬೆಲೆಗಳು!'

'ಇದರಲ್ಲೂ ಶ್ರೀಮತಿ ಗಾಂಧಿ ಪ್ರಗತಿ ಸಾಧಿಸಿದರು. ಅವರಿಗೆ ಶ್ರೀಸಾಮಾನ್ಯನ ಹಿತಚಿಂತನೆ ಇರುತ್ತಿದ್ದು ನಿಜವಾದರೆ, ರಾಜ—ಮಹಾರಾಜರನ್ನು ಅಮಾನ್ಯ ಮಾಡುವುದಕ್ಕೆ ಗಮನ ಕೊಡದೆ ಆತನ ಪ್ರಗತಿ ಹೇಗೆಂಬತ್ತ ಲಕ್ಷ್ಯಹರಿಸಬಹುದಿತ್ತು. ಏರುತ್ತಿರುವ ಬೆಲೆಯೇರಿಕೆಯನ್ನು ಇಳಿಸಲು ಅವರೇನು ಮಾಡಿದರು? ದಿನೋಪಯೋಗಿ ವಸ್ತುಗಳ ಬೆಲೆ ಗಗನ ಮುಟ್ಟುತ್ತಿರುವಾಗ ತಾನು ಪ್ರಗತಿಶೀಲೆ; ಇತರರು ತನಗಡ್ಡಿ ಎಂದು ಡೋಲು ಬಾರಿಸತೊಡಗಿದರು ಅಷ್ಟೆ."

'ಅವರ ಚುನಾವಣಾ ಘೋಷಣೆ...'

"ಅದು ವ್ಯರ್ಥ ಘೋಷಣೆ. ಆಸ್ತಿಯ ಮೇಲಿನ ಅಧಿಕಾರ ಕಿತ್ತುಹಾಕುವುದಿಲ್ಲವೆಂಬ ಭರವಸೆ ನೀಡುತ್ತಾರೆ. ನೀಡಿದ ಯಾವುದೇ ಭರವಸೆಯನ್ನು ಕಾರ್ಯರೂಪಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡದಿರುವವರು ಏನು ಭರವಸೆ ನೀಡಿದರೇನು?

"ಹೌದೂನ್ನಿ..."

"ಹೌದೂನ್ನಿ....'

"ಆಸ್ತಿಯ ಮೇಲೆ ನ್ಯಾಯಬದ್ಧ ಮಿತಿ, ಆದಾಯ ಮತ್ತು ನಗರಗಳಲ್ಲಿನ ಆಸ್ತಿಯ ಬೆಲೆ ಮಿತಿ; ವಿಲಾಸೀ ಜೀವನೋಪಯೋಗಿ ವಸ್ತು ಬಳಕೆಗೆ ತಡೆ, ಆಡಳಿತದಲ್ಲಿ ಮತ್ತು ಲಾಭದಲ್ಲಿ ಕಾರ್ಮಿಕರಿಗೆ ಪಾಲು, ನಿರುದ್ಯೋಗ ಸಮಸ್ಯೆಗೆ ಪರಿಹಾರ, ಅಸಮತೆಯ ನಿರ್ಮೂಲನ, ರಾಜಧನಾದಿ ರದ್ದತಿ ಇವು ಆಕೆಯ ಚುನಾವಣಾ ಘೋಷಣೆಯ ಅಂಶಗಳು."

'ಅಲ್ಲ, ನನಗೆ ಇನ್ನೊಂದು ಮಿತಿಯಿರಬೇಕೆನಿಸುತ್ತದೆ.'

"ಏನು?"

"ಮಂತ್ರಿ ಮಾಗಧರು ಮಾಡುವ ಖರ್ಚಿನ ಬಾಬಿನಲ್ಲಿ....'

"ಹಾಗನ್ನಬೇಡ."

"ಮತ್ತೆ?"

"ಮಂತ್ರಿ ಮಿತಿ ಅನ್ನು."

"ಯಾಕೆ?"

'ನೋಡು, ರಾಜರುಗಳ ರಾಜಧನಕ್ಕೂ ರಾಜರ ಸೌಲಭ್ಯ—ವಿಶೇಷ ಹಕ್ಕುಗಳಿಗೂ ಒಂದು ಮಿತಿಯಿದೆ.'

"ಹೌದು..."

"ಆದರೆ, ಮಂತ್ರಿಗಳಿಗೆ ಇಂತಹ ಯಾವುದೇ ಮಿತಿಯಿಲ್ಲ. ಆದದರಿಂದ ಮಂತ್ರಿಗಳ ಸಂಖ್ಯೆಗೆ, ಅವರ ವೇತನ—ಭತ್ತೆಗಳಿಗೆ, ಪ್ರವಾಸವೆಚ್ಚಕ್ಕೆ, ಅವರು ಉಪಯೋಗಿಸುವ ನೀರು — ವಿದ್ಯುತ್ತಿಗೆ ಫೋನ್ ಮೊದಲಾದುವುಗಳಿಗೆ, ಭಾಗವಹಿಸುವ ಡಿನ್ನರ್ ಪಾರ್ಟಿಗಳಿಗೆ, ಮಾಡುವ ಉದ್ಘಾಟನೆ, ಬಿಗಿಯುವ ಭಾಷಣ ಇತ್ಯಾದಿ ಇತ್ಯಾದಿ ಗಳಿಗೊಂದು ಮಿತಿ...'

"ಓ, ಅದೆಲ್ಲ ಎಲ್ಲಾಗುತ್ತೆ?"

"ಮತ್ತೆ ಪ್ರತಿಗಾಮಿ ಗಳಿಗೂ ಪ್ರಗತಿಗಾಮಿ ಗಳಿಗೂ ಏನು ವ್ಯತ್ಯಾಸ?"

"......ನನಗೂ ನಿಮಗೂ ಇರುವಷ್ಟು ಮಾತ್ರ...."

"ಅಹ್ಹಹ್ಹ..."

—ಗೋರಾ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¼% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈವಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಶ್ರೀ

(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—1.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1

ದಯಮಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

ಲೋಕಸಭೆಗೆ ಚುನಾವಣೆಗಳು

ಲೋಕಸಭೆಯನ್ನು ಪ್ರಧಾನಿಯು ತ ಲಷೆ ಮೇರೆಗೆ ವಿಸರ್ಜಿಸಿ ಮರು ಚುನಾವಣೆಗಳಿಗೆ ರಾಷ್ಟ್ರಪತಿಯವರು ಆಜ್ಞೆ ಮಾಡಿದರು. ಚುನಾವಣೆಗಳ ಕಮಿಷನರರು ಈ ಆಜ್ಞೆಯನ್ನು ಕಾರ್ಯರೂಪಕ್ಕೆ ತರಲು ಸೂಕ್ತ ಕ್ರಮ ಕೈಕೊಳ್ಳುತ್ತಿದ್ದಾರೆ.

ಮತದಾರರ ಯಾದಿಯು ಆದಂದೋ ಪರಿಷ್ಕಾರಗೊಂಡಿದ್ದರಿಂದ ಮತ್ತೆ ಹೊಸ ಯಾದಿಯನ್ನು ತಯಾರಿಸುವ ಕೆಲಸವೀಗ ಉಳಿದಿಲ್ಲ. ಅದೇ ರೀತಿ ಚುನಾವಣೆಗಳಿಗೆ ಅಗತ್ಯವಾದ ಸಾಧನೋಪಕರಣಗಳೂ ಚುನಾವಣಾ ಆಯೋಗದ ಬಳಿಯಿವೆ. ಆಂದರೆ, ಈ ಚುನಾವಣೆಗಳನ್ನು ನಡೆಸಲು ಆಯೋಗ ಹೊಸತಾಗಿ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದ ಅಗತ್ಯ ಇಲ್ಲ.

ಲೋಕ ಸಭೆಯು ವಿಸರ್ಜನೆಯಾಗುವುದು, ಮರು ಚುನಾವಣೆಗಳು ನಡೆಯುವುವೆಂದು ರಾಜ್ಯಕೀಯದ ಗಾಳಿ ಬಡೆದವರಿಗೆಲ್ಲ ಗೊತ್ತಿತ್ತು. ಯಾವುದೇ ಅಪೇಕ್ಷಿತ ಕಾರಣಗಳಿಂದಾಗಿ ಪ್ರಧಾನಿ ಗಾಂಧಿಯವರು ಈ ನಿರ್ಣಯಕ್ಕೆ ಬರಲಿಲ್ಲ. ತಮಗನುಕೂಲ ವಾತಾವರಣವನ್ನವರು ನಿರೀಕ್ಷಿಸುತ್ತ ಇದ್ದರಷ್ಟೆ. ಈಗ ಅನುಕೂಲ ವಾತಾವರಣವಿದೆಯೆಂದು ಆಕೆಯು ಪೈಕ ಹಿತ ಚಿಂತಕರು ಭಾವಿಸದೆ ಹೋದರೂ ಪ್ರತಿಕೂಲ ವಾತಾವರಣವಿಲ್ಲವೆಂದು ಖಂಡಿತಕ್ಕೂ ಹೇಳುತ್ತಾರೆ. ಆದ್ದರಿಂದಲೇ ಅವರು ತಮ್ಮ ಕಾಲ ಹಬ್ಬೆರಳು ಒತ್ತಿದರು; ರಾಷ್ಟ್ರಪತಿಯವರು ಕೈ ಒತ್ತು ಹಾಕಿದರು; ಆಯೋಗ ಚುನಾವಣೆಗಳಿಗೆ ಆರಂಭ ಮಾಡಿತು.

ಸುಮಾರು ೫೪ ಕೋಟಿ ಜನಸಂಖ್ಯೆ ಇರುವ ದೇಶದಲ್ಲಿ ಸುಮಾರು ೨೮ ಕೋಟಿ ಮತದಾರರಿದ್ದಾರೆ. ೧೯೭೦ನೆಯ ಇಸವಿ ಜನವರಿ ೧ರಂದು ೨೧ ವರ್ಷ ಪ್ರಾಯದವರಾದವರಿಗೆ ಈ ಚುನಾವಣೆಗಳಲ್ಲಿ ಮತದಾನದ ಅಧಿಕಾರವುಂಟು. ಈ ಮತದಾರರ ಸಂಖ್ಯೆ ಹಿಂದೆ ಲೋಕ ಸಭಾ ಚುನಾವಣೆ ಸಮಯದಲ್ಲಿದ್ದ ಮತದಾರ ಸಂಖ್ಯೆಗಿಂತ ಸುಮಾರು ಶೇ. ೧೫ರಷ್ಟು ಹೆಚ್ಚು. ದೇಶದ ಜನಸಂಖ್ಯೆಯು ಏರುತ್ತಿರುವ ಪ್ರಮಾಣದಲ್ಲಿಯೇ ಮತದಾರರ ಸಂಖ್ಯೆಯೂ ಹೆಚ್ಚುತ್ತಿದೆ ಎಂಬುದು ಗಮನಾರ್ಹ.

ಪ್ರಸ್ತುತ ಪ್ರಕಟವಾದ ಮತದಾರರ ಪಟ್ಟಿಯಲ್ಲಿ ಮತದಾನಾರ್ಹರ ಹೆಸರು ಸೇರಿಕೊಂಡಿಲ್ಲವಾದರೆ, ಅಂತಹರು ತಮ್ಮ ಹೆಸರನ್ನು ನೋಂದಣಿ ಮಾಡಿಕೊಳ್ಳಬಹುದ. ೧೯೬೦ನೆ ಇಸವಿಯ ಮತದಾರರ ದಾಖಲಾತಿ ಕಾನೂನಿನ ೬ನೆ ಕ್ರಮ ಸಂಖ್ಯೆಯ ಅರ್ಜಿಯನ್ನು ಸಲ್ಲಿಸಬಹುದು. ಇಂತಹ ಅರ್ಜಿಗಳನ್ನು ಚುನಾವಣಾಧಿಕಾರಿಗಳಿಗೆ ೧೯೭೧ರ ಜನವರಿ ೧೫ಕ್ಕೆ ಮುಂಚಿತವಾಗಿ ಕಳಿಸಬೇಕು.

ಮತದಾರರ ಅನುಕೂಲಕ್ಕೆಂದು ದಾಖಲಾತಿ ಶುಲ್ಕವನ್ನು ೫೦ ಪೈಸೆಗಳಿಂದ ೧೦ ಪೈಸೆಗೆ ಇಳಿಸಲಾಗಿದೆ. ಪ್ರಮಾದವಶದಿಂದ ಮತದಾರರ ಯಾದಿಯಲ್ಲಿ ಸೇರಿಲ್ಲದ ಮತದಾನಾರ್ಹರಾದವರೆಲ್ಲರೂ ಈ ಸೌಲಭ್ಯವನ್ನು ಉಪಯೋಗಿಸಿ ತಮ್ಮ ಹೆಸರುಗಳನ್ನು ನೋಂದಣಿ ಮಾಡಿಸಿಕೊಳ್ಳುವುದು ಅಗತ್ಯವಾಗಿದೆ.

ಬೇರೆ ಬೇರೆ ರಾಜ್ಯಗಳಲ್ಲಿ ಮತದಾನದ ದಿನಗಳನ್ನು ಚುನಾವಣಾ ಆಯೋಗವು ನಿರ್ಧರಿಸಿದೆ. ಫೆಬ್ರವರಿ ೨೮ರಿಂದ ತೊಡಗಿ ಮಾರ್ಚ್ ೮ನೆಯ ತಾರೀಕಿನ ವರೆಗೆ ಮತದಾನವು ನಡೆಯುತ್ತದೆ.

ಕರ್ನಾಟಕದಲ್ಲಿ ಮತದಾನವು ಫೆಬ್ರವರಿ ೨೮ ಮತ್ತು ಮಾರ್ಚ್ ೪—ಈ ಎರಡು ದಿನಗಳಲ್ಲಿ ನಡೆಯುವುದೆಂದು ಗೊತ್ತಾಗಿದೆ.

ಮತದಾನದ ದಿನಗಳಿಗನುಸಾರವಾಗಿ ಸಾಕಷ್ಟು ಪೂರ್ವಭಾವಿಯಾಗಿ ರಾಷ್ಟ್ರಪತಿಗಳು ಚುನಾವಣೆಗಳಲ್ಲಿ ಮತದಾನ ನೀಡುವ ಬಗ್ಗೆ ಬೇರೆ ಬೇರೆ ಘೋಷಣೆಗಳನ್ನು ಹೊರಡಿಸುವರು.

ಈ ಘೋಷಣೆಯ ನಂತರ ನಿಶ್ಚಿತ ದಿನಗಳಲ್ಲಿ ಉಮೇದ್ವಾರರು ತಮ್ಮ ನಾಮಪತ್ರಗಳನ್ನು ಸಲ್ಲಿಸಬೇಕು. ಅವುಗಳ ಪರಿಶೀಲನೆ ಮತ್ತು ಅವಶ್ಯವಾದರೆ, ಚುನಾವಣೆಗಳು ಪೂರ್ವ ನಿರ್ಧಾರಿತ ದಿನಗಳಲ್ಲಿ ನಡೆಯುವುವು. ಉಮೇದ್ವಾರರಿಗೆ ತಮ್ಮ ಪ್ರಚಾರ ಕಾರ್ಯಕ್ಕೆ ಸುಮಾರು ೨೦ ದಿನಗಳು ಉಳಿಯುತ್ತವೆ.

ಹಿಂದಿನ ಚುನಾವಣೆಗಳಿಗೂ ಇಂದಿನದಕ್ಕೂ ಬಹಳಷ್ಟು ಅಂತರ ದೇಶದ ರಾಜ್ಯಕೀಯದಲ್ಲಿದೆ. ಮುಖ್ಯವಾಗಿ, ಅವಿಭಜಿತ ಕಾಂಗ್ರೆಸ್ಸು ಹಿಂದೆ ದೇಶದ ಬಲಾಢ್ಯ ಪಕ್ಷವಾಗಿತ್ತು. ಉಳಿದ ಹಲವಾರು ಪಕ್ಷಗಳು ಅಲ್ಪ ಪ್ರಾಬಲ್ಯ ಹೊಂದಿದ್ದವು. ಇಂದು ಅಂತಹ ಬಲಾಢ್ಯ ಪಕ್ಷವೊಂದಿಲ್ಲ. ಕಾಂಗ್ರೆಸ್ಸು ವಿಘಟನೆಗೊಂಡದರಿಂದ ಅದರ ಶಕ್ತಿ ರ್ಹಾಸವಾಗಿದೆ. ಇಂಡಿಕೇಟು ತನ್ನನ್ನೇ ಪ್ರಬಲ ಪಕ್ಷವೆಂದು ಹೇಳಿಕೊಳ್ಳುತ್ತಿದೆಯಾದರೂ ಇದು ಮಿತಿಮೀರಿದ ಆತ್ಮ ಪ್ರಶಂಸೆ ಮಾತ್ರ.

ಹಿಂದೆ ಕಾಂಗ್ರೆಸ್ಸು ಬಹುಮತದ ಪಕ್ಷವಾಗಿ ಅಧಿಕಾರ ಹಿಡಿಯಲು ಸಾಕಷ್ಟು ಬಹುಮತಗಳಿಸಿತ್ತು. ಇಂದು ಯಾವುದೇ ಪಕ್ಷವು ಅಂತಹ ಬಹುಮತ ಪಡೆಯುವ ನಿರೀಕ್ಷೆಯಿಲ್ಲ. ಸಂಮಿಶ್ರ ಸರಕಾರವೇ ಸ್ಥಾಪನೆಯಾಗುವ ಸಂಭವ ಹೆಚ್ಚು.

ಚುನಾವಣೆಗಳು ಮುಗಿದ ಮರುದಿನವೇ ಮತಗಣನೆಗೆ ಆರಂಭವಾಗಿ ಮಾರ್ಚ್ ೮ರೊಳಗೆ ಎಲ್ಲ ಪರಿಣಾಮಗಳೂ ಪ್ರಕಟಗೊಳ್ಳುತ್ತವೆ. ಹಾಗಾಗಿ ಮಾರ್ಚ್ ಮಧ್ಯದಲ್ಲೇ ಹೊಸ ಸರಕಾರ ರಚನೆಗೊಂಡು ಅಧಿಕಾರಕ್ಕೆ ಬರುವುದು ಸಾಧ್ಯವಾಗಿದೆ.

ಮುಂದಿನ ವರ್ಷದ ಮುಂಗಡ ಪತ್ರವನ್ನು ಮಾರ್ಚ್ ಕೊನೆಯೊಳಗೇನೇ ಸಂಸತ್ತಿನ ಮುಂದೆ ಮಂಡಿಸುವುದಕ್ಕೆ ಇದರಿಂದನುಕೂಲವಾಗುತ್ತದೆ.

ತಂದೆಯೇ, ಅವರನ್ನು ಕ್ಷಮಿಸು, ತಾವು ಏನು ಮಾಡುತ್ತಾರೆನ್ನುವುದೇ ಅವರಿಗೆ ತಿಳಿದಿಲ್ಲ. — ಜೀಸಸ್ ಕ್ರೈಸ್ತ

o o o

ಪ್ರತಿಯೊಬ್ಬನೂ ತನ್ನ ಕರ್ತವ್ಯ ಮಾಡಬೇಕೆಂದು ಇಂಗ್ಲೆಂಡು ಅಪೇಕ್ಷಿಸುತ್ತದೆ. — ನೆಲ್ಸನ್

o o o

ನನಗೆ ಸ್ವಾತಂತ್ರ್ಯ ಕೊಡು, ಇಲ್ಲವೆ ಸಾವು ಕೊಡು. — ಪೇಟ್ರಿಕ್ ಹೆನ್ರಿ

o o o

ಅಯ್ಯ ಯುವಕ, ಪಶ್ಚಿಮಕ್ಕೆ ಹೋಗು! — ಹೊರೇಸ್ ಗ್ರೀಲೀ

o o o

ಸಾರ್ವಜನಿಕ ಕ್ಷೇತ್ರ ಯಾಕೆ?

ಸಾರ್ವಜನಿಕ ಕ್ಷೇತ್ರ ರಾಷ್ಟ್ರದ ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸುತ್ತದೆ.

ಪ್ರಮುಖ ಆರ್ಥಿಕ ಕ್ಷೇತ್ರಗಳಾದ ಕಬ್ಬಿಣ ಮತ್ತು ಉಕ್ಕು, ತೈಲೋದ್ಯಮ, ಭಾರೀ ಇಂಜಿನೀಯರಿಂಗ್, ರಾಸಾಯನಿಕ ಗೊಬ್ಬರಗಳು, ಅಪಸ್ಕೃತ ಔಷಧಿಗಳು, ಕೇಬಲ್, ಹಡಗು ಕೈಗಾರಿಕೆ ಮುಂತಾದುವುಗಳನ್ನು ರಾಷ್ಟ್ರದ ಸ್ವಾಧೀನಕ್ಕೊಳಪಡಿಸುತ್ತದೆ.

ಲಘು ಹಾಗೂ ಮೂಲ ಉದ್ಯಮಗಳಿಗೆ ಅಗತ್ಯವಿರುವ ಭಾರಿ ಬಂಡವಾಳವನ್ನು ಒದಗಿಸುತ್ತದೆ.

ಕೆಲವು ದೊಡ್ಡ ಸಾರ್ವಜನಿಕ ಕ್ಷೇತ್ರಗಳ ಬಂಡವಾಳ
(1969ರ ಮಾರ್ಚ 31 ರಲ್ಲಿದ್ದಂತೆ)
(ಕೋಟಿ ರೂಪಾಯಿಗಳಲ್ಲಿ)

ಹಿಂದೂಸ್ತಾನ್ ಸ್ಟೀಲ್	1099
ಡಿ. ವಿ. ಸಿ.	224
ಹಿಂದೂಸ್ತಾನ್ ಏರೋನಾಟಿಕ್ಸ್	197
ಆಯಿಲ್ ಆಂಡ್ ನ್ಯಾಚುರಲ್ ಗ್ಯಾಸ್ ಕಮಿಷನ್	189
ನ್ಯಾಶನಲ್ ಕೋಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್	178
ನೈವೇಲಿ ಲಿಗ್ನೈಟ್	173
ಭಾರತ್ ಹೆವಿ ಇಲೆಕ್ಟ್ರಿಕಲ್ಸ್	162
ಫರ್ಟಿಲೈಸರ್ ಕಾರ್ಪೊರೇಷನ್	156
ಇಂಡಿಯನ್ ಆಯಿಲ್ ಕಾರ್ಪೊರೇಷನ್	143
ಹೆವಿ ಇಲೆಕ್ಟ್ರಿಕಲ್ಸ್ (I)	112
ಇಂಡಿಯನ್ ಡ್ರಗ್ಸ್ ಆಂಡ್ ಫಾರ್ಮಾಸ್ಯೂಟಿಕಲ್ಸ್	67
ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ	55



ಬೆಡಗಿನ ನೆಲೆವೀಡು ಕೊಡಗು

ಕರ್ನಾಟಕ ತ್ರಿದಿಶಾಲಯಕಿದು ನಂದನ
ವನವು
ಕಾಫಿಗೆ ಏಲಕ್ಕಿಗೆ ಕಿತ್ತಳೆ ಬೆಳೆಗೀ
ಕೊಡಗು
ಪ್ರೇಮದರ ಭಾವನೆಗಳ
ತುಂಬಿಹುದೀ ಕೊಡಗು
ಕಾವೇರಿಯು ಮುದ್ದಾಡುತ ಪಾವನವೀ
ಕೊಡಗು

ಪ್ರಕೃತಿ ಸೌಂದರ್ಯದ ನೆಲೆವೀಡು ಕೊಡಗು, ಕಾಫಿ, ಏಲಕ್ಕಿ, ಕಿತ್ತಳೆಗೆ ಹೆಸರಾಂತ ನಾಡು ಕೊಡಗು. ಪಶ್ಚಿಮ ಘಟ್ಟಗಳ ಮಡಿಲಲ್ಲಿ ಎದ್ದು ಕಾಣುವ ಸುಂದರ ವೀರಭೂಮಿ ಕೊಡಗು. ಒಂದೆಡೆ ಕೇರಳ ರಾಜ್ಯದ ವೈನಾಡು ಜಿಲ್ಲೆ. ಇನ್ನೊಂದೆಡೆ ದಕ್ಷಿಣ ಕನ್ನಡ. ಮಗದೊಂದೆಡೆ ಮೈಸೂರು, ಹಾಸನ ಜಿಲ್ಲೆಗಳು. ಸುಮಾರು 1641 ಚದರಮೈಲು ವಿಸ್ತೀರ್ಣ. ಸಮುದ್ರಮಟ್ಟಕ್ಕಿಂತ ಮೂರು ಸಾವಿರ ಅಡಿ ಎತ್ತರ. ಗಿರಿ, ಶಿಖರ, ಹಳ್ಳಕೊಳ್ಳ, ಕಾಡು—ಮೇಡು ಕಣಿವೆ, ಜಲಪಾತ ಎಂದು ವೈವಿಧ್ಯಪೂರ್ಣವಾದ ಈ ಜಿಲ್ಲೆಯನ್ನು ನೋಡಿದರೆ ಎಲ್ಲೆಲ್ಲೂ ಹಸಿರು ಹಸಿರು.

ದಕ್ಷಿಣದ ಗಂಗೆ ಕಾವೇರಿ ಹುಟ್ಟಿದ್ದು ಕೊಡಗಿನ ಭಾಗಮಂಡಲದ ಸಮೀಪದ ತಲಕಾವೇರಿಯಲ್ಲಿ. ಇದಕ್ಕೆ ಹಾರಂಗಿ, ಹೇಮಾವತಿ, ಲಕ್ಷ್ಮಣತೀರ್ಥ ಇವು ಉಪನದಿಗಳು. ಕಾವೇರಿ ತನ್ನ ಉಪನದಿಗಳೊಡನೆ ಪೂರ್ವಾಭಿಮುಖವಾಗಿ ಹರಿದರೆ ಸಾವತ್, ಬರಪೊಳೆ, ಕುಮಾರಧಾರೆ, ಪಯಸ್ವಿನಿ ನದಿಗಳು ಪಶ್ಚಿಮಾಭಿಮುಖವಾಗಿ ಹರಿಯುತ್ತಿವೆ.

ನಮ್ಮ ದೇಶದ ಇತರ ಕಡೆಗಳಂತೆಯೇ ಕೊಡಗಿನ ಇತಿಹಾಸವೂ ಪುರಾತನ. ಕದಂಬರು, ಚೆಂಗಾಳ್ವರು, ನಾಯಕರು, ಇಕ್ಕೇರಿಯ ಅರಸರು, ಲಿಂಗರಾಜ, ಹೈದರ್, ಟಿಪ್ಪು, ಈಸ್ಟ್ ಇಂಡಿಯಾ ಕಂಪನಿ ಹಾಗೂ ಬ್ರಿಟಿಷರು ಆಳಿದ ನಾಡು ಕೊಡಗು. ನಮ್ಮ ದೇಶದಲ್ಲಿ ಬ್ರಿಟಿಷ್ ಆಳಿಕೆ ಕೊನೆಗೊಂಡು ಸ್ವಾತಂತ್ರ್ಯ ದೊರೆತ ಮೇಲೆಯೂ ಕೊಡಗು ಒಂದು ಪ್ರತ್ಯೇಕ ರಾಜ್ಯವಾಗಿತ್ತು. 1956ರಲ್ಲಿ ರಾಜ್ಯ ಪುನರ್ಘಟನೆಯಾಯಿತು. ಆಗ ಕೊಡಗು ಹೊಸ ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾಯಿತು.

ಕಳೆದ ಜನಗಣತಿಯಂತೆ ಕೊಡಗಿನ ಜನಸಂಖ್ಯೆ 3,21,516. ಇವರಲ್ಲಿ 172514 ಪುರುಷರು. 149002 ಸ್ತ್ರೀಯರು. ಇವರಲ್ಲಿ 2,99,069 ಮಂದಿ ಹಳ್ಳಿಗರು. 22,417 ಮಂದಿ ಪಟ್ಟಣಿಗರು. ಸುಮಾರು ನೂರಕ್ಕೆ 35 ಮಂದಿಗೆ ಇಲ್ಲಿ ಓದು ಬರಹವಿದೆ. ಮಡಿಕೇರಿಯಲ್ಲಿ ವಿದ್ಯಾವಂತರ ಸಂಖ್ಯೆ ನೂರಕ್ಕೆ ಸುಮಾರು 64. ವೀರರಾಜಪೇಟೆಯಲ್ಲಿ ಸುಮಾರು 65.

ಇಲ್ಲಿ ಸಾಮಾನ್ಯ ಎಲ್ಲಾ ಜಾತಿ ಮತಪಂಗಡಗಳ ಜನರು ಸೌಹಾರ್ದದಿಂದ ಬಾಳಿ ಬದುಕುತ್ತಿದ್ದಾರೆ. ಇವರಲ್ಲಿ ಕೊಡವರು ಈ ಜಿಲ್ಲೆಯ ಜನರಲ್ಲಿ ಒಂದು ವಿಶಿಷ್ಟ ವರ್ಗದವರು. ಕಟ್ಟಾಳುಗಳು, ವೀರಯೋಧರು. ಭಾರತಕ್ಕೆ ಇಬ್ಬರು ಮಹಾದಂಡನಾಯಕರನ್ನು ಒದಗಿಸಿದವರು. ಆದರೂ ಇವರಲ್ಲಿ ಹೆಚ್ಚಿನವರು ಬೇಸಾಯಗಾರರು. ಕೆಲವರು ತೋಟಗಾರರು. ಬೇಟೆ ಇವರಿಗೆ ತುಂಬ ಇಷ್ಟ. ಹುತ್ತರಿ ಕುಣಿತ, ಬೊಳಕಾಟ, ಕೋಲಾಟ ಇವರಿಗೆ ಅಚ್ಚುಮೆಚ್ಚಿನವು. ಕುಪ್ಪಸ ತೊಟ್ಟು ಸೊಂಟಕ್ಕೆ ಪಟ್ಟಿ ಬಿಗಿದು ಕುಣಿಯುವ ಕೊಡವರ ಕುಣಿತ ಕಣ್ಣಿಗೆ ಹಬ್ಬ. ಕೊಡವರಿಗೆ ಮುಖ್ಯವಾದ ಹಬ್ಬ ಕೈಲ್‌ಪೊಳದ್. ಬೇಸಾಯ ಮುಗಿದ ಮೇಲೆ ಈ ಹಬ್ಬವನ್ನು ಆಚರಿಸುತ್ತಾರೆ. ಇದು ಅವರ ಆಯುಧ ಪೂಜೆ. ಕಾವೇರಿ ಸಂಕ್ರಮಣ ಕೊಡವರಿಗೊಂದು ದೊಡ್ಡ ಪರ್ವದಿನ.

ಕೊಡವರಿಗೆ ತಮ್ಮ ಸ್ವಂತ ಭಾಷೆ ಇದೆ. ಇದಕ್ಕೆ ಲಿಪಿ ಇಲ್ಲ. ಕನ್ನಡ, ತಮಿಳು, ಮಲೆಯಾಳಂ, ಪದಗಳು ಈ ಭಾಷೆಯಲ್ಲಿ ಸೇರಿಕೊಂಡಿವೆ. ಕೊಡವರ ಭಾಷೆಯಲ್ಲಿ ಕೆಲವು ಗ್ರಂಥಗಳೂ ಇವೆ.

ಕೊಡಗು ಜಿಲ್ಲೆಯಲ್ಲಿ ಮೂರರಲ್ಲಿ ಒಂದು ಭಾಗ ಅರಣ್ಯ. ಇದರಲ್ಲಿ ತೇಗ, ಬೀಟೆ, ಹೊನ್ನೆ, ಗಂಧ ಇತ್ಯಾದಿ ಬೆಲೆಯುಳ್ಳ ಮರಗಳಿವೆ. ಕಾಫಿ, ಏಲಕ್ಕಿ, ಕಿತ್ತಳೆ, ಭತ್ತ, ರಾಗಿ, ಕಾಳುಮೆಣಸು, ಅಡಿಕೆ, ರಬ್ಬರು, ತೆಂಗು, ಇವೆಲ್ಲ ಈ ಜಿಲ್ಲೆಯಲ್ಲಿ ಹುಲುಸಾಗಿ ಬೆಳೆಯುತ್ತವೆ. ಕೊಡಗನ್ನು ಕರ್ನಾಟಕದ "ನಂದನವನ" ಎಂದರೆ ಅತಿಶಯೋಕ್ತಿಯಲ್ಲ. ಮನ ಸೆಳೆಯುವ ಪ್ರಕೃತಿ ಸೌಂದರ್ಯದಿಂದ ಪ್ರವಾಸಿಗರ ಕಣ್ಮನಗಳಿಗೆ ಸಂತಸವೀಯುವ ಅನೇಕ ಸುಂದರ ತಾಣಗಳು ಕೊಡಗಿನಲ್ಲಿವೆ. ಇವುಗಳಲ್ಲಿ "ರಾಜಾಸೀಟ್" ಕೋಟೆ, ಓಂಕಾರೇಶ್ವರ ದೇವಾಲಯ ಗದ್ದುಗೆ ಇವು ಮಡಿಕೇರಿಯಲ್ಲಿ ನೋಡಬೇಕಾದುವು. ಮಡಿಕೇರಿಯಿಂದ 25 ಮೈಲಿ ವಾಯುವ್ಯಕ್ಕೆ ಸಾಗಿದರೆ ಸಿಗುತ್ತದೆ ಭಾಗಮಂಡಲ. ಇದು ಕಾವೇರಿ ಕನಿಕಾ ನದಿಗಳ ಸಂಗಮ ಸ್ಥಳ. ಇಲ್ಲಿದೆ ಪುರಾಣ ಪ್ರಸಿದ್ಧವಾದ ಭಗಂಡೇಶ್ವರ ದೇವಾಲಯ. ಭಾಗಮಂಡಲದಿಂದ ಮೂರು ಮೈಲಿ ದೂರದಲ್ಲಿದೆ ತಲಕಾವೇರಿ. ಇಲ್ಲಿಯೇ ದಕ್ಷಿಣಗಂಗೆ ಎನಿಸಿದ ಕಾವೇರಿಯ ಉದ್ಭವ. ಕೊಡಗಿನ ಇನ್ನೊಂದು ಪ್ರೇಕ್ಷಣೀಯವಾದ್ದು ನಾಲ್ಕುನಾಡು ಅರಮನೆ ಹಾಗೂ ಇಗ್ಗುತಪ್ಪ ದೇವಾಲಯ. ಇದು ವೀರರಾಜಪೇಟೆ—ನಾಪೋಕ್ಲು ಮಾರ್ಗದಲ್ಲಿದೆ. ವೀರರಾಜಪೇಟೆಯಿಂದ ಇಲ್ಲಿಗೆ 12 ಮೈಲಿ. ಈ ಅರಮನೆಯಿಂದ ಮೂರು ಮೈಲಿ ದೂರದ ಗುಡ್ಡದ ಮೇಲೆ ಇಗ್ಗುತಪ್ಪ ದೇವಾಲಯ. ಕಾವೇರಿಯಂತೆ ಇಗ್ಗುತಪ್ಪನೂ

ನಾವಿಬ್ಬರು
ನಮಗಿಬ್ಬರೇ ಮಕ್ಕಳು

ಚಿಕ್ಕ ಸಂಸಾರ
ಸುಖಕ್ಕೆ ಆಧಾರ.

ಎರಡು ಅಥವಾ ಮೂರು ಮಕ್ಕಳ ನಂತರ ಮುಂದೆ ಮಕ್ಕಳಾಗದ ಹಾಗೆ ಚಿಕಿತ್ಸೆ ಪಡೆಯುವುದು ಅತ್ಯುತ್ತಮ.

ಹೆಂಗಸರಿಗೆ— ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ.
ಗಂಡಸರಿಗೆ— ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ.

ನುರಿತ ವೈದ್ಯರುಗಳಿಂದ ಶಸ್ತ್ರ ಚಿಕಿತ್ಸೆ ಪಡೆಯುವ ಅವಕಾಶವಿದೆ.

ಹೆಂಗಸರಿಗಿಂತ ಗಂಡಸರು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವುದು ಉತ್ತಮ ಏಕೆಂದರೆ :

1) ತುಂಬಾ ಸುಲಭ
2) 30 ನಿಮಿಷಗಳಲ್ಲಿ ಚಿಕಿತ್ಸೆ ಮುಗಿದು, ಮನೆಗೇ ಹೋಗಬಹುದು. ಹೆಂಗಸರಾದರೆ 7 ದಿನ ಆಸ್ಪತ್ರೆಯಲ್ಲಿರಬೇಕು.
3) ಸಂಸಾರ ಸುಖಕ್ಕೆ ಯಾವ ಆತಂಕವೂ ಇಲ್ಲ.

ಗಂಡಸರೇ— ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಯ ಅವಕಾಶವನ್ನು ಉಪಯೋಗಿಸಿಕೊಳ್ಳಿ

ನಿಮ್ಮ ತಾತ್ಕಾಲಿಕ ಖರ್ಚಿಗಾಗಿ ಹಣ ಕೊಡುವ ವ್ಯವಸ್ಥೆಯೂ ಇದೆ.
ನೆನಪಿಡಿ — ಕುಟುಂಬ ಯೋಜನೆ ಕೇಂದ್ರದ ಚಿಹ್ನೆ — ಕೆಂಪು ತ್ರಿಕೋಣ.

ಕೊಡಗರ ಆರಾಧ್ಯದೇವತೆ. ಇರ್ಪು ಜಲಪಾತ ಗೋಣಿಕೊಪ್ಪಲಿನಿಂದ ವೈನಾಡಿಗೆ ಹೋಗುವ ರಸ್ತೆಯಲ್ಲಿ ಸುಮಾರು 15 ಮೈಲಿಯಲ್ಲಿದೆ. ಇಲ್ಲಿ ಕಾವೇರಿಗೆ ಉಪನದಿ ಲಕ್ಷ್ಮಣತೀರ್ಥ ಎತ್ತರದಿಂದ ಧುಮುಕುತ್ತದೆ. ಹೀಗೆಯೇ ಎರಡು ಗುಡ್ಡಗಳ ನಡುವೆ ಕಾವೇರಿನದಿ ಹರಿಯುತ್ತಿದ್ದು ಪ್ರಕೃತಿ ಸೌಂದರ್ಯದಿಂದ ತುಂಬಿ ತುಳುಕುತ್ತಿರುವ ರಾಮಸ್ವಾಮಿ ಕಣಿವೆ ಇದೆ. ಇಲ್ಲಿಗೆ ಕೊಡಿಗೆಯಿಂದ ಎರಡು ಮೈಲಿ. ಮಡಕೇರಿಯಿಂದ ಕೊಡಗಿಗೆ 21 ಮೈಲಿ. ಇಲ್ಲಿಯ ಕೃಷಿ ಸಂಶೋಧನಾ ಕ್ಷೇತ್ರ, ಪಶುಸಂಗೋಪನಾ ಹಾಗು ಕ್ಷೀರೋತ್ಪಾದನ ಕೇಂದ್ರ ಇತ್ಯಾದಿಗಳು ಕೊಡಗಿನ ಅಭಿವೃದ್ಧಿಯ ಕುರುಹುಗಳೆಂದರೆ ಅತಿಶಯವಲ್ಲ.

ಮಡಕೇರಿಯಿಂದ ಕೆಲವು ಮೈಲಿ ದೂರದಲ್ಲಿರುವ ಚೆಟ್ಟಳ್ಳಿಯ ಫಲ ಸಂಶೋಧನಾ ಕ್ಷೇತ್ರವನ್ನು ಕೊಡಗಿಗೆ ಬಂದವರು ನೋಡದೆ ಹೋಗಬಾರದು. ಕೊಡಗಿನ ಕಿತ್ತಳೆ ಎಷ್ಟು ಜನಪ್ರಿಯವೋ, ಕೊಡಗಿನ ಜೇನೂ ಅಷ್ಟೇ ಸುಪ್ರಸಿದ್ಧ. ಭಾಗಮಂಡಲದ "ಮಧುವನ" ಜೇನುನೊಣ ಸಾಕಣೆಯಲ್ಲಿ ತರಬೇತಿ ಕೊಡುತ್ತಿದೆ. ರೈತರಿಗೆ ಸುಲಭ ಬೆಲೆಗೆ ಜೇನುಪೆಟ್ಟಿಗೆಗಳನ್ನು ಒದಗಿಸುತ್ತದೆ.

ಕೊಡಗಿನಲ್ಲಿ ರಾಜ್ಯದ ಇತರ ಕಡೆಗಳಂತೆ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿದೆ. ತಾಂತ್ರಿಕ ಶಿಕ್ಷಣದ ಬಗ್ಗೆ ಕುಶಾಲನಗರದಲ್ಲಿ ಒಂದು ಪೊಲಿಟೆಕ್ನಿಕ್ ಶಾಲೆ ಇದೆ. ಒಂದು ಪ್ರಥಮದರ್ಜೆಯ ಕಾಲೇಜು, ಸುಮಾರು 35 ಹೈಸ್ಕೂಲುಗಳು. 366 ಪ್ರಾಥಮಿಕ ಶಾಲೆಗಳಲ್ಲದೆ, ಒಂದು ಅಧ್ಯಾಪಕರ ತರಬೇತಿ ಕಾಲೇಜೂ ಕೊಡಗಿನಲ್ಲಿದೆ.

ಕೊಡಗಿನಲ್ಲಿ ಸುಮಾರು 75 ಸಾವಿರ ಎಕರೆಗಳಲ್ಲಿ ಕಾಫಿ ಬೆಳೆ ಇತ್ತಿದ್ದರೆ, 27 ಸಾವಿರ ಎಕರೆಗಳಲ್ಲಿ ಏಲಕ್ಕಿ ಬೆಳೆಸುತ್ತಿದೆ. ಸುಮಾರು ಒಂದೂವರೆ ಲಕ್ಷ ಎಕರೆಗಳಲ್ಲಿ ಭತ್ತದ ಬೇಸಾಯ ನಡೆಯುತ್ತಿದೆ. ಇದು ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಮುಂದುವರಿದ ಜಿಲ್ಲೆ. ಇಲ್ಲಿ 500ಕ್ಕೂ ಹೆಚ್ಚು ಸಹಕಾರ ಸಂಘಗಳಿವೆ. ಸಾರ್ವಜನಿಕ ಆರೋಗ್ಯ ಹಾಗೂ ವೈದ್ಯಕೀಯ ಸೌಕರ್ಯಗಳ ಬಗ್ಗೆ ಮಡಕೇರಿಯಲ್ಲಿರುವ ಗಂಡಸರ ಹಾಗೂ ಹೆಂಗಸರ ಎರಡು ಆಸ್ಪತ್ರೆಗಳು ಸಹಿತ ಈ ಜಿಲ್ಲೆಯಲ್ಲಿ ಒಟ್ಟು 25 ಆಸ್ಪತ್ರೆಗಳಿವೆ. ಕ್ಷಯ, ಮಲೇರಿಯಾ ರೋಗಗಳ ಬಗ್ಗೆಯೂ ಇಲ್ಲಿ ಪ್ರತ್ಯೇಕವಾದ ಚಿಕಿತ್ಸಾ ಸೌಕರ್ಯವಿದೆ; ಅಲ್ಲದೆ ಕುಟುಂಬ ಯೋಜನೆಯ ಬಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಇವೆಲ್ಲ ಮಕ್ಕಳನ್ನು ಪಡೆಯುಬಲ್ಲವರಿಗೆ ಕುಟುಂಬಯೋಜನೆಯ ಬಗ್ಗೆ ಸಲಹೆ ನೀಡುತ್ತವೆ. ಶಸ್ತ್ರ ಚಿಕಿತ್ಸೆ ಮಾಡುತ್ತವೆ. ಮಂಕಿ ಆಳಪಡಿಸುತ್ತವೆ. ನಿರೋಧಗಳನ್ನು ಹಂಚುತ್ತವೆ.

1965—66 ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸುಮಾರು 1400 ಮಹಿಳೆಯರು ಮಂಕಿ ಧಾರಣೆ ಮಾಡಿಕೊಂಡರು. ತದನಂತರ ಕುಟುಂಬಯೋಜನೆ ಕಾರ್ಯಕ್ರಮ ಮುಂದುವರಿದಿದೆ. 1965-66 ರಿಂದ ಕಳೆದ ಆಗಸ್ಟ್ ತಿಂಗಳ ಅಖೈರವರೆಗೆ ಈ ಜಿಲ್ಲೆಯಲ್ಲಿ ಒಟ್ಟು 4863 ಶಸ್ತ್ರಕ್ರಿಯೆಗಳೂ, 4728 ಮಂಕಿಧಾರಣೆಗಳೂ ಆಗಿವೆ. 1438 ಕುಟುಂಬಗಳಲ್ಲಿ ಸಾಂಪ್ರದಾಯಿಕ ಸಂತತಿ ನಿರೋಧ ಸಾಧನಗಳನ್ನು ಬಳಸಲಾಗುತ್ತಿದೆ.

ಚಾರುಚಂದ್ರನ

ಧಾರ್ತರಾಷ್ಟ್ರಾಲಿಂಗನ ನಿಷ್ಫಲವಾಯ್ತು

ತುಂಬಿ ತುಳುಕುವ ಬಹುಮತವನ್ನು ೧೯೬೭ರ ಸಾರ್ವತ್ರಿಕ ಚುನಾವಣೆಗಳಲ್ಲಿ ಡಿಎಂಕೆ ತಮಿಳುನಾಡಿನಲ್ಲಿ ಹೇಗೆ ಪಡೆಯಲು ಸಮರ್ಥವಾಯಿತ್ತು?

ಇದವರ ವಿರೋಧಿಗಳಿಗೆ ಮಾತ್ರ ಉತ್ತರ ಸಿಗದ ಪ್ರಶ್ನೆಯಲ್ಲ; ಸ್ವಯಂ ದ್ರಾವಿಡ ಅಗ್ರ ಪಂಕ್ತಿಯ ನಾಯಕರಿಗೇ ತಿಳಿಯದ ಪ್ರಶ್ನೆ.

ಸಾಕಷ್ಟು ತಲೆ ಕೆಡಿಸಿಕೊಂಡು ಅವರು ಕೊನೆಗೂ ಆಡಿಕೊಂಡು ಉತ್ತರವಿತ್ತರು — ಪ್ರಾಂತೀಯತೆಯನ್ನು, ಪ್ರಾದೇಶಿಕತೆಯನ್ನು, ಕೆಣಕಿ ತಮಿಳು ಭಾಷಾಂಧಾಭಿಮಾನವನ್ನು ಉದ್ರೇಕಿಸಿದ್ದೇ ಕಾರಣ.

ಇದನ್ನವರು ಬಾಯಿಬಿಟ್ಟು ಹೇಳಲಿಲ್ಲ; ಉಳಿದವರು ಆಡತೊಡಗಿದರು. ಪ್ರತ್ಯೇಕ ದ್ರಾವಿಡನಾಡಿನ ಬೇಡಿಕೆಯನ್ನು ಹಿಂದಿಟ್ಟು, ಭಾರತ ಒಕ್ಕೂಟದೊಳಗಿನ ಸ್ವಾಯತ್ತ ರಾಜ್ಯದ ಬೇಡಿಕೆಯನ್ನು ಮುಂದಿಟ್ಟರು ದ್ರಾವಿಡರು.

ರಾಜ್ಯಕೀಯ ಚಾಣಾಕ್ಷ, ರಾಜಾಜಿಯವರ ಉತ್ತೇಜನ — ಪ್ರೋತ್ಸಾಹದ ಆಸರೆಯಿತ್ತು. ಅಣ್ಣಾದೊರೈಯಂತಹ ಸಾಮಯಿಕವಾದಿಯ ನೇತೃತ್ವವಿತ್ತು.

ಅಣ್ಣಾದೊರೈ ಅಗಲಿ ಹೋದೊಡನೆಯೇ ದ್ರಾವಿಡದಲ್ಲಿ ಭಿನ್ನಮತ ಮೂಡಿತು. ನಾಯಕತ್ವದ ಜಗಳದಲ್ಲಿ ಕರುಣಾನಿಧಿಯವರು ನೆಡುಂಚೆಳಿಯನ್ನರನ್ನು ತಿರಸ್ಕರಣೆಯಿಂದ ಕಂಡರು.

ಇಬ್ಬರ ಬೋಳಿಯೂ ತಾತ್ತೇ ಆದುದರಿಂದ ಯಾರೂ ಯಾರ ಬಗ್ಗೂ ಆಡಲಿಲ್ಲ, ಮತ್ತೆ ಒಂದಾದರು.

ಕಾಂಗ್ರೆಸ್ ವಿಭಜನೆಯು ನಾಂದಿ ರಾಷ್ಟ್ರಪತಿ ಚುನಾವಣೆ. ಸಹಜವಾಗಿ ಕಾಂಗ್ರೆಸ್ ವಿರೋಧಿಯೆನಿಸಿದ ದ್ರಾವಿಡ ಶ್ರೀ ಗಿರಿಯವರನ್ನು ಬೆಂಬಲಿಸಿದ್ದು ಸಹಜ.

ಕಾಂಗ್ರೆಸ್ ವಿಭಜನೆಯ ನಂತರ ಶ್ರೀಮತಿ ಗಾಂಧಿಯವರಿಗೆ ಬೆಂಬಲ ನೀಡುವುದರಿಂದಲೇ ತಮ್ಮ ಲಾಭವೆಂದ ದ್ರಾವಿಡ ಅವರ "ಪ್ರಗತಿಪರ" ನೀತಿಗಳಿಗೆ ಬೆಂಬಲ ನೀಡಿತು. ಕೇಂದ್ರದಲ್ಲಿ ಶ್ರೀಮತಿ ಗಾಂಧಿ ಸರಕಾರವನ್ನು ಉಳಿಸುವುದು ನಮಗೆ ಬೇಕಿಲ್ಲವೆಂದರು ಅದರ ನಾಯಕರು.

ಆದರೆ, ಪ್ರಧಾನಿ ಗಾಂಧಿ ಇಂತಹ ಬಹುಮತದ ಮೇಲೆ ಉಳಿಯಬಯಸದೆ ಲೋಕಸಭೆ ವಿಸರ್ಜನೆ ಮಾಡಿದರು.

ಹಾಗಾಗಿ ದ್ರಾವಿಡದ ನಾಯಕರಿಗೆ ಕಣ್ಣು ಕಾಣದಾಯಿತು.

ತಮ್ಮ ಹಾಗೂ ಕಮ್ಯುನಿಸ್ಟರ ಬೆಂಬಲವಿರುವಾಗ ಶ್ರೀಮತಿ ಗಾಂಧಿ ಈ ಕ್ರಮ ಕೈಕೊಂಡದ್ದು ಅವರಿಗೆ ಅಪ್ರಿಯವಾಯ್ತು.

ಮರುಚುನಾವಣೆಗಳಲ್ಲಿ ಪ್ರಧಾನಿ ಗಾಂಧಿಯವರ ಪಕ್ಷ ಬಹುಮತಗಳಿಸಬಹುದು; ಗಳಿಸದೆ ಉಳಿಯಬಹುದು; ಆದರೆ, ತಮಿಳು ನಾಡಿನಲ್ಲಿ ದ್ರಾವಿಡದ ಪ್ರಭಾವಕ್ಕೆ ಹಾನಿ ತಟ್ಟುವುದು ನಿಸ್ಸಂಶಯ. ತಾವು ಅಧಿಕಾರ ಗಿಟ್ಟಿಸಿದ ಘಟನೆಯ ಮೂಲವೆಲ್ಲಿ ಅಡಗಿದೆಯೆಂದು ಅವರಿಗೆ ಸರಿಯಾಗಿ ಗೊತ್ತು. ಈಗ ಹೀಗಾಗುವುದೆಂದು ತಿಳಿಯುತ್ತಿದ್ದರೆ, ಪ್ರಾಯಃ ಶ್ರೀಮತಿ ಗಾಂಧಿಯ ಸರಕಾರವುಳಿಸಲು ಮುಂದಾಗ ತಿದ್ದರೋ ಏನೋ!

ಶ್ರೀಮತಿ ಗಾಂಧಿ ತನ್ನ ಸೀಟಿಯನ್ನು ತೀರಿಸಿಕೊಳ್ಳಲು ಕಮ್ಯುನಿಸ್ಟ್, ದ್ರಾವಿಡ ಮುಸ್ಲಿಂ ಲೀಗುಗಳನ್ನು ತೆಕ್ಕೆಯಲ್ಲಿಟ್ಟು ಕೊನೆಗೂ ಅವನ್ನು ತಿಪ್ಪೆಗೆಸೆಯುವ ತಂತ್ರವಾದಿಗಳು.

ದ್ರಾವಿಡ ನಿಬ್ಬೆರಗಾಯಿತು. ಸಾಕಷ್ಟು ತಲೆ ತುರಿಸಿ ಕೊಂಡಿತು. ಸ್ಪಷ್ಟ ಬಹುಮತವಿದ್ದರೂ ವಿಧಾನ ಸಭೆಯನ್ನು ವಿಸರ್ಜಿಸಿತು.

ವಿಸರ್ಜನೆಯ ಹಿಂದೆ ರಾಮಾಯಣವಿದೆ; ಮಹಾಭಾರತವಿದೆ.

ದ್ರಾವಿಡವು ಪ್ರಾದೇಶಿಕ ಪಕ್ಷ. ಪ್ರಾದೇಶಿಕತೆಯ ಉದ್ರೇಕದಿಂದಲೇ ಅದು ಅಂದು ಲೋಕಸಭೆ ವಿಧಾನ ಸಭೆಗಳ ಚುನಾವಣೆಗಳಲ್ಲಿ ಜಯ ಭೇರಿ ಬಾರಿಸಿತ್ತು. ಹಿಂದೀ ವಿರೋಧಿ ನೀತಿಯು ಅಂದು ದ್ರಾವಿಡದ ನಿಶ್ಚಿತ ಪ್ರಬಲಾಸ್ತ್ರವಾಗಿತ್ತು.

ಕಾಂಗ್ರೆಸ್ (ಸಿಂಡಿಕೇಟ್) ಇಂದಿಗೂ ತಮಿಳು ನಾಡಿನಲ್ಲಿ ಗೌರವ ಪಡೆದಿದೆ. ಕಾಂಗ್ರೆಸ್‌ನ ಅಳಿಕೆ ಇಂದಿನವರೆಗೆ ಬರಿಯ ಸವಿನೆನಪು.

ದ್ರಾವಿಡ ಈ ನಾಲ್ಕು ವರ್ಷಗಳಲ್ಲಿ ಹೆಚ್ಚಿನದೇನೂ ಮಾಡಿಲ್ಲ. ಹಿಂದಿ ವಿರೋಧಿ ಅಸ್ತ್ರವಾದರೂ ಈಗ ಮೊಂಡಾಗಿದೆ; ಪ್ರಾಚೀನವಸ್ತು ಭಂಡಾರ ಸೇರಿದೆ.

ತಮಿಳು ಮಾಧ್ಯಮದ ವಿರುದ್ಧವೇ ಚಳುವಳಿ ಆರಂಭವಾಗಿದೆಯೆಂಬಾಗ ದ್ರಾವಿಡದ ಅಂಧ ಭಾಷಾಭಿಮಾನದ ಪಾಪದ ಕೂಸು ಇದು ಎನಿಸುತ್ತದೆ.

ಕರುಣಾನಿಧಿ — ಸುಬ್ರಹ್ಮಣ್ಯಂರ ಪ್ರಭಾವ ಎಷ್ಟೇ ಇದ್ದರೂ ಕಾಮರಾಜರ ಮುಂದವರಿನ್ನೂ ನಿಸ್ತೇಜರೇ.

ಆದುದರಿಂದ ದ್ರಾವಿಡವು ಲೋಕಸಭೆಗೆ ಮಾತ್ರ ಚುನಾವಣೆ ನಡೆದಲ್ಲಿ ತಾನು ಮಣ್ಣು ಮುಕ್ಕುವುದು ಖಂಡಿತವೆಂದು ತಿಳಿದು ಕೊಂಡಿತು.

ಲೋಕಸಭಾ ಚುನಾವಣೆಗಳಲ್ಲಿ ಪ್ರಾದೇಶಿಕ ಭಾವನೆಗಳಿಗೆ ಅವಕಾಶವಿಲ್ಲ. ಈ ಭಾವನೆ ಉದ್ರೇಕವಾಗದೆ ಹೋದರೆ ದ್ರಾವಿಡ ಗೆಲ್ಲುವುದಿಲ್ಲ.

ದ್ರಾವಿಡ ಗೆಲ್ಲದೆ ಹೋದರೆ, ಅದರ ಬಲ ಕುಸಿಯುತ್ತದೆ. ಶ್ರೀಮತಿ ಗಾಂಧಿಯವರ ಅಥವಾ ಮತ್ಯಾರ ಮೇಲಾದರೂ ತನ್ನ ಪ್ರಭಾವ ಬೀರದೆ ಮೂಡಿಸಬೇಕಾದರೆ, ಲೋಕಸಭೆಯಲ್ಲಿ ಹೆಚ್ಚು ಸ್ಥಾನ ಪಡೆಯಬೇಕು.

ಆದುದರಿಂದ ವಿಧಾನ ಸಭೆಗೂ ಚುನಾವಣೆ ನಡೆಯಬೇಕು. ಮತ್ತೆ ತನ್ನ ಅದೇ ಹಳೆಯ ನಾಟಕವನ್ನು ಚಲಾವಣೆಗೆ ತಂದು ತಮಿಳರನ್ನು ಸಂಮೋಹಿತಗೊಳಿಸಬೇಕು ಮತಗಳಿಸಬೇಕು.

ಕರುಣಾನಿಧಿಯವರು ತಮ್ಮ ಬುದ್ಧಿವಂತಿಕೆಯನ್ನು ತೋರಿಸಿದ್ದಾರೆ. ಶ್ರೀಮತಿ ಗಾಂಧಿಗೂ ಮಿಗಿಲಾದ ಬುದ್ಧಿವಂತಿಕೆಯಿದು.

ಕೇರಳದಲ್ಲಿ ಅಚ್ಯುತಮೆನನ್ ಮಂತ್ರಿಮಂಡಲದ ಕೋಯರನ್ನು ಮಧ್ಯಾವಧಿ ಚುನಾವಣೆಯ ಮೇಲೆ ಆಸ್ಪಿಕೊಂಡರು ಅವರು.

ಇದು ಧೃತರಾಷ್ಟ್ರಾಲಿಂಗನವಾದದ್ದು ಸರ್ವ ವಿದಿತ.

ಇದೇ ಧಾರ್ತರಾಷ್ಟ್ರಾಲಿಂಗನ ನೀತಿಯಿಂದ ದ್ರಾವಿಡವನ್ನು ಹುಡಿಗುಟ್ಟಬಹುದು ಎಂದವರ ಹವಣಿಕೆಯಿತ್ತು. ಆ ದಕ್ಕೆಂದೇ ಅಲ್ಲಿ ಚುನಾವಣಾ ಹೊಂದಾಣಿಕೆಗೆ ಅವರು ಮುಂದಾಗಿದ್ದರು.

ಕರುಣಾನಿಧಿ ತಮ್ಮ ನಿಸ್ಪೃಹತೆಯಿಂದ ಆ ಆಲಿಂಗನವನ್ನು ನಿಷ್ಫಲವಾಗುವಂತೆಸಗಿದರು.

ಕರುಣಾನಿಧಿಯವರೂ ಜನತೆಯ ಹೊಸ ಆದೇಶದ ನೆಪದಲ್ಲಿ ವಿಧಾನ ಸಭೆಯನ್ನು ವಿಸರ್ಜಿಸಿ ಶ್ರೀಮತಿ ಗಾಂಧಿಗಿಂತಲೂ ದಿಟ್ಟ ಹೆಜ್ಜೆಯಿಟ್ಟರು.

ಆದರೆ, ಒಂದು ಪ್ರಶ್ನೆ ವಿಧಾನ ಸಭೆಯ ವಿಸರ್ಜನೆಯಿಂದ ಶ್ರೀಮತಿ ಗಾಂಧಿಗೆ ಬಲವಾದ ಏಟತ ದ್ರಾವಿಡದ ನಾಲ್ಕು ವರ್ಷಗಳ ಅಧಿಕಾರದ ಅನುಭವ; ಅದು ಕೇಂದ್ರದಲ್ಲಿ ಶ್ರೀಮತಿ ಗಾಂಧಿಗೆ ನೀಡಿದ ನಿಸ್ವಾರ್ಥ ಬೆಂಬಲ ಜನತೆಯ ಮುಂದಿದೆ. ಅದು ಮತ್ತೆ ದ್ರಾವಿಡ ಉದಯ ಸೂರ್ಯನಿಂದಲೇ ತೃಪ್ತಿ ಪಡುತ್ತದೆಯೆ?

ಸಿಂಡಿಕೇಟಿನ ಚಾಪವನ್ನು ಕೈಗೆತ್ತಿಕೊಳ್ಳುತ್ತದೆಯೆ?

ಎರಡನೆಯದು ಸಂಭವನೀಯ ಸಂಭವವೇ ಹೆಚ್ಚು. ಆಗ ಪೌರಾಣಿಕರೊಳಗಣ ಎರಡು ಪಕ್ಷಗಳ ಹೋರಾಟದಿಂದ ಕೈಯೆಳಗಿನ ಒಂದಷ್ಟೆಸಳನ ನೆನಪಾಗುತ್ತದೆ.

ಸಂದರ್ಶಿಸಿರಿ!—ಸಂತೃಪ್ತರಾಗಿ!!
ಬಣ್ಣ ಬಣ್ಣದ ವಜ್ರಗಳಿಗೆ, ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—
ಐಡಿಯಲ್ ಫೋಟೋ ಹೌಸ್ PHONE: 3131
ಆಗ್ಫಾ, ಕೊಡಕ್, ಇಲ್‌ಫೋರ್ಡ್ ಗಿವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1
Tele: GOLDKING Estd. 1947 Phone: 3242 Res:3272

ಗ್ರಾಮೀಣ ಆಸ್ಪತ್ರೆಗಳ ಸ್ಥಾಪನೆಗೆ ಮಹಾ ಯೋಜನೆ

ಹಿಂದುಳಿದಿರುವ ಪ್ರದೇಶಗಳ ಗ್ರಾಮೀಣ ಜನತೆಗಾಗಿ 2,200 ಕೇಂದ್ರ ಗ್ರಾಮಾಂತರ ಆಸ್ಪತ್ರೆಗಳನ್ನು ಸ್ಥಾಪಿಸಬೇಕು. ಇಂತಹ ಪ್ರತಿ ಆಸ್ಪತ್ರೆಯು ಸನಿಹದಲ್ಲಿ ಹೊರರೋಗಿಗಳ ವೈದ್ಯಶುಶ್ರೂಷೆಗಾಗಿ ವೈದ್ಯಶಾಲೆಗಳಿರಬೇಕು. ಪ್ರತಿ ಗ್ರಾಮಾಂತರ ಆಸ್ಪತ್ರೆಯಲ್ಲೂ 25 ಹಾಸಿಗೆಗಳ ಸೌಲಭ್ಯ ಹಾಗು ಮೂವರು ವೈದ್ಯರುಗಳಿರಬೇಕು. ಔಷಧಿ ವಿಭಾಗ, ಶಸ್ತ್ರಚಿಕಿತ್ಸಾ ಸೌಲಭ್ಯ, ಪ್ರಸೂತಿ ಹಾಗೂ ಸ್ತ್ರೀರೋಗ ಚಿಕಿತ್ಸಾ ವಿಭಾಗಗಳಿರಬೇಕು. ಇಂತಹ ಆಸ್ಪತ್ರೆಗಳ ಜಾಲವು ಗ್ರಾಮಾಂತರ ಜನತೆಗೆ ಆರೋಗ್ಯ, ವೈದ್ಯ ಸೌಲಭ್ಯ, ಕುಟುಂಬ ಯೋಜನಾ ಸೇವೆ ಮತ್ತು ಪ್ರಸೂತಿ—ಶಿಶು ಆರೋಗ್ಯ ವಿಭಾಗದಲ್ಲಿ ಸಂಘಟಿತ ಸೇವೆ ಸಲ್ಲಿಸುವುದು ಸಾಧ್ಯವಾಗುತ್ತದೆ.

ಪಂಚವಾರ್ಷಿಕ ಯೋಜನೆಗಳಲ್ಲಿ ಆರೋಗ್ಯ ಕ್ಷೇತ್ರಕ್ಕೆ ಮೀಸಲಾಗಿದ್ದ ಹಣವನ್ನು ಮುಖ್ಯವಾಗಿ ನಗರ ಪ್ರದೇಶಗಳಿಗೆ ವಿಸ್ತರಿಸಿ, ಗ್ರಾಮಾಂತರ ಪ್ರದೇಶವನ್ನು ಕಡೆಗಣಿಸಲಾಗಿದೆ. ಇದು ದುರದೃಷ್ಟಕಾರಿ ಘಟನೆ. ಇದರಿಂದ ನಗರ, ಗ್ರಾಮಾಂತರ ಜನತೆಯ ಆರೋಗ್ಯ ಸೇವಾ ವಿಸ್ತರಣೆಯಲ್ಲಿ ಅಸಮತೆಯುಂಟಾಗಿದೆ.

ಭಾರತ ವೈದ್ಯ ಪರಿಷತ್ತಿನ ಪಟ್ಟಿಯಲ್ಲಿ ದಾಖಲಾಗಿರುವ 1.05 ಲಕ್ಷ ಸಂಖ್ಯೆ ವೈದ್ಯರಲ್ಲಿ ಮುಕ್ಕಾಲು ಭಾಗ ನಗರಗಳಲ್ಲೂ ಉಳಿದವರು ಗ್ರಾಮಾಂತರ ಪ್ರದೇಶದಲ್ಲೂ ಇದ್ದಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ದೇಶದ ಶೇಕಡ 80ರಷ್ಟು ಜನರು ನೆಲೆಸಿದ್ದಾರೆ. ಅದೇ ರೀತಿ ಭಾರತದ ಆಸ್ಪತ್ರೆಗಳಲ್ಲಿರುವ 2,55,700 ಹಾಸಿಗೆ ಸೌಲಭ್ಯದ ಪ್ರಮಾಣವೂ ನಗರ ಗ್ರಾಮಾಂತರ ಪ್ರದೇಶಗಳಲ್ಲಿ ಅಸಮಾನವಾಗಿ ಹಂಚಿಹೋಗಿದೆ. ಈ ಹಂಚಿಕೆ ನೀತಿಯನ್ನು ತಡೆಗಟ್ಟಿದ್ದಾರೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ವಿಸ್ತರಿಸಬೇಕೆಂದಿರುವ ಸುಮಾರು 26 ಅಥವ 30 ಸಹಸ್ರ ಹಾಸಿಗೆ ಸೌಲಭ್ಯವೂ ನಗರಪ್ರದೇಶಗಳಿಗೇ ಅಧಿಕ ಪ್ರಮಾಣದಲ್ಲಿ ಮೀಸಲಾಗಿಡಲಾಗುತ್ತದೆ.

ಮಹಾ ಯೋಜನೆ

ಕೇಂದ್ರ ಆರೋಗ್ಯ ಶಾಖೆ ರೂಪಿಸಿರುವ "ಮಹಾಯೋಜನೆ"ಯು (ಮಾಸ್ಟರ್ ಪ್ಲ್ಯಾನ್) ಸಲಹೆ, ಸೂಚನೆಗಳ ಪ್ರಕಾರ ಗ್ರಾಮಾಂತರ ಪ್ರದೇಶದ ಬೃಹತ್ ಜನಕೋಟಿಗೆ ಸೀಮಿತ ಸಂಪನ್ಮೂಲದ ಚೌಕಟ್ಟಿನಲ್ಲಿ ಕನಿಷ್ಠ ಆರೋಗ್ಯ ಸೇವಾ ಸೌಲಭ್ಯ ವಿಸ್ತರಿಸುವ ಉದ್ದೇಶವಿದೆ.

ವಿದೇಶಗಳಲ್ಲಿರುವ ಭಾರತೀಯ ವೈದ್ಯರು ಸಹಕಾರ ತತ್ವದ ಬುನಾದಿಯ ಮೇಲೆ ಆಸ್ಪತ್ರೆಗಳನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಆರೋಗ್ಯ ಶಾಖೆಗೆ ಸೂಚನೆ ಕಳುಹಿಸಿದ್ದಾರೆ. ಸಹಕಾರ ತತ್ವದಂತೆ ವಿವಿಧ ಆರೋಗ್ಯ ಸೇವೆ ನೀಡುವ ವೈದ್ಯಶಾಲೆಗಳನ್ನು ವಿಶೇಷ ಸೇವಾ ಸೌಲಭ್ಯವಿಲ್ಲದಿರುವ ಪ್ರದೇಶದಲ್ಲಿ ಸ್ಥಾಪಿಸುವುದಾದರೆ ವಿದೇಶದಲ್ಲಿರುವ ಭಾರತೀಯ ವೈದ್ಯರಿಗೆ ವಿಶೇಷ ಸಹಾಯ ನೀಡಬೇಕೆಂಬುದು ಕೇಂದ್ರ ಸರ್ಕಾರದ ಇಚ್ಛೆಯಾಗಿದೆ.

ಸಮೃದ್ಧಶಾಲಿಯಾದ ದೇಶಗಳಿಗೆ ಮೇಧಾವಿ ಭಾರತೀಯ ವೈದ್ಯರು ವಲಸೆ ಹೋಗುತ್ತಿದ್ದಾರೆ. ಇಂತಹ ವೈದ್ಯರಿಗೆ ವಿದೇಶಗಳಲ್ಲಿ ನೀಡುವಂತಹ ಹಣದ ಆಕರ್ಷಣೆಯನ್ನು ಭಾರತ ಸರಕಾರ ನೀಡುವುದು ಉಚಿತವಾಗಲಾರದು ಹಾಗೂ ಸಮಂಜಸವಾಗಲಾರದು; ಆದರೆ ಮಾತೃಭೂಮಿಗೆ ಸೇವೆಸಲ್ಲಿಸಲು ಆಶಿಸುವಂತಹ ವೈದ್ಯರಿಗೆ ಸೌಲಭ್ಯ ಒದಗಿಸುವುದೇ ಸರಕಾರದ ಮಹೋದ್ದೇಶವಾಗಿದೆ.

ವೈದ್ಯ ಪದವಿ ಪಡೆದವರು ಮೂರು ವರುಷ ಕಾಲ ಕಡ್ಡಾಯದ ಗ್ರಾಮಾಂತರ ಸೇವೆ ಸಲ್ಲಿಸಿದ ನಂತರ ವಿಶ್ವವಿದ್ಯಾಲಯಗಳು ನಿಯಮ ರಚಿಸುವುದನ್ನು ಪರಿಶೀಲಿಸಬೇಕಾಗಿದೆ. ಗ್ರಾಮಾಂತರ ಸೇವೆ ಮಾಡುವ ವೈದ್ಯರಿಗೆ ಹೆಚ್ಚು ಪ್ರೋತ್ಸಾಹ ನೀಡುವ ಬಗ್ಗೆ ಸರಕಾರ ಪರಿಶೀಲಿಸುತ್ತದೆ. ಹೀಗೆ ಸೇವೆ ಮಾಡಿದ ವೈದ್ಯರಿಗೆ ಸ್ನಾತಕೋತ್ತರ ಶಿಕ್ಷಣಕ್ಕೆ ಪ್ರವೇಶ ನಡೆಯಲು ಅವಕಾಶ ಅಥವ ಸರಕಾರಿ ಸೇವೆಗೆ ಸೇರಲಿಚ್ಛಿಸಿದ ವೈದ್ಯರಿಗೆ ವಿಶೇಷ ವೇತನ ನೀಡಿಕೆಯ ಸಾಧ್ಯತೆಯನ್ನು ಪರಿಶೀಲಿಸಬೇಕಾಗಿದೆ.

ಭಾರತೀಯ ವೈದ್ಯ ಪದ್ಧತಿ ಹಾಗೂ ಹೋಮಿಯೊಪಥಿ ಶಿಕ್ಷಣ ಪಡೆದವರಿಗೆ ಅಲ್ಪ ತರಬೇತಿ ನೀಡಿದರೆ ಅವರನ್ನು ಹಿಂದುಳಿದ ಪ್ರದೇಶಗಳಲ್ಲಿರುವ ವೈದ್ಯಕೀಯ ಹುದ್ದೆಗಳಲ್ಲಿ ತುರ್ತು ಸೇವೆ ಮಾಡಲು ಬಳಸಿಕೊಳ್ಳಬಹುದೆಂಬ ಆಶಾಭಾವನೆಯಿದೆ.

(ನವದೆಹಲಿಯಲ್ಲಿ ಡಿಸೆಂಬರ್ 10ರಂದು ಆರಂಭವಾದ ಆರೋಗ್ಯ ಹಾಗು ಕುಟುಂಬ ಯೋಜನಾ ಸಮ್ಮೇಳನದಲ್ಲಿ ಕೇಂದ್ರ ಆರೋಗ್ಯ ಸಚಿವ ಶ್ರೀ ಕೆ. ಕೆ. ಷಾ ಮಾಡಿದ ಉದ್ಘಾಟನಾ ಭಾಷಣದ ಸಾರಾಂಶ)

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ,
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾರ್ಟಿಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೇಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ನೀವು ಭಾರವಾಗಿದ್ದೀರಾ?

ಮೊಗದಷ್ಟಾಗಿ ಊಟ ಹೊಡೆಯುವ ದಪ್ಪ ಶರೀರದವರು ಲಘು ಮೈಕಟ್ಟಿಗಾಗಿ ಕಟ್ಟುನಿಟ್ಟಿನ ಊಟೋಪಚಾರ ಕೈಕೊಳ್ಳಬೇಕೆಂದಾಗ ಕಕ್ಕಾಬಿಕ್ಕಿಯಾಗುತ್ತಾರೆ. ಆದರೆ ಅಷ್ಟೊಂದು ತ್ಯಾಗಮಾಡದೆ ನಿಮ್ಮ ಮೈಯನ್ನು ಇಳಿಸಿಕೊಳ್ಳಬೇಕೆಂದಿದ್ದರೆ ಕೆಳಗಿನ ವಿಧಾನವನ್ನು ನಿಮಗೆ ಸೂಚಿಸುತ್ತಿದ್ದೇನೆ:

ನಿಮ್ಮ ಅಂದಿನ ತೂಕ ಮತ್ತು ತಾರೀಕನ್ನು ಮೊದಲು ಬರೆದಿಡಿ. ಆ ದಿನದಿಂದ ಕನಿಷ್ಠ ಮೂರು ವಾರಗಳ ಕಾಲವಾದರೂ ಈ ಪಥ್ಯದ ಊಟವನ್ನು ತೆಗೆದುಕೊಳ್ಳಿ. ಕಾಫೀ ಮತ್ತು ಚಹಾಗಳಲ್ಲಿ ಸಕ್ಕರೆ ಪ್ರಮಾಣವನ್ನು ಸೇ. 75ರಷ್ಟು ಕಡಮೆ ಮಾಡಿ.

ಬಿಳೀ ಬ್ರೆಡ್ಡು ತಿನ್ನಬೇಡಿ, ಒಂದಿಷ್ಟು ಕರೀ ಬ್ರೆಡ್ಡು ಅಥವಾ ಮೇಶರ್ ರಸ್ಕ್ ಆಗಬಹುದು.

ಮಿಠಾಯಿ, ಕೇಕು, ಬಿಸ್ಕತ್ತು, ಚಾಕೊಲೇಟ್ ಯಾವುದೂ ಕೂಡದು. ಬದಲು ಹಣ್ಣು ತೆಗೆದುಕೊಳ್ಳಿ. ಸಾಧಾರಣ ಚೀಸ್‌ಗೆ ಬದಲು ಕಾಟೇಜ್ ಚೀಸ್ ಉತ್ತಮ. ಬೆಣ್ಣೆಯನ್ನು ಅಪರೂಪವಾಗಿ ತೆಗೆದುಕೊಳ್ಳಬಹುದು. ಸಂಪೂರ್ಣ ಬಿಟ್ಟುಬಿಟ್ಟರೆ ಇನ್ನಷ್ಟು ಒಳ್ಳೆಯದು.

ಎರಡು ಊಟಗಳ ನಡುವೆ ನಿಮಗೆ ವಿಪರೀತ ಹಸಿವಾಗುತ್ತಿದ್ದರೆ ಒಂದು ಸೇಬು ಹಣ್ಣು, ಸೌತೆಕಾಯಿ, ಟೊಮಾಟೊ ಅಥವಾ ಒಣ ಹಣ್ಣು—ಒಣಗಿಸಿದ ಪ್ಲಂ ಹಣ್ಣು ಹೆಚ್ಚು ಒಳ್ಳೆಯದು—ಹೀಗೆ ಯಾವುದನ್ನಾದರೂ ತೆಗೆದುಕೊಳ್ಳಬಹುದು.

ರಾತ್ರಿ ಊಟ ಮಾಡುವುದಕ್ಕಿಂತ ಒಂದು ಲೋಟ ಬಿಸಿ ಬಿಸಿ ಹಾಲು ಕುಡಿಯುವುದು ಹೆಚ್ಚು ಒಳ್ಳೆಯದು. ಇದರಿಂದ ನಿದ್ದೆಯೂ ಚೆನ್ನಾಗಿ ಬರುತ್ತದೆ

ಈ ಪಥ್ಯದ ಊಟವನ್ನು ನೀವು ಪಾಲಿಸಿದರೆ ಮೂರು ವಾರಗಳ ಅಂತ್ಯದಲ್ಲಿ ನೀವು ಕನಿಷ್ಠ 4 ಪೌಂಡು ತೂಕವನ್ನಾದರೂ ಕಳೆದುಕೊಂಡು ಖಂಡಿತವಾಗಿ ಮೊದಲಿಗಿಂತಲೂ ಅಂದವಾಗಿ ಕಾಣಿಸುತ್ತೀರಿ.

ಈ ಸರಕಾರವು ಕೊನೆಯ ವರೆಗೂ ಅರ್ಧ ಗುಲಾಮವಾಗಿ, ಅರ್ಧ ಸ್ವತಂತ್ರವಾಗಿ ಇರಲಾರದೆಂದು ನನ್ನ ನಂಬುಗೆ.

—ಏಬ್ರಹಾಂ ಲಿಂಕನ್

o o o

ನಾನು, ನಿಮ್ಮ ಬೆವರು ಕಣ್ಣೀರು ರಕ್ತ ಕೇಳುತ್ತೇನೆ. —ಚರ್ಚಿಲ್

ಶ್ರೀ ಕೆ. ಕೆ. ಪೈಗಳಿಂದ ಸುವರ್ಣ ಚಿಟ್‌ಫಂಡ್ಸಿನ ಉದ್ಘಾಟನೆ

ಸುವರ್ಣ ಚಿಟ್ ಫಂಡ್ಸ್ ಆಂಡ್ ಫೈನಾನ್ಸಿಂಗ್ ಕಂಪನಿ (ಪ್ರೈ) ಲಿಮಿಟೆಡ್ ಎನ್ನುವ ಕೊಯಮುತ್ತೂರಿನಲ್ಲಿ ಪ್ರಧಾನ ಕಛೇರಿಯಿರುವ ಸಂಸ್ಥೆಯ ಉಡುಪಿ ಶಾಖೆಯನ್ನು ಇದೇ ತಾ. ೬ರಂದು ಉಡುಪಿಯ 'ಕೃಷ್ಣ ವಿಹಾರ' (ಮೊದಲು ತಂತಿ ಕಛೇರಿಯಿದ್ದ) ಕಟ್ಟಡದಲ್ಲಿ ಸಿಂಡಿಕೇಟ್ ಬೇಂಕಿನ ಪಾಲಕ ಶ್ರೀ ಕೆ. ಕೆ. ಪೈಗಳು, ನಗರ ಸಭಾಧ್ಯಕ್ಷ ಡಾ. ವಿ. ಎಸ್. ಆಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿಸುತ್ತಾ, ಈ ಸಂಸ್ಥೆಯು ಪ್ರಕೃತ ಅತ್ಯಾವಶ್ಯಕವಾಗಿರುವ ಉಳಿತಾಯ ಯೋಜನೆಗೆ ಪ್ರಚೋದನೆ ಕೊಡುವಂತಾಗಲಿ ಎಂದರು.

ಆರಂಭದಲ್ಲಿ ಡೈರೆಕ್ಟರರಲ್ಲೊಬ್ಬರಾದ ಶ್ರೀ ರಾಮದಾಸನ್ ಸ್ವಾಗತಿಸಿದರು. ಸಂಸ್ಥೆಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ಪಿ. ಆರ್. ಕುರುಪ್ (ಕೇರಳದ ಮಾಜಿ ಮುಖ್ಯಮಂತ್ರಿ) ಅವರು ಸಂಸ್ಥೆಯ ಉದ್ದೇಶಗಳನ್ನು ತಿಳಿಯಪಡಿಸಿದರು. ಮುಖ್ಯ ಅತಿಥಿಗಳಾದ ಎಡ್ವೊಕೇಟ್ ಪಿ. ಶಿವಾಜಿ ಶೆಟ್ಟಿ, ಎಡ್ವೊಕೇಟ್ ಶಿಕಾರಿಪುರ ವಿಲಿಯಂ ಪಿಂಟೋ, ಪ್ರೊ|| ಬಿ. ವಿ. ಕೃಷ್ಣಮೂರ್ತಿ ಅವರುಗಳು ಶ್ರೇಯೋಭಾಷಣ ಮಾಡಿದರು. ಅಧ್ಯಕ್ಷರು ಸಂಸ್ಥೆಗೆ ಶುಭಕೋರಿ ಮಾತನಾಡಿದರು. ಅಂತ್ಯದಲ್ಲಿ ಉಡುಪಿ ಶಾಖಾ ಮೆನೇಜರ್ ಶ್ರೀ ಕೆ. ಎ. ಬಾಕರ್ ವಂದನೆಗಳನ್ನರ್ಪಿಸಿದರು.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನ
ಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್
ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ.
ಹಾಲುಕೋಟೆ, ಉಡುಪಿ, ದ. ಕ.

ಒರಿಸ್ಸಾದಲ್ಲಿ ಮೆಹತಾಬ್ ತದಿಗಿಣ

ಒರಿಸ್ಸಾದಲ್ಲಿ ಜನಕಾಂಗ್ರೆಸ್ಸಿನ ಹರಿಕೃಷ್ಣ ಮೆಹತಾಬರು ಸ್ವತಂತ್ರ ಪಕ್ಷದ ಮುಖ್ಯಮಂತ್ರಿ ಸಿಂಗದೇವರನ್ನು ವನವಾಸಕ್ಕೆ ಸಿಲುಕಿಸಿದರು.

ಸ್ವತಂತ್ರ—ಜನಕಾಂಗ್ರೆಸ್ ಸಮ್ಮಿಶ್ರ ಸರಕಾರದಿಂದ ಜನಕಾಂಗ್ರೆಸ್ ಹೊರ ಬಂತು. ಅದರ ಅಭಿಪ್ರಾಯದಂತೆ ಈಗ ಸಿಂಗದೇವರದು ಅಲ್ಪಸಂಖ್ಯಾತರ ಸರಕಾರ; ಅದು ರಾಜಿನಾಮೆ ಕೊಡಬೇಕು.

ಸ್ವತಂತ್ರ ಪಕ್ಷವು ತನಗೆ ಈಗಲೂ ವಿಧಾನ ಸಭೆಯಲ್ಲಿ ಬಹುಮತವಿದೆಯೆಂದು ಹೇಳುತ್ತಿದೆ; ಬೇಕಾದಲ್ಲಿ ಪ್ರದರ್ಶಿಸುತ್ತೇವೆ ಎನ್ನುತ್ತದೆ.

ರಾಜ್ಯಪಾಲ ಅನ್ಸಾರಿಯವರ ಕೈಯಲ್ಲಿ ಚೆಂಡು ಇದೆ. ಅವರು ಆಚೆಗೆಸೆದರೆ ಆಚೆ; ಈಚೆಗೆಸೆದರೆ ಈಚೆ.

ಉತ್ತರ ಪ್ರದೇಶದ ಉದಾಹರಣೆ ಅವರ ಮುಂದೆ ಇದೆ. ರಾಜ್ಯಪಾಲ ಗೋಪಾಲ ರೆಡ್ಡಿಯವರು ಶ್ರೀಮತಿ ಗಾಂಧಿ ಸರಕಾರ ಮೆಚ್ಚಿಸಿಲ್ಲವೆನ್ನುತ್ತಾರೆ. ರಾಜ್ಯಪಾಲ ಅನ್ಸಾರಿಯವರೂ ಏನು ಕ್ರಮ ಕೈಕೊಂಡರೂ ಅದು ಸ್ವ—ಅಭಿಪ್ರಾಯ.

ಒರಿಸ್ಸಾದಲ್ಲಿ ಸಿಂಡಿಕೇಟ್— ಇಂಡಿಕೇಟ್‌ಗಳನ್ನು ಮೆಟ್ಟಿ ನಿಂತದ್ದು ಉತ್ಕಲ ಕಾಂಗ್ರೆಸ್. ಮಾಜೀ ಮುಖ್ಯಮಂತ್ರಿ ನೆಹರೂ ಆಪ್ತ ಬಿಜೂ ಪಟ್ನಾಯಕರೇ ಇದರ ನಾಯಕರು—ಜನಕರು.

ಬಿಜೂ ಮೇಲೆ ನೂರು ರೂ ಆರೋಪಗಳು ಹೊರಿಸಲ್ಪಟ್ಟರೂ ಅವರನ್ನು ಅಪ್ರಿಯ ಗೊಳಿಸಲು ಆಕಾಶ ಪಾತಾಳವೊಂದು ಮಾಡಿದ್ದರೂ ಅವರಿನ್ನೂ ಒರಿಸ್ಸಾದಲ್ಲಿ ನಡೆಯುವ ನಾಣ್ಯ.

ಹರಿಕೃಷ್ಣ ಮೆಹತಾಬರಿಗೆ ಸ್ವತಂತ್ರ ಪಕ್ಷದ ಮೇಲೇಕೆ ಕೋಪ?

ಸ್ವತಂತ್ರ ಪಕ್ಷ ಸಿಂಡಿಕೇಟಿನೊಂದಿಗೆ ಹೊಂದಾಣಿಕೆ ಸಾಧಿಸುತ್ತದೆ?

ಅಥವಾ ಒರಿಸ್ಸಾ ವಿಧಾನಸಭೆಗೂ ಮರುಚುನಾವಣೆಗಳು ನಡೆಯಬೇಕೆಂದ ಪರ ಮನಸ್ಸಿಯೆ?

ಪ್ರಾಯಃ ಅವೆರಡೂ ಅಲ್ಲ.

ಸಿಂಗದೇವ ಸಂಪುಟದ ಮಂತ್ರಿ ಹರಾಬರ ಮೇಲಿನ ಆರೋಪಗಳ ಪರಿಶೀಲನೆಗೆ ಆಯೋಗ ನೇಮಿಸಲು ನಿರ್ಧರಿಸಿದೆ. ಇದರ ಸುಳಿವು ತಿಳಿದೇ ಶ್ರೀ ಮೆಹತಾಬರು ಹೀಗಂದರೆ?

ಸಿಂಗದೇವರು ವಿಧಾನಸಭೆಯನ್ನು ವಿಸರ್ಜಿಸಲು ಸಿದ್ಧರು. ಆದರೆ, ಲೋಕಸಭಾ ಚುನಾವಣೆಗಳ ಜತೆಗೇ ವಿಧಾನ ಸಭೆಗೂ ಚುನಾವಣೆ ನಡೆಯುವ ಬಗ್ಗೆ ರಾಜ್ಯಪಾಲರು ಭರವಸೆ ನೀಡಬೇಕು.

ರಾಜ್ಯಪಾಲರು ಇದಕ್ಕೆ ತಕ್ಷಣ ಸಿದ್ಧರಿದ್ದಂತೆ ತೋರುವುದಿಲ್ಲ. ಹೀಗಾದಲ್ಲಿ ಒರಿಸ್ಸಾದ ಲೋಕಸಭಾ ಸ್ಥಾನಗಳು ಇಂದಿರಾ ಕೈಜಾರಿ ಹೋಗುವುದು ಸುಲಭ.

ಆದುದರಿಂದಲೇ ಹಲವು ವಾದಗಳು - ಸಿಂಗದೇವರಿಗೆ ವಿಧಾನಸಭೆ ವಿಸರ್ಜಿಸುವ ಸಲಹೆ ನೀಡುವ ಅಧಿಕಾರವಿಲ್ಲ.

—ಆಗವರು ರಾಜಿನಾಮೆ ನೀಡಬೇಕು.

—ರಾಷ್ಟ್ರಪತಿ ಆಳಿಕೆ ಹೇರಬೇಕು.

—ಅಂತೂ ಸದ್ಯವೇ ಚುನಾವಣೆ ನಡೆಬೇಕೆಂದೇನೂ ಇಲ್ಲ.

ಆಗ ಸಿಂಗದೇವರ ರಾಜ್ಯಕೀಯ ಮುಖ್ಯ ಗೂಡುಲ ಆರಂಭಿಸುವುದು. ಶ್ರೀ ಮೆಹತಾಬರ ಕೃತಿಯ ಹಿನ್ನೆಲೆ ಇದು.

ರಾಜ್ಯಪಾಲರು ಏನು ಮಾಡುತ್ತಾರೆ? ಕೇಂದ್ರದ ಆದೇಶ ಪಡೆಯಬಯಸುತ್ತಾರೆಯೆ? ಅಥವಾ 'ಸಿಂಗದೇವ್ ಹಟಾವೋ' ಜಪ ಮಾಡುತ್ತಾರೆಯೆ?"

ಬಂಗಾಳದಲ್ಲಿ ಹಿಂಸಾಚಾರಗಳಿಗೆ ಕೊನೆಯಿಲ್ಲದೆ ಹೋದರೂ ಅಶಾಂತಿ ತಾಂಡವ ಮಾಡುತ್ತಿದ್ದರೂ ಅಲ್ಲಿ ವಿಧಾನ ಸಭಾ ಚುನಾವಣೆಗಳನ್ನು ನಡೆಸಲು ಶ್ರೀಮತಿ ಗಾಂಧಿ ನಿರ್ಧರಿಸಿದ್ದಾರೆ.

ಅಂತಹ ಪರಿಸ್ಥಿತಿ ಒರಿಸ್ಸಾದಲ್ಲಿ ಕಾಲ್ಪನಿಕವಾಗಿಯೂ ಇಲ್ಲ.

ಒರಿಸ್ಸಾದಲ್ಲಿ ಹಿಂದೆಗೆಯುವುದೆಂದರೆ, ರಾಷ್ಟ್ರಕೀಯ ರೊಟ್ಟಿಯನ್ನು ಪಕ್ಕಕ್ಕೆ ಮಗುಚಿಸಲು ಅವಕಾಶವಿರಿಸ ಬೇಕೆಂದೆ ಅರ್ಥ.

ಕನ್ನಡದಲ್ಲಿ ಅಪರೂಪವಾದ ಪುಸ್ತಕ

ಸ್ವಪ್ನಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ವಿವರಗಳನ್ನೊಳಗೊಂಡ 'ಕಾರ್ತಿಕೇಯ' ವಿರಚಿತ ಕಿರುಹೊತ್ತಗೆ ಬೆಲೆ 0—50

o o o

ದಿ। ಕವಿಭೂಷಣ ಕೆ. ಟಿ. ವೆಂಕಪ್ಪ ಶೆಟ್ಟರ ಪ್ರಸಂಗ ಪುಸ್ತಕಗಳು

ಸಾಹಸ ಭೀಮ ವಿಜಯ	0–50
ವಾಲಿ ಸುಗ್ರೀವ (ದುರಂತ ಯಕ್ಷಗಾನ ನಾಟಕ)	0-50
ಲಕ್ಷ ಪಗಡೆ	0–40
ಭಾರತದ ಗುರುಕುಲ	0-40
ಭರತೇಶ ದಿಗ್ವಿಜಯ	0–50

ಪ್ರತಿ ಪುಸ್ತಕಕ್ಕೂ ಬುಕ್ ಪೋಸ್ಟಿನಿಂದ ಕಳಿಸಲು 0-30 ಪೈಸೆ ಅಂಚೆ ವೆಚ್ಚ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ. ಕ.

ಓದುವ ಸಮಯವನ್ನು ಪಡೆಯುವುದು ಹೇಗೆ?

ಓದುವುದಕ್ಕೆ ತಮಗೆ ಸಮಯವೇ ಸಿಕ್ಕುವುದಿಲ್ಲವೆಂದು ಅನೇಕ ಜನರು ಯಾವಾಗಲೂ ಗೊಣಗುತ್ತಿರುತ್ತಾರೆ. ಅವರು ಮನಸ್ಸು ಮಾಡಿದರೆ ಓದಲು ಬೇಕಾದ ಸಮಯ ಅವರಿಗೆ ಸಿಕ್ಕೇ ಸಿಕ್ಕುತ್ತದೆ.

ಅವರಿಗೆ ಓದಲು ಬೇಕಾದ ಸಮಯ ಸಿಕ್ಕುವುದು ಹೀಗೆ:—

೧ ಕಡಿಮೆ ಮಾತಾಡಬೇಕು.

೨ ಹೋದಲ್ಲಿ ಬಂದಲ್ಲಿ ಕೈಚೀಲದಲ್ಲಿ ಒಂದು ಒಳ್ಳೆಯ ಪುಸ್ತಕವನ್ನು ಇರಿಸಿಕೊಳ್ಳಬೇಕು.

೩ ಕಲಿದಿಂಬಿನ ಬುಡದಲ್ಲಿ ಯಾವಾಗಲೂ ಒಂದು ಒಳ್ಳೆಯ ಪುಸ್ತಕವನ್ನು ಇರಿಸಿಕೊಂಡಿರಬೇಕು, ನಿದ್ದೆ ಬರದೇ ಇದ್ದರೆ ಓದಬೇಕು.

೪ ಏಳಬೇಕಾದ ಸಮಯಕ್ಕಿಂತ ಪ್ರತಿದಿನವೂ ಹದಿನೈದು ನಿಮಿಷ ಮೊದಲು ಎದ್ದು ಓದಬೇಕು.

೫ ಮನೆಯಲ್ಲಿ ಹೋದಲ್ಲಿ ಬಂದಲ್ಲಿ ಒಂದು ಆಕರ್ಷಕ ಪುಸ್ತಕ ಕಣ್ಣು ಹಾಕಿದಲ್ಲಿ ಕಾಣಬೇಕು.

೬ ಬರುತ್ತೇನೆಂದು ಹೇಳಿ ಸಮಯ ತಪ್ಪಿಸಿ ಬರುವ ಜನರನ್ನು ಎದುರು ನೋಡುವಾಗ ನಿಮ್ಮ ಸಹಾಯಕ್ಕೆ ಒಂದು ಪುಸ್ತಕವನ್ನು ತೆಗೆದುಕೊಳ್ಳಬೇಕು.

೭ ಡಾಕ್ಟರರು, ದಂತವೈದ್ಯರು ಮುಂತಾದವರ ಬಳಿಗೆ ಹೋದಾಗ ಅವರ ಪತ್ರಿಕೆಗಳನ್ನು ಓದದೇ ನೀವು ತೆಗೆದುಕೊಂಡು ಹೋದ ಪುಸ್ತಕವನ್ನೇ ಓದಿರಿ.

೮ ನೀವು ಕಾರಿನ ರಿಪೇರಿ ನಡೆವಾಗ ಕಾಯಬೇಕಾಗಿ ಬಂದಾಗ ನಿಮ್ಮ ಪುಸ್ತಕವನ್ನು ಹೊರಗೆ ತೆಗೆಯಿರಿ.

೯ ಪ್ರವಾಸಕ್ಕೆ ಹೋದಾಗ ನಿಮ್ಮ ಸಹ ಪ್ರವಾಸಿ ನಿಮಗೆ ಸರಿಕೆಯಾಗದೇ ಇರಬಹುದು. ಆಗ ಒಂದು ಒಳ್ಳೆಯ ಪುಸ್ತಕವೆ ಸ್ನೇಹ ನಿಮಗಿರಲಿ.

೧೦ ಬುಕ್‌ಕೇಸಿನಲ್ಲಿರುವ ಎರಡು ಪುಸ್ತಕಗಳಿಗಿಂತ ಕೈಯಲ್ಲಿರುವ ಒಂದು ಪುಸ್ತಕ ಲೇಸು! ('ಪ್ರಪಂಚ')

ಶ್ರೀ ರಾಮಕುಂಜೇಶ್ವರ ಹೈಸ್ಕೂಲಿನ ವರ್ಧಂತ್ಯುತ್ಸವ

ಕಳೆದ ತಾ. ೨೦ರಂದು ಶ್ರೀ ರಾಮಕುಂಜೇಶ್ವರ ಹೈಸ್ಕೂಲಿನ ವರ್ಧಂತ್ಯುತ್ಸವವು ಉಡುಪಿ ಶ್ರೀ ಪೇಜಾವರ ಮತ್ತು ಶ್ರೀ ಸುಬ್ರಹ್ಮಣ್ಯ ಮಠಾಧೀಶರ ಸಮ್ಮುಖದಲ್ಲಿ ದ. ಕ. ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಕೆ. ಎಸ್. ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ದೇಶಸೇವಾ ಧ್ಯೇಯದಿಂದ ವಿದ್ಯಾಭ್ಯಾಸ ಮಾಡಿ ವಿದ್ಯಾರ್ಥಿಗಳು ದೇಶಸೇವಾ ಸೇನಾನಿಗಳಾಗಬೇಕೆಂದು ಶ್ರೀ ಪೇಜಾವರ ಶ್ರೀಗಳವರು ತಮ್ಮ ಭಾಷಣದಲ್ಲಿ ಆಶಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆ ಮೇಲಿನ ಕಾಲದಲ್ಲಿ ಸಹಾ ನಡೆದುಕೊಳ್ಳಬೇಕಾದ ವಿಚಾರಗಳನ್ನು ತಿಳಿಸುತ್ತಾ ಎಲ್ಲಾ ಸಂಸ್ಥೆಗಳ ಅಭಿವೃದ್ಧಿಗೆ ಸರಕಾರದ ಸಹಾಯದಷ್ಟೇ ಊರಿನ ಮಹಜನೀಯರ ಸಹಾಯವೂ ಅಗತ್ಯವೆಂಬುದನ್ನು ಪ್ರತಿಪಾದಿಸಿದರು. ಪ್ರಧಾನಾಧ್ಯಾಪಕ ಶ್ರೀ ಎಸ್. ಜನಿಪ್ರಸಾದ ರಾಯರ ವರದಿವಾಚನ, ಶ್ರೀ ಎಸ್. ನಾರಾಯಣ ಕಲ್ಲೂರಾಯರ ಸಂದೇಶವಾಚನ, ಹೈಸ್ಕೂಲಿನ ಮತ್ತು ನೆರೆಯ ಎಲಿಮೆಂಟರಿ ಶಾಲೆಗಳ ವಿದ್ಯಾರ್ಥಿಗಳಿಗೆ ಆಟೋಟ ಸ್ಪರ್ಧೆಗಳ ಸಿಹಿಯಕ್ಕಾಗಿ ಬಹುಮಾನವಿತರಣ, ಸಭಾಂತ್ಯದಲ್ಲಿ ಶ್ರೀ ಎಂ. ಕೃಷ್ಣಾಚಾರ್ಯರ ಧನ್ಯವಾದ, ಅನಂತರ ನಾಟಕಾಭಿನಯದ ಕೊನೆಗೆ ಶ್ರೀ ಸಿ. ಗಂಗಾಧರರಾಯರ ಧನ್ಯವಾದಗಳೊಡನೆ ಸಮಾರಂಭವು ಕೊನೆಗೊಂಡಿತು.

ಭದ್ರಾವತಿಯಲ್ಲಿ ಕವಿ ಬಡೆಕ್ಕಿಲರಿಗೆ ಸನ್ಮಾನ

ಭದ್ರಾವತಿಯ ಕರ್ನಾಟಕ ಸಂಘ ಮತ್ತು ಕನ್ನಡ ಸಾಹಿತ್ಯ ಸಂಘಗಳ ಸಂಯುಕ್ತ ಆಶ್ರಯದಲ್ಲಿ ತಾ. 31-12-70ರಂದು ನ್ಯೂಟೌನ್ ಶಾರದಾಮಂದಿರದಲ್ಲಿ ಕನ್ನಡದ ಪ್ರಖ್ಯಾತ ಹಿರಿಯ ಕವಿ ಯಕ್ಷಗಾನ ಕಾವ್ಯದಕ್ಷ ದ. ಕ. ಜಿಲ್ಲೆಯ ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟ ಅವರನ್ನು ಸಿವೃತ್ತ ಶ್ರೇಷ್ಠ ನ್ಯಾಯಾಧೀಶ ಶ್ರೀ ಸಿಟ್ಟೂರು ಶ್ರೀನಿವಾಸಯ್ಯನವರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು. ವೇದ ಘೋಷಗಳೊಂದಿಗೆ ಪೂರ್ಣ ಕುಂಭ ಕಲಶದೊಡನೆ ಕವಿ ಶ್ರೀ ಬಡೆಕ್ಕಿಲರನ್ನು ಸ್ವಾಗತಿಸಲಾಯಿತು. ದಾಲತಿಯರು ಆರತಿ ಬೆಳಗಿದ ನಂತರ ಸಮಾರಂಭವು ವಿದ್ವಾನ್ ರಾಮಮೂರ್ತಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು.

ಸನ್ಮಾನ ಸಮಿತಿಯ ಅಧ್ಯಕ್ಷರೂ ಮಾಜಿ ಶಾಸಕರೂ ಆದ ಶ್ರೀ ಬಿ. ವಾಥನಾಚಾರ್ ಅವರು ಸ್ವಾಗತ ಕೋರಿದರು. ಬಡೆಕ್ಕಿಲರ "ಗೀತಾಸಾರ"ದ ಹಲವು ಆಯ್ದ ಕವನಗಳನ್ನು ಶ್ರೀ ಶ್ಯಾಮ ಅಯ್ಯಂಗಾರ್ ಅವರೂ "ಸ್ವಶಕ್ತಿವಾದ"ವನ್ನು ವಿದ್ವಾನ್ ರಾಮಮೂರ್ತಿಯವರೂ ಹಾಡಿದರು.

ಶ್ರೀ ಶ್ರೀಜಾನ್ ಕೃಷ್ಣಮೂರ್ತಿಯವರು ಕವಿಗಳಿಗೆ ಸನ್ಮಾನ ಪತ್ರವನ್ನು ಅರ್ಪಿಸಿ ಮಾತನಾಡುತ್ತಾ 86 ವರ್ಷ ವಯಸ್ಸಿನ ಕವಿ ಶ್ರೀ ಬಡೆಕ್ಕಿಲ ಅವರು ಕನ್ನಡನಾಡು ನುಡಿಗೆ ಸಲ್ಲಿಸಿರುವ ಅಮೋಘ ಸೇವೆಯನ್ನು ಕೊಂಡಾಡಿದರು.

ಕವಿವರ್ಯರಿಗೆ ಚಂದನ ವಿಗ್ರಹವುಳ್ಳ ಕರಂಡವನ್ನು ಅರ್ಪಿಸಲಾಯಿತು. ನೂರಕ್ಕೂ ಹೆಚ್ಚು ಸಾಂಸ್ಕೃತಿಕ, ಕಲಾ ವಾಣಿಜ್ಯ ಹಾಗೂ ಕೈಗಾರಿಕಾ ಸಂಘ ಸಂಸ್ಥೆಗಳು ಕವಿಗಳಿಗೆ ಪುಷ್ಪಹಾರಗಳನ್ನರ್ಪಿಸಿದರು.

ಸಭಾಧ್ಯಕ್ಷ ಶ್ರೀ ಸಿಟ್ಟೂರು ಅವರು, ಕವಿವರ್ಯರ "ಕರ್ನಾಟಕ ಪರಿಸ್ಥಿತಿ" ಗ್ರಂಥವನ್ನು ಬಿಡುಗಡೆಗೊಳಿಸಿದರು.

ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಂ. ಆರ್. ಶಾಸ್ತ್ರಿ ಮತ್ತು ಕಾರ್ಕಳದ ನಾರಾಯಣ ರಾವ್ ಕಲ್ಲೆ ಅವರು ಅಭಿನಂದನಾ ಭಾಷಣ ಮಾಡಿದರು.

ಅಧ್ಯಕ್ಷರು ಮಾತನಾಡಿ, ಸಾಹಿತಿಗಳನ್ನೂ ಕವಿಗಳನ್ನೂ ಸನ್ಮಾನಿಸುವ ಸತ್ಸಂಪ್ರದಾಯವನ್ನಿಟ್ಟುಕೊಂಡಿರುವ ಕೈಗಾರಿಕಾ ಕೇಂದ್ರದ ಜನತೆ ಅಭಿನಂದನಾರ್ಹರೆಂದು ಹೇಳಿದರು.

ತಮ್ಮನ್ನು ಸನ್ಮಾನಿಸಿದ ಬಗ್ಗೆ ಶ್ರೀ ಬಡೆಕ್ಕಿಲರು ಕೃತಜ್ಞತೆ ವ್ಯಕ್ತಪಡಿಸಿದರು.

Gram : VISHWA Tel: 29111

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಪ್ರಜಾ ರಾಜ್ಯ ಸಂಚಿಕೆ

ಖ್ಯಾತ ಲೇಖಕರ ವಿಚಾರ ಪ್ರಚೋದಕ ಲೇಖನ ಕವನಾದಿಗಳಿಂದ ಕೂಡಿ ವೈವಿಧ್ಯ ಪೂರ್ಣವಾಗಿ ತಾ. 26-1-71ರಂದು ಪ್ರಕಟವಾಗುವುದು. ಬೆಲೆ: 0-50 ಪೈಸೆ.

ಕಡಲೆಗಾಳುಗಳು

ಫೆಬ್ರವರಿ ಕೊನೆಯ ವಾರಕ್ಕೆ ಆರಂಭವಾಗುವುದೆಂದು ನಿರೀಕ್ಷಿಸಲಾಗಿದ್ದ ಲೋಕಸಭಾ ಚುನಾವಣೆಗಳು ಮಾರ್ಚ್ ಮೊದಲ ವಾರದಿಂದ ತೊಡಗುತ್ತವೆಯೆಂದು ಎರಡನೆಯ ಸುದ್ದಿ.

—ಇಂಡಿಕೇಟ್ ಅಧ್ಯಕ್ಷ ದೇಶದ ಸಂರಕ್ಷಣಾ ಸಚಿವ ಜಗಜ್ಜೀವನರಾಮರ ಜತೆ ಈ ಅಭಿಪ್ರಾಯಕ್ಕೂ ಇದಕ್ಕೂ ಸಂಬಂಧ ಕಲ್ಪಿಸ ಬೇಡಿ ಎಂದು ಶುದ್ಧ ಸೂಚನೆ.

—ವಿವಿಧ ರಾಜಕೀಯ ಪಕ್ಷಗಳಿಗೆ ಪ್ರಚಾರ ನಡೆಸಲು ಇನ್ನಷ್ಟು ಹೆಚ್ಚಿನ ಅವಕಾಶ ನೀಡುವುದೇ ಹೀಗೆ ಮುಂದರಿಕೆಯ ಉದ್ದೇಶವೆಂದು ಹೇಳಿಕೆ.

—ಫೆಬ್ರವರಿ ತಿಂಗಳ ಚುನಾವಣೆಗಳು ಶುಭಕಾಲವಾಗವೆಂದು ಜ್ಯೋತಿಷಿಗಳ ಸಲಹೆ ಶ್ರೀಮತಿ ಗಾಂಧಿ ಪಡೆದಿದ್ದಾರೆಯೋ ಎಂಬುದೊಂದು ಕುಹಕ ಪ್ರಶ್ನೆ.

—ಕೇಳಿದರೂ ಏಕೆ ಕೇಳಬಾರದು? ಅಧಿಕಾರದಲ್ಲಿ ಲಾಲಸೆಯಿಲ್ಲವೆಂದು ಹೇಳುವುದೂ ಲಾಲಸೆಯಿಂದಲೇ ಆದರವಾದ, ಪಾಪ, ಅವರ ಸಲಹೆ ಕೇಳಿದ್ದರೂ ಕೇಳಿರಬಹುದು.

—ಏನೇ ಆಗಲಿ, ಎಸ್ಸೆನ್‌ರ ಭವಿಷ್ಯ ಸುಳ್ಳಾಗಿಯೇ ಹೋಯಿತು. ಫೆಬ್ರವರಿಯಲ್ಲಿ ಚುನಾವಣೆ ನಡೆಯುತ್ತಿಲ್ಲ.

—ಅವರಿಗೆ ಅಂಜಿಕೆ ಬೇಡ, ಯಾರೋ ಜ್ಯೋತಿಷಿಗಳು ಏಗರಿಂದ ಇತ್ತೀಚಿನವರೆಗೆ ಸಿಂಡಿಕೇಟ್ ನಾಯಕತ್ವದ ಸರಕಾರ ಅಂದಿದ್ದಾರೆ.

—ಆಗ ಇಂದಿರಾಗಾಂಧಿ ಯುವ ಗುಂಪನ್ನು "ಕಾಂಗ್ರೆಸ್" ಮಾಡುತ್ತಾರೆಂದು ಮಾತ್ರ ಅವರು ಹೇಳಲಿಲ್ಲ.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

ಕ್ರಮ ನಂಬ್ರ 24/1969

ಸಿಂಡಿಕೇಟ್ ಬೇಂಕ್ ಮಣಿಪಾಲ — ವಾದಿ,

ಮತ್ತು

N. ಧರ್ಮರಾಜ ಪೂವಣಿ ಕೂಡಾ — ಪ್ರತಿವಾದಿಗಳು

ಇವರೊಳಗೆ

1ನೇ ಪ್ರತಿವಾದಿ, ಧರ್ಮರಾಜ ಪೂವಣಿ, ಅಪ್ಪು ಪಕ್ಕಳರ ಮಗ, ಬೆಳ್ತಂಗಡಿಯಲ್ಲಿ ಈ ಮೊದಲು ನಿವಾಸವಿದ್ದವರು.

ಸದರಿ 1ನೇ ಪ್ರತಿವಾದಿಗೆ—

ವಾದಿ ಬೇಂಕಿನಿಂದ ಪ್ರತಿವಾದಿಗಳು ಮತ್ತು 2ನೇ ಪ್ರತಿವಾದಿಯ ಹೆಂಡ್ತಿ ಜಾಲಿ ಪ್ರತಿಷ್ಠಿತ ಪಟ್ಟ ಅನುಭವಕ ಸಹಾ—ತಾರೀಖು 16—7—1966ರಲ್ಲಿ ರೂಪಾಯಿ 20,000/-ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಆಧಾರದಿಂದ ಓವರ್ ಡ್ರಾಫ್ಟ್ ಮೂಲಕ ಪಡೆದ ಸಾಲದ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರತಕ್ಕ ಅಸಲು ಬಾಕಿ ಬಡ್ಡಿ ಸಹಾ ರುಪಾಯಿ 11,248-22ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಖು 29.1.1971ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ದಿವಸ ಸದರಿ 1ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸದೆಯಿದ್ದ, 1ನೇ ಪ್ರತಿವಾದಿಯ ಗೈರು ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಸಲಾಗಿಯದೆ.

H. Ramanatha Pai

Advocate for Pltf.

ಉಡುಪಿ, ತಾ. 9—1—1971.

—ಸಿಪಾಯಿದಂಗೆಯ ವೇಳೆಯೂ ಜಂಗೆ ಯಶ ದೊರಕುತ್ತದೆ ಎಂದು ಜ್ಯೋತಿಷಿಗಳು ಅಂದಿದ್ದರಂತೆ.

—ಅಂದರೆ, ಸರಿಯಾಗಿ ಕೆಲಸ ಮಾಡಲಿ; ಯಶ ಗಳಿಸುತ್ತಾರೆಂದು ಮಾತ್ರ ಅರ್ಥ ಮಾಡಲಾಯಿತು.

o o o

ಲಂಡನ್ನಿನ ರಾಯಲ್ ವೈದ್ಯಕೀಯ ಕಾಲೇಜಿನ ತಜ್ಞರಿಗೂ ಸಿಗರೇಟಿಗೂ ಎಣ್ಣೆ ಸೀಗೆಯಿಂದ ತೋರುತ್ತದೆ.

—ಸಿಗರೇಟು ಸೇದುವುದನ್ನು ಬಿಡಿ; ಇಲ್ಲದೇ ಜೀವ ಬಿಡಲು ತಯಾರಾಗಿ ಎಂದು ಅವರು ಕರೆ ನೀಡಿದ್ದಾರೆ.

—ಪ್ರತಿ ಸಿಗರೇಟು ಪ್ಯಾಕಿನಲ್ಲಿಯೂ ಜೀವಾಪಹಾರಕ ವಿಷವೆಂದು ಲೇಬಲ್ ಹಚ್ಚಬೇಕು ಎಂದವರ ಸಲಹೆ.

—ಸಿಗರೇಟುಗಳ ಪ್ರಚಾರವನ್ನೇ ನಿಷೇಧಿಸ ಬೇಕು ಎಂಬದು ಮತ್ತೊಂದು ಸಲಹೆ. ಉಳಿದವು ಸಾಧಾರಣ.

—ಇದು ಸಾಧ್ಯವಾದೀತೆ? ಆ ಲಿಡಾಲ್, ಇಲಿ ಪಾಷಾಣ, ಟರ್ಪೆಂಟೈನ್ ಮೊದಲಾದವು ವಿಷವೆಂದು ತಿಳಿದೇ ಜನ ಸೇವಿಸಿ ಸಾಯುವುದು? ಸಿಗರೇಟಿನ ವಿಷ ಮಂದವಾಗಿರಬಹುದು ಮಾತ್ರ.

—ಇಂದಿನ ಜನಜೀವನದ ದುಃಖಾರ್ತ ರಾಜ್ಯದಲ್ಲಿ ದಿನದಿನವೂ ಸತ್ತು ಹುಟ್ಟುತ್ತಿರುವ ಭಾರತೀಯರು "ಸಿಗರೇಟು ಸೇದುವ ಬ್ರಿಟಿಷ"ರನ್ನು ಹೋಲ ಬಹುದೆ?

—ಹಾಗೆಂದ ಓಬಿ ವಯಸ್ಸಿನ ಸಿಗರೇಟ ಚಟಗಳಲ್ಲಿ ಸಾವು ತುಂಬು.

—ಅಂದರೆ ಕಾಲೇಜು ವಿದ್ಯಾರ್ಥಿಗಳು ಸಿಗರೇಟು ಸೇದಿದರೂ ಸಾಯುವ ದಿನ ದೂರವಿದೆಯೆಂದು ತೃಪ್ತಿಯಿಂದ ಹೊಗೆಯುಗುಳಬಹುದು.

o o o

ಆಂಧ್ರಪ್ರದೇಶದ ನಿಜಾಮಾಬಾದ ಜಿಲ್ಲೆಯ ಅಂಗಮ್‌ಪೇಟೆಯೆಂಬ ಹಳ್ಳಿಯಿಂದ ವಿಚಿತ್ರವಾದರೂ ಸತ್ಯಸಂಗತಿಯೆಂದು ಬಂದಿದೆ.

—ಅಲ್ಲಿನ ಭುವನೇಶ್ವರ ಸ್ವಾಮಿ ದೇವಾಲಯದ ಬಳಿಯ ಕಲ್ಲಿನ ಕಂಬವೊಂದು ಮುಟ್ಟದೆಯೇ ತಿರುಗಲಾರಂಭಿಸಿತಂತೆ.

—ಅತ್ಯಂತ ಹಳೆಯದಾದ ಈ ಕಲ್ಲ ಕಂಬವನ್ನು ಇದುವರೆಗೆ ಯಾರೂ ಮುಟ್ಟುವ ಗೋಜಿಗೇ ಹೋಗಿಲ್ಲವೆ?

—ಅಥವಾ ಆಕಸ್ಮಿಕವಾಗಿ ಕಂಬ ಈಗ ತಾನೇ ತಿರುಗತೊಡಗಿತೆ?

—ಇದೂ ಸಾಧ್ಯವೆನ್ನುತ್ತೀರಾ?

—ಕಲಿಕಾಲದಲ್ಲಿ ಏನೆಲ್ಲ ಸಾಧ್ಯವೆಂದು ಪಟ್ಟಿ ಮಾಡುವುದಕ್ಕಿಂತ ಏನೆಲ್ಲ ಅಸಾಧ್ಯವೆಂದು ಲೇಖಿಸುವುದೇ ಸುಲಭ.

—ಏಕೆಂದರೆ, ಈಗ ಎಲ್ಲವೂ ಸಾಧ್ಯ; ಎಲ್ಲವೂ ಪ್ರಗತಿಶೀಲ.

—ಕಲ್ಲಲ್ಲಿ ನಾರಿ ಸೃಷ್ಟಿಸುವ ಶಕ್ತಿ ಒಂದೊಮ್ಮೆ ಕವಿ ಪ್ರಜಾಪತಿಗಳಿಗೆ ಮಾತ್ರ ಮೀಸಲು.

—ಇಂದದು ಶ್ರೀಸಾಮಾನ್ಯನ ಸೊತ್ತು.

—ಬಹುಮತದ ಬಲದಿಂದ ಅಲ್ಪಮತೀಯರನ್ನು ಜೀವಂತ ಸಮಾಧಿ ಮಾಡುತ್ತಿರುವ ಪ್ರಜಾತಂತ್ರಗಳಲ್ಲಿ ಕಲ್ಲಗಂಬವೂ ತಿರುಗುತ್ತದೆ; ಮಾತೂ ಆಡುತ್ತದೆ.

—ಹಿಂದಿನವರು ಅಂದರೆ ಅದು ಮೂಢನಂಬಿಕೆ; ಅಂಧವಿಶ್ವಾಸ; ಅನಾಗರಿಕತೆಯ ಪರಾಕಾಷ್ಠೆ.

—ಇಂದಿನವರು ಅಂದರೆ ಪ್ರಗತಿಶೀಲತೆಯ ಕುರುಹು; ಸಂಶೋಧನೆ!

ಬ್ಯಾಂಕಿಂಗ್ ಪ್ರದರ್ಶನದ ಉದ್ಘಾಟನೆ

ಕೆನರಾ ಬ್ಯಾಂಕಿನವರು ಏರ್ಪಡಿಸಿರುವ 92ನೆಯ ಬ್ಯಾಂಕಿಂಗ್ ಪ್ರದರ್ಶನವನ್ನು ತಾ. 10ರಂದು ಡಾ| ಟಿ. ಎಂ. ಎ. ಪೈಯವರು, ಶ್ರೀ ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ಉಡುಪಿ ಸಂಸ್ಕೃತ ಕಾಲೇಜಿನ ಮಠಾರದಲ್ಲಿ ಉದ್ಘಾಟಿಸಿ ತಮ್ಮ ದೇಶದ ಆರ್ಥಿಕ ಪ್ರಗತಿಯಲ್ಲಿ ಬ್ಯಾಂಕುಗಳ ಜವಾಬ್ದಾರಿಯನ್ನು ವಿವರಿಸಿ ಪ್ರದರ್ಶನವು ಉಪಯುಕ್ತವಾಗಿದೆ ಎಂದರು. ಡಾ. ಪಿ. ಆರ್. ನಾಯಕ್, ಬೈಲೂರು ವಾಸುದೇವ ರಾವ್, ಪಿ. ಶಿವಾಜಿ ಶೆಟ್ಟಿ ಮುಂತಾದವರು ಮಾತನಾಡಿದರು. "ಒಟ್ಟು ಹಣ ಎಷ್ಟು?" ಎಂಬ ಸ್ಪರ್ಧೆಯನ್ನು ಡಾ| (ಶ್ರೀಮತಿ) ಪದ್ಮ ರಾವ್ ಅವರೂ 'ಕೃಷಿ ಕೇಂದ್ರ' ವಿಭಾಗವನ್ನು ಟಿ | ವಿ. ಎಸ್. ಆಚಾರ್ಯರೂ ಉದ್ಘಾಟಿಸಿದರು. ಅಧ್ಯಕ್ಷ ಶ್ರೀ ಮಧ್ವರಾಜರು ನಿರುಪಯುಕ್ತವಾಗಿ ರಾಷ್ಟ್ರದಲ್ಲಿ ಬಿದ್ದಿರುವ ಕೋಟಿಗಟ್ಟಲೆ ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ಬಳಸುವಂತಾಗಬೇಕೆಂದರು. ಆರಂಭದಲ್ಲಿ ಸ್ಥಳೀಯ ಕೆನರಾ ಬ್ಯಾಂಕ್ ಚರ್ಚ್ ರೋಡ್ ಶಾಖೆಯ ಮೆನೇಜರ್ ಶ್ರೀ ಎಂ. ಜೆ. ಹೆಗ್ಡೆಯವರು ಸ್ವಾಗತಿಸಿದ್ದರು. ಪ್ರದರ್ಶನದ ಸುಪರಿಂಟೆಂಡೆಂಟ್ ಶ್ರೀ ಡಿ. ಎನ್. ಎ. ರಾವ್ ರ ಕೃತಜ್ಞತೆಯನ್ನು ಅರ್ಪಿಸಿದರು.

ಪ್ರದರ್ಶನದ ಕುರಿತು ತಾ. 9ರಲ್ಲಿ ಕರೆಯಲಾದ ಪತ್ರಿಕಾ ಗೋಷ್ಠಿಯಲ್ಲಿ ಪ್ರದರ್ಶನದ ಮಾಹಿತಿಯ ವಿವರಿಸಲ್ಪಟ್ಟವು. ಪ್ರದರ್ಶನವು ತಾ. 15ರ ತನಕ ನಡೆಯುವುದು.

ಕನ್ನಡ ಸಾಹಿತ್ಯ ಸಂಘದ ವಾರ್ಷಿಕೋತ್ಸವ

ಭದ್ರಾವತಿಯ ಕನ್ನಡ ಸಾಹಿತ್ಯ ಸಂಘದ ವಾರ್ಷಿಕೋತ್ಸವವು ತಾ. 1ರಂದು ನ್ಯೂಟೌನ್ ಶಾರದಾ ಮಂದಿರದಲ್ಲಿ ರಾಜ್ಯ ವಿಧಾನ ಮಂಡಳದ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಶ್ರೀ ಕೆ. ಹೆಚ್. ಶ್ರೀನಿವಾಸ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಆರ್. ಎಸ್. ರಾಘವೇಂದ್ರಾಚಾರ್ ಅವರು ಸ್ವಾಗತ ಭಾಷಣ ಮಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಜನತೆಯಲ್ಲಿ ಸಾಹಿತ್ಯದ ಅಭಿರುಚಿ ಬೆಳೆದರೆ ನಾಡೂ ನುಡಿಯೂ ಉನ್ನತ ಮಟ್ಟಕ್ಕೇರಲು ಸಾಧ್ಯವಾಗುವುದೆಂದೂ ಈ ಕಾರ್ಯವನ್ನು ಇಂತಹ ಸಾಹಿತ್ಯ ಸಂಘಗಳು ಮಾಡುತ್ತಿರುವುದು ಶ್ಲಾಘನೀಯವೆಂದೂ ಹೇಳಿದರು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

R. I. A. 285/64 O. S. 447/63

Exc, 252/70

ಲಿಗೋರಿ ಅಲ್ಪೋನ್ಸ್ — ಡಿಕ್ರಿದಾರು

J. M. ಅಪ್ಲಿಂಟೊ ಕೂಡಾ — J. Ds.

8ನೇ J. D. ಅಂಬ್ರೋಜ ಪಿಂಟೋ, ಲೋರೆನ್ಸ್ ಪಿಂಟೋರ ಮಗ, ಚಿಕ್ಕಮಗಳೂರು ಜಿಲ್ಲಾ ಬಾಳೆ ಹೊನ್ನೂರು ಸಂಗಮೇಶ್ವರ ಟೌನ್ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಡಿಕ್ರಿದಾರನು J. D. ಲೋರೆನ್ಸ್ ಪಿಂಟೋ ಮೇಲೆ ಪಡೆದ ಮೇಲೆ ಹಿರ್ದ್ದಿದ O.S. 449/63ನೇ ಡಿಕ್ರಿ ಮೇಲೆ ಹಿವಜ್ಜ ವಗೈರೆ ಮೇಲೆ ನಡ್ಸಿದ ಮೇಲಿನ ಅಮ್ಲಜಾರಿಯಲ್ಲಿ ನಿಮಗೆ Order 21. R. 22ರ ನೋಟೀಸು ಬಗ್ಗೆ ಮತ್ತು J. D. ಲೋರೆನ್ಸ್ ಪಿಂಟೋರ ವಾರೀಸುದಾರರನ್ನಾಗಿ ನಿಮಗೆ Sec. 50ರ ಪ್ರಕಾರ ನೋಟೀಸು ಬಗ್ಗೆ ಸದ್ರಿ ಅಮ್ಲಜಾರಿ ನಿಮ್ಮ ಜಾಬ್ತಿ ಬಗ್ಗೆ ತಾರೀಕು 4—2—71ಕ್ಕೆ ಇಟ್ಟದೆ. ಆ ಕುರಿತು ನಿಮಗೆ ಆಕ್ಷೇಪ ಇದ್ದರೆ ನೀವು ತಾರೀಕು 4—2—1971ಕ್ಕೆ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದಾಗಲೀ ವಕೀಲರ ಮೂಲಕವಾಗಲೀ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನ ಮೇಗೆ ಯುಕ್ತಕಂಡ ರೀತಿ ತೀರ್ಮಾನಿಸಲಾದೀತು. ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat

ಡಿಕ್ರಿದಾರ್ರ ಕಡೆ ವಕೀಲ

ಕಾರ್ಕಳ, 6—1—1971.



ಗ್ರಾಮಾಂತರ ವಿದ್ಯುಚ್ಛಕ್ತಿ: ಇಪ್ಪತ್ತು ವರ್ಷಗಳು

ಶ್ರೀ ಎ. ಪಿ. ಸೀತಾಪತಿ
ಕೇಂದ್ರ ಜಲ ಮತ್ತು ವಿದ್ಯುತ್ ಆಯೋಗ.

ದೇಶದ ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಕೈಗೊಂಡ ಪಂಚವಾರ್ಷಿಕ ಯೋಜನೆಗಳಲ್ಲಿ ಗ್ರಾಮೀಣ ವಿದ್ಯುಚ್ಛಕ್ತಿ ಯೋಜನೆಗೆ ಹೆಚ್ಚಿನ ಗಮನ ನೀಡಲಾಗಿದೆ. 25 ವರ್ಷಗಳ ಹಿಂದೆ ದೇಶದಲ್ಲಿ ವಿದ್ಯುಚ್ಛಕ್ತಿ ಉತ್ಪನ್ನ ಕಡಿಮೆ ಪ್ರಮಾಣದಲ್ಲಿತ್ತು. ನಗರ ಪ್ರದೇಶಗಳಿಗೆ ಮತ್ತು ಅದರ ಸುತ್ತಮುತ್ತಲ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ಬೇಕಷ್ಟು ಪ್ರಮಾಣದಲ್ಲಿ ಪೂರೈಸಲು ಸಾಧ್ಯವಾಗುತ್ತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿಯೂ ದಕ್ಷಿಣ ಭಾರತದ ಮೈಸೂರು, ಮದರಾಸು ಮತ್ತು ಕೇರಳ ಹಾಗೂ ಉತ್ತರದ ಪಂಜಾಬು ರಾಜ್ಯಗಳಲ್ಲಿ ಗ್ರಾಮೀಣ ವಿದ್ಯುಚ್ಛಕ್ತಿ ಯೋಜನೆಗಳನ್ನು ರಾಜ್ಯಸರ್ಕಾರಗಳು ಕೈಗೊಂಡವು. 1940ರಷ್ಟು ಹಿಂದೆಯೇ ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಪ್ರಾರಂಭವಾಯಿತು.

ಪಂಚವಾರ್ಷಿಕ ಯೋಜನೆಗಳಲ್ಲಿ ಗ್ರಾಮೀಣ ವಿದ್ಯುಚ್ಛಕ್ತಿಯಿಂದ ಲಭ್ಯವಾಗುವ ಅನುಕೂಲಗಳನ್ನು ಅರಿತುಕೊಂಡು ಆ ಬಗ್ಗೆ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆಹಾರ ಉತ್ಪನ್ನವನ್ನು ಹೆಚ್ಚಿಸಲು, ಗ್ರಾಮೀಣ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು, ಮತ್ತು ಜನಜೀವನ ಮಟ್ಟವನ್ನು ಹೆಚ್ಚು ಸುಧಾರಿಸಲು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯಗಳನ್ನು ಒದಗಿಸಬೇಕು. ಬೇಸಾಯ ಪ್ರಧಾನವಾದ ದೇಶದಲ್ಲಂತೂ ಇದು ಅತಿ ಮುಖ್ಯ. ಗ್ರಾಮೀಣ ವಿದ್ಯುಚ್ಛಕ್ತಿ ಯೋಜನೆಯಿಂದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಜೊತೆಗೆ ಗ್ರಾಮೀಣ ಜನತೆಯು ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನವಚೇತನವನ್ನು ಉಂಟುಮಾಡುವುದು. ಈ ವಿಷಯವನ್ನು ಎಲ್ಲ ರಾಜ್ಯ ಸರ್ಕಾರಗಳೂ ಮನಗೊಂಡಿವೆ. ನೀರಾವರಿ ಯೋಜನೆಗಳನ್ನು ನಿರ್ವಹಿಸಲು ಮತ್ತು ಪಂಪುಸೆಟ್‌ಗಳಿಗೆ ಯಂತ್ರಗಳನ್ನು ಅಳವಡಿಸಲು ವಿದ್ಯುಚ್ಛಕ್ತಿ ಅಗತ್ಯ.

ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ 1947 ಹಿಂದೆ ಕೇವಲ 1500 ಹಳ್ಳಿಗಳಲ್ಲಿ ಮಾತ್ರ ವಿದ್ಯುಚ್ಛಕ್ತಿ ಸೌಲಭ್ಯವಿತ್ತು. ಆದರೆ ಕೇವಲ 25 ವರ್ಷಗಳ ಅವಧಿಯಲ್ಲಿ 77000 ಹಳ್ಳಿಗಳಿಗೆ ಈ ಸೌಲಭ್ಯವನ್ನು ವಿಸ್ತರಿಸಲಾಗಿದೆ. ಅಂದರೆ, ದೇಶದಲ್ಲಿ ಒಟ್ಟು ಜನಸಂಖ್ಯೆಯ ಶೇಕಡ 40 ಮಂದಿಗೆ ಈ ಸೌಲಭ್ಯ ದೊರೆಯುತ್ತಿದೆ. 1947ರಲ್ಲಿ 1500 ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯ ದೊರೆಯುತ್ತಿದ್ದು, 1969ರ ವೇಳೆಗೆ 69,991ಕ್ಕೆ ಏರಿದೆ. ಇದರಿಂದಾಗಿ ನೀರಾವರಿ ವಿದ್ಯುಚ್ಛಕ್ತಿ ಪಂಪುಸೆಟ್‌ಗಳ ಸಂಖ್ಯೆಯೂ ಏರಿದೆ. ಚತುರ್ಥ ಯೋಜನೆಯಲ್ಲಿ 1·25 ದಶಲಕ್ಷ ಪಂಪುಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಉದ್ದೇಶಿಸಲಾಗಿದೆ.

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸುವ ಕಾರ್ಯಕ್ರಮವನ್ನು ಕೈಗೊಳ್ಳುವ ರಾಜ್ಯ ಸರ್ಕಾರಗಳಿಗೆ ಮತ್ತು ವಿದ್ಯುಚ್ಛಕ್ತಿ ಮಂಡಳಿಗಳಿಗೆ ಕೇಂದ್ರ ಸರ್ಕಾರ ಸಾಲ ಮತ್ತಿತರ ರೂಪದಲ್ಲಿ ಆರ್ಥಿಕ ನೆರವು ನೀಡುತ್ತಿದೆ. ವಿದ್ಯುಚ್ಛಕ್ತಿ ಮಂಡಳಿಗಳಿಗೆ ವಾಣಿಜ್ಯ ಬ್ಯಾಂಕುಗಳು ಮತ್ತು ಜೀವ ವಿಮಾ ಕಾರ್ಪೋರೇಷನ್ ಸಂಸ್ಥೆಗಳಿಂದಲೂ ಈ ಸಾಲಭ್ಯ ದೊರೆಯುತ್ತಿದೆ. ಬೇಸಾಯ ಉದ್ದೇಶಗಳಿಗೆ ಬಳಸುವ ವಿದ್ಯುಚ್ಛಕ್ತಿ ಬೆಲೆಯಲ್ಲಿ ರಿಯಾಯತಿಯನ್ನು ತೋರಿಸಲಾಗುವುದು.

ಗ್ರಾಮೀಣ ವಿದ್ಯುಚ್ಛಕ್ತಿ ಯೋಜನೆಗಳಿಗೆ ಬೇಕಾಗುವ ಹಣಕಾಸಿನ ನೆರವು ನೀಡಲು ಸರಕಾರೀ ಕ್ಷೇತ್ರದಲ್ಲಿ ಗ್ರಾಮಾಂತರ ವಿದ್ಯುಚ್ಛಕ್ತಿ ಕಾರ್ಪೊರೇಷನ್ ಸ್ಥಾಪಿಸಲಾಗಿದೆ. ಈ ಸಂಸ್ಥೆಗೆ ಕೇಂದ್ರ ಸರ್ಕಾರದಿಂದ 45 ಕೋಟಿ ಮತ್ತು ಯು.ಎಸ್. ನೆರವಿನಿಂದ 105 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಐದು ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ಇದರಿಂದ ನೆರವು ದೊರೆಯಲಿದೆ.

ಗ್ರಾಮಾಂತರ ವಿದ್ಯುಚ್ಛಕ್ತಿ ಯೋಜನೆಗಳನ್ನು ತೀವ್ರಗೊಳಿಸಲು ವಿದ್ಯುಚ್ಛಕ್ತಿ ಸರಕಾರಿ ಸಂಘಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಮೈಸೂರು, ಗುಜರಾತ್, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಉತ್ತರಪ್ರದೇಶಗಳಲ್ಲಿ ಈ ಉದ್ದೇಶಕ್ಕಾಗಿ ಪ್ರತಿ ರಾಜ್ಯದಲ್ಲಿ ಒಂದರಂತೆ ಐದು ಪ್ರಾಯೋಗಿಕ ಯೋಜನೆಗಳನ್ನು ಕೈಗೊಳ್ಳಲಾಗಿದೆ.

ಕುಶಲ ಕಲೆಗೆ - ಹೊಸ ವಿನ್ಯಾಸ

ಅನಾದಿ ಕಾಲದಿಂದಲೂ ಭಾರತ ಕುಶಲ ಕಲಾವಸ್ತುಗಳಿಗೆ ಹೆಸರಾಗಿದೆ. ಮನುಷ್ಯನ ಕಲ್ಪನೆಯ ಮೇರೆಗೆ ಕುಶಲಕಲಾವಿದರು ಗ್ರಾಮಾಂತರದಲ್ಲಿ ವಾಸಿಸತೊಡಗಿದರು. ಅವರ ಪಾಲಿಗೆ ಕಲೆಯೇ ಜೀವನದ ಸರ್ವಸ್ವವಾಗಿತ್ತು. ಅವರು ತಯಾರಿಸಿದ ವಸ್ತುಗಳು ದೇಶದ ಕೀರ್ತಿಧ್ವಜವನ್ನು ಮೆರೆಸಿದವು.

ಕಾಲಚಕ್ರ ಉರುಳಿತು. ಕೈಗಾರಿಕೆಗಳ ತಂತ್ರಗಳಲ್ಲಿ ಪ್ರಗತಿಯಾಯಿತು. ಆಧುನಿಕ ಯುಗದಲ್ಲಿ ಪದಾರ್ಪಣ ಮಾಡಿದಾಗ ಯಂತ್ರದರ್ಶನವಾಯಿತು. ಹೊಸ ಕೈಗಾರಿಕಾ ತಂತ್ರಗಳೊಂದಿಗೆ ಹಳೆಯ ಕುಶಲಕಲಾವಿದರು ಸ್ಪರ್ಧಿಸಬೇಕಾಯಿತು. ನಮ್ಮ ರಾಷ್ಟ್ರದ ಅಖಿಲಭಾರತ ಹಸ್ತಕುಶಲಕಲಾವಸ್ತುಗಳ ಮಂಡಲಿಯು ಕಲಾವಿದರ ಕೌಶಲವನ್ನು ಎದುರಿಸಿದರು. ಹಸ್ತಕೌಶಲವಸ್ತುಗಳಿಗೆ ಹೊಸ ಹೊಸ ವಿನ್ಯಾಸಗಳನ್ನು ರೂಪಿಸಿದರು. ಸೂಕ್ತವಾದ ಪ್ರಚಾರದ ಮೂಲಕ ಈ ವಸ್ತುಗಳನ್ನು ಜನಪ್ರಿಯಗೊಳಿಸಿದರು. ದೇಶ–ವಿದೇಶಗಳ ಕಲಾವಿದರು ಈ ವಸ್ತುಗಳ ತಯಾರಿಕೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದರು.

ಪ್ರಾದೇಶಿಕ ವಿನ್ಯಾಸ ಕೇಂದ್ರಗಳು ಅಖಿಲ ಭಾರತ ಹಸ್ತಕುಶಲಕಲಾ ಮಂಡಳಿಯು ಪ್ರಾದೇಶಿಕ ವಿನ್ಯಾಸ ಕೇಂದ್ರಗಳ ಮೂಲಕ ಕಾರ್ಯಭಾರವನ್ನು ನಿರ್ವಹಿಸುತ್ತಿದೆ. ಕಲಕತ್ತಾದಲ್ಲಿರುವ ಪ್ರಾದೇಶಿಕ ವಿನ್ಯಾಸ ಕೇಂದ್ರ ಪೂರ್ವ ಭಾರತದ ಹಸ್ತಕುಶಲಕಲಾ ವಸ್ತುಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಈ ಕೇಂದ್ರ ಮುಖ್ಯವಾಗಿ, ಕುಂಬಾರಿಕೆ; ಪ್ರಾಣಿಗಳ ಕೊಂಬುಗಳಿಂದ, ಚಿಪ್ಪುಗಳಿಂದ, ಬಿದಿರು ಮತ್ತು ಹಸ್ತಿದಂತಗಳಿಂದ ಕಲಾಕೃತಿಗಳನ್ನು ತಯಾರಿಸಲು ಗಮನವನ್ನು ಕೊಟ್ಟಿದೆ. ಚಾಪೆ ಹೆಣೆಯುವುದು, ರತ್ನಗಂಬಳಿ ನೇಯುವುದು, ಬೆಳ್ಳಿಯ ಜಾನಪದ ಆಭರಣಗಳನ್ನು ತಯಾರಿಸುವುದು ಇತ್ಯಾದಿ ಕೆಲಸಗಳನ್ನು ಈ ಕೇಂದ್ರವು ಕೈಗೊಂಡಿದೆ. ಈಗ ಅದು ಬಿದಿರಿನ ಕೆತ್ತನೆಯ ಕಲಾಕೃತಿಗಳ ವಿಶೇಷ ಯೋಜನೆಯೊಂದನ್ನು ಹೊಂದಿದೆ. ಪಶ್ಚಿಮ ಬಂಗಾಳದ ಚಾರ್ ಚಂದಾಳಮುಕರಲ್ಲಿ ಈ ಯೋಜನೆಯನ್ವಯ ಸ್ಥಾಪಿಸಲಾಗಿರುವ ಕೇಂದ್ರದಲ್ಲಿ 400 ಜನ ಕಲಾವಿದರು ಸೇವೆ ಸಲ್ಲಿಸುತ್ತಿದ್ದಾರೆ. ಇವರೆಲ್ಲರೂ ಬಿದಿರಿನ ಸಪಾಟಾದ ಎಳೆಗಳಿಂದ ನವೀನ ವಿನ್ಯಾಸದ ಬಳೆಯನ್ನು ತಯಾರಿಸುವುದರಲ್ಲಿ ನಿಷ್ಣಾತರು. ಇದೂ ಅಲ್ಲದೇ ಮನೆ ಕೆಲಸಗಳಿಗೆ ಬೇಕಾಗುವ ಫೈಲ್-ಟ್ರೇಗಳು ಅಂಗಡಿಗಳಿಗೆ ಹೋಗುವಾಗ ಉಪಯುಕ್ತವಾಗುವ ಬಿದಿರಿನ ಬುಟ್ಟಿಗಳು, ಇತ್ಯಾದಿ ಅನೇಕ ವಸ್ತುಗಳಲ್ಲೂ ಅವರ ಕಲಾ ನೈಪುಣ್ಯವನ್ನು ಕೈಚಳಕವನ್ನು ಕಾಣಬಹುದು.

ಕಲ್ಕತ್ತಾದ ಪ್ರಾದೇಶಿಕ ವಿನ್ಯಾಸ ಕೇಂದ್ರ ಹಸ್ತಕುಶಲ ಕಲಾವಿದರಿಗೆ ಹೊಸ–ಹೊಸ ವಿನ್ಯಾಸಗಳನ್ನು ಒದಗಿಸಿದೆ. ಅದು ಕಲಾವಸ್ತುಗಳ ಮಾರಾಟಕ್ಕಾಗಿ ಸಹಕಾರ ಸಂಘಗಳನ್ನು ವ್ಯವಸ್ಥೆಗೊಳಿಸಿದೆ. ಬಂಗಾಳ ಮತ್ತು ಒರಿಸ್ಸದ ಮಾಲೆಗಾರರು ಹಿಂದೂ ಹಬ್ಬಗಳ ಸಂದರ್ಭದಲ್ಲಿ ಬಳಕೆಯಾಗುವ ಅಲಂಕಾರಿಕ ವಸ್ತುಗಳನ್ನು ತಯಾರಿಸುವಲ್ಲಿ ನಿಪುಣರು; ಅವರ ಕಲಾಕೃತಿಗಳಿಗೆ ಸಾಕಷ್ಟು ಪ್ರೋತ್ಸಾಹ ದೊರೆಯುತ್ತಿದೆ. ಮಣ್ಣು ಹೊಳಪಿನ ಪಾತ್ರೆಗಳನ್ನು ತಯಾರಿಸುವುದು, ಚಿಪ್ಪುಗಳಿಂದ ಆಭರಣ ತಯಾರಿಸುವುದು ಇತ್ಯಾದಿ ವೃತ್ತಿಗಳು ಸಾಂಪ್ರದಾಯಿಕವಾಗಿದ್ದರೂ ಬಹಳ ಜನರು ಈ ಕುಶಲಕಲಾ ವೃತ್ತಿಗಳನ್ನು ಆಶೆಯಿಂದ ನಿರ್ವಹಿಸುತ್ತಿದ್ದಾರೆ. ಹಸ್ತಕುಶಲ ಕಲಾಕೃತಿಗಳಿಗೆ ದೇಶ ವಿದೇಶಗಳಲ್ಲಿ ಸಾಕಷ್ಟು ಬೇಡಿಕೆಯಿರುವುದರಿಂದ ಈ ಕಲಾವಿದರಿಗೆ ಹೊಸ ಚೇತನ ದೊರೆತಿದೆ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಶುದ್ಧವಾಗಿಯೂ ತಯಾರಾಗುತ್ತಲಿವೆ
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್.
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

READ &
ADVERTISE IN
NAVAYUGA WEEKLY

NAVAYUGA 14—1—1971
Registered with the Registrar
of News Papers for India
under No. R. N. 3546/'57

REGD. No. [illegible]
LICENCE No. 33
Licensed to Post without Prepayment

ಸಂಬಂಧ ಸೋಡಚೀಟಿಗೆ ಸಮಯ ಸನ್ನಿಹಿತವಾಗಿಲ್ಲ

ಚಕ್ರವರ್ತಿ ರಾಜಗೋಪಾಲಾಚಾರಿಯವರಿಗೆ ದ್ರಾವಿಡ ಮುನ್ನೇತ್ರ ಕಳಗಂನ್ನು ದೂರವಾಗಿಡಲು ಮನಸ್ಸಿಲ್ಲ; ಸ್ವ. ಪಾರ್ಟಿಯ ಸದಸ್ಯರನ್ನು ಬಹಳ ದಿನ ಹಿಡಿಸುವಂತೆಯೂ ಇಲ್ಲ. ಅತ್ತ ಹೋದರೆ ಹುಲಿ, ಇತ್ತ ಹೋದರೆ ಹೊಳೆಯೆಂಬಂತಾಗಿದೆ ಅವರ ಪರಿಸ್ಥಿತಿ. ದ್ರಾ.ಮು.ಕ.ವು ಅವರನ್ನು 'ಹುಲಿ'ಯೆಂದು ಹೇಳುತ್ತಿದ್ದರೂ ಅವರು ಬ್ರಾಹ್ಮಣರಾಗಿರುವ ಕಾರಣ ತರಾಟೆಗೆ ತೆಗೆದುಕೊಳ್ಳದೆ ಬರುತ್ತಿರಲಿಲ್ಲ. ಹಾಗಿದ್ದರೂ ಹಿಂದಿನಿಂದಲೂ ರಾಜಾಜಿಯವರಿಗೆ ಜಸ್ಟೀಸ್ ಪಾರ್ಟಿ, ನಂತರ ದ್ರಾವಿಡ ಕಳಗಂ, ಮುಸ್ಲಿಂ ಲೀಗುಗಳೆಂದರೆ ಒಂದಿಷ್ಟು ಮೃದು ಹೆಚ್ಚು. ದ್ರಾವಿಡ ಕಳಗವಿನ ಪ್ರಗತಿಶೀಲರೇ ದ್ರಾವಿಡ ಮುನ್ನೇತ್ರ ಕಳಗಮಿನವರು. ಅವರನ್ನು ರಾಜಕೀಯಕ್ಕೆಳೆದವರೇ ರಾಜಾಜಿಯವರು. ಅವರನ್ನು ಸಿಂಹಾಸನದಲ್ಲಿ ಕೂತುಕೊಳ್ಳಿಸಿದವರೂ ಅವರೇ. ಸಿಂಹಾಸನವೇರಿದಾಕ್ಷಣ ದ್ರಾ.ಮು.ಕ.ದ ಮುಖ ಬದಲಾಗುತ್ತದೆಯಂತೇ? ಅದು ಲಾಭ-ನಷ್ಟದ ಲೆಕ್ಕ ಹಾಕುತ್ತಿರುತ್ತದೆ. ಆಸನ ಕೈಗೆಟುಕಲು ರಾಜಾಜಿಯವರ ಆಸರೆ ಅವಶ್ಯ ಅಗತ್ಯವಿತ್ತು. ಅದಾದ ಮೇಲೆ ಅದನ್ನು ದೂರ ಮಾಡಿದರು. ಇತ್ತ ಇಂದಿರಾಜಿಯವರ ಕೃಪಾಕಟಾಕ್ಷ ಬಿದ್ದಿರುವಾಗ ಅತ್ತ ಮುದುಗನ ಕನ್ನಡಿ ನೋಟ ಯಾರಿಗೆ ಬೇಕಾಗಿದೆ? ಅದರಿಂದಲೇ ಅವರು ತಮಿಳ್ನಾಡು ವಿಧಾನಸಭೆಯಲ್ಲಿ ಸ್ವತಂತ್ರ ಪಾರ್ಟಿ ಮುಖಂಡನ ಬಳಿ, ಸಂಬಂಧ ಸೋಡಚೀಟಿಯಿಂದ ಸ್ವಪಾರ್ಟಿಗೆ ಸೀಟು ಬಾಕಿಯೆಂದ ಭವಿಷ್ಯ ನುಡಿದರು. ಲಾಭ-ನಷ್ಟ ಲೆಕ್ಕ ಹಾಕುವದರಲ್ಲಿ ರಾಜಾಜಿ ಹಿಂದೆ ಬೀಳುವವರಲ್ಲ. ಸಾಲದೂ ಆಗಿ ತನ್ನ ಸ್ವ.ಪಾರ್ಟಿಯ ಸದಸ್ಯರು ತಕರಾರು ಮಾಡುತ್ತಿದ್ದಾರೆಂದು ಪತ್ರಿಕೆಯ ಮೂಲಕ ದ್ರಾ.ಮು.ಕ.ಕ್ಕೆ ತಿಳಿಸಿದರು.

ರಾಜಾಜಿಯವರ ಸಾಹುಕಾರಿನ ಮಂಡಿಗಳಿಗೆ ಕರುಣಾನಿಧಿ ಆಕರ್ಷಿತರಾಗುವವರಲ್ಲ. ಅವರು ಸ್ವ. ಪಾರ್ಟಿಗೆ ಧೈರ್ಯವಾಗಿಯೇ ಸವಾಲನ್ನಿತ್ತರು. ಅದನ್ನು ನುಂಗಿಕೊಂಡಿರಲು ಸ್ವಪಾರ್ಟಿಯ ಪ್ರಮುಖರಿಗೆ ಸಾಧ್ಯವಾಗಲಿಲ್ಲ. ಅವರು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಲಾರಂಭಿಸಿದರು. ಇದ್ದರೂ ಧೈರ್ಯದಿಂದ ರಾಜಾಜಿಯವರನ್ನೆದುರಿಸುವ ಧೈರ್ಯ ಅವರಿಗಿಲ್ಲ. ಅದನ್ನರಿತುಕೊಂಡಿರುವ ರಾಜಾಜಿ ನಯವಾಗಿ ತನ್ನ ಅನುಯಾಯಿಗಳಿಗೆ ಸಂಬಂಧ ಸೋಡಚೀಟಿ ಹಾಕಲು ಈಗ ಸಮಯ ಸನ್ನಿಹಿತವಾಗಿಲ್ಲವೆಂದು ತಿಳಿಸಿದರು. ಹಾಗೆ ಸಂಬಂಧ ಮುರಿದುಕೊಳ್ಳಕೂಡದು. ಮೈತ್ರಿ ಮುಂದಾಗಬೇಕು. ಈಗ ಬೇರೆ ಹೋಗುವದು ಸರಿಯಲ್ಲ. ದ್ರಾ. ಮು. ಕ.ದೊಂದಿಗೆ ಗೆಳೆತನದಿಂದಿರಬೇಕು. ಕುಂದುಕೊರತೆಗಳ ಕಂಡುಹಿಡಿಸಲು ಹಿಂಜರಿಯಬೇಕಾಗಿಲ್ಲ. ಮಹಾಮೈತ್ರಿ ಸಾಧಿಸಿತೆಂದರೆ ನಂತರ ತಲಾಖ್ ಮಾಡಿಕೊಳ್ಳುವ....

ಸೋಡ ಚೀಟಿಯ ಸಂಶಯ ದ್ರಾ. ಮು. ಕ.ಕ್ಕೆ ಬಂತು. ಅವರಿಗೆ ತನ್ನ ಹಿಂದಿನ ಮಾತು ಜ್ಞಾಪಕಕ್ಕೆ ಬಂತು. ಹಾವನ್ನೂ ಹಾರುವವನನ್ನು ಕಂಡಲ್ಲಿ ಮೊದಲು ಹಾರುವವನನ್ನು ಹೊಡೆಯೆಂಬುದು ಇದೇ ದ್ರಾ. ಮು. ಕ. ದವರು ಹಿಂದೆ ಹೇಳುತ್ತಿದ್ದರು. ಅಧಿಕಾರಕ್ಕೆ ಆಸೆಪಟ್ಟು ಆ [illegible] ರಾಜಾಜಿಯವರೊಂದಿಗೆ ಕೂಡಿಕೊಂಡಿದ್ದರೂ ಕರುಣಾನಿಧಿ ಅದಕ್ಕೆ ಕಟ್ಟುಬೀಳಬೇಕೆಂದೇನಿಲ್ಲ. ಅದರಿಂದ ಅವರೂ ತಮ್ಮ ರಕ್ಷಣೆಯ ಏರ್ಪಾಡಿಗೆ ಮುಂದಾದರು. ಇದುವರೆಗೆ ಅವರಲ್ಲಿ ಜನತಾ ಬೆಂಬಲ, ವಿದ್ಯಾರ್ಥಿಗಳ ಬೆಂಬಲದ ಧೈರ್ಯ ಇತ್ತು. ತಮ್ಮ ಸಾರ್ವಜನಿಕ ಸಭೆಗಳಿಗೆ ಈಗ ಜನರು ಬರುವದಿಲ್ಲ. ಜನರೆ ಸೇರದಿದ್ದ ಜನಸಂಘದ ಸಭೆಗಾದರೂ ಪ್ರಚಾರದ ಪ್ರಭಾವ ಇಲ್ಲದೆ ಜನ ಜಂಗುಳಿ ಸೇರುತ್ತದೆ. ತಮಿಳ್ನಾಡಿನಲ್ಲಿ ಸೇರಿದ್ದ ಜನಸಂಘದ ರಾಜ್ಯ ಅಧಿವೇಶನ ಅವರಿಗೆ ಭಯವನ್ನುಂಟುಮಾಡಿತು. ಅಟಲ ಬಿಹಾರಿ ವಾಜಪೇಯಿಯವರು ಬಂದಿದ್ದರೆಂಬ ಗಾಳಿ ವದಂತಿಯ ಮೇಲೆಯೇ ಜನತಾ ಸಾಗರವೇ ಕೂಡುತ್ತದೆ. ಕಾಮರಾಜರೂ ಮತ್ತೆ ಮುಂದಕ್ಕೆ ಬರುತ್ತಿದ್ದಾರೆ. ಅಕ್ಕಿ, ವಿದ್ಯಾಭ್ಯಾಸ, ಕೆಲಸ....ಸರಕಾರ ನಡೆಸುವದೆಂದರೆ ಚಲಚಿತ್ರದಲ್ಲಿ ಸರಕಾರ ನಡೆಸಿದಂತೆ ನಾಟಕ ಅಲ್ಲ, ಪತ್ರಿಕೆಗಳಿಗೆ ಬರೆದಂತೆ ಅಲ್ಲ. ಟೀಕಿಸುವದು ಬಹಳ ಸುಲಭ ಆಡಳಿತ ನಡೆಸುವದು ಬಹಳ ಕಷ್ಟ. ಇದ್ದರೂ ಸಿಂಹಾಸನವನ್ನು ಬಿಟ್ಟುಕೊಡುವದೇ? ಈ ಸುಖಜೀವನ, ಭೋಗ ಬಾಳು, ವೈಭವ ಇವನ್ನು ಬಿಟ್ಟುಕೊಡುವದೇ? ಆಚಾರ್ಯರು ಸುಮ್ಮಗುಳಿಯುವವರಲ್ಲ. ಕಾಂಗ್ರೆಸ್ಸಿನ ಕಾಲು ಮುರಿದವರು ದ್ರಾ. ಮು. ಕ.ವನ್ನು ದೂರಕ್ಕೆಸೆಯದೆ ಬಿಡುವದುಂಟೇ? ಆಚಾರ್ಯರೆದುರಿಗೆ ಶಿಖಂಡಿಯನ್ನು ನಿಲ್ಲಿಸಿಬಿಟ್ಟರೆ? ದ್ರಾ. ಮು. ಕ.ದವರಿಗೂ ಮಹಾಭಾರತದ ಜ್ಞಾಪಕ ಬರುವದುಂಟು. ಭಾರತಕ್ಕೇನೇ ಭಗವದ್ಗೀತೆಯ ನೆನಪು ಬರುವಾಗ ದ್ರಾ. ಮು. ಕ.ಕ್ಕೆ ಮಹಾಭಾರತದ ಜ್ಞಾಪಕ ಬರುವದರಲ್ಲಿ ಆಶ್ಚರ್ಯವೇನು? ಅದಾಗಲೇ ಇಂದಿರಾಜಿಯವರ ಇಚ್ಛೆಯಂತೆ ನಡೆಯಲು ಕರುಣಾನಿಧಿ ಕರುಣೆ ತೋರಿಸಿದ್ದಾರೆ. ಇನ್ನು ಅವರ ಕಾಂಗ್ರೆಸ್ಸಿನೊಂದಿಗೆ ಕೂಡಿಕೊಂಡರಾಯಿತು. ಆಸಕ್ಕೆ ಬೀಜ ಹಾಕುವಂತೆ ರಾಜ್ಯಸಭಾ ಚುನಾವಣೆ ಸಮಯದಲ್ಲಿ ಒಕ್ಕೂಟದ ಸ್ವತಂತ್ರ ಪಾರ್ಟಿಗೆ ಮತದಾನ ಮಾಡದೆ ಇಂದಿರಾ ಗಾಂಧಿಯ ಚಿದಂಬರ ಸುಬ್ರಹ್ಮಣ್ಯಂರವರಿಗೆ ಮತದಾನ ಮಾಡುವ ಮನಸ್ಸು ಮಾಡಿರುವದು.

"ಭಾರತವನ್ನು ರಕ್ಷಿಸಿರಿ, ಪ್ರಜಾಪ್ರಭುತ್ವವನ್ನು ಕಾಪಾಡಿ"ರೆಂದು ಸಂಸ್ಥಾ ಕಾಂಗ್ರೆಸ್ಸ್ ನ ಕರೆಗೆ [illegible] ವಿರೋಧಿ ಶಕ್ತಿಗಳೂ ಒಂದಾಗಲಾರಂಭಿಸಿದುವು. ಕೇರಳ ಚುನಾವಣೆಯ ಕಾಲದಲ್ಲಿ ಇಂದಿರಾ ಕಾಂಗ್ರೆಸ್ಸ್ ಕಮ್ಯುನಿಸ್ಟ್ ಪಕ್ಷಗಳು, ಮುಸ್ಲಿಂ ಲೀಗು, ಸಂಯುಕ್ತ ಸೋಷ್ಯಾಲಿಸ್ಟ್ ಪಾರ್ಟಿ, ಪ್ರಜಾಸೋಷ್ಯಾಲಿಸ್ಟ್ ಪಾರ್ಟಿ, ರಿವಲ್ಯೂಶನರಿ ಸೋಷ್ಯಾಲಿಸ್ಟ್ ಪಾರ್ಟಿ ಇತ್ಯಾದಿ ಇತ್ಯಾದಿ ಒಂದಾಗಿದ್ದವು. ಆ ಮೈತ್ರಿ ಮುಂದುವರಿಯಿತು. ತಮಿಳ್ನಾಡಿಗೂ ಅದು ಹಬ್ಬಿತು. ನವಂಬರಿನಲ್ಲಿ ಅವು ಒಂದಾಗಿ ಸೇರುವ ಯೋಜನೆ ಮಾಡಿದವು. ಚಳಿಗಾಲದಲ್ಲಿ ಬೆಚ್ಚನೆಯ ಜ್ಞಾಪಕ ಬರುವಂತೆ, ಆಗಲೇ [illegible] ಅವು ಬೆಚ್ಚಗಾಗಿ ಒಂದಾಗಲು ನಿರ್ಧರಿಸಿದುವು. ಹೊಸ ಕಾಂಗ್ರೆಸ್, ರಷ್ಯಾದವರ ಕಮ್ಯುನಿಸ್ಟ್ ಪಾರ್ಟಿ, ಪಿ. ಎಸ್. ಪಿ. ಪಾರ್ಟಿ, ಮುಸ್ಲಿಂ ಲೀಗು, ಫಾರ್ವರ್ಡ್ ಬ್ಲಾಕ್, ತಮಿಳ್ ಅರಸು ಕಳಗಂಗಳೊಂದಿಗೆ ದ್ರಾ. ಮು. ಕ.ವು ಚುನಾವಣಾ ಒಡಂಬಡಿಕೆಯನ್ನು ಮಾಡಿಕೊಂಡಿತು. ಇದು ಅಲ್ಲಿನ ಮುಂದಿನ ನಗರಸಭೆ ಚುನಾವಣೆಗಾಗಿ. ಈ ಒಪ್ಪಂದದಂತೆ ಸ್ಪರ್ಧಿಸಬೇಕಾದ ಹೆಚ್ಚಿನ ಸ್ಥಾನಗಳಿಗೆ ದ್ರಾ. ಮು. ಕ. ಅಭ್ಯರ್ಥಿಗಳನ್ನು ನಿಲ್ಲಿಸುತ್ತದೆ. ಇನ್ನುಳಿದ [illegible] ಅಂಶವೆಂದರೆ [illegible] ವಲ್ಲಿ ಮುಸ್ಲಿಂ ಲೀಗಿನ ಸದಸ್ಯರು ಅಧಿಕ ಸಂಖ್ಯೆ[illegible] ಹೊಸ ಕಾಂಗ್ರೆಸ್ಸಿಗೆ [illegible] ಅದರಿಂದಲೇ [illegible] ಇಲ್ಲದಿದ್ದಲ್ಲಿ ಅದು ಸಿಗುವ ಭರವಸೆ ಏನಿದೆ? ಕಾಮರಾಜರ [illegible] ಇಂದಿರಾ ಕಾಂಗ್ರೆಸ್ಸ್ [illegible] ದ್ರಾ. ಮು. ಕ. ಬಿಟ್ಟಂದ ಪಕ್ಷಗಳ [illegible] ತಮ್ಮ ಭುಜಬಲದಿಂದಲೇ ಎಲ್ಲಾ ಸ್ಥಾನಗಳಿಗೂ ಹೋರಾಡಬೇಕೆಂದು ದ್ರಾ.ಮು.ಕ.ದಲ್ಲಿ ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರತ್ಯೇಕವಾಗಿ ಚುನಾವಣಾ ಕಣಕ್ಕಿಳಿಯುವ ಆಸೆ ಇದ್ದಿಲ್ಲವೆಂದು ದ್ರಾ.ಮು.ಕ. ಧುರೀಣರು ಅವರಿಗೆ ತಿಳಿಸಿದರು. ಈ ಎಲ್ಲ ಪಕ್ಷಗಳು ಸಂಯುಕ್ತ ಸೋಷ್ಯಾಲಿಸ್ಟ್ ಪಾರ್ಟಿ ಹಾಗೂ ಚೈನೀಸ್ ಪರ [illegible] ಕಮ್ಯುನಿಸ್ಟ್ ಪಾರ್ಟಿ (ಮಾರ್ಕ್ಸ್ ವಾದಿ) ಗಳಿಗೂ ಅವಕಾಶ ನೀಡಿತ್ತಿದೆ [illegible] ಸೇರುವ ಸಂಭವ ಇಲ್ಲ. ಸಂಯುಕ್ತ ಸೋಷ್ಯಾಲಿಸ್ಟ್ ಪಾರ್ಟಿ ಹಿಂದಿನ ನೈಜ ಘಟನೆಗಳಿಂದ, ಕಹಿ ಅನುಭವಗಳಿಂದ ಪಾಠ ಕಲಿತುಕೊಂಡಿದೆ. ದ್ರಾ. ಮು. ಕ. ಅದೆಂತು ತಮಗೆ ಮೋಸ ಮಾಡಿತೆಂಬುದನ್ನು ಅವರು ಮರೆತು ಬಿಟ್ಟಿಲ್ಲ. ಇದ್ದರೂ ಇದು ರಾಜಕೀಯ. ಎಸ್. ಎಸ್. ಪಾರ್ಟಿ ಇಂದಿರಾಜಿಯವರೊಂದಿಗೆ ಸೇರಲೂ ಸಿದ್ಧವಾಗಿರುವಾಗ ದ್ರಾ. ಮು. ಕ. ದೊಂದಿಗೆ ಪುನಃ ಸೇರಿದರೂ ಆಶ್ಚರ್ಯವೇನಿಲ್ಲ. ಮಾರ್ಕ್ಸ್ ಕಮ್ಯೂನಿಸ್ಟ್ ಪಾರ್ಟಿಯ ವಿಷಯ ಹಾಗಲ್ಲ. ರಷ್ಯಾದ ಬಣ ಇರುವಲ್ಲಿ ಚೈನೀಸ್ ಬಣ ಇರುವದಿಲ್ಲ. ಇದುವೇ ಅವರ ಅತಿ ಹೋರಾಡಿದ ಪಾರ್ಟಿಗಳಿಗಿಂತ ಅಧಿಕ ಸ್ಥಾನಗಳನ್ನು ಪಡೆದುಕೊಳ್ಳುವದೇ ಅವರ ಯುಕ್ತಿ. ಇದನ್ನು ಮುಸ್ಲಿಂ ಲೀಗು ಅರ್ಥಮಾಡಿಕೊಂಡು ಅದೂ ಭಿನ್ನ ಭಿನ್ನ ಹೆಸರಿನಿಂದ ಕಣಕ್ಕಿಳಿದಿದೆ. ಹಾಗೂ ರಾಜಾಜಿಯವರಿಗೆ ಸೋಡ ಚೀಟಿ ಸಮಯ ಸನ್ನಿಹಿತವಾಗಿಲ್ಲವಾದರೂ ದ್ರಾ. ಮು. ಕ. ವೇ ತಲಾಖ್ ಮಾಡಿಕೊಂಡಿತು. ಅಯ್ಯೋ ಪಾಪ, ರಾಜಾಜಿ [illegible]

— ಶಿವಶಂಕರ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303, 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

Edited, Printed & Published by K. H. Shetty at the Navayuga Press, Udipi, S. India.

ನವಯುಗ



ಪ್ರಜಾರಾಜ್ಯ ವಿಶೇಷಾಂಕ ೧೯೭೧

೫೦ ಪೈಸೆ

NAVAYUGA

REPUBLIC DAY SPECIAL 1971

CANARA BANK DOES IT AGAIN

Expansion without Parallel During 1970

51 New Branches Opened For Business On a Single Day, Wednesday, December 23, 1970, All Over India.

501 Branch-Target For the Year Exceeded. As at end of December 1970, 504 Branches All Over India.

136 Branches Opened During The Year.

CANARA BANK

HEAD OFFICE : BANGALORE-2

Grams: 'STENCO' Mysore

Phone: OFF: 21810 RES: 20865

STANDARD ENGINEERING CO.

ENGINEERS, CONTRACTORS AND CONSULTANTS

OPPOSITE PRABHA TALKIES

MYSORE-1

DISTRIBUTORS

KIRLOSKAR PRODUCTS MYSORE, MANDYA & COORG DISTRICTS PREMIER IRRIGATION EQUIPMENTS

BRANCHES

EASTERN EXTENSION ROAD MANDYA. PHONE: 232

BIG BAZAAR STREET CHAMRAJNAGAR. PHONE: 66

DEALING IN: KIRLOSKAR ELECTRIC MOTORS, STARTERS, TRANSFORMERS, GENERATORS, ALTERNATORS, AUTOMATIC ON MAINS FAILURE SETS, DIESEL OIL ENGINES, DOMESTIC, AGRICULTURAL & INDUSTRIAL PUMPS, VALVES, AGRICULTURAL IMPLEMENTS, SUGARCANE MILLS, GROUNDNUT DECORTICATORS, LATHES, MACHINE TOOLS, PREMIER SPRINKLER IRRIGATION EQUIPMENTS, RUBBER HOSES, 'V' BELTS, BELTINGS, GIPIPES & FITTINGS, ELECTRICAL GOODS & PHILLIPS RADIOS.

ELECTRICAL INSTALLATIONS OF LOW, MEDIUM & HIGH VOLTAGE UNDERTAKEN.

ಪ್ರಜಾರಾಜ್ಯ ವಿಶೇಷಾಂಕ
1971

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 20

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವುದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮಗೆ ಕೈಸೇರಬೇಕು.

ಮುಖ ಚಿತ್ರ

1970ರ ಅತ್ಯುಚ್ಚ ಮೀನು ಮತ್ತು ಮೀನಿನಉತ್ಪನ್ನಗಳ ರಫ್ತಿಗಾಗಿ ಮೀಸಲಾಗಿಟ್ಟ ಪ್ರಧಾನ ಫಲಕ ಪ್ರಶಸ್ತಿಯನ್ನು ಮಲ್ಪೆಯ ಕೊರೊನೆಟ್ ಕ್ಯಾನಿಂಗ್ ಕಂಪೆನಿಯು ಮೂರನೆಯ ವರ್ಷವೂ ಅನುಕ್ರಮವಾಗಿ ಗಳಿಸಿದ್ದು, ಮೈಸೂರಿನ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಕಂಪೆನಿಯ ಮಾಲಕರೂ ಮಾಜಿ ಶಾಸಕರೂ ಆದ ಶ್ರೀ ಮಲ್ಪೆ ಮಧ್ವರಾಜರಿಗೆ ತಾ. 2-1-1971ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ನೀಡುತ್ತಿರುವುದು.

ನವಯುಗ

ಎಚ್ಚರ, ಎಚ್ಚರ ಗೆಳೆಯಾ, ಎಚ್ಚರ

ಪ್ರಜಾಪ್ರಭುತ್ವ ದಿನ ಈ ಹಿಂದಿನ ಇಪ್ಪತ್ತು ವರ್ಷಗಳಂತೆ ಇಂದೂ ಬಂದಿದೆ; ಪ್ರಜೆಗಳಿಗೆ ತಮ್ಮ ಪ್ರಭುತ್ವದಲ್ಲಿ ತಮ್ಮ ಕರ್ತವ್ಯ ಮತ್ತು ಅಧಿಕಾರಗಳೇನೆಂಬುದನ್ನು ಅದು ನೆನಪಿಸಿ ಕೊಡುತ್ತದೆ. ಆದರೆ, ನಮ್ಮ ಪ್ರಜೆಗಳೂ ಪ್ರಜಾಪ್ರಭುಗಳೂ ಅಧಿಕಾರಗಳನ್ನು ಮೆಚ್ಚಿದಂತೆ ಕರ್ತವ್ಯಗಳಿಗೆ ಅಂಟಿ ಕುಳಿತುಕೊಳ್ಳುವ ಅಭ್ಯಾಸದಿಂದ ದೂರ ದೂರ–ಬಹುದೂರ ಸರಿಯುತೊಡಗಿದ್ದಾರೆ; ಪರಿಣಾಮವಾಗಿ ನಮ್ಮದು ಪ್ರಜಾಪ್ರಭುತ್ವವೆಂದಾಡಿಕೊಳ್ಳಬೇಕಾದರೆ, ನೂರು ಬಾರಿ ಯೋಚಿಸಬೇಕಾದ ಪರಿಸ್ಥಿತಿ ಮೂಡಿಬಂದಿದೆ. "ಬಹುಮತ"ದ ಹೆಸರಿನಲ್ಲಿ ನಡೆಯುತ್ತಿರುವ ಹಿಂಸಾಕಾಂಡವನ್ನು, ಶೋಷಣೆಯ ವ್ಯವಸ್ಥಿತ ಕಾರ್ಯಕ್ರಮವನ್ನು, ಅನ್ಯಾಯಗಳನ್ನು ಪ್ರಜೆಗಳು ಸಹಿಸಿಕೊಂಡು ತೆಪ್ಪಗೆ ಕುಳಿತಿರಬೇಕಾದ ಪರಿಸ್ಥಿತಿ ಮೂಡಿದರೆ, ಬಾಯಿತೆರೆದವರನ್ನು 'ಪ್ರತಿಗಾಮಿ' ಎಂದು ಹೆಸರಿಸುವುದಾದರೆ, ಇದು ಪ್ರಜಾಪ್ರಭುಗಳ ಪ್ರಭುತ್ವ ಮಾತ್ರವಾಯ್ತು. ಈ ಪ್ರಜಾಪ್ರಭುಗಳಾದರೂ ತನ್ನ ಜೀವ ರಕ್ಷಣೆಗೆ ಬಣ್ಣ ಬದಲಾಯಿಸುತ್ತಿರುವ ಓತಿಯಂತೆ, ಅಧಿಕಾರ ಪ್ರಾಪ್ತಿಗಾಗಿ, ಸ್ವಾರ್ಥಸಿದ್ಧಿಗಾಗಿ ರಾಜ್ಯಕೀಯದಲ್ಲಿ ಪಕ್ಷಾಂತರ ನಿರತರಾಗುತ್ತಲಿದ್ದಾರೆ. ಈ ರೀತಿಯ ಪ್ರಭುಗಳು ಪ್ರಜೆಗಳನ್ನು ಸುಲಿದು, ಹಿಂಸಿಸಿ, ವಂಚಿಸಿ, ಮೋಸಗೊಳಿಸಿ, ಛದ್ಮವೇಶಧಾರಿಗಳಾಗಿ ತಮ್ಮ ವ್ಯಕ್ತಿಗತ ಹಿತಸಾಧಕರಾಗುತ್ತಿದ್ದಾರೆ; ಜನಹಿತಕ್ಕೆ ಎಂದೋ ತಿಲಾಂಜಲಿ ನೀಡಿದ್ದಾರೆ.

ಈ ವರ್ಷದ ಪ್ರಜಾಪ್ರಭುತ್ವ ದಿನಾಚರಣೆಯ ಮುನ್ನೆಲೆಯಲ್ಲಿ ಲೋಕ ಸಭೆಗೆ, ಒಂದೆರಡು ರಾಜ್ಯಗಳಲ್ಲಿ ವಿಧಾನ ಸಭೆಗೂ ಚುನಾವಣೆಗಳು ನಡೆಯಲಿವೆ ಪ್ರಧಾನಿ ಶ್ರೀಮತಿ ಗಾಂಧಿಯವರು ತನ್ನ ಪ್ರಗತಿಪರ ಕಾರ್ಯಕ್ರಮಗಳಿಗೆ ಜನತೆಯ ನೇರ ಆದೇಶ ಪಡೆಯುವ ಇರಾದೆಯಿಂದ ಲೋಕ ಸಭೆಯನ್ನು ವಿಸರ್ಜಿಸಿದ್ದರಿಂದ ಇದು ಅಗತ್ಯವಾಗಿದೆ. ಪ್ರಜೆಗಳಿಗೆ ತಮ್ಮ ಪ್ರತಿನಿಧಿಗಳನ್ನು ಆಯುವ ಅವಕಾಶ ಒಂದು ವರ್ಷ ಮೊದಲೇ ಲಭ್ಯವಾಗಿದೆ. ೧೯೬೭ರಲ್ಲಿ ಆರಿಸಿದ ಪ್ರತಿನಿಧಿಗಳು ದಿಲ್ಲಿಯಲ್ಲಿ ಆಡಿದ "ದಿ ಗ್ರೇಟ್ ಸರ್ಕಸ್"ನ ಸ್ಪಷ್ಟ ಚಿತ್ರವಿಂದು ಜನರ ಮುಂದಿವೆ. ದೇಶದ ಹಿರಿಯ ಪ್ರಭಾವಶಾಲಿ ರಾಜ್ಯಕೀಯ ಪಕ್ಷ ಕಾಂಗ್ರೆಸ್ಸು ಕೆಲವು ಕುಟಿಲಮತಿ ಮುತ್ತವರ ಅನುಯಾಯಿಗಳಿಂದ ಒಡೆದು ಹೋದ ಮೇಲೆ ದೇಶದಲ್ಲಿ ತೀವ್ರ ಅರಾಜಕತೆಯೇ ಹರಡಿದಂತಿದೆ. ಇಂಡಿಕೇಟ್ ನೀತಿಯಿಂದಾಗಿ, ಕಮ್ಯುನಿಸ್ಟರೊಂದಿಗೆ ಅದರ ಸಖ್ಯದಿಂದಾಗಿ ಉತ್ಪಾದನಾ ರಂಗವು ಪಾತಳಿಗೆ ಇಳಿದು ಹೋಯಿತು; ಕೃಷ್ಯುತ್ಪನ್ನಗಳು ಸಾಕಷ್ಟಿದ್ದರೂ ಹಂಚಿಕೆಯ ಅವ್ಯವಸ್ಥೆಗಳಿಂದಾಗಿ ಆಹಾರಧಾನ್ಯಗಳ, ಜೀವನೋಪಯೋಗಿ ಆವಶ್ಯಕ ವಸ್ತುಗಳ ಮತ್ತು ಕೈಗಾರಿಕೋತ್ಪನ್ನಗಳ–ಹೀಗೆ ಎಲ್ಲವುಗಳ ಬೆಲೆಯೇರಿತು. ಹಣದುಬ್ಬರದಿಂದಾಗಿ ರೂಪಾಯಿಯು ಬೆಲೆ ಕುಸಿದು ಹೋಯಿತು. ಹೀಗಾಗಿ ಶ್ರೀ ಸಾಮಾನ್ಯನ ಜೀವನ ದಿನದಿಂದ ದಿನಕ್ಕೆ ದುರ್ಭರವಾಗುತ್ತಲೇ ಬರುತ್ತಿದೆ. ಬೆಲೆಯೇರಿಕೆಯನ್ನು ತಡೆಯಲು ಆವಶ್ಯಕ ಕ್ರಮ ತೆಗೆದುಕೊಳ್ಳುತ್ತೇವೆಂದು ಪ್ರಜಾಪ್ರಭುಗಳು ಉಗ್ಗಡಿಸಿಯೇ ತೃಪ್ತಿ ಪಡುತ್ತಾರೆ ಹೊರತು, ಯಾವ ಕ್ರಮವೂ ಜ್ಯಾರಿಗೆ ಬಂದಿಲ್ಲ; ಬಂದ ಕ್ರಮವಾದರೂ ಬೆಲೆಯೇರಿಕೆಯನ್ನು ತಡೆಯಲು ಸಮರ್ಥವಾಗಿಲ್ಲ.

ಕೇಂದ್ರದ ಪ್ರಜಾಪ್ರಭುಗಳು ಕಳೆದೊಂದು ವರ್ಷವಿಡಿ ತಮ್ಮಡಿ ಬೇರು ದೃಢಪಡಿಸುವಲ್ಲಿ, ತಮ್ಮ ವಿರೋಧಿಗಳನ್ನು ನೆಲಸಮ ಮಾಡುವಲ್ಲಿ ತಮ್ಮ ಅಮೂಲ್ಯ ಸಮಯವನ್ನು ಕಳೆದರೆಂಬುದು ಎಲ್ಲರಿಗೂ ಗೊತ್ತು. ದೇಶದ ಆಗು–ಹೋಗುಗಳ ಬಗ್ಗೆ ಚಿಂತಿಸಲು ಅವರಿಗೆ ಅವಕಾಶವೊದಗಲಿಲ್ಲ. ತಮ್ಮ ಶಕ್ತಿಯನ್ನು ಹೆಚ್ಚಿಸಲು ಅವರು ನಕ್ಸಲೀಯರು, ಕಮ್ಯುನಿಸ್ಟರು, ಮುಸ್ಲಿಂ ಲೀಗಿಗಳು, ಡಿಎಂಕೆಗಳು ಹೀಗೆ ಅಲ್ಪಮತೀಯರನ್ನು ಅಪ್ಪಿಕೊಂಡರು; ಅವರಿಗೆ ನರ್ತಿಸಲು ರಂಗಭೂಮಿಯನ್ನು ಏರ್ಪಡಿಸಿಕೊಟ್ಟರು. ಈ ಭಸ್ಮಾಸುರರಿಂದ ಶ್ರೀಸಾಮಾನ್ಯರೀಗ ಭಸ್ಮವಾಗುತ್ತಲಿದ್ದಾರೆ. ಇಂಡಿಕೇಟು ಸೃಷ್ಟಿಸಿದ ಈ ಭಸ್ಮಾಸುರನೀಗ ಅದನ್ನೇ ನುಂಗ ಬರುತ್ತಿದೆ; ಜನ ಹಾಹಾಕಾರವೆಬ್ಬಿಸುತ್ತಿದೆ.

ದೇಶದ ಒಳಗೆ ಜನ ಜನವೂ ಅತೃಪ್ತಗೊಂಡಿದೆ; ರಾಜ್ಯಕೀಯ ಅತ್ಯಂತ ಕಳಪೆಯಾಗುತ್ತ ಬಂದಿದೆ; ಪ್ರಜೆಗೆ ತನ್ನ ವಿತ್ತ ಜೀವಿತಗಳೆಲ್ಲವೂ ಅರಕ್ಷಣೀಯವೆಂಬ ಗೊಂದಲದ ವಾತಾವರಣವೀಗ ಉತ್ಪನ್ನವಾಗಿದೆ. ಕೇಂದ್ರದ ಯಾವ ನೀತಿಯೂ ಇಂದು ಜನರಿಗೆ ತೃಪ್ತಿ ತಂದು ಕೊಡುತ್ತಿಲ್ಲ. ವಿದೇಶಗಳಲ್ಲಾದರೂ ಭಾರತದ ಬಗ್ಗೆ ಸದ್ಭಾವನೆ ಮಾಯವಾಗುತ್ತಲೇ ಇದೆ. ದೇಶವು ಅಮೆರಿಕೆ—ರಷ್ಯಗಳೆರಡನ್ನೂ ಒಲಿಸಿಕೊಂಡಿದ್ದ ತಟಸ್ಥರಲ್ಲಿ ಅಗ್ರ ಪೂಜೆಗೊಂಡಿದ್ದ ಕಾಲವೊಂದಿತ್ತು. ಆಫ್ರೇಷ್ಯಾದ ದೇಶಗಳಲ್ಲಿ ಭಾರತದ ಅಭಿಪ್ರಾಯಕ್ಕೆ ಮಾನ್ಯತೆಯಿತ್ತು. ಇಂದು ಅಂತಹ ಸ್ಥಾನಮಾನ ನಮಗೆ ಉಳಿದಿಲ್ಲ. ದೊಡ್ಡ ಆದರ್ಶಗಳೇನೋ ನಮ್ಮಲ್ಲಿವೆ ನಿಜ; ಆದರೆ, ಆ ಆದರ್ಶಗಳು ಕಾಗದ ಪತ್ರಗಳಲ್ಲೇ ಉಳಿದಿವೆ. ಅವುಗಳ ಅಕ್ಷರಗಳೂ ಮಾಸಿ ಹೋಗಿವೆ. ಅದನ್ನು ನಾವೂ ಓದಲಾರೆವು; ಪರಂಪರಾಪ್ರಾಪ್ತವಾದಂತೆ ಅವನ್ನು ಹಾಡುವುದರಲ್ಲೇ ನಾವು ತೃಪ್ತರಾಗುತ್ತೇವೆ. ಚೀನಾ ಮತ್ತು ಪಾಕಿಸ್ತಾನಗಳು ನಮ್ಮನ್ನು ಇನ್ನೂ ಸಂಶಯ ದೃಷ್ಟಿಯಿಂದಲೇ ನೋಡುತ್ತಿವೆ. ಅಮೆರಿಕೆ–ರಷ್ಯಗಳಾದರೂ ನಮ್ಮನ್ನು ಸಂಪೂರ್ಣ ನಂಬದಂತಹ ಸನ್ನಿವೇಶ ನಿರ್ಮಾಣವಾಗಿದೆ. "ಪ್ರಗತಿಪರ ಕಾರ್ಯಕ್ರಮ"ದ ಹೆಸರಿನಲ್ಲಿ ನಾವು ಕಮ್ಯುನಿಜಂಗೆ ಹತ್ತಿರ ಬರುತ್ತಿದ್ದೇವೆ; ಆದರೂ ಇದು ಕಮ್ಯುನಿಜಂ ಎಂದು ಒಪ್ಪಿಕೊಳ್ಳಲು ನಾವು ಸಿದ್ಧರಿಲ್ಲ. ಹಾಗಾಗಿ ನಮಗೆ ರಶ್ಯವೂ ಇಲ್ಲ; ಅಮೆರಿಕೆಯೂ ಇಲ್ಲ.

ಗತ ವರ್ಷದ ಇನ್ನೊಂದು ವೈಶಿಷ್ಟ್ಯ ಶಾಸಕಾಂಗ–ನ್ಯಾಯಾಂಗಗಳ ಹೊಡೆದಾಟ. ಶ್ರೀಮತಿ ಗಾಂಧಿಯವರು ಬ್ಯಾಂಕ್ ರಾಷ್ಟ್ರೀಕರಣ ಸಾಧಿಸಿದರು; ಇದು ಸಂವಿಧಾನ ವಿರೋಧಿಯೆಂದು ನ್ಯಾಯಾಂಗ ಘೋಷಿಸಿತು. ಕೂಡಲೇ ಲೋಪದೋಷಗಳನ್ನು ತಿದ್ದಿಕೊಂಡು ಮತ್ತೆ ರಾಷ್ಟ್ರೀಕರಣವನ್ನು ಸಾಧಿಸಿದರು. ರಾಜಧನಾದಿ ರದ್ದತಿಯ ಆಕೆಯ ಕ್ರಮವೂ ಅಸಿಂಧುವೆಂದು ನ್ಯಾಯಾಲಯ ಸಾರಿತು; ಅಖಿಲ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಚುನಾವಣೆಯ ಚಿಹ್ನೆ "ನೊಗ ಹೊತ್ತ ಜೋಡೆತ್ತು"ಗಳನ್ನು ಚುನಾವಣಾ ಕಮಿಶನರು ಇಂಡಿಕೇಟಿಗೆ ನೀಡಿದರೂ ನ್ಯಾಯಾಲಯವು ಅದರ ಉಪಯೋಗಕ್ಕೆ ತಡೆ ನೀಡಿದೆ. ತನ್ನ ಪ್ರಗತಿ ಕಾರ್ಯಗಳಿಗೆ ಹಲವು ವಿಘ್ನಗಳು ಬರುತ್ತಿವೆಯೆಂಬುದನ್ನೂ ತನ್ನ ಪ್ರಚಾರ ಸಾಧನವನ್ನಾಗಿ ಶ್ರೀಮತಿ ಗಾಂಧಿ ಬಳಸುತ್ತಾರೆ; ಸಂವಿಧಾನ ವಿರೋಧಿ ನೀತಿಯೇ ಪ್ರಗತಿ ಎಂದುದನ್ನಾಕೆ ಸಮರ್ಥಿಸುತ್ತಿದ್ದಾರೆಯೆ? ಎಂಬ ಸಂದೇಹ ಬರುತ್ತದೆ.

ಸಿಂಡಿಕೇಟಾದಿ ಕೆಲವರು ಆಕೆಯನ್ನು ಅಧಿಕಾರದಿಂದುರುಳಿಸಲು ಒಂದಾಗಿದ್ದಾರೆ. ಎಲ್ಲ ರಾಜ್ಯಕೀಯ ಪಕ್ಷಗಳ ಆಡಳಿತೆ ವಿಧಾನವಿಂದು ದೇಶಕ್ಕೆ ಚಿರಪರಿಚಿತ. ಆದುದರಿಂದ, ದೇಶದ ಭವ್ಯ ಪ್ರಾಚೀನ ಪರಂಪರೆಯನ್ನು ಸಂಪೂರ್ಣ ಮರೆತು, ಕಮ್ಯುನಿಜಂನ ಸುಂದರ ಕನಸು ಕಾಣುತ್ತಲೇ ತೃಪ್ತಿಪಡಬೇಕೆ? ಅಥವಾ ನಮ್ಮ ನೆಲ ಗಾಳಿ ನೀರುಗಳಿಗೆ ಒಪ್ಪುವಂತೆ, ಯಾರಿಗೂ ಹಾನಿಯಾಗದಂತೆ ಸಮಾಜವಾದವನ್ನು ವ್ಯವಹೃತಗೊಳಿಸಬೇಕೆ?—ಎಂದು ವಿವೇಚಿಸಬೇಕು. ಭಾರತವನ್ನು ಮೇಲೆತ್ತುವ ಕಾರ್ಯವಿಂದಾಗಬೇಕು. ಪ್ರಜೆಗಳು ಪ್ರಜ್ಞಾಶೀಲರಾಗಿ ವಿವೇಕಯುತರಾಗಿ ತಮ್ಮ ಪ್ರಭುಗಳನ್ನು ಆರಿಸುವ ಸಮಯವಿದು; ಇಲ್ಲಿ ಎಚ್ಚರತಪ್ಪಿದರೆ, ನಮ್ಮ ಭವಿಷ್ಯವೇ ನೆಲಸಮವಾಗುತ್ತದೆ; ಮತ್ತೆ ತಲೆಯೆತ್ತುವ ಅವಕಾಶ ನಮಗಿಲ್ಲ.

ಕಾಮನೆ ಭಾವನೆ

ನಮ್ಮ ಅಪಾರ ಸಂಖ್ಯೆಯ ಚಂದಾದಾರರು, ಓದುಗರು, ಹಿತಚಿಂತಕರು, ಜಾಹಿರಾತುದಾರರು, ಲೇಖಕರು – ಇವರಿಗೆಲ್ಲ ಈ ಶುಭದಿನದಂದು ನಮ್ಮ ಹಾರ್ದಿಕ ಅಭಿನಂದನೆಗಳು ಸಲ್ಲುತ್ತವೆ. ವಾಡಿಕೆಯಂತೆ ಪ್ರಕಟಗೊಂಡ ಈ ವಿಶೇಷ ಸಂಚಿಕೆಯ ನಿರ್ಮಾಣಕಾರ್ಯದಲ್ಲಿ ಸರ್ವರೀತಿಯ ಸಹಾಯ—ಸಹಕಾರ ನೀಡಿದ ಲೇಖಕ ಬಂಧುಗಳಿಗೂ ಜಾಹೀರಾತುದಾರರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು ಸೇರುತ್ತವೆ. ಇವರೆಲ್ಲರ ಸಹಕಾರ ಮುಂದೆಯೂ ದೊರೆಯುತ್ತಿರಲಿ; ಭಾರತ ಪ್ರಜಾಪ್ರಭುತ್ವ ಚಿರಾಯುವಾಗಲಿ.

ಭವ್ಯ ಭಾರತದ ಶಿಲ್ಪಿ - ಶಿಕ್ಷಕ

ಸಮಾಜದಲ್ಲಿ ಶಿಕ್ಷಕರ ಪಾತ್ರ ಅದ್ವಿತೀಯವಾದದ್ದು. ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಜ್ಞಾನ ಜ್ಯೋತಿಯ ಪ್ರಸಾರ ಮಾಡುವುದು, ನಾಗರೀಕತೆಯನ್ನು ಅಭಿವೃದ್ಧಿಪಡಿಸುವುದು ಇವುಗಳಲ್ಲಿ ಅವರು ಸಲ್ಲಿಸುವ ಸೇವೆ ಅತ್ಯಂತ ಹಿರಿದು. ಪ್ರತಿ ವ್ಯಕ್ತಿಗೆ ಸರಿಯಾದ ಶಿಕ್ಷಣ ನೀಡುವುದಲ್ಲದೆ ರಾಷ್ಟ್ರದ ಭವಿತವ್ಯವನ್ನು ರೂಪಿಸುವುದರಲ್ಲೂ ಅವರು ಕಾರಣರಾಗಿದ್ದಾರೆ. ಶಿಕ್ಷಕರ ಕಲ್ಯಾಣದಲ್ಲಿ ರಾಷ್ಟ್ರದ ಹಿತ ಅಡಗಿದೆ. ಸೇವಾದುರಂಧರರಾದ ಅವರ ನಿಸ್ವಾರ್ಥಸೇವೆಯನ್ನು ಯಾರು ಎಂದೆಂದೂ ಮರೆಯಲಾರರು. ಇಂದಿನ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದರಲ್ಲೂ ಶಿಕ್ಷಕರಿಗೆ ಉತ್ತೇಜನ ನೀಡುವುದು ಅಗತ್ಯದ ವಿಷಯವಾಗಿದೆ.

ಶಿಕ್ಷಕರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಉತ್ತಮ ಪಡಿಸಲು ಇತ್ತೀಚಿನ ವರ್ಷಗಳಲ್ಲಿ ಸೂಕ್ತ ಗಮನ ನೀಡಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಈ ಬಗ್ಗೆ ಆಸಕ್ತವಹಿಸಿವೆ. ಉತ್ತಮ ಶಿಕ್ಷಕರಿಗೆ ರಾಷ್ಟ್ರಮಟ್ಟದ ಹಾಗು ರಾಜ್ಯಮಟ್ಟದ ಪ್ರಶಸ್ತಿಗಳನ್ನು ನೀಡಿ ಗೌರವಿಸುವುದು, ವೇತನಗಳಲ್ಲಿ ಬಡ್ತಿ ನೀಡುವುದು, ನಿವೃತ್ತ ವೇತನ, ಪ್ರಾವಿಡೆಂಟ್‌ಫಂಡ್, ಸೇವಾ ಅವಧಿಯಲ್ಲಿ ತರಬೇತಿ, ಶಿಕ್ಷಕರ ಮಕ್ಕಳಿಗೆ ಶಾಲಾ ಕಾಲೇಜುಗಳಲ್ಲಿ ಉಚಿತ ಶಿಕ್ಷಣ, ರಾಷ್ಟ್ರೀಯ ಹಾಗು ರಾಜ್ಯಮಟ್ಟದ ವಿದ್ಯಾರ್ಥಿವೇತನಗಳನ್ನು ನೀಡುವುದು ಇವೇ ಮೊದಲಾದ ವಿಶೇಷ ಸೌಲಭ್ಯಗಳನ್ನು ಶಿಕ್ಷಕರಿಗೆ ಈಗ ದೊರಕಿಸಿಕೊಡಲಾಗಿದೆ.

ಉತ್ತಮ ಶಿಕ್ಷಕರಿಗೆ ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡಿ ಗೌರವಿಸುವ ಯೋಜನೆಯನ್ನು 1958ರಿಂದ ಪ್ರಾರಂಭಿಸಲಾಯಿತು. ಈ ಯೋಜನೆಯ ಆರಂಭದಿಂದ ಇಂದಿನವರೆಗೆ 1005 ಮಂದಿ ಶಿಕ್ಷಕರಿಗೆ ರಾಷ್ಟ್ರೀಯ ಗೌರವ ಪ್ರಶಸ್ತಿಗಳನ್ನು ನೀಡಲಾಗಿದೆ; ಪ್ರಶಸ್ತಿಗಳ ಜೊತೆ ಪ್ರಶಸ್ತಿ ವಿಜೇತರಿಗೆ 500ರೂ.ಗಳ ನಗದು ಬಹುಮಾನವನ್ನು ಕೊಡಲಾಗುವುದು.

ಶಿಕ್ಷಕ ವೃತ್ತಿ ಹೆಚ್ಚು ಆಕರ್ಷಕವಾಗುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳಲ್ಲಿ ಆ ವೃತ್ತಿಯ ವೇತನಗಳನ್ನು ಹೆಚ್ಚಿಸಲಾಗಿದೆ. ಈ ದಿಶೆಯಲ್ಲಿ ಆ ರಾಜ್ಯ ಸರ್ಕಾರಗಳು ಕೊಠಾರಿ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಿವೆ. ದೇಶದ ವಿವಿಧ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ವಿಶ್ವವಿದ್ಯಾಲಯಗಳ ಅಧ್ಯಾಪಕರ ವೇತನಗಳನ್ನೂ ಏರಿಸಲಾಗಿದೆ. ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗ ಮಾಡಿರುವ ಶಿಫಾರಸುಗಳ ಅನ್ವಯ ಈ ಕ್ರಮ ಕೈಕೊಳ್ಳಲಾಗಿದೆ. ಕೇಂದ್ರ ಸರ್ಕಾರವು ಅಧ್ಯಾಪಕರ ವೇತನ ಏರಿಕೆಗಾಗಿ ವಿವಿಧ ರಾಜ್ಯ ಸರ್ಕಾರಗಳಿಗೆ 1966-67ರಿಂದ 1969—70ವರೆಗೆ 12.29ಕೋಟಿ ರೂ.ಗಳನ್ನು ಒದಗಿಸಿದೆ.

ಶಿಕ್ಷಕರ ಕಲ್ಯಾಣದೃಷ್ಟಿಯಿಂದ ಮೈಸೂರು, ಆಂಧ್ರಪ್ರದೇಶ, ಬಿಹಾರ್, ಕೇರಳ, ಒರಿಸ್ಸಾ, ತಮಿಳುನಾಡು, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳ ಈ ರಾಜ್ಯಗಳಲ್ಲಿ ತ್ರಿಮುಖ ಲಾಭ ಯೋಜನೆಯನ್ನು ಅಂದರೆ ನಿವೃತ್ತ ವೇತನ, ಪ್ರಾವಿಡೆಂಟ್ ಫಂಡ್ ಮತ್ತು ಜೀವ ವಿಮಾ ಸೌಲಭ್ಯಗಳನ್ನು ಜಾರಿಗೆ ತರಲಾಗಿದೆ ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಈ ತ್ರಿವಿಧ ಯೋಜನೆಯ ಜಾರಿಗೆ ಅನುಮತಿ ನೀಡಲಾಗಿದೆ. ಶಿಕ್ಷಕರು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವಂತೆ ಮಾಡಲು ಮೈಸೂರು, ಅಜ್ಮೀರ್, ಭುವನೇಶ್ವರ, ಭೂಪಾಲಗಳ ರೀಜಿನಲ್ ಕಾಲೇಜುಗಳಲ್ಲಿ, ದೆಹಲಿ-ರಾಜಸ್ಥಾನಗಳ ವಿಶ್ವವಿದ್ಯಾನಿಲಯಗಳಲ್ಲಿ ಸೌಲಭ್ಯಗಳನ್ನು ಒದಗಿಸಲಾಗಿದೆ. ರಾಜ್ಯಗಳ ಶಿಕ್ಷಾ ಸಂಸ್ಥೆ, ವಿಜ್ಞಾನ ಅಧ್ಯಯನ ಸಂಸ್ಥೆ, ರಾಷ್ಟ್ರೀಯ ಸಂಶೋಧನೆ ಮತ್ತು ತರಬೇತಿ ಪರಿಷತ್ತು ಇವುಗಳು ಸಹಾ ಶಿಕ್ಷಕರಿಗಾಗಿಯೇ ವಿವಿಧ ಅಧ್ಯಯನ ವರ್ಗಗಳನ್ನು ಏರ್ಪಡಿಸುತ್ತವೆ. ಮೈಸೂರು, ಆಂಧ್ರಪ್ರದೇಶ, ಬಿಹಾರ್ ಕೇರಳ, ತಮಿಳುನಾಡು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಿಕ್ಷಕರ ಮಕ್ಕಳಿಗೆ ಸೆಕೆಂಡರಿ ಶಿಕ್ಷಣದವರೆಗೆ ಉಚಿತ ವಿದ್ಯಾ ಅವಕಾಶವನ್ನು ನೀಡಲಾಗುತ್ತಿದೆ. ಅಸ್ಸಾಂ, ಹರಿಯಣ, ಒರಿಸ್ಸಾ, ಪಂಜಾಬುಗಳಲ್ಲೂ ಉಚಿತ ಶಿಕ್ಷಣ ನೀಡಲಾಗಿದೆ. ಗುಜರಾತ್, ಮಧ್ಯಪ್ರದೇಶ ಈ ರಾಜ್ಯಗಳಲ್ಲಿ ಶಿಕ್ಷಕರ ಮಕ್ಕಳನ್ನು ಕಡಿಮೆ ವರಮಾನಗುಂಪಿನಲ್ಲಿ ಸೇರಿಸಲಾಗಿದೆ.

ಪ್ರಾಥಮಿಕ ಮತ್ತು ಸೆಕೆಂಡರಿ ಶಾಲಾ ಶಿಕ್ಷರ ಮಕ್ಕಳಿಗೆ ಪ್ರತಿವರ್ಷ 500 ರಾಷ್ಟ್ರೀಯ ವೇತನಗಳನ್ನು ನೀಡಲಾಗುತ್ತಿದೆ. ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನು ಪರಿಶೀಲಿಸಿ ಈ ವಿದ್ಯಾರ್ಥಿವೇತನಗಳನ್ನು ನೀಡಲಾಗುವುದು. ಈ ವಿದ್ಯಾರ್ಥಿವೇತನಗಳ ಮೊತ್ತ ತಿಂಗಳಿಗೆ 50 ರೂ.ಗಳಿಂದ 100 ರೂ.ಗಳ ವರೆಗೆ ಇರುವುದು. 500 ರೂ.ಗಳಿಗಿಂತ ಕಡಿಮೆ ಇರುವ ಶಿಕ್ಷಕರ ಮಕ್ಕಳು ಈ ವೇತನಗಳಿಗೆ ಅರ್ಹರು. ಸಾಲ ರೂಪದಲ್ಲಿಯೂ ರಾಷ್ಟ್ರೀಯ ವಿದ್ಯಾರ್ಥಿವೇತನಗಳನ್ನು ಈಗ ನೀಡಲಾಗುತ್ತಿದೆ. ಇದು ಶಿಕ್ಷಕರ ಮಕ್ಕಳಿಗೂ ಅನ್ವಯಿಸುತ್ತದೆ.

ವಿದ್ಯಾರ್ಥಿವೇತನ ಪಡೆದಿದ್ದು ಶಿಕ್ಷಣ ಮುಗಿದ ನಂತರ ಆ ಅಭ್ಯರ್ಥಿ ಯಾವುದೇ ಸಂಸ್ಥೆಯಲ್ಲಿ ಶಿಕ್ಷಣವೃತ್ತಿಯನ್ನು ಅವಲಂಬಿಸಿದರೆ ಅಂತಹ ಸಂದರ್ಭಗಳಲ್ಲಿ ಸಾಲದ ನೆರವನ್ನು ವಾಪಸ್ಸು ಮಾಡಬೇಕಿಲ್ಲ. ಅಂತಹವರು ಶಿಕ್ಷಕರಾಗಿ 10 ವರ್ಷಗಳ ಸೇವೆ ಸಲ್ಲಿಸಬೇಕು. 1970—71ರಲ್ಲಿ 2,000 ಹೊಸ ಸಾಲರೂಪದ ವಿದ್ಯಾರ್ಥಿವೇತನಗಳನ್ನು ನೀಡಲಾಗಿದೆ. ಶಿಕ್ಷಕರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಪ್ರತಿಷ್ಠಾನದಿಂದಲೂ ಶಿಕ್ಷಕರು ಮತ್ತು ಅವರನ್ನು ಅವಲಂಬಿಸಿರುವವರಿಗೆ ಆರ್ಥಿಕ ನೆರವು ದೊರೆಯುತ್ತಿದೆ. ಈ ನಿಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಆರ್ಥಿಕ ನೆರವು ದೊರೆಯುತ್ತಿದೆ. ಪ್ರತಿವರ್ಷ ಸೆಪ್ಟೆಂಬರ್ 5ರಂದು ನಡೆಯುವ "ಶಿಕ್ಷಕರ ದಿನಾಚರಣೆ"ಯಂದು ದೇಶಾದ್ಯಂತ ಹಣ ಸಂಗ್ರಹಿಸಿ ಈ ನಿಧಿಗೆ ಅರ್ಪಿಸಲಾಗುವುದು. ಸ್ವಸಂತೋಷದಿಂದ ಕೊಡುವ ಹಣವನ್ನು ಮಾತ್ರ ಸಂಗ್ರಹಿಸಲಾಗುವುದು. ಈ ನಿಧಿಗೆ ನೀಡುವ ಹಣ ಆದಾಯ ತೆರಿಗೆಯ ವಿಮುಕ್ತಿಯನ್ನು ಪಡೆಯುವುದು. ●

With best compliments
from

U. SADIYA
Licenced Electrical Contractor
CLASS "A" No. 428,
Car-Street,
UDIPI, S. Kanara.

● ಉಡುಪಿಯು ಭಾರತದಲ್ಲಿ 902 ವರ್ಷಗಳಿಂದ ಸುಪ್ರಸಿದ್ಧ ಕ್ಷೇತ್ರ !

● ಐರೋಡಿಯವರ ಪಾತ್ರೆ ಭಂಡಾರವು 92 ವರ್ಷಗಳಿಂದ ಉಡುಪಿಯಲ್ಲಿ ಪ್ರಸಿದ್ಧ !!

ಕಡಿಮೆ ಕ್ರಯದಲ್ಲಿ ಉತ್ತಮ ಸೌಂದರ್ಯದ
ಮನೆ, ಮಠ, ದೇವಾಲಯಗಳಿಗೆ ಬೇಕಾಗುವ
ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಸ್ಟೀಲು,
ಎಲ್ಯುಮಿನಿಯಮ್ ಪಾತ್ರೆಗಳು
ರಖಂ ಆಗಿಯೂ ಚಿಲ್ಲರೆಯಾಗಿಯೂ ಸಿಗುವ
ಒಂದೇ ಅಂಗಡಿ

ಮೆಸರ್ಸ್
ಐರೋಡಿ ರಾಧಾಕೃಷ್ಣ ಪೈ

ಪಾತ್ರೆ ವ್ಯಾಪಾರಿ,
ಅನಂತೇಶ್ವರ ಸನ್ನಿಧಿ,
ರಥಬೀದಿ, ಉಡುಪಿ, ದ ಕನ್ನಡ.

ವಿಶೇಷ ಸೂಚನೆ— ದೇವತಾರ್ಚನೆ ಪಾತ್ರೆಗಳ ಸಚಿತ್ರ ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸಲಾಗುವುದು.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O. S. No. 237/70.

ರಾಜಂಮ ಹೆಗ್ಗಡ್ತಿ — ವಾದಿಳು

ಮತ್ತು

ಭುಜಂಗ ಶೆಟ್ಟಿ ಕೂಡಾ — ಪ್ರತಿವಾದಿರು

ಯವರೊಳಗೆ

ಪ್ರತಿವಾದಿರು: 1. ಭುಜಂಗ ಶೆಟ್ಟಿ, 6. ಶಂಕರ ಶೆಟ್ಟಿ— ಚಂದಂಮ ಶೆಡ್ತಿ ಮಕ್ಕಳು, ಉಡುಪಿ ತಾಲೂಕು ಬೆಳ್ಳಂಪಳ್ಳಿ ಗ್ರಾಮದಲ್ಲಿ ರುವರು.

ವಾದಿಳು ನಿಂಮ ಮೇಲೆ ದಾಖಲು ಮಾಡಿದ ಮೇಲ್ಕಂಡ ಮೊಡಿನ ದಾವೆಯು ತಾರೀಖು 19-2-1971ಕ್ಕೆ ಇಟ್ಟಿದೆ. ಆ ದಿವಸ ಬೆಳಿಗ್ಗೆ 10 ಗಂಟೆಗೆ ಕೋರ್ಟಿಗೆ ಸ್ವಂತ ಹಾಜರಾಗಿ ಉದಾಹರಿಸುವರೆ ತಪ್ಪಿದ್ದ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವುದು.

By order of Court
Sd/ V. Prabhakara Hegde, *B.A., B.L.,*
ವಾದಿಳ ಪರ ಎಡ್ವೊಕೇಟ್
ಉಡುಪಿ. D/ 19—1—71.

ಪುತ್ತೂರು IInd ಎಡಿಶನಲ್ ಮು. ಕೋರ್ಟಿನಲ್ಲಿ

O. S. 88/70

P. T. ಕೋಶಿಯಸ್ — ವಾದಿ

ಮತ್ತು

ಕುರಿಯನ್ ಮತ್ತು ಸಹಾ — ಪ್ರತಿವಾದಿರು

7ನೇ ಪ್ರತಿವಾದಿ:- ಚಿನ್ನಮ್ಮ, ಮೂಟನ್‌ಚೇರಿಯನ್‌ರ ಮಗಳು C/o ಜೋಶೆಫ್ ಮೂಟನ್, ಪುಲಿವೇಳಿ ಪರಬಿಲ್ ಮನೆಯಲ್ಲಿ ಯಿಕ ಕೇಂದ್ರದ ಹತ್ತಿರ ಕೊಟ್ಟಾಯಂ ತಾಲ್ಲೂ-Post ಮುಟ್ಟೆಂಚಲ್ಲಿಂ [Kerala]. 8ನೇ ಪ್ರತಿವಾದಿ:- ಶೀಶಮ್ಮ, ಮೇತ್ಯೂ ಮೂಟನ್ ಚೇರಿಯನ್‌ರ ಮಗಳು, ನಾಣಮಲ ಮನೆಯಲ್ಲಿ ಪಿಡಿಯೂರ್ "ಬಿ" ಗ್ರಾಮದಲ್ಲಿ ಕೊಟ್ಟಾಯಂ ತಾಲೂಕು Post ಮನರಾದ. [Kerala].

ವಾದಿಯು ಹೂಡಿದ ಮೇಲಿನ ದಾವೆಯು ವಿಚಾರಣೆಗಾಗಿ ಬಗ್ಗೆ ತಾ. 19-2-1971ಕ್ಕೆ ಇಡಲ್ಪಟ್ಟಿದೆ. ಆ ದಿವಸ ನೀವು ಸ್ವತಹಾ ಯಾ ವಕೀಲರ ಮುಖಾಂತರ ಕೋರ್ಟಿಗೆ ಹಾಜರಾಗಿ ಉದಹರಿಸ್ಬೇಕು ತಪ್ಪಿ ಗೈರು ಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಬಾದೀತೆಂತ ಈ ಮೂಲಕ ತಿಳಿಸಲಾಗಿದೆ.

(By order of the Court)
(Sd.) K. Raghunatha Rai.
Advocate for Plaintiff
Puttur, S.K. 20—1—71

ನಮ್ಮ ಪ್ರಜಾಪ್ರಭುತ್ವ ಎತ್ತ ಸಾಗುತ್ತಿದೆ?

ಶ್ರೀ ಬಿ. ಶಂಭು ಶೆಟ್ಟಿ



ಲೇಖಕರು

ಸ್ವಾತಂತ್ರ್ಯದಾರಭ್ಯ ಇಂದಿನ ತನಕವೂ, ಶ್ರೀ ಶಾಸ್ತ್ರೀಜಿಯವರ ದಿನಗಳನ್ನುಳಿದು ನಾವು ಕಮ್ಯೂನಿಜಂನತ್ತ ಸಾಗುತಿದ್ದೇವೆಂಬುದು ಲೇಖಕರ ಅಭಿಪ್ರಾಯ. ಸಾರ್ವಜನಿಕ ರಂಗಕ್ಕೆ ಉತ್ತೇಜನ ನೀಡುತ್ತ ನಷ್ಟವನ್ನು ತುಂಬಿಸುತ್ತ ಜಗತ್ತಿನ ದೊಡ್ಡ ಪ್ರಜಾಪ್ರಭುತ್ವ ದೇಶ ದೊಡ್ಡ ಸಾಲಗಾರ ದೇಶವಾಗಿದೆ ಎಂಬ ಕಟು ಸತ್ಯವನ್ನು ಲೇಖಕರು ಹೇಳಿದ್ದಾರೆ.

ನಮ್ಮ ಗತಿಸಿದ ಮುಖಂಡರ ಮಹಾನ್ ತ್ಯಾಗ ಬಲಿದಾನಗಳಿಂದಾಗಿ 23 ವರ್ಷಗಳ ಮೊದಲು ನಾವು ಸ್ವಾತಂತ್ರಗೊಂಡೆವು. ಸಂ. 1950ನೇ ಇಸ್ವಿ ಜನವರಿ ತಾರೀಕು 26ರಲ್ಲಿ ನಮ್ಮ ರಾಷ್ಟ್ರ ವಿಶ್ವದಲ್ಲಿಯೇ ದೊಡ್ಡ ಸಾರ್ವಭೌಮ ಪ್ರಜಾತಂತ್ರ ರಾಜ್ಯವೆಂದು ಸಾರಲಾಯ್ತು. ನಮ್ಮ ಘಟನೆಯನ್ನು ಮತ್ತು ಭಾವೀ ಯೋಜನೆಗಳನ್ನು ಪ್ರಪಂಚದ ರಾಜಕಾರಣಿಗಳು ಮುಕ್ತಕಂಠದಿಂದ ಹೊಗಳಿ ತಲೆತೂಗಿದ್ದರು. ನಮಗಿನ್ನು ಬರವಿಲ್ಲ, ಬಂಧನವಿಲ್ಲವೆಂದು ಹಿರಿಹಿಗ್ಗಿ ಸಂತೋಷದಿಂದ ಕುಣಿದಾಡಿದೆವು. ಸಂ. 1950ನೇ ಇಸ್ವಿ ಡಿಸೆಂಬರ ತಿಂಗಳ ತಾರೀಕು 15ರಲ್ಲಿ ಭಾರತದ ಮಹಾನ್ ಶಿಲ್ಪಿ ಸರದಾರ್ ಪಟೇಲರು ದೈವಾಧೀನರಾದರು. ನಮ್ಮ ರಾಜಕೀಯದಲ್ಲಿ ಕರಾಳ ಕತ್ತಲೆಯು ಆವರಿಸಿತು. ಲಂಚ, ವಂಚನೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಶಿಸ್ತು, ಅವಿಧೇಯತನ ಮತ್ತು ಪಕ್ಷಾಂತರ ರಾಜಕೀಯದಲ್ಲಿ ಮನೆಮಾಡಲು ಸುರುವಾಯ್ತು. ವಿದೇಶೀ ಏಜಂಟರ ಅಲೆಯು ದೇಶದಾದ್ಯಂತ ಬೀಸಲು ಸುರುವಾಯ್ತು. ಸರದಾರ್ ಪಟೇಲರ ಮರಣದ ಬಳಿಕ, ಶಾಸ್ತ್ರೀಜಿಯವರು ಪ್ರಧಾನಿಯಾಗಿದ್ದ 17 ತಿಂಗಳ ಅವಧಿಯನ್ನು ಬಿಟ್ಟರೆ, ಉಳಿದ ಈ ಎರಡು ದಶಕಗಳ ರಾಜಕೀಯ ಸ್ವಾತಂತ್ರ್ಯದಲ್ಲಿ ಬ್ರಿಟಿಷರನ್ನು ಹೊರದಬ್ಬಿ ಯೂನಿಯನ್ ಜಾಕ್‌ನ್ನು ಕೆಳಗಿರಿಸಿ, ಬದಲಿಗೆ ಮಾವೋ ಮತ್ತು ಲೆನಿನ್‌ರವರ ಭಿತ್ತಿಪತ್ರಗಳನ್ನು ಹಚ್ಚಲು ಮತ್ತು ಕತ್ತಿ ಗುದ್ದಲಿಯಿಂದೊಡಗೂಡಿದ ರಕ್ತರಂಜಿತ ಪರಕೀಯ ಧ್ವಜವನ್ನು ಏರಿಸಲು ರಾತ್ರಿ ಹಗಲು ಶ್ರಮಿಸಿದೆವು. ತನ್ನ ಜೀವನವನ್ನೇ ದೇಶಕ್ಕಾಗಿ ಮುಡಿಪಾಗಿಟ್ಟ, ನಮ್ಮ ರಾಷ್ಟ್ರಪಿತನ ಗರಡಿಯಲ್ಲಿ ಪಳಗಿದ್ದ, ಹೆಜ್ಜೀಕೆ, ನಮ್ಮ ರಾಷ್ಟ್ರಪಿತನ ನೆರಳಿನಂತಿದ್ದ ಕೃಪಾಲಾನಿಯವರ ವಿರುದ್ಧ ಗಾಂಧೀಜೀಯವರು ಜೀವಂತವಿರುವಾಗ್ಗೆ ಈ ನಮ್ಮ ಭಾರತಕ್ಕೆ ಕಾಲಿಡಲು ನಾಚುತ್ತಿದ್ದವರನ್ನು ಎತ್ತಿಕಟ್ಟಿ ನಿಷ್ಠಾವಂತ ದೇಶ ಪ್ರೇಮಿಗಳನ್ನು ಮೂಲೆಪಾಲು ಮಾಡಿದೆವು. ಬೇಕೆಂತಲೇ ಚೀನವು ನಮ್ಮ ಮೇಲೆ ಯುದ್ಧ ಸಾರುವಂತೆ ಅವಕಾಶ ಕಲ್ಪಿಸಿಕೊಟ್ಟೆವು.

ಬ್ರಿಟಿಷ್ ಆಳರಸರ ಎಂಜಲನ್ನಕ್ಕಾಗಿ ಸ್ವಸ್ವಪಡೆಗೆ ಸೇರಿ ಗುಲಾಮಗಿರಿಯ ಕ್ಷೇತ್ರವನ್ನು ಪರರಾಷ್ಟ್ರದಲ್ಲಿ ಹಾಡುತ್ತಿದ್ದ ದೇಶಬಾಂಧವರಲ್ಲಿ ದೇಶ ಪ್ರೇಮದ ಅರಿವಿನ ಅಂಕುರವನ್ನು ಬಲವಾಗಿ ಊರಿ, ಅವರೆಲ್ಲರನ್ನು ಒಂದುಗೂಡಿಸಿ, ಭಾರತದ ಸ್ವಾತಂತ್ರ್ಯದ ರಣಕಹಳೆಯನ್ನು ಪರರಾಷ್ಟ್ರದಲ್ಲಿ ಊದಿ, ಭಾರತದ ಸ್ವಾತಂತ್ರ್ಯದ ದೀವಿಗೆಯನ್ನು ಪರರಾಷ್ಟ್ರದಲ್ಲಿ ಬೆಳಗಿಸಿದ, ಬಾಬೂಸುಭಾಷ್ ಚಂದ್ರ ಬೋಸರನ್ನು ದೇಶದ್ರೋಹಿ ಎಂದೂ, ನಮ್ಮ ರಾಷ್ಟ್ರಪಿತ ಪೂಜ್ಯ ಬಾಪೂಜಿಯವರನ್ನು ಬ್ರಿಟಿಷ್ ಸಾಮ್ರಾಜ್ಯದ ಏಜಂಟನೆಂದೂ, ಇತಿಹಾಸ ಪ್ರಸಿದ್ಧ ಭಾರತದ ಆಂದೋಲನದ ಸಮಯ ರಾಷ್ಟ್ರಕ್ಕೆ ವಿರೋಧವಾಗಿ ವರ್ತಿಸಿದ್ದ ಮತ್ತು ಚೀನ, ಭಾರತದ ಮೇಲೆ ದಾಳಿ ಮಾಡಿತೆಂದು ಈ ತನಕವೂ ಒಪ್ಪಲು ಸಿದ್ಧವಿಲ್ಲದ ಕಮ್ಯೂನಿಷ್ಟನಾಯಕರೇ ಇಂದು ನಮ್ಮ ರಾಷ್ಟ್ರದ ಆಗು ಹೋಗುಗಳ ಚಕ್ರತಿರುಗಿಸುತ್ತಿರುವರು. ಉದಾ:— ಒಂದು ಕಾಲದಲ್ಲಿ ಲೆನಿನ್ ಮತ್ತು ಸ್ಟಾಲಿನ್‌ರವರ ಪರಮಭಕ್ತರಾಗಿದ್ದ ಕಾಡಿಲ್ಕರ್, ರಘುನಾಥ ರೆಡ್ಡಿ ಗುಜ್ರಾಲ್, ನಂದಿನಿ ಸತ್ಪತಿ, ಮತ್ತು ಆರ್. ಕೆ. ಸಿನ್ಹ ಮುಂತಾದವರು ಈಗ ಅಪ್ಪಟ ಗಾಂಧಿ ಭಕ್ತರು ಕಾಂಗ್ರೆಸು ಮುಖಂಡರು. ನಿಷ್ಠಾವಂತ ದೇಶಭಕ್ತರು. ಮಾತ್ರವಲ್ಲ ಸ್ವತಂತ್ರ ಭಾರತದ ಕೇಂದ್ರದ

ಈ ವರ್ಷ, ರಜತ 1971 ಮಹೋತ್ಸವದ ನವಹರ್ಷ

ಇಪ್ಪತ್ತೈದು ವರ್ಷಗಳ ಹಿಂದೆ, 1947ರಲ್ಲಿ ಸ್ವಾತಂತ್ರ್ಯೋತ್ಸವದ ಉದಯದೊಂದಿಗೇ ನಮ್ಮ ಸಂಸ್ಥೆಯು ಉದಯಿಸಿತು.
ಅಂದಿನಿಂದ ಇಂದಿನವರೆಗೆ ನಾವು ಸಲಿಸುತ್ತ ಬಂದಿರುವ ಸೇವೆಯು ಈ ರಜತಮಹೋತ್ಸವದ
ವರ್ಷವನ್ನು ಪ್ರವೇಶಿಸಲು ನಮ್ಮನ್ನು ಮುನ್ನಡೆಸಿ ತಂದಿದೆ,

ಎಸ್. ಎಲ್. ಶೇಟ್ ಡಾಯ್‌ಮಂಡ್ ಹೌಸ್

ಕಾರ್ನಾಡು ಸದಾಶಿವರಾವ್ ರಸ್ತೆ, ಹಂಪನಕಟ್ಟೆ, ಮಂಗಳೂರು (ಫೋನ್: 3242)

ಜಿಲ್ಲೆಯ ಜನರ ವಿಶ್ವಾಸ-ಆದರಗಳನ್ನು ಗಳಿಸಿ, ಹೊರಜಿಲ್ಲೆಗಳ ಸಾವಿರಾರು ಮಹನೀಯರ—ಮಹಿಳೆಯರನ್ನು ನಮ್ಮ ಪೋಷಕ—
ಹಿತಚಿಂತಕರ ವಿಶಾಲ ಕುಟುಂಬದಲ್ಲಿ ಗಣಿಸಿ,ನಮ್ಮ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಿದವರೆಲ್ಲರಿಗೂ

1971ನೇ ನವವರ್ಷವು ಸಂಪತ್ಸಮೃದ್ಧಿಗಳನ್ನು ತರಲಿ ಎಂದು ಹಾರೈಸುವೆವು.

ರಜತೋತ್ಸವದ ಈ ವರ್ಷದಲ್ಲಿಯೂ ಮುಂದಕ್ಕೂ ಇತ್ಯೋಪತಿಶಯ ಸೇವೆಸಲಿಸುವ ಆಶ್ವಾಸನೆಯೀಯುವೆವು.

— ಗಣರಾಜ್ಯ ದಿನದ ಶುಭಾಶಯಗಳು ! —

S. L. SHET DIAMOND HOUSE

K. S. RAO ROAD, MANGALORE-1

ಮಂತ್ರಿವರ್ಯರು. ಮಾಜಿ ಕಮ್ಯುನಿಷ್ಟ ಮುಖಂಡರಾಗಿದ್ದ ಶ್ರೀ ಕುಮಾರ ಮಂಗಲಂ ಇಂದು ಇಂಡಿಯನ್ ಏರ್‌ಲೈನ್ಸ್‌ನ ಅಧ್ಯಕ್ಷರು. ಆದರೆ, ಸಮಯ ಪರಿಪಕ್ವವಾದೊಡನೆ ಇವರ ನಿಜ ಬಣ್ಣ ಬಯಲಾಗಲಿದೆ. ಕೆಂಪು ಕೋಟೆಯ ಮೇಲೆ ಕೆಂಪು ಧ್ವಜವನ್ನು ಏರಿಸಲು ಹೊರಟ ಮೊದಲ ಕಮ್ಯುನಿಷ್ಟ ದಸ್ಯುಗಳು ಇವರು.

ಎರಡನೇ ಮಹಾಯುದ್ಧದ ಬಳಿಕ ಜಗತ್ತಿನಲ್ಲಿ ಹೊಟ್ಟೆಗೆ ಅನ್ನವಿಲ್ಲದೆ ಕ್ಷಾಮದಿಂದಾಗಿ ಒಂದುವರೆ ಲಕ್ಷ ಜನ ಸಾವನ್ನು ಅಪ್ಪಿದ್ದರೆ, ಅದು ಗಾಂಧೀಜಿಯವರ ಮುಂದಾಳುತನದಲ್ಲಿ ಸ್ವಾತಂತ್ರ್ಯಗಳಿಸಿದ ಭಾರತದ ಬಿಹಾರಿನಲ್ಲಿ ಮಾತ್ರ. 40ಸಾವಿರ ಜನ ಹೊಟ್ಟೆಗೆ ಅನ್ನವಿಲ್ಲದೆ ನರಳಿ ನರಳಿ, ಸತ್ತಿದ್ದರೆ ಅದು ಭಾರತದ ರಾಜಸ್ಥಾನದಲ್ಲಿ ಮಾತ್ರ ಮುಂಬಾಯಿಯಂಥಾ ಪ್ರಾಮುಖ್ಯ ಪಟ್ಟಣದಲ್ಲಿ ಮೂರು ಮೈಲುದ್ದದ ಮೆರವಣಿಗೆಯಲ್ಲಿ ತೆರಿಗೆ ತಪ್ಪಿಸುವ ಮಂತ್ರಿಯನ್ನು ಕೊಂಡೊಯ್ದು, ಗೌರವಿಸಿ, ತಾಜಮಹಾಲ್ ಮತ್ತು ಎಂಬೇಸಿದರ್‌ನಂಥಾ ಪ್ರಾಮುಖ್ಯ ಪಾಶ್ಚಿಮಾತ್ಯ ಮಾದರಿಯ ಉಚ್ಛ ಮಟ್ಟದ ವಿಲಾಸೀ ಜೀವನದ ಹೋಟೇಲುಗಳಲ್ಲಿ ಪ್ರತಿನಿಧಿಗಳು ಕಲೆತು ಸಮಾಜವಾದದ ಠರಾವು ಮಂಜೂರು ಮಾಡಿದ್ದ ಈ ನಮ್ಮ ರಾಜಕರ್ತರು ಆಗ ಎಲ್ಲಿದ್ದರು? ಅಧಿಕಾರದ ಗದ್ದುಗೆಯಲ್ಲಿ ಆಸನಾರೂಢರಾಗಿರಲಿಲ್ಲವೇ? ಇದೇ ಜಗಜ್ಜೀವನ್ ರಾಮ್ ಆಗ್ಯೆ ಆಹಾರ ಮಂತ್ರಿಯಾಗಿರಲಿಲ್ಲವೇ? ಎಂಟು ಸಾವಿರ ಮೈಲು ದೂರದ ಅಮೇರಿಕಾದ ಅಕ್ಕಿ ಗೋದಿಯನ್ನು ಈ ನಮ್ಮ ಜನ ತಿಂದು ಬದುಕಬಹುದು. ಆದರೆ ಒಂದೇ ಸಾರ್ವಭೌಮತ್ವಕ್ಕೆ ಸೇರಿದ ಭಾರತದ ಇತರ ನೆರೆ ರಾಜ್ಯಗಳ ಅಕ್ಕಿ ಗೋದಿಯನ್ನು ತಿನ್ನಲು ಕಾನೂನಿನ ತಡೆ. ಇದು ನಮ್ಮ ರಾಷ್ಟ್ರೀಯತೆ. ವಲಯ ಪದ್ಧತಿ. ಇದು ನಮ್ಮ ಸ್ವರಾಜ್ಯ.

ಸ್ವತಂತ್ರ ಭಾರತದ ಮೊದಲ ಕೇಂದ್ರದ ಮಂತ್ರಿ ಮಂಡಲದಲ್ಲಿ 14 ಮಂತ್ರಿಗಳು ಮಾತ್ರವಿದ್ದು ಗಣನೀಯ ಪ್ರಗತಿಯನ್ನು ಸಾಧಿಸಿದ್ದರೆ, ಇಂದು ಕೇಂದ್ರದಲ್ಲಿ 54 ಮಂತ್ರಿಗಳು ಇದ್ದು ಗಡಿ ವಿವಾದ, ನೀರಿನ ವಿವಾದಗಳು ಕೊಳೆಯುತ್ತಿವೆ. ರಾಜ್ಯ ಸರಕಾರಗಳ ಮಂತ್ರಿ ಮಂಡಲದ ಸಂಖ್ಯೆಯು ದಿನದಿಂದ ದಿನಕ್ಕೆ ಏರುತ್ತಿದೆ. ಉದಾ:–ಉತ್ತರ ಪ್ರದೇಶದಲ್ಲಿ ಕೇವಲ 2 ಮಂತ್ರಿಗಳಿಂದ ಮೊದಲುಗೊಂಡ ಮಂತ್ರಿ ಮಂಡಲದ ಸಂಖ್ಯೆಯು ಈಗ 52ಕ್ಕೆ ಏರಿದೆ. ಈ ರೀತಿ ಆಡಳಿತೆಯ ವೆಚ್ಚ ಕೋಟಿಗಟ್ಲೆ ರೂಪಾಯಿ ಏರಿದೆ. ಸಮಾಜವಾದದ ಹೆಸರಿನಲ್ಲಿ ಅಖಿಲ ಭಾರತದಲ್ಲಿ ಸರಕಾರದ ಗುತ್ತಿಗೆಯ ಕೈಗಾರಿಗಳಲ್ಲಿ ಐದು ಸಾವಿರ ಕೋಟಿ ರೂಪಾಯಿಗಳನ್ನು ತೊಡಗಿಸಿಯೂ, ವರ್ಷ ಒಂದರ ನೂರ ಐವತ್ತು ಕೋಟಿ ರೂಪಾಯಿಗಳ ನಷ್ಟ. ಅಖಿಲ ಭಾರತದಲ್ಲಿ ಸಾರ್ವಜನಿಕ ಕಾಮಗಾರಿ ಇಲಾಖೆಯಲ್ಲಿ ವರ್ಷಂಪ್ರತಿ ವೆಚ್ಚವಾಗುತ್ತಿರುವ ಸಾವಿರಾರು ಕೋಟಿ ರೂಪಾಯಿಗಳಲ್ಲಿ ಶೇಕಡಾ 30 ಪಾಲು ಕೂಡಾ ಜನತೆಗೆ ಪ್ರಯೋಜನ ನೀಡುತ್ತಿಲ್ಲವೆಂದು ಸರಕಾರೀ ವರದಿಗಳೇ ಸಾರುತ್ತಿವೆ. ರಕ್ಷಣಾ ಖಾತೆಯಲ್ಲಿ ವರ್ಷಂಪ್ರತಿ ಸಾಧಾರಣ 25 ಕೋಟಿ ರೂಪಾಯಿಗಳ ಸಾಮಾಗ್ರಿಗಳು ಕಳವಾಗುತ್ತಿವೆ. ಇದರ ಗೊತ್ತು ಗುರಿ ಇಲ್ಲ. ಹಣ ಕಾಸಿನ ರಾಜ್ಯ ಸಚಿವ ಶ್ರೀ ಪಿ. ಸಿ. ಸೇಥಿಯವರು ಲೋಕ ಸಭೆಯಲ್ಲಿ ಇತ್ತೀಚೆಗೆ ಇತ್ತ ಹೇಳಿಕೆ ಪ್ರಕಾರ 5ಲಕ್ಷ ರೂಪಾಯಿ ಅಥವಾ ಅದಕ್ಕಿಂತಲೂ ಹೆಚ್ಚಿಗೆ ಆದಾಯ ತೆರಿಗೆ ಬಾಕಿ–ಮಾಡಿಕೊಂಡ 1100 ಜನ ಮಹಾನುಭಾವರಿರುವರು. ಒಂದು ಕೋಟಿಗೂ ಹೆಚ್ಚಿನ ತೆರಿಗೆ ಬಾಕಿ ಮಾಡಿಕೊಂಡ 17 ಜನ ಮಾನ್ಯ ವ್ಯಕ್ತಿಗಳು ಬೇರೆಯೇ ಇದ್ದಾರೆ. ಇವರೆಲ್ಲರ ಒಟ್ಟು ಕರಬಾಕಿ–550ಕೋಟಿ ರೂಪಾಯಿಗಳು. ಕಳೆದ ಸಾಲಿನಲ್ಲಿ ಕೇಂದ್ರದ 12ಸಚಿವ ಖಾತೆಗಳಲ್ಲಿ 77ಕೋಟಿ18ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ಲೋಕ ಸಭೆಯಲ್ಲಿ ಮಂಡಿಸಿದ್ದ ಸರಕಾರಿ ಲೆಕ್ಕ ಪರಿಶೋಧಕರ ವರದಿ ತಿಳಿಸಿದೆ. ರಶ್ಯಾದ ನೆರವಿನಿಂದ ರೂಪುಗೊಂಡು ನಡೆಯುವ 13 ಯೋಜನೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ 105 ಕೋಟಿ ರೂಪಾಯಿಗಳ ನಷ್ಟ. ರಶ್ಯಾದ ಉತ್ತಡಕ್ಕೆ ನಮ್ಮ ನಾಯಕರು ಬಲಿಬಿದ್ದು ಬೊಕಾರೊದ ಉಕ್ಕಿನ ಕಾರ್ಖಾನೆಗೆ 1200 ಕೋಟಿ ರೂಪಾಯಿಗಳನ್ನು ತೊಡಗಿಸಿಯೂ; ಈ ಕಾರ್ಖಾನೆ ಈ ತನಕ ಪೂರ್ತಿಗೊಂಡಿಲ್ಲ. ಹಿಂದೂಸ್ಥಾನ್ ಸ್ಟೀಲ್ ಕಂಪನಿ ಒಂದರಲ್ಲಿಯೇ ಕಳೆದ ವರ್ಷ 40 ಕೋಟಿ ರೂಪಾಯಿಗಳ ನಷ್ಟ. ನಮ್ಮ ಪ್ರಧಾನಿಯ ಕಾರ್ಯದರ್ಶಿಯ ಕೈವಾಡದಿಂದಾಗಿ ರಾಷ್ಟ್ರೀಕೃತ ಸೆಂಟ್ರಲ್ ಬೇಂಕ್ ಆಫ್ ಇಂಡಿಯಾದ ಲಂಡನ್ ಶಾಖೆಯಲ್ಲಿ ರೂಪಾಯಿ 2ಕೋಟಿ ಸ್ವಾಹಾ. ನಮ್ಮ ಮೈಸೂರು ರಾಜ್ಯದ ಮಟ್ಟಿಗೆ ಹೇಳುವುದಾದರೆ, ಭದ್ರಾವತಿಯ ಉಕ್ಕಿನ ಕಾರ್ಖಾನೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ರೂಪಾಯಿ 5ಕೋಟಿ ನಷ್ಟ. ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದ್ದ H M. T. ಕಳೆದ ಸಾಲಿನಲ್ಲಿ 3ಲಕ್ಷ ಕೈಗಡಿಯಾರಗಳನ್ನು ನಿರ್ಮಿಸಿ, ರೂಪಾಯಿ 34ಲಕ್ಷ ನಷ್ಟ. ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವಾಗ್ಯೆ ಬರಿಯ ಭಾರತವನ್ನು ಮಾತ್ರ ಬಿಟ್ಟು ಹೋಗಿಲ್ಲ. ಜತೆಯಲ್ಲಿ 1600ಕೋಟಿ ರೂಪಾಯಿಗಳನ್ನೂ ಬಿಟ್ಟು ಹೋಗಿದ್ದರು. 23 ವರ್ಷಗಳ ಈ ಸ್ವರಾಜ್ಯದಲ್ಲಿ ಈ ಹಣವು ದಕ್ಷ ಮತ್ತು ಸಮರ್ಥ ಆಡಳಿತೆಯ ಕೊರತೆಯಿಂದಾಗಿ ಸ್ವಾಹಾ ಆಗಿ ಈಗ 6000 ಕೋಟಿ ರೂಪಾಯಿಗಳ

(ಮುಂದಕ್ಕೆ ೮ನೇ ಪುಟ ನೋಡಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 280/1970

ಕೃಷ್ಣರಾಜ ಬಲ್ಲಾಳ — ವಾದಿ

ಮತ್ತು

ಗುಡ್ಡ ಪೂಜಾರಿ ಕೂಡಾ — ಪ್ರತಿವಾದಿರು

ಇವರೊಳಗೆ

2ನೇ ಪ್ರತಿವಾದಿ ರಾಮ ಪೂಜಾರಿ, ಗುಡ್ಡ ಪೂಜಾರಿ ಮಗ, ಉಡುಪಿ ತಾಲ್ಲೂಕು ಅಂಬಲಪಾಡಿ ಗ್ರಾಮದಲ್ಲಿರುವವ, ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ವಾದಿಯು ಪ್ರತಿವಾದಿಂದ ತಾರೀಕು 11—1—1961ನೇ ರ. ನಿ ಬರೆದು ಕೊಟ್ಟ ಚೀಟು ಮೇರೆಗೆ ಬರತಕ್ಕ ಸಾಲಕ್ಕೆ ಮತ್ತು ಸೌಮ್ಯ ಯಿಂದ ಯಾರ್ಮ ವರ್ಷಗಳ ಗೇಣಿ ಪ ಬಡ್ಡಿ ವಗೈರೆಯನ್ನು ಕೇಳಿ ಮಾಡಿದ ಮೇಲಿನ ದಾವೆಯಲ್ಲಿ 2ನೇ ಪ್ರತಿವಾದಿಗೆ ಆಗತಕ್ಕ ಅಮ್ಮರು ನೋಟೀಸು ಬಗ್ಗೆ ಸದ್ರಿ ದಾವೆಯು ತಾ. 4-2-71ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುವುದರಿಂದ 2ನೇ ಪ್ರತಿವಾದಿಯು ಉದಹರಿಸ ತಕ್ಕದ್ದು ಇದ್ದಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ಸ್ವಂತವಾಗಿ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಲಿಕ್ಕೆ ತಪ್ಪಿದ್ರೆ ಏಕಪಕ್ಷವಾಗಿ ಸದ್ರಿ ದಾವೆಯು ತೀರ್ಮಾನವಾಗಲ್ಪಡುವುದೆಂತ ಈ ಮೂಲಕ 2ನೇ ಪ್ರತಿವಾದಿಗೆ ತಿಳಿಸಲಾಗುತ್ತದೆ.

Sd/- B. Krishna Bhat,
Advocate for Plaintiff

Udipi, 13-1-1971.



ಪ್ರಿನ್ಸಿಪಾಲ್ ಕೆ. ರಾಮಕೃಷ್ಣ ಉಡುಪ

ಶಿಕ್ಷಣ ರಂಗದ ಮೇಲೆ ಚುನಾವಣೆಯ ಗಾಳಿ

ಶಿಕ್ಷಣ ರಂಗವನ್ನು ರಾಜಕೀಯ ಸೀಮೆಗೆ ಹೊರಗೆಂದು ಘೋಷಿಸದೆ ಹೋದರೆ, ದೇಶವು ಸದ್ಯವೇ ನಾಶಕ್ಕೀಗಿಳಿಯುತ್ತದೆ. ಈ ಪವಿತ್ರ ರಂಗವನ್ನು ಆಡುಂಬೊಲವಾಗಿ ರಾಜಕಾರಣಿಗಳು ಬಳಸುವುದನ್ನು ಈ ವರ್ಷದ ಚುನಾವಣೆಯ ವೇಳೆಯಿಂದಾದರೂ ತ್ಯಜಿಸಲಿ. ಮುಂದಿದೇ ಸತ್ಸಂಪ್ರದಾಯವಾಗಲಿ.

ಪ್ರಧಾನಿ ಇಂದಿರಾ ಗಾಂಧಿಯವರು 1972ರ ಮಹಾ ಚುನಾವಣೆಯನ್ನು ಒಂದು ವರ್ಷ ಮೊದಲೇ ನಡೆಸಬೇಕೆಂದು ಇತ್ತೀಚೆ ನಿರ್ಧರಿಸಿದ್ದಾರೆ. ದೇಶದ ಹಿತ ದೃಷ್ಟಿಯಿಂದ ಇದು ಹಿತಕರವಿರಲೂಬಹುದು. ಆದರೆ ಆ ಚುನಾವಣೆಯ ಗಾಳಿ ಹಾಗೂ ಅದರ ಧಾಳಿ ಶಿಕ್ಷಣರಂಗದ ಮೇಲೂ ಬಿದ್ದುದಾದರೇನಾಗಬಹುದು? ನಾಳೆ ದೇಶದ ಆಗುಹೋಗುಗಳಿಗೆ ಹೊಣೆಗಾರರಾದ ನಮ್ಮ ಯುವಕರ ಮೇಲೆ ಅದರ ಪರಿಣಾಮವೇನಾಗಬಹುದು? ಇದನ್ನು ಯೋಚಿಸಿ ನೋಡಲು ಇದೀಗ ಸೂಕ್ತ ಸಮಯವಲ್ಲವೇ?

ಸದ್ಯ ಬರಲಿರುವ ಚುನಾವಣೆಯನ್ನು ಮನಸ್ಸಿನಲ್ಲಿಟ್ಟುಕೊಂಡೇ ವಿವಿಧ ರಾಜಕೀಯ ಪಕ್ಷಗಳವರು ತಮ್ಮ ತಮ್ಮ ಕೈವಾಡವನ್ನು ಶಿಕ್ಷಣ ರಂಗದಲ್ಲಿ ಈಗಾಗಲೇ ನಡೆಸಿಬಿಟ್ಟಿದ್ದಾರೆ. ಶಾಲಾ ಕಾಲೇಜುಗಳ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಸಾಕಷ್ಟು ಬೆಂಬಲ ಹೊರಗಿಂದ ಬಂದೇ ಬರುತ್ತಿತ್ತು. ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳಲ್ಲಿ ಕೆಲವರು ತಮ್ಮ ಕೈಗೊಂಬೆಗಳನ್ನು ಅದಕ್ಕಾಗಿಯೇ ವಿದ್ಯಾರ್ಥಿಯಾಗಿ ಸೇರಿಸಿಬಿಟ್ಟಿದ್ದಾರೆ. ತಮಗೆಬೇಕಾದ ಘೋಷಣೆಗಳನ್ನು ಅವರಿಂದ ಹಾಡಿಸಿ ಯುವಕರ ಮನಸ್ಸನ್ನು ತಮ್ಮತ್ತ ಸೆಳೆದುಕೊಳ್ಳಲು ಪ್ರಯತ್ನಿಸಿದ್ದಾರೆ. ಈಗ ಅಧಿಕಾರಕ್ಕೆ ಬಂದ ಅಥವಾ ಬಾರದ ಬೇರೆ ಬೇರೆ ರಾಜಕೀಯ ಪಕ್ಷಗಳವರೂ ಈ ಪಾಪದಿಂದ ಹೊರಗಾಗಿಲ್ಲ.

ಉತ್ತರ ಪ್ರದೇಶದಲ್ಲಿ ಈ ವಿದ್ಯಾರ್ಥಿ ಸಂಘಗಳ ಹೆಸರಲ್ಲಿ ನಡೆಯುತ್ತಿರುವ ಹೋರಾಟವನ್ನು ಸಹಿಸಲು ಯಾವ ಸರಕಾರಕ್ಕೂ ಇತ್ತೀಚೆ ಸಾಧ್ಯವೇ ಆಗದೆ ಹೋಯಿತು. ಅದಕ್ಕಾಗಿ ಕೆಲದಿನ ಹಿಂದೆ ಈ ವಿದ್ಯಾರ್ಥಿ ಸಂಘಗಳ(Students Union) ಹತೋಟಿಗಾಗಿಯೇ ಸರ್ಕಾರ ದೊಡ್ಡ ಕಾನೂನು ಸಹಾ ಮಾಡಬೇಕಾಯಿತು. ಹಿಂದಕ್ಕೆ, ಬೇರೆ ಬೇರೆ ತರದಲ್ಲಿ ವಿದ್ಯಾರ್ಥಿಗಳ ಮನಸ್ಸನ್ನು ಕೆಡಿಸಿ 'ಯೂನಿಯನ್' ಮೂಲಕ ರಾಜಕೀಯ ಬೇಳೆ ಬೇಯಿಸಿದ್ದ ಮಹಾಮುಖಂಡರೇ ಇಂದು ಸೋತುಹೋಗಿದ್ದಾರೆ. ತಮ್ಮನ್ನೇ ಸುಡಬಂದ ವಿದ್ಯಾರ್ಥಿ ಭಸ್ಮಾಸುರರಿಗೆ ಹೆದರಿ, ಅವರ ಹತೋಟಿಗೆ ಕಟ್ಟುನಿಟ್ಟಾದ ಕಾನೂನು ತರಬೇಕಾಯಿತು. ಶಾಲಾ ಕಾಲೇಜುಗಳಲ್ಲಿ "ಯೂನಿಯನ್" ಸದಸ್ಯತನ ಕಡ್ಡಾಯವಾಗಬೇಕಾಗಿಲ್ಲ; ಬೇಕಾದವರು ಇಷ್ಟವಿದ್ದರೆ ಮಾತ್ರ ಚಂದಾ ಹಣ ತೆತ್ತು ಸದಸ್ಯರಾಗಬಹುದು; ಅವರ ಕಾರ್ಯಕ್ಷೇತ್ರವೂ ಪರಿಮಿತವಾಗಿರಬೇಕು— ಎಂದು ಮೊದಲಾಗಿ ನಿಯಮ ಮಾಡಬೇಕಾಯಿತು. ಇದು ಈ ಹಿಂದೆ ಸಮಾಜವಾದೀ, ಸಮತಾವಾದೀ ಪಕ್ಷಗಳವರೆಲ್ಲ ತೊಡಗಿದ ಅನಿಷ್ಟ ಬೀಜಗಳು ಮರವಾಗಿ ವಿಷಗಾಳಿ ಹಬ್ಬಿದಾಗ, ಅವರೇ ಅಧಿಕಾರಕ್ಕೆ ಬಂದ ಮೇಲೆ ಉತ್ತರ ಪ್ರದೇಶದಲ್ಲಿ ಜ್ಯಾರಿಗೆ ತಂದ ಕಾನೂನಿನ ಕಥೆ. ಇದೀಗ ಬೇರೆ ಬೇರೆ ತರದಲ್ಲಿ ಇತರ ಕಡೆಗಳಲ್ಲೂ ಕಾಣುತ್ತಿದೆ. ಮದ್ರಾಸಿನಲ್ಲಿ ಹಿಂದೆ ಹಿಂದೀ ವಿರೋಧಿ ಚಳುವಳಿಯನ್ನು ವಿದ್ಯಾರ್ಥಿಗಳ ಮೂಲಕ ಡಿ. ಎಂ. ಕೆ. ಪಾರ್ಟಿಯವರು ಆರಂಭಿಸಿದರು; ಎಷ್ಟೆಷ್ಟೋ ಹಿಂಸಾಕೃತ್ಯ ಸಂಪನ್ನಾಶಗಳನ್ನು ನಡೆಸಿ ಆ ಮೂಲಕ ಅಧಿಕಾರಾರೂಢರೂ ಆದರು. ಹೀಗೆ, ಬೇರೆಲ್ಲ ಭಾಷೆ ಹೊಡೆದುಹಾಕಿ ತಮಿಳಿನ ಏಕ ಚಕ್ರಾಧಿಪತ್ಯವನ್ನು ಸಾರಿಯೂ ಆಯಿತು. ಆದರೆ ಆ ವಿದ್ಯಾರ್ಥಿ ಚಳುವಳಿಯ ಭಸ್ಮಾಸುರ ಈಗ ಡಿ. ಎಂ. ಕೆ. ಮಹಾಶಿವನನ್ನೇ ಸುಡಹೊರಟಾಗ ಅವರಿಗೀಗ ಎಚ್ಚರವಾಗುತ್ತಿದೆ.

ದ್ವೇಷಾಸೂಯೆಗಳ ರಾಜಕೀಯ:-

ಸ್ನೇಹ ಸಹಕಾರಗಳ ಮೂಲಕ ರಾಜಕೀಯ ನಡೆಸುವುದಕ್ಕಿಂತಲೂ ದ್ವೇಷಾಸೂಯೆಗಳ ಮೂಲಕ ಪಾರ್ಟಿಕಟ್ಟುವುದು ಸುಲಭ. ತತ್ಕಾಲಕ್ಕೆ ಲಾಭದಾಯಕ. ಹಿಂದೂ ದ್ವೇಷದ ಮೂಲಕ ಮುಸ್ಲಿಂಲೀಗ್ ಬಂದುದು ಹಾಗೆಯೇ ಅದೇ ತರದಲ್ಲಿ ಅಂಗ್ರೇಜೀ ಭಾಷೆ ತೊಡೆದು ಹಾಕಿರಿ!; ಹಿಂದೀ ಭಾಷೆಗೆ ಧಿಕ್ಕಾರ! Down with Hindi ಈ ರೀತಿಯ ಸುಲಭದ ಘೋಷಣೆಯ ಮೂಲಕ, ಹಗೆತನವನ್ನು ಹೊಡೆದೆಬ್ಬಿಸಿ ಕೆಲವೆಲ್ಲ ರಾಜಕೀಯ ಪಕ್ಷಗಳು ವಿದ್ಯಾರ್ಥಿಗಳ ಎಳೆ ಮನಸ್ಸನ್ನು ಒಮ್ಮೆಗೆ ಸೆಳೆದುಕೊಂಡುದು ಸ್ವಾಭಾವಿಕ.

ಆದರೆ ತಮಿಳು ಭಾಷೆಯ ಹಿರಿಮೆಯ ಬರೇ ಘೋಷಣೆಯಿಂದ ಹೊಟ್ಟೆ ತುಂಬುವದಿಲ್ಲ; ವಿದ್ಯಾಭ್ಯಾಸ ಮುಗಿಸಿ ಕೆಲಸ ದೊರಕಬೇಕಾದರೆ ಇಂಗ್ಲಿಷ್, ಹಿಂದೀ ಭಾಷೆಗಳ ಅರಿವಿಲ್ಲದೆ ಸಾಧ್ಯವಿಲ್ಲ; ಎಂಬುದೀಗ 3-4 ವರ್ಷಗಳ ಮೇಲೆ ವಿದ್ಯಾರ್ಥಿಗಳಿಗರ್ಥವಾಗುತ್ತಿದೆ. ಮಾತೃ ಭಾಷೆಯ ಮೂಲಕ ಶಿಕ್ಷಣ ನಡೆಯಬೇಕೆಂಬ ಮೂಲತತ್ವ ಸಂಪೂರ್ಣ ಸರಿ; ಆದರೂ ಉಚ್ಚ ವಿದ್ಯಾಭ್ಯಾಸ ವಿಚಾರದಲ್ಲಿ ತಮಿಳು ಮಾಧ್ಯಮ ಈಗಿನ ಕಾಲಕ್ಕೆ ಸರಿಹೋಗುವುದಿಲ್ಲ; ಶಿಕ್ಷಣ ರೀತಿ ನೀತಿಗಳ ಬದಲಾವಣೆಯಲ್ಲಿ ಅವಸರ ಪ್ರವೃತ್ತಿ ಸರಿಯಲ್ಲ; ಎಂದು ಮೊದಲಾಗಿ ದೂರಾಲೋಚನೆಯುಳ್ಳ ಶಿಕ್ಷಣ ತಜ್ಞರು ಹೇಳಿದ ಮಾತಿಗೆ ಸರ್ಕಾರ ಬೆಲೆ ಕೊಡಲೆ, ಇಲ್ಲ. ಭಾವಾವೇಶಕ್ಕೊಳಗಾಗಿ ತಮಿಳು ಶಿಕ್ಷಣ ಮಾಧ್ಯಮವೇ ಉಚ್ಚಮಟ್ಟದಲ್ಲೂ ಇರಬೇಕು. ಸರ್ಕಾರೀ ಕಾಲೇಜುಗಳಲ್ಲಿ ಇಂಗ್ಲಿಷ್ ಮಾಧ್ಯಮವಿರಲೇ ಬಾರದು. ತಮಿಳಲ್ಲಿ ಓದಿದವರಿಗಲ್ಲದೆ ಕೆಲಸ ಸಿಗಬಾರದು; -ಈ ಮೊದಲಾದ ಆಧಿಕ ಪ್ರಸಂಗದ ಭಾಷಾ ಮೋಹ ಇಂದೀಗ ವಿದ್ಯಾರ್ಥಿಗಳನ್ನು ನಡುನೀರಲ್ಲಿ ಕೈಬಿಟ್ಟಿದೆ. ತಮಿಳುನಾಡಲ್ಲಿ ಸಿಗುವ ಉದ್ಯೋಗಾವಕಾಶ ಬಹು ಸ್ವಲ್ಪ ಸಿಕ್ಕಿದರೂ ಅದರ ಭವಿಷ್ಯ ಅಷ್ಟಕ್ಕಷ್ಟೇ. ಹೊರಗಂತು ಸಾಕಷ್ಟು ಇಂಗ್ಲಿಷ್ ಬಾರದ್ದರಿಂದ ತಮಿಳರು ಯಾರಿಗೂ ಬೇಡದವರಾಗಿದ್ದಾರೆ. ಮಾತ್ರವಲ್ಲದೆ ಸಂಕುಚಿತ ಬುದ್ಧಿಯ ಪದವೀಧರರನ್ನು ಕೆಲಸಕ್ಕೆ ತೆಗೆದುಕೊಳ್ಳುವುದು ಅಪಾಯಕಾರಿಯೆಂದು ಹೊರಗಿನವರು ತಿಳಿಯತೊಡಗಿದ್ದಾರೆ. ಹಾಗಾಗಿ Unemployment among our graduates is to a great extent due to their unemployability ಎಂಬೀ ತಜ್ಞರ ಮಾತು ಆ ಯುವಕರಿಗೀಗ ಅರ್ಥವಾಗತೊಡಗಿದೆ.

ಅದರ ಪರಿಣಾಮವಾಗಿ, ಅತಿದೊಡ್ಡ ವಿದ್ಯಾರ್ಥಿ ಗಲಭೆ, ಹೊಡೆದಾಟಗಳು ತಮಿಳುನಾಡಿನಾದ್ಯಂತ ನಡೆದು ಕಾಲೇಜುಗಳನ್ನೆಲ್ಲ ಅನಿರ್ದಿಷ್ಟ ಕಾಲ ಇತ್ತೀಚೆ ಮುಚ್ಚಲಾಯಿತು. ನಗರ ನಗರಗಳಲ್ಲಿ ತಮಿಳು ರ್‍ಯಾಲೀ ನಡೆಸಿ ಘೋಷಣೆ ಹಾಡಿಸಿ, ತಮಿಳಿನ ಹಿರಿಮೆಯ ಮೆರವಣಿಗೆ ವ್ಯವಸ್ಥೆಗೊಳಿಸಿ ಯುವಕರ ಬಾಯಿ ಮುಚ್ಚಿಸಬೇಕೆಂಬ ಮುಖ್ಯ ಮಂತ್ರಿಗಳ ಸೋಗೂ ಮಕ್ಕಳಿಗೆ ಬೇಡವಾಯಿತು. 'ಬಾಯಾರಿದಾತಂಗೆ ಬೇಕಾದ್ದು ನೀರು; ಕಾವ್ಯರಸವಲ್ಲ' 'ಯಾವ ಕಂಪೆನಿಯೂ ತಮಿಳು ಗೀತೆಗೊಲಿದು ಕಸುಬು ಕೊಡದು' ಎಂಬುದೀಗ ಎಲ್ಲರಿಗೂ ಅರ್ಥವಾಗುತ್ತಿದೆ.

ಇದೀಗ ರಾಜಕೀಯ ಗಾಳಿಗೆ ಶಿಕ್ಷಣ ರಂಗ ಒಳಗಾದರೆ ಆಗುವ ಅಪಾಯಕ್ಕೊಂದೆರಡು ಉದಾಹರಣೆ ಮಾತ್ರ.

ಗುರುಗಳ ರಾಜಕೀಯ:

ಇದೀಗ ವಿದ್ಯಾರ್ಥಿಗಳಿಗೆ ರಾಜಕೀಯ ಮದ್ಯಪಾನ ಮಾಡಿಸಿದ್ದರ ಪರಿಣಾಮದ ಕಥೆಯಾದರೆ, ಇನ್ನು ರಾಜಕೀಯ ಪ್ರಭಾವಕ್ಕೊಳಗಾದ ಗುರುಗಳ ಮೂಲಕವಾಗುವ ಅನರ್ಥಗಳಿಗೆ ತುದಿ ಬುಡವೇ ಇಲ್ಲ. ಕೇರಳ, ಪಶ್ಚಿಮ ಬಂಗಾಳಗಳಲ್ಲಿ ವಾಮ ಪಕ್ಷದ ಸರ್ಕಾರ ರಾಜ್ಯಭಾರ ನಡೆಸುತ್ತಿದ್ದಾಗ ತಂತಮ್ಮ ಪಕ್ಷದ ಒಲುಮೆಗೊಳಗಾದ ಅಧ್ಯಾಪಕರನ್ನೆಲ್ಲ ಶಿಕ್ಷಣರಂಗದಲ್ಲಿ ತುಂಬಿ ಬಿಡಲಾಯಿತು. ಇದೀಗ ವಿದ್ಯಾರ್ಥಿಗಳನ್ನು ಹಿಡಿಯುವುದಕ್ಕಿರುವ ದೊಡ್ಡ ಗಾಳವಾಗಿ ಪರಿಣಮಿಸಿದೆ. ಕಲ್ಕತ್ತಾದ ಎಷ್ಟೋ ಕಾಲೇಜುಗಳ ಹೊಡೆದಾಟ ಹಿಂಸಾಚಾರಗಳಿಗೆ ಅಂತಹ ರಾಜಕೀಯ ತಜ್ಞ ಅಧ್ಯಾಪಕರೇ ಸೂತ್ರಧಾರರಾಗಿದ್ದಾರಂತೆ. ಆದರೆ ಬರಬರುತ್ತ ಅದೇ ಉಗ್ರ ರೂಪತಾಳಿ ಈಗಂತು ಬೆಂಕಿ ಇಟ್ಟಾತನ ಚಿಂಕೆಗೂ ಮೀರಿದ ಜ್ವಾಲಾಮುಖಿಯಾಗಿ ಅಲ್ಲಿಯ ಪರಿಸ್ಥಿತಿ ಪರಿಣಮಿಸಿದೆ. ಎಲ್ಲವನ್ನೂ ಸುಟ್ಟುಹಾಕುತ್ತಿದೆ. ಶಾಲಾ ಕಾಲೇಜುಗಳೆಲ್ಲ ಅನಿರ್ದಿಷ್ಟಕಾಲ ಮುಚ್ಚಿಹೋಗಿವೆ. ಕಳೆದ ವರ್ಷ ತೆಲಂಗಾಣದ ಕಥೆಯೂ ಅದೇ ತರವಾಯಿತು. ಹಸುವಿಗೆ ಕಾಯಿಲೆಯಾದರೆ ಕೋಣನಿಗೆ ಬರೆ ಎಳೆದಂತಾಗಿದೆ. ತೆಲಂಗಾಣದಲ್ಲಿ ಬಡತನವಿದ್ದರೆ ಶಾಲಾ ಮಕ್ಕಳು ಕ್ಲಾಸಿಗಾಗಲಿ, ಪರೀಕ್ಷೆಗಾಗಲಿ ಹೋಗಬಾರದೆಂದು ಅಲ್ಲಿಯ ಮುಂದಾಳುಗಳೇ ಉಪದೇಶಿಸಿದರು. ಮಕ್ಕಳೆಲ್ಲ ಬೀದಿಪಾಲಾಗಿ, ಅಮೂಲ್ಯ ಶಿಕ್ಷಣಾವಕಾಶವನ್ನು ಒಂದೆರಡು ವರ್ಷ ಕಳೆದುಕೊಂಡರು. ಬಡತನ ಮತ್ತಷ್ಟು ಹೆಚ್ಚುವಂತಾಯಿತು.

ಈ ವಿಚಾರದಲ್ಲಿ ಮೈಸೂರು ರಾಜ್ಯವೂ ಬಹಳ ಹಿಂದೆ ಬಿದ್ದಿಲ್ಲ. ವರ್ಷಕ್ಕೊಮ್ಮೆ ಮೈಸೂರು, ಬೆಂಗಳೂರು ಹಾಗೂ ಸುತ್ತಮುತ್ತಣ ಶಾಲಾ ಕಾಲೇಜುಗಳಿಗೆ ಒಂದೆರಡು ತಿಂಗಳಾದರೂ ಗಲಭೆಯ ರಜೆ ಬಾರದೆ ಸಾಧ್ಯವೇ ಇಲ್ಲ. ಅಧಿಕಾರದಲ್ಲಿದ್ದವರು ಸ್ವಾರ್ಥ ರಾಜಕೀಯ ಶಿಕ್ಷಣ ಕ್ಷೇತ್ರದೊಳಗೆ ನಡೆಸಿ, ಹುದ್ದೆಗಳಿಗೆಲ್ಲ ತಮಗೆ ಬೇಕಾದವರನ್ನೇ ತುಂಬಿಸುವಲ್ಲಿ ಎಂತಹ ಕೆಲಸಕ್ಕೂ ಹಿಂಜರಿಯಲಿಲ್ಲ. ಅದರ ಅರ್ಥ ವಿದ್ಯಾರ್ಥಿಗಳಿಗೂ ಆಗದೆ ಹೋಗಿಲ್ಲ. ಆಗ ಅಧಿಕಾರದಲ್ಲಿಲ್ಲದ ಪುಢಾರಿಗಳು ಅದನ್ನೇ ದೊಡ್ಡದಾಗಿಸಿ ವಿದ್ಯಾರ್ಥಿ ನಾಯಕರ ಮೂಲಕ ಸೇಡು ತೀರಿಸಿಕೊಂಡರು. ಹಲವಾರು ಪ್ರಾಣ ಹಾನಿ. ಸಾಕಷ್ಟು ಸಂಪನ್ನಾಶ–ಇವೆಲ್ಲ ಪ್ರತಿವರ್ಷದ ರೂಢಿಯ ಮಾತಾಗಿದೆ. ಈ ತರದ ವಾತಾವರಣದಲ್ಲಿ ಮಿತಿಮೀರಿದ ಮೋಸ ಅನ್ಯಾಯಗಳಾಗದಂತೆ ನೋಡಿಕೊಳ್ಳುವುದು ಅಧಿಕಾರಸ್ಥರ ಕರ್ತವ್ಯವಾದರೆ ಅಧಿಕಾರದಿಂದ ಹೊರಗಿರುವರು ಅದರ ದುರುಪಯೋಗ ಸ್ವಾರ್ಥಕ್ಕಾಗಿ ಮಾಡಿಕೊಳ್ಳಬಾರದು. ಅವರೆ, ಎಂತಹ ಸಂದರ್ಭದಲ್ಲೂ ವಿದ್ಯಾರ್ಥಿಗಳು ಮಾತ್ರ ತಮ್ಮ ಸ್ವಂತ ಬುದ್ಧಿ ಉಪಯೋಗಿಸುವುದು ಬಹು ಮುಖ್ಯ.

ಇನ್ನೀಗ ಮದ್ರಾಸಿನವರು ಮಾಡಿದ ತಮಿಳು ವ್ಯಾಮೋಹದ ಕಥೆಯನ್ನು ಕನ್ನಡ ವ್ಯಾಮೋಹಕ್ಕೊಳಗಾದ ನಮ್ಮ ಕೆಲ ಹಿರಿಯರೂ ನಡೆಸುವುದರಲ್ಲಿದ್ದಾರೆ. ಶಿಕ್ಷಣ ವಿಚಾರದಲ್ಲಿ ತಜ್ಞರ ಮಾತಿಗೆ ಬೆಲೆ ಕೊಡಬೇಕಾದ್ದು ಸರಿಯಾದರೂ ಶಿಷ್ಯರ ಅಭಿಪ್ರಾಯಕ್ಕೂ ಬೆಲೆ ಇರಬೇಕು. ಹೆತ್ತವರ ಅಪೇಕ್ಷೆಗೂ ಗೌರವ ಕೊಡಬೇಕು. ಅದಿಲ್ಲದೆ ತಮಗಧಿಕಾರವಿದೆಯೆಂಬ ದರ್ಪದಿಂದ ಆಳಲಾರಂಭಿಸಿದರೆ ಪರಿಣಾಮ ನೆಟ್ಟಗಾಗದು. ಬರುವ ವರ್ಷದಿಂದ ಎರಡು ವರ್ಷದ ಪಿ. ಯು. ಸಿ ಬರಲಿದೆ. ಅಲ್ಲಿ ಕನ್ನಡ ಮಾಧ್ಯಮ ಖಡ್ಡಾಯವಾಗಬೇಕೆಂಬ ನಿಯಮ ಸಹ ಬರಲಿದೆಯಂತೆ. ಇದನ್ನು ಬಲಾತ್ಕಾರದಿಂದ ಹೇರಿದ್ದಾದರೆ ಬರುವ ವರ್ಷದ ರಾಜ್ಯಾದ್ಯಂತದ ಗಲಭೆಗೆ ಇದೇ ಒಂದು ಕಾರಣವಾಗಲೂ ಬಹುದು. ಹಾಗಾಗಿ, ನೆರೆ ಪ್ರಾಂತದವರ ಗೊಂದಲದ ಕಥೆ ನೋಡಿ, ಕೇಳಿಯಾದರೂ ನಮ್ಮವರಿಗೆ ಜ್ಞಾನೋದಯವಾದೀತೆಂದು ಹಾರೈಸೋಣ.

ಇಷ್ಟರಲ್ಲೇ ನಡೆಯುವ ನಮ್ಮ ಚುನಾವಣೆಯ ಕಾಲದಲ್ಲಿ ನಮ್ಮ ನಾಯಕರು ಶಿಕ್ಷಣ ರಂಗದಿಂದ ದೂರವಿದ್ದರೆ ಅವರಿಗೂ ಹಿತ; ದೇಶಕ್ಕೂ ಕ್ಷೇಮ. ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಹೊರಗಿನ ರಾಜಕೀಯದ ಆಗು ಹೋಗುಗಳನ್ನು ಅರ್ಥಮಾ

(ಮೂವತ್ತಾರನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:— ಮೈಸೂರು, ಬೆಂಗಳೂರು ಮತ್ತು ಮಂಗಳೂರು.

ವಿದ್ವಾನ್ ಕೆ. ವೆಂಕಟರಾಯಾಚಾರ್ಯ

ಭೀಷ್ಮನು ಬ್ರಹ್ಮಚಾರಿಯೆ, ವಿವಾಹಿತನೆ?

ಅಷ್ಟವಸುಗಳಲ್ಲಿ ಎಂಟನೆಯವನಾದ ದ್ಯೌ ಗಂಗೆಯಲ್ಲಿ ಶಂತನುವಿಗೆ ಹುಟ್ಟಿ ದೇವವ್ರತನೆನಿಸಿ ಭೀಷ್ಮನೆಂದು ಪ್ರಸಿದ್ಧನಾದವ. ಈತನು ಬಾಲಬ್ರಹ್ಮಚಾರಿ [illegible] ಆದರೆ ವಿವಾಹಿತನೆಂದು [illegible] ಹೇಳುವುದು [illegible] ಎನ್ನುತ್ತಾರೆ [illegible].

ವೇದವ್ಯಾಸ ರಚಿತ ಮಹಾಭಾರತವು ಹಿಂದೂ ದೇಶದ ಪ್ರಾಚೀನ ಚರಿತ್ರೆಯನ್ನು ನಿರೂಪಿಸುವ ಪ್ರಾಚೀನತಮ ಹಾಗೂ ಲೋಕ ಪೂಜ್ಯ ಕೃತಿರತ್ನವೆಂದು ಸುಪ್ರಸಿದ್ಧವು ಮೊತ್ತ ಮೊದಲಿಗೆ 'ಜಯ'ವೆಂಬ ಹೆಸರಿಂದಲೇ ಅದು ಪ್ರಖ್ಯಾತವಾಗಿತ್ತು. ಆಗಣ ಅದರ ಮೌಲಿಕ ರೂಪದ ಅಂಕೆಯು ಅಲ್ಲಿ ಬೇರೆ ಹೇಳಲಾಗಿದೆ. "ಭಾರತ-ಮಹಾಭಾರತ ಧರ್ಮಾಚಾರ್ಯ"ರೆಂದು ಆಶ್ವಲಾಯನ ಸೂತ್ರದಲ್ಲಿ ಹೇಳಿರುವುದರಿಂದ, 'ಜಯ'ವು "ಭಾರತ"ವಾಗಿ ವಿಸ್ತಾರಗೊಂಡುದಲ್ಲದೆ, ಮುಂದೆ "ಮಹಾಭಾರತ"ವೆಂದೂ ರೂಪಾಂತರಗೊಂಡಿದೆಯೆನ್ನಲು ಅನುವಿದೆ ಈ ಮಹಾಭಾರತ ಗ್ರಂಥವೆಂದರೆ ಒಂದು ಲಕ್ಷ (ನೂರು ಸಾವಿರ "ಅನುಷ್ಟುಪ್" ಶ್ಲೋಕಗಳಷ್ಟು ವಿಸ್ತೃತವೆಂದು ಹೇಳುತ್ತಾರೆ ಇತ್ತೀಚೆಗೆ ಪುಣೆಯ ಭಾಂಡಾರ್ಕರ್ ಪ್ರಾಚ್ಯ ಸಂಶೋಧನಾ ಸಂಸ್ಥೆಯಿಂದ ಪ್ರಕಟವಾದ ಪ್ರತಿಯಲ್ಲಿ ಹಲವಾರು ಅಮುದ್ರಿತ—ಮುದ್ರಿತ ಪ್ರತಿಗಳ ನಿರೀಕ್ಷೆಯಿಂದಲೂ, ಕೆಲವೊಂದು ವ್ಯಾಖ್ಯಾನಗಳ ಪರಿಶೀಲನೆಯಿಂದಲೂ ಈ ಮಹಾಭಾರತದ ಮೌಲಿಕ ಕೃತಿಯೆಷ್ಟೆಂದು ಬೇರೆ ತಿಳಿಯಲನುವಿದೆ: ಅದರ ಆದಿ ಪರ್ವದಲ್ಲಿ ಒಟ್ಟು ೨೨೫ ಅಧ್ಯಾಯಗಳಿದ್ದು, 7243 ಶ್ಲೋಕಗಳು ಮಾತ್ರ ಸಂಕಲಿತವಾಗಿವೆ ಹಾಗೆ, ಸಭಾಪರ್ವದಲ್ಲಿ ಒಟ್ಟು 72 ಅಧ್ಯಾಯಗಳಿದ್ದು, ಅಲ್ಲಿ 2390 ಶ್ಲೋಕಗಳು ಸಂಕಲನವಾಗಿವೆ. (ಈ ತರದಲ್ಲಿಯೇ ಇತ್ತೀಚೆಗೆ ವಾಲ್ಮೀಕಿ ರಾಮಾಯಣದ ಸಾರ್ವತ್ರಿಕ ನಿರೂಪಿತ ಪ್ರತಿಯೊಂದು ಹೈದರಾಬಾದಿನಲ್ಲಿ ಸಿದ್ಧವಾಗುತ್ತಿದೆ). ಇಂತಹ ಕ್ಲಪ್ತ ಪ್ರತಿಯೇ ನಮಗೆ ಮಾರ್ಗದರ್ಶಕವಾಗಬಲ್ಲುದು ಎಂದು ತಿಳಿಯಲೆಡೆಯಿದೆ. ಆದರೆ, ಪ್ರಾಚೀನದ ಕೆಲವು ವ್ಯಾಖ್ಯಾನಗಳೂ ಇಲ್ಲಿ ಅತ್ಯವಶ್ಯವಾಗಿ ಗಮನೀಯಗಳೇ ಸೈ! ಅಂತೆ ಉಡುಪಿಯ ಸೋದಾಮಠದ ಶ್ರೀ ವಾದಿರಾಜರು (16ನೆ ಶತಕ) ಬರೆದ "ಲಕ್ಷಾಭರಣ"ವೆಂಬ ವ್ಯಾಖ್ಯೆಯು ಪುಣೆಯ ಆಧುನಿಕ ಪ್ರತಿಯಲ್ಲಿ ಆಧಾರವೆಂದು ಪರಿಗಣಿತವಾಗಿಲ್ಲೆಂದು ಶ್ರೀ ಆಲೂರ ವೆಂಕಟರಾಯರು ಬೇರೆಡೆ ಬರೆದಿದ್ದರು. ಅಂತೆ; ನೀಲಕಂಠ (17ನೆ ಶತಕ) ಬರೆದ ವ್ಯಾಖ್ಯಾನದಲ್ಲಿ ಕೆಲವೊಂದು ವಿಚಾರ ಕಣಗಳು ವಿಶೇಷತಃ ಹೇಳಲಾಗಿವೆ. ಇಂತಹ ಪ್ರಾಚೀನ ವ್ಯಾಖ್ಯಾನಗಳ ಆಧಾರದಿಂದ ವ್ಯಾಸಕೃತ ಮಹಾಭಾರತದ ಇತಿಮಿತಿಯು ನಿರೂಪಿಸಲು ವಿಶೇಷ ಜ್ಞಾನಕ್ಕೆ—ಶಕ್ಯವಿದೆಯೆಂದು ತಿಳಿಯಬಹುದಾಗಿದೆ.

ಪ್ರಕೃತ ಲೇಖದಲ್ಲಿ, 'ನೀಲಕಂಠೀಯ' ವ್ಯಾಖ್ಯೆಯಲ್ಲಿ ಕೆಲವೆಡೆ ಕಾಣುವಂತೆ, ಭೀಷ್ಮನು ಬ್ರಹ್ಮಚಾರಿಯೆ? ವಿವಾಹಿತನೆ?" ಎಂಬ ಬಗೆ ತುಸ ವಿವೇಚಿಸಲಾಗಿದೆ. ಇದು ಕೇವಲ "ಅಂಧಾನುಕರಣ"ವಲ್ಲ, ಪ್ರಾಚೀನ ಪುರುಷರ—ಕೃತಿಗಳ ಬಗೆಗೆ "ಉಪೇಕ್ಷಾದೃಷ್ಟಿ"ಯಲ್ಲ! (ಶ್ರೀ ಕೃಷ್ಣನು "ಷೋಡಶಸ್ತ್ರೀ ಸಹಸ್ರೇಶ"ನಾದರೂ 'ಬ್ರಹ್ಮಚಾರಿ'ಯೆಂದೂ ಹೇಳುವುದಿದೆ); ಹಾಗಾದರೆ, 'ಭೀಷ್ಮನು ಬ್ರಹ್ಮಚಾರಿ'ಯೆಂದರೆ ವಿವಾಹಿತನಾಗಿದ್ದು, ಕಳತ್ರರನ್ನು ಬಿಟ್ಟು ಹಾಗೂ ಪುತ್ರರನ್ನು ಜನಿಯಿಸದೆ "ನೈಷ್ಠಿಕ ಬ್ರಹ್ಮಚಾರಿ"ಯಾಗಿದ್ದನೆಂದು ಅರ್ಥವಿಸಿದರೆ ಅಗೌರವವಲ್ಲ!

ನಾನು ಕಳೆದ ಇಪ್ಪತ್ತು ವರ್ಷಗಳಲ್ಲಿ ಆಯಾ ಕಡೆಗಳ ಪತ್ರಿಕೆಗಳಲ್ಲಿ ಈ ವಿಚಾರದ ಲೇಖ ತಕ್ಕಂತೆ ವಿವರಿಸಿ ಬರೆದಿದ್ದೇನೆ. ಅಯೋಧ್ಯೆಯ "ಸಂಸ್ಕೃತ" ಸಾಪ್ತಾಹಿಕ; ಮಂಗಳೂರಿನ 'ಕಂಠೀರವ' ಸಾಪ್ತಾಹಿಕ, ಧಾರವಾಡದ "ಜಯ ಕರ್ನಾಟಕ" ಮಾಸಿಕ; ಮಂಗಳೂರಿನ 'ಪ್ರಭಾತ' ಸಾಪ್ತಾಹಿಕ; ಉಡುಪಿಯ 'ಉದಯವಾಣಿ' ದೈನಿಕಗಳಲ್ಲಿ ಈ ಬಗೆಗೆ ನನ್ನ ಲೇಖನಗಳು ಪ್ರಕಟವಾಗಿವೆ!

ಆದರೆ, ಇದೇ ಇಸವಿಯಲ್ಲಿ ಪ್ರಕಟವಾದ "ಉದಯವಾಣಿ"ಯ ಲೇಖನ ನೋಡಿದವರೊಬ್ಬರು—ವಾಚಕರು — ಈ ಬಗೆಗೆ ತುಸ ಶಂಕಿಸಿದರು: ಅಷ್ಟವಸುಗಳಲ್ಲೊಬ್ಬ ಭೀಷ್ಮನಾಗಿ ಅವತರಿಸಿದ್ದು, ಆತನಿಗೆ ವಸಿಷ್ಠನ ಶಾಪವಿರುವುದನ್ನು ಆ ಶಂಕಿಸಿ ಬರೆದರು. ಅಂತೆ, ವ್ಯಾಸ ಭಾರತದಲ್ಲಿರುವ ವಸುಗಳ ಶಾಪದ ವಿಷಯವನ್ನೆ ಇಲ್ಲಿ ಮೊದಲಾಗಿ ಬರೆಯ ಬೇಕೆಂದಿದೆ. (ಅದಾಗಿ. ಭೀಷ್ಮನು ಅಂಬೆಯನ್ನು ಕರಕೊಂಡು ಬಂದ ಸಂಗತಿಯಲ್ಲಿ ಈ ಬಗೆಗೆ ಏನಾದರೂ ಶಂಕೆಗಳಿವೆಯೋ ಎಂದೊಬ್ಬರು ಪ್ರಶ್ನಿಸಿದರು. ಇಲ್ಲಿ ಆ ಸಂಗತಿಯನ್ನು ಬರೆಯಲು ಎತ್ತಿಕೊಳ್ಳಬೇಕಾಗಿಲ್ಲ. ನೀಲಕಂಠೀಯ ವ್ಯಾಖ್ಯೆಯಲ್ಲಿ ಅದಾವ ತರದ ನಿರೂಪಣೆಯಿದೆ. ಅದೇಕೆ ಸರಿಯೆಂಬುದನ್ನು ಇಲ್ಲಿ ಸೂಚಿಸಬೇಕಾಗಿದೆ.

With best compliments from:

HOTEL SATKAR

Boarding, Lodging & Restaurant

Behind Corporation Office,
9 MISSION ROAD

BANGALORE-27

Phone No—
1 72303
2 72304

Grams :
HOSTSATKAR

Vegetarian Cuisine

Attached Bath Rooms & Phones

Running H and C water.

Moderate Charges

Railway Station, Laundry, Post office and
Entertainment Area Nearby.

Large airy Rooms; Roof garden
Quiet, Calm Atmosphere
Personalised service.

Props: T. S. SHETTY & SONS

ವಸುಗಳಿಗೆ ಶಾಪದ ಕತೆ

ಮೇರುವಿನ ತಪ್ಪಲಲ್ಲಿ ವರುಣನ ಪುತ್ರನಾದ ವಸಿಷ್ಠನು ವಾಸಿಸಿದ್ದನು. ಆತನು ಹೋಮಧೇನುವನ್ನು ಸಾಕಿದ್ದನು. ಆದೊಮ್ಮೆ ಅಲ್ಲಿಗೆ ಅಷ್ಟವಸುಗಳು ಹೆಂಡಿರೊಂದಿಗೆ ಬಂದು ವಿಹರಿಸುತ್ತಿದ್ದರು. ಅವರಲ್ಲೊಬ್ಬನ ಹೆಂಡತಿ ಆ ವಸಿಷ್ಠನ ನಂದಿನೀ ಧೇನುವನ್ನು ಕಂಡಳು. ತನ್ನ ಗಂಡನಿಗೆ ಅದನ್ನು ಕಾಣಿಸಿದಳು. "ಆ ಧೇನುವಿನ ಹಾಲನ್ನು ಕುಡಿದರೆ ಹತ್ತು ಸಾವಿರ ವರುಷ ಯೌವನದಿಂದ ಜೀವಿಸಬಹುದೆಂದು" ಆತ ಹೇಳಿದನು. ಆಕೆ 'ನರಲೋಕದ ತನ್ನ ಗೆಳತಿ ಜಿತವತಿಗೆ (ಉಶೀನರನ ಮಗಳಿಗೆ) ಇದನ್ನು ಕೊಡಿಸಬೇಕೆಂದು' (ಅದರಿಂದಾಕೆ ಜರಾಮರಣರಹಿತಳಾಗಲೆಂದು ಹೇಳಿದಳು. ಆಕೆಯ ಗಂಡನು (ದ್ಯೌ) ಮಿಕ್ಕೆಲ್ಲರೊಂದಿಗೆ ಆ ಧೇನುವನ್ನು ಅಪಹರಿಸಿದನು ಆವರೆ, ಅನಂತರ ಒದಗುವ 'ಪ್ರಪಾತ'ವನ್ನು ತಿಳಿದಿಲ್ಲ.

ವಸಿಷ್ಠನು ಆಶ್ರಮಕ್ಕೈದಿ ಧನವನ್ನು ಕಾಣದೆ. ದಿವ್ಯ ಜ್ಞಾನದಿಂದ ಯಥಾರ್ಥವನ್ನು ತಿಳಿದು, ಶಾಪಕ್ಕೆಳಸಿದನು; ಅದನ್ನು ಅಪಹರಿಸಿದ ಕಾರಣ ಅವರೆಲ್ಲಾ 'ಅಷ್ಟವಸುಗಳು) ಮನುಷ್ಯರಲ್ಲಿ ಜನಿಸುವಂತೆ ಶಪಿಸಿದನು. ಇದನ್ನು ತಿಳಿದ ಅಷ್ಟ ವಸುಗಳು ವಸಿಷ್ಠನಲ್ಲಿಗೈದಿ ಆ ಶಾಪ ಪರಿಹಾರಕ್ಕೆ ಬೇಡಿದರು. "ನೀವು ಅನು ಸಂವತ್ಸರ ರೀತಿಯಲ್ಲಿ ಒಬ್ಬೊಬ್ಬ ಒಂದೊಂದು ವರ್ಷ ಬಿಡುವಿನಲ್ಲಿ) ಭೂಮಿಯಲ್ಲಿ ಜನಿಸಿ ಮೋಕ್ಷವನ್ನು ಪಡೆಯಿರಿ; ಆವನಿಗಾಗಿ ನೀವೆಲ್ಲರೂ ಸೇರಿ ಶಪಿಸಲ್ಪಟ್ಟರೋ, ಆ ಕೊನೆಯವನಾದ ದ್ಯೌ ನಾಮಕ ವಸುವು ಭೂಲೋಕದಲ್ಲಿ 'ದೀರ್ಘಕಾಲ' ವಾಸಿಸಲಿ. ನಾನು ಶಪಿಸಿದುದನ್ನು ಸುಳ್ಳಾಗಿಸಲಾರೆನು. ಇವನಾದರೋ, ಮನುಷ್ಯರಲ್ಲಿ ಸಂತತಿಯನ್ನು ಹುಟ್ಟಿಸದಿರಲಿ. ಈತ ಸರ್ವ ಶಾಸ್ತ್ರ ವಿಶಾರದನಾಗಿಯೂ ಧರ್ಮಾತ್ಮನಾಗಿಯೂ ಇರುವನು. ತಂದೆಯ ಪ್ರಿಯ—ಹಿತದಲ್ಲಿ ಯುಕ್ತನಾಗಿ ಸ್ತ್ರೀ ಭೋಗಗಳನ್ನು ವರ್ಜಿಸುತ್ತಾನೆ ಎಂದು ವಸಿಷ್ಠನಾಡಿದನು.

ಆ ಮೇರೆಗೆ ಭೂಲೋಕದಲ್ಲಿ ಶಂತನುವಿನಿಂದ ಗಂಗೆಯಲ್ಲಿ ಅವರೆಲ್ಲಾ ಅವತರಿಸಿ,(ಜನಿಯಿಸಿ) ಹುಟ್ಟಿದೊಡನೆ ಆಕೆಯಿಂದ ಎಸೆಯಲ್ಪಟ್ಟು ಶಾಪದಿಂದ ಮುಕ್ತರಾದರು. ಕೊನೆಯ ವಸುವೇ ದೇವವ್ರತನೆಂದು(ಗಂಗಾದತ್ತನೆಂದು) ಹೆಸರಿನಿಂದ ಪ್ರಖ್ಯಾತನಾಗಿರುವನೆಂದು (ಹಲವು ವರುಷ ಬಾಳುವನೆಂದು)ಗಂಗೆಯೇ ಶಂತನುಗೆ ಹೇಳಿದುದು ವರ್ಣಿಸಲಾಗಿದೆ! (ಗೋರಖಪುರದ ಗೀತಾಪ್ರೆಸ್ಸಿನ ಹಿಂದೀ ಭಾಷಾಂತರದ ಕೂಡ ಇರುವ ವ್ಯಾಸ ಭಾಗತದ ಆದಿ ಪರ್ವ 99 - 39, ಪುಣೆಯ ಭಾಂ. ಸಂಸ್ಥೆಯ ಪ್ರತಿ 93 37 ನೋಡಿ)

ಈ ತರದ ಮೌಲಿಕಕತೆಯನ್ನು ಆ ಶಂಕೆಗಾರರು ಪರಿಶೀಲಿಸದೆ, ವಸುಗಳಿಗೆ ವಸಿಷ್ಠನು ಶಾಪ ಕೊಟ್ಟುದರಿಂದ ಭೀಷ್ಮನು ಅವಿವಾಹಿತನಾಗಿ ಹಾಗೂ ಆಬಾಲ ಬ್ರಹ್ಮಚಾರಿಯಾಗಿ ಇರಬೇಕೆಂದು ಭಾವಿಸುವುದು ತಪ್ಪಾಗುತ್ತದೆ. ಈ ಮೇಲಿನ ಶಾಪದ ಮೂರು ಶ್ಲೋಕಗಳು—ಭೀಷ್ಮನು ವಿವಾ

(ಮೂವತ್ತನಾಲ್ಕನೇ ಪುಟ ನೋಡಿರಿ)

ಶ್ರೀ ನವಗಿರಿನಂದ

ಗುಣದರ್ಶಿನಿ

ದಾನ ನೀಡುವುದೇನೋ ಒಳ್ಳೆಯದು. ಆದರೆ, ಪಾತ್ರಾಪಾತ್ರವರಿಯದೆ ದಾನ ನೀಡಿದರೆ, ಅದು ಅತ್ಯಕ್ತ ಶಾಪವೇ ಆಗಿ ದಾನಿಯನ್ನೇ ಕಾಡತೊಡಗುತ್ತದೆ. "ಸತ್ಪಾತ್ರದೊಳ್ ದಾನಮಂ ಇಡಬೇಕು" ಎಂಬುದರಲ್ಲಿ ಸತ್ಯವಡಗಿಲ್ಲವೆ?

ಒಂದಾನೊಂದು ಊರಿನಲ್ಲಿ ಶ್ಯಾಮ ಪ್ರಭು ಎಂಬ ಭಾರಿ ದೊಡ್ಡ ಶ್ರೀಮಂತನಿದ್ದ. ಎಷ್ಟು ಶ್ರೀಮಂತನೋ ಅಷ್ಟೇ ಧರ್ಮಬುದ್ಧಿಯುಳ್ಳವನು. ಎಲ್ಲರೂ ಅವನನ್ನು ಕಲಿಯುಗದಕರ್ಣ ಎಂದು ಹೇಳುತ್ತಿದ್ದರು. ದಿನಾ ಅತಿಥಿ ಅಭ್ಯಾಗತರಿಂದ ಅವನ ಮನೆ ತುಂಬಿಕೊಂಡೇ ಇರುತ್ತಿತ್ತು. ಯಾರು ಬಂದು ತಮ್ಮ ಕಷ್ಟ ಹೇಳಿಕೊಂಡು ಸಹಾಯ ಕೇಳಿದರೂ ಇಲ್ಲವೆನ್ನುತ್ತಿದ್ದಿಲ್ಲ. ಅವನ ಹತ್ತಿರ ಯಾಚನೆಗೆ ಬಂದವರು ಬರಿಗೈಯಿಂದ ಹಿಂದಿರುಗಿದ್ದಿಲ್ಲ.

ಹೀಗಿರುವಾಗ ಅಂತಹ ಧರ್ಮಪ್ರಭುವಿಗೆ ಯಾವುದೋ ಒಂದು ರೋಗವು ಅಂಟಿಕೊಂಡಿತು. ಅದೊಂದು ವಾತರೋಗದ ಹಾಗೆ ಅವನನ್ನು ಪೀಡಿಸಲಾರಂಭಿಸಿತು. ದಿನಾ ವೈದ್ಯಚಿಕಿತ್ಸೆ ಸಾಗುತ್ತಿದ್ದರೂ ಅದೇನೂ ವಾಸಿಯಾಗುವಂತೆ ಕಾಣಲಿಲ್ಲ. ಯಾವುದೋ ಪೂರ್ವ ಜನ್ಮದ ಪಾಪಶೇಷವೇ ತನ್ನನ್ನು ಹೀಗೆ ಬಾಧಿಸುವುದು ಎಂದುಕೊಂಡನು.

ಆದರೂ ಅವನು ತನ್ನ ದಾನ ಧರ್ಮಗಳನ್ನು ಎಂದಿನಂತೆ ಸಾಗಿಸಿಕೊಂಡೇ ಇದ್ದನು.

ಒಂದು ದಿನ ಅವನ ಮನೆಗೆ ಒಬ್ಬ ಯೋಗಿಪುಂಗವನು ಅಭ್ಯಾಗತನಾಗಿ ಬಂದು, ಶ್ಯಾಮಪ್ರಭುವಿನಿಂದ ಆದರಾತಿಥ್ಯಗಳನ್ನು ಪಡೆದನು. ಸಂತೃಪ್ತನಾದ ಆತನು ಶ್ಯಾಮಪ್ರಭುವಿನ ರೋಗದ ಸಂಗತಿಯನ್ನು ಕೇಳಿ ಹೀಗೆಂದನು:

ಇದು ಪೂರ್ವ ಜನ್ಮದ ಪಾಪಶೇಷದ ಪೀಡೆಯೇನೂ ಅಲ್ಲ. ಪರಿಶುದ್ಧ ಚರಿತ್ರೆಯುಳ್ಳವರು ತಿಳಿಯದೆ ಏನಾದರೂ ತಪ್ಪು ಮಾಡಿದಾಗ ಅದರ ಪ್ರತಿಕ್ರಿಯೆ ಕೂಡಲೇ ಕಾಣಿಸುವುದುಂಟು. ಹಾಗೆ ಕಾಣಿಸಿದ್ದೇ ನಿನಗೆ ಬಂದಿರುವ ಈ ರೋಗ. ನೀನು ಮಾಡಿದ ತಪ್ಪು ಏನೆಂದು ಕೇಳುವಿಯಾ? ಯಾರು ಏನು ಕೇಳಿದರೂ ಇಲ್ಲವೆನ್ನದೆ ಕೊಡುತ್ತೀ. ಪಾತ್ರಾಪಾತ್ರವರಿಯದೆ ಕೊಡುವ ದಾನದಿಂದ ಅನ್ಯಾಯಕ್ಕೆ ಪ್ರೋತ್ಸಾಹ ಕೊಟ್ಟ ಹಾಗಾಯಿತು. ಅದರಿಂದ ನಿನಗೆ ಪರೋಕ್ಷ ಪಾಪದೋಷ ಅಂಟಿಕೊಂಡಿತು. ನಾನು ಒಂದು ಮಣಿ ನಳಿಕೆ ಕೊಡುತ್ತೇನೆ. ಮೂರು ವರ್ಷಗಳ ವರೆಗೆ ಅದು ಪ್ರಯೋಜನವಾಗಿರುತ್ತೆ. ಮನುಷ್ಯರ ಯೋಗ್ಯಾಯೋಗ್ಯತೆಗಳನ್ನು ಆ ನಳಿಕೆಯಿಂದ ನೋಡಿ ದಾನ ಧರ್ಮ ಮಾಡು. ನಿನ್ನ ರೋಗವು ವಾಸಿಯಾಗುತ್ತದೆ. ನಳಿಕೆಯ ಪ್ರಯೋಜನ ತೀರುವಷ್ಟರಲ್ಲಿ ಪಾತ್ರಾಪಾತ್ರವಿವೇಚನೆಯನ್ನು ಕೈಗೂಡಿಸಿಕೊಂಡು ದಾನಧರ್ಮ ಮಾಡುತ್ತಿರು."

ಹೀಗೆ ಹೇಳಿ ಆ ಮಣಿನಳಿಕೆಯನ್ನು ಕೊಟ್ಟು ಯೋಗಿ ಪುಂಗವನು ಹೊರಟು ಹೋದನು.

ಶ್ಯಾಮಪ್ರಭು ತನ್ನ ಮನೆಗೆ ಬಂದವರನ್ನು ಅತಿಥಿ ಗೃಹದಲ್ಲಿ ಕೂಡಿಸಿ ತಾನು ಕತ್ತಲೆಯಲ್ಲಿದ್ದು ಆ ನಳಿಕೆಯ ದ್ವಾರಾ ಅವರನ್ನು ನೋಡುವನು. ಯಾಚನೆಗೆ ಬಂದವರಲ್ಲಿ ಕೆಲವರು ನರಿಗಳಂತೆಯೂ ಕೆಲವರು ತೋಳಗಳಂತೆಯೂ ಕಂಡರು. ಉಳಿದವರು ಮಾತ್ರ ಮಾನವರಂತಿದ್ದರು. ನರಿ—ತೋಳಗಳಂತೆ ಕಂಡವರನ್ನು ಸೇವಕರ ಮೂಲಕ ಉಪಾಯವಾಗಿ ಕಳುಹಿಸಿ, ಉಳಿದವರನ್ನು ಮಾತ್ರ ತೃಪ್ತಿಪಡಿಸಿ ಕಳುಹಿಸಿದನು. ಇದೇ ರೀತಿ ಪ್ರತಿ ದಿನವೂ ಮಾಡಿದನು. ಅವನು ಹೇಗೋ ತಮ್ಮ ವಂಚನೆಯನ್ನು ಕಂಡುಹಿಡಿಯುವನೆಂದು ಗೊತ್ತಾದ ಮೇಲೆ ಅಂಥವರು ಯಾಚನೆಗೆ ಬರುವದನ್ನೂ ಬಿಟ್ಟರು. ಒಳ್ಳೆಯವರಿಗೇ ಅವನ ದಾನ ಧರ್ಮಗಳು ಸಲ್ಲುತ್ತ ಬಂದುವು.

ಅವನ ಸೇವಕರಲ್ಲಿ ಕೂಡಾ ಕೆಲವರು ನರಿಗಳಂತೆ ತೋಳಗಳಂತೆ ಕಂಡುಬಂದುದರಿಂದ, ಅಂಥವರನ್ನೂ ಮನೆಯಿಂದ ತೊಲಗಿಸಿಬಿಟ್ಟನು.

ಹೀಗೆ ಶ್ಯಾಮ ಪ್ರಭುವಿನ ಮನೆಯಿಂದ ತೊಲಗಿಸಲ್ಪಟ್ಟ ಸೇವಕರಲ್ಲಿ ಬಾಬಣ್ಣನೆಂಬವನೂ ಒಬ್ಬ. ಅವನು ಪ್ರಭುವಿನ ಮನೆಯಲ್ಲಿ ಕಳ್ಳತನ ಮಾಡಿ ಮಾಡಿ ರುಚಿಕಂಡವ. ಶ್ಯಾಮಪ್ರಭು ಒಂದು ನಳಿಕೆಯಿಂದ ಬಂದವರನ್ನು ನೋಡುವುದನ್ನು ಅವನು ಕಂಡು ಹಿಡಿದಿದ್ದ. ಆ ನಳಿಕೆಯಿಂದಲೇ ಶ್ಯಾಮ ಪ್ರಭುವಿನ ಗುಣವು ಬದಲಾಯಿಸಿದ್ದೆಂದೂ ಅವನಿಗೆ ಗೊತ್ತಾಗಿತ್ತು. ಆ ಮನೆಯಿಂದ ಹೊರಡಿಸಿದ ಮೇಲೆ, ಅಸೂಯೆಗೊಂಡ ಬಾಬಣ್ಣ, ಒಂದು ದಿನ ಉಪಾಯವಾಗಿ ಶ್ಯಾಮಪ್ರಭುವಿನ ಮನೆಗೆ ಹೊಕ್ಕು, ಆ ಮನೆಯ ಸುಳಿವುನಳಿವುಗಳನ್ನು ತಿಳಿದವನಾದ ಕಾರಣ, ಅವನು ಆ ಮಣಿ ನಳಿಕೆಯನ್ನು ಕದ್ದುಕೊಂಡು ಪಾರಾಗಿಯೂ ಬಿಟ್ಟ.

ಅವನು ದಾರಿಯಲ್ಲಿ ಹೋಗುವವರನ್ನೂ ಬರುವವರನ್ನೂ ಆ ನಳಿಕೆಯಿಂದ ನೋಡುತ್ತ, "ಅಯ್ಯಯ್ಯೋ! ನರಿ ನರಿ!" ಎಂದು ಓಡತೊಡಗಿದನು. ಮತ್ತೊಮ್ಮೆ "ಅಯ್ಯೋ ಸತ್ತೆ! ತೋಳ ತೋಳ!" ಎಂದು ಕಿರಿಚಿಕೊಂಡನು. ಹೀಗೆ ಅವನು ನಳಿಕೆಯಿಂದ ನೋಡುವುದೂ ಹೆದರುವುದೂ, ಕಿರಿಚಿಕೊಳ್ಳುವುದೂ ನೋಡಿ ಜನರು ಅವನಿಗೆ ಹುಚ್ಚು ಹಿಡಿಯಿತು ಎಂದುಕೊಂಡರು. ಕೆಲವರು ನಕ್ಕರು. ಕೆಲವರು ಅವನು ತಮ್ಮನ್ನು ಅವಮಾನಪಡಿಸುವನೆಂದು ಬೈದರು. ಕೆಲವರು ಅವನನ್ನು ಹಿಡಿದು ಹೊಡೆಯಲು ಅಟ್ಟಿಸಿಕೊಂಡು ಹೋದರು.

ಆಗ ಅವನ ಇದಿರಾಗಿ ನಾಲ್ವರು ರಾಜಭಟರು ಬರುತ್ತಿದ್ದರು. ಅವರನ್ನು ನಳಿಕೆಯಿಂದ ನೋಡಿದ ಬಾಬಣ್ಣ "ಅಯ್ಯೋ! ಹುಲಿ! ಹುಲಿ!" ಎಂದು ಅರಚುತ್ತಾ ಅಡ್ಡದಾರಿ ಬಿದ್ದು ಓಡತೊಡಗಿದ. ರಾಜಭಟರು ಅವನನ್ನು ಹಿಡಿದು ಅವನ ಕೈಯಲ್ಲಿದ್ದ ನಳಿಕೆಯನ್ನು ಕಿತ್ತುಕೊಂಡರು.

ರಾಜಭಟರು ಕೂಡ ಆ ನಳಿಕೆಯನ್ನು ನೋಡಿ, ಅದರ ಅದ್ಭುತವನ್ನು ಅರಿತುಕೊಂಡು, "ಇದು ನಿನಗೆ ಎಲ್ಲಿ ಸಿಕ್ಕಿತು?" ಎಂದು ಕೇಳಿದರು.

ಹುಲಿಗಳನ್ನು ನೋಡಿ ಹೆದರಿಹೋಗಿದ್ದ ಬಾಬಣ್ಣ, "ನಾನು ಇದನ್ನು ಶ್ಯಾಮಪ್ರಭುಗಳ ಮನೆಯಿಂದ ಕದ್ದೆ" ಎಂದು ಸತ್ಯವನ್ನೇ ಹೇಳಿಬಿಟ್ಟ.

ರಾಜ ಭಟರು ಅವನನ್ನು ರಾಜನ ಬಳಿಗೆ ಕರೆದೊಯ್ದು ನಿಲ್ಲಿಸಿ ಅದ್ಭುತ ನಳಿಕೆಯನ್ನು ರಾಜನ ಮುಂದಿಟ್ಟರು. ಅದರ ರಹಸ್ಯವನ್ನು ತಿಳಿದ ಮಂತ್ರಿ, ಆ ಮಣಿ ನಳಿಕೆಯ ಮೂಲಕ ಸಭೆಯಲ್ಲಿದ್ದವರನ್ನೆಲ್ಲ ಒಮ್ಮೆ ನೋಡಿದ! ಒಬ್ಬಿಬ್ಬರು ನರಿಯಂತೆ, ತೋಳದಂತೆ ತೋರಿದರು. ಬಾಬಣ್ಣ ಬಾಲ ಮುದುಡಿದ ನಾಯಿಯಂತೆ ತೋರಿದ.

ರಾಜ ಮಂತ್ರಿಗಳು ಆಲೋಚನೆ ಮಾಡಿ ಶ್ಯಾಮಪ್ರಭುವನ್ನು ಕರೆಯಿಸಿಕೊಂಡರು. ಈಗ ಶ್ಯಾಮ ಪ್ರಭುವಿನ ಆರೋಗ್ಯ ಚೆನ್ನಾಗಿದ್ದಿತು. ಅವನೊಡನೆ ವಿಚಾರಿಸಲಾಗಿ, ಯೋಗಿಪುಂಗವನು ತನಗೆ ಅದನ್ನು ಕೊಟ್ಟ ಸಂಗತಿಯನ್ನು ಹೇಳಿದನು.

ಇನ್ನು ತನಗೆ ಅದರ ಅಗತ್ಯವಿಲ್ಲವೆಂತಲೂ ಪಾತ್ರಾಪಾತ್ರ ವಿವೇಚನೆಯು ದಾನಿ ಗೊತ್ತಾಯಿತೆಂತಲೂ ಹೇಳಿ "ಇನ್ನು ಇದು ಮಹಾರಾಜರ ಉಪಯೋಗಾರ್ಥವಾಗಿಯೆ ಇರಲಿ" ಎಂದು ಹೇಳಿ ರಾಜನಿಗೇ ಅದನ್ನು ಕೊಟ್ಟು ಹೊರಟು ಹೋದನು.

ರಾಜನು ಆ ಮಣಿ ನಳಿಕೆಯ ಸಹಾಯದಿಂದ ಕುಟಿಲಾತ್ಮರನ್ನು ಕಂಡು ಹಿಡಿದು, ಉಪಾಯದಿಂದ ಅಂಥವರನ್ನು ತೊಲಗಿಸಿ, ಒಳ್ಳೆಯ ರಾಜ್ಯಭಾರಕ್ಕೆ ಅನುಕೂಲಪಡಿಸಿ ಕೊಂಡನು.

ಮೂರು ವರುಷಗಳ ಮೇಲೆ ಆ ನಳಿಕೆಯ ಪ್ರಭಾವ ಹೊರಟುಹೋಯಿತು.



ಮನೆಮನೆಯಲ್ಲೂ ಇರಲೇಬೇಕಾದ ಪವಿತ್ರ ಧಾರ್ಮಿಕ ಗ್ರಂಥ

ಪುಟ 450ಕ್ಕೂ ಮಿಕ್ಕಿ. ಬೆಲೆ ರೂ. 1-50

ಸಿಗುವ ಸ್ಥಳಗಳು: ನವಯುಗ ಪ್ರೆಸ್, ಉಡುಪಿ

ನವಭಾರತ ಪುಸ್ತಕ ಭಂಡಾರ, ಉಡುಪಿ

ಟಿ. ಎನ್. ಕೃಷ್ಣಯ್ಯ ಸೆಟ್ಟಿ ಅಂಡ್ ಸನ್ಸ್, ಚಿಕ್ಕಪೇಟೆ, ಬೆಂಗಳೂರು–2

ಪ್ರೊ। ಬಿ. ಎಚ್. ಶ್ರೀಧರ

(ಒಂದು ಶತಾರಿ ಗದ್ಯ)

ಅವಿವೇಕಯುಕ್ತ ಪ್ರತಿಭಟನೆ ಮತ್ತು ಅವಿವೇಕಯುಕ್ತ ಅಪ್ರತಿಭಟನೆ—ಎರಡರಲ್ಲಿ ಎಳ್ಳಷ್ಟು ತಾರತಮ್ಯವಿಲ್ಲ. 'ಪ್ರಜಾಪ್ರಭುತ್ವವಾದಿ'ಗಳೆನ್ನುವ ನಮ್ಮ ಅಧಿಕಾರಾಧಿಕಾರಿಗಳಲ್ಲಿ ಇವೆರಡೂ ಗುಣಗಳು ಮನೆಮಾಡಿ ಬಿಟ್ಟಿವೆ. ಆದುದರಿಂದಲೇ ನಮ್ಮದು ಕುರಿ ಪ್ರಜಾಪ್ರಭುತ್ವ; ನಮ್ಮದು ಕುರಿನಾಡು.

ಗಾಂಧಿ ಸಿದ್ಧಾಂತ ಮತ್ತು ಇಂದಿನ ಪ್ರಜಾಪ್ರಭುತ್ವ

ಅವಿವೇಕಯುಕ್ತವಾದ ಪ್ರತಿಭಟನೆಗೆ ಹೇಗೋ ಹಾಗೇ ಅವಿವೇಕಯುಕ್ತವಾದ ಅಪ್ರತಿಭಟನೆಗೂ ಪ್ರಜಾಪ್ರಭುತ್ವದಲ್ಲಿ ಸ್ಥಾನವಿಲ್ಲ. ಪ್ರತಿಭಟನೆಗೆ ಆಧಾರವಾದ ವಿವೇಕ ಮತ್ತು ಅಪ್ರತಿಭಟನೆಗೆ ಆಧಾರವಾದ ವಿವೇಕಗಳಲ್ಲಿ ತಾರತಮ್ಯವಿಲ್ಲ. ವಿವೇಚನೆಯಿಂದ ಬರುವುದು ವಿವೇಕ. ವಿವೇಚನೆಗೆ ಸರ್ವೋದಯವೊಂದು ಮಾನದಂಡ. ಸರ್ವರಲ್ಲಿ ಸರ್ವಮತದಾರರೂ ಅಡಕವಾಗುತ್ತಾರೆ. ಅವರಲ್ಲಿ ಆರ್ಥಿಕ ವೈಷಮ್ಯವಿರುವುದು ಅವರ ಮತಶಕ್ತಿಯನ್ನು ಹ್ರಾಸಗೊಳಿಸುತ್ತದೆ; ಇತರ ಯಾವ ಭೇದವೂ ಸಾಮಾನ್ಯರ ಮತಶಕ್ತಿ ವೈಷಮ್ಯವನ್ನು ಅಷ್ಟು ಹೆಚ್ಚಿಸದು. ಅರ್ಥದಿಂದ ಅಧಿಕಾರ, ಪ್ರಭಾವ; ಅಧಿಕಾರದಿಂದ, ಪ್ರಭಾವದಿಂದ ಅರ್ಥ—ಈ ವಿಧವಾಗಿ ಪರಸ್ಪರ ಪೋಷಣೆಗಿವು ನಿಂತಿರುವಾಗ ಈ ಎರಡೂ ಶಾಕಸ್ಟು ಇಲ್ಲದ ಹತ್ತು ಸಮಸ್ತರ ಮತಸ್ವಾತಂತ್ರ್ಯವು ವ್ಯಾವಹಾರಿಕವಾಗಿ ಅರ್ಥಾಧಿಕಾರ ಸಂಪನ್ನರ ಪ್ರಭಾವಿ ಮತಸ್ವಾತಂತ್ರ್ಯಕ್ಕೆ ಸರಿಸಮವಾಗದು. ಆದರಿಂದ ವಿಷಮ ಪ್ರಜಾಪ್ರಭುತ್ವವಲ್ಲದೆ ಸಮ ಪ್ರಜಾಪ್ರಭುತ್ವ ಉದಯಿಸದು. ಈಗ ನಾವಿರುವುದು ವಿಷಮ ಪ್ರಜಾಪ್ರಭುತ್ವದಲ್ಲಿ. ಇದನ್ನು ಪರಿಹರಿಸಲು ಅರ್ಥಾಧಿಕಾರಗಳಲ್ಲಿ ಬಹಳ ಮೇಲ್ತರಗತಿಗೇರಿದ ಅಲ್ಪಸಂಖ್ಯಾತರು ಸ್ವಪ್ರಭಾವ—ಕೃತಿಗಳಿಂದ ಬಿಡುವುದಿಲ್ಲ. ಇದೇ ನಮ್ಮ ಇಂದಿನ ಜೀವನದ ಸರ್ವ ಸಮಸ್ಯೆಗಳ ತಳಪಾಯ.

ದೊಡ್ಡವರೆನ್ನಿಸಿದ ರಾಷ್ಟ್ರಸೇವಾ ಪ್ರಮುಖರ ವಿಶೇಷ ಹಕ್ಕುಗಳನ್ನು ಪಾಲಿಸಿಕೊಂಡು ಹೋಗುವುದು ಸರ್ವೋದಯಕ್ಕೆ ವಿರುದ್ಧವಾದುದು; ಅವರು ರಾಜರಿದ್ದರೂ ಅಷ್ಟೇ, ರಂಕರಿದ್ದರೂ ಅಷ್ಟೇ—ಸರಕಾರದ ಒಳಗಿದ್ದರೂ ಒಂದೇ, ಹೊರಗಿದ್ದರೂ ಒಂದೇ. ಪ್ರಜಾಪ್ರಭುತ್ವದ ಬುನಾದಿಯಾದ ಚುನಾವಣೆಯ ವ್ಯವಹಾರದಲ್ಲೇ ಅವರು ಹುಳಿ ಹಿಂಡಲು ವಿವಿಧ ಭ್ರಷ್ಟಾಚಾರ ಸೂತ್ರಗಳನ್ನು ಬಳಸುತ್ತಾರೆ. ಚುನಾವಣೆ ಕೆಟ್ಟಾಗ ಪ್ರಜಾಪ್ರಭುತ್ವ ಒಳ್ಳೆಯದಾಗುವುದು ಶಕ್ಯವೇ? ಅದರಲ್ಲಿ ತಯಾರಾಗಿ ಚುನಾಯಿತರಾಗುವವರ ಪ್ರತಿನಿಧಿತ್ವದ ಮಟ್ಟವು ಈಗ ನಿರ್ಲಜ್ಜತ್ವಕ್ಕೆ ಇಳಿದ ಅನೇಕ ಸಂದರ್ಭಗಳು ಅನುಭವಕ್ಕೆ ಬಂದಿವೆ. ಅವರಿಗೆ ದುಡ್ಡು, ನೃತ್ಯ, ಮೋಜುವಾನಿ, ಬಿಟ್ಟಿ ಟ್ರಿಪ್ಪು, ಆಸ್ತಿ, ಅಧಿಕಾರಗಳನ್ನು ಬಿಟ್ಟರೆ ಮತ್ತಾವುದೂ ಬೇಕಾಗಿಲ್ಲ. ಇಂಥ ಚುನಾವಣೆಯನ್ನಾಧರಿಸಿದ ಪ್ರಜಾಪ್ರಭುತ್ವವನ್ನು ಇಟ್ಟುಕೊಳ್ಳುವುದು ಮತದಾರರಿಗೆ ಸರ್ವನಾಶಕರವೆಂಬುದನ್ನು ಯಾವ "ಸೋಷಲ್ ಎಜುಕೇಶನ್ ಆಫೀಸರ್" ಎಷ್ಟು ಜನರಿಗೆ ತಿಳಿಸಿದ್ದಾನೆ? ನೂರಕ್ಕೆ ನೂರು ಖರ್ಚು ಮಾಡಿ ನೂರಕ್ಕೆ ೨೫ಕ್ಕೂ ಕಡಿಮೆ ಪ್ರಯೋಜನ ಪ್ರಜೆಗಾಗುವಂತಹ ಕಮ್ಯೂನಿಟಿ-ಡೆವಲಪ್‌ಮೆಂಟ್ ಯೋಜನೆಗಳು "ಮನವೊಲಿಸುವ" ಅಹಿಂಸಾತ್ಮಕ ಶಿಕ್ಷಣದ ಅಲಸ ಕ್ಷೇತ್ರಗಳಾಗಿ ಪರಿಣಮಿಸಲು ಸರಕಾರವು ಪುರಂದರಾದಿ ದಾಸಪಂಥವನ್ನೂ ಬಸವಣ್ಣಾದಿ ಶರಣಪಂಥವನ್ನೂ ರಾಜಕೀಯ ಪ್ರಜಾಪ್ರಭುತ್ವ ಪದ್ಧತಿ ಎಂದು ತಿಳಿದದ್ದೇ ಕಾರಣ. "ಹರಿ-ಹರಕಥೆ"ಗಳನ್ನು ಹಿಂದೆ ಸರಕಾರ ಮಾಡಿಸುತ್ತಿದ್ದಿಲ್ಲ. ಈಗ ಅನೇಕ ಕಾಯಿದೆಬದ್ಧ ಸರಕಾರಿ ಸಂಘ-ಸಂಸ್ಥೆಗಳ ಮೂಲಕ ಅವುಗಳನ್ನು ಮಾಡಿಸಲು ಸರಕಾರಗಳು ಅಧಿಕಾರಿಗಳನ್ನೂ ನೌಕರರನ್ನೂ ನಿಯಮಿಸಿವೆ! ದಾಸ ನೌಕರ ಮತ್ತು ಶರಣ ನೌಕರ "ಜಾತ್ಯತೀತರ"—ಅವರು ಅಧಿಕಾರ ಹೊಣೆಗಳೂ "ಜಾತ್ಯತೀತ"—ಆದರವರಲ್ಲಿ (ತಾರ್ಕಿಕವಾಗಿ) ಜಾತ್ಯಾ ಬುದ್ಧಿಹೀನರೂ ಅಪ್ರಾಮಾಣಿಕರೂ ಆಗಿರುವವರನ್ನೇ ನೋಡಿ ಆಯ್ದು ವಿವಿಧ ಹುದ್ದೆಗಳಲ್ಲಿ ನಿಯಮಿಸಿಕೊಂಡ ದಾಸ ಶರಣ ಸರಕಾರಿ ಬುದ್ಧಿಮತ್ತೆಗೆ ಪ್ರಜಾಪ್ರತಿನಿಧಿಗಳು ಸೇರಿದ ಆಳುವ ಆ ಈ ಪಕ್ಷವೇ ಕಾರಣ. ಅದು ಕೆಲವೆಡೆ ಹರಿಕಥಾಪಕ್ಷ, ಕೆಲವೆಡೆ ಹರಕಥಾಪಕ್ಷ. ಆದರ ಕೆಲ ಗಣ್ಯ ಸದಸ್ಯರು ದನು-ದಿತಿಗಳ ಸತ್‌ಪರಂಪರೆಯವರು. ಅವರನ್ನಾಯ್ದವರು ಜಾತ್ಯತೀತ ಕುರಿಗಳು, ಭಾರತೀಯ ಸದ್‌ಗೃಹಸ್ಥರಲ್ಲ! ಕುರಿ ಪ್ರಭುತ್ವದಲ್ಲಿ ತೋಳಗಳೇ ಪ್ರಾಧಿಕಾರ ವಹಿಸುವುದು ಸ್ವಾಭಾವಿಕ. ಕುರಿಗಳ ಮುಖವಾಡ ಧರಿಸಿ ಅವು "ನಾವು ನೀವೇ" ಎಂದು ದಂತಗಳನ್ನು ಪ್ರಕಟಿಸುವುದು ಕುರಿಗಳಿಗಷ್ಟೇ ಸಹ್ಯ. ಕುರಿಗಳಿಗೆ "ನೀವು ಕುರಿಗಳೆಂ"ದು ಹೇಳಿದವನು ಶತ್ರು, "ನರಿಗಳೆಂ"ದು ಪ್ರಶಸ್ತಿ ಕೊಟ್ಟವನು ಮಿತ್ರ. ನರಿಗಳೀಗ 'ನೀವೂ ನರಿಗಳೆಂ'ದು ಹೊಗಳಲಾರಂಭಿಸಿವೆ; ಆದುದರಿಂದ ಕುರಿಗಳ 'ಶತ್ರು'ಗಳಿಗೆ ಭಾರತತ್ಯಾಗವೊಂದೇ ಉಳಿದದ್ದು-ಏಕೆಂದರೆ, ಅವರು ಕುರಿಗಳಿಗೆ ಸತ್ಯವನ್ನು ಕಲಿಸಲಾರರು. ದೇಶ ತ್ಯಾಗವು ಸ್ವಾರ್ಥತ್ಯಾಗ! ಆದುದರಿಂದ ಬುದ್ಧಿವಂತ ಪ್ರಾಮಾಣಿಕರೀಗ ವಿದೇಶಗಳಿಗೆ ಹೋಗಿ ತಿರುಗಿ ಬಾರದಿರುವುದು ಜನಸಂಖ್ಯೆಯನ್ನು ಹಿಡಿತದಲ್ಲಿಡಬೇಕೆಂಬ ಧೋರಣಕ್ಕೆ ಪೋಷಕ; ಅವರ ಮಿತಸಂತಾನ ಯೋಜನೆಯೂ ಅದಕ್ಕೆ ಅಷ್ಟೇ ಪೋಷಕ. ಆದುದರಿಂದ ನ್ಯಾಯವಾದಿಗಳಾದ ಬುದ್ಧಿವಂತ ಬಡವರನ್ನು ದೇಶ ತ್ಯಾಗದ ಒತ್ತಾಯಕ್ಕೆ ಗುರಿಪಡಿಸುವ ತೋಳಪ್ರಜಾಪ್ರಭುತ್ವದಲ್ಲಿ ಕುರಿಗಳು ಸ್ವರ್ಗಸುಖವನ್ನು ಅನುಭವಿಸುವುದು ಅವುಗಳ ನಂಬಿಗೆಯಾದರೆ, ಸಂಖ್ಯಾಸತ್ಯವನ್ನು ಎಷ್ಟು ಹೊಗಳಿದರೂ ಸಾಲದಲ್ಲವೇ? ನಮ್ಮ ಕಾಂಗ್ರೆಸ್ ಮುಖ್ಯ ಮಂತ್ರಿಗಳು ಶ್ರೀ ವಿನೋಬಾ ಭಾವೆಯವರ ಸೇವೆಗೆ ಜನ ಬರಬೇಕೆಂದು ದಿನಾಂಕ ರಹಿತವಾದ ಒಂದು ಮನವಿಯನ್ನು ಮಾಡಿಕೊಂಡಿದ್ದಾರೆ. ಅದರ ಪ್ರಕಾರ ಜನರು ಕಾಣಿಕೆ ಸಲ್ಲಿಸಿ ಭಾವೆಯವರ ಶಿಬ್ಬಂದಿಯ ಮೂಲಕ ಭೂರಹಿತರಿಗೆ ಭೂಮಿಯನ್ನು ಸ್ವಪ್ರೇರಣೆಯ ಪ್ರಕಾರ ಭೂಮಾಲಿಕರು ದಾನ ಕೊಡುವಂತೆ ಮಾಡಬೇಕಂತೆ! ಕುರಿಯಲ್ಲದವನಿಗೆ ಇದರ ಅರ್ಥ ಹೀಗಾಗುತ್ತದೆ: 'ನಮ್ಮಲ್ಲಿ ತಾವೇ ಸ್ವತಃ ಸಾಗುಮಾಡಲು ಸಾಧ್ಯವಿಲ್ಲದಷ್ಟು ಭೂಮಿಯು ಹಲವರಿಗಿದೆ. ಅವರ ಮತಗಳಿಂದ ನಮ್ಮ ಎಲ್ಲ ಮುಖ್ಯಮಂತ್ರಿಗಳು ಆರಿಸಿಬಂದಿದ್ದಾರೆ. ಒಟ್ಟು ಜನತೆಯ ಬಹುಮತ ಪಡೆದ ಪಕ್ಷದ ಅತ್ಯುಚ್ಚ ಜನ ಪ್ರತಿನಿಧಿಗಳಾದ ಅವರು ತಮ್ಮ ಸಪಕ್ಷೀಯ ಸದಸ್ಯರ ಬಲದಿಂದ ಉಕ್ತ ಉದ್ದೇಶ ಸಾಧನೆಗೆ ತಕ್ಕ ಕಾಯದೆ ಮಾಡಿ ಅದನ್ನು ಸಮರ್ಥವಾಗಿ ಜಾರಿಗೆ ತರುವ ಎಲ್ಲ ಅನುಕೂಲಗಳೂ ಭಾವೆಯವರಿಗಿಂತ ನೂರು ಪಟ್ಟು ಹೆಚ್ಚಿದ್ದರೂ ಹಾಗೆ ಮಾಡಲು ಮನಸ್ಸು ಮಾಡರು! ತಾವು ಸಮರ್ಥವಾಗಿ ಪ್ರಜಾಪ್ರಭುತ್ವೀನ ಪದ್ಧತಿಯಂತೆ ಅತ್ಯಲ್ಪ ಅವಧಿಯಲ್ಲಿ ತಮಗೆ ಒಪ್ಪಿತವಾದ ಭೂಸುಧಾರಣೆಯನ್ನು ಮಾಡಲು ಯಾವ ನ್ಯಾಯವಾದ ಕಾರಣವೂ ಅಡ್ಡಬಾರದಿರುವಾಗ, ಈ ಪ್ರಕಾರ ಭಾವೆಯವರ ಹೆಸರಿನಲ್ಲಿ ನಿಧಿ ಸಂಗ್ರಹ ಮಾಡುವ ಬೆಂಗಳೂರ ಸಂಘವೊಂದಕ್ಕೆ ನೆರವೀಯಲು ಅಪೀಲು ಮಾಡಿ ಕೈಕಟ್ಟಿ ಕುಳಿತುಕೊಳ್ಳುವುದು ಪ್ರತಿನಿಧಿತ್ವಕ್ಕೆ ತಕ್ಕದ್ದೆನ್ನಿಸಿತೇ?' ಕುರಿಗಳು ಮಾತ್ರ ತಕ್ಕದ್ದೆಂದಾರು!

ನಾಯಕತ್ವದ ಮೇಲೆ ಮತದಾರರ ನಿಯಂತ್ರಣವಿರುವದು ಸಂಖ್ಯಾಮಾನದಿಂದ ಮಾತ್ರ; ಮತದಾರರ ಮೇಲೆ ನಾಯಕನ ಹಿಡಿತವಿರುವದು ಅವನ ವ್ಯಕ್ತಿತ್ವ-ಚಾರಿತ್ರಗಳಿಂದ ಮಾತ್ರ. ವ್ಯಕ್ತಿತ್ವ-ಚಾರಿತ್ರಬಲಗಳಲ್ಲಿ ನ್ಯೂನರಾದ ನಾಯಕರಿಂದ ಪ್ರಜಾಪ್ರಭುತ್ವ ಪದ್ಧತಿಯಪ್ರಕಾರ ಯಾವ ಬಹು ಜನೋಪಕಾರಿಯಾದ ಕಾರ್ಯವೂ ಚೆನ್ನಾಗಿ ಆಗದು. ಮತದಾರರ ಮತಿಯನ್ನು ನೈತಿಕವಾಗಿ ಸದಾದರ್ಶದತ್ತ ತಿರುಗಿಸಲಾಗದ ನಾಯಕನು ಕೇವಲ ಹಾಸ್ಯಾಸ್ಪದ ನಾಯಕನೇ ಸರಿ. ನಾಯಕಸ್ಥಾನವನ್ನು ಯೇನಕೇನ ಪ್ರಕಾರೇಣ ಉಳಿಸಿಕೊಳ್ಳಲು ಹೆಣಗುವವರೇ ಇಂದು ಲೋಭಿಗಳನ್ನು ಮನವೊಲಿಸಿ ಇಲ್ಲವೆ ಕಲಿಸಿ ಪರೋಪಕಾರಿಗಳನ್ನಾಗಿ ಪರಿವರ್ತಿಸಲಾರದವರಾಗಿದ್ದಾರೆ. ಇಂಥ ಅಧೀರನಾಯಕರನ್ನು ಪದಚ್ಯುತಗೊಳಿಸುವುದು ಬಹು ಜನಸಂತ್ರಸ್ತರ ಪ್ರಜಾಪ್ರಭುತ್ವೀನ ಕರ್ತವ್ಯ. ಹೇಡಿಗಳೇ ಸಂಕುಚಿತ ಸ್ವಾರ್ಥಿಗಳು; ಅವರಲ್ಲಿ ಕ್ಷಾತ್ರವೀರತನವಿಲ್ಲ. ಅಂಥವರು ಯಕ್ಷಗಾನದ ಹನುಮನಾಯಕರಾಗಲೂ ಅನರ್ಹರು. A moral leader alone can become a true socio-political leader in India—ನೀತಿವೀರನೊಬ್ಬನೇ ಭಾರತದಲ್ಲಿ ನಿಜವಾದ ಸಾಮಾಜಿಕ-ರಾಜಕೀಯ ಮುಖಂಡನಾದಾನು — ಎಂಬುದನ್ನು ಭಾರತದ ಮೂಕ ಕೋಟಿಗಳೂ ಅವರ ತಂದೆ ಗಾಂಧಿಯವರೂ ಅರಿತಿದ್ದರು.

ಅಜ್ಞಾನಿಯು ಶಿಶು; ಜ್ಞಾನಿಗೆ ಅವನನ್ನು ಕಂಡು ದಯೆಯುಂಟಾದೀತು, ನಗೆಬಂದೀತು—ಅಲ್ಲದೆ ಸಿಟ್ಟು ಬರಲಾರದು. ಗಾಂಧಿಯವರ ಅಹಿಂಸಾ ದೃಷ್ಟಿ ಇಂಥ ಜ್ಞಾನಿಯದು. ಈ ದೃಷ್ಟಿಯಿಂದ ನಮ್ಮ ಹಲವಾರು ನಾಯಕರು ದಯಾರ್ಹರೆಂಬುದನ್ನು ಮತದಾರರೀಗ ಅರಿತರೆ, ಅವರ ಮೇಲೆ ದಯೆಯಿಟ್ಟು ಅವರನ್ನು ನಾಳಿನ ಚುನಾವಣೆಯಲ್ಲಿ ಆರಿಸಿ, ಮುಖಂಡತ್ವಕ್ಕೆ ಏರಿಸರು. ದುರುತ್ಸಾಹ-ನಿರುತ್ಸಾಹಗಳು ಅಜ್ಞಾನಜನ್ಯ. ಅಪಜ್ಞಾನವು ಅಜ್ಞಾನಾಂತರ್ಗತ. ದಸರೆಯ ಕವಿಸಂಮೇಳನಕ್ಕೆ ಅರ್ಜಿ ಕರೆಯುವಂತ ಸುಬುದ್ಧಿಸಂಪನ್ನ ಶಿಬ್ಬಂದಿಯನ್ನಿಟ್ಟುಕೊಂಡ ಮಂತ್ರೀಶ್ವರರ ಪ್ರಭುತ್ವವು ಭಾರತದಲ್ಲಿ ಅದ್ವಿತೀಯ. ಕಡುಮಳೆಗಾಲದಲ್ಲಿ ಮಳೆನಾಡಿನಲ್ಲೂ ದಸರಾ ಕ್ರೀಡಾಸ್ಪರ್ಧೆ ನಡೆಯಿಸಲು "ಸರ್ಕ್ಯುಲರ್" ಹೊರಡಿಸುವ ಅಧಿಕಾರಿಗಳನ್ನು ಸಾಕಿಕೊಂಡಿರುವ "ಕ್ಯಾಬಿನೆಟ್ಟು" ಅಪ್ರತಿಮ ಪ್ರಗತಿಶೀಲ! ಅಜ್ಞಾನಿಗಳಿಂದ ಬಿರುದು-ಬಾವಲಿ-ಧನಕನಕಾದಿಗಳನ್ನು ಪಡೆದು ಬೆನ್ನುತಟ್ಟಿಕೊಳ್ಳುವ ಬುದ್ಧಿ-ಕುರಿನಾಡಿಗರಿಗಿಲ್ಲದೆ ಕರುನಾಡಿಗರಿಗಿದ್ದೀತೇ? ಕಂಪನಿಯ ನಾವೆ ಮತ್ತು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಪುಣ್ಯಾತ್ಮರ ದಿನಗಳನ್ನು ಆಚರಿಸಬೇಕೆಂದು ಕೇವಲ ಒಂದೇ ದಿನ ಮುಂಚಿತವಾಗಿ ಪರಿಪತ್ರ ಕಳಿಸುವಾಗ ಶೈಕ್ಷಣಿಕ-ಸಾಂಸ್ಕೃತಿಕ ಸಂಸ್ಥೆಗಳಿರುವುದೂ

([illegible] ಪುಟ ನೋಡಿರಿ)

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಶ್ರೀ ಎಂ. ರಾಧಾಕೃಷ್ಣ ರಾವ್, ಬಿ.ಎ., ಬಿ.ಟಿ.

ಈ ರಾಷ್ಟ್ರಕ್ಕೆ ಏನಾಗಿದೆ...?

ಸ್ವಾತಂತ್ರ್ಯ ಗಳಿಸಿ ಕಾಲು ಶತಮಾನ ಕಳೆಯುತ್ತ ಬಂದರೂ ನಾವಿನ್ನೂ ಚೇತರಿಸಿಕೊಳ್ಳಹೊರಟಿದ್ದೇವೆಯೇ? ಇಲ್ಲವೆನ್ನುತ್ತೇನೆ ಎಲ್ಲರೂ. ಏಕೆ ಹೀಗೆ? —ಇದು ಯಕ್ಷಪ್ರಶ್ನೆ. ಸ್ವಾರ್ಥಲಂಪಟತೆಯಲ್ಲೇ ಮುಳುಗಾಡುವ ಪ್ರವೃತ್ತಿ, ರಕ್ತಗತವಾದ ಆ ಅಪ್ರಾಮಾಣಿಕತೆಗಳೇ ನಮ್ಮ ಬವಣೆಗಳಿಗೆ ಮೂಲಹೇತುವೆಂಬುದು ಅಪ್ರಿಯವಾದರೂ ಕಟು ಸತ್ಯ.

ಸ್ವತಂತ್ರ ಭಾರತಕ್ಕೆ ಇಪ್ಪತ್ತೆರಡು ಇಪ್ಪತ್ತಮೂರು ವರ್ಷಗಳ ಇತಿಹಾಸವಿದೆ. ಕಾಲುಶತಮಾನವೆನ್ನುವುದು ವ್ಯಕ್ತಿಜೀವನದ್ದಲ್ಲಿಯಷ್ಟಲ್ಲದಿದ್ದರೂ ರಾಷ್ಟ್ರಜೀವಿತದಲ್ಲಿಯೂ ಗಣನೀಯ—ಕಾಲಾವಧಿ ಈ ಕಾಲಘಟ್ಟದಲ್ಲಿ ನಾವು ನಡೆದುದೆಷ್ಟು ಪಡೆದುದೆಷ್ಟು ಎಂಬುದರ ಲೆಕ್ಕ ತೆಗೆದರೆ ನಮಗೆ ಸಿಗುವ ಚಿತ್ರ ಉತ್ಸಾಹದಾಯಕವಾಗಿದೆಯೇ? ಎರಡು ದಶಕಗಳ ಕಾಲ ಬೆಳೆದ ಈ ಸ್ವತಂತ್ರ ರಾಷ್ಟ್ರವು ನವಯೌವನವನ್ನು ದೊರಕಿಸಿಕೊಂಡಿದೆಯೇ? ಇದರ ತೊಡೆ ತೋಳುಗಳು ಬೇಕಷ್ಟು ಬಲಿತಿವೆಯೇ? ಸರ್ವರೋಗ ನಿವಾರಿಣಿ ಎಂದು ನಾವು ಭಾವಿಸಿದ್ದ ಸ್ವಾತಂತ್ರ್ಯವು ನಮ್ಮ ರಾಷ್ಟ್ರಕ್ಕೆ ಪೂರ್ಣಾರೋಗ್ಯವನ್ನು ದೊರಕಿಸಿಕೊಟ್ಟಿತೇ? ಈ ಪ್ರಶ್ನೆಗಳಿಗೆಲ್ಲ ವಿಚಾರಶೀಲರು ಕೊಡುವ ಉತ್ತರ 'ಇಲ್ಲ' ಎಂದು. ಭಾರತದಲ್ಲೇ ತಯಾರಾದ ಸ್ಟೆತೊಸ್ಕೋಪನ್ನು ಉಪಯೋಗಿಸಿ ಪರೀಕ್ಷಿಸಿದರೂ ಏಕೆ, ಏನು ಎಂಬುದು ಗೊತ್ತಾಗದಿದ್ದರೂ—ಇಲ್ಲ. ಎಲ್ಲೋ ಏನೋ ಕೆಟ್ಟಿದೆ ಎಂಬುದು ಸ್ಪಷ್ಟವಾಗುತ್ತದೆ. ತನ್ನ Makeupನ್ನು ತೆಗೆದು ಕಿರೀಟ, ಕವಚಗಳನ್ನು ಕಳಚಿ ರಾಷ್ಟ್ರವು ಕನ್ನಡಿ ನೋಡಿಕೊಳ್ಳಬೇಕಾದ ಕಾಲ ಬಂದಿದೆ. ಈ ರಾಷ್ಟ್ರಕ್ಕೆ ಬಡಿದಿರುವ ಮಹಾವ್ಯಾಧಿಯ ರೋಗ ಲಕ್ಷಣಗಳ ವಿಶ್ಲೇಷಣೆಯು ಸಕಾಲಿಕವೂ ಸಾರ್ಥಕವೂ ಆಗಿದೆ.

ನಾವು ಸ್ವತಂತ್ರರಾದಂದಿನಿಂದ ಇಪ್ಪತ್ತಮೂರು ಬಾರಿ ಭೂಮಿಯು ಸೂರ್ಯನನ್ನು ಸುತ್ತಿತು. ಸ್ವತಂತ್ರ ಭಾರತವು 23 ಮೈಲುಗಲ್ಲುಗಳನ್ನು ದಾಟಿ ನಡೆಯಿತು. ಆದರೆ ಈ "ನಡೆ" ಮುನ್ನಡೆಯಾಗಿಲ್ಲ; ನಮ್ಮನ್ನು ಕಾಡುತ್ತಿರುವ ಕೋಟಿ ಪ್ರಶ್ನೆಗಳನ್ನು, ಕಾಲವೊಡ್ಡಿದ ಕೋಟಿ ಸವಾಲುಗಳನ್ನು ನಾವು ಎದುರಿಸಿ ಅವುಗಳಿಗೆ ಸಮುತ್ತರಗಳನ್ನು ನೀಡಿಲ್ಲ. ಬದಲು ಬೆನ್ನಟ್ಟಿಬರುತ್ತಿರುವ ಈ ಯಕ್ಷಪ್ರಶ್ನೆಗಳಿಂದ ಗಾವುದ ದೂರ ಓಡಲು ಪ್ರಯತ್ನಿಸಿದೆವು. ಹೀಗಾಗಿ ನಮ್ಮದಿದು ಪ್ರರೋಗಮನವಲ್ಲ: ಭೂತ ಪ್ರಶ್ನೆಗಳ ಭೀಮ ಬಾಹುಗಳಿಂದ ಪಲಾಯನ! ಇಂದಲ್ಲ ನಾಳೆ ಈ ಪ್ರಶ್ನೆಗಳೇ ನಮ್ಮನ್ನು ಅಡ್ಡಗಟ್ಟದಿರುವುದಿಲ್ಲ. ಇವುಗಳನ್ನು ಎದುರಿಸದೆ, ಇವುಗಳ ಕೂರುಗುರು ಕೋರೆದಾಡೆಗಳನ್ನು ಕಳಚದೆ ನಮಗೆ ಮೋಕ್ಷವೂ ಇಲ್ಲ.

ಇದೇ ಎಡ ಬಲಗಳ ಕಣ್ಣೋಡಿಸಿದಾಗ ತಲೆ ತಗ್ಗಿಸುವಂತಾಗುತ್ತದೆ. ರಷ್ಯ ಚೈನಗಳಂತಹ ಬೃಹತ್ ರಾಷ್ಟ್ರಗಳ ಮಾತಿರಲಿ. ಇಸ್ರೇಲ್, ಜಪಾನುಗಳಂತಹ ಸಣ್ಣ ರಾಷ್ಟ್ರಗಳು ಸಾಧಿಸಿರುವ ಪವಾಡಗಳು ನಮ್ಮೆದುರು ಕುಣಿಯುತ್ತವೆ. ಹುಟ್ಟಿದೊಡನೆ ಸೂರ್ಯನನ್ನು ನುಂಗಲೆಂದು ಊರ್ಧ್ವಗಾಮಿಯಾದ ಹನುಮಂತ ಜಟಿ ಈ ರಾಷ್ಟ್ರಗಳನ್ನು ಕ್ಷಿತಿಜಾಂತರಗಳಿಗೆ ಮುನ್ನುಗ್ಗಿಸುತ್ತಿದೆ. ಪ್ರಬುದ್ಧ ರಾಷ್ಟ್ರವಾಗಿ ಬೆಳೆಯಬೇಕೆಂಬ ಹಂಬಲನಮ್ಮಲಿಲ್ಲವೆಂದಲ್ಲ; ದಾರಿದ್ರ್ಯದಿಂದ ಸಮೃದ್ಧಿಯತ್ತ ನಮ್ಮನ್ನು ಒಯ್ಯಲಿಕ್ಕಾಗಿ ಪಂಚವಾರ್ಷಿಕ ಯೋಜನೆಗಳ ಪಂಚಾಕ್ಷರಿಯನ್ನು ನಾವು ಜಪಿಸಿದೆವು. ನಾವು ನೀರಿಗೆ ಹಾಕಿದ ಹಣ ಸ್ವಲ್ಪವೇನಲ್ಲ. ಕಡ ತಂದ ಕಾಸನ್ನು ಬೇಡಿ ತಂದ ಭಿಕ್ಷೆಯನ್ನು ಎಲ್ಲವನ್ನೂ ನೀರಿಗೆ ಸುರಿದೆವು. ಹರಿಯುವ ನದಿಗಳನ್ನು ತಡೆದು ನಿಲ್ಲಿಸಿದೆವು. ಹರಿಯದಲ್ಲಿ ಹರಿಯಿಸಿದೆವು; ತಂತಿಗಳಲ್ಲೂ ಹಾಯಿಸಿದೆವು. ಇಷ್ಟಾಗಿಯೂ ಪಂಚವಾರ್ಷಿಕ ಯೋಜನೆಗಳ ಪಾಲಕಿಯು ನಮ್ಮನ್ನು ಒಯ್ಯಬೇಕಾದಲ್ಲಿಗೆ ಒಯ್ದಿಲ್ಲ. ಭಾರತದ ಕುಚೇಲರು ಕುಬೇರರಾಗಲಿಲ್ಲ.

ನಮ್ಮ ಪಾಲಿಗೆ ಮಾತ್ರ 2×2 = 3 ಆಯಿತೇಕೆ? ಇದಕ್ಕೆ ಕಾರಣಗಳು ಹಲವು. 'ಭಾರತ'ವೆನ್ನುವ ರಾಷ್ಟ್ರದ ಅಸ್ತಿತ್ವವನ್ನೇ ಮರೆತ ನಾವು ನಮ್ಮ ರಾಷ್ಟ್ರದೊಂದಿಗೆ ತಾದಾತ್ಮ್ಯ ಹೊಂದುವ ಕಾರ್ಯದಲ್ಲಿ ವಿಫಲರಾಗಿದ್ದೇವೆ. ಒಂದೊಮ್ಮೆಗೆ ರಾಷ್ಟ್ರವೆಂಬುದೊಂದು ಇದ್ದರೂ, ಅದು ಇರುವುದು ನಮ್ಮಿಂದ ಸುಲಿಯಲ್ಪಡಲಿಕ್ಕಾಗಿಯೇ ಎಂಬುದು ನಮ್ಮ ವಿಶ್ವಾಸ. ಚಿಪ್ಪಿನೊಳಗೆ ಅವಿತು ಬದುಕುವ ಬಸವನ ಹುಳದ ಪಾಡು ನಮ್ಮದು. ಇತರರಿಗಾಗಿ ಒಂದು ಬಿಂದು ಬೆವರನ್ನು ಸುರಿಸುವ ಸನ್ನದ್ಧತೆಯೂ ನಮ್ಮಲ್ಲಿಲ್ಲ! ನಮ್ಮ ಪ್ರಮಾಣಿಕತೆಯ ಅಭಾವವೇ ರಾಷ್ಟ್ರದ ಪತನಕ್ಕೆ ಇನ್ನೊಂದು ಹೇತುವಾಗಿದೆ. ಒಳ್ಳೆಯ ಗುಣಗಳನ್ನೆಲ್ಲಾ ಎಂದೋ ವಿದೇಶಗಳಿಗೆ ರಫ್ತು ಮಾಡಿ ಕೈತೊಳೆದುಕೊಂಡವರು ನಾವು. ಕೆಲವೇ ಸಮಯ ಹಿಂದೆ ಪತ್ರಿಕೆಯಲ್ಲಿ ಒಂದು ವರದಿ ಪ್ರಕಟವಾಗಿತ್ತು. ಯಾರೋ ಮಹಾಮನಸ್ಸಿನ ಮಹನೀಯರು ಗೋಧಿ ಹಿಟ್ಟಿಗೆ ನೀರು ಬೆರೆಸಿ ಬಾಟ್ಲಿಗಳಲ್ಲಿ ತುಂಬಿಸಿ ಸ್ಟ್ರೆಪ್ಟೋಮೈಸಿನ್ ಇಂಜಕ್ಷನೆಂದು ಮಾರಿದರಂತೆ! ಇದು ವ್ಯಾಗೀಯ ವ್ಯವಹಾರ ಮಾತ್ರವಲ್ಲ. ಸ್ವಾತಂತ್ರ್ಯದ ವ್ಯಭಿಚಾರವು ಕೂಡ. ಅತಿ ಸ್ವಾತಂತ್ರ್ಯದಿಂದಾದ ಅಜೀರ್ಣ ನಮ್ಮನ್ನು ಈ ಗತಿಗಿಳಿಸಿದೆ. ನಮ್ಮದು "Fair is foul foul is Fair" ಆಗಿರುವ ವಿಪರೀತ ಮೌಲ್ಯಗಳ ವಿಕಟ ಸಮಾಜ. ಇದರ ಅಷ್ಟಾವಕ್ರತೆ ಅನನ್ಯ, ಅಸದೃಶ.

ಈ ಪ್ರಮಾಣಿಕತೆಯ ಅಭಾವವು ಜನಜೀವನದ ವಿವಿಧ ರಂಗಗಳಲ್ಲೂ ರಿಂಗಣ ಗುಣಿಯುತ್ತಿದೆ. ಇದಕ್ಕೆ ಇನ್ನೊಂದು ನಿದರ್ಶನ ನಮ್ಮ ಉತ್ಸವಗಳು 'ಶಿಕ್ಷಕ ದಿನ: ಮಕ್ಕಳ ದಿನ; ಕುಷ್ಠರೋಗಿ ಸಪ್ತಾಹ–ಒಂದೇ ಎರಡೇ "Every dog-has its day" ಎಂಬ ಮಾತು. ನಮ್ಮಲ್ಲಿ ಅಕ್ಷರಶಃ ಸತ್ಯವಾಗಿದೆ. ವನಮಹೋತ್ಸವವನ್ನೇ ತೆಗೆದುಕೊಳ್ಳೋಣ. ಇದನ್ನು ನಾವು 1959ರಿಂದಲೇ ಆಚರಿಸಿಕೊಂಡು ಬಂದಿದ್ದೇವೆ. ನಾವು ನೆಟ್ಟ ಸಸಿಗಳಲ್ಲಿ ಅರ್ಧಾಂಶವಾದರೂ ಬೇರೂರಿ ಬೆಳೆದಿದ್ದರೆ ಭಾರತದ ಉದ್ಯಾನಗಳಲ್ಲಿ ಅರಣ್ಯಗಳೇ ವ್ಯಾಪಿಸಿಕೊಂಡಿರುತ್ತಿದ್ದುವು! ಪುಣ್ಯಕ್ಕೆ ಹಾಗಾಗಲಿಲ್ಲ. ನಮ್ಮ ಆರಂಭ ಶೂರತ್ವವು ನೆಟ್ಟ ಸಸಿಯನ್ನು ಸಾಯಿಸಿತೇ ಹೊರತು ಬದುಕಿಸಲಿಲ್ಲ. ಸಸಿ ಸತ್ತು ಕಸವಾಯಿತು. ಬೇಲಿಯೂ ಒಣಗಿ ಬಿತ್ತು. ಸರಿ. ಅಕ್ಟೋಬರದಲ್ಲಿ ಸ್ವಚ್ಛತಾ ಸಪ್ತಾಹ ತಾನೆ! ಆಗ, ಒಣಗಿದ ಆ ಸಸಿ ತರಗೆಲೆಗಳನ್ನೆಲ್ಲಾ ಗುಡಿಸಿ ಬೆಂಕಿಕೊಟ್ಟೆವು! ಈ ನಮ್ಮ ಉತ್ಸವ ಪ್ರಿಯತೆಯು ಜಗತ್ತಿನ ದೊಡ್ಡ ತಮಾಷೆಗಳಲ್ಲಿ ಒಂದಾಗಿ ಪರಿಣಮಿಸಿದೆ.

ನಮ್ಮ ಇನ್ನೊಂದು ದೊಡ್ಡ ದೌರ್ಬಲ್ಯವೆಂದರೆ ಮಾತಿನ ಮಲ್ಲತನ. ವಾಗ್ವಿಲಾಸದಲ್ಲಿ ನಮ್ಮನ್ನು ಮೀರಿಸುವವರಿಲ್ಲ. ರೋಮ್ ನಗರ ಉರಿಯುತ್ತಿದ್ದಾಗ ನೀರೋ ಪಿಟೀಲು ನುಡಿಸುತ್ತಿದ್ದನಂತೆ. ಇಲ್ಲಿ ನುಡಿಯುವವರು ಹೆಚ್ಚು; ದುಡಿಯುವವರಲ್ಲ. ನಮಗೆ ಭವ್ಯ ಇತಿಹಾಸವಿದೆ. ಆ ಗತ ವೈಭವವನ್ನು ಮೆಲುಕಾಡುವುದರಲ್ಲೇ ನಾವು ತೃಪ್ತಿಪಟ್ಟುಕೊಳ್ಳುತ್ತಿದ್ದೇವೆ. ಇತ್ತೀಚಿಗೆ ಸ್ವಾತಂತ್ರ್ಯವನ್ನು ಗಳಿಸಿಕೊಂಡ ಕೆಲವು ರಾಷ್ಟ್ರಗಳು ಶರಗತಿಯಿಂದ ಪ್ರಗತಿಹೊಂದಿದುದು ಪ್ರಾಯಶಃ ಅವುಗಳಿಗೆ ಹೊಗಳಿಕೊಳ್ಳುವಂತಹ ಪ್ರಾಚೀನ ಇತಿಹಾಸವಿರದ ಕಾರಣವಾಗಿರಬೇಕು. ನಾವಾದರೋ ಮುಂದೆ ನೋಡುವ ಬದಲು ಹಿಂದೆ ನೋಡುತ್ತಿದ್ದೇವೆ. ಈ 'ಉತ್ತರಕುಮಾರತ್ವ' ಕೊನೆಗೊಳ್ಳದೆ ನಮಗೆ ಉಳಿಗಾಲವಿಲ್ಲ. ಭವ್ಯ ಭವಿಷ್ಯದ ಭಾಷ್ಯಕಾರರಾಗುವ ಬದಲು ಕಳೆದ ಪುಟಗಳನ್ನು ಓದಿ ಕುಣಿಯುವ ನಮ್ಮನ್ನು ಏನೆನ್ನಬೇಕು

ಮಾತಿನ ಮಲ್ಲತನದ ಬೆನ್ನೇರಿ ಬಂದ ಇನ್ನೊಂದು ಪಿಡುಗು ಮೈಗಳ್ಳತನ. ಇವೆರಡೂ ಒಂದಾಗಿ ನಮ್ಮ ಕೃಷಿಕೈಗಾರಿಕೆಗಳ ಮರಣ ಗಂಟೆಯನ್ನು ಬಾರಿಸುತ್ತಿವೆ. ನಾವು ಗಡಿಯಾರದ ಗುಲಾಮರು. ಕಾರ್ಖಾನೆ ಕಾರ್ಯಾಲಯ ಕಚೇರಿ ಶಾಲೆಗಳಲ್ಲಿ ದುಡಿಯುವ ನಮ್ಮ ಒಂದು ಕಣ್ಣು ಕೆಲಸದಲ್ಲಿದ್ದರೆ. ಇನ್ನೊಂದು ಕಣ್ಣು ನೆಟ್ಟಿರುವುದು ಗಡಿಯಾರದಲ್ಲಿ. ಕರ್ತವ್ಯ ನಿಷ್ಠೆ ನಮ್ಮಿಂದ ಕಣ್ಮರೆಯಾಗಿದೆ. ಎರಡು ದಶಕಗಳು ಸಂದರೂ ಇನ್ನೂ ನಮ್ಮ ಉದ್ಯಮಗಳು ಅಂಬೆಗಾಲಿಡುತ್ತಿವೆ; ಅವುಗಳ ಶೈಶವಾವಸ್ಥೆ ದಾಟಿಲ್ಲ; ಅವುಗಳಿಗೆ ಬಾಲಗ್ರಹ ಪೀಡೆ ತಪ್ಪಿಲ್ಲ. ನಮ್ಮ ಕೈಗಾರಿಕೆಗಳು ಉತ್ಪಾದಿಸಿದ ವಸ್ತುಗಳು ವಿದೇಶೀ ಮಾರುಕಟ್ಟೆಗಳನ್ನು ಆಕರ್ಷಿಸುವ ಮಾತಂತಿರಲಿ ನಮಗೇ ಅವು ಬೇಡವಾಗಿವೆ ನಾವು ಆ ವಸ್ತುಗಳನ್ನು ಕೊಂಡುಕೊಳ್ಳದ ವಿನಾ ಕೈಗಾರಿಕೆಗಳು ಬೆಳೆಯಲಾರವು. ಅವು ಬೆಳೆಯದ ಹೊರತು ಶ್ರೇಷ್ಠ ಸಾಧನಗಳನ್ನು ಉತ್ಪಾದಿಸಲಾರೆವು ಆದರೆ ಉತ್ಪನ್ನಗಳು ಶ್ರೇಷ್ಠವಾಗುವ ತನಕ ನಾವು ಅವನ್ನು ಕೊಂಡುಕೊಳ್ಳಲಾರೆವು ಇದೊಂದು ವಿಷವರ್ತುಲ. ಅಮೆರಿಕದ ಕಂಪ್ಯೂಟರುಗಳು ಇನ್ನೇನು ಸ್ವತಃ ಕವನ ಬರೆಯುವ ಸನ್ನಾಹದಲ್ಲಿದ್ದರೆ ನಮ್ಮಲ್ಲಿ ತಯಾರಾದ ಪೆನ್ನುಗಳು ಬರೆಯಹೊರಟಾಗ ಸಂಪು ಹೂಡುತ್ತವೆ; ನಿಬ್ಬಿನ ಮೂಲಕ ಹೊರತು ಉಳಿದೆಲ್ಲೆಡೆ ಶಾಯಿ ಕಾರುತ್ತವೆ. ಭಾರತೀಯ ಸಾಧನಗಳಿಂದ ಬೇಸತ್ತ ನಾವು ವಿದೇಶೀ ಉತ್ಪನ್ನಗಳಿಂದ ಆಕರ್ಷಿತರಾಗುತ್ತೇವೆ. ಹೀಗಾಗಿ ನಮ್ಮ ರೂಪಾಯಿಯ ಮಾನಭಂಗ ನಮ್ಮ ಕೈಯಿಂದಲೇ ನಡೆಯುತ್ತಿದೆ.

ಕೃಷಿ ಕ್ಷೇತ್ರದಲ್ಲೂ ನಮ್ಮ ಸಾಧನೆ ಸಿದ್ಧಿಗಳು ಆಶಾದಾಯಕವಾಗಿಲ್ಲ. 1951ರ ಅಂಕೆ ಸಂಖ್ಯೆಗಳ ಪ್ರಕಾರ ಜಪಾನಿನಲ್ಲಿ ಎಕ್ರೆಯೊಂದರ ಸರಾಸರಿ ಭತ್ತದ ಉತ್ಪನ್ನವು 3414 ರಾತ್ತುಲುಗಳಷ್ಟಾಗಿದ್ದರೆ ನಮ್ಮಲ್ಲಿ ಅದು 728 ರಾತ್ತುಲುಗಳಷ್ಟು! ಅದೇ ನೆಲ; ಅದೇ ಜಲ; ಫಲದಲ್ಲಿ ಮಾತ್ರ ಅಪಾರ ಅಂತರ.

ನಮ್ಮ ರೂಪಾಯಿಯ ಮಾನ ಹರಣಕ್ಕೆ ಮತ್ತೊಂದು ಕಾರಣ ನಮ್ಮ ವಿದೇಶ ಸಂಚಾರದ ವ್ಯಾಮೋಹ. ಉಚ್ಚ ಶಿಕ್ಷಣಕ್ಕಾಗಿ ಹಲವರು ಮೇಧಾವಿಗಳು ವಿದೇಶಗಳಿಗೆ ತೆರಳಿ ಪದವೀಧರರಾಗಿ ಮರಳುತ್ತಿದ್ದಾರೆ. ಇದು ಇನ್ನು ಕೆಲವು ಕಾಲವಾ

(ಮೂವತ್ತಮೂರನೇ ಪುಟ ನೋಡಿ)

Gram : VISHWA
Tel: 29111

When at Bangalore
Stay at

HOTEL NATARAJA

Restaurant Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಶಾಸ್ತ್ರವೇ ನೃಪನ ಕುರುಡಾಗಿಸಿತ್ತು!

[ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.]

ಸುತರು ಮುನಿಯೊಡನೆ ಅಯೋಧ್ಯೆಗೆ ಹೋಗಿದ್ದರು—ಶ್ರೀರಾಮನ ಆಸ್ಥಾನದಲ್ಲಿ ರಾಮಾಯಣವನ್ನು ಹಾಡಲು. ಇತ್ತ ಆಶ್ರಮದಲ್ಲಿ ಸೀತೆ ಸಂಜೆಯ ವೇಳೆ ಮರದ ಬುಡದಲ್ಲಿ ಕುಳಿತು ಹಿಂದಿನ ನೆನಹುಗಳನ್ನು ಮಾಡುತ್ತಾ ಚಿಂತಾಕುಲೆಯಾಗುತ್ತಾಳೆ. ತನ್ನ ದುರ್ವಿಧಿಯನ್ನು ನಿಂದಿಸಿಕೊಳ್ಳುವಳು. ನಿರಪರಾಧಿನಿಯಾದ ತನ್ನನ್ನು ಅರಸನು ಇಂತು ಏಕೆ ತೊರೆದನೋ ಎಂಬುದು ಆಕೆಗೆ ತಿಳಿಯಲೊಲ್ಲದು. ರಾಜನೀತಿಯ ಶಾಸ್ತ್ರ ಅಷ್ಟು ಕಠಿಣವಿರಬಹುದೇ ಎಂದು ಕೇಳುವಳು— ಇದು ಮಲೆಯಾಳದ ಮಹಾಕವಿ ಕುಮಾರನ್ ಆಶಾನ್ ಬರೆದ ಸೀತಾ ಖಂಡಕಾವ್ಯದ ಒಂದು ಭಾಗದ ಕನ್ನಡ ರೂಪಾಂತರ.

೧

ತರಳಾಕ್ಷಿ ತನ್ನ ಚಿಂತೆಯ ಮುಂದುವರಿಸಿದಳು
ಧಾರೆ ಮುರಿಯದೆ; ತಂತು ಕಡಿಯಲುಂಟೆ?
ಅಲೆಗಳಿಂದಾದ ಗಾಳಿಯು ಗೈದ ಸೇತುವಿಂ
ಬಲವಾದ ಹೊನಲು ಹರಿವುದು ತಡೆಯಲುಂಟೆ?

೨

ಗಿರಿಗಹ್ವರಂಗಳಿಂದುಗ್ರವೆನಿಸಿದ ವಿಪಿನ
ಸಿಂಹ ಶಾರ್ದೂಲಗಣ ಸರಿಸ ಹಾವುಗಳು;
ಅತಿ ಭಯಂಕರ ಸಿಂಧು, ಕಕ್ಕಸದ ರಕ್ಕಸರ
ನಿಲಯವೋ—ಎಲ್ಲವಿವು ಕಂಡವುಗಳು!

೩.

ನರಲೋಕದಲ್ಲಿರುವ ನರಕ ದುಃಖವನ್ನೆಲ್ಲ
ಅನುಭವಿಸಿ ಸರಿಯಾಗಿ ತಿಳಿದಿರುವೆನು;
ಇಂತಿರಲು ಪರಮಾರ್ಥವನ್ನೆನಗೆ ತಿಳಿಸದೆಯೆ
ಎಂತೆನ್ನೊಳಡಗಿಸಿದ ನರನಾಥನು?

೪

ಪತಿಯ ಚಿತ್ತಕೆ ವಿರುದ್ಧದ ವೃತ್ತಿಯಲಿ ನಡೆದ
ಸತಿಯೆ ಜಾನಕಿ? ಸರ್ವಥಾ ಶಂಕೆಯೇಕೆ?
ಮೊರೆಯುವ ಮಹೋದಧಿಗೆ ಇದಿರಾಗಿ ಜಾಹ್ನವಿಯು
ಹರಿಯಲುಂಟೇ? ಸೆಳೆತವದರ ಹಾಗೆ!

೫

ಅಪಕೀರ್ತಿ ಭಯದಿಂದಲಂಧನಾಗಿಹ ನೃಪನು
ಇಂತು ತನ್ನಯ ಕೋಳೆಯ ತೊಳೆಯಬಯಸಿದನೆ?
ಕೃಪಣೋಚಿತವೆನಿಪ್ಪ ಈತೆರನ ನಡತೆಯಿಂ
ಅಪವಾದ ಸರಿಯೆಂದು ದೃಢವ ಪಡಿಸಿದನೆ?

೬

ಅಪರಾಧಿಯನ್ನು ದಂಡಿಸದೆ ಬಿಡುವುದುವುಂಟು
ಕೃಪೆಯಿಂದ ಸಂಶಯಂಗೊಂಡ ನೃಪನು;
ಅಪರಾಧವೆನಿತಿಲ್ಲದೆಯೆ ಶಿಕ್ಷೆಗೊಳಗಾದೆ
ಭೂಪನೆಂತೀ ಪಾಪ ಕಳೆಯಲಿಹನು?

೭

ಸಂಪ್ರೀತಿಯಿಂದಲಾನಂದು ಹೇಳಿದೆನೊಂದು
ವಿಶ್ವಾಸ ಪೂರ್ವಕದ ಬಯಕೆ ಗರ್ಭಿಣಿಯು;
ಅದರೊಳೇ ಕಾಲೂರಿಕೊಂಡು ಈ ವಂಚನೆಯ
ಗೈದನಲ್ಲವೆ ನೃಪತಿಯೆನಗೆ ದುರ್ಗತಿಯು?

೮

ಜನಕಾಜ್ಞೆಯಂ ಹೊತ್ತು ವನಯಾತ್ರೆ ಗೈದಿರಲು
ಇನಿಯಂಗೆ ನೆರವಾಗಿ ನಾ ಹೋದೆನು;
ನಯರಹಿತನೆನ್ನ ಪ್ರಿಯ ಸ್ವಯಮಾಜ್ಞೆಯನ್ನಿತ್ತು
ಏಕಾಕಿನಿಯ ವನಕೆ ಬಲಿಗೊಟ್ಟನು!

೯

ಅನ್ಯೋನ್ಯ ಭೇದವಿಲ್ಲದ ಹೃದಯ ಹೃದಯಗಳ
ಸ್ನೇಹಭಾವದ ಸಲುಗೆ ಸಿಗಲೆಯಿಲ್ಲ!
ದುರ್ಭಾಗ್ಯಳಾದೆನಗೆ ಮಾನವ ಸಹಜವಾದ
ಆ ಕೃತಜ್ಞತೆಯು ದೊರೆ ತೋರಲಿಲ್ಲ!

೧೦

ಕಟ್ಟಿರುವೆ ಕೂಡ ತನ್ನಯ ಮೊಟ್ಟೆ ಮರಿಗಳನು
ಕಷ್ಟದಿಂ ಕಾಪಾಡುತಿದೆ ಪ್ರೀತಿಯಿಂದ;
ಎಲ್ಲ ಬಲ್ಲವನಾದ ಯೆನ್ನರಸನೋ—ಇಂದು
ನಿಜಗರ್ಭವನೆ ಕಾಡಿಗೆಸೆದ ನಿರ್ದಯದೆ!

೧೧

ಶ್ವಶುರನೋ ಬಹುಯಜ್ಞ ದೀಕ್ಷೆಯೊಂತನು ಮತ್ತೆ
ಅಶುಭಗಳ ತೊಲಗಿಸುತ ಪಡೆದ ಪುತ್ರನನು.
ಅವನ ನಂದನನಿಂದು ಶಿಶುನೋಕ್ತಿ ಕೇಳುತ್ತೆ
ಪುಣ್ಯ ಶಿಶು ಲಾಭಮುತ್ಸವವ ತೊರೆದಿಹನು!

೧೨

ಅಯ್ಯೋ! ನೆನೆಯೆನು! ನೃಪನು ಶೂದ್ರಮುನಿಯೊರ್ವನನು
ನಿಷ್ಕರುಣೆಯಿಂದಂದು ಕೊಂದನೆಂದು!
ಬಗೆಯೆ—ಸ್ತ್ರೀ ಶೂದ್ರರಿಗೆ ಸ್ವಾತಂತ್ರ್ಯನೀಡದಿಹ
ಶಾಸ್ತ್ರವೇ ನೃಪನ ಕುರುಡಾಗಿಸಿತ್ತು!

೧೩

ಸಹಜವಾದ ದಯಾರ್ದ್ರತೆಯು ಧರ್ಮ ಬುದ್ಧಿಯೂ
ಮಹನೀಯವಾದಾತ್ಮಗುಣಗಳಿವು ದೊರೆಯಿಂ
ಸಹಧರ್ಮಿಣಿಯ ಕಾರ್ಯದಲ್ಲಿ ಸಹಸಾ ತೊಲಗಿ
ಹೊರಟೆ ಹೋಯಿತ್ತಯ್ಯೊ! ಎನ್ನ ದುರ್ವಿಧಿಯಿಂ!

೧೪

ವನಭೂಮಿಯಲ್ಲಿ ಯಮುನಾತ್ರಮದ ಬಳಿಯಲ್ಲಿ
ಘನಗರ್ಭ ಭಾರದಿಂದೆನ್ನ ಹರಿಣಿ
ಕಣ್ಮುಂದೆ ನಿಂತಿರಲಂದು ಹೃದಯೇಶಂಗೆ
ಬಾಷ್ಪಾಂಬುವೊಸರಿತ್ತು—ನೆನೆಯೆ ಧರಿಣಿ!

೧೫

ಅತ್ಯಂತ ಕೋಮಲ ಸ್ವಭಾವದ ಮನಸ್ಥಿತಿಯು
ಚಿಗುರುವುದು ಕಾಡಿನಲಿ ತಳಿರಿನಂತೆ;
ರಾಜಪಟ್ಟದಿ ಬದ್ಧವಾಗಿರುವ ಬುದ್ಧಿಯು
ರೂಕ್ಷವು ಗುರಾಣಿ ಹೊರಭಾಗದಂತೆ!

೧೬

ನಿಜವಾಗಿ ನೋಡಿದೊಡೆ—ವನವಾಸ ವೇಳೆಯೊಳೆ
ಅಸಮಾನ ಪ್ರಣಯವನು ಪ್ರಿಯನು ತೋರ್ದ
ಒಡೆತನದ ಪಡೆದಿರಲು ಪರಮಾರ್ಥ ಸೌಹೃದವು
ಕ್ಷಯವಾಗಿ ಹೋಗುವುದೆ? ಏನನರ್ಥ!

1969ರ ಸಾಲಿನ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಕವಿವರ್ಯರೂ ಕಾಸರಗೋಡು ಕರ್ನಾಟಕ ಸಮಿತಿಯ ಧುರೀಣರೂ ಆದ ಶ್ರೀ ಕಯ್ಯಾರ ಕಿಞ್ಞಣ್ಣರೈಗಳು ಗವರ್ನರ್ ಶ್ರೀ ಧರ್ಮವೀರರ ದಿವ್ಯಹಸ್ತದಿಂದ ಸ್ವೀಕರಿಸುತ್ತಿದ್ದಾರೆ. ಪಕ್ಕ ಬಾಗಿ ನಿಂತು ನೋಡುತ್ತಿರುವವರು ವಿದ್ಯಾ ಮಂತ್ರಿಗಳಾದ ಶ್ರೀ ಕೆ. ವಿ. ಶಂಕರಗೌಡರು. ಅವರ ಒತ್ತಿಗೆ ಕಾಣುತ್ತಿರುವವರು ಡಾ|| ಅ. ನ. ಕೃಷ್ಣರಾಯರು. ಈ ಸಮಾರಂಭ ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ನೆರವೇರಿತು.

ನಮೋ! ಮಹಾತ್ಮ!

ಕೆ. ಎನ್. ಭಟ್, ಶಿರಾಡಿಪಾಲ್

ಓಂ ನಮೋ! ಓ ಶಿಲ್ಪಿ! ಸ್ವಾತಂತ್ರ್ಯ ವರಶಿಲ್ಪಿ!
ಓಂ ನಮೋ! ಗುಣಶಿಲ್ಪಿ! ಸತ್ಯ ಶಿವಶಿಲ್ಪಿ!
ಓಂ ನಮೋ! ವಿಶ್ವಾತ್ಮ ಮಾನವತೆಯಾ ಶಿಲ್ಪಿ
ಓಂ ನಮೋ! ಭಾರತದ ಸೌಭಾಗ್ಯ ಶಿಲ್ಪಿ || ೧ ||

ಭಾರತದ ಸ್ವಾತಂತ್ರ್ಯ ಮಹಾಪುರ್ಣ ನೀನಾದೆ!
ಶಸ್ತ್ರವಿಲ್ಲದ ಸಮರ ಸರ್ವಜ್ಞನಾದೆ!
ಹೊಡೆದವರ ನ್ಯೈಪಡವಿ ಮುದ್ರಿಸಲು ಮುಂಪಾದೆ
ಮಣಿದವರ ಹರಸುತ್ತ ಹುತಾತ್ಮನಾದೆ! || ೨ ||

ಹಿಂಸೆಯನು ತ್ಯಜಿಸುತ್ತ ವಂಚನೆಯ ವರ್ಜಿಸುವ
ಸದ್ಬೋಧೆಯಂ ನೀಡಿ ವಿಕ್ರಮದ ಸಾರ್ದಿ
ಪ್ರೇಮದಿಂ ಶೌರ್ಯವಾಜ್ವಾಲೆಯನ್ನಡಗಿಸುತ
ಭಾರತದ ವರಶಕ್ತಿ ವಿಶ್ವಕ್ಕೆ ತೋರ್ದೆ! || ೩ ||

ಸತ್ಯ ಶಿವ ಸುಂದರಂ ಗಾಂಧೀ ಮಹಾತ್ಮನವ!
ಸತ್ಯ ಚೇತನ ಕರಂ ಗಾಂಧೀ ಸುನಾಮ!
ಮರ್ತ್ಯರೊಳು ಮಾದೇವ ಮಾರ್ತಾಂಡ ನೀನಮರ
ನಿತ್ಯ ಸಂಸ್ಮರಣೀಯ ಶಕಪುರುಷನಾದ! || ೪ ||

ಮಾನವತೆಯಂ ಪಿಡಿದು ಮಾರ್ಗೇಶ ನೀನಾದೆ
ಸರ್ವಧರ್ಮ ಸುಪೂಜ್ಯ ಮನುಕುಲಕೆ ಮಾನ್ಯ!
ವಿಶ್ವ ವಂದ್ಯ ಮಹಾತ್ಮ! ಭಾರತದ ಪುಣ್ಯಾತ್ಮ!
ಭವ್ಯ ಭಾರತಕಿಂದು ದಿವ್ಯ ಪ್ರಭೆ ನೀಡೈ || ೫ ||

1969ರಲ್ಲಿ ಮೈಸೂರು ದಸರಾ ಕವಿ ಸಂಮ್ಮೇಳನದಲ್ಲಿ ಹಾಡಿದ, ಬಾನುಲಿ ಪ್ರಸಾರಗೊಂಡ ಕವಿತೆ.

'ನವಯುಗ' ಸುವರ್ಣ ಮಹೋತ್ಸವ ನಿಧಿಗೆ
ಉದಾರ ಧನಸಹಾಯ ಮಾಡಿ ಸಹಕರಿಸಿರಿ!

ಡಾ|| ಪಿ. ಗುರುರಾಜ ಭಟ್ಟ

ಬಗ್ಗವಾಡಿ ಶ್ರೀ ಮಹಿಷಮರ್ದಿನಿ

ಕುಂದಾಪುರದಿಂದ ಹತ್ತೂವರೆ ಮೈಲು ದೂರದಲ್ಲಿ ನದೀ ತಟಾಕದಲ್ಲಿನ "ಬಗ್ಗವಾಡಿ"ಯ ಮಹಿಷಮರ್ದಿನಿ ದೇವಾಲಯ ತನ್ನ ಪ್ರಾಕೃತಿಕ ಸನ್ನಿವೇಶದಿಂದ ಮನಸೂರೆಗೊಳ್ಳುತ್ತದೆ. ಇಲ್ಲಿನ ನಾಲ್ಕೂವರೆ ಅಡಿ ಎತ್ತರದ ದೇವಿಯ ವಿಗ್ರಹ ಅಭ್ಯಸನೀಯ ಶಿಲ್ಪ ವಿನ್ಯಾಸವೂ ಆಗಿದೆ.

ಕುಂದಾಪುರದಲ್ಲಿ ದೋಣಿಯಲ್ಲಿ ಕುಳಿತು ಸುಮಾರು 2½ ಗಂಟೆ ಪಯಣ ಬೆಳೆಸಿ ಬಗ್ಗವಾಡಿ ದೇವಾಲಯದ ಮುಂಭಾಗದಲ್ಲಿಳಿದಾಗ ಅಲ್ಲಿಯ ವಾತಾವರಣವನ್ನು ಕಂಡು ಬಹು ಸಂತೋಷವಾಯಿತು. ಶಾಂತ ವಾತಾವರಣ; ಪೇಟೆಯ ಗದ್ದಲ, ಗಲಭೆಗಳಿಲ್ಲ; ಒಂದು ಪಾಳುಬಿದ್ದ ಕೋಟೆ ನದೀತಟಾಕದಲ್ಲೇ ಇದೆ. ಇದರ ಎದುರುಭಾಗದಲ್ಲಿ ದಿವ್ಯವಾದ ಒಂದು ದೇಗುಲವಿದೆ. ಈ ದೇಗುಲವು ಅರ್ವಾಚೀನ ಕಟ್ಟಡ. ಮುಂಬಾಯಿಯ ಮೊಗವೀರ ಸಮಾಜದಿಂದ ಹೊಸತಾಗಿ ನಿರ್ಮಿತವಾದ ದೇವಾಲಯದ ಕಟ್ಟಡ. ಆದರೆ, ಈ ದೇವಾಲಯದಲ್ಲಿ ಅಧಿದೇವತೆಯಾಗಿರುವ ಶಕ್ತಿಯು ಶ್ರೀ ಮಹಿಷಮರ್ದಿನಿ— ನಮ್ಮ ಜಿಲ್ಲೆಯ ಮಹಿಷ ಮರ್ದಿನಿ ವಿಗ್ರಹಗಳಲ್ಲಿ ಅತಿ ಎತ್ತರವಾದ ಹಾಗೂ ಬಹಳ ಪ್ರಾಚೀನವಾದ ಶಿಲಾಮೂರ್ತಿ.



ಬಗ್ಗವಾಡಿಯ ಮಹಿಷಮರ್ದಿನಿ ದೇವಾಲಯದ ಶ್ರೀ ಮಹಿಷಮರ್ದಿನಿ [ಸು. ಕ್ರಿ.ಶ. 8-9ನೇ ಶತಕ]

ಬಗ್ಗವಾಡಿಯು ಕುಂದಾಪುರಕ್ಕೆ ಸುಮಾರು ಹತ್ತು ಮೈಲು ಈಶಾನ್ಯಕ್ಕಿದೆ. ಇದೊಂದು ತೀರ ಹಳ್ಳಿ. ಆದರೆ ಬಗ್ಗವಾಡಿ ಎಂಬೀ ಹೆಸರಿನಲ್ಲಿ ತುಂಬಾ ಸ್ವಾರಸ್ಯವಿದೆ. ಇದರ ಮೂಲ ರೂಪವು ವ್ಯಾಘ್ರವಾಡಿ ಎಂದಿರಬೇಕು. ಕಾಲಕ್ರಮೇಣ ಇದು ಬಗ್ಗವಾಡಿಯಾಗಿದ್ದಿರಬೇಕು. (ವ್ಯಾಘ್ರದ ತತ್ಭವ ಬಗ್ಗ) ಭಾಷಾದೃಷ್ಟಿಯಲ್ಲಿ ಪರಿಶೀಲಿಸಿದರೆ ಈ ಹೆಸರೂ ಸಾಕಷ್ಟು ಪ್ರಾಚೀನವೇ ಆಗಿದೆ.

ಬಗ್ಗವಾಡಿಯ ದೇವಾಲಯದಲ್ಲಿ ಪ್ರತಿಷ್ಠಿತವಾದ ಶ್ರೀ ಮಹಿಷಮರ್ದಿನಿ ವಿಗ್ರಹವು ಯಾರ ಮನಸ್ಸನ್ನಾದರೂ ಸೆಳೆಯದಿರಲಾರದು. ಶಿಲ್ಪ ವಿಜ್ಞಾನಿಗಳಿಗೆ ಮಹದಾನಂದವನ್ನೀಯಬಹುದಾದ ವಿಗ್ರಹ. ಇತಿಹಾಸಕಾರನಿಗೆ ಪ್ರಾಚೀನತೆಯ ಸ್ಪಷ್ಟ ಕುರುಹನ್ನೀಯುವ ಮೂರ್ತಿ. ಕಲೋಪಾಸಕರಿಗೆ ಮೃಷ್ಟಾನ್ನವನ್ನೀಯುವಬಿಂಬ. ಭಕ್ತಾದಿಗಳ ಹೃದಯವನ್ನು ಸೆರೆಹಿಡಿಯುವ ಶಿಲ್ಪ. ನಮ್ಮ ಜಿಲ್ಲೆಯ ಶಿಲಾ ವಿಗ್ರಹಗಳಲ್ಲಿ ಗೋಮಟೇಶ್ವರ ಮೂರ್ತಿಗಳನ್ನು ಬಿಟ್ಟರೆ ಪ್ರಾಯಃ ಇಷ್ಟು ಎತ್ತರದ ಪ್ರತಿಮೆಯು, ಇಷ್ಟರ ತನಕ ತಿಳಿದು ಬಂದಂತೆ, ಇನ್ನೊಂದಿರಲಾರದು. ಎತ್ತರದಲ್ಲಿ 4½'ಯಾಗಿದ್ದು ದಪ್ಪನಾದ, ಗಂಭೀರವಾದ ಮುಖಮುದ್ರೆಯುಳ್ಳ ಲಾವಣ್ಯಮಯವಾದ ವಿಗ್ರಹವಿದಾಗಿದೆ.

ನಮ್ಮ ಜಿಲ್ಲೆಯ ಇತರ ಮಹಿಷಮರ್ದಿನೀ ಬಿಂಬಗಳಿಗೂ ಈ ಬಿಂಬಕ್ಕೂ ತುಂಬಾ ವ್ಯತ್ಯಾಸವಿದೆ. ಮುಖ್ಯವಾಗಿ ಬಾಹುಗಳ ನಿರ್ದೇಶನದಲ್ಲಿ ಈ ವ್ಯತ್ಯಾಸ ಕಂಡು ಬರುತ್ತದೆ. ಈ ಬಿಂಬದ ನಾಲ್ಕೂ ಬಾಹುಗಳು ಕೆಳ ಮೊಗವಾಗಿಯೇ ತೋರಿಸಲ್ಪಟ್ಟಿವೆ. ಇತರ ಚತುರ್ಬಾಹು ವಿಗ್ರಹಗಳಲ್ಲಿ ಎರಡು ಮೇಲ್ಮೊಗವಾಗಿಯೂ ಎರಡು ಕೆಳಮೊಗವಾಗಿಯೂ ನಿರ್ದೇಶಿತವಾಗಿವೆ. ಬಲಭಾಗದ ಒಂದು ಕೈಯ್ಯಲ್ಲಿ ಕಠಾರಿಯೂ ಇನ್ನೊಂದರಲ್ಲಿ ಮಹಿಷನ ಬಾಲವೂ ಗಟ್ಟಿಯಾಗಿ ಹಿಡಿಯಲ್ಪಟ್ಟಿವೆ. ಎಡಭಾಗದ ಒಂದು ಕೈಯ್ಯಲ್ಲಿ ಘನವಾದ ಶಲಾಕೆಗಳು ಮೇಲ್ಮೊಗವಾಗಿ ಹಿಡಿದಿರುವ ತ್ರಿಶೂಲವೂ ಇನ್ನೊಂದರಲ್ಲಿ ಪದ್ಮವೂ ಆಯುಧಗಳಾಗಿವೆ. ಮಹಿಷನನ್ನು ನಿಸ್ಸಹಾಯಕ ಹಾಗೂ ದುಸ್ಸಹನೀಯವಾದ ಪರಿಸ್ಥಿತಿಗೆ ಇಳಿಸಿದ ರೀತಿ ಬಹು ಭೀಕರವಾಗಿದೆ. ಮಹಿಷನ ಶಿರಸ್ಸನ್ನು ತ್ರಿಶೂಲದಿಂದ ಇರಿದು ನಾಲ್ಕೂ ಕಾಲುಗಳು ನೇತಾಡುವಂತೆ ಲಾಂಗೂಲವನ್ನು ಹಿಡಿದ ರೀತಿಯು ಶಿಲ್ಪಿಯ ಭಕ್ತಿಪೂರ್ವಕವಾದ ಹೃದಯವು ಈ ಮೂರ್ತಿಯ ಕೆತ್ತನೆಯಲ್ಲಿ ಹೇಗೆ ಐಕ್ಯವಾಗಿದ್ದಿರಬಹುದೆಂಬುವನ್ನು ಚೆನ್ನಾಗಿ ತಿಳಿಸುತ್ತದೆ. ಮುಖ ಮತ್ತು ಶಿರಸ್ಸಿನ ಕುರಿತಾಗಿ ಒಂದೆರಡು ವಿಷಯಗಳನ್ನು ತಿಳಿಸುವುದು ಅಗತ್ಯ. ವಿಶಾಲ ಹಾಗೂ ದುಂಡಗಾದ ಮುಖ, ದೀರ್ಘವಾದ ಟೊಪ್ಪಿಯಾಕಾರದ ಕಿರೀಟ, ದೀರ್ಘವಾದ ಕಿವಿಗಳು ಮತ್ತು ಮುಖಕ್ಕೆ ಸರಿಯಾಗಿ ಹಿಂಭಾಗದಲ್ಲಿ ಸೂರ್ಯಮಂಡಲ—ಇವು ವೈಲಕ್ಷಣಗಳಾಗಿವೆ ಈ ಭಾಗದ ಕೆತ್ತನೆಯಲ್ಲಿ ಬೌದ್ಧ ಶಿಲ್ಪದ ಲಕ್ಷಣಗಳು ತೋರಿಬರುತ್ತವೆ. ಅಲಂಕಾರಿಕವಾದ ಕೆತ್ತನೆಗಳು ಬಹು ಕಡಿಮೆ. ತೊಡಿಗೆಯು ನೊ... ವರೆಗೆ ಇಳಿದು ಭಾರವಾದ ಸ್ತನಗಳು ಲಕ್ಷಣಕ್ಕೆ ಒಪ್ಪುವಂತೆ ಮೂಡಿಸಲ್ಪಟ್ಟಿವೆ. ಮಹಿಷನ ಕೋಡುಗಳು ಬಹು ದೀರ್ಘವಾಗಿವೆ. ತಕ್ಕಮಟ್ಟಿಗೆ ಮಹಿಷನ ನಿರ್ದೇಶವು ಕಡಿಯಾಳ ಮಹಿಷಮರ್ದಿನಿ ವಿಗ್ರಹದ ಮಹಿಷನನ್ನು ಹೋಲುತ್ತದೆ ಈ ಮೂರ್ತಿಯ ಶಿಲ್ಪ ವೈಖರಿಯು ವಿಠಲದ ಪಂಚಲಿಂಗೇಶ್ವರ ದೇವಾಲಯದ ಉಪಸ್ಥಾನ ಮೂರ್ತಿಯಾದ ಈಗ ವಿಸರ್ಜಿಸಲ್ಪಟ್ಟ ಮತ್ತು ಯಂ. ಜಿ. ಯಂ. ಕಾಲೇಜಿನ ವಸ್ತು ಪ್ರದರ್ಶನಾಲಯದಲ್ಲಿರುವ ಮಹಿಷಮರ್ದಿ

(...)

ಕಣ್ಣಾರಿನ ಶ್ರೀ ಮಹಿಷಮರ್ದಿನಿ [ಸು. ಕ್ರಿ.ಶ. 9-10ನೇ ಶತಕ]

ಪ್ರಾಪ್ತೇತು ಷೋಡಶೇ ವರ್ಷೆ ರಾಸಭೇರಪಿ ಅಪ್ಸರಾ ಭವೇತ್” — ಹದಿನಾರನೆ ವರ್ಷಕ್ಕೆ ಹೆಣ್ಣು ಕತ್ತೆಯಾಗಿದ್ದರೂ ಅಪ್ಸರೆಯಾಗಿ ಕಾಣುವಳಂತೆ. ಹಾಗೆಯೇ ಹದಿನಾರನೆಯ ವರ್ಷ ಹೆಣ್ಣಿಗೆ ಗಂಡಾಂತರದ್ದು - ಎಂದೂ ಒಂದು ಗಾದೆ ಇದೆ;ನಮ್ಮ ನೆರೆಯ ಮರಾಠಿಗರಲ್ಲಿ. ಆದರೆ ನಮ್ಮ ಪ್ರಧಾನಿ ಇಂದಿರಾಜಿಯವರಿಗೆ ಐವತ್ತಮೂರನೆಯ ವರ್ಷ ಗಂಡಾಂತರದ್ದೆಂದರೆ ತಪ್ಪಾಗಲಿಲ್ಲ. ಹೆಣ್ಣಿಗೆ ಮೂವತ್ತಕ್ಕೆ ಮುಪ್ಪೋ? ಐವತ್ತಕ್ಕೋ? ವೈದ್ಯರಿಗೆ ಗೊತ್ತು. ಅವಳ ಗಂಡ ಅಥವಾ ಅವಳನ್ನು ನೋಡುವ ಬೇರೆ ಹೆಣ್ಣಿನ ಗಂಡನಿಗೆ ಗೊತ್ತು!

ಆದರೆ ಇಂದು ಇಂದಿರಾಜಿಗೆ ಐವತ್ತಮೂರು. ಆದರೂ ಅವರು ತಲೆಯ ಮೇಲಿನ ನರೆಗೂದಲ ಜುಟ್ಟುಗಳನ್ನು ಬಿಟ್ಟರೆ ಮುಪ್ಪಿಗೆ ತನ್ನ ಸುತ್ತಲೂ ಎಲ್ಲೂ ಸುಳಿಯಲು ಕೊಡಲಿಲ್ಲ. ಇದು ಅವರ ತೇಜಸ್ವಿಯೂ ವರ್ಚಸ್ವಿಯೂ ಆದ ವ್ಯಕ್ತಿತ್ವದ ವಿಜಯವೆನ್ನಬಹುದು.

ಬೆಳೆಯುವ ಜನಪ್ರಿಯತೆ, ಬೆಳೆಯುವ ವಿರೋಧ, ಬೆಳೆಯುವ ಯಶಸ್ಸು, ಬೆಳೆಯುವ ಸಂಘರ್ಷ, ಬೆಳೆಯುವ ಕರ್ತೃತ್ವ, ಬೆಳೆಯುವ ಶತ್ರುತ್ವ, ಬೆಳೆಯುವ ಅಂತಾರಾಷ್ಟ್ರೀಯ ಕೀರ್ತಿ, ಬೆಳೆಯುವ ಅಂತರ್ಗತ ಕೊಡಕು ತೊಂದರೆ, ಬೆಳೆಯುವ ಶುಭಾಶಯಗಳು, ಜತೆಗೆ ಬೆಳೆಯುವ ಬಯ್‌-ಬಿರುನುಡಿಗಳು....ಹೀಗೆ ಅನೇಕಪರಿಯ ಪರಸ್ಪರ ವಿರೋಧಿ ಸಂಗತಿಗಳಿಂದ ವರ್ಣರಂಜಿತವಾದ ಪರಿಸ್ಥಿತಿಯಲ್ಲಿ ಇಂದಿರಾಗಾಂಧಿಯವರು ಐವತ್ತನೆಯ ಮೈಲುಗಲ್ಲನ್ನು ತನ್ನ ಆಯುಷ್ಯದ ಪಥದಲ್ಲಿ ಪಂಥದಿಂದ ದಾಟಿ ಮುನ್ನಡೆದಿದ್ದಾರೆ. ಇದು ಇಂದಿರಾ ಯುಗದ ಎರಡನೆಯ ವರ್ಷ. ಈ ಯುಗ ಕಳೆದ ವರ್ಷ ಆರಂಭವಾಯಿತು.

ಇಂದಿರಾಜಿ ಕಳೆದ ವರ್ಷದಿಂದಲೇ ತನ್ನ ಸ್ವತ್ವದ ಸತ್ವವನ್ನು ಸ್ಥಾಪಿಸಿ ಭಾರತದ ನಾಯಕಿಯಾಗಿ ಮುಂದೆ ಬಂದದ್ದೂ, ಭಾರತೀಯ ಜನತೆ ಅವರನ್ನು ಧೀರ ಲಲಿತ ಭೂಮಿಕೆಯಲ್ಲಿ ಕಂಡುಕೊಂಡಿದ್ದೂ ಒಪ್ಪಿಕೊಂಡಿದ್ದು—ಎನ್ನಬಹುದು. ಆ ಮೊದಲು ಚುನಾವಣೆಗಳ ಮುಂಚಿನ ಅವರ ಪ್ರಧಾನಿತ್ವ ವಿಶೇಷವಾಗಿ ಸ್ವಾನಬಲದಿಂದಲೇ ಸಿದ್ಧವಾಗಿತ್ತು. “ಗೂಂಗೀ ಗುಡಿಯಾ” (ಮೂಕ ಗೊಂಬೆ)ಎಂದು ಅಂದುಅವರನ್ನು ಮಧುಲಿಮಯೆ ಬಣ್ಣಿಸಿದ್ದುಂಟು. ಆದರೆ ಈಗ ಅವರು ಮೂಕಿಯೂ ಅಲ್ಲ ಗೊಂಬೆಯೂ ಅಲ್ಲವೆಂದು ಹೆಜ್ಜೆ ಹೆಜ್ಜೆಗೂ ಪ್ರಕಾಶವಾಗುತ್ತಿದೆ. ಕರ್ತೃತ್ವ, ನೇತೃತ್ವ ಮತ್ತು ವ್ಯಕ್ತಿತ್ವಗಳ ಇಂಥ ಒಂದು ಸಾರ್ಥಕ ಹಾಗೂ ಸಮರ್ಥ ಸಮನ್ವಯ ಇಷ್ಟು ಅಲ್ಪ ಕಾಲದಲ್ಲಿ ಇಷ್ಟು ಪ್ರಕರ್ಷವಾಗಿ ಪ್ರಕಾಶಗೊಳಿಸಿದ ಇನ್ನೊಂದು ವ್ಯಕ್ತಿ ಶ್ರೀ ಲಾಲ್‌ಬಹಾದ್ದೂರ್ ಶಾಸ್ತ್ರಿಯವರೇ. ಆದರೆ ಶಾಸ್ತ್ರೀಜೀ ಪ್ರಧಾನಿಯಾಗುವ ಪೂರ್ವದಿಂದಲೂ ತನ್ನ ಸತ್ವದಲ್ಲಿ ಸ್ವಾಯತ್ತ ಪ್ರಭಾವ ಬೀರುತ್ತಲೇ ಇದ್ದರು.

ಆದರೆ ಇಂದಿರಾಜಿ ವಿಶೇಷವಾಗಿ ತಂದೆಯ ಯೋಗಕ್ಷೇಮ, ‘ತೀನಮೂರ್ತಿ’ಯ ಯಾಜಮಾನ್ಯ ಇವುಗಳಲ್ಲಿಯೇ ಬುದ್ಧಿ

ಶ್ರೀ ಗೌರೀಶ ಕಾಯ್ಕಿಣಿ

ಪ್ರಿಯದರ್ಶಿನೀ ಇಂದಿರಾ

(ಐವತ್ತುಮೂರರ ವ್ಯಕ್ತಿ ಪರಿಚಯ)

ಭಾರತದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ರಾಜಕೀಯ ನೀತಿ-ನಿಲುವುಗಳೇನೇ ಇರಲಿ, ವ್ಯಕ್ತಿಗತವಾಗಿ ಅವರ ಪ್ರಭಾವಶಾಲಿನಿ. ಈ ಪ್ರಭಾವದ ಬಲದಿಂದಲೇ ಅವರ ವಿಶ್ವವಿಖ್ಯಾತಿಯೂಗಿದ್ದಾರೆ. ಉತ್ತಮ ರೂಪದ, ಆರೋಗ್ಯದ, ಪರಿಶ್ರಮಿ ಶ್ರೀಮತಿ ಇಂದಿರಾ ಸ್ವಾವಲಂಬಿಗಳೂ ಆಗಿದ್ದಾರೆ.

ವಂತಿಕೆಯನ್ನು ತೊಡಗಿಸಿದ್ದರು. ನೆಹರೂಜಿಯ ವ್ಯಕ್ತಿತ್ವದಲ್ಲಿ ಮಗಳ ವ್ಯಕ್ತಿತ್ವ ಪೂರ್ತಿ ಅಡಗಿಹೋದಂತೆ ಇತ್ತು. ಅವರು ಕಾಂಗ್ರೆಸಿನ ಅಧ್ಯಕ್ಷರಾಗಿದ್ದಾಗಲೂ ನೆಹರೂಜಿಯ ಆದೇಶದ ಪಾಶದಿಂದ ಅವರು ದೂರವಾಗಿದ್ದಿಲ್ಲ. ಆದರೆ ಆಗಲೂ ಅವರು ತನ್ನ ಚುರುಕು ಕೆಲಮಟ್ಟಿಗೆ ಕಾಣಿಸದೆ ಹೋಗಲಿಲ್ಲ. ಆಗ ಕೇರಳದಲ್ಲಿಯ ಪ್ರಥಮ ಕಮ್ಯುನಿಸ್ಟ ಸರಕಾರವನ್ನು ಉರುಳಿಸಿದ ಶ್ರೇಯಸ್ಸಿನ ಒಂದು ಪಾಲು ದಿ.ಮನ್ನಾರ್ ಪದ್ಮನಾಭನ್ ಅವರ ಚಳವಳಿಯದಾದರೆ ಇನ್ನೊಂದು ಪಾಲು ಆಗಿನ ಕಾಂಗ್ರೆಸ್ ಅಧ್ಯಕ್ಷೆ ಇಂದಿರಾಜಿಯವರದೇ ಇತ್ತೆಂದು ಪ್ರಸಿದ್ಧವಾಗಿತ್ತು.(ಅವರೇ ಈಗ ಕಮ್ಯುನಿಸ್ಟರ ಕೈವಾರಿ. ಕೊಸಿಗಿನರ ಕೈಗೊಂಬೆ— ಎಂದೆಲ್ಲ ಪ್ರಸಿದ್ಧಿ ಪಡೆಯುತ್ತಿದ್ದಾರೆ! ಇದೂ ಒಂದು ಮೇಲೆ ಹೇಳಿದ ಪರಸ್ಪರ ವಿರೋಧೀ ಸನ್ನಿವೇಶದ್ದೇ ಒಂದು ಮೆರುಗು!)

ಒಂದು ದೃಷ್ಟಿಯಿಂದ ತಂದೆಗಿಂತ ಮಗಳು ಮಿಗಿಲು. ನೆಹರೂಜಿ ಅಧಿಕಾರದಲ್ಲಿ ಇದ್ದರೆ ಇಂದು ಮುರಾರಜಿ ಭಾಯಿ ಇಷ್ಟು ಸುಲಭವಾಗಿ ಕೇಂದ್ರಾಧಿಪತ್ಯದಿಂದ ಉರುಳುತ್ತಿದ್ದಿಲ್ಲ. ನೆಹರೂಜಿಗೆ ಹಳೆಯ ಋಣಾನುಬಂಧ; ಸಂಗಾತಿತನದ ನಿಷ್ಠೆ ತನ್ನದೇ ಸಂಕಲ್ಪ ವಿಕಲ್ಪಗಳ ತೊಡಕು ಯಾವಾಗಲೂ ಕಾಡುತ್ತಿತ್ತು. ಇಂಥಹ ಭಾವುಕ ಹೃದಯ ದೌರ್ಬಲ್ಯ ಇಂದಿರಾ ಗಾಂಧಿಯು ಕಾಣಿಸುವುದಿಲ್ಲ. ಇವರಲ್ಲಿ ತಂದೆಯ ತತ್ವನಿಷ್ಠೆಯೊಂದಿಗೆ ಅಜ್ಜ ಮೋತೀಲಾಲರ ನಿರ್ಧಾರ—ನಿಷ್ಠುರತೆ ಕಂಡುಬರುತ್ತದೆ.

ಇಂಥ ವಿಶಿಷ್ಟ ವೈಭವಶಾಲಿ ವ್ಯಕ್ತಿತ್ವದ ಇಂದಿರಾಜಿ ಹೇಗೆ ಕಾಣುತ್ತಾರೆ? ಹೇಗೆ ಬಾಳುತ್ತಾರೆ?

ಈ ವಯಸಿನಲ್ಲಿಯೂ ಅವರ ರೂಪಸಂಪತ್ತು ಅತ್ಯಂತ ಪ್ರೇಕ್ಷಣೀಯವಾಗಿದೆ.

“BICCO” Food Products
Farm Fresh & Economic

RANGE OF PRODUCTS: Squashes, Crushes, Syrups, Canned Pineapple and Mango Slices, Pineapple Juice, Mango Pulp, Fruit Cocktail, Jams, Pickles, Ginger Preserve, Sweets and Toffees, Canned Fish Products etc.

Manufacturers:

Bharath Industrial and Canning Co. Ltd.

P. O. KAUP. (South Kanara)

Gram: “BICCO” Phone: 29
Res: 41

SALES DEPOT:

BHAVANTHI STREET, MANGALORE.

Phone: 3266

ಹಿಂದೆ ಕೇಂದ್ರ ಸರಕಾರದಲ್ಲಿ ಶ್ರೀಮತಿ ತಾರಕೇಶ್ವರಿ ಸಿನ್ಹಾ ಅತ್ಯಂತ ರೂಪಸುಂದರಿರೆಂದು ಖ್ಯಾತಿವೆತ್ತಿದ್ದರು. ಆದರೆ ಅದು ಶೃಂಗಾರಿಕ ದೃಷ್ಟಿಯಿಂದ. ಇಂದಿರಾಗಾಂಧಿಯವರ ರೂಪಶ್ರೀಯ ಪರಿಯೇ ಬೇರೆ. ನೆಹರೂ ಮನೆತನದ ಕಾಶ್ಮೀರಿ ಗುಲಾಬಿಯ ನಳನಳಿಸುವ ಚೆಲುವಿನ ಕಳೆ ಅವರಲ್ಲಿ ಪೈತೃಕವಾಗಿ ಬಂದಿದೆ. ವಿದೇಶೀಯರಿಗೆ ಅವರ ಸೌಂದರ್ಯ ಆಕರ್ಷಕವಾಗಿ, ಮೋಹಕವಾಗಿ, ಮಾದಕವಾಗಿಯೂ ಅನಿಸುತ್ತದೆ. ಇಂತಹ ಹೆಂಗಸು ಚಿತ್ರಪಟದ ಬೆಳ್ಳಿಯ ತೆರೆಯಲ್ಲಿ ಮೆರೆಯುವುದರ ಬದಲು ಹೀಗೇಕೆ ಈ ರಾಜಕಾರಣದ ರಣರಂಗದಲ್ಲಿ ತೊಡಗಿರುವಳೋ ಎಂದು ಪಾಶ್ಚಾತ್ಯ ಪತ್ರಿಕೋದ್ಯಮಿಗಳಿಗೆ ಆಶ್ಚರ್ಯ!

ಇಂದಿರಾಜಿಯ ಅಂಗಸೌಷ್ಠವದಲ್ಲಿ ಕೇವಲ ಕೋಮಲತೆಯಿಲ್ಲ. ಅದು ಅಷ್ಟೇ ಸದೃಢ ಆರೋಗ್ಯಪೂರ್ಣವಾಗಿದೆ. ಇತ್ತೀಚೆಗೆ ಪ್ರೌಢ ವಯೋಮಾನದ “ಪುಢಾರಿ” ಗಳಿಗೆ ದೇಶದ ರಾಜಕೀಯ ಹೋರಾಟ, ಆಡಳಿತದ ಒತ್ತಡ,ಮಾನಸಿಕ ಕ್ಲೇಶ ಮುಂತಾದುವುಗಳಿಂದ ಕಾಲಕ್ಕಿಂತ ಮುಂಚೆ ಮುಪ್ಪು, ಮುಪ್ಪಿಗಿಂತ ಮುಂಚೆ ಸಾವು ಬರುವುದುಂಟು. ೫೨ ವರ್ಷಕ್ಕೇ ದೈತ್ಯಾಕಾರದ ಜ. ನಾಸೇರ್ ಬಲಿಬೀಳಲಿಲ್ಲವೆ?

ಆದರೆ ಶ್ರೀಮತಿ ಗಾಂಧಿಯವರು ಇದೆಲ್ಲ ಜಂಜಡದಲ್ಲಿಯೂ ತನ್ನ ಎಲ್ಲಾ ಜವಾಬುದಾರಿಗಳನ್ನು ಸಹಜಲೀಲಾಜಾಲವಾಗಿ ನಡೆಸಿಕೊಂಡು ಹೋಗುವುದನ್ನು ನಾವು ನೋಡುತ್ತೇವೆ. ಇವರು ಒಮ್ಮೆಲೆ ಎಲ್ಲೆಡೆಯಲ್ಲಿಯೂ ಇದುರಿಸಬೇಕಾಗಿ ಬಂದ–ಅನೇಕ ಸಲ ಇವರೇ ಹುಟ್ಟಿಸಿಕೊಂಡ–ಸಮಸ್ಯೆಗಳು ನೂರಾರು. ಇಷ್ಟು ಕ್ಲಿಷ್ಟ, ಕಷ್ಟದ ಸನ್ನಿವೇಶ ನೆಹರೂಜಿಯವರಿಗೂ ಈ ವಯಸ್ಸಿನಲ್ಲಿ ಇದುರಿಸಬೇಕಾಗಿ ಬಂದಿದ್ದಿಲ್ಲ. ಆದರೆ ರಾಜಕಾರಣದಲ್ಲಿಯ ಪೆಟ್ಟುಗಳನ್ನು ತಾನು ತಿನ್ನುತ್ತಿರುವಾಗಲೆ ಇತರರಿಗೆ ಅದಕ್ಕೂ ಹೆಚ್ಚು ತಿನ್ನಿಸುವುದರಲ್ಲಿಯ ಅವರ ಕಸುಬುಗಾರಿಕೆಗೆ ಇದಿರಾಳಿಗಳೂ ತಲೆದೂಗಬೇಕು.

ಇಂದಿರಾಜಿಯ ಮೈಯಲ್ಲಿ ಇಂಥ ವಿಲಕ್ಷಣ ಶಕ್ತಿಯೂ ಶಾರೀರಿಕ ದಾರ್ಢ್ಯವೂ ಎಲ್ಲಿಂದ ಬಂತು? ಅವರು ತಂದೆಯಂತೆಯೆ ನಸುಕಿನಲ್ಲಿ ಎದ್ದು ಕೆಲವು ಯೋಗಾಸನಗಳನ್ನು ನಿಯಮದಿಂದ ಮಾಡುತ್ತಾರೆ. ಸಾಮಾನ್ಯವಾಗಿ ಅವರು ತಂದೆಯಂತೆಯೆ ದಿನಕ್ಕೆ ೧೮ ತಾಸು ದುಡಿಯುತ್ತಾರೆ. ಅವರು ಮಲಗುವ ವೇಳೆ ನಿಶ್ಚಿತವಿಲ್ಲದಿದ್ದರೂ ಏಳುವ ವೇಳೆ ಒಂದೇ–ನಸುಕಿಗೆ ೫ ಗಂಟೆ. ಎದ್ದ ಮೇಲೆ ಪ್ರಾತರ್ವಿಧಿಗಳ ನಂತರ ಅವರುಮಾಡುವ ಪ್ರಥಮಕಾರ್ಯವೆಂದರೆ ಕೆಲವು ಯೋಗಾಸನಗಳು. ಆದಾದೊಡನೆ ಸ್ನಾನ. ತಂದೆಯ ಎಲ್ಲಾ ಶಿಕ್ಷಣ ಇಂಗ್ಲೆಂಡಿನಲ್ಲಿ. ಮಗಳ ಶಿಕ್ಷಣ ತಾಯಿಯ ಬೇನೆ ತಂದೆಯ ಜೇಲುಗಳಿಂದಾಗಿ ಆಗಾಗ ವಿಚ್ಛಿನ್ನವಾಗಿ ಶಾಂತಿನಿಕೇತನ, ಕರ್ಮ ವಿದ್ಯಾಪೀಠ ಸ್ವಿಟ್ಝರ್ಲಂಡ್ ಮತ್ತು ಇಂಗ್ಲೆಂಡುಗಳಲ್ಲಿ. ಆದಾಗ್ಯೂ ಇವರಿಗೆ ಹಸೆಯಲ್ಲಿ ಚಹ (bed-tea) ಸೇವಿಸುವ ಚಟವಿಲ್ಲ. ತಂದೆಗೂ ಇದ್ದಿಲ್ಲ. ಮುಂಜಾನೆ ಮಿಂದ ಮೇ

(ಅಪ್ಪತ್ತೆಂಟನೇ ಪುಟ ನೋಡಿ)

ಶ್ರೀ ಮಿರ್ಜಿ ಅಣ್ಣಾರಾಯ, ಶೇಡಬಾಳ.

ಪಕ್ಷ ಮತ್ತು ಪ್ರಜಾಪ್ರಭುತ್ವ

ಅಧಿಕಾರದಲ್ಲಿರುವ ಗುಂಪು ಅಧಿಕಾರವುಳಿಸಲು, ಅಧಿಕಾರವಿಲ್ಲದ ಗುಂಪು ಅದನ್ನು ಗಳಿಸಲು ಆಶೆ—ಆಮಿಷ ನೀಡುವ ಭಾರತದಲ್ಲಿ ಪ್ರಜಾಶಕ್ತಿಯ ಗೋಣು ಮುರಿಯತೊಡಗಿದೆ. ನೈಜ ದೇಶಭಕ್ತ—ಸೇವಾದೀಕ್ಷಿತರ ರಾಷ್ಟ್ರೀಯ ಸಂಘಟನವೊಂದು ರಚನೆಯಾಗಿ ಅದು ಕೆಲಕಾಲ ಉಳಿದರೆ, ಆಗ ರಾಜಕೀಯ ರೋಗ ಉಪಶಮನವಾಗಿ ಒಳ್ಳೆಯ ಜನಹಿತ ಪಕ್ಷ ರಚನೆಗೊಳ್ಳಬಹುದು.

ಭಾರತದ ಈಗಿನ ರಾಜಕೀಯ ಸ್ಥಿತಿಯನ್ನು ನೆನೆದಾಗ ಪ್ರತಿಯೊಬ್ಬ ವಿಚಾರವಂತನಿಗೂ ಕಳವಳ ಉಂಟಾಗದೆ ಇರದು. ಸ್ವಾತಂತ್ರ್ಯಪೂರ್ವದ ನಮ್ಮ ರಾಷ್ಟ್ರ ನಾಯಕರು ತಮ್ಮ ತ್ಯಾಗ, ಸಚ್ಚಾರಿತ್ರ್ಯ, ದೇಶಭಕ್ತಿಗಳಿಂದ ಜಗತ್ತಿಗೇನೇ ಆದರ್ಶ ವ್ಯಕ್ತಿಗಳಾಗಿ ಬಾಳಿಹೋದರು. ಇಂದಿನ ನಾಯಕರು ಮಾತ್ರ ತಮ್ಮ ಅಧಿಕಾರ ಪಟ್ಟವು ಭದ್ರವಾಗಲೆಂದು ದೇಶವನ್ನೂ ಸಹ ಬಲಿಗೊಡಲು ಹಿಂದೆ ಮುಂದೆ ನೋಡದಂಥ ಸ್ಥಿತಿಗೆ ಇಳಿದಿದ್ದಾರೆ. ಸಮಾಜವಾದ, ಸಮತಾವಾದದ ಮಾತುಗಳನ್ನು ಆಡುತ್ತ, ಪಕ್ಷ—ಸಂಗಡಗಳ ರಾಜಕೀಯಕ್ಕೆ ತುತ್ತಾಗುತ್ತಲಿದ್ದಾರೆ ಪಕ್ಷ ಪಕ್ಷಗಳ ಹೋರಾಟದ ಕಣವಾಗಿ ದೇಶವು ಹಾಳಾಗುತ್ತಿಸೆ, ಪ್ರಜಾಪ್ರಭುತ್ವವು ಕುಸಿಯುತ್ತಿದೆ

ಒಂದು ಗುಂಪು ಅಧಿಕಾರಸೂತ್ರವನ್ನು, ಪಡೆಯುವುದಕ್ಕೆಂದು, ಪ್ರಜಾಪ್ರಭುತ್ವವು ನಷ್ಟವಾಗುತ್ತಿದೆ ಎಂದು ಸಾರುತ್ತ ವಿವಿಧ ಪಕ್ಷಗಳಲ್ಲಿ ಮಹಾ ಮೈತ್ರಿಯನ್ನು ಸಂಘಟಿಸುತ್ತಲಿದೆ. ಇನ್ನೊಂದು ಗುಂಪು ತನ್ನ ಕೈಯಲ್ಲಿ ಸಿಕ್ಕ ಅಧಿಕಾರವನ್ನು ಕಳೆದುಕೊಳ್ಳಕೂಡದೆಂದು ತನ್ನ ಗುಂಪಿಗೆ ಸೇರುವೆನೆನ್ನುವವರಿಗೆ ಬೇಕುಬೇಕಾದುದನ್ನು ನೀಡಲು ಮುಂದೆ ಬರುತ್ತಿದೆ. ಒಬ್ಬರದನ್ನು ಕಸಿದು ಹಂಚಿಕೊಂಡುಬಿಡುವುದು ಸಮತಾವಾದವೆಂದು ಭಾವಿಸಿದಂತಿದೆ. ಇನ್ನೊಬ್ಬರ ಆಸ್ತಿ-ಪಾಸ್ತಿಗಳನ್ನು ಎತ್ತಿ, ನಾಲ್ಕು ಜನರಿಗೆ ಹಂಚುವುದು ಸುಲಭ. ಅವನ್ನು ಮಾಡಲು ಅಂಥ ನಾಲ್ಕು ಜನರ ಬೆಂಬಲ ಪಡೆಯುವುದೂ ಸುಲಭ. ಆದರೆ ಇದರಿಂದ ದೇಶ, ಸಮಾಜಗಳ ಹಿತ ಸಾಧಿಸುವೆನೆನ್ನುವುದು ಮಾತ್ರ ಸಲ್ಲದ ಮಾತು. ಈ ವರ್ತನೆಯು ಸಾಮ್ಯವಾದವೂ ಅಲ್ಲ, ಸಮತಾವಾದವೂ ಅಲ್ಲ. ಇದಕ್ಕೆ ಮೂಲವೆನಿಸುವ ಮನೋವೃತ್ತಿಯೂ ಸಮತೆಯನ್ನು ಸಾಧಿಸುವಂಥದಲ್ಲ. ಸಮತಾವಾದವನ್ನು ಸಾಧಿಸುವ ಮಾರ್ಗವೂ ಇದಲ್ಲ.

ಭಾರತೀಯಸಂಸ್ಕೃತಿಗೂ ಪರಂಪರೆಗೂ ಈ ದೃಷ್ಟಿಯು ಒಗ್ಗದು. ಪಶ್ಚಿಮ ದೇಶಗಳಲ್ಲಿ ಜನಿಸಿ ಬೆಳೆದ ಕಮ್ಯುನಿಜಂ ಆಗಲಿ, ಸಾಮ್ಯವಾದವಾಗಲಿ, ಬಂಡವಾಳಶಾಹಿಯ ನಿರ್ಮೂಲನವಾಗಲಿ ಇದ್ದಕ್ಕಿದ್ದಂತೆ ನಮ್ಮದೇಶಕ್ಕೆ ಅನ್ವಯಿಸಲಿಕ್ಕೆ ಆಗದು. ಇಲ್ಲಿಯ ಪರಿಸ್ಥಿತಿಯೇ ಬೇರೆ, ಸಮಸ್ಯೆಗಳೇ ಬೇರೆ,ಜನತೆಯ ಮನೋವೃತ್ತಿಯೂ ಭಿನ್ನ. ಆದರಿಂದ ಇವುಗಳಿಗೆ ಅಳವಡುವಂಥ, ರಾಷ್ಟ್ರದ ಏಳಿಗೆಯನ್ನು ಸಾಧಿಸುವಂಥ ಸಮತಾವಾದವು ನಮ್ಮ ದೇಶಕ್ಕಾಗಿ ಬೇಕು. ಇದರ ಸ್ವರೂಪವನ್ನು ವಾಸ್ತವ ಪರಿಣಾಮದ ದೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಂಡು, ನಾವು ರೂಪಿಸಬೇಕಾಗಿದೆ. ಇದನ್ನು ಈ ರಾಜಕೀಯ ಸಂತೆಯ ಒದರಾಟ, ಚೀರಾಟದ ವ್ಯಾಪಾರದಿಂದ ಸಾಧಿಸಲಿಕ್ಕಾಗದು. ಖಂಡಿತ ಸಾಧಿಸಲಿಕ್ಕಾಗದು.

ಆದರಿಂದ ರಾಷ್ಟ್ರದ ಉನ್ನತಿಯ ದೃಷ್ಟಿಯಿಂದ ವಿಚಾರವಂತರಲ್ಲಿ ಒಂದು ಧ್ಯೇಯವು ರೂಪುಗೊಂಡಿರಲಿಕ್ಕೆ ಬೇಕು. ಆ ಧ್ಯೇಯವನ್ನು ಸಾಧಿಸುವುದಕ್ಕಾಗಿ ಒಂದು ನಿಶ್ಚಿತ ಮಾರ್ಗದ ಕಲ್ಪನೆಯೂ ಮುಖಂಡರಲ್ಲಿ ನಿಚ್ಚಳವಾಗಿ ಮೂಡಿರಬೇಕು. ಇಂಥ ಧ್ಯೇಯ ಹಾಗೂ ಅದನ್ನು ಸಾಧಿಸುವ ಮಾರ್ಗಗಳಲ್ಲಿ ಏಕಮತವಿರುವ ಒಂದು ಜನರ ಗುಂಪು ಇರಬೇಕು. ಇವರಿಂದ ಒಂದು ರಾಜಕೀಯ ಪಕ್ಷದ ಸಂಘಟನೆಯಾಗುವುದು. ಇಂಥ ಧ್ಯೇಯನಿಷ್ಠ ರಾಜಕೀಯ ಪಕ್ಷದಲ್ಲಿ ಪಕ್ಷತ್ಯಾಗದ ಪ್ರಶ್ನೆಯೇ ಏಳುವುದಿಲ್ಲ. ಇವರಿಗೆ ಅಧಿಕಾರ ಲಾಲಸೆಯಾಗಲಿ, ಧನಾರ್ಜನೆಯಾಗಲಿ, ಮುಖ್ಯ ಗುರಿಯಲ್ಲ. ದೇಶದ ಹಿತ, ಪ್ರಜೆಗಳ ಕಲ್ಯಾಣಗಳೇ ಇವರ ಧ್ಯೇಯ ಧೋರಣೆಗಳು. ಇದನ್ನು ಸಾಧಿಸುವಲ್ಲಿಯೇ ತಮ್ಮ ಪಕ್ಷದ ಸರ್ವ—ಶಕ್ತಿಯನ್ನೂ ವ್ಯಯಿಸುವುದೊಂದೇ ಪ್ರಾಮಾಣಿಕ ಕಾರ್ಯವಾಗಿರುತ್ತದೆ.

ಇಂಥ ಪ್ರಾಮಾಣಿಕ ಮನೋವೃತ್ತಿಯ ರಾಜಕೀಯ ಪಕ್ಷವೊಂದು ದೇಶದಲ್ಲಿ ಭದ್ರವಾಗಿ ನಿಂತು, ಕಾರ್ಯಪ್ರವೃತ್ತವಾದಲ್ಲಿ ದೇಶದ ಪ್ರಜಾಪ್ರಭುತ್ವವು ಉಳಿಯುವದು ಸಾಧ್ಯವಿದೆ. ಇಲ್ಲದಿದ್ದರೆ ಪ್ರಜಾಪ್ರಭುತ್ವದ ಹೆಸರಿನಲ್ಲಿ, ಪ್ರಬಲ ಗುಂಪೊಂದು ದೇಶದ ಆಡಳಿತ ಸೂತ್ರಗಳನ್ನು ಕೈಯಲ್ಲಿ ತಕ್ಕೊಂಡು ಮನಬಂದಂತೆ ವರ್ತಿಸುತ್ತದೆ. ಆಗ ಪ್ರಜೆಗಳ ವಿತ್ತ ಜೀವಿತಗಳು ರಾಷ್ಟ್ರದಲ್ಲಿ ಗಂಡಾಂತರಸ್ಥಿತಿಗೆ ಹೋಗಿ ಮುಟ್ಟುತ್ತವೆ. ಅಸಂತುಷ್ಟರ ಗುಂಪು, ಸಂಗಡಗಳು ಹಿಂಸಾಚಾರದಂತಹ ಹೀನ [illegible]ವೆ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ಮಗ್ನವಾಗುತ್ತವೆ. ಆದರಿಂದ ದೇಶದ ಭದ್ರತೆಗೇನೇ ಮೂಲದಲ್ಲಿ ಕೊಡಲಿಯೇಟು

[ಹದಿನೇಳನೆ ಪುಟ ನೋಡಿ]



ದೇಶದ ಉದ್ದಗಲ ನೀವು ಸಂಚರಿಸುತ್ತಿರಲಿ— ದಕ್ಷಿಣದ ಕೇರಳ, ತಮಿಳುನಾಡು, ಮೈಸೂರು, ಗೋವಾ, ಪಾಂಡಿಚೇರಿ, ಅಂಡಮಾನ ದ್ವೀಪ, ಮಹಾರಾಷ್ಟ್ರ ಮತ್ತು ಉತ್ತರದ ಗುಜರಾಥ, ಪಶ್ಚಿಮ ಬಂಗಾಳ, ದೆಹಲಿ, ಉತ್ತರಪ್ರದೇಶ, ಹರಿಯಾಣಾ— ಈ ಯಾವುದೇ ಪ್ರದೇಶಗಳಿಗೆ ಕಾರ್ಯಾರ್ಥವಾಗಲಿ, ಉಲ್ಲಾಸಕ್ಕಾಗಲಿ ಸಂಚರಿಸುತ್ತಿರಲಿ ನಿಮ್ಮ ನೆರವಿಗೆ ನಗುಮುಖದ, ಸ್ನೇಹಶೀಲ, ಕಾರ್ಯತತ್ಪರ ಗೆಳೆಯನೊಬ್ಬ ದೊರೆಯುವನು.

ಈತನೇ ಸಿಂಡಿಕೇಟ್ ಬ್ಯಾಂಕಿನ ಮೆನೇಜರ್.......

ದೇಶದ ಬೇರೆ ಬೇರೆ ಕೇಂದ್ರಗಳಲ್ಲಿರುವ ಇಂತಹ 460 ಮಿತ್ರರು ನಿಮ್ಮ ಆರ್ಥಿಕ ಸೌಕರ್ಯಕ್ಕಾಗಿ ಪ್ರಯಾಣದ ವೇಳೆಯ ನಿಮ್ಮ ಅನಾನುಕೂಲತೆಯ ನಿವಾರಣೆಗಾಗಿ ನಿಮ್ಮೊಡನೆ ಸಹಕರಿಸುವರು. ಪ್ರಾದೇಶಿಕ ಸ್ಥಿತಿಯ ಸಮನಾದ ತಿಳಿವನ್ನೂ, ಅದಕ್ಕಿಂತ ಮಿಗಿಲಾಗಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪಕ್ವ ಅನುಭವವನ್ನೂ ಗಳಿಸಿರುವ ಈ ನಿಮ್ಮ ಗೆಳೆಯರ ಸೌಜನ್ಯಪೂರ್ಣ ಸೇವೆ ನಿಮ್ಮ ಪಾಲಿಗೆ ಸದಾ ಲಭ್ಯ.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ :
ಮಣಿಪಾಲ

ಕೆ. ಕೆ. ಪೈ
ಕಸ್ಟೋಡಿಯನ್

ಶಾಖೆಗಳು : 460ಕ್ಕೂ ಮಿಕ್ಕಿವೆ

ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರಭುಗಳ ಪ್ರಭುತ್ವ

ಶ್ರೀ ಶಿವಶಂಕರ

ರಾಜ್ಯಸಭೆ ಮತ್ತು ವಿಧಾನ ಪರಿಷತ್ತುಗಳನ್ನು ರದ್ದು ಮಾಡಬೇಕೆನ್ನುವ ಸ್ವರ ಪ್ರಗತಿಶೀಲರಿಂದ ಕೆಲದಿನಗಳಿಂದ ಕೇಳಿ ಬರುತ್ತಿದೆ. ನಾವು ಮತ್ತೂ ಪ್ರಗತಿಶೀಲರಾಗಿ ಲೋಕ ಸಭೆ - ವಿಧಾನ ಸಭೆಗಳನ್ನೂ ಏಕೆ ರದ್ದು ಮಾಡಬಾರದು? ಅದುವರೆಗೆ ನಮ್ಮದು ಪ್ರಜಾಪ್ರಭುತ್ವವಾಗುವುದಿಲ್ಲ; ಪ್ರಜಾಪ್ರಭುಗಳ ಪ್ರಭುತ್ವವಾಗುತ್ತದೆ ... ಈ ವಾದ ವಿಚಿತ್ರವೆನಿಸಿದರೂ ಇದರಲ್ಲಿ ಹುರುಳಿದೆಯೆನಿಸುತ್ತದೆ.

ಜನವರಿ ೨೬. ಭಾರತದ ಪ್ರಜೆಗಳಲ್ಲಿ ಪ್ರಜಾಪ್ರಭುತ್ವದ ಪ್ರಜ್ಞೆ ಬರುವ ಪರಿಸರದ ಪರ್ವದಿನ ಬಹುಶಃ ಅಂದು ಮಾತ್ರ ಅದರ ಅರಿವಾಗುವದು. ಎಲ್ಲೆಲ್ಲೂ ತ್ರಿರಂಗಿ ಹಾರಾಡುತ್ತಿರುವಾಗ, ಶಾಲಾ ಮಕ್ಕಳು ಹೆತ್ತವರ ಬಳಿ ಧ್ವಜಕ್ಕೆ ಹಣ ಕೇಳಿದಾಗ, ಮಕ್ಕಳು ಎದೆಯ ಮೇಲೆ ಮೂರು ಬಣ್ಣದ ಕಾಗದ ಚುಚ್ಚಿಕೊಂಡು ಬಂದಾಗ.... ದೊಡ್ಡವರಿಗೆ ಅದರ ಜ್ಞಾಪಕ ಬರುವಂತೆ, ಮಿಠಾಯಿ ದೊರೆತಾಗ ಮಕ್ಕಳಿಗೆ ನೆನಪು ಮರುಕಳಿಸುವದುಂಟು. ಪ್ರಜಾಪ್ರಭುತ್ವದ ಪ್ರಜೆಗಳು ನಾವೆಂಬ ಅಭಿಮಾನ ಆಗ ಉಂಟಾಗುತ್ತದೆ. ಅತ್ತ ಪ್ರಜಾಪ್ರಭುಗಳ ತಲೆಯಲ್ಲಿ ಬೇರೆಯೇ ಮಸಾಲೆ ತಯಾರಾಗುತ್ತಿರುತ್ತದೆ. ಮತದಾನದ ಹಕ್ಕುಳ್ಳವರು ಮತದಾನಮಾಡಿ ತಮ್ಮನ್ನು ಆಳಲಿಕ್ಕಾಗಿ ಕೆಲವರನ್ನು ಕಳುಹಿಸುತ್ತಾರೆ. ಹೀಗೆ ಆರಿಸಿಕೊಂಡು ಬಂದವರು ಪ್ರಜಾಪ್ರಭುಗಳಾಗುತ್ತಾರೆ. ಪ್ರಜಾಪ್ರಭುಗಳು ಪ್ರಜಾಪ್ರಭುತ್ವ ದಿನಾಚರಣೆಗಾಗಿ ಏರ್ಪಾಡು ಮಾಡುತ್ತಾರೆ, ಭಾಷಣಮಾಡುತ್ತಾರೆ; ಪ್ರಜೆಗಳು ಅವರಿಗಾಗಿ ಶ್ರಮಪಡುತ್ತಾರೆ, ಫಲಾಕಿನ್ನುತ್ತಾರೆ. ಹೀಗೆ ನಮ್ಮ ಪ್ರಜಾಪ್ರಭುತ್ವ ನಡೆಯುತ್ತಿದೆ, ಕಾಲಚಕ್ರ ಉರುಳುತ್ತಿದೆ.

ಈಗ ಇದ್ದಕ್ಕಿದ್ದಂತೆ ಕೆಲವರು ಪ್ರಜಾಪ್ರಭುತ್ವ ಪ್ರಪಾತದಲ್ಲಿ, ಪ್ರಜಾಪ್ರಭುತ್ವ ಪರಿಪಾಟದಲ್ಲಿ, ಪ್ರಜಾಪ್ರಭುತ್ವ ಪ್ರಜೆಗಳಿಗೆ ಭೂತ. ಪ್ರಜಾಪ್ರಭುತ್ವವೆಂದರೆ ಪ್ರಜಾಪ್ರಭುಗಳ ಪ್ರಭುತ್ವ....ಹೀಗೆ ಸ್ವರವೆತ್ತಲಾರಂಭಿಸಿದ್ದಾರೆ ಇಂದು ಹೊಸತಾಗಿ ಈ ಸ್ವರವೆತ್ತಿರುವವರನ್ನು ಹಳೆಯ ಕಾಂಗ್ರೆಸ್ಸಿಗರು, ಸಂಸ್ಥಾ ಕಾಂಗ್ರೆಸ್ಸಿಗರು, ನಿಜಲಿಂಗಪ್ಪನವರ ಕಾಂಗ್ರೆಸ್ಸಿಗರೆಂದು ಹೇಳಲಾಗುತ್ತಿದೆ. ಪಂಡಿತ ಜವಾಹರಲಾಲ ನೆಹ್ರೂಜೀಯವರ ಪ್ರಭುತ್ವದ ಕಾಲದಲ್ಲೇ ಭಾರತೀಯ ಜನಸಂಘದವರು ಪ್ರಜಾಪ್ರಭುತ್ವವನ್ನುಳಿಸಲು ತಮ್ಮ ಪಕ್ಷದ ಸ್ಥಾಪನೆಯಾಗಿದೆಯೆಂದು ಸಾರಿದ್ದರು. ಆಗ ಕಾಂಗ್ರೆಸ್ಸಿಗರೆಲ್ಲರೂ ನೆಹ್ರೂಜೀಯವರಿಗೆ ಜೀ ಹುಜೂರೆನ್ನುತ್ತಿದ್ದರು. ಅವರೆದುರಿಗೆ ನಿಲ್ಲಲಾರದ ಕೃಪಲಾನಿ, ರಾಜಾಜಿ ಕಾಂಗ್ರೆಸ್ಸಿನಿಂದ ಹೊರಗೋಡಿ ಬೇರೆ ಪಕ್ಷಗಳನ್ನು ಕಟ್ಟಿಕೊಂಡರು. ಕ್ರಮೇಣ ಮಹಾವೀರ ತ್ಯಾಗಿ ಮುಂತಾದವರು ಧೈರ್ಯ ತಂದುಕೊಂಡು ಪ್ರಜಾಪ್ರಭುತ್ವವಿದು, ಪ್ರಜಾಪ್ರಭುಗಳ ಪ್ರಭುತ್ವವಲ್ಲವೆಂಬುದನ್ನವರಿಗೆ ತಿಳಿಸುವ ಸಾಹಸಕ್ಕೆ ಮುಂದಾದರು. ಜವಹರಲಾಲರಿಗೆ ಆಶ್ಚರ್ಯವಾಯಿತು. ಅವರ ಅಂಕ ಅಂತ್ಯವಾಯಿತು. ಜೀ ಹುಜೂರೆನ್ನುತ್ತಿದ್ದವರೇ ತಲೆ ಎತ್ತಲಾರಂಭಿಸಿದರು. ಜವಹರಲಾಲರ ನಾಮ ಜಪಿಸುತ್ತ ಏನು ಏನಾದರೂ ಮಾಡುವಂತಾಗಬೇಕೆಂದು ಅವರ ಅಚ್ಚುಮೆಚ್ಚಿನ ಅರಗುವರಿ ಇಂದಿರಾ ಗಾಂಧಿ ನೆಹ್ರೂರವರನ್ನು ಪಟ್ಟಕ್ಕೇರಿಸಿದರು. ಇಂದಿರಾಜೀ ತಾನು ಗಾಂಧಿಯೂ ಅಲ್ಲ, ನೆಹ್ರೂ ಅಲ್ಲವೆಂಬುದನ್ನು ನಿಜಮಾಡಿ ತೋರಿಸಿದರು. ಅವರಿಗೆದುರಾಗಿ ನಿಜಲಿಂಗಪ್ಪ, ಕಾಮರಾಜ, ಸದೋಬಾ ಪಾಟೀಲ, ಸಂಜೀವ ರೆಡ್ಡಿ, ಬಿಜೂ ಪಾಟ್ನಾಯಕ, ಅತುಲ್ಯ ಘೋಷ್, ಶ್ರೀಮತಿ ಕೈರಾನ್, ಆಲಿ....ಕಾಂಗ್ರೆಸ್ಸೇ ಎದ್ದು ನಿಂತಿತು ಮತ್ತು ಪ್ರಜಾಪ್ರಭುತ್ವಕ್ಕೆ ಅಪಾಯ ಬಂದಿದೆ, ಅದನ್ನುಳಿಸಲೊಂದಾಗಿರಿ.... ಘೋಷಣೆಯನ್ನಿತ್ತಿದೆ. ತನ್ನೊಂದಿಗೆ ಬರಲು ಅದು ಭಾರತೀಯ ಜನಸಂಘ, ಸ್ವತಂತ್ರಪಾರ್ಟಿ ಹಾಗೂ ಇತರ ಪಕ್ಷ ಪಾರ್ಟಿಗಳಿಗೆ ಆಮಂತ್ರಣವನ್ನಿತ್ತಿದೆ. ಇದಕ್ಕೆ ಇಂದಿರಾಜೀ ಒಂದಿಷ್ಟೂ ಸೊಪ್ಪು ಹಾಕುತ್ತಿರುವದಿಲ್ಲ. ಅವರಿಗೆ ತನ್ನ ಹಳೆಯ ಸಹವಾಸಿಗಳ ಅಂದರೆ ಕಾಂಗ್ರೆಸ್ಸಿಗರ ಗುಣಗೊತ್ತಿದೆ. ರಾಜಾಜಿಯವರನ್ನೂ ಅವರು ಮರೆತಿರುವದಿಲ್ಲ. ಅವರಿಗಿರುವದು ಭಾರತೀಯ ಜನಸಂಘದ ಬೆದರಿಕೆ ಮಾತ್ರ. ಹೋದೆಡೆಗಳಲ್ಲೆಲ್ಲಾ ಅವರು ಭಾರತೀಯ ಜನ ಸಂಘದ ಕುರಿತು ತುಚ್ಛರೀತಿಯಲ್ಲಿ ಮಾತಾಡುತ್ತಿದ್ದಾರೆ ಮತ್ತು ಪತ್ರಿಕೆ-ಆಕಾಶವಾಣಿ ಸಭೆಗಳ ಮೂಲಕ ತನ್ನಿಂದ ಪ್ರಜಾಪ್ರಭುತ್ವಕ್ಕೆ ಅಪಾಯ ಬಂದೊದಗಿದೆಯೆಂಬ ಮಿಥ್ಯಪ್ರಚಾರ ನಡೆಯುತ್ತಿದೆಯೆಂದೂ ತಾನಿರುವ ತನಕ ಪ್ರಜಾಪ್ರಭುತ್ವ ಭದ್ರವಾಗಿರುತ್ತದೆಂದೂ ಭಾರಿ ಪ್ರಚಾರ ನಡೆಸುತ್ತಿದ್ದಾರೆ. ಜವಾಹರಲಾಲರೊಂದಿಗಿದ್ದ ಹಿರಿಯ ಕಾಂಗ್ರೆಸ್ಸಿಗರು ಅವರ ಮುದ್ದಿನ ಮಗಳನ್ನೇತಕ್ಕೆ ದೂರಕ್ಕೋಡಿಸಲು ಪ್ರಯತ್ನಿಸುತ್ತಿದ್ದಾರೆ? ಹಾಗೆನೇ, ಇಂತಹ ಪ್ರಚಾರದ ಅವಶ್ಯಕತೆ ಇಂದಿರಾಜೀಗೇತಕ್ಕಿಂದು ಬಂದು ಬಿಟ್ಟಿತು? ಆ ಪ್ರಶ್ನೆಯ ಗಿರಿಯೇ ಬಣಗಳ ಮಧ್ಯೆ ನಿಂತಿರುವದು. ಇದು ಪಕ್ಷನೊಳಗಿನ ಹಂದಾಟ, ಇಲ್ಲಿ ಪ್ರಜಾಪ್ರಭುತ್ವಕ್ಕೇನು ಅಪಾಯ ಬಾದಿದೆ?

Vaidyaratnam P. S. Varier's

ARYA VAIDYA SALA

KOTTAKKAL (KERALA STATE).

Head Office Telephones — Kottakkal Exchange.

Office with Extension to Administrator & Manager	....	Phone No. 31.
Nursing Home	...	Phone No. 44.
Chief Physician	....	Phone No. 25.
Managing Trustee (Residence)	...	Phone No. 27.
,, ,, (Office)	....	Phone No. 61.
Manager (Residence)	....	Phone No. 26.

MADRAS BRANCH

No. 1, Krishnamachari Road,
NUNGUMBAKKAM — MADRAS-34
(Phone No. 811275).

Other Branches.

1. Kozhikode (Phone: 2155).
2. Palghat (Phone: 104).
3. —do— Sales Depot (Phone: 584).
4. Alwaye.
5. Erode (Phone: 172).
6. Tirur Phone: 31).
7. Ernakulam Phone: 33026).
8. Trivandrum (Phone: 3914).

and

Over 100 Authorised Agencies and Depots.

Genuine Standard Ayurvedic Medicines and expert medical advice available at our Head Office at Kottakkal and all Branches. Medical advice through correspondence given by our Chief Physician at Kottakkal. Special Treatments like Pizhichil, Navarakkizhi, etc., are conducted under the supervision of our Chief Physician at our GOLDEN JUBILEE NURSING HOME, KOTTAKKAL.

MANAGING TRUSTEE

ಹೆಸರೇನೋ ಪ್ರಜಾಪ್ರಭುತ್ವ ಆದರೆ ನಡೆಯುತ್ತಿರುವದು ಪಕ್ಷಗಳ ಪ್ರಭುತ್ವ. ಸಾಮರ್ಥ್ಯವುಳ್ಳ 'ಮನಸ್ಸಿರುವ ವ್ಯಕ್ತಿಗಳು ಚುನಾವಣೆಗೆ ನಿಂತು ಪ್ರಜೆಗಳಿಂದ ಚುನಾಯಿಸಲ್ಪಟ್ಟು ಪ್ರಭುತ್ವದ ಅಂಕುಶ ಕೈಗೆ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂಬ ಅಭಿಪ್ರಾಯ ಹಬ್ಬಿರುತ್ತದೆ. ಆದುದರಿಂದಲೇ ಪಕ್ಷದಲ್ಲಿಲ್ಲದವನಿಗೆ, ಸ್ವತಂತ್ರ ಅಭ್ಯರ್ಥಿಗೆ ಮತದಾನ ಮಾಡಲಾಗದೆಂದು ಹೇಳಲಾಗುತ್ತದೆ. ಚುನಾವಣೆಗೆ ನಿಲ್ಲುವ ಅಭ್ಯರ್ಥಿ ಪ್ರಜೆಗಳಲ್ಲಿ ಹಾಗೂ ಮತದಾನದ ಪ್ರಜೆಗಳಲ್ಲಿ ತಾವು ಭಾರತೀಯರೆನ್ನುವದಕ್ಕಿಂತ ಇಂತಹ ಪಕ್ಷದವರೆನ್ನುವ ಅಭಿಪ್ರಾಯ ಜಾಗೃತವಾಗಿರುವದಕ್ಕೆ ಇದು ಸಾಕ್ಷಿ. ಪಕ್ಷದ ಹೆಸರಿಲ್ಲದೆ ಆರಿಸಲ್ಪಟ್ಟವರಲ್ಲಿ ಕೆಲವರೊಂದಾಗಿ ಮಂತ್ರಿ ಮಂಡಲ ರಚಿಸಲು ಸಾಧ್ಯವೇ ಇಲ್ಲವೆನ್ನುವದು ಕೆಲವರ ಅಭಿಪ್ರಾಯ. ಹಾಗಾಗಿ ಎಲ್ಲರೂ ಪಕ್ಷಕ್ಕೆ ಶರಣೆನ್ನುತ್ತಾರೆ. ಹೀಗೆ ಚುನಾವಣಾ ಕಳಕ್ಕಿಳಿಯುವವನು ಒಂದು ಪಕ್ಷಕ್ಕೆ ಕಟ್ಟುಬೀಳುತ್ತಾನೆ. ಅವನು ಆ ರೀತಿ ಕಟ್ಟುಬಿದ್ದರೂ ಆರಿಸಿ ಬರುವದು ವ್ಯಕ್ತಿಯೇ ವಿನ ಪಕ್ಷವಲ್ಲ. ರಾವಣನಿಗೆ ಚುನಾವಣಾ ಕಳಕ್ಕಿಳಿಯುವ ಮನಸ್ಸಾಯಿತು. ಅವನು ರಿಪುದಳದ ಅಭ್ಯರ್ಥಿಯಾಗಿ ನಿಂತು ಗೆದ್ದು ಬಂದನು. ಆದರೆ ಅವನ ಪಕ್ಷದವರು ಬಹಳ ಮಂದಿ ಗೆಲ್ಲದ ಕಾರಣ, ಸಂಪೂರ್ಣ ಶತ್ರು ಪಾರ್ಟಿಯವರೇ ಹೆಚ್ಚು ಜಯಶೀಲರಿರುವದರಿಂದ ಅವರು ಮಂತ್ರಿಮಂಡಲ ರಚಿಸುತ್ತಾರೆ. ತಾನು ಸಂಪೂರ್ಣ ಶತ್ರು ಪಾರ್ಟಿಗೆ ಸೇರಿದಲ್ಲಿ ತನಗೆ ಮಂತ್ರಿಪದವಿ ನಿಶ್ಚಿತವೆಂಬುದನ್ನು ಖಚಿತ ಮಾಡಿಕೊಂಡ ರಾವಣ ರಿಪುದಳಕ್ಕೆ ರಾಜಿನಾಮೆಕೊಟ್ಟು ಸಂಪೂರ್ಣ ಶತ್ರು ಪಾರ್ಟಿಗೆ ಸೇರಿ ಸಚಿವನಾಗುತ್ತಾನೆ. ಆಗ ರಿಪುದಳಕ್ಕೆ ಮತದಾನ ಮಾಡಿದವರು ಆ ಪಕ್ಷದವರೊಂದಿಗೆ ಪಿಳಿಪಿಳಿ ನೋಡುತ್ತಾರೆ. ಏನು ಪ್ರಯೋಜನ? ಪ್ರಜೆಗಳು ಆರಿಸಿದ್ದು ರಿಪುದಳದ ಅಭ್ಯರ್ಥಿಯನ್ನೋ, ರಾವಣನನ್ನೋ, ರಿಪುದಳದ ಅಭ್ಯರ್ಥಿ ರಾವಣನನ್ನೋ....? ಇದನ್ನಿಂದು ಪಕ್ಷಾಂತರ ಪಿಡುಗು; ಇದನ್ನು ಕಾನೂನಿನ ಮೂಲಕ ತಡೆಗಟ್ಟಬೇಕೆನ್ನಲಾಗುತ್ತಿದೆ. ಹಾಗೆ ಹೇಳುತ್ತಿರುವಂತೆಯೇ ಉತ್ತರ ಪ್ರದೇಶದಲ್ಲಿ ಪಕ್ಷಾಂತರ ನಡೆದು ಹೊಸ ಹೊಸ ಮಂತ್ರಿಮಂಡಲ ಉಂಟಾಗುತ್ತಿದೆ. ಬಿಹಾರಿನಲ್ಲಿ ಬಡಬಡ, ಗುಜರಾತಿನಲ್ಲಿ ಗುಡುಗುಡು, ಮೈಸೂರಿನಲ್ಲಿ ಮುಸಿಮುಸಿ ನಡೆಯುತ್ತಿದೆಯಲ್ಲದೆ, ಲೋಕ ಸಭೆಯಲ್ಲಿ ಆ ವಿಷಯ ಪ್ರಸ್ತಾಪ ನಡೆಯುತ್ತಿರುವಾಗಲೇ ಪಕ್ಷಾಂತರ ನಡೆಯುತ್ತಿರುತ್ತದೆ. ಇದು ಇಂದು ನಿನ್ನೆಯ ಅಭ್ಯಾಸವಲ್ಲ. ಸಂಪ್ರದಾಯ ವಿರೋಧಿಗಳಿಗೂ ಸಂಪ್ರದಾಯವಾಗಿರುವ ಸಾಂಕ್ರಾಮಿಕ ರೋಗವಿದು. ಸ್ವಾತಂತ್ರ್ಯಸಿಗುವ ಮುಂಚೆಯೇ ಹೀಗಿತ್ತೆಂದಲ್ಲಿ, ಪ್ರಜಾಪ್ರಭುತ್ವ ಬಂದ ಮೇಲೆ ಹಾಗೆನ್ನುವುದರಲ್ಲಿ ಅರ್ಥವಿಲ್ಲ. ಬ್ರಿಟಿಷರಿದ್ದಾಗಲೇ ಕಾಂಗ್ರೆಸ್ಸಿಗೆ ಮಂತ್ರಿಮಂಡಲ ರಚಿಸಲು ಸಾಕಷ್ಟು ಸಂಖ್ಯಾಬಲ ಇಲ್ಲದಿದ್ದಾಗಲೇ, ರಾಜಕೀಯದಲ್ಲಿ–ಆಚಾರ್ಯರೆನ್ನಲಾಗುತ್ತಿರುವ ರಾಜಗೋಪಾಲಾಚಾರಿಯವರು ಅದನ್ನು ಬಳಕೆಗೆ ತಂದಿದ್ದರು. ಅಂದರೆ, ಇಂದು ಪಕ್ಷಾಂತರ ನಡೆಸುತ್ತಿರುವವರಲ್ಲಿ ಅನೇಕರು ಹುಟ್ಟುವ ಹಿಂದೆಯೇ ರಾಜಜ್ಜನವರು ಅವರಿಗೆ ಮಾರ್ಗದರ್ಶನ ಮಾಡಿಸಿದ್ದು, ಇಂದು ಅದು ಅಜ್ಜ ನೆಟ್ಟ ಆಲದ ಮರವಾಗಿ ಬಿಟ್ಟಿದೆ. ಯಾವ ಹಕ್ಕಿ ಯಾವಾಗ ಬೇಕಾದರೂ ಬಂದು ತಂಗಬಹುದು; ಹಾರಿಹೋಗಬಹುದು. ಪ್ರಜಾಪ್ರಭುತ್ವ ಅಪಾಯದಲ್ಲಿದೆನ್ನುವ ರಾಜಾಜಿಯವರ ಅಮೂಲ್ಯ ಕೊಡುಗೆಯ ಫಲವನ್ನಿಂದು ಪ್ರಜಾಪ್ರಭುತ್ವ ಸವಿಯುತ್ತಿದೆ! ರಾಜಾಜಿಯವರಾದರೋ ತನ್ನ ಸ್ವಂತ ಲಾಭಕ್ಕಾಗಿ ಹಾಗೆ ಮಾಡದೆ, ಆಗ ಸ್ವ–ಪಾರ್ಟಿಯಾಗಿದ್ದ ಕಾಂಗ್ರೆಸ್ಸಿಗಾಗಿ ಹಾಗೆ ಮಾಡಿದ್ದರು. ಬ್ರಿಟಿಷರನ್ನೋಡಿಸಲು ಹಾಗೆ ಮಾಡಿದ್ದರೆನ್ನುವವರೂ ಇದ್ದಾರೆ. ಕಾಂಗ್ರೆಸ್ಸಿಗೆ ಇದು ಅಂದಿನಿಂದ ಬೆನ್ನು ಬಿಡದ ಮಾಟವಾಗಿ ಬಿಟ್ಟಿದೆ. ಈ ಕಾಂಗ್ರೆಸ್ಸಿನ ಅಧ್ವರ್ಯುಗಳು, ಅತಿರಥ–ಮಹಾರಥರು ಪ್ರಜಾಪ್ರಭುತ್ವ ಗಂಡಾಂತರದಲ್ಲಿದೆನ್ನುತ್ತಾರೆ. ಇಲ್ಲಿ ಗಂಡಾಂತರವೇನಿದೆ, ಪಕ್ಷಾಂತರ ಮಾತ್ರವಲ್ಲವೇನೆಂದು ಕೇಳುವವರೂ ಇದ್ದಾರೆ. ಇರಲಿ. ಇದಕ್ಕೆ ಭಾರತೀಯ ಜನಸಂಘದ ಮೆದುಳೆನ್ನಲಾಗುತ್ತಿದ್ದ, ರಾಷ್ಟ್ರೀಯ ಚಾಣಕ್ಯ ಪಂಡಿತ ದೀನದಯಾಳ ಉಪಾಧ್ಯಾಯರೊಂದು ಉಪಾಯವನ್ನು ಸೂಚಿಸಿದ್ದರು.

ಅವರ ಸೂತ್ರದ ಪ್ರಕಾರ ಯಾವೊಂದು ಸ್ಥಾನಕ್ಕೂ ವ್ಯಕ್ತಿ ಚುನಾವಣಾ ರಂಗಕ್ಕಿಳಿಯುವುದಿಲ್ಲ. ಪಕ್ಷಗಳು ಭಾಗವಹಿಸುತ್ತವೆ. ಒಂದು ಸ್ಥಾನದಿಂದ ಒಂದು ಪಕ್ಷ ಆರಿಸಿಬಂತೆಂದರೆ ಐದು ವರ್ಷ ಅದಕ್ಕೆ ಹೆದರಿಕೆ ಇಲ್ಲ. ಇದರಿಂದ ಲೋಕಸಭೆ, ವಿಧಾನಸಭೆಗಳಲ್ಲಿ ಪಕ್ಷ ಸದಸ್ಯರ ಸಂಖ್ಯಾಬಲ ಏರುಪೇರಾಗುವುದಿಲ್ಲ. ಐದು ವರ್ಷ ಹಾಗೆಯೇ ಇರುತ್ತದೆ. ಗೆದ್ದ ಪಕ್ಷವು ತನ್ನ ಅಭ್ಯರ್ಥಿಯನ್ನು ಆಯಾ ಪ್ರಜಾ ಪ್ರತಿನಿಧಿಗಳ ಸಭೆಗಳಿಗೆ ಕಳುಹಿಸುತ್ತದೆ. ಮತದಾನಿಗಳು ಯಾವೊಂದು ವ್ಯಕ್ತಿಯ ಪ್ರಭಾವಕ್ಕೊಳಗಾಗದೆ ಪಕ್ಷ ಪ್ರಭಾವಕ್ಕೊಳಗಾಗಿ ಪಕ್ಷಕ್ಕೆ ಮತದಾನ ಮಾಡುತ್ತಾರೆ. ಪಕ್ಷ ಕಳುಹಿಸಿದ ಅಭ್ಯರ್ಥಿ ಇನ್ನೊಂದು ಪಕ್ಷಕ್ಕೆ ಹಾರಿದನೆಂದರೆ ಹಿಂದಿನ ಪಕ್ಷಕ್ಕೆ ರಾಜಿನಾಮೆ ಕೊಡಬೇಕಾಗುತ್ತದೆ. ಆಗ ಪಕ್ಷ ಅವನಿಗೆ ಸೋಡಚೀಟಿ ಕೊಡುತ್ತದೆ. ಅವನು ಪ್ರತಿನಿಧಿ ಸಭೆಯಲ್ಲಿರಲು ಸಾಧ್ಯವಾಗುವುದಿಲ್ಲ. ಆಗ ಮರು ಚುನಾವಣೆಯ ಅವಶ್ಯಕತೆಯೂ ಇರುವುದಿಲ್ಲ. ಪ್ರತಿನಿಧಿ ಪಕ್ಷವು ಬೇರೊಬ್ಬನನ್ನು ಕಳುಹಿಸುತ್ತದೆ. ಅಷ್ಟೇ. ಇದು ಪ್ರತಿನಿಧಿ ಮರಣಹೊಂದಿದಾಗಲೂ ಹಾಗೆನೇ. ಚುನಾವಣೆಗಾಗಿ ಹಣ ನೀರಿನಂತೆ ಹರಿಯಬೇಕಾಗಿಲ್ಲ. ಇದರಲ್ಲೇನೂ ಮಜಾ ಇರುವದಿಲ್ಲವೆನ್ನುವವರೂ ಇದ್ದಾರೆ. ಹಿಂದೆ ರಾಜರು ಯಜ್ಞ–ಯಾಗಗಳ ಹೆಸರಿನಲ್ಲಿ ಸಂಪತ್ತನ್ನು ಹಂಚುತ್ತಿದ್ದರಾದಲ್ಲಿ, ಇಂದು ಪ್ರಜಾಪ್ರಭುಗಳು ಚುನಾವಣೆಯ ಸಮಯ ತಮ್ಮ ಬಂಡವಾಳವನ್ನು ಬರಿದಾಗಿಸುತ್ತಾರೆ. ಆಗಾಗ ಚುನಾವಣೆ ನಡೆದರೆ ತಾನೇ ಈ ಮಜಾ? ಇದ್ದರೂ ರಾಜ್ಯ ಬೊಕ್ಕಸ ಇದಕ್ಕಾಗಿ ವ್ಯಯವಾಗುವುದು ತಪ್ಪುತ್ತದೆ.

ಇದರಿಂದ ವ್ಯಕ್ತಿಗಳು ಪಕ್ಷಾಂತರ ನಡೆಸುವುದನ್ನು ತಡೆಗಟ್ಟಬಹುದಾದರೂ ಅದು ಉಚಿತ ಸೂತ್ರ ಸುಸೂತ್ರವಾಗಿ ಸಾಗಬೇಕಲ್ಲವೆ? ಇಂದಿನ ಸ್ಥಿತಿಯಲ್ಲಿ ಯಾವೊಂದು ಪಕ್ಷಕ್ಕೂ ಬಹುಮತ ಸಿಕ್ಕುವಂತಿಲ್ಲ. ಆಗ ಸಂಯುಕ್ತದಳಗಳ ಅವಶ್ಯಕತೆ ಬರುತ್ತದೆ. ಕೆಲವಾರು ಪಕ್ಷಗಳು ಸೇರಿ ಮಂತ್ರಿಮಂಡಲವನ್ನು ರಚಿಸಬಹುದು. ಉತ್ತರ ಪ್ರದೇಶದಲ್ಲಿ ಇ. ಕಾ. ವ. ತ್ತು ಬಿ. ಕೆ. ಡಿ. ಯು ಇತ್ತು. ಪಂಜಾಬಿನಲ್ಲಿ ಅಕಾಲಿದಳ–ಜನಸಂಘ ಮೈತ್ರಿ ಇತ್ತು. ಆದರೆ ಅದು ಬದಲಾಗಿ ಉತ್ತರಪ್ರದೇಶದಲ್ಲಿ ಬಾ. ಕ್ರಾ. ದ. ದ ಆಕ್ರಂದನವನ್ನು ಆಲಿಸಿದ ಹಳೆಯ ಕಾಂಗ್ರೆಸ್, ಜನಸಂಘ ......ಓಡಿಬಂದುವು. ಪಂಜಾಬಿನಲ್ಲಿ ಅಕಾಲಿದಳ–ಜನಸಂಘ ಮೈತ್ರಿ ಖಾಲಿಯಾದಾಗ ಹೊಸ ಕಾಂಗ್ರೆಸ್ಸು ಧಾವಿಸಿತು. ಹೀಗೆ ಸಂಯುಕ್ತ ಸರಕಾರದಲ್ಲಿ ವ್ಯಕ್ತಿಗಳ ಪಕ್ಷಾಂತರದ ಬದಲು ಅದಕ್ಕಿಂತಲೂ ಭೀಕರವಾದ, ಪಕ್ಷಗಳ ಪಕ್ಷಾಂತರವೇ ನಡೆಯುತ್ತದೆ. ಇದು ಒಳ್ಳೆಯದೇನು? ವ್ಯಕ್ತಿಗೂ ಪಕ್ಷಕ್ಕೂ ಈ ವಿಷಯದಲ್ಲಿ ಏನು ಭೇದವಿದೆ? ವ್ಯಕ್ತಿ ಮಾಡಿದಲ್ಲಿ ಅನ್ಯಾಯ, ಪಕ್ಷ ಹಾಗೆ ಮಾಡಿದಲ್ಲಿ ನ್ಯಾಯವಾಗುತ್ತದೇನು? ಬಡವ ತಿಂದರೆ ಹೊಟ್ಟೆಗಿಲ್ಲದೆ, ಶ್ರೀಮಂತ ತಿಂದರೆ ಸುದ್ದಿಗೇನು? ಇದಕ್ಕೆ ದೀನದಯಾಳ ಉಪಾಧ್ಯಾಯರ ಸೂತ್ರವೇನಿದೆ? ಎಲ್ಲರಿಗೂ ರಾಜಕೀಯ ಚಳ್ಳೆಂಗಾಯಿ ತಿನ್ನಿಸಿದ ನಾನು ತಾನೆಂದು ಭಾವಿಸಿಕೊಂಡಿದ್ದ ರಾಜಾಜಿಯವರೇ ದೀನ ದಯಾಳ ಉಪಾಧ್ಯಾಯರ ರಾಜಕೀಯದೆದುರು ನತಮಸ್ತಕರಾಗಿ ಶ್ಲಾಘಿಸಿರುವರು. ಅವರ ಪೂರ್ಣ ಲಾಭ ಜನತೆಗೆ ಲಭ್ಯವಾಗಲು ಜನತಾ ದ್ರೋಹಿಗಳು, ದೇಶದ್ರೋಹಿಗಳು ಬಿಡಲಿಲ್ಲ. ಅವರ ಕೊಲೆಯೊಂದಿಗೆ, ಭಾರತೀಯ ಹತ್ಯೆ ನಡೆಸಿ ತಮ್ಮ ರಕ್ತಸಿಂಚಿತ ಕೆಂಪು ಕೇತುವನ್ನು ಹಾರಿಸಬಹುದೆಂದು ಭಾವಿಸಿಕೊಂಡಿದ್ದರು. ಪ್ರಜಾಪ್ರಭುತ್ವದಲ್ಲಿ ಅದು ಕೈಗೂಡುವಂತಿಲ್ಲ. ದೀನದಯಾಳ ಉಪಾಧ್ಯಾಯರ ಬಲಿದಾನ ವ್ಯರ್ಥವಾಗದು. ಎರಡು ಪಕ್ಷಗಳಿರುವಲ್ಲಿ ಅವರ ಸೂತ್ರ ಸರಾಗವಾಗಿ ನಡೆಯಬಹುದು. ಹಲವಾರು ಪಕ್ಷಗಳಿರುವಲ್ಲೂ ಸರ್ಕಾರಿ ಬೊಕ್ಕಸವನ್ನುಳಿಸಲು ಇದೊಂದು ವರಪ್ರಸಾದ. ಇದು ರಾಜಕೀಯ ಧ್ರುವೀಕರಣದ ನಂತರ ಬಳಕೆಗೆ ಬರಲು ಸಾಧ್ಯವಿದೆ. ಈ ಸೂತ್ರ ಬಳಕೆಯಲ್ಲಿರುತ್ತಿದ್ದಲ್ಲಿ ಕಾಂಗ್ರೆಸ್ಸಿನ ಸ್ಥಿತಿ ಹೀಗಾಗುತ್ತಿರಲಿಲ್ಲ. ವ್ಯಕ್ತಿಗೆ ವಿಶಿಷ್ಟ ಸ್ಥಾನ ಇರದಿರುವುದರಿಂದ ಕಾಂಗ್ರೆಸ್ಸಿನ ಅಧ್ಯಕ್ಷರು ಇಂದಿರಾಜಿಯನ್ನು ಒಡನೆ ಗದ್ದುಗೆಯಿಂದ ಇಳಿಸಿಬಿಡುತ್ತಿದ್ದರು. ಕೆಳಗಿಳಿದ ಇಂದಿರಾಜಿ ನಂತರ ತನ್ನವರ ಸಹಾಯದಿಂದ ನಿಜಲಿಂಗಪ್ಪನವರನ್ನು ಅಧ್ಯಕ್ಷ ಸ್ಥಾನದಿಂದೋಡಿಸಿ ಅನಂತರ ಪ್ರಧಾನಿಯಾಗಲು ಸಾಧ್ಯವಾಗುತ್ತಿತ್ತು. ಆಗ ಕಾಂಗ್ರೆಸ್ಸು ಒಡೆಯದೆ ಒಂದೇ ಪಕ್ಷವಾಗಿರುತ್ತಿತ್ತು. ಅದರ ಬದಲು ಲೋಕಸಭೆಯಲ್ಲಿಂದು ಆಳುವ ಪಕ್ಷವೂ "ಕಾಂಗ್ರೆಸ್" ಎದುರು ಪಕ್ಷವೂ "ಕಾಂಗ್ರೆಸ್ಸಾ"ಗಿದೆ. ಬೀದಿಯ ವರ ಮಾತಿನಲ್ಲಿ ಎಲ್ಲರೂ ಕಾಂಗ್ರೆಸ್ ಮಾಡುತ್ತಿದ್ದಾರೆ.

ಇಂದಿರಾಜಿಯವರು ತನ್ನ ಹೊಗಳು ಭಟ್ಟರ ಮಧ್ಯೆ ಮಾತಾಡುವಾಗಲೆಲ್ಲಾ

(ಇಪತ್ತೈದನೇ ಪುಟ ನೋಡಿರಿ)

For your Motor Transport Needs In South Kanara

REMEMBER

THE HANUMAN TRANSPORT Co. (PRIVATE) LIMITED,

Post Box No. 27,

UDIPI, S. K.

(Estd : 1930)

Telephone : Telegrams :
Managing Director . 319 "HANUMANCO"
Controller of Works & Stores : 319A

ಪಕ್ಷ ಮತ್ತು ಪ್ರಜಾಪ್ರಭುತ್ವ

(ಹದಿನಾಲ್ಕನೇ ಪುಟದಿಂದ)

ಬೀಳುತ್ತದೆ. ಸ್ವಾತಂತ್ರ್ಯವು ಸ್ವೈರಾಚಾರಕ್ಕೆ ಇಳಿದು ಪರರಾಷ್ಟ್ರಗಳ ಅಪ್ರತ್ಯಕ್ಷ ಅಧಿಕಾರದ ಚುಂಚು ಪ್ರವೇಶಕ್ಕೆ ಮಾರ್ಗವಾಗುತ್ತದೆ. ರಾಷ್ಟ್ರವು ಅವನತಿಯ ಇಳಿಜಾರಿಗೆ ಬಲಿಯಾಗುತ್ತದೆ.

ಇಂದು ಭಾರತದ ಸ್ಥಿತಿಯು ಒಬ್ಬ ರೋಗಿಯ ಅವಸ್ಥೆಯಲ್ಲಿದೆ. ಮೊದಲು ರೋಗ ನಿವಾರಣೆಯಾಗಬೇಕು; ಆ ಮೇಲೆ ಕ್ರಮದಿಂದ ಬಲ ಸಂವರ್ಧನೆ ಆಗಬೇಕು. ರೋಗ ನಿವಾರಣೆಗೆ ತೀವ್ರ ಕ್ರಮದ ತಾತ್ಕಾಲಿಕ ಗುಣ ನೀಡುವಂಥವಾದರೂ ಉಪಾಯಗಳನ್ನು ಕೈಗೊಳ್ಳಬೇಕೆನಿಸುತ್ತದೆ. ಇದಕ್ಕೆ ಪಕ್ಷ ಸಂಗಡ ವಿರಹಿತ ಒಂದು ನಡುಗಾಲ ಸರಕಾರವೇ ಕೇಂದ್ರದಲ್ಲಿ ಸದ್ಯ ರೂಪುಗೊಳ್ಳಬೇಕಾದೀತು. ಸ್ವಾರ್ಥಸಾಧಕರಿಂದ ಮೂಲೆಗೊತ್ತಲ್ಪಟ್ಟ ನಿಷ್ಠಾವಂತ ದೇಶಭಕ್ತರ ಕೈಯಲ್ಲಿ ರಾಜ್ಯಸೂತ್ರಗಳನ್ನು ಒಪ್ಪಿಸಬೇಕಾದೀತು. ಇದರಿಂದ ನಮ್ಮ ರಾಜಕೀಯದ ಈ ರೋಗವು ನಿವಾರಣೆಯಾಗಬಲ್ಲದು. ಆ ಮೇಲೆ ನಿಜವಾದ ಪ್ರಜಾಪ್ರಭುತ್ವಕ್ಕೆ ದಾರಿಯನ್ನು ರಾಷ್ಟ್ರವು ಸುಗಮ ಮಾಡಿಕೊಳ್ಳಲು ಸಾಧ್ಯವಿದೆ. ಆಗ ಒಳ್ಳೆಯ ಪಕ್ಷಗಳು ದೇಶದಲ್ಲಿ ರೂಪುಗೊಳ್ಳುವವು. ಆ ಪಕ್ಷಗಳಿಂದ ಪ್ರಜಾಪ್ರಭುತ್ವವೂ ಉಳಿಯುತ್ತದೆ. ಅಲ್ಲಿಯ ವರೆಗೆ ಈ ಗಂಡಾಂತರಕಾರಿ ಸ್ಥಿತಿಯು ತಪ್ಪದು.

ಶ್ರೀ ತಪ್ಪಲಸೆ ವಿಶ್ವೇಶ್ವರ ಶರ್ಮಾ

ರಾಷ್ಟ್ರಕ್ಕೆ ನಮ್ಮ ಶಿಸ್ತಿನ ಆವಶ್ಯಕತೆ ಎಷ್ಟು?

ಶಿಸ್ತು ಇಲ್ಲದೆ ಹೋದರೆ, ಪ್ರಗತಿ—ಪ್ರತಿಷ್ಠೆ ಅಸಾಧ್ಯ. ರಾಷ್ಟ್ರದ ಶಿಸ್ತು ಪಾಲನೆಯಲ್ಲಿ ವ್ಯಕ್ತಿ ವ್ಯಕ್ತಿಯ ಪಾತ್ರ ಹೆಚ್ಚುತ್ತ ಬಂದರೆ ರಾಷ್ಟ್ರಕ್ಕೆ ಹಿತಕಾರಿ; ನೆಮ್ಮದಿ.

ವ್ಯಕ್ತಿಗಾಗಲೀ ರಾಷ್ಟ್ರಕ್ಕಾಗಲೀ ಶಿಸ್ತು ಒಂದು ಅಮೂಲ್ಯ ಅಲಂಕಾರ. ಶಿಸ್ತಿನ ಜೀವನ ಗೌರವ ಘನತೆ ಗಳಿಸುತ್ತದೆ. ಶಿಸ್ತಿಲ್ಲದ ಅವ್ಯವಸ್ಥಿತ ಅವಸ್ಥೆ ಸ್ವಭಾವ, ನಮಗಾಗಲೀ ರಾಷ್ಟ್ರಕ್ಕಾಗಲೀ ಯಾವ ಪ್ರಭಾವವನ್ನೂ ತರಲಾರದು. ಜೀವನದ ಸುಗಮ–ಸೌಲಭ್ಯವನ್ನೂ ಸಾಧಿಸಲಾರದು. ಹಾಗಾಗಿ ಶಿಸ್ತು ನಾವು ಗಳಿಸಿಕೊಳ್ಳಬೇಕಾದ ಉಳಿಸಿಕೊಳ್ಳಬೇಕಾದ ಬಹುಮೌಲ್ಯದ ಆಸ್ತಿ.

ಶಿಸ್ತಿನ ಸೂತ್ರ

ಶಿಸ್ತಿಲ್ಲದೆ ನಾವು ಏನನ್ನೂ ಸಾಧಿಸಲಾರೆವು. ಜೀವನ ಅಬಾಧಿತವಾಗಬೇಕಾದರೆ, ಅದು ಪರಸ್ಪರ ಆಘಾತ–ವಿಘಾತಗಳನ್ನು; ಕ್ರಿಯೆ–ಪ್ರತಿಕ್ರಿಯೆಗಳನ್ನು ತಪ್ಪಿಸಿಕೊಂಡು ಮುನ್ನಡೆಯಬೇಕಾದರೆ ಅದಕ್ಕೊಂದು ಸ್ವತಂತ್ರ ರೀತಿ–ನೀತಿಗಳು ಇರಬೇಕಾಗುತ್ತದೆ. ಆದರಿಂದ ಲೋಕ ಜೀವನದ ವ್ಯವಸ್ಥೆ ರೂಪುಗೊಳ್ಳಬೇಕಾಗುತ್ತದೆ. ಅದನ್ನೇ ಶಿಸ್ತು–ಸಭ್ಯತೆ ಎನ್ನುತ್ತೇವೆ. ಇದನ್ನು ಅಲಕ್ಷಿಸಿ ಸಾಗಿದರೆ ವ್ಯಕ್ತಿಗೊಂದು ರೀತಿಯಾಗಿ ಬೇಕಾದಂತೆ ವರ್ತಿಸುವುದರಿಂದ ಪರಸ್ಪರ ಗೊಂದಲಕ್ಕೆ ಕಾರಣವಾಗುವುದುಂಟು; ಇದನ್ನು ತಪ್ಪಿಸುವದಕ್ಕಾಗಿ ಶಿಸ್ತಿನ ಸೂತ್ರ ನಮ್ಮ ಬಾಳಿನಲ್ಲಿ ಬೆಳೆದು ಬಂದಿರುತ್ತದೆ. ಹೆಣೆದುಕೊಂಡಿರುತ್ತದೆ.

ನಮ್ಮ ಆಚಾರ ವಿಚಾರಕ್ಕೆಲ್ಲ ನೀತಿಯುಂಟು, ನಿಯಮವುಂಟು. ಅದನ್ನು ಪಾಲಿಸುವುದು ನಮ್ಮ ಧರ್ಮ. ಪಾಲಿಸದಿದ್ದರೆ ನಾವು ಧರ್ಮಬಾಹಿರರಾಗುತ್ತೇವೆನ್ನುವಷ್ಟು ಕಟ್ಟಳೆ. ಇದನ್ನು ನಿರೂಪಿಸುವದಕ್ಕಾಗಿಯೇ ಅನೇಕ ಶಾಸ್ತ್ರಗಳು, ಅನೇಕ ಗ್ರಂಥಗಳು ರಾಶಿ ರಾಶಿಯಾಗಿ ಬಂದಿರುವ ಅನೇಕ ಶತಮಾನಗಳಿಂದಲೂ ಪರಿಷ್ಕರಣಗೊಳ್ಳುತ್ತ ಬಂದಿರುವ ಈ ಗ್ರಂಥಗಳ ಆದೇಶ–ಉದ್ದೇಶ ಒಂದೇ. ನಮ್ಮ ಬಾಳಿನ ದಾರಿ–ಗುರಿಗಳಿಗೊಂದು ಸಾಧನೆಯ ನಿರ್ಮಾಣ. ಇಲ್ಲಿ ಶಿಸ್ತಿಗೆ ಅತ್ಯಂತ ಪ್ರಾಮುಖ್ಯತೆ. ಭಿನ್ನ ರಾಗ–ರುಚಿಗಳ ಜೀವನದಲ್ಲಿಯೂ ಪರಸ್ಪರರ ಹೊಂದಾಣಿಕೆಯಲ್ಲಿ ಶಿಸ್ತಿನ ಸೂತ್ರ ಒಂದು ಸೌಹಾರ್ದ ಸೇತುವೆ ಇದ್ದ ಹಾಗೆ. ಅದು ಎಲ್ಲವನ್ನೂ ಸುಗಮವಾಗಿ ಸಾಗಿಸುತ್ತದೆ, ಹೊಂದಿಸುತ್ತದೆ; ಎಂದೆಂದೂ ಬೇರೆಯಾಗದ ಹಾಗೆ.

ಪರಂಪರೆಯ ಹಿರಿಮೆ

ನಾವು, ನಮ್ಮ ದೇಶ ಈ ಶಿಸ್ತಿನ ಪರಂಪರೆಯಲ್ಲಿಯೇ ಬೆಳೆದುಬಂದವರು. ಎಂಥ ಪ್ರಸಂಗದಲ್ಲಿಯೂ ಅದನ್ನು ಬಿಡದೇ ಉಳಿಸಿಕೊಂಡು ಬಂದ ಖ್ಯಾತಿ ನಮ್ಮ ದೇಶಕ್ಕೆ ಹಿಂದಿನಿಂದಲೂ ಇದೆ. ನಾವು ಬೇರೆ ಯಾವುದೇ ವಿಚಾರದಲ್ಲಿ ಮುಂದರಿಯದಿದ್ದರೂ ಶಿಸ್ತುಗೇಡಿಗಳಾಗಿ ವರ್ತಿಸುವುದಕ್ಕೆ ಹೋದವರಲ್ಲ. ಹಾಗಾಗಿ ವಿದೇಶಗಳಲ್ಲಿಯೂ 'ಭಾರತೀಯ ಜೀವನಕ್ಕೆ ಬೆಲೆಯುಂಟು, ನೆಲೆಯುಂಟು' ಎಂಬ ಭಾವನೆ ಬೆಳೆದಿದೆ.

ಪಾಪ–ಪುಣ್ಯಗಳ ಬೀರುತ್ವ–ಧೀರತ್ವದಲ್ಲಿ ಈ ಶಿಸ್ತನ್ನೂ ನಾವು ಎಣಿಸಬಹುದಾಗಿದೆ. ನಮ್ಮ ಶಿಸ್ತು ಉಲ್ಲಂಘನೆಯಿಂದ ಇನ್ನೊಬ್ಬರಿಗೆ ತೊಂದರೆ ಸಂಭವಿಸಿದರೆ ಅದೂ ಒಂದು ಪಾಪವೇ. ಹಾಗೆಯೇ ಅದರ ಪಾಲನೆಯಿಂದ ಏನಾದರೂ ಪ್ರತ್ಯುಪಕಾರವಾದರೆ ಅದೊಂದು ಪುಣ್ಯ ಸಂಗ್ರಹವೆಂತಲೇ ತಿಳಿಯುವದುಂಟು. ಹಾಗಾಗಿ ಶಿಸ್ತು

(ಇಪ್ಪತ್ತನಾಲ್ಕನೇ ಪುಟ ನೋಡಿರಿ)

The Canara Banking Corporation Ltd.

offers

the following rates of interest on

FIXED DEPOSITS

		Rate of Interest (% p. a.)
Deposits for 91 days and above but less than 6 months	....	4½
Deposits for 6 months and above but less than 9 months	....	4¾
Deposits for 9 months and above but less than 1 year	....	5¼
Deposits for 1 year and above but less than 2 years	....	5¾
Deposits for 2 years and above but upto and inclusive of 3 years	....	6¼
Deposits above 3 years but upto and inclusive of 6 years	...	6¾
Deposits above 5 years but upto and inclusive of 6 years	....	7
Deposits for periods above 6 years	....	7½

Savings Bank Accounts : 3½% p. a.

THE CANARA BANKING CORPORATION LIMITED

serving the nation since 1906

Regd. Office
UDIPI

Admn. Office
MANGALORE

ಶ್ರೀ ಮ. ರಾಜೀವ, ಎಂ.ಎ.,ಎಂ.ಎಡ್.

ಒಂದು ಹೆಜ್ಜೆ ಮುಂದೆ; ಎರಡು ಹೆಜ್ಜೆ ಹಿಂದೆ

ನಾವು ಶೈಕ್ಷಣಿಕ ರಂಗದಲ್ಲಿ ತೀವ್ರ ಗಮನ ಮಾಡಿದ್ದೇವೆ. ಪ್ರಾಥಮಿಕ ಶಿಕ್ಷಣ ಉಚಿತ ಶಿಕ್ಷಣ, ಬಯಸಿದವರಿಗೆಲ್ಲ ಉನ್ನತ ಶಿಕ್ಷಣ...... ಹೀಗೆ ಆದರೆ, ಸತ್ಯ ಹೇಳುವುದಾದರೆ, ನಮ್ಮದು ಒಂದು ಹೆಜ್ಜೆ ಮುಂದೆ; ಎರಡು ಹೆಜ್ಜೆ ಹಿಂದೆ. ಇದೇಕೆ ಮತ್ತು ಹೇಗೆ?

ಭಾರತದ ಪ್ರಧಾನ ಸಮಸ್ಯೆಗಳಲ್ಲೊಂದಾದ ಆರ್ಥಿಕ ಅಭಿವೃದ್ಧಿಯ ಸಮಸ್ಯೆಯ ಉಪ ಸಮಸ್ಯೆಯು ಅಕ್ಷರತೆಯ ಪ್ರಶ್ನೆಯಾಗಿದೆ. ಅಕ್ಷರತೆಯು ಆರ್ಥಿಕ ಅಭಿವೃದ್ಧಿಗೆ ಅವಶ್ಯವಾದ ಅಂಗವಾಗಿದೆ. ಅದು ಕಾರ್ಯ ಕೌಶಲ್ಯವನ್ನು ಹೆಚ್ಚಿಸಲೂ, ದಕ್ಷತೆ ಹಾಗೂ ಸಾಮರ್ಥ್ಯವನ್ನು ಅಧಿಕಗೊಳಿಸಲೂ ಅವಶ್ಯವಾಗಿರುವ ಒಂದು ಸಾಮಾಜಿಕ ಶಕ್ತಿಯಾಗಿದೆ. ಒಂದು ಸಮಾಜದ ಆಧುನೀಕರಣಕ್ಕೂ ವ್ಯಕ್ತಿಯ ಆಲೋಚನೆ ಹಾಗೂ ವೈಯುಕ್ತಿಕ ಆಚರಣೆಯ ಆಧುನೀಕರಣಕ್ಕೂ ಬೇಕಾಗಿರುವ ಒಂದು ಸಮರ್ಥ ಸಾಧನವು ಈ ಅಕ್ಷರತೆಯಾಗಿದೆ. ವಿದ್ಯಾಭ್ಯಾಸ ಹಾಗೂ ಅಕ್ಷರತೆಯು ಸಾಮಾನ್ಯ ದೃಷ್ಟಿಯಲ್ಲಿ ಬೇರೆಯಾಗಿಲ್ಲ.

ಇಂದು ಆರ್ಥಿಕ ಅಭಿವೃದ್ಧಿಯನ್ನೂ ಸಾಮಾಜಿಕ ಸಮೃದ್ಧಿಯನ್ನೂ ಸಾಧಿಸಲು ಭಾರತಕ್ಕೆ ಬೇಕಾದುದು ಅಕ್ಷರತೆಯಲ್ಲಿ ಅತೀವವಾದ ಅಭಿವೃದ್ಧಿ. ಅದೂ ಕೂಡಾ ಅತ್ಯಲ್ಪಾವಧಿಯಲ್ಲಿ ಈ ಅಭಿವೃದ್ಧಿಯನ್ನು ಸಾಧಿಸಿದಷ್ಟು ತೀವ್ರಗತಿಯ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿ ಸಾಧ್ಯ.

ನಮ್ಮ ದೇಶಕ್ಕೆ ಈ ದಿಸೆಯಲ್ಲಿ ಕೇವಲ ನೂರೈವತ್ತು ವರ್ಷಗಳ ಇತಿಹಾಸ ಪರಂಪರೆಯಿದೆ. ಏಷ್ಯಾದ ರಾಜ್ಯಗಳೆಲ್ಲಾ ಭಾರತದಂತೆಯೇ ಅಕ್ಷರತೆಯ ದೃಷ್ಟಿಯಲ್ಲಿ ಬಹಳ ಹಿಂದುಳಿದಿವೆ. ಜಪಾನ್ ದೇಶವು ಮಾತ್ರ ಈ ದಾರಿಯಲ್ಲಿ ಮುಂದುವರಿದಿದೆ. ಅದು ಏಷ್ಯಾದ ರಾಷ್ಟ್ರಗಳಲ್ಲೆಲ್ಲಾ ಮುಂದುವರಿದ ರಾಜ್ಯವಾಗಿದೆ. ಬ್ರಿಟಿಷ್ ಆಡಳಿತೆಯ ಅವಧಿಯಲ್ಲಿ ಅಕ್ಷರತೆಯ ದಾರಿಯಲ್ಲಿ ಮುಂದುವರಿಯಲು ಆರಂಭಿಸಿದ ಭಾರತದ ಪ್ರಗತಿಗೂ ಅದರ ಹಿಂದಿನ ಆವಶ್ಯಕ್ಕೂ ಅಂತರವು ಅಗಲವಾಗಿ ಉಳಿದಿದೆ. ಮಾತ್ರವಲ್ಲದೆ ಅದು ಅಗಲಗಲವಾಗಿಯೇ ಹೋಗುವಂತಿದೆ! ಬೇಡಿಕೆ—ಪೂರೈಕೆಗಳು ಅಂತರವು ದಿನೇ ದಿನೇ ಹೆಚ್ಚುತ್ತಿದೆ.

ಈ ಬೇಡಿಕೆ ಪೂರೈಕೆಗಳಲ್ಲಿ ಅಜ–ಗಜಾಂತರವನ್ನುಂಟುಮಾಡುವ ಮತ್ತೊಂದು ಸಮಸ್ಯೆಯೇ ಭಾರತದ ಮುಖ್ಯ ಸಮಸ್ಯೆಗಳಲ್ಲೊಂದಾದ ಜನ ಸಂಖ್ಯೆಯ ಹೆಚ್ಚಳವಾಗಿದೆ. ೧೯೪೭ರ ಮೊದಲು ಅಶಾಂತಿ, ದಾರಿದ್ರ್ಯ, ನಿರುದ್ಯೋಗ, ಅನಕ್ಷರತೆಗಳು ಭಾರತೀಯ ಸಮಾಜದ ಪ್ರಜೆಗಳನ್ನು ಪೀಡಿಸುವ ಪ್ರಧಾನ ಸಮಸ್ಯೆಗಳಾಗಿದ್ದರೆ, ಆ ವರ್ಷದ ಮುಂದಿನ ದಶಕಗಳಲ್ಲಿ ಜನಸಂಖ್ಯೆಯ ಸಮಸ್ಯೆಯೂ ಬೃಹದಾಕಾರದಲ್ಲಿ ಬೆಳೆದುಬಂದಿದೆ. ಇಂದು ಈ ಸಮಸ್ಯೆಯು ನಿರಕ್ಷರತೆಯ ಸಮಸ್ಯೆಯನ್ನು ಮತ್ತಷ್ಟು ಕ್ಲಿಷ್ಟ ಸಮಸ್ಯೆಯನ್ನಾಗಿ ಮಾಡಿದೆ.

ಒಂದೆಡೆ ಶಾಲೆಗಳ ಸಂಖ್ಯೆ, ಅಧ್ಯಾಪಕರ ಸಂಖ್ಯೆ ಮತ್ತು ವಿದ್ಯಾ ಇಲಾಖೆಯ ಕಚೇರಿಗಳ ಸಂಖ್ಯೆಯು ಹೆಚ್ಚಿರಬಹುದು. ಶಾಲೆಗೆ ಹೋಗುವವರ ಸಂಖ್ಯೆಯೇ ಅಕ್ಷರತೆಯ ಹೆಚ್ಚಳದ ಸಂಕೇತವಲ್ಲ. ಶಾಲೆಗೆ ಹೋಗುವವರ ಸಂಖ್ಯೆ ಭಾರತದಲ್ಲಿ ಬಹಳ ಕಡಿಮೆ. ಆದರೆ ಶಾಲೆಯ ಹೊರಗೆ ಹೊಲಗಳಲ್ಲಿ, ಹೊಟೆಲುಗಳಲ್ಲಿ, ಕಾರ್ಖಾನೆಗಳಲ್ಲಿ ದರ್ಜಿಯಂಗಡಿಗಳಲ್ಲಿ, ಮನೆಗಳಲ್ಲಿ ಪರಿಚಾರಕರಾಗಿ ದುಡಿಯುವ ಶಾಲೆಯ ಹೊರಗಿರುವ, ಶಾಲಾ ಪ್ರಾಯದ ಮಕ್ಕಳ ಸಂಖ್ಯೆ ಬಹಳ ದೊಡ್ಡದಾಗಿದೆ. ಅಕ್ಷರಸ್ಥರ ಸಂಖ್ಯೆಯು ಶೇಕಡಾ ಪ್ರಮಾಣದಲ್ಲಿ ದೊಡ್ಡದೆಂದು ತೋರಿಕೆಗೆ ಕಾಣಬಹುದು. ಉದಾಹರಣೆಗಾಗಿ ೧೯೦೧ ಮತ್ತು ೧೯೬೯ರ ಅವಧಿಯಲ್ಲಿ ಸಂಖ್ಯೆಯು ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ೧೯೦೧ರಲ್ಲಿ ನೂರು ಮಂದಿಗೆ ಕೇವಲ ಆರು ಮಂದಿ ಅಕ್ಷರಸ್ಥರಾಗಿದ್ದರೆ ಅರ್ವತ್ತೆಂಟು ವರ್ಷಗಳ ಅವಧಿಯ ಅನಂತರ, ಅಂದರೆ ಎರಡು ತಲೆಮಾರುಗಳ ಬಳಿಕ ನೂರು ಮಂದಿಗೆ ಮೂವತ್ತಮೂರು ಮಂದಿ ಅಕ್ಷರಸ್ಥರಾಗಿದ್ದಾರೆ. ಅಕ್ಷರತೆಯ ಪ್ರಮಾಣದಿಂದ ತಪ್ಪು ಗ್ರಹಿಕೆಗೆ ಅವಕಾಶವಿಲ್ಲ. ಶಾಲೆಗೆ ಬರುವವರ ಸಂಖ್ಯೆ ಹಿಂದಿನ ದಶಕಗಳಲ್ಲಿ ಬಹಳ ಕಡಿಮೆಯಿತ್ತು. ಎಲ್ಲರೂ ಹಿಂದೆ ಶಾಲೆಗೆ ಬರುತ್ತಿದ್ದಿಲ್ಲ. ಇಂದು ಶಾಲೆಗೆ ಬರುವವರ ಸಂಖ್ಯೆಯೇನೋ ತೀವ್ರವಾಗಿ ಹೆಚ್ಚುತ್ತಿದೆ. ಇದು ಶುಭ ಸೂಚನೆ. ಆದರೆ ಹಿಂದಿನ ಸಮಸ್ಯೆಗಳು ಹಾಗೆಯೇ ಬಗೆಹರಿಯದೆ ಉಳಿದಿವೆ.

ಶಾಲೆಗೆ ಬಂದರೂ ಪ್ರಗತಿಯನ್ನು ಸಾಧಿಸಲು ಅಶಕ್ತರಾಗಿ ಉತ್ತೀರ್ಣರಾಗದೆ ಉಳಿಯುವವರು, ಫೈಲಾಗುವವರು, ಶಾಲೆಯನ್ನು ಮಧ್ಯದಲ್ಲಿ ಬಿಟ್ಟು ಬಿಡುವವರು, ಎಲ್ಲಕ್ಕಿಂತಲೂ ಮುಖ್ಯವಾಗಿ ಶಾಲೆಗೆ ಬಾರದೆ ಹೊರಗುಳಿದಿರುವವರ ಸಂಖ್ಯೆ ದಿನೇ ದಿನೇ ಬೆಳೆಯುತ್ತಿರುವುದು ಭಾರತದ ಅಕ್ಷರತೆಯ ಮಹಾ ಸಮಸ್ಯೆಯಾಗಿದೆ. ೧೯೫೧ರಲ್ಲಿ ಭಾರತದ ಅನಕ್ಷರಸ್ಥರ ಸಂಖ್ಯೆಯು ೨೯೮ ಮಿಲಿಯವಾಗಿತು. ೧೯೬೧ರಲ್ಲಿ ಅದು ೩೩೪ ಮಿಲಿಯವಾಗಿತ್ತು. ಅಕ್ಷರಸ್ಥರಲ್ಲಿಯೂ ಬಹುಮಂದಿ ಪುರುಷರು ಮಾತ್ರ ಅಕ್ಷರಸ್ಥರಾಗಿದ್ದರು. ಪುನಃ ಅಕ್ಷರಸ್ಥರಲ್ಲಿ ಬಹುಮಂದಿ ನಗರವಾಸಿಗಳು ಮಾತ್ರ ಅಕ್ಷರಸ್ಥರಾಗಿದ್ದರು. ಈ ಅಕ್ಷರಸ್ಥರ ಅಕ್ಷರತೆಯು ಕೂಡಾ ಮಿಡಲ್ ಸ್ಕೂಲ್ ಹಾಗೂ ಅದರ ಕೆಳಗಿನ ತರಗತಿಗಳಿಗೆ ಸಂಬಂಧಿಸಿದ ವಿದ್ಯಾಭ್ಯಾಸವಾಗಿತ್ತು. ನೂರುಮಂದಿ ಅಕ್ಷರಸ್ಥರಲ್ಲಿ ತೊಂಭತ್ತೆರಡು ಮಂದಿ ಈ ವರ್ಗಕ್ಕೆ ಸೇರಿದ ಅಕ್ಷರಸ್ಥರಾಗಿದ್ದರು. ಅವರಲ್ಲಿ ಬಹುಮಂದಿ ಮುಂದಿನ ವರ್ಷಗಳಲ್ಲಿ ಕಲಿತುದನ್ನು ಮರೆಯುವ ಮಂದಿಗಳೇ! ದೇಶದ ಸಂಪತ್ತನ್ನು ಸೃಷ್ಟಿಸುವ ಯುವ ಜನಾಂಗದಲ್ಲಿ ಅಂದರೆ ೧೫–೩೦ ವರ್ಷ ಪ್ರಾಯದ ಪ್ರಜಾಸಂಖ್ಯೆಯಲ್ಲಿ ಕೇವಲ ೨೫ರಷ್ಟು ಮಂದಿ ಅಕ್ಷರಸ್ಥರಾಗಿರುವರು. ದೇಶದ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಅಗತ್ಯವಾಗಿರುವ ಶ್ರಮಜೀವಿಗಳ ವರ್ಗ ೧೫ರಿಂದ ೪೪ ವರ್ಷ ಪ್ರಾಯದ ಪ್ರಜಾ ಸಂಖ್ಯೆಯಾಗಿದೆ. ಈ ವರ್ಗದ ಅನಕ್ಷರತೆಯ ಪ್ರಮಾಣವು ಶೇಕಡಾ ಸುಮಾರು ಎಪ್ಪತ್ತರಷ್ಟಾಗಿದೆ. ನೂರರಲ್ಲಿ ಮುಕ್ಕಾಲಂಶ ಮಂದಿ ತೀರಾ ಅನಕ್ಷರಸ್ಥರಾಗಿರುವ ದೇಶದ ಪ್ರಗತಿಯ ವೇಗ ಪ್ರಮಾಣವಾದರೂ ಎಷ್ಟು ತೀವ್ರವಾಗಬಹುದು? ಎಷ್ಟು ಶೀಘ್ರವಾಗಿ ನಡೆಯಬಹುದು? ೧೯೬೧ ಮತ್ತು ೧೯೭೧ರ ಅವಧಿಯಲ್ಲಿ ಅನಕ್ಷರತೆಯ ಪ್ರಮಾಣವು ಎಪ್ಪತ್ತರಿಂದ ಅರ್ವತ್ತೈದಕ್ಕೆ ಇಳಿಯಿತು. ಆದರೆ ಅದೇ ಅವಧಿಯಲ್ಲಿ ಅ

(ಇಪ್ಪತ್ತಮೂರನೇ ಪುಟ ನೋಡಿರಿ)

NOTICE

In the Court of the Principal Munsif Coondapoor

O. S. No. 247/1970.

Syndicate Bank —Plaintiff

Versus

Shivarama Shetty }
Ramanna Shetty } Defendants

Please take notice that a suit for recovery of Rs. 6962—0—0 is filed against the defendants for recovery of the amounts personally and by sale of the Sewing machines charged for the amounts. In the said suit Defendant No (1) is evading service. Hence notice is hereby given that the said suit is posted to 19—2—1971 at 11 A. M. before the Principal Munsif Coondapoor.

You are hereby summoned to appear before the Court on that day in person or through an Advocate duly instructed and to answer all questions in the suit (or who shall be accompanied by some person able to answer all such questions) failing which the suit will be decided ex parte.

(By order of Court)

K. Raghunath Shenai,
Advocate for Plaintiff

ನಮ್ಮ ಅಸಂಖ್ಯಾತ ಗ್ರಾಹಕರಿಗೂ
ಹಿತೈಷಿಗಳಿಗೂ
ಪ್ರಜಾರಾಜ್ಯ ದಿನದ ಶುಭಾಶಯಗಳು!

ಕಾರವಾರದ ನಿಸರ್ಗ ಸೌಂದರ್ಯ ಸವಿಯಲಾಗಮಿಸುವ
ಪ್ರವಾಸೀ ಅತಿಥಿಗಳ
ಹಾರ್ದಿಕ ಸತ್ಕಾರಕ್ಕೆ ನಾವು ಮೊಸಲು

ಉಡುಪಿ ಶ್ರೀಕೃಷ್ಣ ವಿಲಾಸ
ಮೈನ್ ರೋಡ್, ಕಾರವಾರ

'ಐಸ್‌ಕ್ರೀಮ್' ಮುಂತಾದ ತಂಪು ಪಾನೀಯಗಳು ನಮ್ಮ ವೈಶಿಷ್ಟ್ಯ
ಗ್ರಾಹಕರ ತೃಪ್ತಿಯೇ ನಮ್ಮ ಧ್ಯೇಯ

ಮ್ಯಾಲಕ: ಕೆ. ಸಂಜೀವ ರಾವ್

Please visit & enjoy
UDIPI SHRI KRISHNA VILAS
Main Road, KARWAR, N. K.

ONCE YOU PAY A VISIT
WILL REMEMBER THE CITY'S

POPULAR VEGETARIAN RESTAURANT

MADHU NIVAS

Boarding & Lodging

GANDHI SQUARE - - - MYSORE

For **Quality Vegetarian Preparations and Comfortable Stay in Our Double and Single Rooms.**

Try for a while and be satisfied.

Phone: 1593 Res: 1777.

ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿ
ಜನಪ್ರಿಯವಾದ

ಮಧು ನಿವಾಸ

ಸಂದರ್ಶಿಸಬೇಕಾದ

ವಸತಿ, ಭೋಜನ ಹಾಗೂ ಉಪಾಹಾರ ಮಂದಿರ

ಗಾಂಧಿ ಚೌಕ - - - ಮೈಸೂರು

ವ್ಯಾಲಕರು :
ಬಿ. ರಾಮದಾಸ ಭಟ್ ಮತ್ತು ಸಹೋದರರು.

ವಿಶ್ವಾಸಾರ್ಹ ನೀರಾವರಿಯ ವ್ಯವಸ್ಥೆಗೆ

ಜಗದ್ವಿಖ್ಯಾತವಾದ

ಹಿಂದುಸ್ಥಾನ್ ಬ್ರೌನ್ ಬೊವೆರಿ

ಮೋಟಾರು ಪಂಪುಸೆಟ್ಟುಗಳು
ಮತ್ತು
ಕಟ್ಲೆರ್ ಹ್ಯಾಮರ್ ಸ್ಟಾರ್ಟರುಗಳನ್ನೇ
ಆರಿಸುತ್ತಾರೆ.

ನಿಮಗೆ ಬೇಕಾದ ಪಂಪುಸೆಟ್ಟುಗಳನ್ನು
ಕೆಳಗಿನವರಲ್ಲಿ ಸದಾ ದಾಸ್ತಾನಿನಿಂದ ಪಡೆಯಬಹುದು.

Sales & Service

VICTOR TRADING CORPORATION

FALNIR ROAD - - MANGALORE-1

Phone : 5737

GOPAL FARM ENGINEERS

FALNIR ROAD - - MANGALORE-1

Phone : 5737

ದಿ ಶಂಕರ ವಿಠಲ್ ಮೋಟಾರ್ ಕಂಪೆನಿ ಲಿಮಿಟೆಡ್

ಮಂಗಳೂರು

(ದಕ್ಷಿಣ ಕನ್ನಡ ಜಿಲ್ಲೆ)

ಇಪ್ಪತ್ತೆರಡನೆಯ ಪ್ರಜಾರಾಜ್ಯ ದಿನದಂದು

ನಾವು ನಮ್ಮೆಲ್ಲರ ಪ್ರೋತ್ಸಾಹಕರಿಗೂ, ಹಿತೈಷಿಗಳಿಗೂ
ಪ್ರಯಾಣಿಕರಿಗೂ, ಮತ್ತು ನಾಗರಿಕರಿಗೂ ಸಹ
ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನರ್ಪಿಸಲು
ಸಂತೋಷಪಡುತ್ತೇವೆ.

THE SHANKER VITTAL MOTOR COMPANY LIMITED

MANGALORE

Estd: 1965 Phone: 172

SREE MAHADEV
COMMERCIAL CHIT-FUND COMPANY (P) LTD.,

GUTHALU COLONY,

MANDYA (Mysore State)

(Regd. No. 1566)

ಸ್ಥಾಪನೆ : 1965 ರಿ. ನಂ. 1566

ಶ್ರೀ ಮಹದೇವ್
ಕಮರ್ಷಿಯಲ್ ಚಿಟ್-ಫಂಡ್ ಕಂಪೆನಿ (ಪ್ರೈ) ಲಿ.,

ಗುತ್ತಲು ಕಾಲೋನಿ, ಮಂಡ್ಯ.

(ಫೋನ್ ನಂ. 172)

ನಮ್ಮಲ್ಲಿ ದಿನ ಚೀಟಿಗಳು ಮತ್ತು ತಿಂಗಳ ಚೀಟಿಗಳು ನಡೆಯುತ್ತವೆ. ಅಲ್ಲದೆ ಹೆಚ್ಚಿನ ಲಾಭವೂ ಸಿಗುತ್ತೆ. ನಾವು ಬಡ್ಡಿ ಚೀಟಿಯನ್ನೂ ಸಹ ಹರಾಜು ಮಾಡುತ್ತೇವೆ.

ಪ್ರಾಮಾಣಿಕ ವ್ಯವಹಾರ! ಆಕರ್ಷಕ ಡಿವಿಡೆಂಡ್!!

ಹೆಚ್ಚಿನ ವಿವರಗಳಿಗೆ— ಕಂಪೆನಿಯ ಆಫೀಸಿಗೆ ಖುದ್ದು ಯಾ ಫೋನ್ ಮೂಲ್ಕ ವಿಚಾರಿಸಬೇಕಾಗಿ ವಿನಂತಿ.

BRANCH OFFICE—
JAIN STREET, MANDYA.

ಬಿ. ದೇವಯ್ಯ,
ಮ್ಯಾನೇಜಿಂಗ್ ಡೈರೆಕ್ಟರ್.

ವಿಹಾರಕ್ಕಾಗಿ ವ್ಯವಹಾರಕ್ಕಾಗಿ

ಉಡುಪಿಗೆ ಬಂದಾಗ
ಉಳಕೊಳ್ಳುವ ಚಿಂತೆ ಬೇಡ

ಏರ್-ಕಂಡಿಶನ್ಡ್ ಕೋಣೆಗಳಿಂದ ಸುಸಜ್ಜಿತವಾದ ಅತ್ಯಾಧುನಿಕ ವಸತಿಗೃಹ

'ಕಲ್ಪನಾ ಲೋಜಿಂಗ್ ಹೌಸ್'

ನೀವು ಮತ್ತು ನಿಮ್ಮ ಪರಿವಾರದವರು ಒಮ್ಮೆ ಇಲ್ಲಿಗೆ ಬಂದರೆ ಎಂದೆಂದಿಗೂ ನಮ್ಮ ಸಂದರ್ಶಕ ಮಿತ್ರರಾಗುವಿರಿ.

'ಕಲ್ಪನಾ'

ಊಟ, ಉಪಹಾರ ಮತ್ತು ವಸತಿಗೃಹ

'ಉಪೇಂದ್ರ ಭಾಗ್'

ಉಡುಪಿ

ದಕ್ಷಿಣ ಕನ್ನಡ ಜಿಲ್ಲೆ.

ಫೋನ್ : 440

Wishing all our patrons
A happy and prosperous
New Year.

WHEN AT MANDYA

PLEASE VISIT

VENUS TOURIST HOTEL

M. C. ROAD,

MANDYA.

(Boarding, Lodging & Restaurant)

PHONE : 281

It is a pleasure to stay at your favourite Hotel.

S. K. Ramaswamy,
Proprietor.

B. S. NARASIMHAIAH SON & CO.

P. B. NO. 5, BAZAAR STREET,

MANDYA.

Distributors

M/s. India Tobacco Co.

Caltex (India) Ltd.,

Ravi Vegetable Oil Industries
Davangere.

Nutrine Confectionery Co. (P) Ltd.,
Chittoor.

The Raja Soap Factory,
Mysore.

ಭಕ್ತಿಭಾವ ಪ್ರಚೋದಕ ಕ್ಷೇತ್ರ ಶ್ರೀ ಸುಬ್ರಹ್ಮಣ್ಯ

ನಿಸರ್ಗಸುಂದರ ಪುಣ್ಯಧಾಮ — ಭಕ್ತಜನ ಸೌಖ್ಯದಾರಾಮ

ಪಶ್ಚಿಮ ಕರಾವಳಿ ಪರಶುರಾಮ ಸೃಷ್ಟಿ. ಶ್ರೀ ಸುಬ್ರಹ್ಮಣ್ಯವು ಇಲ್ಲಿನ ಸಪ್ತ ಕ್ಷೇತ್ರಗಳಲ್ಲಿ ಒಂದು. ಶ್ರೀ ಸ್ವಾಮಿ ಸುಬ್ರಹ್ಮಣ್ಯನು ಭಕ್ತಜನ ವತ್ಸಲನಾಗಿ ಅವರ ಸಂರಕ್ಷಕನಾಗಿ ನೆಲೆ ನಿಂತ ನಿಸರ್ಗದ ಮಡಿಲಲ್ಲಿ ಕಂಗೊಳಿಸುವ ಪುಣ್ಯ ತಾಣವಿದು. ಪಶ್ಚಿಮ ಘಟ್ಟಗಳ ಶಿಖರವಾದ ಕುಮಾರ ಪರ್ವತ ಮಾಲೆಯಿಂದ ತೊಟ್ಟನೆ ಕೆಳಗಡೆ, ಘಟ್ಟಗಳ ಬುಡದಲ್ಲಿನ ಈ ಪುಣ್ಯಧಾಮ ಕಂಡು ದಣಿಯದ ಸೌಖ್ಯದಾರಾಮ.

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಹೆಸರು ಮೊದಲು ಕುಕ್ಕೆ ಎಂದಿತ್ತು. ಕುಕ್ಕೆ ಪಟ್ಟಣದಲ್ಲಿ ಗರುಡಬಾಧೆಯನ್ನು ಪರಿಹರಿಸಲು ವಾಸುಕಿಯು ಬಂದು ಶಿವನನ್ನು ಕುರಿತು ತಪಸ್ಸು ಮಾಡಿದನು. ಆಗ ಮೆಚ್ಚಿ ದರ್ಶನ ನೀಡಿದ ಶಿವನು ವಾಸುಕಿಯ ಮನೋಭೀಷ್ಟಗಳನ್ನು ಪೂರಯಿಸಿ ಅಂತರ್ಧಾನನಾದನು. ಅದರಂತೆ, ಮುಂದೆ ಕುಮಾರ ಪರ್ವತದಲ್ಲಿ ದೇವ ಸೇನಾಪತಿಯಾಗಿ ಕುಮಾರ ಸ್ವಾಮಿಯು ಪಟ್ಟಾಭಿಷಿಕ್ತನಾದನು; ಅವನು ತಾರಕಾಸುರನನ್ನು ದಮನಿಸಿದ ಬಳಿಕ, ಕುಕ್ಕೆ ಪಟ್ಟಣಕ್ಕೆ ಬಂದನು. ಕುಮಾರ ಸ್ವಾಮಿಯ ಕಲಾಂಶ ಭೂತನಾಗಿ ವಾಸುಕಿಯು ಲೋಕಪೂಜ್ಯನಾದನು.

ಕುಮಾರಸ್ವಾಮಿಗೆ ಸೇನಾನಿಯಾಗಿ ಅಭಿಷೇಕ ಮಾಡಿದ ನೀರೇ ಹರಿದು ಶ್ರೀ ಕ್ಷೇತ್ರದ ಮೂಡಲಲ್ಲಿ ಎರಡು ಧಾರೆಗಳಾಗಿ ಕವಲೊಡೆದು ಪಡುವಲ್ಲಿ ಮತ್ತೆ ಒಂದಾಗುತ್ತದೆ. ಈ ಧಾರೆಯು ಕುಮಾರಧಾರೆಯೆಂದು ಹೆಸರಾಗಿದೆ. ಶ್ರೀ ಕ್ಷೇತ್ರದಲ್ಲಿ ಕುಮಾರಧಾರೆಯು ಕುಮಾರಸ್ವಾಮಿ ಕಲಾಯುಕ್ತನಾದ ವಾಸುಕಿಯನ್ನು ಅಪ್ಪಿಕೊಂಡಿದ್ದಾಳೆ. ಇದರಲ್ಲೇ ಧಾರಾತೀರ್ಥ, ದರ್ಪಣ ತೀರ್ಥ ಮೊದಲಾದ ಪುಣ್ಯ ತೀರ್ಥಗಳಿವೆ. ಧಾರಾ ತೀರ್ಥದಲ್ಲಿ ಮಿಂದು ಪರಶುರಾಮನು ಮಾತೃಹತ್ಯಾದೋಷದಿಂದ ಮುಕ್ತನಾದನು. ಅಸಿತ ಮಹಾಮುನಿಯ ಶಾಪದಿಂದ ರಾಕ್ಷಸಿಯಾದ ಅದಿತಿಯು ಇದೇ ತೀರ್ಥದಲ್ಲಿ ಮಿಂದು ಶ್ರೀ ಸುಬ್ರಹ್ಮಣ್ಯ ದರ್ಶನ ಪಡೆದು ಮೂಲರೂಪ ತಳೆದಳು. ಶ್ರೀ ಸುಬ್ರಹ್ಮಣ್ಯನ ಪ್ರಸಾದವು ಸರ್ಪದೋಷ, ವಿಷಬಾಧೆ ಅಪಸ್ಮಾರ ಮತ್ತು ಚರ್ಮವ್ಯಾಧಿ ಮೊದಲಾದುವುಗಳಿಗೆ ದಿವ್ಯ ಹಾಗೂ ಪರಮೌಷಧ. ಶ್ರೀಕ್ಷೇತ್ರದ ಮೂಲ ಮೃತ್ತಿಕೆಯು ಸರ್ವರೋಗೋಪಶಮನಕಾರಿ. ಶ್ರೀಕ್ಷೇತ್ರದಲ್ಲಿನ ವಿಚಿತ್ರ ಹರಕೆ ಮಡೆಸ್ನಾನ. ಷಷ್ಠಿ ಉತ್ಸವದ ವೇಳೆ ಸಮಾರಾಧನೆ ಮುಗಿದ ಬಳಿಕ ಎಂಜಲೆಲೆಗಳ ಮೇಲೆ ವಿಧಿವತ್ತಾಗಿ ಹೊರಳಾಡಿಕೊಂಡು ಹೋಗುವುದೇ ಈ ಹರಕೆ. ಕುಷ್ಠರೋಗ ಪೀಡಿತನಾದ ಸಾಂಬನು ಇದೇ ಕ್ಷೇತ್ರದಲ್ಲಿ ಮಡೆಸ್ನಾನ ಮಾಡಿ ಅದನ್ನು ದೂರಮಾಡಿಸಿದನೆಂದು ಐತಿಹ್ಯವಿದೆ.



ನೌಕಾ ವಿಹಾರ

ಶ್ರೀ ಕ್ಷೇತ್ರ ಸುಬ್ರಹ್ಮಣ್ಯದ ನಿಸರ್ಗ ರಮಣೀಯತೆಯನ್ನು ಮೆಚ್ಚಿಕೊಂಡು ಅನೇಕ ದೇವತೆಗಳು ಇಲ್ಲಿ ನೆಲಸಿದ್ದಾರೆ. ನೋಡಿ ಮುಗಿಯದಷ್ಟು, ಸುಂದರವಾದ, ಕುತೂಹಲ ಜನಕವಾದ ಐತಿಹ್ಯಗಳಿಂದ ಕೂಡಿದ ಪ್ರೇಕ್ಷಣೀಯ ಸ್ಥಳಗಳು ಇಲ್ಲಿವೆ.

ಗರ್ಭಗೃಹದ ಪಶ್ಚಿಮದಲ್ಲಿ ಕುಕ್ಕೆ ಲಿಂಗಗಳು, ಷಣ್ಮುಖನು ತಾರಕಾಸುರನನ್ನು ಸಂಹರಿಸಿದ ಉತ್ಸಾಹದಿಂದ ಸ್ಥಾಪಿಸಿದ ಕಪಾಲೇಶ್ವರ ಅಥವಾ ಭೈರವೇಶ್ವರ ದೇವರ ಗುಡಿ, ಒಳಪ್ರಾಕಾರದ ಈಶಾನ್ಯ ಭಾಗದಲ್ಲಿ ಉಮಾಮಹೇಶ್ವರ ವಿಗ್ರಹಗಳು, ಒಳ ಅಂಗಣದ ಆಗ್ನೇಯ ದಿಕ್ಕಿನಲ್ಲಿ ಶ್ರೀ ಸಂಪುಟ ನರಸಿಂಹ ದೇವರ ಗುಡಿ, ಶ್ರೀ ಸುಬ್ರಹ್ಮಣ್ಯ ದೇವಾಲಯದ ಮುಂಭಾಗದ ಮಹಾದ್ವಾರದ ಬಳಿ ಇರುವ ಬಲ್ಲಾಳರಾಯನ ವಿಗ್ರಹ, ಶ್ರೀ ಸುಬ್ರಹ್ಮಣ್ಯ ಮಠ, ಶೃಂಗೇರಿ ಮಠ—ಮೊದಲಾದುವುಗಳು ಒಂದು ಸುತ್ತಿನಲ್ಲೇ ಕಣ್ಣಿಗೆ ಕಾಣುವ ಸ್ಥಳಗಳು.

ತುಸು ಅತ್ತಿತ್ತ ಸಂಚರಿಸಿದರೆ, ಆದಿ ಸುಬ್ರಹ್ಮಣ್ಯ, ಬಿಲದ್ವಾರ, ಗೋಗರ್ಭ, ಮಾಸ್ತಿಕಟ್ಟೆ ಮೊದಲಾದುವುಗಳು ಇವೆ. ಸಾಹಸಿಗಳಿಗೊಂದು ಆಹ್ವಾನದಂತೆ ೪೦೦೦ ಅಡಿ ಎತ್ತರದ ಕುಮಾರ ಪರ್ವತ ಮೂರು ಶಿಖರಗಳನ್ನು ಎತ್ತಿ ನಿಂತಿದೆ. ಇಲ್ಲಿಗೆ ದೇಗುಲದಿಂದ ಸುಮಾರು ೧೨ ಮೈಲಿಗಳಷ್ಟು ದೂರ ದುರ್ಗಮವಾದ ದಾರಿ. ಇದರ ಮೂರು ಶಿಖರಗಳಲ್ಲಿಯೂ ಒಂದು ಏಳು ಸುತ್ತಿ ಶಿಖರ ಹೊತ್ತಿರುವ ಶೇಷ ಪರ್ವತ; ಉಳಿದವು ಸಿದ್ಧ ಪರ್ವತ ಮತ್ತು ಕುಮಾರ ಪರ್ವತ.

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಪ್ರಧಾನ ಉತ್ಸವ ಚಂಪಾ ಷಷ್ಠಿಯ ವೇಳೆ ನಡೆಯುತ್ತದೆ. ಉಳಿದ ಸಮಯ ಋತು ಮಾನಕ್ಕನುಗುಣವಾದ ಹಲವಾರು ಉತ್ಸವಗಳು ಜರಗುತ್ತಿರುತ್ತವೆ. ದೇವರ ಅಲಂಕೃತ ಮೂರ್ತಿಯನ್ನು ಹೊರಲು ರಥಗಳು, ಶೇಷ, ಅಶ್ವ, ಮಯೂರ, ಪುಷ್ಪರಥ, ಛಂಡಿ, ಪಾಲಕಿ ಮೊದಲಾದುವುಗಳಿದ್ದು, ನಿಯಮಿತ ರೀತಿಯಲ್ಲಿ ನಿಯಮಿತ ಉತ್ಸವಗಳು ನಡೆಯುತ್ತವೆ. ಹಗಲಿರುಳು ನಡೆಯುವ ಈ ಉತ್ಸವಾದಿಗಳು ಜನರಲ್ಲಿ ಭಕ್ತಿ ಭಾವನೆಯನ್ನು ಪ್ರಚೋದಿಸಿ ಹೃದಯ ವಿಕಾಸಕ್ಕೂ ಸಾಧನವಾಗುತ್ತಿವೆ.

ಶ್ರೀ ಸುಬ್ರಹ್ಮಣ್ಯದ ಆಡಳಿತೆಯು ಎಂಡೋಮೆಂಟ್ ಬೋರ್ಡಿನಿಂದ ನಿಯುಕ್ತರಾದ ಟ್ರಸ್ಟಿಗಳ ಮೂಲಕ ನಡೆಯುತ್ತದೆ. ಕಾಲ ಕಾಲದಲ್ಲಿ ಅಧಿಕಾರಕ್ಕೆ ಬಂದ ಟ್ರಸ್ಟಿಗಳು ದೇವಳದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಆಸಕ್ತಿಯನ್ನು ವಹಿಸಿ, ಕಾರಣಾಂತರಗಳಿಂದ ಹೀನಸ್ಥಿತಿಗಿಳಿದಿದ್ದ ಕ್ಷೇತ್ರವನ್ನು ಮೇಲ್ಮೆಗೆ ತರಲು ದುಡಿಯುತ್ತಿದ್ದಾರೆ. ಪ್ರಕೃತದ ಟ್ರಸ್ಟಿಗಳು :

ಶ್ರೀ ಕೆ. ಸುಬ್ರಹ್ಮಣ್ಯ ಗೌಡ, ಅಧ್ಯಕ್ಷರು.
ಶ್ರೀ ಡಿ. ಕೆ. ಹೆಬ್ಬಾರ್
ಶ್ರೀ ಬಿ. ಸುಬ್ಬಯ್ಯ ಶೆಟ್ಟಿ
ಶ್ರೀ ಬಿ. ಬಾಲಕೃಷ್ಣ ರೈ
ಶ್ರೀ ಜಿ. ಪುಟ್ಟು ಸ್ವಾಮಿ.

ಶ್ರೀ ದೇವಾಲಯದ ಸಮಸ್ತ ಆಗುಹೋಗುಗಳನ್ನು ಯಥೋಚಿತವಾಗಿ ನಡೆಸಿಕೊಂಡು ಹೋಗುವಲ್ಲಿ ಬಹುದೀರ್ಘಕಾಲದ ಅನುಭವವಿರುವ ಶ್ರೀ ಎಸ್. ರಾಮಕೃಷ್ಣ ಭಟ್ಟರವರು ಮೆನೇಜರರಾಗಿ ದುಡಿಯುತ್ತಿದ್ದಾರೆ.

ಶ್ರೀ ಸುಬ್ರಹ್ಮಣ್ಯನ ದರ್ಶನ ಲಾಭದಿಂದ, ಆತನ ಅನುಗ್ರಹ ಪ್ರಾಪ್ತಿಯಿಂದ ಸುಖ—ಸಂತೋಷ ಹೊಂದಿದ ಲಕ್ಷಾಂತರ ಭಕ್ತರು ಶ್ರೀ ದೇವರ ಮಹಿಮಾತಿಶಯಕ್ಕೆ ಸಜ್ಜೀವ ಕನ್ನಡಿ ಹಿಡಿಯುತ್ತಿದ್ದಾರೆ.

ಅವಭೃಥ ಸ್ನಾನ

ಪಾಲಕಿ ಉತ್ಸವದ ಒಂದು ನೋಟ

ಶ್ರೀಕ್ಷೇತ್ರದ ಚಿತ್ರ

ಹಲವಾರು ಅಭಿವೃದ್ಧಿಕಾರ್ಯಗಳಿಂದ

ಬ್ರಹ್ಮರಥ

ದ್ವಾರ ಸಮುದ್ರದ ಹೊಯ್ಸಳರ ಇತಿಹಾಸ ಮಸಕು — ಮಸಕಾಗುತ್ತ ಬಂದಂತೆ ಕರ್ನಾಟಕದ ಇತಿಹಾಸವೂ ಶಿಥಿಲವಾಗುತ್ತ ಬಂತು. ಕನ್ನಡದ ಕಲೆ—ಸಾಹಿತ್ಯ-ಧರ್ಮ — ಸಂಸ್ಕೃತಿಗಳಿಗೆ ಹೊಯ್ಸಳರು ನೀಡುತ್ತಿದ್ದ ಪ್ರೋತ್ಸಾಹ — ತೋರುತ್ತಿದ್ದ ಉತ್ಸಾಹಗಳು ಅಪಾರ. ಅವರ ಆಡಳಿತೆಯು ಕುಸಿದು ಹೋದ ಬಳಿಕ ಕರ್ನಾಟಕದ ಹಲವಾರು ದೇವ ಮಂದಿರಗಳ ಆಡಳಿತೆಯೂ ಕುಸಿದು ಹೋಗತೊಡಗಿತು; ಶಿಥಿಲವಾಗುತ್ತ ಬಂತು.

ಪೌರಾಣಿಕ ಪ್ರಸಿದ್ಧವಾದ ಧರ್ಮ ಕ್ಷೇತ್ರವೆನಿಸಿದ ಶ್ರೀ ಸುಬ್ರಹ್ಮಣ್ಯದ ಉಪಾಸನೆ—ಪೂಜೆ ಪುನಸ್ಕಾರಗಳಲ್ಲೂ ನೂರಾರು ಎಡರು—ತೊಡರುಗಳು ಅಡ್ಡಹಾಯ್ದು ಬಂದುವು. ಊರು ಅವ್ಯವಸ್ಥೆಗಳಿಗೆ ತವರೂರಾಗುತ್ತ ಬಂತು. ಇದರಿಂದ ಜನರು ವಲಸೆ ಹೋಗತೊಡಗಿದರು. ಪಟ್ಟಣವಾಗಿದ್ದ ಸುಬ್ರಹ್ಮಣ್ಯದ ಸುತ್ತಮುತ್ತ ಕಾಡು ಬೆಳೆಯಿತು; ಮಲೇರಿಯಾ ಹರಡಿತು. ಮಹಾಮಾರಿಗಳ ಹಿಡುಗಿನಿಂದಾಗಿ ಇದ್ದವರೂ ಊರು ಬಿಡಲಾರಂಭಿಸಿದರು.

ಊರಿಗೆ ಬಂದ ಗತಿಯಿಂದ ಶ್ರೀ ಭಗವಾನ್ ಸುಬ್ರಹ್ಮಣ್ಯನೂ ದೂರವಾಗಲಿಲ್ಲ. ದೇವಳದ ಆಡಳಿತೆಯು ಪೂರ್ತಿ ಅರಾಜಕವಾಗಿ ಪರಿಣಮಿಸಿತ್ತು. ಭಕ್ತಾದಿಗಳಿಗೆ ಯಾವ ಅನುಕೂಲತೆಯೂ ಅಲ್ಲಿರಲಿಲ್ಲ. ಸಂಚಾರದ ವ್ಯವಸ್ಥೆ ಅಸೌಕರ್ಯಗಳಿಂದಲೇ ತುಂಬಿತ್ತು. ದಿನದಿಂದ ದಿನಕ್ಕೆ ಕಳೆಗುಂದುತ್ತ ಬಂದ ಶ್ರೀ ಕ್ಷೇತ್ರವನ್ನು ಮತ್ತೆ ಊರ್ಜಿತಗೊಳಿಸಲು ತುಂಬ ಮುತುವರ್ಜಿ ವಹಿಸುವುದು ಅನಿವಾರ್ಯವಾಗಿತ್ತು.

ಶ್ರೀ ದೇವಳದ ಆಡಳಿತೆಯು ನಿರಾತಂಕವಾಗಿ, ಸುಯೋಗ್ಯವಾಗಿ ನಡೆಯಲೆಂದು ಸರಕಾರವು ಟ್ರಸ್ಟಿಗಳನ್ನು ನೇಮಿಸಿತು. ಇವರಾದರೂ ಲಭ್ಯ ಸಾಧನ ಸಂಪತ್ತಿನಿಂದ ಶ್ರೀ ಕ್ಷೇತ್ರದ ಉನ್ನತಿಯನ್ನು ಸಾಧಿಸುತ್ತ ಬಂದಂತೆ ಕ್ಷೇತ್ರವು ಸಂಪೂರ್ಣ ಜೀರ್ಣಸ್ಥಿತಿಯಿಂದ ಉದ್ಧಾರವಾಗುತ್ತ ಬಂದು, ಇಂದು ದಕ್ಷಿಣ ಭಾರತದ ಶ್ರೇಷ್ಠ ತೀರ್ಥಸ್ಥಾನಗಳಲ್ಲಿ ಭದ್ರ ಸ್ಥಾನವನ್ನು ಗಳಿಸಿದೆ.

ಶ್ರೀ ಸುಬ್ರಹ್ಮಣ್ಯ ದೇವಾಲಯದ ಆದಾಯಗಳು ಪರಿಮಿತ. ಇದರಿಂದ ಧಾರ್ಮಿಕ ವಿಧಿ—ನಿಯಮ, ಪೂಜೆ - ಪುನಸ್ಕಾರಾದಿಗಳಿಗೆ ಯಾವುದೇ ಪ್ರಕಾರದಲ್ಲಿ ಚ್ಯುತಿಯೊದಗದಂತೆ ಉಳಿದ ಅಭಿವೃದ್ಧಿ ಕಾರ್ಯಗಳನ್ನು ಟ್ರಸ್ಟಿಗಳು ಕೈ ಕೊಳ್ಳುತ್ತಿದ್ದಾರೆ. ಆಸ್ತಿಕ ಮಹಾಶಯರೂ ಧರ್ಮಭೀರುಗಳೂ ಆದ ಹಲವಾರು ಜನರು ಟ್ರಸ್ಟಿಗಳ ಕಾರ್ಯಕ್ರಮಗಳಲ್ಲಿ ಸಹಾಯ ಸಲ್ಲಿಸಿದ್ದಾರೆ.

ಹೀಗಾಗಿ ಇಂದು ಶ್ರೀ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿಯ ಕಾರ್ಯಕ್ರಮಗಳು ನಡೆದಿವೆ. ಜೀರ್ಣವಾದ ಹಲವಾರು ಗುಡಿಗೋಪುರಗಳು ಹೊಸ ರೂಪ ಪಡೆದಿವೆ. ಶ್ರೀ ಆದಿಸುಬ್ರಹ್ಮಣ್ಯನ ಗುಡಿ, ಅಲ್ಲಿಗೆ ಹೋಗುವ ದಾರಿಯಲ್ಲಿನ ಕುಮಾರಧಾರಾ ಹಾದಿಗೆ ಹಾಕಿದ ಭದ್ರವಾದ ಸೇತುವೆ - ಜೀರ್ಣೋದ್ಧಾರ ಕಾರ್ಯಕ್ರಮಗಳಲ್ಲಿ ಶಿಖರಪ್ರಾಯವಾಗಿದೆ. ಕುಮಾರ ಪರ್ವತದ ಶಿಖರಗಳು ತಲೆಯೆತ್ತಿ ನಿಂತಿರುವಂತೆಯೇ ಈ ಜೀರ್ಣೋದ್ಧಾರ ಕಾರ್ಯಗಳೂ ಸದಾ ಸ್ಮರಣೀಯವಾಗಿರುತ್ತವೆ.

ಶ್ರೀ ಕ್ಷೇತ್ರದಲ್ಲಿನ ವಿವಿಧ ಪ್ರೇಕ್ಷಣೀಯ ಸ್ಥಾನಗಳಿಗೆ ಹೋಗುವ ದಾರಿ—ಓಣಿ—ರಸ್ತೆಗಳು ಶುಚಿ—ಸುಂದರವಾಗಿವೆ. ಧರ್ಮ — ಸೌಂದರ್ಯಗಳು ಶುಚಿರ್ಭೂತವಾಗಿದ್ದರೆ ಅವುಗಳ ಸಾರ ಸರ್ವಗ್ರಾಹಿಯಾಗುತ್ತದೆಯೆಂಬುದನ್ನು ಇವು ಸಾರಿ ಹೇಳುತ್ತವೆ. ವಿಶಾಲವಾದ ಶ್ರೀ ಸುಬ್ರಹ್ಮಣ್ಯಮಂದಿರವೂ ಶುಚಿಗಿನ್ನೊಂದು ಹೆಸರು.

ಕಾಲಕಾಲದಲ್ಲಿ ಆಡಳಿತೆ ನಡೆಸಿದ ಟ್ರಸ್ಟಿ ಮತ್ತು ವ್ಯವಸ್ಥಾಪಕರ ಅವಿರತ ತ್ಯಾಗಯುಕ್ತ ದುಡಿಮೆ—ಭಕ್ತ ಜನರ ಉದಾರತೆಯಿಂದ ಇಂದು ಶ್ರೀ ಕ್ಷೇತ್ರದಲ್ಲಿ ಹಲವಾರು ಛತ್ರಗಳ ನಿರ್ಮಾಣವಾಗಿವೆ. ಯಾತ್ರಾರ್ಥಿಗಳಿಗೆ ತಂಗಲು ಇವು ಸದಾ ದೊರೆಯುತ್ತವೆ. ಶ್ರೀ ಕ್ಷೇತ್ರಕ್ಕೆ ಆಗಮಿಸುವ ಭಕ್ತರ ಸಂಖ್ಯೆಗೆ ಇದು ಸಾಲದೆನಿಸಿದರೂ ಕಾಲಕ್ರಮದಲ್ಲಿ ಇನ್ನೂ ಛತ್ರಗಳನ್ನು ಕಟ್ಟುವ ಯೋಜನೆ ಆಡಳಿತೆದಾರರಲ್ಲಿದೆ.

ಪಶ್ಚಿಮ ಘಟ್ಟಗಳ ಬುಡದಲ್ಲಿರುವ ಶ್ರೀ ಕ್ಷೇತ್ರಕ್ಕೆ ಹೋಗುವಾಗ ಹಲವಾರು ನದಿನದಗಳು ಅಡ್ಡವಾಗುತ್ತಿದ್ದವು. ಆದರೆ, ಸರಕಾರದ ಅನುಗ್ರಹದಿಂದ ಶ್ರೀ ಕ್ಷೇತ್ರದ ವಿಶ್ವಸ್ತರ ಆಗ್ರಹದಿಂದ ಭಗವದಾಶೀರ್ವಾದಗಳಿಂದ ಇಂದು ಸಂಚಾರ ವ್ಯವಸ್ಥೆಯಲ್ಲಿನ ಆತಂಕಗಳೆಲ್ಲವೂ ಹೇಳ ಹೆಸರಿಲ್ಲದಂತಾಗಿವೆ. ಅಗಲವಾದ ಡಾಮರು ರಸ್ತೆ ನಾನಾ ಮೂಲೆಗಳಿಂದಲೂ ಶ್ರೀ ಸುಬ್ರಹ್ಮಣ್ಯಕ್ಕೆ ನಮ್ಮನ್ನು ಒಯ್ಯುತ್ತವೆ.

ದೇವಾಲಯದ ಒಡೆತನಕ್ಕೆ ಸೇರಿದ ಭೂಮಿಯನ್ನು ವಿಶ್ವಸ್ಥ ಮಂಡಳಿಯು ಚೆನ್ನಾಗಿ ಬಳಸಿಕೊಳ್ಳುತ್ತಿದೆ. ಕಾಡುಗಳನ್ನು ಕಡಿದು, ತೋಟಗಾರಿಕೆಯನ್ನು ಅದು ಆರಂಭಿಸಿದೆ; ಮತ್ತು ಇದರಲ್ಲಿ ಬಹುಪಾಲು ಯಶಸ್ಸನ್ನೂ ಗಳಿಸಿದೆ. ಇಂದು ಹಲವಾರು ಸಾವಿರ ವಾರ್ಷಿಕ ಆದಾಯ ತರುವಂತಹ ಕೆಲವಾರು ತೋಟಗಳು ಶ್ರೀ ದೇವಳದ ಅಂಕಿತದಲ್ಲಿವೆ.

ಮಲೆನಾಡೆಂದು ಒಂದು ಕಾಲದಲ್ಲಿ ಹೆಸರಾದ ಕ್ಷೇತ್ರದಲ್ಲಿ ಶಿಕ್ಷಣದ ಸೌಕರ್ಯವನ್ನು ಹೆಚ್ಚಿಸಲು ಆಡಳಿತ ಮಂಡಳಿ ಕೈ ಹಾಕಿತು. ಅದರ ಪರಿಣಾಮವಾಗಿ ಶ್ರೀ ಸುಬ್ರಹ್ಮಣ್ಯೇಶ್ವರ ಹಾಯರ್ ಸೆಕೆಂಡರಿ ಶಾಲೆಯ ಸ್ಥಾಪನೆಯಾಯ್ತು. ಇದರಿಂದ ಸುತ್ತ ಮುತ್ತಲ ಹತ್ತಾರು ಊರುಗಳಿಂದ ವಿದ್ಯಾರ್ಥಿಗಳು ಈಗ ಪ್ರೌಢ ಶಿಕ್ಷಣವನ್ನು ಪಡೆಯುವಂತಾಗಿದೆ.

ಶ್ರೀ ಕ್ಷೇತ್ರದಲ್ಲಿನ ವಿಶ್ವಸ್ಥ ಮಂಡಳಿಯೂ ಆಡಳಿತೆ ವ್ಯವಸ್ಥಾಪಕರೂ ತುಂಬ ಉತ್ಸಾಹಶೀಲರು. ಅವರು ತಮ್ಮ ಸಾಧನೆಗಳಿಂದಾಗಿ ಉತ್ತೇಜಿತರಾಗಿ ಹಲವಾರು ಚಿಕ್ಕ ದೊಡ್ಡ ಯೋಜನೆಗಳನ್ನು ರೂಪಿಸಿದ್ದಾರೆ. ಇವುಗಳಲ್ಲಿ ಕೆಲವು ಮಂಜೂರಾತಿಯ ಹಂತದಲ್ಲಿದ್ದರೆ, ಇನ್ನು ಕೆಲವು ಕಾರ್ಯರೂಪಕ್ಕೆ ಬರುವ ಹಟ್ಟದಲ್ಲಿವೆ. ಇವುಗಳಲ್ಲಿ ಕೆಲವನ್ನು ಇಲ್ಲಿ ಸಂಗ್ರಹಿಸುವ ಪ್ರಯತ್ನ ಮಾಡಿದೆ:

೧. ಸದ್ಯ ಶ್ರೀ ಕ್ಷೇತ್ರದಲ್ಲಿ ನೀರಿನ ಸರಬರಾಯಿ ಯೋಜನೆಯೊಂದಿದ್ದರೂ ಅದು ಸಾಕಷ್ಟು ನೀರನ್ನು ಪೂರಯ್ಸಲು ಅಸಮರ್ಥವಾಗಿದೆ. ಆದುದರಿಂದ ಇದನ್ನು ಮ

ಆದಿ ಸುಬ್ರಹ್ಮಣ್ಯ ಮತ್ತು ಅಲ್ಲಿಗೆ ಹೋಗುವ ದಾರಿ

ಬದಲಾಗುತ್ತಿದೆ

ನೂರಾರು ಅನುಕೂಲತೆಗಳು



ನಯನಮನೋಹರ ಹೂವಿನ ತೇರು

ತ್ರಷ್ಟು ಸಶಕ್ತಗೊಳಿಸುವುದು ಅಗತ್ಯವೆಂದು ಕಂಡು ಬಂದುದರಿಂದ ರೂಪಾಯಿ ೨,೧೦,೦೦೦ ವೆಚ್ಚದ ಅಂದಾಜು ಯೋಜನೆಯೊಂದನ್ನು ರೂಪಿಸಿ ಅದಕ್ಕೆ ಪಿ. ಎಚ್. ಇ. ಇಲಾಖೆಯ ಮಂಜೂರಾತಿ ಪಡೆದಿದೆ. ಈ ಬೃಹತ್ ಯೋಜನೆಯನ್ನು ಎಸ್. ಆರ್. ಡಬ್ಲ್ಯೂ. ಎಸ್. ಸ್ಕೀಮಿನಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದು ಶೀಘ್ರದಲ್ಲೇ ಕಾರ್ಯಗತವಾಗಲಿದ್ದು ಮುಂದೆ ನೀರಿನ ಪೂರೈಕೆ ತೃಪ್ತಿಕರವಾಗಿ ಸಾಗುವುದೆಂದು ನಿರೀಕ್ಷಿಸಲಾಗಿದೆ.

ಈ ಯೋಜನೆಯ ಬಗ್ಗೆ ಪಂಚಾಯತ್ ಬೋರ್ಡಿನ ಪಾಲಿನ ಬಾಬ್ತು ರೂ. ೫೧,೦೦೦ವನ್ನು ದೇವಸ್ಥಾನದಿಂದ ಕೊಡುವುದಕ್ಕೂ ಮುಂದೆ ವಾರ್ಷಿಕ ರಕ್ಷಣೆಗಾಗಿ ರೂ. ೭,೫೦೦ನ್ನೂ ದೇವಾಲಯದಿಂದಲೇ ನೀಡುವುದಕ್ಕೂ ನಿರ್ಧರಿಸಲಾಗಿದೆ.

೨. ದೇವಾಲಯದ ಹೊರಗೆ ತೇರು ಬೀದಿಯಲ್ಲಿದ್ದ ಜೀರ್ಣವಾದ ಹಳೆಯ ಅಂಗಡಿ ಕಟ್ಟಡಗಳನ್ನು ಕಿತ್ತುಹಾಕಿ ಆಧುನಿಕ ಸೌಲಭ್ಯ–ಸೌಕರ್ಯಗಳಿಂದ ಕೂಡಿದ ವಸತಿಗೃಹ, ರೆಸ್ಟೋರೆಂಟ್, ಅಂಗಡಿ ಕೋಣೆಗಳು ಇಂಡಿಯನ್ ಓವರ್ ಸೀಸ್ ಬ್ಯಾಂಕಿಗೆ ಆಫೀಸು ಕಟ್ಟಡ–ಮೊದಲಾದುವುಗಳಿಗೆ ಅನುಕೂಲವಾಗುವಂತೆ ಅಂದಾಜು ರೂ. ಮೂರು ಲಕ್ಷದ ವೆಚ್ಚದಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಲು ಆರಂಭಿಸಲಾಗಿದೆ. ಇದರಲ್ಲಿ ಈಗಾಗಲೇ ಒಂದನೆ ಮಹಡಿಯ ಕೆಲಸ ಮುಗಿದಿದೆ.

೩. ಶ್ರೀ ಆದಿ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ರೂ. ೩೦,೦೦೦ದ ಅಂದಾಜು ವೆಚ್ಚದಲ್ಲಿ ಒಂದು ಭೋಜನಗೃಹ ಮತ್ತು ಪಾಕಶಾಲೆಯನ್ನು ಕಟ್ಟಿಸಲು ತೊಡಗಿದ್ದು, ಇದರ ಬಹುಪಾಲು ಕೆಲಸ ಈಗಾಗಲೇ ಮುಗಿದಿದೆ.

೪. ಶ್ರೀ ಸುಬ್ರಹ್ಮಣ್ಯೇಶ್ವರ ಹಾಯರ್ ಸೆಕೆಂಡರಿ ಶಾಲೆಯ ಉಪಯೋಗಕ್ಕೆಂದು ಒಂದು ಪಾಕಶಾಲೆ ಮತ್ತು ಭೋಜನಶಾಲೆಯ ಅಗತ್ಯವಿದ್ದು ಇದಕ್ಕೆಂದು ರೂ. ೩೦,೦೦೦ದ ಅಂದಾಜು ವೆಚ್ಚದಲ್ಲಿ ಕಟ್ಟಡದ ಕಾರ್ಯವು ಆರಂಭವಾಗಿದ್ದು ಶೀಘ್ರದಲ್ಲೇ ಮುಕ್ತಾಯದ ಹಂತವನ್ನು ಮುಟ್ಟಲಿದೆ. ಇದರಿಂದ ಶಾಲಾ ಮಕ್ಕಳಿಗೆ ಹೆಚ್ಚಿನ ಸೌಕರ್ಯಗಳು ದೊರೆಯುವಂತಾಗುವುದು.

೫. ಕೊಳ್ಳೆಗಾಲದ ಪ್ರಸಿದ್ಧ ರೇಶ್ಮೆ ಮತ್ತು ಚಿನ್ನಾಭರಣ ವ್ಯಾಪಾರಿಗಳಾದ ಶ್ರೀ ಅಶ್ವತ್ಥನಾರಾಯಣ ಸೆಟ್ಟಿ ಮತ್ತು ಮಕ್ಕಳು ಇವರ ಉದಾರ ದಾನವಾಗಿ ರೂ ೬೦,೦೦೦ ಅಂದಾಜು ವೆಚ್ಚದ ಒಂದು ಹೊಸ ಛತ್ರ ಕಟ್ಟಡವನ್ನು ರಚಿಸುವ ಬಗ್ಗೆ ನಕ್ಷೆ–ಅಂದಾಜುಗಳೆಲ್ಲ ಸಂಪೂರ್ಣವಾಗಿ, ಶೀಘ್ರದಲ್ಲೇ ಕಟ್ಟಡದ ಕೆಲಸವು ಆರಂಭವಾಗಲಿದೆ.

ಇದೇ ಶ್ರೀ ಅಶ್ವತ್ಥನಾರಾಯಣ ಸೆಟ್ಟರ ಕಿರಿಯ ಸಹೋದರ ಶ್ರೀ ಅನ್ನದಾನ ಸುಬ್ಬ ಸೆಟ್ಟರು ಕಟ್ಟಿಸಿ ಶ್ರೀ ಕ್ಷೇತ್ರದ ಆಡಳಿತೆಗೆ ಈ ಮೊದಲೇ ಒಪ್ಪಿಸಿರುವ ಛತ್ರ ಕಟ್ಟಡದ ವಿಸ್ತರಣೆಗಾಗಿ ಸುಮಾರು ರೂ. ೬೦ ೦೦೦ ಅಂದಾಜು ವೆಚ್ಚದಲ್ಲಿ ಆರು ಕೋಣೆಗಳನ್ನು ಹೊಸದಾಗಿ ಕಟ್ಟಿಸಿ ದೇವಳದ ಆಡಳಿತೆಗೆ ಉದಾರವಾಗಿ ನೀಡಲು ನಿರ್ಧರಿಸಿದ್ದಾರೆ. ಈ ವಿಸ್ತರಣೆಯ ಕೆಲಸವನ್ನೂ ಆರಂಭ ಪಡಿಸಲಾಗಿದೆ

೬. ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯ ಮುಂಭಾಗದಲ್ಲಿರುವ ಗರುಡಗಂಭಕ್ಕೆ ವಿಶೇಷ ಚಿತ್ರಕಲೆಯಿಂದ ಕೂಡಿದ ಬೆಳ್ಳಿಮುಚ್ಚುವ ಕೆಲಸವನ್ನು ಸುಮಾರು ರೂ ೬೦,೦೦೦ದ ವೆಚ್ಚದಿಂದ ಮುಗಿಸಲಾಗಿದೆ.

೭. ಉತ್ಸವ ದೇವರಿಗೆ ರೂ. ೨೦,೦೦೦ ವೆಚ್ಚ ಮಾಡಿ ಚಿನ್ನದ ಕವಚವನ್ನು ಹೊಸತಾಗಿ ಮಾಡಿಸಲಾಗಿದೆ.

೮. ಯಾತ್ರಾರ್ಥಿಗಳ ಉಪಯೋಗಕ್ಕಾಗಿ ಶ್ರೀ ಸುಬ್ರಹ್ಮಣ್ಯ ಸೆಟ್ಟಿ ಛತ್ರದಲ್ಲಿ ರೂ. ೯,೦೦೦ ಖರ್ಚುಮಾಡಿ ಟ್ಯಾಲೆಟ್‌ಗಳನ್ನು ಒದಗಿಸಿ ನಾಲ್ಕು ಕೊಠಡಿಗಳಿಗೆ ವಿದ್ಯುತ್ ಮತ್ತು ನೀರಿನ ಸೌಕರ್ಯಗಳನ್ನು ಪೂರಯ್ಸಲಾಗಿದೆ.

೯. ರೂ. ೩೫ ಸಾವಿರಕ್ಕೂ ಹೆಚ್ಚು ವೆಚ್ಚ ಮಾಡಿ ಶ್ರೀ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಕಟ್ಟಡಗಳಿಗೂ ವಿದ್ಯುತ್ ದೀಪಗಳ ಸೌಲಭ್ಯವನ್ನು ಒದಗಿಸಲಾಗಿದೆ.

೧೦. ಟೆಲಿಫೋನು ಸೌಕರ್ಯವನ್ನೂ ಪಡೆಯುವ ಪ್ರಯತ್ನವು ಕಳೆದ ವರ್ಷ ಯಶಗಳಿಸಿದೆ.

೧೧. ಶ್ರೀ ದೇವರ ವೈಭವ—ಉತ್ಸವಾದಿಗಳಲ್ಲಿ ಅಲಂಕಾರ ಹಾಗೂ ಭೂಷಣಪ್ರಾಯವಾಗಿರುವ ಐರಾವತದ ಅಭಾವವು ಕೆಲವರ್ಷಗಳಿಂದ ಇತ್ತು. ಘನ ಮೈಸೂರು ಸರಕಾರದ ಉದಾರತೆಯಿಂದ ದೇವಳದ ಪ್ರಕೃತದ ಆಡಳಿತ ಮಂಡಳಿಯು ಇದನ್ನು ನೀಗಿಸಿದೆ. 'ಇಂದುಮತಿ' ಎಂಬ ಆನೆಯು ಇಂದು ಶ್ರೀ ಕ್ಷೇತ್ರದಲ್ಲಿದೆ.

೧೨. ಕಾಡು ಬೆಳೆದಿರುವ ಶ್ರೀ ದೇವಳದ ಹಿಡುವಳಿಗಳನ್ನು ಅಭಿವೃದ್ಧಿ ಪಡಿಸಿ ಅಡಿಕೆ ವ್ಯವಸಾಯ ಮಾಡಿದ್ದರಿಂದ ಹಿಂದಿನ ಫಸಲಿಯಲ್ಲಿ ಸು. ರೂ. ೯೦ ಸಾವಿರದಷ್ಟು ಉತ್ಪತ್ತಿಯಾಗಿದೆ.

ಶ್ರೀ ಕ್ಷೇತ್ರದ ಆಡಳಿತೆದಾರರು ಹತ್ತು ಹಲವರ ಸಹಾಯದಿಂದ ಮೇಲಿನ ಯೋಜನೆಗಳಲ್ಲಿ ಯಶಃಪಥಗಾಮಿಗಳಾಗಿದ್ದಾರೆ. ಇನ್ನೂ ಕೆಲವೊಂದು ಯೋಜನೆಗಳು ಆದರ ಮುಂದಿವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ನಮೂದಿಸಬಹುದು.

ಶ್ರೀ ಕ್ಷೇತ್ರದ ಬ್ರಹ್ಮ ರಥವು ಬಹಳ ಶಿಥಿಲವಾಗಿದೆ. ಮುಖ್ಯ ಉತ್ಸವಕ್ಕೆ ಆತಂಕವಾಗದಂತೆ ಇದನ್ನು ಶೀಘ್ರವಲ್ಲೇ ಪುನಾರಚಿಸುವುದು ಅತಿ ಆಗತ್ಯವಾಗಿದೆ. ಈಗಿರುವ ರಥದಂತೆಯೇ ಹೊಸತೊಂದನ್ನು ತಯಾರಿಸಲು ಸುಮಾರು ನಾಲ್ಕು ವರ್ಷಗಳ ಕಾಲಾವಧಿಯೂ ಮೂರು ಲಕ್ಷ ರೂಪಾಯಿಗಳೂ ಬೇಕಾಗಬಹುದೆಂದು ತಜ್ಞರು ಅಂದಾಜು ಮಾಡಿದ್ದಾರೆ.

ಹಾಗೆಯೇ ಶ್ರೀ ಕ್ಷೇತ್ರದ ಪ್ರವೇಶದಲ್ಲಿರುವ ಗೋಪುರವನ್ನೂ ಉತ್ತಮವಾಗಿ ರಚಿಸುವ ಮತ್ತೊಂದು ಯೋಚನೆಯೂ ಇದೆ. ಇದಕ್ಕೆ ರೂ. ನಾಲ್ಕು ಲಕ್ಷಗಳ ವೆಚ್ಚ ಬರಬಹುದು. ದೇವಳದ ಈಗಿನ ಉತ್ಪತ್ತಿಯಿಂದಲೇ ಇವನ್ನು ಪೂರಯ್ಸಲು ಬಹುಕಾಲ ಕಾಯಬೇಕಾಗುತ್ತದೆ. ಅದುವರೆಗೆ ಎಲ್ಲ ಪ್ರಗತಿ ಕಾರ್ಯಗಳನ್ನೂ ಸ್ಥಗಿತಗೊಳಿಸಬೇಕಾಗುತ್ತದೆ. ಆದುದರಿಂದ ಈ ಬಗ್ಗೆ ಭಕ್ತಾದಿಗಳ ಉದಾರ ಧನ ಸಹಾಯ ಬಯಸುವುದು ಸಾಧುವಾದುದು. ಸಾಕಷ್ಟು ಧನ ಸಂಗ್ರಹವಾದೊಡನೆಯೇ ಆರಂಭವಾಗಲಿರುವ ಈ ದೊಡ್ಡ ಯೋಜನೆಗಳಿಗೆ ಭಕ್ತರು ದೊಡ್ಡ ಮನಸ್ಸಿನಿಂದ ಸಹಾಯ ಮಾಡಬೇಕು. ದೇವಾಲಯದ ಆಫೀಸಿಗೆ ಧನವನ್ನು ರವಾನಿಸಿದರೆ, ಅದನ್ನು ಕೃತಜ್ಞತೆಯೊಂದಿಗೆ ಸ್ವೀಕರಿಸಿ, ಶ್ರೀ ಸ್ವಾಮಿಯ ಅನುಗ್ರಹ ರೂಪವಾಗಿ ಮೂಲಮೃತ್ತಿಕಾ ಪ್ರಸಾದಗಳೊಡನೆ ರಶೀದಿ



ಬ್ರಹ್ಮೋತ್ಸವದ ಸುಂದರ ದೃಶ್ಯ

ಶ್ರೀ ಸುಬ್ರಹ್ಮಣ್ಯನ ಸನ್ನಿಧಿಯಲ್ಲಿ

ಜನಜಾಗೃತಿಗಾಗಿ ಧರ್ಮಸಮ್ಮೇಳನ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಕಿರುಷಷ್ಠಿ ಉತ್ಸವದ ವೇಳೆ ಧರ್ಮ ಸಮ್ಮೇಳನವು ನಡೆದು ಬರುವುದು ಸತ್‌ಸಂಪ್ರದಾಯವಾಗಿದೆ. ಭಾರತೀಯರು ಧಾರ್ಮಿಕವಾಗಿ ಪತಿತರಾಗುತ್ತ ಜೀವನ ದುರ್ಭರಗೊಳ್ಳುತ್ತ ಬರುತ್ತಿರುವ ವೇಳೆಯಲ್ಲಿ ಧರ್ಮ ಜಾಗೃತಿಯ ಕಾರ್ಯಕ್ರಮಗಳು ನಾಲ್ಕು ನಿಟ್ಟಿನಿಂದ ನಡೆಯಬೇಕಾದುದು ಅತ್ಯಗತ್ಯ.

ಶ್ರೀ ಕ್ಷೇತ್ರದಲ್ಲಿ ನಡೆಯುವ ಧರ್ಮ ಸಮ್ಮೇಳನಗಳಲ್ಲಿ ಧರ್ಮ ಪೀಠಾಧೀಶರೂ ಧರ್ಮ ಶ್ರದ್ಧಾಳುಗಳೂ ಭಾಗವಹಿಸುತ್ತ ಬಂದು ತಮ್ಮ ಧರ್ಮ ಜ್ಞಾನ ಗಂಗೆಯನ್ನು ಬಿಂದು ಬಿಂದುವಾಗಿ ಸಭಾಸದರಿಗಿತ್ತು ಅವರನ್ನು ಪುನೀತರನ್ನಾಗಿ ಮಾಡುತಿದ್ದಾರೆ. ಈ ವರ್ಷ ಇದೇ ತಿಂಗಳ ತಾ. ೨೮ರಂದು ಧರ್ಮ ಸಮ್ಮೇಳನವು ನಡೆದಿದ್ದು. ಅದರ ಸಂಕ್ಷಿಪ್ತ ವರದಿಯೊಂದು ಹೀಗಿದೆ. ಶ್ರೀ ಕ್ಷೇತ್ರದ ಧರ್ಮ ಜಾಗೃತಿ ಕಾರ್ಯಕ್ರಮ ಸಫಲವಾಗುತ್ತಿದೆ.

ಕುಕ್ಕೇ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಕಿರಿಷಷ್ಠಿ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು ತಾ ೧-೧-೭೧ನೇ ಶುಕ್ರವಾರ ಕೀರ್ತನ ಕೇಸರಿ ಶ್ರೀ ಎಂ. ವಿಮಲಾನಂದ ದಾಸ್, ಶಿವಮೊಗ ಇವರಿಂದ "ಗಣಪತಿ ವಿಜಯ ಯಾತ್ರೆ"ಯೆಂಬ ಹರಿಕಥೆ, ಶ್ರೀ ವಿ. ಎಸ್. ರಾಮಚಂದ್ರ ಶಾಸ್ತ್ರಿ, ಆಸ್ಥಾನ ವಿದ್ವಾನ್ ಇವರಿಂದ "ಸುಬ್ರಹ್ಮಣ್ಯ ತತ್ತ್ವ" ವಿಷಯವಾಗಿ ಉಪನ್ಯಾಸ, ಶ್ರೀ ಎಂ. ಪದ್ಮನಾಭ ಸರಳಾಯ, ಶ್ರೀ ಕೆ. ಬಾಬುರೈ ಇವರುಗಳ ಪಕ್ಕವಾದ್ಯದೊಡನೆ ಧಾರವಾಡದ ಆಕಾಶವಾಣಿ ಕಲಾವಿದರಾದ ಶ್ರೀ ಚಕ್ರಕೋಡಿ ನಾರಾಯಣ ಶಾಸ್ತ್ರಿ ಇವರಿಂದ ಸಂಗೀತ ಕಚೇರಿ ಕಾರ್ಯಕ್ರಮಗಳು ಮನೋರಂಜಕವಾಗಿ ಬೋಧಪ್ರದವಾಗಿದ್ದು ನೆರೆದಿದ್ದ ಸಹಸ್ರಾರು ಜನ ಭಕ್ತಾದಿಗಳಿಗೆ ಸಂತಸವಾಯಿತು. ಮೇಲ್ಕಂಡ ಕಾರ್ಯಗಳು ತಳಿರು ತೋರಣಗಳಿಂದಲಂಕೃತವಾದ ಮಂಟಪದಲ್ಲಿ ಜರುಗಿದವು. ದೇವಸ್ಥಾನದ ಮೆನೇಜರ್ ಶ್ರೀ ಎಸ್. ರಾಮಕೃಷ್ಣ ಭಟ್ ಅವರು



ಡಾ| ಯಂ. ಯನ್. ವಿಶ್ವನಾಥಯ್ಯನವರು ಉದ್ಘಾಟನಾ ಭಾಷಣ ಮಾಡುತ್ತಿರುವುದು. ಪಕ್ಕದಲ್ಲಿ ಕುಳಿತವರು ಪೇಜಾವರ ಮಠದ ಶ್ರೀಪಾದಂಗಳವರು ಮತ್ತು ಸುಬ್ರಹ್ಮಣ್ಯ ಮಠದ ಹಿರಿಯ ಶ್ರೀಪಾದಂಗಳವರು.

ಆಡಳಿತ ಮಂಡಳಿ ಪರವಾಗಿ ಎಲ್ಲರನ್ನೂ ಸ್ವಾಗತಿಸಿ ಅಭಿನಂದಿಸಿದರು.

ತಾ ೨-೧-೭೧ನೇ ಶನಿವಾರ ಅಪರಾಹ್ನ ೩ ಗಂಟೆಗೆ ಧರ್ಮ ಸಮ್ಮೇಳನ ಉಡುಪಿ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಡಾ| ಎಂ. ಎಸ್. ವಿಶ್ವನಾಥಯ್ಯ, ಪ್ರೊಫೆಸರ್, ಮಾನಸ ಗಂಗೋತ್ರಿ, ಮೈಸೂರು–ಇವರು ಸಮ್ಮೇಳನವನ್ನು ಉದ್ಘಾಟಿಸಿದರು. ಶ್ರೀಯುತರು ತಮ್ಮ ಭಾಷಣದಲ್ಲಿ—ವಿಜ್ಞಾನ, ಧರ್ಮ, ದೇವರು ಹಾಗೂ ಇಂದಿನ ಯುವಜನರ ಮನೋಗತದ ಕುರಿತು ಪ್ರಸ್ತಾಪಿಸಿದರು. ಮಾನವ ಕಲ್ಯಾಣದ ಸೋಗಿನಲ್ಲಿ-ಇಡೀ ಜಗತ್ತನ್ನು ೧೫ ಬಾರಿ ಭಸ್ಮ ಮಾಡಿ ಬಿಡಬಲ್ಲ ಪ್ರಮಾಣದ ಆಟಂಬಾಂಬ್ ಇತ್ಯಾದಿ ವಿನಾಶಕಾರಕ ವಸ್ತುಗಳನ್ನು ರಷ್ಯ, ಅಮೇರಿಕ ರಾಷ್ಟ್ರಗಳು ತಯಾರಿಸಿ ಶೇಖರಿಸಿಕೊಂಡಿರುವುದಾಗಿ ನುಡಿದರು. ಗಾಳಿಗೆ ಹೇಗೆ ರೂಪು ಎಂಬುವುದು ಇಲ್ಲವೋ ಹಾಗೆ ದೇವರಿಗೆ ನಿರ್ದಿಷ್ಟವಾದ ರೂಪವೆಂಬುದು ಇಲ್ಲವೆಂದರು. ಆದರೂ ದೇವರು ನಾನಾ ರೀತಿಯ ಅವತಾರಗಳಿಂದ ಬಗೆ ಬಗೆಯ ಭಾವನೆಗಳನ್ನು ನಮ್ಮ ಅಂತರಾತ್ಮನಲ್ಲಿ ಪ್ರಚೋದಿಸುವ ಶಕ್ತಿ ಬೆಳೆದುಬಂದಿದೆಯೆಂದರು. ಯಾರಾದರೂ ತಪ್ಪು ಮಾಡಿದ್ದು ತಾನು ನಿರಪರಾಧಿಯೆಂದು ಸಾಧಿಸುವಾಗ "ದೇವರ ಮುಂದೆ ಸತ್ಯ ಮಾಡುವೆಯಾ?" ಅಂದರೆ ತಪ್ಪು ಮಾಡಿದವನು ಸತ್ಯ ಮಾಡಲು ಹಿಂಜರಿಯುವುದರ ಹಿನ್ನೆಲೆಯಲ್ಲಿ ದೈವಶಕ್ತಿ ಅಡಗಿರುವ ಅಂಶವನ್ನು ಉದಾಹರಿಸಿ ಪ್ರತಿಯೊಬ್ಬರೂ ದೇವರನ್ನು ನಂಬಿ, ಪೂಜಿಸಿ ಪಾವನರಾಗಬೇಕೆಂದೂ. ಇಂದಿನ ಸಮಾಜದಲ್ಲಿ ಜನರು ನಿರ್ಮಿಸುವ ಗೃಹಗಳಲ್ಲಿ ದೇವರಿಗಾಗಿ ಮೀಸಲಿರಬೇಕಾದ ಕೊಠಡಿಗಳಿಲ್ಲದಿರುವ ಬಗ್ಗೆ ವಿಷಾದಿಸಿದರು. ದೇವಸ್ಥಾನದ ಆಡಳಿತ ಮಂಡಳಿಯವರು ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಜರುಗಿದ ಧರ್ಮ ಸಮ್ಮೇಳನವನ್ನು ಉದ್ಘಾಟಿಸಿ ನಾಲ್ಕು ಮಾತುಗಳನ್ನಾಡುವ ಅವಕಾಶ ಕಲ್ಪಿಸಿಕೊಟ್ಟುದಕ್ಕಾಗಿ ವಂದಿಸಿದರು.

ಬೆನಾರಸ್ ಹಿಂದೂ ಯೂನಿವರ್ಸಿಟಿ ನಿವೃತ್ತ ಪ್ರಿನ್ಸಿಪಾಲ್ ಆಸ್ಥಾನ ವಿದ್ವಾನ್ ಶ್ರೀ ವಿ. ಎಸ್. ರಾಮಚಂದ್ರ ಶಾಸ್ತ್ರಿಯವರು "ಧರ್ಮದ ಅರ್ಥ ಮತ್ತು ಅಗತ್ಯ" ಎಂಬುದರ ಕುರಿತು ಮಾತನಾಡುತ್ತ ಭಾರತದ ನಾನಾ ಧರ್ಮಗಳ ಬಗ್ಗೆ ಮನಸಾರೆಯವಾಗಿ ವಿವರಿಸಿದರು. ಭಾರತದ ಧರ್ಮ ಹಾಗೂ ಸಂಸ್ಕೃತಿ ಇಡೀ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠವಾದವುಗಳೆಂದರು ಪಾಶ್ಚಿಮಾತ್ಯ ನಡೆ. ನುಡಿಗಳು ಭಾರತೀಯರಿಗೆ ಶೋಭಿಸುವುದಿಲ್ಲವೆಂದೂ ನಮ್ಮ ನಡೆ

([illegible] ನೇ ಪುಟ ನೋಡಿ)

ಶ್ರೀ ಸುಬ್ರಹ್ಮಣ್ಯ ಗೌಡರು ಸ್ವಾಗತಭಾಷಣ ಮಾಡುತ್ತಿರುವುದು

ಯನ್ನು ರವಾನಿಸಿ ಕೊಡುವ ವ್ಯವಸ್ಥೆಯಿದೆ. ಭಕ್ತಜನ ಸಂರಕ್ಷಕನಾದ ಶ್ರೀ ಸುಬ್ರಹ್ಮಣ್ಯನಿಗಾಗಿ ಕೈಕೊಳ್ಳುವ ಈ ಕಾರ್ಯದಲ್ಲಿ ಎಲ್ಲರೂ ಮುಕ್ತ ಹಸ್ತದಾನಿಗಳಾಗುವುದು ಅಗತ್ಯವಿದೆ.

ಶ್ರೀ ಆದಿ ಸುಬ್ರಹ್ಮಣ್ಯ ಮತ್ತು ಮುಖ್ಯ ಕ್ಷೇತ್ರಗಳಲ್ಲಿರುವ ಸ್ನಾನ ಘಟ್ಟಗಳು ತೀರಾ ಜೀರ್ಣವಾಗಿವೆ. ಇವುಗಳನ್ನು ಹೊಸತಾಗಿ ಕಟ್ಟುವ ಬಗ್ಗೆ ಪೂರ್ವ ಸಿದ್ಧತೆಗಳೆಲ್ಲವೂ ನಡೆದಿವೆ. ರೂ. ೩೦,೦೦೦ ವೆಚ್ಚದ ಈ ಯೋಜನೆಯು ಮಂಜೂರಾತಿ ಪಡೆದೊಡನೆಯೇ ಕಾರ್ಯಗತವಾಗಲಿದೆ.

ಸದ್ಯದ ನಿರೀಕ್ಷೆಯಂತೆ ೧೯೭೦ರಲ್ಲಿ ಹಾಸನ — ಮಂಗಳೂರು ರೇಲುದಾರಿ ಸಂಪೂರ್ಣಗೊಳ್ಳಲಿದ್ದು ಸುಬ್ರಹ್ಮಣ್ಯ ಕ್ಷೇತ್ರದಿಂದ ಎಂಟು ಮೈಲು ದೂರದಲ್ಲಿ ರೇಲು ನಿಲ್ದಾಣವಿರುವುದು. ಆಗ ಶ್ರೀ ಕ್ಷೇತ್ರ ದರ್ಶನ ಮಾಡಲು ಬಯಲು ನಾಡುಗರಿಗೆ ಹೆಚ್ಚಿನ ಅನುಕೂಲವಾಗುವುದು.

ಶ್ರೀ ಸುಬ್ರಹ್ಮಣ್ಯ ಭಕ್ತರ ಆಕರ್ಷಕ ತೀರ್ಥವಾಗಿದೆ. ಶ್ರೀ ಸ್ವಾಮಿಯ ಅನುಗ್ರಹದಿಂದ ಮನೀಷೆಗಳನ್ನು ಪಡೆದವರು ಸಾವಿರ ಸಾವಿರ ಸಂಖ್ಯೆಯಲ್ಲಿದ್ದಾರೆ. ಆತನ ದರ್ಶನ ಲಾಭವನ್ನು ಪಡೆದು ಸಂತೃಪ್ತರಾಗದವರು ಇಲ್ಲವೆಂದರೆ ಅತಿಶಯವಲ್ಲ.

ಉತ್ತಮ ವಾತಾವರಣ, ಆದರ್ಶ ಆಡಳಿತೆ ಮತ್ತು ಶ್ರದ್ಧಾಸಕ್ತರು ಮೂಪ್ಪುರಿಗೊಂಡ ಶ್ರೀ ಕ್ಷೇತ್ರವು ಶ್ರೀ ಸ್ವಾಮಿಯ ಸಾಕಾರ ಮೂರ್ತಿ. ——

ಪೇಜಾವರ ಶ್ರೀಪಾದಂಗಳವರಿಂದ ಅಧ್ಯಕ್ಷ ಭಾಷಣ.

Wishing all our patrons a happy and prosperous New Year

PHONE : Shop : 207
Resi. : 287

M. S. T. No. M.D./C.T.A./- 24/1-10-57

SRI LAKSHMI VILAS

TEXTILE SHOW ROOM

ಶ್ರೀ ಲಕ್ಷ್ಮೀ ವಿಲಾಸ್

ರೇಷ್ಮೆ ಜವಳಿ ಅಂಗಡಿ

ಮಂಡ್ಯ.

MANDYA

(MYSORE STATE)

Proprietors:
A. Seenappa & Sons.

The Best and Cheapest house for all your requirements in

SILKS
SAREES
SHIRTINGS
SUITINGS

Authorised Stockist of:

BINNY FABRICS

METTUR MILLS

and

CALICO MOSQUITO NETTINGS

of

Latest Varieties

Sold at Fixed Rates.

Please remember that we are at your service since 1931.

'Satisfaction of our customers is our motto'.

PLEASE VISIT ONCE
AND MAKE SURE OF OUR PROMPT SERVICE.

ವೈದ್ಯರಿಗೊಂದು ಸವಿಮಾತು!

ಜನತೆಗೊಂದು ಕಿವಿಮಾತು!!

ಅಪ್ರತಿಮ ಗುಣಮಟ್ಟದಲ್ಲಿ
ವೈದ್ಯರ ಹಂಬಲವನ್ನು ಈಡೇರಿಸಿ
ಜನತೆಯ ಬೆಂಬಲ ಪಡೆದು
ಮುನ್ನಡೆಯುತ್ತಿರುವ
ಶಾಸ್ತ್ರೋಕ್ತ ಆಯುರ್ವೇದ ಔಷಧಿಗಳ
ಬೃಹನ್ನಿರ್ಮಾಣ ಸಂಸ್ಥೆ !!!

ದಿ ನ್ಯೂ ಭುವನೇಂದ್ರ
ಆಯುರ್ವೇದಿಕ್ ಫಾರ್ಮಸಿ

ಕಟಪಾಡಿ, ದ. ಕನ್ನಡ.

ಪ್ರಜಾರಾಜ್ಯೋತ್ಸವದ ಶುಭಾಶಯಗಳು !

ಹೋಟೆಲ್ ಟೂರಿಸ್ಟ್

(ರಿಜಿಸ್ಟರ್ಡ್)

ರೇಸ್ ಕೋರ್ಸ್ ರೋಡು, ಆನಂದರಾವ್ ಸರ್ಕಲ್,

ಬೆಂಗಳೂರು-9.

ಕಣ್ಮನ ತಣಿಸುವ ಬೆಂಗಳೂರು ಮಹಾನಗರದ ಅತ್ಯಂತ
ಕೇಂದ್ರಸ್ಥಾನದಲ್ಲಿರುವ ಮಹೋನ್ನತ ಹೋಟೆಲ್.

ಪ್ರತಿ ಕೋಣೆಗೂ ಸ್ನಾನಾಗಾರದ ವ್ಯವಸ್ಥೆ ಇರುವ
150 ಕೊಠಡಿಗಳ ಅತ್ಯಾಧುನಿಕ ವಸತಿ, ಭೋಜನ ಮತ್ತು
ಉಪಾಹಾರ ಮಂದಿರ.

With best compliments from

HOTEL TOURIST

(Regd.)

Race Course Road, Ananda Rao Circle,

BANGALORE-9.

High Class Vegetarian Boarding,
Lodging & Restaurant

Phone— 72381
Res.— 23414

Grams—HOTELTOUR

With best compliments
from

SRI MANJUNATH
MOTOR SERVICE

UDIPI, S.K.

Phone: 382

ಅನಾದಿ ಕಾಲದಿಂದಲೂ ನಡೆದು ಬಂದ ನಮ್ಮ ಸನಾತನ ಧರ್ಮ ಸಂಪ್ರದಾಯದಲ್ಲಿ ಮಾನವನ ಅಥವಾ ಸಮಾಜದ ಕಲ್ಯಾಣಕ್ಕೆ ನಾಲ್ಕು ಪುರುಷಾರ್ಥಗಳನ್ನು ಸೂಚಿಸಲಾಗಿದೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬೀ ನಾಲ್ಕು ಮನುಷ್ಯ ಪ್ರಯತ್ನ ಕರ್ಮ ಮಾರ್ಗಗಳು ಮಾನವನ ಏಳಿಗೆಗೆ ಅಥವಾ ಮನುಷ್ಯ ಜನ್ಮದ ಸಾರ್ಥಕ್ಯಕ್ಕೆ ನಿಸ್ಸಂದೇಹಕವಾದ ಪೂರಕ ಮಾರ್ಗಗಳೆಂಬುದು ಸರ್ವವಿದಿತ. ಈ ಆವರಣದಲ್ಲಿ ಮನುಷ್ಯನು ಶ್ರದ್ಧಾ ಭಕ್ತಿಗಳಿಂದ ಕಾರ್ಯನಿರತನಾಗಿ, ನಿಸ್ವಾರ್ಥದಿಂದ ಶ್ರಮಿಸಿದರೆ, ವಿವೇಕೋದಯವಾಗಿ ನಾಲ್ಕೂ ಪುರುಷಾರ್ಥಗಳನ್ನು ಈ ಜನ್ಮದಲ್ಲೇ ಗಳಿಸಲು ಸಾಧ್ಯ ಎಂಬುದನ್ನು ಪೂರ್ವಜರು ಪ್ರತಿಪಾದಿಸಿ ಸಫಲ ಜೀವನವನ್ನೂ ಬಾಳಿ ಕೃತಾರ್ಥರಾಗಿದ್ದಾರೆ. ಮಾನವನಿಗೆ ಎಟುಕದ ವಸ್ತು ಏನೂ ಇಲ್ಲ.

ಒಂದು ದೃಷ್ಟಿಯಲ್ಲಿ ಈ ನಾಲ್ಕು ಪ್ರಯತ್ನ ಮಾರ್ಗಗಳು ಹಿಂದೂ ಧರ್ಮದ ಅಡಿಗಲ್ಲು. ಈ ನಾಲ್ಕು ಪ್ರಮಾಣ ಮಾರ್ಗಗಳನ್ನು ಸತ್ವಶಾಲಿಗಳಿಂದ ಅನುಸರಿಸಿ ಬದುಕಿ ಅಂತಿಮ ಕಾಮನೆಯಾದ ಮೋಕ್ಷ ಪದವಿಯನ್ನು ಎಲ್ಲರೂ ಪಡೆಯಬಹುದು.

ಧರ್ಮ:–

ನಮ್ಮ ದೇಶದಲ್ಲಿ ಧರ್ಮಕ್ಕೆ ಕೊಟ್ಟ ಪ್ರಾಧಾನ್ಯ ಜೀವನದ ಬೇರಿನ್ನಾವ ಅಂಗಕ್ಕೂ ಕೊಡಲಿಲ್ಲ. ಹುಟ್ಟಿನಿಂದ ಸಾವಿನ ತನಕ, ಹೆಜ್ಜೆ ಹೆಜ್ಜೆಗೂ ಅಂದರೆ ನಮ್ಮ ಪ್ರತಿಯೊಂದು ಚಿಂತನ, ಮಂಥನ, ಕಾರ್ಯ ಮತ್ತು ಕ್ಷೇತ್ರದಲ್ಲಿ ಧರ್ಮಕ್ಕೆ ಅಗ್ರಗಣ್ಯವಾದ ಪಾತ್ರವಿದೆ. ಮನುಷ್ಯ ಜನ್ಮದ ಹುಟ್ಟಿಗೂ ಧರ್ಮವೇ ಕಾರಣ. ಸಾವಿನ ಬಳಿಕವೂ ಅಂದರೆ ಜಡ ಶರೀರ ಸುಟ್ಟು ಹೋದ ಮೇಲೂ ಅಥವಾ ದಫನ ಮಾಡಿ ಪಂಚಭೂತವನ್ನು ಸೇರಿದ ಮೇಲೂ ಮಾನವನ ಬೆನ್ನು ಬಿಡದೆ ಇರುವ ಏಕೈಕ "ವಸ್ತು" ಧರ್ಮ.

ಹಾಗಾದರೆ ಧರ್ಮವೆಂದರೇನು? ಈ ಶಬ್ದಕ್ಕೆ ಸಾವಿರಾರು ಅರ್ಥ ವ್ಯಾಪ್ತಿಗಳಿವೆ. ಸದ್ಯ ನಮ್ಮ ಈ ಲೇಖನದ ಸಲುವಾಗಿ ಧರ್ಮವೆಂದರೆ ಮೊದಲು ತನ್ನ ಇಹಕ್ಕೂ ಪರಕ್ಕೂ ಅನಂತರ ತನ್ನವರ ಇಹಕ್ಕೂ ಪರಕ್ಕೂ ಬಳಿಕ ಎಲ್ಲರ ಇಹಕ್ಕೂ ಪರಕ್ಕೂ ಸಾಧಕವಾಗುವ, ಯಾರಿಗೂ ಬಾಧಕವಲ್ಲದ ಕರ್ಮಾಂಗ ಮಾರ್ಗವೇ ಧರ್ಮವೆಂದು ನೆಚ್ಚಿಕೊಳ್ಳೋಣ. ಅಂದರೆ ನಾವು ಎಂತಹ ಕೆಲಸವನ್ನು ಮಾಡಿದರೂ ಅದಕ್ಕೆ ಧರ್ಮದ ಚೌಕಟ್ಟು ಇಲ್ಲವಾದರೆ ಅದು ನಿರರ್ಥಕ.

ಅರ್ಥ:–

ಐಶ್ವರ್ಯ ಅಥವಾ ಸಂಪತ್ತು ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಬೇಕಾಗುವ ಅತ್ಯಗತ್ಯ ಸಂಪನ್ಮೂಲ. ಮನುಷ್ಯ ತನ್ನ ಬಹುಮುಖ ಬಾಳನ್ನು ಯಶಸ್ಸಿನಿಂದ ಬೆಳಗಬೇಕಾದರೆ ಅರ್ಥವನ್ನು ಸಂಪಾದಿಸಬೇಕು. ಸಂಪತ್ತು ಇಲ್ಲದೆ ಯಾವ ಕೆಲಸ ಕೈಗೊಂಡರೂ ಅದು ಅಸಂಪೂರ್ಣ. ಆದ್ದರಿಂದ ಯಾವತ್ತೂ ಕಾರ್ಯ ಕ್ರಮದ ಯಶಸ್ಸಿಗೆ ಅಥವಾ ಜೀವನದ ಸಫಲತೆಗೆ ಹಣ

ಶ್ರೀ ಕೆ. ಜಿ. ಹೆಗಡೆ.

ಅರ್ಥ, ಅನರ್ಥ ಮತ್ತು ಪರಾರ್ಥ

ನೂರು ಜನರಿಗೆ ಪ್ರಿಯವಾಗದೆ ಹೋದರೂ ವಿವೇಕವುಳ್ಳ ಒಂದು ಆತ್ಮಕ್ಕೆ ಪ್ರಿಯವಾದರೆ ತನ್ನ ಕೃತಿ ಸಾರ್ಥಕವೆಂದು ತಿಳಿದ ಶ್ರೀ ಹೆಗಡೆಯವರು ಪ್ರಾಚೀನ ಪುರುಷಾರ್ಥಗಳನ್ನೂ ನವೀನ ಅರ್ಥಾನರ್ಥಗಳನ್ನೂ ಸ್ಥೂಲವಾಗಿ ಇಲ್ಲಿ ವಿವೇಚಿಸಿದ್ದಾರೆ.

ಬೇಕು. ಹೀಗಾಗಿ ಧರ್ಮವನ್ನು ಬಿಡದೆ ಕ್ಷಣ ಕ್ಷಣವೂ ಮನುಷ್ಯನು ಅರ್ಥ ಅಥವಾ ಹಣವನ್ನು ಸಂಪಾದಿಸುತ್ತ, ಸಂಗ್ರಹಿಸುತ್ತ, ವ್ಯಯಿಸುತ್ತ ಹೋಗಬೇಕು.

ಕಾಮ:—

ನಾನಾ ವಿಧದ ಕಷ್ಟ ಕಾರ್ಪಣ್ಯಗಳಿಂದಲಾದರೂ ಧನವನ್ನು ಶೇಖರಿಸಿ, ಧನವಂತನಾದರೆ ಮಾತ್ರ ತನ್ನ ಬದುಕಿನ ಕಾಮನೆಗಳನ್ನು ತೀರಿಸಬಹುದು. ಕಾಮನೆಯೆಂದರೆ ಬಯಕೆ. ಮಾನವನೆಂದ ಮೇಲೆ ಆತನಿಗೆ ಏನು ಬೇಡ? ಮನೆ ಬೇಕು. ಮಡದಿ ಬೇಕು. ಮಕ್ಕಳು ಬೇಕು. ಉಣ್ಣಲು ತಿನ್ನಲು, ಉಡಲು, ತೊಡಲು— ಎಲ್ಲಾ ಬೇಕು. ಇವೆಲ್ಲ ಸಾಮಾನ್ಯ ಅಥವಾ ಸಹಜ ಬಯಕೆಗಳು. ಇವುಗಳ ಹೊರತು ಧನಾರ್ಥಗಳಲ್ಲಿ ಶ್ರೀಮಂತನಾದ ಮನುಷ್ಯ ಇನ್ನೆಷ್ಟೋ ಸುಖಾವಪೂರ್ಣ ಅವಸ್ಥೆಗಳನ್ನು ಅನುಭವಿಸಬಹುದು ಈ ಸಂದರ್ಭದಲ್ಲಿ ಕಾಮ ಅಂದರೆ ಬರೇ ಲೈಂಗಿಕ ಆಸೆಯ ಪೂರ್ತಿಯಲ್ಲ. ಲೈಂಗಿಕ ಆಸೆ ಅಭಿಲಾಷೆಯನ್ನೊಳಗೊಂಡು ಮಿಕ್ಕೆಲ್ಲ ಕಾಮನೆಗಳಿಗೂ ಧರ್ಮಾರ್ಥ ಸಂಬಂಧವಿದ್ದರೆ ಮಾತ್ರ ಅದು ಪರಿಶುದ್ಧವಾಗುತ್ತದೆ. ಪವಿತ್ರವೂ ಪರಿಪೂರ್ಣವೂ ಆಗುತ್ತದೆ.

ಮೋಕ್ಷ:—

ಮೋಕ್ಷವೆಂದರೆ ಬದುಕಿನ ಅಂತಿಮ ಕ್ಷೇತ್ರ ಅಥವಾ ಕೊನೆಯ ಕಾಮನೆ. ಇದನ್ನು ಕೆಲವರು ಇಹ ಜೀವನದ ಅಂತಿಮ ಘಟ್ಟವೆಂದೂ ಪರಲೋಕ ಜೀವನದ ನಿಷ್ಕ್ರಿಯ ನಿಶ್ಚಿಂತನಗಳ ಸೋಪಾನವೆಂದೂ ಕರೆಯುವರು. ಅರ್ಥವಿಷ್ಟೆ. ಸ್ವರ್ಗ–ನರಕಗಳೆಂಬ ಅವಸ್ಥೆಗಳು ಮರಣಾನಂತರ ಇಲ್ಲವೆಂದು ಬಗೆಯುವ ತಾರ್ಕಿಕರು ಇದೇ ಜೀವನದಲ್ಲಿ ಮೋಕ್ಷವನ್ನು ಅನುಭವಿಸಬಹುದು ಎನ್ನುತ್ತಾರೆ. ಇಲ್ಲಿನ ಜೀವನ ನೀರಿನ ಮೇಲಿನ ಗುಳ್ಳೆಯಂತೆ! ನಾಲ್ಕು ದಿನದ ಬಾಳು ಅಥವಾ ಗೋಳು! ಪರಲೋಕ ಚಿಂತನ ಮತ್ತು ಪರಮಾನಂದ ಸಾಂತ್ವನವೇ ಮೋಕ್ಷವೆಂದು ನಂಬುವರು. ಪರಲೋಕದ ಶಾಶ್ವತ ಸುಖ ಸೌಲಭ್ಯಗಳಿಗೆ ಧರ್ಮಾರ್ಥ ಕಾಮಗಳ ಸಂಯಮ ಬೇಕು. ಸಮಗ್ರ ಜೀವ ಕೋಟಿಗಳ ಕಲ್ಯಾಣವೇ ಮೋಕ್ಷಕ್ಕೆ ದಾರಿಯೆಂದು ಬಗೆದು ನಿಸ್ವಾರ್ಥ ಜೀವನವನ್ನು ಬಾಳಿ ಧರ್ಮಾರ್ಥ ಕಾಮಗಳ ವ್ಯಯವೇ ಮೋಕ್ಷ. ಹೀಗೆಲ್ಲ ನಾಲ್ಕು ಪುರುಷಾರ್ಥಗಳ ವಿಚಾರ ಅಥವಾ ವಿವೇಚನೆಯನ್ನು ಮಾಡಬಹುದು.

ನಾವೆಲ್ಲ ಆಧುನಿಕತೆಗೆ ಕಟ್ಟುಬಿದ್ದ ನವಯುಗದ ನಾಗರಿಕರು. ಕಲಿಯುಗದಲ್ಲಿ ಅಜ್ಜ ನೆಟ್ಟ ಗೋಳೀ ಮರಕ್ಕೆ ಮನ್ನಣೆಯಿಲ್ಲ; ಬೆಲೆಯಿಲ್ಲ! ಸಾವಿರಾರು ವರ್ಷಗಳಿಂದ, ಋಷಿ, ಮುನಿಗಳಿಂದ ಸಾಧುಸಂತರಿಂದ, ಧರ್ಮಗುರುಗಳಿಂದ ಅವ್ಯಾಹತವಾಗಿ ಬಂದ ನೀತಿ ಮಾರ್ಗ, ಧರ್ಮ ಮಾರ್ಗ ಮತ್ತು ಜೀವನ ಮಾರ್ಗಗಳು ನಮಗೆ ನುಂಗಲಾರದ ತುತ್ತಾಗಿವೆ. ಧರ್ಮ ಶಾಸ್ತ್ರ ಪಠನ, ಮನನ, ಚಿಂತನಗಳು ನಮ್ಮ ಇಹಜೀವನದ ಶಾಂತಿಗೆ ಬೇಕಾಗಿಲ್ಲ. ವಿದ್ಯೆ ವಿನಯಗಳು ಉದರಂಭಣೆಗೆ ಮಾತ್ರ. ಆತ್ಮಜ್ಞಾನ ವಿಕಸನ ಮತ್ತು ಸತ್ಯಾನ್ವೇಷಣೆ ಅಥವಾ ಶೋಧನೆ ಜನರಿಗೆ ಬೇಕಾಗಿಲ್ಲ. ಧರ್ಮವನ್ನು ಬಿಟ್ಟುಕೊಟ್ಟು ನಮಗೆ ಧನ ಅಥವಾ ಅರ್ಥ ಮಾತ್ರ ಪ್ರಾಣಕ್ಕಿಂತಲೂ ಅಮೂಲ್ಯ. ದುಡ್ಡಿದ್ದವನೇ ದೊಡ್ಡಪ್ಪನಾದ ಈ ಜಗತ್ತಿನಲ್ಲಿ ಜನರು ದುಷ್ಕರ್ಮಗಳಿಂದಲಾದರೂ ಸಂಪತ್ತನ್ನು ಶೇಖರಿಸುವಲ್ಲಿ ಏನೂ ಆಶ್ಚರ್ಯವಿಲ್ಲ. ಪ್ರಾಯಃ ಈ ಕಲಿಕಾಲದಲ್ಲಿ ಶ್ರೀ ಧನ ಲಕ್ಷ್ಮಿಯ ದುರಾಚಾರ ಆರಾಧಕರು ಇದ್ದಷ್ಟು ಬೇರಾವ ಯುಗ ಕಲ್ಪಗಳಲ್ಲೂ ಇರಲಿಕ್ಕಿಲ್ಲ. "ಸರ್ವೇಗುಣಾಃ ಕಾಂಚನಂ ಆಶ್ರಯಂತಿ" ಎಂಬ ಸಂಸ್ಕೃತ ನಾಣ್ನುಡಿ ಶೇಕಡಾ ನೂರ ಒಂದು ಪಾಲು ಸತ್ಯ.

ಇಂತಹ ಸುಗಮ ಜೀವನದ ಸಾತ್ವಿಕ ಮತ್ತು ಸಾರ್ಥಕ ತತ್ವ ಬುನಾದಿಯ ಸಾಂಸ್ಕೃತಿಕ ಭಂಡಾರ ನಮಗಿದ್ದರೂ ನಾವು ಅವಕ್ಕೆಲ್ಲ ಈಗ ನವೀನ ಅರ್ಥವನ್ನು ಕಲ್ಪಿಸಿ ಕೊಂಡಿರುತ್ತೇವೆ. ನೀತಿ, ನಿಯಮ, ಧರ್ಮ ಮುಂತಾದ "ಸದಾಚಾರ ಸಾಂಸ್ಕೃತಿಕ ಮಾರ್ಗಗಳನ್ನು ತೊರೆದು ಯದ್ವಾತದ್ವಾ ನವ ಸಮಾಜದ ನಿರ್ಮಾಣವನ್ನು ಮಾಡುತಿದ್ದೇವೆ. ಈ ಎಲ್ಲ ತುಮುಲ ಯುದ್ಧದಲ್ಲಿ ನಮಗೆ ಎದ್ದು ಕಾಣುವ ಅರ್ಥಾನರ್ಥ, ಸ್ವಾರ್ಥ ಮತ್ತು ಪರಾರ್ಥ ಅಥವಾ ಸತ್ಯಾರ್ಥಗಳ ಕೆಲವು ಸೀಮಾ ವ್ಯಾಖ್ಯೆಗಳನ್ನು ಇಲ್ಲಿ ಚರ್ಚಿಸಿ ಸಮಸ್ಯೆಗಳಿಗೆ ಸುಲಭೋಪಾಯಗಳನ್ನು ಸೂಚಿಸಲಾಗಿದೆ.

ನವೀನ ಅರ್ಥ:–

ಪ್ರಚಲಿತ ಜೀವನವನ್ನು ಒರೆಗಲ್ಲಿಗೆ ಹಚ್ಚಿ ನೋಡುವಾಗ ಅರ್ಥ ಮತ್ತು ಅನರ್ಥಗಳ ದ್ವಂದ್ವ ಯುದ್ಧ ಕಣ್ಣಿಗೆ ಗೋಚರಿಸುತ್ತದೆ. ಅರ್ಥಾತ್ ಇಂದಿನ ಸಮಾಜವನ್ನು ಅಥವಾ ಜನ ಜೀವನವನ್ನು ಅರ್ಥ ಇದ್ದವರು ಮತ್ತು ಅರ್ಥ ಇಲ್ಲವೆ ಹಣಕಾಸಿಲ್ಲದವರು (Haves and have nots) ಎಂದು ಸಾಮಾನ್ಯವಾಗಿ ವಿಂಗಡಿಸಬಹುದು. ಒಂದು ಶ್ರೀಮಂತ ವರ್ಗ, ಇ

(ಮೂವತ್ತೈದನೇ ಪುಟ ನೋಡಿರಿ)

ಒಂದು ಹೆಜ್ಜೆ ಮುಂದೆ; ಎರಡು ಹೆಜ್ಜೆ ಹಿಂದೆ

(ಹದಿನೆಂಟನೇ ಪುಟದಿಂದ)

ನಕ್ಷರಸ್ಥರ ಒಟ್ಟು ಸಂಖ್ಯೆಯು ನೂರ ಮೂವತ್ತೊಂದು ಮಿಲಿಯದಿಂದ ನೂರ ಐವತ್ತು ಮಿಲಿಯಕ್ಕೇರಿತು! ದುಡಿಯುವ ಶ್ರಮಜೀವಿಗಳ ಅಕ್ಷರತೆಯ ಪ್ರಮಾಣವು ಇಳಿಮುಖವಾಗುವ ಲಕ್ಷಣಗಳೇ ತೋರುವುದಿಲ್ಲ. ೧೯೮೧ರಲ್ಲಿ ಅಕ್ಷರಸ್ಥರ ಪ್ರಮಾಣವು ಶೇಕಡಾ ಐವತ್ತರಷ್ಟಾಗುವ ಅಂದಾಜು ಮಾಡಲಾಗಿದೆ. ಆದರೆ ಆಗ ಅನಕ್ಷರಸ್ಥರ ಸಂಖ್ಯೆಯು ಮುನ್ನೂರ ಐವತ್ತೆಂಟು ಮಿಲಿಯವಾಗುವುದು!

ಭಾರತವು ಸ್ವತಂತ್ರವಾದ ಇಪ್ಪತ್ತಮೂರು ವರ್ಷಗಳ ಬಳಿಕವೂ ಅಕ್ಷರತೆಯ ಪ್ರಗತಿ ಮಂದಗತಿಯಲ್ಲಿ ಸಾಗಿದೆ. ಅದು ಶೇಕಡಾ ಹದಿನಾಲ್ಕರಿಂದ ಶೇಕಡಾ ಮೂವತ್ತೈದರಷ್ಟು ಏರಿಕೆಯನ್ನು ಹೊಂದಿದೆಯಾದರೂ ದೇಶದ ಅವಶ್ಯಗಳ ದೃಷ್ಟಿಯಿಂದಲೂ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯ ದೃಷ್ಟಿಯಿಂದಲೂ ಅಕ್ಷರತೆಯ ಪ್ರಮಾಣ ಬಹಳವಾಗಿ ಹಿಂದುಳಿದಿದೆ. ಅಕ್ಷರತೆಯು ಪ್ರತಿವರ್ಷ ಶೇಕಡಾ ಒಂದರಷ್ಟು ಅಧಿಕಗೊಳ್ಳುತ್ತಿದೆ; ಜನಸಂಖ್ಯೆಯ ಹೆಚ್ಚಳವು ಶೇಕಡಾ ಎರಡಕ್ಕಿಂತಲೂ ಮಿಕ್ಕಿ ಅಧಿಗಗೊಳ್ಳುತ್ತಿದೆ. ಪ್ರತಿ ದಶಕದಲ್ಲಿಯೂ ಅಕ್ಷರಸ್ಥರಿಗಿಂತ ಅನಕ್ಷರಸ್ಥರ ಸಂಖ್ಯೆಯು ಹೆಚ್ಚುತ್ತಿದೆ. ಈ ವಿಷಮ ಪರಿಸ್ಥಿತಿಯಿಂದ ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ಭಾರತವು ತೀವ್ರಗತಿಯ ಪ್ರಗತಿಯನ್ನು ಸಾಧಿಸಲು ಅಸಮರ್ಥವಾಗಿದೆ. ಇದೊಂದು ವಿಷವೃತ್ತ—ಚರಿತ್ರೆಯ ಚಕ್ರವ್ಯೂಹ. ಈ ಚಾರಿತ್ರಿಕ ಚಕ್ರವ್ಯೂಹವನ್ನು ಒಡೆಯುವ ಪ್ರಯತ್ನ ಇನ್ನೂ ನಡೆದಿಲ್ಲ. ದಿನ ನಿತ್ಯವೆಂಬಂತೆ ಮುಂದಾಳುಗಳು, ಪ್ರತಿಯೊಂದು ಪೇಟೆ ಪಟ್ಟಣದ ಮುಖಂಡರು ಶಿಕ್ಷಣ ಪದ್ಧತಿಯ ನೂರಾರು ನ್ಯೂನತೆಗಳ ಬಗ್ಗೆ ಭಾಷಣ ಮಾಡುವರು. ಅದರ ಕುಂದು ಕೊರತೆಗಳ ಬಗ್ಗೆ ಕಟುವಾದ ಟೀಕೆಯನ್ನು ಮಾಡುವರು. ಶಿಕ್ಷಣದ ಆದರ್ಶಗಳ ಲೋಪದೋಷಗಳ ಬಗ್ಗೆಯೂ ಚರ್ಚೆ ನಡೆಯುವುದು. ಇಳಿಮುಖವಾಗುವ ಶಿಕ್ಷಣದ ಮಟ್ಟಗಳ ಬಗ್ಗೆಯಂತೂ ಕೊನೆಯಿಲ್ಲದ ಮಾತುಗಳ ಸುರಿಮಳೆ ನಿತ್ಯ ನಡೆಯುತ್ತಿದೆ. ಅಲ್ಲೊಂದು ಇಲ್ಲೊಂದು ಹೊಸ ಪ್ರಯೋಗಗಳ ಕುರಿತೂ ನಾವು ನಿತ್ಯ ಕೇಳುತ್ತಿದ್ದೇವೆ. ಅನುಕರಣೆಯಂತೂ ನಿತ್ಯದ ನಡವಳಿಕೆಯಾಗಿದೆ.

ಭಾರತದ ಜನರು—ಭಾರತದ ಸರ್ಕಾರ—ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಶಿಕ್ಷಣ ಪದ್ಧತಿಯ ಪುನರ್ರಚನೆಯನ್ನು ಮಾಡದಿದ್ದಲ್ಲಿ, ಸಾರ್ವತ್ರಿಕ ಶಿಕ್ಷಣದ ಆದರ್ಶವನ್ನು ತನ್ನ ರಾಷ್ಟ್ರೀಯ ಧೋರಣೆಯನ್ನಾಗಿ ಮಾಡದಿದ್ದಲ್ಲಿ ಮುಂದಿನ ದಶಕಗಳಲ್ಲಿ ಭಾರತವು ಪ್ರಗತಿಯನ್ನು ಸಾಧಿಸುವ ಅವಕಾಶಗಳು ಮತ್ತೂ ಕಡಿಮೆಯಾಗಬಹುದು. ನಾವು ಒಂದು ಹೆಜ್ಜೆ ಮುಂದಿಡಬಹುದು; ಆದರೆ ಪರಿಸ್ಥಿತಿಗಳು ಎರಡು ಹೆಜ್ಜೆ ಹಿಂದಿಡಲು ನಮ್ಮನ್ನು ಒತ್ತಾಯಿಸಬಹುದು.

ರಾಷ್ಟ್ರಕ್ಕೆ ನಮ್ಮ ಶಿಸ್ತಿನ ಆವಶ್ಯಕತೆ ಎಷ್ಟು?

(ಹದಿನೆಳನೇ ಪುಟದಿಂದ)

ಪಾಲನೆಯಲ್ಲಿ ಹೆಚ್ಚು ಪಾಲುಗೊಳ್ಳುವದು ಲೋಕವ್ಯವಹಾರಕ್ಕೆ ಹೆಚ್ಚು ಸಹಾಯಕ.

ಯಾರು ಹೇಗಿರಬೇಕು ಎನ್ನುವದರ ಆಳತೆಯನ್ನು ನಿರ್ದೇಶಿಸುವದೇ ಶಿಸ್ತು. ಇದನ್ನು ಬಿಟ್ಟಾಗ ನಾವು ನಮ್ಮ ಆಳತೆ ತಪ್ಪಿ ವರ್ತಿಸಿದ ಹಾಗೆ. ಆದರಿಂದ ಕೇವಲ ನಮಗಷ್ಟೇ ಅಲ್ಲ, ನಮ್ಮಿಂದ ಜನಕ್ಕೂ ಲೋಕಕ್ಕೂ ತೊಂದರೆ ತಂದ ಹಾಗೆ. ಪರಸ್ಪರ ವ್ಯವಹಾರ–ವ್ಯವಸ್ಥೆಯಲ್ಲಿ ಗೊಂದಲ. ಅನಾದಿಯಿಂದಲೂ ಈ ಶಿಸ್ತಿನ ಬುನಾದಿಯ ಮೇಲೆ ನಾವು ಬೆಳೆಯುತ್ತ ಬಂದಿದ್ದೇವೆ.

ಅಪಾಯಕ್ಕೆ ಆಹ್ವಾನ

ಸಾಧ್ಯವಾದಷ್ಟು ನಾವು ಅಪಾಯ ತಪ್ಪಿಸಿಕೊಂಡು ಸುರಕ್ಷಿತತನ ಬೆಳೆಸುವದಕ್ಕೆ ಈ ಶಿಸ್ತು ಕಾರಣವಾಗಿದೆ. ಇಬ್ಬರು ಪ್ರಯಾಣಿಕರೂ ತಮ್ಮ ವಾಹನಗಳನ್ನು ಒಂದೇ ದಿಕ್ಕಿನಲ್ಲಿ ಸಾಗಿಸಿದರೆ ಅಪಾಯವಾಗದೇ ಇದ್ದೀತೇ? ಅಲ್ಲಿ ಇಬ್ಬರೂ ಪ್ರಯಾಣದ ಶಿಸ್ತನ್ನು–ನೀತಿಯನ್ನು ಅರಿಯಬೇಕು. ಅಂದರೆ ಮಾತ್ರ ಅಪಾಯ ತಪ್ಪುತ್ತದೆ. ಇಲ್ಲದಿದ್ದರೆ ಅಪಾಯಕ್ಕೆ ನಾವೇ ಆಹ್ವಾನ ನೀಡಿದಂತೆಯೇ, ಅಲ್ಲವೇ?

ಹೀಗೆಯೇ ಇನ್ನುಳಿದ ಎಲ್ಲ ವ್ಯವಹಾರಗಳಲ್ಲಿಯೂ ಈ ಶಿಸ್ತು ಉಲ್ಲಂಘನೆಯಿಂದ ಅಪಾಯ ಸಂಭವಿಸಬಹುದೆಂದು ತಿಳಿಯಬೇಕು. ಕೆಲವು ಪ್ರತ್ಯಕ್ಷವಲ್ಲದಿದ್ದರೂ ಅಪ್ರತ್ಯಕ್ಷವಾಗಿ ಅದರ ಪರಿಣಾಮವಾಗುತ್ತದೆ. ಲೋಕದ ನಡತೆಗೆ ಯಾವುದು ಅಪೇಕ್ಷಣೀಯವೋ ಅದೇ ಅಂದಿನ ರೀತಿಯಾಗುತ್ತದೆ. ಅಂದಿನ ಶಿಸ್ತಾಗುತ್ತದೆ. ಅದನ್ನು ಅತಿಕ್ರಮಿಸುವದು ಲೋಕದ ದೃಷ್ಟಿಯಿಂದ ಪಾಪವೇ ಎನ್ನಬೇಕು.

ಶಿಸ್ತಿಗೆ ಅಸ್ತು.

ಶಿಸ್ತಿನ ಬಗ್ಗೆ ನಾವಿಷ್ಟು ಜಾಗ್ರತರಾಗಿರಬೇಕಾದರೆ ಇಂದು ಇದಕ್ಕೆ ಎಷ್ಟರ ಮಟ್ಟಿಗೆ ಅಸ್ತು ಎನ್ನುತ್ತಿದ್ದೇವೆ ಎನ್ನುವದೇ ಮುಖ್ಯವಾಗಿದೆ. ಲೋಕ ಜೀವನದಲ್ಲಿಯ ಅನೇಕ ವಿದ್ಯಮಾನಗಳನ್ನು ನಿರೀಕ್ಷಿಸಿದಾಗ ಇವರ ಪ್ರತ್ಯಕ್ಷ ಪರಿಚಯವಾಗುತ್ತದೆ.

ವ್ಯಕ್ತಿ—ವ್ಯಕ್ತಿಗಳಲ್ಲಿ ಪರಸ್ಪರ ಸಂಘರ್ಷಣೆ, ದೂಷಣೆ, ಆಕಸ್ಮಿಕ ಅವಘಡಗಳು ಸ್ವಚ್ಛಂದ ಪ್ರವೃತ್ತಿ ಇವೆಲ್ಲ ನಮ್ಮ ಶಿಸ್ತುಗೇಡಿತನದ ನಿದರ್ಶನಗಳೆಂದರೆ ತಪ್ಪಾಗಲಾರದು. ಯಾರಿಗೂ ಯಾರೂ ಏನೂ ಹೇಳುವಂತಿಲ್ಲ. ಅಷ್ಟೊಂದು ಸ್ವಾಭಿಮಾನದ ಭಾವನೆ, ವಿದ್ಯಾರ್ಥಿಯ ಶಿಸ್ತನ್ನು ಗುರುವು ಪ್ರಶ್ನಿಸುವಂತಿಲ್ಲ, ಹೆಂಡತಿಯ ಶಿಸ್ತನ್ನು ಗಂಡನು ಕೇಳುವಂತಿಲ್ಲ, ಹೀಗೆ ನಡೆದಿದೆ; ಅವರಿಗೆ ಬೇಕು ಬೇಕಾದಂತೆ ವರ್ತಿಸುವದೇ ಶಿಸ್ತು ಎನ್ನುವ ಕಲ್ಪನೆ ಹೀಗಾದರೆ ಲೋಕಾಪೇಕ್ಷವಾದ ನಡತೆಗೆ ಯಾವ ಬೆಲೆ? ಎಲ್ಲಿ ನೆಲೆ?

ಈ ಶಿಸ್ತುಗೇಡಿತನದ ಪರಿಚಯ ದಿನವೂ ಆಗುತ್ತಿದೆ. ನಮ್ಮಲ್ಲಿ ಅರ್ಥವೇ ಇಲ್ಲದ ಮುಷ್ಕರಕ್ಕೇನೂ ಕೊರತೆಯಿಲ್ಲ. ಯಾರಿಗೆ ಏನಾಗಿದೆ? ಯಾಕೆ ಮಾಡಬೇಕು? ಇವುಗಳ ಕಲ್ಪನೆಯೇ ಇಲ್ಲದೆ ಅಂತೂ ಮುಷ್ಕರ ನಡೆಯಬೇಕು. ದೇಶದ ಪಿತ್ತ ಸೊತ್ತುಗಳ ಆಹುತಿಯಾಗಬೇಕು. ಇದರಿಂದ ಯಾವ ದೇಶಕ್ಕೆ, ಯಾರಿಗೆ ನಷ್ಟ ಬರುತ್ತಿದೆ ಎಂಬುದನ್ನಾದರೂ ಸೂಕ್ಷ್ಮವಾಗಿ ವಿಚಾರಿಸುತ್ತಾರೆಯೇ? ಪ್ರಶ್ನೆ ಪತ್ರಿಕೆ ಬಿಗಿಯಾದರೆ ಮುಷ್ಕರ ಮಾಡುವಷ್ಟು ನಮ್ಮಲ್ಲಿಯ ವಿದ್ಯಾರ್ಥಿಗಳು ಮುಂದರಿದರೆ ಶಿಸ್ತಿನ ಜೀವನಕ್ಕೆ ನಾವು ಯಾವ ಬೆಲೆ ಇರಿಸಿಕೊಂಡಿದ್ದೇವೆ?

ಅನೇಕ ಸಾರಿ ಶಿಸ್ತಿನ ರೀತಿ–ನೀತಿಗಳನ್ನು ಅಂದಿನ ಮಹಾಜನರ ನಡತೆಯಿಂದ ಕಲಿಯಬೇಕೆಂದು — ಅರಿಯಬೇಕೆಂದು ಸುಭಾಷಿತ ಹೇಳುತ್ತದೆ. ಅಂದರೆ ಅವರೇ ಮಹಾತ್ಮರು. ಅರ್ಥಾತ್ ಶಿಸ್ತುಳ್ಳ ಜೀವನವೇ ಆದರ್ಶ ಜೀವನ. ಆದರೆ ಇಂದು ಅಂಥವರೇ ಶಿಸ್ತು ಉಲ್ಲಂಘನೆಗೆ ಅರ್ಹತೆಗಳಿಸಿ ಮುಂದಾಗುತ್ತಿದ್ದಾರೆ. ಆತ್ಮಸಾಕ್ಷಿ ನಮ್ಮ ಶಿಸ್ತಿನ ಸ್ವರೂಪ ದರ್ಶನ ಮಾಡಿಸಬೇಕೇ? ಅದು ಬೇಕು ಬೇಕಾದಂತೆ ತಮಗೆ ಹೊಂದಿಕೆಯಾಗುವ ಹಾಗೆ ಅದು ಪರಿವರ್ತನೆಯಾಗುತ್ತಿದ್ದರೆ ಅದು ರಾಷ್ಟ್ರಕ್ಕೆ ಕ್ಷೇಮಕರವೇ? ನೆಮ್ಮದಿ ತರಬಹುದೇ?

ಆತ್ಮ ಸಾಕ್ಷಿಯ ಇತಿ ಮಿತಿ

ಶಿಸ್ತಿನ ಸ್ಥಾನ ಮಾನಗಳನ್ನು ಇಂದು ಆತ್ಮ ಸಾಕ್ಷಿಗೆ ಕೊಡಲಾಗಿದೆ. ಆತ್ಮ ಸಾಕ್ಷಿಯಂತೆ ವರ್ತಿಸಿದರೆ ಅದು ಶಿಸ್ತು ಪಾಲನೆಯಾದಂತೆ ಎಂಬುದು ಅವರ ಮನಃಸಾಕ್ಷಿ. ಆದರೆ ಈ ಸಾಕ್ಷಿಗಳಿಗೆ ಏನಾದರೂ ಒಂದು ಇತಿಮಿತಿಯಿದೆಯೇ ಎನ್ನುವದೇ ಒಂದು ಪ್ರಶ್ನೆ. ಆತ್ಮಸಾಕ್ಷಿಯಂತೆ ವರ್ತಿಸುವದು ಅಪರಾಧವಲ್ಲವೆಂತಾದರೆ ಯಾರು ಹೇಗೆ ಬೇಕಾದರೂ ವರ್ತಿಸುವದಕ್ಕೆ ಅನುಮತಿ ಸಿಕ್ಕಂತೆ. ಕಳುವು ಮಾಡಿದವನೂ ತನ್ನ ಆತ್ಮಸಾಕ್ಷಿಯಾಗಿ ಮಾಡಿದೆನ್ನಬಹುದು. ಆಗ ಅವನನ್ನು ಅಪರಾಧಿಯಲ್ಲವೆಂದು ತಿಳಿಯದೇ ಇರಲಾದೀತೆ? ಪ್ರಧಾನಿ ಇಂದಿರಾ ನೀತಿಯಂತೆ ಆತ್ಮಸಾಕ್ಷಿಗೇ ಹೆಚ್ಚು ಬೆಲೆ. ಅಂದಾಗ ಆತ್ಮಸಾಕ್ಷಿ ಅಪರಾಧವಲ್ಲ!

ನಮ್ಮಲ್ಲಿಂದು ಎಷ್ಟೋ ಜನರಿಗೆ ಆತ್ಮವೇ ಇಲ್ಲ. ಆತ್ಮ ಶೋಧನೆ ಮಾಡಿಕೊಂಡರೆ ಮಾತ್ರ ಆತ್ಮದ ಅರಿವು. ಇಲ್ಲದಿದ್ದರೆ ಮರೆವು. ಇದೂ ಹಾಗೆಯೇ ಆಗಿದೆ. ಮನಸ್ಸಿಯಾಗಿ ವರ್ತಿಸುವದಕ್ಕೆ ಇದೊಂದು ಸೋಗು, ಮುಸುಕು, ಶಿಸ್ತಿನ ಕಟ್ಟು ಪಾಡುಗಳು ಇಲ್ಲದಿದ್ದರೆ ರಾಷ್ಟ್ರ ಜೀವನಕ್ಕೆ ಭವಿಷ್ಯ ನಿರ್ಮಾಣ ಮಾಡಲು ಸಾಧ್ಯವಿದೆಯೇ? ಎಲ್ಲರೂ ಆತ್ಮ ಸಾಕ್ಷಿಯಂತೆ ವರ್ತಿಸುವಂತಾದರೆ ಜೀವನ ವ್ಯವಸ್ಥೆ ಹದಗೆಡದೆ ಇದ್ದೀತೆ?

ಶಿಸ್ತು ಭಂಗ

ನಾವು ಶಿಸ್ತಿಲ್ಲದ ಜನಾಂಗದವರಾದರೆ ಯಾವ ಆದರ್ಶವನ್ನೂ ಸಾಧಿಸಲಾರೆವು. ಹಾಗಾಗಿ ಶಿಸ್ತಿನ ಬಳಕೆ ಭಯ ಯಾವಾಗಲೂ ಇರಬೇಕೆಂಬ ಕಾರಣಕ್ಕಾಗಿ ಅದನ್ನು ಅತಿಕ್ರಮಿಸಿದವರನ್ನು ಶಿಸ್ತಿನ ಕ್ರಮಕ್ಕೆ ಗುರಿಪಡಿಸುವ ಪರಿಪಾಠ ಹಾಕಿಕೊಂಡಿದ್ದೇವೆ.

ಆದರೆ ಈ ಪಾಠ ಪಾಠವಲ್ಲಿಯೇ ಉಳಿದರೆ ನಾವೇನು ಕಲಿತಂತಾಗುತ್ತದೆ! ಯಾವ ವ್ಯಕ್ತಿಗಾಗಲೀ ಪಕ್ಷಕ್ಕಾಗಲೀ ಶಿಸ್ತು ಭಂಗ ಶೋಭಿಸುವದಿಲ್ಲ. ಹೆಚ್ಚೆಚ್ಚು ಶಿಸ್ತು ಭಂಗವಾದರೆ ಅಲ್ಲಿ ಅಷ್ಟಷ್ಟು ಅಸ್ಥಿರತೆ-ಅನೈಕ್ಯತೆಯಾಗಿದೆಯೆಂದು ತಿಳಿಯಬಹುದು. ದಿನಕ್ಕೊಂದು ವೇಷ ಧರಿಸಿ ದಿನಕ್ಕೊಂದು ಪಕ್ಷ ಸೇರುವ ಶಿಸ್ತುಗೇಡಿಗಳನ್ನು ಸಮಾಜ ಬಹಿಷ್ಕರಿಸಬೇಕು.

ಸಂಸ್ಕೃತಿ–ಸಂಸ್ಕಾರ

ಶಿಸ್ತು ಮಾನಸಿಕ ಸಂಸ್ಕಾರದ ಒಂದು ಕ್ರಿಯೆ. ಅದು ದೊರಕಿದಾಗ ಮನಸ್ಸು ಲೋಕಾನುಭವಗಳಿಸುವದಕ್ಕೆ ಮುಂದಾಗುತ್ತದೆ. ತನ್ನತನ ಅರಿತುಕೊಂಡು ತನ್ನ ಇತಿ–ಮಿತಿಗಳನ್ನು ರೂಪಿಸಿಕೊಂಡು ಸಾಗುತ್ತದೆ. ಆಗ ಅಂಥ ವ್ಯಕ್ತಿ ವ್ಯಕ್ತಿಗಳಿಂದ ಯಾವ ಪ್ರತಿಕೂಲವೂ ಇಲ್ಲದೇ ಅಬಾಧಿತ ಸುರಕ್ಷಿತ ಜೀವನ ಸಾಗುತ್ತವೆ.

ಕೇವಲ ಮೈಗೆ ಶಿಸ್ತಿನ ಅಲಂಕಾರವಾದರೆ ಸಾಲದು. ಮೈಗೆ ಅವಶ್ಯವಿರುವಷ್ಟೇ ಮನಸ್ಸಿಗೂ ಇದೆ. ಶಿಸ್ತುಳ್ಳ ಸೈನ್ಯವು ಹೇಗೆ ಅಭೇದ್ಯವೋ ಹಾಗೆ ಶಿಸ್ತುಳ್ಳ ವ್ಯಕ್ತಿಯ ಜೀವನದ ಕೋಟೆಯೂ ಅಷ್ಟೇ ಅಭೇದ್ಯ. ಯಾವ ಆಶೆ–ಆಮಿಷಕ್ಕೂ ಅದು ಒಡೆಯಲಾರದು.

ರಾಷ್ಟ್ರ ಜೀವನದಲ್ಲಿ ಶಿಸ್ತು ಪಾಲನೆಯೆಂದರೆ ಧರ್ಮ ಪಾಲನೆ ಮಾಡಿದ ಹಾಗೆ. ಧರ್ಮವು ನಮ್ಮನ್ನು ರಕ್ಷಿಸಿದ ಹಾಗೆ, ಅದು ನಮ್ಮನ್ನೂ ದೇಶವನ್ನೂ ರಕ್ಷಿಸುತ್ತದೆ. ಅದನ್ನು ಬಿಟ್ಟರೆ ನಾವು ಅರಕ್ಷಿತರಾದಂತೆ.

ನಮ್ಮ ಸಂಸ್ಕೃತಿ ಈ ಶಿಸ್ತಿನ ಸಂಸ್ಕಾರವನ್ನು ಮೈಗೂಡಿಸುತ್ತಲೇ ಬಂದಿದೆ. ಶಿಸ್ತು ಜೀವನಕ್ಕೊಂದು ಬೆಳಕು–ಇದ್ದ ಹಾಗೆ, ನಾವು ನಮ್ಮ ರಾಷ್ಟ್ರ, ಪಕ್ಷಿಗಳು ಅಬಾಧಿತವಾಗಿ ಚಾರಿತ್ರ್ಯಯುಕ್ತವಾಗಿ ಬೆಳೆಯ ಬೇಕಾದರೆ ಅದು ಶಿಸ್ತಿನಿಂದಲೇ ಸಂಘಟಿಸಲ್ಪಡಬೇಕು. ಯಾವ ಕ್ಷೇತ್ರದಲ್ಲೇ ಆದರೂ ಶಿಸ್ತಿಲ್ಲದಿದ್ದರೆ ಅಲ್ಲಿಯ ಪ್ರಗತಿ–ಪ್ರತಿಷ್ಠೆ ಅಸಾಧ್ಯ. ಹಾಗಾಗಿ ರಾಷ್ಟ್ರದ ಶಿಸ್ತು ಪಾಲನೆಯಲ್ಲಿ ನಮ್ಮ ಪಾಲುಗಾರಿಕೆ ಹೆಚ್ಚಾದಷ್ಟು ರಾಷ್ಟ್ರಕ್ಕೆ ಹಿತಕಾರಿ, ನೆಮ್ಮದಿ.

ಸ್ವಾಗತ

ಸ್ವಾಗತ ಗೈವೆವು ಸಂಭ್ರಮದಿಂದಲಿ
ಭಾರತ ಭಾಗ್ಯದ ಉಷಾ—ಉದಯದಿ

ಹಿಮಗಿರಿ ಶಿಖರ ಪ್ರ-ದಕ್ಷಿಣ ಸೇತು
ಪಶ್ಚಿಮ ಪೂರ್ವ ಪ್ರಭಾ ಹರ್ಷಾ
ನಗುವೊಗ ಮಲ್ಲಿಗೆಯರಳಿಸಿ
ಪಡೆಯಲು
ಧ್ವಜದಡಿಯಲಿ ಭಾರತ ವರ್ಷಾ!

ಗಂಗಾ ಯಮುನಾ ಸಂಗಮದೆಲವಿಗೆ
ಬೆರೆಯಿತು ಕನ್ನಡ ರಸಗಂಗಾ
ಭಾವೈಕ್ಯದ ಹಿರಿ ಹೊನಲಲಿ
ಹರಿಯಿತು
ಚೈತನ್ಯದ ಅಮೃತ ರಂಗಾ!

ಮೊಳಗಿದೆ ಸಪ್ತ ಸಮುದ್ರ ದಿಗಂತದಿ
ಭಾರತ ಜನನಿಯ ಜಯಘೋಷ,
ಸ್ವಾಗತವಿದೊ ಸುಸ್ವಾಗತ ಗೆಳೆಯರೆ
ಗಣರಾಜ್ಯದ ಈ ಶುಭ ದಿವಸ!

—ಗೋಪಾಲಕೃಷ್ಣ ಹೆಗಡೆ

ಸ್ತ್ರೀ ಪುರುಷರಿಬ್ಬರೂ ಸಮಾನರಿದ್ದಾರೆ. ಇಬ್ಬರ ಜೊತೆಯಿಂದಲೇ ಸಮಾಜರಥವು ನಡೆಯುತ್ತದೆ. ಮಾನವ ಧರ್ಮ ಜೀವನದಲ್ಲಿ ಉಭಯರೂ ಸಹಧರ್ಮಚಾರಿಗಳಾಗಿದ್ದಾರೆ ಆದ್ದರಿಂದ ಭೋಗ ಮತ್ತು ವಿಷ ಆರಾಮದ ಸಲುವಾಗಿ ಸ್ತ್ರೀ ಪುರುಷರು ತಮ್ಮ ಸಂಬಂಧವನ್ನು ಉಪಯೋಗಿಸಬಾರದು.

೦ ೦ ೦

ವಿಶ್ವ ಕುಟುಂಬತ್ವವೇ ಮಾನವ ಜಾತಿಯ ಆದರ್ಶವಾಗಿದೆ. ಆದ್ದರಿಂದ ಶಾಂತಿ ಪ್ರೇಮಗಳೇ ನಿಜವಾದ ಧರ್ಮವಾಗಿವೆ, ಯುದ್ಧವಲ್ಲ. ಈ ಆದರ್ಶಗಳನ್ನೇ ವ್ಯವಹಾರದಲ್ಲಿ ತರುವ ಕಾರ್ಯ ಪದ್ಧತಿಯ ವಿಷಯದಲ್ಲಿ ಗಾಂಧಿಯವರ ಸೂತ್ರಗಳು ಈ ಕೆಳಗಿನಂತಿವೆ: ಸಾಧ್ಯಕ್ಕೆ ಅನುರೂಪವಾದ ಸಾಧನಗಳನ್ನೇ ಉಪಯೋಗಿಸಬೇಕು. ಸಾಧನೆಗಳಿಗೆ ತಕ್ಕಂತೆಯೇ ಸಾಧ್ಯವು ಕೈಗೂಡುವುದು. ಆದ್ದರಿಂದ ಸಾಧನ ಶುದ್ಧಿ ಮತ್ತು ಪ್ರಾಮಾಣಿಕತನ ಇವೇ ಕಾರ್ಯ ಪದ್ಧತಿಯ ಮೂಲ ಮಂತ್ರಗಳಾಗಿವೆ.

೦ ೦ ೦

ಪ್ರಜಾರಾಜ್ಯ ದಿನದ ಶುಭಾಶಯಗಳು!

ನೂರ್ ಎಂಡ್ ಕೊ..

ಡೀಲರ್ಸ್:
ಇಂಡಿಯನ್ ಆಯಿಲ್ ಕೊರ್ಪರೇಶನ್ ಲಿಮಿಟೆಡ್
ಮೂಲ್ಕಿ, ದ. ಕ.

NOOR & CO.,

Dealers : INDIAN OIL CORPORATION LTD.

MOOLKI, S. K.

Phone: 22

ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರಭುಗಳ ಪ್ರಭುತ್ವ

(ಹದಿನಾರನೇ ಪುಟದಿಂದ)

ಪ್ರಜಾಪ್ರಭುತ್ವದ ಗಂಡಾಂತರಕ್ಕೆ ತಾನೇನು ಮಾಡಿದ್ದೇನೆಂದು ಕೇಳುತ್ತಿದ್ದಾರೆ. ಅದಕ್ಕೂ ಹೊಗಳುಭಟ್ಟರ ಕರತಾಡನ! ಬೀಚಿಯವರ ಮಾತು ಸರಿಯಾಗಿಯೇ ಇದೆ–ಅವರು "ಕಾಂಗ್ರೆಸ್ಸ್" ಮಾಡಿದ್ದಾರೆಂದು. ಇಂದು ಪಕ್ಷವನ್ನು ಭೇದಿಸಿ ಅಧಿಕಾರದಲ್ಲಿರುವವರೂ ಅವರೇ ಪಕ್ಷ ಪಲ್ಲಟನೆಗೆ ಪ್ರೋತ್ಸಾಹವೀಯುತ್ತಿರುವವರೂ ಅವರೇ. ಅದಕ್ಕೆ ಗವರ್ನರುಗಳ ಗದ್ದುಗೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಪಂಡಿತ ದೀನದಯಾಳು ಉಪಾಧ್ಯಾಯರ ಸೂತ್ರದಿಂದ ಇಂದಿರಾಜಿಯವರ ಈ ಎರಡು ರಾಜಕೀಯ ರೋಗಗಳನ್ನೂ ತಡೆಗಟ್ಟಬಹುದು. ಹೊಸಹೊಸ ಜಾಡ್ಯಗಳು ಹಬ್ಬುವ ಕಾಲವಿದು. ಹೊಸ ಕಾಂಗ್ರೆಸ್ ಹುಟ್ಟುತ್ತಿರುವ ರಾಜಕೀಯ ಸುಗ್ಗಿ ಇದು. ಹಾಗೆನೇ ಸಮಸ್ಯೆಗಳನ್ನುಂಟುಮಾಡದಿರಲು ಇಂದಿರಾಜಿಯವರು ಪ್ರತಿಗಾಮಿ ರಾಜಕೀಯ ಗೊಡ್ಡು ಅಥವಾ ಬಂಜೆಯಿರುವುದಿಲ್ಲ. ಸಮಸ್ಯೆ ತಡೆಗಟ್ಟುವ ಲೂಪನ್ನು ಅವರು ಧರಿಸಿಕೊಂಡಿರುವುದಿಲ್ಲ. ಸಮಸ್ಯೆಗಳ ಮೂಲವೇ ಅವರಿದ್ದಾರೆ. ಸಂಸದಿನಲ್ಲಿ ತನ್ನ ಕಾಂಗ್ರೆಸ್ಸಿಗೆ ಬಹುಮತ ಇಲ್ಲದಿದ್ದರೂ ಅವರು ಗದ್ದುಗೆಗೆ ಅಂಟಿಕೊಂಡಿದ್ದಾರೆ! ತನ್ನ ಕಾಂಗ್ರೆಸಿಗೆ ಜನಸಂಖ್ಯೆಯಲ್ಲಿ ಶೇಕಡಾ೫೦ಕ್ಕಿಂತ ಅಧಿಕ ಬಹುಮತ ಇದೆಯೇ? ಅವರ ಪಕ್ಷದ ಸದಸ್ಯರಾದರೂ ಸಂಸದಿನ ಸದಸ್ಯರ ಸಂಖ್ಯೆಯ ಅರ್ಧದಷ್ಟಾದರೂ ಇದ್ದಾರೆಯೇ? ಇಲ್ಲ. ಹಾಗಿದ್ದರೂ ಅಧಿಕಾರದ ಸ್ಥಾನವನ್ನು ಅವರು ಬಿಡುವದಿಲ್ಲ. ಸಾಲದುದಕ್ಕೆ ಪ್ರಜಾಪ್ರಭುತ್ವದ ನಾಮೋಚ್ಚಾರಣೆ! ಯಾವಾಗ ತನಗೆ ಬಹುಮತದ ಬಲ ಇಲ್ಲವೋ, ಒಡನೆ ಅವರು ಜನತಾ ಜನಾರ್ಧನನ ಬಳಿ ಮತದಾನ ಕೇಳಬೇಕಾಗಿತ್ತು. ಅವರ ಬದಲು ದೇಶದ್ರೋಹಿ ದುಃಶ್ಯಕ್ತಿ ಕಮ್ಯೂನಿಷ್ಟರ ಮತ್ತು ಮುಸ್ಲಿಂ ಲೀಗಿಗಳ ಸಹಾಯದಿಂದ ಸಿಂಹಾಸನಕ್ಕಂಟಿಕೊಂಡಿದ್ದಾರೆ. ಇದರಲ್ಲಿ ಕಮ್ಯೂನಿಷ್ಟರಿಗಾಗಲೀ ಮುಸ್ಲಿಂ ಲೀಗಿಗಳಿಗಾಗಲೀ ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇದೆಯೇ? ರಷ್ಯಾದಲ್ಲಿ ಪ್ರಜಾಪ್ರಭುತ್ವ ಇದೆಯೇ? ಚೈನಾದಲ್ಲಿದೆಯೇ? ಅರಬ ದೇಶಗಳಲ್ಲಿದೆಯೇ? ಇವರೇ ಇಂದಿರಾಜೀಯವರ ಪ್ರಜಾಪ್ರಭುತ್ವದ ದಲ್ಲಾಳಿಗಳು! ಅವರ ಕೆಲಸವಾಗುವವರೆಗೆ ಇಂದಿರೆಯನ್ನು ಅವರು ದೇವಿಯೆನ್ನುವರು, ಧೀರೆಯೆನ್ನುವರು ಘಂಟಾಕೆನ್ನುತ್ತಾರೆ, ನಂತರ ಇದೇ....ಪೊರಕೆ....ಹಂಗೇರಿ, ಪೋಲೇಂಡುಗಳಲ್ಲಿ ನಡೆದುದೇನು? ಇವರಿಗೆ, ದೇಶದ್ರೋಹಿಗಳಿಗೆ–ದೇಶ ವಿಚ್ಛೇದನಕಾರಿಗಳ ಬೆಂಬಲ! ದ್ರಾ. ಮು. ಕ. ಅಖಾಲಿದಳ, ಝಾರ್ಖಂಡ ಪಾರ್ಟಿಗಳ ಆಧಾರ.

ಇಲ್ಲಿ ವಿಶೇಷವೆಂದರೆ ಈ ಎಲ್ಲಾ ರಾಜಕೀಯ ಪಕ್ಷಗಳು ತಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇವೆಯೆಂದು ಹೇಳುತ್ತಿರುವುದು. ಕಮ್ಯುನಿಸ್ಟ್ ಪಾರ್ಟಿಗಳ ಹಾಗೂ ಮುಸ್ಲಿಂ ಲೀಗಿನ ಪ್ರಜಾಪ್ರಭುತ್ವ ಪ್ರಪಂಚಕ್ಕೆ ಹೊಸತೇನಲ್ಲ. ಏನೇ ಇರಲಿ, ಇವರೆಲ್ಲರೂ ಇಲ್ಲಿಯ ಪ್ರಜೆಗಳ ಮತದಾನದಿಂದಾಗಿ ಡಿಲ್ಲಿಯ ದರ್ಬಾರಿನಲ್ಲಿ ಮೆರೆಯುತ್ತಿದ್ದಾರೆನ್ನುವದನ್ನು ಮರೆಯಲು ಸಾಧ್ಯವೇ ಇಲ್ಲ. ಹಣ ಅಮೇರಿಕದ್ದಿರಬಹುದು, ರಷ್ಯಾದ್ದಿರಬಹುದು, ಚೈನಾದ್ದಿರಬಹುದು, ಪಾಕಿಸ್ತಾನದ್ದಿರಬಹುದು, ಅರಬ ದೇಶಗಳದ್ದಿರಬಹುದು ಸಾಲದುದಕ್ಕೆ ಕಳ್ಳನೋಟುಗಳೇ ಇರಬಹುದು. ಆದರೆ ಮತದಾನಿಗಳಲ್ಲಿ ಬಹುಸಂಖ್ಯಾಕರು ಇಲ್ಲಿಯ ಪ್ರಜೆಗಳೇ ಇದ್ದಾರೆ. ಅಸ್ಸಾಂ, ಬಂಗಾಲ, ಕಾಶ್ಮೀರ, ರಾಜಸ್ಥಾನ, ಪಂಜಾಬ .... ಮುಂತಾದೆಡೆಗಳಲ್ಲಿ ಪಾಕಿಸ್ತಾನಿಗಳು ಮತದಾನ ಮಾಡಿರಬಹುದಾದರೂ ಬಹುಸಂಖ್ಯಾಕರು ಇಲ್ಲಿಯವರೇ ಇರುವರು ಆದುದರಿಂದ ಅವರು ಇಲ್ಲಿಯ ಪ್ರಜೆಗಳನ್ನು ಪ್ರತಿನಿಧಿಸುವವರೇ ಇದ್ದಾರೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಈ ಪ್ರಜಾಪ್ರತಿನಿಧಿಗಳು ಡಿಲ್ಲಿ ದರ್ಬಾರಿನಲ್ಲಿ ಮಾಡಿದ್ದೇನು? ರಾಣಿ ನೊಣದ ಹಿಂದುಗಡೆ ಎಲ್ಲಾ ಜೇನ್ನೊಣಗಳು ಓಡುತ್ತವೆ. ಜೇನ್ನೊಣಗಳಲ್ಲೂ ಪ್ರಜಾಪ್ರಭುತ್ವವಂತೆ! ಹಾಗೆನೇ ಇಂದಿರಾಜೀಯವರು ಸಂಸದಿನ ಎಲ್ಲಾ ಸದಸ್ಯರನ್ನು 'ನಪುಂಸಕ'ರನ್ನಾಗಿಸಿದಾಗ ಅವರು ಆಚ್ಚರಿಯಿಂದ, ಆನಂದದಿಂದ ಕಣ್ಣುಬಾಯಿ ಬಿಟ್ಟರು. ಲೋಕಸಭೆಯಲ್ಲಿ ರಾಜಧನ ಗುತ್ತಿಗೇನು ವಿಷಯ ಚರ್ಚೆಗೆ ಬಂತು. ಅಲ್ಲಿ ಅದಕ್ಕೆ ಬೇಕಾದ ಬಹುಮತ ಸಿಕ್ಕಿತು. ಅಲ್ಲಿಂದ ಗೊತ್ತುವಳಿ ರಾಜ್ಯಸಭೆಗೆ ಹೋಯಿತು. ಅಲ್ಲಿ ನಿಶ್ಚಿತ ಬಹುಮತ ಸಿಗದೆ ಬಿದ್ದುಹೋಯಿತು. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರು ಅದನ್ನು ಅಲ್ಲಿಗೇನೇ ಬಿಡಬೇಕಾಗಿತ್ತು. ಅದರ ಬದಲು ಇಂದಿರಾರಾಣಿಯವರು ರಾಷ್ಟ್ರಾಧ್ಯಕ್ಷರ ಸಹಾಯದಿಂದ ಅದನ್ನು ಬಳಕೆಗೆ ತಂದುಬಿಟ್ಟರು. ಇಂದಿರಾಜಿಯವರ ಪ್ರಜಾಪ್ರಭುತ್ವಕ್ಕೆ ಹಿಂದಿನ ಎರಡು ಘಟನೆಗಳು ಸಾಕ್ಷಿಗಳಂತಿವೆ. ಉಳಿದ ಪ್ರಜಾಪ್ರತಿನಿಧಿಗಳು ಮಾಡಿದ್ದೇನು? ತಮ್ಮ ಸ್ಥಾನವನ್ನು ಕಾಯ್ದುಕೊಳ್ಳುವುದಕ್ಕೇನೇ ಅವರು ಹೋರಾಡಲಾರಂಭಿಸಿದರು ನಿಜವಾಗಿ ಅವರು ಸಂವಿಧಾನದ ಪ್ರಕಾರ ಪ್ರಜಾಪ್ರತಿನಿಧಿಗಳಾಗಿದ್ದು, ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳವರಾಗಿದ್ದಲ್ಲಿ ಇಂದಿರಜ್ಜಿಯವರನ್ನು ಬಿಟ್ಟುಳಿದ ಸದಸ್ಯರೆಲ್ಲರೂ ತಕ್ಷಣ ರಾಜಿನಾಮೆ ಸಲ್ಲಿಸುತ್ತಿದ್ದರು ಪಕ್ಷ ವ್ಯಾಮೋಹ, ರಾಜಕೀಯ ಛಲ ... ಇವೆಲ್ಲಾ ನಂತರ ತಾವು ಪ್ರಜಾಪ್ರತಿನಿಧಿಗಳೆನ್ನುವುದು ಮುಖ್ಯ. ಯಾವಾಗ ತಮ್ಮ ಅಭಿಪ್ರಾಯಕ್ಕೆ ಸಂವಿಧಾನಕ್ಕೆ ವಿರುದ್ಧವಾಗಿ ಇಂದಿರಾಜಿ ಅದನ್ನುತಂದರೋ ಅಂದೇ ಅವರೆಲ್ಲರೂ ಹೊರಗೆ ಬರಬೇಕಾಗಿತ್ತು. ದುರಾದೃಷ್ಟವಶಾತ್ ಒಬ್ಬರಾದರೂ ಇಷ್ಟರ ವರೆಗೆ ರಾಜಿನಾಮೆ ಕೊಟ್ಟಿಲ್ಲ. ಅಪಮಾನವನ್ನು ನುಂಗಿಕೊಂಡು ಹಾಯಾಗಿದ್ದಾರೆ! ಇವರು ಪ್ರಜಾಪ್ರತಿನಿಧಿಗಳೇನು? ಇವರು ನಿಜವಾಗಿ ಪ್ರಜಾಪ್ರಭುಗಳಿದ್ದಾರೆ. ಹಿಂದಿನವರು ಸಂಪತ್ತು, ಜಮೀನಿನ ಮೇಲೆ ಜಮೀನ್ದಾರೀ ಪ್ರಭುಗಳಾಗುತ್ತಿದ್ದರು, ಇಂದಿನವರು ಗಿಟ್ಟಿಸಿಕೊಂಡ ಮತದ ಮೇಲೆ ಪ್ರಜಾಪ್ರಭುಗಳಾಗುತ್ತಿ

ಕೊಡುವವನಿಗೆ ಹರುಷ—
ಪಡೆವವನಿಗೆ ಹರುಷ—
ಜನಪ್ರಿಯ "ಪ್ರಕಾಶ"

ಮೂವತ್ತು ವರ್ಷಗಳಿಗೂ ಮಿಕ್ಕಿ
ದೇಶದ ವಿವಿಧ ರಾಜ್ಯಗಳಲ್ಲಿ
—ತಾರತಮ್ಯ ತಿಳಿವ ಜನರಿಂದ ಆದರಿಸಲ್ಪಟ್ಟಿವೆ—

ಪ್ರಕಾಶ ಬೀಡಿಗಳು

PRAKASH BEEDIES

ಎಲ್ಲ ಕಾಲಗಳಲ್ಲಿ ಎಲ್ಲ ಜನರಿಗೆ ಸೇವನೆಯ ಆನಂದವೀಯುತ್ತಿವೆ !

ಪ್ರಜಾರಾಜ್ಯ ದಿನದ ಶುಭಾಶಯಗಳನ್ನು ಕೋರುವ

ಕೆ. ಎಂ. ಆನಂದ ಪ್ರಭು ಎಂಡ್ ಸನ್ಸ್

ಬಂದರ, ಮಂಗಳೂರು-1
ಫೋನ್ : 3718

ಫೆಕ್ಟರಿ: ಕೊಡಿಯಾಲ್‌ಬೈಲ್, ಮಂಗಳೂರು-3
ಫೋನ್ : 3532

ದ್ದಾರೆ! ಇದು ತಮಗೆ ಅಪಮಾನವೆಂದು ಕೊಂಕಣಿ ಪ್ರಭುಗಳು ಭಾವಿಸಬಹುದು. ಪ್ರಜೆಗಳ ಮತಗಳನ್ನು ಗಿಟ್ಟಿಸಿಕೊಂಡು ಪ್ರಜೆಗಳ ಪ್ರಭುಗಳಾಗಿರುವವರೇ ಹೊಣೆ ಅದಕ್ಕೆ.

ತನಗೆ ಐವರು ಗಂಡಂದಿರಿದ್ದೂ ಏನು ಪ್ರಯೋಜನವೆಂದು ಅತ್ತು ಕೃಷ್ಣನ ಸಹಾಯವನ್ನು ಯಾಚಿಸಿದಳಂತೆ ಪಾಂಚಾಲಿ. ನೂರಾರು ಸದಸ್ಯರಿದ್ದು ತನಗೇನು ಪ್ರಯೋಜನವೆಂದು ಸಂಸತ್ತು ಸಂವಿಧಾನ ಇಂದು ಗೋಗರೆಯುತ್ತಿದೆ. ಪಾಂಚಾಲಿಗಾದರೋ ಅಣ್ಣ ಕೃಷ್ಣನಿದ್ದ; ಸಂಸದಿಗೆ ಸಂವಿಧಾನಕ್ಕೆ ಪಾಪ, ಇಂದು ಯಾರಿದ್ದಾರೆ? ಜನರಲ್ ಕರಿಯಪ್ಪನವರು ಬೆಟ್ಟು ತೋರಿಸುತ್ತಿದ್ದಾರೆ. ಅದು ಪರಿಹಾರವಾದೀತೇ?

ಏನೇ ಇರಲಿ. ಪ್ರಜಾಪ್ರತಿನಿಧಿಗಳ ಈ ಕೃತಿಯಿಂದಾಗಿ ಬಡ ಬೋರೇಗೌಡ ಯೋಚಿಸಬೇಕಾಗಿದೆ. ಈ ನೂರಾರು ಪ್ರಜಾಪ್ರಭುಗಳ ಆವಶ್ಯಕತೆಯಾದರೂ ಏನು? ಚರ್ಚೆ ನಡೆಯುವಾಗ ಕೆಲವೊಮ್ಮೆ ಹನ್ನೆರಡು ಸದಸ್ಯರನ್ನು ಕೂಡಿ ಹಾಕಲು ಅಧ್ಯಕ್ಷರಿಗೆ ಅಯ್ಯಪ್ಪ ಅನಿಸುತ್ತದೆ! ಶ್ರೀಸಾಮಾನ್ಯನಿಗೆ ಈ ಬಿಳಿಯಾನೆಯ ಪಡೆಗಳೇತಕ್ಕೆ? ಇಂದಿರಾಜೀ ಅದನ್ನು ಸಿದ್ಧಪಡಿಸಿದ್ದಾರೆ. ಪ್ರಜಾಪ್ರಭುಗಳು ನಿಜವೆಂದಿದ್ದಾರೆ. ಇಲ್ಲೇ ದೀನದಯಾಳು ಉಪಾಧ್ಯಾಯರ ಸೂತ್ರಕ್ಕೆ ಸೂಕ್ತ ಬದಲಾವಣೆ ಕೊಡಬೇಕಾಗಿರುವದು. ಪ್ರಜೆಗಳಿಗೆ ಮತದಾನದ ಹಕ್ಕು ಇರಬೇಕು. ಕರಿಯಪ್ಪನವರು ಒಪ್ಪಲಿ, ಬಿಡಲಿ, ಸಂವಿಧಾನದ ಅಸ್ತಿವಾರಕ್ಕೆ ಭಂಗ ಬರಕೂಡದು. ಯಾವೊಂದು ವ್ಯಕ್ತಿ ಯಾ ಕಣಕ್ಕಿಳಿಯ ಬೇಕಾಗಿಲ್ಲ; ಕೇವಲ ಪಕ್ಷ ಮಾತ್ರ. ಯಾವ ಪಕ್ಷಕ್ಕೆ ಶೇಕಡಾ ಐವತ್ತಕ್ಕಿಂತ ಅಧಿಕ ಮತ ಸಿಗುತ್ತದೋ ಅದು ದಿಲ್ಲೀಶ್ವರನಾಗಬೇಕು. ಅದಕ್ಕಿಂತ ಕಮ್ಮಿ ಸಿಕ್ಕಿದ ಪಕ್ಷಗಳೇ ಇದ್ದಲ್ಲಿ ಅವು ಸಂಯುಕ್ತ ದಳವನ್ನು ರಚಿಸಿಕೊಳ್ಳಬೇಕು. ದಿಲ್ಲಿಯಲ್ಲಿ ಅಲ್ಲದೆ ಬೇರೆಲ್ಲೂ ವಿಧಾನಸಭೆ–ಮಂತ್ರಿಮಂಡಲಗಳು ಬೇಕಾಗಿಲ್ಲ. ದಿಲ್ಲಿಯಲ್ಲಿ ಈ ರೀತಿ ಶೇಕಡಾ ಐವತ್ತಕ್ಕಿಂತ ಅಧಿಕ ಮತದಾನ ಪಡೆದವರು ಮಂತ್ರಿಮಂಡಲ ರಚಿಸಬೇಕು. ಇದರ ಸಂಖ್ಯೆ—ಅಷ್ಟ ಅಮಾತ್ಯರು, ಅಷ್ಟ ಉಪ-ಅಮಾತ್ಯರು, ಅಷ್ಟ-ಸಹಾಯಕ-ಅಮಾತ್ಯರು ಮತ್ತು ಪ್ರಧಾನಿ—ಹೀಗೆ ಇಪ್ಪತ್ತೈದಕ್ಕಿಂತ ಹೆಚ್ಚು ಇರಬಾರದು. ಸಂಸದಿನ ಆವಶ್ಯಕತೆಯೇ ಇರುವದಿಲ್ಲ. ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಯಬೇಕು. ಈ ನಡುವೆ ಶೇಕಡಾ ಐವತ್ತಕ್ಕಿಂತ ಅಧಿಕ ಪ್ರಜೆಗಳು ಮಂತ್ರಿಮಂಡಲದ ರಾಜಿನಾಮೆ ಬಯಸಿದಲ್ಲಿ ಅದರ ಫಲಿತಾಂಶದಂತೆ ನಡೆಯಬೇಕು. ಇಲ್ಲಿ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಯುವ ಧೈರ್ಯ, ನಂಬಿಕೆಯಾದರೂ ಏನು? ಇಂದಿರಾಜೀಯಂತಹವರು ಪ್ರಧಾನಿಗಳಾಗಿ ಬಿಟ್ಟಲ್ಲಿ ಮುಗಿಯಿತು. ನ್ಯಾಯಾಂಗಕ್ಕೆ ಪೂರ್ಣ ಸ್ವಾತಂತ್ರ್ಯ ಇದ್ದು ಅದರ ತೀರ್ಮಾನದಂತೆ ನಡೆಯಬೇಕು. ಹಾಗೆ ನಡೆಯದಿದ್ದಲ್ಲಿ ಸೈನ್ಯ ಇದೆ. ಸೇನೆಗೆ ಆಜ್ಞೆ ಕೊಡುವದು ಯಾರು? ರಾಷ್ಟ್ರಾಧ್ಯಕ್ಷರು ಇದ್ದಾರೆ. ರಾಷ್ಟ್ರಾಧ್ಯಕ್ಷರು ಪ್ರಧಾನಿಯ ಪರವಾಗಿದ್ದಲ್ಲಿ ಅನ್ನದ ಋಣ ತೀರಿಸುವವರಾಗಿದ್ದಲ್ಲಿ? ಅವರ ಉಪ್ಪುಂಡವರಾಗಿದ್ದಲ್ಲಿ? ಕೊನೆಗೆ ಜನತಾ ಜನಾರ್ದನ ವಿರಾಟ ರೂಪವನ್ನು ಪ್ರಕಟಿಸಬೇಕಾಗುತ್ತದೆ. ಹೀಗೆ ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರಭುಗಳ ಪ್ರಭುತ್ವವನ್ನು ಕೊನೆಗಾಣಿಸಿ ನೈಜ ಪ್ರಜಾಪ್ರಭುತ್ವವನ್ನು ಬಳಕೆಗೆ ತರಬೇಕಾಗಿದೆ. ಅಲ್ಲಿಯವರೆಗೆ ಇದನ್ನು ಪ್ರಜಾಪ್ರಭುತ್ವವೆನ್ನುವದಕ್ಕಿಂತ ಪ್ರಜಾಪ್ರಭುಗಳ ಪ್ರಭುತ್ವವೆನ್ನುವದೇ ಸೂಕ್ತವಿದೆ. ವಿಧಾನ ಪರಿಷತ್ತು, ರಾಜ್ಯಸಭೆಗಳನ್ನು ರದ್ದು ಮಾಡಬೇಕೆಂಬ ಮಾತು ಕೆಲದಿನಗಳಿಂದ ಕೇಳಿ ಬರುತ್ತಿದೆ. ನಾವೇತಕ್ಕೆ ಇನ್ನೂ ಪ್ರಗತಿಶೀಲರಾಗಿ ಲೋಕಸಭೆಯನ್ನೂ ರದ್ದು ಮಾಡಲು ಕೇಳಬಾರದು? ಆಗ ಪ್ರಜಾಪ್ರಭುಗಳ ಸಂಖ್ಯೆ ಕಮ್ಮಿಯಾಗುತ್ತದೆ; ಸರಕಾರಕ್ಕೂ ಭದ್ರತೆ ಇರುತ್ತದೆ.

ದಾರಿದೀಪ

ಹಚ್ಚಿದವರು: ಜಿ. ಎಸ್. ಅನ್ನದಾನಿ.

೧

ನಮ್ಮೋಣಿಯೊಳಗಿರುವ ಹನುಮ ಕುಸ್ತೀಪಟುವು
ಕಲ್ಲು ಎತ್ತುವದರಲಿ ಭೀಮ ಮುಂದು
ತುಂಬಿ ಹರಿಯುವ ನದಿಯನೆದುರು ಈಸಿದ ಧೀರ
ಸಂಗಣ್ಣ ಹಿರಿಯಮಣಿ ನಮಗೆ ಇಂದು!

೨

ಹೋಳಿ ಹುಣ್ಣಿವೆಯಲ್ಲಿ ಹೆಣವಾಗಿ ನಗಿಸುತಿಹ
ಗಂಭೀರ ಕಲಾವಿದ ಜೋಶಿ ರಾಮು,
ಹೆಣ್ಣು ವೇಷವ ತೊಟ್ಟು ಹಾಡಾಡಿ ಅಳಲಿಕ್ಕೆ
ಹೆಣ್ಣುಗಳ ಮೀರಿಸಿಹ ಮೀಸಿ ಭೀಮ.

೩

ಹುತುತು ಖೋಖೋ ಆಟ ಸರಗೇರಿ ಇತ್ಯಾದಿ
ಎಲ್ಲ ಆಟಗಳಲ್ಲಿ ನಿಂಗ ಜಾಣ.
ಬೇಟೆಯಾಡುವದರಲಿ ರಂಗನೆತ್ತಿದ ಕಯ್ಯಿ
ಹುಸಿಯು ಆಗುವದಿಲ್ಲ ಬಿಟ್ಟ ಬಾಣ!

೪

ಆ ಓಣಿ ಈ ಓಣಿಯೊಳಗೆಲ್ಲ ಮಿಂಚುತಿಹ
ಚುಕ್ಕೆಗಳ ಈ ಬಳಗ ಮೆಚ್ಚಿಕೊಂಡು;
ಒಂದೆ ಜಾತಿಯ ಹಕ್ಕಿ ಒಂದೆಡೆಗೆ ಕೂಡಿಸಿದ
ಗ್ರಾಮಸೇವಕ ಬಹಳ ನೆಚ್ಚಿಕೊಂಡು!

೫

ಗ್ರಾಮ ಸೇವಕನಾಗಿ ನಮ್ಮೂರಿಗೈತಂದ
ಪ್ರಭುದೇವ ಅಂತೆಯೇ ನಮಗೆ ಮೆಚ್ಚು
ಚುಕ್ಕೆಗಳ ಬಳಗಕ್ಕೆ ಚಂದ್ರನಂತಿರುವಾತ
ಅಂದರೂನು ಅವಗೆ ಅಲ್ಲ ಹೆಚ್ಚು!

೬

ಬಂದ ಕೆಲದಿನದಲ್ಲಿ ಮೋಡಿ ಮಾಡಿದ ನಮಗೆ
ಸೆಳೆದುಕೊಂಡನು ಎಸೆದು ಸ್ನೇಹ ಬಲೆಯ
ಮಾತಿನಲಿ ಮಾಧುರ್ಯ ಒಳಹೊರಗೆ ಔದಾರ್ಯ
ಕಟ್ಟಲಾರೆವು ನಾವು ಅವನ ಬೆಲೆಯ!

೭

ನಾವು ಇಪ್ಪತ್ತು ಜನ ಒಂದೆ ವಾರಿಗೆಯವರು
ಅವನು ಹೇಳಿದ ಹಾಗೆ ಒಂದುಗೂಡಿ.
ಪ್ರತಿಯೊಬ್ಬರೂ ಹತ್ತು ರೂಪಾಯಿಗಳ ಹಾಕಿ
'ತರುಣ ಸಂಘ'ವು ಎಂದು ನೋಂದು ಮಾಡಿ;

೮

ಸೋಮವಾರಕ್ಕೊಮ್ಮೆ ಶ್ರಮದಾನ ಮಾಡುತ್ತ
ರಸ್ತೆಯನು ರಚಿಸಿದೆವು ಕಾಡು ಕಡಿದು!
ಬಾವಿ ಕೆರೆ ಶುಚಿಗೊಳಿಸಿ ವ್ಯಕ್ತಿತ್ವ ಬೆಳೆಸಿದೆವು
ಗೌರವವು ಬರುವಂಥ ಗುರಿಗೆ ನಡೆದು!

೯

ಒಂದು ದಿನ ಶ್ರಮದಾನ ನಡೆದಿದ್ದ ಹಾಗೆಯೇ
ಉತ್ಸಾಹ ಪ್ರೀತಿಯಭಿಮಾನ ತಾಳಿ,
ತಾಲೂಕಿನಧಿಕಾರಿ 'ಬಿ. ಡಿ. ಓ.'ರ ಕರೆತಂದು
ನಮ್ಮಗಳ ಸಾಹಸವ ತಿಳಿಸಿ ಹೇಳಿ;

೧೦

ಫೋಟೊ ತೆಗೆಯಿಸಿ ಅದನು ಪತ್ರಿಕೆಗೆ ಕಳುಹಿಸಿದ
ಹೀಗೆಲ್ಲ ಹೆಚ್ಚಿಸಿದ ಪ್ರಭುವು ಮಾನ!
ಮೇಲಾಧಿಕಾರಿಗಳು ಯಾರೆ ಬಂದರು ಅವರ—
ಮುಂದೆ ಹಾಡುವ ನಮ್ಮ ಕೀರ್ತಿ ಗಾನ!

೧೧

ರಿಂಗು ಕೇರಂಬೋರ್ಡು ವ್ಹಾಲಿಬಾಲಿತ್ಯಾದಿ
ಆಡಲಿಕೆ ಹೊಸ ಹುರುಪು ತುಂಬಿ ಬಿಟ್ಟ.
ಸಬ್‌ಸಿಡಿಯ ಸವಲತ್ತು ನಮ್ಮ ಸಂಘಕೆ ಕೊಡಿಸಿ
ಅವುಗಳನು-ನಮ್ಮೆದುರು ತಂದು ಇಟ್ಟ!

೧೨

"ಆಟಗೆಯ ಸಾಮಾನು ಇಡಲಿಕ್ಕೆ ಕೂಡಲಿಕೆ
ನಮ್ಮ ಸಂಘಕೆ ಸ್ವಂತ ಮನೆಯು ಬೇಕು"
ಈ ವಿಚಾರವ ತಿಳಿಸೆ ಹೇಳಿದರು ಎಲ್ಲರೂ
"ಬಾಡಿಗೆಯ ಮನೆ ನಮಗೆ ಸಧ್ಯ ಸಾಕು!"

೧೩

ಪ್ರಭುವಿನುತ್ಸಾಹಕ್ಕೆ ಹಂಚಿಕೆಗೆ ಎಣೆಯಿಲ್ಲ
'ಸ್ವಂತ ಮನೆ ಕಟ್ಟುವದು ಸುಲಭ'ವೆಂದ
ನಾಟಕದ ಹುಚ್ಚಿರುವ ನಮ್ಮಗಳ ತಲೆ ತುಂಬಿ
'ನಾಟಕವನಾಡಿದರೆ ಸಾಧ್ಯ'ವೆಂದ

೧೪

ತಲೆಯಲ್ಲಿ ಈ ವಿಷಯ ಹೊಕ್ಕಿರಲು ಬಿಡುವನೇ
ನಾಟಕದ ಪುಸ್ತಕವ ಕೊಂಡುತಂದ
ನಾಟಕವ ನಮ್ಮಿಂದ ಆಡಿಸಿಯೆ ಕಟ್ಟಿಸಿದ
ನಾಟಕಕೆ ಕೂಡಿದ್ದ ರೊಕ್ಕದಿಂದ!

೧೫

ಹಿಡಿದ ಹಠವನು ಬಿಡದೆ ಸಾಧಿಸುವ ಛಲಗಾರ
ಸಾಹಸಿಯು ಅವನಲ್ಲಿ ಇಹುದು ಕೆಚ್ಚು!
ಕಿಂದರಿಯ ಜೋಗಿಯವ ಊದುತಿಹ ರಾಗಕ್ಕೆ
ತಕ್ಕಂತೆ ಕುಣಿಯುವದೆ ನಮಗೆ ಮೆಚ್ಚು!

೧೬

'ಕಾಯಕವೆ ಕೈಲಾಸ'ವೆನುವ ತತ್ವವ ತಿಳಿಸಿ
ಮೇಲು ಕೀಳಿನ ಭಾವ ದೂಡಿರುವನು!
ಜೋಯಿಸರ ರಾಮನಿಗೆ ಬಣಜಿಗರ ಸಂಗನಿಗೆ
ಕೋಳಿ ಸಾಕುವ ಹಾಗೆ ಮಾಡಿರುವನು!

೧೭

ಸುಧಾರಿತ ಹೊಸ ತಳಿಯ ಕೋಳಿ ಹುಂಜಗಳನ್ನು
ಅರ್ಧ ಬೆಲೆಗೇ ತಂದು ಕೊಡುತಿರುವನು
ಸುಧಾರಿತ ಪದ್ಧತಿಯ ಕೋಳಿ ಸಾಕಣೆಯನ್ನು
ಕಲಿಯಲಿಕೆ ರಂಗನನು ಕಳಿಸಿರುವನು!

೧೮

'ಆಲಸ್ಯವೆನ್ನುವದು ತರುಣರಿಗೆ ತರವಲ್ಲ.
ಆಲಸ್ಯವೇ ಶತ್ರು ತಿಳಿದುನೋಡಿ.
ದುಡಿತ ದುಡ್ಡಿನ ತಾಯಿ ದುಡಿದುಡಿದು ನೀವೆಲ್ಲ
ಸಾಲದಿಂದಲಿ ದೇಶ ಮುಕ್ತ ಮಾಡಿ!

೧೯

'ಭಾರತದ ಭವಿತವ್ಯ ನಿಮ್ಮ ಕೈಯಲ್ಲಿಹುದು
ತರುಣರೇ ಭಾರತದ ನಾಡಿ'—ಎಂದು
ಹುರುಪು ಹುಮ್ಮಸು ತುಂಬಿ ದುಡಿಯಲಿಕೆ ಹಚ್ಚುವನು
ಗ್ರಾಮ ಸೇವಕ ನಮ್ಮ ಆಪ್ತ ಬಂಧು!

೨೦

ತರುಣ ರೈತರ ಬಗೆಗೆ ಇನ್ನಷ್ಟು ಅಭಿಮಾನ
ಅವರಿಗೂ ಎಡೆಬಿಡದೆ ಬೆಂಬತ್ತಿಹ
ಹೊಸ ತಳಿಯ ಹೊಸ ಬೀಜ ಫರ್ಟಿಲೈಜರು ಕೊಟ್ಟು
ಉತ್ಸುಕತೆ ಅವರಲ್ಲಿ ತುಂಬುತ್ತಿಹ!

೨೧

ಒಂದಲ್ಲ ಎರಡಲ್ಲ ಹಲವಾರು ರೀತಿಯಲಿ
ಗ್ರಾಮ ಸೇವಕ ನಮ್ಮ ತರುಣರನ್ನು;
ಪ್ರಗತಿಪಥದೆಡೆ ನಡಿಸಿ ಆಗಿಹನು ಕಣ್ಮಣಿಯು
'ದಾರಿದೀಪ'ವು ಅಂದರೇನೆ ಚನ್ನು!

[ವಿ. ಸೂ:- ಪ್ರಕಟವಾಗಲಿರುವ "ಗ್ರಾಮ ಸೇವಕ" ಕಾವ್ಯ ಕಾದಂಬರಿಯ ಒಂದು ಪ್ರಕರಣ—ಲೇಖಕ]

ಎಲ್ಲ ಶಿಕ್ಷಣವನ್ನು ಬಾಲಕರ ಮಾತೃಭಾಷೆಯಲ್ಲಿಯೇ ಮಾತ್ರ ಸರಿಯಾದ ರೀತಿಯಲ್ಲಿ ಕೊಡುವುದು ಶಕ್ಯವಿದೆ. ಪ್ರತಿಯೊಬ್ಬ ಸುಶಿಕ್ಷಿತ ಭಾರತೀಯನಿಗೆ ಮಾತೃಭಾಷೆ ಹಿಂದೀ ಮತ್ತು ಸಂಸ್ಕೃತ ಜ್ಞಾನವಿರಬೇಕು. ಮುಸಲ್ಮಾನರಿಗೆ ಅರಬಿಯ ಜ್ಞಾನವಿರಬೇಕು. ಪಾರ್ಸಿಗಳಿಗೆ ಪಾರ್ಸಿಯ ಜ್ಞಾನವಿರಬೇಕು. ಮತ್ತು ಇವರೆಲ್ಲರಿಗೂ ಹಿಂದಿಯ ಜ್ಞಾನವಿರಲೇಬೇಕು.

o o o

ಈ ತರದ ಸಮಾಜವು ತನ್ನ ಉನ್ನತಿಯನ್ನು ಸಾಧಿಸಿಕೊಳ್ಳುವುದು. ತನ್ನ ಸದಸ್ಯರ ಉನ್ನತಿಯನ್ನೂ ಸಾಧಿಸುವುದು. ಮತ್ತು ವಿಶ್ವಶಾಂತಿಯನ್ನೂ ಸಾಧಿಸಬಲ್ಲುದು.



UNITY IN DIVERSITY!

That is what Mysore Sales International has achieved. Look at the range of products handled by us. Pumpsets, Silk, Agricultural implements, Radios, Sandal products, PVC Wires & Cables, Energy Meters. . .and also Mysore State Lottery Tickets.

We represent such reputed houses of manufacture asThe Government Soap Factory, The Government Sandalwood Oil Factory, Radio & Electricals Mfg. Co. Ltd., The Mysore Implements Factory, etc. . . . and The Mysore State Government for the sale of its lottery tickets.

With a wide network of branches and dealer outlets at important centres, Mysore Sales International serves the manufacturer and the consumer with effective distribution of products of proven excellence.

m

MYSORE SALES INTERNATIONAL LIMITED,

Hari Nivas, 36, Cunningham Road, Bangalore-1B. Phone: 75595-71189

Branches: Arun Chambers, Tardeo Main Road, Bombay-34. 3E/1, Jhandewalan Extension New Delhi-55.

Sole Selling Agents of **MYSORE STATE LOTTERY**

FOR TICKETS JUST ONE RUPEE EACH... HERE'S A FORTUNE WITHIN YOUR REACH.

B. Dattaram-MS-9

ಪ್ರಿಯದರ್ಶಿನೀ ಇಂದಿರಾ

(ಹದಿಮೂರನೇ ಪುಟದಿಂದ)

ಲಿಯೇ ಅವರು ಉಪಾಹಾರ ತೆಗೆದುಕೊಳ್ಳುವುದು ವಾಡಿಕೆ.

ನೆಹರೂ ಅವರ ಮುಂಜಾವಿನ ಉಪಾಹಾರದಲ್ಲಿ "ಉಪ"ದ ಅಂಶ ಕಡಿಮೆಯೇ ಆಗಿತ್ತು. ಅದೊಂದು ಮೇಜವಾನಿಯೇ. ಮಗಳು, ಮೊಮ್ಮಕ್ಕಳು, ಬೇರೆ ಇದ್ದರೂ ಆಗಾಗ್ಗೆ ಬಂದು ಸೇರುವ ಅಳಿಯ, ಇತರ ಆಪ್ತೇಷ್ಟರು ಅವರ ಭೋಜನ ಸುತ್ತಲು ಮುಂಜಾನೆ ಇರಲೇ ಬೇಕು. ಸಂಜೆಯ ಚಹಕ್ಕೂ ಹಾಗೆಯೇ. ಮಧ್ಯಾಹ್ನ ರಾತ್ರಿಯ ಊಟಕ್ಕೂ ಹಾಗೆಯೇ-ಅತಿಥಿಗಳನ್ನು-ಅಭ್ಯಾಗತರನ್ನು ಬಿಟ್ಟು ತಂದೆ ನೆಹರೂಜಿ ಒಂಟಿಯಾಗಿ ಉಣ್ಣುತ್ತಲೇ ಇದ್ದಿಲ್ಲ. ಆ ಅತಿಥಿಗಳೂ ರಾಜಕೀಯ ಕೋಟೆಯಿಂದ ಆದಷ್ಟೂ ಹೊರಗೆ-ಕವಿಯೋ ಕಲಾವಿದನೋ ಪತ್ರಿಕೋದ್ಯಮಿಯೋ, ಹಳೆಯ ಗೆಳೆಯನೋ ಇನ್ನಾರೋ.

ಆದರೆ ಇಂದಿರಾಜಿ ಮುಂಜಾವಿನ "ನಾಶ್ತಾ" ತನ್ನ ಕೋಣೆಯಲ್ಲಿ ಒಂಟಿಯಾಗಿ ಮುಗಿಸುತ್ತಾರೆ. ಸಂಜೆಗೂ ಮಿತ್ರ ಪರಿವಾರ ಕಲೆಹಾಕಿ ಕೊಳ್ಳುವುದಿಲ್ಲ. ಯಾವಾಗಲೂ ಕಚೇರಿಯ ಅಥವಾ ಸಾರ್ವಜನಿಕ ಕಾರ್ಯಕ್ರಮಗಳ ಒತ್ತಡವೇ ಒತ್ತಡ. ಅವರ ಒಟ್ಟು ಖಾದ್ಯ ಪೇಯಗಳು ಕಡಿಮೆಯೇ. ಚಹ-ಕಾಫಿ ಕೂಡಾ ಕುಡಿಯುವುದು ಕಡಿಮೆ. ಅವರು ಮಜ್ಜಿಗೆ ಕುಡಿಯುವುದು ಹೆಚ್ಚು. ಬೇಸಿಗೆಯಲ್ಲಿ ಶೀತ ಪಾನಕ ಮತ್ತು ಸೀಯಾಳ (ಎಳೆಗಾಯಿ)ದ ನೀರು. ಅವರ ಪ್ರಕೃತಿ ಸ್ವಾಸ್ಥ್ಯಕ್ಕೆ ಹಾಗೂ ಅಂಗ ಕಾಂತಿಗೆ ಈ ಮಿತಾಹಾರವೂ ಇನ್ನೊಂದು ಕಾರಣ.

ಇಂದಿರಾಜಿಯ ಮೂಲದ ದಂತಪಂಕ್ತಿ ಇನ್ನೂ ಬಲಿಷ್ಠವಾಗಿ ಅಚ್ಚುಕಟ್ಟಾಗಿ ಇದೆ. (ಸಿಂಡಿಕೇಟಿನ ಯಾವ ಮೂತಿನ ಮಲ್ಲನೂ ಅವರ ಹಲ್ಲು ಮುರಿದಿಲ್ಲ!) ಅವರ ಕಾರ್ಯೋತ್ಸಾಹ ಮತ್ತು ಚಪಲತೆ ತರುಣರನ್ನೂ ನಾಚಿಸುವಂತಹುದು. ಅವರ ನಡಿಗೆ ಬಹಳ ವೇಗದ್ದು. ಪ್ರದರ್ಶನ, ಕಟ್ಟೋಣಗಳ ಸ್ಥಳ ಪರೀಕ್ಷಣ ಮುಂತಾದವನ್ನು ನೋಡಲು ಹೋದಾಗ ಅವರ ಜತೆಗೆ ಹೋಗುವ ಅಧಿಕಾರಿಗಳು ಬಹಳ ಹಿಂದೆ ಬೀಳುತ್ತಾರೆ-ನಡಿಗೆಯಲ್ಲಿ. (ತನ್ನ ಈ ನಡಿಗೆಯಲ್ಲಿಯೇ ಇಂದು ಜನತೆಯನ್ನು ಮುನ್ನಡೆಯಿಸಿಕೊಂಡು ಹೋಗಲು ಅವರು ಹಟ ತೊಟ್ಟಿದಂತಿದೆ!) ದೇಶದ ಒಳಗೂ ಹೊರಗೂ ಅವರು ಬಿರುಗಾಳಿಯ ಪ್ರವಾಸಗಳನ್ನು ಕೈಗೊಳ್ಳುತ್ತಾರೆ. ಆಗಲೂ ಅವರಿಗೆ "ಥಂಡಿ"—"ಗರ್ಮಿ" ಯಾವುದೇ ವಿಶೇಷ ಬಾಧಿಸಿಪ್ಪೂ ಇಲ್ಲ.

ದಿನಾಲು ಸರಕಾರೀ ಕೆಲಸ ಮುಗಿಯಲು ಅವರಿಗೆ ಮಧ್ಯರಾತ್ರೆ ಆಗುತ್ತದೆ. ಆ ಮೇಲೆ ಅವರು ತನ್ನ ಆಡಳಿತ ಪಕ್ಷದ ರಾಜಕೀಯದತ್ತ ಅವರ ಪತ್ರವ್ಯವಹಾರದತ್ತ ಗಮನ ಕೊಡುವದು. ಅದ್ದರಿಂದಲೇ ಇಂದಿರಾಜೀ 'Mid-night missiles'ಗಳ ಒಗೆಗೆ ನಿಜಲಿಂಗಪ್ಪ ಪ್ರಭೃತಿಗಳಿಂದ ಬೀಷ್ಟೆಗೆ ಗುರಿಯಾದದ್ದು. ಮಧ್ಯಾಹ್ನದ ಊಟವನ್ನು ಅವರು ತನ್ನ ಕಚೇರಿಗೋ ಸಭಾಭವನದಲ್ಲಿಯ ತನ್ನ ಕೋಣೆಗೋ ತರಿಸಿಕೊಳ್ಳುತ್ತಾರೆ. ಕಾಂಗ್ರೆಸು ಇಬ್ಭಾಗವಾಗುತ್ತಿದ್ದಾಗ ಅವರ ಪಕ್ಷದ ಸಲಹೆಗಾರರ ಮಾತುಕತೆ ರಾತ್ರೆ ೧೧ರಿಂದ ೧||-೨ರ ತನಕವೂ ನಡೆಯುತ್ತಿದ್ದವು. ಮತ್ತೆ ೫ಕ್ಕೆ ಅವರು ಹೊಸ ದಿನವನ್ನು ಸ್ವಾಗತಿಸಲು ನಗೆಮೊಗದಿಂದ ಸಜ್ಜಾಗುತ್ತಿದ್ದರು.

ತೇಲಾಂಗಣದ ಚಳವಳಿಯ ಸಮಯದ ಒಂದು ಉದಾಹರಣೆ ಅವರ ಅದ್ಭುತ ಕಾರ್ಯಶಕ್ತಿಗೆ ದ್ಯೋತಕವಾಗಿದೆ. ಅವರು ವಿಶೇಷ ವಿಮಾನದಿಂದ ದಿಲ್ಲಿಯಿಂದ ರಾತ್ರೆ ೧೧||ಗೆ ಹೈದರಾಬಾದಿಗೆ ಬಂದು ಅಲ್ಲಿ ತೇಲಾಂಗಣದ ತಂಡದವರೊಂದಿಗೆ ಮುಂಜಾನೆ ೩ರವರೆಗೆ ಚರ್ಚೆಮಾಡಿ ನಸುಕಿಗೆ ೫||ಗೆ ರಾಜಧಾನಿಗೆ ಮರಳಿಬಂದು ಒಂದು ತಾಸಿನಲ್ಲಿ ಸ್ನಾತ್ರರ್ವಥಿ ಉಪಾಹಾರಗಳನ್ನು ಎಲ್ಲ ಮುಗಿಸಿ ೬||ಗೆ ಪಾಲಂ ವಿಮಾನ ನಿಲ್ದಾಣದಲ್ಲಿ ಮತ್ತೆ ಹಾಜರಾದರು-ಆದೇ ಹೊತ್ತಿಗೇ ಅವರ ಅಫಘಾಣಿಸ್ಥಾನದ ಸಂಚಾರ ಆರಂಭವಾಗುವುದಿತ್ತು. ಕಳೆದ ರಾತ್ರೆಯ ದಣಿವು ಲೆಕ್ಕಿಸದೆ ಅವರು ಆ ದಿನ ಕಾಬೂಲಿನಲ್ಲಿಯ ತನ್ನ ಎಲ್ಲ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಿದರು.

ಮಹಿಳೆಯರಿಗೆ ವಿಸ್ಮಯವೆನಿಸಬಹುದಾದ ವಿಷಯವೆಂದರೆ, ಇಂದಿರಾಜಿಯ ಕೆಲವು ವೈಶಿಷ್ಟ್ಯಗಳು. ಅವರು ಹೆಂಗಸಾಗಿಯೂ ದೂರ ದೂರದ ಪ್ರವಾಸದಲ್ಲಿ ತನ್ನ ಕೆಲಸ ಬೊಗಸೆಗಳಿಗೆ ಆಳುಗಳನ್ನು ಸಂಗಡ ಒಯ್ಯುವುದಿಲ್ಲ. ಅವರ ಕಾರ್ಯದರ್ಶಿನಿಗಳಾದ ಉಷಾಭಗತ ಅಥವಾ ಶ್ರೀಮತಿ ಕೃಷ್ಣಾ ಇವರಲ್ಲಿ ಯಾರೊಬ್ಬರು ಜತೆಗೆ ಇರುತ್ತಾರೆ-ಅದೂ ಇಂದಿರಾಜಿಯವರ ವೈಯಕ್ತಿಕ ಸಹಾಯಕ್ಕಾಗಿ ಅಲ್ಲ, ಹೋದಲ್ಲಿ ಸ್ವಾಗತ ಸಮಾರಂಭದಲ್ಲಿ ಸಂಗಡ ಶೋಭೆಗಾಗಿ ಸಿಬ್ಬಂದಿ ಬೇಕೆಂದು! ತನ್ನ ಬಟ್ಟೆಬರೆ ಇತರ ಸಾಮಾನುಗಳ ವ್ಯವಸ್ಥೆ ಅವರು ತಾನೇ ನೋಡಿಕೊಳ್ಳುತ್ತಾರೆ. ಮನೆಯಲ್ಲಿಯೂ ಅವರು ಹೀಗೇ-ಹೆಚ್ಚಾಗಿ ಸ್ವಾವಲಂಬಿಗಳೇ.

ಅವರ ಕೇಶ ಭೂಷೆ, ಸೀರೆಗಳ ಅಚ್ಚುಕಟ್ಟು, ವರ್ಣ ಸಂಗತಿ, ಬಟ್ಟೆಗಳ ಆಗಾಗ್ಗಿನ ಬದಲಾವಣೆ, ಅವುಗಳ ಔಚಿತ್ಯ-ಇದೆಲ್ಲ ಆಕರ್ಷಕವಾಗಿ ಇಡಲು ಅವರು ತಪ್ಪುವುದಿಲ್ಲ. ಸರಳತೆಯೊಂದಿಗೆ ಶೋಭೆಯನ್ನು ಸಹಜವಾಗಿ ಸಾಧಿಸುವ ಕೌಶಲ್ಯ ಇಂದಿರಾಜಿ ಕಲಿತುಕೊಂಡಿದ್ದಾರೆ. ಹಿಂದೆ ತಂದೆಯ ಪ್ರವಾಸದಲ್ಲಿ ಅವರ ಅಗತ್ಯಗಳನ್ನೆಲ್ಲ ನೋಡಿಕೊಳ್ಳುವ ದಕ್ಷತೆ ಮಗಳದಾಗಿತ್ತು. ಆ ದಕ್ಷತೆಯ ತಾಲೀಮು ಈಗ ತನ್ನ ಬಗ್ಗೆ ಉಪಯೋಗಕ್ಕೆ ಬಂದಿದೆ. ಅವರು ಅಂಗ ಕಾಂತಿಗೆ ಬಣ್ಣ ಬಳಿದು ಮೆರಗು ಕೊಡುವುದಿಲ್ಲ. ಎಸ್. ಎಸ್. ಪಿ.ಯ ರಾಜನಾರಾಯಣರಂಥ ಸದಸ್ಯರು ಅನೇಕ ಸಲ ಅವರನ್ನು ತುಂಟತನದಿಂದ 'ಇಂದಿರಾ ರಾಣಿ' ಎಂದು ಕರೆಯುತ್ತಾರೆ. ಆದರೆ ಈ ಹೆಂಗಸು ತೀರಸಾದಾ ಸರಳ ರೂಪದವಳು. ಮೈ ಮೇಲೆ ವಸ್ತು-ಒಡವೆಗಳಿಲ್ಲ, ಅತ್ತರು, ಸುಗಂಧ ದ್ರವ್ಯಗಳ ಸಿಂಚನವಿಲ್ಲ.

ನೆಹರೂ ಕುಟುಂಬದಲ್ಲಿ ಅನೇಕರು ಲೇಖಕರಾಗಿ ಖ್ಯಾತಿವೆತ್ತಿದ್ದಾರೆ. ಸ್ವಯಂ ಜವಾಹರಲಾಲರು, ಅವರ ಸೋದರಿ ಕೃಷ್ಣಾ ಹಾಥಿ ಸಿಂಗ, ವಿಜಯಲಕ್ಷ್ಮಿ ಪಂಡಿತ, ಅವರ ಮಗಳು ನಯನತಾರಾ ಸಾಯಗಲಿ ಇವರೆಲ್ಲ ಲೇಖಕನಕ್ಕಾಗಿ ಪ್ರಸಿದ್ಧ. ಆದರೆ ಇಂದಿರಾಜಿ ಸಾಹಿತ್ಯ ಲೋಕದ 'ಸಕ್ರಿಯ ಸದಸ್ಯೆ' ಅಲ್ಲ ಆದರೆ ಇವರ ಸಾಹಿತ್ಯ ಪ್ರೇಮಕ್ಕೆ ಕಾವ್ಯಾಭಿರುಚಿಗೆ ವಿನೋದಬುದ್ಧಿಗೆ ಅವರ ಮಾತುಕತೆ ಭಾಷಣಗಳೇ ಸಾಕ್ಷಿ. ಅವರು ಇಂಗ್ಲೀಷ್, ಹಿಂ

Authorised Distributors:

M/S. KARKERA SONS & COMPANY
KARKERA MANSION,
MAIDAN WEST ROAD,
MANGALORE-1.

ಅಧಿಕೃತ ವಿತರಣೆಗಾರರು :

ಕರ್ಕೇರ ಸನ್ಸ್ ಮತ್ತು ಕಂಪೆನಿ
ಕರ್ಕೇರ ಮ್ಯಾನ್ಶನ್,
ಮೈದಾನ್ ವೆಸ್ಟ್ ರೋಡು,
ಮಂಗಳೂರು—1.

ದೀ, ಉರ್ದೂ ಮತ್ತು ಫ್ರೆಂಚ್ ಭಾಷೆಗಳಲ್ಲಿ ಚೆನ್ನಾಗಿ ಮಾತಾಡಬಲ್ಲರು. ಅಲ್ಲದೆ ಬಂಗಾಲೀ, ಪಂಜಾಬಿ, ಮರಾಠೀ ಅವರಿಗೆ ತಕ್ಕಮಟ್ಟಿಗೆ ಬರುತ್ತವೆ. ಆದರೆ ತಾರಕೇಶ್ವರಿ ಸಿಂಹರಂತೆ ಅವರು ನೂರಾರು ಉರ್ದೂ ಕಾವ್ಯ-ಪದ್ಯಗಳನ್ನು ಭಾಷಣದಲ್ಲಿ ಉರುಳಿಸಲಾರರು. ಸಾಯುವ ಕೆಲವು ದಿನಗಳ ಮುಂಚೆ ಜ| ಡಿಗಾಲ ತನ್ನ ಆತ್ಮ ವೃತ್ತದ ಖಂಡಗಳನ್ನು ಇಂದಿರಾಜಿಗೆ ಪ್ರೀತಿಯಿಂದ ಕಾಣಿಕೆಯಾಗಿ ಕಳುಹಿಸಿದ್ದನ್ನು ಇಲ್ಲಿ ನೆನೆಯಬಹುದು.

ಜಗತ್ತಿನ ಇತಿಹಾಸದ ಇಣುಕು ನೋಟಗಳನ್ನು ತಂದೆಯೇ ಮಗಳಿಗೆ ಚಿಕ್ಕಂದಿನಲ್ಲಿಯೇ ಮಾಡಿಕೊಟ್ಟರು. ಆದ್ದರಿಂದ ಯಾವದೇ ವಿಷಯ ಪ್ರಮೇಯದ ಐತಿಹಾಸಿಕ ಹಿನ್ನೆಲೆ ಅವರ ಹಂಬಲದಲ್ಲಿ ಸಿದ್ಧವಾಗಿಯೇ ಇರುತ್ತದೆ. ತೂಕ ತಪ್ಪಿದ, ವಿನಯ ತಪ್ಪಿದ ಮಾತು ಅವರ ಬಾಯಿಂದ, ಬರಹದಲ್ಲಿ ಬರುವದೇ ವಿರಳ.

ಮುಂದೆ ಗಾಂಧೀಜಿ ಮತ್ತು ಗುರುದೇವ ಟಾಗೋರರವರ ಜೀವನ-ದರ್ಶನಗಳ ಪ್ರಭಾವ ಇಂದಿರಾಜಿಯ ಮೇಲೆ ಆಳವಾಗಿ ಆಯಿತು. ಅವರ ಕಲಾತ್ಮಕತೆಗೆ, ರಸಿಕತೆಗೆ ಕಾವ್ಯಾಭಿರುಚಿಗೆ ಶಾಂತಿನಿಕೇತನವು ಸಂಸ್ಕಾರ ನೀಡಿತು. ಆದ್ದರಿಂದ ಅವರ ಸಂದರ್ಶನಗಳು ಪತ್ರಿಕಾ ಪರಿಷತ್ತುಗಳು ತುಂಬ ಪ್ರಭಾವಿಯಾಗುತ್ತವೆ.

ರಾಜಕಾರಣದ ರೂಕ್ಷ ಕ್ಷೇತ್ರದಲ್ಲಿ ಸದಾಕಾಲವೂ ಜೀವ ಸವೆಸುತ್ತಿರುವಾಗಲು ಇಂದಿರಾಜಿ ವಾತ್ಸಲ್ಯಮೂರ್ತಿ--ತಾಯಿ. ದೀನ ದಲಿತ ದುಃಖ ಪೀಡಿತರ ಕರೆಗೆ, ಮೊರೆಗೆ ಅವರ ಕರುಳು ಕೂಡಲೆ ಕರಗುತ್ತದೆ. ಸಾರ್ವಜನಿಕವಾಗಿ ಮಾತ್ರವಲ್ಲ ವೈಯಕ್ತಿಕವಾಗಿ ದೇಶದ ಯಾವ ಮೂಲೆಯಿಂದಲೂ ಅಂಥ ನೊಂದವರ ಬೆಂದವರ ಪ್ರಾರ್ಥನೆ ಅವರ ಕಿವಿಗೆ ಕಣ್ಣಿಗೆ ಬಿದ್ದರೆ ಇಂದಿರಾಜಿ ಕೂಡಲೆ ಅವರ ನೆರವಿಗೆ ತನ್ನಿಂದ ಆದಷ್ಟೂ ಪ್ರಯತ್ನ ಮಾಡುತ್ತಾರೆ.

ಇಂದಿರಾಜಿ ಸಮಾಜವಾದಿಗಳು ಅಹುದೋ ಅಲ್ಲವೊ ಇದು ಮುಖ್ಯವಲ್ಲ. ಸಮಾಜವಾದವೆಂದರೆ ಬರೆ ಭೂತದಯಾವಾದವಲ್ಲ. ಅದು ವೈಯಕ್ತಿಕ ಹೃದಯ ಪರಿವರ್ತನೆಯ ಸರ್ವೋದಯ ವ್ರತವಲ್ಲ. ಅದೊಂದು ಸಾಮುದಾಯಿಕ ಸತ್ತೆಯಿಂದ ಸ್ಥಾಪಿಸಬೇಕಾದ ಸಾಮಾಜಿಕ ಜೀವನ ಪದ್ಧತಿ. ಆದ್ದರಿಂದ ಇಂದಿರಾಜಿಯ ವ್ಯಕ್ತಿಗತ ಅಭಿಪ್ರಾಯಗಳು ಏನೇ ಇರಲಿ ಅವುಗಳ ಹಿಂದಿನ ಪ್ರೇರಣೆಗಳು ಏನೇ ಇರಲಿ ಅವರು ಇಂದು ಭಾರತವನ್ನು ಪ್ರಾಮಾಣಿಕವಾಗಿಯೂ ಸಮಾಜವಾದೀ ಸಮಾಜ ರಚನೆಯ ಸ್ಥಾಪನೆಗೆ ಒಯ್ಯುವ ದಾರಿಯಲ್ಲಿ ದಿಟ್ಟ ಹೆಜ್ಜೆಯನ್ನು ತನಗೆ ಸಹಜವಾದ ದ್ರುತಗತಿಯಲ್ಲಿ ಇಡುತ್ತಾ ಮುನ್ನಡೆದಿದ್ದಾರೆ.

"ನೀವು ರಾಜಕಾರಣದಿಂದ ನಿವೃತ್ತರಾದ ಮೇಲೆ ಏನು ಮಾಡಬಯಸುವಿರಿ?" ಒಬ್ಬ ಪತ್ರಿಕೋದ್ಯಮಿ ಇಂದಿರಾಜಿಯನ್ನು ಕೇಳಿದ ಅವರೆಂದರು, "ಸುದೈವದಿಂದ ನನಗೆ ಇಬ್ಬರು ಒಳ್ಳೆಯ ಹುಡುಗರಿದ್ದಾರೆ. ಅವರೊಂದಿಗೆ ನಾನು ಸುಖವಾಗಿ ಶೇಷಾಯುಷ್ಯವನ್ನು ಕಳೆಯುವೆನು." ಈ ಮಾತಾಡಿದಾಗ ರಾಜೀವನ ಮದುವೆ ಆಗಿದ್ದಿಲ್ಲ. ಈಗ ಮದುವೆಯಾಗಿ ಮನೆಯಲ್ಲಿ ಇಟಾಲಿಯನ್ ಸೊಸೆ ಬಂದಳು. ಮೊಮ್ಮಗ ರಾಹುಲ ಅಂಬೆಗಾಲಿಡುತ್ತಿದ್ದಾನೆ. ಈ ವೃದ್ಧಿಗೊಳ್ಳುವ ವಂಶವಲ್ಲಿಯೊಂದಿಗೆ ಪ್ರಿಯದರ್ಶಿನೀ ಇಂದಿರೆಯ ಆಯುರಾರೋಗ್ಯವೂ ಕರ್ತೃತ್ವವೂ ಇನ್ನೂ ವಿಕಾಸಗೊಂಡು ಪ್ರಫುಲ್ಲವಾಗಿ ಫಲಿಸಲಿ ಎಂದು ಐವತ್ತಮೂರನೆಯ ವರ್ಷದಲ್ಲಿ ಹೆಜ್ಜೆ ಇಟ್ಟ ಅವರ ಕುರಿತು ಹಾರೈಸಿದರೆ ತಪ್ಪಾಗಲಾರದು.

ಬಗ್ಗವಾಡಿ ಶ್ರೀ ಮಹಿಷಮರ್ದಿನಿ

(ಹನ್ನೆರಡನೇ ಪುಟದಿಂದ)

ನಿಯ ಶಿಲ್ಪವನ್ನು ಹೋಲುತ್ತದೆ. ಕಾಲಮಾನದಲ್ಲಿ ಇವೆರಡೂ ವಿಗ್ರಹಗಳು ಸು. ಕ್ರಿ.ಶ. ೮ನೇ ಶತಮಾನಕ್ಕೆ ಅನ್ವಯವಾಗಬಹುದು. ವಿಕಲದ ವಿಗ್ರಹವು ಇನ್ನೂ ಸ್ವಲ್ಪ ಪ್ರಾಚೀನವೇ ಆಗಬಹುದು.

ಮಹಿಷಮರ್ದಿನಿ ವಿಗ್ರಹಗಳ ವಿಶೇಷ ಅಭ್ಯಾಸ ಮಾಡುವ ಜಿಜ್ಞಾಸುಗಳು ಬಗ್ಗವಾಡಿಯ ಮಹಿಷಮರ್ದಿನಿಯನ್ನೂ, ವಿಕಲದ ಮಹಿಷಮರ್ದಿನಿಯನ್ನೂ, ಕಣ್ಣಾರಿನ ಮಹಿಷಮರ್ದಿನಿಯನ್ನೂ, ಕಡಿಯಾಳಿಯ ಮಹಿಷಮರ್ದಿನಿಯನ್ನೂ ಕುಂಜೂರಿನ ಮಹಿಷಮರ್ದಿನಿಯನ್ನೂ ನಂದಿಕೂರಿನ ಮಹಿಷಾಸುರ ಮರ್ದಿನಿಯನ್ನೂ ಮಂದರ್ತಿಯಲ್ಲಿ ಭಿನ್ನವಾಗಿ ಹೊರಗಿರಿಸಲ್ಪಟ್ಟ ಮಹಿಷಮರ್ದಿನಿ ವಿಗ್ರಹವನ್ನೂ, ಕುಂಜಾರಿನ ಮಹಿಷಾಸುರ ಮರ್ದಿನಿ ವಿಗ್ರಹವನ್ನೂ ಗುಂಡುಮೆ ಮತ್ತು ಬೈಂದೂರಿನ ಮಹಿಷ, ಮಹಿಷಾಸುರ ಮರ್ದಿನಿ ವಿಗ್ರಹಗಳನ್ನೂ ಕಂಡು ಅಭ್ಯಸಿಸುವುದು ಅಗತ್ಯವಾಗಿದೆ.

ಬಗ್ಗವಾಡಿಯ ಮಹಿಷಮರ್ದಿನಿಯಂತಹ ವಿಗ್ರಹಗಳು ಕರ್ನಾಟಕದಲ್ಲಿ ವಿರಳವೆನ್ನಬೇಕು. ಈ ದೇವಾಲಯದಲ್ಲಿ ಪೂಜೆ ಯೋಗ್ಯ ರೀತಿಯಲ್ಲಿ ನಡೆಯುವಂತೆ ಸಂಘವು ಏರ್ಪಡಿಸಿದ ಕಾರ್ಯವು ಸ್ತುತ್ಯವಾಗಿದೆ. ದೇವಾಲಯವು ಸುವ್ಯವಸ್ಥಿತವಾಗಿದೆ. ಕಟ್ಟಡದ ಪುನರ್ನಿರ್ಮಾಣವಾಗುವ ಮೊದಲು ಮುಳಿ ಮಾಡಿನಿಂದ ಕೂಡಿದ ದುರವಸ್ಥೆಗೀಡಾದ ದೇವಾಲಯವಿದಾಗಿತ್ತೆಂದು ತಿಳಿದು ಬರುತ್ತದೆ.

[ಈ ದೇವಾಲಯವನ್ನು ಪರಿಶೀಲಿಸಿ ಛಾಯಾಚಿತ್ರಗಳನ್ನು ತೆಗೆಯಲು ಅನುಮಾಡಿಕೊಟ್ಟ ದೇಗುಲದ ಆಡಳಿತೆಯನ್ನು ನಡೆಸುವ ಶ್ರೀ ನಾಯ್ಕರಿಗೂ ದೇಗುಲದ ಅರ್ಚಕರಿಗೂ ನನ್ನೊಡನೆ ಸಹಕರಿಸಿದ ನನ್ನ ಸಹೋದ್ಯೋಗಿ ಶ್ರೀ ನರಸಿಂಹ ಕೆದ್ಲಾಯರಿಗೂ ನನ್ನ ವಂದನೆಗಳು.]

ವಿಕಲದ ಪಂಚಲಿಂಗೇಶ್ವರ ದೇವಾಲಯದ
ಶ್ರೀ ಮಹಿಷಮರ್ದಿನಿ [ಸು. ಕ್ರಿ.ಶ. 8ನೇ ಶತಕ]

ಮುರುಕು ಮಂಚ

ಮುರುಕು ಮಂಚ, ಮುರುಕು
ಗುಡಿಸಲು,
ಹರಿದ ಚಪ್ಪಲಿ, ಹರಿದ ತನುಮನ
ಎಲ್ಲ ನಗುತ್ತವೆ. ಕೂ....ಗುತ್ತವೆ
ಗಾಳಿಗೋ? ಬೆಳಕಿಗೋ? ಒಟ್ಟಾರೆ
ನಡುಗುತ್ತವೆ—
ಆಗಾಗ ದೇವನನು ನೆನೆಯುತ್ತ
ಎರಡು ಕಾಲಿನ ಮಂಚಕ್ಕೆ
ಹಲವು ಕಾಲದ ಧರ ಹೆಚ್ಚಾಗಿ ಹೋಗಿ
ಒಂದೇ ಕಾಲಾಗುತ್ತ
ಲಟ್ಟಣಿಗೆ, ಉನ್ಮಾದ, ಆಸೆ,
ಎಲ್ಲ ಕೂಡಿದೆ, ಕಪ್ಪೆ ಬದುಕಾಗಿದೆ,
ಬದುಕಬೇಕಾಗಿದೆ
ಸೋರು ಜೀವದ ಕೆಳಗೆ ಹಸಿವಣ್ಣು
ಮಿಡಿಯುತಿದೆ
ಮೊಳಕೆ ಏಳುವ ಮೊನಲೆ
ಉಗುರು ಚಿವುಟುತಿದೆ
ಮಂಚಕ್ಕು ಚಳಿಯಿದೆ, ಆಗಾಗ
ಸೆಟೆಯಿದೆ
ಹಾವಸೆಗೆಯ ಮೇಲ್ಗಡೆವ ಗಮ್ಮತ್ತೂ
ಬಹಳದೆ
ಅಂದಾಗ ನಡೆಯಲೇಬೇಕು
ಬೀಳಲೇಬೇಕು. ಕುರುಡು ಕಂಡದ
ಬೊಬ್ಬೆ—
ಹೊಡೆಯಲೇಬೇಕು.
ಏನೇ ಆಗಲಿ, ಏನೇ ಹೋಗಲಿ—
ಮರ ಮರವೇ, ಮಂಚ ಮಂಚವೇ,
ಹೊರಲು ಮಾತ್ರ [illegible]ಕು!
ಜನರು ಬರೇ ನಾಲ್ಕು!!
ಇಷ್ಟೇ ಸಾಕು!!!

ಜಯಂತಕುಮಾರ ಕ್ಯಾಕಿಣಿ,
ಗೋಕರ್ಣ

ಕನ್ನಡದಲ್ಲಿ ಅಪೂರ್ವವಾದ
ಪುಸ್ತಕ

ಸ್ವಪ್ನಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ [illegible] ವಿವರಗಳನ್ನೊಳಗೊಂಡ '[illegible]' [illegible] ಕಿರುಹೊತ್ತಗೆ ಬೆಲೆ [illegible]—50

ವಿ. ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪ್ರಸಂಗ ಪುಸ್ತಕಗಳು
ಸಾಹ[illegible] ಭೀ[illegible] ವಿಜ[illegible] [illegible]
[illegible]
[illegible] [illegible]5[illegible]
ಲಕ ಪಗಡೆ [illegible]
ಭಾರತದ ಗುರುಕುಲ [illegible] 4[illegible]
ಭರತೇಶ ದಿಗ್ವಿಜಯ 0—50

ಪ್ರತಿ ಪುಸ್ತಕಕ್ಕೂ ಟಪಾಲು ವೆಚ್ಚ [illegible] ಕಳಿಸಲು 0-30 ಪೈಸೆ ಹಂಚಿ [illegible]

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ. ಕ.

ಕನ್ನಡ ತಾಯಿಯ ನಿವೇದನೆ

ಕನ್ನಡ ತಾಯಿ ತನ್ನ ಮಕ್ಕಳಲಿ ಒಂದು
ಬಿನ್ನಹವ ಮಾಡವಳು ಕಣ್ಣೀರು ತಂದು!
"ಕರ್ನಾಟಕ ಎಂದು ಬಿಡಿ; ಕನ್ನಡವ ಬೆಳಸಿ
ಸರಿಕರಲಿ ನನ್ನದೂ ಮರ್ಯಾದೆ ಉಳಿಸಿ !"

—ಜಿ. ಎಸ್. ಅನ್ನದಾನಿ

‘ಸೃಷ್ಟಿಯಾಚೆಗು ನಿಲುವ ಸೃಷ್ಟಿ’

ಬರೆದವರು : ‘ದೇವಕಿನಂದನ’, ಭದ್ರಾವತಿ.

ಅವನೊಬ್ಬನಿದ್ದ.
ಅವನೊಬ್ಬನೆಂದೇನು?
ಜನರಿದ್ದರವನ ಹಿಂದೂ.
ಹಿಂದೇಕೆ? ಮುಂದೆಯೂ ಬೆಳೆಯುವುದು
ಈ ಸಾಲು.

ಈ ಸಾಲಿನಲ್ಲಿ
ಎದ್ದು ಕಂಡವನೊಬ್ಬ.
ಹಾಗೆನಲು ನೋಡಲೆತ್ತರವಾಳೆ?
ದಪ್ಪ—ತೂಕದೊಳು?
ನೋಡಿದರೆ, ಮತ್ತೊಮ್ಮೆ, ಮಗುದೊಮ್ಮೆ
ನೋಡಲೇಬೇಕೆಂಬ ಬಯಕೆ
ಥಾಂಗುಡಿಯಿಡುವ ರೂಪೆ?
ಅಂಥದ್ದು ಏನಿಲ್ಲ! ಆದರೂ
ಅವನೊಬ್ಬ ಆಳು!
ಕೋಟಿ ಕೋಟಿಯ ಮುಂದು ಎದ್ದು
ಕಾಣುವ ಆಳು!
ಬೊಕ್ಕ ತಲೆ—ಬೊಚ್ಚ ಬಾಯಿ
ಎಲುಬು ಹಂದರಸುತ್ತ
ಹೊಲಿಸಿತ್ತು ತೊಗಲ.
ನಡೆ ನೇರ! ವೇಗದಲಿ
ಉಳಿದವರು ಹಿಂದು, ಹಿಂದೂ!
ಆದರೂ ಕೈಯೊಳಿತ್ತೊಂದೂರುಗೋಲು.
ಅವನೊಬ್ಬ ಹಣ್ಣು ಮುದುಕ.
ದುಡಿದು ಹಣ್ಣಾಗಿದ್ದ.
ಲೋಕಭಾರವ ಹೊತ್ತು ಸಣ್ಣಾಗಿದ್ದ.
ಮೂಗು ನಸು ಬಾಗಿತ್ತು
ಬಾಗಿದ್ದ ಮೂಗನೇರಿತ್ತು ಕನ್ನಡಕ,
ಅದರೆಡೆಯೊಳಡಗಿತ್ತು
ಭೂತಗನ್ನಡಿ—ಕಣ್ಣೆರಡು.
ನೋಡಿದರೆ ಸಾಕು! ನೀನವನ ದಾಸ
ಅವನೆ ಮೋಹನದಾಸ.
ಬೆಳ್ಳಿ ಮೀಸೆ.
ಆಗಿರಲೆ ಬೇಕಿವಗೆ ವಯಸು.
ಆರು ಹೇಳುವದದರ?
—ಎಳೆಯರನು ನಾಚಿಸುವ ಉತ್ಸಾಹ—
ದಿನವಿಡೀ ದುಡಿದರೂ ದಣಿಯದಿಹ
ಮನಸು
ಮಗುವಿನಂತಹ ಮನಸು.
ನಗೆಯೊ?—ಬೆಳ್ದಿಂಗಳು
ಮಾತುಗಾರನೊ?
ಮಾತಾಡದಿಹ ಮೌನಿ.
ಮಾತುಗಾರರ ಮಣಿಪ ರುದ್ರ ಮೌನ.
ಮಾತೊ? ಮಾತುಗಳೆ?
ಉರಿವ ಉಲ್ಕೆಗಳು!
“ಮಾಡು! ಮಡಿ!” ಇದು ಅವನ ನುಡಿ
ಮನಸೆಂತೊ, ಮಾತಂತು!
ಮಾತೆಂತೊ, ಕೃತಿಯಂತು!
ಧೃತಿಯದುವು ಸಾವವಗೆ ತಂತು.
ಧೀರನೇ?—ಪಾಪ ಭೀರು!
ಸಾಮ್ರಾಜ್ಯಗಳೆ ನುಗ್ಗಿದರು
ಜಗ್ಗದಚಲ ನಿರ್ಧಾರ
ಸೋತರೊ, ಸೋಲನರಿಯದ ಶೂರ!
ಮುಗಿಲೆ ಧರೆಗೆರಗಿದರು, ನೆಲವೆ
ನಭಕೇರಿದರು,
ಇವನಿರುವ ಗಂಭೀರ
ಕತ್ತಿ ಮಸೆದನೆ?

ಬಿಲ್ಲು—ಬಾಣ ಬಳಸಿದನೆ?
ಕೋಟಿ—ಕೊತ್ತಳ ಕಟ್ಟಿ, ಸೈನ್ಯವನು
ತಾನಿಟ್ಟು
ರಾಜ್ಯಗಳ ಮೆಟ್ಟಿ
ಸಾಮ್ರಾಜ್ಯ ಕಟ್ಟಿದನೆ? ಒಂದು ಇಲ್ಲ!
ಎಲ್ಲವನು ಬಲಿಗೊಟ್ಟು, ಎಲ್ಲವನು
ಪಡೆದ!
ಜನರೊಳ್ಳಿತನೆ ಬಗೆದ!
ಸನ್ಯಾಸಿಯೇ?
ಕಾಂಚನವ. ಕಾಮಿನಿಯ, ಕಾಮಿಸದ
ಕಾಷಾಯ ಧರಿಸದಿಹ ಸನ್ಯಾಸಿ!
ಹೊರಗೆಂತೊ ಒಳಗು ಅಂತೆಯೆ ಇದ್ದ!
ದಂಡ ಯಾತ್ರೆಯ ಮಾಡಿ
ರಿಪು ಮುಂಡಿಗಳ ಕೆಡಹಿದನೆ? ಏನು
ಇಲ್ಲ!
ಆದರೂ ದಂಡಿ ಯಾತ್ರೆಯ
ದಂಡನಾಯಕನಿತ
ಬಾಳುದ್ದ ಬಂಡುಗಾರ!
“ಕಳ ಬೇಡ! ಕೊಲ ಬೇಡ! ಹುಸಿಯ
ಹೇಳಲು ಬೇಡ!”
ಲಾಠಿ ಏಟಿಗೊ, ಗುಂಡಿನೇಟಿಗೊ
ಬಿದ್ದು ಹೋಗಲಿ ದೇಹ.
ಬರಿಯ ನೆತ್ತರೆ ಸಾಕೆ?
ನಿನ್ನಸುವೆ ಬೇಕದಕೆ ಜೋಕೆ!
ಹೀಗೆ ಹೇಳಿದ ಜಟ್ಟಿ
ಎದೆ ತಟ್ಟಿ
ಭಾರತಿಯ ಬಿಡುಗಡೆಗೆ ಬೇಕಿದುವೆ ಗಟ್ಟಿ!
ದಾಸ್ಯ ನಿದ್ರೆಯೊಳಿದ್ದ
ಭಾರತದ ಚೇತನವ
ಬಡಿದೆಬ್ಬಿಸಿತು. ಇವನ ಭೇರಿ ನಾದ!
ಆದರೂ—ಅವ ಮಲಗಿಯೇ ಇದ್ದ.
ಮಲಗಿದ್ದರೂ, ಎಚ್ಚರಿದ್ದ; ಎಚ್ಚರಿದ್ದರು
ಮಲಗಿದಂತಿದ್ದ,
ಅವನೇಳೆ
ಭಾರತಕೆ ಭಾರತವೆ ಏಳುತಿತ್ತು!
ರಣ ಕಹಳೆ ಕೇಳುತಿತ್ತು!
ಹಸಿವು
ತೃಷೆ
ನಿದ್ರೆಗಳ
ಮರೆತು ಮಲೆತು ನಿಲುತಿತ್ತು!
ಅವನ ಹೆಸರೆತ್ತಿದರೆ
ಚಕ್ರಾಧಿಪತ್ಯಗಳ, ಆಳಿದರಸುಗಳ
ಎದೆ ತಲ್ಲಣಿಸಿ
ಮಂಜಾಗುತಿತ್ತು!
ಚರ್ಚಿಲರ ಚುಟ್ಟದಿಂ
ಕೆಂಗಿಡಿ ಹಾರುತಿತ್ತು!
ಪಂಚಮರೊ, ಪಂಚಮ ಜಾರ್ಜರೊ,
ಆರ ಭಟ್ಟಿಯೆ ಇರಲಿ,
ಇಷ್ಟೊಂದೆ ವೇಷ!
ಅವಗಿಲ್ಲ ವಿಧ ವಿಧದ ವೇಷ! ಥಳಕು,
ಪೋಸು!
ಮೊಣಗಾಲ ಮುಟ್ಟದಿಹ,
ಉಡುಗಲು ಗಜ್ಜೆ!
ಇಳಿಬಿದ್ದ ಶಾಲು ಮೈಮುಚ್ಚೆ!
ಛಳಿ—ಮಳೆಯೆ, ಉರಿ ಬಿಸಿಲೆ
ಎಲ್ಲ ಅವನಿಚ್ಛೆ!

ಶ್ರೀ ಶಿಮುಂಜೆ ಪರಾರಿ.

ಆದರ್ಶ ಕಳ್ಳ

ಕಳ್ಳತನ ಮಾಡಬೇಡವೆಂದು ಗುರು ಹೇಳಿದೊಡನೆ ಮಹಾರಾಜನು ಯಹೋವನೂ ಕಳ್ಳತನ ಮಾಡಿಲ್ಲವೇನು—ಎಂದು ಸವಾಲೊಡ್ಡಿದ. ಗುರು ಉತ್ತರಿಸಲಾಗದ ಈ ಪ್ರಶ್ನೆಯನ್ನು ಗುರುಪುತ್ರಿ ಉಪಾಯಾಂತರದಿಂದ ಉತ್ತರಿಸಿದಳು.

ಮಹಾತ್ಮಾ ಯೇಸುಕ್ರಿಸ್ತನ ಸಮಕಾಲೀನರೂ, ಯಹೂದೀ ಧರ್ಮಶಾಸ್ತ್ರಗಳ ಪ್ರಕಾಂಡ ಪಂಡಿತರೂ, ರಾಜ ಮತ್ತು ಪ್ರಜೆಗಳ ಶ್ರದ್ಧೆಗೆ ಪಾತ್ರರಾದವರೂ ಆದ ಗಮಲೀಯಲ್ ಎಂಬೊಬ್ಬ ಧರ್ಮಗುರುಗಳಿದ್ದರು. ಯಹೂದೀ ನಿಯಮಶಾಸ್ತ್ರವೆನಿಸಿದ ‘ಥೋರಹ್’ದ ಆಚಾರ್ಯರೇ ಅವರು.

ಒಮ್ಮೆ ಅವರು ಯಹೂದೀ ಅರಸನಿಗೆ “ಯಹೋವಾನ (ಯಹೂದಿಗಳ ದೇವರು) ಹತ್ತು ಆಜ್ಞೆಗಳನ್ನು ವಿವರಿಸುತ್ತಿದ್ದರು. ಎಂಟನೇ ಆಜ್ಞೆಯಲ್ಲಿ—“ನೀನು ಕಳ್ಳತನ ಮಾಡಬೇಡ.” ಎಂಬೊಂದು ಮಾತು ಇತ್ತು.

ಕೂಡಲೇ ಅರಸನು ನಗುತ್ತಾ—“ರಬ್ಬೀ (ಗುರು)ಗಮಲೀಯಲ್ ನಿಮ್ಮ ಮಾತು ವಿಚಿತ್ರವಾಗಿದೆ” ಎಂದನು.

ಗಮಲೀಯಲ್ ಕಕ್ಕಾವಿಕ್ಕಿಯಾದರು. ಅವರು ಆಶ್ಚರ್ಯದಿಂದ ಅರಸನನ್ನು ದಿಟ್ಟಿಸುತ್ತಾ—“ಮಹಾರಾಜಾ, ನಿಮ್ಮ ಮಾತು ಅರ್ಥವಾಗಲಿಲ್ಲ.” ಎಂದರು.

“ರಬ್ಬಿ, ನಮ್ಮ ಮಾತೆಯಾದ ಈವಳ ನಿರ್ಮಾಣ ಹೇಗಾಯಿತು ಎಂಬುದು ನಿಮಗೆ ತಿಳಿದೇ ಇದೆ. ಆದಿ ಪುರುಷ ಆದಂ ಮಲಗಿದ್ದಾಗ ಯಹೋವಾ ಅವನ ಒಂದು ಪಕ್ಕೆ ಲುವನ್ನು ಕದ್ದು, ಈವಳನ್ನು ನಿರ್ಮಿಸಿದ್ದನಲ್ಲವೇ?”

“ಮಹಾರಾಜಾ, ಇದು ಈಶ್ವರನಿಂದೆ” ಎಂದರು ಗಮಲೀಯಲ್.

“ಇಲ್ಲ ರಬ್ಬೀ, ನಾನು ಯಹೋವಾನನ್ನು ನಿಂದಿಸುತ್ತಿಲ್ಲ. ಆದರೆ ನಾನು ಹೇಳಿದುದು ಸುಳ್ಳೇನು?”........ಎಂದು ಪುನಃ ಪ್ರಶ್ನಿಸಿದನು ಅರಸ.

ಸೆರೆಮನೆಯೊ, ಅರಮನೆಯೊ,
ಅವಗೆಲ್ಲ ಒಂದೆ—ನಿಂದೆಯಪನಿಂದೆ!
ಹೊರಗಿರಲು
ಬಾಯಿ—ಬರವಣಿಗೆಗಿರೆ ನಿರ್ಬಂಧ
ನೀ ಬಂದಿ! ಒಳಗಿರೆ ಬಂದಿಯೇ?
ಬಂಧ—ಮೋಕ್ಷಕೆ
ಒಳಗಿನಂಧಕಾರವೆ ಬಂಧು
ಬಿಡುಗಡೆಗೆ ಬಂಧನವೆ ನಾಂದಿ.
ಹೀಗೆಂದ ದೃಷ್ಟಾರ,
ದಲಿತರಾಧಾರ
ಭಾರತದ ನೇತಾರ—ಅವನೆ ಗಾಂಧಿ.
ಅವನಿಲ್ಲ ಇನ್ನು. ಹೀಗೆ ಹೇಳುವರಿನ್ನು!
ಹಾಗೆ ಹೇಳುವರೆಲ್ಲ ನಿಜಪನರಿತವರಲ್ಲ.
ಈ ಮಾತು ಹೊಲ್ಲ.
ಹುಟ್ಟುವರು ಸಾಯುವರು
ಇದು ಸೃಷ್ಟಿ ಗುಟ್ಟು.
ಹುಟ್ಟು ಸಾವನು ಮೆಟ್ಟಿ ನಿಂತರ ಬಾಳು
ನೊಳಗುಟ್ಟು ದೂರ ದೃಷ್ಟಿ!
ಸೃಷ್ಟಿಯಾಚೆಗು ನಿಲುವ ಸೃಷ್ಟಿ!

ಯಹೂದಿ ಧರ್ಮ ಶಾಸ್ತ್ರದ ಪ್ರಕಾಂಡ ಪಂಡಿತ ಗಮಲೀಯಲ್ ನಿರುತ್ತರರಾಗಿದ್ದರು. ಕೂಡಲೇ ಮನೆಗೆ ಹಿಂತಿರುಗಿಬಂದ ರಬ್ಬೀ ಯಹೂದೀ ಧರ್ಮದ ಮಹಾಸಭೆಯ ಎಪ್ಪತ್ತು ಸದಸ್ಯರ ಆಪತ್ಕಾಲೀನ ಸಭೆಯನ್ನು ಕರೆದರು. ಈ ಎಪ್ಪತ್ತು ಮಂದಿ ಮಹಾಪುರುಷರು ಕೂಡ ಧರ್ಮ ಶಾಸ್ತ್ರದ ಪಂಡಿತರಾಗಿದ್ದರು. ಆದರೆ ರಾಜನಿಗೆ ಹೇಗೆ ಉತ್ತರಿಸಬಹುದು ಎಂಬ ಬಗ್ಗೆ ಯಾವ ಸಲಹೆಯನ್ನೂ ಕೊಡುವುದು ಅವರಿಗೆ ಹೊಳೆಯಲಿಲ್ಲ.

ರಬ್ಬೀ ಗಮಲೀಯಲ್ ಅವರ ಪುತ್ರಿಗೆ ತಂದೆಯ ಚಿಂತೆ ತಿಳಿಯಿತು. ಕೂಡಲೇ ಅವಳು ಅರಮನೆಗೆ ಹೋದಳು. ಅಲ್ಲಿ ರಾಜನ ಮುಂದೆ ನಿಂತು ಆಕೆ ಪ್ರಭೂ, ನ್ಯಾಯವಾಗಬೇಕು” ಎಂದು ಬೇಡಿಕೊಂಡಳು.

“ನ್ಯಾಯ?”

“ಹೌದು ಪ್ರಭೂ, ನಿನ್ನೆ ರಾತ್ರಿ ನನ್ನ ಮನೆಗೆ ಕಳ್ಳ ನುಗ್ಗಿದ್ದ. ಅವನು ನನ್ನ ಬೆಳ್ಳಿಯ ಹಣತೆಯನ್ನು ಕದ್ದು—ಅದರ ಬದಲು ಚಿನ್ನದ ಹಣತೆಯನ್ನು ಅಲ್ಲಿ ಬಿಟ್ಟು ಹೋಗಿದ್ದಾನೆ. ಪ್ರಭೂ ನನಗೆ ನ್ಯಾಯ ದೊರಕಬೇಕು” ಎಂದಳು.

ಅರಸನು ಬಿದ್ದು ಬಿದ್ದು ನಗತೊಡಗಿದನು.

ಅರಸನ ನಗು ಮುಗಿಯುವ ತನಕವೂ ಸುಮ್ಮನೆ ನಿಂತಿದ್ದ ಗಮಲೀಯಲ್ ಪುತ್ರಿ ಪುನಃ ತನ್ನ ಬಿನ್ನಹವನ್ನು ಪುನರುಚ್ಚರಿಸಿದಳು—“ಪ್ರಭೂ ನನಗೆ ನ್ಯಾಯಬೇಕು”.

ಅರಸನು ಮುಗುಳ್ನಗುತ್ತಾ ಹುಡುಗಿಯ ಬೆನ್ನು ತಟ್ಟಿ—‘ಅಂತಹ ಆದರ್ಶ ಕಳ್ಳ ದಿನಾ ಮಹಲಿಗೆ ಬರುತ್ತಿದ್ದರೆ’....ಎಂದು ಉದ್ಗರಿಸಿದನು.

ತಕ್ಷಣ ಗುರು ಗಮಲೀಯಲ್ ಪುತ್ರಿಯು ಗಂಭೀರವಾಗಿ —“ಹೌದು ಪ್ರಭೂ, ನಿಮ್ಮ ಮಾತು ಸತ್ಯ, ನನ್ನ ಪರಮೇಶ್ವರನಾದ ಯಹೋವನೂ ಅಂತವನೇ. ಅವನು ಆದಿ ಪುರುಷ ಆದಂ ನಿಂದ ಒಂದು ಪಕ್ಕೆಲುವನ್ನು ಕದ್ದನು; ಅದರ ಬದಲು ಅವನಿಗೊಬ್ಬ ಸುಂದರ ಜೀವನ ಸಂಗಾತಿ ಸ್ತ್ರೀಯನ್ನು ಒದಗಿಸಿದನು!” ಎಂದಳು.

(ಯಹೂದೀ ಧರ್ಮಗ್ರಂಥ ‘ತಾಲಮೂದ’ ದಿಂದ—ನಾರಿಕಾ ಕೃಪೆ)

ಎಲ್ಲ ಧರ್ಮಗಳ ಬಗ್ಗೆ ಸಹಿಷ್ಣುತೆಯಷ್ಟೇ ಸಾಲದು. ಸಮಭಾವವೂ ಬೇಕು. ಅಂದರೆ ಮಾತ್ರ ಎಲ್ಲ ಜಾತಿಯವರು ಪರಸ್ಪರರೊಡನೆ ಕೂಡಿಕೊಂಡು ಬಾಳಬಲ್ಲರು. ಮತ್ತು ಅದರಿಂದ ನಿಜವಾದ ಮಾನವ ಧರ್ಮದ ಉದಯವಾಗಬಲ್ಲದು.

೦ ೦ ೦

ಶ್ರೀ ಪಿ. ಶ್ಯಾಮ ಭಟ್, ಬಿ. ಎ. ಬಿ. ಇಡಿ.

ಪೌರನ ಹಕ್ಕು ಮತ್ತು ಕರ್ತವ್ಯಗಳು

ಪ್ರಜಾಪ್ರಭುತ್ವದಲ್ಲಿ ಪೌರನಿಗೆ ಹಕ್ಕುಗಳೂ ಇವೆ; ಆತನು ನಿರ್ವಹಿಸಬೇಕಾದ ಕರ್ತವ್ಯಗಳೂ ಇವೆ. ನಾಗರಿಕರ ಹಕ್ಕುಗಳಿಗೆ ಚ್ಯುತಿ ತರುವ ರಾಜಕೀಯ ಪುಢಾರಿಗಳು ಕರ್ತವ್ಯ ನಿರ್ವಹಿಸುವಲ್ಲಿ ಹೊಣೆ ಜಾರಿಸಿಕೊಳ್ಳುವ ಪೌರರು ಅಪಾಯದೊಂದಿಗೆ ಕಾರಣಪುರುಷರಾಗಿದ್ದಾರೆ. ಪ್ರಜಾಪ್ರಭುತ್ವದ ಆರೋಗ್ಯ ನೆಟ್ಟಗಿರಲು ಪೌರನು ಹಕ್ಕು ಬಾಧ್ಯತೆಗಳನ್ನು ಅರಿತಿರಬೇಕು

ಮಾನವನು ಒಬ್ಬ ಸಂಘ ಜೀವಿ, ಸಮಾಜ ಜೀವಿ ಸಮಾಜ ಮತ್ತು ಮಾನವರೊಳಗಿನ ಸಂಬಂಧವು ಬಹಳ ಪ್ರಾಚೀನ ಕಾಲದಿಂದಲೇ ಅನೂನವಾಗಿ ಬೆಳೆದು ಬಂದಿದೆ. ಮಾನವನಿಲ್ಲದೆ ಸಮಾಜವಿಲ್ಲ; ಸಮಾಜವಿಲ್ಲದೆ ಮಾನವನಿಲ್ಲ. ಹಿಂದೆ ಕೆಲವು ವೇಳೆ ರಾಜ್ಯ-ಸರಕಾರಗಳೆದುರು ಮಾನವನ ಅಸ್ತಿತ್ವವು ಶೂನ್ಯವಾಗಿತ್ತು. ಆದರೆ ಕಾಲಕ್ರಮೇಣ ಪೌರನೇ ಶ್ರೇಷ್ಠನೆಂತಲೂ ರಾಷ್ಟ್ರ, ಸರಕಾರಗಳು ಯೋಗ್ಯ ಪೌರರ ಹೊರತು ಉಳಿಯುವುದು ಸರ್ವಥಾ ಅಸಾಧ್ಯವೆಂತಲೂ ಸ್ಪಷ್ಟವಾಗುತ್ತಾ ಬಂತು. ಏಕಾಂಗಿಯಾದ ಮಾನವನು ಸುರಕ್ಷಿತನಾಗಿ ಸುಖ ಬಾಳ್ವೆ ನಡೆಸುವುದು ಸಾಧ್ಯವಿಲ್ಲವೆಂದು ಮನಗಂಡು ಸಾಮಾಜಿಕ ಭಾವನೆ ಬೆಳೆದು ಬಂದಿತು. ಮಾನವನ ಸಾಮೂಹಿಕ ಪ್ರಗತಿಗೆ ಸಮಾಜ ಸಂಘಟನೆಯು ಅಗತ್ಯವೆಂಬುದಾಗಿ ಮನುಷ್ಯ ಮನಗಂಡ. ಹಾಗಾಗಿ ನೈತಿಕ, ಆರ್ಥಿಕ, ರಾಜಕೀಯ ಪುರೋಗತಿಗಾಗಿ ಹಲವು ಸಂಘ, ಸಂಸ್ಥೆಗಳನ್ನು ರೂಪಿಸಿ ತನ್ಮೂಲಕ ಸಾಮಾಜಿಕ ಭಾವನೆಯ ಬೆಳವಣಿಗೆಯೊಂದಿಗೆ ತನ್ನ ಉತ್ಕೃಷ್ಟತೆಯನ್ನು ಸಾಧಿಸ ಹೊರಟಿದ್ದಾನೆ ಮಾನವ. ವೈಯಕ್ತಿಕ ಅಭಿವೃದ್ಧಿಯ ಸಂಕುಚಿತ ಭಾವನೆಯಿಂದ ವಿಶಾಲ ಭಾವನೆಯ ವಿಕಾಸ ಮಾರ್ಗದಲ್ಲಿ ಮುನ್ನಡೆದು ಇಡೀ ಮಾನವ ಕುಲದ ಅಭಿವೃದ್ಧಿಯನ್ನು ಸಾಧಿಸುವ ಉತ್ಕಟೇಚ್ಛೆಯನ್ನು ಬೆಳೆಸಿಕೊಂಡಿದ್ದಾನೆ. ರಾಜ್ಯವೇ ಶ್ರೇಷ್ಠ, ಸರಕಾರವೇ ಶ್ರೇಷ್ಠವೆಂದು ಬಗೆದು ನಿರಂಕುಶಮತಿಯಾಗಿ ದಬ್ಬಾಳಿಕೆಯನ್ನು ನಡೆಸುವ ರಾಜಾಧಿಕಾರದೆದುರು ಮಾನವ ಕಾಂತಿಯು ಮಸಗಿ, ರಾಜ ಮಕುಟವು ನೆಲಕ್ಕೆ ಅಪ್ಪಳಿಸಲ್ಪಟ್ಟು, ರಾಜ ಮತ್ತು ಪ್ರಜೆಗಳ ಹೋರಾಟವಲ್ಲಿ ತ್ವರಿತವಾಗಿಯಲ್ಲವಾದರೆ ಸಾವಕಾಶವಾಗಿಯಾದರೂ ಪ್ರಜೆಗಳೇ ವಿಜಯಿಗಳಾದರೆಂಬುದನ್ನು ಇತಿಹಾಸದ ಸ್ವರ್ಣ ಪುಟಗಳನ್ನು ಮಗುಚಿದಾಗ ಕಾಣಬಹುದಾದ ಸ್ಪಷ್ಟ ಸಂಗತಿಯಾಗಿರುತ್ತದೆ.

ಇಂದಿನ ವಿಶ್ವ ರಾಷ್ಟ್ರಗಳಲ್ಲಿ ಬಹುತೇಕ ಪ್ರತಿಯೊಂದು ರಾಷ್ಟ್ರವೂ ಪೌರನ ಹಕ್ಕುಗಳ ಕುರಿತು ತನ್ನ ಸಂವಿಧಾನದಲ್ಲಿ ಘೋಷಿಸಿರುತ್ತದೆ. ಪೌರನಿಗಿರುವ ಈ ಅಧಿಕಾರ ಅಥವಾ ಹಕ್ಕನ್ನು ಧಾರ್ಮಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಾಗೂ ರಾಜಕೀಯದ ಸ್ವಾತಂತ್ರ್ಯದ ಅಧಿಕಾರವೆಂದು ಹೇಳಬಹುದಾಗಿದೆ. ವಿದೇಶೀ ಆಳ್ವಿಕೆಯ ವಿರುದ್ಧ ನಡೆಸಿದ ಘೋರ ಸಂಘರ್ಷಣೆಯ ಪರಿಣಾಮವಾಗಿ ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಯಿತು. ಶೀಘ್ರದಲ್ಲೇ ಭಾರತದ ಸಂವಿಧಾನ ರೂಪಿಸಲ್ಪಟ್ಟಿತು. ಭಾರತದ ಸಂವಿಧಾನದಲ್ಲಿ ಪೌರನಿಗಿರುವ ಅಧಿಕಾರಗಳನ್ನು ನಿರೂಪಿಸಲಾಗಿದೆ. ಅವುಗಳಲ್ಲಿ ಪ್ರಾಮುಖ್ಯವಾದ ಕೆಲವನ್ನು ಈ ಕೆಳಗೆ ಕೊಡಲಾಗಿದೆ.

1) ಜಾತಿ, ಧರ್ಮ ಅಥವಾ ಲಿಂಗ ಭೇದವಿಲ್ಲದೆ ಪ್ರತಿಯೊಬ್ಬ ವಯಸ್ಕ ನಾಗರಿಕನಿಗೆ ಮತ ಚಲಾಯಿಸುವ ನೌಕರಿ ಮತ್ತು ಸರಕಾರದ ಸಹಾಯ ಪಡೆಯುವ ಹಕ್ಕು.

2) ಭಾಷೆ, ಲೇಖನ, ನಿಃಶಸ್ತ್ರ ಸಂಘಟನೆ, ದೇಶದಲ್ಲಿ ಅಡ್ಡಿ ಆತಂಕಗಳಿಲ್ಲದೆ ತಿರುಗುವ, ವಾಸಿಸುವ, ಸಂಪತ್ತು ಸಂಪಾದಿಸುವ, ವ್ಯವಸಾಯ ನಡೆಸುವ ಪೂರ್ಣ ಸ್ವಾತಂತ್ರ್ಯ

3) ನ್ಯಾಯಾಲಯದಲ್ಲಿ ತಪ್ಪಿತಸ್ಥ ಹಾಗೂ ದಂಡಾರ್ಹನೆಂದು ತೀರ್ಪಿಲ್ಲದೆ ದಂಡ ಕೊಡದಿರುವ ಸ್ವಾತಂತ್ರ್ಯ.

4) ಯಾವ ಪುರುಷನಾಗಲಿ, ಸ್ತ್ರೀಯಾಗಲಿ, ಮಕ್ಕಳಾಗಲಿ ವಿಕ್ರಯ ಹೊಂದತಕ್ಕದ್ದಲ್ಲ.

5) ಧರ್ಮ, ಸಂಸ್ಕೃತಿ, ಪೂಜೆ ಪುರಸ್ಕಾರಗಳ ಸ್ವಾತಂತ್ರ್ಯ.

6) ಸಕಾರಣವಿಲ್ಲದೆ ನಾಗರಿಕನ ಸಂಪತ್ತಿ ಇಸಕೊಳ್ಳುವಂತದ್ದಲ್ಲ.

7) ತುರ್ತು ಪರಿಸ್ಥಿತಿ ವಿನಹ ನಾಗರಿಕನ ಹಕ್ಕನ್ನು ಕುಂಠಿತಗೊಳಿಸ ತಕ್ಕದ್ದಲ್ಲ.

ಈ ಅಧಿಕಾರಗಳಲ್ಲದೆ ಇನ್ನೂ ಕೆಲವು ಮೂಲಭೂತವಾದ ಹಕ್ಕನ್ನು ಸೂಚಿಸಲಾಗಿರುವುದರಿಂದ ಪೌರನ ಹಕ್ಕುಗಳು ಮತ್ತಷ್ಟು ಹೆಚ್ಚಾಗಿರುತ್ತವೆ. ಯಾವ ಬಾಲಕನನ್ನಾಗಲಿ, ಬಾಲಿಕೆಯನ್ನಾಗಲಿ ಪರಿಶ್ರಮದ ಕೆಲಸಗಳಲ್ಲಿ ಉದ್ಯೋಗಿಸದಿರುವುದು. ವೃದ್ಧಾಪ್ಯ ಮತ್ತು ಅಶಕ್ತತೆಯಿಂದ ಸಂಪಾದಿಸಲಾಗದ ವ್ಯಕ್ತಿಗಳಿಗೆ ಸಹಾಯವೊದಗಿಸುವುದು, ಶುಲ್ಕವಿಲ್ಲದೆ ಪ್ರಾರಂಭಿಕ ವಿದ್ಯಾಭ್ಯಾಸ ಪಡೆಯುವುದು, ಅಸ್ಪೃಶ್ಯತೆಯನ್ನು ನಿವಾರಿಸುವುದು ಮುಂತಾದ ವಿಷಯಗಳನ್ನೂ ಸಂವಿಧಾನದಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ.

ನಾಗರಿಕನ ಉನ್ನತಿ, ನಿಶ್ಚಿಂತತೆ ಮತ್ತು ಸಂರಕ್ಷಣೆಯ ಸೌಲಭ್ಯವನ್ನೊದಗಿಸುವ ಉದ್ದೇಶದಿಂದ ನಿರ್ಮಾಣಗೊಂಡ ಸಮಾಜದಲ್ಲಿ ನಾಗರಿಕನಿಗೆ ಈ ಹಕ್ಕುಗಳ ಅವಶ್ಯಕತೆಯಿದೆಯೆಂಬುದು ಸುಸ್ಪಷ್ಟ. ಯಾಕೆಂದರೆ ತನ್ನ ಮೇಲೆ ನಿಯಂತ್ರಣ ಅಥವಾ ನಿಯಮಾನುಸಾರ ಕಾರ್ಯ ಪ್ರವರ್ತಿಸುವ ಅಧಿಕಾರವನ್ನು ಅವನೇ ಕೊಟ್ಟಿರುವುದಾಗಿದೆ. ಒಂದು ವೇಳೆ ಈ ಸೌಲಭ್ಯಗಳನ್ನೊದಗಿಸದಿದ್ದಲ್ಲಿ ಅಥವಾ ಅವನ ಸ್ವಾತಂತ್ರ್ಯವನ್ನು ಕಸಿದು ಕೊಂಡಲ್ಲಿ ಸಮಾಜ ರೂಪೀಕರಣದ ಉದ್ದೇಶವೇ ನಿಷ್ಪ್ರಯೋಜಕವಾಗುತ್ತದೆ. ಆದುದರಿಂದಲೇ ಪ್ರತಿಯೊಂದು ಸಭ್ಯ ರಾಷ್ಟ್ರದಲ್ಲೂ ನಾಗರಿಕನಿಗೆ ಕೆಲವೊಂದು ಮೂಲಭೂತ ಹಕ್ಕುಗಳನ್ನು ಕಾಯ್ದಿರಿಸಲಾಗುತ್ತದೆ. ಈ ಅಧಿಕಾರಗಳನ್ನು ಕೊಡದಿದ್ದಲ್ಲಿ ತಾನೊಬ್ಬ ಸ್ವತಂತ್ರ ರಾಷ್ಟ್ರದ ಸಜೀವ ಪ್ರಜೆಯೆಂಬ ಅಭಿಮಾನವಾದರೂ ವ್ಯಕ್ತಿಗಳಲ್ಲಿ ಮೂಡಲು ಸಾಧ್ಯವಿಲ್ಲ.

ದ್ವಿತೀಯ ಜಾಗತಿಕ ಯುದ್ಧವು ಕೊನೆಗೊಂಡಾಗ ವಿಶ್ವದ ಉಜ್ವಲ ಭವಿಷ್ಯದ ಕಡೆಗೆ ವಿಶ್ವದ ಬೃಹದ್ರಾಷ್ಟ್ರಗಳ ರಾಜನೀತಿಜ್ಞರು ಗಮನ ಹರಿಸಿ. ಚರ್ಚಿಸಿದಾಗ ಅಮೆರಿಕದ ಆಗಿನ ಅಧ್ಯಕ್ಷರಾಗಿದ್ದ ರೂಜವೆಲ್ಟರು ನಾಲ್ಕು ಮಹಾವಿಚಾರಗಳ ಕಡೆಗೆ ವಿಶೇಷ ಪ್ರಾಧಾನ್ಯ ಕೊಡಬೇಕೆಂದು ಒತ್ತಾಯಿಸಿದರು. ಅವು ಪ್ರಪಂಚದ ನಾಗರಿಕನ ಮಾನವೀಯ ಹಕ್ಕುಗಳ ಸಂಬಂಧವಾಗಿರುತ್ತವೆ. ಅವು (1) ವಾಕ್ ಸ್ವಾತಂತ್ರ್ಯ—ಪ್ರತಿಯೊಬ್ಬ ನಾಗರಿಕನಿಗೆ ತನ್ನ ಅಭಿಪ್ರಾಯವನ್ನು ನಿರ್ಭೀತಿಯಿಂದ ಪ್ರಕಟಿಸುವ ಸ್ವಾತಂತ್ರ್ಯ.

(2) ಧಾರ್ಮಿಕ ಸ್ವಾತಂತ್ರ್ಯ—ಪ್ರತಿಯೊಬ್ಬ ಪೌರನಿಗೆ ತನ್ನ ಧಾರ್ಮಿಕ ವಿಶ್ವಾಸದೊಂದಿಗೆ ಪೂಜೆ, ಉಪಾಸನೆ, ಪ್ರತಾನುಷ್ಠಾನಗಳ ಸ್ವಾತಂತ್ರ್ಯ.

(3) ಅಭಾವದಿಂದ ನಿಶ್ಚಿಂತತೆ–ಅಶನ, ವಸನ, ವಸತಿಗಳ ಅಭಾವವಿಲ್ಲದೆ, ಅವುಗಳ ಸೌಲಭ್ಯವನ್ನು ಇಷ್ಟಪೂರ್ತಿ ಪಡೆಯುವ ಸ್ವಾತಂತ್ರ್ಯ.

(4) ನಿರ್ಭಯತೆ—ವಿದೇಶಗಳ ವಿಧರ್ಮಿಗಳ ಅಥವಾ ವಿಜಾತೀಯರ ಆಕ್ರಮಣ ಭಯದಿಂದ ನಿರ್ಮುಕ್ತನಾಗಿರುವ ಸ್ವಾತಂತ್ರ್ಯ.

ವಿಶ್ವಸಂಸ್ಥೆಯು ಈ ವಿಚಾರಗಳ ಕುರಿತು ದೀರ್ಘಕಾಲ ಚರ್ಚಿಸಿ. ಯೋಚಿಸಿ ಜಗತ್ತಿನ ಪ್ರತಿಯೊಬ್ಬ ಪೌರನಿಗಿರಬೇಕಾದ ಹಕ್ಕುಗಳ ಕುರಿತು ಘೋಷಿಸಿತು. ಇದರಿಂದ ಮನುಷ್ಯನು ರಾಷ್ಟ್ರವು ತನ್ನ ಜೀವತ್ತಾ ಸವಲತ್ತುಗಳನ್ನು ನಡೆಸುವ ಸ್ವಾತಂತ್ರ್ಯಾಧಿಕಾರದಲ್ಲ ಕೈಹಾಕುವಂತಿಲ್ಲವೆಂಬ ವಿಶ್ವಾಸವನ್ನು ತಳೆಯುವಂತಾಗಿದೆ. ಆದುದರಿಂದ ಸಾಮೂಹಿಕ ಕಾರ್ಯವಿಧಾನಗಳಿಂದ ಮನುಷ್ಯನಿಗೆ ಬಹಳಷ್ಟು ಸೌಲಭ್ಯಗಳು ಲಭಿಸುತ್ತವೆ ಮತ್ತು ಅವನು ತನ್ನ ಭೌತಿಕ ಹಾಗೂ ನೈತಿಕ ಉನ್ನತಿಯನ್ನು ನಿಶ್ಚಿಂತನಾಗಿ ಸಾಧಿಸುವ ಪ್ರಯತ್ನದಲ್ಲಿ ಸಫಲತೆಯನ್ನು ಕಾಣಲವಕಾಶವಿದೆ.

(ಮೂವತ್ತಮೂರನೇ ಪುಟ ನೋಡಿರಿ)

ಪ್ರಜಾರಾಜ್ಯ ದಿನದ ಶುಭಾಶಯಗಳು!

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿಗಳು
ಪ್ರವಾಸಿಗರ ಉಪಚಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್ : 77

HOTEL SHIVAPRASAD
High Class Boarding, Lodging & Restaurant
COONDAPUR. S. K.

೧೮೫೭ರ ಸ್ವಾತಂತ್ರ್ಯ ಹೋರಾಟದ ವೇಳೆ ಪ್ರಾಣವನ್ನು ತೃಣವೆಂದು ಬಗೆದು ತನ್ನ ದೇಶದ ಸ್ವಾತಂತ್ರ್ಯ ಸಂರಕ್ಷಣೆಗಾಗಿ ಹೋರಾಡಿದ ಅಪ್ರತಿಮ ವೀರ-ಧೀರ ಕುನ್ವರ್ ಸಿಂಗ್ ಭಾರತವನ್ನು ಬೇಗನೇ ಸ್ವಾತಂತ್ರ್ಯಗೊಳಿಸೆಂದು ಮಾತೆ ಗಂಗೆಯನ್ನು ಬೇಡಿಕೊಂಡು ತೋಳಬಲಿ ನೀಡಿದ!

ಶ್ರೀ ಎಚ್. ಎಂ. ನಾರಾಯಣ ಭಟ್

ಸ್ವಾತಂತ್ರ್ಯ ಸಂಗ್ರಾಮದ ಸ್ಮರಣೆ

ಧೀರ ದೇಶಾಭಿಮಾನಿ ಕುನ್ವರ್ ಸಿಂಗ್

೧೮೫೭! ''ಸಿಪಾಯಿ ದಂಗೆ'' ಎಂದು ಬ್ರಿಟಿಷ್ ಆಡಳಿತೆಗಾರರು ಕರೆದಿದ್ದ ಮೊದಲ ಭಾರತದ ಸ್ವಾತಂತ್ರ್ಯ ಸಂಗ್ರಾಮ ಆದರ ತೀವ್ರತೆಯಲ್ಲಿ ಉತ್ತರ ಭಾರತದ ಹಲವೆಡೆಗಳಿಗೂ ವ್ಯಾಪಿಸಿತ್ತು. ಬ್ರಿಟಿಷ್ ಸಾಮ್ರಾಜ್ಯದ ಸಂಘಟಿತ ಹಾಗೂ ಸಜ್ಜೀಕೃತ ಮಹಾಶಕ್ತಿಯನ್ನು ನೆನಪಿಗೆ ತಂದು ಸ್ವಾತಂತ್ರ್ಯಪ್ರೇಮಿಗಳಾಗಿದ್ದ ಭಾರತೀಯ ವೀರಾಗ್ರಣಿಗಳನೇಕರೂ ವನಾಂತರಗಳಲ್ಲಿ ಅಜ್ಞಾತವಾಸದಲ್ಲಿದ್ದು ಮಾತೃಭೂಮಿಯ ಬಂಧವಿಮೋಚನೆಯ ಉಪಾಯಗಳ ಬಗ್ಗೆ ದಾರಿ ಹುಡುಕುತ್ತಿದ್ದರು. ಹಾಗೆ ದಾರಿ ಹುಡುಕುತ್ತಿದ್ದವರಲ್ಲಿ ಜಗದೀಶಪುರದ ರಾಜನಾಗಿದ್ದ ಕುನ್ವರ್‌ಸಿಂಗ್ ಒಬ್ಬರು.

ಬ್ರಿಟಿಷ್‌ಸೇನೆಗಳು ಜಗದೀಶಪುರವನ್ನು ಆಕ್ರಮಿಸಿ ಸ್ವಾಧೀನಪಡಿಸಿದ್ದರು. ಎಪ್ಪತ್ತರ ಹರೆಯದ ಕುನ್ವರ್‌ಸಿಂಗ್ ಧೀರೋದಾತ್ತನೂ ಪರಾಕ್ರಮಶಾಲಿಯೂ ವೀರಾಗ್ರೇಸರನೂ ಯುವ ಚೈತನ್ಯ ತುಂಬಿತುಳುಕುವ ಉತ್ಸಾಹ ಶೀಲನೂ ಆಗಿದ್ದನು. ಶತ್ರುಗಳನ್ನು ಜಯಿಸಿ ತನ್ನ ರಾಜ್ಯವನ್ನೂ ಭಾರತವನ್ನೂ ಸ್ವತಂತ್ರವಾಗಿ ಮಾಡುವ ಬಗ್ಗೆಯೇ ಚಿಂತಾಕ್ರಾಂತನಾಗಿದ್ದನು. ಈತನೊಂದಿಗೆ ಸಹೋದರ–ಪುತ್ರ—ಕಳತ್ರರೂ ಅನುಗಮಿಸಿದ್ದರು. ಜತೆಯಲ್ಲಿ ವಿಶ್ವಾಸಕ್ಕೆ ಯೋಗ್ಯರಾಗಿದ್ದ ಸೇನಾನಿಗಳೂ ಯೋಧರೂ!

ಭೀಕರ ನರ ಬೇಟೆ

ಭಾರತದ ಸ್ವಾತಂತ್ರ್ಯ ಹೋರಾಟದ ವಿವಿಧ ರಂಗಗಳಲ್ಲಿ ಕಾರ್ಯೋನ್ಮುಖರಾಗಿದ್ದ ಅನೇಕ ದೇಶಾಭಿಮಾನಿಗಳನ್ನೂ ಬ್ರಿಟಿಷ್‌ಸೈನಿಕರು ಹುಡುಕಿ ಹಿಡಿದು ನರಬೇಟೆಯಾಡಿ ಹಿಂಸಿಸುತ್ತಿದ್ದರು.

ಆ ಕಾಲದಲ್ಲಿ ಕುನ್ವರ್‌ಸಿಂಗ್ ಪಶ್ಚಿಮ ಬಿಹಾರಿನ ಅರಣ್ಯಗಳನ್ನು ಆಶ್ರಯಿಸಿದ್ದರು.

ಬ್ರಿಟಿಷ್ ಸೇನೆ ಲಕ್ನೋದತ್ತ ಧಾವಿಸುವುದಾಗಿ ಕುನ್ವರ್ ಸಿಂಗ್‌ಗೆ ತಿಳಿಯಿತು. ಕೂಡಲೇ ತನ್ನ ಅನುಯಾಯಿಗಳೊಂದಿಗೆ ಪೂರ್ವ ಅಯೋಧ್ಯೆಯತ್ತ ಕುನ್ವರ್‌ಸಿಂಗರೂ ತೆರಳಿದರು. ಊರ ನಿವಾಸಿಗಳು ಸರ್ವ ಸಹಾಯ ಸಹಕಾರಗಳನ್ನೂ ನೀಡುವ ಭರವಸೆ ನೀಡಿದಾಗ ಉತ್ಸಾಹ ಇಮ್ಮಡಿಸಿತು.

ಬ್ರಿಟಿಷ್ ಸೈನಿಕರು ವಿಶ್ರಮಿಸುತ್ತಿದ್ದಿರಬೇಕು. ಕುನ್ವರ್ ಸಿಂಗ್ ನೇತೃತ್ವ ವಹಿಸಿದ್ದ ಸೇನಾ ವಿಭಾಗವೊಂದು ಹಠಾತ್ತನೆ ಆಕ್ರಮಣಕ್ಕಿಳಿದುದರಿಂದಾಗಿ ಶತ್ರು ಸೇನೆಯು ದಿಗ್ಭ್ರಾಂತವಾಯಿತು. ''ಭಾರತ್ ಮಾತಾಕೀ ಜೈ....!'' ಎಂಬ ಘೋಷಾರವವೂ ಗುಂಡುಗಳ ಹಾರಾಟದ ಶಬ್ದವೂ ಆರ್ಭಟಿ ಅಟ್ಟಹಾಸಗಳೂ ಅಂತರಿಕ್ಷವನ್ನು ಆವರಿಸಿದ್ದವು. ಅನಿರೀಕ್ಷಿತವಾಗಿದ್ದ ಈ ಧಾಳಿಯಿಂದಾಗಿ ಬ್ರಿಟಿಷ್ ಸೈನಿಕರು ಚೆದರಿ ಚೆಲ್ಲಾಪಿಲ್ಲಿಯಾಗಿ ಪಲಾಯನ ಗೈದರು. ಆದರೂ ಕುನ್ವರ್‌ಸಿಂಗ್ ಬಿಡದೆ ಬೆಂಬತ್ತಿದರು—ಅನೇಕರನ್ನು ಸದೆಬಡಿದರು.

ಹೇಗಾದರೂ ಕುನ್ವರ್‌ಸಿಂಗರನ್ನು ವಶಪಡಿಸುವ ನಿರ್ಧಾರವನ್ನು ಬ್ರಿಟಿಷ್ ಸೇನಾನಿಗಳೂ ಮಾಡಿದರು.

ತನ್ನ ಸೇನಾವಿಭಾಗವನ್ನು ಮತ್ತಷ್ಟು ಬಲಪಡಿಸಲೂ ಬಿಳಿಯ ಸೈನಿಕರನ್ನು ಹೊಡೆದೋಡಿಸಲೂ ಕುನ್ವರ್ ಸಿಂಗ್ ಕೂಡಾ ದೃಢ ಸಂಕಲ್ಪ ಮಾಡಿದರು.

ಒಂದು ದಿನ ಕುನ್ವರ್ ಸಿಂಗರ ಸೈನಿಕರ ಮೇಲೆ ಬಿಳಿಯ ಯೋಧರು ಅನಿರೀಕ್ಷಿತ ಧಾಳಿಯೆಸಗಿದರು.

ಕುನ್ವರ್ ಸಿಂಗ್ ಎದೆಗೆಡದೆ ತನ್ನ ಸೇನಾವಿಭಾಗವನ್ನು ತಂಡ ತಂಡಗಳಾಗಿ ಹಿಂತೆಗೆಯುವಂತೆ ನಿರ್ದೇಶಿಸಿದರು. ಸಾಕಷ್ಟು ಸಿದ್ಧತೆಗಳಿಲ್ಲದೆ ಸುಶಕ್ತವಾಗಿದ್ದ ಬ್ರಿಟಿಷರ ಫಿರಂಗಿಗಳನ್ನಿದಿರಿಸುವುದರಲ್ಲಿ ಪ್ರಯೋಜನವಿಲ್ಲವಾಗಿತ್ತು. ಈ ಹಿಂತೆಗೆತವೂ ಬ್ರಿಟಿಷ್ ಸೇನೆಗೆ ಸಮಸ್ಯೆಯನ್ನೇ ಸೃಷ್ಟಿಸಿತು.

ರಜಪೂತ ಸೈನಿಕರು ತಂಡ ತಂಡಗಳಾಗಿ ಹಲವೆಡೆಗಳಲ್ಲಿದ್ದುದರಿಂದಾಗಿ ಇವರೆಲ್ಲರನ್ನೂ ಇದಿರಿಸಿ ಹೋರಾಡುವುದು ಬ್ರಿಟಿಷ್ ಸೈನಿಕರಿಗೆ ಕಷ್ಟವಾಯಿತು.

ರಜಪೂತ ಸೈನಿಕರು ಕೋಸಲ ದೇಶದ ಮೂಲಕ ಗಂಗಾತೀರವನ್ನು ತಲುಪಿದರು. ನದಿಯನ್ನು ದಾಟುವಾಗ ಶತ್ರುಗಳಿಂದ ಆಕ್ರಮಿಸಲ್ಪಡಬಹುದಾದ ಭೀತಿಯಿತ್ತು. ಅಲ್ಲಿ ಕುನ್ವರ್ ಸಿಂಗ್ ಒಂದು ಉಪಾಯ ಹೂಡಿದರು. ತನ್ನ ಸೈನಿಕರು ಆ ರಾತ್ರಿ ಒಂದು ನಿರ್ದಿಷ್ಟ ಸ್ಥಳದಿಂದ ಆನೆಗಳ ಮೇಲೇರಿ ನದಿಯನ್ನು ದಾಟುವುದಾಗಿ ಒಂದು ವಾರ್ತೆ ಹಬ್ಬಿಸಿ ಅದು ಶತ್ರುಸೇನೆಗೆ ತಿಳಿಯುವಂತೆ ಏರ್ಪಡಿಸಿದರು.

ಈ ವಾರ್ತೆ ತಿಳಿದದ್ದೇ ತಡ; ಬ್ರಿಟಿಷ್ ಸೈನಿಕರು ನಿರ್ದಿಷ್ಟ ಸ್ಥಳದತ್ತ ಸಾಗಿ ಅವಿತು ಕುಳಿತರು.

ಕುನ್ವರ್‌ಸಿಂಗ್ ಮತ್ತು ಸೈನಿಕರು ತಮ್ಮ ಅನುಯಾಯಿಗಳೊಂದಿಗೆ ಬೇರೊಂದು ಸ್ಥಳದಿಂದ ದೋಣಿಗಳ ಮೂಲಕ ನದಿ ದಾಟಲು ಹೊರಟರು.

ಬ್ರಿಟಿಷ್ ಸೈನಿಕರು ದೋಣಿಗಳತ್ತ ಗುಂಡು ಹಾರಿಸಿದರು. ಕುನ್ವರ್‌ಸಿಂಗ್ ಒಂದು ದೋಣಿಯಲ್ಲಿ ನದೀಮಧ್ಯದಲ್ಲಿದ್ದರು.

ಸಂಘರ್ಷಣೆ

ಶತ್ರುವಿನ ಒಂದು ಗುಂಡು ಕುನ್ವರ್ ಸಿಂಗ್‌ರ ಒಂದು ಭುಜವನ್ನು ಹೊಡೆದು ಹಾನಿಗೊಳಿಸಿತ್ತು. ಈ ಪ್ರಹಾರವನ್ನು ಲಕ್ಷಿಸದೆ ಆ ವೀರಾಗ್ರೇಸರನು ಮೊಣಕಾಲೂರಿ ನಿಂತು ದೇವರಲ್ಲಿ ಪ್ರಾರ್ಥಿಸಿದನು....

"ಭಾರತವನ್ನು ಬೇಗನೇ ಸ್ವತಂತ್ರಗೊಳಿಸಬೇಕು...." ಎಂದು.

ಬಳಿಕ ಜೋಲುತ್ತಿದ್ದ ತನ್ನ ಕೈಯನ್ನು ಖಡ್ಗದಿಂದ ತುಂಡರಿಸಿ ಗಂಗಾನದಿಗೆ ಬಲಿಯರ್ಪಿಸಿದ್ದಾಯ್ತು. ಧಾರಾಕಾರವಾಗಿ ರಕ್ತವನ್ನು ಭುಜದಿಂದ ಹರಿಸಿಕೊಂಡೇ ಈ ರಜಪೂತ ವೀರನು ನದಿಯ ಮರುದಂಡೆಯನ್ನು ತಲುಪಿದುದು.

ಅಷ್ಟರಲ್ಲಿಯೇ ಅಲ್ಲಿಗೆ ಮುಂದಾಗಿ ತಲಪಿದ್ದ ತನ್ನ ಅನುಯಾಯಿಗಳು ಅಲ್ಲಿನ ಕೃಷಿಕರನ್ನೂ ಸಂಘಟಿಸಿ ಬ್ರಿಟಿಷ್ ಸೈನಿಕರನ್ನಿದಿರಿಸಲು ಸಿದ್ಧತೆ ಮಾಡಿದ್ದರು.

ಅಲ್ಲಿಂದ ಕುನ್ವರ್ ಸಿಂಗ್ ಮತ್ತು ಪಾರ್ಟಿ ಜಗದೀಶಪುರವನ್ನು ಸೇರಿದಾಗ ಅಲ್ಲಿ ಕಾವಲು ನಿಂತಿದ್ದ ಬ್ರಿಟಿಷ್ ಸೈನಿಕರು ಭಯವಿಹ್ವಲರಾದರು.

ಭೀಕರ ಸಂಘರ್ಷಣೆಯ ಬಳಿಕ ಬ್ರಿಟಿಷ್ ಸೈನಿಕರು ಪಲಾಯನಗೈದರು. ಓಟದ ವೇಳೆ ಅನೇಕ ಮಂದಿ ಬಿಳಿಯರು ಬಿದ್ದು ಸತ್ತರು.

ಹಾಗೆ ರಾಜಾ ಕುನ್ವರ್‌ಸಿಂಗ್ ತನ್ನ ರಾಜ್ಯವನ್ನು ಬ್ರಿಟಿಷರಿಂದ ವಿಮೋಚನೆಗೊಳಿಸಿದರು.

ಆವೇಶಭರಿತನಾಗಿದ್ದ ರಾಜಾ ಕುನ್ವರ್ ಸಿಂಗ್ ಅನುಯಾಯಿಗಳೊಂದಿಗೆ ತನ್ನ ರಾಜಧಾನಿಯನ್ನು ಪ್ರವೇಶಿಸಿ ಅಲ್ಲಿ ಹಾರಾಡುತ್ತಿದ್ದ ಬ್ರಿಟಿಷರ ಧ್ವಜವನ್ನು (ಯೂನಿಯನ್ ಜೇಕ್) ಹರಿದೆಸೆದು ಸ್ವಾತಂತ್ರ್ಯ ಮತ್ತು ಧರ್ಮಗಳ ಪ್ರತೀಕವಾದ ತನ್ನ ಸುವರ್ಣಪತಾಕೆಯನ್ನು ಏರಿಸಿದರು. ಆಗ ಜನರು ಹರ್ಷೋನ್ಮತ್ತರಾಗಿ ವಿಜಯ ಘೋಷಣೆಗಳನ್ನೆಬ್ಬಿಸಿದರು.

ಈ ಹೋರಾಟದ ಆವೇಶದೆಡೆಯಲ್ಲಿ ಅಲಕ್ಷಿಸಲ್ಪಟ್ಟ ಭುಜದ ಗಾಯವು ವಿಷಲಿಪ್ತ ವ್ರಣವಾಗಿ ಪರಿಣಮಿಸಿತ್ತು. ಮತ್ತೆ ಆ ವ್ರಣ ಒಣಗಲಿಲ್ಲ. ಸ್ವಾತಂತ್ರ್ಯ ಯೋಧರಲ್ಲಿ ಅಗ್ರಗಣ್ಯನಾಗಿದ್ದ ಆ ಧೀರ ಭಾರತ ಪುತ್ರನು ಮೂರನೇ ದಿನ ವೀರ ಸ್ವರ್ಗವನ್ನು ಸೇರಿದನು.

ಗಾಂಧಿ ಸಿದ್ಧಾಂತ ಮತ್ತು ಇಂದಿನ ಪ್ರಜಾಪ್ರಭುತ್ವ

(ಒಂಭತ್ತನೇ ಪುಟದಿಂದ)

ಅವುಗಳಿಗೆ ಆ ಬಗ್ಗೆ ಧನ ಸಹಾಯ ನೀಡಿ ಅಂಥ ಕಾರ್ಯಗಳನ್ನು ಮಾಡಿಸುವುದೂ ಮರೆತು ಹೋಗುವ ಹಾಗೂ ಹೇಂಕಾರ ತೋರಿಸುವ ಅರುಳು ಮರುಳು ಕಾರ್ಯದರ್ಶಿಗಳನ್ನೂ ಡೈರೆಕ್ಟರರನ್ನೂ ನಿಯಮಿಸಿಕೊಂಡಿರುವ ಮಂತ್ರಿಮಂಡಲ ಎಂಥ ಸುಬುದ್ಧಿ ಸಂಪನ್ನವೆಂದು ಹೇಳಬೇಕು? ಧಾರಣೆ ಎಷ್ಟು ಏರಿದರೂ ಯಾವ ಸರಕಾರಿ ಶಾಖೆಯೂ ಲಕ್ಷ್ಯಹಾಕದಿರುವ ಸನ್ನಿವೇಶವು ವರ್ಷಗಟ್ಟಲೆ ಉಳಿಯುವ ಅನುಭವ ಬಡ ಪ್ರಜೆಗಳಿಗೆ ಉಂಟಾಗಲು ಯಾರು ಜವಾಬುದಾರರು? ಈಗ ಜವಾಬುದಾರಿ ಸರಕಾರ ಇದೆ ಎಂದು ಹೇಳಲು ಯಾವ ಪ್ರಜೆಗೆ ಸಾಧ್ಯ?

ಸಂತ್ರಸ್ತ ಪ್ರಜೆಗೆ ಏನು ಮಾಡಲೂ ಸಾಧ್ಯವಿಲ್ಲದಂತೆ ಮಾಡಿದ ಮುಖಂಡರ ಅಧಿಕಾರ ನಿರ್ವಾಹವು ವಿವೇಕವುಳ್ಳದ್ದೆಂದು ಅವನಿಗೆ ಹೇಳಲು ಸಾಧ್ಯವಾಗದು. ಆದುದರಿಂದ ಏನಾದರೂ ಮಾಡಿ, ತನಗೊದಗಿದ ಕಾಯಿದೆಬದ್ಧ ಕಷ್ಟವನ್ನು ಪರಿಹರಿಸಿಕೊಳ್ಳುವ ಅವಕಾಶವನ್ನು ಒದಗಿಸುವ ರಾಜ್ಯ ಸಂವಿಧಾನವನ್ನು ರಚಿಸುವ ಹೊಸ ಮುಖಂಡರಿಗೆ ಮಾತ್ರ ನಾಳೆ ಪ್ರಾಮಾಣಿಕ ಬುದ್ಧಿವಂತರು ಮತ ಕೊಟ್ಟಾರು–ಉಳಿದವರಿಗೆ ಲಾಟರಿ ಛಾನ್ಸು ಮಾತ್ರ! ಅದೇನು ಕಡಿಮೆ ಛಾನ್ಸೇ?

THE PRESS

for NEAT CLEAR ARTISTIC PRINTING

NAVAYUGA PRESS

UDIPI

Printers for — NAVAYUGA Weekly

We undertake all kinds of Bookwork, job work etc.

Proprietors:

NAVAYUGA ENTERPRISE LTD.

Regd. Office: PALUKOTE, UDIPI, S. K.

ಈ ರಾಷ್ಟ್ರಕ್ಕೆ ಏನಾಗಿದೆ...?

(ಹತ್ತನೆ ಪುಟದಿಂದ)

ದರೂ ಅಗತ್ಯವೂ ಅನಿವಾರ್ಯವೂ ಎನಿಸೀತು. ಆದರೆ ಕ್ಷುಲ್ಲಕ ಕಾರಣಗಳಿಗಾಗಿ ವಿದೇಶ ಪ್ರಯಾಣ ಕೈಕೊಂಡು ನಮ್ಮ ವಿದೇಶ ವಿನಿಮಯವನ್ನು ಕುಸಿಯುವಂತೆ ಮಾಡುವವರೂ ಇಲ್ಲಿದ್ದಾರೆ. ಇನ್ನು ಕೆಲವರು ಚಿಕಿತ್ಸೆಗಾಗಿ ವಿದೇಶಕ್ಕೆ ತೆರಳುವವರು. ಇಷ್ಟು ಮಂದಿ ವಿದೇಶಗಳಲ್ಲಿ ಕಲಿತು ಬಂದ ಡಾಕ್ಟರರು ನಮ್ಮಲ್ಲಿದ್ದಾರೆ. ಅವರ ವೈದ್ಯಕೀಯ ಸಲಹೆ ನಮಗೆ ಸಾಲದೆಂದೆ? ಚಿಕಿತ್ಸೆಗೆ ಅಗತ್ಯವಿರುವ ಆಧುನಿಕ ಸಲಕರಣೆಗಳಿರುವ ಒಂದೇ ಒಂದು ಆಸ್ಪತ್ರೆ ಇಲ್ಲಿ ಇಲ್ಲವೆಂದೆ? ಅಲ್ಲ, ನಮ್ಮಲ್ಲಿರುವ ಆತ್ಮವಿಶ್ವಾಸದ ಕೊರತೆಯೇ ಇದಕ್ಕೆ ಕಾರಣವಾಗಿರಬೇಕು. ವಿಚಾರ ದಾರಿದ್ರ್ಯದಿಂದ ನರಳುತ್ತಿರುವ ನಮ್ಮ ಬೌದ್ಧಿಕದಾಸ್ಯ ಇನ್ನೂ ತೊಲಗಿಲ್ಲ. ಈ ಸ್ಥಿತಿ ಹೀಗೆಯೇ ಮುಂದುವರಿದರೆ ನಾವು ಮುಖಕ್ಷೌರಕ್ಕಾಗಿಯೂ ಹೊರದೇಶಗಳಿಗೆ ಹೋಗಿ ಬರುವ ದಿನ ದೂರವಿರಲಾರದು.

ಸ್ವಾಭಿಮಾನ ಶೂನ್ಯತೆಯು ನಮ್ಮ ಪತನಕ್ಕೆ ಒಂದು ಕಾರಣವಾದರೆ ಇನ್ನೊಂದು ಕಾರಣ ನಮ್ಮ ರಾಜಕಾರಣ. ಈ ರಾಜಕಾರಣವು ತನ್ನ ಕೊಳಕು ತಲೆಯನ್ನು ತುರುಕಿಸದ ರಂಗವಿರಲಾರದು. ಯಾವುದೂ ಅವರ ಕಬಂಧಕೈಗಳ ವಜ್ರಮುಷ್ಟಿಯಿಂದ ಪಾರಾಗದು. ಪರಿಣಾಮ? ಶಿಕ್ಷಣ ಉತ್ಪಾದನೆಗಳು ಒತ್ತಟ್ಟಿಗಿರಲಿ. ಒಲಿಂಪಿಕ್ ಪಂದ್ಯಗಳಲ್ಲಿ ಟೆಸ್ಟ್ ಮ್ಯಾಚ್‌ಗಳಲ್ಲಿ ಎಲ್ಲದರಲ್ಲಿಯೂ ಶ್ರೀ ಕೆ. ಯಸ್. ನರಸಿಂಹಸ್ವಾಮಿಯವರ "ಹಿಂದಿನ ಸಾಲಿನ ಹುಡುಗರು ನಾವು!"

ನಾವು ಅವುಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತೇವೆ. ಸೋಲುತ್ತೇವೆ; ಇತರರಿಗೆ 'ನಾವು ಗೆದ್ದೆವು' ಎಂಬ ಸಂತೋಷವನ್ನು ದೊರಕಿಸಿಕೊಡುತ್ತೇವೆ.

ನಮ್ಮ ನಡೆ ನುಡಿಗಳೊಳಗಣ ಅಂತರವೂ ರಾಷ್ಟ್ರದ ಪ್ರಗತಿಗೆ ಪ್ರತಿಬಂಧಕವಾಗಿ ಪರಿಣಮಿಸಿದೆ. ನಮ್ಮ ಮಾತುಗಳು ಕೃತಿಗಳಾಗಿ ಭಾಷಾಂತರ ಹೊಂದುತ್ತಿಲ್ಲ. ನಾವು ಆಚರಿಸಿ ಕೈತೊಳೆದುಕೊಂಡ ಗಾಂಧಿ ಶತಾಬ್ಧಿಯು ಅದಕ್ಕೆ ಉತ್ತಮ ನಿದರ್ಶನವಾಗಬಲ್ಲುದು. ಕೇರಳದ ಹೈಕೋರ್ಟಿನ ಚೀಫ್ ಜಸ್ಟಿಸ್ ಶ್ರೀ ಪಿ. ಟಿ. ರಾಮನ್ ನಾಯರರು ಮಂಗಳೂರಿನಲ್ಲಿ ಹೇಳಿದಂತೆ ಗಾಂಧೀಜಿಯವರ ಆದರ್ಶಗಳನ್ನು ನಾವು ಭಾರತದಲ್ಲಿ ಕಿವಿಗಳಲ್ಲಿ ಕೇಳಬಲ್ಲೆವೇ ವಿನಾ ಕಣ್ಣಲ್ಲಿ ಕಾಣಲು ಸಾಧ್ಯವಿಲ್ಲ. ಗಾಂಧೀ ಶತಾಬ್ಧಿಯ ಸಂದರ್ಭದಲ್ಲಿ ನಾವು ರಾಷ್ಟ್ರಪಿತನಿಗೆ ಸಲ್ಲಿಸಿದುದು ವರ್ಗೀಯ ಕಲಹಗಳ ಕಾಣಿಕೆಯನ್ನು; ಆ ಅಹಿಂಸಾಮೂರ್ತಿಗೆ ರಕ್ತಾಂಜಲಿ ನೀಡಿದ ಕೃತಘ್ನ ರಾಷ್ಟ್ರ ನಮ್ಮದು. ಬಾಪೂಜಿಯನ್ನು ರಕ್ತಸಾಕ್ಷಿ ಪೂರ್ವಕ ಮರೆತ ಮತಾಂಧರು ನಾವು. ಭಾರತಕ್ಕೆ ಬಂದು ನಮ್ಮ ಅಧಃಪತನವನ್ನು ತೆರೆದ ಕಣ್ಣುಗಳಿಂದ ಕಂಡ ಗಡಿನಾಡ ಗಾಂಧಿಯವರಿಗೆ ಎದೆಯೊಡೆದಂತಾಗಿರಬೇಕು. ಹಾಗಾಗಿ "ಭಾರತದಲ್ಲಿ ಇಂದು ಕಗ್ಗತ್ತಲು ಕವಿದಿದೆ. ಇಲ್ಲಿನ ರಾಜಕೀಯ ನಾಯಕರು ಜನತೆಯ ಕಣ್ಣಿಗೆ ಮಣ್ಣು ತೂರುತ್ತಿದ್ದಾರೆ. ಎಲ್ಲರಿಗೂ ಓಟುಗಳು ಬೇಕು. ಅಧಿಕಾರದ ಒರಗು ದಿಂಬುಗಳು ಬೇಕು. ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಇವರು ಎಲ್ಲರನ್ನೂ ಶೋಷಿಸುತ್ತಿದ್ದಾರೆ.... ಭಾರತೀಯರು ಗಾಂಧೀಜೀ ಹೆಸರೆತ್ತಿದರೆ ವಿದೇಶೀಯರು ಗಹಗಹಿಸಿ ನಗುತ್ತಾರೆ" ಎಂದು ಅವರು ಗದ್ಗದಿತರಾಗಿ ಗುಡುಗಿದುದರಲ್ಲಿ ಆಶ್ಚರ್ಯವಿಲ್ಲ.

ನಮ್ಮ ಪರಪುಟ್ಟತೆ ಕೊನೆಗೊಳ್ಳಬೇಕಾದರೆ, ತಿರುಪೆಯೆತ್ತುವ ದುರ್ದಿನಗಳು ದೂರವಾಗಬೇಕಾದರೆ ನಮಗೆ ಸ್ವಯಂಪೂರ್ಣತೆ ಸಿದ್ಧಿಸಬೇಕಾದರೆ ನಮ್ಮಲ್ಲಿನ ಸ್ವಾಭಿಮಾನ ಸ್ವಾವಲಂಬನಶೀಲತೆಗಳು ಜಾಗೃತವಾಗಬೇಕು; ರಾಷ್ಟ್ರಪ್ರೇಮ, ಕರ್ತವ್ಯಪ್ರಜ್ಞೆ, ಕಷ್ಟಸಹಿಷ್ಣುತೆಗಳು ಮುಪ್ಪುರಿಗೊಳ್ಳಬೇಕು. ಲಂಚಾವತಾರವು ನಡೆಸುತ್ತಿರುವ ಅಸಹ್ಯ ತಾಂಡವವು ಅವಸಾನ ಹೊಂದಬೇಕು. ಆದರ್ಶಶೂನ್ಯ ಧ್ಯೇಯಹೀನ ವ್ಯಕ್ತಿತ್ವಭ್ರಷ್ಟ ನೆರಳುಗಳಾಗಿ ನರಳುವ ನಮ್ಮ ಈ ಪಾಡು ಕೊನೆಗೊಳ್ಳಲಿ. ಭಾರತಮಾತೆಯು ನಮ್ಮ ಕುರಿತು

"ಹಲ ಕೆಲವು ಕುರುಡು ಕುನ್ನಿ
ಹಲ ಕೆಲವು ಹುಳಗಳೆನ್ನಿ"

—ಎಂದು ಹಲುಬುವುದು ನಿಲ್ಲಲಿ. ಹಾಗಾಗದೆ ಯಾವ ಯೋಜನೆಯ ಮಂತ್ರ ಕಂಬಳಿಯೂ ರಾಮರಾಜ್ಯಕ್ಕೆ ನಮ್ಮನ್ನು ಒಯ್ಯಲಾರದು. ಈ ರಾಷ್ಟ್ರಕ್ಕೆ ಈಗ ಅಗತ್ಯವಿರುವುದು ಇಲ್ಲಿ ಅಡಗಿರುವ ಸುಪ್ತ ಶಕ್ತಿಸಂಚಯವನ್ನು ಹೊಡೆಗೆಬ್ಬಿಸಬಲ್ಲ ವಿದ್ಯುತ್ ಚಿಕಿತ್ಸೆ.

ಸ್ತ್ರೀ–ಪುರುಷರಿಬ್ಬರೂ ಸಮಾನರಿದ್ದಾರೆ. ಇಬ್ಬರ ಜತೆಯಿಂದಲೇ ಸಮಾಜರಥವು ನಡೆಯುತ್ತಿದೆ. ಮಾನವ ಧರ್ಮ ಜೀವನದಲ್ಲಿ ಉಭಯರೂ ಸಹಧರ್ಮಚಾರಿಗಳಾಗಿದ್ದಾರೆ. ಆದ್ದರಿಂದ ಭೋಗ ಮತ್ತು ವಿಷಯಾರಾಮದ ಸಲುವಾಗಿ ಸ್ತ್ರೀ-ಪುರುಷರು ತಮ್ಮ ಸಂಬಂಧವನ್ನು ಉಪಯೋಗಿಸಬಾರದು.

೦ ೦೦ ೦

ಇಂಥ ಸಮಾಜದ ಹತ್ತಿರ ಸತ್ಯಾಗ್ರಹದ ಶಸ್ತ್ರವು ಯಾವಾಗಲೂ ಇದ್ದೇ ಇರುವುದು. ಅದು ಬ್ರಹ್ಮಾಸ್ತ್ರವಿದ್ದಂತೆಯೇ.

೦ ೦೦ ೦

ಪೌರನ ಹಕ್ಕು ಮತ್ತು ಕರ್ತವ್ಯಗಳು

(ಮೂವತ್ತೊಂದನೇ ಪುಟದಿಂದ)

ಮಾನವನ ಉನ್ನತಿಗೆ ಸಮಾಜವು ಒಂದು ಸಾಧನವಾಗದೆ ಸಮಾಜವನ್ನು ಕಟ್ಟುವವನು ಮನುಷ್ಯನೇ ಆದರೂ ತನ್ನ ಉನ್ನತಿಯ ಸಾಧನವಾದ ಸಮಾಜವನ್ನು ಆತನು ಉಪೇಕ್ಷಿಸಿದಲ್ಲಿ ಅದು ಅವನ ಪ್ರಗತಿಗೆ ಕಂಟಕವನ್ನು ತಂದೊಡ್ಡಿದಂತೆ ಎಂಬುದನ್ನು ಆತನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಸಾಧನವು ಸಾಕಷ್ಟು ಬಲಯುತವಾಗಿಲ್ಲವಾದರೆ ಸಾಧ್ಯವನ್ನು ಸಾಧಿಸುವುದು ಕಷ್ಟವಾಗುತ್ತದೆ. ಗಾಡಿ ಮತ್ತು ಎತ್ತುಗಳು ಮನುಷ್ಯನನ್ನು ಒಂದು ಕಡೆಗೆ ಒಯ್ಯುವ ಸಾಧನಗಳು; ಈ ಸಾಧನಗಳ ಕಡೆಗೆ ಲಕ್ಷ್ಯವಿರಿಸದಿದ್ದರೆ, ಅವುಗಳು ಶಕ್ತಿಯುತವಾಗಿಲ್ಲವಾದರೆ, ತಾನು ಉದ್ದೇಶಿಸಿದ ಗುರಿಯನ್ನು ತಲಪುವುದು ಕಷ್ಟಸಾಧ್ಯವೆಂಬುದನ್ನು ಆತನು ಅರಿತಿರಲೇಬೇಕು. ಆದುದರಿಂದ ತನ್ನ ಅಭ್ಯುದಯದ ಸಾಧನವಾದ ಸಮಾಜವನ್ನು ಸಶಕ್ತವನ್ನಾಗಿಯೂ, ಪ್ರಭಾವಶಾಲಿಯನ್ನಾಗಿಯೂ ಮಾಡುವುದಕ್ಕಾಗಿ ಆತನು ಎಂತಹ ತ್ಯಾಗ ಮಾಡಲೂ ಸಿದ್ಧನಾಗಿರಬೇಕಾದುದು ಆತನ ಆದ್ಯ ಕರ್ತವ್ಯವಾಗಿರುತ್ತದೆ. ಹಾಗಾಗಿ ತನ್ನ ಸುಖ ಸೌಕರ್ಯಗಳಿಗಾಗಿ ಯಾವುದನ್ನು ತಾನು ಆಶಿಸುತ್ತಾನೊ ಅದು ತನ್ನಂತೆ ಪರರಿಗೂ ಸಿಗಬೇಕು, ಅದಕ್ಕಾಗಿ ತಾನು ಏನನ್ನಾದರೂ ಮಾಡಲು ಸಿದ್ಧ ಎಂಬ ಕರ್ತವ್ಯ ಪ್ರಜ್ಞೆ ಪ್ರತಿಯೊಬ್ಬ ಪೌರನಲ್ಲಿದ್ದರೆ, ಆ ಸಮಾಜವು ಆ ಸಮಾಜದಿಂದ ಕಟ್ಟಲ್ಪಟ್ಟ ರಾಷ್ಟ್ರವು ಸಂಪದಭಿವೃದ್ಧಿಯನ್ನು ಹೊಂದಿ, ಆತ್ಮತೃಪ್ತಿ ಪಡೆಯುವುದು ಸಾಧ್ಯವಾಗಬಹುದು. ಆದುದರಿಂದ ಅನ್ಯೋನ್ಯ ಸಹಕಾರ, 'ತನ್ನಂತೆ ಪರರ ಬಗೆ' ಎಂಬ ಭಾವನೆಯೇ ಮಾನವ ಹಿತದ ಅಡಿಗಲ್ಲು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾದುದು ಒಬ್ಬ ಉತ್ತಮ ಪೌರನ ಕರ್ತವ್ಯ.

ನಾಗರಿಕನ ಹಲವಾರು ಕರ್ತವ್ಯಗಳಲ್ಲಿ ಮುಖ್ಯವಾದ ಐದನ್ನು ಹೀಗೆ ಹೇಳಬಹುದು.

1) ತನಗಾಗಿ ತನ್ನ ಪಾಲಿನ ಕರ್ತವ್ಯ.

2) ಕುಟುಂಬಕ್ಕಾಗಿ ತಾನು ಮಾಡಬೇಕಾದ ಕರ್ತವ್ಯ.

3) ತನ್ನ ಗ್ರಾಮ ವಾ ನಗರದ ಕಡೆಗೆ ಮಾಡಬೇಕಾದ ಕರ್ತವ್ಯ.

4) ತನ್ನ ರಾಷ್ಟ್ರದ ಏಳ್ಗೆಗಾಗಿ ಮಾಡಬೇಕಾದ ಕರ್ತವ್ಯ.

5) ವಿಶ್ವದ ಕಡೆಗೆ ತನ್ನ ಕರ್ತವ್ಯ.

ಆದುದರಿಂದ ಅಣುವಿನಿಂದ ಮಹತ್ತಿಗೆ ಆಲೋಚಿಸಿ, ಮಾನವ ಕುಲವೊಂದು ವಿಶ್ವವೇ ಕುಟುಂಬ ಎಂಬ ವಿಶಾಲ ಭಾವನೆ ಬೆಳೆದು ಬರಬೇಕು. ಸದಾ ಕರ್ತವ್ಯಶೀಲನಾಗಬೇಕು.

ಯಾವುದಾದರೊಂದು ಸೌಧವು ಶಕ್ತಿಯುತವಾಗಿರಬೇಕಿದ್ದರೆ ಅದಕ್ಕೆ ಉಪಯೋಗಿಸುವ ಕಲ್ಲು, ಮರ, ಸಿಮೆಂಟು, ಕಬ್ಬಿಣ ಮೊದಲಾದವುಗಳು ಹೇಗೆ ಉತ್ಕೃಷ್ಟತರದ್ದಾಗಿರಬೇಕೊ, ಅಂತೆಯೇ ಒಂದು ಸಮಾಜ ಅಥವಾ ದೇಶವನ್ನು ಸಭ್ಯವನ್ನಾಗಿಯೂ, ಬಲವಂತವನ್ನಾಗಿಯೂ ಮಾಡಬೇಕಿದ್ದರೆ ಅಲ್ಲಿಯ ನಾಗರಿಕರು ಸುಶೀಲರೂ, ಸಚ್ಚರಿತ್ರರೂ, ಸದಾಚಾರಿಗಳೂ ಸುಶಿಕ್ಷಿತರೂ ಆಗಿರಬೇಕೆಂಬುದೆ ಖಂಡಿತ. ಆದುದರಿಂದ ಪ್ರತಿಯೊಬ್ಬ ನಾಗರಿಕನು ತನ್ನ ಉನ್ನತಿಯನ್ನು ವ್ಯಕ್ತಿಗತವೆಂದು ಭಾವಿಸದೆ, ದೇಶಕ್ಕಾಗಿ ಎಂಬುದನ್ನು ಸದಾ ಗಮನದಲ್ಲಿಟ್ಟುಕೊಳ್ಳಬೇಕು. ಕುಟುಂಬದ ಸದಸ್ಯರು ಪರಸ್ಪರ ಸಹಯೋಗದಿಂದ ವರ್ತಿಸಿದರೆ ಮಾತ್ರ ಕುಟುಂಬದ ಏಳಿಗೆಯಾಗುವುದು ಸಾಧ್ಯವಿದೆ. ಹೀಗೆ ತಾನು ವಾಸಿಸುವ ಗ್ರಾಮ ಅಥವಾ ನಗರ ಹಾಗೂ ತನ್ನ ದೇಶದ ಕಡೆಗೆ ಪ್ರತಿಯೊಬ್ಬನು ಅಭಿಮಾನಪೂರ್ವಕ ನಿಸ್ವಾರ್ಥ ಬುದ್ಧಿಯಿಂದ ದುಡಿಯಬೇಕು. ತನ್ನ ರಾಷ್ಟ್ರದ ಸರಕಾರ ಬಲಿಷ್ಟವಾಗಿದ್ದರೆ ಅದು ತನ್ನ ಪ್ರಜೆಗಳ ರಕ್ಷಣೆ ಮಾಡಲು ಸಾಧ್ಯವಿದೆ. ಹೀಗೆ ದೇಶದ ಕಡೆಗೆ ಹರಿಯುವ ವಿಶಾಲ ಭಾವನೆಯು ವಿಶ್ವವ್ಯಾಪಿಯಾಗಬೇಕು. ಆಗ ಮಾತ್ರ ವಿಶ್ವಯುದ್ಧಗಳನ್ನು ತಡೆಯಲು ಸಾಧ್ಯವಿದೆ. ಜಾತಿ, ಭಾಷೆ, ಪ್ರಾಂತ, ದೇಶ ಮುಂತಾದ ಭೇದ ಭಾವನೆಗಳನ್ನು ಕಲ್ಪಿಸಿ, ವೈಮನಸ್ಸನ್ನು ಬೆಳೆಸಿ, ಆಂತರಿಕ ಕಲಹವನ್ನೆಬ್ಬಿಸಿ ಮತ್ತೆ ಅದನ್ನು ರಾಷ್ಟ್ರ ರಾಷ್ಟ್ರಗಳೊಳಗೆ ಹಬ್ಬಿಸಿ ನಮ್ಮ ಅವನತಿಯನ್ನು ನಾವೇ ತಂದುಕೊಂಡಲ್ಲಿ ಪ್ರಾಣಿಕೋಟಿಗಳಲ್ಲಿ ಶ್ರೇಷ್ಠವಾದ ಮಾನವ ಜನ್ಮವನ್ನು ಪಡೆದು ಸ್ವಾರ್ಥಕವಾದರೂ ಹೇಗೆ? ಆದುದರಿಂದ ಮಾನವರೆಲ್ಲ ಸೋದರರು; ಮಾನವ ಕುಲವೊಂದೆ ಎಂಬ ವಿಶ್ವ ಬಂಧುತ್ವದ ಭಾವನೆಯು ಪ್ರತಿಯೊಬ್ಬನಲ್ಲೂ ಜಾಗೃತವಾದರೆ, ತನ್ನ ಸ್ವಾತಂತ್ರ್ಯ ಮತ್ತು ಅಧಿಕಾರಗಳನ್ನು ವಿಶ್ವದ ಒಳಿತಿಗಾಗಿ ಮೀಸಲಾಗಿಟ್ಟರೆ, ಇಡೀ ವಿಶ್ವವೇ ಉನ್ನತಿಯ ಪರಾಕಾಷ್ಠೆಯನ್ನೇರಬಹುದು ಮಾತ್ರವಲ್ಲ ವಿಶ್ವ ಶಾಂತಿಯನ್ನು ಕಾಣಬಹುದು.

ಇಂಗ್ಲಿಷ್ ಕಲಿಯಲಿಲ್ಲವಲ್ಲಾ ಎಂದು ಚಿಂತಿಸಬೇಡಿರಿ !

ಅನ್ಯರ ಸಹಾಯವಿಲ್ಲದೆ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಪುಸ್ತಕ ನಿಮಗಾಗಿ ಸಿದ್ಧವಿದೆ—

ಸುಲಭದಲ್ಲಿ ಇಂಗ್ಲಿಷ್

(ಅತ್ಯುಪಯುಕ್ತ ಆಂಗ್ಲ ಸ್ವಯಂಬೋಧಿನಿ)

ಬೆಲೆ: ರೂ. 2-00

ಪುಸ್ತಕಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ
ನವಭಾರತ ಪುಸ್ತಕ ಭಂಡಾರ, ಪಾಲುಕೋಟೆ, ಉಡುಪಿ
ಇವರಿಗೆ ಬರೆಯಿರಿ.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು
ನವಭಾರತ ಪುಸ್ತಕ ಭಂಡಾರ.
ಪಾಲುಕೋಟೆ, ಉಡುಪಿ, ದ. ಕ.

ಪ್ರೊ। ಎಂ. ಎಸ್. ಎಸ್. ರಾವ್

ಜೀವಿಗಳಲ್ಲಿ ಆಹಾರ ಪೋಷಣೆ

೧

ಸ್ವಯಂಪೋಷಕ ಜೀವಿಗಳು ಮತ್ತು ಪರಪೋಷಕ ಜೀವಿಗಳು ತಂತಮ್ಮ ಆಹಾರವನ್ನು ಹೇಗೆ ಹೊಂದಿಸಿಕೊಳ್ಳುತ್ತವೆಯೆಂಬುದರ ಸ್ಥೂಲ ವಿಶ್ಲೇಷಣೆಯನ್ನು ಸಮರ್ಥ ಪ್ರೊ। ರಾಯರು ಮಾಡಿದ್ದಾರೆ.

ಜೀವಿಗಳೆಲ್ಲವೂ ಸ್ವಯಂಪೋಷಕಗಳು (auto trophic) ಇಲ್ಲವೆ ಪರ ಅಥವಾ ವಿಭಿನ್ನ ಪೋಷಕಗಳು (Hetero trophic) ಆಗಿರುತ್ತವೆ. ಸ್ವಯಂಪೋಷಕಗಳೆನಿಸಿದವು ನೀರು, ಇಂಗಾಲದ ಡೈ ಆಕ್ಸೈಡ್ ಮತ್ತು ಖನಿಜಾಂಶಗಳಂತಹ ಸರಳ ರೂಪದ ಘಟಕಗಳಿಂದ ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳಬಲ್ಲವು. ಇವುಗಳನ್ನು ಸಂಶ್ಲೇಷಿಸಲು ಬೇಕಾಗುವ ಶಕ್ತಿಯನ್ನು ಸೂರ್ಯನ ಬೆಳಕಿನಿಂದ ದೊರಕಿಸಿಕೊಳ್ಳುವುವು. ಇದನ್ನು 'ದ್ಯುತಿ ಸಂಶ್ಲೇಷಣೆ' ಅಥವಾ 'ಕಿರಣ ಜನ್ಯ ಸಂಯೋಗ ಕ್ರಿಯೆ' ಹೊಂದುವ [Photo synthetic auto trophs] ಸ್ವಯಂಪೋಷಕ ಜೀವಿಗಳಲ್ಲಿ ಕಾಣಬಹುದು. ರಾಸಾಯನಿಕ ಸಂಶ್ಲೇಷಣೆ ಹೊಂದುವ ಸ್ವಯಂಪೋಷಕ ಜೀವಿಗಳಲ್ಲಿ [chemo synthetic auto trophs] ರಾಸಾಯನಿಕ ಕ್ರಿಯೆಯಿಂದ ಬಿಡುಗಡೆಯಾಗುವ ಶಕ್ತಿಯು ಬಳಕೆಯಾಗುತ್ತದೆ. ಸಸ್ಯಜೀವಿಗಳಲ್ಲಿ ಹಸಿರು ಬಣ್ಣವಿರದ ಸಸ್ಯಗಳು ಮತ್ತು ಮಾನವನನ್ನು ಒಳಗೊಂಡ ಎಲ್ಲ ಪ್ರಾಣಿಗಳೂ ಆಹಾರ ಮತ್ತು ಆಮ್ಲಜನಕದ ಪೂರೈಕೆಗೆ ಹಸಿರು ಸಸ್ಯಗಳ ಮೇಲೇ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅವಲಂಬಿಸಿರುತ್ತವೆ.

ಈ 'ದ್ಯುತಿ ಸಂಶ್ಲೇಷಣೆ' ಅಥವಾ 'ಕಿರಣ ಜನ್ಯ ಸಂಯೋಗ ಕ್ರಿಯೆ' ಎಂಬುದು ನೀರು ಮತ್ತು ಇಂಗಾಲದ ಡೈ ಆಕ್ಸೈಡನ್ನು ಹೀರಿಕೊಂಡು ಸೂರ್ಯನ ಬೆಳಕಿನಲ್ಲಿರುವ ಶಕ್ತಿಯನ್ನು ಬಳಸಿಕೊಂಡು ಹಸಿರು ಕೋಶ ಸಮೂಹಗಳು, ಶರ್ಕರ ಪಿಷ್ಟಾದಿಗಳನ್ನು ತಯಾರಿಸುವ ಒಂದು ವಿಧಾನ ಆದರಲ್ಲಿ ಆಮ್ಲಜನಕವು ಒಂದು ಉಪೋತ್ಪಾದ ವಸ್ತು [by-product ಈ ದ್ಯುತಿ ಸಂಶ್ಲೇಷಣಾ ಕ್ರಿಯೆಯಲ್ಲಿ ಗ್ಲೂಕೋಸ್ ಸಕ್ಕರೆಯು ಮೊಟ್ಟಮೊದಲಿನ ಉತ್ಪಾದಿತ ವಸ್ತು. ಅದು ಎಲೆಗಳಿಂದ ಸಸ್ಯದ ಇತರ ಭಾಗಗಳಿಗೆ ಸ್ಥಾನಾಂತರ ಹೊಂದುತ್ತದೆ. ಮುಂದೆ ಅದು, ಸಸ್ಯ ದೇಹದಲ್ಲಿ ರಚಿತವಾಗುವ ಇತರ ವಸ್ತುಗಳನ್ನೆಲ್ಲ ಉತ್ಪಾದಿಸಲು ಬಳಕೆಯಾಗುತ್ತದೆ. ಈ ಸಕ್ಕರೆಯ ಉತ್ಪಾದನೆಯ ವೇಳೆಗೆ 2 ತಂಡದ ಕ್ರಿಯೆಗಳು ಉಂಟಾಗುತ್ತವೆ. ಬೆಳಕು ಮೊದಲಿನ ಹಂತದಲ್ಲಷ್ಟೇ ಅವಶ್ಯವಿದ್ದು ಆಗಹರಿದ್ರೇಣ ಅಥವಾ'ಕ್ಲೋರೊಪ್ಲಾಸ್ಟ್"ಗಳ ಸಹಾಯದಿಂದ ನೀರಿನ ಅಣುಗಳು ವಿಭಜನೆಗೊಂಡು, ಆಮ್ಲ ಜನಕವು ಬಿಡುಗಡೆಯಾಗುತ್ತದೆ. 2ನೆಯ ತಂಡದ ಕ್ರಿಯೆಗಳು ಬೆಳಕು ಮತ್ತು ಕತ್ತಲೆ. ಇವೆರಡರಲ್ಲಿಯೂ ಸಾಗುವಂತಹವಾಗಿದ್ದು ಇಂಗಾಲದ ಡೈ ಆಕ್ಸೈಡ್ ವಿಭಜನೆಗೊಂಡು, ಶರ್ಕರ ಪಿಷ್ಟಾದಿಗಳು ನಿರ್ಮಾಣವಾಗುತ್ತವೆ. ಮುಂದೆ ಸಸ್ಯ ಮತ್ತು ಪ್ರಾಣಿ ಜೀವಿಗಳ ದೇಹದಲ್ಲಿ ಸಂಗ್ರಹವಾಗುವ ಇಂಗಾಲದ ಡೈ ಆಕ್ಸೈಡ್ ಎಂಬ ಅನಿಲವು, ಉಸಿರಾಟ ಕ್ರಿಯೆ, ಪ್ರಾಣಿಗಳ ವಿಸರ್ಜನಾವಸ್ತುಗಳು ಮತ್ತು ಮೃತ ಜೀವಿಗಳು ಬೆಕ್ಟೇರಿಯ ಹಾಗೂ ಶಿಲೀಂಧ್ರಗಳಿಂದ ಕೊಳೆಯುವುದು, ಇತ್ಯಾದಿ ವಿಧಾನಗಳಿಂದ ಮತ್ತೊಮ್ಮೆ ವಾಯುವಿಗೆ ಹಿಂತಿರುಗುತ್ತದೆ.

ಸಸ್ಯಗಳ ಬೆಳವಣಿಗೆಗೆ ಕೆಲವು ಮೂಲ ಧಾತುಗಳು ಅತ್ಯವಶ್ಯಕವಾಗಿ ಬೇಕೇಬೇಕು. ಅವು ಇಂಗಾಲ, ಆಮ್ಲಜನಕ, ಜಲಜನಕ, ರಂಜಕ, ಪೊಟ್ಯಾಶಿಯಂ, ಸಾರಜನಕ, ಗಂಧಕ, ಕ್ಯಾಲ್ಸಿಯಂ, ಮೆಗ್ನೀಸಿಯಂ, ಕಬ್ಬಿಣ, ಬೊರಾನ್, ತಾಮ್ರ, ಮೇಂಗನೀಸ್, ಸತು ಇತ್ಯಾದಿಗಳಾಗಿರುತ್ತವೆ. ಸಾರಜನಕವೊಂದನ್ನು ಬಿಟ್ಟು ಉಳಿದ ಪ್ರಧಾನ ಹಾಗೂ ಅಪ್ರಧಾನ (minor) ಘಟಕಗಳೆಲ್ಲ ಮಣ್ಣಿನಿಂದಲೇ ದೊರೆಯುತ್ತವೆ. ಸಾರಜನಕವು ಮಾತ್ರ ಸಾರಜನಕದ ಸ್ಥಿರೀಕರಣ (Nitrogen Fexation) ಮತ್ತು ವಿದ್ಯುತ್ ವಿಸರ್ಜನ (electrical discharge ಗಳ ಮೂಲಕ ವಾಯುವಿನಿಂದ ದೊರೆಯುತ್ತದೆ. ನಿಸರ್ಗದಲ್ಲಿ ಇಂಗಾಲದ ಚಕ್ರವಿದ್ದಂತೆ, ಸಾರಜನಕದ ಚಕ್ರವೂ ಒಂದಿದ್ದು, ಅವು ಭೂಮಿಯಿಂದ ವಾಯುವಿಗೆ ಮತ್ತು ವಾಯುವಿನಿಂದ ಭೂಮಿಗೆ ಆವರ್ತನಗೊಳ್ಳುತ್ತಿರುತ್ತದೆ.

ಇನ್ನು ಪರಪೋಷಕ ಅಥವಾ ವಿಭಿನ್ನ ರೀತಿಯ ಆಹಾರ ಸೇವನೆಯು (Hetero Trophic mode of nutrition) ವಿಧಾನಗಳು—ನೀರ, ಇಂಗಾಲದ ಡೈಆಕ್ಸೈಡ್ ಮತ್ತು ಖನಿಜಾಂಶಗಳನ್ನು ಬಳಸಿಕೊಂಡು ತನ್ನ ಸಾವಯುವ ಆಹಾರವನ್ನು ತಾವೇ ಸಂಶ್ಲೇಷಿಸಿಕೊಳ್ಳಲಾರದಂತಹ ಜೀವಿಗಳಲ್ಲೆಲ್ಲ (ಅಂದರೆ ಪ್ರಾಣಿಗಳಲ್ಲಿ) ಕಂಡುಬರುವುದುಂಟು. ಅಂತಹ ವಿಭಿನ್ನ ರೀತಿಯ ಪರಪೋಷಕಗಳು, ಶರ್ಕರಪಿಷ್ಟಾದಿ ಕೊಬ್ಬು, ಪ್ರೋಟೀನು, ಖನಿಜಾಂಶಗಳು ಮತ್ತು ವಿಟಾಮಿನ್‌ಗಳಂತಹ ಅವಶ್ಯಕತೆಗಳನ್ನು ಪೂರ್ಣವಾಗಿಯೋ, ಭಾಗಶಃವೋ ಪೂರೈಸಿಕೊಳ್ಳಲು ಸಸ್ಯದ ವಿವಿಧ ಭಾಗಗಳನ್ನು ಸೇವಿಸಿ ಅಥವಾ ಅಂತರಗ್ರಹಿಸುವುದರ ಮೂಲಕ (ingestion) ಸಾಧಿಸಿಕೊಳ್ಳಲೆತ್ನಿಸುತ್ತವೆ.

ಪ್ರಾಣಿಗಳು ಸ್ವೀಕರಿಸುವ ಆಹಾರದ ಬಹುಭಾಗವು, ಮೊದಲು ಕರಗುವ ಘಟಕಗಳಾಗಿ ವಿಶ್ಲೇಷಣೆ ಅಥವಾ ವಿಚ್ಛಿದ್ರಗೊಂಡ ನಂತರ, ಅವು ವಿವಿಧ ಜೈವಿಕ ಚಟುವಟಿಕೆಗಳಿಗೆ ಬಳಸಿಕೊಳ್ಳಲ್ಪಡುತ್ತವೆ. ಮುಂದೆ ಪಚನವಾಗದೆ ಉಳಿದ ಆಹಾರದ ಘಟಕಗಳೆಲ್ಲ ದೇಹದಿಂದ ಹೊರಗೆ ವಿಸರ್ಜಿಸಲ್ಪಡುತ್ತವೆ. ಪಕ್ಷಿ, ಬೆಕ್ಕು, ಎರೆಹುಳು ಶಿಲೀಂಧ್ರ ಇಲ್ಲವೆ ಮಾನವ ಇತ್ಯಾದಿ ಯಾವುದೇ ಆಗಲಿ ಅಂತಹ ಜೀವಗಳೆಲ್ಲದರ ಆಹಾರವು ರಾಸಾಯನಿಕವಾಗಿ ಶರ್ಕರಪಿಷ್ಟಾದಿ ಪ್ರೋಟೀನು, ಕೊಬ್ಬು, ನೀರು, ಖನಿಜಾಂಶಗಳು ಮತ್ತು ಕೆಲವು ವಿಟಮಿನ್‌ಗಳನ್ನು ಒಳಗೊಳ್ಳುತ್ತವೆ. ಪಚನಕ್ರಿಯೆಯ ವಿಧಾನದಲ್ಲಿ ಈ ಶರ್ಕರಪಿಷ್ಟಾದಿಗಳು ಪ್ರೋಟೀನು ಮತ್ತು ಕೊಬ್ಬುಗಳ ಸಂಕೀರ್ಣ ಅಣು ಘಟಕಗಳು. ಕೆಲವು ಕಿಣ್ವಗಳ ಸಹಾಯದಿಂದ, ಸಕ್ಕರೆ. ಅಮೈನೋ ಆಮ್ಲ, ಗ್ಲಿಸರಾಲ್ ಮತ್ತು ಫ್ಯಾಟಿ ಆಮ್ಲ ಇತ್ಯಾದಿ ರೂಪದ ಚಿಕ್ಕ ಹಾಗೂ ಸರಳ ಘಟಕಗಳಾಗಿ ವಿಶ್ಲೇಷಣೆ ಹೊಂದುತ್ತವೆ.

ಆದರೆ ಕೋಶದ ಹೊರಗೆ ಸಾಗುವ ಪಚನಕ್ರಿಯಾ ವಿಧಾನಗಳಲ್ಲಿ (extra cellular digestion), ಕೋಶಗಳು ಆಹಾರದ ಜಲವಿಶ್ಲೇಷಣೆಗೆ (hydrolysis) ಕಿಣ್ವಗಳನ್ನು ಸ್ರವಿಸಿ ಸುರಿಯುತ್ತವೆ. ಇದು ಪ್ರಾಣಿಗಳ ದೇಹದಲ್ಲಿರುವ ಆಹಾರ ನಾಳದಂತಹ ವಿಶಿಷ್ಟ ಕುಹರದಲ್ಲಿಯಾಗಲಿ ಇಲ್ಲವೆ ಸಾವಯುವ ಆಹಾರ ವಸ್ತುಗಳನ್ನು ಕೊಳೆಯಿಸುವ ಶಿಲೀಂಧ್ರಗಳ ಹೊರವ್ಯೈಯ್ಯಲ್ಲಾಗಲೀ ಉಂಟಾಗಬಹುದು. ಕೋಶದೊಳಗೆ ಉಂಟಾಗುವ ಪಚನಕ್ರಿಯೆಗಳಲ್ಲಿ ಕೋಶದೊಳಗೇ ಆಹಾರವು ಜಲವಿಶ್ಲೇಷಣೆ ಹೊಂದುತ್ತದೆ. ಇಂತಹ ಆಹಾರಪೋಷಣೆಯು "ಸ್ಪಾಂಜಸ್" (Sponges) ಮತ್ತು "ಸಿಲೆಂಟರೇಟ್ಸ್"ನಂತಹ ಕೆಳವರ್ಗದ ಪ್ರಾಣಿಗಳಲ್ಲಿ ಕಂಡು ಬರುತ್ತದೆ. ಹಾಗೆ ಪಚನವಾದ ಆಹಾರದ ಕರಗಿದ ಅಂಶಗಳೆಲ್ಲ ಕೋಶದ್ರವದೊಳಕ್ಕೆ ಹೀರಿಕೊಳ್ಳಲ್ಪಡುತ್ತವೆ. ಮುಂದೆ ಅದು ಶಕ್ತಿಯನ್ನು ದೊರಕಿಸಿಕೊಳ್ಳುವುದಕ್ಕೂ ಮತ್ತು ದೈಹಿಕ ರಚನೆಯ ಉದ್ದೇಶಗಳಿಗೂ ಬಳಕೆಯಾಗುತ್ತವೆ.

ಮೇಲ್ವರ್ಗದ ಸಸ್ಯಗಳಲ್ಲಿ ಕೂಡ ಪೂರ್ಣ ಇಲ್ಲವೆ ವಿಭಿನ್ನ ರೀತಿಯ ಆಹಾರ ಪೋಷಣೆಯ ನಿದರ್ಶನಗಳು ದೊರೆಯುತ್ತವೆ. "ಡ್ರೊಸೆರಾ" (Drosera) "ನಿಪೆಂಥಸ್" (Nepenthes) ಮುಂತಾದ ಕೀಟಾಹಾರಿ ಸಸ್ಯಗಳಲ್ಲಿಯೂ ಅತ್ಯಂತ ವೈಶಿಷ್ಟ್ಯಪೂರ್ಣ ರಚನಾ ಮಾರ್ಪಾಟುಗಳಿಂದ ಕೀಟಾದಿಗಳನ್ನು ನುಂಗಿ, ಜೀರ್ಣಿಸುವುದರ ಮೂಲಕ ತಮ್ಮ ಆಹಾರ ಬೇಡಿಕೆಗಳನ್ನು ಸಂಪೂರೈಸಿ (Supplement) ಕೊಳ್ಳುತ್ತವೆ. "ಕಸ್ಕುಟ" (cuscuta) ಅಥವಾ ಬದನಿಕೆ ಮುಂತಾದ ಸಸ್ಯಗಳು "ಹಾಸ್ಟೋರಿಯ" Hastoria ಎಂಬ ವಿಶಿಷ್ಟ ರೀತಿಯ ಹೀರುನಳಿಕೆಯ ವಿಧಾನಗಳಿಂದ ವಿವಿಧ ಆಶ್ರಯದಾತ ಸಸ್ಯಗಳ ಮೇಲೆ ಪರಾವಲಂಬಿ ಜೀವನನಡೆಸುತ್ತವೆ. ಅನೇಕ ಬೆಕ್ಟೀರಿಯ ಮತ್ತು ಶಿಲೀಂಧ್ರಗಳೂ ಪರಾವಲಂಬಿಗಳಾಗಿಯೋ ಇಲ್ಲವೆ ಕೊಳೆತಿನಿಗಳಾಗಿಯೋ ಇದ್ದು ಜೀವನನಿರ್ವಹಣೆ ಮಾಡುತ್ತವೆ.

(ಸಾಧಾರ)

ಭೀಷ್ಮನು ಬ್ರಹ್ಮಚಾರಿಯೆ, ವಿವಾಹಿತನೆ?

(ಏಳನೇ ಪುಟದಿಂದ)

ಹಿತನಿದ್ದು, ತಂದೆಯ ಪ್ರಿಯ—ಹಿತಗಳಿಗಾಗಿ ತಾನು ಸ್ತ್ರೀ ಭೋಗಗಳನ್ನು ತ್ಯಜಿಸಿದನೆಂಬ ಬಗೆಗೆ—ನಮ್ಮ ವಾದಕ್ಕೆ ಅಡ್ಡಿಯಾಗಲಾರವು!

ದೇವವ್ರತನು ದೇವಲೋಕದಲ್ಲಿ ಹಲವು ವರ್ಷವಿದ್ದು, ವಿದ್ಯಾಭ್ಯಾಸ ಮಾಡಿ, ಮರಳಿದ್ದನು. ಮತ್ತೆ ಭೂಲೋಕದಲ್ಲಿ ನಾಲ್ಕು ವರ್ಷಗಳು ಕಳೆದ ಮೇಲೇನೇ ಈ ತರದಲ್ಲಿ ಸ್ತ್ರೀ ಸುಖದ ತ್ಯಾಗಕ್ಕೆಡೆಗೊಂಡುದು! ಆತನ ಆಗಿನ ಪ್ರತಿಜ್ಞೆಯ ಮಾತು ಹಾಗೂ ಅನಂತರ ಸತ್ಯವತಿ ಆತನನ್ನು ನಿಯೋಗಕ್ಕೆ ಹೇಳಿ ಒತ್ತಾಯಿಸುವಲ್ಲಿ ಭೀಷ್ಮನ ಆ ಪ್ರತಿವಚನಗಳು, ಶ್ರೀಕೃಷ್ಣನು ಸರಳ ಮಂಚದಲ್ಲಿ ಒರಗಿದ ಭೀಷ್ಮನನ್ನು ಕಂಡಾಗ ಹೇಳಿದ ನುಡಿತ, ಮತ್ತು ಧರ್ಮರಾಯನು ಭೀಷ್ಮನ ಸಂಸ್ಕಾರಕ್ಕೆ ಅಗ್ನಿಗಳನ್ನು ತಂದನೆಂಬಲ್ಲಿಗೆ ಇರುವ ಪ್ರಾಚೀನದ ವ್ಯಾಖ್ಯಾನ, ಕೊನೆಗೆ ಭೀಷ್ಮನು ಶ್ರೀಕೃಷ್ಣನನ್ನು ಬೇಡಿಕೊಳ್ಳುವ ರೀತಿಗಳನ್ನು ಇಲ್ಲಿ ಸಾಪೇಕ್ಷ ರೀತಿಯಿಂದ ಪರಿಶೀಲಿಸಬೇಕಾಗಿದೆ.

ಭೀಷ್ಮನು ಕೇವಲ ಬ್ರಹ್ಮಚಾರಿಯಾಗಿ (ಪ್ರಥಮಾಶ್ರಮಿಯಾಗಿ) ಬಾಳಿದ್ದರೇನೇ ಆತನ ವ್ಯಕ್ತಿತ್ವದ ಸೌಲ್ಯವೆಯೆಂಬುದಕ್ಕೇನೂ ಆಧಾರವಿಲ್ಲ! ಆತ ವಿವಾಹಿತನಿದ್ದು, ನೈಷ್ಠಿಕ ಬ್ರಹ್ಮಚರ್ಯ ವ್ರತ ಪಾಲಿಸಿದ್ದನೆಂದರೆ, ಆತನಿಗೇನೂ ಕುಂದುಂಟಾಗುವುದಿಲ್ಲ! ವ್ಯಾಸ ಭಾರತದ ಸುಪರೀಕ್ಷೆಯಿಂದಲೇ ಈ ವಾದವೆತ್ತಿದೆ. ಅಂತೆ, ಪ್ರಾಚೀನ ವ್ಯಾಖ್ಯಾನ ಹಾಗೂ ತರ್ಕ ಶಾಸ್ತ್ರಾದಿಗಳ ಉಲ್ಲೇಖನವೂ ಇದಕ್ಕೆ ಬೆಂಬಲಿಸಿದೆಯೆಂಬುದು ಗಮನೀಯ!

ಶ್ರೀ ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳೂ ಅದೊಮ್ಮೆ ಈ ಬಗೆಗೆ ಅನುಮೋದಿಸಿ, ತರ್ಕ ಶಾಸ್ತ್ರದಲ್ಲಿ ಈ ಊಹೆಯಿದೆಯೆಂದರು ಶ್ರೀ ಶ್ರೇಣಿ ಗೋಪಾಲ ಕೃಷ್ಣಭಟ್ಟರು ನನ್ನ ಇತ್ತೀಚಿನ "ಉದಯವಾಣಿ"ಯಲ್ಲಿ ಬಂದ ಲೇಖವನ್ನೋದಿ ವಿಷಯ ಸಂಗ್ರಹಯೋಗ್ಯವಾಗಿದೆ"ಯೆಂದು ಖಾಸಗಿಯಾಗಿ ಬರೆದರು.

ಪುರಾಣಗಳನ್ನು ಹಾಗೂ ಇತರ ಶಾಸ್ತ್ರಗಳನ್ನು ಓದಿದಲ್ಲಿ ಈ ಬಗೆಗೆ ಬರುವ ವಿಶೇಷಾಂಶಗಳು ನಿರುದ್ಧವಾಗಿಲ್ಲವೆಂದು ಇದರಿಂದ ವ್ಯಕ್ತವಾಗುತ್ತದೆ. ಅಂಬಮೇಲೆ, ಕೇವಲ "ಗತಾನುಗತಿಕ—ಅಂಧ ನ್ಯಾಯ"ದಿಂದ 'ಭೀಷ್ಮನು ವಿವಾಹಿತನಲ್ಲ'ವೆಂದು ಹೇಳುವುದು ಅದೇನೂ ಚೆನ್ನಲ್ಲ! "ಭೀಷ್ಮನಿಗೆ ವಿವಾಹವಾಗಿದ್ದು, ನೈಷ್ಠಿಕ ಬ್ರಹ್ಮಚಾರಿಯಾಗಿದ್ದಿರಬೇಕೆಂದೇ" ಇಲ್ಲಿಗೆ ನಾವು ನಿರ್ಧರಿಸಬಹುದಾಗಿದೆ.

ಇತಿ ಶಮ್!

ಇಂತಹ ಸಮಾಜದ ಹತ್ತಿರ ಸತ್ಯಾಗ್ರಹದ ಶಸ್ತ್ರವು ಯಾವಾಗಲೂ ಇದ್ದೆ ಇರುವುದು. ಅದು ಬ್ರಹ್ಮಾಸ್ತ್ರವಿದ್ದಂತೆಯೇ.

ಸತ್ಯಾಗ್ರಹ ಶಕ್ತಿ ಬರಬೇಕಾದರೆ ನಾವು ಶುದ್ಧರೂ ಪವಿತ್ರರೂ, ನಮ್ರರೂ, ಅಹಿಂಸಾಪಾರಾಯಣರೂ ಆಗಿದ್ದು ಸತ್ಯದ ಸೇವೆಯನ್ನು ಮಾಡುತ್ತಲೇ ಸತ್ಯವನ್ನು ಹುಡುಕುತ್ತಿರಬೇಕು.

ಅರ್ಥ ಅನರ್ಥ ಮತ್ತು ಪರಾರ್ಥ

(ಇಪ್ಪತ್ತನಾಲ್ಕನೇ ಪುಟದಿಂದ)

ನ್ನೊಂದು ಬಡ ಜನರ ವರ್ಗ. ಈ ಎರಡು ಜನರ ಮಧ್ಯೆ ಇನ್ನೊಂದು ಮಾಧ್ಯಮ ವರ್ಗವಿದೆ ಅನ್ನುತ್ತಾರೆ. ಇದು ಬರೇ ಆಭಾಸ.

ಜನ ಮತ್ತು ಜೀವನ ರಾತ್ರೆ ಮತ್ತು ಹಗಲು ಇದ್ದಂತೆ. ಒಂದು ಗೇಯಿಸುವವರ ವರ್ಗ. ಇನ್ನೊಂದು ಗೇಯುವ ವರ್ಗ. ಒಂದು ಸಾಧಕವಾದರೆ ಇನ್ನೊಂದು ಬಾಧಕ. ಒಂದು ಉತ್ಪಾದಕ ವರ್ಗವಾದರೆ ಇನ್ನೊಂದು ನಾಶಕಾರಕ ಅಥವಾ ವಿಧ್ವಂಸಕ. ಒಂದು ಸತ್ಯ ಪರಿಪಾಲಕವಾದರೆ ಇನ್ನೊಂದು ಅಸತ್ಯ ಹಿಂಬಾಲಕ. ಒಂದು ಉತ್ತಮವಾದರೆ ಇನ್ನೊಂದು ಅಧಮ ಅಥವಾ ನೀಚ. ಒಂದಕ್ಕೊಂದು ಸಾಮ್ಯವಿಲ್ಲದ ದುರಾಚಾರ ನೀತಿ ಜನಜೀವನದಲ್ಲಿ ಅಡಕವಾಗಿದೆ. ಅರ್ಥ ಧರ್ಮದ ನೀತಿ ನಿಯಮಗಳು ವ್ಯತಿರಿಕ್ತವಾಗಿವೆ.

ಅರ್ಥವಿದ್ದವರು ಜಗತ್ತೇ ತಮ್ಮಿಂದ ನಡೆಯುತ್ತದೆಂಬ ದುರಹಂಕಾರಿಗಳಾಗಿ ಅಸತ್ಯ ಕಲ್ಪನೆಗಳಿಂದ ಉಬ್ಬಿಹೋಗಿದ್ದಾರೆ. ಬೀಜ ಮೊದಲೋ ವೃಕ್ಷ ಮೊದಲೋ ಎಂಬ ತಾತ್ವಿಕ ಸ್ಪರ್ಧೆಯಲ್ಲಿ, ತರ್ಕದಲ್ಲಿ ಬೀಜ ಮೊದಲು ಎಂಬ ನಿರ್ಣಯವಾಗಿದೆ. ಹಾಗೆಯೇ ಸಂಪನ್ಮೂಲ ಮೊದಲೋ, ಕಾಯ ಶ್ರಮ ಮೊದಲೋ ಎಂಬ ಅರ್ಥ ಶಾಸ್ತ್ರ ವ್ಯಾಖ್ಯೆಯಲ್ಲಿ ಕಾಯ ಶ್ರಮ ಮೊದಲು ಎಂದು ಸಿದ್ಧಾಂತವಾಗಿದೆ. ಹತ್ತು ಜನರ ಕಾಯ ಶ್ರಮದ ಪ್ರತಿಫಲವೇ ಸಂಪನ್ಮೂಲದ ಉಗಮವೆಂಬ ನಿಷ್ಕರ್ಷೆಯಾಗಿದೆ. ಹಣ ಕಾಸುಗಳಿಂದ ಕೊಬ್ಬಿದ್ದ ಶ್ರೀಮಂತರು ತಮ್ಮ ಹಣ ಕಾಸಿನಿಂದಲೇ ಬೆಳಗಾಗುವದೆಂದು ಪಿಟೀಲು ಬಾರಿಸುವದರಲ್ಲಿ ಏನೂ ಅರ್ಥವಿಲ್ಲ.

ಇಂದಿನ ಕಾಲ ಪರಿಸ್ಥಿತಿಯಲ್ಲಿ ಧನವಿಲ್ಲದೆ ವಾಣಿಜ್ಯ, ಉದ್ಯಮ ಅಥವಾ ಯಾವತ್ತೂ ಘನ ಕೈಗಾರಿಕಾ ಕ್ಷೇತ್ರವನ್ನು ಪ್ರಾರಂಭಿಸಲು ಸಾಧ್ಯವಿಲ್ಲ. ಆದರೆ ಸಂಪನ್ಮೂಲದ ಉತ್ಪಾದನೆಗೆ ಕಾಯಶ್ರಮ ಅಗತ್ಯವೆಂಬುದನ್ನೂ ಮರೆಯಬಾರದು. ಅದು ಬೇಕಾದರೆ ಒಬ್ಬನ ಸಂಪಾದನೆಯಿರಲಿ ಅಥವಾ ಹತ್ತಾರು—ನೂರು ಜನರ ಪರಿಶ್ರಮದ ಫಲವಿರಲಿ. ಯಂತ್ರವೊಂದೇ ಸಂಪತ್ತನ್ನು ವರ್ಧಿಸುವ ಏಕಮೇವ ಸೂತ್ರ ಅಥವಾ ಮೂಲ ಎಂಬ ಎವದರಲ್ಲಿ ಏನೂ ಅರ್ಥವಿಲ್ಲ, ಅಂದರೆ ಅರ್ಥವಂತರು ಅನರ್ಥ ಮಾತನಾಡಬಾರದು, ಇಲ್ಲವೆ ಅನರ್ಥ ಮಾಡಬಾರದು. ಅನರ್ಥವೇ ಅರ್ಥಾರ್ಥಿಗಳ ಏಕಮೇವ ಧ್ಯೇಯವೆಂಬ ಸತ್ಯ ಮನಗಾಣುತ್ತೇವೆ.

ಈಗ ಅನರ್ಥದ ಅವಸ್ಥೆಯನ್ನು ವಿವೇಚಿಸುವ, ಅನರ್ಥ ಅಥವಾ ಹಣಕಾಸಿಲ್ಲದ ಜನರ ಚಿಂತನ, ಮಂಥನ ವಿಚಾರ ಧೋರಣೆಗಳೇ ಬೇರೆ. ಅವರ ಎಲ್ಲಾ ದುರವಸ್ಥೆಗೆ ಅರ್ಥವೇ ಕಾರಣವೆಂದು ಅವರು ಬಗೆಯುತ್ತಾರೆ. ತಾವು ಅನರ್ಥ ಬಗೆಯದೆ ಅರ್ಥವನ್ನು ಉತ್ಪಾದಿಸಿದರೆ ಅಥವಾ ವರ್ಧಿಸಿದರೆ ಅದರಿಂದ ಒಂದು ಪಾಲಾದರೂ ತಮಗೆ ದಕ್ಕೀತೆಂದು ಅವರು ನಂಬುವದಿಲ್ಲ. ಸಂಪತ್ತನ್ನು, ಉತ್ಪಾದನೆಯನ್ನು ವರ್ಧಿಸಿದರೆ ಮಾತ್ರ ಸರ್ವ ಕಲ್ಯಾಣವಾದೀತು. ಉತ್ಪಾದನೆಯಿಲ್ಲದೆ ಸಂಪನ್ಮೂಲವನ್ನು ಹಂಚಿಬಿಟ್ಟರೆ ದೇಶೋದ್ಧಾರ ಅಥವಾ ಜನತೋದ್ಧಾರ ಎಂತಾದೀತು? ಈ ಲೇಖನದ ವಿಚಾರವಿಷ್ಟೆ. ಅರ್ಥ ಉಳ್ಳವರು ತಮ್ಮ ಸಂಪತ್ತನ್ನು ಸಮಾಜೋದ್ಧಾರ, ದೇಶೋದ್ಧಾರ ಮತ್ತು ಜನತೋದ್ಧಾರ ಕಾರ್ಯಗಳಲ್ಲಿ ವಿನಿಯೋಗಿಸಬೇಕು, ಮತ್ತು ಕಾರ್ಮಿಕ, ಶ್ರಮಿಕ ದಲಿತ ಅಂದರೆ ದುಡಿಯುವವರನ್ನು ಆವಶ್ಯಕ ಘಟಕವೆಂದು ಬಗೆಯಬೇಕು. ಅವರ ನೆರವಿಲ್ಲದೆ ಅರ್ಥ ಬೆಳೆಯದು.

ಒಂದು ರೂಪಾಯಿಯ ನಾಣ್ಯವನ್ನು ಭೂಮಿಯಲ್ಲಿ ತೂರಿ ನೀರು ಎರೆದರೆ ಅದರಿಂದ ಉತ್ಪಾದನೆಯಾಗದು. ಅದೇ ರೂಪಾಯಿ ಅಥವಾ ನಾಣ್ಯವನ್ನೂ ಅನಾರ್ಥಿಗೆ ಕೂಲಿ ಕೊಟ್ಟೋ, ವೇತನ ಕೊಟ್ಟೋ ಸಂಪತ್ತನ್ನು ವರ್ಧಿಸಬಹುದು. ಸಂಪತ್ತು ವರ್ಧಿಸಬೇಕಾದರೆ ಉತ್ಪಾದನೆ ಬೆಳೆಯಬೇಕು. ಉತ್ಪಾದನೆ ಹೆಚ್ಚಬೇಕಾದರೆ ಕಾರ್ಮಿಕ ಮತ್ತು ಶ್ರಮಿಕ ಅಂದರೆ ದುಡಿಯುವವರು ಅಧಿಕ ದುಡಿಯಬೇಕು. ಈ ದುಡಿಯುವವರ ಸ್ನೇಹ, ಸಂಪರ್ಕ ಮತ್ತು ಮೆಹನತ್ತು ಇಲ್ಲದೆ ಅರ್ಥ ಬೆಳೆಯದು.

ಇದೇ ಮಾದರಿಯಲ್ಲಿ ಅನಾರ್ಥಿಗಳು ಅಂದರೆ ಹಣ ಕಾಸು ಇಲ್ಲದವರು ಕಾರ್ಮಿಕರು, ಶ್ರಮಿಕರು, ಇತ್ಯಾದಿ, ಐಶ್ವರ್ಯವನ್ನು ಹೆಚ್ಚಿಸಬೇಕೇ ವಿನಃ ಒಬ್ಬನ ಅಥವಾ ಹತ್ತು ಜನರ ಸಂಪತ್ತನ್ನು ಎಲ್ಲರಿಗೂ ಹಂಚಿಕೊಟ್ಟರೂ ಬಡತನ ನೀಗದು. ನಮ್ಮ ಬಡತನ ನೀಗಬೇಕಾದರೆ ನಾವು ದೊಡ್ಡವರಾಗಬೇಕು. ನಮ್ಮ ಯೋಜನೆ, ಭಾವನೆ, ಕಾಮನೆ ಮತ್ತು ಉತ್ಪಾದನೆಗಳು ದೊಡ್ಡದಾಗಬೇಕು. ನಮ್ಮ ದಾರಿದ್ರ್ಯವನ್ನು ನಾವೇ ದೂರ ಮಾಡಿಕೊಳ್ಳಬೇಕಲ್ಲದೆ ಬೇರೊಬ್ಬನ ಐಶ್ವರ್ಯವನ್ನು ಹಂಚಿದ ಮಾತ್ರಕ್ಕೆ ಅದು ಸಾಧ್ಯವಾಗಲಾರದು.

"ಅಕ್ಕಿ ಸರಿಯಾಗಬಾರದು; ಅಕ್ಕ ಬಡವಾಗಬಾರದು" ಎಂಬ ಗಾದೆಯಿದೆ. ಅಕ್ಕನಿಗೆ ಬೇಕಾಗುವಷ್ಟು ಅಕ್ಕಿಯನ್ನು ಕೊಡದಿದ್ದರೂ ಸ್ವಲ್ಪವನ್ನಾದರೂ ಕೊಟ್ಟರೆ ಅಕ್ಕಿಯ ಭಂಡಾರ ಬರಿದಾಗದು. ಆದರೆ ಅಕ್ಕ ವಿಧವೆಯಾದರೂ ಚಿಂತಿಲ್ಲ; ಭಾವ ಸಾಯಲಿ ಎಂಬ ಧೋರಣೆ ಮಾತ್ರ ಸಮಾಜ ಘಾತುಕ; ವ್ಯಕ್ತಿ ನಾಶಕ. ದುಡಿಮೆಗೆ, ಶ್ರಮಕ್ಕೆ ಸಂಪೂರ್ಣ ವೇತನ ದೊರೆಯದಿದ್ದರೂ ದುಡಿಮೆ ನಿಲ್ಲಿಸಬಾರದು. ಯಾಕೆಂದರೆ ದುಡಿತ ನಿಲ್ಲಿಸಿದರೆ ದುಡಿಯುವವನಿಗೂ ಇಲ್ಲ; ದುಡಿಸುವವನಿಗೂ ನಾಸ್ತಿಯಾಗುವದು. ಅರ್ಥವಿಷ್ಟೆ. ಎರಡು ಬಣದವರೂ ಸ್ವಾರ್ಥವನ್ನು ದೂರ ನಿಲ್ಲಿಸಬೇಕು. ಸತ್ಯಾರ್ಥ ಅಥವಾ ಪರಾರ್ಥದ ಚಿಂತನ ಮೂಡಿಸಬೇಕು.

ಹಾಗಾದರೆ ಪರಾರ್ಥ ಅಥವಾ ಸತ್ಯಾರ್ಥವೆಂದರೇನು? ಧನಿಕರು ಮತ್ತು ಬಡವರು ಪರಸ್ಪರ 'ಮೈತ್ರಿ'ಯಿಂದ ನಡೆಯು

ಹೆಚ್ಚು ಹಾಲು ಉತ್ಪಾದನೆಗೆ
'ಮಿಲ್ಕ್ ಕ್ಯಾನ್' ಗುರ್ತಿನ
ಆಹಾರ ಸತ್ವ ಹಾಗೂ ಖನಿಜ ವಸ್ತುಗಳಿಂದ ಸಮೃದ್ಧವಾದ
ದನಗಳ ಮೇವನ್ನೂ
ಮತ್ತು
ಮೊಟ್ಟೆಗಳ ಉತ್ಪನ್ನವನ್ನು
ಹೆಚ್ಚಿಸಲು
'ಬ್ಯಾಸ್ಕೆಟ್' ಗುರ್ತಿನ
ಕೋಳಿಗಳ ಮೇವನ್ನೂ
ಉಪಯೋಗಿಸಿರಿ.

ತಯಾರಕರು :
ಮೈಸೂರು ಫೀಡ್ಸ್ ಪ್ರೈವೇಟ್ ಲಿಮಿಟೆಡ್
283-284, ಹಳೇತರಗು ಪೇಟೆ,
ಬೆಂಗಳೂರು—2 A.

ದಾಸ್ತಾನುದಾರರು :

1) ಮೆ॥ ಜೈ ಭಾರತ್ ಮಿಲ್ಸ್
ಉಪೇಂದ್ರ ಬಾಗ್, ಉಡುಪಿ.

2) ಮೆ॥ ಜಿ. ಜಿ. ಶ್ರೀನಿವಾಸ ಪ್ರಭು
ಬಂದರ್, ಮಂಗಳೂರು-1.

ಬೇಕು. ಮಾತ್ಸರ್ಯ ಇಬ್ಬರಿಗೂ ಘಾತುಕವೇ. ಭ್ರಾತೃ ಪ್ರೇಮವಿಲ್ಲದೆ, ಮಾನವೀಯತೆಯಿಲ್ಲದೆ, ಅನುಕಂಪವಿಲ್ಲದೆ ಜೀವನ ನೀಗಿದರೆ ಇಬ್ಬರಿಗೂ ನೆಮ್ಮದಿಯಿಲ್ಲ. ಆದ್ದರಿಂದ ಸ್ವಾರ್ಥವನ್ನು ಎಲ್ಲರೂ ಸಂಪೂರ್ಣ ತ್ಯಜಿಸಬೇಕು. ಸ್ವಾರ್ಥದ ದಮನವಾಗದೆ ಸಂಪತ್ತು ಬೆಳೆಯದು. ನಿಸ್ವಾರ್ಥ ಚಿಂತನ ಮತ್ತು ಶ್ರಮವಿಲ್ಲದೆ ಶಾಂತಿ ನೆಲಸದು. ನಮ್ಮ ನಮ್ಮ ಕ್ಷೇತ್ರದಲ್ಲಿ, ನಾವು ಚೆನ್ನಾಗಿ ದುಡಿದರೆ ಮಾತ್ರ ನಾವು ಶ್ರೀಮಂತರಾದೇವು. ದೇಶವೂ ಶ್ರೀಮಂತವಾದೀತು. ಪರಾರ್ಥ ಅಥವಾ ಸತ್ಯಾರ್ಥದ ದರ್ಶನವನ್ನು ನಾವು ನಿಸರ್ಗದಲ್ಲಿ ನೋಡಬಹುದು. ಪ್ರಕೃತಿಯಿಂದ ಪಾಠಕಲಿತು ನಾವು ಧನವಂತರಾಗಬೇಕು.

ಸೂರ್ಯ ಚಂದ್ರಾದಿಗಳು ಏತಕ್ಕಾಗಿ ಅಥವಾ ಯಾರಿಗಾಗಿ ಮತ್ತು ಯಾವ ಪ್ರತಿಫಲಕ್ಕಾಗಿ ಬೆಳಗುತ್ತಿವೆ? ಮಳೆ ಬಿಸಿಲುಗಳು ಯಾರ ಪ್ರೀತ್ಯರ್ಥಕ್ಕಾಗಿ ತಮ್ಮ ಕೆಲಸವನ್ನು ಜರಗಿಸುತ್ತಿವೆ? ಬೆಂಕಿ,ನೀರು,ಗಾಳಿಗಳು ಮಾನವನಿಗೆ ಏಕೆ ಸಹಕಾರಿ ಅಥವಾ ಉಪಕಾರಿಯಾಗಬೇಕು? ಗಿಡಮರಗಳು ಯಾರಿಗಾಗಿ ಫಲಕೊಡುತ್ತವೆ?ಇವುಗಳ ಪರಿಶ್ರಮದಿಂದ ಜಗತ್ತು ನಡೆಯುತ್ತಿದೆ. ಅವರೆಲ್ಲ ಸಂಪು ಮಾಡಿದರೆ ಮಾತ್ರ ನಮಗೆ ಬದುಕಿನ ಸತ್ಯಾರ್ಥ ತಿಳಿದೀತು!

ಹೂವು ಏಕೆ ಅರಳುತ್ತಿದೆ? ಗಿಡವೇಕೆ ಹಣ್ಣನ್ನು ಈಯುತ್ತದೆ? ಹುಲ್ಲೇಕೆ ಹಸುರಾಗಿದೆ? ಇವೆಲ್ಲ ನಿಸ್ವಾರ್ಥ ಬದುಕಿನ ಸಂಕೇತಗಳು. ತಮ್ಮ ಅಸ್ತಿತ್ವದಿಂದ ತಮಗೆ ಲಾಭವಿಲ್ಲದಿದ್ದರೂ ಮಾನವ ಕೋಟಿ, ಜೀವ ಕೋಟಿ ಸುಖಿಸಲಿ ಎಂಬುವದು ಅವುಗಳ ವಿಶಾಲ ಮನೋಭಾವನೆ. ಉದಾತ್ತ ಧ್ಯೇಯ. ಧಾರಾಳ ಮನಸ್ಸು. ಇರುವೆಯಿಂದಲೂ ಪಾಠವನ್ನು ಕಲಿಯಬಹುದಾಗಿದೆ. ತದ್ರೀತಿಯಲ್ಲಿ ಅರ್ಥ ಇದ್ದವರು ಮತ್ತು ಅರ್ಥ ಇಲ್ಲದ ಅನರ್ಥಿಗಳು ಸ್ವಾರ್ಥವನ್ನು ತ್ಯಾಗ ಮಾಡಿ ತಮ್ಮ ಬದುಕನ್ನು ಲೋಕ ಕಲ್ಯಾಣಕ್ಕಾಗಿ, ಜನತೋದ್ಧಾರಕ್ಕಾಗಿ—ಎಲ್ಲರ ಸುಖ ಸಂಪತ್ತಿಗಾಗಿ ವಿಚಾರ ಮಾಡಿ ಕಾರ್ಯ ಪ್ರವೃತ್ತರಾಗುವನೇ ಪರಾರ್ಥ, ಸತ್ಯಾರ್ಥ ಅಥವಾ ಸಮಕಾಲೀನ ಪುರುಷಾರ್ಥ.

ಒಂದು ಅಕ್ಕಿಯ ಅಥವಾ ಗೋದಿಯ ಬೀಜ ಸಾವಿರಾರು ಕಾಳನ್ನು ಸೃಷ್ಟಿಯಲ್ಲಿ ಹೆಚ್ಚಿಸುತ್ತದೆ. ಅಂತೆಯೇ ಒಂದು ನಿಸ್ವಾರ್ಥಪೂರ್ಣ ಕಾರ್ಯ ಸಂಪನ್ನ ಯೋಜನೆ ಅಥವಾ ವಿಚಾರ ಲಕ್ಷೋಪಲಕ್ಷ ಜನರ ಅಭ್ಯುದಯಕ್ಕೆ ಕಾರಣವಾಗಬಲ್ಲುದು. ಈ ಸತ್ಯಾರ್ಥ ಅಥವಾ ಪರಾರ್ಥ ಪುರುಷಾರ್ಥ ಯೋಜನೆಯಲ್ಲಿ ಎಲ್ಲರಿಗೂ ಭಾಗವಹಿಸುವ ಅವಕಾಶವಿದೆ. ಇದು ಬರೇ ಶ್ರೀಮಂತರಿಗೆ ಮಾತ್ರವಲ್ಲ, ಬಡವರಿಗೂ ಅಲ್ಲ. ವಿದ್ಯಾವಂತರಿಗೂ ಅವಿದ್ಯಾವಂತರಿಗೂ ಇವರಲ್ಲಿ ಸ್ಥಾನವಿದೆ. ರೈತರಿಗೆ ಶ್ರಮಿಕರಿಗೆ, ಕಾರ್ಮಿಕರಿಗೆ, ದುಡಿಯುವವರಿಗೆ; ವ್ಯಾಪಾರಿಗಳಿಗೆ-ಅಂದರೆ ಎಲ್ಲಾ ಜನಪ್ರಿಯರಿಗೆ, ದೇಶಪ್ರಿಯರಿಗೆ ಮತ್ತು ಮಾನವ ಕಲ್ಯಾಣ ಬಯಸುವವರಿಗೆಂದು ಇದನ್ನು ಬರೆಯಲಾಗಿದೆ.

ಅಮೆರಿಕೆಯ ಆಗರ್ಭ ಶ್ರೀಮಂತ ದಿವಂಗತ ಹೆನ್ರಿ ಫೋರ್ಡನ ಯಶಸ್ಸಿಗೆ ಕಾರಣವೇನು? ನಿಸ್ವಾರ್ಥ ಜೀವನ. ಉದಾತ್ತ ಭಾವನೆ. ಉನ್ನತ ಧ್ಯೇಯ. ಜಗತ್ತಿನ ಎಲ್ಲಾ ಮಾನವರೂ ಕನಿಷ್ಠ ಒಂದು ಮೋಟಾರು ಕಾರನ್ನು ಕೊಳ್ಳುವಂತಾಗಬೇಕೆಂಬ ಮಹಾದರ್ಶ. ಅಮೆರಿಕೆಯಲ್ಲಿ ಇತರ ಕಂಪೆನಿಯ ಉದ್ದಿಮೆದಾರರು ಮೋಟಾರಿನ ಬೆಲೆಯನ್ನು ಏರಿಸುವ ವಿಚಾರ ಮಾಡಿದರೆ ಹೆನ್ರಿ ಫೋರ್ಡ್ ತನ್ನ ಕಾರಿನ ಬೆಲೆಯನ್ನು ಇಳಿಸುತ್ತಿದ್ದ. ಇತರ ಉದ್ದಿಮೆದಾರರು ಕಾರ್ಮಿಕರ ವೇತನ ಅಥವಾ ಇಳಿತದ ವಿಚಾರ ಮಾಡಿದಾಗ ಅವನು ಕಾರ್ಮಿಕರ ವೇತನವನ್ನು ಹೆಚ್ಚಿಸುತ್ತಿದ್ದ. ಇದರಿಂದ ನಮ್ಮ ಉದ್ದಿಮೆದಾರರು ಪಾಠಕಲಿತಾರೇ? ಕಲಿತರೆ ಧನ್ಯರವರು! ನಾವೂಧನ್ಯರು!! ದೇಶ ಧನ್ಯವಾದೀತು!!!

ಇನ್ನೂ ಕೆಲವೊಂದು ಸೂಕ್ತ ಸೂಚನೆಗಳು—ವಿಚಾರವಂತರಿಗಾಗಿ.

● ಒಂದು ಗಿರಣಿಯ ಮಾಲಕ ನೂರು ಗಿರಣಿಯ ಒಡೆಯನಾಗುವ ದುರಾಸೆ ಮಾಡುವ ಬದಲು, ಭಾರತದಲ್ಲಿನ ಪ್ರಜೆಗಳೆಲ್ಲರಿಗೂ ಬೇಕಾಗುವ ಬಟ್ಟೆ ಬರೆಗಳನ್ನು ತನ್ನ ಮಿಲ್ಲಿನಿಂದ ಸಿಗುವಂತಾಗಲಿ ಎಂಬ ಸಂಕಲ್ಪ ಮಾಡಲಿ.

● ಅನ್ನಕ್ಕಾಗಿ ದೇಶ ಇನ್ನೂ ದವಸ ಧಾನ್ಯಗಳನ್ನು ಆಯಾತ ಮಾಡುವ ದುರ ಪ್ರಸಂಗದಲ್ಲಿ ಪ್ರತಿಯೊಬ್ಬ ರೈತನೂ ಉಣ್ಣಲು ತಿನ್ನಲು ಬೇಕಾಗುವಷ್ಟು ಆಹಾರೋತ್ಪಾದನೆಯನ್ನು ಮಾಡುವೆನು ಎಂದು ಪಣತೊಡಲಿ.ದೇಶಕಣಜ—ಕಾಳುಗಳಿಂದ ತುಂಬುವದು.

● ಕನಿಷ್ಠ ಸಾವಿರ ಜನರ ಪ್ರಾಣ ರಕ್ಷಿಸಿದ ಬಳಿಕವೇ ತಾನು ಪ್ರಾಣ ಬಿಟ್ಟೇನು ಎಂದು ಪ್ರತಿ ಡಾಕ್ಟರ್ ಮತ್ತು ವೈದ್ಯರು ಪ್ರಮಾಣ ಮಾಡಲಿ.

● ನೂರು ಸಂಕ ಸೇತುವೆಗಳನ್ನು ಕಟ್ಟುವ ಅವಕಾಶ ಪ್ರತಿಯೊರ್ವ ಇಂಜನಿಯರನಿಗೆ ಸಿಗದಾದರೂ ತಾನು ಹುಟ್ಟಿದ ಹಳ್ಳಿ ಪಳ್ಳಿ ಪರಿಸರಗಳಲ್ಲಿ ಸಣ್ಣ ಪುಟ್ಟ ಸಂಕ ಸೇತುವೆಗಳನ್ನು ನಿರ್ಮಿಸದೆ ಬಿಡೆನು ಎಂದು ತಾಂತ್ರಿಕ–ವಿಜ್ಞಾನಿಗಳು ವಿಚಾರ ಮಾಡಲಿ.

● ಹಳ್ಳಿ ಪಳ್ಳಿಯ ಜನರು ವಿಕ್ರಯಕ್ಕಲ್ಲವಾದರೂ, ತಮಗೆ ವಿಶೇಷ ಜಮೀನು ಭೂಮಿ ಇಲ್ಲದಿದ್ದರೂ, ಇದ್ದ ತುಣುಕು ಭೂಮಿಯಲ್ಲಿ ಕಾಯಿಪಲ್ಲೆ ಸಾಗುವಳಿ ಮಾಡಲಿ. ಹೂ ಹಣ್ಣು ಗಿಡಗಳನ್ನು ಬೆಳಸಲಿ.

● ಮಧ್ಯಮ ವರ್ಗದ ಮನೆಯಿದ್ದವರು ಅಥವಾ ಭೂ ಮಾಲ್ಡಕರು ವಿಶಾಲ ಕೃಷಿಕೋದ್ಯಮದಲ್ಲಿ ಕೈಯಿಕ್ಕಲು ಅಸಮರ್ಥರಾಗಿದ್ದರೂ ತಮ್ಮ ಮನೆಯ ಸುತ್ತ ಮುತ್ತ ತೆಂಗಿನ ಕಾಯಿ, ಮಾವು, ಪೇರಲ, ಹಲಸು ಬಾಳೆ ಮುಂತಾದ ಫಲ ವೃಕ್ಷಗಳನ್ನು ಬೆಳೆಸಲಿ.

● ವ್ಯಾಪಾರಿಗಳು ವರ್ಷದಲ್ಲಿ ಒಂದು ದಿನವಾದರೂ ಲಾಭವಿಲ್ಲದೆ ಖರೀದಿ ಬೆಲೆಯಲ್ಲಿ ತಮ್ಮ ಸಾಮಾನುಗಳನ್ನು ವಿಕ್ರಯಿಸಿ, ವ್ಯಾಪಾರ ಮಾಡಲಿ.

● ಶ್ರಮಿಕರು, ಕಾರ್ಮಿಕರು ದುಡಿಯುವವರು ಮತ್ತು ಬಡವರು ಒಂದು ದಿನವಾದರೂ ತಮ್ಮ ಶ್ರಮವನ್ನು ದೇಶಕ್ಕೆ ದಾನ ಮಾಡಲಿ.

● ಹೊಟ್ಟೆಬಾಕರು ಅಥವಾ ದಿನಕ್ಕೆ ಆರು ಹೊತ್ತು ಉಣ್ಣುವವರು ಒಂದು ದಿನವಾದರೂ ಸಂಪೂರ್ಣ ಉಪವಾಸ ಮಾಡಲಿ ಇದು ಅಸಾಧ್ಯವೆಂದಾದರೆ ಒಪ್ಪತ್ತು ಊಟವನ್ನಾದರೂ ಬಿಟ್ಟುಕೊಡಲಿ.

● ಉಪಾಧ್ಯಾಯರು ಅಥವಾ ಐಗಳು ಒಂದು ವಿದ್ಯಾರ್ಥಿಯಿಂದಲಾದರೂ ವಿದ್ಯೆಯಲ್ಲಿ ವಿಕ್ರಮ ತೋರಿಸುವ ಪಂಥಕ್ಕಿಳಿಯಲಿ.

● ವಿದ್ಯಾರ್ಥಿಗಳು ಅಥವಾ ಅಕ್ಷರಸ್ಥರು ಒಬ್ಬ ನಿರಕ್ಷರಕುಕ್ಷಿಯನ್ನಾದರೂ ವಿದ್ಯಾವಂತನಾಗುವಂತೆ ಯತ್ನ ಮಾಡಲಿ, ಅಥವಾ ವಿದ್ಯಾದಾನವನ್ನೀಯಲಿ.

● ನಮ್ಮ ಕಲಿ ಭೀಷ್ಮ ಪಿತಾಮಹರಂತಹ ರಾಜಕಾರಣಿಗಳು ಅಹೋರಾತ್ರಿ ಇಂದಿರಜ್ಜಿಯನ್ನು ಉರುಳಿಸುವ ತಲೆ ಸಿಡಿತದ ಕಾರ್ಯಕ್ರಮವನ್ನು ಬದಿಗೊತ್ತಿ ಒಂದು ಕ್ಷಣವಾದರೂ ತಾವು ಮಾಡುವ ಕೆಲಸ ಸರಿಯೇ; ದೇವರಿಗೆ ಅಥವಾ ಜನರಿಗೆ ಇದು ಪ್ರಿಯವೇ ಎಂದು ವಿಚಾರ ಮಾಡಲಿ.

● ವಿಧ್ವಂಸಕ ಕಾರ್ಯಗಳಲ್ಲಿ ನಿರತರಾದ ನಕ್ಸಲೀಯರಿರಲಿ; ಸರಕಾಸುರವಾದಿಗಳಿರಲಿ, ತಾವು ಮಾಡುತ್ತಿರುವ ಕಾರ್ಯ ಸರಿಯೋ ತಪ್ಪೋ ಎಂದು ಒಂದು ತಾಸು ಯೋಚಿಸಲಿ.

● ಭಾಷಣ ಬಿಗಿಯುವ ದೇಶೋದ್ಧಾರಕರು ಮತ್ತು ಜನ ಸುಧಾರಕರು ಒಂದು ದಿನವಾದರೂ ಭಾಷಣ ಬಿಗಿಯದೆ ಮೌನವನ್ನಾಚರಿಸಲಿ

● ಜೀವನಾರಭ್ಯ ಸುಳ್ಳು, ಮೋಸ, ದುರಾಚಾರಗಳಿಂದ ಬಾಳುವ ಜನರು ಒಂದು ದಿನವಾದರೂ ಸತ್ಯ, ಸತ್ಕರ್ಮ, ಮತ್ತು ಸದ್ಭಾವನೆಗಳನ್ನು ಬೆಳೆಸಿ ತಮಗಿಷ್ಟಬಂದವರ ಸೇವೆ ಮಾಡಲಿ.

● ಧರ್ಮದ ಹೆಸರಿನಲ್ಲಿ ಗೊಂದಲವೆಬ್ಬಿಸುವ ಸಮಾಜ ಘಾತುಕರು ಅಥವಾ ಕಪಟ ಸನ್ಯಾಸಿಗಳು ಒಂದು ದಿನ ಸುಮ್ಮನೆ ಕೂರಲಿ. ಇತ್ಯಾದಿ, ಇತ್ಯಾದಿ.

ನೀತಿ:-

ಈ ಪುಣ್ಯ ಭೂಮಿ ಭಾರತ ದೇಶ ಎಂದಿಗೂ ನರಿ ನಾಯಿಗಳ ರಾಜ್ಯಾಡಳಿತಕ್ಕೆ ಹೋಗದು. 'ದೇಶವನ್ನು ರಕ್ಷಿಸಿರಿ, ಪ್ರಜಾಪ್ರಭುತ್ವವನ್ನು ಉಳಿಸಿ' ಎಂದು ಬೊಬ್ಬಿಡುವವರು ಜನಕೋಟಿಯ ಹಿತವರಲ್ಲ. ತೋಳ ಬಂತೋ ತೋಳ ಎಂದು ಗೀಳು ಹಾಕುವವರೇ, ಕಾಲ ಬದಲಾಗಬಹುದು. ಜನಜೀವನದ ಚಿಂತನ ಮಂಥನ ಬದಲಾದೀತು. ಆಚಾರ ವಿಚಾರಗಳು ಬದಲಾದರೂ ದೇವರು ಮತ್ತು ಅವನ ಸ್ವರೂಪ ಅಥವಾ ಸ್ವಗುಣ ಬದಲಾಗುವುದಿಲ್ಲ. ಅದು ಹಿಂದೆಯೂ ಒಂದೇ ಈಗಲೂ ಒಂದೇ. ಮುಂದೆಯೂ ಒಂದೇ. ಈ ಅರ್ಥ, ಅನರ್ಥ, ಸ್ವಾರ್ಥ ಮತ್ತು ಸ್ವಜನಾರ್ಥದ ಪಗಡೆಯಾಟದಲ್ಲಿ ಸತ್ಯಾರ್ಥವನ್ನು ಪ್ರಕಟಿಸದೆ ಸುಮ್ಮನೆ ಕೂತುಕೊಳ್ಳುವನಲ್ಲ: ಸರಕಾರಕ್ಕೆ ಸೈನ್ಯಬೇಕು. ಪದಚ್ಯುತ ರಾಜಕಾರಣಿಗಳಿಗೆ ಅಧಿಕಾರ ಮತ್ತು ಪದವಿ ಬೇಕು. ಈ ಎಲ್ಲ ಡೊಂಬರಾಟವನ್ನು ಕ್ಷಣ ಮಾತ್ರದಲ್ಲಿ ನಿಲ್ಲಿಸಿಬಿಡುವ ಶಕ್ತಿ ದೇವರಿಗೆ ಇದೆಯೆಂಬುದನ್ನು ನಾವೆಲ್ಲ ಮರೆಯಬಾರದು. ಆದ್ದರಿಂದ ಸತ್ಯಾರ್ಥವನ್ನು ಇದಿರು ನೋಡೋಣ. ದೀನದಯಾಳು, ಸಚ್ಚಿದಾನಂದ ಭಗವಂತನಿಗೆ ವಂದಿಸೋಣ.

ಶಿಕ್ಷಣ ರಂಗದ ಮೇಲೆ ಚುನಾವಣೆಯ ಗಾಳಿ

(ಐದನೇ ಪುಟದಿಂದ)

ಡಿಕೊಂಡರೂ ಅದರಲ್ಲಿ ಸಕ್ರಿಯ ಭಾಗವಹಿಸುವುದು ವಿಹಿತವಲ್ಲ. ಪುಢಾರಿಗಳು ಶಿಕ್ಷಣರಂಗವನ್ನು ಕಲುಷಿತಗೊಳಿಸಿದ್ದಾದರೆ ಸರಿಯಾದ ಶಿಕ್ಷಣ ಯುವಕರಿಗೆ ದೊರಕದಂತಾಗುತ್ತದೆ. ಅಪಕ್ವ ಜ್ಞಾನದ ಆ ಯುವಕರು ನಾಳೆ ದೇಶದ ಸಂಪತ್ತಾಗುವ ಬದಲು ವಿಪತ್ತಾಗುವ ಸಂಭವವಿದೆ. ಈ ಸಲದ ಚುನಾವಣೆಯಲ್ಲಿ ಯಾವುದೇ ಪಕ್ಷ ವಿದ್ಯಾರ್ಥಿಗಳ ಬೆಂಬಲದಿಂದ ಗೆದ್ದು ಬಂದಂತಾದರೆ ಈ ವರ್ಷದ ಪರೀಕ್ಷೆ ಸಕಾಲದಲ್ಲಾಗದೇ ಹೋಗಬಹುದು. ಅಥವಾ ಆದರೂ ಬಹುಮಂದಿ ಪಾಸಾಗ ಬಹುದು. ಆಗ ಎಲ್ಲರಿಗೂ ಪಾಸು ಕೊಡಬೇಕೆಂದು ಚಳುವಳಿ ನಡೆದಾಗ ಮೇಲಿನವರು ಶರಣಾಗತರಾಗಲೂ ಬಹುದು. ಹಾಗೆ ಪಾಸಾದವರು ಸರಿಯಾದ ಯೋಗ್ಯತೆಯುಳ್ಳ ಪದವೀಧರರಾಗದೇ ಹೋಗುವುದೂ ಸ್ವಾಭಾವಿಕ. ಅಂಥವರಿಗೂ ಉದ್ಯೋಗ ಕೊಡಲೇಬೇಕೆಂಬ ಬಲಾತ್ಕಾರವೂ ನಡೆಯಬಹುದು. ಮೆರವಣಿಗೆ ಕಲ್ಲೆಸೆತಗಳ ಸಂಖ್ಯೆ ಮಿತಿಮೀರಬಹುದು. ಕೊನೆಗೆ ಭಸ್ಮಾಸುರನಂತೆ ಈ ಸಮಸ್ಯೆ ಎಲ್ಲರನ್ನೂ ಸುಟ್ಟು ಹಾಕುವ ಪಡಂಭೂತವಾದರೂ ಆಶ್ಚರ್ಯಪಡಬೇಕಾಗಿಲ್ಲ.

ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ನಮ್ಮ ರಾಷ್ಟ್ರಾಧ್ಯಕ್ಷರು ಬೆಂಗಳೂರಲ್ಲಿ ಕೆಲ ದಿವಸಗಳ ಹಿಂದೆ ನ್ಯಾಶನಲ್ ಕಾಲೇಜಿನ ರಜತೋತ್ಸವ ಸಂದರ್ಭದಲ್ಲಿ 'Educational Institutions must be declared out of bounds for Politicians' ಎಂದು ತುಂಬ ಅರ್ಥವತ್ತಾಗಿ ಸಾರಿದ್ದಾರೆ.

ಆದಕ್ಕಾಗಿಯೇ ಆದಷ್ಟು ಮಟ್ಟಿಗೆ ಗುರುಗಳೂ,ಶಿಷ್ಯರೂ, ಹಿರಿಯರೂ—ಈ ಸಲದ ಚುನಾವಣೆಯ ಗಾಳಿ, ಅದರ ಧಾಳಿ ಶಿಕ್ಷಣರಂಗದ ಮೇಲೆ ಆಗದಂತೆ ನೋಡಬೇಕಾಗಿದೆ. ಇನ್ನಾದರೂ ನಾವು ಮುಂಬರುವ ಅಪಾಯವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಹಾಗೆ ಒಂದು ಸಲ ದೂರವಿರುವ ಅಭ್ಯಾಸವಾಗಿ ಹೋದರೆ ಇನ್ನು ಮುಂದೆ ಬರಲಿರುವ ಎಲ್ಲ ತರದ ಚುನಾವಣೆಗಳಿಗೂ — ಶಿಕ್ಷಣರಂಗಕ್ಕೂ ಪ್ರತ್ಯಕ್ಷ ಸಂಬಂಧವಿಲ್ಲದಂತಾಗಬಹುದು. ಅಂತಹ ಉತ್ತಮ ಸಂಪ್ರದಾಯಾರಂಭಕ್ಕೆ ಇದೇ ತಕ್ಕ ಕಾಲ ಏಕಾಗಬಾರದು?

ಪ್ರತಿಯೊಬ್ಬರು ತಮ್ಮ ತಮ್ಮ ಧರ್ಮವನ್ನೇ ಸರಿಯಾಗಿ ಪಾಲಿಸುವಂತಾಗುವದೇ ನಿಜವಾಗಿ ಅವಶ್ಯವಾದದ್ದು. ಹೀಗಾದರೆಯೇ ಧರ್ಮದ ಸುಳ್ಳು ಅಭಿಮಾನ ಮತ್ತು ಧಾರ್ಮಿಕ ಹುಚ್ಚುತನದ ವಿಷಯವು ಬರಲಾರದು.

o o o

ಚೆನ್ನಾಗಿ ಸವಾರಿ ಮಾಡಲು ಅರಿಯದವನ ಮೇಲೆ ಅವನ ಕುದುರೆಯೇ ಸವಾರಿ ಮಾಡಿಬಿಡುತ್ತವೆ. ಅದು ಅವನಿಗೆ ಬೇಕಾದ ಹಾಗೆ ಕುಣಿಸುತ್ತದೆ. ಮತ್ತು ಬೇಡವಾದರೆ ಕೆಡವಿಯೂ ಬಿಡುತ್ತದೆ.

ನಮ್ಮ ಪ್ರಜಾಪ್ರಭುತ್ವ ಎತ್ತ ಸಾಗುತ್ತಿದೆ?

(ನಾಲ್ಕನೇ ಪುಟದಿಂದ)

ವಿದೇಶಗಳ ಸಾಲ ನಮ್ಮ ತಲೆಯ ಮೇಲಿದೆ. ಅಮೇರಿಕಾದಂಥಾ ಧನಿಕ ರಾಷ್ಟ್ರದಿಂದ ಹಿಡಿದು ನಾರ್ವೆಯಂಥಾ ಅಂಗೈಅಗಲದ ರಾಷ್ಟ್ರದಿಂದಲೂ ಸಾಲಬೇಡಿ ತಂದಿದ್ದೇವೆ.

ಕಮ್ಯುನಿಷ್ಟ ರಾಷ್ಟ್ರವಾಗಿದ್ದ ಯುಗೋಸ್ಲಾವಿಯಾ, ಅಮೇರಿಕಾ, ಬ್ರಿಟನ್ ಮತ್ತು ಫ್ರಾನ್ಸ್‌ಗಳಿಂದ ಸಹಾಯ ಪಡೆದು ಸ್ಟಾಲಿನರ ಬೆದರಿಕೆಗಳಿಗೆ ಮಣಿಯದೆ, ರಾಷ್ಟ್ರದ ಉದ್ಯಮಗಳನ್ನು ಖಾಸಗೀ ಮಾಲಿಕತ್ವಕ್ಕೆ ವಹಿಸಿಕೊಟ್ಟು, ಈಗ ಪಶ್ಚಿಮ ಮತ್ತು ಪೂರ್ವ ಎರಡೂ ಜಗತ್ತು ಮನ್ನಿಸುವ ಮಹಾವ್ಯಕ್ತಿ ಆಗಿದ್ದಾರೆ. 79 ತುಂಬಿದ ಮಾರ್ಷಲ್ ಟಿಟೋ ಮಾದರಿ ಸಮಾಜವಾದಿ ರಾಷ್ಟ್ರವೆನಿಸಿರುವ ಸ್ವೀಡನ್ 40 ವರ್ಷಗಳ ಸಮಾಜವಾದಿ ಸರಕಾರದ ಆಡಳಿತದಲ್ಲಿ ಶೇಕಡಾ 9)ಕ್ಕಿಂತಲೂ ಹೆಚ್ಚಿನ ಉದ್ಯಮಗಳನ್ನು ಖಾಸಗೀ ಮಾಲಕತ್ವಕ್ಕೆ ಬಿಟ್ಟುಕೊಟ್ಟು ಕೇವಲ 80ಲಕ್ಷ ಜನ ಸಂಖ್ಯೆ ಇರುವ ಈ ಸಣ್ಣ ರಾಷ್ಟ್ರ ವಿಶ್ವ ಸಂಸ್ಥೆಯು ಸಂ. 1969-70ರ ಸಾಲಿನಲ್ಲಿ ಪ್ರಕಟಿಸಿದ ಉತ್ಪನ್ನದಲ್ಲಿ 2ನೇ ಸ್ಥಾನಗಳಿಸಿದೆ. 2270 ಅಮೆರಿಕನ್ ಡಾಲರು. ನಮಗಿಂತಲೂ ಒಂದು ವರ್ಷ ತಡವಾಗಿ ಸ್ವಾತಂತ್ರ್ಯಗೊಂಡ ಇಸ್ರಾಯಿಲ್ 16ನೇ ಸ್ಥಾನಗಳಿಸಿದೆ. 1160 ಅಮೇರಿಕನ್ ಡಾಲರು. 15 ವರ್ಷ ಎಡೆಬಿಡದೆ ಯುದ್ಧ ಮಾಡಿ ಆಟಂಬಾಂಬಿನಿಂದ ಜರ್ಜರಿತವಾದ ಜಪಾನು 22ನೇ ಸ್ಥಾನಗಳಿಸಿದೆ. 160 ಅಮೇರಿಕನ್ ಡಾಲರು. ಪ್ರಪಂಚದಲ್ಲಿ ಜನ ಸಂಖ್ಯೆಯಲ್ಲಿ 2ನೇ ಸ್ಥಾನವನ್ನೂ ವಿಸ್ತೀರ್ಣದಲ್ಲಿ 7ನೇ ಸ್ಥಾನವನ್ನೂ ಗಳಿಸಿದ ಭಾರತ ಉತ್ಪನ್ನದಲ್ಲಿ 67ನೇ ಸ್ಥಾನ ಗಳಿಸಿದೆ. ಕೇವಲ 90 ಅಮೇರಿಕನ್ ಡಾಲರು, ಅಂದರೆ ರೂಪಾಯಿ 375/-ಮಾತ್ರ. ಇದು ನಮ್ಮ ಪ್ರಗತಿಯ ಚಿಹ್ನೆಯೇ? ಸಮಾಜವಾದೀ ಸಮಾಜ ರಚನೆಯ ಕಡೆಗೆ ನಾವು ಯಾ ವ ಗ ತಿ ಯಿಂ ದ ಸಾಗುತ್ತಿದ್ದೇವೆ? ಎರಡನೇ ಮಹಾಯುದ್ಧದಲ್ಲಿ ನೆಲಸಮವಾಗಿ ಅಪಾರ ಸಂಪತ್ತನ್ನು ಕಳೆದು ಕೊಂಡಿದ್ದ ಜರ್ಮನಿ, ಜಪಾನು ಈಗ ಹಿಂದಿಗಿಂತಲೂ ವೈಭವಯುಕ್ತ ರಾಷ್ಟ್ರಗಳಾಗಿ ವಿಶ್ವದ ಎದುರು ಸುಖಶಾಂತಿಯಿಂದ ಮೆರೆದಾಡುತ್ತಿವೆ.

ಮದ್ಯಪಾನ ನಿಷೇಧ, ಭಾಷಾವಾರು ಪ್ರಾಂತ್ಯರಚನೆ, ನೂತನ ಶಿಕ್ಷಣ ಕ್ರಮಗಳು, ರೂಪಾಯಿ ಅಪಮೌಲ್ಯ, ಆಹಾರವಲಯ ಪದ್ಧತಿ, ಸಂವಿಧಾನದ ತಿದ್ದುಪಡಿ, ಮತ್ತು ರಾಷ್ಟ್ರೀಕರಣ, ಇವುಗಳಲ್ಲಿ ಯಾವುದರಲ್ಲಾಗಲೀ, ಉದ್ದೇಶಿಸಿದ ಗುರಿಯನ್ನು ಈ ತನಕ ನಾವು ಮುಟ್ಟದೆ, ಬೇಕೆಂತಲೇ ಹೊಸ ಸಮಸ್ಯೆಗಳನ್ನು ನಿರ್ಮಿಸಿ, ದೇಶಕ್ಕೆ ಗಂಡಾಂತರವನ್ನೇ ಬರಮಾಡಿಕೊಂಡು, ಅರಾಜಕತೆಯನ್ನು ರಾಷ್ಟ್ರದ ಉದ್ದಗಲವಲ್ಲಿ ನಿರ್ಮಿಸಿ, ಶಾಶ್ವತ ಅಶಾಂತಿಗೊಂದಲಗಳಿಗೆ ಆಸ್ಪದವನ್ನುಂಟು ಮಾಡಿ ನಾವೆಲ್ಲವರೂ, ಭಾರತೀಯರೆಂಬುದನ್ನು ಸಂಪೂರ್ಣ ಮರೆತು ಬಿಟ್ಟಿರುವೆವು. ಭೂಸುಧಾರಣೆಯ ಕಾನೂನಿನ ನೆಪದಿಂದ ಸರಕಾರವು ಭೂಮಿಯ ಒಡೆತನವನ್ನು ವಹಿಸಿ ಕೊಂಡು ಭಾರತದಲ್ಲಿ ಕಮ್ಯುನಿಸಂ ಕಾಲು ಚಾಚಲು ಹವಣಿಸುತ್ತಿದೆ. ಸಮಾಜವಾದದ ಹೆಸರಿನಲ್ಲಿ ಕೊಲೆ, ಸುಲಿಗೆ, ದರೋಡೆ, ಮತ್ತು ಆಕ್ರಮಣ, ರಾಜಕೀಯದ ಸೋಗು ಹಾಕಿ ಕೊಂಡು ಅಂಜದೆ, ಅಳುಕದೆ, ನಿರ್ಭೀತಿಯಿಂದ ನಡುಹಗಲಲ್ಲೇ ನಡೆಯುಯುತ್ತಿದೆ. ರಕ್ತದ ಕಾಲಿವೆಯು ಹರಿಯುತ್ತಿದೆ. ಹಾಹಾಕಾರವು ನಾಲ್ಕೂ ಕಡೆ ಕಾಮರ್ಗಿಲಿನಂತೆ ಆವರಿಸುತ್ತಿದೆ. ಇದನ್ನು ತಡೆಗಟ್ಟಲು ನಮ್ಮ ಈಗಿನ ಸರಕಾರ ಸಂಪೂರ್ಣ ಅಸಮರ್ಥವಾಗಿರುತ್ತದೆ.

ಸ್ವತಂತ್ರ ಭಾರತದ ಇತಿಹಾಸದಲ್ಲಿ ಎರಡನೇಯ ಅಧ್ಯಾಯ ಸುರು ಆಗಲಿದೆ. ಅನಿರೀಕ್ಷಿತವಾಗಿ ನಮ್ಮ ರಾಷ್ಟ್ರದಲ್ಲಿ ಇಬೇ ಬರುವ ಮಾರ್ಚಿ ಮೊದಲನೇಯ ವಾರದಲ್ಲಿ ಚುನಾವಣೆಯು ನಡೆಯಲಿದೆ. ಸಮಗ್ರ ದೇಶದ ಜನತೆ ಈ 23ವರ್ಷಗಳ ದೀರ್ಘ ನಿದ್ದೆಯಿಂದ ಇನ್ನಾದರೂ ಎಚ್ಚತ್ತು ಈ ತನಕದ ಆಗು ಹೋಗುಗಳನ್ನು ಲಕ್ಷ್ಯದಲ್ಲಿಟ್ಟು, ನಮ್ಮ ಗತಿಸಿದ ಮುಖಂಡರ ಆಶೆ ಆಕಾಂಕ್ಷೆ ಮತ್ತು ಗುರಿ ಏನಿತ್ತು ಎಂಬುದನ್ನಾದರೂ ತುಸು ಆಲೋಚಿಸಲಿ. ನಮಗೆ ಇಂದು ಸಿಂಡಿಕೇಟು ಬೇಕೋ? ಯಾ ಇಂಡಿಕೇಟು ಬೇಕೋ? ಎಂಬ ಪ್ರಶ್ನೆ ಮುಖ್ಯವಲ್ಲ. ಪ್ರಜಾಪ್ರಭುತ್ವ ಬೇಕೋ? ಯಾ ಸರ್ವಾಧಿಕಾರಿ ಬೇಕೋ? ಈ ರಾಷ್ಟ್ರದ ಬಗ್ಗೆ ಅಚಲನಿಷ್ಠೆಯುಳ್ಳವರು ಬೇಕೋ? ಅಥವಾ ಪರದೇಶದ ಬಗ್ಗೆ ನಿಷ್ಠೆಉಳ್ಳವರು ಬೇಕೋ? ತನ್ನ ಮನೆ, ತನ್ನ ಹೊಲ, ತನ್ನ ಊರು, ತನ್ನ ರಾಷ್ಟ್ರ ಎಂಬ ಈ ಮೂಲ ಭೂತ ಸಿದ್ಧಾಂತಗಳಾದ ರಾಷ್ಟ್ರೀಯತೆಯಲ್ಲಿ ವಿಶ್ವಾಸ ಉಳ್ಳವರು ಬೇಕೋ? ಅಥವಾ ದೇಶದಾದ್ಯಂತ ಅರಾಜಕತೆಯನ್ನು ನಿರ್ಮಿಸಿ, ತನ್ಮೂಲಕ ಕ್ರಾಂತಿಯನ್ನು ಉಂಟು ಮಾಡಿ, ಬಂದೂಕಿನ ಕೊಳವೆಯಿಂದಲೇ ಅಧಿಕಾರ ಕಸೆಯುವ ವಾನುಮಾರ್ಗಗಳು ಬೇಕೋ? ಎಂಬುದನ್ನು ಪ್ರಜಾಪ್ರಭುತ್ವದ ಈ ಶುಭದಿನದಲ್ಲಿ ನಿಶ್ಚಯಿಸಿ ಬರಲಿರುವ ಚುನಾವಣೆಗಾಗಿ ಪಣತೊಡಬೇಕಾದದ್ದು ಪ್ರತಿಒಬ್ಬ ಮತದಾರನ ಆದ್ಯಕರ್ತವ್ಯವಾಗಿರುತ್ತದೆ.

ಜನತೆಗೆಂದೂ ಸರಕಾರದೊಡನೆ ಜಗಳಾಡಬೇಕಾಗುವುದಿಲ್ಲ. ನಮಗೆ ಇಂಗ್ಲೀಷರ ವಿರುದ್ಧ ಕಾದಾಡುವುದೂ ಬೇಕಲಿಲ್ಲ. ಜನತೆ ಎಚ್ಚತ್ತಿದೆ ಎಂದು ತಿಳಿದೊಡನೆ ಅವರು ಕಾಲುಕಿತ್ತರು. ●

WITH BEST WISHES

OF THE SEASON

FROM:-

M/s. K. V. Veerappa & Brothers

CALTEX DEALERS,

MANDYA.

PHONE: 71.

Shivalingiaha, B. Sc.,
Partner.

'ಸಂಜಯ' ಚಿತ್ರ ಮಂದಿರದ ಆರಂಭೋತ್ಸವ

ನಿರ್ಮಾತರ ಬಗ್ಗೆ ಮುಖ್ಯಮಂತ್ರಿ ಪ್ರಶಂಸೆ

"ನಂದ ಎಂಟರ್‌ಪ್ರೈಸಸ್" ಅವರ ಸಾಹಸದ ಫಲವಾದ ಬೆಂಗಳೂರು ನಗರದ ಸಂಜಯ ಸಿನಿಮಾ ಮಂದಿರದ ಆರಂಭೋತ್ಸವ ಸಮಯದಲ್ಲಿ, ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರೂ, ಶಿಕ್ಷಣ ಸಚಿವ ಶ್ರೀ ಕೆ. ವಿ. ಶಂಕರ ಗೌಡರೂ ಕನ್ನಡ ಚಿತ್ರಗಳ ಪ್ರದರ್ಶನದ ಅಗತ್ಯವನ್ನು ಒತ್ತಿ ಹೇಳಿ, ಆ ಮೂಲಕ ಕನ್ನಡ ಚಿತ್ರೋದ್ಯಮಕ್ಕೆ ಪ್ರೋತ್ಸಾಹನೀಡಬೇಕೆಂದು ಕರೆಯಿತ್ತರು.

ಈ ಭವ್ಯ ಸಂಜಯ ಮಂದಿರ ಒಕ್ಕಲಿಗರ ಸಂಘದ ವಿಶಾಲವಾದ ಪ್ರದೇಶದಲ್ಲಿದ್ದ ಕಟ್ಟಡದ ಪೂರ್ಣ ಮಾರ್ಪಾಟಿನ ಸ್ವರೂಪ. ಮಂಡ್ಯದ ಶ್ರೀ ಎಚ್. ಸಿ. ಚನ್ನಯ್ಯ ಅವರು ಒಕ್ಕಲಿಗರ ಸಂಘದಿಂದ ಈ ಪ್ರದೇಶವನ್ನು ಪಡೆದು ಆಧುನಿಕ ಯುಗಕ್ಕೆ ತಕ್ಕಂತೆ, ದಿವ್ಯ ರೂಪಕೊಟ್ಟು, ಸುಸಜ್ಜಿತಗೊಳಿಸಿ, ಆಕರ್ಷಕವಾಗುವಂತೆ ಮಾಡಿ ಸುತ್ತಮುತ್ತಲಿನ ಪ್ರದೇಶಕ್ಕೆಲ್ಲಾ ಭೂಷಣಪ್ರಾಯವಾಗಿ ನಿರ್ಮಿಸಿದ್ದಾರೆ. ಮುಖ್ಯಮಂತ್ರಿ ಹಾಗೂ ಶಂಕರಗೌಡರು ಭವ್ಯಾಕೃತಿಯ, ಸುಂದರವಾದ ಈ ಮಂದಿರವನ್ನು ಮತ್ತು ನಿರ್ಮಾತರ ಸಾಹಸ ಹಾಗೂ ದೂರಾಲೋಚನೆಯನ್ನು ಮುಕ್ತಕಂಠದಿಂದ ಹೊಗಳಿದ್ದು ಮುಕ್ತವಾಗೇ ಕಂಡಿತು.

ನಗರದ ಅನೇಕ ಗಣ್ಯರೂ, ಸಿನಿಮಾ ಉದ್ಯಮದ ಮುಖ್ಯಸ್ಥರೂ, ಅಭಿಮಾನಿಗಳೂ ಕಿಕ್ಕಿರಿದು ಕಲೆತಿದ್ದ ಸಮಾರಂಭದಲ್ಲಿ ಮುಖ್ಯಮಂತ್ರಿ ಅವರು ಚಿಕ್ಕದಾದರೂ ಚೊಕ್ಕ ಭಾಷಣದಲ್ಲಿ ಮಂದಿರದ ನಿರ್ಮಾತರನ್ನು ಅಭಿನಂದಿಸಿ, ಕನ್ನಡದ ಅಭಿಮಾನಿಗಳಾದ ಅವರು ಕನ್ನಡ ಚಿತ್ರಗಳನ್ನೇ ಪ್ರದರ್ಶಿಸಬೇಕೆಂದು ಕೋರಿ, ಅವರು ಹಾಗೆ ಮಾಡುವರೆಂಬ ಭರವಸೆಯನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಒಕ್ಕಲಿಗರ ಸಂಘದವರನ್ನೂ ಪ್ರಶಂಸಿಸಿದರು. ಕನ್ನಡ ಚಿತ್ರಗಳನ್ನೇ ಪ್ರದರ್ಶಿಸಲು ಮುಂದೆ ಬರುವವರಿಗೆ ಮಂದಿರಗಳನ್ನು ಕಟ್ಟಲು ಸರ್ಕಾರ ಹೆಚ್ಚು ಹೆಚ್ಚಾಗಿ ಪರವಾನಗಿ ಕೊಡುವುದಾಗಿ ಆಶ್ವಾಸನ ನೀಡಿದರು. ಈ ನೂತನ ಮಂದಿರವು ಮಿಕ್ಕ ಮಂದಿರಗಳಂತಿರದೆ, ಅನೇಕ ಉಪಯುಕ್ತ ಸೌಲಭ್ಯಗಳಿಂದ ಕೂಡಿರುವುದು ಸಂತೋಷದ ವಿಚಾರವೆಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಸಚಿವ ಶ್ರೀ ಶಂಕರ ಗೌಡರು ತಮ್ಮ ಭಾಷಣದಲ್ಲಿ ತಾವು ವಿದ್ಯಾರ್ಥಿದೆಶೆಯನ್ನು ಒಕ್ಕಲಿಗರ ಸಂಘದ ಹಾಸ್ಟೆಲಿನಲ್ಲಿ ಕಳೆದುದನ್ನು ಸ್ಮರಿಸಿದರು. ಹಳೆಯ ಕಟ್ಟಡ ಮೇಲೆ ಇಂದು ಭವ್ಯವಾಗಿ ಎದ್ದಿರುವ ಈ ಭವ್ಯ ಸಿನಿಮಾ ಮಂದಿರದ ನೋಟ ಅತ್ಯಂತ ರಮಣೀಯವಾಗಿ ಸುಂದರವಾಗಿದ್ದು ಸಂಘದ ವಿವೇಚನೆಯ ದ್ಯೋತಕವಾಗಿದೆ ಎಂದೂ ಶ್ಲಾಘಿಸಿದರು. ಕನ್ನಡ ಭಾಷೆಯ ಪ್ರಗತಿಯಲ್ಲಿ ಕನ್ನಡ ಚಲನ ಚಿತ್ರೋದ್ಯಮ ಮುಖ್ಯ ಸಾಧನವೆಂದು ನುಡಿದು ಕನ್ನಡ ಚಿತ್ರಗಳನ್ನೇ ಪ್ರದರ್ಶಿಸಲು ಚಿತ್ರ ಮಂದಿರಗಳು ಸಂಕಲ್ಪಿಸಬೇಕೆಂದು ಹೇಳಿ, ಈ ದಿಶೆಯಲ್ಲಿ ಸಂಜಯ ಯಶಸ್ಸು ಗಳಿಸಲಿ ಎಂದರು.

ಸಮಾರಂಭ ದಶಂಬ್ರ 25ನೇ ತಾರೀಖು ಶುಕ್ರವಾರ ಬೆಳಗ್ಗೆ 10 ಘಂಟೆಗೆ ನಡೆಯಿತು. ದೇವತಾ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ, ಶ್ರೀ ಗೋಪಾಲಕೃಷ್ಣರವರಿಂದ ಸ್ವಾಗತ ಭಾಷಣ, ಮಂದಿರದ ಕೆಲಸ ನಿರ್ವಹಿಸಿದ ಇಂಜನಿಯರುಗಳ ವರದಿ, ಮಂದಿರದ ಸ್ವರೂಪ ವರ್ಣನೆ, ಗೌರವ ನೀಡಿಕೆ ಮುಂತಾದುವಿದ್ದವು. ತರುವಾಯ ಮುಖ್ಯಮಂತ್ರಿಗಳ ಮತ್ತು ಶಿಕ್ಷಣ ಸಚಿವರ ಭಾಷಣಗಳಾದವು. ಕಡೆಯಲ್ಲಿ ಶ್ರೀ ಗೋಪಾಲಕೃಷ್ಣ ಅವರು ಮಂತ್ರಿಗಳಿಗೂ, ಆಹ್ವಾನಿತರಿಗೂ, ಒಕ್ಕಲಿಗರ ಸಂಘದ ಅಧಿಕಾರಿ ವರ್ಗ ಹಾಗೂ ಸದಸ್ಯರಿಗೂ ವಂದನಾರ್ಪಣೆ ಮಾಡಿದರು.

ಮುಖ್ಯ ಮಂತ್ರಿ ಅವರು ಆಗಮಿಸಿದೊಡನೆಯೇ ಶ್ರೀ ಚನ್ನಯ್ಯನವರೂ, ಶ್ರೀ ಗೋಪಾಲಕೃಷ್ಣ ಅವರೂ ಅವರನ್ನು ಸ್ವಾಗತಿಸಿದರು. ಟೇಪನ್ನು ಕತ್ತರಿಸಿ ಮುಖ್ಯಮಂತ್ರಿ ಅವರು ಮಂದಿರದ ಆರಂಭ ಮಾಡಿದರು. ಸಮಾರಂಭ ಅತ್ಯಂತ ಯಶಸ್ವಿಯಾಗಿ ನೆರವೇರಿತು. 'ಪರೋಪಕಾರಿ' ಚಿತ್ರದ ಕೆಲವು ದೃಶ್ಯಗಳನ್ನು ಆಹ್ವಾನಿತರಿಗೆ ತೋರಿಸಲಾಯಿತು.

ಮಂತ್ರಿ ಶ್ರೀ ಲಿಂಗಾರೆಡ್ಡಿ, ಪಾರ್ಲಿಮೆಂಟಿನ ಸದಸ್ಯ ಶ್ರೀ ಶ್ರೀರಾಮರೆಡ್ಡಿ, ಒಕ್ಕಲಿಗರ ಸಂಘದ ಅಧ್ಯಕ್ಷ ಶ್ರೀ ಎಚ್. ಕೆ. ವೀರಣ್ಣಗೌಡರು, ಉಪಾಧ್ಯಕ್ಷರುಗಳಾದ ಶ್ರೀ ಶಿವಲಿಂಗಯ್ಯ, ಶ್ರೀ ನಾರಾಯಣಗೌಡ, ಕಾರ್ಯದರ್ಶಿ ಶ್ರೀ ಮಲ್ಲಿಕಾರ್ಜುನ ಮುಂತಾದವರೂ, ಟವರ್ ಪ್ಲಾನಿಂಗ್ ಡೈರೆಕ್ಟರ್ ಶ್ರೀ ಕೆ. ಎಸ್. ರಾಮೇಗೌಡರೂ, ಅಲ್ಲದೆ ಅನೇಕ ಮಹಿಳೆಯರೂ ಹಾಜರಿದ್ದರು.

SOME OF THE IMPORTANT FEATURES OF THEATRE 'SANJAYA'

— EQUIPPED WITH —	— HIGH LIGHTS —
Westrex 14 a Century projectors with stearo phonic sound system	Zero angle projection with shortest thro
Technicot imported screen 22' x 51 1/2'	Pond near the screen with box type procenium first of its kind in India
1,020 comfortable push back seats	Natural material acoustic treatment with concealed coloured lights
Spacious garden area with parking area for more than 150 cars first time in Bangalore	30' diametre dome with lights stream line marble stair case over the pond

---

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

Ex. Case 137/70 in O. S. 260/57

ವಾದಿ:- ಸದ್ದಕ್ಕ ಶೆಡ್ತಿ

ಪ್ರತಿವಾದಿರು:- ಥೋಮಾಸ್ ಲೋಬೊ (ಪೋಕಿ) ಕೂಡಾ

ನಡ್ರು ಅಮ್ಲ ಜ್ಯಾರಿಯಲ್ಲಿ 2, 3ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

2ನೇ ಎದ್ರಿಳ ಮೇಲಿನ ಹಕ್ಕಿನ ಮೇಲಿನ ಹಕ್ಕಿನ ಮಾರಾಟದ ಕುರಿತು ಡಿಕ್ರಿಯಲ್ಲಿ ವಿಧಿ ಇದ್ದು ಆ ಕುರಿತು ವಾದಿಳು ಏಲಂ ಇಸ್ತಿಹಾರನ್ನು ಕೋರ್ಟಿಗೆ ಈ ಮುಂಚೆಯೇ ದಾಖಲು ಮಾಡಿರುತ್ತಾಳೆ. ಸದ್ರಿ ಏಲಂನ ಶರ್ತ ನಿರ್ಣಯಿಸುವ ಬಗ್ಗೆ ತಾ. 19-2-71ಕ್ಕೆ ಇಟ್ಟಿರುತ್ತದೆ. ಆ ದಿನದಲ್ಲಿ ಆಕ್ಷೇಪವಿದ್ದಲ್ಲಿ ಆ ದಿನ ಕೋರ್ಟಿಗೆ ಹಾಜರಾಗಿ ಆಕ್ಷೇಪ ಹೇಳಲಿಕ್ಕೆ ತಪ್ಪಿದ್ದಲ್ಲಿ ಕೋರ್ಟಿನವರು ಏಕ್ಸ್ ಪಾರ್ಟಿ ಏಲಂನ ಶರ್ತಗಳನ್ನು ನಿರ್ಣಯಿಸಲಾಗುತ್ತದೆಂತ ಈ ಮೂಲಕ ತಿಳಿಸಿಯದೆ.

(By order of the Court)

(Sd) A. N. Rao

Advocate for Decree-holder

Coondapoor. 13—1—71.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O. S. 299/70.

ಶ್ರೀ ಸೋದೆ ವಾದಿರಾಜ ಮಠ, ಉಡುಪಿ —ವಾದಿರು

ಮತ್ತು

ರಾಜು ಶೆಟ್ಟಿ ಕೂಡಾ —ಪ್ರತಿವಾದಿರು

ಪ್ರತಿವಾದಿರು: 1. ರಾಜು ಶೆಟ್ಟಿ, 2. ಭಾಗಿ ಶೆಡ್ತಿ, 3. ಅಕ್ಕಂಮ ಶೆಡ್ತಿ, 4. ಸೀತ ಶೆಡ್ತಿ, ಈವು ಶೆಡ್ತಿ ಮಗಳು, ಉಡುಪಿ ತಾಲೂಕು ಶಿರ್ವ ಗ್ರಾಮದಲ್ಲಿರುವವರು.

ವಾದಿರು ನಿಂಮ ಮೇಲೆ ಗೇಣಿ ಬಾಕಿಗೆ ದಾಖಲ್ ಮಾಡಿದ ಮೇಲ್ಕಂಡ ದಾವೆಯು ತಾ. 12-2-71ಕ್ಕೆ ತಕ್ಕಗೆಯಿಟ್ಟಿದೆ. ಅದಿನ್ನ ಬೆಳಿಗ್ಗೆ 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸುವರೆ ತಪ್ಪಿದ್ದಲ್ಲಿ ಸದ್ರಿ ದಾವೆಯನ್ನು ನಿಂಮ ಗೈರ್ ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು.

By order of Court

Sd/- V.G. Kedlaya,

M.A.LL.B.,

ವಾದಿರ ಕಡೆ ಅಡ್ವೋಕೇಟು

ಉಡುಪಿ,

D/ 12-1-71.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 79/70

ಶ್ರೀ ಸೋದೆ ವಾದಿರಾಜಮಠ —ವಾದಿರು

ಮತ್ತು

ರಾಮಸೇರಿಗಾರ (ಬೌತಿ) ಎಚ್ಚು ಸೇರಿಗಾರ್ತಿ ಕೂಡಾ } ಪ್ರತಿವಾದಿರು

3ನೇ ಪ್ರತಿವಾದಿ ನರಂಗ ಸೇರಿಗಾರ, ಮುತ್ತಕ್ಕ ಸೇರಿಗಾರ್ತಿ ಮಗ, ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಕಡಿಯಾಳಿಯಲ್ಲಿರುವವ.

ವಾದಿರು ದಾಖಲ್ ಮಾಡಿದ ಗೇಣಿ ಬಾಕಿ ಅರ್ಜಿಯು ತಾರೀಖು 12-2-1971ಕ್ಕೆ ತಕ್ಕಿಗೆ ಯಿಟ್ಟಿದೆ. ಅ ದಿನ್ನ ಬೆಳಿಗ್ಗೆ 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸುವರೆ ತಪ್ಪಿದ್ದ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವುದು.

By order of court

Sd. ವಿ. ಜಿ. ಕೆದ್ಲಾಯ M.A.LL.B

ವಾದಿರ ಕಡೆ ಅಡ್ವೋಕೇಟು

ಉಡುಪಿ, 12—1—71.

ಕುಂದಾಪುರ ಮು. ಕೋರ್ಟಿನಲ್ಲಿ

Ex. Case 136/70 in O. S. 163/59

ವಾದಿ:- ಕಾವೇರಿ ಶೆಡ್ತಿ

ಪ್ರತಿವಾದಿ:- ಗೋವಿಂದ ಶೆಟ್ಟಿ

ಮೇಲಿನ ಅಮ್ಲ ಜ್ಯಾರಿಯ ಎದ್ರಿ ಗೋವಿಂದ ಶೆಟ್ಟಿಗೆ ಈ ಮೂಲಕ ತಿಳಿಯಪಡಿಸಿದ್ದು— ಡಿಕ್ರಿ ವಿಧಿ ಪ್ರಕಾರ ಎದ್ರಿಯ ಬಾಬ್ತು ಸ್ಥಿರಾಸ್ತಿ ಏಲಂನ ಬಗ್ಗೆ ವಾದಿಳು ಮೇಲಿನ ಅಮ್ಲ ಜ್ಯಾರಿ ಮಾಡಿ ಇಸ್ತಿಹಾರನ್ನು ಕೋರ್ಟಿಗೆ ಹಾಜರು ಮಾಡಿರುತ್ತಾಳೆ. ಏಲಂನ ಶರ್ತ ನಿರ್ಣಯಿಸುವ ಬಗ್ಗೆ ತಾ. 19-2-71ಕ್ಕೆ ಇಟ್ಟಿದೆ. ಆ ದಿನದಲ್ಲಿ ನೀವು ಕೋರ್ಟಿಗೆ ಹಾಜರಾಗಿ ಆಕ್ಷೇಪ ಹೇಳಲಿಕ್ಕೆ ತಪ್ಪಿದಲ್ಲಿ ಏಕ್ಸ್ ಪಾರ್ಟಿ ಏಲಂನ ಶರ್ತಗಳನ್ನು ನಿರ್ಣಯಿಸಲಾಗುತ್ತದೆಂಬ ಸಂಗತಿಯನ್ನು ಈ ಮೂಲಕ ತಿಳಿಸಿಯದೆ.

(By order of the Court)

(Sd) A. N. Rao

Advocate for Decree-holder

Coondapoor. 13—1—71.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

I. A. III O. S. 181/67

ಹರಿಕೃಷ್ಣ ಭಟ್ಟ —ವಾದಿ, ಅರ್ಜಿದಾರ

ಭೀಮ ಭಟ್ಟ ಕೊಚಿಮೆ ಶಾಂಭಟ್ಟರ ಮಗ ಕನ್ಯಾನ ಗ್ರಾಮ —ಎದ್ರಿ

ಎದ್ರಿಗೆ ಕೋರ್ಟಿನ ಹುಕುಂ ಪ್ರಕಾರ ತಿಳಿಸುವುದೇನೆಂದರೆ.

ಮೇಲ್ಕಂಡ ಡಿಕ್ರಿ ಮೇಲೆ ಡಿಕ್ರಿಗೆ ಜವಾಬ್ದಾರಿಯಾಗುವ ದಾವಾ ಆಸ್ತಿ ಮಾರಾಟದ ಬಗ್ಗೆ ಜ್ಯಾರಿ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರನು ಬರಕೊಂಡ ಮೇಲ್ಕಂಡ ಅರ್ಜಿಯು ತಾ. 9—2—1971ಕ್ಕೆ ಇಟ್ಟಿರುವುದರಿಂದ ಅದಕ್ಕೆ ಆಕ್ಷೇಪಣೆಗಳಿದ್ದ ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ನೀವು ಸ್ವಂತ ವಕೀಲರ ದ್ವಾರಾ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗಿದೆ.

(Sd.) B. Ishwara Bhat

Advocate for Petitioner,

ಪುತ್ತೂರು, ತಾ. 18—1—71.

ಜನಜಾಗೃತಿಗಾಗಿ ಧರ್ಮಸಮ್ಮೇಳನ

(IVನೇ ಪುಟದಿಂದ)



ವೇದಿಕೆಯಲ್ಲಿ (ಎಡ.ಬಲ) ಡಾ| ಯಂ. ಯನ್. ವಿಶ್ವನಾಥಯ್ಯ, ಪೇಜಾವರ ಮಠಾಧೀಶರು, ಸುಬ್ರಹ್ಮಣ್ಯ ಮಠದ ವಿದ್ಯಾ ಸಿಂಧುತೀರ್ಥ ಶ್ರೀಪಾದಂಗಳವರು, ಶ್ರೀ ಕೆ. ಸುಬ್ರಹ್ಮಣ್ಯ ಗೌಡ, ಶ್ರೀ ಎಸ್. ರಾಮಚಂದ್ರ ಶಾಸ್ತ್ರಿ

ನುಡಿ, ಉಡಿಗೆ ತೊಡಿಗೆಗಳ ಹಿರಿಮೆಯನ್ನರಿತು ಬಾಳಬೇಕೆಂದೂ ಬೋಧಿಸಿದರು.

ಅಧ್ಯಕ್ಷ ಪೀಠದಿಂದ ಶ್ರೀ ಸ್ವಾಮೀಜಿ ಅವರು ಭಾಷಣ ಆರಂಭಿಸಿ ಭಾರತೀಯರಿಗೆ ನಮ್ಮ ನಿಜ ಧರ್ಮದ ಅರಿವಿಲ್ಲದೆ ಮೋಸ ಹೋಗುತ್ತಿರುವ ಬಗ್ಗೆ ವಿಷಾದಿಸಿದರು. ಜಗತ್ತಿನಲ್ಲೇ ಹಿರಿದಾದ ನಮ್ಮ ಧರ್ಮ ನಮ್ಮಿಂದಲೇ ಅಧೋಗತಿಗಿಳಿದು ಹಾಳಾಗದಂತೆ ನಿತ್ಯ ಜೀವನದಲ್ಲಿ ಧರ್ಮದ ಎಲ್ಲೆ ಮೀರಬಾರದೆಂದು ಆಶಿಸಿದರು. ವಿಜ್ಞಾನ ಹಾಗೂ ನಾಗರೀಕತೆ ಧರ್ಮದ ಕೊಲೆಮಾಡದಂತೆ ಸರ್ವರೂ ಶಪಥ ಮಾಡಿ ಜಗತ್ತಿಗೇ ಭಾರತ ಮಾದರಿಯಾಗಿ ತನ್ನ ಹಿರಿಮೆಯನ್ನು ಪ್ರತಿಬಿಂಬಿಸಲು ಶ್ರಮಿಸಬೇಕೆಂದರು

ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯ ಗೌಡ ಅವರು ಪ್ರಥಮದಲ್ಲಿ ಶ್ರೀ ಗುರುಗಳನ್ನೂ ಅತಿಥಿಗಳನ್ನೂ ಸ್ವಾಗತಿಸಿ ಕಡೆಯಲ್ಲಿ ಅಭಿನಂದಿಸಿದರು. ನಾನಾ ಊರುಗಳಿಂದ ಗಣ್ಯರು ಸಮ್ಮೇಳನಕ್ಕೆ ಶುಭಕೋರಿ ಸಂದೇಶಗಳನ್ನು ಕಳಿಸಿದ್ದರು.

ಅಂತ್ಯದಲ್ಲಿ ಆಡಳಿತ ಮಂಡಳಿಯ ಸದಸ್ಯರಲ್ಲೊಬ್ಬರಾದ ಶ್ರೀ ಸುಬ್ಬಯ್ಯ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ರಾತ್ರಿ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ಕಿರಿಷಷ್ಠಿ ರಥೋತ್ಸವ-ತೀರ್ಥಪ್ರಸಾದ ವಿನಿಯೋಗ, ಜಿಲ್ಲೆಯ ಸುಪ್ರಸಿದ್ಧ ಕಲಾವಿ

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ

ದರ ಕೂಡುವಿಕೆಯಿಂದ ಯಕ್ಷಗಾನ ಕಾರ್ಯಕ್ರಮದೊಂದಿಗೆ ಕಾರ್ಯಕ್ರಮಗಳು ಮುಗಿದವು. ಮೇನೇಜರ್ ಹಾಗೂ ನೌಕರರ ವರ್ಗದವರಿಂದ ಯಾತ್ರಾರ್ಥಿಗಳಿಗೆ ಉತ್ತಮ ವ್ಯವಸ್ಥೆ ಏರ್ಪಟ್ಟಿತ್ತು.

ಉಡ್ಪಿ ಮುನ್ಸೀಫ್ ಕೋರ್ಟಿನಲ್ಲಿ

S. C. No. 72/1970.

ಶ್ರೀ ಸೋದೆ ವಾದಿರಾಜ ಮಠ— ವಾದಿರು

ಮತ್ತು

ರಾಮಚಂದ್ರಯ್ಯ ಕೊಡಾರ್— ಪ್ರತಿವಾದಿರು

ಇವರೊಳಗೆ

ಪ್ರತಿವಾದಿರು: 1. ರಾಮಚಂದ್ರಯ್ಯ, 3. ನರಸಿಂಹ ಭಟ್ಟ, 4. ಗೋಪಾಲಭಟ್ಟ— ಇಂಬುಕಲ್ಲು ಮರಿಯಪ್ಪ ಭಟ್ಟ ಮಕ್ಕಳು. ಉಡ್ಪಿ ತಾಲ್ಲೂಕು ಉದ್ಯಾವರ ಗ್ರಾಮದಲ್ಲಿರುವವರು

ವಾದಿರು ನಿಂಮ ಮೇಲೆ ಗೇಣಿ ಬಾಕಿ ಬಗ್ಗೆ ದಾಖಲು ಮಾಡಿದ ಮೊಕದ್ದಮೆಯು ತಾರೀಖು 19-2-71ಕ್ಕೆ ಇಟ್ಟಿದೆ. ಆ ದಿನ್ನ ಬೆಳಿಗ್ಗೆ 10 ಗಂಟೆಗೆ ನೀವು ಕೋರ್ಟು ಮುಂದೆ ಹಾಜರಾಗಿ ಉತ್ತರಿಸುವರೆ ತಪ್ಪಿದ್ರೆ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲ್ಪಡುವುದು.

By order of Court

(Sd.) V. G. Kedlaya,

M.A., LL.B.,

ವಾದಿರ ಕಡೆ ಎಡ್ವೋಕೇಟ್

ಉಡ್ಪಿ, D/ 19—1—71.

ಉಡ್ಪಿ ಮುನ್ಸೀಫ್ ಕೋರ್ಟಿನಲ್ಲಿ

O. S. No. 296/1970.

ಶ್ರೀ ಸೋದೆ ವಾದಿರಾಜ ಮಠ— ವಾದಿರು

ಮತ್ತು

ಜಾರು ಪೂಜಾರಿ ಕೊಡಾರ್— ಪ್ರತಿವಾದಿರು

ಇವರೊಳಗೆ

2ನೇ ಪ್ರತಿವಾದಿ: ಕಾಳು ಪೂಜಾರಿ. ಜಾರು ಪೂಜಾರಿಯ ತಂಮ, ಉಡ್ಪಿ ತಾಲ್ಲೂಕು ಮಟಪಾಡಿ ಗ್ರಾಮದಲ್ಲಿರುವವ.

ವಾದಿರು ನಿಮ್ಮ ಮೇಲೆ ಗೇಣಿ ಬಾಕಿ ಬಗ್ಗೆ ದಾಖಲು ಮಾಡಿದ ಮೊಕದ್ದಮೆಯು ತಾರೀಖು 20.2.1971ಕ್ಕೆ ಇಟ್ಟಿದೆ. ಆ ದಿನ್ನ ಬೆಳಿಗ್ಗೆ 10 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉತ್ತರಿಸುವರೆ ತಪ್ಪಿದ್ರೆ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವುದು.

By order of Court

(Sd.) V. G. Kedlaya,

M.A., LL.B.,

ವಾದಿರ ಕಡೆ ಎಡ್ವೋಕೇಟ್.

ಉಡ್ಪಿ, D/ 19—1—71.

ಒಂದುವೇಳೆ ನೀವು ಸಿಂಹ ವಾಗಿದ್ದರೆ

ಕುಟುಂಬಯೋಜನೆಯನ್ನು

ಅನುಸರಿಸಬೇಡಿ

ದೇಶದಲ್ಲಿನ ಸಿಂಹಗಳ ಸಂಖ್ಯೆ ತೀವ್ರವಾಗಿ ಕಡಿಮೆ ಆಗುತ್ತಿದೆ.
ಪ್ರತಿಯೊಬ್ಬರೂ ಚಿಂತೆಗೊಳಗಾಗಿದ್ದಾರೆ...
ಭಾರತದಲ್ಲಿ ಹೆಚ್ಚು ಸಿಂಹಗಳಿರಬೇಕೆಂದು ನಾವು ಬಯಸುತ್ತೇವೆ.

ಆದರೆ ಒಂದುವೇಳೆ ನೀವು ಮಾನವರಾಗಿದ್ದರೆ

ಕುಟುಂಬ ಯೋಜನೆಯು ಅತ್ಯಾವಶ್ಯಕ



davp 70/566

Telegram: "FOOD" Telephone: 6012

THE SOUTH KANARA CENTRAL CO-OPERATIVE WHOLESALE STORES LTD.,

'SAHAKARI MAHAL' :: MANGALORE-1.

Wholesalers in

FOOD GRAINS,
TEXTILES,
PROVISIONS,
CONSUMER GOODS,
ETC.

Visit

JANATHA BAZAAR

for all your requirements

Sri S. Narsappay, *B.A., B.L.,*
President.

ಕತ್ತಲ ಜೀವನದಿಂದ .... ಸುಗಮದ ಬಾಳಿಗೆ!
ದಾರಿದ್ರ್ಯದ ಸಂಕೋಲೆ ಮುರಿದು ....
ಸುಭಿಕ್ಷದ ರಾಜ್ಯಕ್ಕಾಗಿ ಪಯಣ!!

ಸಹಕಾರದ ಪಥವನ್ನು ಅನುಸರಿಸಿದ ಬಡವನೂ ಬಲ್ಲಿದನೂ
ತನ್ನ ಜೀವನವನ್ನು ಸಾರ್ಥಕಗೊಳಿಸಬಹುದು.

ದ. ಕ. ಜಿಲ್ಲಾ
ಕೇಂದ್ರ ಸಹಕಾರಿ ಬ್ಯಾಂಕ್ ಲಿ.

ಮಂಗಳೂರು-3.

ಶಾಖೆಗಳು:— ಕುಂದಾಪುರ, ಪುತ್ತೂರು, ಬಂಟ್ವಾಳ, ಉಡುಪಿ,
ಕಾರ್ಕಳ, ಬೆಳ್ತಂಗಡಿ,
ಜನತಾ ಬಜಾರ್ (ಮಂಗಳೂರು) ಮತ್ತು ಸುಳ್ಯ.

ನಿರಖು ಠೇವಣಾತಿಗಳ ಮೇಲೆ
ಆಕರ್ಷಕ ಬಡ್ಡಿ ದರಗಳಿವೆ.

ಶ್ರೀ ಬಿ. ಪ್ರಭಾಕರ ರಾವ್, *M. A., B. L.,*
ಉಪಾಧ್ಯಕ್ಷ.

ಶ್ರೀ ಬಿ. ನಾರಾಯಣ ನಾಯಕ್,
ಅಧ್ಯಕ್ಷ.

ಎನ್. ವೆಂಕಪ್ಪ ರೈ, *H. D. C.*
ಕಾರ್ಯದರ್ಶಿ.

ತಂತಿ: 'ಸಹಕಾರ' ಫೋನ್: 4637

THE S. K. A. C. M. SOCIETY LTD.,

MANGALORE-1.

ದ. ಕ. ಕೃಷಿಕರ
ಸಹಕಾರಿ ಮಾರಾಟ ಸಂಘ ಲಿ.,

'ಸಹಕಾರಿ ಮಹಲ್'

ಮಂಗಳೂರು-೧.

ಅಡಿಕೆ, ಯಾಲಕ್ಕಿ, ಕಾಳು ಮೆಣಸು, ತೆಂಗಿನ ಕಾಯಿ, ಬಾಳೇಕಾಯಿ ವಗೈರೆ ವ್ಯವಸಾಯದ ಎಲ್ಲಾ (ಅಕ್ಕಿ, ಭತ್ತ ಹೊರತು) ಉತ್ಪತ್ತಿಗಳನ್ನು ಕಮಿಷನ್ ವ್ಯಾಪಾರಕ್ಕೆ ಪಡಕೊಂಡು ಯೋಗ್ಯ ಬೆಲೆಗೆ ವಿಕ್ರಯಿಸುವ ಜಿಲ್ಲೆಯ ಏಕಮಾತ್ರ ಸಹಕಾರಿ ಮಾರಾಟ ಸಂಘ. ಮೆಂಬರರಿಗೆ ಇಂಡೆಂಟು ಮೂಲಕ ಗೃಹಕೃತ್ಯದ ಸಾಮಾನು ಗಳನ್ನು ಒದಗಿಸುವ ಏರ್ಪಾಡಿದೆ. ಜಿಲ್ಲೆಯ ಎಲ್ಲಾ ಕೃಷಿಕರ ಸಹಕಾರವನ್ನು ಸಂಘವು ಅಪೇಕ್ಷಿಸುತ್ತದೆ.

ಯಸ್. ನರ್ಸಪ್ಪಯ್ಯ, B. A., B. L.,
ಉಪಾಧ್ಯಕ್ಷ.

ಬಿ. ಪ್ರಭಾಕರ ರಾವ್, M. A., B. L.,
ಅಧ್ಯಕ್ಷ.

ಸವನು ಚಿನ್ನದ ಆಭರಣಗಳಿಗೆ
ಮತ್ತು ಶುದ್ಧ ಬೆಳ್ಳಿಯ ಪಾತ್ರೆಗಳಿಗೆ
ಹವಳ, ಕೆಂಪು, ಮುತ್ತು, ಪುಷ್ಯರಾಗ ಹರಳುಗಳು ಯಾವಾಗಲೂ
ಮಾಫಕ ದರದಲ್ಲಿ ಸಿಗುತ್ತವೆ.
ಉಡುಗೊರೆಗೆ ಬೇಕಾಗುವ ಸ್ಟೀಲ್ ಪಾತ್ರೆಗಳಿಗೆ
ವಿಚಾರಿಸಿರಿ:

ಕೃಷ್ಣ ಜ್ಯುವೆಲ್ಲರಿ ಮಾರ್ಟ್
ಕೃಷ್ಣ ವೆರೈಟಿ ಸ್ಟೋರ್ಸ್

ತೆಂಕಪೇಟೆ, ಉಡುಪಿ ದ. ಕ.

ಪ್ರೊಪ್: ಯು. ರಾಘವೇಂದ್ರ ಕೃಷ್ಣ ಭಟ್ಟ

PHONE: Office: 366
Resi: 676

Contribute generously

to the

NAVAYUGA
GOLDEN JUBILEE FUND 1971

NATION BUILDERS WITH A DIFFERENCE!

Yes, we at TULUCON are proud that we too contribute our might to Nation building. But we do it the TULUCON way:

1) **By offering expert Management and technical advise to business and industry – we increase their profitability which is so vital for their stability and growth.**
2) **By assisting entrepreneurs in promoting new companies – we increase the production and employment capacity of our country.**
3) **By conducting Management Training and Development courses – we help our talented young men & women to become the leaders in business, industry and society.**
4) **Through our Manpower Pool – we help to fit the right person to the right job thus helping to make the proper use of available Manpower.**
5) **By our own continued growth – we help to create employment to many, directly and indirectly.**

Our task is tough and challenging; but we love it. Do you like to know what we do at TULUCON? Then, just step in; you will see us in action!

TULUCON SERVICES AT A GLANCE

Project studies.	**Administrative Management.**
Production Planning & Control.	**Organisation & Methods.**
Personnel Selection.	**Cost Studies & Control.**
Trainning & Development.	**Financial Management.**
Personnel Management.	**Market Surveys.**
Union-Management Relations.	**Marketing Managemet.**
	Company Law Matters.

TULUCON (PRIVATE) LIMITED

Management Consultants.

Regd. Office: **21, Popular Building, K. S. Rao Road,**

MANGALORE—1.

Phone: 7166; Post Box No. 205; Grams: TULUCON.

To know the what, when, how and by whom of Management.
Consult TULUCON — the firm that solves your management Problems!

NAVAYUGA
28—1—1971

Regd. No. B. G. 176 Licence No. 33
Licenced to Post without Prepayment

ನಿಮ್ಮ ವ್ಯವಹಾರವನ್ನು

ವಿಜಯಾ ಬ್ಯಾಂಕಿನೊಂದಿಗೆ

ಬೆಳೆಸಿರಿ !

ಮೈಸೂರು, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ದೆಹಲಿಯಲ್ಲಿ ಒಟ್ಟು 126 ಶಾಖೆಗಳಿಂದ ಜನತೆಗೆ ಯೋಗ್ಯ ರೀತಿಯ ಸೇವೆ ಸಲ್ಲಿಸುತ್ತಿದೆ.

ನಿಮ್ಮ ಆರ್ಥಿಕ ಸಮಸ್ಯೆಯನ್ನು ಬಿಡಿಸಲು ನಿಮ್ಮ ಹತ್ತಿರದ ವಿಜಯಾ ಬ್ಯಾಂಕಿನ ಶಾಖೆಯನ್ನು ವಿಚಾರಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ : 1931

ಆಡಳಿತ ಕಛೇರಿ:
ಭಾರತೀಯ ವಿದ್ಯಾಭವನ ಬಿಲ್ಡಿಂಗ್
ರೇಸ್ ಕೋರ್ಸ್ ರೋಡ್
ಬೆಂಗಳೂರು-1
ಫೋನ್ ನಂಬ್ರ : 24101 – 5 ಲೈನುಗಳು

ರಿಜಿಸ್ಟರ್ಡ್ ಆಫೀಸ್:
ವಿಜಯಾ ಬ್ಯಾಂಕ್ ಬಿಲ್ಡಿಂಗ್
ಲೈಟ್ ಹೌಸ್ ಹಿಲ್ ರೋಡ್
ಮಂಗಳೂರು-3
ಫೋನ್ ನಂಬ್ರ : 5711

ಎಮ್. ಸುಂದರ್‌ರಾಮ್ ಶೆಟ್ಟಿ
ಚೇರ್‌ಮನ್

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 21

NAVAYUGA

4—2—1971

ಚಾರುಚಯನ

ಹುತ್ತವ ಬಡಿದರೆ ಹಾವು ಸಾಯದು

ಸಂಘಾನದ ಮಾತುಕತೆಗಳಿಗೆ ಆರಂಭಿಸಿ ಅವನ್ನು ಕೊನೆಯ ಗಳಿಗೆಯಲ್ಲಿ ಒಂದಲ್ಲ ಒಂದು ನೆಪವೊಡ್ಡಿ ಮುರಿಯುವುದು ಇಂಡಿಕೇಟಿನ ಜನ್ಮಸಿದ್ಧ ಹಕ್ಕು ಎಂಬುದೀಗ ಮತ್ತೊಮ್ಮೆ ಸ್ಪಷ್ಟವಾಗಿದೆ.

ಕೇರಳದಲ್ಲಿ ಬಲಕಮ್ಯುನಿಸ್ಟರ ನೇತೃತ್ವದ, ತಮಿಳುನಾಡಿನಲ್ಲಿ ದ್ರಾವಿಡ ಮುನ್ನೇತ್ರ ಕಳ್ಗಮಿನ ನಾಯಕತ್ವದ, ಸಂಯುಕ್ತರಂಗ, ಬಂಗಾಳದಲ್ಲಿ ಬಂಗ್ಲಾ ಕಾಂಗ್ರೆಸ್ಸ್, ಉತ್ಕಲದಲ್ಲಿ ಜನಕಾಂಗ್ರೆಸ್ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರಜಾ ಸಮಾಜವಾದಿ ಆದಿ ಪಕ್ಷಗಳೊಂದಿಗೆ ಮಾತುಕತೆಗೆ ಆರಂಭ ಮಾಡಿದರೂ ಅವನ್ನು ಸಮಾಧಿಗೆಯ್ದವರೂ ಇಂಡಿಕೇಟಿಗರೇ.

ಲೋಕಸಭಾ ಸ್ಥಾನಗಳನ್ನು ಹಂಚಿಕೊಳ್ಳುವಲ್ಲಿ ಹೊಂದಾಣಿಕೆಯನ್ನು ಸಾಧಿಸುವುದೇ ಈ ಮಾತುಕತೆಯ ಉದ್ದೇಶವಿತ್ತು. ಇದು ವಿಫಲಗೊಂಡದ್ದರಿಂದ ತಾನು ಸ್ವತಂತ್ರವಾಗೇ ಚುನಾವಣೆಗಳಲ್ಲಿ ಸ್ಪರ್ಧಿಸುವ ಅವಕಾಶ ಅದು ಗಳಿಸಿಕೊಂಡಿತು. ಇದು ಪೂರ್ವನಿಶ್ಚಿತ.

ಇದರಲ್ಲಿ ತಪ್ಪು ಇಲ್ಲ. ಇದು ಸಮರ್ಥನೀಯವೂ ಹೌದು. ಆದರೂ ಒಂದು ಶಂಕೆ—ಹಾಗಿರುವಾಗ, ಮಾತುಕತೆಗಳನ್ನು ಆರಂಭ ಮಾಡುವ ಅಗತ್ಯವಾದರೂ ಏನಿತ್ತು?

ಎಲ್ಲರನ್ನೂ ತಾನು ನಂಬಿದ್ದೇನೆ. ಆದರೆ, ತಾನು ನಂಬಿದವರೇ ತನಗೆ ದ್ರೋಹ ಬಗೆದರು. ಆದುದರಿಂದ ಇಂತಹ ನಿರ್ಧಾರಕ್ಕೆ ಬರುವುದು ಅಂತಿಮ ವೇಳೆಗೆ ಅಗತ್ಯವಾಯ್ತು ಎಂದು ಅದು ಕಹಳೆಯೂದುವುದು ಸಹಜ.

ಕಾಂಗ್ರೆಸ್ ವಿಭಜನೆಯ ಮೊದಲೂ ಬಳಿಕವೂ ಇಂಡಿಕೇಟು ಮಾಡಿದ್ದೂ ಇದೇ ಕೃತಿಯನ್ನು. ಅವರಿವರ ಬೆಂಬಲದಿಂದ ಅಧಿಕಾರದಲ್ಲಿ ಉಳಿದುಕೊಂಡು, ಶ್ರೀ ಸಾಮಾನ್ಯೋದ್ಧಾರದ ಮಂತ್ರ ಪಠಿಸುತ್ತ ಜನತೆಗೆ ಮಾಡಿದ್ದೂ ಇದೇ ವಂಚನೆ. ಎಲ್ಲರನ್ನೂ ನಂಬಿಸಿ ವಂಚಿಸುತ್ತ ತಾನೇ ತಾನಾಗಿ ಮೆರೆದಾಡುವ ರಾಕ್ಷಸೀ ಚಪಲ ಸದ್ಯ ಇಂಡಿಕೇಟಿಗೆ ಮಾತ್ರ ಮೀಸಲು.

ಚುನಾವಣೆಗಳು ಹತ್ತಿರ ಬಂದಂತೆ ರಾಜ್ಯಕೀಯ ಪಕ್ಷಗಳು ಜನತೆಗೆ ನಾನಾ ವಿಧದ ಭರವಸೆಗಳನ್ನು ನೀಡುವುದು, ಆಶೆ-ಆಮಿಶಗಳ ಜಾಲವನ್ನೊಡ್ಡಿ ಅದರಲ್ಲಿ ಮತಪಕ್ಷಿಗಳನ್ನು ಸೆರೆಹಿಡಿಯುವುದು ಸ್ವಾಭಾವಿಕ.

ಇದೀಗ ಕೆಲವು ರಾಜ್ಯಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳನ್ನು ಹೊರಡಿಸಿವೆ. ಆಯಾ ಪಕ್ಷಗಳ ಅಗ್ರಣಿಗಳು ಇವನ್ನು ಬಿಡುಗಡೆ ಮಾಡಿದ್ದಾರೆ.

ಕಳೆದೊಂದೂವರೆ ವರ್ಷ ಕಾಲ ದಿಲ್ಲಿಯಲ್ಲಿ ತಮ್ಮ ಡೋಲನ್ನು ಬಜಾಯಿಸುತ್ತಿದ್ದ ಇಂಡಿಕೇಟ್-ಪ್ರಧಾನಿ ಗಾಂಧಿಯವರ ಸುತ್ತ ಮುತ್ತ ಬೆಳೆದು ಬಂದವರ ಪಕ್ಷ, ಶ್ರೀ ಜಗಜ್ಜೀವನ ರಾಮರ ನಾಯಕತ್ವದ ಕಾಂಗ್ರೆಸ್ ಎಂದು ಇದನ್ನು ಆಕಾಶವಾಣಿಯೂ ಚುನಾವಣಾ ಆಯೋಗವೂ ಹೆಸರಿಸುತ್ತವೆ. ಸ್ವಯಂ ಜಗಜ್ಜೀವನ ರಾಮರೇ ಈ ಗುಂಪನ್ನು ಆಳುವ ಕಾಂಗ್ರೆಸ್ ಎಂದು ಕರೆಯುತ್ತಾರೆ.

ಆದರೆ, ಇದು ಆಳುವ ಕಾಂಗ್ರೆಸ್ಸು ಅಲ್ಲ

(ಹನ್ನೆರಡನೇ ಪುಟ ನೋಡಿರಿ)

ಬನ್ನಿರಿ
ವಿಜಯ ಬ್ಯಾಂಕಿಗೆ
ನಿಮ್ಮ ಉಳಿತಾಯಗಳಿಂದ
ಲಾಭ ಗಳಿಸಲು ನಿಮಗೆ
ವಿಧಾನ
ಸೂಚಿಸುತ್ತೇವೆ

ದಿ ವಿಜಯ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಕಚೇರಿ: ಮಂಗಳೂರು.
ಆಡಳಿತ ಕಚೇರಿ: ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
ಛೇರ್ಮನ್: ಎಂ. ಸುಂದರ್‌ರಾಮ್ ಶೆಟ್ಟಿ

Bensons 1817-KAN

ರಫ್ತು ಕ್ಷೇತ್ರದಲ್ಲಿ ಮೈಸೂರಿನ ಪಾತ್ರ

ಲೇಖಕರು: ಶ್ರೀ ಕೆ. ಎಸ್. ಸುಬ್ರಹ್ಮಣ್ಯ.

ಮೈಸೂರು ರಾಜ್ಯಕ್ಕೆ 1956ರ ವರೆಗೆ ಸಮುದ್ರ ಕರಾವಳಿಯೇ ಇದ್ದಿಲ್ಲವಾದರೂ ಇತರ ಹಲವಾರು ಕ್ಷೇತ್ರಗಳಲ್ಲಿ ಪ್ರಮುಖ ಸ್ಥಾನ ಪಡೆದಿರುವ ಈ ರಾಜ್ಯ ರಫ್ತು ವ್ಯಾಪಾರ ಕ್ಷೇತ್ರದಲ್ಲೂ ಗಣ್ಯಸ್ಥಾನ ಹೊಂದಿದೆ. ರಾಜ್ಯದಲ್ಲಿ ಉತ್ಪಾದನೆಯಾದ ಕಾಫಿ, ಗಂಧದೆಣ್ಣೆ ಹಾಗೂ ಇತರ ಹಲವು ವಸ್ತುಗಳಿಗೆ ದೇಶದೊಳಗೆ ಮಾರುಕಟ್ಟೆ ಇಲ್ಲದೇ ಇದ್ದುದರಿಂದ ಪರದೇಶಗಳಲ್ಲಿ ಮಾರುಕಟ್ಟೆ ಕಂಡುಕೊಳ್ಳಬೇಕಾದುದೇ ಇಂತಹ ಪ್ರಗತಿಗೆ ಕಾರಣ. ಈ ಕಾರಣದಿಂದಾಗಿಯೇ ಮೈಸೂರು 1920ರ ಸುಮಾರಿನಿಂದಲೇ ಲಂಡನ್‌ನಲ್ಲಿ ರಾಜ್ಯದ ವಾಣಿಜ್ಯ ಅಧಿಕಾರಿಯವರ ಕಚೇರಿ ಸ್ಥಾಪಿಸಿತ್ತು. ರಾಜ್ಯಗಳ ಪುನರ್‌ವಿಂಗಡಣೆ ಹಾಗೂ ಹೊಸ ಮೈಸೂರು ರಾಜ್ಯ ನಿರ್ಮಾಣವಾದಾಗ, ಸುಮಾರು 200 ಮೈಲಿ ಕರಾವಳಿ ಮತ್ತು ಅರಣ್ಯ ಹಾಗೂ ಖನಿಜ ಸಂಪತ್ತಿನಿಂದ ತುಂಬಿದ ಒಳನಾಡು ರಾಜ್ಯಕ್ಕೆ ಲಭಿಸಿತು. ಈ ರೀತಿ ಮೈಸೂರಿನ ಉತ್ಪನ್ನಗಳ ರಫ್ತು ಸಾಧ್ಯತೆ ಈಗ ವಿಶೇಷವಾಗಿದೆ. ಹಾಸನ – ಮಂಗಳೂರು ರೈಲ್ವೇ ಹಾಗೂ ಮಂಗಳೂರು ಸರ್ವಋತು ಬಂದರುಗಳ ನಿರ್ಮಾಣ—ಈ ದೃಷ್ಟಿಯಲ್ಲಿ ಒಂದು ಮಹತ್ವಪೂರ್ಣ ಅಭಿವೃದ್ಧಿ. ಈ ಅವಧಿಯಲ್ಲೇ ಕುದುರೆಮುಖ ಮತ್ತು ದೋಣಿಮಲೆಗಳಲ್ಲಿ ಕಬ್ಬಿಣ ಅದಿರು ಯೋಜನೆಗಳನ್ನು ರಾಷ್ಟ್ರೀಯ ಖನಿಜ ಸಂಪತ್ತು ಅಭಿವೃದ್ಧಿ ಸಂಸ್ಥೆಯು ಕೈಗೊಂಡಿರುವುದೂ ಇಂತಹ ದೂರದೃಷ್ಟಿಯಿಂದಲೇ. ಈಗಲೂ ರಾಜ್ಯದಲ್ಲಿ ದೊರೆಯುವ ಸಾಕಷ್ಟು ಪ್ರಮಾಣದ ಅದಿರನ್ನು ನೆರೆ ರಾಜ್ಯಗಳ ಬಂದರುಗಳ ಮುಖಾಂತರ ರಫ್ತು ಮಾಡಲಾಗುತ್ತದೆ. ರಾಜ್ಯದಲ್ಲಿ ಅಗೆಯಲಾದ ಮಿಲಿಯಗಟ್ಟಲೆ ಟನ್ನುಗಳಷ್ಟು ಕಬ್ಬಿಣದ ಅದಿರನ್ನು ರಾಜ್ಯದ ಪಶ್ಚಿಮ ಕರಾವಳಿಯ ಮಂಗಳೂರು ಹಾಗೂ ಇತರ ಕೆಲವು ಬಂದರುಗಳ ಮೂಲಕ ರಫ್ತು ಮಾಡುವ ದಿನ ಬಹಳ ದೂರವಿಲ್ಲ.

ಅರಣ್ಯ ಉತ್ಪನ್ನಗಳು, ಮೀನು, ಕಾಫಿ ಹಾಗೂ ಕಬ್ಬಿಣ ಅದಿರುಗಳನ್ನು ಮಾತ್ರವೇ ರಫ್ತು ಮಾಡುವುದರಲ್ಲಿ ಮೈಸೂರು ಮುಂದಕ್ಕೆ ತೃಪ್ತಿಗೊಂಡಲಾರದೆಂಬುದು ಖಂಡಿತ. ರೇಷ್ಮೆ ಬಟ್ಟೆ, ಅಗರಬತ್ತಿ, ಗೇರುಬೀಜ, ಏಲಕ್ಕಿ. ಕುಶಲಕಲಾ ವಸ್ತುಗಳು, ಎಂಜಿನೀಯರಿಂಗ್ ಉತ್ಪನ್ನಗಳು—ಹಾಗೂ ಇತರ ಹಲವಾರು ರೀತಿಯ ವಸ್ತುಗಳನ್ನು ರಫ್ತು ಮಾಡುವ ಸೋಪಾನದಲ್ಲಿದೆ — ಈಗ ಮೈಸೂರು ಬೇರೆ ಮಾತಿನಲ್ಲಿ ಹೇಳುವುದಾದರೆ—ರಾಜ್ಯವು ಸಾಂಪ್ರದಾಯಿಕ ರಫ್ತು ವ್ಯಾಪಾರದಿಂದ, ಪರಿಷ್ಕೃತ ವಸ್ತುಗಳ ರಫ್ತು ವ್ಯಾಪಾರಕ್ಕೆ ಕಾಲಿಡುತ್ತಿದೆ.

ರಾಜ್ಯದ ರಫ್ತು ವ್ಯಾಪಾರ ಸಾಧ್ಯತೆಯನ್ನು ಕ್ರಮಬದ್ಧವಾಗಿ ನಿರ್ಧರಿಸುವ ಸಲುವಾಗಿ ಭಾರತೀಯ ವಿದೇಶೀ ವ್ಯಾಪಾರ ಸಂಸ್ಥೆಯ ನೆರವಿನೊಂದಿಗೆ ಸುಮಾರು ಎರಡು ವರ್ಷಗಳ ಹಿಂದೆ ನಡೆಸಲಾದ ಸಮೀಕ್ಷಾ ಕಾರ್ಯ ಶ್ಲಾಘನೀಯ. 1967–68ರಲ್ಲಿ ರಾಜ್ಯದ ರಫ್ತು ವ್ಯಾಪಾರ 52.6 ಕೋಟಿ ರೂಪಾಯಿಗಳ ಮೌಲ್ಯದ್ದೆಂದು ಈ ಸಮೀಕ್ಷೆಯಿಂದ ವೇದ್ಯವಾಯಿತು. ಇದೇ ಅವಧಿಯಲ್ಲಿ ಅಖಿಲ ಭಾರತ ರಫ್ತು ವ್ಯಾಪಾರ 1,198.7 ಕೋಟಿ ರೂಪಾಯಿಗಳಷ್ಟಾಗಿತ್ತು. ಈ ಸಮೀಕ್ಷೆಯ ಅಂಕೆ ಸಂಖ್ಯೆಗಳ ನೆಲೆಯಲ್ಲಿ, ರಾಜ್ಯದ ರಫ್ತು ವ್ಯಾಪಾರವು 1973–74 ರಲ್ಲಿ 122–10 ಕೋಟಿ ರೂಪಾಯಿಗಳಾಗಬಹುದೆಂಬ ಅಂದಾಜು ಮಾಡಲಾಯಿತು.

ರಾಷ್ಟ್ರೀಯ ಮಟ್ಟದ ರಫ್ತು ವ್ಯಾಪಾರಗನುಸಾರ, ರಾಜ್ಯದ ಕಾಫಿ ರಫ್ತು ರಾಷ್ಟ್ರೀಯ ರಫ್ತಿನ ಶೇಕಡಾ 95ರಷ್ಟಿದ್ದು ಇದಕ್ಕೆ ಅಗ್ರಗಣ್ಯ ಸ್ಥಾನ. ಶೇಕಡಾ 51ರಷ್ಟು ಇರುವ ಅಗರಬತ್ತಿ ರಫ್ತು ಎರಡನೆಯ ಸ್ಥಾನ ಪಡೆಯುವುದು. ಇತರ ವಸ್ತುಗಳಿಗೆ ದೊರೆಯುವ ಸ್ಥಾನ ಅನುಕ್ರಮವಾಗಿ ಈ ರೀತಿ ಇದೆ. ಗಂಧದೆಣ್ಣೆ ಶೇಕಡಾ 42; ಪರಿಷ್ಕೃತ ಹಣ್ಣುಹಂಪಲು ಶೇಕಡಾ 38; ಕಬ್ಬಿಣದ ಅದಿರು–ಶೇಕಡಾ 22; ಕಚ್ಚಾ ಹೊಗೆಸೊಪ್ಪು–ಶೇಕಡಾ 17; ಮ್ಯಾಂಗನೀಸ್ ಶೇಕಡಾ 15; ಹಾಗೂ ಏಲಕ್ಕಿ—ಶೇಕಡಾ 10. 1967 — 68 ರಲ್ಲಿ ಮೈಸೂರಿನ ಗೇರುಬೀಜ ರಫ್ತು ಅಖಿಲಭಾರತ ರಫ್ತಿನ ಶೇಕಡಾ 8ರಷ್ಟಾಗಿತ್ತು. ಇದೇ ಅವಧಿಯಲ್ಲಿ ಎಂಜಿನೀಯರಿಂಗ್ ವಸ್ತುಗಳ ರಫ್ತು ಶೇಕಡಾ 5ರಷ್ಟು ಮಾತ್ರ. ಮುಂಬರುವ ವರ್ಷಗಳಲ್ಲಿ ಈ ಪ್ರವೃತ್ತಿಯಲ್ಲಿ ಬದಲಾವಣೆಯಾಗಿ, ಎಂಜಿನೀಯರಿಂಗ್ ವಸ್ತುಗಳ ಹಾಗೂ ಖನಿಜ ಸಂಪತ್ತುಗಳ ರಫ್ತು ಅಧಿಕವಾಗುವ ಲಕ್ಷಣಗಳು ಕಂಡುಬರುತ್ತಿವೆ. 1967—68ರಲ್ಲಿ ಶೇಕಡಾ 52·60 ಕೋಟಿ ರೂಪಾಯಿಯ ರಾಜ್ಯದ ರಫ್ತು ವ್ಯಾಪಾರ, 1973—74ರಲ್ಲಿ 122·10 ಕೋಟಿ ರೂಪಾಯಿಯಷ್ಟಾಗಲಿದೆ ಎಂದು ಮೇಲೆ ಹೇಳಿದ ಸಮೀಕ್ಷೆಯಿಂದ ಅಂದಾಜು ಮಾಡಲಾಗಿದೆ. ಅಂದರೆ 132ರಷ್ಟು ಹೆಚ್ಚಳವಾಗಲಿದೆ. ಎಂಜಿನೀಯರಿಂಗ್ ವಸ್ತುಗಳು, ರೇಷ್ಮೆಬಟ್ಟೆ, ಕುಶಲಕಲಾ ವಸ್ತುಗಳು, ಅಗರ್‌ಬತ್ತಿ—ಹಾಗೂ ಖನಿಜ ಸಂಪತ್ತುಗಳು ನಾಲ್ಕನೇ ಯೋಜನಾವಧಿಯಲ್ಲಿ ಗಣನೀಯ ಪ್ರಮಾಣದಪ್ರಗತಿಸಾಧಿಸಲಿವೆ. ಮೌಲ್ಯದ ದೃಷ್ಟಿಯಿಂದ, ಮುಂದಕ್ಕೆಅತ್ಯಧಿಕಪ್ರಮಾಣದ ವಿದೇಶಿ ವಿನಿಮಯ ಗಳಿಸಲಿರುವ ವಸ್ತುಗಳೆಂದರೆ (1) ಖನಿಜ ಸಂಪತ್ತುಗಳು ಮತ್ತು(2) ತೋಟಗಾರಿಕೆ ಉತ್ಪನ್ನಗಳು. ಮೈಸೂರಿನ ರಫ್ತು ಕ್ಷೇತ್ರದಲ್ಲಿ ಪ್ರಮುಖವಾದ ಕೆಲವು ವಸ್ತುಗಳ ಮುನ್ನೋಟ ಹೀಗಿದೆ.

ಮೈಸೂರಿನ ರಫ್ತು ವ್ಯಾಪಾರ—1967–68 ಮತ್ತು 1973–74

ಬೆಲೆ: ಸಾವಿರ ರೂ.ಗಳಲ್ಲಿ

ಉತ್ಪನ್ನಗಳು	1967–68ರಲ್ಲಿ ರಫ್ತು	ಶೇಕಡಾ	1973–74ರಲ್ಲಿ ಆಗಬಹುದಾದ ಅಂದಾಜು ರಫ್ತು	ಶೇಕಡಾ
ವ್ಯವಸಾಯ ತೋಟಗಾರಿಕೆ	233,963	44.5	370,700	30.3
ಅರಣ್ಯ	5,075	0.9	8,300	0.7
ಬಟ್ಟೆ : ರೇಷ್ಮೆ	4,861	0.9	34,930	2.9
ಖನಿಜ ಸಂಪತ್ತು	179,958	34.2	515,750	42.2
ರಾಸಾಯನಿಕಗಳು	16,216	3.1	24,013	2.0
ಮೀನು ಹಾಗೂ ಪಶುಜನ್ಯ	61,690	11.8	114,000	9.3
ಎಂಜನೀಯರಿಂಗ್	20,976	4.0	137,600	11.3
ಕುಶಲಕಲೆ ಹಾಗೂ ಅಗರಬತ್ತಿ	3,327	0.6	15,780	1.3
ಒಟ್ಟು	526,071	100.0	1,221,073	100.0

ಮೂಲ : ಭಾರತೀಯ ವಿದೇಶೀ ವ್ಯಾಪಾರ ಸಂಸ್ಥೆ.

ಕಾಫಿ:

ಮೈಸೂರು, 1967—68ರಲ್ಲಿ 17.3 ಕೋಟಿ ರೂಪಾಯಿ ಮೌಲ್ಯದ 29,786 ಟನ್ನು ಕಾಫಿ ರಫ್ತು ಮಾಡಿತು. 1973–74ರೊಳಗೆ ಈ ಪ್ರಮಾಣ ಕನಿಷ್ಟ 20 ಕೋಟಿ ರೂಪಾಯಿ ಬೆಲೆಯ 36,000 ಟನ್ನುಗಳಾಗಬಹುದು. ಪ್ರಪಂಚದ ಮಾರುಕಟ್ಟೆಗಳಲ್ಲಿ 1967—68ರಿಂದೀಚೆಗೆ ಕಾಫಿ ಅಭಾವ ತಲೆದೋರುವಂತೆ ಕಂಡುಬರುತ್ತಿದೆ. ಈ ಕಾರಣದಿಂದಾಗಿಯೂ, ರಾಜ್ಯದ ಕಾಫಿ ಉತ್ಪಾದನೆ ಅಧಿಕವಾಗುತ್ತಿರುವುದರಿಂದಲೂ, ಕಾಫಿ ರಫ್ತಿನಿಂದ ದೊರೆಯುವ ವಿದೇಶೀ ವಿನಿಮಯ ಅಧಿಕವಾಗುವ ನಿರೀಕ್ಷೆ ಇದೆ. ಕಾಫಿ ಬೀಜವನ್ನೆ ರಫ್ತು ಮಾಡುವ ಬದಲು, ಕಾಫಿ ಹುಡಿಯನ್ನು ಅದರಲ್ಲೂ ಕ್ಷಣದಲ್ಲೇ ಕಾಫಿ ಪಾನೀಯ ತಯಾರಾಗುವಂತಹ ಹುಡಿಯನ್ನು ಪರದೇಶಗಳಿಗೆ ಮಾರುವುದು ಉತ್ತಮ.

ಗೇರುಬೀಜ ಮತ್ತು ಏಲಕ್ಕಿ:

ಗೇರುಬೀಜ ತಿರುಳು ಹಾಗೂ ಗೇರುಬೀಜ ಎಣ್ಣೆ ರಫ್ತು ಪ್ರಕೃತ 3·5 ಕೋಟಿ ರೂಪಾಯಿಯಷ್ಟಿದ್ದು, 1973–74 ರಲ್ಲಿ 6·2 ಕೋಟಿ ರೂಪಾಯಿಯಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ. ಪರಿಷ್ಕರಣ ಹಾಗೂ ಪ್ಯಾಕಿಂಗ್‌ಗಳಲ್ಲಿ ಸುಧಾರಣೆ ಮಾಡಿಕೊಂಡರೆ, ಗೇರುಬೀಜ ರಫ್ತು ಹೆಚ್ಚಳ ಸಾಧ್ಯ. ಭಾರತದಿಂದಾಗುವ ಏಲಕ್ಕಿ ರಫ್ತಿನಲ್ಲಿ, ಶೇಕಡ 20ರಷ್ಟು ಮೈಸೂರಿನಿಂದಲೇ ಆಗುತ್ತದೆ. ಏಲಕ್ಕಿ ರಫ್ತಿನಿಂದ ಈಗ ದೊರೆಯುವ ವಿದೇಶಿ ವಿನಿಮಯ ಒಂದು ಕೋಟಿ ರೂಪಾಯಿಗಿಂತ ಕಡಿಮೆ. ಇದು ಸದ್ಯವೇ 1·25 ಕೋಟಿ ರೂಪಾಯಿಯಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ. ಏಲಕ್ಕಿ ರಫ್ತು ಅಧಿಕವಾಗಬೇಕಾದರೆ ಗುಣ ಅಂಶ ನಿಯಂತ್ರಣ ಹಾಗೂ 'ಕಟ್ಟೆ' ರೋಗದ ನಿರ್ಮೂಲನ ಅತ್ಯವಶ್ಯ.

ಖನಿಜ ಸಂಪತ್ತು:

ಮೈಸೂರಿನ ಕಬ್ಬಿನ ಅದಿರು ರಫ್ತು 16·2 ಕೋಟಿ ರೂಪಾಯಿಯಿಂದ 48 ಕೋಟಿ ರೂಪಾಯಿಗೇರುವ ನಿರೀಕ್ಷೆ ಇದೆ.

(ಹನ್ನೊಂದನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 92/69

ಲಕ್ಷ್ಮಿ ಅಮ್ಮ — ವಾದಿಳು

ಮತ್ತು

ಕಮಲಾಕ್ಷ ಶೆಟ್ಟಿ — ಪ್ರತಿವಾದಿರು

ಇವರೊಳಗೆ

12ನೇ ಪ್ರತಿವಾದಿ ವೆಂಕಟರಾಜಭಟ್ಟ–ಜಲಜಾಕ್ಷನ ಮಗ—ಉಡುಪಿ ತಾಲೂಕು ..... ಗ್ರಾಮ.

ವಾದಿಯು ಪ್ಲೇಂಟ್ A ಶೆಡ್ಯೂಲು ಆಸ್ತಿಯಲ್ಲಿ ..... ದಾಖಲು ಮಾಡಿದ ಖಾವ್ಯತು ತಾ. 20—2—71ಕ್ಕೆ ಇಟ್ಟಿದೆ. ಸದ್ರಿ 12ನೇ ಪ್ರತಿವಾದಿಯು ಸದರಿ ತಾ. 20—2—71ನೇ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ವ್ಯಾಜ್ಯದಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗುವರೆ ತಪ್ಪಿದರೆ ಸದ್ರಿ 12ನೇ ಪ್ರತಿವಾದಿಯ ಗೈರುಹಾಜರಿಯಿಂದ ಮೇಲಿನ ವ್ಯಾಜ್ಯ ತೀರ್ಮಾನಿಸಲ್ಪಡುವದು.

(Sd) Gratian C. Rego,
Vakil for Plaintiff.

Udipi, Dated 22—1—71.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

Exc. 59/1970 O. S. No. 234/1962

ಸಂಕ ಶೆಟ್ಟಿ ಸಹಾ — ಅರ್ಜಿದಾರರು

ಮತ್ತು

ಸುಂದರಿ ಶೆಟ್ಟಿ ಸಹಾ — ಎದ್ರಿರು

ಇವರೊಳಗೆ

ಪ್ರ. ..... ಎದ್ರಿರು 1 ಸುಂದರಿ ಶೆಟ್ಟಿ ..... ಶೆಟ್ಟಿ ..... ಉಡುಪಿ ತಾಲ್ಲೂಕು ..... ಗ್ರಾಮದ ..... ಇವರಿಗೆ ಈ ಮೂಲಕ ತಿಳಿಸುವದೇನಂದ್ರೆ,

ಮೇಲಿನ ಅಮಲ್ದಾರಿ ..... ಯೋಲಂ ..... ತಾರೀಕು 24–2–71ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10–30 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ..... ಹಾಜರಾಗಿ ..... ತಪ್ಪಿದಲ್ಲಿ ..... ಸದ್ರಿ ..... ತೀರ್ಮಾನಿಸಲಾಗುವದು.

(By order of the Court)

N. M. Adyanthaya
Advocate for Petitioner

Karkala, 23—2—71

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 21

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ,
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಪ್ರಗತಿಶೀಲ ನಿರ್ಣಯ

ನಲುವತ್ತು ವರ್ಷಗಳಿಗೆ ಹಿಂದೆ ತನ್ನ ಕರಾಚಿ ಅಧಿವೇಶನದಲ್ಲಿ ಕಾಂಗ್ರೆಸ್ಸು ಭೂಕಂದಾಯವನ್ನು ರದ್ದು ಮಾಡುವ ನಿರ್ಣಯ ಕೈಕೊಂಡಿತ್ತೆಂಬುದು ಹೆಚ್ಚಿನವರಿಗೆ ಮರೆತು ಹೋಗಿರಬಹುದು. ಅಂದಿನ ಉತ್ಸಾಹಿಗಳು ಇಂದು ನಿರುತ್ಸಾಹಿಗಳಾಗಿ ಮೂಲೆಯಲ್ಲಿ ಕುಳಿತಿದ್ದಾರೆ; ಅಥವಾ ಮೂಲೆಗೆ ತಳ್ಳಲ್ಪಟ್ಟಿದ್ದಾರೆ. ಅದು ಅಂದು ಬಹಳ ಕ್ರಾಂತಿಕಾರಿ—ಪ್ರಗತಿಪರ ನಿರ್ಣಯವಾಗಿತ್ತು. ಇಂದಿಗೂ ಹಾಗೆಯೇ ಇದೆ. ಆದರೆ, ಆ ಕಾಲದಲ್ಲಿ ಬ್ರಿಟಿಷರ ಕೈಗಳಲ್ಲಿ ಆಡಳಿತ ಸೂತ್ರವಿದ್ದು, ನಿರ್ಣಯಗಳನ್ನು ಮಾಡುವುದಷ್ಟೇ ಕಾಂಗ್ರೆಸ್ಸಿನ ಕಾರ್ಯಕ್ರಮವಿತ್ತು. ಬ್ರಿಟಿಷರು ನಮ್ಮ ದೇಶವನ್ನು ನಮ್ಮ ಕೈಗಳಿಗಿತ್ತು ತಮ್ಮೂರಿಗೆ ಹೋಗಿ ೨೩ ವರ್ಷಗಳಾದರೂ ದೇಶದ ಎಲ್ಲ ರಾಜ್ಯಗಳಲ್ಲೂ ಈ ನಡುವೆ ಅಲ್ಪಾವಧಿಯಿಂದ ದೀರ್ಘಾವಧಿಯ ವರೆಗೆ ಕಾಂಗ್ರೆಸ್ ರಾಜ್ಯಭಾರ ನಡೆದಿದ್ದರೂ ಆ ಸರಕಾರಗಳು ಕಂದಾಯ ರದ್ದು ಮಾಡುವ ನಿರ್ಣಯವನ್ನು ಇದುವರೆಗೂ ಮಾಡಿದ್ದಿಲ್ಲ. ಈ ದಿಸೆಯಲ್ಲಿ ಮೊದಲ ಹೆಜ್ಜೆ ಇಟ್ಟು ತನ್ನ ಪ್ರಗತಿಪರತೆಯನ್ನು ಕರ್ನಾಟಕದ ಸಿಂಡಿಕೇಟ್ ಸರಕಾರ ತೋರಿಸಿಕೊಟ್ಟಿದೆ.

ಬೆಟ್ಟದಷ್ಟು ಮಾತಾಡುತ್ತ ನಿರ್ಣಯಗಳ ಜಾಲ ಬೀಸುತ್ತ ಮತದಾರರ ಮೇಲೆ ಸಮ್ಮೋಹಿನಿ ಬೀರಲು ಇಂಡಿಕೇಟ್ ಪ್ರಯತ್ನಿಸುತ್ತಿರುವಾಗ, ತಾನು ಪ್ರಗತಿಶೀಲ, ಸಿಂಡಿಕೇಟ್ ಪ್ರಗತಿಗಾಮಿಗಳ ಕೂಟವೆಂದು ದೂರುತ್ತಿರುವಾಗ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಈ ದಿಟ್ಟ ಹೆಜ್ಜೆ ನಿಂದಕರಿಗೊಂದು ಸವಾಲಾಗುತ್ತದೆ. ಯಾರು ಪ್ರಗತಿಶೀಲರು ಎಂಬುದನ್ನು ಅರಿತುಕೊಳ್ಳುವುದಕ್ಕೂ ಜನತೆಗೊಂದು ಅವಕಾಶವಾಗುತ್ತದೆ. ಸದ್ಯದ ನಿರ್ಣಯದಂತೆ ಮುಂದಿನ ಜುಲೈ ಮೊದಲನೆ ದಿನದಿಂದ ಲಾಭದಾಯಕವಲ್ಲದ ಭೂಹಿಡುವಳಿಗಳ ಮೇಲಿನ ಕಂದಾಯವು ಇಲ್ಲದಾಗುವುದು. ಈ ಸೌಲಭ್ಯವನ್ನು ರಾಜ್ಯದ ಹಿಡುವಳಿದಾರರಲ್ಲಿ ಪ್ರತಿ ಮೂವರಲ್ಲಿ ಇಬ್ಬರು ಪಡೆಯುತ್ತಾರೆ. ಲಾಭದಾಯಕವಲ್ಲದ ಭೂ ಹಿಡುವಳಿಯೆಂದರೆ, ಹತ್ತು ಎಕ್ರೆ ಖುಷ್ಕಿ ಜಮೀನು, ಎರಡು ಎಕ್ರೆ ತರಿ ಜಮೀನು ಅಥವಾ ಒಂದು ಎಕ್ರೆ ಬಾಗಾಯತು ಇದಕ್ಕೆ ಸಮಾನ. ಇಂತಹ ನಿರ್ಣಯದಲ್ಲಿ ಅನ್ಯಾಯವಾಯಿತೆಂದು ಯಾರೂ ದೂರುವುದು ಸಾಧ್ಯವಿಲ್ಲ.

ಚುನಾವಣೆಗಳಿಗೆ ಮೊದಲು ಈ ಬಗೆಯ ನಿರ್ಣಯ ಮಾಡಿದ್ದು ಮತ ಹಿಡಿಯಲಿಕ್ಕಿಸಿದ ಗಾಳವೆಂದು ಕೆಲವರು ಟೀಕಿಸಬಹುದು. ಆದರೆ, ಕಾಂಗ್ರೆಸ್ಸು ಕಳೆದ ಸಾರ್ವತ್ರಿಕ ಚುನಾವಣೆಗಳಿಗೆ ಮೊದಲೇ ಈ ಸಂಬಂಧದ ಭರವಸೆಯನ್ನು ನೀಡಿದೆಯೆಂಬುದನ್ನು ಮರೆಯು ಬಾರದು. ಈಗ ಅದನ್ನು ಈಡೇರಿಸಿ ಕೊಟ್ಟಿರುವುದನ್ನು ನಿಷ್ಕ್ರಿಯೋಜಕವೆನ್ನಲಾಗದು. ಬೇರೆ ಯಾವ ರಾಜ್ಯವಾದರೂ 'ಪ್ರಗತಿಶೀಲ'ರೆಂದೋ 'ವಾಮಪಂಥೀಯ'ರೆಂದೋ 'ರೈತ-ಕಾರ್ಮಿಕ ಜನೋದ್ಧಾರಕ'ರೆಂದೋ ಹಣೆಗೆ ಪಟ್ಟಿ ಹಚ್ಚಿಕೊಂಡಿರುವವರು ಶಾಸನ ನಡೆಸಿದ, ನಡೆಸುತ್ತಿರುವ ರಾಜ್ಯಗಳು—ಈ ಸಂಬಂಧ ಮುಂದುವರಿಯದೆ ಇರುವಾಗ, ಮಾತು ಘೋಷಣೆಗಳಿಂದಲೇ ಬಾಯಿ ತೀಟೆ ತೀರಿಸುತ್ತಿರುವಾಗ ಸಿಂಡಿಕೇಟ್ ಪ್ರತಿಗಾಮಿಯೆಂದು ಅಪಪ್ರಚಾರ ನಿರತರಾದವರಿಗೆ ಕೆನ್ನೆಗೇಟು ನೀಡಿದಂತಾಗಿದೆ. ತನ್ನ ಪ್ರಗತಿಶೀಲ ಕಾರ್ಯಕ್ರಮಗಳನ್ನು 'ಸಿಂಡಿಕೇಟ್' ತಡೆಯುತ್ತಿತ್ತು ಎಂದು ದೂರುವುದರಲ್ಲೇ ತೃಪ್ತಿಪಡುವ ಪ್ರಧಾನಿ ಗಾಂಧಿಯ ಮಾತು ಹುರುಳಿಲ್ಲದ್ದು, ಬರಿಯ ಅಪಪ್ರಚಾರ ಪ್ರೇರಿತವಾದದ್ದು ಎಂಬುದನ್ನು ಸಾರುತ್ತದೆ.

ಭೂ ಕಂದಾಯದಿಂದ ಕರ್ನಾಟಕದ ಸರಕಾರಿ ಬೊಕ್ಕಸ ಪ್ರತಿ ವರ್ಷ ರೂ. ೫ ಕೋಟಿ ಪಡೆಯುತ್ತಿತ್ತು. ಸದ್ಯ ನೀಡಿದ ಸೌಲಭ್ಯಗಳಿಂದ ಸುಮಾರು ಒಂದೂವರೆ ಕೋಟಿ ರೂಪಾಯಿಗಳ ಹಾನಿ ತುಂಬಿಕೊಳ್ಳಬೇಕಾಗುವುದು. ಇದರ ಸಿಂಹಪಾಲು ಸ್ಥಳೀಯ ಸಂಸ್ಥೆಗಳಲ್ಲಿ ಹಂಚಿ ಹೋಗುವುದರಿಂದ, ಅಂತಹ ಸಂಸ್ಥೆಗಳಿಗೆ ನಷ್ಟವನ್ನು ತುಂಬಿಕೊಳ್ಳುವುದೂ ಅಸಾಧ್ಯವಾದ ಮಾತಲ್ಲ. ಗ್ರಾಮೀಣ ಜನತೆಯ ಹಿತ ಸಾಧನೆಗಾಗಿ ಇಂತಹ ಕ್ರಮವಾದರೂ ಅವಶ್ಯ. ಸರಕಾರವೇ ಸ್ಥಳೀಯ ಸಂಸ್ಥೆಗಳಿಗೆ ನಷ್ಟ ತುಂಬಿಕೊಡ ಬೇಕಾದ ಸಂದರ್ಭ ಬಂದರೂ ಅದೂ ಹೆಚ್ಚು ಕಷ್ಟನಾಗಲಾರದು. ತನ್ನ ನೌಕರರ ವೇತನಾದಿ ಏರಿಸಲು ೧೦-೧೫ಕೋಟಿ ರೂಪಾಯಿ ಗಳಿಸ ಬಲ್ಲ ಸರಕಾರ ಮೂರರಲ್ಲೆರಡು ಪಾಲು ರೈತರ ಸುಖಕ್ಕಾಗಿ ಒಂದೂವರೆ ಕೋಟಿ ರೂಪಾಯಿ ಸಂಪಾದಿಸಲು ಹಿಂಜರಿಯದು. ಇತಿಹಾಸ ಪ್ರಸಿದ್ಧ ಭೂಕಂದಾಯ ರದ್ಧತಿಯ ನಿರ್ಣಯದೊಡನೆ ಗ್ರಾಮಾಂತರ ಪ್ರದೇಶದ ನಿರುದ್ಯೋಗ ನಿವಾರಣೆಗಾಗಿ ಭೂಸೇನೆಯೊಂದನ್ನು ರಚಿಸುವ ನಿರ್ಧಾರಕ್ಕೆ ಕರ್ನಾಟಕ ಸರಕಾರ ಬಂದಿದೆ. ಸ್ಥಳೀಯರಿಗೆ ಸ್ಥಳವಲ್ಲಿಯೇ ಉದ್ಯೋಗ ದೊರಕಿಸುವ ಈ ಸೇನೆಯು ನಮ್ಮ ಹಲಕೆಲವು ಪ್ರಶ್ನೆಗಳಿಗೆ ಉತ್ತರ ನೀಡ ಬಲ್ಲುದು ಕೃಷಿ, ಪಶು—ಪಕ್ಷಿಪಾಲನೆ —ಗುಡಿಕೈಗಾರಿಕೆ ಮೊದಲಾದ ಗ್ರಾಮಾಂತರ ಕಾರ್ಯ ಕ್ರಮಗಳನ್ನು ವಿಸ್ತೃತ ತಳಹದಿಯಲ್ಲಿ ಇದು ಉತ್ಸಾಹದಿಂದ ಕೈಕೊಂಡರೆ, ಗ್ರಾಮದ ಸಮಸ್ಯೆಗಳ ಪರಿಹಾರಕ್ಕೆ ನೆರವಾಗ ಬಹುದು; ಉದ್ಯೋಗಾವಕಾಶವರಸಿ ನಗರ ಸೇರುವ ಗ್ರಾಮಾಂತರ ವಲಸೆಗೂ ತಡೆ ಬೀಳ ಬಹುದು. ಆದರೆ, ನಿಯೋಜಿತ ಭೂಸೇನೆಯ ಸಂಘಟನೆ ಮತ್ತು ಕಾರ್ಯ ಪ್ರಣಾಳಿಗಳು ನಿರ್ವಂಚನೆಯಿಂದ ಪರಿಶುದ್ಧ ವಾತಾವರಣದಲ್ಲಿ ನಡೆಯುವಂತಾಗ ಬೇಕು. ಸ್ವಾರ್ಥಿಗಳೂ ಸಂಕುಚಿತ ಮನೋವೃತ್ತಿಯವರೂ ಅಧಿಕಾರಿ —ಅಧಿಕಾರೇತರರಾಗಿ ಇದರಲ್ಲಿ ತಲೆ ಹಾಕಿದರೆ, ಈ ಸೇನೆಯ ಸ್ಥಾಪನೆಯ ಹಿಂದೆ ಅಡಗಿರುವ ಉದ್ದೇಶ್ಯ ಮಣ್ಣುಗೂಡುವುದು.

ಕರ್ನಾಟಕ ಸರಕಾರದ ಕ್ರಾಂತಿಕಾರಿ—ಪ್ರಗತಿಪರ ನಿರ್ಧಾರವನ್ನು ಅದರ ಶತ್ರುಗಳೂ ಎರಡೂ ಕೈಗಳಿಂದ ಸ್ವಾಗತಿಸಬೇಕು.

ಮುಯ್ಯ್ ತೀರಿತು

ಕಾಶ್ಮೀರದ ಮುಖ್ಯಮಂತ್ರಿ ಸಾದಿಕರನ್ನೂ ಅವರ ಸಹೋದ್ಯೋಗಿಗಳನ್ನೂ ಕೊಲೆ ನಡೆಸುವ ಪ್ರಯತ್ನದ ಪಿತೂರಿ ಬಹಿರಂಗವಾಗಿ ಅದನ್ನು ವಿಫಲ ಮಾಡುವಲ್ಲಿ ಪೋಲೀಸರು ಸಫಲರಾದರು. ಅಲ್ ಫತಾ ಎಂಬ ಕೂಟವು ಈ ಸಂಚಿಗೆ ಪ್ರೇರಕ ಶಕ್ತಿಯೆಂದೂ, ಇದರೊಂದಿಗೆ ಭಾರತದಲ್ಲಿನ ಪಾಕ್ ಹೈ ಕಮಿಶನರ ಕಛೇರಿಯ ಪ್ರಥಮ ಕಾರ್ಯದರ್ಶಿ ನಿಕಟ ಸಂಬಂಧವಿರಿಸಿಕೊಂಡಿರುವರೆಂದೂ ಗೊತ್ತಾಗಿದೆ. ಆ ಕಾರಣದಿಂದ ಅವರು ಭಾರತದಲ್ಲಿರಲು ಅನರ್ಹರೆಂದು ಭಾರತ ಸರಕಾರ ನಿರ್ಧರಿಸಿ ಅವರು ದೇಶ ಬಿಟ್ಟು ಹೋಗ ಬೇಕೆಂದು ಆ

(ಹತ್ತನೇ ಪುಟ ನೋಡಿರಿ)

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

I. A. No. I in O. S. 292/65.

ಗೋಪಾಲಕೃಷ್ಣ —ಅರ್ಜಿದಾರ

— VS —

ಕುಸುಮಾವತಿ ಸಹಾ —ಎದುರು

4. ಸೀತಾರಾಮ ಭಟ್ಟ, ಭೀಮ ಭಟ್ಟರ ಮಗ, ಬಂಟ್ವಾಳ ತಾಲ್ಲೂಕು ವಿಟ್ಲಪಡ್ನೂರು ಗ್ರಾಮದ ಕೆಳಿಲ ......ಇವರಿಗೆ —

ಮೇಲ್ಕಂಡ ಅರ್ಜಿದಾರನು ಕೋರ್ಟಿನ ಡಿಪೋಜಿಟಿನಲ್ಲಿರುವ ರೂಪಾಯಿ 400-00ನ್ನು ಪಡಿಯಲು ಹಾಕಿದ ಅರ್ಜಿಯು ನಿಮ್ಮ ಆಕ್ಷೇಪಣೆ ಬಗ್ಗೆ ತಾ. 19-2-1971ಕ್ಕೆ ಇಟ್ಟಿದೆ. ಸದ್ರಿ ದಿವಸ ನೀವು ಸ್ವತಹ ವಕೀಲರ ದ್ವಾರಾ ಹಾಜರಾಗಿ ಉದಜರಿಸತಕ್ಕದ್ದು. ತಪ್ಪಿದಲ್ಲಿ ನಿಂಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೋರ್ಟಿನ ಹುಕ್ಕುಂ ಪ್ರಕಾರ

Sd/- K. Rama Bhat
Advocate for Petitioner.

ಪುತ್ತೂರು, 20-1-1971.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 103/1970

ಪಟ್ಟೇದಿ ಯಾನೆ ಲಕ್ಷ್ಮಿ ಹೆಂಗ್ಸು ಮತ್ತು — ವಾದಿ

ರುಕ್ಮಿಣಿ ಸಹಾ — ಪ್ರತಿವಾದಿರು

ಬೆಳ್ತಂಗಡಿ ತಾಲೂಕು ಬಡಗ ಕಾರಂದೂರು ಗ್ರಾಮದ ಪಜ್ಜೈಬೈಲು ಎಂಬಲ್ಲಿರುವ ರುಕ್ಮಿಣಿ ಹೆಂಗ್ಸಿನ ಮಕ್ಕಳು 1ನೇ ಶಿವಪ್ಪ ಸೇರಿಗಾರ (ಮೂರನೇ ಪ್ರತಿವಾದಿ), 2ನೇ ಅಪ್ಪಿ ಹೆಂಗ್ಸು (6ನೇ ಪ್ರತಿವಾದಿ) 3ನೇ ಜಮುನ (7ನೇ ಪ್ರತಿವಾದಿ)ರಿಗೆ

ಮೇಲ್ಕಂಡ ವ್ಯವಹಾರದಲ್ಲಿ ವಾದಿಯು ಪಾಲಿನ ಬಟ್ಟು ಮಾಡಿದ ದಾವೆಯಲ್ಲಿ ನಿಮಗೇನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ತಾರೀಕು 18-2-1971ರಂದು ಹಗಲು ಗಂಟೆ 11ಕ್ಕೆ ಸರಿಯಾಗಿ ನೀವು ಸ್ವತಹಾ ಯಾ ವಕೀಲರ ದ್ವಾರ ಬಂದು ತಿಳಿಸಿಕೊಳ್ಳಬೇಕು. ಇಲ್ಲವಾದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

[ಕೋರ್ಟಿನ ಹುಕ್ಕುಂ ಮೇರೆಗೆ]

ಯನ್. ಜೆ. ಕಡಂಬ
ವಕೀಲ್, ಬೆಳ್ತಂಗಡಿ

ಬೆಳ್ತಂಗಡಿ, 29-1-1971.

ಗೇಹರಾಜ್ಯದಲ್ಲಿ

ಗರುಡದೀಪ ನ್ಯಾಯ

"ಅಲ್ಲಾರಿ, ಇದೇನೂಂತ?"

"ಯಾವುದು?"

"ಉತ್ತರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ತ್ರಿಭುವನ ನಾರಾಯಣ ಸಿಂಗರು ಉಪಚುನಾವಣೆಯಲ್ಲಿ ಸೋತರಂತಲ್ಲಾ?'

'ಹ್ಞಂ, ಅದ್ರಲ್ಲೇನೆ? ಚುನಾವಣೆ ಅಂತಂದ ಮೇಲೆ ಸೋಲು–ಗೆಲವು ಎರಡಕ್ಕೂ ಸಿದ್ಧರಾಗಬೇಕು"

"ಅದು ಸರೀನ್ನಿ. ಆದರೂ ಶ್ರೀ ಸಿಂಗರು ಉ. ಪ್ರ.ದಲ್ಲಿ ಬಹುಮತೀಯ ಸರಕಾರದ ನೇತಾರರು. ಅವರನ್ನು ಸಿಂಡಿಕೇಟು, ಭಾರತೀಯ ಕ್ರಾಂತಿದಳ ಮೊದಲಾಗಿ ಕೆಲವಾರು ಪಕ್ಷಗಳೂ ಬೆಂಬಲಿಸಿದ್ದುವು. ಹಾಗಿರುವಾಗ....?"

'ಅದು ಸರೀನ್ನ...."

'ಮತ್ತೆ ಅವರೀಗ ಮೂರು ತಿಂಗಳ ಮುಖ್ಯಮಂತ್ರಿ. ಅವರು ಸೋಲುವುದು ಅಂದರೆ, ಸರಕಾರವೇ ಸೋತಂತಾಗಲಿಲ್ಲವೆ?'

'ಚುನಾವಣೆಗೆ— ನಿಂತದ್ದು ಅವರು; ಸೋತದ್ದು ಅವರು. ವಿಧಾನ ಸಭೆಯಲ್ಲಿ ಬಹುಮತ ಅವರಿಗಿತ್ತು ತಾನೆ?"

'ಆದರೂ ಜನ ತ್ಯಜಿಸಿದ ವ್ಯಕ್ತಿ ಮುಖ್ಯಮಂತ್ರಿಯಾಗಿ ಮುಂದುವರಿಯುವುದು ಒಳ್ಳೆಯದಲ್ಲ."

'ಅದಕ್ಕೇನಾಗಬೇಕು? ಇನ್ನೊಂದು ಉಪ ಚುನಾವಣೆಯಲ್ಲಿ ಮತ್ತೆ ಸ್ಪರ್ಧಿಸಿ ಅದೃಷ್ಟ ಪರೀಕ್ಷೆ ಮಾಡಿಕೊಂಡರಾಯ್ತು. ಇಲ್ಲ ವಿಧಾನ ಪರಿಷತ್ತು ಇದೆ ತಾನೆ?"

'ಅದೇನೇ ಇರಲಿ, ಆದರೂ....'

"ನೋಡೋಣ, ಸಂಯುಕ್ತರಂಗದ ಸಮನ್ವಯ ಸಮಿತಿ ಯಾವ ಸಲಹೆ ಅವರಿಗೆ ನೀಡುತ್ತದೆಂದು...."

'ಮತ್ತೊಂದು ಸಂಗ್ತಿ ಅಂದ್ರೆ ಸಿಂಗರನ್ನು ಸೋಲಿಸಿದವರು ಇಂಡಿಕೇಟಿಗರು....'

'ಹೌದು ..'

"ಹದಿನಾರು ಸಾವಿರಕ್ಕೂ ಮಿಕ್ಕಿದ ಬಹುಮತದಿಂದ....'

"ಹೌದು ..."

"ಆದ್ದರಿಂದ ಉ.ಪ್ರ.ದಲ್ಲಿ ಇಂಡಿಕೇಟ್ ಶಕ್ತಿ ಬೆಳೆಯುತ್ತಿದೆ ಎಂದು ಹೇಳಿದರೆ ತಪ್ಪಲ್ಲ....'

"ಹೇಳುವುದಕ್ಕೇನು? ಎಲುಬಿಲ್ಲದ ನಾಲಿಗೆ ಬೇರೆ. ಆದರೆ ನೋಡು, ಪಕ್ಷಗಳ ಬಲಸಂವರ್ಧನೆಯ ವಿಷಯವನ್ನು ಸ್ಥಾಲೀ ಪುಲಾಕನ್ಯಾಯದಿಂದ ನಿರ್ಧರಿಸಲಾಗದು.

"ಯಾಕೆ ಹಾಗಂತೀರಿ?"

"ಚುನಾಯಿತ ಪ್ರತಿನಿಧಿಗಳೇ ಬೇರೆ ಬೇರೆ ಆಶೆ–ಆಮಿಷಗಳಿಗೆ ಬಲಿಯಾಗಿ ದಿನ ಬೆಳಗಾಗುವುದರೊಳಗೆ ಪಕ್ಷಾಂತರ ಮಾಡುತ್ತಿರುವ ಸಮಯವಿದು. ಇದರಲ್ಲಿ ಮತದಾರರದೇನು ತಪ್ಪು?"

'ಶ್ರೀ ಸಿಂಗರ ಪರಾಜಯಕ್ಕೆ ಜಾತೀಯ ವಾತ್ಸಲ್ಯವೇ ಕಾರಣವೆಂದು ಹೇಳುತ್ತಾರೆ.'

'ಇರಬಹುದು. ಆದರೆ, ಜಾತ್ಯತೀತತೆಯ ಸಂರಕ್ಷಣೆಯು ತಮ್ಮದೇ ಗುತ್ತಿಗೆಯೆಂದು ಬಂಬಡಿ ಬಾರಿಸುವ ಇಂಡಿಕೇಟಿಗರೂ ಜಾತೀಯತೆಗೆ ಶರಣಾದರೆಂದ ಹಾಗಾಯಿತು.'

'ಅಲ್ಲಾರಿ, ಮತ್ತೇನ್ಗದು? ಚುನಾವಣೆಗೆ ಅಭ್ಯರ್ಥಿಗಳನ್ನು ಆಯುವಾಗಲೇ ಈ ವಿಷಸರ್ಪ ಹೆಡೆ ಬಿಚ್ಚುತ್ತದೆ.'

"ಸರ್ಪಕ್ಕೆ ಎಲ್ಲರೂ ಹೆದರುತ್ತಾರೆ."

'ಅದಕ್ಕೇ ಹಾಲೆರೆಯುತ್ತಾರೆ; ಸುತ್ತು ಬರುತ್ತಾರೆ, ನಮಸ್ಕಾರ ಮಾಡುತ್ತಾರೆ.'

"ಹ್ಞಂ."

'ಅಂದ್ರೆ, ಶ್ರೀ ಸಿಂಗರ ಸೋಲಿನಿಂದ ಇಂಡಿಕೇಟು ಪ್ರಬಲವಾಗುತ್ತದೆ ಎಂದು ಸಿದ್ಧವಾಗುವುದಿಲ್ಲ ಅನ್ನುತ್ತೀರಾ?'

"ಯಾಕೆ ಹಾಗೆನ್ನ ಬೇಕು? ಕೆಲಕೆಲವೆಡೆ ಕೆಲಕೆಲವರು ಬಲವಾಗುತ್ತ ಹೋಗುತ್ತಾರೆ. ಕೆಲವರು ದುರ್ಬಲರಾಗುತ್ತಾರೆ. ಏರಿದವನು ಇಳಿಯುವುದೂ ಬಿದ್ದವನು ಏಳುವುದೂ ಪ್ರಕೃತಿ ಸಹಜತಾನೆ?"

"ಅದು ಸರೀನ್ನಿ."

"ಮತ್ತೆ ನೋಡು, ಕರ್ನಾಟಕದಲ್ಲಿ ಇಂಡಿಕೇಟು ಬಲವಾಗಿದೆ ಅಂದವರು ಜಮಖಂಡಿಯಿಂದ ಪಾಠ ಕಲಿತುಕೊಳ್ಳಬೇಕಾದೀತು."

"ಯಾಕೆ ಹಾಗಂತೀರಿ?"

'ಇಂಡಿಕೇಟ್ ಅಭ್ಯರ್ಥಿಯನ್ನು ಸಿಂಡಿಕೇಟ್ ಅಭ್ಯರ್ಥಿ ಸೋಲಿಸಿದ್ದು ಕಡಿಮೆ ಮಹತ್ವದ್ದಲ್ಲ."

"ಆದರೆ, ಬೆಂಗಳೂರಲ್ಲಿ?"

'ನೋಡಮ್ಮ ನೋಡು. ರಾಜ್ಯಕಾರಣಿಯನ್ನು, ಅದರಲ್ಲೂ ಶ್ರೇಷ್ಠ ಮಟ್ಟದ ರಾಜ್ಯಕಾರಣಿಯನ್ನು ಅದಕ್ಕಿಂತಲೂ ಶ್ರೇಷ್ಠ ಮಟ್ಟದ ಸಾಹಿತ್ಯಕಾರರು ಎದುರಿಸಲಿದ್ದಾರೆ.'

"ಅಂದರೆ?"

'ಇಂಡಿಕೇಟಿನಿಂದ ಮಾಜಿ ಮುಖ್ಯಮಂತ್ರಿ, ಮಾಜಿ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಮತ್ತು ಹಾಲಿ ಕೇಂದ್ರ ನ್ಯಾಯಾಂಗ ಸಚಿವ ಶ್ರೀ ಕೆಂಗಲ್ಲರನ್ನು ಶ್ರೇಷ್ಠ ಕವಿ, ಶಿಕ್ಷಕ ಶ್ರೀ ವಿ. ಗೋಪಾಲಕೃಷ್ಣ ಅಡಿಗರು ಎದುರಿಸುತ್ತಾರೆ.'

"ಇದು ಭಾರೀ ತಮಾಷೆ"

'ತಮಾಷೆಯೇನು ಬಂತು?'

'ರಾಜ್ಯಕಾರಣಕ್ಕೂ ಸಾಹಿತ್ಯಕ್ಕೂ ಏನು ಸಂಬಂಧ?'

'ಭಾರೀ ಸಂಬಂಧವಿದೆ. ರಾಜ್ಯಕಾರಣಿಗಳಿಗೆ ಸಾಹಿತ್ಯದ ಜ್ಞಾನ ಅಗತ್ಯ ಬೇಕೇ ಬೇಕು. ರಾಜ್ಯಕಾರಣಿಯ ಕತ್ತಿಗಿಂತ ಕವಿಯ ಲೆಖ್ಖಣಿಕೆ ಶಕ್ತಿಶಾಲಿಯೆಂದು ಇತಿಹಾಸ ಸಾರಿದ್ದುಂಟು.

'ಹ್ಞಂ. ಇದು ದೀಪಕೀಟ ನ್ಯಾಯವಾಯ್ತು.'

"ಹಾಗಲ್ಲಮ್ಮ. ಇದು ಗರುಡ ದೀಪ ನ್ಯಾಯವೇಕಾಗಬಾರದು? ಬಲೆಯನ್ನು ಇಲಿ ಕಡಿಯುವುದಿಲ್ಲವೆ, ಹಾಗೆ."

'ಅದು ಸರೀನ್ನಿ. ಮೊಲವನ್ನೂ ಆಮೆ ಸೋಲಿಸಲು ಶಕ್ತವಾದಂತೆ. ಕಳೆದ ಬಾರಿ ತಿರುಕಾಮರಾಜರನ್ನು ವಿದ್ಯಾರ್ಥಿಯೊಬ್ಬನು ಸೋಲಿಸಿದಂತೆ....'

"ನೋಡು, ಇಂದಿನ ರಾಜ್ಯಕೀಯ ಜನರು ತಮ್ಮ ಸ್ಥಾನಮಾನ ಸಂಪತ್ತುಗಳ ಬಗ್ಗೆ ತೀವ್ರ ಎಚ್ಚರಾಗಿದ್ದಾರೆ ಮಾತ್ರ. ಜನತೆಯ ಬಗ್ಗೆ ಕಾಳಜಿಯೇನೂ ಇಲ್ಲ. ಆದುದರಿಂದ ರಾಜ್ಯಕೀಯ ರಾಡಿಯಿಂದ ಬೆಂಗಳೂರು ಜನ ಎಷ್ಟು ಬೇಸತ್ತಿದೆಯೆಂದರೆ, ಕಾರ್ಪೊರೇಶನ್ ಚುನಾವಣೆಯಲ್ಲಿ ಮತ ಚಲಾಯಿಸಲೂ ಒಪ್ಪಲಿಲ್ಲ. ಅಂಥವರಿಗೆ ಈಗ ಸುವರ್ಣಾವಕಾಶ.ದಂಡ ಶಕ್ತಿ ಮೇಲೋ ಸಾಹಿತ್ಯ ಶಕ್ತಿ ಮೇಲೋ ಎಂಬುದನ್ನು ನಿರ್ಧರಿಸುವ ಈ ಸದವಕಾಶವನ್ನು ಅವರು ವ್ಯರ್ಥಕಳೆದುಕೊಳ್ಳಲಾರರು.'

"ಅದು ಸರೀನ್ನಿ. ಆದರೆ ನನಗೊಂದು ಸಂದೇಹ...."

"ನೋಡು, ಅಂಥಾ ಸಂದೇಹವನ್ನೂ ಚುನಾವಣಾ ಪೂರ್ವಸಂಧ್ಯೆಯಲ್ಲಿ ಪಡಬಾರದು. ಒಳ್ಳೆತನ್ನೇ ಹಾರೈಸೋಣ...."

"ಹ್ಞಂ. ಇದು ಆಜ್ಞೆ...."

"..............."

—ಗೋರಾ.

ಎಂ. ಜಿ. ಎಂ. ಕಾಲೇಜು ವರ್ಧಂತಿ.

ತಾ. 22-1-1971ರಂದು ಎಂ. ಜಿ. ಎಂ. ಕಾಲೇಜಿನ ವರ್ಧಂತ್ಯುತ್ಸವದ ಅಧ್ಯಕ್ಷತೆ ವಹಿಸಿದ್ದ ಸಿಂಡಿಕೇಟ್ ಬೇಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈ ಅವರು ನಮ್ಮ ಜನತೆ ಈಗ ನಿಷ್ಕ್ರಿಯವಾಗಿದೆ ಎಂದೂ, ನಾವು ಕೈಕೆಸರು ಮಾಡಲು ಹಿಂಜರಿದರೂ ಸುಖ ಸಂಪತ್ತುಗಳನ್ನು ಅಪೇಕ್ಷಿಸುತ್ತೇವೆಂದೂ ಹೇಳಿದರು. ಇಂದೀಗ ಗಾಂಧೀಜಿ ಆದರ್ಶಗಳನ್ನು ಜನತೆ ಮರೆತಿರುವಾಗ ಇಂದಿನ ಯುವಕರಿಗೆ ಅವರ ಆದರ್ಶಗಳನ್ನು ನೆನಪಿಸಲು ರಾಜ್ಯದಲ್ಲೇ ಶ್ರೇಷ್ಠವೆನಿಸಿದ ಎಂ. ಜಿ. ಎಂ. ಕಾಲೇಜು ಶ್ರಮವಹಿಸುತ್ತಿರುವುದಕ್ಕೆ ಸಂತೋಷ ಸೂಚಿಸಿದರು.

ಆರಂಭದಲ್ಲಿ ಕೆ. ಆರ್. ಶ್ರೀಕಂಠಯ್ಯನವರು ಸ್ವಾಗತಿಸಿದರು. ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ ಅವರು ವರದಿಯನ್ನೋದಿದರು. ಶ್ರೀ ಕೆ. ರಮೇಶ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಚಂದಾ ಹಣ ಬಾಕಿ ಇರುವವರು ದಯವಿಟ್ಟು ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸ ಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ಪುತ್ತೂರು IInd Addl. ಮುನ್ಸಿಫ್ ಕೋರ್ಟಿನಲ್ಲಿ

Ex.c. 110/70 (O S. 583/63)

ನಾರಾಯಣ ಶೆಟ್ಟಿ —ಅರ್ಜಿದಾರ

ಹಸನಬ್ಬ ಯಾನೆ ಅಬ್ಬು ಸಹಾ—ಎದುರು ಕಕ್ಷಿ ಎದ್ರು:- ಅಸಿಯಾ, ಬೋಳ್ವಳ್ಳಿ ಬ್ಯಾರಿಯ ಮಕ್ಕಳು—ಕೆದಿಲ ಗ್ರಾಮ.

ಸದ್ರಿ ಕಕ್ಷಿ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಈ ಅಮಲ್ದಾರಿಯಲ್ಲಿ ದಾಖಲಾದ ಯೋಗ್ಯ ಇಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸುವ ನೋಟೀಸಿನ ಬಗೆ ತಾ. 9-2-71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉಜ್ರುಹೇಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರು ಮಾಡಿ ಯುಕ್ತ ಕ್ರಮ ತೀರ್ಮಾನಿಸಲಾಗುವುದು

Sd/- M. Rammohan Rao,

Advocate for Petitioner.

Puttur. 28—1—71

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ. ಕ.

ಭಾರತದಲ್ಲಿ ವಿಸ್ತೃತ ಸಂಪರ್ಕ ಸಾಧನಗಳು

ಭಾರತದಲ್ಲಿ ಸ್ವಾತಂತ್ರ್ಯಾನಂತರ ಸಂಪರ್ಕ ಸಾಧನಗಳು ಬಹು ವಿಸ್ತೃತವಾಗಿ ಬೆಳೆದಿವೆ.

ನಮ್ಮ ದೇಶದ ಅಂಚೆ ವ್ಯವಸ್ಥೆ ಬಹುಶ: ಪ್ರಪಂಚದಲ್ಲಿಯೇ ಅತಿದೊಡ್ಡದು. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಅಂಚೆಕಚೇರಿಗಳು ಐದುಪಟ್ಟು ಹೆಚ್ಚಾಗಿವೆ. 1960ರಲ್ಲಿ 70.713 ಅಂಚೆಕಚೇರಿಗಳಿದ್ದರೆ, ಜುಲೈ1, 1970ರಲ್ಲಿ ಇದ್ದ ಅಂಚೆ ಕಚೇರಿಗಳ ಸಂಖ್ಯೆ 105433.

ದೇಶದ ಹಲವೆಡೆಗಳಲ್ಲಿ ಸಂಚಾರೀ ಅಂಚೆಕಚೇರಿಗಳೂ, ರಾತ್ರಿ ಅಂಚೆಕಚೇರಿಗಳೂ ಕೆಲಸ ಮಾಡುತ್ತಿವೆ. ಕಾಶ್ಮೀರದ ಜೇಲಂ ನದಿಯಲ್ಲಿ ದೋಣಿಯ ಮೇಲೆಯೆ ಕೆಲಸ ಮಾಡುವ ಅಂಚೆಕಚೇರಿಯೊಂದಿದೆ.

ಈಗ ದೇಶದಲ್ಲಿ ಸುಮಾರು ಹದಿನೈದು ಸಾವಿರ ಟೆಲಿಗ್ರಾಫ್ ಕಚೇರಿಗಳು ಕಾರ್ಯ ಮಾಡುತ್ತಿವೆ.

1947ರಿಂದ ದೇಶದಲ್ಲಿ ಎಕ್ಸ್‌ಚೇಂಜ್ ಹಾಗು ಟೆಲಿಫೋನ್‌ಗಳ ಸಂಖ್ಯೆ ಹತ್ತು ಪಟ್ಟು ಹೆಚ್ಚಾಗಿವೆ. ಮಾರ್ಚ್ 31, 1970ರ ವೇಳೆಗೆ ನಮ್ಮಲ್ಲಿದ್ದ ಟೆಲಿಫೋನ್‌ಗಳು 11.75 ಲಕ್ಷ. ಡಿಸೆಂಬರ್ 31 1969ರಲ್ಲಿ ದೇಶದಲ್ಲಿ ಒಟ್ಟು 12011 ಟೆಲಿಪ್ರಿಂಟರುಗಳು ಕೆಲಸಮಾಡುತ್ತಿದ್ದವು. ಇದರಲ್ಲಿ ದೇವನಾಗರಿ ಲಿಪಿಯ ಕೀ ಬೋರ್ಡ್ ಇದ್ದ 600 ಟೆಲಿಪ್ರಿಂಟರುಗಳೂ ಸೇರಿವೆ. ಏಳುಸಾವಿರ ಲೈನುಗಳ ಸಾಮರ್ಥ್ಯ ಪಡೆದ 30 ಟೆಲೆಕ್ಸ್ ಎಕ್ಸ್‌ಚೇಂಜ್‌ಗಳು ನಮ್ಮಲ್ಲೀಗ ಕೆಲಸ ಮಾಡುತ್ತಿವೆ. ಮದ್ರಾಸಿನಲ್ಲಿರುವ ಹಿಂದುಸ್ತಾನ್ ಟೆಲಿಪ್ರಿಂಟರ್ಸ್ ಲಿಮಿಟೆಡ್ ಕಾರ್ಖಾನೆಯು ಟೆಲಿಪ್ರಿಂಟರುಗಳನ್ನು ಹಾಗು ಅದಕ್ಕೆ ಸಂಬಂಧಿಸಿದ ಸಹಾಯಕ ಉಪಕರಣಗಳನ್ನೂ ತಯಾರಿಸುತ್ತದೆ. 1969—70ರಲ್ಲಿ ಈ ಕಾರ್ಖಾನೆಯು 5310 ಟೆಲಿಪ್ರಿಂಟರ್ ಯಂತ್ರಗಳನ್ನು ತಯಾರಿಸಿದೆ. 1964—65ರಲ್ಲಿ ಈ ಕಾರ್ಖಾನೆಯನ್ನು ಸ್ಥಾಪಿಸಲಾಯಿತು.

ಪ್ರಸ್ತುತ ವರ್ಷದ ಯೋಜನಾ ಅವಧಿಯಲ್ಲಿ ಕೋ ಎಕ್ಸಲ್ ಕೇಬಲನ್ನು 13,000 ಕಿಲೋಮೀಟರ್ ಹಾಗೂ ಮೈಕ್ರೋವೇವ್ ಪದ್ಧತಿಯ ಮಾರ್ಗವನ್ನು 4,000 ಕಿಲೋಮೀಟರ್ ಉದ್ದದಷ್ಟು ಬೆಳೆಸಲು ಯೋಜಿಸಲಾಗಿದೆ.

ಭಾರತದ ಸಾಗರೋತ್ತರ ಟೆಲಿ ಕಮ್ಯುನಿಕೇಶನ್ ಸೇವೆಯು ಹೊಸ ದಿಗಂತದ ಅಂಚಿನಲ್ಲಿದೆ.

ಪುಣೆಯ ಹತ್ತಿರದ ಆರ್ವಿ ಎಂಬ ಸ್ಥಳದಲ್ಲಿ ಟೆಲಿ ಕಮ್ಯುನಿಕೇಶನ್ನಿಗೆ ಸಂಬಂಧಿಸಿದ ಭೂನಿಲ್ದಾಣ ರಚನೆಯು ಮುಕ್ತಾಯದ ಹಂತದಲ್ಲಿದೆ.

ಮದ್ರಾಸಿನ ಹಿಂದುಸ್ಥಾನ್ ಟೆಲಿಪ್ರಿಂಟರ್ಸ್ ಲಿ. ಕಾರ್ಖಾನೆಯ ಟೆಲಿಪ್ರಿಂಟರ್ ಮತ್ತು ಅದಕ್ಕೆ ಸಂಬಂಧಿಸಿದ ಸಹಾಯಕ ಉಪಕರಣಗಳನ್ನು ತಯಾರಿಸುತ್ತಿದೆ.

ಬೆಂಕಿ

ನೋಡು ಬಂದಿಹುದು ಬೆಟ್ಟದ ಬೆಂಕಿ
ಹಚ್ಚಿ ಇಟ್ಹಾಂಗೆ ಕಾರ್ತೀಕ ಪಂಕ್ತಿ.

ಉರಿಯು ನೆಗೆದೆದ್ದು ಮೇಲಕ್ಕೆ ಮೇಲೆ
ಕರೆಯುತಿಹುದೇನೊ ಮೋಡದ ಸಾಲೆ;

ಓಹೊ ಬರುತಿಹುದು ನಿಶೆಯೊಡತಿ ತೇರು
ಅದಕೆ ಕೈಮುಗಿದು ನಿಂತಿಹುದು ಊರು!

ಸಂಜೆ ಸುಳಿದಿತ್ತ ಸೆರಗನ್ನೆ ಹಾಸಿ
ತಾರೆ ಬೆಂಡೋಲೆ ನಸುನಗುವ ಸೂಸಿ

ಹುಲ್ಲು ಹಸುರೆಲ್ಲ ಬೆಂಕಿಗೆ ಸಿಕ್ಕು
ಕರೆದು ಕಣ್ಣೀರ ಕಾಣಿಕೆ ಕೊಟ್ಟು

ಸುಟ್ಟು ನೆಲಮುಗಿಲ ನಡುವೆಲ್ಲ ಬೂದಿ
ಅಯ್ಯೊ ನಿನಗೆಲ್ಲಿ ಉಳಿದೀತು ಹಾದಿ?

ಬೆಂಕಿ ಆರಿರಲು ಚಿಗುರದೆ ಹಸಿರು
ಮರಳಿ ಬಂದ್ಹಾಂಗೆ ಜೀವದ ಉಸಿರು!

—ಗೋಪಾಲಕೃಷ್ಣ ಹೆಗಡೆ

ಸ್ತ್ರೀ ಪುರುಷರಿಬ್ಬರೂ ಸಮಾನರಿದ್ದರೆ ಇಬ್ಬರ ಜೊತೆಯಿಂದಲೇ ಸಮಾಜ ರಥವು ನಡೆಯುತ್ತದೆ. ಮಾನವ ಧರ್ಮ ಜೀವನದಲ್ಲಿ ಉಭಯರೂ ಸಹಧರ್ಮಚಾರಿಗಳಾಗಿದ್ದಾರೆ. ಆದ್ದರಿಂದ ಭೋಗ ಮತ್ತು ಪಾಪ ಆದಾಯದ ಸಲುವಾಗಿ ಸ್ತ್ರೀ ಪುರುಷರು ತಮ್ಮ ಸಂಬಂಧವನ್ನು ಉಪಯೋಗಿಸಬಾರದು.

ಂ ಂ ಂ

ಸಾಂದ್ರ ಬೇಸಾಯಕ್ಕೆ ವಿಸ್ತೃತ ಯೋಜನೆ

ಕೃಷಿ ಕ್ಷೇತ್ರದಲ್ಲಿ ಗುರಿ ಮೀರಿದ ಸಾಧನೆ ರಾಜ್ಯದ ಅಭಿಮಾನ್ಯ ನಾಲ್ಕನೆಯ ಯೋಜನೆಯಲ್ಲಿ ಕೃಷಿ ಸೇವೆಯನ್ನು ಮತ್ತಷ್ಟು ಸಾಂದ್ರಗೊಳಿಸುವ ಪ್ರಯತ್ನ. ಈ ಉದ್ದೇಶಕ್ಕಾಗಿ **24** ಕೋಟಿ ರೂಪಾಯಿ ವೆಚ್ಚಕ್ಕೆ ಅವಕಾಶ.

ಕೈಗೊಳ್ಳಲಿರುವ ನಾನಾ ಸಾಂದ್ರ ಕಾರ್ಯಕ್ರಮಗಳ ಫಲವಾಗಿ ರಾಜ್ಯದ ಆಹಾರ ಉತ್ಪಾದನೆ **62** ಲಕ್ಷ ಟನ್ನುಗಳಿಗೆ ಮುಟ್ಟುವ ನಿರೀಕ್ಷೆ ಇದೆ. ಅಧಿಕ ಇಳುವರಿ ತಳಿಗಳ ಕೃಷಿಗೆ ಈ ಒಳಪಟ್ಟಿರುವ **2·98** ಲಕ್ಷ ಹೆಕ್ಟೇರು ವಿಸ್ತೀರ್ಣ **5·8** ಲಕ್ಷ ಹೆಕ್ಟೇರುಗಳಿಗೆ ವ್ಯಾಪಿಸುವ ಗುರಿ.

ಕೃಷಿ ಅಭಿವೃದ್ಧಿಯ ಯೋಜನಾ ವೆಚ್ಚದಲ್ಲಿ ಸುಧಾರಿಸಿದ ಬೀಜ, ರಸಾಯನಿಕ ಗೊಬ್ಬರ, ಸಸ್ಯ ಸಂರಕ್ಷಣೆ, ಕೃಷಿ ಉಪಕರಣಗಳು, ವ್ಯವಸಾಯ ಶಿಕ್ಷಣ— ಇತ್ಯಾದಿ ಕಾರ್ಯಕ್ರಮಗಳ ವೆಚ್ಚದ ಪಾಲು **18·85** ಕೋಟಿ ರೂಪಾಯಿಗಳು.

(ಮೈಸೂರು ಸರಕಾರದ ವಾರ್ತಾ ಮತ್ತು ಪ್ರಚಾರೋದ್ಯಮ ಇಲಾಖೆಯಿಂದ ಪ್ರಕಟಿತ)

ಚುನಾವಣೆಗೆ ಮೊದಲು

ನಾಗಾಲೋಟಕಿತ್ತ ಇಂಡಿಕೇಟ್ ಕುದುರೆ

ಕಾಂಗ್ರೆಸ್ ಪಕ್ಷದ ವಿಭಜನೆಗೆ ಶ್ರೀಮತಿ ಇಂದಿರಾ ಗಾಂಧಿಯವರೂ ಉನ್ನತ ಪಟ್ಟದಲ್ಲಿರುವ ಅವರ ಬೆರಳೆಣಿಕೆಯ ಮಿತ್ರಶತ್ರುವರ್ಗದವರೂ ಮುಖ್ಯ ಕಾರಣರೆಂಬುದು ಲೋಕಕ್ಕೆ ಗೊತ್ತು. ಇವರಿಗೆ ಒತ್ತಾಸೆ ನೀಡಿದವರೂ ಕೆಲವರಿದ್ದಾರೆ. ಇವರಲ್ಲಿ ತಮಿಳುನಾಡಿನ ದ್ರಾಮುಕದ ಅಗ್ರನಾಯಕರು ಮುಖ್ಯರು. ಕಾಂಗ್ರೆಸ್ಸಿನ ಉನ್ನತ ಹುದ್ದೆಗಳಲ್ಲಿದ್ದು ಕಾರಣಾಂತರಗಳಿಂದ ಪತಿತರಾಗಿ ಪ್ರತ್ಯೇಕ ಪಕ್ಷ-ಪಂಗಡ ಕಟ್ಟಿಕೊಂಡವರೂ ಇವರ ಹಿಂದೆ ಇದ್ದರು. ಅಂಥವರೆಲ್ಲ ಶ್ರೀಮತಿ ಗಾಂಧಿಗೆ ಬೆಂಬಲ ನೀಡಲು ಮುಂದಾಗುವ ಭರವಸೆ ಕೊಟ್ಟದ್ದರಿಂದ "ಡಿಲ್ಲಿ ಸರ್ಕಸ್" ಕುತೂಹಲಕಾರಿಯಾಗಿ ನಡೆಯಿತು.

ತಂದೆಯನ್ನೂ ಮೀರಿಸಿದ ರಾಜ್ಯಕಾರಣಿ ಶ್ರೀಮತಿ ಗಾಂಧಿಯವರು. ಆಕೆಯ ತಂದೆ ಜನತೆಯ ಮುಂದೆ ಮಣಿಯುತ್ತಿದ್ದರು. ಆದರೆ, ಆಕೆ, ತಾನು ಮತ್ತು ತನ್ನ ಬೆಂಬಲಿಗರು ಮಾತ್ರ ಜನತೆಯೆಂದು ದೃಢವಾಗಿ ನಂಬಿದ್ದಾರೆ ಶ್ರೀ ಸಾಮಾನ್ಯನನ್ನು ಹೋದಲ್ಲೆಲ್ಲ ಹೊಗಳುತ್ತ ಆತನ ಉದ್ಧಾರಕ್ಕಾಗಿಯೇ ತನ್ನ ಅವತಾರವಾಗಿದೆಯೆಂಬ ಭ್ರಮೆ ಹುಟ್ಟಿಸುತ್ತಿದ್ದಾರೆ. ಕಾಂಗ್ರೆಸ್‌ನ ಒಂದು ಬಣವನ್ನು ಕಂಡರಾಗದ ಉಳಿದ ರಾಜ್ಯಕೀಯ ಪಕ್ಷಗಳಲ್ಲಿ ಕೆಲವು ಶ್ರೀಮತಿ ಗಾಂಧಿಯೊಡನೆ ಸರಸವಾಡಿ ತಮ್ಮ ಸ್ವಾರ್ಥ ಸಾಧನೆಯಲ್ಲಿ ಯಶಗಳಿಸಬಹುದೆಂದು ನಂಬಿದುವು. ಆದರೆ, ಶ್ರೀಮತಿ ಗಾಂಧಿ ಮತ್ತಿತರ ಮೈತ್ರಿ ದೀಪ—ಶಲಭನ್ಯಾಯದಂತಾಗುವುದೆಂಬ ಸತ್ಯವೀಗ ವ್ಯಕ್ತವಾಗಿದೆ.

ಕೇರಳದ ವಿಧಾನ ಸಭೆಗೆ ನಡೆದ ಮಧ್ಯಾವಧಿ ಚುನಾವಣೆಗಳಲ್ಲಿ ಶ್ರೀಮತಿ ಗಾಂಧಿಯವರು ಮೈತ್ರಿಯ ಬಲೆಯನ್ನು ಬೀಸಿದರು. ಈ ಬಲೆಯ ಹೆಸರು ಏನಾದರೂ ಇರಲಿ, ಅದರಲ್ಲಿ ಬಲಕಮ್ಯೂನಿಸ್ಟರನ್ನೂ ಮುಸ್ಲಿಂಲೀಗಿಗಳನ್ನೂ ಮತ್ತಿತರ ಕೆಲವು ಮಿತ್ರರಲ್ಲೂ ಸಿಕ್ಕು ಹಾಕಿದರು. ಚುನಾವಣಾ ಫಲಿತಾಂಶ ಪ್ರಕಟಗೊಂಡಾಗ ಶ್ರೀಮತಿ ಗಾಂಧಿಯವರ ಚಾಣಕ್ಯ ನೀತಿಯು ಜಗಜ್ಜನಿತವಾಯ್ತು. ಅಚ್ಯುತ ಮೆನನ್ನರು ಪಾತಾಳಕ್ಕೆ ಇಳಿದುಹೋದರು ಆದರೂ ಅಧಿಕಾರದಲ್ಲಿ ಮುಂದುವರಿಯಬೇಕಾದರೆ, ಅದೇ ಬಲೆಯಲ್ಲಿ ನರಳಾಡುತ್ತಲೇ ಇರಬೇಕಾಯ್ತು. ಶ್ರೀ ಮೆನನ್ನರು ಶ್ರೀಮತಿ ಗಾಂಧಿಯವರೊಡನೆ ಯೇನಕೇನ ವಿರೋಧ ಕಟ್ಟಿಕೊಂಡರೆ, ಅವರು ಮರುಗಳಿಗೆಯಲ್ಲೇ ಉರುಳಿಬಿಡುತ್ತಾರೆ.

ಈ ಕಾರಣದಿಂದಲೇ ಲೋಕಸಭೆಯ ಚುನಾವಣೆಗಳಲ್ಲಿ ಹೊಂದಾಣಿಕೆಯ ಮಾತುಗಳು ಮುಂದೆ ಬಂದುವು. ಅದು ಸಾಧ್ಯವೆಂದೂ ಅನಿಸಿತು. ಆದರೆ, ಕೊನೆಯ ಗಳಿಗೆಯಲ್ಲಿ ಅದು ಬಿದ್ದೂ ಹೋಯಿತು. ಇದಕ್ಕೆ ಕಾರಣವೂ ಸ್ಪಷ್ಟ. ಕಮ್ಯೂನಿಸ್ಟ್ ಮತ್ತು ಮುಸ್ಲಿಂ ಲೀಗುಗಳೊಂದಿಗೆ ಮೈತ್ರಿ ಸಾಧಿಸಿದ್ದ ಇಂಡಿಕೇಟು ಪ್ರಬಲ ಟೀಕೆಗಳನ್ನು ಎದುರಿಸಬೇಕಾಯ್ತು. ಇದಕ್ಕಿಂತ ಹೆಚ್ಚಾಗಿ ಇಂದು ಕೇರಳ ಸರಕಾರದ ಆಯುಷ್ಯ ಬರೆಯುವ ಲೆಖ್ಖಣಿಕೆ ತನ್ನ ಕೈಯಲ್ಲೇ ಭದ್ರವಾಗಿರುವಾಗ, ತಲೆಬಾಗಬೇಕಾದ ಅಗತ್ಯವೇನು? ಹೀಗೆ ಲೋಕಸಭಾ ಚುನಾವಣೆಗಳಲ್ಲಿ ಸ್ವತಂತ್ರವಾಗೇ ಸ್ಪರ್ಧಿಸಿ ತನ್ನ ಬಲಾಬಲಗಳನ್ನು ಅರಿತುಕೊಳ್ಳುವ ಇಚ್ಛೆ ಅದಕ್ಕೆ.

ಈ ಚುನಾವಣೆಗಳಲ್ಲಿ ಇಂಡಿಕೇಟು ಬಲ ಗಳಿಸದೆ ಹೋದರೆ, ಅದಕ್ಕೇನೂ ನಷ್ಟ ಸಂಭವಿಸುವುದಿಲ್ಲ. ಶ್ರೀ ಮೆನನ್ನರ ಸಂಯುಕ್ತರಂಗ ಸಿಂಡಿಕೇಟಿಗೆಂದೂ ಬೆಂಬಲ ನೀಡುವುದಿಲ್ಲ; ತಾನು ಸೋತರೂ ಗೆದ್ದರೂ ಈ ಗುಂಪಿನ ಸಹಾಯ ತನ್ನ ಬೆನ್ನಿಗೆ ಅಂಟಿಕೊಂಡಿರುವಾಗ, ತನ್ನ ಸ್ವಸಾಮರ್ಥ್ಯದ ಪರೀಕ್ಷೆಯೊಂದನ್ನು ಪುಕ್ಕಟೆಯಾಗಿ ಏಕೆ ಮಾಡಬಾರದು? ಅದಕ್ಕೇ ಇಂಡಿಕೇಟೀಗ ಸಿದ್ಧವಾಗಿದೆ.

ಒಂದು ವೇಳೆ ತನ್ನ ಬಲ ಹೆಚ್ಚಿದೆಯೆಂದು ಅದಕ್ಕೆ ಮನವರಿಕೆಯಾದರೆ, ವಿಧಾನ ಸಭೆಗೂ ಚುನಾವಣೆ ನಡೆಸುವ ರಹಸ್ಯ ಆಲೋಚನೆ ಅದರದ್ದು. ಶ್ರೀ ಮೆನನ್ನರನ್ನು ಉರುಳಿಸಿ ತಾನೇ ಅಧಿಕಾರ ಪೀಠವೇರುವ ಸಂಚೂ ಅವರದ್ದು. ಆದುದರಿಂದಲೇ ಮೈತ್ರಿ-ಹೊಂದಾಣಿಕೆಗಳ ಸಂಬಂಧದಲ್ಲಿ ತಾನು ಹಿಡಿದ ಪಟ್ಟನ್ನು ಅದು ಬಿಡಲೊಲ್ಲದು. ಮುರಿಯಬೇಕೆಂದೇ ಮಾತುಕತೆ ಆರಂಭಿಸಿದ್ದಾರೆ ಇಂಡಿಕೇಟಿಗರು.

ಇದೇ ನಾಟಕಾಭಿನಯ ತಮಿಳುನಾಡಿನಲ್ಲೂ ನಡೆದಿದೆ. ಶ್ರೀಮತಿ ಗಾಂಧಿಯವರ ಸರಕಾರವನ್ನು ಉರುಳಿಸಬಯಸದ ದ್ರಾಮುಕ ತನ್ನ ನಾಯಕತ್ವದಲ್ಲಿ ಸಂಯುಕ್ತರಂಗವನ್ನು ಕಟ್ಟಿತು. ಇದರಲ್ಲಿ ಇಂಡಿಕೇಟೂ ಮುಸುಡು ತುರುಕಿಸಿತು. ಕೆಲ ನಗರಸಭಾ ಚುನಾವಣೆಗಳಲ್ಲಿ ಅದು ಗೆದ್ದುಬಿಟ್ಟಿತು. ಉಗ್ರ ಸಂಯುಕ್ತರಂಗದ ಬಲದಿಂದ ತನ್ನ ಬಹುಮತವನ್ನು ಉಳಿಸಿಕೊಳ್ಳುವ ಇರಾದೆಯಿಂದ, ಹೊಂದಾಣಿಕೆಯ ವೇಳೆ ತಾವು ಮೊದಲು ಗೆದ್ದ ಕ್ಷೇತ್ರಗಳು ತಮಗೇ ದೊರೆಯುತ್ತವೆಯೆಂಬ ವಿಶ್ವಾಸದಿಂದ ಶ್ರೀ ಕರುಣಾನಿಧಿಯವರು ವಿಧಾನಸಭೆಯನ್ನೂ ವಿಸರ್ಜಿಸಿ ಗೆದ್ದು ಮತ್ತೆ ಅಧಿಕಾರದಲ್ಲಿ ಉಳಿಯಲು ಹವಣಿಸಿದರು. ಆದರೆ, ಅವರ ಈ ಎಣಿಕೆಯ ಲೆಕ್ಕಾಚಾರ ತಲೆಕೆಳಗಾಯ್ತು. ವಿಧಾನ ಸಭೆಯನ್ನು ವಿಸರ್ಜಿಸಿ ತಾವು ಭಾರಿ ತಪ್ಪು ಮಾಡಿದೆವೆಂದವರೀಗ ಪರಿತಪಿಸತೊಡಗಿದ್ದಾರೆ.

ಇಂಡಿಕೇಟು ಇಲ್ಲಿಯೂ ತನ್ನ ರಾಜ್ಯಕೀಯ ಬೇಳೆಯನ್ನು ಬೇಯಿಸಹೊರಟಿತು. ತಮಿಳುನಾಡಿನಲ್ಲಿ ತನ್ನ ಬೇರೂರಲು ಅದು ಕಳೆದೊಂದೂವರೆ ವರ್ಷಗಳಿಂದಲೂ ಮಣ್ಣು ಹದಮಾಡುವುದರಲ್ಲೇ ತಲ್ಲೀನವಾಗಿದೆ. ವಿಧಾನ-ಲೋಕ ಸಭೆಗಳಿಗೆ ಏಕಕಾಲದಲ್ಲಿ ನಡೆಯಲಿರುವ ಚುನಾವಣೆಯ ವೇಳೆಯಾದರೂ ಅದು ಸಾಧ್ಯವಾದೀತೇ ಎಂಬ ಆಶಯ ಅದರದ್ದು. ಕಮ್ಯುನಿಸ್ಟ್-ಮುಸ್ಲಿಂಲೀಗಿಗಳಂತೆಯೇ ದ್ರಾಮುಕವೂ ತನ್ನ ಕೈತಪ್ಪಿ ಹೋಗುವುದಿಲ್ಲವೆಂದು ಅದಕ್ಕೆ ಗೊತ್ತು. ಆದುದರಿಂದ ತಾನು ಇನ್ನೊಂದು ಪರೀಕ್ಷೆ ಮಾಡಿಕೊಂಡರೆ, ಏನೂ ನಷ್ಟವಿಲ್ಲವೆಂದು ಅದರ ಇಂಗಿತ.

ಇದೇ ರೀತಿಯ ಮಾತುಕತೆಗಳು ಒರಿಸ್ಸ, ಬಂಗಾಳಗಳಲ್ಲಿಯೂ ನಡೆದಿವೆ. ಅವೂ ಬಿದ್ದು ಹೋಗುವಂತಹ ಹಂತದಲ್ಲೇ ನಿಂತಿವೆ. ವಿಧಾನಸಭೆಯ ಚುನಾವಣೆಗಳು ಲೋಕಸಭಾ ಚುನಾವಣೆಗೆ ಉಚಿತ ಪ್ರಚಾರ ಸಾಧನಗಳು. ಆದ್ದರಿಂದ ತನ್ನ ಬಲಾಬಲಗಳ ಪರಿಶೀಲನೆಗೆ ಇನ್ನೂ ಕೆಲವು ಕಾಲ ಕಾಯುವುದಕ್ಕೆ ಬದಲು ಇಂದೇ ಸಿದ್ಧವಾಗಲು ಇಂಡಿಕೇಟು ನಿರ್ಧರಿಸಿದ್ದು ಸಹಜನೇ.

ಇದರ ಪರಿಣಾಮವೇನಾಗುತ್ತದೆ? ಇದಕ್ಕೆ ಕೇರಳವನ್ನೇ ಬೊಟ್ಟು ಮಾಡಬಹುದು. ಅತಿಥಿಯಾಗಿ ಬಂದವಳು ಮನೆಯೊಡತಿಯಾಗುತ್ತಾಳೆ. ಅಚ್ಯುತ ಮೆನನ್, ಮಹಮ್ಮದ್ ಕೋಯಾ, ಕರುಣಾನಿಧಿ, ಹರಿಕೃಷ್ಣ ಮೆಹತಾಬ್, ಅಜಯ ಮುಖರ್ಜಿ....ಹೀಗೆ ಬೇರೆ ಬೇರೆ ಘಟಾನುಘಟಿಗಳು ಇಂಡಿಕೇಟನ್ನೇ ಬಲವಾಗಿ ನಂಬಿ ಆಧರಿಸಿದರು; ಆದರೆ, ಈ ಇಂಡಿಕೇಟ್ ಕುದುರೆ ಇವರೆಲ್ಲರನ್ನೂ ಒದ್ದು ಕಡಿವಾಣ ಕಿತ್ತೊಗೆದು ನಾಗಾಲೋಟಕ್ಕೆ ತೊಡಗಿದೆ ಈ ಓಟವನ್ನು ಕಂಡ ಸಿಂಡಿಕೇಟ್ ಅದರ ಕಾಲು ಮುರಿಯಲು ಮುಂದಾಗಿದೆ. ಸಂಯುಕ್ತರಂಗದೊಡನೆ ದೊಣ್ಣೆ ಬೀಸಲು ಸಿದ್ಧವೇನೋ ಆಗಿದೆ. ಆದರೂ ಯಾರು ಯಾವ ಕಾಲಿಗೆ ದೊಣ್ಣೆ ಎಸೆಯಬೇಕೆಂದು ಇನ್ನೂ ನಿರ್ಧಾರವಾಗಿಲ್ಲ. ಈ ಹೊಯ್ದಾಟದಲ್ಲಿ ಒಬ್ಬರ ದೊಣ್ಣೆ ಮತ್ತೊಬ್ಬನಿಗೆ ತಾಗಿ ಅವರವರೇ ಉರುಳಿಬಿದ್ದು, ಕುದುರೆ ಮುಗಿದೋಡುತ್ತದೆಯೆ? ಅಥವಾ ಕುದುರೆಯ ಕಾಲೇ ಮುರಿದು ಮುಗ್ಗರಿಸುತ್ತದೆಯೆ—ಕಾದು ನೋಡಬೇಕು.

ಈ ಇಂಡಿಕೇಟ್ ಕುದುರೆಯನ್ನು ನಂಬಿ ಅದರ ಮೇಲೆ ಸವಾರಿ ಮಾಡುವ ಹೆಬ್ಬಯಕೆಯಿಂದಿದ್ದವರು ಆ ಬಗ್ಗೆ 'ಜಿಯ್ಯೋ ಪಾಠ' ನ್ನಕಲಿಯಬೇಡವೆ?

ಉಡುಪಿ ಶಿವಿಲ್ ಜಡ್ಜರ ಕೋರ್ಟಿನಲ್ಲಿ

S. C. 70/1969.

ಸಿಂಡಿಕೇಟ್ ಬೇಂಕ್ ಮಣಿಪಾಲ —ವಾದಿ

ಮತ್ತು

ಕೃಷ್ಣ ಬಿ. ನಾಯಕ್ ಕೂಡಾ —ಪ್ರತಿವಾದಿರು

೨ನೇ ಪ್ರತಿವಾದಿ—ಭಾಸ್ಕರಶೆಟ್ಟಿ—ಕೊರಪ್ಪ ಶೆಟ್ರ ಮಗ—ಅಲ್ತಾರು ಗ್ರಾಮದ ಪರೀಕಲ್ಲಿ ರುವವರು, ಇವರಿಗೆ—

ಪ್ರತಿವಾದಿರು ವಾದಿ ಬೇಂಕಿಗೆ ತಾರೀಕು ೨೨-11-೬೬ರಲ್ಲಿ ರೂಪಾಯಿ 1000/-ಕ್ಕೆ ಬರೆದುಕೊಟ್ಟ ದಿಮಾಂಡ ನೋಟಿನ ಬಾಬ್ತು ಬಕ್ಕಿ ಅಸಲು ಬಾಕಿ ಬಡ್ಡಿ ಕೂಡಾ ರೂಪಾಯಿ ೬೭೨-00ಕ್ಕೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಸದರಿ ದಾವೆಯು ತಾರೀಕು ೨೨-೨-1971ಕ್ಕೆ ತನಿಕೆ ಬಗ್ಗೆ ಖಯಾಲಾಗಿ ಇದೆ. ಆ ದಿನ್ನ ಸದರಿ 2ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸದಯಿದ್ದರೆ—ಆತನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯ ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಯಪಡಿಸಲಾಗಿಯದೆ.

H. Ramanath Pai
Advocate for Plff

ಉಡುಪಿ, ತಾ. ೨೬-1-1971.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತೆಯ ಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕನ್ನಡ ಸಾಹಿತ್ಯ ಉಗಮಸ್ಥಾನ—
ಗುಲ್ಬರ್ಗ

ಗುಲ್ಬರ್ಗ ಮೈಸೂರು ರಾಜ್ಯಕ್ಕೆ ಹೈದರಾಬಾದ್ ಸಂಸ್ಥಾನದಿಂದ ವಿಲೀನವಾದ ಜಿಲ್ಲೆಗಳಲ್ಲಿ ಒಂದು. ಇದರ ಇತಿಹಾಸ ಕ್ರಿ. ಶ. ಆರನೇ ಶತಮಾನದಿಂದಲೇ ಸುಪ್ರಸಿದ್ಧವಾಗಿದೆ. ಆರನೇ ಶತಮಾನದಿಂದ ಎಂಟನೇ ಶತಮಾನದವರೆಗೆ ಕನ್ನಡದ ಹಿರಿಮೆಯನ್ನು ಬೆಳಗಿದವರು, ಬಾದಾಮಿಯ ಚಾಲುಕ್ಯರು. ಇವರ ಬಳಿಕ ರಾಷ್ಟ್ರಕೂಟರು. ಇವರಲ್ಲಿ ಪ್ರಮುಖನೆಂದರೆ ಕನ್ನಡ ನಾಡಿನ ಉದ್ದಗಲವನ್ನು ಸಾರಿದ ಮೂರನೆಯ ಗೋವಿಂದನ ಮಗ ಅಮೋಘ ವರ್ಷ. ಇವನ ಆಳಿಕೆ ಕರ್ನಾಟಕ ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ. ಇವನೇ ಕ್ರಿ. ಶ. ಒಂಬತ್ತನೇ ಶತಮಾನದಲ್ಲಿ ಕವಿರಾಜಮಾರ್ಗದಂತಹ ಲಕ್ಷಣ ಗ್ರಂಥವನ್ನು ರಚಿಸಿದನೆಂದು ಹೇಳಲಾಗುವ ನೃಪತುಂಗ. ಇವನು 65 ವರ್ಷಗಳ ಕಾಲ ರಾಜ್ಯಭಾರವನ್ನು ಮಾಡಿದನು. ಕನ್ನಡಿಗರು "ಕುರಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್" ಎಂದು ಕನ್ನಡಿಗರ ಜಾಣ್ಮೆಯನ್ನು ನೃಪತುಂಗ ಕೊಂಡಾಡಿದ್ದಾನೆ. ರಾಷ್ಟ್ರಕೂಟರ ಬಳಿಕ ಈ ಪ್ರದೇಶ ತಿರುಗಿ ಚಾಲುಕ್ಯರ ಕೈಸೇರಿ ಆ ಮೇಲೆ ತಘಲಕ್, ಆತನ ಬಳಿಕ ಮಹಮುದ್ ತಘಲಕ್ ಬಳಿಕ ಬಹಮನ್‌ಷಾಹ ಹಾಗೂ ಹೈದರಾಬಾದಿನ ನಿಜಾಮನ ವಶದಲ್ಲಿದ್ದು ಕೊನೆಗೆ ರಾಜ್ಯ ಪುನರ್‌ವಿಂಗಡನೆಯ ಕಾಲದಲ್ಲಿ ಮೈಸೂರು ರಾಜ್ಯದೊಡನೆ ವಿಲೀನವಾಯಿತು.

ಗುಲ್ಬರ್ಗ ಜಿಲ್ಲೆಯ ದಕ್ಷಿಣಕ್ಕೆ ರಾಯಚೂರುಜಿಲ್ಲೆ, ಪೂರ್ವಕ್ಕೆ ಆಂಧ್ರಪ್ರದೇಶದ ಮಹಬೂಬನಗರ ಜಿಲ್ಲೆ, ಉತ್ತರಕ್ಕೆ ಬೀದರ ಮತ್ತು ಮಹಾರಾಷ್ಟ್ರದ ಉಸ್ಮಾನ್‌ಬಾದ್ ಜಿಲ್ಲೆಗಳು, ಮತ್ತು ಪಶ್ಚಿಮಕ್ಕೆ ಬಿಜಾಪುರ ಮತ್ತು ಸೊಲ್ಲಾಪುರ ಜಿಲ್ಲೆಗಳು ಆವರಿಸಿಕೊಂಡಿವೆ. ಈ ಜಿಲ್ಲೆಯ ವಿಸ್ತೀರ್ಣ 6574 ಚ. ಮೈಲಿ. ಇಲ್ಲಿ ಆಳಂದ, ಗುಲ್ಬರ್ಗ, ಚಿಂಚೋಳಿ, ಅಫಜಲಪುರ, ಚಿತಾಪುರ, ಸೇಡಂ, ಶಹಪುರ, ಯಾದಗಿರಿ, ಜೇವರ್ಗಿ, ಸುರಪುರ ಎಂದು ಒಟ್ಟು ಹತ್ತು ತಾಲೂಕುಗಳಿವೆ. ಈ ಜಿಲ್ಲೆಯ ಸುಮಾರು 39,29,947 ಎಕರೆಭೂಮಿಯಲ್ಲಿ 36,24,479 ಎಕರೆಗಳಿಗಿಂತಲೂ ಹೆಚ್ಚು ಭೂಮಿ ಬೇಸಾಯಕ್ಕೆ ಯೋಗ್ಯವಾಗಿದೆ. ಬೇಸಾಯಕ್ಕೆ ಯೋಗ್ಯವಾದ ಭೂಮಿಯ ವಿಸ್ತೀರ್ಣದಲ್ಲಿ ಇಡೀ ಮೈಸೂರುರಾಜ್ಯದಲ್ಲಿ ಈ ಜಿಲ್ಲೆಗೆ ಎರಡನೆಯ ಸ್ಥಾನವಿದೆ.

ಈ ಜಿಲ್ಲೆಯಲ್ಲಿ ಸುಮಾರು 15 ಲಕ್ಷಕ್ಕೂ ಹೆಚ್ಚು ಎಕರೆಗಳಲ್ಲಿ ಜೋಳ ಬೆಳೆಯುತ್ತಿದೆ. ಹೀಗೆ ಸಜ್ಜೆ, ತೊಗರಿ, ನೆಲಗಡಲೆ ಎಂದು ಪ್ರತಿಯೊಂದು ಬೆಳೆಯುವ ವಿಸ್ತೀರ್ಣ ಎರಡರಿಂದ ಎರಡುವರೆ ಲಕ್ಷ ಎಕರೆಗಳಷ್ಟಿದೆ. ಇವನ್ನು ಬಿಟ್ಟರೆ ಸುಮಾರು 1,81,000ಕ್ಕೂ ಹೆಚ್ಚು ಎಕರೆಗಳಲ್ಲಿ ಹತ್ತಿ ಬೆಳೆಯುತ್ತದೆ. ಇಷ್ಟೇ ಅಲ್ಲ ಭತ್ತ, ರಾಗಿ, ಗೋಧಿ, ಕಡಲೆ, ಮೆಣಸಿನಕಾಯಿ, ಹರಳು, ತಂಬಾಕು ಇತ್ಯಾದಿಗಳು ಈ ಜಿಲ್ಲೆಯಲ್ಲಿ ತಕ್ಕಮಟ್ಟಿಗೆ ಬೆಳೆಯುತ್ತವೆ. ಮಳೆ ಕಡಿಮೆಯಿರುವ ಈ ಜಿಲ್ಲೆಯಲ್ಲಿ ಬೇಸಾಯಕ್ಕೆ ನೀರಾವರಿ ಸೌಕರ್ಯಗಳೇ ಅತಿ ಮುಖ್ಯವಾದುದು. ಇಲ್ಲಿ ಸುಮಾರು 60ಕ್ಕೂ ಮಿಕ್ಕಿ ನೀರಾವರಿ ಯೋಜನೆಗಳು ಇವೆ. ಸುಮಾರು 3,900 ಬಾವಿಗಳಿವೆ.

ಶಿಕ್ಷಣ ಕ್ಷೇತ್ರದಲ್ಲಿ ಈ ಜಿಲ್ಲೆ ದಿನ ದಿನ ಅಭಿವೃದ್ಧಿಯಾಗುತ್ತಾ ಬಂದಿದೆ. ಇಲ್ಲೀಗ 75 ಹೈಸ್ಕೂಲುಗಳು, 295 ಮಾಧ್ಯಮಿಕ ಶಾಲೆಗಳು, 1251 ಪ್ರಾಥಮಿಕ ಶಾಲೆಗಳು ಇವೆ. ಅಲ್ಲದೆ, ಲಾ ಕಾಲೇಜು, ಇಂಜಿನೀಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಸಹಿತ ಒಟ್ಟು 11 ಕಾಲೇಜುಗಳಿವೆ. ಇವುಗಳಲ್ಲಿ ಸುಮಾರು ನಾಲ್ಕು ಸಾವಿರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ.

ಈ ಜಿಲ್ಲೆಯ ಜನಸಂಖ್ಯೆಯಲ್ಲಿ ಸುಮಾರು ಎರಡು ಲಕ್ಷದ ಹತ್ತೊಂಭತ್ತು ಸಾವಿರಕ್ಕೂ ಮಿಕ್ಕಿ ಪರಿಶಿಷ್ಟ ವರ್ಗಕ್ಕೆ ಸೇರಿದವರಿದ್ದಾರೆ. ಇವರ ಅಭಿವೃದ್ಧಿಗಾಗಿ ಈ ಜಿಲ್ಲೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇವುಗಳಲ್ಲಿ ವಿದ್ಯಾರ್ಥಿನಿಲಯಗಳು, ಮಕ್ಕಳಿಗೆ ಸಹಾಯಧನ, ಶಿಷ್ಯವೇತನ, ಶಿಶುವಿಹಾರ, ಮಹಿಳಾ ಕಲ್ಯಾಣ ಕೇಂದ್ರ, ಮಧ್ಯಾಹ್ನದ ಉಪಾಹಾರದ ವ್ಯವಸ್ಥೆ ಇತ್ಯಾದಿಗಳು ಮುಖ್ಯವಾಗಿವೆ.

ಸಹಕಾರಿ ಆಂದೋಲನವೂ ಈ ಜಿಲ್ಲೆ ಮುಂದುವರಿಯುತ್ತಿದೆ. ಸಹಕಾರಿ ತರಬೇತಿ ಕೇಂದ್ರ, ಜಿಲ್ಲಾ ಹಾಲಿನ ಪೂರೈಕೆ ಸಂಘ, ಸಗಟು ಗ್ರಾಹಕರ ಸಂಘ, ತಾಲೂಕು ವ್ಯಾಪಾರ ಸಂಘ, ಪರಿಶಿಷ್ಟ ಮತ್ತು ಗುಡ್ಡಗಾಡು ಜನರ ವಸತಿ ಸೌಕರ್ಯದ ಸಂಘ. ಇವೇ ಇದಕ್ಕೆ ಸಾಕ್ಷಿಗಳು ಅಲ್ಲದೆ ಸುಮಾರು 300ಕ್ಕೂ ಹೆಚ್ಚು ಸಹಕಾರಿ ಬೇಸಾಯ ಸಂಘಗಳು ಈ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿವೆ. ಹತ್ತಿ ಒಟ್ಟು ನೇಯುವುದು ಈ ಜಿಲ್ಲೆಯ ಮುಖ್ಯ ಕೈಗಾರಿಕೆಯಾಗಿದೆ. ಅಲ್ಲದೆ ರೇಷ್ಮೆ, ಎಣ್ಣೆ ಕೈಗಾರಿಕೆಗಳು ಈ ಜಿಲ್ಲೆಯಲ್ಲಿ ಮುಂದುವರಿಯುತ್ತಿವೆ.

ಆರೋಗ್ಯ ಕ್ಷೇತ್ರದಲ್ಲಿ ಈ ಜಿಲ್ಲೆ ಪ್ರಗತಿ ಹೊಂದುತ್ತಿದೆ. ಪ್ರತಿಯೊಂದು ತಾಲೂಕಿನಲ್ಲೂ ಒಂದು ಸರಕಾರೀ ಆಸ್ಪತ್ರೆ, 750 ಹಾಸಿಗೆಗಳುಳ್ಳ ಜಿಲ್ಲಾ ಆಸ್ಪತ್ರೆ, 17 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸ್ಥಳೀಯ ನಿಧಿಯಿಂದ ನಡೆಸಲ್ಪಡುವ ಎರಡು ಆಸ್ಪತ್ರೆಗಳಿವೆ. ತಾಲೂಕು ಅಭಿವೃದ್ಧಿ ಮಂಡಳಿಯಿಂದ ನಡೆಸಲ್ಪಡುವ 26 ಆರೋಗ್ಯ ಘಟಕಗಳಿವೆ. ಇವೆಲ್ಲ ಸಾಮಾನ್ಯ ಚಿಕಿತ್ಸೆಯೊಡನೆ ಕುಟುಂಬ ಕಲ್ಯಾಣ ಯೋಜನೆಯಲ್ಲಿಯೂ ಭಾಗವಹಿಸುತ್ತಿವೆ. ಜನಸಂಖ್ಯೆ ಸಮಸ್ಯೆ ಇತರ ಜಿಲ್ಲೆಗಳಂತೆ ಈ ಜಿಲ್ಲೆಯಲ್ಲಿಯೂ ತೀವ್ರವಾಗಿರುವ ಕಾರಣ 1960ರಿಂದಲೇ ಇಲ್ಲಿ ಕಾರ್ಯಕ್ರಮ ಪ್ರಾರಂಭಗೊಂಡಿದೆ. 1966—67 ರಿಂದ 1970 ಅಕ್ಟೋಬರ್ ವರೆಗೆ 8,028 ಮಂದಿ ಗಂಡಸರಿಗೂ, 654 ಮಂದಿ ಮಹಿಳೆಯರಿಗೂ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. 3,479 ಮಂದಿ ಮಹಿಳೆಯರು ವಂಕಿ ಧರಿಸಿದ್ದಾರೆ. ಸುಮಾರು ಒಂದು ಲಕ್ಷದ ಏಳು ಸಾವಿರ ನಿರೋಧ್‌ಗಳನ್ನು ಹಂಚಲಾಗಿದೆ.

ರಾಜ್ಯದ ಹೈಸ್ಕೂಲುಗಳಿಗೆ
ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65-66ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಉಡುಪಿಯಲ್ಲಿ ಯುವ ಕವಿ ಸಮ್ಮೇಳನ

ಭಾರತ ಸರ್ಕಾರದ ಕ್ಷೇತ್ರ ಪ್ರಚಾರ ಇಲಾಖೆಯವರು ಇದೇ ಫೆಬ್ರವರಿ ತಾ. 19ರಂದು ಸಂಜೆ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ಯುವ ಕವಿ ಸಮ್ಮೇಳನವನ್ನು ಏರ್ಪಡಿಸಲಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಯುವ ಕವಿಗಳು ಮತ್ತು ಮುಖ್ಯವಾಗಿ ಕಾಲೇಜುಗಳಲ್ಲಿ ಕಲಿಯುತ್ತಿರುವ ಯುವಕ ಯುವತಿಯರು ಇದರಲ್ಲಿ ಭಾಗವಹಿಸಬಹುದು. ಕವಿಗಳು "ಬದಲಾಗುತ್ತಿರುವ ಭಾರತ ನನ್ನ ದೃಷ್ಟಿಯಲ್ಲಿ" ಎಂಬ ವಿಷಯದ ಬಗ್ಗೆ ತಾವೇ ರಚಿಸಿರುವ ಕವನಗಳನ್ನು ವಾಚಿಸಬಹುದು. ಅತ್ಯುತ್ತಮವೆಂದು ಪರಿಗಣಿಸಲ್ಪಡುವ ಮೂರು ಕೃತಿಗಳಿಗೆ ಬಹುಮಾನ ನೀಡಲಾಗುತ್ತದೆ.

ಈ ಯುವ ಕವಿ ಸಮ್ಮೇಳನದಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಕವನಗಳನ್ನು ಪೂರ್ವ ಪರಿಶೀಲನೆಗಾಗಿ ಉಡುಪಿ ಎಂ. ಜಿ. ಎಂ. ಕಾಲೇಜಿನ ಪ್ರಿನ್ಸಿಪಲ್ ಪ್ರೊ. ಕು. ಶಿ. ಹರಿದಾಸ ಭಟ್ಟರಿಗೆ ಫೆಬ್ರವರಿ ತಾ. ೧೦ರೊಳಗೆ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ಸುಬ್ರಹ್ಮಣ್ಯದಲ್ಲಿ ಛತ್ರದ ಶಿಲಾನ್ಯಾಸ —ರಾಜ್ಯಪಾಲರಿಂದ

ತಾ. 28.1.71ರಂದು ರಾಜ್ಯಪಾಲ ಶ್ರೀ ಧರ್ಮವೀರರು ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯದ ಆಡಳಿತ ಸಮಿತಿಯವರು ನಿರ್ಮಿಸುತ್ತಿರುವ 1,95,000 ರೂಪಾಯಿ ವೆಚ್ಚದ ಛತ್ರಕ್ಕೆ ಶಿಲಾನ್ಯಾಸ ಗೈದರು. ರಾಜ್ಯಪಾಲರನ್ನು ದೇವಾಲಯಕ್ಕೆ ವೈಭವದಿಂದ ಸ್ವಾಗತಿಸಲಾಯಿತು.

ಆಡಳಿತ ಮೊಕ್ತೇಸರ ಶ್ರೀ ಸುಬ್ರಹ್ಮಣ್ಯ ಗೌಡರು ಸ್ವಾಗತಿಸಿ ದೇವಾಲಯದ ಇತಿಹಾಸವನ್ನು ವಿವರಿಸಿ ಇಲ್ಲೊಂದು ಪ್ರವಾಸಿ ವಿಶ್ರಾಂತಿಧಾಮವನ್ನು ಶೀಘ್ರವೆ ನಿರ್ಮಿಸುವಂತೆ ಇಲಾಖೆಗೆ ಆದೇಶಿಸುವಂತೆ ಮನವಿ ಮಾಡಿದರು.

ರಾಜ್ಯಪಾಲರು ತನಗೆ ಈ ಕ್ಷೇತ್ರ ದರ್ಶನಕ್ಕೆ ದೀರ್ಘಕಾಲದಿಂದ ಇದ್ದ ಬಯಕೆ ಪೂರೈಸಿದ ಬಗ್ಗೆ ಸಂತೋಷ ಸೂಚಿಸಿ, 'ರೈಲ್ವೆ ರಸ್ತೆಯು ಈ ಕ್ಷೇತ್ರದ ಸಮೀಪವೆ ಇರುವುದರಿಂದ, ಇಲ್ಲಿಂದ ಮಡಿಕೇರಿಗೊಂದು ರಸ್ತೆ ರಚಿಸಲು ಸರಕಾರ ನಿರ್ಧರಿಸುವುದರಿಂದಲೂ ಈ ಕ್ಷೇತ್ರ ಹೆಚ್ಚಿನ ಪ್ರಾಮುಖ್ಯ ಪಡೆದು ಅಭಿವೃದ್ಧಿ ಹೊಂದಲಿದೆ. ಅದಕ್ಕೆ ತಕ್ಕ ಯೋಜನೆಗಳನ್ನು ಈಗಿಂದೀಗಲೇ ಪ್ರಾರಂಭಿಸಿ' ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ|| ಶಿವರಾಮ ಕಾರಂತರು ರಾಜ್ಯಪಾಲರು ಸ್ವತಃ ನಾಡಿನ ಈ ಕ್ಷೇತ್ರಕ್ಕೆ ಭೇಟಿ ನೀಡಿದ್ದಕ್ಕೆ ತಮ್ಮ ತೃಪ್ತಿ ಸೂಚಿಸಿ "ಈಗಿನ ಕಾಲದಲ್ಲಿ ದೇವರು—ಧರ್ಮಗಳಲ್ಲಿ ವಿಶ್ವಾಸ ಕಡಿಮೆಯಾಗಿದೆ ಎನ್ನುವುದು ತಪ್ಪು. ಧರ್ಮಸ್ಥಳ, ತಿರುಪತಿ ಮುಂತಾದ ಕ್ಷೇತ್ರಗಳು ಇದಕ್ಕೆ ನಿದರ್ಶನ. ಯಾತ್ರಿಕರಿಗೆ ಅನುಕೂಲವಾದ ಸೌಕರ್ಯಗಳು ದೊರೆಯಬೇಕು" ಎಂದರು.

ಟ್ರಸ್ಟಿಗಳಲ್ಲೊಬ್ಬರಾದ ಶ್ರೀ ಬಿ. ಸುಬ್ಬಯ್ಯ ಶೆಟ್ಟರು ಧನ್ಯವಾದ ಅರ್ಪಿಸಿದರು. ನಂತರ ರಾಜ್ಯಪಾಲರು ಶ್ರೀ ಸುಬ್ರಹ್ಮಣ್ಯ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಶ್ರೀ ಸಂಪುಟ ನರಸಿಂಹ ದೇವರ ಸಂದರ್ಶನ ಮಾಡಿ ಮಂಗಳೂರಿಗೆ ತೆರಳಿದರು.

ಬೆಂಗಳೂರಿನಲ್ಲಿ ದಕ್ಷಿಣ ಕನ್ನಡಿಗರ ಸಂಘದ ಸಾಂಸ್ಕೃತಿಕ ಕಾರ್ಯಕ್ರಮ

ಬೆಂಗಳೂರಿನ ದಕ್ಷಿಣ ಕನ್ನಡಿಗರ ಸಂಘದ ಆಶ್ರಯದಲ್ಲಿ ತಾ. 9—1—71 ರಂದು ರಾಜ್ಯದ ಆಹಾರ ಹಾಗೂ ನಾಗರಿಕ ಪೂರೈಕೆ ಖಾತೆಯ ಸಚಿವ ಶ್ರೀ ವಿಠಲದಾಸ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು.

ಕಾರ್ಯಕ್ರಮದ ಸಲುವಾಗಿ ನೃತ್ಯಪ್ರದರ್ಶನವಿತ್ತ ಬೇಬಿಲತ ಮತ್ತು ಬೇಬಿ ತಾರಾ ಇವರಿಗೆ ಮಂತ್ರಿ ಶ್ರೀ ವಿಠಲದಾಸ ಶೆಟ್ಟರು ಬಹುಮಾನ ವಿತರಣೆ ಮಾಡುತ್ತಿರುವುದು.



ಆಕರ್ಷಕ ನೃತ್ಯಭಂಗಿಯಲ್ಲಿ

ಬೇಬಿಲತಾ (10 ವರ್ಷ) ಬೇಬಿ ಜ್ಯೋತಿ (7 ವರ್ಷ) ಮತ್ತು ಬೇಬಿ ತಾರಾ (8 ವರ್ಷ). ಈ ಮೂವರೂ ಪ್ರಸಿದ್ಧ ಹೊಟೆಲ್ ಟೂರಿಸ್ಟಿನ ಪಾರ್ಟ್ನರ್ ಶ್ರೀ ಪಿ. ವಾದಿರಾಜ ರಾಯರ ಕುಮಾರಿಯರು.

ಸಂದರ್ಶಿಸಿರಿ!—ಸಂತೃಪ್ತರಾಗಿರಿ!!

ಬಿಲ್ಲಜಾಗರಾ ವಜ್ರಗಳಿಗೆ, ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ವ್ಯಾಪಾರಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res;3272

ದಿ ವಿಜಯ ಬೇಂಕ್ ಲಿಮಿಟೆಡ್

ಹೆಡ್ ಆಫೀಸ್:	ರಿಜಿಸ್ಟರ್ಡ್ ಆಫೀಸು:
ರೇಸ್ ಕೋರ್ಸ್ ರೋಡ್,	ಲೈಟ್ ಹೌಸ್ ಹಿಲ್ ರೋಡ್,
ಬೆಂಗಳೂರು-1.	ಮಂಗಳೂರು-1.

ಕಾಪು ಶಾಖೆ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ಸಗಗಳ ಈಡಿನ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿ ಕೊಂಡಿದ್ದಕ್ಕೆ ಕೆಲವರಿಗೆ ಬಟ್ಟ ರಿಜಿಸ್ಟ್ರಿ ನೋಟೀಸುಗಳು ಅಂಚೆಕಾರರಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ—ವ— ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾ. 10-2-1971 ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ಅಡವಿಟ್ಟ ನಗಗಳನ್ನು ತಾರೀಖು 18-2-1971 ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ಆವಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು—ಯಾ—ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ ಯಾ ಖಾಸಗಿಯಾಗಿ ಹರಾಜು ಮಾಡಲಾದೀತು, ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು—ವ—ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ಜಂಜರಾ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು ರೂ. ಪೈಸೆ
562/68	ಶೀನಪ್ಪ ಶೆಟ್ಟಿ, S/o ಶೀನು ಶೆಟ್ಟಿ, ಬರಕಾಣ ಮನೆ, ಬೆಳ್ಳದೂರು ಗ್ರಾಮ, ಪೋಸ್ಟ್ ಪಾದೂರು, ಉಡುಪಿ ತಾಲೂಕು, ದ.ಕ.	140 . 45
426/68	ಬೆರ್ಮು ವಿ. ಬಂಗೇರ, S/o ವೆಂಕಪ್ಪ ಬಂಗೇರ, ಕಾಪು, ದ. ಕ.	95 . 95
813/68	ಶೀನ ಪೂಜಾರಿ, S/o ಚನ್ನಯ ಪೂಜಾರಿ, ಅಕ್ಕಿಕೋಟೆ, ಪಾಂಗಾಳ ಗ್ರಾಮ, ಪೋಸ್ಟ್ ಪಾಂಗಾಳ, ಉಡುಪಿ ತಾಲೂಕು, ದ. ಕ.	47 . 75

ಸ್ಥಳ: ಕಾಪು
ತಾರೀಖು: 22-1-1971

ಜಯರಾಮ ಶೆಟ್ಟಿ
ಮೆನೇಜರ್

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕೊಲಿಟಿಯಲ್ಲಿ, ಸ್ಟೈಲಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

Gram: VISHWA Tel: 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಉಪಗ್ರಹ ಸಂಪರ್ಕ ಸೇವಾ ವ್ಯವಸ್ಥೆ

ಲೇಖಕರು : ಶ್ರೀ ಸತ್ಯನಾರಾಯಣ ಸಿನ್ಹ.

ಭಾರತದ ಸಾಗರೋತ್ತರ ಟೆಲಿಕಮ್ಯೂನಿಕೇಷನ್ ಸೇವಾ ವಿಭಾಗವು ಹೊಸ ಶಖೆ ಹೊಸ್ತಿಲಿನಲ್ಲಿದೆ. ಪೂನಾ ಬಳಿಯಿರುವ ಆರ್ವಿ ಭೂಕೇಂದ್ರವು ಮುಕ್ತಾಯ ಹಂತದಲ್ಲಿದೆ. ಭಾರತವು ಇನ್ನು ಕೆಲವು ತಿಂಗಳುಗಳಲ್ಲೇ ಹಿಂದೂ ಮಹಾ ಸಾಗರದ ಮೇಲೆ ಹಾರುತ್ತಿರುವ "ಇಂಟೆಲಸಾಟ್ -111" ಎಂಬ ಸಂಪರ್ಕ ಉಪಗ್ರಹದ ಮೂಲಕ ಇತರ ದೇಶಗಳೊಂದಿಗೆ ಪ್ರಥಮ ಬಾರಿಗೆ ಸಂಪರ್ಕ ಹೊಂದುತ್ತದೆ.

ಇಂದು ಭಾರತದಲ್ಲಿ ಕೋ ಅಕ್ಸಿಯಲ್ ಕೇಬಲ್ ಮತ್ತು ಮೈಕ್ರೋವೇವ್ ಸಂಪರ್ಕ ವ್ಯವಸ್ಥೆಯಿದೆ. ಜಾಗತಿಕ ರಂಗದಲ್ಲಿ ಜಲಾಂತರ್ಗತ ದೂರವಾಣಿ ಕೇಬಲ್ ವ್ಯವಸ್ಥೆ ಹಾಗು ಉಪಗ್ರಹ ಸಂಪರ್ಕ ವ್ಯವಸ್ಥೆಯಿದೆ.

ಭಾರತವು 1965ರಲ್ಲಿ ಜಾಗತಿಕ ಉಪಗ್ರಹ ಸಂಪರ್ಕ ಒಕ್ಕೂಟವನ್ನು ಸೇರಿತು. ಇಡೀ ಜಗತ್ತಿನಲ್ಲಿ ಉಪಗ್ರಹ ಸಂಪರ್ಕ ವ್ಯವಸ್ಥೆ ಕಾರ್ಯಗತಗೊಳಿಸುವ ದೃಷ್ಟಿಯಿಂದ ಈ ಒಕ್ಕೂಟ ನಿರ್ಮಾಣಗೊಂಡಿತು. ಈಗ 76ದೇಶಗಳು ಈ ಒಕ್ಕೂಟದ ಸದಸ್ಯತ್ವ ಪಡೆದಿವೆ. ಈ ಸದಸ್ಯ ದೇಶಗಳು ಜಾಗತಿಕ ಸಂಪರ್ಕದ ಶೇಕಡ 95 ಭಾಗವನ್ನು ಪ್ರತಿನಿಧಿಸುತ್ತವೆ.

ಉಪಗ್ರಹ ಸಂಪರ್ಕ ವ್ಯವಸ್ಥೆ ಇತ್ತೀಚಿನದಾದರೂ ಈ ಕ್ಷೇತ್ರದ ಪ್ರಗತಿ ಅದ್ಭುತವಾಗಿದೆ. "ಅರ್ಲಿ ಬರ್ಡ" ಎಂಬ ಪ್ರಥಮ ಸಂಪರ್ಕ ಉಪಗ್ರಹವನ್ನು ಹಾರಿಸಿದ ಐದು ವರ್ಷಗಳ ಅವಧಿಯಲ್ಲಿ ವಾಣಿಜ್ಯ ಸಂಪರ್ಕ ವ್ಯವಸ್ಥೆಗಾಗಿ ಏಳು ಉಪಗ್ರಹಗಳನ್ನು ಹಾರಿಸಲಾಗಿದೆ. ಉಪಗ್ರಹ ಸಂಪರ್ಕ ವ್ಯವಸ್ಥೆಯ ಪ್ರಭಾವವು ಟೆಲಿವಿಷನ್ ಕಾರ್ಯಕ್ರಮ ಪ್ರಸಾರದಿಂದ ಉಜ್ವಲವಾಗುತ್ತದೆ.

1967ರಲ್ಲಿ ಅಹಮದಾಬಾದ್‌ನಲ್ಲಿ ಪ್ರಾಯೋಗಿಕ ಕೇಂದ್ರವನ್ನು ಸ್ಥಾಪಿಸಲಾಯಿತು. ಇಲ್ಲಿ ಭಾರತೀಯ ಹಾಗು ವಿದೇಶೀಯ ಇಂಜನಿಯರುಗಳಿಗೆ ಉಪಗ್ರಹ ತಾಂತ್ರಿಕ ವಿಜ್ಞಾನದ ಬಗ್ಗೆ ತರಬೇತಿ ನೀಡಲಾಗುತ್ತಿದೆ.

ಉಪಗ್ರಹ ಸಂಪರ್ಕ ವ್ಯವಸ್ಥೆ ಜನತೆಗೆ ಮೋಹಕವಾಗಿ ತೋರಿದರೂ ಅದರಲ್ಲಿ ಕಾರ್ಯನಿರತರಾದ ಇಂಜನಿಯರುಗಳಿಗೆ ವಿಸ್ತಾರಗೊಳ್ಳುತ್ತಿರುವ. ತಾಂತ್ರಿಕ ವಿಜ್ಞಾನದ ಆವಿಷ್ಕಾರವಾಗಿ ಗೋಚರಿಸುತ್ತದೆ. ಏಕಕಾಲಿಕ ಉಪಗ್ರಹವನ್ನು ಸಮಭಾಜಕ ವೃತ್ತದ ಕಕ್ಷೆಯಲ್ಲಿ ಭೂಮಿಯಿಂದ 22,300 ಮೈಲಿ ಎತ್ತರದಲ್ಲಿ ಹಾರಿಸಲಾಗುತ್ತದೆ. ಆದರೆ ಉಪಗ್ರಹದಿಂದ ಭೂಮಿಗೆ ಬರುವ ಸಂಕೇತ ದುರ್ಬಲವಾಗಿರುತ್ತದೆ. ಅಂತಹ ದುರ್ಬಲ ಸಂಕೇತ ಸ್ವೀಕರಿಸಿ ಪರಿವರ್ಧಕಗೊಳಿಸಲು ಜಟಿಲ ಎಲೆಕ್ಟ್ರಾನಿಕ್ ಸಾಧನಗಳು ಬೇಕಾಗುತ್ತದೆ.

ಹಿಂದೂ ಸಾಗರದ ಮೇಲೆ 1969ನೇ ಇಸವಿ ಜೂನ್‌ನಿಂದ ಉಪಗ್ರಹವನ್ನು ಕಕ್ಷೆಯಲ್ಲಿ ಹಾರಿಸಲಾಗಿದೆ. ಆರ್ವಿ ಕೇಂದ್ರದಲ್ಲಿರುವ ಮೈಕ್ರೋವೇವ್ ಸಂಪರ್ಕವು ಬೊಂಬಾಯಿಯಲ್ಲಿರುವ "ವಿದೇಶ ಸಂಚಾರ ಭವನಕ್ಕೆ" ಸಂಕೇತವನ್ನು ರವಾನಿಸುತ್ತದೆ.

ಬೊಂಬಾಯಿಯಲ್ಲಿರುವ 17 ಉಪ್ಪರಿಗೆಯ ವಿದೇಶ ಸಂಚಾರ ಭವನದಲ್ಲಿ ಸಾಗರೋತ್ತರ ಸಂಪರ್ಕ ವ್ಯವಸ್ಥೆಯೆಲ್ಲವನ್ನೂ ಸಜ್ಜುಗೊಳಿಸಲಾಗಿದೆ. ಈ ಕಟ್ಟಡದಲ್ಲೇ ವಿದೇಶಗಳಿಗೆ ಕಳುಹಿಸುವ ತಂತಿಗಳನ್ನು ಸ್ವೀಕರಿಸುವ ಹಾಗೂ ಜಾಗತಿಕ ಟೆಲೆಕ್ಸ್ ಮತ್ತು ದೂರವಾಣಿ ಸ್ವೀಕರಿಸುವ ಸೌಲಭ್ಯವನ್ನು ಜನತೆಗೆ ಒದಗಿಸಲಾಗುತ್ತದೆ.

ಉಪಗ್ರಹ ಸಂಪರ್ಕ ವ್ಯವಸ್ಥೆ ಆರಂಭವಾದ ಒಂದು ವರ್ಷದ ಅವಧಿಯೊಳಗೆ ಸಾಗರೋತ್ತರ ದೂರವಾಣಿ ಸೇವಾ ವ್ಯವಸ್ಥೆಯು ದ್ವಿಗುಣಗೊಳ್ಳುವ ನಿರೀಕ್ಷೆಯಿದೆ. ಜಾಗತಿಕ ಟೆಲೆಕ್ಸ್ ವ್ಯವಸ್ಥೆಯೂ ವಿಸ್ತರಿಸುತ್ತದೆ.

1970ರಲ್ಲಿ 5 · 24 ಲಕ್ಷ ನಿಮಿಷಗಳ ಕಾಲ ಸಾಗರೋತ್ತರ ದೂರವಾಣಿ ಸೌಲಭ್ಯ ಒದಗಿಸಿರುವುದು 1975ರಲ್ಲಿ 19 · 9 ಲಕ್ಷ ನಿಮಿಷಗಳಿಗೂ 1980ರಲ್ಲಿ 32·66 ಲಕ್ಷ ನಿಮಿಷಗಳಿಗೂ ಹೆಚ್ಚುವ ಸಂಭವವಿದೆ. ಇದೇ ರೀತಿ ಟೆಲೆಕ್ಸ್ ವ್ಯವಸ್ಥೆಯೂ 1970ರಲ್ಲಿ 12 · 31 ಲಕ್ಷ ನಿಮಿಷಗಳಿದ್ದುದು, 1975ರಲ್ಲಿ 52 · 58 ಲಕ್ಷ ನಿಮಿಷಗಳಾಗಿ, 1980ರಲ್ಲಿ 1 ಕೋಟಿ 5 ಲಕ್ಷದ 60 ಸಹಸ್ರ ನಿಮಿಷಗಳಿಗೆ ಏರುತ್ತದೆ.

ದೆಹಲಿಯ ಬಳಿ ಎರಡನೇ ಭೂಕೇಂದ್ರ ಸ್ಥಾಪಿಸುವ ಯೋಜನೆಯಿದೆ. ಬಹುಶಃ ಈ ಕೇಂದ್ರ 1974ರಲ್ಲಿ ಕಾರ್ಯಾರಂಭ ಮಾಡಬಹುದು. ಈ ಕೇಂದ್ರಕ್ಕೆ ಸಾಗರೋತ್ತರ ದೂರವಾಣಿ ಕೇಬಲ್ ಜಾಲದ ಸಂಪರ್ಕ ಏರ್ಪಡಿಸುವುದು ಸಾಧ್ಯವಾಗಬಹುದು.

ನಾವು ಮುಂದಿನ ದಶಕದ ಅವಕಾಶ, ಸವಾಲುಗಳನ್ನು ಉತ್ಸಾಹದಿಂದ ಎದುರಿಸಲು ಸಿದ್ಧರಾಗಿದ್ದೇವೆ. ನಮ್ಮ ಪ್ರಯತ್ನದಿಂದ ಭಾರತದಲ್ಲಿ ಉತ್ತಮ ವರ್ಗದ ಸಂಪರ್ಕ ವ್ಯವಸ್ಥೆ ಏರ್ಪಾಟಾಗಿ ವಾಣಿಜ್ಯ, ವ್ಯವಹಾರಗಳಿಗೆ ಸಾಕಾಗುವಂತೆ ಹಾಗೂ ಜಾಗತಿಕ ಮಟ್ಟಕ್ಕೆ ಅನುಗುಣವಾಗುವಂತೆ ಮಾಡುವುದು ಸಾಧ್ಯವಾಗಬಹುದು.



ಪುಣೆಯ ಸಮೀಪದ ಆರ್ವಿ ಎಂಬಲ್ಲಿಯ ಪ್ರಥಮ ಭೂನಿಲ್ದಾಣದಲ್ಲಿ 97 ಅಡಿಯ ಧ್ವನಿ ಆಕರ್ಷಕ ತಂತಿಗಳಜೋಡಣೆ.

ನಿಮಗೆ ಗೊತ್ತೆ?

ಭಾರತಕ್ಕೆ ಸ್ವಾತಂತ್ರ್ಯ ಸಮಯದಲ್ಲಿ ದೇಶದಲ್ಲಿ ಐದು ಮುಖ್ಯ ಬಂದರುಗಳಿದ್ದವು. ತದನಂತರ ಕಾಂಡ್ಲಾ, ಮರ್ಮಗೋವ ಹಾಗು ಪರದೀಪ ಬಂದರುಗಳನ್ನು ಮುಖ್ಯ ಬಂದರುಗಳನ್ನಾಗಿ ಅಭಿವೃದ್ಧಿ ಪಡಿಸಲಾಗಿದೆ.

1947ರಲ್ಲಿ 59 ಹಡಗುಗಳಿದ್ದರೆ, ಇಂದು ನಮ್ಮ ಬಳಿ 250 ಹಡಗುಗಳಿವೆ. ಇಂದು 49 ವಿದೇಶಗಳಿಗೆ ನಮ್ಮ ನೌಕಾ ಸೇವೆ ಲಭ್ಯವಿದೆ.

1947ರಲ್ಲಿ ಒಂದೇ ಒಂದು ಚಿಕ್ಕಖಾಸಗೀ ನೌಕಾಂಗಣವಿತ್ತು. ಇಂದು ನಮ್ಮದೇ ಆದ ನೌಕಾಂಗಣವಿದೆ. ಕಳೆದ 18 ವರ್ಷಗಳಲ್ಲಿ ನಾವು ಸಮುದ್ರಸಂಚಾರ ಸಾಮರ್ಥ್ಯದ 50 ಹಡಗುಗಳನ್ನು ಕಟ್ಟಿದ್ದೇವೆ.

1947ರಲ್ಲಿ ನಮ್ಮ ದೇಶದಲ್ಲ ಒಂದೇ ಒಂದು ಸ್ಟೇಟ್ ಟ್ರಾನ್ಸ್‌ಪೋರ್ಟು ಕಾರ್ಪೊರೇಷನ್ ಇದ್ದಿತು. ಈಗ ದೇಶದಲ್ಲಿ 15 ಇಂತಹ ಕಾರ್ಪೊರೇಷನ್‌ಗಳಿವೆ. 1968—69 ಸಾಲಿನಲ್ಲಿ ನಮ್ಮಲ್ಲಿ 107100 ಬಸ್ಸುಗಳು, 341732 ಟ್ರಕ್‌ಗಳೂ ಇದ್ದವು. 1951—56ರ ಅವಧಿಯಲ್ಲಿ ರಸ್ತೆಗಳಿಗೆಂದು ಕೇಂದ್ರ—ರಾಜ್ಯ ಸರಕಾರಗಳು ಒಟ್ಟು 1421. 3 ದಶಲಕ್ಷ ರೂ.ಗಳನ್ನು ವೆಚ್ಚ ಮಾಡಿದ್ದರೆ, 1966–69ರ ಅವಧಿಯಲ್ಲಿ 2175 ದಶಲಕ್ಷ ರೂ.ಗಳನ್ನು ವೆಚ್ಚ ಮಾಡಿವೆ. 1947ರಿಂದ 1969ರ ಅವಧಿಯಲ್ಲಿ 36647 ಮೈಲಿ ಉದ್ದದ ರಸ್ತೆಯನ್ನು ಹೊಸದಾಗಿ ರಚಿಸಲಾಗಿದೆ. ಕಳೆದ 20 ವರ್ಷಗಳಲ್ಲಿ ದೇಶದಲ್ಲಿ 150 ಮಹತ್ವದ ಸೇತುವೆಗಳನ್ನು ರಚಿಸಲಾಗಿದೆ.

ಪುತ್ತೂರು IIn dAddl. ಮುನ್ಸಿಫ್ ಕೋರ್ಟಿನಲ್ಲಿ

Exc. 397/70 O. S. 147/63

ಸುಬ್ಬಪ್ಪ —ಅರ್ಜಿದಾರ
ಕರಿಯ ಗೌಡ ಸಹಾ —ಎದ್ರುರು

2ನೇ ಎದ್ರು:- ಕುಂಞಗೌಡ-ಅಣ್ಣಪ್ಪ ಗೌಡರ ಮಗ— ಶಿರ್ಲೆ ಗ್ರಾಮದ ದಗವೂರು.

ಸದ್ರಿ 2ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ:—

ಅಕ್ಕಯ್ಯ ಗೌಡರ ವಾರಿಸ್ದಾರರಾಗಿ ನಿಮ್ಮನ್ನು ಕಕ್ಷಿಯಲ್ಲಿ ಕೂಡಿಸಬೇಕೆಂತ ಮಾಡಿದ ಈ ಅಮಲ್ದಾರಿಯಲ್ಲಿ ನಿಮ್ಮ ನೋಟೀಸಿನ ಬಗ್ಗೆ ತಾ. 19—2—71ಕ್ಕೆ ಇಟ್ಟಿರುತ್ತದೆ, ಸದ್ರಿ ದಿವಸ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವಾಯಿ ಮಾಡಿ ಯುಕ್ತ ಕೆಂದಂತೆ ತೀರ್ಮಾನಿಸಲಾಗುವುದು.

Sd/- M. Rammohan Rao,
Advocate for Petitioner.
Puttur. 28—1—71

ಮನೆಯಿಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ
ಮನೆ-ಮದ್ದು
ಬೆಲೆ: ರೂ. 2–00

ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ
ಗೀತೆಯ ಕೈಗನ್ನಡಿ
ಪಾಕೆಟ್ ಎಡಿಶನ್ ಬೆಲೆ ರೂ. 1–50

ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ. 2–00

Letter Writing Made Easy
ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1 50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ. ದ. ಕ.

ವಿದೇಶ ಪ್ರಯಾಣ

ಶ್ರೀ ಡಯಾನ್ ಫೆರ್ನಾಂಡಿಸ್, ಬಿ.ಎ.

ಬೊಂಬಾಯಿಯ ಪ್ಲಾಸ್ಟಿಕ್ಸ್ ಎಂಡ್ ಲಿನೋಲಿಯಮ್ಸ್ ಎಕ್ಸ್‌ಪೋರ್ಟ್ ಪ್ರೊಮೋಶನ್ ಕೌನ್ಸಿಲಿನ ಕಾರ್ಯದರ್ಶಿಗಳಾದ ಶ್ರೀ ಡಯಾನ್ ಫೆರ್ನಾಂಡಿಸರು ಅಂತಾರಾಷ್ಟ್ರೀಯ ವ್ಯಾಸಂಗ ಹಾಗೂ ವ್ಯವಹಾರ ಪ್ರವಾಸವನ್ನು ಇದೇ ಫೆಬ್ರವರಿ ಆದಿಯಲ್ಲಿ ಕೈಕೊಳ್ಳಲಿದ್ದಾರೆ. ಅವರೊಂದಿಗೆ ಓರ್ವ ಇಂಜನೀಯರರೂ ಮೂರಾಟ ವಿಸ್ತರಣಾಧಿಕಾರಿಗಳೂ ತೆರಳಲಿರುವರು. ಇವರು ಕ್ರಮೇಣ ಇಬ್ಬರು ವ್ಯಾಪಾರಿಗಳ ಮತ್ತು ಒಬ್ಬ ಸರಕಾರಿ ಅಧಿಕಾರಿಗಳೊಂದಿಗೆ ಸೇರಿಕೊಳ್ಳುವರು. ಅಮೇರಿಕಾ ಸರಕಾರದ ಆರ್ಥಿಕ ನೆರವಿನ ಈ ಪ್ರವಾಸವು ಹೊಂಗ್ ಕೋಂಗ್‌ನಿಂದ ಆರಂಭವಾಗುವುದು. ಅಲ್ಲಿಂದ ಅವರು ಕ್ರಮವಾಗಿ ಟಿಪೆ, ಟೋಕಿಯೊ, ಯು. ಎಸ್. ಎ., ಯು. ಕೆ., ವೆಸ್ಟ್ ಜರ್ಮನಿ ಮತ್ತು ಇಟಲಿಗೆ ಪ್ರಯಾಣಿಸಿ ಹಿಂತಿರುಗುವರು. ಶ್ರೀ ಫೆರ್ನಾಂಡಿಸರು ಉಡುಪಿಯ ಶ್ರೀ ಮತ್ತು ಶ್ರೀಮತಿ ರೋಕ್ಕಿ ಫೆರ್ನಾಂಡಿಸರ ಸುಪುತ್ರರು. ‡‡

(ಮೂರನೇ ಪುಟದಿಂದ)

ಜ್ಞಾಪಿಸಿತ್ತು. ಆದರಂತೆ ಆಕ್ಷೇಪಾರ್ಹ ವ್ಯಕ್ತಿ ಭಾರತ ತ್ಯಜಿಸಿತು. ಭಾರತದ ಈ ಕೃತಿಗೆ ಪ್ರತೀಕಾರವೆಂಬಂತೆ ಪಾಕಿಸ್ತಾನವೂ ತನ್ನಲ್ಲಿರುವ ಭಾರತೀಯ ಹೈ ಕಮಿಶನರ ಕಛೇರಿಯ ಪ್ರಥಮ ಕಾರ್ಯದರ್ಶಿಯನ್ನು ಅನರ್ಹ ವ್ಯಕ್ತಿಯೆಂದು ಸಾರಿ ಅವರು ದೇಶ ಬಿಟ್ಟು ಹೋಗಬೇಕೆಂದು ಆಜ್ಞೆ ಮಾಡಿತ್ತು. ಪಾಕ್ ಸರಕಾರದ ಈ ನೀತಿಯಲ್ಲಿ ನಾವೇನೂ ಹೊಸತನವನ್ನಾಗಲೀ ಅವಾಸ್ತವಿಕತೆಯನ್ನಾಗಲೀ ಕಾಣುವುದಿಲ್ಲ. ತನ್ನ ಮೂಗಿನ ನೇರಕ್ಕೆ ಬಂದುದನ್ನು ಅಡ್ಡ ತಿರುಗಿಸುವ ತಂತ್ರ ಮಾತ್ರವಿದು. ಅಧ್ಯಕ್ಷ ಯಾಹ್ಯಾಖಾನರು ಪಾಕಿಸ್ತಾನವನ್ನು ಎತ್ತ ಕರೆದೊಯ್ಯುತ್ತಿದ್ದಾರೆಂಬುದಕ್ಕೆ ಅವರ ಈ ಕೃತ್ಯ ಕನ್ನಡಿ ಹಿಡಿಯುತ್ತದೆ. ಭಾರತವನ್ನು ಕೆಣಕುವುದು, ಅದನ್ನು ಅವಹೇಳನಕ್ಕೆ ಗುರಿ ಮಾಡುವುದು ಮತ್ತು ಅದರ ಉನ್ನತಿಗೆ ವಿಘ್ನವೊಡ್ಡುವುದು—ಈ ಮೊದಲಾದ ನೀತಿ-ನಿಲುವುಗಳು ದಿವಾಳಿಖೋರತನವೇ ಸರಿ. ಆದರೆ, ಇದು ಎಲ್ಲ ಕಾಲಕ್ಕೂ ಸರಿ ಹೊಂದಲಾರದೆಂಬುದನ್ನು ಯಾಹ್ಯಾಖಾನರಾದರೂ ಅರಿತುಕೊಳ್ಳ ಬೇಕಿತ್ತು. ಆ ಪ್ರಜ್ಞೆ ಅವರಿಗೆ ಮೂಡಲಿಲ್ಲ.

ಯೂನಿಯನ್ ಡೇ ಸಮಾರಂಭ

ತಾ. 24ರಂದು ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಯೂನಿಯನ್ ಡೇ ಸಮಾರಂಭವು ಡಾ| ಬಿ. ಬಿ. ಶೆಟ್ಟರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದು, ಪ್ರಿನ್ಸಿಪಾಲ್ ಎಂ. ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಅನಸೂಯ ಬಿ. ಶೆಟ್ಟಿ ಅವರು ಬಹುಮಾನ ವಿತರಣೆ ಗೈದರು. ಮುಖ್ಯ ಅತಿಥಿಗಳ ಭಾಷಣದ ನಂತರ ಸಂಘದ ಉಪಾಧ್ಯಕ್ಷ ಧನ್ಯವಾದಗಳನ್ನರ್ಪಿಸಿದರು. ರಾತ್ರಿ, ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ನಾಟಕ ಪ್ರದರ್ಶಿಸಲ್ಪಟ್ಟಿತ್ತು.

ಮುದ್ದಣ ಸಾಹಿತ್ಯೋತ್ಸವ

ಉಡುಪಿಯ ಎಂ. ಜಿ. ಎಂ. ಕಾಲೇಜಿನಲ್ಲಿ ತಾ. 21—1—1971ರಂದು ಮುದ್ದಣ ಸಾಹಿತ್ಯೋತ್ಸವವನ್ನು ಪ್ರಿನ್ಸಿಪಾಲ್ ಆರ್. ವೈ. ಧಾರ್ವಾಡ್‌ಕರ್ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಶ್ರೀ ಎಸ್. ಕೆ ಶ್ರೀಪತಿ ಆಚಾರ್ಯ ಅವರು ಸ್ವಾಗತ ಕೋರಿದರು. ಶ್ರೀ ಕೆಕ್ಕುಂಜೆ ಗೋಪಾಲಕೃಷ್ಣ ಭಟ್ ಅವರು ಕವಿ ಮುದ್ದಣನ ಜೀವಿತ ಮತ್ತು ಸಾಧನೆಯ ಕುರಿತು ಭಾಷಣವಿತ್ತರು.

ಗೋರೆಗಾಂವ್ ಕರ್ನಾಟಕ ಸಂಘ

ಮುಂಬಯಿ, ದ. 26, ಸಂಘದ ಆಶ್ರಯದಲ್ಲಿ ಪ್ರಜಾಪ್ರಭುತ್ವ ದಿನವನ್ನು ಶರದಾ ಶಾಲಾ ಮಕ್ಕಳ ಕೂಡುವಿಕೆಯಿಂದ ಆಚರಿಸಲಾಯಿತು. ಸಂಘದ ಅಧ್ಯಕ್ಷ ಸದಾಶಿವ ಜಿ. ಶೆಟ್ಟರು ಧ್ವಜವನ್ನು ಏರಿಸಿ ಭಾರತೀಯರ ಕರ್ತವ್ಯದ ಬಗ್ಗೆ ಮಾತನಾಡಿದರು. ಎಂ. ಸಂಜೀವ ಶೆಟ್ಟರು ಈಗಿನ ರಾಜಕೀಯ ಪರಿಸ್ಥಿತಿಯ ಕುರಿತು ಮಾತಾಡಿದರು. ಪ್ರಧಾನ ಕಾರ್ಯದರ್ಶಿ ಸೋಮನಾಥ ಕಾರಂತರು ವಂದನಾರ್ಪಣೆ ಸಲ್ಲಿಸಿದರು.

ವಿದ್ಯಾರ್ಥಿ ಭವನದ ದಿನಾಚರಣೆ

ಉಡುಪಿಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ದಿನಾಚರಣೆಯು 25.1.71ರಂದು ಉಡುಪಿ ಪ್ರಿನ್ಸಿಪಾಲ್ ಸಿವಿಲ್ ಜಡ್ಜ್ ಶ್ರೀ ಬಿ. ವಿಶ್ವನಾಥ ರೈ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನವೋತ್ಸಾಹದಿಂದ ನೆರವೇರಿತು. ಸ್ಥಳೀಯ ಸರಕಾರಿ ಆಸ್ಪತ್ರೆಯ ಸರ್ಜನ್ ಡಾ| ವೈ. ನರಸಿಂಹ ಶೆಟ್ಟರು ಮುಖ್ಯ ಅತಿಥಿಗಳಾಗಿದ್ದರು. ಸುಪರಿಂಟೆಂಡೆಂಟ್ ಡಾ| ವಿ. ಎಸ್. ಶೆಟ್ಟರು ಸ್ವಾಗತಭಾಷಣ ಮಾಡಿದ ಬಳಿಕ ಡಾ| ಬಿ. ಬಿ. ಶೆಟ್ಟರು ಅತಿಥಿಗಳ ಪರಿಚಯ ಮಾಡಿದರು. ಶ್ರೀ ಟಿ. ರಾಮಯ್ಯ ಶೆಟ್ಟರು ವಾರ್ಷಿಕ ವರದಿಯನ್ನೋದಿದರು. ಶ್ರೀ ಕೆ. ಶಶಿಧರ ಹೆಗ್ಡೆಯವರು ಮಾಡಿದ ಸ್ವಸ್ತಿವಾಚನಕ್ಕೆ ಶ್ರೀ ಎಸ್. ಜಯಕರ ಶೆಟ್ಟರು ಉತ್ತರಿಸಿದರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ವಿದ್ಯಾರ್ಥಿಜೀವನ, ವಿದ್ಯಾರ್ಥಿಗಳಲ್ಲಿರಬೇಕಾದ ಶಿಸ್ತು ಸಂಯಮಗಳ ಕುರಿತು ಭಾಷಣವಿತ್ತರು. ಧನ್ಯವಾದಸಮರ್ಪಣೆ, ಮನರಂಜನಾ ಕಾರ್ಯಕ್ರಮಗಳೊಂದಿಗೆ ಸಮಾರಂಭ ಸಮಾಪ್ತಿಯಾಯಿತು.

ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ದಶವಾರ್ಷಿಕೋತ್ಸವ

ತಾ. 31.1.71ರಂದು ದಶವಾರ್ಷಿಕೋತ್ಸವದ ಉದ್ಘಾಟನೆಯು ರಾಜ್ಯಪಾಲ ಶ್ರೀ ಧರ್ಮವೀರರಿಂದ, ಮಾಜಿ ದಂಡನಾಯಕ ಜ| ಕಾರಿಯಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಧರ್ಮವೀರರು ಮಾತನಾಡುತ್ತಾ, ಧಾರ್ಮಿಕ ಸಂಸ್ಥೆಗಳು ಶಿಕ್ಷಣದ ಬಗ್ಗೆ ಆಸಕ್ತಿ ವಹಿಸುವುದರಿಂದ ಉತ್ತಮ ಪರಿಣಾಮ ಉಂಟಾಗುವುದೆಂದು ವಿದ್ಯಾರ್ಥಿಗಳಿಗೆ ಯುಕ್ತ ಶಿಕ್ಷಣ ನೀಡುತ್ತಿರುವ ಪೂರ್ಣಪ್ರಜ್ಞ ಕಾಲೇಜಿನ ಸಾಧನೆಯನ್ನು ಪ್ರಶಂಸಿಸಿದರು.

ಪ್ರಿನ್ಸಿಪಾಲ್ ಶ್ರೀ ಎಂ. ಗೋಪಾಲಕೃಷ್ಣ ಅಡಿಗರು ಕಾಲೇಜಿನ ಪ್ರಗತಿಯ ಸವಿಸ್ತಾರ ವರದಿ ಸಲ್ಲಿಸಿದರು.

ಜ|| ಕಾರಿಯಪ್ಪನವರು ವಿದ್ಯಾರ್ಥಿಗಳಿಗೆ ಹಿತೋಕ್ತಿಗಳನ್ನಿತ್ತು ಅವರು ಸ್ವಾರ್ಥಸಾಧಕರ ಬಲೆಗೆ ಬೀಳಬಾರದೆಂದು ಕೋರಿದರು. ಶ್ರೀ ಪೇಜಾವರ ಮಠ, ಅದಮಾರು ಮಠ ಹಾಗೂ ಶಿರೂರು ಮಠದ ಶ್ರೀಗಳವರು ಮಾತಾಡಿದರು. ಅಂತ್ಯದಲ್ಲಿ ಶ್ರೀ ಸದಾಶಿವರಾವ್ ವಂದಿಸಿದರು.

ಫಲಸಾಕ್ಷಿ

ಶೀಘ್ರ ಆರ್ಥಿಕ ಪ್ರಗತಿಗೆ ಯೋಗ್ಯ ವಾತಾವರಣವನ್ನು ಕಲ್ಪಿಸುವತ್ತ ಮೈಸೂರು ರಾಜ್ಯ ಸರಕಾರವು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ.

ಈ ಅಂಶಗಳನ್ನು ಸ್ವಲ್ಪ ಗಮನಿಸಿ:

1. ಬ್ಯಾಂಕುಗಳು ಮತ್ತಿತರ ಕೇಂದ್ರ ಸಂಸ್ಥೆಗಳಲ್ಲಿ ತೆಗೆದುಕೊಂಡ ಕೋಟ್ಯಾಂತರ ರೂ.ಗಳ ಸಾಲಕ್ಕೆ ಹೊಣೆಯಾಗಿರುವುದರ ಜೊತೆಗೆ ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯ ಸರಕಾರದ ಸಂಸ್ಥೆಗಳ ಮೂಲಕವೇ ಕೈಗಾರಿಕೆಗಳಲ್ಲಿ 9 ಕೋಟಿ ರೂ. ಬಂಡವಾಳ ಹೂಡಲಾಗಿದೆ.
2. ಈ ವರ್ಷ ರಾಜ್ಯದಲ್ಲಿ ಸುಮಾರು 1,258 ಹೊಸ ಕೈಗಾರಿಕೆಗಳು ಆರಂಭವಾಗುವ ನಿರೀಕ್ಷೆಯಿದೆ.
3. ಕಳೆದ ನಾಲ್ಕು ವರ್ಷಗಳಲ್ಲಿ ವರ್ಷಕ್ಕೆ ಸರಾಸರಿ 27,500 ನೌಕರಿ ಅವಕಾಶಗಳನ್ನು ಕಲ್ಪಿಸಲಾಗಿದೆ.
4. ರಾಜ್ಯದ 38·20 ಲಕ್ಷ ಶಾಲಾ ಮಕ್ಕಳಿಗೆ ಶಿಕ್ಷಣ ಸೌಲಭ್ಯವನ್ನು ನೀಡಲಾಗಿದೆ.
5. ನೀರಾವರಿ ಸೌಲಭ್ಯವನ್ನು 10,00,000 ಎಕರೆಗಳಿಗೆ ವಿಸ್ತರಿಸಲಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯ ಆರಂಭದಲ್ಲಿ ಈ ಸೌಲಭ್ಯ ಕೇವಲ 46,000 ಎಕರೆಗಳಿಗೆ ಮಾತ್ರ ಇತ್ತು, ಪ್ರಸ್ತುತದ ಯೋಜನೆಯಲ್ಲಿ ನೀರಾವರಿಗಾಗಿ 90 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.
6. ವರ್ಷಕ್ಕೆ ಸರಾಸರಿ 600 ಹಳ್ಳಿಗಳು ಮತ್ತು 20,000 ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ.
7. ಕಳೆದ 5 ವರ್ಷಗಳಲ್ಲಿ 12 ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲಾಗಿದೆ.
8. ಕಡಮೆ ಹಾಗೂ ಮಧ್ಯಮ ಆದಾಯದ ಮತ್ತು ಕೈಗಾರಿಕಾ ಗೃಹ ನಿರ್ಮಾಣ ಯೋಜನೆಗಳಿಗೆ ಪ್ರಸಕ್ತ ಯೋಜನೆಯಲ್ಲಿ 3 ಕೋಟಿ ರೂ.ಗಳನ್ನು ಖರ್ಚುಮಾಡಲಾಗುತ್ತಿದೆ; ಗೃಹ ನಿರ್ಮಾಣ ಮಂಡಲಿಯು ಎತ್ತುವ ಡಿಬೆಂಚರುಗಳಿಗೆ ಸರ್ಕಾರವು ಜಾಮೀನಾಗಿರುತ್ತದೆ.

(ಮೈಸೂರು ಸರ್ಕಾರದ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ ಪ್ರಕಟಿತ)

ರಫ್ತು ಕ್ಷೇತ್ರದಲ್ಲಿ ಮೈಸೂರಿನ ಪಾತ್ರ

(ಎರಡನೇ ಪುಟದಿಂದ)

ಕುದುರೆಮುಖ ಹಾಗೂ ದೋಣಿಮಲೆ ನಿಕ್ಷೇಪಗಳ ಶೋಧನೆಯಿಂದಾಗಿ, ಕಬ್ಬಿಣ ಅದಿರು ರಫ್ತು ಸಾಧ್ಯತೆ ವಿಶೇಷವಾಗಿದೆ ಮುಖ್ಯಮಂತ್ರಿಯವರ ಜಪಾನ್ ಸಂದರ್ಶನದ ನಂತರ, ಅದಿರು ರಫ್ತು ಮಾಡುವ ಬದಲು ಬೀಡು ಕಬ್ಬಿಣದ ರಫ್ತು ಮಾಡುವುದು ಉತ್ತಮವೆಂಬ ವಿವೇಚನೆ ಅಧಿಕಾರೀ ವರ್ತುಲಗಳಲ್ಲಿ ಪ್ರಬಲವಾಗುತ್ತಿದೆ. ಕರಾವಳಿಗಳಲ್ಲಿ ಬೀಡು ಕಬ್ಬಿಣದ ಕಾರಖಾನೆಗಳ ಸ್ಥಾಪನೆಗೆ ಹಣ ವಿನಿಯೋಗ ಮಾಡುವುದರ ಕುರಿತು ಹೊಸ ವಿವೇಚನೆ ಅಗತ್ಯ.

ಮಂಗಳೂರು ಬಂದರು ನಿರ್ಮಾಣ ಕಾರ್ಯ ಶೀಘ್ರವಾಗಿ ಪೂರ್ಣವಾದರೆ. ಅದಿರು ರಫ್ತಿಗೆ ಅಧಿಕ ಸಹಾಯವಾಗುವುದು.

ಕೈಮಗ್ಗ ಹಾಗೂ ವಿದ್ಯುತ್ ಚಾಲಿತ ಮಗ್ಗಗಳು:-

ರಾಜ್ಯದ ಕೈಮಗ್ಗ ರೇಷ್ಮೆ ಬಟ್ಟೆ ರಫ್ತು 1967-68ರಲ್ಲಿ 44 ಲಕ್ಷ ರೂಪಾಯಿಯಷ್ಟಿದ್ದುದು, 1973-74ರಲ್ಲಿ ಸುಮಾರು ಒಂದು ಕೋಟಿ ರೂಪಾಯಿಯಷ್ಟಾಗುವ ನಿರೀಕ್ಷೆ ಇದೆ. ರೇಷ್ಮೆ ವ್ಯವಸಾಯ ಅಭಿವೃದ್ಧಿಗೆ ಬೃಹತ್ ಯೋಜನೆಯೊಂದು ಸರಕಾರದ ಪರಿಶೀಲನೆಯಲ್ಲಿದೆ.ಇದರ ಆರ್ಥಿಕ ಪರಿಣಾಮಗಳೇನೆಂಬುದನ್ನು ನಿರ್ಧರಿಸಬೇಕಾಗಿದೆ. ಈ ಯೋಜನೆ ಕಾರ್ಯಗತವಾದರೆ, ರೇಷ್ಮೆ ಬಟ್ಟೆ ಉತ್ಪಾದನೆ ನಾಲ್ಕಷ್ಟು ಹೆಚ್ಚಬಹುದು. ವಿದ್ಯುತ್ ಚಾಲಿತ ಕೈಮಗ್ಗಗಳಲ್ಲಿ ತಯಾರಾಗುವ ಬಟ್ಟೆಯ ರಫ್ತು ವೃದ್ಧಿಗೆ ಪ್ರಯತ್ನ ಮಾಡಲಾಗುತ್ತಿದೆಯಾದರೂ, ಈ ಕುರಿತ ಮುನ್ನೋಟ ಅನಿರ್ದಿಷ್ಟವಾಗಿದೆ.

ಗಂಧದೆಣ್ಣೆ ಮತ್ತು ಸಾಬೂನು:-

1967-68ರಲ್ಲಿ ಗಂಧದೆಣ್ಣೆ ರಫ್ತು ಆದಾಯ 1. 4 ಕೋಟಿ ರೂಪಾಯಿಯಷ್ಟಿತ್ತು. ಮೈಸೂರಿನಲ್ಲಿ ರಾಷ್ಟ್ರದ ಒಟ್ಟು ಗಂಧದ ಮರದ ಶೇಕಡಾ 80ರಷ್ಟು ಇದೆ ಆದರೆ ಮರ ಕಡಿದ ಸ್ಥಳಗಳಲ್ಲಿ ಮತ್ತೆ ಸಸಿ ನಾಟಿ ಮಾಡುವ ಕುರಿತು ತೀವ್ರ ಕಾರ್ಯಕ್ರಮ ಕೈಕೊಳ್ಳದಿದ್ದರೆ ರಾಜ್ಯದ ರಫ್ತು ಅಭಿವೃದ್ಧಿಯಾಗದೇನೇ ಉಳಿಯಬಹುದು. ಗಂಧದ ಸಾಬೂನು ರಫ್ತು 3.3 ಲಕ್ಷ ರೂಪಾಯಿಯಿಂದ 25ಲಕ್ಷ ರೂಪಾಯಿಗೇರುವ ನಿರೀಕ್ಷೆ ಇದೆ. ಈ ಸಂಬಂಧ, ರಫ್ತು ವ್ಯಾಪಾರ ಹೆಚ್ಚಳದ ಕ್ರಮವಾಗಿ, ರಫ್ತು ವ್ಯಾಪಾರದಿಂದ ದೊರೆಯಲಿರುವ ನಿರೀಕ್ಷಿತ ಆದಾಯದ ಶೇಕಡಾ 10ರಷ್ಟು ಅಂಶವನ್ನು ವಿದೇಶೀ ಮಾರುಕಟ್ಟೆಗಳಲ್ಲಿ ಪ್ರಚಾರ ಹಾಗೂ ರಫ್ತು ಅಭಿವೃದ್ಧಿ ಕಾರ್ಯಗಳಿಗಾಗಿ ವಿನಿಯೋಗಿಸಬೇಕೆಂದು ಭಾರತೀಯ ವಿದೇಶೀ ವ್ಯಾಪಾರ ಸಂಸ್ಥೆ ಸಲಹೆ ಮಾಡಿದೆ.

ಕುಶಲಕಲಾ ವಸ್ತುಗಳು:-

ಕುಶಲಕಲಾ ವಸ್ತುಗಳ ರಫ್ತಿಗೆ ಮೈಸೂರು ದೀರ್ಘಕಾಲದಿಂದಲೂ ಪ್ರಖ್ಯಾತವಾಗಿದ್ದು ಈ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಸೂಚನೆಗಳಿವೆ. ಅಗರ್‌ಬತ್ತಿ ಕುಶಲಕಲಾವಸ್ತುಗಳಿಗಿಂತ ಸ್ವಲ್ಪ ಭಿನ್ನವಾಗಿದೆಯಾದರೂ, ಇದನ್ನು ಕುಶಲಕಲಾ ವಸ್ತುಗಳಲ್ಲೇ ಸೇರಿಸಲಾಗಿರುವುದು ವಿಚಿತ್ರವಾಗಿದೆ. 19 7—6 ರಲ್ಲಿ ಕುಶಲಕಲಾ ವಸ್ತುಗಳ ಒಟ್ಟು ರಫ್ತು ಆದಾಯ 33 ಲಕ್ಷ ರೂಪಾಯಿಗಳಾಗಿದ್ದು, ಇದರಲ್ಲಿ ಅಗರಬತ್ತಿಯಿಂದಲೇ ದೊರೆತ ಆದಾಯ ೨ ಲಕ್ಷ ರೂಪಾಯಿ. ಕುಶಲಕಲಾ ವಸ್ತುಗಳ ರಫ್ತು 1973—74ರಲ್ಲಿ 1·58 ಕೋಟಿ ರೂಪಾಯಿಗೇರುವ ಸಾಧ್ಯತೆ ಇದ್ದು, ಇದರಲ್ಲಿ ಅಗರ್‌ಬತ್ತಿಯಿಂದ ದೊರೆಯುವ ಅಂಶ ಶೇಕಡಾ 90ರಷ್ಟಾಗಲಿದೆ. ಕರಕುಶಲ ಕೆಲಸಗಾರರು ಮಾಡುವ ಉತ್ಪಾದನೆ ರಾಜ್ಯದ ರಫ್ತು ಕ್ಷೇತ್ರದಲ್ಲಿ ವಹಿಸುವ ಪಾತ್ರ ಈಗಲೂ ತೀರ ಸಣ್ಣದೆಂಬುದಕ್ಕೆ ಇದು ದಾಖಲೆ. ದಂತ ಹಾಗೂ ಗಂಧದ ಮರವನ್ನು ಕರಕುಶಲ ಕೆಲಸಗಾರರಿಗೆ ಧಾರಾಳ ಪ್ರಮಾಣದಲ್ಲೂ ರಿಯಾಯತಿ ದರದಲ್ಲೂ ಒದಗಿಸಿದರೆ, ಪರಿಸ್ಥಿತಿಯನ್ನು ಸುಧಾರಿಸಬಹುದು.

ಎಂಜಿನೀಯರಿಂಗ್ ಉತ್ಪಾದನೆಗಳು:

ಎಂಜಿನೀಯರಿಂಗ್ ಉತ್ಪನ್ನಗಳ ರಫ್ತು 196 —68ರಲ್ಲಿ 2·1 ಕೋಟಿ ರೂಪಾಯಿಗಳಷ್ಟಿದ್ದುದು, 1973—74ರಲ್ಲಿ 13·7 ಕೋಟಿ ರೂಪಾಯಿಗಳಷ್ಟಾಗಲಿದೆಯೆಂದು ನಿರೀಕ್ಷಿಸಲಾಗಿದೆ. ಹಿಂದುಸ್ಥಾನ್ ಯಂತ್ರೋಪಕರಣಗಳ ಕಾರಖಾನೆ, ಭಾರತ ಇಲೆಕ್ಟ್ರಾನಿಕ್ಸ್, ಟೆಲಿಫೋನ್ ಕಾರಖಾನೆ, ಹೊಸ ಸರಕಾರೀ ವಿದ್ಯುತ್ ಉಪಕರಣಗಳ ಕಾರಖಾನೆ, ಮುಂತಾದ ಸಾರ್ವಜನಿಕ ಕ್ಷೇತ್ರದ ಉದ್ಯಮಗಳು, ಇತ್ತೀಚಿನ ವರ್ಷಗಳಲ್ಲಿ ವಿದೇಶೀ ಮಾರುಕಟ್ಟೆಗಳಲ್ಲಿ ಶ್ಲಾಘನೀಯ ಪ್ರಭಾವ ಬೀರಿವೆ. ಖಾಸಗೀ ಕ್ಷೇತ್ರದಲ್ಲೂ ಹಲವು ಘಟಕಗಳು ವಿದೇಶೀ ಮಾರುಕಟ್ಟೆಗಳಲ್ಲಿ ಪ್ರಗತಿ ಸಾಧಿಸಿವೆ. ಮುಂದಿನ ಐದು ಅಥವಾ ಹತ್ತು ವರ್ಷಗಳಲ್ಲಿ ರಾಜ್ಯದ ಎಂಜಿನೀಯರಿಂಗ್ ಉತ್ಪನ್ನಗಳ ರಫ್ತಿನಲ್ಲಿ ನಾಲ್ಕಷ್ಟು ಪ್ರಗತಿಹೊಂದುವ ಸಾಧ್ಯತೆ ವಿಶೇಷವಾಗಿದೆಯಾದರೂ ಲಾಭದಾಯಕ ಉತ್ಪಾದನೆಗೆ ಅಧಿಕ ಗಮನ ನೀಡಬೇಕಾಗಿರುವುದು ಅತ್ಯವಶ್ಯ. ಇತರ ರಾಜ್ಯಗಳಂತೆ ಮೈಸೂರಿನ ಔದ್ಯಮಿಕ ಘಟಕಗಳಿಗೆ ಮಜೂರಿ ಹೆಚ್ಚಳದ ಹಾಗೂ ಕಚ್ಚಾಮಾಲು ಅಭಾವದ ಸಮಸ್ಯೆಯನ್ನು ಎದುರಿಸುತ್ತಿವೆ. ಈ ಸಂದರ್ಭದಲ್ಲಿ ಸರಕಾರೀ ಮೂಲ ಕತ್ವದ ಘಟಕಗಳ ಉತ್ಪಾದನಾ ದಕ್ಷತೆಯ ಕುರಿತು ಪ್ರಸ್ತಾಪಿಸುವುದು ಅಪ್ರಾಸಂಗಿಕವೆನಿಸಲಾರದು. ಇವುಗಳಲ್ಲಿ ಹಲವು ಘಟಕಗಳಿಗೆ ವಿಶೇಷ ರಫ್ತು ಸಾಧ್ಯತೆ ಇದೆಯಾದರೂ, ಗ್ರಾಹಕರ ಬೇಡಿಕೆಗಳು, ಗುಣಮಟ್ಟ ಹಾಗೂ ಪ್ಯಾಕೇಟಿಂಗ್— ಮುಂತಾದವುಗಳ ಕಡೆಗೆ ಇವು ತೋರುತ್ತಿರುವ ನಿರ್ಲಕ್ಷ್ಯದಿಂದಾಗಿ, ಇವುಗಳ ಪ್ರಗತಿಗೆ ಧಕ್ಕೆ ಉಂಟಾಗಿದೆ. ಇವುಗಳ ರಫ್ತು ಹೆಚ್ಚಳದ ಪ್ರಯತ್ನ ಇವುಗಳಿಗೆ ಲಾಭದಾಯಕವಾಗುವುದಷ್ಟೇ ಅಲ್ಲದೆ, ರಾಜ್ಯದ ರಫ್ತು ಆದಾಯಕ್ಕೂ ಸಹಾಯಕವಾಗುವುದು. ಸರಕಾರೀ ಮಾಲಿಕತ್ವದ ವ್ಯಾಪಾರೀ ಸಂಸ್ಥೆ-ಮೈಸೂರು ಸೇಲ್ಸ್ ಇಂಟರ್‌ನ್ಯಾಶನಲ್-ಇದರ ಪುನರ್‌ರಚನೆಯಿಂದಾಗಿ, ಇಂತಹ ಕೆಲವೊಂದು ಲೋಪದೋಷಗಳನ್ನು ಸರಿಪಡಿಸಲಾಗುತ್ತಿದೆ ಎಂಬುದು ಶುಭಸೂಚನೆ. ಈ ಸಂಸ್ಥೆಯು ಸಾಕಷ್ಟು ಪರಿಣತೆ ಗಳಿಸಿಕೊಂಡರೆ ಸಾರ್ವಜನಿಕ ಕ್ಷೇತ್ರದಲ್ಲಿ ಈಗ ಕಂಡು ಬರುತ್ತಿರುವ ರಫ್ತು ತೊಂದರೆಗಳನ್ನು ಕಾಲಕ್ರಮೇಣ ನಿವಾರಿಸಲು ಸಾಧ್ಯವಾಗಬಹುದು.

ರಫ್ತು ಕ್ಷೇತ್ರದಲ್ಲಿ ಪ್ರಗತಿ ಸಾಧಿಸಬೇಕೆಂಬ ಸಾರ್ವತ್ರಿಕ ಜಾಗೃತಿ ಈಗ ತಲೆದೋರಿದೆ. ಈ ಕ್ಷೇತ್ರದಲ್ಲಿ ತಮ್ಮ ಸಾಧನೆಗೆ ಸರಕಾರದ ಮನ್ನಣೆ ದೊರಕಬೇಕೆಂದು ಹಲವಾರು ಘಟಕಗಳು ತೋರಿಸುತ್ತಿರುವ ಆಸಕ್ತಿಯೇ ಇದಕ್ಕೆ ದ್ಯೋತಕವಾಗಿದೆ. ಯಾವುದಾದರೂ ಘಟಕಕ್ಕೆ ಸರಕಾರ ಅರ್ಹತಾಪತ್ರ ಅಥವಾ ಪ್ರಶಸ್ತಿ ನೀಡಿದರೆ, ಅದರ ಉತ್ಪನ್ನದ ಗುಣಮಟ್ಟ ತಾನಾಗಿಯೇ ಸುಧಾರಿಸುತ್ತದೆ ಎಂಬುದನ್ನು ಗಮನಿಸಬೇಕು. ಪ್ರಕೃತದ ರಫ್ತು ಹೆಚ್ಚಳ ಆಂದೋಲನದಲ್ಲಿ ಈ ಪ್ರವೃತ್ತಿ ಪ್ರಮುಖ ಪಾತ್ರ ವಹಿಸುತ್ತದೆ. ಈಗಾಗಲೇ ಹೇಳಿರುವಂತೆ, ಈ ಪ್ರಯತ್ನಗಳು ರಾಜ್ಯ ಸರಕಾರಕ್ಕೆ ಪ್ರತ್ಯಕ್ಷವಾಗಿ ಯಾವುದೇ ರೀತಿಯಲ್ಲಿ ಪ್ರಯೋಜನಕಾರಿಯಾಗದಿರ ಬಹುದು. ಆದರೆ, ಈ ಪ್ರಯತ್ನಗಳಿಂದಾಗಿ ಉತ್ಪನ್ನಗಳ ಗುಣಮಟ್ಟ ಕಾಪಾಡಿಕೊಳ್ಳಬೇಕೆಂಬ ಮನೋಭಾವ ಉತ್ಪಾದಕರಲ್ಲಿ ಬೆಳೆಯುತ್ತಿದೆ ಎಂಬ ಕಾರಣದಿಂದ, ಇಂತಹ ಪ್ರಯತ್ನಗಳು ಮಹತ್ವಪೂರ್ಣ ಎಂಬುದಕ್ಕೆ ಸಂದೇಹವಿಲ್ಲ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 264/70

ಶ್ರೀ ಸೋದೆ ವಾದಿರಾಜಮಠ — ವಾದಿಗಳು

ಮತ್ತು

ಚಂದಯ್ಯ ಶೆಟ್ಟಿ ಕೂಡಾ — ಪ್ರತಿವಾದಿಗಳು

ಯವರೊಳಗೆ

1ನೇ ಪ್ರತಿವಾದಿ ಚಂದಯ್ಯ ಶೆಟ್ಟಿ ಮಾಂದರಬೆಟ್ಟು ರಾಮಯ್ಯ ಶೆಟ್ಟಿ ಯವರ ಮಗ, ಉಡುಪಿ ತಾಲೂಕು ಶಿರ್ವ ಗ್ರಾಮದಲ್ಲಿರುವವರ.

ವಾದಿಗಳು ಗೇಣಿ ಬಾಕಿ ಬಗ್ಗೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 22—2—71ಕ್ಕೆ ಇಟ್ಟಿದೆ. ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟಿಗೆ ಹಾಜರಾಗಿ ಉತ್ತರಿಸತಕ್ಕದ್ದು, ತಪ್ಪಿದ್ದಲ್ಲಿ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆ ತೀರ್ಮಾನಿಸಲಾಗುವುದು.

(By order of Court)

(Sd.) V. G. Kedlaya,
M. A. LL. B.,
Advocate for Plaintiff

ಉಡುಪಿ, D. 28-1-71

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 46/70

ಶ್ರೀ ಸೋದೆ ವಾದಿರಾಜ ಮಠ — ವಾದಿಗಳು

ಮತ್ತು

ಕೂಸು ಶೆಡ್ತಿ ಕೂಡಾ — ಪ್ರತಿವಾದಿಗಳು

ಯವರೊಳಗೆ

ಪ್ರತಿವಾದಿಗಳು:— 1. ಕೂಸು ಶೆಡ್ತಿ, ಕಟ್ಟಿಂಗೆರೆ [illegible] 2. [illegible] ಶೆಟ್ಟಿ, 1ನೇಯವರ [illegible] ಉಡುಪಿ ತಾಲೂಕು ಶಿರ್ವ ಗ್ರಾಮದ [illegible]

ವಾದಿಗಳು [illegible] ಗೇಣಿ ಬಾಕಿ [illegible] ದಾವೆಯು [illegible] 24—2—71ಕ್ಕೆ ಇಟ್ಟಿದೆ. ಆ [illegible] ಕೋರ್ಟಿಗೆ [illegible] ಹಾಜರಾಗಿ ಉತ್ತರಿಸತಕ್ಕದ್ದು, ತಪ್ಪಿದ್ದಲ್ಲಿ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವುದು.

(By order of Court)

(Sd.) V. G. Kedlaya,
M. A. LL. B.,
Advocate for Plaintiff.

ಉಡುಪಿ, D. 28—1—71

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 1-6 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¾% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಅಮೃತಾಂಜನ

● ತಲೆ ನೋವು ● ಮೈ ನೋವು ● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

NAVAYUGA 4-2-1971

Registered with the Registrar
of News Papers for India
under No. R. N. 3546/'57

REGD. No B. G. 176
LICENCE No. 33
Licensed to Post without Prepayment

ಹುತ್ತವ ಬಡಿದರೆ ಹಾವು ಸಾಯದು

(ಒಂದನೇ ಪುಟದಿಂದ)

ವೆಂಬುದು ಶ್ರೀ ಸಾಮಾನ್ಯನಿಗೆ ಗೊತ್ತು. ಡಿಲ್ಲಿಯಲ್ಲೂ ಉಳಿದ ಕೆಲವು ರಾಜಧಾನಿಗಳಲ್ಲಿಯೂ ಇದು ಹಲವರ ಬೆಂಬಲದಿಂದಲೋ ಸ್ವತಂತ್ರವಾಗಿಯೋ ಆಳುತ್ತಿದೆ ಎಂದ ಮಾತ್ರಕ್ಕೆ 'ಆಳುವ' ಎಂಬ ವಿಶೇಷಣ ಸಂಕುಚಿತವಾಗುತ್ತದೆ.

ಜಗಜ್ಜೀವನ ರಾಮರ ನೇತೃತ್ವವಾದರೂ ಇದಕ್ಕೆ ಇದೆಯೆ? ಇಲ್ಲ. ಶ್ರೀ ರಾಮರು ಈಗ ಅದರ ಅಧ್ಯಕ್ಷರಾಗಿದ್ದಾರೆ ಮಾತ್ರ. ಇವರಿಗೆ ಮೊದಲು ಶ್ರೀ ಸುಬ್ರಹ್ಮಣ್ಯಂ ಅಧ್ಯಕ್ಷರಾಗಿದ್ದರು. ಈಗ ಚುನಾವಣೆಗಳು ನಡೆಯದಿರುವುದಾದರೆ, ಮತ್ತೊಬ್ಬನು ಇದರ ಅಧ್ಯಕ್ಷನಾಗಿರುವ ಸಾಧ್ಯತೆಯೂ ಇತ್ತು.

ಶ್ರೀಮತಿ ಇಂದಿರಾ ಗಾಂಧಿಯವರಲ್ಲಿ "ಬೇರೆ ಬೇರೆ ಕಾರಣಗಳಿಂದ" ನಿಷ್ಠೆ ತೋರಿಸಿದವರು ಆಕೆಯನ್ನು ಮುತ್ತಿದರು; ಆಗ ಒಂದು ಗುಂಪಾಯಿತು. ಇದಕ್ಕೆ ಶ್ರೀಮತಿ ಗಾಂಧಿಯವರದ್ದೇ ನಾಯಕತ್ವ; ಆಕೆಯೇ ಇದರ ಜೀವನಾಡಿ. ಮೊನ್ನೆ ಮೊನ್ನೆ ನಡೆದ ಅದರ ಅಧಿವೇಶನದಲ್ಲಿಯೂ ಶ್ರೀಮತಿ ಗಾಂಧಿಯ ಚಿತ್ರವೇ ಸ್ವಯಂ ಸೇವಕರ ಬ್ಯಾಜಿನಲ್ಲಿ ಅಲಂಕೃತವಾಗಿತ್ತು. ಶ್ರೀಮತಿ ಗಾಂಧಿಯವರು ಏನು ಬಯಸುತ್ತಾರೆಯೋ ಅದನ್ನು ಒಪ್ಪಿಕೊಳ್ಳುವುದಷ್ಟೇ ಈ ಗುಂಪಿನ ಕೆಲಸ.

ಆದುದರಿಂದ ಇದನ್ನು ಶ್ರೀಮತಿ ಇಂದಿರಾ ನಾಯಕತ್ವದ ಗುಂಪು ಅಥವಾ ಸಿಂಡಿಕೇಟಿಗೆ ಪ್ರಾಸಬದ್ಧವಾಗಿ ಇಂಡಿಕೇಟ್ ಎಂದು ಸದ್ಯ ಕರೆಯುವುದೇ ಸರಿಯಾದೀತು.

ಇಂಡಿಕೇಟಿನ ಚುನಾವಣಾ ಪ್ರಣಾಳಿಕೆಯನ್ನು ಶ್ರೀಮತಿ ಇಂದಿರಾ ಗಾಂಧಿಯವರು ನವದೆಹಲಿಯಲ್ಲಿ ಬಿಡುಗಡೆ ಮಾಡಿದರು.

ಇದರಲ್ಲಿ ಹನ್ನೆರಡು ತತ್ವಗಳನ್ನು ನಮೂದಿಸಿ, ಅವನ್ನು ಅನುಷ್ಠಾನಕ್ಕೆ ತರಲು ಜನತೆಯ ಬೆಂಬಲವನ್ನು ಅವರು ಯಾಚಿಸಿದರು.

ಸುಧಾರಣಾ ತತ್ವಗಳಿಗೆ ಬದ್ಧವಾದ, ಲೋಕಸಭೆಯಲ್ಲಿ ನಿರ್ಧಾರಕ ಬಹುಮತವಿರುವ ಸುಭದ್ರ ಸರಕಾರ ಇದಕ್ಕಾಗಿ ಅಗತ್ಯವೆಂಬುದನ್ನು ಅವರು ತಿಳಿಸಿದರು. ಸ್ಪಷ್ಟ ಬಹುಮತದ ಬೆಂಬಲವನ್ನು ತಮಗೆ ನೀಡಬೇಕೆಂದು ಅವರು ಮನವಿ ಮಾಡಿದರು.

ಕೆಲವು ವಿರೋಧಿ ಪಕ್ಷಗಳು ಹಾಕಿಕೊಂಡಿರುವ ಮಾರ್ಗದಿಂದ ರಾಷ್ಟ್ರದ ಪ್ರಗತಿಯಾಗದೆಂದೂ ರಾಷ್ಟ್ರದ ಒಗ್ಗಟ್ಟು ಹಾಗೂ ಬಲವನ್ನು ಉಳಿಸಿಕೊಳ್ಳುವುದು ಸಾಧ್ಯವಾಗದೆಂದೂ ಅವರು ಢಣಾಢಂಗುರವಾಗಿ ಸಾರಿದರು.

ತನ್ನ ತತ್ವಗಳೆಲ್ಲವೂ ಸಮಾಜವಾದವನ್ನು ಜಾರಿಗೆ ತರುವ ಏಕಮೇವ ಸಾಧನಗಳೆಂದು ಸಾರಿದರು.

'ಸಮಾಜವಾದ'ವೆಂಬ ಗುರಿ ಮುಟ್ಟಲು ತನ್ನ ದಾರಿಯೊಂದೇ ನಿಷ್ಕಂಟಕವೆಂದೂ ಈ ದಾರಿಯಲ್ಲಿ ವಿರೋಧಿಗಳು ಕಲ್ಲು-ಮುಳ್ಳುಗಳನ್ನು ತಂದೊಡ್ಡಿ ಕಂಗೆಡಿಸುತ್ತಿದ್ದಾರೆಂದು ದೂರಿದರು. ವಿರೋಧಿಗಳಿಗೆ ಇಂತಹ ದುಷ್ಕೃತ್ಯಗಳನ್ನು ಮಾಡಲು ಅವಕಾಶವೊದಗದಂತೆ ತನ್ನ ಗುಂಪನ್ನೇ ನಿರ್ಧಾರಕ ಬಹುಮತದಿಂದ ಆರಿಸಿ ಸರಕಾರದ ಸೂತ್ರಗಳನ್ನು ತನ್ನ ಕೈಯಲ್ಲೇ ಉಳಿಯುವಂತೆ ಮಾಡಿ, ಸಮಾಜವಾದವನ್ನು ಮುಟ್ಟಿಸುವ ಹೊಣೆಗಾರಿಕೆಯನ್ನು ತನಗೇ ಬಿಟ್ಟುಕೊಟ್ಟು ಜನ ಈ ಬಗ್ಗೆ ನಿಶ್ಚಿಂತವಾಗಿರಬೇಕೆಂದು ಬುದ್ಧಿ ಹೇಳಿದರು.

ಹೀಗೆ ಹೇಳುವುದು ಅವರ ಧರ್ಮ; ಕರ್ತವ್ಯ. ಚುನಾವಣೆಗಳಲ್ಲಿ ಸ್ಪರ್ಧಿಸುವ ಯಾವ ಅಭ್ಯರ್ಥಿಯಾದರೂ ಹೀಗೇ ಹೇಳಬೇಕು; ಹೇಳದೆ ಹೋದರೆ, ಆತನ ಉಮೇದ್ವಾರಿಕೆಯನ್ನು ಅನುಮೋದಿಸಿದವರೇ ಅವನಿಗೆ ಮತ ನೀಡಲಿಕ್ಕಿಲ್ಲ.

ರಾಜಧನ ಮೊದಲಾದ ಅಸಂಗತ ಅಧಿಕಾರಗಳನ್ನು ರದ್ದುಗೊಳಿಸುವುದು-ಇತ್ಯಾದಿ ಸಮಾಜವಾದಿ ಕಾರ್ಯಕ್ರಮಗಳನ್ನು ನಿರಾತಂಕವಾಗಿ ವ್ಯವಹೃತಗೊಳಿಸಲು ಸಂವಿಧಾನವನ್ನು ತಿದ್ದುಪಡಿ ಮಾಡುವುದು ಇಂಡಿಕೇಟಿನ ಉದ್ದೇಶ್ಯ.

ಆಸ್ತಿ ಮೇಲಿನ ಹಕ್ಕನ್ನು ತನ್ನ ಪಕ್ಷವು ವಿರೋಧಿಸುವುದಿಲ್ಲವೆಂದೂ ಆದರೂ ಆಸ್ತಿಗಳ ಮೇಲೆ ಮಿತಿ ಹೇರುವುದು ಅಗತ್ಯವೆಂದು ಅದು ಭಾವಿಸುತ್ತದೆಯೆಂದೂ ಪ್ರಣಾಳಿಕೆ ಹೇಳುತ್ತದೆ. ರಾಜಧನಾದಿಗಳು ರಾಜರ ಆಸ್ತಿಯೆಂಬರ್ಥವನ್ನು ಸರ್ವೋಚ್ಛ ನ್ಯಾಯಾಲಯ ಒಪ್ಪಿಕೊಂಡದ್ದರಿಂದ ಅವನ್ನು ರದ್ದುಪಡಿಸಬೇಕಾದರೆ, ಆಸ್ತಿ ಮೇಲಿನ ಹಕ್ಕನ್ನು ಕಸಿದುಕೊಳ್ಳಬೇಕಾಗುತ್ತದೆ. ಆಸ್ತಿಯ ಹಕ್ಕಿಗೆ ಮಿತಿಯನ್ನು ಹೇರುವುದಾದರೆ, ರಾಜಧನಾದಿಗಳಿಗೂ ಒಂದು ಮಿತಿಯನ್ನು ನಿರ್ಧರಿಸಬೇಕಾಗುತ್ತದೆ. ಆದರೆ ಆಗ ರಾಜಧನಾದಿಗಳನ್ನು ರದ್ದು ಮಾಡಿದಂತಾಗುವುದಿಲ್ಲ. ಆದುದರಿಂದ ಈ ತತ್ವವು ಮರಳುಗಾಡಿನಲ್ಲಿ ಮರೀಚಿಕೆಯನ್ನು ತೋರಿಸಿದಂತೆ, ಅಥವಾ, ಆಸ್ತಿ ಹಕ್ಕನ್ನು ಸಮುದ್ರಕ್ಕೆ ತಳ್ಳಿದಂತೆ ಮಾತ್ರ.

ರಾಜ—ಮಹಾರಾಜರೊಡನೆ ಸಂಧಾನ ನಡೆಸಿ, ಬದಲಾದ ವಾತಾವರಣಕ್ಕೆ ಅವರು ಹೊಂದಿಕೊಳ್ಳುವಂತೆ ಮನವೊಲಿಸುವ, ಈ ಮೂಲಕ ಸಾಮಾಜಿಕ ನ್ಯಾಯವನ್ನು ಅನುಷ್ಠಾನಕ್ಕೆ ತರುವ ಇರಾದೆ ಇಂಡಿಕೇಟಿಗೆ ಲೇಶಮಾತ್ರವೂ ಇಲ್ಲವೆಂಬುದಕ್ಕೆ ಈ ಪ್ರಣಾಳಿಕೆ ಕನ್ನಡಿ ಹಿಡಿಯುತ್ತದೆ.

ಉದ್ಯಮ ರಂಗದಲ್ಲಿ ಸರಕಾರಿ ವಲಯಗಳನ್ನು ವಿಸ್ತರಿಸುವ ಆಶಯ ಪ್ರಣಾಳಿಕೆ ಸಾರಿದೆ. ಸರಕಾರಿ ಒಡೆತನದಲ್ಲಿರುವ ಹಲವಾರು ಉದ್ಯಮಗಳು ನಷ್ಟದಲ್ಲಿಯೇ ಮುಂದುವರಿದು ಜನತೆಗೇ ಭಾರವಾಗುತ್ತಿರುವುದು ಸರ್ವ ಜಗಜ್ಜನಿತ. ಹಾಗಿರುವಾಗ, ಮತ್ತಷ್ಟು ಸರಕಾರಿ ರಂಗವನ್ನು ವಿಸ್ತರಿಸುವುದರಿಂದ ಉದ್ಯಮರಂಗದಲ್ಲಿ ಪುನಶ್ಚೇತನ ಮೂಡ ಬಲ್ಲುದೆಂದು ಹೇಳಲಾಗದು.

ಈಗಾಗಲೇ ಸರಕಾರಿ ಒಡೆತನದಲ್ಲಿನ ಉದ್ಯಮಗಳು ದೇಶಕ್ಕೆ ಭಾರವಾಗದಂತೆ ಪ್ರಯತ್ನಿಸುವ ಬಗ್ಗೆ ಯಾವ ಭರವಸೆಯೂ ಇಲ್ಲ.

ಜತೆಯಲ್ಲೇ ಖಾಸಗಿ ಕ್ಷೇತ್ರಕ್ಕೂ ಸೂಕ್ತ ಸ್ಥಾನ ನೀಡುವ ಆಶಯವನ್ನು ಪ್ರಣಾಳಿಕೆ ಹೊಂದಿದೆ.

ಸರಕಾರದ ಕಾರ್ಮಿಕ ನೀತಿ—ಉದ್ಯಮದ ರೀತಿ ನೀತಿಗಳು ಕುಲಗೆಟ್ಟು ಹೋಗಿರುವುದು ಸರ್ವವೇದ್ಯ. ಆದುದರಿಂದ ಉದ್ಯಮರಂಗದಲ್ಲಿ ಹಲವಾರು ಬಗೆಯ ಆತಂಕಗಳು ತಲೆದೋರಿ ಕೆಲವು ಉದ್ಯಮಗಳು ಸ್ಥಗಿತಗೊಂಡಿವೆ; ಕಾರ್ಮಿಕರ ಕೀಟಲೆ ಮಿತಿ ಮೀರಿರುವುದರಿಂದ ಉದ್ಯಮರಂಗಸ್ತ್ರ ಕುಸಿದು ಬಿದ್ದಿದೆ; ಉತ್ಪಾದನೆ ಇಳಿಮುಖವಾಗಿದೆ. ಇವನ್ನು ಸುಧಾರಿಸದೆ ಹೋದರೆ, ಖಾಸಗಿ ಕ್ಷೇತ್ರವು ಉತ್ಸಾಹ ಹೊಂದುವುದೆಂದು ನಂಬಲಿಕ್ಕಾಗದು.

ಅಲಿಪ್ತ ನೀತಿಯನ್ನು ಎತ್ತಿ ಹಿಡಿಯುವ ಪಕ್ಷದ ನೀತಿ ಹಳೆಯದ್ದೇ. ಆದರೆ, ನಮ್ಮ ಅಲಿಪ್ತ ನೀತಿಯ ಬಗ್ಗೆ ದೇಶ ವಿದೇಶಗಳಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಬಹಳ ಸಂದೇಹ ಮೂಡಿದೆ. ನಮ್ಮ ಕಾರ್ಯ ನೀತಿಯೂ ಇದಕ್ಕೆ ಪರಿಪೋಷಕವಾಗಿದೆ. ಕೇಂದ್ರ ಸರಕಾರದ ಒಲವು ಕಮ್ಯೂನಿಜಂನತ್ತ ಸರಿಯುತ್ತಿರುವುದೇ ಇದಕ್ಕೆ ಸಾಕ್ಷಿ.

ದೇಶದ ಆರ್ಥಿಕ ಸ್ಥಿತಿಗತಿಗಳು ಮೇಲೇರದೆ ದೇಶ ಮೇಲೇರುವುದಿಲ್ಲ. ಇರುವ ಸಂಪತ್ತನ್ನು ಕಸಿದು ಹಂಚಿಕೊಳ್ಳುವಷ್ಟರಿಂದಲೇ ಸಮಾಜವಾದ ಸ್ಥಾಪನೆಯಾಗುವುದಿಲ್ಲ. ಉಳ್ಳವರನ್ನೂ ಇಲ್ಲದವರನ್ನಾಗಿಸುವುದರಿಂದ ಸಾಮಾಜಿಕ ನ್ಯಾಯ ಒದಗುವುದಿಲ್ಲ.

ಜನತೆಯಲ್ಲಿನ ಅನಾಸಕ್ತಿ, ಅಕರ್ಮಣ್ಯತೆಗಳನ್ನು ಹೋಗಲಾಡಿಸಿ ಎಲ್ಲರೂ ಪರಿಶ್ರಮಿಗಳೂ ಸರಳ ಜೀವಿಗಳೂ ಉದಾರಿಗಳೂ ಆಗುವಂತೆ ಮಾಡುವ ನೀತಿ ನಮಗೆ ಬೇಕು. ಇದು ಬಹಿರಂಗದಲ್ಲಿ ಗೋಚರವಾಗುವುದಲ್ಲ; ಅಂತರಂಗದಿಂದ ಮೂಡಿಬರಬೇಕು.

ರಕ್ತ ಕೆಟ್ಟು ಮೈತುಂಬ ಕಜ್ಜಿಯೆದ್ದಾಗ, ರಕ್ತ ಶುದ್ಧಿಗೆ ಔಷಧಿ ಕೊಡಬೇಕು; ಬರಿಯ ಲೇಪದಿಂದ ಇದು ವಾಸಿಯಾಗುವುದಿಲ್ಲ.

ಕ್ರಾಂತಿಕಾರಿ, ಪ್ರಗತಿಪರ ನೀತಿ ಅಂತರಂಗ ಶುದ್ಧಿ ಸಾಧಿಸುವ ವಿಧಾನಕ್ಕೆ ಮತ್ತೊಂದು ಹೆಸರು. ನೂರು ಜನರನ್ನು ಕೊಂದು ಕ್ರಾಂತಿ ಸಾಧಿಸಬಹುದು; ಅದೇ ಪ್ರಗತಿಯೆಂದು ಹೇಳಬಹುದು.

ಆದರೆ, ಹುತ್ತವ ಬಡಿದರೆ ಹಾವು ಸಾಯದು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ, ಮಂಗಳೂರು.

P. & S. C. No. 2/1971.

ಮೃತ ಡಿ. ಶೀನಪ್ಪ ಶೆಟ್ರಿಗೆ ಬರಬೇಕಾದ ಐವೇಜಿನ ಬಾಬ್ತು—

ಶಾರದಮ್ಮ ಶೆಡ್ತಿ ವಗೈರೆರು —ಅರ್ಜಿದಾರರು

ಮೇಲ್ಕಂಡ ಅರ್ಜಿದಾರರು ರಾಮಯ್ಯ ಶೆಟ್ರ ಮಗ, ಮೃತಪಟ್ಟ ಶೀನಪ್ಪ ಶೆಟ್ಟಿ, ಕುಂದಾಪುರ ತಾಲೂಕು ದೇವಲಕುಂದ ಗ್ರಾಮದ ನಿವಾಸಿ—ಇವರಿಗೆ ಬರತಕ್ಕ ಐವೇಜಿನ ಬಾಬ್ತು ಸದ್ರಿಯವರ ಹೆಂಡ್ತಿ ಶಾರದಮ್ಮ ಶೆಡ್ತಿಯವರ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕೆಂದು ಅರ್ಜಿ ದಾಖಲು ಮಾಡಿದ್ದು, ಅದಕ್ಕೇನಾದರೂ ಆಕ್ಷೇಪವಿದ್ದಲ್ಲಿ ತಾರೀಕು 22-2-1971ರಂದು ಬೆಳಿಗ್ಗೆ ಸದ್ರಿ ಕೋರ್ಟಿನಲ್ಲಿ ಆಕ್ಷೇಪದಾರರು ಹಾಜರಾಗಿ ತಿಳಿಸತಕ್ಕದ್ದು.

(By order)

Sd/-K. Rajarama Hegde

ಅರ್ಜಿದಾರರ ಎಡ್ವೋಕೇಟ್.

ಮಂಗಳೂರು, ತಾ. 26-1-71

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 22

NAVAYUGA

11—2—1971

ತಮಿಳುನಾಡಿನಲ್ಲಿ ದ್ರಾಮುಕಕ್ಕೆ

ಇಂಡಿಕೇಟಿಗರು ಶರಣುಹೋದರು

ಚುನಾವಣೆಗಳು ಸಮೀಪಗತವಾದುವು; ಕೆಲವು ರಾಜ್ಯಗಳಲ್ಲಿ ನಾಮಪತ್ರಗಳ ಸಲ್ಲಿಕೆ, ಪರಿಶೀಲನೆ, ಹಿಂತೆಗೆತ ಮೊದಲಾದುವೂ ಮುಗಿದುವು. ಉಳಿದೆಡೆ ನಾಲ್ಕೈದು ದಿನಗಳ ಅವಧಿಯಲ್ಲಿ ಎಲ್ಲವೂ ಕೊನೆಗೊಳ್ಳುವುವು.

ಅಲ್ಲಿ ಯಾರು, ಇಲ್ಲಿ ಯಾರು, ಅವರೋ, ಇವರೋ, ಅವರಂತೆ. ಇವರಂತೆ ಎಂದು ಮುಂತಾದ ಊಹಾಪೋಹೆಗಳ ತೆರೆ ಸರಿದು 'ಪ್ರಜಾ ಪ್ರಭು' ಸದಾಕಾಂಕ್ಷಿಗಳ ಜೀವಂತ ಮೂರ್ತಿ ಕಣ್ಣಮುಂದೆ ನಿಲ್ಲತೊಡಗಿದೆ.

ಸಿಂಡಿಕೇಟ್ ತನ್ನ ನೇತೃತ್ವದ ಸಂಯುಕ್ತ ರಂಗದ ಸಲುವಾಗಿ ಕೆಲವೊಂದು ತ್ಯಾಗಗಳನ್ನು ಮಾಡಿತು. ಬೊಂಬಾಯಿಯಿಂದಲೇ ಸ್ಪರ್ಧಿಸುವುದಾಗಿ ಕೊನೆಯ ಗಳಿಗೆಯ ವರೆಗೂ ಪಟ್ಟು ಹಿಡಿದ ಸದೋಬಾ ಪಾಟೀಲರನ್ನು ಬನಸ್ಕಾಂತಕ್ಕೆ ಕಳಿಸುವಲ್ಲಿ ಅದು ಸಫಲವಾಯ್ತು. ಒಂದೆರಡು ಕಡೆಯಲ್ಲಿ ವಿವಾದ ಬಲವತ್ತರವಾಗಿದ್ದರೂ ಅವೂ ಸಮಾಧಾನಕರವಾಗಿ ದೂರಗೊಳ್ಳುವಂತಾಗುವುದು ಅಸಂಭವವಲ್ಲ.

ಸಿಂಡಿಕೇಟಾದಿ ಚತುರ್–ಪಕ್ಷ ಸಂಯುಕ್ತರಂಗಗಳು ಶ್ರೀಮತಿ ಗಾಂಧಿಯ ಪದಚ್ಯುತಿಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡಿವೆ.

ಈ ಗುರಿಯಿಂದ ದೇಶಕ್ಕೇನು ಲಾಭವೆಂದು ಮತದಾರ ಕೇಳಬಹುದು. ಸಹಜ.

ಮೊದಲಿಗೆ ಆಕೆಯ ಗುಂಪನ್ನು ಅಧಿಕಾರದಿಂದ ಇಳಿಸಬೇಕು; ಇದಕ್ಕಾಗಿ ಚುನಾವಣೆಗಳಲ್ಲಿ ಆಕೆಯ ಗುಂಪು ಗೆಲ್ಲದಂತೆ ನೋಡಿಕೊಳ್ಳಬೇಕು. ಹೀಗಾಗಬೇಕಾದರೆ, ವಿವಿಧ ಪಕ್ಷಗಳಲ್ಲಿ ಹಂಚಿಹೋಗುವ ಮತಗಳನ್ನು ತಡೆಯಬೇಕು; ಅದಕ್ಕಾಗಿ ಚುನಾವಣಾ ಹೊಂದಾಣಿಕೆ—ಸ್ಥಾನಗಳ ಹೊಂದಾಣಿಕೆ ಬೇಕು.

ಚುನಾವಣೆಗಳಲ್ಲಿ ಸಂಯುಕ್ತ ರಂಗದ ಅಭ್ಯರ್ಥಿಗಳು ಬಹುಮತ ಗಳಿಸಿದರೆ ಮುಂದೆ ಸರಕಾರ ರಚಿಸುವ ಪ್ರಶ್ನೆ. ಅದಕ್ಕೆ ಈಗಲೇ ಏಕೆ ತಲೆ ಕೆಡಿಸಿಕೊಳ್ಳಬೇಕು?

ಸರಕಾರ ರಚಿಸುವ ಅವಕಾಶ ಲಭ್ಯವಾದರೆ, ವಿವಿಧ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳ ಆಧಾರದ ಮೇಲೆ ಕನಿಷ್ಟ ಕಾರ್ಯಕ್ರಮ ರೂಪುಗೊಳ್ಳುವುದು ಅಸಾಧ್ಯವಲ್ಲ.

ಕುಂಟನೂ ಕುರುಡನೂ ಪರಸ್ಪರ ಸಹಕಾರದಿಂದ ಬೇಡಿ ಹೊಟ್ಟೆ ಹೊರೆಯಲು ಶಕ್ತರಾದಾರು.

ಇಂಡಿಕೇಟ್ ತಾನು ಯಾವ ಪಕ್ಷದೊಡನೆಯೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲವೆಂದು ಅದರ ಅಧ್ವರ್ಯುಗಳು ಸಾರಿದರು. ರಾಜ್ಯ ಮಟ್ಟದಲ್ಲಿ ಬೇಕಾದರೆ ಹೊಂದಾಣಿಕೆಗೆ ಒಪ್ಪ ಬಹುದೆಂದು ಕುಂಟು ಪಂಕ್ತಿ ಸೇರಿಸಿದರು. ಬಂಗಾಳ, ತಮಿಳುನಾಡು ಮತ್ತು ಒಡಿಸ್ಸಾಗಳಲ್ಲಿ ಈ ಕುಂಟು ಪಂಕ್ತಿಯ ಬಲದಿಂದಲೇ ಅದು ಚುನಾವಣಾ ಕಣಕ್ಕೆ ಇಳಿಯ ಬೇಕಾಯ್ತು.

ಇಂಡಿಕೇಟು ಈ ಕುಂಟು ಪಂಕ್ತಿಯನ್ನು ಸೇರಿಸಿದುದರ ಹಿನ್ನೆಲೆ ಭಾರಿಯಿದೆ.

ಕಮ್ಯುನಿಸ್ಟ್ ಪತಾಕೆಗಳ ನಡುವೆ ಅದು ತನ್ನದನ್ನೂ ಹಾರಿಸಿತು–ಕೇರಳದಲ್ಲಿ. ಆದು ಉಳಿದವುಗಳಿಗಿಂತ ಮೇಲಕ್ಕೇರಿತು. ಕಮ್ಯುನಿಸ್ಟರು ಕಣ್ಣು ಕಾಲು ಬಿಟ್ಟರು. ಈಗ ತಮ್ಮ ಉಳಿವು ಅಳಿವಿನ ಪ್ರಶ್ನೆಯನ್ನು ಇಂಡಿಕೇಟಿನ ಕೈಗಳಿಗೊಪ್ಪಿಸಿ ಅವರು ಸರಕಾರ ನಡೆಸುತ್ತಾರೆ.

ಅದೇ ರೀತಿ ತಮಿಳುನಾಡಿನಲ್ಲಿ ದ್ರಾಮುಕವನ್ನು, ಬಂಗಾಳದಲ್ಲಿ ಬಂಗ್ಲಾ ಕಾಂಗ್ರೆಸ್, ಉತ್ಕಳದಲ್ಲಿ ಉತ್ಕಲ ಕಾಂಗ್ರೆಸ್‌ಗಳನ್ನು ಒಡೆದೋ ಹಿಡಿದೋ ತನ್ನ ಚಂಚು ಪ್ರವೇಶವನ್ನದು ಬಯಸಿತ್ತು. ಅತಿಥಿಯಾಗಿ ಬಂದ ಮಾರಿ ಮನೆಯೊಡತಿಯಾದ ಕಥೆ ಅಲ್ಲಿನವರು ಮರೆಯಲಿಲ್ಲ. ಎಲ್ಲ ಮಾತುಕತೆ ಮುರಿಯಿತು.

ಶ್ರೀಮತಿ ಗಾಂಧಿ ರಾಜ್ಯ ವಿಧಾನ ಸಭೆಯ ಆಸೆಯನ್ನು ತ್ಯಾಗ ಮಾಡಲೇ ಬೇಕಾಯಿತು. ತಮಿಳು ನಾಡಿನ ಲೋಕ ಸಭಾ ಸದರ ಬೆಂಬಲವನ್ನು ಗಳಿಸಿಕೊಳ್ಳಲು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಆಕೆ ಈ ಅದ್ಭುತ ತ್ಯಾಗಕ್ಕೆ ಸೊಂಟಕಟ್ಟಿದರು.

ಒಮ್ಮೆ ಬರಡಾದ ಮಾತುಕತೆ ಮತ್ತೆ ಫಲಪ್ರದವಾಯ್ತು.

ಲೋಕಸಭೆಯ ೧೦ ಸ್ಥಾನಗಳನ್ನು ದ್ರಾಮುಕವನ್ನು ಬೇಡಿ ಇಂಡಿಕೇಟ್ ಪಡೆಯಿತು; ಕರುಣಾನಿಧಿಯವರು ಈ ಸ್ಥಾನಗಳನ್ನು ಅನುಗ್ರಹಿಸುವ ಕರುಣೆ ತೋರಿದರು.

ಆದರೆ. ಸುಮ್ಮನೆಯಲ್ಲ. ಪ್ರತಿಯಾಗಿ ವಿಧಾನ ಸಭೆಯ ಸ್ಥಾನಗಳಲ್ಲಿ ನನಗಾವ ಹಕ್ಕೂ ಇಲ್ಲವೆಂದು ಇಂಡಿಕೇಟ್ ಬರೆದು ಕೊಟ್ಟಿತು.

ಇದು ಹೊಂದಾಣಿಕೆಯೆ?

ಅಲ್ಲ, ಅನನ್ಯ ಶರಣಾಗತಿ.

ಈ ಶರಣಾಗತಿಗೆ ಇಂಡಿಕೇಟ್ ಏಕೆ ಸಿದ್ಧವಾಯಿತೆಂಬುದು ಸ್ಪಷ್ಟ. ಅಚ್ಯುತ ಮೆನನ್ನರನ್ನು ಮೋಸಗೊಳಿಸಿದಂತೆ ಕರುಣಾನಿಧಿಯನ್ನೂ ನುಂಗುವ ಇರಾದೆ ಅದರದ್ದು ಇತ್ತು.

ಇದು ಮನವರಿಕೆಯಾಯ್ತು.

ಕರುಣಾನಿಧಿಗೆ ತನ್ನ ಅಧಿಕಾರ ಮದ್ರಾಸದಲ್ಲಿದ್ದರೆ ಸಾಕು; ಡಿಳ್ಳಿಯಲ್ಲಿ ಕಾಮರಾಜರ ಡಾಳ ಉರುಳದಿದ್ದರೆ ಸರಿ.

ಇಂಡಿಕೇಟಿನ ಕಣ್ಣು ಡಿಲ್ಲಿಯಲ್ಲಿ. ಕೈಯಲ್ಲಿರುವ ಒಂದನ್ನಾದರೂ ಉಳಿಸಿಕೊಳ್ಳುವ ಹೆಬ್ಬಯಕೆ. ಆದ್ದರಿಂದ ಮದ್ರಾಸದಲ್ಲಿ ಕರುಣಾನಿಧಿಯೇ ಸದ್ಯ ಉಳಿಯಲಿ; ಕಾಮರಾಜರ ಕಾರೋಬಾರು ಬಾರದಿರಲಿ ಎಂಬ ಆಶಯ.

ಇಬ್ಬರೂ ಒಂದಾಗಿ ಮತಬೇಟೆಗೆ ಹೊರಟರು.

ರಾಷ್ಟ್ರೀಯ ಮಟ್ಟದಲ್ಲಿ ಇಂಡಿಕೇಟ್ ಸಿಂಡಿಕೇಟ್‌ಗಳ ಚುನಾವಣಾ ಘೋಷಣೆಗಳು ಪರ್ಯಾಲೋಚನೀಯ.

ಇಂಡಿಕೇಟು ಅಂದಿನ ಸಮಾಜವಾದದ ಸ್ಥಾಪನೆಗಾಗಿ ರಾಜಧನಾದಿ ವಿಶೇಷ ಸೌಲಭ್ಯಗಳ ರದ್ದು—ಅದಕ್ಕಾಗಿ ಅಗತ್ಯವಾದ ಸಂವಿಧಾನ ತಿದ್ದುಪಡಿ; ಸಾರ್ವಜನಿಕ ಕ್ಷೇತ್ರದ ವಿಸ್ತರಣೆ; ಶ್ರೀಮಂತ-ಬಡವರ ನಡುವಣ ಅಂತರ ನಿವಾರಣೆ. ಇದಕ್ಕಾಗಿ ಆಸ್ತಿಯ ಮೇಲೆ ಮಿತಿ; ನಿರುದ್ಯೋಗ ನಿವಾರಣೆ ಇ. ಇ.

ಆದರೆ, ಈ ಪ್ರಣಾಳಿಕೆಯು ಬರಿಯ ಲೊಳಲೊಟ್ಟೆ. ಆಸ್ತಿಯ ಮೇಲೆ ಮಿತಿ ಹಾಕುವ ಇರಾದೆಯಿರುವವರು ಆ ಮಿತಿಯ ಬಗ್ಗೆ ಬಾಯ್ದೆರೆದಿಲ್ಲ. ಆಸ್ತಿಯ ಮೇಲಿನ ಹಕ್ಕನ್ನು ಸಂರಕ್ಷಿಸ ಬಯಸುವವರು ಆಸ್ತಿಯೆಂದು ಪರಿಗಣಿತವಾದವುಗಳ ರದ್ದು ಮಾಡುತ್ತಾರಂತೆ ನಿರುದ್ಯೋಗ ನಿವಾರಣೆಯ ಘೋಷಣೆ-ಕಂಠ ಶೋಷಣೆ ಮಾತ್ರ. ಬೆಲೆಯೇರಿಕೆ, ಉತ್ಪಾದನೆಗಳ ಬಗ್ಗೆ ಚಿರಮೌನ.

ಈಒಂದೂವರೆ ವರ್ಷದಲ್ಲಿ ಇಂಡಿಕೇಟು ಏನನ್ನೂ ಸಾಧಿಸಲಿಲ್ಲ. ಒಂದು ಹೆಜ್ಜೆ ಮುಂದೆ ಹೋದರೆ, ಎರಡು ಹೆಜ್ಜೆ ಹಿಂದೆ ಬಂದಿದೆ—ಇದು ಅನುಭವ.

ಅದರ ಆರ್ಥಿಕ ನೀತಿ ಉಸುಬಿನ ಮೇಲೆ ನಿಂತಿದೆ. ರಾಜ್ಯಕೀಯವಾಗಿ ತಮಿಳುನಾಡಿನಲ್ಲಿ ಮುಖಭಂಗ ಮಾಡಿದ ಅದು ಆರ್ಥಿಕ ನೀತಿಯಿಂದಾಗಿ ಪಾತಳಿಗಿಳಿದಿದೆ.

ಆದರೆ ವಿರೋಧ ಪಕ್ಷಗಳು ಸ್ಪಷ್ಟತೆಯತ್ತ ತುಸು ಗಮನ ಹರಿಸಿವೆ. ಸಿಂಡಿಕೇಟು ಆಸ್ತಿಯ ಮೇಲಿನ ಹಕ್ಕನ್ನು ಸಂರಕ್ಷಿಸುವ ಭರವಸೆ ನೀಡಿದೆ ಸಂಪತ್ತಿನ ಸಮಾನ ವಿತರಣೆಯ ಆಶ್ವಾಸನ ನೀಡಿದೆ. ಭೂಸುಧಾರಣೆಗಳನ್ನು ಅನುಷ್ಠಾನಕ್ಕೆ ತರಬಯಸಿದೆ. ನಿರುದ್ಯೋಗ ನಿವಾರಣೆಗೆಂದು ಒಂದು ನೂರು ಕೋಟಿ ರೂಪಾಯಿಗಳ ನಿಧಿಯೊಂದನ್ನು ನಿರ್ಮಿಸುವ ವಿಶ್ವಾಸದಾನ ಮಾಡಿದೆ. ಸಂವಿಧಾನ ಬದ್ಧವಾಗಿಯೇ ರಾಜಧನಾದಿ ವಿಶೇಷ ಸೌಲಭ್ಯಗಳನ್ನು ಕೊನೆಗಾಣಿಸ ಬಯಸಿದೆ. ಜನಸಂಘವು ಸಂಪತ್ತಿನ ವಿತರಣೆಯಲ್ಲಿ ಕನಿಷ್ಠ ಮತ್ತು ಗರಿಷ್ಠ ಮಿತಿಯನ್ನು ಒಂದಕ್ಕೆ ಇಪ್ಪತ್ತು ಎಂದು ಸಾರಿದೆ. ಸ್ವತಂತ್ರ ಪಕ್ಷವು ಸಿಂಡಿಕೇಟಿನ ಲಖನೋ ಅಧಿವೇಶನದ ಗೊತ್ತುವಳಿಯ ಆಧಾರದಲ್ಲೇ ಪ್ರಣಾಳಿಕೆ ಹೊರಡಿಸಿದೆ.

ಸಿಂಡಿಕೇಟ್ ನೇತೃತ್ವವಾದಿ ರಂಗದ ಅಂಗ ಪಕ್ಷಗಳ ಪ್ರಣಾಳಿಕೆಗಳ ಮುಂದೆ ಇಂಡಿಕೇಟಿನದು ಸಪ್ಪೆ. ಮಾತ್ರವಲ್ಲ, ಅಸ್ಪಷ್ಟ. ಯಾವ ದೃಢ ನೀತಿಯೂ ಇಂಡಿಕೇಟಿಗೆ ಇಲ್ಲ; ಗಾಳಿ ಬಂದತ್ತ ತೂರಿಕೊಳ್ಳುವುದಷ್ಟೇ ಅದರ ನೀತಿಯೆಂದು ಪ್ರಣಾಳಿಕೆ ಸಾರಿ ಹೇಳುತ್ತದೆ.

ತನ್ನ ಸಮಾಜವಾದಿ ಪ್ರಗತಿಪರ ಕಾರ್ಯಕ್ರಮಗಳಿಗೆ ಪ್ರತಿಗಾಮಿಗಳು ತಡೆಯೊಡ್ಡುತ್ತಿದ್ದಾರೆಂದು ಉದ್ಘೋಷಿಸುವ ಶ್ರೀಮತಿ ಗಾಂಧಿ ಆ ಕಾರ್ಯಕ್ರಮಗಳು ಯಾವುವು ಎಂಬುದನ್ನು ಬಾಯ್ಬಿಡುವುದಿಲ್ಲ.

ತನ್ನ ಸ್ಥಾನ ಭದ್ರತೆಗಾಗಿ ಮಾಡುವುದೆಲ್ಲ ಪ್ರಗತಿ, 'ಸಮಾಜವಾದಿ' ಕಾರ್ಯ

(ಹನ್ನೆರಡನೇ ಪುಟ ನೋಡಿರಿ)

ಪ್ರಾಚೀನ ಭಾರತದಲ್ಲಿ ನ್ಯಾಯಾಡಳಿತ

ಲೇಖಕರು: ಶ್ರೀ ಕೆ. ಜಿ. ವಸಂತ ಮಾಧವ, ಎಂ.ಎ.

ಪೀಠಿಕೆ

ಪ್ರಾಚೀನ ಭಾರತದಲ್ಲಿ ನ್ಯಾಯಾಡಳಿತಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನಿತ್ತಿದ್ದರೆಂದು ವೇದಗಳು, ಸ್ಮೃತಿ, ಕೌಟಿಲ್ಯನ ರಾಜನೀತಿ ಮತ್ತು ಇನ್ನಿತರ ರಾಜನೀತಿಜ್ಞರ ಅಭಿಪ್ರಾಯಗಳಿಂದ ತಿಳಿದು ಬರುತ್ತವೆ. ಒಂದು ರಾಜ್ಯದ ಸುವ್ಯವಸ್ಥೆಯೂ ಅಲ್ಲಿನ ನ್ಯಾಯಾಡಳಿತವನ್ನು ಹೊಂದಿಕೊಂಡಿದೆ ಎಂದು ಪಾಶ್ಚಾತ್ಯ ರಾಜನೀತಿಜ್ಞ ಬ್ರೈಸ್ (Bryce) ಅಭಿಪ್ರಾಯ ಪಟ್ಟಿದ್ದರೆ, ರಾಜ್ಯದ ಮತ್ತು ಪ್ರಜೆಗಳ ಇರುವಿಕೆಯನ್ನು ನ್ಯಾಯಾಡಳಿತ ನಿರ್ಧರಿಸಿ ರಾಜ್ಯವು ಪ್ರಗತಿ ಮಾರ್ಗದಲ್ಲಿ ಹೋಗಲು ಸಹಾಯಕ ಮಾಡುವುದೆಂದು ಪ್ರಾಚೀನ ಭಾರತೀಯ ರಾಜನೀತಿಜ್ಞರ ಅಭಿಪ್ರಾಯ. ನ್ಯಾಯಾಡಳಿತವು ಧರ್ಮದ ಒಂದು ಭಾಗವೆಂದು ಭಾರತೀಯರು ತಿಳಿದಿದ್ದರು. ನ್ಯಾಯಾಡಳಿತವನ್ನು ದಂಡನೀತಿಯೆಂದು ಸ್ಮೃತಿಯಲ್ಲಿ ಕರೆದಿದೆ

ವೇದಕಾಲದಲ್ಲಿ ನ್ಯಾಯಾಡಳಿತೆ:-

ಭಾರತದ ನ್ಯಾಯಾಡಳಿತೆ ಚರಿತ್ರೆಯು ವೇದಕಾಲದಿಂದ ಆರಂಭವಾಗುತ್ತದೆ ಎಂದು ಸಾಧಾರಣವಾಗಿ ಒಪ್ಪಿಕೊಳ್ಳಬಹುದು. ಪ್ರಜೆಗಳು ರಾಜನಿಗೆ ತಮ್ಮ ಉತ್ಪತ್ತಿಯ ಒಂದಂಶವನ್ನು ಕೊಡುವರು. ಅದಕ್ಕೆ ಪ್ರತಿಯಾಗಿ ರಾಜನು ನ್ಯಾಯಾಧೀಶನಾಗಿ ರಾಜ್ಯದಲ್ಲಿ ನ್ಯಾಯಾಡಳಿತ ಸ್ಥಾಪಿಸಬೇಕೆಂಬ ಅಭಿಪ್ರಾಯ ವೇದಗಳಿಂದ ತಿಳಿದು ಬರುತ್ತದೆ. ಆ ಕಾಲದಲ್ಲಿ ನ್ಯಾಯದ ಮುಖ್ಯಾಧಿಕಾರಿ ರಾಜನು. ರಾಜ್ಯದಲ್ಲಿ ನ್ಯಾಯಾಡಳಿತ ಸ್ಥಾಪಿಸುವುದೇ ರಾಜನ ಮುಖ್ಯ ಕರ್ತವ್ಯ. ವೇದಕಾಲದಲ್ಲಿ ರಾಜನು ಎರಡು ವರ್ಗಗಳ ವ್ಯಾಜ್ಯಗಳನ್ನು ತೀರ್ಮಾನಿಸುತ್ತಿದ್ದನು. ಒಂದನೆಯದು ನಾಗರಿಕ ವ್ಯಾಜ್ಯ (Civil Case) ಎರಡನೇಯದು ಅಪರಾಧಿತ ವ್ಯಾಜ್ಯ (Criminal Case) ರಾಜದ್ರೋಹ, ಭ್ರೂಣಹರಣ, ಹತ್ಯೆ, ಕಳವು ಮತ್ತು ಬ್ರಾಹ್ಮಣಹತ್ಯೆಗಳೆಲ್ಲ ಅಪರಾಧಿತ ವ್ಯಾಜ್ಯಗಳಾಗಿವೆ. ವೇದಕಾಲದಲ್ಲಿ ರಾಜದ್ರೋಹ ಮತ್ತು ವಧೆಗಳಿಗೆ ಮರಣ ದಂಡನೆಯನ್ನು ನೀಡಿದರೆ, ಕಳವಿಗೆ ಕಾದ ಕಬ್ಬಿಣದ ಸಲಾಕೆಯ ಬರೆಯು ಶಿಕ್ಷೆಯಾಗಿತ್ತು. ಯಜುರ್ವೇದದಲ್ಲಿ ಗ್ರಾಮ್ಯವಾಧಿನ ಎಂಬ ಶಬ್ದ ಹಲವು ಸಲ ಬರುವುದರಿಂದ ಗ್ರಾಮಗಳಲ್ಲೂ, ನ್ಯಾಯಾಧಿಪತಿಗಳು ಇದ್ದರೆಂದು ಡಾ|| ಸಾಲೆತ್ತೂರರವರು ಅಭಿಪ್ರಾಯಪಡುತ್ತಾರೆ.

ಮನುಸ್ಮೃತಿಯಲ್ಲಿ:—

ಭಾರತದ ನ್ಯಾಯಾಡಳಿತ ಕ್ರಮ ಮನುಸ್ಮೃತಿ ಕಾಲದಲ್ಲಿ ಒಂದು ನಿರ್ದಿಷ್ಟ ರೂಪಕ್ಕೆ ಬಂತು. ಮನುವು ತನ್ನ ಧರ್ಮಶಾಸ್ತ್ರದಲ್ಲಿ ನ್ಯಾಯಾಡಳಿತಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾನೆ. ದಂಡನೀತಿಯು ರಾಜ್ಯವನ್ನು ರಕ್ಷಿಸುವುದೆಂದೂ, ಪ್ರಜೆಗಳನ್ನು ತನ್ನ ತನ್ನ ಸ್ಥಾನದಲ್ಲಿಡುವುವೆಂದೂ ಮತ್ತು ದಂಡನೀತಿಯಿಂದಾಗಿ ಜಗತ್ತಿನಲ್ಲಿ ಶಾಂತಿ ನೆಲೆಸುವುದೆಂದೂ ಮನು ಅಭಿಪ್ರಾಯ ಪಡುತ್ತಾನೆ. ದಂಡನೀತಿಯೇ ರಾಜ್ಯ; ಅದೇ ಸಕಲವನ್ನೂ ನಡೆಸಿಕೊಂಡು ಹೋಗುತ್ತದೆ. ಮತ್ತು ದಂಡದ ಹೆದರಿಕೆಯಿಂದಾಗಿ ಜಗತ್ತಿನಲ್ಲಿ ಸುಖ ಸಂತೃಪ್ತಿ ಇದೆ. ಆದರೆ ಮನುವು ದಂಡನೀತಿಯನ್ನು ರಾಜನು ತನ್ನ ಮನಬಂದಂತೆ ಕಾರ್ಯಕ್ಕೆ ತರುವುದನ್ನು ವಿರೋಧಿಸಿದ್ದಾನೆ. ರಾಜನು ಅಪರಾಧಿಗಳನ್ನು ಶಿಕ್ಷಿಸುವಾಗ ಅವರ ಅಪರಾಧಗಳನ್ನು ಸರಿಯಾಗಿ ವಿಮರ್ಶಿಸಿ ಶಿಕ್ಷಿಸಿದರೆ ಸಕಲ ಜನತೆಗೂ ಕ್ಷೇಮಕರ. ಅಪರಾಧಿಯ ಅಪರಾಧವನ್ನು ಸರಿಯಾಗಿ ವಿಮರ್ಶಿಸದೆ ರಾಜನು ತನ್ನ ದಂಡನೆಯನ್ನು ಚಲಾಯಿಸಿದರೆ ದಂಡನೀತಿಯ ಧ್ಯೇಯವೇ ವಿಫಲವಾಗುವುದು. ಅಪರಾಧಿಯ ಅಪರಾಧವನ್ನು ವಿಮರ್ಶಿಸಿ, ಸಮಯ, ಕಾಲ, ಅಪರಾಧಿಯ ಸಾಮರ್ಥ್ಯತೆಗಳನ್ನು ಗಣನೆಗೆ ತೆಗೆದುಕೊಂಡು ರಾಜನು ತನ್ನ ದಂಡಾಧಿಕಾರವನ್ನು ಅನ್ಯಾಯದಲ್ಲಿ ವರ್ತಿಸುವ ಜನರ ಮೇಲೆ ಚಲಾಯಿಸಬೇಕು. ವ್ಯಾಜ್ಯಗಳನ್ನು ಯಾವ ರೀತಿಯಲ್ಲಿ ತೀರ್ಮಾನಿಸಬೇಕೆಂದು ಮನು ತನ್ನ ಅಭಿಪ್ರಾಯವನ್ನು ಈ ರೀತಿಯಲ್ಲಿ ತಿಳಿಸಿದ್ದಾನೆ. ರಾಜನೇ ಸ್ವತಃ ವ್ಯಾಜ್ಯಗಳನ್ನು ವಿಚಾರಿಸುವಾಗ ರಾಜನು ಗಾಂಭೀರ್ಯದಿಂದ ನ್ಯಾಯಾಲಯ ಪ್ರವೇಶಿಸಬೇಕು. ಅಲ್ಲಿ ಅವನೊಂದಿಗೆ ವೇದಶಾಸ್ತ್ರ ಪಾರಂಗತ ಬ್ರಾಹ್ಮಣರೂ ಮತ್ತು ರೂಢಿ ನಿಯಮಗಳನ್ನು ಸರಿಯಾಗಿ ತಿಳಿದ ಸಲಹೆಕಾರರೂ ಇರಬೇಕು. ಇವರೆಲ್ಲರನ್ನೊಳಗೊಂಡ ನ್ಯಾಯಾಲಯದಲ್ಲಿ ರಾಜನು ಪ್ರತಿಯೊಬ್ಬರ ವ್ಯಾಜ್ಯಗಳನ್ನು ವಿಮರ್ಶಿಸಿ, ಅವರವರಿಗೆ ಸಲ್ಲುವ ಶಿಕ್ಷೆಗಳನ್ನು ಗಂಭೀರ ವಾಣಿಯಿಂದ ಸಾರಬೇಕು. ಈ ಸಮಯದಲ್ಲಿ ರಾಜನು ತನ್ನ ಉಡುಗೆಯ ದೊಡ್ಡಸ್ತಿಕೆಯನ್ನಾಗಲೀ, ಮತ್ತು ಅವನು ಧರಿಸಿದ ಆಭರಣಗಳನ್ನಾಗಲೀ ಅಲ್ಲಿ ತೋರಿಸಬಾರದು. ನ್ಯಾಯ ಪಾಲಿಸುವಲ್ಲಿ ರಾಜನು ಹದಿನೆಂಟು ವಿಧಗಳ ಕಾನೂನಿನ ರೂಢಿ ನಿಯಮಕ್ಕೆ ಹೊಂದಿಕೊಂಡು ನ್ಯಾಯದಾನ ಮಾಡಬೇಕು. ಒಂದು ವೇಳೆ ರಾಜನಿಗೆ ವ್ಯಾಜ್ಯಗಳನ್ನು ತನಿಖೆ ಮಾಡುವಲ್ಲಿ ಆಯಾಸವಾದರೆ ಅವನ ಮಂತ್ರಿ ಅವನ ಸ್ಥಾನವನ್ನು ವಹಿಸಿ ನ್ಯಾಯದಾನ ಮಾಡಬೇಕು.

ಕೌಟಿಲ್ಯನ ಕಾಲದಲ್ಲಿ:—

ನ್ಯಾಯಾಡಳಿತವೇ ರಾಜ್ಯದ ಗುರಿಯೆಂದು ಕೌಟಿಲ್ಯನು ಸಾರಿದ್ದಾನೆ. ರಾಜದಂಡವು ರಾಜನೀತಿಯಾಗಿದು ಪ್ರಗತಿ ಮಾರ್ಗದಲ್ಲಿ ರಾಜ್ಯವನ್ನು ಕೊಂಡುಹೋಗಲು ಸಾಧನವಾಗಿದೆ. ರಾಜದಂಡವು ರಾಜ್ಯದ ಸಂಪತ್ತನ್ನು ಉಳಿಸಿಕೊಳ್ಳುವ, ಇದ್ದ ಸಂಪತ್ತನ್ನು ಅಭಿವೃದ್ಧಿಗೊಳಿಸುವ, ಮತ್ತು ಇದ್ದ ಸಂಪತ್ತನ್ನು ಜನರಲ್ಲಿ ನ್ಯಾಯವಾಗಿ ಹಂಚಿ ಹೋಗುವ ಸಾಧನವಾಗಿದೆಯೆಂದು ತನ್ನ ಅರ್ಥಶಾಸ್ತ್ರದಲ್ಲಿ ತಿಳಿಸಿದ್ದಾನೆ. ರಾಜ್ಯದಲ್ಲಿ ರಾಜನು ನ್ಯಾಯ ಪರಿಪಾಲನೆಯಲ್ಲಿ ಉದಾಸೀನತೆ ತೋರಿಸಿದರೆ ರಾಜ್ಯದಲ್ಲಿ ಅರಾಜಕತೆ ತಲೆದೋರಿ ದುಷ್ಟರು ಸಜ್ಜನರನ್ನು ಪೀಡಿಸುವರು. ಇದನ್ನೆ ಕೌಟಿಲ್ಯನು ಮತ್ಸ್ಯನ್ಯಾಯವೆಂದು ಕರೆದಿದ್ದಾನೆ. ನ್ಯಾಯಾಡಳಿತವಿರುವ ರಾಜ್ಯದಲ್ಲಿ ದುರ್ಬಲರು ಪ್ರಬಲರನ್ನು ಎದುರಿಸುವರು. ನ್ಯಾಯ ತೀರ್ಮಾನದಿಂದ ಜನತೆಯಲ್ಲಿ ಪರಿಣಾಮ ಆಗದಿದ್ದರೆ ಆ ನ್ಯಾಯ ತೀರ್ಮಾನ ಉಪಯೋಗವಿಲ್ಲದ್ದು. ಕೌಟಿಲ್ಯನ ಗುರು ಸಾಮಾಜಿಕ ನ್ಯಾಯವನ್ನು ಕಾಪಾಡಲು ಉಗ್ರಶಿಕ್ಷೆ ಅಗತ್ಯವೆಂದು ವಾದಿಸಿದರೆ ಕೌಟಿಲ್ಯನು ಅವನ ಅಭಿಪ್ರಾಯವನ್ನು ವಿರೋಧಿಸಿ ಶಿಕ್ಷೆಯು ಅಪರಾಧಕ್ಕೆ ತಕ್ಕಂತಿರಬೇಕೆಂದು ತಿಳಿಸಿದ್ದಾನೆ. ಉಗ್ರದಂಡನಾದ ರಾಜನು ಪ್ರಜೆಗಳಿಗೆ ಉದ್ವೇಗವನ್ನುಂಟು ಮಾಡುತ್ತಾನೆ. ಮೃದುದಂಡನಾಗಿದ್ದರೆ ರಾಜನು ಪ್ರಜೆಗಳಿಂದ ಅನಾದರ ಪಡೆಯುತ್ತಾನೆ. ದೇಶ, ಕಾಲ, ಅಪರಾಧಗಳಿಗೆ ಅನುರೂಪವಾದ ದಂಡವನ್ನು ಉಪಯೋಗಿಸುವ ರಾಜನು ಪೂಜ್ಯನಾಗುತ್ತಾನೆ. ದೇಶದ ಶಾಂತಿ ಸೌಹಾರ್ದಗಳನ್ನೇರ್ಪಡಿಸಿ ದುಷ್ಟರನ್ನು ಅಡಗಿಸಿ ನ್ಯಾಯದ ವಿಷಯಗಳಿಗೆ ಉತ್ತೇಜನವನ್ನೀಯಲು ರಾಜನು ತನ್ನ ದಂಡನೀತಿಯನ್ನು ಕಾರ್ಯರೂಪಕ್ಕೆ ತರಬೇಕೆಂದು ಕೌಟಿಲ್ಯನ ಅಭಿಮತ. ಅಪರಾಧ ಮತ್ತು ಅಪರಾಧಿಗಳನ್ನು ನಿರ್ಣಯಿಸುವುದಕ್ಕೆ ನ್ಯಾಯಾಂಗವು ಸಂಗ್ರಹಣ ದ್ರೋಣ ಮುಖ ಮತ್ತು ಸ್ಥಾನಿಯವೇ ಮೊದಲಾದ ಮುಖ್ಯ ಸ್ಥಳಗಳಲ್ಲಿ ನ್ಯಾಯಸ್ಥಾನಗಳಿದ್ದಿದ್ದವು. ಸಾಲ, ಮಾನಭಂಗ, ಹೊಡೆದಾಟ, ದಾಯ ವಿಭಾಗ ಮುಂತಾದ ವ್ಯವಹಾರ

(ಹನ್ನೊಂದನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. NO. 165/1970.

ಸೂರಪ್ಪ ಸೆಟ್ಟಿ — ವಾದಿ

1 ಸುಬ್ರಾಯ ಹೆಬ್ಬಾರ್ 2 ಗಣಪಯ್ಯ ಹೆಬ್ಬಾರ್ 3 ಅನಂತ್ ಹೆಬ್ಬಾರ್ —ಪ್ರತಿವಾದಿರು

ಸದರಿ ದಾವೆಯ 2ನೆ ಪ್ರತಿವಾದಿ ಗಣಪಯ್ಯ ಹೆಬ್ಬಾರ್–ಸುಬ್ರಾಯ ಹೆಬ್ಬಾರರ ವ ಗ, ಕುಂದಾಪುರ ತಾಲ್ಲೂಕು ನಂಬ್ರ 28ನೇ ಕೆರಾಡಿ ಗ್ರಾಮದಲ್ಲಿರುವವ, ಇವರಿಗೆ—

ಸದ್ರಿ ದಾವೆಯ 1ನೆ ಪ್ರತಿವಾದಿ ಸ್ವತಹಾ ಮತ್ತು 2–3ನೇ ಪ್ರತಿವಾದಿಗ ಮೈನರ ಮಕ್ಕಳ ಗಾರ್ಡಿಯನನಾಗಿ ಸಹಾ ವಾದಿಗೆ ತಾರೀಖು 28–4–1964ರಲ್ಲು ರೂಪಾಯಿ1700/ಕ್ಕೆ ರಚಿಸ್ತ್ರಿ ಖತಿ ಬರೆದುಕೊಟ್ಟು ಈತು ದಸ್ತವೇಜು ಪ್ರಕಾರ ಬಹಾ ಅಸಲು ಬಡ್ಡಿ ಹಣ ರೂಪಾಯಿ 1704/ವಗೈರೆ ಬಗ್ಗೆ ನಿಂದು ಮೇಲೆ ಮಾಡಿದ ಸದ್ರಿ ದಾವೆಯು ತಾ. 20-2-1971ಕ್ಕೆ ಆಖ್ಯರೆ ಸಾರಿ ತನ್ಗಿಗೆ ಯಿದೋಣಾಗಿಯದೆ. ಈ ಕುರಿತು ನಿಂವು ಆಕ್ಷೇಪ ಇದ್ದಲ್ಲಿ ಸದರಿ ತಾರೀಕಿನ ದಿವಸ ಹಗಲು 11ಗಂಟೆಗೆ ಈ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳ ಕಕ್ಕದ್ದು ತಪ್ಪಿದಲ್ಲಿ ದಾವೆಯನ್ನು ಏಕಪಕ್ಷದಲ್ಲಿ ತೀರ್ಮಾನಿಸಲಾಗ್ಡೇತು.

(ಕೋರ್ಟು ಹ್ಯುಂ ಪ್ರಕಾರ)

M. A. Shetty,

ವಾದಿಯ ಕಡೆ ಎಡ್ವೊಕೇಟ್

ಕುಂದಾಪುರ, ತಾರೀಖು 21-1-1971.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಡೊಂಬರಾಟಕ್ಕೆ ಇತಿಶ್ರೀ ಹಾಡು

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 22

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಕಾಂಗ್ರೆಸ್‌ನ ಎರಡು ತುಕ್ಕಡಿಗಳ ಹಣಹಣೆಯನ್ನು ಕಾಣಬೇಕಾದರೆ ಕರ್ನಾಟಕಕ್ಕೆ ಬನ್ನಿ ಎಂದು ಕೈಯೆತ್ತಿ ಕರೆಯಬೇಕೆನಿಸುತ್ತದೆ. ಲೋಕಸಭೆಯ ವಿಸರ್ಜನೆಯೊದ ಮೇಲೆ ಇಲ್ಲಿ ನಡೆದಷ್ಟು ಪ್ರಭಾವೀ ಅಭಿಪ್ರಾಯಾಂತರ ತತ್ಕಾರಣ ಪಕ್ಷಾಂತರಗಳು ಪ್ರಾಯಃ ಅದಕ್ಕೆ ಮೊದಲಿನ ಒಂದೂ ಕಾಲು ವರ್ಷದಲ್ಲಿ ನಡೆಯಲಿಲ್ಲವೆನ್ನುವುದು ಸರ್ವವೇದ್ಯ. ಲೋಕಸಭೆಗೆ ನಡೆಯುವ ಚುನಾವಣೆಗಳು ಮುಂದಿನ ವರ್ಷ ನಡೆಯುವ ವಿಧಾನಸಭಾ ಚುನಾವಣೆಗಳಿಗೆ ಕನ್ನಡಿ ಹಿಡಿಯುವುದು ಸಾಧ್ಯವಾದುದರಿಂದ ಇಲ್ಲಿನ ಚುನಾವಣೆಗಳಿಗೆ ಮಹತ್ವ ಬಂದಿದೆ. ಸಿಂಡಿಕೇಟಿನ ಗಂಡುಭೂಮಿಯೆಂದು ಕರೆಯಲಾದ ಇಲ್ಲಿನ ವಿಧಾನ ಸಭೆಯಲ್ಲಿ ಇಂಡಿಕೇಟಗರ ಬೆಂಬಲ ೫೦ಕ್ಕೆ ಏರಿತು. ಶ್ರೀ ವೀರೇಂದ್ರ ಪಾಟೀಲರ ಸಂಪುಟದ ಹಿರಿಯ ಮಂತ್ರಿಗಳಾಗಿದ್ದ ಶ್ರೀಗಳಾದ ಮಹಮ್ಮದಾಲಿ ಮತ್ತು ಪುಟ್ಟ ಸ್ವಾಮಿಯವರು ಆಡಳಿತ ಕಾಂಗ್ರೆಸಿನತ್ತ ಒಲಿದದ್ದು ಕಡಿಮೆ ಮಹತ್ವದ್ದಲ್ಲ. ಇವರಿಬ್ಬರೂ ಒಂದಕ್ಕಿಂತ ಹೆಚ್ಚು ಬಾರಿ ತಮ್ಮ ಪಕ್ಷಾಂತರವನ್ನು ನಿರಾಕರಿಸಿದವರು. ಬೆಂಕಿಯಿಲ್ಲದೆ ಹೊಗೆಯೇಳಬೇಕೆಂಬುದಕ್ಕೆ ಈ ಮಹಾಶಯದ್ವಯರ ವರ್ತನೆ ಒಳ್ಳೆಯ ಉದಾಹರಣೆ. ಇದೇ ರೀತಿಯ ಪಕ್ಷಾಂತರ ನಡೆಯುತ್ತ ಹೋಗುವುದಾದರೆ, ವ್ಯಕ್ತಿಯ ಅಭಿಪ್ರಾಯವು ಅಧಿಕಾರ—ಸ್ವಾರ್ಥಗಳನ್ನೇ ಬಯಸಿ ಬದಲಾಗುವುದಾದರೆ, ಹೂವಿಂದ ಹೂವಿಗೆ ಹಾರುವ ದುಂಬಿಗೂ ವ್ಯಕ್ತಿಗೂ ಏನೂ ವ್ಯತ್ಯಾಸವಿಲ್ಲವೆಂದಾಯ್ತು. ಚುನಾವಣೆಗೆ ಮುನ್ನಾದಿನವೇ ಅಭ್ಯರ್ಥಿ ಪಕ್ಷಾಂತರಗೊಳ್ಳಬಹುದು; ಚುನಾವಣಾ ಪರಿಣಾಮ ಪ್ರಕಟವಾದ ದಿನವೇ ಗೆದ್ದವನು ಪಕ್ಷ ಬದಲಿಸಬಹುದು! ರಾಜ್ಯಕೀಯ ಪಕ್ಷವೆಂಬುದು ಹೀಂಗಿಯಾಗಿ ದಿನಕ್ಕೆ ಮೂರು ಸಲ ಬದಲಾವಣೆಗೊಳ್ಳುವಂತಾಗುವುದರಿಂದ ವ್ಯಕ್ತಿಗತ ಕಲ್ಯಾಣ ಸಾಧ್ಯವಾದೀತು; ಸಾಮೂಹಿಕ ಕಲ್ಯಾಣ ಅಸಾಧ್ಯವೇ ಸರಿ.

ರಾಜ್ಯದಲ್ಲಿ ಸಿಂಡಿಕೇಟು ಜನಸಂಘ, ಪ್ರ.ಸ.ಪಾ. ಮೊದಲಾದವರೊಡನೆ ಚುನಾವಣಾ ಹೊಂದಾಣಿಕೆ ಮಾಡಿಕೊಂಡಿದೆ. ಈ ಹೊಂದಾಣಿಕೆಯೊದರೂ ಕೆಲವೆಡೆ ತೀರ ಶಿಥಿಲವಾಗಿದೆಯೆನಿಸುತ್ತದೆ. 'ಬೆಂಬಲ' ಎಂಬ ಪದದ ವ್ಯಾಖ್ಯಾನ "ತಮ್ಮ ಪಕ್ಷದಿಂದ ಅಧಿಕೃತ ಅಭ್ಯರ್ಥಿಗಳನ್ನು ನಿಲ್ಲಿಸದಿರುವುದು" ಎಂದು ಮಾಡಿದ್ದರಿಂದಲೇ ಹೊಂದಾಣಿಕೆಯ ಉದ್ದೇಶ್ಯ ಈಡೇರುವುದಿಲ್ಲ. ಕೆಲವೆಡೆ ಈ ವ್ಯಾಖ್ಯಾನವೂ ಅನರ್ಥಕಾರಿಯೆನಿಸುವಂತಾಗಿದೆ. ಆದರೆ, ಇಂಡಿಕೇಟು ಎಲ್ಲ ಮತದಾರ ಕ್ಷೇತ್ರಗಳಲ್ಲೂ ಸ್ವತಂತ್ರವಾಗಿ ಸ್ಪರ್ಧೆಗಿಳಿದಿದೆ; ಸೋಲು-ಗೇಲುಗಳ ಬಗ್ಗೆ ಅದಕ್ಕೆ ನಿಶ್ಚಿಂತೆ. ದ್ವಿಮುಖ ಸ್ಪರ್ಧೆಯನ್ನು ತಪ್ಪಿಸಿ ಸಿಂಡಿಕೇಟ್ ಸಂಯುಕ್ತರಂಗ, ಗೆಲ್ಲದಂತೆ ಇಂಡಿಕೇಟ್ ಪ್ರಯತ್ನಿಸುತ್ತಿದೆ; ಇನ್ನೂ ಕೆಲವು 'ಚುನಾವಣಾ ಹುಚ್ಚರೂ' ಇದರಲ್ಲಿ ಮಿತಿಮೀರಿದ ಆಸಕ್ತರಾಗಿದ್ದಾರೆ. ಹಾಗಿರುವಾಗ ಪರಿಣಾಮವೆಲ್ಲಿ ನಿಲ್ಲಬಹುದೆಂದು ಹೇಳ ಬರುವುದಿಲ್ಲ. ಆದುದರಿಂದಲೇ ಎರಡೂ ಕಾಂಗ್ರೆಸ್ ಬಣಗಳು ತಂತಮ್ಮ ಪ್ರಚಾರವನ್ನು ಬಲವಾಗೇ ಮಾಡುತ್ತಿವೆ. ತನ್ನ ಗಂಡು ಭೂಮಿಯ ಸಂರಕ್ಷಣೆ ಸಿಂಡಿಕೇಟಿನ ಧರ್ಮವೆನಿಸಿದರೆ, ಈ ಗಂಡು ಭೂಮಿಯನ್ನು ತಮ್ಮ ಕೈವಶ ಮಾಡಿಕೊಳ್ಳುವುದು ಇಂಡಿಕೇಟಿನ ಕ್ಷಾತ್ರಧರ್ಮವಾಗಿದೆ.

ರಾಜ್ಯದ ಸಿಂಡಿಕೇಟ್ ಸರಕಾರ ಇಡಿಯ ಭಾರತದಲ್ಲೇ ಪ್ರಗತಿಪರವೆಂದು ಅದರಿಂದ ಹೊರ ಬಂದು ಇಂಡಿಕೇಟಿನತ್ತ ಒಲಿದ ಮಾಜಿ ಸಚಿವ ಶ್ರೀ ಪುಟ್ಟ ಸ್ವಾಮಿಯವರ ಪ್ರಶಸ್ತಿ ಪತ್ರ. ಇದೇ ಸರಕಾರವನ್ನು ಪ್ರತಿಗಾಮಿಯೆನ್ನುತ್ತಾರೆ ಅವರ ಇಂಡಿಕೇಟ್ ಸ್ನೇಹಿತರು. 'ಪ್ರಗತಿ' ಎಂಬ ಪದವೂ ತನ್ನ ಮೂಲಾರ್ಥವನ್ನು ಕಳೆದುಕೊಂಡಿದೆ; ತಾವು ಮಾಡ ಬಯಸುವುದೇ ಪ್ರಗತಿಯೆನ್ನುತ್ತಾರೆ ಇಂಡಿಕೇಟಗರು (ಏಕೆಂದರೆ, ಅವರು ಮಾಡಿದ್ದು ಎಲ್ಲಿಯೂ ಏನೂ ಇಲ್ಲ). ಕರ್ನಾಟಕ—ಕೇಂದ್ರ ಸರಕಾರಗಳ ನಡುವೆ ಭಾರಿ ಭಿನ್ನಮತಗಳಿವೆ. ಶ್ರೀಮತಿ ಗಾಂಧಿ ಪ್ರಧಾನಿಯಾಗಿ ದಿಲ್ಲಿಯಲ್ಲಿ ಅಧಿಕಾರ ಸ್ವೀಕರಿಸಿದಂದಿನಿಂದ ಡಿಳ್ಳೀಶ್ವರಿಯು ಕನ್ನಡ ಭುವನೇಶ್ವರಿಯನ್ನು ಮಲತಾಯಿ ದೃಷ್ಟಿಯಿಂದಲೇ ನೋಡುತ್ತಿದ್ದಾಳೆ. ಕಾಂಗ್ರೆಸ್ ವಿಭಜನೆಗೊಂಡ ಬಳಿಕ ಈ ದೃಷ್ಟಿ ಮತ್ತಷ್ಟು ತೀಕ್ಷ್ಣವಾಗಿದೆ. ಕಾವೇರಿ ನೀರನ್ನು ತಮಿಳರಿಗೆ ಕುಡಿಸಬೇಕು; ಬೆಳಗಾಂವಿಯನ್ನು ಮರಾಠಿಗರ ಕೈಗಳಲ್ಲಿಡಬೇಕು—ಇದು ಶ್ರೀಮತಿ ಇಂದಿರಾಜಿಯ ಮನೀಷೆ. ಇದನ್ನು ಕನ್ನಡಿಗರು ಎಂದಿಗೂ ಸಹಿಸಲಾರರು. ಇವುಗಳ ಪ್ರಸ್ತಾಪವನ್ನು ಸಿಂಡಿಕೇಟ್ ತನ್ನ ಚುನಾವಣಾ ಪ್ರಚಾರದಲ್ಲಿ ಮಾಡಿದರೆ, ಇಂತಹ ಪ್ರಸ್ತಾಪವು ಅಲ್ಪತನವೆನ್ನುತ್ತಾರೆ ಇಂಡಿಕೇಟಿಗರು. ತನ್ನನ್ನು ತೇದುಕೊಂಡು ಶ್ರೀಗಂಧ ಪರರಿಗೆ ಸುಖ ನೀಡುತ್ತದೆ; ನಿಜ. ಇದು ಅದರ ಧಾರಾಳತನ. ಕನ್ನಡಿಗರೂ ಧಾರಾಳತನ ತೋರಿಸಬೇಕು; ಅಲ್ಪೇಚ್ಛಿಗಳಾಗಬಾರದು ಎಂದು ಇಂಡಿಕೇಟಿಗರ ಉಪದೇಶ. ಇದೇ ಉಪದೇಶವನ್ನು ಅವರು ತಮಗೆ ನೀಡಿಕೊಂಡು ಹಾಗೆ ವರ್ತಿಸಬಾರದೇಕೆ? ಚುನಾವಣೆಗಳಿಗೆ ಅಂಟಿಕೊಳ್ಳುವುದು ಅಲ್ಪೇಚ್ಛಿತನವಲ್ಲವೇನು? ಅಧಿಕಾರ ಬಯಸುವುದು ಅಲ್ಪತನವೆನಿಸದೇನು? ಓದುವುದು ಶಾಸ್ತ್ರ; ಇಕ್ಕುವುದು ಗಾಳವೆಂಬಂತೆ ಸಿಂಡಿಕೇಟನ್ನು 'ಅಲ್ಪತನ'ದ ಪಕ್ಷವೆಂದು ದೂರಿ ತಮ್ಮವನ್ನು ಉದಾರಿಯೆಂದು ಬಣ್ಣಿಸುತ್ತ ಬಳಿದುಕೊಳ್ಳುವ ಇಂಡಿಕೇಟ್ ಬಾಲಂಗೋಚಿಗಳಿಗೆ ಕರ್ನಾಟಕದ ಜನ ಒಲಿಯುವುದು ಬೇಡ. ಡಿಳ್ಳಿಯಲ್ಲಿ ತನ್ನ ಪತಾಕೆ ಹಾರುವುದು ಮಾತ್ರ ಬೇಕು. ಡಿಳ್ಳಿಯಲ್ಲಿರುವ ಇಂಡಿಕೇಟ್ ಸರಕಾರ ಬದಲಾದರೆ ಮಾತ್ರ ಕನ್ನಡಿಗರಿಗೆ ನ್ಯಾಯ ದೊರೆಯುವ ಆಶೆಯಿದೆ. ಜನತೆ ತಾವು ಬಯಸುವ ಸರಕಾರವನ್ನು ರಚಿಸಬಲ್ಲುದು; ಕನ್ನಡಿಗರು ತಮ್ಮ ಹಿತ ಯಾರ ಕೈಗಳಲ್ಲಿ ಭದ್ರವಾಗಬಲ್ಲುದೆಂದು ಪರಾಮರ್ಶಿಸಿ ಮತದಾನ ಮಾಡಬೇಕು. ಇದು ಪ್ರಾದೇಶಿಕತೆಯ ಅಭಿಮಾನವಲ್ಲ; ಎರಡೂವರೆ ಕೋಟಿ ಕನ್ನಡಿಗರ ಜೀವನ—ಮರಣದ ಪ್ರಶ್ನೆ. ಇದು ದೇಶದ್ರೋಹದ ಕೃತಿಯಲ್ಲ; ದೇಶ ರಕ್ಷಣೆಯ ಸಾಧನ. ವ್ಯಕ್ತಿ—ವ್ಯಕ್ತಿಯೂ ತಾನು ಬಯಸುವವನಿಗೆ ಮತನೀಡುವಾಗ ತನ್ನ 'ಕಲ್ಯಾಣ'ವನ್ನೇ ಬಯಸುತ್ತಾನೆ. ಇದು ಸಂವಿಧಾನದತ್ತ ಅಧಿಕಾರ. ಕನ್ನಡಿಗರೂ ತಮಗೆ ಸಂವಿಧಾನ ನೀಡಿದ ಈ ಅಧಿಕಾರವನ್ನು ಸುಯೋಗ್ಯ ರೀತಿಯಲ್ಲಿ ಬಳಸಿಕೊಂಡು ಶ್ರೀ

(ಹತ್ತನೇ ಪುಟ ನೋಡಿರಿ)

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

ಮೇ ತಿಂಗಳಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಗೇಹರಾಜ್ಯದಲ್ಲಿ

ದಂಡಂ ದಶಗುಣಂ ಭವೇತ್

"ಅಂತೂ ಒಮ್ಮೆಗೆ ಮುಗಿಯಿತೂಂತಾಯ್ತು."

"ಏನು?"

'ಮತ್ತಿನ್ನೇನು? ಮಂಗಳೂರು ಗಲಭೆಗಳು'

'ಆದರೂ ನೋಡು, ಈ ಗಲಭೆ ಮಂಗಳೂರಿಗೆ ಮಾತ್ರ ಸೀಮಿತವಾಗಿರಲಿಲ್ಲ; ಅದರ ಕಾವು ಇಡಿಯ ಜಿಲ್ಲೆಗೂ ಹರಡಿತ್ತು.'

'ಹ್ಞೂಂ, ನಮ್ಮೂರಿಗೂ ಅದರ ರವೆ ಬೀಸಿತು ಅಂದ ಮೇಲೆ ಹಾಗೇ ಅಂದುಕೊಳ್ಳಬೇಕು.'

"ಪ್ರಕರಣ ಮುಗಿಯಿತಲ್ಲ; ಅದೇ ಸಂತೋಷ...."

"ಹಾಗಲ್ಲಾರಿ, ಇದು ಆರಂಭವಾದದ್ದು ಹೇಗೇಂತ?"

'ಯಾರನ್ನು ಕೇಳೋದು? ಅಂತೂ ಸುರುವಾಯ್ತು.'

'ಅಂದ್ರೆ ಏನೂ ಕಾರಣವಿಲ್ದೆ ಹೀಗಾಯ್ತೇನು?'

'ಅಲ್ಲ, ಯಾವುದನ್ನು ಕಾರಣ ಅಂತ ಅನ್ನೋದು ಹೇಳು. ನಿಜವಾದ ಕಾರಣ ಭಗವಂತನಿಗೇ ಗೊತ್ತಿಲ್ಲಾಂತ ತೋರುತ್ತೆ.'

"ಯಾಕೆ?"

"ನೋಡಮ್ಮ, ಬಸ್ಸಿನಲ್ಲಿ ಓವರ್‌ಲೋಡ್ ಮಾಡಬಾರದು—ಇದು ಕಾನೂನು."

'ಸರಿ.'

"ಓವರ್‌ಲೋಡಾದ ಬಸ್ಸಿನಿಂದ ಹೆಚ್ಚಿನ ಪ್ರಯಾಣಿಕರನ್ನು ಇಳಿಸಲು ಕಂಡಕ್ಟರ ಅಸಫಲನಾದ. ಬಸ್ಸನ್ನು ಅನಿವಾರ್ಯವಾಗಿ ಪೋಲೀಸ್ ಸ್ಟೇಶನ್ನಿಗೆ ಒಯ್ಯಲಾಯ್ತು. ಅಲ್ಲಿ ಒಬ್ಬ ವಿದ್ಯಾರ್ಥಿಯನ್ನು ಬಸ್ಸಿನಿಂದ ಇಳಿಸಲಾಯ್ತು—ಇದು ವಿದ್ಯಾರ್ಥಿ ಅಸಮಾಧಾನಕ್ಕೆ ಮೂಲವಿರಬಹುದು. ಶಾಂತಿ ಸಮಿತಿಯಲ್ಲಿ ಒಪ್ಪಿಕೊಂಡ ಹೇಳಿಕೆಯಿದು'

"ಅಂದರೆ, ತಪ್ಪು ವಿದ್ಯಾರ್ಥಿಗಳದ್ದೇ ಆಯ್ತು; ಅಲ್ಲಿ ಯಾರೋ ಒಬ್ಬ ವಿದ್ಯಾರ್ಥಿಯ ಮೇಲೆ ಬಸ್ಸಿನಲ್ಲಿ ಯಾರೋ ಕೈಮಾಡಿದರಂತೆ.'

'ಯಾರು ಯಾರು ಹೇಳುವ ಸುದ್ದಿ ಯಾಕೆ? ಶಾಂತಿ ಸಮಿತಿಯ ಮುಂದೆ ವಿದ್ಯಾರ್ಥಿ ವಕ್ತಾರರೇ ಈ ಹೇಳಿಕೆಯನ್ನು ಅಲ್ಲಗಳೆದಿದ್ದಾರೆ. ಪತ್ರಿಕಾ ವರದಿ ಸುಳ್ಳು ಅಂದಿದ್ದಾರೆ.'

"ಹಾಗಾದರೆ, ತಪ್ಪು ಯಾರದು?"

'ಅದೇ ಈಗ ಪ್ರಶ್ನೆ. ಜಿಲ್ಲೆಯನ್ನು ಮೂರು ದಿನ ಗಡಗಡನೆ ನಡುಗಿಸಿದ ಈ ದುರ್ಘಟನೆಯ ಹೊಣೆ ಯಾರದು?'

"ಪತ್ರಿಕೆಗಳಲ್ಲಿ ಪ್ರಕಟಗೊಂಡ ತಪ್ಪು ವರದಿಯಿಂದ ವಿದ್ಯಾರ್ಥಿ ಸಮುದಾಯ ರೊಚ್ಚಿಗೆದ್ದಿರಲೂ ಸಾಕು."

'ಸಾಕು. ಅದನ್ನೆಲ್ಲ ಚರ್ಚೆ ಮಾಡಿ ಇನ್ನೇನು ಲಾಭ? ಆಗಬಾರದ್ದು ಆಗಿಹೋಯಿತು. ನಿರೀಹ ಜೀವವೊಂದರ ಬಲಿಯೂ ಆಯ್ತು. ಈ ಬಲಿಯಿಂದ ಜಿಲ್ಲೆಯ ಜನರು ಪಾಠ ಕಲಿಯಬೇಕು."

'ಅದೆಂತಹ ಪಾಠ?'

'ನೋಡು, ವಿದ್ಯಾರ್ಥಿಗಳೂ ವಿಶಾಲ ಜಗತ್ತಿನ ಪರಿಚಯವುಳ್ಳವರು. ಅವರು ಕೂಪ ಮಂಡೂಕಗಳಾಗಿಯೇ ಉಳಿಯಬೇಕೆಂದು ಬಯಸುವುದು ಅಪರಾಧ.'

'ಖಂಡಿತಕ್ಕೂ.'

'ಶಿಕ್ಷಣ ಪ್ರಸಾರ ವ್ಯಾಪಕವಾದಂತೆ ವಿದ್ಯಾರ್ಥಿ ಬಲವೂ ಮಿತಿಮೀರಿದೆ. ವಿದ್ಯಾವಂತರಲ್ಲಿ ಹೆಚ್ಚುತ್ತಿರುವ ನಿರುದ್ಯೋಗ, ದೇಶದ ಅಗ್ರನಾಯಕರು ನಿರ್ಮಿಸುತ್ತ ಹೋಗುತ್ತಿರುವ ಗೊಂದಲಮಯ ವಾತಾವರಣ, ನೀರಸವಾದ ಪಾಠ್ಯಕ್ರಮ, ಅಸಮರ್ಪಕವಾದ ಸಾಧನ-ಸೌಲಭ್ಯ-ಇತ್ಯಾದಿಗಳಿಂದ ಪ್ರತಿ ವಿದ್ಯಾರ್ಥಿಯ ತಲೆಯಲ್ಲೂ ಹೊಯ್ದಾಟ ನಡೆಯುತ್ತಲೇ ಇರುತ್ತದೆ."

'ಹ್ಞೂಂ....'

"ಬಿಸಿ ನಳಿಕೆಯಿರುವ ಗ್ಯಾಸ್ ಬುರುಡೆಗೇನಾಗಬೇಕು, ಒಂದು ಕಿಡಿ ದೊರೆತರೆ ಸಾಕು, ಬುಗ್ಗೆಂದು ಉರಿದುಹೋಗುತ್ತದೆ."

'ಅದು ಸರೀನ್ನಿ. ವಿದ್ಯಾರ್ಥಿ ಸಮುದಾಯದ ಸಮಸ್ಯೆಗಳನ್ನು ತೋಡಿಕೊಂಡು ಸೂಕ್ತ ಪರಿಹಾರ ತೋರಿಸುವ ವ್ಯವಸ್ಥೆ ಸದ್ಯಕ್ಕಿಲ್ಲ.'

"ಕೆಲವರು ಅನ್ನಬಹುದು, ಕೋಳಿಯನ್ನು ಕೇಳಿ ಮಸಾಲೆ ಕಡೆಯುತ್ತಾರೆಯೇ ಅಂತ ಆದರೆ,ಕೋಳಿ ಕೋಳಿಯೇ. ವಿದ್ಯಾರ್ಥಿಗಳು ಮನುಷ್ಯರು.ಅವರಿಗೆ ತಮ್ಮ ಭವಿಷ್ಯವು ದಿನ ದಿನಕ್ಕೂ ಗಾಡಾಂಧಕಾರಮಯವಾಗುತ್ತ ಹೋಗುತ್ತಿರುವುದನ್ನು ಕಾಣುವಾಗ ಹೃದಯ ತಪ್ತಗೊಳ್ಳುವುದು ಸಹಜ."

"ಅದು ಸರೀನ್ನಿ. ಮನಃಶಾಂತಿಯಿಲ್ಲ. ಮುಂದೇನು ಎಂಬ ಪ್ರಶ್ನೆ ಭೂತಾಕಾರ ತಾಳಿ ಕಾಡತೊಡಗಿ ಇಂದಿನದನ್ನು ಕೆಡಿಸಿಬಿಡುತ್ತದೆ.'

"ಆದುದರಿಂದಲೇ ಪ್ರೌಢ-ಪ್ರಬುದ್ಧ ವಿದ್ಯಾರ್ಥಿಗಳಲ್ಲಿ ನಿರಾಶಾಭಾವನಾಜನ್ಯ ಉದ್ರಿಕ್ತ ದಶೆ ಮನೆಮಾಡಿದೆ.'

'ಈ ಉದ್ರೇಕ ವ್ಯಕ್ತವಾಗಲು ನೆಪವೊಂದು ದೊರೆತರೆ ಸಾಕು.'

'ಬಾಂಬಿನಲ್ಲಿ ಸಂಹಾರಕ ಶಕ್ತಿ ಹುದುಗಿರುವಂತೆ, ಅವಕಾಶ ದೊರೆತೊಡನೆಯೇ ಅದು ಅಸ್ಫೋಟಗೊಳ್ಳುವಂತೆ ಅದೂ ಒಡೆಯುತ್ತದೆ; ಭಾರೀ ಬಿರುಗಾಳಿ ಬೀಸುತ್ತದೆ.'

'ಹ್ಞೂನ್ನೀ, ಅದಕ್ಕೇ ಪರಿಹಾರವೇನು?'

ವಿದ್ಯಾರ್ಥಿಗಳ ಸಮಸ್ಯೆಗಳನ್ನು ಅರಿತುಕೊಳ್ಳಲು ಶಾಶ್ವತವಾದ ಒಂದು ವ್ಯವಸ್ಥೆ ಬೇಕೆನಿಸುತ್ತದೆ. ಇನರಲ್ಲಿ ಶಿಕ್ಷಕ—ವಿದ್ಯಾರ್ಥಿಗಳು ಮಾತ್ರ ಸೇರಿರಬೇಕು. ಸಾಮಾನ್ಯವಾಗಿ ಇವರಿಬ್ಬರ ಸಮಸ್ಯೆಗಳೂ ಏಕರೀತಿಯವೇ.'

'ಹ್ಞೂಂ.'

"ಮೊನ್ನೆಯ ಘಟನೆಯನ್ನೇ ತೆಗೆದುಕೊ. ಓವರ್‌ಲೋಡು ಮಾಡುವುದು ತಪ್ಪು. ನ್ಯಾಯ ಮತ್ತು ಕಾನೂನುಗಳನ್ನು ಯಾವ ಪ್ರಜೆಯೂ ತನ್ನ ಕೈಗಳಿಗೆ ತೆಗೆದುಕೊಳ್ಳಬಾರದು. ಸಾರಿಗೆ ವ್ಯವಸ್ಥೆ ಸಾಲದೆಂದಿದ್ದರೆ, ಈ 'ವ್ಯವಸ್ಥೆ' ಸಬಂಧ ಪಟ್ಟವರಿಗೆ ತಿಳಿಸಿ ಅದನ್ನು ಹೆಚ್ಚಿಸಿಕೊಳ್ಳಬಹುದು. ಹೆಚ್ಚಿಸುವಲ್ಲಿ ಸಾರಿಗೆಯವರೂ ಸಹಕಾರ ನೀಡಬೇಕು.'

'ಅದು ಸರೀನ್ನಿ. ಆದರೂ ಸದ್ಯ ನಮ್ಮ ಸರಕಾರಗಳಿಗೆ ಬಿಸಿಯಾಗದೆ ಬುದ್ಧಿ ಬರುವುದೇ ಇಲ್ಲ.'

'ಯಾಕೆ ಹಾಗಂತೀಯ?'

'ಅಲ್ಲಾರಿ, ಜನ ದೊಂಬಿಯೇಳದೆ ಸರಕಾರವಾಗಲೀ ಯಜಮಾನರಾಗಲೀ ಏನು ಮಾಡಿದ್ದಾರೆ? ನೋಡಿ, ಭಾಷಾಧ್ಯಾಪಕರಿಗೂ ತರಬೇತಿ ಹೊಂದಿದ ಪದವೀಧರರ ವೇತನ ನೀಡುವುದಾಗಿ ಭರವಸೆ ನೀಡಿ ಮೂರು ತಿಂಗಳಾದರೂ ಆಜ್ಞೆ ಹೊರಟಿಲ್ಲ; ಬಂಕೈಯಲ್ಲಿ ಬೇಡಿದರೆ ಯಾರು ಕೊಡುತ್ತಾರೆ?'

'ಅಂದರೆ, ದಂಡಂ ದಶಗುಣಂ ಭವೇತ್ ಎಂಬುದರಲ್ಲೇ ನಿನಗೆ ವಿಶ್ವಾಸ.'

"ಹ್ಞೂ. ಆದರೆ, ಈ ವಿಶ್ವಾಸ ಮನೋವೈಜ್ಞಾನಿಕವಾಗಿ ಜನಿಸಿದ್ದು."

"ಹೌದೌದು. ದೆಹಲಿಯಲ್ಲಿ ಮುಂಜಾನೆಯ ದಿನಪತ್ರಿಕೆಯ ಹೆಸರ ಬಳಿ ಜನಸಂಘ ತನ್ನ ಚುನಾವಣಾ ಚಿಹ್ನೆಯ ಮುದ್ರೆಯೊತ್ತಿ ಹೊಸ ಪ್ರಚಾರತಂತ್ರ ಆರಂಭಿಸಿದೆಯಂತೆ."

'ಅದೇ ಅಂದೆನಲ್ಲ, ನೋಡಿ ಮಹಾಭಾರತದಲ್ಲಿ ಯಕ್ಷನೊಬ್ಬ ಧರ್ಮರಾಯನಿಗೆ ಪ್ರಶ್ನೆ ಕೇಳಿದ ಘಟನೆ ಬರುತ್ತದೆ. ಮಹಾಮೂರ್ಖರು ಯಾರು ಅಂತ."

"ಹೌದು."

"ನಮ್ಮ ಕಣ್ಣೆದುರಲ್ಲಿ ಸಾವಿರಾರು ಜನ ಪ್ರತಿನಿತ್ಯ ಸಾಯುತ್ತಿರುವುದನ್ನು ಕಂಡೂ ಕೇಳಿಯೂ ತಾನು ಮಾತ್ರ ಅಮರನೆಂದು ಭಾವಿಸುವವನೇ ಮಹಾಮೂರ್ಖನೆಂದನಂತೆ ಯಮಪುತ್ರ.'

"ಅಲ್ಲವೇ ಮತ್ತೆ?"

'ಹಾಗೇನೇ ನಮ್ಮ ಮುಗ್ಧ ಜನತೆಯ ಕಣ್ಣ ಮುಂದೆ ನಾನಾಕ್ಷೇತ್ರಗಳ ಪುಢಾರಿಗಳು ಆಡುತ್ತಿರುವ ಡೊಂಬರಾಟ, ಪ್ರದರ್ಶಿಸುತ್ತಿರುವ ಸಮ್ಮೋಹಿನಿಯಿಂದ ಅವರೂ ಪ್ರಭಾವಿತವಾಗದೆ ಉಳಿದ್ದಿವಾರೆಂದೂ ತಿಳಿದಿರುವುದೇ ಮಹಾ ಮೂರ್ಖತನ."

"ಹೌದು. ನಿಜಕ್ಕೂ. ಕನ್ನಡ ಮಾಧ್ಯಮದ ಬಗ್ಗೆ ಕವಿ ಯೊಬ್ಬನಾಡಿದ ಮಾತು ನೆನಪಾಗುತ್ತಿದೆ".

'ಏನು?'

'ಕನ್ನಡ ಮಾಧ್ಯಮವಾಗಲಿ ಬೇಕು ಮೊದಲೀ ಕವಿಗಳಿಗೆ ಅಂತ.'

"ಬೇಷ್, ಉನ್ನತ ಮಟ್ಟದವರು ತಮ್ಮ ಸದ್ವರ್ತನೆಯ ಪ್ರಭಾವವನ್ನು ಕಿರಿಯರ ಮೇಲೆ ಬೀರಲು ಅಶಕ್ತರಾದದ್ದರಿಂದಲೇ ಅವರು ಅನಿಯಂತ್ರಿತರಾಗುತ್ತಿದ್ದಾರೆ."

'ಇದನ್ನು ಇನ್ನೊಂದು ಬಾರಿಹೇಳು.'

'ಯಾವುದನ್ನು?'

'ತಿಳಿಲಿಲ್ಲನೆ?'

'....ಓ....ಅದನ್ನು....'

'ಹ್ಞೂಂ....'

—ಗೋರಾ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 258/1970.

H. ಕೃಷ್ಣ ಮೂರ್ತಿ — ವಾದಿ

ಮತ್ತು

H. ರಾಮಚಂದ್ರ ರಾವ್ ಕೂಡಾ— ಪ್ರತಿವಾದಿಗಳು

ಯಾವರೊಳಗೆ.

4ನೇ ಪ್ರತಿವಾದಿ:— ಶೇಷಗಿರಿ ನ್ಯಾಕ— ಗೋವಿಂದ ನ್ಯಾಕರ ಮಗ—ಉಡುಪಿ ತಾಲೂಕು ಬೊಮ್ಮರಬೆಟ್ಟು ಗ್ರಾಮದ ಹಿರಿಯಡ್ಕ—ಹಾಲಿ ಮಹಾರಾಷ್ಟ್ರ ಸ್ಟೇಟ್ ಕಾರಿವಾರ್ ಯಿಂಬಲ್ಲಿರುವವ—

ಯುವರಿಗೆ—ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ವಾದಿಯು ನೀವು ವಗೈರೆರ ಮೇಲೆ ಇಂಜಕ್ಷನ್ ಮತ್ತು ನಷ್ಟ ವಗೈರೆ ನಿವೃತ್ತಿಗಳನ್ನು ಕೇಳಿ ಮಾಡಿದ ಮೋಕದ್ದಮೆ ದಾವೆಯು ತಾರೀಖು 2-8-1971ಕ್ಕೆ ಇಟ್ಟಿದೆ— ಈ ದಾವೆ ಸಂಬಂಧ ಪಟ್ಟರೆ ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ವ್ಯಾಹೀರು ಮಾಡಿಕೊಳ್ಳತಕ್ಕದ್ದು.. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಕೋರ್ಟಿನ ಹುಕುಂ ಪ್ರಕಾರ,

K. Balachandra Rao
Advocate for Plaintiff.

Udipi, Dated 5-2-1971.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಗಂಧರ್ವ ದಮನಕ್ಕಾಗಿ

ಭರತನ ವಿಜಯಯಾತ್ರೆ

ಸಿಂಧೂ ನದಿ ದಡದಲ್ಲಿ ನೆಲಸಿದ್ದ ಮಾನವರ ಮೇಲೆ ಗಂಧರ್ವರು ಆಕ್ರಮಣ ಮಾಡಿದರು. ಅವರು ಮಾನವರನ್ನು ಕೊಂದರು; ದೇಶವನ್ನು ಹಾಳುಗೆಡಹಿದರು. ಸಿಂಧುವಿನ ಇತ್ತಟಗಳಲ್ಲೂ ತಮ್ಮ ವಸತಿಗಳನ್ನು ನಿರ್ಮಿಸಿದರು. ಶೈಲೂಷನು ಗಂಧರ್ವ ನಾಯಕನಾಗಿದ್ದನು. ಇಷ್ಟರಿಂದಲೇ ಅವರು ತೃಪ್ತರಾಗದೆ ಆಸುಪಾಸಿನ ಚಿಕ್ಕಪುಟ್ಟ ರಾಜರನ್ನು ಪೀಡಿಸಹತ್ತಿದರು. ಇದನ್ನು ಕೇಕಯ ದೇಶದ ರಾಜ ಯುಧಾಜಿತ್ತನಿಗೆ ಸಹಿಸಲಾಗಲಿಲ್ಲ. ಅವನು ತನ್ನ ಪುರೋಹಿತನಾದ ಗಾರ್ಗ್ಯನನ್ನು ದೂತನನ್ನಾಗಿ ನೇಮಿಸಿ ಅಯೋಧ್ಯೆಯ ಶ್ರೀರಾಮಚಂದ್ರನಿಗೆ ಈ ರೀತಿ ಸಂದೇಶ ಕಳಿಸಿದನು.

"ಮಹಾರಾಜ ರಾಮಚಂದ್ರ, ಸಿಂಧೂ ನದಿಯ ಇಕ್ಕಡೆಗಳಲ್ಲಿ ನೆಲಸಿದ್ದ ಮಾನವರನ್ನು ಕೊಂದು ಈಗ ಗಂಧರ್ವರು ವಾಸ ಮಾಡಿದ್ದಾರೆ. ಲಕ್ಷ್ಮಣ, ಭರತ ಅಥವಾ ಶತ್ರುಘ್ನರಲ್ಲಿ ಯಾರಾದರೊಬ್ಬನನ್ನು ಕಳಿಸಿ, ಅವರನ್ನು ನಿರ್ನಾಮ ಮಾಡು. ಇದರಿಂದಾಗಿ ನಿನ್ನ ಸಾಮ್ರಾಜ್ಯವೂ ಉಳಿಯುವುದು; ಅಲ್ಲಿನ ಶಾಸಕರೂ ನಿರ್ಭಯರಾಗುವರು."

ಸಂದೇಶವನ್ನೋದಿಸಿಕೊಂಡ ಶ್ರೀರಾಮಚಂದ್ರನು ಯೋಚಿಸತೊಡಗಿದನು. "ಲಂಕೆಯಲ್ಲಿ ಅದಮ್ಯನೆನಿಸಿದ್ದ ಮೇಘನಾದನನ್ನು ಕೊಂದು ಲಕ್ಷ್ಮಣನು ಸಾಕಷ್ಟು ಪ್ರಸಿದ್ಧಿಹೊಂದಿದ್ದಾನೆ. ಮಧುರೆಯಲ್ಲಿ ಲವಣಾಸುರನನ್ನು ಮೃತ್ಯುಲೋಕಕ್ಕಟ್ಟಿ ಶತ್ರುಘ್ನನೂ ಕೀರ್ತಿ ಗಳಿಸಿದ್ದಾನೆ. ಇದುವರೆಗೂ ಭರತನ ವೀರ್ಯದ ಪರಿಚಯ ಜನತೆಗೆ ಗೋಚರವಾಗಲಿಲ್ಲ. ಆದುದರಿಂದ ಆತನನ್ನೇ ಗಂಧರ್ವ ದಮನಕ್ಕೆ ನಿಯೋಜಿಸುವುದು ಸೂಕ್ತ."

ಹೀಗೆ ನಿರ್ಣಯಿಸಿದ ಶ್ರೀರಾಮನು ತಮ್ಮ ಭರತನನ್ನು ಕರೆದು ಆತನೊಡನೆಂದನು—"ವತ್ಸ, ಗಾರ್ಗ್ಯರೊಂದಿಗೆ ಈಗಲೇ ರಾಜಗೃಹಕ್ಕೆ ಹೋಗು. ನನ್ನ ಮಾವನನ್ನೂ ಕೂಡಿಕೊಂಡು ವಿದೇಶೀ ಆಕ್ರಮಣಕಾರಿ ಶೈಲೂಷನನ್ನು ಕೊಲ್ಲು; ಇಲ್ಲವೇ ಓಡಿಸು. ನಿನ್ನ ದೇಶವನ್ನು ಸಂರಕ್ಷಿಸು" ಅಣ್ಣನಿಂದ ಆಜ್ಞೆ ಪಡೆದ ಭರತನು ಸಂತೋಷದಿಂದ ಉಬ್ಬಿದನು. ಆತನ ವೀರೋತ್ಸಾಹವನ್ನು ಕಂಡ ಮಾನವರೂ ದೇವತೆಗಳೂ ಭರತ ಗುಣಗಾನದಲ್ಲಿ ಮೈಮರೆತರು— "ಭರತನೆಂದರೆ ಯಾರು ? ರಾಮ ವನವಾಸದ ವೇಳೆ ಭರತನು ವರ್ತಿಸಿದ ಬಗೆ ದೇವದುರ್ಲಭವಾದುದು. ಅಧಿಕಾರ–ಒಡೆತನಕ್ಕಾಗಿ ಪರದಾಡುವವರು ಮಾನವರು. ಆದರೆ, ಭರತನಾದರೋ ಕಿಚ್ಚು ಹಿಡಿದ ಮನೆಯನ್ನು ಬಿಡುವಂತೆ ರಾಜ್ಯಾಧಿಕಾರವನ್ನು ತ್ಯಜಿಸಿದನು. ದೊಡ್ಡಣ್ಣನ ರಾಜ್ಯವನ್ನು ಕಬಳಿಸಲು ತಾನು ಯಾರು ಎಂದು ಕೇಳಿದನು. ರಾಮನು ವನವಾಸವನ್ನನುಭವಿಸಿದ ೧೪ ವರ್ಷಗಳ ಕಾಲ ಒಂದು ರಾತ್ರಿಯಾದರೂ ಭರತನು ಸುಖದಿಂದ ನಿದ್ರಿಸಲಿಲ್ಲ. ಸುಖಸಾಧನಗಳಿಂದ ವಂಚಿತನಾಗಿ ಅಣ್ಣನು ಕಾಡಿನಲ್ಲಿದ್ದಾನೆಂದು, ತನ್ನ ಬಳಿಯಿದ್ದ ಭೋಗ ವಿಲಾಸಗಳಿಗೆ ತಿಲಾಂಜಲಿ ಬಿಟ್ಟನು. ಶ್ರೀರಾಮನಂತೆಯೇ ಉದ್ದ ಜಡೆ ಬಿಟ್ಟು, ಕಂದ ಮೂಲ ತಿಂದು, ಶ್ರೀ ರಾಮನ ಈ ರಾಜ್ಯವನ್ನು ರಕ್ಷಿಸುತ್ತ ಪ್ರಜಾಪರಿಪಾಲನಾ ನಿರತನಾಗಿದ್ದನು." ಎಂದು ಎಲ್ಲರೂ ಹೊಗಳಿ ಹಾಡತೊಡಗಿದರು.

ಅತ್ತ ಭರತನಿಗೆ ಆಜ್ಞೆ ನೀಡಿ ಶ್ರೀ ರಾಮನು ಲಕ್ಷ್ಮಣನಿಗೆ ಆದೇಶ ಕೊಡ ಹತ್ತಿದನು— 'ತಮ್ಮ ಲಕ್ಷ್ಮಣ, ಭರತನ ಚತುರಂಗ ಸೇನೆಯೊಂದಿಗೆ ವಿಷ ಚಿಕಿತ್ಸಕ, ಶಲ್ಯ ಚಿಕಿತ್ಸಕರಲ್ಲಿ ವಿಶೇಷ ತಜ್ಞರಾದವರನ್ನು ಬಹಳ ಸಂಖ್ಯೆಯಲ್ಲಿ ಕಳಿಸು. ಶರೀರ ಚಿಕಿತ್ಸಕ ವೈದ್ಯರನ್ನೂ ರವಾನಿಸು. ಕಲಾಕಾರರು, ಶಿಲ್ಪಿಗಳು, ಕಮ್ಮಾರರು, ಉಪ್ಪಾರರು, ಮಾರ್ಗದರ್ಶಕರು ಮತ್ತು ಗಿಡನಾಟುವವರು ಮೊದಲಾದವರೂ ಅವರ ಜತೆಯಿರಲಿ.'

ಶ್ರೀರಾಮನ ಆಜ್ಞೆಯಂತೆ ಅದೇ ದಿನ ಸೇನೆ ಸಜ್ಜುಗೊಂಡು ನಿಂತಿತು. ರಣ ಭೇರಿ ಬಾರಿಸಿತು. ರಾಷ್ಟ್ರಧ್ವಜ ಪೂಜೆ ನಡೆಯಿತು. ಭರತನು ಅಶ್ವಾರೂಢನಾದನು. ಅವನು ರಾಜ ಸಭೆಯತ್ತ ಧಾವಿಸಿದನು. ಸಭಾ ಸಮೀಪದಲ್ಲಿ ಕುದುರೆಯಿಂದಿಳಿದು ಅವನು ರಾಜ ದರಬಾರಿಗೆ ನಡೆದನು. ಸಿಂಹಾಸನದಲ್ಲಿ ವಿರಾಜಮಾನನಾಗಿದ್ದ ಶ್ರೀ ರಾಮನಿಗೆ ದಂಡವತ್ ನಮಸ್ಕರಿಸಿದನು. ಶ್ರೀರಾಮನೂ ಸಿಂಹಪೀಠದಿಂದಿಳಿದು ಬಂದು ತಮ್ಮನನ್ನು ಅಪ್ಪಿಕೊಂಡನು. 'ತಮ್ಮ, ಗಂಧರ್ವರನ್ನು ಹೊಡೆದಟ್ಟು. ಅವರು ಮತ್ತೊಮ್ಮೆ ನಮ್ಮ ರಾಜ್ಯದ ಮೇಲೆ ಆಕ್ರಮಣ ನಡೆಸುವ ಧೈರ್ಯ ಹೊಂದದಿರಲಿ. ಸಿಂಧೂನದಿಯ ಇಕ್ಕಡೆಗಳಲ್ಲೂ ಒಂದೊಂದು ಮಹಾನಗರಗಳನ್ನು ನಿರ್ಮಿಸು. ಒಂದರಲ್ಲಿ ತಕ್ಷನನ್ನೂ ಇನ್ನೊಂದರಲ್ಲಿ ಪುಷ್ಕರನನ್ನೂ ದೇಶರಕ್ಷಣೆಗಾಗಿ ಅಭಿಷೇಕ ಮಾಡಿ ಮರಳಿ ಬಾ. ಕ್ಷಾತ್ರ ಧರ್ಮ ಪಾಲನೆಗಾಗಿಯೇ ನಾನೀಗ ನಿನ್ನನ್ನು ಕಳಿಸುತ್ತಿದ್ದೇನೆ." ಹೀಗೆ ನುಡಿದ ರಾಮನು ಭರತನನ್ನು ಆನೆಯ ಮೇಲೇರಿಸಿದನು. ಭರತ ಸಮ್ಮಾನಾರ್ಥ ಪ್ರೇಮವಶನಾದ ಲಕ್ಷ್ಮಣನು ಛತ್ರ ಹಿಡಿದು ಆತನ ಹಿಂದೆ ಕುಳಿತು ಬೀಳ್ಕೊಡಲು ಹೊರಟನು. ಮುಂದೆ ಪ್ರಯಾಣ ಪಟಹಗಳು ಮೊಳಗುತಿದ್ದುವು. ರಾಜ ಪತಾಕೆಯ ಹಿಂದೆ ಸೇನೆಗಳು ನಡೆಯುತಿದ್ದುವು ದೇಶರಕ್ಷಣೆಗಾಗಿ ಉತ್ಕಟೇಚ್ಛೆ ನಾಗರಿಕರನ್ನು ಅಯೋಧ್ಯೆಗೆ ಮರಳಿಸುವುದು ಅಸಾಧ್ಯವಾಯ್ತು. ನಗರದ ಹೊರವಲಯದಲ್ಲಿ ಭರತನು ಬಿಡಾರ ಹೂಡಿ ಒಂದು ರಾತ್ರಿಯನ್ನು ಅದಕ್ಕಾಗಿ ಕಳೆಯಬೇಕಾಯ್ತು. ಬಹಳ ಕಷ್ಟದಿಂದ ಮರಳುವಂತೆ ನಾಗರಿಕರನ್ನು ಒಪ್ಪಿಸಬೇಕಾಯ್ತು. ಲಕ್ಷ್ಮಣನೂ ತಮ್ಮನನ್ನು ತಕ್ಕೈಸಿ ಮನಸ್ಸಿಲ್ಲದ ಮನಸ್ಸಿನಿಂದ ಹಿಂದೆ ಬಂದನು.

ಆ ಬಳಿಕ ಭರತನು ತನ್ನ ಸೇನಾಪತಿ ವಿಜಯನಿಗೆ ಆಜ್ಞೆ ನೀಡಿದನು— "ಸೇನೆಯ ಒಂದಂಶವನ್ನು ಈಗಲೇ ಮುಂದೆ ಕಳಿಸು. ಅದು ಏರು-ಪೇರಿನ ದಾರಿಯನ್ನು ಸರಿಯಾಗಿಸುತ್ತ, ತಡೆಯಾಗಿರುವ ಮುಳ್ಳು–ಮರಗಳನ್ನು ಕಡಿಯುತ್ತ ನದಿಗಳಿಗೆ ಸೇತುವೆ ಕಟ್ಟುತ್ತ ನೀರಿಲ್ಲದಲ್ಲಿ ಬಾವಿಗಳನ್ನು ತೋಡುತ್ತ. ಸೇನೆ ತಂಗಲು ಡೇರೆಗ

(ಎಂಟನೇ ಪುಟ ನೋಡಿ)

ಸಾಂದ್ರ ಬೇಸಾಯಕ್ಕೆ ವಿಸ್ತೃತ ಯೋಜನೆ

ಕೃಷಿ ಕ್ಷೇತ್ರದಲ್ಲಿ ಗುರಿ ಮೀರಿದ ಸಾಧನೆ ರಾಜ್ಯದ ಅಭಿಮಾನ್ಯ ನಾಲ್ಕನೆಯ ಯೋಜನೆಯಲ್ಲಿ ಕೃಷಿ ಸೇವೆಯನ್ನು ಮತ್ತಷ್ಟು ಸಾಂದ್ರಗೊಳಿಸುವ ಪ್ರಯತ್ನ. ಈ ಉದ್ದೇಶಕ್ಕಾಗಿ **24** ಕೋಟಿ ರೂಪಾಯಿ ವೆಚ್ಚಕ್ಕೆ ಅವಕಾಶ.

ಕೈಗೊಳ್ಳಲಿರುವ ನಾನಾ ಸಾಂದ್ರ ಕಾರ್ಯಕ್ರಮಗಳ ಫಲವಾಗಿ ರಾಜ್ಯದ ಆಹಾರ ಉತ್ಪಾದನೆ **62** ಲಕ್ಷ ಟನ್ನುಗಳಿಗೆ ಮುಟ್ಟುವ ನಿರೀಕ್ಷೆ ಇದೆ. ಅಧಿಕ ಇಳುವರಿ ತಳಿಗಳ ಕೃಷಿಗೆ ಈ ಒಳಪಟ್ಟಿರುವ **2·98** ಲಕ್ಷ ಹೆಕ್ಟೇರು ವಿಸ್ತೀರ್ಣ **5·8** ಲಕ್ಷ ಹೆಕ್ಟೇರುಗಳಿಗೆ ವ್ಯಾಪಿಸುವ ಗುರಿ.

ಕೃಷಿ ಅಭಿವೃದ್ಧಿಯ ಯೋಜನಾ ವೆಚ್ಚದಲ್ಲಿ ಸುಧಾರಿಸಿದ ಬೀಜ, ರಸಾಯನಿಕ ಗೊಬ್ಬರ, ಸಸ್ಯ ಸಂರಕ್ಷಣೆ, ಕೃಷಿ ಉಪಕರಣಗಳು, ವ್ಯವಸಾಯ ಶಿಕ್ಷಣ— ಇತ್ಯಾದಿ ಕಾರ್ಯಕ್ರಮಗಳ ವೆಚ್ಚದ ಪಾಲು **18·85** ಕೋಟಿ ರೂಪಾಯಿಗಳು.

(ಮೈಸೂರು ಸರಕಾರದ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ ಪ್ರಕಟಿತ)

ರಾಜಾಜಿಯವರ ರಾಜಕೀಯ ಸಂಕ್ರಾಂತಿ

ಅಡಿಗೆ ಬಿದ್ದರೂ ಜಟ್ಟಿ ಮೀಸೆಗೆ ಮಣ್ಣಾಗಿಲ್ಲ

ಚಕ್ರವರ್ತಿ ರಾಜಗೋಪಾಲಾಚಾರಿಯವರು ತಮಿಳ್ನಾಡಿನ ಮಟ್ಟಿಗೆ ಸ್ವಪಾರ್ಟಿ, ದ್ರಾವಿಡ ಮುನ್ನೇಟ್ರ ಕಳ್ಗಗಮಿನ ಸಂಬಂಧವನ್ನು ಮುಂದರಿಸಿಕೊಂಡು ಹೋಗಬಹುದೆಂದು ಭಾವಿಸಿಕೊಂಡಿದ್ದರು. ದ್ರಾ ಮುಕವನ್ನು ಬೆದರಿಸಿಯೋ, ಬುದ್ಧಿ ಮಾತು ಹೇಳಿಯೋ, ಆಶೆ ಹುಟ್ಟಿಸಿಯೋ ಬೆನ್ನ ಹಿಂದೆ ಕರೆದುಕೊಂಡು ಹೋಗಬಹುದೆಂದು ತಿಳಿದುಕೊಂಡಿದ್ದರು. ಅವರ ಲೆಖ್ಖಾಚಾರ ತಲೆಕೆಳಗಾಯಿತು. ಸೋಡಚೀಟಿಗೆ ಸಮಯ ಸನ್ನಿಹಿತವಾಗಿಲ್ಲವೆಂದು ಅವರು ತಿಳಿಸಿದೊಡನೆ ದ್ರಾ.ಮು.ಕ.ವು ಒಕ್ಕಟ್ಟದಿಂದ ಸ್ವಪಾರ್ಟಿಗೆ ಅರ್ಧಚಂದ್ರ ಪ್ರಯೋಗ ಮಾಡಿತು. ದ್ರಾ.ಮು.ಕ.ವು ಬಹಿರಂಗವಾಗಿ ಹೊಸ ಕಾಂಗ್ರೆಸ್ಸಿನೊಂದಿಗೆ ಸೇರಿಕೊಂಡಿತು. ಸ್ವತಂತ್ರ ಪಾರ್ಟಿಯ ದುರವಸ್ಥೆ ಕಂಡು ಮುಸ್ಲಿಂ ಲೀಗಾಗಲೀ, ಫಾರ್ವರ್ಡ್ ಬ್ಲಾಕಾಗಲೀ, ತಮಿಳು ಅರಸು ಕಳ್ಗಗವಾಗಲಿ ಅಯ್ಯೋ, ಪಾಪವೆನ್ನಲಿಲ್ಲ, ಪಾಪಿ ತೊಲಗಿರೆಂದೇ ಹೇಳಿದುವು! ಹೊಸ ಕಾಂಗ್ರೆಸ್ಸು, ದ್ರಾ.ಮು.ಕ., ಮುಸ್ಲಿಂ ಲೀಗ್, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ, ಪ್ರಜಾಸೋಷ್ಯಾಲಿಸ್ಟ್ ಪಾರ್ಟಿ, ಫಾರ್ವರ್ಡ್ ಬ್ಲಾಕ್ ಮತ್ತು ತಮಿಳು ಅರಸು ಕಳ್ಗಗಂಗಳು ಸೇರಿ ಸಪ್ತ ಪಕ್ಷ ಸಮೂಹವಾದುದಲ್ಲದೆ ಇವುಗಳೊಂದಿಗೆ ದ್ರಾವಿಡ ಕಳ್ಗಗಂ ಕೂಡಾ ಸೇರಿಕೊಂಡಿತು.

ರಾಜಾಜಿಯವರೇನು ಈಗ ಮಾಡಲು ಸಾಧ್ಯ? ದ್ರಾ. ಮು. ಕ. ಅವರಿಗೆ ರಾಜಕೀಯ 'ಗಳ್ತಾ' ಕೊಟ್ಟಿದೆ. ಇಷ್ಟೆಲ್ಲಾ ಆದ ಮೇಲೆ ರಾಜಾಜಿಯವರು ಸ್ವರಾಜ್ಯ ಪತ್ರಿಕೆಯಲ್ಲಿ ಬರೆಯುತ್ತ, ದ್ರಾ. ಮು. ಕ. ಬಂಧನದಿಂದ ಹೊರ ಬರಲು ತನ್ನ ಸ್ವ-ಪಾರ್ಟಿಗೆ ಕರೆ ಇತ್ತರು. ಹೊರ ಬರಲು ಕಾರಣವೇನು? ದ್ರಾ. ಮು. ಕ. ವು ಇಂದಿರಾ ಕಾಂಗ್ರೆಸ್ ಅರ್ಥಾತ್ ಕಮ್ಯೂನಿಸ್ಟ್ ಆಳಿತಕ್ಕೆ ನೆರವುಕೊಡಬೇಕೆಂಬ ನಿರ್ಣಯಕ್ಕೆ ಬಂದಿರುವದಿದೆ. ದ್ರಾ. ಮು. ಕ. ಇಂದು ಪಿನ್ನೆಯಿಂದೇನು ಇಂದಿರಾಜೀಯವರ ಹಿಂದಿರುವದು, ಗಿರಿಯವರನ್ನು ರಾಷ್ಟ್ರಾಧ್ಯಕ್ಷಗಿರಿಗೇರಿಸಿದಂದಿನಿಂದಲೂ ಅವರ ರಾಜಕೀಯ ಲಲ್ಲೆ ನಡೆಯುತ್ತಿದೆ. ಮುದುಕಪ್ಪನಿಗೇತಕ್ಕೆ ಹೊಟ್ಟೆಕಿಚ್ಚು ಈಗ? ದ್ರಾ. ಮು. ಕ. ಅವರ ಪಾರ್ಟಿಯನ್ನು ತಳ್ಳಿ, ಜಟ್ಟಿಯನ್ನು ಕೆಳಗೆ ಕೆಡವಿದೆ. ರಾಜಾಜಿಯವರೀಗ ತಾವು ಹೊರಗೆ ಬಂದಿದ್ದೇವೆಂಬ ಪ್ರಕಟಣೆಯನ್ನಿತ್ತು ಮೀಸೆಗೆ ಮಣ್ಣಾತಾಗಿಲ್ಲವೆಂದಿರುವರು! ಇನ್ನು ಮುಂದಕ್ಕೆ ದ್ರಾ. ಮು. ಕ. ಕ್ಕೆ ನೆರವು ನೀಡುವಂತಿಲ್ಲವೆಂಬುದನ್ನು ಸ್ವಪಾರ್ಟಿಗೆ ಸ್ಪಷ್ಟ ಪಡಿಸುತ್ತ, ಸ್ವಪಾರ್ಟಿಯ ಅಭ್ಯರ್ಥಿ ಇರುವಲ್ಲಿ ಆ ಅಭ್ಯರ್ಥಿಗೂ, ಇತರೆಡೆಗಳಲ್ಲಿ ಸಂಸ್ಥಾ ಕಾಂಗ್ರೆಸ್ಸಿನ ಅಭ್ಯರ್ಥಿಗೆ ಮತದಾನ ಮಾಡಬೇಕೆಂಬ ಆದೇಶವನ್ನು ರಾಜಾಜಿ ಕೊಟ್ಟಿರುವರು. ಅಗ್ಗ:ದ್ರಾ. ಮು. ಕ. ಕ್ಕೆ ಮಹಾಭಾರತ ಜ್ಞಾಪಕ ಬಂತು. ಪುನಃ ರಾಜಾಜಿಯವರನ್ನು ದ್ರಾ. ಮು. ಕ. ವು ದ್ರೋಣಾಚಾರ್ಯರೆಂದು ಕರೆದು ಸಂಸ್ಥಾ ಕಾಂಗ್ರೆಸ್ಸನ್ನು ಕೌರವ ಪಡೆಯೆಂದೂ ದ್ರೋಣಾಚಾರ್ಯರು ಕೌರವರೊಡನಿದ್ದರೂ ಪಾಂಡವರ ಮೇಲೆ ಮಮತೆ ಇಟ್ಟಿದ್ದಂತೆ ತಮಗೆ ಸಹಾಯ ಮಾಡಬೇಕೆಂದು ರಾಜಾಜಿಯವರಿಗೆ (ಮಹಾಭಾರತ ಬರೆದಿರುವವರಿಗೆ) ದ್ರಾ. ಮು. ಕ. ಜ್ಞಾಪಕ ಪಡಿಸಿದೆ. ನೈಜ ಸ್ಥಿತಿ ಏನಿದೆ? ದ್ರಾ. ಮು. ಕ. ದಳ ಕೌರವ ಪಡೆ ಇದೆ. ಸ್ವತಂತ್ರ ಪಾರ್ಟಿಗೆ ನಗರಸಭಾ ಚುನಾವಣೆಯಲ್ಲಿ ಸೂಜಿ ಮೊನೆಯೂರುವಷ್ಟು ಸ್ಥಾನ ಬಿಟ್ಟು ಕೊಡುವದಿಲ್ಲವೆಂದು ಅವರನ್ನು ದ್ರಾ. ಮು. ಕ. ಹೊರಗಟ್ಟಿರುತ್ತದೆ. ಹಾಗಿದ್ದೂ ತಮಗೆ ಬೇಕಾಗುವ ರೀತಿಯಲ್ಲಿ ಮಹಾಭಾರತವನ್ನು ಕರುಣಾನಿಧಿಯವರು ಆಚಾರ್ಯರಿಗೆ ಕಲಿಸಿಕೊಡುತ್ತಿದ್ದಾರೆ.

ದಶಂಬರ ಮಧ್ಯಭಾಗದಲ್ಲಿ ಸೇಲಮಿನಲ್ಲಿ ತಮಿಳ್ನಾಡು ಸ್ವತಂತ್ರ ಪಾರ್ಟಿಯ ಸಭೆ ಸೇರಿ ಅವರೊಂದು ನಿರ್ಣಯಕ್ಕೆ ಬಂದರು. ಆ ತೀರ್ಮಾನದ ಸಾರಾಂಶ:— ರಾಜ್ಯದ ಪಾರ್ಲಿಮೆಂಟರಿ ಬೋರ್ಡ್ ಅಕ್ಟೋಬರಿನಲ್ಲಿತ್ತಿದ್ದ ಆದೇಶದಂತೆ ನಡೆದುಕೊಳ್ಳುವದರಲ್ಲಿ ದ್ರಾ.ಮು.ಕ. ತಪ್ಪಿರುತ್ತದೆ. ಅಲ್ಲದೆ ಸಂಯುಕ್ತ ಮೈತ್ರಿ ಇರುವಾಗಲೇ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಹಾಗೂ ಹೊಸ ಕಾಂಗ್ರೆಸ್ಸಿನೊಂದಿಗೆ ಮುಂದಿನ ನಗರಸಭಾ ಚುನಾವಣೆಗಳಿಗಾಗಿ ಒಪ್ಪಂದ ಮಾಡಿಕೊಂಡಿರುವದರಿಂದ, ತಮಿಳ್ನಾಡು ಸ್ವತಂತ್ರ ಪಾರ್ಟಿಯ ರಾಜ್ಯ ಸಮಿತಿಯು ದುಃಖವನ್ನು ವ್ಯಕ್ತಪಡಿಸುತ್ತ ಪ್ರಚಲಿತ ಸಂಬಂಧವನ್ನು ಕಡಿದುಕೊಳ್ಳುತ್ತದೆ.

ಈ ತೀರ್ಮಾನಕ್ಕೆ ಸ್ವತಂತ್ರಪಾರ್ಟಿ ಬಂದದ್ದೇ ಯಾವಾಗ! ನಿರ್ಣಯದ ಮಾತಿನಲ್ಲೇ ಸೂಚಿಸುವವಾದಲ್ಲಿ ದ್ರಾ.ಮು.ಕ.ವು ಹೊಸ ಕಾಂಗ್ರೆಸ್ಸಿನೊಂದಿಗೆ ಒಪ್ಪಂದ ಮಾಡಿಕೊಂಡ ಮೇಲೆ. ಅಂದರೆ ದ್ರಾ. ಮು. ಕ.ವು ಸ್ವತಂತ್ರ ಪಾರ್ಟಿಯ ಸಂಬಂಧಕ್ಕೆ ಎಳ್ಳು ನೀರು ಬಿಟ್ಟ ಮೇಲೆಯೇ. ದ್ರಾ. ಮು.ಕ.ವೇ ಸ್ವತಂತ್ರ ಪಾರ್ಟಿಯನ್ನು ಸಂಯುಕ್ತ ದಳದಿಂದ ಹೊರದಬ್ಬಿದ ಮೇಲೆ ಸಂಯುಕ್ತ ದಳದಿಂದ ಸ್ವತಂತ್ರ ಪಾರ್ಟಿ ಹೊರಗೆ ಬರುತ್ತದೆ! ಈಗ ಬಂದರೇನು, ಬರದಿದ್ದರೇನು? ದ್ರಾ.ಮು.ಕ.ದ ಪಾಲಿಗಂತೂ ಸ್ವತಂತ್ರ ಪಾರ್ಟಿ ಹೊಲಿ ಪಾರ್ಟಿಯಾಗಿರುತ್ತದೆ. ಅದನ್ನು ಅವರು ಇನ್ನು ಮುಂದೆ ಮುಚ್ಚಲು ಸಿದ್ಧರಿಲ್ಲ.

ನಾಲ್ಕು ವರ್ಷ ಕಾಲದ ಮೈತ್ರಿಯಿಂದ ರಾಜಾಜಿ ಒಂದು ಪಾಠ ಕಲಿತುಕೊಂಡರೆನ್ನಬಹುದು. ಸೇಲಮಿನಲ್ಲಿ ಜರಗಿದ ರಾಜ್ಯ ಅಧಿವೇಶನಕ್ಕೆ ಅವರು ಕಳುಹಿಸಿರುವ ಸಂದೇಶದಿಂದ ಅದನ್ನು ಅರಿತುಕೊಳ್ಳಬಹುದು. ಅದು ಅಧಿವೇಶನದ ಪ್ರತಿನಿಧಿಗಳಿಗಿತ್ತಿರುವ ಮೊದಲನೆಯ ಎಚ್ಚರಿಕೆ:— "ನಿರೀಶ್ವರವಾದಿಗಳ ಬೋನಲ್ಲಿ ಸಿಕ್ಕಿಬೀಳಬೇಡಿರಿ. ದೇವರ ಆಶೀರ್ವಾದವಿಲ್ಲದೆ ಜಯಶೀಲರಾಗಿ ಫಲವನ್ನುಣ್ಣಲು ಸಾಧ್ಯವಿಲ್ಲ."

ನಿರೀಶ್ವರವಾದಿಗಳು ಯಾರು? ದ್ರಾ. ಮು. ಕ. ದವರು, ಕಮ್ಯೂನಿಸ್ಟ್ ಪಾರ್ಟಿಗಳ ಸದಸ್ಯರು. ಹೊಸ ಕಾಂಗ್ರೆಸ್ಸಿಗರಲ್ಲಿ ಹೆಚ್ಚಿನವರು.... ಇದು ಗೊತ್ತಿದ್ದು ಅವರೇಂತು ಬಲೆಯಲ್ಲಿ ಸಿಕ್ಕಿ ಬಿದ್ದರು? ದ್ರಾ. ಮು. ಕ. ದವರು ನಿರೀಶ್ವರವಾದಿಗಳೆಂಬುದು ಅವರಿಗೆ ಗೊತ್ತಿಲ್ಲವೇನು? ದೇವರ ಮೇಲೆ ತಮಗೆ ನಂಬಿಕೆ ಇದೆಯೆಂದು ನಟಿಸಿಕೊಳ್ಳುತ್ತಾರೆ. ಮನಸ್ಸಿನಾಳದಲ್ಲಿ ನಂಬಿಕೆ ಇರಬಹುದು. ಇದ್ದರೂ ಸಾರ್ವಜನಿಕವಾಗಿ ಅವರು ಹಿಂದೂಗಳು ನಂಬುವ ದೇವರನ್ನು ಹಾಸ್ಯ ಮಾಡುವವರೇ ಇದ್ದಾರೆ. ಅದಕ್ಕೆ ಕಾರಣವೆಂದರೆ ಈ ದೇವರೆಲ್ಲರೂ ಆರ್ಯರ ದೇವರಿದ್ದಾರೆ! ಅವರನ್ನು ನಂಬಿದರೆ ಬ್ರಾಹ್ಮಣರು ಹೇಳಿದಂತೆ ಕೇಳಬೇಕಾಗುತ್ತದೆ. ಈ ಪದ್ಧತಿಯನ್ನು ಹಾಳು ಮಾಡಲು ಅವರು ದೇವಸ್ಥಾನಗಳ ಆಡಳಿತದಲ್ಲಿ ಕೈಹಾಕಿರುವರು. ದೇವಸ್ಥಾನಗಳೊಳಗೆ ಅಣ್ಣಾದೊರೈಯ ಭಾವಚಿತ್ರಗಳನ್ನಿಡುತ್ತಾರೆ. ಶ್ರೀ ಸಾಮಾನ್ಯನ ಸರಳ ದೇವಸ್ಥಾನಗಳನ್ನು ನಾಶಮಾಡುತ್ತಿದ್ದಾರೆ. ಪೂಜಾ ಪದ್ಧತಿಗಳನ್ನು ಪ್ರಗತಿ ಭಾಷೆ ಹೆಸರಿನಲ್ಲಿ ಬದಲಾಯಿಸುತ್ತಿದ್ದಾರೆ.... ತನ್ನ ತಪ್ಪಿನ ಅರಿವು ರಾಜಾಜಿಯವರಿಗುಂಟಾಗಿರಬೇಕು. ಹೊಸ ಮಿಂಡನ ಸಹವಾಸಕ್ಕಿಂತ ಹಳೆಯ ಗಂಡನ ಪಾದವೇ ಮೇಲೆನ್ನುವಂತೆ ತನ್ನ ಹಳೆಯ ಕಾಂಗ್ರೆಸ್ಸಿನ ಮಿತ್ರ ಕಾಮರಾಜರೂ ತಾನೂ ಒಂದಾಗಿದ್ದೇವೆಂದು ಘೋಷಿಸಿರುವರು ರಾಜಾಜಿ. ಕಾಮರಾಜರ ಮೇಲಿನ ಕೋಪದಿಂದಾಗಿ ಕಾಂಗ್ರೆಸ್ಸನ್ನು ನಾಶಮಾಡಲು ದ್ರಾ. ಮು. ಕ. ದೊಂದಿಗೆ ಒಂದಾಗಿದ್ದ ರಾಜಾಜಿಯವರು, ದ್ರಾ. ಮು. ಕ. ವು ತನ್ನನ್ನು ಹೊರದಬ್ಬಿದಾಗ ಅದನ್ನು ಧೂಳೀಪಟಗೊಳಿಸಲು ಕಾಮರಾಜರೊಂದಿಗೆ ಕೂಡಿಕೊಂಡಿರುವರು. ಇದು ರಾಷ್ಟ್ರೋತ್ಥಾನಕ್ಕಾಗಿಯೆಂದು ರಾಜಾಜಿ ಹೇಳಿರುವರು. ಅದನ್ನು ಕೇಳಿದ ಕಾಮರಾಜರು ರಾಜಾಜಿಯವರ ಮನೆಗೆ ಹೋಗಿ ಅವರನ್ನು ಭೇಟಿಯಾಗಿರುವರು. ಇಬ್ಬರೂ ಮನ ತೆರೆದು ಮಾತುಕತೆಯಾಡಿರುವರು. ಪ್ರಜಾಪ್ರಭುತ್ವವನ್ನು ಕಾಪಾಡಲು ಒಂದಾಗುವೆನೆಂಬ ಆಶ್ವಾಸನೆಯನ್ನು ಅವರು ಜನತೆಗಿತ್ತಿರುವರು.

ಇದು ರಾಜಾಜಿಯವರ ರಾಜಕೀಯ ಸಂಕ್ರಾಂತಿ ಇದೆ. ಮಕರ ಸಂಕ್ರಮಣ ಪೊಂಗಲಿನ ಸಮಯ ಭಾಸ್ಕರನು ಬಟ್ಟೆ ಬದಲಾಯಿಸುತ್ತಾನೆ. ಹಾಗೆಂದೇ ರಾಜಾಜಿಯವರು ತನ್ನ ದಿಸೆಯನ್ನು ಬದಲಾಯಿಸಿರುವರು. ಅವರು ಕಾಲ ಪಕ್ವವಾಗಿಲ್ಲ, ಸಮಯ ಸನ್ನಿಹಿತವಾಗಿಲ್ಲವೆಂದು ಉತ್ತರಾಯಣಕ್ಕಾಗಿ ಕಾದರೆಂದು ಕಾಣುತ್ತದೆ. ಉತ್ತರಾಯಣ ಬಂದಿದೆ. ಭಾರತದ ರಾಜಕೀಯ ಭಾಸ್ಕರನೂ ತನ್ನ ದಿಕ್ಕನ್ನು ಇನ್ನು ಮೇಲೆ ಬದಲಾಯಿಸುತ್ತಾನೆಯೇ? ಪ್ರಜಾಪ್ರಭುತ್ವದ ರಕ್ಷಣೆಗಾಗಿ, ರಾಷ್ಟ್ರದ ರಕ್ಷಣೆಗಾಗಿ ರಾಷ್ಟ್ರೀಯ ಮನೋಭಾವನೆಯುಳ್ಳ ದೇಶೀಯ ಶಕ್ತಿಗಳು ಒಂದಾಗುತ್ತವೆ ಏನು? ಸ್ವತಂತ್ರ ಪಾರ್ಟಿಯೊಳಗೂ ಪಿರಿಪಿರಿ ಇದ್ದೇ ಇದೆ. ಹಳೆಯ ಕಾಂಗ್ರೆಸ್ಸಿನೊಳಗೂ ಕಾಳಗ ನಡೆಯುತ್ತಿದೆ. ಭಾರತೀಯ ಜನಸಂಘವು ಈ ಎರಡು ಪಕ್ಷಗಳತ್ತ ನೋಡುತ್ತಿದೆ. ಇನ್ನು ಇವರಲ್ಲಿ ಯಾರಿಗೂ ಬುದ್ಧಿ ಬಂದಿರುವದಿಲ್ಲ. ಅವುಗಳೊಳಗೆ ರಾಜಕೀಯ ಸಂಕ್ರಾಂತಿ ನಡೆದಲ್ಲಿ ಮಾತ್ರ ರಾಜಕೀಯ ರವಿ ದಿಕ್ಕು ಬದಲಾಯಿಸಲು ಸಾಧ್ಯ. ಇಲ್ಲದಿದ್ದಲ್ಲಿ ರಾಜಕೀಯ ರಾದ್ಧಾಂತ ಮಾತ್ರ ನಡೆದೀತು ಅಷ್ಟೆ. ಇದರ ಸ್ಪಷ್ಟ ಅರಿವು ರಾಜಾಜಿಯವರಿಗಿದೆ. ಅವರ ಜನ್ಮದಂದು ಅವರನ್ನು ಅಭಿನಂದಿಸಿ ಶತಾಯುಗಳಾಗಬೇಕೆಂಬ ಇಚ್ಛೆಯನ್ನು ಕೆಲವರು ವ್ಯಕ್ತಪಡಿಸಿರುವರು. ಸ್ವತಂತ್ರ ಪಾರ್ಟಿಯ ಒಂದು ಚಿಕ್ಕ ಸಮ್ಮೇಳನದಲ್ಲಿ ಮಾತಾಡುತ್ತ ರಾಜಾಜಿಯವರು ಅಭಿವಂದನೆಯ ಕುರಿತು ತಿಳಿಸುತ್ತಾ, ಅಯ್ಯೋ, ಈ ದಾರುಣ ದುಃಸ್ಥಿತಿಯನ್ನು ಕಾಣಲು ನಾನಿನ್ನೂ ಜೀವಂತವಾಗಿದ್ದೇನಲ್ಲವೆಂದು ದುಃಖ ವ್ಯಕ್ತ ಪಡಿಸಿದರು. ಶ್ರೀಮತಿ ಇಂದಿರಾ ಗಾಂಧಿಯವರು ಕಮ್ಯೂನಿಸ್ಟರ ಸಂಬಂಧ ಕಡಿದುಕೊಂಡಲ್ಲಿ ತಾನು ಸಲಹೆಕೊಡಲು ಸದಾ ಸಿದ್ಧವೆಂದು ಅವರು ಸೂಚಿಸಿರುವರು. ಇದು ಸಾಧ್ಯವೇನು? ಕಾಮರಾಜ ಹಾಗೂ ರಾಜಾಜಿಯವರ ಭೇಟಿ ತಮಾಷೆಗಾಗಿ ಇರುವದಿಲ್ಲ. ದೇಶಕ್ಕೊದಗಿರುವ ಅಪಾಯದ ಅರಿವುಂಟಾಗಿ ಅವರು ಒಂದಾಗಿರುವರು. ಧಾರ್ಮಿಕ ತತ್ವಗಳನ್ನು ಜನತೆ ಮೂಲೆಗೊತ್ತಿರುವದೇ ಇಂದಿನ ಕಷ್ಟ ಕೋಟಲೆಗೆ ಕಾರಣ. ಪ್ರಗತಿ ಮತ್ತು ಅಭಿವೃದ್ಧಿಗೆ ಧಾರ್ಮಿಕ ದಾರಿ ಅತ್ಯಗತ್ಯ. ಧರ್ಮದ ತಳಹದಿಯ ಮೇಲೆ ನಿಂತಿರುವ ಒಂದೇ ಒಂದು ಪಕ್ಷವೆಂದರೆ ಸ್ವತಂತ್ರ ಪಾರ್ಟಿ; ಮಿಕ್ಕವೆಲ್ಲವೂ ಅಧಿಕಾರಕ್ಕಾಗಿ ಪ್ರಯತ್ನಿಸುವ ಪಕ್ಷಗಳೆವೆಯೆಂದು ತಮ್ಮ ಪಕ್ಷದ ಕುರಿತು ರಾಜಾಜಿ ತಿಳಿಸಿರುವರು. ಅದೇ ಉಸಿರಿನಲ್ಲಿ ಕಾಮರಾಜ ಮತ್ತು ಅವರ ಸಂಯುಕ್ತ ಕಾರ್ಯಕ್ಕೆ ಸಹಾಯ ಮಾಡಬೇಕೆಂದೂ ಕೇಳಿ ಕೊಂಡಿರುವರು. ಅಧಿಕಾರಕ್ಕಾಗಿ ಚುನಾವಣಾ ಕಳಕ್ಕಿಳಿಯದ ಪಕ್ಷ ಸ್ವತಂತ್ರ ಪಾರ್ಟಿ ಏನು? ತ್ಯಾಗಶೀಲ ಸ್ವತಂತ್ರ ಪಾರ್ಟಿಯ ರಾಜಾಜಿ ಅಧಿಕಾರಕ್ಕಾಗಿ ಹಾತೊರೆಯುತ್ತಿರುವ ಕಾಮರಾಜರನ್ನು ಜನತೆ ಬೆಂಬಲಿಸಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಏನು ತಮಾಷೆ! ಅದರ ಅರಿವುಂಟುಮಾಡಲು ಅದು ತಮಾಷೆ ಅಲ್ಲವೆಂದು ರಾಜಾಜಿಯವರೇ ಹೇಳುತ್ತಿದ್ದಾರೆ. ರಾಜಾಜಿಯವರು ಎಡೆಬಿಡದೆ ಇದೇ ರೀತಿ ಧಾರ್ಮಿಕ ತಳಹದಿಯ ಮೇಲೆ ಅವರ ಪಕ್ಷ ಇದೆಯೆಂದು, ನಮ್ಮ ಪೂರ್ವಜರ ಹಾಗೂ ವೇದೋಪನಿಷತ್ತು, ಭಗವದ್ಗೀತೆ, ರಾಮಾಯಣ, ಮಹಾಭಾರತಗಳನ್ನು ಮರ್ಯಾದೆಯಿಂದ ಕಾಣಬೇಕೆಂದು ಹೇಳುತ್ತ ಬಂದಲ್ಲಿ ಅವರೊಡನಿರುವ ಬ್ರಿಟಿಷರ ಬಂಧುಗಳು, ಪಾಕಿಸ್ತಾನಿಪ್ರಿಯರು, ಅಮೇರಿಕದ ಅಪ್ತರೂ ಅವರನ್ನು ನಡುದಾರಿಯಲ್ಲಿ ಬಿಟ್ಟುಬಿಡುವದರಲ್ಲಿ ಸಂದೇಹವಿಲ್ಲ. ಆಚಾರ್ಯರಿಗೆ ಧರ್ಮದ ಜ್ಞಾಪಕ ಈಗ ಬಂತೇನು? ಪೂಜಾಕೇಂದ್ರ, ದೇವಸ್ಥಾನಗಳನ್ನು ದ್ರಾ.ಮು.ಕ. ಹಾಗೂ ಹೊಸ ಕಾಂಗ್ರೆಸ್ಸು ಪ್ರದರ್ಶನಾಲಯಗಳನ್ನಾಗಿ ಮಾಡುತ್ತಿರುವಾಗ ಎರಡೆನ್ನದನಗೆ ಧರ್ಮದ ನೆನಪು ಬರುತ್ತದೆ! ಇದು ರಾಜಾಜಿಯವರ ರಾಜಕೀಯ ಸಂಕ್ರಾಂತಿ ಇದೆ.


ಸುಮಾರು ಎರಡು ದಶಕಗಳ ಹಿಂದೆ ಗಣರಾಜ್ಯದ ಉದಯವಾಯಿತು...ಪ್ರಗತಿ
ಮತ್ತು ಸಂಪನ್ನತೆಯತ್ತ ಬಹುದೂರ ಸಾಗಬೇಕೆಂದು ಬಲ್ಲ,
ಚೇತನೋತ್ಸಾಹಭರಿತ ಗಣರಾಜ್ಯ.
ಆದರೆ ಅದೆಲ್ಲ ನಿನ್ನೆಯ ಮಾತು, ಇಂದು ನಾವು ಬಹಳಷ್ಟು
ಸಾಧಿಸಿದ್ದೇವೆ. ಆದರೂ ಸಾಧಿಸಬೇಕಾದದ್ದು ಇನ್ನೂ ಬಹಳವಾಗಿದೆ.
ನಾಳಿನ ಭಾರತವು ನಾವು ಬಯಸಿದಂತಿರುತ್ತದೆ...ಇದು
ಜನತೆಯ ಅಭಿಮಾನದ ಗಣರಾಜ್ಯ
ನಿನ್ನೆ ಇಂದು ನಾಳೆ...
davp 70/631

ಭರತನ ವಿಜಯಯಾತ್ರೆ

(ಐದನೇ ಪುಟದಿಂದ)

ಳನ್ನು ಹಾಕುತ್ತ ಮುಂದುವರಿಯಲಿ." ಕೂಡಲೇ ಪುರೋಗಾಮಿ ಸೈನಿಕರು ಮುಂದೆ ಹೊರಟರು.

ಪ್ರಾತಃಕಾಲ. ಸೇನಾಭಿಯಾನ ದುಂದುಭಿ ಮೊಳಗಿತು. ಒಂಟೆ, ಕತ್ತೆ, ಎತ್ತಿನ ಗಾಡಿ ಮತ್ತು ಆನೆಗಳ ಮೇಲೆ ತನ್ನ ಸಾಮಾನು ಸರಂಜಾಮುಗಳನ್ನು ಹೇರಿ ಸೇನೆಯು ಹೊರಟಿತು. ಭರತನು ಪಾಲಕಿಯಲ್ಲಿ ಪ್ರಯಾಣಿಸತೊಡಗಿದನು. ಸೇನೆಯ ಮುಂಭಾಗದಲ್ಲಿ ಧ್ವಜವು ರಾಮಸೇನೆಯ ಆಗಮನವನ್ನು ಸಾರುತ್ತ ಹಾರಾಡುತ್ತಿತ್ತು. ಭರತನ ಸೇನೆಯ ಎಲ್ಲ ಚಿಕಿತ್ಸಾಲೆಯ ಮತ್ತು ಔಷಧಿ ಭಂಡಾರಗಳ ಮೇಲೆ 'ಕಲ್ಯಾಣಗೃಹ' ಸೂಚಕ ಧ್ವಜವು ಶೋಭಿಸುತ್ತಿತ್ತು.ಹೀಗೆ ಸಕಲ ವೈಭವೋಪೇತ ಸೇನೆಯು ಗಂಗಾತಟವನ್ನು ತಲಪಿತು. ನಾಕಾಧ್ಯಕ್ಷನಿಗೆ ಆಜ್ಞೆ ನೀಡಿ, ಚರ್ಮದ ಅನೇಕ ನಾವೆಗಳನ್ನು ತರಿಸಲಾಯ್ತು. ಕೆಲವು ನಾವೆಗಳು ಸಾಮಾನು ಹೊತ್ತವು; ಕೆಲವು ಪುರುಷರನ್ನು ಹೇರಿಕೊಂಡುವು; ಕೆಲವನ್ನು ಕುದುರೆಗಳು ಹತ್ತಿದವು; ಕೆಲವನ್ನು ಎತ್ತುಗಳು ಏರಿದವು; ಇನ್ನು ಕೆಲವನ್ನು ಕತ್ತೆಗಳೂ ಒಂಟೆಗಳೂ ತುಂಬಿದವು. ಕೆಲವರು ಆನೆಗಳನ್ನು ಏರಿಯೇ ಗಂಗೆಯನ್ನು ದಾಟಲಾರಂಭಿಸಿದರು. ಕೆಲವು ಆನೆಗಳನ್ನು ನಾವೆಗಳಿಂದಲೇ ಗಂಗೆಯನ್ನು ಪಾರುಮಾಡಿಸಿದರು. ಗಂಗೆಯನ್ನು ದಾಟಿದ ಮೇಲೆ ಸೇನೆಯು ತನ್ನ ಡೇರೆ ಹಾಕಿತು. ರಾತ್ರೆಯಲ್ಲಿ ದೊನ್ನೆಗಳಲ್ಲಿ ದೀಪವಿರಿಸಿ ಗಂಗೆಯಲ್ಲಿ ತೇಲ ಬಿಟ್ಟಿತು. ಮರುದಿನ ಯಮುನಾನದಿಯನ್ನು ದಾಟಿತು. ಅಲ್ಲಿ ಮತ್ಸ್ಯರಾಜ ಸುರಥ, ಸಾಲ್ವರಾಜ ಗೋರಸೇನ ಮತ್ತು ಶಿವಿಗಳ ರಾಜ ಪ್ರಭದ್ರಕರು ಭರತನನ್ನು ಸ್ವಾಗತಿಸಿದರು. ಅವರು ಕುರುಕ್ಷೇತ್ರಕ್ಕೆ ಹೋದರು. ಅದನ್ನು ದಾಟಿ ಸೇನೆಯು ಕುಣಿದೇಶವನ್ನು ತಲಪಿತು. ತ್ರಿಗರ್ತ ರಾಜ ವಸುಧಾನ, ಕುಲೂ ಪ್ರಜಾಪತಿ ಜಯ, ದಾಶೇರಕರ ರಾಜ ಗೋವಾಶನರು ಭರತನನ್ನು ಸೇರಿಕೊಂಡರು. ಅವರೆಲ್ಲರನ್ನೂ ಕೂಡಿಕೊಂಡು ಭರತನು ರಾವಿ ನದಿಯನ್ನು ದಾಟಿ ದೇವಿಕಾ ನದಿಯ ದಂಡೆಯಲ್ಲಿ ಡೇರೆ ಹಾಕಿದನು.

ಅಷ್ಟರಲ್ಲಿ ಪದಾತಿ ಸೇನಾ ಸಮೇತರಾಗಿ ಪರ್ವತರಾಜ ಕುಮಾರ, ಶ್ರೀಣಿಮಾನ್, ವಸುಬಂಧು, ಸುಯೋಧನರೂ ಮದ್ರದೇಶದ ರಾಜ ಅಂಶುಮಾನರೂ ಅಲ್ಲಿ ಬಂದು ಸೇರಿಕೊಂಡರು. ಸಿಯಾಲ ಕೋಟೆಯಲ್ಲಿದ್ದ ಮದ್ರದೇಶದರಸು ಭರತನಿಗೆ ಭವ್ಯ ಸ್ವಾಗತ ನೀಡಿದನು. ಇಲ್ಲಿ ಮೂರು ದಿನಗಳವರೆಗೆ ವಿಶ್ರಾಂತಿಯನ್ನನುಭವಿಸಿ ಭರತನು ಚೇನಾಬ ನದಿಯನ್ನು ದಾಟಿದನು. ಇಲ್ಲಿಯ ಶ್ರುತಂಜಯನೂ ಅಭಿಸಾರ ದೇಶದ ರಾಜ ಕೃತಂಜಯನೂ ಕಾಶ್ಮೀರ ನರೇಶ ಸುಬಾಹುವೂ ಆತನನ್ನು ಬರಮಾಡಿಕೊಂಡರು. ಮುಂದೆ ಎಲ್ಲರೂ ಜೀಲಂ ನದಿಯನ್ನು ದಾಟಿದರು. ಸುದಾಮಾ ಪ್ರಾಂತದಲ್ಲಿ ಸುದಾಮಾ ನದಿಯನ್ನು ಪಾರುಮಾಡಿ, ಭರತನೂ ಆವನ ಪರಿವಾರದವರೂ ಕೇಕಯ ರಾಜ್ಯವನ್ನು ಪ್ರವೇಶಿಸಿದರು.

ಉಗ್ಗು ಮಾತು

ಲೇಖಕರು: "ನವಗಿರಿನಂದ"

ನನ್ನದು ಉಗ್ಗು ಮಾತು. ಇದರಿಂದ ಅವಮಾನಕ್ಕೊಳಗಾದ ಪ್ರಸಂಗ ಎಷ್ಟೋ.

ಅವಮಾನಗಳಾದಂತೆ, ಅವಮಾನದ ಶಂಕಾತಂಕಗಳಲ್ಲಿರುವಾದ ಉಗ್ಗು ಇನ್ನಷ್ಟು ಹೆಚ್ಚು.

ಶಾಲೆಯ ಮಾಸ್ತರು ಆಗಾಗ ಹೇಳುವರು: 'ಉಗ್ಗು ಅಂತ ಹೆದರಬಾರದು ಕಣೋ.ಯಾರಾದರೂ ನಕ್ಕರೆ ನೀನೂ ನಗು ಬೇಕಾದರೆ. ಇತರರು ನಗುತ್ತಾ ಇದ್ದರೆ ನಿನಗೆ ಅದೇ ಔಷಧ ಇತರರ ನಗುವಿನಿಂದ ಉಗ್ಗು ಕಡಮೆಯಾಗುತ್ತದೆ."

ಈ ಮಾತು ಬರುಬರುತ್ತ ನಿಜವೆನಿಸಿತು. ಬೆಳೆದಂತೆ, ಭಾರ ಬಿದ್ದಂತೆ, ಶಂಕಾತಂಕಗಳೆಲ್ಲ ತನ್ನಂತೆ ಜಾರಿಹೋದುವು. ಉಗ್ಗು ಹೋಗದಿದ್ದರೂ ಅದರ ಮೇಲೆ ಲಕ್ಷ್ಯ ಕೊಡುವುದನ್ನು ಬಿಟ್ಟುಬಿಟ್ಟೆ. ನಕ್ಕವರು ನಕ್ಕರು, ಬಿಟ್ಟವರು ಬಿಟ್ಟರು.

ಯೋಚನೆ ಮಾಡಿದಾಗ ನನ್ನ ಉಗ್ಗು ಮಾತು ಕೇಳಿ ನಕ್ಕವರಿಂದ ನನಗೆ ಲಾಭವಾಯಿತೇ ಹೊರತು ನಷ್ಟವಂತೂ ಆಗಲಿಲ್ಲ.

ಒಂದು ಸಾರಿ ನಾನೊಂದು ಶರ್ಟು ಬಟ್ಟೆ ಕೊಂಡುಕೊಳ್ಳಲು ಜವುಳೀ ಅಂಗಡಿಗೆ ಹೋದೆ. ನನಗೆ ಬೇಕಾದ ಬಟ್ಟೆಯ ತುಂಡಿಗೆ ಎರಡೂ–ಕಾಲೂ ರೂಪಾಯಿ (ಆ ಕಾಲದಲ್ಲಿ) ಆಯಿತು. ನಾನು ಐದು ರೂಪಾಯಿಯ ಒಂದು ನೋಟು ಕೊಟ್ಟೆ. ಇಷ್ಟರಲ್ಲಿ ಅಂಗಡಿಯಾತ ನನ್ನ ಉಗ್ಗು ಮಾತು ಕೇಳಿ ನಗುತ್ತ, ನನ್ನನ್ನು ಬೇಕೆಂತ ಮಾತಾಡಿಸುತ್ತ, ಸೇವಕನ ಕಡೆಗೆ ನೋಡಿ ಕಣ್ಣು ಚಿವುಟಕೊಳ್ಳುತ್ತ, "ಬಟ್ಟೆ ಬೇಬ್ಬೇಕಾದಾಗ ಇಯ್ಯಿಲ್ಲಿಗೇ ಬನ್ನಿ. ಬೆಚ್ಚೆಲೋ ಬಟ್ಟೆ ಬೇಹ್ಬೇಕಾದಷ್ಟಿದೆ'' ಎಂದು ಹೇಳುತ್ತ ಚಿಲ್ಲರೆ ಹಣ ವಾಪಾಸುಕೊಟ್ಟ. ನಾನು ಕೊಟ್ಟದ್ದು ಹತ್ತು ರೂಪಾಯಿ ನೋಟು ಅಂದುಕೊಂಡು ಏಳೂಮುಕ್ಕಾಲು ರೂಪಾಯಿಯನ್ನು ವಾಪಾಸು ಕೊಟ್ಟ. ನಾನು ನೆಗಾಡಿಕೊಂಡೇ ಮಾತಾಡಿ "ಚೇಷ್ಟೆಗೆ ದಂಡವಾಯಿತು" ಎಂದುಕೊಳ್ಳುತ್ತ ಅಲ್ಲಿಂದ ಹೊರಬಿದ್ದೆ. ನಾನು ಅವನಿಗೆ ಮೋಸ ಮಾಡಿದೆನೆಂಬ ಅಳುಕು ಸ್ವಲ್ಪವೂ ನನಗೆ ಉಂಟಾಗಲಿಲ್ಲ. ಸಮಯ ಸಾಧಕತ್ವ ನನ್ನಲ್ಲಿಯೂ ಇತ್ತು. ಅವನು ಕೊಟ್ಟ ಹೆಚ್ಚಿನ ಐದು ರೂಪಾಯಿಯನ್ನು ವಾಪಾಸು ಕೊಡುತ್ತಿದ್ದರೆ ನನ್ನ ಗೌರವ ಹೆಚ್ಚುತಿತ್ತು. ಆ ಬುದ್ಧಿ ಬರಲಿಲ್ಲ. ಹಾಗೆಯೇ ಒಂದು ಸಾರಿ ಒಂದು ಸಣ್ಣ ಅಂಗಡಿಯಿಂದ ಬೆಂಕಿ ಪೆಟ್ಟಿಗೆ ಕೊಂಡುಕೊಂಡು ಎರಡಾಣೆ ನಾಣ್ಯ ಕೊಟ್ಟಾಗ, ಆತ 'ಬೆಬ್ಬೇರೇನೂ ಬೇಬ್ಬೇಡವೆ?' ಎಂದು ಕೇಳುತ್ತ ನಾಲ್ಕಾಣೇದು ಚಿಲ್ಲರೆ ನನಗೆ ಕೊಟ್ಟುಬಿಟ್ಟ. "ಬೇರೇನೂ ಬೇಡ" ಎಂದು ಹೇಳುತ್ತಾ ಅದನ್ನು ಹಾಗೇ ಜೇಬಿಗಿಳಿಸಿಕೊಂಡು ಅಲ್ಲಿಂದ ಜಾರಿಬಿಟ್ಟೆ.

ಆ ಮೇಲೆ ಸ್ವಲ್ಪ ಕೊರಗಿಕೊಂಡೆ. ಆ ಸಣ್ಣ ಅಂಗಡಿಯಲ್ಲಿದ್ದವ ತರುಣ ಪ್ರಾಯದವ. ತಮಾಷೆ ಮಾಡುವ ಪ್ರಾಯ ತಾನೆ? ಹೆಚ್ಚಿನ ದುಡ್ಡನ್ನು ಅವನಿಗೆ ಹಿಂದಿರುಗಿ ಕೊಟ್ಟು 'ತಮಾಶೆ ಮಾಡುವುದು ಆರೋಗ್ಯಕ್ಕೆ ಒಳ್ಳೆಯದಾದರೂ ಎಚ್ಚರ ತಪ್ಪಬಾರದು. ನಾನು ಬೆಂಕೀ ಪೊಟ್ಟಣ ಕೇಳಿ ಎರಡಾಣೇನೇ ಕೊಟ್ಟಿದ್ದೆ, ನಾಲ್ಕಾಣೆಯಲ್ಲ' ಎಂದು ಹೇಳ ಬೇಕೆನಿಸಿತು. ಆದರೆ ಈ ಅನಿಸಿಕೆ ಬರುವಾಗ ನಾನು ಆ ಊರಿನಿಂದ ಎಷ್ಟೋ ಮೈಲು ದೂರದಲ್ಲಿದ್ದೆ.

ಂ ಂ ಂ

ಒಂದು ದಿನ ಟೌನಿನ ಕೆಲಸ ಮುಗಿಸಿ ಮನೆಗೆ ಬರುತ್ತಾ, ದಾರಿಯಲ್ಲಿ ಒಂದು ಪುಟ್ಟ ಅಂಗಡಿಯಲ್ಲಿ ಸಿಗರೇಟು ತೆಗೆದುಕೊಂಡು ಜೇಬಿನಲ್ಲಿದ್ದ ನಾಲ್ಕಾಣೆಯ ನಾಣ್ಯವನ್ನು ಕೊಟ್ಟೆ. ನನ್ನ ಉಗ್ಗು ಮಾತು ಕೇಳಿ ಅವನ ಗಮನ ಎತ್ತ ಹೋಯಿತೋ ಏನೋ? ಆದರೆ ಅವನು ನೆಗಾಡಿದ್ದು ಗೊತ್ತಾಗಲಿಲ್ಲ. ಅವನು ಕೊಟ್ಟ ಚಿಲ್ಲರೆಯನ್ನು ನಾನೂ ನೋಡದೆ ಜೇಬಿಗಿಳಿಸಿ, ಸಿಗರೇಟು ಸೇದಿಕೊಂಡೇ ನಡೆದು ಮನೆ ಸೇರಿದೆ. ಜೇಬಿನಿಂದ ದುಡ್ಡು ತೆಗೆಯುವಾಗ ನಾಲ್ಕಾಣೆಯ ಪಾವಲಿಯೊಂದು ಹೆಚ್ಚಾಗಿರುವುದು ಗೊತ್ತಾಯಿತು. ಕೊನೆಗೆ ಕೊಂಡುಕೊಂಡದ್ದು ಆ ಸಿಗರೇಟೇ. ಆಗ ನಾಲ್ಕಾಣೆಯ ಹೊರತು ಬೇರೆ ದುಡ್ಡೇ ನನ್ನ ಜೇಬಿನಲ್ಲಿರಲಿಲ್ಲವೆಂಬುದೂ ನೆನಪಿದೆ. ಸಿಗರೇಟಿನ ಒಂದಾಣೆ ಹೋದರೆ ಮೂರಾಣೆ ಮಾತ್ರವೇ ಇರಬೇಕಿತ್ತು. ಮೇಲೆ ಒಂದು ನಾಲ್ಕಾಣೆ ನಾಣ್ಯ ಹೆಚ್ಚಾಗಿದೆ. ಇದು ಆ ಅಂಗಡಿಯವನೇ ಕೊಟ್ಟದ್ದು ಎಂಟಾಣೆ ನಾಣ್ಯ ಅಂದುಕೊಂಡು ಬಾಕಿ ಚಿಲ್ಲರೆ ಎಣಿಸಿಕೊಟ್ಟಿದ್ದಾನೆ-ಪಾಪ ಚಿಕ್ಕ ಅಂಗಡಿಯವನ ಆ ದುಡ್ಡು ನನಗೇಕೆ?

ಅದನ್ನು ಇಟ್ಟುಕೊಂಡಿರಲು ಮನಸ್ಸು ಬಾರದೆ, ರಾತ್ರಿ ಊಟವಾದ ಮೇಲೆ ಒಂದೂವರೆ ಮೈಲು ದೂರವಿರುವ ಆ ಅಂಗಡಿಯ ಕಡೆಗೆ ಹೊರಟೆ. ಬಾಗಿಲು ಮುಚ್ಚುವ ತಯಾರಿಯಲ್ಲಿದ್ದ ಅವನ ಹತ್ತಿರ ನಾಲ್ಕಾಣೆಯನ್ನು ನೀಡುತ್ತ ನಡೆದ ಸಂಗತಿ ಹೇಳಿದೆ. ಆತ ಆಶ್ಚರ್ಯದಿಂದ ನನ್ನ ಮುಖ ನೋಡಿ ಅದನ್ನು ಪಡೆದುಕೊಂಡ.

ನಾನು ಅಲ್ಲಿಂದ ಹೊರಡುವಾಗ ನನ್ನ ಕಾಲಿಗೆ ಒಂದು ಮುಳ್ಳು ಚುಚ್ಚಿದುದರಿಂದ ಸ್ವಲ್ಪ ನಿಧಾನಿಸಿದೆ. ಆಗ ಆ ಅಂಗಡಿಯವ ಯಾರ ಹತ್ತಿರವೋ ಹೇಳುವ ಮಾತು ನನ್ನ ಕಿವಿಗೆ ಬಿತ್ತು, ಎರಡು ಉತ್ತರ ಪ್ರತ್ಯುತ್ತರಗಳು:

"ಈ ಕಾಲದಲ್ಲಿಯೂ ಇಂತ ನೀತಿವಂತರು ಇದ್ದಾರಲ್ಲ!'

'ಇದೇನು ನೀತಿಯೋ? ಮೋಸ! ನಾಲ್ಕಾಣೆ ಆದ್ರಿಂದ ತಂದುಕೊಟ್ಟ. ನಾಲ್ಕು ರೂಪಾಯಿ ಆಗ್ತಿದ್ರೆ ತಂದುಕೊಡ್ತಿದ್ನಾ?'

'ಬಹುಶಃ ಆತ ಈ ಅಂಗಡೀಲಿ ಸಾಲದ ಲೆಕ್ಕ ಇಟ್ಟುಕೊಳ್ಳಿಕ್ಕೆ ಇದೊಂದು ಪೀಠಿಕೆ ಅಂತ ಕಾಣುತ್ತೆ"........

ಮುಳ್ಳಿನ ಹಾಗೆಯೇ ಆ ಸಂಭಾಷಣೆಗಳೂ ಚುಚ್ಚದಿರಲಿಲ್ಲ. ಹಿಂದೆ ಜವುಳಿ ಅಂಗಡಿಯಲ್ಲಿ ನಾನು ಐದು ರೂಪಾಯಿ ಒಳಗೆ ಹಾಕಿಕೊಳ್ಳಲಿಲ್ಲವೆ?

ಂ ಂ ಂ

ಸಣ್ಣಪುಟ್ಟ ಅಂಗಡಿಯವರು ಸಾಧಾರಣವಾಗಿ ನೀತಿ ತಪ್ಪದೆ ನಡೆದುಕೊಳ್ಳುವರೆಂದು ಹೇಳಬಹುದು.ಉದಾಹರಣೆ, ಒಬ್ಬಳು ಪಲ್ಯಕಾಯಿ ಮಾರುವ ಮುದುಕಿಯ ಸಂಗತಿ ನೆನಪಿಗೆ ಬರುತ್ತದೆ. ಇದು ಇತ್ತೀಚೆಗೆ ನಯಾಪೈಸೆ ಬಳಕೆಗೆ ಬಂದ ಮೇಲೆ ನಡೆದ ಸಂಗತಿ.

ಮುಚ್ಚಂಜೆಯ ಹೊತ್ತು. ನಾನು ಕಣ್ಣಡಕವನ್ನು ಮನೆಯಲ್ಲೇ ಮರೆತು ತರಕಾರೀ ಕೊಂಡುಕೊಳ್ಳಲು ಹೋಗಿದ್ದೆ. ಆ ಮುದುಕಿಯ ಹತ್ತಿರ ಐದು ಪೈಸೆಗೆ ಎಳೆ ಮೆಣಸಿನ ಕಾಯಿಕೊಂಡು ಕೊಂಡು ಹತ್ತು ಪೈಸೆಯ ನಾಣ್ಯವನ್ನು ಕೊಡುತ್ತ "ಬಾಕಿ ಐದು ಪೈಸೆ ಕೊಡಮ್ಮ" ಅಂದೆ. ಅವಳು ಐದು ಪೈಸೆ ನನ್ನ ಕೈಗೆ ಹಾಕಿ ನಾನು ಕೊಟ್ಟ ನಾಣ್ಯವನ್ನು ತೆಗೆದುಕೊಂಡಳು.

ನಾನು ಜನರ ಗುಂಪಿನಲ್ಲಿ ಸೇರಿ ಹೊರಟಾಗ 'ಸಾಮಿ, ಓ ಸಾಮಿ.' ಎನ್ನುತ್ತ ಆ ಮುದುಕಿ ನನ್ನನ್ನು ಹಿಂದಕ್ಕೆ ಕರೆಯುತ್ತಿದ್ದಾಳೆ. ನಾನೇನೋ ಅವಳಿಗೆ ಕೇಡು ಬಗೆದು ತಪ್ಪಿಸಿಕೊಂಡವನೆಂಬಂತೆ ಎಲ್ಲರ ಲಕ್ಷ್ಯವೂ ನನ್ನ ಕಡೆಗೆ ಹರಿಯಿತು. ಮುದುಕಿ ಎದ್ದು ನನ್ನ ಕಡೆಗೇ ಬರುತ್ತಿದ್ದಾಳೆ.

"ಏನು ಸಾಮಿ ನೀವು? ಅರ್ಧರೂಪಾಯಿ ನಾಣ್ಯಾನ ಕೊಟ್ಟೇದ್ದೀರಲ್ಲಾ?— ಐದು ಪೈಸೇ ಎಳೇ ಮೆಣಸಿನ ಕಾಯಿ ತಕ್ಕೊಂಡು? ಹತ್ತು ಪೈಸೇ ಅಂದುಕೊಂಡ್ರಾ? ಸುಮ್ಮನೇಕೆ ಸಾಮಿ ಹೆಚ್ಚಿನ ದುಡ್ಡು? ನಮ್ದೇ ನಮಗೆ ದಕ್ಕಿದರೆ ಸಾಕಾಗಿದೆ" ಎಂದಳು.

ನಿಜಕ್ಕೂ ಅವಳು ಕರೆದು ಕೊಡದಿದ್ದರೆ ಅವಳಿಗೆ ಹೆಚ್ಚು ದುಡ್ಡು ಕೊಟ್ಟೆನೆಂದು ನನಗೆ ಗೊತ್ತಾಗುವ ಸಂಭವವಿದ್ದಿಲ್ಲ.

ಸಂದರ್ಶಿಸಿರಿ!—ಸಂತೃಪ್ತರಾಗಿರಿ!!

ಬೆಳ್ಳಿ ಬಂಗಾರ ವಜ್ರಗಳಿಗೆ, ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ವ್ಯಾಪಾರಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res;3272

ನಂಬಿದರೆ ನಂಬಿ

ನೀವು ಮತ್ತು ನಿಮ್ಮ ದೇಹ

ತನ್ನ ಜೀವನದ ಆದ್ಯಂತ (ಸರಾಸರಿ 70 ವರ್ಷಗಳ ಆಯುಷ್ಯ) ಒಬ್ಬ ಮನುಷ್ಯನು 100 ಟನ್ನು ಆಹಾರವನ್ನು ಸೇವಿಸುತ್ತಾನೆ. ಇದು ಅವನ ಸ್ವಂತ ದೇಹಕ್ಕಿಂತ 1,250 ಪಾಲು ಹೆಚ್ಚು ತೂಕವಾಗುತ್ತದೆ (ದೇಹದ ತೂಕ ಸುಮಾರು 175 ಪೌಂಡು ಎಂದು ಭಾವಿಸಿಕೊಂಡು).

ಮಾನವನ ಆಹಾರದಲ್ಲಿ ಕೇವಲ ಸೇ. ಒಂದರಷ್ಟು ಮಾತ್ರವೇ ಜಲಾಂಶವು ಸೇರುತ್ತದೆ; ಅದೇ ಭೂಮಿಯ ಪೃಷ್ಠ ಭಾಗದಲ್ಲಿ ಸೇ. 75ರಷ್ಟು ಭಾಗ ಜಲಾವೃತವಾಗಿದೆ.

ಮನುಷ್ಯನು ಆಹಾರವಿಲ್ಲದೆ ಭಿನ್ನ ಭಿನ್ನ ಅವಧಿಯ ವರೆಗೆ ಬಾಳಬಲ್ಲ. ಇದು ಅವನು ಪಡೆದು ಬೆಳೆದ ಪೋಷಕ ಆಹಾರ, ಅವನ ಆರೋಗ್ಯ ಸ್ಥಿತಿ ಮೊದಲಾದವುಗಳನ್ನೇ ಅವಲಂಬಿಸಿರುತ್ತದೆ; 52 ದಿನಗಳ ಕಾಲ ಉಪವಾಸವಿದ್ದವರ ದೃಷ್ಟಾಂತವನ್ನು ಸೋವಿಯೆತ್ ಸಂಶೋಧಕರು ನೀಡುತ್ತಾರೆ. ಅಮೆರಿಕದ ಪತ್ರಿಕಾ ವರದಿಗಳ ಪ್ರಕಾರ ಒಬ್ಬಾಕೆ 117 ದಿನಗಳ ಕಾಲ ಉಪವಾಸವಿದ್ದಳು. ಈ ಅವಧಿಯಲ್ಲಿ ಆಕೆ ಕೇವಲ ನೀರು ಮತ್ತು ವಿಟಾಮಿನ್‌ಗಳನ್ನು ಮಾತ್ರವೆ ಸೇವಿಸಿದಳು. ಬೊಜ್ಜಿನಿಂದ ಬಳಲುತ್ತಿದ್ದ ಆಕೆ (ಆಕೆಯ ಮೊದಲ ತೂಕವು 364 ಪೌಂಡುಗಳಷ್ಟು ಇದ್ದಿತು) 119 ಪೌಂಡು ತೂಕವನ್ನು ಕಳೆದುಕೊಂಡಿದ್ದಳು;

ಮನುಷ್ಯ ದಿನವೊಂದಕ್ಕೆ ಸರಾಸರಿ 20,000 ಹೆಜ್ಜೆಗಳನ್ನು ಹಾಕುತ್ತಾನೆ; ಒಂದ. ವರ್ಷಕ್ಕೆ 7,000,000; 70 ವರ್ಷಗಳಲ್ಲಿ 50,000,000 ಹೆಜ್ಜೆಗಳು. ತನ್ನ ಜೀವಮಾನದಲ್ಲಿ ಆತ ನಡೆದುಕೊಂಡೇ ಚಂದ್ರನನ್ನು ತಲಪಬಹುದು. ಭೂಮಧ್ಯ ರೇಖೆಯ ಗುಂಟ ಭೂಮಂಡಲವನ್ನು 9 ಬಾರಿ ಸುತ್ತು ಹಾಕಬಹುದು.

ಸರಾಸರಿ 70 ವರ್ಷಗಳ ಆಯುರ್ಮಾನದಲ್ಲಿ 23 ವರ್ಷಗಳು ನಿದ್ದೆಯಲ್ಲಿ ಕಳೆಯುತ್ತವೆ, 13 ವರ್ಷಗಳು ಮಾತನಾಡುವುದರಲ್ಲಿ ಮತ್ತು 6 ವರ್ಷ ಊಟ ಉಣಿಸುಗಳಲ್ಲಿ ಕಳೆಯುತ್ತವೆ.

ಮನುಷ್ಯನ ನಿರ್ಮಲವಾದ ಚರ್ಮವು ಸೂಕ್ಷ್ಮದರ್ಶಕೀಯ ಜೀವಿಗಳನ್ನು ನಾಶಯಿಸುತ್ತದೆ. ನಿರ್ಮಲವಾದ ಮನುಷ್ಯ ಚರ್ಮದ ಮೇಲೆ ಕಂಡು ಬಂದ ಆರಂಭದ 30,000,000 ಸೂಕ್ಷ್ಮ ದರ್ಶಕೀಯ ಜೀವಿಗಳಲ್ಲಿ ಕೇವಲ 720,000 ಮಾತ್ರ ಬಹಳೆಂದರೆ ಒಂದು ಗಂಟೆ ಕಾಲ ಬಾಳುತ್ತವೆ. 7, 000ಗಳು ಎರಡು ಗಂಟೆಗಳ ಕಾಲ ಬದುಕುಳಿಯಲು ಪ್ರಯತ್ನಿಸುತ್ತವೆ.

ಮೂಗಿನ ತುದಿ, ಬೆರಳುಗಳ ತುದಿ, ಕಾಲ್ಬೆರಳ ತುದಿ ಮೊದಲಾದುವು ಅತ್ಯಂತ ಶೀತ ಸಂವೇದನೆಯ ಭಾಗಗಳಾಗಿವೆ. ಇವುಗಳಲ್ಲಿ ಶೀತ ಸಂವೇದನೆಯ ತಂತುಗಳಿವೆ. ದೇಹದ ಎಲ್ಲಾ ಭಾಗಗಳಲ್ಲೂ ಶೀತ ಸಂವೇದನೆಯ ಬಿಂದುಗಳು ಇವೆ. ಇವುಗಳ ಒಟ್ಟು ಸಂಖ್ಯೆ ಸುಮಾರು 250,000.

ಮನುಷ್ಯನಲ್ಲಿ ಸುಮಾರು 30,000 ಉಷ್ಣ ಸಂವೇದನೆಯ ಬಿಂದುಗಳು ಇವೆ.

ಚರ್ಮದ ಪೃಷ್ಠಭಾಗದ ಮೇಲೆ 2ರಿಂದ 4 ಮಿಲಿಯಗಳವರೆಗೆ ವೇದನಾ ಸಂವೇದನೆಯ ಬಿಂದುಗಳು ಇವೆ. "ನೋವೆ ಆರೋಗ್ಯದ ಕಾವಲು ನಾಯಿ" ಎಂದರು ಪುರಾತನ ಗ್ರೀಕರು. ಯಾಕೆಂದರೆ ಇದೇ ಶರೀರಾಂಗಗಳಿಗೆ ಅಪಾಯದ ಎಚ್ಚರಿಕೆಯನ್ನು ನೀಡುತ್ತದೆ. ನೋವು ಇಲ್ಲದಿದ್ದರೆ, ಮನುಷ್ಯನು ರಕ್ಷಣಾಹೀನನಾಗಿರುತ್ತಿದ್ದ ಮತ್ತು ಮುಂಬರುವ ಗಂಡಾಂತರದ ಅರಿವಿಲ್ಲದೆ ನಾಶವಾಗಿ ಹೋಗುತ್ತಿದ್ದ.

ಮನುಷ್ಯ ಅತ್ಯಂತ ಬಹಳೆಂದರೆ 111.2-113 ಫ್ಯಾರೆನ್‌ಹೀಟ್ ಉಷ್ಣಾಂಶದವರೆಗೆ ದೇಹದ ಉಷ್ಣತೆಯನ್ನು ತಡೆದುಕೊಳ್ಳಬಲ್ಲ. ಅತ್ಯಂತ ನೀಚ ಅಂಕಿ 77-80.6 ಫ್ಯಾರೆನ್‌ಹೀಟ್ ಅಂಶಗಳು.

ಕ್ರಮಶಃ ಉಷ್ಣತಾಮಾನವು ಹೆಚ್ಚುತ್ತಿರುವ ಒಣ ವಾತಾವರಣದಲ್ಲಿ ಮನುಷ್ಯನು ಅಲ್ಪಕಾಲದ ವರೆಗೆ 302-320 ಫ್ಯಾರನ್‌ಹೀಟ್ ಉಷ್ಣಾಂಶವನ್ನು ತಡೆದುಕೊಳ್ಳಬಲ್ಲವನಾಗಿದ್ದಾನೆ.

ಮನುಷ್ಯ ರೋಮದ ಕರ್ಷಕ ಶಕ್ತಿಯು (ಪ್ರತಿ ಚದರ ಮಿಲಿ ಮೀಟರಿಗೆ 100 ಪೌಂಡು) ಇಷ್ಟೇ ವಿಭಾಗದ (ಪ್ರತಿ ಚದರ ಮೀಟರಿಗೆ 5 ಪೌಂಡುಗಳು) ಲೆಡ್ ವೈರ್‌ಗಿಂತ, ಜಿಂಕ್ ವೈರ್‌ಗಿಂತ (ಪ್ರತಿ ಚದರ ಮೀಟರಿಗೆ 37.5 ಪೌಂಡು) ಅಲ್ಯೂಮಿನಿಯಂ ವೈರಿಗಿಂತ (ಪ್ರತಿ ಚದರ ಮಿಲಿಮೀಟರಿಗೆ 62.5 ಪೌಂಡು) ಮತ್ತು ಪ್ಲಾಟಿನಂ ವೈರಿಗಿಂತ (ಪ್ರತಿ ಚದರ ಮಿಲಿ ಮೀಟರಿಗೆ 75 ಪೌಂಡು) ಹೆಚ್ಚಾಗಿದೆ.

ಒಂದಿಷ್ಟಾದರೂ ಶಿಕ್ಷಣವಿಲ್ಲದ ಕಣ್ಣು ವರ್ಣಪ್ರಭೇಧಗಳನ್ನು ಕಾಣಲಾರದು. ಹೊಸತಾಗಿ ಹುಟ್ಟಿದ ಕೂಸು 6 ಅಥವಾ 7 ತಿಂಗಳವರೆಗೂ ವರ್ಣಾಂಧವಾಗಿರುತ್ತದೆ. ಸಹಜ ವರ್ಣ ಸಂವೇದನಾ ಶಕ್ತಿಯನ್ನು ಹೊಂದಿರುವ ವಯಸ್ಕನು ವರ್ಣಪಟಲದಲ್ಲಿ ಸುಮಾರು 10,000 ಛಾಯೆಗಳನ್ನು ಗುರುತಿಸಬಲ್ಲ.

ಮನುಷ್ಯನು ದಿನವೊಂದಕ್ಕೆ 455 ಘನ ಅಡಿ ಗಾಳಿಯನ್ನು ಉಸಿರಾಡಿಸುತ್ತಾನೆ.

"ಮೋಲಿನ ಕೋರ್ಟ್" ಬಿಡುಗಡೆ

ಕಾಸರಗೋಡು, ಜ. 29; ಈ ತಾಲೂಕಿನ ಕನ್ನಡಪರವಾದಿ ಧುರೀಣರೂ, ರಾಜಕಾರಣಿ—ಕೃಷಿಕ—ನ್ಯಾಯವಾದಿ— ಶ್ರೀ ಕಳ್ಳಿಗೆ ಮಹಾಬಲ ಭಂಡಾರಿಯವರು ಬರೆದ "ಮೋಲಿನ ಕೋರ್ಟು" ದ್ವಿತೀಯ ಕಾದಂಬರಿಯನ್ನು ಇತ್ತೀಚೆಗೆ ಇಲ್ಲಿ ಎಡ್ವಕೇಟ್ ಶ್ರೀ ಕೆ. ಎಸ್. ಸುಬ್ರಾಯ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಸರಳ ಸಮಾರಂಭವೊಂದರಲ್ಲಿ ಸರಕಾರೀ ಕಾಲೇಜಿನ ಪ್ರೊಫೆಸರ್ ಟಿ. ಸುಬ್ರಾಯ ಭಟ್ಟರು ಬಿಡುಗಡೆಗೊಳಿಸಿದರು.

ಶಾಲಾ ವರ್ಧಂತ್ಯುತ್ಸವ.

ವಂಡ್ಸೆ ಬೋರ್ಡು ಮಲೆನಾಡು ಹ್ಯಾಸ್ಕೂಲಿನ ವರ್ಧಂತ್ಯುತ್ಸವವು ಜನವರಿ 28ರಂದು ಕುಂದಾಪುರ ತಾಲೋಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಬಿ. ವೀರಾಂಜನೇಯ ಹೆಗ್ಡೆಯವರ ಹಿರಿತನದಲ್ಲಿ ಜರಗಿತು. ಪೂರ್ವಾಹ್ನ ವಂಡ್ಸೆ ಸಿಂಡಿಕೇಟ್ ಬ್ಯಾಂಕಿನ ಮೆನೇಜರ್ ಶ್ರೀ ಎಂ. ರಾಘವೇಂದ್ರ ಶೆಟ್ಟರು ನಾಕನ ಧ್ವಜಸ್ತಂಭವನ್ನು ಉದ್ಘಾಟಿಸಿ, ಧ್ವಜವನ್ನು ಏರಿಸಿದ್ದರು.

ರಾತ್ರಿ ಘಂಟೆ 8ಕ್ಕೆ ದೇವತಾ ಪ್ರಾರ್ಥನೆಯೊಂದಿಗೆ ಸಭೆ ಆರಂಭವಾಗಿ ಶಾಲಾ ವರದಿಯನ್ನು ಮುಖ್ಯೋಪಾಧ್ಯಾಯ ಶ್ರೀ ಎಸ್. ಮಂಜಯ್ಯ ಶೆಟ್ಟರೂ, ವಿದ್ಯಾರ್ಥಿ ಸಂಘದ ವರದಿಯನ್ನು ವಿದ್ಯಾರ್ಥಿ ನಾಯಕ ರವೀಂದ್ರನಾಥ ಶೆಟ್ಟರೂ ಓದಿದರು. ಹಳೆ ವಿದ್ಯಾರ್ಥಿ ಶ್ರೀ ಕೆ. ಶಿವರಾಮ ಶೆಟ್ಟರಿಂದ ಸ್ವಾಗತ ಭಾಷಣ, ಮುಖ್ಯ ಅತಿಥಿ ಶ್ರೀ ಯಡ್ತರೆ ಮಂಜಯ್ಯ ಶೆಟ್ಟರಿಂದ ಭಾಷಣವಾದ ಬಳಿಕ ಶ್ರೀ ಎ. ಜಿ. ಕೊಡ್ಗಿಯವರು ಬಹುಮಾನ ವಿತರಣೆಗೈದರು. ಅಧ್ಯಕ್ಷರ ಭಾಷಣದ ಬಳಿಕ ಶಾಲಾ ಬಾಲಕ ಬಾಲಕಿಯರಿಂದ ಹಾಗೂ ಯುವಕರಿಂದ ರಸಮಂಜರಿ ಕಾರ್ಯಕ್ರಮ ಜರಗಿತು. ಕೊನೆಯಲ್ಲಿ ಸಹಾಯಕ ಅಧ್ಯಾಪಕ ಶ್ರೀ ಎಸ್. ಚೆನ್ನಕೇಶವ ಅಡಿಗರು ಸರ್ವರನ್ನು ವಂದಿಸಿದರು.

ಬಂಟರ ಯಾನೆ ನಾಡವರ ಸಂಘ ಮುಂಬಯಿ:

ಮೇಲಿನ ಸಂಘದ ಶಾಲಾ ಕಟ್ಟಡದ ನಿಧಿಗಾಗಿ ಇದೇ ಫೆಬ್ರವರಿ ತಿಂಗಳ ತಾರೀಕು 27 ನೇ ಶನಿವಾರ ಸಾಯಂಕಾಲ ಗಂಟೆ 6.30ಕ್ಕೆ, ಕಿಂಗ್ ಸರ್ಕಲಿನಲ್ಲಿರುವ ಷಣ್ಮುಖಾನಂದ ಸಭಾ ಗೃಹದಲ್ಲಿ ಚಲಚಿತ್ರರಂಗದಲ್ಲಿ ಹೆಸರಾಂತ ಕಲಾವಿದರ ಕೂಡುವಿಕೆಯಿಂದ ನರ್ತನ, ಗಾಯನ, ಹಾಸ್ಯ ಇತ್ಯಾದಿ ವಿವಿಧ ವಿನೋದಾವಳಿಗಳಿಂದ ಕೂಡಿದ ಕಾರ್ಯಕ್ರಮವು ಜರಗಲಿರುವುದೆಂದೂ ಟಿಕೇಟುಗಳನ್ನು ಪಡೆದು ಕನ್ನಡಿಗರ ಸರ್ವರೂ ಪ್ರೋತ್ಸಾಹಿಸಬೇಕೆಂದೂ ಸಂಘದ ಗೌರವ ಕಾರ್ಯದರ್ಶಿಗಳು ಆದರದಿಂದ ವಿನಂತಿಸುತ್ತಾರೆ.

ಭಂಡಾರ್‌ಕರ್ಸ್ ಕಾಲೇಜಿನ ವಾರ್ಷಿಕೋತ್ಸವ

ಕುಂದಾಪುರದ ಭಂಡಾರ್‌ಕರ್ಸ್ ಕಾಲೇಜಿನ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿದ್ದ ಮಂಗಳೂರಿನ ಡಾ| ಎಂ. ಡಿ. ಅಡಪ್ಪನವರು ಮಾತನಾಡುತ್ತಾ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವನೆಯನ್ನು ಪ್ರಜ್ವಲಿಸಲು ವಿಶ್ವಸಂಸ್ಥೆಗಳಿಂದಲೂ ನಮ್ಮ ದೇಶದಲ್ಲಿ ಈಗ ದೇಶದ ಅಭಿವೃದ್ಧಿ ಮಾರ್ಗದಲ್ಲಿ ನಡೆಸಲ್ಪಡುವ ಪ್ರತಿಷ್ಠಾನ 'ಮುಖ್ಯ' ಅಗತ್ಯವಿದೆಯೆಂದೂ ಹೇಳಿದರು.

ಆರಂಭದಲ್ಲಿ ಡಾ| ಎಚ್. ವೆಂಕಟರಮಣಯ್ಯನವರಿಂದ ಸ್ವಾಗತ, ಪ್ರಾಧ್ಯಾಪಕ ವೃಂದವರಿಂದ ಶುಭಾಶಯಗಳ ವಾಚನಗಳಾದವು. ಅಂತ್ಯದಲ್ಲಿ ಪ್ರಾಧ್ಯಾಪಕ ನ.ಂರಾರಿ ತೋಳ್ಪಾಡಿಯವರು ವಂದನೆಗಳನ್ನರ್ಪಿಸಿದರು. ರಾತ್ರಿ ನಾಟಕ ಪ್ರದರ್ಶನಗಳಿದ್ದವು.

ಪೂರ್ಣಪ್ರಜ್ಞ ಕಾಲೇಜು ವಿಚಾರ ಸಂಕಿರಣ

ನ ದಿನ ಹಿರಿಯ ಸಾಹಿತಿ ಡಾ| ಶಿವರಾಮ ಕಾರಂತರು ಶ್ರೀ ಪೂರ್ಣಪ್ರಜ್ಞ ಕಾಲೇಜಿನ ದಶಮಾನೋತ್ಸವ ಅಂಗವಾಗಿ ತಾ. 23ರಂದು ಏರ್ಪಡಿಸಿದ "ಶಿಕ್ಷಣ ಮತ್ತು ಜೀವನ ಮೌಲ್ಯಗಳು" ಎಂಬ ಕುರಿತಾದ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಜೀವನದಲ್ಲಿ ಒಳ್ಳೆಯದಕ್ಕಾಗಿ ಮೌಲ್ಯಗಳು ಇರಬೇಕು. ಶಿಕ್ಷಣಕ್ಕೂ ಜೀವನ ಮೌಲ್ಯಗಳಿಗೂ ಸಂಬಂಧ ಕಲ್ಪಿಸುವುದು ವ್ಯಾವಹಾರಿಕವಾಗಲಾರದೆಂದರು.

ವಿಚಾರ ಸಂಕಿರಣದಲ್ಲಿ ಕಸ್ತೂರಿಯ ಸಹಸಂಪಾದಕ ಶ್ರೀ ಪಿ ವಿ. ಆಚಾರ್ಯ, ಮೈಸೂರಿನ ಸ್ಟೀಚ್ ಪೆಥಾಲಜಿ ಪ್ರೊಫೆಸರ್ ಡಾ| ಎಂ. ಎಸ್. ರಷ್ಮಿ, ಅಲ್ ಇಂಡಿಯಾ ರೇಡಿಯೋದ ಶ್ರೀ ಎಂ ಶಂಕರ ಮತ್ತು ಮೈಸೂರು ಜೆ. ಎಸ್. ಎಸ್. ಕಾಲೇಜಿನ ಪ್ರಾಧ್ಯಾಪಕ ಶ್ರೀ ಕೆ. ಸದಾಶಿವ ಇವರುಗಳು ಭಾಗವಹಿಸಿದ್ದರು.

ಸಂಜೆ ರಾಜ್ಯದ ಕಾಲೇಜಿಯೇಟ್ ಎಜುಕೇಶನ್ ಡೈರೆಕ್ಟರ್ ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರು ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಡಾ| ಕಾರಂತರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರು ಕಾಲೇಜಿನ ಕಾಮರ್ಸ್ ವಿಭಾಗದ ಹೊಸಕಟ್ಟಡವನ್ನು ಉದ್ಘಾಟಿಸಿದರು.

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸ ಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು-4

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ

ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ

ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮುನ್ನಡೆಯಲ್ಲಿ ಸಣ್ಣ ಕೈಗಾರಿಕಾ ಕ್ಷೇತ್ರ

ದೇಶದ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ 1960—61ರಿಂದ ಗಣನೀಯ ಪ್ರಮಾಣದಲ್ಲಿ ಪ್ರಗತಿ ಕಂಡುಬರುತ್ತಿದೆ. ಈ ಕ್ಷೇತ್ರದ ಉತ್ಪಾದನೆ 1966ರಿಂದೀಚೆಗೆ ದಾಖಲೆಯನ್ನೂ ಸ್ಥಾಪಿಸಿದೆ. ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ 1966ರಲ್ಲಿ ರಿಜಿಸ್ಟ್ರಾದ ಕೈಗಾರಿಕಾ ಘಟಕಗಳ ಸಂಖ್ಯೆ 1,41,619 ಇದ್ದು ಅದು 1970ರ ವೇಳೆಗೆ 1,90,727ಕ್ಕೆ ಏರಿದೆ. 1967ರಿಂದ ಈಚೆಗೆ ವರ್ಷಕ್ಕೆ 17,000 ಹೊಸ ವಿಭಾಗಗಳ ಸ್ಥಾಪನೆಯಾಗಿವೆ. 1965—66ರಲ್ಲಿ ಈ ಕೈಕಾರಿಕಾ ವಿಭಾಗಗಳಲ್ಲಿ 58 ಲಕ್ಷ ಮಂದಿಗೆ ಉದ್ಯೋಗಾವಕಾಶ ದೊರಕಿತ್ತು. 1970—71ರ ವೇಳೆಗೆ ಈ ಕ್ಷೇತ್ರದ ಕಾರ್ಮಿಕರ ಸಂಖ್ಯೆ 65 ಲಕ್ಷಗಳಿಗೆ ಏರಿದೆ. 1969—70ರಲ್ಲಿ ಈ ಕ್ಷೇತ್ರ ಸಣ್ಣ ಕೈಗಾರಿಕಾ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಘಟಕಗಳಲ್ಲಿ 3,670 ಕೋಟಿ ರೂಪಾಯಿ ಬೆಲೆಬಾಳುವ ವಸ್ತುಗಳನ್ನು ತಯಾರಿಸಲಾಗಿದೆ.

ಕೈಗಾರಿಕೋದ್ಯಮ ಬೆಳೆಯಲು ಅಗತ್ಯವಾದ ಹಣಕಾಸಿನ ಸೌಲಭ್ಯ, ತಾಂತ್ರಿಕ ಗುಣಮಟ್ಟಗಳ ಅಭಿವೃದ್ಧಿ ಹಾಗೂ ಇನ್ನಿತರ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸುತ್ತಿರುವುದು ಸಣ್ಣ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಯಲ್ಲಿ ಕಂಡುಬಂದಿರುವ ಪ್ರಗತಿಗೆ ಮುಖ್ಯ ಕಾರಣ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದಲೂ ಸಾಕಷ್ಟು ಪ್ರಮಾಣದಲ್ಲಿ ನೆರವು ದೊರೆಯುತ್ತಿದೆ. ಸಣ್ಣ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಕೆಲವು ವಸ್ತುಗಳನ್ನು ಸಣ್ಣ ಕೈಗಾರಿಕೋದ್ಯಮಿಗಳೇ ಉತ್ಪಾದಿಸುವ ಸೌಲಭ್ಯವನ್ನು ಸರ್ಕಾರದವರು ಕಲ್ಪಿಸಿಕೊಟ್ಟಿದ್ದಾರೆ.

ಇತ್ತೀಚೆಗೆ ದೇಶದಲ್ಲಿ ಹದಿನಾಲ್ಕು ದೊಡ್ಡ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಲಾಯಿತು. ಈ ರಾಷ್ಟ್ರೀಕರಣದ ನಂತರ ಸಣ್ಣ ಕೈಗಾರಿಕಾ ಘಟಕದಲ್ಲಿನ ಉತ್ಪಾದನೆ ನಾಲ್ಕರಷ್ಟು ಹೆಚ್ಚಿದೆ. 1966ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಂಸ್ಥೆಯವರು ಈ ಕ್ಷೇತ್ರಕ್ಕಾಗಿ ನೀಡಿದ್ದ ಸಾಲ ಕೇವಲ 90·75 ಕೋಟಿ ರೂ. ಗಳಷ್ಟಿತ್ತು. ಇದು 1970ರ ವೇಳೆಗೆ 393.39 ಕೋಟಿ ರೂ.ಗಳಿಗೆ ಏರಿದೆ. ಅಂದರೆ ಈ ನಾಲ್ಕು ವರ್ಷಗಳಲ್ಲಿ ಬ್ಯಾಂಕುಗಳಿಂದ ಸಾಲ 300 ಕೋಟಿ ರೂ.ಗಳಷ್ಟು ಏರಿದೆ. ಇಷ್ಟೇ ಅಲ್ಲದೆ ಸಣ್ಣ ಕೈಗಾರಿಕೋದ್ಯಮಗಳೂ ವಿದೇಶಗಳಿಂದ ಕಚ್ಚಾ-ವಸ್ತುಗಳನ್ನು ತರಿಸಿಕೊಳ್ಳಲು ಅನುಕೂಲವಾಗುವಂತೆ ವಿದೇಶೀ ವಿನಿಮಯ ಸೌಲಭ್ಯವನ್ನೂ ಅವರಿಗೆ ನೀಡಲಾಗಿದೆ. ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯಿಂದಾಗಿ ಸಣ್ಣ ಕೈಗಾರಿಕೆಗಳನ್ನು ಅವಲಂಬಿಸಿರುವ ಇತರ ಕೈಗಾರಿಕೆಗಳೂ ಪ್ರಗತಿಪಥದಲ್ಲಿವೆ. 1969—70ರಲ್ಲಿ ಸುಮಾರು 10,000 ಸಣ್ಣ ಕೈಗಾರಿಕೆಗಳಿಗೆ ಅಗತ್ಯವಾಗುವ ಸಣ್ಣಪುಟ್ಟ ವಸ್ತುಗಳನ್ನು ತಯಾರಿಸುವ ಘಟಕಗಳು 27·30 ಕೋಟಿ ರೂ.ಗಳಷ್ಟು ವಸ್ತುಗಳನ್ನು ಪೂರೈಸಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ದೃಷ್ಟಿಯಿಂದ ಕೈಗೊಂಡ ಯೋಜನೆ ಈಗಾಗಲೇ 34,000 ಹಳ್ಳಿಗಳಲ್ಲಿ ಜಾರಿಗೊಂಡಿದೆ. ಇದರಿಂದಾಗಿ 1,16,000 ಮಂದಿಗೆ ಉದ್ಯೋಗಾವಕಾಶ ದೊರೆತಿದೆ. ಈ ಕೈಗಾರಿಕಾ ಘಟಕಗಳು 1969—70ರಲ್ಲಿ 10·16ಕೋಟಿರೂ.ಗಳಷ್ಟು ಬೆಲೆಬಾಳುವ ವಸ್ತುಗಳನ್ನು ತಯಾರಿಸಿವೆ ಸಣ್ಣ ಕೈಗಾರಿಕೋದ್ಯಮಿಗಳಿಗೆ ಅಗತ್ಯವಾದ ತಾಂತ್ರಿಕ ಮತ್ತು ಆಡಳಿತ ತರಬೇತಿ ನೀಡಲು ಅಗತ್ಯವಾಗುವ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಯೋಜನೆಯಲ್ಲಿ 26,308 ಮಂದಿಗೆ ತರಬೇತಿ ಸೌಲಭ್ಯ ನೀಡಲಾಗಿದೆ.

(ಮುಂದಿನ ಪುಟದಿಂದ)

ಮತಿ ಗಾಂಧಿಯವರ ಡೊಂಬರಾಟಕ್ಕೆ ಇತಿಶ್ರೀ ಹಾಡಬೇಕು.

ಆಧುನಿಕ ಭೀಷ್ಮ

ಭೀಷ್ಮಾಚಾರ್ಯರನ್ನು ಗೆಲ್ಲಲು ಅಸಾಧ್ಯವಾದಾಗ, ಶಿಖಂಡಿಯನ್ನು ಯುದ್ಧಕ್ಕೆ ಧರ್ಮರಾಯ ಕಳಿಸಿದನಂತೆ. ಶಿಖಂಡಿಯೊಡನೆ ಯುದ್ಧ ಮಾಡಬಯಸದೆ ಸ್ವಯಂ ಆಚಾರ್ಯರೇ ಶಿಖಂಡಿಯಂತೆ ಶರಶಯನ ಮಾಡಿದರಂತೆ. ಕೌರವ ಸಕ್ಷದ ಅಜ್ಜ—ಗುರು ಮೊದಲಾದವರನ್ನು ಕಂಡ ತಕ್ಷಣ ಅರ್ಜುನ ಕಂಗಾಲಾಗಿ ಶಸ್ತ್ರ ಸನ್ಯಾಸಕ್ಕೆ ನಿರ್ಧರಿಸಿದನಂತೆ; ಆಗ ಶ್ರೀ ಕೃಷ್ಣ ಆತನಿಗೆ ಗೀತೋಪದೇಶ ಮಾಡಿ, "ನಿಮಿತ್ತ ಮಾತ್ರಂ ಭವ ಪಾಂಡು ಪುತ್ರ" ಎಂದು ಆಜ್ಞಾಪಿಸಿ ಕರ್ಮಯೋಗದ ಪಾಠವನ್ನು ನೀಡಿದನಂತೆ.

ಉತ್ತರ ಪ್ರದೇಶದ ಸಿಂಹ ಶ್ರೀ ಚಂದ್ರಭಾನುಗುಪ್ತರು ಚುನಾವಣೆಗಳಲ್ಲಿ ಸ್ಪರ್ಧಿಸುವುದಿಲ್ಲವೆಂದು ಕೇಳಿದಾಗ ಇದೆಲ್ಲ ನೆನಪಾಗುತ್ತದೆ. ಇತ್ತೀಚೆಗೆ ಹೃದಯಾಘಾತಕ್ಕೆ ಒಳಗಾದ ವೇಳೆ, ಅವರು ಚುನಾವಣೆಗಳಲ್ಲಿ ಸ್ಪರ್ಧಿಸುವುದಿಲ್ಲವೆಂದು ಪತ್ರಿಕೆಗಳು ವರದಿ ಮಾಡಿದಾಗ, ಅದನ್ನು ನಿರಾಕರಿಸಿದ ಗುಪ್ತ ಈಗ ತಾವೇ ಹಿಂದೆ ಸರಿದಿದ್ದಾರೆ. ತಾನು ಸ್ಪರ್ಧಿಸಲಿದ್ದ ಕ್ಷೇತ್ರದಲ್ಲಿ ಇಂಡಿಕೇಟಿಗರು ಶ್ರೀ ಕೆ. ಸಿ. ಪಂತರನ್ನು ನಾಮಕರಣಮಾಡಿ ಬಿಟ್ಟರು. ಪಂತ—ಗುಪ್ತರ ಸಂಬಂಧ ಶಿಷ್ಯ ಗುರುಗಳದ್ದು; ಮಗ-ತಂದೆಯರದ್ದು. ಅಂದು ಭೀಷ್ಮ ರಣರಂಗದಿಂದ ಹಿಂದೆ ಸರಿದಂತೆ ಇಂದು ಗುಪ್ತ ಚುನಾವಣೆಯಿಂದ ದೂರವುಳಿದರು. ಅರ್ಜುನನನ್ನು ಕಂಡ ದ್ರೋಣರು ಯುದ್ಧದಿಂದ ವಿಮುಖರಾಗದೆ ಹೋಚ ಹೋರಾಟದಲ್ಲಿ ಶಿಷ್ಯನಿಂದಲೇ ಗುರು ಪರಾಜಿತನಾದ. ಇತಿಹಾಸ ಮರುಕೊಳಿಸುತ್ತದೆ ಎನ್ನುವುದು ಕಲಿಕಾಲದಲ್ಲೂ ಸತ್ಯವೇ. ಶ್ರೀ ಗುಪ್ತ ರಾಜ್ಯಕೀಯದಲ್ಲಿ ಪಳಗಿದ ಹುಲಿಯಾದರೂ ಈ ಉದಾರತನದಿಂದ ಇಂಡಿಕೇಟನ್ನು ಬಲ ಪಡಿಸುತ್ತಾರೆಯೇ? ಕಾದುನೋಡಬೇಕು.

ಬೆಳ್ಳಿಹಬ್ಬ ಸ್ಮಾರಕ ಭಾಷಣ

ಇದೇ ತಾ. 1ರಂದು ಮಣಿಪಾಲ ಎಕಾಡೆಮಿ ಆಫ್ ಜನರಲ್ ಎಜ್ಯುಕೇಷನ್ನಿನ ಬೆಳ್ಳಿಹಬ್ಬ ಸ್ಮಾರಕ ಭಾಷಣ ಮಾಲಿಕೆಯಲ್ಲಿ ಮೂರನೆಯದಾಗಿ ನಾಡಿನ ಹಿರಿಯ ಮತ್ತು ಪ್ರಖ್ಯಾತ ಕವಿ ಡಾ| ದ. ರಾ. ಬೇಂದ್ರೆ ಅವರು ಶಿಕ್ಷಣ ಮತ್ತು ಸಂಸ್ಕೃತಿ ಎಂಬ ಕುರಿತು ಎಂ. ಜಿ. ಎಂ. ಕಾಲೇಜಿನ ರವೀಂದ್ರ ಮಂಟಪದಲ್ಲಿ ವಿಚಾರ ಪ್ರಚೋದಕ ಅನುಭವಪೂರ್ಣ ಭಾಷಣ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಡಾ| ಟಿ. ಎಂ. ಎ. ಪೈ ಅವರು ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಟಿ. ರಮೇಶ ಪೈಗಳು ಸ್ವಾಗತಿಸಿದರು. ಉಡುಪಿ ರಂಗಭೂಮಿ ಆರ್ಕೆಸ್ಟ್ರಾದವರು ಆರಂಭದಲ್ಲೂ ಕೊನೆಯಲ್ಲೂ ಬೇಂದ್ರೆಯವರ ಕೆಲವು ಕವಿತೆಗಳನ್ನು ಹಾಡಿದರು. ಬೇಂದ್ರೆ ಕುರಿತ ಬನ್ನಂಜೆ ಗೋವಿಂದಾಚಾರ್ ಕೃತ ಕವನವೊಂದನ್ನು ಹಾಡಿದ ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಕೊನೆಯಲ್ಲಿ ಧನ್ಯವಾದಗಳನ್ನು ಅರ್ಪಿಸಿದರು.

ವಾರ್ಷಿಕೋತ್ಸವ

ಉಡುಪಿಯ ಮೋಡರ್ನ್ ಹಾಯರ್ ಪ್ರೈಮರಿ ಶಾಲೆಯ ವಾರ್ಷಿಕೋತ್ಸವವು ತಾ. 6-2-71 ರಂದು ಮಣಿಪಾಲ ಕಾಲೇಜ್ ಆಫ್ ಎಜ್ಯುಕೇಶನ್ನಿನ ಪ್ರಿನ್ಸಿಪಾಲ್ ಶ್ರೀ ಕೆ.ಆರ್. ಹಂದೆ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯಕರು ಸ್ವಾಗತಿಸಿದ ಬಳಿಕ ಮುಖ್ಯೋಪಾಧ್ಯಾಯ ಶ್ರೀ ಎಚ್. ಎಲ್. ಭಟ್ಟರು ವರದಿವಾಚನಗೈದರು. ಮಿಲಾಗ್ರಿಸ್ ಕಾಲೇಜಿನ ಲೆಕ್ಚರರ್ ಬಿ. ದೀನದಾಸ ಶೆಟ್ಟರು ಮಾಡಿದ ಸ್ವಸ್ತಿವಾಚನಕ್ಕೆ ಶ್ರೀ ಸಿ. ಶ್ರೀಶ ಬಲ್ಲಾಳರು ಉತ್ತರಿಸಿದರು. ಸಿಂಡಿಕೇಟ್ ಬೇಂಕ್ ಕೆಥೊಲಿಕ್ ಸೆಂಟರ್‌ನ ಮೇನೇಜರ್ ಶ್ರೀ ಎಫ್. ದಾಂತಿ ಅವರು ಬಹುಮಾನ ವಿತರಣೆಗೈದರು. ಧನ್ಯವಾದ ಸಮರ್ಪಣೆಯ ನಂತರ ವಿವಿಧ ವಿನೋದಾವಳಿ, ನಾಟಕ ಪ್ರದರ್ಶನಗಳು ನೆರವೇರಿದವು. ಬೆಳಿಗ್ಗೆ ಶ್ರೀ ಪಿ. ಶಿವಾಜಿ ಶೆಟ್ಟರು ಧ್ವಜಾರೋಹಣಮಾಡಿದ್ದರು.

ಮರುದಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಸಿಂಡಿಕೇಟ್ ಬೇಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರಿಂದ ನಿಯೋಜಿತ ಭಾಷಣವಾದ ಮೇಲೆ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯಕರನ್ನೂ, ರಾಷ್ಟ್ರಪ್ರಶಸ್ತಿ ವಿಜೇತ ಟಿ. ಕಾಂತಪ್ಪ ಮಾಸ್ತರರನ್ನೂ ಸನ್ಮಾನಿಸಿ ಗೌರವಿಸಲಾಯಿತು. ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು "ಜ್ಞಾನಗಂಗೆ"—ಸಂಸ್ಮರಣ ಸಂಚಿಕೆಯನ್ನು ಉದ್ಘಾಟಿಸಿದರು. ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣ ನಂತರ ಹಳೆ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ನಾಟಕ ಪ್ರದರ್ಶನ ನಡೆಯಿತು. ಬೆಳಿಗ್ಗೆ ಸಂಘದ ವಾರ್ಷಿಕ ಮಹಾಧಿವೇಶನ ಜರಗಿತು.

ಅಕ್ಕಿ ಮುಹೂರ್ತ

ಉಡುಪಿ ಶ್ರೀ ಅದಮಾರು ಮಠದಲ್ಲಿ ತಾ. 5—2—71ರಂದು ಬೆಳಿಗ್ಗೆ ಶ್ರೀ ಮಠದ ಬರಲಿರುವ ಪರ್ಯಾಯದ ಪೂರ್ವಭಾವಿಯಾಗಿ ಶ್ರೀ ಮನ್ಮಧ್ವಾಚಾರ್ಯರವ ಸುಭ ಸಂಪ್ರದಾಯದ ಪ್ರಕಾರ ಅಕ್ಕಿ ಮುಹೂರ್ತದ ಕಾರ್ಯಕ್ರಮವು ಯಶಸ್ವಿಯಾಗಿ ಜರಗಿತು. ಅನಂತರ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದರವರು ಪರ್ಯಾಯ ಶ್ರೀ ಫಲಿಮಾರು ಮಠದ ಶ್ರೀ ಪಾದಂಗಳವರಾದಿಯಾಗಿ ಇತರ ಶ್ರೀ ಶ್ರೀ ಪಾದಂಗಳವರನ್ನು ಕೂಡಾ ವಾದ್ಯ ಘೋಷಗಳಿಂದ ವೈಭವ ಪೂರ್ವಕ ತಮ್ಮ ಮಠಕ್ಕೆ ಕರೆತಂದು ಶ್ರೀ ಶ್ರೀ ಪಾದಂಗಳವರನ್ನು ಸ್ವಾಗತಿಸಿ ಪಾದಪೂಜೆ, ಮಾಲಿಕಾ ಮಂಗಳಾರತಿಗಳಿಂದ ಸತ್ಕರಿಸಿದರು.

ಕಿಶೋರ್ ಕುಮಾರ್ ನೈಟ್

ಉಡುಪಿಯ ಸಂಗೀತ ಸಭೆಯ ಆಶ್ರಯದಲ್ಲಿ ಇದೇ ತಾ.13ರಂದು ಪ್ರಸಿದ್ಧ ಚಲಚಿತ್ರ ನಟ ಕಿಶೋರ್ ಕುಮಾರರ ನಾಯಕತ್ವದಲ್ಲಿ ವಿಖ್ಯಾತ ನಟ ನಟಿಯರ ಸಾಂಸ್ಕೃತಿಕ ಕಾರ್ಯಕ್ರಮಗಳು ಬೋರ್ಡ್ ಹೈಸ್ಕೂಲ್ ವಠಾರದಲ್ಲಿ ಜರಗಲಿದೆ.

ಕನ್ನಡ ಸಂಘ, ಭಟಕಳ

ತಾ. 31.1.1971ರಂದು ಅಂಜುಮಾನ್ ಆರ್ಟ್ಸ್ ಮತ್ತು ಸಾಯನ್ಸ ಕಾಲೇಜಿನ ಕನ್ನಡ ಸಂಘದ ಆಶ್ರಯದಲ್ಲಿ, ಖ್ಯಾತ ಲೇಖಕ ಶ್ರೀ ಗೌರೀಶ ಕಾಯ್ಕಿಣಿ (ಗೋಕರ್ಣ) ಅವರು ಉಪಪ್ರಾಚಾರ್ಯ ಶ್ರೀ ಕೆ. ಎಮ್. ದಾಸನಕೊಪ್ಪ ಅವರ ಅಧ್ಯಕ್ಷತೆಯಲ್ಲಿ ಉಪನ್ಯಾಸಗೈದರು.

ಕನ್ನಡ ವಿಭಾಗದ ಪ್ರಾಧ್ಯಾಪಕ ಶ್ರೀ ಎಸ್. ಜಿ. ಕುಲಕರ್ಣಿ ಅವರು ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಶ್ರೀ ಕಾಯ್ಕಿಣಿ ಅವರು ಗೋಕರ್ಣದ—ಭಟ್ಕಳದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಉಜ್ವಲತೆಯನ್ನು ಎತ್ತಿ ತೋರಿಸಿದರು. ವಿದ್ಯಾರ್ಥಿಗಳು ಕೇವಲ ಪರೀಕ್ಷಾರ್ಥಿಗಳಾಗದೆ, ನಿಜವಾದ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡ ಸುಸಂಸ್ಕೃತ—ನಾಗರೀಕರಾಗಿ ಬಾಳಬೇಕೆಂದು ಹೇಳಿ ಅಲ್ಲಲ್ಲಿ ನಗೆಬುಗ್ಗೆಗಳಿಂದ ವಿದ್ಯಾರ್ಥಿಗಳಿಗೆ ಸಮಯೋಚಿತ ಉಪದೇಶವಿತ್ತರು. ಕೊನೆಗೆ ಪ್ರೊ|| ಎಸ್. ಜಿ. ಕುಲಕರ್ಣಿ ಅವರು ಆಭಾರಮನ್ನಿಸಿದರು.

ನವ್ಯ ಉಪಕ್ರಮದ ಸಂಕಲ್ಪ ಸಮಾರಂಭ

ಶಿರ್ವ, ತಾ. 31 "ದೇವರ ಭಕ್ತಿ ಮತ್ತು ಮಾನವನ ಯತ್ನ ಜೊತೆಗೂಡಿ ಸಾಗಬೇಕು. ದೇವರ ಭಕ್ತಿ ಮಾತ್ರ ಇಚ್ಛಿತ ಫಲವನ್ನು ನೀಡಲಾರದು. ಜೊತೆಗೆ ಶ್ರದ್ಧೆ, ಒಗ್ಗಟ್ಟಿನ ದುಡಿಮೆ ಸೇರಿಕೊಂಡರೆ ಅವನು ಯಶಸ್ಸನ್ನು ಸಾಧಿಸಲು ಸಾಧ್ಯ. ವಿದ್ಯಾರ್ಥಿ ತನ್ನ ಯತ್ನವನ್ನು ನಿಲ್ಲಿಸಿ ಬರಿದೇ ದೇವರನ್ನು ಶರಣು ಹೋದರೆ ಅವನು ಯಶಸ್ಸನ್ನು ಸಾಧಿಸಲಾರ. ಭಕ್ತಿ ಯಶಸ್ಸಿನ ಮೂಲ" ಎಂಬ ರಾಗಿ ಹಿಂದೂ ಹಾಯರ್ ಸೆಕೆಂಡರಿ ಶಾಲೆಯು ಕೈಕೊಟ್ಟಿದದ ನವ್ಯ ಉಪಕ್ರಮದ 'ಸಂಕಲ್ಪ' ಸಮಾರಂಭದಲ್ಲಿ ಶ್ರೀ ಶ್ರೀ ಪೇಜಾವರ ಸ್ವಾಮಿಗಳು ಸಂದೇಶವನ್ನು ನೀಡಿ, ಜೀವನದಲ್ಲಿ ತ್ಯಾಗದ ಹಿರಿಮೆಯನ್ನು ಬೋಧಿಸಿದರು. ಆರಂಭದಲ್ಲಿ ಶ್ರೀ ಶಿವಾಜಿ ಶೆಟ್ಟರು ಸ್ವಾಗತಿಸಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಜಯರಾಮ ಶೆಟ್ಟರು ಧನ್ಯವಾದ ಅರ್ಪಿಸಿದರು.

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ನವಭಾರತ ಪುಸ್ತಕ ಭಂಡಾರ (ನವಯುಗ ಪ್ರೆಸ್) ಉಡುಪಿ, ದ.ಕ.

ಪ್ರಾಚೀನ ಭಾರತದಲ್ಲಿ ನ್ಯಾಯಾಡಳಿತೆ

(ಎರಡನೇ ಪುಟದಿಂದ)

ಗಳ ತೀರ್ಮಾನಕ್ಕಾಗಿ ಧರ್ಮಸ್ಥೀಯ ಎಂಬ ನ್ಯಾಯಸ್ಥಾನಗಳಿದ್ದವು. ಅಧಿಕಾರಿಗಳ ಅಪರಾಧ, ದ್ರೋಹ, ಕಳವು ಮತ್ತು ಮೊದಲಾದ ಅಪರಾಧಗಳನ್ನು ಗೊತ್ತು ಮಾಡಿ ನಿರ್ಣಯಿಸಿ ಶಿಕ್ಷೆ ವಿಧಿಸುವುದು, ಕಂಟಕ ಶೋಧನ ಸಭೆಗಳ ಕೆಲಸ. ಪೂರ್ವ ಪಕ್ಷ, ಪ್ರತಿ ಪಕ್ಷ ಮತ್ತು ಕ್ರಿಯಾ ನಿರ್ಣಯ ಇವು ಮುಖ್ಯವಾದ ನ್ಯಾಯ ಕ್ರಮ. ನ್ಯಾಯ ಸಭೆಯಲ್ಲಿ ತೃಪ್ತಿಕರವಾದ ತೀರ್ಪು ದೊರೆಯದಿದ್ದರೆ ಕಕ್ಷಿ ಪ್ರತಿಕಕ್ಷಿಗಳು ಪಂಡಿತರಿಂದ ಕೂಡಿದ ರಾಜ ಪ್ರತಿನಿಧಿ ಸಭೆಗೆ ಪುನರ್ ಸಮೀಕ್ಷಣೆ ಒಪ್ಪಿಸುವ ಅವಕಾಶವಿದ್ದಿತ್ತು. ವ್ಯವಹಾರಕ್ಕೆ ಸಂಬಂಧಪಟ್ಟ ವಿವಾದಗಳೆಲ್ಲವನ್ನು ಸ್ಥಳದ ಪ್ರಮುಖರು ನಿರ್ಧರಿಸುತ್ತಿದ್ದರು. ಭೂಮಿಗೆ ಸಂಬಂಧಪಟ್ಟ ವ್ಯವಹಾರಗಳೆಲ್ಲವೂ ಪ್ರಮುಖರ ಸಮ್ಮುಖದಲ್ಲಿ ಬಹಿರಂಗವಾಗಿ ನಡೆಯಬೇಕೆಂದಿತ್ತು. ಭೋಗ ಸಂಪತ್ತುಗಳ ಮೇಲೆ ಸೇ. 15ಕ್ಕೆ ಜಾಸ್ತಿಯಾಗಿ ಬಡ್ಡಿಯನ್ನು ವಸೂಲು ಮಾಡುವಂತಿರಲಿಲ್ಲ. ಹತ್ತು ವರ್ಷಗಳ ಮೇಲೆ ಕೊಟ್ಟ ಸಾಲವನ್ನು ಹಿಂದಕ್ಕೆ ಕೇಳಲು ಹಕ್ಕಿರಲಿಲ್ಲ. ತಂದೆ ತಾಯರು, ದಂಪತಿಗಳು ಮತ್ತು ಮಕ್ಕಳ ಮೇಲೆ ಋಣ ವ್ಯಾಜ್ಯಗಳನ್ನು ಹೂಡುವುದಕ್ಕೆ ಅವಕಾಶವಿರಲಿಲ್ಲ. ನ್ಯಾಯ ಮಂಡಲಿಯು ಸಮರ್ಪಕವಾಗಿ ನಡೆಯುತ್ತಿತ್ತು. ಕೃತ್ಯ ನಡೆದ ಮೂರು ದಿನಗಳು ಕಳೆದನಂತರ ಗುಮಾನಿ ಇದ್ದರೂ, ಶಂಕಿತನನ್ನು ಹಿಡಿದು ಶಿಕ್ಷಿಸುವುದಕ್ಕೆ ನ್ಯಾಯಾನುಮತಿ ಇರಲಿಲ್ಲ. ಶಂಕಿತನನ್ನು ತಪ್ಪಿತಸ್ತನೆಂದು ಋಜುವಾದ ಮೇಲೆ ಅವನಿಗೆ ದಂಡ ವಿಧಿಸುತ್ತಿದ್ದರು. ಮುದುಕರನ್ನೂ, ರೋಗಸ್ತರನ್ನೂ, ಹಸಿವು ಬಾಯಾರಿಕೆಯಿಂದ ಬಳಲಿದವರನ್ನೂ, ಅವರು ಅಪರಾಧಿಗಳಾಗಿದ್ದರೂ ಶಿಕ್ಷಿಸುತ್ತಿರಲಿಲ್ಲ. ಬ್ರಾಹ್ಮಣರಿಗೆ ದೇಹ ದಂಡನೆಯ ಶಿಕ್ಷೆ ಇರಲಿಲ್ಲ. ಆದರೆ ಬ್ರಾಹ್ಮಣ ಅಪರಾಧಿಯ ಮುಖದ ಮೇಲೆ ತಪ್ಪನ್ನು ತೋರಿಸುವುದಕ್ಕಾಗಿ ಬರೆಹಾಕಿ ಗ್ರಾಮದ ಜನರೆದುರಿಗೆ ಆತನ ತಪ್ಪನ್ನು ಪ್ರಕಟಿಸಿ ಅವನನ್ನು ದೇಶಭ್ರಷ್ಟನನ್ನಾಗಿ ಮಾಡುವಕ್ರಮವಿತ್ತು.

ಕೌಟಿಲ್ಯನ ನ್ಯಾಯಾಡಳಿತೆಯ ವೈಶಿಷ್ಟ್ಯತೆ:

ರಾಜಶಾಸನವು ಧರ್ಮ ನ್ಯಾಯವೆಂದೂ ಸಾರಿ, ಇದು ಧರ್ಮಶಾಸ್ತ್ರಕ್ಕೆ ವಿರೋಧವಿದ್ದಲ್ಲಿ ಧರ್ಮ ನ್ಯಾಯವೇ ಪ್ರಾಬಲ್ಯದಲ್ಲಿರಬೇಕೆಂದು ಕೌಟಿಲ್ಯನು ತಿಳಿಸಿದ್ದಾನೆ ಇದರಿಂದಾಗಿ ಕೌಟಿಲ್ಯನು ರಾಜಶಾಸನದ ಘನತೆಯನ್ನು ಎತ್ತಿಹಿಡಿದಿದ್ದಾನೆ. ಈ ಕ್ರಾಂತಿಕರವಾದ ವಿಷಯವನ್ನು ತಿಳಿಸಿದವರಲ್ಲಿ ಕೌಟಿಲ್ಯನೇ ಮೊದಲಿಗನು. ಆದರೂ ನ್ಯಾಯ ತೀರ್ಮಾನಿಸುವಾಗ ಜನರಲ್ಲಿರುವ ರೂಢಿ ನಿಯಮಗಳನ್ನು ರಾಜನು ಪಾಲಿಸಿಕೊಂಡುಹೋಗಬೇಕೆಂದು ತಿಳಿಸಿದ್ದಾನೆ. ಬೇರೆಯವರಿಂದ ಆಚರಣೆಗೆ ತರಲ್ಪಡದಿರುವ ಧರ್ಮವಾದ ಮತ್ತು ಬೇರೆಯವರಿಂದ ಪ್ರವರ್ತಿಸಲ್ಪಟ್ಟ ಆಚಾರಗಳನ್ನು ರಾಜನು ಪ್ರಚಾರಕ್ಕೆ ತರಬೇಕು. ಆ ಧರ್ಮವನ್ನು ಎಂದಿಗೂ ಆಚರಣೆಗೆ ತರಬಾರದು. ಬೇರೆಯವರಿಂದ ಆಚರಣೆಗೆ ತರಲ್ಪಟ್ಟ ಅಧರ್ಮವನ್ನು ತಡೆಯಬೇಕು. ನ್ಯಾಯಧಾನದಲ್ಲಿ ವಿಳಂಬವಾಗುವುದನ್ನು ಕೌಟಿಲ್ಯನು ವಿರೋಧಿಸಿದ್ದಾನೆ. ದಂಡನೆ ವಿಧಿಸುವಲ್ಲಿ ಯಾವ ವರ್ಗದವರನ್ನು ಕೌಟಿಲ್ಯನು ವಿನಾಯಿತಿಗೊಳಿಸಲಿಲ್ಲ.

ನ್ಯಾಯಾಧೀಶರ ಅರ್ಹತೆ:

ನ್ಯಾಯ ತೀರ್ಮಾನಿಸುವವನು ನ್ಯಾಯಾಧೀಶನೆಂದೂ, ಅವನಲ್ಲಿ ಕೆಲವು ಅರ್ಹತೆಗಳಿರಬೇಕೆಂದೂ ಪ್ರಾಚೀನ ಭಾರತೀಯರು ಮನಗಂಡಿದ್ದರು ರಾಜನಿಗೆ ನ್ಯಾಯ ತೀರ್ಮಾನಿಸಲು ಸಹಾಯಕರಾದ ಬ್ರಾಹ್ಮಣರು ವೇದ ಶಾಸ್ತ್ರಪರಿಣತರಾಗಿರಬೇಕೆಂದು ಮತ್ತು ಸಾಮಾಜಿಕ ನಿಯಮಗಳನ್ನು ಅರಿತವರಾಗಿರಬೇಕೆಂದು ಮನು ತನ್ನ ಸ್ಮೃತಿಯಲ್ಲಿ ತಿಳಿಸಿದ್ದಾನೆ. ನ್ಯಾಯಾಧೀಶನು ನ್ಯಾಯಧಾನ ಮಾಡುವಾಗ, ಶಾಸ್ತ್ರ, ಆಗಮ ಮತ್ತು ವೇದಗಳನ್ನರಿತಿರಬೇಕೆಂದು ಗೌತಮನ ಅಭಿಪ್ರಾಯ. ನ್ಯಾಯಾಧೀಶನನ್ನು ನೇಮಿಸುವಾಗ ಅವನ ಕುಟುಂಬದ ಹಿನ್ನೆಲೆ, ಅವನ ಅರ್ಹತೆ, ಆಚಾರ, ವಿಚಾರ, ಅವನಲ್ಲಿ ನಿಷ್ಪಕ್ಷಪಾತ ಬುದ್ಧಿಯೋ, ಇಲ್ಲವೋ ಲಂಚಕ್ಕೆ ಒಳಪಡುವನೋ ಮತ್ತು ಲೋಭ, ಕ್ರೋಧಗಳಿಂದ ವಿಮುಕ್ತನಾಗಿದ್ದಾನೋ ಈ ಎಲ್ಲಾ ಅಂಶಗಳನ್ನು ರಾಜನು ಗಮನಿಸಬೇಕು. ಇದು ವಿಷ್ಣುವಿನ ಅಭಿಪ್ರಾಯ. ಧರ್ಮಾಧಿಕಾರಿಗಳು ಎಲ್ಲಾ ಸಂದರ್ಭಗಳಲ್ಲೂ ಎಲ್ಲರಲ್ಲಿಯೂ ಸಮಾನರಾಗಿದ್ದು ವಿಶ್ವಾಸಾರ್ಹರಾಗಿ, ಲೋಕ ಪ್ರಿಯರಾಗಿದ್ದು, ಕಪಟ, ಛಲಾವರ್ಜಿತರಾಗಿ ನ್ಯಾಯಧಾನ ಮಾಡಬೇಕೆಂದು ಕೌಟಿಲ್ಯನ ಅಭಿಮತ. ನ್ಯಾಯಾಧಿಕಾರಿಗಳು ವ್ಯಾಜ್ಯವನ್ನು ತೀರ್ಮಾನಿಸುವಾಗ ವಾದಿ ಪ್ರತಿವಾದಿಗಳಿಗೆ ಅನಾವಶ್ಯಕವಾಗಿ ಹೆದರಿಸಿದರೆ, ಯಾ, ಅವರನ್ನು ನಿಷ್ಕಾರಣವಾಗಿ ದಬ್ಬಾಳಿಕೆಯಿಂದ ಹೊರಕಳುಹಿಸಿದರೆ ನ್ಯಾಯಾಧೀಶರನ್ನು ದಂಡಿಸಬೇಕೆಂದು ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ತಿಳಿಸಿದ್ದಾನೆ. ಇನ್ನೂ ನ್ಯಾಯಾಧೀಶನು ಕಾನೂನಿನ ನಿಯಮಗಳನ್ನು ಉಲ್ಲಂಘಿಸಿದರೆ ಅವನನ್ನು ಪದಚ್ಯುತಗೊಳಿಸಬೇಕೆಂದು ಕೌಟಿಲ್ಯನು ತಿಳಿಸಿದ್ದಾನೆ. ಆದುದರಿಂದ ನ್ಯಾಯಾಧೀಶನು ಕಾನೂನಿಗೆ ಒಳಗಾಗಿದ್ದನೆಂದು ತಿಳಿಯಬಹುದು.

ದಕ್ಷಿಣ ಭಾರತದಲ್ಲಿ:

ಕೌಟಿಲ್ಯನ ಆಡಳಿತವನ್ನು ಆಧರಿಸಿ ಉತ್ತರ ಭಾರತದಲ್ಲಿ ಗುಪ್ತರು, ಹರ್ಷ ಮತ್ತು ರಜಪುತ್ರ ಅರಸರು ನ್ಯಾಯ ಪಾಲನೆಯನ್ನು ತಮ್ಮ ರಾಜ್ಯದಲ್ಲಿ ಮಾಡುತ್ತಿದ್ದರು. ದಕ್ಷಿಣ ಭಾರತದಲ್ಲಿ ಪಲ್ಲವರು, ಚೋಳರು, ಚಾಲುಕ್ಯರು ಮತ್ತು ರಾಷ್ಟ್ರಕೂಟ ಅರಸರು ನ್ಯಾಯಾಡಳಿತೆಯನ್ನು ಉತ್ತಮ ರೀತಿಯಲ್ಲಿ ನಡೆಯಿಸಿಕೊಂಡು ಹೋಗಿದ್ದರು. ಪ್ರಾಚೀನ ಕರ್ನಾಟಕದಲ್ಲಿ ಸಣ್ಣ ಪುಟ್ಟ ಜಗಳಗಳನ್ನು ಸಮಾಜದ ಹಿರಿಯರು ಕೂಡಿ ತಾನೇ ಪರಿಹರಿಸಿಕೊಳ್ಳುತ್ತಿದ್ದರು. ಅವು ದೊಡ್ಡ ವಿವಾದಗಳಾದರೆ ದಂಡನಾಯಕರಂತಹ ಹಿರಿಯ ಅಧಿಕಾರಿಗಳು. ಕೆಲವೊಮ್ಮೆ ರಾಜರು ನ್ಯಾಯಮೂರ್ತಿಗಳಾಗಿ ತೀರ್ಪು ಕೊಡುತ್ತಿದ್ದರು. ಶಿಕ್ಷೆಗಳು ಸಾಮಾನ್ಯವಾಗಿ ಕ್ರೂರವಾಗಿದ್ದವು. ಬಾಯನ್ನು ಸುಡುವುದು, ಶೂಲಕ್ಕೇರಿಸುವುದು, ಹಗ್ಗದಲ್ಲಿ ಕಟ್ಟಿ ಹಾಕುವುದು, ಸೆರೆಯಲ್ಲಿಡುವುದು ಶಿಕ್ಷೆಗಳಲ್ಲಿ ಕೆಲವು ಸಣ್ಣ ತಪ್ಪಾದರೆ ಅಪರಾಧಿಗಳು ಹಣದ ರೂಪದಲ್ಲಿ ದಂಡನೆಯನ್ನು ತೆರಬೇಕಿತ್ತು. ಪ್ರಾಚೀನ ಕರ್ನಾಟಕದಲ್ಲಿ ದೇವಸ್ಥಾನವು ಒಂದು ರೀತಿಯಲ್ಲಿ ನ್ಯಾಯಾಲಯವಾಗಿತ್ತು. ದೇವಸ್ಥಾನದಲ್ಲಿ ಒಂದು ವಚನ ಕೊಟ್ಟರೆ ಅದನ್ನು ಪರಿಪಾಲಿಸಬೇಕೆಂಬ ನಿರ್ಬಂಧವಿರುತ್ತಿತ್ತು. ಯಾವುದೊಂದು ಸಂದರ್ಭದಲ್ಲಿ ಅಪರಾಧಿಯೆಂದು ಜನರು ಭಾವಿಸುತ್ತಿರುವ ವ್ಯಕ್ತಿಯ ಅಪರಾಧವು ಬಾಹ್ಯಕಾರಣಗಳಿಂದಾಗಿ ನಿರ್ಣಿತವಾಗದಿದ್ದರೆ ಅವನು ನಿರಪರಾಧಿಯೋ ಎಂಬುದರ ತೀರ್ಮಾನ ದೇವಸ್ಥಾನದಲ್ಲಿ ನಡೆಯುತ್ತಿದ್ದಿತು. ಇದನ್ನು ದಿವ್ಯದ ಮುಖಾಂತರ ತೀರ್ಮಾನಿಸುತ್ತಿದ್ದರು.

ಉಪಸಂಹಾರ:

ಉತ್ತಮ ನ್ಯಾಯಾಡಳಿತವಿಲ್ಲದ ರಾಜ್ಯದ ಪ್ರಗತಿ ಅಸಾಧ್ಯವೆಂದು ತಿಳಿದ ಪ್ರಾಚೀನ ಭಾರತೀಯರು ನ್ಯಾಯಾಡಳಿತೆಗೆ ಹೆಚ್ಚಿನ ಗಮನವನ್ನಿತ್ತಿದ್ದರು. ನ್ಯಾಯಾಡಳಿತೆ ಉತ್ತಮ ರೀತಿಯಲ್ಲಿದ್ದಾಗ ದೇಶವು ಸುವ್ಯವಸ್ಥೆಯಲ್ಲಿದ್ದುದನ್ನೂ, ನ್ಯಾಯಾಡಳಿತೆ ಸಡಿಲುಗೊಂಡಾಗ ಅರಾಜಕತೆ ಮತ್ತು ದಬ್ಬಾಳಿಕೆತಾಂಡವಾಡುತ್ತಿದ್ದುದನ್ನೂ ನಮ್ಮ ಇತಿಹಾಸವು ತಿಳಿಸುತ್ತದೆ.

ಆಧಾರ ಗ್ರಂಥ:—

Social and political life under Vijayanagar I— Dr. Saletore.

Ancient Indian political thoughts— Dr. Saletore

ಕನ್ನಡದ ಶಾಸನಗಳ ಅಧ್ಯಯನ— ಎಂ.ಚಿದಾನಂದ ಮೂರ್ತಿ

[ಪ್ರಜಾರಾಜ್ಯ ಸಂಚಿಕೆಗೆ ಬಂದ ಲೇಖನ]

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

R. A. No. 49/1969.

ತಂಗಿ ಸೆಡ್ತಿ ಕೂಡಾ —ಅಪೀಲೆಂಟ್ಸ್
Appellants

ವಿ/ಸ್

ಕೋರಗ ಸೆಟ್ಟಿ ಕೂಡಾ —ರೆಸ್ಪೊಂಡೆಂಟ್ಸ್
Respondents

ಇವರೊಳಗೆ

ನೋಟೀಸು

ಕಾರ್ಕಳ ತಾಲ್ಲೂಕು ಇನ್ನ ಗ್ರಾಮದ ಮಾಂಡ್ರಗುತ್ತು ಎಂಬಲ್ಲಿರುವ ಶೇಷಿ ಸೆಡ್ತಿರ ಮಕ್ಕಳು ಸ್ವದಿ ಅಪೀಲಿನ 2 ಮತ್ತು 3ನೇ ರೆಸ್ಪೊಂಡೆಂಟ್ಸ್ ತಿಮ್ಮಪ್ಪ ಸೆಟ್ಟಿ ಮತ್ತು ರತಿ ಸೆಡ್ತಿ-ಸದಾನಂದರ ಮಕ್ಕಳು 5ನೇ ಕುಸುಮ ಸೆಡ್ತಿ—6ನೇ ದಿನೇಶ ಸೆಟ್ಟಿ—ತಂಗಿಸೆಡ್ತಿರ ಮಗ 7ನೇ ರೆಸ್ಪೊಂಡೆಂಟ್ ಸೀತಾರಾಮ ಸೆಟ್ಟಿ—ರತಿಸೆಡ್ತಿರ ಮಕ್ಕಳು 8ನೇ ಕರುಣಾಕರ ಸೆಟ್ಟಿ ಮತ್ತು 9ನೇ ರೆಸ್ಪೊಂಡೆಂಟ್ ಸುಮತಿ ಸೆಡ್ತಿ—ಇವರು ಸ್ವತಹಾ ಮತ್ತು 16ನೇ ಪ್ಯನರ್ ರೆಸ್ಪೊಂಡೆಂಟ್ ವಿಠ್ಠಲ ಗಾಡಿಯವರಾಗಿ ಪ್ರತಿ—ಕುಸುಮ ಸೆಡ್ತಿರ ಮಕ್ಕಳು 10ನೇ ಜಗದೀಶ ಮತ್ತು 11ನೇ ಇಂದಿರ ಸೆಡ್ತಿ—ಬಾಗಿ ಸೆಡ್ತಿರ ಮಕ್ಕಳು 12ನೇ ರಮೇಶ, 13ನೇ ಶೇಷಿ ಮತ್ತು ಸುಂದರಿ ಸೆಡ್ತಿರ ಮಕ್ಕಳು 14ನೇ ಮತ್ತು 15ನೇ ರೆಸ್ಪೊಂಡೆಂಟ್ಸ್ ಲಕ್ಷ್ಮಿ ಸೆಡ್ತಿ ಮತ್ತು ಜಯರಾಮ ಸೆಟ್ಟಿ ಮತ್ತು ಮಂಗಳೂರು ತಾಲ್ಲೂಕು ಬಳುಂಜೆ ಗ್ರಾಮದ ಕೋಟಿನಾಯಗುತ್ತು ಎಂಬಲ್ಲಿರುವ ಮಾಂಡ ಸೆಟ್ಟಿ ಮಕ್ಕಳು 23ರಿಂದ 25ನೇ ರೆಸ್ಪೊಂಡೆಂಟ್ಸ್ ಬೋಜ ಪೂಜಾ, ಜಗನ್ನಾಥ ಪೂಜಾ ಮತ್ತು ಸುಶೀಲ-ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲಿನ ಅಪೀಲೆಂಟರು (Appellants) ಕಾರ್ಕಳ ಮುನ್ಸಿಫ್ ಕೋರ್ಟ್ O. S. 412/67ರ ತಾ. 16-12-1968ನೇ ತಾರೀಕಿನಲ್ಲಾದ ಡಿಕ್ರಿ ವಿರುದ್ಧ ಹೂಡಿರುವ ಮೇಲಿನ ಅಪೀಲು ನಿಮ್ಮ ಹಾಜರಾಗಿ ಬಗ್ಗೆ ತಾರೀಕು 23-2-71ರಂದು ಇಟ್ಟಿರುತ್ತದೆ. ಆ ದಿವಸ ಹಗಲು ಬೆಳಗ 11ಗಂಟೆಗೆ ಸ್ವಯಂ ಆಗಿ ಇದ್ದಾಗಿ ಯಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು.

ಕೋರ್ಟಿನ ಹುಕ್ಮಂ ಮೇರೆಗೆ

ಪಿ. ಎನ್. ಕೃಷ್ಣ ಮೂರ್ತಿ ರಾವ್,
ಬಿ.ಎ.ಎಲ್.ಎಲ್.ಬಿ,
ಎಡ್ವಕೇಟ್ for ಅಪೀಲೆಂಟ್ಸ್.

ಉಡುಪಿ, ದ.ಕ. ತಾ. 1-2-1971.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms: Roof garden

Quiet, Calm Atmosphere

Personalised Service.

READ & ADVERTISE IN NAVAYUGA WEEKLY

NAVAYUGA 11-2-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಪಾಕಿಸ್ತಾನದಲ್ಲಿ

ಭಾರತೀಯ (ವಿ)ಮಾನಾಪಹರಣ

ಜಮ್ಮುವಿನಲ್ಲಿ ಇಳಿಯಬೇಕಾಗಿದ್ದ ಭಾರತೀಯ ಪ್ರಯಾಣಿಕರ ವಿಮಾನವೊಂದಕ್ಕೆ ಅಲ್ಲಿ ಇಳಿಯಬಿಡಲಿಲ್ಲ.

ಇಳಿಯಗೊಡದವರು ಜಮ್ಮುವಿನ ವಿಮಾನ ನಿಲ್ದಾಣದ ಅಧಿಕಾರಿಗಳಲ್ಲ; ಇಬ್ಬರು ಪ್ರಯಾಣಿಕರೇ.

ಈ ಪ್ರಯಾಣಿಕರು ಇತರ ಯಾತ್ರಿಕರಿಗೂ ಪೈಲಟನಿಗೂ ಪಿಸ್ತೂಲಿನ ಭಯ ತೋರಿಸಿದರು; ವಿಮಾನವನ್ನು ಲಾಹೋರಿಗಭಿಮುಖವಾಗಿ ಓಡಿಸುವಂತೆ ಬಲಾತ್ಕರಿಸಿದರು.

ನಿರುಪಾಯ ಪೈಲಟ್ ಅವರ ಬೆದರಿಕೆಗೆ ಮಣಿದನು; ವಿಮಾನ ಲಾಹೋರದಲ್ಲಿ ಇಳಿಯಿತು.

ಇದು ವಿಮಾನಾಪಹಾರದ ಕೃತಿ; ಭಾರತೀಯ ವಿಮಾನವೊಂದು ಅಪಹೃತವಾದ ಮೊತ್ತಮೊದಲ ಉದಾಹರಣೆ.

ಅಪಹಾರಕಾರರು ಯಾರು? ಭಾರತದವರಂತೂ ಅಲ್ಲವೇ ಅಲ್ಲ; ಇದು ಪಾಕ್ ಕುತಂತ್ರಿಗಳ ಕೆಲಸ.

ಕಾಶ್ಮೀರದ ಜನಮತಗಣನಾಪರ ರಂಗದ ಬಂಧಿತರ ಬಿಡುಗಡೆ ಬಯಸಿ ಈ ಕೃತಿಯನ್ನವರು ಎಸಗಿದರಂತೆ.

ಜಮ್ಮು ಮತ್ತು ಕಾಶ್ಮೀರ ಸರಕಾರವು ಈ ರಂಗವನ್ನು ನಿಷೇಧಿಸಿತ್ತು; ಅದರ ಕೆಲವು ಸದಸ್ಯರನ್ನು ಬಂಧಿಸಿತ್ತು. ಅವರ ಬಿಡುಗಡೆಯೇ ಈ ಅಪಹಾರದ ಉದ್ದೇಶವೆಂದು ಹೇಳಲಾಯ್ತು.

ಪಾಕಿಸ್ತಾನದ ಪ್ರೋತ್ಸಾಹ ಮತ್ತು ಉತ್ತೇಜನಗಳು ಇದರ ನಿಯೋಜಿತ ಬೆಂಗೋಲು ಎಂಬುದು ಸುಸ್ಪಷ್ಟ.

ಕಾಶ್ಮೀರವನ್ನು ಆಕ್ರಮಿಸಲು, ಮತ್ತೊಮ್ಮೆ ಯುದ್ಧಕ್ಕೆ ತೊಡಗಲು ತನ್ನಾಲಕ ಆಂತರಿಕ ರಾಜ್ಯಕೀಯ ದಿವಾಳಿಖೋರತನವನ್ನು ಮುಚ್ಚಿಡಲು ಪಾಕ್ ನಾಯಕರು ಉರುಳಿಸಿದ ಮೊದಲ ದಾಳವಿದು.

ಮಾತುಕತೆಗಳ ಬಳಿಕ ಯಾತ್ರಿಕರೇನೋ ನವದೆಹಲಿಗೆ ಬದುಕಿ ಬಂದರು. ಉಳಿದದ್ದು ವಿಮಾನವನ್ನು ಮರಳಿ ಪಡೆಯುವುದು ಮಾತ್ರ.

ಭಾರತ ಸರಕಾರ ಈ ಬಗ್ಗೆ ಭಗೀರಥ ಪ್ರಯತ್ನ ನಡೆಸುತ್ತಿದ್ದಂತೆಯೇ ಕರ್ಣಭೇದಕ ಸುದ್ದಿಯೊಂದನ್ನು ಪಾಕ್ ಬಾನುಲಿ ಬಿತ್ತರಿಸಿತು.

"ಅಪಹೃತ ಭಾರತೀಯ ವಿಮಾನವನ್ನು ಆಸ್ಫೋಟಗೊಳಿಸಿ ಧ್ವಂಸ ಮಾಡಲಾಗಿದೆ.'

ಭಾರತೀಯ ವಿಮಾನವು ಲಾಹೋರದಲ್ಲಿ ಇಳಿದ ಬಳಿಕ, ಅದರ ರಕ್ಷಣೆಯ ಭಾರ ಪಾಕ್ ಹೊರ ಬೇಕಿತ್ತು. ಅದನ್ನು ಮರಳಿಸುವ ಹೊಣೆಗಾರಿಕೆಯಿಂದ ಅದು ತಪ್ಪಿಸಿಕೊಳ್ಳ ಬಾರದಿತ್ತು.

ಅಪಹಾರ ಕರ್ತರ ಮೇಲೆ ಕಾನೂನಿನಂತೆ ಕ್ರಮತೆಗೆದುಕೊಳ್ಳ ಬೇಕಿತ್ತು.

ಪಾಕಿಸ್ತಾನ ಸರಕಾರ ಹೀಗೆ ಮಾಡದೆ ಅಂತಾರಾಷ್ಟ್ರೀಯ ಕಾನೂನು-ಸಂಪ್ರದಾಯಗಳನ್ನು ಮುರಿಯಿತು.

ಭಾರತವೇನು ಮಾಡಿತು? ತನ್ನ ವಿಮಾನವೊಂದು ಅಪಹೃತವಾಗಿ ಲಾಹೋರ ನಿಲ್ದಾಣದಲ್ಲಿರುವಾಗಲೇ, ಪೂರ್ವ ಪಾಕಿಸ್ತಾನಕ್ಕೆ ಹೋಗಲಿದ್ದ ರಾಂಗುಲಾಮರನ್ನು ಕರೆದೊಯ್ಯಲು ಭಾರತದ ಭೂಭಾಗದ ಮೇಲೆ ವಿಮಾನ ಹಾರಲು ಪಾಕಿಸ್ತಾನಕ್ಕೆ ಅನುಮತಿ ನೀಡಿತು.

ತಾನು ಅನುಮತಿ ನಿರಾಕರಿಸಿದರೆ, ಲಾಹೋರದ ಭಾರತೀಯ ಯಾತ್ರಿಗಳ ಜೀವಕ್ಕೆ ಅಪಾಯವೆಂದದು ಹೆದರಿತು.

ವಿಮಾನವು ಧ್ವಂಸವಾಯ್ತೆಂಬ ವಾರ್ತೆ ಪ್ರಸಾರವಾದ ಬಳಿಕ, ಪಾಕ್ ಮಿಲಿಟರಿ ವಿಮಾನಗಳು ತನ್ನ ಭೂಭಾಗದ ಮೇಲೆ ಹಾರಲು ನಿರ್ಬಂಧ ಸಾರಿತು.

ಇದು ಅನ್ಯಾಯದ ಕೃತಿಯೆಂದು ಹೇಳಿ, ವಿಮಾನ ಧ್ವಂಸ ಮಾಡಿದ ಬಗ್ಗೆ ಪರಿಹಾರ ಕೇಳಿತು.

ಪಾಕ್-ಭಾರತ ಯುದ್ಧದ ವೇಳೆ ಎರಡೂ ರಾಷ್ಟ್ರಗಳೂ ಪರಸ್ಪರ ಹಡಗುಗಳನ್ನು ಬಂಧಿಸಿದ್ದಿತ್ತು.

ಮಾತುಕತೆಗಳ ಪರಿಣಾಮವಾಗಿ ಭಾರತವೇ ತಾನು ಬಂಧಿಸಿದ್ದವನ್ನು ಮೊದಲು ಬಿಡುಗಡೆ ಮಾಡಿದ್ದುಂಟು.

ತಮ್ಮ ಹಡಗುಗಳು ಬಂಧಮುಕ್ತವಾದ ಕೂಡಲೇ ಪಾಕಿಸ್ತಾನ ತಾನು ಬಂಧಿಸಿದವರನ್ನು ಏಲಂ ಹಾಕಿ ಭಾರತದ ಮುಖಕ್ಕೆ ಮಸಿ ಬಳಿದದ್ದುಂಟು.

ಹಾಗಿರುವಾಗ, ಪಾಕಿಸ್ತಾನವು ಪರಿಹಾರ ನೀಡುವುದೆಂಬುದು ಹೆಬ್ಬಯಕೆ ಮಾತ್ರವಾದೀತು.

ಪಾಕಿಸ್ತಾನದ ಕೈವಾಡ ಈ ದುಷ್ಕೃತ್ಯದ ಹಿಂದೆ ಇಲ್ಲವೆನ್ನುವುದು ಹಗಲಿನಷ್ಟು ಸುಳ್ಳು.

ವಿಮಾನಾಪಹರಣಕಾರರನ್ನು ಪಾಕಿಸ್ತಾನ ಅಪರಾಧಿಗಳಂತೆ ಕಾಣಲಿಲ್ಲ. ಅವರಿಗೆ ರಾಜ್ಯಕೀಯ ಆಶ್ರಯದ ರಾಜ ಸನ್ಮಾನವನ್ನೇ ನೀಡಿತು.

ಅಪಹೃತ ವಿಮಾನದಲ್ಲಿದ್ದ ಪ್ರಯಾಣಿಕರನ್ನು ಕರೆತರಲು ಭಾರತವು ಬೇರೆ ವಿಮಾನ ಕಳಿಸಲು ಅನುಮತಿ ಕೇಳಿದಾಗ, ಪಾಕಿಸ್ತಾನ ಮೊದಲಿಗೆ ಅನುಮತಿ ನಿರಾಕರಿಸಿತು.

ಇದಕ್ಕೆ ಅದು ನೀಡಿದ ಕಾರಣ ಕ್ಷುಲ್ಲಕ.

ಕೊನೆಗೂ ಅದೇನೋ ಅನುಮತಿ ದೊರೆಯಿತು. ಆದರೆ, ವಿಮಾನಾಪಹರಣಕಾರರ ರಕ್ಷಣೆಯಲ್ಲಿ ನಿರತವಾಯಿತು; ವಿಮಾನವನ್ನು ರಕ್ಷಿಸಲು ನಿರಾಕರಿಸಿತು.

ಇದೇ ಬಗೆಯ ವಿಮಾನಾಪಹರಣಕಾರ್ಯವು ಅರಬದೇಶಗಳಲ್ಲಿ ಕೆಲ ತಿಂಗಳುಗಳಿಗೆ ಮೊದಲು ನಿರಾತಂಕವಾಗಿ ಸಾಗಿದ್ದನ್ನು ಇಲ್ಲಿ ನೆನಪಿಸ ಬೇಕು.

ಅಪಹರಣ ಮಾಡಿದವರು ಕಾಶ್ಮೀರಿಗಳು; ಅಲ್ಲಿನ ಜನಮತ ಗಣನಾ ರಂಗಕ್ಕೆ ಸೇರಿದವರು.

ಈ ಅಪರಾಧಿಗಳನ್ನು ಭಾರತಕ್ಕೆ ಒಪ್ಪಿಸಲು ಪಾಕಿಸ್ತಾನ ನಿರಾಕರಿಸಿತು. ಅದು ನೀಡಿದ ಕಾರಣ ತೀರ ವಿಚಿತ್ರ.

"ಕಾಶ್ಮೀರಿಗಳು ಭಾರತೀಯ ಪ್ರಜರಲ್ಲ. ಆದುದರಿಂದ ಅವರನ್ನು ಭಾರತಕ್ಕೆ ಕಳಿಸುವುದು ಸಾಧ್ಯವಿಲ್ಲ"

ಪಾಕಿಸ್ತಾನ ೧೯೭೧ನೆಯ ವರ್ಷದಲ್ಲಿಲ್ಲ; ಅದಿನ್ನೂ ೧೯೪೭ನೆಯ ವರ್ಷದಲ್ಲೇ ಕುಕ್ಕರಿಸಿದೆ.

ಅದರ ಹೇಳಿಕೆಯಂತೆ ಕಾಶ್ಮೀರಿಗಳ ಮೇಲೆ ಭಾರತ ಆಕ್ರಮಣ ಮಾಡಿ ತನ್ನ ಪ್ರಭುತ್ವವನ್ನು ದಂಡ ಬಲದಿಂದ ಅವರ ಮೇಲೆ ಹೇರಿದೆ. ಭಾರತೀಯ ಗುಲಾಮಿಗಿರಿಯಿಂದ ಮುಕ್ತರಾಗಲು ಕಾಶ್ಮೀರಿಗಳು ಹೋರಾಡುತ್ತಿದ್ದಾರೆ; ಜನಮತಗಣನಾ ರಂಗವು ಈ ಹೋರಾಟಗಾರರ ಕೂಟ.

ಅಂದರೆ, ಪಾಕಿಸ್ತಾನದ ರಾಜ್ಯನೀತಿ ಸಂಪೂರ್ಣ ದಿವಾಳಿಯೆದ್ದಿವೆ; ಅದಿನ್ನು ಸುಧಾರಿಸುವ ಲಕ್ಷಣಗಳು ಹರದಾರಿ ದೂರವಿದೆ.

ನೆರೆ ರಾಷ್ಟ್ರದೊಡನೆ ಸ್ನೇಹ ಸಂಬಂಧವನ್ನು ಬಯಸುವುದು ನಮ್ಮ ಧರ್ಮ. ಆದರೆ, ಮಾತು ಮಾತಿಗೂ ಮುಟಿದೆದ್ದು ಬೆನ್ನಲ್ಲಿ ಚೂರಿ ಹಾಕುವ ಪಾಕಿಸ್ತಾನದ ಭಾರತ ನೀತಿ ವಿಶ್ವಾಸವನ್ನು ಮೂಡಿಸಲು ಅಶಕ್ತ.

ನಾವು ಉದಾರರಾಗಿ ಪಾಕಿಸ್ತಾನದೊಂದಿಗೆ ವರ್ತಿಸುತ್ತಲೇ ಬಂದಿದ್ದೇವೆ. ಈ ಉದಾರತೆಯ ದುರುಪಯೋಗವನ್ನು ಅದು ಸಂಪೂರ್ಣ ಮಾಡಿಕೊಳ್ಳುತ್ತಲೇ ಬಂದಿದೆ.

ಪಾಕಿಸ್ತಾನದ ವಾದ ನೀತಿ ವಿಲಕ್ಷಣ; ವಿಚಿತ್ರ. ತನ್ನ ಪಟ್ಟು ತಾನು ಬಿಡಲಾರೆನೆಂಬ ಪರೋಕ್ಷ ಘೋಷಣೆ. ಕಾಲು ಕೆದರಿ ಜಗಳಕ್ಕೆ ಎಳೆಯುವ ನೇರ ವಿಧಾನ.

ಕಾಶ್ಮೀರದ ಬಗ್ಗೆ ಈ ವರೆಗೆ ನಡೆಸಿದ್ದ ಇತಿಹಾಸ ಸಿದ್ಧ ದಾಖಲೆಗಳನ್ನು ಅಲ್ಲಗಳೆಯುವ ಅದರ ದೈತ್ಯ ಕೃತಿ ರಾಕ್ಷಸೀ ನೀತಿಯ ಪ್ರತೀಕ.

ಪಾಕ್ ಕೃತಿ ತ್ರಿಕಾಲಕ್ಕೂ ಖಂಡನೀಯ.

ಇಂಡಿಕೇಟಿಗರು ಶರಣುಹೋದರು

(ಒಂದನೇ ಪುಟದಿಂದ)

ಕ್ರಮವೆಂದಾಕೆ ತಿಳಿದುಕೊಂಡಿದ್ದಾರೆಂದೆನಿಸುತ್ತದೆ.

ಅದು ನಿಜವಿರಬಹುದು; ಆದರೆ, ಅಂತಹ ಕಾರ್ಯಕ್ರಮಗಳು ಅದೆಷ್ಟು ಪ್ರಗತಿಪರವಿರಲಿ, ಸಮಾಜವಾದಿಯಿರಲಿ, ಸರ್ವಾಧಿಕಾರದ ಕಾರ್ಯಗಳಾಗುತ್ತವೆ.

ಸಮಾಜವಾದ—ಪ್ರಗತಿಗಳ ಏಕಸ್ವಾಮ್ಯ ತನ್ನಲ್ಲಿದೆಯೆಂದು ಪ್ರಧಾನಿ ಗಾಂಧಿ ತಿಳಿದಿರುವುದರಿಂದಲೇ ಆಕೆಯ ವರ್ತನೆ ಸರ್ವಾಧಿಕಾರದತ್ತ ವಾಲಿದೆಯೆಂಬ ಅನುಮಾನ ಬಲವಾಗುತ್ತಿದೆ.

ಇಂಥವರು ಜಯಭೇರಿ ಬಾರಿಸಿದರೆ ಮಿಲಿಟರಿ ಸರ್ವಾಧಿಕಾರದ ಬದಲು ನಾಗರಿಕ ಸರ್ವಾಧಿಕಾರ ಬರುತ್ತದೆ; ಪ್ರಜಾಸತ್ತೆಯ ಗೋಣು ಮುರಿಯುತ್ತದೆ; ಸಮಾಜವಾದ ಬೀದಿಪಾಲಾಗುತ್ತದೆ.

Gram : VISHWA Tel : 29111

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 27/1970.

ಕಮಲ ಶೆಡ್ತಿ —ವಾದಿಳು

ಮತ್ತು

ರಾಮಣ್ಣ ಶೆಟ್ಟಿ ಕೂಡಾ —ಪ್ರತಿವಾದಿಗಳು

ಯಾವರೊಳಗೆ

ಪ್ರತಿವಾದಿರು:— 1 ರಾಮಣ್ಣ ಶೆಟ್ಟಿ 2 ಬಚ್ಚ ಶೆಟ್ಟಿ, ಸುಬ್ಬಕ್ಕ ಶೆಡ್ತಿ ರ ಮಕ್ಕಳು—

ಉಡ್ಪಿ ತಾಲೂಕು ಮೂಡುತೋನ್ಸೆ ಗ್ರಾಮದ ಜಪ್ಪುಬೆಟ್ಟುನಲ್ಲಿರುವವರು—

ಯಾವರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ವಾದಿಗೆ ಮೃತ ಸುಬ್ಬಕ್ಕ ಶೆಡ್ತಿ ರು ತಾರೀಕು 25-6-1969ರಲ್ಲಿ ರೂಪಾಯಿ 4000/ಕ್ಕೆ ಬರೆಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಖರ್ಚುಗಳನ್ನು ಬರಮಾಡಿ ಕೊಳ್ಳುವರೆ ವಾರೀಸುದಾರರಾದ ನೀವು ವಗೈರೆಗಳ ಮೇಲೆ ಹೂಡಿದ ದಾವೆಯು ತಾರೀಕು 12-2-1971 ಕ್ಕೆ ಇಟ್ಟಿದೆ —ಉದಾಹರಿಸುವಂಥಾದ್ದಿದ್ದರೆ ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು—ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು.

ಕೋರ್ಟಿನ ಆಜ್ಞೆ ಪ್ರಕಾರ

K. Balachandra Rao
Advocate for Plaintiff.

Udipi, 3-2-1971.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ 50
ಸಂಚಿಕೆ 23

NAVAYUGA

18—2—1971

ಭವಿಷ್ಯ ನಿರ್ಣಾಯಕ ಚುನಾವಣೆ

ಸಮಾಜವಾದದ ಜಪವೊಂದು ಭಾರತೀಯ ರಾಜ್ಯಕೀಯಕ್ಕೆ ಸೋಂಕಿದ ಭೂತ. ಭಾರತದ ರಾಜ್ಯಕೀಯ ನೆಲದಲ್ಲಿ ಕಾಲಿಡಬೇಕೋ ಸಮಾಜವಾದದ ಸ್ಲೋಗನ್ನನ್ನು ಉರುಹಾಕಬೇಕು.

ಪ್ರಧಾನಿ ಗಾಂಧಿಯವರ ಅಭಿಪ್ರಾಯದಲ್ಲಿ ಭಾರತದ ರಾಜ್ಯಕೀಯ ಪಕ್ಷಗಳ ವಿಭಜನೆ ಎರಡಾಗಿ; ಒಂದು ಪ್ರಗತಿಶೀಲರು: ಎರಡು ಪ್ರತಿಗಾಮಿಗಳು ಮತ್ತು ಜಾತೀಯವಾದಿಗಳು.

ಆಕೆಯ ಪ್ರಗತಿಯನ್ನು 'ಕಮ್ಯುನಿಸಂ ಸರ್ವಾಧಿಕಾರವೆನ್ನು'ತ್ತಾರೆ ಕೆಲವರು. ಪ್ರಗತಿಶೀಲತೆಯಲ್ಲಿ ತಾನೇನೂ ಕಡಿಮೆಯಿಲ್ಲ ಎಂದು, ಸಮಾಜವಾದ ಸ್ಲೋಗನ್ನು ಬರಿಯ ಶ್ರೀಮತಿ ಗಾಂಧಿಯ ಖಾಸಗಿ ಆಸ್ತಿಯಲ್ಲವೆನ್ನುತ್ತಾರೆ ಅವರು.

ಕರ್ನಾಟಕದ ಸಿಂಡಿಕೇಟ್ ಸರಕಾರ ದೇಶದಲ್ಲೇ ಅತ್ಯಂತ ಪ್ರಗತಿಶೀಲವೆಂದು ಅದರ ವಿರೋಧಿಗಳೇ ತೆರೆದೆದೆಯಲ್ಲಿ ಹೊಗಳುತ್ತಾರೆ. ಈ ಸರಕಾರ 'ಪ್ರಗತಿ'ಯ ಸ್ಲೋಗನ್ನು ಉಚ್ಚರಿಸುವುದನ್ನು ಬಿಟ್ಟು ಪ್ರಗತಿಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ; ತನ್ಮೂಲಕ ಸಮಾಜವಾದವನ್ನು ಅನುಷ್ಠಾನಕ್ಕೆ ತರಲು ಮುಂದಾಗಿದೆ.

ಶ್ರೀಮತಿ ಗಾಂಧಿಯವರು ಆಡಿ ತೃಪ್ತಿಪಡುತ್ತಿರುವಾಗ, ಶ್ರೀ ಪಾಟೀಲರು ಮಾಡಿ ಜನತೆಗೆ ತೃಪ್ತಿ ತಂದರು.

ಇದನ್ನು ಶ್ರೀಮತಿ ಗಾಂಧಿ ಹೇಗೆ ಸಹಿಸುವುದೆಂತು? ಯಾವುದು ಆಗಬಾರದೆಂದು ಅವರು ಬಯಸಿದ್ದರೋ ಅದು ಆಗಿ ಹೋದಾಗ, ಇವೆಲ್ಲ ಚುನಾವಣೆಗಳ ಸ್ಟಂಟು ಎಂದು ಮೂಗು ಮುರಿದರು.

ಈಗ ಚುನಾವಣೆಗಳು ನಡೆಯುತ್ತವೆ; ಇದರಿಂದ ಕರ್ನಾಟಕ ಸರಕಾರದ ಮೇಲೇನೂ ಪರಿಣಾಮವಿಲ್ಲ. ಶ್ರೀ ಪಾಟೀಲರೇನೂ ಚುನಾವಣೆಯೆದುರಿಸುವುದಿಲ್ಲ.

ಶ್ರೀಮತಿ ಗಾಂಧಿಯವರ ಸಮಾಜವಾದದ ಸ್ಲೋಗನ್ನಿನಲ್ಲಿ ಎದ್ದು ಕಾಣುವ ಕೆಲವಂಶಗಳಿವೆ. ದೀನದಲಿತರ ಅರ್ಥಾತ್ ಶ್ರೀಸಾಮಾನ್ಯರ ಕಲ್ಯಾಣ ಇವುಗಳಲ್ಲಿ ಒಂದು.

ಹದಿನಾಲ್ಕು ಬ್ಯಾಂಕುಗಳ ರಾಷ್ಟ್ರೀಕರಣದ ನಂತರ ತನ್ನ ಮನೆಯಂಗಳದಲ್ಲಿ ಶ್ರೀ ಸಾಮಾನ್ಯರನ್ನು ಕೂಡಿಸಿ ಅವರ ಉದ್ಧಾರಕ್ಕಾಗಿಯೇ ಬ್ಯಾಂಕ್ ರಾಷ್ಟ್ರೀಕರಣ ಮಾಡಿದೆನೆಂದು ಸಾರಿದವರು ಆಕೆ.

ಬ್ಯಾಂಕುಗಳಲ್ಲಿನ ನೋಟುಗಳ ಕಟ್ಟುಗಳೆಲ್ಲವನ್ನೂ ಶ್ರೀಮತಿ ಗಾಂಧಿ ತಂದು ತಮಗೆಲ್ಲ ಹಂಚುತ್ತಾರೆಂದು ಈ ಶ್ರೀಸಾಮಾನ್ಯರು ನಂಬಿ ಬ್ಯಾಂಕು ರಾಷ್ಟ್ರೀಕರಣವನ್ನು ಮನಸಾರೆ ಪ್ರಶಂಸಿಸಿದ್ದುಂಟು

ಆದರೆ, ಶ್ರೀಮತಿ ಗಾಂಧಿ ಹಾಗೆ ಮಾಡಲಿಲ್ಲ; ಬ್ಯಾಂಕ್ ರಾಷ್ಟ್ರೀಕರಣದಿಂದ ಶ್ರೀಸಾಮಾನ್ಯನಿಗೆ ಯಾವ ಲಾಭವೂ ದೊರೆಯಲಿಲ್ಲ.

ಸಾಮೂಹಿಕವಾಗಿ ದೇಶಕ್ಕೆ ಈ ರಾಷ್ಟ್ರೀಕರಣದಿಂದ ಪ್ರಯೋಜನವಾಗಿದೆಯೆ?

ಬ್ಯಾಂಕಿಂಗ್ ಸೌಲಭ್ಯಗಳ ಉದಾರ ವಿಸ್ತರಣೆಯೊಂದನ್ನುಳಿದು ಮತ್ತೇನನ್ನೂ ಸಾಧಿಸಿದಂತಿಲ್ಲ.

ಠೇವಣಿಗಳು ಹೆಚ್ಚುವುದು ಬಿಟ್ಟು ಇಳಿಯ ತೊಡಗಿವೆ. ನೀಡಿದ ಸಾಲದ ಮೊತ್ತ ಹೆಚ್ಚುತ್ತಿದೆ. ಇವುಗಳಲ್ಲಿ ಮರು ಪಾವತಿಯು ಸಂಶಯಗ್ರಸ್ತವಾದುವೂ ದೊಡ್ಡ ಮೊತ್ತದಲ್ಲೇ ಇವೆ.

ಪರಿಣಾಮ? ಇನ್ನೆರಡು ವರ್ಷಗಳಲ್ಲಿ ದೇಶದ ಬ್ಯಾಂಕಿಂಗ್ ಸಂಘಟನೆಗಳು ನಷ್ಟದಲ್ಲಿ ನಡೆಯಲಾರಂಭಿಸಿದರೆ ಆಶ್ಚರ್ಯವಲ್ಲ.

ಈ ನಷ್ಟವನ್ನು ಯಾರು ತುಂಬಿಸಿಕೊಡಬೇಕು?

ಶ್ರೀ ಸಾಮಾನ್ಯನೇ ತಾನೇ

ಶ್ರೀಮತಿ ಗಾಂಧಿ ಶ್ರೀಸಾಮಾನ್ಯನನ್ನು ಉದ್ಧರಿಸುವುದಾಗಿ ಹೇಳಿ ನರಕಕ್ಕೆ ದೂಡಿದರು.

ಇದು ಹೊಸ ಸಂಗತಿಯಲ್ಲ. ೧೯೬೯—೭೦ನೆಯ ಒಂದು ವರ್ಷದಲ್ಲೇ ಸರಕಾರ ನಡೆಸುವ ಕಂಪೆನಿಗಳಿಗೆ ಎಂಬತ್ತಮೂರು ಕೋಟಿ ರೂಪಾಯಿಗಳು ನಷ್ಟ ಸಂಭವಿಸಿದುವು!

ಸರಕಾರಿ ಒಡೆತನದ ಕಂಪೆನಿಗಳು ಈ ರೀತಿ ಭಾರಿ ನಷ್ಟದಲ್ಲಿ ನಡೆಯುತ್ತಿರುವಾಗ ಮತ್ತೂ ಮತ್ತೂ ರಾಷ್ಟ್ರೀಕರಣವನ್ನು ವಿಸ್ತರಿಸುವುದಾಗಿ ಇಂಡಿಕೇಟ್ ಚುನಾವಣಾ ಪ್ರಣಾಳಿಕೆ ಹೇಳುತ್ತದೆ.

ಅಂದರೆ, ಇನ್ನೂ ಇನ್ನೂ ನಷ್ಟದಲ್ಲೇ ಕಂಪೆನಿಗಳನ್ನು ನಡೆಸಲು ಮುಂದಾಗುವುದು; ಈ ನಷ್ಟ ಪೂರ್ತಿಗಾಗಿ ಶ್ರೀ ಸಾಮಾನ್ಯನ ರಕ್ತ ಹೀರುವುದು.

ಶ್ರೀಮತಿ ಗಾಂಧಿ ಈಗಾಗಲೇ ಶ್ರೀ ಸಾಮಾನ್ಯನ ರಕ್ತ ಹೀರತೊಡಗಿದ್ದಾರೆ; ಇನ್ನು ಮಾಂಸ ಮೂಳೆಯನ್ನು ಬಿಡುವುದಿಲ್ಲ.

ಆದರೆ, ಸಮಾಜವಾದದ ಕೈವಾರಿಗಳಾದ ಆಕೆಯೂ ಆಕೆಯ ಮಂತ್ರಿಗಳೂ ಸ್ವರ್ಗಸುಖ ಅನುಭವಿಸುತ್ತಾರೆ. ಅವರಿಗೆ ವೇತನ—ಭತ್ತೆಗಳು ಮಾತ್ರವಲ್ಲದೆ ಮತ್ತಿತರ ವಿಶೇಷ ಸೌಲಭ್ಯಗಳು ಲಭ್ಯವಾಗಿವೆ. ಸುಮಾರು ಒಬ್ಬ ಕೇಂದ್ರಮಂತ್ರಿ ಐದು ಲಕ್ಷ ರೂಪಾಯಿಗಳ ನಿಧಿ ಕರಗಿಸುವ ಶಕ್ತಿ ಹೊಂದಿದ್ದಾನೆ!

ರಾಜ-ಮಹಾರಾಜರು ಕೆಲವರಿದ್ದರು; ಅವರ ಬದಲಿಗೆ ಈ ಪ್ರಜಾಪ್ರಭುಗಳು ಶ್ರೀಸಾಮಾನ್ಯರನ್ನು ಹಿಂಡಿ ಹಿಪ್ಪೆಮಾಡಿ ಎಸೆಯ ಹೊರಟಿದ್ದಾರೆ. ಇದು ಸಮಾಜವಾದದ ಒಂದು ನಮೂನೆ.

ದೇಶದ ಅರ್ಥವ್ಯವಸ್ಥೆಯನ್ನು ಕೆಡಿಸುವಲ್ಲಿ ಶ್ರೀಮತಿ ಗಾಂಧಿ ಸಮಾಜವಾದ ಕಂಕಣಬದ್ಧವಾಗಿದೆ.

೧೯೬೨ರಲ್ಲಿ ಇದ್ದ ರೂಪಾಯಿಯ ಮೌಲ್ಯ ಈಗ ಎಂಟರಲ್ಲಿ ಒಂದರಷ್ಟು ಕಡಿಮೆಯಾಗಿದೆ. ಅಂದರೆ, ಒಂದು ನೂರು ರೂಪಾಯಿಗೆ ದೊರೆಯುತ್ತಿದ್ದದ್ದು ಇದು ನಾಲ್ನೂರರೆ ರೂಪಾಯಿಗೂ ದೊರೆಯುತ್ತಿಲ್ಲ. ಬೆಲೆಯೇರಿಕೆ ಗಗನವ್ಯಾಪಿಯಾಗಿದೆ.

ಇದೇಕೆ ಹೀಗೆ?

ಜನಸಂಖ್ಯೆಯ ಹೆಚ್ಚುವರಿ ಇದಕ್ಕೆ ಕಾರಣವೆಂದು ಹೇಳುತ್ತಾರೆ ಕುಟುಂಬ ಯೋಜನಾ ವಿಭಾಗದವರು. ಇದೂ ಒಂದು ಕಾರಣವೆಂದು ಒಪ್ಪಬಹುದು; ಆದರೆ ಇದೊಂದೇ ಕಾರಣವೆಂದು ಹೇಳುವುದು ಅಸಾಧ್ಯ.

ಶ್ರೀಮತಿ ಗಾಂಧಿಯವರ ನೀತಿ ಕಮ್ಯುನಿಜಂ ಪ್ರಭಾವಿತ. ಆಕೆ ಅಧಿಕಾರಕ್ಕೆ ಬಂದ ಮೇಲೆ ದೇಶದ ಹಲವಾರು ಉತ್ಪಾದನೆಗಳು ನಿಂತುವು. ಬಂಗಾಳ ಕೈಗಾರಿಕೋದ್ಯಮ ಪ್ರಬಲ ಕೇಂದ್ರವಾಗಿತ್ತು. ಇಂದದು ಟೀಕೆಗೆ ಎದ್ದಿತ್ತಿದೆ. ಉದ್ಯಮ ರಂಗದಲ್ಲಿ ಬಿಕ್ಕಟ್ಟು ಕಾರ್ಮಿಕ—ಮಾಲೀಕ ವಿವಾದಗಳಿಂದಾಗಿ, ಕಾರ್ಮಿಕ ವರ್ಗದ ಹಿಂಸಾಚರಣೆ ಮತ್ತದಕ್ಕೆ ಶ್ರೀಮತಿ ಗಾಂಧಿಯ ಅವ್ಯಕ್ತ ಪ್ರೋತ್ಸಾಹನದಿಂದಾಗಿ ಕಾರಖಾನೆಗಳು ನಿಂತುವು.

ಬಾಕಸ್ಸು, ಸೀಪ್ಪು, ಮಾಸ್ತರ ಒಂದು ......ಇವೆಲ್ಲ ಈ ದಿನದ ಬೀಗದಲ್ಲಿ ಶ್ರೀಮತಿ ಗಾಂಧಿ ಪತ್ರ ಸ್ವಕಾರ್ಯಸಾಧನೆಗಳು.

ಉತ್ಪಾದನೆಯಲ್ಲಿ ಇಳಿತ: ಪೂರೈಕೆಯಲ್ಲಿ ಕಡಿತ. ಬೆಲೆಯ ಪ್ರಮಾಣ ರಾಕೆಟ್ ನಷ್ಟ; ಕಾಳಸಂತೆ ಕದೀಮರು ಸುಗ್ಗಿಯ ಕಾಲ. ಶ್ರೀಸಾಮಾನ್ಯ ಮಾತ್ರ ನಡುನೀರಲ್ಲಿ.

ಇದು ಶ್ರೀಮತಿ ಗಾಂಧಿಯ ಸಮಾಜವಾದದ ಒಂದು ಗತಿ.

ಶ್ರೀಮತಿ ಗಾಂಧಿ ತನ್ನನ್ನು ವಾಮಪಂಥೀಯಳೆಂದು ಕರೆದುಕೊಳ್ಳುವುದಿಲ್ಲ. ಆದರೆ ಆಕೆಯ ಸಹಚರರೂ ಉದ್ಧಾರಕರೂ ಆದ ಕಮ್ಯುನಿಸ್ಟರು, ದ್ರಾ.ಮು.ಕ.ರು ಮತ್ತಿತರರು ಹಾಗೆಂದು ಕರೆಯುತ್ತಾರೆ.

ಆಕೆಯ ರಾಜಕೀಯ ಸ್ನೇಹಿತರೆಲ್ಲರೂ ವಾಮ ಪಂಥೀಯರೇ.ಆಕೆ ಮಾತ್ರ ಪ್ರಗತಿಶೀಲೆ; ಸಮಾಜವಾದಿ. ಇದು ಸ್ಲೋಗನ್ನು ಸತ್ಯ ಸಂಗತಿಯೆಂದರೆ, ವಾಮ ಪಂಥೀಯ ಸರ್ವಾಧಿಕಾರಿ.

ಇದಕ್ಕೆಂದೇ ಆಕೆ ವಾಮ ಪಂಥೀಯರ ಹಿಂಸಾಕಾಂಡಗಳನ್ನು ತಡೆಯುವುದಿಲ್ಲ. ಮನೆಗೆ ಬೆಂಕಿ ಹಚ್ಚಲಿ, ದರೋಡೆ ಮಾಡಲಿ, ಕೊಲೆ ಸುಲಿಗೆಗಳನ್ನು ನಡೆಸಲಿ, ಆಕೆಗೆ ಈ ಬಗ್ಗೆ ನಿಶ್ಚಿಂತೆ.

ಇವೆಲ್ಲ ನಿರುದ್ಯೋಗದಿಂದ ಹುಟ್ಟಿದ್ದ ಶ್ರೀ ಸಾಮಾನ್ಯನ ಅಸಮಾಧಾನದ ಉರಿ ಆಕೆಗೆ.

ಈ ಉರಿ ಆರಬೇಕಾದರೆ ಏನು ಮಾಡಬೇಕು? ಉದ್ಯೋಗ ಒದಗಿಸಬೇಕು.

ಮೂರು ಕೋಟಿ ನಿರುದ್ಯೋಗಿಗಳು ಇಂದು ದೇಶದಲ್ಲಿದ್ದಾರೆ. ಇಷ್ಟು ಉದ್ಯೋಗಾವಕಾಶಗಳನ್ನು ಆಕೆ ಏಕಕಾಲದಲ್ಲಿ ಹೇಗೆ ಒದಗಿಸಬೇಕು?

ಹಿಂಸೆ—ಕೊಲೆ—ಸುಲಿಗೆ ಮೊದಲಾದುವು ಅವರವರೇ ಆರಿಸಿಕೊಂಡ ಉದ್ಯೋಗ ಅವನ್ನೇ ಮುಂದುವರಿಸಿದರೆ ಶ್ರೀಮತಿಯ ಗಂಟು ಮುಳುಗುವುದಿಲ್ಲ.

ಶ್ರೀಮತಿ ಗಾಂಧಿಯವರ ಕೈಗಳಲ್ಲಿ ದೇ

(ಹನ್ನೆರಡನೇ ಪುಟ ನೋಡಿರಿ)

ಶ್ರೀ ವಿ. ನಾಯಕ, ಕರ್ಕಿಕೋಡಿ

ಉತ್ತರ ಕನ್ನಡ ಜಾನಪದ ಗೀತೆಗಳಲ್ಲಿ

ವಿಕೃತ ಕಾಮ

ಜಾನಪದ ಗೀತೆ ಜನಪದಸಂಪದ. ವಿಕೃತ ಕಾಮಕ್ಕೆ ಸಂಬಂಧಿಸಿದ ಕೆಲವು ಜಾನಪದ ಸೂಕ್ತಿಗಳನ್ನು ಲೇಖಕರು ಇಲ್ಲಿ ವಿವೇಚಿಸಿದ್ದಾರೆ.

ಪರಿಶುದ್ಧವಾದ ಪ್ರೇಮವೆಂದರೆ ತಂನಂನು ಸಂಪೂರ್ಣವಾಗಿ ಅರ್ಪಿಸಿ ಬಿಡುವುದು! ಅಧರ್ಮಕ್ಕೆ ಅಲಮಾತ್ರವೂ ಇಂಬು ಕೊಡದೇ ನಿರ್ಭೀತತೆಯಿಂದ, ನಿಷ್ಕಲಂಕತ್ವಕ್ಕೆ ಹೆಸರಾಗಿ ಸಾಗುವ ಮಹೋಂನತ ಮಾರ್ಗ ಕೂಡಾ ಅದು! ಇದು ಬಿಟ್ಟು ಅಡ್ಡದಾರಿ ಹಿಡಿವವರಿಗೆ ಸಮಾಜದಲ್ಲಿ ಮಂನಣೆ ದೊರಕುವುದಕ್ಕುಂಟೇ? ಕಟ್ಟಿಕೊಂಡ ಮಡದಿಗೆ ದ್ರೋಹ! ಮೇಲಾಗಿ ಸ್ತ್ರೀಕುಲಕ್ಕೇ ಕುಠಾರಪ್ರಾಯವಾದ ಹಾಗೆ!! ಇದಕ್ಕೇ ಎಂದುದು "ವಿಕೃತಕಾಮ" ಎಂದು. ಕಾಮದ ಹಣೆಯ ಬರೆಹವೇ ಅಷ್ಟು! ವಿವೇಕ ಎಂನುವುದು ಅಲ್ಲಿದ್ದರೆ ತಾನೇ? ಮಾನಿನಿಯರಾದ ತಾಯಂದಿರಿಗೆ ಗಂಡುಗಳ ಆಶಕ್ತ ಮನೋವೃತ್ತಿ ಕಂಡು ಕನಿಕರ ಉಂಟಾಗುತ್ತಿದೆ.

ಅಂಣಯ್ಯನಿವನು ಸಿಟ್ಟಿನವನೆಂಬು ಸೋದರಿಗಾಗಲೇ ತಿಳಿದಿದೆ. ಹಾಗೆಂದು ಆತನ ಅಹಿತವಂನೆಣಿಸುವುದು ಸತ್ಕರ್ಮವಲ್ಲ! ಅದಕ್ಕೇ ವಿನಯದಿಂದ ಕರೆದು ಕೇಳಿದಳು ಸೋದರಿ:–

ಸಿಟ್ಟಿನಲಂಣಯ್ಯಗೆ ಸಿಕ್ಕಿದುಂಗುರ್ಯಾಕೆ
ನಡುರಾತ್ರೆಯೂಕೆ ನೆರೆಮನೆ||

ನಡುರಾತ್ರಿಯೆದ್ದು ನೆರೆಮನೆ ಪ್ರವೇಶಿಸುವ ವಿಟ ಅಂಣಯ್ಯನ ಅಸಕೃತ್ಯಕ್ಕೆ ತಲೆ ತಗ್ಗಿಸೋಣ! ಅಂಥಹರಂನು ಮಾರ್ಮಿಕವಾಗಿ ಖಂಡಿಸಿದ ಗುಣವಂತ ಗರತಿಯರ ಧೈರ್ಯಕ್ಕೆ ಅಡ್ಡಬೀಳೋಣ!! ಅವರಾ ಅಲಂಕಾರ ಪರಿಜ್ಞಾನವಂನು ಅದೆಷ್ಟಾಗಿ ಹೊಗಳೋಣ!! ಅಷ್ಟು ಒಪ್ಪಾದ, ಓಪ್ಪಾದ, ಅಪೂರ್ವವಾದ "ರೂಪಕ ಅಲಂಕಾರ"! ಸಿಕ್ಕಿದುಂಗುರದ ಒಡೆತನವೂ, ಕಂಡವರ ಹೆಂಡಿರ ಸಂಗವೂ ಅದೆಷ್ಟು ನಿಕೃಷ್ಟ, ನಾಚಿಕೆಗೇಡು ಹಾಗೂ ಮಾನಹಾನಿಕಾರಕ ಎಂಬ:ದಂನು ಚಿತ್ರಿಸುವಲ್ಲಿ ಜಾನಪದ ಕವಿಗಳು ಒಳ್ಳೆಯ ಯಶಸ್ಸನ್ನು ಪಡೆದಿದ್ದಾರೆ.

ಎಷ್ಟಾದರೂ ಸಿಕ್ಕಿದುಂಗುರ ತಾನೇ? ತೊಟ್ಟುಕೊಂಡೇವೆಂದರೆ ನಾಲ್ಕು ಮಂದಿ ಕಂಡು ಅಪಕೀರ್ತಿ ಕಟ್ಟಿಟ್ಟದ್ದೇ ಸರಿ. ಯಾರಿಗೂ ಗೊತ್ತಾಗದ ಹಾಗೆ ಇಟ್ಟುಕೊಂಡೇವೆಂದರೂ ಆತ್ಮಕ್ಕೆ ಶಾಂತಿ ಹೇಗೆ ಲಭಿಸಬೇಕು? ಹಾಗೇ ತಾನೆ ಕಂಡವರ ಸತಿಯರ ಸಹವಾಸ? ಗುಟ್ಟು ಎಂದಾದರೂ ರಟ್ಟಾಗದೆ ಹೋದೀತೇ ಹೇಗೆ? ಅದಕ್ಕೆ ಕಳಕಳಿಯ ವಿಜ್ಞಾಪನೆ ಅಂಣಯ್ಯನಲ್ಲಿ: –

ಇಂದಿಗೀ ಬುದ್ಧಿ ಬಿಡಬೇಕು||

ಹಾಗಿದ್ದರೂ ಈ ಗಂಡುಗಳಂನು ನಂಬಲಿಕ್ಕುಂಟೆ? ಇವಕ್ಕೆ ಒಂದು ಮನಸ್ಸೆ? ಒಂದು ಮಾರ್ಗವೇ? ಹೆಂಣುಗಳಂನು ಕಂಡಾಗೆಲ್ಲ ಸಭ್ಯತೆಯನ್ನು ತೋಚಿದ್ದು ಅಷ್ಟರಲ್ಲೇ ಇದೆಯಷ್ಟೇ! ಹಾಗೇಕೋ:—

ಹಾಲ ಕಂಡಲ್ಲೂಟ ನೀರ ಕಂಡಲ್ಲೆ
ಸ್ನಾನ
ನಾರಿಯ ಕಂಡಲ್ಲೆ ಅನುಮಾನ
ಅಂಣಯ್ಯಗೆ!

ಇದು ಸರಿಯೇ? ನೀತಿಯೆ ಇದು? ಹೆಂಣ್ಣುಲದ ಸಚ್ಚಾರಿತ್ರ್ಯಕ್ಕೆ ಭೀತಿ ತಾನೇ ಈ ಗಂಡುಗಳು! ಗಂಡೆಂದರೆ ಸ್ತ್ರೀಕುಲಕ್ಕೆ ಪಿತೃ, ಭ್ರಾತೃ, ಪುತ್ರ ಸ್ವರೂಪಗಳು ತಾನೇ? ಪತಿಯಾದವನಿಗೂ ಸ್ತ್ರೀ, ಶಯ್ಯಾಗೃಹವೊಂದುಳಿದು ಉಳಿದೆಲ್ಲೆಡೆಯೂ ಮಾತೆಯೇ! ಸ್ತ್ರೀ ಕುಲದ ನಿರ್ಮಾಣವು ಬರಿಯ ಭೋಗಕ್ಕಲ್ಲ! "ಮಾನವತಾ ಧರ್ಮ" ಪತಾಕೆಯೆಂದು ಎತ್ತಿಹಿಡಿವ ಮಹಾ ಚೈತನ್ಯಶಾಲಿಗಳವು! 'ವಿಶ್ವಸೌಖ್ಯ' ಅವರ ಕೈಯಲ್ಲಿದೆ ಎಂದರೆ ಗಂಡು ಜನಾಂಗ ಸ್ತ್ರೀಗೆ ದೊರೆತ ಮಂಣಿನ ಮುದ್ದೆಯಂತೆ! ಆ ತಾಯ ಮಾತಿಗೆ ಎದುರಾಡುವ ಗಂಡೂ ಉಂಟೇ? ಸೋದರಿಯ ಸಂದೇಶವಂನು ಸ್ವೀಕರಿಸದ ಸೋದರರುಂಟೇ? ಹೆತ್ತ ಮಗಳಂನು ಮುದ್ದಿಸದ, ಮುತ್ತಿಡದ ತಂದೆಯೂ ದೊರೆತಾನೆಯೇ? ನಲ್ಲೆಯ ನಲ್ಮೆ ತಂನು ನಿರಾಕರಿಸುವ ನಲ್ಲನಂನು ನೋಡಿದ್ದುಂಟೇ? ಎಂದಿಗೂ ಇಲ್ಲ ತಾನೇ! ಏಕೆಂದರೆ ಈ ಒಂದೊಂದೂ ಶಕ್ತಿಗಳು ಗಂಡಂನು ಭಯ, ಭಕ್ತಿ, ಪ್ರೀತಿ, ಪ್ರೇಮ, ಮಮತೆಗಳ ದಿವ್ಯಾನುಭವದಲ್ಲಿ ಇಳಿಸಿ ಮಾನವತೆಯ ವೈಶಾಲ್ಯವನ್ನು ಖಚಿತಗೊಳಿಸುತ್ತವೆ.

ಅಷ್ಟೇಕೆ? ಯಾವತ್ತೂ ಮಾನವ ಜನಾಂಗವಂನು ನಿಟಿದ ಸೌಂದರ್ಯದೆಡೆಗೆ ಕರೆದೊಯ್ಯುತ್ತನೆ! ಇಂಥ ಸ್ತ್ರೀ ಶಕ್ತಿ ಎಂದೆಂದಿಗೂ ಮಾತೆಯೇ! ಈ ಸತ್ಯವಂನು ಕಡೆಗಣಿಸಿ ಹಾಗೆ ಕೇಡುಂಟು ಮಾಡುವ ಗಂಡಿಗೆ ನರಕವೇ ಕಟ್ಟಿಟ್ಟದ್ದು! ಇದಂನು ಮರೆತು ನಡೆದುದಾದರೆ ಲೋಕಕ್ಕೆ ಕಂಟಕ! ಅಂಥ ಸ್ತ್ರೀ ಶಕ್ತಿಯ ತೇಜೋಭಂಗವಾಗುವುದಾದರೆ ದ್ವಿಶಕ್ತಿಗೂ ಮಾರಕ!!

ಅದಂನು ಸ್ತ್ರೀ ಕುಲ ಬಲ್ಲುದು! ಅದಕ್ಕೇ ಅಂಣಯನಂನು ಕರೆದು ಎಚ್ಚರಿಕೆ ಕೊಟ್ಟಳು ತಂಗಂನು:–

ಇಂದಿಗೇ ಬುದ್ಧಿ ಬಿಡಬೇಕು||

"ಅನುಮಾನ ಸಲ್ಲದು ಅಂಣಯ್ಯ! ಹಾಗೆ ಕೂಡದು!! ಭವಿಷ್ಯಕ್ಕೆ ಕೇಡು; ಮನುಷ್ಯತ್ವಕ್ಕೆ ಕುಂದು! ಗಂಡ್ತನಕ್ಕೆ ಅಪಮಾನ! ನೈತಿಕತೆಗೆ ಕಲಂಕ!! ಹೆಂಣಿಗೂ ನಿಂಮಿಂದ ಭೀತಿ; ಅಪಕೀರ್ತಿ!! ನಿಂಮ ಸಚ್ಚಾರಿತ್ರ್ಯ ಸ್ತ್ರೀ ಶಕ್ತಿಗೆ ಪ್ರೇರಕ.! ದೇವಿಯೊಲವಿಗೆ ಅದೇ ಕಾರಕ!! ಈ ಸದ್ಭಾವನೆಯೇ ನಿಂಮ ಸಿಂಮ ಯಶಸ್ಸಿಗೆ, ಶ್ರೇಯಸ್ಸಿಗೆ ಸಾಧಕ!" ಹಾಗೆಂದು ನೀತಿಮಾರ್ಗಗಳು ಹಿದಳು ಬಲ್ಲಾಕೆ!

ಹಾಗೆ ನಡೆದುದಾದಲ್ಲಿ ಆ ಮಾತೃಶಕ್ತಿಗೆ ಪೂರ್ಣಾನಂದ ಲಭ್ಯವಾಗುವುದೆಂಬುವುದರಲ್ಲಿ ಲವಲೇಶವೂ ಸಂಶಯವಿಲ್ಲ! ಇಂಥ ತಾಯಂದಿರ ಸನಿಹದಲ್ಲಿ ಬೆಳೆದ ಗಂಡು ಜನಾಂಗವೇ ಧನ್ಯ!

ಮನುಷ್ಯನಾದವನಿಗೆ ಸ್ವಲ್ಪಾದರೂ "ಪಿತ್ಥ" ಬೇಕು ಎಂನುವುದು ಇದಕ್ಕೇ ಕೆಲವರು 'ಸೆರ್ಕ' ಎಂದರು. 'ಛಲ' ಎಂದು ಹೇಳುವುದೂ ಇದಕ್ಕೇ! ಪ್ರಾಯದ ಜಗ್ಗಟದಲ್ಲಿ ಆಗಬಾರದಾಗುವುದುಂಟು! ಬಲ್ಲವರು ತಿಳಿಸಿ ಹೇಳಿದ ಮೇಲಾದರೂ ಬುದ್ಧಿ ಬರಬೇಕಲ್ಲ! ಆಗಲೂ ಆಗಲಿಲ್ಲ ಎಂದಾಗ 'ಮಾನ ಮೂರಾಸು' ಆಗುವುದುಂಟು! ಒಂದೂರಿನದು ನೂರೂರಿಗೆ ಸುದ್ದಿಯಾಗುವುದುಂಟು! ಇವನ ಕಥೆಯೊದರೂ ಅಂಥದ್ದೇ. ಅಂಥಹನ ಕುರಿತು ಒಂದು ಹಾಡು ಬಗುತ್ತದೆ:–

ಮದ್ದರಾತ್ರಲೆದ್ದಿ ಕದ್ದಿ ಸೋಳಿಗೋವ
ಬಿದ್ದಿ ಮೊಳಕಂಡಿ ವಡಕಂಡ|
ಅಂಣಯ್ಯ
ಇದ್ದ ಮಾನಟ್ಟು ಕಳಕಂಡ||

ಪಿತ್ಥವಿಲ್ಲದ ಬದುಕಿನ ಗತಿಯೇ ಅಷ್ಟು! ಇವನೆಲ್ಲ ಕಂಡೂ ಪಂಡು ಇಂನೊಬ್ಬ ಶ್ರೀಮಂತ ವಿಟ ತನ್ನ ಚಟ (ಚಟ)ಯಂನ್ನು ಬಿಡಲಾರ! ಎಷ್ಟು ಬಾರಿ ಹಣೆ ಚಚ್ಚಿಕೊಂಡರೂ 'ಸರಿ' ಎಂದೊಪ್ಪಿ ಸನ್ಮಾರ್ಗ ಹಿಡಿಯಲಾರ:–

ಮಾವನ ಮಗುಳಿಗೆ ಮೂಳಿಗೆಯ ಮನೆ
ಬಿಟ್ಟು
ತಾ ಹೋದ ಪರರ ಜಗಲೀಗೆ||

ಭಾರೀ ಶ್ರೀಮಂತ! ಕಂಣು ಕುಕ್ಕಿಸುವಂಥ ವೈಭವದ ಮನೆ ಅವನದು!! ಬದುಕಿಗೊಂದು ಅರ್ಥ, ಮೌಲ್ಯ, ಸಂಸ್ಕಾರ ಕೊಡಲು 'ಮಡದಿ' ಬೇರೆ ಬಂದಿದ್ದಾಳೆ— ಹಾಗಿದ್ದರೂ ಅವೆಲ್ಲವೂ ವ್ಯರ್ಥವಾಗಿದೆ ಈ ಸಂಸ್ಕಾರ ಹೀನನಿಗೆ! ಪರರ ಸ್ವತ್ತಿನ ಮೇಲೆ ಅದೇಕಂಥ ವ್ಯಾಮೋಹವೋ:—

[ಹನ್ನೊಂದನೇ ಪುಟ ನೋಡಿರಿ]

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ
S. C. ನಂ. 146/70.
ನೋಟೀಸು

ವಾದಿ:- ಶ್ರಾಸಿ ರಾಮಚಂದ್ರ ಶ್ಯಾನುಭಾಗ, ಗಂಗೊಳ್ಳಿ

ಪ್ರತಿವಾದಿ:- ತಂಡೇಲ ಮಂಜುನಾಥ, ಹೇಮಯ್ಯನ ಮಗ, ಭಟ್ಕಳ ಕಸಬಾ ಮಖಿನಕ ವೇ.

ಪ್ರತಿವಾದಿಗೆ— ಈ ಮೂಲಕ ತಿಳಿಯಪಡಿಸಿದ್ದು—

ಫಿರ್ಯಾದ ವಾದಿಗೆ "ಮಹಾಲಕ್ಷ್ಮಿ" ಮಚ್ಛ್ವಯ ತಂಡೇಲತನದ ಬಾಬ್ತು ಲೆಕ್ಕಾಚಾರ ಪ್ರಕಾರ ಬಗಿಸಕತ್ತ ರೂ. 257.56 ಮತ್ತು ಬಡ್ಡಿ ರೂ. 47.76 ಕೂಡಾ ರೂ. 305.30, ಮುಂದಿನ ಬಡ್ಡಿ, ದಾವಾಖರ್ಚುಗಳಿಗೆ ಮೇಲ್ಕಂಡ ವಾದಿ ನಿಮ್ಮ ಮೇಲೆ ಸಣ್ಣ ದಾವಾ ನಡಿಸಿದ್ದಾನೆ, ಅದನ್ನು ತನಿಖೆ ಬಗ್ಗೆ ತಾರೀಖು 6.3.71ಕ್ಕೆ ಇಟ್ಟಿರುವುದರಿಂದ ನಿಮಗೆ ಆ ಕುರಿತು ಉದಾಹರಣೆ ಏನಾದರೂ ಇದ್ದರೆ ಆ ದಿನ ಹಗಲು 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಎಕ್ಸ್ ಪಾರ್ಟಿ ಮಾಡಿ ದಾವಾ ತೀರ್ಮಾನಿಸಲಾಗುತ್ತದೆ.

(ಕೋರ್ಟು ಹುಕುಂ ಪ್ರಕಾರ)
(ಸಹಿ)
ಪಿ. ಎಸ್. ಎನ್. ಹೆಬ್ಬಾರ್
ವಾದಿಯ ಎಡ್ವೊಕೇಟ್
ಕುಂದಾಪುರ, 6.1.71.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ನವಯುಗ

ಸುವರ್ಣೋತ್ಸವ ವರ್ಷ

ಸಂಪುಟ : 50

ಸಂಚಿಕೆ : 23

NAVAYUGA, UDIPI, S. K. 18—2—1971

ಮತದಾರರನ್ನು ಒಲಿಸಿಕೊಳ್ಳಿ

ಸಿಂಡಿಕೇಟು—ಸ್ವತಂತ್ರ—ಜನಸಂಘ ಮೊದಲಾದ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ವಿಟ್ಟಿರುವ ಪಕ್ಷಗಳ ಕೂಟವು ಎಷ್ಟರ ಮಟ್ಟಿಗೆ ಯಶಗಳಿಸಿದೆಯೆಂದು ಇದೀಗ ಅಂದಾಜು ಮಾಡುವುದು ಸಾಧ್ಯವಾಗುತ್ತದೆ. ಎಲ್ಲೆಡೆಯೂ ನಾಮಪತ್ರಗಳನ್ನು ಹಿಂದೆಗೆದುಕೊಳ್ಳುವ ಅವಧಿ ಮುಕ್ತಾಯಗೊಂಡಿದ್ದು, ವಾಸ್ತವಿಕವಾಗಿ ಚುನಾವಣಾ ಕಣದಲ್ಲಿ ಉಳಿಯಬಯಸಿದವರ ಸ್ಪಷ್ಟ ವಿವರಣೆ ದೊರೆತಿದೆ. ಮೈತ್ರಿಯನ್ನೋ ಹೊಂದಾಣಿಕೆಯನ್ನೋ ಮಾಡಿಕೊಂಡಿರುವವರು ಏನು ಸಾಧ್ಯವಾಯಿತೋ ಅಷ್ಟರಿಂದಲೇ ತೃಪ್ತರಾಗಿ ತಂತಮ್ಮ ಪಾಡಿಗೆ ತಾವು ಇದ್ದುಬಿಡುವ ಮನೋವೃತ್ತಿ ತೋರಿಸುತ್ತಿರುವರೆಂದು ತೋರುತ್ತದೆ. ಇದರಿಂದ ಹೊಂದಾಣಿಕೆಯಲ್ಲಿ ತೂರಿಕೊಂಡ ಪಕ್ಷಗಳಿಗೆ ಯಾವ ಪ್ರಯೋಜನವೂ ಲಭ್ಯವಾಗುವುದಿಲ್ಲವೆಂಬುದನ್ನು ಬಹು ಬೇಗನೇ ಅರಿತುಕೊಳ್ಳಬೇಕು.

ಚತುರ್ಪಕ್ಷ ಕೂಟದ ಮುಖ್ಯ ಉದ್ದೇಶ 'ಪ್ರಜಾತಂತ್ರದ ಮುಖಕ್ಕೆ ಮಸಿ ಬಳಿದ ಇಂಡಿಕೇಟ್' ಬಹುಮತ ಗಳಿಸದಂತೆ ನೋಡಿಕೊಳ್ಳುವುದು. ಇದಕ್ಕಿರುವ ಏಕಮೇವ ಉಪಾಯವೆಂದರೆ ನೇರ ಸ್ಪರ್ಧೆ ಕೊಡುವಲ್ಲಿ ಶಕ್ತರಾಗುವುದು. ಆದರೆ, ಇದರಲ್ಲಿ ಸಫಲತೆ ಹೊಂದಾಣಿಕೆ ಕೂಟಕ್ಕಾಗಲಿಲ್ಲ. ಎಲ್ಲೋ ಬೆರಳೆಣಿಕೆಯ ಕ್ಷೇತ್ರಗಳಲ್ಲಿ ದ್ವಿಮುಖ ಸ್ಪರ್ಧೆ ನಡೆಯುತ್ತದೆ ಮಾತ್ರಕ್ಕೆ ಕೂಟ ಯಶಗಳಿಸಿತೆಂದಾಗಲಿಲ್ಲ. ಅಷ್ಟು ಮಾತ್ರವಲ್ಲದೆ ಕೆಲವೆಡೆ ಈ ಕೂಟದ ಅಂಗ ಪಕ್ಷಗಳೇ ಪರಸ್ಪರರನ್ನು ಎದುರಿಸುತ್ತಿರುವ ಸನ್ನಿವೇಶಗಳೂ ಇವೆ. ಇದರಿಂದ ಕೂಟವ್ಯೂಹದ ಶಕ್ತಿ ವೃಥಾ ಹ್ರಾಸವಾಯಿತೆಂದೇ ಹೇಳಬೇಕು. ಕರ್ನಾಟಕದಲ್ಲಿರುವುದು ೨೭ ಲೋಕ ಸಭಾಕ್ಷೇತ್ರಗಳು. ಇವುಗಳಿಗೆ ಒಟ್ಟು ೧೦೪ ಜನ ಅಭ್ಯರ್ಥಿಗಳು ಈಗಿನ ಗಟ್ಟದಲ್ಲಿದ್ದಾರೆ. ಇವರಲ್ಲಿ ಪಕ್ಷೇತರರು ಬಹಳ ಉದಾರರಾಗಿ ಸೋಲು ಗೆಲುಗಳ ತಕ್ಕಡಿಯನ್ನು ತೂಗುತ್ತಿರುವುದು ಗಮನಾರ್ಹ, ೨೭ರಲ್ಲಿ ನೇರ ಸ್ಪರ್ಧೆಯಿರುವುದು ಮೂರು ಕಡೆಗಳಲ್ಲಿ; ತ್ರಿಕೋಣ ಸ್ಪರ್ಧೆ ಹತ್ತೆಡೆಗಳಲ್ಲಿ. ರಾಜಧಾನಿ ಬೆಂಗಳೂರಲ್ಲಿ ೧೮ಜನ ಸ್ಪರ್ಧಿಗಳು! ಅಂತಿಮ ಘಟ್ಟದಲ್ಲಿ ಹೊಂದಾಣಿಕೆ ಯಶಸ್ವಿಯಾಯಿತೆಂದು ಕೂಟವೇನೋ ಘೋಷಿಸಿತು. ಆದರೆ, ಈ ಯಶಸ್ಸು ಕಾಗದ ಪತ್ರಗಳಲ್ಲಿ ಮಾತ್ರವೆಂದೇ ಹೇಳಬೇಕು. ಉದಾಹರಣೆಗೆ ಉಡುಪಿ ಕ್ಷೇತ್ರವನ್ನು ಕೂಟವು ಸ್ವತಂತ್ರ ಪಕ್ಷದ ಶ್ರೀ ಲೋಬೋ ಪ್ರಭುಗಳಿಗೆ ನೀಡಿತ್ತು. ಆದರೆ, ಶ್ರೀ ಎಸ್. ಎಸ್. ಕೊಳ್ಕೆಬೈಲರು ಸಿಂಡಿಕೇಟಿನಿಂದ ನಾಮಪತ್ರ ಸಲ್ಲಿಸಿದರು. ಉನ್ನತ ನಾಯಕರು ಹೊಂದಾಣಿಕೆಯಲ್ಲಿ ಯಶಗಳಿಸಲು ಅವರಿಗೆ ನಾಮಪತ್ರ ಹಿಂದೆಗೆಯುವಂತೆ ಒತ್ತಾಯ ಮಾಡಿದಾಗ, ಅವರು ಪಕ್ಷಕ್ಕೇ ರಾಜಿನಾಮೆ ನೀಡಿ ಪಕ್ಷೇತರರಾಗಿ ಸ್ಪರ್ಧಿಸಲು ನಿರ್ಧರಿಸಿದರು. ಶ್ರೀ ಕೊಳ್ಕೆಬೈಲರು ಕಳೆದ ಬಾರಿ ಶ್ರೀ ಲೋಬೋ ಪ್ರಭುಗಳ ವಿರುದ್ಧ ಹೋರಾಡಿದರೆಂಬುದು ನಿಜ. ಈ ಬಾರಿ ತವರ ಪರವಾಗಿ ಕೆಲಸ ಮಾಡುವುದೂ ಕಷ್ಟವಾಗುತ್ತದೆಂಬುದೂ ಸತ್ಯವೇ. ಆದರೂ ರಾಜ್ಯಕೀಯದಲ್ಲಿ ಎಲ್ಲವೂ ಸಾಧ್ಯವಾಗಬೇಕಾಗುತ್ತವೆ. ಶ್ರೀ ಕೊಳ್ಕೆಬೈಲರು ದೃಢವಾಗಿ ತಮ್ಮ ನಿಲುಮೆಗೆ ಅಂಟಿ ಕೊನೆಯ ಗಳಿಗೆಯವರೆಗೂ ಉಳಿದರೆ, ಅವರು ಗೆಲ್ಲುವ ಸಾಧ್ಯತೆಯೂ ಇಲ್ಲವೆಂದಲ್ಲ. ಆದರೆ, ಇತ್ತೀಚೆಗೆ ಜಿಲ್ಲೆಯ ಉತ್ತರ ಭಾಗದಲ್ಲಿ ಬೀಸತೊಡಗಿದ ಪಕ್ಷಾಂತರ ಗಾಳಿ ಶ್ರೀಯುತರನ್ನೂ ಇಂಡಿಕೇಟಿನತ್ತ ಸೆಳೆದೊಯ್ದರೂ ಅಚ್ಚರಿಯಿಲ್ಲ.

ಇಂತಹುದೇ ಪರಿಸ್ಥಿತಿ ಹಲವೆಡೆಯಿದೆ. ಆದರೆ, ಆತ್ಮಸಾಕ್ಷಿ, ವ್ಯಕ್ತಿನಿಷ್ಠೆಯ ಈ ಯುಗದಲ್ಲಿ ಪಕ್ಷನಿಷ್ಠರು ಇದಕ್ಕೆ ಯಾವ ಚುಚ್ಚುಮದ್ದೂ ಕೊಡಲಾರರು. ಇದು ಚುನಾವಣೆಯ ಮೊದಲ ಬಿರುಗಾಳಿಯೆಂದರೆ, ಚುನಾವಣೆಯ ನಂತರವೂ ಪಕ್ಷಾಂತರದ ಸುಳಿಗಾಳಿ ಭರದಿಂದ ಬೀಸುವ ಸಾಧ್ಯತೆ ಆಕಾಶದಷ್ಟು ತೆರೆಯಾಗಿದೆ. ಈ ಯೆಲ್ಲ ಪಕ್ಷಾಂತರಗಳ ಪ್ರಭಾವದಿಂದ ದೇಶದಲ್ಲಿ ಮುಂದಿನ ಕೆಲವು ವರ್ಷ ಸುಭದ್ರ ಸರಕಾರ ಸ್ಥಾಪನೆ ಖಂಡಿತಕ್ಕೂ ಸಾಧ್ಯವಿಲ್ಲ. ಇಂಡಿಕೇಟ್ ಕೂಟ ಪಕ್ಷಗಳೂ ತಂತಮ್ಮ ಬಹುಮತದಲ್ಲಿ ಅಚಲ ವಿಶ್ವಾಸ ವ್ಯಕ್ತ ಪಡಿಸಿದರೂ ಅದು ವಿಚಲವಾಗುವುದರಲ್ಲಿ ಸಂದೇಹವಿಲ್ಲ. ಹೊಂದಾಣಿಕೆಯ ಕೂಟದವರ ಕರ್ತವ್ಯ ತುಂಬ ಇದೆ. ಅವರು ಎದುರಿಸಬೇಕಾದವರು ಇಂಡಿಕೇಟನ್ನು ಮಾತ್ರವಲ್ಲ. ಪ್ರಭಾವಶಾಲೀ ಪಕ್ಷೇತರರನ್ನೂ ಎದುರಿಸಬೇಕಾಗಿದೆ. ಆದುದರಿಂದ ಸ್ಥಾನಗಳ ಹೊಂದಾಣಿಕೆಯಂತೆಯೇ ಪ್ರತಿ ಕ್ಷೇತ್ರದಲ್ಲೂ ಎಲ್ಲರೂ ಒಂದಾಗಿ ಚುನಾವಣಾ ಪ್ರಚಾರಕ್ಕಿಳಿಯಬೇಕಾಗಿದೆ. ಇಂತಹ ಕ್ಷೇತ್ರ ತಮಗೆ ಕೊಟ್ಟಿದ್ದು: ಅಲ್ಲಿ ಅವರೇ ಚುನಾವಣಾ ಪ್ರಚಾರ ಮಾಡಲಿ ಎಂದು ಉಳಿದವರು ಸುಮ್ಮನಿದ್ದರೆ, ಕೂಟದ ಅಭ್ಯರ್ಥಿಗಳು ಗೆ

(೫ನೇ ಪುಟ ನೋಡಿ)

ವಿಜಯ ಬ್ಯಾಂಕಿನ
ದ್ವಿವಿಧ ಸೌಲಭ್ಯಯೋಜನೆ

ಈ ಶಾಲಾ ಶಿಕ್ಷಕಿಗೆ ಬೇರಾವುದೇ ಉಳಿತಾಯದ ಯೋಜನೆಗಿಂತ ಹೆಚ್ಚು ಭದ್ರತೆ ನೀಡುವುದು

ಈಕೆ ನಿವೃತ್ತಳಾಗುವಾಗ, ಉಳಿತಾಯಗಳಿಂದ ಪಡೆ ಮಾಡಬೇಕಾಗಿಲ್ಲ, ಕ್ರಮಾಗತ ಮಾಸಿಕವೇತನ ಲಭಿಸುವ ಭರವಸೆ ದೊರೆಯುವುದು.

ವಿಜಯ ಬ್ಯಾಂಕಿನ ವಿಶೇಷರೀತಿಯ ದ್ವಿವಿಧ ಸೌಲಭ್ಯ ಯೋಜನೆ ನಿಮಗೆ ಇಂಥ ಹೆಚ್ಚಿನ ಭದ್ರತೆ ನೀಡುವುದು. ಬೇಗನೆ ಪ್ರಾರಂಭಿಸಿದರೆ, ನಿಮಗೆ ಹೆಚ್ಚು ಪ್ರಯೋಜನ ದೊರೆಯುವುದು.

ನಿಮಗೆ ಆಸಕ್ತಿಯಿದೆಯೋ? ಪೂರ್ಣ ವಿವರಗಳನ್ನು ವಿಜಯಬ್ಯಾಂಕಿನ ಅತಿ ಸಮೀಪದ ಶಾಖೆಯಿಂದ ತಿಳಿದುಕೊಳ್ಳಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಕಚೇರಿ: ಮಂಗಳೂರು-3.
ಆಡಳಿತ ಕಚೇರಿ: ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
ಛೇರ್ಮನ್: ಎಂ. ಸುಂದರ್‌ರಾಮ್ ಶೆಟ್ಟಿ

Bensons-1318 KAN

ಗೇಹರಾಜ್ಯದಲ್ಲಿ

ಅದು ಅತ್ತೆಯ ಕಾಲ; ಇದು ಸೊಸೆಗಳ ಕಾಲ

'ಮುಗಿಯಿತಲ್ಲ?'

'ಏನು?'

'ಬಯಲಾಟದಲ್ಲಿ ಕಟ್ಟೀಸ, ಸ್ತ್ರೀವೇಶಗಳು ಮುಗಿದು ಇದೀಗ ಒಡ್ಡೋಲಗದ ಚೆಂಡೆ ಕೇಳತೊಡಗಿದೆ.'

'ಅಂದ್ರೆ, ಏಂಥದು? ಬಯಲಾಟವೆಲ್ಲಿ? ಯಾವ ಮೇಳ, ಪ್ರಸಂಗ ಯಾವುದು?'

'ಬಯಲಾಟ ಇಡಿಯ ದೇಶದಲ್ಲಿ; ಮೇಳ ಯಾವಯಾವುದೋ ನೂರು; ಮತ್ತೆ ಪಸ್ರಂಗ....'

'ಸಾಕು ಬಿಡೀಂದ್ರೆ.... ನೀವು ಚೆಂಡೆ ಕೇಳಿಸ್ತಿದೆ ಅಂದಾಗ ನಾನು ಏನೇನೋ ಆಸೆ ಕಟ್ಕೊಂಡೆ. ಅದೆಲ್ಲ ಗಗನ ಕುಸುಮವಾಯ್ತು.'

'ಅಲ್ಲವೆ, ಈ ಬಾರಿಯ ಚುನಾವಣೆಗಳನ್ನು ನಿಜವಾಗ್ಲೂ ಬಯಲಾಟ ಅಂತಲೇ ಕರೆಯಬೇಕು.'

'ಯಾಕೆ?'

'ಯಾಕೆ ಅಂತಂದ್ರೆ, ನಮ್ಮ ಜಿಲ್ಲೆಯಲ್ಲೇ ನೋಡು, ಇರೋದು ಎರಡು ಪಾರ್ಲಿಮೆಂಟರಿ ಕ್ಷೇತ್ರಗಳು....'

'ನಮ್ಮ ಜಿಲ್ಲೆಗಲ್ಲಾರಿ, ಕೊಡಗನ್ನೂ ಸೇರಿಕೊಂಡು....'

'ಅದೂ ಸರಿಯೇ. ಇವುಗಳಿಗೆ ಉಮೇದ್ವಾರರು ಇಪ್ಪತ್ತು!'

'ಅಲ್ಲಾರಿ, ತುಮುಕೂರಲ್ಲೋ ಎಲ್ಲೋ ಒಂದು ಸ್ಥಾನಕ್ಕೆ ಇಪ್ಪತ್ತೈದು ನಾಮಪತ್ರ ಬಂದಿದೆಯಂತೆ. ಅದನ್ನು ನೋಡುವಾಗ ನಮ್ಮಲ್ಲೇ ಕಡಿಮೆ ಅನ್ನಿಸ್ತದೆ.'

'ಒಂದು ಪೀಯೊನ್ ಕೆಲಸ ಖಾಲಿಯಿದೆ ಅಂತ ನ್ಯೂಸ್‌ಪೇಪರಲ್ಲಿ ಅಡ್‌ವರ್ಟೈಸ್ ಆದೊಡನೆಯೇ ನೂರು ಅಪ್ಲಿಕೇಶನ್‌ಗಳು ಬರೋ ಕಾಲ ಇದು. ಎಂ. ಪಿ. ಹುದ್ದೇನೂ ಅದೇ ರೀತಿಗೆ ತಿರುಗುತ್ತಿರುವಂತಾಯ್ತು.'

'ಮತ್ತೂ ಒಂದು ನೋಡಿ.'

'ಏನು?'

'ಐವತ್ತು ರೂಪಾಯಿಯ ಕೆಲಸಕ್ಕಾದ್ರೂ ಐದನೆ ಇಯತ್ತೆ ಕಲಿಲೇ ಬೇಕೂಂತ ಇದೆ. ಆದ್ರೆ, ಚುನಾವಣೆಗೆ ನಿಲ್ಲಬೇಕಾದ್ರೆ ಕೋಣನ ಹಾಗೆ ನ್ಯಾಯವಾಗಿ ಮತದಾರರ ಯಾದಿಯಲ್ಲಿ ಹೆಸರೊಂದಿದ್ರೆ ಸಾಕು.'

'ನೋಡು, ಇಲ್ಲೂ ತಮಾಷೆ.'

'ಏನು?'

'ಹೆಚ್. ವಿ. ಕಾಮತ್ ಇದ್ದಾರಲ್ಲ, ಅವರ ಹೆಸ್ರೇ ಮತದಾರರ ಯಾದಿಯಲ್ಲಿಲ್ಲವಂತೆ....'

'ಅವ್ರು ಹುಂಡಿ ಕಾಮತರು?'

'ಹೌದು....'

"ಅವ್ರು ಎಂಪಿ ಆಗಿ ಇದ್ರಲ್ಲಾ?"

"ಅದೆಲ್ಲ ನಿಜ. ಆದರೆ, ಈ ಬಾರಿ ಅವರು ಇಲ್ಲ ಅಂತ್ಲೇ ಲೆಕ್ಕ."

"ಅಲ್ಲಾರಿ, ಇಂತಹ ದೊಡ್ಡ ದೊಡ್ಡ ಮನುಷ್ಯರಿಗೇ ಮತದಾನ ಮಾಡುವ ಹಕ್ಕು ಇಲ್ಲದಿರುವಾಗ...."

"ಶ್ರೀ ಸಾಮಾನ್ಯರಿಗೆಲ್ಲ ಇದ್ದೇ ಇರುತ್ತೆ. ೧೬ ವರ್ಷದ ಹೈದನೂ ೨೧ ವರ್ಷದವನಾಗುವುದುಂಟು."

'ಅದಕ್ಕೇನೂ ಮಾಡೋದು? ನೀರಿದ್ದಲ್ಲಿ ಕೆಸರು ಉಂಟೇ ಉಂಟು.'

"ಅದು ಸರೀನ್ನು, ಪ್ರತಿಭೆಯನ್ನು ರಾಜ್ಯಕೀಯದಿಂದ ಹೊರಗಿಡಬೇಕಾದರೆ, ಮತದಾರರ ಯಾದಿಯಲ್ಲಿ ಅವರ ಹೆಸರು ಇರದಂತೆ ಮಾಡಿದರೆ ಸರಿ."

"ಅಲ್ರಿ, ಮತ್ತೆ ನೋಂದಾಯಿಸಲು ಅವಕಾಶ ಕೊಡುತ್ತಾರಲ್ಲ?"

"ಕೊಡ್ತಾರೆ....ಆದ್ರೆ ನೋಡು ಮತದಾರರ ಯಾದಿಯನ್ನು ಕಾಣಲು ಹೋಗುವುದು, ಅದರಲ್ಲಿ ತನ್ನ ಹೆಸರು ಇದೆಯೋ ಇಲ್ಲವೋ ಎಂದು ಪರಿಶೀಲಿಸುವುದು, ಒಂದು ವೇಳೆ ಇಲ್ಲವೆಂದಾದಲ್ಲಿ ಸೇರಿಸಲು ಸೂಕ್ತ ಕ್ರಮ ಕೈಕೊಳ್ಳುವುದು ಪೌರರ ಕರ್ತವ್ಯವೆಂಬುದನ್ನು ಎಷ್ಟು ಜನ ತಿಳಿದಿದ್ದಾರೆ?'

'ಅದೀಗ ಸರಿ. ಮತದಾರರಲ್ಲೇ ಮತ ಚಲಾಯಿಸಲು ಉತ್ಸಾಹ ಕುಂದಿರುವಾಗ, ಉಳಿದವರಿಗೆ ತಮ್ಮ ಕರ್ತವ್ಯಗಳ ಬಗ್ಗೆ ಚಿಂತೆಯಿಲ್ಲಿಯದು?'

'ಅಂತೂ ನಾಮಪತ್ರಗಳ ಜಡಿಮಳೆ ನಮ್ಮ ರಾಜ್ಯದಲ್ಲೂ, ದೇಶದಲ್ಲೂ....'

'ರಾಜ್ಯಕೀಯ ಸ್ಥಾನಮಾನಗಳು ಕಾಮಧೇನುವಿಗೂ ಮಿಗಿಲಾಗಿರುವ ಪರಿಸ್ಥಿತಿಗಳು ಬದಲಾಗುವವರೆಗೆ ಇದು ಹೀಗೇ ನಡೆಯುತ್ತದೆ....'

'ಪಾಪ, ಅವರಿಗಿದು ಲಾಟರಿ ಎಂದು ಗೊತ್ತಿಲ್ಲ.'

'ಇದು ಲಾಟರಿ ಹೇಗಾಗುತ್ತೆ?'

"ಯಾಕೆ? ಭಾಗ್ಯಪರೀಕ್ಷೆ ತಾನೆ?"

"ನೋಡಿ, ಒಂದು ರೂಪಾಯಿ ಕೊಟ್ಟು ಲಾಟರಿ ಕೊಂಡರೆ, ಲಕ್ಷಾಧೀಶನಾಗುವ ಭಾಗ್ಯ ಅವನದಾಗ ಬಹುದು. ಆದರೆ, ಚುನಾವಣೆಯಲ್ಲಿ ಅಂತಹ ಭಾಗ್ಯ ಕಡಿಮೆ."

'ಏಕೆ?'

"ಲಾಟರಿಯಲ್ಲಿ ಸದ್ಯಕ್ಕೆ ಲಂಚ-ರುಷುವತ್ತು—ವಶೀಲಿ—ದಯೆ—ದಾಕ್ಷಿಣ್ಯ ಇತ್ಯಾದಿಗಳು ತಲೆ ಹಾಕಿಲ್ಲ. ಆದರೆ, ರಾಜಕೀಯದಲ್ಲಿ ಆರಂಭದಿಂದಲೇ ಇದು ತೊಡಗಿದ ಮೇಲೆ ಮೇಲೆ ಹೋದಂತೆ ದೈತ್ಯಾಕಾರ ತಳೆಯುತ್ತದೆ.'

"ಅದು ಸರೀನ್ನು, ಮೈಸೂರಿನ ಒಕ್ಕಲಿಗರನ್ನು ಒಳಗು ಮಾಡಲು ಶ್ರೀಮತಿ ಗಾಂಧಿ ಕೆಂಗಲ್ಲರನ್ನು ಮಂತ್ರಿ ಮಾಡಿದರಂತೆ.'

"ಹ್ಞೂಂ....ಹಾಗೆಯೇ ಎಲ್ಲಾನೂ?"

"ಏನಿದ್ರೂ ಸದ್ಯದ ಚುನಾವಣೆಗಳು ಭಾರೀ ಸ್ವಾರಸ್ಯ ಇವೆ."

"ಯಾಕೆ ಹಾಗಂತೀರಿ?"

'ನೋಡು ಮಂಗಳೂರಿನಿಂದ ಮಾಜಿ ಸಚಿವ, ಮಾಜಿ ಎಂ. ಪಿ. ಶ್ರೀ ಪೂಣಚ್ಚರು ಮರು ಆಯ್ಕೆಯನ್ನು ಬಯಸಿದ್ದಾರೆ. ಇವರದ್ದು ಪಕ್ಷ ಸಿಂಡಿಕೇಟು.'

"ಅಂದರೆ, ಸಂಯುಕ್ತರಂಗದ ಅಭ್ಯರ್ಥಿ ಅಂದ ಹಾಗಾಯ್ತು."

"ಹ್ಞೂಂ....ಅವರನ್ನು ಮೊನ್ನೆ ಮೊನ್ನೆ ಇಂಡಿಕೇಟ್ ಸೇರಿದ ಅದುವರೆಗೆ ಸಿಂಡಿಕೇಟಿನಲ್ಲಿದ್ದ ಮತ್ತೊಬ್ಬ ಮಾಜಿ ಶ್ರೀ ಕೆ. ಕೆ. ಶೆಟ್ಟರು ಎದುರಿಸುತ್ತಾರೆ.'

"ಅಲ್ಲಾರಿ, ಹೋದ ಚುನಾವಣೆಯಲ್ಲಿ ಪೂಣಚ್ಚರ ಪರ ದುಡಿದವರಲ್ಲ ಇವರು?"

'ಹ್ಞೂಂ....ಆದರೆ, ಅದು ಆಗ; ಇದು ಈಗ....'

"ಮತ್ತೆ ಉಡುಪಿಯಲ್ಲಿ?"

"ಇಲ್ಲೂ ಹಾಗೇ ಶ್ರೀ ಲೋಬೋ ಪ್ರಭುಗಳು ಸ್ವತಂತ್ರ ಪಕ್ಷದಿಂದ ನಿಂತು ಮರು ಆಯ್ಕೆ ಬಯಸಿದ್ದಾರೆ. ಶ್ರೀ ರಂಗನಾಥ ಶೆಣೈ ಅವರು ಇಂಡಿಕೇಟ್ ಅಭ್ಯರ್ಥಿ."

"ಅಲ್ಲರೀ ಶ್ರೀ ಕೊಳ್ಕೆಬೈಲರೂ ನಿಂತಿದ್ದಾರೆಂದು ನೆರೆಮನೆ ಪಾಪು ಹೇಳ್ತಿದ್ದ."

"ಶ್ರೀ ಕೊಳ್ಕೆಬೈಲರು ಸಿಂಡಿಕೇಟಿನ ಪ್ರಧಾನಕಾರ್ಯದರ್ಶಿಯಾಗಿದ್ದರು. ಕಳೆದ ಸಲ ಶ್ರೀ ಲೋಬೋಪ್ರಭುಗಳೆದುರು ನಿಂತು ಸೋತವರು. ಈ ಬಾರಿ ಅವರಿಗೆ ಪರವಾಗಿ ಕೆಲಸ ಮಾಡಲಾಗದೆಂದು ಹೇಳಿ, ಸಿಂಡಿಕೇಟಿನಿಂದಲೇ ನಾಮಪತ್ರ ಸಲ್ಲಿಸಿದರು. ಆದರೆ, ಚತುರ್‌ಪಕ್ಷಗಳ ಹೊಂದಾಣಿಕೆಯಂತೆ ಅವರು ನಾಮಪತ್ರ ಹಿಂತೆಗೆದುಕೊಳ್ಳಬೇಕಾದುದು ಅನಿವಾರ್ಯವಾಯ್ತು...."

'ಆದರೆ....'

"ಅವರದಕ್ಕೆ ಸಿದ್ಧರಿರದೆ ಸಿಂಡಿಕೇಟಿಗೆ ರಾಜೀನಾಮೆಯಿತ್ತು ಪಕ್ಷೇತರರಾಗಿ ಸ್ಪರ್ಧಿಸಲು ನಿಶ್ಚಯಿಸಿದ್ದಾರೆ...."

'ಹಾಗೆ....ಅಲ್ಲಾರಿ, ಕಳೆದ ಬಾರಿ ಶ್ರೀ ಕೊಳ್ಕೆಬೈಲರಿಗೇ ಓಟುಕೊಡಿ ಎಂದು ಕೇಳಿದವರಲ್ಲಿ ಶ್ರೀ ಶೆಣೈ ಕೂಡ ಒಬ್ಬರಲ್ಲ?'

'ಅದು ಅತ್ತೆಯ ಕಾಲ; ಇದು ಸೊಸೆಗಳ ಕಾಲ.'

'ಮತ್ತೆ ಯಾರು ಯಾರು ಇದ್ದಾರೆ?'

'ಇದ್ದಾರೆ ಪಕ್ಷೇತರರಾಗಿ ಕೆಲವರು. ಆದರೆ, ಪೂಣಚ್ಚ—ಶೆಟ್ಟಿ ಇಬ್ಬರೂ ಒಂದಾಗಿದ್ದರು;ಈಗ ಪರಸ್ಪರರನ್ನು ಎದುರಿಸುತ್ತಿದ್ದಾರೆ. ಹಾಗೇ ಉಡುಪಿಯಲ್ಲಿ.

'ಇಲ್ಲಿ ಕೊಳ್ಕೆಬೈಲರು ಪಕ್ಷೇತರರಾಗಿದ್ದರೂ ಪಕ್ಷಕ್ಕಿಂತ ಹೆಚ್ಚಿನ ಬೆಲೆಹೊತ್ತವರು.'

"ಅದು ಹೌದೂನ್ನು. ಅಂತೂ ಚುನಾವಣೆಗಳ ಅಂಕದ ಸರದೆ ಸರಿಯಿತು. ನಟರು ತಮ್ಮ ತಮ್ಮ ಅಭಿನಯಕ್ಕೆ ತೊಡ

(ಒಂಬತ್ತನೇ ಪುಟ ನೋಡಿ)

ಮೊದಲ ಹೆಜ್ಜೆ

ಸೇವಿಂಗ್ಸ್ ಖಾತೆಯನ್ನು ತೆರೆಯಲು ಸಿಂಡಿಕೇಟ್ ಬ್ಯಾಂಕಿನ ಹೊಸ್ತಿಲಲ್ಲಿಡುವ ನಿಮ್ಮ ಮೊದಲ ಹೆಜ್ಜೆ ನಿಮ್ಮ ಬದುಕಿನ ನವ ಮನ್ವಂತರಕ್ಕೆ ಅಡಿಯನ್ನಿರಿಸಿದಂತೆ.

ಈ ಹೆಜ್ಜೆ ನಿಮ್ಮ ಜೀವನದಲ್ಲಿ ಮಹತ್ತರವಾಗಬಲ್ಲುದು. ಅದು ನಿಮ್ಮ ಭವಿಷ್ಯದ ಬಾಳಿಗೆ ಹೊಸ ಅವಕಾಶಗಳನ್ನು ಒದಗಿಸುವುದರೊಂದಿಗೆ ನಿಮ್ಮ ಆರ್ಥಿಕ ಯಶಸ್ಸು, ಸಾಮಾಜಿಕ ಕ್ಷೇಮ, ಮತ್ತು ಕುಟುಂಬದ ಭದ್ರತೆಗೆ ಸುಗಮ ಮಾರ್ಗವನ್ನು ತೋರಿಸಬಲ್ಲುದು.

ಎಲ್ಲಾ ವರ್ಗದ ಜನರ ಅನುಕೂಲತೆಗೆ ಹೊಂದುವ ವಿವಿಧ ಉಳಿತಾಯ ಯೋಜನೆಗಳನ್ನು ಸಿಂಡಿಕೇಟ್ ಬ್ಯಾಂಕು ರೂಪಿಸಿದೆ.

ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು ಉಳಿತಾಯ ಖಾತೆಯನ್ನು ತೆರೆದು ನಿಮ್ಮ ಬದುಕಿಗೆ ಸುರಕ್ಷಿತ ಆಸರೆಯನ್ನು ನೀಡಿರಿ.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ: ಮಣಿಪಾಲ

ಶಾಖೆಗಳು: 460ಕ್ಕೂ ಮಿಕ್ಕಿವೆ

ಕೆ. ಕೆ. ಪೈ ಕಸ್ಟೋಡಿಯನ್

ಕರ್ನಾಟಕದ ಕಣಜ-ಬಳ್ಳಾರಿ

ಬಳ್ಳಾರಿಯ ಇತಿಹಾಸ ಶಿಲಾಯುಗದಿಂದ ಮೊದಲ್ಗೊಂಡು, ಚಂದ್ರಗುಪ್ತ, ಅಶೋಕರ ಕಾಲವನ್ನು ಹಾದು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ವಿಶ್ವವಿಖ್ಯಾತವಾಯಿತು. ಈ ಜಿಲ್ಲೆಯಲ್ಲಿ ದೊರೆತ ಅನೇಕ ಶಿಲಾಶಾಸನಗಳು, ಗುಡಿಗೋಪುರಗಳು, ಶಿಲ್ಪಕಲೆಯ ಅವಶೇಷಗಳು ಬಳ್ಳಾರಿಯ ಇತಿಹಾಸವನ್ನು ಪ್ರತ್ಯಕ್ಷವಾಗಿ ತೋರಿಸಿಕೊಡುತ್ತಿವೆ. ಇಲ್ಲಿ ದೊರೆತ ಶಿಲಾಶಾಸನಗಳಲ್ಲಿ "ಕನ್ನಡದ ಗಂಡುಗಲಿಗಳ ಬೀಡು"—ಇತ್ಯಾದಿಯಾಗಿ ಕರ್ನಾಟಕ ರತ್ನಸಿಂಹಾಸನಾಧೀಶ್ವರರಾದ ವಿಜಯನಗರದ ಅರಸರ ಪ್ರತಾಪಗಳ ಬಣ್ಣನೆ ಮನಮುಟ್ಟುವಂತಿವೆ. ವಿಜಯನಗರದ ಪತನ ಬಳ್ಳಾರಿಯ ಪತನ ಎಂದರೆ ಅತಿಶಯೋಕ್ತಿಯಲ್ಲ. ಬಳಿಕ ಮೈಸೂರಿನ ಹೈದರಾಲಿ, ಟಿಪ್ಪು ಸುಲ್ತಾನರ ವಶಕ್ಕೆ ಬಂದು ಕೊನೆಗೆ ಬ್ರಿಟಿಷರ ವಶದಲ್ಲಿ ಮದರಾಸು ಪ್ರಾಂತದ ಒಂದು ಜಿಲ್ಲೆಯಾಗಿತ್ತು ಬಳ್ಳಾರಿ. ಭಾರತವು ಸ್ವತಂತ್ರವಾದಾಗ ವಿಶಾಲ ಕರ್ನಾಟಕಕ್ಕೆ ನಾಂದಿಯಾಗಿ ಬಳ್ಳಾರಿ ಜಿಲ್ಲೆ ೧೯೫೩ರಲ್ಲೆ ಮೈಸೂರು ರಾಜ್ಯದಲ್ಲಿ ಸೇರಿಸಿಕೊಂಡಿತು.

ಬಳ್ಳಾರಿಯ ಜನತೆಯಲ್ಲಿ ವಿಜಯನಗರ ಸಾಮ್ರಾಜ್ಯದ ಮಹಾವೈಭವದ ಗಾಂಭೀರ್ಯಗಳು ಪ್ರತಿಬಿಂಬಿತವಾಗಿವೆ. ಕರ್ನಾಟಕದ ಉತ್ತರ ದಕ್ಷಿಣ ಭಾಗಗಳ ಸಂಗಮವೆನಿಸಿದ ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡಿಗರ ಅಭಿಮಾನ ಎದ್ದು ಕಾಣುತ್ತಿದೆ. ಕನ್ನಡ ಸಾಹಿತ್ಯ ಸಂಸ್ಕೃತಿಗೆ ಕಂಠಾಭರಣಗಳಂತ ಹಂಪೆಯ ಹರಿಹರ, ಅವನ ಸೋದರಳಿಯ ಉಭಯಕವಿ ಹಂಪೆಯ ರಾಘವಾಂಕ, ಕನ್ನಡ ಸಾಹಿತ್ಯದಲ್ಲಿ ನವಯುಗವನ್ನೇ ರಗಳೆ ಷಟ್ಪದಿಗಳ ಮೂಲಕ ಸ್ಥಾಪಿಸಿದ್ದಾರೆ. ಬಳ್ಳಾರಿ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯದಿಂದ ಕಪಿಸಾಮ್ರಾಜ್ಯದ ಕೀರ್ತಿ ದುಂದುಭಿಯೂ ಮೊಳಗಿತ್ತು.

ಬಳ್ಳಾರಿ ಜಿಲ್ಲೆಯಲ್ಲಿ ನೋಡಬೇಕಾದ ಅನೇಕ ಸ್ಥಳಗಳಿವೆ. ಎಲ್ಲಕ್ಕಿಂತಲೂ ವಿಶ್ವವಿಖ್ಯಾತವಾದ ವಿಜಯನಗರ ಅಥವಾ ಹಂಪಾಕ್ಷೇತ್ರ. ಇಲ್ಲಿ ಅಳಿದುಳಿದ ಗುಡಿಗೋಪುರಗಳು ಮೂರ್ತಿಗಳು ಎಂತಹ ಕಲ್ಲೆದೆಯನ್ನೂ ಕರಗಿಸದೆ ಇರಲಾರವು. ಇನ್ನು ಅಚ್ಚಳಿಯದೆ ನೆಲೆನಿಂತ ಗಗನಚುಂಬಿತವಾದ ವಿರೂಪಾಕ್ಷ ದೇವಾಲಯದ ಗೋಪುರ ಚಿತ್ತಾಕರ್ಷಕವಾಗಿದೆ. ಇಲ್ಲಿ ಪ್ರತಿವರ್ಷ ನಡೆಯುವ ಜಾತ್ರೆಗೆ ಸಾವಿರಾರು ಜನರು ಬಂದು ನೆರೆಯುತ್ತಾರೆ. ತುಂಗವೂ ಭದ್ರವೂ ಆದ ತುಂಗಭದ್ರೆಯ ತೀರದಲ್ಲಿ ಸುಮಾರು 62ಮೈಲಿ ವಿಸ್ತಾರವಾಗಿದ್ದ ವಿಜಯನಗರ ಒಂದು ಕಾಲದಲ್ಲಿ ಜಗತ್ತಿನ ಕಣ್ಣನ್ನು ಸೂರೆಗೊಂಡಿತ್ತು. ಇಲ್ಲಿ ಅಂಗಡಿ ಬೀದಿಗಳಲ್ಲಿ ಮುತ್ತು ರತ್ನಗಳನ್ನು ರಾಶಿ ಹಾಕಿ ಮಾರಾಟ ಮಾಡುತ್ತಿದ್ದ ಕಾಲವಿತ್ತು.

ವಿಜಯನಗರದಲ್ಲಿ ಇಂದು ವಿಜಯವಿಠಲ ದೇವಾಲಯ, ಅಚ್ಯುತರಾಯನ ದೇವಾಲಯ, ಗಾಣಗಿತ್ತಿ ದೇವಾಲಯ, ಮಹಾನವಮಿ ದಿಬ್ಬ, ಕಮಲಮಹಾಲ್, ಗಜಾಲಯ ಇವೆಲ್ಲ ವಿಜಯನಗರ ಸಾಮ್ರಾಜ್ಯದ ಗತ ವೈಭವಕ್ಕೆ ಸಾಕ್ಷಿಗಳಾಗಿವೆ. ಇಷ್ಟೇ ಅಲ್ಲ ಭಿನ್ನ ಭಿನ್ನವಾಗಿದ್ದರೂ ಉಗ್ರನರಸಿಂಹ, ಗಣಪತಿ ವಿಗ್ರಹಗಳು, ಜಗತ್ತಿನಲ್ಲೇ ಅಪ್ರತಿಮವೆನಿಸಿದ ಒಂದೇ ಕಲ್ಲಿನಲ್ಲಿ ಕೆತ್ತಿ ರಚಿಸಿದ ಶಿಲಾರಥ ಇವೆಲ್ಲ ಇನ್ನೂ ಹೃದಯಂಗಮವಾಗಿವೆ. ಹೀಗೆಯೇ ಸೊಂಡೂರಿನ ಕುಮಾರಸ್ವಾಮಿ ದೇವಾಲಯ ಕೊಟ್ಟೂರು ಬಸವೇಶ್ವರ ದೇವಾಲಯ ಉಜ್ಜಯನಿಯ ಮರುಳುಸಿದ್ಧ ದೇವಾಲಯಗಳೂ ನೋಡತಕ್ಕವು.

ಪುರಾಣ ಕಾಲದಲ್ಲಿ ಚಿನ್ನದ ಮಳೆ ಸುರಿದು ಇಂದೀಗ ತುಂಗಭದ್ರೆಯ ಜಲಸಂಪತ್ತಿನಿಂದ ಫಲವತ್ತಾದ ಪ್ರದೇಶವಿರುವುದು ಬಳ್ಳಾರಿ ಜಿಲ್ಲೆಯಲ್ಲಿ. ನೂರಹತ್ತುಕೋಟಿ ರೂಪಾಯಿವೆಚ್ಚದತುಂಗಭದ್ರಾ ಅಣೆಕಟ್ಟು ಬಳ್ಳಾರಿಜಿಲ್ಲೆಗೆ ಮಾತ್ರವಲ್ಲ, ಮೈಸೂರು ರಾಜ್ಯದ ರಾಯಚೂರು, ಆಂಧ್ರಪ್ರದೇಶದ ಕರ್ನೂಲ್, ಅನಂತಪುರ ಜಿಲ್ಲೆಗಳಿಗೆಂದು ಸುಮಾರು 12 ಲಕ್ಷ ಎಕರೆ ಜಮೀನಿಗೆ ನೀರೊದಗಿಸುವುದು. ಈ ಅಣೆಕಟ್ಟು ನೀರಾವರಿಯೊಂದಿಗೆ ಸುಮಾರು ಒಂದುಲಕ್ಷದ ತೊಂಭತ್ತು ಸಾವಿರ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಬಲ್ಲದು.

ಬಳ್ಳಾರಿ ಜಿಲ್ಲೆಯ ಇನ್ನೊಂದು ನೀರಾವರಿ ಯೋಜನೆಯೆಂದರೆ ಹಗರಿಬೊಮ್ಮನಹಳ್ಳಿಯ ಯೋಜನೆ. ಇದು ಸುಮಾರು ಏಳುಸಾವಿರ ಮುನ್ನೂರಐವತ್ತು ಎಕರೆಗಳಿಗೆ ನೀರೊದಗಿಸಬಲ್ಲುದು.

ಹೀಗೆ ಬಳ್ಳಾರಿ ಜಿಲ್ಲೆಯ ಬೇಸಾಯಕ್ಕೆ ಯೋಗ್ಯವಾದ ಭೂಮಿಯೆಲ್ಲ ಅಭಿವೃದ್ಧಿಯಾದರೆ ಆಗ ಅದು ಇಡೀ ಕರ್ನಾಟಕಕ್ಕೇ ಆಹಾರವನ್ನೊದಗಿಸಬಲ್ಲ "ಕರ್ನಾಟಕದ ಕಣಜ"ವಾಗಬಹುದೆಂದರೆ ಅತಿಶಯೋಕ್ತಿಯಲ್ಲ.

ಬಳ್ಳಾರಿ ಜಿಲ್ಲೆ 3854 ಚದುರ ಮೈಲಿ ವಿಸ್ತೀರ್ಣವಾಗಿದೆ. ಇಲ್ಲಿ 585 ಹಳ್ಳಿಗಳಿವೆ. ಇಲ್ಲಿಯ ಭೂಮಿ ಕಪ್ಪು ಕೆಂಪು ಹಾಗು ಮಿಶ್ರ ಮಣ್ಣಿನಿಂದ ಕೂಡಿದ್ದು ಬೇರೆ ಬೇರೆ ತರಹದ ಪೈರುಗಳನ್ನು ಬೆಳೆಸಲು ಅನುಕೂಲವಾಗಿದೆ. ಇಲ್ಲಿ ಭತ್ತ, ರಾಗಿ, ಜೋಳ, ಸಜ್ಜೆ, ಗೋಧಿ, ಕಬ್ಬು, ಹತ್ತಿ, ನೆಲಗಡಲೆ, ಹರಳು, ಎಳ್ಳು, ತೊಗರಿ, ಅಲಸಂಡೆ, ಹೆಸರು, ಹುರುಳಿ, ನೀರುಳ್ಳಿ, ಸಾಕಷ್ಟು ಬೆಳೆಯುತ್ತವೆ. ಹೀಗೆಯೇ ಹುಣಸೆ, ಮಾವು ಬಳ್ಳಾರಿ ಜಿಲ್ಲೆಯಲ್ಲಿ ಚೆನ್ನಾಗಿ ಬೆಳೆಯುತ್ತವೆ. ನಾನಾ ಬಗೆಯ ಖನಿಜ ಸಂಪತ್ತಿಗೆ ಬಳ್ಳಾರಿ ಜಿಲ್ಲೆ ಪ್ರಖ್ಯಾತವಾಗಿದೆ. ಸೊಂಡೂರಬೆಟ್ಟಗಳಲ್ಲಿ ಕಬ್ಬಿಣ, ಮ್ಯಾಂಗನೀಸ್, ರೆಡ್ಆಕ್ಸೈಡ್, ಕಾಂತಶಿಲೆ, ಬಂಗಾರ, ಸುಣ್ಣದಕಲ್ಲು, ಬಳಪದ ಕಲ್ಲು ಇತ್ಯಾದಿಗಳು ದೊರೆಯುತ್ತವೆ.

ಬಳ್ಳಾರಿ, ಶಿರಗುಪ್ಪ, ಸೊಂಡೂರು, ಹೊಸಪೇಟೆ, ಹಡಗಲಿ, ಮಲ್ಲಾಪುರ, ಹರಸನಹಳ್ಳಿ, ಕೊಡಲಗಿ ಎಂದು ಎಂಟು ತಾಲೂಕುಗಳಿವೆ. ಬಳ್ಳಾರಿ, ಹೊಸಪೇಟೆಗಳಲ್ಲಿ ನಗರಸಭೆಗಳಿವೆ. ಇತರ ಹತ್ತು ಪಟ್ಟಣ ಪಂಚಾಯಿತಿಗಳು 317 ಗ್ರಾಮ ಪಂಚಾಯಿತಿಗಳು ಈ ಜಿಲ್ಲೆಯಲ್ಲಿವೆ.

ಈ ಜಿಲ್ಲೆಯ ಉತ್ತರಕ್ಕೆ ರಾಯಚೂರುಜಿಲ್ಲೆ, ದಕ್ಷಿಣಕ್ಕೆ ಚಿತ್ರದುರ್ಗಜಿಲ್ಲೆ, ಪಶ್ಚಿಮಕ್ಕೆ ಧಾರವಾಡಜಿಲ್ಲೆ ಪೂರ್ವಕ್ಕೆ ಆಂಧ್ರಪ್ರದೇಶದ ಕರ್ನೂಲ್, ಅನಂತಪುರ ಜಿಲ್ಲೆಗಳಿವೆ.

ಕೇಂದ್ರ ಶಿಕ್ಷಣ ಸಚಿವಶಾಖೆ ಇಡೀ ದೇಶದಲ್ಲಿ ಶಿಕ್ಷಣ ಅಭಿವೃದ್ಧಿ ಯೋಜನೆಗಳ ಆಯ್ಕೆ ಮಾಡಿರುವ 4 ಜಿಲ್ಲೆಗಳ ಪೈಕಿ ಬಳ್ಳಾರಿ ಜಿಲ್ಲೆ ಒಂದಾಗಿದೆ. ಹೀಗೆ ಒಂದು ಜಿಲ್ಲೆ ಪಂಜಾಬಿನಲ್ಲಿ, ಇನ್ನೊಂದು ಜಿಲ್ಲೆ ಬಿಹಾರದಲ್ಲಿ, ಮತ್ತೊಂದು ಜಿಲ್ಲೆ ಮಹಾರಾಷ್ಟ್ರದಲ್ಲಿ ಈ ಬಗ್ಗೆ ಆಯ್ಕೆಯಾಗಿ ಈ ಯೋಜನೆಯಂತೆ ವೃತ್ತಿ ಆಧಾರಿತವಾದ ಶಿಕ್ಷಣವನ್ನು ಸಾರ್ಥಕ ಮಾಡಲಾಗುವುದು. ಅಲ್ಲದೆ ಬಳ್ಳಾರಿ ಜಿಲ್ಲೆಯ ತೋರಣಗಲ್ಲಿನಲ್ಲಿ ಹೊಸ ಉಕ್ಕಿನ ಕಾರ್ಖಾನೆ ಸದ್ಯದಲ್ಲೇ ಸ್ಥಾಪಿತವಾಗಲಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಐದು ಕಾಲೇಜುಗಳು, 44 ಹೈಸ್ಕೂಲುಗಳು, 3 ತಾಂತ್ರಿಕ ಶಿಕ್ಷಣ ಸಂಸ್ಥೆಗಳೂ ಇವೆ. ಮರಗೆಲಸ, ಲೋಹದ ಕೆಲಸ, ಚಿನ್ನ, ಬೆಳ್ಳಿ ಕೆಲಸ, ಚಾಪೆ ಹೆಣಿಗೆ,ಕೈಮಗ್ಗ ನೇಯ್ಗೆ, ಕಂಬಳಿ ನೇಯ್ಗೆ, ಕುಂಬಾರಿಕೆ, ಇಟ್ಟಿಗೆ ತಯಾರಿಕೆ, ಕಲ್ಲಿನ ಕೆಲಸ ಮೊದಲಾದ ಗ್ರಾಮಕೈಗಾರಿಕೆಗಳು ಈ ಜಿಲ್ಲೆಯಲ್ಲಿವೆ. ವ್ಯವಸಾಯೋತ್ಪನ್ನಗಳಿಂದ ನಡೆಯುವ ಮುಖ್ಯ ಕೈಗಾರಿಕೆಗಳಾದ 2 ಸಕ್ಕರೆ ಕಾರ್ಖಾನೆಗಳು, 43 ಹತ್ತಿಗಿರಣಿಗಳು, 70 ಎಣ್ಣೆಗಿರಣಿಗಳೂ, 6 ಅಕ್ಕಿ ಗಿರಣಿಗಳೂ ಇಲ್ಲಿವೆ.

ಇಲ್ಲಿ ದಿನದಿನ ಏರುತ್ತಿರುವ ಜನಸಂಖ್ಯೆಯನ್ನು ತಡೆಯದಿದ್ದರೆ, ಈ ಯೋಜನೆಗಳೆಲ್ಲ ಸಾಧಿಸಬೇಕಾದಷ್ಟು ಪ್ರಗತಿಯನ್ನು ಸಾಧಿಸಲಾರವು ಎಂಬುದರಲ್ಲಿ ಸಂದೇಹವಿಲ್ಲ. ಆದ ಕಾರಣ ಕುಟುಂಬ ಯೋಜನೆ 1965 – 66ರಿಂದಲೇ ಈ ಜಿಲ್ಲೆಯಲ್ಲಿ ಮುಂದುವರಿಯುತ್ತಿದೆ.

1961ರ ಜನಗಣತಿಯ ಪ್ರಕಾರ ಈ ಜಿಲ್ಲೆಯ ಜನಸಂಖ್ಯೆ 915261. ಇಲ್ಲಿಯ ಜನಸಂಖ್ಯೆ ಬೆಳವಣಿಗೆ ಸಾವಿರಕ್ಕೆ 21ರಂತೆ ಹೆಚ್ಚುತ್ತಲಿದೆ. ಬಳ್ಳಾರಿಜಿಲ್ಲೆಯಲ್ಲಿ ಬಳ್ಳಾರಿ, ಹೊಸಪೇಟೆಗಳನ್ನು ಬಿಟ್ಟು 40 ವಿವಿಧ ವರ್ಗದ ಆಸ್ಪತ್ರೆಗಳಿವೆ. ಬಳ್ಳಾರಿಯಲ್ಲಿ 600 ಹಾಸಿಗೆಗಳುಳ್ಳ ಮೆಡಿಕಲ್ ಕಾಲೇಜ್ ಆಸ್ಪತ್ರೆ, ಹೊಸಪೇಟೆಯಲ್ಲಿ 40 ಹಾಸಿಗೆಗಳುಳ್ಳ ಜನರಲ್ ಆಸ್ಪತ್ರೆ ತುಂಗಭದ್ರಾ ಬೋರ್ಡ್ ಆಸ್ಪತ್ರೆ ಹಾಗು 13 ಪ್ರಾಥಮಿಕ ಆರೋಗ್ಯಕೇಂದ್ರಗಳಿವೆ. ಇವೆಲ್ಲ ಕುಟುಂಬಯೋಜನೆಯ ಬಗ್ಗೆ ಅರ್ಹ ದಂಪತಿಗಳಿಗೆ ಸಲಹೆ ಕೊಡುತ್ತವೆ. ಶಸ್ತ್ರಕ್ರಿಯೆ ಮಾಡುತ್ತಿವೆ. ಹಾಗು ವಂಕಿ ಧಾರಣೆ ಮಾಡುತ್ತಿವೆ; ಇತರ ಗರ್ಭನಿರೋಧಕ ಸಾಧನಗಳನ್ನು ಒದಗಿಸುತ್ತವೆ.

ಜನಸಂಖ್ಯೆಯ ನಿಯಂತ್ರಣಕ್ಕಾಗಿ 1965–66ರಿಂದ ಕುಟುಂಬಯೋಜನೆ ಕಾರ್ಯಕ್ರಮದಂತೆ ಕಳೆದ ಸೆಪ್ಟೆಂಬರ್ ತಿಂಗಳವರೆಗೆ 13610 ಗಂಡಸರಿಗೆ, 2250 ಮಹಿಳೆಯರಿಗೆ ಶಸ್ತ್ರಕ್ರಿಯೆ ನಡೆದಿವೆ. ಸುಮಾರು 9ಸಾವಿರ ಮಹಿಳೆಯರು ವಂಕಿ ಧಾರಣೆ ಮಾಡಿಸಿಕೊಂಡಿದ್ದಾರೆ ಇದುವರೆಗೆ 21958 ನಿರೋಧಗಳನ್ನು ಹಂಚಲಾಗಿದೆ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O. S. No. 272/70.

ಶ್ರೀ ಸೋದೆ ವಾದಿರಾಜ ಮಠ —ವಾದಿಯು,

ಮತ್ತು

ರಾಮಚಂದ್ರಯ್ಯ ಯಾನೆ)
ರಾಮಚಂದ್ರ ರಾವ್) —ಪ್ರತಿವಾದಿ.

ಇವರೊಳಗೆ

ಪ್ರತಿವಾದಿ–ರಾಮಚಂದ್ರಯ್ಯ ಯಾನೆ ರಾಮಚಂದ್ರ ರಾವ್, ಅಧಿಕಾರಿ ಪುಟ್ಟಣ್ಣಯ್ಯನವರ ಮಗ, ಉಡುಪಿ ತಾಲೂಕು ಮಟ್ಟುಗ್ರಾಮ

ವಾದಿಯು ಗೇಣಿ ಬಗ್ಗೆ ನಿಮ್ಮ ಮೇಲೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 2.3.71ಕ್ಕೆ ತನಿಖೆಗೆ ಇಟ್ಟಿದೆ. ಆ ದಿವಸ ಬೆಳಿಗ್ಗೆ 11ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉದಾಸೀನ ಪತ್ತೆ ಚಿತ್ತದೆ ತಂದು ಗೈರು ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲ್ಪಡುವುದು.

(By order of Court)

Sd/ V. G. Kedlaya,
M.A.LL.B.
ವಾದಿಯ ಕಡೆ ಅಡ್ವೋಕೇಟ್

ಉಡುಪಿ, D. 9.2.71.

‘ಗಾಂಧೀಜಿ ಮತ್ತು ನಮ್ಮ ರಾಜಕೀಯ ಜೀವನ’

ಲೇಖಕರು: ಶ್ರೀ ಮುರಲೀಧರ ಉಪಾಧ್ಯ

ಗಾಂಧೀಜಿಯಂತೆ ನಮ್ಮ ರಾಜಕೀಯ ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸಿದವರು, ಪ್ರಭಾವ ಬೀರಿದವರು ಬೇರಾರೂ ಇಲ್ಲ ಎಂದರೆ ಅತ್ಯುಕ್ತಿಯಾಗಲಾರದು. ಅವರದು ವೈವಿಧ್ಯಪೂರ್ಣ ವ್ಯಕ್ತಿತ್ವ, ಈ ಶತಮಾನದ ಬೇರಾವ ವ್ಯಕ್ತಿಯನ್ನೂ ಅವರೊಡನೆ ಹೋಲಿಸುವುದು ಸುಲಭಸಾಧ್ಯವಲ್ಲ. ಭಾರತದಲ್ಲಿ ಅವರ ಭಾಷಣಗಳು, ಅವರ ಬರವಣಿಗೆಗಳು ರಾಷ್ಟ್ರನಿರ್ಮಾಪಕ ಚಟುವಟಿಕೆಗಳ ಒಂದು ಸುಂದರ ವಿಶ್ವಕೋಶದಂತಿವೆ. ವಿಶ್ವವ್ಯಾಪಕತೆಯುಳ್ಳ ಅವರ ಬೋಧನೆಯಲ್ಲಿ ತನ್ನದೇ ಆದ ಸ್ವೋಪಜ್ಞತೆಯಿವೆ. ಅವರ ಸಹವಾಸದಲ್ಲಿ ಯಾರಿಗೂ ಕೃತಕತೆ ಕಾಣಿಸಲಿಲ್ಲ. ಅದಕ್ಕೆ ಬದಲಾಗಿ ಆತ್ಮೀಯತೆ ತೃಪ್ತಿಗಳ ಸಂಗಮಸ್ಥಾನವಾಯಿತು. ಬೋಧಿಸಬೇಕು ಅನಿಸಿದ್ದನ್ನು ಮೊದಲು ತಾನು ಪ್ರಾಯೋಗಿಕವಾಗಿ ಆಚರಣೆಗೆ ತಂದು, ಅನಂತರ ಮಾರ್ಗದರ್ಶನ ಮಾಡಿದುದೇ ಗಾಂಧೀಜಿ, ‘ಗಾಂಧೀಜಿ’ಯಾದುದರ ಒಳಗುಟ್ಟು. ಗಾಂಧೀಜಿ ನಮ್ಮಲ್ಲಿ ಮಾನಸಿಕ ಪರಿವರ್ತನೆಯ ಕ್ರಾಂತಿಯನ್ನೇ ಮಾಡಿದರು. ಜವಹರ್‌ಲಾಲ್ ನೆಹರೂರವರು ಹೇಳಿದಂತೆ, **“He was like a powerful current of fresh air that made us stretch ourselves and take deep breaths like a beam of light that pierced the darkness and removed the scales from our eyes....”** (“ಅವರು ನಮ್ಮನ್ನೆಲ್ಲ ಮೈಮುರಿದೇಳುವಂತೆ ಮಾಡಲು ಬಂದ ಶುದ್ಧ ಪವನ ಪ್ರವಾಹದಂತಿದ್ದರು; ಕತ್ತಲನ್ನು ಹೊಡೆದೋಡಿಸಿ ನಮ್ಮ ಕಣ್ಣುಗಳಿಗೆ ಅಂಟಿಕೊಂಡಿದ್ದ ಪರೆ ಕಳಚಿದ, ದಿವ್ಯಜ್ಯೋತಿಯವರು.”)

ಗಾಂಧೀಜಿ ಬೆಟ್ಟದ ಮೇಲಿನಿಂದ ದೇವಪುತ್ರನಾಗಿ ಇಳಿದು ಬರಲಿಲ್ಲ; ಮಾನವಕೋಟಿಯ ಮಧ್ಯದಿಂದ ಮೇಲೆದ್ದು ಬಂದು ದೇವಮಾನವರಾದರು. ಸುತ್ತಲೂ ವ್ಯಾಪಿಸಿದ್ದ ಅಂಧಕಾರವನ್ನು—ನಪುಂಸಕತನವನ್ನು— ಹೊಡೆದೋಡಿಸಲು ಅವರು ‘ಅಂಜಬೇಡಿರಿ, ಅಳುಕಬೇಡಿರಿ’ ಎಂಬ ನಿರ್ಭೀತ ಘೋಷಣೆಯ ಹಿಲಾಲು ಹೊತ್ತಿಸಿದರು. ಅವರ ರಾಜಕೀಯ ಮಾತಿನಿಂದ ಮಾವಿನಕಾಯಿ ಉದುರಿರುವ ರಾಜಕೀ ಭಾಷಣದ ಬಿರುಗಾಳಿಯಾಗಿರಲಿಲ್ಲ. ಅದಕ್ಕೆ ಬದಲಾಗಿ ಅವರಿಗೆ ಮಾತಿಗಿಂತ ಕೃತಿ ಮುಖ್ಯವಾಗಿತ್ತು, ಕಾಯಕವೇ ಕೈಲಾಸವಾಗಿತ್ತು. ಗಾಂಧೀಜಿ ರಾಜಕಾರಣಿಗಳನ್ನು ಒಂದು ಹೊಚ್ಚ ಹೊಸ ಸಂದೇಶದೊಡನೆ ಹಳ್ಳಿಗಳಿಗೆ ಕಳಿಸಿದರು.

‘ಸತ್ತ ಜನವನೆತ್ತಿದಂಥ ಸಂಜೀವನ ಶಕ್ತಿಯಾದರು ಗಾಂಧೀಜಿ. ನಮ್ಮಂತೆಯೆ ಬಾಳಿ ಕೂಡ, ನಮ್ಮ ಗುರಿಯ ಹಿರಿಯ ಕೋಡನ್ನು ಏರಿನಿಂತು ಅವರು ಮಹಾತ್ಮರಾದರು. ಅವರು ರಾಜಕೀಯದಲ್ಲಿದ್ದೂ ಸರ್ವಬಿಟ್ಟು ಸಂನ್ಯಾಸಿಯಂತಿದ್ದರು. ಸಾಮಾನ್ಯವಾಗಿ ಧಾರ್ಮಿಕ ಗುರುಗಳೊಬ್ಬರಿಗೆ ಮೀಸಲಾದ ಭಕ್ತಿ, ತನ್ಮಯತೆ ಆತ್ಮಾರ್ಪಣೆಗಳನ್ನು ಗಾಂಧೀಜಿ ತನ್ನದಾಗಿಸಿಕೊಂಡರು. ಇದು ಮಾನವಜನಾಂಗದ ಇತಿಹಾಸದಲ್ಲೇ ಒಂದು ಅಪೂರ್ವ ಸಂಗತಿ ಎನ್ನಬಹುದು.

ಗಾಂಧೀಜಿ ಸಂಶೋಧಿಸಿದ ಹೊಸ ಅಸ್ತ್ರವೇ—ಅಹಿಂಸಾತ್ಮಕ ಅಸಹಕಾರ. ರಾಜಕೀಯದಲ್ಲಿ ಈ ಅಸ್ತ್ರವನ್ನು ಉಪಯೋಗಿಸುವುದರಲ್ಲಿ ಅವರೇ ಮೊದಲಿಗರು. ನಮಗೆ ಸ್ವಾತಂತ್ರ್ಯ ಲಭಿಸಿತು ಎಂದು ಹೇಳುವುದು ಇತ್ತೀಚೆಗೆ ವಾಡಿಕೆಯಾಗಿಬಿಟ್ಟಿದೆ. ಆದರೆ ಇತಿಹಾಸದ ತೀರ್ಪು ಬೇರೆಯಾಗಿದೆ. ಕ್ರಾಂತಿಕಾರಿ ರಾಷ್ಟ್ರೀಯತೆಯು ಕೂಡಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನ್ನದೇ ಆದ ಸೇವೆಯನ್ನು ಸಲ್ಲಿಸಿತ್ತು ಎನ್ನುತ್ತದೆ ಇತಿಹಾಸ. ತಾನು ಏನಾದರೂ ಯಶಸ್ಸು ಗಳಿಸಿದ್ದರೆ ಅದು ಹಿಂಸೆ ಮತ್ತು ಅಹಿಂಸೆಗಳ—ಕಲಬೆರಕೆಯಿಂದಲೇ ಲಭಿಸಿದೆಯೆಂದು ಗಾಂಧೀಜಿಯವರೇ ಒಪ್ಪಿಕೊಂಡಿದ್ದಾರೆ. (ಹರಿಜನ— ೨೦-೪-೧೯೪೦) ‘ಇಂದಿನ ನಮ್ಮ ರಾಜಕೀಯದಲ್ಲಿ ಅಹಿಂಸೆಯ ಹೆಸರೇ ಕೇಳಿಬರುತ್ತಿಲ್ಲ. ಅದು ಅರಣ್ಯರೋದನವಾಗಿ ಉಳಿದಿವೆ. ಇದಲ್ಲದೆ ನಾವು ನಮ್ಮ ಗಡಿಗಳನ್ನು ಮೈಯೆಲ್ಲಾ ಕಣ್ಣಾಗಿ ಕಾಯಬೇಕಾಗಿದೆ. ಪ್ರತಿಯೊಂದು ರಾಷ್ಟ್ರವೂ ತನ್ನ ಸುಭದ್ರತೆಗಾಗಿ ರಕ್ಷಣಾಪಡೆಗಳನ್ನು ಅವಲಂಬಿಸಿರಬೇಕೆಂಬುದನ್ನು ನಾವು ಒಪ್ಪಿಕೊಳ್ಳಲೇ ಬೇಕಾಗಿದೆ. ಗಾಂಧೀಜಿಯ ಸಫಲ—ವಿಫಲ ಜೀವನ ದರ್ಶನವನ್ನು ಅದರ ನಗ್ನಸತ್ಯವನ್ನು ಕವಿ ಅಂಬಿಕಾತನಯದತ್ತರು ಸೊಗಸಾಗಿ ಬಣ್ಣಿಸಿದ್ದಾರೆ. “ಹಿಂಸೆ, ಮಹಾತ್ಮರ ಮುಂಚೆಯೇ ಹುಟ್ಟಿತ್ತು. ಅಹಿಂಸೆ ಅವರ ಮುಂಚೆಯೇ ಆರೆಸತ್ತಿತ್ತು, ಅವರು ಊದಿದ ಮಂತ್ರದಿಂದ ಅಹಿಂಸೆಗೆ ಬಹಳಷ್ಟು ತ್ರಾಣ ಬರಲಿಲ್ಲ ಹಿಂಸೆಗಂತೂ ಲಂಗೂಲಗಾಮು ಇರಲಿಲ್ಲ.”

ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸತ್ಯಾಗ್ರಹದ ಸರಿಯಾದ ಪ್ರಯೋಗವಾಗಲಿಲ್ಲವೆಂದು ಗಾಂಧೀಜಿಯವರೇ ಹೇಳಿದ್ದಾರೆ. ಇಂದು ನಮ್ಮೆಲ್ಲರಿಗೂ ಸಂವಿಧಾನ ಬದ್ಧವಾದ ಮೂಲಭೂತ ಹಕ್ಕುಗಳಿರುವಾಗ, ವೈಯುಕ್ತಿಕ ಹಕ್ಕುಗಳಿರುವಾಗ ಸತ್ಯಾಗ್ರಹವನ್ನು ರಾಷ್ಟ್ರೀಯ ಮಟ್ಟದಲ್ಲಿ ಒಂದು ಅಸ್ತ್ರವನ್ನಾಗಿ ಉಪಯೋಗಿಸುವದು ಕಷ್ಟಕರವಾಗುತ್ತದೆ. ಸತ್ಯಾಗ್ರಹದ ಇಂದಿನ ಸ್ಥಿತಿಯನ್ನು ಕಂಡು ಸ್ವರ್ಗವನೇರಿದ ಗಾಂಧಿಮಹಾತ್ಮರು ಕಣ್ಣೀರ್ಗರೆವರು ಎಂದು ಕವಿ ವ್ಯಥಿಸಿದ್ದು ಸತ್ಯವಲ್ಲವೇ? ಹಿಂದೊಮ್ಮೆ ರಾಜಕೀಯ ಅಸ್ತ್ರವೆನಿಸಿದ್ದ “ಉಪವಾಸ” ಮುಷ್ಕರವು ಇಂದು ತನ್ನ ಹೆಸರನ್ನು, ಮಹತ್ವವನ್ನು ಕಳೆದುಕೊಂಡಿವೆ. ಗಾಂಧೀಜಿಯವರ ರಾಜಕೀಯ ಅಸ್ತ್ರಗಳಲ್ಲಿ ಇದೂ ಒಂದಾಗಿತ್ತು ಎಂಬುದನ್ನು ನಾವು ಮರೆಯುವಂತಿಲ್ಲ. ನೈತಿಕ ವಿಷಯಗಳಿಗೆ ಅಗ್ನಿಪರೀಕ್ಷೆಯ ಸಮಯ ಸನ್ನಿಹಿತವಾದಾಗ, ಗಾಂಧೀಜಿ ಈ ಅಸ್ತ್ರಕ್ಕೆ ಶರಣು ಹೋಗುತ್ತಿದ್ದರು. ಆದರೆ, ಇಂದು ಎಷ್ಟು ಅಲ್ಪ ಕಾರಣಗಳಿಗಾಗಿ ಉಪವಾಸ ಮುಷ್ಕರದ ಬೆದರಿಕೆ ಹಾಕುತ್ತಾರೆಂಬುದನ್ನು ನೋಡಿದರೆ “ನಗೆಯು ಬರುತಿದೆ ಎನಗೆ” ಎಂಬ ಕೀರ್ತನೆಯ ನೆನಪಾಗುತ್ತದೆ.

ತನ್ನ ಜೀವನದ ಇನ್ನೆರಡು ಆದರ್ಶ ಧ್ಯೇಯಸಾಧನೆಯಲ್ಲಿಯೂ ಗಾಂಧೀಜಿ ಅನಿವಾರ್ಯವಾಗಿ ಸೋಲಬೇಕಾಯಿತು. ಹಿಂದೂ–ಮುಸ್ಲಿಂ ಏಕತೆ ಹಾಗೂ ಭಾರತದ ರಾಜಕೀಯ ಏಕತೆ ಇವೇ ಆ ಎರಡು ಆದರ್ಶ ಧ್ಯೇಯಗಳು. ಆದರ್ಶದ ಆಟ ವಾಸ್ತವದೆದುರು ಸಾಗಲಿಲ್ಲ.

ಸರ್ವಸ್ವಾಮ್ಯವುಳ್ಳ ಸರಕಾರವೊಂದರ ಪ್ರಬಲ ವಿರೋಧಿಯಾಗಿದ್ದರು ಗಾಂಧೀಜಿ. ಆದರೆ ದಿನೇ ದಿನೇ ತನ್ನ ಚಟುವಟಿಕೆಗಳನ್ನು ಹೆಚ್ಚಿಸುತ್ತಿರುವ ನಮ್ಮ ಸರಕಾರವು ಗಾಂಧೀಜಿಯ ಆದರ್ಶಗಳನ್ನು ಮಣ್ಣುಗೂಡಿಸಿದೆಯೆಂದರೆ ತಪ್ಪಾಗಲಾರದು. ಮದ್ಯಪಾನನಿರೋಧದ ಹೆಸರೆತ್ತಲೂ ಇಂದು ಯಾರಿಗೂ ಎದೆಗಾರಿಕೆಯಿಲ್ಲವೇ ಎನ್ನಿಸುತ್ತದೆ. ಅದಕ್ಕೆ ಬದಲಾಗಿ ನಮ್ಮ ಸರಕಾರಗಳು “ಲಾಟರಿಯಿಂದ ಲಕ್ಷಾಧೀಶರಾಗಿರಿ” ಎಂದು ಘೋಷಿಸುತ್ತ ತನ್ನ ಪ್ರಜೆಗಳನ್ನೆಲ್ಲ ಕನಸುಣಿಗಳನ್ನಾಗಿ ಪರಿವರ್ತಿಸಲು ಹೊರಟಿದೆ.

ಗಾಂಧೀಜಿಯ ಆದರ್ಶ ಆರ್ಥಿಕ ನೀತಿಗಳನ್ನು ತಿರಸ್ಕರಿಸಲಾಗದಿದ್ದರೂ, ಅವರ ರಾಜಕೀಯ ಅಸ್ತ್ರಗಳು ಕೆಲಸಕ್ಕೆ ಬಾರದವು ಎನಿಸಿಕೊಂಡಿದ್ದರೂ, ರಾಷ್ಟ್ರಜೀವನದ ಇತರ ಕೆಲವು ಅಂಗಗಳಲ್ಲಿ ನಾವು ಅವರ ತತ್ವಗಳ ನಿಚ್ಚಳ ಪ್ರಭಾವವನ್ನು ಗುರುತಿಸಬಹುದು. ನಮ್ಮ ಸಂವಿಧಾನದಲ್ಲಿರುವ ರಾಷ್ಟ್ರನಿರ್ದೇಶಕ ತತ್ವಗಳು ಗಾಂಧೀಜಿಯವರ ಪ್ರಭಾವವನ್ನು ಎತ್ತಿ ತೋರಿಸುತ್ತವೆ. ಗಾಂಧೀಜಿ ನಮ್ಮ ಸಾಮಾನ್ಯ ಜನತೆಯಲ್ಲಿ ಮೂಡಿಸಿರುವ ರಾಜಕೀಯದ ಎಚ್ಚರವೂ ಪ್ರಜಾಪ್ರಭುತ್ವದ ಅರ್ಥವನ್ನು ವಿಸ್ತರಿಸುವಲ್ಲಿ ಸಹಾಯವಾಗಿದೆ. ತನ್ನ ದೇಶದ ಜನರು ಅಹಿಂಸೆಯನ್ನು ಜೀವನದ ಅಮೂಲ್ಯ ಅಂಗವೆಂದು ಸ್ವೀಕರಿಸಬೇಕೆಂದು ಗಾಂಧೀಜಿ ಆಶಿಸಿದ್ದರು. ಅದೇ ಅವರ ಮಹದಾಶೆಯಾಗಿತ್ತು. ಭಾರತದಲ್ಲಿ ಅಹಿಂಸಾತ್ಮಕ ಸರಕಾರವುಳ್ಳ ಹಳ್ಳಿಗಳ ಗಣರಾಜ್ಯವೊಂದಕ್ಕೆ ಭದ್ರ ತಳಪಾಯ ಹಾಕಬೇಕೆಂದು ಅವರು ಆಶಿಸಿದ್ದರು. ಈ ಆದರ್ಶ ಗಣರಾಜ್ಯದಲ್ಲಿ ರಕ್ಷಣಾ ಪಡೆಗಳ ಹಾಗೂ ಅತಿವೆಚ್ಚದ ಯಂತ್ರಗಳ ಅವಶ್ಯಕತೆಯಿಲ್ಲ. ಗಾಂಧೀಜಿಯ ಅತ್ಯಂತ ಪ್ರಬಲ ಪ್ರಭಾವ ನಮಗೆ ಕಾಣಸಿಗುವುದು ಇಂದು ಜಾಗೃತವಾಗಿರುವ ಸಾಮಾಜಿಕ ನ್ಯಾಯದ ಪ್ರಜ್ಞೆಯಲ್ಲಿ ಅಸ್ಪೃಶ್ಯರೆಂದು ತುಚ್ಛೀಕರಿಸಲಾಗುತ್ತಿದ್ದವರನ್ನು ಹರಿಜನರೆಂದು ಕರೆದು ಅವರನ್ನು ಸಮಾಜವು ಸಮಾನರೆಂದು ಸಹಾನುಭೂತಿಯಿಂದ ಸ್ವೀಕರಿಸುವಂತೆ ಮಾಡಲು ಗಾಂಧೀಜಿ ಹಗಲಿರುಳು ದುಡಿದರು. ಈ ಹರಿಜನೋದ್ಧಾರ ಕಾರ್ಯವನ್ನು ನಮ್ಮ ಸರಕಾರವು ಮುಂದುವರಿಸುತ್ತಿರುವುದು ಸಂತೋಷದ ಸಂಗತಿ. ಪಂಚಾಯತಿ ರಾಜ್ಯದ ಪ್ರಾರಂಭ ತನ್ಮೂಲಕ ಆಡಳಿತದ ವಿಕೇಂದ್ರೀಕರಣ— ಇವೂ ಗಾಂಧೀಜಿಯ ಪ್ರಭಾವದಿಂದ ಬಂದಿವೆ ಎ

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4



ನ್ನಬಹುದು. 'ಹಳ್ಳಿಗಳ ಸ್ವರಾಜ್ಯವೇ ನಿಜವಾದ ಸ್ವರಾಜ್ಯ'ವೆಂದು ಗಾಂಧೀಜಿ ತನ್ನ ಜೀವನದುದ್ದಕ್ಕೂ ಪ್ರತಿಪಾದಿಸುತ್ತಿದ್ದರು. ವೈಯುಕ್ತಿಕ ಆಸ್ತಿಯ ಕುರಿತು ನಮ್ಮ ಸರಕಾರದ ಧೋರಣೆಯಲ್ಲೂ ಗಾಂಧೀಜಿಯ ಪ್ರಭಾವವಿದೆಯೆಂದು ಕಾಣಿಸುತ್ತಿದೆ.

ಭಾರತ ಇಂದು ಗಾಂಧೀಜಿಯವರ ತತ್ವಗಳಲ್ಲಿ ಎಷ್ಟನ್ನು ಕಡೆಗಣಿಸಿದೆ ಎನ್ನುವುದಕ್ಕಿಂತ, ಎಷ್ಟನ್ನು ಸ್ವೀಕರಿಸಿದೆ ಎನ್ನುವುದು ಮುಖ್ಯವಾದ ಯೋಚಿಸಬೇಕಾದ ವಿಷಯ. ಗಾಂಧೀವಾದದ ಗತಿಯನ್ನು ನೋಡಿ ಮರುಗುವವರಿಗಿಂತ, ಗಾಂಧೀವಾದದ 'ಗತಿ'ಯಲ್ಲಿ ಸಾಹಸದಿಂದ ಮುನ್ನುಗ್ಗುವವರು ಇಂದು ನಮಗೆ ಬೇಕಾಗಿದ್ದಾರೆ.

"........... ಇತಿಹಾಸದಲ್ಲಿ ಯುದ್ಧಗಳಿಂದ ಜರ್ಜರಿತವಾದ ಜಗತ್ತಿನಲ್ಲಿ ಶಾಂತಿ ಮತ್ತು ಅಹಿಂಸೆಯನ್ನು ಬೋಧಿಸಿದ ಮಹಾ ಪ್ರವರ್ತಕರೆಂದು ಗಾಂಧೀಜಿ ಚಿರಕಾಲ ಬೆಳಗುತ್ತಾರೆ. ಆದರೆ ಭಾರತೀಯರನ್ನು ಕೊನೆಯ ದಿಗ್ವಿಜಯದೆಡೆಗೆ—ಸ್ವಾತಂತ್ರ್ಯದೆಡೆಗೆ ನಡೆಸಿದುದು ಗಾಂಧೀಜಿಯ 'ರಾಜಕೀಯ ಚತುರತೆ' ಎಂಬುದನ್ನು ಶೀಘ್ರವಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಈ ಕುರಿತು ಆಳವಾದ ವಾಸ್ತವಿಕ ಚಿಂತನೆ, ವಿಮರ್ಶೆ ಇನ್ನೂ ಆಗಬೇಕಾಗಿದೆ." (ಡಾ. ಆರ್. ಸಿ. ಮಜುಮ್‌ದಾರ್).

ಗಾಂಧೀಜಿ ತನ್ನ ರಾಜಕೀಯ ದರ್ಶನದಲ್ಲಿ ಸೋಲಲಿಲ್ಲ. ಆದರೆ ನಾವು ಅವರ ತತ್ವಗಳನ್ನು ಅರಿತುಕೊಳ್ಳುವುದರಲ್ಲಿ ಸೋತಿದ್ದೇವೆ, ಅವರು ಸಂಶೋಧಿಸಿದ ಆಯುಧಗಳನ್ನು ದುರುಪಯೋಗ ಪಡಿಸಿಕೊಂಡಿದ್ದೇವೆ. ಇದು ಒಪ್ಪಿಕೊಳ್ಳಬೇಕಾದ ವಾಸ್ತವಿಕ ಸತ್ಯ. ಗಾಂಧೀಜಿ ಸೋತದ್ದು "ಹೌದು" ಎಂದು ಯಾರಾದರೂ ಒಪ್ಪಿಕೊಳ್ಳುವುದಾದರೆ ಅವರ ಸೋಲಿಗೆ ಕಾರಣವನ್ನು ಹೀಗೆ ವಿವರಿಸಬಹುದು—ತಾನು ಮಾಡಿದುದನ್ನೂ ಇತರರೂ ಮಾಡಬಹುದೆಂದು, ಕಾರ್ಯಸಾಧನೆಯಲ್ಲಿ ಇತರರು ತನಗಿಂತಲೂ ಮೇಲ್ಮಟ್ಟದವರೆಂದು ಅವರು ಭಾವಿಸಿದರು. ಈ ತಪ್ಪು ಭಾವನೆ ಅಪಾಯಕಾರಿಯಾಯಿತು, ಭಯಂಕರವಾಗಿತ್ತು; ಮನುಕುಲದ ಇತಿಹಾಸದ ಮೂರು ಪ್ರದರ್ಶನಾತ್ಮಕ ಸೋಲುಗಳಾದ, ಸಾಕ್ರೆಟಿಸ್ ಗೌತಮ ಬುದ್ಧ ಮತ್ತು ನಜರೇತಿನ ಯೇಸು ಇವರೊಂದಿಗೆ ಗಾಂಧೀಜಿಯೂ ಸೇರುವಂತಾಯಿತು. ತಾವು ಆಚರಣೆಗೆ ತಂದುದನ್ನು ಇತರರೂ ತರಬಹುದೆಂದು ಅವರೆಲ್ಲರೂ ನಂಬಿದರು. ಅಂತೆಯೇ ಗಾಂಧೀಜಿಯ ಕನಸೂ ಕನಸಾಗಿಯೇ ಉಳಿಯಿತು." (ವಿನ್ಸೆಂಟ್‌ಶಿಯೂನ್)

ಡಾ| ಎಸ್. ರಾಧಾಕೃಷ್ಣನರು ಹೇಳಿರುವಂತೆ, 'ಅನುಭವದ ಅಗ್ನಿಪರೀಕ್ಷೆಯ ನಂತರ ಅವರು—ಗಾಂಧೀಜಿ ಉಳಿಯುವುದು ರಾಜಕಾರಣಿ—ಯೂ—ಸುಧಾರಕ—ಯೂ ತತ್ವಜ್ಞಾನಿ—ಯೂ— ನೀತಿಶಾಸ್ತ್ರಜ್ಞನಾಗಿ ಅಲ್ಲ. ಆದರೆ ಅವುಗಳೆಲ್ಲವನ್ನು ಒಳಗೊಂಡಿದ್ದ ವ್ಯಕ್ತಿಯಾಗಿ ಮಾನವತೆಯ ಆದರ್ಶ ಗುಣಗಳೇ ಮೂರ್ತಿವೆತ್ತು ಬಂದಂಥ ವ್ಯಕ್ತಿಯಾಗಿ, ತನ್ನ ಮಿತಿಯನ್ನು ಅರಿತವರಾಗಿ, ಮರೆಯಲಾಗದಂಥ ಹಾಸ್ಯ ಪ್ರವೃತ್ತಿಯಿದ್ದ ವ್ಯಕ್ತಿಯಾಗಿ ಅವರು ನಮ್ಮ ನೆನಪಿನಲ್ಲಿ ಉಳಿಯುತ್ತಾರೆ. ನಾವು ಅವರ ಶರೀರವನ್ನು ಕೊನೆಗಾಣಿಸಬಲ್ಲೆವು. ಆದರೆ ತಾನೇ ಒಂದು ದೈವೀ ಪ್ರಕಾಶವಾಗಿರುವ ಅವರ ಆತ್ಮವು ಹಲವು ದಿನಗಳ ತನಕ ಮತ್ತು ಬಲುದೂರದ ವರೆಗೆ ಅಸಂಖ್ಯ ಜನಾಂಗಗಳಿಗೆ ಶ್ರೇಷ್ಠತೆಯಿಂದ ಜೀವನಯಾಪನ ಮಾಡಲು ಪ್ರೋತ್ಸಾಹಿಸುತ್ತಲೇ ಇರುತ್ತದೆ."

ಹಸಿರು ಕ್ರಾಂತಿ

ದೇಶದಲ್ಲಿ ಆಹಾರಧಾನ್ಯಗಳ ಉತ್ಪಾದನೆ ವರ್ಧಿಸಿದೆ. 1949—50 ಸಾಲಿನಲ್ಲಿ ನಮ್ಮಲ್ಲಿ ಒಟ್ಟು 54.9 ದಶಲಕ್ಷ ಹೆಕ್ಟೇರುಗಳಿಂದ 123 ಟನ್ ಆಹಾರ ಧಾನ್ಯಗಳನ್ನು ಬೆಳೆದಿದ್ದರೆ, 1969—70ರಲ್ಲಿ 99.5 ದಶಲಕ್ಷ ಟನ್ ಆಹಾರವನ್ನು ಬೆಳೆಯಲಾಯಿತು. ಅದರಂತೆ ಸಾಗುವಳಿ ಕ್ಷೇತ್ರವು 99 ದಶಲಕ್ಷ ಹೆಕ್ಟೇರುಗಳಿಗೆ ಏರಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಪ್ರತಿ ಹೆಕ್ಟೇರ್ ಭೂಮಿಯಲ್ಲಿ ಬೆಳೆದ ಫಸಲೂ ಹೆಚ್ಚಾಗಿದೆ. ಒಂದು ಹೆಕ್ಟೇರ್ ಭೂಮಿಯ ಬೆಳೆ 553 ಕಿಲೋಗ್ರ್ಯಾಂಗಳಿಂದ 805 ಕಿಲೋಗ್ರ್ಯಾಂಗಳ ವರೆಗೂ ಹೆಚ್ಚಾಗಿದೆ.

ಹೆಚ್ಚು ಇಳುವರಿ ನೀಡುವ ಬಿತ್ತನೆ ಬೀಜಗಳು, ಶಾಸ್ತ್ರೀಯ ರೀತಿಯಿಂದ ಬಳಸಲಾದ ನೀರು, ರಾಸಾಯನಿಕ ಗೊಬ್ಬರ ದಬಳಕೆ, ಕ್ರಿಮಿಕೀಟಗಳ ನಿಯಂತ್ರಣ, ವಿವಿಧ ಬೆಳೆ ತೆಗೆವ ಕಾರ್ಯಕ್ರಮ, ಯಾಂತ್ರೀಕೃತ ಬೇಸಾಯ, ಸುಲಭಪತ್ತಿನ ಸಹಾಯ— ಈ ಮಾರ್ಗಗಳ ಮೂಲಕ ಭೂಫಲವತ್ತೆಯನ್ನು ಹೆಚ್ಚಿಸಲು ಸಾಧ್ಯವಾಗಿದೆ.

1966-67ರಲ್ಲಿ ಅಧಿಕ ಪ್ರಮಾಣದಲ್ಲಿ ಹೆಚ್ಚು ಇಳುವರಿಯ ಬಿತ್ತನೆ ಬೀಜಗಳನ್ನು ಬಳಕೆಗೆ ತರಲಾಯಿತು. 1966-67 ರಲ್ಲಿ ಸುಮಾರು ಹತ್ತೊಂಭತ್ತು ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಇಂತಹ ಬೀಜಗಳನ್ನು ಬಿತ್ತಿದ್ದರೆ, 1969-70ರಲ್ಲಿ ಒಂದು ಕೋಟಿ ಹತ್ತು ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬಿತ್ತಲಾಯಿತು. 1973-74ರ ವೇಳೆಗೆ ಸುಮಾರು ಎರಡೂವರೆ ಕೋಟಿ ಹೆಕ್ಟೇರ್ ಭೂಮಿಯಲ್ಲಿ ಹೆಚ್ಚು ಇಳುವರಿ ನೀಡುವ ಬೀಜಗಳನ್ನು ಬಿತ್ತಲು ಗುರಿ ಇರಿಸಿಕೊಳ್ಳಲಾಗಿದೆ.

ಸಣ್ಣ ನೀರಾವರಿ

1950—51 ಸಾಲಿನಲ್ಲಿ 12.9 ದಶಲಕ್ಷ ಹೆಕ್ಟೇರ್ ಭೂಮಿಗೆ ಸಣ್ಣನೀರಾವರಿ ಯೋಜನೆಗಳು ನೀರೊದಗಿಸಿದ್ದರೆ, 1968-69 ಸಾಲಿನಲ್ಲಿ ಒಂದುಕೋಟಿ ತೊಂಬತ್ತುಲಕ್ಷ ಹೆಕ್ಟೇರಭೂಮಿ ಸಣ್ಣ ನೀರಾವರಿ ಯೋಜನೆಗಳಿಂದ ನೀರಿನಾಶ್ರಯ ಪಡೆಯಿತು.

1968-69 ಸಾಲಿಗೆ ದೇಶದಲ್ಲಿ ಒಟ್ಟು ಹದಿನೆಂಟು ಲಕ್ಷಟನ್ ರಾಸಾಯನಿಕ ಗೊಬ್ಬರವನ್ನು ಬಳಸಲಾಯಿತು. 1973—74ರ ವೇಳೆಗೆ 55ಲಕ್ಷ ಟನ್ ರಾಸಾಯನಿಕ ಗೊಬ್ಬರವನ್ನು ಬಳಸಲು ಗುರಿ ಇರಿಸಿಕೊಳ್ಳಲಾಗಿದೆ.

1965—66ರಲ್ಲಿ 18.6 ದಶಲಕ್ಷ ಹೆಕ್ಟೇರು ಭೂಮಿಯಲ್ಲಿ ಬೆಳೆಗೆಡಿಸುವ ಕ್ರಿಮಿಕೀಟಗಳ ಉಪದ್ರವನ್ನು ತಡೆಯಲು ಕ್ರಮ ಕೈಕೊಳ್ಳಲಾಯಿತು. 1968-69ರಲ್ಲಿ 40ದಶಲಕ್ಷ ಹೆಕ್ಟೇರ್ ಭೂಮಿಯನ್ನು ಕ್ರಿಮಿಕೀಟಕಗಳಿಂದ ರಕ್ಷಿಸಲಾಯಿತು. ಚತುರ್ಥ ಯೋಜನೆಯಲ್ಲಿ 80ದಶಲಕ್ಷ ಹೆಕ್ಟೇರಭೂಮಿಯನ್ನು ಈ ರೀತಿ ರಕ್ಷಿಸಲು ಗುರಿ ಇರಿಸಿಕೊಳ್ಳಲಾಗಿದೆ.

1969—70ರಲ್ಲಿ ವಿವಿಧ ಬೆಳೆ ಕಾರ್ಯಕ್ರಮವನ್ನು 17.5ದಶಲಕ್ಷ ಹೆಕ್ಟೇರ್ ಭೂಮಿಗೆ ವಿಸ್ತರಿಸಲಾಯಿತು. 1970-71ರಲ್ಲಿ ಮತ್ತೆ 9.6 ದಶಲಕ್ಷ ಹೆಕ್ಟೇರ್ ಭೂಮಿಯಲ್ಲಿ ವಿವಿಧ ಬೆಳೆ ತೆಗೆಯಲು ಉದ್ದೇಶಿಸಲಾಗಿದೆ.

ಭಾರತೀಯ ಬೇಸಾಯಗಾರನು ಯಾಂತ್ರೀಕೃತ ಕೃಷಿ ಪದ್ಧತಿಯತ್ತ ಉತ್ಸಾಹ ತೋರಿಸಹತ್ತಿದ್ದಾನೆ. ಕಾರಣ ಬೇಸಾಯದ ಯಂತ್ರೋಪಕರಣಗಳನ್ನು ದೇಶದಲ್ಲೇ ಉತ್ಪಾದಿಸಲುವಿಶೇಷ ಪ್ರಯತ್ನಗಳು ನಡೆದಿವೆ.

ವಾಣಿಜ್ಯ ಬ್ಯಾಂಕುಗಳು ಕೃಷಿ ಅಭಿವೃದ್ಧಿಗೆ ಗಮನಾರ್ಹ ರೀತಿಯಲ್ಲಿ ಸಹಾಯಮಾಡಿವೆ. 1970 ಜೂನ್ ಅಖೈರದ ವರೆಗೆ ಈ ಬ್ಯಾಂಕುಗಳು 613 ಕೋಟಿ ರೂ.ಗಳ ಸಾಲವನ್ನು ಕೃಷಿ ಅಭಿವೃದ್ಧಿಗೆಂದು ಸಾಲ ರೂಪದಲ್ಲಿ ಒದಗಿಸಿವೆ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No:— 1 72303 Grams: HOST SATKAR
2 72304

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಆರೋಗ್ಯ ಸೂತ್ರಗಳು

ಸೋವಿಯೆಟ್ ರಷ್ಯದ ಪ್ರಖ್ಯಾತ ವೈದ್ಯ ಡಾ|| ಎಸ್. ಗುರೀವಿಚ್‌ರು ಪ್ರಾವ್ದಾ ಪತ್ರಿಕೆಯಲ್ಲಿ ಒಂದು ಲೇಖನ ಬರೆದು ಇಳಿ ವಯಸ್ಸಿನ ವರೆಗೆ ಆರೋಗ್ಯದಿಂದ ಹೇಗೆ ಇರಬೇಕೆಂಬ ಕುರಿತು ಎಂಟು ಸೂತ್ರಗಳನ್ನು ನಿರೂಪಿಸಿದರು:—

೧) ಆರು ಘಂಟೆಗೆ ಎಂದೊಡನೆಯೇ ಹಾಸಿಗೆಯಿಂದ ಏಳಬೇಕು. ಎಚ್ಚರವಾದ ಮೇಲೆ ಮಲಗಿಕೊಂಡು ಇರಬಾರದು. ಅದರಿಂದ ದೈಹಿಕ ವ್ಯವಸ್ಥೆ ದುರ್ಬಲಗೊಳ್ಳುತ್ತದೆ.

೨) ಪ್ರಾತಃವಿಧಿ ತೀರಿಸಿ, ಡಾಕ್ಟರರು ಹೇಳಿದ ವ್ಯಾಯಾಮ ಮಾಡಬೇಕು. ಆ ನಂತರ ತಣ್ಣೀರು ಸ್ನಾನ ಮಾಡಿ, ಲಘು ಉಪಹಾರ ಸ್ವೀಕರಿಸಿ, ಸ್ವಲ್ಪ ಓಡಾಡಬೇಕು.

೩) ಆ ವೇಳೆ ಮೂರು—ನಾಲ್ಕು ಗಂಟೆ ಕೆಲಸ ಮಾಡಬೇಕು.

೪) ಮಧ್ಯಾಹ್ನದ ಊಟದ ನಂತರ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬೇಕು.

೫) ಇದರ ನಂತರ ಮೂರು—ನಾಲ್ಕು ಗಂಟೆ ಕೆಲಸ, ಆ ವೇಳೆ ಸ್ವಲ್ಪ ವಾಕ್; ಆದಾದ ವೇಳೆ ಸಂಜೆಯ ಊಟ.

೬) ಊಟದಲ್ಲಿ ಮಿತಿ ಇರಬೇಕು; ಆದರೆ ಸ್ವಲ್ಪ—ಸ್ವಲ್ಪ ನಾಲ್ಕು ಸಲ ತೆಗೆದುಕೊಳ್ಳಬೇಕು.

೭) ಹಾಲಿನ ಪದಾರ್ಥಗಳನ್ನು, ಕಾಯಿಪಲ್ಯಗಳನ್ನು, ಹಣ್ಣುಗಳನ್ನು ಹೆಚ್ಚು ತಿನ್ನಬೇಕು. "ಕುಡಿಯುವುದನ್ನು", ಸೇದುವುದನ್ನು ಬಿಡಬೇಕು. ಯಾಕೆಂದರೆ ಅವು ತೀವ್ರ ವೃದ್ಧಾಪ್ಯಕ್ಕೆ ದಾರಿ ಮಾಡಿಕೊಡುತ್ತವೆ.

೮) ಎಲ್ಲಕ್ಕೂ ಮೇಲಾಗಿ ತಿಳಿದುಕೊಳ್ಳಬೇಕಾದುದೇನೆಂದರೆ ಆಲಸ್ಯತನವು ಮಾನವನ ಮಹಾ ವೈರಿಯಾಗಿದೆ. (—ಪ್ರ)

ಲಕ್ಷದ್ವೀಪಗಳಿಗೆ ಪ್ರಥಮ ಬಾರಿ ಬ್ಯಾಂಕಿಂಗ್ ಸೌಲಭ್ಯ

ಲಕ್ಷದ್ವೀಪಗಳ ದ್ವೀಪ ಸಮುದಾಯವು ಈಗ ಪ್ರಥಮ ಬಾರಿ ಬ್ಯಾಂಕಿಂಗ್ ಸೌಲಭ್ಯವನ್ನು ಹೊಂದಿದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲೊಂದಾದ ಸಿಂಡಿಕೇಟ್ ಬ್ಯಾಂಕು [illegible] ಕವರಟ್ಟಿಯಲ್ಲಿ ತನ್ನ ಹೊಸ ಶಾಖೆಯೊಂದನ್ನು ತೆರೆದಿದೆ. ರಾಷ್ಟ್ರೀಕರಣದ ನಂತರ ಲೀಡ್ ಬ್ಯಾಂಕ್ ಯೋಜನೆಯನ್ವಯ ಸಿಂಡಿಕೇಟ್ ಮತ್ತು ಕೆನರಾ ಬ್ಯಾಂಕುಗಳಿಗೆ ಲಕ್ಷದ್ವೀಪ, ಮಿನಿಕಾಯ್ ಮತ್ತು ಅಮಿನ್ ದ್ವೀಪಗಳಲ್ಲಿ ಬ್ಯಾಂಕ್ ಸೌಲಭ್ಯವನ್ನು ಅಭಿವೃದ್ಧಿ ಪಡಿಸಲು ಅವಕಾಶ ನೀಡಲಾಗಿದೆ.

ಕೇರಳ ಕರಾವಳಿಯಿಂದ ಇನ್ನೂರರಿಂದ ನಾನೂರು ಕಿಲೋಮೀಟರ್‌ಗಳ ದೂರವಿರುವ ಈ ದ್ವೀಪಗಳ ಸಮೂಹದಲ್ಲಿ ಸುಮಾರು ಇಪ್ಪತ್ತು ದ್ವೀಪಗಳಿವೆ. 28ಚದರ ಕಿಲೋಮೀಟರ್ ವಿಸ್ತೀರ್ಣವಿರುವ ಈ ದ್ವೀಪದಲ್ಲಿ 1961ರ ಜನಗಣತಿಯ ಪ್ರಕಾರ 24,108 ಜನರಿದ್ದಾರೆ. ಮಿನಿಕಾಯ್ ದ್ವೀಪದಲ್ಲಿ ಆದಾಯದ ದೊಡ್ಡ ಮೂಲವು ನಾವಿಕರಿಂದಾಗಿದೆ—ಆದರೆ ಈ ಪ್ರದೇಶದ ಆರ್ಥಿಕತೆಯು ಹೆಚ್ಚಾಗಿ ತೆಂಗು ಬೆಳೆಯ ಮೇಲೆ ಹೊಂದಿಕೊಂಡಿದೆ.

ಪುಟ್ಟದಾದ ಈ ದ್ವೀಪಗಳಲ್ಲಿ ದೊಡ್ಡ ಕೈಗಾರಿಕೆಗಳಿಗೆ ಯಾವುದೇ ಅವಕಾಶವಿಲ್ಲ. ಈ ದ್ವೀಪಗಳ ಪೈಕಿ ಬರೀ ಆರು ಮಾತ್ರ ವಿದ್ಯುತ್ ಸೌಲಭ್ಯವನ್ನು ಪಡೆದಿವೆ. ನಾರಿನ ಕೈಗಾರಿಕೆಗೆ ಹೆಚ್ಚು ಮಹತ್ವವನ್ನು ನೀಡಲಾಗಿದೆ.

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸ ಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ಸಮಾನತೆಯ ಸೂತ್ರ

ಮಾನವರೆಲ್ಲರೂ ಸಮಾನರು. ಅವರಲ್ಲಿ ಯಾವ ಭೇದಭಾವವೂ ಇರಬಾರದು. ಉಚ್ಚ, ನೀಚ, ಮೇಲು ಕೀಳು ಈ ಎಲ್ಲ ತಾರತಮ್ಯಗಳು ಮನುಷ್ಯನ ಸಂಕುಚಿತ ಸ್ವಭಾವದ ಮೌಢ್ಯತನದ ಲಕ್ಷಣಗಳು ಎಂದು ತಿಳಿದು ಕೆಲವು ವರ್ಷಗಳಿಂದೀಚೆಗೆ ಸಮಾನತೆಗಾಗಿ ಅನೇಕ ಸುಧಾರಣೆಗಳು ತೀವ್ರಗತಿಯಿಂದ ನಡೆಯುತ್ತಿರುವುದು ನಮ್ಮ ಸಂಸ್ಕೃತಿಯ ಶುಭ ಸಂಕೇತ.

ಸಮಾನತೆ, ಸುಧಾರಣೆ ಎಂಬ ಪದಗಳನ್ನು ಮಾತ್ರ ನಾವಿಂದು ಹೇಗೆ ಬಳಸುತ್ತಿದ್ದೇವೆ ಎಂಬುದರ ಬಗ್ಗೆ ವಿಚಾರಿಸುವಾಗ ಪ್ರಗತಿಯ ಹೆಸರಲ್ಲಿ ಎಡವುತ್ತಿರುವುದರ ಅರಿವು ತಾನಾಗಿಯೇ ತೋರಿಬರುತ್ತದೆ. ನಮ್ಮ ಪಕ್ಕದ ಮನೆಯ ಮೂರ್ತಿ ಕಡು ಬಡತನದಲ್ಲಿ ಶಾಲೆಗೆ ಹೋಗುತ್ತಿದ್ದಾನೆ. ಆತನ ವಿಧವೆ ತಾಯಿ ಒಬ್ಬನೇ ಮಗನ ವಿದ್ಯಾಭ್ಯಾಸಕ್ಕಾಗಿ ಪ್ರಾಣವನ್ನೇ ತೇಯುತ್ತಿದ್ದಾಳೆ. ಆಕೆ ಎಷ್ಟು ದುಡಿದರೂ ಇಂದಿನ ಸಾಮಾನುಗಳ ಬೆಲೆ ಗಗನಕ್ಕೇರಿರುವಾಗ ಹೊಟ್ಟೆಯ ಸಮಸ್ಯೆಯನ್ನೇ ಅವಳ ದುಡಿಮೆಯ ಅಲ್ಪ ಸಂಪತ್ತು ತೃಪ್ತಿದಾಯಕವಾಗಿ ಪೂರೈಸದಿರುವಾಗ ಬಟ್ಟೆಗಾಗಿ ಉಳಿಸುವುದು ಅಸಾಧ್ಯವೇ ಆಗುತ್ತಿದೆ. ಆದ್ದರಿಂದ ಆ ಬಡ ಬಾಲಕ ಹರಕು ಅಂಗಿಯನ್ನೇ ಧರಿಸಿಕೊಂಡು ಶಾಲೆಗೆ ಹೋಗುವುದು ರೂಢಿಯಾಗಿದೆ. ಮೊನ್ನೆಯೊಮ್ಮೆ ಆತ ಶಾಲೆಯಿಂದ ನೇರವಾಗಿ ನಮ್ಮ ಮನೆಗೆ ಬಂದವನೇ ಒಂದೇ ಉಸಿರಿನಲ್ಲಿ ತನ್ನ ಮನದಳಲನ್ನು ನಿವೇದಿಸಿದ.

"ನೀವ್ಯಾವಾಗ್ಲೂ ಜಾತಿಭೇದವಿರಬಾರ್ದುಅನುತ್ತಿದ್ದಿರಲ್ಲ? ಇಂದು ನಮ್ಮ ಶಾಲೇಲಿ ಹರಿಜನ, ಗಿರಿಜನರ ಮಕ್ಕಳಿಗೆ ಹೊಸ ಹೊಸ ಅಂಗಿಚಡ್ಡಿ ಕೊಟ್ಟಿದ್ದಾರೆ. ಉಳಿದವರಿಗಿಲ್ಲ?

"ಹೌದು ಮೂರ್ತಿ ಅವರು ಬಡವರು" ಎಂದು ನುಡಿದ ನಾಲಗೆ ಮೂರ್ತಿಯ ಹರಕುಅಂಗಿ ನೋಡಿ ಚಲಿಸದಾಯಿತು.

"ಓಹೋ....ಎಲ್ಲ ಸುಮ್ಮನೆ. ಅವರಲ್ಲಿ ಒಬ್ಬ ಶೆಟ್ಟಿ ಅಂತ, ಅವ ದಿನಾಲು ಟೆರ್ಲಿನ್ ಅಂಗಿ ಹಾಕ್ಕೊಂಡೇ ಬರ್ತಿದ್ದಾನೆ. ಅವನ ತಂದೆ ಭಾರಿ ದೊಡ್ಡವರಂತೆ. ರಾಮುವಿಗೂ ಮನೇಲಿ ನಾಲ್ಕೈದು ಅಂಗಿಗಳಿವೆಯಂತೆ."

ಇದು ನಮ್ಮ ಇಂದಿನ ಸುಧಾರಣೆಯ ಒಂದು ಸಣ್ಣ ನಿದರ್ಶನ. ಎಳೆಯ ಮಕ್ಕಳಿಗೇ ಹಿಂದುಳಿದವರಾರೆಂದು ಬೊಟ್ಟು ತೋರಿಸುವಂತೆ ಮಾಡುವ ಸಹಾಯ ಸೌಲಭ್ಯಗಳ ಹೆಸರಲ್ಲಿ ಉಂಟಾಗುವ ಇಂತಹ ಪ್ರಕರಣಗಳು ಎಷ್ಟೋ ನಡೆಯುತ್ತಿವೆ. ಹಿಂದುಳಿದ ವರ್ಗಗಳ ಮೇಲ್ಮೈಗಾಗಿ ಮಾಡುವ ಸಹಾಯ ಇತರ ಜಾತಿಯ ಎಳೆಯ ಬಡ ಮುಗ್ಧ ಜೀವಿಗಳನ್ನು ಸಮಸ್ಯೆಯ ಸುಳಿಯಲ್ಲಿ ಸಿಲುಕಿಸಿ ನೊಂದುಕೊಳ್ಳುವಂತೆ ಮಾಡುವ ವಿಧಾನದಿಂದ ಜಾತೀಯತೆಯ ಅಂತರವನ್ನು ಎತ್ತಿತೋರಿಸುವಂತೆ ಮಾಡೀತು ಅಷ್ಟೆ. ಬಡ ಮಕ್ಕಳ ವಿದ್ಯೆಗಾಗಿ ಸಹಾಯ ನೀಡಬೇಕಾದ್ದು ಸರಕಾರದ ಕರ್ತವ್ಯ. ಆದರೆ ಅದು ಕೇವಲ "ಹಿಂದುಳಿದ ವರ್ಗ"ಗಳಿಗೆ ಮಾತ್ರ. ಮೀಸಲಾಗಿರಿಸಿ ಮಕ್ಕಳೊಳಗೇ ಭೇದಭಾವವನ್ನು ಬೆಳೆಸಲು ಸಹಕಾರಿಯಾಗುವುದು ದುರ್ದೈವವೆನ್ನಬೇಕು. ಜಾತಿ ಭೇದ ಅಳಿಯಬೇಕು ಹೇಗೆ? ಶಾಲೆಗೆ ದಾಖಲಾತಿಯಾಗುವಾಗ ಆರಂಭವಾದ ಜಾತಿಯ "ಕಲಮ್"ಗಳು, ವಿದ್ಯಾರ್ಥಿವೇತನ, ಕಾಲೇಜು ಶಿಕ್ಷಣದ ವರೆಗೂ ಮುಂದುವರಿದು ಕೊನೆಗೆ ಉದ್ಯೋಗಗಳಲ್ಲಿ ಪರ್ಯವಸಾನವಾಗುವ ಈ 'ಜಾತಿ'ಯ ಸಹಾನುಭೂತಿಯಿಂದ ಏನನ್ನು ಸಾಧಿಸಬಹುದು?

ಬಡತನಕ್ಕೆ ಯೋಗ್ಯತೆಗೆ, ಬುದ್ಧಿಶಕ್ತಿಗೆ ಇಲ್ಲದ ಸೌಲಭ್ಯ ಕೇವಲ 'ಹಿಂದುಳಿದ ಪಂಗಡ' ಎಂಬ ಪದಕ್ಕಿದ್ದರೆ ನಾವು 'ಸಮಾನರು' ಎಂಬ ಒಣ ಡಂಭಾಚಾರದ ಪದಪ್ರಯೋಗಗಳಿಂದ ಯಾವ ಸಾರ್ಥಕ್ಯವಿದೆ? ಮನುಷ್ಯ ಮನುಷ್ಯರಲ್ಲಿಯ ಅಂತರವನ್ನು ಹೆಚ್ಚಿಸುವುದೇ 'ಸಮಾನತೆ'ಯ ವಿಪರೀತಾರ್ಥವೇ?

ಹಳ್ಳಿಗಳಲ್ಲಿ ಹರಿಜನ, ಗಿರಿಜನರಿಗೆ ದರ್ಖಾಸ್ತುಗಳ ವಿತರಣೆಯಾಗುತ್ತಿದೆ, ಭೂಹೀನರಿಗೆ ಭೂಮಿ ಸಿಗುವುದು ನ್ಯಾಯವೇ. ಆದರೆ ಇಲ್ಲೂ ಸ್ವಾರಸ್ಯಕರವಾದ ಘಟನೆಗಳು ಜರಗುತ್ತವೆ. ಒಂದು ಕುಟುಂಬದಲ್ಲಿ ಹತ್ತು ಮಂದಿ ಸದಸ್ಯರು ಒಟ್ಟಾಗಿ ವಾಸಿಸುತ್ತಿದ್ದರೂ ಆ ಹತ್ತು ಮಂದಿಯ ಹೆಸರಲ್ಲೂ ಅನೇಕ ಎಕ್ರೆ ಸ್ಥಳಗಳು ಕೊಡಲ್ಪಡುತ್ತವೆ. ದನ, ಕರುಗಳಿಗೆ ಮೇಯಲಿಕ್ಕಂತೂ ಸ್ಥಳ ಉಳಿಯಲಾರದು. ಮನುಷ್ಯರಿಗೆ ಹೆಚ್ಚಾದ ಮೇಲೆ ತಾನೇ ಪ್ರಾಣಿಗಳ ವಿಚಾರ? ಗಿರಿಜನರಿಗೆ ಸಿಕ್ಕಿದ ಸ್ಥಳವನ್ನೇನು ಮಾಡೋಣ ಎಂಬುದೇ ಸಮಸ್ಯೆಯೆಂದಾದರೆ ಇತರ ಜಾತಿಯವರಿಗೆ ಒಂದು ಸಣ್ಣ ಮನೆ ಕಟ್ಟಲಿಕ್ಕಾದರೂ ಸ್ಥಳಸಿಗುತ್ತಿದ್ದರೆ ಎಷ್ಟು ಸಂತೋಷದಿಂದ ಜೀವಿಸಬಹುದಿತ್ತು ಎಂಬ ತೀರದ ಆಸೆ ಏಕೆಂದರೆ ಹಿಂದುಳಿದವರಿಗೆ ಸಿಗುವಷ್ಟು ಸುಲಭದಲ್ಲಿ ಭೂಮಿ ಇತರ ಜಾತಿಯವರಿಗೆ ಖಂಡಿತ ಸಿಗುವಂತಿಲ್ಲ. ಹೆಚ್ಚೇಕೆ? ಈ ಹಿಂದುಳಿದವರು ಒಬ್ಬೊಬ್ಬರೇ ನಾಲ್ಕಾರು ಮನೆ ಕಟ್ಟಿಸಿ ಬಾಡಿಗೆಗೆ ಕೊಟ್ಟಾಗ ಅದರಲ್ಲಿ ಮುಂದರಿದ ಜಾತಿಯವರು ವಾಸಿಸುತ್ತಿದ್ದ ತಮ್ಮ ದುರದೃಷ್ಟಕ್ಕಾಗಿ ಪರಿತಪಿಸುವ ಕಾಲ ಬಂದಿದೆ.

ಇದು ಇಂದಿನ ಸಮಾನತೆಯ ಧರ್ಮವೋ? ಅಲ್ಲ ಹಿಂದೆ....ಮುಂದೆ.... ಎಂಬ ಬದಲಾವಣೆಯ ಸೂತ್ರವೋ? ಸಂಬಂಧಿಸಿದ ಅಧಿಕಾರಿಗಳು ಸ್ವಲ್ಪ ಯೋಚಿಸಿ ಕರ್ತವ್ಯ ನಿರ್ವಹಿಸಿದರೆ ಇಂತಹ ತಾರತಮ್ಯಗಳಿಗೆ ಅವಕಾಶ ಒದಗಲಿಕ್ಕಿಲ್ಲವೋ ಏನೋ! ಚೆನ್ನಾಗಿ ವಿಚಾರಿಸಿ ನೋಡಿದರೆ ಇದು ಈಗಾಗಲೇ ಸರ್ವವ್ಯಾಪಿಯಾಗಿ ಸಮಸ್ಯೆಗಳನ್ನುಂಟು ಮಾಡಿರುವುದು ಸ್ಪಷ್ಟವಾಗುತ್ತದೆ.

ಭೇದಭಾವ ತೊಲಗಲಿ ಎಂದು ಘೋಷಿಸುತ್ತಾ ಅಂತಹ ಭಾವನೆಯನ್ನು ಬೆಳೆಸುವುದು ಇಂದಿನ ಸುಧಾರಣೆಯ ತತ್ವಗಳಲ್ಲಡಗಿದೆ. ಮಾನವರೆಲ್ಲರೂ ಒಂದಾಗಿ ಬಾಳಲಿ. ಅಂತಹ ಉನ್ನತ ಭಾವನೆ ಎಲ್ಲರಲ್ಲೂ ಬೆಳೆಯಲಿ. ಆದರೆ ಸಮಾಜ 'ತಿರುವು ಮುರುವು' ಮಾಡುವ ಅರ್ಥವಿಲ್ಲದ ತತ್ವಗಳಿಂದ ಯಾರಿಗೂ ಯಾವ ಸಮಾಧಾನವೂ ಸಿಗಲಾರದು.

— **ಸಹನಾ,** ಹಿರಿಯಡ್ಕ.

ಕರ್ನಾಟಕ ಪ್ರಾದೇಶಿಕ ಆಯುರ್ವೇದ ಮಂಡಲದ 27ನೇ ಸಮ್ಮೇಳನ

ಕರ್ನಾಟಕ ಆಯುರ್ವೇದ ಮಂಡಲದ 27ನೇ ಸಮ್ಮೇಳನ ಹಾಗೂ ವಸ್ತು ಪ್ರದರ್ಶನವನ್ನು ವಿಟ್ಲದ ಕೇಂದ್ರ ಉದ್ಯಾನ ಬೆಳೆಗಳ ಪರಿಶೋಧನಾ ಕ್ಷೇತ್ರದಲ್ಲಿ ಇದೇ ಬರುವ ಎಪ್ರಿಲ್ ತಿಂಗಳಲ್ಲಿ ಜರಗಿಸುವುದೆಂದು ನಿರ್ಣಯಿಸಲಾಗಿದೆ. ವನೌಷಧಿಗಳ ತವರೂ, ಶೈಕ್ಷಣಿಕ, ವ್ಯಾವಸಾಯಿಕ, ಹಾಗೂ ವ್ಯಾವಹಾರಿಕ ಕೇಂದ್ರವೂ, ಪ್ರಸಿದ್ಧ ಯಾತ್ರಾ ಸ್ಥಳವೂ ಆದ ಮಲೆನಾಡ ಸೆರಗಿನಲ್ಲಿರುವ ವಿಟ್ಲದಂತಹ ಗ್ರಾಮೀಣ ಪ್ರದೇಶದಲ್ಲಿ ಜರಗಲಿರುವ ಈ ಮಹಾಧಿವೇಶನಕ್ಕೆ ತಾವೆಲ್ಲರೂ ಬಂದು ಸಕ್ರಿಯವಾಗಿ ಭಾಗವಹಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಲು ನಿಖಿಲ ಕರ್ನಾಟಕ ಆಯುರ್ವೇದ ಮಂಡಲ ಸಹಿತ ಸಮ್ಮೇಳನದ ಸ್ವಾಗತ ಸಮಿತಿಯು ನಿಮ್ಮನ್ನು ಹೃತ್ಪೂರ್ವಕ ಆಮಂತ್ರಿಸಲು ಸಂತೋಷಪಡುತ್ತದೆ.

ಈ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸುವ ಸಲುವಾಗಿ, ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮದರ್ಶಿಗಳಾದ ಶ್ರೀಮಾನ್ ವೀರೇಂದ್ರ ಹೆಗ್ಗಡೆಯವರು ಸ್ವಾಗತಾಧ್ಯಕ್ಷರಾಗಿದ್ದು, ಜಿಲ್ಲೆಯ ವಿವಿಧ ಕೇಂದ್ರಗಳ ಪ್ರಭಾವಶಾಲಿ ಹಾಗೂ ಅನುಭವಿಗಳಾದ ಕಾರ್ಯಕರ್ತರನ್ನು ಒಳಗೊಂಡ ಸ್ವಾಗತ ಸಮಿತಿಯನ್ನು ರಚಿಸಲಾಗಿದೆಯೆಂದು ತಿಳಿಸಲು ಹರ್ಷಪಡುತ್ತೇವೆ. ಈ ಸಲದ ಆಯುರ್ವೇದ ಸಮ್ಮೇಳನವು ಕೇವಲ ಭಾಷಣ ಮತ್ತು ಗೊತ್ತುವಳಿಗಳ ಬದಲು ಆಯುರ್ವೇದ ವೈದ್ಯಕವನ್ನು ಅಧುನಿಕ ಜಗತ್ತಿಗೆ ಒಪ್ಪುವಂತೆ ಪರಿಷ್ಕರಿಸಿ ರೂಪಿಸುವ ಹಲವು ವಿಧಾಯಕ ಚಟುವಟಿಕೆಗಳಿಂದ ತುಂಬಿರಬೇಕೆಂಬ ಆಶಯವನ್ನು ಹಲವು ಮಂದಿ ವಿದ್ವಜ್ಜನರು ಪತ್ರಮುಖೇನ ಹಾಗೂ, ಸ್ವತಃ ಸಮಿತಿಗೆ ತಿಳಿಸಿರುವರು. ಅಧಿವೇಶನವನ್ನು ಈ ದೃಷ್ಟಿಯಿಂದಲೂ ಸಂಪೂರ್ಣ ಪರಿಣಾಮಕಾರಿಯಾಗಿ ನಡೆಸಲು ವ್ಯವಸ್ಥೆ ಮಾಡುವ ಸಲುವಾಗಿ ಹಲವಾರು ಕಾರ್ಯನಿರ್ವಾಹಕ ಉಪ ಸಮಿತಿಗಳನ್ನೂ ರಚಿಸಲಾಗಿದೆ.

ಂ ಂ ಂ

ವಿಟ್ಲದಲ್ಲಿ ಜರಗುವ ಈ ಅಧಿವೇಶನದ ಸವಿ ಸ್ಮರಣೆಗಾಗಿ ಅಮೂಲ್ಯ ಲೇಖನಗಳನ್ನೊಳಗೊಂಡ ಒಂದು ಸ್ಮರಣ ಸಂಚಿಕೆಯನ್ನು ಪ್ರಕಟಿಸಲು ನಿರ್ಧರಿಸಲಾಗಿದೆ. ಅಲ್ಲದೆ ಅಧಿವೇಶನದ ಶಾಶ್ವತ ಸ್ಮಾರಕವಾಗಿ ಈ ಕೇಂದ್ರದಲ್ಲೊಂದು ಸಾರ್ವಜನಿಕ ವನಸ್ಪತಿ ಉದ್ಯಾನವನ್ನು ವ್ಯವಸ್ಥಾಪಿಸುವ ಯೋಜನೆ ಇದೆ. ಅಲ್ಲದೆ ಆಯುರ್ವೇದದ ಉನ್ನತಿಗಾಗಿ ನಾನಾ ಪ್ರಕಾರಗಳ ವಿಧಾಯಕ ಕಾರ್ಯಕ್ರಮಗಳನ್ನು ರೂಪಿಸುವ ವ್ಯವಸ್ಥೆಗಳಾಗಲಿವೆ. ಈ ಅಧಿವೇಶನವು ಆಯುರ್ವೇದಕ್ಕೆ ಇಂದು ಒದಗಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಜರಗುವ ನಿಮಿತ್ತ ಚಾರಿತ್ರಿಕ ಮಹತ್ವ ಹೊಂದುವುದರಲ್ಲಿ ಸಂಶಯವಿಲ್ಲ. ದಕ್ಷಿಣ ಭಾರತದ ಉದ್ಯಾನವನವೆನಿಸಿದ ದಕ್ಷಿಣ ಕನ್ನಡದ ವೈದ್ಯ ಬಾಂಧವರು ಹಾಗೂ ಆಯುರ್ವೇದಾಭಿಮಾನಿಗಳು ಸ್ವಾಗತ ಸಮಿತಿಯ ಸದಸ್ಯರಾಗಿ ಸೇರಿ ಸಹಕರಿಸುವುದಲ್ಲದೆ ಅಧಿವೇಶನದಲ್ಲೂ ಭಾಗವಹಿಸಿ ಅದನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ. ಕರ್ನಾಟಕದ ಇತರ ಜಿಲ್ಲೆಗಳ ವೈದ್ಯ ಬಾಂಧವರು ಪ್ರತಿನಿಧಿಗಳಾಗಿಯೂ ಮಹಾಜನರು ಸಂದರ್ಶಕರಾಗಿಯೂ ಬಂದು ಅಧಿವೇಶನದಲ್ಲಿ ಭಾಗವಹಿಸಿ ಕೃತಕೃತ್ಯರಾಗಬೇಕಾಗಿ ಪ್ರಾರ್ಥನೆ.

ಸ್ವಾಗತ ಸಮಿಯ ಪರವಾಗಿ

ಡಾ. ಪಿ. ಯಸ್. ಈಶ್ವರ ಭಟ್,

ಪ್ರಧಾನ ಕಾರ್ಯದರ್ಶಿ.

ಪೂಗ ನಿಲಯ, ವಿಟ್ಲ, ದ. ಕ.

ದಿನಾಂಕ 12—1—71.

Gram : VISHWA   Tel : 29111

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ವಿದ್ಯಾರ್ಥಿಯ ಸ್ವಯಂ ಪರೀಕ್ಷೆ

ಲೇಖಕರು: ಶ್ರೀ ಇ. ಗ್ಲೂವೆಸ್ತೈಯಿನ್

ಮಾಸ್ಕೊ ಭೌತ-ತಾಂತ್ರಿಕ ಸಂಸ್ಥೆಯು ನಾಡಿನಲ್ಲಿ ಅತ್ಯಂತ ಕಠಿನ ಪಾಠಕ್ರಮವುಳ್ಳ ಮಹಾವಿದ್ಯಾಲಯವೆಂದು ಎಣಿಸಲಾಗಿದೆ. ಅದು ಬೋಧನ ವಿಧಾನಗಳಲ್ಲಿ ಬದಲಾವಣೆಗಳನ್ನು ಮಾಡುತ್ತಿದೆ.

ಒಂದು ವಿಶಿಷ್ಟ ಪಾಠಕ್ರಮದ ಕುರಿತು ಸಮಾನ ಮಹತ್ವದ ಮೂರು ಉಪನ್ಯಾಸಗಳನ್ನು ವಿದ್ಯಾರ್ಥಿಗಳಿಗೆ ಮೂರು ಬೇರೆ ಬೇರೆ ಕೋಣೆಗಳಲ್ಲಿ ನೀಡಲಾಗುತ್ತದೆ. ಅಂತೂ ಸಮಯದಲ್ಲಿ ತಮಗೆ ಯಾವುದು ಅತ್ಯಂತ ಮಹತ್ವದ್ದೆನಿಸುತ್ತದೆಯೋ ಆ ಉಪನ್ಯಾಸಕ್ಕೆ ಹೋಗಲು ವಿದ್ಯಾರ್ಥಿಗಳು ಸ್ವತಃ ನಿರ್ಧರಿಸಿಕೊಳ್ಳುತ್ತಾರೆ.

ಪರೀಕ್ಷೆಯ ಕ್ರಮವನ್ನೂ ಬದಲಾಯಿಸಲಾಗಿದೆ.

ರೂಢಿಯಲ್ಲಿರುವ ಪರೀಕ್ಷೆಗಳಲ್ಲಿ ಅಧ್ಯಾಪಕರು ಪ್ರಶ್ನೆಗಳನ್ನು ಕೇಳುತ್ತಾರೆ. ಅವುಗಳಿಗೆ ವಿದ್ಯಾರ್ಥಿಗಳು ಉತ್ತರಗಳನ್ನು ನೀಡುತ್ತಾರೆ.

ಆದರೆ ಈ ವಿದ್ಯಾಲಯದಲ್ಲಿ ವಿದ್ಯಾರ್ಥಿಯೇ ಪ್ರಶ್ನೆಯನ್ನು ಪರ್ಯಾಲೋಚನೆಗಾಗಿ ಮಂಡಿಸಿಕೊಂಡು, ಅದಕ್ಕೆ ತಾನಾಗಿಯೇ ಸ್ವತಃ ಉತ್ತರವನ್ನು ಒದಗಿಸುತ್ತಾರೆ..

ಹಾಗೆ ಮಾಡಲು ಅವರು ಒಂದು ತಿಂಗಳು ಕಾಲಾವಧಿಯನ್ನು ಬಳಸಿಕೊಳ್ಳುತ್ತಾರೆ. ಪರೀಕ್ಷಾ ಕಾಲದಲ್ಲಿ ಆತನು ತನಗೆ ಅವಶ್ಯಕವೆನಿಸಿದ ಯಾವ ಪುಸ್ತಕಗಳನ್ನಾದರೂ ಬಳಸಿಕೊಳ್ಳಬಹುದು.

ಆತನಿಗೆ ಎಷ್ಟು ವಿಷಯಗಳು ನೆನಪಿನಲ್ಲಿದೆಯೆಂಬುದನ್ನು ಕಂಡುಹಿಡಿಯುವುದು ಈ ಪರೀಕ್ಷೆಯ ಉದ್ದೇಶವಲ್ಲ. ವಿಶಿಷ್ಟ ವಿಷಯದ ಬಗೆಗೆ ಆತನ ತಿಳಿವಳಿಕೆಯ ಗಾಢ ವ್ಯಾಪ್ತಿಯನ್ನು ಗುರುತಿಸುವುದೇ ಇಲ್ಲಿ ಉದ್ದೇಶ.

'ವಿದ್ಯಾರ್ಥಿಯ ತರ್ಕ ಸಾಮರ್ಥ್ಯ, ವಾಸ್ತವಾಂಶಗಳ ಬಗೆಗೂ ಸೂತ್ರಗಳ ಬಗೆಗೂ ಆತನ ವಿಮರ್ಶಾತ್ಮಕ ದೃಷ್ಟಿಥ ಕಂಡು ಹಿಡಿಯುವುದೇ ನಮ್ಮ ಪ್ರಯತ್ನ' ಎಂದು ಈ ವಿದ್ಯಾಲಯದ ರೆಕ್ಟರರಾದ ಓಲೆಗ್ ಬೆಲೋತ್ಸೆರ್ಕೊವೆಸ್ಕಿ ಅವರು ನನಗೆ ಹೇಳಿದರು.

"ಪ್ರತಿಯೊಂದು ವಿಶಿಷ್ಟ ಕಾರ್ಯದ ವ್ಯಾಪಕವಾದ ಹಿನ್ನೆಲೆಯನ್ನು ಕಂಡುಹಿಡಿಯಲು ವಿದ್ಯಾರ್ಥಿಯು ಸಮರ್ಥನಾಗಬೇಕೆಂದೂ, ತೊಂದರೆಗಳನ್ನು ಗ್ರಹಿಸಿ ಅವುಗಳಿಗೆ ಹಿಂಜರಿಯದೆ ಮುಂದುವರಿಯುವಂತಾಗಬೇಕೆಂದೂ ನಾವು ಪ್ರಯತ್ನಿಸುತ್ತೇವೆ" ಎಂದು ಅವರು ನುಡಿದರು.

ವಿದ್ಯಾರ್ಥಿಗಳ ಕಾರ್ಯದ ಮೌಲ್ಯ ನಿರ್ಣಯವನ್ನು ಕಟ್ಟಕಡೆಗೆ ಮಾಡಿ, ಅದನ್ನು ನಿಕಟತರವಾಗಿ ತರುವ ಜ್ಞಾನವನ್ನು ಅಧ್ಯಾಪಕರೂ, ವಿಜ್ಞಾನಿಗಳೂ ವಿನಿಮಯ ಮಾಡಿಕೊಳ್ಳುತ್ತಾರೆಂದು ಅವರು ಸೂಚಿಸಿದರು.

ಹಿರಿಯರು ಎಳೆಯರ ಕಡೆಗೆ ಹೊಸ ಬಗೆಯ ನೋಟ ಬೀರುತ್ತಿದ್ದಾರೆ. ಎಳೆಯರ ರಚನಾತ್ಮಕ ಅಂತಃಶಕ್ತಿಯ ಬಗೆಗೆ ಹಿರಿಯರಲ್ಲಿ ವಿಶೇಷ ಭರವಸೆ ಉಂಟಾಗಿವೆ.

ಪ್ರಾಧ್ಯಾಪಕರೊಬ್ಬರು ಇತ್ತೀಚೆಗೆ ಹೀಗೆ ಹೇಳಿದರು: "ನಿಮ್ಮ ವ್ಯಾಸಂಗ ಮತ್ತು ನಿಮ್ಮ ನಿರ್ಮಾಣ ಎಂದು ವಿಜ್ಞಾನವನ್ನು ವಿಂಗಡಿಸಲಾಗುತ್ತದೆ. ನೀವಿನ್ನೂ ವಿದ್ಯಾರ್ಥಿಯಾಗಿರುವಾಗಲೇ, ನಿರ್ಮಿಸಲಾರಂಭಿಸಲೂ ಬಹುದು."

ಈ ಧೋರಣೆಯಲ್ಲಿ ಖಂಡಿತವಾಗಿಯೂ ಈ ವಿದ್ಯಾಲಯವೊಂದಕ್ಕೇ ಸೀಮಿತವಾಗಿಲ್ಲ.

ಈ ಕಾಲದಲ್ಲಿ ವಿದ್ಯಾರ್ಥಿಗಳೂ ಮತ್ತು ಅಧ್ಯಾಪಕರೂ, ಎಷ್ಟೋ ಸಲ ಉನ್ನತ ಸೈದ್ಧಾಂತಿಕ ವಿಷಯಗಳ ಕುರಿತು, ಸಂಯುಕ್ತ ಸಂಶೋಧನೆಯನ್ನು ಕೈಗೊಳ್ಳುವುದು ಅಪರೂಪವೇನೂ ಅಲ್ಲ.

ಕೆಲವು ಸಂದರ್ಭಗಳಲ್ಲಿ ಇಂತಹ ಸಂಶೋಧನೆಯನ್ನು ವಿಶಿಷ್ಟ ಕಾರಖಾನೆಗಳಿಗಾಗಿ ಕೈಗೊಳ್ಳಲಾಗುತ್ತದೆ. ವಿಜ್ಞಾನದ ಕ್ರಿಯಾತ್ಮಕ ಅನುವರ್ತನೆಯೊಂದಿಗೆ ಇದು ಎಷ್ಟೋ ಸಲ ವಿದ್ಯಾರ್ಥಿಯ ಪ್ರಥಮ ಸಂಪರ್ಕವಾಗಿರುತ್ತದೆಯಾದುದರಿಂದ, ವಿಶೇಷತಃ ಅಮೂಲ್ಯವಾಗಿರುತ್ತದೆ.

ಈ ಪರಿವರ್ತನೆಗಳು ಗಣನೀಯ ಪ್ರಮಾಣದಲ್ಲಿ ಸ್ವತಃ ವಿದ್ಯಾರ್ಥಿಗಳಲ್ಲೇ ಉಂಟಾಗುತ್ತಿರುವ ಬದಲಾವಣೆಯನ್ನು ಪ್ರತಿಬಿಂಬಿಸುತ್ತವೆ.

ಹಿಂದೆ ಇದ್ದುದಕ್ಕಿಂತಲೂ ಉನ್ನತ ಪ್ರಮಾಣದ ಜ್ಞಾನವು ಅವರಿಗೆ ಇರುತ್ತದೆ. ತಮ್ಮ ಪ್ರಾಧ್ಯಾಪಕರಿಂದ ತಿಳಿಸಲಾದ ವಿಷಯಗಳನ್ನು ಅವರು ಹೆಚ್ಚು ವಿಮರ್ಶಕ ದೃಷ್ಟಿಯಿಂದ ಗ್ರಹಿಸುತ್ತಾರೆ.

ಮತ್ತೊಂದು ಕಡೆ, ಅವರು ಹೆಚ್ಚು ಪ್ರಬುದ್ಧರಾಗಿದ್ದು, ಸ್ವತಂತ್ರರಾಗಿರಬಯಸುತ್ತಾರೆ ಮತ್ತು ತಾವು ಬಾಳುತ್ತಿರುವ ಸಮಾಜದಲ್ಲಿ ಹೆಚ್ಚು ಜವಾಬುದಾರಿಯ ಮಹತ್ತರ ಪಾತ್ರವನ್ನು ಅವರು ವಹಿಸಬಯಸುತ್ತಾರೆ.

ಯಾವ ವ್ಯಕ್ತಿ ಯಾರದಾದರೂ ದಾಸ್ಯತ್ವವನ್ನು ಯಾವ ಸಮಯದಲ್ಲಿ ಸ್ವೀಕಾರ ಮಾಡುತ್ತಾನೆಯೋ ಅದೇ ಸಮಯದಲ್ಲಿ ಅವನ ಅರ್ಧ ಯೋಗ್ಯತೆ ನಷ್ಟವಾಗುತ್ತದೆ. (ಓಡಿಸಿ)

ಪ್ರಾರ್ಥನೆಯು ವಿಶ್ವಾತ್ಮದೊಳಗೆ ಜೀವಿಸುವ ಪ್ರಯತ್ನವಾಗಿರುತದೆ.

ಸುಖದ ಆಧಾರವು ಪುಣ್ಯವಾಗಿರುತ್ತದೆ. ಮತ್ತು ಅನಿವಾರ್ಯ ರೂಪದಿಂದ ಅದರ ತಳಹದಿ (ನೆಲಗಟ್ಟು) ಸತ್ಯವಾಗಿರುತ್ತದೆ. (ಕಾಲ್‌ರಿಜ್)

ಅದು ಅತ್ತೆಯ ಕಾಲ; ಇದು ಸೊಸೆಗಳ ಕಾಲ

(ನಾಲ್ಕನೇ ಪುಟದಿಂದ)

ಗಿದ್ದಾರೆ. ಅಂತಪುರವನ್ನು ಯಾರು ಹೊಗುತ್ತಾರೋ ಕಾದು ನೋಡಬೇಕು.'

"ಅಲ್ರಿ, ಆಗ, ಒಡ್ಡೋಲಗ ಅಂದ್ರಿ; ಈಗ ನಾಟಕ ಅಂತೀರಿ...."

"ಅಲ್ವೆ, ಒಡ್ಡೋಲಗ ಅದ್ರೆ ಏನು, ನಾಟಕ ಅದ್ರೆ ಏನು? ಭಾಷಣ ಭೈರವರ ಅಬ್ಬರ ತಾಳ ಕೇಳಿದಾಗ ಒಡ್ಡೋಲಗದ ನೆನಪಾಗಿ ಹಾಗಂದಿರಬಹುದು.'

'ಏನಂದ್ರೀಂತ ನಿಮಗೇ ನೆನಪಿಲ್ಲ....'

'ನೀಡಿದ ಭರವಸೆಗಳನ್ನೆಲ್ಲ ಮಂತ್ರಿವರ್ಯರು ಗಳರೇ ಮರೆತು ಬಿಡುವಾಗ...'

"ಹೋಗ್ಲಿ ಬಿಡು...."

"ಆಯ್ತು. ಮತ್ತೊಂದು ಹಿಡಿದುಕೊಂಡಾದ್ರೂ ಏನು ಪ್ರಯೋಜನ?"

'ಅಬ್ಬಾ, ನೀವೇ....'

'ಏನೂ....'

—ಗೋರಾ.

ಸಂದರ್ಶಿಸಿರಿ!—ಸಂತೃಪ್ತರಾಗಿರಿ!!

ಬಂಗಾರದ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮ್‌ಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು—1

Tele: GOLDKING Estd: 1047 Phone: 3242 Res:3272

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

ಮೇ ತಿಂಗಳಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಬೆಳೆ ವಿಮೆ ಕುರಿತ ವಿಚಾರಗೋಷ್ಠಿ

ಸಿಂಡಿಕೇಟ್ ಬೇಂಕಿನ ಎಗ್ರಿಕಲ್ಚರ್ ಫೌಂಡೇಶನ್ ಸಂಘಟಿಸಿದ ವಿಚಾರಗೋಷ್ಠಿಯೊಂದು ಉಡುಪಿಯ ಮುಕುಂದಕೃಪಾ ಸದನದಲ್ಲಿ ಸಿಂಡಿಕೇಟ್ ಬೇಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈ, ಅವರ ಅಧ್ಯಕ್ಷತೆಯಲ್ಲಿ ಇದೇ ತಾ. 7ರಂದು ಜರಗಿತು. ಇದರಲ್ಲಿ, ಕೆನರಾ ಬೇಂಕಿನ ಡೆಪ್ಯುಟಿ ಜನರಲ್ ಮೆನೇಜರ್ ಶ್ರೀ ಬಿ. ವಿ. ಭಂಡಾರಿ, ಬೆಂಗಳೂರ ಕೃಷಿ ವಿದ್ಯಾಲಯದ ಪ್ರಾಧ್ಯಾಪಕ ಡಾ| ಜಿ. ತಿಮ್ಮಯ್ಯ, ಸಾಗರದ ಶ್ರೀ ಕೆ. ಎಚ್. ಶ್ರೀನಿವಾಸ್ ಎಂ. ಎಲ್. ಎ. ಮೈಸೂರು ಪ್ರದೇಶ ಕೃಷಿಕ ಸಮಾಜದ ಕಾರ್ಯದರ್ಶಿ ಶ್ರೀ ಬಿ. ಎಸ್. ಹಿರೇಗೌಡರ್, ಕೊಪ್ಪದ ವಕೀಲ ಶ್ರೀ ಎಲ್. ಆನಂದ, ಮೂಡಬಿದಿರೆಯ ಡಾ| ಎಲ್. ಸಿ. ಸೋನ್ಸ್, ಉಡುಪಿಯ ಪ್ರಗತಿಪರ ರೈತ ಶ್ರೀ ಪಿ. ಆನಂದರಾಯ ಹೆಗ್ಡೆ, ಸಿಂಡಿಕೇಟ್ ಬೇಂಕಿನ ಕೃಷಿ ವಿಭಾಗದ ವಿಶೇಷಜ್ಞ ಶ್ರೀ ಕೆ. ವಿ. ಶೆಣೈ, ಕೃಷಿ ಪ್ರತಿಷ್ಠಾನದ ಶ್ರೀ ಕೆ. ಎಂ. ಉಡುಪ ಇವರುಗಳು ಭಾಗವಹಿಸಿದ್ದರು. [illegible] ಶ್ರೀ ಕೆ. ಎಚ್. ಶ್ರೀನಿವಾಸ್ ಬೆಳೆ ವಿಮೆಯ ತತ್ವವನ್ನು ವಿವರಿಸಿ ಈ ದಿಸೆಯಲ್ಲಿ [illegible] ಬೆಳೆ ವಿಮೆ ಜಾರಿಗೆ ತರಬೇಕೆಂದೂ ವಿಮೆ ಇಲ್ಲದಿದ್ದರೆ ಕನಿಷ್ಠ ಬೆಳೆ ಬಂದಾಗ ಸ್ವೀಕರಿಸುವ ಬಗ್ಗೆ ಅಲ್ಪಸ್ವಲ್ಪ ತೆಗೆದಿರಿಸಿ ಅಭಾವದ ಕಾಲದಲ್ಲಿ ರಕ್ಷಣೆ ಪಡೆಯಬಹುದಾಗಿದೆ ಎಂದೂ ಕೃಷಿಕರು ಸಂಸ್ಥೆಯೊಂದರಲ್ಲಿ ಕೂಡಿ ಅಭಾವದ ಸಂದರ್ಭದಲ್ಲಿ ಪರಸ್ಪರ ಸಹಾಯ ಮಾಡಿಕೊಳ್ಳುವುದೇ ಬೆಳೆ ವಿಮೆಯ ಮುಖ್ಯ ತತ್ವ ಎಂದೂ ಹೇಳಿದರು.

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ (ನವಯುಗ ಪ್ರೆಸ್) ಉಡುಪಿ, ದ.ಕ.

(ಮೊದಲನೇ ಪುಟದಿಂದ)

ಲ್ಲುವ ಸಾಧ್ಯತೆ ಬಹಳ ಕಡಿಮೆಯಾಗುತ್ತದೆ. ಬಿರುಸಿನ ಪ್ರಚಾರದೊಡನೆ ಪ್ರತ್ಯೇಕ ಮತದಾರನನ್ನೂ ಭೆಟ್ಟಿಯಾಗಿ ಆತನಿಗೆ ತಮ್ಮ ಪಕ್ಷದ ನೀತಿ-ನಡಾವಳಿಕೆಯನ್ನು ಮುಂದಿಟ್ಟು ಮಾಡಿ ಒಲಿಸಿಕೊಳ್ಳುವುದು ಅತ್ಯಂತ ಆಗತ್ಯವಿದೆ. ಈ ಕಾರ್ಯದಲ್ಲಿ ಯಾರು ಹೆಚ್ಚು ಯಶಗಳಿಸಬಲ್ಲರೋ ಅವರೇ ಚುನಾವಣೆಗಳಲ್ಲಿಯೂ ಯಶಗಳಿಸುತ್ತಾರೆ. ಸಂಯುಕ್ತ ಪ್ರಯತ್ನಗಳಿಂದ ಕೂಟ ಪಕ್ಷಗಳು 'ಪಕ್ಷಾಂತರ' ಸಿಡುಗಿಗೆ ಬಲಿಯಾಗುವಂತೆ ತೀವ್ರ ಎಚ್ಚರಿಕೆಯನ್ನೂ ವಹಿಸದೆ ಹೋದರೆ, ಅವರೆಲ್ಲರ ಪ್ರಯತ್ನ ದೂರ ಗುಡ್ಡಕ್ಕೆ ಮಣ್ಣು ತುಂಬಿದಂತಾಗುವುದು ಸಹಜವೇ.

ಪಾಕಿಗಳು ಪುಕ್ಕಲರಲ್ಲ

ಭಾರತೀಯ ವಿಮಾನಾಪಹರಣವು ಪಾಕ್ ಪ್ರಚೋದಿತವೆಂಬುದೀಗ ಮತ್ತಷ್ಟು ಸ್ಪಷ್ಟವಾಗಿದೆ. ವಿಮಾನಾಪಹರಣಗೆಯ್ದವರನ್ನು ಭಾರತಕ್ಕೆ ಒಪ್ಪಿಸಲು ಪಾಕಿಸ್ತಾನ ನಿರಾಕರಿಸುತ್ತದೆ; ಮಾತ್ರವಲ್ಲ, ಅವರಿಗೆ ಸನ್ಮಾನವನ್ನೂ ನೀಡುವಷ್ಟು ಮುಂದರಿದಿದೆ. ಇಸ್ಲಾಮಾಬಾದವಲ್ಲಿರುವ ಭಾರತೀಯ ರಾಯಭಾರಿ ಕಛೇರಿಯ ಮೇಲೆ ಆಕ್ರಮಣ ನಡೆಸಿ ಆಸ್ತಿಪಾಸ್ತಿಗಳಿಗೆ ಹಾನಿಯನ್ನು ಪಾಕಿಸ್ತಾನಿಗಳು ತಂದೊಡ್ಡಿದಾಗ ಪಾಕ್ ಸರಕಾರ ಕಣ್ಣು ಮುಚ್ಚಿ ಅದಕ್ಕೆ ಸಮ್ಮತಿ ನೀಡಿತ್ತೇ ಹೊರತು ರಕ್ಷಣೆಯೊದಗಿಸಲು ಸಿದ್ಧವಾಗಲಿಲ್ಲ. ಭಾರತ ಸರಕಾರವೇನೋ ಎಲ್ಲವಕ್ಕೂ ಎಚ್ಚರಿಕೆ ನೀಡುತ್ತಲೇ ಮುಂದಿನ ಗಂಭೀರ ಪರಿಣಾಮಗಳಿಗೆ ಪಾಕಿಸ್ತಾನವೇ ಹೊಣೆಯಾದೀತೆಂದು ಪ್ರತಿಭಟನಾ ಪತ್ರ ರವಾನಿಸುವುದರಲ್ಲಿ ತೃಪ್ತವಾಗಿದೆ. ಜತೆಯಲ್ಲಿ ಕಾಶ್ಮೀರದ ಕಂದರದಲ್ಲಿ ಪಾಕ್ ಸೇನೆಗಳು ಜಮಾವಣೆಗೊಳ್ಳುತ್ತಿರುವುವೆಂಬ ವದಂತಿಗಳೂ ಹಬ್ಬತೊಡಗಿವೆ. ಪಾಕಿಸ್ತಾನದ ಯಾವುದೇ ವಿಮಾನಗಳು ಭಾರತದ ಭೂಭಾಗವನ್ನು ಹಾದುಹೋಗಬಾರದೆಂಬ ಕ್ರಮ ನಮಗೆ ಉಗ್ರವಾಗಿ ಕಂಡರೂ ಪಾಕ್ ಸ್ನೇಹಿತರು ನೆರೆಹೊರೆಯಲ್ಲಿರುವಾಗ, ಅದಕ್ಕೇನೂ ನಷ್ಟವಿಲ್ಲ. ನೆರೆಹೊರೆಯವರು ನಮಗೇನೇ ಇಲ್ಲವೆಂಬ ಸ್ಥಿತಿಗೆ ನಾವು ಬಂದಿದ್ದೇವೆ. ನಮ್ಮ ಒಲವು ರಶ್ಯದತ್ತ ಹರಿದಿರುವುದು ಬೆಳಕಿನಷ್ಟು ತಿಳಿ. ಆದರೆ, ಅದೇ ರಶ್ಯ ಪಾಕಿಸ್ಥಾನವನ್ನೂ ಮುದ್ದಿಡುತ್ತಿದೆ–ನೆಪ ಯಾವುದೇ ಇರಲಿ. ಪಾಕಿಸ್ತಾನ ವಿಮಾನದ ನಷ್ಟವನ್ನು ತುಂಬಿಕೊಡದಿದ್ದರೆ, ಇನ್ನು ಉಗ್ರ ಕ್ರಮ ಕೈಕೊಳ್ಳುತ್ತೇವೆ ಎಂದು ಹೇಳುವುದನ್ನು ಬಿಟ್ಟು ಪರಿಹಾರ ಪಾವತಿಗೆ, ಅಪಹರಣಕಾರರನ್ನು ಒಪ್ಪಿಸುವುದಕ್ಕೆ ಅವಧಿ ಹೇರಿ ಅದು ತೀರಿದೊಡನೆಯೇ ಉಗ್ರ ಕ್ರಮ ಕೈಕೊಳ್ಳುವುದೇ ಸೂಕ್ತ. ಕಾಗದದ ಹುಲಿಗಳಿಗೆಲ್ಲ ಹೆದರುವಷ್ಟು ಪಾಕಿಸ್ತಾನಿಗಳು ಪುಕ್ಕಲರಲ್ಲ. ಭಾರತದ ಚುನಾವಣೆಗಳಿಗೂ ಈ ಘಟನೆಗಳಿಗೂ ಏನಾದರೂ ಬಾದರಾಯಣ ಸಂಬಂಧವಿದೆಯೋ ಕಾದು ನೋಡಬೇಕು.

ಅಖಿಲ ಭಾರತ ಕುಟುಂಬ ಯೋಜನಾ ಸಮ್ಮೇಳನದ ಉದ್ಘಾಟನೆ

ಅಖಿಲ ಭಾರತ ಕುಟುಂಬ ಯೋಜನಾ ಸಂಘ ನಡೆಸುತ್ತಿರುವ ಅಖಿಲ ಭಾರತ ಮಟ್ಟದ ಒನೆಯ ಸಮ್ಮೇಳನವು ಮಣಿಪಾಲದಲ್ಲಿ ಇದೇ ತಾ 14ರಂದು ರಾಜ್ಯದ ಆರೋಗ್ಯ ಸಚಿವ ಶ್ರೀ ವೈ. ರಾಮಕೃಷ್ಣ ಅವರ ಅಧ್ಯಕ್ಷತೆಯಲ್ಲಿ, ರಾಜ್ಯಪಾಲ ಶ್ರೀ ಧರ್ಮವೀರರು ಉದ್ಘಾಟಿಸಿದರು. ಅವರು ಉದ್ಘಾಟಿಸುತ್ತಾ, ನಮ್ಮ ಆರ್ಥಿಕ ಸ್ಥಿತಿಯನ್ನು ಹದಗೆಡಿಸುತ್ತಿರುವ ಜನಸಂಖ್ಯೆಯನ್ನು ತಡೆಯುವುದಕ್ಕೆ ಮನೆಯಿಂದ ಮನೆಗೆ ಕುಟುಂಬ ಯೋಜನಾ ಪ್ರಚಾರ ನಡೆಸಿ ವೈಯಕ್ತಿಕ ಸಂಪರ್ಕ ಬೆಳೆಸಿ ಜನತೆಯಲ್ಲಿ ಸಮಸ್ಯೆಯ ಅರಿವು ಮೂಡಿಸಬೇಕು. ಜನಸಂಖ್ಯಾ ಸಮಸ್ಯೆಯ ನಿವಾರಣೆ ಜನಸಂಖ್ಯಾ ನಿಯಂತ್ರಣದಿಂದಲೇ ಆಗಬೇಕಾಗಿದೆ. ಈ ಕಾರ್ಯ ಚಳುವಳಿಯ ಮೂಲಕ ನಡೆಯಬೇಕಾಗಿದೆ ಅಲ್ಲದೆ ಜನಸಂಖ್ಯಾ ಶಿಕ್ಷಣದ ಮೂಲಕ ನಡೆಯಬೇಕು. ತರುಣ ತರುಣಿಯರು ಮದುವೆಗೇ ಮೊದಲೇ ಕುಟುಂಬ ಯೋಜನೆಯ ಬಗ್ಗೆ ತಿಳಿದಿರಬೇಕು. ಎಳೆಯರಿಗೆ ಜನಸಂಖ್ಯಾ ಶಿಕ್ಷಣ ನೀಡುವುದರಿಂದ ಮಾತ್ರ ಇದು ಸಾಧ್ಯ. ಇಂತಹ ಶಿಕ್ಷಣ ನೀಡುವಲ್ಲಿ ಹಲವು ಸಂಶೋಧನೆಗಳು ನಡೆಯಬೇಕು ಅಲ್ಲದೆ ನಿರ್ಧಾರಯುತ ತ್ಯಾಗಪೂರ್ತ ಕಾರ್ಯ ನಡೆಯಬೇಕು. ಈ ಕ್ಷೇತ್ರಕ್ಕೆ ಅಂಥ ಕಾರ್ಯಕರ್ತರು ಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಸಚಿವ ಶ್ರೀ ವೈ. ರಾಮಕೃಷ್ಣ ಅವರು ಜನಸಂಖ್ಯಾ ಸ್ಫೋಟದ ಗಂಭೀರತೆಯನ್ನು ವಿವರಿಸಿ ಅದರ ನಿವಾರಣೋಪಾಯ ಕುಟುಂಬ ಯೋಜನೆ ಎಂದರು. ಇದನ್ನು ಕಾರ್ಯರೂಪಕ್ಕೆತರುವುದು ನಮ್ಮೆಲ್ಲರ ಪ್ರಥಮ ಕರ್ತವ್ಯ ಎಂದು ತಿಳಿಯಬೇಕು ಎಂದು ನುಡಿದರು.

ಸಂಘದ ಅಧ್ಯಕ್ಷೆ ಶ್ರೀಮತಿ ಅವಾಬ್ಯಾವಾಡಿಯಾ ಅವರು ಮಾತಾಡಿ 21 ವರುಷಗಳಿಂದ ಕಾರ್ಯವೆಸಗುತ್ತಿರು ಈ ಸಂಸ್ಥೆಯ ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ನೀಡುತ್ತಿರುವ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿದರು. ಜನಸಂಖ್ಯಾ ಶಿಕ್ಷಣ ಮುಂದಿನ ಪೀಳಿಗೆಯ ಮತ್ತು ಮಾನವ ಜನಾಂಗದ ಅಸ್ತಿತ್ವದ ದೃಷ್ಟಿಯಿಂದಲೇ ಮಹತ್ವಪೂರ್ಣವಾದದ್ದು ಎಂದು ನುಡಿದರು. ಸಂಸ್ಥೆಯ ಸ್ಥಾಪನೆಗೆ ಕಾರಣರಾದ ಶ್ರೀಮತಿ ಧನವಂತಿ ರಾಮರಾವ್ ಅವರು ಸಂಸ್ಥೆಯ ಕಾರ್ಯಗಳ ಬಗ್ಗೆ ತೃಪ್ತಿ ಸೂಚಿಸಿದರು. ಕುಟುಂಬ ಯೋಜನೆ ಜ್ಞಾನವನ್ನು ಎಳೆಯರಿಂದ ಅಡಗಿಸಿಡುವುದು ಅಶಕ್ಯ ಎಂದ ಅವರು ಇದಕ್ಕಾಗಿ ತಾವು ಜನಸಂಖ್ಯಾ ಶಿಕ್ಷಣದಂತಹ ವಿಧಾನವನ್ನು ರೂಪಿಸಬೇಕಾಯಿತು ಎಂದು ನುಡಿದರು.

ಸಂಘದ ಪರವಾಗಿ ದ. ಕ. ಘಟಕದ ಅಧ್ಯಕ್ಷ ಡಾ| ಟಿ. ಮಾಧವ ಪೈ ಮತ್ತು ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ರಮೇಶ ಪೈ ದೇಶದಾದ್ಯಂತ ಮತ್ತು ವಿದೇಶಗಳಿಂದಲೂ ಆಗಮಿಸಿದ ಮುನ್ನೂರಕ್ಕೂ ಹೆಚ್ಚು ಪ್ರತಿನಿಧಿಗಳನ್ನು ಸ್ವಾಗತಿಸಿದರು. ಶ್ರೀಮತಿ ಪಾರ್ವತಿ ಕೈಲಾಸಪತಿ ಅವರಿಂದ ಪ್ರಾರ್ಥನೆ ಮತ್ತು ಸಂಘದ ಕಾರ್ಯದರ್ಶಿ ಮಲ್ಲಿಕಾ ಘೋಷ್ ಅವರಿಂದ ಧನ್ಯವಾದಾರ್ಪಣೆ ನಡೆದುವು.

ಪ್ರಧಾನಿ ಗಾಂಧಿ....

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಇಂಡಿಕೇಟಿನ ಚುನಾವಣಾ ಪ್ರಚಾರಕ್ಕೆಂದು ತಾ. 10ರಂದು ಮಂಗಳೂರಿಗೆ ಬಂದರು. ನೆಹರೂ ಮೈದಾನದಲ್ಲಿ ಸೇರಿದ್ದ ಸಭೆಯನ್ನುದ್ದೇಶಿಸಿ ಮತ್ತೆ ತಮ್ಮ ಪಕ್ಷಕ್ಕೇ ಮತ ನೀಡಬೇಕೆಂದು ವಿನಂತಿಸಿದರು. ಅವರ ಭಾಷಣದ ಸಾರಾಂಶ ಕೆಳಗೆ ಕೊಡಲಾಗಿದೆ:

ಇಂದು ದೇಶದಲ್ಲಿ ಪ್ರತಿಗಾಮಿ ಶಕ್ತಿಗಳು ಒಂದಾಗೂಡಿವೆ. ಇದರಿಂದ ದೇಶದ ಪ್ರಜಾಪ್ರಭುತ್ವಕ್ಕೆ ಅಪಾಯವುಂಟಾಗಿದೆ. ಕಾಂಗ್ರೆಸ್ ಪ್ರಾರಂಭದಿಂದಲೂ ಸಮಾಜವಾದದ ಧ್ಯೇಯ ಹೊಂದಿದೆ. ಸಮಾಜವಾದದಲ್ಲಿ ನಂಬಿಕೆಯಿಲ್ಲದವರು ಬಹುಮಂದಿ ಪಕ್ಷದಲ್ಲಿದ್ದರಿಂದ ಒಬ್ಬೊಬ್ಬರಾಗಿ ಪಕ್ಷ ಬಿಟ್ಟು ಹೋದರು. ಸಂಸ್ಥೆಯನ್ನ ಹಿಂದಿನ ಗುರಿ ಸಾಧನೆಗೆ ಪ್ರಯತ್ನಿಸಿದಾಗ ಮಾತ್ರ ಜನತೆಯ ಉತ್ಸಾಹದ ಸ್ವರ ಮತ್ತೆ ಕೇಳಿಬಂದುದು.

ಅಲ್ಪ ಆದಾಯಗಳಿಲ್ಲದ ಕೈಗಾರಿಕೆಗಳ ಅಭಿವೃದ್ಧಿ ಪಕ್ಷದ ಧ್ಯೇಯ. ಆದರೆ, ಮೇಲ್ಪಟ್ಟ ಆರ್ಥಿಕ ಕ್ಷೇತ್ರದ ಸೂತ್ರಗಳು ಸರಕಾರದ ವಲಯದ ಹತೋಟಿಯಲ್ಲಿರಬೇಕು. ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ನೆರವು ನೀಡಬೇಕು, ಹಂತ ಹಂತವಾಗಿ ನಿರುದ್ಯೋಗ ನಿವಾರಣೆಗಳೇ ಇಂಡಿಕೇಟಿನ ಇತರ ಧ್ಯೇಯಗಳು.

ಇವುಗಳನ್ನು ಸಮಾಜವಾದದ ಮೂಲಕ ಸಾಧಿಸುವುದೊಂದೇ ನಮಗಿರುವ ಮಾರ್ಗ. ಅದು ದೀರ್ಘಮಾರ್ಗವಲ್ಲ. ಕಷ್ಟಕಾರ್ಪಣ್ಯ ಹಾದು ಅದನ್ನು ಮುನ್ನಡೆಯುವಾಗ ಹಲವಾರು ಸವಾಲು—ಅಡ್ಡಿಯಂಗಳನ್ನು ಎದುರಿಸಬೇಕಾಗುತ್ತದೆ. ಸರಿಯಾದ ಮಾರ್ಗದಲ್ಲಿ ಕಷ್ಟದ ದುಡಿಮೆಯೊಂದೇ ದೇಶದ ಬಡತನ ಹಾಗೂ ಹಸಿವನ್ನು ನಿವಾರಿಸಬಲ್ಲುದು.

ಈ ಗುರಿಗಳ ಸಾಧನೆಗೆ ಜನತೆಯ ಪೂರ್ಣ ಸಹಕಾರ ಬೇಕು. ಎಷ್ಟೇ ವಿರೋಧ ಬರಲಿ, ತಮ್ಮ ಪಕ್ಷ ನಿರ್ಧಾರಿತ ಗುರಿಗಳನ್ನು ಬಿಟ್ಟು ಹೋಗುವುದಿಲ್ಲ.

ಶ್ರೀಮತಿ ಗಾಂಧಿಗೆ ಸಂಭ್ರಮದ ಸ್ವಾಗತ ದೊರೆಯಿತು. ಸಭೆಯಲ್ಲಿ ಲೋಕಸಭೆಯ ಇಂಡಿಕೇಟ್ ಅಭ್ಯರ್ಥಿಗಳಾದ ಶ್ರೀ ಕೆ. ಕೆ. ಶೆಟ್ಟಿ ಮತ್ತು ಶ್ರೀ ಟಿ. ರಂಗನಾಥ ಶೆಣೈ ಅವರೂ ಉಪಸ್ಥಿತರಿದ್ದರು.

ಉಡುಪಿ ಎಡಿಶನಲ್ ಸಿವಿಲ್ ಜಡ್ಜರ ಕೋರ್ಟಿನಲ್ಲಿ

S. C. 63/1970.

ಕೆ. ಗೋಪಾಲದಾಸ ಶೆಣೈ —ವಾದಿ

ಮತ್ತು

ಪ್ರತಿವಾದಿಯು: –

2) ನಾಸಿರ್ ಅಹಮ್ಮದ್—ಯೂಸೂಫ್ ಸಾಹೇಬರ ಮಗ; 3) ಫಕೀರ್ ಮಹಮ್ಮದ್ ಸಾಹೇಬ–ಅಬ್ದುಲ್ ಸಾಹೇಬರ ಮಗ— ಉಡುಪಿ ತಾಲೂಕು ಮುಲ್ಲಾರು ಗ್ರಾಮದಲ್ಲಿ ವಾಸವಿರುವವರು—

ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ವಾದಿಯು ಹಕ್ಕಿನ ಬಾಬ್ತು 1ನೇ ಪ್ರತಿವಾದಿಯು ಬಾಡಿಗೆಗೆ ಅನುಭವಿಸುವ ಮುಲ್ಲಾರು ಪಂಚಾಯತಿ ಬೋರ್ಡಿನ ನಂಬರ್ Door No. 2-157ನೇ ಕಟ್ಟಡವನ್ನು ನೀವು ಅಕ್ರಮವಾಗಿ ಸ್ವಾಧೀನ ಹೊಂದಿರುವದ್ರ ಕುರಿತು ನಿಮ್ಮ ಉಭಯರು ಸ್ವಾ. ಸದ್ರಿ ಕಟ್ಟಡದ ಸ್ವಾಧೀನತೆ ವಗೈರೆ ನಿವೃತ್ತಿಗಳನ್ನು ಕೇಳಿ ವಾದಿಯು ಹೂಡಿದ ಮೇಲ್ಕಂಡ ದಾವೆಯು ತಾರೀಕು 1-3-1971ಕ್ಕೆ ಇಟ್ಟದೆ. ಉದಾಹರಿಸುತಂತಾದ್ದದ್ದರೆ ಆ ದಿವಸ ಪೂರ್ವಾಹ್ನ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ವಾಬ್ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕುಂ ಪ್ರಕಾರ

K. Balachandra Rao
Advocate for Plaintiff
Udipi, 15-2-71.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 55/1968

ಕರುಣಾಕರ ಶೆಟ್ಟಿ —ವಾದಿ

ಮತ್ತು

1. ಕೊರಗಪ್ಪ ಶೆಡ್ತಿ, ಕೊರಗಾತಿ ಶೆಡ್ತಿ ಮಗಳು, 2. ಸಾಧು ಶೆಟ್ಟಿ, 3. ಆನಂದ ಶೆಟ್ಟಿ—1ನೇ ಪ್ರತಿವಾದಿಯ ಮಕ್ಕಳು—ಉಡುಪಿ ತಾಲ್ಲೂಕು ಹಲುವಳ್ಳಿ ಗ್ರಾಮದ ಆಲಡ್ಕ ಎಂಬಲ್ಲಿ ಇರುವವರು. —ಪ್ರತಿವಾದಿಗಳು

ಇವರೊಳಗೆ

ಸದ್ರಿ 1-2ನೇ ಪ್ರತಿವಾದಿಗಳಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ವಾದಿಯು ಶೋಭಕೃತು ಮತ್ತು ಕ್ರೋಧಿ ಸಂ||ಗಳ ಗೇಣಿ ವಗೈರೆ ಕೇಳಿ ವಾದಿ ಮೇಲೆ ಹೂಡಿದ ಮೇಲಿನ ವ್ಯಾಜ್ಯವು 1-2ನೇ ಪ್ರತಿವಾದಿಯ ಅಡ್ರೆಸು ನೋಟೀಸು ಬಗ್ಗೆ ತಾರೀಕು 22-2-71ಕ್ಕೆ ಮುಂದೂಡಲಾಗಿರುತ್ತದೆ ಎಂತ ಸದ್ರಿ ಪ್ರತಿವಾದಿಗಳಿಗೆ ಈ ಮೂಲಕ ತಿಳಿಸಲಾಗುತ್ತದೆ.

B. Ananda Shetty
Advocate for Plaintiff
Udipi, 12-2-71.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

R. A. 46/1969

ಲಕ್ಷ್ಮೀನಾರಾಯಣ ಹೆಬ್ಬಾರ್ — ಎಪ್ಪೇಲೆಂಟ್

ಮತ್ತು

ಸೂರಮ್ಮ ಶೆಡ್ತಿ ಕೂಡಾ— ಎದ್ರಿಗಳು

ಇವರೊಳಗೆ

ಆನಂದ ಶೆಟ್ಟಿ—ಸುಂದರಮ್ಮ ಶೆಡ್ತಿ ಮಗ, ಕುಂದಾಪುರ ತಾಲೂಕು ಸಿದ್ಧಾಪುರ ಗ್ರಾಮದಲ್ಲಿರುವ 2ನೇ ಎದ್ರಿಗೆ—

ಎಪ್ಪೇಲೆಂಟರು ದಾಖಲು ಮಾಡಿದ ಮೇಲ್ಕಾಣಿಸಿದ ಅಪೀಲು ನಿಮ್ಮ ಹಾಜರಾತಿ ಬಗ್ಗೆ 4-3-1971ಕ್ಕೆ ಇಟ್ಟಿರುತ್ತದೆ. ಆದುದರಿಂದ ನೀವು ಆ ದಿವಸ ಬೆಳಿಗ್ಗೆ ಘಂಟೆ 10ಕ್ಕೆ ಕೋರ್ಟಿನ ಮುಂದೆ ಹಾಜರಾಗಬೇಕು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಅಪೀಲು ತೀರ್ಮಾನ ಆಗಲ್ಪಡುತ್ತದೆ.

ವೈ. ದೂಮಣ್ಣ ಹೆಗ್ಡೆ, ಬಿ.ಎ., ಬಿ.ಎಲ್.
Advocate for Appellant
Udipi, 15-2-71.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O.S.No 342/1967

ಶ್ರೀಕೃಷ್ಣಾಪುರ ಮಠ ಉಡುಪಿ ಇದರ ಅಧಿಪತಿಗಳು—ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಯವರು —ವಾದಿಗಳು

ಅಂಣಪ್ಪ ಶೆಟ್ಟಿ ವಗೈರೆರು —ಪ್ರತಿವಾದಿಗಳು

ಸದರಿ ದಾವೆಯ 3ನೇ ಪ್ರತಿವಾದಿ ನಾರಾಯಣ ಸೆಟ್ಟಿ 6ನೇ ಪ್ರತಿವಾದಿಯು ಸುಶೀಲ ಸೆಡ್ತಿ, 7ನೇ ಪ್ರತಿವಾದಿಯು ಲೀಲ ಸೆಡ್ತಿ—ಅಂಣಪ್ಪ ಸೆಟ್ಟಿ ಮಕ್ಕಳು, 9ನೇ ಪ್ರತಿವಾದಿ ಮುಟ್ಟಿ ಸೆಡ್ತಿ, ಅಂಣಪ್ಪ ಸೆಟ್ಟಿ ಹೊಸ ಕಿಟ್ಟ ಸೆಟ್ಟಿ, 10ನೇ ಪ್ರತಿವಾದಿ, ಅಂಣಪ್ಪ ಸೆಟ್ಟಿ ಅಳಿಯ, ಉಡುಪಿ ತಾಲೂಕು ನಡ್ಸಾಲು ಗ್ರಾಮದಲ್ಲಿರುವವರಿಗೆ—

ವಾದಿಯು ನಿಮ್ಮ ಮೇಲೆ ಕೂಡಾ ವಾದಿಸಿ, ಮೇಲ್ಕಂಡ ಚಾಲಗೇಣಿ ಗೇಣಿ ಬಾಕಿಯ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 16-3-1971ನೇ ಬೆಳಿಗ್ಗೆ 11ಗಂಟೆಗೆ ಇಟ್ಟಿರುವದರಿಂದ ಸದರಿ ದಾವೆಯ ವಿಚಾರದಲ್ಲಿ ನಿಮ್ಮ ಉದಾಹರಣೆಯು ಇರುವಲ್ಲಿ ನೀವು ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗಿ ಜ್ವಾಬು ಮಾಡಿಕೊಳ್ಳಬಹುದಾಗಿಯೂ ತಪ್ಪಿದಲ್ಲಿ ಸದರಿ ದಾವೆಯು ನಿಮ್ಮ ಗೈರ್ ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಕೋರ್ಟು ಹುಕುಮು ಪ್ರಕಾರ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

S. Rajagopal Achar, B.A.B.L.
Advocate for Plaintiff
Karkala. 13-2-71.

ಉತ್ತರ ಕನ್ನಡ ಜಾನಪದ ಗೀತೆಗಳಲ್ಲಿ

ವಿಕೃತ ಕಾಮ

[ಎರಡನೇ ಪುಟದಿಂದ]

ಮಾವ ಕೇಳಿದರೆ ಮುನಿವನು ತಂಮಯ್ಯ ಎಂದು ಸಾರೆ ಸಾರೆ ಹೇಳಿದರೂ— 'ಊ ಹುಂ '!

ಮಾವ ಮುನಿದರೆ ಸೊಂಟನ ನೆವಳಕೊಳುವೆ ಯಾರೆಂತೆಂದರೂ ಪಾಪಕುಂಡವೇ ಪುಣ್ಯದಾವಾಸ, ನರಕವೇ ಸ್ವರ್ಗ, ತಾನೇ ಸತ್ಯ ಎಂನುವ ಜನಕ್ಕೆ ಸದ್ಬುದ್ಧಿ ಅದ್ಹೇಗೆ ಬರಬೇಕು? ಕಾಮಾಂಧತೆಯ ಮುಂದೆ ಲೋಕವಿಲ್ಲ! ಧರ್ಮವಿಲ್ಲ! ಮಾನದ ಅರಿವಿಲ್ಲ ಕೂಡ!! ಅದೇ ಉದ್ಧಟತನ; ನಿರ್ಲಕ್ಷ್ಯತನ! ಮನುಷ್ಯತ್ವಕ್ಕೆ ಹೇಳದ ನಿರ್ಲಜ್ಜತನ!! ಅಲ್ಲದವರ ಕೂಡ ಮಾತಿಗೆ ಮಾತು ಮಥಿಸಿದರೆ ಕೇಡೆಂದು ಅಕ್ಕಂಮ ತೆಪ್ಪಗಾದಳು!

ಇಂನ್ನೊಂದೆಡೆ:—

ನೀರೆಲ್ಲದ ಕೆರೆಯಲ್ಲಿ ಬುಡವೆಲ್ಲದ
ಗಿಡ ಹುಟ್ಟಿ
ತೊಟ್ಟಿಲ್ಲದ ಹೂವು ಅರಳಿತ್ತು|
ಸ್ವಾಮಿ ಮಗಳು
ಬಳ್ಳೆಲ್ಲದ ದಂಡಿ ಮುಡುದಿತ್ತು|
ಸ್ವಾಮಿ ಮಗಳು
ಗಂಡೆಲ್ಲದ ಮಗನ ಪಡೆದಿತ್ತು||

ಕುವರಿಯೊಬ್ಬಳ ಕುಕರ್ಮವಂನು ಕಬ್ಬಿಗಿತಿ ಕನಿಕರದಿಂದ ಬಂಣಿಸುತ್ತಿದ್ದಾಳೆ. ಮಗುವಿನ ಅವ್ಯವಹಾರದಿಂದಾದ ಅಚಾತುರ್ಯವೊಂದು ಆಕೆಯ ಅಂತಃಕರಣವಂನು ಅನುತಾಪದಿಂದ ಒದ್ದೆಯಾಗಿಸಿದೆ!

ಹೆಂಣಿಗೆ ಗಂಡು, ಗಂಡಿಗೆ ಹೆಂಣು ಮಾಯೆಯೆಂಬುದೇನೋ ನಿಜ! ಆದರೂ ಈ ಮಾಯೆಯಂನು ಧರ್ಮದಂತೆ ಜಯಿಸುವುದೇ ಸಕಲರ್ಗ ಹಿರಿಮೆ! ಶಾಸ್ತ್ರೋಕ್ತ ವಿವಾದವಾದ ಪತಿ ಕೊನೆತನಕ ಹೆಂಣಿಗೆ ನೆರಳಾಗಿರಲೇ ಬೇಕು. ಮಂಗಳ ಸೂತ್ರದ ಮೌಲ್ಯ ಅಂಥದ್ದು! ಬಂದ ಹಾಗಿನದು ಈ ಹೆಂಣು ಇದಂನೆಲ್ಲ ಅರಿಯದೇ ಹಾದಿ ತಪ್ಪಿದಳು! ನೀರಿಲ್ಲದ ಕೆರೆಯಾದಳು! ಬುಡವಿಲ್ಲದ ಗಿಡದಂತಾದಳು! ತೊಟ್ಟಿಲ್ಲದ ಹೂವಿಗೆ ಸಮನಾದಳು! ಬಳ್ಳಿಯಿಲ್ಲದ ದಂಡೆಯಾದಳು! ಇಂತು ತಂನ ಬಾಳಿಗೊಂದು ಕಪ್ಪು ಪರದೆ ಎರೆದುಕೊಂಡಳು!

ನಿಜಕ್ಕೂ ಅಷ್ಟು ಸಮರ್ಥನೀಯವೂ, ಅಪ್ರತಿಮವೂ, ಅನವರ್ಘ್ಯವೂ ಆದ ದೃಷ್ಟಾಂತಮಾಲಿಕೆ! ಗಂಡ-ಹೆಂಡಿರಲ್ಲಿಯ ಸ್ನೇಹ (ಸಂಬಂಧ)ವೆಂದರೆ ಸ್ವರ್ಗದಲ್ಲಿಯೂ ಬಿಡಲಾರದ ನಂಟು ಎಂನುವುದುಂಟು! ಈ ಒಲವಿನಲ್ಲಿ, ಈ ಸ್ಥಿರತೆಯಲ್ಲಿ ದೊರೆಯತಕ್ಕಂಥ ಸೌಖ್ಯ; ಮೇಲಾದ ತೃಪ್ತಿ ಬೇರೆಲ್ಲೂ ದೊರೆಯದು! ಇಂಥೊಂದು ಅನಿವಾರ್ಯವಾದ ಪರಂಪರೆಯನ್ನು ಹರಿದೊಗೆದಲ್ಲಿ (ಮಾವ ಜೀವಕ್ಕೂ ನೆಂಮದಿ ಪ್ರಾಪ್ತವಾಗಲಾರದು. ಇಂಥ ಶಿಷ್ಟಾಚಾರವಂನು ಗಾಳಿ ತೂರಿ, ಅಸಭ್ಯತೆಯಂನೇ ಅಚ್ಚುಮೆಚ್ಚಾಗಿ ಅಪ್ಪಿಕೊಂಡಲ್ಲಿ— ಅದು ಸಂತಸವೂ ಕೊಡದ, ಯಾರಿಗೆ ಯಾರೋ ಎಂನುವಂಥ ಅಸಹಾಯಕ, ಅಶಕ್ತ ಸ್ಥಿತಿಗಿಳಸುವ ದುಡುಕು ವ್ಯವಹಾರವೇ ಸರಿ.

ವಿಶಾಲವಾದ ಸಮಾಜದಲ್ಲಿ ಇಂಥವರೂ ಬದುಕಿದ್ದಾರೆ! ಬದುಕುವುದೇನು ಬಂತು; ಬದುಕಿಯೂ ಸತ್ತಿದ್ದಾರೆ! ಮೊದಲು ಭೋಗ ತೃಪ್ತಿಯಾಸೆ ಹುಟ್ಟಿನರೆ ಪರಿಣಾಮ ಸರ್ವ ಪರಿತ್ಯಾಗದ— ನಿಸ್ಸಾರತೆಯ ಅರಿವು ಹುಟ್ಟಿಸುತ್ತದೆ. ಎಂದರೆ ಸರ್ವರಿಗೂ ಬೇಡವಾದ ಮೇಲೆ ಆಗುವುದೇ ಅಷ್ಟು ತಾನೇ?

ಹಾಗೆ ನೋಡಿದರೆ ಹೆಂಣುಗಳಂನು ಮಿತಿತಪ್ಪಿ ಹೊಗಲುವಂತಿಲ್ಲ. ಅವರ ತಾಟಕಿತನ (ಕೊಂಮಣಿ ತನ)ವೇ ಎಷ್ಟೋ ಗಂಡುಗಳು ಕೆಡಲು ಕಾರಣವೆಂಬುದಂನೂ ಅಲ್ಲಗಳೆಯುವಂತಿಲ್ಲ. ಹಾಡುಗಾತಿ ಇದಂನೂ ಅರಿಯದೇ ಇಲ್ಲ. ಅಲ್ಲವೇ ಇದು? ಹೆಂಣು ತಂನ ಧರ್ಮವಂನು ಸಮನಾಗಿ ಕಾಪಾಡಿಕೊಂಡಿದ್ದರೆ ಗಂಡೇನು ಮಾಡೀತು? ಅವರ ನಿರ್ಬಲತೆಯೋ ಇಷ್ಟೆಲ್ಲ ಹಗರಣಕ್ಕೆ ಕಾರಣ ತಾನೇ? ಅವಕ್ಕೇ ಬಿರುನುಡಿಯಿಂದ ಅಂಥ ಬಿಂನಾಣಗಿತ್ತಿಯರಿಗೆ ಎಚ್ಚರಿಕೆ ಕೊಡಲಾಗುತ್ತಿದೆ:—

ಕೊಂಮಣಿಗಿತ್ತೆಂಣೆ ನಂಮನಿಗೆ ಬರು
ಬೇಡ
ನಮ್ಮಂಣದೀರು ಕೆಣಕೂರು| ಮಿಣ
ಕೂರು
ಎಲೆಯ ಕೊಟ್ಟೆ ಮೊಲೆಯ ಹಿಡಿ
ಮಾರು||

ಪ್ರಾಯದ ಗಂಡಸರಿದ್ದಲ್ಲಿ ಹೀಗೆಲ್ಲ "ವಯ್ಯಾರ" ತೋರುವುದು ಹೆಂಡ ಕುಡಿಸುವುದೂ ಒಂದೇ ತಾನೇ? ಗಂಡು ಜನಾಂಗದ ಅತ್ಯಂತ ಕೃಶ ಪ್ರಕೃತಿಯ ವಾಸ್ತವ ಚಿತ್ರಣವು ಇಲ್ಲಿ ಪರೋಕ್ಷವಾಗಿಯಾದರೂ ಅದೆಷ್ಟು ಅಂಚಿತವಾಗಿ ಮೂಡಿದೆ? ವಿಕೃತ ಕಾಮದ ಒಂದು ಮುಖ ಇದು! ಕಟು ಸತ್ಯವುಳ್ಳ ಸಂಗತಿ ಅಪ್ರಿಯವೆಂನಿಸುತ್ತಾದರೂ ನೈತಿಕ ಪಾವಿತ್ರ್ಯವಂನುಳಿಸಿ ಬೆಳಸಿಕೊಳ್ಳಲು ಅದು ಹೇಳಲೇಬೇಕಾದ್ದು! ಸಮಾಜಕ್ಕೆ ಇದರಿಂದ ಹಿತವಿದೆ. ಮಾನವ ದೌರ್ಬಲ್ಯಗಳಂನು ಅಷ್ಟು ಸಮಂಜಸವಾಗಿ ಹೃದಯಕ್ಕೂ, ಬುದ್ಧಿಗೂ ನಾಟುವಂತೆ ಹರಿತವಾದ ವಿಡಂಬನೆಯಿಂದ, ಭೂಷಣವಾದ ಉಪಮೆ ದೃಷ್ಟಾಂತಗಳಿಂದಲೂ ಪರೋಕ್ಷವಾಗಿ, ಇಲ್ಲವೇ ಅಪರೋಕ್ಷವಾಗಿಯೂ ಜೊತೆಗೇ ಉತ್ತಮ ಬದುಕಿನ ಕುರಿತು ದಿವ್ಯ ಸಂದೇಶವಂನು ನೀಡಿರುವ ಜಾನಪದ ಗೀತೆಗಳ ಅಧ್ಯಯನ–ಮನನವು ಪ್ರತಿಯೊಂದು ಆತ್ಮಕ್ಕೂ ಬೆಳಕಂನು, ಜಾಗೃತಿಯಂನು, ಚಿಂತಿಯಂನ್ನು ನೀಡುತ್ತದೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ!

ಮಾನವಂತಿ ಹೆಂಣಿನ ಉದಾತ್ತ ನೀತಿಯಂನು ಚಿತ್ರಿಸುತ್ತಿದ್ದಾಳೆ ಹಾಡುಗಾತಿ:-

ಅತ್ತೆಮನೆಯ ಸೊಸೆಂದಿರು ಎತ್ತಿನ
ಮೇಲೆ ಹೋಗ್ತಾರೆ
ಕಟ್ಟೆಯಮೇಸೊಬ್ಬ ಬಣಜಿಗ|ಏನಂಬನೆ
ಸಾವಿರ ಕೊಡ್ತೆ ಇಳಿಹೆಂಣೆ||

ಎಷ್ಟೊಂದು ಪಾಪಪೂರ್ಣ ವಿಚಾರ! ಕಾಮದ ವಿಕಾರತೆಯೆಂದರೇನೆ ಇದು! ಹೆಂಣಿನ ಮುಂದೆ ಯಾವುದೂ ಅಲ್ಲ. 'ಥೂ ತ್! ಹಾಳಾಗ' ಎಂದಳು ಆ ಹೆಂಣು ಸಹಿಸಲಾಗದ ಕೋಪದಿಂದ:—

ಸಾವಿರ ಕೊಟ್ಟರೂ ನಂನ ಕಾಲುಂಗಿಲ
ಬೆಲೆಯಾಗ
ಕತ್ತೆಯಂತವನೆತೊಲಗ್ಹೋಗ||

ಸಾಕಲ್ಲವೇ ಉಡುಗೊರೆ? "ಛೀ" ಎಂದು ಉಗುಳಿದಳು! ವೀರ್ಯ, ಗಾಂಭೀರ್ಯ, ಸಚ್ಚಾರಿತ್ರ್ಯಗಳೆಂಬರೆ ಇದೇ ಅಲ್ಲವೇ? ಧರ್ಮರಕ್ಷಕರೆಂದರೆ ಇಂಥಹರು ತಾನೇ? ಇಂಥ ತಾಯಂದಿರು ಜೀವಿಸಿರುವವರೆಗೆ ಮಾತ್ರ ಲೋಕದಲ್ಲಿ ಯಥಾಪ್ರಕಾರ ಬೆಳಕಿರುತ್ತದೆಂಬುದಂನ ಎಂದೂ ಸರ್ವಥಾ ಮರೆಯಬಾರದು!

[ಪ್ರಜಾರಾಜ್ಯ ಸಂಚಿಕೆಗೆ ಬಂದುದು]

ಸಾಂದ್ರ ಬೇಸಾಯಕ್ಕೆ ವಿಸ್ತೃತ ಯೋಜನೆ

ಕೃಷಿ ಕ್ಷೇತ್ರದಲ್ಲಿ ಗುರಿ ಮೀರಿದ ಸಾಧನೆ ರಾಜ್ಯದ ಅಭಿಮಾನ್ಯ ನಾಲ್ಕನೆಯ ಯೋಜನೆಯಲ್ಲಿ ಕೃಷಿ ಸೇವೆಯನ್ನು ಮತ್ತಷ್ಟು ಸಾಂದ್ರಗೊಳಿಸುವ ಪ್ರಯತ್ನ. ಈ ಉದ್ದೇಶಕ್ಕಾಗಿ **24** ಕೋಟಿ ರೂಪಾಯಿ ವೆಚ್ಚಕ್ಕೆ ಅವಕಾಶ.

ಕೈಗೊಳ್ಳಲಿರುವ ನಾನಾ ಸಾಂದ್ರ ಕಾರ್ಯಕ್ರಮಗಳ ಫಲವಾಗಿ ರಾಜ್ಯದ ಆಹಾರ ಉತ್ಪಾದನೆ **62** ಲಕ್ಷ ಟನ್ನುಗಳಿಗೆ ಮುಟ್ಟುವ ನಿರೀಕ್ಷೆ ಇದೆ. ಅಧಿಕ ಇಳುವರಿ ತಳಿಗಳ ಕೃಷಿಗೆ ಈ ಒಳಪಟ್ಟಿರುವ **2·98** ಲಕ್ಷ ಹೆಕ್ಟೇರು ವಿಸ್ತೀರ್ಣ **5·8** ಲಕ್ಷ ಹೆಕ್ಟೇರುಗಳಿಗೆ ವ್ಯಾಪಿಸುವ ಗುರಿ.

ಕೃಷಿ ಅಭಿವೃದ್ಧಿಯ ಯೋಜನಾ ವೆಚ್ಚದಲ್ಲಿ ಸುಧಾರಿಸಿದ ಬೀಜ, ರಸಾಯನಿಕ ಗೊಬ್ಬರ, ಸಸ್ಯ ಸಂರಕ್ಷಣೆ, ಕೃಷಿ ಉಪಕರಣಗಳು, ವ್ಯವಸಾಯ ಶಿಕ್ಷಣ— ಇತ್ಯಾದಿ ಕಾರ್ಯಕ್ರಮಗಳ ವೆಚ್ಚದ ಪಾಲು **18·85** ಕೋಟಿ ರೂಪಾಯಿಗಳು.

(ಮೈಸೂರು ಸರಕಾರದ ವಾರ್ತಾ ಮತ್ತು ಪ್ರಚಾರೋದ್ಯಮ ಇಲಾಖೆಯಿಂದ ಪ್ರಕಟಿತ)

NAVAYUGA 18-2-1971

Registered with the Registrar of News Papers for India under No. R. N. 3546/'67

REGD. No. B. G. 176
LICENCE No. 33
Licensed to Post without Prepayment

ಭವಿಷ್ಯನಿರ್ಣಾಯಕ

(ಒಂದನೇ ಪುಟದಿಂದ)

ಶ ಸುಖ ಪಡೆಯುವುದು ಸಾಧ್ಯವಿಲ್ಲ. ಆಕೆ ಇದ್ದವರನ್ನೂ ಇಲ್ಲದವರನ್ನೂ ಏಕ ಸಮವಾಗಿ ಹಿಂಡುತ್ತಲೇ ಹೋಗುತ್ತಾರೆ. ಯೂರ ಆಸ್ತಿ ಪಾಸ್ತಿಗಳಿಗೂ ವಿತ್ತ—ಜೀವಿತಗಳಿಗೂ ಸಂರಕ್ಷಣೆಯೆಂಬುದನ್ನು ಆಕೆ ಕೊಡುವುದಿಲ್ಲ.

ಉಳಿದವರು ಏನು ಮಾಡುತ್ತಾರೆ ಎಂಬ ಪ್ರಶ್ನೆ.

ಇಂಡಿಕೇಟು ಸ್ಪಷ್ಟ ಬಹುಮತ ಗಳಿಸುವುದಿಲ್ಲ. ಚುನಾವಣಾ ನಂತರ ಸಂಯುಕ್ತ ಸರಕಾರದ ಸ್ಥಾಪನೆ ಅನಿವಾರ್ಯ.

ಆಗ, ವಾಮಪಂಥೀಯರ ಕೈಗಳಿಗೆ ಅಧಿಕಾರವು ನೀಡಿ ದೇಶವನ್ನು ಹಿಂಸೆಯ ತಾಂಡವವನ್ನಾಗಿ ಶೋಷಣೆಯ ಕಣವನ್ನಾಗಿ ಅಭದ್ರತೆಯ ದೇಶವನ್ನಾಗಿ ಉಳಿಸಿಕೊಳ್ಳಬೇಕೆ?

ಸಮಾಜವಾದದಲ್ಲಿ ನಂಬಿಕೆಯಿದೆಯೆನ್ನುವವರ ಕೈಗಳಿಗೆ ಅಧಿಕಾರ ನೀಡಿ ಪರಿಸ್ಥಿತಿ ಸುಧಾರಿಸುವುದು ಸಾಧ್ಯವಾದೀತೇ ಎಂದು ನೋಡಬಾರದೇಕೆ?

ಜನ ವಿವೇಚನೆಯಿಂದ ಮತನೀಡಬೇಕು ತುಸುವಾದರೂ ಜಾರಿದರೆ ಎದ್ದೇಳದಂತೆ ಸೊಂಟ ಮುರಿದೀತು. ಇದು ಭವಿಷ್ಯ ನಿರ್ಣಾಯಕವೆನ್ನಬಹುದಾದ ಚುನಾವಣೆ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

P. and S. C. No 1/1971.

1 ಭೋಜ ಪೂಜಾರಿ 2 ಅಕ್ಕು ಪೂಜಾರ್ತಿ 3 ಸಂಕ ಪೂಜಾರಿ 4 ಗಿರಿಯಪ್ಪ ಪೂಜಾರಿ 5 ಕಾವು ಪೂಜಾರ್ತಿ 6 ಅಕ್ಕಮ್ಮ ಪೂಜಾರ್ತಿ —ಶೇಷ ಪೂಜಾರಿ ಮಕ್ಕಳು, ಉಡುಪಿ ತಾಲ್ಲೂಕು ಶೀಲಾವರ ಗ್ರಾ.ಮ.ದ ವಂಡನಕುದ್ರು

—ಅರ್ಜಿದಾರರು

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದ್ರೆ—

ಮೇಲ್ಕಂಡ ಅರ್ಜಿದಾರರ ತಂದೆ ಮೃತ ಶೇಷ ಪೂಜಾರಿಯು ಬಾಬ್ತು ಅರ್ಜಿಯ A ಶೆಡ್ಯೂಲಿನಲ್ಲಿ ಕಾಣಿಸಿರುವ ಅಯವೇಜುಗಳನ್ನು ವಸೂಲಿ ಪಡೆಯುವರೆ ತಾವು ಹಕ್ಕುದಾರರು ವ ವಾರೀಸುದಾರರೆಂತಲೂ ಆ ಬಗ್ಗೆ ತಮಗೆ ವಾರೀಸು ಸರ್ಟಿಫಿಕೇಟು ಕೊಡಿಸುವಂತೆ ಸದ್ರಿ ಅರ್ಜಿದಾರರು ಅರ್ಜಿ ಮಾಡಿಕೊಂಡಿರುವುದರಿಂದ ಆ ಕುರಿತು ಯಾರಿಗಾದರೂ ಆಕ್ಷೇಪಣೆ ಯಿರುವಲ್ಲಿ ಅದನ್ನು ತಾ. 22-2-1971 ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Varadaraya Pai
Advocate for petitioners.

ಉಡುಪಿ, 28.1.1971

READ & ADVERTISE IN NAVAYUGA WEEKLY

ಭಾರತದ ವಸತಿ ಯೋಜನೆಯ ಪ್ರಗತಿ

ಚತುರ್ಥ ಪಂಚವಾರ್ಷಿಕ ಯೋಜನೆ ಆರಂಭವಾಗುವ ವರೆಗೆ ಬಹುತೇಕ ನಗರ ಪ್ರದೇಶದಲ್ಲಿ ಸರ್ಕಾರಿ ಹಾಗೂ ಖಾಸಗಿ ವಲಯಗಳ ಸಹಾಯದಿಂದ 5,550 ಕೋಟಿ ರೂಪಾಯಿ ಬಂಡವಾಳ ಹೂಡಿ ಸುಮಾರು 2·9 ಕೋಟಿ ವಸತಿ ಘಟಕಗಳನ್ನು ರಚಿಸಲಾಗಿದೆಯೆಂದು ಅಂದಾಜು ಮಾಡಲಾಗಿದೆ.

ದೇಶದ ವಸತಿ ನಿರ್ಮಾಣ ಪರಿಸ್ಥಿತಿಯ ಸುಧಾರಣೆಗಾಗಿ ಸರ್ಕಾರವು ಅನೇಕ ಕ್ರಮಗಳನ್ನು ಕೈಗೊಂಡಿದೆ. ವಿವಿಧ ವಸತಿ ಯೋಜನೆ ಹಾಗೂ ಕೊಳಚೆ ಪ್ರದೇಶ ನಿರ್ಮೂಲನಕ್ಕಾಗಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ 1969ನೇ ಇಸವಿ ಮಾರ್ಚಿ ಮಾಸಾಂತ್ಯದ ವರೆಗೆ 279·52 ಕೋಟಿ ರೂಪಾಯಿ ಕೊಟ್ಟಿತ್ತು.

ನಗರ ಪ್ರದೇಶಗಳಲ್ಲಿ ಕೈಗಾರಿಕಾ ಕಾರ್ಮಿಕರು ಮತ್ತು ದುರ್ಬಲ ವರ್ಗದವರಿಗಾಗಿ ವಸತಿಯೋಜನೆ, ಅಲ್ಪ ವರಮಾನ ಹಾಗೂ ಮಧ್ಯಮ ವರಮಾನ ವಸತಿಯೋಜನೆಗಳು, ಕೊಳಚೆ ನಿರ್ಮೂಲನ ಮತ್ತು ಸುಧಾರಣಾ ಯೋಜನೆ, ಭೂ ಸ್ವಾಧೀನ ಮತ್ತು ಅಭಿವೃದ್ಧಿ ಯೋಜನೆ, ರಾಜ್ಯಸರ್ಕಾರ ಉದ್ಯೋಗಿಗಳಿಗೆ ಬಾಡಿಗೆ ವಸತಿ ಯೋಜನೆಗಳನ್ನು ಆರಂಭಿಸಲಾಗಿದೆ.

1969ನೇ ಇಸವಿ ಡಿಸೆಂಬರ್ ಮಾಸದ ವರೆಗೆ ಗ್ರಾಮಾಂತರ ವಸತಿ ಯೋಜನೆಗೆ 12ಕೋಟಿ ರೂಪಾಯಿಯನ್ನು, ಪ್ಲಾಂಟೇಷನ್ ಕಾರ್ಮಿಕರ ವಸತಿ ಯೋಜನೆಗೆ 37.55ಲಕ್ಷ ರೂಪಾಯಿಯನ್ನೂ ಕೇಂದ್ರ ಸರ್ಕಾರ ನೀಡಿತು.

ಈ ಎಲ್ಲಾ ಯೋಜನೆಗಳ ಆಶ್ರಯದಲ್ಲಿ ಸುಮಾರು 5 ಲಕ್ಷ ವಸತಿ ಘಟಕಗಳನ್ನು ರಚಿಸಲಾಗಿದೆ. 22 ಸಹಸ್ರ ಎಕರೆ ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಇದರಲ್ಲಿ ಸುಮಾರು 14 ಸಹಸ್ರ ಎಕರೆ ಭೂಮಿಯನ್ನು ವಸತಿ ನಿರ್ಮಾಣಕ್ಕಾಗಿ ಅಭಿವೃದ್ಧಿಪಡಿಸಲಾಗಿದೆ.

ಚಕ್ರನಿಧಿ ನಿರ್ಮಾಣ

ಬೃಹತ್ ವಸತಿ ಯೋಜನೆಗಾಗಿ 200 ಕೋಟಿ ಚಕ್ರ ನಿಧಿಯ ನಿರ್ವಹಣೆಗಾಗಿ 1970ನೇ ಇಸವಿ ಏಪ್ರಿಲ್‌ನಲ್ಲಿ "ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಹಣಕಾಸು ಕಾರ್ಪೊರೇಷನ್" ಸ್ಥಾಪಿಸಿದ್ದು ಪ್ರಗತಿಯ ಹೆಜ್ಜೆಯಾಗಿದೆ. ಕೇಂದ್ರ ವಸತಿಶಾಖೆ ಪ್ರಸಕ್ತ ವರ್ಷದ ವೆಚ್ಚಕ್ಕಾಗಿ 20 ಕೋಟಿ ರೂಪಾಯಿ ಹೊಂದಿದೆ; ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಬಂದಿರುವ ಅನೇಕ ವಸತಿ ಯೋಜನೆಗಳನ್ನು ಪರಿಶೀಲಿಸಿದೆ. ವಸತಿ ಕಾರ್ಪೊರೇಷನ್ ಸಹಾಯಧನ ನೀಡಿಕೆಯನ್ನು ಸಿದ್ಧಪಡಿಸುತ್ತಿದೆ.

ಕೇಂದ್ರ ವಸತಿ ಶಾಖೆಯು ಗ್ರಾಮಾಂತರ ವಸತಿ ನಿರ್ಮಾಣದ ಮಹತ್ವಪೂರ್ಣ ಯೋಜನೆಯನ್ನು ಸಿದ್ಧಪಡಿಸಿದೆ. ಈ ಯೋಜನೆಯ ಪ್ರಕಾರ ರಾಜ್ಯಸರ್ಕಾರಗಳು ಭೂಹೀನ ಕೃಷಿ ಕಾರ್ಮಿಕರಿಗೆ ಉಚಿತ ವಸತಿ ನಿವೇಶನ ನೀಡುತ್ತವೆ. ಕೇಂದ್ರ ಸರ್ಕಾರವು ಆಯ್ಕೆಯಾದ ಜಿಲ್ಲೆಗಳಲ್ಲಿ ವಸತಿ ನಿರ್ಮಾಣಕ್ಕೆ ಸಹಾಯಧನ ನೀಡುತ್ತದೆ. ಈ ಯೋಜನೆಯ ವಿವರಗಳು ಸಿದ್ಧವಾಗುತ್ತಿವೆ.

ಸರ್ಕಾರಿ ವಲಯದ ಹಿಂದೂಸ್ತಾನ್ ವಸತಿ ಕಾರ್ಖಾನೆಯು 1969—70ನೇ ಸಾಲಿನಲ್ಲಿ 1.98ಕೋಟಿ ರೂಪಾಯಿ ವಹಿವಾಟು ನಡೆಸಿದೆ; ಹಾಗೂ 26ಲಕ್ಷರೂಪಾಯಿ ಲಾಭಗಳಿಸಿದೆ. ಇವೆಲ್ಲವೂ ಹೊಸ ದಾಖಲೆಗಳಾಗಿವೆ.

ಕಾರ್ಯಸಾಧನೆ

ಕೇಂದ್ರ ವಸತಿ ಶಾಖೆಯ ಆಡಳಿತಕ್ಕೊಳಪಟ್ಟಿರುವ ರಾಷ್ಟ್ರೀಯ ವಸತಿ ನಿರ್ಮಾಣ ಕಾರ್ಪೊರೇಷನ್ ಪ್ರಸಕ್ತ ವರ್ಷದಲ್ಲಿ 8 ಕೋಟಿ ರೂಪಾಯಿ ಮೌಲ್ಯದ ನಿರ್ಮಾಣ ಕಾರ್ಯ ಪಡೆದುಕೊಂಡಿದೆ. ಇದರಿಂದ ಉತ್ತಮ ಲಾಭಗಳಿಸಿ ದಾಖಲೆ ಸ್ಥಾಪಿಸುವ ನಿರೀಕ್ಷೆಯಿದೆ.

ಕೇಂದ್ರ ವಸತಿ ಶಾಖೆಯು 1970-71 ರಲ್ಲಿ ಮಾಡಿರುವ ಕಾರ್ಯಸಾಧನೆಯ ವಿವರ ಹೀಗಿದೆ:—ದೆಹಲಿಯ ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ದೀರ್ಘಾವಧಿ ಭೋಗ್ಯದ ಹಕ್ಕು ನೀಡಿಕೆ; ಅಲ್ಪವೆಚ್ಚದಲ್ಲಿ ಶೀಘ್ರವಾಗಿ ವಸತಿ ನಿರ್ಮಿಸುವ ಬಗ್ಗೆ ಅಧ್ಯಯನ, ರಾಷ್ಟ್ರೀಯಕಟ್ಟಡ ಸಂಸ್ಥೆಯಲ್ಲಿ ವಸತಿ ಮತ್ತು ನಗರಾಭಿವೃದ್ಧಿಗಾಗಿ ಸಂಶೋಧನೆ; ಮಹಾತ್ಮಾಗಾಂಧಿ ಸ್ಮಾರಕ ನಿರ್ಮಾಣಕ್ಕಾಗಿ ಬಿರ್ಲಾಭವನದ ಸ್ವಾಧೀನ; ವಿಮಾನನಿಲ್ದಾಣ ಮತ್ತು ಟೆಲಿವಿಷನ್ ಕೇಂದ್ರಗಳಿಗಾಗಿ ಹೊಸಕಟ್ಟಡಗಳ ನಿರ್ಮಾಣ; ದೆಹಲಿ ಅಭಿವೃದ್ಧಿ ಸಂಸ್ಥೆಯಿಂದ ಬೃಹತ್ ಪ್ರಮಾಣದ ವಸತಿ ಯೋಜನೆ.

ಪ್ರಸನ್ನವಾಗಿ ಕಲಿಸುವದು ಕವಿಗಳ ಉದ್ದೇಶವಾಗಿರುತ್ತದೆ. ಮತ್ತು ಆಗಬೇಕು.

ಯಾವಾಗಲೂ ವಾಸ್ತವಿಕತೆಯಿಂದ ಆದರ್ಶವು ಉಗಮವಾಗುತ್ತದೆ. (ಕಾರ್ಲೈಲ್.)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77.

HOTEL SHIVAPRASAD
High Class Boarding, Lodging & Restaurant
COONDAPUR, S. K.

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ
ಮನೆ-ಮದ್ದು
ಬೆಲೆ: ರೂ. 2-00

ಪ್ರತಿಯೊಬ್ಬನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ
ಗೀತೆಯ ಕೈಗನ್ನಡಿ
ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy
ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.

-ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ. ದ. ಕ.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 24

NAVAYUGA

25—2—1971

ಚಾರುಚಯನ

ತಪ್ಪು ಲೆಕ್ಕಾಚಾರ - ತಪ್ಪು ದಾರಿ

ಇಂಡಿಕೇಟಿಗರ ಹೆಬ್ಬಯಕೆಯೀಗ ಜನರ ಕಣ್ಮುಂದಿದೆ.

ರಾಜ್ಯ ಮಟ್ಟದ ನಾಯಕ ಶ್ರೀ ಕೆಂಗಲ್ ಭವಿಷ್ಯ ನುಡಿದಿದ್ದಾರೆ. ಇನ್ನು ಐದಾರು ತಿಂಗಳುಗಳೊಳಗೆ ಕರ್ನಾಟಕದಲ್ಲಿ ಇಂಡಿಕೇಟ್ ಆಡಳಿತ ಬರುತ್ತದೆ.

ಇದೇನೂ ಅಸಂಭವವೆಂದು ಹೇಳಲಾಗದು. ದೇಶದ ಇಂದಿನ ರಾಜ್ಯಕಾರಣದಲ್ಲಿ ಏನೂ ಸಾಧ್ಯವಾಗುತ್ತದೆ.

ಈಗಾಗಲೇ ಇಂಡಿಕೇಟಿಗೆ ಎಮ್ಮೆಲ್ಲೆಗಳ ಸಂಖ್ಯೆ ೫೦ನ್ನು ಮೀರಿದೆ. ರಾಜ್ಯದ ಪ್ರಸವಾ ಮತ್ತು ಸಿಂಡಿಕೇಟ್‌ಗಳಿಂದ ಪಕ್ಷಾಂತರ ನಡೆಯುತ್ತಲೇ ಇದೆ.

ಈ ಪಕ್ಷಾಂತರಕ್ಕೆ ಇಂಡಿಕೇಟ್ ತನ್ನಿಂದ ಸಾಧ್ಯವಾದಷ್ಟು ಒತ್ತಾಸೆಯನ್ನು ನಾಲ್ಕೂ ನಿಟ್ಟಿನಿಂದ ನೀಡುತ್ತಲೇ ಬರುತ್ತಿದೆ.

ಶ್ರೀ ಕೆಂಗಲ್ಲರ ಭವಿಷ್ಯ ಇದುವರೆಗೆ ಸತ್ಯವಾದ ಉದಾಹರಣೆಗಳು ಅಪರೂಪ. ಆದರೆ, ರಕ್ಷೆ ಮತ್ತು ಜ್ಯೋತಿಷ್ಯಗಳಲ್ಲಿ ಆತ್ಮವಿಶ್ವಾಸಕ್ಕೂ ಮಿಗಿಲಾದ ನಂಬಿಕೆಯಿಟ್ಟಿರುವ ಇಂಡಿಕೇಟ್ ನಾಯಕರು ಜ್ಯೋತಿಷಿ ಮುಖದಿಂದ ಕೇಳಿದ ಭವಿಷ್ಯವನ್ನೇ ಜನತೆಯ ಮುಂದೆಯೂ ಇಟ್ಟಿದ್ದಾರೆಯೆ?– ಇದು ಸಂದೇಹಾಸ್ಪದ.

ಬೆಂಗಳೂರು ನಗರಕ್ಕೆ ಕಾವೇರಿಯ ನೀರನ್ನು ಪೂರಯಿಸುವುದು ತನ್ನ ಧರ್ಮವೆಂಬಂತಾಡಿದ್ದಾರೆ ಶ್ರೀ ಕೆಂಗಲ್. ಈ ಬಗ್ಗೆ ರಾಜ್ಯ ಸರಕಾರ ಪೂರ್ವಭಾವಿ ಕ್ರಮಗಳೆಲ್ಲವನ್ನೂ ಕೈಕೊಂಡಿದೆಯೆಂಬುದನ್ನು ಮಾತ್ರ ಅವರು ಬಚ್ಚಿಟ್ಟಿದ್ದಾರೆ.

ಕೇಂದ್ರ ಸರಕಾರವು ನೀಡುವ ಎಲ್ಲ ಬಗೆಯ ನೆರವು ರಾಜ್ಯ ಸರಕಾರದ ಮೂಲಕವೇ ಎಂಬುದನ್ನು ಒಪ್ಪಿಕೊಂಡ ಶ್ರೀ ಕೆಂಗಲ್ ಈಗಿನ ಸಿಂಡಿಕೇಟ್ ಸರಕಾರ ರಾಜ್ಯದಲ್ಲಿರುವ ವರೆಗೆ ಬೆಂಗಳೂರು ಕಾರ್ಪೊರೇಶನ್ನಿಗೆ ನೆರವು ಸಿಗಲಾರದೆಂದು ಬೆದರಿಸಿದ್ದಾರೆ.

ಮುಂದಿನ ಐದಾರು ತಿಂಗಳುಗಳಲ್ಲಿ ರಾಜ್ಯದಲ್ಲಿ ತಮ್ಮದೇ ಸರಕಾರವೇರ್ಪಟ್ಟು ಆಗ ಎಲ್ಲವೂ ಸರಿಹೊಂದುವುದು ಎಂದು ನಂಬಿಸಿ, ಮುಂದಿನ ಐದಾರು ವರ್ಷಗಳಲ್ಲಿ ಬೆಂಗಳೂರಿಗರಿಗೆ ಇಂಡಿಕೇಟ್ ನಳ್ಳಿಯಿಂದ ಕಾವೇರಿ ತೀರ್ಥ ಕುಡಿಸಿದಾಗ ತಮಗೆ ವಿಧಾನ ಸೌಧ ಕಟ್ಟಿಸಿದಾಗ ಆದುದಕ್ಕಿಂತಲೂ ಮಿಗಿಲಾದ ಆನಂದವಾಗುವುದೆಂದೂ ಅದೇ ವೇಳೆ ತಾವು ನಿವೃತ್ತರಾಗುವುದೆಂದೂ ಶ್ರೀ ಕೆಂಗಲ್ ಜನತೆಯನ್ನು ಕಲ್ಪನಾ ಲೋಕಕ್ಕೆಳೆದೊಯ್ದಿದ್ದಾರೆ.

ವಿಧಾನ ಸೌಧದ ರಚನೆಯ ಸಂತೋಷ ಹಳೆಯದಾಯ್ತು. ಪ್ರಾಪ್ಯ ವಸ್ತುವಿನಿಂದ ತೃಪ್ತಿ ಪಟ್ಟುಕೊಳ್ಳುವುದು ಮಹತ್ವಾಕಾಂಕ್ಷಿಗಳಿಗೆ ಆಗದ ಕೆಲಸ.

ತೀರ್ಥಪಾನದ ಪುಣ್ಯ ಭವಿಷ್ಯದಲ್ಲಿ ಲಭ್ಯವಾಗಬೇಕಾದದ್ದು. ಅದು ಆಕಾಶದ ಕುಸುಮ. ಆದುದರಿಂದಲೇ ಅದಕ್ಕೆ ಸೌಂದರ್ಯ ಹೆಚ್ಚು.

ಶ್ರೀ ಕೆಂಗಲ್ಲರು ತಮ್ಮ ಪಕ್ಷದ ಆರ್ಥಿಕ ನೀತಿಯ ಬಗ್ಗೆ ಎಲ್ಲೂ ಚಕಾರವೆತ್ತಲಿಲ್ಲ. ಚುನಾವಣೆ ನಡೆಯುತ್ತದೆಯೆಂದಾದ ಮೇಲೆ ಅವರ ಡೆಲ್ಲಿ ಸೆಕ್ರೆಟೇರಿಯೆಟ್ಟು ಬೆಂಗಳೂರಿಗೇ ಬಂದಿದೆಯೆಂದೆನಿಸುತ್ತದೆ.

ಕೇಂದ್ರದ ಎಲ್ಲ ಮಂತ್ರಿಗಳೂ ವಿವಿಧ ರಾಜ್ಯಗಳಲ್ಲಿ ಚುನಾವಣಾ ಪ್ರಚಾರ ಮಾಡುತ್ತಿದ್ದಾರೆ; ಆದರೆ, ಒಂದು ಸುತ್ತಿನ ಪ್ರಚಾರ ಮುಗಿದೊಡನೆಯೇ ಡೆಲ್ಲಿಗೆ ಹಾರಿ ಭತ್ತೆಗಿಟ್ಟಿಸುತ್ತಾರೆ.

ಆದರೆ, ಶ್ರೀ ಕೆಂಗಲ್ ಡೆಲ್ಲಿ ಮುಖ ನೋಡ ಬಯಸುವುದಿಲ್ಲ. ತಾವು ಡೆಲ್ಲಿಯಲ್ಲಿ ಮಂತ್ರಿಯಾಗಿದ್ದೇವೆಂಬುದೂ ಅವರಿಗೆ ಮರೆತು ಹೋದಂತಿದೆ.

ಶ್ರೀಮತಿ ಗಾಂಧಿಯ ಎಡ ಗೈ ಬಂಟ ಮಂತ್ರಿ ಶ್ರೀ ಫಕ್ರುದ್ದೀನ್ ಅಲಿ ಅಹಮ್ಮದರು ಕರ್ನಾಟಕಕ್ಕೆ ಬಂದರು.

ಅವರ ಆಗಮನದ ಹಿನ್ನೆಲೆ ಮುಸ್ಲಿಂಲೀಗಿನ ಹೆಣಕ್ಕೆ ಮತ್ತೆ ಪ್ರಾಣಪ್ರತಿಷ್ಠೆ ಮಾಡುವುದು ಮಾತ್ರ. ತನ್ನ ಸ್ಥಾನ—ಮಾನಗಳ ಭದ್ರತೆಗಾಗಿ ಅವರು ಇಂಡಿಕೇಟಿನಲ್ಲಿ ನಿಂತಿದ್ದಾರೆ; ಅವರೊಲವು ಮುಸ್ಲಿಂಲೀಗಿನೊಂದಿಗೆ ಇರುವುದು ತಪ್ಪಲ್ಲ.

ಶ್ರೀ ಅಹಮ್ಮದ ಮಹಾಶಯರಿಂದಾಗಿಯೇ ಕೇರಳದ ಮುಸ್ಲಿಂಲೀಗನ್ನು ಇಂಡಿಕೇಟ್ ಸಾರ್ವಜನಿಕವಾಗಿ ಮುತ್ತಿಟ್ಟದ್ದು. ಲೀಗು ಜಾತೀಯ ಪಕ್ಷವಲ್ಲವೆಂದು ಶ್ರೀಮತಿ ಗಾಂಧಿ ಸರ್ಟಿಫಿಕೇಟ್ ದಾನ ಮಾಡಿದ್ದು.

ಬೆಂಗಳೂರಿನಲ್ಲಿ ಮುಸ್ಲಿಂ ಲೀಗ್ ಅಭ್ಯರ್ಥಿಯೂ ಸ್ಪರ್ಧಿಸಲಿದ್ದು ಶ್ರೀ ಅಹಮ್ಮದರು ಯಾವ ಹುದ್ದರಿಯ ಪ್ರಚಾರ ಮಾಡಿದರೆಂದು ಅವರಿಗೇ ಗೊತ್ತು.

ಆದರೂ ಬೆಂಗಳೂರು ಬಿಡುವಾಗ ಅವರು ಭಾರಿ ದೊಡ್ಡ ಭವಿಷ್ಯ ಹೇಳಿದರು. ಇಂಡಿಕೇಟ್ ಲೋಕಸಭೆಯಲ್ಲಿ ೨೮೦ರಿಂದ ೩೦೦ ಸ್ಥಾನಗಳಷ್ಟು ಪಡೆದು ಸ್ಪಷ್ಟ ಬಹುಮತ ಗಳಿಸುವುದಂತೆ.

ಪರಿಣಾಮ ಪ್ರಕಟವಾಗುವ ವರೆಗೆ ಇದನ್ನು ಹೇಳಬಹುದು. ಆದರೆ, ಆ ಮೇಲೆ ಎಂದೂ ಮತ್ತೆ ಕಟ್ಟಿಕೊಳ್ಳಲಾಗದಂತೆ ತುರುಬು ಬಿಚ್ಚಿಹೋಗುತ್ತದೆ.

ಕರ್ನಾಟಕದ ೨೭ ಸ್ಥಾನಗಳಲ್ಲಿ ಅವರು ೨೦–೨೨ ಸ್ಥಾನಗಳನ್ನು ಲೆಕ್ಕಾಚಾರಕ್ಕೆ ತೆಗೆದುಕೊಂಡಿದ್ದಾರೆ. ಇದು ಆರು ಆರು ಹದಿನಾರರ ಲೆಕ್ಕಾಚಾರವೆಂಬುದು ತಿಳಿಯಲು ಹೆಚ್ಚು ಕಾಲಾವಧಿ ಬೇಕಾಗಿಲ್ಲ.

ಉತ್ತರ ಪ್ರದೇಶ (೮೫), ಬಿಹಾರ (೫೩), ಮಹಾರಾಷ್ಟ್ರ (೪೫), ಪಶ್ಚಿಮ ಬಂಗಾಳ (೪೦), ಆಂಧ್ರ ಪ್ರದೇಶ (೪೧)– ಈ ಪಂಚ ಮಹಾರಾಜ್ಯಗಳಲ್ಲೇ ಶ್ರೀ ಅಹಮ್ಮದರ ಲೆಕ್ಕಾಚಾರ ತಪ್ಪಿಹೋಗಿದೆ.

ಶ್ರೀಮತಿ ಗಾಂಧಿ ಸಮೇತರಾಗಿ ಇಂಡಿಕೇಟಿಗರು ಸುಲಿದ ಬಾಳೆಹಣ್ಣು ಎಂದು ನಂಬಿದ್ದೇ ಒಣಗಿದ ಕಬ್ಬಾಗಿದೆ.

ಭೂರಿಮಾಣಿಕವೆಂದು ಹಿಡಿದದ್ದು ತೋರ ಸರ್ಪವೆನಿಸಿದೆ. ಹಾಗಿರುವಾಗ ಉಳಿದ ರಾಜ್ಯಗಳ ಲೆಕ್ಕಾಚಾರದಲ್ಲೇನು ಬಂತು?

ಶ್ರೀ ಅಹಮ್ಮದರ ಲೆಕ್ಕ ಎಷ್ಟು ತಪ್ಪು ಎಂಬುದಕ್ಕೆ ವಿಸರ್ಜಿತ ಲೋಕಸಭೆಯಲ್ಲಿನ ವಿವಿಧ ಪಕ್ಷಗಳ ಬಲಾಬಲಗಳ ಸಮೀಕ್ಷೆ ಮಾಡಿದರೆ ಸಾಕು.

ಅವಿಭಜಿತ ಕಾಂಗ್ರೆಸ್	೨೮೩
ಸಿಪಿಐ	೨೩
ಸಿಪಿಎಂ	೧೯
ಜನಸಂಘ	೩೫
ಎಸ್‌ಎಸ್‌ಪಿ	೨೩
ಸ್ವತಂತ್ರ	೪೪
ದ್ರಾಮುಕ	೨೫
ಪ್ರಸವಾ	೭
ಇತರರು	೫೪

ಕಾಂಗ್ರೆಸ್‌ನಿಂದ ಸುಮಾರು ೨೨೦ ಸದಸ್ಯರು ಇಂಡಿಕೇಟ್ ಕಟ್ಟಿಕೊಂಡರು. ಈಗ ಇರುವ ೨೨೦ರ ಬಲವನ್ನು ೨೮೦—೩೦೦ಕ್ಕೆ ಏರಿಸುವುದು ಕನಸಿನ ಭತ್ತಕ್ಕೆ ಗೋಣಿ ಹಿಡಿದಂತೆ ಮಾತ್ರ.

ಕೇಂದ್ರ ಸರಕಾರದ ರೀತಿ—ನೀತಿಗಳು ಜನತೆಗೆ ಬೇಸರ ತಂದಿವೆ. ಬೆಲೆಯೇರಿಕೆಯಿಂದ ಜೀವನ ದುಸ್ತರವಾಗಿದೆ; ನಿರುದ್ಯೋಗದಿಂದ ಯುವಜನರಲ್ಲಿ ಅಸಮಾಧಾನ ತಾಂಡವವಾಗಿದೆ; ಉತ್ಪಾದನಾರಂಗವು ಕುಸಿದು ದೇಶದ ಅರ್ಥವ್ಯವಸ್ಥೆಯು ಯಂತ್ರ ಕೆಟ್ಟು ಹೋಗಿದೆ.

ಇಂಡಿಕೇಟ್ ಇಂಜಿನಿಯರು ಇದನ್ನು ರಿಪೇರಿಯ ಹೆಸರಲ್ಲಿ ಮತ್ತೂ ಕೆಡಿಸಲು ಮುಂದಾದರೇ ಹೊರತು, ರಿಪೇರಿ ಮಾಡಲು ಉತ್ಸುಕರಾಗಲಿಲ್ಲ. ಅವರಿಗೆ ತಮ್ಮ ಸ್ಥಾನವುಳಿಸಿಕೊಳ್ಳುವುದೇ ದೊಡ್ಡ ಪ್ರಶ್ನೆ.

ಶ್ರೀ ಅಹಮ್ಮದರು ಆಶಾವಾದಿಗಳೆಂಬುದು ಸಂತೋಷ. ಆದರೆ, ಅವರ ಆಶಾವಾದದ ಹಿಂದೆ ಮುಸ್ಲಿಂಲೀಗಿನ ಪಿಶಾಚನಗುವೂ ಇರುವುದನ್ನು ಮರೆಯಬಾರದು.

ದೇಶದಲ್ಲೇ ಪ್ರಗತಿಪರ ಸರಕಾರವೆಂದು ಹೆಸರಾದ ರಾಜ್ಯದ ಸರಕಾರ ಸಿಂಡಿಕೇಟಿನದ್ದು. ಸಿಂಡಿಕೇಟ್ ಪ್ರಗತಿವಾದಿ, ಸಮಾಜವಾದಿಯೆಂಬುದನ್ನು ಅದರ ವಿರೋಧಿಗಳೂ ಒಪ್ಪಿಕೊಳ್ಳುತ್ತಾರೆ.

ಇಂಡಿಕೇಟ್ ಸ್ಲೋಗನ್ನು ಸಮಾಜವಾದಿಯಾದರೆ ಸಿಂಡಿಕೇಟು ಸಮಾಜವಾದವನ್ನು ಕೃತಿಗಿಳಿಸಿದೆ.

ಶ್ರೀ ಕೆಂಗಲ್ ಮತ್ತು ಶ್ರೀ ಅಹಮ್ಮದರು ಕೈಗೆಟಕದ ಧ್ರುವತಾರೆಯನ್ನು ತಂದು ಕೊಡುವ ಬೆಲ್ಲವನ್ನು ಕನ್ನಡಿಗ ಮತದಾರರ ಮೊಣಕ್ಕೆ ಗಂಟಿಗೆ ಸವರಿದ್ದಾರೆ.

ಕೈಯಲ್ಲಿರುವ ಸಕ್ಕರೆಯನ್ನು ಚೆಲ್ಲಿ ಕನ್ನಡಿಗರು ಈ ಬೆಲ್ಲ ಬಯಸುತ್ತಾರೆಯೆ?

ಸೌಂದರ್ಯ ಸತ್ಯವಾಗಿರುತ್ತದೆ. ಸತ್ಯ ಸೌಂದರ್ಯವಾಗಿರುತ್ತದೆ.

ಕವಿತೆಯು ಮಹಾನ್ ಲಕ್ಷ್ಯವೇನೆಂದರೆ ಅದು ಜನರ ಚಿಂತೆಗಳನ್ನು ಶಾಂತ ಮಾಡುವದು ಮತ್ತು ಅವರ ವಿಚಾರಗಳನ್ನು ಉನ್ನತಗೊಳಿಸಲಿಕ್ಕೆ ಮಿತ್ರನಂತೆ ಕಾರ್ಯ ಮಾಡುವದು.

ಸುಂದರತೆಯ ಮಾಧುರ್ಯವು ಪ್ರತಿನಿತ್ಯ ಹೆಚ್ಚುತ್ತಾ ಹೋಗುವದು. ಎಂದಿಗೂ ಅದರ ಹ್ರಾಸವಾಗುವುದಿಲ್ಲ. (ಕೀಟ್ಸ್)

ನಮ್ಮ ಸಂಪತ್ತು - ನಮ್ಮ ದಾರಿದ್ರ್ಯ

ಲೇಖಕರು : ಶ್ರೀ ಎಂ. ಪಿ. ಮಹಿಷಿ.

ನಮ್ಮ ದೇಶದಷ್ಟು ಸುಸಂಪನ್ನವಾದುದು ಇಡೀ ಜಗತ್ತಿನಲ್ಲಿ ಇನ್ನೊಂದಿಲ್ಲ. ಇದು ಉತ್ಪ್ರೇಕ್ಷೆಯಲ್ಲ. ನಮ್ಮಷ್ಟು ದರಿದ್ರರು ಜಗತ್ತಿನಲ್ಲಿ ಬೇರಾರೂ ಇಲ್ಲ. ಇದೂ ಉತ್ಪ್ರೇಕ್ಷೆಯಲ್ಲ. ಇದೆ—ಇಲ್ಲ ಎಂಬುದನ್ನು ಒಂದೇ ಉಸುರಿನಲ್ಲಿ ಹೇಳಿದಾಗ ಹಾಗು ಅದನ್ನು ಕೇಳಿದಾಗ ಸಹಜವಾಗಿಯೇ ಅಚ್ಚರಿ ಸಂಶಯಗಳುಂಟಾಗುವವು. ಒಂದೆಡೆಯಲ್ಲಿ ದೇಶ ಸುಸಂಪನ್ನವಾಗಿದೆ ಎಂದು ಹೇಳಿದರೆ, ಇನ್ನೊಂದೆಡೆಯಲ್ಲಿ ದೇಶದ ಜನ ದರಿದ್ರರು ಎಂದು ಕೇಳುವಂತಾಗಿದೆ. ಎಂದೂ ಹೊಂದಾಣಿಕೆಯಾಗದ ಈ ಮಾತಿನ ಸರಣಿಗೆ ಏನಾದರೂ ಅರ್ಥವಿದೆಯೆ?

ತೀರ ಸಹಜವಾಗಿದೆ ಪ್ರಶ್ನೆ. ಅಷ್ಟೇ ಸ್ಪಷ್ಟವಾಗಿದೆ ಉತ್ತರ.

ಸಮೃದ್ಧ ನಿಸರ್ಗ ಸಂಪತ್ತು

ನಮ್ಮ ದೇಶದ ಭೌಗೋಲಿಕ ರಚನೆ ಮತ್ತು ಋತುಮಾನಗಳ ಭ್ರಮಣ ನೋಡಿದಾಗ ದೇವರು ನಮ್ಮ ಮೇಲೆ ಹೆಚ್ಚಿನ ಕೃಪಾಕಟಾಕ್ಷ ಬೀರಿದ್ದಾನೆ ಎನ್ನುವುದು ಮನಗಾಣದೆ ಇಂದು 'ದೇವರ ಕೃಪೆ'ಯನ್ನು ಬಯಸದವರೂ ಕೂಡ ಪ್ರಕೃತಿಯ ಕೊಡುಗೆಯನ್ನು ಕೃತಜ್ಞತೆಯಿಂದ ಸ್ವೀಕರಿಸದೆ ಇರಲಾರರು.

ನಮ್ಮ ದೇಶ ಪ್ರಾಚೀನ ಇತಿಹಾಸ, ಮನುಕುಲದ ಹೆಗ್ಗಳಿಕೆಯ ಹೆಜ್ಜೆಯನ್ನು ಗುರುತಿಸುವ ಸಾಧನವಾಗಿದೆ.

ನಮ್ಮ ಪರಂಪರೆ, ಸಂಸ್ಕೃತಿಗಳಿಗೆ ಉಜ್ವಲತೆಯಲ್ಲದೆ ಬೇರೊಂದು ವಿಶೇಷಣ ನಿರರ್ಥಕ.

ಮುಗಿಲನ್ನು ಮುತ್ತಿಡುವ ಎತ್ತರಕ್ಕೆ ಇರುವ ಉತ್ತುಂಗ ಶಿಖರಗಳ ಪರ್ವತಾವಳಿಯು ಹೆಮ್ಮೆ ನಮ್ಮದು. ಎಡಬಲಗಳಲ್ಲಿ ಆಳವಾದ ನೀಳಸಾಗರದ ರಕ್ಷಣೆ ಇರುವುದು ನಮ್ಮ ದೇಶಕ್ಕೆ. ಇಷ್ಟೇ ಅಲ್ಲ ನಮ್ಮ ನಾಡದೇವಿಯ ಪದ ಚರಣಗಳನ್ನು ತೊಳೆಯಲೂ ದಕ್ಷಿಣದಲ್ಲಿ ಸಾಗರ ಸದಾಸಿದ್ಧ.

ಯಮುನೆ-ಗಂಗೆ, ಗೋದೆ-ತುಂಗಭದ್ರೆ—ಕೃಷ್ಣೆ-ಕಾವೇರಿಯರು ಮೈದುಂಬಿ ಹರಿದು ನಾಡಿಗೆ ಜೀವನಾಡಿಯಾಗಿರುವರು.

ವಾತಾವರಣವಂತೂ ಅತ್ಯಂತ ಹಿತಕರ ಜಗತ್ತಿನಲ್ಲಿ ಆಯಾಯ ದೇಶಗಳಲ್ಲಿ ಕಂಡು ಬರುವ ವಾತಾವರಣಗಳೆಲ್ಲವೂ ಈ ದೇಶದಲ್ಲಿ ಆಯಾಯ ಪ್ರದೇಶಗಳಲ್ಲಿ ಕಂಡುಬರುತ್ತಿವೆ. ಅತಿ ಶೀತಲ-ಅತಿ ಉಷ್ಣವಲ್ಲದೆ ಸಮಶೀತೋಷ್ಣವಾದ ಹವೆಯುಳ್ಳ ಪ್ರದೇಶ ನಮ್ಮಲ್ಲಿವೆ.

ಉಜ್ವಲ ಸಂಸ್ಕೃತಿ

ಜಗತ್ತಿನ ಇತರೆಡೆಗಳಲ್ಲಿ ನಾಗರಿಕತೆ ಇನ್ನೂ ಅಂಕುರಿಸತೊಡಗಿದ್ದಾಗ, ಭಾರತದಲ್ಲಿ ಅದು ಫಲದಾಯಿಯಾಗಿತ್ತು. ಹರಪ್ಪಾ-ಮೊಹೆಂಜೋದಾರೋ ಸಂಸ್ಕೃತಿಯ ಅವಶೇಷಗಳ ಶೋಧನೆ ಈ ಸತ್ಯದ ಮೇಲೆ ಬೆಳಕು ಬೀರಿದೆ.

ತನ್ನ ಅವತಾರಕ್ಕೂ ದೇವರು ಈ ದೇಶವನ್ನೇ ಆರಿಸಿ ಒಂದಲ್ಲ—ಎರಡಲ್ಲ-ಹತ್ತು ಅವತಾರಗಳನ್ನು ಹೊತ್ತು ಬಂದಿದ್ದಾನೆ ಇಡೀ ಲೋಕೋದ್ಧಾರಕ್ಕೆಂದು. ದುಷ್ಟ ನಿಗ್ರಹ-ಶಿಷ್ಟಪರಿಪಾಲನೆಗೆಂದು. ಇಷ್ಟೇ ಸಾಲದು ಎನ್ನುವಂತೆ ಮತ್ತೆ-ಮತ್ತೆ ಅವಶ್ಯಕತೆ ಉಂಟಾದಾಗಲೆಲ್ಲ ನಾನು ಬಂದೇ ಬರುತ್ತೇನೆ- ಸಂಭವಾಮಿ ಯುಗೇ ಯುಗೇ ಎಂದೂ ಹೇಳಿದ್ದಾನೆ. ನಾವೂ ನಂಬಿದ್ದೇವೆ. ಅವನು ಬಂದಿದ್ದಾನೆ. ಹೋಗಿದ್ದಾನೆ. ನಾವೂ ಇದ್ದೇ ಇದ್ದೇವೆ. ಇನ್ನೂ ಅವನ ಬರುವನ್ನು ಕಾಯುತ್ತಲೇ ಇದ್ದೇವೆ. ಅವನು ಬಂದಾಗ ಎಚ್ಚರವಾಗಿರಲಿಲ್ಲ. ಎಚ್ಚರವಾದಾಗ ಅವನಿರಲಿಲ್ಲ. ಆದುದರಿಂದ ಮತ್ತೆ ಅವನ ಬರುವಿಗಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದೇವೆ. ವಿದ್ಯೆ ಸಾಧಿಸಬೇಕಾದಾಗ, ನಿದ್ದೆ ನಮ್ಮ ಕಣ್ಣಲ್ಲಿ ಮುದ್ದೆಯಾಗಿ ಕುಳಿತಿದೆ. ಕಾಮ—ಕ್ರೋಧಗಳ ಕೇಳಿ ನಡೆದಾಗ ನಿದ್ದೆ ಕಾಲಿಗೆ ಬುದ್ಧಿ ಹೇಳಿದೆ.

ಹೆಣ್ಣು, ಹೊನ್ನು, ಮಣ್ಣಿಗಾಗಿ ರಾಮಾಯಣವನ್ನೇ ಹಾಡಿದ್ದೇವೆ, ಮಹಾಭಾರತವನ್ನೇ ಆಡಿದ್ದೇವೆ. ಮನೆತನದ ಕೀರ್ತಿ-ಹೆಸರ ದೆಸೆಗೆಳೆದುರು ಮಾನಿನಿಯ ಹೃದಯವನ್ನೇ ರಾಮ ಮರೆತ. ಭಾಗಾದಿತನ ಸಾಧಿಸುವ ಹಠದಲ್ಲಿ ಬಂಧುತ್ವವನ್ನೇ ಮರೆತರು ಅಂಧ ಧೃತರಾಷ್ಟ್ರನ ಕಂದರು. ಕಡಿದರು—ಕೊಂದರು ರಕ್ತದ ಓಕುಳಿಯಾಡಿದರು. ಕೊನೆಗೆ ಸಾರಿದರು—ಸತ್ಯಮೇವ ಜಯತೇ.

ಸೋತವರು ಸತ್ತರು-ಉಳಿದರು. ಗೆದ್ದವರು ಉಳಿದರು-ಸತ್ತರು. No profit –no loss. ಲಾಭವಿಲ್ಲ - ಹಾನಿಯಿಲ್ಲ. ಏನು ಪ್ರಯೋಜನ? ಲಾಭವನ್ನಾದರೂ ಗಳಿಸಬೇಕು—ಇಲ್ಲವೆ ಹಾನಿಯ ಹೊಳೆಯಲ್ಲಿ ಕೊಚ್ಚಿ—ಕೊಂಡಾದರೂ ಹೋಗಬೇಕು. ಇದ್ದರೂ ಇಲ್ಲದಂತೆ. ಇದು ಎನು ಪ್ರಯೋಜನ?!

ಈಸಬೇಕು-ಇದ್ದು ಜಯಿಸಬೇಕು. ಇದೀಗ ಬಾಳಿಗೊಂದು ಅರ್ಥಪೂರ್ಣವಾದ ನಂಬಿಕೆ. ಸಂತೆಯೊಳಗೆ ಮನೆಮಾಡಿ ಗದ್ದಲಕ್ಕೆ ಅಂಜಬಾರದು. ಇದೀಗ ಬಾಳಿಗೊಂದು ಅವಶ್ಯವಾದ ಧೈರ್ಯದ ಬತ್ತಳಿಕೆ.

ಈ ನಮ್ಮ ಸುಸಂಪನ್ನ ದೇಶದಲ್ಲಿ ಮಿಂಚಿ ಹೋದ ಅನುಭವಗಳ ಕುರುಹು. ಧರ್ಮ, ಶಾಸ್ತ್ರ, ನ್ಯಾಯ, ನೀತಿ ಎಲ್ಲ ಶ್ರಮಿಸಿವೆ ಬದುಕು ಸಾರ್ಥಕವಾಗಲೆಂದು, ಕಾಲ ಧರ್ಮವನ್ನರಿತು ಅದಕ್ಕೆ ಹೊಂದಿಕೊಳ್ಳುತ್ತ ಬಂದಿವೆ. ಅಂತೆಯೇ ಇನ್ನೂ ಪ್ರಭಾವವನ್ನು ಉಳಿಸಿಕೊಂಡಿವೆ.

ನಮ್ಮ ಉಜ್ವಲ ಸಂಸ್ಕೃತಿ-ಪರಂಪರೆಗೆ ಆಗಾಗ ಅಡೆತಡೆಗಳುಂಟಾಗಿವೆ. ಪರದಾಸ್ಯದಂತಹ ಕಾರ್ಮೋಡ ದಿಂದ ಅದರ ತೇಜಸ್ಸಿಗೆ ಕುಂದುಂಟಾಗಿದೆ. ಶತ ಶತಮಾನಗಳವರೆಗೆ ಈ ಮೋಡ ಅದರ ತೇಜಸ್ಸಿಗೆ ಅಡ್ಡ ಗೋಡೆಯಾಗಿ ನಿಂತಿದೆ. ಏನಾದರೇನು, ರವಿ ಪ್ರಕಾಶವನ್ನೂ ಮೋಡ ಎಷ್ಟು ಕಡಿಮೆ ಮಾಡೀತು? ಅದು ಕರಗದೇ ಎಷ್ಟು ಕಾಲ ನಿಂತೀತು?

ಪರಕೀಯರ ಆಗಮನ

ಗತ ಕಾಲದ ಇತಿ ಹಾಸದ ಅವಲೋಕನೆಯನ್ನೂ ಮಾಡಿದಾಗ ಈ ಘಟ್ಟಗಳು ಅಲ್ಲಲ್ಲಿ ಗೋಚರಿಸುವವು. ಎಲ್ಲಿ ಒತ್ತಾಯ ದಬ್ಬಾಳಿಕೆಯನ್ನೂ ಮೆಟ್ಟಿ ನಿಂತು ತನ್ನ ವೈಶಿಷ್ಟ್ಯವನ್ನೂ ಉಳಿಸಿಕೊಂಡುಬಂದುದೇ ಅದರ ಹಿರಿಮೆ. ಪರದೇಶದ ಜನ ಯಾವಾಗಲೂ ಭಾರತದತ್ತ ಆಕರ್ಷಿತವಾಗಿದೆ. ಇಲ್ಲಿ ಬಂದು ಕೊಳ್ಳೆ ಲೂಟಿ ಹೊಡೆಯಬೇಕೆಂದವರು ಇಲ್ಲಿಯೆ ತಳವೂರಿದ್ದಾರೆ. ಇಲ್ಲಿಯ ಜಲ-ಇಲ್ಲಿಯ ನೆಲ ಇವುಗಳ ಔದಾರ್ಯಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಅನಗತ್ಯ.

ವ್ಯಾಪಾರಕ್ಕಾಗಿ ಬಂದರು, ರಾಜಕೀಯದಲ್ಲಿ ಕೈ ಹಾಕಿದರು, ದೇಶವನ್ನೇ ತಮ್ಮ ಕಪಿಮುಷ್ಟಿಯಲ್ಲಿ ಹಿಡಿದು ನಮಗೆ ಗುಲಾಮಗಿರಿಯ ಅಂಗಿಯನ್ನು ತೊಡಿಸಿ ತಮ್ಮ ವೈಭವ ಮೆರೆಸಿದರು.

ಸ್ವಾರ್ಥಪರತೆ, ಅನೈಕ್ಯ, ಮತೀಯ ಸಂಕುಚಿತ ಬುದ್ಧಿ, ಪರದೇಶಿಯರೊಡ್ಡಿದ ಆಮಿಷ ಈ ಪಂಚತಂತ್ರಗಳೆ ಬಲೆಗೆ ಸಿಕ್ಕಿಬಿದ್ದ ಒಂದು ದೊಡ್ಡ ದೇಶದ, ದೊಡ್ಡ ಜನ ದಾಸರಾದರು. ತಮ್ಮತನ ಮರೆತು ಜನಕನಂತೆ ತುಣುಕು ರೊಟ್ಟಿಗಾಗಿ ಕಂಡವರ ಮನೆಯ ಬಾಗಿಲು ಬಿದ್ದು ಕೊಂಡರು. ನಿಷ್ಠೆಯನ್ನು ತೋರಲು ಅಷ್ಟೇ ಜೋರಾಗಿ ಬೊಗಳಿದರು. ತಮ್ಮ ನೆರೆಗೂ ಬೊಗಳಿದರು. ಜಾತಿ ಜಾತಿಗೇ ವೈರಿ.

ವ್ಯಾಪಾರ—ರಾಜಕೀಯ:ದಿಂದ ಧಾರ್ಮಿಕ ಪರಂಪರೆಯ ಕೋಟೆಯನ್ನು ಮುತ್ತಿದರು. ನಮ್ಮ ದೌರ್ಬಲ್ಯದ ಲಾಭ ಪಡೆದುಕೊಂಡರು. ಲಕ್ಷಾಂತರ ಜನವನ್ನು ಮತಾಂತರಗೊಳಿಸಿದರು. ಅಜ್ಞಾನ ಕವಿದಿದ್ದ ಜನಕ್ಕೆ ತಾವೇನು ಮಾಡುತ್ತಿದ್ದೇವೆಂಬುದರ ಅರಿವು ಇರಲಿಲ್ಲ. ಅರಿವಿದ್ದ ಕೆಲವರಿಗೆ ಬಲವಿರಲಿಲ್ಲ, ಬಲವಿದ್ದ ಹಲವರಿಗೆ ಅರಿವಿರಲಿಲ್ಲ.

ಕಾಲಗತಿ

ಕಾಲ ಬದಲಾಯಿತು. ಯುದ್ಧದ-ಜಾಗತಿಕ ಯುದ್ಧದ ಕಾರ್ಮೋಡಗಳು ಕಾಣಿಸಿಕೊಂಡವು. ಒಂದೇ ಶತಮಾನದಲ್ಲಿ ಎರಡು ಮಹಾಯುದ್ಧಗಳು. ಇಡೀ ಜಗತ್ತು ತತ್ತರಿಸಿತು. ರಾಷ್ಟ್ರ ರಾಷ್ಟ್ರಗಳಲ್ಲಿ ಕೂಟ ಮೈತ್ರಿ ಉಂಟಾಯಿತು. ಗಣಗಳು ಬಣಗಳು ಉಂಟಾಯಿತು. ಯುದ್ಧದಲ್ಲಿ ಜಯ ಸಂಪಾದನೆಯೆ ಗುರಿಯಾಗಿತ್ತು. ಆದರೆ ಯುದ್ಧೋದ್ಯಮದಲ್ಲಿ ಪರಿಣಮಿಸಬಹುದಾದ ಸಾವು-ನೋವುಗಳ ಲೆಕ್ಕ ಯಾರ ಗಮನಕ್ಕೂ ಬರಲಿಲ್ಲ. ಜನಜೀವನ ಗೊಂದಲ-ಗಾಬರಿಗಳಿಗೆ ಈಡಾಗಿ ಸುರಕ್ಷಿತವಾರಾಗಿ ಬದುಕುವ ಬಗೆ ಹೇಗೆ ಎಂದು ಚಿಂತೆಗೆ ಎಡೆಕೊಟ್ಟಿತು.

ಇತ್ತ ಯುದ್ಧ ನಡೆದಿತ್ತು. ಅತ್ತ ವಿಜ್ಞಾನ ತನ್ನ ಶೋಧನೆಯನ್ನು ಮುಂದುವರಿಸಿತ್ತು. ಆಧುನಿಕವಾದ ಯುದ್ಧ ಸಾಮಗ್ರಿ ಸಾಧನೋಪಕರಣಗಳು ಬಳಕೆಗೆ ಬಂದವು. ಕಡಿಮೆ ವೆಚ್ಚ—ವೇಳೆಯಲ್ಲಿ, ಅಧಿಕ ನಾಶ ಹೇಗೆ ಸಾಧಿಸಬೇಕೆಂಬುದೇ ಯುದ್ಧೋತ್ಸುಕರ ಹಂಬಲವಾಗಿತ್ತು.

ಈ ನಾಶವೀ ಆಶೆಗೆ ಕಳಸವಿಟ್ಟಂತೆ ಅಣು ಬಾಂಬು ಕರಗತವಾಯಿತು. ಜಪಾನಿನ ಹಿರೋಶಿಮಾ—ನಾಗಾಸಕಿ, ಕಿಕ್ಕಿರಿದು ಜನರಿಂದ ತುಂಬಿರುವ ನಗರಗಳು ಈ ಅಣುಬಾಂಬ ಯಜ್ಞಕ್ಕೆ ಪಶುಬಲಿಯಾದವು. ಸತ್ತವರ ಸಂಖ್ಯೆ ಇನ್ನೂ ತಿಳಿದಿಲ್ಲ. ಉಳಿದವರೂ ಕೂಡ ಅಣುವಿನ ಅನಿಷ್ಟ ಪರಿಣಾಮಗಳಿಗೆ ಈಡಾಗಿ ಅಂಗವಿಕಲತೆಯುಳ್ಳವರಾಗಿದ್ದಾರೆ.

ಎಷ್ಟೇ ಬಲಿದಾನವಾದರಾಗಲಿ, ಕೊನೆಗೊಮ್ಮೆ ಯುದ್ಧದ ತಾಂಡವ ನೃತ್ಯ ನಿಂತಿತು. ಆಘಾತದಿಂದ ರಾಷ್ಟ್ರಗಳು ಚೇತರಿಸಿಕೊಳ್ಳತೊಡಗಿದಾಗ, ತಮತಮಗಾದ ಹಾನಿಯ ಲೆಕ್ಕಾಚಾರ ಹಾಕತೊಡಗಿದರು. ಲಾಭವಂತೂ ಇರಲೇ ಇಲ್ಲ. ಅಂತರ ಇದ್ದಿದ್ದರೆ ಸತ್ತವರ ಸಂಖ್ಯೆಯಲ್ಲಿ ಬಳಸಿದ ಮದ್ದುಗುಂಡುಗಳ ಮೊತ್ತದಲ್ಲಿ.

ಇನ್ನು ಹೀಗೆ ಕಾದಾಡುತ್ತ ಬದುಕುವುದು ಸಾಧ್ಯವಿಲ್ಲವೆಂದೂ ಸಂಯುಕ್ತ ಸಹಕಾರದಿಂದಲೇ ಈ ಜಗತ್ತಿನಲ್ಲಿ ನೆಮ್ಮದಿ ಸಾಧ್ಯವೆಂದೂ ಕನಿಷ್ಠ ಆ ಗಳಿಗೆಯಲ್ಲಾದರೂ ಹೊಳೆಯಿತು. ಸಂಯುಕ್ತ ರಾಷ್ಟ್ರ ಸಂಘ ಏರ್ಪಟ್ಟಿತು.

(ಹನ್ನೊಂದನೇ ಪುಟ ನೋಡಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 24

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟಿಯರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ದುಷ್ಪರ ಸಹವಾಸ ಫಲ

ಸಾರ್ವತ್ರಿಕ ಚುನಾವಣೆಗಳು ಹತ್ತಿರವಾಗುತ್ತ ಬಂತು. ಮತದಾರರು 'ಯಾರು ಹಿತವರು ನನಗೆ?' ಎಂದು ಯೋಚನಾ ಮಗ್ನರಾಗಿದ್ದಾರೆ. ದೇಶದ ಮೂಲೆಮೂಲೆಯಲ್ಲೂ ಅಭ್ಯರ್ಥಿಗಳು ಪ್ರಚಾರತತ್ಪರರಾಗಿದ್ದಾರೆ. ಪ್ರತಿ ಮತದಾರನನ್ನೂ ಭೆಟ್ಟಿ ಮಾಡಿ, ಆತನ ಪದವಿಡಿದು ಶರಣೆನುವ ವರೆಗೂ ಕೆಲವು ಅಭ್ಯರ್ಥಿಗಳ ನಮ್ರತೆ ವ್ಯಕ್ತವಾಗತೊಡಗಿದೆ ವಿಚಾರಶೂನ್ಯ ಅಜ್ಞ ಮತದಾರರ ಮತಾಧಾರದಿಂದಲೇ ಸೋಲುಗೇಲುಗಳು ನಿಲ್ಲುವುದರಿಂದ ಅವರನ್ನೊಲಿಸಿಕೊಳ್ಳಲು ಬಹುವಿಧ ಪ್ರಯತ್ನಗಳಾಗತೊಡಗಿವೆ. ಇಂಡಿಕೇಟ್ ಮತ್ತು ಸಿಂಡಿಕೇಟ್‌ಗಳ ನೇತೃತ್ವದಲ್ಲಿ—ಈ ಚುನಾವಣಾ ಹೋರಾಟ ತುಂಬ ಸ್ವಾರಸ್ಯಕರವಾಗಿ ನಡೆಯತೊಡಗಿದೆ.

"ಭಾರತೀಯ ಜನಸಂಘವನ್ನು ನಿರ್ಮೂಲ ಮಾಡುವುದೇ ನನ್ನ ಜೀವನದ ಧ್ಯೇಯ"ವೆಂದು ಪ್ರಧಾನಿ ಗಾಂಧಿಯವರು ಪುಣೆಯಲ್ಲಿ ಆಡಿದರೆಂದು ವರದಿ ಬಂತು. ಮರುದಿನವೇ ತಾನು ಅಂತಹ ಮಾತಾಡಿದ್ದಿಲ್ಲವೆಂದು ಆಕೆಯಿಂದ ಸ್ಪಷ್ಟೀಕರಣ ಹೊರಟಿತು. ಅಹಮ್ಮದಾಬಾದದಲ್ಲಿ ಒಂದೆರಡು ಸಿಂಡಿಕೇಟ್ ಪ್ರಮುಖರನ್ನು ಚುನಾವಣಾ ಪ್ರಚಾರ ವೇದಿಕೆಗೆ ಕರೆದು ಕುಳ್ಳಿರಿಸಲಾಯ್ತು. ಪ್ರಧಾನಿ ಗಾಂಧಿಯೂ ಅಲ್ಲಿ ಮಂಡಿತರಿದ್ದರು. ಅಷ್ಟರಲ್ಲಿ ಬೇಡಿಕೆಯ ಮೇಲಿಂದ ನೂರು ರೂಪಾಯಿಯ ನೋಟುಗಳು ಹಾರತೊಡಗಿದುವು. ಸಿಂಡಿಕೇಟ್ ನಾಯಕರು 'ನಿಮ್ಮ ನೋಟುಗಳೂ ಬೇಡ; ನಿಮ್ಮ ಸಹವಾಸವೂ ಬೇಡ' ಅಂದು ಕೆಳಗಿಳಿದು ಬಂದರು. ಲಂಚಕೊಟ್ಟು ಪಕ್ಷಾಂತರ ಮಾಡಿ ಚುನಾವಣೆ ಗೆಲ್ಲುವ ಇಂಡಿಕೇಟ್ ಕುತಂತ್ರವಿದು. ಶ್ರೀಮತಿ ಗಾಂಧಿ ಅಚ್ಚರಿ ಪಟ್ಟರಂತೆ. ಇದೆಂತಹ ಅಚ್ಚರಿ? ತನ್ನ ರೂಪಾಯಿಗಳು ಗಾಳಿಯಲ್ಲಿ ತೂರಲ್ಪಡುವುವೆಂಬುದರ ಕಲ್ಪನೆಯೂ ಅವರಿಗೆ ಇದ್ದಿರಲಾರದು. ಆದುದರಿಂದಲೇ ಈ ಬಗೆಯ ಬೆರಗು.

ಬೆಂಗಳೂರಿನಲ್ಲಿ ಕೇಂದ್ರ ಸಚಿವ ಶ್ರೀ ಕೆಂಗಲ್ ಹನುಮಂತಯ್ಯನವರು ರಾಜ್ಯದ ಪತ್ರಿಕೆಗಳನ್ನು ದೂರ ಹೊರಟಿದ್ದಾರೆ. ಕೇಂದ್ರ ಮಂತ್ರಿಯಾದ ತನ್ನ ಬಗ್ಗೆ ಪತ್ರಿಕೆಗಳು ಮುಖ್ಯವಾಗಿ ದೊಡ್ಡ ಪತ್ರಿಕೆಗಳು– ಯಾವ ಪ್ರಚಾರವನ್ನೂ ನೀಡುವುದಿಲ್ಲವೆಂಬುದವರ ದೂರು. "ಶ್ರೀಮತಿ ಇಂದಿರಾ ಗಾಂಧಿಯವರಲ್ಲಿ ವಿಶ್ವಾಸವಿಡಿ; ಆಕೆಯಿಂದ ರಾಜ್ಯಕ್ಕೆ ಶುಭವಾಗುತ್ತೆ" ಎಂದು ಸದಾ ಶುಕಪಾಠಿಗಳಾದ ಶ್ರೀ ಕೆಂಗಲ್ಲರು ಯಾವ ಹೊಸ ಮಾತನ್ನು ಆಡುತ್ತಾರೆಂದು ಅವರಿಗೆ ಪ್ರಚಾರ ನೀಡಬೇಕು? ಕೇಂದ್ರದಲ್ಲಿ ಶ್ರೀ ಕೆಂಗಲ್ಲರ ಸ್ಥಾನಮಾನವೇನಿತ್ತು, ಇಂದೇನಿದೆಯೆಂಬುದನ್ನು ಕನ್ನಡಿಗರು ಅರಿತಿದ್ದಾರೆ. ರಾಜ್ಯಕ್ಕೆ ಸಂಬಂಧಿಸಿದ ಮಹಾಜನ ವರದಿಯನ್ನು ಸಂಸತ್ತಿನ ಮುಂದೆ ಇಡುವುದಕ್ಕೆ ಸಂಪುಟ ನಿರ್ಧರಿಸುವಾಗ ಶ್ರೀ ಕೆಂಗೆಲ್ ಬೆಂಗಳೂರ ಜನಮಂದಿರದಲ್ಲಿ ಶ್ರೀಮತಿ ಇಂದಿರಾ ಪಾರಾಯಣ ನಿರತರಾಗಿದ್ದರು! ಶ್ರೀ ಕೆಂಗಲ್ಲರ ಸೇವೆ ಸದ್ಯಕ್ಕೆ ಸಾಕು; ಯಾರಾದರೂ ಹೊಸ ಮುಖ ಬರಲಿ ಎಂದು ಬೆಂಗಳೂರು ಮತದಾರರು ಈಗ ಹೇಳುವುದು ಅವಾಸ್ತವವಲ್ಲ.

ಇಂಡಿಕೇಟಿನಿಂದ ರಾಜ್ಯಕ್ಕೆ ನ್ಯಾಯ ದೊರೆಯುವುದು ಸಾಧ್ಯವಿಲ್ಲ. (ಅದರ ರಾಜ್ಯ ಕನ್ವೀನರರಾದ ಶ್ರೀ ದೇವರಾಜ ಅರಸರೇ ಸಂಸತ್ತಿನ ಮುಂದೆ ಮಹಾಜನವರದಿ ಬರುವಂತಾಗಲು ಶ್ರೀಮತಿ ಗಾಂಧಿಗೆ ಪ್ರೇರಣೆ ನೀಡಿದರೆಂಬುದು ಈಗ ಆಕಾಶವ್ಯಾಪಿಯಾಗಿದೆ). ಅನ್ಯಾಯವಾಗುವುದಿಲ್ಲವೆಂದು ಭರವಸೆಯೇನೂ ಇಲ್ಲ. ಇದನ್ನು ದೃಢಪಡಿಸುತ್ತದೆ ದ್ರಾಮುಕದೊಡನೆ ಅದರ ಸಂಬಂಧ. ಹೇಳಿ ಕೇಳಿ, ಬೆಂಗಳೂರು ಕನ್ನಡಿಗರ ರಾಜ್ಯಧಾನಿಯಾದರೂ ತಮಿಳರ ಪ್ರಭಾವ ಅಲ್ಲಿ ಧಾರಾಳವಿದೆ. ಬೆಂಗಳೂರು ಕಾರ್ಪರೇಶನ್ ಚುನಾವಣೆಗಳಲ್ಲಿ ದ್ರಾಮುಕ ತನ್ನ ಶಕ್ತಿಯೆಷ್ಟಿದೆಯೆಂಬುದನ್ನು ಕಣ್ಣಿಗೆ ಕಟ್ಟುವಂತೆ ತೋರಿಸಿಕೊಟ್ಟಿದೆ. ಈಗ ಇಂಡಿಕೇಟ್ ಅಭ್ಯರ್ಥಿ ಶ್ರೀ ಕೆಂಗಲ್ಲರಿಗೆ ಅದು ತನ್ನ ಬೆಂಬಲ ನೀಡಲು ಮುಂದೆಬಂದಿದೆ. ಪಾತಳಿಯಲ್ಲಿ ಉರುಳುವ ಭಯದಿಂದ ತತ್ತರಿಸುತ್ತಿರುವ ಶ್ರೀ ಕೆಂಗೆಲ್ ಈ ಹುಲ್ಲುಕಡ್ಡಿಯನ್ನು ಬಲವಾಗಿ ಅಪ್ಪಿಕೊಂಡಿದ್ದಾರೆ. ಇದೇ ರೀತಿ ಸಾಧ್ಯವಿರುವಲ್ಲೆಲ್ಲ ಇಂಡಿಕೇಟ್ ದ್ರಾಮುಕದೊಡನೆ ಮೈತ್ರಿ ಸಾಧಿಸಿಕೊಂಡು ಹೇಗಾದರೂ ಗೆಲ್ಲುವ ಹವಣಿಕೆ ಮಾಡಿದೆ. ಕಾವೇರಿ ನೀರಿನಲ್ಲಿ ಸಿಂಹಪಾಲು ಕೇಳುತ್ತದೆ ತಮಿಳುನಾಡು; ದ್ರಾಮುಕ. ನಾವೆಷ್ಟು ನೀರು ಬಳಸಬೇಕೆಂಬುದು ತಮಿಳರಲ್ಲೇ ಇತ್ಯರ್ಥವಾಗಿದೆಯೆನ್ನುತ್ತಾರೆ ಶ್ರೀ ದೇವರಾಜ ಅರಸರು—ಇಂಡಿಕೇಟ್. ಇವರಿಬ್ಬರೂ ಒಂದಾಗಿರುವಾಗ ರಾಜ್ಯಕ್ಕೆ ನ್ಯಾಯದಾನ ಕನಸಿನಲ್ಲೂ ಆಗುವುದು ಸಾಧ್ಯವಿಲ್ಲ. ಮೂಕನೂ ಕುಂಟನೂ ಒಂದಾದರೆ ಅಪಶಕುನ ಮಾತ್ರ. ಇದು ಅಪವಿತ್ರ ಮೈತ್ರಿಯೆಂದು ದ್ರಾಮುಕವಾಗಲೀ ಇಂಡಿಕೇಟಾಗಲೀ ಒಪ್ಪಿಕೊಳ್ಳುವುದಿಲ್ಲ. ಇದು ಹೊಂದಾಣಿಕೆ ಅಥವಾ ಮೈತ್ರಿಯಲ್ಲವಾದರೆ, ಶ್ರೀ ಕೆಂಗಲ್ಲರು ರಾಜ್ಯಕ್ಕೆ ಹಿತವನ್ನೇ ಬಯಸುವುದಾದರೆ, ಶ್ರೀಮತಿ ಗಾಂಧಿಯವರ ಆಡಳಿತದಲ್ಲಿ ಕನ್ನಡಿಗರಿಗೆ ನ್ಯಾಯ ಲಭ್ಯವೆಂದು ಹೃದಯದಲ್ಲಿ ನಂಬಿರುವರಾದರೆ "ನಿಮ್ಮ ಸಹಾಯ ಬೇಡ"ವೆಂದು ಸ್ಪಷ್ಟವಾಗಿ ನಿರಾಕರಿಸಬೇಕಿತ್ತು. ಇದೇ ಮಾತು ಮುಸ್ಲಿಂ ಲೀಗಿನ ಬೆಂಬಲಕ್ಕೂ ಅನ್ವಯಿಸುತ್ತದೆ. ಜನಸಂಘವು ಜಾತೀಯ ಪಕ್ಷನೆಂದವರು ಮುಸ್ಲಿಂ ಲೀಗಿನ ಆಲಿಂಗನದಲ್ಲಿ ತೃಪ್ತಿ–ಸುಖ ಪಡುವುದು ಸೋಜಿಗವಾದರೂ ಚುನಾವಣೆಗಳಲ್ಲಿ ಯೇನಕೇನ ಪ್ರಕಾರೇಣ ವಿಜಯಲಕ್ಷ್ಮಿಯನ್ನು ವರಿಸುವುದೇ ಅವರ ಹೆಗ್ಗುರಿ. ಆದರೆ, ಮತದಾರರು ರಾಜ್ಯಕಾರಣಿಗಳ ರಂಗಿನ ಥಳಕು ಮಾತು–ಸುಳ್ಳು ಭರವಸೆಗಳಿಗೆ ಬಲಿಬೀಳದೆ ಗದರಿಕೆ–ಹೆದರಿಕೆಗಳಿಗೆ ಅಳುಕದೆ ಯೋಗ್ಯರನ್ನು ಚುನಾಯಿಸುವುದು ಅಗತ್ಯವಾಗಿದೆ. 'ದುರ್ಜನರ ಸಂಗ ಅಭಿಮಾನ ಭಂಗ'ವೆಂಬುದರಲ್ಲಿನ ಸತ್ಯವನ್ನು ಇಂಡಿಕೇಟು ಇದಕ್ಕೆ ಮೊದಲೇ ಕಂಡುಕೊಳ್ಳಲಿಲ್ಲ. ಮುಸ್ಲಿಂ ಲೀಗಿನಂತಹ ನೂರಕ್ಕೆ ನೂರರಷ್ಟು ಅಲ್ಪಸಂಖ್ಯಾಕರ ಹೆಸರಿನ ಜಾತೀಯ ಪಕ್ಷ, ದ್ರಾಮುಕದಂತಹ ಅಂಧ ಪ್ರಾಂತೀಯತೆ–ಭಾಷೀಯತೆಗಳ ವಾತರೋಗಕ್ಕೆ ತುತ್ತಾದ ಪಕ್ಷ ಮತ್ತು ದೇಶದ್ರೋಹಿ ಕಮ್ಯುನಿಸ್ಟ್ ಪಕ್ಷಗಳೊಡನೆ 'ಮೈತ್ರಿ' ಸಾಧಿಸಿಕೊಂಡಿರುವ ಇಂಡಿಕೇಟು ತನ್ನ ಬೆಂಬಲಿಗರಿಂದಾಗಿಯೇ ಈ ಬಾರಿ ಪಾಠ ಕಲಿಯುತ್ತದೆ.

ಪಾಕಿಗೆ ಸಂವಿಧಾನ

ಪಾಕಿಸ್ತಾನದಲ್ಲಿ ಪ್ರಜಾಸತ್ತೆಯು ಗರ್ಭಧಾರಣೆ ಮಾಡಲಿದೆಯೆಂಬ ಸುದ್ದಿ ಬಂದಿದೆ. ಮಾರ್ಚ ಮೊದಲವಾರದಲ್ಲಿ ಮಿಲಿಟರಿ ಅಧ್ಯಕ್ಷ ಶ್ರೀ ಯಾಹ್ಯಾಖಾನರು ಇತ್ತೀಚೆಗೆ ಚುನಾಯಿತವಾದ ರಾಷ್ಟ್ರೀಯ ಅಸೆಂಬ್ಲಿಯ ಸಭೆ ಕರೆದಿದ್ದಾರೆ. ಪಾಕಿಸ್ತಾನಕ್ಕೊಂದು ಘಟನೆಯನ್ನು ತಯಾರಿಸುವುದೇ ಇದರ ಉದ್ದೇಶ್ಯ. ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳ ನಾಯಕರು ಶ್ರೀಗಳಾದ ರೆಹಮಾನ್ ಮತ್ತು ಭುಟ್ಟೋರವರ ನಡುವೆ ಸಂವಿಧಾನ ಸ್ವರೂಪದಲ್ಲೇ ತೆಂಗು–ತುಂಬೆಗಳ ಅಂತರವಿತ್ತು. ಶ್ರೀ ರೆಹಮಾನರು ಪ್ರಾದೇಶಿಕ ಸ್ವಾಯತ್ತತೆಯನ್ನು ನಂಬಿದರೆ, ಶ್ರೀ ಭುಟ್ಟೊ ಕೇಂದ್ರದ ಏಕಛತ್ರಾಧಿಪತ್ಯವನ್ನು ಬಯಸಿದ್ದಾರೆ. ಇದರಿಂದ ಶ್ರೀ ಭುಟ್ಟೋ ತಾನು ಅಧಿವೇಶನವನ್ನು ಬಹಿಷ್ಕರಿಸುವರೆಂದೂ ಹೇಳಿದ್ದರು ಆದರೆ. ತನ್ನ ಪಟ್ಟು ನಡೆಯುವುದಿಲ್ಲವೆಂದ ವರಿಗೆ ಖಾತ್ರಿಯಾದ ಮೇಲೆ ಶ್ರೀ ರೆಹಮಾನರ ಸಲಹೆಗಳಿಗೆ ಅವರು ಒಪ್ಪಿದಂತೆ ಮಾಡಿದ್ದಾರೆ. ಅಧಿವೇಶನಕ್ಕೆ ಹಾಕಿದ ಬಹಿಷ್ಕಾರವನ್ನು ಹಿಂದೆಗೆದುಕೊಂಡಿದ್ದಾರೆ. ಶ್ರೀ ಭುಟ್ಟೋರನ್ನು ನಂಬಿಯೇ ಮಾಜಿ ಅಧ್ಯಕ್ಷ ಆಯ್ಯೂಬಖಾನರು ಕೆಟ್ಟರೆಂಬುದನ್ನು ಮರೆಯಲಾಗದು. ಪೂರ್ವ–ಪಶ್ಚಿಮ ಪಾಕಿಸ್ತಾನಗಳ ನಡುವೆ ಪೂರ್ವ–ಪಶ್ಚಿಮಗಳಷ್ಟೇ ವ್ಯತ್ಯಾಸವಿದೆ. ಇದು ಅವರ ನಾಯಕರ ವರ್ತನೆಗಳಿಂದಲೇ ವ್ಯಕ್ತವಾಗುತ್ತದೆ. ಈ ಅಂತರಗಳು ದೂರಾಗುವುದು ಸಾಧ್ಯವಾದರೂ ಪ. ಪಾಕಿಸ್ತಾನದ ಕಲ್ಲು ಮನಸ್ಸು ಕರಗಲು ಬಹುಕಾಲ ಬೇಕಾದೀತು. ಅದುವರೆಗೆ ಪ್ರಜಾಸತ್ತೆಯ ಹೆಸರಲ್ಲಿ ಏನೇನು ನಡೆಯುತ್ತಲಿದೆಯೋ!

ಬ್ರಹ್ಮೋಪದೇಶ—
ಉಪಾಹಾರ ಸತ್ಕಾರ

[illegible] ಶ್ರೀ [illegible] ಶ್ರೀ ಭಾಸ್ಕರ [illegible] ಅವರು [illegible] ಅವರ ಬ್ರಹ್ಮೋಪದೇಶವು [illegible] ತಾ. 14-2-71 [illegible] ಸಮಾರಂಭಕ್ಕೆ [illegible] ಆಗಮಿಸಿದ್ದರು.

ಚುನಾವಣೆಗಳ ಮುಸ್ಸಂಜೆಯಲ್ಲಿ ಧೂಳು ಕವಿದ ವಾತಾವರಣ

ಚುನಾವಣೆಗಳು ಹತ್ತಿರ ಹತ್ತಿರವಾದಂತೆ, ರಾಜ್ಯಕೀಯವು ಮತ್ತಷ್ಟು ಡೋಲಾಯಮಾನವಾಗುತ್ತ ಬಂದಂತೆ ರಾಜ್ಯ–ರಾಜ್ಯದಲ್ಲಿ ಅಶಾಂತಿ ಹರಡುವ ಪ್ರಯತ್ನ ಅಲ್ಲಲ್ಲಿ ನಡೆಯುತ್ತಿದೆ.

ಕೇರಳದಲ್ಲಿ ಸರಕಾರಿ ನೌಕರರು ಅಧಿಕ ಸೌಲಭ್ಯಗಳನ್ನು ಬೇಡಿ ಮುಷ್ಕರ ಹೂಡಿದರು. ಮುಖ್ಯಮಂತ್ರಿ ಶ್ರೀ ಅಚ್ಯುತ ಮೆನನ್ನರೂ ಅವರ ಪಕ್ಷವೂ ಈ ಮುಷ್ಕರವನ್ನು ದೃಢತೆಯಿಂದ ಎದುರಿಸಲು ನಿರ್ಧರಿಸಿದ್ದಾರೆ. ಆದರೆ, ಅವರ ಸಂಯುಕ್ತರಂಗದ ಅಂಗ ಪಕ್ಷೀಯರಲ್ಲಿ ಕೆಲವರು ನೌಕರರ ಬೇಡಿಕೆಗಳಿಗೆ ಪರರಾಗಿದ್ದಾರೆ.

ಹೀಗೆ ಪರರಾಗಿರುವವರಲ್ಲಿ ಸರಕಾರದಿಂದ ಹೊರಗುಳಿದು ಮೆನನ್ನರ ಪ್ರಗತಿಪರ ನೀತಿಗಳಿಗೆ ನಿಶ್ಶರ್ತ ಬೆಂಬಲ ನೀಡುವ ಇಂಡಿಕೇಟೂ ಸೇರಿದೆ. ಶ್ರೀ ಮೆನನ್ನರು ವಾರ್ಷಿಕ ನಾಲ್ಕು ಕೋಟಿ ರೂಪಾಯಿಗಳನ್ನು ಹರಿವಾಣದಲ್ಲಿಟ್ಟು ನೌಕರರ ಕೈಗಳಿಗೊಪ್ಪಿಸಲು ಮುಂದೆ ಬಂದರೂ ಅವರು ತಮ್ಮ ಮೂಲ ಬೇಡಿಕೆಗಳಿಂದ ವಿಚಲಿತರಾಗಲಿಲ್ಲ.

ಶ್ರೀ ಮೆನನ್ನರ ಪ್ರಮುಖ ವಿರೋಧಿ ಅವರ ದಾಯಾದಿ ಮಾರ್ಕ್ಸಿಸ್ಟ್ ಪಕ್ಷ. ಆದುದರಿಂದ ನೌಕರರ ಮುಷ್ಕರದ ಹಿಂದೆ ಮಾರ್ಕ್ಸಿಸ್ಟ್ ಪಕ್ಷದ ಕೈವಾಡವಿದೆ ಎಂದು ಭಾವಿಸುವುದು ತಪ್ಪಲ್ಲ. ಮುಷ್ಕರಕಾರರ ದೃಢತೆ—ಎದೆಗಾರಿಕೆಗಳಿಗೆ ಮಾರ್ಕ್ಸಿಸ್ಟರ ಬೆಂಬಲ, ಇಂಡಿಕೇಟಿಗರ ಸಹಾನುಭೂತಿಗಳೇ ಶ್ರೀರಾಮರಕ್ಷೆ.

ಆದರೆ, ಇದನ್ನು ಒಪ್ಪಲು ಯಾರೂ ತಯಾರಿಲ್ಲ. ಮಾರ್ಕ್ಸಿಸ್ಟ್ ನಾಯಕ ಶ್ರೀ ಎ. ಕೆ. ಗೋಪಾಲನ್ನರೆನ್ನುವಂತೆ ಸರಕಾರಿ ನೌಕರರ ಮುಷ್ಕರ ನ್ಯಾಯವಾದದ್ದು. ಶ್ರಮಜೀವಿಗಳ ನ್ಯಾಯವಾದ ಹೋರಾಟಕ್ಕೆ ಬೆಂಬಲ ನೀಡುವುದು ಅವರ ಪಕ್ಷದ ಸಾಮಾನ್ಯ ನೀತಿ. ಆದ್ದರಿಂದ ಮಾರ್ಕ್ಸಿಸ್ಟರು ಮುಷ್ಕರದ ನಿಲುಗಡೆಯಾಗಬೇಕಾದರೆ ಸರಕಾರ ಶರಣು ಬರಬೇಕೆಂದು ಬಯಸುವುದು ಅಸಾಧುವಲ್ಲ.

ಇವರೇ ಮಾರ್ಕ್ಸಿಸ್ಟರು ಸರಕಾರದ ಸೂತ್ರಧಾರಿಗಳಾಗಿದ್ದಾಗ, ಇವರೇ ಶ್ರಮ ಜೀವಿಗಳು. ಇದೇ ರೀತಿಯ ನ್ಯಾಯಕ್ಕಾಗಿ ಹೋರಾಡಿದಾಗ ಆ ಹೋರಾಟವನ್ನು ಬಗ್ಗು ಬಡಿಯಲು ಸರ್ವ ಸನ್ನದ್ಧರಾಗಿದ್ದರೆಂಬುದನ್ನು ಯಾರು ಮರೆಯುತ್ತಾರೆ?

ಇಂಡಿಕೇಟಿಗರೂ ಲೋಕಸಭಾ ಚುನಾವಣೆಯ ಬಳಿಕ ಕೇರಳದ ರಾಜ್ಯಕೀಯಕ್ಕೆ ಹೊಸ ತಿರುವು ಕೊಡಲು ಬಯಸಿದ್ದಾರೆ. ಉಳಿದವರ ನಿಶ್ಶರ್ತ ಬೆಂಬಲದಿಂದ ತನ್ನವರೇ ಇರುವ ಸಚಿವ ಸಂಪುಟ ರಚಿಸಲಿಚ್ಛಿಸಿದ್ದಾರೆ. ಶ್ರೀ ಮೆನನ್ನರು ತಾನಾಗಿ ರಾಜಿನಾಮೆ ನೀಡಿ ಕೆಳಗಿಳಿಯಬೇಕೆಂದು ಅಪೇಕ್ಷಿಸುತ್ತಾರೆ. ಅದಕ್ಕೆಂದೇ ಮುಷ್ಕರಕಾರರ ಬೇಡಿಕೆಗಳು ನ್ಯಾಯವಾದುವು ಎಂದವರು ತುಟಿಯೊಡಿಸುತ್ತಾರೆ.

ಇಷ್ಟರಲ್ಲೇ ಶ್ರೀ ಮೆನನ್ನರು ಮುಷ್ಕರವನ್ನು ಹೇಗಾದರೂ ಕೊನೆಗೊಳ್ಳುವಂತೆ ಮಾಡದಿದ್ದಲ್ಲಿ, ಲೋಕ ಸಭಾ ಚುನಾವಣೆಗಳಿಗೆ ಭಂಗ ಬರುತ್ತದೆ. ಅಧಿಕಾರ ಲಾಲಸಿಗಳು ದಂಡೋಪಾಯಕ್ಕೆ ಹೆದರುವಂತೆ ಮತ್ತಾವುದರ ಮುಂದೂ ತಲೆಬಾಗುವುದಿಲ್ಲ.

ನೌಕರರು ಶ್ರಮ ಜೀವಿಗಳು. ಅವರ ಬೇಡಿಕೆ ನ್ಯಾಯವಾದದ್ದು ನಿಜ. ಆದರೆ, ಯಾವ ನೌಕರಿಯೂ ಇಲ್ಲದೆ ಕೂಲಿ–ನಾಲಿಮಾಡಿ ಹೊಟ್ಟೆ ಹೊರೆಯುವ ಶ್ರೀಸಾಮಾನ್ಯರಿಗಿಂತ ನೌಕರ ವರ್ಗದ ಶ್ರಮಜೀವಿಗಳ ಸಂಖ್ಯೆ ಹೆಚ್ಚಾಗಿ ಹೋಯಿತೆ?

ಅನಕ್ಷರ—ಅಜ್ಞ—ಅಶಿಕ್ಷಿತ ಶ್ರೀ ಸಾಮಾನ್ಯರ ಉದ್ಧಾರವೇ ತಮ್ಮ ಉದ್ಧಾರವೆಂದೂ ಅವರ ಉದ್ಧಾರ ತಮ್ಮ ಏಕೈಕ ಗುತ್ತಿಗೆಯೆಂದೂ ಹೇಳಿಕೊಳ್ಳುತ್ತಿರುವ ಇಂಡಿಕೇಟಿಗರೂ ಮಾರ್ಕ್ಸಿಸ್ಟರೂ 'ಇಸ್ತ್ರಿ ಅಂಗಿ'ಯ "ಬಿಳಿ ಕೊರಳು ಪಟ್ಟಿ"ಯ ಕೆಲವು ಲಕ್ಷ ನೌಕರರಿಗಾಗಿ ಹಲವು ಕೋಟಿ ಶ್ರೀಸಾಮಾನ್ಯರ ಬದುಕನ್ನು ನರಕಕ್ಕಿಳಿಸುವುದು ಸಮಾಜವಾದವೆನಿಸುವುದೆ?

ಶ್ರೀ ಮೆನನ್ನರು ತಮ್ಮ ಅಧಿಕಾರದಿಂದ ಇಳಿಯ ಬಯಸದಿದ್ದರೆ, ನೌಕರರಿಗೆ ಅನನ್ಯ ಶರಣುಹೋಗಲೇಬೇಕು. ಲೋಕಸಭೆಯ ೧೦ ಸ್ಥಾನಗಳಿಗಾಗಿ ಇಂಡಿಕೇಟು ವಿಧಾನ ಸಭೆಯ ೨೪೦ ಸ್ಥಾನಗಳನ್ನೂ ಬಲಿಯಾಗಿ ತೆತ್ತುದರ ಮುಂದೆ ಇದು ಶರಣಾಗತಿಯೇ ಅಲ್ಲ; ಬಗ್ಗುವು ಎಂಬುದು ಜನವಂಚನೆಯದು; ಕೊಟ್ಟವು ಎಂಬುದು ಉದಾರ ಸೂಚನೆಯದು.

ಅಧಿಕಾರದಲ್ಲಿ ಉಳಿಯಬೇಕಾದರೆ ಹಾವಿಗೆ ಹೊಡೆಯಲೂಬೇಕು; ಅದಕ್ಕೆ ತಾಗಲೂ ಬಾರದು. ಈ ಬಗೆಯ ಕಲಿಯಲ್ಲಿ ನಮ್ಮ ರಾಜ್ಯಕೀಯ ಪುಡಾರಿಗಳು ಒಬ್ಬರಿಗಿನ್ನೊಬ್ಬರು ಬಲೀಯಸರು.

ಇದು ಕೇರಳದ ಕತೆಯಾದರೆ, ತಮಿಳುನಾಡಿನದು ಮತ್ತೊಂದು ತೆರ.

ಸೇಲಮ್ಮಿನಲ್ಲಿ ನಡೆಯಿತೆನ್ನಲಾದ ಮೆರವಣಿಗೆಯೊಂದರ ವಿವರವಿರುವ 'ತುಘಲಕ್' ಪತ್ರಿಕೆಯ ಒಂದು ಸಂಚಿಕೆಯನ್ನೇ ದ್ರಾಮುಕ ಸರಕಾರ ಮುಟ್ಟುಗೋಲು ಹಾಕಿತು.

ಪತ್ರಿಕೆಯಲ್ಲಿ ಆಕ್ಷೇಪಾರ್ಹ ಪುಟಗಳವೆಯೆಂಬುದೇ ಸರಕಾರದ ಈ ಕೃತಿಗೆ ಸಮರ್ಥನೆ.

ಅಶ್ಲೀಲ ಪ್ರಸಂಗವೊಂದರ ಕುರಿತು ಚಿತ್ರಲೇಖನವೊಂದನ್ನು ತುಘಲಕ್ ಪ್ರಕಟಿಸಿದೆಯೆಂದು ಆರೋಪ.

ಈ ಪ್ರಸಂಗವೂ ಕುತೂಹಲಕಾರಿಯೇ. ಜನವರಿ ಕೊನೆಯಲ್ಲಿ ದ್ರಾವಿಡ ಕಳಗಂ ನಾಯಕ ಪೆರಿಯಾರ್ ನೇತೃತ್ವದ ಮೆರವಣಿಗೆಯೊಂದು ಸೇಲಂನಲ್ಲಿ ನಡೆಯಿತು. ಅದು ಹಿಂದೂ ಜನರ ಆರಾಧ್ಯ ದೈವ ಶ್ರೀ ರಾಮಚಂದ್ರನ ಚಿತ್ರಕ್ಕೆ ಅಪಮಾನ ಮಾಡಿತು.

ಈ ಅಪಮಾನ ಯಾವ ರೀತಿಯದ್ದು? ಮತ್ತು ಯಾಕೆ?

ಹಿಂದೂ ದೇವರ ಚಿತ್ರಗಳಿಗೆ ಚಪ್ಪಲಿ ಪ್ರಹಾರ; ಮೂಢನಂಬಿಕೆಗಳ ಮೂಲೋತ್ಪಾಟನೆಯೇ ಇದರ ಹಿಂದಿರುವ ಘನೋದ್ದೇಶ.

(ಒಂಭತ್ತನೇ ಪುಟ ನೋಡಿರಿ)

ಮರ್ಫಿ
ಮೇರಾ–ಮುಸಾಫಿರ್
ಪ್ರತಿಯೊಂದು ಸ್ಟೇಶನೂ
ಸುಸ್ಪಷ್ಟ ಹಾಗೂ ಶಕ್ತಿಯುತ



• ಬೆಲೆಯಲ್ಲಿ ಎಕ್ಸೈಜ್ ಡ್ಯೂಟಿ ಮಾತ್ರ ಸೇರಿದೆ ಇತರ ಎಲ್ಲಾ ತೆರಿಗೆಗಳು ಪ್ರತ್ಯೇಕ.

ರೂ. 328*

4.ಬ್ಯಾಂಡ್ ಡೀಲಕ್ಸ್ ಟ್ರಾನ್ಸಿಸ್ಟರ್

- ಜಗತ್ತಿನಾದ್ಯಂತದ ಎಲ್ಲಾ ಸ್ಟೇಶನುಗಳನ್ನೂ ಆಲಿಸುವುದಕ್ಕಾಗಿ—ಆಲ್‌ವೇವ್
- ಶಕ್ತಿಯುತವಾದ ವಾಲ್ಯೂಮ್.
- ನಿಮ್ಮ ಆಯ್ಕೆಗನುಗುಣವಾಗಿ ಧ್ವನಿಯನ್ನು ನಿಯಂತ್ರಿಸಲು ಹೈ-ಲೋ ಟೋನ್.
- ಅತಿ ಸೂಕ್ಷ್ಮಗ್ರಾಹಿತ್ವತೆಗಾಗಿ ಒಳಗೆ ಅಡಗಿಸಿದ ಫೆರೈಟ್ ರಾಡ್ ಮತ್ತು ಲೂಪ್ ರೀತಿಯ ಏರಿಯಲ್
- ಶ್ರೇಷ್ಠ ದರ್ಜೆಯ ಪೊಲಿಸ್ಟೆರಿನ್‌ನಿಂದ ಮಾಡಿದ ಅಂದವಾದ ಹಾಗೂ ಸೊಬಗುಳ್ಳ ಟು-ಟೋನ್ ಕ್ಯಾಬಿನೆಟ್.
- ನಿರಾಯಾಸವಾಗಿ ಹಾಗೂ ತ್ವರಿತವಾಗಿ ಟ್ಯೂನ್ ಮಾಡಲಿಕ್ಕಾಗಿ ಎರಡು ಸೂಚಿಗಳಿರುವ ಉದ್ದನೆಯ ಹಾಗೂ ಸುಸ್ಪಷ್ಟವಾದ ಡಯಲ್ ಸ್ಕೇಲ್
- ದೊಡ್ಡ ಸೈಜಿನ ಬ್ಯಾಟರಿಯಲ್ಲಿ ನಡೆಯುತ್ತದೆ. ಪ್ರವಾಹವನ್ನು ನಿಯಂತ್ರಿಸುವ ಸಾಧನವನ್ನು ಜೋಡಿಸಿದರೆ ವಿದ್ಯುತ್ ಶಕ್ತಿಯಿಂದ ಕೂಡಾ ನಡೆಸ ಬಹುದು!

ಲಘು, ಸುಸ್ಪಷ್ಟ ಹಾಗೂ ಶಕ್ತಿಯುತವಾದ ಧ್ವನಿಯನ್ನು ನೀಡಲಿಕ್ಕಾಗಿ ಪ್ರತಿಯೊಂದು ಮರ್ಫಿಯನ್ನೂ "ಮ್ಯಾಗ್ನಿಟ್ಯೂನ್ಡ್" ಮಾಡಲಾಗಿದೆ.

ಮರ್ಫಿ ಮನೆಯಲ್ಲಿ ಆನಂದದ ಸುಗ್ಗಿ!

ತಡವಾದ ನಿರ್ಧಾರ

ಬೆನ್ನಲ್ಲಿ ಇರಿಯುವ ಹೊಸ ಕ್ರಮ

ಭಾರತದಲ್ಲಿ ಲೋಕಸಭೆಗೆ ಸದಸ್ಯರನ್ನು ಆರಿಸಲು ಚುನಾವಣೆಯ ವಿಧಿಗಳು ಮುಂದುವರಿಯುತ್ತಿವೆ. ಚುನಾವಣೆಯ ಬಿಸಿ ಗಾಳಿ ದೇಶವ್ಯಾಪಿಯಾಗಿದೆ.

ಪ್ರಚಾರ ಸಭೆಗಳು ಅವ್ಯಾಹತವಾಗಿ ಸಾಗಿವೆ; ವರ್ತಮಾನ ಪತ್ರಿಕೆಗಳಲ್ಲಿ ಜಾಹೀರಾತುಗಳೂ ಕಾಣಿಸಿಕೊಂಡಿವೆ. ಮನೆಮನೆಗೂ ಹೋಗಿ ಮತ ಬೇಡುವುದಕ್ಕೂ ಇಷ್ಟರಲ್ಲೇ ಆರಂಭವಾಗಿದೆ.

ಆದರೆ, ಒಂದು ವಿಷಯ. ಈ ಬಾರಿಯ ಚುನಾವಣೆಗಳಲ್ಲಿ ಯಾರು ಗೆದ್ದು ಬರುತ್ತಾರೆಂಬ ಚಿಂತೆ ಯಾರಿಗೂ ಇಲ್ಲ. ರಾಜ್ಯಕೀಯ ಪಕ್ಷಗಳೆಲ್ಲವಕ್ಕೂ ಸಮಾಜವಾದವೇ ಪಂಚಾಕ್ಷರಿ. ಈ ಪಂಚಾಕ್ಷರಿಯನ್ನು ಮರೆತು ಸಪ್ತಾಕ್ಷರಿ ಉಚ್ಚರಿಸಹೊರಟರೆ, ಅವರು ಪ್ರತಿಗಾಮಿಗಳಾಗುತ್ತಾರೆ.

'ಸಮಾಜವಾದ'ಕ್ಕೆ ತಮಗೆ ಮನಬಂದಂತೆ ವ್ಯಾಖ್ಯಾನ ನೀಡುತ್ತ ತಮ್ಮ ವ್ಯಾಖ್ಯೆಯೇ ಪರಮ ವೈಜ್ಞಾನಿಕವೆಂದೂ ಇದನ್ನೇ ಶ್ರೀ ಸಾಮಾನ್ಯ ನಂಬಿಕೊಂಡಿರಬೇಕೆಂದೂ ಎಲ್ಲವರ ಕಟ್ಟಾಜ್ಞೆ.

ಶ್ರೀ ಮದ್ಭಗವದ್ಗೀತೆಗೆ ಮೂವರು ಆಚಾರ್ಯರು ಮೂರು ಬಗೆಯಾಗಿ ವ್ಯಾಖ್ಯಾನ ಮಾಡಿ, ತಂತಮ್ಮ ವ್ಯಾಖ್ಯಾನದ ಶ್ರೇಷ್ಠತೆಯನ್ನು ಸ್ಥಾಪಿಸ ಹೊರಟ ಪೂರ್ವೇತಿಹಾಸ ನೆನಪಿಗೆ ಬರುತ್ತದೆ.

ಶ್ರೀಸಾಮಾನ್ಯನು ಇವುಗಳಲ್ಲಿ ಯಾವ ವ್ಯಾಖ್ಯಾನವು ತನಗೆ ಸಾಧಕವೆಂದು ಪರ್ಯಾಲೋಚಿಸಬೇಕಾಗಿದೆ. ಆದರೆ, ಅಷ್ಟು ವಿವೇಚನಾಶಕ್ತಿ ಮತದಾರನಿಗೆ ಇರುವುದಿಲ್ಲವೆಂದು ನಮ್ಮ ರಾಜ್ಯಕೀಯ ಪುಢಾರಿಗಳಿಗೆ ಚೆನ್ನಾಗಿ ಗೊತ್ತು. 'ಅಂದಿಗೆ ಅದೇ ಸುಖ; ಇಂದಿಗೆ ಇದೇ ಸುಖ'ವೆಂದು ಪಕ್ಷಾಂತರ ಪ್ರವೃತ್ತಿಯ ತಿಪ್ಪರಲಾಗದಲ್ಲೇ ನಿರತರಾದ ಇವರಿಂದ ದೇಶ ಏನನ್ನೂ ಬಯಸಬಾರದು.

ಅಧಿಕಾರ ದಾಹವೇ ಪಕ್ಷಾಂತರದ ಬೀಜ ಮಂತ್ರ. ಸ್ವಾರ್ಥಸಾಧನೆಯೇ ಅದರ ಮೊಳಕೆ. ವಿವಿಧ ಆಶೆ-ಆಮಿಶಗಳೇ ನೀರು ಗಾಳಿ—ಬೆಳಕು ಎಲ್ಲ ಅಶಿಸ್ತು ಹೂ, ಅರಾಜಕತೆ ಫಲ.

ಕಾಂಗ್ರೆಸ್ಸು ವಿಭಜನೆಯ ವೇಳೆಯೊಂದು ಬಾರಿಯೆದ್ದ ಪಕ್ಷಾಂತರ ಅಣಬೆಗಳು ಅಲ್ಲಿಗೇ ಮುಗಿಯಲಿಲ್ಲ, ಪ್ರಧಾನಿ ಗಾಂಧಿಯವರು ಲೋಕಸಭೆಯನ್ನು ವಿಸರ್ಜಿಸಿದ ನಂತರ ಮತ್ತಷ್ಟು ಹೆಚ್ಚಿವೆ.

ಪಕ್ಷಾಂತರದ ಪಿಡುಗಿಗೆ ಅನೇಕ ಮೇಧಾವಿಗಳೂ ಬುದ್ಧಿ ಜೀವಿಗಳೂ ಗುರಿಯಾಗಿದ್ದಾರೆ; ಚುನಾವಣೆಯ ಮುನ್ನಾದಿನದವರೆಗೂ ಇದು ನಡೆಯುತ್ತದೆ; ಮುಂದೆ ಭಾರೀ ಪ್ರಮಾಣದಲ್ಲಿ ಹರಡಲಿದೆ.

ರಾಜ್ಯಕೀಯವಾಗಿ ಭಾರತ ತುಂಬ ಅಸ್ತವ್ಯಸ್ತವಾಗಿದೆ. ಈ ಕ್ಷೇತ್ರದಲ್ಲಿ ಯಾರನ್ನೂ ಯಾರೂ ನಂಬುವುದು ಸಾಧ್ಯವಿಲ್ಲವೆಂಬಂತಾಗಿದೆ. ಆ ಕೈಯನ್ನು ಈ ಕೈ ನಂಬುವುದಿಲ್ಲವೆಂಬ ಹಳೆಯ ಮಾತು ನಮ್ಮ ದೇಶದ ಈ ಚುನಾವಣಾ ವೇಳೆಗೆ ಸರಿಯಾಗಿ ಹೊಂದಿಕೊಳ್ಳುತ್ತದೆ.

'ಆತ್ಮಸಾಕ್ಷಿ'ಯನ್ನು ಜಾಗ್ರತಗೊಳಿಸಿ ಪಕ್ಷೀಯ ಶಿಸ್ತನ್ನು ಉಲ್ಲಂಘಿಸಿದ್ದರಿಂದಲೇ ರಾಜ್ಯಕೀಯ ತುಮುಲ ಹುಟ್ಟಿಕೊಂಡಿತು.

ಪ್ರತಿಯೊಬ್ಬ ಮತದಾರನಿಗೂ ಆತ್ಮಸಾಕ್ಷಿಗೆ ಸರಿಯಾಗಿ ನಡೆದು ಕೊಂಡರೆ, ಏನಾದೀತು?

ಚುನಾವಣೆಯ ಕೊನೆಯ ಗಳಿಗೆಯಲ್ಲಿ ಸ್ಪರ್ಧಿಗಳು ಮತದಾರರ ಆತ್ಮವನ್ನು ತಾವೇ ಕ್ರಯಕ್ಕೆ ಕೊಡು ಕೊಂಡು, ಅವುಗಳ ಮೇಲೆ ಸವಾರಿ ಮಾಡ ಹವಣಿಸಿದರೆ ಏನಾದೀತು?

ಯಾವುದಾದರೂ ಒಂದು ಪಕ್ಷದ ಕಾರ್ಯಕರ್ತನಾದರೂ ಆ ಪಕ್ಷಕ್ಕೆ ವಿರೋಧವಾಗಿ ಪ್ರಚಾರ ಕಾರ್ಯ ನಡೆಸುವುದಿಲ್ಲವೆಂದು ನಂಬುವುದು ಹೇಗೆ? ಅವನಿಗೂ ಆತ್ಮವಿದೆ. ಅದಕ್ಕೆ ಸಾಕ್ಷಿಯಿರ ಬೇಡವೆ? ಇಂಡಿಕೇಟ್ ಇರಲಿ, ಸಿಂಡಿಕೇಟ್ ಇರಲಿ ಅಥವಾ ಇನ್ನಾವುದೇ ಪಕ್ಷವಿರಲಿ, ಅದಕ್ಕೆ ಸೇರುವಾಗ ಪುಢಾರಿಗಳು ಒಂದು ಕಾಲು ಹೊರಗಿಟ್ಟೇ ಪ್ರವೇಶಿಸುತ್ತಾರೆ. ತಮ್ಮ ವ್ಯಕ್ತಿಗತ ಹಿತಸಾಧನೆಯ ಮುಂದೆ ದೇಶದ ಐವತ್ತೈದು ಕೋಟಿ ಜನತೆಯನ್ನು ಕಾಲಕಸಕ್ಕೆ ಕಡೆಯಾಗಿ ಕಾಣುತ್ತ ತಮ್ಮ ಡೊಂಬರಾಟದ ನಮ್ರ ಪ್ರೇಕ್ಷಕರಂತೆ ಕುಣಿಸುತ್ತಿರುವ ಈ ವ್ಯಕ್ತಿಗಳು ದೇಶಕ್ಕೇನು ಮಾಡುತ್ತಾರೆ?

ಅವೇ ಹಳೆ ಮುಖಗಳು—ಹಚ್ಚಿಕೊಂಡ ಬಣ್ಣ ಮಾತ್ರ ಬೇರೆ. ಹಚ್ಚಿದ ಲೇಬಲ್ ಬೇರೆಯಾದ ಮಾತ್ರಕ್ಕೆ ಅವರ ಹೃದಯ ಬೇರೆಯಾಗಬಲ್ಲುವೆ?

ರಾಜ್ಯಕೀಯದಲ್ಲಿ ಪ್ರಗತಿ-ಪ್ರತಿಗಳ ಅರ್ಥವೇನೇ ಇರಲಿ, ರಾಜ್ಯಕೀಯದ ಬರಡೆಮ್ಮೆ ಕರೆಯುವವರು ನಿಘಂಟು ಆ ಶಬಗಳಿಗೆ ಏನು ಅರ್ಥ ಹೇಳುತ್ತದೆ ಎಂಬುದು ಮುಖ್ಯ.

ತಮಗೆ ಅಧಿಕಾರ-ಸ್ಥಾನ-ಮಾನ-ಸಂಪತ್ತು-ಸೌಲಭ್ಯ ಇತ್ಯಾದಿ ನೀಡುವವರು ಪ್ರಗತಿಶೀಲರು; ಅವನ್ನು ನಿರಾಕರಿಸುವವರು ಪ್ರತಿಗಾಮಿಗಳು-ಇದು ಅವರ ಡಿಕ್ಷನರಿಯ ವ್ಯಾಖ್ಯಾನ.

ರಾಜ್ಯಕೀಯ ನಾಯಕರು ತಡವಾಗಿ ನಿರ್ಣಯ ತೆಗೆದುಕೊಳ್ಳುವ ಹೊಸ ರೋಗಕ್ಕೆ ಬಲಿಯಾಗಿದ್ದಾರೆ.

ಇದಕ್ಕೆ ಸಮಯ ಸಾಧಕತನವೆಂದು ಹೇಳಬಹುದು. ಅಥವಾ ಬೆನ್ನಲ್ಲಿ ಇರಿಯುವ ಹೊಸ ಮೋಡಿಯೆಂದರೂ ಅಚ್ಚರಿಯಿಲ್ಲ.

ಈ ಬಗೆಯ ಮೋಡಿ ಇಲ್ಲಗೇ ನಿಲ್ಲುವುದಿಲ್ಲ. ಚುನಾವಣೆಯ ಹಿಂದಿನ ದಿನ ಭಾರಿ ಸರ್ಕಸ್ ನೋಡಲಿಕ್ಕಿದೆ.

ಅಭ್ಯರ್ಥಿಗಳ ರಂಗಿನ ಮಾತಿಗೆ ಮರುಳಾಗಿ ಮತದಾರ ವಂಚಿತನಾಗುವ ಸಾಧ್ಯತೆಯೂ ಇದೆ.

ಪಕ್ಷೀಯ ಆತ್ಮಕ್ಕಿಂತ ವ್ಯಕ್ತಿಗತ ಆತ್ಮವು ಶ್ರೇಷ್ಠವೆಂದು ತಿಳಿಯುವಲ್ಲಿ ಇದು ಸಾಧ್ಯ.

"ಮತದಾರರೇ, ಎಚ್ಚರಾಗಿರಿ. ರಾಜ್ಯಕೀಯ ಓತಿಗಳ ಬಣ್ಣಕ್ಕೆ ಮಾರುಹೋಗದಿರಿ."—ಇದು ಸಕಾಲಿಕ ಎಚ್ಚರಿಕೆ.

ಭಾರತದ ಜನತೆಯ ಉಳಿವು-ಅಳಿವಿನ ಪ್ರಶ್ನೆಗೆ ಸಮಾನ ಎಂದಿನ ಚುನಾವಣೆ.

ತಪ್ಪು ಮತದಾನ ಮಾಡಿದರೆ ಪಶ್ಚಾತ್ತಾಪ ಪಡುವುದಕ್ಕೂ ಅವಕಾಶವಿಲ್ಲ; ತಿದ್ದಿಕೊಳ್ಳುವುದಕ್ಕೆಲ್ಲಿ?

ಹಾಲು ಉಕ್ಕಿ ಒಲೆಗಿಳಿದರೆ, ಕರಟು ವಾಸನೆ ಮಾತ್ರ ಬಹುಕಾಲ ಬಡೆಯುತ್ತದೆ.

ಸಾಂದ್ರ ಬೇಸಾಯಕ್ಕೆ ವಿಸ್ತೃತ ಯೋಜನೆ

ಕೃಷಿ ಕ್ಷೇತ್ರದಲ್ಲಿ ಗುರಿ ಮೀರಿದ ಸಾಧನೆ ರಾಜ್ಯದ ಅಭಿಮಾನ್ಯ ನಾಲ್ಕನೆಯ ಯೋಜನೆಯಲ್ಲಿ ಕೃಷಿ ಸೇವೆಯನ್ನು ಮತ್ತಷ್ಟು ಸಾಂದ್ರಗೊಳಿಸುವ ಪ್ರಯತ್ನ. ಈ ಉದ್ದೇಶಕ್ಕಾಗಿ 24 ಕೋಟಿ ರೂಪಾಯಿ ವೆಚ್ಚಕ್ಕೆ ಅವಕಾಶ.

ಕೈಗೊಳ್ಳಲಿರುವ ನಾನಾ ಸಾಂದ್ರ ಕಾರ್ಯಕ್ರಮಗಳ ಫಲವಾಗಿ ರಾಜ್ಯದ ಆಹಾರ ಉತ್ಪಾದನೆ 62 ಲಕ್ಷ ಟನ್ನುಗಳಿಗೆ ಮುಟ್ಟುವ ನಿರೀಕ್ಷೆ ಇದೆ. ಅಧಿಕ ಇಳುವರಿ ತಳಿಗಳ ಕೃಷಿಗೆ ಈ ಒಳಪಟ್ಟಿರುವ 2·98 ಲಕ್ಷ ಹೆಕ್ಟೇರು ವಿಸ್ತೀರ್ಣ 5·8 ಲಕ್ಷ ಹೆಕ್ಟೇರುಗಳಿಗೆ ವ್ಯಾಪಿಸುವ ಗುರಿ.

ಕೃಷಿ ಅಭಿವೃದ್ಧಿಯ ಯೋಜನಾ ವೆಚ್ಚದಲ್ಲಿ ಸುಧಾರಿಸಿದ ಬೀಜ, ರಸಾಯನಿಕ ಗೊಬ್ಬರ, ಸಸ್ಯ ಸಂರಕ್ಷಣೆ, ಕೃಷಿ ಉಪಕರಣಗಳು, ವ್ಯವಸಾಯ ಶಿಕ್ಷಣ— ಇತ್ಯಾದಿ ಕಾರ್ಯಕ್ರಮಗಳ ವೆಚ್ಚದ ಪಾಲು 18·85 ಕೋಟಿ ರೂಪಾಯಿಗಳು.

(ಮೈಸೂರು ಸರಕಾರದ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ ಪ್ರಕಟಿತ)

ಅಪೊಲೋ-೧೪ರ ಯಾತ್ರಿಕರು

ಗಗನದಲ್ಲಿ ಹಾರಾಟ ನಡೆಸಿದ ಪ್ರಥಮ ಅಮೆರಿಕನರಾದ 47 ವರ್ಷ ವಯಸ್ಸಿನ ಗಗನಯಾತ್ರಿ ಅಲನ್ ಬಿ. ಷಪರ್ಡ್, ಜೂನಿಯರ್ ಅವರು ಈಗ ಗಗನ ಹಾರಾಟ ನಡೆಸಿದ ಅತ್ಯಂತ ಹಿರಿಯ ಅಮೆರಿಕನರಾದರು.

ಪ್ರಥಮ ಬಾರಿಗೆ ಚಿಕ್ಕ ಮರ್ಕ್ಯುರಿ ಕೋಶವೊಂದರಲ್ಲಿ 15 ನಿಮಿಷಗಳ ಉಪ-ಕಕ್ಷಾ ಹಾರಾಟ ನಡೆಸಿ 9 ವರ್ಷಗಳು, ಎಂಟು ತಿಂಗಳು ಮತ್ತು 26 ದಿನಗಳ ನಂತರ ಷಪರ್ಡ್ ಅವರು ತಮ್ಮ ದ್ವಿತೀಯ ಹಾರಾಟಕ್ಕಾಗಿ, ಈ ಬಾರಿ ಚಂದ್ರನಿಗೆ, ಮೇಲೇರಿಸಲ್ಪಟ್ಟರು. ಜನವರಿ 31ರಂದು ಫ್ಲಾರಿಡಾದ ಕೇಪ್ ಕೆನೆಡಿಯಿಂದ ಮೇಲೇರಲು ಗೊತ್ತುಪಡಿಸಿದ ಅಪೋಲೋ-14ರ ಪ್ರಧಾನ ಚಾಲಕರವರು.

ತಮ್ಮ ಸಹಚಾಲಕ ಗಗನಯಾತ್ರಿ ಎಡ್ಗರ್ ಡಿ. ಮಿಚೆಲ್ ಅವರೊಂದಿಗೆ ಚಂದ್ರನಲ್ಲಿಳಿದು, ನಡೆದ ಷಪರ್ಡ್ ಅವರು ಚಂದ್ರನ ನೆಲಕ್ಕೆ ಮಧ್ಯ ವಯಸ್ಸಿನ ತಲೆಮಾರಿನ ಪರಿಚಯ ಮಾಡಿದರು. ಈ ಇಬ್ಬರು ಚಂದ್ರನ ಮೇಲೆ ನಡೆದ ಐದನೆಯ ಮತ್ತು ಆರನೆಯ ಮಾನವರು, ಆದರೆ 40ಕ್ಕೆ ಮೀರಿದ ವಯಸ್ಸಿನವರಲ್ಲಿ ಮೊದಲಿಗರು ಮಿಚೆಲ್ ಅವರಿಗೆ 1970ರ ಸೆಪ್ಟೆಂಬರ್ 17ಕ್ಕೆ 40 ವರ್ಷಗಳು ಪೂರ್ಣಗೊಂಡವು.

ಚಾಲಕ ವರ್ಗದಲ್ಲಿ ಮೂರನೆಯವರಾದ ಸ್ಟುವರ್ಟ್ ಎ. ರೂಸಾ ಅವರಿಗೆ 37 ವರ್ಷಗಳು.

ಇದುವರೆಗೆ ಚಂದ್ರನಲ್ಲಿ ನಡೆದವರಲ್ಲಿ ಅತ್ಯಂತ ಹಿರಿಯ ವ್ಯಕ್ತಿ ಎಡ್ವಿನ್ ಇ. ಆಲ್ಡ್ರಿನ್. ಅವರು 1969ರ ಜುಲೈ 20ರಂದು, ತಮಗೆ 40 ವರ್ಷಗಳಾಗುವುದಕ್ಕೆ ಸರಿಯಾಗಿ ಆರು ತಿಂಗಳು ಮುಂಚಿತವಾಗಿ ನೀಲ್ ಆರ್ಮ್‌ಸ್ಟ್ರಾಂಗ್ ಅವರೊಡನೆ ಚಂದ್ರನಲ್ಲಿಳಿದರು. ಚಂದ್ರನಲ್ಲಿಳಿದ ಇತರ ಮೂವರು ಗಗನಯಾತ್ರಿಗಳ ಪೈಕಿ ಇಬ್ಬರು —ಆರ್ಮ್‌ಸ್ಟ್ರಾಂಗ್ ಮತ್ತು ಚಾರ್ಲ್ಸ್ ಕಾನ್ರಾಡ್—ಭೂಮಿಗೆ ಹಿಂದಿರುಗಿದನಂತರ 39ನೆಯ ವಯಸ್ಸಿನವರಾದರು.

ಚಂದ್ರನಲ್ಲಿಳಿಯದೆ ಚಂದ್ರನ ಸುತ್ತ ಹಾರಾಟ ನಡೆಸಿದವರಲ್ಲಿ ಅತ್ಯಂತ ಹಿರಿಯ ವ್ಯಕ್ತಿ ಜೇಮ್ಸ್ ಎ. ಲೊವೆಲ್, ಜೂನಿಯರ್ ಅವರು. 1970ರ ಏಪ್ರಿಲ್‌ನಲ್ಲಿ ಅಪೋಲೋ—13ರ ಹಾರಾಟದ ಸಮಯದಲ್ಲಿ ಅವರಿಗೆ 42 ವರ್ಷ ವಯಸ್ಸು. ಇದುವರೆಗೆ ಗಗನ ಹಾರಾಟ ನಡೆಸಿದವರಲ್ಲಿ ಅತ್ಯಂತ ಹಿರಿಯರೆಂದರೆ ವಾಲ್ಟರ್ ಷಿರ್ರಾ. 1968ರ ಅಕ್ಟೋಬರ್‌ನಲ್ಲಿ 11 ದಿನಗಳ ಅಪೊಲೋ-7ರ ಭೂಕಕ್ಷಾ ಹಾರಾಟದ ಪ್ರಧಾನ ಚಾಲಕರಾಗಿದ್ದಾಗ ಅವರಿಗೆ 45 ವರ್ಷ ವಯಸ್ಸಾಗಿತ್ತು.

ಅವರುಗಳ ವಯಸ್ಸೆಷ್ಟೇ ಆಗಿರಲಿ, ಅಪೋಲೋ-14ರ ಚಾಲಕರು ಇದುವರೆಗೆ ಭೂಕಕ್ಷೆಯಲ್ಲಿ ಅಥವಾ ಚಂದ್ರನಿಗೆ ಹಾರಾಟ ನಡೆಸಿದ 7 ಚಾಲಕರಿಗಿಂತ ಗಗನ ಹಾರಾಟದಲ್ಲಿ ಕಡಿಮೆ ಅನುಭವವುಳ್ಳವರು. ಈ ಮೂವರ ಪೈಕಿ ಒಬ್ಬರೂ ಭೂಕಕ್ಷಾ ಹಾರಾಟ ನಡೆಸದೆ ಪ್ರಥಮ ಬಾರಿಗೆ ಅಪೊಲೋ ವಾಹನವನ್ನು ನಡೆಸಲಿದ್ದಾರೆ. 10 ವರ್ಷಗಳ ಹಿಂದೆ ಷಪರ್ಡ ಅವರು 15 ನಿಮಿಷಗಳ ಉಪ-ಕಕ್ಷಾ ಹಾರಾಟ ನಡೆಸಿದ್ದನ್ನು ಬಿಟ್ಟರೆ ಇವರಾರೂ ಈ ಮುಂಚೆ ಗಗನದಲ್ಲಿ ಹಾರಾಟ ನಡೆಸಿಲ್ಲ.

ಆದರೂ ಈ ಮೂವರೂ ಮಿಲಿಟರಿ ವೈಮಾನಿಕರಾಗಿ, ವಿಮಾನಗಳ ಟೆಸ್ಟ್ ಪೈಲಟ್‌ಗಳಾಗಿ ಸುದೀರ್ಘ ಅನುಭವ ಹೊಂದಿದ್ದಾರೆ. ಮಿಚೆಲ್ ಮತ್ತು ರೂಸಾ 1966ರ ಏಪ್ರಿಲ್‌ನಲ್ಲಿ ಗಗನಯಾತ್ರಿಗಳಾದಾಗಿನಿಂದ ಗಗನ ಹಾರಾಟ ತರಬೇತಿಯಲ್ಲಿದ್ದಾರೆ.

ಷಪರ್ಡ್ ಅವರು ವಯಸ್ಸಿನಲ್ಲಿ, ಅನುಭವದಲ್ಲಿ ಮತ್ತು ಈಗ ಟೆಕ್ಸಾಸ್‌ನ ಹೌಸ್ಟನ್‌ನಲ್ಲಿ ಮಾನವಾಂತರಿಕ್ಷಯಾನ ಕೇಂದ್ರದಲ್ಲಿ ತರಬೇತಿಯಲ್ಲಿರುವ 49ಮಂದಿ ಅಮೆರಿಕನ್ ಗಗನಯಾತ್ರಿಗಳಲ್ಲಿ ಅತ್ಯಂತ ಹಿರಿಯರು. 1961ರ ಮೇ 5ರಂದು ಅಮೆರಿಕದ ಮಾನವ ಸಹಿತ ಗಗನ ಸಂಶೋಧನ ಕಾರ್ಯಕ್ರಮವನ್ನು ಆರಂಭಿಸಿ ಇತಿಹಾಸ ನಿರ್ಮಿಸಿದಂದಿನಿಂದ ಅವರ ವ್ಯಕ್ತಿತ್ವದಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಆ ದಿನ, ಒಂದು ರೆಡ್‌ಸ್ಟೋನ್ ರಾಕೆಟ್ ಮೂಲಕ ಫ್ಲಾರಿಡಾದ ಕೇಪ್ ಕ್ಯಾನವೆರೆಲ್‌ನಿಂದ ಒಂದು ಗಗನಕ್ಯಾಪ್ಸೂಲ್‌ನಲ್ಲಿ ಮೇಲೇರಿಸಲ್ಪಟ್ಟ ಅವರು 116.5 ಮೈಲಿಗಳ ಎತ್ತರಕ್ಕೆ ಹಾರಿದರು, ಅನಂತರ ಅಟ್ಲಾಂಟಿಕ್‌ಸಾಗರದಲ್ಲಿ ತಾವು ಮೇಲೇರಿದ ಸ್ಥಳದಿಂದಲೆ 302 ಮೈಲಿಗಳ ದೂರದಲ್ಲಿ ಇಳಿದರು.

ಅಂದಿನ ಹಾರಾಟದಲ್ಲವರು, ಮಾನವ ಹಾರಾಟದಲ್ಲಿರುವ ಗಗನವಾಹನವನ್ನು ನಿಯಂತ್ರಿಸಬಲ್ಲ ಎಂದೂ, ಮತ್ತು ಇನ್ನೂ ಗರಿ ಮೂಡುತ್ತಿರುವ ಅಮೆರಿಕದ ಗಗನಯಾನಕ್ಕೆ ವ್ಯವಸ್ಥೆಯು ಕಾರ್ಯ ಸಾಧ್ಯ ಎಂದೂ ಪ್ರಮಾಣ ಪಡಿಸಿದರು.

ಅವರು ಮಾನವ ಕುಲಕ್ಕೆ ವಾತಾವರಣದಿಂದ ಎತ್ತರದಲ್ಲಿ ಭೂಮಿ ಹಾಗೂ ಆಕಾಶಗಳು ಹೇಗೆ ಕಾಣಿಸುತ್ತವೆ ಎಂಬ ಬಗೆಗೆ ಪ್ರಥಮ ಪ್ರತ್ಯಕ್ಷ ನಿದರ್ಶನವನ್ನು ನೀಡಿದರು ಮತ್ತು ಮಾನವ ಸಹಿತ ಗಗನ ಸಂಶೋಧನ ತಂತ್ರಜ್ಞಾನದಲ್ಲಿ ರಷ್ಯನರಿಗಿಂತ ಹಿಂದಿದ್ದ ಅಮೆರಿಕವು, ಮುನ್ನಡೆಯಬಹುದೆಂದು ನಿರ್ಧರಿಸಿದೆ ಎಂಬುದನ್ನು ಪ್ರಪಂಚಕ್ಕೆ ಮನಗಾಣಿಸಿದರು.

ಯಾವಾಗಲೂ ನಿರ್ದುಷ್ಟವಾಗಿ ಉಡುಪು ಧರಿಸುವ ಅವರ ತೂಕ 165 ಪೌಂಡುಗಳು. ಅತಿ ಎತ್ತರ ಕಾಯದ ಗಗನಯಾತ್ರಿಗಳಲ್ಲೊಬ್ಬರಾದ ಅವರ ಉದ್ದ 5 ಅಡಿ 11 ಅಂಗುಲ. ಅವರ ನಡಿಗೆ ಸರಳ, ಗಂಭೀರ, ಶಿಸ್ತು ಮತ್ತು ಆತ್ಮವಿಶ್ವಾಸದ ಪ್ರತೀಕ.

ಷಪರ್ಡ್ ಅವರು ಗಗನ ಪರಿಶೋಧನ ತರಬೇತಿಗೆ ನೇಮಕವಾದ ಮೊದಲ 7 ಮಂದಿ ಅಮೆರಿಕನರ ಪೈಕಿ ಒಬ್ಬರು. 1959ರ ಎಪ್ರಿಲ್‌ನಲ್ಲಿ ಆಯ್ಕೆಯಾದ ಈ ತಂಡ ಅನಂತರ "ಪ್ರಾರಂಭದ ಏಳು" ಎಂದು ಪ್ರಸಿದ್ಧಿಪಡೆಯಿತು.

ಷಪರ್ಡ್ ಅವರನ್ನು ಮರ್ಕ್ಯುರಿ ಸರಣಿಯ ಏಳನೆಯ ಹಾರಾಟಕ್ಕೆ ಚಾಲಕರಾಗಿ ನೇಮಿಸಲಾಯಿತು. ಆದರೆ ಆ ವೇಳೆಗೆ ಮರ್ಕ್ಯುರಿ ಹಾರಾಟಗಳು ಅತ್ಯಂತ ಯಶಸ್ವಿಯಾಗಿ ನಿರೀಕ್ಷಿತ ಉದ್ದೇಶಗಳು ಪೂರ್ಣಗೊಂಡುದರಿಂದ ಆ ಹಾರಾಟವನ್ನು ಕೈಬಿಡಲಾಯಿತು; ಮತ್ತು ಜೆಮಿನಿ ಹಾರಾಟಗಳ ಹೊಸ ಸರಣಿಯನ್ನು ಆರಂಭಿಸಲು ನಿರ್ಧರಿಸಲಾಯಿತು. ಈ ಹೊಸ ಸರಣಿಯ ಹಾರಾಟಗಳಲ್ಲೊಂದಕ್ಕೆ ಅವರು ಆಯ್ಕೆಯಾಗುವುದಕ್ಕೆ ಮುಂಚೆಯೇ ಅವರ ಕಿವಿಯಲ್ಲಿ ಮಿನಿಯರ್ಸ್ ಸೈನ್‌ಡ್ರೋಮ್ ಎಂಬ ರೋಗಂಕು ತಗಲಿ ತಲೆಸುತ್ತು ಓಕರಿಕೆ ಮುಂತಾದ ತೊಂದರೆಗಳುಂಟಾದಾವು. ಇನ್ನೊಬ್ಬ ಚಾಲಕ ಜತೆಗಿದ್ದ ಹೊರತು ವಿಮಾನ ಹಾರಾಟಕ್ಕೆ ಕೂಡ ಅವರನ್ನು ಶಿಫಾರಸು ಮಾಡಲು ವೈದ್ಯರು ನಿರಾಕರಿಸಿದರು.

1968ರ ವೇಳೆಗೆ ಅವರ ಎಡ ಕಿವಿ ಕೇಳಿಸದಂತಾಗಿದ್ದು ಸದಾ ಗುಯ್‌ಗುಟ್ಟುತ್ತಿತ್ತು. ಅವರಿಗೆ ಶಸ್ತ್ರಚಿಕಿತ್ಸೆ ನಡೆಸಿ, ಅವರ ಒಳಕಿವಿಯಲ್ಲಿ ದ್ರವದ ಒತ್ತಡವನ್ನು ನಿವಾರಿಸಲು ಒಂದು ರಬ್ಬರ್ ಕೊಳವೆಯನ್ನು ಅಳವಡಿಸಲಾಯಿತು. ಶಸ್ತ್ರ ಚಿಕಿತ್ಸೆಯಿಂದ ಅವರ ಆರೋಗ್ಯ ಸುಧಾರಿಸಿತು. ಮತ್ತು 1969ರಲ್ಲಿ ಅವರು ಹಾರಾಟ ನಡೆಸುವ ಅರ್ಹತೆ ಪಡೆದರು ಮತ್ತು ಅದೇ ವರ್ಷ ಆಗಸ್ಟ್‌ನಲ್ಲಿ ಅವರನ್ನು ಅಪೋಲೋ—14ರ ಪ್ರಧಾನ ಚಾಲಕರಾಗಿ ನೇಮಕ ಮಾಡಲಾಯಿತು.

ತಮ್ಮ ಅನರ್ಹತೆಯ ಅವಧಿಯಲ್ಲಿ ಷಪರ್ಡ್ ಅವರು ಡೆಸ್ಕ್‌ನಲ್ಲಿ ಕುಳಿತು ಗಗನ ಕಾರ್ಯಗಳ ಸಮನ್ವಯ ಮಾಡುವ ಹುದ್ದೆಯನ್ನು ಒಪ್ಪಿಕೊಂಡರು. ಪುನಃ ಗಗನ ಹಾರಾಟ ನಡೆಸಲು ತನಗೆ ಸಾಧ್ಯವೇ ಆಗದಿರಬಹುದು ಎಂದವರಿಗೆ ತೋರಿತು. ಅದಕ್ಕಾಗಿ ಅವರು ಬೇರೆ ಪ್ರಯತ್ನವನ್ನಾರಂಭಿಸಿದರು. ತಮ್ಮ ಸಂಪಾದನೆಯಲ್ಲಿ ಉಳಿತಾಯ ಮಾಡಲಾರಂಭಿಸಿದರು. ಉಳಿತಾಯಗಳು ಬೆಳೆದಂತೆ ಬ್ಯಾಂಕೊಂದರ ಮತ್ತು

ಕುಂದಾಪುರ ಮುನ್ಸೀಫ್ ಕೋರ್ಟನಲ್ಲಿ

O. S. 5/1971.

ವಾದಿ — S. J. ಡಿಸೋಜ

ಪ್ರತಿವಾದಿರು — ಎಲ್ಲಾನ್ ಫೆರ್ನಾಂಡಿಸ್ ಕೂಡಾ

ಕುಂದಾಪುರ ತಾಲ್ಲೂ ಕುಂದಾಪುರ ಕಸ್ಬಾ ಗ್ರಾಮದ ಖಾರ್ವಿ ಕೇರಿಯಲ್ಲಿರುವ ಡೆರಿಲ್ ಫೆರ್ನಾಂಡಿಸರ ಹೆಂಡ್ತಿ ಕೊನ್ಸಿಟ್ ಫೆರ್ನಾಂಡಿಸ್, ಜೆ. ಆರ್. ಫೆರ್ನಾಂಡಿಸರ ಮಗಳು ಸಿಂತಿಯಾ ಡಿ. ಕ್ರೂಜ್। ಜೆ. ಆರ್ ಫೆರ್ನಾಂಡಿಸರ ಮಗ ವೆಂಜಿಲ್ ಫೆರ್ನಾಂಡಿಸ್। ಜೆರಿಲ್ ಫೆರ್ನಾಂಡಿಸರ ಮಗ ಎರಿಕ್ ಫೆರ್ನಾಂಡಿಸ್। ಸಿ. ಎ. ಫೆರ್ನಾಂಡಿಸರ ಮಗಳು ಕ್ರಿಂಟಿನ್ ಫೆರ್ನಾಂಡಿಸ್। ಕೂಡಾ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

1ನೇ ಪ್ರತಿವಾದಿಯು ಸಹೋದರಿ ಪ್ರತಿನ್ರಾಂಡಿಸ್ ಡ್ಯಾನಿಯಲ್ ಮಾರ್ಕ್ಸ್ ಫೆರ್ನಾಂಡಿಸರು ಸಾಲವಾಗಿ ಪಡೆದ ರೂಪಾಯಿ 1500ಕ್ಕೆ ತಾರೀಕು 26.8.1967ರಲ್ಲಿ ಬರೆಕೊಟ್ಟ ದಿವಾಂದು ನೋಟಿನ ಹಣ ಬಡ್ಡಿ ಕೂಡಾ ಬರ ಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾರೀಕು 12.8.1971ಕ್ಕೆ ತನ್ನಿಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಗಲು 11ಗಂಟೆಗೆ ಹಾಜರಾಗಿ ತಕ್ರಾರು ಮಾಡಿ ಕೊಳ್ಳತಕ್ಕದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿಯದೆ.

By order.

(Sd) G. V. Aithal.

Advocate for Plaintiff

Date 1-2-1971. Coondapoor.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು-4

ಇತರ ಕೆಲವು ಸಾಹಸಗಳ ಭಾಗಶಃ ಮಾಲಿಕರಾದರು. ಬಿಡುವಿನ ಸಮಯದಲ್ಲವರು ಬ್ಯಾಂಕಿನ ಡೈರೆಕ್ಟರಾಗಿ ಕೆಲಸ ಮಾಡಿದರು.

ಅವರು ತಮ್ಮ ಪತ್ನಿ ಲೂಸಿ, ಮತ್ತು 19 ವರ್ಷದ ಮಗಳು ಜೂಲೀ ಜತೆಗೆ ಟೆಕ್ಸಾಸ್‌ನ ಹೌಸ್ಟನ್‌ನಲ್ಲಿ ತಮ್ಮ ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದಾರೆ. ಇನ್ನಿಬ್ಬ ಮಗಳು ಲಾರಾಳಿಗೆ ಮದುವೆಯಾಗಿದೆ.

ಪ್ರತಿದಿನ 16 ಗಂಟೆಗಳ ಹಾರಾಟ ತರಬೇತಿಯೂ ಸೇರಿ ಹಾರಾಟದ ಸಿದ್ಧತೆಗಳಿಗೆ ತಮ್ಮ ಪೂರ್ಣ ಸಮಯವನ್ನು ವಿನಿಯೋಗಿಸುವ ಸಲುವಾಗಿ ಷಪರ್ಡ್ ಅವರು ತಮ್ಮ ಉದ್ಯಮ ಸಂಬಂಧಗಳನ್ನು ಕಡಿದುಕೊಂಡಿದ್ದಾರೆ.

ಗಗನದಲ್ಲಿ ಹಾರುವುದೆಂದರೇನು ಎಂಬ ಬಗೆಗೆ ಮಾನವರಿಗೆ ಪ್ರಥಮ ಬಾರಿಗೆ ನೈಜ ಚಿತ್ರಣವನ್ನು ನೀಡಿದವರು ಷಪರ್ಡ್ ಅವರು. ಅದಕ್ಕೆ ಮುಂಚೆ ರಷ್ಯದ ಯೂರೀ ಗಗಾರಿನ್ ಮಾತ್ರ ಗಗನ ಹಾರಾಟ ನಡೆಸಿದ್ದರು. ಆದರೆ ಗಗಾರಿನ್‌ರ ಹಾರಾಟವನ್ನು ಬಹಳ ರಹಸ್ಯವಾಗಿ ನಡೆಸಲಾದುದರಿಂದ ಪ್ರಪಂಚಕ್ಕೆ ಆ ಬಗೆಗೆ ಹೆಚ್ಚು ತಿಳಿಯಲಿಲ್ಲ.

ಷಪರ್ಡ್ ಅವರು ಟೆಸ್ಟ್ ಪೈಲಟ್‌ಗಳ ಸಂಕೇತಗಳಾದ 'ಎ—ಓಕೆ' ಮತ್ತು "ಆಲ್ ಸಿಸ್ಟಮ್ಸ್ ಆರ್ ಗೋ" ಎಂಬ ಪದಗಳನ್ನು ಸೃಷ್ಟಿಸಿದವರು. ಅವರು ಮೊದಲ ಬಾರಿಗೆ ಗಗನದಿಂದ ಭೂಮಿಯನ್ನು ವೀಕ್ಷಿಸಿದಾಗ ಉದ್ಗರಿಸಿದ 'ಎಂತಹ ಮನೋಹರ ದೃಶ್ಯ' ಎಂಬ ವಾಕ್ಯವನ್ನು ಭೂಮಿಯಲ್ಲಿ ಲಕ್ಷಾಂತರ ಮಂದಿ ರೇಡಿಯೋ ಆಲಿಸುವವರು ಕಿವಿಗೊಟ್ಟು ಕೇಳಿದರು.

"ಗಗನ ಹಾರಾಟಕ್ಕೆ ಸಿದ್ಧಗೊಳ್ಳುವುದು ಎಂದೂ ಸುಲಭದ ಕೆಲಸವಾಗಿರಲಿಲ್ಲ" ಎಂದು ಷಪರ್ಡ್ ಒಪ್ಪಿಕೊಳ್ಳುತ್ತಾರೆ. ತಮ್ಮ ಆಯ್ಕೆಯ ಬಗೆಗೆ ಷಪರ್ಡ್ ಹೀಗೆನ್ನುತ್ತಾರೆ:

"ಮೂಲಭೂತವಾಗಿ ಒಬ್ಬ ಮನುಷ್ಯ ತನ್ನ ಅದೃಷ್ಟಕ್ಕೆ ತಾನೇ ಕಾರಣನಾಗುತ್ತಾನೆ ಎಂದು ನನ್ನ ಭಾವನೆ. ಆತ ಕಷ್ಟಪಟ್ಟು ಶಕ್ತಿಮೀರಿ ಶ್ರಮಿಸಿದರೆ, ಮೊದಲಿನಿಂದ ಕಡೆಯ ವರೆಗೂ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದರೆ ಒಂದಲ್ಲ ಒಂದು ದಿನ ಅದೃಷ್ಟ ಅವನಿಗೆ ಒಲಿಯುತ್ತದೆ."

ತಾತ್ವಿಕವಾಗಿ ಹೇಳುವುದಾದರೆ, "ಅಪೋಲೋ–14ರ ಯಾತ್ರೆಯಲ್ಲಿ ನಾನು ಮೃತನಾದರೆ, ನಾನು ಅದೃಷ್ಟಶಾಲಿ ಎಂದು ಹೇಳುವುದಿಲ್ಲ" ಎಂದು ನುಡಿದರು.

ತರಬೇತಿ, ಹಾರಾಟ ಸಿದ್ಧತೆ ಮತ್ತು ಗಗನ ಹಾರಾಟದಲ್ಲಿ ಭೂ ವಿಜ್ಞಾನಿಗಳ ಬೆಂಬಲ ಇವುಗಳ ಬಗೆಗೆ ತೀವ್ರ ಗಮನ ನೀಡಲಾಗಿರುವುದರಿಂದ "ಮೊಮ್ಮೊದಲಾದ ವೈಮಾನಿಕಾ ಪರೀಕ್ಷಾ ಹಾರಾಟಗಳಲ್ಲಿ ಹಿಂದಿರುಗುತ್ತಿದ್ದುದಕ್ಕಿಂತ ಗಗನ ಹಾರಾಟಗಳಲ್ಲಿ ಹೆಚ್ಚು ಸುರಕ್ಷಿತವಾಗಿ ಹಿಂದಿರುಗುವ ಸಾಧ್ಯತೆಗಳು ಚೆನ್ನಾಗಿವೆ" ಎಂದು ಷಪರ್ಡ್ ಹೇಳಿದರು.

ಷಪರ್ಡ್ ಅವರ ಬಗೆಗೆ ಪ್ರಪಂಚಾದ್ಯಂತ ಪ್ರಶಂಸೆಗಳು ಕೇಳಿಬಂದಾಗ, ಅನೇಕ ಅಮೆರಿಕನರ ಭಾವನೆಗಳನ್ನು ಅಮೆರಿಕದ ಸೆನೆಟರ್ ಸ್ಟೈಲನ್ ಬ್ರಿಡ್ಜ್ಸ್ ಅವರು ಒಂದು ಮಾತಿನಲ್ಲಿ ಪ್ರಕಟಪಡಿಸಿದರು. ಷಪರ್ಡ್ ಅವರ ಹಾರಾಟದಿಂದ ಅಮೆರಿಕದ ಘನತೆ ಹಾಗೂ ಆತ್ಮವಿಶ್ವಾಸಗಳು ಹೆಚ್ಚಿದುದನ್ನು ಪ್ರಸ್ತಾಪಿಸುತ್ತಾ ಸೆನೆಟರ್ ಅವರು "ಷಪರ್ಡ್ ಅವರೊಂದಿಗೆ ನಮ್ಮ ಘನತೆಯೂ ಉನ್ನತಿಗೇರಿತು ಅವರು ಹಿಂದಿರುಗಿ ಬಂದರು" ಎಂದರು.

ಷಪರ್ಡ್ ಅವರು ಕಾರ್ಯನಿರ್ವಹಣೆಯನ್ನು ಪ್ರಶಂಸಿಸಿ ಅಮೆರಿಕದ ಕಾಂಗ್ರೆಸ್‌ನ ಉಭಯ ಸದನಗಳೂ ಗೊತ್ತುವಳಿಗಳನ್ನು ಅನುಮೋದಿಸಿದವು.

1923ರ ನವೆಂಬರ್ 15ರಂದು ನ್ಯೂ ಹಾಂಪ್‌ಷೈರ್‌ನ ಪೂರ್ವ ಡೆರ್ರೀಯಲ್ಲಿ ಜನಿಸಿದ ಷಪರ್ಡ್ ಅವರು, ನ್ಯೂ ಇಂಗ್ಲೆಂಡ್ ಎಂದು ಪ್ರಸಿದ್ಧವಾಗಿರುವ ಅಮೆರಿಕದ ಈಶಾನ್ಯ ಪ್ರದೇಶದ ಕುಟುಂಬವೊಂದರ ಎಂಟನೆಯ ತಲೆಮಾರಿನವರು. ನೆರೆಯವರು ಈ ಕುಟುಂಬವನ್ನು "ಒಗ್ಗಟ್ಟಿನ ಕುಟುಂಬ" ಎಂದು ಕರೆಯುತ್ತಿದ್ದರು. ಹುಡುಗನಾಗಿದ್ದಾಗ ಷಪರ್ಡ್ ಅವರು ತನಗೆ ಒಂದು ಸೈಕಲ್ ಕೊಳ್ಳಲು ಹಣ ಸಂಗ್ರಹಿಸುವ ಸಲುವಾಗಿ ಕೋಳಿಮರಿಗಳನ್ನು ಸಾಕುವ ಕಾರ್ಯದಲ್ಲಿ ತನ್ನ ಅಜ್ಜಿಗೆ ಸಹಾಯ ಮಾಡುತ್ತಿದ್ದರು.

ಪೂರ್ವ ಡೆರ್ರೀಯಲ್ಲಿ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪಡೆದರು. ಅನಂತರ ಸೆಕೆಂಡರಿ ಶಿಕ್ಷಣಕ್ಕಾಗಿ ಸಮೀಪದ ಊರಿಗೆ ಹೋದರು. 1944ರಲ್ಲಿ ಅಮೆರಿಕದ ನಾವೆಲ್ ಅಕಾಡೆಮಿಯಿಂದ ಪದವೀಧರರಾದ ನಂತರ ದ್ವಿತೀಯ ಪ್ರಪಂಚ ಯುದ್ಧದ ಸಮಯದಲ್ಲಿ ಪೆಸಿಫಿಕ್‌ನಲ್ಲಿ ಅಮೆರಿಕದ ಡಿಸ್ಟ್ರಾಯರ್ ನೌಕೆ ಕಾಗ್ಸವೆಲ್‌ನಲ್ಲಿ ಕೆಲಸ ಮಾಡಿದರು.

ಅನಂತರ ಹಾರಾಟ ತರಬೇತಿಗೆ ಸೇರಿದರು. ಅವರನ್ನು ವಿಮಾನವಾಹಕಗಳಿಗೆ ನೇಮಿಸಲಾಯಿತು. 1950ರಲ್ಲಿ ಅವರು ಟೆಸ್ಟ್ ಪೈಲಟ್ ಆದರು ಮತ್ತು 9 ವರ್ಷಗಳ ನಂತರ ಗಗನಯಾತ್ರಿಯಾಗಿ ಆಯ್ಕೆಯಾದರು.

ಮಿಚೆಲ್ ಅವರಿಗೂ ಅಮೆರಿಕದ ನೌಕಾಬಲದಲ್ಲಿ ಕೆಲಸ ಮಾಡಿ ಅನುಭವವಿದೆ. 1964ರಲ್ಲಿ ಅವರು ಮಸಾಚುಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಏರನಾಟಿಕ್ಸ್ ಮತ್ತು ಅಸ್ಟ್ರನಾಟಿಕ್ಸ್‌ನಲ್ಲಿ ಡಾಕ್ಟರೇಟ್ ಡಿಗ್ರಿಪಡೆದರು.

ಟೆಕ್ಸಾಸ್‌ನ ಹಿಯರ್‌ಫೋರ್ಡ್‌ನ ನಿವಾಸಿಯಾದ ಮಿಚೆಲ್ ಅವರು (ಜನ್ಮದಿನ ಸೆಪ್ಟೆಂಬರ್ .., 19..) ನ್ಯೂ ಮೆಕ್ಸಿಕೋದ ಆರ್ಟೆಸಿಯಾದ ಸೆಕೆಂಡರಿ ಸ್ಕೂಲ್‌ನಿಂದ ಪದವೀಧರರಾದರು. ಅದು ತಮ್ಮ ತೌರೂರು ಎಂದವರು ಭಾವಿಸುತ್ತಾರೆ.

1952ರಲ್ಲಿ ಮಿಚೆಲ್ ಅವರು ಕಾರ್ನೆಗೀ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟನಲ್ಲಿ ಬ್ಯಾಚಲರ್ ಆಫ್ ಸೈನ್ಸ್ ಡಿಗ್ರಿಯನ್ನು ಪಡೆದು ಅದೇ ವರ್ಷ ಅಮೆರಿಕದ ನೌಕಾಬಲಕ್ಕೆ ಸೇರಿದರು. ಹಾರಾಟ ತರಬೇತಿಯ ನಂತರ ಓಕಿನಾವದಲ್ಲಿ ವಿಮಾನವಾಹಕ ನೌಕೆಗಳಲ್ಲಿ ಪೆಟ್ರೋಲ್ ಸ್ಕ್ವಾಡ್ರನ್‌ನಲ್ಲಿ ರಿಸರ್ಚ್ ಪೈಲಟ್ ಆಗಿಯೂ, ಅನಂತರ ಯೋಜಿತ ಮ್ಯಾನ್ಡ್ ಆರ್ಬಿಟಿಂಗ್ ಸ್ಪೇಸ್ ಲ್ಯಾಬರೇಟರಿಯ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ವಿಭಾಗದ ಮುಖ್ಯಸ್ಥರಾಗಿಯೂ ಕೆಲಸ ಮಾಡಿದರು. ಆದರೆ ಪ್ರಾರಂಭದ ಡಿಜೈನ್ ಹಂತದಲ್ಲೇ ಆ ಪ್ರಾಜೆಕ್ಟ್ ಕೈಬಿಡಲಾಯಿತು.

1951ರ ಆದಿಯಲ್ಲಿ ಮಿಚೆಲ್ ಅವರು ಅಮೆರಿಕದ ನಾವಲ್ ಪೋಸ್ಟ್ ಗ್ರಾಜ್ಯುಯೇಟ್ ಸ್ಕೂಲಿನಿಂದ ಎರನಾಟಿಕಲ್ ಎಂಜಿನಿಯರಿಂಗ್‌ನಲ್ಲಿ ಬ್ಯಾಚಲರ್ ಆಫ್ ಸೈನ್ಸ್‌ನಲ್ಲಿ ಡಿಗ್ರಿಯನ್ನೂ ಪಡೆದರು ಮತ್ತು ಗಗನಯಾತ್ರಿಯಾಗಿ ಆಯ್ಕೆಯಾಗುವುದಕ್ಕೆ ಸ್ವಲ್ಪ ಮುಂಚೆ, ಅಮೆರಿಕದ ವಿಮಾನಬಲದ ಏರೋಸ್ಪೇಸ್ ರಿಸರ್ಚ್ ಪೈಲಟ್ ಸ್ಕೂಲಿನಿಂದ, ತರಗತಿಗೆ ಮೊದಲನೆಯವರಾಗಿ ಪದವೀಧರರಾದರು. ಅದೇ ಸಮಯದಲ್ಲವರು ಆ ಶಾಲೆಯಲ್ಲಿ ಪಾರ್ಟ್–ಟೈಂ ಬೋಧಕರಾಗಿ ಕೆಲಸ ಮಾಡುತ್ತಿದ್ದರು.

ಅವರು ತಮ್ಮ ಪತ್ನಿ ಲೂಸೀ ಹಾಗೂ ಇಬ್ಬರು ಪುತ್ರಿಯರಾದ ಕಾರ್ಲೈನ್ ಮತ್ತು ಎಲಿಜಬೆತ್‌ರೊಡನೆ ಹೌಸ್ಟನ್‌ನಲ್ಲಿ ಮಾನವಾಂತರಿಕ್ಷಯಾನ ಕೇಂದ್ರದ ಸಮೀಪ ವಾಸಿಸುತ್ತಿದ್ದಾರೆ.

ರೂಸಾ ಅವರು ಅಮೆರಿಕದ ವಿಮಾನಬಲದಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದಾರೆ. ಷಪರ್ಡ್ ಮತ್ತು ಮಿಚೆಲ್ ಅವರು ಚಂದ್ರಾವತರಣ ವಾಹನದಲ್ಲಿ ಚಂದ್ರನ ನೆಲದಲ್ಲಿಳಿಯುವ ಸಮಯದಲ್ಲಿ ಅವರು ಕಮಾಂಡ್ ನೌಕೆಯನ್ನು ಚಂದ್ರನ ಕಕ್ಷೆಯಲ್ಲಿ ನಡೆಸುವರು.

1933ರ ಆಗಸ್ಟ್ 16ರಂದು ಕೊಲರಾಡೋದ ಡುರಾಂಗೋಲದಲ್ಲಿ ಜನಿಸಿದ ರೂಸಾ ಅವರು ಒಕ್ಲಹಾಮದ ಕ್ಲಾರ್‌ಮೋರ್‌ನ ಶಾಲೆಗಳಲ್ಲಿ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣಗಳನ್ನು ಪಡೆದರು. ಅನಂತರ ಒಕ್ಲಹಾಮಾ ವಿಶ್ವವಿದ್ಯಾನಿಲಯ ಹಾಗೂ ಆರಿಜೋನಾ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡಿದರು. ಕೊಲರಾಡೋ ವಿಶ್ವವಿದ್ಯಾನಿಲಯದಿಂದ ಎರನಾಟಿಕಲ್ ಎಂಜಿನಿಯರಿಂಗ್‌ನಲ್ಲಿ ಆನರ್ಸ್ ಮತ್ತು ಬ್ಯಾಚಲರ್ ಆಫ್ ಸೈನ್ಸ್ ಪದವೀಧರರಾದರು.

1953ರಲ್ಲಿ ಅವರು ವಿಮಾನಬಲವನ್ನು ಸೇರಿದರು. ಮೊದಲು ಫೈಟರ್ ಪೈಲಟ್ ಆಗಿ, ಅನಂತರ ಮೆಯಿಂಟೆನೆನ್ಸ್ ಪೈಲಟ್ ಆಗಿ ಮತ್ತು 1965ರಲ್ಲಿ ಏರೋಸ್ಪೇಸ್ ರಿಸರ್ಚ್ ಪೈಲಟ್ ಸ್ಕೂಲ್‌ನಿಂದ ಪದವೀಧರರಾದ ಬಳಿಕ, ಎಕ್ಸ್‌ಪರಿಮೆಂಟಲ್ ಟೆಸ್ಟ್ ಪೈಲಟ್ ಆಗಿ ಕೆಲಸ ಮಾಡಿದರು.

ಅವರು ತಮ್ಮ ಪತ್ನಿ ಜೀನ್, ಮತ್ತು ಮೂವರು ಪುತ್ರರು ಹಾಗೂ ಒಬ್ಬಳು ಪುತ್ರಿ–ಕ್ರಿಸ್ಟಾಫರ್, ಜಾನ್, ಸ್ಟುವರ್ಟ್ ಎ. ಜೂನಿಯರ್ ಮತ್ತು ರೋಸ್‌ಮೇರಿಯರೊಂದಿಗೆ ಹೌಸ್ಟನ್‌ನ ಸಮೀಪ ವಾಸಿಸುತ್ತಿದ್ದಾರೆ.

ಉಡುಪಿ ಮುನ್ಸೀಫ್ ಕೋರ್ಟ್‌ನಲ್ಲಿ

O. S. No. 378/1969.

ಶ್ರೀ. ಕೋಟೆ ವಾದಿರಾಜ ಪಾತ್ರ—ವಾದಿಯು ಮುಖ್ಯ

ಆಲೇಸ್ ಮೋಹ ಕೋಡ — ಪ್ರತಿವಾದಿ

ಪ್ರತಿವಾದಿ: ಮೊಗವೀರ ದ್ವ. [illegible] ಮೋಹ ಮಗಳು, ಉಡುಪಿ [illegible] ಶಿರ್ವ ಗ್ರಾಮ.

ವಾದಿಯು ನಿಂಮ ಮೇಲೆ ಶ್ರೀಕ ಬಾಕಿಗೆ ದಾಖಲು ಮಾಡಿದ ಮೇಲ್ಕಂಡ ದಾವೆಯ ತಾರೀಖು 16–9–1971ನೇ ಇಸ್ವಿಗೆ ಮುಂದೆ. ಆದಿತ್ಯ ಬೆಳಿಗ್ಗೆ 11ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಉತ್ತರಿಸುವರೆ ತಪ್ಪಿದ್ದಲ್ಲಿ ಏಕಪಕ್ಷ ನ್ಯಾಯ ತೀರ್ಮಾನ ನಡೆಸಲಾಗುವುದು.

By order of Court.

(Sd.) Sri V. G. Kedlaya,

M. A., LL. B.,

Advocate for Plaintiff.

ಉಡುಪಿ, ತಾ. 17.8–71.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ –

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸ ಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಮಕ್ಕಳಿಗೆಲ್ಲಿದೆ ಮಾರ್ಗದರ್ಶನ?

ಮೊನ್ನೆ ನಮ್ಮ ಮಹಿಳಾ ವೃಂದದಲ್ಲಿ ಮಕ್ಕಳ ವರ್ತನೆಗಳ ವಿಚಾರದಲ್ಲಿ ಚರ್ಚೆ ಆರಂಭವಾಯಿತು. ಆಗ ಗೀತಾ ಸ್ಫೂರ್ತಿಯುತವಾದ ಪುಟ್ಟ ಭಾಷಣವನ್ನೇ ಮಾಡಿದಳು.

"ಇಂದಿನ ನಮ್ಮ ಮಕ್ಕಳಲ್ಲಿ ಅಶಿಸ್ತು, ಅಶಾಂತಿ, ಅಸಮಾಧಾನಗಳು ಬೆಳೆಯುತ್ತಿವೆ. ವಿದ್ಯಾರ್ಥಿಗಳಲ್ಲಿ ಗಲಭೆ, ಗೊಂದಲ, ಮುಷ್ಕರಗಳೇ ವಿದ್ಯೆಯ ಗುರಿಯೆಂದು ತಿಳಿದುಕೊಂಡು ನೀತಿ, ನಿಯಮಗಳನ್ನು ಗಾಳಿಗೆ ತೂರಿ ಅಂಕೆ ಮೀರಿ ವರ್ತಿಸುತ್ತಿದ್ದಾರೆ. ಅವರನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯಲು ಹೆತ್ತವರೂ ಶಕ್ತರಾಗಿಲ್ಲ. ಶಾಲೆಯ ಶಿಕ್ಷಕರೂ ಸಮರ್ಥರಾಗಿಲ್ಲ. ಸಣ್ಣ ಪುಟ್ಟ ಕಾರಣಗಳಿಗಾಗಿ ಅವರು ಮಾಡುವ ಅನ್ಯಾಯ, ಅತ್ಯಾಚಾರಗಳನ್ನು ಕೇಳಿದರೆ ಹಿರಿಯರೆನಿಸಿದ ನಾವು ನಾಚಿಕೆಯಿಂದ ತಲೆತಗ್ಗಿಸಬೇಕಾಗಿದೆ."

ಅವಳ ಆವೇಶಪೂರಿತ ಮಾತುಗಳು ಮುಗಿಯುವ ಮೊದಲೇ ಉಷಾ ಸ್ವರವೆತ್ತಿದಳು.

"ಇದಕ್ಕೆ ಕೇವಲ ಮಕ್ಕಳೇ ಹೊಣೆಯಲ್ಲ ಗೀತಾ. ಹಿರಿಯರೆನಿಸಿದವರೆಲ್ಲರೂ ಇಂದು ಹೇಗೆ ಬಾಳುತ್ತಿದ್ದೇವೆ ಎಂಬುದನ್ನು ಚೆನ್ನಾಗಿ ವಿವೇಚಿಸಬೇಕಾಗಿದೆ. ಚಿಕ್ಕ ಮಕ್ಕಳಿಗೆ ಸತ್ಯ, ಪ್ರಾಮಾಣಿಕತನದ ಉಪದೇಶವನ್ನೀಯುವ ಹಿರಿಯರು ಜೀವನದಲ್ಲಿ ಸುಳ್ಳು, ಮೋಸ, ಕಪಟಗಳ ಜಾಲದಲ್ಲಿ ಸಿಲುಕಿಕೊಂಡಿರುತ್ತಾರೆ. ಮಕ್ಕಳಿಗೆ ಕೇವಲ ಹಿತೋಪದೇಶವನ್ನೀಯುವುದರಲ್ಲೇ ತಮ್ಮ ಕರ್ತವ್ಯ ತೀರಿತೆಂಬ ಹಿರಿಯರ ಅಲಕ್ಷ್ಯ ವರ್ತನೆಯೇ ಎಳೆಯರ ಬಾಳನ್ನು ಅಧಃಪತನಕ್ಕೆಳೆಯುತ್ತಿದೆ. ಕೇವಲ ಬೋಧನೆಗಿಂತ ಕಾರ್ಯಾಚರಣೆಯಲ್ಲಿ ಉತ್ತಮ ಮಾರ್ಗದರ್ಶನವಿರುತ್ತಿದ್ದರೆ ಕಿರಿಯರು ಇಷ್ಟೊಂದು ಹೀನ ಸ್ಥಿತಿಗಿಳಿಯುತ್ತಿರಲಿಲ್ಲ. ಮಕ್ಕಳು ಕೆಡಲು ಮನೆಯ ವಾತಾವರಣವೊಂದೇ ಕಾರಣವಲ್ಲ ಗೀತಾ. ಇಂದಿನ ಶಾಲೆಗಳೂ ಅಲ್ಲಿಯ ಬೇಜವಾಬ್ದಾರೀ ಶಿಕ್ಷಕರೂ ಮಕ್ಕಳು ಚಿಕ್ಕಂದಿನಿಂದಲೇ ದುರ್ಗುಣಗಳನ್ನು ಬೆಳೆಸಿಕೊಳ್ಳಲು ಕಾರಣವಾಗುತ್ತಿದ್ದಾರೆ. ಅವರು ತಮ್ಮ ದೋಷಪೂರಿತ ನಡೆ, ನುಡಿಗಳಿಂದ ಎಳೆಯ ಮಕ್ಕಳ ಕೋಮಲ ಮನಸ್ಸನ್ನು ಕಲುಷಿತಗೊಳಿಸುತ್ತಾರೆ. ಉಷಾ ಇನ್ನೂ ಮುಂದುವರಿಸುತ್ತಿದ್ದಳು, ಆದರೆ ಅಲ್ಲಿಯೇ ಇದ್ದ ಶಿಕ್ಷಕಿ ವಸುಧಾಳ ಕೆಂಗಣ್ಣುಗಳು ಅವಳ ಮಾತಿಗೆ ಕಡಿವಾಣ ಹಾಕಿದವು.

"ಏಕೆ ನಿಲ್ಲಿಸಿದೆ ಉಷಾ? ಇನ್ನೂ ಏನಾದರೂ ನಮ್ಮ ನಿಂದೆಯ ನಿರರ್ಗಳ ಭಾಷಣ ಮಾಡಿಯೇ ಬಿಡಲ್ಲ?" ಎಂದು ಸಿಟ್ಟಿನಿಂದ ಕಿರುಚಿದಳು ವಸುಧಾ. ಈಗ ಸಮಾಧಾನ ಚಿತ್ತದ ಶಾಂತಮ್ಮ ನಿಧಾನವಾಗಿ ಮಾತು ಪ್ರಾರಂಭಿಸಿದಾಗ ಸಭೆಯೆಲ್ಲ ಕುತೂಹಲದಿಂದ ಮೌನವಾಗಿಕಿವಿಗೊಟ್ಟಿತು.

"ವಸುಧಾ, ಉಷಾಳ ಮಾತಿಗೆ ಸಿಟ್ಟಾಗ ಬೇಡಮ್ಮ, ಅವಳ ನುಡಿಗಳಿಂದ ಶಿಕ್ಷಕಿಯಾಗಿದ್ದ ನಿನಗೆ ಬೇಸರವಾಗುವುದು ಸಹಜವೇ ಆದರೂ ಆಕೆ ಹೇಳಿದುದರಲ್ಲಿ ಅನುಚಿತವಾದುದೇನೂ ಇಲ್ಲ ಎಂಬುದು ನನ್ನ ಅನುಭವದಿಂದಲೇ ತಿಳಿದಿದೆ. ಆಗಲಾದರೂ ಉಷಾಳ ಮಾತಿನಲ್ಲಿ ಎಷ್ಟು ಸತ್ಯತೆಯಿದೆ ಎಂಬುದನ್ನು ನೀನೂ ತಿಳಿದುಕೊಳ್ಳುವಿ. ನನ್ನ ಮಗಳು ಆಶಾ ಮೊನ್ನೆ ಶಾಲೆಯಿಂದ ಬರುವಾಗ ಅಳುತ್ತಿದ್ದಳು. ಕಾರಣ ಕೇಳುವ ಮೊದಲೇ ಅವಳ ಕೆನ್ನೆ ಕೆಂಪಡರಿದನ್ನು ಅದರಲ್ಲಿ ಮೂಡಿದ ಬೆರಳುಗಳ ಗುರುತನ್ನೂ ಕಂಡು ಸಂಕಟ ಪಟ್ಟೆ. ಒಬ್ಬಳೇ ಮಗಳೆಂದು ಅತ್ಯಂತ ಮುದ್ದಿನಿಂದ ಬೆಳೆಸಿದ್ದೆನೆಂದು ಅವಳೆಂದೂ ತಿಳಿಗೇಡಿತನದ ಕೆಲಸಕ್ಕೆ ಕೈಯಿಕ್ಕುವವಳಲ್ಲ. ಮನೆಯಲ್ಲಿ ಅರಿಯದೇ ಏನಾದರೂ ಸಣ್ಣ ಅಪರಾಧಗೈದಾಗ ಸ್ವಲ್ಪ ಗದರಿಸಿದರೇ ಬಾಡುವ ಅವಳ ಮೊಗ ಇಂತಹ ಕಠೋರತೆಗೆ ಬಲಿಯಾದ್ದನ್ನು ನೋಡಿ ತಾಯಿಯ ಕರುಳು ಎಷ್ಟು ನೊಂದೀತೆಂಬುದನ್ನು ಊಹಿಸು ವಸುಧಾ. ಅವಳನ್ನು ಸಮಾಧಾನ ಪಡಿಸಿ ವಿಚಾರಿಸಿದಾಗ ಅವಳ ಅಕ್ಷರ ಚೆನ್ನಾಗಿರಲಿಲ್ಲವೆಂದು ಅವಳ ಟೀಚರ್ ಕೆನ್ನೆಗೆ ಹೊಡೆದು ಮಕ್ಕಳೆದಿರು ಚೆನ್ನಾಗಿ ಬಯ್ದು ಅವಮಾನಿಸಿದರಂತೆ. ಹೆಣ್ಣು ಸ್ವಭಾವತಃ ಕೋಮಲ ಹೃದಯಿಯೆಂದು ಯಾಕೆ ಹೇಳುತ್ತಾರೋ ಎಂದು ನನಗೇ ಆಶ್ಚರ್ಯವಾಯಿತು. ಇಷ್ಟು ಸಣ್ಣ ವಿಷಯಕ್ಕೆ ಈ ರೀತಿಯ ಹೊಡೆತ ಎಂದಾದರೆ ಕಲಿಯುವಿಕೆಯಲ್ಲಿ ತೀರಾ ಹಿಂದುಳಿಯುವ ಮಂದ ಬುದ್ಧಿಯ ನಿರ್ಭಾಗ್ಯ ಶಿಶುಗಳ ಪಾಡೇನು? ಆಗ ಆಶಾ ಎಲ್ಲವನ್ನೂ ಹೇಳಿದಳು. ಅವರು ಯಾವಾಗಲೂ ಮಕ್ಕಳಿಗೆ ಕೆನ್ನೆಗೇ ಹೊಡೆಯುವುದಂತೆ. ಕೆಲವರಿಗೆ ಅದು ಅಭ್ಯಾಸವೇ ಆದ್ದರಿಂದ ಅಷ್ಟೊಂದು ನೋವು ಎಂದೆನಿಸುವುದಿಲ್ಲವಂತೆ. ಎಷ್ಟೋ ಬಾರಿ ರಕ್ಷಕರು ದೂರುಗಳನ್ನೂ ತರುತ್ತಿರುತ್ತಾರೆ. ಆದರೂ ಆ ಒರಟು ಕೈಯ ಕಠೋರ ಹೃದಯ ಪರಿವರ್ತನೆ ಹೊಂದುವುದಿಲ್ಲ. ಪ್ರೀತಿಯಿಂದಲೇ ಪಾಠ ಕಲಿಸಬೇಕಾದ ಇಂದಿನ ನವೀನ ಪದ್ಧತಿಯಲ್ಲಿ ದೈಹಿಕ ದಂಡನೆಯೇ ಅಪರಾಧ ಎನ್ನುವ ಪರಿಸ್ಥಿತಿಯಲ್ಲಿ ಅತಿ ಸಣ್ಣ ಕಾರಣಕ್ಕೋಸ್ಕರ ಈ ರೀತಿ ವರ್ತಿಸುವ ಶಿಕ್ಷಕಿಯ ಬಗ್ಗೆ ಯಾವ ಕ್ರಮ ಕೈಗೊಳ್ಳಬಹುದು?"

"ಅಧಿಕಾರಿಗಳಿಗೆ ತಿಳಿಸಬೇಕಿತ್ತು." ಎಂದಳು ಉಷಾ. "ಸಣ್ಣ ಪುಟ್ಟ ವಿಷಯಗಳಿಗೆಲ್ಲ ಸಲ್ಲದ ಹಗರಣವೇಕೆಂದು ನಾನು ಮರುದಿನ ಶಾಲೆಗೆ ಹೋಗಿ ಶಿಕ್ಷಕಿಯ ಭೇಟಿ ಮಾಡಿ ಮಾತನಾಡಿದೆ. ಆಕೆ ಮೊದಲು ತಾನು ಮಗುವಿಗೆ ಹೊಡೆಯಲೇ ಇಲ್ಲವೆಂದರು. ಕೊನೆಗೆ ಸುಳ್ಳು ಸಾಧಿಸದಾದಾಗ ಕದನಕ್ಕೇ ಸಿದ್ಧರಾದರು. ಅದೂ ಸಾಧ್ಯವಾಗದಾಗ ಗೊಣಗೊಟ್ಟಿ ಮೌನ ತಳೆದರು. ಹಾಳಾಗಿ ಹೋಗಲಿ ಎಂದು ಜಿಗುಪ್ಸೆಗೊಂಡು ಮನೆಗೆ ಬಂದೆ. ಅಂದಿನಿಂದ ಆಶಾಳಿಗೆ ಯಾವಾಗಲೂ ತೀರಾ ಸಪ್ಪೆಯಾಗಿರುತ್ತಾಳೆ. ಮೊದಲಿನ ಲವಲವಿಕೆ, ಗೆಲುವು ಅವಳ ಮೊಗದಲ್ಲಿಲ್ಲ. ಮೊನ್ನೆ ನಾನು ತುಂಬ ಪ್ರಶ್ನಿಸಿದ ಮೇಲೆ ಅವಳ ಮನದ ದುಗುಡದ ಕಾರಣ ತಿಳಿಯಿತು. ಈಗ ಟೀಚರ್ರು ಅವಳಿಗೆ ಯಾವ ಪ್ರಶ್ನೆಯನ್ನೂ ಕೇಳುವುದಿಲ್ಲವಂತೆ. ದಿನಾಲೂ ಚಾಡಿಗಾತಿ ಎಂದು ಹಂಗಿಸಿ ಬಯ್ಯುತ್ತಾರಂತೆ. ಎಲ್ಲವನ್ನೂ ಹೇಳಿ ಆಶಾ ಕೊನೆಗೆ ಅಂದಳು ಅಮ್ಮಾ, ಇವನ್ನೆಂದೂ ನೀನು ಕೇಳಲು ಹೋಗ್ಬೇಡ. ದಮ್ಮಯ್ಯ! ಆ ಮೇಲೆ ಇನ್ನೂ ಹೆಚ್ಚು ಪೀಡಿಸುತ್ತಾರೆ ಎಂದು ಅಂಗಲಾಚಿದಳು. ನೇರ ಮಾರ್ಗದ ಹಿಂಸೆಗೆ ಅಧಿಕಾರಿಗಳ ಕಾನೂನಿನ ಬೆಂಬಲ ದೊರೆತೀತು. ಆದರೆ, ಇಂತಹ ಕುಯುಕ್ತಿ, ಕುಹಕತನಗಳಿಗೆ ಯಾವ ಪರಿಹಾರವಿದೆ ಹೇಳು? ಮಕ್ಕಳಿಗೆ ಆದರ್ಶರಾಗಬೇಕಾಗಿದ್ದ ಶಿಕ್ಷಕಿಯರು ಮುಗ್ಧ ಮಗುವಿನ ಮೇಲೆ ದ್ವೇಷ, ಪ್ರತೀಕಾರ, ಮತ್ಸರಗಳ ವಿಷ ಬಾಣಗಳನ್ನೆಸೆದರೆ? ರಕ್ಷಿಸುವವರ್ಯಾರು? ಅಂತಹ ವ್ಯಕ್ತಿಗಳ ಕೈಯಲ್ಲಿ ಶಿಕ್ಷಣ ಪಡೆದ ಕಿರಿಯರು ಯಾವ ಸದ್ಗುಣಗಳನ್ನು ಕಲಿತು ಬಾಳಬಹುದು? ಮನೆಯಲ್ಲಿ ಹಿರಿಯರು ನಾಟಕೀಯವಾಗಿ ನಾಗರಿಕತೆಯನ್ನನುಸರಿಸಿದರೂ ಅವರ ಸ್ವಭಾವ ಸಂಪೂರ್ಣವಾಗಿ ಉಚ್ಛ ನೀತಿಯನ್ನನುಸರಿಸದೆ ಶಾಲೆಯಲ್ಲಿ ಶಿಕ್ಷಕಿಯರು ಎಳೆಯ ಮಕ್ಕಳಿಗೆ ಸರಿಯಾದ ಮಾರ್ಗದರ್ಶನವನ್ನೀಯದೆ ಕೇವಲ ವಿದ್ಯಾರ್ಥಿಗಳನ್ನೇ ದೂಷಿಸಿದರೆ ಏನನ್ನು ಸಾಧಿಸಬಹುದು?" ಎಂದು ನಿಟ್ಟುಸಿರು ಬಿಟ್ಟರು ಶಾಂತಮ್ಮ.

"ಹೌದು ಶಾಂತಮ್ಮ, ನೀವು ಹೇಳುವ ಹಾಗೆಯೇ ಹೊಣೆಗಾರಿಕೆಯನ್ನರಿಯದ ಮೂರ್ಖ ಶಿಕ್ಷಕಿಯರು ಇದ್ದಾರೆ ನಿಜ. ಆದರೆ ಎಲ್ಲರೂ ಹಾಗೆಯೇ ಎಂದು ಮಾತ್ರ ತೀರ್ಮಾನ ಮಾಡಬೇಡಿ" ಎಂದು ವಸುಧಾ ಅವರ ನೊಂದ ಮನದ ಬೇಗೆಯನ್ನು ಗ್ರಹಿಸಿ ನುಡಿದಳು.

"ಹಾಗೇನಿಲ್ಲ ವಸುಧಾ. ಎಲ್ಲರೂ ಅದೇ ರೀತಿಯವರೆಂದಾಗಿದ್ದರೆ ಮಕ್ಕಳನ್ನು ಯಾರೂ ಶಾಲೆಗೇ ಕಳಿಸುತ್ತಿರಲಿಲ್ಲ. ಆದರೆ ಇಂತಹ ಕೆಲವೇ ಮಂದಿಯಿಂದ ಶಿಕ್ಷಣ ಸಂಸ್ಥೆಗಳಿಗೇ ಕೆಟ್ಟ ಹೆಸರು. ಓ! ಮಾತಿನಲ್ಲಿ ವೇಳೆಯಾದ್ದೇ ತಿಳಿಯಲಿಲ್ಲ ಕೆಲಸಗಳೆಲ್ಲ ಬಾಕಿ" ಎಂದು ಶಾಂತಮ್ಮ ಎದ್ದಕೂಡಲೇ ಉಳಿದ ಮಹಿಳೆಯರೂ ಗಡಿಬಿಡಿಯಿಂದ ಎದ್ದು ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

—ಸಹನಾ, ಹಿರಿಯಡ್ಕ.

ಉಡುಪಿ ಶಿವಿಲ್ ಜಡ್ಜರ ಕೋರ್ಟಿನಲ್ಲಿ

S. C. 56/1970.

ಸಿಂಡಿಕೇಟ್ ಬೇಂಕ್ ಮಣಿಪಾಳ—ವಾದಿ

ಮತ್ತು

ಸಯ್ಯದ್ ಗೌಸ್ ಸಾಹೇಬ ಕೂಡಾ —ಪ್ರತಿವಾದಿರು

ಯಾವರಿಗೋಳಗೆ—

1 ನೇ ಪ್ರತಿವಾದಿ—ಸೈಯದ್ ಗೌಸ್ ಸಾಹೇಬ—ಸೈದ್ ಹೈದರ್ ಸಾಹೇಬರ ಮಗ—ಬ್ರಹ್ಮಾವರದಲ್ಲಿ ರೋಲ್ಮನ್ ಚರ್ಚ್ ಬಳಿ ಯಾಗುವವರು—

ಸದರಿ 1 ನೇ ಪ್ರತಿವಾದಿಗೆ

ಪ್ರತಿವಾದಿರು ವಾದಿ ಬೇಂಕಿಗೆ ತಾರೀಕು 8-8-1967 ಕ್ಕೆ ರೂಪಾಯಿ 1000-00 ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ಕೂಡಾ ರೂಪಾಯಿ 608-98 ಕ್ಕೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಸದರಿ ವ್ಯಾಜ್ಯವು ತಾರೀಕು 16-3-1971 ಕ್ಕೆ ತನಿಖೆ ಬಗ್ಗೆ ಯಿಟ್ಟಿದೆ. ಆ ದಿನ್ನ ಸದರಿ 1 ನೇ ಪ್ರತಿವಾದಿಯು ಸ್ವತಃ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಾಸ್ಪದ ಯಿದ್ದ ಅವನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದರಿ 1 ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸಲಾಗಿರುವದೆ.

H. Ramanath Pai,
Advocate for Plff.

ಉಡುಪಿ, ತಾರೀಕು 17-2-71.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಚುನಾವಣೆಗಳ ಮುಸ್ಸಂಜೆಯಲ್ಲಿ ಧೂಳು ಕವಿದ ವಾತಾವರಣ

(ನಾಲ್ಕನೇ ಪುಟದಿಂದ)

ಇಂತಹ ಮೆರವಣಿಗೆ ನಡೆಯಲು ಸರಕಾರವೇ ಅನುಮತಿ ನೀಡಿತ್ತು. ಪೋಲೀಸು ರಕ್ಷಣೆಯನ್ನು ಬೇರೆ ಕೊಟ್ಟಿತ್ತು.

ಅಶ್ಲೀಲ ಪ್ರಸಂಗಗಳನ್ನು ಸಂಘಟಿಸಿ ನಡೆಸುವುದು, ನಡೆಸಲು ಪ್ರೋತ್ಸಾಹ ನೀಡುವುದು ಆಕ್ಷೇಪಾರ್ಹವೆನಿಸಲಿಲ್ಲ. ಸರಕಾರಕ್ಕೆ ಅದರ ಚಿತ್ರಲೇಖನ ಮಾತ್ರ ಆಕ್ಷೇಪಾರ್ಹವಾಯ್ತು.

ಈ ಆಕ್ಷೇಪದ ಹಿಂದೆ ಚುನಾವಣೆಯ ದೃಷ್ಟಿಯಿದೆ.

ಹಿಂದೂ ದೇವರುಗಳನ್ನು ನಿಂದಿಸುವುದು, ಅವುಗಳ ಪಟಗಳಿಗೆ ಅಪಮಾನ ಮಾಡುವುದು ದ್ರಾವಿಡರ ಬಾಲಲೀಲೆಗಳು.

ದೇಶದ ಸಂವಿಧಾನವನ್ನೇ ಸುಟ್ಟು ಹಾಕುವ ಲೀಲೆ ತೋರಿದವರಿಗೆ ಇದೇನೂ ದೊಡ್ಡದಲ್ಲ.

ಶ್ರೀಮತಿ ಗಾಂಧಿಯಂಥಹ ಶ್ರೀಮುಖಿಗೇ ಚಪ್ಪಲಿ ಪ್ರಹಾರವಾಗುತ್ತಿರುವಾಗ ಶ್ರೀರಾಮನ ಚಿತ್ರಪಟವೇನು ಮಹಾ?

ಆದರೆ, ಈ ಘಟನೆ ತಮಿಳುನಾಡಿನಲ್ಲಿ ದ್ರಾವಿಡರ ಮುಖಕ್ಕೆ ಮಸಿ ಬಳಿಯಲು ಸಾಕು. ಪ್ರಮುಖ ವಿರೋಧಿ ಪಕ್ಷಗಳು ಈ ಘಟನೆಯಿಂದ ಸಂಪೂರ್ಣ ಲಾಭ ಗಳಿಸುವುದು ನಿಶ್ಚಯ.

ವಿಧಾನ ಸಭೆಯಲ್ಲಿ ತನ್ನ ಪ್ರಭುತ್ವವುಳಿಸಲು ಮುಖ್ಯಮಂತ್ರಿ ಕರುಣಾನಿಧಿಯವರು ಲೋಕಸಭೆಯ ಒಡೆತನ ಶ್ರೀಮತಿ ಗಾಂಧಿಯವರ ಕೈಗಳಲ್ಲಿ ಉಳಿಯುವುದಕ್ಕೆ ನೆರವಾದರು. ತುಘಲಕ್ ದುರ್ಘಟನೆಯಿಂದ ಇಬ್ಬರ ಸಿಂಹಾಸನವೂ ಒಂದು ಗಜ ಅಡಿಗೆ ಸರಿಯಿತು.

ಪಂಚಮಹಾ ರಾಜ್ಯಗಳಲ್ಲಿ ಒಂದಾದ ಆಂಧ್ರಪ್ರದೇಶದ ಸರಕಾರ ಪ್ರಧಾನಿಯ ಅಧೀನಸ್ಥ. ಆದರೆ, ಅಲ್ಲೇ ಆಕೆಯ ಮುಖಕ್ಕೆ ಚಪ್ಪಲಿ ಬೀಳಬೇಕೆ?

ಇಂಥದಕ್ಕೆಲ್ಲ ಅಂಜುವವಳು ತಾನಲ್ಲವೆಂದು ತಾಸು ಭಾಷಣ ಆಕೆ ಬಿಗಿದೇ ಬಿಟ್ಟರು. ಪ್ರತ್ಯೇಕ ತೆಲಂಗಾಣವಿಲ್ಲವೆನ್ನಲಿಲ್ಲ; ಇದೆಯೆಂದೂ ಹೇಳಲಿಲ್ಲ.

ಚಿಕ್ಕ ಚಿಕ್ಕ ರಾಜ್ಯಗಳಿಂದ ದೇಶದ ಐಕ್ಯ ಭಂಗವಾಗುತ್ತದೆ ಎಂದು ಹೇಳಿದರು. ಪ್ರಧಾನಿಯ ತಿರುವು ಮಾತನ್ನು ತೆಲಂಗಾಣಿಗರು ಅರ್ಥ ಮಾಡಿಕೊಳ್ಳಲು ಶಕ್ತರಾಗುವುದಿಲ್ಲವೆಂದವರ ನಂಬಿಕೆಯಿರ ಬಹುದು–ಹೇಳಿ ಕೇಳಿ ತೆಲಂಗಾಣಿಗರು ಹಿಂದುಳಿದವರು ತಾನೆ?

ಆದರೆ, ಪಂಜಾಬವನ್ನು ವಿಭಜಿಸಿದಾಗ ಈ ಜ್ಞಾನ ಶ್ರೀಮತಿಗಾಂಧಿಗೆ ಬರಲಿಲ್ಲ. ಪ್ರಾಯಃ ಆಗ, ಪ್ರತಿಗಾಮಿಗಳು ಬಾರಕೋಲು ಹಿಡಿದು ಪ್ರತ್ಯೇಕ ಪಂಜಾಬ ಕೊಡಿಸಿದರೆಂದು ಉತ್ತರ ಬರಬಹುದು.

ಕರ್ನಾಟಕದಲ್ಲಿ ಕೇಂದ್ರ–ರಾಜ್ಯ ವ್ಯಾಜ್ಯ ವಿಪುಲವಾಗಿ ಹರಡಿದೆ. ದಿನದಿನಕ್ಕೆ ಅದು ಸಿಕ್ಕುಗಟ್ಟುತ್ತ ಬರುತ್ತಿದೆ.

ಶ್ರೀಮತಿ ಗಾಂಧಿಯವರ ಸರಕಾರ ಕೇಂದ್ರದಲ್ಲಿರುವ ತನಕ ಕನ್ನಡಿಗರಿಗೆ ನ್ಯಾಯದಾನವಿಲ್ಲ–ಇದು ರಾಜ್ಯ ಸಿಂಡಿಕೇಟಿನ ಏಕೈಕ ಘೋಷಣೆ. ಇದಕ್ಕೆ ಪ್ರತಿಯೊಬ್ಬ ದೊಡ್ಡ ಇಂಡಿಕೇಟನದು.

ಬ್ರಹ್ಮ ಬಂದರೂ ಕಾವೇರಿಕೊಳ್ಳದ ಯೋಜನೆ ತಡೆಯಲಾರೆನೆಂದು ಶ್ರೀ ವೀರೇಂದ್ರ ಪಾಟೀಲ್ ಭರವಸೆ ಕೊಟ್ಟರೆ, ೧೯೨೪ರ ಒಡಂಬಡಿಕೆಯೇ ನೀರಿನ ವಿವಾದ ಪರಿಹಾರಕ್ಕೆ ಅಸ್ತಿವಾರವೆನ್ನುತ್ತಾರೆ ಶ್ರೀ ದೇವರಾಜ ಅರಸರು.

೧೯೨೪ರ ಒಡಂಬಡಿಕೆ ಆಗಿನ ಕಾಲಕ್ಕೆ ಸಂಬಂಧಿಸಿದ್ದು. ಇಂದು ಪರಿಸ್ಥಿತಿ ಬದಲಾಗಿದೆ; ರಾಜ್ಯದ ಬೇಡಿಕೆ ಹೆಚ್ಚಾಗಿದೆ. ಪೂರೈಕೆ ಕಡಿಮೆಯಾಗಿದೆ. ನಮ್ಮ ನೆಲದಲ್ಲಿ ಹರಿಯುವ ನೀರು ನಾವು ಮೊದಲು ಉಪಯೋಗಿಸಿ, ಹೆಚ್ಚಿನದನ್ನು ಪರರಿಗೆ ಹರಿಯಬಿಡಬೇಕು.

ಬೆಂಗಳೂರಲ್ಲಿ ಶ್ರೀ ಕೆಂಗಲ್ಲರ ಪೇಟ ತಿರುವು ಮುರುವು ಆಗುವ ಛಾನ್ಸು ಬಹಳಷ್ಟಿದೆ. ಸುಶಿಕ್ಷಿತ ವರ್ಗವು ಕೆಂಗಲ್ಲರು ಈ ಬಾರಿ ಗೆಲ್ಲುವುದು ಬೇಡವೆಂದು ನಿರ್ಧರಿಸಿದಂತಿದೆ. ಹಾಗಾಗಿ ಸ್ಲಂ ಏರಿಯಾವೇ ಕೆಂಗಲ್ಲರಿಗೆ ಸ್ವರ್ಗವಾದೀತು.

ಈ ನಡುವೆ ಹಾಸನದಲ್ಲಿ ಗಲಭೆ. ಹುಲ್ಲಿನಂತಹ ಕಾರಣ, ಬೆಟ್ಟದಂತಹ ಪ್ರತಿಕ್ರಿಯೆ, ಶಾಲೆಕಾಲೇಜುಗಳು ಅನಿರ್ದಿಷ್ಟಾವಧಿಯ ವರೆಗೆ ಬಂದ್.

ಚುನಾವಣೆಗಳು ಸಮೀಪಗತವಾಗುತ್ತಿರುವಾಗ ಈ ಬಗೆಯ ಕಲುಷಿತ ವಾತಾವರಣ ತಾಂಡವವಾಡುವಾಗ, ಚುನಾವಣೆಗಳು ನಿಷ್ಪಕ್ಷಪಾತವಾಗಿ ಹೇಗೆ ನಡೆಯುತ್ತವೆ ಎಂಬುದೇ ಪ್ರಶ್ನೆ.

ಇದನ್ನು ಉತ್ತರಿಸಬೇಕಾದವರು ನಾವು—ನೀವು; ರಾಜ್ಯಕೀಯಕ್ಕೆ ಪ್ರೈಮನ ಮಾರಿಕೊಂಡವರಲ್ಲ.

ಕೊರಂಗ್ರಪಾಡಿಯಲ್ಲಿ ಸತ್ಕಾರಕೂಟ

ಮುಂಬಯಿಯ ಜಗನ್ನಾಥ ಎಜ್ಯುಕೇಷನ್ ಸೊಸೈಟಿಯ ಅಧ್ಯಕ್ಷ, ಕೆಮ್ತೂರು ಶ್ರೀ ಸದಾಶಿವ ಜೆ. ಶೆಟ್ಟರಿಗೆ ತಾ. 16—2—71ರಂದು ಕೊರಂಗ್ರಪಾಡಿಯ ಗವರ್ನ್‌ಮೆಂಟ್ ಹೈಯರ್ ಪ್ರೈಮರಿ ಶಾಲೆಯ ಬೆಟರ್‌ಮೆಂಟ್ ಕಮಿಟಿಯ ಸದಸ್ಯರೂ ಗ್ರಾಮದ ಮುಖ್ಯಸ್ಥರೂ ಸತ್ಕಾರವಿತ್ತು ಗೌರವಿಸಿದರು.

ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ರಮಾ ಬಾಯಿ, ಪಂಚಾಯಿತಿ ಅಧ್ಯಕ್ಷ ಶ್ರೀ ಕೆ. ಬಾಲಕೃಷ್ಣ ಶೆಟ್ಟಿ, ಮಾಜಿ ಅಧ್ಯಾಪಕ ಶ್ರೀ ಎಂ. ರಾಮಕೃಷ್ಣಯ್ಯ ಮೊದಲಾದವರು, ಶ್ರೀ ಶೆಟ್ಟರು, ಗ್ರಾಮದ ಹಾಗೂ ಅಕ್ಕ ಪಕ್ಕದ ಶಾಲೆಗಳ ಏಳಿಗೆಗಾಗಿ ಕೈಗೊಂಡಿರುವ ಯೋಜನೆ ಮತ್ತು ಪಡುತ್ತಿರುವ ಶ್ರಮದ ಕುರಿತು ಮಾತನಾಡಿದರು. ಶ್ರೀ ಶೆಟ್ಟರು ತಮ್ಮ ಸೊಸೈಟಿಯ ಧ್ಯೇಯೋದ್ದೇಶಗಳನ್ನು ವಿವರಿಸಿ ವಿದ್ಯಾರ್ಥಿಗಳಿಗೆ ಹಿತೋಪದೇಶ ಮಾಡಿದರು. ಹೊಲಿಗೆ ಕ್ಲಾಸು, ಲೈಬ್ರೇರಿಯನ್ನು ಪ್ರಾರಂಭಿಸಿದರೆ ಸೊಸೈಟಿ ನೆರವಾಗುವುದು ಎಂದರು. ಶಾಲಾ ಕಟ್ಟಡಕ್ಕೆ ವಾಗ್ದಾನ ಮಾಡಿದ ರೂ. 4,000ವನ್ನು ಒಡನೆ ಕಳುಹಿಸಿಕೊಡುವ ಭರವಸೆಯನ್ನಿತ್ತರು. ಶ್ರೀ ಬೈಲೂರು ಕಾಳು ಶೆಟ್ಟರು ಶಾಲೆಯ ಏಳಿಗೆಗಾಗಿ ಸೂಕ್ತ ಸಲಹೆಗಳನ್ನಿತ್ತರು.

ಅಧ್ಯಾಪಕ ಶ್ರೀ ಕೆ. ಸುಂದರ ಶೆಟ್ಟರು ಧನ್ಯವಾದಗಳನ್ನು ಅರ್ಪಿಸಿ ಶಾಲಾಮಕ್ಕಳಿಗೆ ಸಿಹಿತಿಂಡಿ ವಿತರಣೆಗೊಳಿಸಿದರು.

ಉಡುಪಿಯಲ್ಲಿ ಕುಟುಂಬಯೋಜನಾ ಕ್ಲಿನಿಕ್ ಉದ್ಘಾಟನೆ

ಇದೇ ತಾ. 11ರಂದು ಉಡುಪಿಯಲ್ಲಿ ಕುಟುಂಬ ಯೋಜನಾ ಸಮಿತಿಯ ದ. ಕ. ಜಿಲ್ಲಾ ಶಾಖೆಯು ಹೊಯಿಂದ ವ್ಯವಸ್ಥೆಗೊಳಿಸಲ್ಪಟ್ಟ ಕುಟುಂಬ ಯೋಜನಾ ಕ್ಲಿನಿಕನ್ನು ಅಖಿಲ ಭಾರತ ಫೆಮಿಲಿ ಪ್ಲಾನಿಂಗ್ ಆಸೋಸಿಯೇಶನ್ ಅಧ್ಯಕ್ಷೆ ಶ್ರೀಮತಿ ಅವಾಬಾಯಿ ಬಿ. ವಾಡಿಯಾ ಅವರು ಉದ್ಘಾಟಿಸಿದರು. ಅವರು ಅಸೋಸಿಯೇಶನಿನ ಮಣಿಪಾಲ ಶಾಖೆಯಿಂದ ಕುಟುಂಬ ಯೋಜನಾ ಕಾರ್ಯಕ್ರಮಗಳಿಗೆ ಸಿಗುತ್ತಿರುವ ಬೆಂಬಲ ಹಾಗೂ ಮಾರ್ಗದರ್ಶನವನ್ನು ಶ್ಲಾಘಿಸಿದರು.

ಅಧ್ಯಾಪಕರನ್ನು ಕುಟುಂಬಯೋಜನೆಯ ಕಾರ್ಯಕ್ರಮಗಳಿಗೆ ಅಳವಡಿಸಿಕೊಳ್ಳುವ ಸೈಂಟ್ ಪ್ರೊಜೆಕ್ಟ್ ಕೂಡಾ ಇಲ್ಲಿಯೇ ನಡೆಯಿತು. ಇಲ್ಲಿ ತೊಡಗುವ ಕ್ಲಿನಿಕ್‌ನ ಸದುಪಯೋಗ ಜನತೆ ಪಡೆಯಲೆಂದವರು ಆಶಿಸಿದರು.

ಆರಂಭದಲ್ಲಿ ಶ್ರೀ ಟಿ. ರಮೇಶ ಪೈಗಳು ಅತಿಥಿಗಳನ್ನು ಸ್ವಾಗತಿಸಿದರು. ಡಾ| ಸದ್ಯಾರಾಯರು ಮಣಿಪಾಲ ಕೇಂದ್ರದ ಚಟುವಟಿಕೆಗಳನ್ನು ವಿವರಿಸಿದರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ| ಟಿ. ಎಂ. ಎ. ಪೈಗಳು ಮಾತನಾಡಿ, ಈ ಕಾರ್ಯದಲ್ಲಿ ಅತಿ ಹೆಚ್ಚಿನ ಆಸಕ್ತಿ ವಹಿಸಿರುವ ತಜ್ಞ ಡಾಕ್ಟರುಗಳನ್ನು ಅಭಿನಂದಿಸಿದರು. ಶ್ರೀ ಎ. ಜೆ. ಆಲ್ಸೆ ವಂದಿಸಿದರು.

ಜಿಲ್ಲೆಯಲ್ಲಿ ೨ನೇ ಟಿ.ಬಿ. ಕೇಂದ್ರಕ್ಕೆ ಅಸ್ತಿವಾರ

ಉಡುಪಿಯ ಸರಕಾರೀ ಆಸ್ಪತ್ರೆಗೆ ಹೊಂದಿ ಸುಮಾರು ಒಂದು ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಿರುವ ಇಪ್ಪತ್ತು ಹಾಸಿಗೆಗಳುಳ್ಳ ಟಿ. ಬಿ. ವಾರ್ಡಿಗೆ ರಾಜ್ಯ ಆರೋಗ್ಯ ಸಚಿವ ಶ್ರೀ ವೈ. ರಾಮಕೃಷ್ಣ ಅವರು ವಿಧಾನಸಭಾ ಸದಸ್ಯ ಮಣೇಲ್ ಶ್ರೀನಿವಾಸ ನಾಯಕ್ ಅವರ ಅಧ್ಯಕ್ಷತೆಯಲ್ಲಿ ಇದೇ ತಾ. 14ರಂದು ಶಂಕುಸ್ಥಾಪನೆ ಗೈದರು.

ಸಚಿವ ರಾಮಕೃಷ್ಣ ಅವರು ಮಾತನಾಡುತ್ತಾ ಕ್ಷಯವು ಇಂದು ಸೂಕ್ತ ಚಿಕಿತ್ಸೆಯಿಂದ ಗುಣಪಡಿಸಬಲ್ಲಂತಹ ರೋಗವೆಂದೂ ಈ ಚಿಕಿತ್ಸಾ ಕೇಂದ್ರದಲ್ಲಿ ರೋ

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್, ಉಡುಪಿ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಿಂದ ಚಿನ್ನಾಭರಣಗಳ ಆಡವಿನ ಮೇಲೆ ಪಡೆದ ಸಾಲವನ್ನು, ಬ್ಯಾಂಕಿನ ನಿಬಂಧನೆಗಳಿಗನುಗುಣವಾಗಿ, ಅಸಲು ಯಾ ಬಡ್ಡಿಯನ್ನು ಮಾಯದೆ ತಾರೀಕಿಗೆ ಸರಿಯಾಗಿ ಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ಮೂಲಕ ಕಳುಹಿಸಿಕೊಟ್ಟ ನೋಟೀಸು ಕೂಡಾ, ಸದ್ರಿ ಸಾಲಗಾರರು ಸಾಲ ಪಡೆಯುವಾಗ ತಿಳಿಸಿದ ವಿಳಾಸದಲ್ಲಿ ಇಲ್ಲದೆ ಇರುವುದರಿಂದ ಪಾವತಿಯಾಗದೆ ನಮಗೆ ವಾಪಸ್ಸು ಬಂದಿರುತ್ತದೆ. ಸದ್ರಿ ಸಾಲದ ಅಸಲು ಬಡ್ಡಿ ವಿವೇಚನ್ನು ತಾ. 6–3–1971ರೊಳಗೆ ಬ್ಯಾಂಕಿಗೆ ಪಾವತಿ ಮಾಡದಿದ್ದಲ್ಲಿ ಸದ್ರಿ ಸಾಲಗಾರರು ಬ್ಯಾಂಕಿನಲ್ಲಿ ಅಡವಿಟ್ಟ ಚಿನ್ನಾಭರಣಗಳನ್ನು ಅದೇ ತಿಂಗಳ ತಾರೀಕು 9ನೇ ಮಂಗಳವಾರ ಅಪರಾಹ್ನ ಘಂಟೆ 1ಕ್ಕೆ ಸರಿಯಾಗಿ ಯಾ ಮುಂದಕ್ಕೆ ಯಾವುದಾದರೊಂದು ದಿನದಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ.

ಸಾಲದ ನಂಬ್ರ	ಹೆಸರು	ಸಾಲದ ಮೊಬಲಗು
115/68	ಜೋನ್ ಡಿ'ಸೋಜ, ಪಾವುಲ್ ಡಿ'ಸೋಜರ ಮಗ, ಗುಜರಬೆಟ್ಟು, ಕೋಟೆ ಗ್ರಾಮ, ಕೆಮ್ಮಣ್ಣು P. O.	ರೂ. 80–00

ಕೋರ್ಪೊರೇಶನ್ ಬ್ಯಾಂಕ್ ಕಚೇರಿ
ಉಡುಪಿ
19—2—1971.

ಜಿ. ಮಂಜುನಾಥ ನಾಯಕ್,
ಏಜಂಟ್

ಸಂದರ್ಶಿಸಿರಿ!—ಸಂತುಷ್ಟರಾಗಿರಿ!!

ಬಳ್ಳಿ ಬಂಗಾರ ವಜ್ರಗಳಿಗೆ, ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮ್‌ಗಳ ಅಧಿಕೃತ ವ್ಯಾಪಾರಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

ಗಳಿಗೆ ಒಳ್ಳೆಯ ಶುಶ್ರೂಷೆ ದೊರೆಯಲೆಂದೂ ಹಾರೈಸಿದರು,

ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಈ ವಾರ್ಡಿಗೆ ತನ್ನ ತಂದೆಯ ಹೆಸರಿನಲ್ಲಿ ರೂ. 5,000ದ ವೈಯಕ್ತಿಕ ಕೊಡುಗೆಯನ್ನು ಘೋಷಿಸಿ ಕ್ಷಯರೋಗವನ್ನು ಪೂರ್ಣವಾಗಿ ನಿವಾರಿಸಲು ಯತ್ನ ನಡೆಯಬೇಕು ಎಂದರು. ನಗರ ಸಭಾಪತಿ ಡಾ| ವಿ. ಎಸ್. ಆಚಾರ್ಯ, ವಿಧಾನ ಸಭಾ ಸದಸ್ಯ ಶ್ರೀ ಎಸ್.ಕೆ. ಅಮೀನ್ ಅವರುಗಳು ಮಾತನಾಡಿ ಈ ಕೇಂದ್ರದ ಅವಶ್ಯಕತೆಯನ್ನು ತಿಳಿಸಿದರು. ದಕ್ಷತೆಯಿಂದ ಆಸ್ಪತ್ರೆಯ ಮೇಲ್ವಿಚಾರಣೆ ನೋಡುತ್ತಿರುವ ಸರ್ಜನ್ ಡಾ| ವೈ. ಎನ್. ಶೆಟ್ಟಿ ಅವರ ಗೌರವಾರ್ಥ, ಅಧ್ಯಕ್ಷ ಶ್ರೀ ಮಣೀಲ್ ಶ್ರೀನಿವಾಸ ನಾಯಕ್ ಅವರು ಪುಷ್ಪಹಾರ ಅರ್ಪಿಸಿದರು.

ಆರಂಭದಲ್ಲಿ ಶ್ರೀ ಎಸ್. ಸೀತಾರಾಮ ಕಾಮತರು ಸ್ವಾಗತಿಸಿದ್ದರು. ಶ್ರೀ ಎಸ್. ಎಲ್. ಭಟ್ ಧನ್ಯವಾದವಿತ್ತರು. ಈ ವಾರ್ಡಿನ ರಚನೆಗೆ ಸರಕಾರದಿಂದ ರೂ. 50,000 ನೆರವು ದೊರೆತಿದ್ದು ಉಳಿದಂಶವನ್ನು ಸ್ಥಳೀಯವಾಗಿ ಸಂಗ್ರಹಿಸಲಾಗಿದೆ.

"ಎನ್ನ ತಂಗಡಿ" ಉದ್ಘಾಟನೆ

ಡಾಲಿ ಫಿಲಮ್ಸ್‌ನವರು ತಯಾರಿಸಿದ "ಎನ್ನ ತಂಗಡಿ" ಎಂಬ ತುಳು ಚಿತ್ರವು ತಾ. 19ರಂದು ಮಂಗಳೂರು ವುಡ್‌ಲೇಂಡ್ಸಿನಲ್ಲಿ ನಗರ ಸಭಾಪತಿ ಶ್ರೀ ವಾಮನ ಕೊಡಿಯಾಲ್‌ಬೈಲ್ ಅವರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರಿಂದ ಉದ್ಘಾಟಿಸಲ್ಪಟ್ಟಿತು. ಈ ಚಿತ್ರದ ಹಂಚಿಕೆದಾರರಾದ ಉಡುಪಿಯ "ಚಿತ್ರಭಾರತಿ" ಸಂಸ್ಥೆಯ ಪಾಲುಗಾರ ಶ್ರೀ ಎ.ಜಿ. ಅಲ್ಸೆಯವರು ಸ್ವಾಗತಿಸುತ್ತಾ ಶ್ರೀ ರಾಜನ್ ಅವರು ಬಹು ಸಾಹಸದಿಂದ ಈ ಚಿತ್ರವನ್ನು ಬಿಡುಗಡೆಗೆ ಸಿದ್ಧಗೊಳಿಸಿದ್ದಾರೆ. ಇದರಲ್ಲಿ ತುಳುವಿನ ಸಂಸ್ಕೃತಿ ಜನಜೀವನವನ್ನು ಪ್ರತಿಬಿಂಬಿಸುವ ಪ್ರಯತ್ನ ಕೈಕೊಳ್ಳಲಾಗಿದೆ. ಇದು ಯಶಸ್ವಿಯಾದರೆ ಹೆಚ್ಚಿನ ತುಳು ಚಿತ್ರಗಳು ತಯಾರಾಗಬಹುದು.

ಶ್ರೀ ಅಡಿಗರು ಉದ್ಘಾಟನಾ ಭಾಷಣದಲ್ಲಿ ತುಳುಭಾಷೆಯಲ್ಲಿ ಇಪ್ಪತ್ತು ವರ್ಷಗಳಿಂದ ನಾಟಕಗಳಾಗುತ್ತಿವೆ. ಈಗ ಶ್ರೀ ರಾಜನ್‌ರ ಈ ಚಿತ್ರ ದಿಟ್ಟ ಹೆಜ್ಜೆಯಾಗಿದ್ದು ಚರಿತ್ರಾರ್ಹವಾಗಿದೆ. ಇದು ಯಶಸ್ವಿಯಾಗಲಿ ಎಂದರು. ಮುಖ್ಯ ಅತಿಥಿ ಶ್ರೀ ಬಿ. ಗಂಗಾಧರ ದಾಸರು ನಮ್ಮ ಜಿಲ್ಲೆಯಲ್ಲಿ ಸುಮಾರು ಹನ್ನೆರಡು ಲಕ್ಷ ತುಳುವರಿದ್ದಾರೆ. ತುಳು ಭಾಷೆಗೆ ಇದ್ದ ತಿರಸ್ಕಾರ ಭಾವ ಈಗ ಮಾಯವಾಗುತ್ತಿದೆ. ಶ್ರೀ ರಾಜನ್‌ರು ತುಳುಭಾಷೆಗೆ ಸಲ್ಲಿಸಿದ ಸೇವೆ ಅಭಿನಂದನೀಯ ಎಂದರು. ಅಧ್ಯಕ್ಷರು ಸುಮಾರು 40 ವರುಷಗಳ ಹಿಂದೆ ತುಳುಭಾಷೆ ಸಾಹಿತ್ಯದ ಪುನರುದ್ಧಾರಕ್ಕಾಗಿ ದುಡಿದ ದಿ. ಶ್ರೀ ಪಣಿಯಾಡಿ ಮೊದಲಾದವರ ಸೇವೆಯನ್ನು ನೆನಪಿಗೆ ತಂದರು. ನಿರ್ಮಾಪಕ ನಿರ್ದೇಶಕ ನಟ ಶ್ರೀ ಎಸ್. ಆರ್. ರಾಜನ್‌ರು ಈ ಚಿತ್ರದ ಯಶಸ್ವೀ ತಯಾರಿಕೆಗಾಗಿ ತೃಪ್ತಿ ವ್ಯಕ್ತಗೊಳಿಸಿದರು. ನಟ ಶ್ರೀ ಆನಂದ ಶೇಖರ್ ವಂದನೆ ಸಲ್ಲಿಸಿದರು.

ಯುವ ಕವಿ ಸಮ್ಮೇಳನ

ಇದೇ ತಾ. 13ರಂದು ಉಡುಪಿ ಎಂ. ಜಿ. ಎಂ. ಕಾಲೇಜಿನ ರವೀಂದ್ರ ಮಂಟಪದಲ್ಲಿ ಜರಗಿದ ಯುವ ಕವಿ ಸಮ್ಮೇಳನದಲ್ಲಿ ಜಿಲ್ಲೆಯ ಸುಮಾರು 10 ಕಾಲೇಜುಗಳಿಂದ ಮತ್ತು ವೈಯಕ್ತಿಕವಾಗಿ ಒಟ್ಟು 30 ಮಂದಿ ತರುಣ ಕವಿಗಳು, ಕವಯಿತ್ರಿಯರು ಭಾಗವಹಿಸಿದ್ದರು.

ಕಾರ್ಯಕ್ರಮದ ಸಂಯೋಜಕ ಫೀಲ್ಡ್ ಪಬ್ಲಿಸಿಟಿ ಆಫೀಸರ್ ಶ್ರೀ ಬಿ. ಕೃಷ್ಣಾನಂದ ಹೆಗ್ಡೆ ಅತಿಥಿಗಳನ್ನು ಸ್ವಾಗತಿಸಿದರು. ಪ್ರಿನ್ಸಿಪಾಲ್ ಪ್ರೊ| ಕು. ಶಿ. ಹರಿದಾಸ ಭಟ್ಟರು ಸಮ್ಮೇಳನವನ್ನು ಶ್ರೀ ಬನ್ನಂಜೆ ಗೋವಿಂದಾಚಾರ್ಯರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿ ಮಾತನಾಡುತ್ತಾ, "ಬದಲಾಗುತ್ತಿರುವ ಭಾರತ" ಎಂಬ ವಿಷಯದ ಮೇಲೆ ಯುವ ಕವಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುವ ಈ ಅವಕಾಶದಿಂದ ದೇಶದ ಭವಿಷ್ಯದ ಬಗ್ಗೆ ನಮ್ಮ ಯುವ ಜನಾಂಗ ಏನು ಯೋಚಿಸುತ್ತಿದೆ ಎನ್ನುವುದನ್ನರಿಯಲು ಸಾಧ್ಯವಾಗುತ್ತದೆ" ಎಂದರು.

ಅಧ್ಯಕ್ಷ ಶ್ರೀ ಬನ್ನಂಜೆಯವರು ಮಾತನಾಡುತ್ತಾ, ಸರಕಾರದಿಂದ ಬಹುಮಾನಿತರಾದ ಕವಿಗಳಾಗುವುದು ದೊಡ್ಡದಲ್ಲ. ಆದರೆ ನಿಜವಾದ ಕವಿಗಳಾಗುವುದು ಬಹಳ ಕಷ್ಟ. ನಮ್ಮ ತರುಣರು ನಿಜವಾದ ಕವಿಗಳಾಗಲು ಪ್ರಯತ್ನಿಸಬೇಕು' ಎಂದರು. ಅನಂತರ ಅವರು ಬಹುಮಾನಿತ ಕವಿತೆಗಳಿಗೆ ಬಹುಮಾನವನ್ನು ಹಂಚಿದರು. ಭಾಗವಹಿಸಿದ ಎಲ್ಲಾ ಯುವಕವಿಗಳಿಗೂ ಸರಕಾರದ ಪರವಾಗಿ ಸರ್ಟಿಫಿಕೇಟು ನೀಡಲಾಯಿತು.

ಮೊದಲ ಬಹುಮಾನ ಗೋವಿಂದದಾಸ ಕಾಲೇಜಿನ ಕುಮಾರಿ ಶೈಲಜಾ, ದ್ವಿತೀಯ ಬಹುಮಾನ ಸಂತ ಫಿಲೋಮಿನಾ ಕಾಲೇಜಿನ ಬಾಲಸುಬ್ರಹ್ಮಣ್ಯ ಕಂಜರ್ಪಣೆ, ಮತ್ತು ತೃತೀಯ ಬಹುಮಾನ ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ಸಿ. ಎಚ್. ಶಾಮ ಭಟ್ ಅವರ ಕವಿತೆಗಳಿಗೆ ನೀಡಲಾಯಿತು.

ಶ್ರೀ ಶ್ರೀಶ ಬಲ್ಲಾಳ್, ಕೋ. ಮ. ಕಾರಂತ ಮತ್ತು ಲೀಲಾ ಭಟ್ ಸ್ಪರ್ಧೆಯ ತೀರ್ಪುಗಾರರಾಗಿದ್ದರು. ಸಮಾರಂಭದ ಅಂತ್ಯದಲ್ಲಿ ಶ್ರೀ ಕೃಷ್ಣಾನಂದ ಹೆಗ್ಡೆಯವರು ಕೃತಜ್ಞತೆ ಸಲ್ಲಿಸಿದರು.

ವಿವಾಹ—ಸತ್ಕಾರ ಸಮಾರಂಭ

ಶಿವಮೊಗ್ಗದ ಖ್ಯಾತ ಹೋಟೆಲ್ ಉದ್ಯಮಿ ಶ್ರೀ ಸಿ. ಕೆ. ಜನಾರ್ದನ ಶೆಟ್ಟಿಯವರ ತಮ್ಮ ಪುತ್ರಿ ಚಿ. ಸೌ. ಪೂಲಿನಿ ಅವರ ವಿವಾಹವು ಬೈಂದೂರಿನ ಶ್ರೀ ಬಿ. ಶ್ರೀನಿವಾಸ ಸಹೋದರರ ಪುತ್ರ ಚಿ| ಬಿ. ಎಚ್. ನಾಗರಾಜ, ಜೂನಿಯರ್ ಇಂಜಿನಿಯರ್ ಅವರೊಂದಿಗೆ ವಧುವಿನ ಶೆಟ್ಟಿ ನಿವಾಸದಲ್ಲಿ ತಾ. 14-2-71ನೇ ಬೆಳಿಗ್ಗೆ ವಿಜೃಂಭಣೆಯಿಂದ ನೆರವೇರಿದ ಸಂಬಂಧ ಸಂಜೆ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಇದಕ್ಕೆ ನಗರದ ಹಾಗೂ ಆಸುಪಾಸಿನ ಗಣ್ಯ ಮಾನ್ಯರು ಬಹು ಸಂಖ್ಯೆಯಲ್ಲಿ ಆಗಮಿಸಿ ವಧೂವರರನ್ನು ಆಶೀರ್ವದಿಸಿದರು.

ಕೈಗಾರಿಕಾ ಉತ್ಪಾದನೆಯಲ್ಲಿ ಏರಿಕೆ

ಭಾರತದ ಕೈಗಾರಿಕಾ ರಂಗದ ಉತ್ಪಾದನಾ ಸಾಮರ್ಥ್ಯದಲ್ಲಾಗಿರುವ ಪ್ರಗತಿ ಉತ್ಸಾಹಕಾರಿಯಾಗಿದೆ. ಮೆಷೀನ್ ಟೂಲಗಳು, ಸೈಕಲ್, ಸ್ಕೂಟರ್, ಹೊಲಿಗೆಯಂತ್ರ, ವಿದ್ಯುತ್ ಬೀಸಣಿಗೆ, ಟ್ರ್ಯಾಕ್ಟರ್, ಸೀಮೆಂಟ್ ಯಂತ್ರೋಪಕರಣ,ವಿದ್ಯುತ್‌ಚಾಲಿತ ಪಂಪ್‌ಗಳು, ಡೀಸೆಲ್ ಎಂಜಿನ್‌ಗಳು, ಶುಷ್ಕ ಬ್ಯಾಟರಿಗಳು, ಸೀಮೆಂಟ್, ಕಾಗದ ಅಲ್ಯೂಮಿನಿಯಂ, ಮುದ್ರಣ ಯಂತ್ರ, ವಾಣಿಜ್ಯ ವಾಹನಗಳು, ಸಕ್ಕರೆ ತಯಾರಿಕಾ ಯಂತ್ರಗಳು, ಗಣಿ ಯಂತ್ರಗಳು, ಉಕ್ಕಿನ ಕೊಳವೆಗಳು ಮುಂತಾದುವುಗಳ ತಯಾರಿಕೆಯಲ್ಲಿ ಗಣನೀಯ ಏರಿಕೆಯಾಗಿದೆ.

1950—51ರಲ್ಲಿ 30 ಲಕ್ಷ ರೂಪಾಯಿ ಬೆಲೆಯ ಮೆಷೀನ್‌ಟೂಲ್ ತಯಾರಿಕೆಯಿದ್ದುದು 1969–70ರಲ್ಲಿ 22.30 ಕೋಟಿ ರೂಪಾಯಿಗಿಂತಲೂಹೆಚ್ಚಾಗಿತ್ತು. ಸೈಕಲ್ ಸಂಖ್ಯೆ 99 ಸಹಸ್ರದಿಂದ 25.12 ಲಕ್ಷಕ್ಕಿಂತಲೂ ಹೆಚ್ಚಾಗಿತ್ತು. ಹೊಲಿಗೆ ಯಂತ್ರಗಳು 33 ಸಹಸ್ರದಿಂದ 3.59 ಲಕ್ಷಕ್ಕಿಂತಲೂ ಮಿಗಿಲಾಗಿತ್ತು. ವಿದ್ಯುತ್ ಬೀಸಣಿಗೆಗಳು 1.94 ಲಕ್ಷದಿಂದ 15.51 ಲಕ್ಷಕ್ಕಿಂತಲೂ ಹೆಚ್ಚು ತಯಾರಿಕೆಯಾಗಿತ್ತು. ವಿದ್ಯುತ್ ಚಾಲಿತ ಪಂಪುಗಳು 34 ಸಹಸ್ರದಿಂದ 3.66 ಲಕ್ಷಕ್ಕಿಂತಲೂ ಹೆಚ್ಚಾಗಿತ್ತು. ಡೀಸೆಲ್ ಎಂಜಿನ್‌ಗಳು 5,540 ರಿಂದ 1.35 ಲಕ್ಷಕ್ಕಿಂತಲೂಹೆಚ್ಚಾಗಿತ್ತು. ಶುಷ್ಕ ಬ್ಯಾಟರಿಗಳು 18.3 ಕೋಟಿಯಿಂದ 46.8 ಕೋಟಿಗೇರಿತು. ಸೀಮೆಂಟ್ ಉತ್ಪಾದನೆ 27 ಲಕ್ಷ ಟನ್‌ಗಳಿಂದ 1.38 ಕೋಟಿ ಟನ್‌ಗಳಿಗೇರಿತು. ಕಾಗದ ಮತ್ತು ಕಾಗದ ಬೋರ್ಡುಗಳ ತಯಾರಿಕೆ 1.14 ಲಕ್ಷ ಟನ್‌ಗಳಿಂದ 7.21ಲಕ್ಷ ಟನ್‌ಗಳಿಗೇರಿತು. ಅಲ್ಯೂಮಿನಿಯಂ 3677 ಟನ್‌ಗಳಿಂದ 1.35 ಲಕ್ಷ ಟನ್‌ಗಳಿಗಿಂತಲೂ ಹೆಚ್ಚು ಉತ್ಪಾದಿಸಲಾಯಿತು.

1969–70ನೇ ಸಾಲಿನಲ್ಲಿ ಸ್ಕೂಟರ್, ಮೋಟರ್ ಸೈಕಲ್ ಮತ್ತು ಮೋಪೆಡ್‌ಗಳ ಸಂಖ್ಯೆ 1.03 ಲಕ್ಷವಿದ್ದಿತು; 17,099 ಟ್ರ್ಯಾಕ್ಟರ್‌ಗಳಿದ್ದುವು; 9.9ಕೋಟಿ ರೂಪಾಯಿ ಬೆಲೆಯ ಸೀಮೆಂಟ್ ತಯಾರಿಕಾ ಯಂತ್ರ ತಯಾರಿಸಲಾಯಿತು; 24ಲಕ್ಷ ರೂಪಾಯಿ ಬೆಲೆಯ ಮುದ್ರಣ ಯಂತ್ರ ನಿರ್ಮಿಸಲಾಯಿತು; 22ಲಕ್ಷ ರೂಪಾಯಿ ಬೆಲೆಯ ರಬ್ಬರ್ ತಯಾರಿಕಾ ಯಂತ್ರ ತಯಾರಿಸಲಾಯಿತು; 3.3ಕೋಟಿ ರೂಪಾಯಿ ಬೆಲೆಯ ಕಾಗದ ಮತ್ತು ಕಾಗದ ತಿರುಳು ತಯಾರಿಕಾ ಯಂತ್ರ ನಿರ್ಮಿಸಲಾಯಿತು; 40ಲಕ್ಷ ರೂಪಾಯಿಗಿಂತಲೂ ಹೆಚ್ಚು ಬೆಲೆಯ ಕಲ್ಲಿದ್ದಲು ಮತ್ತಿತರ ಗಣಿಯಂತ್ರಗಳನ್ನು ತಯಾರಿಸಲಾಯಿತು.

1969—70ರಲ್ಲಿ 32, 2[illegible]6 ವಾಣಿಜ್ಯೋಪಯೋಗಿ ವಾಹನಗಳಿದ್ದವು;13.16 ಕೋಟಿ ರೂಪಾಯಿಗಿಂತಲೂ ಹೆಚ್ಚು ಬೆಲೆಯ ಸಕ್ಕರೆ ಗಿರಣಿ ಯಂತ್ರಗಳನ್ನೂ 22.9[illegible] ಕೋಟಿ ರೂಪಾಯಿಗಿಂತಲೂ ಹೆಚ್ಚು ಬೆಲೆಯ ಬಾಯ್ಲರುಗಳನ್ನೂ ತಯಾರಿಸಲಾಯಿತು. 1969—70ರಲ್ಲಿ 2.71 ಲಕ್ಷ ಟನ್‌ಗಳಿಗಿಂತಲೂ ಹೆಚ್ಚು ಉಕ್ಕಿನ ಕೊಳವೆಗಳನ್ನು ತಯಾರಿಸಲಾಯಿತು.

ಸ್ವೀಕಾರ

ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್ಟರು ಬರೆದ ಈ ಕೆಳಗಿನ ಪುಸ್ತಕಗಳನ್ನು ಆತ್ಮಾದರದಿಂದ ಸ್ವೀಕರಿಸಿದ್ದೇವೆ.

1. **ಸೂಕ್ತಿವಾದ** (ಹಾಡು ಗಬ್ಬ) ಬೆಲೆ 50 ಪೈಸೆ.
2. **ಭೀಮ ವಿಜಯ** (ಯಕ್ಷಗಾನ) ಬೆಲೆ-ರೂ. 1.
3. **ಕರ್ನಾಟಕದ ಪರಿಸ್ಥಿತಿ ಮತ್ತು ಇತರ ಕೃತಿಗಳು** (ವಾರ್ಧಿಕ ಷಟ್ಪದಿಯ ಪದ್ಯ ಸಂಗ್ರಹ) ಬೆಲೆ—ರೂ. 1.

ಸಿಗುವ ವಿಳಾಸ:-

ಶ್ರೀ ಬಡೆಕ್ಕಿಲ ವೆಂಕಟರಮಣ ಭಟ್, ಕೆದಿಲ ಗ್ರಾಮ, ಪೋಸ್ಟ್ ಕೆದಿಲ, ಬಂಟ್ವಾಳ ತಾಲೂಕು, ದ. ಕ.

ಕೃತಜ್ಞತಾ ಸಮರ್ಪಣೆ

ನಾವು ಇದೇ ಮೇ ತಿಂಗಳಲ್ಲಿ ಆಚರಿಸಬೇಕೆಂದಿರುವ ನವಯುಗದ "ಸುವರ್ಣ ಮಹೋತ್ಸವ"ದ ಕಾರ್ಯಾರ್ಥವಾಗಿ ನಮ್ಮ ಕೆಲವು ಮಿತ್ರರೊಂದಿಗೆ ಕಳೆದವಾರ ಪ್ರವಾಸ ಕೈಗೊಂಡಾಗ ಈ ಕೆಳಗಿನ ಮಹನೀಯರು ಬೇರೆ ಬೇರೆ ರೀತಿಯಿಂದ ಸಹಕರಿಸಿ ಪ್ರೋತ್ಸಾಹಿಸಿದುದಕ್ಕಾಗಿ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನರ್ಪಿಸುತ್ತೇವೆ.

ಶ್ರೀ ಡಿ. ವೀರೇಂದ್ರ ಹೆಗ್ಡೆ, ಧರ್ಮಸ್ಥಳ; ಡಾ| ಬಿ. ಶೀನ ಶೆಟ್ಟಿ, ಬಳ್ಳಾರಿ; ಡಾ| ಬಿ. ರತ್ನಾಕರ ಹೆಗ್ಡೆ, ಹೊಸಪೇಟೆ; ಡಾ| ಎನ್. ವಿಠಲ ಪೂಂಜ, ಗಂಗಾವತಿ; ಡಾ| ಬಿ. ಆರ್. ಹೆಗ್ಡೆ, ಕಂಪ್ಲಿ; ಶ್ರೀ ಬಿ. ಮಾಧವಾಚಾರ್, ಭದ್ರಾವತಿ.

ಸಂಪಾದಕ
ನವಯುಗ, ಉಡುಪಿ

ಪಂಡಿತ ಬಿ. ಲಕ್ಷ್ಮಣ ದೇವ ವಿದ್ಯಾರ್ಥಿ ಅವರು ಬರೆದ,

ನೆಹರೂ ನೀತಿಯ ಪುನರಾವರ್ತನೆ

ಇಂದಿರಮ್ಮನವರ ದುಡುಕುತನವನ್ನು ಸಂಕ್ಷಿಪ್ತವಾಗಿ ವಿವರಿಸುವ, ಚುನಾವಣೆ ಕಾಲದಲ್ಲಿ ಅಗತ್ಯವಾಗಿ ಓದತಕ್ಕ ಚಿಕ್ಕ ಪುಸ್ತಕ. ಬೆಲೆ—60 ಪೈಸೆ. ಸಿಗುವ ಸ್ಥಳ:— ಸದ್ಧರ್ಮಪ್ರಚಾರಕ ಗ್ರಂಥ ಮಾಲೆ, ಶ್ರದ್ಧಾನಂದ ನಗರ, ಮಂಗಳೂರು—4

ಮೂರ್ಖರ ಶಬ್ದ (ಸಪ್ಪಳ)ವು ದೂರದವರೆಗೆ ಕೇಳಿಸುತ್ತದೆ. ಅದರ ಹೊರತಾಗಿ ವದನ್ನಾರೂ ಕೇಳುವುದಿಲ್ಲ.

ಒಂದೇ ಸಮಯದಲ್ಲಿ ನನಗೆ ಎರಡು ಕೆಲಸಗಳನ್ನು ಮಾಡಲಿಕ್ಕೆ ಆಗುವುದಿಲ್ಲ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 184/1970.

ಮೂಲ್ಕಿ ಶ್ರೀ ವೆಂಕಟ್ರಮಣ ದೇವರ ಭಂಡಾರ —ವಾದಿ
ಬೋಳಗ ಶೆಟ್ಟಿ ಸಹಾ —ಪ್ರತಿವಾದಿ
8. ಮಹಾಬಲ ಶೆಟ್ಟಿ, ಭಾಮು ಶೆಟ್ಟರ ಮಗ, ಉಡುಪಿ ತಾಲ್ಲೂಕು ಸಾಂತೂರು ಗ್ರಾಮದಲ್ಲಿರುವವ—

ವಾದಿರ ದೇವರ ಭಂಡಾರದ ವಳಗೆ ನೀವು ವರ್ಗ್ಗದ ಚಾಲಗೇಣಿ ಹಕ್ಕಿನಿಂದ ಅನುಭವಿಸಿ ಬರುವ ಆಸ್ತಿ ಬಾಬು ತಾ. 31-3-1968 ಮತ್ತು 31-3-69ನೇ ವ್ಯಾದೆಗಳಿಗೆ ಬರತಕ್ಕ ಚಾಲಗೇಣಿ ಗೇಣಿ ಬಾಕಿ ಕಾಣಿ ರೂಪಾಯಿ 967-31ಕ್ಕೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ತಾ. 4-3-1971ಕ್ಕೆ ನಿಮ್ಮ ಹಾಜರು ಬಗ್ಗೆ ಇಟ್ಟಿದೆ. ಆ ಕುರಿತು ಆಕ್ಷೇಪ ಇದ್ದರೆ ಸದ್ರಿ ದಿನ ಬೆಳಿಗ್ಗೆ ಮೇಲ್ಕಂಡ ಕೋರ್ಟ್ ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ದರೆ ನಿಮ್ಮ ಗೈರು ಹಾಜರಿಯಲ್ಲಿ ದಾವಾ ತೀರ್ಮಾನವಾಗುವುದು ಎಂತ ಕೋರ್ಟ್ ಹುಕುಂ ಪ್ರಕಾರ ತಿಳಿಸಿಯದೆ.

K. V. Kamath
Advocate for Plaintiff

Karkala, 20-2-71.

ನಮ್ಮ ಸಂಪತ್ತು — ನಮ್ಮ ದಾರಿದ್ರ್ಯ

(ಎಂಟನೇ ಪುಟದಿಂದ)

ಒಬ್ಬರು ಇನ್ನೊಬ್ಬರ ಮೇಲೆ ಆಧಿಪತ್ಯ–ಸಾರ್ವಭೌಮತ್ವವನ್ನು ಇನ್ನು ಮುಂದೆ ಹೊಂದಿರುವುದು ಬದಲಾದ ಸ್ಥಿತಿಗತಿಗಳ ಕಾರಣದಿಂದ ಕಠಿಣವಾಗಿ ಪರಿಣಮಿಸಿತು.

ಜಾಗ್ರತ ಭಾರತ

ಭಾರತದಲ್ಲಿ ಉಂಟಾದ ಜಾಗ್ರತಿ, ಆಳರಸರ ಕಣ್ಣಿನ ಪರೆಯನ್ನು ಕಳಚಿತು. ಅವರ ಅತ್ಯುಗ್ರ-ಕ್ರೂರ ವಿಧಾನಗಳಾವುವೂ ಸಾಮ್ರಾಜ್ಯವನ್ನು ಕಟ್ಟಿ ನಿಲ್ಲಿಸುವುದು ಸಾಧ್ಯವಿಲ್ಲವೆಂಬುದು ಅನುಭವಕ್ಕೆ ಬಂದಿತು. ಒಬ್ಬ ಮುನಿದರೆ ಮಣಿಸಬಹುದು. ಒಂದು ರಾಷ್ಟ್ರ ಎದ್ದು ನಿಂತರೆ ಎದುರಿಸುವ ಎದೆಗಾರಿಕೆ ಯಾರಿಗುಂಟು?

ದೇಶದಲ್ಲಿ, ಜನ ತ್ಯಾಗ ಬಲಿದಾನಗಳನ್ನು ಮಾಡಿದರು. ಅಹಿಂಸಾಮಯ ಸತ್ಯಾಗ್ರಹದ ಅಗ್ರಪೌರೋಹಿತ್ಯ ವಹಿಸಿ, ದೇಶದ ಯುವಕರನ್ನು ಪ್ರೇರೇಪಿಸಿ, ಮನೆಮಾರು ಹಾಗೂ ಜೀವನದ ಪರಿವೆಯಿಲ್ಲದೆ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿಸುವ ಪವಾಡವೆಸಗಿದರು ಮಹಾತ್ಮರು ರಾಷ್ಟ್ರದ ಅದ್ಭುತ ಅದಮ್ಯ ಶಕ್ತಿಯ ಅರಿವು ಆಳರಸರಿಗೆ ಆಯಿತು. ಸಾತ್ವಿಕ ಶಕ್ತಿಯ ಉಜ್ವಲ ತೇಜದೆದುರು ಆಸುರೀ ಶಕ್ತಿಯು ಪ್ರಕಾಶ ಸೂರ್ಯನೆದುರು ದೀಪದಂತಾಯಿತು.

ದೇಶ ಸ್ವತಂತ್ರವಾಯಿತು. ಜತೆಗೆ ವಿಭಜನೆ ಆಯಿತು. ಸಾಮೂಹಿಕ ಕೊಲೆ-ಸೇಡುಗಳು ತಾಂಡವ ನೃತ್ಯ ನಡೆಯಿಸಿದವು. ಆತ್ಮ ವಿಶ್ವಾಸ ಪರಸ್ಪರ ಸೌಹಾರ್ದ ಇಲ್ಲದೆ ನಿಸತೊಡಗಿದವು. ಮನೆ ಬಿಡಿಸಿದರೆಂಬ ಸಿಟ್ಟಿನಿಂದ ಮನೆಯ ಕಿಡಿಕಿ ಬಾಗಿಲಗಳನ್ನೂ ಮುರಿದು ಹಾಳುಗೆಡವಿ ಹೋದಂತಿತ್ತು ದೇಶದ ಸ್ಥಿತಿ. ರಾಜಕೀಯವಾಗಿ ತುಸು ಅಸ್ತವ್ಯಸ್ತಗೊಂಡಿತು.

ಧುರೀಣರು ದೇಶದಲ್ಲಿ ಶಾಂತಿ ಸುವ್ಯವಸ್ಥೆಗಾಗಿ ಹಗಲಿರುಳು ದುಡಿದರೂ ಅನೇಕ ದಿನಗಳವರೆಗೆ ಆಳರಸರ ಅತಿಥಿಗಳಾಗಿ ಸೆರೆಮನೆಯಲ್ಲಿಯೇ ಅನೇಕ ವರುಷಗಳನ್ನು ಕಳೆದ ಅವರಿಗೆ ಈ ಆಡಳಿತಾತ್ಮಕ ತೊಡಕು ತುಸು ಗಾಬರಿಗೊಳಿಸಿತು. ಆದರೂ, ಧೈರ್ಯ ಸ್ಥೈರ್ಯ ಹಾಗು ಮುತ್ಸದ್ಧಿತನಗಳ ಪರಿಣಾಮವಾಗಿ ಪರಿಸ್ಥಿತಿ ಹಿಡಿತದಲ್ಲಿ ಬಂದೀತು.

ಸ್ವಾತಂತ್ರ್ಯ ದೊರಕಿತು

ಸ್ವಾತಂತ್ರ್ಯ ಬಂದೀತು. ಬಹುದಿನದ ನಾಡಿನ ಬಯಕೆ ಈಡೇರಿತು. ಬಹಳ ಜನರ ಬಲಿದಾನ ತೆಗೆದುಕೊಂಡಿತು. ಕಷ್ಟಕಾರ್ಪಣ್ಯಗಳನ್ನು ಎದುರಿಸಬೇಕಾಯಿತು. ದೇಶ ಸೇವೆಯ ಪ್ರೇರಣೆಯಿಂದ ಹೋರಾಟದಲ್ಲಿ ಧುಮುಕಿದವರಿಗೆ ಗುರಿ ಒಂದೇ ಕಣ್ಣೆದುರು ಇತ್ತು. ಬ್ರಿಟಿಷರು ತೊಲಗಬೇಕು ದಾಸ್ಯ ಶ್ರುಂಖಲೆ ಕಳಚಬೇಕು ವಿತ್ತ ಪ್ರಾಣಗಳ ನಾಶವಾದರೂ ಲೆಕ್ಕಿಸಲಿಲ್ಲ.

ಈಗ ಮುಂದೇನು? ಒಡೆದಾಗಲಿ ಮುಂದಾಗಲೀ ಭಾರತದ ಜನ ಸ್ವತಂತ್ರರಾದರು ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಮಾಲಿಕೆಯಲ್ಲಿ ಸೇರಿದರು. ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವ ಪಡೆದರು. ಭಾರತೀಯರು ನಾವು ಎಂದು ತಲೆಎತ್ತಿಕೊಂಡು ನಡೆಯುವ ಸುವರ್ಣ ಅವಕಾಶ ಈಗ ನಮ್ಮದಾಯಿತು.

ಆದರೆ ಮುಂದೇನು? ಜಗತ್ತಿನ ಇತರ ರಾಷ್ಟ್ರಗಳ ಎದುರು ಎದೆಸೆಟೆಸಿ ನಡೆದರೆ ಸಾಕೆ? ನಮ್ಮ ಸ್ವಾತಂತ್ರ್ಯದ ಗುರಿ ಇಷ್ಟೇನೇ? ನಾವು ಸ್ವಾತಂತ್ರ್ಯ ಪಡೆಯಲು ಮಾಡಿದ ತ್ಯಾಗದ ಬೆಲೆ ಇಷ್ಟೇನೆ? ಎಂದಿಗೂ ಅಲ್ಲ.

ಪ್ರಕೃತಿಯ ಅಪಾರ ಕರುಣೆಗೆ ಪಾತ್ರವಾದ ನಮ್ಮ ದೇಶದ ಪ್ರಾಕೃತಿಕ ಸಂಪತ್ತನ್ನು ಯೋಗ್ಯವಾದ ಯೋಜನೆಗಳ ಕಾರ್ಯಕ್ರಮದಂತೆ, ಜನತೆಯ ಆರ್ಥಿಕ ಹಾಗು ಔದ್ಯೋಗಿಕ ಅಭಿವೃದ್ಧಿಗಾಗಿ ಬಳಸಿಕೊಳ್ಳಲು ಯೋಚಿಸಬೇಕಾದುದು ಆದ್ಯ ಕರ್ತವ್ಯ. ಉದ್ಯಮ– ವ್ಯವಸಾಯಗಳ ಅಭಿವೃದ್ಧಿಯಾಗದೆ, ದಿನದಿನಕ್ಕೂ ಬೆಳೆಯುತ್ತಿರುವ ಜನಕ್ಕೆ ಅನ್ನ–ಬಟ್ಟೆ ವಸತಿಗಳನ್ನು ಹಾಗು ಕೈತುಂಬ ಕೆಲಸವನ್ನು ಒದಗಿಸುವುದು ಅಸಾಧ್ಯ.

ನಮ್ಮ ಸಂಪತ್ತು ವಿಪುಲವಾಗಿದೆ ಎಂದಿಷ್ಟೇ ಹೇಳಿದರೆ ಸಾಲುವದಿಲ್ಲ. ಅದರ ಆಳವೆಷ್ಟು ಗಾತ್ರವೆಷ್ಟು ಎಂಬುದೂ ಗೊತ್ತಾಗಬೇಕು. ಆಗ ನಮ್ಮ ಬಳಿಯಿರುವ ಬಟ್ಟೆ ಹಾಗು ನಮ್ಮ ಮೈ ಅಳತೆಗೆ ತಕ್ಕ ಪೋಷಾಕು ಸಿದ್ಧಗೊಳಿಸಬರುವುದು.

ಘನನಿರ್ಮಾಣ

ಇದಕ್ಕಾಗಿ ಯೋಜನಾ ಆಯೋಗ ರಚಿತವಾಯಿತು. ಯಾವುದಕ್ಕೆ ಮೊದಲು ಪ್ರಾಶಸ್ತ್ಯ ಎನ್ನುವದನ್ನೂ ನಿರ್ಧರಿಸಲು ಆಯೋಗಕ್ಕೆ ಬಿಟ್ಟುಕೊಡಲಾಯಿತು. ದೇಶದ ಸಂಪನ್ಮೂಲಗಳ ಆಧಾರದ ಮೇಲೆ ಹಲವಾರು ಯೋಜನೆಗಳನ್ನು ರೂಪಿಸಲಾಯಿತು.

ಹಸಿದ ಹೊಟ್ಟೆಗೆ ಮೊದಲು ಹಿಟ್ಟು ಅಗತ್ಯ. ಆ ಮೇಲೆ ಉಳಿದೆಲ್ಲ ವಿಷಯಗಳು. ಮೊದಲು ಬದುಕಲು ಅನ್ನ. ಆದಿ ಪೋಟೋಬಾ-ನಂತರ ವಿಠೋಬಾ ನಿಜ. ಆದುದರಿಂದ ಒಕ್ಕಲುತನಕ್ಕೆ ಅವರಲ್ಲೂ ಆಹಾರ ಧಾನ್ಯ ಉತ್ಪಾದನೆಗೆ ಆದ್ಯತೆ ಸಹಜ.

ಆದರೆ ನಮ್ಮ ಹಳ್ಳಿಯ ಜನ ನೂರಕ್ಕೆ ನೂರು ಅನಕ್ಷರಸ್ಥರು ಅನುಭವಿಕರು ನಿಜ. ಆದರೆ ಆಧುನಿಕ ವೈಜ್ಞಾನಿಕ ಯುಗದಲ್ಲಿ ಕೇವಲ ಅನುಭವ ಒಂದೇ ಸಾಲದು ಜೊತೆಗೆ ತಾಂತ್ರಿಕ-ಯಾಂತ್ರಿಕ ತಿಳುವಳಿಕೆಯೂ ಅಗತ್ಯ. ಆದುದರಿಂದ ಈ ತಿಳುವಳಿಕೆಯ ಸಾಮರ್ಥ್ಯವನ್ನು ಉಂಟುಮಾಡಬೇಕಾದರೆ ಹಳ್ಳಿಗನ ಗುಡಿಸಲಿನ ಬಾಗಿಲದವರೆಗೆ ಹೋಗಿ ಹೇಳಬೇಕು. ಆದರೆ ಆ ಗುಡಿಸಲನ್ನು ಮುಟ್ಟುವುದು ಅಷ್ಟು ಸುಲಭವೇನಲ್ಲ. ಊರಿಗೆ ಮುಟ್ಟಲು ದಾರಿಯಿಲ್ಲ. ನೀರಿಗೆ ಬಾವಿಯಿಲ್ಲ. ರೋಗ ರುಜಿನಗಳಲ್ಲಿ ದೇವರೇ ಬಂದು ಕಾಪಾಡಬೇಕು. ಮೂಢ—ಮುಗ್ಧ ಪರಂಪರೆಗೆ ಕಟ್ಟುಬಿದ್ದ ಮನೋವೃತ್ತಿಯ ಜನರನ್ನು ಅಷ್ಟು ಸುಲಭವಾಗಿ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಮಾಡುವುದು ಕಷ್ಟಸಾಧ್ಯ.

ಆದುದರಿಂದ ವಿಸ್ತರಣಾ ಮಾದರಿಯ ಆಡಳಿತವನ್ನು ಜಾರಿಗೆ ತರಲು ಯೋಜಿಸಲಾಯಿತು "ಗಾಂಧೀಜಿಕಿ ಜೈ" 'ಜವಾಹರಲಾಲಕಿ ಜೈ' "ಜಯಹಿಂದ್" ಎಂದು ಘೋಷಿಸಿದ್ದರು ಹಳ್ಳಿಯ ಜನ ಸ್ವಾತಂತ್ರ್ಯ ಹೋರಾಟದಲ್ಲಿ ಆದರೆ ಈಗ ಅದೆಲ್ಲ ಈ ರೀತಿ ತಮಗೆ ಹೊಸ ಸಮಸ್ಯೆಗಳನ್ನು ತಂದು ಒಡ್ಡುವದೆಂದು ಅರಿತಿರಲಿಲ್ಲ.

ಬ್ರಿಟಿಷರು ಗಂಟು ಮೂಟೆ ಕಟ್ಟಿಕೊಂಡು ಹೋದರು. ನಮಗಾಗಿ ಏನನ್ನೂ ಬಿಡಲಿಲ್ಲ. ಅದೇಕೆ ಬಿಟ್ಟರಲ್ಲ ಯಥೇಚ್ಛ ಹಂಚಿಕೊಳ್ಳ ಬಹುದಾದಷ್ಟು ಬಡತನವನ್ನು, ರೋಗ ರುಜಿನಗಳನ್ನು, ಅನಕ್ಷರಸ್ಥಾ ಅಜ್ಞಾನಿಗಳನ್ನು, ಜಾತೀಯ ಮಾತ್ಸರ್ಯವನ್ನು, ಚಿಕ್ಕ ಪುಟ್ಟ ದೇಶೀಯ ರಾಜರನ್ನು, ಒಡಕನ್ನೂ ತೊಡಕನ್ನೂ ಇನ್ನೂ ಅನೇಕರನ್ನೂ ಎಡೆಗುಂದಲಿಲ್ಲ. ಹಿರಿಯರು ಕಾರ್ಯ ನಿರತರಾದರು.

ಆದರೆ ನಮ್ಮ ದೇಶದ ಪರಿಸ್ಥಿತಿಯ ಪರಿಣಾಮವಾಗಿ ದೊರಕಬೇಕಾದ ಅಂಕಿ ಸಂಖ್ಯೆಗಳು ಸರಿಯಾಗಿ ವ್ಯವಸ್ಥಿತವಾಗಿ ದೊರೆಯಲಿಲ್ಲ. ಸಿಕ್ಕಷ್ಟು ಆಧಾರದ ಮೇಲೆ ಯೋಜನೆಗಳನ್ನು ರೂಪಿಸಲಾಯಿತು. ದೀರ್ಘಕಾಲದ ಯೋಜನೆಗಳು— ತೀವ್ರ ಫಲಕಾರಿ ಯೋಜನೆಗಳು ರೂಪಗೊಂಡವು.

ಭಾರೀಯೋಜನೆಗಳು

ದೊಡ್ಡ ನದಿಗಳಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಿ, ವ್ಯವಸಾಯಕ್ಕೆ ನೀರು, ಉ

ನವಯುಗ – ಚಿನ್ನದ ಹಬ್ಬದ ಸಂಚಿಕೆ

ಸ್ಥಾಪನೆ : 1921 **ಚಿನ್ನದ ಹಬ್ಬ : 1971**

ಮೈಸೂರು ರಾಜ್ಯದ ಪ್ರಸಿದ್ಧ ಸಾಪ್ತಾಹಿಕ **'ನವಯುಗ'** ಈ ಐವತ್ತು ವರ್ಷಗಳ ಕಾಲ ರಾಜ್ಯದ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಿ ರೂಢಿಸುವುದರಲ್ಲಿ ಸದ್ದುಗದ್ದಲವಿಲ್ಲದೆ ಕಾರ್ಯತತ್ಪರವಾಗಿದೆ. ದಿ| ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ ಈ ದೀರ್ಘಕಾಲದಲ್ಲಿ ಶ್ರೀ ಕೆ. ಕೆ. ಶೆಟ್ಟಿ, ಎಂ. ವಿ. ಹೆಗ್ಡೆ ಮುಂತಾದವರ ಸಹಯೋಗದಿಂದ ನಾಡಿನ ವಾರಪತ್ರಿಕೆಗಳಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿ ಉಳಿಸಿಕೊಂಡು ಬಂದಿರುತ್ತದೆ. ಕಾಲಕಾಲಕ್ಕೆ ನಾವು ಹೊರಡಿಸಿದ ವಿಶೇಷ ಸಂಚಿಕೆಗಳು ರಾಜ್ಯದ ಅಭಿವೃದ್ಧಿಮುಖವಾದ ಆರ್ಥಿಕ, ಸಾಮಾಜಿಕ ಸನ್ನಿವೇಶಗಳನ್ನು ಚಿತ್ರಿಸಿ ಸರಕಾರಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಮನ್ನಣೆ ಪಡೆಯುವಂತಾಗಿದೆ. 'ನವಯುಗ'ದ ಲೇಖಕರ ಬಳಗವೂ ಕರ್ನಾಟಕದ ಬಡಗಣಿಂದ ತೆಂಕಣದ ವರೆಗೆ ಹರಡಿ ವಿಶೇಷ ಸಂಚಿಕೆಗಳಲ್ಲಿ ರಾಜ್ಯದ ಪ್ರತಿಭೆ ಪ್ರಕಟವಾದ್ದನ್ನು ಎಲ್ಲರೂ ಗಮನಿಸಿದ್ದಾರೆ.

1971—ನವಯುಗದ ಚಿನ್ನದ ಹಬ್ಬದ ವರ್ಷ. ಅಂದು ಮೇಯಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ನವಯುಗ ಒಂದು ವಿನೂತನ ವಿಶಿಷ್ಟ ರೀತಿಯ ತನ್ನದೇ ಪರಂಪರೆಯ ¼ ಕ್ರೌನ್ ಆಕಾರದ ಸುಮಾರು **200** ಪುಟಗಳ **ಚಿನ್ನದ ಹಬ್ಬದ ಸಂಚಿಕೆ**ಯನ್ನು ಪ್ರಕಟಿಸುವ ಉದ್ದೇಶ ಇರಿಸಿಕೊಂಡಿದೆ. ನಾಡಿನ ಪ್ರಖ್ಯಾತ ಧುರೀಣರನ್ನೂ, ಲೇಖಕರನ್ನೂ ಈಗಾಗಲೇ ಲೇಖನ ಕಾರ್ಯಕ್ಕಾಗಿ ನಿಯೋಜಿಸಲಾಗಿದೆ. ರಾಜ್ಯದ ಬುದ್ಧಿ ಮತ್ತು ಆರ್ಥಿಕ ಸಂಪತ್ತಿನ ಉದ್ಭವ ಕೇಂದ್ರಗಳ ಚಿತ್ರಮಯ ಕಥೆಯನ್ನು ಬಿತ್ತರಿಸುವಂತೆ ಕೆಲವರನ್ನು ಕೇಳಿಕೊಳ್ಳಲಾಗಿದೆ. ತುಂಗಭದ್ರಾ ಕಣಿವೆ, ಪಣಂಬೂರು, ಕುದುರೆಮುಖ, ಮಣಿಪಾಲ, ಭದ್ರಾವತಿ, ಶರಾವತಿ— ಮುಂತಾದ ಅಭಿವೃದ್ಧಿ ಬಿಂದುಗಳ ವಿಸ್ತೃತ ವರ್ಣನೆ ವಿಶೇಷ ಸಂಚಿಕೆಯನ್ನು ಅಲಂಕರಿಸುತ್ತದೆ.

ಚಿನ್ನದ ಹಬ್ಬದ ಸಂಚಿಕೆಯ ಕೆಲವು ಪುಟ ಜಾಹೀರಾತುಗಳಿಗಾಗಿ ಮೀಸಲಾಗಿಸಿದೆ. ನಾಡಿನ ಜನಮನವನ್ನು ಮುಟ್ಟುವ ಈ ಸಂಚಿಕೆಯಲ್ಲಿ ತಮ್ಮ ಸಂಸ್ಥೆಯ ಹೆಸರು—ಕೆಲಸ ಕಾಣಿಸಿಕೊಳ್ಳುವಂತಾಗಲಿ, ನಿಮ್ಮ ಶಕ್ಯವಿದ್ದಷ್ಟು ಜಾಹೀರಾತು ಪುಟಗಳನ್ನು ಕಾಯ್ದಿರಿಸುವಂತಾಗಲಿ ಎಂದು ಪ್ರಾರ್ಥಿಸುತ್ತೇವೆ.

ಜಾಹೀರಾತನ್ನು ಆದಷ್ಟು ತ್ವರಿತವಾಗಿ ಎಪ್ರಿಲ್ ತಿಂಗಳ ೧೫ನೇ ತಾರೀಕಿನ ಒಳಗೆ ನಮಗೆ ತಲಪುವಂತೆ ಕಳುಹಿಸಿ ಉಪಕರಿಸಬೇಕು.

ಕನ್ನಡದ ಪ್ರಖ್ಯಾತ ಕವಿಗಳಾದ ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ ಅವರು ನಮ್ಮ ಕೋರಿಕೆಯಂತೆ ಅತಿಥಿ ಸಂಪಾದಕರಾಗಿರಲು ಒಪ್ಪಿಕೊಂಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇನೆ.

ತಮ್ಮ ಸೇವಾಭಿಲಾಷಿ,

ಕೆ. ಹೊನ್ನಯ್ಯ ಶೆಟ್ಟಿ
ಮೆನೇಜಿಂಗ್ ಎಡಿಟರ್.

ನವಯುಗ ಆಫೀಸು,
ಉಡುಪಿ.

NAVAYUGA 25-2-1971

Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ದ್ಯಮಕ್ಕೆ ವಿದ್ಯುತ್ತು ಒದಗಿಸುವ ಕಾರ್ಯ ಕೈಗೊಳ್ಳಲಾಯಿತು. ಅದರಂತೆಯೇ ಗ್ರಾಮೀಣ ಭಾಗದ ಅಭಿವೃದ್ಧಿಗಾಗಿ ರಾಷ್ಟ್ರೀಯ ವಿಸ್ತರಣಾ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಯಿತು.

ಬಹಳ ಕಾಲದ ಮೇಲೆ ಬಾಗಿಲಿಗೆ ಬಂದ ಈ ನೂತನ ಬದಲಾವಣೆ—ಅಧಿಕಾರಿಗಳೇ ಜನತೆಯ ಕಡೆಗೆ ಹೋಗಿ ಅವರ ಬೇಕು ಬೇಡಗಳನ್ನು ವಿಚಾರಿಸುವುದು, ನಿಜವಾಗಿಯೂ ನೂತನ ಚೈತನ್ಯಕ್ಕೆ ಕಾರಣವಾಯಿತು. ಹುರುಪು-ಹುಮ್ಮಸ್ಸುಗಳಿಂದ ಜನ ಪಾಲುಗೊಂಡಿತು. ರಸ್ತೆ, ಶಾಲೆ, ಸಭಾಮಂದಿರ, ಬಾವಿ, ಪಾಯಿಕೇಂದ್ರ, ಸಹಕಾರಿ ಪತ್ತಿನ ಸಂಘ, ಗ್ರಾಮ ಪಂಚಾಯತಿ ಇನ್ನೂ ಅನೇಕ ಸುಧಾರಣೆಯ ಕಾರ್ಯಗಳು ಭರದಿಂದ ನಡೆದವು. ಇನ್ನೇನು ಇನ್ನು ಕೆಲವಾರು ವರುಷಗಳಲ್ಲಿ ಗ್ರಾಮೀಣ ಭಾರತದ ಚಿತ್ರವೇ ಬದಲಿಸುವುದು ನಿಶ್ಚಯ.

ಚಿತ್ರ ಬದಲಾಯಿತು. ಮೊದಲು ಹಳ್ಳಿಗೊಂದು ಪ್ರಾಥಮಿಕ ಶಾಲೆ ಇರಲಿಲ್ಲ. ಈಗ ತಾಲೂಕಿಗೊಂದು ಕಾಲೇಜು ಇದೆ. ಒಂದಕ್ಕೆ ನಾಲ್ಕು ವಿಶ್ವವಿದ್ಯಾಲಯಗಳಾಗಿವೆ. ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಅಲ್ಲಲ್ಲಿ ಇವೆ.

ಶಿಕ್ಷಣದ ಕಾರ್ಯ ವಿಸ್ತಾರಗೊಂಡಿತು. ವ್ಯವಸಾಯ ಅಭಿವೃದ್ಧಿಗೊಂಡಿತು. ಹಳ್ಳಿ–ಪೇಟೆಗಳ ಸಂಬಂಧ ನಿಕಟವಾಯಿಯಿತು. ಸಾಂಕ್ರಾಮಿಕ ರೋಗಗಳು ನಿರ್ನಾಮವಾದವು. ಇಂದು ಸಾಯುವವರು ನಾಳೆ ಸಾಯುವದೂ ನಿಶ್ಚಿತವಿಲ್ಲ. ಆಯುಷ್ಯದ ಪ್ರಮಾಣ ಹೆಚ್ಚಿತು.

ಹುಟ್ಟಿದ ಮೂರು ದಿನಗಳಲ್ಲಿ ಮರಣವಾಗುತ್ತಿದ್ದ ಶಿಶುಗಳು, ಮರಣವನ್ನು ಗೆದ್ದವು. ತಾಯಿ ಕುತ್ತಿನಿಂದ ಪಾರಾದಳು. ಸಾವುನೋವು–ನಳಲಿಕೆಗಳು ಬಿಡಾರಕಿತ್ತವು. ನಮ್ಮ ದೇಶದ ಜನ ರೋಗಭಯದಿಂದ ಮುಕ್ತರಾಗಿ ಬದುಕಿ ಬೆಳೆಯತೊಡಗಿದರು. ಹಳ್ಳಿ-ಪಟ್ಟಣಗಳಲ್ಲಿ, ರಸ್ತೆ-ಬೀದಿಗಳೆಲ್ಲ ಇಂದು ಚಿಕ್ಕದಾಗಿವೆ. ಜನಜಂಗುಳಿ, ಎಲ್ಲೆಲ್ಲೂ ಜನ. ಒಬ್ಬರಲ್ಲ, ನೂರಲ್ಲ–ಸಾವಿರವಲ್ಲ– ಹತ್ತುಸಾವಿರವಲ್ಲ– ನೂರು ಸಾವಿರವಲ್ಲ—ಕೋಟ್ಯಾನುಕೋಟಿ ಜನ, ನಿಮಿಷಕ್ಕೊಂದು ಶಿಶು ಕಣ್ಣುಬಿಟ್ಟು ಈ ಜಗತ್ತನ್ನು ನೋಡಿ ಅಳುತ್ತದೆ. ಸುತ್ತಲಿನವರು ಕೈತಟ್ಟಿ ಖುಷಿಯಿಂದ ನಕ್ಕು ನಲಿಯುತ್ತಾರೆ.

ಆದರೆ ಈ ಶಿಶು ಅತ್ತದ್ದು ನಿರರ್ಥಕವೆ? ಅಲ್ಲ, ಅದು ತನ್ನ ಭವಿಷ್ಯವನ್ನು ನೆನೆದು ಗಾಬರಿಯಿಂದ ಅತ್ತಿತೆ? ಇರಬಹುದು. ಇದ್ದರೂ ಇರಬಹುದು.

ಎಷ್ಟೊಂದು ಬೃಹತ್ ಯೋಜನೆಗಳನ್ನು ಹಮ್ಮಿಕೊಂಡಿದ್ದರೂ ಅದೆಲ್ಲ ನಾಳೆಗೆ ಫಲಕೊಡುವಂತಹವು. ಆದರೆ ಇಂದು ಎದುರಿಸಬೇಕಾದ ಸಮಸ್ಯೆಗೆ ಪರಿಹಾರ ಅಗತ್ಯ, ಇಂದು ಬದುಕಿದ್ದರೆ ತಾನೆ ನಾಳೆಗೆ ಅರ್ಥ.

ಇತಿಮಿತಿಯಿಲ್ಲದೆ ಬೆಳೆಯುತ್ತಿರುವ ಜನಸಂಖ್ಯೆ, ವಿದ್ಯಾವಂತ ಹಾಗು ಅಲ್ಪ ಇಲ್ಲವೆ ಏನೂ ವಿದ್ಯೆ ದೊರೆಯದಿರುವವ, ಗ್ರಾಮಾಂತರ ಹಾಗು ನಗರ ಪ್ರದೇಶಗಳಲ್ಲಿಯ ಜೀವನ ರೀತಿ–ನೀತಿಗಳನ್ನು ಪಡೆದಿರುವವ ಹೀಗೆ ನಾನಾ ಬಗೆಯ ಯುವಕರು ಇಂದು ಉದ್ಯೋಗ ಅವಕಾಶಗಳಿಲ್ಲದೆ ತೊಳಲುತ್ತಿದ್ದಾರೆ. ನಾಳೆ ಬರುವ ಯೋಜನೆಗಳಿಗೆ ಬೇಕಾದಷ್ಟು ಜನಬಲ ಈಗಾಗಲೇ ಇದೆ.

ವಿವಿಧ ಸಮಸ್ಯೆಗಳು

ವ್ಯವಸಾಯದ ಕೂಲಿಕಾರರು, ಔದ್ಯಮಿಕ ಕೂಲಿಕಾರರು ಹಾಗಿ ಬಿಡಿ ಕೂಲಿಕಾರರು ಇತರರೂ ಒಂದು ದೊಡ್ಡ ಭಾಗವಿದೆ. ಬೆಲೆಗಳು ಏರುತ್ತ ಸಾಗಿವೆ. ರೂಪಾಯಿಯ ಕೊಳ್ಳುವ ಶಕ್ತಿ ಕುಗ್ಗುತ್ತ ನಡೆದಿದೆ. ವೇತನಗಳು ಹೆಚ್ಚುವವು ಬೆಲೆಗಳು ಹೆಚ್ಚುವವು. ಬೆಲೆಗಳು ಹೆಚ್ಚಿದಂತೆ ವೇತನದಲ್ಲಿ ಹೆಚ್ಚಳ. ವೇತನದಲ್ಲಿ ಹೆಚ್ಚಳವಾದಾಗ ಬೆಲೆಗಳು ಏರುತ್ತ ನಡೆಯುವವು. ಇದೊಂದು ಎಂದೂ ಮುಗಿಯದ ಸಮಸ್ಯೆ. ಇದರ ಪರಿಣಾಮ ಉದ್ಯಮ ವ್ಯವಸಾಯಗಳ ಮೇಲೆ ವಿಪರೀತವಾಗುತ್ತಿದೆ. ಆಡಳಿತ ಯಂತ್ರಣದ ವೆಚ್ಚ ಕೈಮೀರುತ್ತದೆ. ರಕ್ಷಣೆಯ ಭಾರವೂ ಹೆಚ್ಚುತ್ತಿದೆ.

ಶಿಕ್ಷಣ ಪಡೆಯುವ ವಿದ್ಯಾರ್ಥಿಗೆ ಮುಂದಿನ ಭವಿಷ್ಯದ ಕುರಿತು ಅನಿಶ್ಚಿತತೆ ಒಂದು ದೊಡ್ಡ ಆತಂಕವಾಗಿದೆ. ಮುಂದೇನು? ನಿರುದ್ಯೋಗ. ಹೊಟ್ಟೆ ಬಟ್ಟೆಗಳ ಗತಿ! ದೈವವೇ ಗತಿ.

ಈ ನೈರಾಶ್ಯ ಭಾವನೆಯು ಅವನಲ್ಲಿ ವಿಪರೀತ ವಿಚಾರಗಳಿಗೆ ಎಡೆಮಾಡಿಕೊಟ್ಟಿದೆ. ಅಲ್ಲದೆ ಪ್ರತಿದಿನ ತನ್ನವರಿಗೆ, ಅಣ್ಣನಿಗೆ, ತಂದೆಗೆ, ಅಕ್ಕನಿಗೆ ಆಗುವ ಸಾಮಾಜಿಕ ಅನ್ಯಾಯಗಳು ಅವನ ತಲೆ ತಿರಿಗಿಸುತ್ತದೆ. ಒಳ್ಳೇ ಪ್ರತಿಭಾವಂತನಾದ ಅಣ್ಣನಿಗೆ ಎಲ್ಲೂ ಅವಕಾಶವಿಲ್ಲ. ಕಾರಣವಿಷ್ಟೆ, ಅವಕಾಶ ದೊರಯಬೇಕಾದರೆ, ಕೈಯಲ್ಲಿ ಹಣಬೇಕು. ದೊಡ್ಡವರೆಂಬುವವರ ಪರಿಚಯಬೇಕು ಇಲ್ಲವೆ ಜಾತಿಯ ವಿಚಾರದಲ್ಲಿ ಬೇಕಾದವನಾಗಿರಬೇಕು. ಹೀಗೆ ಹಾಡುಹಗಲಿನಲ್ಲಿಯೇ ಅಣ್ಣನ ತೇಜೋವಧೆಯೂಗುತ್ತಿದೆ. ತಂದೆಗಂತೂ ಜಾತಿಯ ಇಲ್ಲವೇ ಇನ್ನಾವುದೇ ಇಂಥದೇ ಕಾರಣದಿಂದ ಬದುಕಿನಲ್ಲಿ ಮುಂದುವರಿಯಲಾಗಲಿಲ್ಲ. ಇದನ್ನೆಲ್ಲ ಕಂಡ ಕಿರಿಯ ವಿದ್ಯಾರ್ಥಿಗೆ ಒಂದು ಬಗೆಯ ರೋಷ ಸಹಜವಾಗಿ ಉಂಟಾಗುತ್ತದೆ.

ಇಂದಿನ ಸಮಾಜ, ಅದರಲ್ಲಿ ನೆಲೆಗೊಂಡ ಅಹಿತ ಹಾಗು ದುಷ್ಟವಾಸನೆಗಳು. ಭ್ರಷ್ಟಾಚಾರದ ಅನಿರ್ಬಂಧ ಸ್ವೈರಾಚಾರ, ಇವುಗಳನ್ನೆಲ್ಲ ಕೊಡಲಿಯ ಕಾವಿನಿಂದ ಸದೆಬಡಿಯಬೇಕು. ಇಲ್ಲವೆ ಕೊಡಲಿಯಿಂದ ಕಡಿದೊಗೆಯಬೇಕು.

ಈ ಉಗ್ರ ಪ್ರವೃತ್ತಿ ದೇಶದಲ್ಲಿ ವಿಧ್ವಂಸಕ ಹಾಗೂ ದ್ವೇಷ ಪೂರ್ಣವಾದ ಹಿಂಸಾತ್ಮ ಕೃತಿಗಳಿಗೆ ಪ್ರೇರಕವಾಗಿದೆ. ಜಾತೀಯ ಭಾವನೆ, ಬರಿ ಹಿಂದು ಮುಸಲ್ಮಾನ ಎಂದಲ್ಲ. ಹಿಂದುಗಳಲ್ಲಿಯೇ ಜಾತಿ, ಪಂಗಡಗಳ ಗತ್ತುಗಾರಿಕೆ—ಗುಂಪುಗಾರಿಕೆ ಎಲ್ಲೆಡೆಗೆ ತುಂಬಿ ತುಳುಕುತ್ತಿದೆ.

ಯಶಸ್ಸಿಗೆ ದಾರಿ

ಈ ಒಳಗುದಿ, ಅಸಂತೋಷ, ಹಾಗೂ ಅನಿಶ್ಚಿತ ಭವಿಷ್ಯ ಇವುಗಳಿಂದ ನಮ್ಮ ವಿಧಾಯಕ ಶಕ್ತಿ ಹ್ರಾಸವಾಗುತ್ತಿದೆ.

ಕಷ್ಟ ಪಟ್ಟು ಪಡೆದಿರುವ ಸ್ವಾತಂತ್ರ್ಯದ ಬಲವರ್ಧನೆ ಹೇಗೆ ಸಾಧಿಸೀತೆಂಬುದು ಇಂದು ಎಲ್ಲರ ಚಿಂತೆಯಾಗಿದೆ.

ಶಿಕ್ಷಣಕ್ಕೆ ಸಾರ್ಥಕ ಸ್ವರೂಪ, ಉದ್ಯೋಗ ಅವಕಾಶಗಳಲ್ಲಿ ಹೆಚ್ಚಳ, ಜಾತಿ-ಮತ ಪಂಥಗಳನ್ನು ದ್ವೇಷಕ್ಕಾಗಿ-ಸ್ವಾರ್ಥಕ್ಕಾಗಿ ಬಳಸುವದಕ್ಕೆ ಕಠಿಣ ಶಿಕ್ಷೆ ಮುಂತಾದ ತೀವ್ರಕಾರ್ಯಕ್ರಮ ಇಂದಿನ ಅಗತ್ಯವಾಗಿದೆ.

ಹೀಗಾಗದಿದ್ದಲ್ಲಿ, ಅಪಾರ ಮೂಲ ಸಂಪತ್ತು ಹೊಂದಿರುವ ನಮ್ಮ ದೇಶ, ದಾರಿದ್ರ್ಯದ ತಿರುಗಣಿಯ ಮಡುವಿನಲ್ಲಿ ಮುಳುಗುವ ಭಯವಿದೆ.

ಧೀಮಂತ-ಶ್ರೀಮಂತ ದೇಶದ ದೀನದರಿದ್ರ್ಯ ಜನರು ನಾವು ಎಂಬುದನ್ನು ಸಹಿಸಬಹುದೆ?

(ಶ್ರಮರಾಜ್ಯ ಸಂಚಿಕೆಗೆ ಬಂದುದು)

Gram : VISHWA Tel : 29111

When at Bangalore
Stay at

HOTEL NATARAJA

Restaurant Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಮದ್ರಾಸ್ ಮಧ್ವಸಂಘದ ಮಧ್ವ ನವಮಿ ಉತ್ಸವ

ಮದ್ರಾಸ್ ಪರಶುವಾಕದಲ್ಲಿರುವ ದಿ. ಶ್ರೀ ಕುತ್ತೆತ್ತೂರು ಸೀತಾರಾಮರಾಯರ ಸ್ವಗೃಹವಾದ ದಾಸಪ್ರಸಾದದಲ್ಲಿ ಮದ್ರಾಸ್ ಮಧ್ವ ಸಂಘದ ಪರವಾಗಿ ಮಧ್ವ ನವಮೀ ಉತ್ಸವವು ಫೆಬ್ರವರಿ 4, 5 ದಿನಗಳಲ್ಲಿ ವಿಜೃಂಭಣೆಯಿಂದ ನಡೆಯಿತು. ಎರಡು ದಿನಗಳಲ್ಲಿಯೂ ಸಚ್ಛಾಸ್ತ್ರಪಾರಾಯಣ ಬ್ರಾಹ್ಮಣ ಸುವಾಸಿನೀ ಸಂತರ್ಪಣೆ ಭಜನ ಉಪನ್ಯಾಸ ಮುಂತಾದ ಕಾರ್ಯಕ್ರಮಗಳು ವಿಶೇಷ ರೀತಿಯಿಂದ ನಡೆದವು. 4ನೇ ತಾರೀಖಿನಲ್ಲಿ ಸಂಜೆ ದಾಸಪ್ರಸಾದದಿಂದ ಶ್ರೀ ಮಧ್ವಾಚಾರ್ಯರ ಅಲಂಕಾರಯುತವಾದ ಪಟದ ಮೆರವಣಿಗೆಯು ನಾದಸ್ವರ ಭಜನ ಮುಂತಾದ ವಿವಿಧ ವೈಭವದೊಡನೆ ನಡೆಯಿತು.

4—2—71ರಲ್ಲಿ ಉಡುಪಿಯಿಂದ ವಿಶೇಷಾತಿಥಿಯಾಗಿ ಬಂದಿರುವ ಶ್ರೀಪಾದೂರು ವೆಂಕಟರಮಣ ಐತಾಳರು ಶ್ರೀರಮಣನ ಅನಂತಗುಣ ಪರಿಪೂರ್ಣತ್ವ ಎಂಬ ವಿಷಯವನ್ನು ಕುರಿತು, ಶ್ರೀ S. R. ರಘೂತ್ತಮಾಚಾರ್ಯರ ಅಧ್ಯಕ್ಷತೆಯಲ್ಲಿಯೂ ಮರುದಿನದಲ್ಲಿ ಶ್ರೀ ರಘೂತ್ತಮಾಚಾರ್ಯರು ವಿಷ್ಣು ಸರ್ವೋತ್ತಮತ್ವವನ್ನು ಕುರಿತು, ಶ್ರೀಪಾದೂರು ವೆಂಕಟರಮಣ ಐತಾಳರ ಅಧ್ಯಕ್ಷತೆಯಲ್ಲಿಯೂ ವಿದ್ವತ್ಪೂರ್ಣವಾದ ಉಪನ್ಯಾಸಗಳನ್ನು ಮಾಡಿದರು.

4—2—71ರಲ್ಲಿ Dr. P. ನಾಗರಾಜರಾಯರು ದಿವಂಗತ, ಧರ್ಮಭೂಷಣ, ಕೆ. ಸೀತಾರಾಮರಾಯರ ಸ್ಮಾರಕವಾಗಿ ಆಂಗ್ಲ ಭಾಷೆಯಲ್ಲಿ ಬರೆದಿರುವ ವೇದಾಂತ ಸಾರ ಸಂಗ್ರಹ ಗ್ರಂಥ ಮತ್ತು ಶ್ರೀ ಪಿ.ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರು ವಿಶ್ವಪ್ರಪಂಚ ವೇದಾಂತ ಪರಿಷತ್ತಿನಲ್ಲಿ ಸಂಸ್ಕೃತ ಭಾಷೆಯಲ್ಲಿ ಮಾಡಿದ ಭಾಷಣದ ಕನ್ನಡ ಭಾಷಾಂತರ ಇವೆರಡರ ಉದ್ಘಾಟನೆಯಾಯಿತು ಧರ್ಮಭೂಷಣ ದಿ. ಕೆ. ಸೀತಾರಾಮರಾಯರ ಸುಪುತ್ರರಾದ ವೇದಾಂತ ವಿದ್ವಾನ್ ಶ್ರೀ ಕೆ. ನಾರಾಯಣದಾಸರು ಭಾಷಣಮಾಡಿದರು.

5-2-71ರಲ್ಲಿ ನಡೆದ ವಿದ್ವತ್ಸಭೆಯಲ್ಲಿ ದೇಶ ವಿದೇಶದ ಪಂಡಿತರುಗಳಿಗೆ ಸಂಭಾವನೆಯು ಕೊಡಲ್ಪಟ್ಟಿತು. ಶ್ರೀ ಕೆ. ಬಾಲಸುಬ್ರಹ್ಮಣ್ಯ ಶಾಸ್ತ್ರಿಗಳು, ಶ್ರೀ ಕೃಷ್ಣಮಾಚಾರ್ಯರು ಮುಂತಾದವರು ಆಚಾರ್ಯರ ಹಿರಿಮೆಯನ್ನು ಹೊಗಳಿದರು. ಎರಡು ದಿನಗಳಲ್ಲಿಯೂ ಶ್ರೀ ಪಿ. ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರ ಧನ್ಯವಾದದೊಡಿಗೆ ಸಭೆಯ ಮುಕ್ತಾಯವಾಯಿತು. ಉತ್ಸವದ ಅಂಗವಾಗಿ 11—2—71ರಲ್ಲಿ ಇಲ್ಲಿನ ಧರ್ಮಪ್ರಕಾಶದಲ್ಲಿ ಸುಮಾರು 5000 ಬಡಬಗ್ಗರಿಗೆ ಬಿಸಿ ಬೇಳೆ ಹುಳಿ ಅನ್ನ, ಲಡ್ಡು, ಪಾಯಸಗಳನ್ನು ತೃಪ್ತಿಯಾಗುವಂತೆ ವಿನಿಯೋಗ ಮಾಡಲಾಯಿತು.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 25

NAVAYUGA

4-3-1971

ಲೋಕಸಭಾ ಚುನಾವಣೆಯಲ್ಲಿ

ಹಿತವರನ್ನು ಆರಿಸಿಕೊಳ್ಳಿ

ನಿರ್ಭೀತಿಯಿಂದ ಮತನೀಡಿರಿ

ಮದ್ರಾಸು ರಾಜ್ಯದಲ್ಲಿರುವಾಗಿನಿಂದಲೂ 'ಕಾಂಗ್ರೆಸ್ ಜಿಲ್ಲೆ' ಎಂಬ ಹೆಸರು ಪಡೆದ ಜಿಲ್ಲೆ ದಕ್ಷಿಣ ಕನ್ನಡ. ೧೯೫೭ರಲ್ಲಿ ಮೊತ್ತ ಮೊದಲ ಬಾರಿಗೆ ಸಾರ್ವತ್ರಿಕ ಚುನಾವಣೆಗಳ ವೇಳೆಯಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನೇ ಪ್ರಚಂಡ ಬಹುಮತದಿಂದ ಆರಿಸಿ ಕಳಿಸಿದ ಜಿಲ್ಲೆಯಿದು.

೧೯೬೭ರ ಚುನಾವಣೆಗಳು ದೇಶದ ರಾಜ್ಯಕೀಯದಲ್ಲೇ ತಿರುವು-ಮುರುವು ತೋರಿಸಿದುವು. ಇದು ಈ ಜಿಲ್ಲೆಗೂ ಹೊರತಾಗಲಿಲ್ಲ. ೬೭ರಲ್ಲಿ ಜಿಲ್ಲೆಯ ಉತ್ತರ ವಿಭಾಗ (ಉಡುಪಿ ಪಾರ್ಲಿಮೆಂಟರಿ ಕ್ಷೇತ್ರ)ದಲ್ಲಿ ಕಾಂಗ್ರೆಸ್ಸು ಪ್ರಚಂಡ ಪರಾಭವವನ್ನೇ ಹೊಂದಿತು ಈ ಪರಾಭವದ ಹಿಂದೆ ಹಲವು ಕಾರಣಗಳಿದ್ದುವು. ಅಭ್ಯರ್ಥಿಗಳ ಆಯ್ಕೆಯಲ್ಲಿ ಒಮ್ಮತವನ್ನು ಸಾಧಿಸುವಲ್ಲಿ ಸ್ಥಳೀಯ ಮತ್ತು ಉನ್ನತ ಮಟ್ಟದ ನಾಯಕರು ಅಸಮರ್ಥರಾದುದೇ ಮುಖ್ಯ ಕಾರಣ. ಅಭ್ಯರ್ಥಿಗಳು ಆಯ್ಕೆಗೊಂಡ ಬಳಿಕ ಅಸಮಾಧಾನ ಗೊಂಡವರಲ್ಲಿ ಹಲವರು ಸುಮ್ಮನುಳಿದರೂ ಕೆಲವು ಪ್ರಭಾವಿಗಳು ವಿರುದ್ಧ ಪ್ರಚಾರದಲ್ಲಿ ನಿರತರಾದುದು ಜನ ವೇದ್ಯ.

ಅದೇನಿದ್ದರೂ ಮರುವರ್ಷವೇ ನಡೆದ ತಾಲೂಕು ಬೋರ್ಡ್ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಮತ್ತೊಮ್ಮೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು. 'ಕಾಂಗ್ರೆಸ್ ಜಿಲ್ಲೆ'ಯೆಂಬ ಅಭಿಮಾನವನ್ನು ಪುನಃ ಮೆರೆಯಿತು. ಈ ವೇಳೆಗೆ ಕಾಂಗ್ರೆಸ್ಸೇತರ ಪಕ್ಷಗಳು ನೆಲಸಮವಾದುವು.

ಕೇಂದ್ರದಲ್ಲಿ ಉಂಟಾದ ಕಾಂಗ್ರೆಸ್ ಬಿಕ್ಕಟ್ಟಿನ ಪ್ರತಿಕ್ರಿಯೆ ಕರ್ನಾಟಕ ರಾಜ್ಯದ ಮೇಲಾದುದು ಸಹಜವೇ. ಈ ವರೆಗೆ ಸುಮಾರು ಐವತ್ತು ಎಂ.ಎಲ್. ಎ.ಗಳು ಇಂಡಿಕೇಟ್ ಸೇರಿಕೊಂಡಿದ್ದಾರೆ. ಕೇಂದ್ರ ಕಾನೂನು ಸಚಿವ, ಶ್ರೀಮತಿ ಇಂದಿರಾಗಾಂಧಿಯವರ ಪರಮಾಪ್ತ ಬಿರುದುಧಾರಿ ಶ್ರೀ ಕೆಂಗಲ್ ಹನುಮಂತಯ್ಯನವರು ಇನ್ನಾರು ತಿಂಗಳುಗಳೊಳಗೆ ಮತ್ತೆ-ಕನಿಷ್ಠ ೬೮ ಎಮ್ಮೆಲ್ಲೆಗಳನ್ನು ಪಕ್ಷಾಂತರಗೊಳಿಸಿ, ಬೆಂಗಳೂರಿನಲ್ಲಿ ತಾನು ಕಟ್ಟಿಸಿದ ವಿಧಾನ ಸೌಧದಲ್ಲಿ ತನ್ನವರನ್ನು ಸಿಂಹಾಸನದಲ್ಲಿ ಅಭಿಷೇಕಗೊಳಿಸುವ ಕನಸುಕಾಣುತ್ತಿದ್ದಾರೆ.

ರಾಜ್ಯದಲ್ಲಿ ಬೀಸಿದ ಪಕ್ಷಾಂತರದ ಬಿರುಗಾಳಿ ದಕ್ಷಿಣ ಕನ್ನಡಕ್ಕೆ ತುಸು ತಡವಾಗಿಯೇ ಬೀಸಿತೆನ್ನಬೇಕು. ಜಿಲ್ಲೆಯಲ್ಲಿ ಇಂಡಿಕೇಟಿನ ಅಡ್ ಹಾಕ್ ಸಮಿತಿ ರಚನೆಗೊಂಡು, ಮಾಜಿ. ಎಂ. ಪಿ. ಶ್ರೀ ಕೆ. ಶಂಕರ ಆಳ್ವರು ಅದರ ಕನ್ವೀನರರಾದರು. ಶ್ರೀ ಆಳ್ವರಿಗೆ ೧೯೭೧ರ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೇಟು ದೊರೆಯುವಿದಲ್ಲವೆಂದ ಅವರು ಒಳಗಿಂದೊಳಗೇ ಅಸಮಾಧಾನ ಹೊಂದಿದ್ದರೆಂದು ಹೇಳಬೇಕು.

ಶ್ರೀಮತಿ ಇಂದಿರಾ ಗಾಂಧಿಯವರು ಲೋಕಸಭೆಯನ್ನು ವಿಸರ್ಜಿಸಿದ ಕೂಡಲೇ ಇಬ್ಬರು ಅಭ್ಯರ್ಥಿಗಳನ್ನು ಆರಿಸುವುದಕ್ಕೆ ಆರಂಭವಾಯ್ತು. ಜಿಲ್ಲೆಯ ಲೋಕಸಭಾ ಮತದಾರ ಕ್ಷೇತ್ರವು ವಿಲಕ್ಷಣವಾಗಿ ವಿಂಗಡಣೆ ಹೊಂದಿರುವುದರಿಂದ ದಕ್ಷಿಣ ಭಾಗವು ತುಂಬ ಸಮಸ್ಯಾತ್ಮಕವೆನಿಸಿದೆ.

ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳು ಮಂಗಳೂರು ಮತ್ತು ಉಡುಪಿ ಎಂಬೆರಡು ಲೋಕಸಭಾ ಕ್ಷೇತ್ರಗಳಲ್ಲಿ ಹಂಚಿ ಹೋಗಿವೆ ಮಾತ್ರವಲ್ಲ ಇಲ್ಲಿನ ಬೆಳ್ತಂಗಡಿ ಕ್ಷೇತ್ರವು ಇವುಗಳಿಗೆ ಹೊರತಾಗಿದೆ. ಅದರ ಬದಲು ಕೊಡಗು ಜಿಲ್ಲೆಯ ಮೂರು ಕ್ಷೇತ್ರಗಳು ಸೇರಿವೆ. ಆದುದರಿಂದ, ಮಂಗಳೂರು ವಿಭಾಗಕ್ಕೆ ಹುದ್ದರಿಯನ್ನು ಆರಿಸುವಲ್ಲಿ ಭಿನ್ನಾಭಿಪ್ರಾಯ ಮೂಡುವುದು ಸಹಜವೇ.

ರಾಜ್ಯದಲ್ಲಿಯೇ ಅತ್ಯಂತ ಪರಿಶ್ರಮಿ, ಜಾಗೃತ, ಸುಶಿಕ್ಷಿತ ಸುಸಂಘಟಿತ ಮತ್ತು ಸುಸಂಸ್ಕೃತ ಮತದಾರರಿರುವ ದಕ್ಷಿಣ ಕನ್ನಡ ಜಿಲ್ಲೆಯ ಹಣಾಹಣಿ ಹೋರಾಟಕ್ಕೆ ಈ ಬಾರಿಹೆಚ್ಚಿನ ಪ್ರಾಶಸ್ತ್ಯ ಬಂದಿದೆ.

ಮಂಗಳೂರು ವಿಭಾಗದಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆ. ಮಡಿಕೇರಿ ಮತ್ತು ಸೋಮವಾರಪೇಟೆ ಕ್ಷೇತ್ರಗಳೂ ದಕ್ಷಿಣ ಕನ್ನಡದ ಸುಳ್ಯ, ಪುತ್ತೂರು, ಬಂಟ್ವಾಳ ಹಾಗೂ ಮಂಗಳೂರು-೧ ಮತ್ತು ೨ ಕ್ಷೇತ್ರಗಳೂ ಕೂಡಿವೆ. ಈ ೮ ಕ್ಷೇತ್ರಗಳಲ್ಲಿ ೧೯೬೭ರ ವಿಧಾನ ಸಭಾ ಚುನಾವಣೆಗಳಲ್ಲಿ ಅವಿಭಜಿತ ಕಾಂಗ್ರೆಸ್ ೫, ಸ್ವತಂತ್ರ ಪಕ್ಷ ೨ ಮತ್ತು ಜನಸಂಘ ೧ ಸ್ಥಾನಗಳನ್ನು ಪಡೆದಿವೆ. ೫ ಜನ ಕಾಂಗ್ರೆಸ್ ಶಾಸಕರು ಈಗ ಸಿಂಡಿಕೇಟಿನಲ್ಲೇ ಉಳಿದಿದ್ದಾರೆ. ಮೈತ್ರಿ ಕೂಟದಲ್ಲಿ ಸೇರಿಕೊಂಡಿರುವ ಉಳಿದ ಪಕ್ಷಗಳೂ ತಮ್ಮ ಹುದ್ದರಿಯಾಗಿ ಅಂದು ವಿಜೇತರಾದ ಶ್ರೀ ಸಿ. ಎಂ. ಪೂಣಚ್ಚರನ್ನೇ ಆರಿಸಿಕೊಂಡಿವೆ.

ಶ್ರೀ ಸಿ.ಎಂ. ಪೂಣಚ್ಚರು ಇಂದಿನ ಮುಂದಾಳುಗಳಲ್ಲಿ ಹೆಸರುವಾಸಿಯಾದವರು. ಹೊಸ ಪೀಳಿಗೆಯವರು. ಇನ್ನೂ ಯುವಕರು ಐವತ್ತರ ಗಡಿಯನ್ನು ಇತ್ತೀಚೆಗೆ ದಾಟಿದವರು. ಕೊಡಗು ಪ್ರತ್ಯೇಕ ರಾಜ್ಯವಾಗಿದ್ದಾಗ, ಅದರ ಮುಖ್ಯಮಂತ್ರಿಯಾಗಿದ್ದವರು. ರಾಜ್ಯ ಪುನರ್ವಿಂಗಡಣೆಯ ಬಳಿಕ ಕರ್ನಾಟಕದಲ್ಲಿ ಗೃಹ ಹಾಗೂ ಕೈಗಾರಿಕೆಗಳ ಮಂತ್ರಿಯಾಗಿದ್ದರು. ೧೯೬೭ರಲ್ಲಿ ಲೋಕಸಭೆಗೆ ಹೋಗುವುದಕ್ಕೆ ಮೊದಲು ರಾಜ್ಯದ ವಾಣಿಜ್ಯ ಕಾರ್ಪೋರೇಶನ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು ೬೭ರಲ್ಲಿ ಶ್ರೀಮತಿ ಗಾಂಧಿಯವರ ಸಂಪುಟದಲ್ಲಿ ರಾಜ್ಯಮಟ್ಟದ ಸಚಿವ ಸ್ಥಾನ ಪಡೆದ ಶ್ರೀ ಪೂಣಚ್ಚರು 'ಕಾಂಗ್ರೆಸ್ ಸರ್ಕಸ್'ನ ಸುಳಿಯಲ್ಲಿ ಸಿಂಡಿಕೇಟಿನಲ್ಲೇ ಉಳಿದುದರಿಂದ ಮಂತ್ರಿಪದಕ್ಕೆ ಎರವಾದರು.

ಶ್ರೀ ಸಿ. ಎಂ. ಪೂಣಚ್ಚರು ಮೃದುಭಾಷಿ, ಉಜ್ವಲ ವಾಗ್ಮಿ ಅವರದು ಸದಾ ನಗು ಮೊಗ; ಉದಾರ-ವಿಶಾಲ ಹೃದಯ. ೬೭ರಲ್ಲಿ ವಿರೋಧ ಪಕ್ಷೀಯರೆಲ್ಲ ಒಂದಾಗಿ ಬೆಂಗಳೂರಿನಿಂದ ಶ್ರೀ ಕೆ. ಎರ್. ಕಾರಂತರನ್ನು ಎಳೆದುತಂದು ಇವರಿಗೆ ಪ್ರಬಲ ಪ್ರತಿಸ್ಪರ್ಧಿಯಾಗಿ ನಿಲ್ಲಿಸಿದ್ದರೂ ಗೆದ್ದು ಬಂದವರು.

ಈ ಬಾರಿ ಅವರ ಗೆಲುವಿಗಿರುವ ಒಂದೇ ಒಂದು ತಡೆಯೆಂದರೆ. ಶ್ರೀ ಕೆ.ಕೆ. ಶೆಟ್ಟರು ಇಂಡಿಕೇಟಿನ ಅಭ್ಯರ್ಥಿಯಾಗಿ ಅವರನ್ನು ಎದುರಿಸುತ್ತಿರುವುದು. ಶ್ರೀ ಶೆಟ್ಟರು ಕಾಂಗ್ರೆಸಿನ ನಾಯಕಮಣಿಯಾಗಿದ್ದು ಶ್ರೀ ಪೂಣಚ್ಚರ ಗೆಲುವಿಗೆ ಶಕ್ತಿಮೀರಿ ಶ್ರಮಿಸಿದ್ದಾರೆ.

ಶ್ರೀ ಕೆ. ಕೆ. ಶೆಟ್ಟರು ಅತ್ಯಂತ ಹಳೆಯ ಕಾಂಗ್ರೆಸಿಗ. ನಿಷ್ಠಾವಂತ ಹೋರಾಟಗಾರ ಎಪ್ಪತ್ತರಷ್ಟು ವಸಂತಗಳನ್ನು ಕಳೆದುದರಿಂದ ಯೌವನದ ಹುಮ್ಮಸ್ಸು ಅವರಲ್ಲಿ ಕುಂದಿದೆ. ನಿಸ್ಪೃಹರಾದರೆ; ಅವರ ರಕ್ತದಲ್ಲಿ ರಾಜ್ಯಕಾರಣವೇ ಹರಿಯುತ್ತಿದೆ.

ಸ್ವಾತಂತ್ರ್ಯ ಸಂಗ್ರಾಮದ ವೇಳೆಯಿಂದಲೂ ರಾಜ್ಯಕೀಯದಲ್ಲಿದ್ದ ಶ್ರೀ ಶೆಟ್ಟರು ಆಗಲೂ ಸ್ವಾತಂತ್ರ್ಯಾನಂತರವೂ ಹಲವಾರು ಸ್ಥಾನಮಾನಗಳನ್ನು ಹೊಂದಿ ಅನುಭವಿಸಿದವರು. ಎಮ್‌ಎಲ್‌ಸಿಯಾಗಿ, ವಿಧಾನ ಪರಿಷತ್ತಿನ ಉಪಸಭಾಪತಿಯಾಗಿ ಮತ್ತೆ ಸಭಾಪತಿಯೂ ಆಗಿ ಮೊನ್ನೆ ತಾನೇ ನಿವೃತ್ತರಾದವರು. ಅದುವರೆಗೂ ಆ ನಂತರದ ಕೆಲವು ತಿಂಗಳುಗಳೂ ಅವರ ನಿಷ್ಠೆ ಸಿಂಡಿಕೇಟಿನಲ್ಲಿತ್ತು. ಶ್ರೀಮತಿ ಗಾಂಧಿ ಪ್ರಗತಿಶೀಲರೆಂದು ಅವರಿಗೆ ಮನವರಿಕೆಯಾಗಲು ಲೋಕಸಭೆ ವಿಸರ್ಜನೆಯಾಗಬೇಕಾಯ್ತು.

ಶ್ರೀ ಶೆಟ್ಟರು ಲೋಕಸಭೆಗೆ ಸ್ಪರ್ಧಿಸಲು ಆಯ್ಕೆಯಾದದ್ದೂ ಅವರು ಇಂಡಿಕೇಟ್ ಸೇರಲು ಪ್ರೇರಕವಾದ ಘಟನೆಯಂತೆಯೇ ವಿಲಕ್ಷಣ. ಇಂಡಿಕೇಟಿನ ನಿರ್ವಾಚಿತ ಹುದ್ದರಿ ಶ್ರೀ ಶಂಕರ ಆಳ್ವಾರಿಗೆ ಅನಿರೀಕ್ಷಿತವಾಗಿ ಪುತ್ರವಿಯೋಗವಾದುದರಿಂದ ಅವರು ಹಿಂದುಳಿದರು. ಆಗ ಶೆಟ್ಟ

(ಹನ್ನೆರಡನೇ ಪುಟ ನೋಡಿರಿ)

ಅಶೋಕನ ಆಳಿಕೆಯನ್ನು ಕಂಡ

ರಾಯಚೂರು

ರಾಯಚೂರು ಹಿಂದಿನ ಹೈದರಾಬಾದ್ ಸಂಸ್ಥಾನದಿಂದ ಮೈಸೂರು ರಾಜ್ಯಕ್ಕೆ ವಿಲೀನವಾದ ಜಿಲ್ಲೆಗಳಲ್ಲಿ ಇನ್ನೊಂದು. ರಾಜಪುರ ಎಂಬ ಹೆಸರು ರಾಯಚೂರು ಎಂದಾಗಿರಬೇಕೆಂದು ಕೆಲವರ ಮತ.

ಈ ಜಿಲ್ಲೆಯ ಇತಿಹಾಸ ಸುಮಾರು ಎರಡು ಸಾವಿರ ವರ್ಷಗಳ ಹಿಂದಿನ ಶಿಲಾಯುಗದಿಂದ ಪ್ರಾರಂಭವಾದಂತೆ ಕಾಣುತ್ತವೆ. ಈ ಜಿಲ್ಲೆಯ ಮಸ್ಕಿ, ಪಿಕಲಿಹಾಳ, ಕರಡಿಕಲ್ಲು, ಕಲ್ಲೂರು ಇತ್ಯಾದಿ ಕಡೆಗಳಲ್ಲಿ ಭೂಗರ್ಭ ಸಂಶೋಧನೆಯಿಂದ ದೊರೆತ ಅವಶೇಷಗಳೇ ಇದಕ್ಕೆ ಸಾಕ್ಷಿಗಳು. ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿ ಈ ಜಿಲ್ಲೆ ಮೌರ್ಯರ ಅಧೀನದಲ್ಲಿತ್ತು. ಅಶೋಕನ ಮೂರು ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ. ಅಲ್ಲದೆ ಕ್ರಿ. ಪೂ. ಎರಡನೇ ಮತ್ತು ಮೂರನೇ ಶತಮಾನದ ನಡುವಿನ ಕಾಲದ್ದೆಂದು ಊಹಿಸಲಾದ ಸ್ಫಟಿಕದಿಂದ ನಿರ್ಮಿತವಾದ ಗೌತಮ ಬುದ್ಧನ ಚಿಕ್ಕಪ್ರತಿಮೆ ಇಲ್ಲಿ ದೊರೆತಿದೆ. ಆ ನಂತರ ಇತಿಹಾಸವಾಹಿನಿ ಕೆಲಕಾಲ ಕಣ್ಮರೆಯಾಗಿ ಬಾದಾಮಿ ಹಾಗು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ತಿರುಗಿ ಹೊರ ಹೊಮ್ಮಿ ರಾಷ್ಟ್ರಕೂಟ, ಹೊಯ್ಸಳ ಹಾಗು ವಿಜಯನಗರದ ಅರಸರ ಮೂಲಕ ಈ ಪ್ರದೇಶದ ಕೀರ್ತಿ ಬೆಳಗಿತು.

ರಾಯಚೂರು ಜಿಲ್ಲೆಯಲ್ಲಿ ಅತಿ ಪುರಾತನ ಕಾಲದಲ್ಲೇ ಅನೇಕ ಅಗ್ರಹಾರಗಳಿದ್ದವು. ಇಲ್ಲಿ ವೇದಪುರಾಣ, ಇತಿಹಾಸ, ವ್ಯಾಕರಣ, ನಾಟಕ, ತರ್ಕ, ಛಂದಸ್ಸು ವೇದಾಂತ ಇತ್ಯಾದಿಗಳನ್ನು ಶಿಷ್ಯವೃಂದಕ್ಕೆ ಪಂಡಿತರು ಪಾಠ ಹೇಳುತ್ತಿದ್ದರು.

ರಾಯಚೂರು ಜಿಲ್ಲೆಯ ವಿಸ್ತಾರ ಐದುಸಾವಿರದ ನಾನ್ನೂರ ಮೂವತ್ತೈದು ವರೆ ಮೈಲಿಗಳು. ರಾಯಚೂರು, ದೇವದುರ್ಗ, ಲಿಂಗಸೂಗೂರು, ಕುಷ್ಟಗಿ, ಯಲಬುರ್ಗಿ, ಕೊಪ್ಪಳ, ಗಂಗಾವತಿ, ಸಿಂಧನೂರು ಮತ್ತು ಮಾನ್ವಿ ಎಂಬ ಒಂಬತ್ತು ತಾಲೂಕುಗಳು ಈ ಜಿಲ್ಲೆಯಲ್ಲಿವೆ. ಇಲ್ಲಿ ಹತ್ತು ಪಟ್ಟಣಗಳಿವೆ. ಒಟ್ಟು ಹಳ್ಳಿಗಳ ಸಂಖ್ಯೆ 1304 ಇಲ್ಲಿ ಬೇಸಾಯ ನಡೆಯುವ ಭೂಮಿಯ ವಿಸ್ತೀರ್ಣ ಸುಮಾರು 27,01,561 ಎಕರೆಗಳು. ಮಳೆಯ ಕೊರತೆ ಇರುವ ಈ ಜಿಲ್ಲೆಯಲ್ಲಿ ನೀರಾವರಿ ಸೌಕರ್ಯಗಳು ಅತಿಮುಖ್ಯವಾದುವು.

ಈ ಜಿಲ್ಲೆಯ ಉತ್ತರಕ್ಕೆ ಕೃಷ್ಣಾನದಿ, ದಕ್ಷಿಣಕ್ಕೆ ತುಂಗಭದ್ರಾ ಎಂದು ಎರಡು ನದಿಗಳ ನಡುವಿನ ನಿಸರ್ಗ ರಮಣೀಯವಾದ ಈ ಜಿಲ್ಲೆಗೆ ತುಂಗಭದ್ರಾ ಅಣೆಕಟ್ಟೆ ನಿಜವಾಗಿಯೂ ಒಂದು ವರಪ್ರಸಾದವಾಗಿದೆ. ಈ ಅಣೆಕಟ್ಟೆ ಮುನಿರಾಬಾದಿನ ಸಮೀಪದಲ್ಲಿದೆ. ಇದರ ಜಲಾಶಯಕ್ಕೆ "ಪಂಪಾ ಸಾಗರ" ಎಂದು ಹೆಸರು. ಇದರ ಬಲಗಡೆ ಬೆಟ್ಟದ ಮೇಲಿದ್ದೆ 'ಕೈಲಾಸ' ಎಂಬ ಅತಿಥಿಗೃಹ. ಪಂಪಾಸಾಗರ ತುಂಬ ಮನೋಹರವಾಗಿದೆ. ವಿಜಯನಗರ ಅರಸರ ಕಾಲದ ಪಂಪಾ ಸರೋವರದ ಕೀರ್ತಿ ಈಗ ಈ ಪಂಪಾಸಾಗರಕ್ಕೆ ಬರತೊಡಗಿದೆ ಎಂದರೆ ಅತಿಶಯವಲ್ಲ.

ಇಷ್ಟಲ್ಲದೆ ಈ ಜಿಲ್ಲೆಯ ಮಾನ್ವಿ ತಾಲೂಕಿನಲ್ಲಿ ತುಂಗಭದ್ರಾ ನದಿಗೆ ಕಟ್ಟಿದ ಚಿಕ್ಕ ಅಣೆಕಟ್ಟು—ಹೀಗೆ ಈ ಎರಡು ಅಣೆಕಟ್ಟುಗಳು ರಾಯಚೂರು ಜಿಲ್ಲೆಗೆ ನೀರಾವರಿ ಒದಗಿಸುತ್ತಿವೆ.

ಈ ಜಿಲ್ಲೆಯಲ್ಲಿ ಜೋಳ, ಸಜ್ಜೆ, ನವಣೆ, ಗೋಧಿ ಇವು ಧಾರಾಳವಾಗಿ ಬೆಳೆಯುತ್ತವೆ. ಅಲ್ಲದೆ ಕಡಲೆ, ಕುಸುಬೆ, ಅಗಸೆ ಬೆಳೆಗಳೂ ಇಲ್ಲಿ ಸಾಕಷ್ಟು ಬೆಳೆಯುತ್ತವೆ.

ತುಂಗಭದ್ರಾ ಅಣೆಕಟ್ಟಿನಿಂದ ನೀರು ದೊರೆತ ಬಳಿಕ ಗಂಗಾವತಿ, ಸಿಂಧನೂರು, ಮಾನ್ವಿ ತಾಲೂಕುಗಳಲ್ಲಿ ಕಬ್ಬು, ಭತ್ತ, ಮಿಶ್ರತಳಿ ಜೋಳಗಳು ಧಾರಾಳ ಬೆಳೆಯತೊಡಗಿವುವು. ತೋಟಗಾರಿಕೆಯೂ ಇಲ್ಲಿ ಹೆಚ್ಚುತ್ತಾ ಬರುತ್ತಿದೆ. ಇಲ್ಲಿ ಸ್ಥಾಪಿಸಲಾದ 'ಶಕ್ತಿಮಾನ' ಮೆಕ್ಕೆ ಜೋಳದ ಬೀಜೋತ್ಪಾದನಾ ಕ್ಷೇತ್ರ ರೈತರಿಗೆ ಬೇಕಾದಷ್ಟು ಬೀಜಗಳನ್ನು ಒದಗಿಸುತ್ತಿದೆ. ಇಲ್ಲಿಯ ಅನೇಕ ತರುಣ ರೈತರು ಸುಧಾರಿತ ತಳಿಬೆಳೆಗಳನ್ನು ಬೆಳೆಸುತ್ತಿದ್ದಾರೆ.

ಬಂಗಾರ ಈ ಜಿಲ್ಲೆಯ ಖನಿಜಗಳಲ್ಲಿ ಒಂದು. ಈ ಜಿಲ್ಲೆಯ ಹಟ್ಟಿ ಎಂಬಲ್ಲಿ ಬಂಗಾರಕ್ಕಾಗಿ ತೆಗೆದ ಒಂದು ಸಾವಿರ ಅಡಿಗಿಂತಲೂ ಆಳವಾದ ಗಣಿಗಳಿವೆ. ಅಲ್ಲದೆ ಚೀನಿಮಣ್ಣು, ಬಣ್ಣದಮಣ್ಣು, ಉಸುಕಿನ ಕಲ್ಲು, ಕಲ್ಲುಪ್ಪು ಕೂಡ ಈ ಜಿಲ್ಲೆಯಲ್ಲಿ ಅಲ್ಲಲ್ಲಿ ದೊರೆಯುತ್ತವೆ. ದೊಡ್ಡ ಕೈಗಾರಿಕೆಗಳು ಈ ಜಿಲ್ಲೆಯಲ್ಲಿ ಇಲ್ಲದಿದ್ದರೂ ಮುನಿರಾಬಾದಿನ ಸಕ್ಕರೆ ಮತ್ತು ಗೊಬ್ಬರ ಕಾರ್ಖಾನೆಗಳು ಈ ಕೊರತೆಯನ್ನು ಕೆಲ ಮಟ್ಟಿಗೆ ತುಂಬಿವೆ. ಖಾದಿ, ಕೈಮಗ್ಗದ ಸೀರೆ, ಕಂಬಳಿ, ಜಿಲ್ಲ, ಜಾದರಕ್ಷೆ, ಒಸಿಯುನ್, ಇತ್ಯಾದಿಗಳು ಗ್ರಾಮ-ಕೇಂದ್ರಗಳಲ್ಲಿ ತಯಾರಾಗುತ್ತಿವೆ

ಶಿಕ್ಷಣಕ್ಷೇತ್ರದಲ್ಲಿ ರಾಯಚೂರು ಜಿಲ್ಲೆ ಪ್ರಗತಿಯ ಹಾದಿಯಲ್ಲೀಗ ಸಾಗುತ್ತಾ ಬಂದಿದೆ. ಇಲ್ಲಿ 50 ಹೈಸ್ಕೂಲುಗಳು, 329 ಹೈಯರ್ ಪ್ರೈಮರಿ ಸ್ಕೂಲುಗಳು, 3 ಕಾಲೇಜುಗಳಿವೆ.

ಈ ಜಿಲ್ಲೆಯ ಉತ್ತರಕ್ಕೆ ಕಲಬುರ್ಗಿ, ವಿಜಾಪುರ ಜಿಲ್ಲೆಗಳಿವೆ. ದಕ್ಷಿಣಕ್ಕೆ ಬಳ್ಳಾರಿ ಜಿಲ್ಲೆ. ಪಶ್ಚಿಮಕ್ಕೆ ಧಾರವಾಡ ಹಾಗೂ ವಿಜಾಪುರ ಜಿಲ್ಲೆಗಳಿವೆ. ಪೂರ್ವಕ್ಕೆ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಿದೆ.

ಮೈಸೂರು ರಾಜ್ಯದ ಇತರ ಜಿಲ್ಲೆಗಳಂತೆ ಈ ಜಿಲ್ಲೆಗಳಲ್ಲಿಯೂ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಪುಣ್ಯಕ್ಷೇತ್ರಗಳಿವೆ. ಕೊಪ್ಪಳ ಪುರಾತನ ಕಾಲದಿಂದಲೇ ಪ್ರಸಿದ್ಧವಾಗಿದೆ. ಇದು ಜೈನರ ಪುಣ್ಯಕ್ಷೇತ್ರವಾಗಿ, ಸುಮಾರು ಒಂದು ಸಾವಿರ ವರ್ಷಗಳ ವರೆಗೆ ಮೆರೆದಿತ್ತು, ರಾಷ್ಟ್ರಕೂಟ ನೃಪತುಂಗನು ಇದನ್ನು 'ಮಹಾಕೊಪಣ ನಗರ'ವೆಂದು ಕೊಂಡಾಡಿದ್ದಾನೆ. ಇಲ್ಲೊಂದು ಭವ್ಯವಾದ ಕೋಟೆ ಇದೆ.

ಕೃಷ್ಣಾನದಿಯ ತೀರದಲ್ಲಿರುವ ನವಲಿಯ ಜಟಾಶಂಕರ ದೇವಾಲಯ, ಕೃಷ್ಣಾ-ಭೀಮಾನದಿಗಳ ಸಂಗಮವಿರುವ ಕಾಡಲೂರು. ಯಲಬುರ್ಗಾ ತಾಲೂಕಿನ ಇಟಗಿ, ಆನೆಗುಂದಿಯಲ್ಲಿರುವ ಪಂಪಾಸಾಗರ, ಶಬರಿಯ ಆಶ್ರಮ. ಆಂಜನೇಯಬೆಟ್ಟ, ಕುಷ್ಟಗಿ ತಾಲೂಕಿನ ಹನುಮಸಾಗರ, ಹಾಗು ಮಾವಿನೂರು. ಕನಕಗಿರಿ, ಅಮರೇಶ್ವರ, ಸಿರಿವಾರ, ಹೂಗಲ್ಲು, ಬಾಲಹಳ್ಳಿ, ನಾರದಗಡ್ಡೆ, ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳು ಇಲ್ಲಿವೆ.

ಸಾಹಿತ್ಯ ಕ್ಷೇತ್ರದಲ್ಲಿ ರಾಯಚೂರು ಸುಮಾರು 400 ವರ್ಷಗಳಿಂದಲೇ ಪ್ರಖ್ಯಾತವಾಗಿದೆ. 'ವರದಪ್ಪ ರತ್ನಾಕರ' ಎಂಬ ಷಟ್ಪದಿ ಕಾವ್ಯವನ್ನು ಬರೆದ ಲಿಂಗಣ್ಣಕವಿ, 'ಕುಮಾರವಿಜಯ' 'ಬಸವಶತಕ' ಭುವನೈಕನಾಯಕಿ ಶತಕ ಮತ್ತು ಪಂಪಾಶತಕವನ್ನು ಬರೆದ ಗಣಕಲ್ಲಿನ ಬಸವಲಿಂಗ ಶರಣ ಕವಿ, ಹೂಗಲ್ಲಿನ ವೀರಪ್ಪಯ್ಯ ಇವರೆಲ್ಲ ರಾಯಚೂರಿನ ಸಾಹಿತ್ಯಕ್ಷೇತ್ರವನ್ನು ಹುಲುಸಾಗಿ ಬೆಳೆಸಿದವರು. ಈ ಜಿಲ್ಲೆಯಲ್ಲಿ ಬಾಳಬೆಳಗಿದಷ್ಟು, ಹರಿದಾಸರು [illegible] ಡೆ ಇನ್ನೆಂತಿಲ್ಲ. ವ್ಯಾಸಕೂಟದಲ್ಲಿ [illegible] ರದಾಸರ ಬಳಿಕ ಹೆಸರೆಂದು [illegible] ಕೊಂಡ ವಿಜಯದಾಸರು. ಗೋಪಾಲದಾಸರು. ಜಗನ್ನಾಥದಾಸರು. ವೇಣು[illegible]ರು. ಪ್ರಾಣೇಶದಾಸರು. ಇವರೆಲ್ಲ [illegible] ಯವರು

1857ರ ಸ್ವಾತಂತ್ರ್ಯ ಸಂಗ್ರಾಮ[illegible] ಭಾಗವಹಿಸಿದ ಕೊಪ್ಪಳದ ಕೋಟೆ[illegible] ನಿಂತು ಬ್ರಿಟಿಷರೊಡನೆ ಕಾದಾಡಿ [illegible] ತೆತ್ತ ಮುಂಡರಗಿ ಭೀಮರಾಯ, [illegible] ಗೆಯ ಕೆಂಚನ ಗೌಡ ಇವರಿಗೆ ಭಾರತದ ಇತಿಹಾಸದಲ್ಲಿ ಗೌರವಸ್ಥಾನ ಸಲ್ಲಬೇಕು.

ಇಲ್ಲಿಯ ಜನರು ರಸಿಕರು, ಸಂಗೀತ ಸಾಹಿತ್ಯಪ್ರೇಮಿಗಳು, ಬಿಡುವಿನ ಕಾಲವನ್ನು ತಾಳಮದ್ದಳೆ, ಕೋಲು, [illegible]ಲಾಟ, ಭಜನೆ ಇತ್ಯಾದಿಗಳಲ್ಲಿ ಕಳೆಯುವ ಭಾವಜೀವಿಗಳು.

ವೈದ್ಯಕೀಯ ಕ್ಷೇತ್ರವನ್ನು ನೋಡಿದರೆ, ಈ ಜಿಲ್ಲೆಯಲ್ಲಿ, ಮೂರು ಆಸ್ಪತ್ರೆಗಳಿವೆ. ಮೂವತ್ತುಮೂರು ಚಿಕಿತ್ಸಾಲಯಗಳಿವೆ. ಹದಿನೈದು ಪ್ರಾಥಮಿಕ ಆರೋಗ್ಯ ಹಾಗೂ 16 ಕುಟುಂಬ ಯೋಜನಾ ಘಟಕಗಳಿವೆ.

ಜನಸಂಖ್ಯೆ ಸಮಸ್ಯೆ ಇತರ ಜಿಲ್ಲೆಗಳಂತೆ ಈ ಜಿಲ್ಲೆಯಲ್ಲಿಯೂ ಇದ್ದೇ ಇದೆ. ಇದರಿಂದಲೇ ಕುಟುಂಬ ಯೋಜನೆ [illegible] 1965ರಿಂದಲೇ ಪ್ರಾರಂಭವಾಗಿದೆ. ಈ ವರೆಗೆ ಈ ಜಿಲ್ಲೆಯಲ್ಲಿ 1069 ಶಸ್ತ್ರಚಿಕಿತ್ಸೆಗಳು ನಡೆದಿವೆ. 5152 ಜನಕ್ಕೆ ಲೂಪ್ ಹಾಕಲಾಗಿದೆ. 102371 ನಿರೋಧ್‌ಗಳನ್ನು ಹಂಚಲಾಗಿದೆ.

ಹಾರೈಕೆ

ವಾರ ವಾರವು ಹರುಷ ವರುಷವ
ಬೀರಿ ಬರುತಿದೆ ನವಯುಗ|
ನಾಡ ಪ್ರಗತಿಕೆ, ನುಡಿಯ ಪ್ರೇಮಕೆ
ದಾರಿ ದೀಪವು ನವಯುಗ ||೧||

ಶಾಂತಿಯಿಂದಲೆ ಕ್ರಾಂತಿಸಾಧಿಪ
ಸತ್ಯಸುಂದರ ನವಯುಗ|
ಭ್ರಾಂತಿಯೋಡಿಸಿ ಅರಿವನೂಡುವ
ನಿತ್ಯ ನೂತನ ನವಯುಗ ||೨||

ನಾಡ ಬೆಳಗುತ, ನುಡಿಯ ಬೆಳಸುತ
ಚೆನ್ನವಾಗಿದೆ ನವಯುಗ|
ಲೋಕದಲಿ ಶತ, *ಸಾವಿರದ ಪತ್ರಿಕೆ
ಯಾಗಿ ಬೆಳಗಲಿ ನವಯುಗ ||

—ದಿಗಂಬರ ಜೋಶಿ, ಬೆಳಗಾವಿ

*ಸಾವಿರದ=ಸಾವು + ಇರದ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ **"ವಿಜಯಾ ಬ್ಯಾಂಕ್"**ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{1}{2}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಚಂದಾ ಹಣ ಬಾಕಿ ಇರುವವರು **ದಯಮಾಡಿ ಅದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.**

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 25

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಪ್ರತಿಭೆಯ ದೇಶಾಂತರ ಮತ್ತು ದೇಶದ್ರೋಹಕ್ಕೆ ಪ್ರೋತ್ಸಾಹ

ಉತ್ತರದ ರಾಜ್ಯಗಳ ಹಿಂಸಾಚರಣೆ ಮತ್ತು ಅತಿರೇಕಾಚಾರಗಳ ಗಾಳಿ ದಕ್ಷಿಣಕ್ಕೂ ಬೀಸಿದರೆ, ಅದನ್ನು ಅಸಹಜವೆನ್ನಲಾಗದು. ಇದುವರೆಗೆ ಕಳ್ಳ ನೋಟುಗಳನ್ನೇ ತಯಾರಿಸಿ ತೃಪ್ತಿಪಟ್ಟುಕೊಳ್ಳುತ್ತಿದ್ದ ದಾಕ್ಷಿಣಾತ್ಯರು ಈಗ ಒಂದು ಹೆಜ್ಜೆ ಮುಂದುವರಿದಿರುವುದು ಪತ್ತೆಯಾಗಿದೆ. 'ಶಸ್ತ್ರಾಸ್ತ್ರಗಳ ತಯಾರಿ ಮತ್ತುವುಗಳ ಮಾರಾಟ'ದಲ್ಲಿ ನಿರತವಾದ ಬೃಹತ್ ತಂಡವೊಂದನ್ನು ರಾಜ್ಯದಲ್ಲಿ ಪತ್ತೆ ಹಚ್ಚಿದ್ದು ರಾಜ್ಯದ ಬೇಹುಗಾರರ ಕಾರ್ಯಕ್ಷಮತೆಗೊಂದು ನಿದರ್ಶನ. ನಾಲ್ಕಾರು ತಿಂಗಳುಗಳ ಹಿಂದೆ ಗುಮಾನಿ ಬಂದಿತ್ತೆಂದೂ ಅಂದಿನಿಂದಲೂ ತಂಡ ಪತ್ತೆಗೆ ಹೊಂಚು ಹಾಕುತಿತ್ತೆಂದೂ ಈಗ ಅದರ ಪ್ರಯತ್ನ ಸಫಲವಾಯಿತೆಂದೂ ಬೇಹುಗಾರ ವಿಭಾಗದ ಹೇಳಿಕೆ ಕೇಳುವಾಗ, ಈ ತಂಡದ ಕಾರ್ಯವ್ಯಾಪ್ತಿ ಸುವಿಸ್ತೃತವಾದದ್ದೆಂದೇ ಹೇಳಬಹುದು.

ಈ ಅಕ್ರಮ ಶಸ್ತ್ರಾಸ್ತ್ರಗಳ ತಯಾರಿ ಮತ್ತು ಮಾರಾಟದ ತಂಡದ ಬಗ್ಗೆ ಈಗ ತಿಳಿದು ಬಂದಿರುವ ಅಂಶಗಳು ಮುಖ್ಯವಾಗಿ ಎರಡು ಮಾತ್ರ. ಬಳ್ಳಾರಿಯಲ್ಲಿ ಕಾರಖಾನೆಯದೆ; ಬೆಂಗಳೂರಲ್ಲಿ ವ್ಯಾಪಾರ ನಡೆಯುತ್ತದೆ. ಆದರೆ, ಈ ಅಕ್ರಮ ವ್ಯವಹಾರದ ಹಿನ್ನೆಲೆಯೇನು ಎಂಬುದು ಅಸ್ಪಷ್ಟ. ಕೇರಳ ಮತ್ತು ಆಂಧ್ರ ಪ್ರದೇಶದ ಕೆಲವೆಡೆ ಸಶಸ್ತ್ರ ಪುಂಡಾಟಿಕೆಗಳು ಇತ್ತೀಚೆಗೆ ನಡೆದದ್ದು ಸರ್ವವೇದ್ಯ. ವ್ಯವಸ್ಥಿತವಾಗಿ ನಡೆಯುತ್ತಿರುವ ಅಕ್ರಮ ಶಸ್ತ್ರಾಸ್ತ್ರಗಳ ವ್ಯವಹಾರಕ್ಕೂ ಈ ಪುಂಡಾಟಿಕೆಗಳಿಗೂ ಸಂಬಂಧವಿದೆಯೇ ಅಥವಾ ಬರಿಯ ವ್ಯಾಪಾರೋದ್ದೇಶ ಮಾತ್ರ ಇವರ ಗುರಿಯೇ ಎಂದು ಇನ್ನು ಗೊತ್ತಾಗಬೇಕಾಗಿದೆ. ಖಾಸಗಿ ಶಸ್ತ್ರಾಸ್ತ್ರಗಳನ್ನು ತಯಾರಿಸುವುದು ಕಾನೂನಿನ ದೃಷ್ಟಿಯಲ್ಲಿ ಮಹಾಪರಾಧ. ಈ ವ್ಯವಹಾರಕ್ಕೆ ತೊಡಗಿದವರೂ ಸಾಮಾನ್ಯ ವ್ಯಕ್ತಿಗಳಲ್ಲ. ಸಮಾಜದ ಪ್ರತಿಷ್ಠಿತ ವರ್ಗದವರ ಉಲ್ಲೇಖನೀಯ ಸಂಬಂಧವಿದೆಯೆಂಬುದು ಬಹಿರಂಗವಾಗಿದೆ. ಈಗ ವಶಪಡಿಸಿಕೊಂಡಿರುವ ಶಸ್ತ್ರಾಸ್ತ್ರಗಳಲ್ಲಿ ಹಲವಾರು ಅತ್ಯಂತ ವೈಜ್ಞಾನಿಕವಾದದ್ದು. ಬೇಹುಗಾರರ ಅಭಿಪ್ರಾಯದಲ್ಲಿ ಇದುವರೆಗೆ ಎಲ್ಲಿಯೂ ನೋಡದ್ದು. ಅಂದರೆ, ಈ ತಂಡದಲ್ಲಿ ಪ್ರತಿಭಾವಂತರೂ ತೂರಿಕೊಂಡಿದ್ದಾರೆಂಬುದು ಸುಸ್ಪಷ್ಟ. ಅಂತಹರ ಪ್ರತಿಭೆ ಸರಿದಾರಿಯಲ್ಲಿ ನಡೆಯುವುದು ಬಿಟ್ಟು ಕಾನೂನಿಗೆ ವಿರೋಧವಾಗಿ ಅಡ್ಡದಾರಿ ಹಿಡಿಯಬೇಕೇನು ಕಾರಣವೆನ್ನುವುದೂ ಬೆಳಕಿಗೆ ಬರಬೇಕು. "ಮನುಷ್ಯನು ಹುಟ್ಟಿನಿಂದಲೇ ಅಡ್ಡದಾರಿ ಹಿಡಿಯುವುದಿಲ್ಲ; ಪರಿಸ್ಥಿತಿಗಳ ಒತ್ತಡದಿಂದ ಹಾಗೆ ಮಾಡತೊಡಗುತ್ತಾನೆ" ಎಂಬುದು ವಾಸ್ತವಕ್ಕೆ ತೀರ ಹತ್ತಿರವಾಗಿದೆ. ಹಾಗಿರುವಾಗ, ಸದ್ಯ ಪತ್ತೆಯಾದ ತಂಡದ ಪ್ರತಿಭಾವಂತರನ್ನು ಸರಕಾರವೂ ಬಳಸಿಕೊಳ್ಳುವುದು ಸಾಧ್ಯವಾದರೆ, ದೇಶದ ರಕ್ಷಣೋಪಕರಣಗಳ ಸ್ಥಿತಿ-ಗತಿ ಸುಧಾರಿಸುವುದೂ ಸಾಧ್ಯ. ಇದೇ ರೀತಿಯ ನೂರಾರು ಪ್ರತಿಭಾವಂತರನ್ನು ನಾವು ಬೇರೆ ಬೇರೆ ಕಾರಣಗಳನ್ನು ಮುಂದೂಡಿ ಹತಾಶಗೊಳಿಸಿ ಭಗ್ನಮನೋರಥರನ್ನಾಗಿ ಮಾಡುತ್ತಲೇ ಬಂದಿದ್ದೇವೆ. ಇದರಿಂದಾಗಿಯೇ ದೇಶದ ಪ್ರತಿಭೆ ದೇಶಾಂತರ ಹೋಗುವುದು ಪರಿಪಾಟವಾಗಿದೆ. ಇನ್ನು ಇಲ್ಲಿಯೇ ಉಳಿದದ್ದು ಅಡ್ಡದಾರಿ ಹಿಡಿಯುವುದು ಸ್ವಾಭಾವಿಕವೇ.

ನಕ್ಸಲೀಯ ಚಟುವಟಿಕೆಗಳಿಗೆ ಅಥವಾ ಹಿಂಸಾಕಾರ್ಯಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರಯಿಸುವುದು ಈ ತಂಡದ ಉದ್ದೇಶವಾಗಿದ್ದರೆ, ಅದು ಖಂಡನೀಯ; ದೇಶದ್ರೋಹದ ಚಟುವಟಿಕೆ ಈ ಬಗ್ಗೆ ಇನ್ನೂ ವಿಸ್ತೃತ ತನಿಖೆ ನಡೆಯಬೇಕು. ಇತ್ತೀಚೆಗಿನ ಒಂದೆರಡು ವರ್ಷಗಳಲ್ಲಿ ದೇಶದಲ್ಲಿ ನಾನಾ ಕಾರಣಗಳಿಂದ ಹಿಂಸಾಚಾರ ವ್ಯಾಪ್ತವಾಗಿದೆ. ಇವು ಆಕಸ್ಮಿಕವಲ್ಲ; ಸುವ್ಯವಸ್ಥಿತವಾದ ಏರ್ಪಾಡು. ಪಶ್ಚಿಮ ಬಂಗಾಳದಲ್ಲಿ ಹತ್ತಾರು ಕೊಲೆ ನಡೆಯದ ದಿನವೆಂಬುವೇ ಇಲ್ಲ. ಹಾಗಿದ್ದರೂ ಸರಕಾರ ಈ ಬಗ್ಗೆ ಯಾವ ಪ್ರಾಮುಖ್ಯವನ್ನೂ ಕೊಡುವುದಿಲ್ಲ. ಆದುದರಿಂದಲೇ ಶಸ್ತ್ರಾಸ್ತ್ರಗಳ ತಯಾರಿ, ಪೂರೈಕೆ ಹಿಂಸಾಚಾರಗಳು ತಡೆಯಿಲ್ಲದಂತೆ ನಡೆಯುತ್ತಿವೆ.

ಈಗ ವರದಿಯಾಗಿರುವಂತೆ ಬಳ್ಳಾರಿ ಜಾಲದಲ್ಲಿ ಅನೇಕ ಸುಪ್ರತಿಷ್ಠ ವ್ಯಕ್ತಿಗಳೂ ಸೇರಿಕೊಂಡಿದ್ದಾರೆ. ಡಾಕ್ಟರರು, ಇಂಜಿನಿಯರು, ರಾಜ್ಯಕಾರಣಿಗಳು, ದಲಾಲಿಗಳು ಹೀಗೆ ಎಲ್ಲ ಕೈಗಳೂ ಒಂದಾದರೆ ಮಾತ್ರ ಇವೆಲ್ಲ ವ್ಯವಹಾರ ನಿರಾತಂಕವಾಗಿ ನಡೆಯಬಹುದು. ಯಾರೇ ಇರಲಿ, ದೇಶದ್ರೋಹ ಮತ್ತು ಶಾಸನದ ಉಲ್ಲಂಘನೆಗೆ ಸೂಕ್ತ ದಂಡನೆ ವಿಧಿಸಲೇ ಬೇಕು. ಈ ತಂಡವನ್ನು ಪತ್ತೆ ಹಚ್ಚಿದ ಬೇಹುಗಾರದಳಕ್ಕೆ ದೇಶವೇ ಕೃತಜ್ಞವಾಗಿರಬೇಕು.

ಪ್ರತಿಭಾವಂತರನ್ನು ದ್ವಿತೀಯ ದರ್ಜೆಯ ಪ್ರಜೆಗಳಾಗಿ ಕಾಣುವ ಚಟ ನಮ್ಮಿಂದ ದೂರವಾಗಬೇಕು. ಪ್ರತಿಭೆಯನ್ನು ಸರಕಾರ ಗುರುತಿಸಿ, ಅದನ್ನು ದೇಶಾಂತರವಾಗದಂತೆ, ಅದು ಅಡ್ಡದಾರಿ ಹಿಡಿಯದಂತೆ ಸಾಕಷ್ಟು ಹಿಂಡಿ ಗೊಬ್ಬರ ಹಾಕಿ ದೇಶ ಪುನಾರಚನೆಯಲ್ಲಿ ಬಳಸಿಕೊಳ್ಳಬೇಕು. ಇದಕ್ಕೆ ತಪ್ಪಿದರೆ, ದೇಶಾಂತರವಾಗಲು ಅಶಕ್ತವಾದ ಪ್ರತಿಭೆ ದೇಶದ್ರೋಹದಲ್ಲಿ ಆಸಕ್ತವಾಗುವುದು ಸಹಜ.

ಮೊದಲ ಯುದ್ಧ

ಚುನಾವಣೆಗಳು ಆರಂಭವಾಗಿ ಇನ್ನೇನು ಮುಗಿಯಲಿವೆ. ಇದೀಗ ವರದಿಯಾದಂತೆ ಆ. ೧೨ರ ಒಳಗೆ ಚುನಾವಣಾ ಫಲಿತಾಂಶವೆಲ್ಲವೂ ಪ್ರಕಟಗೊಂಡು, ಭಾರತದ ಭಾವಿಲೋಕ ಸಭೆಯ ಕರಡು ಚಿತ್ರವನ್ನು ನಮ್ಮ ಮುಂದಿಡುತ್ತದೆ. ದೇಶದ ಎಲ್ಲ ಕ್ಷೇತ್ರಗಳಲ್ಲಿಯೂ ಸ್ಪರ್ಧೆ ಇರುವುದು ಮುಖ್ಯವಾಗಿ ಇಂಡಿಕೇಟ್ ಮತ್ತದರ ಬೆಂಬಲಿತ ಪಕ್ಷಗಳು ಹಾಗೂ ಸಿಂಡಿಕೇಟ್ ಮತ್ತದರ ಹಿಂದಿರುವ ಪಕ್ಷಗಳ ನಡುವೆ. ತೋರಮಟ್ಟಿಗೆ ಹೇಳುವುದಾದರೆ ಕಾಂಗ್ರೆಸ್ಸಿನ ಎರಡು ಪಂಗಡಗಳ ನಡುವೆ—ಇದು ದಾಯಾದಿಕಲಹ. ಒಂದೊಂದು ಗುಂಪೂ ತನ್ನನ್ನು ಪಾಂಡವರೆಂದೂ ಇನ್ನೊಂದನ್ನು ಕೌರವರೆಂದೂ ಕರೆದು ಕೊಂಡಿದೆ; ಅಂದರೆ ಇದೀಗ ನಡೆಯುತ್ತಿರುವುದು 'ನೆಹರೂ ಉತ್ತರಾಧಿಕಾರ'ದ ಬಗ್ಗೆ ಕುರುಕ್ಷೇತ್ರ. ಕುರುಕ್ಷೇತ್ರದಲ್ಲಿ ಪಾಂಡವರು ಗೆದ್ದರು; ಕೌರವರು ಮಣ್ಣು ಮುಕ್ಕಿದರು. ಇದಕ್ಕೆ ಕೃಷ್ಣನ ಲೀಲೆಯೇ ಕಾರಣ. ಆದರೆ ಈ ಕುರುಕ್ಷೇತ್ರದಲ್ಲಿ ಕೃಷ್ಣ ಕಾಣಿಸಿ ಕೊಳ್ಳಲಿಲ್ಲ; ಪ್ರಾಯಃ ರಾಮಸ್ವಾಮಿ ನಾಯಕರ ಚಪ್ಪಲಿಗೆ ಹೆದರಿ ಅಡಗಿದನೋ ಏನೋ! ಆದುದರಿಂದ ಇಲ್ಲಿ ಯಾರೊಬ್ಬರ ಸಂಪೂರ್ಣ ಸೋಲೂ ಇಲ್ಲ; ಯಾರೊಬ್ಬರ ಸಂಪೂರ್ಣ ಗೆಲುವೂ ಇಲ್ಲ. ಇದರಿಂದ ಮತ್ತೆ ಸೈನ್ಯ ಭರ್ತಿ–ಪಕ್ಷಾಂತರ. ಒಬ್ಬೊಬ್ಬ ಎಂಪಿಯ ಕಿಮ್ಮತ್ತು ಅವನು ಎಂಪಿಯಾಗಲು ಮಾಡಿದ ಖರ್ಚಿನ ಇಮ್ಮಡಿ–ಮುಮ್ಮಡಿ–ನಾಲ್ಮಡಿ....ಹೀಗೆ ಏರುತ್ತದೆ. ಅಂತೂ ಹೊಡೆದಾಟ ಇಷ್ಟಿಗೇ ಮುಗಿಯಲಿಲ್ಲ; ಕುರುಕ್ಷೇತ್ರದ ಮೊದಲನೆ ದಿನದ ಯುದ್ಧ ಮಾತ್ರವಿದೆನಿಸುತ್ತದೆ. ಭೀಷ್ಮ ಪರ್ವವೇ ಹತ್ತು ದಿನವಿರಬೇಕಲ್ಲ? ●

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 321/1968
Ex. C. 255/1970

1. ಕೃಷ್ಣ ಯಾನೆ ಪಾರ್ವತಿ ಹೆಂಗಸು
2. ನ ತೆ ಶ್ರೀ ವ ಹಾಲಕ್ಷ್ಮಿ ದೇವರ ಭಂಡಾರ—ಅರ್ಜಿದಾರರು

ವಾ ವ. ನ ನ್ಯ ಕೂಡಾ —ಎದ್ರಿಉ

Judgement debtors:

1 ವ ವ ನ ನ, 9 ಬ ಬು ನ್ಯಾಕ, 7. ನ. ೧೨ ಎ. ಣ ನ್ಯಾಕ. 8. ನ. ಸಂಜನ್ನಾಕ —ಗಟ್ಟಿ ಪ್ರಭ ಮುಕ್ತ 10, ರಂಗ ಮ್ಮ—ಂಟ ಪ ಭುರಿ ಗಧವೆ. ಕಾರ್ಕಳ ತಾಲ್ಲೂಕು ನಲ್ಲೂರು ಗ್ರಾಮದ ರಂಬೆಟ್ಟು ಎಂಬಲ್ಲಿರುವವರು, 12 ಗ. ಲಾದಿ ಯಾನೆ ಸುಮಾ ಶೆಡ್ತಿ, ಗ ಹೆಗ್ಡೆ ಮಗಳು ಸದ್ರಿ ನಲ್ಲೂರು ಗ್ರಾಮದ ಹಂದ್ರಬೆಟ್ಟು ಎಂಬಲ್ಲಿರುವವಳು.

1ನೇ ಅರ್ಜಿದಾರಳು 2ನೆ ಅರ್ಜಿದಾರ ದೇವರ ಭಂಡಾರಕ್ಕೆ ಬರೆಕೊಟ್ಟ ರಜಿಸ್ಟ್ರದ ಸಾಲ ಪತ್ರದ ಕಾರ ಸದ್ರಿ ಡಿಕ್ರಿ ಆಸ್ತಿ 2ನೆ ಅರ್ಜಿದಾರ ದೇವರ ಭಂಡಾರಕ್ಕೆ ಬಂದದ್ದನ್ನು ಮುಂಜೂರು ಮಾಡಿ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಸಿರುವ ಸ್ಥಿರಾಸ್ತಿಗಳ ಏಲಂನಿಂದ ಹಣ ಬರಮಾಡಿಕೊಳ್ಳುವರೆ ಪ್ರಿವ್ಯಾತಿ ಕೇಳಿ ಅರ್ಜಿದಾರರು ಮಾಡಿದ ಸದ್ರಿ ಅಮಲ್ದಾರಿಯು ತಾ. 10–3–1971ಕ್ಕೆ ಇದೆ ಲಾಗಿ ಇದೆ. ಆಕ್ಷೇಪ ಇದ್ದವರು ಸದ್ರಿ ದಿನ ಬೆಳಗ್ಗೆ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲಾಗುವದು.

P. Ramachandra Rao
Pleader for D. Hs.

ಕಾರ್ಕಳ, ತಾ. 26–2–71.

ಸಣ್ಣ ಬಂಡವಾಳದಿಂದ ಗೃಹ ಕೈಗಾರಿಕಾ ನ್ನ ಹಾಗವನ್ನು ಅಭಿವೃದ್ಧಿಗೊಳಿಸಿ ನಿಮ್ಮ ಸಂಪಾದನೆಯನ್ನು ಹೆಚ್ಚಿಸಲು ಸಲುವಾಗಿ ಗುಡಿ ಗೃಹ ಕಾರ್ಯ ಕನ್ನಡ ಪುಸ್ತಕಕ್ಕಾಗಿ ವಿಚಾರಿಸಿ. ಪುಟಗಳು: 234, ಬೆಲೆ ರೂ. 10.00, ಅಂಚೆವೆಚ್ಚ: ರೂ.2.50.
Cottage Industry (NC-1) P.B.1262,
Anguri Bagh Market, Delhi-6.

ಚಾರುಚಯನ

ಓಟು ಯಾರಿಗೆ ಹಾಕಬೇಕು ?

ಓಟು ಯಾರಿಗೆ ಹಾಕಬೇಕು?

ಚುನಾವಣೆಗಳು ಬಂದಷ್ಟು ಬಾರಿ ಈ ಪ್ರಶ್ನೆ ಮತದಾರರನ್ನು ಕಾಡುತ್ತದೆ.

ಈ ಬಾರಿಯ ಚುನಾವಣೆಗಳ ವೇಳೆ ಈ ಪ್ರಶ್ನೆ ಭಾರೀ ಭೂತವಾಗಿ ತಲೆಯ ಮೇಲೆ ಸವಾರಿ ಮಾಡುತ್ತದೆ.

ಇದಕ್ಕೆ ಕಾರಣ ಸ್ಪಷ್ಟ.

ಇದಕ್ಕೆ ಮೊದಲು ತಾನು ಗೆದ್ದೇನೆಂದು ವಿಶ್ವಾಸವಿರುವ ಕ್ಷೇತ್ರಗಳಲ್ಲಿ ಬೇರೆ ಬೇರೆ ರಾಜ್ಯಕೀಯ ಪಕ್ಷಗಳು ತಂತಮ್ಮ ಹುದ್ದರಿಗಳನ್ನು ನಿಲ್ಲಿಸುತಿದ್ದುವು. ಪ್ರತಿಪಕ್ಷಕ್ಕೂ ತನ್ನದೇ ಆದ ನೀತಿ-ನಿಲುವೆ ಇರುತಿತ್ತು. ಯಾವ ಪಕ್ಷದ ನೀತಿ ತನಗೆ ಸಮಾಧಾನಕರವೋ ಆ ಪಕ್ಷದ ಅಭ್ಯರ್ಥಿಗೆ ಮತದಾನ ಮಾಡಬಹುದಿತ್ತು.

ಆದರೆ, ಈ ಬಾರಿ ಹಾಗಿಲ್ಲ.

ಶ್ರೀಮತಿ ಇಂದಿರಾ ಗಾಂಧಿಯವರ ಇಂಇಂಡಿಕೇಟು ಹೆಚ್ಚಿನೆಡೆ ತನ್ನ ಕಾಲ ಮೇಲೆಯೇ ನಿಂತು ಅದು ಸ್ಪರ್ಧೆಗಿಳಿದಿದೆ. ಕೆಲವೆಡೆ ಅದು ಇತರ ಪಕ್ಷಗಳೊಡನೆ ಹೊಂದಾಣಿಕೆ ಮಾಡಿಕೊಂಡಿದೆ.

ತಮಿಳುನಾಡು, ಕೇರಳ ಮತ್ತು ಪಶ್ಚಿಮ ಬಂಗಾಳಗಳು ಈ ಹೊಂದಾಣಿಕೆಗೆ ಮುಖ್ಯ ರಾಜ್ಯಗಳು.

ಇಂಡಿಕೇಟ್ ಹೊಂದಾಣಿಕೆ ಮಾಡಿಕೊಂಡದ್ದು ಯಾರೊಡನೆ?

ವಿದೇಶನಿಷ್ಠರಾದ ಕಮ್ಯುನಿಸ್ಟರೊಡನೆ, ಪ್ರಾಂತೀಯವಾದಿ ದ್ರಾವಿಡ ಮುನ್ನೇತ್ರ ಕಳಗಂನೊಡನೆ ಮತ್ತು ನೂರಕ್ಕೆ ನೂರು ಜಾತೀಯವಾದಿ ಮುಸ್ಲಿಂ ಲೀಗಿನೊಡನೆ. ಇನ್ನು ಕೆಲವೆಡೆ ಚಿಕ್ಕಪುಟ್ಟ ಪ್ರಾದೇಶಿಕ ಪಕ್ಷಗಳೊಡನೆ.

ಇಂಡಿಕೇಟಿನ ಅಧ್ಯಕ್ಷ ಶ್ರೀ ಜಗಜ್ಜೀವನರಾಮರು ಮೊದಲೇ ಘೋಷಿಸಿದ್ದಾರೆ-ರಾಷ್ಟ್ರೀಯ ಮಟ್ಟದಲ್ಲಿ ಯಾವ ಪಕ್ಷದೊಡನೆಯೂ ಇಂಡಿಕೇಟ್ ಮೈತ್ರಿ ಸಾಧಿಸುವುದಿಲ್ಲವೆಂದು. ಅಂದರೆ, ಪ್ರಾದೇಶಿಕ-ಪ್ರತ್ಯೇಕವಾದಿ ಪಕ್ಷಗಳೊಡನೆ ಮಾತ್ರ ತಮ್ಮ ಮೈತ್ರಿಯೆಂದು. ವಿದೇಶನಿಷ್ಠರೊಡನೆ ಮಾತ್ರ ತಮ್ಮ ಸ್ನೇಹವೆಂದು!

ಕಮ್ಯುನಿಸ್ಟ್ ಪಕ್ಷ ಮತ್ತು ಮುಸ್ಲಿಂ ಲೀಗುಗಳು ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸದಲ್ಲಿ ಇಂಡಿಕೇಟಿಗೆ ಬೆಂಬಲ ಸೂಚಿಸಿವೆ. ದ್ರಾಮುಕದೊಡನೆ ಇಂಡಿಕೇಟ್ ಕೂಡಿಕೊಂಡಿದೆ.

ರಶ್ಯ ಅಥವಾ ಚೀನಾ ಪ್ರೇರಿತ ಕಮ್ಯುನಿಜಂ ಭಾರತಕ್ಕೆ ಬೇಕಾಗಿಲ್ಲ. ಕಮ್ಯುನಿಜಂ ಜ್ವಾಲೆಯ ಬೇಗೆಯಿಂದ ಬಂಗಾಳ-ಕೇರಳದ ನಾಗರಿಕರು ಪಡುತ್ತಿರುವ ಬವಣೆಯನ್ನು ನೆನೆದಾಗಲೇ ಮೈ ಜುಮ್ಮೆನ್ನುತ್ತಿದೆ.

ಮತ ಪೆಟ್ಟಿಗೆಗಳಿಂದ ಸಾಮಾಜಿಕ ನ್ಯಾಯ ಸಿಗುವುದಿಲ್ಲವೆಂದು ಪ್ರಜಾತಂತ್ರವನ್ನೇ ಅಲ್ಲಗಳೆಯುವ ಕಮ್ಯುನಿಸ್ಟರ ಅಪವಿತ್ರ ಮೈತ್ರಿಯನ್ನು ಇಂಡಿಕೇಟು ಹಿಂದೆ ತ್ಯಜಿಸಿಲ್ಲ; ಇಂದೂ ತ್ಯಜಿಸಿಲ್ಲ; ಮುಂದೆಯೂ ತ್ಯಜಿಸುವುದಿಲ್ಲ.

ದ್ರಾಮುಕದ ನೀತಿಯಿಂದು ಜಗಜ್ಜನಿತ. ಧರ್ಮದ ಜೀವಾಳವಾದ ದೇವರ ಅಸ್ತಿತ್ವವನ್ನೇ ಅದು ಕೆದಕಲು ಹೊರಟಿದೆ. ಆದರೆ, ಹಿಂದೂ ದೇವರ ಪಟಗಳನ್ನು ಚಪ್ಪಲಿಯಿಂದ ಹೊಡೆಯುವ ಪೌರುಷವಂತರು ಮುಸ್ಲಿಮರ ಅಥವಾ ಕ್ರೈಸ್ತರ ಇಲ್ಲವೇ ಇತರ ಮತೀಯರನ್ನು ಇದುವರೆಗೆ ಕೆಣಕುವ ಸಾಹಸ ತೋರಲಿಲ್ಲ. ಪ್ರತ್ಯೇಕತಾವಾದಿಗಳಾದ ದ್ರಾಮುಕರು ಭಾರತದ ಐಕ್ಯವನ್ನು, ಏಕ ರಾಷ್ಟ್ರೀಯತೆಯನ್ನು ನೆಚ್ಚುವುದಿಲ್ಲ; ಪ್ರತ್ಯೇಕ ಧ್ವಜವನ್ನು ಹಾರಾಡಿಸುವ ಹೆಬ್ಬಯಕೆಯುಳ್ಳ ಇವರ ಸ್ನೇಹ ಭಾರತೀಯ ಏಕತೆಯ ಸೂತ್ರವನ್ನು ಕಡಿದು ದೇಶವನ್ನು ಆತಾಂತ್ರಿಕ ಅಬಲವಾಗಿ ಮಾಡಲು ಸಶಕ್ತವಾಗಿದೆ.

ಅಲ್ಪಸಂಖ್ಯಾಕರೆಂಬ ಹೆಸರಲ್ಲಿ ಬಹುಸಂಖ್ಯಾಕರ ಮೇಲೆ ಸವಾರಿ ಮಾಡಿ ತಮ್ಮ ಸ್ವಾರ್ಥ ಸಾಧನೆಗೆ ಇತರರ ರಕ್ತ ಹಿಂಡುವ ಮುಸ್ಲಿಂಲೀಗು ತನ್ನ ಪಿಪಾಸೆಯನ್ನು ತಣಿಸುವುದಕ್ಕೆಂದೇ ಇಂಡಿಕೇಟಿಗೆ ಬೆಂಬಲ ನೀಯುತ್ತವೆ.

ಈ ಮತೀಯ ಮತ್ತು ಎಡ ಪಕ್ಷಗಳಿಗೆ ದುರಾಗಿ ಸಿಂಡಿಕೇಟ್, ಸ್ವತಂತ್ರ, ಜನಸಂಘ ಮತ್ತು ಸಂಯುಕ್ತ ಸಮತಾವಾದಿ ಪಕ್ಷಗಳು ಒಂದು ಗೂಡಿವೆ. ಕೆಲವೆಡೆ ಪ್ರಜಾಸಮಾಜವಾದಿ ಪಕ್ಷವೂ ಈ ಮೈತ್ರಿಕೂಟಕ್ಕೆ ಬೆಂಬಲವಾಗಿದೆ.

ಸಮಾಜವಾದವೇ ಇಂದು ಎಲ್ಲ ರಾಷ್ಟ್ರೀಯ ಪಕ್ಷಗಳ ಲಕ್ಷ್ಯ. ಆದುದರಿಂದ ಇಂಡಿಕೇಟ್ ಅಧಿಕಾರ ಗದ್ದುಗೆಗೇರಿದರೆ ಮಾತ್ರ ಸಮಾಜವಾದ ಜ್ಯಾರಿಗೆ ಬರುವುದೆಂದು ವಾದಿಸುವುದು ಮಹಾ ಮೂರ್ಖತನದ ಪ್ರಮಾದ.

ಇಂಡಿಕೇಟ್ ತನ್ನ ಒಂದೂವರೆ ವರ್ಷದ ಅಧಿಕಾರಾವಧಿಯಲ್ಲಿ ಏನನ್ನು ಸಾಧಿಸಿತು?

ಬ್ಯಾಂಕುಗಳ ರಾಷ್ಟ್ರೀಕರಣವೊಂದು; ರಾಜಧನ ರದ್ದತಿಯ ಸುಗ್ರೀವಾಜ್ಞೆ ಮತ್ತೊಂದು.

ಆದರೆ, ಇದರಲ್ಲಿ ಹೊಸತೇನಿದೆ?

ಪಂ. ನೆಹರುರವರು ದೇಶದ ದೊಡ್ಡ ಬ್ಯಾಂಕಾದ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾವನ್ನು ರಾಷ್ಟ್ರೀಕರಣ ಮಾಡಿದ್ದನ್ನು ಯಾರೂ ಹೇಳುವುದಿಲ್ಲ. ಜೀವವಿಮಾ ಕಂಪೆನಿಗಳ ರಾಷ್ಟ್ರೀಕರಣ ಸಾಧಿಸಿದ್ದನ್ನು ಯಾರೂ ಗಮನಿಸಿದಂತಿಲ್ಲ.

ಏಕೆಂದರೆ, ಪಂ. ನೆಹರುರವರು ತಾನು ಮಹಾಸಾಧನೆ ಮಾಡಿದೆನೆಂದುಕೊಳ್ಳಲಿಲ್ಲ. ಟ್ಯಾಕ್ಸೀ ಡ್ರೈವರುಗಳನ್ನೂ ರಿಕ್ಷಾ ಓಡಿಸುವವರನ್ನೂ ಗಾಡಿ ಹೊಡೆಯುವವರನ್ನೂ ಮನೆಯಂಗಳದಲ್ಲಿ ಕೂರಿಸಿ ತನ್ನ ಹೆಗ್ಗಳಿಕೆ ಹೊಗಳಿಕೊಳ್ಳಲಿಲ್ಲ.

ಶ್ರೀಮತಿ ಗಾಂಧಿ ರಾಷ್ಟ್ರೀಕೃತ ಬ್ಯಾಂಕುಗಳ ಸಾಲಿಗೆ ಮತ್ತೆ ಹದಿನಾಲ್ಕನ್ನು ಸೇರಿಸಿದರು. ರಾಷ್ಟ್ರೀಕರಣದ ನಂತರ ಬ್ಯಾಂಕಿಂಗ್ ವ್ಯವಸ್ಥೆ ಹೇಗೆ ನಡೆಯಹತ್ತಿದೆಯೆಂದರೆ, ಅದು ವಿಶಾದನೀಯ. ಯಾವ ಧ್ಯೇಯೋದ್ದೇಶಗಳನ್ನಿಟ್ಟು ಈ ರಾಷ್ಟ್ರೀಕರಣ ಸಾಧಿಸಲಾಯ್ತೋ ಅವುಗಳಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಕನಸಿನಲ್ಲೇ ಉಳಿದಿದೆ. ಉಳಿದ ಒಂದು ಅಸಂಬದ್ಧವಾಗಿದೆ.

ರಾಜಧನಾದಿಗಳನ್ನು ಸಂಧಾನದ ಮೂಲಕವೇ ತ್ಯಜಿಸಲು ರಾಜರು ಸಿದ್ಧರಿದ್ದಾಗ, ತನ್ನಿಂದಾಗಿಯೇ ಅದಾಯಿತೆಂದು ಹೇಳಿಕೊಳ್ಳಲು ಶ್ರೀಮತಿ ಸಂವಿಧಾನ ತಿದ್ದುಪಡಿ ತಂದರು.

ಅದು ಸಂಸತ್ತಿನಲ್ಲಿ ಬಿದ್ದುಹೋದೊಡನೆಯೇ ಸುಗ್ರೀವಾಜ್ಞೆ ಹೊರಡಿಸಿದರು.

ತನ್ನಿಂದಲೇ ಪ್ರಜಾಸತ್ತೆ ಉಳಿಯುವುದೆಂದು ನಿಂತಲ್ಲಿ ಕುಳಿತಲ್ಲಿ ಉಗ್ಗಡಿಸುವ ಪ್ರಧಾನಿ ಸಂಸತ್ತನ್ನು ಧಿಕ್ಕರಿಸಿ ತಾನು ತಪ್ಪು ಹೆಜ್ಜೆಯಿಟ್ಟೆನೆಂದು ಇನ್ನೂ ಒಪ್ಪಿಕೊಳ್ಳಲು ಸಿದ್ಧರಿಲ್ಲ.

ಪ್ರಜಾಸತ್ತೆಯ ರಕ್ಷಣೆಗೆ ನ್ಯಾಯಾಲಯವು ಓಡಿ ಬರಬೇಕಾಯ್ತು. ಹೀಗೆ ಬಂದ ನ್ಯಾಯಾಲಯವನ್ನೇ ಟೀಕಿಸಲು ಇಂಡಿಕೇಟಿಗರೂ ಅದರ ಜೀವಸ್ನಿತ್ರರೂ ಸಿದ್ಧರಾದರು. ಇಂಥವರಿಂದ ಪ್ರಜಾತಂತ್ರ ನೆಮ್ಮದಿಯಿಂದ ಉಸಿರಾಡುವುದು ಸಾಧ್ಯವಾದೀತೆ?

ಸಮಾಜವಾದದ ಹೆಸರಲ್ಲಿ, ರೈತ ಕಾರ್ಮಿಕರ ಉದ್ಧಾರದ ನೆಪದಲ್ಲಿ ದೇಶದ ಅರ್ಥವ್ಯವಸ್ಥೆಗೆ ಅನಾರೋಗ್ಯಕರ ವಾತಾವರಣ ನಿರ್ಮಿಸುವಲ್ಲಿ ಮಾತ್ರ ಅವರು ಸಫಲರಾಗಿದ್ದಾರೆ; ಪರಿಣಾಮವಾಗಿ ಉತ್ಪಾದನೆ ಕುಗ್ಗಿತು; ಪೂರೈಕೆ ಶಿಥಿಲವಾಯ್ತು; ಆರ್ಥಿಕ ಪರಿಸ್ಥಿತಿ ಕಂಗಾಲಾಯಿತು; ಹಾಗಾಗಿ ಎಲ್ಲಿ ನೋಡಿದರೂ ನಿರುದ್ಯೋಗ ಬೆಳೆಯಿತು; ಬೆಲೆಯೇರಿತು; ಅಭಾವ ಹೆಚ್ಚಿತು. ಜನಜೀವನ ದುಸ್ತರವಾಯ್ತು.

ಇವಕ್ಕೆಲ್ಲ ತಾನು ಕಾರಣಳಲ್ಲ; ತನ್ನ ವಿರೋಧಿಗಳೆಂದು ಶ್ರೀಮತಿ ಗಾಂಧಿ ಮತ್ತಾಕೆಯ ಮಿತ್ರರು ಪ್ರಚಾರಕ್ಕೆ ತೊಡಗಿದರು—ಕುಣಿಯಲು ಬಾರದವನು ರಂಗಸ್ಥಳ ಓರೆಯೆಂದಂತೆ!

ಸಿಂಡಿಕೇಟ್ ನೇತೃತ್ವದ ಮೈತ್ರಿ ಕೂಟ ಪ್ರಜಾಸತ್ತೆಯನ್ನು ಉಳಿಸುವ ಏಕೈಕ ಉದ್ದೇಶದಿಂದ ರೂಪ ಧರಿಸಿದೆ. ಪ್ರಧಾನಿ ಗಾಂಧಿಯ ಪಕ್ಷವನ್ನು ಸೋಲಿಸಿ. ಆಕೆಯ ಸ್ವೈರ ವೃತ್ತಿಗೆ ಪೂರ್ಣ ವಿರಾಮ ಹಾಕಿ. ಸಂವಿಧಾನವನ್ನು ಎತ್ತಿ ಹಿಡಿದು ಸಮಾಜವಾದವನ್ನು ಜ್ಯಾರಿಗೆ ತರುವ ಸದುದ್ದೇಶ ಅದರದು.

ರಾಜಧನ ರದ್ದತಿಗೆ ಇದೂ ಬದ್ಧವೇ. ಹಲವರು ರಾಜರು ತಮ್ಮ ಧನವನ್ನೂ ವಿಶೇಷ ಹಕ್ಕುಗಳನ್ನೂ ತ್ಯಾಗ ಮಾಡಲು ತಾವಾಗಿಯೇ ಮುಂದೆ ಬಂದಿದ್ದಾರೆ.

ದೇಶನಿಷ್ಠೆಯನ್ನು ಬೆಳೆಸಿ, ದೇಶದ ಐಕ್ಯವನ್ನು ಉಳಿಸಿ, ವಿವಾದಗಳನ್ನು ಸಮಾಧಾನಕರವಾಗಿ ತೀರ್ಮಾನಿಸಿ, ಉತ್ಪಾದನೆಯನ್ನು ಹೆಚ್ಚಿಸಿ. ಬೆಲೆಯೇರಿಕೆಯನ್ನು ತಡೆದು ಉದ್ಯೋಗ ಬಯಸುವವರಿಗೆಲ್ಲ ಉದ್ಯೋಗಾವಕಾಶವೊದಗಿಸಿ, ರೂಪಾಯಿಯ ಬೆಲೆಯನ್ನು ಹೆಚ್ಚಿಸಿ, ಶ್ರೀಮಂತ-ಬಡವರ ನಡುವಣ ಅಂತರವನ್ನು ಇಳಿಸಿ ಸಮಾಜವಾದವನ್ನು ಜ್ಯಾರಿಗೆ ತರಲು ಈ ಮೈತ್ರಿಕೂಟ ಬದ್ಧವಾಗಿದೆ.

ಭಾರತೀಯರೆಲ್ಲರೂ ಸರಿಸಮಾನರು ಎಂಬುದರಲ್ಲಿ ದೃಢವಿಶ್ವಾಸವಿಟ್ಟು ಸಂವಿಧಾನದ ಶ್ರೇಷ್ಠತೆಯನ್ನು ಸಂರಕ್ಷಿಸುವ ಹೊಣೆಗಾರಿಕೆ ಇವರದ್ದು.

ಮತದಾರನು ಯೋಚಿಸಬೇಕು.

ರಾಷ್ಟ್ರೀಕೃತ ಉದ್ದಿಮೆಗಳು ಕೋಟ್ಯಂತರ ರೂಪಾಯಿಗಳ ನಷ್ಟದಲ್ಲೇ ಮುಂದುವರೆಯುತ್ತಿರುವಾಗ, ಈ ರಾಷ್ಟ್ರೀಕರಣವನ್ನು ಮಿತಿಯಲ್ಲಿಡಬೇಕೆ, ಮತ್ತೂ ಮತ್ತೂ ಮುಂದುವರಿಸಿಕೊಂಡು ನಷ್ಟವನ್ನು ಹೆಚ್ಚಿಸಿ, ಅದನ್ನು ತುಂಬಿಕೊಳ್ಳಲು ಶ್ರೀ ಸಾಮಾನ್ಯನನ್ನು ಹಿಂಡಿ ಹಿಪ್ಪೆಮಾಡಬೇಕೆ?

ಮಂತ್ರಿ—ಮಾಗಧರ ವಿಶೋ ಆರಾಮಜೀವನಕ್ಕೆ ಕೋಟ್ಯಂತರ ರೂಪಾಯಿಗಳು ಪೋಲಾಗುವುದನ್ನು ಮುಂದುವರಿಸಬೇಕೆ?

ಭ್ರಷ್ಟಾಚಾರ—ಆಡಳಿತ ಅದಕ್ಷತೆ ಕರ್ತವ್ಯ ಲೋಪಗಳಿಗೆ ಕಡಿವಾಣ ಹಾಕಬೇಡವೆ?

ಮುಂದುಗಡೆ ಇರುವೆ ಹೋಗುವುದನ್ನು ತಡೆದು ಹಿಂದುಗಡೆ ಆನೆ ತಪ್ಪಿಸಿಕೊಂಡು ಹೋಗಲು ಉತ್ತೇಜನ ನೀಡುವವರಿಂದ ಸಮಾಜವಾದ ಸ್ಥಾಪನೆಯಾದೀತೆ?

(ಒಂಭತ್ತನೇ ಪುಟ ನೋಡಿರಿ)

ನವಯುಗ ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

ಮೇ ತಿಂಗಳಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಸದಸ್ಯರ 'ತೊಂದರೆ' ಇಲ್ಲದೆನೇ ಇಂದಿರಾಜೀ ಪ್ರಧಾನಿಯಾಗಿ ಮುಂದರಿಯಬಹುದು! ರಾಷ್ಟ್ರಾಧ್ಯಕ್ಷ ಗಿರಿಯವರಿಗೆ ಎದುರು ಪಕ್ಷದ ಪ್ರಮುಖರೆಲ್ಲರೂ ಪತ್ರ-ತಂತಿಗಳ ಮೂಲಕ ಬರಕಾಸ್ತುಗೊಳಿಸಬಾರದೆಂದೂ ತಮಗೆ ಒಂದು ಅವಕಾಶ ಒದಗಿಸಿಕೊಡಬೇಕೆಂದೂ ಕೇಳಿಕೊಂಡರೂ ಗಿರಿಯವರು ಉಪಕಾರ ಮರೆಯುವವರಲ್ಲವೆಂಬುದನ್ನು ಸಿದ್ಧಪಡಿಸಿದರು. ಇಂದಿರಾಜೀಯವರ ಸಚಿವಸಂಪುಟವೂ 'ಜೀ, ಹುಜೂರ್'ಗಳಿಗಿಂತ ಕೀಳ್ಮಟ್ಟದವರೇನೂ ತಾವಲ್ಲವೆಂಬುದನ್ನು ಸ್ಪಷ್ಟಪಡಿಸಿದೆ. ರಘುರಾಮಯ್ಯನವರೂ ಈಗೇನಯ್ಯಾ ಹೇಳುವರು? ಸಚಿವ ಸಂಪುಟದ ಸಭೆಗೆ ಏರ್ಪಾಡಾಗಿತ್ತು. ಮಧ್ಯದಲ್ಲಿ ಒಂದೇ ಒಂದು ರಾತ್ರಿ. ಅದೆಲ್ಲೆಲ್ಲಿಗೋ ಹೋಗಿದ್ದ ಅಮಾತ್ಯವೃಂದ ಹಿಂತಿರುಗಲು ಏರ್ಪಾಡು ಮಾಡಿಕೊಂಡಿತ್ತು. ತಾವೇ ಇಂದಿರಾಜೀಯವರ ಬಲಗೈ ಭಾರೀ ಕುಳಗಳು, ಅಂತಃರಂಗದ ಅಮಾತ್ಯರು, ನಂಬಿಕೆಯ ನೇಹಿಗರೆಂದೆಲ್ಲಾ ಮನಸ್ಸಿನಲ್ಲೇ ಮಂಡಿಗೆ ಮೆಲ್ಲುತ್ತ, ಕಲ್ಪನಾ ಕುದುರೆಯ ಮೇಲೆ ವಿಹರಿಸುತ್ತ, ಮುಗಿಲ ಮಾಳಿಗೆಗಳಲ್ಲೇ ವಾಸಿಸುತ್ತಿದ್ದ ಸ್ವರಣ ಸಿಂಘ, ಹನುಮಂತಯ್ಯ, ರಘುರಾಮಯ್ಯ, ಕೆ. ಕೆ. ಷಾ, ದಿನೇಶ ಸಿಂಘ, ಡಾ| ವಿ. ಕೆ. ಆರ್. ವಿ. ರಾವ್ ಮುಂತಾದ ಅತಿರಥ ಮಹಾರಥರು ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ಇಂದಿರಾಜಿಯವರ ಬಳಿ ಇರಲಿಲ್ಲ. ಇದರಿಂದ ಅವರ ಮನಸ್ಸಿನ ಮೇಲೇನಾದರೂ ಪರಿಣಾಮ ಆಗಿದೆಯೋ? 'ಅಬ್ಬಾ' ಲೋಕಸಭೆಯ ಸದ್ದುಗದ್ದಲ್ಲಿಲ್ಲದೆ ಸಚಿವರಾಗಿ ಸಂಚರಿಸುವ ಸದವಕಾಶದ ಭಾಗ್ಯ ತಮಗೆ ದೊರಕಿಸಿಕೊಟ್ಟರು. ಅವರ ಭಾಗ್ಯದೇವಿ ಇಂದಿರಾರಾಣಿಯವರಿಗೂ ಭಾಗ್ಯದೇವತೆ ವ. ವಾ. ಗಿರಿಯವರಿಗೂ ಅವರು ಆಭಾರಿಗಳು. ಈ ಉಪಕಾರವನ್ನು ಅವರೆಂದಿಗೂ ಮರೆಯಲಾರರು.

ಇಂದಿರಾಗಾಂಧಿಯವರು ಹೇಳಿರುವಂತೆ ಭಾರತದ ಪ್ರಜಾಪ್ರಭುತ್ವದಲ್ಲಿ ಈ ಘಟನೆ ಇದೇ ಮೊತ್ತಮೊದಲಬಾರಿಗೆ ನಡೆದದ್ದಿದೆ.

ಇಂದಿರಾಜಿಯವರ ಜೀವನವೇ ಇಂತಹ ಮೊತ್ತಮೊದಲೆಗಳಿಂದ ತುಂಬಿರುತ್ತದೆ. ಅವರ ಪಾಲಿಗೆ ಇದೇನೂ ಅಸ್ವಾಭಾವಿಕ, ಅಸಾಧಾರಣವಾದ ವಿಷಯವಿರುವುದಿಲ್ಲ. ಇದು "ಪ್ರಧಾನಿಯವರ 'ಹೊಸ ವರ್ಷ'ದ ಕೊಡುಗೆಯಂತೆ! ಹೊಸ ವರ್ಷ! ಯಾರಿಗೆ? ಭಾರತ ಸರಕಾರ ಶಕವರ್ಷವನ್ನು ಅನುಸರಿಸುತ್ತಿದೆಯೋ? ಇಲ್ಲವೆ ಕ್ರಿಸ್ತಶಕವನ್ನೋ? ಜನತೆಯ ಬಳಿ ಏನು ಬೇಕಾದರೂ ಅವರು ಆಡುತ್ತಾರೆ!

ಲೋಕಸಭಾ ವಿಸರ್ಜನೆಯ ವಿಷಯ ಕಾಳ್ಗಿಚ್ಚಿನಂತೆ ಹಬ್ಬಿತು. ಕೃಪಲಾನಿಯವರು ಸಂಸದನ್ನು ವಿಸರ್ಜಿಸುವ ಹಕ್ಕು ಪ್ರಧಾನಿಯವರಿಗಿಲ್ಲವೆಂದಿದ್ದಾರೆ. ಯಾವ ಪ್ರಧಾನಿಯವರಿಗೆ? ಅವರ ಮಾತಿನಲ್ಲೇ ಸೂಚಿಸುವದಿದ್ದಲ್ಲಿ ಅಲ್ಪ ಸಂಖ್ಯಾಕರ ಪಕ್ಷದ ಪ್ರಧಾನಿಗೆ? ಅಲ್ಪ ಮತೀಯರ ಪಕ್ಷದ ಪ್ರಧಾನಿ ಆಳಬಹುದಾದಲ್ಲಿ ವಿಸರ್ಜಿಸಲು ಸೂಚಿಸುವ ಹಕ್ಕೂ ಅವರಿಗಿದೆ. ವಿಸರ್ಜಿಸುವ ನಿರ್ಧಾರಕ್ಕೆ ಬರುವವರೂ ಒಬ್ಬರಿದ್ದಾರಲ್ಲಾ! ಮುದ್ರೆ! ಅವರು ಯೋಚಿಸಿ ನೋಡಬೇಕಾಗಿತ್ತು. ಇಲ್ಲಿ ಇಂದಿರಾಜೀಯವರು ರಾಜ್ಯಸಭೆಯನ್ನು ವಿಸರ್ಜಿಸಲು ತಿಳಿಸಿರುವದಿಲ್ಲ. ಅದು ನಡೆಯವಂತೆಯೂ ಇಲ್ಲ. ಇಂದಿರಾಜೀಯವರ ನಿರ್ಬಲತೆಯ ಕುರಿತು ಸಂಸ್ಥಾ ಕಾಂಗ್ರೆಸ್ಸಿನ ಮುಂದಾಳು ಮಿಶ್ರರೂ ಅಂದಿರುವರು.

ಬಲರಾಜ ಮಧೋಕರು ವಿಸರ್ಜನೆ ಸಂವಿಧಾನಕ್ಕೆ ವಿರೋಧ, ಅನೈತಿಕವೆಂದಿದ್ದಾರೆ.

ಸುಂದರ ಸಿಂಘ ಭಂಡಾರಿಯವರು ಈ ನಿರ್ಧಾರವನ್ನು ಸಂವಿಧಾನದ ದೃಷ್ಟಿಯಲ್ಲಿ ಅಸಮಂಜಸವೆಂದಿದ್ದಾರೆ. ಘಟನೆಯೇ ಒಂದು ದುರ್ಘಟನೆಯೆಂದು ತಿಳಿದುಕೊಂಡಿರುವ ಇಂದಿರಾಜೀಗೆ ಇದೊಂದು ಅಸಮಂಜಸವೇನು?

ಅಟಲ ಬಿಹಾರಿ ವಾಜಪೇಯಿಯವರು, ಪ್ರಧಾನಿಯವರ ಈ ಸಲಹೆಯನ್ನು ಸ್ವೀಕರಿಸಿ ರಾಷ್ಟ್ರಾಧ್ಯಕ್ಷರು ಎಲ್ಲಾ ಸಂವಿಧಾನದ ಮರ್ಯಾದೆ ಮತ್ತು ಪ್ರಜಾಸತ್ತಾತ್ಮಕ ಸಂಪ್ರದಾಯಗಳನ್ನು ಗಾಳಿಗೆ ತೂರಿಬಿಟ್ಟಿದ್ದಾರೆಂದರು. ಉಪ್ಪುಂಡ ಮನೆಗೆ ಗಿರಿಯವರಿಂದ ಎರಡು ಬಗೆಯಲು ಸಾಧ್ಯವೇನು? ಪಕ್ಷದ ಮರ್ಯಾದೆ ಸಂಪ್ರದಾಯಗಳನ್ನು ಗಾಳಿಗೆ ತೂರಿಬಿಟ್ಟು ಸಂಪ್ರದಾಯ ವಿರೋಧೀ ಸ್ತ್ರೀ ತನಗೆ ಬೆಂಬಲವಿತ್ತಿರುವಾಗ, ಅದೇ ದಶರಥನೇ ಕೈಕೇಯಿಗೆ ವರಕೊಟ್ಟಿಲ್ಲವೇನು?-ಇದೇನು, ಮಹಾ!

ಸಂಯುಕ್ತ ಸೋಷ್ಯಾಲೀಸ್ಟ್ ಪಾರ್ಟಿಯ ಅಧ್ಯಕ್ಷ. ಪ್ರಧಾನ ಕಾರ್ಯದರ್ಶಿಗಳೂ ಇಂದಿರಾಜೀಯವರಿಗೆ ಅಧಿಕಾರವಿಲ್ಲ, ಇದು ಸಂವಿಧಾನಕ್ಕೆ ವಿರೋಧವೆಂದಿರುವರು. ಅವರ ಮಾತು ಇಲ್ಲಿಗೇನೇ ಇನ್ನು ಚುನಾವಣೆಯ ಚುಕ್ಕಾಣಿ ಹಿಡಿಯುವ ಕೆಲಸವಷ್ಟೇ ಇರುವದು, ತಮಾಷೆಯ ರೌದ್ರಕಾಂಡ ಇರುವದು ಇನ್ನು ರಾಜ್ಯಸಭೆ ಸೇರಿತೆಂದರೆ ಆಗ. ರಾಜನಾರಾಯಣರ ಪಾತ್ರ ಆಗ ಅರಿವಾಗುತ್ತದೆ. ರಾಯಬರೇಲಿಯಲ್ಲಿ ಅವರು ಇಂದಿರಾಜಿಗೆ ಸೋತರೂ ರಾಜ್ಯಸಭೆಯ ಸ್ಥಾನ ಅವರಿಗೆ ಇದ್ದೇ ಇದೆ.

ನಡೆದದ್ದು ನಡೆದು ಹೋಯ್ತು ಇನ್ನು ನ್ಯಾಯ ಅನ್ಯಾಯದ ಪ್ರಶ್ನೆಗೆ ಉತ್ತರಕೊಡಬೇಕಾಗಿರುವವರು ಮತದಾರರು. ಜನತಾ ನ್ಯಾಯಾಲಯಕ್ಕೆ ಇಂದಿರಾಜೀ ಈ ವಿಷಯವನ್ನು ಒಪ್ಪಿಸಿದ್ದಾರೆ. ಅಷ್ಟು ಸೂಕ್ಷ್ಮ ಪರಿಸ್ಥಿತಿ ಇದು. ನೆಹ್ರೂ ಕುಟುಂಬ ಅನ್ಯಾಯ ಮಾಡುವದೇ ಇಲ್ಲವೆನ್ನುವದು ಇಂದಿರಾ ಅನುಸಾರಕರ ಘನಅಭಿಪ್ರಾಯ. ಆದರೆ ಲೋಕಸಭೆ ಅಧಿವೇಶನ ನಡೆಯುತ್ತಿದ್ದಾಗ ಸಲಹೆ ಕೊಡದೆ ದಿಢೀರನೆ ಸಲಹೆ ಕೊಡಲು ಏನು ಕಾರಣ? ನ್ಯಾಯಾಲಯದ ತೀರ್ಪು ಬಂದು ಹತ್ತು ದಿನಗಳ ಮೇಲಾದುವಲ್ಲವೇ? ಲೋಕಸಭೆಯನ್ನು ಆಗಲೇ ವಿಸರ್ಜಿಸಿ ಒಂದಿಷ್ಟು ಕವಡೆಯಷ್ಟಾದರೂ ಕಾಸನ್ನುಳಿಸಬಹುದಿತ್ತಲ್ಲವೇ? ಅದೂ ಅಲ್ಲದೆ, ಇಂದಿರಾಜೀ ಅಂದು ಸಂಸದಿನಲ್ಲಿ ಹೇಳಿದ್ದೇನು? ತೀರ್ಪು-ಸೋಲಲ್ಲ. ಪುನಃ ಗೊತ್ತುವಳಿಯನ್ನು ತರಬಹುದು.... ಈಗೇನಾಯಿತಪ್ಪಾ ಈ ಚಳಿಯಲ್ಲಿ? ಮರುಚುನಾವಣೆ ಇಲ್ಲವೆಂದು ಹೇಳಿರುವ ಇಂದಿರಾಜೀ ಇಂದು ಯಾರ ಮಾತಿಗೆ ಕಿವಿಗೊಟ್ಟು ಬಿಟ್ಟು ಅವಸರದ ನಿರ್ಧಾರಕ್ಕೆ ಬಂದರು? ರಷ್ಯಾದ ಆದೇಶದಂತೆಯೋ? ಜ್ಯೋತಿಷಿಗಳ ಸಲಹೆಯ ಮೇರೆಗೆ, ತಾನೇ?

ಈ ವಿಸರ್ಜನೆಯಿಂದ ಇನ್ನೊಂದು ಪ್ರಶ್ನೆಯೂ ತಲೆ ಎತ್ತಿರುತ್ತದೆ. ಅದುವೇ ಬಂಗಾಲ. ಅಲ್ಲಿ ಈಗ ರಾಷ್ಟ್ರಾಧ್ಯಕ್ಷರ ಆಡಳಿತವಿದೆ. ಅಲ್ಲಿ ಚುನಾವಣೆ ನಡೆಯಬೇಕೆಂದು ಎದುರು ಪಕ್ಷದವರು ಹೇಳಿದಾಗ ಸಮಯ ಸರಿಯಾಗಿಲ್ಲ, ದೊಂಬಿ ನಿಲ್ಲಬೇಕು, ಶಾಂತಿ ಮೊದಲು- ಚುನಾವಣೆ ನಂತರವೆಂದೆಲ್ಲಾ ಇಂದಿರಾಜಿ ಡಿಲ್ಲಿಯಲ್ಲೂ ಕಲ್ಕತ್ತದಲ್ಲೂ ಹೇಳಿದರು. ಈಗ ಅಲ್ಲಿಯ ಸ್ಥಿತಿ ಹತೋಟಿಗೆ ಬಂದಿದೆ ಏನು? ಇಂದಿರಾಜೀ ಹೇಳುತ್ತಿದ್ದಾಗ ಅಲ್ಲಿ ಜಗಳ-ಸುಲಿಗೆಗಳು ಮಾತ್ರವಿದ್ದಲ್ಲಿ ಇಂದದು ಪ್ರಗತಿಹೊಂದಿ ಕೊಲೆ-ಕೊಳ್ಳೆಗಳ ಘಟ್ಟವನ್ನು ಮುಟ್ಟಿದೆ. ಪ್ರಗತಿಮಾತಾ ಇಂದಿರಾಜೀಗೆ ಇದೇ ಅನುಕೂಲ ಪರಿಸ್ಥಿತಿ ಇರಬಹುದು.

ಇಲ್ಲಿ ಜ್ಞಾಪಕಕ್ಕೆ ಬರುವದು ಲೋಕಸಭೆಯಲ್ಲಿ ನಡೆದ ಘಟನೆ. ಡಿಲ್ಲಿಯ ಸಫ್ದರ್ ಜಂಗ್ ವಿಮಾನ ನಿಲ್ದಾಣದಲ್ಲಿ ದುರ್ಘಟನೆ ನಡೆದಾಗ ಆ ಕುರಿತು ಸದಸ್ಯ ಯಂ. ಯಲ್. ಸೋಂಧಿಯವರು ಮಾತಾಡುವದನ್ನು ತಡೆಗಟ್ಟುತ್ತ ಸಭಾಧ್ಯಕ್ಷ ಜಿ. ಯಸ್. ಧಿಲನ್‌ರವರು ಇನ್ನು ಮುಂದೆ ಸೋಂಧಿಯವರಿದ್ದು ನಿಂತಲ್ಲಿ, ಅವರ ಪಕ್ಷದ ಶ್ರೀ ಚಂದ್ರಗೋಯಿಲ್ (ಅಧ್ಯಕ್ಷರಿಲ್ಲದಾಗ ಸಭೆನಡೆಸುವವರಲ್ಲಿ ಅವರೂ ಒಬ್ಬರು) ಅವರನ್ನು ಸಭಾಧ್ಯಕ್ಷರ ಆಸನದಲ್ಲಿ ಕೂತುಕೊಳ್ಳಿಸಿ ತಾನು ಹೊರ ಹೋಗುತ್ತೇನೆಂದರು. ಇದು ಇನ್ನು ಯಾವಾಗ ನಡೆಯುತ್ತದೋ? ಅದು ಬೇರೆ ವಿಷಯ. ಶ್ರೀ ಸಾಮಾನ್ಯನು ಮತದಾರ ಮಹಾಪ್ರಭು ಅದನ್ನು ಅರ್ಥಮಾಡಿಕೊಂಡಿರುವ ರೀತಿ ಬೇರೆ—ಭಾರತೀಯ ಜನ ಸಂಘ ಎದ್ದು ನಿಂತಲ್ಲಿ ಇಂದಿರಾ ಕಾಂಗ್ರೆಸ್ ಕೂಟ ಹೇಳ ಹೆಸರಿಲ್ಲದೆ ಕಾಲ್ತೆಗೆಯುತ್ತದೆ, ಓಡಿ ಹೋಗುತ್ತದೆ. ಇದಕ್ಕೆ ಇಂದಿರಾ ಗಾಂಧಿ ಅವಕಾಶ ಒದಗಿಸಿಕೊಟ್ಟಿದ್ದಾರೆ. ಅದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಬೇಕು. ಅವರೊಂದಿಗೆ ಇನ್ನು ಅದೆಂತು ನುಬಲಿ. ಈ ಅಧಿಕಾರ ಲಾಲಸಿ ಇಂದಿರೆಯನ್ನೆನ್ನುವ ಪ್ರಶ್ನೆಯನ್ನೂ ಕೇಳಿಕೊಳ್ಳಬೇಕಾಗುತ್ತದೆ.

—ಶ್ರೀ ಶಿವಶಂಕರ.

ಮನೆಯೊಂದಾದಲ್ಲಿ ಇರಲೇಬೇಕಾದ

ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ. ದ. ಕ.

ಎಸ್. ಆರ್. ಬೀಡಿಗಳನ್ನು ಕೊಂಡುಕೊಳ್ಳುವ ಮೊದಲು ರಿಜಿಸ್ಟರ್ಡ್ ಟ್ರೇಡ್ ಮಾರ್ಕನ್ನು ಪರೀಕ್ಷಿಸಿ ಕೊಂಡುಕೊಳ್ಳಲು ಮರೆಯದಿರಿ.

SR REGD.

REGD. NO 149136.

S.R. BEEDI WORKS, UDIPI, S.K.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ

ಮೈತ್ರಿಕೂಟಕ್ಕೆ ಭಾರಿ ಬೆಂಬಲ

ವೀರೇಂದ್ರ ಪಾಟೀಲರ ಶ್ಲಾಘನೆ

ಪ್ರಧಾನಿ ಇಂದಿರಾ ಗಾಂಧಿಯವರು ಮಂಗಳೂರಿಗೆ ಬಂದು ಚುನಾವಣಾ ಭಾಷಣ ಮಾಡಿ ಇಂಡಿಕೇಟ್ ಅಭ್ಯರ್ಥಿಗಳಿಗೆ ಮತದಾನ ಮಾಡಬೇಕೆಂದು ಕೇಳಿ ಹೋದ ಬಳಿಕ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಚುನಾವಣಾ ಪ್ರಚಾರಕ್ಕೆಂದು ಜಿಲ್ಲೆಗಾಗಮಿಸಿದರು.

ಮಂಗಳೂರಿನ ನೆಹರೂ ಮೈದಾನದಲ್ಲಿ ಪ್ರಚಂಡ ಸಭೆ ಸೇರಿತ್ತು. ವಿವಿಧ ರಾಜ್ಯಕೀಯ ಪಕ್ಷಗಳ ನಾಯಕರು ಸಭೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಪಾಟೀಲರು ಶ್ರೀಮತಿ ಗಾಂಧಿಯವರ ಅಗ್ಗದ ಘೋಷಣೆಗಳಿಂದಲೇ ಸಮಾಜವಾದ ಸ್ಥಾಪನೆ ಹೊಂದುವುದಿಲ್ಲವೆಂದೂ ದೇಶದಲ್ಲಿ ಬಂಗಾಳದಂತಹ ದುರವಸ್ಥೆ ಹರಡದಂತೆ ಮೈತ್ರಿಕೂಟಕ್ಕೆ ಬೆಂಬಲ ನೀಡಬೇಕೆಂದರು. ಶ್ರೀ ಸಾಮಾನ್ಯರಿಗೆ ಸ್ವಾತಂತ್ರ್ಯದ ಫಲ ದೊರೆತು ಅವರ ಆಶೆ–ಆಕಾಂಕ್ಷೆಗಳು ಈಡೇರುವವರೆಗೆ ಸಮಾಜವಾದವನ್ನು ಸ್ಥಾಪಿಸುವ ಹೆಗ್ಗಳಿಕೆ ಹೇಳಿಕೊಂಡರೆ, ಅದು ನಿಷ್ಪ್ರಯೋಜನ ಎಂದು ಸಾರಿದರು.

'ಪಂ. ನೆಹರುರವರು ಜೀವವಿಮಾ ವ್ಯವಹಾರವನ್ನೂ ಇಂಪೀರಿಯಲ್ ಬ್ಯಾಂಕನ್ನೂ ರಾಷ್ಟ್ರೀಕರಣ ಮಾಡಿದ್ದಾರೆ ಆದರೆ, ಆ ದಿಟ್ಟ ಹೆಜ್ಜೆಯನ್ನವರು ಚುನಾವಣೆಯ ವೇಳೆ ಪ್ರಸ್ತಾಪಿಸಲಿಲ್ಲ. ಶ್ರೀಮತಿ ಗಾಂಧಿ ತಾನು ೧೪ ಬ್ಯಾಂಕುಗಳ ರಾಷ್ಟ್ರೀಕರಣದ ಪ್ರಶ್ನೆಯನ್ನೇ ಪರ್ವತವೆಂಬಂತೆ ಕಾಣಿಸಿ ಇದೇ ಸಮಾಜವಾದವೆನ್ನುತ್ತಾರೆ. ಬೆಲೆಗಳ ಏರಿಕೆಯನ್ನು ತಡೆಯಲಾಗದೆ, ನಿರುದ್ಯೋಗವನ್ನು ಹೋಗಲಾಡಿಸಿದೆ. ಉತ್ಪಾದನೆಯನ್ನು ಹೆಚ್ಚಿಸದೆ ಕೈಕಾಲು ಬಿಡುತ್ತಿರುವ ಶ್ರೀಮತಿ ಗಾಂಧಿಯವರು ರಾಷ್ಟ್ರೀಕರಣ ಕೋತಿಯನ್ನು ಕುಣಿಸಿ ಮತ ಬೇಡುತ್ತಿದ್ದಾರೆ. ಆರ್ಥಿಕ ಕಾರ್ಯಕ್ರಮಗಳನ್ನು ರಾಜ್ಯಕೀಯ ಉದ್ದೇಶಗಳಿಗಾಗಿ ಬಳಸುತ್ತಿದ್ದಾರೆ.

"ಕಾಂಗ್ರೆಸ್ ೧೯೫೫ರಷ್ಟು ಹಿಂದೆಯೇ ಸಮಾಜವಾದವನ್ನು ಸ್ವೀಕರಿಸಿದೆ. ಪ್ರಧಾನಿ ಗಾಂಧಿಯವರು ಇಷ್ಟು ತಡವಾಗಿ ಅದನ್ನು ಜನತೆಗೆ ತಿಳಿಯಪಡಿಸುವ ಅಗತ್ಯವಿಲ್ಲ. ಜನತೆಗದು ಎಂದೋ ಗೊತ್ತಿದೆ. ಇಂದು ಜನತೆ ರಾಜ್ಯಕೀಯ ಪ್ರಜ್ಞೆ ಹೊಂದಿದೆ; ಆದುದರಿಂದ ಸುಲಭವಾಗಿ ಅದನ್ನು ವಂಚಿಸುವುದು ಸಾಧ್ಯವಿಲ್ಲ. ಕೇಂದ್ರ ಸರಕಾರವು ರಾಜ್ಯಗಳ ಪರಿಸ್ಥಿತಿಗಳನ್ನು ಅರಿತು ಕೊಂಡು ನಿಷ್ಪಕ್ಷಪಾತತನದಿಂದ ವರ್ತಿಸಬೇಕು. ಅದಕ್ಕಾಗಿ ಮೈತ್ರಿಕೂಟದ ಅಭ್ಯರ್ಥಿಗಳನ್ನೇ ಆರಿಸಬೇಕು.

"ಒಂದೇ ವರ್ಷದಲ್ಲಿ ಎರಡು ಚುನಾವಣೆ ನಡೆಸುವ ಅಗತ್ಯವಿರಲಿಲ್ಲ. ಆದರೆ, ಶ್ರೀಮತಿ ಗಾಂಧಿಯವರು ತಮ್ಮ ರಾಜ್ಯಕೀಯ ಉದ್ದೇಶದಿಂದ ಇದಕ್ಕೆ ಮುಂದಾದರು. ದೇಶದ ಸಂಪತ್ತನ್ನು ಪೋಲು ಮಾಡಿಯಾದರೂ ತಮ್ಮ ಇಷ್ಟಾರ್ಥ ಸಿದ್ಧಿ ಮಾಡಿಕೊಳ್ಳಲು ಮುಂದಾದರು!

"ಪಕ್ಷಾಂತರಕ್ಕೆ ಗುರಿಯಾದವರ ವರ್ತನೆ ತೀರ ವಿಚಿತ್ರ. ಸ್ವಾರ್ಥಸಾಧನೆಯೇ ಅವರ ಪಕ್ಷಾಂತರದ ಮೂಲೋದ್ದೇಶ. ಈ ಪಕ್ಷತ್ಯಾಗಿಗಳು ಹೊಸ ಪಕ್ಷ ಸೇರಿಕೊಂಡ ಕೂಡಲೇ ಪ್ರಗತಿಶೀಲರಾಗುವುದು ತೀರ ವಿಲಕ್ಷಣ. ಇದು ಪ್ರಗತಿಯ ಅಪಹಾಸ್ಯವಲ್ಲದೆ ಬೇರೆಯಲ್ಲ.

"ಮಹಾರಾಷ್ಟ್ರೀಯರ ಒತ್ತಾಯದಿಂದ ಕೇಂದ್ರವು ಮಹಾಜನ ಆಯೋಗ ನೇಮಿಸಿತು; ಅದರ ವರದಿ ಮಹಾರಾಷ್ಟ್ರಕ್ಕೆ ಪ್ರತಿಕೂಲವಾಗಿ ಬಂದಾಗ, ಅದನ್ನು ನಾಲ್ಕು ವರ್ಷ ಕಟ್ಟಿಟ್ಟು ಕೊನೆಯ ಗಳಿಗೆಯಲ್ಲಿ ಸಂಸತ್ತಿನ ಕಕ್ಷೆಯೊಳಗೆ ಎಳೆದು ತಂದು ಹಾಕಿದರು. ನದೀನೀರಿನ ಪ್ರಶ್ನೆಯೂ ಅಷ್ಟೇ. ರಾಜ್ಯಕ್ಕೆ ಶ್ರೀಮತಿ ಗಾಂಧಿಯವರು ಒಳ್ಳೆಯದು ಮಾಡದಿದ್ದರೆ ಬೇಡ; ಕೆಟ್ಟದು ಮಾಡುವುದನ್ನು ಬಿಡಲಿಲ್ಲ.

"ನಾವಿಂದೊಂದು ನಿರ್ಣಯಕ್ಕೆ ಬರಬೇಕು. ದೇಶದ ಕೆಲವು ಪಕ್ಷಗಳಿಗೆ ಪ್ರಜಾತಂತ್ರದಲ್ಲಿ ನಂಬಿಕೆಯಿಲ್ಲ. ಪ. ಬಂಗಾಳದಲ್ಲಿ ಇವುಗಳ ಹೊಡೆದಾಟ ನಡೆಯುತ್ತಿದೆ. ಅಲ್ಲಿ ಯಾರಿಗೂ ಸುಖವಿಲ್ಲ; ಎಲ್ಲರೂ ಭದ್ರತೆಯಿಲ್ಲದೆ ದಿನದೂಡಬೇಕಾಗಿದೆ. ವಿಶ್ವಕವಿ ರವೀಂದ್ರರ ಅಮರ ಸಾಧನೆಯ ಫಲ ಶಾಂತಿನಿಕೇತನದಲ್ಲಿ ಸೈನಿಕ ಕಾವಲು ನಿಂತಿದೆ. ಬಂಗಾಳದಿಂದ ಉದ್ದಿಮೆದಾರರು ಕಂಬಿಕಿತ್ತು ಸುರಕ್ಷಿತ ರಾಜ್ಯಗಳಿಗೆ ಬರುತ್ತಿದ್ದಾರೆ. ಇದಕ್ಕಿಂತ ಬೇರೆ ಅರಾಜಕತೆ ಯೇನು?

"ದೇಹದ ಒಂದಂಗಕ್ಕೆ ಅಂಟಿದ ಕ್ಯಾನ್ಸರ್ ಕ್ರಮೇಣ ದೇಹವ್ಯಾಪಿಯಾಗುತ್ತದೆ. ದೇಶದ ಒಂದು ರಾಜ್ಯದ ಅರಾಜಕತೆ ದೇಶವ್ಯಾಪಿಯಾಗುತ್ತದೆ ಇದಾಗಬಾರದೆಂದಿದ್ದರೆ, ಯೋಗ್ಯ ಚಿಕಿತ್ಸೆ ಮಾಡಬೇಕು. ಸಮಾಜಘಾತುಕ ಶಕ್ತಿಗಳನ್ನು ದಮನಿಸಬೇಕು. ಪ್ರಜಾಸತ್ತೆಯನ್ನು ಉಳಿಸಬೇಕು.

"ಇದಕ್ಕಾಗಿ ಪ್ರಜಾಸತ್ತೆಯಲ್ಲಿ ವಿಶ್ವಾಸವಿರುವ ಮೈತ್ರಿಕೂಟದ ಅಭ್ಯರ್ಥಿಗಳಿಗೇ ಮತನೀಡಿ ಆರಿಸಬೇಕು. ಮೈತ್ರಿಕೂಟವು ಕೇಂದ್ರದಲ್ಲಿ ಸುಭದ್ರ ಸರಕಾರ ರಚಿಸಬಲ್ಲುದು ಪ್ರಜಾಸತ್ತೆಯನ್ನೂ ಉಳಿಸಬಲ್ಲುದು" ಎಂದರು ಶ್ರೀ ಪಾಟೀಲರು.

ಇದೇ ಸಭೆಯಲ್ಲಿ ಶ್ರೀ ಸಿ. ಎಂ. ಪೂಣಚ್ಚರೂ ಭಾಷಣ ಮಾಡಿ ಜನಬೆಂಬಲವನ್ನು ಯಾಚಿಸಿದರು.

ಅನಂತರ ಮುಖ್ಯಮಂತ್ರಿಯವರು ಉಚ್ಚಿಲದ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಮೊಗವೀರ ಮಹಾಜನ ಸಂಘವು ಏರ್ಪಡಿಸಿದ್ದ ಸಭೆಯಲ್ಲಿ ಭಾಗವಹಿಸಿದರು. ಮುಖ್ಯಮಂತ್ರಿಯವರಿಗೆ ಸಂಘದ ಅಧ್ಯಕ್ಷ ಶ್ರೀ ಎಂ. ಮಧ್ವರಾಜರೊಂದು ಮನವಿಯನ್ನರ್ಪಿಸಿದರು. ಇದರಲ್ಲಿ ಮೀನಿನ ಅಭಾವವಿರುವುದರಿಂದ ಮೀನುಗಾರರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಮುಂತಾಗಿ ಕೇಳಿಕೊಳ್ಳಲಾಗಿತ್ತು.

ಶ್ರೀ ಪಾಟೀಲರು ಇನ್ನೂ ಕೆಲವು ಮನವಿಗಳನ್ನು ಸ್ವೀಕರಿಸಿ, ಅವುಗಳನ್ನು ತೀವ್ರ ಗಮನಿಸುವ ಭರವಸೆ ನೀಡಿದರು. ರಾಜ್ಯ ಸರಕಾರವು ಮೀನುಗಾರಿಕೆಗೆ ಸಾಕಷ್ಟು ಉತ್ತೇಜನ ನೀಡುತ್ತಿದೆಯೆಂದೂ ಶ್ರೀ ಮಧ್ವರಾಜರಂಥವರಿಂದಾಗಿಯೇ ಈ ಉದ್ದಿಮೆ ಬೆಳೆದು ನಿಂತಿದೆಯೆಂದೂ ಇಂದು ದಕ್ಷಿಣ ಭಾರತದ ಮೀನುಗಾರಿಕೆಯಲ್ಲಿ ಕರ್ನಾಟಕವೇ ಅಗ್ರಸ್ಥಾನ ಹೊಂದಿದೆಯೆಂದೂ ಹೇಳಿದರು. ಬೆಸ್ತರ ಸಮಾಜದ ಮನವಿಯ ಬಗ್ಗೆಯೂ ಪರಿಶೀಲನೆ ಮಾಡುವ ಆಶ್ವಾಸನೆ ನೀಡಿದರು.

ಮುಂದಿನ ಚುನಾವಣೆಗಳಲ್ಲಿ ಮೈತ್ರಿಕೂಟದ ಅಭ್ಯರ್ಥಿ ಶ್ರೀ ಪೂಣಚ್ಚ ಮತ್ತು ಶ್ರೀ ಜೋಕಿಮ್ ಪ್ರಭುಗಳನ್ನೆ ಆರಿಸಬೇಕೆಂದು ವಿನಂತಿಸಿಕೊಂಡರು. ಮೊಗವೀರ ಸಮಾಜದ ಪರವಾಗಿ ಶ್ರೀ ಮಧ್ವರಾಜರು ಮುಖ್ಯಮಂತ್ರಿಯವರಿಗೆ ಭರವಸೆ ನೀಡಿದ್ದರ ಬಗ್ಗೆ ಅವರು ಸಂತೋಷ ವ್ಯಕ್ತಪಡಿಸಿದರು.

ಈ ಜಿಲ್ಲೆಯಲ್ಲಿ ಜಿಲ್ಲೆಯ ಗಣ್ಯ ರಾಜ್ಯಕೀಯ ನಾಯಕರೂ ಉಪಸ್ಥಿತರಿದ್ದರು.

Statement about ownership and other particulars about newspaper: NAVAYUGA

FORM IV (See Rule 8)

1.	Place of publication	...	UDIPI
2.	Periodicity of its publication	...	WEEKLY
3.	Printer's Name	...	K. H. SHETTY
	(whether citizen of India?)	...	Yes
	(Address)	...	Palukote, Udipi.
4.	Publisher's Name	...	K. H. Shetty
	(whether citizen of India?)	...	Yes
	Address	...	Palukote, Udipi.
5.	Editor's Name	...	K. H. SHETTY
	(whether citizen of India?)	...	Yes
	Address	...	Palukote, Udipi.
6.	Names and addresses of individuals who own the newspaper and partners or shareholders holding more than one per cent of the total capital	...	K. H. SHETTY (Prop.)

I, K. H. Shetty hereby declare that the particulars given above are true to the best of my knowledge and belief.

Dated 1—3—1971.

(Sd) **K. H. Shetty**
Signature of Publisher.

ಸಾಯುವಾಗಿನ ಉದ್ಗಾರಗಳು

ದೇವರಿಗೆ ಕೃತಜ್ಞತೆಗಳು, ನಾನು ನನ್ನ ಕರ್ತವ್ಯ ಮಾಡಿದ್ದೇನೆ.

—ಲಾರ್ಡ್ ನೆಲ್ಸನ್

o o o

ನಾನು ಕಷ್ಟದಿಂದ ಸಾಯುತ್ತಿದ್ದೇನೆ; ಆದರೆ ಇಲ್ಲಿಂದ ಹೋಗಲು ನಾನು ಹೆದರಿಲ್ಲ.

— ಜಾರ್ಜ್ ವಾಶಿಂಗ್‌ಟನ್

o o o

ನಾನು ಬದುಕಿದ್ದ ರೀತಿಯಲ್ಲಿಯೇ ಸಾಯುತ್ತಿದ್ದೇನೆ, ಸಾಧನವನ್ನು ಮೀರಿದ ಜೀವನ ನನ್ನದು.

—ಆಸ್ಕರ್ ವೈಲ್ಡ್

o o o

ನನ್ನ ದೇವರೇ, ನನಗೆ ಗುಂಡು ಬಡಿಯಿತು. —ಜಾನ್ ಕೆನೆಡಿ

o o o

ನನ್ನ ಮೇಲೆ ಹೂವು ಬೆಳೆಯುತ್ತಿರುವಂತೆ ನನಗೆ ಅನಿಸತೊಡಗಿದೆ.

—ಜಾನ್ ಕೀಟ್ಸ್

o o o

ಸಾಯುವ ಮನುಷ್ಯನು ಯಾವುದನ್ನೂ ಸುಲಭವಾಗಿ ಮಾಡುವುದಿಲ್ಲ (ಸುಲಭವಾಗಿ ಉಸಿರಾಡಿಸಬೇಕೆಂದು ವೈದ್ಯರು ಹೇಳಿದಾಗ ಉದ್ಗಾರ ತೆಗೆದದ್ದು.)

— ಬೆಂಜಾಮಿನ್ ಫ್ರಾಂಕ್ಲಿನ್

o o o

ನಾನು ಸ್ವರ್ಗದಲ್ಲಿ ಶ್ರವಣ ಮಾಡುತ್ತೇನೆ. (ತನ್ನ ಕಿವುಡುತನವನ್ನು ಕುರಿತು ಆ ಪ್ರಖ್ಯಾತ ಸಂಗೀತಗಾರ ಹೇಳಿದ್ದು.)

—ಬಿಥೋವೆನ್

o o o

ಅಲ್ಲಿ ಬಹಳ ಸುಂದರವಾಗಿದೆ.

—ಥಾಮಸ್ ಅಲ್ವಾ ಎಡಿಸನ್

o o o

ತಂದೆಯೇ, ಎಲ್ಲ ಮುಗಿಯಿತು, ನನ್ನ ಆತ್ಮವನ್ನು ನಿನ್ನ ಕೈಗೆ ಹಾಕಿದ್ದೇನೆ.

—ಜೀಸಸ್ ಕ್ರೈಸ್ಟ್

o o o

"ಹೇ, ರಾಮ" — ಮ. ಗಾಂಧೀ

(—ಪ್ರ)

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O. S. No. 26/70.

ರುಕ್ಕು ಸಿಡ್ತಿ ಕೂಡಾ — ವಾದಿರು

ಮತ್ತು

ಶೀನ ಶೆಟ್ಟಿ ಕೂಡಾ — ಪ್ರತಿವಾದಿರು

ಇವರೊಳಗೆ,

7ನೇ ಪ್ರತಿವಾದಿ ಮುದ್ದು ಶೆಟ್ಟಿ, ಸುಬ್ಬ ಶೆಟ್ಟಿರ ಮಗ, ಉಡುಪಿ ತಾಲ್ಲೂಕು ಆತ್ರಾಡಿ ಗ್ರಾಮದ ಪರೀಕದಲ್ಲಿರುವವರು.

7ನೇ ಪ್ರತಿವಾದಿ ಮುದ್ದು ಶೆಟ್ಟಿಗೆ ಈ ಮೂಲಕ ತಿಳಿಸುವುದೇನೆಂದರೆ:—

ವಾದಿರು ಹಿಸ್ಸೆಗೆ ನಿವೃತ್ತಿ ಕೇಳಿ ಮಾಡಿದ ಮೊಕದ್ದಮೆ ದಾವೆಯು ತಾರೀಕು 24.3.71ಕ್ಕೆ ನಿಮ್ಮ ಹಾಜರಾತಿಗೆ ಬಿಟ್ಟಿದೆ. ಆ ಬಗ್ಗೆ ನಿಮ್ಮ ಆಕ್ಷೇಪ ಇದ್ದರೆ ಸದ್ರಿ ದಿವಸ ಹಗಲು ಗಂಟೆ 11ಕ್ಕೆ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದು. ತಪ್ಪಿದರೆ ನಿಂಮ ಗೈರು ಹಾಜರಿಯಲ್ಲಿ—ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

Y. C. S Hegde,
Advocate for Plaintiffs.

ಉಡುಪಿ, ತಾ. 24.2.71.

ಪ್ರಜಾತಂತ್ರದ ಗೋರಿಗೆ ಶಿಲಾನ್ಯಾಸ

ಭಾರತ ವಿಶಾಲ ಗಣತಂತ್ರ. ೧೯೫೨ರಿಂದ ೬೭ರ ವರೆಗೆ ನಾಲ್ಕು ಸಾರ್ವತ್ರಿಕ ಚುನಾವಣೆಗಳನ್ನು ನಾವು ಮುಗಿಸಿ ಇದೀಗ ಲೋಕಸಭೆಗೆ ಐದನೆಯ ಬಾರಿಗೆ ಪ್ರತಿನಿಧಿಗಳನ್ನು ಆರಿಸುತ್ತಿದ್ದೇವೆ.

ಮೊದಲ ನಾಲ್ಕು ಚುನಾವಣೆಗಳು ಶಾಂತ ರೀತಿಯಿಂದಲೇ ನಡೆದುವು. ಮತದಾನದ ವೇಳೆಯೂ ಆ ಮೊದಲೂ ನಾವು ರಕ್ಷಿಸಿಕೊಂಡು ಬಂದ ಶಾಂತ ಪರಿಸ್ಥಿತಿಯನ್ನು ಕಂಡ ವಿದೇಶೀಯರೂ ಮೂಗಿಗೆ ಬೆರಳೇರಿಸಿದರು; ನಮ್ಮ ಜನಕೋಟಿಗೆ ಶಹಭಾಸ್ ಹೇಳಿದರು.

ಆದರೆ, ಪ್ರಗತಿಯ ಹೆಸರಲ್ಲಿ ಸತ್ ಸಂಪ್ರದಾಯಗಳನ್ನು, ರಕ್ತಗತವಾಗಿ ಬಂದ ಸಂಸ್ಕೃತಿಯನ್ನು, ಶಾಂತ ಮನೋಭಾವವನ್ನು ನಾವು ನೀರಿನಲ್ಲಿ ತೊಳೆಯತೊಡಗಿದ್ದೇವೆಯೋ ಅನಿಸುತ್ತದೆ.

ಸ್ವಾತಂತ್ರ್ಯಾನಂತರ ಭಾರತೀಯರು ಯಾದವೀಕಲಹಾಸಕ್ತರಾಗುತ್ತಾರೆಂಬ ವಿದೇಶೀ ಅಸೂಯೆಗಾರರ ಮಾತನ್ನು ನಾವೀಗ ಸತ್ಯಮಾಡಿ ತೋರಿಸಹೊರಟಿದ್ದೇವೆಯೆ?

ಚುನಾವಣೆಗಳ ಪೂರ್ವಸಂಧ್ಯೆಯಲ್ಲಿ ದೇಶದ ಶಾಂತ ವಾತಾವರಣ ಮಲಿನವಾಗಿದೆ; ಕಲುಷಿತಗೊಂಡಿದೆ. ಚುನಾವಣಾ ಆಯೋಗವು ನಿರ್ಭೀತಿಯಿಂದ ಮತದಾನ ಮಾಡಿರೆಂದು ಜಾಹೀರಾತುಗಳ ಮೂಲಕ ಜನರಿಗೆ ಬೋಧಿಸಹೊರಟಿದ್ದರೂ ಚುನಾವಣೆಗಳು ನಿರ್ಭೀತಿಯಿಂದ ನಡೆಯುವುದು ಸಂದೇಹಾಸ್ಪದವೆನಿಸಹತ್ತಿದೆ.

ದೇಶದ ಮುಖಕ್ಕೆ ಮಸಿ ಹಚ್ಚುವಲ್ಲಿ ಬಂಗಾಳದ ಪಾತ್ರ ಹಿರಿದೋ ಹಿರಿದು. ಅವರದೇ ಭವ್ಯ ನಾಯಕತ್ವ.

ರಾಜ್ಯಸರಕಾರವು ಪರಸ್ಪರ ಹೋರಾಟದಿಂದ ಪತಿತವಾದ ಬಳಿಕ ರಾಷ್ಟ್ರಪತಿ ಆಳಿಕೆಯಲ್ಲಿ ಬಂತು.

ಸಾಮಾನ್ಯವಾಗಿ ರಾಷ್ಟ್ರಪತಿ ಆಳಿಕೆಯ ಕಾನೂನು—ವ್ಯವಸ್ಥೆಗಳು ಸುಧಾರಿಸಬೇಕಿತ್ತು. ಪಂಜಾಬದಲ್ಲಿ ರಾಷ್ಟ್ರಪತಿ ಆಳಿಕೆಯ ವೇಳೆ ಅಲ್ಲಿ ಶಾಂತ ವಾತಾವರಣ ನೆಲೆಗೊಂಡ, ನ್ಯಾಯ ರಕ್ಷಣೆಯಾದ, ಹಿಂಸಾಚಾರಗಳು ಕೊನೆಗೊಂಡ, ಆಡಳಿತೆ ಪರಿಣಾಮಕಾರಿಯಾದ ಉದಾಹರಣೆಗಳು ನಮ್ಮ ಕಣ್ಮುಂದಿವೆ.

ಆದರೆ, ಪಶ್ಚಿಮ ಬಂಗಾಳದಲ್ಲಿ ಹಾಗಾಗಲಿಲ್ಲ. ಹೇಳಿಕೇಳಿ ಅಲ್ಲಿನ ರಾಜ್ಯಪಾಲ ಶ್ರೀ ಶಾಂತಿ ಸ್ವರೂಪ ಧಾವನ್ ವಿವಾದಾಸ್ಪದ ವ್ಯಕ್ತಿ. ಕಮ್ಯುನಿಸ್ಟರನ್ನು ಒಲಿಸಿಕೊಳ್ಳುವ ಸ್ವಾರ್ಥ ಉದ್ದೇಶ ಪ್ರೇರಿತವಾಗಿಯೇ ಕೇಂದ್ರ ಸರಕಾರ ಅವರನ್ನು ಅಲ್ಲಿ ನೇಮಿಸಿತ್ತು.

ರಾಜ್ಯದಲ್ಲಿ ಗೃಹಖಾತೆ ಮಾರ್ಕ್ಸಿಸ್ಟ ಬಸು ಕೈಯಲ್ಲಿರುವಾಗ ಅದು ಅರಾಜಕವಾಗುತ್ತ ಬಂದಿತ್ತು. ತಮ್ಮ ಬೇಳೆ ಬೇಯಿಸಿಕೊಳ್ಳಲು ಸರಕಾರ ಆಡಳಿತ ಯಂತ್ರವನ್ನು ಸಾಕಷ್ಟು ಉಪಯೋಗಿಸಿಕೊಂಡಿತು.

ರಾಜ್ಯಪಾಲರೂ ಕಮ್ಯುನಿಸ್ಟ್ ಮನೋವೃತ್ತಿಯವರು. ಮುಖ್ಯಮಂತ್ರಿ ಅಜಯ ಮುಖರ್ಜಿ ರಾಜನಾಮೆ ನೀಡಿದ ಬಳಿಕ ಕಮ್ಯುನಿಸ್ಟ್ ನೇತೃತ್ವದಲ್ಲಿಯೇ ಸರಕಾರ ರಚಿಸುವುದು ಸಾಧ್ಯವೆಂದು ಅಭಿಪ್ರಾಯ ನೀಡಿದ ವ್ಯಕ್ತಿ ಶ್ರೀ ಧಾವನ್ನರಿಗೂ ಆಡಳಿತದ ಹಿರಿಯ ಅಧಿಕಾರಿಗಳಿಗೂ ಭಿನ್ನಾಭಿಪ್ರಾಯವಿದೆ. ಶಾಂತಿಯನ್ನು ಹಿಂಸೆಯಿಂದಲೇ ತರಬೇಕು ಎಂಬ ರಾಜ್ಯಪಾಲರ ಮನೋಭಾವ ದೂರವಾಗಿಲ್ಲ; ಬದಲಿಗೆ ಅದು ಮತ್ತಷ್ಟು ದೃಢವಾಗುತ್ತ ಬರುತ್ತಿದೆ.

ಇಂದು ಬಂಗಾಳದಲ್ಲಿ ಏನು ನಡೆಯುತ್ತಿದೆ? ದಿನಾ ಹತ್ತಾರು ಮುಖ್ಯ ಕೊಲೆಗಳು ನಡೆಯುತ್ತಿವೆ. ನಕ್ಸಲೀಯ ಚಟುವಟಿಕೆಗಳು ದಿಗಂತ ವ್ಯಾಪ್ತವಾಗಿವೆ. ಎಲ್ಲೆಂದರಲ್ಲಿ ಅಶಾಂತಿ–ಹಿಂಸೆಗಳು ಟ್ವಿಸ್ಟ್ ಡಾನ್ಸ್ ನಿರತವಾಗಿವೆ. ಗುಂಡು–ಬಾಂಬು–ಕತ್ತಿಗಳ ಕ್ಯಾಬರೇ ನಡೆಯುತ್ತಿದೆ. ಶಾಂತಿ ಬೇಕು ಎಂಬುದು ಕಾನನರೋದನವಾಗಿದೆ. ಜನತೆಯ ವಿತ್ತ ಜೀವಿತಗಳಿಗೆ ಎಳ್ಳಷ್ಟೂ ಸಂರಕ್ಷಣೆಯೆಂಬುದಿಲ್ಲ.

ಹಿಂಸೆ—ಕೊಲೆಗಳು ಮುಖ್ಯವಾಗಿ ರಾಜ್ಯಕೀಯ ಪ್ರೇರಿತವೆಂಬುದು ಗಮನೀಯ.

ಕಮ್ಯೂನಿಸ್ಟರ ಒತ್ತಡಕ್ಕೆ ಬಲಿಬಿದ್ದ ಶ್ರೀಮತಿ ಗಾಂಧಿಯವರು ಬಂಗಾಳದಲ್ಲಿಯೂ ಲೋಕಸಭಾ ಚುನಾವಣೆಯೊಂದಿಗೆ ವಿಧಾನಸಭೆ ಚುನಾವಣೆ ನಡೆಸಲು ಆಜ್ಞೆ ಮಾಡಿದರು.

"ಸ್ಪರ್ಧೆಗಿಳಿದ ಅಭ್ಯರ್ಥಿಗಳನ್ನು ಮುಗಿಸಿರಿ; ಚುನಾವಣೆಗಳು ನಡೆಯದಂತೆ ನೋಡಿಕೊಳ್ಳಿರಿ"—ಇದು ಹಿಂಸಾಚಾರ ನಿರತರ ಕರೆ.

ಇದರಂತೆ ನೂರಾರು ಹತ್ಯೆಗಳು ಹಾಡು ಹಗಲಲ್ಲೇ ನಡೆದುವು. ಪರಿಸ್ಥಿತಿ ಗಂಭೀರವಾಯಿತು.ಆದರೂ ರಾಜ್ಯಪಾಲ ಧಾವನ್ನರು ಶ್ರೀಮತಿ ಗಾಂಧಿಗೇ ಸವಾಲೊಡ್ಡಿದ್ದಾರೆ–'ದಿಲ್ಲಿಯ ಗಲ್ಲಿಗಳಿಗಿಂತ, ಕಲಕತ್ತೆಯ ಗಲ್ಲಿಗಳು ಸುರಕ್ಷಿತವಾಗಿವೆ!

ಶ್ರೀಮತಿ ಗಾಂಧಿ ಬಂಗಾಳದಲ್ಲಿ ಚುನಾವಣೆ ನಡೆಸಲು ನಿರ್ಧರಿಸಿದ್ದು ರಾಜ್ಯಕೀಯ ಉದ್ದೇಶದಿಂದ ನಾಲ್ಕು ದಿನಗಳ ಹಿಂದೆ ಹಿಂಸಾಚಾರಕ್ಕೆ ಹೆಸರಾದ ಬಂಗಾಳ ಚುನಾವಣೆ ನಡೆಯಲು ತಕ್ಕ ವಾತಾವರಣ ಹೊಂದಿರಲಿಲ್ಲ. ಆದರೆ, ಈ ನಡುವೆ ಅಲ್ಲಾವುದ್ದೀನನ ದೀಪ ಕಂಡು ಬಂತು. ಚುನಾವಣೆ ನಡೆಯುವ ಆಜ್ಞೆ ಹೊರಟಿತು.

ಬಂಗಾಳದ ಈ ಪರಿಸ್ಥಿತಿಗೆ ಶ್ರೀಮತಿಇಂದಿರಾ ಗಾಂಧಿಯವರೇ ವೈಯಕ್ತಿಕವಾಗಿ ಹೊಣೆ. ರಾಜ್ಯಪಾಲ ಧಾವನ್ನರೊಡನೆ ಆಕೆ ಈ ಹೊಣೆಗಾರಿಕೆಯನ್ನು ಹಂಚಿಕೊಳ್ಳಬಹುದಷ್ಟೆ.

ಅಲ್ಲಿ ಚುನಾವಣೆಗಳು ನಡೆಯುವುದನ್ನು ತಡೆಯಬೇಕೇ ಎಂಬುದೀಗ ಶ್ರೀಮತಿಯ ಯೋಚನೆ.

ದೇಶದ ಬಗ್ಗೆ ದೇಶದ ಜನತೆಯ ಬಗ್ಗೆ ಯೋಚನೆ ಮಾಡುವುದನ್ನು ಬಿಟ್ಟು ತನ್ನ ಅಧಿಕಾರದ ಸಂರಕ್ಷಣೆಗಾಗಿಯೇ ಇಪ್ಪತ್ತನಾಲ್ಕು ತಾಸು ಯೋಚಿಸುವ ಆಕೆ ನಡೆಯಲಿ ಎಂದೇ ಹೇಳಿಯಾರು.

ಆಗ, ಬಂಗಾಳದಲ್ಲಿ ಚುನಾವಣೆಗಳು ನಡೆಯಬಹುದು; ನಡೆಯಿತೆಂದು ವರದಿ ಬರಬಹುದು.

ಆದರೆ, ಪ್ರಜಾತಂತ್ರದಲ್ಲಿ ಪ್ರಧಾನವಾದ ಮತಸ್ವಾತಂತ್ರ್ಯವನ್ನನುಭವಿಸಿ ಮತದಾನ ನಡೆಯುವುದಿಲ್ಲ. ಮೋಡ ಕವಿದ ವಾತಾವರಣದಲ್ಲಿ ಯಾವುದೂ ಸಮರ್ಪಕವಾಗಿ ನಡೆಯುವುದಿಲ್ಲ.

ಹಿಂಸಾಕಾಂಡದ ಕಾರಣದಿಂದ ಸೇನೆಯ ಸಂರಕ್ಷಣೆಯಲ್ಲಿ ಮತದಾನ ನಡೆಯುವಂತಹ ಪರಿಸ್ಥಿತಿ ಪ್ರಜಾತಂತ್ರಕ್ಕೊಂದು ಗೋರಿ ಕಟ್ಟಿದಂತೆ.

ರಾಜಾರಾಮ ಮೋಹನರಾಯ್, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಈಶ್ವರಚಂದ್ರ ವಿದ್ಯಾಸಾಗರ, ಬಂಕಿಂಚಂದ್ರ ಬಾಬು, ರವೀಂದ್ರನಾಥ ಟಾಗೋರ– ಮೊದಲಾದ ವಿಶ್ವವಿಖ್ಯಾತರ ಜನ್ಮಭೂಮಿ ಬಂಗಾಳಕ್ಕೆ ಬಂದೊದಗಿದ ದುಸ್ಥಿತಿ ಶೋಚನೀಯ; ವಿವಂಚನೀಯ.

ಇಂಗ್ಲಿಷರು ತಳವೂರಲು ಮೊತ್ತಮೊದಲು ಮಣೆ ಹಾಕಿದ ಬಂಗಾಳಿಗಳು ಪ್ರಜಾತಂತ್ರದ ಗೋಣು ಮುರಿಯಲು ಕತ್ತಿ ಮಸೆಯುತಿದ್ದಾರೆಯೋ ಎನಿಸುತ್ತದೆ.

ಮಸೆದ ಕತ್ತಿಯನ್ನು ಕಿತ್ತುಕೊಳ್ಳುವ ಶಕ್ತಿ ಶ್ರೀಮತಿ ಗಾಂಧಿಯ ಅಧಿಕಾರ ಸ್ಥಾನಕ್ಕಿದ್ದರೂ, ಆ ಕತ್ತಿಗೆ ತನ್ನ ಕತ್ತೇ ಎರವಾಗಬಹುದೆಂಬ ಅಂಜಿಕೆಯಿಂದ ಆಕೆ ಮಿಣಮಿಣನೆ ನೋಡುತ್ತ ನಿಬ್ಬೆರಗಾಗಿದ್ದಾರೆನಿಸುತ್ತದೆ.

ಅಧಿಕಾರದಾಹ ದೇಶವನ್ನೆತ್ತ ಒಯ್ಯುತ್ತಿದೆಯೆಂಬುದಕ್ಕೆ ಬಂಗಾಳವೊಂದು ಲೋಕ ನಿದರ್ಶನ.

In the Court of the Civil Judge of Udipi. S. K.

O. S. No. 13 of 1969

Between:

B.Narayana Shetty and another —Plaintiffs

AND

B. Jagannatha Hegde and others —Defendants

NOTICE

To 7th defendant:

Prahlada Shetty, S/o Akkayya Shedthi, residing in L. I. C. Building, Room No. 1, Building No. 2. Mount Poser, Vallabha Nagar, Bombay.

Please take notice that the above named plaintiffs had instituted a suit for judgement and decree in their favour against the defendants for payment of the plaint claimed amounts, etc , on the charge of the plaint A Schedule properties.

You are hereby sommoned to appear in this court in person or by a pleader duly instructed, and able to answer all material questions relating to the suit, or who shall be accompanied by some person able to answer all such question on the 11th day of March, 1971 at 11 A.M. before the above mentioned court, failing which the matter will be decided in your absence.

By order of the Court

(Sd) P.N. Krishnamoorthy Rao
Advocate for Plaintiffs

Udipi, S. K.)
Dated: 24-2-1971)

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕೊಲಿಟಿಯಲ್ಲಿ, ಸ್ಟ್ಯಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

Gram : VISHWA Tel: 29111

When at Bangalore
Stay at

HOTEL NATARAJA

Restaurant Boarding & Lodging.
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಇನ್ನದೆಂತು ನಂಬಲಿ ಈ ಇಂದಿರಾಜಿಯನ್ನು

ಭಾರತದ ಹಿರಿಯ ರಾಜಕಾರಣಿ, ಮುತ್ಸದ್ಧಿ, ಮೇಧಾವಿ, ಚಾಣಕ್ಯ, ದ್ರೋಣಾಚಾರ್ಯ, ಭೀಷ್ಮಾಚಾರ್ಯ, ನರಿ .... ಇತ್ಯಾದಿ ಇತ್ಯಾದಿ ಬಿರುದಾಂಕಿತ ವಯೋವೃದ್ಧ ಚಕ್ರವರ್ತಿ ರಾಜಗೋಪಾಲಾಚಾರಿಯವರು, ನಡುಗಾಲ ಚುನಾವಣೆ ನಡೆಯುವ ಸಂದರ್ಭವೇ ಇಲ್ಲವೆಂದು ಹೇಳಿ ಒಂದು ವಾರ ಕಳೆಯುವಾಗಲೇ, ಈ ಮಹಿಳೆಯ ಮನಸ್ಸಿನಲ್ಲೇನಿದೆಂಬುದು ಹೇಳುವದು ಕಷ್ಟವೆಂದು ಯಾವ ನಾರಿಯ ಕುರಿತು ಭಾರತೀಯ ಜನಸಂಘದ ಅಧ್ಯಕ್ಷ—ಅಟಲ ಬಿಹಾರಿಯವರು ಹೇಳಿದ್ದರೋ, ಅದೇ ಅಂಗನೆ, ಅವರೇ ಅಂದು ಅದೆಲ್ಲರಿಗೂ ಆಶ್ಚರ್ಯ ಉಂಟಾಗುವ ರೀತಿಯಲ್ಲಿ ಮರುಚುನಾವಣೆಯ ಘೋಷಣೆ ಇಂದಿರಾಜೀ ಹಾಕುವರೆಂದಿರುವಂತೆ, ಪ್ರಧಾನಿ ಇಂದಿರಾ ಗಾಂಧಿ ನೆಹ್ರೂರವರು ಲೋಕಸಭೆಯನ್ನು ಮುರಿದುಬಿಟ್ಟರು. ಅಟಲಬಿಹಾರಿ ವಾಜಪೇಯಿಯವರು ಕಳೆದ ಆರೇಳು ತಿಂಗಳುಗಳಿಂದ ಈ ವಿಷಯವನ್ನು ಹೇಳುತ್ತ ಬಂದಿರುವರು. ರಾಜಕೀಯದ ಪಂಪ್ಯಾಟ ಕಳದಲ್ಲಿರುವವರು ಅದನ್ನು ಗಂಭೀರವಾಗಿ ಮಹತ್ವದ ವಿಷಯವನ್ನಾಗಿ ತೆಗೆದುಕೊಳ್ಳಲಿಲ್ಲ. ಹೀಗಾಗಿ ಸಂಸ್ಥಾ ಕಾಂಗ್ರೆಸ್ಸಿನ ಹೊಂದಾಣಿಕೆ—ಮೈತ್ರಿಯ ಮಾತುಕತೆ ಬಸವನ ಹುಳುವಿನ ವೇಗದಲ್ಲಿ ಹೋಗುತ್ತಿದೆ. ಇದ್ದರೂ ನಿಜಲಿಂಗಪ್ಪ, ಪಾಟೀಲಾದಿಗಳೂ ರಂಗಾ, ಮಸಾನಿ ಮುತ್ತಿತರರೂ ಕ್ರಮಶಃ ಮೆಲ್ಲಮೆಲ್ಲನೆ ಅದು ನಿಜವೆಂಬುದನ್ನು ಅರಿತುಕೊಂಡು ಎಚ್ಚರವಾದರು. ಎಚ್ಚತ್ತೆದ್ದು ಹಟಹಿಡಿದು ಅಳುವ ಮಗುವನ್ನು ತಟ್ಟಿ ಮಲಗಿಸಲು ತಾಯಿಗೆ ಗೊತ್ತಿಲ್ಲವೇನು? ಹಾಗೇನೇ ಹೊಸದಿಲ್ಲಿಯಲ್ಲಿ ಹೊಸ ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಪಾರ್ಟಿ ಸೇರಿದಾಗ ಇಂದಿರಾ ಗಾಂಧಿಯವರು ತಮ್ಮ ಅನುಯಾಯಿಗಳಿಗೆ, ನಡುಗಾಲ ಚುನಾವಣೆ ನಡೆಸುವ ಇರಾದೆ ತಮಗಿಲ್ಲವೆಂದೂ, ಅದು ವಾಜಪೇಯಿಯವರ ಪ್ರಚಾರವೆಂದು ಹೇಳಿ, ಜನಸಂಘವು ತಮ್ಮ ಹಾಗೂ ತಮ್ಮ ಪಕ್ಷದ ವಿರುದ್ಧ ಈ ರೀತಿ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿದೆಯೆಂದು ವಿವರಿಸಿದರು. ಅತ್ಯಧಿಕ ಪ್ರಸಾರದ ಆಶೆ ಇರುವ ಪತ್ರಿಕೆಗಳು ದಪ್ಪಕ್ಷರಗಳಲ್ಲಿ— **Prime Minister rules out mid-term poll** ಬರೆದು ಪಕ್ಕದಲ್ಲೇ—**But Sangh is getting ready** ಯೆಂದು ಪ್ರಕಟಿಸಿದ್ದುವು. ಇಂದಿರಾರವರ ಹಾಗೂ ವಾಜಪೇಯಿಯವರ ಮಾತುಗಳನ್ನು ಅಕ್ಕಪಕ್ಕದಲ್ಲೇ ಅಚ್ಚುಹಾಕಿದ್ದುವು. ಇಂದಿರಾ— **We have no intension of holding mid-term elections at the moment as is being propagated by Mr. A. B. Vajapayee.**

ವಾಜಪೇಯಿ:— **Early Lok Sabha polls were not only a political necessity for the New Congress, but also an economic necessity....whatever the Prime Minister might say to the contrary ......Elections would take place by March ......**

ಇತರ ಪಕ್ಷಗಳೂ ಜನಸಂಘದೊಡನೆ ಸೇರಿ ಮಧ್ಯಕಾಲೀನ ಚುನಾವಣೆಯ ಮಾತನ್ನು ಹೇಳಲಾರಂಭಿಸಿದುವು. ಆಗ ಒಂದು ದಿನ ಸಮಾಚಾರ ಪತ್ರಿಕೆಗಳು-ಫೆಬ್ರವರಿಯಲ್ಲಿ ಮರುಚುನಾವಣೆ; ಇಂದಿರಾ ನಿರ್ಧಾರವೆಂದು ಪ್ರಕಟಿಸಿದುವು. ಲೋಕಸಭೆಯಲ್ಲಿ ಅದರ ಪ್ರತಿಧ್ವನಿ ಕೇಳಿಬಂತು. ಭಾರತೀಯ ಜನಸಂಘದ ಸದಸ್ಯ ಶ್ರೀ ಚಂದ ಗೋಯಲ್‌ರವರು ದಶಂಬರ ದಿನಾಂಕ ಹದಿನೆಂಟು ಈ ಲೋಕಸಭಾ ಅಧಿವೇಶನದ ಕೊನೆಯ ದಿನವೇನೆಂದು ಕೇಳಿದರು. ಹಾಗೇನಿಲ್ಲವೆಂದು ಲೋಕಸಭಾ ಅಧ್ಯಕ್ಷ ಧಿಲನ್‌ರವರು ಧೈರ್ಯದಿಂದ ಆಶ್ವಾಸನೆ ಇತ್ತರು. ದಶಂಬರ ದಿನಾಂಕ ಹದಿನಾಲ್ಕರಂದು ಲೋಕಸಭೆಯಲ್ಲಿ ಎಲ್ಲಾ ಎದುರು ಪಕ್ಷಗಳ ಸದಸ್ಯರು ಮರುಚುನಾವಣೆಯ ನಿಜಸ್ಥಿತಿಯನ್ನು ಅರಿತುಕೊಳ್ಳಲು ಪ್ರಯತ್ನಿಸಿದರು. ಆಗ ಅಲ್ಲಿದ್ದ ಸಂಸತ್ ಸಂಬಂಧ ಸಚಿವ ರಘುರಾಮಯ್ಯನವರು ಅದು ಸುಳ್ಳು ವದಂತಿಯೆಂದರು. ತೃಪ್ತರಾಗದ ಸದಸ್ಯರು ಮರು ಪ್ರಶ್ನೆ ಹಾಕಲು ಎದ್ದಾಗ ಸಭಾಧ್ಯಕ್ಷ ಧಿಲನ್‌ರವರು, ರಘುರಾಮಯ್ಯನವರು ಪ್ರಧಾನಿಗಳ ಪರವಾಗಿ ಆಶ್ವಾಸನೆ ಇತ್ತಿದ್ದಾರೆಂದರು. ಅಂದು ಆ ಮಾತನ್ನು ಮುಂದರಿಸಲು ಆ ವೇಳೆ ಸಾಧ್ಯವಿಲ್ಲದೆ ಹೋಯಿತು. ಲೋಕಸಭೆಯನ್ನು ವಿಸರ್ಜಿಸುವ ಮುಂಚೆ ಅದನ್ನು ಸದಸ್ಯರಿಗೆ ತಿಳಿಸಬೇಕೆಂದು ಅವರು ಸಭಾಧ್ಯಕ್ಷರನ್ನು ಕೇಳಿಕೊಂಡರು. ಈಗ ಲೋಕ ಸಭಾ ಅಧಿವೇಶನದ ಅಂತ್ಯದ ಹಿಂದುಗಡೆಯೇ ವಿಸರ್ಜನೆಯೂ ನಡೆದು ಹೋಯಿತು. ಅಬ್ಬಾ! ಲೋಕಸಭಾ ಅಧ್ಯಕ್ಷರೂ ಅಂಧಕಾರದಲ್ಲಿದ್ದರೇನು? ಅವರಿಗೂ ಈ ಸಮಾಚಾರ ಗೊತ್ತಿಲ್ಲದೆ ಹೋಯಿತೇನು? ಅಥವಾ ಗೊತ್ತಿದ್ದೂ ಇಂದಿರಾಜೀಯ ಕೈಗೊಂಬೆಯಾಗಿ ಬಿಟ್ಟರೇನು? ಧಿಲನ್‌ರವರು ದಿಲ್ ಇಲ್ಲದ ಖಿಲೌನಾ ಆಗಿ ಬಿಟ್ಟರೇನು? ರಘುರಾಮಯ್ಯ ಮಂತ್ರಿಯವರಿಗೆ ಆ ಸಮಾಚಾರ ಗೊತ್ತಿಲ್ಲದೆ ಹೋಯಿತೇನು? ಗೊತ್ತಿದ್ದೂ ಲೋಕಸಭೆಗೆ ಅವರು ಸುಳ್ಳು ಸುದ್ದಿಕೊಟ್ಟರೇನು? ಇನ್ನು ಯಾರನ್ನು ಕೇಳುವದು?

ಸರ್ವೋಚ್ಚ ನ್ಯಾಯಾಲಯವು ರಾಜಧನದ ಕುರಿತು ತೀರ್ಪಿತ್ತಾಗ ಹೆಚ್ಚಿನ ಎದುರು ಪಕ್ಷಗಳವರು ಇಂದಿರಾಜೀ ರಾಜಿನಾಮೆಕೊಡಬೇಕೆಂದು ಕೇಳಿದರು. ಹಾಗೆ ಕೇಳಲು ಅವರಿಗೆ ಅದ್ಯಾವ ನೈತಿಕ ಬಲವಿತ್ತೋ, ಅವರಿಗೆನೇ ಗೊತ್ತು. ರಾಜಧನ ರದ್ದಿಯಾತಿನ ಗೊತ್ತುವಳಿ ಲೋಕಸಭೆಯಲ್ಲಿ ಬಹುಮತದಿಂದ ಅಂಗೀಕರಿಸಲ್ಪಟ್ಟರೂ ರಾಜ್ಯ ಸಭೆಯಲ್ಲಿ ಒಂದು ಮತ ಕಮ್ಮಿಯಾಗಿ ತಳ್ಳಲ್ಪಟ್ಟದ್ದನ್ನು ಪ್ರಧಾನಿ ಇಂದಿರಾಜೀಯವರು ಬಲಾತ್ಕಾರದಿಂದ ರಾಷ್ಟ್ರಾಧ್ಯಕ್ಷರ ಸಹಾಯದಿಂದ ಆಜ್ಞೆಯನ್ನಾಗಿ ತಂದಾಗ ಮಾನಧನ ಸದಸ್ಯರು ಒಡನೆ ರಾಜೀನಾಮೆ ಕೊಡಬೇಕಾಗಿತ್ತು. ಈ ರೀತಿ ಆಜ್ಞೆಗಳನ್ನು ತರುವದಾದರೆ ಸಂಸದಿನ ಅವಶ್ಯಕತೆಯಾದರೂ ಏನು? ಶ್ರೀ ಸಾಮಾನ್ಯನ ಬೊಕ್ಕಸ ಅದಕ್ಕೇಕೆ ಬರಿದಾಗಬೇಕು? ಒಂದು ಸಲ ಸಂಸತ್ತಿನಿಂದ ಹೊರಬಂದಲ್ಲಿ ಮತ್ತೆ ಒಳಗೆ ಹೋಗುವ ನಿಶ್ಚಯವೆಲ್ಲಿ! ಒಂದು ಅವ್ಯಾರೂ ರಾಜಿನಾಮೆಕೊಡಲಿಲ್ಲ. ಅದೇ ರೀತಿ, ಇಂದಿರಾಜೀಯವರ ತೀರ್ಮಾನವನ್ನು ಸರ್ವೋಚ್ಚ ನ್ಯಾಯಾಲಯ ನ್ಯಾಯಬಾಹಿರವೆಂದು ತೀರ್ಪಿತ್ತಾಗ, ಇಂದಿರಾಜೀಯವರು ಮಾಡಿದ್ದು ಸರಿಯೆಂದವರು ಅವ್ಯಾರೂ ರಾಜಿನಾಮೆಕೊಟ್ಟು ಹೊರಬರಲಿಲ್ಲ. ಅಂತಹ ಮಾನಧನರು ಇದ್ದರೆ, ಬೇಂಕು ತೀರ್ಮಾನದ ಸಮಯದಲ್ಲೇ ಬರುತ್ತಿದ್ದರು. ಇಂತಹವರು ಒಬ್ಬರ ರಾಜಿನಾಮೆಗೆ ಇನ್ನೊಬ್ಬರು ಒತ್ತಾಯಿಸುತ್ತಿದ್ದಾರೆ! ಏನೇ ಇರಲಿ. ಈ ಎರಡನೆಯ ನ್ಯಾಯದೇವತೆಯ ಶಾಪದಿಂದಾದರೂ ಇಂದಿರಜ್ಜಿಯವರಿಗೆ ಬುದ್ಧಿಬರಬೇಕಾಗಿತ್ತು. ಆ ಕಾಲ ಮೀರಿಹೋಗಿರುತ್ತದೆ. ಅವರು ರಾಜಿನಾಮೆ ಕೊಡುವದಿದ್ದಲ್ಲಿ ಅವರನ್ನು ಕಾಂಗ್ರೆಸ್ಸಿನ ಅಧ್ಯಕ್ಷರು ತಮ್ಮ ಪಕ್ಷದಿಂದ ಹೊರಿತಳ್ಳಿದಾಗಲೇ ಕೊಟ್ಟುಬಿಡುತ್ತಿದ್ದರು. ಅಂದು ಬಲಗೈಯಲ್ಲಿ ರಾಜಿನಾಮೆ ಪತ್ರ ಸಲ್ಲಿಸಿ, ಎಡಕೈಯಲ್ಲೇ ಹೊಸ ಸಚಿವ ಸಂಪುಟದ ಪತ್ರವನ್ನು ಕೊಡುತ್ತಿದ್ದರು. ಅವರನ್ನು ಪ್ರಜಾಪ್ರಭುತ್ವವಾದಿಯೆನ್ನಬಹುದಿತ್ತು. ಅವರು ಸರ್ವಾಧಿಕಾರಿಣಿಯಂತೆ ನಡೆದುಕೊಂಡರು. ಅವರ ಬಳಿ ನ್ಯಾಯ-ಅನ್ಯಾಯದ ಮಾತುಕತೆಯಾಡುವದೂ ಮರಳುಗಾಡಿನಲ್ಲಿ ಮಳೆ ಬರುವದೂ ಒಂದೇ. ಹಾಗಿರುವದರಿಂದ ಕೇವಲ ಬಾಯಿತೀಟಿಗೆ ರಾಜಿನಾಮೆ ಕೇಳಬೇಕಷ್ಟೇ. ಬೇರೇನೂ ಪ್ರಯೋಜನವಿಲ್ಲ.

ಈಗ ಇದ್ದಕ್ಕಿದ್ದಂತೆ ಲೋಕಸಭೆಯನ್ನು ವಿಸರ್ಜಿಸಲು ರಾಷ್ಟ್ರಾಧ್ಯಕ್ಷರ ಅಧಿಕಾರವನ್ನು ಅವರು ಉಪಯೋಗಿಸಿಕೊಂಡು ಕೆಲವರಿಗೆ ಆಶ್ಚರ್ಯಕ್ಕೂ, ಕೆಲವಾರು ಪ್ರಶ್ನೆಗಳಿಗೂ ಆಸ್ಪದವಾಗಿದ್ದಾರೆ. ಲೋಕಸಭೆಯ ಅಧಿವೇಶನ ನಡೆಯುತ್ತಿದ್ದಾಗ ವಿಸರ್ಜನೆಯ ವಿಷಯ– ತನ್ನ ವಿರುದ್ಧ ಪ್ರಚಾರವೆನ್ನುತ್ತಿದ್ದವರೀಗ ತಾನೇ ತನ್ನ ವಿರುದ್ಧ ಪ್ರಚಾರಕ್ಕೆ ಆರಂಭಿಸಿರುವರು. ರಾಷ್ಟ್ರಾಧ್ಯಕ್ಷ ಗಿರಿಯವರು ಉಪ್ಪಿನ ಋಣ ತೀರಿಸಿಕೊಂಡರೂ ಗಿರಿಯಿಂದ ಪ್ರಪಾತಕ್ಕೆ-ಪಾತಾಳಕ್ಕೆ ಬಿದ್ದಿರುವರು. [ನ್ಯಾಯವಾಗಿ ಪ್ರಜಾಪ್ರಭುತ್ವಪಥದಲ್ಲಿ ಸಾಗುತ್ತಿರುವ ರಾಷ್ಟ್ರಾಧ್ಯಕ್ಷರೂ ಇಂದಿರಾಜೀ ಸಂಪುಟದ ರಾಜಿನಾಮೆ ಸ್ವೀಕರಿಸಿ ಉಳಿದ ಪಕ್ಷಗಳಿಗೆ ಸಂದರ್ಭವನ್ನು ಬಿಟ್ಟುಕೊಡಬೇಕಾಗಿತ್ತು. ಇತರ ಎಲ್ಲಾ ಪಕ್ಷಗಳಿಗೂ ಬಹುಮತ ಇಲ್ಲವೆಂದಲ್ಲಿ ಇಂದಿರಜ್ಜಿಯವರಿಗೆ ಇತ್ತೇನು? ಉಳಿದ ಪಕ್ಷಗಳು ಸೇರಿಕೊಂಡು ಮಂತ್ರಿಸಭೆ ರಚಿಸುವುದರಲ್ಲಿ ಸೋತಾಗ ರಾಷ್ಟ್ರಾಧ್ಯಕ್ಷರು ತಮ್ಮ ಘನ ಅಧಿಕಾರದಂತೆ ನಡೆಯಬಹುದಾಗಿತ್ತು. ಈಗ ಲೋಕಸಭಾ

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಓಟು ಯಾರಿಗೆ ಹಾಕಬೇಕು?

(ನಾಲ್ಕನೇ ಪುಟದಿಂದ)

ಬಾಯಿ ಮಾತಿನ ಸಮಾಜವಾದದಿಂದ ಲೇ ಬಡ ಭಾರತೀಯನ ಉದ್ಧಾರವಾದೀತೆ?

ಹುಲಿಯಿಂದ ತಪ್ಪಿಸಿಕೊಳ್ಳುವ ನೆಪವೊಡ್ಡಿ ಗುಹೆಯೊಳಗೆ ಆಶ್ರಯ ಪಡೆಯಬಯಸುವುದು ಸಾಧುವಾದೀತೆ?

ನಮಗೆ ಭಾರತೀಯ ಸಮಾಜವಾದ ಬೇಕೆ? ರಶ್ಯನ್ ಅಥವಾ ಮಾವೋ ಸಮಾಜವಾದ ಬೇಕೆ?

ಕಾಗದಗಳಲ್ಲಿ ನೋಟು ಅಚ್ಚು ಮಾಡುವಷ್ಟರಿಂದಲೇ ನಮ್ಮ ಬಡತನ ನೀಗುವುದೆ. ಅಥವಾ ಬಹುಮುಖೀ ಉತ್ಪಾದನೆಗಳಿಂದಲೇ ನಾವು ಶ್ರೀಮಂತರಾಗಬಲ್ಲೆವೆ?

ಮೊಸರು ಕುಡಿದ ನರಿ ಆಡನ್ನು ಮುಟ್ಟಿಟ್ಟು ಅದನ್ನು ದೋಷಿಯೆಂದು ಹೆಸರಿಸುವ ಜಾಣ್ಮೆ ತೋರಿತಂತೆ.

ಶ್ರೀಮತಿ ಗಾಂಧಿಯವರ ರಾಜ್ಯಕೀಯವೂ ಈ ನರಿಯ ತಂತ್ರಕ್ಕಿಂತ ಭಿನ್ನವಲ್ಲ.

ಮತದಾರರು ವಿವೇಚನೆಯಿಂದ ವರ್ತಿಸಬೇಕು. ತಮಗೆ ಯಾವುದು ಸರಿಯೆಂದು ಮೊದಲು ನಿರ್ಧರಿಸಬೇಕು.

ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವ ದೃಢ ಪ್ರತಿಜ್ಞೆ ಹೊಂದಿದ ಮೈತ್ರಿಕೂಟಕ್ಕೊಂದು ಅವಕಾಶವಿತ್ತು ನೋಡಿದರೆ ತಪ್ಪಾಗಲಾರದು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. No. 231/1970

ಶಿವರಾಮ ಶೆಟ್ಟಿ — ವಾದಿ

ಗಿರಿಜಮ್ಮ ಶೆಡ್ತಿ ಕೂಡಾ — ಪ್ರತಿವಾದಿಯು

ಸದ್ರಿ ದಾವೆಯ ೩ನೆ ಪ್ರತಿವಾದಿ ತಿಂಗು ಪ್ರ ಶೆಟ್ಟಿ ೪ನೆ ಪ್ರತಿವಾದಿಳು ತಿಂಗಳ ಶೆಡ್ತಿ ೬ನೆ ಪ್ರತಿವಾದಿಳು ಮಾಳಮ್ಮ ಶೆಡ್ತಿ — ಗೋವಿಂದ ಶೆಟ್ಟಿ ಮಕ್ಕಳು.

ಕುಂದಾಪುರ ತಾಲ್ಲೂಕು ಆನಗಳ್ಳಿ ಗ್ರಾಮದ ಹೇರಿಕುದ್ರಲ್ಲಿರುವವರು

ಇವರಿಗೆ

ಸದ್ರಿ ದಾವೆಯು ಪ್ರತಿವಾದಿರ ಕುಟುಂಬದ ವಸ್ತಿ ರೆರೆಂಗಳಿಗೆ ತಾರೀಕು 9-6-1966ರಲ್ಲು ಆದ ಹಿಸೆಪಟ್ಟಿ ಪ್ರಕಾರ ಬಡಂದು ಶೆಡ್ತಿ ಸಾರ್ವತಿ ಶೆಡ್ತಿ ಕೂಡಾ ಇವರಿಗೆ ಸ್ವೀಕಿನ A ಶೆಡ್ಯೂಲ್ ಆಸ್ತಿಯ ಜವಾಬುದಾರಿಯಿಂದ ಸಿಕ್ಕಿರ್ [illegible] ಯನ್ನು ಸದ್ರಿಯವರು ವಾದಿಗೆ ತಾರೀಕು 8-6-1966ರಲ್ಲು ರಿಜಿಸ್ತ್ರಿ ಟ್ರಾನ್ಸ್‌ಫರ್ ಮಾಡಿಕೊಟ್ಟ ಪ್ರಕಾರ ವಾದಿಯು [illegible] ಹೆಂಗೆ, ಶೀಲರ ಈ ಎರಡು ಸಂವತ್ಸರಗಳ ಬಾಬ್ತು [illegible] ಆದೇಶ ರೂಪಾಯಿ 366-76 ಪೈಸೆ [illegible] ಬಗ್ಗೆ ನಿಮ್ಮ ಮೇಲೆ ಮಾಡಿದ ಸದ್ರಿ ದಾವೆಯು ತಾರೀಕು 20-3-1971ಕ್ಕೆ ಅಖೈರಿ [illegible] ಇಡಲ್ಪಟ್ಟಿರುತ್ತದೆ. ಈ ಕುರಿತು ನಿಮ್ಮ ಆಕ್ಷೇಪ ಇದ್ದಲ್ಲಿ ಸದರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಈ ಕೋರ್ಟಿನ ಮುಂದೆ ಖುದ್ದಾಗಿ ಹಾಜರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ದಾವೆಯನ್ನು ಏಕಪಕ್ಷದಲ್ಲಿ ತೀರ್ಮಾನಿಸಲಾದೀತು.

ಕೋರ್ಟಿನ ಹುಕುಂ ಪ್ರಕಾರ

M. A. Shetty,
Advocate,
ವಾದಿಯ ಪರ,

ಕುಂದಾಪುರ,
ತಾರೀಕು 26-2-1971

ಗೇಹರಾಜ್ಯದಲ್ಲಿ

ನೀನೇ, ಅಲ್ಲವಾದರೆ ನಿನ್ನ . . .

'ಎರಡಾದುದು ಮೂರಾಗಬೇಕೆಂಬುದು ನಿಜಕ್ಕೂ ಸತ್ಯ ಕಣೇ....'

'ಏಕೆ ಹಾಗಂತೀರಿ?'

'ನೋಡು, ಕರ್ನಾಟಕದ ಘನ ಸಂಪುಟದಿಂದ ಜನಾಬ್ ಮಹಮ್ಮದಾಲಿ ಮತ್ತು ಶ್ರೀ ಪುಟ್ಟು ಸ್ವಾಮಿಯವರು ಎರಡು ದಿನಗಳ ಅವಧಿಯಲ್ಲಿ ರಾಜಿನಾಮೆ ನೀಡಿ ನಿರ್ಗಮಿಸಿದರು.'

'ಅವರೀಗ ಇಂಡಿಕೇಟ್ ಸೇರಿಯೂ ಆಯ್ತು. ಭಾರಿ ಹಳೆಯ ಕತೆ.'

'ಅದೇ ಎರಡು ಈಗ ಮೂರಾಗಿದೇಂದ್ರೆ....'

'ಅಂದ್ರೆ?'

'ಮತ್ತೊಬ್ಬ ಸನ್ಮಾನ್ಯ ಸಚಿವ ಶ್ರೀ ವಸಂತರಾವ ಪಾಟೀಲರು ರಾಜಿನಾಮೆ ನೀಡಿದ್ದಾರೆ.'

'ಹೌದೆ?'

'ಮತ್ತೆ ನಾನು ಅಂದದ್ದೇನು? ಎಂದೋ ಹೊರಹೋಗಲಿದ್ದ ವ್ಯಕ್ತಿ; ತೋಳ ಕುರಿ ನ್ಯಾಯ ಮಾಡಿ ಈಗಲಾದರೂ ಹೋದರೆಂದು ಕೆಲವರಿಗೆ ಸಮಾಧಾನ.'

'ಅಲ್ಲಾರಿ, ಮತ್ತೆ ಮಾಡೋದಾದ್ರೂ ಏನು? ರಾಜಿನಾಮೆ ಕೊಡಬೇಕಾದರೆ ಏನಾದರೂ ಕಾರಣ ನಮೂದಿಸಬೇಕು. ನೀನಲ್ಲವಾದರೆ ನಿನ್ನಪ್ಪ ಅನ್ನೋದು, ಕುರಿಮರೀ ನೋಲಿ ನೆಗೆಯೋದೇ....'

'ಮತ್ತೀಗ ಇದನ್ನು ಅನ್ನುವುದಾದರೂ ಏನು? ಪಾಪ, ತಮ್ಮ ತುಮುಲದಿಂದ ವಸಂತ ಪಾಟೀಲರು ಭಾರಿ ಸಣ್ಣವಾಗಿರಬಹುದು.'

'ಇನ್ನು ವಸಂತ ಮಾಸ ಬರಲಿದೆ. ತಿಳಿಗಾಳಿಯಲ್ಲಡ್ಡಾಡಿ ಆರಾಮ ತೆಗೆದುಕೊಳ್ಳಲಿ. ಹೇಗೂ ಮುಂದಿನ ವರ್ಷ ಮತ್ತೆ ಚುನಾವಣೆ ನಡೆಯುತ್ತದೆ. ಆಗ ಎಂಟೂ ಮೂಲೆಗಳಿಂದ ಹುಮ್ಮಸ್ಸು ತುಂಬಿ ರಣಕಣಕ್ಕಿಳಿಯಬಹುದಲ್ಲ?'

ಬಹುದು. ಆದರೆ, ಅದುವರೆಗೆ ಅವರನ್ನು ಸುಮ್ಮನಿರಲು ಬಿಡಬೇಕಲ್ಲ? ಬೆಳಗಾಂವಿಯಲ್ಲಿ ಇಂಡಿಕೇಟ್ ವ್ಯೂಹರಚನೆಗೇ ಅವರ ನೆತ್ತರು ವ್ಯರ್ಥ ಹರಿಯಬಹುದು.?

"ಹೋಗಲಿ ಬಿಡಿ. ಅಲ್ಲ, ಈ ಚುನಾವಣೆಯ ವೇಳೆ ಶ್ರೀಮತಿ ಗಾಂಧಿ ತನ್ನನ್ನು ಕೊಲೆ ಮಾಡುವುದೆಂಬ ಜನಸಂಘದ ಸಂಚು ತಿಳಿದು ಬಂದಿದೆ ಎಂದಿದ್ದಾರಲ್ಲಾ, ಹೀಗೂ ಉಂಟೆ?"

'ಹೇಗೆ?'

'ಅದು ಗೊತ್ತಿಲ್ಲ; ಆಕೆ ಹೇಳಲಿಲ್ಲ.'

'ಅಲ್ಲಮ್ಮ, ಶ್ರೀಮತಿಯವರು ಪ್ರಧಾನಿ. ಆಕೆಯ ಪ್ರಾಣ ರಕ್ಷಣೆಗೆಂದು ಭಾರತೀಯರು ದಿನಾ ಐವತ್ತು ಸಾವಿರ ರೂಪಾಯಿ ಖರ್ಚು ಮಾಡುತ್ತಾರೆ. ಆಕೆಯ ಸುತ್ತ ಮುತ್ತ ರಕ್ಷಕರು ಮಾತ್ರವಲ್ಲ, ಗುಪ್ತಚರರ ಜಾಲವೂ ಹರಡಿದೆ.'

'ಅದು ಹೌದು ನೋಡಿ, ಆದರ ಮೇಲೆ, ಆಕೆಯ ಪ್ರಾಣಕ್ಕೆ ಅಪಾಯ ತಂದೊಡ್ಡಬಲ್ಲವನೆಂಬ ಸಂದೇಹ ಯಾರ ಮೇಲೂ ಬಿದ್ದಿಲ್ಲ. ಈ ಆರೋಪವನ್ನು ಪುಷ್ಟೀಕರಿಸುವಂತಹ ಯಾವ ಘಟನೆಯೂ ನಡೆದಿಲ್ಲ.'

'ಹಾಗಿರುವಾಗ ಶ್ರೀಮತಿಯ ಆತ್ಮಕ್ಕೆ ಎಲ್ಲಿಂದ ಪ್ರೇರಣೆಯಾಯ್ತು?'

'ಅದು ಆಕೆಯ ಅಂತರಾತ್ಮನಿಂದಲೇ ಇರಬಹುದು.'

"ಅಂತರಾತ್ಮನಿಂದಲ್ಲ; ಸ್ವ ಕ ಪೋ ಲ ದಿಂದ.'

'ಯಾಕೆ?'

'ತನ್ನ ಪ್ರಾಣಕ್ಕೆ ಗಂಡಾಂತರವಿದೆ ಎಂದಾದರೂ ಡಂಗುರ ಸಾರಿ 'ಅಯ್ಯೋ ಮಾತಾಯಿ, ಹಾಗಾದರೂ ಗೆದ್ದು ಬಿಡು' ಎಂದು ನಾಗರಿಕರು ಹೇಳುವಂತೆ ಪರೋಕ್ಷ ಬಲಾತ್ಕಾರ ಹೇರುವುದು.'

'ಅಲ್ಲಾರಿ. ಆಕೆ ಜನಸಂಘವನ್ನೇ ಏಕೆ ಎತ್ತಿಕೊಳ್ಳುತ್ತಾರೆ?'

'ಏಕೆಂದರೆ, ಅದಕ್ಕೂ ಕಾರಣವುಂಟು. ಸುಳ್ಳನ್ನು ನೂರು ಬಾರಿ ಹೇಳಿದಾಗ ಜನ ಅದನ್ನು ಸತ್ಯವೆಂದು ನಂಬುತ್ತದೆ. ಜನಸಂಘವೇ ಮಾಡಿದ್ದು ಎಂದು ಶ್ರೀಮತೀಜಿ ಆರೋಪಿಸಿದ್ದರಲ್ಲಾ?'

'ಅದಕ್ಕೆ ಮುರಾರ್ಜಿ ಭಾಯಿಯೇ ಉತ್ತರಕೊಟ್ಟರಲ್ಲಾ-ಗಾಂಧಿ ಕೊಲೆಯ ವೇಳೆ ಜನಸಂಘ ಹುಟ್ಟಿಯೇ ಇರಲಿಲ್ಲ. ಅಂತ.'

'ಹ್ಞೂಂ, ಆಗ ಏನು ಬಂತು?'

'ಏನು?'

'ನೀನು ಅಲ್ಲವಾದರೆ ನಿನ್ನಪ್ಪ'

'ಅಂದ್ರೆ?'

"ಜನಸಂಘವಲ್ಲವಾದರೆ ಬೇಡ. ರೊಡನೆ ಒಂದಾಗಿ ಹೋದ ಆರ್. ಎ. ಎಸ್. ಎಂದು?

"ಆದ್ರೆ ನೋಡಿ, ಗಾಂಧಿ ಕೊಲೆಗೂ ಆರ್. ಎಸ್. ಎಸ್‌ಗೂ ಏನೇನೂ ಸಂಬಂಧವಿಲ್ಲವೆಂದು ಆಗಲೇ ಸರ್ದಾರ ಪಟೇಲರು ಹೇಳಿದ್ದು ಕೆಲ ತಿಂಗಳಿಗೆ ಮೊದಲು ಪತ್ರಿಕೆಗಳಲ್ಲಿ ಬಂದಿದೆಯಲ್ಲ?"

"ಬಂದಿದೆ ನಿಜ. ಆದರೂ ಸುಳ್ಳು ಹೇಳುವುದಕ್ಕೇನಂತೆ?"

"ಅಂದ್ರೆ, ತನ್ನ ಪ್ರಾಣ ಅತ್ಯಂತ ಅಮೂಲ್ಯವಾದದ್ದು ಎಂದು ತಾನೇ ಪ್ರಶಸ್ತಿ ಪತ್ರ ಕೊಟ್ಟುಕೊಳ್ಳುವ ಪ್ರಯತ್ನ?"

'ಅಲ್ಲ, ಮತ್ತೇನನ್ನಬೇಕಿದನ್ನು?'

"ಹ್ಞೂಂ....ಆದ್ರೆ ನೋಡಿ, ಅಂತಹ ನೂರಾರು ಬೆದರಿಕೆ ಪತ್ರಗಳು ಶ್ರೀ ನಿಜಲಿಂಗಪ್ಪನವರಿಗೂ ಬಂದಿವೆಯಂತೆ. ಅವುಗಳಲ್ಲಿ ಒಂದು ರಕ್ತದಿಂದಲೇ ಬರೆಯಲ್ಪಟ್ಟಿತ್ತಂತೆ."

"ಅಲ್ವೆ, ಅದ್ರಲ್ಲೇನೂಂತ?"

"ಏನೂ ಇಲ್ವೆ?"

"ತನ್ನ ಅಸಮಾಧಾನವನ್ನು ಪಾತ್ರಪರಡಿಗಳ ಮೇಲೆ ಮನೆ ಹೆಂಗಸು ತೋರಿಸುವುದಿಲ್ಲವೆ?"

"ಸಾಕು ಬಿಡೀಂದ್ರೆ...."

'ನೋಡು....'

"ಏನು?"

'ಕನ್ನಡಿ....'

'ಯಾಕೆ?'

"ಕೆಂಡ ಸಂಪಗೆ ಹೇಗಿದೇಂತ"

'ಆಯ್ತು.'

'ಅಲ್ಲಮ್ಮ, ದೇವ್ರು ಎಲ್ಲ ಪ್ರಾಣಿಗಳ ರಕ್ತವನ್ನೂ ಕೆಂಪಾಗಿಟ್ಟಿದ್ದಾನೆ. ಹಾಗಿರುವಾಗ ರಕ್ತದಲ್ಲಿ ಬರೆಯೋದೇನು ಮಹಾ?'

'ಓ, ಅದು ಹೌದುರಿ.'

"ಕೈಲಾಗದವರು ಹಿಂಪಾಡಿಕೊಳ್ಳುತ್ತಾರೆ."

"ಅಪ್ಪನನ್ನು ಮಗ. [illegible] ನ್ನು ಮಕ್ಕಳು ಆಡಿ ಕೊಳ್ಳುವಂತೆ...."

"ಹ್ಞೂಂ. ಹಾಗಾದರೆ ಹಾಗೆ."

'ಅಲ್ಲಾರಿ, ತಮಿಳುನಾಡಿನಲ್ಲಿ ನಾಮುಕ ಮಣ್ಣು ಮುಕ್ಕುವುದು ಗ್ಯಾರಂಟಿಯಂತೆ.'

"ಹ್ಞೂಂ. ರಾಜಾಜಿ — ಕಾಮರಾಜರು ಮತ್ತೆ ಒಂದುಗೂಡಿ ಮದ್ರಾಸಿನ ನಾಗರಿಕರೆದುರಲ್ಲಿ ಮತ್ತೆ ಗಂಡ — ಹೆಂಡಿರಾದರಂತೆ."

'ಅಲ್ಲಾರಿ. ಅದು ಹೇಗೇಂತ?'

'ನೋಡಮ್ಮ, ರಾಜಾಜಿ—ಕಾಮರಾಜರು ಮೊದಲೇ ಗಂಡ ಹೆಂಡಿರೇ ಅವರ ನಡುವೆ, ಹೆಂಡತಿ — ಗಂಡರ ನಡುವೆ, ವಿರಸ ಹುಟ್ಟಿತು. ಅವರಲ್ಲಿ ವಿಚ್ಛೇದನವೂ ಆಯ್ತು. ಈ ಗಂಡ ಅಣ್ಣಾದೊರೈಯನ್ನು ಮದುವೆಯಾದ. ಈ ದಾಂಪತ್ಯ ಸುಖಪ್ರದವಾಗಲಿಲ್ಲ ಎಂದು ತಿಳಿದು...."

'ಮತ್ತೆ ಹಳೆಯ ಹೆಂಡತಿಯನ್ನೇ ಎರಡೂ ಕೈಗಳಿಂದ ಸ್ವಾಗತಿಸಿದ.'

'ಹ್ಞೂಂ. ಇದರಿಂದಾಗಿ ದ್ರಾವಿಡ ಮುನ್ನೇತ್ರ ಕಳಗಂ

ಸಂದರ್ಶಿಸಿರಿ | — ಸಂತೃಪ್ತರಾಗಿರಿ ||

ಬಂಗಾರ ವಜ್ರಗಳಿಗೆ ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

— ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ —

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಗೂಲು ಜತೆಗೆ 'ತಘಲಕ್' ಪ್ರಕರಣ ನುಂಗಲಾರದ ತುತ್ತು.'

'ಅಂದರೆ ಅಲ್ಲಿ ಕಾಮರಾಜರು ಗೆಲ್ಲುವುದು ಗ್ಯಾರಂಟಿ.'

"ಹ್ಞೂಂ...."

"ಅಲ್ಲಾರಿ, ನೋಡುವ, ಈ ಚು-ನಾವಣೆಗಳ ನಂತರ ಸಂಸತ್ತಿನ ಬಲಾಬಲ ಹೇಗಿರಬಹುದೂಂತ?"

"ಹೇಗಿದ್ದರೇನ?"

'ಆದ್ರೂ ಯಾರು ಸರಕಾರ ರಚಿಸುತ್ತಾರೆ?'

'ಯಾರಾದ್ರೂ....'

'ಹಾಗಲ್ಲಾರಿ, ತಮಾಷೆಯಾಗಿ ಕೇಳಿದ್ದಲ್ಲ....'

"ಅಲ್ವೇ, ಒಬ್ರು ಜೋಯಿಸ್ರು ಶ್ರೀಮತಿ ಇಂದಿರಾ ಗಾಂಧಿ ಸರ್ಕಾರ ರಚಿಸ್ತಾರೇಂದ್ರೆ ಇಬ್ರು ಇಲ್ಲಂತಾರಲ್ಲಾ...."

"ಆ ಜೋಯಿಸ್ರ ಮಾತು ಬಿಟ್ಬಿಡಿ. ಒಳ್ಳೇ ದಕ್ಷಿಣೆ ಕೊಟ್ರೆ ಒಳ್ಳೇ ಭವಿಷ್ಯ ಬರಿಯುತ್ತಾರೆ; ಇಲ್ವಾದ್ರೆ ಇಲ್ಲ...."

'ಅಂದ್ರೆ ನಿಂಗೆ ನನ್ನ ಭವಿಷ್ಯಬೇಕು....'

'ಹ್ಞೂಂ....'

'ಕೇಂದ್ರ ಸರ್ಕಾರದ ಭವಿಷ್ಯ ಉತ್ತರ ಪ್ರದೇಶದ ಭವಿಷ್ಯದಂತೆ. ನೋಡಮ್ಮ, ಉ.ಪ್ರ. ದಲ್ಲಿ ೮೫ ಸದಸ್ಯರು. ಇವರಲ್ಲಿ ೫೫ ಇಂಡಿಕೇಟಿಗೆ ೩೦ ಪ್ರಜಾಸತ್ತಾತ್ಮಕ ರಂಗಕ್ಕೆ ೧೫ ಭಾರತೀಯ ಕ್ರಾಂತಿದಳಕ್ಕೆ ಉಳಿದ ೧೫ ಪಕ್ಷೇತರರಿಗೇಂತ ಲೆಕ್ಕ. ಅದರಂತೆ ದೇಶದಲ್ಲಿಯ ೫ ಅನ್ನು. ಸುಮಾರು ೨೦೦ ಇಂಡಿಕೇಟಿಗೆ. ೨೩೦ ಪ್ರಜಾಸತ್ತಾತ್ಮಕ ರಂಗಕ್ಕೆ ೫೦ ಚಿಕ್ಕ ಪುಟ್ಟ ಪಕ್ಷಗಳಿಗೆ ೫೦ ಪಕ್ಷೇತರರಿಗೆ.'

"ನಿಜಕ್ಕೂ...."

"ಗಾಡು ನೋಡಮ್ಮ, ಚುನಾವಣಾ ಫಲಿತಾಂಶ ಇದಕ್ಕಿಂತ ಹೆಚ್ಚು ಬದಲಾಗಲಿಕ್ಕಿಲ್ಲ. ಮತ್ತೆ ನೋಡು, ಇದು ಗ್ರಹಚಾರ ನಕ್ಷತ್ರಚಾರಗಳ ಅಂಶ–ಡಿಗ್ರಿ ಗುಣಿಸಿ ಬಾಗಿಸಿ ಮುಹೂರ್ತ ಫಲ ನೋಡಿ ಹೇಳಿದ್ದಲ್ಲ.'

'ಅದು ನಂಗೊತ್ತಿಲ್ವೆ? ಇಲ್ಲಿ. ಪ್ರಧಾನಿ ಯಾರಾಗ್ತಾರೆ?'

'ನೋಡು, ಮೊದಲಿಗೆ ಬೆರಳು ತೋರ್ಸಿ ಎಂದಿ. ಈಗ....'

'ಹಾಗನ್ನಬೇಡ್ರಿ. ಯಾರೂಂತ....'

'ಯಾರಾದ್ರೆ ನಮಗೇನಂತೆ?'

'ಸದ್ಯ ನಾನೂ ನೀನೂ ಅಲ್ಲ ತಾನೆ?'

'ಆದ್ರೂ....'

'ನೋಡಮ್ಮ, ಜನಮತದೆದುರು ಯಾವ ಭವಿಷ್ಯವೂ ಸತ್ಯವಾಗೋದಿಲ್ಲ. ಗ್ರಹಗಳು ಹೀಗೆ ಆದಾವೆಂದು ತೋರಿಸುತ್ತವೆಯೋ ಹೊರ್ತು ಹೇಗಾಗುತ್ತವೆಯೆನ್ನುವುದಿಲ್ಲ. ಅವುಗಳ ಈ ಚಂಚಲತೆಯಿಂದಾಗೇ ಜ್ಯೋತಿಷ್ಯಭಾಷೆಯೊಂದು ಬೇರೆಯಿದೆ.

'ಚಂದ್ರನು ರಾಜನಾದುದರಿಂದ ಭೂಮಿಯಲ್ಲಿ ಕಾಲಕಾಲಕ್ಕೆ ಮಳೆಬೆಳೆಯಾಗಿ ಸುಭಿಕ್ಷೆ ಉಂಟಾದೀತು. ಅರ್ಘಪತಿಯು ರವಿಯಾದುದರಿಂದ ಅಲ್ಪ ಮಳೆಯಿಂದಾಗಿ ದುರ್ಭಿಕ್ಷೆ ತಲೆದೋರೀತು....'

'ಹ್ಞೂಂ ಅದೇ. ಭಾರಿ....'

'ಅಯ್ಯೋ....'

—ಗೋರಾ

ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಶಿರ್ವ, 23. ಹಿಂದೂ ಹಾಯರ್ ಸೆಕೆಂಡರಿ ಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವದ ಅಧ್ಯಕ್ಷೀಯ ಭಾಷಣದಲ್ಲಿ ಬೊಂಬ್ಯಾ ಹೈ ಕೋರ್ಟು ವಕೀಲರಾದ ಶ್ರೀ ಬಿ. ವಿಶ್ವನಾಥ ರಾಯರು ವಿದ್ಯಾರ್ಥಿಗಳಲ್ಲಿ ಶಿಸ್ತು ಸಂಯಮಗಳಿರಬೇಕೆಂದು ಒತ್ತಿ ಹೇಳಿದರಲ್ಲದೆ ವಿದ್ಯಾರ್ಥಿಗಳ ಅಸಹನೆ ಅತೃಪ್ತಿಗಳಿಗೆ ಹಿರಿಯರೂ ಅಧ್ಯಾಪಕರೂ ಸರಿಯಾದ ಪರಿಹಾರ ಹಾಗೂ ವಿದ್ಯಾರ್ಥಿಗಳು ಜೀವನದ ಕರೆಗಳನ್ನು ಕಂಡುಕೊಳ್ಳಬೇಕೆಂದು ಹೇಳಿದರು. ಶಾಲೆಯ ಹಳೆ ವಿದ್ಯಾರ್ಥಿ ಸಂಘದ ನೆಲೆಯಲ್ಲಿ ಹಳೆ ವಿದ್ಯಾರ್ಥಿಗಳು ಶಾಲೆಯ ಅಭಿವೃದ್ಧಿಗಾಗಿ ಸಹಾಯ, ಸಹಕಾರಗಳನ್ನು ನೀಡಬೇಕೆಂದರು. ಅಪೂರ್ಣವಾಗಿರುವ ಶಾಲೆಯ ಮೂಲ ಕಟ್ಟಡವನ್ನು ಪೂರ್ತಿ ಗೊಳಿಸಲು ಹಳೆಯ ವಿದ್ಯಾರ್ಥಿಗಳು ನೆರವು ನೀಡಬೇಕೆಂದರಲ್ಲದೆ ತಾನು ಸಂಪೂರ್ಣ ಸಹಕಾರ ಬೆಂಬಲಗಳನ್ನು ನೀಡುವ ಭರವಸೆಯನ್ನಿತ್ತರು. ಈ ಜ್ಞಾನ ಮಂದಿರ ನೆಲೆಗೊಂಡ ಭವ್ಯ ವಾತಾವರಣದಿಂದ ಪ್ರಭಾವಿತರಾದ ಅಧ್ಯಕ್ಷರು ಈ ಪ್ರಶಾಂತ ವಾತಾವರಣದಲ್ಲಿ ಭವ್ಯ ಕಾಲೇಜು ನಿರ್ಮಾಣವಾಗಲಿ ಎಂದು ಹಾರೈಸಿದರು.

ಆಟೋಟ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಶಾಸಕ ಶ್ರೀ ಬಿ. ಭಾಸ್ಕರ ಶೆಟ್ಟರು ಬಹುಮಾನಗಳನ್ನಿತ್ತರು. ಅತಿಥಿಗಳನ್ನು ಸಂಘದ ಅಧ್ಯಕ್ಷರಾದ ಶ್ರೀ ಬಿ. ಜಯರಾಮ ಶೆಟ್ರು ಸ್ವಾಗತಿಸಿದ್ದರು ವರದಿವಾಚನವನ್ನು ಕಾರ್ಯದರ್ಶಿ ಶ್ರೀ ವಿ. ಸುಬ್ಬಯ್ಯ ಹೆಗ್ಡೆಯವರು ನೆರವೇರಿಸಿದ್ದರು. ಶಾಲಾ ವಿದ್ಯಾರ್ಥಿನಿಯರಿಂದ ನೃತ್ಯ ಸಂಘದ ಸದಸ್ಯರಿಂದ ಪೂ–ಪನ್ನಿರ್ ಎಂಬ ತುಳು ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟವು. ಕಾರ್ಯದರ್ಶಿ ಶ್ರೀ ವಿ. ಸುಬ್ಬಯ್ಯ ಹೆಗ್ಡೆಯವರಿಂದ ಧನ್ಯವಾದ ಸಮರ್ಪಣೆ, ರಾಷ್ಟ್ರಗೀತೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಅದೇ ಪೂರ್ವಾಹ್ನ ಶಾಲಾ ಹಳೆ ವಿದ್ಯಾರ್ಥಿಗಳೂ ಕಾರ್ಕಳದ ಪ್ರಸಿದ್ಧ ವಕೀಲರೂ ಆದ ಶ್ರೀ ಎನ್. ಭಾಸ್ಕರ ಹೆಗ್ಡೆಯವರು ಧ್ವಜವನ್ನು ಅರಳಿಸಿದ್ದರು.

ವಾರ್ಷಿಕೋತ್ಸವ

ಶಿರ್ವ, ಫೆ. 21: "ಆರು ವರ್ಷಗಳ ಹಿಂದೆ ತಾನು ಈ ಶಾಲೆಯ ವಾರ್ಷಿಕೋತ್ಸವದ ಅಧ್ಯಕ್ಷನಾಗಿ ಬಂದ ಸವಿನೆನಪನ್ನು ಜ್ಞಾಪಿಸಿಕೊಂಡು, ಶ್ರೀ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರಿಂದ ಆಶೀರ್ವಾದ ಪಡೆದು ಶಾಲಾ ಕಟ್ಟಡದ ನನ್ನ ಉಪಕ್ರಮದ ಸಂಕಲ್ಪ ಮಾಡಿರುವುದನ್ನು ತಿಳಿದು ಸಂತೋಷಗೊಂಡು ಕಟ್ಟಡದ ನಿರ್ಮಾಣ ಕಾರ್ಯದಲ್ಲಿ ತನ್ನ ಪೂರ್ಣ ಸಹಾಯ ಸಹಕಾರದ ಆಶ್ವಾಸನೆಯನ್ನು ಈಯುತ್ತೇನೆಂದೂ, ಬೆಳ್ಳಿ ಹಬ್ಬದ ಉತ್ಸವವನ್ನು ಎದುರುನೋಡುತ್ತಿರುವ ಈ ಶಾಲೆಗೆ ಉತ್ತಮ ಭವಿಷ್ಯವನ್ನು ಹಾರೈಸುತ್ತೇನಲ್ಲದೆ, ವಿದ್ಯಾಭಿಮಾನಿಗಳು ಈ ಸಂಸ್ಥೆಯ ಅಭಿವೃದ್ಧಿಗೆ ನೆರವಾಗಬೇಕು" ಒಂದು ಶ್ರೀ ಎಂ. ಮಧ್ವರಾಜರು ಹಿಂದೂ ಹಾಯರ್ ಸೆಕೆಂಡರಿ ಶಾಲಾ ವಾರ್ಷಿಕೋತ್ಸವದ ಅಧ್ಯಕ್ಷ ಸ್ಥಾನದಿಂದ ನುಡಿದರು. ಶಾಲಾ ಮುಖ್ಯೋಪಾಧ್ಯಾಯರಾದ ಬಿ. ಜಯರಾಮ ಶೆಟ್ಟರು ಅತಿಥಿಗಳನ್ನು ಸ್ವಾಗತಿಸುವುದರೊಂದಿಗೆ ಶಾಲಾ ವರದಿಯನ್ನು ಒಪ್ಪಿಸಿದ್ದರು. ಶ್ರೀ ಕೆ. ವಾಸುದೇವ ಶೆಟ್ಟರು ಸಂದೇಶವಾಚನವನ್ನು ಮಾಡಿದ್ದರು. ಶಾಲಾ ಹಳೆವಿದ್ಯಾರ್ಥಿ ಪತ್ರಕರ್ತ ಶ್ರೀ ಶಿವಾನಂದ ಪ್ರಭು, ಶಿರ್ವ ಇವರು ತಮ್ಮ ಜೀವನದಲ್ಲಿ ತಮ್ಮ ಶಾಲೆಯ ಶಿಕ್ಷಣ ವಹಿಸಿದ ಪಾತ್ರ, ತಮ್ಮ ಬಾಳಿಗಿತ್ತ ಸ್ಫೂರ್ತಿಯನ್ನು ಸ್ವಸ್ತಿವಾಚನದಲ್ಲಿ ನುಡಿದಿದ್ದರು. ವಿವಿಧ ಸ್ಪರ್ಧೆ ಆಟೋಟಗಳಲ್ಲಿ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯವನ್ನು ಶ್ರೀಮತಿ ಮನೋರಮಾ ಮಧ್ವರಾಜರು ನೆರವೇರಿಸಿದ್ದರು. ಅಧ್ಯಕ್ಷರ ಭಾಷಣಾನಂತರ ವಿದ್ಯಾರ್ಥಿನಿಯರಿಂದ ನೃತ್ಯ, "ಧ್ರುವ" ವಿದ್ಯಾರ್ಥಿಗಳಿಂದ 'ಕಾಣಿಕೆ' ನಾಟಕಗಳು ಅಭಿನಯಿಸಲ್ಪಟ್ಟು ಜನರ ಮೆಚ್ಚುಗೆಯನ್ನು ಗಳಿಸಿದುವು. ಶ್ರೀ ಬಿ. ಜಯರಾಮ ಶೆಟ್ಟರು ಧನ್ಯವಾದವಿತ್ತರು.

ಅದೇ ದಿನ ಪೂರ್ವಾಹ್ನ ಪಂಚಾಯತ್ ಬೋರ್ಡು ಅಧ್ಯಕ್ಷರಾದ ಶ್ರೀ ಪಿ. ಸೀತಾರಾಮ ಶೆಟ್ಟರಿಂದ ಧ್ವಜಾರೋಹಣ, ಶ್ರೀ ಬಿ. ಚಂದ್ರಹಾಸ ಹೆಗ್ಡೆಯವರಿಂದ ಶಾಲಾಮಕ್ಕಳಿಗೆ ಸಿಹಿತಿಂಡಿ ಹಂಚೋಣವೂ ನಡೆದಿತ್ತು.

ಜಾತಿ ವೈಷಮ್ಯ ಬೆಳೆಸದಿರಿ

ಪುತ್ತೂರಿನಲ್ಲಿ ವೀರೇಂದ್ರ ಪಾಟೀಲ್

ಪುತ್ತೂರಿನಲ್ಲಿ ಕಳೆದ ತಾ. 25ರಂದು ನಡೆದ ಮೈತ್ರಿ ಕೂಟದ ಚುನಾವಣಾ ಪ್ರಚಾರ ಸಭೆಯಲ್ಲಿ ರಾಜ್ಯದ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು ಮಾತನಾಡುತ್ತಾ, ಚುನಾವಣೆ ಪವಿತ್ರ ಕಾರ್ಯ. ಪ್ರತಿಯೊಂದು ಪಕ್ಷಕ್ಕೂ ಪ್ರಚಾರ ಮಾಡುವ ಅಧಿಕಾರವಿರಬೇಕು. ಇಲ್ಲವಾದರೆ ನಿಷ್ಪಕ್ಷವಾದ ಚುನಾವಣೆ ನಡೆಯಲಾರದು. ಜಾತಿ ವೈಷಮ್ಯ ಬೆಳೆಸುವ ರೀತಿಯಲ್ಲಿ ಆಡಳಿತ ಕಾಂಗ್ರೆಸಿನವರ ವರ್ತನೆ ಬೇಸರದ ಸಂಗತಿಯಾಗಿದೆ ಎಂದರು. ಚುನಾವಣೆಗೆ ಜಾತಿ, ಧರ್ಮ ತರುವುದು ಬೇಡ. ಜಾತಿಯ ಹೆಸರಿನ ಮೇಲೆ ಓಟು ಕೇಳುವುದು ಪಾಪದ ಕೆಲಸ. ಈ ಅಪಪ್ರಚಾರಗಳಿಗೆ ಮೋಸ ಹೋಗಬೇಡಿರಿ ಎಂದು ಅವರು ವಿನಂತಿಸಿದರು. ಬಂಗಾಳದ ಪರಿಸ್ಥಿತಿಯ ಕುರಿತು ಮಾತನಾಡುತ್ತಾ ಅವರು, ದೇಶದ ಪರಿಸ್ಥಿತಿ ಏನೆಂಬುದನ್ನು ಯೋಚಿಸಬೇಕು. ಬಂಗಾಳದಲ್ಲಿ ಹೆಚ್ಚಾಗಿ ಬಾಂಬ್ ಕೈಗಾರಿಕೆ ಬೆಳೆಯುತ್ತದೆ. ಬಂಗಾಳದ ಸ್ಥಿತಿಗೆ ಯಾರು ಹೊಣೆ? ಎಂದು ವಿವರಿಸಿದರು. ಬಂಗಾಳದಲ್ಲಿ ಈಗ ರಾಷ್ಟ್ರಾಧ್ಯಕ್ಷರ ಆಳ್ವಿಕೆಯಿದೆ ಅಂದರೆ ಕೇಂದ್ರ ಸರಕಾರವೇ ಅಲ್ಲಿನ ಈ ಅನಾಹುತಗಳಿಗೆ ಹೊಣೆಯೆನ್ನಬೇಕು. ನಮ್ಮ ರಾಷ್ಟ್ರದಲ್ಲಿ ಅಂತಹ ಸರಕಾರ ಬೇಕೆ? ಬಂಗಾಳದ ಪರಿಸ್ಥಿತಿ ಎಲ್ಲ ಕಡೆಗೂ ಬರಬೇಕೆ ಎಂದು ಪ್ರಶ್ನಿಸಿದರು.

ಮೈತ್ರಿಕೂಟ ನಾವು ಮಾತ್ರ ಮಾಡಿರುವುದಲ್ಲ; ಆಡಳಿತ ಕಾಂಗ್ರೆಸಿನವರೂ ಮಾಡಿಕೊಂಡಿದ್ದಾರೆ. ನಮ್ಮದು ದೇಶಪ್ರೇಮಿಗಳ ಕೂಟ. ಆದರೆ ಆಡಳಿತ ಕಾಂಗ್ರೆಸಿಗರು ಕಮ್ಯೂನಿಸ್ಟರ ಜತೆಯಲ್ಲಿ ಡಿ. ಎಂ. ಕೆ. ಜತೆಯಲ್ಲಿ, ಮುಸ್ಲಿಂ ಲೀಗಿನ ಜತೆಯಲ್ಲಿ ಮೈತ್ರಿ ಮಾಡಿಕೊಂಡಿದ್ದಾರೆ. ಕಮ್ಯೂನಿಸ್ಟರ ಜತೆಯಲ್ಲಿ ಕಾಂಗ್ರೆಸ್ ಸರಕಾರ ರಚನೆಯಾದರೆ ಕಮ್ಯೂನಿಸಂ ಬರುತ್ತದೆ ಅವರಿಗೆ ಯಾವದೇ ದೇವರ ಮೇಲೆ ನಂಬಿಕೆ ಇಲ್ಲ ಡಿ. ಎಂ. ಕೆ. ಯವರು ಧರ್ಮದ ಅಪಪ್ರಚಾರ, ಧರ್ಮ ಭ್ರಷ್ಟ, ನಷ್ಟಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ದೇಶದಲ್ಲಿ ಇನ್ನು ಏಕ ಪಕ್ಷದ ರಚನೆಯು ಸಂಭವವಿಲ್ಲ ಆದ್ದರಿಂದ ಯಾವ ಪಕ್ಷಗಳಿಗೆ ದೇಶಭಕ್ತಿಯಿದೆ, ದೇಶದ ಬಗ್ಗೆ ಕಳಕಳಿಯಿದೆ ಎಂಬುದನ್ನು ನೋಡಿ ಮತದಾನ ಮಾಡಬೇಕೆಂದು ವಿನಂತಿಸಿದರು. ಆಡಳಿತ ಪಕ್ಷದವರು ತಾವು ಬಡವರ ಪಕ್ಷ ಎಂದು ಹೇಳುತ್ತಿರುವುದನ್ನು ಉದಾಹರಣೆಗಳೊಂದಿಗೆ ಅವರು ಖಂಡಿಸಿದರು. ಕರ್ನಾಟಕಕ್ಕಾಗಿ ಹಗಲು ರಾತ್ರಿ ದುಡಿದ ತತ್ವನಿಷ್ಠರಾದ ಶ್ರೀ ಪೂಣಚ್ಚರಿಗೆ ಅತ್ಯಧಿಕ ಬೆಂಬಲ ನೀಡಬೇಕು ಎಂದು ವಿನಂತಿಸಿದರು.

ವಿಧಾನಸಭಾ ಸದಸ್ಯ ಶ್ರೀ ಬಿ. ಎಂ. ಇದಿನಬ್ಬನವರು ಮಾತನಾಡುತ್ತಾ ಮುಸ್ಲಿಮರು ಅನಾವಶ್ಯಕವಾಗಿ ನಡೆಯುತ್ತಿರುವ ಅಪಪ್ರಚಾರಗಳಿಗೆ ಬಲಿಯಾಗದೆ ಸಂಸ್ಥಾ ಕಾಂಗ್ರೆಸಿಗೆ ಬೆಂಬಲ ನೀಡಬೇಕೆಂದು ವಿನಂತಿಸಿದರು.

ಲೋಕಸಭೆಯ ಅಭ್ಯರ್ಥಿ ಶ್ರೀ ಸಿ. ಎಂ. ಪೂಣಚ್ಚರು ಮಾತಾಡಿ. ಈ ಸಲದ ಚುನಾವಣೆಯಲ್ಲಿ ಎಲ್ಲರೂ ಮೈತ್ರಿ ಕೂಟದ ಸಂಸ್ಥಾ ಕಾಂಗ್ರೆಸಿಗೆ ಮತನೀಡಿ ನನ್ನ ಸೇವೆಯ ಅವಕಾಶವನ್ನು 5 ವರುಷಗಳ ವರೆಗೆ ಉಳಿಸಿಕೊಳ್ಳಬೇಕೆಂದು ಕೇಳಿಕೊಂಡರು. ಸಭೆಯ ಅಧ್ಯಕ್ಷತೆ ವಹಿಸಿದ್ದ ರೆ. ಫಾ. ಪತ್ರಾವೊರವರು ದೇಶದ ಸ್ವಾತಂತ್ರ್ಯವನ್ನೂ ಪ್ರಜಾಪ್ರಭುತ್ವವನ್ನೂ ಉಳಿಸಲು ಸಂಸ್ಥಾ ಕಾಂಗ್ರೆಸಿನ ಅಭ್ಯರ್ಥಿಗೆ ಮತನೀಡುವಂತೆ ವಿನಂತಿಸಿದರು.

ಪ್ರಾರಂಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ • ಕುಂಬ್ರ ಜತ್ತಪ್ಪ ರೈಯವರು ಸ್ವಾಗತಿಸಿದರು. ಡಾ| ಮುಹಮ್ಮದ್ ಧನ್ಯವಾದ ಅರ್ಪಿಸಿದರು.

ಇದೇ ದಿನ ಬೆಳಿಗ್ಗೆ 9 ಗಂಟೆಗೆ ಮಂಗಳೂರಿನಿಂದ ಹೊರಟ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ದಾರಿಯಲ್ಲಿ ಕಣ್ಣೂರು, ಫರಂಗಿಪೇಟೆ, ಕಲ್ಲಡ್ಕ, ಪೂಣೆ ಮೊದಲಾದ ಕೇಂದ್ರಗಳಲ್ಲಿ ಅಲ್ಲಿನ ಸಾರ್ವಜನಿಕರ ಸ್ವಾಗತವನ್ನು ಸ್ವೀಕರಿಸಿ, ಸಂಸ್ಥಾ ಕಾಂಗ್ರೆಸಿನ ಉಮೇದ್ವಾರ ಶ್ರೀ ಪೂಣಚ್ಚರಿಗೆ ಬೆಂಬಲ ಕೊಡಲು ಕೇಳಿಕೊಂಡರು.

ಫರಂಗಿ ಪೇಟೆಯಲ್ಲಿ ನೆರೆದಿದ್ದ ಬೃಹತ್ ಸಭೆಯನ್ನು ಉದ್ದೇಶಿಸಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ್, ಆಹಾರ ಮಂತ್ರಿ ಶ್ರೀ ವಿಟ್ಟಲದಾಸ ಶೆಟ್ಟಿ, ವಿಧಾನ ಸಭಾ ಸದಸ್ಯೆ ಶ್ರೀಮತಿ ಲೀಲಾವತಿ ರೈ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಾ| ಕೆ. ನಾಗಪ್ಪ ಆಳ್ವರು ಮಾತನಾಡುತ್ತಾ ಕೇಂದ್ರದಲ್ಲಿ ಸುಭದ್ರ ಸರಕಾರ ರಚಿಸಲು ಅನುಕೂಲವಾಗುವಂತೆ ಸಂಸ್ಥಾ ಕಾಂಗ್ರೆಸಿಗೇ ಬೆಂಬಲ ನೀಡಬೇಕೆಂದರು.

ಪುತ್ತೂರಿನಿಂದ ಹೊರಟ ಶ್ರೀ ಪಾಟೀಲರು ಜಾಲ್ಸೂರಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿ ಮಡಿಕೇರಿಗೆ ತೆರಳಿದರು.

ಐತಿಹಾಸಿಕ ನೆನಪುಗಳ ಆಗರ—

ವಿಜಾಪುರ

ಮೈಸೂರು ರಾಜ್ಯದ ಜಿಲ್ಲೆಗಳಲ್ಲಿ ಅತಿ ದೊಡ್ಡ ಜಿಲ್ಲೆ ವಿಜಾಪುರ. 'ವಿಜಾಪುರ' ಎಂದೊಡನೆಯೇ ಮುಂಬಯಿ ರಾಜ್ಯದ ನೆನಪಾಗುತ್ತದೆ. ಬೆಳಗಾಮ್, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳೊಡನೆ ಈ ಜಿಲ್ಲೆಯು ಮುಂಬಯಿ ರಾಜ್ಯದಲ್ಲಿತ್ತು. ಇದು ರಾಜ್ಯ ಪುನರ್ವಿಂಗಡಣೆಯ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಲೀನವಾಯಿತು. ಈ ನಾಲ್ಕು ಜಿಲ್ಲೆಗಳ ವಿಸ್ತಾರ 20.984 ಚದರ ಮೈಲಿ. ಜನಸಂಖ್ಯೆ ಸುಮಾರು 51.35 ಲಕ್ಷ.

ವಿಜಾಪುರ ಜಿಲ್ಲೆಯಲ್ಲಿ ಬಾದಾಮಿ, ಬಾಗಲಕೋಟೆ, ಬಾಗೇವಾಡಿ, ವಿಜಾಪುರ, ಇಂಡಿ, ಸಿಂಧಗಿ, ಮುಧೋಳ, ಮುದ್ದೇಬಿಹಾಳ, ಜಮಖಂಡಿ, ಹುನಗುಂದ, ಬೀಳಗಿ ಎಂದು ಹನ್ನೊಂದು ತಾಲೂಕುಗಳಿವೆ. ಈ ಜಿಲ್ಲೆ ಮೈಸೂರು ರಾಜ್ಯದ ವೈಶಿಷ್ಟ್ಯವಾಗಿದೆ.

"ವಾತಾಪಿ ಗಣಪತಿಂ ಭಜೆ" ಎಂದು ಸಂಗೀತಗಾಯನವನ್ನು ಆರಂಭಿಸುವುದು ಸಂಪ್ರದಾಯ. ಈ ಗಣಪತಿಯೇ ಬಾದಾಮಿಯ ಗಣಪತಿ. ಬಾದಾಮಿಯೇ ಸಂಸ್ಕೃತದಲ್ಲಿ ವಾತಾಪಿ. ಇದು ಚಾಲುಕ್ಯರ ರಾಜಧಾನಿ. ಇದರ ಸುತ್ತಲಿನ ಭವ್ಯ ಕೋಟೆ ಮೊದಲನೆ ಪುಲಿಕೇಶಿಯ ನಿರ್ಮಾಣ. ಹರ್ಷಚಕ್ರವರ್ತಿಯನ್ನು ಸೋಲಿಸಿದವನೇ ಎರಡನೆಯ ಪುಲಿಕೇಶಿ. ಚಾಲುಕ್ಯ ಸಾಮ್ರಾಜ್ಯದ ಕೀರ್ತಿ ಈತನ ಕಾಲದಲ್ಲಿ ಮುಗಿಲು ಮುಟ್ಟಿತು. ಸಾಹಿತ್ಯಕಲೆಗೆ ಪ್ರೋತ್ಸಾಹ ದೊರೆಯಿತು. ಬಹಮನಿರಾಜ್ಯ ಕೊನೆಗೊಂಡು ಆದಿಲಶಾಹಿ ರಾಜ್ಯದ ಉದಯವಾದಾಗ ಇನ್ನೊಮ್ಮೆ ವಿಜಾಪುರಕ್ಕೆ ಪ್ರಮುಖಸ್ಥಾನ ದೊರೆಯಿತು.

ಪರಶುರಾಮನ ಕಥೆಗೆ ಸಂಬಂಧಿಸಿದ ಐಹೊಳೆ ಇರುವುದು ವಿಜಾಪುರ ಜಿಲ್ಲೆಯಲ್ಲಿ. ಇಲ್ಲಿ ಸುಮಾರು 70 ದೇವಾಲಯಗಳಿವೆ. ನಂದೀಶ್ವರ, ದುರ್ಗ, ಜಿನಾಲಯ, ಬ್ರಾಹ್ಮಣ ಗುಹಾಲಯ ಇವೆಲ್ಲ ಕಲಾಪ್ರೇಮಿಗಳನ್ನು ಮರುಳುಗೊಳಿಸುವಂತಿವೆ. ಇಲ್ಲಿದೆ ಕೃಷ್ಣೆ, ಮಲಪ್ರಭಾ, ಘಟಪ್ರಭಾ, ದೋಣ ಮೊದಲಾದ ಐದು ನದಿಗಳಿವೆ. ಇವೆಲ್ಲ ನೀರೊದಗಿಸಿದಾಗ ಈ ಜಿಲ್ಲೆಯ ಫಲವತ್ತಾದ ಭೂಮಿ ಪಂಜಾಬಿನಂತೆ ಗೋಧಿಯ ಕಣಜವಾಗುವುದರಲ್ಲಿ ಸಂದೇಹವಿಲ್ಲ.

ಬಿಜಾಪುರದಲ್ಲಿ ಸರೋವರಗಳಂತಿರುವ ತಾಜ್ ಬಾವಡಿ ಮತ್ತು ಚಾಂದ್ ಬಾವಡಿ ಎಂಬ ಎರಡು ಬಾವಿಗಳಿವೆ. ವಿಜಾಪುರ ಪಟ್ಟಣದ ನಡುವೆ ತಲೆಯೆತ್ತಿ ನಿಂತಿರುವ ಉಪ್ಪಲಿ ಬುರುಜಿನ ಮೇಲೇರಿದರೆ ಸುಮಾರು ಹತ್ತು ಮೈಲಿನ ವರೆಗೆ ಸುತ್ತಮುತ್ತಲ ನಿಸರ್ಗ ಸೌಂದರ್ಯವನ್ನು ಕಾಣಬಹುದು. ಇದರ ಮೇಲೆ ಎರಡು ದೊಡ್ಡ ತೋಪುಗಳಿವೆ. ಇವುಗಳಲ್ಲಿ ದೊರಕ್ಕೆ ಗುಂಡೆಸೆಯುವ ತೋಪಿನ ತೂಕ ಇಪ್ಪತ್ತೆರಡು ಟನ್ನುಗಳು. ಇಲ್ಲಿಂದ ಸ್ವಲ್ಪ ದೂರದಲ್ಲಿ ಮಲಿಕ ಮೈದಾನ ಎಂಬ ತೋಪಿದೆ. ಇದರ ಬಾಯಿ ಒಬ್ಬ ಮನುಷ್ಯನಿಗೆ ಕುಳಿತುಕೊಳ್ಳಲು ಸಾಧ್ಯವಾಗುವಷ್ಟು ದೊಡ್ಡದು.

ವಿಜಾಪುರದಿಂದ 70 ಮೈಲಿಯಲ್ಲಿ ಬಾದಾಮಿ, ಐಹೊಳೆ ಪಟ್ಟದಕಲ್ಲುಗಳಲ್ಲಿ ಚಾಲುಕ್ಯರ ಕಾಲದ ಶಿಲ್ಪಕಲೆಯ ವೈಭವವನ್ನು ಕಣ್ಣಾರೆ ಕಾಣಬಹುದು. ಪಟ್ಟದಕಲ್ಲಿನಲ್ಲಿ ಹತ್ತು ಸುಂದರ ದೇವಾಲಯಗಳಿವೆ. ಬಾದಾಮಿಯಲ್ಲಿ ನಾಲ್ಕು ಗುಹಾಲಯಗಳಿವೆ. ವಿಜಾಪುರದ 'ಗೋಲಗೊಮ್ಮಟ' ಜನಪ್ರಸಿದ್ಧವಾಗಿದೆ. ಇನ್ನೂರು ಅಡಿ ಅಗಲ, ಇನ್ನೂರು ಅಡಿ ಎತ್ತರದ ಈ ಗೋಲಗೊಮ್ಮಟ ಶಿಲೆಯ ಮೇಲೆ ನೆಲೆನಿಂತಿದೆ. ಕಂಭಗಳಿಲ್ಲದ ಈ ಮಹಾಸೌಧ ವಿಸ್ಮಯಕಾರಕವಾಗಿದೆ. ಪ್ರತಿ ಮಾತನ್ನೂ ಅನೇಕ ಬಾರಿ ಮರುಧ್ವನಿಗೊಳಿಸುವ ಈ ಗೊಮ್ಮಟ ಜಗತ್ತಿನ ಅಚ್ಚರಿಗಳಲ್ಲಿ ಒಂದು. ಇದನ್ನು ನಿರ್ಮಿಸಿದವರು ಆದಿಲ್‌ಶಾ.

ಇಬ್ರಾಹಿಮ್ ರೋಜಾ ಇನ್ನೊಂದು ಮನೋಹರ ಕಲಾಕೃತಿ. ಇದು ಕುಸುರಿ ಕೆಲಸಗಳಿಂದ ರಮಣೀಯವಾಗಿದೆ. ಈ ಕಟ್ಟಡದ ಹೊರಗೋಡೆಯ ಮೇಲಿನ ಕುರಾನಿನ ಸಂಪಿಗಳನ್ನು ಕಲಾತ್ಮಕವಾಗಿ ಕೆತ್ತಲಾಗಿದೆ.

ವಿಜಾಪುರದ ಮತ್ತೊಂದು ಭವ್ಯ ಕಟ್ಟಡ ಜುಮ್ಮಾ ಮಸೀದಿ. ನೂರಐವತ್ತು ಅಡಿ ಎತ್ತರವಿರುವ ಈ ಮಸೀದಿ ಏಷ್ಯಾಖಂಡದಲ್ಲೇ ಅತಿದೊಡ್ಡ ಮಸೀದಿಯೆಂದು ಪ್ರತೀತಿ. ಹೀಗೆಯೇ ಚಿತ್ರಮಯವಾದ ಅಸಾರ್ ಮಹಾಲ್, ಏಳುಪ್ಪರಿಗಳಲ್ಲಿ ಈಗ ಐದು ಪ್ಪರಿಗಳೂ ಮಾತ್ರ ಉಳಿದಿರುವ ಸಾತಮಂಜಲ್ ಭಾರತದಲ್ಲೇ ಅತಿದೊಡ್ಡ ಕಮಾನುಗಳುಳ್ಳ ಫರೂಕ್ ಮಹಲ್, ಅಲಿರೋಜಾ ಜೋಡುಗುಮ್ಮಟ ಮೊದಲಾದ ಭವ್ಯ ಕಟ್ಟಡಗಳು ತುಂಬ ಆಕರ್ಷಣೀಯವಾಗಿವೆ.

ವೀರಶೈವಮತದ ಆಚಾರ್ಯ ಪುರುಷ ಶ್ರೀ ಬಸವಣ್ಣನವರು ಜನಿಸಿದ ಬಾಗೇವಾಡಿ ಅವರು ತಮ್ಮ ಕಡೆಯ ದಿನಗಳನ್ನು ಕಳೆದ ಕೂಡಲಸಂಗಮ ಇರುವುದು ಈ ಜಿಲ್ಲೆಯಲ್ಲಿ.

ಬಿಜಾಪುರದಿಂದ ಎಂಟು ಮೈಲಿಯಲ್ಲಿದೆ ತೊರವೆ ನರಸಿಂಹ ದೇವಾಲಯ. ಇಲ್ಲಿಯೇ ಕುಮಾರ ವಾಲ್ಮೀಕಿ ತನ್ನ ರಾಮಾಯಣವನ್ನು ಬರೆದುದೆಂದು ಹೇಳಿಕೆ.

ಕನ್ನಡ ಸಾಹಿತ್ಯ ಸಾಮ್ರಾಜ್ಯದ ಚಕ್ರವರ್ತಿಯೆನಿಸಿದ ರನ್ನ ವಿಜಾಪುರ ಜಿಲ್ಲೆಯ ಮುಧೋಳದವನು. ಪಂಪನ ಬಳಿಕ ಪ್ರಖ್ಯಾತನಾದ ಅಭಿನವ ಪಂಪ ವಿಜಾಪುರದವನು. ಕನ್ನಡ ಪಂಚತಂತ್ರವನ್ನು ರಚಿಸಿದ ದುರ್ಗಸಿಂಹ ಪಟ್ಟದಕಲ್ಲಿನವನು. ಅಗ್ಗಳ ಕವಿ ಇಂಗಳೇಶ್ವರದವನು. ಶಬ್ದಮಣಿದರ್ಪಣದಂತಹ ಪ್ರೌಢವ್ಯಾಕರಣವನ್ನು ರಚಿಸಿದ ಕೇಶಿರಾಜ ಕೊಂಡಗುಳಿಯವನು.

ಬಿಜಾಪುರ ಜಿಲ್ಲೆಯಲ್ಲಿ ಮುಖ್ಯವಾಗಿ ಜೋಳ, ಗೋಧಿ, ಕಡಲೆ, ಕುಸಬೆ ಇತ್ಯಾದಿ ಬೆಳೆಯುತ್ತದೆ. ಹೆಚ್ಚಿನ ಮಟ್ಟಿಗೆ ಮಳೆಯನ್ನು ನೆಚ್ಚಿರಬೇಕಾದ ಈ ಜಿಲ್ಲೆಯಲ್ಲಿ ಅಣೆಕಟ್ಟಿನ ಮೂಲಕ ನೀರಾವರಿ ಬಗ್ಗೆ ಪ್ರಯತ್ನ ನಡೆದಿದೆ. ಇಲ್ಲಿ ಹರಿಯುವ ನದಿಗಳಲ್ಲಿ ಕೃಷ್ಣಾ, ಮಲಪ್ರಭಾ, ಘಟಪ್ರಭಾ ಇವೇ ಮುಖ್ಯವಾದುವು. ಘಟಪ್ರಭೆಯ ಎಡದಂಡೆ ಕಾಲುವೆ ಹಾಗು ಕೃಷ್ಣಾ ಮೇಲ್ದಂಡೆ ಯೋಜನೆ ಇವುಗಳಿಂದ ಸುಮಾರು ಮೂರು ಲಕ್ಷ ಎಕರೆಗೆ ನೀರಾವರಿ ದೊರೆಯುವುದು. ಮೈಸೂರು ರಾಜ್ಯದಲ್ಲೇ ಅತಿದೊಡ್ಡ ನೀರಾವರಿ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸುಮಾರು ನೂರಐವತ್ತು ಕೋಟಿ ರೂಪಾಯಿಗಿಂತಲು ಹೆಚ್ಚು ವೆಚ್ಚವಾಗುವುದು. ಈ ಯೋಜನೆಯಂತೆ ಆಲಮಟ್ಟಿ ಅಣೆಕಟ್ಟು ಈ ಜಿಲ್ಲೆಯಲ್ಲಿ ನಿರ್ಮಿತವಾಗುವುದು.

ರಾಷ್ಟ್ರ ರಕ್ಷಣ ನಿಧಿಗೆ ಚಿನ್ನ ನೀಡಿದ ಜಿಲ್ಲೆಗಳಲ್ಲಿ ವಿಜಾಪುರಕ್ಕೆ ಅಗ್ರಸ್ಥಾನವಿದೆ.

ವಿದ್ಯಾಕ್ಷೇತ್ರದಲ್ಲಿ ಈ ಜಿಲ್ಲೆ ಮುಂದುವರಿಯುತ್ತಾ ಬರುತ್ತಿದೆ. ಪ್ರತಿ ಹಳ್ಳಿಯಲ್ಲಿಯೂ ಒಂದು ಪ್ರಾಥಮಿಕ ಶಾಲೆ. ಪ್ರತಿ ತಾಲೂಕಿನಲ್ಲಿಯೂ ಐದು ಅಥವಾ ಆರು ಪ್ರೌಢಶಾಲೆಗಳು. ಹನ್ನೊಂದು ಕಾಲೇಜುಗಳು, ಎರಡು ಪಾಲಿಟೆಕ್ನಿಕ್ ಒಂದು ಇಂಡಸ್ಟ್ರಿಯಲ್ ಟ್ರೈನಿಂಗ್ ಸ್ಕೂಲ್, ಎಂದು ವಿಜಾಪುರ ಜಿಲ್ಲೆಯ ಜನತೆಗೆ ವಿದ್ಯಾ ಸೌಕರ್ಯಗಳಿವೆ.

ಆರೋಗ್ಯ ಕ್ಷೇತ್ರವನ್ನು ನೋಡಿದರೆ ಇಲ್ಲಿ ಒಂದು ಜಿಲ್ಲಾ ಆಸ್ಪತ್ರೆ 21 ಆರೋಗ್ಯ ಕೇಂದ್ರಗಳಿವೆ. ಇವೆಲ್ಲ ಜನರಿಗೆ ವೈದ್ಯಕೀಯ ಚಿಕಿತ್ಸೆ ಒದಗಿಸುತ್ತವೆಯಲ್ಲದೆ, ಕುಟುಂಬ ಯೋಜನೆಯ ಬಗ್ಗೆ ಶಸ್ತ್ರಕ್ರಿಯೆ, ವಂಕಿಧಾರಣೆ, ನಿರೋಧ ಹಂಚಿಕೆ ಹಾಗು ಸಲಹೆ ನೀಡಲು ಸದಾ ಸಿದ್ಧವಾಗಿದೆ. ಜನಸಂಖ್ಯೆಯ ಸಮಸ್ಯೆ ಈ ಜಿಲ್ಲೆಯನ್ನು ಬಿಟ್ಟಿಲ್ಲ. ಇದರಿಂದ ಕುಟುಂಬ ಯೋಜನಾ ಕಾರ್ಯಕ್ರಮ ಈ ಜಿಲ್ಲೆಯಲ್ಲಿ 1965ರಲ್ಲಿ ಆರಂಭವಾಯಿತು. ಈವರೆಗೆ 14728 ಮಂದಿ ಗಂಡಸರು ಹಾಗು 1981 ಹೆಂಗಸರು ಶಸ್ತ್ರಕ್ರಿಯೆ ಮಾಡಿಸಿಕೊಂಡಿದ್ದಾರೆ. [illegible] ಮಹಿಳೆಯರು ವಂಕಿ ಅಳವಡಿಸಿಕೊಂಡಿದ್ದಾರೆ. ಕಳೆದ ನವೆಂಬರ್ ತಿಂಗಳ ಅಖೈರವರೆಗೆ 25481 ನಿರೋಧಗಳನ್ನು ಈ ಜಿಲ್ಲೆಯಲ್ಲಿ ಹಂಚಲಾಗಿದೆ.

ನಿಜವೇ?

ಮಂಗಗಳ ಮುಖಗಳು ಬಣ್ಣ [illegible] [illegible].

o o o

[illegible] ಬರುತ್ತಾರೆ.

o o o

ಉಸಿರು ಹಿಡಿದು [illegible] ಹಾವು ಕಚ್ಚುವುದಿಲ್ಲ.

o o o

ಎಡ ಮಗ್ಗುಲು ಕಚ್ಚಿ ಮಲಗಿದರೆ ಹೃದಯದ ಮೇಲೆ ಹೆಚ್ಚು ಭಾರ ಬೀಳುತ್ತದೆ.

o o o

ಕಾಡಿನ ಬೆಕ್ಕಿನ [illegible] ಕಡೆಯಲ್ಲಿ ಬಂಗಾರದ ನಿಕ್ಷೇಪ ಇರುತ್ತದೆ.

o o o

ರೋಲ್ಸ್ ರಾಯ್ಸ್ ಕಾರಿನ ಎಂಜಿನ್‌ಗಳನ್ನು ಸೀಲ್ ಮಾಡಿರುತ್ತಾರೆ.

o o o

ಉಷ್ಟ್ರ ಪಕ್ಷಿಯು (ಆಸ್ಟ್ರಿಚ್) ತನ್ನ ತಲೆಯನ್ನು ಉಸುಕಿನಲ್ಲಿ ಹುದುಗಿಸಿಕೊಂಡಿರುತ್ತದೆ.

o o o

[illegible]

o o o

[illegible]

o o o

ಸಿಡಿಲು ಒಂದೇ ಸ್ಥಳದಲ್ಲಿ ಎರಡು ಸಲ ಬೀಳುವುದಿಲ್ಲ.

o o o

ಗಂಡಸರ ಎದೆಯ ಮೇಲೆ ಇರುವ ಕೂದಲುಗಳು ಪೌರುಷದ ಸಂಕೇತವೆನಿಸಿವೆ.

o o o

ಕಣ್ಣು [illegible] ಕುರುಡಾಗಿರುತ್ತವೆ.

o o o

ಕೂದಲನ್ನು [illegible] ಬೇಗ ಬೆಳೆಯುತ್ತದೆ.

ಪ್ರ

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

READ &
ADVERTISE IN
NAVAYUGA WEEKLY

NAVAYUGA 4-3-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಹಿತವರನ್ನು ಆರಿಸಿಕೊಳ್ಳಿ

(ಒಂದನೇ ಪುಟದಿಂದ)

ರ ಚೀಟಿ ಮೇಲೆ ಬಿತ್ತು. ತಾನು ಬೆಂಬಲಿಸಿದ್ದ ಶ್ರೀ ಪೂಣಚ್ಚರನ್ನೇ ಅವರೀಗ ಎದುರಿಸುತಿದ್ದಾರೆ.

ಇವರಿಬ್ಬರಲ್ಲದೆ ಹೆಸರಿಸಬಹುದಾದ ಇನ್ನೊಬ್ಬ ಅಭ್ಯರ್ಥಿ ಸಿ.ಪಿ.ಎಂ.ನ ಶ್ರೀ ಎಂ. ಎಚ್. ಕೃಷ್ಣಪ್ಪ. ತಮ್ಮ ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿ ಇವರು. ದೀನ ದಲಿತರ ಕಾರ್ಮಿಕರ ನಡುವೆ ಕೆಂಬಾವುಟದ ನೆರಳಲ್ಲಿ ಗರುಡಿಯಾಡಿದ ವ್ಯಕ್ತಿ. ೧೯೬೭ರಲ್ಲಿ ಬಂಟ್ವಾಳ ಕ್ಷೇತ್ರದಿಂದ ವಿಧಾನ ಸಭೆಗೆ ಸ್ಪರ್ಧಿಸಿ ಸೋತವರು. ಆದರೂ ಕಾರ್ಮಿಕ ಮತ್ತು ಬಡವರ್ಗಗಳಲ್ಲಿ ಜನಪ್ರಿಯರಾದ ಇವರು ಇಂಡಿಕೇಟಿನ ಹಲವಾರು ಸಾವಿರ ಮತಗಳನ್ನು ಗಿಟ್ಟಿಸಲು ಸಮರ್ಥರಾಗಬಹುದು. ಎರಡೂ ಕಾಂಗ್ರೆಸ್‌ಗಳನ್ನು ಎದುರಿಸುವುದನ್ನೇ ಮಾರ್ಕ್ಸಿಸ್ಟರು ನಿರ್ಧರಿಸಿದ್ದರೂ ಇಲ್ಲಿ ಅವರು ಗೆಲ್ಲುವ ಆಶಯವಿಲ್ಲ; ಪಕ್ಷ ಸಂವರ್ಧನೆಯ ದೃಷ್ಟಿಮಾತ್ರ ಗಮನೀಯ.

ಪ್ರಜಾಸೋಶಿಯಲಿಸ್ಟ್ ಪಕ್ಷದ ಶ್ರೀ ಪಿ. ಈಶ್ವರ ಭಟ್ಟ ಮತ್ತು ಪಕ್ಷೇತರ ಶ್ರೀ ಎಸ್. ಎನ್. ವಾಸುದೇವ ರಾವ್ ಇವರ ಸ್ಪರ್ಧೆ ಮತ ವಿಭಜನೆಗೆ ಅನುಕೂಲವಾಗಬಲ್ಲುದು.

ಶ್ರೀ ಕೆ. ಕೆ. ಶೆಟ್ಟಿ ಮತ್ತು ಶ್ರೀ ಪೂಣಚ್ಚರ ಪರ ಬಿರುಸಿನ ಕೆಲಸ ನಡೆಯುತ್ತಿದ್ದು ಇಬ್ಬರೂ ಪ್ರಚಂಡ ಬಹುಮತಗಳಿಸುವ ಆಶಯದಿಂದಿದ್ದಾರೆ.

ಉಡುಪಿ ಮತದಾರ ಕ್ಷೇತ್ರಕ್ಕೆ ಸುರತ್ಕಲ್ಲು, ಮೂಡಬಿದಿರೆ, ಕಾರ್ಕಳ, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ ಮತ್ತು ಕಾಪು ವಿಧಾನಸಭಾ ಕ್ಷೇತ್ರಗಳು ಸೇರಿವೆ. ೧೯೫೭ರಿಂದಲೂ ಈ ಪ್ರದೇಶವು ಕಾಂಗ್ರೆಸ್ಸಿಗೆ ಸವಾಲಾಗಿಯೇ ಇತ್ತು. ಈ ಸವಾಲು ೬೭ರಲ್ಲಿ ನುಂಗಲಾರದ ತುತ್ತಾಗಿ ಪರಿಣಮಿಸಿತು. ಸುರತ್ಕಲ್ಲು, ಬೈಂದೂರು, ಕುಂದಾಪುರ ಮತ್ತು ಕಾಪುಗಳಲ್ಲಿ ಪ್ರಸವಾವು ಗೆದ್ದು ಬಂದಿತ್ತು. ಕಾರ್ಕಳ ಮತ್ತು ಮೂಡಬಿದ್ರೆಗಳಲ್ಲಿ ಸ್ವತಂತ್ರ, ಬ್ರಹ್ಮಾವರದಲ್ಲಿ ಪಕ್ಷೇತರರು ಗೆದ್ದರು. ಕಾಂಗ್ರೆಸ್‌ಗೆ ಉಡುಪಿಯನ್ನು ಉಳಿಸಿಕೊಳ್ಳಬೇಕಾದರೆ ಸಾಕುಬೇಕಾಯಿತು. ಈ ಕಾಂಗ್ರೆಸ್ ಶಾಸಕರು ಸಿಂಡಿಕೇಟಿನಲ್ಲೇ ಇದ್ದಾರೆ. ಪಕ್ಷೇತರರು ಸ್ವತಂತ್ರ ಪಕ್ಷ ಸೇರಿದ್ದಾರೆ. ಕುಂದಾಪುರದ ಶ್ರೀಮತಿ ವಿನ್ನಿ ಫೆರ್ನಾಂಡಿಸ್ ಮತ್ತು ಕಾಪುವಿನ ಶ್ರೀ ಭಾಸ್ಕರ ಶೆಟ್ಟರು ಇಂಡಿಕೇಟಿಗೆ ಸೇರಿದ್ದಾರೆ. ಬೈಂದೂರಿನ ಶ್ರೀ ಹಳ್ಳನಾಡು ಸುಬ್ಬರಾಯರೂ ಸುರತ್ಕಲ್ಲಿನ ಶ್ರೀ ಪಿ. ವಿ. ಐತಾಳರೂ ಪಕ್ಷಾಂತರಗೊಂಡರೆಂಬ ವದಂತಿಯನ್ನು ವಿರೋಧಿಸಿ ಇದರಲ್ಲಿ ಹುರುಳಿಲ್ಲವೆಂದಿದ್ದಾರೆ.

ಕಳೆದ ಚುನಾವಣೆಗಳ ವೇಳೆ ಕಾಂಗ್ರೆಸಿನ ಪ್ರತಿಸ್ಪರ್ಧಿ ಶ್ರೀ ಎಸ್. ಎಸ್. ಕೊಳ್ಕೆಬೈಲರನ್ನು ಸ್ವತಂತ್ರ ಪಕ್ಷದ ಶ್ರೀ ಲೋಬೋ ಪ್ರಭುಗಳು ಸೋಲಿಸಿ ಗೆದ್ದು ಬಂದಿದ್ದಾರೆ. ಪ್ರಜಾಸತ್ತಾತ್ಮಕ ರಂಗವು ಸ್ಥಾನಗಳ ಹೊಂದಿಕೆ ಮಾಡಿಕೊಂಡಾಗ, ಈ ಬಾರಿಯೂ ಇದು ಸ್ವತಂತ್ರ ಪಕ್ಷದ ಕೈಗಳಲ್ಲೇ ಉಳಿಯಿತು. ಶ್ರೀ ಲೋಬೋ ಪ್ರಭುಗಳೇ ಅವರ ಅಭ್ಯರ್ಥಿಯಾದರು. ನಿವೃತ್ತ ಐ. ಸಿ. ಎಸ್. ಅಧಿಕಾರಿಯಾದ ಶ್ರೀ ಲೋಬೋಪ್ರಭು ೬೦ರ ಗಡಿ ದಾಟಿದವರು. ಉತ್ತಮ ದೇಹದಾರ್ಢ್ಯ ರಕ್ಷಿಸಿಕೊಂಡ ಇವರು ಈ ಕ್ಷೇತ್ರದ ಅವಶ್ಯಕತೆಗಳನ್ನು ಚೆನ್ನಾಗಿ ಮುಂದಟ್ಟು ಮಾಡಿಕೊಂಡವರು. ಅವನ್ನು ಪೂರಯ್ಸುವಂತೆ ಕೇಂದ್ರ ರಾಜ್ಯ ಸರಕಾರಗಳನ್ನು ಕೇಳಿಕೊಂಡ ಹಲವಾರು ಪತ್ರಗಳೇ ಇದಕ್ಕೆ ಸಾಕ್ಷಿ. ಪತ್ರಕರ್ತರೂ ಆದ ಶ್ರೀಯುತರು 'ಜನತೆಗೂ ಸರಕಾರಕ್ಕೂ ನಡುವಣ ಪೋಸ್ಟ್‌ಬಾಕ್ಸ್' ಆಗಿಯೂದರೂ ದುಡಿದಿದ್ದಾರೆನ್ನುವ ಸಮಾಧಾನವಿದೆ. ಅಷ್ಟೂ ಮಾಡದಿದ್ದವರು ಇಲ್ಲವೆ? ಎಂದು ಕೇಳಬೇಕಾಗುತ್ತದೆ. ಇವರಿರುವುದು ಮಂಗಳೂರಲ್ಲಿ ಎಂಬ ಒಂದು ಕೊರತೆಯಿದೆ. ಉಡುಪಿ ಮತದಾರರು ೧೯೫೭ರಿಂದಲೂ ಮಂಗಳೂರಿನವರನ್ನೇ ತಮ್ಮ ಪ್ರತಿನಿಧಿಯಾಗಿ ಆರಿಸಿ ಕಳಿಸುವ ಪರಂಪರೆಯನ್ನು ಮೆಟ್ಟುತ್ತಲೇ ಬಂದಿದ್ದಾರೆ ಎಂದ ಮಾತ್ರಕ್ಕೆ ಸಮಾಧಾನ ಪಡಬಾರದೇಕೆ?

ಶ್ರೀ ಲೋಬೋ ಪ್ರಭುಗಳು ಇಬ್ಬರು ಪ್ರಬಲ ಪ್ರತಿಸ್ಪರ್ಧಿಗಳನ್ನು ಎದುರಿಸಬೇಕಾಗಿದೆ. ಮೊದಲನೆಯದಾಗಿ ಇಂಡಿಕೇಟಿನ ಶ್ರೀ ಪಿ. ರಂಗನಾಥ ಶೆಣೈ ಮತ್ತು ಎರಡನೆಯದಾಗಿ ಪಕ್ಷೇತರರಾದ ಶ್ರೀ ಎಸ್. ಎಸ್. ಕೊಳ್ಕೆಬೈಲ್. ಶ್ರೀ ಶೆಣೈಯವರು ನಲುವತ್ತರ ಗಡಿ ದಾಟಿದವರು; ಹೊಸ ರಕ್ತದವರು, ಕಾಂಗ್ರೆಸ್ ವಿಭಜನಾ ನಂತರ ಇಂಡಿಕೇಟ್ ಸೇರಿದವರು. ಅದುವರೆಗೂ ಕಾಂಗ್ರೆಸಿಗಾಗಿ ದುಡಿದವರು. ೬೭ರಲ್ಲಿ ಚುನಾವಣೆಗಳ ವೇಳೆ ಉಡುಪಿಯಿಂದ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವುದು ಸಾಧ್ಯವಾಗಿದ್ದರೆ ಶ್ರೀ ಶೆಣೈ ಮತ್ತು ಶ್ರೀ ಮಧ್ವರಾಜರ ಸಂಯುಕ್ತ ಪ್ರಯತ್ನದಿಂದ ಎಂಬುದಂತೂ ಸತ್ಯ. ಅತ್ಯಂತ ಸರಳವ್ಯಕ್ತಿ ಸೇವಾತತ್ಪರರೂ ಆದ ಶ್ರೀ ಶೆಣೈ ಉಡುಪಿ ನಗರ ಸಭಾಪತಿಯಾಗಿದ್ದರು. ಇದೀಗ ಮೊತ್ತ ಮೊದಲ ಬಾರಿಗೆ ಭಾರೀ ಚುನಾವಣೆಯ ರಂಗಕ್ಕೆ ಧುಮುಕಿದ್ದಾರೆ.

೧೯೬೫ರಲ್ಲಿ ಕಿಸಾನ್ ಮಜದೂರ್ ಪಕ್ಷ ಸೇರಿದ್ದ ಶ್ರೀ ಕೊಳ್ಕೆಬೈಲ್ ೬೯ರಲ್ಲಿ ಕಾಂಗ್ರೆಸಿಗೆ ಮರಳಿದರು. ಇದೀಗ ಚುನಾವಣೆಯಲ್ಲಿ ಪಕ್ಷದ ಟಿಕೇಟು ದೊರೆಯಲಿಲ್ಲವೆಂಬ ಕಾರಣದಿಂದ (ಸಿಂಡಿಕೇಟಿಗೆ) ರಾಜಿನಾಮೆ ಇತ್ತಿದ್ದಾರೆ. ಕಳೆದ ಬಾರಿ ಶ್ರೀ ಲೋಬೋ ಪ್ರಭುಗಳಿಗೆ ಪ್ರಬಲ ಪ್ರತಿಸ್ಪರ್ಧೆ ನೀಡಿದ ತಾನು ಮೈತ್ರಿಯ ಹೆಸರಲ್ಲಿ ಅವರ ಪರವಾಗಿ ಪ್ರಚಾರ ಮಾಡುವುದು ಸಾಧ್ಯವಾಗದೆಂದವರು ಪಕ್ಷತ್ಯಾಗ ಮಾಡಿದ್ದಾರೆ. ಶ್ರೀ ಶೆಣೈ ಅವರು ಕಳೆದ ಬಾರಿ ಶ್ರೀ ಕೊಳ್ಕೆಬೈಲರಿಗಾಗಿ ಮತಯಾಚನೆ ಮಾಡಿದ್ದು ಈ ಬಾರಿ ಅವರೇ ಶ್ರೀ ಕೊಳ್ಕೆಬೈಲರನ್ನು ಎದುರಿಸುವಾಗ ರಾಜ್ಯಕೀಯದಲ್ಲಿ ಎಲ್ಲವೂ ಸಾಧ್ಯವಾಗಬೇಕು ಎಂದು ಹೇಳಬೇಕಾಗುತ್ತದೆ.

ಶ್ರೀ ಕೊಳ್ಕೆಬೈಲರು ತುಂಬ ಪಳಗಿದ ವ್ಯಕ್ತಿ. ಪ್ರಸಿದ್ಧ ವಕೀಲರೂ ಹೌದು. ಕಳೆದ ಬಾರಿ ತಾನು ನಂಬಿದವರೇ ತನಗೆ ಕೈಕೊಟ್ಟುದರಿಂದ ಅವರು ಸೋತು ಹೋದರು. ಈ ಸಾರಿ ಏನಾಗುತ್ತದೆ ನೋಡಬೇಕಷ್ಟೆ.

ಉಡುಪಿ ಕ್ಷೇತ್ರದಿಂದ ಸ್ಪರ್ಧಿಸುವ ನಾಲ್ಕನೆಯ ಅಭ್ಯರ್ಥಿ ಶ್ರೀ ಪಿ. ವಿಟ್ಠಲ ಶೆಟ್ಟಿ. ಇವರು ಉಡುಪಿಯಲ್ಲಿ ವಕೀಲರಾಗಿದ್ದು ಪಕ್ಷೇತರರಾಗಿ ನಿಂತಿದ್ದಾರೆ. ಹಲವಾರು ಮತಗಳನ್ನು ಸೆಳೆಯಲು ಮಾತ್ರ ಇವರ ಸ್ಪರ್ಧೆ ಕಾರಣವಾಗುತ್ತದೆ.

ಶ್ರೀ ಲೋಬೋ ಪ್ರಭು, ಶ್ರೀ ಶೆಣೈ ಮತ್ತು ಶ್ರೀ ಕೊಳ್ಕೆಬೈಲ್ — ಈ ಮೂವರಲ್ಲಿ ಯಾರು ಹಿತವರು ಎಂದು ಉಡುಪಿ ಮತದಾರರು ಉತ್ತರಿಸಬೇಕು. ಮೂವರೂ ಸಮರ್ಥರು; ಸಶಕ್ತರು; ಜನಪ್ರತಿನಿಧಿಯಾಗುವ ಅರ್ಹತೆಯನ್ನು ಬೆಳೆಸಿ ಉ[illegible]ಸಿಕೊಂಡವರು. ಪಕ್ಷೀಯ ಶಿಸ್ತು–ಸ[illegible]ಗಳು ಶಿಲವಾಗುತ್ತ ಬಂದು ಇತರ[illegible]ಳೇ ಮಹತ್ವವನ್ನು ಗಳಿಸುತ್ತ ಬರುತ್ತಿ[illegible]ವಾಗ ಯಾವುದೇ ಅಭ್ಯರ್ಥಿಯ ವಿಜ[illegible]ವು ಅವನ ಪಕ್ಷದ ವಿಜಯವಾಗಿ [illegible]ಯದೆ ಅವನ ಮತ್ತವನ ಬೆಂಬಲಿಗರ [illegible]ಕ್ತಿಗತ ಶಕ್ತಿಯ ವಿಜಯವಾಗುತ್ತದೆ.

ಉಡುಪಿ ಕ್ಷೇತ್ರದಲ್ಲಿ ಮತದಾನ [illegible]ಚ್ ೪ಕ್ಕೆ. ಮಂಗಳೂರಲ್ಲಿ ಮಾರ್ಚ್ [illegible].

ಶ್ರೀ ಲೋಬೋ ಪ್ರಭುಗಳ ಚಿಹ್ನೆ [illegible]ಕ್ಷತ್ರ, ಶ್ರೀ ಶೆಣೈಯವರದ್ದು ಹಸು–ಕರು, ಶ್ರೀ ಕೊಳ್ಕೆಬೈಲರದ್ದು ಉದಯಸೂರ್ಯ, ಶ್ರೀ ವಿಟ್ಠಲ ಶೆಟ್ಟರದ್ದು ಸಿಂಹ, ಶ್ರೀ ಪೂಣಚ್ಚರದ್ದು ಚರಕದಲ್ಲಿ ನೂಲುವ ಮಹಿಳೆ, ಶ್ರೀ ಕೆ. ಕೆ. ಶೆಟ್ಟರದ್ದು ಹಸು–ಕರು.

ಶ್ರೀಮತಿ ಇಂದಿರಾಗಾಂಧಿಯ ಆತ್ಮಸಾಕ್ಷಿ ಜಾಗರಣದಿಂದ ಕಾಂಗ್ರೆಸ್ಸು ವಿಭಜನೆಗೊಂಡಿತು; ನಿಷ್ಠಾವಂತ ಕಾಂಗ್ರೆಸಿಗ[illegible] ಮುಖ ಮುಚ್ಚಿಕೊಂಡೇ ಮೌನವಾಗಿದ್ದೇ ತೃಪ್ತಿ ಪಡಬೇಕಾಯ್ತು.

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 149/1970. S. C. 82'66.

ವೀರಯ್ಯ ಪೂಜಾರಿ — ಅರ್ಜಿದಾರ, ವಾದಿ

1. ದೋಣಪ್ಪ, [illegible] — ಎದುರು, ಪ್ರತಿವಾದಿ.

ಎದುರೀಗೆ ಕೋರ್ಟಿನ [illegible] ನೋಟೀಸು ಏನೆಂದರೆ —

ನಿಮ್ಮಿಂದ ಅರ್ಜಿದಾರಗೆ ಬರ ಬೇಕಾದ S. C. 82/65 ನೇ ಡಿಕ್ರಿ, [illegible] ಮರೋಡಿ ಗ್ರಾಮದ ಸ. ನಂಬ್ರ 81/2

$\frac{83}{1,2,3,4,6,7,8,9}$, $\frac{85}{3}$, $\frac{193}{2,4}$, $\frac{269}{1}$.

125/1 ನೇ [illegible] ಜಮೀನುಗಳನ್ನು [illegible] ಯಾವುದೇ [illegible] ಮಾಡಬಾರದಾಗಿ ಈ ಮೂಲಕ [illegible] ತಾ. 11-3-71ಕ್ಕೆ [illegible] ಈ ಮೂಲಕ [illegible] ಗಿಯದೆ.

By order of the Court

B. ISHWARA BHAT
Advocate for Petitioner

ಬೆಳ್ತಂಗಡಿ, ತಾ. 28-2-71.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 26

NAVAYUGA

11—3—1971

ಇದು ನಮ್ಮ ಭಾರತ

ಕಳೆದುಕೊಂಡ ನಿಧಿ

ಭಾರತವು ಪ್ರಾಮಾಣಿಕತೆಗೆ, ಸುಸಂಸ್ಕೃತಿಗೆ ಅನಾದಿಯಿಂದಲೂ ಪ್ರಖ್ಯಾತ. ಕಾಲಭಾರದಿಂದ ಅವು ಅದುಮಲ್ಪಟ್ಟಿರುವುದು ನಿಜ. ಸ್ವಲಾಭದ ವ್ಯಾಪಾರಿ ಮನೋಭಾವವನ್ನು ಪಾಶ್ಚಾತ್ಯರಿಂದ ನಾವು ಎರವಲು ಕೊಂಡದ್ದೂ ಹೌದು. ಹಾಗಿದ್ದೂ ಆತ್ಮ-ಪರಮಾತ್ಮಗಳ ಸಂಬಂಧ ಜಿಜ್ಞಾಸೆಯಲ್ಲೇ ಆಯುಷ್ಯ ಸವೆದ ಮುನಿಪುಂಗವರ ವಿರುದ್ಧ ಸತ್ ರಕ್ತ ನಮ್ಮ ಧಮನಿಗಳಲ್ಲಿ ಮಿಡಿಯುತ್ತಿದೆ. ಆದುದರಿಂದ ಬೂದಿಯೊಳಗಿನ ಕೆಂಡ ಒಮ್ಮೆಲೇ ಪ್ರಜ್ವಲಿಸುವಂತೆ ಸ್ವಾರ್ಥದ ನಡುವೆಯೂ ಪ್ರಾಮಾಣಿಕತೆ ಎದ್ದು ತೋರುತ್ತದೆ.

ಇದು ಭಾರತದ ರಾಜಧಾನಿ ನವದೆಹಲಿಯಲ್ಲಿ ಕಳೆದ ಆಗಸ್ಟಿನಲ್ಲಿ ನಡೆದ ಸತ್ಯ ಘಟನೆ. ಲಖನೌವಿನ ಓರ್ವ ವ್ಯಾಪಾರಿ ವ್ಯಾಪಾರಾರ್ಥ ನವದಿಲ್ಲಿಗೆ ಪ್ರಯಾಣ ಮಾಡಿದ. ಆತನಿಗೆ ಸಬ್ಜಿಮಂಡಿಯಲ್ಲಿ ಕಾರ್ಯಭಾರವಿತ್ತು. ರೇಲಿನಿಂದ ಇಳಿದವನೇ ಟ್ಯಾಕ್ಸಿಯೊಂದನ್ನು ಮಾಡಿಕೊಂಡು ಸಬ್ಜಿಮಂಡಿಗೆ ಹೋದ. ಅವನನ್ನು ಅಲ್ಲಿ ಬಿಟ್ಟು ಟ್ಯಾಕ್ಸಿ ತನ್ನ ನೆಲೆಯತ್ತ ಓಡಿತು.

ವ್ಯವಹಾರದ ಮಾತುಕತೆಗಳೆಲ್ಲ ಮುಗಿದಾಗ ವ್ಯಾಪಾರಿಗೆ ತನ್ನ 'ಹ್ಯಾಂಡ್ ಬ್ಯಾಗ್' ಇಲ್ಲದಿರುವುದು ನೆನಪಾಯಿತು. ನೆನಪು ಶಕ್ತಿಯನ್ನು ಹಿಂದೋಡಿಸಿದನು. ರೈಲಿನಿಂದ ಇಳಿದಾಗ ಕೈಯಲ್ಲಿದ್ದದ್ದು, ಹೋಟೆಲಿನಿಂದ ಮರಳುವಾಗ ಅದರಿಂದಲೇ ಹಣ ತೆಗೆದನ್ನು, ಚಿಲ್ಲರೆ ಜೇಬಿಗೆ ಹಾಕಿಕೊಂಡದ್ದು, ಟ್ಯಾಕ್ಸಿಯಲ್ಲಿ ಕೂರುವಾಗಲೂ ಪಕ್ಕದಲ್ಲೇ ಇಟ್ಟುಕೊಂಡದ್ದು ಟ್ಯಾಕ್ಸಿವಾಲನಿಗೆ ಮಾತ್ರ ಜೇಬಿನ ಚಿಲ್ಲರೆ ನೋಟು ಕೊಟ್ಟದ್ದು ಎಲ್ಲವೂ ನೆನಪಿಗೆ ಹೊಳೆದುವು. ಅಂತೂ ಟ್ಯಾಕ್ಸಿಯಲ್ಲೇ ಕೈಚೀಲ ಬಿಟ್ಟಿರುವುದೆಂದು ನಿರ್ಧಾರವಾಯಿತು.

ಆ ಕೈಚೀಲ ಖಾಲಿಯಿರಲಿಲ್ಲ. ಅದರಲ್ಲಿ ನೂರು ನೂರರ ನೋಟುಗಳ ದೊಡ್ಡ ಕಟ್ಟೇ ಇತ್ತು. ವ್ಯಾಪಾರಕ್ಕಾಗಿ ತಂದದ್ದು. ಈಗ ಏನು ಮಾಡಬೇಕು? ವ್ಯಾಪಾರಿಯ ಮುಖ ಜೋಲುಬಿತ್ತು. ಜೀವನಕ್ಕೇ ಕತ್ತಲು ಕವಿದಂತಾಯಿತು. ಅವನು ನಿಟ್ಟುಸಿರು ಬಿಡುತ್ತ ತಲೆಯ ಮೇಲೆ ಕೈಯಿಟ್ಟು ಸುಮ್ಮನಿದ್ದನು.

ಅಷ್ಟರಲ್ಲಿ ಅಂಗಡಿಯ ಮುಂದೆ ಟ್ಯಾಕ್ಸಿಯೊಂದು ಬಂದು ನಿಂತಿತು. ಡ್ರೈವರನು ಬಾಗಿಲು ತೆರೆದು ಹೊರ ಬಂದನು. ಲಖನೌ ವ್ಯಾಪಾರಿಯನ್ನು ಕರೆದು ಕೈಜೋಡಿಸಿದನು. "ಸ್ವಾಮೀ, ನನ್ನ ಅಜಾಗರೂಕತೆಗಾಗಿ ಕ್ಷಮಿಸಿರಿ" ಎಂದನು.

ವ್ಯಾಪಾರಿಗೆ ಏನೊಂದೇ ಹೊಳೆಯಲಿಲ್ಲ. ಡ್ರೈವರನ ಪರಿಚಯವೂ ಆತನಿಗಾಗಲಿಲ್ಲ. ಎಲ್ಲೋ ನೋಡಿದ ಅಸ್ಪಷ್ಟ ನೆನಪು; ಎಲ್ಲೆಂಬುದು ಮಾತ್ರ ಹೊಳೆಯದು.

ಡ್ರೈವರನು ನೇರ ಕಾರಿನೊಳಗೆ ಕೈಹಾಕಿ ಕೈಚೀಲವೊಂದನ್ನು ಹೊರತಂದನು. ವ್ಯಾಪಾರಿ ಮತ್ತವನ ಮಿತ್ರರು ನೋಡುತ್ತಲೇ ಇದ್ದರು. ಡ್ರೈವರನೇ ಮುಂದುವರಿಸಿದನು—'ಸ್ವಾಮಿ, ನನ್ನ ಪರಿಚಯವಾಗಲಿಲ್ಲವೇ?'

ವ್ಯಾಪಾರಿಗೆ ಈಗ ತುಸು ಧೈರ್ಯಮೂಡಿ ಆಗಾಗ ದೆಹಲಿಗೆ ಬರುತ್ತಿರುವ ತಾನು ಎಂದಾದರೂ ಈತನ ಟ್ಯಾಕ್ಸಿಯಲ್ಲಿ ಬಂದಿರಬಹುದೆನಿಸಿತು. ಆತನು ಕೈಯಲ್ಲಿ ಹಿಡಿದಿದ್ದ ಕೈಚೀಲದ ಬಣ್ಣ ಆಕಾರ ತನ್ನದನ್ನೇ ಹೋಲುತ್ತಿತ್ತು. ಇದೀಗ ತಾನೇ ತನ್ನನ್ನು ಇಲ್ಲಿ ಬಿಟ್ಟು ಹೋದ ಟ್ಯಾಕ್ಸಿ ಇದೇ ಇರಬಹುದೆನಿಸಿತು ಒಮ್ಮೆ.

ಅಷ್ಟರಲ್ಲಿ ನಾಲ್ಕಾರು ಜನಕೂಡಿದರು. ಟ್ಯಾಕ್ಸಿವಾಲನೆಂದ— 'ಸ್ವಾಮಿ, ಅವಸರದಲ್ಲಿ ನೀವು ಟ್ಯಾಕ್ಸಿಯಿಂದ ಈ ಕೈಚೀಲ ತೆಗೆದುಕೊಳ್ಳುವುದಕ್ಕೆ ಮೊದಲೇ ನಾನು ಮುಂದುವರಿದೆ. ತಮಗಾದ ತೊಂದರೆಗಳಿಗಾಗಿ ಕ್ಷಮಿಸಿರಿ' ಎಂದು ಕೈಮುಗಿದ.

ವ್ಯಾಪಾರಿಗೆಲ್ಲವೂ ಹೊಳೆದುಹೋಯಿತು. ಅವನು ಗದ್ಗದ ಸ್ವರದಿಂದ ನುಡಿದ— 'ತಮ್ಮಾ, ನಾನೇ ಅವಸರದಿಂದ ಮರೆತುಬಿಟ್ಟೆ. ನಿನ್ನ ಪ್ರಾಮಾಣಿಕತೆಗೆ ಪ್ರತಿಯಾಗಿ ನಾನೇನು ನೀಡಲಿ? ಎಂದು ಅವರು ಚೀಲದೊಳಗೆ ಕೈಹಾಕತೊಡಗಿದರು. ಸ್ಪರ್ಶಮಾತ್ರದಿಂದಲೇ ಚೀಲದ ಬಾಯಿ ತೆರೆಯಲಿಲ್ಲವೆಂಬುದರ ಅನುಭವವಾಯ್ತು; ಸಂತೋಷದಿಂದ ಅವರು ಹಿಗ್ಗಿದರು. ಅಗಲಿ ಹೋದ ಲಕ್ಷ್ಮಿ ಮತ್ತೆ ಅವರ ಕೈಹಿಡಿದಿದ್ದಳು.

ಟ್ಯಾಕ್ಸಿವಾಲನೆಂದನು— 'ಸ್ವಾಮಿ, ಪರರ ಸೊತ್ತು ಮುಟ್ಟುವುದು ಮಹಾಪಾಪ. ಈ ಟ್ಯಾಕ್ಸಿಯಲ್ಲಿ ಇನ್ನೊಬ್ಬ ಪ್ರಯಾಣಿಕ ಕೂತುಕೊಳ್ಳಲು ಬಾಗಿಲು ತೆರೆದಾಗಲೇ ನಿಮ್ಮ ಪರ್ಸ್ ಗೋಚರವಾದದ್ದು. ಅವನನ್ನು ಚೌಕದಲ್ಲೇ ಬಿಟ್ಟು ನಿಮ್ಮನ್ನು ಹುಡುಕಿಕೊಂಡು ಬಂದೆ. ನಾನಿನ್ನು ಬರುತ್ತೇನೆ. ನಮಸ್ಕಾರಗಳು'.

ವ್ಯಾಪಾರಿ— 'ನಿನ್ನ ಪ್ರಾಮಾಣಿಕತೆಗಾಗಿ ಮೆಚ್ಚಿದ್ದೇನೆ. ಏನಾದರೂ ಬಹುಮಾನ....'

ಟ್ಯಾಕ್ಸಿವಾಲ—'ಸ್ವಾಮಿ, ನಿಮ್ಮ ಬಹುಮಾನಕ್ಕಿಂತ ಕೈಚೀಲವೇ ದೊಡ್ಡದು. ಬಹುಮಾನದ ಆಸೆಗಾಗಿ ಕೈಚೀಲವನ್ನು ನಾನು ನಿಮಗೆ ಒಪ್ಪಿಸಿದ್ದೆನಾದರೆ ಮಹಾ ಮೂರ್ಖ ನಾನು. ನೂರಾರು ರೂಪಾಯಿಗಳಿಗಾಗಿ ಸಾವಿರಾರು ರೂಪಾಯಿಗಳನ್ನು ಯಾರಾದರೂ ಕಳೆದುಕೊಳ್ಳುತ್ತಾರೆಯೆ? ಆದರೆ, ಅದಕ್ಕೂ ಮಿಗಿಲಾದ ಬಹುಮಾನವೊಂದಿದೆ. ಭಾರತೀಯರೆಲ್ಲರೂ ಪ್ರಾಮಾಣಿಕರಾಗುವಂತೆ ಪ್ರಾಮಾಣಿಕ ಪ್ರಯತ್ನ ನಡೆಸುವಂತೆ ದೇವರಲ್ಲಿ ನಿತ್ಯ ಬೇಡಿಕೊಳ್ಳಿ. ಇದರಿಂದ ಭಾರತಕ್ಕೇ ಕಳೆದುಕೊಂಡ ನಿಧಿ ಮರಳಿ ದೊರೆತಂತಾಗುವುದು' ಎಂದಾತ ಟ್ಯಾಕ್ಸಿ ಹತ್ತಿ ಸ್ಟಾರ್ಟರ್ ಒತ್ತಿದ. ಎಲ್ಲರೂ ನೋಡುತ್ತಿದ್ದಂತೆಯೇ ಟ್ಯಾಕ್ಸಿ ಮರೆಯಾಯಿತು.

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

ಮೇ ತಿಂಗಳಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ
ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ದೋಣಿ ಸಾಗಿತು....

ಹರಕು ಗುಡಿಸಲ ಮುಂದೆ ನಿಂತೆನು
ಕಣ್ಣು ನೆಟ್ಟಿತು ದೂರಕೆ
ದೂರ್ದಳಿವೆಲಿ ಮನದಿ ನಿಂತೆನು
ಹೊಳೆಯ ಹುಯ್ಲಿನ ಆಟಕೆ—

ಗಾಳಿ ಎದೆಯುಬ್ಬಿ ಬೀಸಿತು
ಮನಸು ದೋಣಿಗೆ ಸಾಗಿತು—
ನನಸು ಕಳಚಿತು ಕನಸು ಹುಟ್ಟಿತು
ಹೃದಯ ಭಾವವು ಮಿಡಿಯಿತು—

ದೂರ ನೀರಲಿ ನಾವೆ ತೇಲಿದೆ
ಕೆಂಗು ಹಾಯ್ಗಳ ಹಿಡಿದಿದೆ—
ತೇಲುತಿಹ ಆ ಮೀನ ತದಿಯಲಿ
ಜಲ್ಲ ಹಿಡಿದಿಹನಾವನೊ....

ಮೆಲ್ಲಮೆಲ್ಲನೆ ಬರುವ ಎಲರಿಗೆ
ದೋಣಿ ಸಾಗಿತು ಮೆಲ್ಲಗೆ—
ಹಾಯ ಬಾರಿಕೆ ಗಾಳಿಯಾಟಕೆ
ತೂಗುತಿಹುದುಯ್ಯಾಲೆಯು—

ಮನಸು ಕನಸಿನ ಲೋಕವಾಗಿದೆ
ಆತ್ಮ ಸವಿದಿದೆ ರಸದನು—
ಮಾನದ ಅಕ್ಷಿಗೆ ಕ್ಷೀರಸೇಚನ
ಕಣ್ಣುಗೊಂಡಿದೆ ಭಾವವು.

ಭವದಸಾಗರ ಹೀಚಿನಡೆಯಿತು
ದೋಣಿ ಸಾಗಿತು ಮುಂದಕೆ—
ದಡದ ಬದಿಗದು ನಡೆದು ಬಂದಿತು
ನಾವು ಅಂತೆಯೆ ಮುಂದಕೆ.

— ಗುಂಡ್ಮಿ ಭಾಸ್ಕರ ಮಯ್ಯ

ಪ್ರೇಮ ಪ್ರವಾಹ

ಕತೆಗಾರ್ತಿ : ಶ್ರೀಮತಿ ಯಶೋದಾ ಎನ್. ಜೆನ್ನಿ.

'ಹಾಗಾದ್ರೆ.... ನಾನು ಹೋಗಿಯೇ ಬಿಡಲೇನು?" ರಘುಪತಿ ಸಿಟ್ಟಿನಿಂದ ಕೇಳಿದ.

"ಹೋಗಿ. ಹೋಗಿ. ಯಾರು ಬೇಡಾಂದರು? ಸಾವಿರ ಸಲ ಹೇಳಿ ಹೆದರಿಸಿದ್ದಾಯ್ತು. ನೀವು ಹೋದರೇ ನನಗೂ ಮನಸ್ಸಿಗೆ ಶಾಂತಿ ಲಭಿಸೀತು' ಮಡದಿ ಮಮತಾ ಅಷ್ಟೇ ಗಟ್ಟಿಯಾಗಿ ನುಡಿದಳು.

'ಏನೆಂದೆ? ನಾನು ಹೋದರೇ ನಿನಗೆ ಮನಶ್ಶಾಂತಿಯೇ? ಸರಿ ಹಾಗಾದರೆ ನೋಡುತ್ತಿರು" ಎಂದು ಸಿಟ್ಟಿನಿಂದ ದಢದಢನೆ ಮೆಟ್ಟಿಲಿಳಿದು ರಭಸವಾಗಿ ನಡೆದೇ ಬಿಟ್ಟ. ಪತಿ ಕಣ್ಮರೆಯಾಗುವ ವರೆಗೂ ಕ್ರೋಧದಿಂದ ಕೂಗಾಡುತ್ತಿದ್ದ ಮಮತಾ ಆ ಮೇಲೆ ಒಮ್ಮಿಂದೊಮ್ಮೆಯೇ ಅಸಹಾಯಕಳಂತೆ ಕುಸಿದು ಕುಳಿತು ಅಳತೊಡಗಿದಳು.

ಅಯ್ಯೋ.... ಏನಾಗಿಬಿಟ್ಟಿತು?

ಇಲ್ಲ. ತಾನು ಅಳಬಾರದು. ಖಂಡಿತ ಅಳಲೇಬಾರದು. ಅಪರಾಧವೆಲ್ಲ ಅವರದೇ ಆಗಿರುವಾಗ ನಾನೇಕೆ ಅವರಿಗಾಗಿ ಕಣ್ಣೀರ್ಗರೆಯಬೇಕು? ಎಂದು ತನ್ನನ್ನು ತಾನೇ ಸಮಾಧಾನಪಡಿಸಿಕೊಂಡಳು ಮಮತಾ.

ರಘುಪತಿ ಯಾವೊಂದು ಗೊತ್ತುಗುರಿಯಿಲ್ಲದೆ ಮುಂದೆ ಮುಂದೆ ನಡೆಯುತ್ತಲೇ ಇದ್ದ. ಕಾಲುಗಳು ಸೋಲುವ ವರೆಗೂ ನಡೆದು ಕೊನೆಗೆ ಬಳಲಿಕೆಯ ಅರಿವು ಉಂಟಾದಾಗ ತಾನೆಷ್ಟು ದೂರ ಬಂದು ಬಿಟ್ಟೆನೆಂದು ವಿಸ್ಮಯವಾಗಿ ಅಲ್ಲಿಯ ನಿರ್ಜನ ರಸ್ತೆಯ ಪಕ್ಕದಲ್ಲಿರುವ ಗುಡ್ಡದತ್ತ ಕಾಲೆಳೆದುಕೊಂಡು ಸ್ವಲ್ಪ ದೂರ ಸಾಗಿ ಕಾಲು ಚಾಚಿ ಕುಳಿತುಕೊಂಡ.

ಯಾವ ಗಲಭೆ ಗದ್ದಲಗಳೂ ಇಲ್ಲದ ಪ್ರಶಾಂತ ತಾಣ. ಸಂಜೆಯ ಸೊಬಗಿನೊಂದಿಗೆ ಬೀಸುವ ತಂಗಾಳಿಯ ತಂಪು, ಕತ್ತೆತ್ತಿ ನೋಡಿದರೆ ವರ್ಣರಂಜಿತವಾಗಿ ಕಂಗೊಳಿಸುವ ಆಗಸದ ಸೌಂದರ್ಯರಾಶಿ, ಇವ್ಯಾವುದೂ ಅವನ ಉದ್ವೇಗಗೊಂಡ ಮನಸ್ಸನ್ನು ಸ್ತಿಮಿತಕ್ಕೆ ತರಲು ಸಹಾಯಕವಾಗಲಿಲ್ಲ. ಅಲ್ಲಿಯ ಶಾಂತತೆ ಇನ್ನಷ್ಟು ಭಯಾನಕವೆನಿಸಿ ಮನಸ್ಸು ಬೇಗುದಿಗೊಳಿಸಿತು.

ಪ್ರೇಮ....ವಿವಾಹ! ಎಂದು ಮನದೊಳಗೇ ನುಡಿದ ಆತನಿಗೆ ಗಟ್ಟಿಯಾಗಿ ನಗಬೇಕೆನಿಸಿತು. ಆತ ಗಟ್ಟಿಯಾಗಿ ನಕ್ಕ ಮೇಲೆ, ಹುಚ್ಚಿನ ಮೂಲವೇ ಈ ನಗುವೇನೋ ಎಂದು ಭ್ರಮಿಸಿ ಭೀತನಾದ.

ಆದರೆ ಅಂದು....

ಇಪ್ಪತ್ತು ವರ್ಷಗಳ ಹಿಂದೆ ತನ್ನ ಇಂದಿನ ವಿಷಾದಾಂತ್ಯ ದಾಂಪತ್ಯದ ಭವಿಷ್ಯವನ್ನು ಯಾರಾದರೂ ನುಡಿದಿದ್ದರೆ ಖಂಡಿತ ಆ ಜ್ಯೋತಿಷಿಯೊಂದಿಗೇ ಯುದ್ಧಕ್ಕೆ ಸಿದ್ಧನಾಗುತ್ತಿದ್ದ. ಅಥವಾ ಅವನ ಮೂರ್ಖತನದ ಅತಿರೇಕಕ್ಕಾಗಿ ನಕ್ಕು ಹಾಸ್ಯ ಮಾಡುತ್ತಿದ್ದ.

ಇಂದು ನಲುವತ್ತೈದರಲ್ಲೇ ಅರವತ್ತರ ವೃದ್ಧಾಪ್ಯದ ವೈರಾಗ್ಯವನ್ನು ತಳೆದು ಬಾಳುವ ರಘುಪತಿಗೆ ಬಾಳೊಂದು ಘೋರ ನರಕ ಎಂದೆನಿಸಿದರೂ ಇದರಿಂದ ಮುಕ್ತಿ ದೊರಕಿಸಿಕೊಳ್ಳುವ ಮಾರ್ಗ ಮಾತ್ರ ಕಾಣಿಸುತ್ತಿರಲಿಲ್ಲ. ಗಂಡಸಾಗಿ ಜನಿಸಿ 'ಆತ್ಮಹತ್ಯೆ' ಮಾಡಿಕೊಳ್ಳುವುದಂತೂ ಹೇಡಿತನದ ವಿಚಾರವಾಯ್ತು.

ಮರೆಯಬೇಕು. ಎಲ್ಲ ದುರ್ದಿನಗಳನ್ನು ಮರೆತು ಬಾಳಬೇಕು. ಹಾಗೆಂದೇ ಈಗ ಎಷ್ಟೋ ವರ್ಷಗಳಿಂದ ಜೀವನದ ಕಹಿಗುಳಿಗೆಗಳೆಲ್ಲವನ್ನೂ ಕಣ್ಣು ಮುಚ್ಚಿ ನುಂಗಿಕೊಂಡು ದಿನಗಳೆಯುತ್ತಿದ್ದಾನೆ.

ತಾನು ಮರೆಯಲೆತ್ನಿಸಿದಷ್ಟೂ ನೆನಪುಗಳು ಮಿದುಳಿನಾಳದಿಂದ ಹುಚ್ಚೆದ್ದು ಕುಣಿದು ಕೆಣಕುತ್ತಿವೆ.

ಸಂಸಾರದಲ್ಲಿ ಸಾರವಿಲ್ಲ. ಬದುಕಿನಲ್ಲಿ ಸುಖವಿಲ್ಲ. ಮತ್ತೇನಿದೆ? ಬರಿಯ ದುಃಖ, ಅಶಾಂತಿ. ಬಿಡುಗಡೆಯಿಲ್ಲದ ಬೇಡಿಗೆ ಸಿಲುಕಿದ ಕೈದಿ ತಾನು.

ಬೇಡ ಈ ಕಹಿ ನೆನಪು. ಸಂಸಾರದ ಸವಿ ನೆನಪನ್ನೇ ಸ್ಮರಿಸಬೇಕು. ತನ್ನ ಮತ್ತು ಮಮತಾಳ ಪರಿಚಯವಾದ ಮೊದಲ ದಿನಗಳ ಆನಂದ, ಉತ್ಸಾಹಗಳ ಸವಿಯನ್ನೇ ಮೆಲುಕು ಹಾಕಬೇಕು. ಆದರೆ....ಇಂದು ಅದರ ನೆನಪೇ ಬೇಡವಾಗುತ್ತಿದೆ. ಸ್ವಲ್ಪ ಸಿಹಿತಿಂದು ಆ ಮೇಲೆ ತುಂಬ ಕಹಿ ಕಷಾಯವನ್ನೇ ಕುಡಿದರೆ ಆ ಸಿಹಿಯ ನೆನಪಾದರೂ ಯಾರಿಗೆ ಬೇಕಾಗುತ್ತದೆ?

ಆಕೆಯನ್ನು ಮೊದಲ ಬಾರಿ ಕಂಡಾಗ ತನ್ನಷ್ಟಕ್ಕೇ ಉಂಟಾದ ಆಸಕ್ತಿ ಆ ಮೇಲೆ ಬಸ್ಸಿನಲ್ಲಿ ನಿತ್ಯವೂ ನೋಡುತ್ತಿದ್ದಾಗ ಉಂಟಾದ ಕುತೂಹಲ. ಅದೇ ಬೆಳೆದ ಮೇಲೆ ಪರಿಚಯದ ಮುಗುಳ್ನಗುವಿನ ವಿನಿಮಯ ಸಹಜವೆಂಬಂತೆ ಆರಂಭವಾಗಿ ಕೊನೆಗೆ ಮಿತದಲ್ಲಿ ಮಾತು ಮೊದಲಾಗಿ ಅದೇ ಅತಿಯಾದ ಸಂಭಾಷಣೆಗೂ ಪೀಠಿಕೆಯಾಗಿ ತನ್ನರಿವಿಲ್ಲದೆಯೇ ಪ್ರೀತಿಗೆ ನಾಂದಿಯಾಯಿತು.

ಅಲ್ಲಿಯೇ ನಾನೂ ತಪ್ಪಿದೆ!

ಮಮತಾ ರೂಪಸಿಯೆಂದು ಯಾರೂ ಹೇಳುವಂತಿಲ್ಲವಾದರೂ ಇಪ್ಪತ್ತೈದರ ಯುವಕನಾದ ತನ್ನ ದೃಷ್ಟಿಗೆ ಅವಳು ಅತ್ಯಂತ ಚೆಲುವೆಯಾಗಿಯೇ ಕಂಡಿದ್ದಳು. ಅದಕ್ಕಿಂತಲೂ ಹೆಚ್ಚಿನ ಆಕರ್ಷಣೆ, ಅವಳ ಒನಪು, ವೈಯ್ಯಾರ, ಬೆಡಗುಬಿನ್ನಾಣದ ಬಳುಕುವ ದೇಹ, ವಿಲಾಸದ ನಡಿಗೆ, ಮನ ಸೆಳೆಯುವ ಕಣ್ನೋಟ ತನ್ನನ್ನು ಬಹಳವಾಗಿ ಆಕರ್ಷಿಸಿದವು. ಅದೇ ಪ್ರೀತಿಯ ಮೂಲ ಬಂಡವಾಳವೆಂದು ನೆಚ್ಚಿ ನಂಬಿ ಅವಳೊಂದಿಗೆ ಆತ್ಮೀಯನಾಗಿ ವರ್ತಿಸತೊಡಗಿದ.

ಆದರೆ ಮೊದಲ ತುತ್ತಿನಲ್ಲೇ ಸಿಕ್ಕಿದ ದೊಡ್ಡ ಕಲ್ಲಿನಂತೆ ಆಕೆಯ ಜಾತಿ ಅವನನ್ನು ಕೊಂಚ ವಿಚಲಿತನನ್ನಾಗಿ ಮಾಡಿತು. ಅವಳ ಅಂದವಾದ ಉಡಿಗೆತೊಡಿಗೆಗಳಿಂದಲಂಕೃತವಾದ ಬೆಳ್ಳಗಿನ ವೈಚರ್ಮವನ್ನು ನೋಡಿದವರು ಹರಿಜನವೆಂದು ಊಹಿಸುವುದೂ ಸಾಧ್ಯವಿರಲಿಲ್ಲ. ಆದರೆ ನಿಜ ಸಂಗತಿ ತಿಳಿಯುವಾಗ ಆತ ಸಂಪೂರ್ಣ ಅವಳಿಗೊಲಿದಾಗಿತ್ತು. ಆಗ ಆ ಹೆಣ್ಣು ದಿಟ್ಟತನದಿಂದ ನುಡಿದಿದ್ದಳು.

"ಮನುಷ್ಯರಲ್ಲಿ ಎರಡೇ ಜಾತಿ. ಹೆಣ್ಣು ಮತ್ತು ಗಂಡು ಇಷ್ಟೊಂದು ಮುಂದುವರಿದ ನೀವೂ ಜಾತಿ ವಿಷಯ ಕೇಳಿದೊಡನೆ ಯಾಕೆ ಯೋಚಿಸುತ್ತೀರಿ? ಪ್ರೀತಿಗಿಂತ ಜಾತಿ ದೊಡ್ಡದೇ?'

ಅವಳ ಸಾಮೀಪ್ಯದ ಸುಖದಿದಿರು ಅವಳ ಸವಾಲನ್ನೆದಿರಿಸುವ ಚೈತನ್ಯ ಅವನಲ್ಲಿರಲಿಲ್ಲ.

ಆದರೂ ಒಳಗಿಂದೊಳಗೇ ಅಳುಕು!

ತನ್ನ ಬಂಧು ಬಳಗದವರೇನೆನ್ನುವರೋ ಎಂಬ ಅಂಜಿಕೆ. ಈ ಅಂಜಿಕೆಯೊಂದಿಗೇ ದೇಹ ಬಳಿಸಾರಿತು. ಆ ಅಪರಾಧಕ್ಕಾದ ಶಿಕ್ಷೆಯೇ ಮದುವೆ! ಅರಿತೋ ಅರಿಯದೆಯೋ ಮಾಡಿದ ತಪ್ಪಿಗೆ ಮಮತಾ ತಾಯಾಗುವ ಸ್ಥಿತಿ ತಲುಪಿ ಕಣ್ಣೀರ್ಗರೆದಾಗ ತಾನು ತನ್ನ ಮನೆ. ಜಾತಿ, ಕುಲ, ಎಲ್ಲವನ್ನೂ ಮರೆತು ಆದರ್ಶದ ಕೊನೆಯ ಮೆಟ್ಟಿಲೇರಿ ರಿಜಿಸ್ಟರ್ಡ್ ಮದುವೆ ಮಾಡಿಕೊಂಡು ಬಿಟ್ಟ.

ಆಗ ಇಪ್ಪತ್ತೈದರ ಏರು ಯೌವನದ ತುಂಬು ಉತ್ಸಾಹದಲ್ಲಿದ್ದ ತನಗೆ ಯಾವ ಸಮಸ್ಯೆಯೂ ಬೃಹದಾಕಾರ ತಾಳಿ ಕಿರುಕುಳ ಕೊಡಲಿಲ್ಲ. ಪ್ರಪಂಚವೆಲ್ಲವೂ ತನ್ನದೇ, ತಾನೆಣಿಸಿದ್ದೆಲ್ಲವೂ ನಡೆಯಬೇಕು. ತನ್ನನ್ನೆದಿರಿಸುವ ಸಾಹಸಯಾರಿಗಿದೆ. ಎಂದೇ ಭ್ರಮೆ! ಮಾತ್ರವಲ್ಲ. ಹರಿಜನ ಕನ್ಯೆಯೊಬ್ಬಳನ್ನು ಬ್ರಾಹ್ಮಣ ಯುವಕನು ವಿವಾಹವಾದ ಆದರ್ಶ ಪುರುಷನೆಂದು ಅನೇಕ ಪತ್ರಿಕೆಗಳಲ್ಲಿ ಫೋಟೋ ಹಾಕಿ ಕೊಂಡಾಡಿ ಬರೆದಿದ್ದರು. ಊರಗಣ್ಯರನೇಕರು ಸಮಾಜ ಸುಧಾರಕನೆಂದೂ, ಉನ್ನತ ಧ್ಯೇಯವಾದಿಯೆಂದೂ ಸಮಾನತಾ ಸಾಧಕನೆಂದೂ. ಸಭೆಯಲ್ಲಿ ಹೊಗಳಿ ಹೂಮಾಲೆ ಹಾಕಿ ಸನ್ಮಾನಿಸಿದಾಗ ತಾನು ಹೆಮ್ಮೆಯಿಂದ ಉಬ್ಬಿ ವಿಸ್ಮಿತನಾಗಿದ್ದೆ. ತಾನು ಮಾಡಿದ ಕಾರ್ಯ ಅಷ್ಟೊಂದು ಘನತೆಯುಳ್ಳದ್ದೇ ಎಂದು ತನಗೇ ಆಶ್ಚರ್ಯವಾಗಿತ್ತು. ಅಲ್ಲದೇ ತನ್ನವರೆಂದು ಕೊಂಡಿದ್ದವರೆಲ್ಲರೂ ತುಚ್ಛೀಕರಿಸಿ ದೂರವೇ ಉಳಿದುಕೊಂಡರೂ ಊರವರಾದರೂ ತನ್ನನ್ನು ಗೌರವಿಸಿದರಲ್ಲ ಎಂದು ಸಂತೋಷಪಟ್ಟ.

ಜೀವನವೆಲ್ಲವೂ ಸವಿಸಕ್ಕರೆ ಮೆಲ್ಲುವ ಸಂತಸದ ದಿನಗಳು. ಅದರಲ್ಲಿ ದುಃಖದ ಕರಾಳ ಛಾಯೆ ಕಾಣಿಸಿಕೊಳ್ಳುವುದು ಕಲ್ಪನೆಗೂ ನಿಲುಕದ ವಿಚಾರ ಎಂದೇ ಉತ್ಸಾಹದಿಂದ ಹೊಸ ಬದುಕನ್ನು ಆರಂಭಿಸಿದ್ದ. ದಿನಗಳೆದಂತೆ ಮದುವೆಯ ಮೊದಲ ದಿನಗಳಲ್ಲಿದ್ದ ಉತ್ಸಾಹ, ಸಂಭ್ರಮಗಳ ಕಾವು ಇಳಿಯುತ್ತಾ ಬಂದಂತೆ ಯಾಕೋ ನಿಧಾನವಾಗಿ ಬೇಸರದ ಛಾಯೆ ಅಲ್ಪಸ್ವಲ್ಪ ಪಸರ ತೊಡಗಿತ್ತು.

ತಂದೆ, ತಾಯಿ, ಬಂಧುಬಳಗದವರೆಲ್ಲರಿಂದ ದೂರವಾದ ತಾನು ಊರವರ ಪ್ರೀತಿ ವಿಶ್ವಾಸ ಗೌರವಗಳಿಗೆ ಪಾತ್ರನೆಂದು ತಿಳಿದುಕೊಂಡುದು ತನ್ನ ಹುಚ್ಚುತನವೆಂದೇ ಅನಿಸತೊಡಗಿತು.

ಸಮಾಜ ಸುಧಾರಕನೆಂದು ಸಭೆಯಲ್ಲಿ ಸ್ತುತಿಗೈದ ಜನತೆಯೇ ತಾನು ಹತ್ತಿರ ಹೋದಷ್ಟೂ ದೂರ ಸರಿಯುತ್ತಿರುವುದರ ಕಠೋರ ಸತ್ಯ ಗೋಚರವಾಗತೊಡಗಿತು. ಆದರ್ಶ ವ್ಯಕ್ತಿಯೆಂದು ಆದರಿಸಿ ನುಡಿದ ವ್ಯಕ್ತಿಗಳೇ ತಮ್ಮ ಮನೆಯ ಯಾವ ಸಮಾರಂಭಗಳಿಗೂ ತನ್ನನ್ನು ಕರೆಯದಿದ್ದುದರ ಒಳಮರ್ಮ ಅರಿವಾಗಲಾರಂಭಿಸಿತು.

ಅಪರೂಪವಾಗಿ ತೀರಾ ಮುಂದರಿದ ಆತ್ಮೀಯ ಗೆಳೆಯರು ಉಪಾಹಾರಕ್ಕಾಗಿ ಆಹ್ವಾನಿಸಿದಾಗ ತಾವಿಬ್ಬರೂ ಹೋದರೆ ಅ

(ಹನ್ನೊಂದನೇ ಪುಟ ನೋಡಿರಿ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ–

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಪ್ರಜಾಸತ್ತೆಗೊಂದು ಪ್ರಬಲ ಆಹ್ವಾನ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 26

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಈ ಸಂಚಿಕೆ ವಾಚಕರ ಕೈಸೇರುವಷ್ಟರಲ್ಲಿ, ನಡೆದ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶಗಳು ಪ್ರಕಟವಾಗುತ್ತವೆ. ತಮಿಳುನಾಡು, ಉತ್ಕಲ ಮತ್ತು ಬಂಗಾಳಗಳ ರಾಜ್ಯಸರಕಾರ ಹಾಗೂ ಭಾರತದ ಕೇಂದ್ರ ಸರಕಾರದ ಚುಕ್ಕಾಣಿ ಯಾರ ಕೈಸೇರಿತು ಎಂಬುದು ಸ್ಪಷ್ಟವಾಗಿ ತಿಳಿಯಬಹುದು; ಅಸ್ಪಷ್ಟವಾಗಿ ತಿಳಿಯುವುದಕ್ಕಂತೂ ಆತಂಕವಿಲ್ಲ. ಚುನಾವಣೆಯಲ್ಲಿ ಯಾರೇ ಗೆಲ್ಲಲಿ, ಅಥವಾ ಗೆಲ್ಲುವ ಹಂತದಲ್ಲಿ ನಿಂತಿರಲಿ, ಅದು ಮುಖ್ಯವಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಿಯಾಗದೆ ಹೋದರೆ, ದೇಶವೇನೂ ಮುಳುಗುವುದಿಲ್ಲ. ಬೇರೆಯವರು ಅಧಿಕಾರ ಹಿಡಿದರೆಂದರೆ ದೇಶ ನಂದನವಾಗುವುದಿಲ್ಲ. ಸರಕಾರದ ಸೂತ್ರವೊಂದು ಕೀಲಿ ಮಾತ್ರ. ದೇಶದ ಜನತೆ ಸಾಮೂಹಿಕವಾಗಿ ಪ್ರಗತಿ ಹೊಂದಬೇಕೆಂದು ಇಚ್ಛಿಸಿ, ದುಡಿದರೆ ಮಾತ್ರ ಪ್ರಗತಿಸಾಧ್ಯ. ತಾವು ಪ್ರಗತಿಶೀಲರೆಂದು ಡಂಗುರ ಸಾರುವುದರಿಂದಲೇ ದೇಶ ಪ್ರಗತಿಹೊಂದುವುದಿಲ್ಲ.

ಈ ಬಾರಿಯ ಚುನಾವಣೆಯ ವೇಳೆ ನಡೆಸಿದ ವಿವಿಧ ಪ್ರಚಾರ ಕಾರ್ಯಗಳನ್ನು ಕಾಣುವಾಗ ಅಧಿಕಾರಕ್ಕೆ ಯಾರೇ ಬರಲಿ, ದೇಶದ ಭವಿಷ್ಯ ಅಂಧಕಾರ ಮಯವಾಗಿದೆಯೆನಿಸೀತು. 'ಇಂದಿರಾ ಹಟಾವೋ; ಇಂಡಿಯಾ ಬಚಾವೋ' ಎಂದು ಇಂದಿರಾ ವಿರೋಧಿಗಳ ಗಾಯತ್ರಿಯಾದರೆ "ಓಟ್ ಇಂದಿರಾ, ಸೇವ್ ಇಂಡಿಯಾ" ಎಂಬುದು ಇಂಡಿಕೇಟ್ ಸರ್ವಾರ್ಥಸಿದ್ಧಿ ಜಪ. ಮೊದನೊದಲಿಗೆ ಪ್ರಗತಿ, ಆಸ್ತಿಯ ಮಿತಿ, ರಾಜಧನ ರದ್ಧತಿ, ನಿರುದ್ಯೋಗ ನಿವಾರಣೆ, ಬಡತನದ ದೂರೀಕರಣ ಮೊದಲಾದ ಪಕ್ಷದ ನೀತಿ–ನಡಾವಳಿಗಳ ಬಲದಿಂದ ಮತಯಾಚನೆಮಾಡಿದವರು ಕೊನೆಯ ಗಳಿಗೆಯಲ್ಲಿ ನೀತಿಯನ್ನು ಮೂಲೆಗೆ ತಳ್ಳಿ ದನ-ಕರುಗಳಿಗೆ ಬಲವಂದು ಇಂದಿರಾ ನಾಮೋಚ್ಚಾರದಿಂದಲೇ ಮತ ಬೇಡಲು ಮುಂದಾದರು. ಎಲ್ಲಿಯವರೆಗೆ ಎಂದರೆ, ಇಂದಿರಾವಾದವೇ ಸಮಾಜವಾದ ಎಂಬ ಅಪ್ಪಟ ಸುಳ್ಳನ್ನು ಸಾರುತ್ತ ಜನತೆಯ ಮೇಲೆ ಸಮ್ಮೋಹಿನಿ ಪ್ರಸಂಗವೂ ನಡೆಯಿತು. ಇದು ಇಂಡಿಕೇಟಿನ ಪ್ರಚಾರ ವೈಖರಿಯಾದರೆ, ಅವರ ವಿರೋಧಿಗಳೂ ಹಿಂದುಳಿದಿಲ್ಲ. ಶ್ರೀಮತಿ ಇಂದಿರಾ ಗಾಂಧಿಯನ್ನು ಅಧಿಕಾರದಿಂದ ದಬ್ಬಬೇಕೆಂಬ ಏಕೋದ್ದೇಶದಿಂದ ಚುನಾವಣೆಯ ವೇಳೆ ಒಂದಾದ ಈ ಪಕ್ಷಗಳು 'ಇಂದಿರಾ ಹಟಾವೋ' ಘೋಷಿಸುವುದು ವಿಶೇಷವಲ್ಲ. ಅಂದರೆ, ಈ ಬಾರಿಯ ಪ್ರಚಾರ ಒಂದು ರೀತಿಯ ಸಮ್ಮೋಹಿನಿ ಪ್ರಯೋಗದ ಮೇಲೆ ನಡೆಯಿತೇ ಹೊರತು, ಪಕ್ಷಗಳ ಪ್ರಣಾಳಿಕೆಗಳ ಆಧಾರದ ಮೇಲೆ ನಡೆಯಲಿಲ್ಲ. ಇದು ತಾತ್ಕಾಲಿಕವಾಗಿ ಪ್ರಯೋಜನ ಕೊಟ್ಟಿರಬಹುದು; ಅಭ್ಯರ್ಥಿಯ ಗೆಲುವಿಗೆ ಶಾಂತಿಪಾಠ ಹಾಡಿರಬಹುದು; ಮತದಾರನ ವಿವೇಚನಾಶಕ್ತಿಯನ್ನೇ ಸಮ್ಮೋಹಗೊಳಿಸಿದ ಮೇಲೆ 'ಸ್ವತಂತ್ರವಾಗಿ ಮತ ನೀಡುವ' ಅವಕಾಶವೆಲ್ಲಿ? ಪಕ್ಷಗಳ ಚುನಾವಣಾ ಪ್ರಣಾಳಿಕೆಗಳು ಸಮಾಚಾರ ಪತ್ರಗಳಲ್ಲೇ ಉಳಿದುವು. ಮತದಾರನು ಪಕ್ಷ ಧ್ಯೇಯ–ಗುರಿಗಳಿಗೆ ಅನಭಿಜ್ಞನಾದನು. ಸಮ್ಮೋಹನಾಸ್ತ್ರ ಬಲದಿಂದ ಮತದಾನ ಮಾಡಿದನು. ಇದನ್ನು ಸಂಘಟನಾಶಕ್ತಿಯೆನ್ನುವವರಿದ್ದಾರೆ; ಇಂದಿರಾ ಬಿರುಗಾಳಿಯೆನ್ನುವವರೂ ಇದ್ದಾರೆ; ಅದಾವ ಹೆಸರಿನಿಂದ ಕರೆದರೂ ಇದು 'ಮತದಾರರ ವಂಚನೆ'; ಈ ವಂಚನೆ ಪ್ರಜಾಪ್ರಭುತ್ವಕ್ಕೆ ಕ್ಷಯರೋಗ ಹಿಡಿಸುತ್ತದೆಂಬುದು ಹಗಲಿನಷ್ಟು ಸ್ಪಷ್ಟ.

ಹಿಂದಿನ ಚುನಾವಣೆಗಳಲ್ಲಿ ಶಾಂತಿ ರಕ್ಷಿಸಿಕೊಂಡು ಬಂದ ಹೆಗ್ಗಳಿಕೆ ನಮ್ಮದು. ತಮ್ಮತ್ತ, ತಮ್ಮ ನೀತಿಯತ್ತ ಜನರನ್ನು ಆಕರ್ಷಿಸಲು ಭಗೀರಥ ಪ್ರಯತ್ನ ಮಾಡುವುದು ಪಕ್ಷಗಳ ಕರ್ತವ್ಯ. ಈ ಕರ್ತವ್ಯವನ್ನು ನಾವು ಮೊನ್ನೆಮೊನ್ನೆಯ ವರೆಗೂ ಉತ್ತಮ ರೀತಿಯಿಂದ ನಿಭಾಯಿಸಿಕೊಂಡು ಬಂದು ವಿಶ್ವದಲ್ಲೇ ದಾಖಲೆ ಸ್ಥಾಪಿಸಿದ್ದೆವು. ಆದರೆ, ಈ ಬಾರಿ ನಾವು ಪರಶುರಾಮನತ್ತ ಒಲಿದಂತೆ ಭಾಸವಾಯ್ತು. ವಿರೋಧಿಗಳನ್ನು ದಂಡೋಪಾಯದಿಂದಲೇ ಬಗ್ಗುಬಡೆಯುವ ಹವ್ಯಾಸಕ್ಕೆ ಹಲವೆಡೆ ತೊಡಗಿದ ವರದಿಗಳು ಬಂದಿವೆ; ನಮ್ಮ ವಿರೋಧಿಗಳ ಸಭೆ—ಮೆರವಣಿಗೆಗಳನ್ನು ಕೆಡಿಸುವ ಹಲವಾರು ಪ್ರಯತ್ನಗಳು ಯಶಸ್ವಿಯಾದ ಉಲ್ಲೇಖಗಳೂ ಇವೆ. ರಾಜ್ಯಕೀಯ ಹತ್ಯೆ—ಕೊಲೆಗಳೂ ಕೆಲವೆಡೆ ನಡೆದಿವೆ. ಪಶ್ಚಿಮ ಬಂಗಾಲ ಇವಕ್ಕೆ ಮತ್ತೊಂದು ಹೆಸರು. ಇಷ್ಟರಲ್ಲೇ ತೃಪ್ತರಾಗದ ಕೆಲವು ಸಹೋದರರು ಮತಗಟ್ಟೆಗಳಿಗೂ ದಾಳಿಯಿಟ್ಟು ಮತದಾನವನ್ನು ಕೆಡಿಸಿ ಬಿಟ್ಟ, ಮತಪೆಟ್ಟಿಗೆಗಳನ್ನು ಅಪಹರಿಸಿದ ದುರ್ಘಟನೆಗಳು ಕೆಲವೆಡೆ ನಡೆದುವು. ಇದು ಪ್ರಜಾಸತ್ತೆಗೊಂದು ಪ್ರಬಲ ಆಹ್ವಾನ. ಭಾರತೀಯರು ಪ್ರಜಾಪ್ರಭುತ್ವಕ್ಕೆ ಅನರ್ಹರೆಂಬ ವಿದೇಶೀಯರಿಗೆ ಒದವಿದ ವ್ಯಂಗ್ಯ ಬಾಣ. ಈ ರಾಜ್ಯಕೀಯ ಕೊಲೆಗಳು, ಮುಕ್ತ ಮತದಾನಕ್ಕೆ ಒದಗಿದ ಅಡೆತಡೆಗಳು, ಭೀತ ವಾತಾವರಣ ಪ್ರಜಾಸತ್ತೆಗೆ ಶೋಭನೀಯವಲ್ಲ. ಅಹಿಂಸೆ ಮತ್ತು ಶಾಂತಿಗಳಿಂದ ಸಾಮಾಜಿಕ ನ್ಯಾಯ ಅಲಭ್ಯವೆಂದೂ ಮತಪೆಟ್ಟಿಗೆಗಳಿಂದ ಕ್ರಾಂತಿ ಅಸಾಧ್ಯವೆಂದೂ ತಿಳಿಯುವ ಪ್ರಜಾತಂತ್ರ ವಿರೋಧಿಗಳ ಬೃಹತ್ ಜಾಲ ದೇಶದ ಮೂಲೆ ಮೂಲೆಯಲ್ಲಿ ಹಬ್ಬಿರುವುದು. ಕ್ರಾಂತಿಯ ಹೆಸರಲ್ಲಿ ರಕ್ತಪಾತಕ್ಕೆ ಆರಂಭವಾಗಿರುವುದು ದೇಶದ ಅಭ್ಯುದಯಕ್ಕೆ ಮಾರಕ. ಪ್ರಜಾಸತ್ತೆಯ ತಾಯ್ಬೇರಾದ ಸಂವಿಧಾನವನ್ನೇ ಕಿತ್ತೊಗೆಯುವ, ಅಥವಾ ಅದನ್ನು ತಮಗೆ ಬೇಕಾದಂತೆ ಬದಲಿಸುವ ಆಕಾಂಕ್ಷೆ ಆಸಕ್ತ ಗುಂಪಿನಲ್ಲಿ ಧಾರಾಳವಾಗಿ ಗೋಚರಿಸಿತು. ಲಿಖಿತ ಸಂವಿಧಾನವಿಲ್ಲದೆ ಬರಿಯ ಸಂಪ್ರದಾಯಗಳ ಬಲದಿಂದಲೇ ಜಗತ್ತಿನ ಶ್ರೇಷ್ಠ ಪ್ರಜಾಸತ್ತೆಯೆನಿಸಿದ 'ಇಂಗ್ಲೆಂಡ್', ಲಿಖಿತ ಸಂವಿಧಾನ ಬಲದಿಂದ ಮುನ್ನಡೆದ ಅಮೆರಿಕೆಗಳ ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡ ಭಾರತದ ಸಂವಿಧಾನ ಅಪರಿವರ್ತಿತವೆನ್ನಲಾಗದಾದರೂ ಕೆಲವೇ ಆಸಕ್ತರ ಕೈಯಲ್ಲಿನ ಪುಟ ಚೆಂಡಿನಂತಾಗುವುದು ದೇಶಕ್ಕೆ ಉಚಿತವಲ್ಲ. ಈ ಬಾರಿಯ ಚುನಾವಣೆಗಳಿಂದ ನಾವು ಭಾರೀ ಪಾಠಗಳನ್ನು ಕಲಿಯತಕ್ಕದ್ದಿದೆ. ಈ ಪಾಠಗಳನ್ನು ಕಲಿತುಕೊಳ್ಳುವಲ್ಲಿ ನಾವು ಎಷ್ಟು ತಡ ಮಾಡುತ್ತೇವೋ ಅಷ್ಟು ಪಾತಳಿಗೆ ಕುಸಿಯುತ್ತೇವೆಯೆಂಬುದು ಸತ್ಯ.

ಸರ್ವಾಧಿಕಾರಿಯ ತಲೆತಗ್ಗಿತು

ಮಾರ್ಚ್ ಮೂರರಂದು ಸೇರಬೇಕಾಗಿದ್ದ ಪಾಕ್ ರಾಜ್ಯಾಂಗ ಸಭೆಯನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದುವರಿಸಿ, ಆಳಿಮುಳಿದಿದ್ದ ನಾಗರಿಕ ಆಡಳಿತೆಯನ್ನು ಕಿತ್ತುಹಾಕಿ ಮಾರ್ಷಲ್ ಪ್ರಶಾಸನವನ್ನು ಉಗ್ಗಡಿಸಿದ ಪಾಕ್ ಅಧ್ಯಕ್ಷ ಯಾಹ್ಯಾಖಾನರು ಪೂರ್ವ ಪಾಕಿಸ್ತಾನಕ್ಕೊಂದು ಬುದ್ಧಿ ಕಲಿಸ ಬಯಸಿದ್ದರು. ಪರಿಣಾಮ ಗಂಭೀರವಾಯ್ತು. ಅವಾಮಿ ಲೀಗಿನ ನೇತೃತ್ವದಲ್ಲಿ ನಡೆದ ಪ್ರತಿಭಟನೆ ಪ್ರಜಾಸತ್ತೆಯಲ್ಲಿ ವಿಶ್ವಾಸವಿರಿಸಿದ್ದ ನೂರಾರು ನಾಗರಿಕರ ಕಗ್ಗೊಲೆಗೆ ಕಾರಣವಾಯ್ತು. ಮಿಲಿಟರಿ ಬಲದಿಂದ ಏನನ್ನಾದರೂ ಮಾಡಬಹುದು; ಯಾರನ್ನಾದರೂ ಅಂಕೆಯಲ್ಲಿಟ್ಟುಕೊಳ್ಳಬಹುದೆಂದು ಶಕ್ತಿಯ ಮೇಲೆ ಅಚಲ ವಿಶ್ವಾಸವಿಟ್ಟಿದ್ದ ಯಾಹ್ಯಾಖಾನರು ಮತ್ತು ಭುಟ್ಟೊ ಮಹಾಶಯರು ತತ್ತರಿಸುವಂತಾಯ್ತು. ಆದುದರಿಂದಲೇ ಯಾಹ್ಯಾಖಾನರು ರಾಜ್ಯಾಂಗ ಸಭೆಯನ್ನು ಇದೇ ೨೫ಕ್ಕೆ ಕರೆಯುವುದಾಗಿ ಮತ್ತೆ ಘೋಷಿಸುವಂತಾಯ್ತು. ರಾಜ್ಯಗಳ ಸ್ವಾಯತ್ತತೆಯನ್ನು ಬಯಸಿದ ರಹಮಾನ್, ಏಕಸೂತ್ರತೆಯಲ್ಲಿ ವಿಶ್ವಾಸವಿಟ್ಟಿರುವ ಭುಟ್ಟೋರವರ ಭಿನ್ನಮತವನ್ನು ತನ್ನ ಲಾಭಕ್ಕೆ ಯಾಹ್ಯಾಖಾನರು ಉಪಯೋಗಿಸಿಕೊಳ್ಳಬಯಸಿದ್ದು, ಮತ್ತವರು ಸೋತುಹೋದದ್ದು ಸರ್ವಶ್ರುತ. ರಾಜ್ಯಾಂಗದಲ್ಲಿ ರಾಜ್ಯಸ್ವಾಯತ್ತತೆಯ ಬಗ್ಗೆ ತಾನು ತಳೆದಿರುವ ನಿಲುವಿನಲ್ಲಿ ಯಾವ ಬದಲಾವಣೆಯಿಲ್ಲವೆಂದೂ ಅದನ್ನು ಒಪ್ಪಿಕೊಳ್ಳುವುದಾದರೆ ಮಾತ್ರ ತನ್ನ ಪಕ್ಷವು ಸಭೆಯಲ್ಲಿ ಭಾಗವಹಿಸುವುದೆಂದೂ ರಹಮಾನರು ಹೇಳಿದ್ದಾರೆ. ಭುಟ್ಟೊ ರಾಜ್ಯಾಂಗ ಸಭೆಯನ್ನು ಬಹಿಷ್ಕರಿಸುವ ತಮ್ಮ ನಿಲುವನ್ನು ಬದಲಿಸಿದರೂ ಸ್ವಾಯತ್ತತೆಗೆ ಒಪ್ಪುವುದು ಸಂದೇಹ. ಏಕೆಂದರೆ, ಪೂರ್ವ ಬಂಗಾಳದ ಬಹುಸಂಖ್ಯಾಕ ಪ್ರಜೆಗಳ ರಕ್ತ ಹೀರಿಯೇ ಪಶ್ಚಿಮ ಪಾಕಿಸ್ತಾನದ ಜಿಗಳೆಗಳು ಬೆಳೆದುಬಂದಿವೆ. ಆದುದರಿಂದ ಇಂದಲ್ಲ ನಾಳೆ, ಪೂರ್ವಬಂಗಾಳವು ಸ್ವಾತಂತ್ರ್ಯವನ್ನು ಏಕಪಕ್ಷೀಯವಾಗಿ ಘೋಷಿಸಿದರೆ, ಆಶ್ಚರ್ಯವಿಲ್ಲ. ಪಾಕ್ ನಾಯಕರು ಈಗಿನ ಬಿಕ್ಕಟ್ಟಿನ ವೇಳೆ ತೋರಿಸುವ ಮುತ್ಸದ್ಧಿತನದ ಬಲವೇ ಪಾಕ್ ವಿಭಜನೆಯನ್ನು ತಡೆಯಬಲ್ಲುದು. ಪೂರ್ವ ಪಾಕಿನ ಪ್ರಜೆಗಳು ಪಶ್ಚಿಮದ ಸರ್ವಾಧಿಕಾರದಿಂದ ರೋಸಿದ್ದಾರೆ, ತತ್ತರಿಸಿದ್ದಾರೆ. ಅವರನ್ನು ಈ ಸ್ಫೋಟಕ ದೆಸೆಗೆ ತಂದ ಕೀರ್ತಿಪಟ್ಟ ಪಾಕ್ ನಾಯಕರ ಕೊರಳಿಗೇ ಮಾರಕವಾಗಿದೆ. ●

ನೆರೆರಾಜ್ಯದಲ್ಲಿ

ಯಾರ ಕೈಗೊಂಬೆಗಳೂ ಅಲ್ಲ

'ಕೇಳಿದ್ಯೇನೆ?'

'ಏನು?'

"ಅಲ್ಲಾ, ಪಾಕಿಸ್ತಾನದಲ್ಲಿ ರಾಜ್ಯಾಂಗ ಸಭೆಯನ್ನು ಅನಿರ್ದಿಷ್ಟ ಕಾಲ ಮುಂದೆ ಹಾಕಿದರಂತೆ...."

'ಅದು ಗೊತ್ತಿದ್ದ ಸಂಗತಿಯೇ.'

'ಹೇಗೇಂತ?'

'ರಾಜ್ಯಾಂಗದ ಸ್ವರೂಪದ ಬಗ್ಗೆ ಪೂರ್ವ–ಪಶ್ಚಿಮಗಳ ನಡುವೆ ದಕ್ಷಿಣೋತ್ತರ ಗಳಷ್ಟು ಭಿನ್ನಾಭಿಪ್ರಾಯವಿರುವಾಗ....'

'ಅದೇನಿದ್ದರೂ ಯಾಹ್ಯಾಖಾನರು ಜನತೆಯ ಕೈಗಳಿಗೆ ಅಧಿಕಾರ ಹಸ್ತಾಂತರ ಮಾಡುವುದಾಗಿ ಭರವಸೆ ನೀಡಿದ್ದರು.'

'ಹೌದು....'

'ತುಸು ತಡವೆನಿಸಿಯಾದರೂ ರಾಜ್ಯಾಂಗ ಸಭೆಗೆ ಚುನಾವಣೆ ನಡೆಸಿದರು....'

"ಅದೂ ಹೌದು...."

'ಆದರೆ, ಚುನಾವಣೆಯ ಪರಿಣಾಮ ಅದರ ಮನ್ನೀಕೆಯಂತೆ ಹೊರಬರಲಿಲ್ಲ....'

"ಅದನ್ನೂ ಒಪ್ಪಿಕೊಳ್ಳಬಹುದು."

'ಮತ್ತೆ?'

'ಮತ್ತ್ಯಾಕೆ ಅವರು ರಾಜ್ಯಾಂಗ ಸಭೆ ಕರೀತಾರೆ?'

'ಅಲ್ಲ, ಮಾರ್ಚಿ ಮೂರರಂದು ಅವರು ಸಭೆ ಕರೆದಿದ್ದರಲ್ಲಾ?'

'ಹ್ಞೂಂ, ಕರೆಯಲಾಗದೆಂದು ಕರೆದರು. ಅಷ್ಟೆ.'

'ಹಾಗಲ್ಲ ಕಣೆ, ಪೂರ್ವ ಪಾಕಿಸ್ತಾನದ ಹಠಮಾರಿತನದಿಂದಾಗಿಯೇ ಹೀಗಾಯ್ತು.'

"ಅವರದ್ದೇನು ಹಠಮಾರಿತನಾಂತ?'

'ರಾಜ್ಯಾಂಗದಲ್ಲಿ ಪ್ರಾದೇಶಿಕ ಸ್ವಾಯತ್ತತೆಯ ಅವಕಾಶವಿರಬೇಕು ಅಂತ ಅವರು ಹಿಡಿದ ಛಲ ಬಿಡಲಿಲ್ಲ....'

'ಓ, ಹಾಗೆ. ಅಲ್ಲಾರೀ, ನಾಯಕರು ಏನೇ ಹೇಳಲಿ, ಪ್ರಜಾಸತ್ತೆಯಲ್ಲಿ ಬಹುಮತದ ಮಾತಿಗೆ ಮನ್ನಣೆ ತಾನೆ?'

'ಅದೇ ಯಾಹ್ಯಾಖಾನರಿಗೆ ತೊಂದರೆಯಾದದ್ದು. ಪೂರ್ವ ಬಂಗಾಳದ ರಹಿಮಾನರ ಅವಾಮಿ ಲೀಗು ರಾಜ್ಯಾಂಗ ಸಭೆಯಲ್ಲಿ ಅಪ್ಪಟ ಬಹುಮತ ಗಳಿಸಿದೆಯಲ್ಲಾ?'

"ಅಂದರೆ, ಸಭೆ ಸೇರಿದರೆ, ತನ್ನ ಮತ್ತು ತನ್ನವರ ಮಹತ್ವಾಕಾಂಕ್ಷೆ ಈಡೇರುವುದಿಲ್ಲವೆಂದು ಅವರಿಗೆ ಚಳಿ ಹಿಡಿಯಿತು ಅಲ್ಲವೆ?'

'ಹಾಗಲ್ಲಾನ್ನು. ಆದರೂ ಪಶ್ಚಿಮ ಪಾಕಿಸ್ತಾನದ ಬಹುಮತೀಯ ಪಕ್ಷದ ಭುಟ್ಟೋ ಮಹಾಶಯರ ಅಭಿಪ್ರಾಯ ರಹಮಾನರ ಅಭಿಪ್ರಾಯಕ್ಕೆ ತದ್ವಿರುದ್ಧವಾದುದರಿಂದ....'

'ಏನಾಯ್ತು? ಏನು ವಿರೋಧವಿದ್ದರೂ ಸಭೆಯಲ್ಲಿ ಬಹುಮತದ ಮುಂದೆ ತಲೆ ಬಾಗುವುದು ಪ್ರಜಾಸತ್ತೆಯಲ್ಲಿ ನ್ಯಾಯ, ಧರ್ಮ ಸಮ್ಮತ.'

"ಆದರೆ ನೋಡು, ಭುಟ್ಟೋ ರಾಜ್ಯಾಂಗ ಸಭೆಯನ್ನು ಬಹಿಷ್ಕರಿಸಿದರು. ಅಷ್ಟು ಮಾತ್ರವಲ್ಲ, ಈ ಸಭೆಯಲ್ಲಿ ಭಾಗವಹಿಸುವ ಸ್ವಪಕ್ಷೀಯರ ಸೊಂಟ ಮುರಿದು ಹಾಕುವ ಬೆದರಿಕೆಯನ್ನೂ ಅವರು ಹಾಕಿದ್ದರು."

'ಜೀವವಿದ್ದರೆ ಬೇಡಿ ತಿಂದೇನೆಂದು ಸದಸ್ಯರು ಪ್ರಜಾಸತ್ತೆಗಿಂತ ಸರ್ವಾಧಿಕಾರವೇ ಮೇಲೆಂದು ಸುಮ್ಮನಾದರಲ್ಲವೆ?'

"ಹಾಗೆ ಲೋಕ ಹೇಳಬಾರದೆಂದೇ ಯಾಹ್ಯಾಖಾನರು ಅನಿರ್ದಿಷ್ಟ ಕಾಲದವರೆಗೆ ರಾಜ್ಯಾಂಗ ಸಭೆಯನ್ನು ಮುಂದೆ ಹಾಕಿದರು."

"ಒಟ್ಟಾರೆ, ಅಡಿಗೆ ಬಿದ್ದರೂ ಮೀಸೆಗೆ ಮಣ್ಣಾಗಲಿಲ್ಲ ಎಂದು ತೋರಿಸಿ ಕೊಂಡರು. ಆದರೆ ನೋಡಿ, ಮೀಸೆಗೆ ಮಣ್ಣಾಗದಿದ್ದರೂ ಅಡಿಗೆ ಬಿದ್ದದ್ದು ಸುಳ್ಳಾಗುವುದಿಲ್ಲ.'

'ಅಲ್ಲ, ಮತ್ತೆ ಯಾಹ್ಯಾಖಾನರು ಮಾಡಬಹುದದ್ದಾದರೂ ಏನಿತ್ತು?'

"ರಾಜ್ಯಾಂಗ ಸಭೆಯನ್ನು ಕೂಡಿಸಬೇಕಾಗಿತ್ತು."

"ಈಗ ನೋಡಿ, ಯಾಹ್ಯಾಖಾನರ ಈ ಕೃತಿಯನ್ನು ವಿರೋಧಿಸಿ ಪೂರ್ವಪಾಕಿಸ್ತಾನದಲ್ಲಿ ದೊಂಬಿಯೆದ್ದಿತು. ಇದು ನ್ಯಾಯವೇನು?'

'ನ್ಯಾಯ, ಅನ್ಯಾಯದ ಪ್ರಶ್ನೆ ಮತ್ತೆ. ಸದ್ಯ ತನ್ನ ಜೀವಕ್ಕೆ ಯಾವುದೇ ತಕರಾರು ಬರಲಿಲ್ಲವೆಂದು ಅನರು ತೃಪ್ತರಿರಬಹುದು.'

'ಅಂದರೆ, ದೊಂಬಿನಡೆಯುವುದೆಲ್ಲ ಪೂರ್ವದಲ್ಲೇ ನಡೆಯಲಿ ಎಂದವರ ಅಭಿಪ್ರಾಯ.'

"ಅದೇ ಒಳ್ಳೆಯದಲ್ಲವೆ?"

'ನೋಡಿ, ಪಾಕ್ ನಾಯಕರ ಈ ಬಗೆಯ ಮನೋಭಾವದಿಂದಲೇ ಪೂರ್ವದ ಮೇಲೆ ಅವರ ಹಿಡಿತ ತಪ್ಪಿ ಹೋಗಿದೆ.'

'ಒಂದು ರೀತಿಯಿಂದ ಅದು ಸರೀನ್ನು. ಈ ಬಗೆಯ ಶೋಷಕ ಮನೋಧರ್ಮ ಪಶ್ಚಿಮದ ನಾಯಕರಲ್ಲಿರುವವರೆಗೆ ಪೂರ್ವದೊಡನೆ ಅವರು ಹೊಂದಿಕೊಂಡು ಹೋಗಲಾರರು.'

'ನೋಡಿ, ಪೂರ್ವ ಬಂಗಾಳದ ಜನ ಪಾಕ್ ನಾಯಕರ ಶೋಷಣೆಯಿಂದ ಕಂಗೆಟ್ಟಿದೆ. ವಾಸ್ತವಿಕವಾಗಿ ವಿಸ್ತಾರದಲ್ಲಿ ಚಿಕ್ಕದಾದರೂ ಜನಸಂಖ್ಯೆಯಲ್ಲಿ ಪೂರ್ವಭಾಗ ಸಮೃದ್ಧ'

"ನಿಜಕ್ಕೂ...."

'ಆದರೆ, ಉತ್ಪನ್ನಗಳಲ್ಲಿ, ವಿದೇಶೀ ನೆರವಿನಲ್ಲಿ ಪಶ್ಚಿಮ ಭಾಗದ್ದೇ ಸಿಂಹಪಾಲು'

'ಅದು ಸ್ವಯಂ ವಿದಿತ. ಅಷ್ಟು ಮಾತ್ರವಲ್ಲ, ಸರಕಾರಿ ನೌಕರಿಗಳಲ್ಲಿ, ಸೇನೆಯ ಭರ್ತಿಗಳಲ್ಲಿ ಪೂರ್ವದ ಪ್ರಜೆಗಳನ್ನು ದ್ವಿತೀಯ ವರ್ಗದವರಾಗಿ ಕಾಣಲಾಗುತ್ತಿದೆ. ಈ ಬಗೆಯ ಮಲತಾಯಿ ಧೋರಣೆಯನ್ನು, ಸುಲಿಗೆಯನ್ನು ಈ ಇಪ್ಪತ್ತುನಾಲ್ಕು ವರ್ಷಗಳಲ್ಲೂ ಸಹಿಸಿ ಸಹಿಸಿ ಅವರು ರೋಸಿ ಹೋಗಿದ್ದಾರೆ.'

'ಅವರ ಕೋಪವೇ ರಹಮಾನರ ಅವಾಮಿಲೀಗನ್ನು ಬಹುಮತದಿಂದ ಆರಿಸಿದೆ.'

'ಅದು ಹೌದೂನ್ನು. ಆದರೆ, ಅವರು ಸ್ವಾಯತ್ತತೆಯನ್ನು ಬೇಡುತ್ತಾರೆ.'

'ಅಂತಹ ಬೇಡಿಕೆಯನ್ನವರು ಮಂಡಿಸುವಂತಾದುದಕ್ಕೆ ಪಶ್ಚಿಮದ ನಾಯಕರೇ ಹೊಣೆಗಾರರು.'

"ಯಾಕೆ ಹಾಗಂತೀಯ?"

'ಹತ್ತಿಯನ್ನಾದರೂ ಅದು ಮುತ್ತಬಂದರೆ ಅದು ಕಠೋರವಾಗುತ್ತದೆ.'

'ಹ್ಞೂಂ....'

'ಪಶ್ಚಿಮದ ನಾಯಕರು ಪೂರ್ವದ ಪ್ರಜೆಗಳನ್ನು ಆದಿಯಿಂದಲೂ ಮಲತಾಯಿ ಮಕ್ಕಳಂತೆ ಕಂಡಿದ್ದಾರೆ; ಪ್ರಗತಿಯಿಂದ ವಂಚಿಸಿದ್ದಾರೆ. ಹಿಂದೆ ಬ್ರಿಟಿಷರ ಸುಲಿಗೆಗೆ ಒಳಗಾದವರು ಈಗ ತಮ್ಮವರೇ ತಮ್ಮ ಶೋಷಕರಾದುದನ್ನು ಕಂಡು ರೊಚ್ಚಿದ್ದಾರೆ.'

'ಅದು ಸರೀನ್ನು.'

'ಹಿಂದೆ ಬ್ರಿಟಿಷರ ಗುಲಾಮಿತನದಿಂದ ಮುಕ್ತರಾಗಲು ಬಯಸಿ ಹೋರಾಡಿದಂತೆಯೇ ಅವರೀಗ ಪಶ್ಚಿಮದ ಬಿಗಿ ಬಂಧನವನ್ನು ಸಡಿಲುಗೊಳಿಸಬಯಸಿದ್ದಾರೆ.'

'ಆದರೆ, ಇದರಿಂದ ಪಾಕಿಸ್ತಾನದ ಬಲ ಕುಂದುವುದಿಲ್ಲವೆ?'

'ಯಾಕೆ ಕುಂದಬೇಕು? ತಮ್ಮಿಂದ ನ್ಯಾಯಪಾಲನೆ ಅಸಾಧ್ಯವೆಂದಾದ ಮೇಲೆ ಸಾಧ್ಯವಿರುವಷ್ಟು ಸ್ವಾತಂತ್ರ್ಯವೇಕೆ ಕೊಡಬಾರದು?'

"ರಕ್ಷಣೆ, ವಿದೇಶ ವ್ಯವಹಾರ, ನಾಣ್ಯ ಚಲಾವಣೆ ಮೊದಲಾದ ಕೆಲವು ಸಂಗತಿಗಳನ್ನು ಅವರು ಕೇಂದ್ರವೇ ಇಟ್ಟುಕೊಳ್ಳಲಿ ಎನ್ನುತ್ತಾರೆ."

'ನೋಡಿ, ನಾನೆನ್ನುತ್ತೇನೆ—ಪೂರ್ವ ಪಾಕಿಸ್ತಾನಿಗಳನ್ನು ಸುಮ್ಮನಿರಿಸಲು ಸಾಧ್ಯವಾಗುವುದಿಲ್ಲ. ಭುಟ್ಟೋ ಮಹಾಶಯರಿರಲಿ, ಮತ್ತಾರೇ ಇರಲಿ, ಅವರ ಕನಿಷ್ಠ ಬೇಡಿಕೆಗಳನ್ನು ಮನ್ನಿಸಿದರೆ ಪರಿಣಾಮ ತಿಳಿಗೊಳ್ಳುವುದು. ಅದು ಬಿಟ್ಟು ಸರ್ವಾಧಿಕಾರದಿಂದ ಅವರನ್ನು ಬಗ್ಗು ಬಡಿಯುತ್ತಲೇ ಹೋದರೆ, ಪೂರ್ವಪಾಕಿಸ್ತಾನ ತನ್ನನ್ನು ತಾನು ಸ್ವತಂತ್ರವೆಂದು ಏಕ ಪಕ್ಷೀಯವಾಗಿ ಘೋಷಿಸುವ ದಿನ ಹತ್ತಿರವಾಗುತ್ತ ಬಂದೀತು.'

'ಹೌದೆ, ಪರವಾಗಿಲ್ಲ ನೀನು.'

'ಏನು?'

'ಅಲ್ಲ, ಇಷ್ಟೆಲ್ಲ ರಾಜ್ಯಕೀಯ ನಿನಗೆ ಹೇಗೆ ಸಿದ್ಧಿಸಿತೂಂತ?'

"ನೋಡಿ, ಮೊನ್ನೆ ಇಂದಿರಾಗಾಂಧಿ ಹೇಳಿದ್ದಾರೆ – ಇಂದಿನ ಭಾರತೀಯ ಮಹಿಳೆ ಪುರುಷರ ಕೈಗೊಂಬೆಯಾಗಿ ಉಳಿದಿಲ್ಲ."

'ಉಳಿದವರ ಕತೆ ಸಂಗೊತ್ತಿಲ್ಲ; ಆದರೆ...'

'ಏನು?....ಹೇಳಿ....'

'ಮತ್ತಿನ್ನೇನು? ಆಕೆಯಂತೂ ಉಳಿದೇ ಇಲ್ಲ.'

"ಸಾಕು ಬಿಡೀಂದ್ರೆ...."

'ಏನು ಬೇಸರವಾಯ್ತೆ?'

'ಯಾಕೆ ಬೇಸರ?'

'ಮತ್ತೆ?'

"ಅಲ್ಲ, ಈಗ ನಂದೇಶದಲ್ಲಿ ಲೋಕ ಸಭೆಗೆ ಚುನಾವಣೆ ನಡೀತಲ್ಲ ...."

'ಹ್ಞೂಂ....'

'ಇದ್ರಲ್ಲಿ ಗಾಂಧಿ ಪಕ್ಷ ಬಹುಮತಗಳಿಸದೆ ಹೋದ್ರೆ ರಾಷ್ಟ್ರಪತಿಗಳು ಸಂಸತ್ತನ್ನು ಅನಿರ್ದಿಷ್ಟಾವಧಿಯವರೆಗೆ ಮುಂದುವರಿಸಬಹುದೇಂತ?'

"ಬಹುದೋ ಬಾರದೋ, ಒಂದು ವೇಳೆ ಹಾಗೆ ಮಾಡಿದರೂ ನ್ಯಾಯಾಲಯ ಇತ್ಯರ್ಥ ಆಗುವುದರೊಳಗೆ ಏನಾದರೊಂದು ಆಗುತ್ತದೆ."

'ಅಂದರೆ, ನಮಗೆ ನ್ಯಾಯಾಲಯವೇ ನ್ಯಾಯ ದೊರಕಿಸಿ ಕೊಡಬೇಕೂಂತಾಯ್ತು.'

"ಅದು ದೊರಕಿಸುವುದು ಸಾಮಾಜಿಕ ನ್ಯಾಯವಲ್ಲ; ಕಾನೂನಿನ ನ್ಯಾಯ ಮಾತ್ರವೆನ್ನುತ್ತಾರೆ ಕೆಲವರು.'

"ಮತ್ತೆ ಸಾಮಾಜಿಕ ನ್ಯಾಯವೇದರೇನು?"

"ಇಂದಿರಾ ವಾದ ಸಮಾಜವಾದ; ಇಂದಿರಾ ನ್ಯಾಯ ಸಾಮಾಜಿಕ ನ್ಯಾಯವೆನ್ನಬಹುದು ಇಂಡಿಕೇಟಿಗರು.

'ಅದು ಅವರಿಗಾಯ್ತು. ಭಾರತಕ್ಕೆ?'

"ಭಾರತಕ್ಕೊಂದು ನ್ಯಾಯ ಬೇಕೆ? ಬೇಕಾದರೆ, ವಿದೇಶದಿಂದ ಆಮದು ಮಾಡಿಕೊಳ್ಳಬಹುದು."

"ಅಲ್ಲೀವರೆಗೂ ನಮಗೆ ಬರಗಾಲ ಬಂತೇನು?"

'ಇದು ಹೀಗೇ ಮುಂದುವರಿದರೆ, ಎಲ್ಲವಕ್ಕೂ ಬರಗಾಲ ..."

'ಹೋಗಲಿ ಬಿಡಿ .. '

"ಹ್ಞೂಂ ಮತ್ತೆ ಮಾಡೋದಾದ್ರೂ ಏನು?"

— ಗೋರಾ.

ಚಂದಾ ಹಣ ಬಾಕಿ ಇರುವವರು ದಯವಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ಕನ್ನಡದಲ್ಲಿ ಅಪರೂಪವಾದ ಪುಸ್ತಕ

ಸ್ವಪ್ನಲೋಕ

ಮನೋವಿಶ್ಲೇಷಣದ ಬೆಳಕಿನಲ್ಲಿ ಕನಸುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ವಿವರಗಳನ್ನೊಳಗೊಂಡ 'ಕಾರ್ತಿಕೇಯ' ವಿರಚಿತ ಕಿರುಹೊತ್ತಗೆ ಬೆಲೆ 0—50

o o o

ದಿ। ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪ್ರಸಂಗ ಪುಸ್ತಕಗಳು

ಸಾಹಸ ಭೀಮ ವಿಜಯ	0-50
ವಾಲಿ ಸುಗ್ರೀವ (ದುರಂತ ಯಕ್ಷಗಾನ ನಾಟಕ)	0-50
ಲಕ್ಷ ಪಗಡೆ	0-40
ಭಾರತದ ಗುರುಕುಲ	0-40
ಭೀಷ್ಮ ದಿಗ್ವಿಜಯ	0-50

ಪ್ರತಿ ಪುಸ್ತಕಕ್ಕೂ ಬುಕ್ ಪೋಸ್ಟಿನಿಂದ ಕಳಿಸಲು 0-30 ಪೈಸೆ ಅಂಚೆ ವೆಚ್ಚ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ. ಕ.

ಅಶೋಕನ ಕಾಲದ ಇತಿಹಾಸಕ್ಕೆ ಉಗಮ:

ಚಿತ್ರದುರ್ಗ

ಚಿತ್ರದುರ್ಗ ಜಿಲ್ಲೆ ಮೈಸೂರು ರಾಜ್ಯದ ಮಧ್ಯಪ್ರದೇಶದಲ್ಲಿದೆ. ಬೆಂಗಳೂರು ವಿಭಾಗಕ್ಕೆ ಸೇರಿದ ಐದು ಜಿಲ್ಲೆಗಳಲ್ಲಿ ಒಂದಾದ ಇದರ ವಿಸ್ತೀರ್ಣ 4186 ಚದರ ಮೈಲಿಗಳು. ಈ ಜಿಲ್ಲೆಯಲ್ಲಿ ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮುರು, ಹಿರಿಯೂರು, ದಾವಣಗೆರೆ, ಹರಿಹರ, ಜಗಳೂರು, ಹೊಳಲ್ಕೆರೆ, ಹೊಸದುರ್ಗ ಎಂಬ ಒಂಭತ್ತು ತಾಲೂಕುಗಳಿವೆ.

ಇತಿಹಾಸದ ದೃಷ್ಟಿಯಿಂದ ಚಿತ್ರದುರ್ಗ ಇಡೀ ಮೈಸೂರು ರಾಜ್ಯದಲ್ಲಿ ಹೆಮ್ಮೆ ಪಡತಕ್ಕದ್ದಾಗಿದೆ. ದಕ್ಷಿಣಭಾರತದಲ್ಲಿ ಅತಿ ಪ್ರಾಚೀನವಾದ ಅಶೋಕನ ಶಾಸನ ದೊರೆತದ್ದು ಈ ಜಿಲ್ಲೆಯ ಮೊಳಕಾಲ್ಮುರು ತಾಲೂಕಿನಲ್ಲಿ. ಇದು ಕ್ರಿಸ್ತಪೂರ್ವ 3ನೇ ಶತಮಾನದ್ದು. ಅಲ್ಲದೆ ಚಿತ್ರದುರ್ಗದ ಪಶ್ಚಿಮಕ್ಕಿರುವ ಪುರಾತನ ಚಂದ್ರವಳ್ಳಿ ಪಟ್ಟಣದ ನಿವೇಶನದಲ್ಲಿ ದೊರೆತ ಬುದ್ಧನಕಾಲದ ಸೀಸದ ನಾಣ್ಯವೊಂದರಲ್ಲಿ ಶಾತವಾಹರಾಜ ಪುಲೊಮಾಯಿಯ ಹೆಸರಿದ್ದುದರಿಂದ ಈ ಜಿಲ್ಲೆ ಶಾತವಾಹನರ ಆಳ್ವಿಕೆಗೆ ಸೇರಿತ್ತು ಎಂಬುದಕ್ಕೆ ನಿದರ್ಶನ. ಹೀಗೆ ದಾವಣಗೆರೆಯ ಸಮೀಪದ ಉಚ್ಚಂಗಿದುರ್ಗ ಕದಂಬರ ಮುಖ್ಯ ಕೇಂದ್ರವಾಗಿತ್ತು ಎಂಬುದಕ್ಕೆ ಇಲ್ಲಿ ದೊರೆತ ಕೆಲವು ಕದಂಬರ ಶಾಸನಗಳೇ ಸಾಕ್ಷಿ. ಹೀಗೆಯೇ ಚಾಳುಕ್ಯ ಹೊಯ್ಸಳ, ವಿಜಯನಗರ ಅರಸರ ಆಳ್ವಿಕೆಗೆ ಈ ಜಿಲ್ಲೆ ಒಳಗಾಗಿತ್ತು.

ಹರಿಹರದಲ್ಲಿರುವ 13ನೇ ಶತಮಾನಕ್ಕೆ ಸೇರಿದ ಹರಿಹರೇಶ್ವರ ದೇವಾಲಯ, ಲಕ್ಷ್ಮಿ ನಾರಾಯಣ ದೇವಾಲಯ, ದಾವಣಗೆರೆಯಿಂದ ಈಶಾನ್ಯಕ್ಕಿರುವ ಈಶ್ವರ ದೇವಾಲಯ, ಮಳಲ್ಕೆರೆಯ ವಾಯುವ್ಯಕ್ಕಿರುವ ನಂದಗುಡಿ ನದಿಯ ಬಲದಂಡೆಯ ಮೇಲಿರುವ ನಂದಗುಡಿ ದೇವಾಲಯ ನಿರತಾಡಿಯಲ್ಲಿರುವ ರಂಗನಾಥ ದೇವಾಲಯ, ತುಂಗಭದ್ರಾ ತೀರದಲ್ಲಿರುವ ಎಲ ಕೋಟಿಯ ವೀರಶೈವ ಮಠ—ಇವೆಲ್ಲ ನೋಡತಕ್ಕವು. ಅಲ್ಲದೆ ಇಲ್ಲಿ ಫ್ರೆಂಚ್ ಇಂಜನಿಯರ ಸಹಾಯದಿಂದ ಹೈದರಾಲಿ—ಟಿಪ್ಪು ಸುಲ್ತಾನರ ಕಾಲದಲ್ಲಿ ಕಟ್ಟಿದ ವಿಸ್ತಾರವಾದ ಚಿತ್ರದುರ್ಗ ಕೋಟೆ ಯುದ್ಧತಂತ್ರದ ದೃಷ್ಟಿಯಿಂದ ಅತಿ ಮಹತ್ವದಾಗಿತ್ತು; ಈ ಕೋಟೆಯಲ್ಲಿ ಎಣ್ಣೆ, ತುಪ್ಪ ದಾಸ್ತಾನದ ಬಗ್ಗೆ ಹಾಗೂ ಸಿಡಿಮದ್ದು ತಯಾರಿಕೆಗೆ ಏರ್ಪಟ್ಟಿತು. ಅಲ್ಲದೆ ಜತಿಂಗ ರಾಮೇಶ್ವರ ಬೆಟ್ಟಕ್ಕೆ ಹೋಗುವ ಮೆಟ್ಟಲುಗಳ ಬುಡದಲ್ಲಿ ಇರುವ ಗಣೇಶ ದೇವಾಲಯದ ಗಣೇಶ ವಿಗ್ರಹಕ್ಕೆ ಎರಡೇ ಕೈಗಳಿರುವುದು ವೈಶಿಷ್ಟ್ಯ ಪೂರ್ಣವಾಗಿದೆ. ಎರಡೇ ಕೈಗಳ ಗಣೇಶ ವಿಗ್ರಹ ಅಪೂರ್ವ.

ಚಿತ್ರದುರ್ಗ ಎಂದರೆ ಚಿತ್ರಮಯವಾದ ಕೋಟೆ ಎಂಬರ್ಥ. ಪೌರಾಣಿಕ ದೃಷ್ಟಿಯಿಂದ ಹೇಳುವವಾದರೆ ಚಿತ್ರದುರ್ಗ ಹಿಡಿಂಬಾಸುರನ ರಾಜಧಾನಿಯಾಗಿತ್ತು. ಮಹಾಭಾರತದ ಭೀಮ ಹಿಡಿಂಬಾಸುರನನ್ನು ಸಂಹಾರ ಮಾಡಿದ್ದು ಈ ಚಿತ್ರದುರ್ಗದಲ್ಲಿ.

ಚಿತ್ರದುರ್ಗ ಕೋಟೆಯಲ್ಲಿ 14 ದೇವಾಲಯಗಳಿವೆ. ಇವುಗಳಲ್ಲಿ ಸಂಪಿಗೆ ಸಿದ್ಧೇಶ್ವರ, ಹಿಡಿಂಬೇಶ್ವರ, ಏಕನಾಥ, ಫಾಲ್ಗುಣೇಶ್ವರ, ಗೋಪಾಲಕೃಷ್ಣ, ಆಂಜನೇಯ, ಸುಬ್ಬರಾಯ ಹಾಗು ಬಸವ ದೇವಾಲಯಗಳು ಮುಖ್ಯವಾಗಿವೆ.

ಈ ಜಿಲ್ಲೆಯಲ್ಲಿ ಹರಿಯುವ ನದಿಗಳಲ್ಲಿ ತುಂಗಭದ್ರಾ –ಹರಿಹರ –ದಾವಣಗೆರೆ ತಾಲೂಕುಗಳಲ್ಲಿ ಸುಮಾರು ಮೂವತ್ತು ಮೈಲಿ ದೂರ ಹರಿದರೆ, ವೇದಾವತಿ ಹೊಸದುರ್ಗ, ಹಿರಿಯೂರು, ಚಳ್ಳಕೆರೆ ತಾಲೂಕುಗಳಲ್ಲಿ ಸುಮಾರು ಎಂಭತ್ತು ಮೈಲಿ ದೂರ ಹರಿಯುತ್ತದೆ. ಹಗರಿ ನದಿಗೆ ಚಿತ್ರದುರ್ಗಜಿಲ್ಲೆ ಉಗಮಸ್ಥಾನ. ಇದು ಈ ಜಿಲ್ಲೆಯಲ್ಲಿ ಸುಮಾರು ಎಂಭತ್ತು ಮೈಲಿದೂರ ಹರಿದು ಬಳ್ಳಾರಿ ಜಿಲ್ಲೆಯಲ್ಲಿ ವೇದಾವತಿ ನದಿಯನ್ನು ಸೇರುತ್ತದೆ.

ಚಿತ್ರದುರ್ಗಜಿಲ್ಲೆಯ ದಾವಣಗೆರೆ, ಹರಿಹರ, ಹಿರಿಯೂರುಗಳು ಹತ್ತಿ ಬೆಳೆಗೆ ಪ್ರಸಿದ್ಧವಾದುವು. ಈ ಜಿಲ್ಲೆಯಲ್ಲಿ ಒಟ್ಟು 26, 55, 864 ಎಕರೆಗಳಲ್ಲಿ ಸುಮಾರು 13, 21, 500 ಎಕರೆಗಳಲ್ಲಿ ಬೇಸಾಯ ನಡೆಯುತ್ತದೆ. ಸುಮಾರು ಎರಡೂವರೆ ಲಕ್ಷಕ್ಕೂ ಹೆಚ್ಚು ಎಕರೆಗಳಲ್ಲಿ ಜೋಳ ಬೆಳೆ. ಭದ್ರಾ ನೀರಾವರಿ ಯೋಜನೆ, ವಾಣಿವಿಲಾಸ ಸಾಗರದ ಅಚ್ಚುಕಟ್ಟು, ಕರಿಯಾಲ ಅಚ್ಚುಕಟ್ಟು ಎಂದು ಸುಮಾರು ಒಂದೂವರೆ ಲಕ್ಷ ಎಕರೆಗಳಲ್ಲಿ ನೀರಾವರಿಯಿಂದ ಬೇಸಾಯ ನಡೆಯುತ್ತಿದೆ. ಇಷ್ಟಲ್ಲದೆ ಈ ಜಿಲ್ಲೆಯಲ್ಲಿ 144 ದೊಡ್ಡ ಕೆರೆಗಳು, 212 ಚಿಕ್ಕ ಕೆರೆಗಳು, ಏತದ ಬಾವಿಗಳು 10 ಸಾವಿರಕ್ಕೂ ಹೆಚ್ಚಿನ ನೀರಾವರಿ ಬಾವಿಗಳು ಬೇಸಾಯಕ್ಕೆ ನೀರೊದಗಿಸುತ್ತವೆ. ಅರಣ್ಯ ಸಂಪತ್ತನ್ನು ಹೆಚ್ಚಿಸುವದಕ್ಕಾಗಿ ಈ ಜಿಲ್ಲೆಯಲ್ಲಿ ಗುತ್ತಿಗೆ ಅರಣ್ಯ ವ್ಯವಸ್ಥೆ ಶ್ಲಾಘನೀಯವಾಗಿದೆ. ಸುಮಾರು ಎರಡುಸಾವಿರದನೂರಕ್ಕೂ ಹೆಚ್ಚು ಎಕರೆಗಳಲ್ಲಿ ಎರಡೂವರೆಲಕ್ಷಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಅರಣ್ಯಸಂಪತ್ತಿನ ಮರೋಭಿವೃದ್ಧಿಗೆ ಪ್ರಯತ್ನಿಸಲಾಗಿದೆ. ಈ ಜಿಲ್ಲೆಯಲ್ಲಿ ದ್ರಾಕ್ಷಿ, ಸೇಬು, ಸಪೋಟ, ಮಾವು, ತೆಂಗು, ಅಡಿಕೆ ಇವೆಲ್ಲ ಬೆಳೆಯುತ್ತವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಎರಡು ರಾಷ್ಟ್ರೀಯ ಹೆದ್ದಾರಿಗಳು ಹಾದುಹೋಗುತ್ತಿವೆ. ಇವುಗಳಲ್ಲಿ 50 ಮೈಲಿ 4 ಫರ್ಲಾಂಗ್ ಉದ್ದಕ್ಕೆ ಹಾದುಹೋಗುವ ಬೆಂಗಳೂರು–ಪೂನಾ ಮಾರ್ಗ ಮೊದಲನೆಯದು. 25 ಮೈಲಿ 6 ಫರ್ಲಾಂಗ್ ಉದ್ದಕ್ಕೆ ಹಾದುಹೋಗುವ ಚಿತ್ರದುರ್ಗ–ಸೊಲ್ಲಾಪುರ ಮಾರ್ಗ ಎರಡನೆಯದು. ಅಲ್ಲದೆ ರಾಜ್ಯದ ಹೆದ್ದಾರಿಗಳು ಒಟ್ಟು 177 ಮೈಲಿ 2 ಫರ್ಲಾಂಗಗಳಷ್ಟು ಈ ಜಿಲ್ಲೆಯಲ್ಲಿವೆ.

ಈ ಜಿಲ್ಲೆಯಲ್ಲಿ ಬೆಂಗಳೂರು–ಪೂನ ರೈಲುದಾರಿ 61 ಮೈಲಿಗಳಷ್ಟು ಉದ್ದಕ್ಕೆ ಸಾಗಿದೆ. ಚಿತ್ರದುರ್ಗದಿಂದ ಚಿಕ್ಕಜಾಜೂರಿಗೆ ಹೋಗುವ ಮೀಟರ್‌ಗೇಜ್ ರೈಲುದಾರಿ 19 ಮೈಲಿಗಳಷ್ಟಿದೆ.

ಅಲ್ಲದೆ ಸುಮಾರು 3,600 ಮಂದಿಗೆ ಒಂದರಂತೆ 302 ಅಂಚೆಕಚೇರಿಗಳು, 18 ತಂತಿಕಚೇರಿಗಳು, ಚಿತ್ರದುರ್ಗ, ದಾವಣಗೆರೆ, ಹರಿಹರ, ಚಳ್ಳಕೆರೆಗಳಲ್ಲಿ ಅಟೋಮ್ಯಾಟಿಕ್ ಎಕ್ಸ್‌ಚೇಂಜ್‌ಗಳು, ಹಿರಿಯೂರು, ಜಗಳೂರುಗಳಲ್ಲಿ ಮ್ಯಾನುಯಲ್ ಎಕ್ಸ್‌ಚೇಂಜ್‌ಗಳು, 14 ಪಬ್ಲಿಕ್ ಕಾಲ್ ಬೂತುಗಳು ಜಿಲ್ಲೆಯ ಎಲ್ಲ ಪಟ್ಟಣಗಳಿಗೂ ಜಿಲ್ಲಾ ಕೇಂದ್ರದೊಂದಿಗೆ ಟೆಲಿಫೋನ್ ಸಂಪರ್ಕವಿದೆ.

ಚಿತ್ರದುರ್ಗ ಜಾನುವಾರುಗಳ ಬಗ್ಗೆ ಚಿತ್ರದುರ್ಗ ತಳಿ ಎನ್ನುವಷ್ಟು ಹೆಸರಾಂತಿದೆ. ಈ ತಳಿಗೆ "ದೊಡ್ಡದನ" ಎನ್ನುತ್ತಿದ್ದರು. ಬಳಿಕ ಅಮೃತಮಹಾಲ್, ಹಳ್ಳಿಕಾರ, ಚಿತ್ರದುರ್ಗ, ಮಹದೇಶ್ವರ ಬೆಟ್ಟ ಇತ್ಯಾದಿ ತಳಿಗಳಿಗೂ ಈ ಹೆಸರು ಅನ್ವಯಿಸಿತು. ಚಿತ್ರದುರ್ಗ ತಳಿಗಳು ಸುತ್ತಮುತ್ತಲ ಜಿಲ್ಲೆಗಳಲ್ಲಿಯೂ ಹಬ್ಬಿವೆ. ಅಲ್ಲದೆ ಚಿತ್ರದುರ್ಗ ಜಿಲ್ಲೆಯ ಕುರಿಗಳು ಅತ್ಯುತ್ತಮ ಉಣ್ಣೆಯನ್ನು ಒದಗಿಸುತ್ತವೆ.

ಶಿಕ್ಷಣ ಕ್ಷೇತ್ರದಲ್ಲಿ ಚಿತ್ರದುರ್ಗ ಜಿಲ್ಲೆ ಸಾಕಷ್ಟು ಮುಂದುವರಿಯುತ್ತಾ ಬರುತ್ತಿದೆ. ಕಡ್ಡಾಯಶಿಕ್ಷಣದ ಪ್ರಗತಿ ಇಲ್ಲಿ ಗಮನಾರ್ಹವಾಗಿದೆ. ಈ ಜಿಲ್ಲೆಯಲ್ಲಿ ಒಟ್ಟು 1657 ಪ್ರಾಥಮಿಕ ಶಾಲೆಗಳು, 89 ಮಾಧ್ಯಮಿಕ ಶಾಲೆಗಳು ಕೆಲಸ ಮಾಡುತ್ತಿವೆ. ಈ ಜಿಲ್ಲೆಯ ದಾವಣಗೆರೆಯಲ್ಲಿ ಮೆಡಿಕಲ್ ಕಾಲೇಜು, ಆರ್ಟ್ಸ್, ಕಾಮರ್ಸ್ ಹಾಗೂ ಸೈನ್ಸ್ ಕಾಲೇಜುಗಳಿದ್ದು, ಜಿಲ್ಲೆಯಲ್ಲಿ ಒಟ್ಟು 8 ಕಾಲೇಜುಗಳಿವೆ.

• ಕೈಗಾರಿಕೆಗಳಲ್ಲಿಯೂ ಈ ಜಿಲ್ಲೆ ಪ್ರಗತಿಪರವಾಗಿದೆ. ಹೆಚ್ಚಿನ ಕೈಗಾರಿಕೆಗಳಲ್ಲಿ ದಾವಣಗೆರೆ, ಹರಿಹರಗಳಲ್ಲಿ ಕೇಂದ್ರೀಕೃತವಾಗಿವೆ. ದಾವಣಗೆರೆಯಲ್ಲಿ ಬಟ್ಟೆಯ ಗಿರಣಿಗಳು, ವನಸ್ಪತಿ ತಯಾರಿಕೆ ಇವು ಮುಖ್ಯವಾಗಿದ್ದರೆ, ಹರಿಹರದಲ್ಲಿ ಯಂತ್ರೋಪಕರಣ ತಯಾರಿಕೆಯ ಕಿರ್ಲೋಸ್ಕರ್ ಕಾರ್ಖಾನೆಯಿದೆ. ಅಲ್ಲದೆ ಮರಗೆಲಸ, ಮಣ್ಣಿನ ಮಡಿಕೆ, ಉಣ್ಣೆ, ರೇಷಿಮೆ, ಎಣ್ಣೆ, ಲೋಹ ಇತ್ಯಾದಿ ಕೈಗಾರಿಕೆಗಳು ಜಿಲ್ಲೆಯ ಉದ್ದಗಲಕ್ಕೂ ಹರಡಿಕೊಂಡಿವೆ. ಈ ಜಿಲ್ಲೆಯಲ್ಲಿ 19 ಜನ್ನಿಂಗ್ ಕಾರ್ಖಾನೆಗಳಿದ್ದು, ಇವುಗಳಲ್ಲಿ 10 ದಾವಣಗೆರೆಯಲ್ಲಿ 6 ಚಿತ್ರದುರ್ಗದಲ್ಲಿ ಇವೆ. ಅಲ್ಲದೆ ಜಗಳೂರಿನಲ್ಲಿ ಸಹಕಾರಿ ಜನ್ನಿಂಗ್ ಕಾರ್ಖಾನೆಯೂ ಕೆಲಸ ಮಾಡುತ್ತಿದೆ.

ಸಾರ್ವಜನಿಕ ಆರೋಗ್ಯಕ್ಷೇತ್ರದಲ್ಲಿ ಜಿಲ್ಲಾ ಆಸ್ಪತ್ರೆ, ದಾವಣಗೆರೆಯ ಚಿಗಟೇರಿ ಜನರಲ್ ಆಸ್ಪತ್ರೆಯನ್ನೊಳಗೊಂಡ 3 ಆಸ್ಪತ್ರೆಗಳು, 45 ಚಿಕಿತ್ಸಾಲಯಗಳು, ಜನರ ರೋಗ ಪರಿಹಾರ ಹಾಗು ಮುಂಜಾಗ್ರತೆ ಕ್ರಮಗಳನ್ನು ಕೈಕೊಳ್ಳುತ್ತಿವೆ. ಈ ಜಿಲ್ಲೆಯಲ್ಲಿ ಮಲೇರಿಯಾ ನಿವಾರಣಾ ಕಾರ್ಯಕ್ರಮ ಯಶಸ್ವಿಯಾಗಿ, ಮಲೇರಿಯದ ಸುಳಿವೇ ಇಲ್ಲದಂತಾಗಿದೆ. ಹೀಗೆ ಸಿಡುಬು ಇತ್ಯಾದಿ ಸಾಂಕ್ರಮಿಕ ರೋಗಗಳ ಹಾವಳಿಯನ್ನು ಈ ಜಿಲ್ಲೆಯಲ್ಲಿ ತಡೆಯಲಾಗಿದೆ. ಜನಸಂಖ್ಯೆಯ ಸಮಸ್ಯೆ ಚಿತ್ರದುರ್ಗ ಜಿಲ್ಲೆಯನ್ನೂ ಬಿಟ್ಟಿಲ್ಲ. 1921ರಲ್ಲಿ ಈ ಜಿಲ್ಲೆಯ ಜನಸಂಖ್ಯೆ 574379; 1969ರ ಮಧ್ಯಕ್ಕೆ ಜನಸಂಖ್ಯೆ 1282540ರಷ್ಟಾಗಿದೆ. ಆದುದರಿಂದ ಕುಟುಂಬಯೋಜನಾ ಕಾರ್ಯಕ್ರಮವನ್ನು ಈ ಜಿಲ್ಲೆಯಲ್ಲಿ 1965ರಿಂದಲೇ ಪ್ರಾರಂಭಿಸಲಾಗಿದೆ ಅಲ್ಲಿಂದ 1970ರ ನವೆಂಬರ ತಿಂಗಳವರೆಗೆ 26036 ಪುರುಷರು, 3718 ಮಹಿಳೆಯರು ಸಂತಾನ ನಿರೋಧ ಶಸ್ತ್ರಕ್ರಿಯೆಗಳನ್ನು ಮಾಡಿಸಿಕೊಂಡಿದ್ದಾರೆ. 11725 ಮಹಿಳೆಯರು ವಂಕಿಧಾರಣೆ ಮಾಡಿದ್ದಾರೆ. ಇದುವರೆಗೆ 3.29ಲಕ್ಷ ನಿರೋಧಗಳನ್ನು ಹಂಚಲಾಗಿದೆ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¾% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

READ & ADVERTISE IN NAVAYUGA WEEKLY

ಇಂದಿರಾಜೀ - ಇದೇನಾ ಇಂದಿರಾಜಾಲ

ಸಂತೆಯಲ್ಲಿ ಜನಸ್ತೋಮ ಸೇರಿತ್ತು. ಮಂತ್ರವಾದಿ ತನ್ನ ಮೋಡಿ ವಿದ್ಯೆಯನ್ನು ಪ್ರದರ್ಶಿಸುತ್ತಿದ್ದನು. ಆಶ್ಚರ್ಯ-ಸಂತೋಷಗಳಿಂದ ಜನರು ಚಪ್ಪಾಳೆ ಹೊಡೆಯುತ್ತಿದ್ದರು. ಉತ್ತೇಜಿತನಾದ ಮೋಡಿಗಾರ ಮಾವಿನಗಿಡ ಮಾಡಿ ಹಣ್ಣುಗಳನ್ನು ತರಿಸುತ್ತೇನೆ, ಯಾರಿಗೆಷ್ಟು, ಯಾವ ಮಾವಿನ ಹಣ್ಣು ಬೇಕೆಂದು ಕೇಳಿದನು. ತಮ್ಮ ಆಶೆಯನ್ನು ಜನತೆ ವ್ಯಕ್ತಪಡಿಸಿತು. ಐಂದ್ರಜಾಲಿಕ ಛೂ-ಮಂತ್ರ ಹಾಕಿದ. ಮಾವಿನ ಹಣ್ಣಿನ ಮಾತು ಹಾಗಿರಲಿ, ಗಿಡವೇ ಬರಲಿಲ್ಲ. ಗುಂಪಿನಲ್ಲಿ ಗುಜುಗ್ಗುಜು ಆರಂಭವಾಯಿತು. ಜಾದೂಗಾರ 'ಹಾಂ ಹೂಂ' ಹೂಂಕರಿಸಿ, ಆಕಾಶವತ್ತ ನೋಡಿದ, ಗಾಜಿನಲ್ಲಿದ್ದ ನೀರನ್ನು ದುರ್ರುಗುಟ್ಟಿ ನೋಡಿದ ಮತ್ತು "ಒಬ್ಬನು ಕೈಕಟ್ಟಿಕೊಂಡು ನಿಂತದ್ದರಿಂದ ನಿಮಗೆ ಮಾವಿನ ಹಣ್ಣು ಸಿಗಲಿಲ್ಲ. ಕೈಕಟ್ಟಿಕೊಂಡು ನಿಂತಿದ್ದವರ ಕೊರಳಲ್ಲಿ ಮಾರುತಿಯ ಚಿತ್ರ ಇರುವ ಮಾಲೆ ಇದೆ....... ಹಿಡಿಯಿರಿ ಅವನನ್ನು, ಬಡಿಯಿರಿ......."

ಇಂದ್ರಪ್ರಸ್ಥದಲ್ಲಿ ಇಂತಹದ್ದೇ ಒಂದು ಗುಂಪು ಸೇರಿತ್ತು. ಇಂದಿರಾಜಿಯವರನ್ನು ಹಿಂಬಾಲಿಸಿದ ಕಾಂಗ್ರೆಸ್ಸಿಗರ ಕೂಟ ಅಲ್ಲಿ ಅವರ ಆಲ್ ಇಂಡಿಯಾ ಕಾಂಗ್ರೆಸ್ಸ್ ಕಮಿಟಿ ಕೂಡಿತ್ತು. ಅವರ ಮಧ್ಯೆ ಕೈಯಲ್ಲಿ ಗಾಜಿನ ಲೋಟದಲ್ಲಿ ನೀರನ್ನು ಹಿಡಿದುಕೊಂಡು ಇಂದಿರಾಜೀ ನಿಂತುಕೊಂಡು ರಾಷ್ಟ್ರೀಯ ಸ್ವಯಂ-ಸೇವಕ ಸಂಘ ಹಾಗೂ ಜನಸಂಘದ ಕೋಮು ನೀತಿಯಿಂದಾಗಿ ಜನತೆಗೆ ಸಮಾಜವಾದದ ಫಲ ಸಿಕ್ಕಿಲ್ಲವೆಂದೂ ಅವರನ್ನು ದಂಡಿಸಬೇಕೆಂದೂ ಗುಡುಗಿದರು.......

"ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಗೂ ಜನಸಂಘಗಳು ಹಿಂದೂ ಜಾತೀಯತೆಯ ಪ್ರಚಾರ ನಡೆಸುತ್ತಿವೆ. ಜಾತೀಯತೆಯನ್ನು ಎದುರಿಸಬೇಕು. ನಮ್ಮ ಪಕ್ಷ ಹಿಂದೂ ಜಾತೀಯತೆಗೆ ಮಾತ್ರ ವಿರುದ್ಧವಲ್ಲ. ಮುಸ್ಲಿಂ ಜಾತೀಯತೆಯನ್ನೂ ವಿರೋಧಿಸುತ್ತದೆ. ಜಾತೀಯ ಮನೋಭಾವನೆಯನ್ನು ನಮ್ಮ ಪೂರ್ಣ ಶಕ್ತಿಯಿಂದ ಎದುರಿಸಬೇಕು....'

ಹೌದು. ನಮ್ಮ ದೇಶದಲ್ಲಿ ಮುಸ್ಲಿಂ ಜಾತೀಯತೆ ಇರುತ್ತಿದ್ದಲ್ಲಿ ಇಂದಿರಾಜೀ ಅದನ್ನು ಎದುರಿಸುತ್ತಿದ್ದರು! ಹಳದಿ ಕಾಮಾಲೆಯಾದವನಿಗೆ ಎಲ್ಲಾ ಹಳದಿಯಾಗಿ ಕಾಣುತ್ತದೆ. ಹಾಗೆಯೇ ಏನು, ಹಿಂದೂ ವಿರೋಧಿ ಇಂದಿರಾಜೀಯವರ ಸ್ಥಿತಿ? ಸತ್ತು ಹೋಗುತ್ತಿದ್ದ ಮುಸ್ಲಿಂಲೀಗಿಗೆ ಶುಶ್ರೂಷೆ ಮಾಡಿ, ಇಂದು ಓಡಾಡುವಂತೆ ಮಾಡಿದವರ್ಯಾರು? ಇದೇ ಇಂದಿರಮ್ಮ ಅಲ್ಲವೇನು? ಅವರ ಸರಕಾರವೇ ನೇಮಿಸಿದ ಕೋಮು ಕೋಲಾಹಲ ವಿಚಾರಣಾ ಸಮಿತಿಯ ವರದಿಯನ್ನು ಅವರು ನೋಡಿಲ್ಲವೇನು? ಅತ್ಯುಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರು ಇತರ ಮತೀಯ ಸದಸ್ಯರಿದ್ದ ಸಮಿತಿಯ ವರದಿಯನ್ನು ಗೃಹಖಾತೆಗೆ ಅರ್ಪಿಸಿಲ್ಲವೇನು? ಇಪ್ಪತ್ತಮೂರು ಮತೀಯ ಮಾರಾಮಾರಿಯಲ್ಲಿ ಇಪ್ಪತ್ತೆರಡನ್ನು ಆರಂಭಿಸಿದವರು ಇಂದಿರಾಜೀಯವರ ಮತೀಯ ಬಣ್ಣವಿಲ್ಲದ ಮಹಮ್ಮದೀಯರು! ಇದು 'ಸಂಕುಚಿತ ಜಾತೀಯ ಮನೋಭಾವನೆ' [Narrow communal mentalitiy] ಅಲ್ಲವೆಂಬುದೇ ಅವರ ಅಭಿಪ್ರಾಯ ಇರಬಹುದು. ಮುಸ್ಲಿಮೇತರರನ್ನು ನಾಶಮಾಡುವದೇ ಖುರಾನಿನ ಆದೇಶವೆಂಬುದನ್ನು ಇಂದಿರಮ್ಮನವರು ತಿಳಿದುಕೊಂಡಿರಬೇಕು. ಜೆಹಾದ್ ಪವಿತ್ರಕಾರ್ಯವಲ್ಲವೇ? ಅದನ್ನೆದುರಿಸುವದು ನ್ಯಾಯವೇ? ಅಲ್ಪಸಂಖ್ಯಾಕರ ಮತೀಯ ಹಕ್ಕಿಗೆ ನ್ಯಾಯದ ಗುಂಡು ಹಾರಿಸುವದು ಸರಿ ಏನು? ಈ ಇಪ್ಪತ್ತೆರಡು ವರ್ಷಗಳಲ್ಲೇ ಅಲ್ಲವಾದರೂ ಅವರು ಅಧಿಕಾರದ ಆಸನವನ್ನೇರಿದ ಮೇಲೆ ಕೂಡಾ ಮಹಮ್ಮದೀಯ ಮತಾಂಧತೆಯು ಒಂದೇ ಒಂದು ಘಟನೆಯೂ ಅವರಿಗೆ ಸಿಕ್ಕಿಲ್ಲ! ವಿಚಾರಣಾ ಸಮಿತಿಯ ತೀರ್ಪಿಗೆ ಅವರು ಬಾಧ್ಯಸ್ಥರಂತಿರಲಿ, ಹೊಣೆಗಾರರೂ ಅಲ್ಲ. ಆದುದರಿಂದ ಜೆಹಾದನ್ನು ಎದುರಿಸಿ, ಪಾಕ್ (ಪವಿತ್ರ)ರಾಗಿ ಪ್ರಗತಿ ಹೊಂದಲು ಇಚ್ಛಿಸದೆ ಹಿಂದುಳಿಯಲು ಆಶಿಸುವ ಹಿಂದೂಗಳನ್ನು ಸಂಪೂರ್ಣ ಬಲದಿಂದ ಬಗ್ಗು ಬಡಿಯಬೇಕೆಂದು ಇಂದಿರಾಜೀ "ಇನಿದಾಗಿ" ತನ್ನ ಕಾಂಗ್ರೆಸ್ಸಿಗರಿಗೆ ಹೇಳದೆ ಇನ್ಯಾರಿಗೆ ಹೇಳುವದು?

ತನ್ನ ಹಿಂಬಾಲಕರನ್ನು ಹಿಂಬಾಲಿಸದಿರುವ ಮತೀಯವಾದಿಗಳ ಮನಸ್ಸು ಹೇಗಿದೆ ಗೊತ್ತೇ? ಇಂದಿರಾಜೀ ಉದಾಹರಣೆ ಸಹಿತ ಅದನ್ನು ವಿವರಿಸಿರುವರು. 'ಡಿಲ್ಲಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಕ್ಷಾಶಿಬಿರ ನಡೆಯುತ್ತಿದ್ದಾಗ, ಕಳ್ಳತನದಿಂದ ಗೋಡೆಹಾರಿದ ಒಬ್ಬನನ್ನು ಹಿಡಿದು ಪೋಲಿಸರಿಗೊಪ್ಪಿಸಿದುದರಿಂದ, ಅವರಿಗೆಲ್ಲಿ ತನ್ನ ಶಿಕ್ಷಣದ ಗುಟ್ಟು ಬಯಲಾಗುತ್ತದೋ ಅನ್ನುವ ಭಯ ಬಂದಿದೆ.' ಗೋಡೆ ಹಾರಿದವನು ಇಂದಿರಾಜೀಯವರ 'ನೇಶನಲ್ ಹೆರಾಲ್ಡ್'ನ ಚಿತ್ರ ತೆಗೆಯುವವನಂತೆ! ಅವನನ್ನು ಇಂದಿರಾಜೀ ಬೆಂಬಲಿಸದೆ ಇನ್ನಾರು ಬೆಂಬಲಿಸುವದು? ತರಗತಿ ನಡೆಯುತ್ತಿರುವಾಗ, ಅನುಮತಿ ಕೇಳಿ, ಛಾಯಾಚಿತ್ರ ತೆಗೆಯುದನ್ನು ಬಿಟ್ಟು ಗೋಡೆ ಹಾರುವಷ್ಟು ಅವಶ್ಯಕತೆ ಏನು? ರಾ. ಸ್ವ. ಸಂಘದ ತರಬೇತಿ ಮೈದಾನಿನಲ್ಲಿ ನಡೆಯುತ್ತದೆ. ಅದು ಪೂಜಾಕೇಂದ್ರಗಳಲ್ಲಾಗಲೀ, ಕಾಡಿನ ಮಧ್ಯದಲ್ಲಾಗಲೀ ಅರಮನೆ-ಬಂಗ್ಲೆಗಳಲ್ಲಾಗಲೀ ರಾತ್ರಿ-ಕತ್ತಲಿನಲ್ಲಾಗಲೀ ನಡೆಯದೆ ಬೆಳಿಗ್ಗೆ ಹಾಗೂ ಸಾಯಂಕಾಲ ಮೈದಾನಿನಲ್ಲಿ ಎಲ್ಲರೆದುರಿನಲ್ಲಿ ನಡೆಯುತ್ತದೆ. ಅದರ ಚಿತ್ರ ತೆಗೆಯಲೂ ಕಳ್ಳತನ ನಡೆಸಬೇಕೇ? ನ್ಯಾಯಾಲಯಗಳಿರುವ ಕಾಲದಲ್ಲೇ ಗೋಡೆಹಾರಿ, ಅಕ್ರಮ ರೀತಿಯಲ್ಲಿ ನುಗ್ಗಿದವನನ್ನು ತರಾಟೆಗೆ ತೆಗೆದುಕೊಳ್ಳುವದನ್ನು ಬಿಟ್ಟು, ಅವನನ್ನು ಹೊರಗೆ ಕಳುಹಿಸಿದವರಿಗೆ ಛೀಮಾರಿ! ಕಳ್ಳನಿಗೆ ಪ್ರೋತ್ಸಾಹ! ಹಿಡಿದು ಕೊಟ್ಟವನಿಗೆ ದಂಡನೆ! ಇದು ಇಂದಿರಾಜೀಯವರ ನ್ಯಾಯ! ಅವರ ಮಗ ಮಾಡಿದ್ದು ಅದು ನ್ಯಾಯವೇ ಇದೆ ಅವರಿಗೆ. ಇರಲಿ. ಇಂದಿರಮ್ಮ ದೈಹಿಕ ಪರಿಶ್ರಮ ನಡೆಸುವಲ್ಲಿ ಯಾರಾದರೂ ಗುಪ್ತರೀತಿಯಲ್ಲಿ ಪ್ರವೇಶಿಸಿದರೆ ಅವನನ್ನು ಅವರು ಕಾವಲುಗಾರರಿಗೆ ಒಪ್ಪಿಸುತ್ತಾರೋ ಅಥವಾ.... ಕಾವಲುಗಾರರಿಗೆ ಒಪ್ಪಿಸಿದಲ್ಲಿ ಅವರ ರಹಸ್ಯ ಬಯಲಾಗುತ್ತದೆಂಬ ಹೆದರಿಕೆಯಿಂದ ತಾನೇ ಅವರು ಹಾಗೆ ಮಾಡುವದು? ಅದು ಅವರ ತಪ್ಪಿನ ಒಪ್ಪಿಗೆ ತಾನೇ? ಇಂತಹ ಮಾತುಗಳನ್ನು ಕೇಳಲೂ ಅವರ ಸುತ್ತ ಜನ ಕೂಡುತ್ತದೆ!

ಈ 'ನ್ಯಾಯದೇವತೆ' ತನ್ನ "ನ್ಯಾಯಪ್ರಿಯತೆ"ಗೆ ಇನ್ನೊಂದು ಉದಾಹರಣೆ ಕೊಟ್ಟದ್ದಾರೆ. ಯಾವದಾದರೊಂದು ಪಂಗಡವು ನಡೆಯುವ ನ್ಯಾಯ-ಹಕ್ಕು ತನಗಿಲ್ಲವೆಂಬುದನ್ನು ತಿಳಿದುಕೊಂಡಲ್ಲಿ ಅದು ಪ್ರಜಾಪ್ರಭುತ್ವ ಇರುವದಿಲ್ಲ. ಯಾವ ಗುಂಪು? ಮಹಮ್ಮದೀಯನಿಗೆ ಕೆಲವು ಮದುವೆ ಮಾಡಿಕೊಳ್ಳುವ ಹಕ್ಕು ಇದೆ. ಹರಿಜನರಿಗೆ ಬೇಕಾದಷ್ಟು ಸವಲತ್ತುಗಳಿವೆ. (ಇದನ್ನು ಕೇವಲ ವಾದಕ್ಕಾಗಿ ಉದಾಹರಿಸಲಾಗಿದೆ.) ಇದೇ ರೀತಿ ಇನ್ನು ಕೆಲ ಸಂಘಗಳಿಗೆ ಬೇರೆ ಬೇರೆ ಸವಲತ್ತುಗಳಿವೆ. ಹಾಗಾದರಿಂದಿರುವದು ಪ್ರಜಾಪ್ರಭುತ್ವವಲ್ಲವೇನೇ?

ನವಯುಗ – ಚಿನ್ನದ ಹಬ್ಬದ ಸಂಚಿಕೆ

ಸ್ಥಾಪನೆ : 1921 **ಚಿನ್ನದ ಹಬ್ಬ : 1971**

ಮೈಸೂರು ರಾಜ್ಯದ ಪ್ರಸಿದ್ಧ ಸಾಪ್ತಾಹಿಕ **'ನವಯುಗ'** ಈ ಐವತ್ತು ವರ್ಷಗಳ ಕಾಲ ರಾಜ್ಯದ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಿ ರೂಢಿಸುವುದರಲ್ಲಿ ಸದ್ದುಗದ್ದಲವಿಲ್ಲದೆ ಕಾರ್ಯತತ್ಪರವಾಗಿದೆ. ದಿ| ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿತವಾದ ಈ ದೀರ್ಘಕಾಲದಲ್ಲಿ ಶ್ರೀ ಕೆ. ಕೆ. ಶೆಟ್ಟಿ, ಎಂ. ವಿ. ಹೆಗ್ಡೆ ಮುಂತಾದವರ ಸಹಯೋಗದಿಂದ ನಾಡಿನ ವಾರಪತ್ರಿಕೆಗಳಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿ ಉಳಿಸಿಕೊಂಡು ಬಂದಿರುತ್ತದೆ. ಕಾಲಕಾಲಕ್ಕೆ ನಾವು ಹೊರಡಿಸಿದ ವಿಶೇಷ ಸಂಚಿಕೆಗಳು ರಾಜ್ಯದ ಅಭಿವೃದ್ಧಿಮುಖವಾದ ಆರ್ಥಿಕ, ಸಾಮಾಜಿಕ ಸನ್ನಿವೇಶಗಳನ್ನು ಚಿತ್ರಿಸಿ ಸರಕಾರಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಮನ್ನಣೆ ಪಡೆಯುವಂತಾಗಿದೆ. 'ನವಯುಗ'ದ ಲೇಖಕರ ಬಳಗವೂ ಕರ್ನಾಟಕದ ಬಡಗಣಿಂದ ತೆಂಕಣದ ವರೆಗೆ ಹರಡಿ ವಿಶೇಷ ಸಂಚಿಕೆಗಳಲ್ಲಿ ರಾಜ್ಯದ ಪ್ರತಿಭೆ ಪ್ರಕಟವಾದ್ದನ್ನು ಎಲ್ಲರೂ ಗಮನಿಸಿದ್ದಾರೆ.

1971—ನವಯುಗದ ಚಿನ್ನದ ಹಬ್ಬದ ವರ್ಷ. ಅಂದು ಮೇಯಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ನವಯುಗ ಒಂದು ವಿನೂತನ ವಿಶಿಷ್ಟ ರೀತಿಯ ತನ್ನದೇ ಪರಂಪರೆಯ ¼ ಕ್ರೌನ್ ಆಕಾರದ ಸುಮಾರು **200** ಪುಟಗಳ **ಚಿನ್ನದ ಹಬ್ಬದ ಸಂಚಿಕೆ**ಯನ್ನು ಪ್ರಕಟಿಸುವ ಉದ್ದೇಶ ಇರಿಸಿಕೊಂಡಿದೆ. ನಾಡಿನ ಪ್ರಖ್ಯಾತ ಧುರೀಣರನ್ನೂ, ಲೇಖಕರನ್ನೂ ಈಗಾಗಲೇ ಲೇಖನ ಕಾರ್ಯಕ್ಕಾಗಿ ನಿಯೋಜಿಸಲಾಗಿದೆ. ರಾಜ್ಯದ ಬುದ್ಧಿ ಮತ್ತು ಆರ್ಥಿಕ ಸಂಪತ್ತಿನ ಉದ್ಭವ ಕೇಂದ್ರಗಳ ಚಿತ್ರಮಯ ಕಥೆಯನ್ನು ಬಿತ್ತರಿಸುವಂತೆ ಕೆಲವರನ್ನು ಕೇಳಿಕೊಳ್ಳಲಾಗಿದೆ. ತುಂಗಭದ್ರಾ ಕಣಿವೆ, ಪಣಂಬೂರು, ಕುದುರೆಮುಖ, ಮಣಿಪಾಲ, ಭದ್ರಾವತಿ, ಶರಾವತಿ— ಮುಂತಾದ ಅಭಿವೃದ್ಧಿ ಬಿಂದುಗಳ ವಿಸ್ತೃತ ವರ್ಣನೆ ವಿಶೇಷ ಸಂಚಿಕೆಯನ್ನು ಅಲಂಕರಿಸುತ್ತದೆ.

ಚಿನ್ನದ ಹಬ್ಬದ ಸಂಚಿಕೆಯ ಕೆಲವು ಪುಟ ಜಾಹೀರಾತುಗಳಿಗಾಗಿ ಮೀಸಲಾಗಿಸಿದೆ. ನಾಡಿನ ಜನಮನವನ್ನು ಮುಟ್ಟುವ ಈ ಸಂಚಿಕೆಯಲ್ಲಿ ತಮ್ಮ ಸಂಸ್ಥೆಯ ಹೆಸರು—ಕೆಲಸ ಕಾಣಿಸಿಕೊಳ್ಳುವಂತಾಗಲಿ, ನಿಮ್ಮ ಶಕ್ಯವಿದ್ದಷ್ಟು ಜಾಹೀರಾತು ಪುಟಗಳನ್ನು ಕಾಯ್ದಿರಿಸುವಂತಾಗಲಿ ಎಂದು ಪ್ರಾರ್ಥಿಸುತ್ತೇವೆ.

ಜಾಹೀರಾತನ್ನು ಆದಷ್ಟು ತ್ವರಿತವಾಗಿ ಎಪ್ರಿಲ್ ತಿಂಗಳ ೧೫ನೇ ತಾರೀಕಿನ ಒಳಗೆ ನಮಗೆ ತಲಪುವಂತೆ ಕಳುಹಿಸಿ ಉಪಕರಿಸಬೇಕು.

ಕನ್ನಡದ ಪ್ರಖ್ಯಾತ ಕವಿಗಳಾದ ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ ಅವರು ನಮ್ಮ ಕೋರಿಕೆಯಂತೆ ಅತಿಥಿ ಸಂಪಾದಕರಾಗಿರಲು ಒಪ್ಪಿಕೊಂಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ.

ತಮ್ಮ ಸೇವಾಭಿಲಾಷಿ,

ಕೆ. ಹೊನ್ನಯ್ಯ ಶೆಟ್ಟಿ
ಮೆನೇಜಿಂಗ್ ಎಡಿಟರ್.

ನವಯುಗ ಆಫೀಸು,
ಉಡುಪಿ.

ಈ ನ್ಯಾಯ ದೇವಿಯು ಧರ್ಮ ದೇವತೆಯಾಗಿ ಕಾಂಗ್ರೆಸ್ಸಿಗರ ಕಣ್ಣುಗಳಿಗೆ ಅಲ್ಲಿ ಕಂಡುಬಂದರು. ಇಂದು ಧರ್ಮದ ಹೆಸರೆತ್ತುವ ಹಿಂದೂಗಳಲ್ಲಿ ಅದೆಷ್ಟು ಮಂದಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರೆಂದು, ಸ್ವಾತಂತ್ರ್ಯ ಹೋರಾಟದ "ರಣಚಂಡಿ" ಕೇಳಿದಾಗ ಅವರ ಭಕ್ತರು 'ಯಾರೂ ಇಲ್ಲವಮ್ಮಾ' ಅಂದರಂತೆ. ಇದೇ ಮಾತು ಸಂಸದಿನಲ್ಲಿ ಕೇಳಿಬಂದಾಗ ಅಟಲ ಬಿಹಾರಿ ವಾಜಪೇಯಿಯವರೆದ್ದು ನಿಂತಾಗ ನಿಮ್ಮ ವಿಷಯ ಹೇಳುವದಲ್ಲ. ಬೇರೆಯವರ ವಿಷಯವೆಂದು ಹೇಳಿದುದನ್ನು ಶ್ರೀಮತಿಯವರು ಮರೆತಿರಬೇಕು. ಹಿಂದೂಗಳಿಗೆ ಅದು ಹೋರಾಟ–ಜಗಳವಲ್ಲ, ಸ್ವಾತಂತ್ರ್ಯ ಸಮರವೇ ಸರಿ. ೧೯೪೭ರಲ್ಲಿ ಬ್ರಿಟಿಷರನ್ನು ಕಳುಹಿಸಿದ ಮೇಲೆ ಇಂದಿರಾಜೀಯವರು ಹೆರದಿರಬಹುದು. ಆದರೆ, ಎಲ್ಲರೂ ಹಾಗೆ ಇರಲು ಸಾಧ್ಯ ಇರುವದಿಲ್ಲ. ೧೯೪೭ ಅಗೋಸ್ಟ್ ಹದಿನೈದರ ನಡುರಾತ್ರಿ ಎಲ್ಲಾ ಹಿಂದೂ ಹೆಂಗಳೆಯರಿಗೆ (ಲೂಪ್) ವಂಕಿ ಧಾರಣೆ ಮಾಡಿಸದೆ ಬಿಟ್ಟ ತಪ್ಪು ಯಾರದ್ದು? ಅಂದೇ ಆ ಕ್ರಮ ಕಾಂಗ್ರೆಸ್ ತೆಗೆದುಕೊಳ್ಳುತ್ತಿದ್ದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸದಿದ್ದವರು ಪ್ರಪಂಚ ಕಾಣಲು ಸಾಧ್ಯವೇ ಇರುತ್ತಿರಲಿಲ್ಲ. ಅದೇ ರೀತಿ ಅವರು ಬಿಸಿರಕ್ತವನ್ನೂ ಕೇಳುತ್ತಿರುವದು ಆಶ್ಚರ್ಯವೇ ಇದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸದವರು ಜಗಜೀವನ ರಾಮರಾಯರ ಇಂದಿರಾ ಕಾಂಗ್ರೆಸ್ಸಿಗೆ ಅತ್ಯಗತ್ಯ.

ದುರುಗುಟ್ಟುತ್ತ "ಧರ್ಮದೇವತೆ"ಯು ಬ್ರಿಟಿಷರ ಕಾಲದಲ್ಲಿ 'ಗೋಮಾತೆ'ಯ ಘೋಷಣೆ ಹಾಕಿದವರ್‍ಯಾರಾದರೂ ಇರುವರೇನೆಂದು ಕೇಳಿದರು. ಬ್ರಿಟಿಷರ ವಿಷಯ ಇಂದಿರಾಜೀಯವರಿಗೇನೇ ಚೆನ್ನಾಗಿ ಗೊತ್ತಿರಬಹುದು. ಗೋಭಕ್ತರಿಗೆ ಗೋಮಾತೆಗಾಗಿ ಶ್ರಮಿಸಿದವರ ವಿಷಯ ಗೊತ್ತಿರುವದು ಸ್ವಾಭಾವಿಕ. ೧೮೫೭ರ ಸ್ವಾತಂತ್ರ್ಯ ಸಮರಕ್ಕೆ ಪ್ರೋತ್ಸಾಹವನ್ನಿತ್ತ ಘೋಷಣೆ ಯಾವದು? ಗೋಮಾತೆಯ ವಂಶವನ್ನು ನಾಶಪಡಿಸುತ್ತಿರುವ ಬ್ರಿಟಿಷರನ್ನು ಬ್ರಿಟನಿಗೋಡಿಸುವದೇ ಸಮರದ ಉದ್ದೇಶವಾಗಿತ್ತು. ಅಶೋಕ ಮೆಹ್ತಾರವರು ೧೮೫೭ ವಿಷಯ ಬರೆಯುವಾಗ ಹಿಂದೂ–ಮುಸ್ಲಿಮರಲ್ಲಿ ಆಗ ನಡೆದ ಒಂದು ಒಪ್ಪಂದ—ಗೋವಧೆ ನಿಷೇಧವೆಂದು ಬರೆದಿದ್ದಾರೆ. ೧೯೬೭ರ ಪ್ರಧಾನಿಗೆ ಇದು ಗೊತ್ತಿರಬೇಕೆಂದೇನಿಲ್ಲ. ಆಕ್ಸ್‌ಫೋರ್ಡಿನಲ್ಲಿ ಆ ವಿಷಯ ಹೇಳಿಕೊಟ್ಟಿದ್ದಲ್ಲಿ ತಾನೇ? ಆನಂತರ ಅದೇ ಪ್ರಶ್ನೆಯ ಮೇಲೆ ಕೂಕಾ ನಾಗಾ.... ಯುದ್ಧಗಳು ನಡೆದಿಲ್ಲವೇನು? ಸ್ವಾಮಿ ದಯಾನಂದ, ಶ್ರದ್ಧಾನಂದ, ಉಪೇಂದ್ರ ಮೋಹನ, ಮದನಮೋಹನ ಮಾಳವೀಯ, ಬಾಲ ಗಂಗಾಧರ ಟಿಳಕ್... ಹೆಸರಿನ ಪಟ್ಟಿಯನ್ನೇ ಕೊಡಬಹುದು. ಆದರೆ ಪ್ರಯೋಜನ? ಆಕ್ರಮಣಗಾರ ಬ್ರಿಟಿಷರ ಬಳಿ ಕೇಳದಿರುವದನ್ನು ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವದ ಮೂಲಕ ಡಿಕ್ಟೇಟರರಾದವರನ್ನು ಕೇಳಬಾರದೇನು? ಪಶುವಧೆ ಪ್ರತಿಬಂಧಿಸದಿರುವ ಇಂದಿರಾಜೀಗೆ ಗೋಚಿಹ್ನೆಯೇ ಬೇಕಾಗಿದೆ. ಮತ ದೊರಕಿಸಿಕೊಡುವ ಕಾಮಧೇನು ಅದು! ಚುನಾವಣೆ ಮುಗಿದ ಮೇಲೆ ಕಸಾಯಿಗಾರನಿಗೆ—ಅಶೋಕಾ ಹೋಟೆಲಿಗೆ.

"ಕೇಳಬಹುದು. ಆದರೆ ಚುನಾವಣೆಯ ಸಮಯದಲ್ಲೇ ಏಕೆ ಕೇಳುವಿರಿ? ರಾಜಸ್ಥಾನ, ಬಿಹಾರ್ ಕ್ಷಾಮಕಾಲದಲ್ಲಿ ನಿಮಗದು ಜ್ಞಾಪಕ ಬರುವದಿಲ್ಲವೇ? ಇದೇ ಏನು ನಿಮ್ಮ ಧರ್ಮ?"—ಇಂದಿರಾಜೀಯವರ ಗುಡುಗು. ಬಸವ ಯಾರ ಚುನಾವಣಾ ಚಿಹ್ನೆಯಾಗಿತ್ತು? ಚುನಾವಣೆಯ ಸಮಯ ಮಾತ್ರ ಯಾರಿಗೆ ಅದು ಜ್ಞಾಪಕ ಬರುತ್ತಿದ್ದದ್ದು? ಕ್ಷಾಮಕಾಲದಲ್ಲಿ ಗೋಭಕ್ತರು ತಮ್ಮಿಂದಾದಷ್ಟು ಕಿಂಕರ ಸೇವೆಮಾಡಿರುವರು. ಗೋವಧೆ ನಿಷೇಧವಾಗಲೆಂದು ಕೇಳುತ್ತಿರುವವರನ್ನು ತನ್ನ ಸಂಪೂರ್ಣ ಬಲದಿಂದ ಸಂಹರಿಸಿ ಬಿಡುವುದಾಗಿ ಘೋಷಿಸುತ್ತಿರುವ ಇಂದಿರಾರಾಣಿಯವರು ಆಗ ತನ್ನ ಹಾಗೂ ಸರಕಾರದ ಬಲವನ್ನೇ ಯಾವದಕ್ಕೆ ಉಪಯೋಗಿಸುತ್ತಿದ್ದರು? ಪಶುವಧೆ ಪ್ರೋತ್ಸಾಹಕ್ಕಾಗಿ ಏನು? ಅದೇ ಹೆಜ್ಜೆಯಲ್ಲಿ ಅವರು ಗೋವು ಹಾಗೂ ಧರ್ಮವನ್ನು ಮೆಚ್ಚಿಬಿಡಬೇಕೆಂದು ತಿರುಪತಿಯಂತಹ ಪವಿತ್ರ ಕ್ಷೇತ್ರಗಳಲ್ಲಿ ಭಯಂಕರ ನವನಾಗರೀಕ ಹಾಗೂ ಯಾಂತ್ರಿಕ ದೈತ್ಯ ಕೊಲೆಕಾರ್ಖಾನೆಗಳನ್ನು ತೆಗೆಯಲು ತನ್ನ ಬಲವನ್ನುಪಯೋಗಿಸುತ್ತಿದ್ದಾರೆ. ಜಗದತಲದಲ್ಲಿ (ಬಂಗಾಲ) ದೇವಸ್ಥಾನದೆದುರು ಗೋವಧೆ ಮಾಡಲು ಮತಾಂಧರನು ಪ್ರೋತ್ಸಾಹಿಸಿದ ಅಲ್ಲಿಯ ಮಂತ್ರಿಮಂಡಲದ ಅವಸ್ಥೆ ಅದೇನಾಯಿತು? ಆಹಾರ ಅಭಾವದ ಸಮಯದಲ್ಲಿ ಗೋಮಾಂಸ ಇಲ್ಲಿ ಹಾಳಾಗುತ್ತಿದೆಯೆಂದು ಇಂದಿರಾಜೀಯವರ ಕೃಷ್ಣಪ್ಪನವರು ಹೇಳಿರುವದನ್ನು ಮರೆತು ಬಿಡಲು ಸಾಧ್ಯವಾಗುವುದಿಲ್ಲ.

ಗೋವಧೆ ನಿಷೇಧವು ತನಗೆ ಸ್ವಾತಂತ್ರ್ಯಕ್ಕಿಂತಲೂ ಪ್ರಾಮುಖ್ಯವಾದುದೆಂದು ಮಹಾತ್ಮಾ ಗಾಂಧೀಜೀ ಬ್ರಿಟಿಷರ ಕಾಲದಲ್ಲೇ ಹೇಳುತ್ತಿದ್ದರೆ, ಅಥವಾ ಅವರು ಚುನಾವಣೆಯ ಸಮಯ ಹೇಳುತ್ತಿದ್ದರೇ? ಗೋವಧೆಯ ವಿಷಯವನ್ನು ಚುನಾವಣೆಯಲ್ಲಿ ಉಪಯೋಗಿಸಿಕೊಳ್ಳುತ್ತಿರುವವರು ಯಾರು? ತನ್ನ ಮಂತ್ರಿಮಂಡಲ ಅದನ್ನು ನಿಷೇಧಿಸುದಿಲ್ಲವೆಂದೇತಕ್ಕೆ ಇಂದಿರಾ ಗಾಂಧಿ ಸ್ಪಷ್ಟವಾಗಿ ಹೇಳಬಾರದು? ಅದೇತಕ್ಕೆ ಅವರು ಮೀನಮೇಷ ಎಣಿಸುತ್ತಿದ್ದಾರೇ? ಪುರಿಜಗದ್ಗುರು ಶ್ರೀಶ್ರೀ ಶಂಕರಾಚಾರ್ರು ಸುಶೀಲಕುಮಾರ್, ಪೇಜಾವರ ಮಠಾಧೀಶರು.... ಇವರಿಗೂ ಇಂದಿರಾರ ಚುನಾವಣೆಗೂ ಏನಾದರೂ ಸಂಬಂಧ ಇದೆಯೇ? ಈ ದುಷ್ಪ್ರಚಾರದಿಂದ ಕಾಂಗ್ರೆಸ್ಸು ಬಸವಣ್ಣನನ್ನು ತೋರಿಸಿ ಮತ ಗಿಟ್ಟಿಸಿಕೊಳ್ಳುತ್ತದೆ. ಮತ್ತು ಹಿಂದು ಧರ್ಮಾಭಿಮಾನಿಗಳ ಹಾಗೂ ಗೋಭಕ್ತರ ಮೇಲೆ ತೋಳ-ಮೇಕೆ ನ್ಯಾಯ ತೀರಿಸಿಕೊಳ್ಳುತ್ತಿದೆ. ಆದರೂ ರಾಷ್ಟ್ರಾಭಿಮಾನಿಗಳೂ ದೇಶಭಕ್ತರೂ ಧೈರ್ಯಗುಂದದೆ ಶಾಂತವಾಗಿ ಮನೋಪರಿವರ್ತನೆಯ ಕಾರ್ಯದಲ್ಲಿ ಮುನ್ನಡೆಯುತ್ತಿದ್ದಾರೆ. ಆಗ ಮತಾಂಧರನ್ನು ಅವರ ಮೇಲೆ ಛೂ ಬಿಡಲಾಗುತ್ತದೆ. ಆಗ ಕೆಲವೆಡೆ ಚಕಮಕಿ ನಡೆಯುವದು ವಿಶೇಷವೇನಲ್ಲ. ಇಂದಿರಮ್ಮನವರ ಜೀವನದಲ್ಲೇ ಅಂತಹ ಒಂದು ಘಟನೆ ನಡೆದಿದೆಯೆಂದು ಹೇಳಲಾಗುತ್ತದೆ. ವಿಭಜನೆಯ ಸಮಯ ಪಾಕಿಸ್ಥಾನದಲ್ಲಿ ಭಾರೀ ಅತ್ಯಾಚಾರ ನಡೆಯುತ್ತಿದ್ದಾಗ ಬಿಹಾರಿನಲ್ಲಿ ಕಿಡಿ ಕಂಡುಬಂತು. ಆಗಿನ ಪ್ರಧಾನಿ ಜವಾಹರಲಾಲ್ ನೆಹ್ರೂಜಿಯವರು ಇಂದಿರಾರಾಣಿಯವರನ್ನು ಕರೆದುಕೊಂಡು ಅಲ್ಲಿಗೆ ಹೋಗಿದ್ದರು. ಅವರು ಹಿಂದೂಗಳನ್ನು, ಇಂದು ಇಂದಿರಾಜೀ ಜರೆಯುವಂತೆ ತೆಗಳಿದರು. ಅಂದು ಒಬ್ಬ ಶುಂಠಿಯು ಜವಾಹರಲಾಲ ನೆಹ್ರೂಜೀಯೆದುರಿನಲ್ಲಿ ಇಂದಿರಾರಾಣಿಯವರಿಗೆ ಡಿಕ್ಕಿ ಹೊಡೆದನಂತೆ. ಹಿಂದೂಗಳ ಕುರಿತು ಹೀನಾಯವಾಗಿ ಮಾತಾಡುತ್ತಿದ್ದ ನೆಹ್ರೂಜೀಗೆ ಆಗ ಎಲ್ಲಿಲ್ಲದ ಕೋಪ ಬಂದಂತೆ.

ಕೆಟ್ಟದು ಈ ವರ್ಷ ಬಹಳ ಹಬ್ಬಿದೆಯೆಂದು ಒಪ್ಪಿಕೊಂಡು ಇಂದಿರಾಜೀ, ಅದರಲ್ಲಿ ತನ್ನ ತಪ್ಪೂ ಇದೆಯೆಂದು ಹೇಳಿ ಇನ್ನು ಮೇಲೆ ತಾನು ನಿದ್ರಿಸುವದಿಲ್ಲವೆಂದೂ ದೇಶ ಜಾಗೃತವಾಗಿನೆಯೆಂದೂ ತಿಳಿಸಿರುವರು ಒಳ್ಳೆಯದು. ರಾಷ್ಟ್ರದ ಪ್ರಧಾನಿ ಕುಂಭಕರ್ಣನೊಂದಿಗೆ ಲಲ್ಲೆಯಾಡುತ್ತಿದ್ದಲ್ಲಿ ಆ ದೇಶದ ಗತಿ ಏನು? ಇನ್ನು ಮೇಲೆ ಹಾಗೆ ನಿದ್ರಿಸುವದಿಲ್ಲವೆಂದು ತನ್ನ ಕಾಂಗ್ರೆಸ್ಸಿಗರಿಗೆ ಇಂದಿರಾ ಆಶ್ವಾಸನೆ ಇತ್ತಿದ್ದಾರೆ; ಮತ್ತು, ಮುಂದೇನು ಮಾಡುತ್ತೇನೆಂಬುದನ್ನು ಅವರು ಅಂದೇ ಅವರಿಗೆ ಸ್ಪಷ್ಟಪಡಿಸಿದ್ದಾರೆ. ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲವಂತೆ, ಅದು ಯೋಚನೆ ಮಾಡುವವರಿಗೆ ಆಲೋಚನಾ ಶಕ್ತಿಯುಳ್ಳವರಿಗೆ ಗೊತ್ತಾಗಿರುತ್ತದೆ. ಅವರು ಉದ್ವೇಗಭರಿತರಾಗಿ ಭಾಷಣ ಮಾಡುತ್ತಿದ್ದಾಗ ಗಂಟಲು ಕಟ್ಟಿ ಹೋಯಿತು. ಆಗ ಒಬ್ಬರು ಗಾಜಿನ ಲೋಟೆಯಲ್ಲಿ ನೀರು ಕೊಟ್ಟರು. ಅದನ್ನು ಹಾಗೆಯೇ ಕೈಯಲ್ಲಿ ಹಿಡಿದುಕೊಂಡು ಗಂಟಲು ಸರಿಪಡಿಸಿಕೊಂಡ ಇಂದಿರಾಜೀ ಭಾಷಣ ಮುಂದರಿಸಿದರು. ಕೈಯ್ಯಲ್ಲಿ ಗಾಜಿನ ಲೋಟೆಯಿದ್ದದನ್ನು ಅವರು ಸಂಪೂರ್ಣ ಮರೆತ್ತಿದ್ದರು. ಇಂದಿನ ಕೋಮು ಕೋಲಾಹಲವೂ ಗಾಜಿನ ಲೋಟೆ ಇದೆ. ಅದನ್ನು ಕೈಯಲ್ಲಿ ಹಿಡಿದುಕೊಂಡಿರುವ ಇಂದಿರಾಜೀ ಮೈಮರೆತ್ತಿದ್ದಾರೆ, ತನ್ನ ಸ್ಥಿತಿಯ ಅರಿವೇ ಅವರಿಗಿಲ್ಲವಾಗಿದೆ. ಅದೇನೇನೋ ಆಡುತ್ತಿದ್ದಾರೆ. ಇಂದಿರಾಜೀ ನಿದ್ದೆಯಲ್ಲಿದ್ದರೆ ಅವರನ್ನು ಎಬ್ಬಿಸಬಹುದು. ಈ ರೀತಿ ಮೈಮರೆತಿರುವವರನ್ನು ಪ್ರಜ್ಞಾಶೂನ್ಯರನ್ನು ಏನು ಮಾಡುವದು?

ಈ ಇಂದಿರಾಜೀ ಇಂದಿರಾ ಪ್ರಸ್ಥದಲ್ಲಿ ಇಂದಿರಾ ಜಾಲವನ್ನೂ ಪ್ರದರ್ಶಿಸಿದರು. ತನ್ನ ಸೋಲಿನ ಹೊರೆಯನ್ನು ಹಿಂದೂ ಧರ್ಮಾಭಿಮಾನಿಗಳ ಹಾಗೂ ಗೋಭಕ್ತರ ಮೇಲೆ ಹಾಕಿರುವರು. ಪ್ರಜ್ಞಾವಂತ ಪ್ರಜೆಗಳೀಗ ಇಂದಿರಾಜೀ ಇದೇನಾ ಇಂದಿರಾ ಜಾಲವೆಂದು ಕೇಳಲಾರಂಭಿಸಿದ್ದಾರೆ.

—ಶ್ರೀ ಶಿವಶಂಕರ.

ಶ್ರೀ ಮುಂಡಾಡಿ ದಾಸ ರೈಗಳ ನಿಧನ

ಮಂಗಳೂರಿನ ಪ್ರಸಿದ್ಧ ಕ್ರಿಮಿನಲ್ ವಕೀಲರಾಗಿದ್ದ ದಿ| ಕೆ. ನಾರಾಯಣ ರೈಗಳ ಕೀರ್ತಿಶೇಷರೂ ಸರ್ಕಾರಿ ಪ್ಲೀಡರಾಗಿ ಉತ್ತಮ ಕೃಷಿಕರಾಗಿದ್ದ ಕಡಬ ಮಾಣಿಗದ ಶ್ರೀ ಮುಂಡಾಡಿ ದಾಸ ರೈಯವರು ತಾ. 26.2.71 ರಂದು ಸುಮಾರು 80ನೇ ವಯಸ್ಸಿನಲ್ಲಿ ದೈವಾಧೀನರಾದರು. ದಿವಂಗತರು ನಿರಾಡಂಬರ ಪ್ರವೃತ್ತಿಯವರೂ ಧಾರ್ಮಿಕ ಶೀಲರೂ ಆಗಿ ಜನಪ್ರಿಯರಾಗಿದ್ದರು. ಇವರ ಅಪಾರ ಬಂಧು ಮಿತ್ರರ, ಪತ್ನೀ ಪುತ್ರ ಪುತ್ರಿಯರ ದುಃಖದಲ್ಲಿ ಸಹಾನುಭೂತಿ ಪಡುತ್ತೇವೆ.

ಸಂದೇಹ ಸಿರಿ!—ಸಂತೃಪ್ತರಾಗಿರಿ!!
ಬಿಲ್ಲೆ ಜಾಗರಾ ವಸ್ತ್ರಗಳಿಗೆ, ಆಧುನಿಕ ಶೈಲಿಯ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—
ಐಡಿಯಲ್ ಫೋಟೋ ಹೌಸ್ PHONE: 3131
ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1
Tele: GOLDKING Estd: 1947 Phone: 3242 Res: 3272

ಮನೆಯೊಂದಾವಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ-ಮದ್ದು
ಬೆಲೆ: ರೂ. 2–00
ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ ಗೀತೆಯ ಸಮೂಲ ಅನುವಾದ
ಗೀತೆಯ ಕೈಗನ್ನಡಿ
ಪಾಕೆಟ್ ಎಡಿಶನ್ ಬೆಲೆ ರೂ. 1–50
ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ. 2–00
Letter Writing Made Easy
ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ. ದ. ಕ.

ಅಚ್ಚಳಿಯದ ಬಣ್ಣದ ಚಿತ್ರಗಳ ರಹಸ್ಯ

ಅರ್ಮೇನಿಯದ ಪುರಾತನ ಸ್ಮಾರಕಗಳು ತಮ್ಮ ಅಪೂರ್ವವಾದ ವಾಸ್ತುಶಿಲ್ಪ ಮತ್ತು ಭಿತ್ತಿ ಚಿತ್ರಗಳಿಂದ ತುಂಬಾ ಆಕರ್ಷಕವಾಗಿವೆ. ಪ್ರಾಚೀನ ಕಲಾವಿದರು ರಚಿಸಿರುವ ಈ ಬಣ್ಣದ ಚಿತ್ರಗಳ ಕುಶಲ ಕಾರ್ಯ ಮತ್ತು ತಂತ್ರಗಳು ಇಂದಿಗೂ ಕಲಾತಜ್ಞರ ಹಾಗೂ ಕಲಾಪ್ರೇಮಿಗಳ ಗಮನ ಸೆಳೆಯುತ್ತಿವೆ.

ಅರ್ಮೇನಿಯದ ಸನ್ಯಾಸಿ ಮಠಗಳ ಹಾಗೂ ದೇವಾಲಯಗಳ ಭಿತ್ತಿ ಚಿತ್ರಗಳು ಶತಮಾನಗಳಿಂದ ಮುಕ್ಕಾಗದೆ, ವಿನಾಶದ ಚೂರು ಗುರುತೂ ಇಲ್ಲದೆ ಉಳಿದಿವೆ. ಪುರಾತನ ಕಲಾವಿದರು ಉಪಯೋಗಿಸಿದ ಬಣ್ಣಗಳು ಕೂಡ ತಮ್ಮ ಉಜ್ವಲತೆಯನ್ನು ಒಂದಿಷ್ಟೂ ಕಳೆದುಕೊಂಡಿಲ್ಲ. ಇವುಗಳಲ್ಲಿ ಕೆಲವು ಭಿತ್ತಿ ಚಿತ್ರಗಂಳತೂ ಸಹಸ್ರಾರು ವರ್ಷಗಳಷ್ಟು ಹಳೆಯವು. ಈ ಕಲಾವಿದರು ತಮ್ಮ ರಹಸ್ಯಗಳನ್ನು ಎಂದೂ ಹೊರಗೆ ಬಿಟ್ಟುಕೊಟ್ಟುದಿಲ್ಲ. ಕೇವಲ ಮೃತ್ಯುಶಯ್ಯೆಯಲ್ಲಿದ್ದಾಗ ಮಾತ್ರವೆ ಮಗನಿಗೆ ಅಥವಾ ತಮ್ಮನಿಗೆ ಹೇಳಿಕೊಡುತ್ತಿದ್ದರು. ಹೆಚ್ಚಿನವರು ಈ ರಹಸ್ಯಗಳನ್ನು ತಮ್ಮೊಟ್ಟಿಗೆ ಸಮಾಧಿಗೆ ಕೊಂಡೊಯ್ಯುತ್ತಿದ್ದರು.

ಸ್ವಲ್ಪ ಕಾಲದ ಹಿಂದೆ ಅರ್ಮೇನಿಯನ್ ವಿನ್ಯಾಸ ಶೀಠದ ರಾಸಾಯನಿಕ ಪ್ರಯೋಗಶಾಲೆಯ ಸರ್ಗೇಸ್ ಮ್ಯಕ್ರಿಟ್ಚಿಯನ್ ಅವರ ನೇತೃತ್ವದಲ್ಲಿ ಸಂಶೋಧಕರ ಗುಂಪೊಂದು ಕಾರ್ಯ ಮಾಡಿ ಅರ್ಮೇನಿಯನ್ ಶಿಲೆಗಳಿಂದ ಪುರಾತನ ರಂಗಾರಿಗಳು ಬಣ್ಣವನ್ನು ತಯಾರಿಸುತಿದ್ದರೆಂಬುವನ್ನು ಕಂಡುಹಿಡಿದರು.

ನಾಪತ್ತೆಯಾಗಿರುವ ಈ ರಹಸ್ಯ ಸೂತ್ರವನ್ನು ತಜ್ಞರು ಕಂಡುಹಿಡಿಯಬೇಕೆಂಬ ಅರ್ಮೇನಿಯನ್ ಕಲಾವಿದರ ಕೋರಿಕೆಯಂತೆ ರಾಸಾಯನಿಕ ಪ್ರಯೋಗಶಾಲೆಯವರು ಬಣ್ಣದ ರಹಸ್ಯವನ್ನು ಮೂಲ ವರ್ಣ ದ್ರವ್ಯವನ್ನು ಸಂಶೋಧಿಸತೊಡಗಿದರು.

ಆಗಾಗ ಘಟಿಸುವಂತೆ ಈ ಬಾರಿಯೂ ಆಕಸ್ಮಿಕವೇ ನಿಗೂಢವನ್ನು ಬಿಡಿಸಲು ಸಹಾಯಕವಾಯಿತು. ರಾಸಾಯನಿಕ ಪ್ರಯೋಗಶಾಲೆ ತಜ್ಞರು ಬಹು ವರ್ಣಮಯ ಅರ್ಮೇನಿಯನ್ ಶಿಲೆಗಳ ರಚನೆಯನ್ನು ಗಮನಿಸಿದರು. ಪುರಾತನ ಕಟ್ಟಡಗಳೆಲ್ಲವೂ ಇಂಥ ಶಿಲೆಯಿಂದ—ಜ್ವಾಲಾಮುಖಿ ಶಿಲೆಯಿಂದ ನಿರ್ಮಿಸಲ್ಪಟ್ಟಿದ್ದು ವಾತಾವರಣದಿಂದ ಅಬಾಧಿತವಾಗಿ ಶತಮಾನಗಳ ಕಾಲದಿಂದ ನಿಂತಿವೆ.

ಪುರಾತನ ಕಲಾವಿದರು ಬಣ್ಣಗಳನ್ನು ತಯಾರಿಸಲು ಈ ಕಲ್ಲುಗಳನ್ನೇ ಬಳಸಿರಬೇಕೆಂಬ ತೀರ್ಮಾನಕ್ಕೆ ತಜ್ಞರು ಬಂದರು.

ಗಣರಾಜ್ಯದಲ್ಲಿಯ ಅನೇಕ ನಿಕ್ಷೇಪಗಳಲ್ಲಿಯ ಜ್ವಾಲಾಮುಖಿ ಶಿಲೆಗಳನ್ನು ಅನ್ವೇಷಿಸಿದ ಬಳಿಕ ರಾಸಾಯನಿಕ ಪ್ರಯೋಗಶಾಲೆ ಕಾರ್ಯಕರ್ತರು ವರ್ಣದ್ರವ್ಯಗಳನ್ನು ತಯಾರಿಸಲು ಸೂಕ್ತವಾದಂಥ 20 ನಮೂನೆಯ ಶಿಲೆಗಳನ್ನು ಆರಿಸಿಕೊಂಡರು. ಇವುಗಳಿಂದ ತಯಾರಿಸಲಾದ ಹೊಸ ಬಣ್ಣಗಳನ್ನು ಸತತ ಮೂರು ವರ್ಷಗಳ ಕಾಲ ಪರೀಕ್ಷಿಸಲಾಯಿತು. ಸಹಜ ಸ್ಥಿತಿಗಳಲ್ಲಿ ಮತ್ತು 'ಕೃತ್ರಿಮ ವಾತಾವರಣ'ದ ಕೋಷ್ಠಿಗಳಲ್ಲಿ ಮಳೆ ನೀರು, ಸುಡುವ ಸೂರ್ಯನ ಬಿಸಿಲು, ನೂರಾರು ಅಂಶಗಳ ಉಷ್ಣತೆ ಈ ಯಾವುದೂ ವರ್ಣ ದ್ರವ್ಯಗಳ ಸಹಜ ಬಣ್ಣದ ಮೇಲೆ ಒಂದಿಷ್ಟೂ ಪರಿಣಾಮವನ್ನು ಬೀರಲಿಲ್ಲ.

ಲೆನಿನ್‌ಗ್ರಾಡ್ ಕಲಾ ಬಣ್ಣಗಳ ಕಾರ್ಖಾನೆಯ ತಜ್ಞರಂತೂ ಈ ಪ್ರಾಯೋಗಿಕ ಬಣ್ಣಗಳನ್ನು ಬಹುವಾಗಿ ಮೆಚ್ಚಿಕೊಂಡರು. ಪಖ್ನಾಜಾರ್ ನಿಕ್ಷೇಪಗಳಲ್ಲಿಯ ಜ್ವಾಲಾಮುಖಿ ಶಿಲೆಯಿಂದ ತಯಾರಿಸಿದ ಕಿತ್ತಳೆ ವರ್ಣದ್ರವ್ಯವನ್ನಂತೂ ಅವರು ವಿಶೇಷವಾಗಿ ಉಲ್ಲೇಖಿಸಿದರು.

ರಾಸಾಯನಿಕ ಪ್ರಯೋಗ ಶಾಲೆಯವರು ನಡೆಸಿದ ಈ ಸಂಶೋಧನೆ ಕೇವಲ ರಂಗಾರಿಗಳಿಗೆ ಮಾತ್ರವೆ ಆಸಕ್ತಿಕರವಾಗಿಲ್ಲ. ಸೆರೆಮಿಕ್‌ಗಳಲ್ಲಿ ಬಳಸಬಹುದಾದಂತ ವರ್ಣ ದ್ರವ್ಯಗಳನ್ನು ಅರ್ಮೇನಿಯನ್ ತಜ್ಞರು ಕಂಡುಹಿಡಿದಿದ್ದಾರೆ.

ಆರೋಗ್ಯ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿ

ಭಾರತದ ಸ್ವಾತಂತ್ರ್ಯೋದಯದಿಂದೀಚೆಗೆ ಭಾರತೀಯನ ವಯೋಮಾನವು 32 ವರ್ಷದಿಂದ 52. 6 ವರ್ಷಕ್ಕೇರಿದೆ. ಅದೇ ರೀತಿ ಸ್ವಾತಂತ್ರ್ಯ ಪೂರ್ವದಲ್ಲಿದ್ದ ಮರಣ ಪ್ರಮಾಣವು ಪ್ರತಿ ಸಹಸ್ರಕ್ಕೆ 27. 4 ಇದ್ದುದು 14ಕ್ಕೆ ಇಳಿದಿದೆ. ಈಗ ಎರಡು ದಶಕಗಳ ಹಿಂದೆ ಶಿಶುಗಳ ಮರಣ ಪ್ರಮಾಣವು ಪ್ರತಿ ಸಹಸ್ರಕ್ಕೆ 183 ಇದ್ದುದು 113ಕ್ಕೆ ಇಳಿದಿದೆ.

ಇಂದು ದೇಶದಲ್ಲಿ ಪ್ಲೇಗ್, ಮಲೇರಿಯಾ ರೋಗಗಳ ನಿರ್ಮೂಲನವಾಗಿದೆ. 14 ವರ್ಷ ವಯೋಮಿತಿಯೊಳಗಿನ 14·3 ಕೋಟಿ ಮಕ್ಕಳಿಗೆ ದೇವಿಹಾಕಲಾಗಿದೆ. 1950ರಲ್ಲಿ 1·5 ಲಕ್ಷಕ್ಕಿಂತಲೂ ಹೆಚ್ಚು ಜನರು ಸಿಡುಬಿನಿಂದ ನರಳಿದರು. 1969ರಲ್ಲಿ ಸಿಡುಬು 18,896 ಜನರಿಗೆ ತಗಲಿತ್ತು.

ಭಾರತದಲ್ಲಿ 1951ರಲ್ಲಿ ಸಾಮೂಹಿಕ ಬಿ. ಸಿ. ಜಿ. ದೇವಿ ಹಾಕುವ ಚಳುವಳಿ ಆರಂಭವಾಯಿತು. ಇದು ವಿಶ್ವದಲ್ಲೇ ಅತ್ಯಂತ ಬೃಹತ್ ಕಾರ್ಯಕ್ರಮವೆನಿಸಿಕೊಂಡಿತು. 1970ನೇ ಇಸವಿ ಸೆಪ್ಟೆಂಬರ್ ಮಾಸದವರೆಗೆ ದೇಶದಲ್ಲಿ 8231 ಬಿ. ಸಿ. ಜಿ. ತಂಡಗಳು 25 ಕೋಟಿ ಜನರನ್ನು ಕ್ಷಯರೋಗಕ್ಕಾಗಿ ಪರೀಕ್ಷಿಸಿ 13·4 ಕೋಟಿ ಜನರಿಗೆ ಬಿ. ಸಿ. ಜಿ. ದೇವಿ ಹಾಕಿತು.

ವಿಸ್ತರಣಾ ಯೋಜನೆ

1947ರಲ್ಲಿ ದೇಶದಲ್ಲಿ 6669 ಆಸ್ಪತ್ರೆ, ವೈದ್ಯಶಾಲೆಗಳಿದ್ದು 80,168 ಒಳರೋಗಿ ಹಾಸಿಗೆ ಸೌಲಭ್ಯವಿತ್ತು. ಇಂದು ದೇಶದಲ್ಲಿ 14,580 ಆಸ್ಪತ್ರೆ, ವೈದ್ಯಶಾಲೆಗಳಿದ್ದು 2,63,380 ಒಳರೋಗಿ ಹಾಸಿಗೆ ಸೌಲಭ್ಯವಿದೆ.

1947ರಲ್ಲಿ 47,500 ವೈದ್ಯರು 7000 ದಾದಿಯರೂ 5000 ಸೂಲಗಿತ್ತಿಯರೂ ಇದ್ದರು. ಇಂದು 1.05 ಲಕ್ಷ ವೈದ್ಯರೂ 66 ಸಹಸ್ರ ದಾದಿಯರೂ 52 ಸಹಸ್ರ ಸೂಲಗಿತ್ತಿಯರೂ ಇದ್ದಾರೆ. ಇಂದು ಆರು ಸಹಸ್ರ ಸಾರ್ವಜನಿಕ ಆರೋಗ್ಯ ಸಂದರ್ಶಕರಿದ್ದಾರೆ.

ಸ್ವಾತಂತ್ರ್ಯೋದಯವಾದಾಗ ದೇಶದಲ್ಲಿ 25 ವೈದ್ಯಕೀಯ ಕಾಲೇಜುಗಳಿದ್ದು 2 ಸಹಸ್ರ ವಿದ್ಯಾರ್ಥಿಗಳಿಗೆ ವೈದ್ಯಶಿಕ್ಷಣ ಲಭ್ಯವಿದ್ದಿತು. ಇಂದು 95 ವೈದ್ಯಕಾಲೇಜುಗಳಿದ್ದು 11,800 ವಿದ್ಯಾರ್ಥಿಗಳು ವೈದ್ಯ ಶಿಕ್ಷಣ ಪಡೆಯುತ್ತಿದ್ದಾರೆ.

ಕುಟುಂಬ ಯೋಜನೆ

ಭಾರತವು ವಿಶ್ವದ ಶೇಕಡ 2·4ರಷ್ಟು ಭೂಪ್ರದೇಶ ಹೊಂದಿದ್ದರೂ ಶೇಕಡ 14ರಷ್ಟು ಜನಸಂಖ್ಯೆ ಹೊಂದಿದೆ.

ಭಾರತದ ಜನಸಂಖ್ಯೆ 1961ರಲ್ಲಿ 43·9 ಕೋಟಿಯಿದ್ದಿತು. 1951-61ರ ಅವಧಿಯಲ್ಲಿ ದೇಶದ ಜನಸಂಖ್ಯೆ 7. 8 ಕೋಟಿ ಹೆಚ್ಚಿತ್ತು. 1966ರಲ್ಲಿ ದೇಶದ ಜನಸಂಖ್ಯೆ 50 ಕೋಟಿಯಾಗಿ 1970-71ರಲ್ಲಿ 53.4 ಕೋಟಿಯಾಗಿದೆಯೆಂದು ಅಂದಾಜು ಮಾಡಲಾಗಿದೆ.

ಚತುರ್ಥ ಯೋಜನೆ ಆರಂಭವಾದಾಗ ಜನನ ಪ್ರಮಾಣವು ಪ್ರತಿ ಸಹಸ್ರಕ್ಕೆ 41 ರಿಂದ 39ಕ್ಕೆ ಇಳಿಯಿತು. 1966–67ನೇ ಸಾಲಿನ ಕೊನೆಯಲ್ಲಿ ಕುಟುಂಬಯೋಜನಾ ವಿಧಾನಗಳನ್ನು ಅಂಗೀಕರಿಸಿರುವವರ ಸಂಖ್ಯೆಯು 22.6 ಲಕ್ಷಕ್ಕೇರಿತು. ಈ ಸಂಖ್ಯೆ 1969–70ರಲ್ಲಿ 34 ಲಕ್ಷವಿದ್ದಿತು.

ಪ್ರಸಕ್ತ ವಾರ್ಷಿಕ ಸಾಲಿನ 6 ಮಾಸಗಳಲ್ಲಿ 25 ಲಕ್ಷ ಜನರು ವಿವಿಧ ಕುಟುಂಬ ಯೋಜನಾ ವಿಧಾನಗಳನ್ನು ಅಂಗೀಕರಿಸಿದರು. ಕಳೆದ ವರ್ಷ ಜೂನ್ ಮಾಸಾಂತ್ಯದವರೆಗೆ ದೇಶದಾದ್ಯಂತ 79 ಲಕ್ಷ ಸ್ತ್ರೀ-ಪುರುಷರು ಸಂತತಿ ನಿರೋಧ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದರು; 36 ಲಕ್ಷ ಮಹಿಳೆಯರು ವಂಕಿ ಧರಿಸಿದ್ದರು. ಈ ಸಂಖ್ಯೆ ಇಡೀ ಜಗತ್ತಿನಲ್ಲಿ ಕೈಗೊಂಡಿರುವ ಸಂತತಿ ನಿರೋಧ ಶಸ್ತ್ರ ಚಿಕಿತ್ಸೆಗಿಂತಲೂ ಹೆಚ್ಚಾಗಿದೆ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

In the Court of Munsif Kundapur

O.S. 230/1968 Ex.C. 268/70

B. Vaman Pai —Plaintiff Decree holder

Versus

Paul Desa —Defendant, J.D.

To

Paul Desa, Son of Balthasar Desa, Kavaradi Village, Coondpoor Taluk.

Sir,

Please take notice that the above execution filed for bringing your immovable properties to sale has been posted to 3—4—71 at 11 A.M. for setling the terms of sale proclamation. You are to put in appearance and make your submission or otherwise it will be determined in your absence.

By order of Court

NARAYANA KAMATH

Advocate for Decree holder

Coondapoor, 1-3-71.

ಚುನಾವಣೆ ಮುಗಿಯಿತು; ಮುಂದೇನು ?

ಒಂದು ವರ್ಷ ಮೊದಲೇ ಶ್ರೀಮತಿ ಧಿಢೀರಂ ತಂದುಕೊಟ್ಟ ಲೋಕಸಭೆಯ ಸಾರ್ವತ್ರಿಕ ಚುನಾವಣೆಗಳು ಮುಗಿದೀಗ ಪರಿಣಾಮ ಪ್ರಕಟವಾಗತೊಡಗಿದೆ. ಒಂದೆರಡು ದಿನಗಳಲ್ಲೇ ಎಲ್ಲ ಪರಿಣಾಮಗಳು ಬಹಿರಂಗಗೊಂಡು ಮುಂದಿನ ಲೋಕಸಭೆಯ ಸ್ವರೂಪ ದರ್ಶನವಾಗುತ್ತದೆ. ಈ ಪರಿಣಾಮಗಳು ಶ್ರೀಮತಿ ಗಾಂಧಿಗೂ ಆಕೆಯ ಬೆಂಬಲಿಗರಿಗೂ ಭಾರೀ ಆಘಾತವನ್ನುಂಟು ಮಾಡುವುದೆಂಬುದು ನಿಶ್ಚಯ. ೨೮೦ರಿಂದ ೩೦೦ ಸ್ಥಾನಗಳನ್ನು ಗಳಿಸಿ ನಿಚ್ಚಳ ಬಹುಮತದಿಂದ ಏಕಪಕ್ಷೀಯ ಸರಕಾರ ರಚಿಸುತ್ತೇವೆ ಎಂಬ ಇಂಡಿಕೇಟಿಗರ ಆಸೆ ಎಟಕದ ದ್ರಾಕ್ಷೆಯಾಗುವುದು ನಿಸ್ಸಂದೇಹ. ಅವರು ಸ್ಪಷ್ಟ ಬಹುಮತಕ್ಕೆ ಬೇಕಾದ ೨೬೧ ಸ್ಥಾನಗಳನ್ನು ಪಡೆಯಲು ಅಸಮರ್ಥರಾಗುತ್ತಾರೆ.

ಶ್ರೀಮತಿ ಗಾಂಧಿಯವರು ವಿಸರ್ಜಿತ ಲೋಕಸಭೆಯಲ್ಲಿದ್ದ ೨೨೨ ಸ್ಥಾನಗಳನ್ನೂ ಉಳಿಸಿಕೊಳ್ಳಲು ಅಶಕ್ತರಾಗುತ್ತಾರೆಂಬುದು ಆಕೆಯ ವಿರೋಧಿಗಳ ಅಭಿಮತ. ಪ್ರಜಾಸತ್ತಾತ್ಮಕ ರಂಗವು ಸ್ಪಷ್ಟ ಬಹುಮತ ಗಳಿಸುವುದೆಂದು ಅವರ ನಿರೀಕ್ಷೆ. ಒಂದು ವೇಳೆ, ಶ್ರೀಮತಿ ಗಾಂಧಿಯೇ ಸ್ಪಷ್ಟ ಬಹುಮತ ಗಳಿಸಿಕೊಂಡರೆ, ಆಕೆಯೇ ಸರಕಾರ ರಚಿಸುವುದು ಖಂಡಿತ. ಆದರೂ ಮುಂದಿನ ಬದಲಾವಣೆಯು ಆಕೆ ಮತ್ತು ಪ್ರಜಾಸತ್ತಾತ್ಮಕ ರಂಗಗಳು ಪಡೆಯುವ ಸ್ಥಾನಗಳನ್ನು ಹೊಂದಿಕೊಂಡಿದೆ.

ಶ್ರೀಮತಿ ಗಾಂಧಿಯವರು ಸ್ಪಷ್ಟ ಬಹುಮತವನ್ನಾದರೂ ನಿರೀಕ್ಷಿಸಿದ್ದರು. ಚುನಾವಣೆಗಳು ಮುಗಿಯುತ್ತ ಬಂದಂತೆ ಆಕೆಯ ನಿರೀಕ್ಷೆ ದೂರವಾಗುತ್ತಲೇ ಬರಹತ್ತಿದೆ. ಆದುದರಿಂದ ಬಹುಮತ ಗಳಿಸದೆ ಹೋದರೆ ಏನು ಮಾಡಬೇಕು'

ಈ ಪ್ರಶ್ನೆಗೆ ಉತ್ತರ ಊಹಿಸಲು ಪ್ರಜಾಸತ್ತಾತ್ಮಕ ರಂಗದ ಬಲವನ್ನು ತಿಳಿಯಬೇಕು. ಅದು ನಿಚ್ಚಳ ಬಹುಮತವನ್ನು ಪಡೆದಿದ್ದರೆ, ಶ್ರೀಮತಿ ಗಾಂಧಿ ರಾಜಿನಾಮೆ ಕೊಟ್ಟು ಅಧಿಕಾರಕ್ಕೆ ಎರವಾಗಬೇಕಾಗುತ್ತದೆ.

ಆದರೆ, ಶ್ರೀಮತಿಯವರು ಅಷ್ಟು ಸುಲಭವಾಗಿ ಸೋಲೊಪ್ಪಿಕೊಳ್ಳುವುದಿಲ್ಲ. ತನ್ನ ಸೋಲನ್ನೂ ಗೆಲುವೆಂದು ಕಹಳೆಯೂದುವ ಆಕೆ ಪ್ರಜಾಸತ್ತಾತ್ಮಕ ರಂಗವು ಬಹುಮತವನ್ನು ಕಳೆದುಕೊಳ್ಳುವ ತಂತ್ರ ಹೂಡಬಹುದು. ಚುನಾವಣಾ ನಂತರದ ಪಕ್ಷಾಂತರ ಸರ್ಕಸ್‌ನ ರಿಬ್ಬನ್ ಆಕೆಯಿಂದಲೇ ಕತ್ತರಿಸಲ್ಪಡಬಹುದು.

ಒಂದೆರಡು ಬಾರಿ ಪಂಜಾಬದಲ್ಲಿ, ಬಿಹಾರದಲ್ಲಿ, ರಾಜಸ್ಥಾನದಲ್ಲಿ ನಡೆದಂತೆಯೇ ತನಗೇ ಬಹುಮತವಿದೆಯೆಂದು ರಾಷ್ಟ್ರಪತಿ ಗಿರಿಗೆ ನಿವೇದಿಸಿ, ಸರಕಾರ ರಚಿಸಲು ಆಹ್ವಾನವನ್ನು ತಾವೇ ಪಡೆಯುವ ಪ್ರಯತ್ನ ನಡೆಸಬಹುದು.

ತನ್ನ ನೆಚ್ಚಿನ ಮಗಳ ಮಾತನ್ನು ಕಣ್ಣು ಮುಚ್ಚಿ ಒಪ್ಪುವ ಶ್ರೀ ಗಿರಿಯವರು ಇದನ್ನೂ ಸಮ್ಮತಿಸದೆ ಇರಲಾರರು.

ಶ್ರೀಮತಿ ಗಾಂಧಿಯವರ ಪ್ರಬಲ ಸಮರ್ಥಕರು ದ್ರಾಮುಕರು. ಆದರೆ ತಮಿಳುನಾಡಿನ ವಿಧಾನ ಸಭೆಯೇ ಅವರ ಕೈಜಾರಿ ಹೋಗುವ ಅವಕಾಶ ಬಹಳಷ್ಟಿರುವುದರಿಂದ ಅಲ್ಲಿನ ಬಲವನ್ನು ನಂಬುವುದು ಸಾಧ್ಯವಿಲ್ಲ. ಮೂವತ್ತೊಂಬತ್ತು ಸ್ಥಾನಗಳಲ್ಲಿ ಸುಮಾರು ೨೫ನ್ನು ಸಂಪಾದಿಸುವ ಅವರ ಆಶಯ ದೂರದ ನಕ್ಷತ್ರ ಮಾತ್ರ. ತಮಿಳುನಾಡಿನಲ್ಲಿ ಶ್ರೀಮತಿಯವರ ನಿರೀಕ್ಷೆ ತೀರಾ ಸುಳ್ಳಾಗುತ್ತದೆ.

ಬಲ ಕಮ್ಯೂನಿಸ್ಟರ ಬೆಂಬಲವೂ ಆಕೆಯ ಅಜೇಯ ಬಲ. ಕೇರಳಕ್ಕಿಂತ ಶ್ರೀಮತಿ ಗಾಂಧಿ ಬಂಗಾಳದ ಬಲವನ್ನೇ ನಂಬಿಕೊಂಡಿದ್ದಾರೆ. ಪ್ರತಿನಿತ್ಯ ಹತ್ತಾರು ಕೊಲೆಗಳು ಹಾಡುಹಗಲಿನಲ್ಲೇ ನಡೆಯುತ್ತಿದ್ದರೂ ವಿತ್ತಜೀವಿತಗಳು ಅಪಾಯದ ಹಂತ ಮೀರಿದ್ದರೂ ಚುನಾವಣೆ ನಡೆಸುವ ಆಕೆಯ ನಿರ್ಧಾರ ರಾಜ್ಯಕೀಯದ್ದು. ಮತ್ತೀಗ ಸೇನೆಯನ್ನಿಟ್ಟುಕೊಂಡಾದರೂ ಚುನಾವಣೆ ನಡೆಸುವುದು ಮತ್ತೊಂದು ರಾಜ್ಯಕೀಯ. ಬಂಗಾಳದ ಚುನಾವಣೆಗಳು ಯಾವ ಮುಖ ಹಿಡಿಯಬಹುದೆಂದು ಹೇಳುವುದು ಸಾಧ್ಯವಿಲ್ಲ. ಎಲ್ಲರೂ ಸ್ವಲ್ಪಸ್ವಲ್ಪ ಪಡೆಯಬಹುದಷ್ಟೆ.

ಬಂಗ್ಲಾ ಕಾಂಗ್ರೆಸ್, ಬಿ. ಕೆ. ಡಿ, ಬಲ ಕಮ್ಯುನಿಸ್ಟ್ ಮತ್ತು ದ್ರಾಮುಕ ಹಾಗೂ ಅಪ್ಪಟ ಜಾತೀಯ ಮುಸ್ಲಿಂ ಲೀಗುಗಳ ಬೆಂಬಲವನ್ನು ಶ್ರೀಮತಿ ಗಾಂಧಿ ಪಡೆಯುವ ಪ್ರಯತ್ನ ನಡೆಸಬಹುದು. ಒಂದು ವೇಳೆ ಈ ಪ್ರಯತ್ನ ಯಶಗಳಿಸಿದರೆ, ಪರಿಸ್ಥಿತಿ ಹಿಂದಿನಗಿಂತ ಬೇರೆಯಾಗಲಿಲ್ಲ.

"ತನ್ನ ಪ್ರಗತಿಪರ ಕಾರ್ಯಕ್ರಮಗಳಿಗೆ ಜನತೆಯ ನೇರ ಆದೇಶ ಪಡೆಯುವ' ತವಕದಿಂದ ದೇಶದ ಮುಂದೆ ತಂದು ಹಾಕಿದ ಚುನಾವಣೆಯಲ್ಲಿ ಆಕೆ ಸ್ಪಷ್ಟ ಬಹುಮತ ಗಳಿಸದೆ ಹೋದರೆ ಸರಕಾರ ರಚಿಸುವ ಗೋಜಿಗೆ ಆಕೆ ಹೋಗಬಾರದು. ಉಳಿದವರ ಪ್ರತ್ಯಕ್ಷ ಯಾ ಪರೋಕ್ಷ ಬೆಂಬಲವು ಜನತೆಯ ಆದೇಶಕ್ಕೆ ವಿರುದ್ಧವಾದದ್ದು. ಆಕೆಯ 'ಪ್ರಗತಿಪರ' ನೀತಿಗಳಲ್ಲಿ ಜನತೆಗೆ ವಿಶ್ವಾಸವಿರುವುದಾದರೆ, ಆಕೆಯ ಪಕ್ಷವನ್ನೇ ಆವಶ್ಯಕ ಬಹುಮತದಿಂದ ಜನತೆ ಆರಿಸುತ್ತದೆ. ಏಕೆಂದರೆ, ಇಂಡಿಕೇಟು ಸ್ವತಂತ್ರವಾಗಿ ಸ್ಪರ್ಧೆಗಿಳಿದ ಗುಂಪು.

ಪಾರ್ಲಿಮೆಂಟಿನಲ್ಲಿ ಬಿದ್ದುಹೋದ ಮಸೂದೆಯನ್ನು ಸುಗ್ರೀವಾಜ್ಞೆಯ ಮೂಲಕ ಜ್ಯಾರಿಗೆ ತಂದ ಶ್ರೀಮತಿ ಗಾಂಧಿ ಜನತಾ ನ್ಯಾಯಾಲಯದ ತೀರ್ಮಾನವನ್ನೇಕೆ ಒಪ್ಪುತ್ತಾರೆ? ಯೇನಕೇನ ಅಧಿಕಾರ ಸ್ಥಾನ ಆಕೆಗೆ ಬೇಕು; ಆದುದರಿಂದ ಕಮ್ಯುನಿಸ್ಟರ, ಲೀಗಗಳ ಕೈಮಿಲಾಯಿಸುತ್ತಾರೆ.

ತನ್ನ ಪ್ರಥಮ ಶ್ರೇಣಿಯ ಪ್ರಶಂಸಿಕೆ ಸಂರಕ್ಷಿಕೆ ಶ್ರೀಮತಿ ಗಾಂಧಿಯ ಕರೆಗೆ ಲೀಗಿಗಳು ತಕ್ಷಣ ಓಗೊಡುತ್ತಾರೆ. ಕಮ್ಯುನಿಸ್ಟರು ಕೆಲವೊಂದು ಶರ್ತಗಳನ್ನು ಹೇರಬಹುದು; ಸಚಿವ ಸಂಪುಟದಲ್ಲೇ ಪ್ರಾತಿನಿಧ್ಯ ಬೇಡಬಹುದು; ಕೇರಳದ ತಮ್ಮ ಸರಕಾರದ ದೀರ್ಘಾಯುಷ್ಯವನ್ನು ಬರೆಯಿಸಿಕೊಳ್ಳಬಹುದು. ದ್ರಾಮುಕ ಬಾಯಿ ತೆರೆಯದು. ಕಳೆದುಕೊಂಡ ತನ್ನ ಪ್ರಭಾವವನ್ನು ಗಳಿಸಲು ಅದು ಇಂಡಿಕೇಟಿನ ಬೆಂಬಲ ಯೋಚಿಸಬಹುದು. ಬಂಗ್ಲಾ ಕಾಂಗ್ರೆಸ್ ಅಲ್ಪತೃಪ್ತ. ಶ್ರೀಮತಿ ಗಾಂಧಿಯೇನಾದರೂ ಬೃಹತ್ ತ್ಯಾಗ ಮಾಡಬೇಕಾಗಿ ಬಂದರೆ, ಬಿಕೆಡಿಯ ಚರಣಸಿಂಗರಿಗೆ ೭ ಲೋಕಸಭಾ ಸ್ಥಾನಗಳಿಗಾಗಿ ೨೩೪ ವಿಧಾನ ಸಭಾ ಸ್ಥಾನಗಳನ್ನು ತ್ಯಾಗ ಮಾಡಿದ ಇಂದಿರಾಜಿ ಪ್ರಧಾನ ಮಂತ್ರಿತನಕ್ಕಾಗಿ ಚರಣಸಿಂಗರನ್ನು ತೃಪ್ತಿ ಪಡಿಸಲೂ ಮುಂದಾಗಬಹುದು. ಆದರೆ, ಶ್ರೀ ಸಿಂಗರು ಭಾರಿ ಬೆಲೆಯನ್ನೇ ಕೇಳುತ್ತಾರೆ, ಇದು ಖಂಡಿತ.

ಇದು ಭವಿಷ್ಯದ ಒಂದು ಮುಖ. ಪ್ರಜಾಸತ್ತಾತ್ಮಕ ರಂಗವು ಬಹುಮತ ಪಡೆದು ಬಂದರೆ, ರಂಗದ ಅಂಗ ಪಕ್ಷಗಳು ಭಾರೀ ಯೋಚನೆ ಮಾಡಬೇಕಾಗುತ್ತದೆ. ಸಾಮಾನ್ಯ ಕಾರ್ಯಕ್ರಮ, ನಾಯಕನ ಆಯ್ಕೆಯೇ ಅವುಗಳಿಗೆ ದೊಡ್ಡ ಪ್ರಶ್ನೆ. ಪಕ್ಷಾಂತರಕ್ಕೂ ಆರಂಭವಾಗಬಹುದು. ಅಧಿಕಾರ ಲಾಲಸಿಗಳು ಅಧಿಕಾರ ನೀಡುವವರ ಕುತ್ತಿಗೆಗೆ ಜೋತುಬೀಳುವುದು ಸಹಜ.

ಈ ನಡುವೆ ಹೊಸ ಮಾತೊಂದು ಕೇಳಿ ಬರುತ್ತದೆ. ಪೂರ್ವ–ಪಶ್ಚಿಮಗಳಷ್ಟು ದೂರ ಸರಿದ ಕಾಂಗ್ರೆಸ್ ಬಣಗಳು ೧೮೦ ಡಿಗ್ರಿ ರೇಖಾಂಶದಲ್ಲಿ ಒಂದಾಗುವ ದೂರದ ಆಶಾಕಿರಣವಿದು. ಶ್ರೀಮತಿ ಗಾಂಧಿಯವರನ್ನು ನಾಯಕಪಟ್ಟದಿಂದ ಕೆಳಗಿಳಿಸುವುದಾದರೆ, ಎರಡು ತುಕಡಿಗಳೂ ಒಂದಾಗುವ ಸಾಧ್ಯತೆಯಿದೆಯೆನ್ನಲಾಗುತ್ತಿದೆ.

ಎಐಸಿಸಿಯು ಶ್ರೀಮತಿ ಗಾಂಧಿಯನ್ನು ಕಾಂಗ್ರೆಸ್ಸಿನ ಸದಸ್ಯತ್ವದಿಂದ ಕಿತ್ತುಹಾಕಿ ಪಾರ್ಲಿಮೆಂಟರಿ ಪಕ್ಷಕ್ಕೆ ಹೊಸ ನಾಯಕನನ್ನು ಆರಿಸಲು ಆದೇಶ ನೀಡಿದ್ದನ್ನೂ ಆ ಆದೇಶಕ್ಕೆ ಬಹುತೇಕರು ಅನಿಚ್ಛೆಯತೆ ತೋರಿಸಿದ್ದನ್ನೂ ನೆನಪಿಸಬಹುದು. ಇಲ್ಲಿಂದ ಆರಂಭವಾದ 'ಅಕ್ರಮ'ಗಳ ಮಾಲೆ ಹಿಡಿಯಲಾಗದಷ್ಟು ಮುಂದೆ ಬೆಳೆದಿದೆ. ಶ್ರೀಮತಿಯ ಬೆಂಬಲಿಗರು ಸಾಮಾನ್ಯವಾಗಿ ಅಧಿಕಾರಲಾಲಸಿಗಳಾಗಿರುವುದರಿಂದ ಇದು ಸಾಧ್ಯವಾದೀತೆನಿಸಿದರೂ ಕಷ್ಟಸಾಧ್ಯ.

ಆದರೂ ಶ್ರೀಮತಿ ಗಾಂಧಿಯವರು ತಮ್ಮ ರಾಜ್ಯಕೀಯ ಕ್ರೀಡಾಂಗಣದ ಏಕ ಮಾತ್ರ ಆಟಗಾರರು. ಆಕೆ ಯಾರನ್ನೂ ನಂಬುವುದಿಲ್ಲ. ಇತರ ಆಟಗಾರರನ್ನು ನಿಸ್ತೇಜರನ್ನಾಗಿ ಮಾಡಿ ಬಿಟ್ಟಿದ್ದಾರೆ. ಆಕೆಯ ಬಲಗೈ ಬಂಟರಾದ ಶ್ರೀ ಜಗಜ್ಜೀವನ ರಾಮರು ರಾಜ್ಯಕೀಯದಲ್ಲಿ ಬಹಳದ ಮಹತ್ವಾಕಾಂಕ್ಷೆಯಿಟ್ಟುಕೊಂಡವರು. ಆದರೆ, ಶ್ರೀಮತಿಯವರು ಅವೆಲ್ಲಕ್ಕೂ ತಣ್ಣೀರೆರಚಿದರು. ಮಹಾರಾಷ್ಟ್ರದ ಅನಭಿಷಿಕ್ತ ದೊರೆ ಶ್ರೀ ಚವಣರಾದರೂ ತಮ್ಮ ಛತ್ರವನ್ನು ಕಳೆದುಕೊಂಡಿದ್ದಾರೆ. ಈ "ಅತೃಪ್ತರು" ಇಂದಿರಾ ರಾಜ್ಯಕೀಯದಲ್ಲಿ ತೊತ್ತಳದುಳಿಯಲ್ಪಟ್ಟಿದ್ದಾರೆ. ಇವರೂ ಅವಕಾಶವರಿತು ಶ್ರೀಮತಿಯನ್ನು ದಬ್ಬಲು ತಯಾರಿದ್ದಾರೆ. ಆಗ, ಇವರಿಗೂ ಹಲವರ ಬೆಂಬಲ ದೊರೆಯುತ್ತದೆ. ಅಲ್ಲಿಗೆ "ಇಂದಿರಾಯಣ" ಮುಗಿದು ಇನ್ನೊಂದು ಅಯನ ಬರುತ್ತದೆ.

ಇದೆಲ್ಲ ಸಂಭವನೀಯವೆ? ಇಂದಿನ ಭಾರತೀಯ ರಾಜ್ಯಕೀಯದಲ್ಲಿ ಎಲ್ಲವೂ ಸಾಧ್ಯ. ಕಾಂಗ್ರೆಸ್‌ನ ವಿಭಜನೆ–ಮತ್ತೆ—ಸಮ್ಮಿಳನಗಳು ಈ ಹಿಂದೆಯೂ ನಡೆದಿವೆ; ಈಗಲೂ ನಡೆಯಬಹುದು. ಆದರೆ, ಈಯೆಲ್ಲ ಕಲ್ಪನೆಗಳಿಗೆ ಚುನಾವಣಾ ಫಲಿತಾಂಶವೇ ಹಸುರು ದೀಪ. ಫಲಿತಾಂಶ ಪ್ರಕಟವಾಗುತ್ತ ಬಂದಂತೆ ಒಂದೋ ಕಲ್ಪನಾ ಲೋಕದ ಏಣಿಯೇರಬೇಕು; ಇಲ್ಲ, ಪಾತಳಿಗೆ ಬೀಳಬೇಕು.

ಶ್ರೀಮತಿ ಗಾಂಧಿ ಸೋಲೊಪ್ಪಿಕೊಳ್ಳುವವರಲ್ಲ. ಕೆರಳಿದ ಸಿಂಹಿಣಿ ಇನ್ನಾವ ಅನರ್ಥಕ್ಕಿಳಿಯಬಹುದು?

ಸಂಪಾದಕರಿಗೆ ಪತ್ರ

ಭೀಷ್ಮ ವಿವಾಹಿತನೊ?

'ನವಯುಗ'ದ ಪ್ರಜಾರಾಜ್ಯ ಸಂಚಿಕೆಯ ನನ್ನ ಬರಹ ಓದಿದ ಶಿರ್ವದ ಶ್ರೀ ಬಿ. ಜಯರಾಮ ಶೆಟ್ಟಿಯವರು ಮಂಗಳೂರ 'ನವಭಾರತ"ದಲ್ಲಿ (26-2-71ರಲ್ಲಿ) ಕೆಲವು ಜಿಜ್ಞಾಸೆ ಬರೆದಿದ್ದರು. ಆ ಲೇಖದಲ್ಲಿ ನಾನು ಹೇಳಿದ, ಉದಯವಾಣಿ ಹಾಗೂ ಪ್ರಭಾತಗಳಲ್ಲಿ ಬಂದ ನನ್ನ ಲೇಖನವನ್ನು (ಆಧಾರ ಶ್ಲೋಕಾದಿಗಳೊಡನೆ) ಶ್ರೀಯುತರು ಹಾಗೂ ವಾಚಕರು ದಯಮಾಡಿ ಓದಬೇಕಾಗಿ ಅರಿಕೆ. ಇಂತಹ ಗಹನ ಪ್ರಶ್ನೆಗಳನ್ನು ಕುರಿತು ಉದಾಹರಿಸಿದ ಶ್ಲೋಕಗಳಿಗೆ ಬೇರೆ ಅರ್ಥವಾಗುವಂತಿದ್ದರೇನೇ ಇಂತಹ ಜಿಜ್ಞಾಸೆಯಾಗಬೇಕು. ಹಾಗಲ್ಲದೆ ಕನ್ನಡ ಮೊದಲಾದ ನಾಟಕಾದಿಗಳ ಕೃತಿಗಳ ವಾಕ್ಯಗಳು ಈ ಬಗೆಗೆ ಆಧಾರವಾಗಲಾರವು! ಭೀಷ್ಮ ವಿವಾಹಿತ–ಬ್ರಹ್ಮಚಾರಿಯೆಂಬುದೇ ನಿಜ!

ಸುರತ್ಕಲ್ಲು. ವೆಂಕಟರಾಯಾಚಾರ್ಯ.

ಹಾವನೂರಲ್ಲಿ ಶ್ರೀ ವಾದಿರಾಜರ ಆರಾಧನೆ

ಪ್ರತಿ ಸಲದಂತೆ ಶ್ರೀ ವಾದಿರಾಜ ಗುರು ಸಾರ್ವಭೌಮರ ಆರಾಧನ ಮಹೋತ್ಸವವು ಇದೇ ತಿಂಗಳ ದಿ. ೧೪ರಿಂದ ೧೬ರ ವರೆಗೆ ಹಾವನೂರ ಕ್ಷೇತ್ರದಲ್ಲಿ ಜರಗುವುದು. ಭಕ್ತಾದಿಗಳು ಬಂದು [ರಾಣೇಬೆನ್ನೂರ, ಹಾವೇರಿಗಳಿಂದ ಬಸ್ ಸೌಕರ್ಯವಿದೆ] ತುಂಗಭದ್ರಾ ಸ್ನಾನ, ಪೂಜಾ ದರ್ಶನ, ಗುರುಸೇವಾ, ತೀರ್ಥ ಪ್ರಸಾದಗಳನ್ನು ಹೊಂದಿ ಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು, ಅರ್ಚಕರಾದ ಶ್ರೀ ಗಲಗಲಿ ನರಸಿಂಹಾಚಾರ್ಯರು ವಿನಂತಿಸುತ್ತಾರೆ.

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17–4/65–66ರ ಪತ್ರದಂತೆ ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/– ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಸತತ ಸಾಧನೆ ಮುಖ್ಯ

ಶಿರ್ವ, ಫೆ 26: "ನನ್ನ ಶಾಲಾ ದಿನಗಳಲ್ಲೇ ಅಂತರಾಷ್ಟ್ರೀಯ ಮಟ್ಟದ ಆಟಗಾರನಾಗಬೇಕೆಂದು ಕನಸನ್ನು ಕಟ್ಟಿಕೊಂಡಿದ್ದೆ. ಬರೀ ಕನಸಿನಿಂದ ಏನೂ ಫಲ ಬಾರದು. ಸತತ ಸಾಧನೆ ಮುಖ್ಯ. ನಿರಂತರ ಸಾಧನೆಯ ಫಲವಾಗಿ ಏಷ್ಯನ್ ಆಟೋಟಗಳಲ್ಲಿ ರಜತ ಪದಕವನ್ನು ಗಳಿಸಲು ಸಮರ್ಥನಾದೆ. ಇತ್ತಿಗೆ ನನ್ನ ಆಸೆ ಪೂರೈಸಿಲ್ಲ. ಇನ್ನೂ ಸಾಧನೆಯಿಂದ ಅಂತರಾಷ್ಟ್ರೀಯ ಮಟ್ಟದ ಚಿನ್ನದ ಪದಕವನ್ನು ಗಳಿಸುವೆ...." ಎಂಬುದಾಗಿ ಏಷ್ಯನ್ ಕ್ರೀಡೆಯಲ್ಲಿ ರಜತ ಪದಕವನ್ನು ಗಳಿಸಿ, ಭಾರತಕ್ಕೆ ಕೀರ್ತಿತಂದ ಭಾರತೀಯ ಕ್ರೀಡಾಪಟು ಶ್ರೀ ಗೋವಿಂದ ಶೆಟ್ಟಿಗಾರ್ ಹಿಂದೂ ಹಾಯರ್ ಸೆಕೆಂಡರಿ ಶಾಲಾ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ ಶಿಸ್ತಿನಿಂದ ಮಹತ್ವದ ಸಾಧನೆಗೆ ಸ್ಫೂರ್ತಿಯುತ ಕರೆಯನ್ನು ಕೊಟ್ಟರು.

ಶಾಲಾ ಅಧ್ಯಾಪಕ ಶ್ರೀ ವಾಸುದೇವ ಶೆಟ್ಟರು ಅತಿಥಿಗಳನ್ನು ಪರಿಚಯಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಜಯರಾಮ ಶೆಟ್ಟರು ಅತಿಥಿಗಳ ಸಾಧನೆಯನ್ನು ಪ್ರಶಂಸಿಸಿ ಅವರ ಆದರ್ಶವನ್ನು ಅನುಸರಿಸುವಂತೆ ವಿದ್ಯಾರ್ಥಿಗಳಲ್ಲಿ ಕೇಳಿಕೊಂಡು, ಅತಿಥಿಗಳಿಗೆ ಶುಭವನ್ನು ಹಾರೈಸಿದರು.

ಯಕ್ಷಗಾನ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ 'ದಕ್ಷಾಧ್ವರ' ಎಂಬ ಕಥಾಭಾಗದ ಯಕ್ಷಗಾನ ಕೂಟವು ತಾ. 27.3.71ರಂದು ಬನಾರಿ ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟಿತು.

ಆರಂಭದಲ್ಲಿ ಪ್ರಸಿದ್ಧ ಹಿರಿಯ ಕಲಾವಿದರಲ್ಲೊಬ್ಬರಾದ ಶ್ರೀ ಕುದುರೆ ಕೊಡ್ಲು ರಾಮಭಟ್ಟರ ನಿಧನಕ್ಕಾಗಿ ಸಂತಾಪ ಸೂಚಿಸಿ ಶ್ರದ್ಧಾಂಜಲಿಯನ್ನರ್ಪಿಸಲಾಯಿತು. ಶ್ರೀ ಕಾಂತಪ್ಪ ಮಾಸ್ತರರು ದಿವಂಗತರ ಕಲಾ ಹಿರಿಮೆಯನ್ನು ಕೊಂಡಾಡಿದರು.

ಶ್ರೀ ಕೆ. ಎ. ಭಂಡಾರಿಯವರು ಆಯೋಜಿಸಿದ ಈ ಕಾರ್ಯಕ್ರಮದಲ್ಲಿ ಹಲವು ಕಲಾವಿದರು ಭಾಗವಹಿಸಿದ್ದರು.

ಹಿಂಸಾತ್ಮಕ ದೊಂಬಿ...

ನೀವು ಅವರೊಡನೆ ಚರ್ಚಿಸಿ, ವಾದಿಸಲು ಸಾಧ್ಯವಿಲ್ಲ. ಅದು ಕೆರಳಿದೆ.
ಅದರ ಕೋಪಕ್ಕೆ ಯಾರಾದರೂ ತುತ್ತಾಗಬಹುದು
ಹಿಂಸೆಗೆ ಅಂಕೆ ಶಂಕೆಗಳೆಂಬುದೇ ಇಲ್ಲ.

ಆದರೆ ನೀವು ದೊಂಬಿಯಾಗುವುದನ್ನು ತಪ್ಪಿಸಬಹುದು....
ದೊಂಬಿಯನ್ನು ಉದ್ರೇಕಿಸುವ ವ್ಯಕ್ತಿಯನ್ನು ದೂರವಿಡಿ
ಅವನ ಮಾತಿಗೆ ಕಿವಿಗೊಡದೆ ಅವನನ್ನು ಖಂಡಿಸಿ.

ಕೋಮುವಾದ. ಪ್ರಾದೇಶಿಕತಾವಾದ, ರಾಜಕೀಯ ನಂಬುಗೆಗಳು...
ಇವಾವುದೂ ಜೀವಗಳು ಮತ್ತು ಆಸ್ತಿಪಾಸ್ತಿಯ ವಿನಾಶಕ್ಕೆ
ಸಮರ್ಥನೀಯವಾದ ಕಾರಣವಾಗುವುದಿಲ್ಲ.

ನೀವೇನು ಮಾಡಬಲ್ಲಿರಿ?

ಮೊಹಲ್ಲಿ ಸಮಿತಿಗಳನ್ನು ರಚಿಸಿಕೊಳ್ಳಿ.
ಅಪಾಯಕಾರಿ ವದಂತಿಗಳನ್ನು ಹಬ್ಬಬೇಡಿ.
ನಿಮ್ಮ ನೆರೆಯವರ ಬಗ್ಗೆ ಅರಿತುಕೊಳ್ಳಿ.
ಮಾನವ ಜನಾಂಗದ ಸಮಾನತೆಯನ್ನು
ನಿಮ್ಮ ಮಗುವಿಗೆ ತಿಳಿಸಿ ಹೇಳಿರಿ.

davp 70/600

ಪ್ರೇಮ ಪ್ರವಾಹ

(ಎರಡನೇ ಪುಟದಿಂದ)

ಕ್ಕೆ ನೆರೆದಿದ್ದ ಸ್ತ್ರೀ ಸಮೂಹವೆಲ್ಲ ತಮ್ಮನ್ನು ಸಿಟ್ಟ ದೃಷ್ಟಿಯಿಂದ ನೋಡುತ್ತಿದ್ದುದಲ್ಲದೆ ಮರೆಯಲ್ಲಿ ಏನೇನೋ ಪಿಸುಗುಟ್ಟಿಕೊಳ್ಳುವುದೂ ಕೇಳಿಸುತ್ತಿತ್ತು. ತಾನು ಪ್ರೀತಿಯಿಂದ ಕೈಹಿಡಿದ ಹುಡುಗಿಗೆ ತಾನೇ ತನ್ನ ನಲ್ಮೆಯ ಕುರುಹಾಗಿ 'ಮಮತಾ' ಎಂದು ಹೆಸರು ಬದಲಾಯಿಸಿ ತಮ್ಮ ದಾಂಪತ್ಯ ಜೀವನ ಅತ್ಯಂತ ಹರ್ಷದಾಯಕವಾಗಿ ಸಾಗಬೇಕೆಂದು ಬಯಸಿದುದೆಲ್ಲ ಬರಿಯ ಭ್ರಮೆಯಾಯಿತು. ಸಮಾಜಕ್ಕೆ ಹೊಂದಿಕೊಳ್ಳಲಾರದ ಯಾವ ವ್ಯಕ್ತಿಯೂ ಸುಖಿಯಾಗಿ ಬಾಳಲಾರನೆಂಬ ಕಟು ಸತ್ಯ ಅನುಭವಕ್ಕೆ ಬಂತು.

ನಮ್ಮ ಸಮಾಜವಾದರೋ ಎಂತಹುದು? ಅತ್ಯಂತ ಮಡಿವಂತರೆನಿಸುವ ಸಂಪ್ರದಾಯಶೀಲರೂ ಗೌಪ್ಯವಾಗಿ ಹೀನ ಕುಲದ ಹೆಣ್ಣಿನೊಂದಿಗೆ ಸಂಬಂಧ ಬೆಳೆಸಿದರೂ ಅಪರಾಧವೆನಿಸುವುದಿಲ್ಲ. ಅಂತವರೂ ಕೂಡಾ ಎಲ್ಲರಿದಿರು ಅನ್ಯ ಜಾತಿಯವರ ಸ್ಪರ್ಶವೇ ತಪ್ಪು ಎಂದು ಡಂಬಾಚಾರದಿಂದ ಬದುಕುತ್ತಾರೆ. ಆದರೆ ಮನಮೆಚ್ಚಿದವಳನ್ನು ಕೆಚ್ಚೆದೆಯಿಂದ ಕೈಹಿಡಿದು ಗೌರವಯುತವಾಗಿ ಬಾಳುವ ಧಾರ್ಷ್ಟ್ಯವನ್ನಂತೂ ಸಮಾಜ ಸಹಿಸುವುದಿಲ್ಲ. ಅದ್ದರಿಂದಲೇ ಪಡಬಾರದ ವೇದನೆಯನ್ನು ತಾವಿಬ್ಬರೂ ಅನುಭವಿಸಬೇಕಾಯಿತು.

ಈ ಎಲ್ಲ ಅಸಹನೀಯ ವ್ಯಥೆಯಿಂದ ಬಳಲುತ್ತಿದ್ದಾಗಲೇ 'ಲಾವಣ್ಯ' ಜನಿಸಿದಳು. ಆ ಮೇಲಾದರೂ ತನ್ನ ಸಂಸಾರ ಸಂತೋಷದ ಸವಿಯನ್ನು ಕಾಣಬಹುದೇನೋ ಎಂದಾಶಿಸಿದ್ದೂ ಕೂಡಾ ಫಲಿಸಲಿಲ್ಲ. ಮಗುವಿನ ಮುಗ್ಧ ನಗು, ತೊದಲು ಮಾತು ಇವ್ಯಾವುದೂ ತನ್ನ ಜೀವನವನ್ನು ಮುದಗೊಳಿಸಲಿಲ್ಲ. ಯಾಕೆ?

ಮಮತಾ ತನಗಾಗಿ ತನ್ನವರೆಲ್ಲರನ್ನೂ ತ್ಯಜಿಸಿಬಂದ ತ್ಯಾಗಮಯಿ ಹೆಣ್ಣೆಂದು ತಾನಾಕೆಯನ್ನು ಮನಃಪೂರ್ವಕವಾಗಿ ಪ್ರೀತಿಸಿದೆ. ಆಕೆಯಾದರೋ ವಿವಾಹದ ಮೊದಲ ದಿನಗಳಲ್ಲಿ ತನಗಾಗಿ ತನಳು ಎಂತಹ ಕಷ್ಟವನ್ನೂ ಕಡೆಗಣಿಸುವೆನೆಂದು ಅವಳಿಗೆ ಅತ್ಯಂತ ಪ್ರಿಯವಾದ ಮೀನು, ಮಾಂಸವನ್ನು ವರ್ಜಿಸಿದ್ದಳು. ತನಗಾದರೋ ಮೀನಿನ ವಾಸನೆ ಕೇಳಿದರೇ ಅಸಹ್ಯದಿಂದ ಮೂಗು ಮುಚ್ಚಿಕೊಳ್ಳಬೇಕಾಗುತ್ತಿತ್ತು. ಮಮತಾ ಇನ್ನೆಂದೂ ತಾನು ಅದರ ಆಸೆಯನ್ನು ಕನಸಿನಲ್ಲೂ ಮಾಡಲಾರೆನೆಂದು ಪ್ರತಿಜ್ಞೆ ಮಾಡಿದಾಗ ತನಗೆ ಬಹಳ ಆನಂದವಾಗಿತ್ತು. ಅವಳ ತ್ಯಾಗಕ್ಕಾಗಿ ಅವಳ ಮೇಲಿನ ಅಭಿಮಾನ ಹೆಚ್ಚಿತ್ತು. ಅಂತಹ ಮಮತಾ ನಾಲ್ಕೈದು ತಿಂಗಳುಗಳ ಮೇಲೆ ಕದ್ದು ಮುಚ್ಚಿ ಮಾಂಸಾಹಾರವನ್ನು ತಿನ್ನುವಳೆಂದು ಒಂದು ದಿನ ತಿಳಿದೇ ಹೋಯಿತು.

ಮಂಗಳೂರಿಗೆ ಹೋಗುವ ಕಾರ್ಯವಿದೆಯೆಂದು ಹೊರಟು ಗಂಟೆ ಗಟ್ಟಲೆ ಬಸ್ಸಿಕಾದರೂ ಸೀಟು ಸಿಗದೆ ನಿರಾಶನಾಗಿ ಮನೆತಲಪಿದಾಗ ಬಚ್ಚಲ ಮೂಲೆಯಲ್ಲಿ ಮೀನು ಕೊಯ್ಯುತ್ತಿದ್ದ ದೃಶ್ಯದಿಂದ ನಾನು ಸ್ತಂಭಿತನಾದೆ. ಚಿಕ್ಕಂದಿನಿಂದಲೂ ಮೀನು ಮಾರುವ ಹೆಂಗಸರನ್ನು ಕಂಡಾಗಲೇ ಮೂಗಿಗೆ ಕೈಹಿಡಿಯುವ ಅಭ್ಯಾಸ ಬೆಳೆದಿದ್ದ ನಾನು ಅರ್ಧಾಂಗಿಯ ಈ ಅವಸ್ಥೆಯನ್ನು ನೋಡಿದಾಗ ಏನೆನ್ನಬಹುದು? ಸಿಟ್ಟು, ಜಗಳ ತಿರಸ್ಕಾರಗಳ ಘರ್ಷಣೆ, ಪರಿಣಾಮವಾಗಿ ಹೆಚ್ಚಿನ ದಿನಗಳಲ್ಲಿ ಹೋಟೇಲೂಟ. ಮಮತಾ ಇಂತಹ ಸಣ್ಣ, ಸಣ್ಣ ವಿಷಯಗಳಿಗೆಲ್ಲ ಅಂಜುವ ಹೇಡಿಯಲ್ಲ. ಆಕೆ ಆವರೆಗೂ ಗುಟ್ಟಾಗಿ ಬೇಯಿಸುತ್ತಿದ್ದ ಮಾಂಸವಡಿಗೆ ಆ ಮೇಲೆ ಯಾವಾಗಲೂ ತಯಾರಾಗ ತೊಡಗಿತು. ನನಗಾಗಿ ಬೇರೆ ಅಡುಗೆಯನ್ನು ಮಾಡುತ್ತೇನೆ ಎಂಬುದೇ ಅವಳು ನನಗಿತ್ತ ಸಾಂತ್ವನದ ನುಡಿ.

ಈ ಎಲ್ಲ ಎಡರು ತೊಡರುಗಳೆಡೆಯಲ್ಲೂ ಲಾವಣ್ಯ ಬೆಳೆಯುತ್ತಲೇ ಬಂದಳು.

ತಂದೆ ತಾಯಿಂದಿರ ವಿಷಮ ದಾಂಪತ್ಯದ ವಿಷಗಾಳಿಯಿಂದ ಉಸಿರು ಕಟ್ಟುವಂತಿದ್ದರೂ ಆಕೆ ದೊಡ್ಡವಳಾದಳು. ಎಳೆಯ ಬಾಲಿಕೆಯ ಸ್ವಾಭಾವಿಕ ಮುಗ್ಧ ಪ್ರಶ್ನೆಗಳಿಗೆಲ್ಲ ಉತ್ತರ ಕೊಡಲು ನನ್ನ ಬುದ್ಧಿಶಕ್ತಿಯನ್ನೆಲ್ಲ ವ್ಯಯಿಸಬೇಕಾಗುತ್ತಿತ್ತು. ಎಷ್ಟೋ ಬಾರಿ ನಮ್ಮ ದಾಂಪತ್ಯದ ಬಿರುಕಿನ ಸಮಸ್ಯೆಗಳನ್ನು ಪ್ರಶ್ನಿಸಿ ಅದಕ್ಕೆ ಸಮರ್ಪಕವಾದ ಉತ್ತರ ಸಿಗದೆ ತೊಳಲಾಡಿ ಬೇಸರಗೊಂಡರೂ ಲಾವಣ್ಯ ಹೆಸರಿಗೆ ತಕ್ಕ ರೂಪಸಿಯಾಗಿ ಇಪ್ಪತ್ತರ ಯುವತಿಯಾಗಿ ಕಾಲೇಜು ಕನ್ನೆಯಾಗಿ ಕಂಗೊಳಿಸಿದಳು. ಆಗಲೇ ನಮ್ಮ ಸಣ್ಣ ಪುಟ್ಟ ಸಮಸ್ಯೆಗಳು ಬೃಹದಾಕಾರ ತಾಳಿ ಮಗಳಿಗೆ ವರ ಹುಡುಕುವ ವಿಚಾರವೇ ತನ್ನ ಮಿದುಳನ್ನು ಕೊರೆಯತೊಡಗಿತು.

ಅಂತರ್ಜಾತೀಯ ವಿವಾಹವನ್ನು ಮೆಚ್ಚಿ ಹೊಗಳಿ ಹೊನ್ನ ಶೂಲಕ್ಕೇರಿಸಿದ ವ್ಯಕ್ತಿಗಳೊಂದಿಗೆ ಈ ವಿಚಾರವನ್ನು ಪ್ರಸ್ತಾಪಿಸಿದರೆ ಅವರು ಕುಹಕ ನಗುವಿನ ಉತ್ತರ ಹೇಳಿ ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸುತ್ತಿದ್ದರು.

ನನ್ನ ಒತ್ತಾಯಕ್ಕಾಗಿ, ಪ್ರೀತಿಗಾಗಿ ತಾಯಿ ಏನೆಂದರೂ ಲಕ್ಷಿಸದೆ ಮಾಂಸ ಮುಟ್ಟದ ಲಾವಣ್ಯಳನ್ನು ಸುಧಾರಿತ ಬ್ರಾಹ್ಮಣನೊಬ್ಬನಿಗೇ ಧಾರೆಯೆರೆಯಬೇಕೆಂಬ ತೀರದ ಆಸೆ. ಹೊತ್ತ ನನ್ನ ಹೃದಯ ಬರಡಾಗಿತ್ತು. ತನ್ನ ಸಂಬಂಧಿಕರಿಗೇ ಮಗಳನ್ನು ಮದುವೆ ಮಾಡಬೇಕೆಂಬ ಮಮತಾಳ ಇಚ್ಛೆಗೆ ನಾನು ಸಮ್ಮತಿಯನ್ನೀಯದಿದ್ದುದೇ ಅವಳ ದೃಷ್ಟಿಯಲ್ಲಿ ಅಪರಾಧವಾಗಿತ್ತು. ಇದಕ್ಕಾಗಿ ಹಗಲಿರುಳು ವಾದ ಹೂಡಿ, ಜಗಳವಾಡಿ ಬೇಸರ ಬಂದಿತ್ತು. ಮಮತಾಳಿಗಾದರೋ ತನ್ನ ಬಂಧು ಬಳಗದವರೆಂದರೆ ಬಹಳ ಮೋಹ. ನನಗಾದರೋ ನನ್ನವರೆನ್ನುವವರೆಲ್ಲರೂ ತಾವಾಗಿಯೇ ದೂರವಾಗಿದ್ದಾರೆ.

ನಮ್ಮಿಬ್ಬರ ಜಗಳದಲ್ಲಿ ಕಂಗಾಲಾಗಿ ನೊಂದು ಬೇಗುದಿಗೊಳ್ಳುವ ಜೀವವೊಂದರ ಪರಿವೆಯೇ ಇಲ್ಲದೆ ನಾವಿಬ್ಬರೂ ಪರಸ್ಪರ ವಿರುದ್ಧ ದಿಕ್ಕಿನತ್ತ ಪಯಣ ಬೆಳೆಸುತ್ತಿದ್ದೇವೆ.

ಇಂದೂ ಅದರದೇ ಪುನರಾವರ್ತನೆ.

ಮೂರೇ ತಿಂಗಳುಗಳಲ್ಲಿ ಲಾವಣ್ಯಳಿಗೆ ಅನುರೂಪನಾದ ಉನ್ನತ ಧ್ಯೇಯವಾದಿಯನ್ನು ಖಂಡಿತ ಹುಡುಕಿ ತರುತ್ತೇನೆ. ಈಗ ಅವಸರ ಬೇಡ ಎಂದರೆ ಮಮತಾ ಇನ್ನೊಂದು ತಿಂಗಳೊಳಗೇ ತನ್ನ ಸಂಬಂಧಿಕನೊಬ್ಬನಿಗೆ ಮಗಳನ್ನು ಧಾರೆಯೆರೆಯಬೇಕೆಂದು ಹಟ ಹಿಡಿದಿದ್ದಾಳೆ. ಈ ಛಲದಿದಿರು ನಾನು ಮನೆಬಿಟ್ಟು ಹೋದರೂ ಅವಳಿಗೆ ವ್ಯಥೆಯಿಲ್ಲ. ನನ್ನಿಂದಾಗಿಯೇ ಅವಳ ಮನಶ್ಶಾಂತಿ ಕೆಡಡಿದೆಯಂತೆ.

ಏನೆನ್ನಲಿ ಇದಕ್ಕೆ? ಎಲ್ಲಿಗೆ ಹೋಗಲಿ? ಪ್ರಪಂಚದ ಯಾವ ಮೂಲೆಗೆ ಹೋದರೂ ಇನ್ನು ನನ್ನ ಬದುಕಿನಲ್ಲಿ ಶಾಂತಿ ಲಭಿಸಲಾರದು.

ಹೊತ್ತಿನ ಪರಿವೆಯೇ ಇಲ್ಲದೆ ಗಾಢವಾದ ಯೋಚನೆಯಲ್ಲಿ ಮುಳುಗಿದ ರಘುಪತಿಯನ್ನು ಸುತ್ತಲೂ ಪಸರಿಸಿದ ಅಂಧಕಾರ ಬಡಿದೆಬ್ಬಿಸಿತು. ಆತ ಒಮ್ಮೆಯೇ ಎದ್ದು ನಿಂತು ನಡೆಯತೊಡಗಿದ. ಕಾಲುಗಳು ಅಭ್ಯಾಸ ಬಲದಿಂದ ಅವನ ಮನೆಯತ್ತವೇ ಎಳೆದೊಯ್ದುವು. ಸಂಸಾರಬಂಧನದಲ್ಲಿ ಸಿಲುಕಿದ ತನಗೆ ಬಿಡುಗಡೆಯಾದರೂ ಎಲ್ಲಿದೆ? ಎಂದು ನಿಟ್ಟುಸಿರ್ಗರೆದು ಮನೆಸೇರಿದ

ಅವನಿಗಿಂತಲೂ ಅರ್ಧಗಂಟೆ ತಡವಾಗಿ ಮನೆಸೇರಿದ ಲಾವಣ್ಯಳ ಮೊಗ ಆಯಾಸದಿಂದ ಬಳಲಿದ್ದರೂ, ಆಕೆ ಉತ್ಸಾಹದಿಂದ ಏನನ್ನೋ ಹಾಡುತ್ತಾ ನಗುಮುಖದಿಂದ ಬಂದಿದ್ದಳು.

"ಹಸಿವಿಲ್ಲ" ಎಂದು ಕೊಠಡಿಯಲ್ಲೊರಗಿ ಕುಳಿತ ಅತನನ್ನು ಲಾವಣ್ಯ ಬಂದು ಕರೆದಾಗ ಕನಸಿನಿಂದೆಚ್ಚರಗೊಂಡಂತೆ ನೆಟ್ಟಗೆ ಕುಳಿತ.

'ಅಪ್ಪಾ....'

'ಏನಮ್ಮ?'

"ನೀವು ಬೇಸರಿಸಬಾರದು. ನಾನು ಎಷ್ಟೋ ದಿನಗಳಿಂದ ನಿಮ್ಮನ್ನೊಂದು ಮಾತು ಕೇಳ್ಬೇಕೆಂದಿದ್ದೆ.' ಲಾವಣ್ಯಳಿಗೆ ತಾಯಿಗಿಂತ ತಂದೆಯ ಮೇಲೆಯೇ ಹೆಚ್ಚಿನ ಅಕ್ಕರೆ, ಸಲಿಗೆ. ಆದ್ದರಿಂದಲೇ ಆಕೆ ತನ್ನ ಮನದಾಸೆಗಳನ್ನು ಹೇಳಿಕೊಳ್ಳುತ್ತಿದ್ದುದು ಪಿತನೊಂದಿಗೆ. 'ನಿನ್ನೊಂದಿಗೆ ಬೇಸರ ಮಾಡಿಕೊಳ್ಳುವ ಅಭ್ಯಾಸವೇ ಇಲ್ಲ ಲಾವಣ್ಯ ನೀನೇನೆಂದರೂ ಖಂಡಿತ ಒಪ್ಪಿಗೆಯೇ.' ಪ್ರೀತಿಯಿಂದ ಮಗಳ ತಲೆನೇವರಿಸುತ್ತಾ ನುಡಿದ ರಘುಪತಿ.

'ನಾನು....ನಾನು....ನಮ್ಮ ಕಾಲೇಜಿನ ರಾಬರ್ಟನನ್ನು ಪ್ರೀತಿಸುತ್ತಿದ್ದೇನೆ. ನಾವಿಬ್ಬರೂ ಮದುವೆಯಾಗಬೇಕೆಂದು ನಿರ್ಧರಿಸಿದ್ದೇವೆ.' ಮೆಲ್ಲನೆ ತಡವರಿಸುತ್ತ ಪಿಸು ನುಡಿದಳು ಲಾವಣ್ಯ.

'ಆ್ಞಂ...ಏನೆಂದೆ?'

ರಘುಪತಿ ಚೀರಿದಾಗಿ ಕಂಗಾಲಾಗಿ ಕೇಳಿದಾಗ ಮಮತಾ ಸ್ತಂಭಿತಳಾಗಿ ಹೊಸಲಿನಲ್ಲಿ ನಿಂತಿದ್ದಳು. ಲಾವಣ್ಯಳ ಮೊಗದಲ್ಲಿ ಮಾತ್ರ ಅಚಲ ನಿರ್ಧಾರದ ಸ್ಪಷ್ಟ ಛಾಯೆ ಗೋಚರಿಸುತ್ತಿತ್ತು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 200/1970 S. C. 92/66.

ಸೀರಯ್ಯ ಪೂಜಾರಿ—ಅರ್ಜಿದಾರ, ಡಿಕ್ರಿದಾರ

ಡಿ ಕಮ್ಮ ವೆಂಕಟಪ್ಪನ ಸೊಸೆ, ಬೆಳ್ತಂಗಡಿ ತಾಲ್ಲೂಕು ಮಾರೋಡಿ ಗ್ರಾಮ—ಎದುರು ಪ್ರತಿವಾದಿ

ಎದುರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಡಿಕ್ರಿದಾರ ಅರ್ಜಿದಾರನು ಮೇಲಿನ ಡಿಕ್ರಿ ಮೇಲೆ ಡಿಕ್ರಿಯನ್ನು ಕ್ರಮ ಸ್ವಾಧಿಗೆ ಟ್ರಾನ್ಸ್‌ಫರ್ ಮಾಡಬೇಕಾಗಿ ಅಪೇಕ್ಷಿಸಿ ಮಾಡಿದ ಮೇಲ್ಕಂಡ ಅರ್ಜಿಯು ತಾ. 22-3-71 ಕ್ಕೆ ಇಟ್ಟಿರುವುದರಿಂದ ಅದಕ್ಕೆ ನಿಮಗೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗಿರುತ್ದೆ.

(Sd) B. Ishwara Bhat
Advocate for Petitioner

ಬೆಳ್ತಂಗಡಿ, ತಾ. 18-2-1971.

Gram : VISHWA Tel : 29111

When at Bangalore
Stay at

HOTEL NATARAJA

Restaurant Boarding & Lodging.

107 Police Road, City Market,

BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

NAVAYUGA 11-3-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಇದು ಆದರ್ಶದ ಪ್ರತ್ಯಕ್ಷ ಪಾಠ

ಲಾಟರಿಯಲ್ಲಿ ತನಗೆ ದೊರೆತ ಹಣವನ್ನೆಲ್ಲ—5000 ರೂಬಲು (ಸುಮಾರು 40,000 ರೂಪಾಯಿ)— ಮಕ್ಕಳ ಸಂಸ್ಥೆಗೆ ಕೊಟ್ಟ ಸಾಮಾನ್ಯ ವ್ಯಕ್ತಿಯ ಸತ್ಯ ಕಥೆ ಇದು.

ಈ ಸಮಾಚಾರವನ್ನು ಎಲ್ಲರೂ ಒಮ್ಮೆಗೇ ನಂಬಲಿಲ್ಲ. ಬೀದಿಯಲ್ಲಿ ಓಡಾಡುತ್ತಿರುವಾಗಲಾಗಲೀ ಅಥವಾ ಮುಂದಿನ ಪರ್ಯಟನೆಗಾಗಿ ತನ್ನ ಲಾರಿಯನ್ನು ಸಿದ್ಧಪಡಿಸಿಕೊಳ್ಳುತ್ತಿರುವಾಗಲಾಗಲೀ ವೀಕ್ತರ್ ಬಳಿಗೆ ಯಾರಾದರೂ ಬಂದು—

'ಏನಪ್ಪಾ, ಸಮಾಚಾರ? ನನಗೆ ತಿಳಿದ ಸುದ್ದಿ ನಿಜವೆ? ನೀನು ನಿಜವಾಗಿಯೂ ಐದು ಸಾವಿರ ಕೊಟ್ಟುಬಿಟ್ಟೆಯೋ?....ಏನೋ ಒಂದೆರಡು ಸಾವಿರ ಆಗಬಹುದು, ಆದರೆ ಇಡೀ ಮೊತ್ತವನ್ನೇ ಕೊಟ್ಟದ್ದೇಕೆ?" ಎಂದು ಕೇಳತೊಡಗುತ್ತಿದ್ದರು.

ವೀಕ್ತರರ ಜೀವಿತಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಅರಿಯದವರೇ ಮುಖ್ಯತಃ ಹೀಗೆ ಕೇಳುತ್ತಿದ್ದುದು ಕಂಡುಬಂದಿತು. ಅವರಿಗೆ ವಿಶದವಾದ ಉತ್ತರವನ್ನು ಕೊಡಬೇಕಾಗಿ ಬಂತು.

ನಾವು ಈ ಕತೆಯನ್ನು ಕೊನೆಯಿಂದ ಪ್ರಾರಂಭಿಸುವೆವು. 'ಲಾರಿ ಡ್ರೈವರ್' ವೀಕ್ತರ್ ಕೋಜಿನ್ ಅವರಿಗೆ 'ಲಾಟರಿ'ಯಲ್ಲಿ 5000 ರೂಬಲ್ ಬಂತು. ಆತನು ಆ ಇಡೀ ಮೊತ್ತವನ್ನು ವೊರೊಷಿಲೊವ್‌ಗ್ರಾದಿನ ಶಿಶು ಸದನಕ್ಕೆ ಕೊಟ್ಟು ಬಿಟ್ಟರು. ಆತನ ಪತ್ನಿ, ರೊಟ್ಟಿ ಕಾರಖಾನೆಯಲ್ಲಿ ಲೆಕ್ಕ ಬರೆಯುತ್ತಿರುವ ನದೇಝ್ದ ಸ್ತೆಪಾನೊವ ಸಹ ಈ ಕೊಡುಗೆಗೆ ತಮ್ಮ ಸಂಪೂರ್ಣ ಸಮ್ಮತಿಯನ್ನು ನೀಡಿದ್ದರು.

ಈ ಅಪೂರ್ವ ಔದಾರ್ಯದ ಉದ್ದೇಶವೇನು? ಈಗ ವೀಕ್ತರ್ ಕೋಜಿನ್ನರ ಗತ ಜೀವನದ ವಿಚಾರ ಹೇಳುವುದು ಆವಶ್ಯಕ.

....ಎಷ್ಟೇ ಪ್ರಯತ್ನಪಟ್ಟರೂ, ಆತನಿಗೆ ತಮ್ಮ ತಾಯಿಯ ಮುಖದ ನೆನಪಾಗದು, ಆಕೆಯ ಶವವನ್ನೊಯ್ಯುತ್ತಿದ್ದ ಗಾಡಿಯ ನೆನಪು ಮಾತ್ರ ಇದೆ. ಆಗ ಆತನಿಗೆ ಮೂರು ನಾಲ್ಕು ವರ್ಷಗಳ ಬಾಲ್ಯದೆಶೆ, ಅದು ಯುದ್ಧ ಕಾಲ.

ತಂದೆಯ ನೆನಪು ಆತನಿಗೆ ಇದೆ. ಯುದ್ಧದಿಂದ ವಾಪಸು ಬಂದ ತಂದೆಯು ಅನಾರೋಗ್ಯದಿಂದ ತುಂಬಾ ತೊಂದರೆ ಪಟ್ಟರು. ಗಣಿಯಲ್ಲಿ ಕೆಲಸ ಮಾಡುವುದು ಆಗ ಅವರಿಗೆ ಸಾಧ್ಯವಿರಲಿಲ್ಲವಾದ ಕಾರಣ, ಕುದುರೆಲಾಯಗಳ ಮೇಲ್ವಿಚಾರಣೆಗೆ ನಿಯಮಿಸಲಾಯಿತು. ಆ ಮೇಲೆ ಆತನಿಗೆ ಕಾವಲುಗಾರರ ಕೆಲಸವನ್ನು ಗೊತ್ತುಪಡಿಸಲಾಯಿತು. 1948ರಲ್ಲಿ ಗಣಿಕಾರರು ತಮ್ಮ ಈ ಸಂಗಾತಿಯ ಪಾರ್ಥಿವ ಶರೀರಕ್ಕೆ ಅಂತಿಮ ವಿದಾಯ ಸಲ್ಲಿಸಬೇಕಾಯಿತು. ವೀಕ್ತರ್ ತನ್ನ ತಂದೆಯವರನ್ನು ಕಳೆದುಕೊಂಡಾಗ ಆತನಿಗೆ ಹತ್ತೇ ಹತ್ತು ವರ್ಷ ವಯಸ್ಸು. ತಾಯಿಯಂತೂ ಮೊದಲೇ ತೀರಿಕೊಂಡಿದ್ದರು. ಆತನನ್ನು ಸ್ಥಳೀಯ ಶಿಶು ಸದನಕ್ಕೆ ಸೇರಿಸಲಾಯಿತು.

ಆ ಕಾಲದಲ್ಲಿ ಪ್ರತಿಯೊಂದು ಸಣ್ಣ ಪಟ್ಟಣದಲ್ಲಿಯೂ ಶಿಶು ಸದನಗಳಿದ್ದುವು. ಅವುಗಳಲ್ಲೆಲ್ಲ ಅನಾಥರಾದ ಮಕ್ಕಳು ತುಂಬಿರುತ್ತಿದ್ದರು. ಅದು ಆಗಿನ ಅತ್ಯಂತ ಸಾಮಾನ್ಯ ದೃಶ್ಯವಾಗಿತ್ತು.

ಆದರೆ ಕೋಜಿನ್ನರು ಶಿಶುಸದನವನ್ನು ಎಂದಿಗೂ ಮರೆಯುವುದಿಲ್ಲ. ಅದು ಅವರಿಗೆ ಸರ್ವ ಆವಶ್ಯಕತೆಗಳನ್ನೂ ಒದಗಿಸಿತು. ಪುಸ್ತಕಗಳು, 'ಕಾಪಿ' ಪುಸ್ತಕಗಳು, ಬೆಚ್ಚನೆಯ ಉಡುಪುಗಳು, ಎಲ್ಲವೂ ದೊರೆತುವು. ಆಹಾರದ ಬಗೆಗೂ ಯಾವ ತರದ ದೂರಿಗೂ ಅವಕಾಶವೇ ಇರಲಿಲ್ಲ. ವೀಕ್ತರ್ ಶಿಶುಸದನದಲ್ಲಿ ಐದು ವರ್ಷ ಕಾಲ—ಅವರ ಅದುವರೆಗಿನ ಜೀವನದಲ್ಲಿ ಅರ್ಧ ಸಮಯ—ಇದ್ದರು. ಆ ಮೇಲೆಯೂ ರಾಜ್ಯವು ಎಳೆಯರ ಪೋಷಣೆಯ ಹೊಣೆಗಾರಿಕೆಯನ್ನು ತ್ಯಜಿಸಲಿಲ್ಲ. ವೃತ್ತಿ ತಾಂತ್ರಿಕ ಶಿಕ್ಷಣ ಶಾಲೆಯಲ್ಲಿಯೂ ಅವರನ್ನು ಶಿಶುಸದನಗಳ ಮಾಜೀ ನಿವಾಸಿಗಳ ಗುಂಪಿಗೆ ಗೊತ್ತುಪಡಿಸಿದರು. ಅಲ್ಲಿಯೂ ಅವರಿಗೆ ಉಡುಪು, ಆಹಾರ ದೊರೆತುವು. ಅವರುಗಳಿಗೆ ವೃತ್ತಿ ಶಿಕ್ಷಣವೂ ಲಭಿಸಿತು.—ಎಲ್ಲವೂ ರಾಜ್ಯದ ಖರ್ಚಿನಲ್ಲಿ. ಆತನಿಗೆ ಮೋಟಾರು ಯಂತ್ರಜೋಡಣೆಯ ವಿಶೇಷಜ್ಞತೆಯ ತರಬೇತು ದೊರೆಯಿತು.

ಮಕ್ಕಳ ಸದನದಲ್ಲಿ ಮೂಡಿದ ಸ್ವಭಾವವು ದೃಢವಾಗಿ ಬೇರೂರಿತು. ಅದು ವೀಕ್ತರ್ ಭವಿಷ್ಯತ್ತಿಗೆ ಸುಸ್ಪಷ್ಟ ಪಥ ತೋರಿಸಿತು. ಆತನ ಪಾಡು ಅದೃಷ್ಟವಶವಾಗಲಿಲ್ಲ. ನಿತ್ಯದ ತೊಂದರೆಗಳಿಗೆ ಅದು ಸಿಕ್ಕಲಿಲ್ಲ.

1955ರಲ್ಲಿ ವೃತ್ತಿ ಶಿಕ್ಷಣ ಶಾಲಾಭ್ಯಾಸ ಮುಗಿಸಿಕೊಂಡು ಆತನು ರೊವೆಂಕಿ ಮೋಟಾರು ಕಾರಖಾನೆಯಲ್ಲಿ ಕೆಲಸ ಮಾಡತೊಡಗಿದರು. ಕೂಡಲೇ ಆತನು ದುಡಿಯುವ ಯುವಜನರ ವ್ಯಾಸಂಗ ಸೌಲಭ್ಯವನ್ನು ಬಳಸಿಕೊಂಡು, ಯುದ್ಧ ಕಾಲದಲ್ಲಿ ತಮ್ಮ ವ್ಯಾಸಂಗಕ್ಕಾದ ಹಾನಿಯನ್ನು ತುಂಬಿಸಿಕೊಳ್ಳತೊಡಗಿದರು. ಆತನ ವ್ಯಾಸಂಗವು ಕೆಲಸಕ್ಕೇನೂ ಬಾಧಕವಾಗಲಿಲ್ಲ. ಆತನು ಒಳ್ಳೆಯ 'ಮೆಕ್ಯಾನಿಕ್' ಆದರು, ಮೋಟರು ಚಾಲಕರಾದರು, ದಳನಾಯಕರಾಗಿ ನಿಯುಕ್ತರಾದರು. ಮಾಧ್ಯಮಿಕ ಶಾಲೆಯ ಎಂಟನೆಯ ತರಗತಿಯ ಶಿಕ್ಷಣ ಮುಗಿದ ತರುವಾಯ ಆತನು 'ಡ್ರೈವರ್' ವೃತ್ತಿಗೆ ಸೇರಲು ನಿರ್ಧರಿಸಿದರು. ಆಮೇಲೆ ಆತನು ತಮ್ಮ ಕಾರ್ಯವನ್ನು ನಿಲ್ಲಿಸದೆಯೇ ಕದೀಯೆವ್ ಗಣಿ ವಿದ್ಯಾಲಯದಲ್ಲಿ ಮೋಟರು ಮತ್ತು ಹೆದ್ದಾರಿ ಶಾಖೆಯಲ್ಲಿ ಅಭ್ಯಸಿಸ ಲಾರಂಭಿಸಿದರು. ಕಳೆದ ವರ್ಷ ಆತನಿಗೆ 'ಟೆಕ್ನಿಷಿಯನ್' ಸನ್ನದು ದೊರೆಯಿತು.

ವೀಕ್ತರ್ ಕೋಜಿನ್ನರ ಜೀವನ ಪಥವು ಸರಿಯಾದುದು. ಅದೊಂದು ಕಾರ್ಯಪಥ. ಲಕ್ಷ್ಯಸಾಧನೆಗಾಗಿ ಪಣತೊಟ್ಟು, ಸತತ ಪರಿಶ್ರಮದಿಂದ, ಉನ್ನತ ನಾಗರಿಕ ಕರ್ತವ್ಯ ನಿಷ್ಠೆಯಿಂದ, ಆತನು ತಮ್ಮ ಬೇರೆ ಸಂಗಾತಿಗಳಿಗೂ ಇದೇ ಗುಣಗಳನ್ನು ಕಲಿಸುತ್ತಾರೆ. ಎಲ್ಲಕ್ಕಿಂತ ಹೆಚ್ಚು ಮುಖ್ಯ ವಿಷಯವೇನೆಂದರೆ, ವಿವೇಚನೆಗೆ ಹಣವು ಬಾಧಕವಾಗಕೂಡದೆಂದೂ, ಹಣದಾಸೆಗೆ ಮಾರ್ಗವಾಗ ಕೂಡದೆಂದೂ ಆತನು ಯುವಜನರಿಗೆ ಬೋಧಿಸುತ್ತಾರೆ. ಹೃತ್ಪೂರ್ವಕವಾದ ಔದಾರ್ಯ, ದಯಾರ್ದ್ರತೆ, ಸಾಮಾಜಿಕ ಕರ್ತವ್ಯ ಪ್ರಜ್ಞೆ—ಇವು ಸದಾ ಸೋವಿಯೆತ್ ಜನತೆಯ ಸಹಜ ಲಕ್ಷಣಗಳು. ಕೋಜಿನ್ನರು ಹೆಚ್ಚು ಮಾತನಾಡದಿದ್ದರೂ, ಆತನ ಕೃತಿಗಳು ಈ ಲಕ್ಷಣಗಳನ್ನು ವ್ಯಕ್ತಪಡಿಸುತ್ತವೆ. ಸ್ವತಂತ್ರ ಜೀವನ ರಂಗವನ್ನು ಪ್ರವೇಶಿಸಿದಂದಿನಿಂದಲೂ ಆತನು ಸಲಹೆಯಿಂದಲೂ, ಕೃತಿಗಳಿಂದಲೂ, ಆವಶ್ಯಕ ಸಂದರ್ಭಗಳಲ್ಲಿ ಹಣದ ಮೂಲಕವಾಗಿಯೂ ಜನರಿಗೆ ಸಹಾಯ ಮಾಡಲು ಸರ್ವದಾ ಪ್ರಯತ್ನಿಸುತ್ತ ಬಂದಿದ್ದಾರೆ.

ಮಕ್ಕಳ ಬಗೆಗಂತೂ ಆತನಿಗೆ ವಿಶೇಷ ಮಮತೆ ಇದೆ. ತಾಯ್ತಂದೆಯರ ಪೋಷಣೆಯ ಸಹಜಾವಕಾಶವಿರುವವರಿಗೂ ವಿಶೇಷತಃ ದುರ್ಭಾಗ್ಯಕ್ಕೆ ಗುರಿಯಾದ ಮಕ್ಕಳ ವಿಷಯದಲ್ಲೂ ಅವರಿಗೆ ವಿಶೇಷ ಆದರವಿದೆ. ಈ ಆದರದ ಉಗಮಸ್ಥಾನದ ಪರಿಚಯ ನಮಗಿದೆ. ಅದರ ಉದಾಹರಣೆಯೊಂದನ್ನಿಲ್ಲಿ ಕೊಡುತ್ತೇವೆ.

ರೊವೆಂಕಿಯಲ್ಲಿ ಅಶಕ್ತರಾದ ಮಕ್ಕಳಿಗಾಗಿ ಒಂದು ಸದನವಿದೆ. ಅಲ್ಲಿ ಅವರು ತಮ್ಮ ಸಂಗಾತಿಗಳ ಜನ್ಮ ದಿನಾಚರಣೆಗಾಗಿ (ಜನ್ಮ ಮಾಸಾಚರಣೆಗಾಗಿ ಎನ್ನುವುದು ಹೆಚ್ಚು ಸರಿಯಾದೀತು) ಅಲ್ಲಿನ 'ಜ್ವೆಜ್ದೋಚ್ಕ" ಕೂಟದಲ್ಲಿ ಸಮಾವೇಶಗೊಂಡಿದ್ದಾಗ, ವೀಕ್ತರ್ ದಂಪತಿಗಳೂ ಅಲ್ಲಿದ್ದರು. ಅಲ್ಲಿಗೆ ಅವರು ಬರಿಗೈಯಲ್ಲಿ ಬಂದಿರಲಿಲ್ಲ. ಗಂಡುಮಕ್ಕಳಿಗೆ ಬೈಸಿಕಲ್ಲುಗಳನ್ನೂ ಹೆಣ್ಣು ಮಕ್ಕಳಿಗೆ ಅಂದವಾದ ಉಡುಪುಗಳನ್ನೂ ಅವರು ತಂದಿದ್ದರು.

ಇಲ್ಲಿ 'ಕೊಡುಗೆ' ಶಬ್ದವು ಸರಿಯಾಗದು. ಇಲ್ಲ, ಕೋಜಿನ್ನರು ಆಶ್ರಯದಾತರಲ್ಲ. ಹೆಸರಿಗಾಗಿ ದಾನಮಾಡುವವರೂ ಅಲ್ಲ. ಅವರಿಗೆ ಮಕ್ಕಳ ಸಂತೋಷದಿಂದಲೇ ಆತ್ಮ ಸಂತೋಷ. 'ಬೇರೊಬ್ಬರ' ಮಕ್ಕಳ ಭವಿಷ್ಯದಲ್ಲಿ ಅವರಿಗಿರುವ ಆಸಕ್ತಿಯು, ತಮ್ಮ ಸ್ವಂತದ ಅದೃಷ್ಟ ಸಾಧನೆಗಾಗಿ ಅವರು ನಾಡಿನ ಜನತೆಗೆ ವ್ಯಕ್ತಪಡಿಸುವ ಕೃತಜ್ಞತೆಯ ಸ್ವಾಭಾವಿಕ ಪ್ರಕಟರೂಪವಾಗಿದೆ.

ಉದಾತ್ತತೆಯನ್ನು ಅಳೆಯಲಾಗದು. ಆದರ ಸೂಚ್ಯಂಕಗಳೇ ಬೇರೆ. ವರ್ತಮಾನ ಪತ್ರಿಕೆಯೊಂದರಲ್ಲಿ ತಾವು ಓದಿದ್ದ ಸುದ್ದಿಯೊಂದನ್ನು ವೀಕ್ತರ್ ತಮ್ಮ ಅಭಿಪ್ರಾಯದೊಂದಿಗೆ ಹೀಗೆ ವ್ಯಕ್ತಪಡಿಸಿದರು: ವಯೋವೃದ್ಧರ ವಸತಿ ಗೃಹವೊಂದರ ನಿವಾಸಿಗಳು ಪ್ರತಿಯೊಬ್ಬರೂ ತಮ್ಮ ವಿಶ್ರಾಂತಿ ವೇತನದಿಂದ ಒಂದೊಂದು ರೂಬಲ್ಲನ್ನು ಶಾಂತಿನಿಧಿಗೆ ಪ್ರತಿತಿಂಗಳೂ ತಾವಾಗಿಯೇ ಸಲ್ಲಿಸುತ್ತಿದ್ದರು. ಒಂದೊಂದು ರೂಬಲ್ ಮಾತ್ರವೇ ಆದರೂ, ಅದು ಅನೇಕ "ದುಂಡು" ಮೊತ್ತಗಳಿಗಿಂತಲೂ ಹೆಚ್ಚು ಗುರುತರವಾದುದೆಂದು ಅವರು ನುಡಿದರು.

ಲಾಟರಿಯಲ್ಲಿ ಗೆದ್ದ ಹಣದ ಮೊತ್ತವನ್ನು ಯಾರೂ ಹೆಚ್ಚಿಸಲಾರರು. ಅದು ಎಷ್ಟಾದರೂ ಅನಿರೀಕ್ಷಿತವಾದ ಲಾಭ. ಆದರೆ ಕೋಜಿನ್ ಪರಿವಾರದ ನಿರ್ಧಾರವು ಅಂತಹುದಲ್ಲ. ಅದು ಅವರ ಸ್ವಭಾವವನ್ನೂ, ಸಹಾನುಭೂತಿಯನ್ನೂ ಸೂಚಿಸುತ್ತದೆ. ಅದು ಮಾನವನ ಪ್ರಧಾನ ಸಂಪನ್ನತೆಯ ನಿದರ್ಶನ—ಆತನ ಹೃದಯದ ಔದಾರ್ಯದ ನಿದರ್ಶನ.

—ಬೆಕೇತೊವ್

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

Edited, Printed & Published by K. H. Shetty at the Navayuga Press, Udipi. S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 27

NAVAYUGA

18—3—1971

ಚಾರು ಚಯನ

ಶ್ರೀ ರಾಮರಿಗೆ ಭಾರಿ ಅಸಮಾಧಾನ

ಇಂಡಿಕೇಟ್ ಅಧ್ಯಕ್ಷ ಜಗಜ್ಜೀವನ ರಾಮರು ಅದೇನೋ ಘನೋದ್ದೇಶವನ್ನು ಇಟ್ಟುಕೊಂಡೇ ಶ್ರೀಮತಿ ಗಾಂಧಿ ಸೆರಗಲ್ಲಿ ಆಶ್ರಯ ಪಡೆದಿದ್ದಾರೆ.

ತನ್ನನ್ನು ನಂಬಿದ ಶ್ರೀರಾಮರನ್ನು ಆಕೆ ತುಂಬ ಎತ್ತರಕ್ಕೆ ಎತ್ತರಿಸಿದ್ದಾರೆ. ರಾಷ್ಟ್ರಪತಿ ಹುದ್ದರಿಯಾಗಿ ಆಕೆ ಗಡಿಬಿಡಿಸಿವಾಗಲೇ ನೆಲದಿಂದ ಮೂರಡಿ ಮೇಲೇರಿದರು ಶ್ರೀ ರಾಮರು.

ಪ್ರತಿಗಾಮಿಗಳ ಕೈವಾಡದಿಂದ ಶ್ರೀಮತಿ ಗಾಂಧಿಯವರ ಪ್ರಗತಿ ಭಂಗವಾಯ್ತು.

ಪಕ್ಷಭೇದನದಲ್ಲಿ ತೊಡಗಿದ ಶ್ರೀಮತಿಗೆ ಶ್ರೀ ರಾಮರು ಬೆಂಬಲ ನೀಡಲೇಬೇಕು. ತನ್ನ ಹುದ್ದರಿತನವನ್ನು ಕಿವಿಗೆ ಹಾಕಿಕೊಳ್ಳದವರು ಪ್ರತಿಗಾಮಿಗಳೇ ತಾನೇ?

ಅಂದಿನಿಂದಲೂ ಹೆಜ್ಜೆಹೆಜ್ಜೆಗೆ ಶ್ರೀಮತಿ ಅವರನ್ನು ಎತ್ತುತ್ತಲೇ ಬಂದಿದ್ದಾರೆ. ಭೇದನ ಕಲಾಭ್ಯಾಸಾವಧಿಯಲ್ಲಿ ಶ್ರೀರಾಮರೇ ಆಕೆಗೆ ಆಪ್ತ ಸಲಹೆಗಾರ.

ಮಹಾರಾಜನ ಕ್ಷೌರಿಕನಿಗೆ ಮಹಾರಾಜನಿಗಿಂತಲೂ ಮಹತ್ವದ ಸ್ಥಾನ ಸಲ್ಲುತ್ತದೆ.

ಶ್ರೀಮತಿ ಗಾಂಧಿ ಶ್ರೀರಾಮರನ್ನು ಹೇಗೆ ಉದ್ಧರಿಸಿದರು?

ಹತ್ತು ವರ್ಷದ ಆದಾಯ ತೆರಿಗೆ ನೀಡದ ಅವರ ಅಪರಾಧವನ್ನು ಮರವೆಯ ಮುಖವಾಡ ಹೊದಿಸಿ ಮರೆಸಿದರು.

ಹರಿಜನ ನಾಯಕ (ಈ ನಾಯಕ ಅವಿಚ್ಛಿನ್ನವಾಗಿ ಅಧಿಕಾರಕ್ಕೆ ಅಂಟಿಕೊಂಡೇ ಬಂದಿದ್ದಾನೆ)ನು ರಾಷ್ಟ್ರಪತಿಯಾಗದಿದ್ದರೂ ತನ್ನ ಇಂಡಿಕೇಟಿನ ಅಧ್ಯಕ್ಷನಾಗುವ ದಯೆದೋರಿದರು.

ಸಾಮಾನ್ಯವಾಗಿ ಒಬ್ಬನು ಎರಡು ಪದವಿಗಳಲ್ಲಿ ಮುಂದರಿಯಬಾರದು ಎಂಬ ನಡಾವಳಿಯಿದ್ದರೂ ಶ್ರೀರಾಮರು ತನ್ನ ಮಂತ್ರಿಪದ ಬಿಡಬೇಕೆಂದು ಬಂದ ಯುವ ತುರುಷ್ಕರ ಆಗ್ರಹವನ್ನು ಕೆಳಗಿವಿ ಮಾಡಿ ಕೇಳಿದರು.

ಆಹಾರ (?) ಮಂತ್ರಿಯಾಗಿದ್ದ ಶ್ರೀ ರಾಮರನ್ನು (?) ಮಂತ್ರಿಯಾಗಿ ಮಾಡಿ ಅವರ ಸ್ಥಾನಮಾನವೆತ್ತರಿಸಿದರು.

ಒಂದೇ ಎರಡೆ? ನೂರು ನೂರು.

ಶ್ರೀಮತಿ ಗಾಂಧಿ ಯಾರನ್ನಾದರೂ ಒಲಿಸ ಹೊರಟಿದ್ದಾರೆಂದರೆ, ಅವರನ್ನು ಹೂಳಲು ಹೊಂಡ ತೋಡಿಟ್ಟಿದ್ದಾರೆಂದೇ ಅರ್ಥ.

ಆಕೆ ತೋಡಿದ ಹೊಂಡಕ್ಕೆ ನಿಷ್ಠುರವಾದಿ ಮುರಾರ್ಜಿ ದೇಸಾಯಿ ಬೀಳುವುದು ಆಶ್ಚರ್ಯವಲ್ಲ; ತಂತ್ರವಾದಿ ಕಾಮರಾಜರೇ ವಂಚಿತರಾದ ಮೇಲೆ, ಶ್ರೀ ರಾಮರದೇನು ನಡೆಯುತ್ತದೆ?

ಶ್ರೀ ರಾಮರು ಲೋಕಸಭೆಗೆ ಸ್ಪರ್ಧಿಸಿದ ಕ್ಷೇತ್ರದಲ್ಲಿ ಶ್ರೀಮತಿ ಗಾಂಧಿ ಅವರಿಗೆ ವಿರುದ್ಧ ಪ್ರಚಾರ ಮಾಡಿಸಿದರಂತೆ.

ಶ್ರೀ ರಾಮರು ಗೆಲ್ಲಬಾರದೆಂದವರ ಮಹದಾಸೆಯಂತೆ. ಗೆದ್ದರೆ, ರಾಮು ಚವನರ ನಡುವೆ ಹೊಂದಾಣಿಕೆ ಮಾಡುವುದೇ ತ್ರಾಸವಂತೆ.

ಶ್ರೀ ರಾಮರನ್ನು ಉಪಪ್ರಧಾನಿಯಾಗಿ ಮಾಡುವ ಆಲೋಚನೆಯನ್ನು ಶ್ರೀಮತಿ ಮಾಡಿದ್ದುಂಟು ಆಗ ಶ್ರೀ ಚವನರೇ ಅಡ್ಡ ಬಂದರು. ಇಬ್ಬರು ಉಪ ಪ್ರಧಾನರನ್ನು ಮಾಡುವ ಸೂಚನೆಯೂ ಇತ್ತು. ಆದರೆ, ತನ್ನ ಏಕಸೂತ್ರಾಧಿಕಾರಕ್ಕೆ ಭಂಗಬರಬಾರದೆಂದು ಅದನ್ನು ಬಿಟ್ಟು ಬಿಟ್ಟರು.

ಶ್ರೀಮತಿ ಗಾಂಧಿ ಕಮ್ಯುನಿಸ್ಟರನ್ನೇ ನೆಚ್ಚುವುದಾದರೆ, ತಾನು ನಾಮ್‌ಕೇ ವಾಸ್ತೆ ಅಧ್ಯಕ್ಷನಾಗಿರುವುದಿಲ್ಲ ಎಂದರಂತೆ ಅವರು.

ಅವರ ಉದ್ಗಾರಗಳನ್ನು ಬಿಕೆಡಿಯ ಚರಣಸಿಂಗರೂ ಇಂಡಿಕೇಟಿನ ನಿಜಲಿಂಗಪ್ಪನವರೂ ಸ್ವಾಗತಿಸಿದ್ದಾರೆ.

ಶ್ರೀಮತಿ ಗಾಂಧಿ ಸರಕಾರ ರಚಿಸಲು ಶಕ್ತರಾದರೆ, ಆಕೆಗೆ ಶ್ರೀರಾಮರು ಪ್ರತಿಸ್ಪರ್ಧಿಯಲ್ಲ. ಏಕೆಂದರೆ, ಇಂಡಿಕೇಟು ಇಂದಿರಾ ಸುತ್ತ ಸೇರಿದ ಗುಂಪು.

ಅದರೆ, ಅವರ ನಂತರದ ಮೊದಲ ಸ್ಥಾನ—ಉಪ ಪ್ರಧಾನಿ—ಶ್ರೀ ರಾಮರಿಗೇ ದೊರೆಯಬೇಕು. ದೊರೆಯದೆ ಹೋದರೆ, ಅವರು ಸುಮ್ಮನುಳಿಯುವುದಿಲ್ಲ.

ಕಾಲು ಶತಮಾನ ಕಾಲ ನಿರಂತರ ಮಂತ್ರಿಯಾಗಿದ್ದವರು ಈ ಸ್ಥಾನಕ್ಕೂ ಅನರ್ಹರಾಗುವುದು ಹೇಗೆ?

ತನ್ನ ಮತ್ತು ಇಂದಿರಾ ನಡುವೆ ಭಿನ್ನಾಭಿಪ್ರಾಯವಿಲ್ಲವೆನ್ನುತ್ತಾರೆ. (ನಾಯಕತ್ವದ ಬಗ್ಗೆ) ಅವರು ಆದರೆ ತನ್ನನ್ನು ಉರುಳಿಸಲೆತ್ನಿಸಿದ ಶ್ರೀಮತಿಯವರ ಮೇಲೆ ಅವರು ಒಳಗಿಂದೊಳಗೇ ಮಸಲತ್ತು ನಡೆಸದಿರುವುದಿಲ್ಲ.

ತನ್ನೆಲ್ಲ ಭೇದಗಳನ್ನು ಮರೆತು ಸಿಂಡಿಕೇಟು ಅವರಿಗೆ ಬೆಂಬಲನೀಡುವುದು ಎಂಬ ನಿಜಲಿಂಗಪ್ಪನವರ ಮಾತು ಅರ್ಥಪೂರ್ಣ.

ಶ್ರೀ ರಾಮರ ಹೋಳಿಗೆ ತುಪ್ಪಕ್ಕೆ ಬೀಳುವಂತಹ ಸನ್ನಿವೇಶವೀಗ ಏರ್ಪಟ್ಟೀತೆ? ಅವರು ತುಸು ಕೈಕೊಡಹಿದರೆ ಸಾಕು; ಅದು ಜಾರಿ ತಪ್ಪದ ಕಡಾಯಿಗೇ ಬೀಳುತ್ತದೆಯೆ?

ಅದರೆ, ಕಡಾಯಿಯಲ್ಲಿರುವುದೇನೆಂಬುದನ್ನು ಅವರು ಮೊದಲು ಯೋಚಿಸ ತೊಡಗಿದ್ದಾರೆ. ಅದು ತುಪ್ಪವೆಂದು ಖಾತ್ರಿಯಾದೊಡನೆಯೇ ತನ್ನ ನಾಟಕದ ಗಂಟೆ ಬಾರಿಸುತ್ತಾರೆ. ಚುನಾವಣಾ ನಂತರದ ನಾಟಕ ಆರಂಭವಾಗುತ್ತದೆ.

ಈಗ ಇರುವ ಪ್ರಶ್ನೆ—ಈ ನಾಟಕದ ಸೂತ್ರಧಾರರಾಗಲು ಶ್ರೀ ರಾಮರೇ ಬಯಸುತ್ತಾರೆಯೋ. ಆ ಪದವನ್ನು ಬೇರೆಯಾರಾದರೂ ಅಪಹರಿಸುತ್ತಾರೆಯೆ?

ಸುಖಕರ ರೈಲು ಪ್ರಯಾಣ

ನಮ್ಮ ರೈಲುಗಳಲ್ಲಿ ಪ್ರತಿದಿನ ಅರವತ್ತೆರಡು ಲಕ್ಷ ಮಂದಿ ಪ್ರಯಾಣ ಮಾಡುತ್ತಾರೆ. ಇವರಲ್ಲಿ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರು ರೈಲುಗಳ ಮೂರನೇ ದರ್ಜೆಯಲ್ಲಿ ಪ್ರಯಾಣ ಮಾಡುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಮೂರನೇ ದರ್ಜೆ ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯಗಳು ಇರಲಿಲ್ಲ. ಪ್ರಯಾಣಕ್ಕಾಗಿ ಸ್ಥಾನಗಳನ್ನು ಕಾದಿರಿಸುವುದು, ರೈಲ್ವೆ ಬೋಗಿಗಳಲ್ಲಿ ವಾತಾಯನ ವ್ಯವಸ್ಥೆ, ರಾತ್ರಿ ಪ್ರಯಾಣಿಕರಿಗೆ ಶಯನಸೌಕರ್ಯ, ಊಟ ಉಪಹಾರಗಳ ಸೌಲಭ್ಯಗಳು ಇರಲಿಲ್ಲ.

ಸ್ವಾತಂತ್ರ್ಯಾನಂತರ ರೈಲಿನ ಮೂರನೇ ದರ್ಜೆ ಪ್ರಯಾಣಿಕರಿಗೆ ಸೌಲಭ್ಯಗಳು ಗಣನೀಯ ಪ್ರಮಾಣದಲ್ಲಿ ಒದಗಿಸಲಾಗಿದೆ. 1954ರಲ್ಲಿ ಪ್ರಥಮಬಾರಿಗೆ ಮೂರನೇ ದರ್ಜೆಬೋಗಿಗಳಲ್ಲಿ ಸ್ಲೀಪರ್ ಸೌಲಭ್ಯವನ್ನು ಒದಗಿಸಲಾಯಿತು. ರಾತ್ರಿಪೂರ್ತಿಯಾಗಿ ಓಡುವ ಎಲ್ಲಾ ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳಲ್ಲಿ ಈ ಸೌಲಭ್ಯವನ್ನು ಒದಗಿಸಲಾಗಿದೆ. ಕೆಲವು ಪ್ಯಾಸೆಂಜರ್ ರೈಲುಗಳಲ್ಲಿಯೂ ಈ ವ್ಯವಸ್ಥೆ ಇದೆ. ಈ ಸ್ಲೀಪರ್ ಕೋಚುಗಳನ್ನು ಸಾಧ್ಯವಿದ್ದಷ್ಟು ಹೆಚ್ಚಿಸಲು ಉದ್ದೇಶಿಸಲಾಗಿದೆ. ಸದ್ಯದಲ್ಲಿ ಭಾರತದಲ್ಲಿ 1,900 ಶಯನ ಸೌಕರ್ಯ ಇರುವ ಕೋಚುಗಳಿವೆ. ಇವುಗಳಲ್ಲಿ 1400 ಬ್ರಾಡ್‌ಗೇಜ್ ಕೋಚುಗಳು ಮತ್ತು 500 ಮೀಟರ್‌ಗೇಜ್ ಕೋಚುಗಳಿವೆ. ಇನ್ನು ಕೆಲವು ದಿನಗಳಲ್ಲಿ 330 ಹೆಚ್ಚಿನ ಶಯನಸೌಕರ್ಯವಿರುವ ಕೋಚುಗಳನ್ನು ರೈಲುಗಳಿಗೆ ಒದಗಿಸಲಾಗುವುದು. ಪ್ರಯಾಣಿಕರಿಗೆ ರೈಲುಗಳು ಬರುವ ಮತ್ತು ಹೊರಡುವ ವೇಳೆಯನ್ನು ತಿಳಿಸಲು ಅನುಕೂಲವಾಗುವಂತೆ ಕೆಲವು ಮುಖ್ಯ ರೈಲ್ವೆ ನಿಲ್ದಾಣಗಳಲ್ಲಿ ಧ್ವನಿವರ್ಧಕಗಳ ವ್ಯವಸ್ಥೆಯನ್ನೂ ಏರ್ಪಡಿಸಲಾಗಿದೆ. ರೈಲುಗಳಲ್ಲಿ ಟಿಕೆಟ್ ಇಲ್ಲದ ಪ್ರಯಾಣಿಕರನ್ನು ತಡೆಯಲು ಮತ್ತು ಪ್ರಯಾಣಿಕರಿಗೆ ಅಗತ್ಯವಾದ ಸೌಲಭ್ಯಗಳನ್ನು ನೀಡುವ ಸಲುವಾಗಿ ಮೂರನೇದರ್ಜೆ ಬೋಗಿಗಳಲ್ಲಿ ರೈಲ್ವೆ ಸಿಬ್ಬಂದಿಯನ್ನು ನೇಮಿಸಲಾಗಿದೆ. ದೇಶದಲ್ಲಿ ರೈಲ್ವೆ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಅಗತ್ಯವಾಗಿ ಬೇಕಾಗುವ ವಿಶ್ರಾಂತಿ ಕೊಠಡಿಗಳು, ಕುಡಿಯುವ ನೀರು ಮತ್ತಿತರ ಸೌಲಭ್ಯಗಳನ್ನು ಒದಗಿಸಲಾಗಿದೆ. ಮೂರನೆದರ್ಜೆ ಸ್ಲೀಪರ್ ಕೋಚುಗಳಲ್ಲಿ ತಣ್ಣನೆಯ ನೀರನ್ನು ಪ್ರಯಾಣಿಕರಿಗೆ ನೀಡಲಾಗುವುದು. ಈ ಮೇಲಿನ ಎಲ್ಲಾ ಸೌಲಭ್ಯಗಳಿಗಾಗಿ ಕೇಂದ್ರ ಸರ್ಕಾರದವರು ಪ್ರತಿವರ್ಷ ನಾಲ್ಕು ಕೋಟಿ ರೂ.ಗಳನ್ನು ವೆಚ್ಚಮಾಡುತ್ತಿದ್ದಾರೆ.

ಕರಾಳ ನದಿ

ಈ ಮಧ್ಯಾಹ್ನದವರೆಗೂ ನಾನು ಅತ್ಯಂತ ಗೆಲುವಿನಿಂದಲೇ ಇದ್ದೆ. ಈ ದಿನದ ಸಂಜೆಯವರೆಗೆ, ಈ ಘಳಿಗೆಯವರೆಗೆ, ಅಸಂಖ್ಯಾತ ಟೆಲಿವಿಷನ್ ಸೆಟ್ಟುಗಳು ತುಂಬಿಕೊಂಡಿದ್ದ ಅಂಗಡಿಯ ಗಾಜಿನ ಬಳಿಯಲ್ಲಿ ಒಂದಿಷ್ಟು ನಿಂತು ನೋಡುವವರೆಗೂ.... ಗಾಜಿನೊಳಗಿಂದ ದೃಷ್ಟಿಯನ್ನು ಭೇದಿಸಿ ಅವುಗಳನ್ನೇ ನೋಡುತ್ತಿದ್ದೆ. ಜಾಗತಿಕ ಘಟನೆಗಳ ಬಗ್ಗೆ ವ್ಯಾಖ್ಯಾನಕಾರನೊಬ್ಬ ಮಾತನಾಡುತ್ತಿದ್ದುದನ್ನು ತೋರಿಸುತ್ತಿದ್ದ ತೆರೆಯ, ಅಲ್ಲಿ ಮೇಲುಗಡೆಯಲ್ಲಿದ್ದ ಆ ಭಾರೀ ಸೆಟ್ಟನ್ನೇ ಕೊಳ್ಳಬೇಕೆಂದು ಪುಟ್ಟ ಹುಡುಗನೊಬ್ಬ ಅಪ್ಪನನ್ನು ಅಂಗಲಾಚಿ ಕೇಳುತ್ತಿದ್ದ.

ನಾನು ತಿರುಗಿಕೊಂಡಿರಬಹುದಿತ್ತು, ಬೀದಿಯನ್ನು ದಾಟಿಕೊಂಡು ಹೋಗಿರಬಹುದಿತ್ತು, ಹೋಗಿ ಆಸ್ಪತ್ರೆಯ ಸ್ವಾಗತ ಕೋಣೆಯನ್ನು ಪ್ರವೇಶಿಸಿ ಅಂದ್ರೀಯಾಸ್ ವ್ಯಾಲೇತಿಸ್ ಯಾವ ವಾರ್ಡಿನಲ್ಲಿರುವುದು ಎಂದು ಕೇಳಬಹುದಿತ್ತು. ನಿನ್ನೆಯಷ್ಟೇ ಅವನನ್ನು ಕರೆತರಲಾಗಿದೆ.... ನ್ಯೂಮೋನಿಯ....

ಆದರೆ ನಾನು ಇಲ್ಲೇ ನಿಂತಿದ್ದೇನೆ. ಯಾರೋ ನನ್ನ ಬೆನ್ನ ಹಿಂದೆ ನಿಂತುಕೊಂಡಿರುವಂತೆ, ಅದರಿಂದಾಗಿ ಹೆದರಿಕೊಂಡವರಂತೆ ಶೋ ವಿಂಡೋದಿಂದ ಸ್ವಲ್ಪ ದೂರದಲ್ಲಿ ನಿಂತುಕೊಂಡಿದ್ದೇನೆ. ನಾನು ತಿರುಗಿದರೆ ಮತ್ತು ನನ್ನ ಕಣ್ಣುಗಳು ಅವನನ್ನು ನೋಡಿದರೆ....ಆಗ ನನ್ನಲ್ಲಿ ಬಲ ಉಳಿದೀತೆ, ನನಗೆ ಗೊತ್ತಿಲ್ಲ....

ಹೇಗೂ ಅರ್ಧದಷ್ಟು ದಾರಿ, ಅಷ್ಟೇಕೆ ಅದಕ್ಕೂ ಹೆಚ್ಚಿಗೇನೆ ಬಂದಿದ್ದೇನೆ.

o o o

ಮನೆಗೆ ಬಂದು ಹೇಳಿದೆ—

'ಅಮ್ಮ, ನನಗೆ ಹಸಿದ ತೋಳನಷ್ಟು ಹಸಿವಾಗಿದೆ.'

'ಫೆಲಿಕ್ಸ್ ಫೋನ್ ಮಾಡಿದ್ದ'

ಆಕೆಗೆ ಸಂತೋಷವಾಗಿತ್ತು, ತರುಣ ಡಾಕ್ಟರನೊಡನೆ ನನ್ನ ಸ್ನೇಹವು ವಿವಾಹದ ಕಡೆಗೆ—ಹತ್ತಿರಗೊಳಿಸುತ್ತಿದೆಯೆಂದು.

'ಸಿನಿಮಕ್ಕೆ ಹೋಗುವೆಯ?'

"ಹೌದು, ಆತ 'ಮಿಂಡಾನಾನ್'ಗೆ ಟಿಕೆಟ್ಟು ರಿಸರ್ವ್ ಮಾಡಿಸಿಟ್ಟಿದ್ದರೆ....'

"ಸರಿಯಾಗಿ ಆರು ಗಂಟೆಗೆ ಬರುತ್ತೇನೆಂದು ಹೇಳಿದ್ದಾನೆ. ಕಾಲುಗಂಟೆಯಲ್ಲಿ ...."

ಮೃದುಸ್ವಭಾವದ ಕರುಣಾಮಯಿಯಾದ ನನ್ನ ತಾಯಿ ಅಡುಗೆ ಮನೆಗೆ ನುಸುಳಿಕೊಂಡಳು. ದುಡಿಮೆಯಿಂದ ಹಿಂತಿರುಗಿದೊಡನೆ ಮಗಳನ್ನು ಉಪಚರಿಸಲು ಆಕೆ ಸದಾ ಸಿದ್ಧ.

ಸೋಫದ ಮೇಲೆ ಆರಾಮವಾಗಿ ಒರಗಿಕೊಂಡು ಕೈಚೀಲದಿಂದ 'ಸಂಜೆ ವೃತ್ತಾಂತ' ಪತ್ರಿಕೆಯನ್ನು ಕೈಗೆತ್ತಿಕೊಂಡೆ. ಕಳೆದ ಎರಡು ದಿನಗಳಿಂದ, ಸಂಪೂರ್ಣವಾಗಿಯಲ್ಲವಾದರೂ ಕ್ರಮಶಃ ವಾಸಿಯಾಗುತ್ತಿರುವ ಗಾಯವನ್ನು ಈ ಪತ್ರಿಕೆ ಪುನಃ ಕೆದಕುತ್ತದೆಯೆಂಬ ಕಲ್ಪನೆಯೆ ನನಗಿರಲಿಲ್ಲ.... ಆದರೂ ನೀರ್ಗಲ್ಲ ಚಪ್ಪಡಿಗಳು ತೇಲಿಕೊಂಡು ಹೋಗುತ್ತಿದ್ದ, ಆ ಚಪ್ಪಡಿಗಳಲ್ಲೊಂದರ ಮೇಲೆ ನಿಂತುಕೊಂಡಿದ್ದ ಒಬ್ಬ ಮನುಷ್ಯ, ಅವನನ್ನು ಮತ್ತು ತನ್ನನ್ನೂ ಬೇರ್ಪಡಿಸಿದ್ದ, ಆ ಕರೀ ಹೊಳೆ ಇನ್ನೂ ಅಲ್ಲಿ ಇದ್ದೇ ಇದ್ದಿತು....ಕಣ್ಮುಂದೆ.

ಎತ್ತರವಾದ ದಂಡೆಯ ಮೇಲಿಂದ ನೋಡುತ್ತಿದ್ದರೆ ನೀರು ದಟ್ಟ ಕರೀ ಬಣ್ಣದ್ದಾಗಿ ಕಾಣಿಸುತ್ತದೆ. ನಿಧಾನವಾಗಿ ಚಲಿಸುತ್ತಿದ್ದ ಹಿಮದ ಚಪ್ಪಡಿಗಳು ಮತ್ತು ಮಂದವಾದ ಅಪ್ಪಳಿಕೆಗಳು ಇಲ್ಲದೆ ಹೋಗಿದ್ದರೆ, ಅದೊಂದು ಸತ್ತ ನದಿಯೆಂದು ಯಾರೂ ಭಾವಿಸಬಹುದಾಗಿತ್ತು.

ಎತ್ತರವಾದ ದಂಡೆಯ ಮೇಲೆ ನಾವು ಸರಿಸುಮಾರು ಸಮಯ ನಿಂತಿದ್ದೆವು. ಹಿಮಾವೃತವಾಗಿದ್ದ ವೈನ್ ವೃಕ್ಷಗಳನ್ನೂ ಕಪ್ಪಗಿದ್ದರೂ ಜೀವಂತವಾಗಿದ್ದ ನದಿಯನ್ನೂ ನಕ್ಷತ್ರ ಖಚಿತ ಜನವರಿಯ ಆಕಾಶವನ್ನೂ ಕಂಡು ನಾವು ಸಂತೋಷಪಡುತ್ತಿದ್ದೆವು, ಅದಕ್ಕಿಂತ ಹೆಚ್ಚಾಗಿ ನಾವಿಬ್ಬರೇ ಇದ್ದೆವು.... ಇಬ್ಬರು ಸುಖಿಗಳು....

ಎಲ್ಲದಕ್ಕೂ ಒಂದು ಕೊನೆ ಇದ್ದೇ ಇದೆ. ಹಾಗೆ ನಮ್ಮ ಮೌನವೂ ಕೊನೆಗೊಂಡಿತು. ಚಳಿಯು ನನ್ನ ತೆಳ್ಳಗಿನ ಕೋಟಿನೊಳಗಿಂದ ಒಳನುಸುಳಿತ್ತು. ತಪ್ಪಿಸಿಕೊಳ್ಳುವ ಪೇಚಿನಲ್ಲಿ ಸಿಲುಕಿದವರಂತೆ ಮೆತ್ತಗೆ ಹೇಳಿದೆ.

"ಫೆಲಿಕ್ಸ್, ನನಗೆ ಚಳಿಯಾಗುತ್ತಿದೆ."

ಆತ ಬಾಗಿ ನನ್ನ ಕಣ್ಣುಗಳಲ್ಲೇ ನೋಡಿದ. ಅವನ ಕಣ್ಣುಗಳಲ್ಲಿ ಮಂಜು ತುಂಬಿದಂತೆ ಕಾಣಿಸುತ್ತಿತ್ತು. ತುಟಿಗಳ ಮೇಲೆ ಬಲವಾಗಿ ಮುತ್ತಿಕ್ಕಿದ–ನನ್ನ ಉಸಿರುಕಟ್ಟುವವರೆಗೂ. ಬಳಿಕ ಅವನ ಅಪ್ಪುಗೆಯನ್ನು ಬಿಡಿಸಿಕೊಂಡೆ. ತೃಪ್ತನಾಗಿ ಅವನು ನಂತರ ಕೇಳಿದ:

'ಸೌಲೆ ಈಗ ಬೆಚ್ಚಗೆನಿಸುತ್ತಿದೆಯೆ?'

"ಹೌದು ಈಗೊಂದಿಷ್ಟು ಹಿತವೆನಿಸುತ್ತಿದೆ."

'ಇನ್ನು, ಸಾಗೋಣವೆ?'

'ನಿನ್ನೊಡನೆ....ದೂರದ ಗ್ರಹಗಳಿಗೆ ಕೂಡ....!'

'ಸಮೀಪದ ದಾರಿಯಲ್ಲಿ, ತುಳಿದ ದಾರಿಯನ್ನು ಬಿಟ್ಟು, ಹಿಮದ ಮೇಲಿಂದ ಹೋಗೋಣವೆ?'

"ತೋಳವೊ, ಧ್ರುವ ಕರಡಿಯೊ ಬಂದರೆ ಏನು ಗತಿ?"

"ಒಂದಿಷ್ಟೂ ಚಿಂತಿಸಬೇಡ ಸೌಲೆ, ನಿನ್ನನ್ನು ಚೆನ್ನಾಗಿ ರಕ್ಷಿಸುತ್ತೇನೆ. ಯಾವುದಾದರೊಂದು ಕಾಡು ಪ್ರಾಣಿ ನಮ್ಮ ಮೇಲೆ ಬಿದ್ದು ನಿನ್ನನ್ನು ರಕ್ಷಿಸುವ ಅವಕಾಶ ದೊರೆಯುವುದೂ ಒಳ್ಳೆಯದೆಂದು ನನಗನಿಸುತ್ತದೆ. ಹೆದರಿಕೊಳ್ಳಬೇಡ...."

"ನಾನು ಒಂದಿಷ್ಟೂ ಹೆದರಿಕೊಂಡಿಲ್ಲ. ನೀನು ತುಂಬಾ ಧೈರ್ಯಶಾಲಿ ಮತ್ತು ಶಕ್ತಿವಂತ. ನನಗಂತೂ ಒಂದು ಕಲ್ಲಿನ ಗೋಡೆ ರಕ್ಷಣೆಯಲ್ಲಿದ್ದಂತೆನಿಸುತ್ತದೆ.'

'ಮತ್ತೆ ಚಳಿ ಎನಿಸಿದರೆ, ಪ್ರತಿ ನೂರು ಹೆಜ್ಜೆಗೂ ನಿನ್ನನ್ನು ಬಲವಾಗಿ ಮುತ್ತಿಡುತ್ತೇನೆ, ಆಗಬಹುದೆ?'

"ಇಲ್ಲ ಐವತ್ತು...."

'ಆಯಿತು, ಪ್ರತಿ ಇಪ್ಪತ್ತೈದು ಹೆಜ್ಜೆಗೆ....'

ನಾವು ಮುನ್ನಡೆದೆವು. ಅದೊಂದು ಮೋಜಿನ ಪ್ರದೇಶವಾಗಿ ಕಾಣಿಸುತ್ತಿತ್ತು. ಅಲ್ಲೊಂದು, ಎಲ್ಲೆಲ್ಲೂ ಹಿಮವೆ ಆವರಿಸಿದ್ದ ಲೋಹದ ಕಟ್ಟಡ ನಿಂತಿದ್ದಿತು. ಅಂತರಿಕ್ಷ ಉಡ್ಡಯನಕ್ಕೆ ಸಂಬಂಧಿಸಿದ ರಚನೆಯಂತೆ ಕಾಣಿಸುತ್ತಿತ್ತು. ಕ್ಯಾನ್ವಾಸ್ ಚೀಲಗಳಿಂದ ಮುಸುಕು ಹಾಕಲ್ಪಟ್ಟಿದ್ದ ಶಿಲ್ಪ ಶರೀರದ ಮೊಂಡು ಮೂಗಿನ ವಿಮಾನಗಳು ಅದರ ಮೇಲಿದ್ದುವು. ಬೇಲಿಯ ಬಳಿಗೆ ಒಂದು ಸಣ್ಣ ಗುಡಿಸಲು, ಬೇಸಗೆಯಲ್ಲಿ ಅದು ಎರಡು ಪುಟ್ಟ ಕುದುರೆಗಳಿಗೆ ಆಶ್ರಯಸ್ಥಾನವಾಗಿರುತ್ತಿತ್ತು. ಈಗ ಅವು ಅಲ್ಲಿಲ್ಲ. ಮಕ್ಕಳ ಕಿರಿಚಾಟದ ಸದ್ದುಗದ್ದಲಗಳೂ ಇಲ್ಲ. ಯಾರೂ ಇಲ್ಲ, ಆದರೆ ಫೆಲಿಕ್ಸ್ ಮತ್ತು ನಾನು...ಇಬ್ಬರೆ....

ನಾವು ಯಾವಾಗಲೂ ಕೂಡಿಯೆ ಇರುತ್ತಿದ್ದೆವು....

ಆರು ಗಂಟೆಗೆ ಹತ್ತು ನಿಮಿಷಗಳಿವೆ. ಇನ್ನು ಹತ್ತೇ ನಿಮಿಷಗಳಲ್ಲಿ ಆತ ನನಗೆ ಫೋನ್ ಮಾಡುತ್ತಾನೆ.... ನಮ್ಮಿಬ್ಬರ ನಡುವೆ ತೃತೀಯ ವ್ಯಕ್ತಿಯೊಬ್ಬ ನಿಂತಿರುವುದು ಅವನಿಗೆ ಗೊತ್ತಿಲ್ಲ. ಆತ ಹಠಾತ್ತನೆ, ಇಲ್ಲಿ ಮೇಲೇಳುತ್ತಾನೆಂದು ನಾನೇ ಅನುಮಾನಿಸಿರಲಿಲ್ಲ— ಕಳೆದ ಎರಡು ದಿನಗಳಿಂದ ಆತ ನಮ್ಮನ್ನು ಬೇರ್ಪಡಿಸುತ್ತಿದ್ದರೂ, ಇಲ್ಲಿಯವರೆಗಂತೂ ಆತ ಅಪರಿಚಿತನೆ ಸರಿ.

'ಸಂಜೆ ವೃತ್ತಾಂತ'ದ ಕೊನೆಯ ಪುಟವನ್ನು ನಾನಿನ್ನೂ ತಿರುವಿಹಾಕಿಲ್ಲ.

ಪತ್ರಿಕೆಯನ್ನು ಬಿಡಿಸಿದೆ. ಕೊನೆ ಪುಟದ ಕೆಳ ಎಡಬದಿಯ ಮೂಲೆಯಲ್ಲಿ ದಪ್ಪಕ್ಷರಗಳಲ್ಲಿರುವುದು ನನಗೆ ಕಾಣಿಸುತ್ತಿದೆ:

"ಇದು ನಮ್ಮ ಪಟ್ಟಣದಲ್ಲಿ ನಡೆಯಿತು...."

ನಾನು ಮೊದಲನೆ ಸಾಲನ್ನಷ್ಟೇ ಓದಿದ್ದೆ. ಆದರೆ ವಿದ್ಯುತ್ ಆಘಾತದ ಪರಿಣಾಮ ಅದರಲ್ಲಿದ್ದಿತು.... "ಇಳಿ ಹೊತ್ತಿನಲ್ಲಿ ಇಬ್ಬರು ತರುಣರು ನೇರಿಸ್ ನದಿಯ ದಡದಲ್ಲಿ ನಡೆದು ಬರುತ್ತಿದ್ದರು...." ಇದು ಫೆಲಿಕ್ಸ್ ಮತ್ತು ನನ್ನನ್ನು ಕುರಿತೇ. "ಹಿಮದ ಚಪ್ಪಡಿಗಳು ನಿಧಾನವಾಗಿ ಕೆಳಗೆ ಹರಿಯುತ್ತಿದ್ದುವು. ಇದ್ದಕ್ಕಿದ್ದಂತೆ ಒಂದು ಚಪ್ಪಡಿಯ ಮೇಲೆ ಅವರು ಮನುಷ್ಯನೊಬ್ಬನನ್ನು ಗಮನಿಸಿದರು. ಆ ಸಣ್ಣ ಚಪ್ಪಡಿಯ ಮೇಲೆ ತನ್ನ ತೂಕವನ್ನು ಕಾದುಕೊಳ್ಳಲು ಆತ ಪ್ರಯತ್ನಿಸುತ್ತಿದ್ದ. ಇನ್ನೊಂದು ದೊಡ್ಡ ಚಪ್ಪಡಿಯ ಮೇಲೆ ನೆಗೆಯಲು ಪ್ರಯತ್ನಿಸಿದ. ಜಾರಿ ನೀರಿಗೆ ಬಿದ್ದ. ಅವನ ಜೀವ ಗಂಡಾಂತರದಲ್ಲಿದೆ ...."

ಅದು ನಡೆದದ್ದು ಹೀಗೆ: ಫೆಲಿಕ್ಸ್ ಮತ್ತು ನಾನು ಏದುಸಿರೆಳೆಯುತ್ತಾ ಹೆಚ್ಚು ಕಡಿಮೆ ನೀರಿನ ವರೆಗೂ ಬಂದಿದ್ದೆವು. ನದಿಯ ಅಂಚಿನಲ್ಲಿ ನಿಂತೆವು. ಚಳಿಗಾಲದ ಹಿಮದಿಂದ ಅದಿನ್ನೂ ಹಿಮಗಟ್ಟಿರಲಿಲ್ಲ. ಆ ದಿನವೇ ಬಹಳಷ್ಟು ಹಿಮ ಬಿದ್ದಿದ್ದಿತು, ದಂಡೆಗಳು ಬೆಳ್ಳಗಾಗಿದ್ದುವು. ನಡುವೆ ಕರಾಳ ನದಿ– ಕಪ್ಪಗೆ, ಝುಣು ಝುಣು ಅನಿಷ್ಟಸೂಚಿ.

"ಅದು ಹಲ್ಲು ಮಸೆಯುತ್ತಿರುವಂತೆ ಕಾಣಿಸುತ್ತಿದೆ, ಅಲ್ಲವೇ?"

"ಏನು?"

"ಹೊಳೆ. ಅದನ್ನು ನೋಡಲಿಕ್ಕೇ ನನಗಾಗುವುದಿಲ್ಲ."

"ಹೌದು, ಬೇಸಗೆಯಲ್ಲಿ ಮಾತ್ರ ಅದು ನಿಜವಾಗಿಯೂ- ದಯಾಮಯಿಯಾಗಿರು

(ಹನ್ನೊಂದನೇ ಪುಟ ನೋಡಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸಂಪುಟ: 50 ನವಯುಗ ಸಂಚಿಕೆ: 27

ಪ್ರಧಾನಿ ಗಾಂಧಿಗೆ ಜನತೆಯ ಪಂಥಾಹ್ವಾನ

ಪ್ರಧಾನಿ ಗಾಂಧಿಯವರು ತನ್ನ ಏಕ ಪಕ್ಷೀಯ ಸತ್ತಾಧಿಕಾರವನ್ನು ಬಲಪಡಿಸಲು ಜನತೆಯ ಆದೇಶ ಪಡೆಯುವ ದೊಡ್ಡ ಹೆಸರಿನಲ್ಲಿ ಮಧ್ಯಾವಧಿ ಚುನಾವಣೆಗಳನ್ನು ನಡೆಸಿದರು; ತನ್ನ ಇಷ್ಟಾರ್ಥವನ್ನು ಬಹು ಬಗೆಯಾಗಿ ತೀರಿಸಿಕೊಂಡರು. ಮಹಾತ್ಮಾ ಗಾಂಧಿ, ಪಂ. ನೆಹರು, ಲಾಲಬಹದೂರ ಶಾಸ್ತ್ರಿ ಮೊದಲಾದವರು ಹಲವಾರು ವರುಷ ದೇಶದ ಸ್ವಾತಂತ್ರ್ಯಕ್ಕಾಗಿ ಉದ್ಧಾರಕ್ಕಾಗಿ ಹೋರಾಡಿ ಕಷ್ಟ-ನಷ್ಟಗಳನ್ನನುಭವಿಸಿ ಜನಪ್ರೀತರಾಗಿ ಜನನಾಯಕರಾಗಿದ್ದರೆ, ಶ್ರೀಮತಿ ಗಾಂಧಿಯವರು ಜನನಾಯಕರಾಗಿ ಒಂದೇ ಒಂದು ಚುನಾವಣೆಯಿಂದ ಜನಪ್ರೀತರಾದರು. ಇದೀಗ ಶ್ರೀಮತಿ ಗಾಂಧಿ ತನ್ನ ಹೆಸರನ್ನೂ, ಪ್ರಭಾವವನ್ನೂ ಮನೆಮನೆಯಲ್ಲೂ ಭದ್ರಪಡಿಸಿದರು. ಇದಕ್ಕಾಗಿ ಅವರು ತಮ್ಮ ಪಕ್ಷದ ಹುದ್ದರಿಯನ್ನೇ ಬಳಸಿಕೊಂಡರು. ತಮ್ಮ ನಾಮಬಲದಿಂದಲೇ ಅವರು ಗೆದ್ದರೆಂಬುದನ್ನೂ ಅವರ ತಲೆಬುರುಡೆಯೊಳಗೆ ಹೊಗಿಸಿ, ತಾನು ಪ್ರಶ್ನಾತೀತ ನಾಯಿಕೆಯೆಂದು ಒಕ್ಕೊರಳಿನಿಂದ ಕೂಗಿಸಿಕೊಂಡರು.

ಪ್ರಧಾನಿ ಗಾಂಧಿಯವರನ್ನು ಅಟ್ಟುವುದು ಅವರ ವಿರೋಧಿಗಳಿಂದ ಆಗಲಿಲ್ಲ; ಸದ್ಯ ಲೋಕಸಭೆಯಲ್ಲಿ ಮೂರರಲ್ಲಿ ಎರಡಂಶ ಮತವನ್ನೂ ಪಡೆಯಲು ಸಮರ್ಥರಾಗಿರುವ ಆಕೆಯನ್ನು ಮುಂದಿನ ಐದು ವರ್ಷ ಕಾಲ 'ಅಲ್ಲಾಡಿಸುವುದು' ಸಾಧ್ಯವಿಲ್ಲ. ರಾಜ್ಯಸಭೆಯಲ್ಲಿ ಮಾತ್ರ ಸದ್ಯವಾಕೆಗೆ ಬಹುಮತವಿಲ್ಲವಾದರೂ ಮುಂದಿನ ವರ್ಷ ಮತ್ತೆ ಹಲವು ಸ್ಥಾನಗಳು ತೆರವಾದೊಡನೆಯೇ ಅದೂ ಸರಿಯಾಗ ಬಹುದು. ಪ್ರಧಾನಿ ಗಾಂಧಿಯವರ ಈ ಗೆಲವು ಬರಿಯ ಗೆಲು ಮಾತ್ರವಲ್ಲ, ಪ್ರಚಂಡ ಗೆಲು; ಆಕೆಯ ತಂದೆ ಮೊತ್ತಮೊದಲ ಸಾರ್ವತ್ರಿಕ ಚುನಾವಣೆಗಳಲ್ಲಿ ಪಡೆದ ಗೆಲುವನ್ನು ಮತ್ತೊಮ್ಮೆ ನೆನಪಿಗೆ ತರುತ್ತದೆ. ಪ್ರಧಾನಿಯ ವ್ಯಕ್ತಿಗತ ಪ್ರಭಾವದಿಂದಾಗಲೀ, ಆಕೆಯ ನೀತಿ ನಡಾವಳಿಗಳಿಂದಾಗಲೀ ಅಥವಾ ಮತ್ತಾವುದೇ ರೀತಿ—ವಿಧಾನಗಳಿಂದಲೇ ಇಲ್ಲಿ ಆಕೆ ಗೆದ್ದದ್ದಂತೂ ನಿಜವೇ. ಆಕೆಯ ವಿರೋಧಿಗಳ ಮುಖಕ್ಕೆ ಮಸಿ ಬಳಿಯಲಾದುದೂ ಅಷ್ಟೇ ಸ್ಪಷ್ಟ. ಲೋಕಸಭೆಯಲ್ಲಿ ಬಹುಮತ ಗಳಿಸಬಲ್ಲೆವು ಎಂದ ಮೈತ್ರಿಕೂಟದ ಅಂಗಸಂಸ್ಥೆಗಳು [ಸಿಂಡಿಕೇಟ್ ೧೬, ಜನಸಂಘ ೨೨, ಸ್ವತಂತ್ರ ೮, ಎಸ್ಸೆಸ್ಪಿ ೩] ೪೯ ಸ್ಥಾನಗಳಲ್ಲೇ ತೃಪ್ತಿಪಡುವಂತಾಯ್ತು. ಇದು ಹೆಚ್ಚೆಂದರೆ ೫೦ರ ಗಡಿ ಮೀರುವಂತಿಲ್ಲ. ತನ್ನ ದಳದ ಬಲದಿಂದಲೇ ಪ್ರಧಾನಿಯಾಗುವ ಹೊಂಗನಸು ಕಾಣುತ್ತಿದ್ದ ಬಿ ಕೆ ಡಿ ನಾಯಕ ಚರಣಸಿಂಗರು ತಮ್ಮ ಡೊಂಬರಾಟದಿಂದ ತಾನು ಮುಳುಗಿದ್ದಲ್ಲದೆ ಪಕ್ಷವನ್ನೂ ಮುಳುಗಿಸಿದರು. ವಿವಿಧ ಪಕ್ಷಗಳ ಅತಿರಥ ಮಹಾರಥರು ಒಡ್ಡೋಲಗಕ್ಕೆ ಮೊದಲೇ ಕಾಲು ಮುರಿದು ಬಿದ್ದರು. ಇದು ಏನು ಅಂದರೆ ಬರಿಯ 'ದಿಗ್ಭ್ರಮೆ!'

'ಮೈತ್ರಿಕೂಟ' ರಚನೆಯ ವೇಳೆ ಅದರ ನಾಯಕರು ಏನು ಆಸೆ ಕಟ್ಟಿಕೊಂಡಿದ್ದರೋ ಅದು ಮುರಿದು ಬಿತ್ತು. ಇದಕ್ಕೆ ಕಾರಣವೇನು? ಕೂಟದ ಅಂಗ ಪಕ್ಷಗಳು ಚುನಾವಣಾ ಪೂರ್ವದಲ್ಲಿ ಸ್ಪರ್ಧಾ ಮನೋಭಾವದಿಂದ ಹೋರಾಟಕ್ಕೆ ಇಳಿದುದಿಲ್ಲ. ಅವುಗಳು 'ತೇಪೆಹಚ್ಚಿದ' ಬಟ್ಟೆಯಂತೆ ಬರಿಯ ಹೊಂದಾಣಿಕೆಯನ್ನೂ ಸಫಲಗೊಳಿಸಲಿಲ್ಲ. ಅಭ್ಯರ್ಥಿಗಳು ಕೆಲವರನ್ನು ನಂಬಿದರು; ನಂಬಿದವರು ಕೊನೆಗೂ ಕೈಕೊಟ್ಟರು. ಮೈತ್ರಿಕೂಟದ ಹೆಸರಿನಲ್ಲಿ ತಮ್ಮ ಪಕ್ಷಗಳನ್ನು ಬಲಪಡಿಸಲೂ ಬಹುದೆಂದು ನಂಬಿಕೊಂಡವರೂ ಇದ್ದರು. ಚುನಾವಣಾ ಪರಿಣಾಮಗಳನ್ನೂ ಕೆಲವೆಡೆಯ ಜನಾಭಿಪ್ರಾಯವನ್ನೂ ನೋಡುವಾಗ, ಮೈತ್ರಿಕೂಟದ ಅಂಗ ಪಕ್ಷಗಳು ಬೇರೆ ಬೇರೆಯಾಗಿಯೇ ಸ್ಪರ್ಧಿಸಿದ್ದರೆ, ಅವುಗಳ ಭಾಗ್ಯ ಇಷ್ಟು ಬಿಗಡಾಯಿಸುತ್ತಿರಲಿಲ್ಲವೆನಿಸುತ್ತದೆ. ಕೆಟ್ಟ ಮೇಲೆ ಬುದ್ಧಿ ಬರುವುದು ಸಹಜ. ಕಾಮರಾಜರ ಸಂಯುಕ್ತ ರಂಗ ತಮಿಳುನಾಡಿನಲ್ಲೂ ಸಂಪೂರ್ಣ ಸೋತು ಹೋದುದು ಆಶ್ಚರ್ಯವೇ. ಅಲ್ಲಿ ಅವರಿಗೆ ಅನುಕೂಲ ವಾತಾವರಣವಿದ್ದಿದ್ದರೂ ಜನ ಕರುಣಾನಿಧಿಯವರ ಕೊರಳಿಗೇ ಜೋತು ಬಿದ್ದುದು ವಿಸ್ಮಯದಲ್ಲಿ ವಿಸ್ಮಯ! ಇಂದಿರಾ ಊದಿದ ಗಾಳಿಯಿಂದಾಗಿ ಹುಟ್ಟಿದ್ದ ಸಮುದ್ರ ಯಾವಾಗಲೂ ಹಾಗೇ ಉಳಿಯುವುದಿಲ್ಲ; ಎಷ್ಟು ಬಲವತ್ತರ ಪ್ರವಾಹವೇ ಇರಲಿ ಒಂದಲ್ಲ ಒಂದು ದಿನ ಇಳಿಯುತ್ತದೆ. ಅದಕ್ಕೆ ಪ್ರಧಾನಿ ಗಾಂಧಿಯೊಬ್ಬರೇ ಅಪವಾದವಾಗಲಾರರು.

ಭಾರತದ ಬಡಬಗ್ಗರನ್ನು ಸ್ವರ್ಗದತ್ತ ಒಯ್ಯುವ ಸುವರ್ಣ ಸೋಪಾನ ನಿರ್ಮಿಸಲು ಇನ್ನೈದು ವರ್ಷಕಾಲವಾದರೂ ಪ್ರಧಾನಿ ಗಾಂಧಿಗೆ ತಕರಾರು ಹೇಳುವವರಿಲ್ಲ. ಸಾಮಯಿಕ ಸಾಮಾಜಿಕ ನ್ಯಾಯವೊದಗಿಸಲು ಆಕೆಯ ಕೈ ತಡೆಯುವವರಿಲ್ಲ. ಬಡಜನರ ರಕ್ತ ಹೀರಿ ತಾವು ಕೊಬ್ಬುವ ಶ್ರೀಮಂತ ಜಿಗಳೆಗಳನ್ನೇ ಹೀರುವಾಗ ಆಕೆಯನ್ನು ತಡೆಯುವವರಿಲ್ಲ. "ಆಡಿಕೊಂಡಿದ್ದ ಸಮಾಜವಾದವನ್ನು ಪ್ರಗತಿಯನ್ನು ಯಾವ ಅಡೆತಡೆಯೂ ಇಲ್ಲದೆ ನಿರಾತಂಕವಾಗಿ ಜ್ಯಾರಿಗೆ ತನ್ನಿ; ತಡಮಾಡಬೇಡಿ, ನೆವನವೆತ್ತಬೇಡಿ" ಎಂದು ಭಾರತೀಯರು ತುಂಬು ಬಹುಮತದಿಂದ ಆಕೆಯನ್ನು ಆರಿಸಿದ್ದಾರೆ. ಇದು ಪ್ರಧಾನಿ ಗಾಂಧಿ ತನ್ನ ವಿರೋಧಿಗಳಿಗೆ ನೀಡಿದ ಪಂಥಾಹ್ವಾನವಲ್ಲ; ಭಾರತೀಯ ಜನತೆಯು ಪ್ರಧಾನಿ ಗಾಂಧಿಗೆ ನೀಡಿದ ಪಂಥಾಹ್ವಾನ. ಇದನ್ನು ಆಕೆ ಎಂತು ನಿರ್ವಹಿಸುವರೆಂಬುದನ್ನೇ ಅವಲಂಬಿಸಿ ಭಾರತದ ಮುಂದಿನ ರಾಜ್ಯಕೀಯ ನಡೆಯುತ್ತದೆ.

ಅತೃಪ್ತಿಗೆ ಮೂಲ— ದಿಗ್ವಿಜಯ

ಕರ್ನಾಟಕ ಉರುಸ್ ಮೈಸೂರು ಸಿಂಡಿಕೇಟ್ ಅಧ್ಯಕ್ಷರ ಸ್ವರಾಜ್ಯ. ಇಲ್ಲಿ ಅವರ ಅಪ್ಪಟ ಶಿಷ್ಯೋತ್ತಮರದ್ದೇ ರಾಜ್ಯಭಾರ. ಪ್ರಧಾನಿ ಗಾಂಧಿಯವರು ನೆಲ ಜಲಗಳ ಹೆಸರಿನಲ್ಲಿ ಅನ್ಯಾಯ ಮಾಡಿದ್ದೂ ಇದೇ ರಾಜ್ಯಕ್ಕೆ. 'ಈ ವಿಷಯದಲ್ಲಿ ಅನ್ಯಾಯವಾಗೋದಿಲ್ಲ; ನಮಗೇ ಮತ ನೀಡಿ' ಅಂದರು ಇಂಡಿಕೇಟಿಗರು. ಇದನ್ನು ಪ್ರತಿಭಟಿಸಿದರು ಮೈತ್ರಿಕೂಟಿಗರು. ಜನ ಇಂಡಿಕೇಟಿಗರನ್ನೇ ಬೆಂಬಲಿಸಿತು. ನೂರಕ್ಕೆ ನೂರು ಸ್ಥಾನಗಳನ್ನೂ ಇಂಡಿಕೇಟಿಗೆ ಬಿಟ್ಟುಕೊಟ್ಟ ಮತ್ತೊಂದು ರಾಜ್ಯ ದೇಶದಲ್ಲಿಲ್ಲ. ಸಿಂಡಿಕೇಟ್ ಸರಕಾರವಿರುವ ರಾಜ್ಯದಲ್ಲಿ ಅದು ಒಂದೇ ಒಂದು ಸ್ಥಾನ ಗಳಿಸಲಾರದೆ ಹೋದದ್ದು....? ಇದರಿಂದ ಜನರೊಲವು ಸರಕಾರದಲ್ಲಿಲ್ಲವೆಂದು ಹೇಳಿ, ಮುಖ್ಯಮಂತ್ರಿಗಳು ರಾಜಿನಾಮೆ ಕೊಡಬೇಕು; ಇಲ್ಲವೇ ಮಧ್ಯಾವಧಿ ಚುನಾವಣೆಗಳನ್ನು ಎದುರಿಸಬೇಕು ಎನ್ನುತ್ತಾರೆ ಇಂಡಿಕೇಟಿಗರು. ಇಂಡಿಕೇಟಿನ ವಿಜಯ ರಾಜ್ಯ ಸರಕಾರದ ಮೇಲೆ ಅವಿಶ್ವಾಸ ಮೂಡಿಸುತ್ತದೆ ಎಂಬುದು ಸರಿಯಲ್ಲ. ರಾಜ್ಯ ವ್ಯವಹಾರಗಳಿಗೂ ಕೇಂದ್ರ ವ್ಯವಹಾರಗಳಿಗೂ ತಾಳಿತಂತಿಯೆಂಬುದೇ ಇಲ್ಲ. ಆದುದರಿಂದ ಆ ಕಾರಣವನ್ನು ಮುಂದೂಡಿ ರಾಜೀನಾಮೆಯನ್ನು ಬೇಡುವುದು ಸಾಧುವಲ್ಲ. ಇಂಡಿಕೇಟ್ ರಾಜ್ಯವಿಜಯದ ಹಿಂದೆಯೇ ಹಲವು ಸಮಸ್ಯೆಗಳೂ ಹುಟ್ಟಿವೆ. ಸಿಂಡಿಕೇಟ್ ಎಮ್ಮೆಲ್ಲೆಗಳು ಪಕ್ಷಾಂತರ ರೋಗಕ್ಕೆ ತುತ್ತಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಈ ರೋಗಿಗಳ ಸಂಖ್ಯೆ ಹೆಚ್ಚಿಬಿಟ್ಟರೆ, ಶ್ರೀ ಪಾಟೀಲರು ಬಹುಮತ ಕಳೆದುಕೊಂಡು ರಾಜೀನಾಮೆ ನೀಡಲೇ ಬೇಕಾಗುತ್ತದೆ. ಅಥವಾ ತಮಗೆ ಬೇಕೆನಿಸಿದರೆ ವಿಧಾನ ಸಭೆಯನ್ನು ವಿಸರ್ಜಿಸಿ ಚುನಾವಣೆ ನಡೆಸುವ ಸಲಹೆಯನ್ನೂ ನೀಡಬಹುದು. ಇಂಡಿಕೇಟಿಗರು ಈಗ ಉಬ್ಬಿಹೋಗಿದ್ದಾರೆ. ರಾಜ್ಯದ ೨೭ ಸ್ಥಾನಗಳಲ್ಲಿ ಎಲ್ಲವನ್ನೂ ದೋಚಿಕೊಂಡು ಡಿಲ್ಲಿಗೊಯ್ದವರು ಈಗ ಅದಕ್ಕಾಗಿ ಹೆಚ್ಚಿನ ಪ್ರತಿಫಲವನ್ನು ಕೇಳತೊಡಗಿದ್ದಾರೆ. ರಾಜ್ಯ ಇಂಡಿಕೇಟಿಗರ ಹೃದಯ ಯಾವಾಗಲೂ ತೆರೆದ ಪುಸ್ತಕವೇ. ಅಧಿಕಾರಕ್ಕಾಗಿ, ಪ್ರತಿಫಲಕ್ಕಾಗಿ ಅವರು ಹಂಬಲಿಸಿದವರು, ಅದು ದಕ್ಕದಾಗ ಏನೇನೋ ಮಾಡಿಕೊಂಡು ಬಂದವರು. ಪ್ರಧಾನಿ ಗಾಂಧಿಯವರು ಅವರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದು ಮುಖ್ಯ.

ಪ್ರಚಂಡ ವಿಜಯ

ಉಡುಪಿ ಪಾರ್ಲಿಮೆಂಟರೀ ಕ್ಷೇತ್ರದಿಂದ ಆಳುವ ಕಾಂಗ್ರೆಸಿನ ಅಭ್ಯರ್ಥಿ ಮಾಜಿ ನಗರ ಸಭಾಧ್ಯಕ್ಷ ಎಡ್ವಕೇಟ್ ಶ್ರೀ ಪಿ. ರಂಗನಾಥ ಶೆಣೈಯವರೂ, ಮಂಗಳೂರು ಕ್ಷೇತ್ರದಿಂದ ಹಿರಿಯ ಕಾಂಗ್ರೆಸಿಗ ಹಾಗೂ ಮಾಜಿ ವಿಧಾನ ಪರಿಷತ್ತಿನ ಅಧ್ಯಕ್ಷ, ಆಳುವ ಕಾಂಗ್ರೆಸಿನ ಅಭ್ಯರ್ಥಿ ಶ್ರೀ ಕೆ. ಕೆ. ಶೆಟ್ಟರೂ ಪ್ರಚಂಡ ಬಹುಮತದಿಂದ ಆರಿಸಲ್ಪಟ್ಟಿದ್ದಾರೆ. ಇಬ್ಬರೂ ಉಡುಪಿಯವರೇ ಎಂಬುದು ಅಭಿನಂದನೀಯ.

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

ಮೇ ತಿಂಗಳಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

In the Court of the Munsif of Karkala

O. S. No. 398/1970

Between

Shankara Shetty — Plaintiff

Mahabala Kadamba & others — Defendants

To the 4th defendant—

Vittala Kadamba, Son of Venkamma Kadambedi, resident of Pommanige of Hirgan village of Karkala Taluk.

Please take notice that the plaintiff has instituted the above suit claiming maintenance of Rs 1034-51 and subsequent interest and costs and the same is posted to 22—3—1971. You are at liberty to appear on the said date at 11 A. M. either in person or through lawyer before the said Court and state your defence if any failing which the suit will be decided in your absence.

V. B. Shetty,
Advocate for plaintiff.

Karkala, Dated 9-3-71.

ಜಿಯೊಲಾಜಿಕಲ್ ಸರ್ವೇ ಆಫ್ ಇಂಡಿಯಾ

120 ವರ್ಷಗಳ ಪ್ರಶಂಸಾರ್ಹ ಪ್ರಗತಿ

ಪ್ರಪಂಚದಲ್ಲಿಯೇ ಮೂರನೆಯ ಅತಿ ಹಳೆಯ ಜಿಯೋಲಾಜಿಕಲ ಸರ್ವೇ ಎಂದೆನಿಸಿದ 'ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ' ಸ್ಥಾಪಿತವಾದದ್ದು ಈಗ 120 ವರ್ಷಗಳ ಹಿಂದೆ; 1851ರಲ್ಲಿ ಕಲ್ಲಿದ್ದಲು ಕ್ಷೇತ್ರಗಳ ಪದ್ಧತಿಪೂರ್ವಕ ಪರೀಕ್ಷೆಗೆಂದು ಈ ಸಂಸ್ಥೆ ಆರಂಭವಾಯಿತು. ಅದು ಪ್ರಥಮ ಇಪ್ಪತ್ತು ವರ್ಷಗಳಲ್ಲಿ .ಕಬ್ಬಿಣ ಅದಿರು, ಸುಣ್ಣದ ಹರಳು ಹಾಗು ಕಟ್ಟಡಗಳಿಗೆ ಬೇಕಾಗುವ ಕಲ್ಲುಗಳ ಗಣಿಗಳನ್ನು ಪತ್ತೆಹಚ್ಚತೊಡಗಿತು. ಖನಿಜಗಳ ಅನ್ವೇಷಣೆಯಲ್ಲಿ ಭೂವಿಜ್ಞಾನಕ್ಕೆ ಸಂಬಂಧಿಸಿದ ನಕ್ಷೆಗಳನ್ನು ಸಿದ್ಧಪಡಿಸುವುದು ಅತ್ಯಾವಶ್ಯಕವೆಂಬುದನ್ನು ಪ್ರಥಮ ದಶಕದಲ್ಲಿಯೇ ಕಂಡುಕೊಳ್ಳಲಾಯಿತು. ಪ್ರಥಮ 25 ವರ್ಷಗಳಲ್ಲಿ ಈ ಸಂಸ್ಥೆಯು 16 ಭೂವಿಜ್ಞಾನಿಗಳು ಅನೇಕ ಕಲ್ಲಿದ್ದಲು ಗಣಿಗಳ ಕ್ಷೇತ್ರವನ್ನು, ಹಿಮಾಲಯ, ದಕ್ಷಿಣ ಭಾರತ, ಮಧ್ಯ ಹಾಗು ಪೂರ್ವ ಭಾರತ, ನರ್ಮದಾ ಕಣಿವೆ ಮತ್ತು ಬರ್ಮಾ ಪ್ರದೇಶಗಳಲ್ಲಿ ಭೂವಿಜ್ಞಾನಕ್ಕೆ ಸಂಬಂಧಿಸಿದ ಸಮೀಕ್ಷೆಗೆಂದು ಸಂಚಾರ ಮಾಡಿದರು. ಸಂಸ್ಥೆ ಭೂಕಂಪಗಳ ಬಗ್ಗೆ ಅಭ್ಯಾಸ ಕೈಕೊಂಡಿತು. 19ನೇ ಶತಮಾನದ ಅಂತ್ಯದವರೆಗೂ ಕಲ್ಲಿದ್ದಲಿನ ನಿಕ್ಷೇಪಗಳನ್ನು ಪತ್ತೆ ಹಚ್ಚುವ ಕಾರ್ಯದಲ್ಲಿಯೇ ಸಂಸ್ಥೆ ಪ್ರಾಮುಖ್ಯವಾಗಿ ಪ್ರಯತ್ನಿಸಿತು; ಅಲ್ಲದೆ ಮೈಸೂರು ಹಾಗು ಧಾರವಾಡ ಪ್ರದೇಶಗಳಲ್ಲಿ ಚಿನ್ನದ ನಿಕ್ಷೇಪದ ಬಗೆಗೂ, ಬಿರಹ-ಗಂಗಾ ಕಣಿವೆ ಪ್ರದೇಶದಲ್ಲಿ ಭೂಕುಸಿತದ ಕಾರಣ ಕಂಡುಹಿಡಿಯಲೂ, ಮಧ್ಯ ಹಾಗು ಪಶ್ಚಿಮ ಭಾರತದಲ್ಲಿ ಭೂಗತ ಜಲಾನ್ವೇಷಣೆ ಮಾಡಲೂ ಈ ಸಂಸ್ಥೆ ಕಾರ್ಯಮಾಡಿತು.

ಪ್ರಸ್ತುತ ಶತಮಾನದ ಪ್ರಾರಂಭಕ್ಕೆ ಕಂಡಿಕೊರೆಯುವ ಯಂತ್ರ ಸಾಮಗ್ರಿಗಳನ್ನು ಪಡೆದ ಈ ಸಂಸ್ಥೆ ಹೆಚ್ಚು ಹೊಣೆಹೊರಬೇಕಾಯಿತು. ಹೀಗಾಗಿ ಸಿಂಘಭೂಮಿಯಲ್ಲಿ ತಾಮ್ರದ ಅದಿರನ್ನು, ಮಧ್ಯಪ್ರದೇಶ, ಮಯೂರ ಭಂಜ, ಬಸ್ತಾರ ಹಾಗು ಬಿಹಾರ ನಾಡಿನಲ್ಲಿ ಅಗಣಿತವಾಗಿ ಕಬ್ಬಿಣ ಅದಿರನ್ನು, ಬೇರೆಡೆಯಲ್ಲಿ ಮ್ಯಾಂಗನೀಸ್ ಅದಿರನ್ನು ಪತ್ತೆಹಚ್ಚಲು ಸಾಧ್ಯವಾಯಿತು. ಈ ಕಾಲದಲ್ಲೇ ಬಿಹಾರ್, ಅಸಾಮು, ಹೈದರಾಬಾದ್ ಹಾಗು ಮದ್ರಾಸಗಳಲ್ಲಿ ಸುವರ್ಣ ನಿಕ್ಷೇಪಕ್ಕಾಗಿ ಸಮೀಕ್ಷೆಗಳನ್ನು ಕೈಕೊಳ್ಳಲಾಯಿತು; ಬಲೂಚಿಸ್ತಾನದಲ್ಲಿ ಗಂಧಕವನ್ನು ಪತ್ತೆಹಚ್ಚಲಾಯಿತು. ಅನೇಕ ಸ್ಥಳಗಳಲ್ಲಿ ಕಲ್ಲಿದ್ದಲು ಗಣಿಗಳನ್ನು ಕಂಡುಹಿಡಿಯಲಾಯಿತು; ಪನ್ನಾ ಪ್ರದೇಶದಲ್ಲಿ ವಜ್ರಗಳನ್ನು ಪಡೆಯುವ ಬಗ್ಗೆ ಅಧ್ಯಯನ ನಡೆಸಲಾಯಿತು; ಬರ್ಮಾ, ಅಸಾಮು, ಪಂಜಾಬ, ವಾಯವ್ಯ ಗಡಿ ಪ್ರದೇಶ, ಪರ್ಶಿಯನ್ ಗಲ್ಫ್, ಪಶ್ಚಿಮ ಪರ್ಶಿಯಾ, ಅರೆಬಿಯನ್ ಕರಾವಳಿ, ಇರಾಕ್ ಹಾಗು ಟೆಹರಾನ್ ನಾಡುಗಳಲ್ಲಿ ಪೆಟ್ರೋಲಿಯಂ ಅನ್ವೇಷಣೆ ಕಾರ್ಯವನ್ನೂ ಈ ಸಂಸ್ಥೆ ಕೈಗೆತ್ತಿಕೊಂಡಿತು.

ಪ್ರಥಮ ಜಾಗತಿಕ ಮಹಾಯುದ್ಧ ಕಲ್ಲಿದ್ದಲಿನ ಬೇಡಿಕೆಯನ್ನು ತೀವ್ರಗೊಳಿಸಿದಾಗ, ಮತ್ತೆ ಕಲ್ಲಿದ್ದಲು ನಿಕ್ಷೇಪ ಸಮೀಕ್ಷೆಗಳನ್ನು ಬಹಳಷ್ಟು ಪ್ರದೇಶಗಳಲ್ಲಿ ನಡೆಸಲಾಯಿತು. ಭೂತಾನ, ಟಿಬೆಟ್, ಅಫಗಾನಿಸ್ತಾನ ಹಾಗು ಚಿತ್ರಾಂ—ಪಾಮೀರ್ ಪ್ರದೇಶಗಳ ಭೂವಿಜ್ಞಾನ ನಕ್ಷೆಗಳನ್ನು ಸಿದ್ಧಪಡಿಸಲು ಸಂಸ್ಥೆ ಶ್ರಮವಹಿಸಿತು. ಎರಡನೇ ಜಾಗತಿಕ ಮಹಾಯುದ್ಧದ ಸಮಯದಲ್ಲಿ ಅಸಾಮಿನಲ್ಲಿ ಕಲ್ಲಿದ್ದಲು ಗಣಿಗಳನ್ನು, ಬೈಲದಿಲ್ಲಾ ಪ್ರದೇಶದಲ್ಲಿ ಕಬ್ಬಿಣ ಅದಿರಗಳನ್ನು ಪತ್ತೆ ಹಚ್ಚಲಾಯಿತು. 1925—39ರ ವರೆಗೆ ಹದಿನೈದು ವರ್ಷ ಶ್ರಮಪಟ್ಟು ಹಿಮಾಲಯ ಪರ್ವತಾವಳಿಯ ಭೂವಿಜ್ಞಾನ ಹಾಗು ರಚನೆಯ ಬಗ್ಗೆ ಸಮೀಕ್ಷೆಗಳನ್ನು ನಡೆಸಲಾಯಿತು. ಯುದ್ಧದ ಕಾಲದಲ್ಲೂ ದೇಶದ ವಿವಿಧ ಭಾಗಗಳ ನಕ್ಷೆಯನ್ನು ರಚಿಸುವಲ್ಲಿ ಸಂಸ್ಥೆ ಹಿಂದೆ ಬೀಳಲಿಲ್ಲ. ಯುದ್ಧಕ್ಕೆ ಬೇಕಾಗುವ ಮಹತ್ವದ ಕಚ್ಚಾವಸ್ತುಗಳ ನಿರಂತರ ಸರಬರಾಜಿಗೆಂದು 'ಉಪಯೋಗ ಶಾಲೆ'ಯೊಂದು ಸಂಸ್ಥೆಯ ಆಶ್ರಯದಲ್ಲಿ ಪ್ರಾರಂಭವಾಯಿತು. ಝಾವಾರ ಪ್ರದೇಶದಲ್ಲಿ ಸತುವು-ಸೀಸ, ರಾಜಸ್ತಾನ, ಮದ್ರಾಸ್, ಬಿಹಾರಗಳಲ್ಲಿ ಅಭ್ರಕ, ಕೋಹಿಸುಲ್ತಾನದಲ್ಲಿ ಗಂಧಕ ಮೊದಲಾದ ಮಹತ್ವದ ಖನಿಜಗಳನ್ನು ಹೊರದೆಗೆಯಲು ಈ ಶಾಖೆ ಶ್ರಮವಹಿಸಿತಲ್ಲದೆ, ಇಡೀ ಆಗ್ನೇಶಿಯಾ ಪ್ರದೇಶಗಳಲ್ಲೆ ವಿಮಾನ ನಿಲ್ದಾಣ, ನೀರು ಸರಬರಾಜು, ರಸ್ತೆ ನಿರ್ಮಾಣ ಈ ವಿಷಯಗಳಲ್ಲಿ ಈ ಸಂಸ್ಥೆ ಸಲಹೆಯನ್ನು ನೀಡಿತು. ಜಾಗತಿಕ ಯುದ್ಧದಿಂದಾಗಿ ಈ ಸಂಸ್ಥೆ ಅಂತಾರಾಷ್ಟ್ರೀಯ ಸೌಕರ್ಯದ ಕೆಲಸ ಕೈಕೊಳ್ಳಬೇಕಾಯಿತು. ಯುದ್ಧಾನಂತರ ಶಾಂತಿ ಕಾಲದ ಕೆಲಸಕ್ಕೆ ಸಂಸ್ಥೆ ಹಿಂದಿರುಗಿತು. ಲಿಗ್ನಾಯಿಟ್, ಬಾಕ್ಸಾಯಿಟ್, ಗ್ರಫಾಯಿಟ್, ನಿಕೆಲ್, ಜಿಪ್ಸಮ ಖನಿಜಗಳನ್ನು ಪತ್ತೆ ಹಚ್ಚಲು ಸಮೀಕ್ಷೆಗಳನ್ನು ಕೈಕೊಳ್ಳಲಾಯಿತು, ಬಿಹಾರಿನ ಕಾಗೆಬಂಗಾರ ಅದಿರಿಗಾಗಿ ಭೂಭೌತಿಕ ವೀಕ್ಷಣೆಯನ್ನು ಮಾಡಲಾಯಿತು. ಅಸ್ಸಾಂ, ಓಡಿಸಾ, ಆಂಧ್ರ ಹಾಗು ಮದ್ರಾಸ್ ಪ್ರದೇಶಗಳ ನಕ್ಷೆ ರಚನೆ ಬಿರುಸಾಗಿ ಸಾಗಿತು. ಬಿಯಾಸ್ ಜಲಾಶಯದ ಪ್ರದೇಶದ ಭೂಕುಸಿತ, ಕರಾಚಿ ನಗರದ ನೀರು ಸರಬರಾಜು, ಹುಗಳೀ ನದಿಯ ಕ್ಷಾರಾಂಶ, ಪಂಜಾಬ ಹಾಗು ಉತ್ತರ ಪ್ರದೇಶದ ಪ್ರಾದೇಶಿಕ ಜಲ ಸಂಪತ್ತು, ಭಾಕ್ರಾ ಹಾಗು ತುಂಗಭದ್ರಾ ಅಣೆಕಟ್ಟುಗಳಿಗೆ ಬೇಕಾದ ನಿವೇಶನದ ಆಯ್ಕೆ, ದೆಹಲಿ ಹಾಗು ಅಜಮೀರ್ - ಮೇವಾಡ ಪ್ರದೇಶದ ನೀರಾವರಿ ಯೋಜನೆಗಳು, ಅಸ್ಸಾಂ-ಬರ್ಮಾ ರಸ್ತೆಗಳ ರಚನೆ ಮೊದಲಾದ ವಿಷಯಗಳ ಬಗ್ಗೆ ಸಂಸ್ಥೆಯ ಭೂವಿಜ್ಞಾನಿಗಳು ಅಭ್ಯಾಸ ಕೈಕೊಂಡರು. ಸಂಸ್ಥೆಯ ಕಾರ್ಯ ಹೆಚ್ಚುತ್ತಲಿದ್ದುದರಿಂದ ಅನೇಕ ಭಾಗಗಳನ್ನು ಮಾಡಲಾಯಿತು.

ಸ್ವಾತಂತ್ರ್ಯಾನಂತರ

1946–51ರ ಅವಧಿಯಲ್ಲಿ ಜಿಯೊಲಾಜಿಕಲ್ ಸರ್ವೇ ಆಫ್ ಇಂಡಿಯಾ ಅನೇಕ ವಿಶಿಷ್ಟ ಸಾಧನೆಗಳನ್ನು ಮಾಡಿತು. ನರ್ಮದಾ ಕಣಿವೆ ಹಾಗು ಮಧ್ಯಭಾರತದಲ್ಲಿ ಕಲ್ಲಿದ್ದಲು, ಬಾಕ್ಸಾಯಿಟ್ ಅದಿರು ನಿಕ್ಷೇಪಗ

(ಒಂಭತ್ತನೇ ಪುಟ ನೋಡಿರಿ)

ಸಮಯವಿಲ್ಲದ ಸಮಾಜವಾದಿಗಳು

೧

"ನಾನೇನೂ ಮರೆತು ಬಿಟ್ಟಿಲ್ಲ. ಆದರೆ, ಏನು ಮಾಡುವುದು ಹೇಳಿ, ಒಂದು ಕ್ಷಣ ಬಿಡುವೇ ಆಗಲಿಲ್ಲ.'

"ಮತ್ತೇನು ಮಾಡುವುದು? ಆಗಲಿ, ಇನ್ನು ಯಾವಾಗ ಬರಲಿ?'

'ನಾಳೆ ಇಷ್ಟೇ ಹೊತ್ತಿಗೆ ಬನ್ನಿ. ಏನಾದರೂ ಪುರುಸೋತು ಮಾಡಿಕೊಳ್ಳುತ್ತೇನೆ.'

–ಇದೇ ರೀತಿಯ ಮಾತುಗಳನ್ನು ಅನೇಕರ ಮುಖದಿಂದ ನಾವು ನಿತ್ಯಂಪ್ರತಿ ಕೇಳುತ್ತಿರುತ್ತೇವೆ. ಆದರೆ, ಆ 'ನಾಳೆ' ಎಂದೂ ಉದಯವಾದದ್ದಿಲ್ಲ; ಆ 'ಮಹಾಶಯ'ರಿಗೆ ನಮಗಾಗಿ ಕೆಲಸ ಮಾಡಲು ಅವಕಾಶವೂ ದೊರೆಯಲಿಲ್ಲ! ನಾವು ಕೂಡ ಮಹಾಶಯರು ನಿಜಕ್ಕೂ ದೊಡ್ಡ ಮನುಷ್ಯರೇ; ಅವರಿಗೆ ಒಂದು ನಿಮಿಷವೂ ಬಿಡುವಿಲ್ಲವೆಂಬುದೂ ಸತ್ಯವೇ. ನಮಗಾಗಿ ಬಿಡುವು ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರೆಂಬುದರಲ್ಲೂ ಸತ್ಯಾಂಶವಿದೆ. ಆದರೆ, ನಮ್ಮ ಕೆಲಸ ಮಾಡಿಕೊಡುವ "ಆಶಯ"ವೇ ಇಲ್ಲದ ಅವರಿಗೆ 'ನಾಳೆ' 'ಬಿಡುವಿಲ್ಲ'ವೆಂಬ ಶಬ್ದಗಳು ಅಯೋಚಿತವಾಗಿ ತುದಿನಾಲಗೆಯಲ್ಲಿ ಕುಣಿಯುತ್ತವೆ.

'ತಮ್ಮ ಪತ್ರ ಯಥಾಕಾಲ ಹಸ್ತಗತವಾಯ್ತು. ಕಾರಣಾಂತರಗಳಿಂದ ಮುಖ್ಯವಾಗಿ ವಿಶೇಷ ಕಾರ್ಯಭಾರಗಳಿಂದಾಗಿ ಜರೂರು ಉತ್ತರ ಬರೆಯಲಾಗಲಿಲ್ಲ. ಇನ್ನು ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸುತ್ತೇನೆ. ಕ್ಷಮಿಸಿರಿ....' ಈ ರೀತಿ ಆರಂಭವಾಗುವ ಪತ್ರಗಳಿಗೇನು ಅಭಾವ? ಇದೂ ಪತ್ರಾರಂಭ ಮಾಡುವ ಹೊಚ್ಚ ಹೊಸ ಪ್ಯಾಶನ್!

ತಮ್ಮನ್ನು "ದೊಡ್ಡವರು" ಎನ್ನಿಸಿಕೊಳುವ ದೊಡ್ಡತನದ ಲೋಭಿಗಳು ಈ ಪ್ಯಾಷನ್ನಿನಿಂದ ಪತ್ರ ತೊಡಗುತ್ತಾರೆ. ಅದನ್ನು ಓದಿದವರಲ್ಲಿ ತಮ್ಮ 'ಬಿಡುವಿಲ್ಲದ ಕಾರ್ಯಕ್ರಮ'ಗಳ ಕಲ್ಪನೆಯನ್ನು ಜಮಾಯಿಸುವುದಕ್ಕೆ ಈ ಮೋಡಿ. ಆದರೆ ಜಗತ್ತಿನ 'ದೊಡ್ಡ ಮನುಷ್ಯ'ರೆಲ್ಲರೂ ತಮಗೆ ಬಂದ ಪತ್ರಗಳಿಗೆ ಅದೇ ಕ್ಷಣದಲ್ಲಿ ಉತ್ತರ ಬರೆಯುತ್ತಾರೆಂದು ಹೇಳಿದರೆ, ಅದನ್ನು 'ಈ ದೊಡ್ಡ (ದಡ್ಡ) ಮನುಷ್ಯರು ನಂಬಲಾರರು! ಅವರು ನಂಬಲಿಲ್ಲ ಎಂದ ಮಾತ್ರಕ್ಕೆ ಸತ್ಯ ಸುಳ್ಳಾಗುತ್ತದೆಯೆ?

'ದೊಡ್ಡ ಮನುಷ್ಯರು' ನಿಯಮಿತ ಜೀವನ ಬದುಕುತ್ತಾರೆ. ಇಂದಿನ ಕೆಲಸವನ್ನೆಂದೂ ನಾಳೆಗೆಂದಿಡುವುದಿಲ್ಲ. ಸಮಯಕ್ಕೆ ಸರಿಯಾಗಿ ಉತ್ತರ ಬರಲಿಲ್ಲವೆಂದಾಗ ನಾವೇನು ತಿಳಿಯುತ್ತೇವೆ? "ಎಲ್ಲೋ ಅಂಚೆ ಕಛೇರಿಗಳ ನಡುವೆ ತಿರುಗಾಡುತ್ತಿರ ಬಹುದು; ಅಂಚೆಯಾಳು ಹಾಳು ಬಾವಿಗೆ ಎಸೆದಿರಲೂ ಬಹುದು; ಅಥವಾ ಯಾವುದೋ ಶಾಲೆ ಮಗುವಿನ ಪುಸ್ತಕದೊಳಗೆ ಹಾಯಾಗಿ ನಿದ್ರಿಸುತ್ತಿರಲೂ ಬಹುದು. ಪಾಪ, ಅವನಿಗೆ ಬಿಡುವಿಲ್ಲದೆ? ಓದಿ ಎಲ್ಲಿ ಮೂಲೆಗೆ ತಳ್ಳಿದ್ದಾನೋ! ನಮ್ಮಂತಹ ಎಷ್ಟು ಜನರಿಂದ ಆತನಿಗೆ ಕಾಗದ ಬರುತ್ತಿದೆಯೋ ಏನೋ! ಅವಕ್ಕೆಲ್ಲ ಉತ್ತರಿಸುತ್ತಾ'

ಆದರೆ, ಸತ್ಯ ಹೇಳಬೇಕಾದರೆ, ಸಮಯಕ್ಕೆ ಸರಿಯಾಗಿ ಉತ್ತರ ಬರೆಯದಿರುವುದು ದೊಡ್ಡತನದ ಲಕ್ಷಣವಲ್ಲ; ದಡ್ಡತನದ ಹೆಗ್ಗುರುತು. ನಿಮ್ಮ ಜೀವನ ಯದ್ವಾತದ್ವಾವಾಗಿ ನಡೆದಿದೆ; ಅನಿಯಮಿತವಾಗಿದೆಯೆಂದು ನಿಮ್ಮ ಮಿತ್ರರಿಗೆ ತಿಳಿಸಬೇಕೆಂದಿದ್ದರೆ, ಸಮಯಕ್ಕೆ ಸರಿಯಾಗಿ ಉತ್ತರಿಸಬೇಡಿ; ಎಂದೋ ಬಂದವುಗಳಿಗೆ ಯಾವಾಗಲೋ ಉತ್ತರಿಸ ಹೋಗಿ 'ಕಾರಣಾಂತರ'ದ ನೆಪವೊಡ್ಡಿ ಕ್ಷಮೆಯಾಚಿಸಿ. ಆಗ ನೀವು ನಿಜವಾಗಿಯೂ ದಡ್ಡರು ಎಂದು ಜಗಜ್ಜಾಹೀರಾಗುತ್ತದೆ. ನಿಮ್ಮ ಬೇಜವಾಬ್ದಾರಿಕೆಗೆ ಅಸಡ್ಡೆಗೆ ಅದೊಂದು ಜಾಹೀರಾತಾಗುತ್ತದೆ.

ಡಾ| ಜಾನ್ಸನ್ನರ ಬಳಿಗೆ ಮಿತ್ರರೊಬ್ಬರು ಬಂದರು. ಧಾರ್ಮಿಕ ಗ್ರಂಥಗಳನ್ನು ಓದಲು ತನಗೆ ಬಿಡುವೇ ದೊರೆಯುತ್ತಿಲ್ಲವೆಂದು ಗೊಣಗಿದರು.

'ಯಾಕೆ?' ಜಾನ್ಸನ್ ಕೂಡಲೇ ಪ್ರಶ್ನಿಸಿದರು.

'ನೋಡಿ, ದಿನ ರಾತ್ರಿ ಒಟ್ಟು ಕೂಡಿಸಿದರೆ ಆಗುವುದು ಇಪ್ಪತ್ತುನಾಲ್ಕು ಗಂಟೆಗಳು ಮಾತ್ರ. ಇದರಲ್ಲಿ ಎಂಟು ಗಂಟೆ ನಿದ್ರೆಯಲ್ಲೇ ಹೋಗುತ್ತದೆ.'

'ಇದು ನಿಮಗೆಂದೇನು? ಲೋಕದ ಎಲ್ಲರಿಗೂ ಹಾಗೇನೇ?

'ಅದು ಸರಿ. ನೋಡಿ ಮತ್ತೆ ಎಂಟು ಗಂಟೆ ಆಫೀಸಿನ ಕೆಲಸದಲ್ಲಿ ಕಳೆಯುತ್ತದೆ.'

'ಇನ್ನೂ ಎಂಟು ಗಂಟೆ ಉಳಿಯುತ್ತದೆಯಲ್ಲಾ?'

'ನೋಡಿ, ಇದರಲ್ಲಿ ಸ್ನಾನ, ಊಟ ಮುಖಕ್ಷೌರ, ಆಫೀಸಿಗೆ ಹೋಗಿಬರುವುದು, ಮಿತ್ರರನ್ನು ಕಂಡು ನಾಲ್ಕು ಕುಶಲ ಮಾತುಕತೆ, ಕಾಗದ ಬರೆಯುವುದು..ಅಯ್ಯೋ ಒಂದೇ ಎರಡೆ? ನೂರು ಕೆಲಸಗಳಿವೆ.'

'ಹಾಗಾದರೆ, ನಾನು ಹಸಿವೆಯಿಂದಲೇ ಸಾಯಬೇಕಾಗುತ್ತದೆ!" ಜಾನ್ಸನ್ ಉದ್ಗರಿಸಿದರು.

'ಏಕೆ? ಏಕೆ?' ಮಿತ್ರರಿಂದ ಪ್ರಶ್ನೆ ಕೂಡಲೇ ಹೊರಟಿತು.

'ನಾನು ಚೆನ್ನಾಗಿ ತಿನ್ನುವವ. ಅನ್ನ ಬೆಳೆಯುವ ಭೂಮಿ ಒಂದು ಪಾಲಾದರೆ, ನೀರು ಮೂರು ಪಾಲು. ಪ್ರಪಂಚದಲ್ಲಿ ನನ್ನಂತಹ ಕೋಟ್ಯಂತರ ಮನುಷ್ಯರಿದ್ದಾರೆ. ಅವರೂ ತಂತಮ್ಮ ಹೊಟ್ಟೆ ತುಂಬಿಸಿಕೊಳ್ಳಬೇಕಲ್ಲಾ?'

(ಎಂಟನೇ ಪುಟ ನೋಡಿ)

ಮತ್ಸ್ಯ ಸಂಪತ್ತು

ರಾಜ್ಯದ ಮುಖ್ಯ ನಿಸರ್ಗದತ್ತ ಸಂಪನ್ಮೂಲಗಳಲ್ಲಿ ಮೀನುಗಾರಿಕೆ ಒಂದಾಗಿದೆ. ಈ ಉದ್ಯಮದ ಅಭಿವೃದ್ಧಿಗೆ ನಾಲ್ಕನೆಯ ಯೋಜನೆಯಲ್ಲಿ **300** ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು.

ಯೋಜನೆಯ ಅವಧಿಯಲ್ಲಿ ಒಳನಾಡು ಮೀನು ಸಂಪಾದನೆ **50,000** ಟನ್ನಿನಿಂದ **72,000** ಟನ್ನುಗಳಿಗೆ ಏರಲಿದೆ. ಸಮುದ್ರದ ಮೀನು ಸಂಪಾದನೆ **1.35** ಲಕ್ಷ ಟನ್ನುಗಳಿಂದ **1.65** ಲಕ್ಷ ಟನ್ನುಗಳಿಗೆ ಹೆಚ್ಚಲಿದೆ.

ಮೀನುಗಾರಿಕೆಗಾಗಿ ಇರುವ ಯಾಂತ್ರಿಕ ದೋಣಿಗಳ ಜೊತೆಗೆ ಇನ್ನೂ **385** ದೋಣಿಗಳನ್ನು ಸೇರಿಸುವುದು ನಾಲ್ಕನೆಯ ಯೋಜನೆಯ ಗುರಿ.

1968—69ರಲ್ಲಿ ಮೀನು ರಫ್ತಿನಿಂದ ನಾವು ಗಳಿಸಿದ ವಿದೇಶಿ ವಿನಿಮಯ **1.14** ಕೋಟಿ ರೂಪಾಯಿಗಳು.

(ಮೈಸೂರು ಸರಕಾರದ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ ಪ್ರಕಟಿತ)

ನೀರು ಬೇಕೆನಿಸಿದಾಗ ಬಾವಿ ತೋಡುವರೆ?

ಶ್ರೀಮತಿ ಇಂದಿರಾ ಗಾಂಧಿಯವರು ತನ್ನ ವಿರೋಧಿಗಳ ನಿರೀಕ್ಷೆಯನ್ನು ಮೆಟ್ಟಿ ನಿಂತರು. ಸಂಸತ್ತಿನಲ್ಲಿ ಬಹುಮತವನ್ನು ಗಳಿಸಿದರು.

ತನ್ನ ನಮ್ರ ಅನುಯಾಯಿಗಳನ್ನು ಕೂಡಿಕೊಂಡು ಸಂಪುಟ ರಚನೆ ಮಾಡಿದರು ಎನ್ನಿ.

ಅವರ ಬಹುಮತದ ಪರಿಣಾಮ ಬಹು ಮುಖಿಯೆಂಬುದು ನಿಸ್ಸಂದೇಹ. ಅದರ ಪರಿಣಾಮವೂ ಬಹು ಲೀಲಾಮಯ.

ತನ್ನ ಪ್ರಗತಿಪರ ನೀತಿಗಳ ಅನುಷ್ಠಾನಕ್ಕೆ ಸಂಸತ್ತಿನಲ್ಲಿ ಸ್ಪಷ್ಟ ಬಹುಮತ ಅಗತ್ಯವೆನಿಸಿದ್ದರಿಂದ ಅವರು ಲೋಕಸಭೆಯನ್ನು ವಿಸರ್ಜಿಸಿದ್ದರು.

ನಮ್ಮ ಜನ ಆಕೆಗೆ ಸ್ಪಷ್ಟ ಬಹುಮತವನ್ನೇ ಒದಗಿಸಿ ಕೊಟ್ಟಿತು.

ಇದಕ್ಕೇನು ಕಾರಣ? ದೇಶದ ಮೂಲೆ ಮೂಲೆಯಲ್ಲೂ ಇಂದಿರಾ ವಿರೋಧ ಬಲಿಯುತ್ತಿದ್ದಿತಾದರೂ ಆಕೆಯನ್ನೇ ಬೆಂಬಲಿಸಲು ಕಾರಣವೇನು?

ಇದನ್ನು ಉತ್ತರಿಸಬೇಕಾದವರು ಆಕೆಯ ವಿರೋಧಿಗಳು.

ಆಕೆಯ ವಿಜಯಕ್ಕೆ ಹತ್ತಾರು ಕಾರಣಗಳಿವೆ. ರಾಜ್ಯಕೀಯ ಪಕ್ಷಗಳ ಹೆಚ್ಚಳವೇ ಈ ವಿಜಯದ ಮುಖ್ಯ ಕಾರಣ.

ದೇಶದಲ್ಲಿ ಪ್ರಜಾಪ್ರಭುತ್ವವು ಯಶಗಳಿಸಬೇಕಾದರೆ, ರಾಜ್ಯಕೀಯ ಪಕ್ಷಗಳ ಸಂಖ್ಯೆ ಬೆರಳೆಣಿಕೆಗೆ ಸಿಗುವಂತಾಗಬೇಕು. ಈ ಅಗತ್ಯವನ್ನು ಹಿಂದಿನಿಂದಲೂ ಬುದ್ಧಿಜೀವಿಗಳು ಒತ್ತಾಯಿಸುತ್ತಲೇ ಬಂದಿದ್ದಾರೆ.

ಆದರೆ, ನಮ್ಮ ರಾಜ್ಯಕೀಯ ನಾಯಕರು ತಿಲಮಾತ್ರ ಭಿನ್ನ ಮತದಿಂದಾಗಿ ಹೊಸ ಪಕ್ಷವನ್ನು, ಗುಂಪನ್ನು ಕಟ್ಟಿಕೊಳ್ಳಲು ಮುಂದಾದರು.

ಶ್ರೀಮತಿ ಗಾಂಧಿಯನ್ನು ಅಧಿಕಾರ ವಂ

ಸಣ್ಣ ಸಂಸಾರ ಸುಖದ ಸಂಸಾರ. ಇಂತಹ ಸಂಸಾರದಲ್ಲಿ ಮಕ್ಕಳಿಗೆ ಉತ್ತಮ ಆಹಾರ, ಒಳ್ಳೆಯ ಶಿಕ್ಷಣ ಮತ್ತು ಜೀವನದ ಇತರ ಸೌಕರ್ಯಗಳು ಲಭಿಸುವುದು ಸಹಜ.

ನಿಮ್ಮ ಸಂಸಾರ ಸಣ್ಣದಾಗಿರುವಂತೆ ನೋಡಿಕೊಳ್ಳಿರಿ. ಒಂದು ಮಗು ಜನಿಸಿ ಮೂರು ನಾಲ್ಕು ವರ್ಷ ಕಳೆದ ನಂತರವೇ ಇನ್ನೊಂದು ಮಗು ಜನಿಸುವಂತೆ ಪ್ರಯತ್ನಿಸಿರಿ.

ಕುಟುಂಬ ಯೋಜನೆ ಮಾಡುವುದು ಹೇಗೆಂಬ ಬಗ್ಗೆ ಉಚಿತ ಸಲಹೆ ಮತ್ತು ಸೇವೆ ಪಡೆಯಲಿಕ್ಕಾಗಿ ಸಮೀಪವಿರುವ ಕುಟುಂಬ ಕಲ್ಯಾಣ ಯೋಜನಾ ಕೇಂದ್ರಕ್ಕೆ ಹೋಗಿ ವಿಚಾರಿಸಿರಿ. ಈ ಕೇಂದ್ರದ ಸಂಕೇತ—ಕೆಂಪು ತ್ರಿಕೋಣ.

ಯೋಜಿತ ಸಂಸಾರ
ಸಂತೋಷಿತ ಸಂಸಾರ

ಸಂಸಾರದಲ್ಲಿ ಸಂತೋಷ

davp

ಚಿತ್ರಗೊಳಿಸಲೆಂದು ವೈತ್ರಿಕೂಟದ ರಚನೆಯಲ್ಲಿ ನಾಲ್ಕು ಪಕ್ಷಗಳು ತೊಡಗಿದವು.

ಇವುಗಳ ಹಾಡೇನಾಯ್ತು?

ಸ್ಥಾನಗಳ, ಕ್ಷೇತ್ರಗಳ ಹಂಚಿಕೆಯಲ್ಲೇ ಅವು ಭಿನ್ನಾಭಿಪ್ರಾಯ ತಳೆದವು. ಪರಸ್ಪರ ಚುನಾವಣೆಯಲ್ಲಿ ಒಬ್ಬರನ್ನೊಬ್ಬರನ್ನು ಎದುರಿಸಿದುವು. ಇದರಿಂದ ಲಾಭ ಪಡೆದವರು ವೈತ್ರಿಕೂಟದವರಲ್ಲ; ಇಂಡಿಕೇಟಿಗರು.

ಒಂದು ಸ್ಥಾನದಲ್ಲಿ ಹತ್ತಾರು ಮಂದಿ ಅಭ್ಯರ್ಥಿಗಳು ಸ್ಪರ್ಧಿಸಿದ್ದುದರಿಂದ ಇಂಡಿಕೇಟಿಗೆ ಪ್ರಯೋಜನವಾಯ್ತು. ಹಣಾಹಣಿ ಪ್ರತಿಸ್ಪರ್ಧೆ ಏರ್ಪಡುತ್ತಿದ್ದರೆ, ಹಲವಾರು ಪರಿಣಾಮಗಳಲ್ಲಿ ಪರಿವರ್ತನೆ ಸಾಧ್ಯವಾಗುತ್ತಿತ್ತು.

ಹಲವು ಸಮಗಾರರು ಚರ್ಮದ ಹದಗೆಡಿಸಿದರು; ಹಲವು ಅಭ್ಯರ್ಥಿಗಳು ವಿರೋಧದ ಬಲಗುಂದಿಸಿದರು.

ನಮ್ಮ ಮತದಾರರಲ್ಲಿ ಅಧಿಕಾಂಶ ಜನರು ಅನಭಿಜ್ಞರೆಂಬುದು ಸತ್ಯ. ಈ ಪರಿಸ್ಥಿತಿ ಹಿಂದೆಯೂ ಇತ್ತು, ಮುಂದೆಯೂ ಬಹುಕಾಲ ಉಳಿಯುತ್ತದೆ ಎಂಬುದನ್ನು ನಮಗೆ ಬೇಡವಾಗಿಯೊದರೂ ಒಪ್ಪಿಕೊಳ್ಳಲೇಬೇಕು.

ಇನರು ಪ್ರಜಾಪ್ರಭುತ್ವದ ಆಗು-ಹೋಗುಗಳ ಬಗ್ಗೆ ಚೆನ್ನಾಗಿ ಮನನ ಮಾಡಲಾರರು ಎಂಬುದರಲ್ಲೂ ತುಸು ಸತ್ಯಾಂಶವಿತ್ತು; ಮುಂದೆಯೂ ಇರುತ್ತದೆ.

ಶ್ರೀಮತಿ ಗಾಂಧಿಯವರು ಬೀಸಿದ ಪ್ರಗತಿ ಬ್ರಾಂಡಿನ ಬಿರುಗಾಳಿಯಲ್ಲಿ ದೊಡ್ಡ ದೊಡ್ಡ ಗೋಳೀ ಮರಗಳೇ ಉರುಳಿ ಹೋದವು.

ಆಕೆಗೆ ಹಲವಾರು ಉಪಯೋಗಿ ಅಂಶಗಳಿದ್ದುವು ಎಂದು ಒಪ್ಪಿಕೊಳ್ಳಬೇಕು.

ಆಕೆಯು ಲೋಕ ಸಭೆಯನ್ನು ವಿಸರ್ಜಿಸಿದರೂ ಅಧಿಕಾರ ತ್ಯಾಗ ಮಾಡಲಿಲ್ಲ.

ಆಕೆ ಮಹಿಳೆ. ಮಹಿಳಾ ಮತದಾರರೆಲ್ಲ ಆಕೆಯಿಂದ ಪ್ರಭಾವಿತರಾದದು ಸಹಜ. ಅನಕ್ಷರಸ್ಥರ ಸಂಖ್ಯೆಯೊದರೂ ಪುರುಷರಿಗಿಂತ ಮಹಿಳೆಯರಲ್ಲೇ ಹೆಚ್ಚು. ರಾಜ್ಯಕೀಯ ಜ್ಞಾನದಿಂದ ದೂರವಿರುವವರಲ್ಲೂ ಅವರ ಸಂಖ್ಯೆಯೇ ಅಧಿಕ.

ಗಂಡಸರು ತಂದು ಹಾಕಿದುದನ್ನು ಬೇಯಿಸಿ ಹಾಕುವುದಷ್ಟನ್ನೇ ತಮ್ಮ ಧರ್ಮವೆಂದು ಬಗೆದ ಸ್ತ್ರೀಯರಿಗೆ ಸ್ತ್ರೀಪರ ಅಭಿಮಾನ-ಪಕ್ಷಪಾತಗಳೂ ಇರುವುದು ಅಸಹಜವಲ್ಲ. ಆಸ್ತಿಯ ಮಿತಿ ಹೇರಲಿ, ನಿರುದ್ಯೋಗ ಹೆಚ್ಚಲಿ, ಉತ್ಪಾದನೆ ಕುಂದಲಿ, ಕರಭಾರವೇರಲಿ, ಬೆಲೆಯೇರಿಕೆ ಗಗನ ವಿಹಾರಿಯಾಗಲಿ, ನಮ್ಮ ಹೆಚ್ಚಿನ ಮಹಿಳೆಯರು ಇದರಿಂದ ಕಂಗಾಲಾಗುವುದಿಲ್ಲ. ಮನೆಯ ಯಜಮಾನನಷ್ಟೇ ತಲೆ ತಗ್ಗಿಸಬೇಕು.

ಶ್ರೀಮತಿ ಗಾಂಧಿ ಭಾರತ ರತ್ನ ವಿಶ್ವವಂದ್ಯ ಪಂ. ನೆಹರೂರವರ ಪುತ್ರಿ. ನೆಹರೂ ಮನೆತನದಲ್ಲಿ ಅದರ ತ್ಯಾಗ-ಬಲಿದಾನಗಳಿಂದ ಪ್ರಭಾವಿತರಾದವರೇ ಹೆಚ್ಚಿನವರು.

ಶ್ರೀಮತಿ ಗಾಂಧಿ 'ಪ್ರಗತಿ'ಯ 'ಸಮಾಜವಾದ'ದ ನೀರಿಗೆ ಹೊಸ ರಂಗು ಬೆರಸಿ ಜನತೆಯ ಮುಂದೆ ಪ್ರದರ್ಶಿಸಿದ್ದಾರೆ; ಆ ರಂಗಿನಿಂದ ಯಾವ ಪ್ರಯೋಜನವೂ ಇಲ್ಲವೆಂಬುದು ಇನ್ನು ಮುಂದೆ ಅನುಭವಕ್ಕೆ ಬರಬೇಕಷ್ಟೆ.

ಅಧಿಕ ಮೌಲ್ಯದ ವಿದೇಶೀ ಹಣವನ್ನು ಆಕೆ ಚುನಾವಣಾ ವೇಳೆ ಬಳಸಿದ್ದಾರೆ ಎಂಬುದು ವಿರೋಧಿಗಳ ದೂರು. ಲೈಸೆನ್ಸಿಂಗ್‌ನಿಂದ ಅಕ್ರಮ ಹಣಗಳಿಸಿದ್ದಾರೆಂಬುದು ಅವರ ಮತ್ತೊಂದು ಆರೋಪ. ಇವುಗಳಲ್ಲಿ ಹುರುಳಿರಬಹುದು; ಇಲ್ಲದಿರಬಹುದು. ವಿಚಾರಣೀಯ ಅಷ್ಟೆ.

ಶ್ರೀಮತಿ ಗಾಂಧಿ ವಿರೋಧಿಗಳು ತಮ್ಮ ನೀತಿ—ನಿಲುವೆಗಳ ಬಗ್ಗೆ ಹೇಳಿಕೆ ನೀಡಿಯೇ ತೃಪ್ತರಾದುದು ಅವರ ಸೋಲಿಗೆ ಮುಖ್ಯಕಾರಣ. ಜನ ಜನಕ್ಕೂ ಅವರು ತಮ್ಮ ಸಂದೇಶವನ್ನು, ತಮ್ಮ ಕಾರ್ಯ ಪ್ರಣಾಳಿಕೆಯನ್ನು ಮುಟ್ಟಿಸಲಿಲ್ಲ.

ಅಂದರೆ, ಅವರ ಪ್ರಚಾರ ಕಾರ್ಯ, ಮತದಾರರನ್ನೊಲಿಸುವ ಸಾಧನಗಳು ಅಪರ್ಯಾಪ್ತ.

ತಂತಮ್ಮಲ್ಲೇ ಯಾದವೀ ಕಲಹಕ್ಕೆ ತೊಡಗಿದವರು ಶ್ರೀಮತಿ ಗಾಂಧಿ ವಿಜಯವನ್ನು ತಡೆಯದಾದರು.

ಧನ—ಕರುಗಳ ಚಿಹ್ನೆಯೂ ಆಕೆಗೆ ಅನುಕೂಲವಾಗಿಯೇ ಪರಿಣಮಿಸಿತು.

ಈ ಮಧ್ಯಾವಧಿ ಚುನಾವಣೆಗಳ ವೇಳೆ ಏರ್ಪಟ್ಟ ಅನುಕೂಲ ಪರಿಸ್ಥಿತಿಗಳ ಉಪಯೋಗವನ್ನು ವಿರೋಧಿ ಪಕ್ಷಗಳು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ಅಶಕ್ತವಾದುವು ಎಂದರೆ, ಇನ್ನು ನಿಕಟ ಭವಿಷ್ಯದಲ್ಲಿ ಅವು ತಲೆಯೆತ್ತುವುದು ಸಾಧ್ಯವಿಲ್ಲ.

ಕಾಂಗ್ರೆಸ್ ವಿಘಟನೆಯ ಬಳಿಕ ಕಾಮರಾಜರು ತಮಿಳುನಾಡಿನಲ್ಲೇ ತಿರುಗಾಡಿದರು. ಅಲ್ಲಿ ಇಂದಿರಾ ಗಾಳಿಯ ಸೋಂಕೂ ತಗಲದಂತೆ ಕೆಲಸ ಮಾಡಿದರು.

ಅವರು ಒಂದೂವರೆ ವರ್ಷಕಾಲ ಹಗಲು ರಾತ್ರೆ ತನ್ನ ಸಂದೇಶವನ್ನು ಜನ ಜನಕ್ಕೂ ಮುಟ್ಟಿಸಿದ್ದುದರಿಂದಲೇ ಅವರ ಪ್ರಭಾವ ಹೆಚ್ಚುವುದು ಸಾಧ್ಯವಾಯಿತು. ಒಂದೂವರೆ ವರ್ಷಕಾಲ ದುಡಿದರೂ ಕಾಮರಾಜರು ತೃಪ್ತಿಪಡುವುದು ಅಸಾಧ್ಯವಾದಾಗ, ಒಂದೂವರೆ ತಿಂಗಳೂ ಹೃತ್ಪೂರ್ವಕ ದುಡಿಯದವರು ತೃಪ್ತಿಪಡುವುದು ಸಾಧ್ಯವೆ?

ಶ್ರೀಮತಿ ಇಂದಿರಾ ವಿರೋಧಿಗಳು ತಮ್ಮ ಕೈಗೆ ಬಂದ ಸುವರ್ಣಾವಕಾಶವೊಂದನ್ನು ಬೇಕೆಂದೇ ಕಳೆದುಕೊಂಡರು.

ಈಗ ಅವರು ಮುಂದೆ ಮಾಡಬೇಕಾದ ಕೆಲವು ಕೆಲಸಗಳಿವೆ.

ಮುಖಭಂಗಿತರಾದ ಹಳೆಯಹುಲಿಗಳು ರಾಜ್ಯಕೀಯ ಸನ್ಯಾಸ ತೆಗೆದುಕೊಂಡು ಯುವಜನಾಂಗಕ್ಕೆ ಸಕ್ರಿಯವಾಗಿ ದುಡಿಯುವ ಅವಕಾಶ ಒದಗಿಸಬೇಕು.

ದೇಶದ ಪಕ್ಷಗಳ ಸಂಖ್ಯೆಯನ್ನು ಮೂರು-ನಾಲ್ಕಕ್ಕೆ ಇಳಿಸಲು ಅನುಕೂಲ ವಾತಾವರಣವುಂಟುಮಾಡಬೇಕು.

ಇದಕ್ಕಾಗಿ ತಂತಮ್ಮ ಪಕ್ಷಗಳನ್ನೇ ವಿಸರ್ಜಿಸಬೇಕಾಗಿ ಬಂದರೂ ಅದಕ್ಕೆ ಹಿಂದೆ ಮುಂದೆ ನೋಡಬಾರದು.

ಪಕ್ಷದ ನೀತಿ-ನಿಲುವೆಗಳ ಪ್ರಚಾರವನ್ನು ದಿನಂಪ್ರತಿಯೂ ಮಾಡುತ್ತಿರಬೇಕು. ಚುನಾವಣೆಗಳ ವೇಳೆ ಮಾತ್ರ ಪ್ರಚಾರಕ್ಕಿಳಿದರೆ ಆಗದು.

ಜನಸಂಪರ್ಕವನ್ನು ಹೊಂದಲು ನಿಸ್ವಾರ್ಥ ರಾಜ್ಯಕೀಯ ಸೇವಕರ ತಂಡವೇ ನಿರ್ಮಾಣವಾಗಬೇಕು.

'ನೀರು ಬೇಕಾದಾಗ ಬಾವಿ ತೋಡಿದರಾಯ್ತು' ಎಂಬುದು ಮನೆಮಾಡುವವರ ಲಕ್ಷಣವಲ್ಲ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 203/1970.

ಗೋವರ್ಧನ ಕಾಮತ್ ಕೂಡ —ವಾದಿರು

ಮತ್ತು

ಗೋವಿಂದ ಕಾಮತ್ ಕೂಡ —ಪ್ರತಿವಾದಿರು

ಇವರೊಳಗೆ

ಉಡುಪಿ ತಾಲ್ಲೂಕು ಅಲೆವೂರು ಗ್ರಾಮದ ಗುಡ್ಡೆ ಅಂಗಡಿಯಲ್ಲಿ ಗಣಪತಿ ಕಂಪೌಂಡ್ರಲ್ಲಿರುವ—ನಾರಾಯಣ ಕಾಮತ್ರ ಮಕ್ಕಳು—18ನೆ ಪ್ರತಿವಾದಿಳು ಅಪ್ಪಿ ಯಾನೆ ಸಖು ಬಾಯಿ 1, 17ನೆ ಪ್ರತಿವಾದಿಳು ಶ್ರೀಮತಿ ಬಾಯಿ 1 ಕೂಡ ಇವರಿಗೆ

ವಾದಿರು ಪಾಲಿನ ಬಗ್ಗೆ ನೀವು ಕೂಡಾ 17 ಜನರ ಮೇಲೆ ಹೂಡಿದ ದಾವೆಯಲ್ಲಿ ನಿಂಮಿಬ್ಬರಿಗೆ ನೋಟೀಸು ಆಗದ ಕಾರಣ ನಿಂಮ ನೋಟೀಸಿನ ಬಗ್ಗೆ ತಾ. 6-4-71ಕ್ಕೆ ಇಟ್ಟಿದೆ. ನಿಂಮ ಆಕ್ಷೇಪ ಇದ್ದರೆ ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಹಾಜರು ಹಾಕಿ ಕೊಳ್ಳಬೇಕು. ಇಲ್ಲವಾದ್ರೆ ನಿಂಮನ್ನು ಎಕ್ಸ್ ಪಾರ್ಟಿ ಮಾಡಿ ನಿಂಬ್ರ ತೀರ್ಮಾನಿಸಲಾಗುವದು.

(ಕೋರ್ಟ ಹುಕುಂ ಪ್ರಕಾರ)

B. Yogishwara Holla,
Advocate for Plaintiffs.

Udipi, 9-3-71.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

I. A. I. O. S. 23/1965.

ವಾದಿರು —ಸಾದಮ್ಮ ಶೆಡ್ತಿ ಸಹಾ.

ಪ್ರತಿವಾದಿರು —ಸೂರ ಶೆಟ್ಟಿ ಸಹಾ.

ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮದ ಜೋಗೂರಿನಲ್ಲಿರುವ ಚಂದಮ್ಮ ಶೆಡ್ತಿರ ಮಕ್ಕಳು 2ನೇ ಪ್ರತಿವಾದಿಳು ಮಹಾಲಕ್ಷ್ಮಿ ಶೆಡ್ತಿ 1, 3ನೇ ಪ್ರತಿವಾದಿ ಕೃಷ್ಣಪ್ಪ ಶೆಟ್ಟಿ 1, 4ನೇ ಪ್ರತಿವಾದಿ ಹಿರಿಯಣ್ಣ ಶೆಟ್ಟಿ 1, 2ನೇ ಪ್ರತಿವಾದಿಳ ಮಗ 6ನೇ ಪ್ರತಿವಾದಿ ವೀರಣ್ಣ ಶೆಟ್ಟಿ 1, ಶೇಷಿ ಶೆಟ್ಟಿರ ಮಗಳು 14ನೇ ಪ್ರತಿವಾದಿಳು ಪಾರ್ವತಿ ಶೆಡ್ತಿ ಸ್ವತಹಾ ಮತ್ತು ಮೈನರ್ 31ನೇ ಪ್ರತಿವಾದಿಳು ಮೈನರ ಅಂಬು 1, 32ನೇ ಮೈನರ ಗುಂಡ 1, 33ನೇ ಮೈನರ ಶೀಲ 1 ಕೂಡಾ 3 ಜನರ ಗಾರ್ಡಿಯನ್ ಆಗಿ ಸಹಾ 1, ಮೂಕಮ್ಮ ಶೆಡ್ತಿರ ಮಕ್ಕಳು 17ನೇ ಪ್ರತಿವಾದಿ ಕೃಷ್ಣಪ್ಪ ಶೆಟ್ಟಿ 1, 18ನೇ ಪ್ರತಿವಾದಿಳು ಸಾಧಮ್ಮ ಶೆಡ್ತಿ ಸ್ವತಹಾ ಮತ್ತು ಮೈನರ್ 26ನೇ ಪ್ರತಿವಾದಿ ಟೀಚಿ ಯವಳ ಗಾರ್ಡಿಯನ್ ಆಗಿ ಸಹಾ 1, 19ನೇ ಪ್ರತಿವಾದಿ ಭುಜಂಗ ಶೆಟ್ಟಿ 1, ಕನಕಮ್ಮ ಶೆಡ್ತಿ ಮಕ್ಕಳು 27ನೇ ಪ್ರತಿವಾದಿ ನಾಗಯ್ಯ ಶೆಟ್ಟಿ 1, 28ನೇ ಪ್ರತಿವಾದಿಳು ಶ್ರೀಮತಿ ಶೆಡ್ತಿ ಸ್ವತಹಾ ಮತ್ತು ಮೈನರ್ 29ನೇ ಪ್ರತಿವಾದಿ ಅಖಿಲ ಕುಮಾರ 1, 30ನೇ ಪ್ರತಿವಾದಿ ಮೈನರ್ ಅತುಲ ಕುಮಾರ 1 ಕೂಡಾ 2 ಜನರ ಗಾರ್ಡಿಯನ್ ಆಗಿ ಸಹಾ 1, ಕುಂದಾಪುರ ತಾಲ್ಲೂಕು ನಂಬ್ರ 1ನೇ ಶಿರೂರು ಗ್ರಾಮದಲ್ಲಿರುವ ಸೂರಮ್ಮ ಶೆಡ್ತಿರ ಮಗ 35ನೇ ಪ್ರತಿವಾದಿ ನಾರಾಯಣ ಶೆಟ್ಟಿ 1, ಮೂಕಮ್ಮ ಶೆಡ್ತಿರ ಮಕ್ಕಳು 36ನೇ ಪ್ರತಿವಾದಿ ಶೀನಪ್ಪ ಶೆಟ್ಟಿ ಸ್ವತಹಾ ಮತ್ತು 38ನೇ ಪ್ರತಿವಾದಿ ಮೈನರ್ ಜಗನ್ನಾಥನ ಗಾರ್ಡಿಯನ್ ಆಗಿ ಸಹಾ 1, 37ನೇ ಪ್ರತಿವಾದಿಳು ಅಕ್ಕಯ್ಯ ಶೆಡ್ತಿ 1, ಸುಬ್ಬಕ್ಕ ಶೆಡ್ತಿರ ಮಕ್ಕಳು 77ನೇ ಪ್ರತಿವಾದಿ ನಾರಾಯಣ ಶೆಟ್ಟಿ 1, 78ನೇ ಪ್ರತಿವಾದಿ ಸುಬ್ಬಣ್ಣ ಶೆಟ್ಟಿ 1, 79ನೇ ಪ್ರತಿವಾದಿ ವೀರಣ್ಣ ಶೆಟ್ಟಿ 1 ಕೂಡಾ ಇವರೆಲ್ಲರಿಗೂ ಈ ಮೂಲಕ ತಿಳಿಸುವುದೇನೆಂದರೆ,

ಮೇಲಿನ ದಾವೆಯಲ್ಲಿ ತಾ. 18-12-67ರಲ್ಲು ಕೊಡಲ್ಪಟ್ಟ ಪಾಲಿನ ಪ್ರಿಲಿಮಿನರಿ ಡಿಕ್ರಿ ವಿಧಿಗನುಸರಿಸಿ ಪಾಲಿನ ಫೈನಲ್ ಡಿಕ್ರಿ ಕೊಡಿಸಬೇಕೆಂತ ವಗೈರೆ ಕಾಣ್ಸಿ ವಾದಿಯು ದಾಖಲು ಮಾಡಿದ ಮೇಲಿನ ಅರ್ಜಿ ತಾರೀಖು 16-4-71ನೇ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನಿಖೆಗೆ ಇಡಲಾಗಿದೆ ಎಂಬ ಸಂಗ್ತಿ ಈ ಮೂಲಕ ನಿಮಗೆ ತಿಳಿಸಲಾಗಿದೆ. ಆಕ್ಷೇಪ ಇದ್ದರೆ ಸದ್ರಿ ದಿವಸ ಹಾಜರಾಗಿ ಮಾಡಿಕೊಳ್ಳತಕ್ಕದ್ದು.

B. S. Shetty,
B. A. B. L.
Vakil for plaintiffs,
petitioners.

Coondapoor. 8-3-1971.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸಮಯವಿಲ್ಲದ ಸಮಾಜವಾದಿಗಳು

(ಐದನೇ ಪುಟದಿಂದ)

'ಹಾಗೇನಿಲ್ಲ. ಭೂಮಿ ಮತ್ತೂ ಬೇಕಾದಷ್ಟಿದೆ; ಅನ್ನ ಬೆಳೆಯುತ್ತದೆ.'

'ಎಲ್ಲಿ ಹಾಗಿದೆ? ಇರುವ ಕಾಲು ಭಾಗ ನೆಲದಲ್ಲೇ ಪರ್ವತವೆಷ್ಟು? ಬೆಟ್ಟವೆಷ್ಟು, ನದಿಗಳೆಷ್ಟು, ಮರುಭೂಮಿಯೆಷ್ಟು? ಬಂಜರು ಭೂಮಿಯೆಷ್ಟು? ಇವೆಲ್ಲ ಕಳೆದು ಬಿಟ್ಟರೆ, ಅನ್ನ ಬೆಳೆಯುವ ಪ್ರದೇಶ ಭಾರಿ ಚಿಕ್ಕದು. ನನ್ನ ಈ ಭೀಮನ ಹೊಟ್ಟೆ ಹೇಗೆ ತುಂಬ ಬಲ್ಲುದು ದೇವರೆ!'

ಮಿತ್ರರು ಜಾನ್ಸನ್ನರಿಗೆ ಉಪವಾಸ ಬೀಳುವ ಪ್ರಮೇಯ ಬರುವುದಿಲ್ಲವೆಂದು ವಿಶ್ವಾಸ ಹುಟ್ಟಿಸ ತೊಡಗಿದರು.

ಕೊನೆಗೆ ಜಾನ್ಸನ್ ಎಂದರು 'ನೀನು ಹೇಳುವುದು ಸರಿ. ನನಗೆ ಊಟ ಸಿಗುವುದಾದರೆ, ನಿನಗೆ ಧಾರ್ಮಿಕ ಗ್ರಂಥವೋದಲೂ ಸಮಯ ಸಿಕ್ಕೇ ತೀರಬೇಕು.' ದೊಡ್ಡ ನಗುವೊಂದವರ ಮುಖದಿಂದ ಹೊರ ಬಿತ್ತು. ಅವರ ಮಿತ್ರರು ಕ್ಷಣ ನಿಲ್ಲದೆ ಕಂಬಿ ಕಿತ್ತರು.

ಸಮಯ ಅತ್ಯಮೂಲ್ಯವಾದಸಂಪತ್ತು. ಭೌತಿಕವಾದ ಸಂಪತ್ತು ಸಂಪಾದನೆಯಿಂದ ಕೂಡ ಬಹುದು. ಆದರೆ, ಸಮಯದ ಒಂದೊಂದು ಕ್ಷಣವೂ ಗಳಿಸಲು ಅಸಾಧ್ಯ. ಸಮಯ ಸಾಮ್ರಾಟನು ನಿಷ್ಪಕ್ಷಪಾತಿ, ವಜ್ರಕಠೋರ, ಸರ್ವ ಸಮತಾವಾದಿ.

ಪ್ರಯಾಗದ ಒಂದು ಸಭೆಯಲ್ಲಿ ಪಂ. ಮದನ ಮೋಹನ ಮಾಳವೀಯರು ಭಾಷಣ ಮಾಡಬೇಕಿತ್ತು. ಗೊತ್ತಾದ ಸಮಯವಾಯ್ತು; ಆದರೆ, ಪಂ. ಮಾಳವೀಯರ ಉದಯವಾಗಲಿಲ್ಲ. ನೆರೆದಿದ್ದ ಸಾವಿರಾರು ಜನರು ಕೆಲ ಹೊತ್ತು ಕಾದರು; ನಿರಾಶರಾಗಿ ಚದರಿಹೋದರು. ನಮ್ಮಲ್ಲಿ ಸಭೆ-ಸಮ್ಮೇಳನಗಳು ನಿಶ್ಚಿತ ಸಮಯಕ್ಕೆ ಆರಂಭವಾಗುವುದೆಂಬುದೇ ಇಲ್ಲ. 'ಇಂಡಿಯನ್ ಪಂಕ್ಚ್ಯುವಾಲಿಟಿ'ಯನ್ನೇ ಚಾಚೂ ತಪ್ಪದೆ ಅನುಸರಿಸುತ್ತೇವೆ. ಸಭಾ ಕಾರ್ಯಕರ್ತರಿಗಿಂತ ಸಭಾಸದರು ಬುದ್ಧಿವಂತರು. ಗೊತ್ತಾದ ಸಮಯದಲ್ಲಿ ಸಭೆ ತೊಡಗುವುದಿಲ್ಲವೆಂದು ಅವರಿಬ್ಬರಿಗೂ ಗೊತ್ತು. ಸಮಯ ಪಾಲಕನು ಮಾತ್ರ ತನ್ನ ದುರದೃಷ್ಟವನ್ನು ಶಪಿಸಿಕೊಳ್ಳಬೇಕಾಗುತ್ತದೆ.

ನಮ್ಮ ದೇಶದಲ್ಲಿ ಸಮಯ ಪಾಲನೆಗೆ ಸಾಕಷ್ಟು ಗಮನ ನೀಡಲಾಗುವುದಿಲ್ಲ. ದೇಶವಿದೇಶಗಳಿಂದ ಸಂದೇಶ ತರುವ ಅಂಚೆ-ಪತ್ರಗಳು ತಡವಾಗಿ ಬರುತ್ತವೆ. ನಮ್ಮ ರೈಲುಗಳಿಗೆ ನಿಯಮಿತ ಸಮಯವನ್ನು ಪಾಲಿಸುವ ಪರಿಪಾಠವೇ ಮರೆತು ಹೋಗಿದೆ. ಬಸ್ಸುಗಳಾದರೂ ಗೊತ್ತಾದ ಸಮಯಕ್ಕೆ ಮೊದಲೋ ಅನಂತರವೋ ಸ್ಟೇಶನ್ ಬಿಡುತ್ತವೆ. ಇನ್ನು ಉಳಿದವರ ಪಾಡೇನು?

ನಮ್ಮ ಹಳ್ಳಿಯಲ್ಲಿ ಒಂದು ಪ್ರೈಮರಿ ಶಾಲೆ. ಶಾಲಾ ಸಂದರ್ಶನಕ್ಕೆಂದು ಇನ್ಸ್ಪೆಕ್ಟರು ಬಂದರು. ಸಂಜೆ ತಾಸು ನಾಲ್ಕು ದಾಟಿತ್ತು. ನಿಯಮಾನುಸಾರ ನಾಲ್ಕೂವರೆಗೆ ಶಾಲೆಗೆ ಬಿಡುವು, ಶಾಲೆಯಲ್ಲಿ ಮಕ್ಕಳಿಗೆ ಬೇಹಾಜರಿ ಹಾಕಿ ಭರ್ತಿ ಮಾಡಿದ್ದರು ಅಧ್ಯಾಪಕರು. ಏನು ಮಾಡಿದರು? ಇನ್ಸ್ಪೆಕ್ಟರು ಫರ್ಲಾಂಗು ದೂರದಲ್ಲಿ ಬರುತ್ತಿರುವುದನ್ನು ಕಂಡೊಡನೆಯೇ ಶಾಲಾ ಗಂಟೆ ಬಾರಿಸಿದರು; ಮಕ್ಕಳೆಲ್ಲರೂ ಮನೆಯತ್ತ ಓಡಿದರು. ತಮ್ಮ ಕೈಗಡಿಯಾರ ನೋಡಿಕೊಂಡ ಇನ್ಸ್ಪೆಕ್ಟರು ರೇಗಿದರು; ಓಡಿಯೋಡಿ ಶಾಲೆ ಸೇರಿದರು; ಮಕ್ಕಳನ್ನು ಮತ್ತೆ ಕರೆಯುವಂತೆ ಸೂಚಿಸಿದರು. ಅವರೂ ಬಂದರು. ಹಾಜರಿ ಏನು? ಇದ್ದವರು ಮೂವರು; ಬಂದವರು ಆರುವರು. ಉಳಿದ ಮೂವರು? ಮನೆಗೆ ಹೋಗಿರಬಹುದು! ಗಂಟೆ ಮುಂದೆ 'ಇದೆ ಎಂಬ ಇನ್ಸ್ಪೆಕ್ಟರರ ಆಕ್ಷೇಪಣೆಗೆ ಉತ್ತರ—ಇರಬಹುದು. ನಮಗೆ ಪೋಸ್ಟ್ ಆಫೀಸ್ ಗಂಟೆ ಹೇಗೆ ಗೊತ್ತಾಗಬೇಕು? ಈ ಗಡಿಯಾರ ಒಂಭತ್ತೂವರೆ ತೋರಿಸಿದಾಗ ಶುರು ಮಾಡಿದ್ದೇವೆ; ಇದು ನಾಲ್ಕೂವರೆ ತೋರಿಸಿದಾಗ ಬಿಟ್ಟಿದ್ದೇವೆ. ಎರಡು ಗಡಿಯಾರಗಳು ಏಕಸಮಯವನ್ನು ತೋರಿಸುವುದಿಲ್ಲ.

ಕಲ್ಯಾಣ ರಾಜ್ಯವನ್ನು ಕಟ್ಟಬಯಸುವವರು ನಾವು. ಯಾರು ಕಟ್ಟಬೇಕು? ಪ್ರಾಯಃ ಬೇರೆಯವರು ಕಟ್ಟಿಕೊಟ್ಟರೆ, ನಾವು ಅದರಲ್ಲಿದ್ದು ಮೋಜಾ ಮಾಡುತ್ತೇವೆ, ಕ್ರಮೇಣ ಅದನ್ನು ದಿವಾಳಿ ತೆಗೆಯುತ್ತೇವೆ. 'ಸಮಯವಿಲ್ಲ'ವೆಂಬವರು ಕಲ್ಯಾಣ ರಾಜ್ಯವನ್ನು ನಾಶಮಾಡುತ್ತಾರೆ; ಮತ್ತೆ ಅದನ್ನು ಕಟ್ಟುವ ಮಾತೆಲ್ಲಿ ಉಳಿಯಿತು?

ಆಲಸ್ಯಕ್ಕೆ ಸಮನಾದ ಶತ್ರು ಬೇರೊಂದಿಲ್ಲ. ಅಲಸನಿಗೆ ವಿದ್ಯೆಯಿಲ್ಲ; ಅವಿದ್ಯನಿಗೆ ಧನವಿಲ್ಲ, ಅಧನನಿಗೆ ಸುಖವಿಲ್ಲ; ಕಲ್ಯಾಣವಿಲ್ಲ. ಆಲಸ್ಯವೇ ನಮ್ಮ ನೂರಾರು ದುರ್ವ್ಯಸನಗಳಿಗೆ ಪ್ರೇರಕ ಶಕ್ತಿ. ಸದಾ ವ್ಯಸ್ತನಾಗಿರುವವನು ಎಂದಿಗೂ ಅಸ್ತವ್ಯಸ್ತನಾಗುವುದಿಲ್ಲ; ಆತನು ನಿಶ್ಚಿಂತ; ನಿತ್ಯ ಸುಖಿ. ಅವನದು ಕಲ್ಯಾಣ ರಾಜ್ಯ.

ಘೋಷಣೆಗಳಿಂದ ಸಮಾಜ ಸುಖಿಯಾಗುವುದಿಲ್ಲ; ಜುಲುಮಿನಿಂದಲೂ ಕಲ್ಯಾಣ ರಾಜ್ಯ ಸ್ಥಾಪಿತವಾಗುವುದಿಲ್ಲ. ಪ್ರಜೆಗಳೂ, ಅಧಿಕಾರಿಗಳೂ, ನಾಯಕರೂ ಆಲಸ್ಯವನ್ನು ಬಿಡಬೇಕು; ಬಿಡುವಿಲ್ಲ; ಸಮಯವಿಲ್ಲವೆಂಬ ರಾಗವನ್ನು ಬದಲಿಸಬೇಕು; ಮೈಮುರಿದು ದುಡಿಯಬೇಕು. ಪುರುಷೋತ್ತಿಲ್ಲವೆಂಬ ಸ್ಲೋಗನ್ನು ದೂರ ಮಾಡಿ ವ್ಯಕ್ತಿಗತ ಪ್ರತಿಷ್ಠೆ, ಪೌರುಷಗಳನ್ನು ಸಾಮೂಹಿಕ ಹಿತಕ್ಕಾಗಿ ಬಳಸಬೇಕು. 'ಮನವಿದ್ದಲ್ಲಿ ಮಾರ್ಗ'ವೆಂಬುದು ಮೂರು ಕಾಲಕ್ಕೂ ಸತ್ಯ.

ಸಮಯವೆಲ್ಲಿಂದ ತರಲಿ ಎಂದು ಚಿಂತಿಸಬೇಡಿ; ಈ ಚಿಂತೆ ನಿಜಕ್ಕೂ ಇಲ್ಲದ ಚಿಂತೆ.

ಉಡ್ಪಿ—ಸಿವಿಲ್ ಜಡ್ಜರ ಕೋರ್ಟಿನಲ್ಲಿ

M. C. 2/1971.

ಶ್ರೀನಿವಾಸ ರಾವ್ —ಅರ್ಜಿದಾರ

ಮತ್ತು

ಪ್ರಾರ್ದಾ ಯಾನೆ ಶಾಂತಾ—M. ಶ್ರೀನಿವಾಸ ಹೆಬ್ಬಾರರ ಮಗಳು, ಉಡ್ಪಿ ಕ್ರಿಶ್ಚನ್ ಹೈ ಸ್ಕೂಲು ಆಫೀಸು ರಸ್ತೆ ಬಳಿ ನಂಬ್ರ 15–61ನೇ ಮೀನಾಕ್ಷಿ ಎಂಬವರ ಬಿಲ್ಡಿಂಗಲ್ಲಿ ರುವವಳು —opponent

ಸದ್ರಿ opponentಳಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ಮೇಲಿನ ಅರ್ಜಿಯಲ್ಲಿ ಕಾಣ್ಸಿದ ಕಾರಣಗಳಿಂದಾಗಿ ಅರ್ಜಿದಾರನು opponentಳನ್ನು ಮಾಡಿಕೊಂಡ ಮದುವೆಯನ್ನು ರದ್ದುಪಡ್ಸಿ Divorce ಬಗ್ಗೆ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರನು ಮೇಲಿನ ಅರ್ಜಿ ಹಾಕಿದ್ದು ಸದ್ರಿ ಅರ್ಜಿಯು opponentಳ ಹಾಜರಿಗಾಗಿ ನೋಟೀಸು ಬಗ್ಗೆ ತಾ. 6-4-71ಕ್ಕೆ ಮುಂದೂಡಲಾಗಿರುತ್ತದೆ. ಹಾಗಾಗಿ opponentಳು ಸದ್ರಿ ಅರ್ಜಿಯಲ್ಲಿ ಸಾಧಕ ಬಾಧಕಗಳು ಇದ್ದಲ್ಲಿ ಸದ್ರಿ ದಿವಸ ಹಗಲು 11ಗಂಟೆಗೆ ಖುದ್ದಾಗಿ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಹಾಜರಿ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಅರ್ಜಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ನಿಮಗೆ ಈ ಮೂಲಕ ತಿಳಿಸಲಾಗಿಯದೆ.

B. Ananda Shetty
Advocate for Petitioner

Udipi. 7-3-71.

ಪ್ರಾಚೀನ ನೀತಿ ಸೂತ್ರ

ಏಸು ಕ್ರಿಸ್ತರ ಅವತಾರದ ಪೂರ್ವದಲ್ಲಿ ಹದಿನೆಂಟು ನೂರು ವರ್ಷಗಳ ಹಿಂದೆ ಇಜಿಪ್ತದಲ್ಲಿ ಬರೆಯಲಾಗಿದ್ದ 'ಮೃತರ ಪುಸ್ತಕ'ದಲ್ಲಿ,ಇಜಿಪ್ತದ ಆತ್ಮವನ್ನು ಪ್ರತಿಬಿಂಬಿಸುವಂಥ, ಗುಣ ವಿಶೇಷಗಳನ್ನು ಉಲ್ಲೇಖಿಸಲಾಗಿದೆ. ಕೊನೆಯ ನಿರ್ಣಯ ಆಗುವಾಗ ಇಜಿಪ್ತದ ಜನರು ದೇವರೆದುರು, ತಮ್ಮ ಗುಣಧರ್ಮಗಳನ್ನು ಈ ರೀತಿ ಹೇಳಿಕೊಳ್ಳುತ್ತಿದ್ದರು:—

* ನಾನು ಅನೃತವನ್ನು ಆಡಿಲ್ಲ.
* ನಾನು ಮೋಸಗಾರಿಕೆಯಿಂದ ನಷ್ಟಿಕೊಂಡಿಲ್ಲ.
* ನಾನು ಯಾವ ಮನುಷ್ಯನನ್ನೂ ಅಳುವಂತೆ ಮಾಡಿಲ್ಲ.
* ನಾನು ಪರನಾರಿಯರನ್ನು ಕಣ್ಣೆತ್ತಿ ನೋಡಿಲ್ಲ.
* ನಾನು ಯಾವ ಪಾಪ ಕಾರ್ಯದಲ್ಲಿಯೂ ತೊಡಗಿಲ್ಲ.
* ನಾನು ಯಾರ ಬಗೆಗೂ ಹೊಟ್ಟೆಕಿಚ್ಚು ಪಟ್ಟಿಲ್ಲ.
* ನಾನು ಅವಸರದಿಂದ ಯಾವ ನಿರ್ಣಯಕ್ಕೂ ಬಂದಿಲ್ಲ.
* ನಾನು ಎಂದೂ ಅಹಂಕಾರದಿಂದ ನಡೆದುಕೊಂಡಿಲ್ಲ.
* ನಾನು ನನ್ನ ಪ್ರತಿಷ್ಠೆಗೋಸುಗವೇ ಎಂದೂ ಶ್ರಮಿಸಿಲ್ಲ.
* ನಾನು ಎಂದೂ ಕಳವು ಮಾಡಿಲ್ಲ.
* ನಾನು ಯಾವ ಮನುಷ್ಯನನ್ನೂ ಕೊಂದಿಲ್ಲ.
* ನಾನು ದೇವರ ಆಸ್ತಿಯನ್ನು ಎತ್ತಿ ಹಾಕಿಲ್ಲ.
* ನಾನು ಹಿಂದೆ, ದರೋಡೆಗಳಲ್ಲಿ ತೊಡಗಿಲ್ಲ.
* ನಾನು ಅಲ್ಲ-ಸಲ್ಲದ ಮಾತುಗಳನ್ನು ಎಂದೂ ಆಡಿಲ್ಲ.
* ನಾನು ಯಾರ ಮಾತನ್ನೂ ಕದ್ದು ಕೇಳಿಲ್ಲ.
* ನಾನು ಯಾವ ಜನರ ಭಾವನೆಗಳನ್ನೂ ಕೆರಳಿಸಿಲ್ಲ.
* ನಾನು ಲೈಂಗಿಕ ಅಪವಿತ್ರತೆಯ ಕಡೆಗೆ ಮನಸ್ಸು ಮಾಡಿಲ್ಲ.
* ನಾನು ಪೆಟ್ಟು ಕೊಡಲೆಂದು ಯಾವ ಮನುಷ್ಯನ ಮೇಲೆಯೂ ಏರಿ ಹೋಗಿಲ್ಲ.
* ನಾನು ಯಾರನ್ನೂ ಶಪಿಸುವುದಕ್ಕೆ ಹೋಗಿಲ್ಲ.

—ಪ್ರ

ಉಡ್ಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

S. C. 21/71.

ಶ್ರೀ. ಸೋದೆವಾದಿರಾಜ ಮಠ, ಉಡ್ಪಿ —ವಾದಿಯು.

ಮತ್ತು

ಸೋಮಪ್ಪ ಪೂಜಾರಿ ವಗೈರಾ —ಪ್ರತಿವಾದಿಯು.

ಯವರೊಳಗೆ

2ನೇ ಪ್ರತಿವಾದಿ—ಸೀತು ಪೂಜಾರಿ, ಸೋಮಪ್ಪ ಪೂಜಾರಿಯವರ ಮಗ, ಉಡ್ಪಿ ತಾಲೂಕು ತೆಂಕನಿಡಿಯೂರು ಗ್ರಾಮದಲ್ಲಿರುವವರ—

ವಾದಿಯು ಗೇಣಿ ಬಾಕಿಗೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 6-4-71ಕ್ಕೆ ಇಟ್ಟಿರುತ್ತದೆ. ಆ ದಿವಸ ಬೆಳಿಗ್ಗೆ 11ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸುವರೆ ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವುದು.

By order of Court
Sd. V. G. Kedlaya,
M. A. LL. B.
Advocate, Udipi.

ಉಡ್ಪಿ, D/-10.3.71.

Gram: VISHWA Tel: 29111

When at Bangalore
Stay at

HOTEL NATARAJA

Restaurant Boarding & Lodging.
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

120 ವರ್ಷಗಳ ಪ್ರಶಂಸಾರ್ಹ ಪ್ರಗತಿ

(ನಾಲ್ಕನೆ ಪುಟದಿಂದ)

ವನ್ನು ಕಂಡು ಹಿಡಿಯಲಾಯಿತು. ಸಿಂಘಭೂಮಿಯಲ್ಲಿ ಕ್ರೊಮೊಯಿಟ್, ಸಿಕ್ಕಿಂ—ಡಾರ್ಜಿಲಿಂಗ್ ಪ್ರದೇಶದಲ್ಲಿ ತಾಮ್ರ, ರಾಜಾಸ್ಥಾನದಲ್ಲಿ ಸೀಸ—ಸತುವು, ಮಧ್ಯಪ್ರದೇಶದಲ್ಲಿ ಮ್ಯಾಂಗನೀಸ್, ರಾಮಘಾಟಿನಲ್ಲಿ ಕಬ್ಬಿಣ ಅದಿರನ್ನು ಪತ್ತೆ ಮಾಡಲಾಯಿತು. ಮೂರು ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆಗಳಿಗೆ ಬೇಕಾಗುವ ಕಚ್ಚಾಮಾಲಿನ ಬಗೆಗೆ ಅಧ್ಯಯನವನ್ನು ಈ ಸಂಸ್ಥೆ ಪೂರ್ಣಗೊಳಿಸಿತು.

ಮೂರು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಈ ಸರ್ವೇ ಸಂಸ್ಥೆಯ ಕಾರ್ಯ ಚಟುವಟಿಕೆಗಳು ಹೊಸ ದಿಗಂತವನ್ನು ತಲುಪಿದವು.

ಯೋಜನೆಗಳ ಅವಧಿಯಲ್ಲಿ

ಪ್ರಥಮ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಕಚ್ ಪ್ರದೇಶದಲ್ಲಿ ಭೂ-ಕೊರೆತ ನಡೆಸಿ ಅಲ್ಲಿ ಹನ್ನೊಂದು ದಶಲಕ್ಷ ಟನ್ ಲಿಗ್ನೈಟ್ ಇರುವವನ್ನು ಪತ್ತೆ ಹಚ್ಚಲಾಯಿತು. ಪಂಜಾಬ ಹಾಗು ಮಹಾರಾಷ್ಟ್ರಗಳ ಕೆಲವು ಪ್ರದೇಶಗಳಲ್ಲಿ ತೈಲ್ಯ ಸಂಪತ್ತು ಇರುವದನ್ನುಕಂಡು ಹಿಡಿಯಲಾಯಿತು. ಮಧ್ಯಪ್ರದೇಶದಲ್ಲಿ ಅಪಾರ ಮ್ಯಾಂಗನೀಸ್ ಅದಿರು ನಿಕ್ಷೇಪಗಳನ್ನು ಶೋಧಿಸಲಾಯಿತು. ಈಯೋಜನೆಯ ಅಂತ್ಯವೇಳೆಗೆ ತೈಲ ಹಾಗುನೈಸರ್ಗಿಕ ಅನಿಲ ಆಯೋಗದ ಮೂಲಸ್ವರೂಪವು ಈ ಸರ್ವೇಯ ಕಚೇರಿಯಲ್ಲಿ ಮೂಡಿತು.

ದ್ವಿತೀಯ ಯೋಜನಾ ಅವಧಿಯಲ್ಲಿ, ಖನಿಜಗಳ ಶೋಧಕ್ಕೆ ಹೆಚ್ಚಿನ ಚಾಲನೆ ದೊರೆಯಿತು. ಕಲ್ಲಿದ್ದಲು ಗಣಿಪ್ರದೇಶದ ಪುನರ್ ಸಮೀಕ್ಷೆ ನಡೆದು ಸಿಂಗ್ರುಲಿ ಪ್ರದೇಶದಲ್ಲಿ ಕಲ್ಲಿದ್ದಲಿನ ಅಪಾರ ಸಂಗ್ರಹವನ್ನು ಕಂಡು ಹಿಡಿಯಲಾಯಿತು. ಮೈಸೂರೂ ಹಾಗು ಮಹಾರಾಷ್ಟ್ರಗಳಲ್ಲಿ ಕ್ರೋಮೈಟ್, ರಾಜಾಸ್ಥಾನದಲ್ಲಿ ಜಿಪ್ಸಂ, ಮದ್ರಾಸ್ ಗುಜರಾತ ರಾಜ್ಯದಲ್ಲಿ ಬೊಕ್ಸೈಟ್ ಅದಿರುಗಳನ್ನು ಈ ಅವಧಿಯಲ್ಲಿ ಕಂಡು ಹಿಡಿಯಲಾಯಿತು. ಮದ್ರಾಸ ಕರಾವಳಿಯಲ್ಲಿ ತೈಲನಿಕ್ಷೇಪಕ್ಕಾಗಿ, ಪನ್ನಾ ಪ್ರದೇಶದಲ್ಲಿ ವಜ್ರಗಳ ಗಣಿಗಳಿಗಾಗಿ, ಕೇರಳದಲ್ಲಿ ಗ್ರಫೈಟ್ ಬಗೆಗೆ ಭೂಭೌತಿಕ ತನಿಖೆ ಮಾಡಲಾಯಿತು. 13ರಾಜ್ಯಗಳಲ್ಲಿ ಭೂಗತ ಜಲಾನ್ವೇಷಣ ಯೋಜನೆಯ ಅಂಗವಾಗಿ ಅನೇಕ ಬಾವಿಗಳನ್ನು ತೋಡಲಾಯಿತು. ಇಕಾಫ್‌ಗಾಗಿ ಏಶಿಯಾ ಹಾಗು ದೂರಪ್ರಾಚ್ಯ ರಾಷ್ಟ್ರಗಳ ಪ್ರಾದೇಶಿಕ ಭೂವಿಜ್ಞಾನ ನಕ್ಷೆಗಳನ್ನು ಈ ಸಂಸ್ಥೆ ಸಿದ್ಧಪಡಿಸಿತು. ಇದಲ್ಲದೆ ಒಂದು ಸಹಸ್ರ ಇಂಜಿನಿಯರಿಂಗ್ ಭೂವಿಜ್ಞಾನ ಶೋಧನ ಕಾರ್ಯಗಳನ್ನು ಈ ಸಂಸ್ಥೆ ಕೈಗೆತ್ತಿಕೊಂಡಿತು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸಂಸ್ಥೆಯ ಕಾರ್ಯ ಇನ್ನೂ ವಿಸ್ತಾರವಾಗಿ ಹಬ್ಬಿತು. ಕಲ್ಲಿದ್ದಲು ನಿಕ್ಷೇಪವನ್ನು ಪತ್ತೆ ಹಚ್ಚುವ ಕಾರ್ಯ ಮುಂದುವರಿದುದರ ಫಲವಾಗಿ ಹನ್ನೆರಡು ಸಾವಿರ ದಶಲಕ್ಷ ಟನ್ ಕಲ್ಲಿದ್ದಲಿರುವ ಪ್ರದೇಶಗಳನ್ನು ಕಂಡು ಹಿಡಿಯಲಾಯಿತು. ಅಮುಖ್ಯಲೋಹಗಳ ಅನ್ವೇಷಣಾ ಕಾರ್ಯವೂ ಈ ಕಾಲದಲ್ಲಿ ವ್ಯಾಪಕವಾಗಿ ನಡೆಯಿತು. ತೃತೀಯ ಪಂಚವಾರ್ಷಿಕ ಅವಧಿಯಲ್ಲಿ ಸಂಸ್ಥೆಯನ್ನು ಪುನರ್ಘಟಿಸಿ ಪ್ರಾದೇಶಿಕ ಹಾಗು ವರ್ತುಲ ಕಚೇರಿಗಳಲ್ಲಿ ವಿಭಾಗಿಸಿ ಎಲ್ಲ ರಾಜ್ಯಗಳಿಗೂ ಪ್ರಾತಿನಿಧ್ಯ ದೊರೆಯುವಂತೆ ಸೌಕರ್ಯವನ್ನು ಒದಗಿಸಲಾಯಿತು. ಹಿಮಾಲಯ ಭೂವಿಜ್ಞಾನ ವಿಭಾಗವೊಂದನ್ನು ಸುರು ಮಾಡಲಾಯಿತು.

ಸಂಸ್ಥೆಯ ಕಾರ್ಯ

ಪ್ರತಿವರ್ಷವೂ ನಾಲ್ವತ್ತು ಸಾವಿರ ಚದುರು ಕಿಲೋಮೀಟರ್ ಪ್ರದೇಶದ ಸುಸಂಬದ್ಧ ನಕ್ಷೆಯನ್ನು 1:6 36? ಸ್ಕೇಲಿನಲ್ಲಿ ಸಿದ್ಧಪಡಿಸಲಾಗುತ್ತಿದೆ ಬೇರೆ ಬೇರೆ ಲೋಹಗಳ ಅನ್ವೇಷಣೆಗಾಗಿ ಹತ್ತು ಸಾವಿರ ಚದುರ ಕಿಲೋಮೀಟರ್ ಪ್ರದೇಶದ ವಿವರಣಾತ್ಮಕ ನಕ್ಷೆಗಳನ್ನು ವಿಶಾಲ ಸ್ಕೇಲಿನಲ್ಲಿ ತಯಾರು ಮಾಡಲಾಗುತ್ತಿದೆ. 60,00) ಭೂಗತ ಜಲಾನ್ವೇಷಣೆಗೆಂದು ನೆಲ ಕೊರೆಯುವಕಾರ್ಯವನ್ನು ದೊಡ್ಡಪ್ರಮಾಣದಲ್ಲಿ ಕೈಕೊಳ್ಳಲಾಗಿದೆ.

ಭೂವಿಜ್ಞಾನಿಗಳ ಸಹಾಯವಿಲ್ಲದೆ ಲಾಭಕರ ರೀತಿಯಲ್ಲಿ ಬಹುಶಃ ಯಾವದೇ ಇಂಜನಿಯರಿಂಗ್ ಯೋಜನೆಗಳನ್ನು ಪ್ರಾರಂಭಿಸಲು ಸಾಧ್ಯವಿಲ್ಲ. ಅಣೆಕಟ್ಟು ಮುತ್ತು ಇತರ ಭಾರದ ಕಟ್ಟಡಗಳು, ರಸ್ತೆ ನಿರ್ಮಾಣ, ರೈಲ್ವೆಮಾರ್ಗ—ಇವೆಲ್ಲವುಗಳ ಬಗ್ಗೆ ಭೂವಿಜ್ಞಾನಿಗಳು ಸಲಹೆ ನೀಡುವರು. ಈ ಸಂಸ್ಥೆಯು ಕಾಂಡ್ಲಾ ಬಂದರು, ಮುಂಬೈ ಪರಮಾಣು ಶಕ್ತಿ ಕೇಂದ್ರ, ರಾಂಚಿಯ ಭಾರಿ ಇಂಜನಿಯರಿಂಗ್ ಕಾರ್ಖಾನೆ, ಮೂರು ಸರಕಾರೀ ರಂಗದ ಉಕ್ಕು ಕಾರ್ಖಾನೆಯ ಅಡಿಪಾಯ, ಗುಡ್ಡ—ಬೆಟ್ಟಗಳ ಇಳಿಜಾರು ಪ್ರದೇಶದ ಸ್ಥಿರತೆ, ದಾಮೋದರ ಕಣಿವೆ ಜಲಾಶಯದಲ್ಲಿನ ಬಂಡು ಸಮಸ್ಯೆ —ಈ ಮೊದಲಾದ ಕಾರ್ಯಗಳಲ್ಲಿ ಸಂಬಂಧ ಹೊಂದಿ ಸಲಹೆ ನೀಡಿದೆ. ಸಂಸ್ಥೆಯ ಭೂಗತ ಜಲ ವಿಭಾಗವು ತನ್ನ ಕಾರ್ಯ ಚಟುವಟಿಕೆಗಳನ್ನು ಇನ್ನಿಷ್ಟು ವಿಸ್ತಾರಿಸಿದೆ. ದೇಶದಲ್ಲಿ ಈಗ 21 ಭೂಗತ ಜಲ ಘಟಕಗಳು ಕೆಲಸ ಮಾಡುತ್ತಿವೆ. ಅನೇಕ ಪ್ರಯೋಗಾಲಯವನ್ನು ಪಡೆದ ಈ ಸಂಸ್ಥೆ ಅಂತರರಾಷ್ಟ್ರೀಯ ಮಟ್ಟದಲ್ಲೂ ಕೆಲಸ ಮಾಡಿದೆ. ಸಂಸ್ಥೆಯ ತಜ್ಞರ ಸೇವೆಯನ್ನು ಅಭಿವೃದ್ಧಿಶೀಲ ಕಾಂಬೋಡಿಯಾ, ಗಿನಿಯಾ, ಮುವಿಚರ್, ಕೆನ್ಯಾ, ಟರ್ಕಿ, ಹಾಗು ಸೋಮಾಲಿ ದೇಶಗಳಿಗೆ ಒದಗಿಸಲಾಗಿದೆ. ದೇಶದ ಔದ್ಯೋಗೀಕರಣದ ವಿಷಯದಲ್ಲಿ ಈ ಸಂಸ್ಥೆ ಮಹತ್ವದ ಪಾತ್ರವಹಿಸಿದೆ, ವಹಿಸಲಿದೆ ಎಂಬುದರಲ್ಲಿ ಸಂದೇಹವಿಲ್ಲ.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

S. C. 47/70.

ಶ್ರೀ ಸೋದೆವಾದಿರಾಜ ಮಠ —ವಾದಿಗಳು.

ಮತ್ತು

ಶೀನ ಶೆಟ್ಟಿ —ಪ್ರತಿವಾದಿಯು.

ಇವರೊಳಗೆ

ಪ್ರತಿವಾದಿ: ಶೀನ ಶೆಟ್ಟಿ, ರಾಮಯ ಶೆಟ್ಟಿ ಮಗ, ಉಡುಪಿ ತಾಲೂಕು ಕುಕ್ಕೆಹಳ್ಳಿ ಗ್ರಾಮದ ಕೊಡಂಕೂರು.

ವಾದಿಗಳು ನಿಂಮ ಮೇಲೆ ಗೇಣಿ ಬಾಕಿಗೆ ಹಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 1-4-71ಕ್ಕೆ ಇಟ್ಟಿದೆ. ಆ ದಿವ್ಸ ಬೆಳಿಗ್ಗೆ 11ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸುವರೆ ತಪ್ಪಿದ್ರೆ ನಿಂಮ ಗೈರ್ ಹಾಜರಿಯಲ್ಲಿ ಆದ್ರಿ ದಾವೆ ತೀರ್ಮಾನಿಸಲಾಗುವುದು.

By order of Court.

Sd. Sri V. G. Kedlaya,
M. A. LL. B.
ವಾದಿಯ ಕಡೆ ಎಡ್ವೋಕೇಟ್.

ಉಡುಪಿ, D/-5-3-71.

ಶ್ರೀ ಭದ್ರಗಿರಿ ಕೇಶವದಾಸರ ವಿಶ್ವಯಾತ್ರೆ

ಕಳೆದ ಡಿಸೆಂಬರ್ ಮಾಸಾಂತ್ಯದಲ್ಲಿ ನಾಲ್ಕನೆಯ ಬಾರಿ ಹಿಂದೂ ಧರ್ಮವನ್ನು ಹರಡಲು ಸಹಾಯಕವಾಗಿ ವಿಶ್ವಪರ್ಯಟನೆಯನ್ನು ಕೈಗೊಂಡ ಶ್ರೀ ಭದ್ರಗಿರಿ ಕೇಶವದಾಸರು ಬಹು ಯಶಸ್ವಿಯಾಗಿ ಈ ಸೇವೆಯನ್ನು ನಡೆಸುತ್ತಿದ್ದಾರೆ.

ಜನವರಿ ತಾ. 1ರ ಕನಕ ಲಂಡನ್ನಿನ "ಹಿಂದೂಕೇಂದ್ರ" "ದಾಸಾಶ್ರಮ ಕೇಂದ್ರ" ಮತ್ತು ಅಲ್ಲಿನ ಅನೇಕ ಪುರಭವನಗಳಲ್ಲಿ ಶ್ರೀಯುತರು "ಶ್ರೀಮದ್ರಾಮಾಯಣ" ಮತ್ತು ವೇದೋಪನಿಷತ್ತುಗಳ ಬಗ್ಗೆ ಉಪನ್ಯಾಸಗಳನ್ನು ನಡೆಸಿದರು. ಅನೇಕ ಪಾಶ್ಚಾತ್ಯ ಹಿರಿಯರು ಮತ್ತು ಯುವಕ, ಯುವತಿಯರು, ಹಿಂದೂಧರ್ಮದಲ್ಲಿ ಅಪಾರ ಶ್ರದ್ಧೆಯನ್ನು ತೋರಿ ಹಿಂದೂಧರ್ಮವನ್ನು ಸ್ವೀಕರಿಸಿ, ಭಾರತದ ಪವಿತ್ರನಾಮಧೇಯಗಳನ್ನು ದೀಕ್ಷೆಯೊಂದಿಗೆ ಪಡೆದರು.

ವಾಷಿಂಗ್ಟನ್, ಕೆಲಿಫೋರ್ನಿಯಗಳಲ್ಲಿ ಪ್ರಚಾರ ಪ್ರವಾಸಮಾಡಿ ಮಾರ್ಚ್ 15ರ ನಂತರ ಚಿಕಾಗೋಕ್ಕೆ ತೆರಳುವರು

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ನೂರು ಬೇಡಿಕೆ : ಒಂದು ಉತ್ತರ

ನಮ್ಮ ಬದುಕಿನ ಬೇಡಿಕೆಗಳು ಒಂದಲ್ಲ, ಎರಡಲ್ಲ, ನೂರು. ಉದ್ಯೋಗ, ವಿಹಾರ, ಮನೆಯಾಡಳಿತೆ, ಮಕ್ಕಳ ವಿದ್ಯಾಭ್ಯಾಸ, ಅವರ ಪಾಲನೆ, ವಿವಾಹ.... ಹೀಗೆ ಒಂದರ ಬೆನ್ನಿಗೆ ಇನ್ನೊಂದು ಬೇಡಿಕೆ ಸದಾ ಎದುರಾಗುತ್ತದೆ. ನಿತ್ಯ ಆದಾಯವಿರಲಿ, ಮಾಸಿಕ ವರಮಾನವಿರಲಿ, ಅವು ಬದುಕಿನುದ್ದಕ್ಕೂ ಬರುವ ಬೇಡಿಕೆಗಳನ್ನು ಇದಿರಿಸಿ ತಕ್ಕ ಪರಿಹಾರ ನೀಡಲಾರವು. ಕ್ರಮವಾಗಿ ಕೂಡಿಟ್ಟ ಹಣ ನಮ್ಮ ಬದುಕಿನ ಸಮಸ್ಯೆಗಳನ್ನು ಯೋಗ್ಯ ರೀತಿಯಲ್ಲಿ ಬಗೆಹರಿಸಬಲ್ಲುದು.

ಸಿಂಡಿಕೇಟ್ ಬ್ಯಾಂಕಿನಲ್ಲಿ ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆದು, ಹಣ ಕೈಸೇರಿದಂತೆ ಅದರಲ್ಲಿ ಕೂಡಿಟ್ಟು ಬನ್ನಿರಿ. ಹಣದ ಬೇಡಿಕೆ ಬಂದಾಗ ಖಾತೆಯಿಂದ ಬೇಕಷ್ಟು ಮೊತ್ತವನ್ನು ಹಿಂತೆಗೆಯಿರಿ. ಮರಳಿ ಹಣ ಕೈಗೆ ಬಂದಾಗ ಅದನ್ನು ಖಾತೆಯಲ್ಲಿ ತುಂಬಿಸಿರಿ. ಎಷ್ಟೊಂದು ಅನುಕೂಲ! ತೀರಾ ಸರಳ ಮಾದರಿಯ ಖಾತೆಯಿದು. ಅದರ ಪ್ರಯೋಜನ ಹೊಂದಲು ನಿಮ್ಮ ಸಮೀಪವಿರುವ ನಮ್ಮ ಬ್ಯಾಂಕಿನ ಶಾಖೆಯಲ್ಲಿ ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ಪಡೆಯಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್

ಶಾಖೆಗಳು:
470ಕ್ಕೂ ಮಿಕ್ಕಿವೆ

ಕೆ. ಕೆ. ಪೈ
ಕಸ್ಟೋಡಿಯನ್

ಗೇಹರಾಜ್ಯದಲ್ಲಿ

ಪ್ರಗತಿಪರ ಪ್ರಯೋಗಕ್ಕೆ ಪಂಥಾಹ್ವಾನ

'ಕೇಳಿದ್ರ್ಯಲ್ಲಾ?'

'ಹ್ಞೂಂ....'

'ಈಗ ಏನ್ ಹೇಳ್ತೀರಿ?'

'ಯಾವುದಕ್ಕೆ?'

'ಅಲ್ರಿ, ಮಧ್ಯಾವಧಿ ಚುನಾವಣಾ ಫಲಿತಾಂಶಕ್ಕೆ....'

'ಇಂದಿರಾ ಗಾಂಧೀಕೀ ಜೈ ಅಲ್ಲ ಜೈ ಜೈ ಜೈ'

'ಅದು ನೀವು ಅನ್ನದೇ ಇದ್ರೂ ಆಗುತ್ತೆ; ಆಯ್ತು.'

'ಮತ್ತೆ?'

'ಎಲ್ರ ಲೆಕ್ಕಾಚಾರಾನೂ ತಲೆಕೆಳಗೆ ಆಗಿ ಹೋಯ್ತಲ್ಲಾಂತ....'

'ಆಗ್ಲಿ'

'ಅಲ್ರಿ, ಸ್ವಯಂ ಇಂದಿರಮ್ಮನಿಗೇ ವಿಸ್ಮಯವಾಗಿದೆಯಂತೆ....'

'ಅವ್ರ ಲೆಕ್ಕಾಚಾರಾನೇ ತಪ್ಪಿದೆ ಅಂದ್ಮೇಲೆ ನನ್ದು ನಿನ್ದು ಏನು ಮಹಾಂತ...'

'ಅದು ಸರೀನ್ನಿ. ಯಥಾರಾಜಾ ತಥಾ ಪ್ರಜಾ. ಆದ್ರೂ ಇದೆಲ್ಲಾ ಯಾಕೆ ಹೀಗ್ಯಾತೂಂತ?' ತಮಿಳುನಾಡಿನಲ್ಲೂ ಕರುಣಾನಿಧಿಯವರದ್ದೇ ಮೇಲ್ಗೈ.'

'ಇದೆಲ್ಲಾ ಇಂದಿರಾಗಾಳಿಯ ಪ್ರಭಾವ. ಒಂದು ಬಿರುಗಾಳಿ. ಅತ್ಯಂತ ಆಳಕ್ಕೆ ಬೇರು ಬಿಟ್ಟ ಮರಗಳಷ್ಟೇ ಉಳಿದುವು. ದುಃಖವೆಂದರೆ, ಇಂತಹ ಮರಗಳ ಸಂಖ್ಯೆ ಬೆರಳೆಣಿಕೆಯಷ್ಟು.

'ಅದೆಲ್ಲಾ ವೇದಾಂತ ಬೇಡಾರಿ.'

'ಮತ್ತೇನು ರಾಜ್ಯಕೀಯವಾಗಿ ಹೇಳಬೇಕೆ?'

'ಹ್ಞೂಂ....'

'ಇಂದಿರಮ್ಮನ ನೋಂಕಿನಿಂದಲೇ ಸ್ವರ್ಗಸುಖ ಸಿಗುತ್ತೆ ಎಂಬ ತಪ್ಪು ಕಲ್ಪನೆಯಿಂದ ಹೀಗಾಗಿದೆ.'

'ಮತ್ತೆ ವಿದೇಶೀ ಹಣದ ಪ್ರವಾಹವೇ ಹರಿದಿದೆಯೆಂದು ಮೈತ್ರಿಕೂಟದವರು ಕೂಗುತ್ತಾರಲ್ಲಾ?'

'ಅದು ಸರೀನ್ನು. ರಾಜ್ಯಕೀಯ ಪುಡಾರಿಗಳು ತಾವೇ ಗೆಲ್ಲುತ್ತೇವೆಂಬುದಕ್ಕೆ ಮೊದಲು ಕಾರಣ ವಿವರಿಸುತ್ತಾರೆ; ಸೋತರೆ ಅದಕ್ಕೂ ಮೊದಲೇ ಸಿದ್ಧ ಪಡಿಸಿದ ಕಾರಣ ಬಹಿರಂಗ ಮಾಡುತ್ತಾರೆ.'

'ಅಲ್ಲ, ಮೈತ್ರಿಕೂಟದ ಘಟಾನುಘಟಿಗಳೆಲ್ಲ ಸೋತು ಹೋದುದು....'

'ಎಸ್ಕೆ ಪಾಟೀಲ, ರಾಂಸುಭಗಸಿಂಗ್, ರಂಗಾ, ಮುಥೋಕ್ ಮಸಾನಿ, ಚರಣಸಿಂಗ—ಹೀಗೆ ಎಲ್ಲರೂ.... ತಾವಾಡಿದ ಸರ್ಕಸ್ಸಿನ ಬೆಲೆ ತೆತ್ತರು.'

'ಅಲ್ಲಾರಿ, ಕರ್ನಾಟಕದಲ್ಲಿ ಒಂದೇ ಒಂದು ಸೀಟು ಬೇರೆ ಯಾರೂ ಪಡೆಯಲಿಲ್ಲ ಅಂದರೆ?'

'ಇದಕ್ಕೆ ಕಾರಣವಿದೆ. ನೋಡು, ಇಂದಿರಮ್ಮ ಕನ್ನಡಕ್ಕೆ ಅನ್ಯಾಯ ಮಾಡುವುದಿಲ್ಲವಾದರೆ, ಆಕೆ ಕನ್ನಡದ ನೆಲ—ಜಲ ರಕ್ಷಿಸುವುದಾದರೆ, ಆಕೆಯಾದರೇನು? ನೋಡುವ, ಆಕೆಯ ಮಾತು ಎಷ್ಟು ಸತ್ಯವಾಗುತ್ತದೆಂದು ಎಂದು ಹಾಗೆ ಆಗಿರ ಬಹುದು.'

'ಅಥವಾ ಸಿಂಡಿಕೇಟ್ ಸರಕಾರದಿಂದ ಜನ ಬೇಸತ್ತಿದೆಯೆಂದೆ?'

'ಯಾವುದರಿಂದಲೂ ಅಲ್ಲ.'

'ಮತ್ತೆ?'

'ಅಷ್ಟು ವಿವೇಚನೆಯಿಂದ ಮತ ಮಾಡಿದವರ ಸಂಖ್ಯೆ ಕಡಮೆ."

'ಅಂದರೆ?'

'ಅಂದರೆ, ಇಬ್ಬರೂ ತಮ್ಮದು ಕಾಂಗ್ರೆಸ್ ಎಂದು ಹೇಳಿಕೊಂಡರು. ಇದು ಕಾಂಗ್ರೆಸ್ ಚಿಹ್ನೆ ಎಂದು ಸಾರಿದರು. ಹಾಗಿರುವಾಗ ಚಿರಪರಿಚಿತವಾದ ದನ–ಕರುವಿನ ಮೇಲೆ ಮತಚೀಟಿಯಲ್ಲಿ ಮುದ್ರೆಯೊತ್ತಿದರೆ ಆಶ್ಚರ್ಯವೇನು?'

'ಅದೂ ಇರಬಹುದು. ಆದರೆ, ನೋಡಿ ಮೈತ್ರಿಕೂಟ ಎಂದು ಹೇಳಿಕೊಂಡದ್ದೇ ಕೊಂಡದ್ದು. ಸೀಟು ಹಂಚಿಕೊಂಡ ಮೇಲೆ ಮೈತ್ರಿಯೂ ಇಲ್ಲ, ಗಿಯ್ತ್ರಿಯೂ ಇಲ್ಲ. ಮತ್ತಿನ್ನೆಂಥದು? ಕೆಲವೆಡೆ ಅವ್ರವ್ರೇ ಹೋರಾಡಿದ್ರಿಂದ ಮೇಲೆ ಕೂಟ ಮೈತ್ರಿಯ ಮೇಲೆ ಬುದ್ಧಿಜೀವಿಗಳಿಗೆ ಹೇಗೆ ವಿಶ್ವಾಸ ಮೂಡಬೇಕು?'

'ಮತ್ತೊಂದು ನೋಡು, ತಾನು ಪ್ರಗತಿಪರೆ. ತನ್ನ ಬತ್ತಳಿಕೆಯಲ್ಲಿ ನೂರಾರು ಸರ್ವಶಕ್ತ ಪ್ರಗತಿ ಶರಗಳಿವೆ. ಅವನ್ನು ಪ್ರಯೋಗಿಸಲು ಸಂಸತ್ತಿನಲ್ಲಿ ನಿಚ್ಚಳ ಬಹುಮತ ಬೇಕು ಎಂದು ಬಯಸಿದ ಇಂದಿರಮ್ಮನಿಗೆ ಆಕೆ ಬಯಸಿದ್ದಕ್ಕಿಂತಲೂ ಹೆಚ್ಚು ಬೆಂಬಲ ನೀಡಿ, ಪ್ರಗತಿಪರ ಪ್ರಯೋಗಕ್ಕೊಂದು ಪಂಥಾಹ್ವಾನವನ್ನೇ ಜನ ನೀಡಿತೆಂದೇಕೆ ಹೇಳಬಾರದು?'

'ಅದು ಸರೀನ್ನಿ. ಈಗ ಆಕೆ ಏನು ಮಾಡಲೂ ಸಶಕ್ತೆ. ಸಂವಿಧಾನ ತಿದ್ದುವುದಕ್ಕೂ ಕಷ್ಟವಿಲ್ಲ. ಇದುವರೆಗೆ ಬಿಸಕ್ತಹಿತ ವಂದಿಗರು ತನ್ನನ್ನು ತಡೆಯುತಿದ್ದರೆಂದು ಗೊಣಗಿದವರು ಇನ್ನು ಗೊಣಗುತ್ತಲೇ ಹೋಗುವುದು ಸಾಧ್ಯವಿಲ್ಲ. ಆಕೆಯ ಹೃದ್ಗತ ಈಗ ಅಭಿವ್ಯಕ್ತವಾಗಲೇ ಬೇಕು.

'ತನ್ನ ಪ್ರಗತಿ ನೀತಿಗಳಿಂದ ದೇಶವನ್ನು ನಂದನವನ್ನಾಗಿಸುತ್ತಾರೆಯೆ, ನರಕವನ್ನಾಗಿಸುತ್ತಾರೆಯೇ ಕಾದು ನೋಡಬೇಕು.'

'ಅಂದರೆ, ಆಕೆಯ ಈ ಬಹುಮತದಿಂದ ದೇಶಕ್ಕೆ ಕೆಡುಕಾಗುವ ಸಾಧ್ಯತೆಯೂ ಇದೇನ್ನುತ್ತೀರಾ?'

'ಕೈಯಲ್ಲಿರುವ ಅಧಿಕಾರವನ್ನು ಹೇಗೂ ಬಳಸಬಹುದು. ಇಂದಿರಾಯುಗ ಈಗತಾನೇ ಆರಂಭವಾಗಲಿದೆ—ಬಜೆಟ್ ಅಧಿವೇಶನದೊಡನೆ. ಇದು ಹೇಗೆ ಆರಂಭಗೊಳ್ಳುವುದೆಂದು ಕಾದು ನೋಡಬೇಕಷ್ಟೆ?

'ಹ್ಞೂಂ.... ವಿರೋಧ ಪಕ್ಷಗಳು ಪ್ರತಿಪ್ರತ್ಯೇಕ ಸ್ಪರ್ಧಿಸುತ್ತಿದ್ದರೆ, ಹೆಚ್ಚು ಯಶಸ್ಸು ಪಡೆಯುತಿತ್ತೋ ಏನೋ...."

'ಇದನ್ನು ಅವರೇ ಮುಂಚೆ ಯೋಚಿಸಲಿ, ಅಂತೂ ಒಂದು ಇಂದಿರಾ ಬಿರುಗಾಳಿ, ಪ್ರಚಾರ, ಮಳೆ, ಮತ ಪ್ರವಾಹ ಒಮ್ಮೆಗೆ ನಿಂತಿತಲ್ಲಾ.... ಇನ್ನೊಂದಾರು ತಿಂಗಳಾದರೂ ನೆಮ್ಮದಿಯಿಂದ ಉಸಿರಾಡುವುದು ಸಾಧ್ಯವಾಗಲಿ....'

'ಹ್ಞೂ....'

'............'

'ಶ್ಶ್ಯೂ....'

—ಗೋರಾ.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ ನೂತನ ಕಟ್ಟಡದ ಉದ್ಘಾಟನೆ

ಶ್ರೀ ಸಿದ್ಧಗಂಗಾ ಮಠಾಧೀಶರಾದ ಪೂಜ್ಯ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು ಇದೇ ತಾ. ೧೩ರಂದು ಉಜಿರೆಯಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ನೂತನ ಕಟ್ಟಡವನ್ನು ಉದ್ಘಾಟಿಸುತ್ತಾ, ತೀರ್ಥಕ್ಷೇತ್ರವೆಂದು ಪ್ರಸಿದ್ಧಿ ಪಡೆದಿರುವ ಶ್ರೀ ಕ್ಷೇತ್ರ ಧರ್ಮಸ್ಥಳವು ನಾಡಿಗೇ ಹರ್ಷದಾಯಕವಾದ ವಿಚಾರವೆಂದರು. ಮುಂದುವರಿಯುತ್ತಾ, ಹಿಂದಿನ ಧರ್ಮಾಧಿಕಾರಿಗಳಾದ ಶ್ರೀ ಮಂಜಯ ಹೆಗ್ಡೆ ಹಾಗೂ ರತ್ನವರ್ಮ ಹೆಗ್ಗಡೆಯವರು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪ್ರಾರಂಭಿಸಿದ ಶಿಕ್ಷಣ ಪ್ರಸಾರ ಕಾರ್ಯವನ್ನು ಈಗಿನ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರ ಹೆಗ್ಗಡೆಯವರೂ ಅತ್ಯಂತ ಯೋಗ್ಯ ಹಾಗೂ ಉತ್ತಮ ರೀತಿಯಲ್ಲಿ ಮುಂದುವರಿಸಿಕೊಂಡು ಬರುತ್ತಿರುವುದು ಭಾಗ್ಯದ ಮಾತಲ್ಲವೆ ಶ್ರೀ ಹೆಗ್ಡೆಯವರು ತನ್ನ ಹಿರಿಯರ ಪರಂಪರೆಯನ್ನೇ ಉತ್ತಮ ರೀತಿಯಲ್ಲಿ ಮುಂದುವರಿಸಿಕೊಂಡು ಬಂದಂತಾಯಿತೆಂದೂ ಶ್ರೀ ಕ್ಷೇತ್ರದಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ಕಾಲೇಜು ಕಟ್ಟಡ ನಿರ್ಮಿಸುವಂತಹ ಸತ್ಕಾರ್ಯದಲ್ಲಿ ನೆರವಾದವರೆಲ್ಲರೂ ಪುಣ್ಯ ಭಾಜನರಾದರೆಂದೂ ಈ ಕಾರ್ಯದಲ್ಲಿ ಮಂಜುನಾಥ ಸ್ವಾಮಿಯ ಪೂರ್ಣ ಕೃಪೆಗೆ ಪಾತ್ರರಾದ ಶ್ರೀ ವೀರೇಂದ್ರ ಹೆಗ್ಡೆಯವರ ಉತ್ಸಾಹ ಶಕ್ತಿ, ಸತ್ಸಂಕಲ್ಪಗಳು ಪ್ರೇರಕ ಶಕ್ತಿಯಾಗಿವೆಯೆಂದೂ ಹೇಳಿದರು. ರೂ ೬ಲಕ್ಷ ವೆಚ್ಚದ ಈ ಬೃಹತ್ ಕಟ್ಟಡವನ್ನು ಕೇವಲ ಒಂದೇ ವರ್ಷದಲ್ಲಿ ಪೂರ್ತಿಗೊಳಿಸಿದ್ದನ್ನು ಸ್ವಾಮಿಗಳು ಪ್ರಶಂಸಿಸಿದರು.

ಸಮಾರಂಭದ ಅಧ್ಯಕ್ಷ ಸ್ಥಾನ ವಹಿಸಿದ ಮೈಸೂರು ಪ್ರವಾಸೋದ್ಯಮ ಕಾರ್ಪೋರೇಶನ್ನ ಅಧ್ಯಕ್ಷ ಶ್ರೀ ಜೆ. ಬಿ. ಮಲ್ಲಾರಾಧ್ಯರವರು ಇಂದಿನ ಸಮಸ್ಯೆಗಳಿಗೆ ನಮ್ಮ ಮುಂದಾಳುಗಳು ಮಹಾತ್ಮಾ ಗಾಂಧೀಜಿಯವರು ದೇಶಕ್ಕೆ ನೀಡಿದ ಪ್ರಮುಮೂಲವಾದ ಬುನಾದಿ ಶಿಕ್ಷಣದ ಸೂತ್ರವನ್ನು ಕಡೆಗಣಿಸುದುದೇ ಕಾರಣ ಎಂದರು. ಶಿಕ್ಷಣದ ಎಲ್ಲ ಹಂತಗಳಲ್ಲಿ ಬುನಾದಿ ಶಿಕ್ಷಣವನ್ನು ಅನುಷ್ಠಾನಕ್ಕೆ ತರುವುದರಿಂದ ಮಾತ್ರ ನಮ್ಮ ಶಿಕ್ಷಣ ವ್ಯವಸ್ಥೆ ಸರಿಯಾಗ ಬಲ್ಲುದು ಎಂದವರು ಅಭಿಪ್ರಾಯಪಟ್ಟರು.

ಪ್ರಾರಂಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳು ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜ್ಯುಕೇಶನಲ್ ಟ್ರಸ್ಟಿನ ಅಧ್ಯಕ್ಷರೂ ಆದ ಶ್ರೀ ವೀರೇಂದ್ರ ಹೆಗ್ಡೆಯವರು ಸ್ವಾಗತ ಭಾಷಣ ಮಾಡುತ್ತ ಕೆಲವು ವರ್ಷಗಳ ಹಿಂದೆ ಮಲೆನಾಡಿನ ಪ್ರದೇಶವಾದ ಧರ್ಮಸ್ಥಳದಲ್ಲಿ ಜನತೆಗೆ ಶಿಕ್ಷಣ ಸೌಲಭ್ಯವಿದ್ದಿಲ್ಲವೆಂದೂ ಶಿಕ್ಷಣ ನೀಡುವ ಉದ್ದೇಶದಿಂದಲೇ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಸ್ಥಾಪನೆಗೊಂಡಿತೆಂದೂ ಹೇಳಿದರು. ತಮ್ಮ ತೀರ್ಥರೂಪರಾದ ದಿ॥ ರತ್ನವರ್ಮ ಹೆಗ್ಡೆಯವರ ಕಾಲದಲ್ಲಿ ಶ್ರೀ ಕ್ಷೇತ್ರದಲ್ಲಾದ ಶಿಕ್ಷಣಪ್ರಗತಿಯನ್ನೂ ಅವರು ಸ್ಮರಿಸಿದರು. ಕಾಲೇಜ್ ಕಟ್ಟಡದ ನಿರ್ಮಾಣದಲ್ಲಿ ನೆರವಾದವರೆಲ್ಲರಿಗೂ ಶ್ರೀ ಹೆಗ್ಡೆಯವರು ಧನ್ಯವಾದಗಳನ್ನಿತ್ತರಲ್ಲದೆ ಶ್ರೀ ಸ್ವಾಮಿಯ ಅನುಗ್ರಹ ಕೋರಿದರು. ಪರಮಹಂಸ ಶ್ರೀ ಭಾಸ್ಕರ ಶೇಷಾಚಾರ್ಯರವರು ಆಶೀರ್ವಚನಗಳನ್ನಿತ್ತರು. ಶ್ರೀ ಶ್ರೀ ಶ್ರೀ ಕುಮಾರ ಸ್ವಾಮಿಗಳು ಕಾಲೇಜ್ ಕಟ್ಟಡದಲ್ಲಿ ಪಾಲ್ಗೊಂಡ ಸೌಕರರಿಗೆ ಮತ್ತು ನಿರ್ಮಾಣ ಕಾರ್ಯದಲ್ಲಿ ನೆರವಾದ ಇತರ ಮಹನೀಯರಿಗೆ ಬಹುಮಾನಗಳನ್ನಿತ್ತರು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಸ್. ಪ್ರಭಾಕರ್‌ರವರು ಅಂತ್ಯದಲ್ಲಿ ವಂದನಾರ್ಪಣೆ ಗೈದರು.

ಚಂದಾ ಹಣ ಬಾಕಿ ಇರುವವರು ದಯಮಾಡಿ ಅವಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ. ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಎಸ್. ಆರ್. ಬೀಡಿಗಳನ್ನು ಕೊಂಡುಕೊಳ್ಳುವ ಮೊದಲು ರಿಜಿಸ್ಟರ್ಡ್ ಟ್ರೇಡ್ ಮಾರ್ಕನ್ನು ಪರೀಕ್ಷಿಸಿ ಕೊಂಡುಕೊಳ್ಳಲು ಮರೆಯದಿರಿ.

SR REGD.

REGD. NO 149134.

S.R.BEEDI WORKS, UDIPI, S.K.

ಮಿತ ಕುಟುಂಬ ಯೋಜನೆಗೆ

ಅತ್ಯುಪಯುಕ್ತ ಪುಸ್ತಕ —

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ.ಕ.

ಕರಾಳ ನದಿ

(ಎರಡನೇ ಪುಟದಿಂದ)

ತ್ತದೆ." ಆತ ನನ್ನ ಭುಜಗಳನ್ನು ಹಿಡಿದುಕೊಂಡು ಮತ್ತು ತಿರುಗಿಸಿ, ಹೇಳಿದ: "ನಾವು ಇಪ್ಪತ್ತೈದು ಹೆಜ್ಜೆ ಬಂದಿರುವೆವೆಂದು ನಿನಗನಿಸುವುದಿಲ್ಲವೆ?"

"ಹೌದು, ಫೆಲಿಕ್ಸ್, ನನಗೂ ಹಾಗೆ ಅನಿಸುತ್ತದೆ."

ಏರಿಯ ಮೊದಲ ಮೆಟ್ಟಿಲುಗಳನ್ನು ಏರಿಕೊಂಡು ಹೋಗಿದ್ದರೆ, ಖಾಲೀ ಆದರೆ ಯಾವಾಗಲೊ ಒಮ್ಮೊಮ್ಮೆ ಕಾರುಗಳು ಓಡಾಡುವ ರಸ್ತೆಯ ಕಡೆಗೆ ಬಂದಿರುತ್ತಿದ್ದೆವು, ಜೀವನವೂ ತನ್ನ ಮಾಮೂಲು ದಾರಿಯಲ್ಲೇ ನಡೆಯುತ್ತಿತ್ತು ಮತ್ತು ಈ ಹಿಂದಿನಂತೆಯೆ ನಾವಿಬ್ಬರೂ ಸುಖದ ಜೋಡಿಯಾಗಿಯೆ ಉಳಿದಿರುತ್ತಿದ್ದೆವು. ಆದರೆ ಯಾರಿಗೆ ಗೊತ್ತು, ನಮ್ಮ ಸುತ್ತ ಮುತ್ತಲು ಏನೇನು ಕಾದು ಕುಳಿತಿದೆಯೆಂಬುದು? ಹಲ್ಲು ಮಸೆಯುವ ಕಪ್ಪು ಹೊಳೆಯನ್ನು ಬಿಟ್ಟು ಬರಲು ನಾವು ಇಚ್ಛಿಸಲಿಲ್ಲ. ಮತ್ತೆ ಹೀಗಾಗಿ ಹೆಜ್ಜೆ ತಪ್ಪಿದೆವು.

ಕಗ್ಗತ್ತಲೆ? ಕರ್ರಗೆ, ಮೆಲ್ಲನೆ ಮೇಲೇರುತ್ತಿದ್ದ ಹೊಳೆಯ ಕಡೆಗೆ ನನ್ನ ತಲೆಯನ್ನು ತಿರುಗಿಸಿದೆ. ಮೊದಮೊದಲು ನನ್ನ ಕಣ್ಣನ್ನು ನಾನೇ ನಂಬಲಿಲ್ಲ; ಓ, ನದಿಯ ಮಧ್ಯದಲ್ಲಿ ಚಲಿಸುವ ಹಿಮದ ಚಪ್ಪಡಿಯೊಂದರ ಮೇಲೆ ಮನುಷ್ಯ; ನಂಬಲಸಾಧ್ಯ, ಯಾವುದೋ ಒಂದು ಮಾಯೆ ಇರಬೇಕು! ಸಹಾಯಕ್ಕಾಗಿ ಅವನೇಕೆ ಅರಚುತ್ತಿಲ್ಲ?

ಅಲ್ಲ, ಇದು ಮಾಯೆಯಲ್ಲ. ಹಸಿದ ಪ್ರಾಣಿ ಬೇಟೆಯನ್ನು ಕಂಡುಕೊಂಡಿದೆ.

'ಫೆಲಿಕ್ಸ್, ನೋಡು ಅಲ್ಲೊಬ್ಬ ಮನುಷ್ಯ!'

ಆತ ತನ್ನ ಕೋಟಿನ ಗುಂಡಿಗಳ ಕಡೆಗೆ ಒಂದಿಷ್ಟು ಕೈಯೆತ್ತಿದ್ದರೂ ಕರಾಳ, ದುಷ್ಟ ಶಕುನದಂತಿದ್ದ ನೀರಿನ ಕಡೆಗೆ ಒಂದು ಹೆಜ್ಜೆಯನ್ನು ಇಟ್ಟಿದ್ದರೂ....

ಪ್ರಾಯಶಃ ಅವನನ್ನು ತಡೆಗಟ್ಟಲು ನಾನು ಪ್ರಯತ್ನಿಸುತ್ತಿದ್ದೆ, ಹಿಂದೆ ಬರುವಂತೆ ಕರೆಯುತ್ತಿದ್ದೆ.

ನದಿಗೆ ಸಾವಿನ ವಾಸನೆ ಹೊಡೆಯುತ್ತಿತ್ತು. ಜೀವಕ್ಕಿಂತ ಹೆಚ್ಚು ಪ್ರಿಯ, ಅಮೂಲ್ಯವೆನಿಸಿದವನನ್ನು ನಾನು ತ್ಯಾಗ ಮಾಡಲಾರೆ. ಅದು ಎರಡು ಬಲಿಗಳನ್ನೇಕೆ ತೆಗೆದುಕೊಳ್ಳಬೇಕು? ಈ ನದಿಯಲ್ಲಿ ಜಿಗಿಯುವುದು ಹುಚ್ಚುತನವೆ ಸರಿ. ಆದರೂ ಆ ಹಿಮ ಚಪ್ಪಡಿಯ ಮೇಲೆ ಮನುಷ್ಯನೊಬ್ಬ ನಿಂತಿದ್ದಾನೆ ಅವನ ಶಕ್ತಿಯೆಲ್ಲ ಬಸಿಯುತ್ತಿದೆ, ಜೀವಕ್ಕೆ ಜೋತು ಬಿದ್ದಿದ್ದಾನೆ-ಯಾರಾದರೂ ಅವನಿಗೆ ಸಹಾಯ ಮಾಡಬೇಕು.

"ನಿಸ್ಸಹಾಯಕತೆಯ ನಿಟ್ಟುಸಿರು ಬಿಡುತ್ತ ನೀನಿಲ್ಲಿ ನಿಂತಿದ್ದೀ. ಅದು ಹೇಗೆ ನಿಂತಿದ್ದೀ?"

ಕ್ಷಣಾರ್ಧದಲ್ಲಿಯೆ ಫೆಲಿಕ್ಸ್ ರಸ್ತೆಯ ಮೇಲಿದ್ದ ಹಾಗೂ ಓಡುತ್ತಿದ್ದ ಕಾರೊಂದನ್ನು ನಿಲ್ಲಿಸುತ್ತಿದ್ದ.

'ಮನುಷ್ಯನೊಬ್ಬ ಮುಳುಗುತ್ತಿದ್ದಾನೆ.'

'ಎಲ್ಲಿ?'

'ಅಲ್ಲಿ, ನದೀ ಮಧ್ಯದಲ್ಲಿ ಹಿಮ ಚಪ್ಪಡಿಯ ಮೇಲೆ.'

ಬೂದು ಬಣ್ಣದ ಅಳಿಲು ತುಪ್ಪಳದ ಕೋಟುತೊಟ್ಟಿದ್ದ ಧಡೂತಿ ಹೆಂಗಸೊಬ್ಬಳು ಕಿರಿಚಿದಳು.

'ಒಳ್ಳೆಯದು, ನೀನೇಕೆ ಅವನನ್ನು ರಕ್ಷಿಸಬಾರದು? ಇನ್ನಾರನ್ನಾದರೂ ಸಾವಿನ ದವಡೆಗೆ ದೂಡಬಯಸುತ್ತೀಯೊ?'

ಇನ್ನೊಂದು ಕಾರು. ಮತ್ತೆ ಒಂದು, ಮೂರನೆಯದನ್ನೂ ನಿಲ್ಲಿಸಲಾಯಿತು.

ಈ ಮಧ್ಯೆ, ಮನುಷ್ಯ ತನ್ನ ಅಸುವಿಗಾಗಿ ಕಸುವಿನಿಂದ, ಸದ್ದಿಲ್ಲದೆ ಹೋರಾಡುತ್ತಿದ್ದ.

ಯಾರೋ ಪೋಲೀಸರನ್ನು ಕರೆಯಲು ತೆರಳಿದರು; ಇನ್ನಾರೊ ಫ್ಯೈರ್ ಬ್ರಿಗೇಡ್ ಕರೆತರಲು ಓಡಿದರು. ಧಡೂತಿ ಹೆಂಗಸು ಗೊಣಗುತ್ತ ಮುಂದೆ ಸಾಗಿದಳು:

'ಅವನಿಗೆ ಯಾರೂ ಸಹಾಯ ನೀಡಲಾರರು-ಅವನೇ ಅಲ್ಲಿ ಸಿಕ್ಕಿ ಹಾಕಿಕೊಂಡಿದ್ದು ಅವನೇ ಹೊರಬರಬೇಕು!'

ಒಂದು ಹಿಮ ಚಪ್ಪಡಿಯಿಂದ ಇನ್ನೊಂದು ದೊಡ್ಡ ಹಿಮ ಚಪ್ಪಡಿಗೆ ಆ ಮನುಷ್ಯ ಜಿಗಿದ, ಕಾಲು ಜಾರಿತು, ದಟ್ಟ ಕಪ್ಪಗಿನ ನೀರಿಗೆ ಬಿದ್ದ.

ನನ್ನ ಕಣ್ಣು ಮುಚ್ಚಿಕೊಂಡು ಕೈಯಿಂದ ಭದ್ರವಾಗಿ ಫೆಲಿಕ್ಸ್‌ನನ್ನು ಹಿಡಿದುಕೊಂಡೆ ನಾನೇ ನೀರಿಗೆ ಬಿದ್ದಿರುವೆನೋ ಎಂಬುವಂತೆ. ತಣ್ಣಗಿನ ಮೈಕೊರೆಯುವ ನೀರು ನನ್ನನ್ನೆ ಅಮುಕಿ ಹಿಡಿದಂತೆ, ಚಳಿಯು ನನ್ನ ಹೃದಯವನ್ನು ಹಿಂಡುತ್ತಿರುವಂತೆ. ತಲೆಯನ್ನು ಅಲ್ಲಾಡಿಸಿ ಮೇಲೆತ್ತಿದೆ. ಫೆಲಿಕ್ಸ್‌ನ ಕಣ್ಣುಗಳು ನನ್ನನ್ನೇ ನೋಡುತ್ತಿದ್ದವು. ಆದರೆ ಸ್ವಲ್ಪ ಕಾಲದ ಹಿಂದೆ ದಂಡೆಯ ಮೇಲೆ ನಾನು ನೋಡಿದ್ದ, ಅಥವಾ ಮೋಜಿನ ಪ್ರದೇಶದಲ್ಲಿ ನೋಡಿದ್ದ ಮತ್ತು ನದೀ ತೀರದಗುಂಟ ನೋಡಿದ್ದ ಕಣ್ಣುಗಳು ಅವಾಗಿರಲಿಲ್ಲ....ಆ ಕಣ್ಣುಗಳಲ್ಲಿಯ ಬೆಳಕು ಅಡಗಿ ಹೋಗಿತ್ತು. ಅವನಲ್ಲಿ ಇಂಥ ಕಣ್ಣುಗಳನ್ನು ನಾನೆಂದೂ ಕಂಡಿರಲಿಲ್ಲ, ಅಷ್ಟೊಂದು ಪೌರುಷಹೀನ!

○ ○ ○

ವೃತ್ತಪತ್ರಿಕೆಯ ವರದಿ ಎಷ್ಟೊಂದು ಸಾಧಾರಣವಾಗಿ ಇದನ್ನು ಬಣ್ಣಿಸಿದೆ. "ನಂತರ ತರುಣನೊಬ್ಬ ತನ್ನ ಕೋಟನ್ನು ಕಳಚಿ ನೀರ್ಗಲ್ಲ ತಂಪಿನ ನೀರಿಗೆ ಜಿಗಿದ. ಮೈ ಮುದುಡುವ ಚಳಿಯಲ್ಲಿ ಮತ್ತು ಹಿಮ ಚಪ್ಪಡಿಗಳ ಸಂಘಟನೆಯಲ್ಲಿ ಛಲದಿಂದ ಸೆಣಸಾಡಿ, ಮುಳುಗುತ್ತಿದ್ದ ಮನುಷ್ಯನನ್ನು ಸಾವಿನ ದವಡೆಯಿಂದ ಬಿಡಿಸಿದ...." ಇಲ್ಲ ಈ 'ತರುಣ' ಫೆಲಿಕ್ಸ್‌ನಾಗಿರಲಿಲ್ಲ. ಅವನೆಂದೂ ಇಂಥ ತರುಣನಾಗಿಲ್ಲ, ಮತ್ತೆ ಎಂದೂ ಇಂಥ ತರುಣನಾಗಲಾರ....

"ವಿಲ್ನೀಯಸ್‌ನಲ್ಲಿರುವ ದ್ವಿತೀಯ ನಿರ್ಮಾಣ ಕಾಮಗಾರೀ ಆಡಳಿತದಲ್ಲಿ, ಕಾರ್ಯ ಮೇಲ್ವಿಚಾರಣೆಾಧಿಕಾರಿಯಾಗಿರುವ ಆಂದ್ರೀಯಸ್ ವ್ಯಾಲೆತೀಸ್ ತನ್ನ ಜೀವವನ್ನೇ ಪಣವಿಟ್ಟು ಮನುಷ್ಯನನ್ನು ಉಳಿಸಿದ. ಈಗ ವಿಷಯ ಡಾಕ್ಟರರ ಕೈಯಲ್ಲಿದೆ. ಯಾಕೆಂದರೆ ಎ-ವ್ಯಾಲೇತಿಸ್‌ಗೆ ನ್ಯೂಮೋನಿಯ ತಗಲಿಕೊಂಡಿದೆ, ಮತ್ತು ಪಾರುಮಾಡಲ್ಪಟ್ಟ ಮನುಷ್ಯ....'

ಪತ್ರಿಕೆಯನ್ನು ಕೆಳಗೆ ಚೆಲ್ಲಿ ಮೇಲೆ ನೋಡಿದೆ.

ತಾಯಿ ಬಾಗಿಲ ಬಳಿಯಲ್ಲಿ ನಿಂತಿದ್ದಳು.

"ಸೌಲೆ, ನಿನಗೇನಾಗಿದೆ? ಯಾವಾಗಿನಿಂದ ನಾನು ನಿನ್ನನ್ನು ಕರೆಯುತ್ತಿದ್ದೇನೆ. ತಗೋ ಎಲ್ಲವೂ ಮೇಜಿನ ಮೇಲೆ ಇವೆ."

"ಅಮ್ಮ ನನಗೆ ಹಸಿವಾಗಿಲ್ಲ."

"ಏನು ಹಾಗಂದರೆ? ಆಗಲೇನೆ ನೀನು ತೋಳದಂತೆ ಹಸಿದಿದ್ದೇನೆಂದು ಹೇಳಿದೆ!"

ಅವಳು ಬಂದು, ನನ್ನ ಹಣೆಯ ಮೇಲೆ ಕೈಯಿಟ್ಟಳು,

"ಜ್ವರ ಬಂದಿಲ್ಲವೆಂದು ತಿಳಿಯುತ್ತೇನೆ'

"ಇಲ್ಲವಮ್ಮ. ನಾನು ಚೆನ್ನಾಗಿಯೇ ಇದ್ದೇನೆ."

'ಹಾಗಿದ್ದರೆ ಇದ್ದಕ್ಕಿದ್ದಂತೆ ಏನಾಯಿತು ನಿನಗೆ?'

ಇದೇನು ಈಗಲೇ ಹಾಗಾಗಿಲ್ಲವಲ್ಲ, ಕಳೆದ ಮೂರು ದಿನಗಳಿಂದ ಚಿತ್ತಕ್ಷೋಭೆಯಿಂದ ಬಳಲುತ್ತಿದ್ದೇನೆ-ಎಂಬುದಾಗಿನಾನು ವಿವರಿಸಬಹುದಿತ್ತು. ಜೀವನ ನಡೆದೇ ಇದೆ, ಎಲ್ಲವೂ ಸಾಂದ್ರವಾಗಿ ತಿಳಿಯಾಗಿ ಹಾಗೇ ಇದೆ, ದಾರಿಯ ಕೊನೆಯಲ್ಲಿ ಏನು ಕಾದಿದೆ ಎಂಬುದೂ ನನಗೆ ಗೊತ್ತು- ಎತ್ತರದ ದಂಡೆಯ ಮೇಲೆ, ಅಥವಾ ಆ ಎತ್ತರದ ಕಟ್ಟಡಗಳ ಪ್ರದೇಶದಲ್ಲಿ, ಅಥವಾ ಇನ್ನೂ ಮುಂದೆ ನೀರಿನ ಬಳಿಗೆ ಬಂದಾಗ ಮುಂದೆ ಏನು ಕಾದಿದೆಯೆಂದು ಯಾರಾದರೂ ಕೇಳಿದ್ದರೆ ಖಂಡಿತವಾಗಿ ನಾನು ಸುಖ ಎಂದೇ ಉತ್ತರಿಸುತ್ತಿದೆ. "ನಿನ್ನೊಡನೆ-ಕಲ್ಲು ಗೋಡೆಯ ಹಿಂದೆ ಇದ್ದಷ್ಟು" ಎಂದು ಹೇಳಿದಾಗಲೂ ನನಗೆ ಅಂಥ ಆತ್ಮವಿಶ್ವಾಸವಿದ್ದಿತು.

ಆದರೆ ಕಪ್ಪು ಹೊಳೆಯಲ್ಲಿ, ಭಾರೀ ಹಿಮಚಪ್ಪಡಿಗಳ ಮಧ್ಯದಲ್ಲಿ ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನಿಗೆ ಸಹಾಯ ನೀಡಲು ಈಜುತ್ತಿದ್ದಾಗ, ಫೆಲಿಕ್ಸ್‌ನಲ್ಲಿ ಮಾತ್ರವೆ ಬೇರೆ ತರಹ ಕಣ್ಣುಗಳನ್ನು ನಾನು ಕಾಣಲಿಲ್ಲ, ನನ್ನ ಕಡೆಗೇ ನಾನು ನೋಡಿಕೊಂಡು ಕೇಳಿಕೊಂಡೆ: 'ಸೌಲೆ ಸುಖವೆನ್ನುವುದು ಎಷ್ಟೊಂದು ಕ್ಷಣಿಕ ಎಂಬುದನ್ನು ಕಂಡೆಯಾ?....ಒಂದೇ ಒಂದು ತಪ್ಪು ಹೆಜ್ಜೆಯಿಂದ....ಬಳಿಕ ಇನ್ನೇನೂ ಉಳಿದಿರುವುದಿಲ್ಲ. ಕೇವಲ ಚೂರುಗಳು! ಆದರೆ ಚೂರುಗಳನ್ನು ಪುನಃ ಜೋಡಿಸಲಿಕ್ಕಾದೀತೆ? ಇಲ್ಲ, ಇವೆಂದೂ ಸುಖವನ್ನುಂಟುಮಾಡಲಾರವು. ಮುರಿದು ಹೋದುದನ್ನು ನೀನು ಸರಿಪಡಿಸಲಾರಿ."

"ಏನಾದರೂ ಅಂತೀಯೊ ಇಲ್ಲವೊ?"

"ಬರುತ್ತೇನಮ್ಮ, ಬಂದೆ."

"ಹಾಗಿದ್ದರೆ. ಬೇಗ ಬಾ. ಫೆಲಿಕ್ಸ್ ಫೋನ್ ಮಾಡಬಹುದು. ನೀನಿನ್ನೂ ಬಟ್ಟೆ ಬದಲಾಯಿಸಬೇಕು. ಹೀಗೆ ಹೋಗುವುದಿಲ್ಲವಷ್ಟೆ?"

"ಇಲ್ಲಮ್ಮ, ನಾನು ಸಿನೆಮಕ್ಕೆ ಹೋಗುವುದಿಲ್ಲ."

ಹದಿನೈದೇ ನಿಮಿಷಗಳ ಹಿಂದೆ ನಿಜವಾಗಿಯೂ ನಾನು ತೋಳನಂತೆ ಹಸಿದಿದ್ದೆ. ಆದರೆ ಈಗ ಒಂದು ಚೂರು ತಿನ್ನಲೂ ಆಗುವುದಿಲ್ಲ. ಈ ಎರಡು ದಿನಗಳಿಂದಲೂ ಗಾಯದಿಂದ ರಕ್ತ ಹೊರಬರುತ್ತಿದೆ, ಮತ್ತೆ ಆ ತರುಣ ಆಸ್ಪತ್ರೆಯಲ್ಲಿದ್ದಾನೆ, ಅವನ ಜೀವ ಗಂಡಾಂತರದಲ್ಲಿದೆಯೆಂದು ತಿಳಿದಾಗ ಗಾಯ ಮತ್ತಷ್ಟು ತೆರೆದುಕೊಂಡಿದೆ.

ಎಲ್ಲರೂ ಶಾಂತಿ-ಸುಖಗಳಲ್ಲಿ ಬಾಳಬೇಕೆಂದು ಆಶಿಸುವ ನನ್ನ ಪ್ರೀತಿಯ ವೃದ್ಧ ತಾಯಿಗೆ ಒಂದಿಷ್ಟು ನೋವಾಯಿತೇನೊ.

"ನನ್ನ ಮಾತು ಕೇಳುವುದಿಲ್ಲವೆ? ಏನು ಯೋಚಿಸುತ್ತಿದ್ದೀ?"

ನಾನೇನು ಯೋಚಿಸುತ್ತಿದ್ದೆ? ನೀರ್ಗಲ್ಲ ತಣ್ಪಿನ ನೀರಿಗೆ ಒಂದಿಷ್ಟೂ ಹೆದರಿಕೊಳ್ಳದೆ ಇನ್ನೊಂದು ಮಾನವ ಜೀವದ ರಕ್ಷಣೆಗೆ ಧುಮ್ಮಿಕ್ಕಿದ ವ್ಯಕ್ತಿಯ ಬಗ್ಗೆಯೆ?

ಆಸ್ಪತ್ರೆಯಲ್ಲಿ ಹೇಗಿರುವನೊ ಏನೊ.

ನನ್ನ ಗಂಟಲಲ್ಲಿ ಏನೊ ಸಿಲುಕಿಕೊಂಡಂತಾಯಿತು. ಅದೇ ಕ್ಷಣದಲ್ಲಿ ಹರಿತವಾದ ಟೆಲಿಫೋನ್ ಗಂಟೆ ಬಾರಿಸಿತು.

"ಸೌಲೆ"

"ಹೌದು, ತಾಯಿ?"

"ಫೆಲಿಕ್ಸ್, ಕರೆಯುತ್ತಿದ್ದಾನೆ."

"ನಾನಿನ್ನೂ ಹಿಂತಿರುಗಿ ಬಂದಿಲ್ಲವೆಂದು ಹೇಳು."

ಮತ್ತೆ ಇನ್ನೊಂದು ಕರೆ.

"ಸೌಲೆ!"

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಹನ್ನೊಂದು

NAVAYUGA 18-3-1971
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

"ಒಳ್ಳೆಯದು, ನಾನೇ ಅವನಿಗೆ ಹೇಳುತ್ತೇನೆ."

ರಿಸೀವರ್‌ನಲ್ಲಿ ಅಸ್ಖಲಿತವಾದ, ಉತ್ಸಾಹ ತುಂಬಿದ ಧ್ವನಿ ಕೇಳಿಸುತ್ತಿತ್ತು.

"ಯಾರು ಸೌಲೆ?"

'ಹೌದು, ನಾನೆ.'

'ನಿನಗೆ ಎಲ್ಲೊ ಹೊತ್ತಾಗಿ ಬಿಡುತ್ತದೆಯೆಂದು ನನಗೆ ಭಯವಾಗಿತ್ತು. ಏನೊ ಅದೃಷ್ಟವಶಾತ್ ನನಗೆ 'ಮಿಂಡಾಗಾಸ್'ಗೆ ಎರಡು ಟಿಕೆಟ್ಟು ಸಿಕ್ಕಿದೆ. ನಿನ್ನ ಬಳಿಗೆ ಬರಲು ಸಮಯವಿಲ್ಲ. ಥೇಟರ್ ಬಳಿಯಲ್ಲೇ ನೋಡುತ್ತೇನೆ.'

ನಾನು ಸುಮ್ಮನಾದೆ.

'ಸೌಲೆ!'

'ಹೂಂ.'

'ಹೇಳು ಏನಾದರೂ.'

'ಫೆಲಿಕ್ಸ್, ಇಲ್ಲ ಇಂದು ರಾತ್ರಿ ಸಿನೆಮಕ್ಕೆ ಬರಲಾಗುವುದಿಲ್ಲ.'

'ಯಾಕೆ?'

'ಮತ್ತೆಂದೊ ಒಂದು ದಿನ ಹೇಳುವೆ.'

'ಇಲ್ಲ ಈಗಲೇ ಹೇಳು!'

ಅವನ ಧ್ವನಿ ಕಟುವಾಗಿತ್ತು; ತಾಳ್ಮೆಗೆಟ್ಟಿತ್ತು.

ಸುತ್ತಲೆಲ್ಲ ನೋಡಿದೆ. ಅಮ್ಮ ಬಾಗಿಲ ಬಳಿಯಲ್ಲೇ ನಿಂತುಕೊಂಡಿದ್ದಳು, ಅವಳ ಕಣ್ಣಲ್ಲಿ ನೀರೂರಿತ್ತು.

ಇದು ವಿಚಿತ್ರವೆ ಸರಿ. ನನ್ನ ಕೈಯಲ್ಲಿ ತೂಗಾಡುತ್ತಿದ್ದ ರಿಸೀವರ್‌ನೊಳಗಿಂದ ತೆಳ್ಳಗಿನ ಕುಂಯಿ ಕುಂಯಿ ಧ್ವನಿ ಬಂದಿತು.

'ಸೌಲೆ ನಾನು ಮಾತನಾಡುವುದು ಕೇಳಿಸುವುದಿಲ್ಲವೆ?'

ಮುಂದಿನ ಕ್ಷಣದಲ್ಲಿ ನಾನು ಏನನ್ನೂ ಕೇಳಲಿಲ್ಲ. ರಿಸೀವರನ್ನು ಕೆಳಗಿಟ್ಟು ನನ್ನ ಕೋಟಿಗೆ ಕೈ ಹಾಕಿದೆ.

o o o

ಅಂತಾರಾಷ್ಟ್ರೀಯ ವ್ಯಾಖ್ಯಾನಕಾರ ಬಹಳಷ್ಟು ಸಮಯ ಹಿಂದೆಯೆ ತನ್ನ ಕಾರ್ಯಕ್ರಮವನ್ನು ಮುಗಿಸಿರಬೇಕು.

ತಂದೆ ಸಣ್ಣ 'ರೆಕಾರ್ಡನ್ನೇ' ಕೊಂಡ ಮಗ ಅದೆಷ್ಟೇ ಜಾಣನಾಗಿದ್ದರೂ, ಅನಿವಾರ್ಯತೆಗೆ ಹೊಂದಿಕೊಂಡು ಹಸನ್ಮುಖನಾದ ಖುಷಿಯಾಗಿ ಏನನ್ನೋ ಹೇಳಿದ.

ಶೋ ವಿಂಡೋವಿನ ಇನ್ನೊಂದು ಬದಿಯಲ್ಲಿ ಟೆಲಿವಿಷನ್ ತೆರೆಯ ಮೇಲೆ ಯುದ್ಧದ ಕುರಿತ ಚಿತ್ರವೊಂದನ್ನು ತೋರಿಸಲಾಗುತ್ತಿತ್ತು...ಬಾಂಬುಗಳು, ಅಗ್ನಿವರ್ಷ ರಕ್ತ ಮತ್ತು ವೀರರು. ನೂರಾರು ಸಹಸ್ರಾರು ಜನ ವೀರರು. ಜಗತ್ತಿನಿಂದ ಅನಿಷ್ಟವನ್ನೆಲ್ಲ ಅವರು ತೊಳೆದು ಹಾಕುವ ದಿನವು ಒಮ್ಮೆ ಬಂದೇ ಬರುತ್ತದೆ. ಆದರೆ ಮೊನ್ನೆಯಷ್ಟೇ ನೀರ್ಗಲ್ಲ ತಂಪಿನ ನೀರಿನಲ್ಲಿ ತನ್ನಷ್ಟಕ್ಕೆ ತಾನೇ ಜಿಗಿದು ಮುಳುಗುತ್ತಿದ್ದ ಮನುಷ್ಯನನ್ನು ಉಳಿಸಿದ ಮನುಷ್ಯನೊಬ್ಬ ಇಲ್ಲಿದ್ದಾನೆ. ಈಗ ಆತ ಬೀದಿಯ ಆ ಬದಿಯಲ್ಲಿ, ಹಳೆಯ ಆಸ್ಪತ್ರೆ ಕಟ್ಟಡದಲ್ಲಿ ಇದ್ದಾನೆ. ನಾನು ಬೀದಿಯನ್ನು ದಾಟಿಕೊಂಡು ಹೋಗಬಹುದು. ಆದರೆ ದೊಡ್ಡ ದೊಡ್ಡ ಹಿಮಚಪ್ಪಡಿಗಳನ್ನು ಸಾಗಿಸುವ, ಏನನ್ನೊ ಗೊಣಗುವಂತೆ ದಂಡೆಗೆ ನೆತ್ತಿಗೆ ನೀರನ್ನು ಅಪ್ಪಳಿಸುವ, ಆಸೇ ಕಾಲಕ್ಕೆ ಚಪ್ಪಡಿಗಳು ಒಂದಕ್ಕೊಂದು ತಿಕ್ಕಿ ತಾಗಲಾಡುವ ಈ ಕರಾಳ ನದಿಯನ್ನು ನಾನು ದಾಟುವುದೆಂತು?

ಫೆಲಿಕ್ಸ್, ಈಗ ನನ್ನನ್ನೂ ನಿನ್ನನ್ನೂ ಪ್ರತ್ಯೇಕಗೊಳಿಸುವ, ಅಗಲವಾದ ಈ ಕರಾಳ ನದಿಯನ್ನು ನಾನು ದಾಟುವುದೆಂತು?

ಜೀವಸತ್ವಗಳು ಮತ್ತು ಮುಪ್ಪು

—‡ ರೋಬರ್ತ್ ಕೊರೋತ್ಕಿ ‡—

ದೀರ್ಘಾಯುಷ್ಯವು ಅನೇಕ ಸಂಗತಿಗಳನ್ನು ಅವಲಂಬಿಸಿದೆ. ವೃದ್ಧಾಪ್ಯಶಾಸ್ತ್ರ ಮತ್ತು ವೃದ್ಧಾಪ್ಯ ಚಿಕಿತ್ಸಾಶಾಸ್ತ್ರದಲ್ಲಿಯ ಯಶಸ್ಸೂ ಅವುಗಳಲ್ಲೊಂದು. ಆದರೆ ಮುಪ್ಪಡರುವ ಕ್ರಿಯೆಯನ್ನು ಮಾತ್ರ ಇಂದಿಗೂ ಪೂರ್ಣ ಅಭ್ಯಸಿಸಲಾಗಿಲ್ಲ. ನೂರು ವರ್ಷಗಳ ಬಳಿಕ ಬರುವ ಜೈವಿಕ ಅಡ್ಡಿಯವರೆಗೆ ಕೂಡ ಅನೇಕ ಜನರು ಬಾಳುವುದಿಲ್ಲ. ಈ ಮಧ್ಯೆ ವೃದ್ಧಾಪ್ಯದಿಂದಾಗಿಯೆ ಸಾವುಗಳು ಅಷ್ಟೇನೂ ನಡೆಯುತ್ತಿಲ್ಲವೆಂದು ವೈದ್ಯಕೀಯ ಅಂಕಿ-ಅಂಶಗಳು ತಿಳಿಸುತ್ತವೆ. ಬಹುತೇಕ ಪ್ರಸಂಗಗಳಲ್ಲಿ ಡಾಕ್ಟರರು ಶರೀರಾಂಗಗಳು 'ಸಾಯುವಂತೆ ಮಾಡುತ್ತಿರುವ' ವೃದ್ಧಾಪ್ಯದ ಕಾಹಿಲೆಗಳನ್ನೇ ಎದುರಿಸುತ್ತಾರೆ.

ಜೀವನದ ಈ ಮುಖದ ಬಗ್ಗೆ ಹೆಚ್ಚುತ್ತಿರುವ ಜ್ಞಾನ ಮತ್ತು ಅಧಿಕವಾಗಿ ದೊರೆಯುತ್ತಿರುವ ಮಾಹಿತಿಯ ಆಧಾರದ ಮೇಲೆ ವಿಜ್ಞಾನಿಗಳು ವೃದ್ಧಾಪ್ಯ ಕ್ರಿಯೆಯ ಸಿದ್ಧಾಂತವೊಂದನ್ನು ರೂಪಿಸುತ್ತಿದ್ದಾರೆ. ವಿಜ್ಞಾನದ ಇತ್ತೀಚಿನ ಸಾಧನೆಗಳನ್ನೂ, ಅದ್ಯಾವತ್ ಸಂಶೋಧನಾ ವಿಧಾನಗಳನ್ನೂ ಇದಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ಒಂದು ವಿಶಿಷ್ಟ ಸತ್ಯಾಂಶ ಅಥವಾ ಲಕ್ಷಣದ ಆಧಾರದ ಮೇಲಿನ ಸಿದ್ಧಾಂತಕ್ಕೆ, ಮುಪ್ಪಡರುವ ಜಟಿಲ ಕ್ರಿಯೆಯನ್ನು ಒಳಪಡಿಸಿ ನೋಡುವುದು ಅಷ್ಟೊಂದು ಸುಲಭವೂ ಅಲ್ಲ, ಶಕ್ತವೂ ಅಲ್ಲ. ಆದ್ದರಿಂದಲೇ ವಿಜ್ಞಾನಿಗಳು ಇದನ್ನು ನಾನಾ ಮುಖಗಳಿಂದ, ನಾನಾ ಕೋನಗಳಿಂದ ನೋಡಲು ಪ್ರಯತ್ನಿಸುತ್ತಿದ್ದಾರೆ.

ಒಡೆಸ್ಸಾ ಮೆಚ್ನಿಕೋವ್ ವಿಶ್ವವಿದ್ಯಾಲಯದಲ್ಲಿ ಪ್ರಾ. ಅನತೋಲಿ ರೋಜನೋವ್ ಅವರ ನೇತೃತ್ವದಲ್ಲಿರುವ ಜೀವರಸಾಯನ ವಿಜ್ಞಾನ ವಿಭಾಗದ ವಿಜ್ಞಾನಿಗಳು ಅಂಗಕಟ್ಟುಗಳ, ಕೋಶಗಳ, ಒಳಚರ್ಮದ, ಜೀವಂತ ಕೋಶಗಳ 'ಸ್ಟೋರೇಜ್ ಬ್ಯಾಟರಿ'ಗಳಾದ ಮಿಟೊಕೊಂಡ್ರಿಯಾಗಳ ಮೇಲೆ 'ವೃದ್ಧಾಪ್ಯ ವ್ಯಾಪನೆಯ' ಲಕ್ಷಣಗಳನ್ನು ಅಭ್ಯಸಿಸುತ್ತಿದ್ದಾರೆ. ಶರೀರಾಂಗಗಳ (ಭಿನ್ನ ಭಿನ್ನ ವಯಸ್ಸಿನಲ್ಲಿ) ಜೀವರಾಸಾಯನಿಕ ಪ್ರಕ್ರಿಯೆಯಲ್ಲಿ ಜೈವಿಕ ಅನ್ಯಪರಿಣಾಮಕಗಳಾಗಿರುವ ಜೀವಸತ್ವಗಳು, ಎಂಜಿಮ್ಸ್ ಮತ್ತು ಕೋ—ಎಂಜಿಮ್ಸ್‌ಗಳನ್ನು ಮಾರ್ಪಡಿಸುವುದರಲ್ಲೂ ವಿಜ್ಞಾನಿಗಳು ಆಸಕ್ತಿವಹಿಸಿದ್ದಾರೆ.

ಸಪ್ರಥ ಕಾರ್ಯದಲ್ಲಿ ನಶಿಸುವಿಕೆ ಮತ್ತು ಸಂಶ್ಲೇಷಣೆಗಳ ಪ್ರಕ್ರಿಯೆ ಅತ್ಯಂತ ಸೂಕ್ಷ್ಮ ರೀತಿಯಲ್ಲಿ-ಸಮತೂಕದಿಂದ ನಡೆದಿದೆ. ಅನಂತರ ಒಬ್ಬೊಬ್ಬರಿಗೂ ಭಿನ್ನವಾದ ವಯಸ್ಸಿನ ಗಡಿ ಬರುತ್ತದೆ-ಅಂದರೆ ಜಟಿಲವಾದ 'ಸ್ವತಶ್ಚಲಿ' ವ್ಯಾಪಾರ ಪತನಗೊಂಡು ತೂಕ ತಪ್ಪಿರುತ್ತದೆ, ಜೀವದ್ರವ್ಯ ಪರಿಣಾಮ ಕ್ರಿಯೆಯೂ, ಅಂಗಾಂಶಗಳಲ್ಲಿ ಪ್ರಾಣವಾಯುವಿನ ಸತ್ವವೂ ಅಲ್ಪಗೊಂಡಿರುತ್ತವೆ.

"ಈ ಪ್ರಕ್ರಿಯೆಯನ್ನು ಅರಿತುಕೊಳ್ಳುವಲ್ಲಿ ಪಿರುವಿಕ್ ಆಮ್ಲವು ವಿಶೇಷ ಕುತೂಹಲಕಾರಿ ಸಂಗತಿಯಾಗಿದೆ" ಎಂಬುದಾಗಿ ಜೀವ ರಸಾಯನ ವಿಜ್ಞಾನ ವಿಭಾಗದಲ್ಲಿ ಸಂಶೋಧಕರಾಗಿರುವ ಲರೀಸಾ ವ್ಯಾಚೆಂಕೊ ಎಂ.ಎಸ್ಸಿ. (ಜೀವವಿಜ್ಞಾನ) ಅವರು ಹೇಳುತ್ತಾರೆ. "ಎಲ್ಲ ಅಂಗಾಂಶಗಳಲ್ಲೂ ಅಂಗಾಂಗಗಳಲ್ಲೂ ಇದು ಉಪಸ್ಥಿತವಿದ್ದು ಜೀವದ್ರವ್ಯ ಪರಿಣಾಮ ಕ್ರಿಯೆಯಲ್ಲಿ ತುಂಬಾ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಅನೇಕ ರೂಪಾಂತರ ಕ್ರಿಯೆಗಳಲ್ಲಿ ಈ ಆಮ್ಲವು ಭಾಗವಹಿಸುತ್ತದೆ ಮತ್ತು ಜೀವಾಂಗಗಳಲ್ಲಿಯ ಅನೇಕ ಜೀವರಾಸಾಯನಿಕ ಪ್ರತಿಕ್ರಿಯೆಗಳ ಗತಿಯನ್ನು ನಿರ್ಧರಿಸುತ್ತದೆ. ಅಂಗಾಂಶಗಳಿಂದ ಮತ್ತು ಮಿಟೊಕೊಂಡ್ರಿಯಾಗಳಿಂದ ನಡೆಯುವ ಪಿರುವಿಕ್ ಆಮ್ಲ ಹಾಗೂ ಲವಣಗಳ ಪ್ರಾಣವಾಯುಕರಣದ ಪ್ರತಿಕ್ರಿಯೆಯು ಶರೀರದಲ್ಲಿ ಇಡೀ ಎರಡು ಪ್ರಾಣವಾಯುಕರಣದ ಚಕ್ರಗಳನ್ನು-ಒಂದು ಏರೊಬಿಕ್ ಮತ್ತು ಇನ್ನೊಂದು ಅನಾರೋಬಿಕ್ ಪ್ರಾಣವಾಯುಕರಣ ಸಂಪರ್ಕಿಸುತ್ತದೆ.

ಬಿನ್ನ ಬಿನ್ನ ವಯಸ್ಸಿನ ಪ್ರಾಣಿಗಳ ಮೇಲೆ ಪ್ರಯೋಗ ನಡೆಸುತ್ತಿದ್ದ ಕಾಲದಲ್ಲಿ ವಿಜ್ಞಾನಿಗಳು ಪಿರುವಿಕ್ ಆಮ್ಲ ಲವಣಗಳ ಪ್ರಾಣವಾಯುಕರಣದ ಪ್ರಮಾಣ ಮತ್ತು ಈ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕೋ-ಎಂಜಿಮ್‌ಗಳಲ್ಲಿರುವ ಸತ್ವ ಇವುಗಳ ನಡುವಿರುವ ಸಂಬಂಧವೇನೆಂಬುದನ್ನು ಸ್ಥಾಪಿಸಿದ್ದಾರೆ. ಕಿರಿಯ ಪ್ರಾಣಿಗಳಲ್ಲಿ ಮುದಿ ಪ್ರಾಣಿಗಳಲ್ಲಿಯಗಿಂತ ಇದು ಹೆಚ್ಚು ತೀವ್ರವಾಗಿತ್ತು. ವಯಸ್ಸಾದಂತೆ ಪ್ರಾಣವಾಯುಕರಣದ ಪ್ರಮಾಣವೂ ನಿಧಾನಗೊಂಡಿತು. ಮಿಟೊಕೊಂಡ್ರಿಯಾಗಳಲ್ಲಂತೂ ಇದು ಹೆಚ್ಚು ಸ್ಪಷ್ಟವಾಗಿ ಕಾಣಿಸುತ್ತಿತ್ತು.

ವಿಜ್ಞಾನಿಗಳು ನಡೆಸಿದ ಒಂದು ಪ್ರಯೋಗದಲ್ಲಿ ಮುಪ್ಪಡರುತ್ತಿದ್ದ ಜೀವಾಂಗಗಳ ಪ್ರಾಣ ವಾಯುಕರಣದ ಪ್ರಕ್ರಿಯೆಯು ತೀವ್ರಗೊಂಡು ದುರ್ಬಲಗೊಂಡಿದ್ದ ಜೀವಕೋಶಗಳನ್ನು ಹೀಗೆ ಬಲಪಡಿಸಿತು. ಈ ಉದ್ದೇಶಸಾಧನೆಗೆ ಪ್ರಾಣಿಗಳಿಗೆ ಕೋ-ಎಂಜಿಮ್‌ಗಳ ಪೂರ್ವಗಾಮಿಗಳಾದ ಹಲವು ಜೀವಸತ್ವಗಳನ್ನು ನೀಡಲಾಯಿತು. ಜಠರನಾಳಗಳ ಮಾರ್ಗವನ್ನು ಬಿಟ್ಟುಕೊಟ್ಟೇ ಈ ಜೀವ ಸತ್ವಗಳನ್ನು ಶರೀರದೊಳಗೆ ಸೇರಿಸಲಾಯಿತು. ಮುಪ್ಪಾಗುತ್ತಿದ್ದ ಜೀವಾಂಗಗಳಲ್ಲಿ ಲೀನತೆಯ ಪ್ರಕ್ರಿಯೆ ದುರ್ಬಲಗೊಂಡಿತ್ತಾದುದರಿಂದ ಈ ಮಾರ್ಗವನ್ನು ಆರಿಸಿಕೊಳ್ಳಲಾಯಿತು. ಈ ಜೀವಸತ್ವಗಳು ಅಗತ್ಯವಾದ ಕೋ—ಎಂಜಿಮ್‌ಗಳ ನಿರ್ಮಾಣವನ್ನು ತೀವ್ರಗೊಳಿಸಿದುವು. ಶರೀರಾಂಗಗಳಲ್ಲಿ ಜೈವಿಕ ಅನ್ಯಪರಿಣಾಮ ಕ್ರಿಯೊತ್ಪಾದಕಗಳ ಚಟುವಟಿಕೆ ತೀವ್ರಗೊಂಡಿತು. ಇದರ ಪ್ರಚಂಡವಾದ 'ಸಂಸ್ಪರ್ಶ' ಪ್ರಾಣವಾಯುಕರಣವನ್ನು ತೀವ್ರಗೊಳಿಸಿತು.

ಪ್ರಯೋಗಗಳು ಇನ್ನೂ ಪ್ರಯೋಗಾಲಯ ಸ್ಥಿತಿಗತಿಗಳಿಂದ ಈವರೆಗಂತೂ ಹೊರಬಂದಿಲ್ಲ. ಈ ಶರೀರ ವ್ಯಾಪಾರದ ಲಕ್ಷಣಗಳು ಇನ್ನೂ ಸ್ಪಷ್ಟವಾಗಿಲ್ಲ. ಮುಪ್ಪಿನ ಕ್ರಿಯೆಯನ್ನು ಹತೋಟಿಗೆ ತರುವುದರ ಕಡೆಗೆ ಇನ್ನೊಂದು ಹೆಜ್ಜೆಯನ್ನು ಮುಂದಿಡಲಾಗಿದೆಯೆಂಬುದನ್ನು ಮಾತ್ರ ಇದು ತೋರಿಸುತ್ತದೆ.

ಸಂದರ್ಶಿಸಿರಿ!—ಸಂತೃಪ್ತರಾಗಿರಿ!!
ಬಣ್ಣ ಬಣ್ಣದ ವಜ್ರಗಳಿಗೆ, ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—
ಐಡಿಯಲ್ ಫೊಟೋ ಹೌಸ್ PHONE: 3131
ಆಗ್ಫಾ ಕೆಮಿಕಲ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ವ್ಯಾಪಾರಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1
Tele: GOLDKING Estd: 1947 Phone: 3242 Res; 3272

READ & ADVERTISE IN NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 28

NAVAYUGA

25—3—1971

ಹಂತಕನೇ ಸಹೋದರನಾದ

ಆಲಿಪೂರ್‌ನ ಜೇಲಿನಲ್ಲಿ ಸುಂದರ, ದಷ್ಟಪುಷ್ಟ ಹಾಗೂ ಭವ್ಯ ವ್ಯಕ್ತಿತ್ವದ ಒಬ್ಬ ಬಂಗಾಳಿ ನವಯುವಕ ತನ್ನ ಕಥೆಯನ್ನು ಮತ್ತೊಬ್ಬ ರಾಜ್ಯಕೀಯ ಕೈದಿಯೊಡನೆ ಹೇಳಿದನು.

"ನಾನೊಬ್ಬ ಕಳ್ಳ, ಭಯಂಕರ ಲೂಟಿಗಾರ ಮತ್ತು ಕಟುಕನಿದ್ದೆ. ಒಂದು ದಿನ ಒಬ್ಬ ಶ್ರೀಮಂತ ತನ್ನ ಸಂಪತ್ತನ್ನು ಕೂಡಿಸಿ ಬ್ಯಾಂಕಿನಲ್ಲಿಡಲು ಹೋಗಲಿದ್ದಾನೆಂದು ಸುದ್ದಿ ಸಿಕ್ಕಿತು. ನಾನು ಆತನನ್ನು ಹಿಂಬಾಲಿಸಿದೆ; ಅವಕಾಶವರಿಸಿ, ರೂಪಾಯಿಗಳ ಚೀಲವನ್ನು ಅಪಹರಿಸಿ ಓಡಿಹೋದೆ. ಆತನಾದರೂ ಸುಮ್ಮನುಳಿಯಲಿಲ್ಲ ದಿಗ್ಭ್ರಾಂತನಾದನೂ ಸ್ವಲ್ಪದರಲ್ಲೇ ಚೇತರಿಸಿಕೊಂಡು 'ಕಳ್ಳ ಕಳ್ಳ' ಎಂದು ಕೂಗುತ್ತ ನನ್ನನ್ನು ಹಿಂಬಾಲಿಸಿ ಬಂದನು. ಆತನ ಚೀರಾಟ–ಓಟಗಳನ್ನು ಕೇಳಿದ ಮತ್ತಿತರನೇಕರೂ ನನ್ನನ್ನು ಓಡಿಸಿಕೊಂಡು ಬಂದರು.

"ನಾನೂ ನಾಗಾಲೋಟ ಕೀಳುತಿದ್ದೆ. ನನ್ನ ಪುಣ್ಯವಶದಿಂದ ಮಹಾತ್ಮಾ ಗಾಂಧಿಯವರದೊಂದು ಮೆರವಣಿಗೆ ಆ ಕಡೆಯಿಂದ ಬರುತ್ತಲಿತ್ತು. ನಾನು ಅವಸರ–ಆವಸರವಾಗಿಯೇ ಆ ಮೆರವಣಿಗೆಯಲ್ಲಿ ಕೂಡಿಕೊಂಡೆ. ಪಕ್ಕದವನೊಬ್ಬನ ತಲೆಯ ಮೇಲಿನ ಗಾಂಧಿಟೋಪಿ ತೆಗೆದು ನನ್ನ ತಲೆಯ ಮೇಲಿಟ್ಟುಕೊಂಡೆ. ಎಲ್ಲರೊಡನೆ ಕೂಡಿಕೊಂಡು ಘೋಷಣೆ ಕೂಗಿದೆ. ನನ್ನನ್ನು ಒಡಿಸಿಕೊಂಡು ಬಂದವರಿಗೆ ನಾನು ಕಾಣಿಸಿಕೊಳ್ಳಲಿಲ್ಲ; ಕೊಂಡರೂ ನನ್ನ ಪರಿಚಯ ಅಥವಾ ನನ್ನ ಮೇಲೆ ಸಂದೇಹವಾಗುವಂತಿರಲಿಲ್ಲ. ನಾನು ಬದುಕಿಕೊಂಡೆ.

"ಮೆರವಣಿಗೆಯೊಂದು ಮೈದಾನದಲ್ಲಿ ಳಿಯಿತು. ಅದೊಂದು ಬೃಹತ್ ಸಭೆಯೂಯಿತು. ಬಾಪೂ ಸಭೆಯನ್ನುದ್ದೇಶಿಸಿ ಮಾತನಾಡಿದರು. ಅವರ ಒಂದೂ ಶಬ್ದದ ಅರ್ಥ ನನಗಾಗಲಿಲ್ಲ—ನನಗೆ ಹಿಂದಿ ಸರಿಯಾಗಿ ಬರುತ್ತಿರಲಿಲ್ಲ; ಆದರೆ, ಇಡಿಯ ಭಾಷಣದ ಸಾರವನ್ನು ಗ್ರಹಿಸಿದೆ.

"ಮನಸ್ಸನ್ನು ಪವಿತ್ರಗೊಳಿಸಿ, ಜೀವನವನ್ನು ಬದಲಾಯಿಸಿದ ಅಂತಹ ಮತ್ತೊಂದು ಭಾಷಣವನ್ನು ನಾನು ಕೇಳಲಿಲ್ಲ.

"ನಾನು ತುಂಬಿದ ಸಭೆಯಲ್ಲಿ ಕೂಗಿ ಹೇಳಿದೆ— ಬಾಪೂ, ಇಂದಿನಿಂದ ಬಿಟ್ಟುಬಿಟ್ಟೆ. ಶರಾಬು, ಜುಗಾರಿ, ಕಳ್ಳತನ, ಲೂಟಿ, ಹಿಂಸೆ—ಎಲ್ಲವನ್ನೂ ನಿಮ್ಮಾಣೆಯಾಗಿ ಬಿಟ್ಟುಬಿಟ್ಟೆ.

"ಸಭೆ ಮುಗಿದ ಬಳಿಕ, ಅಂದಿನ ಗಳಿಕೆಯಲ್ಲಿ ಪಾಲು ಪಡೆಯಲು ನನ್ನ ಪಾಲುದಾರರು ಬಂದರು. 'ದೇವರು ಮಾಡುವುದೆಲ್ಲ ಒಳಿತಿಗೇ. ಇಂದಿನ ಲೂಟಿಗೆ ಗುರಿಯಾದ ಶ್ರೀಮಂತ ಬಾಬು ಗಂಗಾನದಿಗೆ ಹಾರಿ ಪ್ರಾಣಬಿಟ್ಟ. ನಿನ್ನ ದಾರಿಯ ಮುಳ್ಳು ತಾನಾಗೇ ದೂರವಾಯ್ತು!

"ನಾನು ಗಟ್ಟಿಯಾಗಿ ಹೇಳಿದೆ—'ಇಲ್ಲ, ಇಲ್ಲ. ದೇವರು ಒಳಿತನ್ನು ಮಾಡಲಿಲ್ಲ. ಇದೇ ಆತನ ನ್ಯಾಯವೆ? ಒಬ್ಬ ಅಪರಾಧಿಯನ್ನು ಉಳಿಸುವುದಕ್ಕಾಗಿ ನಿರಪರಾಧಿಯನ್ನು ತನ್ನ ಬಳಿಗೆ ಎಳೆದುಕೊಳ್ಳುವುದು ಎಂತಹ ನ್ಯಾಯ? ಆತನು ಅಪರಾಧಿಗೆ ಶಿಕ್ಷೆ ಕೊಡಬಾರದೆಂದು ಹೀಗೆ ಮಾಡಿದ್ದರೆ ಅದಾವ ಧರ್ಮ? ಹೋಗಿ ಇಲ್ಲಿಂದ. ನನ್ನ ಕಣ್ಣೆದುರು ನಿಲ್ಲಬೇಡಿ. ನಾನೇನೂ ಕೊಡುವುದಿಲ್ಲ; ನಾನೂ ಏನೂ ಇಟ್ಟುಕೊಳ್ಳುವುದಿಲ್ಲ.'

"ಕೂಡಲೇ ನಾನು ಹತ್ತಿರದ ಸ್ಟೇಶನ್ನಿಗೆ ಹೋದೆ. ನಡೆದುದೆಲ್ಲವನ್ನೂ ತಿಳಿಸಿ ಹಣದ ಗಂಟು ಠಾಣೇದಾರನಿಗೊಪ್ಪಿಸಿದೆ. ಅವನು ನನ್ನ ಕೈಗಳಿಗೆ ಕೋಳ ತೊಡಿಸಿ, ಘಟನೆ ನಡೆದಾರಿನ ಪೋಲೀಸರನ್ನು ಕರೆಕಳಿಸಿದ. ಘಟನೆಗೆ ಸಂಬಂಧಿಸಿದವರೆಲ್ಲರೂ ಬಂದರು. ಅವರಲ್ಲಿ ಶ್ರೀಮಂತ ಬಾಬುವಿನ ವಿಧವೆಯೂ ಇದ್ದಳು. ಆಕೆಯನ್ನು ಕಂಡದ್ದೇ ತಡ ನನ್ನ ಕೊರಳಿಂದ ಚೀತ್ಕಾರವೊಂದು ಹೊರಟಿತು. ಎದೆ ಹೊಡೆದು ಕೊಂಡು ನಾನು ಅಳತೊಡಗಿದೆ.

'ಆಕೆ ಸುಂದರ ಸೌಮ್ಯ ಮೂರ್ತಿಯಾಗಿದ್ದಳು; ಮಲಿನ ವಸ್ತ್ರಧಾರಿಯಾಗಿದ್ದಳು. ಆಕೆಯೊಡನೆ ಕೆಲವು ಮುಗ್ಧ ಮಕ್ಕಳೂ ಇದ್ದುವು. ನಾನು ಅಳುತ್ತ ಸಂಕಲೆಗಳಿಂದ ಹಣೆ ಹೊಡೆದುಕೊಂಡೆ. 'ಅಕ್ಕ, ನಿನ್ನ ಸೌಭಾಗ್ಯವನ್ನು ಅಪಹರಿಸಿದ ಪಾಪಿ ನಾನು. ನಿನ್ನ ಪತಿ ಹಂತಕ ನಾನು. ನಿನ್ನ ಸೌಭಾಗ್ಯ ಸಿಂಧೂರವನ್ನು ನಾನು ಮರಳಿಸಲಾರೆ. ಆದರೆ, ನಿನ್ನ ತಮ್ಮನಾಗಿದ್ದು ಆಜೀವ ನಿನ್ನ ಸೇವೆಮಾಡಿಕೊಂಡಿರ ಬಲ್ಲೆ.

'ಕಣ್ಣೀರು ಸುರಿಸುತ್ತ ಆಕೆಯೆಂದಳು—'ತಮ್ಮ, ಯಾರು ಯಾರನ್ನೂ ಕೊಲ್ಲುವುದಿಲ್ಲ, ಬದುಕಿಸುವುದೂ ಇಲ್ಲ. ನನ್ನ ಹಣೆಯಲ್ಲಿ ಬರೆದದ್ದು ನಡೆದೇ ತೀರಬೇಕಲ್ಲಾ? ನೀನು ಶೋಕಿಸ ಬೇಡ.'

'ನಾನು ಆಕೆಯ ಧೈರ್ಯ, ಸಂತೋಷ ಮತ್ತು ಕ್ಷಮಾಶೀಲ ಗುಣಗಳಿಂದ ಪ್ರಭಾವಗೊಂಡೆ. ನ್ಯಾಯಾಲಯಕ್ಕೆ ನನ್ನನ್ನು ಮುಂದೆ ಕರೆತಂದರು. ನಾನು ನನ್ನ ಅಪರಾಧವನ್ನು ಸ್ವೀಕರಿಸಿದೆ. ನಾನು ಯಾವಜ್ಜೀವ ವಿಧವೆಯ ಸೇವೆ ಮಾಡುವೆನೆಂದು ಪ್ರತಿಜ್ಞೆ ಸ್ವೀಕರಿಸಿದೆ.

'ನನ್ನ ಪ್ರತಿಜ್ಞೆ ನ್ಯಾಯಾಧೀಶರ ಮೇಲೆ ಪರಿಣಾಮ ಬೀರಿತು. ಅವರು ನನಗೆ ಅಲ್ಪಾವಧಿಯ ಶಿಕ್ಷೆ ನೀಡಿ, ಬಿಡುಗಡೆಯ ನಂತರ ಪ್ರತಿಜ್ಞಾ ಪೂರ್ತಿಮಾಡಬೇಕೆಂದು ನೆನಪಿಸಿದರು.

'ಇನ್ನೇನು, ಕೆಲದಿನಗಳಲ್ಲೇ ನನ್ನ ಶಿಕ್ಷೆಯು ಮುಗಿಯಲಿದೆ. ಆ ಮೇಲೆ ನನ್ನ ಸೋದರಿಯಲ್ಲಿಗೆ ಹೋಗಬೇಕು. ಆಕೆ ಹೇಗಿದ್ದಾಳೆಯೋ! ನಾನು ಓದು ಬರಹ ಬಲ್ಲವ. ಏನಾದರೊಂದು ನೌಕರಿ ದೊರೆತೀತು; ಒಂದು ವೇಳೆ ಅದು ದೊರೆಯದಿದ್ದರೇನು, ಕೂಲಿ—ನಾಲೆಯಾದರೂ ಮಾಡಿಯೇನು. ನನ್ನ ಭಾಷೆಯುಳಿಸಿಕೊಂಡೇನು.'

ಅವನು ತನ್ನ ಪ್ರತಿಜ್ಞೆಯನ್ನು ನಿಜಕ್ಕೂ ಪಾಲಿಸಿದ. ●

ಜನನ ನಿಯಂತ್ರಣಕ್ಕೆ ಹೊಸ ವಿಧಾನಗಳು

ಮನುಷ್ಯರ ಆರೋಗ್ಯ ಸುಧಾರಣೆಯಲ್ಲಿ ಮಹತ್ವದ ಪಾತ್ರ ವಹಿಸಬಲ್ಲ ಕೆಲವು ರಹಸ್ಯಮಯ ಮೇದೋ ವಸ್ತುಗಳ ಬಗೆಗೆ ಮಾಹಿತಿ ವಿನಿಮಯ ಮಾಡಿಕೊಳ್ಳಲು ಇತ್ತೀಚಿಗೆ ಏಳು ರಾಷ್ಟ್ರಗಳ ವಿಜ್ಞಾನಿಗಳು ಸಭೆ ಸೇರಿದರು.

೪೦ ವರ್ಷಗಳ ಹಿಂದೆ ಸಂಶೋಧಿಸಲಾದ ಈ ವಸ್ತುಗಳನ್ನು ವಿಜ್ಞಾನಿಗಳು 'ಪ್ರೋಸ್ಟಾಗ್ಲಾಂಡಿನ್' ಎಂಬ ಒಂದು ವಿಚಿತ್ರ ಹೆಸರಿನಿಂದ ಕರೆಯುತ್ತಿದ್ದಾರೆ. ಇತ್ತೀಚಿಗೆ ಮಾತ್ರವೇ ವೈದ್ಯಕೀಯ ಸಂಶೋಧನೆಯಲ್ಲಿ ಇವು ಪ್ರಮುಖ ಸ್ಥಾನಕ್ಕೆ ಬಂದಿವೆ.

ಪ್ರಯೋಗಗಳು ಪ್ರೇರೇಪಿಸಿರುವ ನಿರೀಕ್ಷೆಗಳು ಕೈಗೂಡಿದರೆ ಪ್ರೋಸ್ಟಾಗ್ಲಾಂಡಿನ್‌ಗಳು ಮಾನವ ಜನಾಂಗದ ಈ ಎರಡು ತುರ್ತು ಸಮಸ್ಯೆಗಳ ಪರಿಹಾರ ಪ್ರಯತ್ನದ ಮೇಲೆ ಭಾರಿ ಪ್ರಭಾವ ಬೀರುವುವು.

ಪ್ರೋಸ್ಟಾಗ್ಲಾಂಡಿನ್‌ಗಳು ಜನನ ನಿಯಂತ್ರಣಕ್ಕೆ ಸುಧಾರಿತ ವಿಧಾನಗಳ ಆಸೆಯನ್ನೊದಗಿಸಿವೆ. ಈ ಶತಮಾನದ ಕೊನೆಯ ಪಾದದಲ್ಲಿ ಜನಸಂಖ್ಯಾ ನಿಯಂತ್ರಣವು ಪ್ರಪಂಚದ ದೊಡ್ಡ ಚಿಂತಾ ವಿಷಯವಾಗುವುದು.

—ಅನೇಕ ತೀವ್ರ ವ್ಯಾಧಿಗಳ, ಮುಖ್ಯವಾಗಿ ಹೃದಯ ಮತ್ತು ರಕ್ತನಾಳಗಳಿಗೆ ಸಂಬಂಧಿಸಿದ ವ್ಯಾಧಿಗಳ ವಿರುದ್ಧ ಹೋರಾಟದಲ್ಲಿ ಪ್ರೋಸ್ಟಾಗ್ಲಾಂಡಿನ್‌ಗಳು ಹೊಸ ಚಿಕಿತ್ಸಾ ವಿಧಾನಗಳ ಭರವಸೆಯನ್ನೊದಗಿಸುತ್ತವೆ. ಸೋಂಕು ರೋಗಗಳಿಂದಾಗುವ ಮರಣಗಳ ಸಂಖ್ಯೆ ತೀವ್ರ ಇಳಿಮುಖವಾಗಿರುವ, ತಂತ್ರಜ್ಞಾನದಲ್ಲಿ ಮುನ್ನಡೆದಿರುವ ಅನೇಕ ದೇಶಗಳಲ್ಲಿ ಈ ವ್ಯಾಧಿಗಳು ಮರಣಗಳಿಗೆ ಹಾಗೂ ನಿತ್ರಾಣಕ್ಕೆ ಮುಖ್ಯ ಕಾರಣಗಳಾಗಿವೆ. ಕಳೆದ ಸಪ್ಟೆಂಬರ್‌ನಲ್ಲಿ ನ್ಯೂಯಾರ್ಕ ವಿಜ್ಞಾನ ಅಕಾಡಮಿಯ ಆಶ್ರಯದಲ್ಲಿ ಮೇಲೆ ಹೇಳಿದ ಸಭೆ ಜರುಗಿತು. ಪ್ರೋಸ್ಟಾಗ್ಲಾಂಡಿನಗಳ ರಾಸಾಯನಿಕ ರಚನೆಯ ಬಗೆಗೆ ಮತ್ತು ದೇಹದ ಮೇಲೆ ಅವು ಮಾಡುವ ಪರಿಣಾಮಗಳ ಬಗೆಗೆ ಇತ್ತೀಚಿನ ಸಂಶೋಧನೆಗಳನ್ನು ಪ್ರಪಂಚದ ವಿಜ್ಞಾನಿಗಳ ಸಮುದಾಯಕ್ಕೆ ತಿಳಿಸುವುದು ಈ ಸಭೆಯ ಉದ್ದೇಶವಾಗಿತ್ತು.

ಆಧುನಿಕ ವೈದ್ಯಕೀಯದಲ್ಲಿ ಪರಸ್ಪರ ವಿರುದ್ಧವೆಂದು ಭಾಸವಾಗುವ ಅನೇಕ ಉದ್ದೇಶಗಳಿಗೆ ಪ್ರೋಸ್ಟಾಗ್ಲಾಂಡಿನ್ ಉಪಯುಕ್ತವಾಗಬಹುದು. ಪ್ರೋಸ್ಟಾಗ್ಲಾಂಡಿನ್‌ಗಳಿಂದ ಗರ್ಭಧಾರಣೆಯನ್ನು ತಡೆಗಟ್ಟಲು ಸಾಧ್ಯವಾಗಬಹುದು. ಆದರೆ ಗರ್ಭಧಾರಣ ಶಕ್ತಿಯನ್ನು ಉಂಟುಮಾಡಲೂ ಸಾಧ್ಯವಾಗಬಹುದು ಎಂದು ಪ್ರಯೋಗಗಳು ತೋರಿಸಿಕೊಟ್ಟಿವೆ; ಬೇಕಾದಾಗ ಗರ್ಭಪಾತ ಮಾಡಲು ಮತ್ತು ಸಹಜ ಪ್ರಸವದಲ್ಲಿ ವೇದನೆಯನ್ನು ಪ್ರಚೋದಿಸಲೂ ಇವು ಪ್ರಯೋಜನಕರವಾಗಬಹುದು.

ಪ್ರೋಸ್ಟಾಗ್ಲಾಂಡಿನ್‌ಗಳನ್ನು ಕೃತಕವಾಗಿ ತಯಾರಿಸುವ ಸಾಧ್ಯತೆಯೂ ಇದೆ ಎಂದು ಈ ಸಭೆಯಲ್ಲಿ ಓದಲಾದ ವರದಿಗಳಿಂದ ತಿಳಿದುಬಂದಿದೆ.

ಮಹರ್ಷಿ ಅರವಿಂದರ ಏಕಾಂತವಾಸದ ರಹಸ್ಯ

ಶ್ರೀ

ಲೇಖಕರು: ಶ್ರೀ ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

"ಭಾರತ ಸ್ವತಂತ್ರವಾಗಿದೆ; ಆದರೆ ತನ್ನ ಅಖಂಡತ್ವವನ್ನು ಅದು ಕಳೆದುಕೊಂಡಿತು. ಯಾವ ರೀತಿ ಅಥವಾ ಯಾವುದೇ ಉಪಾಯದಿಂದಲಾದರೂ ಈ ವಿಭಜನೆ ಪರಿಸಮಾಪ್ತಿ ಹೊಂದಬೇಕು. ಭಾರತದ ಭಾವೀ ಮಾನವತೆಯ ಬಗ್ಗೆ ಅಖಂಡತ್ವವನ್ನು ಅವಶ್ಯವಾಗಿ ಪಡೆಯಬೇಕಾಗುವುದು ಅದು ಆಗಿಯೇ ತೀರುವುದು."

'ಶ್ರೀ: ಅರವಿಂದ'

1920ರ ಜನವರಿ ತಿಂಗಳಲ್ಲಿ 'ಜೋಸೆಫ್ ಬೆಪ್ಟಿಸ್ಟ್'ರವರು ಶ್ರೀ ಅರವಿಂದರಿಗೆ ಒಂದು ಪತ್ರ ಬರೆದು "ನ್ಯಾಷನಲಿಸ್ಟ್ ಪಾರ್ಟಿ"ಯ ಒಂದು ಮುಖ ಪತ್ರಿಕೆಯಲ್ಲಿ ಪ್ರಧಾನ ಸಂಪಾದಕ ಸ್ಥಾನ ಸ್ವೀಕರಿಸಿ ರಾಜನೀತಿಯಲ್ಲಿ ಪ್ರವೇಶವಾಗಬೇಕೆಂದು ಅನುರೋಧ ಮಾಡಿದರು. ಆ ಪತ್ರಕ್ಕೆ ಶ್ರೀ: ಅರವಿಂದರು ಕೊಟ್ಟ ಉತ್ತರದಲ್ಲಿ "ರಾಜನೀತಿ ನಿಕೃಷ್ಟವೆಂದು ನಾನು ಭಾವಿಸುವುದಿಲ್ಲ; ಮತ್ತು ನಾನು ರಾಜನೀತಿಜ್ಞರಿಗಿಂತ ಬಹಳ ಉತ್ಕೃಷ್ಟ ಶ್ರೇಣಿಯಲ್ಲಿದ್ದೇನೆಂಬ ಭಾವನೆಯೂ ನನ್ನಲಿಲ್ಲ. ಆಧ್ಯಾತ್ಮಿಕ ಜೀವನದಲ್ಲಿ ನಾನು ಎಡೆಬಿಡದೆ ಶಕ್ತಿಯನ್ನು ಉಪಯೋಗಿಸಿರುತ್ತೇನೆ; ಅದರ ಸಾಧನೆಯನ್ನು ಬಹಳ ಉತ್ತಮ ರೀತಿಯಿಂದ ಸಾಧಿಸುತ್ತಿದ್ದೇನೆ. ಆದರೆ ನನ್ನ ಆಧ್ಯಾತ್ಮ ಸಾಧನೆಯೆಂದರೆ ಸನ್ಯಾಸ ಅಥವಾ ಸಂಸಾರ ಪರಿತ್ಯಾಗ ಮಾಡುವಂತಹದ್ದಲ್ಲ. ನನ್ನ ವಿಶ್ವಾಸವೇನೆಂದರೆ ದೇಶವು ಈಗ ಸ್ವಾತಂತ್ರ್ಯದ ಪಥದಲ್ಲಿದೆ; ದೇಶವು ಅದನ್ನು ದೊರಕಿಸಿಕೊಳ್ಳುವುದು. ಪರಂತು ಸ್ವಾತಂತ್ರ್ಯದ ನಂತರ ಅದು ಯಾವ ಸ್ವರೂಪವನ್ನು ಧಾರಣೆ ಮಾಡುವುದೆಂಬುದು ಮಾತ್ರ ಅತಿ ಮಹತ್ವದ ವಿಷಯ. ನನ್ನ ನಂಬಿಕೆಯೇನೆಂದರೆ ಭಾರತಕ್ಕೆ ತನ್ನ ಆತ್ಮ ಮತ್ತು ಬುದ್ಧಿ ವೈಭವ ಇದೆ. ನಾನು ಸರ್ವ ಸಾಮಾನ್ಯತಃ ಯಾವುದೇ ವಿಧಾನದ ಸಾಮಾಜಿಕ ಜನ ತಂತ್ರದಲ್ಲಿ ವಿಶ್ವಾಸವಿರಿಸುತ್ತೇನೆ; ಆದರೆ ಆ ಜನ ತಂತ್ರ ಭಾರತದ ಪರಂಪರೆಗೆ ಅನುಕೂಲವಾಗಿರ ತಕ್ಕದ್ದು. ಸಮಸ್ಯೆಯಲ್ಲಿ ಬಹಳ ಕಡಿಮೆ ಮಂದಿ ವಿಚಾರ ಪರಿಶೀಲನೆ ಮಾಡುತ್ತಾರೆ" ಎಂದು ವಿವರಿಸಿದ್ದರು.

ಕೊಳಕು ಕನ್ನಡಿಯಿಂದ ಅವಲೋಕನ

ಇದಕ್ಕೆ ಪ್ರತಿಯಾಗಿ ಅರವಿಂದರು ಕೆಲವು ಭ್ರಾಂತಮತಿಗಳ ಭಾವನೆಗಳಿಗೆ ಬಲಿಬಿದ್ದರು. ಬಂಗಾಲದ ಕೆಲವು ಪತ್ರಿಕೆಗಳು ಅವರನ್ನು "ಒಬ್ಬ ಪಲಾಯನ ಸನ್ಯಾಸಿ" ಯೆಂಬುದಾಗಿ ಅವಹೇಳನೆ ಮಾಡಿದವು. "ಭರತ ಖಂಡದ ರಾಜನೈತಿಕ ಕ್ಷಿತಿಜದಲ್ಲಿ ಇಷ್ಟೊಂದು ದೇದೀಪ್ಯಮಾನವಾದ ಯಾವ ನಕ್ಷತ್ರವು ಪ್ರಕಾಶಗೊಂಡಿತ್ತೋ ಅದು ಹೇಗೆ ಅಸ್ತವಾಯಿತೆಂಬುದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು. ಏನು! ಅರವಿಂದರು ಪರಾಜಿತರಾದರೇ? ಅಥವಾ ಅವರ ವಿಶ್ವಾಸ ಒಡೆದುಹೋಯಿತೇ?" ಎಂಬುದಾಗಿ ಪತ್ರಿಕೆಗಳು ಮತ್ತು ರಾಜನೈತಿಕ ಬುದ್ಧಿಜೀವಿಗಳು ತರ್ಕಿಸತೊಡಗಿದರು. 1960ರ ನಂತರ ಅರವಿಂದರ ಕುರಿತು ಮತ್ತೊಂದು ವಿಧ್ಯಾಪ್ರಲಾಪ ಹರಡಿತು. ಅಂದರೆ ಅವರ ಅಂತಾರಾಷ್ಟ್ರ ವಾದಿಯಾಗಿಬಿಟ್ಟರು; ಅವರಲ್ಲಿದ್ದ ವಿಶ್ವದ ಏಕಾತ್ಮಕ ದೃಷ್ಟಿಯ ನಿಜತ್ವವನ್ನರಿಯದೆ ಅವರು ರಾಷ್ಟ್ರವಾದದಿಂದ ಪಲಾಯನ ಗೈದರೆಂದು ಅನೇಕರು ಭಾವಿಸಿದರು, ಮತ್ತೊಂದು ಗುಂಪಿನ ಜನತೆ ಅವರಲ್ಲಿದ್ದ ಧರ್ಮಾತೀತ ಭಾವನೆಯನ್ನು ಧರ್ಮ ನಿರಪೇಕ್ಷೆಯ ರೂಪದಲ್ಲಿ ನೋಡತೊಡಗಿದರು. ಆದರೆ ಭಾರತೀಯ ಜೀವನದಲ್ಲಿ ರಾಷ್ಟ್ರಶ್ರದ್ಧೆಯ ಕುರಿತು ಅವರು ಎಷ್ಟೊಂದು ಸುಲಗ್ನರಾಗಿದ್ದಾರೆಂಬುದು ಅವರ 1920ರ ಪತ್ರದಿಂದ ವಿದಿತವಾಗುತ್ತದೆ.

ರಾಷ್ಟ್ರೋದ್ಧಾರ ವ್ರತದಲ್ಲಿಯೇ ಜನಿಸಿದರು

ಈ ಶ್ರದ್ಧೆಯು ಕ್ರಾಂತಿಕಾರಿ ವಾತಾವರಣದ ಕ್ಷಣಿಕ ಉನ್ಮಾದದ ಪ್ರತೀಕವಾಗಿರಲಿಲ್ಲ; ಇದರಲ್ಲಿ ರಾಷ್ಟ್ರಸೇವೆಯ ಅಹಂಕಾರ ಮತ್ತು ಅದಕ್ಕೆ ಪ್ರತಿಯಾಗಿ ಪ್ರತಿದಾನ ದೊರಕಿಸಿಕೊಳ್ಳುವ ಆಕಾಂಕ್ಷೆ ಸಹ ಇರಲಿಲ್ಲ. 1907ರಲ್ಲಿ ತನ್ನ ಪತ್ನಿ 'ಶ್ರೀಮತಿ ಮೃಣಾಲಿನಿದೇವಿ'ಗೆ ಬರೆದ ಪತ್ರದಲ್ಲಿ ಅವರು ತಾನು ಹುಟ್ಟುವಾಗಲೇ ತನ್ನಲ್ಲಿ ಸುಷುಪ್ತವಾಗಿದ್ದ ಆ ಅಂತರ್ಜ್ವಾಲೆಯ ಉಪ್ಘಾಟನೆ ಮಾಡಿದ್ದರು. ಆ ಪತ್ರದಲ್ಲಿ ಅವರು "ಇತರರು ಸ್ವದೇಶವನ್ನು ಒಂದು ಜಡಪದಾರ್ಥ, ಕೆಲವು ಬಯಲು ಪ್ರದೇಶ, ಹೊಲ, ವನ, ಪರ್ವತ, ನದಿ, ಸರೋವರ ಎಂದಿಷ್ಟೇ ಭಾವಿಸಿರುತ್ತಾರೆ. ಆದರೆ ನಾನು ಸ್ವದೇಶವನ್ನು ತಾಯಿಯೆಂದು ನಂಬಿರುತ್ತೇನೆ; ಆಕೆಯ ಭಕ್ತಿ ಮಾಡುತ್ತೇನೆ. ಅವಳನ್ನು ಪೂಜಿಸುತ್ತೇನೆ. ತಾಯಿಯ ಎದೆಯ ಮೇಲೆ ಕುಳಿತು ಯಾರಾದರೊಬ್ಬನು ರಾಕ್ಷಸ ರಕ್ತಪಾನ ಮಾಡಲಿಕ್ಕೆ ಉದ್ಯುಕ್ತನಾದರೆ ಪುತ್ರನು ಏನು ಮಾಡಬಲ್ಲನು? ಪತನ ಹೊಂದಿರುವ ಜಾತಿಯ ಉದ್ಧಾರಮಾಡುವ ಶಕ್ತಿ ನನ್ನಲ್ಲಿದೆಯೆಂಬುದನ್ನು ನಾನು ಬಲ್ಲೆನು. ಈ ಭಾವನೆಯನ್ನು ಅಳವಡಿಸಿಕೊಂಡೇ ನಾನು ಜನ್ಮಧಾರಣೆ ಮಾಡಿರುತ್ತೇನೆ. ಈ ಭಾವನೆ ನನ್ನ ಪ್ರತಿಯೊಂದು ನರನಾಡಿಯಲ್ಲಿ ಬಲವಾಗಿ ಪಸರಿಸಿಕೊಂಡಿದೆ. ಈ ಮಹಾವ್ರತವನ್ನು ಪೂರ್ಣಗೊಳಿಸುವುದಕ್ಕಾಗಿಯೇ ಪರಮಾತ್ಮನು ನನ್ನನ್ನು ಈ ಧರಿತ್ರಿಗೆ ಕಳುಹಿಸಿ ಕೊಟ್ಟಿರುತ್ತಾನೆ. ಇದರ ಬೀಜ ನನ್ನ ಹದಿನಾಲ್ಕನೆ ವರ್ಷ ಪ್ರಾಯದಲ್ಲಿ ನನ್ನಲ್ಲಿ ಅಂಕುರವಾಗಿತ್ತು. ಹದಿನೆಂಟನೆಯ ವರ್ಷದಲ್ಲಿ ಅದರ ಪ್ರತಿಷ್ಠೆ ದೃಢ ಮತ್ತು ಅವಿಚಲವಾಗಿ ಬಿಟ್ಟಿತು'' ಎಂಬುದಾಗಿ ವಿವರಿಸಿಸಿರುತ್ತಾರೆ.

ಉಪರೋಕ್ತ ಪತ್ರದಲ್ಲಿ ತನ್ನ ಸಹಧರ್ಮಿಣಿಯಲ್ಲಿ ವಿವರಿಸಿರುವ ವಿಚಾರಧಾರೆಯೇ ಅರವಿಂದರಲ್ಲಿ ಶತಧಾರಾ ರೂಪದಲ್ಲಿ ಅಭಿವ್ಯಕ್ತವಾಗಿತ್ತು. ದೇಶದ ಸಹಸ್ರಾರು ಮಂದಿಗೆ ಅವರಿಂದ ಪ್ರೇರಣೆ ಲಭಿಸಿತು. ಅವರನ್ನು ಆದರ್ಶ ವಿಭೂತಿಯನ್ನಾಗಿ ಸ್ವೀಕರಿಸಿದರು. ಅವರು; ಆದರೆ ಅರವಿಂದರು ಮುಖಂಡತ್ವದ ಆವರಣದೊಳಗೆ ಸಿಲುಕಲಿಲ್ಲ. ತನ್ನಲ್ಲಿ ಎಷ್ಟೊಂದು ವಿದ್ಯೆ ಬುದ್ಧಿ ಜ್ಞಾನಗಳ ಸಮಾವೇಶವಾಗಿವೆಯೋ ಅವೆಲ್ಲವೂ ಪರಮಾತ್ಮನ ಕೊಡುಗೆ ಎಂದೇ ಅವರ ದೃಢ ವಿಶ್ವಾಸವಾಗಿತ್ತು. ರಾಷ್ಟ್ರ ಸೇವೆಗೋಸ್ಕರ ಭಗವಂತನು ಅವರನ್ನು ಬ್ರಹ್ಮತೇಜಸ್ಸೆಂಬ ಮಹಾ ದಿವ್ಯ ಶಕ್ತಿಯೊಂದಿಗೆ ಸುಸಜ್ಜಿತರನ್ನಾಗಿ ಕಳುಹಿಸಿಕೊಟ್ಟಿರುವನು; ಎಂಬ ಅಪೂರ್ವ ಜ್ಞಾನ ಪ್ರಭೆ ಅವರ ಅಂತರಾತ್ಮದಲ್ಲಿ ಜನ್ಮಕಾಲದಲ್ಲಿಯೇ ನೆಲೆನಿಂತಿದೆ ಎಂದು ಅವರು ದೃಢವಾಗಿ ನಂಬಿಕೊಂಡಿದ್ದರು. ಆದುದರಿಂದಲೇ ಅವರು ಅದರ ಉಪಯೋಗವನ್ನು ಕೇವಲ ತನ್ನ ಜನ್ಮಧಾರಣೆಯ ಉದ್ದೇಶದ ಪೂರ್ತಿಗಾಗಿಯೇ ಕೊನೆ ತನಕವೂ ಚೆನ್ನಾಗಿ ಮಾಡಿಕೊಂಡರು. ಕೇವಲ ಮಾತೃಭಕ್ತಿ ಮತ್ತು ತ್ಯಾಗ ಶ್ರೀ ಅರವಿಂದರು ದೇಶಭಕ್ತಿಯ ಆಧಾರವನ್ನು ಸಹಸ್ರಮ್ಮ ಸಮಕ್ಷಮದಲ್ಲಿ ಸ್ಪಷ್ಟವಾಗಿ ತಿಳಿಸಿದರು. ನಾವು ಪ್ರಾಚೀನ ಭಾರತದ ಶಾಸ್ತ್ರೀಯ ಪರಂಪರೆಯನ್ನು ತ್ಯಜಿಸಿದ್ದರಿಂದ ಈ ಶತಮಾನದ ಪ್ರಾರಂಭದಲ್ಲಿ ಉತ್ಪನ್ನವಾದ ಸುಧಾರವಾದಿ ದೇಶ ಭಕ್ತಿಯ ಮೇಲೆ ಪಾಶ್ಚಾತ್ಯ ಪರಂಪರೆಯ ಮುದ್ರೆ ಬಲವಾಗಿಬಿತ್ತು. ಉಕ್ಕೇರಿ ಬಂದ ದೇಶಭಕ್ತಿಯ ಈ ವಿಚಾರಧಾರೆ ಸಾಮ್ರಾಜ್ಯ ಶಾಹಿಯ ಅಹಂಕಾರ ಯುಕ್ತ ಶಾಸನದ ಪರ್ಯವಸಾನಮಾಡುವುದೆಂಬುದು ಸ್ವಾಭಾವಿಕವಾಗಿತ್ತು. ರಾಷ್ಟ್ರಕ್ಕೆ ಆಗುವ ಲಾಭಕ್ಕಿಂತ "ನಾನೇ ರಾಷ್ಟ್ರ" ಎಂಬ ತಾದಾತ್ಮ್ಯ ಪ್ರವೃತ್ತಿ ಸಮ್ಮುಖದಲ್ಲಿ ಗೋಚರಿಸುತ್ತದೆ. ಕುದುರೆ ಸವಾರಿಯನ್ನು ತಿರಸ್ಕರಿಸುವ ನೆಪದಲ್ಲಿ ಐ. ಸಿ. ಎಸ್. ಪರೀಕ್ಷೆಗೆ ತಿಲಾಂಜಲಿಯಿತ್ತು ಅವರು ಭಾರತಕ್ಕೆ ಮರಳಿದಾಗ ಅವರಿಗೆ ದೊರೆತ ಉದ್ಯೋಗದ ವೇತನ ಕೇವಲ 200 ರೂಪಾಯಿ ಮಾತ್ರ ಇತ್ತು. ಕೊನೆಗೆ ಅದು ವೃದ್ಧಿಯಾಗುತ್ತಾ 700ಕ್ಕೆ ತಲ್ಪಿತು. ಈ ಸಂದರ್ಭದಲ್ಲಿ ಇವರು ಬೆಳಿಗ್ಗಿನಿಂದ ಸಂಜೆಯ ತನಕ ಅಧ್ಯಯನದಲ್ಲಿ ತಲ್ಲೀನರಾಗಿ ಕೇವಲ ಪುಸ್ತಕದೊಳಗಿನ ಸಂಸ್ಕೃತಿ ಮತ್ತು ಕ್ರಾಂತಿಯ ಕುರಿತು ಮಾತನಾಡುವರು ಎಂಬ ಭಾವನೆ ಆಗ ಜನರಲ್ಲಿ ಮೂಡಿತು. ಆದರೆ ಅರವಿಂದರು ಸ್ವಲ್ಪವೂ ಪರಿವರ್ತನೆ ಹೊಂದಲಿಲ್ಲವೆಂದು ಅವರ ಶಿಷ್ಯರಿಗೆ ಮನವರಿಕೆಯಾಯಿತು. ಹುರಿಹಗ್ಗದಿಂದ ಹೆಣೆಯಲ್ಪಟ್ಟ ಒಂದು ಮಂಚ, ಮತ್ತು ಒಂದು ಹಾಸು ವಸ್ತ್ರ (ಹೊದ್ದುಕೊಳ್ಳುವುದಕ್ಕೂ ಅದನ್ನೇ ಉಪಯೋಗಿಸುತಿದ್ದರು)ದಲ್ಲಿಯೇ ಅವರು ನಿರ್ಭರರಾಗಿದ್ದರು.

ಇವರ ಶಿಷ್ಯರಲ್ಲೊಬ್ಬರಾದ 'ಶ್ರೀ ಆರ್. ಎನ್. ಪಾಠಕ್'ರವರ ಒಂದು ಪ್ರಶ್ನೆಗೆ ಅವರು ಉತ್ತರ ಕೊಡುತ್ತಾ "ನಾನು ಬ್ರಹ್ಮಚಾರಿಯಾಗಿರುವೆನೆಂಬುದು ನಿಮಗೆ ಗೊತ್ತಿಲ್ಲವೇ? ಬ್ರಹ್ಮಚಾರಿ ಮೃದುವಾದ ಹಾಗೂ ಕೋಮಲವಾದ ಶಯ್ಯೆಯಲ್ಲಿ ಮಲಗಬಾರದೆಂದು ನಮ್ಮ ಪ್ರಾಚೀನ ಶಾಸ್ತ್ರಗಳು ಸ್ಪಷ್ಟವಾಗಿ ಹೇಳಿರುತ್ತವೆ" ಎಂದು ವಿವರಿಸಿದ್ದರು. ಹಿಂದೂ ಶಾಸ್ತ್ರ ನಿರ್ದೇಶನಕ್ಕೆ ಅರವಿಂದರು ಎಷ್ಟು ಮಹತ್ವ ಮತ್ತು ಗೌರವ ಕೊಡುತಿದ್ದರೆಂಬುದು ಅವರ ನಿಲುಮೆಯಿಂದ ಗೊತ್ತಾಗುತ್ತದೆ.

ಅವರಿಗೆ ಮೂರು ತಿಂಗಳ ವೇತನ ಪ್ರತಿ ಸಲ ಒಟ್ಟಿಗೆ ದೊರಕುತ್ತಿತ್ತು. ಅಷ್ಟನ್ನೂ ಅವರು ತನ್ನ ಮೇಜಿನ ಮೇಲೆ ಇದ್ದ ಒಂದು ಟ್ರೇ (ಬಟ್ಟಲಲ್ಲಿ)ಯಲ್ಲಿಡುತ್ತಿದ್ದರು. ಇದರ ಕುರಿತಾಗಿ ಒಮ್ಮೆ ಪ್ರಶ್ನಿಸಿದಾಗ ಅವರು ನಗುತ್ತಾ 'ನಾನು ಉತ್ತಮ ಜನರ ನಡುವಿನಲ್ಲಿದ್ದೇನೆಂಬುದಕ್ಕೆ ಇದು ನಿದರ್ಶನ; ನನ್ನ ಲೆಕ್ಕವನ್ನೆಲ್ಲಾ ಪರಮಾತ್ಮನೇ ಬರೆದಿಡುತ್ತಾನೆ. ನನಗೆಷ್ಟು ಅಗತ್ಯವಿದೆಯೋ ಅಷ್ಟನ್ನೇ ದೇವರು ನನಗೆ ಒದಗಿಸುತ್ತಾನೆ. ಏನೂ ಆಗಲಿ ನನ್ನನ್ನು ಅವನು ಕೊರತೆಯಲ್ಲಿ ಹಾಕುವುದಿಲ್ಲ; ಅಂದ ಮೇಲೆ ನಾನು ನನ್ನ ಬಗ್ಗೆ ಏಕೆ ಚಿಂತಿಸಬೇಕು?' ಎಂದುತ್ತರವಿತ್ತರು.

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{4}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:- **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, **ಬೆಂಗಳೂರು-1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 28

ಸಂಸ್ಥಾಪಕರು :
ಡಾ ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು
ಸರಕಾರಗಳಲ್ಲಿ ಆರೋಗ್ಯ
ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು
ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ
ಬೇಕಾದ ಯಾವದೇ ಪ್ರಕಟಣೆಗಳು
ಕನಿಷ್ಟ ನಾಲ್ಕು ದಿನ ಮುಂಚಿತ
ವಾಗಿಯೇ ನಮ್ಮ ಕೈಸೇರಬೇಕು.

ವೀರೇಂದ್ರರ ನಿರ್ಗಮನ

ತನ್ನ ಬಲ ಸಂವರ್ಧನೆಗೆಂದು ಶ್ರೀಮತಿ ಇಂದಿರಾ ಗಾಂಧಿಯವರು ತಂದುಕೊಂಡ ಮಧ್ಯಾವಧಿ ಲೋಕಸಭಾ ಚುನಾವಣೆಗಳಲ್ಲಿ ನಿಜಕ್ಕೂ ಆಕೆ ಇಷ್ಟಾರ್ಥ ಸಾಧಿಸಿದರು. ಲೋಕಸಭೆಯಲ್ಲಿ ನಿರ್ಣಯಾತ್ಮಕ ಬಹುಮತ ಗಳಿಸಿದ್ದು ಮಾತ್ರವಲ್ಲದೆ ಉಳಿದೆಲ್ಲಾ ಪಕ್ಷಗಳನ್ನೂ ಕಂಗಾಲಾಗಿಸುವಂತಹ ಪರಿಸ್ಥಿತಿಯನ್ನು ಅವರು ತಂದು ನೀಡಿದರು. ಕಾಂಗ್ರೆಸ್ ವಿಭಜನೆಯ ನಂತರ ಸಿಂಡಿಕೇಟಿನ ಅಧ್ಯಕ್ಷ ನಿಜಲಿಂಗಪ್ಪನವರ ಕರ್ನಾಟಕದಲ್ಲಿಯೂ ಮುರಾರ್ಜಿ ಭಾಯಿಯ ಗುಜರಾತದಲ್ಲಿಯೂ ಆಕೆ ತಲೆಯೆತ್ತಲಾಗಲೇ ಇಲ್ಲ. ಆದುದರಿಂದ ಅಲ್ಲಿನ ಸಿಂಡಿಕೇಟ್ ನಾಯಕತ್ವದಸರಕಾರಗಳನ್ನು ಉರುಳಿಸುವ ತಂತ್ರವನ್ನು ಅವರೂ ಅವರ ಅನುಯಾಯಿಗಳೂ ನಡೆಸಿ ಕೈ ಸುಟ್ಟುಕೊಂಡರು. ಗುಜರಾತದಲ್ಲಿನ ಹಿತೇಂದ್ರ ದೇಸಾಯಿಯವರ ಸಚಿವ ಸಂಪುಟ ಅಪಾಯದ ಹಂತವನ್ನು ತಲುಪಿದರೂ ಅದು ಉರುಳಲಿಲ್ಲ. ಕರ್ನಾಟಕದ ವೀರೇಂದ್ರ ಪಾಟೀಲರ ಮಂತ್ರಿಮಂಡಳಿ ಅಲ್ಲಾಡಲೇ ಇಲ್ಲ. ಕೆಲವಾರು ಶಾಸಕರು ಇಂಡಿಕೇಟಿಗೆ ಸೇರಿದರೂ ಅದು ವಿಚಲಿತವಾಗುವ ಸನ್ನಿವೇಶ ತಡವಾಗೇ ತಲೆದೋರಿತು.

ಮಧ್ಯಾವಧಿ ಚುನಾವಣೆಗಳು! ಇತರ ವಿರೋಧಿ ಪಕ್ಷಗಳೊಡನೆ ಸಿಂಡಿಕೇಟಿನ ಬಲವನ್ನೂ ಕುಂದಿಸಿದುವು. ಸುಮಾರು ೬೨ರಷ್ಟು ಹೊಂದಿದ್ದ ಅದರ ಸ್ಥಾನಬಲ ನಾಲ್ಕರಲ್ಲಿ ಮೂರರಷ್ಟು ಕಡಿಮೆಯಾಯಿತು. ಸಿಂಡಿಕೇಟಿನ ಗಂಡುನೆಲವೆಂದು ಹೆಸರಾದ ಕರ್ನಾಟಕದಲ್ಲಿ ಅದು ಒಂದೇ ಒಂದು ಸ್ಥಾನವನ್ನೂ ಉಳಿಸಿಕೊಳ್ಳಲು ಅಶಕ್ತವಾಯಿತು. ಲಕ್ಷಾಂತರ ಮತಗಳಿಗೆ ಇಂಡಿಕೇಟಿಗೆ ಅವನ್ನು ಬಿಟ್ಟುಕೊಡಲೇ ಬೇಕಾಯಿತು. ಗುಜರಾತದಲ್ಲಾದರೋ ಇಷ್ಟೊಂದು ದಾರುಣ ಸ್ಥಿತಿಯೊದಗಲಿಲ್ಲ. ಅದು ೧೧ ಸ್ಥಾನಗಳನ್ನು ಉಳಿಸಿಕೊಂಡು ಇಂಡಿಕೇಟಿಗಿಂತ ತಾನೇನೂ ಹಿಂದಿಲ್ಲವೆಂದು ತಲೆಯೆತ್ತಿಯೇ ನಿಂತಿತು. ಭಾರತದಲ್ಲೇ ಪ್ರಗತಿಪರ ಜನಹಿತಕಾಂಕ್ಷಿ ಸರಕಾರವೆಂದು ಹೆಸರಾದ ವೀರೇಂದ್ರ ಪಾಟೀಲರ ಸಿಂಡಿಕೇಟ್ ಸರಕಾರ ಪತನವೇ ಮಧ್ಯಾವಧಿ ಚುನಾವಣೆಗಳು ಕನ್ನಡಿಗರಿಗೆ ನೀಡಿದ ಮೊದಲ ಬಹುಮಾನ. ಚುನಾವಣೆಗಳಿಗೆ ಪೂರ್ವ ಸಂಧ್ಯೆಯಲ್ಲಿಯೇ ಮಂತ್ರಿಗಳ, ಶಾಸಕರ ಪಕ್ಷಾಂತರ ನಾಟಕದ ಅಂಕದ ಪರದೆ ಮೇಲೆ ಸರಿದಿದ್ದು, ಚುನಾವಣಾ ಫಲಿತಾಂಶ ಪ್ರಕಟಗೊಂಡ ಉಷಃ ಕಾಲದಲ್ಲಿ ಇತರ ಒಂದೊಂದೇ ಪರದೆಗಳು ಮೇಲೇಳತೊಡಗಿದುವು. ಶಾಸಕ ಪಕ್ಷವನ್ನು ಉದ್ದೇಶಿಸಿ, ಅಧಿವೇಶನವನ್ನು ಒಂದಾಗಿ ಎಂಟೆದೆಯಿಂದೆದುರಿಸಬೇಕು; ಮುಂದಿನ ದಾರಿಯನ್ನು ಮುಂದೆ ಪರಿಶೀಲಿಸೋಣವೆಂದು ಮುಖ್ಯಮಂತ್ರಿಗಳು ಕಳಕಳಿಯಿಂದ ವಿನಂತಿಸಿಕೊಂಡರೂ ಅವರದ್ದು ಅರಣ್ಯ ರೋದನವೇ ಆಯ್ತು. ಕೆಲವರು ಮಂತ್ರಿಗಳೂ ಹಲವರು ಶಾಸಕರೂ ಇಂಡಿಕೇಟ್ ಸೇರಿದ್ದೇವೆಂದು ಘೋಷಿಸಿಯೇ ಬಿಟ್ಟರು. ಬಹುಮತ ಕಳೆದುಕೊಂಡಿರುವುದಾಗಿ ಮನವರಿಕೆ ಮಾಡಿಕೊಂಡ ಪಾಟೀಲರು ತಮ್ಮ ಅಶಕ್ತತೆಗೆ ತಲೆತಗ್ಗಿಸಿ ರಾಜಿನಾಮೆಯನ್ನು ನೀಡಿದರು. ಇದು ಹೇಡಿಯ ಅಧಿಕಾರ ವ್ಯಾಮೋಹಿಯ ರಾಜೀನಾಮೆಯಲ್ಲ; ಕಲಿಯೋರ್ವನ ರಾಜೀನಾಮೆ. ಇದನ್ನು ಅವರ ರಾಜ್ಯಕೀಯ ವಿರೋಧಿಗಳೂ ಒಪ್ಪಬೇಕು.

ಇನ್ನು ಮುಂದಿನ ಪ್ರಶ್ನೆ ಈಗೇನು? ಸಿಂಡಿಕೇಟಿನಿಂದ ಇಂಡಿಕೇಟ್ ಸೇರಿದ ಶಾಸಕರ ಸಂಖ್ಯೆ ಗಣನೀಯವೇ. ರಾಜ್ಯದ ಪ್ರಜಾ ಸಮಾಜವಾದಿ ಪಕ್ಷದ ಕೆಲವಾರು ಶಾಸಕರು ಚುನಾವಣೆಗಳಿಗೆ ಮೊದಲೇ ಇಂಡಿಕೇಟ್ ಸೇರಿದ್ದರು. ಈಗ ಆ ಪಕ್ಷದ ರಾಜ್ಯ ಘಟಕವು ಇಂಡಿಕೇಟಿನಲ್ಲಿ ವಿಲೀನಗೊಳ್ಳುತ್ತಲಿದೆ. (ಇದೇ ಮಾದರಿಯಾಗಿ ರಾಷ್ಟ್ರೀಯ ನೆಲೆಯಲ್ಲೂ ಕಾರ್ಯಗತವಾಗುವುದೂ ಸಾಧ್ಯ.) ಈಗ ಕರ್ನಾಟಕದಲ್ಲಿ ಇಂಡಿಕೇಟಿಗೆ ಬಹುಮತವಿದೆ. ಒಂದು ವೇಳೆ 'ಇಲ್ಲ'ವೆನ್ನುವುದಾದರೂ ಅದು ಸರಕಾರ ರಚಿಸಲು ಮುಂದೆ ಬರುವುದೆಂಬ ವಾರ್ತೆ ಹರಡಿದರೆ ಸಾಕು, ಬಲಬಂದೇ ಬರುತ್ತದೆ. ಆದರೆ, ಇಂಡಿಕೇಟಿನಲ್ಲೇ ಈ ಸಂಬಂಧದಲ್ಲಿ ಭಿನ್ನಮತ ವ್ಯಕ್ತವಾಯ್ತು. ಕೆಲವರು ಸಚಿವ ಸಂಪುಟ ರಚಿಸಬೇಕೆಂದು ಹೇಳಿದರು; ಉಳಿದವರು ಬೇಡವೆಂದರು. ಪಕ್ಷಾಂತರಗೊಂಡ ಶಾಸಕರು ಮೊದಲ ಪಕ್ಷಕ್ಕೆ ದ್ರೋಹ ಬಗೆದಂತೆ ತಮಗೂ ದ್ರೋಹ ಬಗೆದಾರು ಎಂಬ ಭೀತಿ ಅವರಿಗೆ ಈ ಭೀತಿಯನ್ನು ಸಂಪೂರ್ಣ ಅಲ್ಲಗಳೆಯಲಾಗದು. ಅಧಿಕಾರಕ್ಕಾಗಿ ಏನನ್ನು ಮಾಡಲೂ ಮುಂದುವರಿಯುವವರು ಏನೂ ಸಾಧಿಸಿಯಾರು. ಇಂಡಿಕೇಟ್ ನಾಯಕ ದೇವರಾಜ ಅರಸ ಮತ್ತು ಸಿದ್ಧವೀರಪ್ಪನವರಿಗೆ ಸರಕಾರ ರಚಿಸಲು ಆಸೆಯಿದ್ದರೂ ಹೊಸರಕ್ತ ಅವರನ್ನು ವಿರೋಧಿಸಿತು. ಇದನ್ನು ಬರೆಯುವ ಹೊತ್ತಿಗೆ ಈ ಸಂಬಂಧದಲ್ಲಿ ಕೊನೆಯ ನಿರ್ಣಯವಾಗಲಿಲ್ಲ. ಆದರೆ, ಕರ್ನಾಟಕದಲ್ಲಿ ಮಧ್ಯಾವಧಿ ಚುನಾವಣೆಗಳೇ ನಡೆಯುವ ಸೂಚನೆಗಳು ಗೋಚರವಾಗುತ್ತಿವೆ. ಕೇಂದ್ರದಿಂದ ವೀಕ್ಷಕರಾಗಿ ಬಂದ ಉಮಾಶಂಕರ ದೀಕ್ಷಿತರು ಇದನ್ನೇ ಬೆಂಬಲಿಸುವುದು ನಿಸ್ಸಂದೇಹ.

ರಾಜ್ಯದಲ್ಲಿ ಬೀಸಿದ ಇಂದಿರಾ ಬಿರುಗಾಳಿಯ ಶಕ್ತಿಯ ಅನುಮಾನಕ್ಕೆ ಪಾಟೀಲ್ ಸಂಪುಟದ ರಾಜೀನಾಮೆಯೇ ಉದಾಹರಣೆ. ಕರ್ನಾಟಕದ ರಾಜ್ಯಕೀಯ ಆರಂಭದಿಂದಲೂ ಅಸ್ಥಿರವಿದ್ದು ನಿಜಲಿಂಗಪ್ಪನವರೇ ಇದಕ್ಕೊಂದು ಸ್ಥಿರತೆಯನ್ನು ತಂದುಕೊಟ್ಟರೆಂಬುದು ಇತಿಹಾಸ ಜನಿತ. ಆದರೆ, ಈ ಸ್ಥಿರತೆಯು ಕಲ್ಲುಮಣ್ಣುಗಳಿಂದ ಜಡಿದು ತಂದುಕೊಂಡದ್ದಲ್ಲ, ಬರಿಯ ಉಸುಬು ಗುಪ್ಪೆಹಾಕಿ ಸ್ಥಿರತಾ ವೃಕ್ಷವನ್ನು ಬೆಳೆಸಿದ್ದು ಎಂಬುದೀಗ ಸ್ಪಷ್ಟ. ಆದುದರಿಂದಲೇ ಪಕ್ಷ ವಿಭಜನೆಯ ವೇಳೆಯಿಂದಲೂ ಕಂಪಿಸುತ್ತ ಬಂದು ಇದೀಗ ತತ್ತರಿಸಿ ಉರುಳಿಬಿತ್ತು ಎಂಬುದು ವೇದ್ಯವಾಗುತ್ತದೆ. ತತ್ಕಾಲದಲ್ಲೇ ಮತ್ತೊಂದು ಚುನಾವಣೆ ನಡೆದರೆ, ಅದರಲ್ಲಿ ಇಂಡಿಕೇಟೇ ಯಶ ಪಡೆಯುವ ಸಂಭವ ಹೆಚ್ಚು. ಆದರೆ, ಕರ್ನಾಟಕದ ರಾಜ್ಯಕೀಯ ನೀತಿ-ನಿಲುವುಗಳಿಗಿಂತ ಜಾತೀಯತೆಯ ತಳಹದಿಯಲ್ಲೇ ನಿರ್ಮಾಣಗೊಂಡ ನಿದರ್ಶನಗಳು ಮೊದಲಿನವು. ಇದೀಗ ಬೀಸಿದ ಇಂದಿರಾ ಬಿರುಗಾಳಿ ಈ ಜಾತೀಯತೆಯನ್ನೂ ಬೇರು ಸಹಿತ ಕಿತ್ತೊಗೆದು ರಾಜ್ಯಕೀಯ ರಂಗವನ್ನು ಪರಿಶುದ್ಧ ಮಾಡೀತೇ ಎಂದು ಕಾದು ನೋಡಬೇಕಷ್ಟೆ. ಸುಮಾರು ಮೂರುವರೆ ವರ್ಷಕಾಲ ರಾಜ್ಯವನ್ನು ಪ್ರಗತಿ ಪಥವತ್ತ ಒಯ್ದು ವೀರೇಂದ್ರ ಪಾಟೀಲರಿಗೆ ಕನ್ನಡಿಗರೆಲ್ಲರ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲಲೇ ಬೇಕು. ರಾಜ್ಯಕೀಯದಲ್ಲಿ ಯಾವುದೂ ಸ್ಥಿರವಲ್ಲವೆಂಬುದನ್ನು ಅವರನ್ನು ನೋಡಿ ಕಲಿಯಬೇಕು.

ಬಂಗ್ಲಾ ದೇಶ

ಪ್ರಜಾಶಕ್ತಿಯನ್ನು ಅದುಮಿ ಸರ್ವಾಧಿಕಾರವನ್ನು ಸ್ಥಿರಗೊಳಿಸ ಬಹುದೆಂದು ಪಾಕ್ ಸರ್ವಾಧಿಕಾರಿ ಯಾಹ್ಯಾಖಾನರು ನಂಬಿದ್ದರು. ತನ್ನ ರಾಷ್ಟ್ರದ ಒಂದು ರಾಜ್ಯವನ್ನು ದ್ವಿತೀಯ ವರ್ಗದ ರಾಜ್ಯವೆಂದು ದೃಢವಾಗಿ ನಂಬಿ ಅದನ್ನು ಶೋಷಿಸುತ್ತಲೇ ಇತರೆಡೆಯನ್ನು ಎತ್ತರಿಸ ಬಹುದೆಂದು ಮಾಜಿ ವಿದೇಶಮಂತ್ರಿ ಭುಟ್ಟೋ ತಿಳಿದುಕೊಂಡಿದ್ದರು. ಆದರೆ, ಇದೀಗ ಅವರ ನಂಬಿಕೆಗಳು ಸುಳ್ಳಾಗಿ ಪರಿಣಮಿಸಿವೆ. ಅವರು ಕಂಗಾಲಾಗಿದ್ದಾರೆ. ಪೂರ್ವ ಪಾಕಿಸ್ತಾನ-ಬಂಗ್ಲಾ ದೇಶ-ದಲ್ಲಿ ಅವಾಮಿ ನಾಯಕ ರೆಹಮಾನರು ಕೇಂದ್ರ ನೀತಿಯ ವಿರುದ್ಧ ಅಸಹಕಾರ ಚಳುವಳಿಯನ್ನು ಆರಂಭಿಸಿದ್ದು ಇಡಿಯ ಬಂಗ್ಲಾ ಅವರಿಗೆ ಬೆಂಬಲವಾಗಿ ನಿಂತಿದೆ. ಒಂದು ರೀತಿಯಿಂದ ಹೇಳುವುದಾದರೆ, ಢಾಕ್ಕಾದಲ್ಲಿ ರಾವಲ್‌ಪಿಂಡಿಯ ಸರಕಾರದ್ದೇನೂ ನಡೆಯುವುದಿಲ್ಲ; ಆಡಳಿತೆಯ ಸೂತ್ರಗಳು ರೆಹಮಾನರ ಕೈಗಳಲ್ಲಿವೆ. ರಾಜ್ಯಾಂಗ ಸಭೆಯನ್ನು ಸೇರಿಸಲು ಒಪ್ಪದ ಯಾಹ್ಯಾಖಾನ-ಭುಟ್ಟೋಗಳು ಈ ಗಂಭೀರ ಪರಿಸ್ಥಿತಿಯನ್ನು ತಾವಾಗಿಯೇ ತಂದುಕೊಂಡಿದ್ದಾರೆ. ಮನೆಗೆ ಬೆಂಕಿ ಹಚ್ಚಿ ಇದೀಗ ನೀರಿಗಾಗಿ ಪರದಾಡ ಹತ್ತಿದ್ದಾರೆ. 'ಪಾಕಿಸ್ತಾನದ ವಿಭಜನೆಯಂತೂ ಸುನಿಶ್ಚಿತ. ಅದು ಶಾಂತ ವಿಧಾನಗಳಿಂದ ನಡೆಯುತ್ತದೆಯೇ ಎಂಬುದು ಮಾತ್ರ ಈಗಿನ ಪ್ರಶ್ನೆ' ಎಂದು ವಿಶ್ವಸಂಸ್ಥೆಯ ವೀಕ್ಷಕರೊಬ್ಬರ ಅಭಿಪ್ರಾಯ. ಯಾಹ್ಯಾಖಾನರಿಗೂ ಭುಟ್ಟೋ ಮಹಾಶಯರಿಗೂ ಈಗ ಇರುವ ದಾರಿಯೆಂದರೆ, 'ಬಂಗ್ಲಾದೇಶ'ಕ್ಕೆ ಸಾಧ್ಯವಾದಷ್ಟು ಸ್ವಾಯತ್ತತೆಯನ್ನು ನೀಡಿ, ಅದನ್ನು ತನ್ನ ಅವಿಭಾಜ್ಯ ಅಂಗವೆನ್ನುವ ಮುದ್ರೆಯೊತ್ತುವುದು ಮಾತ್ರ. ತಮ್ಮ ಹಿಡಿದ ಪಟ್ಟಿನಿಂದ ಅವರು ಹೊರಗೆ ಬಾರದುಳಿದರೆ, "ಬಂಗ್ಲಾ ದೇಶ" ಸ್ವತಂತ್ರ ದೇಶವೆಂಬ ಘೋಷಣೆ ಕ್ಷಿಪ್ರದಲ್ಲೇ ಹೊರಬೀಳುತ್ತದೆ. ●

ಗೇಹರಾಜ್ಯದಲ್ಲಿ

ತೆಂಗಿನಡಿಯಲ್ಲಿ ಸುಧೆಯ ಕುಡಿದರೆ ?

'ಅಲ್ಲಾರೀ....'

'ಏನು?'

'ನೋಡಿ, ಸಿಂಡಿಕೇಟಿನಿಂದ ಇಂಡಿಕೇಟಿಗೆ ಹಾರುತ್ತಿರೋರ ಸಂಖ್ಯೆ ಏರುತ್ತಾ ಇದೆಯಂತೆ...."

'ಬೆಲ್ಲಕ್ಕೆ ಇರುವೆ ಮುತ್ತುವುದು ಸಹಜ....'

'ಎಲ್ಲಿವರೆಗೆ ಎಂದ್ರೆ, ಅರ್ಜಿ ಫಾರಂಗಳೇ ಖರ್ಚಾಗಿ ಹೋಗಿವೆಯಂತೆ....'

'ಅರ್ಜಿ ಗಿರ್ಜಿಯೆಲ್ಲ ಯಾಕೆ? ಆತ್ಮಸಾಕ್ಷಿಯಾಗಿ ಇದ್ದುಬಿಟ್ರೆ ಸಾಲದೆ?'

'ಸಾಕೂನ್ನಿ. ಆದರೂ ಫಾರ್ಮಾಲಿಟೀಸ್ ಎಲ್ಲ....'

'ಅದೆಲ್ಲ ನಿಧಾನವಾಗಿ ಮಾಡಿಕೊಂಡ್ರೆ ಸರಿ....'

'ಆದ್ರೆ ನೋಡಿ, ಸಿಂಡಿಕೇಟಿನ ಎಲ್ಲ ಎಮ್ಮೆಲ್ಯೆಗಳನ್ನೂ ಅವ್ರು ಸೇರ್ಸೋದಿಲ್ಲಾಂತೆ....'

'ಯಾಕೆ?'

'ಅಲ್ಲ, ಎಲ್ರೂ ಬಂದು ಸೇರಿದ್ರೆ ಮತ್ತೆ ಹಿಂದಿನ ಕತೆ ಪುನರಾವರ್ತನೆಯಾಗುತ್ತೇಂತ....'

'ಅಂದ್ರೆ, ತಮ್ಮ ಮಂತ್ರಿಯಾಗಿ ಮೆರೆಯೋ ಛಾನ್ಸು ತಪ್ಪಿ ಹೋಗುತ್ತೇಂತ....'

"ಹಾಗಲ್ಲಾರೀ....ಮತ್ತೆ ಜಗಳ, ಗುಂಪುಗಾರಿಕೆ...."

'ಅದೇ, ಮತ್ತೆ ಇತಿಹಾಸದ ಪುನರಾವರ್ತನೆ.... ಇಂಡಿಕೇಟ್ ಅಗ್ರಪಂಕ್ತಿಯವರಿಗೆ ಮಂತ್ರಿಪದದಿಂದ ವಂಚನೆ....'

'ಇರಬಹುದು— ಆದರೆ, ಅವರೇನು ಮಂತ್ರಿ ಮಂಡಳ ರಚಿಸುತ್ತಾರೆಯೆ?"

'ಯಾಕೆ ರಚಿಸಬಾರದು? ಬಹುಮತವಿದೆ ಎನ್ನುವುದು ಖಾತ್ರಿ. ಮತ್ತೀಗ ಮಂಡಳ ರಚಿಸುತ್ತಾರೆ ಎಂದರೆ ಮತ್ತೂ ಜನ ಸೇರುತ್ತದೆ'

'ಅಲ್ಲಾರಿ, ಇದೇ ಸಮಯದಲ್ಲಿ ಚುನಾವಣೆ ನಡೆಸಿದರೆ ಹೇಗೆ?'

'ಇಂಡಿಕೇಟು ಗೆಲ್ಲುವ ಸಂಭವವಿದೆ.'

'ಅದಕ್ಕೇ ನೋಡಿ, ಅದು ಕರ್ನಾಟಕ ಯಾನೇ ಮೈಸೂರಲ್ಲಿ ಹೊಸ ಚುನಾವಣೆ ನಡೀಲಿ ಅನ್ನೋದೇ ವಾಸಿ."

'ಯಾಕೆ?"

'ಚುನಾವಣೆ ವೇಳೆ ತಮ್ಮ ನಮ್ರ ಸೇವಕರನ್ನೇ ಉಮೇದ್ವಾರರಾಗಿ ಆರಿಸಿ ಮುಂದೆ ಬರಬಹುದಾದ ಗುಂಪುಗಾರಿಕೆಯನ್ನು ಈಗಲೇ ತಡೆಯಬಹುದು.'

"ಅದು ಸರೀನ್ನಿ. ಈಗ ಪಂಗಡಾಂತರಗೊಂಡ ಎಮ್ಮೆಲ್ಯೆಗಳಿಗೆ ಟಿಕೇಟು ಕೊಡದಿದ್ದರೆ ಸರಿ-"

'ಅಲ್ಲಾರಿ, ವೀರೇಂದ್ರ ಪಾಟೀಲರಿಗೂ ಈ ಗತಿ ಬಂತಲ್ಲಾಂತ....'

'ಯಾಕೆ ಬರಬಾರದು?'

'ನೋಡಿ, ಮಾತಿಗೆ ಹೇಳ್ತೇನೆ. ವೀರೇಂದ್ರ ಪಾಟೀಲರ ಸರಕಾರ ಸಮಾಜವಾದಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದೆ. ಅದು ಪ್ರಗತಿಶೀಲ ಸರಕಾರವೆಂದು ಅದರ ವಿರೋಧಿಗಳೂ ಕೊಂಡಾಡುತ್ತಾರೆ'

'ಯಾರು ಅಲ್ಲವೆನ್ನುತ್ತಾರೆ? ಆದರೆ, ಶ್ರೀ ವೀರೇಂದ್ರ ಪಾಟೀಲರು ಶ್ರೀ ನಿಜಲಿಂಗಪ್ಪನವರಿಗೂ ಹೆಚ್ಚಿನ ತಪ್ಪು ಮಾಡಿದ್ದಾರೆ.'

"ಏನು?"

'ನಿಜಲಿಂಗಪ್ಪನವರು ಶ್ರೀಮತಿ ಗಾಂಧಿ ಹೇಳಿದ್ದಕ್ಕೆ ಸೈಗುಟ್ಟುತ್ತಿದ್ದರೆ, ಅವರಿಗೀ ಗತಿ ಬರುತ್ತಿರಲಿಲ್ಲ. ಶ್ರೀ ಪಾಟೀಲರು ಪ್ರಗತಿ ಶೀಲತೆ ಮತ್ತು ಸಮಾಜವಾದದ ಗುತ್ತೇದಾರಿಯ ಇಂಡಿಕೇಟ್ ಸೇರಬೇಕಾಗಿತ್ತು. ಉಳೀತಿದ್ದರು.'

'ಅಂದರೆ, ಸಿಂಡಿಕೇಟ್ ಏನು ಮಾಡಿದರೂ ಅದು ಪ್ರಗತಿಯಲ್ಲ....'

'ನೋಡಮ್ಮ, ತೆಂಗಿನ ಮರದ ಬುಡದಲ್ಲಿ ಹಾಲು ಕುಡಿದರೂ ಹಾಲು ಕುಡಿದನೆನ್ನುವುದಿಲ್ಲ ಜನ....'

'ಮತ್ತೆ?'

"ಕಳ್ಳು ಕುಡಿದ ಎನ್ನುತ್ತಾರೆ. ಹಾಗೆ ಸಿಂಡಿಕೇಟ್ ಏನು ಮಾಡಿದರೂ ಅದು ಪ್ರತಿಗಾಮಿತನ, ಸಮಾಜದ್ರೋಹವೆಂಬ ಅರ್ಥವು"

'ಅಂದರೆ, ಕಾಂಗ್ರೆಸ್ ವಿಭಜನೆಗೆ ವ್ಯಕ್ತಿಗತ ಪ್ರತಿಷ್ಠೆಯೇ ಕಾರಣವೆಂಬುದು ನಿರ್ವಿವಾದ....'

'ಮತ್ತಿನ್ನೆಂಥದು?'

'ಅಲ್ರಿ, ಮುಂದೇನೂಂತ?'

'ನಾನು ಹೇಳೋದಾದ್ರೆ, ಇನ್ನು ಒಂದೇ ಒಂದು ಉಳಿದಿರೋದು....'

'ಏನು?'

'ಕಾಂಗ್ರೆಸ್ ಬಣಗಳ ಐಕ್ಯ'

'ಅದು ಹೇಗೆ ಸಾಧ್ಯ?'

'ಹೇಗೆ ಅಂದ್ರೆ, ನೋಡು, ಸದ್ಯ ನ್ಯಾಯಾಲಯದಲ್ಲಿ ಕೇಸು ಇದೆ. ಅಲ್ಲಿ ಯಾವುದು ನ್ಯಾಯ ಬದ್ಧ ಕಾಂಗ್ರೆಸ್ ಎಂದು ಇತ್ಯರ್ಥ ಆಗುವವರೆಗೆ ಇಕ್ಕಡೆಯವರೂ ಸುಮ್ಮನಿದ್ದರೆ, ಆ ಮೇಲೆ, ನ್ಯಾಯವಾದ ಕಾಂಗ್ರೆಸ್ಸನ್ನು ಎರಡೂ ಗುಂಪುಗಳು ಸೇರಬಹುದು....'

'ಅಲ್ಲರಿ, ಒಂದು ವೇಳೆ ಸಿಂಡಿಕೇಟೇ ನಿಜವಾದ ಕಾನೂನು ಬದ್ಧ ಕಾಂಗ್ರೆಸ್ ಎಂದು ಗೊತ್ತಾದರೆ....'

'ಇಂಡಿಕೇಟು ಅದನ್ನು ಸೇರಬೇಕ..'

'ಅದು ಯಾಕೆ ಸೇರೀತು?'

'ಹೇಗೆ ಅಂದ್ರೆ, ಈ ಬಾರಿಯೂ ಅದು ಕಾಂಗ್ರೆಸ್ ಧ್ವಜ ಹಾರಿಸಿಯೇ ತನ್ನನ್ನು ಕಾಂಗ್ರೆಸ್ ಎಂದು ಕರೆದುಕೊಂಡೇ ಓಟು ಪಡೆದಿದೆ....'

'ಓಟಿನ ಕತೆ ಬಿಡಿ. ಪಕ್ಷೇತರನೆಂದು ನಿಲ್ಲುವುದು, ಯಾವು ಯಾವುದೋ ಪಕ್ಷಗಳ ಬೆಂಬಲ ಪಡೆಯುವುದು, ಮತ್ತಾವುದೋ ಪಾರ್ಟಿ ಸೇರೋದು. ಈ ಗೌಡ ಬಂಗಾರಪ್ಪ ಪಕ್ಷಾಂತರಿಗಳನ್ನು ಸುದ್ದಿ ಎತ್ತೋದೇ ತಪ್ಪು.'

'ಆತ್ಮ ಸಾಕ್ಷಿಯ ಪ್ರಭಾವವದು.'

'ಅದೇ ಅನುಕೂಲ ಸಿಂಧು?'

'ಇಂಡಿಕೇಟಿಗರಿಗೆ ಅದು ಇಷ್ಟವಿಲ್ಲವಾದ್ರೇನು, ಕಾಂಗ್ರೆಸ್ಸಿನಿಂದ ಬೇರೆಯೇ ಒಂದು ಪಕ್ಷ ಕಟ್ಟಿಕೊಂಡರೆ ಸರಿ....'

'ಆಗ ನೈಜ ಕಾಂಗ್ರೆಸ್ ತನ್ನ ಬಲವನ್ನು ಮರಳಿ ಪಡೆಯ ಬಂದೀತೆ?'

"ಹೂಗಳಿದ್ದರೆ ತುಂಬಿಗಳೂ ಬಂದಾವು

'ಅಂದ್ರೆ ಕಾಂಗ್ರೆಸ್ಸು ವಿಸರ್ಜನೆಯ ಬಾಗಿಲಲ್ಲಿ ನಿಲ್ಲುವುದು.' —ಗೋರಾ

ರಾಜ್ಯದ ನಾಲ್ಕನೆ ಯೋಜನೆ ಮತ್ತು ಕೈಗಾರಿಕೆ

92 ಕೋಟಿ ರೂ. ವಾರ್ಷಿಕ ಆದಾಯ

2 ಕೋಟಿ ಜನರಿಗೆ ಉದ್ಯೋಗ

ಕೈಗಾರಿಕಾ ಪ್ರಗತಿಯ ಮಧುರ ವಾತಾವರಣಕ್ಕೆ, ಮೈಸೂರು ರಾಜ್ಯವು ರಾಷ್ಟ್ರದಲ್ಲೇ ಪ್ರಥಮ. ರಾಷ್ಟ್ರೀಯ ಸಮಿತಿಯೊಂದರ ಅಧ್ಯಯನದ ಪ್ರಕಾರ **1973—74**ರ ವೇಳೆಗೆ ರಾಜ್ಯದಲ್ಲಿ ವಿವಿಧ ಕೈಗಾರಿಕೆಗಳಲ್ಲಿ ಸುಮಾರು **240** ಕೋಟಿ ರೂಪಾಯಿಗಳನ್ನು ತೊಡಗಿಸಲು ಅವಕಾಶವಿದೆ. ಇದರಲ್ಲಿ **164** ಕೋಟಿ ರೂ. ಖಾಸಗಿ ಕ್ಷೇತ್ರದ ಹೂಡಿಕೆ.

ಕೈಗಾರಿಕೆಗೆ ಅತ್ಯಗತ್ಯವಾದ ವಿದ್ಯುತ್ ಈಗ ರಾಜ್ಯದಲ್ಲಿ ಸಮೃದ್ಧಿ, ಇಡೀ ರಾಷ್ಟ್ರದಲ್ಲೇ ರಾಜ್ಯದ ವಿದ್ಯುತ್ ದರ ಕಡಿಮೆ.

ನಾಲ್ಕನೆಯ ಯೋಜನಾವಧಿಯಲ್ಲಿ ಕೈಗಾರಿಕೆಗಳ ಮೇಲಿನ ಬಂಡವಾಳ ಹೂಡಿಕೆ ಯೋಜನೆಯ ಅಂತ್ಯದಲ್ಲಿ ರಾಜ್ಯಕ್ಕೆ **92·6** ಕೋಟಿ ರೂ. ವಾರ್ಷಿಕ ಆದಾಯ ನೀಡಲಿದೆ, ಸುಮಾರು **1,92,000** ಜನರಿಗೆ ಉದ್ಯೋಗ ಒದಗಿಸಲಿದೆ.

(ಮೈಸೂರು ಸರಕಾರದ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ ಪ್ರಕಟಿತ)

ಬಿರುಗಾಳಿ ಬೀಸುತ್ತದೆ, ಏಕೆ?

ಮಹಾಭಾರತ ಯುದ್ಧ ಮುಗಿದಿತ್ತು. ಕೌರವರು ಸಂಪೂರ್ಣ ನಿರ್ನಾಮರಾದರು. ತನ್ನ ಸಹೋದರರ, ಬಂಧು ಬಾಂಧವರ ಮೃತ್ಯುವಿನಿಂದ ಧರ್ಮರಾಯನ ಮನ ನೊಂದಿತು; ಕಂದಿತು. ತಾನು ಅದೇಕಾದರೂ ರಾಜ್ಯಮೋಹದಿಂದ ಈ ಯುದ್ಧಕ್ಕೆ ತೊಡಗಿದೆನೋ ಎಂದು ಯುಧಿಷ್ಠಿರ ತಲ್ಲಣಿಸಿದನು. ಭಗವಾನ್ ಶ್ರೀಕೃಷ್ಣನ ಸಾಂತ್ವನದ ನುಡಿಗಳೂ ಆತನ ಮನಸ್ಸನ್ನು ಸ್ತಿಮಿತಕ್ಕೆ ತರಲಾರದಾದುವು. ಧರ್ಮಜನ ಮನಸ್ಸಿನಲ್ಲಿ ಮೂಡಿದ ವೈರಾಗ್ಯ ಭಾವವನ್ನು ಓದಿಕೊಂಡ ಕೃಷ್ಣನು ಆತನನ್ನು ಭೀಷ್ಮಪಿತಾಮಹನೆಡೆ ಕಳಿಸಿದನು.

ಧರ್ಮಜನ ಶೋಕದಾಳ ಭೀಷ್ಮನಿಗೆ ಮನವರಿಕೆಯಾಯ್ತು. ಅಸಹಾಯಕನೆನಿಸಿದಾಗ ಮನುಷ್ಯ ಆಕಾಶದತ್ತ ನೋಡುತ್ತಾನೆ. ಅವನೆಂದುಕೊಂಡನು—ದೇವರೇ, ಇದು ಯಾರೊಬ್ಬರ ಕೈಯನ್ನೂ ಮೀರಿದ ಸಂಗತಿ. ಮನುಷ್ಯನ ಭಾಗ್ಯ ಅಂಧಕಾರಮಯ. ಅದರಲ್ಲಿ ಏನು ಬರೆದಿದೆಯೆಂದು ಯಾರೊಬ್ಬರೂ ಅರಿಯಲಾರರು. ಧರ್ಮಪುತ್ರನಾದರೋ ಆದರ್ಶ ವ್ಯಕ್ತಿ. ಅಲ್ಲವಾದರೆ, ಈ ಗ್ಲಾನಿ, ಈ ವೈರಾಗ್ಯ ಭಾವ ಆತನ ಮನಸ್ಸಿನಲ್ಲಿ ಮೂಡುತ್ತಿರಲಿಲ್ಲ. ಇದೇ ಆದರ್ಶವನ್ನು ಇಡಿಯ ವಿಶ್ವವೇ ಅನುಕರಿಸುತ್ತಿದ್ದರೆ ಅದರ ಸ್ವರೂಪವೇ ಬೇರೆಯಾಗುತ್ತಿತ್ತು.

ಅನಂತರ ಭೀಷ್ಮನು ಯುಧಿಷ್ಠಿರನನ್ನು ಕುರಿತು ಹೇಳಿದನು.'ಭೀಷಣ ಶಬ್ದ ಮಾಡುತ್ತ, ಕಾಡಿನ ಮರಗಳನ್ನು ಉರುಳಿಸುತ್ತ ಬರುವ ಬಿರುಗಾಳಿಯನ್ನು ನೀನು ನೋಡಿದ್ದೀಯ.? ನಿರ್ಬಲ ವೃಕ್ಷಗಳನ್ನದು ಬೇರು ಸಹಿತ ಕಿತ್ತೊಗೆಯುತ್ತದೆ. ಒಣಗಿದ ಗೆಲ್ಲುಗಳನ್ನು ಪಕ್ಷಿ ಮತ್ತವುಗಳ ಗೂಡುಗಳನ್ನು. ಮೊಟ್ಟೆ ಮರಿಗಳನ್ನು, ಹೂ ಹಣ್ಣು ಬಳ್ಳಿಗಳನ್ನು ನೆಲದ ಮೇಲೆ ಕೆಡೆಯುತ್ತದೆ. ಆದರೆ, ಬಹಳ ಆಳದಲ್ಲಿ ಬೇರು ಬಿಟ್ಟ ಮರಗಳು ಇದ್ದ ಹಾಗೆಯೇ ಉಳಿಯುತ್ತವೆ. ಭಯಂಕರ ಬಿರುಗಾಳಿ ಅವುಗಳ ತಲೆಯ ಮೇಲಿಂದ ಹಾದು ಹೋಗುತ್ತದೆ; ಹೆಚ್ಚೆಂದರೆ, ಅವುಗಳ ಟೊಂಗೆ—ಎಂಕಲುಗಳನ್ನೂ ಒಣ ಎಲೆಗಳನ್ನೂ ಉದುರಿಸುತ್ತವೆ.

ಉಳಿದ ಮರಗಳ ಎಲೆಗಳು, ಕೊಂಬೆ—ರೆಂಬೆಗಳು; ಅಡಿಯ ನೆಲವು ಏನು ಯೋಚನೆ ಮಾಡುತ್ತಿರಬಹುದು?

ಪ್ರಕೃತಿಯು ಬಿರುಗಾಳಿಯನ್ನು ಕಳಿಸುತ್ತದೆ. ಅದು ತನ್ನ ಅತ್ಯಾಚಾರ-ಅನಾಚಾರಗಳಿಗೆ ತೊಡಗುತ್ತದೆ; ಅದರಲ್ಲಿ ಸಫಲವೂ ಆಗುತ್ತದೆ. ಆದರೆ, ಇವೆಲ್ಲ ವ್ಯರ್ಥ, ಸರ್ವಾರ್ಥವ್ಯರ್ಥ. ಪಾಪ, ಆ ಮರಕ್ಕೆ, ಆ ನೆಲಕ್ಕೆ ಪ್ರಕೃತಿಯು ಪ್ರತಿಯೊಂದು ಕಾರ್ಯಕಲಾಪವೂ ನಿಯಮಿತ ರೂಪದಲ್ಲೇ ನಡೆಯುತ್ತಿದೆಯೆಂಬ ಸತ್ಯ ಸಂಗತಿ ಹೇಗೆ ಗೊತ್ತು? ಪ್ರಾಕೃತಿಕ ಕಾರ್ಯಾವಳಿಗಳು ವ್ಯರ್ಥವಾಗಿರುವುದಿಲ್ಲ; ಆಶ್ಚರ್ಯಜನಕವೆನಿಸಿದರೂ ಅದು ಒಮ್ಮಿಂದೊಮ್ಮೆಲೇ ತಲೆದೋರುವುದೂ ಇಲ್ಲ. ಇದನ್ನು ಇತರರು ತಿಳಿದುಕೊಳ್ಳದಿದ್ದರೆ ತಪ್ಪು ಯಾರದು? ಕಾರಣವಿದ್ದೇ ಕಾರ್ಯಗಳು ನಡೆಯುತ್ತವೆ. ಪ್ರಕೃತಿಯೊದರೇನು? ಭಗವಂತನ ನಿಯಮಗಳನ್ನದು ಎಂದಿಗೂ ಮೀರಲಾರದು.

ಗ್ರೀಷ್ಮ ಋತುವಿನ ಭಯಾನಕ ತಾಪ ಪ್ರಾಕೃತಿಕ ಪ್ರಾಣಿಗಳನ್ನು ಉರಿಸುತ್ತದೆ. ಅವಕಾಶವರಿತು, ತಾಪ ವಿಸ್ಫೋಟಗೊಂಡು ಬಿರುಗಾಳಿಯ ರೂಪದಲ್ಲಿ ಅಭಿವ್ಯಕ್ತವಾಗುತ್ತದೆ. ಇದು ನಡೆಯಲೇಬೇಕು. ಬಿರುಗಾಳಿ ಬೀಸದಿರುವುದೇ ಅಸ್ವಾಭಾವಿಕವೆನಿಸುತ್ತದೆ; ಬೀಸುವುದಲ್ಲ.

ಇದೇ ಬಗೆಯಲ್ಲಿ ಮಾನವರಲ್ಲಿ ಪಾಪ ಮತ್ತು ದುಷ್ಕಾರ್ಯಗಳು ತುಂಬಿ ತುಳುಕಾಡುತ್ತಿರುವಾಗ, ಪೀಡಿತರ, ಅನ್ಯಾಯಕ್ಕೊಳಗಾದವರ ಮನಸ್ಸು ಕಹಿಯಾಗುತ್ತದೆ. ವ್ಯಕ್ತಿ ಸಮೂಹವೇ ಸಮಾಜ. ವ್ಯಕ್ತಿಗತ ಸಮಸ್ಯೆಗಳೇ ಬೆಳೆದು ಉಚಿತ ಸಮಯದಲ್ಲಿ ಸಾಮೂಹಿಕ ಸಮಸ್ಯೆಗಳಾಗುತ್ತವೆ. ತಿರಸ್ಕಾರ, ಅಸೂಯೆ, ದ್ವೇಷ, ಶೋಕ ಮತ್ತು ಕ್ರೋಧ ಮೊದಲಾದುವುಗಳಿಂದ ಮಾನವ ಸಮಾಜ ಸಂತಪ್ತವಾಗುತ್ತದೆ. ಈ ಸಂತಪ್ತ ಸಮಾಜದ ಅಂತರಂಗದಲ್ಲಿ ಉರಿಯುತ್ತಿರುವ ಬೆಂಕಿ ಯಾವುದಾದರೊಂದು ನೆಪವೊಡ್ಡಿ ಭುಗಿಲೆನ್ನುತ್ತದೆ. ರಾಜ್ಯಕೀಯ ಪುರುಷರು ಇದನ್ನು ರಾಜ್ಯನೀತಿಯೆಂದು ಹೆಸರಿಸುತ್ತಾರೆ. ದೇಶ–ಸಮಾಜ ಪ್ರೇಮಗಳ ಜಪ ಮಾಡುತ್ತ ಯುದ್ಧಕ್ಕೆ ಸಿದ್ಧರಾಗುತ್ತಾರೆ. ಆದರೆ, ದೇಶಪ್ರೇಮ, ಸಮಾಜ ಪ್ರೇಮಗಳ ಎಡೆಯಲ್ಲಿ ತಿರಸ್ಕಾರ, ವಿದ್ವೇಶ, ಸ್ವಾರ್ಥ ಮತ್ತು ವಿದ್ರೋಹಗಳ ಭಾವನೆ ಇಣಕಿ ನೋಡುತ್ತದೆ.

ಯುದ್ಧವು ಅತ್ಯಂತ ಭೀಷಣವಾದದ್ದು. ಇದು ಎಲ್ಲರಿಗೂ ಗೊತ್ತು. ಇದರ ಪರಿಣಾಮವಾದರೂ ಭಯಾನಕವಾದದ್ದು. ಐವರು ಪಾಂಡವರು ಜಯಭೇರಿ ಹೊಡೆಯುವಂತಾಗಬೇಕಾದರೆ, ಕೋಟ್ಯಂತರ ನಿರೀಹ ಸೈನಿಕರು ಮೃತ್ಯುವಿನ ದವಡೆ ಸೇರಬೇಕಾಯಿತು–ಇದು ತ್ರಿಕಾಲಾಬಾಧಿತ ಸತ್ಯ. ಆದರೆ, ನಿಮ್ಮವರಿಗಾಗಿಯೇ ಜನತೆ ಯುದ್ಧಾಸಕ್ತವಾಯ್ತು ಎಂದು ತಿಳಿಯುವುದು ತಪ್ಪು.ಯುದ್ಧಕ್ಕೆ ಮುಂದೆ ಬಂದವರಲ್ಲಿ ಇನ್ನೂ ಕೆಲವು ಉದ್ದೇಶ್ಯಗಳಿರುತ್ತವೆ.

ಈ ಕುರುಕ್ಷೇತ್ರ ಯುದ್ಧಕ್ಕೆ ಹಲವಾರು ಕಾರಣಗಳಿವೆ. ತಮ್ಮ ವ್ಯಕ್ತಿಗತ ಸ್ವಾರ್ಥ ಸಿದ್ಧಿ, ಶಕ್ತಿ ಪ್ರದರ್ಶನ, ಪ್ರತೀಕಾರ ಮನೋಭಾವ, ಮೊದಲಾದ ನೂರಾರು ಅಂಶಗಳು ಇಲ್ಲಿ ಲೀಲಾಜಾಲವಾಗಿ ತಾಂಡವವಾಡಿವೆ. ಸಾಂಕ್ರಾಮಿಕ ರೋಗಗಳಂತೆ ಯುದ್ಧವೂ ಹಬ್ಬುತ್ತದೆ. ನಲುವತ್ತೊಂಬತ್ತು ಬಗೆಯ ವಾಯುಗಳಂತೆ ಯುದ್ಧವು ಬಹು ಶೀಘ್ರವಾಗಿ ಹರಡುತ್ತದೆ. ಅದರ ವೇಗ ಆವೇಶಮಯವಾದುದು. ಈ ಬಗೆಯ ಅಶಾಂತ ಮತ್ತು ಭಾವಾವೇಶದ ವೇಳೆ ಶಾಂತಿಪೂರ್ವಕ ಗಂಭೀರ ಆಧ್ಯಾತ್ಮಿಕ ಚಿಂತನೆಗಳು ಹೇಗೆ ಸಾಧ್ಯ? ಮಾನವನಲ್ಲಿನ ಸುಷುಪ್ತ ಶಕ್ತಿ ಜಾಗ್ರತವಾಗುತ್ತದೆ. ಯುದ್ಧ ಶಕ್ತಿ, ಪ್ರತೀಕಾರ ಭಾವನೆ, ಆತ್ಮಾಭಿಮಾನಗಳು ಹೆಡೆ ಬಿಚ್ಚುತ್ತವೆ. ಮಾನವ ತನ್ನನ್ನೇ ತಾನು ಮರೆಯುತ್ತಾನೆ.

ಯಾರೂ ರೋಗಿಯಾಗ ಬಯಸುವುದಿಲ್ಲ. ರೋಗ ಬಂದ ಮೇಲೆ ಮಿತ್ಯಾಯಿಂದ ಅದು ದೂರವಾಗುವುದಿಲ್ಲ. ಕಹಿ ಕಷಾಯವೇ ಬೇಕು. ಯುದ್ಧ ಪಾಪವೇ ಪುಣ್ಯವೇ ಎಂದು ಮುಂತಾಗಿ ನೀನು ಯೋಚಿಸುವುದು ಮೂರ್ಖತನ. ಯಾವುದೇ ಕಾರ್ಯ ತಾನಾಗಿ ಪುಣ್ಯಮಯವಲ್ಲ, ಪಾಪಪೂರ್ಣವೂ ಅಲ್ಲ. ಅದರ ಹಿಂದಿರುವ ಉದ್ದೇಶ್ಯವೇ ಅದು ಪಾಪವೇ ಪುಣ್ಯವೇ ಎಂದು ಹೇಳುತ್ತದೆ.



ಜನ ಜಾಗೃತಿಗೆ ನವಯುಗಾದಿ

ಮಾರ್ಚ್ ದಿನಾಂಕ ೨೭; ಚಾಂದ್ರಮಾನ ಯುಗಾದಿ. ಅಂದು ವಿರೋಧಿಕೃತ್ ಸಂವತ್ಸರಾರಂಭ. ಹೊಸ ವರ್ಷ ಆರಂಭವಾಗುವ ಹೊಸ ಸಡಗರ. ರಾಜಕೀಯದಲ್ಲಂತೂ ನವಯುಗದ ನಾಂದಿ. ಧಾರ್ಮಿಕರಂಗದಲ್ಲೂ ನೋಡ–ಚಂದಿಮರಲ್ಲಿ ಪಂದ್ಯಾಟ ನಡೆಯುತ್ತಿದೆ. ಕರ್ನಾಟಕ ಧರ್ಮಭೂಮಿ ಇದೆ. ಶೃಂಗೇರಿ ಶಾರದಾ ಪೀಠದ ಶಂಕರಾಚಾರ್ಯ ಸ್ವಾಮೀಜೀ ವಿದ್ಯಾರಣ್ಯರು ಹಿಂದೂ ಸಾಮ್ರಾಜ್ಯವನ್ನು ಪುನರ್‌ಸ್ಥಾಪಿಸಿದವರು. ಶ್ರೀ ಮಧ್ವಾಚಾರ್ಯರು ದ್ವೈತಮತಸ್ಥಾಪಕರು. ವಿಶಿಷ್ಟಾದ್ವೈತ ಮತಾಚಾರ್ಯರಾಮಾನುಜಾಚಾರ್ಯರಿಗೆ ಆಶ್ರಯಕೊಟ್ಟ ಭೂಮಿ ಕರ್ನಾಟಕ. ಭಕ್ತಿಭಂಡಾರಿ ಬಸವಣ್ಣ, ಅಲ್ಲಮ ಪ್ರಭು, ಅಕ್ಕಮಹಾದೇವಿ ....ಮಹಾಪುರುಷರಿಗೆ ಬರಗಾಲ ಇಲ್ಲಿ ಬಂದಿರುವದಿಲ್ಲ. ಛತ್ರಪತಿ ಶಿವಾಜಿ ಮಹಾರಾಜರು ಹಿಂದೂ ಸಾಮ್ರಾಜ್ಯ ಪುನರ್‌ಸ್ಥಾಪಿಸಲು ಉತ್ಸಾಹವನ್ನಿತ್ತ ನೆಲ ಕರ್ನಾಟಕ, ಗೋಮಟೇಶ್ವರನು ಅದನ್ನೇ ತಪೋಭೂಮಿಯನ್ನಾಗಿ ಆರಿಸಿಕೊಂಡಿರುವನು. ಇದು ಧರ್ಮಸ್ಥಳವಿದೆ.

ಹೌದು. ಅಂತಹ ಕಾಲವೊಂದಿತ್ತು. ಆದರೆ ರಾಮರಾಯರ ಗತಿ ಏನಾಯಿತು? ೧೯೪೭ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಡೆದದ್ದೇನು? ಬರಬರುತ್ತ ಧರ್ಮದ್ರೋಹಿಗಳು, ದೇಶದ್ರೋಹಿಗಳು, ಜನತಾದ್ರೋಹಿಗಳೆಂಬ ಮೊಸಳೆಗಳು ಕನ್ನಡ ಸರೋವರದಲ್ಲಿ ಮನೆಮಾಡಿಕೊಂಡುವು. ಅವು 'ಪ್ರಗತಿ'ಯ ಹೆಸರೆತ್ತುತ್ತ ಮೊಸಳೆ ಕಣ್ಣೀರನ್ನು ಹಾಕುತ್ತಿವೆ; ಮುಗ್ಧ ಜನತೆಯನ್ನು ಮೋಸಗೊಳಿಸಿ ಶೋಷಿಸುತ್ತಿವೆ.

೧೯೭೨ರ ಪ್ರಜಾಪ್ರಭುತ್ವ ದಿನೋತ್ಸವಕ್ಕೆರಡು ದಿನಗಳಿರುವಾಗ ತಮಿಳ್ನಾಡಿನ ಸೇಲಮಿನಲ್ಲೊಂದು ದುರ್ಘಟನೆ ಸಂಭವಿಸಿತು. ಹಿಂದೆ ಗಣರಾಜ್ಯ ದಿನದಂದು ಸರಕಾರದ ಸಂಕೇತ ಧ್ವಜವನ್ನು ಸುಡುತ್ತಿದ್ದವರು ಅಂದು ನಮ್ಮ ಧಾರ್ಮಿಕ ಮಹಾಪುರುಷರ, ಮತೀಯ ಮುಂದಾಳುಗಳ, ಪೂಜಾರ್ಹರ ಭಾವಚಿತ್ರಗಳನ್ನು ಬರೆದು, ವಿಗ್ರಹಗಳನ್ನು ನಿಲ್ಲಿಸಿ ಅದಕ್ಕೆ ಚಪ್ಪಲಿಮಾಲೆಗಳನ್ನು ಹಾಕಿ, ರಸ್ತೆಗಳಲ್ಲೆಳೆದುಕೊಂಡೊಯ್ಯುತ್ತಿರುವಾಗ ಮೆಟ್ಟುಗಳಿಂದ ಥಳಿಸುತ್ತ, ಕೊನೆಯಲ್ಲಿ ಸುಟ್ಟು ಬೂದಿ ಮಾಡಿದರು. ಈ ಗುಂಪಿಗೆ ಸೇರಿದವರು ಈ ರೀತಿ ಮಾಡುವದೇನೂ ಹೊಸತಲ್ಲ. ಹಿಂದೆ ಅವರು ವಿಘ್ನೇಶ್ವರನ ವಿಗ್ರಹಗಳನ್ನು ವಿನಾಯಕ ಚತುರ್ಥಿಯಂದು ಛಿದ್ರ ವಿಛಿದ್ರಗೊಳಿಸಿರುವವರು; ಶ್ರೀ ರಾಮನವಮಿಯಂದು ಮರ್‍ಯಾದಾ ಪುರುಷೋತ್ತಮ ಪ್ರಭು ಶ್ರೀ ರಾಮಚಂದ್ರನ ಕುರಿತು ಅಪಪ್ರಚಾರ ಮಾಡಿರುವರು; ಬ್ರಾಹ್ಮಣರ ಶಿಖೆಗಳನ್ನು ಕತ್ತರಿಸಿ, ಜನಿವಾರಗಳನ್ನು ತುಂಡುಮಾಡಿ, ಅವರ ಅಬಲೆಯರ ಮೇಲೆ ಅತ್ಯಾಚಾರ ಮಾಡಿರುವರು; ಅಲ್ಲದೆ ಶ್ರೀ ಶ್ರೀ ಶಂಕರಾಚಾರ್ಯರ ಗೊಂಬೆಯನ್ನು ರಸ್ತೆಯುಲ್ಲೆಳೆದು ಸುಟ್ಟುಹಾಕಿದ್ದಾರೆ. ಆಗಿದ್ದ ಮುಖ್ಯಮಂತ್ರಿಗಳು ಇದನ್ನು ಮುಖ್ಯವಿಷಯವನ್ನಾಗಿ ತಿಳಿದುಕೊಂಡಿರಲಿಲ್ಲ. ಇದಕ್ಕೆ ಕಾರಣವೂ ಇದೆ. ಈ ಗುಂಪಿನ ನಾಯಕ ರಾಮಸ್ವಾಮಿನಾಯ್ಕರ್ ಇವರಿಗೂ ರಾಜಾಜಿಯವರಿಗೂ ಗಳಸ್ಯ ಕಂಠಸ್ಯ. ಅನಂತರ ಬಂದ ಕಾಮರಾಜರಿಗೆ ರಾಜಾಜಿ (ಬ್ರಾಹ್ಮಣ) ಮೇಲಿನ ಹಗೆ ಹಾಗೂ ರಾಮಸ್ವಾಮಿನಾಯ್ಕರರ ಸಹಾಯದ ಕಾರಣವಾಗಿ ಅವರು ರಾಜಿಯಿಂದಲೇ ಇದ್ದರು. ಭಕ್ತವತ್ಸಲಂ ಕೂಡಾ ಬಿಗಿಯಾಗಿ ವರ್ತಿಸಲಿಲ್ಲ ಹೀಗಾಗಿ ಈ ಗುಂಪಿಗೆ ಧೈರ್ಯ ಬಂತು, ಆ ಮೇಲೆ ತಮಿಳ್ನಾಡಿನಲ್ಲಿ ದ್ರಾವಿಡ ಮುನ್ನೇಟ್ರ ಕಳಗಮಿನ ಅಧಿಕಾರ ಬಂದ ಮೇಲಂತೂ ಅಮಲೇರಿತವರಿಗೆ. ದ್ರಾ.ಮು.ಕ.ವು ಹಿಂದೂ ದೇವಾಲಯಗಳೊಳಗೆ ಯಾರು ಬೇಕಾದರೂ ಹೋಗಬಹುದು, ಅರ್ಚಕರಾಗಿ ಯಾರು ಬೇಕಾದರೂ ಬರಬಹುದು, ವಿಶ್ವಸ್ತರಾಗಿ ಯಾರು ಬೇಕಾದರೂ ಇರಬಹುದು.. ಮುಂತಾದ ಹೊಸ ನಿಯಮಗಳನ್ನು ತಂದುದಲ್ಲದೆ ದೇವಸ್ಥಾನಗಳೊಳಗೆ ಅಣ್ಣಾದೊರೈಯವರ ಚಿತ್ರಗಳನ್ನೂ ತೂಗಹಾಕಿತು.

ಇದರಿಂದ ಕಸಿವಿಸಿಗೊಂಡ ಧರ್ಮಪ್ರೇಮಿಗಳು ದೇವಸ್ಥಾನ ರಕ್ಷಣಾ ಸಂಸ್ಥೆಯ ಹೆಸರಿನಲ್ಲಿ ಸೇಲಮಿನಲ್ಲಿ ಸೇರಿ ದ್ರಾ.ಮು.ಕ.ದ ಆ ರೀತಿಯನ್ನು ಖಂಡಿಸಿ, ಮತೀಯ ವಿಷಯಗಳಲ್ಲಿ ಸರಕಾರ ಕೈಹಾಕಬಾರದೆಂದು ಕೇಳಿಕೊಂಡಿತ್ತು. ನಾಲ್ಕು ಹಾರುವರು ಕೂಡಬಹುದೆಂದು ದ್ರಾ.ಮು.ಕ. ಭಾವಿಸಿಕೊಂಡಿತ್ತು. ಅಲ್ಲಿ ಅನೇಕಾನೇಕ ಸಂಪ್ರದಾಯಸ್ಥರು ಒಂದಾಗಿ ಸೇರಿದುದರಿಂದ ಅದರ ಕಣ್ಣಿಗೆ ಚುಚ್ಚಿದಂತಾಯಿತು. ಇದುವೇ ಸೇಲಂ ದುರ್ಘಟನೆಗೆ ಕಾರಣ. ಈ ದುರ್ಘಟನೆಗೆ ಕಾರಣರಾದವರು ತಾವು ರಾವಣನ ಸಂತಾನದವರೆಂದು ಸಾರಿಕೊಳ್ಳುತ್ತಿದ್ದಾರೆ. ಇವರಿಗೆ ರಾಮನೆಂದರೆ ಆಗದು. ಹಾಗಿದ್ದರೂ ಅವರಲ್ಲಿ ಕೆಲವರಿಗೆ ಮುರುಗನೇ ಏಕಮೇವ ದೇವನಾದ; ಮಿಕ್ಕೆಲ್ಲವೂ ತ್ಯಾಜ್ಯ. ಅಂತಹವರ ದೈವಭಕ್ತಿಗೂ ರಾಮಸ್ವಾಮಿನಾಯ್ಕರ್ ಎದುರು ನಿಂತರು. ಮುರುಗನ ಚಿತ್ರವನ್ನು ಮಾಡಿ ಅದಕ್ಕೂ ಅಪಮಾನಕರ ರೀತಿಯಲ್ಲಿ ಹಿಂಸೆಕೊಡಲಾಯಿತು, ಅದನ್ನೂ ಸುಡಲಾಗಿದೆ. ರಾಮಸ್ವಾಮಿ ನಾಯ್ಕರರ ಪಾಲಿಗೆ ತಮಿಳು ಕಾಡುಜನರ ಭಾಷೆ ಇದೆ. ಕಾಡು ಜನರ ದೇವರು ಮುರುಗನಾದರೂ ಪಟ್ಟಣಪ್ರೇಮಿಗಳಿಗೇತಕ್ಕೆ? ಪಕ್ಕದಲ್ಲಿರುವದು ಕೇರಳ. ಅಲ್ಲಿ ಶಬರಿಮಲೈ ಇದೆ. ದೇಶದ ದಶದಿಶೆಗಳಿಂದ ಅಲ್ಲಿಗೆ ಸಹಸ್ರಾರು ಭಕ್ತರು ಹೋಗುತ್ತಾರೆ. ಅವರ ಅಯ್ಯಪ್ಪನೇ ರಾಮಸ್ವಾಮಿ ನಾಯ್ಕರರ ನೇತ್ರಗಳಿಗೆ ವಿರೋಧಿಯಂತೆ ಕಂಡು ಬಂದರು. ಇದುವೇ ಮಲೆಯೊಳಿಗಳನ್ನು ಈ 'ದ್ರಾವಿಡ ಧುರೀಣ' ಕಾಣುವ ರೀತಿ! ಇಂತಹ ಹಲವಾರು ಕೀಳ್ಮಟ್ಟದ ರಾಕ್ಷಸೀಯ ಕುಕೃತ್ಯಗಳು ಅಂದು ಅಲ್ಲಿ ನಡೆದುವು.

ರಾಮಸ್ವಾಮಿ ನಾಯ್ಕರ್ ಹಾಗೂ ಅವರ ದ್ರಾವಿಡ ಕಳಗಂ ಈ ರೀತಿ ವರ್ತಿಸುವದೇನೂ ಹೊಸತಲ್ಲವೆನ್ನುವದು ನಿಜ. ಅದು ಹಿಂದೆ ತಮಿಳ್ನಾಡಿಗೆ ಸೀಮಿತವಾಗಿತ್ತು. ಈಗ ಬೆಂಗಳೂರು ನಗರ ಸಭೆಗೆ ಕೆಲವು ದ್ರಾವಿಡ ಮುನ್ನೇಟ್ರ ಕಳಗಮಿನ ಸದಸ್ಯರು ಆರಿಸಿಬಂದಿರುವದೇ ತಡ, ಅಲ್ಲೂ ಈ ವಿಷ ಪ್ರಚಾರದ ದುರ್ಗಂಧ ಹಬ್ಬಲಾರಂಭವಾಗಿದೆ. ಅವರ ಕಣ್ಣುಗಳಿಗೆ ರಾಮಸ್ವಾಮಿನಾಯ್ಕರ್ ಮಹಾನ್ ವ್ಯಕ್ತಿ, ವೀರ ಕನ್ನಡಿಗ ಕ್ರಾಂತಿ ಪುರುಷ.... ಇನ್ನೇನೇನೋ ಬಹಳ ಆಶ್ಚರ್ಯ' ಇದೆಂತು ಸಾಧ್ಯ?

ಹಿಂದೆ ಘಜ್ನಿ—ಘೋರಿ ಮುಂತಾದ ಮುಸಲ್ಮಾನ ಆಕ್ರಮಣಗಾರರು ಬಂದು ಇಲ್ಲಿಯ ದೇವಸ್ಥಾನಗಳನ್ನು ಧ್ವಂಸಗೊಳಿಸಿ ಸಿರಿಯ ಸೂರೆಮಾಡುತ್ತಿದ್ದರು. ತನ್ನನ್ನು ತಾನೇ ಕಾಪಾಡಿಕೊಳ್ಳಲಾರದ ದೇವರು ಜನರನ್ನು ರಕ್ಷಿಸುವದುಂಟೇನೆಂದು ಆ ಮತಾಂಧರು ಹಲ್ಲು ಕಿರಿಯುತ್ತಿದ್ದರು. ಅನಂತರ ಬಂದ ಕ್ರಿಸ್ತೀಯ ಮತಪ್ರಸಾರಕರು ಕೆಲವು ಮರದ ಬೊಮ್ಮೆಗಳನ್ನು ರಚಿಸಿ, ಮುಗ್ಧ ಜನತೆಯೆದುರು ನೋಡಿ. ಈ ನಿಮ್ಮ ರಾಮ, ಕೃಷ್ಣ. ಶಕ್ತಿಶಾಲಿಯಾಗಿದ್ದರೆ ನೀರಿನ ಮೇಲೆ ನಡೆಯಲೆಂದು, ಆ ಗೊಂಬೆಗಳನ್ನು ನೀರಿಗೆಸೆದು ಬಿಡುತ್ತಿದ್ದರು. ಆ ಕಟ್ಟಿಗೆಯ ತುಂಡು ಮೇಲೆ ಬರುವದೆಂತು? ನೋಡಿದಿರಾ, ನಿಮ್ಮ ದೇವರು, ಇವು ಸುಳ್ಳು. ನಮ್ಮ ದೇವರು ಯೇಸು, ನೀರಿನ ಮೇಲೆ ನಡೆದಿದ್ದಾರೆ. ಆದುದರಿಂದ ಓ ಪಾಪಿಗಳೇ, ನಮ್ಮ ಮತಕ್ಕೆ ಸೇರಿರೆಂದು ಅವರು ಪ್ರಚಾರ ಮಾಡುತ್ತಿದ್ದರು. ಆಕ್ರಮಣಗಾರರ ಖಡ್ಗ, ಅಧಿಕಾರಕ್ಕೆ ಭಯಪಟ್ಟು. ಅವರು ತೋರಿಸಿದ ಆಶೆ–ಆಮಿಷಗಳಿಗೆ ಬಲಿಯಾಗಿ, ಅವರ ಪ್ರಚಾರಕ್ಕೆ ಬಲಿಯಾಗಿ ಕೆಲವು ನರಿಗಳು ಬಾಲ ಕಳೆದುಕೊಂಡಿವೆ. ಅವು ಇತರರ ಬಾಲವನ್ನೂ ತೆಗೆಯಲು ಪ್ರಯತ್ನಿಸುವದರಲ್ಲೇನೂ ಆಶ್ಚರ್ಯವಿಲ್ಲ.

ಮೆಕಾಲೆ ಅಂದು ಹೇಳಿದ್ದು ಇಂದೂ ನಿಜವಾಗಿದೆ. ಆಂಗ್ಲೇಯರ ಅಧಿಕಾರದಂಕುಶ ಭಾರತದಿಂದ ಹೋದರೂ ಆಂಗ್ಲ ಭಾಷೆಯ ಅಧಿಕಾರದಂಕುಶ ಹೋಗುವದಿಲ್ಲವೆಂಬವನು ವಾದ ಹೂಡಿ ಇಲ್ಲಿ ಆಂಗ್ಲ ವಿದ್ಯೆಗಾಗಿ ಬಹಳ ಪರಿಶ್ರಮಿಸಿರುವನು. ಅವನು ಹೋರಾಡದಿದ್ದಲ್ಲಿ ಇಲ್ಲಿಯ 'ನೇಟಿವ್'ಗಳನ್ನು ಬ್ರಿಟಿಷರು ಬೂಟುಗಾಲಿನಡಿಯಲ್ಲಿ ಗುಲಾಮರಾಗಿಡುವದರಲ್ಲಿ ಮುಂದರಿಯುತ್ತಿದ್ದರು. ಅದನ್ನು ತಪ್ಪಿಸಿ ಇಲ್ಲಿಯವರನ್ನು ಇಂಗ್ಲೀಷರಿಗೆ ಅವನು ಮನೋದಾಸರನ್ನಾಗಿ ಮಾಡಿಟ್ಟಿರುವನು.

ರಾಮಸ್ವಾಮಿ ನಾಯ್ಕರ್ ಬ್ರಿಟಿಷರ ಗರಡಿಯಲ್ಲಿ ಪಳಗಿದವರು. ಭಾರತೀಯರನ್ನು ಒಡೆದು ಆಳಬೇಕು, ಅವರಲ್ಲಿ ದೇಶ, ಧರ್ಮ ಹಾಗೂ ಸಂಸ್ಕೃತ ಭಾಷೆಯ ಮೇಲಿರುವ ಮಮತೆ, ಮರ್ಯಾದೆಗಳ ಮಾರಣಹೋಮ ನಡೆಸಿದಲ್ಲಿ ತಮ್ಮ ಸೂರ್ಯ ಮುಳುಗಲಾರನೆಂದು ಬ್ರಿಟಿಷರು ಭಾವಿಸಿಕೊಂಡಿದ್ದರು. ಅವರು ಒಂದು ಘಟ್ಟದವರೆಗೆ ಜಯಹೊಂದಿದ್ದಾರೆ ರಾಮಸ್ವಾಮಿ ನಾಯ್ಕರ್‌ರಂತಹವರನ್ನು ಅವರು ತಯಾರು ಮಾಡಿಟ್ಟು ಹೋಗಿದ್ದಾರಲ್ಲದೆ, ಬ್ರಿಟಿಷ್ ಕೌನ್ಸಿಲಿನ ಮೂಲಕ ಪ್ರೋತ್ಸಾಹಕೊಡುತ್ತಿದ್ದಾರೆ. ರಾಮಸ್ವಾಮಿ ನಾಯ್ಕರ್‌ರನ್ನು ಅವರು ಚೆನ್ನಾಗಿ ಪಳಗಿಸಿಟ್ಟಿದ್ದಾರೆ. ಇವರಿಗೆ ಹಿಂದೂ ದೇಶ, ಹಿಂದೂ ಧರ್ಮ, ಸಂಸ್ಕೃತ ಭಾಷೆ ಹಿಡಿಸುವದಿಲ್ಲ. ಪ್ರತ್ಯೇಕ ತಮಿಳ್ನಾಡು....ಎಲ್ಲವೂ ಪ್ರತ್ಯೇಕ! ಬಾ

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O. S. No. 9/1971

ಪಿ. ಎನ್. ಕೃಷ್ಣಮೂರ್ತಿ ರಾವ್ —ವಾದಿ

ಮತ್ತು

ಕೆ. ವಾಸುದೇವ ಪ್ರಭು —ಪ್ರತಿವಾದಿ

ಇವರೊಳಗೆ

ನೋಟೀಸು

ಹಾಸನ ಟೌನ್, ನೆಹ್ರು ಸ್ಟ್ರೀಟ್‌ನಲ್ಲಿರುವ "ಮಂಗಳೂರು ರೇಡಿಯೋ ಹೌಸ್" ಎಂಬಲ್ಲಿ ಕೆಲಸದಲ್ಲಿರುವ ಕೆ. ಗೋಪಾಲ ಪ್ರಭುಗಳವರ ಮಗ ಮೇಲಿನ ನಂಬ್ರದ ಪ್ರತಿವಾದಿ ಕೆ. ವಾಸುದೇವ ಪ್ರಭುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ಮೇಲ್ಕಂಡ ವಾದಿಯು ನಿಮ್ಮ ಮೇಲೆ ಪ್ಲೈಂಟು ನಿವೃತ್ತಿ ಕೇಳಿ ಮಾಡಿದ ವ್ಯಾಜ್ಯವು ನಿಮ್ಮ ಹಾಜರಿ ಬಗ್ಗೆ ತಾರೀಕು 16-4-71ರಂದು ಇಟ್ಟಿರುತ್ತದೆ. ನಿಮ್ಮದೇನಾದ್ರೂ ಅದಕ್ಕೆ ಉದಾಹರಣೆಯಿದ್ದಲ್ಲಿ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಈ ಕೋರ್ಟಿನ ಮುಂದೆ ತಾರೀಕು 16-4-71ರಂದು ಬೆಳಗ್ಗೆ 11 ಗಂಟೆಗೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ನಂಬ್ರವನ್ನು ನಿಮ್ಮ ಗೈರು ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು.

ಕೋರ್ಟಿನ ಹುಕ್ಕುಂ ಮೇರೆಗೆ

ಪಿ. ಎನ್. ಗೋಪಾಲಕೃಷ್ಣ ರಾವ್

ವಾದಿ ಕಡೆ ಎಡ್ವಕೇಟ್

ಉಡುಪಿ, ದ. ಕ. ತಾರೀಕು 18-3-71.

Gram : VISHWA Tel : 29111

When at Bangalore
Stay at

HOTEL NATARAJA

Restaurant Boarding & Lodging.
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಯಿಯಲ್ಲಿರುವದು ದ್ರಾವಿಡ ನಾಮ! ಇವರ ಚಟುವಟಿಕೆಗಳಿಂದಾಗಿ ಆಂಧ್ರ ಪ್ರದೇಶ, ಕೇರಳ, ಕರ್ಣಾಟಕದ ಪ್ರದೇಶಗಳು ತಮಿಳುನಾಡಿನಿಂದ ಹೊರಗೆ ಬರಲು ತವಕಿಸಿದುವು. ಇಂದೂ ಇವರು ಮಲಿಯಾಳಿಗಳ ಮೇಲೆ ವಿಷವಮನ ಮಾಡುತ್ತಿದ್ದಾರೆ. ಕನ್ನಡದ ಕುನ್ನಿಗಳಿಗೆ ಮದರಾಸಿನಲ್ಲೇನಿದೆಂದು ಕೇಳಿದ್ದ ರಾಮಸ್ವಾಮಿ ನಾಯ್ಕರರು ಕೆಲವು ಕನ್ನಡಿಗರ ವೀರ ಕನ್ನಡಿಗ, ಮಹಾನ್ ವ್ಯಕ್ತಿ ಕ್ರಾಂತಿಪುರುಷನಾಗಿ ಬಿಟ್ಟಿದ್ದಾರೆ. ಇದಕ್ಕಿಂತ ಅಪಮಾನ ಇನ್ನೇನಾದರೂ ಇದೆಯೇ? ರಾಜಾಜಿಯವರಿದನ್ನು, ಬ್ರಿಟಿಷರು ಬೀಜ ಹಾಕಿದ್ದ ವಿಷವೃಕ್ಷವನ್ನು ಮೊಳಕೆಯಲ್ಲೇ ಚಿವುಟಿ ಬಿಸಾಡುತ್ತಿದ್ದಲ್ಲಿ ಭಾರತೀಯ ಧರ್ಮಾಭಿಮಾನಿಗಳು ಪರಶುರಾಮ ಅವತಾರ ತಳೆಯುವ ಅವಕಾಶ ಬರುತ್ತಿರಲಿಲ್ಲ. ಬ್ರಿಟಿಷರು ಬೀಜ ಬಿತ್ತಿ ಹೋದರು, ರಾಜಾಜಿ ನೀರೆರೆದರು, ಕಾಮರಾಜ ಗೊಬ್ಬರ ಹಾಕಿದರು, ಕಮ್ಯೂನಿಸ್ಟರು ಕಸ ತೆಗೆದರು, ಮುಸ್ಲಿಂ ಲೀಗಿನವರು ನೆಲ ಕೆರೆದರು, ಕ್ರಿಶ್ಚಿಯನ್ ಫೆಡರೇಷನ್‌ಗಳು ಕ್ರಿಮಿನಾಶಕ ಔಷಧಿಯನ್ನು ಸಿಂಪಡಿಸಿದುವಾದಲ್ಲಿ ದಿಲ್ಲಿಯ ಮೊಗಲ ದರ್ಬಾರು ರಕ್ಷಣೆಯ ಪೂರ್ಣ ಜವಾಬ್ದಾರಿಯನ್ನು ಹೊತ್ತಿತು. ಇವೆಲ್ಲವುಗಳ ಸಹಾಯದಿಂದ ಅವರು ಹಿಂದೂ ಸಂಸ್ಕೃತಿಯ ನಾಶಕ್ಕಾಗಿ ಪರಿಶ್ರಮಿಸುತ್ತಿದ್ದಾರೆ. ಔರಂಗಜೇಬನಿಂದಾದುದನ್ನು ತಾನು ಮಾಡಬೇಕೆನ್ನುವ ಛಲದಿಂದ ಇವರಿದ್ದಾರೆ. ಇದೀಗ ಇವರ ಸಹಾಯಕ್ಕಾಗಿ ಇಂದಿರಾಜಿಯವರ ಪೂರ್ಣ ಬೆಂಬಲ ಪಡೆದಿರುವ ಸುಭದ್ರಾ ಜೋಷಿಯವರೂ ಮುಂದಕ್ಕೆ ಬಂದಿದ್ದಾರೆ. ಸುಭದ್ರಾ ಜೋಷಿಯವರು ಇಂದಿರಾಜೀಯಂತಹವರ ಸಹಾಯದಿಂದ ಅಂಧಶ್ರದ್ಧೆ ನಾಶಕಾರಕ ಚಟುವಟಿಕೆಗಳೆಂದು ಸಭೆಗಳನ್ನು ನಡೆಸಿ ಪ್ರಚಾರ ನಡೆಸುತ್ತಿರುವರು. ರಾಮಸ್ವಾಮಿ ನಾಯ್ಕರ್ ಕೂಡಾ ಅದೇ ಹೆಸರಿಗೆ ಅಂದು ಅಂಟು ಬಿದ್ದರು, ಮೂಢ ನಂಬಿಕೆಯನ್ನು ನಾಶಮಾಡುವ ಮೂಢ ನಂಬಿಕೆಗೆ ಇವರೆಲ್ಲರೂ ಒಳಗಾಗಿದ್ದಾರೆ.

ಹಿಂದೂವೆಂದುಕೊಳ್ಳಲು ನಾನು ಗೌರವಪಡುತ್ತೇನೆಂದು ಸ್ವಾಮಿ ವಿವೇಕಾನಂದರು ಅಮೇರಿಕೆಯಲ್ಲಿ ನಡೆದ ಸರ್ವಮತ ಸಮ್ಮೇಳನದಲ್ಲಿ ಸಾರಿರುವರು. ರಾಮತೀರ್ಥಾದಿಗಳು ಹಿಂದೂ ಧರ್ಮದ ಮೇಲೆ ಅನ್ಯರಿಗಿರುವ ಮೂಢ ನಂಬಿಕೆಯನ್ನು ನಾಶ ಮಾಡಲು ಪರಿಶ್ರಮಿಸಿರುವರು. ಮ್ಯಾಕ್ಸ್ ಮುಲ್ಲರ್, ಅನ್ನಿಬೆಸಂಟ್, ನಿವೇದಿತಾ ಮುಂತಾದವರು ಹಿಂದೂ ಧರ್ಮದಿಂದ ಮಾತ್ರ ಜಗತ್ತನ್ನು ರಕ್ಷಿಸಲು ಸಾಧ್ಯವೆಂಬ ಸತ್ಯಾಂಶವನ್ನು ಕಂಡುಕೊಂಡಿದ್ದಾರೆ. ಹಾಗಿದ್ದರೂ ರಾಮಸ್ವಾಮಿ ನಾಯ್ಕರರ ನಾಯಕತ್ವವನ್ನು ಬಯಸುವ ಕನ್ನಡಿಗರೇತಕ್ಕೆ ಹಿಂದೂಧರ್ಮವನ್ನು ಹೀಗಳೆಯುತ್ತಿದ್ದಾರೆ. ಉತ್ತಮ ಸುವ್ಯವಸ್ಥಿತ ಮನೆಯ ನಾಶವನ್ನು ಅದ್ಯಾವ ನಿವಾಸಿಯಾದರೂ ಬಯಸಿಯಾನೇ? ಮಾತೃಭೂಮಿಯ ಮೇಲೆ ಮಮತೆ ಇಲ್ಲದಿರುವವರು ದೇಶ ವಿಭಜನೆಗೊಪ್ಪುತ್ತಾರೆ. ಅಂತೆಯೇ ಧರ್ಮವಿರೋಧಿಗಳು ಮಾತ್ರ ಧರ್ಮ ನಾಶಕಾರ್ಯಕ್ಕೆ ಮುಂದಾಗುತ್ತಾರೆ. ಇದಕ್ಕೆ ಪ್ರಗತಿಯೆಂಬುದು ಮೋಸಮಾಡುವ ವಿಧಾನವಷ್ಟೆ. ಸುಧಾರಣೆಗಾಗಿ ಬುದ್ಧ, ಬಸವ, ತೀರ್ಥಂಕರರು, ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ಗೋವಿಂದಸಿಂಘ, ದಯಾನಂದ ಸರಸ್ವತಿ ಮುಂತಾದವರು ಬಹಳಷ್ಟು ಹೆಣಗಾಡಿದ್ದಾರೆ. ನವ್ಯ ಪ್ರಗತಿವಾದಿಗಳ ಜೊಳ್ಳುವಾದ ಇಂದು ಬೇಕಾಗಿರುವದಿಲ್ಲ.

ಕಮ್ಯುನಿಸ್ಟರ ಅಭಿಪ್ರಾಯದಂತೆ ಮತ ಒಂದು ರೀತಿಯ ಅಫೀಮಂತೆ! ಭಾರತೀಯರು ಸಾಧಾರಣವಾಗಿ ಧರ್ಮಾಭಿಮಾನಿಗಳೇ ಇದ್ದಾರೆ. ಆದುದರಿಂದ ಇಲ್ಲಿ ಕಮ್ಯುನಿಜಂ ಹಬ್ಬುವುದಿಲ್ಲವೆಂದು ರಷ್ಯಾ ತಿಳಿದುಕೊಂಡಿದ್ದು, ಚೈನಿ ರೀತಿಯಲ್ಲಿ ಕಮ್ಯುನಿಸಮ್ಮು ತರಲು ಪ್ರಯತ್ನ ನಡೆಸಲಾಗುತ್ತಿದೆಯಲ್ಲದೆ, ಅಧಿಕಾರದ ಅಂಕುಶವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಲು ಕಮ್ಯುನಿಸ್ಟರು ಕಾತರರಾಗಿದ್ದಾರೆ. ಅಂತಹವರೇ ಇಂತಹ ಗಡಿಬಿಡಿಗಳಿಗೆ ಪ್ರೋತ್ಸಾಹಕರಿದ್ದಾರೆ.

ಕನ್ನಡಿಗರು ಈ ಬಲೆಯಲ್ಲಿ ಸಿಕ್ಕಿಬೀಳುವುದುಂಟೇನು? ಹಿಂದೂದೇಶದಿಂದ ಹಿಂದೂಧರ್ಮ ಹೋದಲ್ಲಿ ಮತ್ತುಳಿಯುವದಾದರೂ ಏನು? ಗ್ರೀಕ್, ರೋಮನ್, ಐಗುಪ್ತ ಮುಂತಾದ ನಾಗರಿಕತೆಗಳ ಸ್ಥಿತಿ ಇಂದೆಂತಿದೆ? ಆ ದುಸ್ಥಿತಿ ನಮ್ಮ ದೇಶಕ್ಕೂ ಬರಬೇಕೇನು? ಅದನ್ನು ಬರಮಾಡಿಕೊಳ್ಳಲು ನಾವು ಇಚ್ಛಿಪಡುತ್ತೇವೆ ಏನು? ಇಲ್ಲವೆಂಬುದೇ ಜನತೆಯ ಒಕ್ಕೊರಲು. ಹಾದಿ ತಪ್ಪಿರುವ ಜನರ ಜಾಗೃತಿಯನ್ನೇ, ರಾಷ್ಟ್ರದ ಪುನರುತ್ಥಾನವನ್ನು ಇಂದಿನ ಯುಗಾದಿ ಸೂಚಿಸುತ್ತದೆ. ವಿರೋಧಿಗಳ ಕೃತಿ ಇಲ್ಲಿ ಕಾರ್ಯರೂಪದಲ್ಲಿಳಿಯುವಂತಿಲ್ಲ.

"ಈ ರಾಷ್ಟ್ರದ ಪ್ರಾಣ ಧರ್ಮದಲ್ಲಿದೆ.... ಈ ದೇಶದ ಬದುಕು, ಭಾಷೆ, ಭಾವನೆ ಎಲ್ಲವೂ ಧರ್ಮಮಯ. ನಿಮ್ಮ ರಾಜನೀತಿ. ಸಮಾಜ ನೀತಿ, ನಗರಪಾಲಿಕೆ, ಪ್ಲೇಗು ಕ್ಷಾಮಗಳ ನಿವಾರಣಾ ಕಾರ್ಯ ಇತ್ಯಾದಿ ಎಲ್ಲವೂ ಇಲ್ಲಿನ ವರೆಗೆ ನಡೆದು ಬಂದಂತೆ ಇನ್ನು ಮುಂದೆಯೂ ಧರ್ಮದ ಮೂಲಕವೇ ನಡೆದೀತು. ಇಲ್ಲವಾದಲ್ಲಿ ನಿಮ್ಮೆಲ್ಲ ಕೂಗಾಟ ಚೀರಾಟಗಳೂ ಬರೀ ಗಾಳಿಯಲ್ಲಿ ತೇಲಿಹೋದಾವು...." ಇದು ವಿವೇಕಾನಂದರ ವಿವೇಕವಾಣಿ. ಇದನ್ನರಿತುಕೊಂಡು ಧರ್ಮ ರಕ್ಷಣೆಗಾಗಿ ಶ್ರಮಿಸಲು ನಾವು ಹೊಸ ವರ್ಷದಲ್ಲಿ ಹೊಸ ಹುರುಪಿನಿಂದ ಮುಂದಾಗಬೇಕಾಗಿದೆ.

—ಶ್ರೀ ಶಿವಶಂಕರ.

ಮಹಾಪುರುಷರ ವಾಣಿಗಳು

ಯಾವದು ಸತ್ಯದಿಂದ ಸ್ವತಂತ್ರವಾಗಿರುತ್ತದೆಯೋ ಅದು ಸ್ವತಂತ್ರ. ಉಳಿದದ್ದು ದಾಸ್ಯ.

ಆಲಸ್ಯವು ಜೀವಿತ ಮನುಷ್ಯನ ಗೋರಿ.

ಎಲ್ಲಕ್ಕಿಂತ ಕವಿತೆಯ ದೇಣಿಗೆಯೆಂದರೆ ಶಾಂತಿ.

ಆಶ್ಚರ್ಯವೇನೆಂದರೆ ಜನರು ಜೀವನವನ್ನು ಹೆಚ್ಚಿಸಲಿಕ್ಕೆ ಅಪೇಕ್ಷಿಸುತ್ತಾರೆ. ಆದರೆ ಸುಧಾರಿಸಲಿಕ್ಕೆ ಇಲ್ಲ.

ಸರ್ವೋಚ್ಚ ಜ್ಞಾನ ಯಾವುದು? ಎಲ್ಲಕ್ಕಿಂತ ಸಣ್ಣದಾದ ಮತ್ತು ಎಲ್ಲಕ್ಕಿಂತ ಸ್ವಚ್ಛವಾದ ಮಾರ್ಗವೆಂದರೆ ಸತ್ಯ.

ಲಕ್ಷಗಂಟಲೆ ಜನರು ಯಾವಾಗ ನಿನ್ನನ್ನು ವಾಹ್ ವಾಹ್ (ಶಬಾಶ್) ಎಂದು ಹೇಳುವಾಗ ನಿನ್ನಿಂದ ಏನು ಅಪರಾಧವಾಯಿತೆಂದೂ ಮತ್ತು ನಿಂದಾ ಮಾಡಿದಾಗ ಏನು ಹಿತ ಲಾಭವಾಯಿತೆಂದೂ ನೀನು ಗಂಭೀರವಾಗಿ ವಿಚಾರ ಮಾಡುವಿಯಾ?

ಇಚ್ಛೆಗಳ ಸಂಘರ್ಷವನ್ನು ಪ್ರಕಟ ಮಾಡುವದೆಂದರೆ ಜೀವನವನ್ನು ವ್ಯವಸ್ಥಿತಗೊಳಿಸಿದಂತೆ.

ವಿಚಿತ್ರವಾದ ಮಾತೆಂದರೆ "ಸುಖದ ಅಭಿಲಾಷೆ" ನನ್ನ ದು:ಖದ ಒಂದು ಅಂಶವಾಗಿದೆ.

ಬರ್ಫ ಮತ್ತು ಬಿರುಗಾಳಿ ಹೂವುಗಳನ್ನು ನಾಶಗೊಳಿಸುತ್ತದೆ. ಆದರೆ ಬೀಜವು ನಾಶವಾಗಲಾರದು.

ಯಾವ ಮನುಷ್ಯನು ತನ್ನ ಜೇಬಿನಿಂದ ಎರಡನೆಯವರ ಮನಸ್ಸನ್ನು ಖರೀದಿ ಮಾಡಲಿಕ್ಕೆ ಅಪೇಕ್ಷಿಸುವವನು ಅವನೆಂಥ ಕುರುಡನು!

ಗೂಗೆಯ ಕಣ್ಣುಗಳು ಕೇವಲ ರಾತ್ರಿಯ ಕಾಲದಲ್ಲಿ ಮಾತ್ರ ತೆರೆಯುತ್ತವೆ, ಅದು ಪ್ರಕಾಶದ ರಹಸ್ಯವನ್ನು ಹೇಗೆ ತಿಳಿಯಬಲ್ಲದು!

ಮನೆಯೆಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಓದಿರಿ! "ಗುಡಿ ಗೃಹಕಾರ್ಯ"

ಕನ್ನಡ ಪುಸ್ತಕ ಚಿಕ್ಕ ಬಂಡವಲಿನಲ್ಲಿ ನಿಮ್ಮ ಮನೆಯಲ್ಲಿ ಉದ್ಯೋಗ—ವ್ಯವಹಾರ ಮಾಡಿ ನಿಮ್ಮ ಆದಾಯ ಬೆಳೆಸಿಕೊಳ್ಳಿರಿ. ಪುಟ 224 ಬೆಲೆ ರೂ. 10 ಅಂಚೆ ವೆಚ್ಚ ರೂ. 2.50

Cottage Industry (NC-2) P.B.No.1262
Anguri Bagh Market, Delhi-6.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಉಡ್ಪಿ ಎಡಿಶನಲ್ ಸಿವಿಲ್ ಜಡ್ಜರ ಕೋರ್ಟನಲ್ಲಿ

L. A. C. No. 87/1970

ಸ್ಪೆಶಲ್ ಲೇಂಡ್ ಎಕ್ವಿಜೇಶನ್ ಆಫೀಸರ–
– ಅರ್ಜದಾರ.

ಮತ್ತು

ಭೇರಿ ರಾಮ ಭಟ್ಟ ಕೂಡಾ–ಕ್ಲೈಮೆಂಟ್ಸರರು.

1ನೇ ಕ್ಲೈಮೆಂಟ್–ಭೇರಿ ರಾಮ ಭಟ್ಟ-ತೆಂಕಗ್ರಾಮದ ಯೆರ್ಮಾಳು.

ಮೇಲಿನ ಅರ್ಜಿಯಲ್ಲಿ ಲೇಂಡ್ ಎಕ್ವಿಜೇಶನ್ ಆಕ್ಟಿನ ಸೆಕ್ಷನ್ 30ರ ಮೇರೆಗೆ ಮಾಡಿದ ಮೇಲಿನ ಅರ್ಜಿಯು ನಿಂಮ ನೋಟಿಸ್ ಬಗ್ಗೆ ತಾ. 9-4-71ಕ್ಕೆ ಇಟ್ಟಿರುವುದರಿಂದ ನಿಂಮ ಹೇಳಿಕೆಗಳು ಯೇನಾದ್ರು ಯಿದ್ದಲ್ಲಿ ಸದ್ರಿ ದಿವ್ಸ ಹಗಲು 10ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು ಎಂಬ ಸಂಗ್ತಿ ನಿಮಗೆ ಯೀ ಮೂಲ್ಕ ತಿಳಿಸೋಣಾಗುತ್ತದೆ.

B. Krishna Bhat
Advocate for Claimants 2 and 4
Udipi, 18-3-71

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ. ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಶಾಸಕರ ಹಕ್ಕುಗಳು ಮತ್ತು ಕರ್ತವ್ಯಗಳು

ಲೇಖಕರು: ಶ್ರೀ ಕೆ. ಎಂ. ರಂಗಸ್ವಾಮಿ.

ರಾಜಕೀಯವನ್ನೇ ವೃತ್ತಿ ಮಾಡಿಕೊಂಡಿರುವ ಜನರಿರುವ ಪಾಶ್ಚಾತ್ಯ ದೇಶಗಳಲ್ಲಿ, ಸಾರ್ವಜನಿಕ ಜೀವನ ಕ್ಷೇತ್ರದ ಭ್ರಷ್ಟಾಚಾರದ ವಿರುದ್ಧವಾಗಿ ಉಗ್ರವಾದ ಹೋರಾಟವು ನಡೆಯುತ್ತಿದೆಯೆಂಬುದೂ, ಅದಕ್ಕೆ ಸಫಲತೆಯೇನೂ ದೊರೆತಿಲ್ಲವೆಂಬುದೂ ಸುಪರಿಚಿತವಾಗಿದೆ. ಈ ಕೇಡನ್ನು ನಿರ್ಮೂಲಗೊಳಿಸಲು ಮೇಲ್ನೋಟಕ್ಕೆ ನಡೆದ ಪ್ರಯತ್ನಗಳಿಂದ ಯಾವ ಪರಿಣಾಮವೂ ಉಂಟಾಗಿಲ್ಲ. ಏಕೆಂದರೆ ಆ ಸಮಾಜಗಳ ರಚನೆಯೇ ಈ ಕೇಡನ್ನು ಶಾಶ್ವತಗೊಳಿಸುವಂತಹುದಾಗಿದೆ.

ಜನಾಧಿಪತ್ಯದ ಕೋಟೆಯೆಂದು ಹೇಳಿಕೊಳ್ಳಲಾಗುವ ಸಂಯುಕ್ತ ರಾಜ್ಯ ಅಮೆರಿಕದಲ್ಲಿನ ಪರಿಸ್ಥಿತಿಗಳ ಕುರಿತು ಬರೆಯುತ್ತ ಮಿ. ಜಾನ್ ಗುಂಥರ್ ಅವರು ತಮ್ಮ "ಸಂ. ರಾ. ಅಮೆರಿಕದೊಳಗೆ" ಎಂಬ ಪುಸ್ತಕದಲ್ಲಿ, "ಈ ದೇಶಕ್ಕೆ ಉತ್ತಮವಾದ ಮತ್ತು ಇನ್ನು ಹೆಚ್ಚಾದ ನಿಸ್ವಾರ್ಥ ನಾಯಕತ್ವದ ಆವಶ್ಯಕತೆಯಿದೆಯೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಉದ್ದೇಶದ ಸ್ಪಷ್ಟತೆ, ಏಕೈಕ ಮನೋಭಾವ, ಯೋಜನೆಯ ಸ್ಥಿರತೆ ಮತ್ತು ಅಭ್ಯೋತ್ತರ— ಇವುಗಳ ದೃಷ್ಟಿಯಿಂದ ಅಸಕ್ತ ನಾಯಕತ್ವದ ಆವಶ್ಯಕತೆ ಇದೆ. ಅನೇಕ ಸಜ್ಜನರು ವೃತ್ತಿ ಜೀವನಗಳನ್ನು ಅಂಗೀಕರಿಸುತ್ತಿಲ್ಲ. ಏಕೆಂದರೆ ವೃತ್ತಿನಿರತ ರಾಜಕಾರಣಿಗಳು ಅವನ್ನು ಹಿಸುಕಿ ದೂರಮಾಡುತ್ತಾರೆ; ಆ ದುರ್ದೆಂಪಲೇ ನಾವು ರಾಜಕೀಯವನ್ನೂ ಪರಿಶೀಲಿಸಬೇಕಾಗುತ್ತದೆ" ಎಂದು ತಿಳಿಸಿದ್ದಾರೆ.

ಆದರೆ ಈ ಚಿತ್ರವು ಎಲ್ಲ ಕಡೆಯೂ ಅಷ್ಟೊಂದು ಕೆಟ್ಟಿಲ್ಲ. ಉದಾಹರಣೆಗೆ ಹೇಳುವುದಾದರೆ ಸೋವಿಯೆತ್ ಒಕ್ಕೂಟದಲ್ಲಿ "ವೃತ್ತಿನಿರತ ರಾಜಕಾರಣಿಗಳು" ಯಾರೂ ಇಲ್ಲ. ರಾಜಕೀಯ ಸಂಸ್ಥೆಗಳ ಮೂಲಕ ಜನತೆಗೆ ಸೇವೆ ಸಲ್ಲಿಸುವುದು ವಿಶೇಷ ಗೌರವವೆಂದು ಸಭ್ಯ ನಾಗರಿಕರೆಲ್ಲರೂ ಭಾವಿಸುತ್ತಾರೆ. ಜನತೆಯ ಪರಮಾಧಿಕ ವಿಶ್ವಾಸವನ್ನು ಪಡೆದಿರುವವರೆಲ್ಲರಿಗೂ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರೇ ಅಥವಾ ಅಲ್ಲವೇ ಎಂಬುದರ ಲೆಕ್ಕವಿಲ್ಲದ ಜನತೆಯ ಒಳಿತಿಗಾಗಿ ಸ್ವಾರ್ಥರಹಿತವಾಗಿ ಕೆಲಸ ಮಾಡಲು ಸಿದ್ಧವಾಗಿರುವವರೆಗೂ ನ್ಯಾಯವಿಧಾಯಕ ಸಭೆಗಳನ್ನು ತೆರೆಯಲಾಗಿರುತ್ತದೆ.

ಅಲ್ಲಿ ವೃತ್ತಿನಿರತರಾದ ರಾಜಕಾರಣಿಗಳು ಇಲ್ಲದಿರುವುದರ ರಹಸ್ಯವೇನೆಂದರೆ, ಅಲ್ಲಿ ವಿಭಿನ್ನ ವೃತ್ತಿಗಳಲ್ಲಿಯೂ, ಉದ್ಯೋಗಗಳಲ್ಲಿಯೂ ತೊಡಗಿರುವ ವ್ಯಕ್ತಿಗಳು ನ್ಯಾಯ ವಿಧಾಯಕ ಸಭೆಗಳಿಗೆ-ಸರ್ವೋಚ್ಚ ನ್ಯಾಯ-ಶಾಸನಾಧಿಕಾರ ಸಂಸ್ಥೆಯಾದ ಸರ್ವೋಚ್ಚ ಸೋವಿಯೆತ್ತನ್ನೂ (ಸಂಸತ್ಸಭೆಯನ್ನೂ) ಒಳಗೊಂಡು ಎಲ್ಲ ಶಾಸನ ಸಭೆಗಳಿಗೆ-ಚುನಾಯಿತರಾಗುವುದಕ್ಕೆ ಯಾವ ಪ್ರತಿಬಂಧಕವೂ ಇಲ್ಲ. ರಾಜ್ಯೋದ್ಯೋಗಿಗಳು, ಎಂಜಿನಿಯರರು, ವಿಜ್ಞಾನಿಗಳು, ಕಾರ್ಮಿಕರು, ಪತ್ರಿಕೋದ್ಯೋಗಿಗಳು, ಕವಿಗಳು, ಚಿತ್ರ ಕಲಾವಿದರು, ನೃತ್ಯ ಕಲಾವಿದರು, ಸಂಗೀತಗಾರರು ಮತ್ತು ಇತರ ಸಾಂಸ್ಕೃತಿಕ ಕಾರ್ಯಕರ್ತರು, (ಈ ಪಟ್ಟಿ ಇಲ್ಲಿಗೇ ಮುಗಿಯದು)-ಇವರುಗಳು ಶಾಸನ ಸಭೆಗಳ ಸದಸ್ಯರಾಗಿದ್ದಾರೆ. ಶಾಸಕರಾಗಿ ತಮ್ಮ ಕೆಲಸವನ್ನು ನಿರ್ವಹಿಸುವುದಕ್ಕೆ ತಮ್ಮ ಸಹಜ ಕಾರ್ಯವು ಅಡ್ಡಿಯಾಗಿದೆಯೆಂದಾಗಲೀ ಅಥವಾ ತದ್ವಿರುದ್ಧವಾಗಿಯಾಗಲೀ (ಎಂದರೆ, ಅವರ ವೃತ್ತಿ ಕಾರ್ಯವು ಶಾಸನ ಸಭೆಯ ಕರ್ತವ್ಯ ನಿರ್ವಹಣೆಗೆ ಬಾಧಕವೆಂದಾಗಲೀ) ಅವರಿಗೆ ಯಾವ ಭಾವನೆಯೂ ಇಲ್ಲ. ಅವರ ಉದ್ಯೋಗದಿಂದಾಗಿ, ಅವರಿಗೆ ಶಾಸನ ಸಭೆಗಳಲ್ಲಿ ತಮ್ಮ ಪ್ರಭಾವವನ್ನು ಬಳಸುವುದರ ಮೂಲಕ ಹಣ ಗಳಿಸಬೇಕಾದ ಯಾವ ಆವಶ್ಯಕತೆಯೂ ಇರದು.

ತಮ್ಮ ಮತದಾರರೊಡನೆ ಸಂಪರ್ಕವಿಟ್ಟುಕೊಳ್ಳಲು ಟಪ್ಪಾಲು-ತಂತಿ ಖರ್ಚುಗಳು, ತಮ್ಮ ಸ್ಥಳಗಳಿಂದ ಸಂಸತ್ತಿನ ಅಧಿವೇಶನಕ್ಕೆ ಹೋಗಿಬರಲು ಪ್ರಯಾಣದ ಖರ್ಚುಗಳು, ಮುಂತಾದ ಕೆಲವು ಸಂಭಾವನೆಗಳ ಹೊರತಾಗಿ, ಅವರಿಗೆ ಸೋವಿಯೆತ್ತುಗಳ ಸದಸ್ಯರೆಂದು ಅವರು ಮಾಡುವ ಕಾರ್ಯಕ್ಕಾಗಿ ಯಾವ ರೀತಿಯ ವಿಶೇಷ ಸಂದಾಯವೂ ಲಭಿಸದು. ಸಂಸತ್ತಿನ ಕರ್ತವ್ಯಕ್ಕಾಗಿ ಹೋಗುವಾಗ ಅವರಿಗೆ ವಿಮಾನ ಮತ್ತು ರೈಲ್ವೇ ಪ್ರಯಾಣವು ಉಚಿತವಾಗಿರುತ್ತದೆ. ನಗರದ ಮತ್ತು ಜಿಲ್ಲಾ ಸೋವಿಯೆತ್ತುಗಳ ಸದಸ್ಯರು ನಗರ ಸಭೆಯ ಪರಿವಹನ ವ್ಯವಸ್ಥೆಯನ್ನು ಉಚಿತವಾಗಿ ಬಳಸಿಕೊಳ್ಳುತ್ತಾರೆ.

ಅಧಿವೇಶನಗಳ ಕಾಲದಲ್ಲಿಯೂ ಸದಸ್ಯರು ಸೋವಿಯೆತ್ತಿನ ಸಮಿತಿಗಳ ಕಾರ್ಯದಲ್ಲಿ ತೊಡಗಿರುವಾಗಲೂ, ಅಥವಾ ವಿಶೇಷವಾಗಿ ಗೊತ್ತುಪಡಿಸಲಾದ ಕಾರ್ಯಗಳನ್ನು ನಿರ್ವಹಿಸುತ್ತಿರುವಾಗಲೂ, ಅವರಿಗೆ ತಮ್ಮ ರೂಢಿಯ ಸರಾಸರಿ ವೇತನವು ಲಭಿಸುತ್ತಿರುತ್ತದೆ. ಗಣನೀಯ ಕಾಲಾವಧಿಯವರೆಗೆ ಅವರು ಯಾವುದಾದರೊಂದು ಸಮಿತಿಯಲ್ಲಿ ಕೆಲಸ ಮಾಡಬೇಕಾದಾಗ, ಸ್ವಾಭಾವಿಕವಾಗಿಯೇ ಅವರಿಗೆ ಆ ಕಾರ್ಯವು ಮುಗಿಯುವವರೆಗೂ ತಮ್ಮ ಸಹಜ ಕಾರ್ಯದಿಂದ ಬಿಡುಗಡೆಯಾಗುತ್ತದೆ.

ಕೆಲವು ಪಾಶ್ಚಾತ್ಯ ದೇಶಗಳಲ್ಲಿ ಕಂಡು ಬರುತ್ತಿರುವ ಸ್ಥಿತಿಗೆ ವ್ಯತಿರಿಕ್ತವಾಗಿ, ಸೋವಿಯೆತ್ತುಗಳ ಸದಸ್ಯರು ಚುನಾವಣೆಗಳ ಮುಕ್ತಾಯವಾದೊಡನೆಯೇ ತಮ್ಮ ಮತದಾರರೊಡನೆಯ ಸಂಪರ್ಕವನ್ನು ಕಳೆದುಕೊಳ್ಳುವುದಿಲ್ಲ. ತಮ್ಮ ಸೋವಿಯೆತ್ತುಗಳು ಕೈಗೊಂಡ ನಿರ್ಣಯಗಳನ್ನು ಜನತೆಗೆ ತಿಳಿಸಿ ವಿವರಿಸುವ ಜವಾಬ್ದಾರಿಯನ್ನು ಅವರು ಹೊತ್ತುಕೊಳ್ಳುತ್ತಾರೆ, ಆ ನಿರ್ಣಯಗಳನ್ನು ಕಾರ್ಯಗತಗೊಳಿಸುವುದರಲ್ಲಿ ಸಕ್ರಿಯ ಪಾತ್ರ ವಹಿಸುವಂತೆ ಅವರಿಗೆ ಪ್ರೇರಣೆಯನ್ನು ನೀಡುತ್ತಾರೆ ಮತ್ತು ಈ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಮಾಡಬೇಕಾದುದೆಲ್ಲದರ ಮೇಲೂ ತನಿಖೆ ನಡೆಸುತ್ತಿರುತ್ತಾರೆ. ಜಿಲ್ಲಾ ಸೋವಿಯೆತ್ತುಗಳಿಂದ ಮೇಲಕ್ಕೆ ಸರ್ವೋಚ್ಚ ಸೋವಿಯೆತ್ತಿನವರೆಗೆ, ಎಲ್ಲ ಸದಸ್ಯರೂ ವ್ಯಕ್ತಿಶಃ ದೂರುಗಳನ್ನೂ ಮತ್ತು ಅರ್ಜಿಗಳನ್ನೂ ಸ್ವೀಕರಿಸುತ್ತಾರೆ ಮತ್ತು ಅವುಗಳ ಬಗೆಗೆ ತಮಗೆ ಸಾಧ್ಯವಾದ ಸೂಕ್ತ ಚರ್ಯೆಯನ್ನು ಕೈಗೊಳ್ಳುತ್ತಾರೆ.

ತಮ್ಮ ಸ್ವಂತ ಚಟುವಟಿಕೆಗಳ ಕುರಿತು, ತಮ್ಮ ಸೋವಿಯೆತ್ತುಗಳ ಚಟುವಟಿಕೆಗಳ ಕುರಿತು ಕನಿಷ್ಠ ಪಕ್ಷ ವರ್ಷಕ್ಕೆ ಎರಡು ಸಲ ಅವರು ತಮ್ಮ ಮತದಾರ ಕ್ಷೇತ್ರಗಳಿಗೆ ವರದಿಗಳನ್ನು ನೀಡುತ್ತಿರುತ್ತಾರೆ. ಆ ಮೂಲಕ, ಮತದಾರರು ತಮ್ಮ ಕಾರ್ಯವನ್ನು ಸಮೀಕ್ಷಿಸಲು, ಮತ್ತು ಆವಶ್ಯಕವಿದ್ದಲ್ಲಿ ಅವರ ಕಾರ್ಯವನ್ನು ಟೀಕಿಸಲು ತಮ್ಮ ಮತದಾರರಿಗೆ ಅವರು ಅವಕಾಶವನ್ನು ನೀಡುತ್ತಿರುತ್ತಾರೆ.

ಈ ಸಂದರ್ಭದಲ್ಲಿ, ಅಮೆರಿಕದ ಸಂಸತ್ಸದಸ್ಯರು ತಮ್ಮ ಮತದಾರರೊಡನೆ ಇಟ್ಟುಕೊಂಡಿರುವ ಸಂಬಂಧವನ್ನು ಹೋಲಿಸುವುದು ಸ್ವಾರಸ್ಯಕರವಾಗಿರುವುದು. "ನ್ಯೂಯಾರ್ಕಿನಲ್ಲಿ ಹತ್ತು ಸಾವಿರ ಜನರಲ್ಲೊಬ್ಬರಿಗೂ ತಮ್ಮ ಶಾಸಕ ಪ್ರತಿನಿಧಿಯ ಹೆಸರು ತಿಳಿಯದು. ಪ್ರಾಯಶಃ ಇದೇ ಕಾರಣದಿಂದಲೇ, ಶಾಸನ ಸಭೆಯು—ನ್ಯೂಯಾರ್ಕ್ ನಗರವು 'ಎಂಪೈರ್ ಸ್ಟೇಟ್' ಆಗಿದ್ದರೂ ಕೂಡ,—ಇಂತಹ ಸಾಧಾರಣ ದರ್ಜೆಯದಾಗಿದೆ"—ಎಂದು ಪುನಃ ಅದೇ ಜಾನ್ ಗುಂಥರರು ತಮ್ಮ ಅದೇ ಪುಸ್ತಕದಲ್ಲಿ ತಿಳಿಸಿದ್ದಾರೆ. "ಅನುಭವಿಕ ಸಮೀಕೃತ"ರೊಬ್ಬರು ಹೇಳಿದುದನ್ನು ಉದಹರಿಸುತ್ತ, "ನ್ಯೂಯಾರ್ಕಿನ ವಿಧಾನ ಸಭೆಯು ಜನತೆಯ ಹೊರತಾಗಿ ಪ್ರತಿಯೊಬ್ಬರನ್ನೂ ಪ್ರತಿನಿಧೀಕರಿಸುತ್ತದೆ" ಎಂದು ಗುಂಥರರು ಬರೆದಿದ್ದಾರೆ.

ಸೋವಿಯೆತ್ ವ್ಯವಸ್ಥೆಯು ಇಂತಹ ಅಪಾದನೆಗಳಿಗೆ ಯಾವ ಅವಕಾಶವನ್ನೂ ನೀಡದೆಂಬುದು ಸ್ಪಷ್ಟವಾಗಿದೆ. ಅಲ್ಲಿನ ಮತದಾರರು ಸದಾ ಜಾಗ್ರತರಾಗಿರುತ್ತಾರೆ. ಕರ್ತವ್ಯ ನೆರವೇರಿಸದ ಯಾವ ಪ್ರತಿನಿಧಿಯನ್ನಾದರೂ ವಾಪಸು ಕರೆಸಿಕೊಳ್ಳುವ ಹಕ್ಕಿನ ಪ್ರಬಲ ಅಸ್ತ್ರವು ಅವರ ಕೈಗಳಲ್ಲಿರುತ್ತದೆ.

ಸೋವಿಯೆತ್ ಶಾಸಕರು ತಮ್ಮ ಭಾರಿ ಹೊಣೆಗಾರಿಕೆಗಳನ್ನು ನೆರವೇರಿಸುವುದನ್ನು ಸಾಧ್ಯಗೊಳಿಸಲು, ಅವರಿಗೆ ವಿಶೇಷ ಹಕ್ಕುಗಳೂ ಸಹ ಇರುತ್ತವೆ. ತಮ್ಮ ಮತದಾನ ಕ್ಷೇತ್ರಗಳಿಗೆ ಆಸಕ್ತಿಯುಳ್ಳ ಸಮಸ್ಯೆಗಳ ಕುರಿತು ಮಸೂದೆಗಳನ್ನು ತರುವ ಮತ್ತು ತಿದ್ದುಪಡಿಗಳನ್ನು ಮಂಡಿಸುವ ಕ್ರಮಬದ್ಧ ಕಾರ್ಯದ ಜತೆಗೆ, ಅವರು ಸೋವಿಯೆತ್ತುಗಳ ಅಥವಾ ತಮ್ಮ ಸ್ಥಾಯಿಸಮಿತಿಗಳ ಅಧಿಕಾರವನ್ನು ಪಡೆದು, ಸಂಸ್ಥೆಗಳ, ಉದ್ಯಮಗಳ, ರಾಜ್ಯ ಮತ್ತು ಸರಕಾರಿ ಕೃಷಿಕ್ಷೇತ್ರಗಳ ಕಾರ್ಯದ ತನಿಖೆಯನ್ನೂ ಸಹ ಮಾಡಬಹುದು, ಮತ್ತು ಅವುಗಳ ಕರ್ತವ್ಯ ನಿರ್ವಹಣೆಗೆ ಸಂಬಂಧಿಸಿದಯಾವ ಅವಶ್ಯಕ ಸಮಾಚಾರವನ್ನಾದರೂ, ಅಂಕಿಗಳನ್ನಾದರೂ ಒತ್ತಾಯದಿಂದ ಬೇಡಿ ತಿಳಿದುಕೊಳ್ಳಬಹುದು. ಸಾರ್ವಜನಿಕರಿಂದ ತಮಗೆ ಬಂದ ದೂರುಗಳನ್ನೂ ಅರ್ಜಿಗಳನ್ನೂ ಅವರು ಪರಿಶೀಲನಾರ್ಥವಾಗಿಯೂ, ತತ್ಸಂಬಂಧಿತ ಅಧಿಕಾರ ವಲಯಗಳ ಅವಶ್ಯಕ ಕಾರ್ಯಾಚರಣೆಗಾಗಿಯೂ ಕಳಿಸಿಕೊಡುತ್ತಿರುತ್ತಾರೆ.

ಸರ್ವೋಚ್ಚ ಸೋವಿಯೆತ್ತಿನ ಸದಸ್ಯರು ವಿಧ್ಯುಕ್ತವಾಗಿ ಸರಕಾರವನ್ನೂ ಮತ್ತು ಯಾವ ಸಚಿವರನ್ನಾದರೂ ಪ್ರಶ್ನಿಸಬಹುದು. ಅವರಿಗೆ ಮೂರು ದಿನಗಳೊಳಗಾಗಿ ಉತ್ತರಗಳು ದೊರೆಯಲೇ ಬೇಕಾಗುತ್ತದೆ.

ತಮ್ಮ ಮತದಾರರ ಅಪಾರ ಸದ್ಭಾವನೆ ಮತ್ತು ಭರವಸೆ—ಇದೇ ಸೋವಿಯೆತ್ ಶಾಸಕರಿಗೆ ಇಂತಹ ತತ್ಪರ ಸೇವೆಗೆ ದೊರೆಯುವ ಪುರಸ್ಕಾರ. ಇದು ಅಮೂಲ್ಯವಾದುದೆಂದು ಸೋವಿಯೆತ್ ಶಾಸಕರು ಭಾವಿಸುತ್ತಾರೆ.

● ●

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಆಕೆಯನ್ನು ಅದೃಷ್ಟವೇ ನಡೆಸಿತು

ಮಾರ್ಚ್ ೧೭, ೧೯೭೧.

ಶ್ರೀಮತಿ ಇಂದಿರಾ ಗಾಂಧಿ, ಪಂ. ಜವಾಹರಲಾಲರ ಏಕಮಾತ್ರ ಪುತ್ರಿ, ಮೂರನೆಯ ಬಾರಿಗೆ ತನ್ನ ಪಕ್ಷದ ಸಂಸದೀಯ ದಳದ ನಾಯಕಿಯಾಗಿ ಅವಿರೋಧವಾಗಿ ಆಯ್ಕೆಯಾದರು.

ಮೊದಲೆರಡು ಬಾರಿ ಆಕೆಯ ಆಯ್ಕೆಯು ತೊಂದರೆ—ಆತಂಕಗಳಿಂದ ಕೂಡಿದ್ದರೂ ಈ ಬಾರಿ ಅದು ನಿರಾತಂಕವಾಯ್ತು.

ಸ್ವಾತಂತ್ರ್ಯಾನಂತರ, ತನ್ನ ತಂದೆಯ ಸೇವೆಯಲ್ಲೇ ನಿರತಳಾಗಿದ್ದು ಅವರಿಂದಲೇ ರಾಜ್ಯಕೀಯ ತರಬೇತಿ ಪಡೆದಿದ್ದ ಆಕೆ ಲಾಲಬಹದ್ದೂರರ ಸಂಪುಟದಲ್ಲಿ ಆಕಾಶವಾಣಿ ಮತ್ತು ಪ್ರಸಾರ ಶಾಖೆಯ ಮಂತ್ರಿಯಾಗಿ ಸಂಪುಟ ಸೇರಿದರು. ಮುಂದೆ ೧೯೬೬ರ ಜನವರಿಯಲ್ಲಿ ಶಾಸ್ತ್ರಿ ನಿಧನರಾದ ಬಳಿಕ ತನ್ನ ಪ್ರಬಲ ಪ್ರತಿಸ್ಪರ್ಧಿ ಶ್ರೀ ಮುರಾರ್ಜಿಭಾಯಿಯನ್ನು ಗೆದ್ದು ಪ್ರಧಾನಿಯಾದರು.

ಆ ಬಾರಿಯೂ ಮುಂದಿನ ವರ್ಷವೂ ಆಕೆಗೆ ಪ್ರಧಾನಿಯಾಗಲು ಪಕ್ಷದ ಅನೇಕಾನೇಕ ಹಿರಿಯ ನಾಯಕರು ಅಪಾರ ನೆರವು ನೀಡಿದ್ದರು. ಆ ನೆರವಿಲ್ಲದಿದ್ದರೆ, ಪ್ರಾಯಃ ಶ್ರೀಮತಿ ಗಾಂಧಿಯ ಪ್ರಭಾವ ಹೆಚ್ಚುತ್ತಿರಲಿಲ್ಲ; ಏಕೆ, ಶ್ರೀಮತಿ ನಿಂಡಿತರಂತೆ ಮೂಲೆಗುಂಪಾಗಿ ಹೋಗುತ್ತಿದ್ದರೋ ಏನೋ!

ಶ್ರೀಮತಿ ಗಾಂಧಿಯವರ ಅರ್ಹತೆಯನ್ನಾಗಲೀ ವ್ಯಕ್ತಿತ್ವವನ್ನಾಗಲೀ ಯಾರೂ ಪ್ರಶ್ನಿಸುವಂತಿಲ್ಲ. ಜತೆಗೆ ಆಕೆಯ ಅದೃಷ್ಟವೇ ಅದೃಷ್ಟ. ಪಕ್ಷದ ಹಿರಿಯ ನಾಯಕರನ್ನೂ ಮೂಲೆಗೆ ತಳ್ಳಿ ಆಕೆ ರಾಷ್ಟ್ರಪತಿ ಆಯ್ಕೆಯ ವೇಳೆ ಆತ್ಮಸಾಕ್ಷಿಯ ಪಾಂಚಜನ್ಯ ಮೊಳಗಿದರು. ದೇಶವೇ ಅಲ್ಲೋಲ ಕಲ್ಲೋಲವಾಯ್ತು.

ಪರಿಣಾಮ, ರುದ್ರ ಭಯಂಕರ ಬಹುಮತ ಪಕ್ಷದ ಅಭ್ಯರ್ಥಿಯ ಸೋಲು, ಕಾಂಗ್ರೆಸ್ ವಿಭಜನೆ. ಎರಡೂ ತುಕುಡಿಗಳೂ ತಮ್ಮನ್ನೇ ಕಾಂಗ್ರೆಸ್ ಎಂದು ಕರೆದುಕೊಳ್ಳುವ ವಿನೋದ.

"ಆತ್ಮಸಾಕ್ಷಿ"ಯ ಹೆಸರಲ್ಲಿ ಹಲವಾರು ಮಂತ್ರ ಮುಗ್ಧರು; ಆಕರ್ಷಿತರು, ಕ್ರಾಂತಿಕಾರಿಣಿಯೆಂದು, ಪ್ರಗತಿ ಶೀಲೆಯೆಂದು ಆಕೆಗೆ ಕೀರ್ತಿ ತಂದರು.

ತನ್ನ ಹೆಸರಿನ ಆಕರ್ಷಣೆಯು ಪ್ರಭಾವಿಯಾಗಿರುವಾಗಲೇ ಆಕೆ ಮಧ್ಯಾವಧಿ ಚುನಾವಣೆ ನಡೆಸಿ ಬಹುಮತಗಳಿಸಲೆಳಸಿದರು. ಇಲ್ಲಿಯೂ ಆಕೆಯ ಅದೃಷ್ಟದ ಬಾಗಿಲು ಅಗಲಕ್ಕೆ ತೆರೆಯಿತು. ೩೫೦ ಸ್ಥಾನಗಳುಳ್ಳ ಲೋಕಸಭೆಯಲ್ಲಿ ಆಕೆ ೩೫೦ ಹೊಂದಿದ್ದಾರೆ.

೧೯೫೭ರಲ್ಲಿ ಪಂ. ನೆಹರು ಮತ್ತು ಮ. ಗಾಂಧಿಯವರ ಪಟ ತೋರಿಸಿ ಮತ ಪಡೆಯ ಬಹುದಿತ್ತು, ೧೯೭೧ರಲ್ಲಿ ಶ್ರೀಮತಿ ಗಾಂಧಿಯ ಪಟ ತೋರಿಸಿಯೇ ಓಟು ಪಡೆಯುವುದು ಸಾಧ್ಯವಾಯ್ತು.

ಇದೂ ಒಂದು ಮೋಡಿ.

ಶ್ರೀಮತಿ ಗಾಂಧಿ ಹುಟ್ಟಿದ್ದು ದೇಶ ಸೇವೆಗೇ ಮೀಸಲಾದ ನೆಹರೂ ಕುಟುಂಬದಲ್ಲಿ ೧೯೧೭ರ ನವಂಬರ ೧೯ರಲ್ಲಿ. ಶಿಕ್ಷಣವೆಲ್ಲವೂ ಅರ್ಧಂಬರ್ಧವೇ. ಪಂ. ನೆಹರೂರವರೇ ಜೇಲಿನಲ್ಲಿರುವಾಗ ಆಕೆಗೆ ಪತ್ರಗಳನ್ನು ಬರೆದು ಸಂಸ್ಕೃತಿ-ಇತಿಹಾಸಗಳ ಪಾಠ ಕಲಿಸಿವರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆಸಕ್ತಿ ತೋರಿಸಿದ್ದ ಶ್ರೀಮತಿ ಗಾಂಧಿ ಎಳೆತನದಿಂದಲೇ ಚಳುವಳಿಗೆ ಬೆಂಬಲ—ಸಹಾಯ ನೀಡುತ್ತಿದ್ದರು.

೧೯೪೨ರಲ್ಲಿ ಫಿರೋಜ್ ಗಾಂಧಿಯನ್ನು ಮದುವೆಯಾದ ಆಕೆ ಸಂಜೀವ ರಾಜೀವರೆಂಬಿಬ್ಬರು ಗಂಡು ಮಕ್ಕಳ ತಾಯಿ ೧೯೬೦ರಲ್ಲಿ ಶ್ರೀ ಗಾಂಧಿ ನಿಧನಗೊಂಡರು.

ತನ್ನ ೩೨ನೇ ವಯಸ್ಸಿನಿಂದಲೇ ಕಾಂಗ್ರೆಸ್ ಸದಸ್ಯೆಯಾಗಿದ್ದ ಆಕೆ ಸಂಸ್ಥೆಯ ಹಲವಾರು ಸ್ಥಾನಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ ಪಕ್ಷದ ಅಧ್ಯಕ್ಷ ಪದವನ್ನೂ ಆಕೆ ಅಲಂಕರಿಸಿದ್ದಾರೆ. ಆದರೆ, ಶಕ್ತಿ—ಪ್ರತಿಷ್ಠೆಯಿಲ್ಲದ ಆ ಪದ ಆಕೆಗೆ ಹಿಡಿಸಲಿಲ್ಲವೆಂದೇ ಅದರಲ್ಲಿ ಮುಂದುವರಿಯಲಿಲ್ಲ.'

ಶ್ರೀಮತಿ ಗಾಂಧಿ ಸ್ವಾತಂತ್ರ್ಯದ ಹೋರಾಟದ ವೇಳೆಯೇ ಜನಿಸಿದವರು, ಹೋರಾಟದಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಭಾಗವಹಿಸಿದವರು. ಸ್ವಾತಂತ್ರ್ಯ ಲಭ್ಯವಾಗುವಷ್ಟರಲ್ಲಿ ಅವರು ಮೂವತ್ತರ ಯುವತಿ. ಸ್ವತಂತ್ರ ದೇಶದ ಯುವ ಜನಾಂಗದ ಮನೀಶಿಯನ್ನೂ, ಸ್ವಾತಂತ್ರ್ಯ ಹೋರಾಟದ ಸಂಕಷ್ಟಗಳ ಅರಿವನ್ನೂ ಮನವರಿಕೆ ಮಾಡಿಕೊಂಡಿರುವ ಆಕೆ ಹೋರಾಟಗಾರ ಮತ್ತು ಯುವಜನಾಂಗಗಳನ್ನು ಬೆಸೆಯುವ ಶಕ್ತಿಯುಳ್ಳವರೆಂಬುದು ನಿರ್ವಿವಾದ. ಆಕೆ ಬೆಳೆದು ಬಂದ ವಾತಾವರಣವೇ ಅಂತಹುದು.

ಶ್ರೀಮತಿ ಗಾಂಧಿಗೆ ಇಂತಹ ಅರ್ಹತೆಯನ್ನು ತಂದುಕೊಟ್ಟದ್ದೂ ಅದೃಷ್ಟವೇ; ಆಕೆ ಪ್ರಧಾನಿಯಾದದ್ದೂ ಅದೃಷ್ಟವೇ. ಹೊತ್ತಿಸಿದ ಆತ್ಮಸಾಕ್ಷಿಯ ಪಂಜಿನಲ್ಲಿ ಪಕ್ಷದ ಹಿರಿಯರು ಪತಂಗಗಳಂತೆ ಸುಟ್ಟುಹೋದದ್ದೂ, ಮುಂದೆ ಸಂಸತ್ತಿನಲ್ಲಿ ಅಲ್ಪಮತೀಯ ಸರಕಾರ ರಚಿಸಿದ್ದೂ, ವಿಶ್ವಾಸ ಪಡೆಯುತ್ತ ಬಂದದ್ದೂ, ಮಾರ್ಚ್ ೧೧ ತನ್ನ ಮೋಡಿಯಲ್ಲಿ ಕದಲದ ಬಹುಮತ ಪಡೆದದ್ದು—ಎಲ್ಲವೂ ಅದೃಷ್ಟವೇ.

ಅರ್ಹತೆ—ಸಾಮರ್ಥ್ಯಗಳಲ್ಲಿ ಶ್ರೀಮತಿ ಗಾಂಧಿಯವರೂ ಮುಂದು. ಅವರಿಂದಲೂ ಮುಂದಾದವರು ಎಷ್ಟೋ ಜನ ಇದ್ದಾರೆ. ಆದರೆ ಶ್ರೀಮತಿಯು ಬಾಳಿಗೆ ದೈವವೂ ಒಲಿದಿದೆ; ಉಳಿದವರ ಬಾಳಿಗದು ಮುನಿದಿದೆ

ಜವಾಹರಲಾಲ ಯುಗ ಮುಕ್ತಾಯಗೊಂಡು ಇಂದಿರಾಯುಗ ಆರಂಭವಾಗಿದೆ. —ಭಾರತೀಯ ರಾಜಕಾರಣಕ್ಕೆ ಹೊಸ ತೊಂದು ತಿರುವು ದೊರೆವಂತಿದೆ.

ಮಹಾಪುರುಷರ ವಾಣಿಗಳು

ನ್ಯಾಯವನ್ನು ತಡೆಮಾಡುವದೆಂದರೆ ಅನ್ಯಾಯವನ್ನು ಸ್ವೀಕಾರ ಮಾಡಿದಂತೆ.

ಬಹಳಷ್ಟು ಮತ್ತು ದೊಡ್ಡ ದೊಡ್ಡ ತಪ್ಪುಗಳನ್ನು ಮಾಡದ ವಿನಾ; ಯಾವ ವ್ಯಕ್ತಿಯೂ ದೊಡ್ಡವನು ಮತ್ತು ಮಹಾನ್ ಪುರುಷರಾಗಿಲ್ಲ.

(ಗ್ಲೈಡ್ ಸ್ಟೋನ್.)

ಆಶೆಯು ಯಾವಾಗಲೂ ಪ್ರಯತ್ನಶೀಲ ಮನುಷ್ಯನ ಹತ್ತಿರವಿರುತ್ತದೆ.

ಪ್ರಸನ್ನತೆಯು ಎಲ್ಲ ಸದ್ಗುಣಗಳ ತಾಯಿ ಇರುತ್ತದೆ.

ಯಾವನ ನಿಶ್ಚಯವು ದೃಢವಾಗಿರುತ್ತದೆಯೋ ಮತ್ತು ಅಚಲವಾಗಿರುತ್ತದೆಯೋ ಅಂಥವನು ಜಗತ್ತನ್ನು ತನ್ನ ಅಂಕಿತದಲ್ಲಿಟ್ಟುಕೊಳ್ಳ ಬಲ್ಲನು.

ಯಾವ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಒಬ್ಬರಿಗೊಬ್ಬರು ಹಾರ್ದಿಕ ಪ್ರೇಮ ಸಮಾನತೆಯ ಭಾವನೆಯನ್ನಿಡುವರೋ ಅಂಥ ಸಮಾಜವು ಎಲ್ಲಕ್ಕಿಂತ ಹೆಚ್ಚು ಸುಖಿಯಾಗಬಲ್ಲದು. (ಗೇಟೆ)

ಪೃಥ್ವಿಯಲ್ಲಿ ಎಲ್ಲಕ್ಕಿಂತ ಆವಶ್ಯಕವೆಂದರೆ ಮನುಷ್ಯ ಎಂದು ನೀವು ಆತ್ಮವಿಶ್ವಾಸವನ್ನಿಡಿರಿ. (ಗೋರ್ಕಿ)

ಕಾಯಿದೆ ಬಡವರ ಮೇಲೆ ಶಾಸನ ಮಾಡುತ್ತದೆ. ಮತ್ತು ಶ್ರೀಮಂತರು ಕಾಯಿದೆಗಳ ಮೇಲೆ ಶಾಸನ ಮಾಡುತ್ತಾರೆ.

ವೈಭವದ ಸಲುವಾಗಿ ಅಹಂಕಾರ ಮತ್ತು ದುಃಖಕ್ಕಿಂತ ಹೆಚ್ಚಿನ ಘಾತಕವಾದ ಬಾಧೆ ಎರಡನೆಯದ್ಯಾವದೂ ಇಲ್ಲ.

(ಗೋಲ್ಡ್ ಸ್ಮಿಥ್)

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 557/1970

ಬಿ. ಯಮ್. ಮುಹ್ಮದ್ —ವಾದಿ

ಮತ್ತು

ಚಿನ್ನಮ್ಮ ಹೆಗ್ಗಡ್ತಿ ಸಹಾ —ಪ್ರತಿವಾದಿ

ಬೆಳ್ತಂಗಡಿ ತಾಲ್ಲೂ ಕರಿಮಣೇಲು ಗ್ರಾಮದಲ್ಲಿರುವ 2ನೇ ಪ್ರತಿವಾದಿ ರಾಜೀವಿಯವರಿಗೆ—

ಮೇಲ್ಕಂಡ ವ್ಯವಹರಣೆಯಲ್ಲಿ ಗೇಣಿ ವಸೂಲಿ ಬಗ್ಗೆ ಅರ್ಜಿದಾರನು ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ನಿಮಗೇನಾದರು ಆಕ್ಷೇಪಣೆ ಇದ್ದ ಪಕ್ಷದಲ್ಲಿ ಅದನ್ನು ಈ 1971ನೇ ಇಸವಿ ಎಪ್ರಿಲ್ 12ನೇ ತಾರೀಕು ಹಗಲು 11 ಗಂಟೆಗೆ ನೀವು ಖುದ್ದಿನಿಂದಾಗಲಿ; ವಕೀಲ ಮುಖಾಂತರ ಹಾಜರಾಗ ತಕ್ಕದ್ದು. ತಪ್ಪಿದರೆ ಸದ್ರಿ ವಿಷಯದಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು.

By order

(Sd) N. J. KADAMBA

Advocate

ಬೆಳ್ತಂಗಡಿ, 19.3.71.

ನವಯುಗ ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

ಮೇ ತಿಂಗಳಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಕುಂದಾಪುರ ಮು. ಕೋರ್ಟಿನಲ್ಲಿ

O. S. 173/70

ವಾದಿರು—ಸುಬ್ಬಕ್ಕ ಶೆಡ್ತಿ ಕೂಡಾ

ಪ್ರತಿವಾದಿರು—ಸೂರಯ್ಯ ಶೆಟ್ಟಿ ಕೂಡಾ

17, 20, 21, 22ನೆ ಪ್ರತಿವಾದಿರಿಗೆ ಯಾ ಮೂಲಕ ತಿಳಿಸುವದೇನೆಂದರೆ.

17ನೆ ಪ್ರ. ಅಂಣಪ್ಪ ಶೆಟ್ಟಿ, 20ನೆ ಪ್ರ. ಲಿಂಗಯ್ಯ ಶೆಟ್ಟಿ, 21ನೆ ಪ್ರ. ಕೃಷ್ಣಪ್ಪ ಶೆಟ್ಟಿ, 22ನೆ ಪ್ರ. ನಾರಾಯಣ ಶೆಟ್ಟಿ.

—ಉಪ್ಪುಂದ ನಾರಾಯಣ ಶೆಟ್ಟಿ ಇವರ ಕೃಷ್ಣಯ ಶೆಟ್ಟಿ ಮಕ್ಕಳು, ಕುಂದಾಪುರ ತಾಲ್ಲೂ ಬೈಂದೂರು ಗ್ರಾಮದ ಕಾರೆಕಟ್ಟೆಯಲ್ಲಿರುವವರು.

ವಾದಿರು ನಿಮ್ಮ ವಗೈರೆರ ಮೇಲೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 3-4-1971ಕ್ಕೆ ತನಿಖೆಗೆ ಇಟ್ಟಿರುವದ್ರಿಂದ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜ್ರು ಆಗಿ ನಿಂಮ ಉವಾಹರಣೆಯಿದ್ದಲ್ಲಿ ಹಾಜ್ರು ಮಾಡತಕ್ಕದ್ದು. ಇದ್ಕೆ ತಪ್ಪಿದಲ್ಲಿ ನಿಂಮ ಗೈರು ಹಾಜರಿಯಲ್ಲಿ ಕೇಳಿ ತೈಸಲು ಮಾಡೋಣಾದೀತೆಂತ ಈ ಮೂಲಕ ತಿಳಿಸೋಣಾಗುತ್ತದೆ.

M. Madhava Rao

Advocate for plff.

ತಾರೀಕು 20-3-71; ಕುಂದಾಪುರ.

ಅಧಿಕಾರ ಮೋಹಿನಿಯ ಮಡಿಲಲ್ಲಿ ಶ್ರೀಸಾಮಾನ್ಯ

ಇಂಡಿಕೇಟು ಪ್ರಚಂಡ ಬಹುಮತದಿಂದ ವಿಜಯ ಗಳಿಸಿದ್ದು ಇಂದ್ರಜಾಲ; ಯಾರೂ ಇಷ್ಟೊಂದು ಯಶಸ್ಸು ನಿರೀಕ್ಷಿಸಲಿಲ್ಲ.

ಉಳಿದವರು ತಮ್ಮ ಸ್ಥಾನ ಮಾನಗಳನ್ನು ಕಳೆದು ಕೊಂಡಿದ್ದಾರೆ. ಅವರಿಗಿದು ನಾಚಿಕೆಯಾದರೂ ಸತ್ಯ.

ಲೋಕಸಭೆಯಲ್ಲಿ ಮೂರರಲ್ಲಿ ಎರಡಂಶ ಬಹುಮತ ಹೊಂದಿರುವ ಆಡಳಿತಪಕ್ಷ ನಿರಾತಂಕವಾಗಿ ತನ್ನ ಇಂದ್ರಜಾಲವನ್ನು ಹರಡಬಹುದು. ಸಂವಿಧಾನ ತಿದ್ದುಪಡಿಗಳನ್ನೂ ಇದು ಬೇರೆಯವರ ಹಂಗಿಲ್ಲದೆ ಲೋಕಸಭೆಯಲ್ಲಿ ಸ್ವೀಕರಿಸಬಹುದು.

ಆದರೆ, ರಾಜ್ಯಸಭೆಯಲ್ಲಿ ಅದರ ಪರಿಸ್ಥಿತಿ ಸುಧಾರಿಸ ಬೇಕಾದರೆ, ಇನ್ನೂ ಒಂದು ವರ್ಷ ಕಳೆಯಬೇಕು. ಮುಂದಿನ ವರ್ಷ ಆಡಳಿತ ಪಕ್ಷ ಅಲ್ಲಿಯೂ ಬಲವಾಗುತ್ತದೆ.

ಪಂಡಿತ ನೆಹರು ನಿಧನರಾದ ವೇಳೆ ಮುಂದಿನ ಪ್ರಧಾನಿಯೇ ಅವರ ಮಗಳು. ಇಂಡಿಯಾ ಅಂದರೆ, "ಪಂಡಿತ್ ನೆಹರು ಪ್ರೈವೇಟ್ ಲಿಮಿಟೆಡ್" ಎಂದು ಹೇಳಿದವರಿದ್ದರು. ಆ ಮಾತು ನಡುವಣ ಒಂದೂವರೆ ವರ್ಷ ಕಾಲ ನಡೆಯಲಿಲ್ಲವಾದರೂ ಮುಂದೆ ಸತ್ಯವಾಯ್ತು.

ಶ್ರೀಮತಿ ಗಾಂಧಿಯವರು ಇದೀಗ ಮೂರನೆಯ ಬಾರಿಗೆ ಪ್ರಧಾನಿ ಪಟ್ಟವೇರಿದರು. ತಮ್ಮ ಸಚಿವ ಸಂಪುಟದ ಮೊದಲ ತಂಡವನ್ನು ಹೆಸರಿಸಿದರು.

ಎಲ್ಲರೂ ನಿರೀಕ್ಷಿಸಿದಂತೆ ಗೃಹ ಶಾಖೆಯನ್ನೂ ಜತೆಗೆ ಪ್ರಸಾರವನ್ನೂ ಪ್ರಧಾನಿಯವರೇ ಇಟ್ಟುಕೊಂಡಿದ್ದಾರೆ. ಇದರಿಂದ ತನಗೆ ಅನುಕೂಲಕರ ವಾತಾವರಣವನ್ನು ನಿರ್ಮಿಸಿಕೊಳ್ಳುವುದು ತನ್ನ ವಿರೋಧಿಗಳನ್ನು ಪರೋಕ್ಷವಾಗಿ ಸದೆಬಡಿಯುವುದು ಆಕೆಗೆ ಸಾಧ್ಯವಾಗುವುದು.

ಯಶವಂತ ರಾವ್ ಬಲವಂತ ರಾವ್ ಚವನರು ಅಧಿಕಾರಕ್ಕಾಗಿ ಭಾರಿ ಬೆಲೆ ತೆತ್ತವರು. ಗೃಹಶಾಖೆಯನ್ನು ಬಿಟ್ಟು ಅರ್ಥಮಂತ್ರಿಯಾದ ಅವರಿಗೆ ಈ ಬಾರಿಯೂ ಅದೇ ಶಾಖೆ ದೊರಕಿದೆ. ಇಂದಿರಾ ಸಮಾಜವಾದದಲ್ಲಿ ವಿಶ್ವಾಸವಿದ್ದು, ಇಂದಿರಾ ಅರ್ಥನೀತಿಯನ್ನು ಕಾರ್ಯಾನುಷ್ಠಾನಗೊಳಿಸುವ ನಿಷ್ಠಾವಂತ ಸಮಾಜವಾದಿಯೆಂದು ಪ್ರಧಾನಿ ಅವರನ್ನು ಹೆಸರಿಸಿ ಈ ಕೆಲಸಕ್ಕೆ ಕೈಹಚ್ಚಿದ್ದಾರೆ. ಈ ಬಾರಿಯ ಬಜೆಟ್ಟು ಇಂದಿರಾ ಸಮಾಜವಾದದ ಮೊದಲ ನೋಟವನ್ನು ತೋರಿಸುತ್ತದೆ.

ಜಗಜ್ಜೀವನ ರಾಮರು ತಮ್ಮ ಸಂರಕ್ಷಣಾ ಮಂತ್ರಿ ಶಾಖೆಯನ್ನೇ ಮತ್ತೊಮ್ಮೆ ಉಳಿಸಿಕೊಂಡಿದ್ದಾರೆ. ಜತೆಗೆ ಅವರು ತಮ್ಮ ಪಕ್ಷದ ಅಧ್ಯಕ್ಷ ಪದವಿ ಬಿಟ್ಟುಕೊಡಬೇಕಾಗಿಲ್ಲವೆಂಬ ಆಶ್ವಾಸನವನ್ನೂ ಪಡೆದಿದ್ದಾರೆ. ಸ್ವಾತಂತ್ರ್ಯಾನಂತರ ಅತ್ಯಂತ ದೀರ್ಘಕಾಲ ಮಂತ್ರಿಯಾಗಿರುವ ಶ್ರೀರಾಮರ ಅನುಭವವನ್ನು ಪಡೆಯದೆ ಹೋದರೆ, ಹರಿಜನರನ್ನು ಎದುರು ಹಾಕಿಕೊಳ್ಳಬೇಕಾಗುವುದೆಂಬುದು ಸತ್ಯ.

ಸದ್ಯವೇ ಪಕ್ಷದ ಚುನಾವಣೆಗಳು ನಡೆಯಲಿದ್ದು ಅಧ್ಯಕ್ಷ ಮಾಲೆಯನ್ನು ಬೇರೆಯವರೊಬ್ಬರಿಗೆ ಹಾಕುವುದು ಈಗಾಗಲೇ ನಿಶ್ಚಿತ. ಆಂಧ್ರದ ಸಂಜೀವಯ್ಯನವರು ಈ ಮಾಲೆಗೆ ಮತ್ತೊಮ್ಮೆ ಕೊರಳೊಡ್ಡಿದ್ದಾರೆ.

ಅಂದು ಬ್ರಹ್ಮಾನಂದ ರೆಡ್ಡಿಯವರು ಮೂಗಿಗೆ ಬೆರಳೇರಿಸಿದ್ದರಿಂದ, ರೆಡ್ಡಿಯವರನ್ನು ಎದುರು ಹಾಕಿಕೊಂಡು, ಆಂಧ್ರವೂ ಕರ್ನಾಟಕದಂತೆ ತನ್ನ ಕೈತಪ್ಪಿ ಹೋಗಬಾರದೆಂದು ಇಂದಿರಾ ಸುಮ್ಮನುಳಿದರು.

ಇದೀಗ ಇಂದಿರಾ ಜಾಲದಲ್ಲಿ ಸಿಕ್ಕಿಕೊಂಡಿರುವವರಲ್ಲಿ ಶ್ರೀ ರೆಡ್ಡಿಯವರೂ ಒಬ್ಬರು ಆದುದರಿಂದ ರೆಡ್ಡಿ ವಿರೋಧ ಇಂದಿರಾರನ್ನು ಏನೂ ಮಾಡುವುದಿಲ್ಲ. ಬದಲಿಗೆ ರೆಡ್ಡಿಯವರನ್ನೇ ಅದು ತೊಳೆದು ಬಿಡುತ್ತದೆ.

ಪಾಂಡಿಚೇರಿಯಿಂದ ಆಯ್ಕೆಯಾದ ಮೋಹನ ಕುಮಾರ ಮಂಗಳಂ ಚುನಾವಣಾ ಕಣಕ್ಕಿಳಿಯುವುದಕ್ಕೆ ಮೊದಲೇ ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರೆಂದು ನೇಮಕಗೊಳ್ಳುವ ಕಿಂವದಂತಿಯಿತ್ತು. ಪಕ್ಷದ ನೀತಿಯ ಆಧಾರದ ಮೇಲಿಂದ ನ್ಯಾಯದಾನ ಮಾಡಲು ಈ ನೇಮಕ ಅನುಕೂಲವಾಗುತಿತ್ತು.

ಆದರೆ, ಒದಗಿದ ವಿರೋಧದಿಂದ ಅದು ದೂರಹೋಯ್ತು.

ಚುನಾವಣಾ ಕಣಕ್ಕೆ ಕುಮಾರ ಮಂಗಳಂ ಇಳಿದಾಗಲೇ ಅವರಿಗೆ ಸಚಿವ ಪಟ್ಟ ಕಾದಿದೆಯೆಂದು ಖಾತ್ರಿಯಿತ್ತು—ಇಂದಿರಾ ಗೆದ್ದರೆ.

ಇಂದಿರಾ ಗೆದ್ದರು; ಅವರಿಗೆ ಭಾರ ಉದ್ದಿಮೆಗಳ ಶಾಖೆ ಕೊಟ್ಟರು ರಾಷ್ಟ್ರೀಕರಣದತ್ತ ಒಲಿದಿರುವ ಇಂಡಿಕೇಟಿಗೆ ಪಕ್ಕಾ ಕಮ್ಯುನಿಸ್ಟ್ ಮನೋವೃತ್ತಿಯ ಮೋಹನ ಕುಮಾರ ಮಂಗಳಂ ಪಕ್ಷದ ಕೈಗಾರಿಕಾ ನೀತಿಯನ್ನು ಅನುಷ್ಠಾನಕ್ಕೆ ತರುವರೆಂಬುದರಲ್ಲಿ ನಂಬಿಕೆ.

ಕರ್ನಾಟಕದ ಕೆಂಗೆಲ್ ಹನುಮಂತಯ್ಯನವರನ್ನೇ ಈ ಬಾರಿ ಪ್ರಧಾನಿ ಕೈಬಿಡಬಹುದಿತ್ತು. ಆದರೆ, ಕೆಂಗೆಲ್ಲರಿಂದ ಪಡೆದು ಕೊಳ್ಳಬಹುದಾದಷ್ಟನ್ನು ಆಕೆಯಿನ್ನೂ ಪಡೆದು ಕೊಳ್ಳಲಿಲ್ಲ. ಅವರನ್ನು ರೇಲ್ವೆ ಮಂತ್ರಿಯೆಂದು ನೇಮಿಸಿಕೊಂಡಿದ್ದಾರೆ ಡಾ| ಸರೋಜಿನಿ ಮಹಿಷಿಯವರನ್ನು ಪ್ರವಾಸ-ಮತ್ತು ನಾಗರಿಕ ವಿಮಾನೋಡ್ಡಾಣ ಉಪಮಂತ್ರಿಯೆಂದು ಹೆಸರಿಸಿದ್ದಾರೆ.

ಬಹುಕಾಲದಿಂದಲೂ ಕೇಂದ್ರ ಸಚಿವರಾಗಿದ್ದ ಬಳ್ಳಾರಿಯ ಡಾ| ವಿ. ಕೆ. ಆರ್. ವಿ. ರಾವ್ ಅವರು ನಿವೃತ್ತರಾಗಿದ್ದಾರೆ. ಹಾಗೆಯೇ ಆಪತ್ಕಾಲದ ಪ್ರಧಾನ ಮಂತ್ರಿಯಾಗಿದ್ದ ಗುಲ್ಜಾರೀಲಾಲ ನಂದಾರನ್ನೂ ಪ್ರಧಾನಿ ಕೈಬಿಟ್ಟಿದ್ದಾರೆ. ಮುರಾರ್ಜಿಯ ಪ್ರಭಾವವನ್ನು ತಗ್ಗಿಸಲೆಂದೇ ನಂದಾರನ್ನು ಹತ್ತಿರ ಎಳೆದುಕೊಂಡ ಇಂದಿರಾ ಅವರಿಂದ ಇನ್ನು ಪ್ರಯೋಜನವಿಲ್ಲವೆಂದುಕೊಂಡಿದ್ದಾರೆ.

ಆಪದ್ಬಾಂಧವನನಿಗೊಂದು ರಾಜ್ಯಪಾಲ ಪದವಿ ಸಾಲದೆ?

ಡಾ| ರಾವ್ ಅವರಿಗೂ ರಾಜ್ಯಪಾಲ ಪದ ದೊರೆಯಬಹುದು. ಇತ್ತೀಚೆಗೆ ಶ್ರೀ ಕೆ. ಸಿ. ರೆಡ್ಡಿಯವರು ನಿವೃತ್ತರಾದುದರಿಂದ ಕರ್ನಾಟಕದ ಮತ್ತೊಬ್ಬನಿಗೆ ನೀಡುವುದು ಅಸಹಜವಲ್ಲ.

ಶ್ರೀಮತಿ ಗಾಂಧಿಯವರು ಸದ್ಯ ಆರಿಸಿಕೊಂಡ ಸಚಿವರಲ್ಲಿ ಹೆಚ್ಚಿನವರು ಹಳಬರೇ. ಕೆಲವೊಂದು ಚಿಕ್ಕಪುಟ್ಟ ಬದಲಾವಣೆಗಳನ್ನು ಬಿಟ್ಟರೆ, ಅವರು ತಮ್ಮ ಹಿಂದಿನ ಶಾಖೆಗಳಲ್ಲೇ ಮುಂದುವರಿದಿದ್ದಾರೆ.

ಸಂಪುಟದಲ್ಲಿ ಇನ್ನೂ ಹಲವಾರು ಸ್ಥಾನಗಳನ್ನು ತುಂಬಿಕೊಳ್ಳ ಬೇಕಾಗಿದ್ದು, ಇವನ್ನು ಪ್ರಕೃತದ ಅಧಿವೇಶನ ಮುಗಿದ ಬಳಿಕ ಭರ್ತಿಮಾಡುತ್ತಾರೆ.

ಈ ಬಾರಿಯ ಲೋಕಸಭಾಸದರಲ್ಲಿ ಬಹಳಷ್ಟು ಹೊಸಬರಾದುದರಿಂದ ಅವರ ಪಕ್ಷನಿಷ್ಠೆ, ಇಂದಿರಾ ಭಕ್ತಿ, ಕಾರ್ಯತತ್ಪರತೆ, ಕ್ರಿಯಾಶಕ್ತಿ ಮೊದಲಾದ ಉತ್ತಮೋತ್ತಮ ಗುಣಗಳನ್ನು ತೂಕ ಮಾಡುವ ಸದವಕಾಶವಾಕೆಗೆ ದೊರೆಯಬೇಕಷ್ಟೆ.

ಇದು ಕೆಲವರಲ್ಲಿ ಅಸಮಾಧಾನ ಮೂಡಿಸಿರಬೇಕು. ಪ್ರಧಾನಿಯ ವಕ್ತಾರರು ಸ್ಪಷ್ಟ ಪಡಿಸಿದರು—ಯಾರೊಬ್ಬನನ್ನಾದರೂ ಮಂತ್ರಿಯಾಗಿ ಸೇರಿಸಿಕೊಳ್ಳಲಿಲ್ಲ ಅಂದರೆ, ಪ್ರಧಾನಿಗೆ ಅವರ ಮೇಲೆ ವಿಶ್ವಾಸವಿಲ್ಲವೆಂದು ಅರ್ಥವಲ್ಲ.

ತಾನು ಹೇಳಿದಂತೆ ಕೇಳುತ್ತ ಬಂದರೆ, ಎಲ್ಲರೂ ವಿಶ್ವಾಸ ಭಾಜನರು. ತಪ್ಪಿದರೆ ಅವರು ಪ್ರತಿಗಾಮಿಗಳು, ವಿಶ್ವಾಸಕ್ಕೆ ಅನರ್ಹರು.

ಸದ್ಯ ಭಾರತದಲ್ಲಿ ಇಂದಿರಾ ಪರ, ಗಾಳಿ ಬೀಸಿದೆ; ಇದು ಕೆಲಕಾಲ ಮುಂದುವರಿಯುತ್ತದೆ. ಕರ್ನಾಟಕದ ಸಿಂಡಿಕೇಟ್ ಸರಕಾರವೂ ಈ ಬಿರುಗಾಳಿಗೆ ಸಿಕ್ಕಿ ತತ್ತರಿಸಿ ಉರುಳಿತೆಂದ ಮೇಲೆ ಅದರ ಬಿರುಸು ಊಹನಾತೀತ.

ದೇಶದಲ್ಲೇ ಪ್ರಗತಿಪರ ನೀತಿಗೆ ಹೆಸರಾದ ವೀರೇಂದ್ರ ಪಾಟೀಲ ಸರಕಾರ ಪಕ್ಷಾಂತರ ಪೀಡೆಗೆ ಗುರಿಯಾಯಿತು.

ಅಧಿಕಾರವೆಲ್ಲಿದೆಯೋ ಅಲ್ಲಿ ಹಾರುವುದು, ಗೆದ್ದ ಎತ್ತಿನ ಬಾಲ ಹಿಡಿಯುವುದು ಪಕ್ಷದ ನೀತಿ—ನಡಾವಳಿಗಳಲ್ಲಿ ಯಾರೊಬ್ಬನಿಗೂ ಹೃತ್ಪೂರ್ವಕ ವಿಶ್ವಾಸವಿಲ್ಲ.

ಇದು ಕಾಲಗತಿ. ಇದಕ್ಕೆ ಈ ಭಯಾನಕ ರೋಗಕ್ಕೆ—ಕಾಲವೇ ಔಷಧಿ ಸೃಷ್ಟಿಸಬೇಕು.

ಹಲವಾರು ಆಶೆ ಹೊತ್ತು ಶ್ರೀಮತಿ ಗಾಂಧಿಯ ಸೆರಗಿನಲ್ಲಿ ಆಶ್ರಯ ಪಡೆದಿದ್ದಾರೆ.

ಹತ್ತು ಸಂಖ್ಯೆಯ ಅಧಿಕಾರಲಾಲಸಿಗಳನ್ನು ತೃಪ್ತಿ ಪಡಿಸಿ ನೂರು ಸಂಖ್ಯೆಯ ಅಧಿಕಾರಾಪೇಕ್ಷಿಗಳ ಬಾಯಿ ಮುಚ್ಚಿಸುವ ತಾಕತ್ತು ಪ್ರಧಾನಿ ಗಾಂಧಿಗಿದೆ. ಮನುಷ್ಯರೊಡನೆ ಗೊಂಬೆಯಾಟವಾಡುವ ಕಲೆಯೂ ಆಕೆಗೆ ಕರಗತವಾಗಿದೆ.

ಅಧಿಕಾರ ಮೋಹಿಗಳಿಗೆ ಬಡಿದ ಮೋಹಿನಿ ಮಾನ್ಯಾಕೆ ಹೊಡೆದೋಡಿಸಬೇಕು. ಪಕ್ಷಾಂತರ ಪಿಡುಗಿಗೆ ಇದೂ ಒಂದು ಮದ್ದು.

ಆದರೆ, ಇಂಡಿಕೇಟಿಗರೂ ಅಧಿಕಾರ ನಿರ್ಲಿಪ್ತರಲ್ಲ; ತಮ್ಮ ಸ್ವಾರ್ಥ ಸಾಧನೆಗಾಗಿಯೇ ಅವರು ಪರ ಪಕ್ಷೀಯರನ್ನು ಕೈಯೆತ್ತಿ ಕರೆದಿದ್ದಾರೆ.

ಈ ನಡುವೆ ಶ್ರೀ ಸಾಮಾನ್ಯನ ಗತಿಯ ಬಗ್ಗೆ ಚಿಂತಿಸಲು ಯಾರಿಗೆ ಬಿಡುವಿದೆ?

ಶ್ರೀಮತಿ ಇಂದಿರಾ ಗಾಳಿ ಇದನ್ನೂ ಹಾರಿಸಿಬಿಟ್ಟಿತೆ?

●●

ಸ್ವರ್ಗದ ಆದರವನ್ನು ಚೆನ್ನಾಗಿ ಮಾಡುವದರ ಸಲುವಾಗಿ ಮನುಷ್ಯನು ೧೦ ಮಿನಿಟುಗಳ ವರೆಗೆ ನರಕದಲ್ಲಿರುವುದು ಒಳ್ಳೆಯದು. [ಚಾರ್ಲೆಟನ್]

ಸಫಲತೆಯನ್ನು ಕಳೆದುಕೊಳ್ಳುವುದರ ನಿಶ್ಚಿತ ರೀತಿ ಎಂದರೆ ಸಮಯವನ್ನು ಕಳೆದುಕೊಳ್ಳುವುದಾಗಿರುತ್ತದೆ. [ಜೇಸಿಲ್ಸ್]

ಎರಡನೆಯವರನ್ನು ನೋಡಿ ನೀವು ಯಾವುದಕ್ಕೆ ಸಂತೋಷಪಡುತ್ತೀರೋ ಅದು ನಿಮ್ಮಲ್ಲಿಯೂ ಇರಲಿ ಮತ್ತು ಅದಾಗಿದ ಎರಡನೆಯವರಿಗೆ ಸಂತೋಷ ಪಡಿಸಿರಿ. [ಚೆಸ್ಟರ್ ಫೀಲ್ಡ್]

ತಿದ್ದುಪಡಿ

ಕಳೆದ ಸಂಚಿಕೆಯ 9ನೇ ಪುಟದ 4ನೇ ಕಾಲಮಿನಲ್ಲಿ ಪ್ರಕಟವಾದ ಎಡ್ವಕೇಟ್ ವಿ. ಜಿ. ಕೆದ್ಲಾಯರ, ಉಡುಪಿ ಸಿವಿಲ್ ಜಡ್ಜರ ಕೋರ್ಟು ನೋಟೀಸಿನಲ್ಲಿ S. C. 21/71 ಎಂದು ತಪ್ಪಾಗಿ ಮುದ್ರಣವಾಗಿದೆ. ಅದು S. C. 21/70 ಎಂದಾಗಬೇಕು. (ಸಂ. ಸ.)

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65-66ರ ಪತ್ರದಂತೆ ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ (ನವಯುಗ ಪ್ರೆಸ್) ಉಡುಪಿ, ದ. ಕ.

ಮಹರ್ಷಿ ಅರವಿಂದರ ಏಕಾಂತವಾಸದ ರಹಸ್ಯ

(ಎರಡನೇ ಪುಟದಿಂದ)

ರಾಷ್ಟ್ರಕ್ಕಾಗಿ ಸದೈವ ತ್ಯಾಗ.

ಒಂದು ದಿನ ಇದ್ದಕ್ಕಿದ್ದಂತೆ 700 ರೂಪಾಯಿ ವೇತನದ ಉದ್ಯೋಗವನ್ನು ತ್ಯಜಿಸಿ ಕೇವಲ 70 ರೂಪಾಯಿಯ ವೇತನದಲ್ಲಿ 'ನೇಷನಲ್ ಕಾಲೇಜಿ'ನ ಸೇವೆಗಾಗಿ ಬರೋಡದಿಂದ ಕಲ್ಕತ್ತೆಗೆ ತೆರಳಿದರು. ಈ ಸನ್ನಿವೇಶದಲ್ಲಿಯೂ ಅವರಲ್ಲಿ ಯಾವತರಹದ ಪರಿವರ್ತನೆಯೂ ಕಂಡು ಬರಲಿಲ್ಲ. ಬಂಗಾಲಕ್ಕೆ ಹೊರಡುವ ಮೊದಲು ಅವರು ಬರೋಡದಲ್ಲಿ ಶಿಕ್ಷಿತ ಯುವಕರ ಮೂಲಕ ಸಶಸ್ತ್ರ ಕ್ರಾಂತಿಯ ಯಾವ ಪ್ರಬಲ ಸಂಘಟನೆಯನ್ನು ಮಾಡಿದ್ದರೋ ಅದು ದಾವಾನಲದಂತೆ ನಗರಗಳಲ್ಲಿ, ಗ್ರಾಮ—ಗ್ರಾಮಾಂತರಗಳಲ್ಲಿ ಹರಡಿ ಹೋಗಿತ್ತು. ನೇಷನಲ್ ಕಾಲೇಜಿನ ಆಚಾರ್ಯ ಪದವಿಗೂ ತ್ಯಾಗ ಪತ್ರ ಕೊಡುವ ಸಂದರ್ಭವೂ ಒಂದು ದಿನ ಬಂದೇ ಬಿಟ್ಟಿತು. ಆ ದಿನ ಅವರು ತನ್ನ ವಿದ್ಯಾರ್ಥಿಗಳ ವಿಶಾಲ ಸಭೆಯನ್ನು ಸಂಬೋಧಿಸಿ ಮಾಡಿದ ಮಹತ್ವಪೂರ್ಣವಾದ ಭಾಷಣದಲ್ಲಿ "ತಾವೆಲ್ಲರೂ ಅಧ್ಯಯನ ಮಾಡಲಿಚ್ಛಿಸುವಿರಾದರೆ ತಾಯಿಗೋಸ್ಕರ ಅಧ್ಯಯನ ಮಾಡಿರಿ. ನಿಮ್ಮ ಶರೀರ-ಮನಸ್ಸು-ಮತ್ತು ಆತ್ಮದ ಸಂಸ್ಕಾರವನ್ನು ತಾಯಿಯ ಸೇವೆಗೋಸ್ಕರ ಪರಿಷ್ಕರಿಸಿರಿ. ಜನನಿಯು ಸದಾ ಪ್ರಸನ್ನಳಾಗುವಂತಹ ಕಾರ್ಯಗಳನ್ನೆಸಗಿರಿ; ಆಕೆಯ ಪ್ರಸನ್ನತೆಗಾಗಿ ನಗು-ನಗುತ್ತಾ ಕಷ್ಟ ಪರಂಪರೆಗಳನ್ನು ಸಹಿಸಿಕೊಳ್ಳಿರಿ. ಇಷ್ಟೇ ನಿಮಗೆ ನನ್ನ ಸಲಹೆ' ಎಂದು ಹೇಳಿದರು.

ವರ್ತಮಾನಕಾಲದ ವಿದ್ಯಾರ್ಥಿ ಸಮೂಹಕ್ಕೆ ಅರವಿಂದ ಘೋಷರ ಈ ದಿವ್ಯ ಸಂದೇಶ ಕೈದೀವಿಗೆಯಂತಿದೆ. ಅರವಿಂದರು ನೇಷನಲ್ ಕಾಲೇಜಿನಿಂದ ಹೊರಟು ಧಗಧಗಿಸುವ ರಾಜಕೀಯ ಕ್ಷೇತ್ರದ ಕರ್ಣಧಾರರಾದಾಗಲೇ ಅವರು ಮೊಟ್ಟಮೊದಲು ಪ್ರಕಾಶಕ್ಕೆ ಬಂದರು. ಅಂದಿನ ರಾಜನೈತಿಕ ಕ್ರಾಂತಿಜ್ವಾಲೆ ಕಾಂಗ್ರೆಸನ್ನು ಸಹ ಆವರಿಸದೆ ಬಿಡಲಿಲ್ಲ. ಬಾರಿಸಾಲ್, ಮಿಡ್ನಾಪುರ (ಮದನಪುರ) ಮತ್ತಿತರ ಕಡೆಗಳಿಂದ ಕ್ರಮಶಃ ಪಸರಿಸುತ್ತಾ ಮುಂದುವರಿದ ಕ್ರಾಂತಿಯ ಮಹಾಜ್ವಾಲೆ ಸೂರತ್‌ಗೆ ತಲ್ಪಿ ರಾಷ್ಟ್ರವಾದಿ ತತ್ವಗಳ ಹೊಡೆತದಿಂದ ಕಾಂಗ್ರೆಸೇ ಕುಂಠಿತವಾಯಿತು. ಸರಕಾರ ರಾಷ್ಟ್ರವಾದಿಗಳನ್ನು ತನ್ನ ಬಲವಾದ ಮನಶ್ಶಕ್ತಿಯಿಂದ ನದೆಬಡಿಯುವುದು ಮತ್ತು ಸರಕಾರದ ಇಂತಹ ದಮನ ಶಕ್ತಿಯನ್ನು ಪ್ರತಿಭಟಿಸುವ ಆಹ್ವಾನವನ್ನು ಅರವಿಂದರು ಸ್ವೀಕರಿಸುವರು ಎಂಬುದಾಗಿ ಜನತೆ ಹೇಳತೊಡಗಿತು.

ಯೋಗ ಸಾಧನೆಯ ಪಥದಲ್ಲಿ

ಈ ಸಂದರ್ಭದಲ್ಲಿ ಬೊಂಬಾಯಿ ಮಧ್ಯ ಭಾರತ ಮತ್ತು ಬರೋಡದಲ್ಲಿ ಅರವಿಂದರ ಭಾಷಣಗಳಾದವು. ಈ ಅವಧಿಯಲ್ಲಿ ಅರವಿಂದರ ಯೋಗಸಾಧನೆ ಪ್ರಾರಂಭವಾಗಿತ್ತು. ಅವರು ಪೂರ್ವಸಿದ್ಧತೆ ಮಾಡಿ ಆಲೋಚಿಸಿ, ಓದಿ ಭಾಷಣಗಳನ್ನು ಮಾಡುತಿದ್ದಿಲ್ಲ. ಅವರ ಭಾಷಣ ಇದ್ದಕ್ಕಿದ್ದಂತೆ ಭಾಗವತ ಜೀತನಾಮಯ ಪ್ರವಾಹದಂತಿತ್ತು. ಮಹಾಯೋಗಿ 'ಲೇಲೇ' ಎಂಬವರೊಡನೆ ಕೇವಲ ಮೂರು ದಿನಗಳಲ್ಲಿಯೇ ಇವರು ನಿರ್ವಿಕಲ್ಪ ಧ್ಯಾನದ ಅಭ್ಯಾಸವನ್ನು ಪೂರ್ಣಗೊಳಿಸಿದ್ದರು. 'ಬೊಂಬೇ ನೇಷನಲ್ ಯೂನಿಯನ್'ನಲ್ಲಿ ಅವರು ಮಾಡಿದ ಭಾಷಣದಲ್ಲಿ ಬುದ್ಧಿಯ ಅತಿರಿಕ್ತ ಯಾವುದೋ ಅನ್ಯಭಾವ ಸ್ರೋತದಿಂದ ಈ ಕೆಳಗೆ ವಿವರಿಸಿದ ವಾಣಿ ಪ್ರಕಟವಾಯಿತು—

"ರಾಷ್ಟ್ರವಾದವೆಂಬುದು ಒಂದು ರಾಜನೈತಿಕ ಕಾರ್ಯಕ್ರಮವಲ್ಲ. ಅದು ಒಂದು ಧರ್ಮ. ಇದು ಆಚರಣೆಗೆ ಯೋಗ್ಯವಾದ ಒಂದು ಸಿದ್ಧಾಂತ. ಇದನ್ನು ಆಚರಿಸಲೇಬೇಕು. ರಾಷ್ಟ್ರವಾದದ ಶಕ್ತಿ ಭಗವಂತನ ಶಕ್ತಿಯಾಗಿರುತ್ತದೆ. ರಾಷ್ಟ್ರವಾದ ಅಮರವಾಗಿರುತ್ತದೆ. ಅದು ಎಂದೆಂದಿಗೂ ಸಾಯಲಾರದು. ಭಗವಂತನು ಕೊಲ್ಲಲ್ಪಡಲಾರನು. ಅವನನ್ನು ಬಂದಿಯನ್ನಾಗಿರಿಸಲು ಸಾಧ್ಯವಿಲ್ಲ; ಅದರಂತೆ ಅವನ ಶಕ್ತಿ ಎಂದಿಗೂ ನಾಶಮಾಡಲ್ಪಡಲಾರದು." ಈ ಭಾಷಣದ ಕೆಲವೇ ವರ್ಷದೊಳಗೆ ಅರವಿಂದರಿಗೆ ಯೋಗಸಾಧನೆಯ ಪರಿಪೂರ್ಣತೆಗಾಗಿ ಏಕಾಂತವಾಸಕ್ಕೆ ತೆರಳಬೇಕಾಯಿತು. ಭಾವೀ ಆಧ್ಯಾತ್ಮಿಕ ಸಮಾಜದ ನೇತೃತ್ವವನ್ನು ವಹಿಸಿಕೊಳ್ಳುವುದಕ್ಕಾಗಿ ಅರವಿಂದರಿಗೆ ಉಪರೋಕ್ತ ಏಕಾಂತವು ಅತಿ ಅಗತ್ಯವಾಗಿತ್ತು. ಭರತ ಖಂಡದ ಜಗದ್ಗುರುತ್ವದ ಗರಿಮೆಯನ್ನು ವಿಕಸಿತಗೊಳಿಸುವುದಕ್ಕಾಗಿ ಅದರ ಶಾಶ್ವತವಾದ ಸತ್ಯವನ್ನು ಅಂಧಕಾರದಿಂದ ಬಿಡಿಸಿ ಪ್ರಕಾಶಕ್ಕೆ ತರಲಿಕ್ಕಾಗಿ ಈ ಏಕಾಂತವಾಸವು ಪರಮಾವಶ್ಯಕವಾಗಿತ್ತು.

ನಾವು ಗತಕಾಲದ ಇತಿಹಾಸದ ಕಡೆಗೆ ದೃಷ್ಟಿ ಪಸರಿಸಿದರೆ ಅತ್ಯಂತ ಗ್ಲಾನಿಮಯವಾದ ಒಂದು ಯುಗವು ಹೊಳೆಯುತ್ತದೆ. ಸಮಗ್ರ ಭಾರತೀಯ ಸಮಾಜ ಕೇವಲ ನಕಾರಾತ್ಮಕ ಸಿದ್ಧಾಂತಗಳ ಹೊರೆಯಾಗಿ ಬಿದ್ದುಕೊಂಡಿತ್ತು. ಒಂದೆಡೆಯಿಂದ ಬೆರಳೆತ್ತಿ ತೋರಿಸಿ ಭಾರತವನ್ನು ಬೈಯುವವರಿದ್ದರು; ಮತ್ತೊಂದು ಗುಂಪು ಇವುಗಳನ್ನೇ ಭಾರತೀಯ ಸಂಸ್ಕೃತಿ ಎಂದು ಭಾವಿಸಿಕೊಂಡು ಇದಕ್ಕೇ ಅಂಟಿಕೊಂಡು ಕೂಪಮಂಡೂಕದಂತೆ ಇತ್ತು. ಈ ಎರಡು ಗುಂಪುಗಳ ನಿರರ್ಥಕ ವಿಚಾರಧಾರೆಯ ನಿರಾಕರಣೆ ಬಹಳ ಅಗತ್ಯವಿತ್ತು. ಭಾರತೀಯ ಸಂಸ್ಕೃತಿಯ ಶಾಶ್ವತ ಮೌಲ್ಯವನ್ನು ನವೀನ ಯುಗದ ಬಾಹ್ಯ ಪರಿವರ್ತನೆಗಳೊಂದಿಗೆ ಸಮನ್ವಯಗೊಳಿಸಿ ಸ್ಥಿರಪಡಿಸಿಕೊಳ್ಳಲಿಕ್ಕೆ ಒಂದು ಪ್ರಯೋಗಾಲಯ ಆವಶ್ಯಕತೆ ಇತ್ತು. ಸಂಸ್ಕೃತಿಯನ್ನು ಪ್ರತ್ಯಕ್ಷ ಜೀವನದ ಮಾಧ್ಯಮದಿಂದ ಮೂರ್ತಿಮಾನ್‌ಗೊಳಿಸದಿದ್ದರೆ ಅದರಿಂದೇನು ಪ್ರಯೋಜನ? ಆದುದರಿಂದ ಅರವಿಂದರು ಒಂದುಕಡೆ ವೇದ, ಉಪನಿಷತ್, ಗೀತೆ ಮತ್ತು ಪೌರಾಣಿಕ ಆಖ್ಯಾಯಿಕೆಗಳನ್ನು ಅವುಗಳ ಮೌಲಿಕ ಸಂದರ್ಭದಲ್ಲಿ ಪ್ರಸ್ತುತಗೊಳಿಸಿದರು; ಮತ್ತೊಂದೆಡೆಯಿಂದ ಅವರು ಭಾರತೀಯ ಸಂಸ್ಕೃತಿಯ ನವವಿಕಾಸದ ರೂಪದಲ್ಲಿ ಮಾನವತ್ವದ ಅತಿಕ್ರಮಣ ಮತ್ತು ಅತಿಮಾನವತ್ವ (ಮಹಾ ಮಾನವತೆ) ವನ್ನು ಧರಿತ್ರಿಯಲ್ಲಿ ಪ್ರತಿಷ್ಠಿಸುವುದರೊಂದಿಗೆ ಇಲ್ಲಿ ದಿವ್ಯ ಜೀವನದ ಅವತರಣದ ಸೂಚನೆಯನ್ನಿತ್ತರು. ಇದು ಅತ್ಯಂತ ಆವಶ್ಯಕ ಎಂಬುದನ್ನವರು ಒಂದು ಶಿಶು ಕ್ರಮಶಃ ಯುವಾವಸ್ಥೆಯನ್ನೈದುವಂತೆ ತೋರಿಸಿಕೊಟ್ಟರು. ಭಾರತದ ಉನ್ನತಿಯ ರಹಸ್ಯ, ಅದರ ವೈಭವ, ಶಕ್ತಿ ಮತ್ತು ಅಹಂಕಾರದ ಪ್ರದರ್ಶನಕ್ಕೋಸ್ಕರವಲ್ಲ! ವಿಶ್ವಕ್ಕೆ ಜ್ಯೋತಿರ್ದಾನ ಮಾಡುವುದಕ್ಕೋಸ್ಕರ ಒಂದು ನವೀನ ಆಧ್ಯಾತ್ಮಿಕ ಜಾತಿಯ ನಿರ್ಮಾಣದ ಮಾಧ್ಯಮದಿಂದ ಸಮಾಜ ರಚನೆಯ ನವೀನ ಆದರ್ಶವನ್ನು ಪ್ರಸ್ತುತಗೊಳಿಸಲಿಕ್ಕಾಗಿ ತನ್ನ ಪ್ರಭಾವ ಪರಿಧಿಗಳನ್ನು ವಿಸ್ತಾರಗೊಳಿಸಬೇಕು. ಶ್ರೀ ಅರವಿಂದರು ಇದೇ ತತ್ವಕ್ಕೆ ಆತ್ಮಿಕ ಶಕ್ತಿ ಕೊಡಲಿಕ್ಕೆ ಬೇಕಾಗಿ ರಾಜಕೀಯವನ್ನು ಪರಿತ್ಯಜಿಸಿ ಅದಕ್ಕಿಂತಲೂ ಪ್ರಬಲ ಮತ್ತು ಸರ್ವಶ್ರೇಷ್ಠವಾದ ಯೋಗ ಶಕ್ತಿಯ ಸಂಗ್ರಹದ ಮಾರ್ಗವನ್ನು ಅವಲಂಬಿಸಿದರು.

ರಾಷ್ಟ್ರದ ಹೆಸರಲ್ಲಿ ಅಂತಿಮ ಕೊಡುಗೆ

ಶ್ರೀ ಅರವಿಂದರು ಏಕಾಂತದಲ್ಲಿದ್ದುಕೊಂಡೇ ತನ್ನ ನಿರ್ದೇಶನವನ್ನು ರಾಜನೀತಿಗೆ ಸಹಕೊಡುತ್ತಾ ಇದ್ದರು. ಪಾಶ್ಚಾತ್ಯ ಪದ್ಧತಿಯ ರಾಜನೀತಿ ಭಾರತ ದೇಶಕ್ಕೆ ಸರ್ವಥಾ ಅನುಚಿತವೆಂಬುದನ್ನು ಅವರು ಜನತೆಗೆ ಪದೇ ಪದೇ ಮುಂದಿಟ್ಟು ಪಠಿಸುತ್ತಾ ಇದ್ದರು. ಭಾರತದ ಅಂತರಾತ್ಮನ ಆಧಾರಿತ ನೀತಿಯನ್ನೇ ನಾವು ಅವಲಂಭಿಸ ಬೇಕೆಂದು ಉಪದೇಶಿಸಿದರು. ರಾಷ್ಟ್ರ ವಿಭಜನೆಯಿಂದ ನೊಂದು ದುಃಖಿಸುತ್ತಿದ್ದ ಭಾರತವಾಸಿಗಳಿಗೆ ಶ್ರೀ ಅರವಿಂದ ಮಹರ್ಷಿ ಸಾಂತ್ವನ ನೀಡುತ್ತಾ ಅಗೋಸ್ತು ೧೫ರ ದಿನಾಚರಣೆಯ ಕುರಿತು ಕೊಟ್ಟಿರುವ ತನ್ನ ಸಂದೇಶದಲ್ಲಿ "೧೫ನೆಯ ಅಗೋಸ್ತು ನನ್ನ ಜನ್ಮ ದಿನವಾಗಿರುತ್ತದೆ; ಈ ದಿನವು ಇಷ್ಟೊಂದು ವಿಶಾಲವಾದ ಅರ್ಥ ಗ್ರಹಣ ಮಾಡಿರುವುದು ನನಗೆ ಸ್ವಾಭಾವಿಕವಾಗಿ ಪ್ರಸನ್ನತೆಯನ್ನುಂಟು ಮಾಡುತ್ತದೆ. ಈ ದಿನವು ಒಂದು ಸಂಯೋಗವೆಂದು ನಾನು ತಿಳಿಯುವುದಿಲ್ಲ; ನನ್ನ ಕರ್ತವ್ಯ ಕರ್ಮದ ಕಡೆಗೆ ಅಗ್ರೇಸರನಾಗಲಿಕ್ಕೆ, ಜನಿಸುವಾಗಲೇ ನನ್ನ ಅಂತರಾತ್ಮನಲ್ಲಿ ದಿವ್ಯ ಶಕ್ತಿಯೊಂದನ್ನು ಕೇಂದ್ರೀಕೃತಗೊಳಿಸಿದ ದಿನವೇ ಅದು ಎಂದು ನನ್ನ ಭಾವನೆ. ಭರತಖಂಡ ಇಂದಿಗೆ ಸ್ವತಂತ್ರವಾಗಿದೆ; ಆದರೆ ಅಖಂಡವಾಗಿ ಉಳಿಯಲಿಲ್ಲ. ಯಾವ ರೀತಿಯಿಂದಲಾದರೂ ಅಥವಾ ಯಾವುದೇ ವಿಧಾನವನ್ನು ಅನುಸರಿಸಿಯಾದರೂ ಈ ವಿಭಜನೆಯು ಪರಿಸಮಾಪ್ತಿ ಹೊಂದಬೇಕು ಭಾರತ ದೇಶದ ಭವಿಷ್ಯದ ಮಹತ್ವಕ್ಕೋಸ್ಕರ ಅಖಂಡತ್ವವನ್ನು ಅತ್ಯವಶ್ಯವಾಗಿ ದೊರಕಿಸಿಕೊಳ್ಳಲೇಬೇಕಾಗುವುದು. ವಿಶ್ವಕ್ಕೆ ಭರತ ಖಂಡದ ಆನುದಾನ ಪ್ರಾರಂಭವಾಗಿ ಬಿಟ್ಟಿದೆ. ಈ ಆಂದೋಲನ ಉತ್ತರೋತ್ತರ ಅಭಿವೃದ್ಧಿಯಾಗುವುದು ಕಾಲದ ಭಯಾನಕತೆಯೊಂದಿಗೆ ಅಧಿಕಾಧಿಕ ಕಣ್ಣುಗಳು ಭಾರತದ ಕಡೆಗೆ ಆಶೆಯಿಂದ ತಿರುಗುವವು. ಅದರ ದಿಕ್ಕಿನಲ್ಲಿ ಮಾತ್ರವಲ್ಲ, ಚೈತ್ಯ ಮತ್ತು ಆಧ್ಯಾತ್ಮಿಕ ಸಾಧನೆಯಲ್ಲಿಯೂ ಪ್ರಗತಿಯಾಗುವುದು" ಎಂದು ಪ್ರಕಟಿಸಿರುವರು. ತನ್ನ ದೇಶ ಬಾಂಧವರಿಗೆ ಇದೇ ಅವರ ಅಂತಿಮ ಕೊಡುಗೆಯಾಗಿತ್ತು.

"ಪಾಂಡಿಚೇರಿ ಅರವಿಂದಾಶ್ರಮದ "ಶ್ರೀ ದೇವದತ್ತ" ಇವರ ಒಂದು ಗ್ರಂಥಾಧಾರದಿಂದ"

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

READ &
ADVERTISE IN
NAVAYUGA WEEKLY

NAVAYUGA 25-3-1971

Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಚತುರ್ಥ ಯೋಜನೆಯಲ್ಲಿ

ಕುಟುಂಬಯೋಜನಾ ಕಾರ್ಯಕ್ರಮ

ನಮ್ಮ ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬಯೋಜನೆಗೆ ಆದ್ಯತೆಯನ್ನು ನೀಡಲಾಗಿದೆ. ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಕೈಗೊಂಡಿರುವ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿರುವುದರ ಪರಿಣಾಮವಾಗಿ ಲಭ್ಯವಾಗಿರುವ ಹಾಗು ಲಭ್ಯವಾಗಬಹುದಾದ ಎಲ್ಲ ಸೌಲಭ್ಯಗಳನ್ನು ಅಲ್ಪಾವಧಿಯಲ್ಲಿ ಎಲ್ಲ ಜನತೆಗೆ ದೊರಕಿಸಿಕೊಡುವುದು ಅತಿ ಮುಖ್ಯ. ಈ ದಿಸೆಯಲ್ಲಿ ಕುಟುಂಬಯೋಜನೆ ತನ್ನದೇ ಆದ ಮಹತ್ವವನ್ನು ಪಡೆದಿದೆ. ದೇಶದಲ್ಲಿ ಈಗ ಜನನ ಪ್ರಮಾಣ ಪ್ರತಿ ಸಾವಿರಕ್ಕೆ 39 ರಷ್ಟಿದೆ. ಇದನ್ನು ಮುಂದಿನ 10—12 ವರ್ಷಗಳಲ್ಲಿ 25ಕ್ಕೆ ಇಳಿಸುವುದು ಪ್ರಸ್ತುತ ಕುಟುಂಬ ಯೋಜನೆಯ ಗುರಿಗಳಲ್ಲಿ ಒಂದು. ಈ ಕಾರಣದಿಂದಾಗಿ ದೇಶವ್ಯಂತ ಸಾಮೂಹಿಕ ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ಕೈಗೊಂಡಿದೆಯಲ್ಲದೆ, ಅದನ್ನು ಕೆಲವು ಕಡೆ ತೀವ್ರಗೊಳಿಸಲಾಗುತ್ತಿದೆ. ನಾಲ್ಕನೇ ಮತ್ತು ಐದನೇ ಯೋಜನೆಗಳಲ್ಲಿ ಕುಟುಂಬ ಯೋಜನೆಗೆ ತಗಲುವ ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರದವರೆ ಭರಿಸುವರು. ಈ ಕುಟುಂಬ ಯೋಜನೆಯ ವಿವಿಧ ಕಾರ್ಯಕ್ರಮಗಳಿಗಾಗಿ ಪ್ರಸಕ್ತ ಯೋಜನೆಯಲ್ಲಿ 315 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಈ ಒಟ್ಟು ಹಣದಲ್ಲಿ 269 ಕೋಟಿ ರೂ.ಗಳನ್ನು ನಗರ ಮತ್ತು ಗ್ರಾಮಾಂತರ ಜನತೆಗೆ ಯೋಜನೆಯನ್ನು ಅನುಸರಿಸಲು ಅಗತ್ಯವಾದ ಸಾಧನ ಸೌಲಭ್ಯಗಳನ್ನು ಪೂರೈಸಲು ಹಣಕಾಸಿನ ನೆರವು ನೀಡಲು ವೆಚ್ಚ ಮಾಡಲಾಗುವುದು. ಉಳಿದ 46 ಕೋಟಿ ರೂ.ಗಳನ್ನು ಕುಟುಂಬ ಯೋಜನೆ ತರಬೇತಿ, ಸಂಶೋಧನೆ, ಕುಟುಂಬ ಯೋಜನೆಯನ್ನು ಅನುಸರಿಸಲು ಉತ್ತೇಜನ ನೀಡುವುದು ಇತ್ಯಾದಿಗಳಿಗಾಗಿ ವೆಚ್ಚ ಮಾಡಲಾಗುವುದು. ಇಷ್ಟೇ ಅಲ್ಲದೆ ವಿವಿಧ ಅಂತರಾಷ್ಟ್ರೀಯ ಸಂಸ್ಥೆಗಳು ಮತ್ತು ವಿದೇಶಿ ಸರ್ಕಾರಗಳೂ ಈ ಯೋಜನೆಗೆ ಆರ್ಥಿಕ ನೆರವು ನೀಡಲು ಮುಂದೆ ಬಂದಿವೆ. ಈಗಾಗಲೇ ಅಮೇರಿಕಾ 14 ಕೋಟಿ ರೂ.ಗಳ ಧನಸಹಾಯ ನೀಡಿದೆ. ಸ್ವಾಡೆ ಸರ್ಕಾರ ಮತ್ತು ವಿಶ್ವಸಂಸ್ಥೆಯ ಮಕ್ಕಳ ಶಿಕ್ಷಣ ನಿಧಿಯವರೂ ನೆರವು ನೀಡಲು ಒಪ್ಪಿದ್ದಾರೆ. ಕುಟುಂಬಯೋಜನೆಯ ಕಾರ್ಯಕ್ರಮಗಳು ಹೆಚ್ಚು ಫಲಪ್ರದವಾಗುವಂತೆ ಮಾಡುವ ಸಲುವಾಗಿ ಕೆಲವು ವಿಧಾನಗಳನ್ನು ಬಳಸಲಾಗುತ್ತಿದೆ:- ಜಿಲ್ಲಾ ಮಟ್ಟದಲ್ಲಿ ಕುಟುಂಬಯೋಜನೆಯನ್ನು ತೀವ್ರಗೊಳಿಸುವುದು, ಹೆರಿಗೆ ನಂತರದ ಕಾರ್ಯಕ್ರಮ ಹಾಗು ಜನಸಂಖ್ಯಾ ಶಿಕ್ಷಣ ಇವು ಈ ಹೊಸ ವಿಧಾನಗಳು.

ನಮ್ಮ ದೇಶದಲ್ಲಿ 335 ಜಿಲ್ಲೆಗಳಿವೆ. ಈ 335 ಜಿಲ್ಲೆಗಳಲ್ಲಿ ಕೇವಲ 55 ಜಿಲ್ಲೆಗಳಲ್ಲಿ ದೇಶದ ಒಟ್ಟು ಜನಸಂಖ್ಯೆಯ ಮೂರರಲ್ಲಿ ಒಂದು ಭಾಗದಷ್ಟು ಜನಸಂಖ್ಯೆ ತುಂಬಿದೆ. ಆದ್ದರಿಂದ ಜನಸಂಖ್ಯೆಯನ್ನು ತಡೆಯಲು ಜಿಲ್ಲಾ ಮಟ್ಟದಲ್ಲಿ ತೀವ್ರ ಕುಟುಂಬ ಯೋಜನೆಯ ಕ್ರಮವನ್ನು ಕೈಗೊಳ್ಳಲಾಗಿದೆ. ಈ ಉದ್ದೇಶಕ್ಕಾಗಿ 17 ಜಿಲ್ಲೆಗಳನ್ನು ಈಗಾಗಲೇ ಆರಿಸಿಕೊಳ್ಳಲಾಗಿದೆ ಹೆರಿಗೆಗಾಗಿ ಬರುವ ಸ್ತ್ರೀಯರಲ್ಲಿ ಅರ್ಹರಾದವರಿಗೆ ಹೆರಿಗೆ ನಂತರ ಕುಟುಂಬ ಯೋಜನೆಯನ್ನು ಅನುಸರಿಸುವುದರಿಂದಾಗುವ ಅನುಕೂಲಗಳ ಬಗ್ಗೆ ಶಿಕ್ಷಣ ನೀಡುವುದು ಹಾಗು ಕುಟುಂಬ ಯೋಜನೆ ಅನುಸರಿಸಲು ಇರುವ ವಿವಿಧ ಸಾಧನಗಳ ಪರಿಚಯ ಮಾಡಿಕೊಡುವುದು, ಹೆರಿಗೆ ನಂತರದ ಕಾರ್ಯಕ್ರಮಗಳಲ್ಲಿ ಮುಖ್ಯವಾದವು. ವೆಸಕ್ಟಮಿ ಮತ್ತು ಟುಬೆಕ್ಟಮಿ ಚಿಕಿತ್ಸೆಗಳನ್ನು ಮಾಡುವ ಹಾಗು ವಂಕಿಗಳನ್ನು ತೊಡಿಸುವ ಆಸ್ಪತ್ರೆಗಳಿಗೆ ಅಗತ್ಯವಾದ ಉಪಕರಣಗಳನ್ನು ಪೂರೈಸಲಾಗುತ್ತಿದೆ. ಕುಟುಂಬ ಯೋಜನೆಯ ಯಶಸ್ವಿಯ ಸಲುವಾಗಿಯೇ, ಮಕ್ಕಳಿಗೆ ಪೋಷ್ಟಿಕ ಆಹಾರ ಒದಗಿಸುವ ಹೊಸ ಯೋಜನೆಯನ್ನು ಕೈಗೊಳ್ಳಲಾಗಿದೆ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಾಹನಗಳನ್ನು ಒದಗಿಸಲಾಗಿದೆ. ಇದೇ ಅಲ್ಲದೆ ಆರೋಗ್ಯ ಕಾರ್ಯಕ್ರಮಗಳಲ್ಲಿ ಒಟ್ಟು 2000 ಹೆಚ್ಚಿನ ವಾಹನಗಳನ್ನು ವಿವಿಧ ಆರೋಗ್ಯ ಕೇಂದ್ರಗಳಿಗೆ ಕುಟುಂಬ ಯೋಜನೆ ಉದ್ದೇಶಗಳಿಗಾಗಿ ನೀಡಲಾಗಿದೆ. ವೈದ್ಯಕೀಯ ಶಿಕ್ಷಣದಲ್ಲಿ ಕುಟುಂಬ ಯೋಜನೆ ಕುರಿತ ವಿಷಯವನ್ನು ಸೇರಿಸಲಾಗಿದೆ. ವೈದ್ಯಕೀಯ, ವಿದ್ಯಾರ್ಥಿಗಳಿಗೆ ಈ ಯೋಜನೆ ಕುರಿತ ತರಬೇತಿ ನೀಡಲು, ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಕುಟುಂಬಯೋಜನೆ ಕುರಿತ ಸಾಮಾನ್ಯ ಶಿಕ್ಷಣ ನೀಡಲು ಉದ್ದೇಶಿಸಲಾಗಿದೆ.

ಚತುರ್ಥ ಯೋಜನೆಯಲ್ಲಿ ಅನೇಕ ಸಾಮಾಜಿಕ ಹಾಗು ಆರ್ಥಿಕ ಬದಲಾವಣೆಗಳನ್ನು ತರಲು ಉದ್ದೇಶಿಸಲಾಗಿದೆ. ವಿವಾಹದ ವಯೋಮಿತಿಯನ್ನು ಹೆಚ್ಚಿಸುವುದು, ಗರ್ಭಪಾತ ಕುರಿತ ಕಾನೂನನ್ನು ಸಡಿಲಗೊಳಿಸುವುದು ಇವೇ ಮುಂತಾದವು ಸರ್ಕಾರ ಗಮನದಲ್ಲಿಟ್ಟಿರುವ ಕೆಲವು ಸಲಹೆಗಳು.

ಆರೋಗ್ಯ ಮತ್ತು ಕುಟುಂಬ ಯೋಜನಾ ಇಲಾಖೆಗಳೇ ಅಲ್ಲದೆ ದೇಶದ ಸಮಾಜ ಕಲ್ಯಾಣ ಮತ್ತು ಬೇಸಾಯ ಅಭಿವೃದ್ಧಿಯಲ್ಲಿ ತೊಡಗಿರುವ ಎಲ್ಲ ಇಲಾಖೆಗಳೂ ಕುಟುಂಬ ಯೋಜನೆಯ ಯಶಸ್ವಿಗಾಗಿ ಶ್ರಮಿಸುತ್ತಿವೆ.

ಪ್ರಾಚೀನ ಕಾಲದ ಎಲುಬುಗಳ ಪ್ರಾಯ ನಿರ್ಣಯ ವಿಧಾನ

'ಕಾರ್ಬನ್-14 ಕೆಲೆಂಡರ್'

ಶ್ರೀ ಎಚ್. ಎಂ. ನಾರಾಯಣ ಭಟ್.

35,000 ವರ್ಷಗಳ ಹಿಂದಿನ ಮನುಷ್ಯನ ಎಲುಬುಗಳು ಪತ್ತೆಹಚ್ಚಲ್ಪಟ್ಟಿವೆ "....20,000 ವರ್ಷಗಳ ಹಿಂದಿನ ಒಂದು ಶಿಲ್ಪಕಲಾಕೃತಿ ಕಾಣಬಂದಿದೆ...." ಇತ್ಯಾದಿ ವಾರ್ತೆಗಳು ಪತ್ರಿಕೆಗಳಲ್ಲಿ ಪ್ರಕಟವಾದುದನ್ನು ನಾವು ನೋಡಿದ್ದೇವೆ.

ಕೆಲವು ವರ್ಷಗಳ ಹಿಂದಿನ ವರೆಗೂ ಹಾಗೆ ಒಂದು ವಸ್ತು—ಪುರಾಣ ವಸ್ತು ಸಿಕ್ಕಿದ್ದರೆ ಅದು ಎಷ್ಟು ವರ್ಷ ಹಿಂದಿನದ್ದೆಂದು ನಿರ್ಧರಿಸಲು ಕಷ್ಟವಾಗಿತ್ತು.

ಆದರೆ, ಈಗ ಆ ಸಮಸ್ಯೆ ನಿವಾರಿಸಲ್ಪಟ್ಟಿದೆ.

ಡಾ| ಲಿಬಿ ಎಂಬ ಶಾಸ್ತ್ರಜ್ಞನು ಇದಕ್ಕೊಂದು ಉಪಾಯವನ್ನು ಕಂಡುಹಿಡಿದನು.

ಈ ಸಂಶೋಧನೆ ಬಗ್ಗೆ ಡಾ| ಲಿಬಿಗೆ ನೋಬೆಲ್ ಪಾರಿತೋಷಕ ನೀಡಲಾಗಿತ್ತು.

ರೇಡಿಯೊ—ಕಾರ್ಬನ್ ಡೇಟಿಂಗ್

ಈ ವಿಧಾನಕ್ಕೆ "ರೇಡಿಯೋ—ಕಾರ್ಬನ್ ಡೇಟಿಂಗ್" ಅಥವಾ "ಕಾರ್ಬನ್—14 ಕೆಲೆಂಡರ್" ಎಂದು ಹೆಸರು.

ಕಾರ್ಬನ್–14 ಎಂದರೆ ಕಾರ್ಬನಿನ ಐಸೋಟೋಪ್. ಶೂನ್ಯಾಕಾಶದಿಂದ ಬರುವ ಕೋಸ್ಮಿಕ್ ರಶ್ಮಿಗಳು ಭೂಮಿಯ ಅತಿ ಮೇಲಿರುವ ವಾಯುವಿನೊಂದಿಗೆ ಒರಸುತ್ತದೆ. ಇದರಿಂದಾಗಿ ಅತಿ ವೇಗದಲ್ಲಿ ಸಾಗುವ ನ್ಯೂಟ್ರೋನ್‌ಗಳನ್ನುಂಟು ಮಾಡುತ್ತದೆ. ಇವು ಅಂತರಿಕ್ಷದ ನೈಟ್ರೋಜನ್ ಅಣುಗಳೊಂದಿಗೆ ತಿಕ್ಕಾಟ—ಘರ್ಷಣೆಗಳ ಪರಿಣಾಮವಾಗಿ ಕಾರ್ಬನ್–14 ಉಂಟಾಗುತ್ತದೆ. ಇದು ಅಂತರಿಕ್ಷದಲ್ಲಿ ಪಸರಿಸುತ್ತದೆ. ಅಂತರಿಕ್ಷದಲ್ಲಿನ ಕಾರ್ಬನ್—ಡೈಓಕ್ಸೈಡ್ ಆಕಿರಣ ಮಾಡುವಾಗ ಕಾರ್ಬನ್—14 ಎಂಬ ಐಸೋಟೋಪ್ ಒಳಪ್ರವೇಶಿಸುತ್ತದೆ. ಕಾರ್ಬನ್—ಡೈ—ಆಕ್ಸೈಡ್ ಸಸ್ಯಗಳ ಬೆಳವಣಿಗೆಗೆ ಅನಿವಾರ್ಯ. ಮೃಗಗಳು, ಸಸ್ಯಗಳನ್ನು ತಿನ್ನುವಾಗ ಇದು ಅವುಗಳ ಶರೀರದಲ್ಲಿ ಎಲುಬುಗಳಿಗೆ ಕೂಡಾ ವ್ಯಾಪಿಸುತ್ತದೆ.

ಮೃಗಗಳು ಸತ್ತು ಹೋಗುವಾಗ ಕಾರ್ಬನ್—14ರ ಶರೀರದೊಳಕ್ಕಿರುವ ಆಕಿರಣ ನಿಲ್ಲುತ್ತದೆ. ಹಾಗೆ ಶರೀರದಲ್ಲಿ ಉಂಟಾದ ಕಾರ್ಬನ್—14 ಕರಗಲು ಪ್ರಾರಂಭವಾಗುತ್ತದೆ. ಮೊದಲ 5730 ವರ್ಷಗಳಾದಾಗ ಶರೀರದೊಳಗಿನ ಕಾರ್ಬನ್ 14ರ ಅರ್ಧಾಂಶ ಕರಗಿರುತ್ತದೆ. ಆ ಬಳಿಕದ 5730 ವರ್ಷಗಳಲ್ಲಿ ಉಳಿದ ಕಾರ್ಬನ್—14ರ ಕಾಲಂಶ ಕರಗುತ್ತದೆ. ಹೀಗೆ ಕಾರ್ಬನ್—14ರ ಅಂಶ ಕಡಿಮೆಯಾಗುತ್ತಾ ಹೋಗುತ್ತದೆ.

ಪ್ರಾಯ ಕಂಡು ಹಿಡಿವ ವಿಧಾನ

ಒಂದು ಹಳೆಯ ಎಲುಬು ಸಿಕ್ಕಿದರೆ ಮೊದಲು ಅದರಲ್ಲಿ ಕರಗುತ್ತಿರುವ ಕಾರ್ಬನ್—14ರ ಅಂಶವೆಷ್ಟೆಂದು ನಿರ್ಣಯಿಸಲಾಗುತ್ತದೆ. ಒಂದು 'ಕ್ಯಾಲಿಬ್ರೇಟೆಡ್ ಸ್ಕೇಲ್" ಉಪಯೋಗಿಸಿ, ಸಾಧಾರಣ ಎಲುಬಿನಲ್ಲಿರುವ ಕಾರ್ಬನ್—14ರ ಪ್ರಮಾಣದೊಂದಿಗೆ ಆಗ ಸಿಕ್ಕಿರುವ ಎಲುಬಿನ ಕಾರ್ಬನ್—14ರ ಪ್ರಮಾಣವನ್ನು ಹೋಲಿಸಿ ಪ್ರಾಯವನ್ನು ನಿರ್ಣಯಿಸಲಾಗುತ್ತದೆ.

ಕಾರ್ಬನ್–14 ಕೆಲೆಂಡರ್‌ನ ಸಹಾಯದಿಂದ ಎಲುಬಿನ ಪ್ರಾಯ ನಿರ್ಣಯಿಸಲು ಸುಲಭವಾಗುತ್ತದೆಂದು ಹೇಳಲಾಗಿದೆ.

ಈ ಕೆಲೆಂಡರ್ ಬಳಸಿ 70,000 ವರ್ಷವರೆಗೂ ಹಿಂದಿನ ಎಲುಬಿನ ಪ್ರಾಯ ನಿರ್ಣಯ ಸಾಧ್ಯವೆನ್ನಲಾಗಿದೆ. ಹೀಗೆ ಈ ನೂತನ ಸಂಶೋಧನೆಯಿಂದಾಗಿ ಪುರಾಣ ವಸ್ತುಗಳ ಕಾಲನಿರ್ಣಯ ಸುಲಭವಾಗಿದೆ.

(—ಸಂಗ್ರಹ)

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!
ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=
ಐಡಿಯಲ್ ಫೋಟೋ ಹೌಸ್ PHONE: 3131
ಆಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1
Tele: GOLDKING Estd: 1947 Phone: 3242 Res: 3272

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 29

NAVAYUGA

1—4—1971

ಕರ್ನಾಟಕ ರಾಜ್ಯಕೀಯದಲ್ಲಿ

ಪ್ರಗತಿಶೀಲತೆಯ ಸಾಕಾರಮೂರ್ತಿ

ಶ್ರೀ ವೀರೇಂದ್ರ ಪಾಟೀಲ್



ಶ್ರೀ ರಾಮಕೃಷ್ಣ ಹೆಗ್ಗಡೆ

'ಮಿಂಚುತಾರೆ'ಯೆಂಬುದು ಸಿನಿಮಾ ಪ್ರಪಂಚದಲ್ಲಿ ಮನೆಮಾತು. ಯಾವುದೋ ಮೂಲೆಯಲ್ಲಿದ್ದ ವ್ಯಕ್ತಿಯನ್ನು ಹೊಸ ಮುಖಾನ್ವೇಷಿ ದಿಗ್ದರ್ಶಕರು ಅದೆಂತೋ ಕಂಡು ಹಿಡಿದು ರಜತ ಪರದೆಯ ಮೇಲೆ ಕಾಣಿಸಬಯಸುವುದು, ಅದು ತನ್ನ ಸಕಲ ಶಕ್ತಿಗಳನ್ನು ಕೇಂದ್ರೀಕೃತಗೊಳಿಸಿ, ಪ್ರಥಮ ಪ್ರದರ್ಶನದಲ್ಲೇ ಜನಮನ ಸೂರೆಗೊಳ್ಳುವುದು ಅಪರೂಪವಲ್ಲ. ಆದರೆ, ಇಂತಹುದೇ ಮಿಂಚು ತಾರೆಯೊಂದು ರಾಜ್ಯಕೀಯ ಪ್ರಪಂಚದಲ್ಲೂ ಉದಯಿಸುತ್ತದೆಂದು ಯಾರೂ ಊಹಿಸಿದ್ದಿಲ್ಲ.

ಸರ್ವೇಸಾಮಾನ್ಯವಾಗಿ ರಾಜ್ಯಕೀಯ ರಂಗದಲ್ಲಿ ರಾಡಿ ತುಂಬಿರುವುದು ಸಹಜ. ಈ ರಾಡಿಯಲ್ಲೂ ತಲೆಯೆತ್ತಬೇಕಾದರೆ, ಅದರಲ್ಲಿ ಅಡಿಯಾಡಿ ತುಂಬ ತರಪೇತು ಪಡೆಯಬೇಕಾಗುತ್ತದೆ. ಅಪರೂಪಕ್ಕಾದರೂ ರಾಜ್ಯಕೀಯ ಆಕಾಶದಲ್ಲಿ ಮಿಂಚುತಾರೆ ಉದಯಿಸುವುದುಂಟೆಂಬುದನ್ನು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಶ್ರೀ ವೀರೇಂದ್ರ ಪಾಟೀಲರು ತೋರಿಸಿದ್ದಾರೆ.

ಸ್ವಾತಂತ್ರ್ಯೋತ್ತರ ಯುಗದಲ್ಲಿ ನಿರ್ಮಾಣಗೊಂಡ ರಾಜ್ಯಕೀಯ ವ್ಯಕ್ತಿ ಶ್ರೀ ವೀರೇಂದ್ರ ಪಾಟೀಲರು. ೧೯೫೬ರಲ್ಲಿ ಕನ್ನಡದ ಹೆಚ್ಚಿನ ನೆಲವೊಂದಾಗಿ ವಿಶಾಲ ಮೈಸೂರು ರಚನೆಯಾದಾಗ ಆದಾಗಲೇ ರಾಜ್ಯಕೀಯದಲ್ಲಿ ಪಳಗಿದ್ದ ಶ್ರೀ ಸಿದ್ಧವನಹಳ್ಳಿ ನಿಜಲಿಂಗಪ್ಪನವರು ಅದು ಹೇಗೋ ಮುಖ್ಯಮಂತ್ರಿಯಾದರು. ಆ ಮೇಲೆ ನಡೆದ ಸಾರ್ವತ್ರಿಕ ಚುನಾವಣೆಗಳ ನಂತರವೂ ಅವರೇ ಆ ಸ್ಥಾನ ಉಳಿಸಿಕೊಂಡರು. ಆದರೆ, ರಾಜ್ಯಕೀಯ ಭಿನ್ನಾಭಿಪ್ರಾಯಕ್ಕೆ ಹೆಸರಾದ ಕರ್ನಾಟಕದಲ್ಲಿ ಅವರ ಮಂತ್ರಿಮಂಡಲ ಉರುಳಿ, ಶ್ರೀ ಬಿ. ಡಿ. ಜತ್ತಿಯವರು ಆ ಪದವಿಗೇರಿದರು.

ಇದೇ ವೇಳೆ ಕಾಂಗ್ರೆಸ್ ಸಂಘಟನೆಯಲ್ಲಿ ಇಬ್ಬರು ಯುವಕರು ಶಕ್ತಿ ಸರ್ವಸ್ವವನ್ನೂ ಕೇಂದ್ರೀಕರಿಸಿ ದುಡಿದುದು ದೃಗ್ಗೋಚರವಾಯ್ತು. ಅಂದಿನ ರಾಜ್ಯಕೀಯ ಭಾಷೆಯಲ್ಲಿ ಹೇಳುವುದಾದರೆ, ಇವರಿಬ್ಬರೂ ಹೊಸ ಪೀಳಿಗೆಯವರು, ಹೊಸ ರಕ್ತದವರು; ಯುವಜನರು. ಇವರಲ್ಲಿ ಒಬ್ಬರು ಶ್ರೀ ವೀರೇಂದ್ರ ಪಾಟೀಲರು. ಮತ್ತೊಬ್ಬರು ಶ್ರೀ ರಾಮಕೃಷ್ಣ ಹೆಗ್ಗಡೆಯವರು. ಶ್ರೀ ಪಾಟೀಲರು ಆಂಧ್ರದ ಗಡಿಯ ಹಿಂದುಳಿದ ಜಿಲ್ಲೆ ಗುಲ್ಬರ್ಗದ ಚಿಂಚೋಳಿಗೆ ಸೇರಿದವರು; ಶ್ರೀ ಹೆಗ್ಗಡೆಯವರು ಕಡಲ ತಡಿಯ ಉತ್ತರ ಕನ್ನಡದ ಸಿರಸಿಗೆ ಹತ್ತಿರದವರು.

ಸಂಘಟನೆಯಲ್ಲಿ ಇಬ್ಬರದೂ ಎತ್ತಿದ ಕೈಯೆಂಬುದು ನಿಜ; ಆದರೆ ಇವರಿಬ್ಬರ ಮನೋಧರ್ಮದಲ್ಲಿ ಒಂದು ವ್ಯತ್ಯಾಸವುಂಟು. ಶ್ರೀ ಹೆಗ್ಗಡೆಯವರು ಪ್ರದರ್ಶನವನ್ನೂ ಬಯಸುತ್ತಾರೆ; ಆದರೆ, ಶ್ರೀ ಪಾಟೀಲರು ಇಂತಹ ಹೆಗ್ಗಳಿಕೆಗೆ ಬಹುದೂರ. ತನ್ನ ಕರ್ತವ್ಯಗಳನ್ನು ಪಾಲಿಸುವುದಷ್ಟೇ ಅವರ ಲಕ್ಷ್ಯ.

ರಾಜ್ಯಕೀಯ ರಂಗದ ಅಜ್ಞಾತವಾಸವನ್ನು ಮುಗಿಸಿಬಂದ ನಿಜಲಿಂಗಪ್ಪನವರು ಮತ್ತೆ ಕಾಣಿಸಿಕೊಂಡರು. ಸಚಿವ ಸಂಪುಟ ರಚಿಸಿದರು. ಹೊಸ ರಕ್ತವನ್ನು ಆರಿಸಬೇಕೆಂಬ ಗಾಳಿಗೆ ಆಗತಾನೇ ಬಲವಾದ ರೆಕ್ಕೆ ಮೂಡಿತ್ತು. ಶ್ರೀ ಪಾಟೀಲ—ಶ್ರೀ ಹೆಗ್ಗಡೆಯವರಿಗೆ ಸಚಿವ ಪಟ್ಟದಲ್ಲಿ ಮತ್ತೆ ಸ್ಥಾನ ದೊರೆಯಿತು. ಶ್ರೀ ಪಾಟೀಲರು ತನ್ನ ವ್ಯಕ್ತಿಗತ ಹಿರಿಮೆಯಿಂದ ಸಾಮೂಹಿಕ ನಾಯಕತ್ವ ಗಳಿಸಿಕೊಂಡರು; ಅವರಲ್ಲಿನ ಅದ್ಭುತ ಶಕ್ತಿಯ ಪರಿಚಯ ಕಾಂಗ್ರೆಸ್‌ನ ಹಳೆಯಹುಲಿಗಳಿಗೂ ಆಯ್ತು, ಅವರು ಭಾರತಾಂಬೆ ಬಂಜೆಯಲ್ಲವೆಂಬ ಮಾತನ್ನೇ ಮತ್ತೆ ನೆನಪಿಸಿಕೊಂಡು ತೃಪ್ತಿಯ ಉಸಿರು ಬಿಟ್ಟರು.

ಶ್ರೀ ಪಾಟೀಲರಲ್ಲಿ ಎಲ್ಲರೂ ಮೆಚ್ಚತಕ್ಕ ಗುಣಗಳು ಹಲವಾರು. ಈ ಗುಣಗಳ ಮುಂದೆ ಅವರ ರಾಜ್ಯಕೀಯ ವಿರೋಧಿಗಳೂ ತಲೆತಗ್ಗಿಸುತ್ತಾರೆ. ಯಾವುದೇ ವಿಧದ ಪ್ರಚೋದನೆಯೇ ರಾಕ್ಷಸಾಕಾರ ತಳೆದು ನಿಂತಿರಲಿ, ಅವರು ಸಂಯಮ ತಪ್ಪುತ್ತಿರಲಿಲ್ಲ. ಅವರ ಈ ಅಸಮ ಸಂಯಮವು ವಿರೋಧಿ ಪಕ್ಷೀಯರನ್ನು ಹಲವು ಬಾರಿ ವಿಷಮ ಸ್ಥಿತಿಗೆ ತಂದೊಡ್ಡಿದ ಉದಾಹರಣೆಗಳುಂಟು.

ಶ್ರೀ ಪಾಟೀಲರು ಮಾತುಗಾರರು. ಹಾಗೆಂದರೆ, ಸುಳ್ಳು-ಪಳ್ಳು ಆಡಿ ತಪ್ಪಿಸಿಕೊಳ್ಳುವವರಲ್ಲ ಅವರ ಭಾಷಣದ ಶೈಲಿ ಕನ್ನಡದ ಕಸುವಿಗೆ ಮತ್ತೊಂದು ಹೆಸರು. ವಿಧಾನಸಭೆಯಲ್ಲಿ ಅವರಾಡುವ ಮಾತು ಮಾತಿನಲ್ಲೂ ವಾದ ವೈಭವ— ಆಕರ್ಷಣೆ. ಸಿದ್ಧಾಂತ ತತ್ವ ಪ್ರತಿಪಾದನೆಗಿಂತ ಸ್ವಸಮರ್ಥನೆಗೆ ಪ್ರಾಶಸ್ತ್ಯ. ಕೇಳುವವರ ಮನಸ್ಸಿನ ಆಳಕ್ಕೆ ವಿಷಯಗುಟುಕು ಇಳಿಸಬಲ್ಲ ವಿಶಿಷ್ಟ ಶಕ್ತಿ. ಶ್ರೀ ಪಾಟೀಲರ ಬಂಡವಾಳದ ಬಹುಪಾಲು ಇದೇ ಆಕರ್ಷಣೆ.

ತನ್ನನ್ನು ನಾಯಕ ಸ್ಥಾನಕ್ಕೇರಿಸಿದ ಶ್ರೀ ಕಾಮರಾಜರು ಜೇಡವಾದಾಗ ಪ್ರಧಾನಿ ಶ್ರೀಮತಿ ಗಾಂಧಿ ಮತ್ತೊಬ್ಬ ಹಿತೈಷಿ ಶ್ರೀ ನಿಜಲಿಂಗಪ್ಪನವರನ್ನು ಕರೆದುಕೊಂಡರು. ರಾತ್ರೆ ಬೆಳಗಾಗುವುದರೊಳಗೆ ಕಾಂಗ್ರೆಸ್ ಅಧ್ಯಕ್ಷಪದವನ್ನು ಅವರ ಕೊರಳಿಗೆ ಕಟ್ಟಿದರು. ಕಾಮರಾಜರ ರಾಜ್ಯನೀತಿಯ ಮುಂದೆ ಶ್ರೀ ನಿಜಲಿಂಗಪ್ಪನವರದು ಸಪ್ಪೆ. ಅವರದ್ದು ಬೆಳ್ಳಗಿದ್ದುದನ್ನೆಲ್ಲ ಹಾಲೆಂದು ತಿಳಿಯುವ ಜೋಳಿ ಸ್ವಭಾವ. ಅವರ ಈ ದುರ್ಬಲತೆಯನ್ನು ಅರಿತುಕೊಂಡು, ಅದರ ಸದುಪಯೋಗ ಪಡೆದು ತನ್ನ ಸಿಂಹಾಸನ ಭದ್ರಮಾಡಿಕೊಳ್ಳುವ ಹವಣಿಕೆ ಅಡಗಿತ್ತೆಂಬುದು ಆಗ ಯಾರಿಗೂ ತಿಳಿಯಲಿಲ್ಲ. ರಾಜಕೀಯದಲ್ಲಿ ಒಂದು ವ್ಯಕ್ತಿ ಮೇಲೆ ಏರಬೇಕಾದರೆ ಸಾವಿರ ವ್ಯಕ್ತಿಗಳನ್ನು ಮೆಟ್ಟಿ ನಿಲ್ಲಬೇಕಾಗುತ್ತದೆ.

ಶ್ರೀ ನಿಜಲಿಂಗಪ್ಪನವರು ನಿವೃತ್ತಿಗೆ ನಿರ್ಗಮಿಸಿದ ನಂತರ ಸಹಜವಾಗೇ ಶ್ರೀ ವೀರೇಂದ್ರ ಪಾಟೀಲರನ್ನು ಮುಖ್ಯಮಂತ್ರಿಯೆಂದು ಕಾಂಗ್ರೆಸ್ ಆರಿಸಿಕೊಂಡಿತು. ಆಗ ಶ್ರೀ ಪಾಟೀಲರು ೪೪ ವಯಸ್ಸಿನವರು. ಭಾರತದ ಮುಖ್ಯ ಮಂತ್ರಿಗಳಲ್ಲಿ ಇವರೇ ಅತ್ಯಂತ ಕಿರಿಯರು.

ಶ್ರೀ ಪಾಟೀಲರು ನಾಯಕರಂತೆಯೇ ನಡೆದುಕೊಂಡರು. ಯಾರಿಗೂ ಕೆಟ್ಟ ಮಾತು ಆಡಲಿಲ್ಲ. ಯಾರೊಬ್ಬರಿಂದಲೂ ಕೆಟ್ಟ ಮಾತು ಆಡಿಸಿಕೊಳ್ಳಲಿಲ್ಲ. 'ಶ್ರೀ ಪಾಟೀಲರ ಮೇಲೆ ನಮ್ಮದೇನೂ ಇಲ್ಲ' ಎಂದವರೇ ಅವರ ಎಲ್ಲಾ ರಾಜ್ಯಕೀಯ ವಿರೋಧಿಗಳು. ತಮ್ಮ ನಾಯಕತ್ವದಿಂದ, ಸದಾಚಾರ, ಸದಾಡಳಿತೆಗಳಿಂದ ಒಳ್ಳೆಯ ಮುಖ್ಯಮಂತ್ರಿ, ಸಮರ್ಥ ನಾಯಕ, ದಕ್ಷ ಆಡಳಿತೆಗಾರ ಎಂದು ಕರೆಯಿಸಿಕೊಂಡರು.

ದೇಶದಲ್ಲಿ ಇಂದಿರಾ ಬಿರುಗಾಳಿ ಆರಂಭವಾಯ್ತು. ವಿವಿಧ ರಾಜ್ಯಗಳ ಕಾಂಗ್ರೆಸ್

(ಎಂಟನೆಯ ಪುಟ ನೋಡಿರಿ)

ಖನಿಜದ ನಿಧಿ- ಚಿಕ್ಕಮಗಳೂರು

ಉತ್ತರಕ್ಕೆ ಹಿಮಗಿರಿ, ದಕ್ಷಿಣಕ್ಕೆ ನೀಲಗಿರಿ, ಇವುಗಳ ನಡುವೆ ಅತಿ ಎತ್ತರವಾದ್ದು ಬಾಬಾಬುಡನ್ ಗಿರಿ. ಇದು ಗಿಡಮೂಲಿಕೆಗಳಿಗೆ ಪ್ರಸಿದ್ಧವಾದ ಪರ್ವತ. ಇದು ಪಶ್ಚಿಮ ಘಟ್ಟಗಳ ಸಾಲಿನಲ್ಲಿದೆ. ಈ ಸಾಲಿನ ಶಕುನಗಿರಿ ರಾಮಾಯಣದಲ್ಲಿ ಉಲ್ಲೇಖಿತ. ರಾವಣನೊಡನೆ ಹೋರಾಡುತ್ತಿದ್ದಾಗ ಮೂರ್ಛೆಗೊಂಡ ಲಕ್ಷ್ಮಣ ಅವನಿಗೆ ತಿರುಗಿ ಚೇತನ ತಂದ ಮೂಲಿಕೆ ಸಂಜೀವಿನಿ. ಇದನ್ನು ಆಂಜನೇಯನು ತಂದುದು ಈ ಗಿರಿಯಿಂದ ಎಂದು ಹೇಳಿಕೆ. ಇನ್ನೊಂದು ಪೌರಾಣಿಕ ಹಿನ್ನೆಲೆಯುಳ್ಳ ಸ್ಥಳ ಶೃಂಗೇರಿ. ಇದಕ್ಕೆ ಶೃಂಗ ಗಿರಿ ಎಂದು ಮೂಲನಾಮ. ಇಲ್ಲಿ ವಿಭಾಂಡಕ ಮುನಿಯ ಆಶ್ರಮವಿತ್ತು. ಇಲ್ಲಿಯೇ ವಿಭಾಂಡಕನಿಗೆ ಋಷ್ಯಶೃಂಗ ಹುಟ್ಟಿದ್ದು. ಒಮ್ಮೆ ಅಂಗದೇಶದಲ್ಲಿ ಬರಗಾಲ ಬಂದಿತ್ತು. ಆಗ ಋಷ್ಯಶೃಂಗ ಅಲ್ಲಿಗೆ ಕಾಲಿಟ್ಟ ಕೂಡಲೇ ಧಾರಾಳ ಮಳೆ ಸುರಿಯಿತು. ಇದರಿಂದಾಗಿ ಆತನಿಗೆ ಅಂಗದೇಶದ ರಾಜಕುಮಾರಿಯೊಡನೆ ವಿವಾಹವಾಯಿತು. ಇವನೇ ಅಯೋಧ್ಯೆಯ ದಶರಥ ಚಕ್ರವರ್ತಿಯ ಪುರೋಹಿತನಾಗಿ ಪುತ್ರಕಾಮೇಷ್ಟಿ ಯಾಗವನ್ನು ನೆರವೇರಿಸಿದ್ದು. ಈ ಯಾಗದ ಪರಿಣಾಮ ಶ್ರೀರಾಮಚಂದ್ರನ ಜನನ. ಹೀಗೆ ಮತ್ತೊಂದು ಪುರಾಣ ಪ್ರಸಿದ್ಧ ಸ್ಥಳ ಹಿರೇಮಗಳೂರು. ಇದು ಜನಮೇಜಯ ಸರ್ಪಯಾಗ ಮಾಡಿದ ಸ್ಥಳವೆಂದು ಹೇಳುತ್ತಾರೆ.

ಮಹಾಭಾರತದ ರುಕ್ಮಾಂಗದನೆಂಬ ರಾಜ, ಈಗ ಸಕ್ಕರೆ ಪಟ್ಟಣ ಎಂಬಲ್ಲಿ ಆಳುತ್ತಿದ್ದ. ಈಗಿನ ಹಿರೇಮಗಳೂರು ಮತ್ತು ಚಿಕ್ಕಮಗಳೂರು ಆತನ ಕುಮಾರಿಯರಿಗೆ ಬಳುವಳಿ ಕೊಟ್ಟ ಗ್ರಾಮಗಳೆಂದು ಹೇಳಿಕೆ.

ಐತಿಹಾಸಿಕ ಸ್ಥಳಗಳ ಆಗರ

ಈ ಜಿಲ್ಲೆಯಲ್ಲಿ ಐತಿಹಾಸಿಕ ಸ್ಥಳಗಳೂ ಸಾಕಷ್ಟಿವೆ. ಇವುಗಳಲ್ಲಿ ಅಜ್ಜಂಪುರ, ಬಾಬಾಬುಡನ್‌ಗಿರಿ, ಸಕ್ಕರೆಪಟ್ಟಣ, ಕುದುರೆಮುಖ ಇವೆಲ್ಲ ಅತಿಮುಖ್ಯವಾದವು. ಅಜ್ಜಂಪುರ ಅಜೀಮುಖಾನನ ಹೆಸರಿನಲ್ಲಿ ಅಜಾಮುಪುರವಾಗಿ ಕ್ರಮೇಣ ಅಜ್ಜಂಪುರವಾಗಿದೆ. ಅಜೀಮುಖಾನನ ಬೇಟೆನಾಯಿಗಳ ಮೇಲೆ ಮೊಲಗಳು ತಿರುಗಿಬಿದ್ದ ಸೋಜಿಗವನ್ನು ಕಂಡು ಅಲ್ಲಿ ಒಂದು ಕೋಟೆಯನ್ನು ಅಜೀಮುಖಾನ ಕಟ್ಟಿಸಿದ. ತರೀಕೆರೆಗೆ ಸಮೀಪದ 12ನೆಯ ಶತಮಾನದ ಅಮೃತೇಶ್ವರ ದೇವಾಲಯ ಅತಿಸುಂದರವಾಗಿದೆ. ಈ ಜಿಲ್ಲೆಯ ಮೂಡಿಗೆರೆ ತಾಲೂಕಿನ ಅಂಗಡಿಹಳ್ಳಿ ಹೊಯ್ಸಳ ವಂಶದ ಮೂಲ ಪುರುಷನ ಜನ್ಮಸ್ಥಳವಾಗಿತ್ತು.

ಸಕ್ಕರೆ ಪಟ್ಟಣಕ್ಕೆ ನಾಲ್ಕು ಮೈಲಿ ದೂರದಲ್ಲಿರುವ ಅಯ್ಯನಕೆರೆ ಬಾಬಾಬುಡನ್ ಗಿರಿಗೆ ಬುಡದಲ್ಲಿದ್ದು ವೇದಾನದಿಗೆ ಮೂಲವಾಗಿದೆ.

ಪುರಾಣದಲ್ಲಿ ಚಂದ್ರದ್ರೋಣ ಪರ್ವತವೆಂದು ಪ್ರಸಿದ್ಧವಾದ ಬಾಬಾಬುಡನ್‌ಗಿರಿ ಕಾಫಿಗಿಡವನ್ನು ಮೊತ್ತಮೊದಲು ನಮ್ಮ ದೇಶಕ್ಕೆ ತಂದ ಮುಹಮ್ಮದೀಯ ಸಂತ ಬಾಬಾಬುಡನ್ ಎಂಬವನ ಸ್ಮಾರಕವಂತಿದೆ. ಇಲ್ಲಿಯ ಗುಹೆಯಲ್ಲಿರುವ ಒಂದು ಪೀಠವನ್ನು ಮುಹಮ್ಮದೀಯರು ಬಾಬಾಬುಡನ್‌ನ ಗೋರಿಯೆಂದೂ ಹಿಂದುಗಳು ದತ್ತಾತ್ರೇಯ ಪೀಠವೆಂದೂ ಪೂಜಿಸುತ್ತಾರೆ. ಈ ಸ್ಥಳಕ್ಕೆ ದಕ್ಷಿಣದ ಮಕ್ಕ ಎಂದೂ ಹೇಳುತ್ತಾರೆ. ಭದ್ರಾನದಿ ದಡದಲ್ಲಿರುವ ಬಾಳೆಹೊನ್ನೂರು ವೀರಶೈವ ಧರ್ಮದ ಪುರಾತನ ಪೀಠ. ಈ ಜಿಲ್ಲೆಯ ಇನ್ನೊಂದು ಸುಪ್ರಸಿದ್ಧ ಕ್ಷೇತ್ರ ಶೃಂಗೇರಿ. 8ನೆಯ ಶತಮಾನದ ಶಂಕರಾಚಾರ್ಯರು ಸ್ಥಾಪಿಸಿದ ಮಠಗಳಲ್ಲಿ ಶೃಂಗೇರಿಯೂ ಒಂದು. ಕಾಶ್ಮೀರದಿಂದ ತಂದು ಪ್ರತಿಷ್ಠಿಸಲಾದ ಶಾರದಾದೇವಿಗೆ ವಿಜಯನಗರದ ಹರಿಹರ ಕೊಟ್ಟ ಜಹಗೀರು ಕ್ಷೇತ್ರವು ಶೃಂಗೇರಿ ಎಂಬುದಕ್ಕೆ ಶಾಸನಗಳ ಆಧಾರವಿದೆ.

ಪಡುಗಡಲ ಸೊಬಗನ್ನು ನೋಡಲು ಸಹ್ಯಾದ್ರಿ ತಲೆಯೆತ್ತಿ ನಿಂತಂತೆ ಭಾಸವಾಗುವ 6?1 , ಅಡಿ ಎತ್ತರವಾದ ಕುದುರೆಮುಖ ಇರುವುದು ಈ ಜಿಲ್ಲೆಯಲ್ಲೇ.

ಮೈಸೂರು ರಾಜ್ಯದ ಪಶ್ಚಿಮ ಘಟ್ಟಗಳ ಮಡಿಲಲ್ಲಿರುವ ಈ ಜಿಲ್ಲೆ 86 ಮೈಲಿ ಉದ್ದ, 55 ಮೈಲಿ ಅಗಲವಾಗಿದೆ. ಉತ್ತರಕ್ಕೆ ಶಿವಮೊಗ್ಗ ಜಿಲ್ಲೆ, ಪೂರ್ವಕ್ಕೆ ಚಿತ್ರದುರ್ಗಜಿಲ್ಲೆ, ಪಶ್ಚಿಮಕ್ಕೆ ದಕ್ಷಿಣಕನ್ನಡ ಜಿಲ್ಲೆಯನ್ನು ಬೇರ್ಪಡಿಸುವ ಘಟ್ಟಗಳ ಸಾಲು ಹಾಗೂ ದಕ್ಷಿಣ ಹಾಸನಜಿಲ್ಲೆ ಮೇರೆಗಳಾಗಿರುವ ಈ ಜಿಲ್ಲೆಯ ವಿಸ್ತೀರ್ಣ 71175 ಹೆಕ್ಟೇರುಗಳು.

ಚಿಕ್ಕಮಗಳೂರು ಜಿಲ್ಲೆಯು ಮಲೆನಾಡು. ಕಾಫಿ, ಅಡಕೆ, ಏಲಕ್ಕಿ, ಟೀ, ಕಿತ್ತಳೆ ಬೆಳೆಗಳಿಗೆ ಅತ್ಯುತ್ತಮವಾಗಿದೆ. ನೀರಾವರಿ ಬಗ್ಗೆ ಈ ಜಿಲ್ಲೆಯಲ್ಲಿ ಸುಮಾರು 202 ಬಾವಿಗಳೂ 165 ಕೆರೆಗಳೂ ಇವೆ. ಹೀಗೆ ವೇದಾವತಿ, ತುಂಗಭದ್ರಾ ನದಿಗಳಿಗೂ ಈ ಜಿಲ್ಲೆ ಜನ್ಮಸ್ಥಾನ. ಖನಿಜ ಸಂಪತ್ತಿಗೆ ಅಗ್ರಸ್ಥಾನ.

ಖನಿಜ ಸಂಪತ್ತಿನಲ್ಲಿ ಇಡೀ ದೇಶದಲ್ಲೇ ಈ ಜಿಲ್ಲೆಗೆ ಅಗ್ರಸ್ಥಾನ ಸಲ್ಲಬೇಕು. ಕುದುರೆ ಮುಖದ ಆರೋಳಿಬೆಟ್ಟದಲ್ಲಿ ನಡೆಸಿದ ಪರಿಶೀಲನೆ ಪ್ರಕಾರ ಐವತ್ತು ಕೋಟಿ ಟನ್ನಿಗೂ ಹೆಚ್ಚು ಕಬ್ಬಿಣದ ಅದಿರು ದೊರೆಯಬಹುದೆಂದು ತಿಳಿದು ಬಂದಿದೆ. ಇಲ್ಲಿ ಕೆಲಸ ಆರಂಭವಾಯಿತೆಂದರೆ, ಜಗತ್ತಿನಲ್ಲೇ ಅತಿದೊಡ್ಡ ಗಣಿಯಾಗುವ ಭಾಗ್ಯ ಚಿಕ್ಕಮಗಳೂರಿನದಾಗುವುದು.

ಶಿಕ್ಷಣ ಕ್ಷೇತ್ರದಲ್ಲಿ ಈ ಜಿಲ್ಲೆಯ ಪ್ರಗತಿ ಗಮನಾರ್ಹವಾಗಿದೆ. ಈ ಜಿಲ್ಲೆಯಲ್ಲಿ 18 ನರ್ಸರಿ ಶಾಲೆಗಳು, 922 ಲೋಯರ್ ಮತ್ತು 315 ಹೈಯರ್ ಪ್ರಾಥಮಿಕ ಶಾಲೆಗಳು 48 ಪ್ರೌಢ ಶಾಲೆಗಳು ಮತ್ತು 2 ಕಾಲೇಜುಗಳು ಮತ್ತು 8 ಕೈಗಾರಿಕಾ, ತಾಂತ್ರಿಕ ತರಬೇತಿ ಶಾಲೆಗಳು ಇವೆ. ಚಿಕ್ಕಮಗಳೂರು ಜಿಲ್ಲೆ ಅರಣ್ಯ ಸಂಪತ್ತಿಗೆ ಮೀಸಲಾಗಿದೆ. ಸುಮಾರು ಮೂರು ಲಕ್ಷ 44 ಸಾವಿರಕ್ಕೂ ಹೆಚ್ಚು ಅರಣ್ಯ ಬೆಳೆದಿರುವ ಈ ಜಿಲ್ಲೆ ತೇಗ, ಬೀಟೆ, ನಂದಿ, ಹೊನ್ನೆ ಇತ್ಯಾದಿ ಉತ್ತಮ ಜಾತಿಯ ಮರಗಳನ್ನು ಒದಗಿಸುತ್ತದೆ.

ಕೈಗಾರಿಕಾ ಕ್ಷೇತ್ರದಲ್ಲಿಯೂ ಈ ಜಿಲ್ಲೆ ಮುಂದುವರಿಯುತ್ತಿದೆ. ನಾರಿನ ಕೈಗಾರಿಕೆ, ಬಿದಿರು ಕೆಲಸ, ಉಣ್ಣೆ ನೇಯ್ಗೆ, ಚಮ್ಮಾರಿಕೆ, ಬಡಗಿತನ, ಇತ್ಯಾದಿಗಳಿಗೆ ಈ ಜಿಲ್ಲೆಯಲ್ಲಿ ಪ್ರೋತ್ಸಾಹ ಕೊಡಲಾಗಿದೆ.

ಆರೋಗ್ಯ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿಯೂ ಚಿಕ್ಕಮಗಳೂರು ಪ್ರಗತಿಯ ಹಾದಿ ತುಳಿಯುತ್ತಿದೆ. ಇಲ್ಲಿ 40 ಪ್ರಾಥಮಿಕ ಆರೋಗ್ಯ ಕೇಂದ್ರಗಳೂ 7 ಕುಟುಂಬ ಯೋಜನಾ ವೈದ್ಯಶಾಲೆಗಳೂ ಇವೆ. 1961ರ ಜನಗಣತಿಯ ಪ್ರಕಾರ ಈ ಜಿಲ್ಲೆಯ ಜನಸಂಖ್ಯೆ ?9 ?849. ಈ ಜಿಲ್ಲೆಯ ಜನಸಾಂದ್ರತೆ ಪ್ರತಿ ಚದುರ ಮೈಲಿಗೆ 214. ಕುಟುಂಬ ಯೋಜನೆಯ ಕಾರ್ಯಕ್ರಮ ಈ ಜಿಲ್ಲೆಯಲ್ಲಿ 1965ರಿಂದಲೇ ಆರಂಭವಾಗಿದೆ. ಇಲ್ಲಿ 1965ರಿಂದ 1970ನೇ ಡಿಸೆಂಬರ್ ಮಾಸಾಂತ್ಯದವರೆಗೆ 773? ಪುರುಷರಿಗೆ, 275? ಮಹಿಳೆಯರಿಗೆ ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ ನಡೆದಿದೆ. 9134 ಮಹಿಳೆಯರು ವಂಕಿಧಾರಣೆ ಮಾಡಿದ್ದಾರೆ. ಈ ಅವಧಿಯಲ್ಲಿ ಜಿಲ್ಲೆಯಾದ್ಯಂತ 4.14 ಲಕ್ಷಕ್ಕಿಂತಲೂ ಹೆಚ್ಚು ನಿರೋಧಗಳನ್ನು ಹಂಚಲಾಗಿದೆ.

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65-66ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 29

ಸಂಸ್ಥಾಪಕರು :
ಡಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಯಾಹ್ಯಾಖಾನರ ನರಮೇಧಾಸಕ್ತಿ

ಪೂರ್ವ ಪಾಕಿಸ್ತಾನದ ನಾಯಕ ಮುಜುಂಬುರ್ ರಹಮಾನರೊಡನೆ ನೇರ ಮಾತುಕತೆ ನಡೆಸಲೆಂದು ಪಾಕ್ ಮಿಲಿಟರಿ ಅಧ್ಯಕ್ಷ ಯಾಹ್ಯಾಖಾನರು ಡಾಕ್ಕಾಕ್ಕೆ ಹೋದರು. ಪಶ್ಚಿಮದ ನಾಯಕ ಭುಟ್ಟೋರೂ ಡಾಕ್ಕಾ ದರ್ಶನ ಮಾಡಿದರು. ರಹಮಾನರ ಮೂಲ ಬೇಡಿಕೆಗಳನ್ನು ಸಮ್ಮತಿಸುವಂತೆ ತೋರಿಸಿಕೊಂಡರು. ರಾವಲ್ಪಿಂಡಿಗೆ ಮರಳಿದ ಎರಡು ತಾಸುಗಳಲ್ಲಿಯೇ ಯಾಹ್ಯಾಖಾನ್ ತನ್ನ ಮಿಲಿಟರಿ ಶಕ್ತಿ ಪ್ರದರ್ಶನಕ್ಕೆ ತೊಡಗಿದರು. ಚಕ್ರಗೋಷ್ಠಿಯ ಮಾತು ಆಡುತಿದ್ದ ನಾಲಗೆ ದೇಶೀಯರ ಮೇಲೆಯೇ ಬಾಂಬುದಾಳಿ—ಟ್ಯಾಂಕು ದಾಳಿ ನಡೆಸಲು ಆಜ್ಞಾಪಿಸಬೇಕಾದರೆ ಅವರ ಗುಣವರಿಯಲು ಬೇರೆ ನಿದರ್ಶನಗಳ ಅಗತ್ಯವಿಲ್ಲ. 'ಬಂಗ್ಲಾ ದೇಶ'ದ ಪ್ರಜೆಗಳು ಪಾಕಿಸ್ಥಾನದ ವಜ್ರಮುಷ್ಟಿಯಿಂದ ಹೊರಬಂದು ಸ್ವತಂತ್ರರಾಗಲು ಕೃತನಿಶ್ಚಯರಾಗಿದ್ದಾರೆ. ಅವರ ನಿಶ್ಚಯ ಜಯಶೀಲವಾಗುವುದೂ ಕಂಡಿತವೇ.

ಹೇಳಿಕೇಳಿ, ಇದು ಪಾಕಿಸ್ತಾನದ ಆಂತರಿಕ ವ್ಯವಹಾರ, ಅಥವಾ ಅಂತರ್ಯುದ್ಧ. ಇದರಲ್ಲಿ ವಿದೇಶೀಯರ ಹಸ್ತಕ್ಷೇಪವೆಂದಿಗೂ ಸಲ್ಲದು. ಆದರೆ, ಮಾನವತೆಯ ದೃಷ್ಟಿಯಿಂದ ಈ ಬಗ್ಗೆ ಅಭಿಪ್ರಾಯ ಪ್ರಕಟಿಸುವ ಅಧಿಕಾರ ಎಲ್ಲ ಸ್ವತಂತ್ರ ನಾಗರಿಕರಿಗೂ ದೇಶಗಳಿಗೂ ಇದ್ದೇ ಇದೆ. ಅಧ್ಯಕ್ಷ ಯಾಹ್ಯಾಖಾನರು 'ಬಂಗ್ಲಾ ದೇಶ'ದಲ್ಲಿ ನಡೆಸುತ್ತಿರುವುದು ಮಾನವಹತ್ಯೆ ಮಾತ್ರವಲ್ಲ, ಅದು ಕಗ್ಗೊಲೆ. ತನ್ನ ವಿರುದ್ಧ ಬಂಡೆದ್ದ ಪ್ರಜೆಗಳನ್ನು ಅಮಾನವೀಯ ರೀತಿ–ವಿಧಾನಗಳಿಂದ ಕೊಂದು ಸಿಂಹಾಸನ ಭದ್ರತೆಗಾಗಿ ನರಮೇಧ ನಡೆಸುತಿದ್ದ ರಾಜ–ಮಹಾರಾಜರ ಕಥೆಗಳು ಇತಿಹಾಸ ಕಾಲದಲ್ಲಿ ಅನೇಕ ನಡೆದುವು. ಸೂರ್ಯಮುಳುಗದ ಸಾಮ್ರಾಜ್ಯಾಧಿಪತಿಗಳಾದ ಬ್ರಿಟಿಷರೂ ಭಾರತದಲ್ಲಿ ಇಂತಹುದೇ ನರಮೇಧಾಸಕ್ತರಾಗಿದ್ದರು. ಆದರೆ, ಭಾರತವು ಬ್ರಿಟಿಷ್ ಆಧಿಪತ್ಯದ ಒಂದು ವಸಾಹತು ಮಾತ್ರವಿತ್ತು. ಬಂಗ್ಲಾ ದೇಶೀಯರು ತಮ್ಮನ್ನು ವಸಾಹತುವಿನಂತೆ ಕೇಂದ್ರ ಸರಕಾರ ನೋಡುತ್ತಿದೆ ಎಂದದ್ದು ಈಗ ಮತ್ತೊಮ್ಮೆ ಸತ್ಯವೆನಿಸಿದೆ. ಯಾಹ್ಯಾಖಾನರು ಸಂಧಾನದ ಮುಖವಾಡವನ್ನು ತೋರಿಸಿ ಹಿಂದಿನಿಂದ ಬಾಂಬೆಸೆದ ಕೃತ್ಯ ನಿಜಕ್ಕೂ ಆತ್ಮವಂಚನೆಯದ್ದು; ವಿಶ್ವಾಸದ್ರೋಹದ್ದು. ತನ್ನ ಮಿಲಿಟರಿ ಶಕ್ತಿಯನ್ನು ಜನ ಶಕ್ತಿಯ ವಿರುದ್ಧ ಯಾವ ರೀತಿ ಬಳಸಿಕೊಳ್ಳುವುದು ಸಾಧ್ಯವೆಂಬುದನ್ನು ಮನವರಿಕೆ ಮಾಡಿಕೊಳ್ಳುವ ಏಕಮೇವೋದ್ದೇಶದಿಂದಲೇ ಅವರು ಡಾಕ್ಕಾಕ್ಕೆ ಹೋಗಿದ್ದರೆಂಬುದೀಗ ಸುಸ್ಪಷ್ಟವಾಗಿದೆ.

'ಬಂಗ್ಲಾ ದೇಶ'ದಲ್ಲಿ ಪೂರ್ವ ಪಾಕಿಸ್ತಾನದ ಪ್ರಜಾಜನರಿಗೂ ಪಶ್ಚಿಮದ ಸೇನೆಗೂ ಭೀಕರ ಹೋರಾಟ ನಡೆಯುತ್ತಿದೆ; 'ಬಂಗ್ಲಾ'ದವರಿಗೆ ಆಹಾರ ಸರಬರಾಯಿಯನ್ನೂ ನಿಲ್ಲಿಸುವಷ್ಟು ಕಠೋರತೆಯನ್ನು ರಾವಲ್ಪಿಂಡಿ ತೋರಿಸಿದೆ. ಆದರೂ ಸ್ವಾತಂತ್ರ್ಯಯೋಧರು ಸೇನೆಯ ಚಲನವಲನಗಳನ್ನು ಹಲವಾರು ರೀತಿಯಿಂದ ನಿಷ್ಕ್ರಿಯಗೊಳಿಸಿದ್ದಾರೆ. ಮೊದಲ ದಿನದ ಹೋರಾಟದಲ್ಲಿಯೇ ರಾಜ್ಯಪಾಲ ಮೇಜರ್ ಟಿಕ್ಕಾಖಾನರು ಸ್ವಾತಂತ್ರ್ಯಯೋಧರ ಗುಂಡಿಗೆ ಬಲಿಯಾದರು. ಮುಜುಂಬುರ್ ರಹಮಾನರನ್ನು ಬಂಧಿಸಲಾಗಿದೆ' ಎಂಬ ಸುಳ್ಳು ವರದಿಯನ್ನು ಕರಾಚಿ ರೇಡಿಯೋ ಪ್ರಸಾರ ಮಾಡಿದ್ದರಿಂದ ತಲೆದೋರಿದ ಭಾವಾವೇಶವೇ ಈ ಕೊಲೆಗೆ ಪ್ರೇರಕ ಶಕ್ತಿಯಾಯಿತು. ಕೆಲವು ಪಾಕ್ ರೆಜಿಮೆಂಟುಗಳು ಸ್ವಾತಂತ್ರ್ಯ ಯೋಧರಿಗೆ ಶರಣು ಬಂದುವೆಂದೂ ಅತ್ತ ಪಶ್ಚಿಮ ಪಾಕಿಸ್ತಾನದಲ್ಲಿಯೂ ವಿವಿಧ ರಾಜ್ಯಗಳು ಏಕ ಪಕ್ಷೀಯವಾಗಿ ಸ್ವಾತಂತ್ರ್ಯ ಘೋಷಿಸಿಕೊಂಡುವೆಂದೂ ವರದಿಗಳು ಬಂದಿವೆ.

'ಬಂಗ್ಲಾ ದೇಶ'ದ ಈ ದುರಂತದ ಸಂಬಂಧ ಭಾರತದೊಡನಿದ್ದೇ ಇದೆ. ನಾವು ಬೇಡವೆಂದರೂ ಆಸಕ್ತಿ ತಳೆಯಲೇಬೇಕು. ಬಂಗ್ಲಾ ಸ್ವತಂತ್ರವಾಗಲಿ, ಯಾಹ್ಯಾಖಾನರ ವಸಾಹತುವಾಗಿಯೇ ಮುಂದುವರಿಯಲಿ, ಅದು ನಮಗೆ ಮುಖ್ಯವಲ್ಲ. ಆದರೆ, ನಮ್ಮ ಸುದೀರ್ಘವಾದ ಗಡಿಯನ್ನು ಸಂರಕ್ಷಿಸಿಕೊಳ್ಳುವುದೂ ಅಲ್ಲಿ ನಡೆಯುತ್ತಿರುವ ಮಾನವ ಮೇಧದ ಪ್ರತಿಕ್ರಿಯೆ ಇಲ್ಲಿ ನಡೆಯದಂತೆ ತಡೆಯುವುದೂ ಮಾನವತೆಗಾಗುವ ಚಿತ್ರಹಿಂಸೆಯನ್ನು ವಿರೋಧಿಸುವುದೂ ಅತ್ಯಗತ್ಯ. ಆದುದರಿಂದ ಅಲ್ಲಿನ ಪ್ರತಿ ಘಟನೆಯನ್ನೂ ಭಾರತ ನೆಟ್ಟ ದೃಷ್ಟಿಯಿಂದ ನಿರೀಕ್ಷಿಸುತ್ತಿದೆ; ತನ್ನ ಕಳವಳವನ್ನು ವ್ಯಕ್ತಪಡಿಸುತ್ತಿದೆ. 'ಪೂರ್ವ ಪಾಕಿಸ್ತಾನದಲ್ಲಿ ರಕ್ತಕ್ರಾಂತಿ ನಡೆಯುತ್ತಿದೆ ಎಂಬುದು ನಿಸ್ಸಂದೇಹ. ಈಗಲೂ ಅಲ್ಲಿನ ಬಹುಮತ ಜನತೆಯ ಆಶೋತ್ತರವಾದ ಪ್ರಜಾಸತ್ತಾತ್ಮಕ ಆಡಳಿತೆಯನ್ನು ರೂಪಿಸಲು ಶಾಂತತೆಯನ್ನು ಸ್ಥಾಪಿಸಲು ಕಾಲಮಿಂಚಿಲ್ಲ. ಅಂತಾರಾಷ್ಟ್ರೀಯ ಸಾಹಚರ್ಯ ಮತ್ತು ಮಾನವೀಯ ಸಂಸ್ಥೆಗಳ ಮನೋಧರ್ಮದ ಮೇಲೆ ಪೂ. ಪಾಕಿಸ್ತಾನದ ಸಂತ್ರಸ್ತ ಜನತೆಗೆ ನೆರವು ನೀಡಲು ಭಾರತ ಸಿದ್ಧವಿದೆ' ಎಂಬ ವಿದೇಶಮಂತ್ರಿ ಸ್ವರ್ಣಸಿಂಗರ ಹೇಳಿಕೆ ಭಾರತದ ನಿಲುವೇಯೇನೆಂಬುದಕ್ಕೆ ಕನ್ನಡಿ ಹಿಡಿಯುತ್ತದೆ.

ಅಧ್ಯಕ್ಷ ಯಾಹ್ಯಾಖಾನರು ಇಂತಹ ದುರಂತವನ್ನು ಉದ್ದೇಶಪೂರಿತರಾಗಿ ತಂದುಕೊಂಡರು. ವಿದೇಶೀಯ ಶಸ್ತ್ರಾಸ್ತ್ರಗಳ ಬಲದಿಂದ ಕೊಬ್ಬಿ ಆಯ್ಯುಬಖಾನರು ಭಾರತದ ಮೇಲೆ ಆಕ್ರಮಣ ಮಾಡಿ ಕೈಮೈ ಸುಟ್ಟುಕೊಂಡರು. ಈಗ ಯಾಹ್ಯಾಖಾನರು ತನ್ನ ಪ್ರಜೆಗಳನ್ನೇ ಸದೆ ಬಡಿಯಲು ಸೊಂಟಕಟ್ಟಿದರು. ಆದರೆ,ಅಮೆರಿಕೆ, ಚೀನ, ಅಥವಾ ರಷ್ಯಾಗಳಿಂದ ಪಡೆದ ಶಸ್ತ್ರಾಸ್ತ್ರಗಳ ಬಲದಿಂದಲೇ 'ಬಂಗ್ಲಾ ದೇಶ'ವನ್ನು ತನ್ನ ಮುಷ್ಟಿಯಲ್ಲಿಡಬಹುದೆಂದು ಅವರು ನಂಬಿದ್ದರೆ, ಅದು ಶುದ್ಧಾಂಗ ಸುಳ್ಳು. ಆದುದರಿಂದಲೇ ವಿಶ್ವದ ಹೆಚ್ಚಿನ ರಾಷ್ಟ್ರಗಳು ಯಾಹ್ಯಾಖಾನರ ಈ ದುಸ್ಸಾಹಸಕ್ಕಾಗಿ ತೀವ್ರ ಕಳವಳ ವ್ಯಕ್ತಪಡಿಸಿವೆ. ಒಂದು ವೇಳೆ ಯಾಹ್ಯಾಖಾನರು ಗುಂಡು–ಬಾಂಬುಗಳ ದೈತ್ಯಬಲದಿಂದ ಬಂಗ್ಲಾದೇಶದ ಮಣ್ಣನ್ನು ಉಳಿಸಿಕೊಳ್ಳಲು ಶಕ್ತರಾದರೂ ಮನವು ಅವರ ಪಂಜರದಿಂದ ಎಂದೋ ಹಾರಿಹೋಗಿದೆ. ಗಿಳಿಯಿಲ್ಲದ ಪಂಜರದಿಂದಲೇ ಅವರು ತೃಪ್ತರಾಗಬೇಕಾದೀತು. ಬಂಗ್ಲಾ ದೇಶದ ಜನರ ಮಾನವೀಯ ಹೋರಾಟಕ್ಕೆ ಮಾನವೀಯರೆಲ್ಲರ ಸಹಾನುಭೂತಿ ಇದ್ದೇ ಇದೆ. ಅದಿಲ್ಲವೆಂದರೆ ಅವರು ಅವರಂಗಜೇಬನ ಕುಲದವರೆಂದೇ ಅರ್ಥ.

ಉಗಾದಿಯ ಉಡುಗೊರೆ

ಹೊಸ ವರ್ಷದ ಉಡುಗೊರೆಯಾಗಿ ಪ್ರಧಾನಿ ಇಂದಿರಾಗಾಂಧಿಯವರು ಕರ್ನಾಟಕಕ್ಕೆ ಅಪೂರ್ವವಾದ ರಾಷ್ಟ್ರಪತಿ ಆಳ್ವಿಕೆಯನ್ನು ಕೊಟ್ಟಿದ್ದಾರೆ. ವೀರೇಂದ್ರ ಪಾಟೀಲರ ಸರಕಾರ ಬಹುಮತ ಕಳೆದುಕೊಂಡುದರಿಂದ ರಾಜಿನಾಮೆ ನೀಡಿತು. ವಿರೋಧಿ ಪಕ್ಷದ ನಾಯಕ ಸಿದ್ಧವೀರಪ್ಪನವರು ತಾನು ಸರಕಾರ ರಚಿಸುವೆನೆಂದು ಹೇಳಿದರೂ ಅವರ ಪಕ್ಷದೊಳಗೆ ಭಿನ್ನಾಭಿಪ್ರಾಯ ಮೂಡಿದ್ದರಿಂದ ಅದು ಅನಿಶ್ಚಯ. ಇನ್ನು ಗೋಪಾಲ ಗೌಡರ ಬಹುಮತದಲ್ಲಿ ಸಂದೇಹ. ಮುಂಗಡಪತ್ರವನ್ನು ಸ್ವೀಕರಿಸುವುದು ಅನಿವಾರ್ಯವಾದದ್ದರಿಂದ ವಿಧಾನ ಸಭೆಯನ್ನು ವಿಸರ್ಜಿಸದೆ ರಾಷ್ಟ್ರಪತಿ ಆಳಿಕೆ ಘೋಷಿಸಬಹುದೆಂಬ ರಾಜ್ಯಪಾಲರ ಸಿಫಾರಸಿನ ಮೇಲೆ ಈ ಉಡುಗೊರೆ ಬಂತು. ಇದು ಸ್ವಾಗತಾರ್ಹವೇ. ಬಜೆಟ್ಟಿಗೆ ಲೇಖಾನುದಾನವನ್ನಾದರೂ ಪಡೆಯದೆ ಹೋದರೆ ಸರಕಾರವೇ ಕುಂಠಿತವಾಗುತಿತ್ತು.

ರಾಜ್ಯಪಾಲರ ಈ ಕ್ರಮದಿಂದ ಇಂಡಿಕೇಟ್ ನಾಯಕರು ಕುತ್ತದಿಂದೊಮ್ಮೆಗೆ ಪಾರಾದರು. ದೇವರಾಜ—ಸಿದ್ಧವೀರಪ್ಪನವರ ಹೋರಾಟದಲ್ಲಿ ಮಧ್ಯಸ್ಥಗಾರರಾಗಲು ಅವರಿಗೆ ಅಂಜಿಕೆಯಿತ್ತು. ವಾಸ್ತವವಾಗಿ ಪಕ್ಷಾಂತರಗೊಂಡವರು ಮೂಲ ಪಕ್ಷದತ್ತ ಹಿಂತಿರುಗತೊಡಗಿದ್ದರಿಂದ ಮುಖ್ಯಮಂತ್ರಿಯಾಗುವ ಸಿದ್ಧವೀರಪ್ಪನವರ ಕನಸು ಕನಸೇ ಆಗಿ ಉಳಿಯಿತು. ಸದ್ಯಕ್ಕೆ ದೇವರಾಜರೇ ಮೊಸೆ ಹುರಿ ಮಾಡಿದರು. ಆದರೆ, ತನಗೆ ಅನಾಯಾಸವಾಗಿ ಬಂದ ಅವಕಾಶವನ್ನು ಬಳಸಗೊಡದವರ ಮೇಲೆ ಸಿದ್ಧವೀರಪ್ಪನವರು ಮುಯ್ಯಿ ತೀರಿಸದೆ ಇರುತ್ತಾರೆಯೆ? ನಿಜಲಿಂಗಪ್ಪನವರ ಮೇಲಿನ ವ್ಯಕ್ತಿಗತ ಮುನಿಸೇ ಅವರನ್ನಿಂದು ಇಂಡಿಕೇಟ್ ಅರ್ಧ ಸಿಂಹಾಸನದಲ್ಲಿ ಮಂಡಿಸುವಂತೆ ಮಾಡಿದೆ. ಸಿದ್ಧವೀರಪ್ಪನವರ ಸ್ಥಾನದಲ್ಲಿ ಮತ್ತಾರಾದರೂ ಒಕ್ಕಲಿಗನಿರುತಿದ್ದರೆ, ಕಂಡಿತಕ್ಕೂ ಇಂಡಿಕೇಟ್ ಸರಕಾರ ರಚನೆಯಾಗುತಿತ್ತು. ಮುಂದೆ ಬಜೆಟ್ಟು ಅಂಗೀಕೃತವಾದ ಮೇಲೆ ಗೋಪಾಲ ಗೌಡರ ಬಹುಮತದ ಪರೀಕ್ಷೆಯಾದರೂ ಆಗಬಹುದು.

●●

ಗೇಹರಾಜ್ಯದಲ್ಲಿ

ರಾಜ್ಯಕೀಯದ ಬರಡು ಜಾಯಮಾನ

'ಏನಂತೆ?'

'ಯಾವುದು?'

'ಇಲ್ಲಾ ಡಿಲ್ಲೀ ಸುದ್ದಿ ಏನೂಂತ?'

'ಏನು ಅಂದ್ರೆ ಏನು?'

'ಅಲ್ಲಾರೀ, ಕರ್ನಾಟಕದಲ್ಲಿ ಮುಂದೇನೂಂತ....'

'ಅದೇ?'

'ಹ್ಞೂಂ....'

'ಮತ್ತಿನ್ನೇನು? ಇದ್ದದ್ದೇ ಹಳೇ ರೋಗ....'

'ಹಾಗಂದ್ರೆ?'

'ಅಲ್ವೆ, ಇಂಡಿಕೇಟಿನಲ್ಲೇ ಭಾರೀ ಜಗ್ಗಣ ಓಡಾಡ್ತಾ ಇದೆ....'

'ಅದು ಸರೀನ್ನಿ. ನಿರ್ಧಾರವೇನಾಯ್ತು?'

'ಆದೀತು. ಏನು ನಿರ್ಧಾರ ಮಾಡಿದರೂ ಅದನ್ನು ಯಾರಾದರೊಬ್ಬರ ಮೇಲೆ ಹೇರಿದಂತೆ. ಆದ್ದರಿಂದ ಮತ್ತೆ ಇತಿಹಾಸದ ಪುನರಾವರ್ತನೆ....'

'ಅಂದರೆ?'

'ದೇವರಾಜ ಅರಸರು ತಮ್ಮ ಬಲ ಬರಿಯ ಐವತ್ತನಾಲ್ಕು. ತಾನು ದಿಲ್ಲಿಯಲ್ಲಿರುವಾಗ, ತನಗರಿವಿಲ್ಲದಂತೇ ಸಿದ್ಧವೀರಪ್ಪಾದಿಗಳು ಸಿಂಡಿಕೇಟಿನಿಂದ ಎಮ್ಮೆಲ್ಲೈಗಳನ್ನು ಎಳೆದುಕೊಂಡದ್ದು ಅನುಚಿತ. ಈ ಪಕ್ಷಾಂತರಿಗಳನ್ನು ಕಟ್ಟಿಕೊಂಡು ಸರಕಾರ ರಚನೆ ಮಾಡುವುದು ಸುತರಾಂ ಅನಿಷ್ಟ ಕಾರಕ. ಈಗ ತಾನೇ ಬೀಸಿದ ಇಂದಿರಾ ಗಾಳಿಗೆ ಬೃಹತ್ ಪರ್ವತ ಎನ್ನುತ್ತಾರೆ.'

'ಅದು ಹೌದೂನ್ನಿ. ಆದರೆ, ಅದು ಅರಸರ ಅಭಿಪ್ರಾಯವಿರಬೇಕಷ್ಟೆ. ಕೇಂದ್ರದ ಇಂಡಿಕೇಟಿನದ್ದಿರಲಾರದು....'

'ಯಾಕೆ?'

'ಅಲ್ಲಾರಿ, ಉತ್ತರ ಪ್ರದೇಶದ ಟಿ. ಎನ್. ಸಿಂಗರನ್ನು ಉರುಳಿಸಲು ಪಕ್ಷಾಂತರಕ್ಕೆ ಬೇಕಷ್ಟು ಪ್ರೋತ್ಸಾಹ ಅಲ್ಲಿನ ಇಂಡಿಕೇಟು ನೀಡುತ್ತಲೇ ಬಂದಿದೆ. ಅದರ ಬಗ್ಗೆ ಕೇಂದ್ರ ಚಕಾರ ಶಬ್ದವೆತ್ತಲಿಲ್ಲ....'

'ಅದು ಅಲ್ಲಿಗೆ; ಇದು ಇಲ್ಲಿಗೆ.'

'ಅದೂ ಸರೀನ್ನಿ. ಆಯಾ ಭೂಮಿಯ ಗುಣ, ವಾತಾವರಣ, ಸಾರ ಸಂರಕ್ಷಣಾ ಶಕ್ತಿಗನುಸಾರವಾದ ಬೀಜ ಬಿತ್ತಬೇಕು.'

'ಹ್ಞೂಂ....ಆದರೆ, ಸಿದ್ಧವೀರಪ್ಪಾದಿಗಳ ಸಿದ್ಧಾಂತವೇ ಬೇರೆ. ತಮ್ಮ ಪಕ್ಷದ ದಿಗ್ವಿಜಯದಿಂದ ನಿಜವಾದ ಕಾಂಗ್ರೆಸ್ ತಮ್ಮದು ಎಂಬ ಸತ್ಯ ಹೃದಯಕ್ಕೆ ಇಳಿದ ನಂತರ ತಮ್ಮ ಬಳಿ ಬಂದವರನ್ನು ದೂರ ಹೋಗಿ ಅನ್ನುವುದು ಅನ್ಯಾಯ. ಅವರ ಪಕ್ಷನಿಷ್ಠೆಯಲ್ಲಿ ಸಂದೇಹ ತೋರುವುದು ಅಸಹಜ. ಆದ್ದರಿಂದ ಸರಕಾರ ರಚಿಸಲು ಬಂದ ಆಹ್ವಾನವನ್ನು ಸ್ವೀಕರಿಸುವುದೇ ಜಾಣತನ. ತಮ್ಮ ಬೇರು ಹರಡಿ ನಿಜಲಿಂಗಪ್ಪನವರನ್ನೂ ಅವರ ಶಿಷ್ಯೋತ್ತಮರನ್ನು ವಾನಪ್ರಸ್ಥಕ್ಕೆ ಕಳಿಸಿಬಿಡೋಣ....'

'ಹ್ಞೂಂ, ಭಾರಿ ಆಲೋಚನೆ. ಅಲ್ಲಾರೀ, ಯಾರೋ ಕೆಲವರು ಅನ್ನುತಿದ್ರಂತೆ— ಸದ್ಯ ಸಂಪುಟ ರಚಿಸೋಣ, ಮತ್ತೆ ಚುನಾವಣೆಯನ್ನೂ ನಡೆಸೋಣ ಅಂತ....'

'ಇದು ಮಧ್ಯಮ ಮಾರ್ಗ. ಆದರೆ ನೋಡು, ಸರಕಾರ ರಚಿಸುವುದಾದರೆ ಒಂದೆರಡು ತಿಂಗಳುಗಳವರೆಗೆ ಮಾತ್ರ ವೇಕೆ? ಮುಂದುವರಿಯಬಹುದಲ್ಲಾ ಏಳೆಂಟು ತಿಂಗಳು? ಆದ್ದರಿಂದ ಬೇಡವೇ ಬೇಡ ಅನ್ನುತ್ತಾರೆ ಕೆಲವರು.'

'ಅಲ್ಲಾರಿ, ಇದು ಭಾರೀ ತಮಾಷೆ....'

"ಏನು?"

'ಸಂಸ್ಥೆ—ಶಾಸಕರ ನಡುವೆ ಹುಟ್ಟಿದ ಈ ತಿಕ್ಕಾಟ....'

'ಇದು ಭಿನ್ನಮತ—ತಿಕ್ಕಾಟಗಳ ಮಟ್ಟ ಮೀರಿ ನಿಂತಿದೆ ಕಣೆ. ಅಂದು ಇಂದಿರಾಗಾಂಧಿ— ನಿಜಲಿಂಗಪ್ಪನವರಲ್ಲಿ ಮೂಡಿದ್ದೇ ಇಂದು ಸಿದ್ಧವೀರಪ್ಪ— ದೇವರಾಜರಲ್ಲಿ ತಲೆದೋರಿದೆ.'

'ಅಲ್ಲಾರಿ, ರಾಜ್ಯದ ಹಲವೆಡೆಯಿಂದ ಅರಸರಿಗೆ ಬೆಂಬಲ ಸೂಚಿಸಿ ತಂತಿ ಗೊತ್ತುವಳಿ ಹೋಗಿವೆಯಂತೆ....'

'ಅರಸರನ್ನು ಕಿತ್ತುಹಾಕಿರೆಂದೂ ತಂತಿ ಹೋಗಿದೆ...'

'ಅಲ್ಲಾರಿ, ದಿಲ್ಲಿಯಲ್ಲಿ ಏನೂ ಆಗೋದಿಲ್ಲಾಂತೀರಾ?'

'ಛೆ, ಛೆ....ಆಗದೆ ಉಂಟೆ? ಇಂದಿರಾ ಅಂದು ಹೊತ್ತಿಸಿದ ಆತ್ಮಸಾಕ್ಷಿ ದೀಪವೀಗ ಬೆಳಕು ನೀಡಬೇಕು.'

'ಅಂದರೆ, ಸಿದ್ಧವೀರಪ್ಪನವರು ಶಾಸಕರ ಆತ್ಮ ಸಾಕ್ಷಿಯನ್ನು ಜಾಗೃತಗೊಳಿಸಿ ಸರಕಾರ ರಚಿಸಬೇಕೂಂತೀರಾ?'

'ಅಷ್ಟು ಮಾತ್ರವಲ್ಲ, ದೇವರಾಜ ಅರಸರು ಒಂದೋ ಸಿದ್ಧಾಂತದ ಬಲದಿಂದ ಇಂಡಿಕೇಟಿಗೆ ರಾಜಿನಾಮೆ ನೀಡಬೇಕು; ಅಥವಾ ಆತ್ಮಸಾಕ್ಷಿಯವರನ್ನು ಪಕ್ಷದಿಂದ ಕಿತ್ತು ಹಾಕಬೇಕು....'

'ಇದೆಲ್ಲಾ ಸಂಭಾವ್ಯವಿತ್ತು. ಆದರೆ, ಅರಸರನ್ನೂ ಸಿದ್ಧವೀರಪ್ಪನವರನ್ನೂ ಯಾರು ಕೇಳ್ತಾರೆ?'

'ಪೆಟ್ಟಿಗೆ ಅವರದ್ದೇ ಆದರೂ ಬೀಗದ ಕೈ ಡಿಲ್ಲಿಯಲ್ಲಿದೇನ್ನುತ್ತೀಯ?'

'ಅಲ್ಲವೇ ಮತ್ತೆ? ಆದರೆ, ನೋಡಿ, ಜಯಭೇರಿ ಹೊಡೆದು ವಿರೋಧಿಗಳನ್ನೆಲ್ಲ ಮಟ್ಟ ಮಲಗಿಸಿದ ಶುಭಗಳಿಗೆಯಲ್ಲಿ ಪಕ್ಷದಲ್ಲಿ ಮೂಡಿದ ಒಡಕು ಶೋಭನೀಯವಲ್ಲ.'

"ಇದು ಒಡಕಲ್ಲ ಕಣೇ. ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ನಿರ್ಧಾರಕ್ಕೆ ಇಬ್ಬರೂ ಬದ್ಧರು...."

'ಅಲ್ಲಾರಿ, ಇಬ್ಬರ ಅಭಿಪ್ರಾಯವನ್ನೂ ಮನ್ನಿಸುವುದು ಹೇಗೆ ಸಾಧ್ಯ? ಯಾರಾದರೊಬ್ಬರ ಪರವಾಗಿಯೇ ಅದು ತೀರ್ಮಾನ ನೀಡಬೇಕು. ಆಗ ಉಳಿದ ಪಕ್ಷದವರು ಖಿನ್ನರಾಗುತ್ತಾರೆ. ಪಕ್ಷ ಅಂತರಂಗದಲ್ಲೇ ಎರಡಾದಂತೆ. ಮುಂದೆ ಯಾವುದೇ ವೇಳೆಯಲ್ಲಿ ಇದು ಭುಗಿಲೆನ್ನುತ್ತದೆ. ಸ್ಥಿರತೆ ಹೊರಟು ಹೋಯ್ತು."

'ಅದಕ್ಕೇನು ಮಾಡಲಾಗುತ್ತೆ? ಅದು ಮೈಸೂರಿನ ಜಾಯಮಾನ. ಈ ಜಾಯಮಾನವನ್ನು ನಿಜಲಿಂಗಪ್ಪನವರೇ ಕುಸು ತಡೆ ಹಿಡಿದರು.'

'ನೋಡಿ, ನನಗೇನೋ ಒಂದು ಸಂದೇಹ- ರಾಜ್ಯದಲ್ಲಿ ಇಂಡಿಕೇಟಿನ ದಿಗ್ವಿಜಯಕ್ಕೆ ಅರಸರೇ ಕಾರಣವೆಂಬ ಭಾವನೆ ಇರುವುದರಿಂದ, ಅವರೇ ಗೆಲ್ಲುತ್ತಾರೆ. ಅದರ ಮೇಲೆ, "ಯುವಕರು" ಎಂದು ಕರೆದುಕೊಳ್ಳುವವರು ಅವರ ಪರವಾಗೇ ಇದ್ದು ಇವರ ಮನಸ್ಸನ್ನು ಮೊಳಕೆಯಲ್ಲೇ ಕರಟಿಸಲು ಕೇಂದ್ರ ನಾಯಕರು ಸಿದ್ಧರಾಗುವುದಿಲ್ಲ.'

'ಹ್ಞೂಂ. ಆಗುವುದು ಹಾಗೆಯೇ. ಆದರೆ, ಹಾಗಾದಲ್ಲಿ ಹಳೆಯ ಹುಲಿಗಳ ಹಲ್ಲು ಪೂರ್ಣ ಉದುರುತ್ತದೆ.'

"ಅಂದರೆ?"

'ಕೆಲವು ಪಟ್ಟ ಭದ್ರ ಹಿತಾಸಕ್ತಿಗಳನ್ನು ಮೂಲೆಗೆ ತಳ್ಳುವ ಪ್ರಯತ್ನ ಇಕ್ಕಡೆಯಲ್ಲೂ ಆರಂಭವಾಗುತ್ತದೆ.'

"ಇಕ್ಕಡೆ ಎಂದರೆ?"

'ಅರಸರದ್ದು ಒಂದು ಕಡೆ; ಸಿದ್ಧವೀರಪ್ಪರದ್ದು ಇನ್ನೊಂದು ಕಡೆ'

"ಅಂದರೆ?"

'ನೋಡಮ್ಮ, ಈ ಒಡಕಿನ ಹಿಂದೇನು ಇದೆ ಎಂದೆನಿಸುತ್ತದೆ?'

'ಏನಿದೆ?'

'ಅರಸರು ಪಕ್ಷದ ಅಧ್ವರ್ಯು, ಸಿದ್ಧವೀರಪ್ಪ ಶಾಸಕರ ಅಧ್ವರ್ಯು. ಇಬ್ಬರಿಗೂ ತಾನು ಮುಖ್ಯಮಂತ್ರಿಯಾಗಬೇಕೆಂಬ ಹಂಬಲ ತುದಿಮೂಗಿನ ಮೇಲೆ. ಸದ್ಯದ ಪರಿಸ್ಥಿತಿಯಲ್ಲಿ ಅರಸರು ಮುಖ್ಯಮಂತ್ರಿಯಾಗುವುದು ಸಾಧ್ಯವಿಲ್ಲ. ಅವರು ಮುಖ್ಯಮಂತ್ರಿಯಾಗುವ ಸಾಧ್ಯತೆಯನ್ನು ಈಗಿಂದೀಗಲೇ ತಡೆದು ತನ್ನ ಸ್ಥಾನವನ್ನು ಭದ್ರಪಡಿಸಲೆಂದೇ ಸಿದ್ಧವೀರಪ್ಪನವರ ಪ್ರಯತ್ನ. ಈಗೊಮ್ಮೆ ಆ ಸ್ಥಾನ ಗಿಟ್ಟಿಸಿಕೊಂಡರೆ, ಚುನಾವಣೆಯ ನಂತರ ಉಳಿಸಲು ಸುಲಭವಾಗುವುದೂಂತ....'

"ಇರಬಹುದೂನ್ನಿ, ಎಂದರೆ, ಕರ್ನಾಟಕದ ರಾಜ್ಯಕೀಯದ ಮೇಲೆ ಒಂದಲ್ಲ ನೂರು ಪ್ರಭಾವಗಳು ಬೀರುತ್ತವೆ ಜಾತೀಯತೆ, ಅಧಿಕಾರ ಲಾಲಸೆ, ಸ್ವಾರ್ಥಪ್ರಿಯತೆ ...'

'ಸಾಕು ಬಿಡೇ. ರಾಜ್ಯಕೀಯ ಅಂದರೆ ಅವೇ. ಸ್ಥಾನಗಳಿಸುವುದು—ಮತ್ತದನ್ನು ಉಳಿಸಲು ಹೆಣಗುವುದು. ಅಲ್ಲವಾದರೆ, ಬಂಗಾಳದಲ್ಲಿ ಅಜಯ ಮುಖರ್ಜಿಗೇ ಮತ್ತೆ ಮುಖ್ಯಮಂತ್ರಿ ಪಟ್ಟವನ್ನು ಇಂದಿರಾ ಗಾಂಧಿ ಕೊಡಬೇಕಾದರೆ....?

'ಇಂದಿರಾ ಗಾಂಧಿಯೇ ಮತ್ತೆ ಪ್ರಧಾನಿಯಾಗಲಿಲ್ಲವೆ? ತಮಿಳುನಾಡಿನಲ್ಲಿ ಕರುಣಾನಿಧಿಯವರು, ಕೇರಳದಲ್ಲಿ ಅಚ್ಯುತಮೆನನ್ನರು ತಂತಮ್ಮ ಸ್ಥಾನವನ್ನು ಉಳಿಸಿಕೊಂಡರಲ್ಲವೆ?'

'ಹ್ಞೂ....ಅವರಿಗೆಲ್ಲ ಅಧಿಕಾರ ಮೋಹವಿಲ್ಲ; ಅಧಿಕಾರ ಸ್ಥಾನ ಸೇವೆ ಮಾಡಲೊಂದು ಅವಕಾಶ'

'ಹೌದ್ರಿ, ಬಡವ ಹೊಟ್ಟೆಗಿಲ್ಲದೆ ಅವೇಧ್ಯ ಭಕ್ಷಿಸಿದರೆ, ಅಮೀರ ಔಷಧಿಗೆಂದದನ್ನು ಮೆಲ್ಲುತ್ತಾನೆ....'

'ಛಿ....ಛಿ....ಏನಿದು ಮಾತು? ಶಾಂತಂ ಪಾಪಂ ಶಾಂತ ಪಾಪಂ....

'ಹೋಗಲಿ ಬಿಡಿ. ಈ ರಾಜ್ಯಕೀಯವೇ ಹಾಗೆ. ಬರೀ ಬರಡೆಮ್ಮೆ ಹಾಗೆಂದು ಅದನ್ನು ಕರೆಯದೆ ಇರೋದಕ್ಕೂ ಸಾಧ್ಯವಾಗೋದಿಲ್ಲ'....

"ಹ್ಞೂಂ....ಇದು ರಾಜ್ಯಕೀಯದ ಜಾಯಮಾನವಾಯ್ತು.'

'ಯಾವುದು?'

"ಏನಿಲ್ಲಾನ್ನು...." —ಗೋರಾ.

ನವಯುಗ

ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

ಮೇ ತಿಂಗಳಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ !

ಪುತ್ತೂರು IIIrd Adll. ಮುನ್ಸಿಫ್ ಕೋರ್ಟಿನಲ್ಲಿ

R. R. C. 1984/70

ಪದ್ಮನಾಭ ಯಿಡಪ್ಪಾಡಿತ್ತಾಯ —ಅರ್ಜಿದಾರ

ಚೆನ್ನಮ್ಮ ಸಹಾ —ಎದ್ರಿರು

ಎದ್ರಿರು: 3 ದುಗ್ಗ ಗೌಡ) ಅಮ್ಮು ಗೌಡರ

4 ನಾಗಪ್ಪ ಗೌಡ) ಮಕ್ಕಳು.

—ಗೋಳಿತೊಟ್ಟು ಗ್ರಾಮಸ್ತರು.

ಸದ್ರಿ 3, 4ನೇ ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

68–69ನೇ ವರ್ಷದ ಗೇಣಿ ಕೇಳಿ ಅರ್ಜಿದಾರನು ನಿಮ್ಮ ಮೇಲೆ ಕೊಡಾ ಮಾಡಿದ ಮೇಲಿನ ಅರ್ಜಿಯನ್ನು ತಾ. 5-4-71ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ಹಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M. Rammohan Rao

Adv. for petitioner

Puttur, 24-3-71.

ಮೂರು ರಾಜ್ಯಗಳ ಮೂರಾಬಟ್ಟೆ

ಲೋಕ ಸಭೆಗೆ ನಡೆದ ಮಧ್ಯಾವಧಿ ಚುನಾವಣೆಗಳ ಜತೆಗೆ ವಿಧಾನ ಸಭೆಗೂ ನಡುಗಾಲದ ಚುನಾವಣೆ ನಡೆದ ರಾಜ್ಯಗಳು ತಮಿಳುನಾಡು, ಒರಿಸ್ಸ ಮತ್ತು ಪಶ್ಚಿಮ ಬಂಗಾಳಗಳು. ಸಿಂಡಿಕೇಟಿನ ನೇತೃತ್ವದ ಸಂಯುಕ್ತರಂಗದ ಅದ್ಭೂರಿಯ ಪ್ರಚಾರದಿಂದ ಕಂಗೆಟ್ಟ ಕರುಣಾನಿಧಿಯವರು ಇಂದಿರಾಗಾಳಿಯ ಸದುಪಯೋಗವನ್ನು ಪಡೆದುಕೊಂಡು ತನ್ನ ಅಧಿಕಾರವುಳಿಸಬೇಕೆಂದು ಬಗೆದು ಬಹುಮತವಿದ್ದರೂ ವಿಧಾನಸಭೆಯನ್ನು ವಿಸರ್ಜಿಸಿ ಜನತೆಯನ್ನು ಎದುರಿಸರು. ಸಾಕಷ್ಟು ಪ್ರತಿಕೂಲ ವಾತಾವರಣವಿದ್ದರೂ ಕಾಮರಾಜ—ರಾಜಾಜಿ ಒಂದಾದರೂ ಇಂದಿರಾ ಗಾಳಿಯ ಪರಿಣಾಮವಾಗಿಯೆ ಅವರು ತನ್ನ ಬಲವನ್ನು ಮತ್ತಷ್ಟು ಬೆಳೆಸಿಕೊಂಡರು ಕೇಂದ್ರದಲ್ಲಿ ಇಂದಿರಾ ಗಾಂಧಿಯ ಕೈಗಳಿಗೆ ಒನಕೆ ಬಲ ಬಂದಂತೆಯೇ ತಮಿಳುನಾಡಿನಲ್ಲಿ ಕರುಣಾನಿಧಿಯವರಿಗೆ ಆನೆಯ ಬಲ ಬಂತು. ಅವರ ವಿರೋಧಿಗಳು ನಿರ್ಬಲರಾದರು. ದ್ರಾವಿುಕವನ್ನು ಅಧಿಕಾರದಿಂದ ಉರುಳಿಸಲು ಒದಗಿದ ಸುಸಂದರ್ಭವು ಅವರ ವಿರೋಧಿಗಳಿಗೆ ಮುಳ್ಳಿನ ಹಾಸಿಗೆಯೇ ಆಯಿತು. ಕರುಣಾನಿಧಿಯವರ ವಿಜಯದಿಂದ ಕಾಮರಾಜ—ರಾಜಾಜಿಯವರ ಕನಸು ಕನಸಾಗಿಯೇ ಉಳಿಯಿತು. ದ್ರಾಮುಕ ಮುಂದೈದು ವರ್ಷ ನಿರ್ಭೀತಿಯಿಂದ ರಾಜ್ಯವಾಳುವುದು ಸಾಧ್ಯವಾಯ್ತು. ಕರುಣಾನಿಧಿಯವರ ಕೈಯ ರೊಟ್ಟಿಗೆ ತುಪ್ಪ ಸುರಿದಂತಾಯ್ತು.

ಒರಿಸ್ಸಾದಲ್ಲಿನ ಸ್ವತಂತ್ರ ಪಕ್ಷದ ಸಿಂಗದೇವರ ಸರಕಾರ ಒಂದೂವರೆ ವರ್ಷಗಳಿಂದ ಹಲವಾರು ವಿಘ್ನ ಬಾಧೆಗಳನ್ನು ಎದುರಿಸಬೇಕಾಯ್ತು. ಡೋಲಾಯಮಾನವಾದ ತನ್ನ ಸಿಂಹಾಸನವನ್ನು ಉಳಿಸಿಕೊಳ್ಳಲು ಸಿಂಗದೇವರು ಬಹು ಪ್ರಯಾಸ ಪಟ್ಟರು. ತನಗೆ ಬಹುಮತವಿಲ್ಲವೆಂದ ವಿರೋಧ ಪಕ್ಷೀಯರ ಮಾತನ್ನು ಅವರು ಮೊದಲಿಗೆ ಒಪ್ಪಲಿಲ್ಲ. ಅಷ್ಟರಲ್ಲೇ ಕರುಣಾನಿಧಿಯವರು ಮುಂದಿಟ್ಟ ದಿಟ್ಟ ಹೆಜ್ಜೆಯ ಸುದ್ದಿ ಅವರು ಕೇಳಿದರು. ಲೋಕ ಸಭಾ ಚುನಾವಣೆಯ ವೇಳೆಯೇ ವಿಧಾನ ಸಭೆಗೂ ಚುನಾವಣೆ ನಡೆಯುವುದಾದರೆ, ತಾನು ರಾಜಿನಾಮೆ ಕೊಡುವುದಾಗಿ ಅವರು ಹೇಳಿದರು. ಆದರೆ, ಆಗಾಗಲೇ ಬಹುಮತವನ್ನು ಕಳೆದುಕೊಂಡ ಸಿಂಗದೇವರ ಮಾತಿಗೆ ಯಾರ ಮನ್ನಣೆ ಸಿಗಬೇಕು? ಒಂದೆರಡು ದಿನಗಳಲ್ಲೇ ಅವರೇನೋ ರಾಜಿನಾಮೆ ನೀಡಿದರು. ರಾಜ್ಯಪಾಲ ಅನ್ಸಾರಿಯವರು ರಾಷ್ಟ್ರಪತಿ ಆಳಿಕೆಗೆ ಸಿಫಾರಸು ಮಾಡಿದರು; ವಿಧಾನ ಸಭೆಗೆ ಚುನಾವಣೆ ನಡೆಸಲು ಕೇಳಿಕೊಂಡರು.

ಉಸ್ತುವಾರಿ ಸರಕಾರವೆಂದು ಸಿಂಗದೇವರ ಸಚಿವ ಸಂಪುಟ ಉಳಿಯಲಿಲ್ಲ. ಚುನಾವಣೆಯೂ ನಡೆಯಿತು. ಆದರೆ ಸಿಂಗದೇವರು ಬಯಸಿದ್ದು ಮಾತ್ರ ಆಗಲಿಲ್ಲ. ಇಂಡಿಕೇಟು ಅಧಿಕ ಸಂಖ್ಯೆಯ ಸ್ಥಾನವನ್ನೇನೋ ಗಳಿಸಿತು. ಮಾಜಿ ಮುಖ್ಯಮಂತ್ರಿ ಬಿಜು ಪಟ್ನಾಯಕರ ಉತ್ಕಲ ಕಾಂಗ್ರೆಸ್ಸೂ, ಸಿಂಗದೇವರ ಸ್ವತಂತ್ರ ಪಕ್ಷವೂ ಉಳಿದವುಗಳಲ್ಲಿ ಸಿಂಹಪಾಲು ಗಳಿಸಿದುವು. ಚುನಾವಣಾ ನಂತರ ಏಕಪಕ್ಷೀಯ ಸರಕಾರ ರಚನೆ ಅಸಾಧ್ಯವಾಯ್ತು. ಇಂಡಿಕೇಟ್ ಮತ್ತು ಸ್ವತಂತ್ರ ಪಕ್ಷಗಳು ಒಂದುಗೂಡಿ ಸರಕಾರ ರಚಿಸುವುದೆಂದೂ ಆಗದ ಮಾತು. ಆದರೆ, ಒಂದು ಕಾಲದಲ್ಲಿ ಇಂಡಿಕೇಟಿಗರಾಗಿದ್ದ ಬಿಜೂ ಉತ್ಕಲ ಕಾಂಗ್ರೆಸ್ಸು ಇಂಡಿಕೇಟಿನೊಂದಿಗೆ ಕೂಡಿ ಸಂಮಿಶ್ರ ಸರಕಾರ ರಚಿಸುವ ಸಾಧ್ಯತೆಯಿತ್ತು. ಇಂಡಿಕೇಟ್ ನಾಯಿಕೆ ರಾಜ್ಯಸಭಾ ಸದಸ್ಯೆ, ಕೇಂದ್ರ ಸಚಿವೆ ನಂದಿನಿ ಸತ್ಪತಿಯವರೂ ಇದೇ ಆಶಯ ಹೊಂದಿದ್ದರು. ಆದರೆ, ಉತ್ಕಲ ಕಾಂಗ್ರೆಸ್ಸು ಇಂಡಿಕೇಟಿಗೆ ಶರಣು ಬರಬೇಕೆಂಬುದು ಅವರ ಆಶಯವಿತ್ತು.

ಇಲ್ಲಿ ಇಂದಿರಾ ಗಾಂಧಿ ಬಯಸಿದ್ದರೆ ಎಲ್ಲವೂ ಸರಿ ಹೊಂದುತಿತ್ತು. ಆದರೆ, ಒರಿಸ್ಸಾದಲ್ಲಿ ಯಾರ ಸರಕಾರವಿದ್ದರೇನು? ಆದುದರಿಂದ ಅವರು ಆಜ್ಞಾಪಿಸಿದರು–'ಸಂಮಿಶ್ರ ಸರಕಾರ ಬೇಡ; ವಿರೋಧ ಪಕ್ಷವಾಗಿಯೇ ಕೂತುಕೊಳ್ಳಿ.' ಸಿಂಗ ದೇವರೂ ಬಿಜೂ ಪಟ್ನಾಯಕರೂ ಒಂದಾದರೆ ಸರಕಾರ ರಚಿಸಬಹುದಿತ್ತು. ಬಿಜೂಗೆ ಇದರಲ್ಲಿ ಆಸಕ್ತಿ ಮೂಡಲಿಲ್ಲ. ತಾನು ಪ್ರಗತಿಗಾಮಿಯೆಂದು ತಿಳಿದಿರುವ ಬಿಜೂ ಪ್ರತಿಗಾಮಿಯೆನ್ನಲಾಗುವ ಸಿಂಗದೇವರ ಕೈಮಿಲಾಯಿಸುವುದು ಸಾಧ್ಯವಾಗಲಿಲ್ಲ.

ಆದರೂ ಇಂಡಿಕೇಟು ಪರೋಕ್ಷಜಾಲ ಬೀಸತೊಡಗಿತು. ಹಿಂದೊಮ್ಮೆ ಕಾಂಗ್ರೆಸ್‌ನ ಪ್ರಶ್ನಾತೀತ ನಾಯಕರಾಗಿ ಹಲಕಾಲ ಮುಖ್ಯಮಂತ್ರಿಯಾಗಿ, ಮತ್ತೆ ಜನ ಕಾಂಗ್ರೆಸ್ ಕಟ್ಟಿ, ಮೊನ್ನೆ ಮೊನ್ನೆ ಇಂಡಿಕೇಟ್ ಸೇರಿದ ಡಾ| ಹರಿಕೃಷ್ಣ ಮೆಹತಾಬರನ್ನೇ ತನ್ನ ನಾಯಕರೆಂದು ಉತ್ಕಲ ಶಾಸಸಭಾ ಇಂಡಿಕೇಟ್ ಪಕ್ಷ ಆರಿಸಿತು. ಡಾ| ಮೆಹತಾಬರು ಉತ್ಕಲ ಕಾಂಗ್ರೆಸ್ಸನ್ನು ಒಡೆಯುವ ಪ್ರಯತ್ನವನ್ನೂ ನಡೆಸಿದರು. ಒಬ್ಬೊಬ್ಬರ ಬೆಂಬಲವನ್ನೇ ಪಡೆಯುವ ಸಾಹಸ ಮಾಡಿದರು. ರಾಜ್ಯಪಾಲರನ್ನು ಭೆಟ್ಟಿಮಾಡಿ ತನಗೆ ಬಹುಮತವಿದೆ; ತಾನು ಸರಕಾರ ರಚಿಸುತ್ತೇನೆಂದೂ ತಿಳಿಸಿದರು. ಅಷ್ಟರಲ್ಲಿ ಅವರಿಗೆ ಇಂದಿರಾ ಕರೆ ಬಂತು; ಅವರು ದೆಹಲಿಗೆ ಹಾರಿ ಹೋದರು. ಅದೇ ವೇಳೆ ಡಾ| ಅನ್ಸಾರಿಯವರು ಮೆಹತಾಬರ ಬಹುಮತದಲ್ಲಿ ತನಗೆ ವಿಶ್ವಾಸವಿಲ್ಲವೆಂದೂ ಉಳಿದವರು ಸರಕಾರ ರಚಿಸುವ ತರಾತುರಿಯಲಿಲ್ಲವೆಂದೂ ಆದುದರಿಂದ ವಿಧಾನಸಭೆಯನ್ನು ಸದ್ಯಕ್ಕೆ ಅಮಾನತ್ತುಗೊಳಿಸಿ ರಾಷ್ಟ್ರಪತಿ ಆಳಿಕೆಯನ್ನು ಮುಂದುವರಿಸಬೇಕೆಂದೂ ಸಿಫಾರಸು ಮಾಡಿದರು. ಕೇಂದ್ರ ಸಚಿವ ಸಂಪುಟದ ಸಲಹೆಯಂತೆ ರಾಷ್ಟ್ರಪತಿ ಗಿರಿಯವರು ಅದಕ್ಕೆ ಒಪ್ಪಿಗೆ ನೀಡಿದರು.

ಡಾ| ಮೆಹತಾಬರದ್ದು ವರ್ಣಮಯ ರಾಜ್ಯಕೀಯ ಜೀವನ. ಮೊದಲಿಂದಲೂ ಉತ್ಕಲದಲ್ಲಿ ನಿರಾತಂಕ ಸರಕಾರ ರಚನೆಯಾದುದೆಂಬುದಿಲ್ಲ. ಏಳು–ಬೀಳುಗಳಿಗೆ ಅದು ಮತ್ತೊಂದು ಹೆಸರು. ಪ್ರಾಯಃ ಸ್ವತಂತ್ರ ಪಕ್ಷದ ಸಿಂಗದೇವ ನಾಯಕತ್ವದ ಸರಕಾರವೇ ಬಹುಕಾಲ ಆತಂಕವಿಲ್ಲದೆ ಸಾಗಿದ ಸರಕಾರವೆನ್ನ ಬಹುದು. ಹಲವಾರು ಆರೋಪಗಳಿಗೆ ಒಳಗಾದ ಡಾ| ಮೆಹತಾಬರ ಬದಲಿಗೆ ಮತ್ತಾರನ್ನಾದರೂ ಇಂಡಿಕೇಟ್ ನಾಯಕನನ್ನಾಗಿ ಆರಿಸಿದ್ದರೆ, ಪರಿಸ್ಥಿತಿ ಸುಧಾರಿಸುವ ಸಾಧ್ಯತೆಯಿತ್ತೋ ಏನೋ. ಬಿಜೂ ಮನಸ್ಸು ಮಾಡಿದ್ದರೆ ಎಲ್ಲವೂ ಸಾಧ್ಯವಿತ್ತು. ಆದರೆ, ಅವರನ್ನು ಇಂಡಿಕೇಟು ಶಿಸ್ತುಭಂಗದ ಆರೋಪ ಹೊರಿಸಿ ಹೊರ ತಳ್ಳಿದ್ದರಿಂದಲೇ ಸದ್ಯ ಉತ್ಕಲದಲ್ಲಿ ಪರಿಸ್ಥಿತಿ ಸುಧಾರಿಸಲಿಲ್ಲ.

ಪಶ್ಚಿಮ ಬಂಗಾಳದ ಪರಿಸ್ಥಿತಿ ಇನ್ನೊಂದು ತಿರುವು ಮುಟ್ಟಿದೆ. ಅಲ್ಲಿ ಮಾರ್ಕ್ಸಿಸ್ಟರು ಅಧಿಕ ಸಂಖ್ಯಾಬಲ ಪಡೆದಿದ್ದಾರೆ. ತಾವು ಇತರರ ಬೆಂಬಲದಿಂದ ಸರಕಾರ ರಚಿಸುವದಾಗಿ ಅವರು ತುದಿಗಾಲಲ್ಲಿ ನಿಂತಿದ್ದರು. ಆ ಇತರರು ಯಾರು ಎಂದು ನಾಯಕ ಜ್ಯೋತಿ ಬಸುವಿಗೇ ಗೊತ್ತಿಲ್ಲ. ಈ ನಡುವೆ ಎರಡನೆಯ ಸ್ಥಾನದಲ್ಲಿ ನಿಂತ ಇಂಡಿಕೇಟೂ ಮುಂದಾಯಿತು. ಒಂಬತ್ತು ಇತರ ಪಕ್ಷಗಳನ್ನು ಕೂಡಿಕೊಂಡು ಅದು ಸರಕಾರ ನಿರ್ಮಾಣಕ್ಕೆ ಪ್ರಯತ್ನ ನಡೆಸಿತು. ಅದಕ್ಕಾಗಿ ಅದು ಮಹಾ ತ್ಯಾಗಕ್ಕೇ ಸಿದ್ಧವಾಯ್ತು. ಪ್ರಧಾನಿ ಗಾಂಧಿಯವರು ಬಂಗ್ಲಾ ಕಾಂಗ್ರೆಸ್ಸಿನ ಅಜಯ ಮುಖರ್ಜಿಯವರನ್ನು ದಿಲ್ಲಿಗೆ ಕರೆದರು; ಅವರಿಗೇ ಮುಖ್ಯಮಂತ್ರಿ ಪದವಿ ನೀಡುವುದಾಗಿ ಭರವಸೆ ನೀಡಿದರು; ಏನಾದರೂ ಮಾಡಿ ಸಂಪುಟ ರಚಿಸಲು ಕೇಳಿಕೊಂಡರು. ಮುಖ್ಯಮಂತ್ರಿ ಪದವಿಗಾಗಿಯೇ ಈ ಮೊದಲು ಮಾರ್ಕ್ಸಿಸ್ಟರ ನಂಟು ಮಾಡುವುದಕ್ಕೂ ಹಿಂಜರಿಯದ ಮುಖರ್ಜಿ ಈಗ ಅಂಜಿಯಾರೆ? ಸೈಗುಟ್ಟಿ ಕಲಕತ್ತೆಗೆ ಬಂದರು. ಅಂತೂ ಇಂತೂ ಹತ್ತು ಪಕ್ಷಗಳನ್ನು ಕೂಡಿಸಿದರು. ಇವುಗಳಲ್ಲಿ ಮೂರು ಸರಕಾರದಿಂದ ಹೊರಗುಳಿದೇ ಬೆಂಬಲ ನೀಡುವ ಭರವಸೆ ನೀಡಿದುವು. ಇಷ್ಟರಲ್ಲೇ ಮುಖರ್ಜಿಯವರು ಧಾವನ್ನರ ಮುಂದೆ ಪ್ರತಿಜ್ಞಾವಿಧಿ ಸ್ವೀಕರಿಸಬಹುದು.

ಈ ಮಧ್ಯೆ ಎಡ–ಬಲ ಕಮ್ಯೂನಿಸ್ಟರ ನಡುವೆ ಪತ್ರವ್ಯವಹಾರ ತೊಡಗಿದೆ. ಬಲ ಕಮ್ಯುನಿಸ್ಟರು ಮುಖರ್ಜಿಯವರಿಗೆ ಬೆಂಬಲ ನೀಡಬಾರದು—ಇದು ಮುಖ್ಯ ವಿಷಯ. "ಇನ್ನು ಮುಂದೆ ನಾವು–ನೀವು ಕಚ್ಚಾಡಬಾರದು. ಒಂದಾಗಿ ಬಾಳಬೇಕು"—ಇದು ಗೌಣ ಸಂಗತಿ. ಭಿನ್ನಭಿನ್ನವಾಗಿ ಒಡೆದು ದೂರನಿಂತ ಎರಡು ತುಕಡಿಗಳು ಒಂದಾಗುವುದು ಅಸಾಧ್ಯವಲ್ಲವಾದರೂ ನಿಕಟ ಭವಿಷ್ಯದಲ್ಲಂತೂ ದೂರದ ಮಾತು. ಅಂತಹುದೇನಾದರೂ ಆಗಬೇಕಾದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ನಡೆಯಬೇಕು. ಶ್ರೀಮತಿ ಇಂದಿರಾ ಗಾಂಧಿಯವರ ನೀತಿಗಳು ಬಲ ಕಮ್ಯುನಿಜಂಗೆ ಹತ್ತಿರಾತಿಹತ್ತಿರವಾಗುವಾಗ, ಆಕೆಯನ್ನು ಅವರು ಬೆಂಬಲಿಸದೆ ಮತ್ತೇನು ಮಾಡಿಯಾರು?

ಆದರೆ, ಪಶ್ಚಿಮ ಬಂಗಾಳದ ಸಾಮಾಜಿಕ ಪರಿಸ್ಥಿತಿ ಇನ್ನೂ ಬದಲಾಗಿಲ್ಲ. ಹಿಂದಿನಂತೆಯೇ ಕೊಲೆಗಳು ಪ್ರತಿದಿನವೂ ನಡೆಯುತ್ತಿವೆ. ಸಾಮಾಜಿಕ ಭದ್ರತೆ ದೂರದ ನಕ್ಷತ್ರವಾಗಿದೆ. ವಿತ್ತಜೀವಿತಗಳು ತೃಣಸಮಾನವಾಗಿವೆ. ರಾಷ್ಟ್ರಪತಿ ಆಳಿಕೆಯ ವೇಳೆ ಏನೇನೂ ಸುಧಾರಿಸದ ಈ ಭಯಾನಕತೆ ಮಾರ್ಕ್ಸಿಸ್ಟೇತರ ಸರಕಾರದಲ್ಲಿ ಸುಧಾರಿಸಬೇಕು. ಅಜಯ ಮುಖರ್ಜಿಯವರು ಈ ಸಾಧನೆಯಲ್ಲಿ ಸಿದ್ಧಪಡಿಸಿದರೆ, ಅಧಿಕಾರ ಲಾಲಸೆಯಿಂದ ತಾನೇ ಹಚ್ಚಿದ ಬೆಂಕಿಯನ್ನು ಆನೇ ಲಾಲಸೆಗಾಗಿ ನಂದಿಸಿದಂತಾಗುತ್ತದೆ.

● ●

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
126 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, **ಬೆಂಗಳೂರು–1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ಧಾರ್ಮಿಕ ಕ್ಷೇತ್ರ-ಪಡುಬಿದರೆ

ಭಾರತೀಯರು ಅತ್ಯದ್ಭುತ ಲೌಕಿಕಾ-ಲೌಕಿಕ ವಿಷಯಗಳನ್ನು ಕಂಡು ಮಾನವಿಕಕ್ಕಿಂತಲೂ ಹೆಚ್ಚಿನದಾದ ದಿವ್ಯಶಕ್ತಿಯೊಂದು ಇಲ್ಲಿ ಸೂತ್ರಧಾರಿಯಾಗಿದೆಯೆಂದು ತಿಳಿದುಕೊಂಡರು. ಆ ದಿವ್ಯ ಭವ್ಯ ಶಕ್ತಿಯ ಬಗೆಗೆ ಹೆಚ್ಚು ಉದಾತ್ತವಾದ ಹಾಗೂ ಆಳ ಹರಹುಗಳುಳ್ಳ ವಿಚಾರಗಳನ್ನು ಕೈಕೊಂಡರು. ವೈದಿಕ ಸಾಹಿತ್ಯ ಮತ್ತು ಪೌರಾಣಿಕ ಸಾಹಿತ್ಯ ವಿಭಾಗಗಳಲ್ಲಿ ಈ ಬಗೆಯ ಸಾಧನಗಳು ವಿವರವಾಗಿ ಹೇಳಿವೆ. ಎಲ್ಲೆಡೆ ವ್ಯಾಪ್ತರಾದ ದೇವರ ಕೇಂದ್ರತ್ವವೊಂದೆಡೆ ಕಲ್ಪಿಸುವ—ಮೂರ್ತಿ ಪೂಜೆಯ ಕುರುಹುಗಳು—ಉದ್ಗಾರಗಳು ಐದು ಸಾವಿರ ವರ್ಷದ ಹಿಂದಣ ಶಿಲ್ಪ ರೂಪದ ಅವಶೇಷಗಳಲ್ಲೂ (ಮೊಹೆಂಜ ದಾರೊ, ಹರಪ್ಪ ಇತ್ಯಾದಿ ಕಡೆಗಳಲ್ಲೂ), ವ್ಯಾಸಕೃತ ಮಹಾಭಾರತ ಇತ್ಯಾದಿ ಸತ್ ಕೃತಿಗಳಲ್ಲೂ ಕಾಣಬರುತ್ತವೆ; ಕೇಳಬರುತ್ತಿವೆ. ದೇಹದ ಎಲ್ಲೆಡೆ ವ್ಯಾಪಿಸಿದ ರಕ್ತ ಕಣಗಳಲ್ಲಿ, ಮನುಷ್ಯ ಇತ್ಯಾದಿ ಜೀವಿಗಳ ಆತ್ಮ-ಬುದ್ಧಿ—ವೀರ್ಯಾದಿಗಳು ವ್ಯಾಪಿಸಿದ್ದರೂ ಪ್ರತ್ಯೇಕಶಃ ಒಂದೊಂದೆಡೆಯಲ್ಲಿ ಮಾತ್ರ ಕೇಂದ್ರೀಕರಿಸಲ್ಪಟ್ಟುದು ವೈಜ್ಞಾನಿಕವಾಗಿಯೂ ಸಿದ್ಧವಾದ ವಿಷಯವು! ಹಾಗೆ, ದೇವನು ಎಲ್ಲೆಡೆ ವ್ಯಾಪ್ತನಾದರೂ ಪ್ರತ್ಯೇಕಶಃ ಒಂದೊಂದೆಡೆ ಒಂದೊಂದು ರೂಪ ನಾಮಾಂತರಗಳಿಂದ ಮೂರ್ತತ್ವವನ್ನು ಹೊಂದಿಕೊಂಡಿದ್ದಾನೆಂಬುದು ಇಲ್ಲಿ ಸ್ಮರಣೀಯವು.

ಸೂರ್ಯ—ಅಗ್ನಿ— ಜಲ— ಮೂರ್ತಿಗಳು ಅಂತಹ ದೇವರ ಕೇಂದ್ರಸ್ಥಾನಗಳೆಂದು ಪ್ರಾಚೀನದಿಂದಲೂ ತಿಳಿದುಬಂದುದೇ ಆಗಿದೆ. "ದೈವಾಧೀನಂ ಜಗತ್ಸರ್ವಂ ಮಂತ್ರಾಧೀನಂತು ದೈವತಂ" ಎಂಬುದು ಇಲ್ಲಿ ಸಂಸ್ಮರಣೀಯವು. "ಉಚ್ಚೈರ್ಗತಿಃ ಜಗತಿ ಸಿಧ್ಯತಿ ಧರ್ಮತಶ್ಚೇತ್, ತಸ್ಯ ಪ್ರಮಾಚ ವಚನೈಃ ಕೃತಕೇತರೈಶ್ಚೇತ್|" ಎಂಬ ಮಹಾಕವಿ ಭೋಜರಾಜನ ಸದುಕ್ತಿಯ ಇಲ್ಲಿ ನೆನಹೇಕೆ? ವೇದ–ಶಾಸ್ತ್ರ–ಪುರಾಣ ಸಾಹಿತ್ಯ ಕೃತಿಗಳಲ್ಲೂ ಇದೇ ವಿಷಯಾಂಶಗಳು ನಿರೂಪಿಸಲಾಗಿವೆ (ವೈದ್ಯನೂ ಚಿಕಿತ್ಸೆಗೆ ಕೆಲವೆಡೆ ತಾಂತ್ರಿಕ ವಿಚಾರಗಳನ್ನೂ, ಮಾಂತ್ರಿಕ ವಿಚಾರಗಳನ್ನೂ ಬಲ್ಲವನಿರಬೇಕೆಂಬುದು ವಿಶೇಷತಃ ಇಲ್ಲಿ ಗಮನೀಯವು!)

ದೇವನನ್ನು ಆರಾಧಿಸಿದವರು ಅವರ ಶ್ರದ್ಧೆಗೆ—ಭಕ್ತಿಗೆ ತಕ್ಕ ಫಲವನ್ನು ಹೊಂದುತ್ತಾರೆಂದು ಹೇಳುವಲ್ಲಿ ನೈಜವಿದೆ! 'ವಿಶ್ವಾಸಃ ಫಲದಾಯಕಃ' ಎಂಬುದು-ಎಲ್ಲಾ ಮಿಕ್ಕ ಕ್ಷೇತ್ರಗಳಂತೆ–ಇಲ್ಲೂ ಉದಾಹರಣೀಯವು! ದೇವ ನಂಬಿದರೆ, ಇಲ್ಲೂ ಉಂಟು, 'ಅಲ್ಲೂ ಉಂಟು' ಎಂಬುದು ಸೂಕ್ತಿ! ಅಂತೆ ಭಾರತೀಯರು ಕಾಲಾನುಕ್ರಮದಲ್ಲಿ ವಿವಿಧ ದಿವ್ಯ ಶಕ್ತಿಗಳಿಗೆವಿವಿಧ ನಾಮ ರೂಪಗಳನ್ನುನಿರೂಪಿಸಿ ತಂತಮ್ಮ ಜೀವನದ ಸಾರ್ಥಕ್ಯವನ್ನು–ಪೂರ್ಣತೆಯನ್ನು ಪಡೆಯಲು ಪ್ರಯತ್ನಿಸುತ್ತಾರೆ. 'ಆಕಾಶಾತ್ ಪತಿತಂತೋಯಂ ಯಥಾ ಗಚ್ಛತಿ ಸಾಗರಂ, ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ' ಎಂಬುದು ಸರ್ವ ಸಮ್ಮತವಾದ ಆಶಯವು!

'ಯಂ ಶೈವಾಃ ಸಮುಪಾಸತೇ ಶಿವ ಇತಿ,
ಬ್ರಹ್ಮೇತಿ ವೇದಾಂತಿನೋ,
ಬೌದ್ಧಾ ಬುದ್ಧ ಇತಿ,
ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ
ಅರ್ಹನ್ನಿತ್ಯಥ ಜೈನಶಾಸನರತಾಃ,
ಕರ್ಮೇತಿ ಮೀಮಾಂಸಕಾಃ||"

(ಶ್ರೀ ಶಂಕರಾಚಾರ್ಯರ ೬ ಮತಗಳು ಬೇರೆ ಇವೆ ಎಂಬುದರಲ್ಲಿ ಷಣ್ಮತಗಳ ಪ್ರಸ್ತಾವವಿದೆ. ಈ ಮೊದಲು "ಚತುಸ್ಸಮನು"ಗಳೆಂಬ ವಿವಿಧ ನಿರೂಪಗಳಲ್ಲೂ ಏಕತೆಯನ್ನು ಸಾರಿದುದುಂಟು. (೭—ಆನೆ ಶತಕದ ಕೃತಿ ನೋಡಿರಿ,ದೇವಾದಿಗಳ ಉಪಾಸನೆಯ ಫಲಃ 'ಯಾಂತಿ ದೇವವ್ರತಾ ದೇವಾನ್|ಪಿತೄನ್ ಯಾಂತಿ ಪಿತೃವ್ರತಾಃ|
ಭೂತಾನಿ ಯಾಂತಿ ಭೂತೇಜ್ಯಾಃ|
ಯಾಂತಿ ಮದ್ಯಾಜಿನೋಽಪಿ ಮಾಮ್||'
(ಗೀತೆ: 9–25)

ಇಲ್ಲಿ ನಾಲ್ಕನೆಯ ಸಾಲಿನಲ್ಲಿರುವ 'ನನ್ನನ್ನು ಪೂಜಿಸುವವರುನನ್ನನ್ನು ಹೊಂದುವರೆಂಬ'ಶ್ರೀಕೃಷ್ಣನ ವಾಕ್ಯದಲ್ಲಿ–ಪರಮಾತ್ಮನೊಬ್ಬನ– ಪುರುಷೋತ್ತಮನ–ಉಲ್ಲೇಖವಿದೆ. ಆ ಮೇರೆಗೆ, ಈ ಪದ್ಯದಲ್ಲಿರುವ ಮೊದಲನೆಯ ಸಾಲಿನ ದೇವರುಗಳೆಂದರೆ ವಿಷ್ಣುವಲ್ಲದೆ ಮಿಕ್ಕ ದಿವ್ಯ ಶಕ್ತಿಗಳೆಂದು (ಶಿವ, ದುರ್ಗೆ, ಅಗ್ನಿ ಇ.) ಖಚಿತವಾಗುತ್ತದೆ. ಮತ್ತೆ ಹೇಳಿದ ಪಿತೃಗಳೆಂದರೆ ಪಿತೃಗಣಗಳೆಂದು ಅರ್ಥ. (ವ್ಯಾಸಭಾರತದ 'ಖಿಲ'ರೂಪದ 'ಹರಿವಂಶ'ದಲ್ಲಿ, ಹಾಗೂ ಮತ್ಸ್ಯ ಪುರಾಣಾದಿಗಳಲ್ಲಿ ಸಪ್ತವ್ಯಾಧಾದ ಶಾಬೆ(ಮ) ಪಿತೃಗಣಗಳ ವಿವರಣಗಳಿವೆ). ಪಿತೃಗಣಗಳನ್ನು ಆರಾಧಿಸಿದರೆ, ಆತನ ಪೂರ್ವಿಕರು ಆವುದೇ ಜನ್ಮಾಂತರಗಳಲ್ಲಿದ್ದರೂ ಅವರವರ ಪಾಲಿಗೆ ಆ ಫಲವನ್ನು ಸಲಿಸುವರೆಂದಿದೆ! ಇನ್ನುಳಿದ ಭೂತಗಳೆಂದರೆ, ಶ್ರೀ ಶಂಕರಾಚಾರ್ಯರು ಬರೆದಂತೆ, ಪರಿವಾರಗಣ ದೇವತೆಗಳೆಂಬುದೇ ಇಲ್ಲಿ ಚೆನ್ನು! (ಆ ಪರಿವಾರಗಳ ರೂಪಾಂತರಗಳಾಗಿ ಕೆಲವು ಭೂತಗಳ ಹೆಸರು ಈ ತುಳುನಾಡಿ (ಚಾಮುಂಡಿ, 2)ನಲ್ಲಿ ಕಾಣುತ್ತಿರುವುದು ಸಾಧಾರಣವಾಗಿದೆ. ಪಿಲಿದೇವಾಲಯಗಳು–ಭೂತಾಲಯಗಳು ಜನತೆಯ ಧಾರ್ಮಿಕ–ಸಾಮಾಜಿಕ ಕೇಂದ್ರಗಳಾಗಿವೆ. ಹೆಚ್ಚಾಗಿ ಈ ಗ್ರಾಮಾಂತರಗಳಲ್ಲಿ ಹಲವಾರು ದೇವಾಲಯಗಳಿವೆ; ಅಲ್ಲೆ ಊರ ಜನರ ಆಗು ಹೋಗುಗಳ ವಿವೇಚನೆಯಾಗುತ್ತಿತ್ತೆಂದು ಹೇಳಲು ಹಲವಾರು ಉದಾಹರಣೆಗಳಿವೆ. ಅದು ಕಾರಣವೇ, ಈ ದೇವಾಲಯಗಳಿಗೆ ಹಲವಾರು ಜನರು ಉದಾರವಾಗಿ ದಾನ-ದತ್ತಿಗಳನ್ನು ಕೊಟ್ಟಿರುತ್ತಾರೆ!

ದೇವಾಲಯ—ಭೂತಾಲಯಗಳ ಕೆಲ ಸಗಾರರಲ್ಲಿ ಬ್ರಾಹ್ಮಣಾದಿ ಸರ್ವಜಾತಿಗಳ ಸಮಾವೇಶವಿದೆ. ಹಲವಾರು ಹಬ್ಬ ಹಾಡಿಗಳು ಈ ಕೇಂದ್ರಗಳಲ್ಲಿ ತಪ್ಪದೆ ನಡೆಯತಕ್ಕುವೆಂದು ಶಾಸನಗಳಾಗಿವೆ. (ವೈಷ್ಣವ-ಶೈವ ಮೊದಲಾದ ಮತೀಯಘರ್ಷಣಗಳು ಕಾಲಾಂತರದ ಕುತರ್ಕ ಜನರಿಂದಲಾದುವಲ್ಲದೆ, ಮೌಲಿಕವಾಗಿ ಹಾಗೆನ್ನಲಾಗಿಲ್ಲ!) ಅಂದರೆ, ಸಾಮಾಜಿಕ ಸರ್ವತೋಮುಖವಾದ ಭದ್ರತೆ—ಪ್ರಗತಿಗೆ ಈ ಕೇಂದ್ರಗಳೇ ಆಧಾರಸ್ತಂಭಗಳಾಗಿದ್ದುವು! ಉದಾ: ದೇವಾಲಯ—ಭೂತಾಲಯಗಳಲ್ಲಿ ಊರ ಜನರ ಒಕ್ಕೂಟದ—ವಿವಾದದ—ಪ್ರಸ್ತಾವ ನಡೆಯುತ್ತಿದ್ದುವೆಂಬುದಕ್ಕೆ ಹಲವಾರು ಉದಾಹರಣಗಳಿವೆ. ದೈವಿಕ ಕೇಂದ್ರಗಳಲ್ಲಿ ಸತ್ಯ—ದಿವ್ಯ ಘೋಷಣಗಳಾಗುತ್ತಿದ್ದುವು.

ದೇವಾಲಯದಲ್ಲಿ ವಾರ್ಷಿಕವಾಗಿ ನಡೆವ ಉತ್ಸವಗಳು ಜನರಲ್ಲಿ ಐಕಮತ್ಯವನ್ನು ಸಾಧಿಸಲು ಮಾಧ್ಯಮಗಳಾಗಿವೆ. (ಆ ಊರಿನಲ್ಲಿ ಅವೊಬ್ಬನ ಮನೆಯಲ್ಲಿ ಮರಣವಾದರೆ, ಅದರ ಸಂಸ್ಕಾರವಾಗದೆ ದೇವಾಲಯದ ನಿತ್ಯಪೂಜೆ ಆಗುವುದಿಲ್ಲವೆಂಬುದೂ ಇಲ್ಲಿ ಹೊಂದಿಸಿಕೊಳ್ಳಬಹುದು!) ಉತ್ಸವವೆಂದರೆ ಆ ದೇವರ ಪೂಜಾರಂಭದ–ಪ್ರತಿಷ್ಠಾಕಾಲದ ಸವಿನೆನಪಿನ ದಿನವಾಗಿದೆ! (ಕೆಲವೊಮ್ಮೆ ಜೀರ್ಣೋದ್ಧಾರ, ಪುನಃ ಪ್ರತಿಷ್ಠೆಗಳಾದ ದಿನವೇ ಉತ್ಸವವಾಗುತ್ತದೆಯಾದರೂ, ಅದು ಅದರ ಅಂಗವಾಗಿರುತ್ತದೆ.) ಉತ್ಸವ ಸಮಯ ದೇವರ ಬಿಂಬದ ಮೆರವಣಿಗೆಯು ತಮ್ಮ ನಿವಾಸದ ಬಳಿ ಬರುವುದೆಂದರೆ ಚಿಕ್ಕವರಿಗೂ ದೊಡ್ಡವರಿಗೂ ಅತಿ ಸಂಭ್ರಮ, ಸ್ಪರ್ಧೆಯಿಂದ ತಮ್ಮ ಪೂಜೆಯೂ—ಸೇವೆಯೂ ವೈಭವಯುತವಾಗುವಂತೆಳಸುವರು. ಕೇವಲ ಕಟ್ಟುಕಟ್ಟಳೆಯ ಪೂಜೆಗಳಲ್ಲದೆ, ಪ್ರಾಚೀನ ಸಾಹಿತ್ಯಕ—ಧಾರ್ಮಿಕ—ಸಾಂಸ್ಕೃತಿಕ ಕಾರ್ಯ-ಸಭಾಕಲಾಪಗಳನ್ನು ನೆರವೇರಿಸುವುದು ಇತ್ತೀಚೆ ತೊಡಗಿದುದು ಸ್ವಾಗತಾರ್ಹ. ಅದರಂತೆ, ಆ ದೇವಾಲಯದ ಪ್ರಾಚೀನತೆ ಹಾಗೂ ಸುಪ್ರಭಾವಗಳ ವಿಚಾರ ತಿಳಿಯುವುದು ಸಾಧುವಾಗಿದೆ ಈ ಸ್ಥಳಮಹಿಮೆಗಳು ಐತಿಹಾಸಿಕಾಂಶಗಳಿಂದ ಕೂಡಿದರೆ ಸತ್ಯಾಪಿಕೆಗೆಳಸುವಲ್ಲಿ ಆಧಾರವಾಗ ಬಲ್ಲುದು. ಕೇವಲ ಭಕ್ತಿ—ವಿಶ್ವಾಸದಂತೆ ಪ್ರಾಚೀನ ವಿಚಾರಗಳೂ. ಇಲ್ಲಿರಬೇಕು. ಆ ಮೇರೆಗೆ ನಮ್ಮಲ್ಲಿ ಹಿಂದಿನವರು ಬರೆದಿರಿಸಿದ ವಿಷಯಾಂಶಗಳ ಸಂಗ್ರಹ—ರಕ್ಷಣೆ ಪರಿಶೀಲನೆ ಪ್ರಸಾರಣೆಗಳಿಗೆಡೆ ಕೊಡುವುದೂ ಈ ಸಾಂಸ್ಕೃತಿಕ ಧಾರ್ಮಿಕ ಸಾಹಿತ್ಯಕ ಪ್ರದರ್ಶನಗಳಲ್ಲಿ ಪ್ರಧಾನವಾಗಿರ ಬೇಕಾಗಿದೆ.

ಪರಶುರಾಮ ಸೃಷ್ಟಿಯಲ್ಲಿ ಇತರೆಡೆಗಿಂತ ಹೆಚ್ಚು ದೇವಾಲಯ—ಭೂತಾಲಯಗಳಿವೆ (ಕೆಲವೆಡೆ ದೇವಾಲಯಗಳಲ್ಲಿ ಭೂತಾಲಯಗಳ ಸಂಪರ್ಕವಿರುವುದು) ಪ್ರತಿಯೊಂದು ಹಳ್ಳಿಯಲ್ಲೂ ಸರಾಸರಿ ಒಂದೆರಡಾದರೂ ಮನೆತನದ-ಸಮಾಜದ ಹಿತ ರಕ್ಷಣೆಗೆಂದು ನಂಬಿದ ದೈವ-ದೇವರುಗಳ ಗುಡಿಗಳಿವೆ. ಮಾಗಣೆಯ ಕೇಂದ್ರದಲ್ಲಿ ಒಂದು ಪ್ರಧಾನ ದೇವಾಲಯವಿದೆ. ದೇವಾಲಯದ ಪ್ರಾಚೀನ ಕಟ್ಟಡಗಳನ್ನು ಪುನಃನಿರ್ಮಿಸುವಲ್ಲಿ ಆ ಪ್ರಾಚೀನ ಸಂಸ್ಕರಣಗಳು ಉಳಿಯುವಂತೆಸಗುವುದು ಅತ್ಯವಶ್ಯ. ಕೆಲವೆಡೆ ಅತ್ಯಾಧುನಿಕ ರೂಪ ರೇಖೆಗಳಿಂದಲೆ ಪುನಃ ಜೀರ್ಣೋದ್ಧಾರ ಮಾಡುವುದುಂಟು; ಇದರಿಂದ ಪೂರ್ವ ಸಂಸ್ಕಾರದ ಅವಶೇಷವಿಲ್ಲದೆ, ಅತ್ಯಂತ ನೂತನ ಸುಂದರ ಸಭಾ ಭವನದಂತೆ ಅದು ಕಂಗೊಳಿಸುತ್ತದೆ! ಇದು ಸಾಧುವಲ್ಲೆಂದು ಹೇಳದೆ ಗತ್ಯಂತರವಿಲ್ಲ! ಏಕೆಂದರೆ, ದೇವರ ಪ್ರಭಾವಾದಿಗಳು ಇದರಿಂದ ಕುಂದುತ್ತವೆಯೆಂಬುದಕ್ಕೆ ಉದಾಹರಣಗಳು ಸಾಕಷ್ಟಿವೆ) ದೇವಾಲಯದ ರಚನೆ ಹಾಗೂ ಅದರ ನಿತ್ಯ ವಿಶೇಷ ವಿನಿಯೋಗಗಳಿಗೊಂದು ಕ್ರಮವಿದೆ ಪ್ರಾಚೀನ ರೀತಿಯಲ್ಲಿ ಮಡಿ ಮೈಲಿಗೆಗಳು ಇಲ್ಲಿ ನೆನಪಿಸ ತಕ್ಕುವು. ಪ್ರತಿಯೊಬ್ಬ ಆಸ್ತಿಕನೂ ಸಂತೆ-ಸಭೆಗಳಿಗೆ ಬಂದಂತೆ ದೇವಾಲಯಕ್ಕೆ ಒಳ ಹೋಗುವುದು ಸರಿಯಲ್ಲ. ಈ ಬಗ್ಗೆ ಅಧಿಕಾರ ವರ್ಗದವರು ತಕ್ಕ ನಿಗಾವಹಿಸಲು ಅವಶ್ಯವಿದೆ! (ಕೇರಳದಲ್ಲಿ ಈ ಬಗ್ಗೆ ವಿಶೇಷತಃ ಆಚಾರವೇ ಇದೆ!)

ದೇವರ ಹರಕೆಗಳು ಹೆಚ್ಚು ಬರಲು ಪೂಜೆ–ಆಡಳಿತೆಗಳೆರಡೂ ಕಾರಣಗಳು ಈ ವೆರಡು ಅಂಗಗಳು ಹೊಂದಾಣಿಕೆಯಿದ್ದರೆ, ಆಸುಪಾಸಿನಲ್ಲಿ ಮಾತ್ರವಲ್ಲ; ಜಿಲ್ಲೆಯನ್ನೇ ಹರಹಿ ಮೀರಿ ನಿಲ್ಲುವ ಪ್ರಭಾವ ತಾನಾಗಿ ಬರುತ್ತದೆ. ಹೊತ್ತಿಗೆ ಸರಿಯಾಗಿ ಪೂಜೆ ನಡೆವಲ್ಲಿ ದೇವರ ಮೇಲಿನ ವಿಶ್ವಾಸದಿಂದ ಬರುವವರಿಗೂ ಒಂದು ಆಕರ್ಷಣವಾಗುತ್ತದೆ. (ನಿಯಮಿತ ರೀತಿಯು ಎಲ್ಲೆಡೆ ಇರಬೇಕಾದುದು!)

ಪಡುಬಿದರೆಯು ಈ ಜಿಲ್ಲೆಯ ನಡುಭಾಗದಲ್ಲಿದೆ; ಮೂಡುಬಿದರೆಯೊಂದು ಇರುವುದರಿಂದ ಅದಕ್ಕಿಂತ ಬೇರೆಯಿರುವುದನ್ನೆ ಇದು ಘೋಷಿಸುತ್ತದೆ; ಇದು ಮೂಡಬಿದರೆಗಿಂತ ಪಡುವಲು ಇರುವುದರಿಂದಲೂ ಈ ಹೆಸರು ಒಪ್ಪುತ್ತದೆ. (ಪಣಂಬೂರು–ಪಡುಪಣಂಬೂರುಗಳು ಹೀಗೆ ಮೂಡು–ಪಡುವಲಲ್ಲಿರುವುದರಿಂದಲೇ ಹಾಗೆ ಹೆಸರಿಸಲ್ಪಟ್ಟಿಲ್ಲ! ಪಣಂಬೂರಿಗಿಂತ ಅರ್ವಾಚೀನವೆಂಬ–ಮತ್ತಿನದೆಂಬ ಅರ್ಥವೇ ಅಲ್ಲಿರಬಹುದು! ಹಾಗಾದರೆ, ಪಡುಬಿದರೆಯು ಮೂಡುಬಿದರೆಗಿಂತ ಅರ್ವಾಚೀನ-ಮತ್ತಿನದು–ಎಂಬ ಆಶಯವಿರಬಹುದೇ? ಈ ಬಗೆಗೆ ಹೆಚ್ಚು ಸಂಗ್ರಹ–ಸಂಶೋಧನೆ ನಡೆಯಬೇಕಾಗಿದೆ.)

ಪಣಂಬೂರಲ್ಲಿ ಹರಿ-ಹರರ ನೆಲೆಗಳಿವೆ. ಪಡುಪಣಂಬೂರಲ್ಲಿ ಉಮಾ ಮಹೇಶ್ವರನ ನೆಲೆಯಿದ್ದರೆ, ಅದರೊತ್ತಿನ ಬಪ್ಪನಾಡಿನಲ್ಲಿ ದುರ್ಗಾ ನಿಲಯವಿದೆಯೆಂಬುದು ಗಮನೀಯ! ಮೂಡಬಿದರೆಯಲ್ಲಿ ಗೌರೀ ದೇವಾಲಯವಿದೆ. ಪಡುಬಿದರೆಯಲ್ಲಿ ಮಹಾಲಿಂಗೇಶ್ವರನ ಸನ್ನಿಧಿಯಿರುವುದು. ಈ ಮೇರೆಗೆ ಇವೆರಡು ಪುಣ್ಯಕ್ಷೇತ್ರಗಳು ಅನ್ಯೋನ್ಯ ಸಂಪರ್ಕದಿಂದ ರಾರಾಜಿಸುತ್ತವೆ.

ಪಡುಬಿದರೆಯಲ್ಲಿ ಶ್ರೀಮಹಾಲಿಂಗೇಶ್ವರನೊಂದಿಗೆ ಶ್ರೀಗಣಪತಿಯ ಪ್ರಭಾವವೂ ಮೆರೆಯುತ್ತಿದೆ. (ಸುರತ್ಕಲ್ಲು, ಶರವುಗಳಲ್ಲಿ ಮಹಾಲಿಂಗೇಶ್ವರನ ಸನ್ನಿಧಿಯಲ್ಲಿರುವ ಮಹಾಗಣಪತಿಯು ಸ್ವತಂತ್ರನಾಗಿದೆ. ಅಲ್ಲಿ ಪ್ರಧಾನ ದೇವರ ಪೂಜೆಯಾದ ಮೇಲೇನೇ ಶ್ರೀ ಗಣಪತಿಯ ಪೂಜೆಯಾಗುವುದು ವೈಶಿಷ್ಟ್ಯ!)

ಪಡುಬಿದರೆಯ ಜಾತ್ರೆಯಲ್ಲಿ ಚೆಂಡು ಇರುವುದು ಸುವಿಶಿಷ್ಟವಿದೆ. ಪಾವಂಜೆಯ ಬಳಿಯ ದೇವೀಕ್ಷೇತ್ರ—'ಕಂಡ್ಯ'ವೆಂಬಲ್ಲೂ 'ಚೆಂಡಾಟ'ವಿದೆ. ಪೊಳಲಿಯ ದೇವಿಯ ಜಾತ್ರೆಯಾದರೋ 'ಚೆಂಡಾಟ'ದಲ್ಲಿ ಸುಪ್ರಸಿದ್ಧವಿದೆ. ಈ 'ಚೆಂಡಾಟ'ದ ಹಿನ್ನೆ

ರಾಷ್ಟ್ರಪತಿ ಭಾಷಣದಲ್ಲಿ
ಕರ್ಮಠತನದ ಬಿಗಿತ

ರಾಷ್ಟ್ರಪತಿಗಳು ಪ್ರತಿವರ್ಷದ ಪ್ರಥಮ ಸಂಸತ್ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವುದು ಸಂಪ್ರದಾಯ. ಈ ಭಾಷಣವು ರಾಷ್ಟ್ರಪತಿಗಳ ಭಾಷಣವಾದರೂ ಅದನ್ನು ತಯಾರಿಸುವುದು ಸರಕಾರದ ಕೆಲಸ.

ಅಧಿಕಾರಾರೂಢ ಸರಕಾರವು ಸ್ವಪಕ್ಷೀಯ ನೀತಿ–ನಿಲುವುಗಳನ್ನು ಆಡಳಿತದಲ್ಲಿ ವ್ಯವಹಾರಕ್ಕೆ ತರುವುದು ಪಕ್ಷೀಯ ಆಡಳಿತೆಯ ಸ್ವೀಕೃತ ಧರ್ಮ. ಆದುದರಿಂದ ರಾಷ್ಟ್ರಪತಿಗಳ ಭಾಷಣವು ಈ ಧರ್ಮಕ್ಕಿಂತ ದೂರವುಳಿಯುವುದಿಲ್ಲ.

ಸರ್ಕಾರದ ಕಾರ್ಯನೀತಿಗಳ ಸಿಂಹಾವಲೋಕನದೊಡನೆ ದೂರಾವಲೋಕನವು ರಾಷ್ಟ್ರಪತಿ ಭಾಷಣದಲ್ಲಿ ಅವಕಾಶ ಪಡೆಯುವುದು ಸಹಜ.

ಈ ಬಾರಿಯ ರಾಷ್ಟ್ರಪತಿ ಭಾಷಣಕ್ಕೆ ದೇಶದಲ್ಲಿ ಎಲ್ಲಿಲ್ಲದ ಪ್ರಾಧಾನ್ಯ ಬಂದಿದೆ. ಹಿಂದಿನ ೨೦ ವರ್ಷಗಳಿಂದಲೂ, ಭಾರತವು ಗಣರಾಜ್ಯವಾದಂದಿನಿಂದಲೂ, ಕೇಂದ್ರದಲ್ಲಿ 'ಕಾಂಗ್ರೆಸ್' ಸರಕಾರವೇ ಇತ್ತು. ಆದರೆ, ಈಗೆರಡು ವರ್ಷಗಳಿಂದ ತನ್ನನ್ನೇ ಕಾಂಗ್ರೆಸ್ ಎಂದು ಕರೆದುಕೊಳ್ಳುವ ಇಂಡಿಕೇಟ್ ದೇಶವಾಳುತ್ತಿದೆ. ಅದು ವರೆಗೆ ಪ್ರಗತಿಗೆ ಮಾರಕರಾಗಿದ್ದವರನ್ನು ಸರಕಾರದಿಂದ, ಪಕ್ಷದಿಂದ, ಏಕೆ, ಲೋಕಸಭೆಯಿಂದಲೇ ದೂರವಿಟ್ಟು ಪ್ರಧಾನಿ ಗಾಂಧಿಯವರು ದಿಗ್ವಿಜಯದ ಗೆಲುವಿನಲ್ಲಿ ಇಂದಿದ್ದಾರೆ.

ಪ್ರಗತಿಶೀಲ ನೀತಿಗಳನ್ನು ರೂಪಿಸುವುದಕ್ಕೆ ಮುಖ್ಯವಾಗಿ ಅವನ್ನು ಕಟ್ಟುನಿಟ್ಟಾಗಿ ಕಾರ್ಯಗತಗೊಳಿಸುವುದಕ್ಕೆ ಇಂದು ಅವರ ಕೈ ತಡೆಯುವವರು ಯಾರೂ ಇಲ್ಲ. ಅವರ ಬಳಿಯಿರುವವರು ಪ್ರಗತಿಶೀಲರೇ. ವಿರೋಧ ಪಕ್ಷಗಳ ಬಲವೂ ಬೆಂದ ಬದನೇಕಾಯಿಯಾಗಿ ಅಕೆ ತನ್ನ ನೀತಿಯನ್ನು ನಿರಾತಂಕವಾಗಿ ಜ್ಯಾರಿಗೆ ತರಲು ಅವಕಾಶ ಪ್ರಾಪ್ತವಾಗಿದೆ.

ಆದುದರಿಂದಲೇ ಈ ಬಾರಿಯ ರಾಷ್ಟ್ರಪತಿ ಭಾಷಣಕ್ಕೆ ವಿಶ್ವಪ್ರಾಧಾನ್ಯ ಬಂದಿದೆ. ಸಂಸತ್ ಸದಸ್ಯರು ಮಾತ್ರವಲ್ಲದೆ ಪ್ರೇಕ್ಷಕರ ಗ್ಯಾಲರಿಗಳೂ ತುಂಬಿತುಳುಕಾಡುತ್ತಿದ್ದಾಗ ರಾಷ್ಟ್ರಪತಿಗಳು ಹುಮ್ಮಸ್ಸಿನಿಂದಲೇ ತನ್ನ ಸರಕಾರದ ನೀತಿ ನಿರೂಪಣಾ ಮಾಧ್ಯಮವಾದ ಭಾಷಣವನ್ನು ಓದಿದರು.

ಭಾರತೀಯ ಪ್ರಜಾ ಕೋಟಿ ತುಂಬಿ ತುಳುಕಾಡುವ ಬಹುಮತವನ್ನು ಆಡಳಿತ ಪಕ್ಷಕ್ಕೆ ಮತಪೆಟ್ಟಿಗೆಗಳ ಮೂಲಕ ನೀಡಿದ್ದು ಅದು ಆಡಳಿತ ಪಕ್ಷದ ನೀತಿಯಲ್ಲಿಟ್ಟ ವಿಶ್ವಾಸವನ್ನೂ ತನ್ಮೂಲಕ ಅದಕ್ಕೆ ನೀಡಿದ ಆದೇಶವನ್ನೂ ರಾಷ್ಟ್ರಪತಿಯವರು ಮೆಚ್ಚಿದ್ದಾರೆ. ಈ ರೀತಿ ಜನತೆಯು ತನ್ನ ಸಾರ್ವಭೌಮಾಧಿಕಾರವನ್ನು ಸುಸ್ಪಷ್ಟಗೊಳಿಸಿದ ವಿಧಾನವನ್ನವರು ಪ್ರಶಂಸಿಸಿದ್ದಾರೆ.

ಆಡಳಿತ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಲಾದ ಆರ್ಥಿಕ ಹಾಗೂ ಸಾಮಾಜಿಕ ಪರಿವರ್ತನೆಯನ್ನು ತರುವುದಕ್ಕಾಗಿ ಸರಕಾರವು ಕೃತ ನಿಶ್ಚಯವಾಗಿದೆ–ಎಂಬಂಶವನ್ನು ಅವರು ಒತ್ತಿ ಹೇಳಿದರು. ಮತ್ತೆ ಅಧಿಕಾರಕ್ಕೆ ಬಂದ ಸರಕಾರವು ಬಡತನವನ್ನು ತೊಡೆದು ಹಾಕುವ ಆಶ್ವಾಸನೆಯನ್ನು ಮತದಾರರಿಗೆ ನೀಡಿದ್ದು ಈ ಆದೇಶವನ್ನು ತ್ವರಿತಗತಿಯಲ್ಲಿ ಪಾಲಿಸಲು ಸರಕಾರ ನಿರ್ದಿಷ್ಟ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದೆಂದು ಭರವಸೆ ನೀಡಿದರು.

● ದೇಶದ ಆರ್ಥಿಕ ಕ್ಷೇತ್ರಕ್ಕೆ ಪರಿಣಾಮಕಾರಿಯಾಗಿ ತೀವ್ರ ಗತಿಯಿಂದ ಬಂಡವಾಳ ಹೂಡಲು ಸಾಧ್ಯವಾಗುವಂತೆ ನಾಲ್ಕನೆಯ ಯೋಜನೆಯನ್ನು ಪುನರ್ವಿಮರ್ಶಿಸಲಾಗುವುದು.

● ಉದ್ಯೋಗಾವಕಾಶ ವಿಸ್ತರಣೆಯ ಸಮಗ್ರ ಕಾರ್ಯಕ್ರಮಕ್ಕೆ ಅವಕಾಶ ಕಲ್ಪಿಸುವ ಗ್ರಾಮಾಂತರ ಉದ್ಯೋಗದ ತೀವ್ರ ಕಾರ್ಯಕ್ರಮವೊಂದು ಈ ಎಪ್ರಿಲ್‌ನಿಂದ ಕಾರ್ಯರೂಪಕ್ಕೆ ಬರುವುದು. ಕಾರ್ಯಕ್ರಮವನ್ನು ಕೃಷಿ ಉತ್ಪಾದನೆ ಹೆಚ್ಚಿಸುವ ಯೋಜನೆಗಳೊಂದಿಗೆ ಸೇರಿಸಲಾಗುವುದು.

● ಭೂಸುಧಾರಣೆಯ ವ್ಯವಹಾರವನ್ನು ಆದಷ್ಟು ತೀವ್ರಗೊಳಿಸಲು ಸೂಕ್ತ ಕ್ರಮ ಕೈಕೊಳ್ಳಲಾಗುವುದು.

● ಗ್ರಾಮಾಂತರ ಜನತೆಗೆ ಜೀವನ ಯೋಗ್ಯವಾದ ವಸತಿ ಗೃಹ ನಿರ್ಮಾಣಕ್ಕೆ ನೆರವು ನೀಡುವುದು.

● ಭೂರಹಿತ ಕಾರ್ಮಿಕರಿಗೆ ಗೃಹ ನಿವೇಶನಗಳನ್ನು ನೀಡಿ ಅವುಗಳ ಒಡೆತನದ ಹಕ್ಕನ್ನು ಅವರಿಗೇ ಕೊಡಲಾಗುವುದು.

● ಖಾಸಗಿ ಮತ್ತು ಸರಕಾರಿ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಕಾರ್ಯಕ್ರಮಗಳನ್ನು ತ್ವರಿತಗತಿಯಲ್ಲಿ ಕಾರ್ಯರೂಪಕ್ಕೆ ತರುವಾಗ ಬರುವ ತೊಡಕುಗಳನ್ನು ನಿವಾರಿಸುವುದು.

● ರಾಜಧನ ಮತ್ತು ರಾಜರ ವಿಶೇಷ ಸೌಲಭ್ಯಗಳನ್ನು ಸೂಕ್ತ ಸಂವಿಧಾನಾತ್ಮಕ ವಿಧಾನಗಳ ಮೂಲಕ ರದ್ದು ಮಾಡುವುದು.

● ಕಾನೂನು ಬಾಹಿರ ಚಟುವಟಿಕೆ ಹಾಗೂ ರಾಜ್ಯಕೀಯ ಕೊಲೆಗಳನ್ನು ತಡೆಯಲು ದಿಟ್ಟ ಕ್ರಮಗಳನ್ನು ತೆಗೆದುಕೊಳ್ಳುವುದು.

● ಕುಟುಂಬ ಯೋಜನೆಯನ್ನು ಅಧಿಕಾಧಿಕ ಉತ್ಸಾಹದಿಂದ ಅನುಷ್ಠಾನಗೊಳಿಸುವುದು.

— ಇವು ಮೊದಲಾದುವು ರಾಷ್ಟ್ರಪತಿ ಭಾಷಣವು ಪ್ರಸ್ತಾಪ ಮಾಡಿದ ಸರಕಾರದ ಆರ್ಥಿಕ ಹಾಗೂ ಸಾಮಾಜಿಕ ಪರಿವರ್ತನೆಗಳ ಸೂತ್ರಗಳು.

ವಿದೇಶೀ ನೀತಿಯಲ್ಲಿ ಅಲಿಪ್ತತೆಯನ್ನೇ ಮುಂದುವರಿಸಿಕೊಂಡು ಹೋಗುವ ಭರವಸೆಯನ್ನು ರಾಷ್ಟ್ರಪತಿ ನೀಡಿದ್ದಾರೆ.

ಭಾರತೀಯ ವಿಮಾನಾಪಹರಣ ಮತ್ತು ಆ ಸಂಬಂಧ ಪಾಕ್ ಸರಕಾರದ ನೀತಿಯ ಬಗ್ಗೆ ತೀರ ಲಘು ಭಾಷೆಯನ್ನು ಉಪಯೋಗಿಸಿ ಅವರು ಪ್ರಸ್ತಾಪಿಸಿ, ಉದ್ರೇಕ ಮತ್ತು ಭಾವಾವೇಶದ ಮಾತುಗಳಿಂದ ಪರಿಸ್ಥಿತಿ ತಿಳಿಗೊಳ್ಳುವ ಬದಲು ಮತ್ತಷ್ಟು ಕೆಡುತ್ತದೆ ಎಂದು ಅಭಿಪ್ರಾಯಿಸಿದರು.

ಚೀನಾವು ಭಾರತದ ಮೇಲೆ ಆಕ್ರಮಣ ಮಾಡಿದಂದಿನಿಂದಲೂ ರಾಷ್ಟ್ರಪತಿ ಭಾಷಣವು ಚೀನಾದ ಬಗ್ಗೆ ಪ್ರಸ್ತಾಪಿಸುತಿತ್ತು. ಆದರೆ, ಈ ಬಾರಿ ಅದು ಕೆಂಪು ಚೀನಾದ ಬಗ್ಗೆ ತುಟಿಯೆರಡು ಮಾಡಲಿಲ್ಲ.

ಇಂಡೋಚೀನಾದ ಸಮರದೊಂದಿಗೆ ಸಂಬಂಧವುಳ್ಳವರೆಲ್ಲ ಅಂತಾರಾಷ್ಟ್ರೀಯ ಒಡಂಬಡಿಕೆಗೆ ಬಂದು ಅಲ್ಲಿ ಶಾಂತಿ ನೆಲಸುವಂತೆ ಮಾಡಬೇಕೆಂದು ಭಾಷಣ ಹೇಳಿದೆ.

ಬ್ರಿಟನ್ನು ದಕ್ಷಿಣ ಆಫ್ರಿಕೆಗೆ ಶಸ್ತ್ರಾಸ್ತ್ರಗಳನ್ನು ಮಾರುವುದನ್ನು ಅದು ಕಳವಳದಿಂದ ಗಮನಿಸಿದೆ.

ಹಿಂದೂಸಾಗರ ಪ್ರದೇಶದಲ್ಲಿ ಬಾಹ್ಯಶಕ್ತಿಗಳು ತಮ್ಮ ಮಿಲಿಟರಿ ನೆಲೆ ಸ್ಥಾಪಿಸುತ್ತಿರುವುದರ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿದೆ.

ಆಡಳಿತ ಪಕ್ಷದ ನೀತಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುವ ರಾಷ್ಟ್ರಪತಿಗಳ ಭಾಷಣದಲ್ಲಿ ಹೇಳಿಕೊಳ್ಳಬಹುದಾದ ಮಹತ್ವದ ಹೊಸ ಅಂಶಗಳೇನೂ ಇರುವುದಿಲ್ಲ. ಆದರೆ, ಪಕ್ಷದ ನೀತಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುವ ಬಿಗಿತ ಮಾತ್ರ ಗರಿಸಿಮಿರಿ ಮಾಡಿದೆ.

ಈ ನೀತಿಯನ್ನು ಸರಕಾರ ಕಾರ್ಯರೂಪಕ್ಕೆ ಹೇಗೆ ತರುತ್ತದೆ; ಅದಕ್ಕೆ ಅವಶ್ಯವಾದ ಸಾಧನ ಸಂಪತ್ತನ್ನು ಎಲ್ಲಿಂದ ಕೂಡಿಸುತ್ತದೆ ಎಂಬುದು ಮಹತ್ವದ ಅಂಶಗಳು. ಬೆಲೆಗಳು ಏರುತ್ತಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿದ ಮಾತ್ರಕ್ಕೆ ಬೆಲೆಗಳು ಇಳಿಯುವುದಿಲ್ಲ. ನೀತಿ ರೂಪಿಸಿದ ಮಾತ್ರಕ್ಕೆ ಆರ್ಥಿಕ–ಸಾಮಾಜಿಕ ಪರಿವರ್ತನೆ ಸಾಧ್ಯವಾಗುವುದಿಲ್ಲ.

ಸರಕಾರದ ಕರ್ಮಠತನವೇ ಜನತೆಯ ಆಶೋತ್ತರಗಳನ್ನು ಪೂರಯ್ಸಲು ಶಕ್ತವಾಗುತ್ತದೆ. ●●

ಲೆಯೇನಿರಬಹುದೆಂದು ತುಸ ಇನ್ನಾದರೂ ಗಮನವಿರಿಸಿಕೊಳ್ಳಬಹುದು.

"ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ"ವೆಂಬ ಹೆಸರಿನಲ್ಲಿ ಶ್ರೀ ಎಂ. ಗಣಪತಿ ರಾವ್ ಐಗಳ್ ಸಂಕಲಿಸಿದ ಪುಸ್ತಕವಲ್ಲಿ ಪಡುಬಿದರೆಯ ಬಗೆಗೆ ಹೀಗೆ ಬರೆದಿದೆ:

ಉಡುಪಿ ತಾಲೂಕಿನ ಬಲ್ಲಾಳರು

1) ಪಡುಬಿದರೆ ಕಿನ್ಯಕ್ಕ ಬಲ್ಲಾಳ— ಇವರು (1) ಪಾದೆಬೆಟ್ಟು, (2) ನಡ್ಸಾಲ, (3) ಪಲ್ಮಾರ್, ಈ ಮೂರು ಗ್ರಾಮಗಳನ್ನು ಆಳುತ್ತಿದ್ದರು. ಬೀಡೂ, ಸೀಮೆ ದೇವಸ್ಥಾನವಾದ ಮಹಾಲಿಂಗೇಶ್ವರ ದೇವಸ್ಥಾನವೂ, ಮುನಿಸುವ್ರತ ಬಸದಿಯೂ ಪಡುಬಿದಿರೆಯಲ್ಲಿವೆ.

ನಡಿಸಾಲು, ಅವರಾಲು, ಬಳಂಜೆ, ದಾರಡು ಗುತ್ತಿನವರು ಮಾಗಣೆ ಗುರಿಕಾರರು. ಮುರಡಿಮನೆ ಅಂಬಳಿಯತ್ತಾಯರು ಪ್ರಧಾನಿಗಳು. ಈ ಬಲ್ಲಾಳರು ಪಲ್ಮಾರು, ಶಿರೂರು, ಪುತ್ತಿಗೆ, ಕಾಣ್ಯೂರು, ಸೋದೆ, ಕೃಷ್ಣಾಪುರ (೧) ಮಠಗಳಿಗೆ ಉಂಬಳಿ ಬಿಟ್ಟಿರುತ್ತಾರೆಂದು ಇವರಲ್ಲಿದ್ದ ;6 ಶಾಸನಗಳಿಂದ ತಿಳಿಯುತ್ತದೆ. ಇವುಗಳ ಪ್ರಕಾರ ಕ್ರಿ. ಶ. 1 43ರಲ್ಲಿಂದ ಕ್ರಿ. ಶ. 1774ರ ತನಕ ಆಳಿದ್ದವರ ಕೆಲವರ ಹೆಸರು ತಿಳಿದಿದೆ. ಇನ್ನು ಇವರಲ್ಲಿ ಕೆಲವು ರಾಜರ ಹೆಸರುಳ್ಳ ಶಾಸನಗಳಲ್ಲಿ ಕಾಲಮಾನವಿಲ್ಲ. ಇವರು ಕೂಡಿ, ಉಡುಪಿ ತಾಲೂಕಿನಲ್ಲಿ ಒಟ್ಟು 11 ಬಲ್ಲಾಳರ ಮನೆತನಗಳು ಹೆಸರಿಸಲ್ಪಟ್ಟಿವೆ. (ಪುಟ 416—421)

ಈ ಮನೆತನದ ಶಾಸನಗಳಲ್ಲಿ ಯಾವವೂ ಸರಕಾರದಿಂದ ಪ್ರತಿಮಾಡಲ್ಪಟ್ಟಿವೆ. ಆವುಗಳಲ್ಲಿ ಬರೆದಿರುವ ಸಾಕಲ್ಯ ವಿಚಾರಗಳೇನು, ಈ ದೇವಳದ ಹಾಗೂ ಇತರ ವಿಚಾರಗಳ ಯಾವ ಹೆಚ್ಚಳವಿದೆ ಇತ್ಯಾದಿಗಳ ಬಗೆಗೆ ಆಸಕ್ತಿಯಿರಬೇಕಾಗಿದೆ.

ಬಲ್ಲಾಳರೆಂದರೆ ಭೂತಾಳಪಾಂಡ್ಯನ ಮಕ್ಕಳ ಸಂತತಿಯೆಂದೂ, ಆತನು ಕ್ರಿ. ಶಕದ ಆದಿಗೆ ಇದ್ದನೆಂದೂ ಐತಿಹ್ಯ ಹೇಗಿದ್ದರೂ. ಈ ದೇವಳವು ಈ ಜಿಲ್ಲೆಯಲ್ಲಿ ಪ್ರಾಚೀನತಮಗಳಲ್ಲೊಂದಾಗಿದೆಯೆಂಬುದಕ್ಕೆ ಅದೇನೂ ಸಂಶಯವಿಲ್ಲ. (ದೇವಳದ ಆಕಾರ, ಇ. ಇಲ್ಲಿ ಗಮನೀಯವು). ಇಲ್ಲಿ ಧಾರ್ಮಿಕ—ಸಾಹಿತ್ಯ ಕೃತಿಗಳ ವಿಚಾರಗಳೊಂದಿಗೆ ಇಂತಹ ಸ್ಥಳೀಯ ಪ್ರಾಚೀನ ಚರಿತ್ರೆಯೂ ನಮಗೆ ತಿಳಿಯಬೇಕಾದುದು.

(ಪಡುಬಿದರೆಯ ಶ್ರೀ ಮಹಾಲಿಂಗೇಶ್ವರ ಶ್ರೀ ಮಹಾಗಣಪತಿ ದೇವಾಲಯದ ಉತ್ಸವ ಸಮಯದಲ್ಲಿ ತಾ. 18–3–71ರ ಸಭೆಯಲ್ಲಿ ಚಿತ್ತರಿಸಿದ ಉಪನ್ಯಾಸದ ಒಂದು ರೂಪವಿದು.)

—ಶ್ರೀ ಕೆ. ವೆಂಕಟರಾಯಾಚಾರ್ಯ,
ಸುರತ್ಕಲ್ಲು

Gram : VISHWA Tel: 29111

When at Bangalore
Stay at

HOTEL NATARAJA

Restaurant. Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಪ್ರಗತಿಶೀಲತೆಯ ಸಾಕಾರಮೂರ್ತಿ

(ಒಂದನೇ ಪುಟದಿಂದ)

ಇಂದಿರಾ ಪರ ನಿಂತಿತು. ಕರ್ನಾಟಕದ ಮೇಲೂ ಬೀಸತೊಡಗಿದ ಈ ಬಿರುಗಾಳಿಯನ್ನು ದಿಟ್ಟತನದಿಂದ ಎದುರಿಸಿದ ಕೀರ್ತಿ ಶ್ರೀ ಪಾಟೀಲರಿಗೇ ಸಲ್ಲಬೇಕು. ವಿಭಜನೆಯ ವೇಳೆ ಉಭಯ ಬಣಗಳಲ್ಲಿ ರಾಜಿ ಮಾಡುವ ಬಹುಮುಖದ ಪ್ರಯತ್ನವನ್ನು ಅವರು ಮಾಡಿದ್ದರು. ಆದರೆ, ಅದಾರ ದುರದೃಷ್ಟವೋ ಅದು ಸಫಲವಾಗಲಿಲ್ಲ.

ಶ್ರೀ ಪಾಟೀಲರು ಇಂದಿರಾ ಪರ ನಿಲ್ಲಲಿಲ್ಲ; ಅವರಿಗೆ ಶ್ರೀ ನಿಜಲಿಂಗಪ್ಪನವರ ಮೇಲಿಗಿಂತಲೂ ರಾಜ್ಯದ ಮೇಲೆ, ದೇಶದ ಮೇಲೆ ಪ್ರೀತಿಯಿತ್ತು, ಗೌರವವಿತ್ತು. ಸಿಂಡಿಕೇಟ್ ವಿವಿಧ ಪಕ್ಷಗಳೊಡನೆ ಭವ್ಯಮೈತ್ರಿ ರೂಪಿಸ ಹೊರಟಾಗ, ಅದನ್ನು ಅಷ್ಟೇ ದೃಢವಾಗಿ ವಿರೋಧಿಸಿದವರು ಶ್ರೀ ಪಾಟೀಲರು. ಆದರೆ, ಅವರ ವಿರೋಧ ವಿರೋಧವಾಗಿ ಉಳಿಯುವುದು ಸಾಧ್ಯವಾಗಲಿಲ್ಲ. ಬಿರುಗಾಳಿಯ ತೀವ್ರತೆ ಕ್ಷಣಕ್ಷಣಕ್ಕೂ ಏರುತ್ತಿರುವಾಗ, ರಕ್ಷಣೆಗೆ ಆಸರೆಯಾದೀತೇನೋ ಎಂಬ ಭಾವನೆ ಹಲವರಲ್ಲಿ ಮೂಡಿತು. ಅಂತೂ ಒಂದು ರೀತಿಯ ಮೈತ್ರಿಕೂಟ ರಚನೆಯಾಯಿತು.

ಮಹಾಪೂರದಲ್ಲಿ ರಾಜ್ಯದಲ್ಲಿನ ಉಳಿದೆಲ್ಲ ಪಕ್ಷಗಳು ಕೊಚ್ಚಿಹೋದುವು. ಶ್ರೀ ಪಾಟೀಲರು ಆಧರಿಸಲು ವಿಶ್ವಪ್ರಯತ್ನ ನಡೆಸಿದರೂ ಅದು ಸಂಪೂರ್ಣ ಮುರಿದುಹೋಯ್ತು. ಲೋಕಸಭೆಯ ೨೭ ಸ್ಥಾನಗಳಲ್ಲಿ ಒಂದನ್ನಾದರೂ ಉಳಿಸಿಕೊಳ್ಳುವುದು ಮೈತ್ರಿಕೂಟದಿಂದ ಸಾಧ್ಯವಾಗಲಿಲ್ಲ. ಅದು ಮಾತ್ರವಲ್ಲ, ಲಕ್ಷಾಂತರ ಮತಗಳಿಗೆ ಎರವಾಗಿ ಪ್ರಚಂಡ ಸೋಲನ್ನು ಇವರು ಒಪ್ಪಿಕೊಳ್ಳಬೇಕಾಯ್ತು.

ತನ್ನ ನಾಯಕತ್ವಕ್ಕೆ ಸವಾಲು ಉದಯವಾಗಿದೆಯೆಂಬುದು ಕೆಲಕಾಲ ಮೊದಲೇ ಶ್ರೀ ಪಾಟೀಲರಿಗೆ ಅನುಭವವಾಗಿತ್ತು. ಮೊದಮೊದಲಿಗೆ ಶಾಸಕರ ಪಕ್ಷಾಂತರದಿಂದ ಮೂಡಿದ ಈ ಸವಾಲು ಸಹೋದ್ಯೋಗಿ ಮಂತ್ರಿಗಳ ರಾಜಿನಾಮೆಯಿಂದ ಬಲಪಡೆಯಿತು. ಲೋಕಸಭಾ ಚುನಾವಣೆಗಳಿಂದ ಬಾಯಿ ತೆರೆಯಿತು. ಮತ್ತೆ ಹತ್ತಾರು ಶಾಸಕರ ಪಕ್ಷಾಂತರದಿಂದ ಶ್ರೀ ಪಾಟೀಲರು ಬಹುಮತ ಕಳೆದುಕೊಂಡರು.

'ಭವಿಷ್ಯದ ಬಗ್ಗೆ ಬಿಡುವಿನಲ್ಲಿ ವಿಚಾರಿಸೋಣ; ಈ ಬಜೆಟ್ ಅಧಿವೇಶನವನ್ನು ಒಂದಾಗಿ ಎದುರಿಸೋಣ'ವೆಂದ ಅವರ ಕಳಕಳಿಯನ್ನು ಕೇಳಿಕೊಳ್ಳುವಷ್ಟು ತಾಳ್ಮೆ ಕೆಲವು ಶಾಸಕರಲ್ಲಿ ಉಳಿಯಲಿಲ್ಲ. 'ನಮ್ಮತ್ತ ಬರುವವರಿಗೆ ೨೭ನೆ ತಾರೀಕಿನ ನಂತರ ಬಾಗಿಲು ಬಂದು' ಎಂದ ಇಂಡಿಕೇಟ್ ನಾಯಕರ ಬೆದರಿಕೆಯಿಂದ ಇತೋ ಭ್ರಷ್ಟಃ ತತೋ ಭ್ರಷ್ಟಃ ಎಂದಾಗ ಬಯಸದ ಅಧಿಕಾರ ಲಾಲಸಿಗಳು ಶ್ರೀ ಪಾಟೀಲರಿಗೆ ಕೊನೆಯ ಗಳಿಗೆಯಲ್ಲಿ ಕೈಕೊಟ್ಟೇ ಬಿಟ್ಟರು.

ಸತ್ಯ ಸಂಗತಿಯನ್ನು ಮನವರಿಕೆ ಮಾಡಿಕೊಂಡ ಮುಖ್ಯಮಂತ್ರಿಗಳು ತಮ್ಮ ಸಂಪುಟದ ಸಭೆ ಕರೆದರು; ರಾಜಿನಾಮೆ ನೀಡಲು ನಿರ್ಧರಿಸಿದರು; ನಿರ್ಧಾರದಂತೆ ನಡೆದುಕೊಂಡರು.

ದಿಲ್ಲಿಯಲ್ಲಿ ಶ್ರೀಮತಿ ಗಾಂಧಿ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದಾಗ ಬೆಂಗಳೂರಲ್ಲಿ ಶ್ರೀ ಪಾಟೀಲರು ಮುಖ್ಯಮಂತ್ರಿ ಪದವಿಗೆ ರಾಜಿನಾಮೆ ನೀಡಿದರು.

ಶ್ರೀ ಪಾಟೀಲರು ಸುಖದಲ್ಲೇ ಹುಟ್ಟಿ ಬೆಳೆದು ಬಂದವರಲ್ಲ. ಅವರ ರಾಜ್ಯಕೀಯ ಜೀವನವೂ ಸುಖಮಯವಾಗಿರಲಿಲ್ಲ. ಜೀವನದಲ್ಲಿ ಸುಖ ದುಃಖಗಳ ಮಧುರ ಮಿಲನವಿದ್ದರೇನೇ ಸ್ವಾರಸ್ಯ. ಶ್ರೀ ಪಾಟೀಲರ ಜೀವನವಿದಕ್ಕೆ ಅಪವಾದವಲ್ಲ.

ಶ್ರೀ ಪಾಟೀಲರು ಮೂವತ್ತು ಮೂರು ತಿಂಗಳು ಕಾಲ ಮುಖ್ಯ ಮಂತ್ರಿಯಾಗಿದ್ದರು. ತನ್ನ ಅಧಿಕಾರಾವಧಿಯಲ್ಲಿ ಅವರೆಂದೂ ಯಾರಿಂದಲೂ ಕೆಟ್ಟ ಹೆಸರು ಕೇಳಲಿಲ್ಲ. ರಾಜ್ಯದ ಸರ್ವತೋಮುಖ ಪ್ರಗತಿಗಾಗಿ ಪ್ರಗತಿ ಶೀಲ ಕ್ರಮಗಳನ್ನು ಅನುಷ್ಠಾನಕ್ಕೆ ತಂದ ಧೀಮಂತ ಮುಖ್ಯಮಂತ್ರಿ. ಅವರನ್ನು ಎಲ್ಲರೂ ಹೊಗಳುತ್ತಾರೆ; ಪ್ರಗತಿಶೀಲರೆನ್ನುತ್ತಾರೆ; ಅವರ ನೀತಿಯನ್ನು, ಅನುಷ್ಠಾನ ಕ್ರಮವನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಾರೆ.

ಆದರೆ, ಅವರು ಸಿಂಡಿಕೇಟಿನಲ್ಲಿ ಉಳಿದುದನ್ನು ಕೆಲವರು ಆಕ್ಷೇಪಿಸುತ್ತಾರೆ. ಅವರು ಶ್ರೀಮತಿ ಗಾಂಧಿಯತ್ತ ವಾಲಿದ್ದರೆ, ಆಕೆಯಂತೆಯೇ ಇನ್ನೂ ಬಹುಕಾಲ ಅಧಿಕಾರದಲ್ಲಿ ಮುಂದುವರಿಯಬಹುದಿತ್ತು. ಇವರು ಆಕೆಗಿಂತಲೂ ಎಳೆಯರು ತಾನೆ? ಶ್ರೀ ಪಾಟೀಲರು ಮುಂದೇನು ಮಾಡುತ್ತಾರೆ? ರಾಜ್ಯಕೀಯದಿಂದಲೇ ನಿರ್ಗಮಿಸುತ್ತಾರೆಯೆ? ತಾನೂ ಇಂಡಿಕೇಟ್ ಸೇರುತ್ತಾರೆಯೋ ಸಿಂಡಿಕೇಟಿನಲ್ಲೇ ಉಳಿದು ಮತ್ತೆ ಒಳ್ಳೆಯ ಭವಿಷ್ಯಕ್ಕಾಗಿ ಎದುರು ನೋಡುತ್ತಾರೆಯೆ? ಅಥವಾ ತಮ್ಮದೇ ಪ್ರತ್ಯೇಕ ಪಕ್ಷವೊಂದನ್ನು ಕಟ್ಟಿಕೊಳ್ಳುತ್ತಾರೆಯೆ?

ಅವರು ಮುತ್ತಿನಂತಹ ಮನುಷ್ಯ. ಮುಂದೇನು ಮಾಡುವರೆಂಬುದು ಸವ್ಯತ್ರಿವರಿಗೆ ಸಂಬಂಧಿಸಿದ ಪ್ರಶ್ನೆ. ಆದರೆ, ಅವರ ರಾಜಿನಾಮೆಯ ಹಿಂದೆಯೇ ಇಂಡಿಕೇಟಿನಲ್ಲಿ ಅಧಿಕಾರಕ್ಕಾಗಿ ಮತ್ತೆ ಆರಂಭವಾದ ಹೋರಾಟದಿಂದ ಜನಕ್ಕೆ ಹಿತವಾಗುವುದಿಲ್ಲ. ಪ್ರಾಯಃ ಕರ್ನಾಟಕದ ರಾಜ್ಯಕೀಯದ ಮೇಲೆ ಹಳೆಯ ಮೋಡ ಕವಿಯುತ್ತದೆ; ಲೋಭಿ ಮೋಡಗಳು ಗುಡುಗತೊಡಗುತ್ತವೆ. ಸುರಿದರೂ ಎಲ್ಲೋ ತಟಕು ಹನಿ ಮಾತ್ರ.

● ●

ನಿಯಮನಿಷ್ಠೆ ಇದ್ದಷ್ಟು ಯಶಸ್ವಿಯಾಗುವುದು ಹೆಚ್ಚು

ಕೃಷಿ ಮತ್ತು ಅರಣ್ಯ ಶಾಸ್ತ್ರಗಳನ್ನು ಕಲಿಯುವ ಪರದೇಶದ ವಿದ್ಯಾರ್ಥಿಗಳು 3/5ರಂತೆ, ವೈದ್ಯಶಾಸ್ತ್ರದವರು 2/5ರಂತೆ, ಪಾರಿಭಾಷಿಕ ಶಾಸ್ತ್ರದವರು ಶೇಕಡಾ 30ರಂತೆ, ಆರ್ಥಿಕ ಮತ್ತು ಸಾಮಾಜಿಕ ಶಾಸ್ತ್ರದವರು ಶೇ. 19ರಂತೆ ಉತ್ತೀರ್ಣರಾಗುವರು. ಬಹುಶಃ ಇತರ ದೇಶಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಶಾಸ್ತ್ರಗಳನ್ನು ಕಲಿಯುವಾಗ ಗಣಿತಶಾಸ್ತ್ರದ ಅಗತ್ಯವಿರುವುದಿಲ್ಲ. ಆದರೆ ಜರ್ಮನಿಯಲ್ಲಿ ಇದರ ಅತ್ಯಗತ್ಯವಿದೆ. ಹೀಗಾಗಿ ಪರದೇಶದ ವಿದ್ಯಾರ್ಥಿಗಳಿಗೆ ಈ ಶಾಸ್ತ್ರಗಳನ್ನು ಕಲಿಯಲು ಕಷ್ಟವಾಗುತ್ತದೆ. ಹಾಗಾಗಿ ಹೆಚ್ಚಿನಂಶ ಇವರು ಉತ್ತೀರ್ಣರಾಗುವುದಿಲ್ಲ.

ಚಿಕ್ಕ ವರಿಸೆಗಳನ್ನು ತಕ್ಕೊಂಡವರಲ್ಲಿಯೂ, ಒಳ್ಳೆಯ ನಿಯಮ ನಿಷ್ಠೆ ಇದ್ದ ವಿಷಯಗಳನ್ನು ತಕ್ಕೊಂಡವರಲ್ಲಿಯೂ ಉತ್ತೀರ್ಣರಾಗುವವರ ಸಂಖ್ಯೆ ಹೆಚ್ಚು. ಆದ ಕಾರಣ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗಲೇ ತುಂಬಾ ನಿಯಮನಿಷ್ಠೆ ಕಟ್ಟುಕಟ್ಟಲೆಗಳನ್ನಿಟ್ಟಿದ್ದಾರೆ. ಈ ನಿಯಮಗಳನ್ನನುಸರಿಸಿ ಉತ್ತೀರ್ಣಹೊಂದಿದ ವಿದ್ಯಾರ್ಥಿಗಳನ್ನು ಮಾತ್ರ ರಿಪಬ್ಲಿಕ್ ಜರ್ಮನಿಯಲ್ಲಿ ವಿದ್ಯಾಭ್ಯಾಸ ಮಾಡಲು ಅವಕಾಶ ಕೊಡುತ್ತದೆ.

ವಿದ್ಯಾರ್ಥಿಗಳು ನಾಪಾಸಾಗಲು ಇನ್ನೊಂದು ಕಾರಣವೆಂದರೆ ಜರ್ಮನಿಯಲ್ಲಿದ್ದಷ್ಟು ವಿದ್ಯಾಲೋಚನೆ, ಸ್ವಾತಂತ್ರ್ಯ ಬೇರೆ ದೇಶಗಳಲ್ಲಿಲ್ಲ. ಈ ತರದ ವಿದ್ಯೆಯನ್ನು ಲಭಿಸುವಂತೆ ಪ್ರಾರಂಭದಿಂದಲೂ ತರಬೇತು ಮಾಡುವಂತೆ ಪರದೇಶದ ವಿದ್ಯಾರ್ಥಿಗಳಿಗೆ ಈಗ ಏರ್ಪಾಡಿದೆ.

ಅನೇಕ ವಿದ್ಯಾರ್ಥಿಗಳಿಗೆ ಜರ್ಮನಿಯಲ್ಲಿ ಕಲಿಯಲಿರುವ ಸುಸಂದರ್ಭಗಳ್ಯಾವುವೆಂದು ಗೊತ್ತೇ ಇಲ್ಲ. ಇದನ್ನು ಗೊತ್ತುಮಾಡಿಕೊಡುವ ಏರ್ಪಾಡು ಈಗ ಇದೆ.

ತಮ್ಮ ದೇಶಗಳಲ್ಲೇ ಸುಧಾರಣೆ ಮತ್ತು ಯೋಜನೆಗಳ ವಿಷಯ ಕಲಿತ ವಿಜ್ಞಾನಿಗಳಿಗೆ ಇನ್ನೂ ಮುಂದುವರಿಸಿ ಕಲಿಯುವಷ್ಟು ಸೌಕರ್ಯಗಳು ಜರ್ಮನಿಯಲ್ಲಿಲ್ಲ.

ಜರ್ಮನಿಯಲ್ಲಿ ಕಲಿತಾದ ನಂತರ ತಮ್ಮ ದೇಶಗಳಿಗೆ ಮರಳಿ ವಿದ್ಯಾರ್ಥಿಗಳು ಏನು ಮಾಡುತ್ತಾರೆ? ತಾವು ಗಳಿಸಿದ ಶಿಕ್ಷಣದ ಸದುಪಯೋಗ ಮಾಡಲು ಅನೇಕ ಸಲ ಇವರಿಗೆ ಅವಕಾಶವಿರುವುದಿಲ್ಲ. ಆಗ ಇವರು ಏನು ಮಾಡ್ಯಾರು? ಇಂಥವರು ತಮ್ಮ ದೇಶಗಳಲ್ಲಿ ಜರ್ಮನ್ ರಿಪಬ್ಲಿಕಿನೊಡಗೂಡಿ ನಡೆಯಿಸುವ ಯೋಜನೆಗಳಲ್ಲಿ ಕೆಲಸ ಮಾಡಬೇಕೆಂಬ ಕಟ್ಟಲೆಯನ್ನು ಇರಿಸುವುದು ಉತ್ತಮ.

ಈ ಮೇಲೆ ಹೇಳಿದ ಸಮಸ್ಯೆಗಳು ಮಾತ್ರವಲ್ಲ ಈಗಿನ ಹೊಸ ಸಮಸ್ಯೆ ಎಂದರೆ ವಿಶ್ವವಿದ್ಯಾಲಯಗಳಲ್ಲಿ ಕೆಲವೇ ವಿಷಯಗಳನ್ನು ಕಲಿಯಲು ಕಿಕ್ಕಿರಿದು ಬರುತ್ತಾರೆ. ಹಾಗಾಗಿ ಎಲ್ಲವರಿಗೂ ಅಲ್ಲಿ ಸ್ಥಳ ಸಿಗುವುದು ಕಠಿಣ. ಈ ಸಮಸ್ಯೆಯನ್ನು ಸುಲಿಯಬೇಕಾಗಿ ರಿಪಬ್ಲಿಕ್ ಸರಕಾರ ಇಂಥಹ ವಿಷಯಗಳಿಗೆ ಪರದೇಶದ ವಿದ್ಯಾರ್ಥಿಗಳಿಗಾಗಿ ಶೇಕಡಾ 10 ಸ್ಥಾನಗಳನ್ನು ಮೀಸಲಾಗಿಟ್ಟಿದೆ. ● ●

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕೊಲಿಟಿಯಲ್ಲಿ, ಸ್ಯಾಜನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

HOTEL SATKAR

Boarding, Lodging & Restaurant
Behind Corporation Office,
9 Mission Road — Bangalore—27.

Phone No.— 1 72303
2 72304
Grams: HOST SATKAR

Vegetarian Cuisine
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ಸೌಂದರ್ಯಾಭಿರುಚಿಯ ಶಿಕ್ಷಣ

೩

ಬಹುಕಾಲದ ವರೆಗೆ, ಶಾಲೆಗಳಲ್ಲಿ, ಸೌಂದರ್ಯಾಭಿರುಚಿಯ ಶಿಕ್ಷಣವು ಕಲೆಗಳನ್ನು ಪರಿಚಯ ಮಾಡಿಕೊಡುವುದು, ಮುಖ್ಯವಾಗಿ ಚಿತ್ರಲೇಖನ ಮತ್ತು ಹಾಡುಗಾರಿಕೆಗಳ ಅಭ್ಯಾಸವನ್ನು ಮಕ್ಕಳಲ್ಲಿ ಬೆಳೆಸುವುದು ಇಷ್ಟಕ್ಕೆ ಮುಗಿಯುತ್ತಿತ್ತು.

ಪ್ರಾಥಮಿಕ ತರಗತಿಗಳಲ್ಲೇ ಈ ಎರಡು ವಿಷಯಗಳನ್ನು ಕಲಿಸಿಕೊಡಲಾಗುತ್ತಿತ್ತು. ಚಿತ್ರ ಲೇಖನದ ಪಾಠಗಳ ಕಾಲಕ್ಕೆ ಮಕ್ಕಳು ಲಲಿತಕಲೆಗಳ ಕುರಿತು ಕೆಲವು ಮೂಲ ವಿಷಯಗಳನ್ನು ಕಲಿತುಕೊಳ್ಳುತ್ತಿದ್ದರು. ಕೊಡಲಾದ ಒಂದು ವಿಷಯದ ಮೇಲೆ ನಾನಾ ರೀತಿಯ ಚಿತ್ರಗಳನ್ನು ಮತ್ತು ಅದೇ ರೀತಿ ತಾವು ಇಷ್ಟಪಟ್ಟ ಚಿತ್ರಗಳನ್ನು ಬರೆಯುತ್ತಿದ್ದರು. ವರ್ಣಚಿತ್ರಗಳ ಚರಿತ್ರೆಯ ಪರಿಚಯವನ್ನು ಪಡೆಯುತ್ತಿದ್ದರು, ಲಲಿತ ಕಲಾ ಭಂಡಾರಗಳಿಗೆ ಭೇಟಿಕೊಡುತ್ತಿದ್ದರು. ಜಗತ್ತಿನ ಖ್ಯಾತ ವರ್ಣಚಿತ್ರಗಳ ಪರಿಚಯ ಮಾಡಿಕೊಳ್ಳುತ್ತಿದ್ದರು. ಅದೇ ರೀತಿ ಶಿಲ್ಪಕಲೆಯ ವಿಷಯಗಳನ್ನೂ ತಿಳಿದುಕೊಳ್ಳುತ್ತಿದ್ದರು. ಹಾಡುಗಾರಿಕೆಯ ಪಾಠಗಳನ್ನೂ ಹೀಗೆ ಮಾಡಲಾಗುತ್ತಿತ್ತು. ಸಂಗೀತಶಾಸ್ತ್ರದ ಮೂಲ ಪಾಠಗಳನ್ನು ಕಲಿಯುತ್ತಿದ್ದರು, ಗಣ್ಯ ವಾಗ್ಗೇಯಕಾರರ ಕೃತಿಗಳ ರೆಕಾರ್ಡ್‌ಗಳನ್ನು ಕೇಳುತ್ತಿದ್ದರು. ಕಟ್ಟುನಿಟ್ಟಾಗಿ ಹೇಳುವುದಾದರೆ, ಸೌಂದರ್ಯಾಭಿಜ್ಞತೆಯ ಶಿಕ್ಷಣವು, ಒಂದು ಕಲಾಶಾಸ್ತ್ರವಾಗಿದೆ, ಕಲೆಯ ಸಿದ್ಧಾಂತವಾಗಿದೆ. ಸೃಷ್ಟ್ಯಾತ್ಮಕ ಕಾರ್ಯದ ವಿಧಾನಗಳನ್ನೂ ಅದು ವಿಶ್ಲೇಷಿಸುತ್ತದೆ, ಕಲೆಯ ಮಾನದಂಡಗಳನ್ನು ಅವಲೋಕಿಸುತ್ತದೆ, ಅದರ ಪ್ರಾಕಾರಗಳನ್ನು, ಬಗೆಗಳನ್ನೂ ಪರೀಕ್ಷಿಸುತ್ತದೆ. ಅಂತೆಯೆ, ಸಹಜವಾಗಿ ಸಾಮಾನ್ಯ ಸೆಕಂಡರಿ ಶಿಕ್ಷಣ ಶಾಲೆಗಳಲ್ಲಿ ಸೌಂದರ್ಯ ಶಿಕ್ಷಣವು ಸಾಮಾನ್ಯವಾಗಿರುತ್ತದೆ. ಸೌಂದರ್ಯಾಭಿರುಚಿಯು ಕೆಲವೇ ಮೂಲ ಪಾಠಗಳಿಗೆ ಸೀಮಿತಗೊಂಡಿರುತ್ತದೆ. ಮಕ್ಕಳ ಸೌಂದರ್ಯಾಭಿರುಚಿಯ ಶಿಕ್ಷಣವು ಮಾತ್ರ ಕಲಾಶಿಕ್ಷಣಕ್ಕಷ್ಟೇ ಸೀಮಿತಗೊಳ್ಳುವುದಿಲ್ಲವೆಂಬುದಂತೂ ಸ್ವಯಂಸ್ಪಷ್ಟ.

ಸೋವಿಯೆತ್ ಅಧ್ಯಾಪಕರು ಮಕ್ಕಳು ಮೊದಲು ಕಲೆಯಲ್ಲಿ ಗಾಢವಾದ ಆಸಕ್ತಿಯನ್ನು ಬೆಳೆಸಿಕೊಳ್ಳುವಂತೆ ಮಾಡಬೇಕಾಗಿದೆ; ಆ ಬಳಿಕ ಮಾತ್ರವೆ ಕಲೆಯ ಚರಿತ್ರೆ ಹಾಗೂ ಸಿದ್ಧಾಂತಗಳ ಜ್ಞಾನವನ್ನು ನೀಡಬೇಕು. ಈ ಉದ್ದೇಶಕ್ಕೆಂದೇ ಸೋವಿಯೆತ್ ಒಕ್ಕೂಟದ ಶಿಕ್ಷಣ ಅಕಾಡಮಿಯಲ್ಲಿ ಶಾಲಾ ಮಕ್ಕಳ ಸೌಂದರ್ಯಾಭಿರುಚಿ ಶಿಕ್ಷಣ ಮಂಡಲಿಯೊಂದನ್ನು ಸ್ಥಾಪಿಸಲಾಗಿದೆ. ಶಾಲೆಗಳಲ್ಲಿ ಕಲೆ ಮತ್ತು ಸೌಂದರ್ಯ ಶಿಕ್ಷಣದ ಸಮಸ್ಯೆಗಳ ಪರಿಶೀಲನೆ, ಅದೇ ರೀತಿ ಕುಟುಂಬದಲ್ಲೂ ಮಕ್ಕಳ ಹಾಗೂ ಯುವ ಜನರ ಸಂಸ್ಥೆಗಳಲ್ಲೂ ಇವುಗಳ ಪರಿಶೀಲನೆಯು ಇದರ ಮುಖ್ಯ ಕಾರ್ಯವಾಗಿದೆ. ಈ ಮಂಡಲಿಯಲ್ಲಿ ಪ್ರಮುಖ ಸೋವಿಯೆತ್ ಕಲಾವಿದರು, ಲೇಖಕರು, ವಾಗ್ಗೇಯಕಾರರು, ಚಲಚ್ಚಿತ್ರ ನಟರು, ನಾಟಕ ನಿರ್ದೇಶಕರು, ಅದೇ ರೀತಿ ಅಧ್ಯಾಪಕರು, ಚರಿತ್ರಕಾರರು, ಶೈಕ್ಷಣಿಕ ಸಂಶೋಧನಾ ಪೀಠಗಳ ಸಂಶೋಧಕರು ಇವರೇ ಮೊದಲಾದವರು ಇದ್ದಾರೆ. ಸೋವಿಯೆತ್ ಯುವಜನ ಸಂಸ್ಥೆಗಳ ಪ್ರತಿನಿಧಿಗಳೂ ಇದರಲ್ಲಿದ್ದಾರೆ.

ಸೋವಿಯೆತ್ ಒಕ್ಕೂಟದಲ್ಲಿ ಎಲ್ಲಾ ಶೈಕ್ಷಣಿಕ ಸಂಸ್ಥೆಗಳೂ ಪಾಠಶಾಲೆಗಳೂ ರಾಜ್ಯಕ್ಕೇ ಸೇರಿರುವುದರಿಂದ ಅದೇ ವೈಜ್ಞಾನಿಕ ವಿಧಾನಗಳಿಂದ ಮತ್ತು ಅದೇ ಸಿಲ್ಯಾಬಿಯಿಂದ ಶಾಲೆಯಲ್ಲಿ ಪಾಠಗಳನ್ನು ಮಾಡುವುದಕ್ಕೆ ಅತ್ಯಂತ ಅನುಕೂಲಕರವಾದ ಸ್ಥಿತಿಗತಿಗಳು ಇವೆ. ಸಾಂಸ್ಕೃತಿಕ ಜೀವನದ ಕೇಂದ್ರಗಳೆನಿಸಿರುವ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸವಾಗಿರುವ ಮಕ್ಕಳಿಗೆ ಕಲೆಗಳ ವಿಷಯವನ್ನು ತಿಳಿದುಕೊಳ್ಳಲು ಹೆಚ್ಚಿನ ಅವಕಾಶಗಳು ಇವೆ. ಮಾಸ್ಕೋ ಮಕ್ಕಳು ಪ್ರಖ್ಯಾತವಾದ ತ್ರೆತ್ಯಾಕೋವ್ ಚಿತ್ರಶಾಲೆಗೆ ತೆರಳಿ ಉತ್ಕೃಷ್ಟ ರಶಿಯನ್ ಕಲಾವಿದರ ಮೂಲಕೃತಿಗಳನ್ನೇ ಪರಿಚಯ ಮಾಡಿಕೊಳ್ಳುವ ಅವಕಾಶವನ್ನು ಹೊಂದಿದ್ದಾರೆ. ಲೆನಿನ್‌ಗ್ರಾಡ್‌ನ ಹುಡುಗರಿಗೆ ಪ್ರಖ್ಯಾತವಾದ ಹೆರ್ಮಿಟೇಜ್ ವಸ್ತು ಭಂಡಾರವಿದ್ದು ಅಲ್ಲಿ ಸಂಗ್ರಹಗೊಂಡಿರುವ ಜಾಗತಿಕ ಕಲಾ ಭಂಡಾರದ ದಿವ್ಯ ಕೃತಿಗಳನ್ನು ಮೆಚ್ಚಿ ತಲೆದೂಗಬಹುದಾಗಿದೆ. ಎಲ್ಲಾ ನಗರಗಳಲ್ಲೂ ಇಂಥ ಅವಕಾಶಗಳು ದೊರೆಯಲಾರವು. ಅಂತೆಯೆ ಮಕ್ಕಳ ಸೌಂದರ್ಯ ಶಿಕ್ಷಣದಲ್ಲಿ ಈಗ ಟೆಲಿವಿಷನ್ ಮತ್ತು ರೇಡಿಯೋಗಳಿಗೆ ವಿಶೇಷ ಸ್ಥಾನವು ಪ್ರಾಪ್ತವಾಗುತ್ತದೆ. ಶಾಲಾಧ್ಯಾಪಕರ ಸಹಾಯಕ್ಕೆಂದೇ ಈಗ ವಿಶೇಷ ರೀತಿಯ ಟೆಲಿವಿಷನ್ ಮತ್ತು ರೇಡಿಯೋ ಕಾರ್ಯಕ್ರಮಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ಅನೇಕ ಜನ ಕಲಾವಿದರು, ಲೇಖಕರು, ವಾಗ್ಗೇಯಕಾರರು ಮತ್ತು ನಟರು ಮಕ್ಕಳಿಗೆ ಸೌಂದರ್ಯ ಶಿಕ್ಷಣವನ್ನು ನೀಡುವ ವಿಚಾರವನ್ನು ಬೆಂಬಲಿಸಿದ್ದಾರೆ. ಉದಾಹರಣೆಗೆ ಪ್ರಖ್ಯಾತ ವಾಗ್ಗೇಯಕಾರ ಪ್ರಾಚಾರ್ಯ ದ್ಮಿತ್ರಿ ಕಬಾಲೆವಸ್ಕಿಯವರು ಮಕ್ಕಳ ರೇಡಿಯೋ ಕಾರ್ಯಕ್ರಮಗಳಲ್ಲಿ ನಿಯಮಿತವಾಗಿ ಭಾಗವಹಿಸುತ್ತಿರುತ್ತಾರೆ. ಸಂಗೀತದ ಪಾಠಗಳನ್ನು ನೀಡುತ್ತಾರೆ. ಇವು ಕೂಡ ಮಕ್ಕಳಿಗೂ, ಅವರನ್ನು ಹೆತ್ತವರಿಗೂ ಪರಮ ಪ್ರಿಯವಾಗಿವೆ.

ಕೆಲವೊಂದು ಶಾಲೆಗಳ ಮೇಲ್ತರಗತಿಗಳಲ್ಲಿ ಐಚ್ಛಿಕ ಕಲಾಪಾಠಗಳನ್ನೂ ಅಳವಡಿಸಲಾಗಿದೆ. ಮೇಲ್ತರಗತಿಯ ವಿದ್ಯಾರ್ಥಿಗಳಿಗೆ ಸೌಂದರ್ಯಾಭಿರುಚಿಯ ಶಿಕ್ಷಣದಲ್ಲಿ ವಿಸ್ತೃತ ಪಾಠಗಳನ್ನು ನೀಡಲಾಗುತ್ತಿದೆ. ಅತ್ಯಂತ ಪ್ರತಿಭಾವಂತ ಮಾತ್ರವೇ ಅಲ್ಲ, ಎಲ್ಲಾ ಶಾಲಾಬಾಲಕರ ಸೌಂದರ್ಯಾಭಿರುಚಿ ಶಿಕ್ಷಣದ ಬಗ್ಗೆಯೆ ನಾನಿಲ್ಲಿ ಮಾತನಾಡುತ್ತಿರುವುದು. ಮತ್ತೆ ಪ್ರತಿಭಾವಂತರಿಗೆಂದೇ ವಿಶೇಷ ರೀತಿಯ ಶಾಲೆಗಳೂ ಸ್ಟುಡಿಯೋಗಳೂ ಕ್ಲಬ್ಬುಗಳೂ ಯುವ ಬಾಲಚಟರ ಅರಮನೆಗಳೂ ಇದ್ದೇ ಇವೆ.

●●

ಶಾಂತಿ ಎಲ್ಲಕ್ಕಿಂತ ಸುಖದ ಸುಂದರ ರೂಪವಾಗಿರುತ್ತದೆ. (ಜೈನಿಂಗ)

ಕಾರ್ಯಶಕ್ತಿ ವಿಹೀನನಾದ ಪ್ರತಿಯೊಬ್ಬ ಬುದ್ಧಿವಂತನು ಅಸಫಲನಾಗುವನು. (ಜೈಂಫರ್ಟ)

ಇದೀಗ ಮೂರನೆ ಬಾರಿ ಪ್ರಧಾನಿ ಪಟ್ಟವೇರಿದ ಭಾರತದ ವೀರಾಂಗನೆ
ಶ್ರೀಮತಿ ಇಂದಿರಾ ಗಾಂಧಿ

ಪುತ್ತೂರು IInd Adll. ಮುನ್ಸಿಫ್ ಕೋರ್ಟನಲ್ಲಿ

Ex. C. 378/67 (O. S. 4/66)

B. ಶಂಭಟ್ಟ —ಅರ್ಜಿದಾರ

ಅಬ್ಬು ಯಾನೆ ಪಳ್ಳಿಕುಂಞಿ ಸಹಾ —ಎದ್ರಿರು

6ನೇ ಎದ್ರಿ: ಆಮಿನಾ, ಅಬ್ಬು ಯಾನೆ ಪಳ್ಳಿ ಕುಂಞಿ ಬ್ಯಾರಿಯ ಮಗಳು, ಕಟಕ ಗ್ರಾಮ.

ಸದ್ರಿ 6ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ–

ಈ ಅಮಲ್ದಾರಿಯಲ್ಲಿ ದಾಖಲಾದ ಯೇಲಂ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸುವ ನೋಟೀಸಿನ ಬಗ್ಗೆ ತಾ. 6-4-71ಕ್ಕೆ ಇಟ್ಟಿರುತ್ತದೆ. ಸದ್ರಿ ದಿನ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಏಕ್ಸ್‌ಪಾರ್ಟಿ ನ್ಯಾಯಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M. Rammohan Rao
Advocate for petitioner
Puttur. 24-3-71

'ದಾರೆದ ಬುಡೆದಿ' ತುಳು ಚಿತ್ರದ ಪ್ರಾರಂಭೋತ್ಸವ

ಶ್ರೀ ಎಂ. ಮಧ್ವರಾಜ್ ಇವರು ಅರ್ಪಿಸಿದ ಶರಾವ್ ಪಿಕ್ಚರ್ಸ್‌ರವರ 'ದಾರೆದ ಬುಡೆದಿ' ತುಳು ಸಾಮಾಜಿಕ ಚಿತ್ರದ ಪ್ರಾರಂಭೋತ್ಸವವು ಇದೇ ಕಳೆದ ತಾ. 19ರಂದು ಮಂಗಳೂರಿನ ಮೋಹಿನಿ ವಿಲಾಸದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಸಮಾರಂಭದ ಅಧ್ಯಕ್ಷತೆಯನ್ನು ಹೋಮ್ ಗಾರ್ಡ್ಸ್‌ನ ಜಿಲ್ಲಾ ಕಮಾಂಡೆಂಟ್ ಡಾ| ಎಂ. ವಿ. ಶೆಟ್ಟಿಯವರು ವಹಿಸಿ ಚಿತ್ರದ ಪಾರಂಭೋತ್ಸವವನ್ನು ನೆರವೇರಿಸಿದರು. ಪ್ರಾರಂಭದಲ್ಲಿ ಶ್ರೀ ಸೀತಾರಾಮ್ ಕುಲಾಲ್‌ರವರು ಸ್ವಾಗತಿಸುತ್ತಾ ಈ ಚಿತ್ರದ ಪ್ರಥಮೋದ್ದೇಶ ತುಳು ಅಭಿವೃದ್ಧಿಯೇ ಆಗಿದ್ದು, ತುಳುಭಾಷೆಯ ಜನರ ಸಂಖ್ಯೆಯನ್ನು ಗಮನಿಸಿದಾಗ ಇದನ್ನು ತಿಳಿದ ಚಿತ್ರ ನಿರ್ಮಾಪಕರು, ನಿರ್ದೇಶಕರು, ವಿತರಣೆಗಾರರು, ಪ್ರದರ್ಶಕರು, ಕಲಾವಿದರು ಈ ಸಾಹಸಕ್ಕೆ ಕೈ ಹಾಕಿರುದು ಒಂದು ಮಹಾಸಾಧನೆ ಎಂದು ಚಿತ್ರವು ಯಶಸ್ಸುಗಳಿಸಲೆಂದರು.

ನಿರ್ಮಾಪಕರ ಪರವಾಗಿ ಶ್ರೀ ಕೆ. ಎನ್. ಟೈಲರ್ ಮಾತನಾಡುತ್ತಾ ತುಳುವಿನಲ್ಲಿ ಚಿತ್ರವೊಂದನ್ನು ತಯಾರಿಸಬೇಕೆಂದಿದ್ದ ತಮ್ಮ ಪ್ರಯತ್ನಕ್ಕೆ ಶ್ರೀ ಮಧ್ವರಾಜರು ಪ್ರೋತ್ಸಾಹ ನೀಡಲು ಮುಂದೆ ಬಂದರು. ಮಂಗಳೂರಿನ ಲಾಂಛನದಲ್ಲಿ ಚಿತ್ರ ತಯಾರಿಸಲು ಪ್ರಾರಂಭಿಸಿದೆವು. ವಿಶ್ವಕಿರಣ್ ಪಿಕ್ಚರ್ಸ್‌ರವರು ನೆರವು ನೀಡಿ ಈ ಚಿತ್ರ ತೆರೆ ಕಾಣುವಂತೆ ಸಹಕರಿಸಿದರು ಎಂದವರು ಹೇಳಿದರು. ಅವರು ಮುಂದುವರಿಯುತ್ತಾ, ತುಳುಚಿತ್ರ ತಯಾರಿಸುವಾಗ ತುಳು ಜನರೇ ಆದರಲ್ಲಿದ್ದು ಚಿತ್ರವಾಗಬೇಕೆಂದು ಶ್ರೀ ಆರೂರು ಪಟ್ಟಾಭಿ, ಲೀಲಾವತಿ ಮೊದಲಾದ ಚಿತ್ರರಂಗದ ಅನುಭವೀ ಕಲಾವಿದರ ಸಹಾಯ ಪಡೆಯಲು ಮುಂದಾದೆವು. ನಮ್ಮ ಈ ಪ್ರಥಮ ಪ್ರಯತ್ನದಲ್ಲಿ ಏನಾದರೂ ಲೋಪದೋಷಗಳಿದ್ದಲ್ಲಿ ಅವುಗಳನ್ನು ಕ್ಷಮಿಸಿ ಪ್ರೋತ್ಸಾಹಿಸಿದಲ್ಲಿ ಇನ್ನೂ ತುಳುಚಿತ್ರಗಳನ್ನು ಮಾಡಬಲ್ಲೆವೆಂಬ ಭರವಸೆ ತನಗಿದೆ ಎಂದು ಹೇಳಿದರು. ಅಂತ್ಯದಲ್ಲಿ ಶ್ರೀ ಕುಲಾಲ್ ಅವರು ಧನ್ಯವಾದಗಳನ್ನರ್ಪಿಸಿದರು.

ಅನಂತರ ನಗರದ ರೂಪವಾಣಿ ಟಾಕೀಸ್‌ನಲ್ಲಿ ಆಮಂತ್ರಿತರಿಗಾಗಿ 'ದಾರೆದ ಬುಡೆದಿ' ತುಳು ಚಿತ್ರದ ಪ್ರದರ್ಶನ ನಡೆದು ಕಲಾವಿದರ ಈ ಸಾರ್ಥಕ ಪ್ರಯತ್ನ ಜನಮೆಚ್ಚುಗೆ ಗಳಿಸಿತು.

● ●

ಕೋಟಿ-ಚೆನ್ನಯ್ಯ ಬೈದೇರು ಉತ್ಸವ

ಸುಳ್ಯ ತಾಲೂಕು ಎಣ್ಮೂರು ಬೀಡಿನ ಪೂರ್ವಪದ್ಧತಿ ಪ್ರಕಾರ ನಡೆಯಲಿರುವ ಸುಪ್ರಸಿದ್ಧ ಎಣ್ಮೂರು ಆದಿ ಶ್ರೀ ಕೋಟಿ-ಚೆನ್ನಯ್ಯರೆಂಬ ಬೈದೇರುಗಳಿಗೆ ಉತ್ಸವವು ತಾ. 7-4-71ರಿಂದ 9-4-71ರ ತನಕ ಜರಗಲಿರುವುದು. ಇದಕ್ಕೆ ಸರ್ವರೂ ಆಗಮಿಸಿ ಸಹಕರಿಸಬೇಕೆಂದು ಕಟ್ಟೆ ಬೀಡಿನ ಪಟೇಲ್ ಕೆ. ಬಿ. ವಿಠ್ಠಲ್ ರೈಯವರು ಅಪೇಕ್ಷಿಸುತ್ತಾರೆ.

ಉಡುಪಿಯಲ್ಲಿ 'ದಾರೆದ ಬುಡೆದಿ' ಪ್ರದರ್ಶನ

ಉಡುಪಿಯ ಅಲಂಕಾರ್ ಥಿಯೇಟರಿನಲ್ಲಿ ಯುಗಾದಿಯ ಕಾಣಿಕೆಯಾಗಿ ಅತ್ಯುತ್ತಮ ತುಳು ಚಿತ್ರವೆಂದು ಪ್ರಶಂಸಿಸಲ್ಪಟ್ಟ ಶ್ರೀ ಮಧ್ವರಾಜ ಅರ್ಪಿತ "ದಾರೆದ ಬುಡೆದಿ" ಚಲಚಿತ್ರವು ತಾ. 26-3-71ರಿಂದ ಪ್ರದರ್ಶಿಸಲ್ಪಡುತ್ತಿದೆ. ಪ್ರತಿ ದಿನದ ನಾಲ್ಕು ದೇಖಾವೆಗಳಿಗೂ ಜನದಟ್ಟಣೆ ವಿಶೇಷವಾಗಿದೆ.

ಚಲಚಿತ್ರ ನಟ ನಟಿಯರಿಗೆ ಸನ್ಮಾನ ಸಮಾರಂಭ

ಶಿರ್ವ 25 "ಕಲೆಯು ಸಂಸ್ಕೃತಿಯ ಅಂಗ ಸಂಸ್ಕೃತಿಗೂ ಧರ್ಮಕ್ಕೂ ನಿಕಟ ಸಂಬಂಧ ಸಂಸ್ಕೃತಿ ಸಂಪನ್ನ ಕಲಾವಿದರಾದ ನೀವು ಒಂದೇ ರೀತಿಯಲ್ಲಿ ಕಲೆಯ ಮೂಲಕ ಸಂಸ್ಕೃತಿಯ ಪ್ರಸಾರವನ್ನು ಮಾಡುತ್ತಾ, ಧರ್ಮ ಜಾಗೃತಿಯನ್ನು ಉಂಟು ಮಾಡುತ್ತಿದ್ದೀರಿ..." ಎಂದು ಶಿರ್ವದ ರೋಟರಿ ಕ್ಲಬ್‌ನ ಅಧ್ಯಕ್ಷ ಹಾಗೂ ಶಂಕರಪುರ ಇಗರ್ಜಿಯ ಧರ್ಮಗುರುಗಳೂ ಆದ ಫಾದರ್ ಸಲ್ಡಾನ್ಹರವರು ಸ್ಥಳೀಯ ಹಿಂದೂ ಹಾಯರ್ ಸೆಕೆಂಡರಿ ಶಾಲಾ ಸಭಾ ಭವನದಲ್ಲಿ ಮದ್ರಾಸಿನ ವಿಜಯರಾಜ್ ಆರ್ಟ್ಸ್‌ನ ಕಲಾವಿದರಾದ ನಟ ಶ್ರೀ ರಾಜಗೋಪಾಲ್ ರಾವ್ ಚಲಚಿತ್ರ ನಟ ಶ್ರೀಮತಿ ವಂದನಾ, ಹಾಸ್ಯ ನಟ ಆರ್. ಟಿ. ರಮಾ, ಕುಮಾರಿ ಸರಸಾ ಮತ್ತು ಶ್ರೀ ಶ್ಯಾಮು ಇವರಿಗಾಗಿ ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ನುಡಿದು ಅವರ ನಾಟಕ "ನಾಲ್ಕು ದಿಕ್ಕುಗಳು" ಅಷ್ಟ ದಿಕ್ಕುಗಳಲ್ಲೂ ಖ್ಯಾತಿಯನ್ನು ಪಡೆಯಲಿ ಎಂದು ಹಾರೈಸಿದರು.

ಕುಮಾರಿಯರಾದ ಶಶಿಕಲ, ಮಾಲಿನಿ, ಗೀತಾರಿಂದ ಪ್ರಾರ್ಥನೆಯಾದ ಬಳಿಕ ಮುಖ್ಯೋಪಾಧ್ಯಾಯ ಶ್ರೀ ಬಿ. ಜಯರಾಮ ಶೆಟ್ರು ತಮ್ಮ ಗೆಳೆಯರಾದ ನಟ ಶ್ರೀ ರಾಜಗೋಪಾಲ ರಾಯರ ಬಳಗವನ್ನು ಸ್ವಾಗತಿಸಿದ್ದರು. ರೋಟರಿಯನ್ ಡಾ। ವೆಂಕಟ ಕೃಷ್ಣರು ತಮ್ಮ ಹಾಗೂ ಶ್ರೀ ರಾಜಗೋಪಾಲರಾಯರ ಗೆಳೆತನ ಬಾಂಧವ್ಯವನ್ನು ಸ್ಮರಿಸಿ ಅವರ ಕಲಾ ಸೇವೆಗೆ ಭವ್ಯ ಭವಿಷತ್ತನ್ನು ಕೋರಿದರು. ನಟ ಶ್ರೀ ರಾಜಗೋಪಾಲ ರಾಯರು ತಮ್ಮ ಬಳಗದವರ ಪರಿಚಯವನ್ನೀಯುತ್ತ ಗೆಳೆಯರ ಮಧ್ಯದಲ್ಲಿ ತಮಗಿಂದು ಬಾಲ್ಯದ ಸವಿನೆನಪುಗಳ ಸ್ಮರಣೆ ಬರುತ್ತಿದೆ ಎಂದು ಕಂಠ ತುಂಬಿ ನುಡಿದರು. ಹಾಸ್ಯ ನಟ ರಮಾ ಹಾಡೊಂದನ್ನು ಸುಶ್ರಾವ್ಯವಾಗಿ ಹಾಡಿದರು. ಮುಖ್ಯೋಪಾಧ್ಯಾಯರ ಧನ್ಯವಾದ ರಾಷ್ಟ್ರಗೀತೆಯೊಂದಿಗೆ ಸಮಾರಂಭ ಮುಕ್ತಾಯಗೊಂಡಿತು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 630/69

ಬಿ. ಕೆ. ಗಂಗಾಧರ ರಾವ್ —ಅರ್ಜಿದಾರ

ಮತ್ತು

ಪೊಡಿಯಮ್ಮ ಬ್ಯಾರ್ತಿ ಮತ್ತು ಇತರರು —ಎದ್ರಿರು

ಮೇಲಿನ ಅರ್ಜಿಯ 4ನೇ ಎದ್ರಿ ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಬಾವಲಿಬನ ಎಂಬಲ್ಲಿ ವಾಸವಾಗಿರುವ ಮೃತ ಮಮ್ಮದೆ ಬ್ಯಾರಿಯ ವಿಧವೆ, ಅಜ್ಜಮ್ಮ ಬ್ಯಾರ್ತಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯ ಪಡಿಸುವುದೇನೆಂದರೆ:-

ಸದ್ರಿ ಅರ್ಜಿಯಲ್ಲಿ ಮೃತ ಬಿ. ಕೆ. ಲಕ್ಷ್ಮೀನಾರಾಯಣ ರಾವ್‌ರವರ ವಾರೀಸುದಾರರಾಗಿ ಸೇರಿಸುವರೇ ಸದ್ರಿ ಅರ್ಜಿದಾರನು ಅರ್ಜಿ ಕೊಟ್ಟಿರುವುದರಿಂದ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಇದೇ ಎಪ್ರಿಲ್ ತಿಂಗಳ 13 ನೇ ತಾರೀಕಿನಂದು ಬೆಳಿಗ್ಗೆ 11 ಗಂಟೆಗೆ ಖುದ್ದಾಗಲೀ ವಕೀಲರ ಮುಖಾಂತರವಾಗಲೀ ಕೋರ್ಟು ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಖ್ಖಾ ಮಾಡಿ ಅರ್ಜಿಯನ್ನು ಮುಂದುವರಿಸಲಾದೀತು. ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್

Advocate for Petitioner

ಬೆಳ್ತಂಗಡಿ, 17.3.71.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

II. Additional Munsiffs Court

O. S. 464/1970

1 ಪುಷ್ಪಾವತಿ- 2 ಯುವರಾಜ ಯಾನೆ ಎಲಿಯಣ —ವಾದಿರು

ಮರುದೇವಿ ಕೂಡಾ —ಪ್ರತಿವಾದಿರು

ಕರಿಯ ಪೂಜಾರಿ, ಬೊಗ್ಗು ಪೂಜಾರಿ ಮಗ ಬೆಳ್ತಂಗಡಿ ತಾಲ್ಲೂಕು ಬಂದಾರು ಗ್ರಾಮದ ಕುರುಡಂಗೆ ಎಂಬಲ್ಲಿ-Post ಬಂದಾರು 6ನೆ ಪ್ರತಿವಾದಿ —ಇವರಿಗೆ

ವಾದಿರು ಪ್ರತಿವಾದಿರ ಮೇಲೆ ಪರ್ಮನೆಂಟು ಇಂಜಂಕ್ಷನಿಗೆ ಮಾಡಿದ ದಾವೆಯಲ್ಲಿ 6ನೆ ಪ್ರತಿವಾದಿಯ ಕೈಫೀತು ನೋಟೀಸಿನ ಬಗ್ಗೆಂತ ತಾ. 14-4-1971ಕ್ಕೆ ವ್ಯಾದೆ ಇಟ್ಟಿರುವದರಿಂದ ಆ ವ್ಯಾದೆ ದಿನ 6ನೆ ಪ್ರತಿವಾದಿಯು ಈ ಕೋರ್ಟು ಮುಂದೆ 11 ಘಂಟೆಗೆ ತಪ್ಪದೆ ಹಾಜ್ರಾಗಿ ತನ್ನ ಆಕ್ಷೇಪಗಳಿದ್ದರೆ ಬರಹ ಮೂಲಕ ಉದಹರಿಸ ತಕ್ಕದ್ದು. ಇದಕ್ಕೆ ತಪ್ಪಿದರೆ ಆತನನ್ನು ಶಿವಾಯಿ ಎಂತ ಮಾಡಿ ಈ ದಾವೆಯನ್ನು ಮುಂದಿನ ರೆಕ್ಕಿಯಿಂದ ತೀರ್ಮಾನಿಸಲಾದೀತು ಎಂತ ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

Sd. B. RAMACHANDRA Rao,

M. A. B.L.

Pleader for Plaintiffs

ಪುತ್ತೂರು, S. K., ತಾ. 25-3-71

ಬೇಕಾಗಿದ್ದಾರೆ

ಕನಿಷ್ಠ 8ನೇ ತರಗತಿ ವರೆಗೆ ಓದಿದ ಕೆಲವು ಉತ್ಸಾಹಿ ಹುಡುಗರನ್ನು ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

[ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ]

ಕಾಂಗ್ರೆಸ್ ವಸ್ತುಪ್ರದರ್ಶನ

1971

ಸುಭಾಷ್‌ನಗರ, ಬೆಂಗಳೂರು—9.

25—3—71 ರಿಂದ ಪ್ರಾರಂಭವಾಗಿದೆ

- ಪ್ರತಿ ದಿನವೂ ಖ್ಯಾತ ಕಲಾವಿದರಿಂದ ಮನರಂಜನೆ
- ರಾಜ್ಯದ ಅಭಿವೃದ್ಧಿಯ ವಿಹಂಗಮ ನೋಟ
- ಕೈಗಾರಿಕಾಭಿವೃದ್ಧಿಯ ಸತ್ಯ ಚಿತ್ರ
- ಗಾಂಧಿ ದರ್ಶನ ಮಂಟಪ
- ಸ್ವಾತಂತ್ರ್ಯ ಹೋರಾಟದ ಚಿತ್ರಶಾಲೆ
- ಎಲ್ಲವೂ ಕೂಡಿದ ಪುಟ್ಟದೊಂದು ಪ್ರಪಂಚ—

ಈ ಭವ್ಯ ಪ್ರದರ್ಶನ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 210/70

ಬಿ. ಕೆ. ಗಂಗಾಧರ ರಾವ್ —ಅರ್ಜಿದಾರ

ಮತ್ತು

ಪೊಡಿಯಮ್ಮ ಬ್ಯಾರ್ತಿ ಮತ್ತು ಇತರರು-ಎದ್ರಿರು

ಮೇಲಿನ ಅರ್ಜಿಯ 3ನೇ ಎದ್ರಿ ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಬಾವಲಿಬನ ಎಂಬಲ್ಲಿ ವಾಸವಾಗಿರುವ ಮೃತ ಮಮ್ಮದೆ ಬ್ಯಾರಿಯ ವಿಧವೆ ಅಜ್ಜಮ್ಮ ಬ್ಯಾರ್ತಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ:-

ಸದ್ರಿ ಅರ್ಜಿಯಲ್ಲಿ ಮೃತ ಬಿ. ಕೆ. ಲಕ್ಷ್ಮೀನಾರಾಯಣ ರಾವ್‌ರವರ ವಾರೀಸುದಾರರಾಗಿ ಸೇರಿಸುವರೇ ಸದ್ರಿ ಅರ್ಜಿದಾರನು ಅರ್ಜಿ ಕೊಟ್ಟಿರುವುದರಿಂದ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಇದೇ ಮೇ ತಿಂಗಳ 25ನೇ ತಾರೀಕಿನಂದು ಬೆಳಿಗ್ಗೆ 11 ಗಂಟೆಗೆ ಖುದ್ದಾಗಲೀ ವಕೀಲರ ಮುಖಾಂತರವಾಗಲೀ ಕೋರ್ಟು ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಖ್ಖಾ ಮಾಡಿ ವ್ಯಾಜ್ಯ ಮುಂದುವರಿಸಲಾದೀತು. ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್

Advocate for Petitioner

ಬೆಳ್ತಂಗಡಿ, 30-3-71

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

E. P. 9/69

ಬಿ. ಕೆ. ಗಂಗಾಧರ ರಾವ್ —ಅರ್ಜಿದಾರ

ಮತ್ತು

ಪೊಡಿಯಮ್ಮ ಬ್ಯಾರ್ತಿ ಮತ್ತು ಇತರರು-ಎದ್ರಿರು

ಮೇಲಿನ ಅರ್ಜಿಯ 8ನೇ ಎದ್ರಿಯಾದ ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಬಾವಲಿಬನ ಎಂಬಲ್ಲಿ ವಾಸವಾಗಿರುವ ಮೃತ ಮಮ್ಮದೆ ಬ್ಯಾರಿಯ ವಿಧವೆ ಅಜ್ಜಮ್ಮ ಬ್ಯಾರ್ತಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ:—

ಸದ್ರಿ ಅರ್ಜಿಯಲ್ಲಿ ಮೃತ ಬಿ. ಕೆ. ಲಕ್ಷ್ಮೀನಾರಾಯಣ ರಾವ್‌ರವರ ವಾರೀಸುದಾರರಾಗಿ ಸೇರಿಸುವರೇ ಸದ್ರಿ ಅರ್ಜಿದಾರನು ಅರ್ಜಿಕೊಟ್ಟಿರುವುದರಿಂದ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಇದೇ ಮೇ ತಿಂಗಳ 25ನೇ ತಾರೀಕಿನಂದು ಬೆಳಿಗ್ಗೆ 11ಗಂಟೆಗೆ ಖುದ್ದಾಗಲೀ ವಕೀಲರ ಮುಖಾಂತರವಾಗಲೀ ಕೋರ್ಟು ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಖ್ಖಾ ಮಾಡಿ ಅರ್ಜಿಯನ್ನು ಮುಂದುವರಿಸಲಾದೀತು. ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್

Advocate for Petitioner

ಬೆಳ್ತಂಗಡಿ, 30-3-71

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ (ನವಯುಗ ಪ್ರೆಸ್) ಉಡುಪಿ, ದ.ಕ.

ಇವರನ್ನು ದೇವರೂ ಕ್ಷಮಿಸುವುದಿಲ್ಲ

ಆಕೆಯೋರ್ವ ನರ್ತಕಿ. ಒಂದೊಮ್ಮೆ ನೃತ್ಯ ಮಾಡುತ್ತಿರುವಾಗಲೇ ಆಕೆಯ ಪಾದ ...ಂದು ಉಳುಕಿತು. ಆಸ್ಪತ್ರೆ ಸೇರುವುದು ...ನಿವಾರ್ಯವೆನಿಸಿತು. ಆದರೆ, ಅಲ್ಲಿನ ಡಾ ...ರು ಏನೇನೋ ನೆಪವೊಡ್ಡಿ ದಾಖಲು ...ಡಿಕೊಳ್ಳಲು ನಿರಾಕರಿಸಿದನು. ಕೊನೆ ... ಆಕೆಯೋರ್ವ ನೃತ್ಯಾಂಗನೆಯೆಂದು ...ಯೊಡನೆಯೇ ಆತನ ದುರ್ವಾಸನೆಗಳು ...ಟಿದೆದ್ದುವು; ಕಣ್ಣುಗಳಲ್ಲಿ ವಿಶಿಷ್ಟ ರೀತಿ... ಹೊಳಪು ಮೂಡಿತು.

ಕೂಡಲೇ ನೃತ್ಯಾಂಗನೆಗೆ ಆಸ್ಪತ್ರೆಯ ಪ್ರವೇಶ ಸಿಕ್ಕಿತು. ಆಸ್ಪತ್ರೆಯಲ್ಲೇ ಅ...ತ ಏಕಾಂತವೆನಿಸಿದೆಡೆಯಲ್ಲಿ ಹಾಸುಗೆ ...ಸಿ ಆಕೆಯನ್ನು ಮಲಗಿಸಿದರು. ಡಾಕ್ಟ... ತನ್ನ ಪಾಶದಲ್ಲಿ ಆಕೆಯನ್ನು ಬಿಗಿಯ...ದೇ ಆ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದ...ಬುದು ನಿಸ್ಸಂದೇಹ.

"ಇದು ಆಸ್ಪತ್ರೆ. ಇಲ್ಲಿನ 'ನರ್ಸು'ಗಳಿಗೆ ...ನಾದರೂ ನಡಕೊಳ್ಳಬೇಕು; ಇಲ್ಲವಾದ... ತೊಂದರೆಯೊದೀತು' ಎಂದು ತಿಳಿಯ... ಹೆಚ್ಚು ತಡವಾಗಲಿಲ್ಲ. ದಿನಂಪ್ರತಿ ...ಡಾಣೆಯ ಬಳುವಳಿ ಕೊಡುವುದೆಂದು ...ಕ್ಕಡೆಯವರಲ್ಲಿ ಒಪ್ಪಂದವಾಯ್ತು.

ಒಂದು ದಿನ 'ನರ್ಸು' ಬರಲಿಲ್ಲ; ಆಕೆ... ಸೊಸೆ ಬಂದಳು. ರೋಗಿಯು ಆಕೆಗೆ ...ಣಕೊಡಲು ಕೈಯೆತ್ತಿದಾಗ, ಆಕೆ ಬೆಚ್ಚಿ...ದಳು—"ಏನಿದು?"

ರೋಗಿಯೆಂದಳು—"ನಿನ್ನತ್ತೆಗೆ ನಿತ್ಯ ...ಡಾಣೆ ನೀಡುವುದಾಗಿ ಒಪ್ಪಿಕೊಂಡಿ...ವೆ."

ಆಕೆ ತಿರಸ್ಕಾರ ಮತ್ತು ಕೋಪದಿಂದ ...ತ್ತರಿಸಿದಳು. ಸಿಡಿಮಿಡಿಗೊಂಡಳು—...ಛೀ, ಲಂಚ? ಇಲ್ಲಮ್ಮ, ಈ ಪಾಪದ ...ಸಂಪಾದನೆ ನನಗೆ ಬೇಡ; ಇಂದಿನಿಂದ ...ತ್ತೆಗೂ ಹೇಳಿ ಬಿಡುತ್ತೇನೆ."

ಆಕೆ ಮುಂದುವರಿದು ಹೇಳಿದಳು.'ಅ...ಮ್ಮ ದೇವರು ಮತ್ತೆಲ್ಲವನ್ನೂ ಕ್ಷಮಿಸಿ ಬಿ...ಡ್ತಾನೆ; ಆದರೆ, ಲಂಚಖೋರರನ್ನು, ...ಪ್ಪಂಡವನ್ನಿಗೆರಡು ಬಗೆವವರನ್ನು ಎಂ...ಗೂ ಮನ್ನಿಸುವುದಿಲ್ಲ. ನಾವು ಮಹಾ...ತ್ಮ ಗಾಂಧಿಯ ಭಕ್ತರು. ಅವರು ನಮ್ಮ ...ಣ್ಣು ತೆರೆದರು. ಮಿಥ್ಯಾಭಿಮಾನದಿಂದ ...ಮ್ಮಂಥವರನ್ನು ತುಳಿಯುತ್ತಿದ್ದ ಅನೇ...ರ ಕಣ್ಣುಗಳನ್ನೂ ತೆರೆಯಿಸಿದ್ದಾರೆ. ಬಾ...ಪೂಜಿ ಅತ್ಯಾಚಾರಿಗಳಿಗೆ, ಸಮಾಜ ಕಂಟಕರಿಗೆ ಮಾನವತೆಯ ಮಹಾಪಾಠ ಕಲಿಸಿದ್ದಾರೆ. ಅವರನ್ನು ನೈಜ ಮಾನವರನ್ನಾಗಿ ಕಡೆದಿದ್ದಾರೆ; ಅವರು ಪಾಪ ಮತ್ತು ದುಷ್ಟ ಕರ್ಮಗಳನ್ನು ಬಿಡುವಂತೆ ಪವಾಡ ಮಾಡಿದ್ದಾರೆ; ಕುಸಂಸ್ಕಾರಗಳ ಜಾಲದಿಂದ ಅವರನ್ನು ಬಿಡಿಸಿದ್ದಾರೆ. ನಾವೂ ನಮ್ಮ ದುರ್ಗುಣಗಳನ್ನು ಬಿಟ್ಟು ಸದ್ಗುಣಿಗಳಾಗುವಂತೆ ಕೈ ಹಿಡಿದು ನಡೆಸಿದ್ದಾರೆ. ಉದ್ದಂಡತೆಯನ್ನು ಬಿಟ್ಟು, ಏನನ್ನುರೂ ವಿನಯಶೀಲರೂ ಆಗುವಂತೆ ರೂಪಾಂತರಿಸಿದ್ದಾರೆ, ಶರಾಬು ಕುಡಿಯ ಬಾರದು; ತಂತಮ್ಮೊಳಗೆ ಹೊಡೆದಾಡ ಬಾರದು, ಬೇರೆಯವರೊಡನೆಯೂ ಜಗಳಕಾಯ ಬಾರದು ಎಂದು ಹೇಳಿದ್ದಾರೆ.

"ತಂಗಿ, ಬಾಪೂವಿನ ಜಾದು ಚಮತ್ಕಾರವಾಗಿದೆ. ನಮ್ಮ ಜಾತಿಯ ಯಜಮಾನರಲ್ಲಿ ಅನೇಕರು ಶರಾಬು ಕುಡಿಯುವುದನ್ನು ನಿಲ್ಲಿಸಿದ್ದಾರೆ. ನಮ್ಮ ನೆರೆಮನೆಯವರೂ ಈಗ ಶರಾಬು ಮುಟ್ಟುವುದಿಲ್ಲ. ಅವರೀಗ ಬಪಲಾಗಿದ್ದಾರೆ.

"ನಮ್ಮ ರಾಷ್ಟ್ರೀಯ ಚರಿತ್ರೆಯೀಗ ಕುಸಿದು ಬಿದ್ದಿದೆ. ನಾವು ಆಸ್ಪತ್ರೆಯಲ್ಲಿ ಮಾತ್ರವಲ್ಲ, ದೇಶತುಂಬ ಕತ್ತಲು ಹರಡುತಿದ್ದೇವೆ ಲಂಚ ವಂಚನೆಗಳು ಎಡೆಬಿಡದೆ ಬೆಳೆಯುತ್ತಿವೆ. ಇಲ್ಲಿನ ಔಷಧಿಗಳು ಹೊರಗಿಂದ ಹೊರಗೇ ಮಾರಿಹೋಗುತ್ತವೆ. ರೋಗಿಗಳಿಗೆ ಬರಿಯ ಬಣ್ಣದ ನೀರು ದೊರೆಯುತ್ತದೆ. ರೋಗಿಯು ಬದುಕಲಿ, ಇಲ್ಲವೇ ಸಾಯಲಿ, ಅದರ ಬಗೆಯಾರೊಬ್ಬರೂ ಚಿಂತಿಸುವುದಿಲ್ಲ; ಎಲ್ಲರಿಗೂ ಹಣಬೇಕು. ನಮ್ಮ ಗತಿ ಇಲ್ಲಿಯವರೆಗೆ ಬಂದು ನಿಂತಿದೆ.

'ನೀನೇನೂ ಹೆದರ ಬೇಡ. ನಿನಗೆ ಯಾವ ತೊಂದರೆಯೂ ಆಗದಂತೆ ಎಚ್ಚರಿಕೆ ನಾನು ವಹಿಸುತ್ತೇನೆ. ನನ್ನ ಗಂಡನಿಗೆ ಡಾಕ್ಟರರ ನೌಕರನ ವಿಶೇಷ ಪರಿಚಯವಿದೆ.'

ನೃತ್ಯಾಂಗನೆಗೆ ಅಹಿಂಸೆಯಲ್ಲಿ ನಂಬಿಕೆಯಿರಲಿಲ್ಲ. ಆಕೆ ಅಹಿಂಸೆಯ ಸಾಕಾರ ಮೂರ್ತಿ ಮಹಾತ್ಮಾ ಗಾಂಧಿಯನ್ನು ಕಟುವಾಗಿ ಟೀಕಿಸುತ್ತಿದ್ದಳು. ಆದರೆ, ಈಗ ಆಕೆಯ ಮನಸ್ಸು ಬದಲಾಯ್ತು. ಗಾಂಧಿಜಿಯನ್ನು ಹೊಗಳ ತೊಡಗಿದಳು. ತಾನೂ ಇದುವರೆಗೆ ಕತ್ತಲಲ್ಲೇ ಇದ್ದುದೆಂದು ಮನವರಿಕೆ ಮಾಡಿಕೊಂಡಳು.'

'ನರ್ಸ್'ನ ಸೊಸೆ ಹೊರಟು ಹೋದಳು. ಮರುದಿನದಿಂದಲೇ ರೋಗಿಗೆ ಎಲ್ಲ ಬಗೆಯ ಸೌಲಭ್ಯಗಳು ದೊರೆಯ ತೊಡಗಿದವು.

ಮಹಾತ್ಮಾ ಗಾಂಧಿಯವರ ಇಂದ್ರಜಾಲದಲ್ಲಿ ಸಿಕ್ಕಿ ಬೀಳದವರು ಯಾರೂ ಉಳಿದಿಲ್ಲ.

ನಗೆಗಡಲು

ಒಬ್ಬಾತ ಮುದುಕ ಅಂಗಡಿಯೊಂದಕ್ಕೆ ಹೋಗಿ ಮಾರುಮಾಣಿಯನ್ನು ಕೇಳಿದ— "ಸ್ವಾಮಿ, ನನಗೊಂದು ಸ್ಟಿಕ್ಕು ಬೇಕಾಗಿತ್ತು."

ಮಾರುಮಾಣಿ— ಓಹೋ ಅದಕ್ಕೇನಂತೆ? ಶೂಟಿಂಗ್‌ಸ್ಟಿಕ್ಕು, ಶುಗರ್‌ಸ್ಟಿಕ್ಕು, ಶೇವಿಂಗ್‌ಸ್ಟಿಕ್ಕು, ವಾಕಿಂಗ್‌ಸ್ಟಿಕ್ಕು, ಕ್ಯಾಂಡಲ್‌ಸ್ಟಿಕ್ಕು ಅಥವಾ ಲಿಪ್‌ಸ್ಟಿಕ್ಕು?

o o o

ಜನಕಲ್ಯಾಣಕಾರಿ ಸರಕಾರವು ಹಿರಿಗೆಯ ವೇಳೆ ಸಹಾಯಧನ ನೀಡುವ ಸಂಬಂಧದ ನಿಯಮಗಳಲ್ಲಿ ಸೇರಿಸಿತು— "ವೃದ್ಧಾಪ್ಯ ಸಹಾಯಧನ ಪಡೆಯುವ ಮಹಿಳೆ ಈ ಸಹಾಯಧನ ಪಡೆಯಲು ಸರ್ವಥಾ ಅನರ್ಹಳು."

o o o

ರಾಮರಾಯರು ಕಾರಿನಲ್ಲಿ ಬರುತ್ತಿರುವಾಗ ಬಸ್‌ಟಾಪಿನಲ್ಲಿ ತನ್ನ ಪ್ರೊಫೆಸರರನ್ನು ಕಂಡರು. ಅವರು ಬಸ್ಸಿಗಾಗಿ ಕಾಯುತ್ತಿರುವರೆಂದು ತಿಳಿದು ಕಾರು ನಿಲ್ಲಿಸಿ ಬಾಗಿಲು ತೆರೆದು 'ಬರ್ತೀರಾ ಸಾರ್?' ಎಂದು ಪ್ರಶ್ನಿಸಿದರು.

ಪ್ರೊಫೆಸರು ನೆಟ್ಟಿಗೆ ಕಾರಿನೊಳಗೆ ಬಂದು ಕೂತರು. ರಾಯರು ಡ್ರೈವ್ ಮಾಡುತ್ತ ಆ ಮಾತು ಈ ಮಾತು ಆಡುತ್ತ ಅವರ ಪತ್ನಿಯ ಬಗ್ಗೆ ವಿಚಾರಿಸಿದರು.

ಪ್ರೊಫೆಸರು ತಟ್ಟನೆ ಹೇಳಿದರು- 'ಆಕೆ ತಮ್ಮನಲ್ಲಿಗೆ ಹೋಗಿದ್ದಾಳೆ. ನಾನು ಬಸ್‌ಸ್ಟಾಪಿನಲ್ಲಿ ಆಕೆಗಾಗಿಯೇ ಕಾದು ಕೊಂಡಿದ್ದೆನೆಂದು ತೋರುತ್ತದೆ. ಈಗ ನಾವು ಎಲ್ಲಿದ್ದೇವೆ?'

o o o

ಚಲಚ್ಚಿತ್ರದ ಶೂಟಿಂಗು ನಡೆಯುತ್ತಿತ್ತು. ನಾಯಕ—ನಾಯಿಕೆಯರು ಸಿದ್ಧರಾಗಿದ್ದರು. ಕೆಮೆರಾಮ್ಯಾನ್ ರೆಡಿಯಿದ್ದ. ಆಷ್ಟರಲ್ಲಿ ಪ್ರೊಡ್ಯೂಸರು ಬಂದರು. ಕೆಮೆರಾದವನನ್ನು ಕೇಳಿದರು—ಏನಯ್ಯಾ, ಕೆಮೆರಾದಲ್ಲಿ ಕಲರ್ ಫಿಲ್ಮು ಇದೆಯೋ ಅಥವಾ ಬ್ಲಾಕ್ ಅಂಡ್ ವೈಟ್?

"ಬ್ಲಾಕ್ ಅಂಡ್ ವೈಟ್, ಸರ್" ಕೆಮೆರಾಮ್ಯಾನ್ ಉತ್ತರಿಸಿದ.

"ನಿನಗೆ ಬುದ್ಧಿಯಿಲ್ಲ. ಈ ದೃಶ್ಯವನ್ನು ಕಲರ್‌ನಲ್ಲಿ ತೆಗೀಬೇಕಂತ ಹೇಳಿ ಹೇಳಿ ನನಗೆ ಸಾಕಾಯ್ತು."

o o o



ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಓದಿರಿ! "ಗುಡಿ ಗೃಹಕಾರ್ಯ"

ಕನ್ನಡ ಪುಸ್ತಕ ಚಿಕ್ಕ ಬಂಡವಲಿನಲ್ಲಿ ನಿಮ್ಮ ಮನೆಯಲ್ಲಿ ಉದ್ಯೋಗ—ವ್ಯವಹಾರ ಮಾಡಿ ನಿಮ್ಮ ಆದಾಯ ಬೆಳೆಸಿಕೊಳ್ಳಿರಿ. ಪುಟ 224 ಬೆಲೆ ರೂ. 10 ಅಂಚೆ ವೆಚ್ಚ ರೂ. 2.50

Cottage Industry (NC-3) P.B.No.1262
Anguri Bagh Market, Delhi-6.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

S. C. No. 49/68

ಶ್ರೀ. ಸೋದೆ ವಾದಿರಾಜ ಮಠ—ವಾದಿರು.

ಮತ್ತು

ರಾಮಣ್ಣ ಸೇರಿಗಾರ (ಪೌತಿ), ವಾರೀಸುದಾರ್ರು ರಾಮು ಸೇರಿಗಾರ ಕೂಡಾ —ಸಪ್ಲಿಮೆಂಟು ಪ್ರತಿವಾದಿರು.

ಯಿವರೊಳಗೆ

ಸಪ್ಲಿಮೆಂಟು 9ನೇ ಪ್ರತಿವಾದಿ—ಕರಿಯ ಸೇರಿಗಾರ, ರಾಮಣ್ಣ ಸೇರಿಗಾರನ ಅಳಿಯ, ಉಡುಪಿ ತಾಲೂಕು ಇನ್ನಂಜೆ ಗ್ರಾಮದಲ್ಲಿರುವವ.

ವಾದಿರು ದಾಖ್ಲು ಮಾಡಿದ ಮೇಲ್ಕಂಡ ಗೇಣ ಬಾಕಿ ವ್ಯಾಜ್ಯವು ತಾರೀಕು 15—4—71ಕ್ಕೆ ಇಟ್ಟಿದೆ. ಆ ದಿವ್ಸ ಬೆಳಿಗ್ಯೆ 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಉದಾಹರಿಸುವರೆ ತಪ್ಪಿದ್ರೆ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆ ತೀರ್ಮಾನಿಸಲ್ಪಡುವುದು.

By order of Court
Sd. V. G. KEDLAYA, *M.A. LL. B.*
ವಾದಿರ ಕಡೆ ಅಡ್ವೋಕೇಟ್,

ಉಡುಪಿ, ತಾ. 23—3—71

READ &
ADVERTISE IN
NAVAYUGA WEEKLY

NAVAYUGA 1-4-1971
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಹೈದರಾಬಾದಿನಲ್ಲಿ ಸಂಯೋಜಿತ ಔಷಧಗಳ ಸಂಯಂತ್ರ

1971ರ ಏಪ್ರಿಲ್ ತಿಂಗಳಿನಲ್ಲಿ ಹೈದರಾಬಾದಿನ ಸಂಯೋಜಿತ ಔಷಧಿ ಸಂಯಂತ್ರವು ತನ್ನ ಸಂಪೂರ್ಣ ಪ್ರಮಾಣದ ಉತ್ಪಾದಕ ಸಾಮರ್ಥ್ಯವನ್ನು ಪಡೆದ ಮೇಲೆ ತನ್ನ ಪ್ರಥಮ ವಾರ್ಷಿಕೋತ್ಸವವನ್ನು ಆಚರಿಸುತ್ತದೆ.

ಹೈದರಾಬಾದಿನ ಪಶ್ಚಿಮ ದಿಶೆಯಲ್ಲಿ ಸ್ವಲ್ಪ ದೂರ ಮುಂದುವರೆದಾಗ, ವಿಶಾಲ ಭೂಮಿಯ ಮೇಲೆ ಅಂದವಾದ ಬಹು ಅಂತಸ್ತುಗಳ ಕಟ್ಟಡಗಳು ಕಂಡುಬರುತ್ತವೆ. ಇದೇ ಸಂಯೋಜಿತ ಔಷಧ ಸಂಯಂತ್ರ. ಸೋವಿಯೆತ್ ಒಕ್ಕೂಟದ ಸಹಕಾರದಿಂದ ಭಾರತ ದೇಶವು ಸ್ಥಾಪಿಸಿರುವ ಏಶಿಯದಲ್ಲೇ ಅತ್ಯಂತ ದೊಡ್ಡದಾದ ಔಷಧೋದ್ಯಮ ಸಂಯಂತ್ರವಿದು.

ಇದು ಭಾರತೀಯ ಜನತೆಗೆ ಜೀವದಾಯಿನಿ ಔಷಧಗಳನ್ನು ನೀಡುತ್ತದೆ. ಈ ಔಷಧಿಗಳಿಗಾಗಿ ಭಾರತವು ಹಿಂದೆ ಪಾಶ್ಚಾತ್ಯ ಏಕಸ್ವಾಮ್ಯ ಸಂಸ್ಥೆಗಳನ್ನು ಅವಲಂಬಿಸಿಕೊಂಡಿರಬೇಕಾಗಿತ್ತು.

1959ರ ಮೇ ದಿನಾಂಕ 29ರಂದು ಮಾಡಿಕೊಳ್ಳಲಾದ ಭಾರತ-ಸೋವಿಯೆತ್ ಒಪ್ಪಂದದ ಮೇರೆಗೆ ಸ್ಥಾಪಿಸಲಾದ ವೈದ್ಯಕೀಯ ಕೈಗಾರಿಕೆಯ ಮೂರು ಸಂಯಂತ್ರಗಳಲ್ಲಿ ಇದೂ ಒಂದಾಗಿದೆ. ಮದರಾಸಿನ ಶಲ್ಯ ಚಿಕಿತ್ಸೋಪಕರಣಗಳ ಕಾರಖಾನೆ ಮತ್ತು ಋಷಿಕೇಶದ 'ಆಂಟಿ-ಬಯೊಟಿಕ್' ಔಷಧ ಸಂಯಂತ್ರ—ಇವೇ ಮಿಕ್ಕೆರಡು ಔಷಧೋದ್ಯಮಗಳು. ಇವು ಈಗಾಗಲೇ ವಾಣಿಜ್ಯ-ಸರಕು ಉತ್ಪಾದನೆಯನ್ನು ಕೈಗೊಂಡಿವೆ.

ಸುಮಾರು 20 ಕೋಟಿ ರೂಪಾಯಿ ಮೌಲ್ಯದ ಈ ಹೈದರಾಬಾದ್ ಸಂಯಂತ್ರವು ಜಗತ್ತಿನಲ್ಲಿರುವ ಈ ಬಗೆಯ ಅತ್ಯಂತ ಭಾರಿ ಸಂಯಂತ್ರಗಳಲ್ಲೊಂದಾಗಿದೆ. ಈಗ ಅದು ಅಲ್ಲಿ ತಯಾರಿಸಬೇಕೆಂದು ಗೊತ್ತುಪಡಿಸಲಾಗಿದ್ದ ಎಲ್ಲ ಔಷಧಿಗಳನ್ನೂ ತಯಾರಿಸುತ್ತಿದೆ. 851 ಟನ್ ಅನ್ನಾಂಗಗಳು ಮತ್ತು ಔಷಧಗಳು, ಸುಮಾರು 4,500 ಟನ್ನುಗಳಷ್ಟು ಬೇರೆ ಬೇರೆ ರಾಸಾಯನಿಕ ಮಧ್ಯವರ್ತಿ ಔಷಧಿಗಳು ಮತ್ತು ಭಾರಿ ಪ್ರಮಾಣದಲ್ಲಿ ಅರ್ಧ ತಯಾರಿಕೆಯ ಔಷಧಿ ವಸ್ತುಗಳು ಇಲ್ಲಿ ತಯಾರಾಗುತ್ತವೆ. ಈ ಸಂಯಂತ್ರವು 1970ರ ಏಪ್ರಿಲ್ ದಿನಾಂಕ 1ರ ವೇಳೆಗೆ ತನ್ನ ಸಂಪೂರ್ಣ ಉತ್ಪಾದನ ಶಕ್ತಿಯನ್ನು ಪಡೆಯುವುದೆಂಬ ಅಂಶವು ಯಾರಿಗಾದರೂ ಸಂತೋಷದಾಯಕವಾದುದು. ಗತ ಅಕ್ಟೋಬರು ತಿಂಗಳಿನಲ್ಲಿ ಉತ್ಪಾದನೆಯು ಈ ಮಿತಿಯನ್ನೂ ಮೀರಿತ್ತು.

ಅತ್ಯಾವಶ್ಯಕವಾದ ಮತ್ತು ಅತ್ಯಂತ ಇತ್ತೀಚಿನ ಸಂಯೋಜಿತ ಔಷಧಗಳನ್ನೂ ಮತ್ತು ಅನ್ನಾಂಗಗಳನ್ನೂ ರಾಸಾಯನಿಕ ಕಚ್ಚಾ ವಸ್ತುಗಳಿಂದ, ಜೈವಿಕ ಸಂಯೋಜನೆಯ ಮೂಲಕ ಈ ಸಂಯಂತ್ರವು ತಯಾರಿಸುತ್ತಿದೆ; ಔಷಧೋದ್ಯಮಕ್ಕಾಗಿ ರಾಸಾಯನಿಕ ಮಧ್ಯಂತರದ ಔಷಧಿಗಳನ್ನೂ ತಯಾರಿಸುತ್ತಿದೆ. ಉತ್ಪಾದನೆಯನ್ನು ಆರು ಮುಖ್ಯ ಗುಂಪುಗಳಾಗಿ ವಿಂಗಡಿಸಬಹುದು. ಅವು ಯಾವುವೆಂದರೆ: 'ಸಲ್ಫಾ' ಔಷಧಗಳು, ಕ್ಷಯ ವಿರೋಧಿ ಔಷಧಿಗಳು, ಅನ್ನಾಂಗ ಔಷಧಿಗಳು, ವೇದನಾಶಾಮಕ ಔಷಧಿಗಳು, ಹೊಟ್ಟೆಯ ಮತ್ತು ಜಠರದ ಪರೋಪಜೀವಿ ಕ್ರಿಮಿ ಸಂಹಾರಕ ಔಷಧಿಗಳು, ಜ್ವರ ನಿವಾರಕ ಔಷಧಿಗಳು. ಅನ್ನಾಂಗಗಳಲ್ಲಿ ಬಿ-1, ಬಿ-2, 'ನಿಕೊಟಿನಾಮೈಡ್' 'ಫಾಲಿಕ್' ಆಮ್ಲ—ಇವುಗಳನ್ನು ಇಲ್ಲಿ ತಯಾರಿಸಲಾಗುತ್ತಿವೆ. 100 ಬಗೆಯ ಕಚ್ಚಾ ರಾಸಾಯನಿಕ ವಸ್ತುಗಳನ್ನು ಒಟ್ಟು 30,000 ಟನ್ನುಗಳಷ್ಟನ್ನು—ಈ ಸಂಯಂತ್ರವು ಉಪಯೋಗಿಸುತ್ತಿದೆ.

ಏಶಿಯದಲ್ಲಿ, (ಜಪಾನನ್ನು ಬಿಟ್ಟರೆ ಏಶಿಯದಲ್ಲಿ) ಇದೊಂದೇ 'ಫಾಲಿಕ್' ಆಮ್ಲ ತಯಾರಿಸುವ ಸಂಯಂತ್ರವಾಗಿದೆ. ವಿಕಿರಣ ಚಿಕಿತ್ಸೆ, ಅರ್ಬುದೋತ್ತರ ಚಿಕಿತ್ಸೆ—ಇವುಗಳಿಗಾಗಿ ಈ ಔಷಧವನ್ನು ಬಳಸಲಾಗುತ್ತದೆ.

ಹಿಂದೆ ಸುಮಾರು 40 ಮಂದಿ ಸೋವಿಯೆತ್ ತಜ್ಞರು ಈ ಸಂಯಂತ್ರದಲ್ಲಿ ಕೆಲಸ ಮಾಡುತ್ತಿದ್ದರು. ಭಾರತೀಯ ಯಂತ್ರ ಕಲಾವಿದರಿಗೆ ತಮ್ಮ ಈ ಕಾರ್ಯವನ್ನು ವಹಿಸಿಕೊಟ್ಟು ಅವರು ಸ್ವದೇಶಕ್ಕೆ ವಾಪಸು ಹೊರಟು ಹೋದರು. "ಭಾರತೀಯ ತಜ್ಞರು ಎಲ್ಲ ಜಟಿಲ ಯಂತ್ರ ಕಲೆಯನ್ನೂ ಬೇಗ ಕಲಿತುಕೊಂಡರು. ಸೋವಿಯೆತ್ ಸಲಹೆಕಾರರ ಆವಶ್ಯಕತೆ ಇಲ್ಲದಂತೆ ಸೂಕ್ತ ಪರಿಸ್ಥಿತಿಗಳನ್ನು ಅವರು ತಮ್ಮ ಸೇವೆಯ ಮೂಲಕ ನಿರ್ಮಿಸಲು ಸಮರ್ಥರಾದರು" ಎಂದು ಇಲ್ಲಿ ಸೋವಿಯೆತ್ ತಜ್ಞರ ಪ್ರಧಾನಾಧಿಕಾರಿಯಾಗಿದ್ದ ಡಾ. ನೆಸ್ತೆರೊವ್ ಅವರು ಹೇಳಿದ್ದಾರೆ.

ಸೋವಿಯೆತ್ ಒಕ್ಕೂಟವೂ ಮತ್ತು ಅಲ್ಲಿನ ತಜ್ಞರೂ ಈ ಭಾರಿ ಸಂಯಂತ್ರ ನಿರ್ಮಾಣಕ್ಕೆ ಸಲ್ಲಿಸಿರುವ ಸೇವೆಯು ವರ್ಣನಾತೀತವಾದುದು. ಸೋವಿಯೆತ್ ಒಕ್ಕೂಟದಲ್ಲಿ ನಮ್ಮ ಯಂತ್ರ ಕಲಾವಿದರನ್ನು ತರಬೇತುಗೊಳಿಸುತ್ತಿದ್ದಾಗಲಾಗಲೀ, ಇಲ್ಲಿ ಭಾರತೀಯರೊಟ್ಟಿಗೆ ಕೆಲಸ ಮಾಡುತ್ತಿದ್ದಾಗಲಾಗಲೀ ಸೋವಿಯೆತ್ ತಜ್ಞರು ಮುಚ್ಚುಮರೆಯಿಲ್ಲದೆ ಈ ಸಂಯಂತ್ರದ ಕಾರ್ಯಕ್ಕೆ ಸಂಬಂಧಪಟ್ಟ ಸರ್ವ ವಿಷಯಗಳನ್ನೂ ವಿವರಿಸಿ ತಿಳಿಸಿದರು. ಅವರ ಅನುಭವ ಜ್ಞಾನವು ನಮಗೆ ತೆರೆದ ಪುಸ್ತಕದಂತೆ ಇದ್ದಿತು.

ಆದುದರಿಂದಲೇ ಡಾ. ಗೌತಮರಂತಹ ಭಾರತೀಯ ತಜ್ಞರೂ, ಡಾ. ವಿಷಿನ್ನರಂತಹ ಭಾರತೀಯ ಯಂತ್ರ ಕಲಾವಿಜ್ಞಾನಿಯೂ ಸಹ 'ರಶಿಯನ್ ತಜ್ಞರು ಭಾರತೀಯ ಯಂತ್ರ ಕಲಾವಿದರಿಗೆ ಮಾರ್ಗದರ್ಶನ ನೀಡಿ, ತರಬೇತಿನ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಿದರು. ಇದರಿಂದ ನಮ್ಮ ಅಭಿವೃದ್ಧಿಯನ್ನು ಬೇಗ ಸಾಧಿಸಲಾಯಿತು' ಎಂದು ಮುಕ್ತಕಂಠದಿಂದ ಪ್ರಶಂಸಿಸಿದರು.

ಸುಮಾರು 70 ಮಂದಿ ಭಾರತೀಯ ತಾಂತ್ರಿಕರು ಸೋವಿಯೆತ್ ಒಕ್ಕೂಟದಲ್ಲಿ ವ್ಯಾಪಕ ಪ್ರಶಿಕ್ಷಣವನ್ನು ಪಡೆದರು. ಅವರು ಈಗ ಸಂಯಂತ್ರದಲ್ಲಿ ಜವಾಬುದಾರಿಯ ವಿಭಿನ್ನ ಹುದ್ದೆಗಳಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಇದಲ್ಲದೆ, ಇದೇ ಸಂಯಂತ್ರದಲ್ಲಿಯೂ ಅನೇಕರಿಗೆ ತರಬೇತನ್ನು ನೀಡಲಾಗಿದೆ.

ಈ ಸಂಯಂತ್ರವು ಈಗಾಗಲೇ ಭಾರತೀಯ ಆರ್ಥಿಕ ವ್ಯವಸ್ಥೆಯ ಮೇಲೆ ಅನುಕೂಲಕರ ಪ್ರಭಾವವನ್ನು ಬೀರತೊಡಗಿದೆ. ಈ ಸಂಯಂತ್ರವು ತಯಾರಿಸುತ್ತಿರುವ ಔಷಧಗಳ ಮತ್ತು ಮಧ್ಯಮ ಔಷಧಗಳ ಆಯಾತದ ಸಲುವಾಗಿ ವಿದೇಶೀ ವಿನಿಮಯದ ನಾಣ್ಯವನ್ನು ಖರ್ಚುಮಾಡಬೇಕಾದ ಆವಶ್ಯಕತೆ ಈಗ ಇಲ್ಲ. ಇದಲ್ಲದೆ ಈ ಸಂಯಂತ್ರವು ಆಸ್ಪತ್ರೆಗಳಿಗೆ ತನ್ನ ಸರಕುಗಳನ್ನು ಮಾರುಕಟ್ಟೆಯ ಬೆಲೆಗಿಂತಲೂ ಅಗ್ಗವಾಗಿ ಒದಗಿಸುತ್ತದೆ ಎಂದರೆ ಅಷ್ಟು ಮಟ್ಟಿಗೆ ವಿದೇಶೀ ಏಕಸ್ವಾಮ್ಯ ಸಂಸ್ಥೆಗಳ ಲೂಟಿಯನ್ನು ಖೋತಾ ಮಾಡಲಾಗಿದೆ.

ಇಡೀ ರಾಜ್ಯದ ಮೇಲೆಯೂ ಮತ್ತು ವಿಶೇಷತಃ ಹೈದರಾಬಾದಿನ ಜನತೆಯ ಮೇಲೆಯೂ ಈ ಪ್ರಾಯೋಜನೆಯು ಬೀರಿರುವ ಪ್ರಭಾವವು ಅಪಾರವಾದುದೆಂದು ಹೇಳಲೇ ಬೇಕು.

ಎರಡು ದೇಶಗಳ ನಡುವಣ ಸಹಕಾರವು ತನ್ನ ಉಪಯುಕ್ತತೆಯನ್ನು ರುಜುವಾತು ಪಡಿಸಿದೆ. ಈ ನಾಡಿನ ಜನತೆಯ ಆರೋಗ್ಯಕ್ಕೂ, ಜೀವನ ಪ್ರಮಾಣಗಳ ಸುಧಾರಣೆಗೂ ಸಹಾಯ ಮಾಡುತ್ತ, ಭಾರತದ ಆರ್ಥಿಕ ಕ್ಷೇತ್ರದ ಪುನಾರಚನೆಗೆ ಈ ಸಹಕಾರವು ಸಹಾಯ ಸಲ್ಲಿಸುತ್ತದೆ.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit **ಫೋನ್: 77**

HOTEL SHIVAPRASAD
High Class Boarding, Lodging & Restaurant
COONDAPUR, S. K.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 30

NAVAYUGA

8—4—1971

ಮೂರು ರಾಜ್ಯಗಳ ಮೂರಾಬಟ್ಟೆ

ಒಂದೂವರೆ ವರ್ಷಗಳಿಗೆ ಮೊದಲು ಕಾಂಗ್ರೆಸ್ಸ್ ವಿಭಜನೆಗೊಂಡಾಗ ಗುಜರಾತ, ಕರ್ನಾಟಕ ಮತ್ತು ಉತ್ತರ ಪ್ರದೇಶಗಳಲ್ಲಿನ ಸರಕಾರ ಸಿಂಡಿಕೇಟಿನ ಕೈಗಳಲ್ಲೇ ಉಳಿಯಿತು. ಇದಕ್ಕೆ ಕಾರಣವೂ ಸ್ಪಷ್ಟ. ಗುಜರಾತವು ಮಾಜಿ ಉಪ ಪ್ರಧಾನಿ ಮುರಾರ್ಜಿ ದೇಸಾಯಿಯವರ ರಾಜ್ಯ. ಕರ್ನಾಟಕ ಅಧ್ಯಕ್ಷ ನಿಜಲಿಂಗಪ್ಪನವರ ಮಾತೃರಾಜ್ಯ. ಮೂರನೆಯದಾದ ಉತ್ತರ ಪ್ರದೇಶವು ಸಿಂಡಿಕೇಟಿನ ಕ್ರಿಯಾಪಟು ಚಂದ್ರಭಾನುಗುಪ್ತರ ಭದ್ರಕೋಟೆ. ಈ ಮೂರೂ ರಾಜ್ಯಗಳಲ್ಲಿ ಸಿಂಡಿಕೇಟ್ ಸರಕಾರ ಅತ್ಯಂತ ಸುದೃಢವಿದ್ದದ್ದು ಕರ್ನಾಟಕ ಮತ್ತು ಗುಜರಾತಗಳಲ್ಲಿ. ಉತ್ತರ ಪ್ರದೇಶದಲ್ಲಿ ಕೆಲವೇ ದಿನಗಳಲ್ಲಿ ಚಂದ್ರಭಾನುಗುಪ್ತರ ಸಚಿವ ಮಂಡಳಿಯು ರಾಜೀನಾಮೆ ಕೊಡಬೇಕಾಯ್ತು. ಇದಕ್ಕೆ ಪಕ್ಷಾಂತರ ರೋಗವೇ ಕಾರಣ.

ಅಡಿಗೆ ಬಿದ್ದರೂ ಮೂಗು ಮಣ್ಣಾಗಲಿಲ್ಲವೆಂಬಂತೆ ಒಮ್ಮೆ ಸಿಂಡಿಕೇಟ್ ಸರಕಾರ ರಾಜೀನಾಮೆ ನೀಡಿ, ಇಂಡಿಕೇಟ್ ನೇತೃತ್ವದಲ್ಲಿ ಸರಕಾರ ಅಲ್ಲಿ ರಚನೆ ಹೊಂದಿದರೂ ಅದೂ ಬಹುದಿನ ಬಾಳಲಿಲ್ಲ. ಆಗ, ಕೈಜಾರಿಹೋದ ಅಧಿಕಾರ ಸೂತ್ರಗಳನ್ನು ಹಿಡಿಯಲು ಕರ್ಣಧಾರನಾಗಿ ನಿಲ್ಲಲು ಸಿಂಡಿಕೇಟ್ ಮುಂದೆ ಬಂದು ಸಂಯುಕ್ತ ವಿಧಾಯಕ ದಳವನ್ನು ರಚಿಸಿಕೊಂಡಿತು. ದಿವಂಗತ ಪ್ರಧಾನಿ ಲಾಲಬಹದ್ದೂರರ ಅನುಯಾಯಿಗಳೂ ಅಜಾತಶತ್ರುಗಳೂ ಆದ ತ್ರಿಭುವನ ನಾರಾಯಣ ಸಿಂಗರನ್ನು ನಾಯಕರೆಂದು ಅದು ಆರಿಸಿತು. ಸಾಕಷ್ಟು ಬಹುಮತ ಪಡೆದಿದ್ದ ದಳವು ತನ್ನ ಅವಧಿ ಮುಗಿಯುವ ತನಕ ಆಡಳಿತೆ ನಡೆಸಬಹುದಿತ್ತು.

ಆದರೆ, ಸಿಂಗರ ತಾರಾಬಲ ಗಟ್ಟಿಯಿದ್ದಂತಿಲ್ಲ. ಅವರು ಹಲವಾರು ವಿಘ್ನ ವಿದ್ದಾರಗಳನ್ನು ಎದುರಿಸಬೇಕಾಯ್ತು. ರಾಜ್ಯ ವಿಧಾನ ಮಂಡಳ ಸದಸ್ಯರಾಗಿರದಿದ್ದುದೇ ಅವರಿಗಿದ್ದ ದೊಡ್ಡ ಆತಂಕ. ಮುಖ್ಯಮಂತ್ರಿಯಾದ ಆರು ತಿಂಗಳುಗಳೊಳಗೆ ಅವರು ಸದಸ್ಯತ್ವ ಪಡೆಯಬಹುದೆಂದೂ ಎಲ್ಲರ ಮೆಚ್ಚುಗೆಗೆ ಪಾತ್ರರಾದ ಸಿಂಗರು ಯಾವುದಾದರೊಂದು ಉಪ ಚುನಾವಣೆಯಲ್ಲಿ ಗೆದ್ದು ಬರುವುದು ಸುಲಭವೆಂದೂ ಆರಂಭದಲ್ಲಿ ನಂಬಲಾಗಿತ್ತು. ತಾನು ಗೆದ್ದೇನೆಂಬ ಧೈರ್ಯ ಸಿಂಗರಿಗಿತ್ತು; ಸಿಂಗರನ್ನು ಗೆಲ್ಲಿಸಬಹುದೆಂಬ ವಿಶ್ವಾಸ ದಳಕ್ಕೂ ಇತ್ತು. ಕಾಲದ ಗತಿಮಾನದಿಂದಾಗಿ ಅವರಿಬ್ಬರ ಧೈರ್ಯ ಮಣಿರಾಮ್ ಉಪ ಚುನಾವಣೆಯಲ್ಲಿ ಕುಸಿದು ಬಿತ್ತು. ಇಂಡಿಕೇಟ್ ಯಃಕಶ್ಚಿತ್ ಅಭ್ಯರ್ಥಿಯೊಬ್ಬನು ಸಿಂಗರ ಮೇಲೆ ವಿಜಯ ಸಾಧಿಸಿದ್ದರಿಂದ ಇಂಡಿಕೇಟಿಗರಿಗೆ ದಿಗ್ವಿಜಯ ಮಾಡಿಬಂದಷ್ಟು ಆನಂದವಾಯ್ತು.

ಉಪ ಚುನಾವಣೆಯಾದುದರಿಂದ, ಮತ್ತದು ಪ್ರತಿಷ್ಠೆಯ ಸ್ಥಾನವಾದುದರಿಂದ ಅದನ್ನು ಗೆಲ್ಲಲು ಪಕ್ಷದ ಶಕ್ತಿಸರ್ವಸ್ವವನ್ನೂ ಕೇಂದ್ರೀಭೂತಗೊಳಿಸಿ ಹೋರಾಡುವುದು ಇಕ್ಕಡೆಯವರ ಕರ್ತವ್ಯವಿತ್ತು. ಆದರೆ, ಇಂಡಿಕೇಟಿನ ನವಸಂದೇಶದಿಂದ ಪ್ರಭಾವಿತರಾದ ಮತದಾರರು ಸಿಂಗರನ್ನು ಬಿಚ್ಚುಮನಸ್ಸಿನಿಂದ ತಿರಸ್ಕರಿಸಿದರು.

ಟಿ. ಎನ್. ಸಿಂಗರ ಪರಾಜಯಕ್ಕೆ ಹಲವಾರು ಕಾರಣಗಳಿರಬಹುದು. ಪ್ರಚಾರ–ಪ್ರಭಾವಗಳಲ್ಲಿ ಅನಾಸಕ್ತಿ ಮತ್ತು ಅಶ್ರದ್ಧೆಗಳೂ ಸೇರಿದಂತೆ ಸಂಪುಟದ ಅಯಶಸ್ಸೂ ಅವುಗಳಲ್ಲಿ ಒಂದು. ಸಂಯುಕ್ತ ವಿಧಾಯಕ ದಳದ ಸರಕಾರವು ಸಿಂಗರ ನಾಯಕತ್ವ ಪಡೆದದ್ದು ಸುದೈವ. ಆದರೆ ಸರಕಾರವು ಜನಹಿತಾಸಕ್ತವಾಗಬೇಕು; ಜನಾಭಿಪ್ರಾಯ ಮೂಡಿಸಬೇಕೆಂಬ ಸಿಂಡಿಕೇಟಿನ ಚರಮೋದ್ದೇಶ ಧೂಳೀಧೂಸರಿತವಾಯ್ತು. ಸಿಂಗರ ಶಕ್ತಿಯನ್ನು, ಪ್ರಭಾವವನ್ನು, ಪ್ರಜಾ ಕಲ್ಯಾಣ ಚಿಂತನ ಪರಿಶೀಲನೆಯನ್ನು ದಳವೂ ಸರಕಾರವೂ ಸರಿಯಾಗಿ ಉಪಯೋಗಿಸಿಕೊಳ್ಳಲಿಲ್ಲ. ವ್ಯಕ್ತಿಹಿತದತ್ತ ಒಲಿದ ದಳದ ಸರಕಾರದ ಮೇಲೆ ಜನ ವಿಶ್ವಾಸ ಮೂಡಲಿಲ್ಲ. ಸಂಯುಕ್ತ ದಳ ಸರಕಾರಗಳು ಸಂಪೂರ್ಣ ಅಯಶ ಹೊಂದುತ್ತವೆ ಎಂಬ ಭಾವನೆಯನ್ನು ಮೊನ್ನಿನ ಲೋಕ ಸಭಾ ಚುನಾವಣೆಗಳ ವೇಳೆಗೆ ಜನತೆಯ ಮುಂದೆ ಪ್ರಚಾರ ಮಾಡಲು ಇಂಡಿಕೇಟಿಗೆ ಸಿಂಗ ಸಂಪುಟವೇ ಆದರ್ಶ ಮಾದರಿಯಾಯ್ತು.

ಒಂದೊಮ್ಮೆ ಸಿಂಗ ಸಂಪುಟವು ಉತ್ತರ ಪ್ರದೇಶದಲ್ಲಿ ಸಫಲ ಕಾರ್ಯಕ್ರಮಗಳಿಂದ ಜನಪ್ರಿಯವಾಗುತ್ತಿದ್ದರೆ, ಸಿಂಡಿಕೇಟ್ ಮತ್ತಿತರ ಮೈತ್ರಿಕೂಟದ ಪಕ್ಷಗಳ ಅವಸ್ಥೆ ಇಷ್ಟೊಂದು ದುರಂತಮಯವಾಗುತ್ತಿರಲಿಲ್ಲ. ಇಂಡಿಕೇಟು ಲೋಕಸಭೆಯಲ್ಲಿ ಭದ್ರ ಕೋಟೆ ಕಟ್ಟಿಕೊಂಡನಂತರ ಇಂಡಿಕೇಟಿಗೆ ಪಕ್ಷಾಂತರ ಹೊಂದುವ ಶಾಸಕರ ಸಂಖ್ಯೆಯೂ ಹೆಚ್ಚಿತು. ಈ ಪಕ್ಷಾಂತರ ಪೀಡೆ ಸಿಂಗರನ್ನೂ ಕಾಡದೆ ಬಿಡಲಿಲ್ಲ. ಅವರ ಸಂಯುಕ್ತ ವಿಧಾಯಕ ದಳವು ವಿಧಾನ ಸಭೆಯಲ್ಲಿ ಬಹುಮತವನ್ನು ಕಳೆದುಕೊಂಡಿತು. ಸಿಂಗರ ಭವಿಷ್ಯವನ್ನೂ ವಿಧಾನ ಸಭೆ ಬರೆಯಿತು. ರಾಜಕೀಯದ ಮಾರಿಗೆ ಬಲಿಗೊಡಲೆಂದೇ ಸಿಂಗರನ್ನು ಎಳೆದು ತಂದು ಬಲಿಗಂಬಕ್ಕೆ ಕಟ್ಟಿದಂತಾಯಿತು. ವಿಧಾನ ಮಂಡಳದ ಸದಸ್ಯನಾಗದೆ ಸರ್ಕಾರ ನಡೆಸಬಹುದಾದ ಆರು ತಿಂಗಳ ಅವಧಿಯಲ್ಲಿ ಬಹು ಅಂಶವನ್ನವರು ಬಳಸಿಕೊಂಡರೆಂಬುದನ್ನು ಬಿಟ್ಟರೆ, ಮತ್ತೇನೂ ಬೆಳವಣಿಗೆ ಅವರಿಂದ ಸಾಧ್ಯವಾಗಲಿಲ್ಲ. ಇನ್ನು ಮುಂದೆ ಪರ್ಯಾಯ ಸರಕಾರ ರಚನೆಯಾಗಲಿ, ಮಧ್ಯಾವಧಿ ಚುನಾವಣೆಗಳೇ ನಡೆಯಲಿ, ಸಿಂಡಿಕೇಟು ಬಹುಮತಗಳಿಸುವ ನಿರೀಕ್ಷೆ ಬಹಳ ದೂರದ್ದಾಗಬಹುದು.

ವಿಧಾನ ಸಭೆಯಲ್ಲಿ ತನಗೆ ಬಹುಮತವಿಲ್ಲವೆಂದು ತಿಳಿದ ಕರ್ನಾಟಕದ ವೀರೇಂದ್ರ ಪಾಟೀಲರು ರಾಜೀನಾಮೆ ನೀಡಿದರು. ಇದಕ್ಕೂ ಇಂಡಿಕೇಟಿಗೆ ಪಕ್ಷಾಂತರಗೊಂಡ ಶಾಸಕರೇ ಹೊಣೆಗಾರರು. ಲೋಕಸಭಾ ಚುನಾವಣೆಯ ವಿಲಕ್ಷಣ ಪರಿಣಾಮದಿಂದ ಅವರು ಪ್ರಭಾವಿತರಾದರು. ಸದ್ಯ ರಾಷ್ಟ್ರಪತಿ ಆಳಿಕೆ ಬಂದಿದ್ದರೂ ಇಲ್ಲಿಯೂ ಸಂಯುಕ್ತ ವಿಧಾಯಕ ದಳ ರಚಿಸುವ ಪ್ರಯತ್ನವನ್ನು ಕೆಲವರು ಮಾಡುತ್ತಿದ್ದಾರೆ. ಸರಕಾರದಿಂದ ಹೊರಗಿದ್ದು ಇದನ್ನು ಬೆಂಬಲಿಸಲು ಸಿಂಡಿಕೇಟು ಸಿದ್ಧವಿದೆಯೆನ್ನುತ್ತಾರೆ. ಅದೇನಿದ್ದರೂ ಕೆಲವು ಶಾಸಕರ ವಿಶ್ವಾಸದ್ರೋಹದಿಂದ ಕಂಗೆಡದೆ ಧೀರರಂತೆ ವರ್ತಿಸಿದ ಪಾಟೀಲರ ಮೇಲೆ ಜನಾಭಿಪ್ರಾಯ ಉತ್ತಮವಾಗಿಯೇ ಉಳಿದಿದೆ. ಅಧಿಕಾರ ಲಾಲಸಿಗಳು ಮತ್ತು ನಿಜಲಿಂಗಪ್ಪನವರ ವಿರೋಧಿಗಳ ಕೈವಾಡದಿಂದಲೇ ಪಾಟೀಲರು ಪಾಡುಪಟ್ಟರು. ಸಮರ್ಥ ಮತ್ತು ಸುಯೋಗ್ಯ ಪ್ರಗತಿಶೀಲ ನಾಯಕರೆಂಬ ಹೆಸರು ಅವರಿಗೆ ಆಯೋಚಿತವಾಗಿ ಬಂದಿದೆ. ಆದುದರಿಂದ, ಒಳ್ಳೆಯ ಯೋಗ್ಯ ಪ್ರತಿಭಾವಂತ ಪ್ರಗತಿಶೀಲರನ್ನು ಕೂಡಿಸಿಕೊಂಡರೆ, ಸಿಂಡಿಕೇಟ್ ಮತ್ತೆ ಅಧಿಕಾರಕ್ಕೇರುವ ಸಾಧ್ಯತೆಗಳಿವೆ. ಇಂಡಿಕೇಟ್ ನಾಯಕರಲ್ಲಿ ಮೂಡಿರುವ ಮಾನಸಿಕ ಭಿನ್ನಾಭಿಪ್ರಾಯವೂ ಇದಕ್ಕೆ ಪೋಷಕವಾಗಬಹುದು. ಇಂದಿರಾ ಮಹಾಪೂರದಲ್ಲಿ ಲೋಕಸಭಾ ಸ್ಥಾನಗಳು ಇಂಡಿಕೇಟ್ ವಶವಾದಂತೆಯೇ ವೀರೇಂದ್ರರು ಮನಸ್ಸು ಮಾಡಿದರೆ ರಾಜ್ಯ ವಿಧಾನಸಭೆಯಲ್ಲಿ ನಿರಾಯಾಸವಾಗಿ ಬಹುಮತಗಳಿಸಬಲ್ಲರು.

ಗುಜರಾತವು ಈಯೆರಡಕ್ಕೂ ದೂರತಾದದ್ದು. ಕಾಂಗ್ರೆಸ್ ವಿಭಜನಾ ನಂತರ ಹಲವು ಬಾರಿ ಮುಖ್ಯಮಂತ್ರಿ ಹಿತೇಂದ್ರ ದೇಸಾಯಿಯವರು ಅಪಾಯದ ಅಂಚನ್ನು ತಲುಪಿದರು. ಸಿಂಡಿಕೇಟನ್ನು ಒಡೆಯಲು ಇಂಡಿಕೇಟ್ ಬಹು ಪರಿಯಾಗಿ ಪ್ರಯತ್ನಿಸಿತು; ಸ್ವತಂತ್ರ ಪಕ್ಷ ಬೆನ್ನು ತಿಕ್ಕಿತು. ಆದರೆ, ಅದರ ಪ್ರಯತ್ನ ನಿಷ್ಪ್ರಯೋಜಕವಾಯ್ತು. ಲೋಕ ಸಭಾ ಚುನಾವಣೆಗಳಲ್ಲಿಯೂ ಇಲ್ಲಿ ಇಂಡಿಕೇಟು 'ಭಾರೀ' ಸೋಲುಣ್ಣಲಿಲ್ಲ; ಇಂದಿರಾ ಪ್ರವಾಹ ಬಂದುದ್ದು ನಿಜ; ಆದರೆ. ಅದೆಲ್ಲವನ್ನೂ ಕೊಚ್ಚಿ ಒಯ್ಯಲಿಲ್ಲ. ಎಳ ಸ್ಥಾನಗಳಲ್ಲಿ ಸಿಂಡಿಕೇಟುಗಳು ಹನ್ನೊಂದು ಹನ್ನೊಂದು ಪಡೆದು ಉಳಿದವೆರಡನ್ನು ಇತರರಿಗೆ ಬಿಟ್ಟುಕೊಟ್ಟವು.

ಆದರೆ, ಹಿತೇಂದ್ರ ದೇಸಾಯಿಯವರು ಈಗ ತೊಡಕಿಗೆ ಸಿಕ್ಕಿಕೊಂಡಿದ್ದಾರೆ. ಸಿಂಡಿಕೇಟ್ ನಾಯಕರು ಪ್ರಜಾಸತ್ತಾತ್ಮಕ ಪಕ್ಷಗಳ ಸಂಯುಕ್ತ ರಂಗ ರಚಿಸುವುದನ್ನು ಪ್ರಬಲಾತಿಪ್ರಬಲವಾಗಿ ವಿರೋಧಿಸಿದ ದೇಸಾಯಿಯವರು ಇಂದಿರಾ ಪ್ರವಾಹವನ್ನು ಎದುರಿಸಲು ನಾಲ್ಕು ದೋರ್ಬಲಗಳಿಸಬೇಕಾಗಿದೆ. ಉತ್ತರ ಪ್ರದೇಶ–ಕರ್ನಾಟಕಗಳಲ್ಲಿ ಹರಡಿದ ಪಕ್ಷಾಂತರ ಪಿಡುಗು ಗುಜರಾತಕ್ಕೂ ತಗಲಿತು. ಹಲವು ಸಿಂಡಿಕೇಟ್ ಶಾಸಕರು ಚುನಾವಣೆಗೆ ಮೊದಲೇ ಇದಕ್ಕೆ ಗುರಿಯಾಗಿದ್ದರು; ಅನಂತರ ಮತ್ತು ಹಲವರು ಅದರ ದಾರಿ ಹಿಡಿದರು. ಇದರಿಂದಾಗಿ ವಿಧಾನ ಸಭೆಯಲ್ಲಿ ದೇಸಾಯಿಯವರ ಪಕ್ಷವು ಬಹುಮತವನ್ನು ಕಳೆದುಕೊಂಡಿದೆ. ಸ್ವಾರಸ್ಯವೆಂದರೆ, ಈ ಸತ್ಯವನ್ನು ವಿರೋಧಿ ಪಕ್ಷಗಳು ಡಣಾಡಂಗುರ ಹೇಳುವುದಿಲ್ಲ;

(ಹನ್ನೆರಡನೆಯ ಪುಟ ನೋಡಿರಿ)

ಒಂದು ಚಿಕ್ಕ ಕಥೆ

ದಕ್ಷಿಣೆ ಇಡು ದಕ್ಷಿಣೆ!

ಹಿಂದಿ ಮೂಲ: ಹರಿಶಂಕರ ಪರಸಾಯಿ.

ಅನುವಾದ: ದ್ವೈಪಾಯನಾಚಾರ್ಯ ಜಹಾಗಿರದಾರ.

ಇಂಥ ಪ್ರಸಂಗವು ಎಂದೂ ಸಂಭವಿಸಿದ್ದಿಲ್ಲ ಎಷ್ಟೋ ವರ್ಷಗಳಿಂದ ಜನರ ಪ್ರಾಣ ಹರಣ ಮಾಡುವ ಕಾರ್ಯ ಯಮರಾಜನು ಮಾಡುತ್ತಿರುವನು. ಅವರವರ ಕರ್ಮಾನುಸಾರವಾಗಿ ಅವರಿಗೆ ಸ್ವರ್ಗದಲ್ಲಿಯಾಗಲಿ ನರಕದಲ್ಲಿಯಾಗಲಿ ಸ್ಥಾನ ದೊರೆಯುತ್ತಿರುವದು. ಆದರೆ ಇಂದಿನಂತಹ ಪ್ರಸಂಗವು ಹಾತ್ರ ಎಂದೂ ಸಂಭವಿಸಿದ್ದಿಲ್ಲ. ಇಷ್ಟು ಗೊಂದಲವು ಎಂದೂ ಉಂಟಾಗಿದ್ದಿಲ್ಲ.

ಚಿತ್ರಗುಪ್ತರು ಚಿಂತಾಮಗ್ನರಾಗಿ ಕಣ್ಣಿಗೆ ಹಾಕಿಕೊಂಡಿದ್ದ ಚಾಳಿಸನ್ನು ಒರಿಸುತ್ತ ರಜಿಸ್ಟರದ ಪುಟಗಳನ್ನು ತಿರುವುತ್ತಿದ್ದರು. ಎಷ್ಟು ತಿರುವಿ ಹಾಕಿದರೂ ತಪ್ಪು ಸಿಗದಾಯಿತು. ಬೇಸತ್ತು ರಜಿಸ್ಟರನ್ನು ಮುಚ್ಚಿ ಒಗೆದರು. ಅವರ ಈ ಮುಚ್ಚುವಿಕೆಯಲ್ಲಿ ನೊಣವೊಂದು ಸಿಕ್ಕು ಸತ್ತಿತು. ಚಿತ್ರಗುಪ್ತರು ನಿಟ್ಟುಸಿರನ್ನು ಬಿಟ್ಟು ಯಮರಾಜನಿಗೆ ನುಡಿದರು.

'ಮಹಾರಾಜ, ರಜಿಸ್ಟರ ಲೆಕ್ಕವೆಲ್ಲ ಸರಿಯಾಗಿದೆ. ರಿಕಾರ್ಡ ಸರಿಯಾಗಿದೆ. ಭೋಲಾರಾಮನು ಐದು ದಿನಗಳ ಹಿಂದೆ ಮರಣ ಹೊಂದಿರುವನು. ಯಮದೂತನು ಅವನ ಪ್ರಾಣಾಪಹರಣ ಮಾಡಿರುವನು. ಆದರೆ ಅವನ ಪತ್ತೆಯೇ ಇಲ್ಲ. ಅವನು ಇಲ್ಲಿಯವರೆಗೂ ಬಂದಿಲ್ಲ. ಅವನ ಅಂಕಿತವೂ ಇಲ್ಲ. ನಡೆದ ಸಮಾಚಾರ ತಿಳಿಯದಾಗಿದೆ.

ಅಷ್ಟರಲ್ಲಿ ಯಮದೂತನು ಬಂದನು. ಅವನ ಕಪ್ಪು ಮುಖ, ಅಕರಾಳ ವಿಕರಾಳ ರೂಪ ನಿರಾಶೆಯಿಂದ ಅವನ ಮುಖವು ಮತ್ತಷ್ಟು ಕಪ್ಪಾಗಿತ್ತು. ಅವನನ್ನು ಕಂಡ ಕೂಡಲೆ ಸಿಟ್ಟಿನಿಂದ ಎಲೇ! ನೀನು ಇಷ್ಟು ದಿವಸ ಎಲ್ಲಿ ಅಡಗಿದ್ದಿ? ಭೋಲಾರಾಮನ ಜೀವವೆಲ್ಲಿದೆ? ಎಂದು ಕೇಳಿದ ಯಮಧರ್ಮನು.

ಅವನು ಅತ್ಯಂತ ದೈನ್ಯತೆಯಿಂದ ಕೈ ಜೋಡಿಸಿ, 'ಮಹಾರಾಜ! ನಡೆದ ಘಟನೆಯನ್ನು ಏನೆಂದು ಹೇಳಲಿ? ಈ ವರೆಗೂ ನಾನು ಎಂದೂ ಫಸಾಯಿಸಲ್ಪಟ್ಟಿಲ್ಲ. ಆದರೆ ಭೋಲಾರಾಮನ ವಿಷಯವಾಗಿ ಮಾತ್ರ ನಾನು ತಲೆತಗ್ಗಿಸಬೇಕಾಗಿದೆ. ಐದು ದಿನಗಳ ಹಿಂದೆ ನಾನು ಭೋಲಾರಾಮನ ಜೀವವನ್ನು ನನ್ನ ವಶಕ್ಕೆ ತೆಗೆದುಕೊಂಡು ಹೊರಟೆ. ಆದರೆ ಆ ಜೀವವು ದಾರಿಯಲ್ಲಿ ಎಲ್ಲಿ ಮಾಯವಾಯಿತೋ ಯಾರಿಗೆ ಗೊತ್ತು? ಈ ಐದು ದಿನಗಳ ವರೆಗೆ ಇಡೀ ಬ್ರಹ್ಮಾಂಡವನ್ನೇ ಹುಡುಕಿದೆ. ಆದರೆ ನನ್ನ ಕೈಯಿಂದ ಜಾರಿಹೋದ ಭೋಲಾರಾಮನ ಜೀವ ದೊರೆಯಲಿಲ್ಲ.

ಯಮಧರ್ಮನು ಸಿಟ್ಟಾದನು. ಅವ ದೂತನಿಗೆ ಹೆದರಿಸಿ 'ಮೂರ್ಖ! ಇಲ್ಲಿಯವರೆಗೆ ಜೀವಗಳನ್ನು ಎಳೆದು ತಂದು ಕೂದಲು ಬೆಳ್ಳಗಾಗಿವೆ. ಇಂಥ ಕಾರ್ಯವು ನಿನ್ನಿಂದ ಆಗಬೇಕೆಂದರೆ ನಿಜವಾಗಿಯೂ ಆಶ್ಚರ್ಯಕರವಾದುದು. ಒಂದು ಸಾಮಾನ್ಯ ವ್ಯಕ್ತಿಯ ಜೀವವು ನಿನಗೆ ಠಕ್ಕಿಸುವುದೆಂದರೆ ಬಹಳೇ ಆಶ್ಚರ್ಯಕರವಾದುದು.

ಮಹಾರಾಜ! ತಪ್ಪನ್ನು ಕ್ಷಮಿಸಬೇಕು ನಾನು ಪ್ರತಿ ಸಲದಂತೆಯೇ ಜಾಗರೂಕತೆಯನ್ನು ವಹಿಸಿರುವೆ. ದೊಡ್ಡ ದೊಡ್ಡ ವಕೀಲರ ಜೀವವನ್ನು ಸಹ ವ್ಯವಸ್ಥಿತವಾಗಿ ಇಲ್ಲಿಗೆ ಎಳೆದು ತಂದಿದ್ದೇನೆ. ಆದರೆ ಈ ಸಲ ಮಾತ್ರ ಯಾವ ಸಂಚುಗಾರಿಕೆ ನಡೆಯಿತೆಂಬುದು ತಿಳಿಯದಾಗಿದೆ.

ಚಿತ್ರಗುಪ್ತನು ನುಡಿದನು—'ಮಹಾರಾಜ! ಈಗ ಸದ್ಯಕ್ಕಂತೂ ಭೂಮಿಯ ಮೇಲೆ ಇದೇ ನಡೆದಿದೆ. ಯಾರು ಯಾರನ್ನೋ ಫಸಾಯಿಸುತ್ತಿರುವರು. ಅಲ್ಲಿ ಯಾರು ಹೆಚ್ಚು ಫಸಾಯಿಸುವರೊ ಅವರು ದೊಡ್ಡವರು. ಈ ಫಸಾಯಿಸುವಿಕೆಯು ಹೆಚ್ಚಾಗಿ ರೇಲ್ವೆ ಖಾತೆಯಲ್ಲಿ ನಡೆಯುತ್ತಿರುವುದು. ಒಮ್ಮೊಮ್ಮೆ ಇಡೀ ರೇಲ್ವೆ ಡಬ್ಬಿಯೇ ಮಾಯವಾಗುವುದು. ಪಾರ್ಸಲಿನಲ್ಲಿಯ ಪದಾರ್ಥಗಳು ರೇಲ್ವೆ ಪೋರ್ಟರನಿಂದ ಸ್ಟೇಶನ್ ಮಾಸ್ತರನ ಮನೆಯಲ್ಲಿ ತುಂಬಿ ತುಳುಕುತ್ತಿರುವವು. ರಾಜಕೀಯ ಮುಂದಾಳುಗಳು ವಿರೋಧಿ ಪಕ್ಷದ ಮುಂದಾಳುಗಳನ್ನು ಓಡಿಸಿಕೊಂಡು ಹೋಗುವರು. ಭೋಲಾರಾಮನ ಜೀವವಾದರೂ ಎಲ್ಲಿ ಅದೇ ರೀತಿಯಾಗಿದೆಯೋ ಯಾರು ಬಲ್ಲರು?

ಯಮರಾಜನು ನುಡಿದನು—ಚಿತ್ರಗುಪ್ತಾ, ನೀನು ಇನ್ನು ಮೇಲೆ ರಿಟಾಯರ್ ಆಗು! ನಿನ್ನ ಬುದ್ಧಿಯು ಮಂದವಾಗಿದೆ ಏ—ಭೋಲಾರಾಮ ಸಾಮಾನ್ಯ ವ್ಯಕ್ತಿ. ಅವನ ಜೀವವನ್ನು ಯಾರು ಎಲ್ಲಿ ತೆಗೆದುಕೊಂಡುಹೋಗಬೇಕು?

ಅಷ್ಟರಲ್ಲಿ ಅಲ್ಲಿಗೆ ನಾರದರ ಸವಾರಿ ಬಂತು. ಯಮಧರ್ಮನು ಚಿಂತಾಯುಕ್ತನಾಗಿ ಕುಳಿತುದನ್ನು ನೋಡಿ—'ಮಹಾರಾಜ! ಏನಾಗಿದೆ? ನರಕದಲ್ಲಿ ಸ್ಥಳಾಭಾವ ಉಂಟಾಗಿದೆಯೇ?

'ಆ ಸಮಸ್ಯೆಯು ಎಂದೋ ಮುಗಿದು ಹೋಗಿದೆ. ನರಕದಲ್ಲಿ ಕಳೆದ ವರುಷ ಒಳ್ಳೇ ಜಾಣ ಕುಶಲ ಜನರು ಬಂದರು. ಅವರಲ್ಲಿ ಎಷ್ಟೋ ಜನರು ಕಟ್ಟಡದ ಕಂತ್ರಾಟದಾರರಿದ್ದರು. ಅವರು ಪುಟ್ಟ ಪೂರಾ ಹಣವನ್ನು ಎತ್ತಿಹಾಕಿ ಎಂಥವೊ ಕಟ್ಟಡಗಳನ್ನು ಕಟ್ಟಿದವರು. ಒಳ್ಳೊಳ್ಳೇ ಎಂಜಿನಿಯರರೂ ಇದ್ದರು. ಅವರು ಕಂತ್ರಾಟದಾರರೊಡನೆ ಬೆರೆತು ಪಂಚವಾರ್ಷಿಕ ಯೋಜನೆಯ ಹಣವನ್ನು ನುಂಗಿ ನೀರು ಕುಡಿದವರು. ಕೆಲವು ಓವ್ಹರಸೀಯರರು ಖೊಟ್ಟಿ ಹಜರಿಯನ್ನು ಬರೆದು ಹಣ ಎತ್ತಿ ಹಾಕಿದವರು. ಅವರೆಲ್ಲರು ಒಟ್ಟಾಗಿ ಪ್ರಾಮಾಣಿಕ ರೀತಿಯಿಂದ ಕೆಲಸ ಮಾಡಿರುವರು. ನನಗೆ ಆ ಬಗ್ಗೆ ಕಾಳಜಿ ಇಲ್ಲ. ಕಾಳಜಿ ಅದೇ ಬೇರೊಂದು ವಿಷಯದ ಬಗ್ಗೆ. ಭೋಲಾರಾಮನೆಂಬ ಒಂದು ಜೀವ ಹರಣ ಮಾಡಲಾಯಿತು. ಆದರೆ ಆ ಜೀವವು ಯಮದೂತನ ಕೈಯಿಂದ ಎಲ್ಲಿಯೊ ಮಾಯವಾಗಿದೆ. ಹೀಗಾಗ ಹತ್ತಿದರೆ ಜನರಲ್ಲಿಯ ಪಾಪ ಪುಣ್ಯದ ವಿಶ್ವಾಸವೇ ಹಾರಿಹೋಗುವುದು

ನಾರದನು–ಸಿನೆಮಾನಟನಂತೆ ಅವನ ಹೆಸರಲ್ಲೇ ಇನ್‌ಕಮ್ ಟ್ಯಾಕ್ಸ್ ಬಾಕಿ ಇಲ್ಲವಷ್ಟೆ?

ಥೆ ಥೆ! ಅವನು ಸಾಮಾನ್ಯ ನೌಕರನು. ಇನ್‌ಕಮ್ಮೇ ಇಲ್ಲವೆಂದ ಮೇಲೆ ಟ್ಯಾಕ್ಸ್ ಎಲ್ಲಿಯದು? ಅವನು ಸಾಯುವವರೆಗೂ ಹೇಗೊ ಜೀವನ ನಡೆಸಿದ್ದನು.

ಎಲಾ ಎಲಾ! ಘಟನೆಯು ಒಳ್ಳೇ ಮನೋರಂಜಕವಾಗಿದೆ. ನನಗೆ ಅವನ ಹೆಸರು ವಿಳಾಸ ಕೊಡಿರಿ. ಭೂಪ್ರದಕ್ಷಿಣೆ ಮಾಡಿಕೊಂಡು ಬರುವೆ. ನಾರದನು ಲಗುಬಗೆಯಿಂದ ಹೊರಡಲು ಸಿದ್ಧನಾದನು.

ಚಿತ್ರಗುಪ್ತನು ಪ್ರಕರಣದ ಇತಿಹಾಸವನ್ನು ಹೇಳಿದನು. ಅದು ಈ ರೀತಿಯಾಗಿತ್ತು.—

ಭೋಲಾರಾಮ ಸದಾಸುಖಿ....ನಾಸಪಳ, ಘಮಘಮಪುರ—ನಾಗಪುರಿ ಹಳ್ಳದ ಹತ್ತಿರ ಒಂದು ಮುರುಕು ಮನೆಯಲ್ಲಿರುತ್ತಿದ್ದನು.... ಅವನಿಗೆ ಪತ್ನಿ, ಒಬ್ಬಳು ಹೆಣ್ಣು ಮಗಳು, ಇಬ್ಬರು ಗಂಡು ಮಕ್ಕಳು, ಇಷ್ಟು ಅವನ ಪರಿವಾರ, ವಯಸ್ಸು ಅರವತ್ತು. ಸರಕಾರಿ ನೌಕರನಾಗಿದ್ದನು ಐದು ವರುಷ ಹಿಂದೆ ರಿಟಾಯರ್ ಆಗಿದ್ದನು. ಇಡೀ ವರುಷ ಮನೆ ಬಾಡಗಿ ಕೊಟ್ಟಿದ್ದಿಲ್ಲ. ಮನೆಯ ಮಾಲಿಕನು ಹೊರಗ ಹಾಕುವವನಿದ್ದನು.... ಅಷ್ಟರಲ್ಲಿ ಪ್ರಾಣ ಕಳೆದುಕೊಂಡನು. ಇಂದು ಐದನೇ ದಿನ ಮನೆಯ ಮಾಲಿಕನು ಅವರನ್ನೆಲ್ಲ ಹೊರಗೆ ಹಾಕಿರಬಹುದು. ಮತ್ತು ಬಾಡಿಗೆಯ ಸಲುವಾಗಿ ಅವನ ಸಾಮಾನುಗಳನ್ನೆಲ್ಲ ಕಸಿದುಕೊಂಡಿರಬಹುದು.

o o o

ಅಂತರ್ಜ್ಞಾನಿಗಳಾದ ನಾರದರು ಸರಿಯಾಗಿ ಅವನ ಮನೆಯ ಮುಂದೆ ಇಳಿದರು.

ನಾರದ— ನಾರಾಯಣ! ನಾರಾಯಣ!

ಹುಡುಗಿ— ಮುಂದೆ ಹೋಗಿರಿ.

ಮಗು; ಭಿಕ್ಷೆ ಬೇಕಾಗಿಲ್ಲ. ಭೋಲಾರಾಮನ ಬಗ್ಗೆ ವಿಚಾರಿಸಬೇಕಾಗಿದೆ. ನಿಮ್ಮ ತಾಯಿಯನ್ನು ಹೊರಗೆ ಕರೆ.

ಭೋಲಾರಾಮನ ಹೆಂಡತಿ ಹೊರಗೆ ಬಂದಳು. ನಾರದರು— ತಾಯಿ? ಭೋಲಾರಾಮನಿಗೆ ಯಾವ ಬಗೆಯ ಸಂಕಟವಿತ್ತು?

ಬಡತನದ ಸಂಕಟವಿತ್ತು. ಪೆನ್ಶನ್ ತೆಗೆದುಕೊಂಡು ಐದು ವರುಷವಾಯಿತು.

(ಹನ್ನೊಂದನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 30

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦—೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಕಾರ್ಯಾಂಗದ ಆವಶ್ ಸಫಾಯಿ ಸಾಧನ

ಕರ್ನಾಟಕದಲ್ಲಿ ಮೊತ್ತ ಮೊದಲ ಬಾರಿಗೆ ರಾಷ್ಟ್ರಪತಿ ಆಳಿಕೆ ಬಂತು. ವೀರೇಂದ್ರ ಪಾಟೀಲರ ಸರಕಾರ ರಾಜಿನಾಮೆ ನೀಡಿದ್ದರಿಂದ, ಪರ್ಯಾಯ ಸರಕಾರ ರಚಿಸುವ ವಿಷಯದಲ್ಲಿ ಇಂಡಿಕೇಟಿನ ಸಿದ್ಧವೀರಪ್ಪ—ದೇವರಾಜ ಅರಸುಗಳ ನಡುವಣ ಭಿನ್ನಾಭಿಪ್ರಾಯ ನಿವಾರಣೆಯೊಗದ್ದರಿಂದ, ವರ್ಷದ ಕೊನೆಯೊದುದರಿಂದ ಹೀಗಾಗುವುದು ಅನಿವಾರ್ಯವಾಯ್ತು. ಇಂಡಿಕೇಟಿನಲ್ಲಿ ಎದ್ದ ಭಿನ್ನಮತ ಕರ್ನಾಟಕಕ್ಕೇನೂ ಹೊಸತಲ್ಲ. ಅಧಿಕಾರಕ್ಕೆ ಅಂಟಿಕೊಳ್ಳುವ ಲಾಲಸೆಯಿಂದ ಇಲ್ಲಿ ಇದು ಹಿಂದಿನಿಂದಲೂ ಬಂದದ್ದೇ ಎಂ. ವಿ. ಕೃಷ್ಣಪ್ಪ, ದಯಾನಂದ ಸಾಗರ್ ಮತ್ತು ಆರ್. ಎಂ. ಪಾಟೀಲರಂತವರು ಸಿದ್ಧವೀರಪ್ಪನವರಿಗೆ ಬೆಂಬಲ ನೀಡುತ್ತಾರೆ. ಅರಸರು ಹೇಳುವ ಜಳ ಮತ್ತು ಸಿದ್ಧವೀರಪ್ಪನವರ ತಡವಾಗಿ ವಿವೇಕೋದಯ ಹೊಂದಿ ಪಕ್ಷಾಂತರ ಮಾಡಿ ಬಂದ ಶಾಸಕರಲ್ಲಿ ಹೆಚ್ಚಿನವರ ಒಲವು ಸರಕಾರ ರಚಿಸುವಲ್ಲೇ ಇದೆ. ಆದರೆ, ಯುವಜನ ಪ್ರತಿನಿಧಿಗಳೆಂದು ಹೇಳಿಕೊಳ್ಳುವ ಕೆಲವರು ಮಾತ್ರ ಇದನ್ನು ವಿರೋಧಿಸುತ್ತಾರೆ. ಪ್ರಾಯಃ ಸದ್ಯ ಸಂಪುಟ ರಚನೆಯಾದರೆ, ನರೆಗೂದಲುಳ್ಳವರೇ ಅಧಿಕಾರಕ್ಕೆ ಅಂಟಿಕೊಳ್ಳುತ್ತಾರೆಂದವರ ಭಯವಿರಲೂ ಬಹುದು.

ಅಧಿಕಾರದ ಆಸೆ ಇಂಡಿಕೇಟಿಗರಿಗೆ ಮೂಗಿನ ತುದಿಯಲ್ಲಿದೆ ಎಂಬುದು ಒಪ್ಪತಕ್ಕದ್ದೇ. ಕೇರಳದ ಸಂಸತ್ ಸದಸ್ಯರೊಬ್ಬರಿಗೆ ಫೋನಿನ ಮೂಲಕ ಮಂತ್ರಿ ನಿಯುಕ್ತಿಯಾಯಿತೆಂದೂ ಅವರು ಟೀಕಾಗಿ ದುಸ್ತು ಮಾಡಿಕೊಂಡು ಪ್ರತಿಜ್ಞೆ ಸ್ವೀಕರಿಸಲು ರಾಷ್ಟ್ರಪತಿ ಭವನಕ್ಕೆ ಹೋಗಿ 'ಮೂರ್ಖ'ರಾದರೆಂದೂ ಏಪ್ರಿಲ್ ಒಂದರ ವರದಿಯೊಂದು ಹೇಳುತ್ತದೆ. ಮಂತ್ರಿಪದ ನೀಡಿದವರನ್ನು ಮುಖತಃ ಕಾಣುವುದಕ್ಕೂ ಅವರ ಉತ್ಸಾಹ ಭಂಗ ಬಂದಿತು! ಪ್ರಾಯಃ ಈ ಮೂರ್ಖರಾದ ಮಹನೀಯರು ಮಂತ್ರಿಪದವಿಗಾಗಿ ಬಹುದಿನಗಳಿಂದ ಕಾಯುತ್ತಿದ್ದಿರಬೇಕು. ಅಧಿಕಾರ ಲಾಲಸೆಯಿಂದಲೇ ಕರ್ನಾಟಕದಲ್ಲಿಯೂ ಇಂಡಿಕೇಟಿನ ಒಂದು ತಂಡ ಪಕ್ಷಾಂತರ ಪಕ್ಷಿಗೆ ನಾಲ್ಕು ರೆಕ್ಕೆ ಕಟ್ಟಿದ್ದು; ಉತ್ತರ ಪ್ರದೇಶದಲ್ಲಿ ಮತ್ತು ಗುಜರಾತದಲ್ಲಿ ಶಾಸಕರನ್ನು ತನ್ನ ಕಡೆ ಎಳೆದುಕೊಂಡದ್ದು. ಯಾವುದೇ ಪಕ್ಷವು ತನ್ನ ಬಲವನ್ನು ಹೆಚ್ಚಿಸಿಕೊಳ್ಳುವುದಾದರೆ, ಜನತೆಯ ಒಲವನ್ನು ಗಳಿಸಬೇಕು; ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆಲ್ಲಬೇಕು. ಅದು ಬಿಟ್ಟು, ಇತರ ಪಕ್ಷದ ಶಾಸಕರನ್ನು ಹಿಡಿದು ತರುವುದೆಂದರೆ, ಅವರ ಸಂಖ್ಯಾಬಲದಿಂದ ಅಧಿಕಾರ ಪಡೆಯ ಬೇಕೆಂಬುದೇ ಇದಕ್ಕೆ ಅರ್ಥ. ಇಂಡಿಕೇಟಿನ ಕೇಂದ್ರ ಪಾರ್ಲಿಮೆಂಟರಿ ಮಂಡಳಿಗೆ ಕರ್ನಾಟಕದ ರಾಜ್ಯಕೀಯವು ಹತ್ತು ವರ್ಷಗಳ ಬಳಿಕ ಮತ್ತೆ ನುಂಗಲಾರದ ತುತ್ತಾಗತೊಡಗಿದೆ. ಉತ್ತರ ಪ್ರದೇಶದಲ್ಲಿ ಪಕ್ಷಾಂತರಿಗಳ ಬೃಹತ್ ಕೂಟದ ಮಹಾನಾಯಕರಾದ ಕಮಲಾಪತಿ ತ್ರಿಪಾಠಿಯವರಿಗೆ ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಅವಕಾಶವನ್ನು ಒದಗಿಸಿಕೊಟ್ಟ ಅದು, ಸಾಧ್ಯವಾದರೆ, ಪಕ್ಷಾಂತರಿಗಳ ಬಲದಿಂದಲೇ ಗುಜರಾತದಲ್ಲಿ ಸರಕಾರ ರಚಿಸುವ ಆಸಕ್ತಿ ಹೊಂದಿದ ಅದು, ಕರ್ನಾಟಕಕ್ಕೆ ಮಾತ್ರ ಬೇರೆಯೇ ನೀತಿ ಹೊಂದಿರುವುದು ಸಿದ್ಧವೀರಪ್ಪನವರ ದುರದೃಷ್ಟವಲ್ಲದೆ ಮತ್ತಿನ್ನೇನು?

ರಾಜ್ಯಪಾಲ ಧರ್ಮವೀರರು ಸಲಹೆಗಾರರ ನೆರವಿಲ್ಲದೆ ತಾನೇ ನೇರವಾಗಿ ಆಡಳಿತ ನಡೆಸ ಹೊರಟಿದ್ದಾರೆ; ಮತ್ತು ಈ ದಿಸೆಯಲ್ಲಿ ಅವರು ಸಾಕಷ್ಟು ಉತ್ಸಾಹದಿಂದಲೇ ಮುಂದುವರಿದಿದ್ದಾರೆ. ಬಿಟಿಎಸ್ ಬಸ್ಸುಗಳ ಮೇಲೆ ತೆಗೆದುಕೊಂಡ ಕ್ರಮಗಳಿಂದ ನಾಗರಿಕರಿಗೆ ಅನನುಕೂಲವಾಗಿದೆ ನಿಜ; ಆದರೆ ಸಾರಿಗೆಯ ನಿಯಮ ಮೀರಿದ ಬಸ್ಸುಗಳಿಂದ ನಿರೀಹ ನಾಗರಿಕರ ಪ್ರಾಣಕ್ಕೆ ಸಂಚಕಾರ ಬರುವ ಪ್ರಮೇಯವನ್ನು ತಪ್ಪಿಸಿದೆಯೆಂಬುದೂ ಸತ್ಯವೇ. ಆಡಳಿತದಲ್ಲಿ ಚುರುಕುತನ ಬೇಕು; ಅದನ್ನು ಕುಂಠಿತಗೊಳಿಸುವ ಯಾವುದೇ ಪ್ರಯತ್ನ ಅಸಹ್ಯವೆಂದು ಸಾರಿದ ರಾಜ್ಯಪಾಲರು ತಾವೇ ಸ್ವತಃ ದಿನದ ಒಂದು ಹೊತ್ತು ವಿಧಾನ ಸೌಧದಲ್ಲಿ ಕುಳಿತುಕೊಳ್ಳ ಹೊರಟಿದ್ದಾರೆ. ಇದರಿಂದಾಗಿ, ವಿವಿಧ ಇಲಾಖೆಯ ಕಾರ್ಯದರ್ಶಿಗಳು ಇನ್ನಿಲ್ಲದ ಉತ್ಸಾಹವನ್ನು ಹೊಂದಲೇಬೇಕಾಗಿದೆ. 'ಅಪ್ಲಿಕೇಶನ್ ಇದೆ; ಅಪ್ಲಿಕಂಟ್ ಆದೇಕೆ ಬರಲಿಲ್ಲ? ಎನ್ನುವ ಧಾಟಿ ಬಹುಕಾಲ ಮುಂದುವರಿಯದು. ಶ್ರೀ ಧರ್ಮವೀರರು ಆಡಳಿತಾಂಗದಲ್ಲೇ ದುಡಿದ ನಿವೃತ್ತ ಅಧಿಕಾರಿ. ಎಲ್ಲಿ ಹೆಗ್ಗಣವಿರಬಹುದೆಂಬುವನ್ನು ಚೆನ್ನಾಗಿ ಬಲ್ಲವರು. ಈ ಹಿಂದೆ ಪಂಜಾಬದಲ್ಲಿ ಅವರು ರಾಜ್ಯಪಾಲರಾಗಿದ್ದಾಗ, ರಾಷ್ಟ್ರಪತಿ ಆಳಿಕೆಯ ವೇಳೆ ಕಾರ್ಯಾಂಗದ ಕಿಲುಬನ್ನು ಕಿತ್ತುಹಾಕಿದ ಧೀರರೆನಿಸಿದವರು; ಹೆಜ್ಜೆ ಹೆಜ್ಜೆಗೂ ತಾಂಡವವಾಡುತ್ತಿದ್ದ ಭ್ರಷ್ಟಾಚಾರದ ಸಿಂಹಭಾಗವನ್ನು ತೊಡೆದು ಹಾಕಿದವರು; ಕಾಳಸಂತೆಯ ಕದೀಮರ ಮೇಲೆ ಕ್ರಮ ಕೈಗೊಂಡು, ಬೆಲೆಯೇರಿಕೆ, ಅಭಾವ ಪರಿಸ್ಥಿತಿಗಳನ್ನು ಇಲ್ಲವಾಗಿಸಿದವರು. ಹಾಗೆಯೇ ಪಶ್ಚಿಮ ಬಂಗಾಳದಲ್ಲಿ ರಾಜ್ಯಕೀಯ ಕುಸ್ತಿಯ ಕಾಲದಲ್ಲಿ ಅಲ್ಲಿನ ರಾಜಪಾಲರಾಗಿ ಧರ್ಮವೀರರಾಗಿ ದೇಶಕ್ಕೆ ಅತ್ಯಮೂಲ್ಯ ಸೇವೆ ಸಲ್ಲಿಸಿದವರು. ಕರ್ನಾಟಕದ ಕಾರ್ಯಾಂಗವೂ ಕಿಲುಬು—ಹೊಲಸುಗಳಿಂದ ಕೂಡಿದೆಯೆಂಬುದನ್ನು ಅವರೂ ಬಲ್ಲರು. ಆದುದರಿಂದಲೇ ರಾಷ್ಟ್ರಪತಿ ಆಳಿಕೆ ಕೆಯೆಂದರೆ, ಅದೇನೂ ತಮಾಷೆಯಲ್ಲ; ಆಡಳಿತೆಯನ್ನು ಚುರುಕುಗೊಳಿಸುವ ಸಮಯವನು ಎನ್ನುತ್ತಾರೆ ಅವರು.

ಸರಕಾರವೆಂದರೆ; ಒಂದು ದಿನವಿದ್ದು ಮರುದಿನವೇ ಉರುಳಿಹೋಗುವಂತಹ ವಿನೋದ ನಾಟಕವಲ್ಲ ಎಂದು ಶ್ರೀ ಧರ್ಮವೀರರ ಖಚಿತ ಅಭಿಪ್ರಾಯ. ವಿಧಾನಸಭೆಯಲ್ಲಿ ಬರಿಯ ಒಂದೆರಡು ಮತಗಳ ಬಹುಮತವಿದ್ದ ಮಾತ್ರಕ್ಕೆ ಯಾರಾದರೂ ಸ್ಥಿರ ಸರಕಾರ ರಚಿಸುವುದು ಸಾಧ್ಯವಿಲ್ಲವೆನ್ನುತ್ತಾರೆ ಅವರು. ಪಕ್ಷಾಂತರ ಪಿಡುಗಿನ ಈ ಸಮಯದಲ್ಲಿ ಅದಕ್ಕೆ ಹೆಚ್ಚಿನ ಮಹತ್ವವೂ ಇದೆ. ಆದುದರಿಂದ ಕರ್ನಾಟಕದಲ್ಲಿ ಚುನಾವಣೆಗಳೇ ನಡೆಯುವ ಸಾಧ್ಯತೆ ಬಹಳಷ್ಟಿದೆ. ಇಷ್ಟರಲ್ಲೇ ಗೋಪಾಲಗೌಡರ ಸಂಯುಕ್ತ ರಂಗ ಅಥವಾ ಇಂಡಿಕೇಟ್ ಸರಕಾರ ರಚಿಸಲಾರದೆಂಬುದು ಖಚಿತವಾಗಿ ವಿಧಾನ ಸಭಾ ವಿಸರ್ಜನೆ—ಮರು ಚುನಾವಣೆಗೆ ಆಜ್ಞೆ ನಡೆದರೆ, ಮುಂದಿನ ತಿಂಗಳಾಂತ್ಯದಲ್ಲಿ ಚುನಾವಣೆಗಳು ನಡೆಯಬಹುದು. ಅದಾಗದೆ ಹೋದರೆ, ಮಳೆಗಾಲದ ತೀವ್ರತೆ ಕಳೆದ ಬಳಿಕವೇ ಚುನಾವಣೆ ನಡೆ[illegible]ಬೇಕಾಗುತ್ತದೆ. ಜನ ಸರಕಾರದ [illegible] ಕಾಲಾವಧಿಯಲ್ಲಿ ಕಾರ್ಯಾಂಗದಲ್ಲಿ ಸತ್ತು ಬಿದ್ದಿರುವ ಹೆಗ್ಗಣಗಳನ್ನು ಹೊತ್ತು ಹೂಳುವುದೇ ರಾಷ್ಟ್ರಪತಿ ಆಳಿಕೆಯ ಪ್ರಮುಖ ಕೆಲಸವೆನಿಸಿದೆ, ನಮ್ಮ ದೇಶದಲ್ಲ. ಈ ನಿಟ್ಟಿನಿಂದ ನಮ್ಮ ರಾಜ್ಯಕ್ಕೆ ಮುಂದಿನ ಜನವರಿಯ ವರೆಗೂ ರಾಷ್ಟ್ರಪತಿ ಆಳಿಕೆ ಮುಂದುವರಿದರೆ ಲಂಚಕ್ಕೆ ಚಾಚುವ ಕೈಗಳಾದರೂ ತುಂಡಾದಾವೋ ಎನಿಸುತ್ತದೆ!

ಬೃಹತ್ ರಾಷ್ಟ್ರಗಳ ಮೌನವ್ರತ

ಬಂಗ್ಲಾದೇಶವನ್ನು ಬಗ್ಗು ಬಡೆದು, ಅದನ್ನು ತನ್ನ ಮುಷ್ಟಿಯಲ್ಲೇ ಉಳಿಸಿಕೊಳ್ಳುವ ಪಶ್ಚಿಮ ಪಾಕಿಸ್ತಾನದ ನಿಲುವೆಯನ್ನು ಕೆಂಪುಚೀನ ಸಮರ್ಥಿಸುತ್ತದೆ. ಅದನ್ನುಳಿದು, ಜಗತ್ತಿನ ಚತುರ್ಮಹಾರಾಷ್ಟ್ರಗಳ ನಿಲುವೆಯೇನು? ಕಾದು ನೋಡುವುದು ಮಾತ್ರವೆ? ಅಲ್ಲಿನ ಸರಕಾರಗಳ ಅಧಿಕೃತ ನಿಲುವೆಯೇನೇ ಇರಲಿ, ಜನಾಭಿಪ್ರಾಯ ಬಂಗ್ಲಾದೇಶಕ್ಕೆ ಪರವಾಗಿದೆಯೆಂದೇ ಹೇಳಬೇಕು. ಭಾರತವೊಂದೇ ಪ್ರತ್ಯಕ್ಷವಾಗಿ ಬಂಗ್ಲಾದ ಸ್ವಾತಂತ್ರ್ಯ ಸಂ

(ಹತ್ತನೇ ಪುಟ ನೋಡಿರಿ)

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 11/71

ಲಕ್ಷ್ಮಿ [illegible] ಅಂಮ —ವಾದಿಳು

ಮತ್ತು

ಶ್ರೀ ಸುಬ್ಬರಾವ್ ಕೂಡಾ —ಪ್ರತಿವಾದಿರು

ಇವರೊಳಗೆ

ಉಡುಪಿ ತಾಲೂಕು ಸಂ. [illegible]ನೇ ಹೇರೂರು ಗ್ರಾಮದಲ್ಲಿ ವಾಸ್ತವ್ಯ ಇರುವ ವೆಂಕಟ್ರಾಯರ ಮಗ [illegible]ನೇ ಪ್ರತಿವಾದಿ B. ಸುಬ್ರಾಯರಿಗೆ ತಿಳಿಸುವುದೇನೆಂದರೆ,

ನೀವು ಕೂಡಾ ಮೂರು ಜನರ ಮೇಲೆ ವಾದಿಳು ಮಾಡಿರುವ ಮೇರೆ ಹೇಳಿದ ವ್ಯಾಜ್ಯವು ತಾ. 16-4-71ಕ್ಕೆ ನಿಮ್ಮ ನೋಟೀಸು ಬಗ್ಗೆ ಇಟ್ಟಿರುತ್ತದೆ. ಆದುದರಿಂದ ನೀವು ಆ ದಿನ ಸ್ವತಃ ವ ವಕೀಲರ ಮುಖಾಂತ್ರ ಮೇಲ್ಕಂಡ ಕೋರ್ಟಿಗೆ ಪೂರ್ವಾಹ್ನ ಗಂಟೆ 11ಕ್ಕೆ ಸರಿಯಾಗಿ ಹಾಜರಾಗಿ ನಿಮ್ಮದೇನಾದರೂ ಉದಾಹರಣೆ ಇದ್ದರೆ ಹಾಕತಕ್ಕದ್ದು. ಇಲ್ಲವಾದಲ್ಲಿ ನಿಮ್ಮ ಶಿವಾಯಿಂದ ತೀರ್ಮಾನಿಸಲ್ಪಡುವುದು ಎಂತ ಈ ಮೂಲಕ ತಿಳಿಸಲಾಗಿಯದೆ.

By order of the Court

H. S. Kedlaya
Advocate for Plaintiff

Udipi, Dated 6-4-71

ಕಡಂದಲೆಯ ಇತಿಹಾಸದ ಮೇಲೆ ಹೊಸ ಬೆಳಕು

ಸಾಧಾರವಾಗಿ ಇತಿಹಾಸ ಬರೆಯಬೇಕು. ಅಂತೆ-ಕಂತೆಗಳು ಪಾರಂಪರ್ಯವಾಗಿ ನಮಗೆ ಬೇಕಷ್ಟು, ಸಾಕಷ್ಟು ಶತಮಾನಗಳಿಂದ ಬಂದೊದಗಿವೆ. ಒಂದು ಊರಿಗೆ ಸಂಬಂಧಿಸಿದ ಒಂದು ದಾಖಲೆಯೊದರೂ ದೊರಕಿದರೆ ಅದರ ಸಹಾಯದಿಂದ ಚರಿತ್ರೆಯ ವಿಧಾನವನ್ನು ತಕ್ಕಮಟ್ಟಿಗೆ ಕಂಡುಕೊಳ್ಳಬಹುದು. ಕಲ್ಬರಹಗಳೂ ತಾಮ್ರ ಶಾಸನಗಳೂ ಇತಿಹಾಸದ ಬರವಣಿಗೆಯಲ್ಲಿ ಅತ್ಯಮೂಲ್ಯವಾದ ದಾಖಲೆಗಳು. ಇವುಗಳನ್ನವಲಂಬಿಸಿ, ಇವುಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಇವುಗಳಲ್ಲಿರುವ ವಿಷಯಗಳನ್ನಳವಡಿಸಿಕೊಂಡು ಸ್ಥಳೀಯ ಇತಿಹಾಸವನ್ನು ಬರೆಯುವ ಅಭ್ಯಾಸವು ಇನ್ನೂ ನಮ್ಮಲ್ಲಿ ಸಾಕಷ್ಟು ಬಳಕೆಗೆ ಬಂದಿಲ್ಲ. ಸಾಧಾರವಲ್ಲದ ವಿವರಗಳನ್ನು ಬರೆದು ಜನಸಾಮಾನ್ಯರಲ್ಲಿ ಐತಿಹಾಸಿಕ ಕಲ್ಪನೆಯಿಲ್ಲದಂತೆ ಮಾಡುವುದು ಇತಿಹಾಸಕ್ಕೂ ಸಾಹಿತ್ಯಕ್ಕೂ ಅಪಕಾರ ಮಾಡಿದಂತಾಗುವುದು.

ಕಡಂದಲೆಯಲ್ಲಿ ನಮಗೆ ದೊರಕಿದ ಒಂದು ಶಿಲಾಶಾಸನದಿಂದ ಎಷ್ಟು ಚಾರಿತ್ರಿಕ ಸ್ಪಷ್ಟತೆ ದೊರಕಬಲ್ಲುದು ಎಂಬುದನ್ನು ಈ ಲೇಖನದಲ್ಲಿ ತಿಳಿಯಪಡಿಸಲು ಬಯಸುತ್ತೇನೆ.

ಶಾಸನದ ಮೂಲಪಾಠ

1. ಸ್ವಸ್ತಿ ಶ್ರೀ ಸಿರಿ ಎರೆ
2. ಬೊಯ್ಗವರ್ಮರ (ಸರ್)
3. ಪಾರಿಪಾಳಿ ಎಮ್ನಾ
4. ಕ್ಷೇತ್ರಮಾನ್ಕಂದಪೂ
5. ಳಭಟಾ ರನ್ಗೆಕೊ
6. ಟ್ಟರ್ ವಳ್ಳಕಣ್ಣ
7. ಮ್ಮನಾ ಮುದಿಮೆಯು
8. ಈದಾನಾಳ್ವೋನ್ಮಾವೊ
9. ನಕ್ಕೆ ಇಡುಸರ್ವ್ವ
10. ಪರಿಕಾರಂಕೊ(ಟ್ಟ)

ಈ ಶಾಸನವು 10ಪಂಕ್ತಿಗಳಿಂದ ಕೂಡಿದ್ದು, ಶಾಸನ ಕಲ್ಲಿನ ಬರಹವಿರುವ ಮೇಲ್ಗಡೆ ಒಂದು ತ್ರಿಶೂಲದ ಚಿತ್ರವಿದೆ. ಶಾಸನಕಲ್ಲು 6 ಬದಿಗಳಿಂದ ಕೂಡಿದ್ದು ನಯವಾದ ಮೇಲ್ಮೈಯಿದ್ದು ಪೂರ್ವಾಭಿಮುಖವಾಗಿ ಶ್ರೀಮಾನ್ ಸಂಜೀವ ಸೆಟ್ರ ಗದ್ದೆಯಲ್ಲಿ ನಡಲ್ಪಟ್ಟಿದೆ. ಶಾಸನದ ಕಾಲಮಾನ ಸು. ಕ್ರಿ. ಶ. 9ನೇ ಶತಮಾನ ಎಂದರೆ ಇಂದಿನಿಂದ ಒಂದು ಸಾವಿರದ ನೂರು ವರ್ಷಗಳಿಂದ ಹಿಂದಿನ ಶಾಸನ.

ಇತಿಹಾಸದ ಮೇಲೆ ಹೊಸ ಬೆಳಕು

ಈ ಕಲ್ಬರಹವು ಚಿಕ್ಕದಾದರೂ ನಮ್ಮ ಜಿಲ್ಲೆಯ ಪ್ರಾಮುಖ್ಯ ಶಾಸನಗಳಲ್ಲಿ ಒಂದಾಗಿದೆ. ವಿಶೇಷ ಮಹತ್ವದ್ದಾಗಿದೆ. ಇದು ರಾಜಕೀಯ ಹಾಗೂ ಧಾರ್ಮಿಕ ಇತಿಹಾಸದ ಮೇಲೆ ಸಾಕಷ್ಟು ಬೆಳಕನ್ನು ಬೀರುತ್ತದೆ. ಈ ಶಾಸನದಲ್ಲಿ ಎರೆಬೊಯ್ಗವರ್ಮರಸನ ಉಲ್ಲೇಖವಿದೆ. ಈತನಾರೆಂದು ನಿಸ್ಸಂಶಯವಾಗಿ ಹೇಳುವುದು ಕಷ್ಟವಾದರೂ ಈತನು ನಮ್ಮ ತುಳು ನಾಡನ್ನು ಒಂದು ಸಾವಿರ ವರ್ಷಕ್ಕಿಂತಲೂ ಮಿಗಿಲಾಗಿ ಆಳಿಕೊಂಡಿದ್ದ 'ಆಳುಪ' ಮನೆತನಕ್ಕೆ ಸೇರಿದ ಸಾರ್ವಭೌಮತ್ವವನ್ನು ಪಡೆದ ಅರಸನಿರಬೇಕು. ಈತನು ಸಾಧಾರಣ ಕ್ರಿ. ಶ.875 ರಿಂದ 900ರವರೆಗೆ ಅಧಿಕಾರದಲ್ಲಿದ್ದನೆಂದು ಒಪ್ಪಿಕೊಳ್ಳ ಬಹುದು. ಈ ಬೊಯ್ಗವರ್ಮರಸನ ಕೈಕೆಳಗೆ ವಳ್ಳಕಣ್ಣಮ್ಮನೆಂಬ ಸ್ಥಳೀಯ ಅಧಿಕಾರಿಯಿದ್ದನೆಂದೂ ಈ ದಾಖಲೆಯಿಂದ ತಿಳಿಯುತ್ತದೆ.

ಶಾಸನದ ಅಭಿಪ್ರಾಯ ಹೀಗಿದೆ ಶ್ರೀ ಸಂಪತ್ಪತಿ ಎರೆ ಬೊಯ್ಗವರ್ಮರಾಜರು ಪಾರಿಪಾಳಿ ಎಂಬ ಕ್ಷೇತ್ರವನ್ನು ಕಂದಪೂಳ ಭಟ್ಟರಕರಿಗೆ ಕೊಟ್ಟರು. ವಳ್ಳಕಣ್ಣಮ್ಮನ ಒಡೆತನವು ಕಂದಪುರವನ್ನು ಆಳುವವನೊ ರಕ್ಷಿಸುವವನೊ ಆಗಿರಲಿ (ಆಗಲಿ) ಈ ಪಾರಿಪಾಳಿ ಕ್ಷೇತ್ರವು ಯಾವುದೇ ತೆರನಾದ ತೆಂಗೆಗೂ ಒಳಗಾಗದಿರಲಿ (ಎಂದರೆ ಈ ಕ್ಷೇತ್ರವು ತೆರಿಗೆಗಳಿಂದ ಹೊರಗಾಗಿರಲಿ).

ಶಾಸನದ ಸಮೀಕ್ಷೆ

ಧಾರ್ಮಿಕ ಇತಿಹಾಸದ ಮೇಲೆ ಈ ಶಾಸನವು ಅಮೂಲ್ಯವಾದ ವಿವರವನ್ನೀಯುತ್ತದೆ. 'ಕುಂದಪೂಳ ಭಟಾರಕ'ಎಂದರೆ ಸ್ಕಂದಪುರದ ದೇವತೆ. ಈ ದೇವತೆ ಯಾವುದು? ನಿಸ್ಸಂಶಯವಾಗಿಯೂ ಶ್ರೀ ಸುಬ್ರಹ್ಮಣ್ಯ ಸ್ವಾಮಿ. ಈ ದೇವತೆಗೆ ಪಾರಿಪಾಳಿ ಎಂಬ ಕ್ಷೇತ್ರವನ್ನು ಸ್ಥಳೀಯ ಅಧಿಕಾರಿಯಾದ ವಳ್ಳಕಣ್ಣಮ್ಮನ ಒಡೆತನದಲ್ಲಿ ನಾಡಿನ ರಾಜನಾದ ಎರಬೊಯ್ಗವರ್ಮರಸನು ದಾನವಾಗಿತ್ತನು. ಕ್ರಿ. ಶ. 9ನೇ ಶತಮಾನದಲ್ಲಿ ಸುಬ್ರಹ್ಮಣ್ಯ ಆರಾಧನೆ ಕಡಂದಲೆಯಲ್ಲಿತ್ತೆಂಬುದಕ್ಕೆ ಇದು ಸಾಕ್ಷಿ. ತುಳುನಾಡಿನಲ್ಲಿ ಇಷ್ಟರ ತನಕ ದೊರಕಿದ ಶಾಸನಗಳಲ್ಲಿ ಸ್ಕಂದ ದೇವತೆಯ ಉಲ್ಲೇಖವನ್ನು ಮಾಡುವ ದಾಖಲೆಗಳಲ್ಲಿ ಇದು ಪ್ರಥಮವೆನ್ನಬಹುದು. ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವತೆಗೂ ಇಷ್ಟು ಪ್ರಾಚೀನವಾದ ಸ್ಪಷ್ಟ ಉಲ್ಲೇಖವಿಲ್ಲ. 'ಕಂದಪೂಳ' ಎಂಬುದು 'ಸ್ಕಂದಪುರ'ದ ಹಳೆಗನ್ನಡದ ರೂಪವಾಗಿದೆ. ಬೆಳುವಾಯಿಯಲ್ಲಿ ದೊರಕಿದ ಕ್ರಿ. ಶ. 1205ರ ಒಂದು ಶಾಸನದಲ್ಲಿ 'ಸ್ಕನ್ದಪುರ'ವೆಂದೇ ಉಲ್ಲೇಖವಿದೆ. ಈ ಸ್ಕನ್ದಪುರವು ಕಡಂದಲೆ ಹೊರತಾಗಿ ಅನ್ಯಥಾ ಸ್ಥಳವಲ್ಲ. 'ಪಾರಿಪಾಳಿ' ಎಂಬೀ ಹೆಸರು ಇಂದಿಗೂ ಇಲ್ಲಿಯ ಜನಸಾಮಾನ್ಯರ ಸ್ಮೃತಿಯಲ್ಲಿ ಸ್ವಲ್ಪ ಅಪಭ್ರಂಶವಾಗಿ ಉಳಿದು ಬಂದಿದೆ.

ಕಡಂದಲೆ ಎಂಬೀ ಹೆಸರಿನ ಬಗೆಗೆ ಜಿಜ್ಞಾಸೆ ಸಂದರ್ಭೋಚಿತವಾಗಿದೆ. ಸ್ಕಂದಪುರ ಎಂಬೀ ರೂಪವು 'ಕಂದಪೂಳ'ವಾಗಿ 'ಕಂದವುರ'ವಾಗಿ 'ಕಡಂದರೆ' ಯಾಗಿ ಕಡೆಗೆ 'ಕಡಂದಲೆ' ಯಾಯಿತೆನ್ನಬಹುದು. ಇದು ಭಾಷಾ ಶಾಸ್ತ್ರದ ನಿಯಮಕ್ಕೆ ಸರಿಯೊಪ್ಪುತ್ತದೆ. ಈ ಊರ ಅಧಿದೇವತೆಯಾದ ಸ್ಕಂದನಿಂದ ಬಂದ ಹೆಸರು. (ಕುಂದಾಪುರ ತಾಲೂಕಿನ ಕಂದಾವರವೆಂಬ ಊರನ್ನು ಇಲ್ಲಿ ನೆನಪರಿಕೆ ಮಾಡಿಕೊಳ್ಳಬಹುದು. ಸ್ಕಂದಪುರವು ಕಂದಾವರವಾಯಿತು. ಕಂದವೆಂದರೆ ಸುಬ್ರಹ್ಮಣ್ಯ ಬಾಲಸುಬ್ರಹ್ಮಣ್ಯ.)

ಸ್ಕಂದ ವಿಗ್ರಹದ ವೈಶಿಷ್ಟ್ಯ

ಕಡಂದಲೆಯ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ವಿಗ್ರಹವು ಸು. 3½' ಎತ್ತರವಾಗಿದ್ದು ಕರಿ ಶಿಲೆಯಿಂದ ಮಾಡಲ್ಪಟ್ಟು ದ್ವಿಬಾಹು ಮೂರ್ತಿಯಾಗಿದೆ. ಬಲಕೈಯ್ಯಲ್ಲಿ ಪದ್ಮವೂ ಎಡಕೈಯು ಕಟ್ಯಾವಲಂಬಿತವಾಗಿಯೂ ಇವೆ. ಧರಿಸಿದ ಉಡುಗೆ, ಕಿರೀಟದ ರೀತಿ, ಮುಖಭಾವ, ಮಿತಾಲಂಕಾರ ಸ್ಥಿತಿ-ಇತ್ಯಾದಿಗಳ ಪರಿಶೀಲನೆಯಿಂದ ಈ ಬಿಂಬವು ಎಷ್ಟೆಂದರೂ ಕ್ರಿ. ಶ. 9ನೇ ಶತಮಾನಕ್ಕೆ ಅನ್ವಯಿಸುತ್ತದೆ. ಪ್ರತಿಮಾ ವಿಜ್ಞಾನಿಗಳು ಈ ಬಿಂಬವನ್ನು ಪರಿಶೀಲಿಸತಕ್ಕದ್ದು. ಬಲಿ ವಿಗ್ರಹವಾದ ಪಂಚಲೋಹದ ಮೂರ್ತಿಯೂ ಒಂದು ಉತ್ತಮ ಶಿಲಾಕೃತಿಯಾಗಿದ್ದು ಕ್ರಿ. ಶ. 10-11ನೇ ಶತಕದ ಚೋಳರ ಕಾಲದ ಶೈಲಿಯನ್ನು ಹೋಲುತ್ತದೆ. ಜಟಾಮುಕುಟವುಳ್ಳ ಬಿಂಬವಿದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡು ಬರುವ ಸ್ಕಂದ ವಿಗ್ರಹಗಳಲ್ಲಿ ಇದು ಅತಿ ಪ್ರಾಚೀನವೆನ್ನಲಡ್ಡಿಯಿಲ್ಲ.

ಈ ಮೂರ್ತಿಯು ದೊರಕಿದ್ದೆಂಬ ಐತಿಹ್ಯವೂ ಇದೆ. ದೇವಾಲಯವು ಪ್ರಾಚೀನವಾದುದರಿಂದ ಜೀರ್ಣವಾಗಿ ಬಿದ್ದುಹೋಗಿ ಪುನರ್ನಿರ್ಮಾಣವಾಗಿದ್ದಿರ ಬಹುದು. ಇಂತಹ ದೃಷ್ಟಾಂತಗಳು ಹಲವಿವೆ. ಕಡಂದಲೆಯು ಪುತ್ತಿಗೆ ಚೌಟರಸರ ಆಳ್ವಿಕೆಗೆ ಸೇರಿತ್ತು. ಇದು ಮಧ್ಯಕಾಲೀನ ರಾಜಕೀಯ ಸ್ಥಿತಿಯಲ್ಲಿ. (ಚೌಟರಸರ ಕಾಲ ಕ್ರಿ. ಶ. 14ನೇ ಶತಮಾನದಿಂದ ಕ್ರಿ. ಶ. 1- ನೇ ಶತಮಾನ)

ಇದೀಗ ಈ ದೇವಾಲಯವು ಶ್ರೀ ಕೆ. ಕೃಷ್ಣ ಭಟ್ಟರ ಹಾಗೂ ಶ್ರೀ ಸಂಜೀವ ಸೆಟ್ರ ಮುಂದಾಳುತನದಲ್ಲಿ ಊರವರ ಭಕ್ತಿಯಿಂದಾಗಿ ಪುನರುಜ್ಜೀವನ ಹೊಂದಿ ಜಿಲ್ಲೆಯ ಪ್ರಧಾನ ಧಾರ್ಮಿಕ ಕೇಂದ್ರಗಳಲ್ಲಿ ಒಂದಾಗುವುದರಲ್ಲಿ ಸಂದೇಹವಿಲ್ಲ. ಶ್ರೀ ಸುಬ್ರಹ್ಮಣ್ಯನು ಸರ್ವರಿಗೂ ಸುಜ್ಞಾನವನ್ನು ಕರುಣಿಸಲಿ ಎಂದು ಆತನನ್ನು ಪ್ರಾರ್ಥಿಸುತ್ತೇನೆ.

(ಕಡಂದಲೆ ಶಾಸನದ ವಿಷಯ ಈ ಮೊದಲು ಉದಯವಾಣಿಯಲ್ಲೂ ಡೆಕ್ಕಾನ್ ಹೆರಾಲ್ಡ್‌ನಲ್ಲೂ ಪ್ರಕಟವಾಗಿದೆ. ಇದರ ಸಂಶೋಧನೆಯು ಕಲ್ಯಾಣಪುರದ Indological Associationನ ಮೂಲಕ ನಡೆದುದಾಗಿದೆ.)

●●

ಮಿತ ಕುಟುಂಬ ಯೋಜನೆಗೆ

ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ.ಕ.

[ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ]

ಕಾಂಗ್ರೆಸ್ ವಸ್ತುಪ್ರದರ್ಶನ

1971

ಸುಭಾಷ್‌ನಗರ, ಬೆಂಗಳೂರು—9.

25—3—71 ರಿಂದ ಪ್ರಾರಂಭವಾಗಿದೆ

- ಪ್ರತಿ ದಿನವೂ ಖ್ಯಾತ ಕಲಾವಿದರಿಂದ ಮನರಂಜನೆ
- ರಾಜ್ಯದ ಅಭಿವೃದ್ಧಿಯ ವಿಹಂಗಮ ನೋಟ
- ಕೈಗಾರಿಕಾಭಿವೃದ್ಧಿಯ ಸತ್ಯ ಚಿತ್ರ
- ಗಾಂಧಿ ದರ್ಶನ ಮಂಟಪ
- ಸ್ವಾತಂತ್ರ್ಯ ಹೋರಾಟದ ಚಿತ್ರಶಾಲೆ
- ಎಲ್ಲವೂ ಕೂಡಿದ ಪುಟ್ಟದೊಂದು ಪ್ರಪಂಚ—

ಈ ಭವ್ಯ ಪ್ರದರ್ಶನ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S No. 1/1971

B. V. ರಘುರಾಮ ಹೆಗ್ಡೆ —ವಾದಿ

ಮತ್ತು

1. ಸುಮತಿ ಶೆಡ್ತಿ, 2. ಚಂದ್ರಮತಿ ಶೆಡ್ತಿ —ಗಿರಿಯಮ್ಮ ಶೆಡ್ತಿ ಮಕ್ಕಳು ಬೇರ್ಕಾಡಿ ಗ್ರಾಮದ ಹುತ್ತಿ ಹೊಸಮನೆಯಲ್ಲಿರುವವರು —ಪ್ರತಿವಾದಿರು

ಮೇಲಿನ ಪ್ರತಿವಾದಿರಿಗೆ ಯೀ ಮೂಲ್ಕ ತಿಳಿಯಪಡಿಸುವದೇನಂದ್ರೆ:—

ವಾದಿಯು ತಾ. 19-12-67ನೇ ತಾರೀಕಿನ ರುಪ್ಯಾ 1000-00ದ ಡಿಮಾಂಡ ನೋಟನಆಸಲು ಬಡ್ಡಿ ಕೇಳಿ ನಿಂಮ ಮೇಲೆ ಮೇಲಿನ ದಾವೆ ಮಾಡಿರುತ್ತಾನಾಗಿಯೂ ಸದ್ರಿ ದಾವೆಯು ತಾ. 30-6-71ಕ್ಕೆ ನಿಂಮ ನೋಟ್ಸಿನಬಗ್ಗೆಯಿಟ್ಟಿರುತ್ತದಾಗಿಯೂ, ನೀವು ಉದಹರಿಸತಕ್ಕದ್ದು ಯಿದ್ದಲ್ಲಿ ಸದ್ರಿ ದಿವ್ಸ ಹಗಲು 11 ಗಂಟೆಗೆ ಸದ್ರಿ ಕೋರ್ಟಿನ ಮುಂಬೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳದಿದ್ದಲ್ಲಿ ಎಕ್ಸ್ ಪಾರ್ಟಿಯಾಗಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ನಿಮಗೆ ತಿಳಿಸೋಣಾಗುತ್ತದೆ.

B. Ananda Shetty
Advocate for plaintiff

Udipi, 2-4-71

ಮತಚೀಟಿಗಳ ಬಗ್ಗೆ

ಸಿದ್ಧಮಾಡಲಾಗದ ವೃಥಾರೋಪ

ಶ್ರೀಮತಿ ಇಂದಿರಾ ಗಾಂಧಿಯವರು ತಾವೇ ಆಶ್ಚರ್ಯಪಟ್ಟುಕೊಳ್ಳುವಷ್ಟು ಬಹುಮತವನ್ನು ಗಳಿಸಿದ್ದಕ್ಕಿಂತಲೂ ಆಕೆಯ ಪಕ್ಷದ ಅಭ್ಯರ್ಥಿಗಳಲ್ಲಿ ಹೆಚ್ಚಿನವರು ತಮ್ಮ ಸಮೀಪದ ಪ್ರತಿಸ್ಪರ್ಧಿಗಿಂತ ಲಕ್ಷ ಅಥವಾ ಅದರ ಹತ್ತಿರ ಹತ್ತಿರದಷ್ಟು ಹೆಚ್ಚಿನ ಮತಗಳಿಸಿದ್ದು ಸೋಜಿಗ. ಮುಖ್ಯವಾಗಿ ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಉತ್ತರ ಪ್ರದೇಶ, ದಿಲ್ಲಿ ಮೊದಲಾದೆಡೆಗಳಲ್ಲಿನ ಪರಿಣಾಮ ಯಾರೂ ಊಹಿಸದ್ದು; ಕಲ್ಪನಾತೀತವಾದದ್ದು.

ಶ್ರೀಮತಿ ಗಾಂಧಿಯವರ ವ್ಯಕ್ತಿತ್ವವೊಂದೇ ಅವರ ವಿಜಯದ ಕಾರಣವೆಂದು ಹೇಳುವಂತಿಲ್ಲ. ಅಥವಾ ಅವರ ಪಕ್ಷದ ನೀತಿಯನ್ನು ಜನ ಅರ್ಥಮಾಡಿಕೊಂಡು ಬೆಂಬಲ ನೀಡಿತೆಂದೂ ತಿಳಿಯುವಂತಿಲ್ಲ. ಅದೇನಿದ್ದರೂ ಬಹುಮತ ಆಕೆಗೆ ಬಂದಿದೆ, ಮತಪೆಟ್ಟಿಗೆಗಳು ಆಕೆಯ ದಿಗ್ವಿಜಯವನ್ನು ಘೋಷಿಸಿವೆ ಎಂಬುದು ಸತ್ಯ. ಹಾಗಿರುವಾಗ ಕಸಿವಿಸಿಗೊಂಡ ಕೆಲವರು ಮತಚೀಟಿಯ ಸಂಬಂಧದಲ್ಲಿ ಆಕ್ಷೇಪವೆತ್ತಿ ಪ್ರಜಾಸತ್ತೆಗೆ ಕಳಂಕ ತರುವ ಪ್ರಯತ್ನ ಮಾಡುತ್ತಿದ್ದಾರೆ. ಇದು ಖೇದನೀಯ.

ಇವರ ತರ್ಕದಂತೆ ಈ ಬಾರಿ ಚುನಾವಣೆಯಲ್ಲಿ ಬಳಸಿದ ಮತಚೀಟಿಗಳು ಸಂಪೂರ್ಣವಾಗಿ ಇಲ್ಲವೇ ಬಹ್ವಾಂಶಿಕವಾಗಿ ಸೋವಿಯತ್ ರಶ್ಯದಲ್ಲಿ ಅಚ್ಚಾದುವು. ಮುದ್ರಣವಾದರೂ ವಿಶಿಷ್ಟ ರೀತಿಯಿಂದಾಯಿತು. ಇಂಡಿಕೇಟ್ ಮತ್ತದು ಬಯಸುವ ಪಕ್ಷದ ಅಭ್ಯರ್ಥಿಯ ಚಿಹ್ನೆಯ ಮುಂದೆ ಅದೃಶ್ಯ ಮುದ್ರೆ ಮೊದಲೇ ಒತ್ತಲಾಗಿತ್ತು. ಮತದಾರನು ಮತಗಟ್ಟೆಯಲ್ಲಿ ಯಾವ ಸಂಕೇತದ ಮುಂದೆ ಮುದ್ರೆಯೊತ್ತಿದರೂ ಅದು ಮಸುಳಿಸಿ ಅದೃಶ್ಯ ಮುದ್ರೆ ದೃಗ್ಗೋಚರವಾಗುವುದು. ಇದರಿಂದಲೇ ವಿರೋಧಿ ಪಕ್ಷಗಳು ಸೋತುಹೋದುವು.

ಇದನ್ನು ಒಪ್ಪುವುದಾದರೆ, ಚುನಾವಣಾ ಆಯೋಗವು ಇಬ್ಬಗೆಯ ಮತ ಚೀಟಿಗಳನ್ನು ಉಪಯೋಗಿಸಿರ ಬೇಕು. ಏಕೆಂದರೆ, ವಿರೋಧಿ ಪಕ್ಷದ ನೂರಾರು ಅಭ್ಯರ್ಥಿಗಳೊಡನೆ ಅದರ ಹಲವಾರು ಘಟಾನುಘಟಿಗಳು ಉರುಳಿ ಹೋದರೂ ಕೆಲವರಾದರೂ ಗೆದ್ದಿದ್ದಾರೆ. ಸೋತು ಹೋದವರು ಕೆಲವಾದರೂ ಮತಗಳಿಸಿದ್ದಾರೆ. ಅಂದರೆ, ಇಬ್ಬಗೆಯ ಮತ ಚೀಟಿಗಳನ್ನು ತನಗೆ ಬೇಕಾದಂತೆ ವಿತರಣೆ ಮಾಡಿದೆಯೆಂದು ಹೇಳ ಬೇಕಾಗುತ್ತದೆ.

ಮತ ಚೀಟಿಯಲ್ಲಿ ಅದೃಶ್ಯ ಮುದ್ರೆಯೊತ್ತಿ ಮತದಾರ ಹಾಕಿದ ದೃಶ್ಯ ಮುದ್ರೆಯನ್ನು ಅದೃಶ್ಯ ಮಾಡುವುದು ಸಾಧ್ಯವಾದರೆ, ಮತದಾನ ವಿಧಾನವನ್ನೇ ಬದಲಾಯಿಸ ಬೇಕಾದೀತು. ಇಂತಹ ಪ್ರಯೋಗವೊಂದು ಯಶಗಳಿಸುವುದಾದರೆ, ಪ್ರಜಾಸತ್ತೆ ಅಳಿದಂತೆಯೇ. ಅಮೇರಿಕೆ–ರಶ್ಯ ಮೊದಲಾದ ಮುಂದುವರಿದ ದೇಶಗಳ ಚುನಾವಣೆಗಳ ವೇಳೆಯೂ ಇಂತಹ ಆರೋಪ ಬಂದಿಲ್ಲವೆಂಬುದನ್ನು ಗಮನಿಸ ಬೇಕು.

ಚಂಡಿಗಡದ ಗೋದಾಮೊಂದರಲ್ಲಿ ಲಕ್ಷಾಂತರ ಮುದ್ರಿತ ಮತ ಚೀಟಿಗಳು ದೊರಕಿದವೆಂದೂ ಅವು ಅಲ್ಲಿಂದ ಹೊರ ಹೋದವೆಂದೂ ಇನ್ನೊಂದು ದೂರು. ಮುದ್ರಿಸುವಾಗ ಅಗತ್ಯಕ್ಕಿಂತ ತುಸು ಹೆಚ್ಚು ಚೀಟಿ ಮುದ್ರಿಸುವುದು ಸರ್ವಶ್ರುತ. ಕೋಟ್ಯಂತರ ಮತದ್ಧಾರರಿರುವಾಗ ಕೆಲವು ಲಕ್ಷ ಗೋದಾಮಿನಲ್ಲಿ ಉಳಿಯುವುದು ತಪ್ಪಲ್ಲ. ಆದರೆ, ಅವು ಹೊರಗೇಕೆ ಬಂದುವು, ಹೇಗೆ ಬಂದುವು. ಚುನಾವಣೆ ಮುಕ್ತಾಯಗೊಂಡ ಕೂಡಲೇ ಬಳಸದ ಮತಚೀಟಿಗಳನ್ನು ನಾಶಪಡಿಸಲಿಲ್ಲವೇಕೆ ಎಂಬಂಶಗಳು ಮಾತ್ರ ವಿಚಾರಣೀಯ.

ಮತಚೀಟಿಗಳ ಬಗ್ಗೆ ಸಂದೇಹ ತಾಳಲು ಇರುವುದಕ್ಕಿಂತ ಹೆಚ್ಚಿನ ಅವಕಾಶ ಮತಪೆಟ್ಟಿಗೆಗಳ ಸುರಕ್ಷಿತತೆಯ ಬಗ್ಗೆ ಸಂಶಯಗ್ರಸ್ತರಾಗಲಿದೆ. ಆದರೆ, ಈ ಬಗ್ಗೆ ಯಾರೊಬ್ಬರೂ ಶಂಕಿತರಾಗಲಿಲ್ಲ. ಅಂದರೆ, ತುಂಬಿತುಳುಕುವ ಬಹುಮತಗಳಿಸಿದ ಶ್ರೀಮತಿ ಗಾಂಧಿಯವರ ಮೇಲೆ ಆರೋಪ ಹೊರಿಸುವುದು ಆಕೆ ರಶ್ಯದ ನಿರ್ದೇಶನ ಪಡೆಯುತ್ತಾರೆಂದೂ ದೂರುವುದೂ ಇಲ್ಲಿನ ಗಣನೀಯ ಅಂಶ.

ಆದರೆ, ಇಂತಹ ಗೊಣಗಾಟದಿಂದ ತಮ್ಮ ನಾಲಿಗೆಯ ತೀಟೆಯನ್ನಷ್ಟೇ ಪರಿಹರಿಸಿಕೊಳ್ಳ ಬಹುದು. ತಮಗಾದ ಮುಖಭಂಗವನ್ನು ಮುಚ್ಚಿಕೊಳ್ಳುವ ಬಯಲು ಸಾಹಸ ಮಾಡಬಹುದು. ಆದರೆ, ಇದು ಆತ್ಮತೃಪ್ತಿಗೊಂದು ಸಾಧನವಾದೀತೇ ಹೊರತು ಮತ್ತೆಲ್ಲ ದೃಷ್ಟಿಯಿಂದ ನಿರರ್ಥಕ. ಮಾನ್ಯ ಸದಸ್ಯರು ಸಂಸತ್ತಿನಲ್ಲಿ ನಡೆಸುವ ಬಾಲಿಷ ಮಾತಿನ ಜಗಳ, ತೋರಿಸುವ ಬಾಯಿತೀಟೆಗಳನ್ನು ನಿಲ್ಲಿಸಿ ತಂತಮ್ಮ ಪಕ್ಷಗಳ ಸಂಘಟನೆಯಲ್ಲಿಯೂ ಪಕ್ಷದ ನೀತಿಗಳ ಬಗ್ಗೆ ಜನಾಭಿಪ್ರಾಯ ರೂಪಿಸುವಲ್ಲಿಯೂ, ರಚನಾತ್ಮಕ ಟೀಕೆಯಲ್ಲಿಯೂ ಸಮಯ ಕಳೆದರೆ ಅದರಿಂದ ಅವರಿಗೂ ಅವರ ಪಕ್ಷಗಳಿಗೂ ಒಳ್ಳೆಯದಾದೀತು; ದೇಶಕ್ಕೂ ಶುಭವಾದೀತು.

ಆಧಾರರಹಿತವಾದ ಇಲ್ಲವೇ ಸಿದ್ಧಮಾಡಲು ಅಸಾಧ್ಯವಾದ ಆರೋಪಗಳನ್ನು ಹುರುಳಿಲ್ಲವೆಂದು ತಿರಸ್ಕರಿಸುವುದು ಯಾರಿಗಾದರೂ ಸುಲಭವೇ. ಆದುದರಿಂದ ದೇಶದ ವಿರೋಧಿ ಪಕ್ಷಗಳು ಈ ಬಾರಿಯ ಚುನಾವಣೆಗಳಲ್ಲಿ ತಮ್ಮ ಸೋಲನ್ನು ಮನಃಪೂರ್ವಕ ಒಪ್ಪಿಕೊಳ್ಳಬೇಕು. ತಮ್ಮ ಸೋಲಿಗೆ ಯಾರ್ಯಾರನ್ನೋ ಬೊಟ್ಟು ಮಾಡುವ ಹುಚ್ಚು ಹವ್ಯಾಸವನ್ನು ಬಿಟ್ಟುಗೊಟ್ಟು, ಜನತೆಯ ತೀರ್ಮಾನವೆಂದು ಪರಿಣಾಮವನ್ನು ತೆಗೆದುಕೊಳ್ಳಬೇಕು.

ದೇಶದ, ದೇಶದ ಜನತೆಯ ಮೇಲೆ ವಿಶ್ವಾಸವಿಡುವುದು, ಅದರ ನಿರ್ಣಯದ ಮುಂದೆ ತಲೆಬಾಗುವುದು ಪ್ರಜಾಸತ್ತಾತ್ಮಕ ಪಕ್ಷಗಳ ಪ್ರಥಮ ಕರ್ತವ್ಯ. ಈ ಕರ್ತವ್ಯವನ್ನು ಪರಿಪಾಲಿಸದೆ ಗೆದ್ದವರ ಮುಖಕ್ಕೆ ಮಸಿ ಬಳಿಯುವ ಪ್ರಯತ್ನವೆಂದರೆ, ಮತದಾರರಿಗೆ ತೋರಿಸಿದ ಅಗೌರವ; ಅವರ ಮುಖಕ್ಕೇ ಸೆಗಣಿ ಎಸೆಯುವ ಪರ್ಯಾಯ ಕ್ರಮ.

ಈ ಬಗೆಯ ವರ್ತನೆಯಿಂದಲೇ ವಿರೋಧಿ ಪಕ್ಷಗಳು ತಮ್ಮ ಬಲವನ್ನು ಕಳೆದುಕೊಂಡಿವೆ; ಇಂಡಿಕೇಟನ್ನು ಬಲಪಡಿಸಿವೆಯೆಂಬುದರಲ್ಲಿ ಲೇಶವಾದರೂ ಸತ್ಯವಿದೆ. ಈ ಸತ್ಯವನ್ನು ಮನಗಂಡು ಕರ್ತವ್ಯನಿಷ್ಠೆ ತೋರಿಸಿದಷ್ಟು ಅವುಗಳ ಬಲ ಸಂವರ್ಧನೆಯಾಗುತ್ತದೆ; ಬಲಕ್ಕೊಂದು ಬೆಲೆಯೂ ಬರುತ್ತದೆ.

ನೀತಿಕಥೆಗಳ ಈಸೋಪ

ಗ್ರೀಸ್ ದೇಶದಲ್ಲಿ ಒಬ್ಬ ಯಜಮಾನ. ಅವನ ಕೈಕೆಳಗೆ ನೂರಾರು ಗುಲಾಮರು. ಒಮ್ಮೆ ಯಜಮಾನನಿಗೆ ಎಲ್ಲಿಗೋ ದೂರ ಯಾತ್ರೆ ಮಾಡುವ ಆವಶ್ಯಕತೆ. ಸಾಮಾನು ಸರಂಜಾಮುಗಳ ಸಿದ್ಧತೆ.

ಯಾತ್ರೆಯ ಸಮಯ ಬಂತು. ಯಜಮಾನನ ಸುತ್ತ ಗುಲಾಮರೂ ಸೇರಿದರು. ಅವರ ಮುಂದೆ ಹತ್ತಾರು ಮೂಟೆಗಳು. ಒಬ್ಬೊಬ್ಬರು ಒಂದೊಂದು ಮೂಟೆ ಹೊರುವಂತೆ ಗುಲಾಮರಿಗೆ ಆಜ್ಞೆಯಾಯಿತು. ತನ್ನ ಪಕ್ಕದಲ್ಲಿನ ಗೂನು ಬೆನ್ನಿನ ಈಸೋಫನನ್ನು ಕಂಡು ಯಜಮಾನನಿಗೇನೆನಿಸಿತೋ, 'ಈಸೋಫ, ನೀನು ಬೇಕಾದ ಒಂದು ಮೂಟೆಯನ್ನು ಮೊದಲು ಆರಿಸು. ಉಳಿದುವನ್ನು ಇತರರು ಹೊರುತ್ತಾರೆ.' ಎಂದನು.

ಈಸೋಫನು ಎಲ್ಲರನ್ನೂ ಎಲ್ಲ ಮೂಟೆಗಳನ್ನೂ ಮಿಕಮಿಕನೆ ಒಂದು ಕ್ಷಣ ನೋಡಿದನು. ಎಲ್ಲದಕ್ಕಿಂತ ದೊಡ್ಡದಾದ ಮೂಟೆಯೊಂದನ್ನು ಎತ್ತಿಕೊಂಡನು. ಅದು ಅತ್ಯಂತ ಭಾರವಾದುದೂ ಆಗಿತ್ತು. ಆತನು ಬಹಳ ಹಗುರಾದ ಮೂಟೆಯನ್ನು ಆರಿಸುವನೆಂದು ನಂಬಿದ್ದ ಅವನ ಯಜಮಾನನಿಗೂ ಇತರ ಗುಲಾಮರಿಗೂ ಸಖೇದಾಶ್ಚರ್ಯವಾಯ್ತು.

ಯಾತ್ರೆ ಆರಂಭವಾಯ್ತು. ನಾಲ್ಕಾರು ದಿನಗಳ ಬಳಿಕ ಒಂದು ರಾತ್ರೆ ಊಟ ಮುಗಿದ ಬಳಿಕ ಈಸೋಫನು ತನ್ನ ಸಹಗುಲಾಮರಲ್ಲಿ ಒಬ್ಬೊಬ್ಬರನ್ನಾಗಿ ಕಂಡನು. "ಏನಯ್ಯ, ಎಷ್ಟು ದಿನಗಳಿಂದ ಭಾರ ಹೊರುತ್ತ ಇದ್ದೀಯ?"

"ಅಯ್ಯೋ, ಈಗತಾನೇ ಆರು ದಿನ ಕಳೆಯಿತು. ಇನ್ನೂ ಆರುದಿನ ಇದ್ದೀತು." —ಗುಲಾಮ ಬೇಸರದಿಂದಲೇ ನುಡಿದನು.

ಈಸೋಫ ಪ್ರಶ್ನಿಸಿದನು—"ಅದು ಸರಿನ್ನು. ಈ ಆರು ದಿನಗಳಲ್ಲಿ ನೀನು ಹೊತ್ತ ಮೂಟೆಯ ಭಾರವೇನಾದರೂ ಕಡಿಮೆಯಾಗಿದೆಯೆ?"

"ಎಲ್ಲಿ ಬಂತು? ಕ್ಷಣ ಕ್ಷಣಕ್ಕೂ ಅದರ ಭಾರ ಹೆಚ್ಚುತ್ತಿರುವಂತೆ ಅನುಭವವಾಗುತ್ತಿದೆ.' ಮಿತ್ರ ಗುಲಾಮನ ಉತ್ತರ ಕೇಳಿ ಈಸೋಫ ತಲೆದೂಗಿ ಅಲ್ಲಿಂದ ಮತ್ತೊಬ್ಬನ ಬಳಿಗೆ ಹೋದನು.

ಹೀಗೆ ತನ್ನ ಮಿತ್ರರೆಲ್ಲರೊಡನೆಯೂ ಇದೇ ಪ್ರಶ್ನೆಯನ್ನು ಕೇಳಿದ ಈಸೋಫ ತನ್ನ ಮೂಟೆಯ ಭಾರ ಮಾತ್ರ ಹೊತ್ತು ಹೊತ್ತಿಗೆ ಕಡಿಮೆಯಾಗುತ್ತಿದೆ. 'ಇಂದು ಅದರ ಭಾರ ಅರ್ಧಾಂಶದಷ್ಟು ಇಳಿದಿದೆ' ಎಂದು ಸಂತೋಷ ವ್ಯಕ್ತ ಮಾಡಿದನು.

ತನಗೊದಗಿದ ಪ್ರಥಮಾವಕಾಶವನ್ನು ಈಸೋಫ ವ್ಯರ್ಥಗೊಳಿಸಿ, ಮೂರ್ಖತನ ತೋರಿದನೆಂದು ಕೊಂಡಿದ್ದ ಅವನ ಸ್ನೇಹಿತರಿಗೆ ಈಗವನ ಚತುರತೆಯು ಮನವರಿಕೆಯಾಯ್ತು. ಅವನು ಹೊತ್ತದ್ದು ಆಹಾರ ತುಂಬಿದ ಮೂಟೆಯಾಗಿತ್ತು. ಹೊತ್ತು ಹೊತ್ತಿಗೂ ಅದರಿಂದ ತೆಗೆದು ಎಲ್ಲರೂ ಆಹಾರ ತಿನ್ನುತ್ತಿದ್ದುದರಿಂದ ಅದು ಹಗುರಾಗುತ್ತ ಬರುತಿತ್ತು. ಮುಂದೆ ಕೆಲವು ದಿನಗಳಲ್ಲೇ ಆತ ಬರಿಗೈಯಲ್ಲೇ ಯಜಮಾನನನ್ನು ಹಿಂಬಾಲಿಸುವುದು ಸಾಧ್ಯವಾಯ್ತು.

ಈಸೋಫನು ಕ್ರಿಸ್ತಪೂರ್ವ ಆರನೆಯ ಶತಕಕ್ಕೆ ಸೇರಿದವನೆನ್ನುತ್ತಾರೆ. ಈತನು ಗ್ರೀಸ್ ದೇಶದವನು. ಆ ಸಮಯದಲ್ಲಿ ಗುಲಾಮರ ವ್ಯಾಪಾರದ ಬೆಳೆ ಹುಲುಸಾಗಿತ್ತು. ಎಲ್ಲೆಲ್ಲಿಂದಲೋ ಮನುಷ್ಯರನ್ನು

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
129 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$ % ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಸಂಭ್ರಮದ ಬ್ರಹ್ಮಕಲಶೋತ್ಸವವನ್ನಾಚರಿಸುತ್ತಿರುವ ದ. ಕ. ಜಿಲ್ಲೆಯ ಪವಿತ್ರ ಕ್ಷೇತ್ರ

ಕಡಂದಲೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

—ಕೊಡತ್ತೂರು ಅನಂತಪದ್ಮನಾಭ ಉಡುಪ.

ಈಗಿನ್ನೂ ಇಲ್ಲದೆಡೆ ಹೊಚ್ಚಹೊಸ ಗುಡಿಗೋಪುರಗಳ ನಿರ್ಮಿತಿಯಾದರೋ ಸಾವಿರ ಪಾಲು ಬೇಕು. ಆದರೆ ಹಳತನ್ನು ಹೊಸತು ಮಾಡುವ ಕೆಲಸ ಎಷ್ಟು ಮಾತ್ರಕ್ಕೂ ಬೇಡ. ಹೀಗಿದ್ದರೂ ಇದ್ದೂ ಇಲ್ಲದಂತಿರುವ ಹಳೆಯ ಹಾಳುಬಿದ್ದ ಗುಡಿಗಳನ್ನು ಹೊಚ್ಚ ಹೊಸದಾಗುವಂತೆ ಪುನಾರಚಿಸುವ ಸತ್ಕಾರ್ಯಕ್ಕೆ ಹೆಚ್ಚಿನ ಮಹತ್ವವಿದೆ ಎನ್ನಲಾಗಿದೆ. ಹಾಗಾಗಿಯೇ ಬಲು ಹಿಂದಣ ಕಡಂದಲೆಯ ಶ್ರೀ ಸುಬ್ರಹ್ಮಣ್ಯ ದೇವರ ಈ ದೇವಾಲಯವು ಈ ಬಾರಿ ನಿತ್ಯನವನೂತನವಾಗುವಂತೆ ಪುನಾರಚಿತವಾಗುವಂತಾದುದು.

ಹೆಸರ ಹಿರಿಮೆ: ಸುತ್ತಲೂ ಎತ್ತರದ ಹೆಬ್ಬೆಟ್ಟಗಳು. ಈ ನಡುವೆ ತಗ್ಗಿನೆಡೆಯಲ್ಲಿ ಅಂದದ ಗುಡಿ. ನಾಲ್ದೆಸೆಗಳ ಗುಡ್ಡಗಳೆಡೆಯಲ್ಲಿ ನೋಡಲು ಸಿಗುವ ಈ ಗುಡಿ ದೂರಕ್ಕೆ ಕಡೆಯುವ ಕಲ್ಲನ್ನು ಹೋಲಿದೆ. ಅಂತಲೇ 'ಕಡಂದ ಕಲ್ಲು' ಎಂಬ ಹಿಂದಣ ಊರು ಬರಬರುತ್ತಾ ಇಂದಿನ ಕಡಂದಲೆಯಾಗಿರಬೇಕೆಂಬ ಹಲವರ ಹೇಳಿಕೆಯಲ್ಲಿ ಹುರುಳಿಲ್ಲವೆನ್ನಲಾಗದು! ಏಕೆಂದರೆ ಈ ಹಿಂದಣ 'ರಿಕಾರ್ಡು'ಗಳಲ್ಲಿ ಈ ಗ್ರಾಮದ ಹೆಸರು 'ಕಡಂದಕಲ್ಲು' ಎಂದೇ ಉಲ್ಲೇಖಿಸಿದುದಾಗಿ ಹಲವರ ಅಂಬೋಣ.

ಇಂತಹ ಕಡಂದಲೆ ಎಂಬ ಊರು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿರುವ ಚರಿತ್ರಾರ್ಹವಾದ ಮೂಡುಬಿದ್ರಿಯ ಬಳಿಯ ಆರೇಳು ಮೈಲು ದೂರದಲ್ಲಿರುವ ಚಿರಪರಿಚಿತವಾದ ಸೊಬಗಿನ ಹಳ್ಳಿಯಾಗಿದೆ. ಇಲ್ಲಿಗೆ ವಿಮಾನ ನಿಲ್ದಾಣವಿರುವ ಬಜ್ಪೆಯಿಂದ ಮುಂಡ್ಕೂರಿಗಾಗಿ ಉಡುಪಿಯುತ್ತ ಹೋಗುವ ಹೆದ್ದಾರಿಯ ಬಳಿಯ ಸಚ್ಚೇರಿ ಪೇಟೆಯ ಮೂಲಕವೂ ತಲುಪುವ ಅನುಕೂಲಕರ ಸೌಕರ್ಯವಿದೆ.

ಪ್ರಾಚೀನತೆಯ ಪ್ರತೀತಿ:—

ತುಳುವರಸರಾಳ್ವಿಕೆಯ ಬಲು ಹಿಂದಿನ ಹೊತ್ತಿನಲ್ಲಿ ಈ ಕಡಂದಲೆ ರಾಜ್ಯದ ಪ್ರಾಮುಖ್ಯ ಸ್ಥಳವಾಗಿತ್ತೆಂದು ಊಹಿಸಲು ಕೆಲವೊಂದು ಚಿಹ್ನೆಗಳಿವೆ. ಕಡಂದಲೆ ಪರಾರಿ ಎಂಬಲ್ಲಿ ಕಾಣಸಿಗುವ ಅರಮನೆಯ ನೆಲಗಟ್ಟು, ಪಕ್ಕದಲ್ಲೇ ಇರುವ ಅರಸಿಕೆರೆ ಇವೆಲ್ಲವೂ ಈ ಊರ ಹಿಂದಿನ ಹಿರಿಮೆಯ ಕುರುಹುಗಳ ಈ ಪ್ರದೇಶ ತುಳುವರಸರಾದ ಚೌಟರಸರ ಅಂಕಿತಕ್ಕೊಳಪಟ್ಟ ಕಾರಣ ಬರಬರುತ್ತಾ ಇಲ್ಲಿಯ ಅರಮನೆಯ ಹಿರಿಮೆ ಕುಂದಿರಬೇಕು.

ಹನ್ನೊಂದನೆಯ ಶತಮಾನದ ಹೊತ್ತಿನಲ್ಲಿ ನಗರ ಸಂಸ್ಥಾನದಲ್ಲಿ ಭೋಜರಾಜನು ಆಳುತ್ತಿದ್ದಾಗ ಚೌಟರಸನು ಆತನ ಅಂಕಿತಕ್ಕೊಳಪಟ್ಟಿದ್ದು ಚೌಟರ ಸೀಮೆಯನ್ನು ಆಳುತ್ತಿದ್ದನಾಗಿ ಹೇಳಲಾಗಿದೆ. ಅಂದಿನ ಚೌಟರಸನಾದ ಚಿಕ್ಕ ಚೌಟನು ತನ್ನ ಹೆಸರ ಹಿರಿಮೆಯನ್ನು ಹೆಚ್ಚಿಸಲೆಂದು ಚಿಕ್ಕರಾಯ ಚೌಟನೆಂದು ತನ್ನ ಹೆಸರನ್ನು ಬದಲಿಸಿದನಂತೆ. ಈ ಸಂಗತಿ ಭೋಜರಾಜನ ಕಿವಿಗೂ ಮುಟ್ಟಿತು. ತನ್ನ ಅಂಕಿತಕ್ಕೊಳಪಟ್ಟ ಸಾಮಂತನೊಬ್ಬ ತನ್ನ ಬಿರುದನ್ನು ಧರಿಸಿಕೊಂಡ ಸಂಗತಿಯಿಂದ ಭೋಜರಾಜನು ರೊಚ್ಚಿಗೆದ್ದ. ಹಾಗಾಗಿ ಚೌಟರಸನನ್ನು ವಿಚಾರಣೆಗೆ ಗುರಿಪಡಿಸಿದ. ಈ ಸುದ್ದಿ ಊರಲ್ಲೆಲ್ಲಾ ಹಬ್ಬಿಹರಡಿತು.

ತನ್ನನ್ನು ಆಪಾದಿತಸ್ಥನನ್ನಾಗಿ ಪರಿಗಣಿಸಿ ಭೋಜರಾಜನು ವಿಚಾರಣೆಗೆಂದು ಸಂಸ್ಥಾನಕ್ಕೆ ಬರಮಾಡಿಸಿಕೊಂಡ ಸಂಗತಿಯನ್ನು ಚೌಟರಸನು ತನ್ನ ಬಂಧು ಬಾಂಧವರಿಗೂ ತಿಳಿಸಿದ. ಒಡೆಯನ ಕೇಳಿಕೆಯನ್ನು ಕಡೆಗಣಿಸಲಾಗದೆ ನಗರ ಸಂಸ್ಥಾನಕ್ಕೆ ತೆರಳಿದ ಚೌಟರಸನೊಂದಿಗೆ ಪುತ್ತಿಗೆ ಗುತ್ತಿನ ಶೆಟ್ಟರೂ, ಅರಮನೆಯ ಶಾನುಭೋಗರೂ ಗುತ್ತು ಬಾಳಿಕೆ ಭಾಪಪರಾರಿ ಮನೆತನದ ಮುಖ್ಯಸ್ಥರೂ ಹೊರಹೊರಟರು. ನಗರ ತಲಪಿ ಹಲವು ದಿನಗಳು ಸಂದರೂ ವಿಚಾರಿಸಲೆಂದು ಭೋಜರಾಜನು ಕರೆಸದ ಕಾರಣ ಚೌಟರಸನು ಕಳವಳಕ್ಕೊಳಗಾದ. ಅಗಲೇ ಒಂದಿರುಳು ಆತನಿಗೊಂದು ಕನಸು ಬಿತ್ತು—"ನೀನು ಕಳವಳಪಡಬೇಡ. ಅರಮನೆಯ ಹಿಂಬದಿಯಲ್ಲಿಯ ಕಸದ ಕುಪ್ಪೆಯಲ್ಲಿ ದೊರಕಲಿರುವ ನನ್ನನ್ನು ನಿನ್ನ ಬಳಿ ಇರಿಸಿಕೊಳ್ಳೋಣಾಗಲಿ. ಊರತ್ತ ತೆರಳಿದ ಬಳಿಕ ನಿನ್ನಂಕಿತದಲ್ಲಿರುವ ನೆಲದಲ್ಲಿ ಎರಡು ಹೊಳೆಗಳ ನಡುವಿನಲ್ಲಿರುವ ಅರಳಿ ಮರಗಳಡಿಯಲ್ಲಿ ಕೆರೆಯ ಪಕ್ಕದಲ್ಲಿ ನನ್ನನ್ನು ನೆಲೆಗೊಳಿಸಿ ಗುಡಿಕಟ್ಟುವೆನೆಂದು ಸಂಕಲ್ಪಿಸು. ಆಗ ನಿನ್ನಾಸೆ ಈಡೇರುವುದು."

ಬೆಳಗಾಗುತ್ತಲೇ ಕಸದ ಕುಪ್ಪೆಯೆಡೆಯಲ್ಲಿ ಹುಡುಕಿದಾಗ ಶ್ರೀ ಸುಬ್ರಹ್ಮಣ್ಯನ ಸುಂದರ ಮೂರ್ತಿಯೊಂದು ಕಾಣಸಿಕ್ಕಿತು. ಅದನ್ನು ತೊಳೆದು ಅಂದಗೊಳಿಸಿ ಬಳಿಯಲ್ಲಿರಿಸಿಕೊಳ್ಳಲಾಗಿ ಆಗಲೇ ಒಡೆಯನಿಂದ ಓಲಗಕ್ಕೆ ಬರಲೆಂದು ಆಜ್ಞೆ ಬಂತು. ತುಂಬಿದ ರಾಜಸಭೆಯಲ್ಲಿ ಭೋಜರಾಜನು ಚೌಟರಸನೊಡನೆ, ನನ್ನಂಕಿತದಲ್ಲಿರುತ್ತಾ ನೀನು ನನ್ನ ಬಿರುದನ್ನು ಇರಿಸಿಕೊಳ್ಳಲು ಕಾರಣವೇನೆಂದು ಪ್ರಶ್ನಿಸಿದ.

ದೊರೆಯ ಕೇಳಿಕೆಗೆ ಒಡನಾಡಿಗಳಾರೂ ಉತ್ತರಿಸದಿರಲು ಚತುರನಾದ ಶ್ಯಾನುಭಾಗ ಈ ರೀತಿ ನುಡಿದ— "ಒಡೆಯರೇ, ದೊರೆಗಳ ಹಿರಿಮೆಯನ್ನು ಕಿರಿದುಗೊಳಿಸಲೆಂದು ನಮ್ಮರಸರು ಈ ರೀತಿಯ ಬಿರುದನ್ನಿರಿಸಿಕೊಂಡದ್ದಲ್ಲ. ನಮ್ಮರಸರ ವಂಶದಲ್ಲಿನ ಗಂಡು ಮಕ್ಕಳೆಲ್ಲರೂ ಹುಟ್ಟಿದಾಕ್ಷಣ ಕಣ್ಮರೆಯಾಗುತ್ತಿದ್ದರು. ಇವರು ಹುಟ್ಟುತ್ತಲೇ ಊರವರೆಲ್ಲರೂ ಒಟ್ಟುಗೂಡಿ ದೇವರ ದಯೆಯಿಂದ ಇವರಾದರೂ ಬದುಕಿ ಉಳಿದರೆ ನಗರದರಸರ 'ರಾಯ' ಬಿರುದನ್ನು ಇರಿಸುವುದಾಗಿ ಹರಕೆಹೊತ್ತರು. ಹಾಗಾಗಿಯೇ ಉಳಿದ ಬೆಳಗಿದ ಇವರಿಗೆ ಈ ರೀತಿಯ ಬಿರುದನ್ನು ಇರಿಸಲಾಗಿದೆ." ತನ್ನ ಪ್ರಭಾವವು ಅಲ್ಲಿಯ ವರೆಗೂ ಹಬ್ಬಿ ಹರಡಿದ ಸಂಗತಿಯಿಂದ ಹೆಮ್ಮೆ ತಾಳಿದ ಒಡೆಯನು ಚೌಟರಸನನ್ನು ಸಂತಸದೊಂದಿಗೆ ಹಿಮ್ಮರಳಲು ಸೂಚಿಸಿದುದಲ್ಲದೆ ಆತನಿಗೆ ಉಡುಗೊರೆ ಇತ್ತು ಗೌರವಿಸಿದನು. ಬನದ ನೆಲವಾದ ಈಗಿರುವೆಡೆಯನ್ನು ಗುಡಿಕಟ್ಟಲು ಕನಸಿನಲ್ಲಿ ಸೂಚಿಸಿದ ಚೆಲುದಾಣವೆಂದು ಚೌಟರಸನು ಬಗೆದು ನೆಲೆನಿಲ್ಲಿಸಿದನು. ಅನುದಿನದ ವಿನಿಯೋಗಗಳಿಗೆ ಬೇಕಾದಷ್ಟು ಉಂಬಳಿಯನ್ನೂ ಬಿಟ್ಟಿದ್ದನು. ಈ ಸುಬ್ರಹ್ಮಣ್ಯ ದೇವಾಲಯದಲ್ಲಿ ವರ್ಷಂಪ್ರತಿ ವಾರ್ಷಿಕೋತ್ಸವಗಳು ವೈಭವದಿಂದ ನೆರವೇರುತ್ತಾ ಬಂದಿರುವುದು.

ಹೊಚ್ಚ ಹೊಸತನದ ಹೊಂಬೆಳಗು:

ಇಂತಹ ಪ್ರಾಚೀನತೆಯ ಹಿರಿಮೆಯುಳ್ಳ ಈ ದೇವಾಲಯಕ್ಕೆ ಪ್ರಕೃತ ಎರಡು ತಿಂಗಳ ಮೊದಲು ಬಂದವರಿಗೆ ಈ ಗುಡಿ ಒಂದು ರೀತಿಯಲ್ಲಿ ಬಲು ಹಿಂದಿನದ್ದೆನಿಸಿ ಹಿರಿಮೆಯುಳ್ಳದಾಗಿ ಕಾಣಿಸಿದರೂ ಹೊಸತನದ ದಿಶೆಯಲ್ಲಿ ಮಾತ್ರ ಅಷ್ಟೇ ಹಿಂದುಳಿದಿದ್ದು ಎನಿಸುತಿತ್ತು.

ಆದರೆ ಇಂದು ಎಲ್ಲಿ ಕಂಡರಲ್ಲಿ ಹೊಚ್ಚಹೊಸತನ. ಅದೂ ಮೂಲದ ಸಹಜತೆಯ ನೆಲೆಗೆ ಒಂದಿನಿತೂ ಕುಂದುಕೊರತೆ ಬರದಂತೆ ಕಂಗೊಳಿಸಿದೆ. ಮೇಲ್ಗಡೆ ಗಟ್ಟಿಮುಟ್ಟಾದ ಮಾಡಿನ ಆವರಣ, ಆವರಲ್ಲೂ ಎತ್ತರದ ಬಿತ್ತರದ ಗರ್ಭಗುಡಿಯ ಮೇಲ್ಬದಿಗೆ ತಳತಳ ಹೊಳೆಯುವ ವಿನೂತನವಾದ ತಾಮ್ರದ ತಗಡುಗಳ ಮುಚ್ಚಳ. ಗೋಡೆಗಳಲ್ಲೆಲ್ಲಾ ಬಗೆಸೆಳೆಯುವಂತೆ ಬಣ್ಣ ಬಣ್ಣದ ಮಿರುಗಿನ ಒಪ್ಪದೊಂದಿಗೆ ಚೊಕ್ಕತನ. ನೆಲದಲ್ಲೆಲ್ಲಾ ಜಗಮಗಿಸುತ್ತಾ ಕನ್ನಡಿಯಂತೆ ನಯನುಣುಪಿನ ಆಕರ್ಷಣೆ, ಒಳಾಂಗಣದ ನಾಲ್ಕಾರು ಆವರಣಗಳ ಎಲ್ಲೆಡೆಯ ನೆಲ ಶಿಲಾಮಯವಾಗಿ ದೃಢೀಕರಣ, ಹೊರಾವರಣದ ನಾಲ್ಕೆಡೆಯ ಸುತ್ತೆಲ್ಲಾ ಎತ್ತರದ ಪ್ರಾಕಾರದ ನವ ನಿರ್ಮಾಣ, ಗೋಪುರಗಳಿಗೆಲ್ಲಾ ಹೊಸ ನೂತನತೆಯ ಒಪ್ಪ ಓರಣ, ಈ ರೀತಿಯ ಸ್ಥಿತ್ಯಂತರಗಳೆಲ್ಲವೂ ಬರೇ ಒಂದೆರಡು ತಿಂಗಳ ಅಲ್ಪಾವಧಿಯ ಅನುದಿನದ ಹಗಲಿರುಳ ನೂರಾರು ಮಂದಿ ಕೆಲಸಗಾರರ ದುಡಿಮೆಯ ಕಾರಣದ ಚಿರನಾವೀನ್ಯ.

ಆವಶ್ಯೋಪಯೋಗಿಯಾದ ನೀರ ಸೌಕರ್ಯದ ಕುರಿತು ಹೇಳುವುದಿದ್ದರೆ ಅಂಗಣದ ಮಗ್ಗುಲಲ್ಲಿ ಅಗಲಕಿರಿದಾದ ಬಾವಿಯೊಂದನ್ನು ಆಳಕ್ಕಗೆಸಿ ಸರಿಪಡಿಸಿ ಕಲ್ಲುಕಟ್ಟಿಸಿ ಅಂದಗೊಳಿಸಲಾಗಿದೆ. ಹೊರಬದಿಯಲ್ಲಿದ್ದ ಸರೋವರ ಒಂದು ಸುಂದರವಾಗಿ ಪುನಾರಚಿಸಲ್ಪಟ್ಟಿದೆ. ಹಾಳು ಹಳ್ಳದಂತಿದ್ದ ಮತ್ತೊಂದು ಕೆರೆಯು ಅಚ್ಚುಕಟ್ಟಾಗಿ ಸುತ್ತಣ ಕಲ್ಲಿನ ಕಟ್ಟೋಣದೊಂದಿಗೆ ಸರ್ವಾಂಗ ಸುಂದರವಾಗಿ ನೀರಕುರಿತು ಸ್ವಾವಲಂಬಿಯಾಗುವಂತೆ ಕೆಲಸ ಸಾಗಿದೆ. ಜೊತೆಗೇನೇ ಮಂಗಳೂರಿನ ಮೋಹಿನಿ ವಿಲಾಸದ ಶ್ರೀ ಬಾಬುರಾಯರ ವತಿಯ ಅಗ್ರಸಾಲೆಯೊಂದು ಹತ್ತಾರು ಸಹಸ್ರ ರೂ. ವೆಚ್ಚದೊಂದಿಗೆ ಕಂಗೊಳಿಸಿದೆ.

ಮುಖ್ಯ ಕಾರಣಪುರುಷರಾದ ಭಟ್ಟರು ಮತ್ತು ಶೆಟ್ಟರು:

ಇಲ್ಲದೆಡೆ ಗುಡಿಗೋಪುರಗಳು ತಲೆಯೆತ್ತಿರಬಹುದು. ಮೊದಲೇ ಇದ್ದವು ಹೊಚ್ಚ ಹೊಸತನದಿಂದ ಕಂಗೊಳಿಸಿರಬಹುದು. ಆದರೆ ಅವೆಲ್ಲವೂ ಹಲವರ ಹುರುಪಿನ ಹುಮ್ಮಸಿನಿಂದಾಗಿ ನೆಲೆಗೊಂಡವುಗಳು. ಆದರೆ ಒಬ್ಬನೇ ಒಬ್ಬ ಪ್ರಧಾನ ವ್ಯಕ್ತಿಯ ವಿಪುಲ ಶಕ್ತಿಯ ಅಚಲ ಭಕ್ತಿಯ ಕಾರಣದಿಂದಾಗಿ ಎಲ್ಲಾದರೂ ಅದ್ಭುತ ಕೆಲಸವೊಂದು ಆದುದಿದ್ದರೆ ಅದು ಕಡಂದಲೆಯಲ್ಲಿ. ಆ ಪ್ರಮುಖ ವ್ಯಕ್ತಿಯೇ ಮದ್ರಾಸಿನ ವುಡ್‌ಲ್ಯಾಂಡ್ಸ್ ಹೋಟೆಲ್‌ಗಳ ಮಾಲಕ ಶ್ರೀ ಕೆ. ಕೃಷ್ಣ ಭಟ್ಟರು. ಇವರಿಗೆ ಊರವರು ಹಲವರು-ಕೆಲವರು ಅಷ್ಟೊ-ಇಷ್ಟೊ ನೆರವಿತ್ತಿರ ಬಹುದು. ಅವೆಲ್ಲವೂ ಕಡಲ ಸೇತುವೆಗೆ ಅಳಿಲ ಸೇವೆಯಂತೆ. ಮಾರ್ಚ್

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ತಿಂಗಳ ಕೊನೆಯಲ್ಲಾರಂಭಗೊಂಡು ಮುಂದಿನ ತಿಂಗಳ ತಾ. ೨ರವರೆಗೆ ನೆರವೇರುವ ಪುರುದಿನದ ನಾಗಮಂಡಲ ಸಹಿತದ, ಬ್ರಹ್ಮಕಲಶೋತ್ಸವದ ಯಶಸ್ವೀ ನಿರ್ವಹಣೆಗಾಗಿ ಊರಲ್ಲೆಲ್ಲಾ ಓಡಾಡುತ್ತಾ ಬಾಳಿಡಿ ಬೆವರಿಳಿಸಿ ಗಳಿಸಿದುದನ್ನು ಚಿರಸ್ಥಾಯಿಯಾಗುವಂತೆ ಸದ್ವಿನಿಯೋಗಿಸುವ ಮೂಸ್ಯರ ನಯವಿನಯದಿ ಸಹಜ ಸರಳ ನಿರಾಡಂಬರ ಪೂರ್ಣ ಸದ್ಗುಣಗಳು ನಿಜವಾಗಿಯೂ ಅನುಕರಣೀಯ.

ಕೈ ಹಿಡಿದ ಕೆಲಸ ಎಷ್ಟೇ ಹಿರಿದಿದ್ದರು ಅದನ್ನು ಅಚ್ಚುಕಟ್ಟಾಗಿ ಕೊನೆ ಮುಟ್ಟಿಸುವ ಎದೆಗಾರಿಕೆ ಮೂಸ್ಯರ ಎತ್ತಿ ಹೇಳಬೇಕಾದ ವೈಶಿಷ್ಟ್ಯ. ಹೆತ್ತೊಡಲು ಹಾಗೂ ಹುಟ್ಟೂರು ಸ್ವರ್ಗಕ್ಕಿಂತಲೂ ಬಲು ಮೇಲಂತೆ. ಆ ಮಾತಿನ ಅಕ್ಷರಶಃ ಸತ್ಯಾಂಶವನ್ನು ಮೂಸ್ಯರ ನರನಾಡಿಗಳಲ್ಲೂ ಗುರುತಿಸಬಹುದು. ಇದೇ ರೀತಿಯ ಹುಟ್ಟೂರ ಮಸುತೆ ಊರವರೆಲ್ಲರಿಗಿದ್ದಲ್ಲಿ ನಾಡ ಹಳ್ಳಿಯೂ ದಿಲ್ಲಿಯನ್ನು ನಾಚಿಸೀತು.

ಸದ್ಯ ದೇವಾಲಯದ ಸತ್ಸಮಾರಂಭಕ್ಕಾಗಿ ಊರಲ್ಲಿರುವ ಶ್ರೀ ಭಟ್ಟರಿಗೆ ಕಡಂಬಲೆ ಶ್ರೀ ಸಂಜೀವ ಶೆಟ್ಟರಂತಹ ಹಿರಿಯರ ಬೆಂಬಲ ದೊರಕದಿದ್ದಲ್ಲಿ ಇಷ್ಟೆಲ್ಲಾ ಕೆಲಸಗಳಾಗುವುದು ಸುಲಭ ಸಾಧ್ಯವಿದ್ದಿಲ್ಲ.

ಶ್ರೀ ಸಂಜೀವ ಶೆಟ್ಟರಂತಹ ಊರ ಹಿರಿಯರ ಸಹಕಾರವಿಲ್ಲದಾಗ ಭಟ್ಟರ ಕನಸು ನನಸಾಗದೆ ಹೋಗಿದ್ದರೆ ಅಚ್ಚರಿಯಲ್ಲ. ಶ್ರೀ ಭಟ್ಟರ ಒಳ್ಳೆಯ ಕೆಲಸದಲ್ಲಿ ಶ್ರೀ ಶೆಟ್ಟರು ಹೆಗಲಿಗೆ ಹೆಗಲು ಕೊಟ್ಟು ಹಾರ್ದಿಕವಾಗಿ ದುಡಿದ್ದಾರೆ ಎಂದೇ ಇಲ್ಲಿ ಊರವರೆಲ್ಲರೂ ತಲೆದೂಗುವಂತೆ ಹಲವಾರು ಕೆಲಸಗಳು ಸಾಗಿವೆ. ಕಣ್ಸನ್ನೆ ಮಾತ್ರದಿಂದಲೇ ಎಂದೆಂದೂ ಆಗಲಾರದುದು ಲೀಲಾಜಾಲವಾಗಿ ನೆರವೇರಲೇ ಬೇಕಾದಂತಹ ಜಾಣ್ಮೆಯ ಹಿರಿಮೆಯು ಶ್ರೀ ಸಂಜೀವ ಶೆಟ್ಟರಲ್ಲಿದ್ದ ಕಾರಣವೇ ಇಷ್ಟು ಅಲ್ಪಾವಧಿಯಲ್ಲಿ ಇಲ್ಲಿ ಇಷ್ಟೆಲ್ಲಾ ಕೆಲಸಗಳಾಗಿವೆ.

ನೋಟಕ್ಕೆ ಕೇಸರಿಯಂತೆ ಘನ ಗಂಭೀರರೆಂದೆಣಿಸಿ ವಜ್ರಕ್ಕಿಂತಲೂ ಕಠೋರರೆಂಬಂತೆ ಕಾಣ ಬಂದರೂ ಸನಿಹಕ್ಕೆ ಸರಿದಂತೆಲ್ಲಾ ಬಗೆಯೊಳಗಣ ಭಾವನೆಗಳ ಪರಿಚಯವಾದಂತೆಲ್ಲಾ ಕುಸುಮಕ್ಕಿಂತಲೂ ಕೋಮಲ ಸ್ವಭಾವದವರೆನಿಸುವುದು ಶ್ರೀ ಸಂಜೀವ ಶೆಟ್ಟರಲ್ಲಿರುವ ವೈಶಿಷ್ಟ್ಯ.

ತನ್ನ ಆಡಳಿತಕ್ಕೊಳಪಟ್ಟ ಸ್ಥಾನೀಯ ದೇವಾಲಯದ ಈ ಬಾರಿಯ ಮಹೋತ್ಸವವು ಸರ್ವ ರೀತಿಯಿಂದಲೂ ಸಂಭ್ರಮದೊಂದಿಗೆ ನೆರವೇರಬೇಕೆಂದು ಶ್ರೀ ಭಟ್ಟರಂತೆ ಶ್ರೀ ಶೆಟ್ಟರೂ ಬದ್ಧಕಂಕಣರಾದುದು ಗಮನಾರ್ಹ.

ಅಪೂರ್ವ ವೈಭವದ
ಬ್ರಹ್ಮಕಲಶೋತ್ಸವ :

"ಮಹಾಜನೋ ಯೇನ ಗತಃ ಸ ಪಂಥಾಃ" ಹಿರಿಯರು ಹೋದ ದಾರಿಯೇ ಹೆದ್ದಾರಿಯಾಗಿರುತ್ತಾ ಶ್ರೀ ಭಟ್ಟರಂತಹವರು ಸಹೋದರ ಶ್ರೀ ಕೆ. ಎಸ್. ನಾರಾಯಣ ಭಟ್ಟರೊಂದಿಗೆ ಶ್ರೀ ಶೆಟ್ಟರಂತಹ ಊರ ಹಿರಿಯರು ಹುರುಪಿನ ಹುಮ್ಮಸ್ಸಿನಿಂದ ಹೋರಾಡುವ ಈ ಹಿರಿಯ ಕೆಲಸಕ್ಕೆ ಇನ್ನುಳಿದ ಊರ ಹಿರಿಯರೂ ಕಿರಿಯರೂ ಹೆಗಲಿಗೆ ಹೆಗಲು ಕೊಟ್ಟು ಸಹಕರಿಸುವಲ್ಲಿ ಸಂದೇಹಕ್ಕೆಡೆಯಿಲ್ಲ.

ಹೀಗೆ ಎಣಿಕೆಗೂ ಸಿಲುಕದಷ್ಟು ರೂ. ವೆಚ್ಚದಲ್ಲಿ ಭವ್ಯವೂ ಭದ್ರವೂ ಆಗಿ ಪುನರ್ನಿರ್ಮಿತವಾದ ಈ ದೇವಾಲಯದಲ್ಲಿ ಬಲು ಹಿಂದೆಯೇ ಜರಗಬೇಕಾಗಿದ್ದ ಬ್ರಹ್ಮಕಲಶೋತ್ಸವದ ಮೂಲಕದ ನಿರಂತರದ ಭಗವತ್ಸಾನ್ನಿಧ್ಯವು ಈ ಬಾರಿ ಅಪೂರ್ವ ವೈಭವದಿಂದ ನೆರವೇರಿದೆಯೆನ್ನಲಾಗಿದೆ. ಈ ಬಗ್ಗೆ ಊರಿಗೆ ಊರೇ ಒಗ್ಗಟ್ಟಿನ ಒಮ್ಮತದಿಂದ ಹಗಲಿರುಳೆನ್ನದೆ ಪರಿಶ್ರಮಿಸುತ್ತಿರುವದು ಪ್ರಶಂಸಾರ್ಹ. ಈ ಶುಭ ಸಮಾರಂಭಕ್ಕಾಗಿ ಆಮಂತ್ರಿತರಾಗಿ ಆಗಮಿಸಲಿರುವ ಅಪಾರ ಸಂಖ್ಯೆಯ ಭಕ್ತರಾದ ಆಗಂತುಕರಿಗೆ ಮಹಾ ಸಂತರ್ಪಣೆಯು ವಿಶೇಷ ವ್ಯವಸ್ಥೆಯಿದ್ದು ಜೊತೆಗೆನೇ ತಾ. ೨೮ರಿಂದ ೫ ದಿನಗಳ ತನಕ ಯತಿವರರ, ವಿದ್ವಜ್ಜನರ, ಪಂಡಿತಪ್ರವರರ ಭಾಷಣ ಪ್ರವಚನಾದಿಗಳೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಇರಿಸಿಕೊಂಡಿರುವುದೂ ಸಮಾರಂಭಕ್ಕೆ ಹೆಚ್ಚಿನ ಕಳೆ ಈಯಲು ಸಹಕಾರಿಯಾಗಿದೆ. ಇವೆಲ್ಲಕ್ಕೂ ಕಲಶಪ್ರಾಯವಾಗಿ ಬ್ರಹ್ಮಕಲಶೋತ್ಸವದಂದು ಶ್ರೀ ಪೇಜಾವರ ಶ್ರೀಗಳವರ ಸದಾಗಮನದ ಕಾರಣದಿಂದಾಗಿ ಕಾರ್ಯಕ್ರಮಕ್ಕೆ ಇನ್ನಷ್ಟು ಪಾವಿತ್ರ್ಯ ಬರಲು ಅವಕಾಶವಿದೆ.

ಒಟ್ಟಿನ ಮೇಲೆ ಈ ರೀತಿಯ ಭಗವತ್ಸಂಪ್ರೀತಿಗೆ ಕಾರಣವಾದ ಸತ್ಸಮಾರಂಭಗಳಿಂದಾಗಿ 'ಲೋಕಾಃ ಸಮಸ್ತಾಃ ಸುಖಿನೋ ಭವಂತು' ಎಂದು ಹಾರೈಸುವುದು ಸಮಯೋಚಿತವಿದೆ. ● ●

ಕಳ್ಳತನ ತಪ್ಪಲ್ಲವೇನು?

ಏ ಣ

ವಿನೋದ ಚಕ್ರವರ್ತಿಯೊಬ್ಬ ನವಯುವಕ. ಶುದ್ಧ ಖಾದೀಧಾರಿ. ಕಾಂಗ್ರೆಸ್‌ನ ಉತ್ಸವ ಮೆರವಣಿಗೆಗಳಲ್ಲಿ ಉತ್ಸಾಹದಿಂದ ಭಾಗವಹಿಸುವವ. ಕಾಂಗ್ರೆಸ್‌ನ ನಿಷ್ಠಾವಂತ ಸೇವಕ.

ಒಂದೊಮ್ಮೆ ಆತ ಕೈದಿಯಾಗಿ ಮಿತ್ರರೊಬ್ಬರಿಗೆ ಕಂಡ. ಅವರೆಂದರು— "ಚಕ್ರವರ್ತಿ, ನಿನ್ನ ನಿಜಸ್ವರೂಪ ಬಯಲಾಯಿತಲ್ಲಾ? ಎಂತಹ ವಂಚನೆ! ನನ್ನ ಮಿತ್ರ ಸಿ. ಐ. ಡಿ. ನೀನು ಹಂಸವೇಶದ ಬಕನೆಂದು ಆಗಾಗ ಹೇಳುತಿದ್ದರು. ಆದರೆ, ನಾನು ಅವರ ಮಾತನ್ನು ನಂಬುತ್ತಿರಲಿಲ್ಲ. ಇಂದು ನಿನ್ನ ಅವಸ್ಥೆಯನ್ನು ಕಣ್ಣಾರೆ ಕಂಡ ಬಳಿಕ ಅದನ್ನು ನಂಬದಿರುವುದು ಹೇಗೆ ಸಾಧ್ಯವಾದೀತು?'— ಧ್ವನಿಯಲ್ಲಿ ಸಿಟ್ಟು ಮತ್ತು ಹೇಯ ಭಾವನೆ ತುಂಬಿತ್ತು.

ವಿನೋದ ಚಕ್ರವರ್ತಿ ಗಟ್ಟಿಯಾಗಿ ನಕ್ಕುಬಿಟ್ಟ. "ಅಣ್ಣಾ, ಬಾಪೂವಿನ ಪ್ರಭಾವದಿಂದ ನನ್ನ ಹೃದಯ ಬದಲಾಯಿಸಿದೆ. ಉದ್ಯೋಗ ಬದಲಾಗಲಿಲ್ಲ. ವ್ಯಕ್ತಿಗತ ಜೀವನ ಬದಲಾಗಿದೆ; ಲೋಕ—ಪರಲೋಕಗಳಿಗೆ ಹಾನಿಕಾರಕವೆನಿಸಿದ್ದು ಬದಲಾಗಿದೆ; ಬಡವರಿಗಾಗಿ, ಅನಾಥರಿಗಾಗಿ ಮತ್ತು ಸಂಕಟದಲ್ಲಿ ತೊಳಲಾಡುವವರ ಸೇವೆಗಾಗಿ, ಬದಲಾಗಿಲ್ಲ.ನಾನೇನು ಮಾಡಿದೆ ಮತ್ತದು ಏತಕ್ಕಾಗಿ? ಕೇಳಿರಿ.

"ಬಡಾಬಜಾರಿನ ಸೂತಾಪಟ್ಟಿಯಲ್ಲಿ ದೂಧನಾಥ ಮಹಾದೇವನ ಮಂದಿರವಿದೆ. ಅದಕ್ಕೆ ಹತ್ತಿರದಲ್ಲೇ ಒಬ್ಬ ಸೇಠ್ ಬಟ್ಟೆಯ ರಖಂ ವ್ಯಾಪಾರದ ಅಂಗಡಿಯಿಟ್ಟಿದ್ದಾನೆ. ನಾನು ಆ ಅಂಗಡಿಯ ಮುಂದೆ ನಿಂತು ಸಿಗರೇಟು ಸೇದುತ್ತಿದ್ದೆ. ನೋಡಿದೆ. ಹರಕು ಚಿಂದಿಯುಟ್ಟು, ಸಾಕಷ್ಟು ಗಡ್ಡ ಬೆಳೆಸಿದ ಚರ್ಮಹೊದ್ದ ಎಲುಬು ಗೂಡೊಂದು ಕೈಮುಗಿದು ಕಣ್ಣು ತುಂಬಿ ದೀನಭಾವದಿಂದ ಬೇಡುತ್ತಿತ್ತು—'ಸೇಠ್‌ಜಿ, ನನ್ನ ಮಗನ ಆಯುಷ್ಯವೇ ವ್ಯರ್ಥವಾಗುತ್ತದೆ. ಅವನೂ ನಿರುಪಯೋಗಿಯಾಗುತ್ತಾನೆ. ನೂರೈವತ್ತು ರೂಪಾಯಿಗಳನ್ನು ಸಾಲವಾಗಿ ಕೊಡಿರಿ, ನಿಮ್ಮ ದಮ್ಮಯ್ಯ; ಅವನನ್ನು ಕಾಲೇಜಿಗೆ ದಾಖಲು ಮಾಡಿಬಿಡುತ್ತೇನೆ. ನಾನು ಅಸಹಾಯಕ; ನ್ಯಾಮನಗಳಲ್ಲಿ ಬಲವಿದ್ದಾಗ ನಿಮ್ಮ ಗುಮಾಸ್ತನಾಗಿದ್ದೆ ತಾನೇ? ಇದೀಗ ಯಾರಿಗೂ ಬೇಡಾದ ನಿತ್ಯ ರೋಗಿಯಾಗಿದ್ದೇನೆ. ದೇವರು ನಿಮಗೆ ಆಶೀರ್ವಾದ ನೀಡುತ್ತಾನೆ.'

ಸೇಠ್ ಹೇಳುತ್ತಿದ್ದ 'ದುಡಿದಿದ್ದರೇನಾಯ್ತು? ಸಂಬಳ ಒಯ್ಯಲಿಲ್ಲವೇನು? ಐದು—ಹತ್ತು ಬೇಕಾದರೆ ಕೊಡುತ್ತೇನೆ. ನೂರೈವತ್ತೆಂದರೆ, ಹಣ ಆಕಾಶದಿಂದ ಸುರಿಯುತ್ತದೇನು? ದೇವರು ಅದಕ್ಕಿಂತ ಹೆಚ್ಚು ಕೊಡು ಎಂದು ನನಗೆ ಹೇಳುವುದಿಲ್ಲ'

ಕೊನೆಗೂ ನಿರಾಶನಾದ ಆ ನಡೆವೆಣವನ್ನು ಸೇಠಜಿ ಅಂಗಡಿ ಜಗಲಿಯಿಂದ ರಸ್ತೆಗೆ ಬಲಾತ್ಕಾರವಾಗೇ ಇಳಿಸಿದ. ಅವನು ಹವ್ವಾ ಸೇತುವಿನ ಕಡೆ ನಡೆದ. ನಾನೂ ಅವನನ್ನು ಹಿಂಬಾಲಿಸಿದೆ. ಒಂದೆಡೆ ಅವನನ್ನು ತಡೆದು ನಿಲ್ಲಿಸಿ ಹೇಳಿದೆ—'ನಿನಗೆ ನೂರೈವತ್ತು ರೂಪಾಯಿಗಳು ಬೇಕು ತಾನೆ? ನನ್ನ ಹಿಂದೆ ಬಾ. ನಿನ್ನ ಅದೃಷ್ಟ ಹೇಗಿದೆ ನೋಡೋಣ. ಆದರೆ, ನಾನು ಹೇಳಿದಂತೆ ನೀನು ಕೇಳಬೇಕು.'

ಮುದುಕನು ಕಣ್ಣುಗಳಲ್ಲಿ ಇಲ್ಲದ ಮಿಂಚನ್ನು ತಂದುಕೊಂಡು ಉದ್ಗರಿಸಿದನು— 'ಖಂಡಿತ, ನಿನ್ನ ಮಾತಿನಂತೆ ನಡೆಯುತ್ತೇನೆ, ನೂರೈವತ್ತು ರೂಪಾಯಿ ಕೊಡುವುದಾದರೆ....'

'ಕೆಲಹೊತ್ತಿನಲ್ಲೇ ದಾರಿಯಲ್ಲಿ ನಡೆಯುತ್ತಿದ್ದ ಯುವಕ ಸೇಠನೊಬ್ಬನ ಕಿಸೆಯಿಂದ ಹಣದ ಚೀಲ ಹಾರಿಸಿದೆ. ಅದನ್ನು ಆ ಮುದುಕನ ಕೈಗಳಿಗೆ ಕೊಟ್ಟೆ. ಅವನು ತಪ್ಪಿಸಿಕೊಂಡನು. ನಾನು ತಪ್ಪಿಸಿಕೊಳ್ಳುವ ಪ್ರಯತ್ನವನ್ನೇ ಮಾಡಲಿಲ್ಲ. ನನ್ನನ್ನು ಸೆರೆಹಿಡಿದರು. ಸ್ಟೇಶನ್ನಿಗೆ ಬಂದೆ. ಥಾನೇದಾರ ಆ ಸೇಠನಿಗೆ ಹೇಳಿದ— "ಈತ ನನಗೆ ಚೆನ್ನಾಗಿ ಗೊತ್ತು. ಉದ್ಯೋಗದಿಂದಲೇ ಕಿಸೆಗಳ್ಳ ಆದರೆ, ಈಗೀಗ ತನಗಾಗಿ ಕಿಸೆ ಕೊರೆಯುವುದಿಲ್ಲ. ಬೇರೆ ಯಾರು ಯಾರಿಗೋ ಹಣಸಹಾಯ ಮಾಡುವುದಕ್ಕಾಗಿ ಕತ್ತರಿಯಿಡುತ್ತಿದ್ದಾನೆ. ನಿಮ್ಮ ಹಣವೆಷ್ಟಿತ್ತು?'

'ಸೇಠ್ ಹೇಳಿದ—' ಐದು ನೂರು!

'ಸಂಖ್ಯೆ ಕೇಳಿದಾಗ ನನ್ನ ಹೃದಯ ಸಂತೋಷದಿಂದ ನಲಿಯಿತು. ನನ್ನ ಮಾತೂ ನನ್ನ ಶ್ರಮವೂ ವ್ಯರ್ಥವಾಗಲಿಲ್ಲವೆಂದು ರೋಮ ನಿಮಿರಿತು. ಕಳ್ಳತನಕ್ಕೆ ಒಳಗಾದ ಮರಿಸೇಠ್ ಆ ಬಟ್ಟೆಯಂಗಡಿಯ ಹಿರಿಸೇಠನ ಮಗನೋ ಚಿಕ್ಕಪ್ಪನ ಮಗನೋ ಇರಬೇಕೆಂದು ತಿಳಿದಾಗ ನನ್ನ ಆನಂದಕ್ಕೆ ಮಿತಿಯೇ ಉಳಿಯಲಿಲ್ಲ. ಮುಂದೇನಾಯ್ತು. ನಿಮಗೆ ಗೊತ್ತೇ ಇದೆ.'

ವಿನೋದ ಚಕ್ರವರ್ತಿಯ ಕತೆ ಕೇಳಿದ ನಂತರ ಆವನ ಹಿರಿಯ ಮಿತ್ರರು ಯೋಚಿಸಿದರು—'ಕಿಸೆಗಳ್ಳರು ಯಾರು? ಅಪರಾಧ ಯಾರದ್ದು? ನ್ಯಾಯಲ್ಲಿ ಬಲವಿರುವವರೆಗೆ ತಮಗೆ ಬೇಕಾದಂತೆ ದುಡಿಸಿಕೊಂಡು ಆ ಬಳಿಕ ರಸ ಹೀರಿದ ಲಿಂಬೆಯಂತೆ ಕಿತ್ತೆಸೆದ ಸೇಠರದ್ದೆ? ಬಡವನಾಗಿ ಹುಟ್ಟಿ ಕಾಲೇಜು ಕಲಿಯ ಬೇಕೆಂಬ ಹಂಬಲ ತೊಟ್ಟವರದ್ದೆ? ಅಥವಾ ಬಡವನ ಹಂಬಲವನ್ನು ಈಡೇರಿಸಲೆಂದು ಸೇಠನನ್ನು ಅಪಹರಿಸಿದ ವಿನೋದ ಚಕ್ರವರ್ತಿಯದೆ? ಬಹುಸಮಯ ಯೋಚಿಸಿದರೂ ಅವರಿಗೆ ಸರಿಯುತ್ತರ ಬರಲಿಲ್ಲ.

ಬಾಪು ಮಹಾತ್ಮಾ ಗಾಂಧಿಯ ಪ್ರಭಾವದಿಂದಾಗಿ ವಿನೋದನ ಉದ್ಯೋಗದ ಉದ್ದೇಶ ಬೇರೆ ತಿರುವು ಕಂಡಿತೆಂದು ನೆನಪಾದೊಡನೆಯೇ ಆತನದು ತಪ್ಪಲ್ಲವೆಂಬ ತೀರ್ಮಾನಕ್ಕೆ ಬಂದರು.

● ●

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

ಮೇ ತಿಂಗಳಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ
ಯೋಜಿಸಲಾಗಿರುವ
ಚಿನ್ನದ ಹಬ್ಬದ ನಿಧಿಗೆ
ಉದಾರ ಸಹಾಯ ಮಾಡಿರಿ!

ನೀತಿಕಥೆಗಳ ಈಸೋಫ

(ಐದನೇ ಪುಟದಿಂದ)

ಸೆರೆ ಹಿಡಿದು ಮಾರುಕಟ್ಟೆಗೆ ತಂದು ಅಲ್ಲಿ ಅವರನ್ನು ಮಾರುತ್ತಿದ್ದರು. ಹೀಗೆ ಒಮ್ಮೆ ಗುಲಾಮರಾದವರು ಆ ಜೀವ ತಮ್ಮ ಯಜಮಾನನ ಜೀತದಾಳಾಗಿ ಆಜೀವ ದುಡಿಯಬೇಕಾಗಿತ್ತು. ಉದಾರಿಗಳಾದ ಯಜಮಾನರು ತಮ್ಮ ಗುಲಾಮರಿಂದ ಹಲವು ವರ್ಷಗಳ ಸೇವೆ ಪಡೆದ ಮೇಲೆ ಅವರನ್ನು ಬಿಟ್ಟು ಬಿಡುತ್ತಿದ್ದುದೂ ಉಂಟು. ಆದರೆ, ಇಂತಹ ಮುಕ್ತಿಗೆ ಗುಲಾಮರ ಅಶಕ್ತತೆಯೇ ಸಾಮಾನ್ಯವಾಗಿ ಪ್ರೇರಕ ಶಕ್ತಿಯೂ ಗಿರುತ್ತಿತ್ತು.

ಗುಲಾಮ ವ್ಯಾಪಾರಿಯೊಬ್ಬನು ಎಲ್ಲಿಂದಲೋ ನೂರಾರು ಮನುಷ್ಯರನ್ನು ಬಂಧಿಸಿ ಮಾರುಕಟ್ಟೆಗೆ ತಂದನು. ಇವರ ಗುಂಪಿನಲ್ಲಿ ಗೂನು ಬೆನ್ನಿನ ಕುರೂಪಿಯಾದ ಈಸೋಫನೂ ಒಬ್ಬನು. ನಾಲ್ಕಾರು ದಿನಗಳವರೆಗೆ ಮಾರುಕಟ್ಟೆಯಲ್ಲಿ ಪ್ರದರ್ಶಿಸಿದರೂ ಈತನನ್ನು ಕೊಳ್ಳಲು ಯಾರೂ ಮುಂದೆ ಬರಲಿಲ್ಲ. ಕೊನೆಗೆ ಹೇಗಾದರೂ ಈ ಕುರೂಪಿಯಿಂದ ಕೈತೊಳೆದುಕೊಳ್ಳ ಬೇಕೆಂದು ನಿಶ್ಚಯಿಸಿದ ವ್ಯಾಪಾರಿಯು ಒಂದು ದಿನ ತನ್ನೆಲ್ಲ ಮನುಷ್ಯ ಸರಕನ್ನು ಕೊಳ್ಳುವವರಿಗೆ ಈಸೋಫನನ್ನು ಪುಕ್ಕಟೆಯಾಗಿ ಕೊಡುವುದಾಗಿ ಸಾರಿದನು. ಕೊನೆಗೂ ಒಬ್ಬ ಯಜಮಾನನ ಒಡೆತನಕ್ಕೆ ಈತ ಸೇರಿದನು.

ಈ ಸೋಫನನ್ನು ಚೆನ್ನಾಗಿ ಪರಿಶೀಲಿಸಿದ ಯಜಮಾನನು ಆತನಲ್ಲಿ ಇತರ ಗುಲಾಮರಲ್ಲಿಲ್ಲದ ವಿಲಕ್ಷಣತೆಯನ್ನೂ ಸುಪ್ತ ಶಕ್ತಿಯನ್ನೂ ಅರಿತುಕೊಂಡನು. ದೈಹಿಕ ಶ್ರಮದ ಕೆಲಸವನ್ನು ಆತನಿಗೆ ಹೆಚ್ಚು ವಹಿಸುತ್ತಿರಲಿಲ್ಲ.

ತನ್ನ ಸಹ ಗುಲಾಮರೊಂದಿಗೆ ಈಸೋಫನ ಸಂಬಂಧ ಸುಮಧುರವಾಗಿತ್ತು. ಆತನು ಹಲವಾರು ರೀತಿಯ ನೂರಾರು ಕತೆಗಳನ್ನು ಹೇಳಿ ಅವರ ಮನಸ್ಸನ್ನು ಪ್ರಸನ್ನಗೊಳಿಸುತ್ತಿದ್ದನು. ಇದು ಅವನ ಯಜಮಾನನಿಗೂ ಮೆಚ್ಚುಗೆಯ ಸಂಗತಿಯಾಗಿತ್ತು. ಆದುದರಿಂದಲೇ ಈಸೋಫನೆಂದರೆ ಅವನಿಗೆ ಇನ್ನಿಲ್ಲದ ಅಭಿಮಾನ.

ಕತೆಗಳಿಂದ ಮಿತ್ರರನ್ನೂ ತನ್ನನ್ನೂ ಸಂತೋಷಗೊಳಿಸುತ್ತಿದ್ದ ಈಸೋಫನನ್ನು ಯಜಮಾನನು ಬಿಡುಗಡೆ ಮಾಡಿದನು. ಈ ಹೊತ್ತಿಗಾಗಲೇ ಈಸೋಫನ ಸಂಗತಿ ದೇಶ ತುಂಬ ಹರಡಿತ್ತು. ಆತನ ನೀತಿ ಕತೆಗಳ ಬಗ್ಗೆಯೂ ಜನತೆಯೂ ಜನಪನೂ ಸಾಕಷ್ಟು ತಿಳುವಳಿಕೆ ಹೊಂದಿದ್ದರು. ಸ್ವತಂತ್ರನಾದ ಈಸೋಫನನ್ನು ಗ್ರೀಸಿನ ರಾಜ ಕ್ರೂರಿಯಸ್ಸು ತನ್ನ ಆಸ್ಥಾನಕ್ಕೆ ಆಹ್ವಾನಿಸಿದನು. ಸೊಟ್ಟ ಮೋರೆಯ ಗೂನುಬೆನ್ನಿನ ಈಸೋಫನನ್ನು ತನ್ನ ಮಂತ್ರಿಯಾಗಿ ನೇಮಿಸಿಕೊಂಡನು. ನೀತಿಮತ್ತೆಗೂ ಬುದ್ಧಿವಂತಿಕೆಗೂ ಹೆಸರಾದ ಈಸೋಫನು ತನಗೊಪ್ಪಿಸಿದ ಕರ್ತವ್ಯಗಳನ್ನು ಲೇಶಚ್ಯುತಿಯಿಲ್ಲದೆ ನಿರ್ವಹಿಸಿದನು.

ಭಾರತದಲ್ಲಿ ಪಂಚತಂತ್ರದಂತೆಯೇ ಯುರೋಪಿನಲ್ಲಿ ಈಸೋಫನ ನೀತಿಕತೆಗಳು ಅತ್ಯಂತ ಜನಪ್ರಿಯವಾಗಿವೆ. ಮೃಗ–ಪಕ್ಷಿಗಳ ಮಾಧ್ಯಮದಲ್ಲಿ ಜನತೆಯನ್ನು ಕಾಂತಾ ಸಮ್ಮಿತಿಯಿಂದ ನೀತಿ ಮಾರ್ಗಕ್ಕೆ ತರುವಲ್ಲಿ, ನೀತಿಯ ಉಪದೇಶ ನೀಡುವಲ್ಲಿ ಪಂಚತಂತ್ರವೂ ಈಸೋಫನ ನೀತಿಕತೆಗಳೂ ಏಕಪ್ರಕಾರ ಸಫಲವಾಗಿವೆ.

●●

ಸಿಂಡಿಕೇಟ್ ಬ್ಯಾಂಕಿನಿಂದ ರೈತರ ಸಪ್ತಾಹದ ಆಚರಣೆ

ರೈತರಿಗೆ ಹಣಕಾಸಿನ ನೆರವು ನೀಡುವಲ್ಲಿ ಪರಿಣಾಮಕಾರಿ ಕೆಲಸ ಮಾಡುತ್ತಿರುವ ಸಿಂಡಿಕೇಟ್ ಬ್ಯಾಂಕು ಕೃಷಿಯ ಅಭಿವೃದ್ಧಿ ಮತ್ತು ಕೃಷಿಕರ ಆರ್ಥಿಕ ಸ್ಥಿತಿ ಸುಧಾರಣೆಗಳಲ್ಲಿ ಅಗ್ರಗಾಮಿಯಾಗಿದೆ. ರೈತ ಸಮಾಜದ ಏಳಿಗೆಯನ್ನು ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾಧಿಸುವುದರಿಂದ ಅಧಿಕ ಸಂಪತ್ತನ್ನು ಗಳಿಸಿದಂತಾಗುತ್ತದೆ. ಈ ಸಂಪತ್ತನ್ನು ಉಳಿತಾಯದ ರೂಪದಲ್ಲಿ ವಾಣಿಜ್ಯ ಬ್ಯಾಂಕುಗಳು ಸ್ವೀಕರಿಸಿ ಅದನ್ನು ಉತ್ಪಾದನಾ ರಂಗಕ್ಕೆ ಒದಗಿಸಬಹುದೆಂದು ಬ್ಯಾಂಕು ಹಿಂದಿನಿಂದಲೂ ನಂಬಿ ಬಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕಿನ ಶಾಖೆಗಳನ್ನು ತೆರೆದು, ಇಂತಹ ಠೇವಣಿಗಳನ್ನು ಕೂಡಿಸುವುದು ಸಾಧ್ಯವೆಂದು ಅದು ತೋರಿಸಿ ಕೊಟ್ಟಿದೆ. ರೈತರಲ್ಲಿ ಉಳಿತಾಯದ ಅಭ್ಯಾಸವನ್ನು ಹೆಚ್ಚಿಸಿ ಅಧಿಕೋತ್ಪಾದಕ ರಂಗಕ್ಕೆ ತಮ್ಮ ಮಿಗತೆಯ ಹಣವನ್ನು ಒದಗಿಸುವ ಪರಿಪಾಠವನ್ನು ಹಬ್ಬಿಸಲು ಬ್ಯಾಂಕು ದೇಶಾದ್ಯಂತ ರೈತರ ಸಪ್ತಾಹ ಕಾರ್ಯಕ್ರಮವನ್ನು ರೂಪಿಸಿದೆ. ಇದು ಬ್ಯಾಂಕಿನ ಮೇಲ್ವಿಚಾರಿತ ಕೃಷಿ ಸಹಾಯ ಯೋಜನೆಗೆ ಒಳಪಡುವ ೨೫೫ ಶಾಖೆಗಳಲ್ಲಿ ಸಂಘಟಿತವಾಗಿದೆ. ಇದರಲ್ಲಿ ಮೈಸೂರು ರಾಜ್ಯದ ೧೧ ಜಿಲ್ಲೆಗಳು ತಮಿಳುನಾಡಿನ ೩ ಜಿಲ್ಲೆಗಳು, ಆಂಧ್ರ, ಹರಿಯಾಣ, ಉತ್ತರಪ್ರದೇಶಗಳ ತಲಾ ಎರಡು ಜಿಲ್ಲೆಗಳು, ಕೇರಳದ ಒಂದು ಜಿಲ್ಲೆ ಮತ್ತು ಡಿಲ್ಲಿಗಳು ಒಳಗೊಂಡಿವೆ. ಈ ಕಾರ್ಯಕ್ರಮವು ಮಾರ್ಚಿ ೨೭ರಂದು ಆರಂಭವಾಗಿದ್ದು ಎಪ್ರಿಲ್ ೧೫ರಂದು ಮುಗಿಯುತ್ತವೆ.

ಸಪ್ತಾಹದ ನಡುವೆ ಆದಷ್ಟು ಹೆಚ್ಚಿನ ರೈತರೊಡನೆ ಸಂಪರ್ಕ ಬೆಳೆಸುವುದು, ಅವರ ಅಲ್ಪ ಉಳಿತಾಯವನ್ನು ಬ್ಯಾಂಕಿನತ್ತ ತರುವುದು ಯೋಜನೆಯ ಉದ್ದೇಶ. ಗ್ರಾಮೀಣ ಭಾರತದ ರೈತರ ಆರ್ಥಿಕ ಮತ್ತು ಸಾಮಾಜಿಕ ಜೀವಾಳದಲ್ಲಿ ಉಪಯುಕ್ತ ಸೇವೆ ಸಲ್ಲಿಸಿರುವ ಬ್ಯಾಂಕು ರೈತ ಸಮಾಜದಿಂದ ತೃಪ್ತಿಕರ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತದೆ. ಈ ಬಗೆಯ ಯೋಜನೆಯೊಂದನ್ನು ರೂಪಿಸಿ ಸುಸಂಘಟಿತ ರೂಪದಲ್ಲಿ ಅನುಷ್ಠಾನಕ್ಕೆ ತರುವ ಪ್ರಯತ್ನಗಳಲ್ಲಿ ದೇಶದಲ್ಲೇ ಇದು ಮೊತ್ತಮೊದಲನೆಯದು.

ಭೂ ಅಭಿವೃದ್ಧಿ, ಧಾನ್ಯೋತ್ಪಾದನೆ, ಕೃಷ್ಯುಪಕರಣಗಳ ಖರೀದಿ ಮೊದಲಾದುವುಗಳಿಗೆ ಸಿಂಡಿಕೇಟ್ ಬ್ಯಾಂಕು ರೈತರಿಗೆ ಸಾಲಸೌಲಭ್ಯವೊದಗಿಸಿದೆ. ಉಪಕಸಬುಗಳಾದ ಪಶುಪಾಲನೆ, ಕೋಳಿಸಾಕಣೆ, ಮೊದಲಾದುವುಗಳನ್ನೂ ಉತ್ತೇಜಿಸಿದೆ.

ಸಿಂಡಿಕೇಟ್ ಬ್ಯಾಂಕಿನಲ್ಲಿ 1964ರಲ್ಲಿ ಎಗ್ರಿಕಲ್ಚರಲ್ ಫಿನಾನ್ಸ್ ಡಿಪಾರ್ಟ್‌ಮೆಂಟ್ ಆರಂಭವಾಯ್ತು. ಮಂಜೂರಾದ ಸಾಲಗಳ ಬಳಕೆಯ ಮೇಲ್ವಿಚಾರಣೆ ಮತ್ತು ನಿರ್ದಿಷ್ಟ ಉದ್ದೇಶಕ್ಕೆ ಬೇಕಾಗುವ ಹಣದ ಅಗತ್ಯದ ಅಂದಾಜು ಮಾಡಲು ತರಬೇತಾದ ನೌಕರರು ಇದರಲ್ಲಿ ಇದ್ದಾರೆ. ಕಳೆದ 7 ವರ್ಷಗಳಲ್ಲಿ ಬ್ಯಾಂಕು ದೇಶದ ನಾನಾ ಮೂಲೆಯಲ್ಲಿರುವ ೧,೦೪,೧೮೩ ರೈತರಿಗೆ ಒಟ್ಟು ರೂ. ೧೬.೭೯ ಕೋಟಿಯನ್ನು ಒದಗಿಸಿದೆ. ಇದರಲ್ಲಿ ರಾಜ್ಯ ವಿದ್ಯುತ್ಮಂಡಳಿ ಮೊದಲಾದುವುಗಳಿಗೆ ನೀಡಿದ ಸಹಾಯವೂ ಕೂಡಿದೆ.

ರೈತ ಸಾಲಗಾರರಲ್ಲಿ ಶೇ. ೮೭ರಷ್ಟು ರೂ. ೨,೦೦೦ಕ್ಕೆ ಮೀರದ ನೆರವನ್ನು ಪಡೆದಿದ್ದಾರೆ. ಶೇ. ೭೯ರಷ್ಟು ಐದು ಎಕ್ರೆಗಳಿಗೂ ಕಡಿಮೆಯಿರುವ ಹಿಡುವಳಿದಾರರು ಹೊಂದಿದ್ದಾರೆ. ರೈತಸಮಾಜದ ನಿರ್ಬಲ ವಿಭಾಗಕ್ಕೆ ಅವಶ್ಯಕ ಮತ್ತು ಸೂಕ್ತ ಸಹಾಯ ನೀಡುವಲ್ಲಿ ಬ್ಯಾಂಕು ತೋರಿಸುವ ಕಳಕಳಿಗೆ ಇವೆರಡು ಜ್ವಲಂತ ನಿದರ್ಶನಗಳು.

●●

ಮಹಾಪುರುಷರ ವಾಣಿಗಳು

ತನ್ನ ನಿಜ ಸ್ವರೂಪವು ಯಾವುದೆಂದು ಕಂಡುಕೊಂಡ ನಂತರ ನಾಶ ಉತ್ಪತ್ತಿಗಳೆರಡೂ ಇಲ್ಲದ ಪರಿಪೂರ್ಣ ಜ್ಞಾನಾನಂದವೇ ಉಳಿಯುತ್ತಿದೆ.

(ರಮಣ ಮಹರ್ಷಿ)

ಅಹಂಕಾರ ನಾಶ ಹೊಂದಿದ ನಂತರ ಅಖಂಡ ಪರಿಪೂರ್ಣ "ಸತ್"ಆದ ಹೃದಯವು ನಾನು, ನಾನು ಎಂದು ತಾನಾಗೆ ಸ್ಫುರಿಸುತ್ತದೆ.

ಹಸಿದೊಡನೆ ಭಿಕ್ಷಾನ್ನಗಳುಂಟು, ತೃಷೆಯಾದೊಡನೆ ಕೆರೆ ಹಳ್ಳಭಾವಿಗಳುಂಟು. ಶಯನಕ್ಕೆ ಹಾಳು ದೇಗುಲಗಳುಂಟು. ಚೆನ್ನಮಲ್ಲಿಕಾರ್ಜುನಾ ಆತ್ಮಸಂಗಕ್ಕೆ ನೀನೆನಗುಂಟು.

(ಅಕ್ಕಮಹಾದೇವಿ)

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ? ಜಾತಿ ವಿಜಾತಿ ಎನಬೇಡ ದೇವನೊಲಿದಾತನೇ ಜಾತ

(ಸರ್ವಜ್ಞ)

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

S. C. No. 10/71

ಸಿಂಡಿಕೇಟ್ ಬೇಂಕ್, ಮಣಿಪಾಲ್ ರಿಕವರಿ ಆಫೀಸರ್ K. P. ಉಮೇಶ ರಾವ್ —ವಾದಿ

ಮತ್ತು

1. ಪಿ. ಭಗವಾನ್‌ದಾಸ; 2. ಕೆ. ರಾಮ ರಾವ್ —ಪ್ರತಿವಾದಿರು

ಯಿವರೊಳಗೆ

2ನೇ ಪ್ರತಿವಾದಿ ಕೆ. ರಾಮ ರಾವ್, ಕೆ. ಲಕ್ಷ್ಮೀನಿಧಿ ರಾಯರ ಮಗ, ಲೆಬೊರೇಟ್ರಿ ಅಸಿಸ್ಟಾಂಟ್, K. M. C. Manipal, ಇವರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದ್ರೆ—

ವಾದಿಯು ಪ್ರತಿವಾದಿರ ಮೇಲೆ 27-1-1968ನೇ ತಾರೀಕಿನ ರೂ. 900/-ರ ಡಿಮಾಂಡ್ ನೋಟಿನ ಬಾಕಿ ಅಸಲು ಬಡ್ಡಿ ಕೇಳಿ ಪ್ಲೇಂಟಿನ ನಿವೃತ್ತಿ ಬಗ್ಗೆ ಮಾಡಿದ ಮೇಲಿನ ದಾವೆಯು ತಾ. 15-4-71ಕ್ಕೆ 2ನೇ ಪ್ರತಿವಾದಿಯ ಅಪ್ಪೆರು ನೋಟ್ಸು ಬಗ್ಗೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಯಿಟ್ಟಿರುತ್ತದ್ದಾಗಿಯೂ 2ನೇ ಪ್ರತಿವಾದಿಯು ಉಜರಿಸ ತಕ್ಕದ್ದು ಯಿದ್ದಲ್ಲಿ ಸದ್ರಿ ದಿವ್ಸ ಹಗಲು 11 ಗಂಟೆಗೆ ಸರಿಯಾಗಿ ಸದ್ರಿ ಕೋರ್ಟಿಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದೆಂತಲೂ ತಪ್ಪಿದ್ರೆ ಸದ್ರಿ ದಾವೆ ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವುದೆಂತಲೂ ಸಹಾ ಈ ಮೂಲ್ಕ ತಿಳಿಸೋದಾಗುತ್ತದೆ.

B. Krishna Bhat

Advocate for Plaintiff

Udipi, 30-3-1971.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗಿವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

In the Court of Munsif Kundapur

S. C. 178/1970

S. Narasimha Acharya —Plaintiff

Shantaram Shanbhag—Defendant

To

V. Shantaram Shanbhag, Son of Narasimha Shanbhag, Vandse Timber merchant, Gangulli Village, Coondapur Taluk

The above suit filed by Plaintiff against you for recovery of amounts due on pronote executed by you on 4-12-67, stands posted to 29-5-71. You are directed to appear before this court on 29-5-71 at 11 A. M. failing which the suit will be determined in your absence.

By order of court

K. Narayana Kamath

Advocate for Plaintiff

Coondapur, 1-4-71.

'ಮಂದರ್ತಿ ಸಮೀಕ್ಷೆ'ಯ ಬಿಡುಗಡೆ

ತಾ. ೩—೪—೧೯೭೩ರಂದು ಮಂದರ್ತಿ ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ಮಹಾಪೂಜೆ ಅನಂತರದಲ್ಲಿ ಈ ದೇವಾಲಯದ ಧಾರ್ಮಿಕ ಹಾಗೂ ಐತಿಹಾಸಿಕ ವಿವರಗಳನ್ನೊಳಗೊಂಡ 'ಮಂದರ್ತಿ ಸಮೀಕ್ಷೆ' ಎಂಬ ಹೊತ್ತಗೆಯು ಕಲ್ಯಾಣಪುರದ ಡಾ. ಗೋವಿಂದಾಚಾರ್ಯರಿಂದ ಬಿಡುಗಡೆ ಮಾಡಲ್ಪಟ್ಟಿತು. ಈ ಸಮಾರಂಭದಲ್ಲಿ ಹೊತ್ತಗೆಯ ಗ್ರಂಥಕರ್ತ ಡಾ. ಪಿ. ಗುರುರಾಜ ಭಟ್ಟರೂ ಇತರ ಹಲವಾರು ಮಹನೀಯರೂ ಭಕ್ತಾದಿಗಳೂ ಇದ್ದರು. ಉದ್ಘಾಟನಾ ನಂತರದಲ್ಲಿ ಡಾ. ಭಟ್ಟರು ಪುಸ್ತಕದಲ್ಲಿ ಅಡಕವಾದ ವಿಷಯದ ಬಗ್ಗೆ ಕೆಲವು ಸಂದರ್ಭೋಚಿತ ಮಾತುಗಳನ್ನಾಡಿದರು.

'ಮಂದರ್ತಿ ಸಮೀಕ್ಷೆ' ಎಂಬೀ ಹೊತ್ತಗೆಯು ಈ ದೇವಾಲಯದ ವಿವರಗಳನ್ನೀಯುವ ಹಾಗೂ ಧಾರ್ಮಿಕ ಹಿನ್ನೆಲೆಯನ್ನು ವಿವರಿಸುವ ವೈಜ್ಞಾನಿಕ ಸಂಶೋಧನೆಯ ಮಾರ್ಗದಲ್ಲಿ ಬರೆದ ಸಚಿತ್ರ ಗ್ರಂಥವಾಗಿದೆ. ಈ ಬಗೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಇದು ಪ್ರಥಮ ಗ್ರಂಥವೆನ್ನಬೇಕು. ಈ ಹೊತ್ತಗೆಯು ೮೨ ಪುಟಗಳಿಂದಲೂ ೨೮ ಪ್ಲೇಟು ಛಾಯಾ ಚಿತ್ರಗಳಿಂದಲೂ ಕೂಡಿದ ಬರಹವಾಗಿದೆ.

ಅ. ಕಾಂಗ್ರೆಸ್ ಕೃತಜ್ಞತಾರ್ಪಣೆ ಸಭೆ

ಪುತ್ತೂರಿನಲ್ಲಿ ಕಳೆದ ನಾ. ೨೪ರಂದು ಲೋಕಸಭಾ ಸದಸ್ಯ ಶ್ರೀ ಕೆ. ಕೆ. ಶೆಟ್ಟರನ್ನು ಅಭಿನಂದಿಸುವ ಮತ್ತು ಚುನಾವಣೆಯವೇಳೆ ಶ್ರಮಿಸಿದ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸುವ ಸಭೆಯೊಂದು ಜರಗಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಸುಬ್ರಹ್ಮಣ್ಯ ಗೌಡರು ವಹಿಸಿದ್ದರು. ಡಾ. ಪಿ. ಎಸ್. ಭಟ್ಟರು ಸ್ವಾಗತಿಸಿದರು.

ಶ್ರೀಗಳಾದ ಗೋಪಾಲಕೃಷ್ಣ ಭಟ್, ಕನ್ಯಾನ ಶಿವರಾವ್, ಭಾಸ್ಕರ ಬಲ್ಯಾಯ ಮೊದಲಾದವರು ಮಾತನಾಡಿದರು. ಶ್ರೀ ಕೆ. ಕೆ. ಶೆಟ್ಟಿ ಎಂ.ಪಿ. ಅವರು ಜನತೆ ನೀಡಿದ ಸಹಾಯಕ್ಕೆ ಕೃತಜ್ಞತೆ ಸಲ್ಲಿಸಿದರು.

ವೈಜ್ಞಾನಿಕ ರೀತಿಯ ಸಂಗ್ರಹಣೆಯಿಂದ

ಧಾನ್ಯಗಳು ಸುರಕ್ಷಿತವಾಗಿರುತ್ತವೆ.

ಈ ಶತ್ರುಗಳ ಬಗ್ಗೆ ಎಚ್ಚರಿಕೆಯಿಂದಿರಿ

- ಇಲಿಗಳು
- ಕೀಟಗಳು
- ತೇವ
- ಪಕ್ಷಿಗಳು

ಸರಿಯಾಗಿ ಸಂಗ್ರಹಿಸಿಡದೆ ಇರುವ ಕಾರಣದಿಂದ ಇವು ಪ್ರತಿವರ್ಷವೂ ಲಕ್ಷಾಂತರ ಟನ್ ಅಮೂಲ್ಯ ಆಹಾರ ಧಾನ್ಯಗಳನ್ನು ಹಾಳುಗೆಡವುತ್ತವೆ.



ಸುಧಾರಿತ ಕಣಜಗಳನ್ನು ಮತ್ತು ಆಧುನಿಕ ತಂತ್ರಗಳನ್ನು ಬಳಸಿರಿ.

ಉಚಿತ ಮಾರ್ಗದರ್ಶನ ಮತ್ತು ತರಬೇತಿ ಲಭ್ಯವಿವೆ.



ವಿವರಗಳಿಗೆ ಇಲ್ಲಿ ವಿಚಾರಿಸಿರಿ :
ಧಾನ್ಯ ಸಂರಕ್ಷಣಾ
ಪ್ರಚಾರ ಘಟಕ, ಆಹಾರ ಇಲಾಖೆ
ಭಾರತ ಸರ್ಕಾರ, ಕೃಷಿ ಭವನ,
ಹೊಸದಿಲ್ಲಿ.

ನಿಮ್ಮ ದವಸ ಧಾನ್ಯಗಳನ್ನು ಸಂರಕ್ಷಿಸಿರಿ
ಅವುಗಳನ್ನು ಚೆನ್ನಾಗಿ ಸಂಗ್ರಹಿಸಿಡಿ

davp 73/481

ಗೇಹರಾಜ್ಯದಲ್ಲಿ

ಹಾವು ಪರೆಯನ್ನು ಕಳಚುವಂತೆ . . .

"ಏನು ವಿಶೇಷಾಂತೆ?"

'ಎಲ್ಲಿ?'

"ಸದ್ಯ ಮತ್ತಿನ್ನೆಲ್ಲಿ? ಬಂಗ್ಲಾ ದೇಶದಲ್ಲಿ....'

'ಹ್ಞಾಂ.... ಮುಜಿಬುರ್ ರಹಮಾನರ ನೇತೃತ್ವದಲ್ಲಿ ಸ್ವಾಧೀನ ಪಡೆ ಏಕ್‌ದಂ ಮುಂದುವರಿಯುತ್ತಿದೆಯಂತೆ....'

"ಅದು ಸರೀನ್ನಿ. ಅದೇನು ಪಾಕಿಸ್ತಾನಿ ಸೈನಿಕರು ಮಿಕಮಿಕ ನೋಡುತ್ತಾ ಇದ್ದಾರೇನು?"

"ಹಾಗೇನೂ ಇಲ್ಲಾನ್ನು. ಅವರೂ ತಮ್ಮ ನೆಲ ಜಲ ವಾಯು ಬಲಗಳನ್ನು ಮುಪ್ಪುರಿಗೊಳಿಸಿ ಸ್ವಾತಂತ್ರ್ಯ ಹೋರಾಟಗಾರರನ್ನು ಸದೆಬಡಿಯುತ್ತಾರೆ...."

'ಮತ್ತೆ ಮುಜುಬ್ ಮುಂದರಿಕೆ ಹೇಗೇಂತ...."

'ಹೇಗೆ ಅಂದರೆ? ಸೇನೆಯ ಮುಂದೆ ಮುಜಿಬ್ ಜನ ಧೀರ ಕಲಿಗಳಂತೆ ನಿಂತು ಹೋರಾಡಿ ಸೇನೆಯನ್ನು ನಿರ್ನಾಮ ಮಾಡಿದ್ದಾರೆ....'

'ಅಲ್ರೀ,ಸೇನೆ ಟ್ಯಾಂಕುಗಳನ್ನು ವಿಮಾನ ಬಾಂಬುಗಳನ್ನು ಉಪಯೋಗಿಸಿ ತಂತಲ್ಲಾ?"

'ಅದು ಇದ್ದೂಂತೇನು? ನೀರಲ್ಲಿ ಮುಳುಗುವವನು ಕೈಕಾಲು ಬಡಿಯುವಂತೆ ಯಾಹ್ಯಾಖಾನರು ಸಿಕ್ಕಸಿಕ್ಕದ್ದನ್ನು ಬಳಸಿಕೊಂಡರು....'

"ಅದು ಮಾತ್ರವಲ್ಲ ನೋಡಿ, ಅಮೆರಿಕೆ ತನಗೆ ನೀಡಿದ ಪ್ಯಾಟನ್ ಟ್ಯಾಂಕುಗಳನ್ನೂ ಸೇಬರ್ ಜೆಟ್ ವಿಮಾನಗಳನ್ನೂ ಯಾಹ್ಯಾಖಾನರು ಬಳಸಿಕೊಂಡಿದ್ದಾರಂತಲ್ಲ?'

'ಅದ್ರಲ್ಲೇನು ವಿಶೇಷಾಂತ? ಕೆಂಪು ಚೀನಾದಿಂದ ಬಂದವುಗಳೂ ಇವೆಯಂತೆ. ರಶ್ಯಕೊಡಮಾಡಿದ್ದೂ ಇರಬಹುದು."

"ಏನೂ ವಿಶೇಷವಿಲ್ಲಾಂತೀರಾ? ಅಲ್ಲ, ಕಮ್ಯುನಿಜಂ ವಿರೋಧಿ ಹೋರಾಟದಲ್ಲಿ ಬಳಸಲೆಂದು ಅಮೆರಿಕೆ...."

'ನೋಡಮ್ಮ, ಶಸ್ತ್ರಾಸ್ತ್ರ ನಮ್ಮ ಕೈಗೆ ಬಂದ ಮೇಲೆ ಅದನ್ನು ಬಳಸುವವರು ನಾವು ತಾನೆ? ಅದ್ರಲ್ಲೂ ಪಾಕಿಸ್ತಾನ ಹೀಗೆ ದುರುಪಯೋಗ ಮಾಡಿದ್ದು ಮೊದಲ ಬಾರಿಗಲ್ಲ....'

'ಅದು ಹೌದೂನ್ನಿ. ನಮ್ಮ ಮೇಲೆ ಆಕ್ರಮಣ ಮಾಡಿದಾಗಲೂ ಅಮೆರಿಕನ್ ಶಸ್ತ್ರಾಸ್ತ್ರಗಳನ್ನು ಬಳಸಿತ್ತು.'

'ನೋಡು, ಅಮೆರಿಕೆ ಮಾತು ತಪ್ಪಿದವರನ್ನು ಹೇಗೆ ಶಿಕ್ಷಿಸಿತು?'

'ಮತ್ತೂ ಒಂದಷ್ಟು ಉಡುಗೊರೆ ನೀಡಿ ಗೌರವಿಸಿತು.'

'ಮತ್ತೆ ಹಾಗಿರುವಾಗ ಯಾಹ್ಯಾಖಾನರದ್ದೇನು ತಪ್ಪು? ಮದುವೆಗೆಂದು ಕೊಡಿಟ್ಟ ಉಪ್ಪಿನಕಾಯಿಯನ್ನು ಜೀವ ಹೋಗುವ ವೇಳೆಯೂ ತಿನ್ನ ಬಾರದು ಎಂದರೆ....'

'ಅದೇನು ತಿಂದರೂ ಅವರದ್ದು ಕತೆ ಮುಗಿದಂತೆಯೇ....'

'ಭಾರೀ ಸುಲಭದಲ್ಲಿ ನಿರ್ಣಯಿಸುತ್ತೀಯೇ ನೀನು. ಯಾಹ್ಯಾಖಾನರೇನು ನೊಣಾಂತ ಭಾವಿಸಿದೆಯೇನು?'

'ಅಲ್ಲಾರಿ, ಹದಿನೆಂಟು ವರ್ಷ ತುಂಬಿದವರೆಲ್ಲ ಸೈನ್ಯ ಸೇರಬೇಕೆಂದು ಅವರು ಆಜ್ಞೆ ನೀಡಿದ್ದಾರಂತೆ.'

'ಸರಿಯೇ. ಪೂರ್ವದ ಏಳೂಮುಕ್ಕಾಲು ಕೋಟಿ....'

'ಮುಕ್ಕಾಲಲ್ಲಿ ಒಂದುಕಾಲು ಸತ್ತು ಹೋಯ್ತು....'

'ಹೋಗಲಿ, ಉಳಿದ ಸಾಡೇಸಾತು.'

'ಪಾಪ, ಯಾಹ್ಯಾಗೀಗ ಸಾಡೇಸಾತ್ ಹಿಡಿದಿರ ಬೇಕು....'

'ಎದುರಿಸಲು ಈ ಸನ್ನಾಹ ಅಗತ್ಯವಿರಬೇಕು...'

'ಅದು ಸರೀನ್ನಿ. ಅಂತೂ ಅಯ್ಯೂಬರು ಸುಲಭದಲ್ಲಿ ಬಂಗ್ಲಾ ಬಿಟ್ಟು ಕೊಡುವುದಿಲ್ಲ....'

'ಅಲ್ವೆ, ಅವ್ರೂಂತೇನು, ನಿನ್ನ ಕೈಯಲ್ಲಿದ್ದದ್ದನ್ನಾದರೂ ನೀನು ಸುಂಸುಮ್ನೆ ಬಿಡ್ತೀಯೇನು? ಹಾವು ಪರೆಯನ್ನು ಬಿಚ್ಚುವಂತೆ ಸೀತೆಯನ್ನು ರಾಮನೊಬ್ಬ ಬಿಟ್ಟಿಟ್ಟಾಂತ'

'ಹಾಗಲ್ಲಾರಿ, ನೋಡಿ ಲೋಕದ ಹೆಚ್ಚಿನ ದೇಶಗಳು ಬಂಗ್ಲಾ ಜನರಿಗೆ ಬೆಂಬಲ ನೀಡಿದ್ದಾವೆ. ಸಹಾನುಭೂತಿ ತೋರಿಸಿದ್ದಾವೆ. ಇನ್ನೂ ನಾಲ್ಕು ದಿನ ಕಳೆದರೆ, ಮನ್ನಣೆಯನ್ನೂ ನೀಡಬಹುದು....'

'ಅದು ಸರೀನ್ನು. ನಮ್ಮ ಸಂಸತ್ತು ಏಕಮತದಿಂದ ಸಂಪೂರ್ಣ ಸಹಾನುಭೂತಿಯನ್ನೂ ಬೆಂಬಲವನ್ನೂ ತೋರಿಸಿದೆಯೆಂದ ಮೇಲೆ....."

'ಅಲ್ಲಾರಿ, ಇಂದಿರಾಗಾಂಧಿಯೇ ಈ ಬಗ್ಗೆ ನಿರ್ಣಯವನ್ನು ಮಂಡಿಸಿದರಲ್ಲಾ....'

'ಏನಾಯ್ತದರಲ್ಲಿ?'

'ಮತ್ತೇನೂ ಇಲ್ಲ....ಬಂಗ್ಲಾ ದೇಶದ ಸಾಮೂಹಿಕ ನರಮೇಧವನ್ನು ವಿರೋಧಿಸುವುದು ಸಹಜವೆನ್ನಿ.'

'ನೋಡಮ್ಮ, ಭಾರತದಲ್ಲಿ ಎಲ್ಲೋ ಒಂದೆರಡೆಡೆ ಹಿಂದೂ—ಮುಸಲ್ಮಾನರ ನಡುವೆ ಗಲಭೆ ನಡೆದಾಗ, ಬೆರಳೆಣಿಕೆಯ ಮುಸಲ್ಮಾನರು ಸತ್ತರೆಂದರೆ ಸಾಕು, ಭಾರತದಲ್ಲಿ ಮುಸಲ್ಮಾನರ ಜೀವಕ್ಕೆ ಸದಾ ಅಪಾಯವಿದೆ ಎಂದು ತಿರುಬೊಬ್ಬೆ ಹಾಕುತಿತ್ತು ಪಾಕಿಸ್ತಾನ. ವಿಶ್ವಸಂಸ್ಥೆಯಲ್ಲೂ ದೂರಿಡಲು ಮುನ್ನುಗ್ಗುತಿತ್ತು ಅದು. ಈಗ ಪೂರ್ವದ ಮುಸಲ್ಮಾನರ ಮೇಲೆ ಪಶ್ಚಿಮದ ಮುಸಲ್ಮಾನರೇ ಗುಂಡು ಹಾರಿಸಿ, ಬಾಂಬೆಸೆದು, ಟ್ಯಾಂಕು ಹರಿಸಿ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಕೊಲೆ ಮಾಡುತಿದ್ದಾರಲ್ಲಾ....'

'ನೋಡಿ, ಇದು ಅಂತರ್ಯುದ್ಧ.'

'ಹೌದು. ಆದರೂ ಮಾನವ ಜನಾಂಗವನ್ನು ಕೊಲೆ ಮಾಡುವ ಅಂತರ್ಯುದ್ಧ ಅಮಾನುಷ. ಇದು ಮಾನವತೆಗೊಂದು ಪಂಥಾಹ್ವಾನ...."

'ಇರಬಹುದು. ನೋಡಿ, ನನಗೇನೋ ಅನಿಸುತ್ತೆ...."

'ಏನು?"

'ಬಂಗ್ಲಾ ಜನರಿಗೆ ಸಹಾನುಭೂತಿ ತೋರಿಸಲಿ. ಆದರೆ, ನಾಳೆ ಬೆಳಿಗ್ಗೆ ನಮ್ಮ ದೇಶದ ಒಂದು ರಾಜ್ಯವೂ ಏಕಪಕ್ಷೀಯವಾಗಿ ಸ್ವಾತಂತ್ರ್ಯ ಘೋಷಿಸಿಕೊಂಡರೆ, ಆಗ ಇಂದಿರಾ ಗಾಂಧಿ ಅದನ್ನು ಒಪ್ಪಿಕೊಳ್ಳುತ್ತಾರೆಯೇಂತ?'

'ಏನಿದು? ಭಾರತ ಏಕ್ಯಕವಾದದ್ದು. ಇದನ್ನು ಒಡೆಯುವ ಬಗ್ಗೆ ಕನಸಿನಲ್ಲೂ ಎಣಿಸಬಾರದು....'

'ಅದು ಹೌದ್ರಿ. ಆದರೆ, ಒಂದು ವೇಳೆ ಬಂಗ್ಲಾದಂತೆಯೇ ಕಾಶ್ಮೀರಿಗಳೋ,ತಮಿಳರೊ ಮುಂದರಿದರೆ....'

'ನೋಡಮ್ಮ, ನಮ್ಮ ದೇಶದಲ್ಲಿ ಅದು ಸಾಧ್ಯವಾಗೋದಿಲ್ಲ. ನಾವೆಲ್ಲ ಒಂದೇ ಎಂಬ ಭಾವನೆ ಹೃದಯಾಂತರಾಳದಲ್ಲಿದೆ. ಕೆಲವೊಂದು ತೋರಿಕೆಯ ಭಿನ್ನಮತಗಳು ರಾಜ್ಯ–ಕೇಂದ್ರಗಳಗಿದ್ದರೂ ಅವೆಲ್ಲ ಎಳ್ಳು ಮಾತ್ರ.'

'ಪಾಕಿಸ್ತಾನದಲ್ಲಿ ಹಾಗಿರಲಿಲ್ಲ?'

'ಪೂರ್ವ–ಪಶ್ಚಿಮ ಪಾಕಿಸ್ತಾನಗಳ ನಡುವೆ ಬಹಳ ಭೇದವಿದೆ ಮುಸಲ್ಮಾನರು ಎಂದ ಮಾತ್ರಕ್ಕೆ. ಅದರಲ್ಲಿ ಸಮಾನತೆಯಿಲ್ಲ. ಪೂರ್ವದವರಲ್ಲಿ ವಿರುದ್ಧ ಬಂಗಾಳಿ ರಕ್ತ ಹರಿಯುತ್ತದೆ, ಅವರು ಸಹಬಾಳ್ವೆಯನ್ನೂ ಸುಖವನ್ನೂ ಬಯಸುತ್ತಾರೆ.ಅವ್ರ ಮೇಲೆ ಮಿಲಿಟರಿ ಶಾಸನ ಅವರನ್ನು ಶೋಷಿಸುತ್ತಲೇ ಬಂದಿರುವುದರಿಂದ ನೊಂದು ಬೆಂದವರ ಒಡಲ ಬೇಗೆಯೊಗ ಭುಗಿಲ್ಲೆಂದಿದೆ. ನಮ್ಮ ದೇಶದಲ್ಲಿ ಅಂತಹ ಪರಿಸ್ಥಿತಿಯಿಲ್ಲ, ಎಲ್ಲ ರಾಜ್ಯಸರಕಾರಗಳು ಪ್ರಜಾಸತ್ತಾತ್ಮಕವಾಗಿಯೇ ನಡೆಯುತ್ತಿವೆ.'

'ಅಲ್ಲಾರಿ, ತಮಿಳುನಾಡಿನವರು–ಪ್ರತ್ಯೇಕ ಧ್ವಜ ಕೇಳಿದ್ದಾರೆ, ಹಿಂದಿ ವಿರೋಧಿಸಿದ್ದಾರೆ, ಹಿಂದೂ ದೇವತೆಗಳಿಗೆ ಅಪಮಾನ ಮಾಡಿದ್ದಾರೆ....'

'ಆದರೂ ಏನೂ ಆಗಿಲ್ಲ ನೋಡು. ನಮ್ಮದು ಸಹನಾಶಕ್ತಿ ಭರಿತ ಬಾಳ್ವೆ. ವ್ಯಕ್ತಿ ಸ್ವಾತಂತ್ರ್ಯದಲ್ಲಿ ವಿಶ್ವಾಸವುಳ್ಳವರು ನಾವು. ರಾಮಸ್ವಾಮಿನಾಯ್ಕರಿಗೆ ರಾಮನ ಮೂರ್ತಿಯ ಮೇಲೆ ಚಪ್ಪಲಿಯಿಂದ ಬಾರಿಸುವ ಸ್ವಾತಂತ್ರ್ಯವಿದೆ. ಹಾಗೆಯೇ ಹಸನಬ್ಬನಿಗೆ ಧರ್ಮಸ್ಥಳದ ಮಂಜುನಾಥನಿಗೆ ಶರಣಾಗಿ ತನ್ನ ಹೆಂಡತಿಯ ರೋಗ ದೂರ ಮಾಡುವಂತೆ ಬೇಡುವ ಸ್ವಾತಂತ್ರ್ಯವೂ ಇದೆ.'

'ನೋಡಿ, ಧರ್ಮದ ಹೆಸರಿನಲ್ಲಿ....'

'ಧರ್ಮವಲ್ಲವೆ, ಮತ....'

'ಹೌದು. ಮತದ ಹೆಸರಲ್ಲಿ ಒಂದು ದೇಶ ಕಟ್ಟುವುದು ತೀರ ಹುಚ್ಚು.'

'ಹಾಗೆಯೇ ಭಾಷೆಯ ಹೆಸರಲ್ಲಿ ರಾಜ್ಯ ಕಟ್ಟುವುದೂ....'

"ಹ್ಞಾಂ....ಅಲ್ಲಾರಿ, ಮುಜಿಬ್‌ರನ್ನು ಸೆರೆ ಹಿಡಿದು ಲಾಹೋರಿಗೆ ತಂದಿದೆಯೆಂದು ಪಾಕ್ ರೇಡಿಯೋ ಬಿತ್ತರಿಸಿದೆಯಂತೆ...."

"ಟಿಕ್ಕಾಖಾನರು ಸತ್ತಿಲ್ಲವೆಂದೂ ಅದು ಹೇಳುವುದಿಲ್ಲವೆ?"

'ಅಂದ್ರೆ ಮುಜಿಬ್ ಇನ್ನೂ ಸ್ವತಂತ್ರರಿದ್ದಾರೆನ್ನುತ್ತೀರಾ?'

"ನೋಡಮ್ಮ, ಮುಜಿಬುರ್ ನಿನ್ನೆಯೂ ಸ್ವತಂತ್ರ, ಇಂದೂ ಸ್ವತಂತ್ರ, ನಾಳೆಯೂ ಸ್ವತಂತ್ರ, ಪೂ. ಬಂಗಾಳಿಗಳಲ್ಲಿನ ಕೆಚ್ಚಿಗೆ ಕಿಚ್ಚಿಟ್ಟು ಅವರನ್ನು ಬಂಧಿಸಲು ಯಾಹ್ಯಾಖಾನರಿಂದ ಅಸಾಧ್ಯ."

"ಅಂದ್ರೆ, ಯಾಹ್ಯಾಖಾನರು ಅವರಿಗೆ ಶರಣಾಗ ಬೇಕು...."

'ಬಂಗ್ಲಾ ದೇಶದ ಜನತೆಯು ಆಶೋತ್ತರಗಳನ್ನು ನಡೆಸಿಕೊಡಬೇಕು....'

—ಗೋರಾ.

(ಮೂರನೇ ಪುಟದಿಂದ)

ಗ್ರಾಮಕ್ಕೆ ಸಹಾನುಭೂತಿತೋರಿಸಿದ ಪ್ರಜಾಪ್ರಭುತ್ವ ದೇಶ.

ಪಾಕಿಸ್ತಾನವು ತನ್ನ 'ಸಹೋದರರ ಮೇಲೆ ಪ್ರಯೋಗ ಮಾಡಿದ ಮಾಡುತ್ತಿರುವ ಶಸ್ತ್ರಾಸ್ತ್ರಗಳು ಅಮೆರಿಕೆಯಿಂದಕೊಂಡದ್ದು. ಅಮೆರಿಕೆಯೊದರೋ ಕಮ್ಯೂನಿಜಂನ ವಿರುದ್ಧ ಹೋರಾಡಲು ಅದಕ್ಕೆ ನೀಡಿದ್ದು ಅವನ್ನು. ಈಗ ಆ ಶಸ್ತ್ರಾಸ್ತ್ರಗಳು 'ಪಾಕಿಸ್ತಾನಿ ಪ್ರಜೆಗಳ ವಿರುದ್ಧ'ವಾಗಿಯೇ ಬಳಕೆಯಾಗುತ್ತಿವೆ. ಗಣಾರಿಂದಲೂ ಅಮೆರಿಕೆಯಿಂದ ಮಿಲಿಟರಿ ನೆರವನ್ನು ಪಡೆಯುವುದನ್ನು ಪೂ. ಬಂಗಾಳವು ವಿರೋಧಿಸುತ್ತಲೇ ಬಂದಿದೆ. ಅದರೊಡನೆ ಇತರ ದೇಶಗಳೂ ಪಾಕಿಸ್ತಾನಕ್ಕೆ ನೀಡುವ ಸೈನಿಕ ನೆರವಿನ ಬಲದಿಂದ ಪಶ್ಚಿಮ ಪಾಕಿಸ್ತಾನವು ಪೂರ್ವ ಪಾಕಿಸ್ತಾನವನ್ನು ದಮನಿಸುತ್ತದೆಂದವರ ಭಯವೀಗ ಸತ್ಯವಾಗಿದೆ. ರಶ್ಯ-ಚೀನಾಗಳಿಂದ ಬಂದ ಶಸ್ತ್ರಾಸ್ತ್ರಗಳೂ ಈ ಅಂತರ್ಯುದ್ಧದಲ್ಲಿ ಬಳಕೆಯಾಗದುಳಿಯಲು ಸಾಧ್ಯವಿಲ್ಲ. ಹೀಗೆ ತಾವು ಯಾವುದೋ ನಿರ್ದಿಷ್ಟ ಉದ್ದೇಶಗಳಿಗೆಂದು ನೀಡಿದ್ದ ಶಸ್ತ್ರಗಳು ದೇಶೀಯರ ವಿರುದ್ಧವೇ ಬಳಕೆಯಾಗುತ್ತಿರುವುದನ್ನು ಕಂಡೂ ಕಂಡೂ ಬಾಯ್ಬಿಡದಿರುವ ಬೃಹತ್ ರಾಷ್ಟ್ರಗಳ ಬಾಲಂಗೋಚಿತನ ಮತ್ತೊಮ್ಮೆ ಜಗಜ್ಜಾಹೀರಾಯ್ತು. ಹಿಂದೆ ಪಾಕ್–ಭಾರತ ಹೋರಾಟ ವೇಳೆಯೊಮ್ಮೆ ಅವುಗಳ ಷಂಡತನ ಪ್ರಕಟವಾಗಿತ್ತು. ●

ಗಿರಿಜಮ್ಮನವರ ನಿಧನ

ಯಕ್ಷಗಾನ ಕವಿಗಳೂ ಪ್ರಸಿದ್ಧ ಅರ್ಥಗಾರರೂ ಆಗಿದ್ದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪತ್ನಿ (ಡಾ| ಕೆ. ಮಂಜುನಾಥ ಶೆಟ್ಟರ ಅಕ್ಕ ವ ಮೂಡಿಗೆರೆ ಡಾ| ಪಿ. ಎ. ಅಧ್ಯಾಪಕರ ಅತ್ತೆ) ಶ್ರೀಮತಿ ಗಿರಿಜಮ್ಮನವರು ತಾ. 30–3–71ರಂದು ಮಂಗಳೂರಲ್ಲಿ ನಿಧನ ಹೊಂದಿದರು. ದಿವಂಗತರ ವೈಕುಂಠ ಸಮಾರಾಧನೆಯು ತಾ. 6–4–71ರಂದು ಮಂಗಳೂರು ಡೊಂಗರ ಕೇರಿ ಹರಿಶೆಟ್ಟರ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಯಥಾಸಾಂಗವಾಗಿ ನೆರವೇರಿತು.

ಪಟೇಲ್ ವೈ. ವಿಠಲ ಹೆಗ್ಡೆಯವರ ನಿಧನ

ಜನಪ್ರಿಯರೂ, ಕಾರ್ಯಶೀಲರೂ, ಸೇವಾಮನೋವೃತ್ತಿಯವರೂ ಆಗಿದ್ದ ಯೇಣಗುಡ್ಡೆ ಪಟೇಲ್ ವೈ. ವಿಠಲ ಹೆಗ್ಡೆಯವರು ತಾ.1–4–71ನೇ ಸಂಜೆ ದಿವಂಗತರಾದರೆನ್ನಲು ವಿಷಾದಿಸುತ್ತೇವೆ. ದಿವಂಗತರ ಶವ ಸಂಸ್ಕಾರ ಕ್ರಿಯೆಯು ಮರುದಿನ ಬೆಳಿಗ್ಗೆ ಸ್ವಗೃಹದಲ್ಲಿ ನೆರವೇರಿತು. ದಿವಂಗತರು ಯೇಣಗುಡ್ಡೆ ಪಟೇಲ್ ಶ್ರೀ ರಾಮಯ್ಯ ಹೆಗ್ಡೆಯವರ ಅಳಿಯಂದಿರೂ, ಕೆಮ್ಮಣ್ಣು ಪಡುಮನೆ ಡಿ. ಸಂಧ್ಯಪ್ಪ ಶೆಟ್ಟರ ಜ್ಯೇಷ್ಠ ಪುತ್ರರೂ ಆಗಿದ್ದರು. ದಿವಂಗತರು ಹಲವಾರು ಸಂಘ ಸಂಸ್ಥೆಗಳ ಸಂಪರ್ಕ ಬೆಳೆಸಿಕೊಂಡು ಜನಪ್ರಿಯತೆಗಳಿಸಿದ್ದರು.

ತಾ. 9ರಂದು ಡಾ| ಕೊರಡ್ಕಲ್ಲರ ಅಧ್ಯಕ್ಷತೆಯಲ್ಲಿ ಪಂಚಾಯತ್ ಕಚೇರಿಯಲ್ಲಿ ದಿವಂಗತರ ಬಗ್ಗೆ ದುಃಖ ಸೂಚಕ ಸಭೆಯೊಂದು ಜರಗಿ ಶ್ರೀಗಳಾದ ಶ್ರೀ ಗೋಪಾಲಕೃಷ್ಣ ನಾಯಕ್, ಪಿ. ನಾರಾಯಣ ಹೆಗ್ಡೆ, ಕೆ. ವೆಂಕಟೇಶ ಪೈ ಮೊದಲಾದವರು ದಿವಂಗತರ ಕಾರ್ಯ ಚಟುವಟಿಕೆಗಳನ್ನು ಜನಪ್ರಿಯತೆಯನ್ನು ಕೊಂಡಾಡಿ ಗುಣಗಾನ ಮಾಡಿದರು. ಪಂಚಾಯತ್ ಅಧ್ಯಕ್ಷ ಶ್ರೀ ಪಿ. ವಿಶ್ವನಾಥ್ ನಾಯಕರು ದಿವಂಗತರ ಆತ್ಮಕ್ಕೆ ಶಾಂತಿಕೋರಿದರು.

ದಕ್ಷಿಣೆ ಇಡು ದಕ್ಷಿಣೆ!

(ಎರಡನೇ ಪುಟದಿಂದ)

ಆದರೆ ಪೆನ್ಶನ್ನದ ಹಣ ಸಿಗಲಿಲ್ಲ. ಪ್ರತಿ ಹದಿನೈದು ದಿನಕ್ಕೊಂದು ಕಾಗದ ಬರೆಯುತ್ತಲೇ ಇದ್ದನು. ಪರಿಶೀಲನೆಯಲ್ಲಿದೆ ಬೇಗನೆ ವ್ಯವಸ್ಥೆ ಮಾಡಲಾಗುವುದು ಎಂದು ಗೊತ್ತಿದ್ದ ಸರಕಾರಿ ಉತ್ತರ ಬರುತ್ತಿತ್ತು. ಐದು ವರ್ಷಗಳಲ್ಲಿ ನಾವು ಕಂಗಾಲರಾದೆವು ಮನೆಯಲ್ಲಿ ಆಭರಣ ಇದ್ದ ಬಿದ್ದ ವಸ್ತುಗಳನ್ನು ಮಾರಿ ಜೀವಿಸಿದೆವು. ಈಗ ನಮ್ಮಲ್ಲಿ ಏನೂ ಉಳಿದಿಲ್ಲ. ಉಪವಾಸದ ತಾಪಕ್ಕೆ ಬೇಸತ್ತು ಹಾಗು ನಮ್ಮ ಸಂಕಟವನ್ನು ನೋಡಲಾರದೆ ಅಸು ನೀಗಿದರು.

ಮತ್ತೇನಾದರೂ ಭಾನಗಡ(ಗೊಂದಲ) ಅವರದು ಇತ್ತೇನು?

ಅವಳು ನಾರದರ ಕಡೆಗೆ ಸಿಟ್ಟುಗಣ್ಣಿನಿಂದ ನೋಡಿದಳು. ನಾರದನು ಸ್ವಲ್ಪ ಹೆದರಿದನು; ತುಸು ಹೊತ್ತಿನ ನಂತರ ಅವಳು ಮಹಾರಾಜ! ತಾವು ಸಾಧುಗಳು ಸಿದ್ಧ ಪುರುಷರು ತಡೆಹಿಡಿಯಲ್ಪಟ್ಟ ಪೆನ್ಶನ್ನನ್ನು ದೊರಕಿಸಿಕೊಡಿರಿ. ಹ್ಯಾಗಾದರೂ ಜೀವಿಸುವೆವು.

ನಾರದನಿಗೆ ಅಂತಃಕರಣ ಉಂಟಾಯಿತು. ಅವನು ನಮ್ಮಂಥ ಸಾಧುಗಳನ್ನು ಯಾರು ಕೇಳಬೇಕು? ಕಾಲ ಈಗ ವಿಚಿತ್ರವಾಗಿದೆ. ಇಲ್ಲಿ ನಮ್ಮದೇನು ಮಠ-ಗಿಠ ಇಲ್ಲ. ಆದರೂ ಕಚೇರಿಗೆ ಹೋಗಿ ಪ್ರಯತ್ನ ಮಾಡಿನೋಡುವೆ.

ನಾರದನು ತಂಬೂರಿ ಬಾರಿಸುತ್ತ ಅಲ್ಲಿಂದ ಹೊರಟು ನೇರವಾಗಿ ಆಫೀಸಿಗೆ ಹೋಗಿ ಕಾರಕೂನನನ್ನು ವಿಚಾರಿಸಿದ. ಅವನು ಭೋಲಾರಾಮನ ಪೆನ್ಶನ್‌ನ ವಿಷಯವಾಗಿ ಹೇಳಿದ—ಅವನ ಅರ್ಜಿ ಬಂದನೆ, ರಿಮಾಂಡರ ಬಂದದೆ, ಆದರೆ ಉಪಯೋಗವೇನು? ದಕ್ಷಿಣಾ ದ್ರವ್ಯ ಬರಬೇಕಲ್ಲವೇ? ಅಂದ ಮೇಲೆ ಕೆಲಸ ಆಗುವುದು ಹೇಗೆ? ಇದೇನು ಸತ್ಯಯುಗವೇ?

ನೀವು ಸಾಧುಗಳು. ಜಗತ್ತಿನ ಸದ್ಯದ ಸ್ಥಿತಿ ನಿಮಗೇನು ಗೊತ್ತು? ಅರ್ಜಿಯ ಜೊತೆಗೆ ಯಾವಾಗಲೂ ದಕ್ಷಿಣಾ ಬೇಕೇ ಬೇಕು. ಕೇವಲ ಅರ್ಜಿಗಳಿಂದ ಕೆಲಸವಾಗದು. ಒಳ್ಳೇದು ಒಳಗೆ ಹೋಗಿರಿ. ಎಂದು ನಾರದನನ್ನು ಒಳಗೆ ಕಳಿಸಿದನು.

ನಾರದನು ಒಟ್ಟು ಇಪ್ಪತ್ತಮೂರು ಮೇಜುಗಳ ಸುತ್ತುವರಿದನು. ಪೃಥ್ವಿ ಪ್ರದಕ್ಷಿಣೆಯಲ್ಲಿ ಅವನಿಗೆ ಇಷ್ಟು ವೇಳೆ ಬೇಕಾಗಲಿಲ್ಲ ಕೊನೆಗೆ "ದೊಡ್ಡ ಸಾಹೇಬರ ಕಡೆಗೆ ಹೋಗಿರಿ"ಎಂಬ ಸೂಚನೆ ಬಂದಿತು.

ನಾರದನು ಸಾಹೇಬರ ಬಾಗಿಲಿಗೆ ಬಂದನು. ಏ ಮಹಾರಾಜ! ಇದನ್ನು ದೇವಾಲಯ ಎಂದು ತಿಳಿದುಕೊಂಡಿರೇನು? ಎಂದು ಪಟ್ಟೇವಾಲಾ ಕೇಳಿದನು.

ನಾರದನು ನಕ್ಕು ಬಾಗಿಲನ್ನು ನೂಕಿ ಒಳಗೆ ಪ್ರವೇಶಿಸಿದನು.

ಸಾಹೇಬರು ವಿದ್ಯುದ್ವೀಜಣಿಕೆಯನ್ನಿಟ್ಟುಕೊಂಡು ಫಾಯಿಲ್‌ಗಳನ್ನು ತಿರುವುತ್ತಿದ್ದರು. ನಾರದರ ಮೂರ್ತಿಯನ್ನು ಆಪಾದ ಮಸ್ತಕ ನೋಡಿ ಏನು ಕೆಲಸ? ಎಂದು ಕೇಳಿದರು. ನಾರದನು ಶುದ್ಧ ಭಾಷೆಯಲ್ಲಿ ಭೋಲಾರಾಮನ ವಿಷಯವನ್ನು ತಿಳಿಸಿದನು.

ಸಾಹೇಬರು— ನೀವು ಬೈರಾಗಿಗಳು.... ನಿಮಗೆ ಆಫೀಸದ ಕಾಯ್ದೆ ಕಾನೂನು ಗೊತ್ತಿಲ್ಲ. ಭೋಲಾರಾಮನು ಇಷ್ಟು ವರ್ಷ ನೌಕರಿ ಮಾಡಿದರೂ ಅವನಿಗೂ ಸಹ ಇಂಥ ಸಾದಾ ವಿಷಯ ಗೊತ್ತಾಗಲಿಲ್ಲ. ಬೈರಾಗಿ ಬುವಾ!.... ಇದು ಒಂದು ಬಗೆಯ ಮಂದಿರ (ದೇವಾಲಯ). ಇಲ್ಲಿಯೂ ಕೂಡ ದಾನ-ಧರ್ಮ ಮಾಡಬೇಕಾಗುತ್ತದೆ. ನೀವು ಭೋಲಾರಾಮನ ಆಪ್ತರೆಂಬಂತೆ ಕಾಣುತ್ತದೆ. ಭೋಲಾರಾಮನ ಪೆನ್ಶನ್ ಅರ್ಜಿಯು ದಕ್ಷಿಣೆ ಇಲ್ಲದ್ದಕ್ಕೆ ಹಾಗೆಯೇ ಬಿದ್ದುಕೊಂಡಿದೆ.

ದಕ್ಷಿಣೆ ಕೊಡುವ ಮನುಷ್ಯ ಬಂದು ನಿಂತಿದೆ ಎನ್ನಿರಿ! ಎಂದು ನಾರದನು ನಿಟ್ಟುಸಿರುಬಿಟ್ಟನು.

ಅದಕ್ಕೆ ಉಪಾಯವಿಲ್ಲ.... ಸರಕಾರಿ ಪೆನ್ಶನ್ ಕೆಲಸವೆಂದರೆ ಇಪ್ಪತ್ತು ಕಚೇರಿಗಳನ್ನು ತಿರಗಬೇಕು ತಡವಾಗುವದು ಸಹಜವೆ. ಅದನ್ನು ನಿಶ್ಚಿತವಾಗಿ ಹೇಳುವದು ಹೇಗೆ?.... ಎಷ್ಟು ಪೆನ್ಶನ್ ದೊರೆಯುವದೊ ಅಷ್ಟು ವೆಚ್ಚವಾಗುವದು.... ಅದರಲ್ಲಿ ಒಂದು ಕೆಲಸ ಆದರೂ ಆದೀತು. ಆದರೆ,

ಆದರೆ? ಅಂದರೇನು ಎಂದು ನಾರದನು ಕೇಳಿದನು. ಸಾಹೇಬನು ಬಾಯಿಬಿಟ್ಟು ಹಲ್ಲು ಕಿಸಿದು ದಕ್ಷಿಣೆ ಬೇಕು ನಿನ್ನ ತಂಬೂರಿ! ಚೆನ್ನಾಗಿದೆ. ಭೋಲಾರಾಮನ ಪೆನ್ಶನ್ ಪ್ರಕರಣದಲ್ಲಿ ದಕ್ಷಿಣೆ ಎಂದು ನೀನು ಅದನ್ನು ಇಡು. ನಮ್ಮ ಮಗಳು ಸಂಗೀತ ಕಲಿಯುತ್ತಿರುವಳು. ನಾನು ಅದನ್ನು ಅವಳಿಗೆ ಕೊಡುವೆ. ಸಾಧು ಸಂತರ ತಂಬೂರಿಯಿಂದ ಸ್ವರವು ಚೆನ್ನಾಗಿ ಹೊರಡುವದೆಂದು ಹೇಳುವರು ಎಂದು ಹೇಳಿ ನಾರದನ ತಂಬೂರಿಯನ್ನು ಕಸಿದುಕೊಂಡು ಮೇಜಿನ ಬಳಿಯಲ್ಲಿ ಇಟ್ಟನು.

ಇನ್ನು ಮೇಲಾದರೂ ಪೆನ್ಶನ್ ಹಣ ಬೇಗನೆ ದೊರೆಯುವಂತೆ ವ್ಯವಸ್ಥೆ ಮಾಡಿರಿ.

ಇನ್ನೇನು ಕೆಲಸ ಬೇಗನೆ ಆಗುವದು. ಸಿಪಾಯಿಯು ಫೈಲ್ ತಂದನು. ಭೋಲಾರಾಮನ ನೂರಾರು ಅರ್ಜಿಗಳು ಅದರಲ್ಲಿದ್ದವು. ಫೈಲು ಗಡುತರವಾಗಿತ್ತು. ಅದರಲ್ಲಿ ಪೆನ್ಶನ್‌ದ ಸರಕಾರಿ ಕಾಗದವೂ ಇತ್ತು. ಸಾಹೇಬನು ಫೈಲದ ಮೇಲಿನ ಹೆಸರನ್ನು ಓದಿದನು....ಮತ್ತು ನಾರದನಿಗೆ ಕೇಳಿದನು ಹೆಸರು ಏನಿದೆ? ಎಂದು

'ಭೋಲಾರಾಮ ಸದಾಸುಖಿ' ನಾರದನು ದೊಡ್ಡ ಧ್ವನಿಯಿಂದ ಹೇಳಿದನು ಅಷ್ಟರಲ್ಲಿ ಆಶ್ಚರ್ಯ ಘಟಿಸಿತು ಫೈಲದಿಂದ ಒಮ್ಮೆಲೇ ಧ್ವನಿ ಕೇಳಿಸಿತು.

ಯಾರು ನನ್ನನ್ನು ಕರೆಯುವರು? ಪೋಸ್ಟ್‌ಮನ್ನನೇನು?

ನಾರದನಿಗೆ ಆಶ್ಚರ್ಯವಾಯಿತು. ಮರುಕ್ಷಣದಲ್ಲಿ ಎಲ್ಲವೂ ನಿಶ್ಯಬ್ಧ

ಭೋಲಾರಾಮ! ಅರೆ ಭೋಲಾರಾಮಾ ನಿನ್ನ ಜೀವವು ಮಾತಾಡುತ್ತಿರುವದೇ? 'ಹೌದು' ಮತ್ತೆ ಧ್ವನಿ ಕೇಳಿಸಿತು.

ನಾನು ನಾರದ ನಿನ್ನನ್ನು ಕರದೊಯ್ಯಲು ಬಂದಿರುವೆನು....ಸ್ವರ್ಗದಲ್ಲಿ ನಿನಗೆ ಹೆಡ್ ಕ್ಲಾರ್ಕ ಜಾಗೆ ಕಾದಿರಿಸಿದೆ....ಚಿತ್ರಗುಪ್ತನು ಆತುರತೆಯಿಂದ ನಿನ್ನ ದಾರಿಯನ್ನೇ ನೋಡುತ್ತಿರುವನು.

ಇಲ್ಲ! ನಾನು ಬರುವುದಿಲ್ಲ! ನನ್ನ ಜೀವವು ಪೆನ್ಶನ್ನದ ಕಾಗದಪತ್ರದಲ್ಲಿ ಸಿಲುಕಿದೆ ....ನನ್ನ ಕೆಲಸ ಪೂರ್ಣವಾಗದ ಹೊರತು, ನಿಮ್ಮ ಸ್ವರ್ಗಕ್ಕೆ ಬರಲಾರೆ.

ನಾರಾಯಣ! ನಾರಾಯಣ! ಎಂದು ನಾರದನು ಕಪಾಳಕ್ಕೆ ಬಡಿದುಕೊಂಡನು.

(ಸಂದರ್ಶನ)

ಹೃದಯದ ಮಿಡಿತವನ್ನು ಟೆಲಿಫೋನಿನಲ್ಲಿ ಕೇಳಬಹುದೇ?

ಟೆಲಿಫೋನ್ ಯಂತ್ರಗಳು ವೈದ್ಯರಿಗೆ ಬಹಳ ಕಾಲದಿಂದಲೂ ಸಹಾಯಕವಾಗಿವೆ. ಅಲೆಕ್ಸಾಂಡರ್ ಗ್ರಹಾಂಬೆಲ್‌ರವರ ಸಂಶೋಧನೆಯು ಈಗಾಗಲೇ ಅತ್ಯಂತ ಉಪಯೋಗಿಯಾಗಿ ವೈದ್ಯಕೀಯ ವಿವರಣೆಗಳನ್ನು, ಉಸಿರಾಡುವುದನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ ಇನ್ನು ಮುಂದೆ ಸ್ಟೆತಾಸ್ಕೋಪಿನಂತೆ ಹೃದಯದ ಮಿಡಿತವನ್ನೂ ಸಹ ತಿಳಿಸಲು ಸಹಾಯವಾಗಲಿದೆ. ಪ್ರತ್ಯೇಕವಾದ ಯಂತ್ರ ಸಾಧನಗಳನ್ನು ಸ್ಟೆತಾಸ್ಕೋಪಿಗೆ ಹೊಂದಿಸುವುದರಿಂದ ಕೆಲವು ಕಿಲೋಮೀಟರುಗಳ ದೂರದಲ್ಲಿರುವ ರೋಗಿಯ ಹೃದಯದ ಮಿಡಿತವನ್ನು ಡಾಕ್ಟರುಗಳು ಗ್ರಹಿಸಿ ರೋಗವನ್ನು ಕಂಡು ಹಿಡಿಯಲು ಸುಲಭವಾಗುತ್ತದೆ. ಡಾ. ಹೀನ್ಸ್ ಸೈಕೋಸ, ಡುಸ್ಸೆಡಾರ್ಫ್‌ನ ಹೃದ್ರೋಗ ಪ್ರವೀಣರು ಇದನ್ನು ಕಂಡು ಹಿಡಿದಿದ್ದಾರೆ. ಈ ನೂತನ ಸಾಧನದಿಂದ ದೂರದಲ್ಲಿರುವ ರೋಗಿಗಳು ಡಾಕ್ಟರುಗಳು ಬರದೆಯೇ ಅವರಿಗೆ ತಮ್ಮ ಹೃದಯದ ಮಿಡಿತವನ್ನು ಈತನ ಸಾಧನದಿಂದ ತಿಳಿಯುವಂತೆ ಮಾಡಬಹುದು ಮತ್ತು ಸೂಕ್ತವಾದ ವೈದ್ಯ ಚಿಕಿತ್ಸೆಯನ್ನೂ ಪಡೆಯಬಹುದು. ಇದಲ್ಲದೆ ಹೃದಯ ಸ್ಥಂಬನ ರೋಗವಿರುವವರು ಡಾಕ್ಟರು ಬರುವುದು ಸಾವಕಾಶವಾಗಬಹುದೆಂಬ ನಿರೀಕ್ಷಣೆ ಇದ್ದಲ್ಲಿ ಈ ನೂತನ ಎಲೆಕ್ಟ್ರೋಕಾರ್ಡಿಯೋಗ್ರಾಫ್ ಸಾಧನದಿಂದ ಕ್ಷಣಾರ್ಧದಲ್ಲಿ ತಿಳಿಸಬಹುದು.

(ಯು. ಪಿ. ಎಸ್.)

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

READ & ADVERTISE IN NAVAYUGA WEEKLY

NAVAYUGA 8-4-1971

Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 33
Licensed to Post without Prepayment

ಮೂರು ರಾಜ್ಯಗಳ ಮೂರಾಬಟ್ಟೆ

(ಒಂದನೆಯ ಪುಟದಿಂದ)

ಸ್ವಯಂ ದೇಸಾಯಿಯವರೇ ಬಿಚ್ಚು ಮನಸ್ಸಿನಿಂದ ಒಪ್ಪಿಕೊಳ್ಳುತ್ತಾರೆ.

'ಆದರೆ, ವಿಧಾನ ಸಭೆಯಲ್ಲಿ ನನಗೆ ಬಹುಮತವಿದೆ' ಎಂದು ಕೆಚ್ಚೆದೆಯಿಂದಲೇ ಅವರು ಮುಂದುವರಿದು ಹೇಳುತ್ತಾರೆ. 'ಆದುದರಿಂದ ರಾಜಿನಾಮೆ ನೀಡುವ ಪ್ರಮೇಯ ಸದ್ಯಕ್ಕೆ ಅನಗತ್ಯ' ಎಂದವರು ಮುಂದುವರಿಸುತ್ತಾರೆ. ಸ್ವತಂತ್ರ ಪಕ್ಷದ ಮೂವತ್ತೊಂದು ಶಾಸಕರು ಪ್ರಚಲಿತ ಪರಿಸ್ಥಿತಿಯಲ್ಲಿ ದೇಸಾಯಿಯವರನ್ನು ಬೆಂಬಲಿಸಲು ತಮ್ಮಲ್ಲೇ ಅನಿವಾರ್ಯವಾಗಿ ಒಂದು ಒಪ್ಪಂದಕ್ಕೆ ಬಂದಿದ್ದಾರೆ. ಆದುದರಿಂದ ದೇಸಾಯಿಯವರಿಗೆ ಸಿಂಗ್–ಪಾಟೀಲರಿಗೊದಗಿದ ದುರವಸ್ಥೆ ಬರಲಾರದು. ಆದರೆ, ಈ ಪರಪುಟ್ಟತನದಿಂದ ಎಷ್ಟು ದಿನ ಕಳೆಯಬಹುದೆಂಬ ಪ್ರಶ್ನೆ ಇದ್ದೇ ಇದೆ. ಇನ್ನೊಂದಾರು ತಿಂಗಳು ದೇಸಾಯರು ಕಳೆದರೆಂದರೆ, ಮುಂದಿನ ವರ್ಷಾರಂಭದಲ್ಲಿ ವಿಧಾನ ಸಭೆಗೆ ಚುನಾವಣೆಗಳು ನಡೆಯಲಿವೆ.

ಇಲ್ಲಿಗೆ ಎಲ್ಲ ಅವತಾರವೂ ಮುಕ್ತಾಯವಾಯ್ತು. ಕೇಂದ್ರದಲ್ಲಿ ಇಂದಿರಾ ಗಾಂಧಿಯವರ ಇಂಡಿಕೇಟ್ ಅಲ್ಪ ಮತೀಯರ ಪಕ್ಷವಾಗಿದ್ದರೂ ಗಾಂಧಿಯವರ ಸರಕಾರಕ್ಕೆ ಸ್ಪಷ್ಟ ಬಹುಮತವಿತ್ತು. ಇದರ ಬಲದಿಂದಲೇ ಅವರು ಹದಿನಾಲ್ಕು ತಿಂಗಳು ನಿರಾತಂಕವಾಗಿ ದೂಡಿದರು. ಹಾಗಿರುವಾಗ, ದೇಸಾಯರೂ ಇದೇ ಮಾರ್ಗದಲ್ಲಿ ಏಳು ತಿಂಗಳು ಕಳೆಯಲಾರರೆ? ಹೀಗೆ ಅವರು ಉರುಳದೆ ಉಳಿದರೆ, ಇಂದಿರಾಗಾಂಧಿ ಮಾಡದ ಕೆಲಸವೊಂದನ್ನು ಇವರು ಸಾಧಿಸಿದಂತಾಗುವುದು. ಸಂಸತ್ತನ್ನು ಎದುರಿಸಲು ಹೆದರಿ ಆಕೆ ಮಧ್ಯಾವಧಿ ಚುನಾವಣೆ ಬಯಸಿದರು; ಆದರೆ, ಶಾಸನ ಮಂಡಳವನ್ನು ಪೂರ್ಣಾವಧಿಯವರೆಗೂ ಎದುರಿಸಿ ದೇಸಾಯರು ವಿಕ್ರಮ ಸಾಧಿಸಿದಂತಾಗುವುದು.

ಮೂರು ರಾಜ್ಯಗಳ ಮೂರಾಬಟ್ಟೆಯ ಕತೆ ಕೇಳಿದ ಬಳಿಕ, ಈ ರಾಜ್ಯಗಳಲ್ಲಾದರೂ ಸಿಂಡಿಕೇಟಿಗೆ ಭವಿಷ್ಯವಿದೆಯೇ ಎಂದು ಕೇಳುವವರಿದ್ದಾರೆ. ರಾಜ್ಯಕೀಯದಲ್ಲಿ ಎಲ್ಲವೂ ಸಾಧ್ಯವಾಗಿರುವಾಗ, ಸಿಂಡಿಕೇಟಿನ ಭವಿಷ್ಯ ಭದ್ರವಿಲ್ಲವೆನ್ನಲಾಗದು. ಆದರೆ, ಇದಕ್ಕೆ ಸರಕಾರ ರಚಿಸಿಕೊಂಡೇ ಜನ ಸೇವೆ ಮಾಡಬೇಕೆಂದು ಬಯಸುವುದು ತಪ್ಪು. ಜನತೆಯ ಕುಂದು ಕೊರತೆಗಳನ್ನು ಕಂಡುಕೊಂಡು, ಅದರೊಡನೆ ನಿಕಟ ಸಂಪರ್ಕ ಹೊಂದಿಕೊಂಡು ಸೇವಾಭಾವನೆಯಿಂದ ದುಡಿಯುವ ಸ್ವಯಂ ಸೇವಕರು ಹೆಚ್ಚು ಸಂಖ್ಯೆಯಲ್ಲಿ ಬೇಕು. ಕುರ್ಚಿಯಲ್ಲಿ ಕುಳಿತುಕೊಂಡೇ ಜನತೆಯ ಬೆಂಬಲ ಪಡೆಯುತ್ತೇವೆಯೆಂಬ ಹಳೆಯ ಧೋರಣೆ ಯಹ್ಯಾಖಾನರು ಬಂಗ್ಲಾದೇಶವನ್ನು ತಮ್ಮ ಮುಷ್ಟಿಯಲ್ಲೇ ಉಳಿಸುವ ದುಸ್ಸಾಹಸ ಮಾಡಿದಂತಾದೀತು. ●●

ನಿರಶನದಿಂದ ರೋಗವಾಸಿ

ಸ್ಥೂಲಕಾಯವನ್ನೊಳಗೊಂಡು ಜೀವ ದ್ರವ್ಯ ಪರಿಣಾಮದ ಅಸ್ತವ್ಯಸ್ತತೆಗಳನ್ನು ಒಂದು ಇತ್ತೀಚಿನ ವೈದ್ಯಕೀಯ ಚಿಕಿತ್ಸೆಯಿಂದ ಗುಣಪಡಿಸಬಹುದು. ಇದು ನಿರಶನ ಚಿಕಿತ್ಸೆ. ಡಾ.ಗ್ರ್ಯಾಂತ್ ಸರ್ಕಿಸ್ಯಾನ್ ಅವರು ಅಮೇರಿಕಾದಲ್ಲಿ ಇದನ್ನು ಇತ್ತೀಚೆಗೆ ಆರಂಭಿಸಿದ್ದಾರೆ. ಈ ಚಿಕಿತ್ಸೆ ಅಲ್ಲಿನ ವಿಶಾಲವಾದ, ಥಳಥಳಿಸುವ ಕೋಣೆಯಲ್ಲಿ ಯಾವುದೂ ಆಸ್ಪತ್ರೆ ವಾರ್ಡನ್ನು ನೆನಪಿಗೆ ತರುವಂತಿಲ್ಲ. ಯೆರೆವಾನದ ಉದ್ದಿಮೆ ಸಂಸ್ಥೆಯೊಂದರಲ್ಲಿ ಕಾರ್ಮಿಕರಾಗಿರುವ ನಾಲ್ಕು ಜನ ರೋಗಿಗಳಲ್ಲಿ ಒಬ್ಬರಾದ ಅಲೀಸಾ ಪಿ ಬಹು ಹಳೆಯ ಹೃದಯ ನೋವಿನಿಂದ ಬಳಲುತ್ತಿದ್ದಳು. ಕಾಲುಗಳು ಊದಿಕೊಂಡಿದ್ದುವು. ಆಗಾಗ ದೀರ್ಘ ಕಾಲ ಹಾಸಿಗೆ ಹಿಡಿದಿರುತ್ತಿದ್ದಳು. ಯಾವಾಗಲೂ ಹತ್ತಿರ ಪಾಲಿಡಾಲ್, ನೈಟ್ರೊಗ್ಲಿಸರಿನ್ ಮೊದಲಾದುವುಗಳಂಥ ರಕ್ತನಾಳಗಳನ್ನು ಹಿಗ್ಗಿಸುವ ಔಷಧಗಳನ್ನು ಇಟ್ಟುಕೊಂಡಿರುತ್ತಿದ್ದಳು. ಕಳೆದ ವರ್ಷ ಶಾಹಿಲೆ ಸರ್ಟಿಫಿಕೇಟನೊಡನೆ ಆಕೆ ಮೂರು ತಿಂಗಳು ರಜೆ ಪಡೆದು ಮನೆಯಲ್ಲೇ ಇದ್ದಳು. ಒಂದಲ್ಲ, ಹಲವು ಬಾರಿ ಹೀಗಾಗಿತ್ತು.

"ಚಿಕಿತ್ಸೆ ಇನ್ನೂ ಪೂರ್ಣಗೊಳ್ಳದಿದ್ದರೂ, ನಾನು ವಸ್ತುತಃ ಈಗ ಆರೋಗ್ಯವಂತಳಾಗಿರುವಂತೆ ಅನಿಸುತ್ತಿದೆ" ಎನ್ನುತ್ತಾಳೆ ಅಲೀಸಾ. "ಹತ್ತು ಕಿಲೊಗ್ರಾಮುಗಳಷ್ಟು ನಿರರ್ಥಕ ತೂಕವನ್ನು ಈಗ ಕಳೆದುಕೊಂಡಿದ್ದೇನೆ ಹೃದಯದ ಬಗ್ಗೆಯಂತೂ ಈಗ ನನಗೆ ಎಳ್ಳಷ್ಟೂ ಚಿಂತೆಯಿಲ್ಲ. ಕಾಲುಗಳಿಗೆ ಊತವೂ ಇಲ್ಲ. ಉಸಿರಾಟ ಸರಾಗವಾಗಿದೆ."

ಪುರುಷರ ವಾರ್ಡಿನಲ್ಲಿ ಸ್ಯಮನ್ ಕೆ. ಸಂಪೂರ್ಣ ಚಿಕಿತ್ಸೆಯನ್ನು ಮುಗಿಸಿಕೊಂಡು ಒಂದೆರಡು ದಿನಗಳ ಹಿಂದಷ್ಟೇ ಆಸ್ಪತ್ರೆಯನ್ನು ಬಿಟ್ಟುಹೋಗಿದ್ದರು. ಎರಡು ತಿಂಗಳ ಕಾಲ ಅವರಿಗೆ ನಿರಶನ ಚಿಕಿತ್ಸೆಯನ್ನು ನೀಡಲಾಯಿತು. ಅನಗತ್ಯ ಮೈತೂಕವನ್ನು ಅವರು ಕಳೆದುಕೊಂಡಿದ್ದರು. ತಲೆನೋವು, ಸಾಮಾನ್ಯ ಬಳಲಿಕೆ ಮೊದಲಾದುವು ಮಾಯವಾಗಿದ್ದುವು. ರಾತ್ರೆ ನಿದ್ರೆಯೂ ಸುಧಾರಿಸಿತ್ತು. ಬೇರೆ ರೋಗಿಗಳಿಗೆ ಕೂಡ ನಿರಶನ ಚಿಕಿತ್ಸಾ ವಿಧಾನವು ಪವಾಡ ಸದೃಶ ಪರಿಣಾಮವನ್ನುಂಟು ಮಾಡಿತ್ತು.

ಚರ್ಮ ವ್ಯಾಧಿಗಳು, ಶ್ವಾಸನಾಳದ ಅಸ್ಥಮಾ, ಆರಂಭಸ್ಥಿತಿಯ ಅತೆರೊಸ್ಕ್ಲೆರೊಸಿಸ್, ರಕ್ತಚಾಪ, ಪಚನಾಂಗಗಳ ತೊಂದರೆ ಮೊದಲಾದಂಥ ಪ್ರಸಂಗಗಳಲ್ಲೂ ಈ ಚಿಕಿತ್ಸೆಯು ಪರಿಣಾಮಕಾರಿಯಾಗಿ ಕಂಡುಬಂದಿದೆ. ಸೋವಿಯತ್ತಿನ ಹಲವು ಪಟ್ಟಣಗಳಲ್ಲಿಯ ಡಾಕ್ಟರರು ಗಳಿಸಿರುವ ಯಶಸ್ಸು, ಈ ವಿಧಾನದಿಂದ ಉಪಚರಿಸಬಹುದಾದ ರೋಗಗಳ ಶ್ರೇಣಿ ಸಾಕಷ್ಟು ದೊಡ್ಡದಿದೆಯೆಂಬುದನ್ನು ತೋರಿಸಿಕೊಟ್ಟಿವೆ.

ನಿರಶನ ಚಿಕಿತ್ಸಾ ಪದ್ಧತಿಯ ಎಲ್ಲ ಮುಖಗಳನ್ನೂ ಬಲ್ಲಂಥ ನುರಿತ ವೈದ್ಯಕೀಯ ಸಿಬ್ಬಂದಿಯಿರುವ ಆಸ್ಪತ್ರೆಗಳಲ್ಲಿ ಮಾತ್ರವೆ ಈ ಚಿಕಿತ್ಸೆಯನ್ನು ಕೈಕೊಳ್ಳ ಬಹುದು. ಆಸ್ಪತ್ರೆಗೆ ಸೇರಿಸಲ್ಪಟ್ಟ ರೋಗಿಯನ್ನು ಮೊದಲು ಸಾಮಾನ್ಯ ಪರೀಕ್ಷೆಗೆ ಒಳಪಡಿಸಬೇಕು. ಅಗತ್ಯವಾದ ಜೀವ ವೈಜ್ಞಾನಿಕ ಹಾಗೂ ಕ್ಲಿನಿಕಲ್ ವಿಶ್ಲೇಷಣೆಗಳನ್ನು ನಡೆಸಬೇಕು. ಅನಂತರ ಎಕ್ಸ್‌ರೇ ತೆಗೆದುಕೊಳ್ಳಬೇಕು. ಚಿಕಿತ್ಸೆಯು ಪರಸ್ಪರ ವಿರೋಧಿಯಲ್ಲವೆಂದು ಸ್ಪಷ್ಟಪಟ್ಟ ಬಳಿಕವೆ ಡಾಕ್ಟರರು ಚಿಕಿತ್ಸೆಯನ್ನಾರಂಭಿಸಬೇಕು.

ಒಬ್ಬೊಬ್ಬ ರೋಗಿಗೆ ಪ್ರತ್ಯೇಕವಾಗಿ ಗೊತ್ತುಪಡಿಸಲಾದ ಅವಧಿಯಲ್ಲಿ ಯಾವ ಆಹಾರವನ್ನೂ ನೀಡಲಾಗುವುದಿಲ್ಲ. ಸ್ಯಮನ್ ಕೆ. ಸಂಪೂರ್ಣ ೭೦ ದಿನ ಒಂದಿಷ್ಟೂ ಆಹಾರವನ್ನು ತೆಗೆದುಕೊಳ್ಳಲಿಲ್ಲ. ರೋಗಿಗಳು ತಮಗೆ ಬೇಕಷ್ಟು ಸಾಧಾರಣ ನೀರನ್ನು ಅಥವಾ ಖನಿಜ ಜಲವನ್ನು ಕುಡಿಯಲು ಅವಕಾಶ ಕೊಡುತ್ತಾರೆ. ಉಪವಾಸದ ಅವಧಿಯ ಉದ್ದಕ್ಕೂ ಅಗತ್ಯವಾದ ದೇಹ ನೈರ್ಮಲ್ಯದ ನೀರನ್ನು ರೋಗಿಗಳಿಗೆ ನೀಡುತ್ತಾರೆ. ಗಾಳಿ ಸಂಚಾರ, ಯೋಗ ಪದ್ಧತಿಯ ಶ್ವಾಸೋಚ್ಛ್ವಾಸ ಮುಂತಾದುವುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಈ ವಿಧಾನದ ಚಿಕಿತ್ಸೆಯಲ್ಲಿದೆ.

ಯಾವ ಔಷಧಿಯನ್ನೂ ಕೊಡಲಾಗುವುದಿಲ್ಲವೆಂಬುದನ್ನು ಗಮನದಲ್ಲಿಟ್ಟುಕೊಳ್ಳಿ, ಒಂದೊಂದು ಶರೀರಾಂಗದಲ್ಲಿ ಸುಪ್ತವಾಗಿರುವ ಜೀವ ಪೋಷಕ ಶಕ್ತಿಗಳೇ ಜೈವಿಕ ಉತ್ತೇಜಕದ ಪಾತ್ರವನ್ನು ನಿರ್ವಹಿಸುತ್ತವೆ ಮತ್ತು [illegible] ದೇ ರೋಗವನ್ನು ಪರಾಭವಗೊಳಿಸ[illegible]

ಇದೇ ಚಿಕಿತ್ಸೆಯಲ್ಲಿ ನಿರಶನದ ಕಾಲಾವಧಿ ಮತ್ತು ನಂತರ ಚೇತರಿಸಿಕೊಳ್ಳುವ ಅವಧಿ ಇವೆರಡೂ ಹೆಚ್ಚುಕಡಿಮೆ [illegible] ಇರುತ್ತವೆ. ಚೇತರಿಕೆ ಅವಧಿಯಾರಂಭದ[illegible] ನೀರಾದ ಹಣ್ಣಿನ ರಸವನ್ನು ಮಾತ್ರ ಕೊಡಲಾಗುತ್ತದೆ. ಅನಂತರ ಹಣ್ಣಿನ ಪ್ರಮಾಣವನ್ನು ಹಸಿ ತರಕಾರಿ, ಪಚ್ಚಡಿ ಮುಂತಾದವನ್ನು ಪಥ್ಯದಲ್ಲಿ ಸೇರಿಸಲಾಗುತ್ತದೆ. ವೈದ್ಯರು ಸೂಚಿಸಿದ ಪೋಷಕಾಂಶಗಳ ಪ್ರಮಾಣವು ಭಂಗಗೊಂಡು ಯಾವುದೇ ರೀತಿಯ ತೊಂದರೆಗಳು ಕಾಣಿಸಬಾರದೆಂದು ಕಟ್ಟುನಿಟ್ಟಾಗಿ ಪ್ರಮಾಣಪೂರ್ವಕವಾಗಿಯೆ ಇವನ್ನು ಕೊಡಲಾಗುತ್ತದೆ.

ಪಥ್ಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಬರೀ ಆಸ್ಪತ್ರೆಯಲ್ಲಿ ಮಾತ್ರವಲ್ಲ, ಮನೆಯಲ್ಲೂ ಅದನ್ನು ಪಾಲಿಸುವಂತೆ ನೋಡಿಕೊಳ್ಳಲಾಗುತ್ತದೆ. ತರಕಾರಿ ಪದಾರ್ಥಗಳು ಹಾಗೂ ಹಣ್ಣುಗಳಿಗೆ ಪ್ರಾಶಸ್ತ್ಯ. ಹಿತಮಿತವಾದ ಊಟವು ದೀರ್ಘಾಯುಷ್ಯಕ್ಕೆ ತುಂಬಾ ಮಹತ್ವದ್ದು.

ಅರ್ಮೇನಿಯದ ಗಣರಾಜ್ಯ ಕ್ಲಿನಿಕಲ್ ಆಸ್ಪತ್ರೆಯ ತೇರಾಪ್ಯುಟಿಕಲ್ ವಿಭಾಗದ ಎರಡು ವಾರ್ಡುಗಳಲ್ಲಿ ಮಾತ್ರವೆ ನಿರಶನ ಚಿಕಿತ್ಸೆಯನ್ನು ಪ್ರಯೋಗಿಸಿ ನೋಡಲಾಗುತ್ತಿದೆ. ಇದು ಗಣರಾಜ್ಯದಲ್ಲಿ ಜನಪ್ರಿಯವಾಗಿದೆ. ●●

Gram : VISHWA Tel : 29111

When at Bangalore
Stay at

HOTEL NATARAJA

Restaurant Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ ಎಲ್ 4. 17-4/65-66ರ ಪತ್ರದಂತೆ ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. **ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.**

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ **ಚಂದಾ ರೂ. 10/- ಮಾತ್ರ.**

ಮೆನೇಜರ್, ನವಯುಗ, ಉಡುಪಿ.

Edited, Printed & Published by K. H. Shetty at the Navayuga Press. Udipi. S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 31

NAVAYUGA

15—4—1971

ಸರ್ವರೋಗ ನಿಗ್ರಹ ಶಕ್ತಿಸಂಪನ್ನ

ಸರಳ ಸಂಜೀವಿನಿ-ಗೋಧಿಗಿಡದ ರಸ

ಮಾನವನ ಆಹಾರ ವಸ್ತುಗಳಲ್ಲಿ ಗೋಧಿಗೊಂದು ಅಪೂರ್ವ ಸ್ಥಾನವಿದೆ. ಈ ಕಾಳಿನಲ್ಲಿ ಏನು ಉಪಯುಕ್ತ ಗುಣವಿದೆ ಎಂಬುದು ಹೆಚ್ಚಿನವರಿಗೆ ತಿಳಿಯದು. ಇದೊಂದು ಉತ್ತಮ ಶಕ್ತಿವರ್ಧಕ ಆಹಾರ ವಸ್ತುವೆಂಬುದನ್ನು ಬಹಳಷ್ಟು ಜನ ಅರಿತಿದ್ದಾರೆ. ಗೋಧಿಕಾಳಿನ ಸಿಪ್ಪೆಯಲ್ಲೇ ಉತ್ತಮ ಪೋಷಕಾಂಶಗಳಿವೆಯೆಂದು ವೈದ್ಯರು ಕಂಡುಹಿಡಿದಿದ್ದಾರೆ. ಆದರೆ, ಇದನ್ನು ನಾವು ಸೇವಿಸುವುದಿಲ್ಲ; ಒಂದೋ ಎಸೆದು ಬಿಡುತ್ತೇವೆ ಇಲ್ಲವೇ ಜಾನುವಾರುಗಳಿಗೆ ತಿನ್ನಿಸಿ ಬಿಡುತ್ತೇವೆ. ಬೆಳ್ಳಗಾದ ಮೈದಾವನ್ನೇ ನಾವು ಮೆಚ್ಚಿ ಸೇವಿಸುತ್ತೇವೆ. ಸಿಪ್ಪೆಯಿಂದ ಕೂಡಿದ ತೋರ ಹಿಟ್ಟನ್ನು ಕಂಡು ಮೂಗು ಮುರಿಯುತ್ತೇವೆ. ಈ ತೋರ ಹಿಟ್ಟನಲ್ಲೇ ಪೋಷಕಾಂಶ ಉತ್ತಮ ಪ್ರಮಾಣದಲ್ಲಿರುತ್ತದೆ. ಆದುದರಿಂದಲೇ ಶಕ್ತಿದಾಯಕ ಪೋಷಕಾಂಶಗಳನ್ನು ಬಿಟ್ಟು ಹಾನಿಕಾರಕ ಮೈದಾವನ್ನು ತಿನ್ನುವುದರಿಂದ ನಾವು ಹಲವು ಬಗೆಯ ಕಾಯಿಲೆ ಕಸಾರೆಗಳಿಗೆ ಒಳಗಾಗುತ್ತೇವೆ. ಪ್ರಕೃತಿ ಚಿಕಿತ್ಸಕರು ತೋರ ಹಿಟ್ಟನ್ನು ಸೇವಿಸಬೇಕೆನ್ನುತ್ತಾರೆ—ಇದರಿಂದ ಹೊಟ್ಟೆಗೆ ಸಂಬಂಧಿಸಿದ ಹಲವಾರು ಬಗೆಯ ಬೇನೆಗಳು ಹೇಳಹೆಸರಿಲ್ಲದಂತಾಗುತ್ತವೆ.

ಗೋಧಿಯನ್ನು ೬-೮ ತಾಸು ನನೆಸಿ ಅರೆದು ರೊಟ್ಟಿ-ದೋಸೆ-ಹಲ್ವಾ ಮೊದಲಾದುವನ್ನು ತಯಾರಿಸಿ ತಿಂದರೆ ಶರೀರ ಪುಷ್ಟಿಯಾಗುತ್ತದೆ. ಆದರೆ, ಸಾಮಾನ್ಯರೂ ಈ ಕಷ್ಟಪಡ ಬಯಸುವುದಿಲ್ಲ. ಮೈದಾವನ್ನೇ ಬಳಸಿ ಹೊಟ್ಟೆನೋವಿನಿಂದ ನರಳಿ, ವೈದ್ಯರ ಬಳಿಗೋಡುವುದೇ ಅವರಿಗೆ ಅತ್ಯಂತ ಪ್ರಿಯವೆನಿಸಿದೆ. ಮನೆಯ ಮುದುಕ-ಮುದುಕಿಯರು ಕೈಗೆ ಸಿಕ್ಕುವ ಹಲವಾರು ವಸ್ತುಗಳಿಂದ ಹಲವು ಬಗೆಯ ಮನೆಮದ್ದುಗಳನ್ನು ತಯಾರಿಸುತಿದ್ದರು. ಆದರೆ, ಇಂದು ಕಾಲ ಬದಲಾಗಿದೆ; ಜನ ಕಷ್ಟಪಡಲು ಬಯಸುವುದಿಲ್ಲ. ಆದುದರಿಂದ 'ರೆಡಿಮೇಡ್' ಔಷಧಾಲಯಗಳಿಗೇ ಅದು ಮೊರೆಹೋಗುತ್ತದೆ. ಈ ಮದ್ದುಗಳಿಂದ ಒಂದು ರೋಗ ಗುಣವಾದಂತೆ ಕಂಡರೂ ಮತ್ತೊಂದು ರೋಗ ಅಂಕುರಿಸುವುದು ಸಾಮಾನ್ಯ ಅನುಭವ.

ಒಬ್ಬಾಕೆ ಅಮೆರಿಕನ್ ಮಹಿಳೆ ಗೋಧಿಯ ಅಪಾರ ಶಕ್ತಿಯ ಬಗ್ಗೆ ಹಲವು ಬಗೆಯಲ್ಲಿ ಸಂಶೋಧನೆ ನಡೆಸಿದಳು. ಅನೇಕಾನೇಕ ಪ್ರಯೋಗ ಸಾಧಿಸಿದಳು. ಇದರ ಪರಿಣಾಮವಾಗಿ 'Why Suffer' Answer—Wheat grass Manna' ಎಂಬ ಪುಸ್ತಕವನ್ನು ಬರೆದಳು. ಈ ಪುಸ್ತಕವು ಮಹಾತ್ಮಾಗಾಂಧಿ ನಿಸರ್ಗೋಪಚಾರ ಆಶ್ರಮ, ಪೋಸ್ಟ್ ಉರುಲೀಕಾಂಚನ, ಪೂನಾ ಜಿಲ್ಲೆ ಇವರಲ್ಲಿ ದೊರೆಯುತ್ತದೆ. ಬೆಲೆ ರೂಪಾಯಿ ಮೂವತ್ತು. ಬರೆದವರು ಡಾ| ಎನ್. ವಿಗಾಮೋರ್. ಇದರಲ್ಲಿ ಆಕೆ ತನ್ನೆಲ್ಲ ಸಂಶೋಧನೆಗಳ ವಿವರಣೆ ನೀಡಿದ್ದಾಳೆ. ಅನೇಕಾನೇಕ ಅಸಾಧ್ಯ ರೋಗಿಗಳ ಮೇಲೆ ಗೋಧಿಯ ಸಸಿಗಳ ರಸ ಪ್ರಯೋಗದಿಂದ ಲಭಿಸಿದ ಗುಣಾಂಶಗಳನ್ನೂ ವಿವರಿಸಿದ್ದಾಳೆ. 'ಇದರ ಸೇವನೆಯಿಂದ ಗುಣಮುಖವಾಗದ ರೋಗವು ಭೂಮಂಡಲದಲ್ಲೇ ಇಲ್ಲ' ಎಂದಾಕೆ ಅಭಿಮಾನದಿಂದ ಬರೆದಿದ್ದಾಳೆ. ದೊಡ್ಡ ದೊಡ್ಡ ಡಾಕ್ಟರರು ನಿಷ್ಪ್ರಯೋಜಕವೆಂದು ಕೈಬಿಟ್ಟ ಬಳಿಕ ಮರಣ ಪ್ರಾಯ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಹೊರಬಂದ ಹಲವಾರು ಕೇನ್ಸರ್ ರೋಗಿಗಳ ಭಯಾನಕ ಭಯವನ್ನು ಈಕೆ ದೂರ ಮಾಡಿದ್ದಾಳೆ. ಆಕೆ ಬಳಸಿದ್ದು Wheat grass Juice (ಗೋಧಿ ಸಸಿಯ ರಸ). ಹಳೆಯದರಲ್ಲಿ ಹಳೆಯದಾದ ಹೊಟ್ಟೆಹುಣ್ಣು, ಮೂಲವ್ಯಾಧಿ, ಸಂಧಿನೋವು, ಪಾಂಡು ರೋಗ, ಮಧು ಮೇಹ, ದಮ್ಮು, ಕೆಮ್ಮು, ಮೊದಲಾದ ಅನಿಯಂತ್ರಿತ ರೋಗಗಳನ್ನೂ ಇದೇ ರಸದಿಂದ ಆಕೆ ಹೋಗಲಾಡಿಸಿದ್ದಾಳೆ. ಮುಪ್ಪಿನ ಅಶಕ್ತತೆಯನ್ನು ಕಡಿಮೆ ಮಾಡಿದ್ದಾಳೆ. ಈಕೆಯ ಪ್ರಯೋಗ ಸಾಧನೆಗಳನ್ನು ಈಗೀಗ ಅಮೆರಿಕೆಯ ಹಲವರು ವೈದ್ಯರು ಸಮರ್ಥಿಸ ತೊಡಗಿದ್ದಾರೆ. ಬೊಂಬಾಯಿ ಮತ್ತು ಗುಜರಾತದ ಹಲವು ವೈದ್ಯರು ಈ ಅದ್ಭುತ ರಸ ಪ್ರಯೋಗವು ಪರಿಣಾಮಕಾರಿಯಾಗಿದೆಯೆಂದು ಅಭಿಪ್ರಾಯ ಪಟ್ಟಿದ್ದಾರೆ. ದೊಡ್ಡ ಗಾಯಗಳಿಗೂ ಇದರ ಲೇಪನ ಲಾಭಪ್ರದವೆಂದು ಹೇಳಿದ್ದಾರೆ.

ಸರ್ವರೋಗ ನಾಶಿನಿಯೆನಿಸಿದ ಈ ರಸವನ್ನು ತಯಾರಿಸುವುದೇನೂ ಕಠಿನವಲ್ಲ. ಯಾರಾದರೂ ಇದನ್ನು ತಯಾರಿಸಿಕೊಳ್ಳುವಷ್ಟು ಸರಳ. ಈ ವಿಧಾನವನ್ನು ಆಕೆ ತನ್ನ ಪುಸ್ತಕದಲ್ಲಿ ನಿರೂಪಿಸಿದ್ದಾಳೆ. ಈ ರಸವನ್ನು 'ಹಸುರು ರಕ್ತ' (green Blood) ಎಂದು ಕರೆಯ ತೊಡಗಿದ್ದಾರೆ. ಇದಕ್ಕೆ ಕಾರಣವೂ ಇದೆ. ಮಾನವ ರಕ್ತಕ್ಕೂ ಈ ಅದ್ಭುತ ಸಂಜೀವಿನಿಗೂ ನೂರಕ್ಕೆ ನಲುವತ್ತರಷ್ಟು ಸಾಮ್ಯವಿದೆ. ಇದಕ್ಕೆ ಮೊದಲು ಇಂತಹ ಔಷಧಿಯ ಶೋಧವೇ ಆಗಿರಲಿಲ್ಲ. ಈ ರಸವು ಎಲ್ಲಿಯೂ ಕ್ರಯಕ್ಕೆ ದೊರೆಯ ಬೇಕೆಂದಿಲ್ಲ. ಪ್ರತಿನಿತ್ಯವೂ ತಯಾರಿಸಿ ನಿತ್ಯವೂ ಸೇವಿಸ ಬಹುದಾದ ಸರಳ ಮಹತ್ತಮ ಔಷಧಿಯಿದು.

ಈ ರಸವನ್ನು ತಯಾರಿಸುವುದು ಹೇಗೆ?

ಮರದ ಪೆಟ್ಟಿಗೆಯಲ್ಲಿ ಅಥವಾ ಮಣ್ಣಿನ ಮಡಕೆಗಳಲ್ಲಿ ಒಳ್ಳೆಯ ಮಣ್ಣು ತುಂಬಿಸಿ ಉತ್ತಮ ಗೋಧಿಯ ಬೀಜವನ್ನು ಬಿತ್ತಬೇಕು. ಈ ಪೆಟ್ಟಿಗೆಗಳನ್ನು ಅಥವಾ ಮಡಕೆಗಳನ್ನು ಕೋಣೆಯೊಳಗಾಗಲೀ, ಚಾವಡಿಯಲ್ಲಾಗಲೀ ಅಥವಾ ಮರದ ನೆರಳಲ್ಲಾಗಲೀ ಇಡಿರಿ. ಅಂದರೆ, ಬಿಸಿಲು ಬೀಳದಂತಿರಬೇಕು. ಆಗಾಗ ನೀರು ಹಾಕುವುದಕ್ಕೆ ಮರೆಯ ಬಾರದು. ನಾಲ್ಕು ದಿನಗಳಲ್ಲೇ ಬೀಜ ಮೊಳಕೆ ಬರುತ್ತದೆ; ಹತ್ತು ದಿನಗಳಲ್ಲೇ ೭—೮ ಅಂಗುಲೆತ್ತರದ ಗಿಡವಾಗುತ್ತದೆ. ಆಗ ಕೆಲವಾರು ಸಸಿಗಳನ್ನು ಬೇರು ಸಹಿತ ಕಿತ್ತು, ಬೇರುಗಳನ್ನು ತುಂಡರಿಸಿರಿ. ಉಳಿದ ದಂಟು-ಎಲೆಗಳನ್ನು ಚೆನ್ನಾಗಿ ತೊಳೆದು ಸ್ವಚ್ಛ ಕಲ್ಲಿನಲ್ಲಿ ಅರೆದು ಅರ್ಧಲೋಟೆಯಷ್ಟು ರಸತೆಗೆಯಿರಿ; ಈ ಸಮಯದಲ್ಲಿ ತುಸು ನೀರನ್ನೂ ಹಾಕಿಕೊಳ್ಳಬಹುದು. ಈ ರಸವನ್ನು ಸೋಸಿ ರೋಗಿಗೆ ಪ್ರತಿನಿತ್ಯ ಮುಂಜಾನೆ ಕುಡಿಸಿರಿ. ಇದೇ ರೀತಿ ಸಂಜೆಯೂ ಹೊಚ್ಚ ಹೊಸ ರಸ ತೆಗೆದು ಕುಡಿಸಿರಿ ಇದರ ಪರಿಣಾಮವನ್ನು ನೀವೇ ನೋಡುವಿರಿ ಭಯಂಕರ ರೋಗವು ಹತ್ತು—ಇಪ್ಪತ್ತು ದಿನಗಳ ಅವಧಿಯಲ್ಲೇ ಓಡಿ ಹೋಗ ತೊಡಗುವುದು. ಮರಣ ಪ್ರಾಯ:ವಾದರೂ ರೋಗಿ—ಮೂರು ತಿಂಗಳುಗಳಲ್ಲೇ ಚೇತರಿಸಿ ಕೊಳ್ಳುತ್ತಾನೆ; ಸ್ವಸ್ಥ ಮನುಷ್ಯನಾಗುತ್ತಾನೆ. ರಸ ತೆಗೆದ ಬಳಿಕ ಉಳಿದ ಸಿಪ್ಪೆಯನ್ನೂ ಉಪ್ಪು ಬೆರಸಿ ಊಟದ ವೇಳೆ ಸಂಜಿಕೊಳ್ಳಬಹುದು ರಸ ತೆಗೆಯುವುದು ನಿಮಗೆ ಬೇಸರಿಕೆ ತಂದರೆ ಗೋಧಿ ಗಿಡವನ್ನು ಕತ್ತರಿಸಿ ಊಟದ ವೇಳೆ ಪಲ್ಯದಂತೆ ಉಪಯೋಗಿಸಿದರೂ ಸರಿಯೇ; ಆದರೆ, ಅದಕ್ಕೆ ಮತ್ತೇನನ್ನೂ ಮಿಶ್ರ ಮಾಡಬಾರದು. ತರಕಾರಿಗಳೊಡನೆ ಈ ಪ್ರಕೃತಿದತ್ತ ಅಮೃತಮಯ ಸಸ್ಯವನ್ನೂ ಸೇವಿಸಿರಿ. ಇದರ ಮುಂದೆ ಎಲ್ಲ ಹೆಚ್ಚಿನ ಆಧುನಿಕ ಔಷಧಿಗಳು ಪ್ರಭೆಗುಂದುವುವು ಎಂದು ಈ ಮಹಿಳಾ ವೈದ್ಯಳು ಘೋಷಿಸಿದ್ದಾಳೆ.

ಗೋಧಿಯ ಸಸಿಗಳು ೭—೮ ಅಂಗುಲಗಳಿಗೆ ಮೀರಿ ಬೆಳೆಯಬಾರದು. ಆದುದರಿಂದ ಕೆಲವು ಪೆಟ್ಟಿಗೆ ಯಾ ಮಡಕೆಗಳಲ್ಲಿ ನಿತ್ಯ ಅವನ್ನು ಬೆಳೆಸಬೇಕಾಗುತ್ತದೆ. ಪೆಟ್ಟಿಗೆ ಯಾ ಮಡಕೆ ಖಾಲಿಯಾದಂತೆ ಮತ್ತೆ ಗೋಧಿ ಬಿತ್ತಬಹುದು. ಹೀಗೆ ಪ್ರತಿದಿನವೂ ಗೋಧಿ ಸಸಿಗಳನ್ನು ಹೊಂದುವುದು ಸಾಧ್ಯವಾಗುವುದು.

ಮಹಿಳಾ ವೈದ್ಯಳು ತನ್ನ ಪ್ರಯೋಗಶಾಲೆಯಲ್ಲಿ ಸಾವಿರಾರು ರೋಗಿಗಳಿಗೆ ಈ ರಸದ ಚಿಕಿತ್ಸೆ ನಡೆಸಿದಳು. ಇದರಲ್ಲಿ ಅಸಫಲಗೊಂಡೇ ಇಲ್ಲ ಎಂದಾಕೆ ಧೈರ್ಯದಿಂದ ಹೇಳುತ್ತಾಳೆ.

ರಸವನ್ನು ಬಹು ಹೊತ್ತಿನ ತನಕ ಇಟ್ಟರೆ ಅದರ ಶಕ್ತಿಗುಂದುವುದು. ಮೂರು-ನಾಲ್ಕು ತಾಸುಗಳ ನಂತರ ಅದು ಸಂಪೂರ್ಣ ವ್ಯರ್ಥವಾಗುವುದು. ಆದರೆ ದಂಟು ಮತ್ತು ಎಲೆಗಳು ಒಂದೆರಡು ದಿನ ಸುರಕ್ಷಿತವಿರುತ್ತವೆ.

ಇದರೊಂದಿಗೆ ಇನ್ನೊಂದು ಪ್ರಯೋಗವನ್ನೂ ನೀವು ಮಾಡಬಹುದು. ಅರ್ಧ ಪಾವಿನಷ್ಟು ಗೋಧಿಯನ್ನು ಚೆನ್ನಾಗಿ ತೊಳೆದು ಅದರ ನಾಲ್ಕು ಪಾಲಷ್ಟು ನೀರಿನಲ್ಲಿ ನನೆ ಹಾಕಿರಿ. ಹನ್ನೆರಡು ತಾಸುಗಳ ತರುವಾಯ ಆ ನೀರನ್ನು ಸಂಜೆ ಮತ್ತು ಮುಂಜಾನೆ ಕುಡಿಯಿರಿ. ನಿಮ್ಮ ರೋಗ

(ಹನ್ನೆರಡನೇ ಪುಟ ನೋಡಿರಿ)

ಅಂತಿಮ ಮಾರ್ಗ—

ದಂಡೋಪಾಯ

ಶ್ರೀ ರಾಮಚಂದ್ರನ ಆದೇಶಾನುಸಾರ ಗಂಧರ್ವ ದಮನೋದ್ದೇಶದಿಂದ ಭರತನು ಸಿಂಧೂನದೀತಟದತ್ತ ಮುಂದುವರಿದನು. ಆತನು ಬಂದ ಸುದ್ದಿ ಕೇಳಿದೊಡನೆಯೇ ಅವನ ಮಾವ ಯುಧಾಜಿತ್ತನು ಸಮಗ್ರ ಸೇನೆಯೊಡನೆ ಸ್ವಾಗತಿಸಿದನು. ರಾಜಗೃಹ ನಗರದ ಸಮಸ್ತ ಪ್ರಜೆಗಳು ರಾಜ್ಯಸಂರಕ್ಷಕ ಭರತನನ್ನು ಎದುರ್ಗೊಂಡರು 'ಭರತ ಕುಮಾರ ಬಂದಿದ್ದಾನೆ, ಅವನು ರಾಜಮಾರ್ಗದ ಮೂಲಕ ರಾಜಪ್ರಾಸಾದಕ್ಕೆ ಹೋಗುತ್ತಾನೆ' ಎಂದು ಕೇಳಿದ ದೂರ ದೂರದ ಸ್ತ್ರೀಯರೆಲ್ಲರೂ ತಮ್ಮ ಮನೆಗಳ ವ್ಯಥೆ ಬಿಟ್ಟು ರಾಜಮಾರ್ಗದ ಇಕ್ಕಡೆಗಳಲ್ಲಿ ಸೇರಿದರು. ರಾಜಮಾರ್ಗದಲ್ಲಿನ ಮನೆ–ಮಠಗಳನ್ನುಳಿದು ಇಡಿಯ ನಗರವೇ ಖಾಲಿಯಾಗಿತ್ತು.

ರಾಜಮಾರ್ಗದ ಪಕ್ಕದ ಮನೆಯವರೂ ಕೆಲಸವೆಲ್ಲವನ್ನೂ ಮುಗಿಸಿ ಭರತದರ್ಶನಾಕಾಂಕ್ಷೆಯಿಂದ ದಟ್ಟಣಿಸಿದರು. 'ದೇಶರಕ್ಷಕನಿಗೆ ಜಯವಾಗಲಿ' ಎಂಬ ಘೋಷ ದಿಗ್ದೇಶಗಳಲ್ಲಿ ಮೊಳಗಿತು. ನಿಧಾನ ಸ್ವಭಾವದ ಕೆಲವರು ಇನ್ನೂ ಅಂಗರಾಗ ಹಾಕುತಿದ್ದರು. ಕೆಲವರು ಕಾಡಿಗೆ ಹಚ್ಚಿಕೊಳ್ಳುತ್ತಿದ್ದರು. ಇನ್ನು ಕೆಲವರು ತಲೆಬಾಚುತ್ತಿದ್ದರು. ಬೇರೆ ಕೆಲವರು ಸೀರೆಯುಡುತ್ತಿದ್ದರು. ಇವರೆಲ್ಲರೂ ತಂತಮ್ಮ ಶೃಂಗಾರ ಕಾರ್ಯವನ್ನು ಅಲ್ಲಿಗೇ ನಿಲ್ಲಿಸಿ ಮಾರ್ಗಮುಖದ ಕಿಟಕಿಯತ್ತ ಇಣಿಕತೊಡಗಿದರು. 'ನೀನು ಮಾತ್ರ ನೋಡಿದರೆ ಸಾಕೆ? ನಾನೂ ನೋಡಬೇಡವೆ?' ಎಂಬ ಗದರಿಕೆಯ ಮಾತೂ ಅಲ್ಲಲ್ಲಿ ಕೇಳಿಬರುತಿದ್ದಂತೆ ಭರತನು ರಾಜಪ್ರಾಸಾದವನ್ನು ಅದ್ದೂರಿಯಿಂದ ಪ್ರವೇಶಿಸಿದನು.

ರಾತ್ರೆ ಅರಮನೆಯಲ್ಲಿ ಸಭೆ ಏರ್ಪಟ್ಟಿತ್ತು. 'ಆಕ್ರಮಣವನ್ನು ಎಂದು ಮತ್ತು ಹೇಗೆ ಆರಂಭಿಸಬೇಕು?' ಎಂಬುದು ಚರ್ಚೆಯ ವಿಷಯವಾಗಿತ್ತು. ಅನೇಕ ರಾಜರು ಸಮಾಗಮಿಸಿದ್ದರು. ಯುಧಾಜಿತ್ತನೆಂದನು—"ರಾತ್ರೆ ಹೊತ್ತು ಆಕ್ರಮಣ ಮಾಡಿ ಮಲಗಿರುವ ಶತ್ರುಗಳನ್ನು ಸದಾ ನಿದ್ರಿಸುವಂತೆ ಮಾಡುವುದು ಉಪಯುಕ್ತವೆಂದೆನ್ನಿಸುತ್ತದೆ."

ಇದನ್ನು ಕೇಳಿದ ಅಯೋಧ್ಯೆ ಸರಕಾರದ ಯುದ್ಧ ಪರಾಮರ್ಶಕ ಕಲಾವಿದನೆಂದನು—"ರಾಜಾ, ಇದು ಸುಲಭ ಮತ್ತು ಉಪಯುಕ್ತವೇನೋ ನಿಜ. ಮಲಗಿದವರ ಮೇಲೆ ಏರಿಹೋಗುವುದೆಂದರೆ ಧರ್ಮಯುದ್ಧ ಗೆಯ್ದಂತೆ. ನನ್ನ ಅಭಿಪ್ರಾಯದಂತೆ ಹಗಲು-ಹೊತ್ತೇ ಆಕ್ರಮಣಕ್ಕೆ ತೊಡಗುವುದು ಒಳ್ಳೆಯದು. ನಾವು ಗೆಲ್ಲುವುದಂತೂ ನಿಶ್ಚಯವೇ.'

ಪುರೋಹಿತನಾದ ಗಾರ್ಗ್ಯನೆಂದನು—"ರಾಜ್ಯಕೀಯದಲ್ಲಿ ಯುದ್ಧವು ಕೊನೆಯ ಹಂತವಲ್ಲದೆ ಆರಂಭಿಕವಲ್ಲ. ಆದುದರಿಂದ ದೂತನೊಬ್ಬನ ಮೂಲಕ ಗಂಧರ್ವರಿಗೆ ನಮ್ಮ ಅಭಿಪ್ರಾಯವನ್ನು ಹೇಳಿ ಕಳಿಸಬೇಕು— 'ನೀವು ತಡಮಾಡದೆ 'ನಮ್ಮ ದೇಶವನ್ನು ಬಿಟ್ಟು ನಿಮ್ಮ ದೇಶಕ್ಕೆ ಹೊರಟು ಹೋಗಬೇಕು. ಈ ಜಗನ್ನಿಯಾಮಕನು ನಡುವೆ ಹಿಮಾಲಯವನ್ನು ನಿಲ್ಲಿಸಿ ನಮ್ಮ–ನಿಮ್ಮ ದೇಶದ ಗಡಿಯನ್ನು ಅಂದೇ ಗೊತ್ತು ಮಾಡಿದ್ದಾನೆ. ಇದು ಮಾನವರ ಲೋಕವೇ ಹೊರತು ಗಂಧರ್ವರ ಲೋಕವಲ್ಲ. ಆದುದರಿಂದ ನಿಮ್ಮದಲ್ಲದ ನೆಲದ ಮೇಲೆ ನಿಮ್ಮ ಆಕ್ರಮಣವನ್ನು ತೆರವು ಮಾಡಬೇಕು'

ಆಗ ಭರತನು ಹೇಳಿದನು 'ಪುರೋಹಿತರೆ, ನಿಮ್ಮ ಮಾತನ್ನು ನಾನು ಒಪ್ಪಿಕೊಂಡೆನು. ರಘುವಂಶದವರು ಸತ್ಯ ಪಕ್ಷಪಾತಿಗಳು ಆದುದರಿಂದ ಮಾವನ ಮಾತು ಸಮ್ಮತವಲ್ಲ ತಾವು ಈಗಲೇ ಶೈಲೂಷನಲ್ಲಿಗೆ ಹೋಗಿ ಆತನಿಗೆ ವಸ್ತು ಸ್ಥಿತಿಯನ್ನು ವಿವರಿಸಿ, ಅಭಿಪ್ರಾಯ ತಿಳಿದು ಬನ್ನಿರಿ ಆದರೂ ಅವನು ಒಪ್ಪದಿದ್ದರೆ, ಯುದ್ಧ ನೀತಿಯಂತೆ ಹೋರಾಡೋಣ'

ಗಾರ್ಗ್ಯರು ರಾಜದೂತರಾಗಿ ಗಂಧರ್ವ ನಗರಕ್ಕೆ ತೆರಳಿದರು. ಅಲ್ಲಿ ಅವರು ಶೈಲೂಷನನ್ನು ಹಲವು ರೀತಿ ವಿಧಾನಗಳಿಂದ ನ್ಯಾಯದಾರಿಗೆ ತರಲೆತ್ನಿಸಿದರು. ಎಲ್ಲವೂ ನಿಷ್ಫಲವಾಯ್ತು. ನಿರಾಶ ಗಾರ್ಗ್ಯರು ರಾಜಗೃಹದಲ್ಲಿ ಭರತನಿಗೆಂದರು–'ಎಲ್ಲವನ್ನೂ ಶೈಲೂಷನಿಗೆ ತಿಳಿಹೇಳಿದ್ದಾಯಿತು; ಅದು ಅತನಿಗೆ ಅಪಥ್ಯವಾಯಿತು. ಅವನು ಸಂಧಿಯನ್ನು ಬಯಸುವುದಿಲ್ಲ, ಸಮರವನ್ನೇ ಇಚ್ಛಿಸುತ್ತಾನೆ'

ಗಾರ್ಗ್ಯನಿಂದ ಸಂಗತಿ ತಿಳಿದ ಭರತನು ಆಕ್ರಮಣ ನಡೆಸಲು ಸೇನೆಗೆ ಆಜ್ಞೆ ನೀಡಿದನು. ತಾನು ಏಕಾಂತದಲ್ಲೇ ಕುಳಿತು ಗುಪ್ತಚರರ ಮಾತು ಕೇಳತೊಡಗಿದನು.

ಗಾರ್ಗ್ಯರ ನಿರ್ಗಮನಾನಂತರ ಗಂಧರ್ವ ಸಭೆಯಲ್ಲೂ ಕೋಲಾಹಲವೆದ್ದಿತು. ತಮ್ಮ ರಾಜನ ಒಲವು ಸಂಗ್ರಾಮದತ್ತವೆಂದು ಕಂಡುಕೊಂಡವರು ಏಕಾಭಿಪ್ರಾಯ ತಳೆದರು–'ಭರತನು ಯುದ್ಧದ ಬೆದರಿಕೆ ಹಾಕಿ ನಮ್ಮನ್ನು ಅಪಮಾನಿಸಿದ್ದಾನೆ. ನಮ್ಮನ್ನು ನಿರ್ಬಲರೆಂದು ಬಗೆದಿದ್ದಾನೆ. ಆದುದರಿಂದ ಆತನೊಡನೆ ಯುದ್ಧ ಮಾಡಲೇ ಬೇಕು.'

ಈಯೆಲ್ಲವನ್ನೂ ಕೇಳಿದ ಗಾಂಧರ್ವ ಪುರೋಹಿತ ನಾಡಾಯನರು ಶೈಲೂಷನೊಡನೆಂದರು–'ಮಹಾರಾಜ, ರಾಜ–ರಾಜರ ನಡುವಣ ವಿವಾದವನ್ನು ಪರಿಹರಿಸಲು ಸಂಗ್ರಾಮವೂ ಒಂದು ಸಾಧನವೆಂಬುದು ನಿಜ ಆದರೆ, ಸಾಮ, ದಾನ ಮತ್ತು ಭೇದಗಳೆಂಬ ಮೊದಲ ಮೂರು ಉಪಾಯಗಳು ಸಂಪೂರ್ಣ ಅಸಫಲಗೊಂಡ ಬಳಿಕವಷ್ಟೇ ಅನಿವಾರ್ಯವಾಗಿ ರಾಜ್ಯನೀತಿ ವಿಶಾರದರು ದಂಡೋಪಾಯಕ್ಕೆಳಸುತ್ತಾರೆ. ಪರಸ್ಪರ ಭಿನ್ನಮತಗಳು ಸಂಧಾನ ಮಾರ್ಗದಿಂದ ಪರಿಹಾರಗೊಂಡರೆ, ಅದು ಉತ್ತಮ ಮತ್ತು ಚಿರಸ್ಥಾಯಿಯಾಗುತ್ತದೆ. ಆದುದರಿಂದ ಉಪಾಯಗಳಲ್ಲಿ ಸಾಮವೇ ಮುಖ್ಯವೆಂದು ಶಾಸ್ತ್ರಗಳು ಸಾರಿವೆ. ಅತ್ಯಂತ ದೊಡ್ಡ ಸೇನೆಯನ್ನು ತಂದಿದ್ದರೂ ಶಕ್ತಿಮದದಿಂದ ಭರತನು ಮೊದಲು ಸಮರಕ್ಕೆ ತೊಡಗಲಿಲ್ಲ, ಸಂಧಾನಕ್ಕೆಂದು ದೂತನನ್ನಟ್ಟಿದನು. ಭರತನೊಡನೆ ಸಂಧಿಮಾಡಿಕೊಂಡು, ನಾವು ನಮ್ಮ ಪರ್ವತೀಯ ಪ್ರದೇಶಕ್ಕೆ ಮರಳಿದರೆ, ನಮಗೆ ಶುಭವಾಗುತ್ತದೆ. ನಮ್ಮ ಮೇಲೆ ಆಕ್ರಮಣ ಮಾಡುವುದರಲ್ಲಿ ಭರತನದ್ದೇನು ತಪ್ಪು? ರಾಜರೊಡನೆ ಅಕಾರಣವಾಗಿ ದ್ವೇಷ ಕಟ್ಟಿಕೊಂಡು, ಅವರನ್ನು ಕೊಂದು ವಸತಿಗೆ ಆರಂಭಿಸಿದವನು ನೀನು. ವಿದೇಶೀಯರಾದ ಗಂಧರ್ವರು ಬಲಾತ್ಕಾರವಾಗಿ ತಮ್ಮ ಮೇಲೆ ಅಧಿಕಾರ ನಡೆಯಿಸುತ್ತಿದ್ದಾರೆಂಬ ಭಾವನೆ ಇಲ್ಲಿನ ಪ್ರಜೆಗಳ ಮನಸ್ಸಿನಲ್ಲಿ ಮೂಡಿದ್ದರಿಂದ ಅವರಿಗೂ ನಮಗೂ ಮನಕಲುಕಿತು. ಈ ಮನೋಭಾವ ಅವರಲ್ಲಿರುವಾಗ ನಾವು ಅವರ ನಡುವೆ ಇರುವುದು ನೀಚ ಕೆಲಸ. ಈಗ, ಈ ಜನಗಳು ಜಾಗೃತರಾಗಿದ್ದಾರೆ. ಅವರೇಕೆ ನಮ್ಮ ಅಧೀನವಿರುತ್ತಾರೆ? ನಾವೂ ಅವರ ನಡುವೆ ಇರುವುದರಿಂದ ಪದೇ ಪದೇ ಯುದ್ಧ—ಹತ್ಯೆಗಳಿಗೆ ತೊಡಗಬೇಕಾಗುವುದು. ನಾವೇನೂ ಇಲ್ಲಿ ಕೃಷಿ ಮಾಡುವುದಿಲ್ಲ. ವ್ಯಾಪಾರ ಮಾಡುವುದಿಲ್ಲ. ಬರಿಯ ಯುದ್ಧವನ್ನೇ ನಾವು ನಡೆಸುತ್ತಿರುವುದಾದರೆ, ಅದಕ್ಕಿಂತ ನಮ್ಮ ದೇಶದಲ್ಲೇ ಉಳಿದುಕೊಳ್ಳುವುದು ಮೇಲಲ್ಲವೆ? ಯುದ್ಧ ಮಾಡಲೇ ಬೇಕೆಂಬುದೇನೂ ಅವಶ್ಯಂಭಾವಿಯಲ್ಲ. ಸಂಧಾನ ಮತ್ತು ಸಂಗ್ರಾಮಗಳಲ್ಲಿ ಯಾವುದು ಲಾಭಪ್ರದವೋ ಅದನ್ನು ನಿಶ್ಚಯಿಸುವುದು ಉತ್ತಮ ಪಕ್ಷ. ಭೂಮಿ ಸಂಪತ್ತು ಮತ್ತು ಮಿತ್ರಲಾಭಗಳೇ ಯುದ್ಧದ ಮುಖ್ಯೋದ್ದೇಶಗಳು. ಭೂಮಿಯ ಮೇಲೆ ಅಧಿಕಾರ ಬಯಸುತ್ತಾರೆ, ಕೃಷಿಗಾಗಿ ಅಥವಾ ವ್ಯಾಪಾರಕ್ಕಾಗಿ. ಆದರೆ, ಮಹಾರಾಜಾ ನಮ್ಮ ದೇಶವೇ ಸಾಕಷ್ಟು ದೊಡ್ಡದಿರುವಾಗ ನಮಗೆ ಈ ನೆಲದಿಂದೇನಾಗಬೇಕು? ವ್ಯಾಪಾರ–ಕೃಷಿಗಳಿಗೂ ನಾವಿದನ್ನು ಬಳಸುವುದಿಲ್ಲವೆಂದ ಮೇಲೆ ಇದು ನಮಗೇಕೆ? ನಮ್ಮ ದೇಶದಲ್ಲೇ ಮೇರು ಪರ್ವತವಿರುವುದರಿಂದ ನಮಗೆ ಸಂಪತ್ತಿನ ಅಭಾವವೆಂಬುದಿಲ್ಲ. ಯಾರಾದರೊಬ್ಬ ರಾಜನ ಪಕ್ಷ ವಹಿಸಿ ನಾವೀಗ ಹೋರಾಡುವುದೂ ಇಲ್ಲ. ಹಾಗಾಗಿ ಇದರಿಂದ ಮಿತ್ರಲಾಭವೂ ದೂರದ ಮಾತು. ಮತ್ತೆ ನಾವು ಯಾಕೆ ಯುದ್ಧ ಮಾಡಬೇಕು? ಆದುದರಿಂದ ನಾವು ಸಂಧಿಯನ್ನು ಸಾಧಿಸಿ ಭರತನನ್ನು ನಮ್ಮ ಮಿತ್ರನನ್ನಾಗಿಸಿ ಈ ದೇಶವನ್ನು ಬಿಟ್ಟು ನಮ್ಮ ದೇಶಕ್ಕೆ ಮರಳಿ ಹೋಗಬೇಕು. ಸನಗಿದೇ ನ್ಯಾಯ ಮತ್ತು ಯುಕ್ತಿಸಂಗತವೆಂದೆನಿಸುತ್ತದೆ.'

ಗುರೂಕ್ತಿಯನ್ನು ಕೇಳಿದ ಶೈಲೂಷ ಹೇಳಿದನು—"ನೀನು ಪದೇ ಪದೇ ಹೇಳಿದ ಮಾತಿನ ಸಾರವನ್ನು ನಾನು ಗ್ರಹಿಸಿಕೊಂಡೆನು. ಆದರೆ ನನಗೂ ಆತ್ಮಸಾಕ್ಷಿ, ಆತ್ಮಗೌರವವಿದೆ. ಅದು ಭರತನ ಮುಂದೆ ತಲೆವಾಗಲು ಬಿಡುವುದಿಲ್ಲ."

ನಾಡಾಯನನು ಎಂದನು—"ಹಾಗಾದರೆ ನೀನು ದೇಶಹಿತ ಮತ್ತು ನ್ಯಾಯ ಮಾರ್ಗಗಳನ್ನು ಮೂಲೆಗೆ ತಳ್ಳಿ ನಿನ್ನ ಅಹಂಕಾರದ ಪುಷ್ಟಿಗಾಗಿ ತನ್ನ ದೇಶದ ಜನ–ಧನವನ್ನು ಪೋಲು ಮಾಡುತ್ತಿದ್ದಿಯೆಂದು ಹೇಳಬೇಕು."

ರಾಜನು ಬಹಳಷ್ಟು ಅವಹೇಳನದಿಂದ ನುಡಿದನು—"ನೀನು ಹೇಳಿದ್ದೆಲ್ಲವನ್ನೂ ಕೇಳಿಕೊಂಡೆನೆಂದು ಆಗಲೇ ತಿಳಿಸಿದ್ದೇನೆ ಆದರೆ, ನಾನು ಭರತನ ಮುಂದೆ ತಲೆ ತಗ್ಗಿಸಲಾರೆ. ಆದುದರಿಂದ ಯುದ್ಧ ನಡೆದೇ ತೀರುವುದು."

ಇದರಿಂದ ನೊಂದ ನಾಡಾಯನನು ತನ್ನ ವಿರೋಧ ವ್ಯಕ್ತಪಡಿಸುವುದಕ್ಕಾಗಿ ಸ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
130 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು_1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 31

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವುದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಇಂಡಿಕೇಟ್ ನಾಯಕತ್ವದಲ್ಲಿ ನಡುಕ

ಕರ್ನಾಟಕದ ಇಂಡಿಕೇಟು ಮುಂದುವರಿದ ವಿಧಾನವನ್ನು ಪರಿಶೀಲಿಸುವಾಗ ಇದರ ನೀತಿಗೂ ಉಳಿದೆಡೆಯ ಪಕ್ಷದ ನೀತಿಗೂ ತುಂಬ ತಾರತಮ್ಯ ಕಾಣುತ್ತದೆ. ಕರ್ನಾಟಕದಲ್ಲಿ ಇಂಡಿಕೇಟು ಬಹುಮತ ಪಕ್ಷವಾಗಿದೆ; ಅದು ಸರಕಾರ ರಚಿಸುತ್ತದೆ ಎಂದು ಹೇಳ ತೊಡಗಿದ ನಂತರ, ಉತ್ತರ ಪ್ರದೇಶ—ಗುಜರಾತಗಳಲ್ಲಿ ರಾಜ್ಯಕೀಯ ಸ್ಥಿತ್ಯಂತರಗಳಾದುವು. ಉ. ಪ್ರದೇಶದಲ್ಲಿ ಪಕ್ಷಾಂತರಿಗಳ ಬೃಹತ್ಕೂಟವಾಗಿರುವ ಇಂಡಿಕೇಟು ಕಮಲಾಪತಿ ತ್ರಿಪಾಠಿಯವರ ನಾಯಕತ್ವದಲ್ಲಿ ಸರಕಾರ ಸ್ಥಾಪಿಸಿತು; ಗುಜರಾತದಲ್ಲಿ ಮತ್ತೆ ಹಿತೇಂದ್ರ ದೇಸಾಯಿಯವರೇ ಸಂಪುಟ ರಚಿಸಿದರು. ಅಲ್ಲಿಯೂ ಪಕ್ಷಾಂತರಗಳ ತಂಡದ ಬಲದಿಂದ ಸರಕಾರ ರಚಿಸಲು ಹೈಕಮಾಂಡು ನಾಯಕ ಪ್ರಿಯರಿಗೆ ಆದೇಶ ನೀಡಿತ್ತೆಂಬುದನ್ನು ಸ್ಮರಿಸ ಬಹುದು. ಎರಡು ರಾಜ್ಯಗಳಿಗಿಂತ ಭಿನ್ನವಾಗಿ ಕರ್ನಾಟಕದಲ್ಲಿ ಸರಕಾರ ರಚನೆ ಬೇಡವೆಂದು ಇಂಡಿಕೇಟಧ್ಯಕ್ಷ ಸಂಜೀವಯ್ಯನವರು ನಿರ್ಧರಿಸಿ ಆದೇಶ ನೀಡಿದ್ದರಿಂದ ನಿರಾಶಗೊಂಡವರು ಹಲವರು; ಪುಲಕಿತರಾದವರು ಕೆಲವರು.

ಈ ನಿರ್ಧಾರಕ್ಕೆ ಮೂರು ಕಾರಣಗಳನ್ನು ಮುಂದು ಮಾಡಲಾಗಿದೆ. ಇವುಗಳನ್ನು ಒಂದೊಂದಾಗಿ ವಿವೇಚಿಸ ಬಹುದು. ಸಚಿವ ಸಂಪುಟದ ರಚನೆಯ ಬಗ್ಗೆ ಪಕ್ಷದ ನಾಯಕರಲ್ಲೇ ಒಮ್ಮತವಿಲ್ಲವೆಂಬುದು ಮೊದಲನೆಯದು. ಬಹುಮತದ ಪಕ್ಷ ಹೌದಾದರೆ, ಸಂಪುಟ ರಚನೆಯ ಬಗ್ಗೆ 'ಒಮ್ಮತ'ವೆಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ; ಪ್ರಜಾಸತ್ತೆಯಲ್ಲಿ ಸರಕಾರ ರಚಿಸುವುದು ಬಹುಮತೀಯ ಪಕ್ಷದ ಕರ್ತವ್ಯ. ಉತ್ತರ ಪ್ರದೇಶದಲ್ಲಿ ತ್ರಿಪಾಠಿ ಸಂಪುಟ ರಚನೆಯಾದದ್ದು ಇಂಡಿಕೇಟು ಬಹುಮತ ಹೊಂದಿದ್ದರಿಂದ; ಗುಜರಾತದಲ್ಲಿ ಪ್ರಿಯ ತೆಪ್ಪಗುಳಿದದ್ದು ಅಲ್ಪ ಮತೀಯ ಪಕ್ಷವಾದದ್ದರಿಂದ ಕರ್ನಾಟಕದ ಇಂಡಿಕೇಟು ಬಹುಮತ ಪಡೆದಿದೆ ಎಂಬ ಮೂಲ ಸಂಗತಿಯಲ್ಲೇ ಪಕ್ಷದಲ್ಲಿ ಭಿನ್ನಾಭಿಪ್ರಾಯವಿದೆ ಎಂದು ಅರ್ಥ. ಸಿದ್ಧವೀರಪ್ಪನವರು ಪಡೆದಿದೆಯೆಂದರೆ ದೇವರಾಜ ಅರಸರು ಪಡೆದಿಲ್ಲವೆನ್ನುತ್ತಾರೆ-ಇದು ಸತ್ಯ. ಈ ಭಿನ್ನಾಭಿಪ್ರಾಯಕ್ಕೆ ಏನು ಕಾರಣವೆಂಬುದನ್ನು ಹೈಕಮಾಂಡೇ ರಾಜ್ಯ ನಾಯಕರಿಗೆ ತಿಳಿಸಿ ತನ್ನ ನಿರ್ಧಾರಕ್ಕಿದು ಎರಡನೆಯ ಕಾರಣವೆಂದು ಹೇಳಿದೆ. 'ಮುಖ್ಯಮಂತ್ರಿ ಯಾರು ಆಗಬೇಕು ಎಂಬುದರಲ್ಲಿ ರಾಜ್ಯದ ನಾಯಕರಲ್ಲಿ ಒಮ್ಮತವಿಲ್ಲ.'–ಇದು ಎರಡನೆಯದಾದರೂ ಮೊದಲನೆಯದೆಂದು ಹೇಳಬೇಕು. "ಸಿದ್ಧವೀರಪ್ಪನವರು ೧೨ ಶಾಸಕರು ಆರಿಸಿದ ನಾಯಕರು. ೧೨೦ ಶಾಸಕರ ನಾಯಕರಾಗಲು ಅವರು ಅನರ್ಹರು" ಎಂದು ಅರಸು ಪಾಳೆಯ ದೃಢವಾಗಿ ನಂಬಿ ಇದಕ್ಕೆ ಅರಸರೇ ಸಶಕ್ತರು ಎಂದು ತಿಳಿದಿದೆ. 'ಇಲ್ಲದಿರುವಾಗ ತಪ್ಪಬೇಕು; ಇರುವಾಗ ಏಕೆ ಬೇಡ?' ಎನ್ನುತ್ತದೆ ಅಪ್ಪರ ಪರಿವಾರ. ಆದುದರಿಂದ ಮುಖ್ಯಮಂತ್ರಿ ಯಾರಾದರೂ ಇನ್ನೊಬ್ಬರಿಗೆ ಮನಸ್ತಾಪ. ಇದರಿಂದ ಪಕ್ಷದಲ್ಲಿ ಭಿನ್ನಮತ ಮೂಡಿ, ಅದೂ ಭಿನ್ನವಾದರೇನು ಗತಿ? ಆದ್ದರಿಂದ ಸದ್ಯ ಸುಮ್ಮನಿರಿ, ಮುಂದೆ ನೋಡೋಣವೆಂಬ ಉಭಯ ಸಂಜೀವಿನೀ ನೀತಿ. ಸಿಂಡಿಕೇಟನ್ನು ತ್ಯಜಿಸಿ ಬಂದ ಶಾಸಕರ ಅರ್ಜಿಗಳಿಗೆ ಇಂಡಿಕೇಟ್ ಇನ್ನೂ ಅಂಗೀಕಾರದ ಮುದ್ರೆಯೊತ್ತದಿರುವುದು ಮೂರನೆಯ ಕಾರಣ. ರಾತ್ರಿ ಬೆಳಗಾಗುವುದರೊಳಗೆ ೬೬ ವರ್ಷದ ಕಮಲಾಪತಿ ತ್ರಿಪಾಠಿ ಶಾಸಕರನ್ನು ಎಳೆತಂದು ಅರ್ಜಿ ಕೊಡಿಸಿ ಮನ್ನಣೆ ನೀಡಿಬಿಡುವಷ್ಟು ಚುರುಕುತನ ತೋರಿಸುತ್ತಿದ್ದರು. ಆದರೆ ಇಲ್ಲಿ ಸಿದ್ಧವೀರಪ್ಪನವರು ಶಾಸಕರನ್ನು ಎಳೆತಂದು ಅರ್ಜಿ ಕೊಡಿಸಿದರೂ ಅದಕ್ಕೆ ಮನ್ನಣೆ ನೀಡದಷ್ಟು ಉದಾಸೀನತೆ ಅರಸರಿಗೆ. ರಾಜ್ಯ ಲೋಕಸಭಾ ಚುನಾವಣೆಯ ವೇಳೆ ದುಡಿದು ಸುಸ್ತಾಗಿರುವ ಅರಸರ ಆಲಸಿಕೆಗೊಂದೇ ಒಂದು ಕಾರಣ. ತ್ರಿಪಾಠಿಯವರಂತೆ ಇವರು ಶಾಸಕರ—ಸದಸ್ಯರ ಏಕಛತ್ರಾಧಿಪತಿಯಲ್ಲ ತಾನೆ? ಇವರೇಕೆ ಮುತುವರ್ಜಿ ತೋರಿ ಭವಿಷ್ಯದ ಕಾಲಿಗೆ ಕೊಡಲಿ ಹಾಕಿಕೊಳ್ಳಬೇಕು?

ಈ ಕಾರಣಗಳ ವಿಶ್ಲೇಷಣೆಯಿಂದ ಸತ್ಯ ಸಂಗತಿ ಹೀಗೆ ಅರಿವಾಗುತ್ತದೆ; ಸಿದ್ಧವೀರಪ್ಪನವರು ಶಾಸಕ ಪಕ್ಷದ ನಾಯಕತ್ವ ಬಿಟ್ಟುಕೊಡಲು ಸಿದ್ಧರಿಲ್ಲ. ಅವರು ಮುಖ್ಯಮಂತ್ರಿಯಾಗುವುದು ಅರಸರಿಗೆ ಬೇಕಾಗಿಲ್ಲ. ಆದುದರಿಂದ ಅರಸರು ಸದಸ್ಯತ್ವ ಕೋರಿ ಬಂದ ಪಕ್ಷಾಂತರಿ ಶಾಸಕರ ಅರ್ಜಿಯನ್ನು ಸ್ವೀಕರಿಸಲಿಲ್ಲ. ಇದರಿಂದಾಗಿ ಇಂಡಿಕೇಟಿಗೆ ಬಹುಮತವಿಲ್ಲ; ಸರಕಾರ ರಚನೆ ಸಾಧ್ಯವಿಲ್ಲ. ಸಿದ್ಧವೀರಪ್ಪನವರು ನಾಯಕತ್ವವನ್ನು ತ್ಯಾಗ ಮಾಡಲು ಸಿದ್ಧರಾದರೆ, ಮರುಕ್ಷಣ ಅರ್ಜಿಗಳಿಗೆ ಮನ್ನಣೆ, ಇಂಡಿಕೇಟಿಗೆ ಬಹುಮತ; ಅರಸರಿಗೆ ಅರಸುಗಿರಿ. ಇಂಡಿಕೇಟ್ ನಾಯಕರ ಈ ವರ್ತನೆಯಿಂದ ರಾಜ್ಯದ ಇಂಡಿಕೇಟಿಗೆ ಅಶುಭವನ್ನುಂಟು ಮಾಡುವುದು ಕಂಡಿತವೇ. ಹನುಮಂತಯ್ಯನವರ ಕಾಲದಿಂದಲೂ 'ಕಾಂಗ್ರೆಸ್' ಪಕ್ಷದಲ್ಲಿ ಮೂಡಿದ್ದ ಭಿನ್ನಮತಗಳೇ ಈಗ 'ಇಂಡಿಕೇಟ'ನಲ್ಲಿ ಮೊಳಕೆಯಲ್ಲೇ ಮೂಡಿತು. ತೋರಿಕೆಗೆ ಕೇಂದ್ರದ ಆದೇಶಕ್ಕೆ 'ನಾವು ತಲೆಬಾಗುತ್ತೇವೆ' ಎಂದು ಇಬ್ಬರೂ ಹೇಳಿದರೂ ಈ ಉದ್ಗಾರದಲ್ಲಿ ವಿಷಾದವೇ ಇಣಿಕಿ ನೋಡುತ್ತಿತ್ತು. ಸಿದ್ಧವೀರಪ್ಪನವರ ಬಾಯಿಂದ ರಸಗವಳವನ್ನು ದೇವರಾಜರು ಕಿತ್ತು ನೆಲಪಾಲು ಮಾಡಿದರೂ ಇದರ ಪರಿಣಾಮವೇನೆಂಬುದನ್ನು ಭವಿಷ್ಯ ನಿರ್ಧರಿಸಬೇಕಷ್ಟೆ.

ಸದ್ಯ ವಿಲೀನತೆಯೇಕೆ?

ಕರ್ನಾಟಕ, ಉತ್ತರ ಪ್ರದೇಶ ಮತ್ತು ಗುಜರಾತಗಳಲ್ಲಿನ 'ಸಿಂಡಿಕೇಟ್' ಸರಕಾರಗಳು ಹಣ್ಣುಗಳುರುಳಿದಂತೆ ಉರುಳಿದಾಗ ಸಿಂಡಿಕೇಟ್ ವಿಸರ್ಜನೆಯ ಪ್ರಶ್ನೆ ಕೆಲವರಲ್ಲಿ ಮೂಡಿತು. ಕರ್ನಾಟಕ–ಗುಜರಾತಗಳಲ್ಲಿ-ಇದು ಹಲವು ಶಾಸಕರ ತಲೆಯಲ್ಲಿ ಸುಳಿಯಿತು. ವೀರೇಂದ್ರ ಪಾಟೀಲರು ಅವಸರ ಬೇಡವೆಂದು ತೆಪ್ಪಗುಳಿದರು. ಮುರಾರ್ಜಿ ಭಾಯಿ ಇಂತಹ ವಿಷಯದಲ್ಲಿ ನಿರ್ಧಾರಕ್ಕೆ ಬರಲು ಕೇಂದ್ರ ಕಾರ್ಯಕಾರಿ ಸಮಿತಿಗೆ ಮಾತ್ರ ಅಧಿಕಾರವೆಂದು ಗುಡುಗಿದರು. ಅಷ್ಟರಲ್ಲಿ ಗುಜರಾತದಲ್ಲಿ ಸಿಂಡಿಕೇಟ್ ನೇತೃತ್ವದಲ್ಲೇ ಸರಕಾರವಾಯ್ತು; ಕರ್ನಾಟಕದಲ್ಲೂ ಸಿಂಡಿಕೇಟ ಬೆಂಬಲದಿಂದ ಸಂಯುಕ್ತರಂಗ ಸರಕಾರದ ಸಾಧ್ಯತೆಗಳು ಮೂಡತೊಡಗಿವೆ. ಇದರಿಂದ ಪ್ರಾಯಃ ಸಿಂಡಿಕೇಟ್ ನಾಯಕರಲ್ಲೂ ಹೊಸ ಉತ್ಸಾಹ ಮೂಡಿರ ಬಹುದು; ಆದುದರಿಂದಲೇ ವಿಲೀನತೆಯ ಪ್ರಶ್ನೆಯನ್ನು ಆಮೂಲ ಕಿತ್ತು ಹಾಕಿದರು; ಮುಂಬಯಿಯಲ್ಲಿ ಮುಂದಿನ ತಿಂಗಳು ತಮ್ಮ ಎ. ಐ. ಸಿ. ಸಿ. ಜರುಗಿಸಲು ಗೊತ್ತು ಮಾಡಿದರು. ಎರಡು ಬಣಗಳೂ ತಮ್ಮನ್ನು ಕಾಂಗ್ರೆಸ್ ಎಂದು ಕರೆದುಕೊಂಡಿರುವುದು ಯಥಾರ್ಥತೆಯನ್ನು ನಿರ್ಧಾರವಾಗ ಬೇಕಾಗಿರುವಾಗ, ವಿಲೀನತೆಯ ಪ್ರಶ್ನೆಯೇಕೆ?—ಪ್ರಾಯಃ ಅಧಿಕಾರಕ್ಕಾಗಿ ಮಾತ್ರವಿರಬಹುದು. ಅವರಿಗೆ ಪಕ್ಷಾಂತರವಿದೇನೆ?

● ●

ಕಡಂದಲೆ ಶ್ರೀ ಸುಬ್ರಹ್ಮಣ್ಯ ದೇವರ ಬ್ರಹ್ಮಕಲಶೋತ್ಸವ

ವಿವಿಧ ಸಾಂಸ್ಕೃತಿಕ ಸಮಾರಂಭಗಳು:—

ಮದರಾಸಿನ ವುಡ್‌ಲ್ಯಾಂಡ್ಸ್ ಹೊಟೇಲ್ ಸಮುದಾಯದ ಸ್ಥಾಪಕ ಶ್ರೀ ಕಡಂದಲೆ ಕೃಷ್ಣರಾವ್, ಕಡಂದಲೆಗುತ್ತು ಕೆ.ಸಂಜೀವ ಶೆಟ್ಟಿ ಇವರ ಮುಂದಾಳುತನದಲ್ಲಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನವೀಕರಿಸಲಾದ ಕಡಂದಲೆ ಶ್ರೀ ಸುಬ್ರಹ್ಮಣ್ಯ ದೇವರಿಗೆ ಬ್ರಹ್ಮಕಲಶಾಭಿಷೇಕ ಉತ್ಸವವು ತಾ. ೯-೪-೭೧ರಂದು ವಿಜೃಂಭಣೆಯಿಂದ ನೆರವೇರಿತು. ಇದರ ಅಂಗವಾಗಿ ತಾ. ೫ರಿಂದ ೯ರ ತನಕ ಸಾಂಸ್ಕೃತಿಕ ಸಮಾರಂಭಗಳು ಜರಗಿದವು.

ಶ್ರೀಗಳಾದ ಎಂ. ವಾಸುದೇವರಾವ್, ಪಿ. ರಘುರಾಮ ಐತಾಳ, ಎಚ್. ಸೀತಾರಾಮ ಆಚಾರ್, ಡಾ| ಅಡಿಗ, ಬಿ. ಜೆ. ಬಿದ್ದಪ್ಪ, ಎಂ. ಆನಂದ ಆಳ್ವ, ಕೆ. ರಘುನಾಥ ಭಂಡಾರಿ, ಕೆಮ್ಮುಂಡು ದೊಡ್ಡಣ್ಣ ಶೆಟ್ಟಿ, ಕಿನ್ನಿಮೂಲ್ಕಿ ಅನಂತ ಪದ್ಮನಾಭ ಆಚಾರ್ಯ, ಮು. ಶಿ. ಹರಿದಾಸ ಭಟ್, ಬಿ. ಎಸ್. ಸುಬ್ರಹ್ಮಣ್ಯ ಶರ್ಮಾ, ಪೆರ್ಲ ಕೃಷ್ಣ ಭಟ್, ಕುಬಣೂರು ಬಾಲಕೃಷ್ಣ ರಾವ್, ಎಸ್. ವಿ. ಪರಮೇಶ್ವರ ಭಟ್, ಡಾ| ಕೆ. ಗುರುರಾಜ ಭಟ್, ಮುದಿಯಾಲ ನಾರಾಯಣ ಭಟ್, ಡಾ| ಟಿ. ಎಂ. ಎ. ಪೈ, ಕಾಪು ಸುಬ್ರಾಯ ಪುರಾಣಿಕ ಮೊದಲಾದವರು ಬೇರೆ ಬೇರೆ ನೆಲೆಯಲ್ಲಿ ಭಾಗವಹಿಸಿದ್ದರು.

ಉಡುಪಿಯ ಶ್ರೀ ಕೃಷ್ಣಾಪುರ; ಶ್ರೀ ಸೋದೆ; ಶ್ರೀ ಶೀರೂರು; ಶ್ರೀ ಪೇಜಾವರ; ಶ್ರೀ ಸುಬ್ರಹ್ಮಣ್ಯ; ಎಡನೀರು ಮಠಗಳ ಶ್ರೀಪಾದಂಗಳವರು ಚಿತ್ತೈಸಿ ಶ್ರೀ ಕೃಷ್ಣರಾಯರ ಭಕ್ತಿಯ ಶುಭ ಕಾರ್ಯಕ್ಕಾಗಿ ಸಂತೋಷಗೊಳಿಸಿ ಫಲ ಮಂತ್ರಾಕ್ಷತೆಯನ್ನೀಯುವ ಮೂಲಕ ಊರವರನ್ನು ಹರಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳ ಯಶಸ್ವಿಗಾಗಿ ಶ್ರೀಗಳಾದ ಕೊಡತ್ತೂರು ಅನಂತಪದ್ಮನಾಭ ಉಡುಪ, ಕೆ. ಅಮರನಾಥ ಶೆಟ್ಟಿ ಮೊದಲಾದವರು ವಿಶೇಷ ಆಸ್ಥೆ ವಹಿಸಿದ್ದರು. ಬ್ರಹ್ಮಕಲಶೋತ್ಸವ ಸಮಾರಂಭಕ್ಕೆ ಮದ್ರಾಸಿನಿಂದ ಶ್ರೀ ಕೃಷ್ಣರಾಯರ ಸ್ನೇಹವ್ಯಮಸದ ನೂರಾರು ಮಿತ್ರರೂ ಆಗಮಿಸಿದ್ದು ಈ ಸಮಾರಂಭಕ್ಕೆ ಮುಕ್ತಹಸ್ತದ ಸಹಕಾರವನ್ನಿತ್ತರು. ದಾಸಪ್ರಕಾಶದ ಶ್ರೀ ಕೆ. ಬಾಲಕೃಷ್ಣರಾಯರು ೧೧,೦೦೧ ರೂ.ಗಳ ಕೊಡುಗೆಯನ್ನು ಸಮರ್ಪಿಸಿದರು. ಧರ್ಮಸ್ಥಳದ ಧರ್ಮದರ್ಶಿ ಶ್ರೀ ವೀರೇಂದ್ರ ಹೆಗ್ಗಡೆಯವರು ಅಧಿಕೃತವಾಗಿ ಆಗಮಿಸಿ ಸಮಾರಂಭಕ್ಕೆ ಕಳೆನೀಡಿದರು. ದಿನಂಪ್ರತಿ ಮನರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಗೇಹರಾಜ್ಯದಲ್ಲಿ

ಚಾರು-ಗೀರುವಾಕರು ಬೇಡ—ಅವಾಕರು ಬೇಕು

“ಅಲ್ಲಾರಿ, ಸುಗ್ಗಿ ಕಾಲದಲ್ಲೂ ಧಾರಣೆಗಳು ಇಳೀಲಿಲ್ಲ ಅಂದ್ರೇನೂಂತ?’

‘ಇಳೀಲಿಲ್ಲ ಅಂದ್ರೆ ಇಳೀಲಿಲ್ಲಾಂತ ತಾನೇ ಅರ್ಥ?”

‘ಅದು ಸರೀನ್ನಿ. ಇಷ್ಟು ವರ್ಷ ಈ ಸಮಯದಲ್ಲಾದ್ರೂ ತುಸು ಇಳೀತಿದ್ದ ಬೆಲೆಗಳೀಗ ಏರುತ್ತಲೇ ಇದೆಯೇನೂಂತ?”

‘ಅಲ್ವೆ, ಜನಗಳಲ್ಲಿ ಕೊಳ್ಳುವ ಶಕ್ತಿಯಿರುವುದರಿಂದ ಅವು ಏರುತ್ತಿವೆ.’

‘ಏನಂತೀರಿ ನೀವು? ಜನರಲ್ಲಿ ಕೊಳ್ಳುವ ಶಕ್ತಿ ಇದೇನ್ನುತ್ತೀರಾ?’

“ಇಲ್ಲದೆ ಉಂಟೆ? ಈ ತುಟ್ಟಿಯ ಕಾಲದಲ್ಲೂ ತುಪ್ಪ–ಅನ್ನ ನುಂಗುವವರಿಗೇನು ಕೊರತೆ?’

‘ಹೂಂ, ಎಲ್ಲೋ ಕೆಲವರು ಅಂತಹ ಶಕ್ತಿಸಂಪನ್ನರಿರಬಹುದು.’

‘ಸರಿಹೋಯ್ತು ಬಿಡು. ಆ ಕೆಲವರೇ ಎಲ್ಲವನ್ನೂ ಹೇಳಿದ ಬೆಲೆ ತೆತ್ತು ಒಯ್ಯುತ್ತಾರೆ.”

‘ಅಂದ್ರೆ, ಉಳಿದವ್ರು....’

‘ಅಭಾವ ಪರಿಸ್ಥಿತಿಗೆ ಬಲಿಯಾಗುತ್ತಾರೆ.’

‘ನೋಡಿ, ನಾವು ಆಹಾರ ವಿಷಯದಲ್ಲಿ ಸ್ವತಂತ್ರರು. ಆಹಾರ ಧಾನ್ಯಗಳ ಆಮದು ಇನ್ನು ಮುಂದೆ ಇಲ್ಲ; ಬೆಳೆದ ಗೋದಿಯನ್ನು ಕಾಪಿಡುವುದೇ ಸಮಸ್ಯೆ ಎಂದು ಮುಂಚಿತವಾಗಿ ಹೇಳುತಿದ್ದ ನಾವೀಗ ಅಮೆರಿಕೆಯಿಂದ ಗೋದಿ ತರಿಸಲಿದ್ದೇವೆಯಂತೆ.”

‘ಹ್ಞೂಂ. ಬರೀ ಗೋದಿಯಲ್ಲ, ಜತೆಯಲ್ಲಿ ಒಂದಷ್ಟು ಅರಳೆ ಮತ್ತು ಉಕ್ಕನ್ನು ತರಿಸುತ್ತೇವೆ. ನಮ್ಮ ಕೈಗಾರಿಕೆಗಳು ಅರಳೆ ಮತ್ತು ಉಕ್ಕಿನ ಅಭಾವವನ್ನು ತೀವ್ರವಾಗಿ ಎದುರಿಸುತ್ತಿರುವುದರಿಂದ ಇದು ಅಗತ್ಯವಾಯ್ತು.’

‘ಅಂದ್ರೆ, ನಮ್ಮ ಉಕ್ಕಿನ ಕಾರಖಾನೆಗಳಲ್ಲಿ ಸಂಪು ನಡೆಯಗೊಟ್ಟು ವಿದೇಶಗಳಿಂದ ಆಮದು ಮಾಡಿಕೊಳ್ಳುವುದು....”

‘ಅದಕ್ಕೇನು ಮಾಡೋದು? ಕಾರ್ಮಿಕರ ಮೂಲಭೂತ ಹಕ್ಕು ಅದು....”

‘ಇರಬಹುದು; ಬದುಕುವುದೂ ಪ್ರಜೆಗಳ ಮೂಲಭೂತ ಹಕ್ಕಲ್ಲವೇನು?”

‘ಯಾರು ಅಲ್ಲಾಂತಾರೆ? ಬದುಕಲಿ....’

‘ಬದುಕಲೀಂತ ಹೇಳಿದರೆ ಸಾಕಾಗದು ನೋಡಿ; ಬದುಕಲು ಸೂಕ್ತ ವಾತಾವರಣವನ್ನೂ ಕಲ್ಪಿಸಿ ಕೊಡಬೇಡವೆ?’

‘ಅಂದ್ರೆ, ಏನನ್ನೋದು ನೀನು?’

‘ನೋಡಿ ದಿನದಿಂದ ದಿನಕ್ಕೆ ಏರುತ್ತಿದೆ ಬೆಲೆ....’

‘ಹೌದು ಮುಂದಿನ ತಿಂಗಳು ಮತ್ತೂ ಏರುತ್ತದೆ....’

‘ಯಾಕೆ?’

‘ಹೊಸ ತೆರಿಗೆಗಳಿಂದ ತುಂಬಿದ ಸುವಿಸ್ತೃತ ಬಜೆಟ್ಟು....’

‘ಹ್ಞೂಂ. ಇರಲಿ, ಈಗ ನೋಡಿ, ೧೯೪೮ರಲ್ಲಿ ಬೆಲೆ ೧೦೦ ಎಂದಿದ್ದರೆ, ೧೯೭೦ರಲ್ಲಿ ಅದು ೨೨೬ಕ್ಕೆ ಮುಟ್ಟಿದೆ. ಅಷ್ಟು ದೂರ ಯಾಕೆ? ೧೯೬೧ರಲ್ಲಿ ೧೦೦ ಇದ್ದದ್ದು ಈಗ ೧೭೩ ಆಗಿದೆ. ಅಂದರೆ, ವರ್ಷಕ್ಕೆ ಸರಾಸರಿ ೭—೮ರಷ್ಟು ಏರುತ್ತಾಲೇ ಇದೆ.’

‘ಅದು ಸರೀನ್ನು. ಅಭಿವೃದ್ಧಿ ಪಥದಲ್ಲಿರುವ ರಾಷ್ಟ್ರಗಳಲ್ಲಿ ಇದು ಸಾಮಾನ್ಯ. ಭವ್ಯ ಭವಿಷ್ಯಕ್ಕಾಗಿ ಈಗ ತುಸು ತ್ಯಾಗ ಮಾಡಬೇಕು.’

‘ಭವಿಷ್ಯ ಎಂದಿರಾ? ಯಾವ ಭವಿಷ್ಯವಂತೆ? ನಾಳೆಯ ಚಿಂತೆ ಕಟ್ಟಿಕೊಂಡು ಇಂದು ನವೆಯುವುದು ವ್ಯರ್ಥ, ಸರ್ವಥಾ ವ್ಯರ್ಥ.’

‘ಯಾಕೆ ಅಷ್ಟು ನಿರಾಶೆ....’

‘ಅಲ್ಲಾರೀ, ಇಂಡಿಕೇಟಿನ ಬಹುಗುಣರು ಆಸ್ತಿಹಕ್ಕನ್ನು ಕಸಿದುಕೊಳ್ಳ ಬೇಕೆಂದು ಹೇಳ ಹೊರಟಿದ್ದಾರೆ. ನಾಳೆ ಏನಾದೀತು ಎಂಬುದು ನಿಜಕ್ಕೂ ಜ್ಯೋತಿಷಿಗಳೂ ಹೇಳಲು ಅಂಜ ಬೇಕಾದ ಈ ಕಾಲದಲ್ಲಿ ನಾಳೆ ತುಪ್ಪ ಕುಡೀ ಬೇಕೂಂತ ಇಂದು ಉಪವಾಸವಿರುವುದೆ?’

‘ಅಂದ್ರೆ ಯಾರಿಗೂ ಭವಿಷ್ಯದ ಭರವಸೆಯಿಲ್ಲಾಂತೀಯ? ಆದ್ರೂ ನೋಡು, ಇರುವೆಗಳಿಗೂ ನಾಳಿನ ಚಿಂತೆಯಿದೆ....’

“ಇರಲಿ. ನಮಗ್ಯಾಕೆ?”

‘ಇಹಲೋಕ—ಪರಲೋಕಗಳಲ್ಲಿ ನಂಬಿಕೆಯಿಡುವುದು ಅಂಧಶ್ರದ್ಧೆಯಂತೆಯೇ ನಾಳಿನ ಚಿಂತೆಯನ್ನು ಇಟ್ಟುಕೊಳ್ಳುವುದೂ....’

‘ಬರಿಯ ಕುರುಡು ನಂಬಿಕೆ ನೋಡಿ, ಯಾರೋ ಒಬ್ಬ ಕವಿ ಹಾಡಿದ್ದಾನಂತೆ–ನಿನ್ನೆ ಸತ್ತಿದೆ; ನಾಳೆ ಹುಟ್ಟಿಲ್ಲ ಅಂತ.’

‘ಹೌದು. ಅದು ಉಮರ್ ಖಯಾಮ್’

‘ಹೌದೌದು. ಹಾಗೆ ಆದ್ದರಿಂದ ಇಂದು ಮಜಬೂತಾಗಿ ಮಜಾಮಾಡಿ....’

‘ಹ್ಞೂಂ. ಏನೋಮ್ಮ, ಭಾರಿ ಆಸ್ತಿಕಳಾಗಿದ್ದವಳು ಬರು ಬರುತ್ತ ಖಟ್ಟಾನಾಸ್ತಿಕಳಾಗುತ್ತ ಬರುತ್ತಿದ್ದಿಯೇನೊಂತ?’

‘ಮತ್ತಿನ್ನೇನಾಗ ಬೇಕೂಂತ? ಬರೀ ಮೂರು ಕಾಸಿನಲ್ಲಾದರೂ ತೃಪ್ತಿಯಿಂದ ದಿನ ದೂಡ ಬೇಕೂಂತ ನಿಶ್ಚಯಿಸಿದರೆ. ಕಾಸಿನ ಬೆಲೆಯೇ ಅರೆಕಾಸಾಗುತ್ತೆ. ಆದ್ದರಿಂದ ನೋಡಿ ಚಾರ್ವಾಕನೋ ಗೀರ್ವಾಕನೋ....’

‘ಚಾರ್ವಕ ಕಣೆ....’

‘ಅವನು ಹೇಳಿದ್ದಾನಂತೆ—ಋಣಂಕೃತ್ವಾ ಘೃತಂ ಪಿಬೇತ್ ಅಂತ....’

‘ಹ್ಞೂಂ ಸಾಲ ಮಾಡಿದರೂ ಪರ್ವಾಗಿಲ್ಲ; ತುಪ್ಪ ಕುಡೀ ಬೇಕೂಂತ. ಅದು ಹೌದು. ಆದ್ರೆ ನೋಡು, ಸಾಲಕೊಡೋರಾದ್ರೂ ಬೇಕಲ್ಲಾ?’

‘ಕೊಡದಿದ್ರೇನಂತೆ? ಸುರು ಮಾಡೂದು ಲೂಟಿ. ‘ನಕ್ಸಲೈಟ್’ ಅಂತ ಹೆಸರು ಇಟ್ಟುಕೊಂಡ್ರೆ ಪಸಂದಾಗಿರುತ್ತದೆ....’

‘ಹ್ಞೂಂ. ಪರ್ವಾಗಿಲ್ವೆ ನೀನು. ಇದನ್ನೆಲ್ಲ ಈಗ ತಾನೇ ಮೀಸೆ ಇಡತೊಡಗಿರುವವರಿಗೆ ಹೇಳಿದರೆ ನಿನ್ನನ್ನೇ ಚಾರ್ವಾಕನೆಂದು ಗೌರವಿಸಿಯಾರು....’

‘ಯಾಕೆ?’

‘ಚಾರ್ವಾಕ ಅಂದರೆ ಚಾರುವಾದ ವಾಕನ್ನಾಡುವವನು. ಅಂದರೆ ಹೃದಯಂಗಮವಾದ, ಹೃದಯೋಲ್ಲಸಿತವಾದ ಮಾತಾಡುವವನು. ತುಪ್ಪ ತಿನ್ನ ಬೇಕು ಅನ್ನೋದು ಅಂತಹ ಮಾತು. ಹಾಗೇ ನಾಳಿನ ಚಿಂತೆ ಬೇಡ; ಇಂದು ತಿನ್ನಿರಿ, ಕುಡಿಯಿರಿ, ಭೋಗಿಸಿರಿ ಅನ್ನೋದೂ ಅಂಥದೇ ಮಾತು. ಇಂದಿನ ಸಿನಿಮಾದ ನಾಯಕ–ನಾಯಿಕೆಯರಿಗೂ ಇದೆ ಸಮ್ಮತ. ಆದ್ದರಿಂದ ಬಹ ಭವಿಷ್ಯದ ಬಗ್ಗೆ ನಿರಾಶೆ ಹೊಂದಿ ವರ್ತಮಾನವನ್ನಷ್ಟೇ ನೋಡ ಬೇಕೆಂಬವರಿಗೆ ನಾಯಕರೊಬ್ಬರು ಬೇಕು.’

‘ಇದ್ದಾರಲ್ಲಾ ಒಂದೊಂದು ಗುಂಪಿಗೆ ಒಬ್ಬೊಬ್ಬರು.’

‘ಯಾರೂಂತೇನೆ? ಇಂದಿರಾ ಗಾಂಧಿಯಾದರೂ ಮುಂದಿನ ಹೋರಾಟವನ್ನೇ ನೋಡುತ್ತಾರೆ, ಇಂದಿನ ವಸ್ತು ಸ್ಥಿತಿಯನ್ನಲ್ಲ. ನಕ್ಸಲೀಯರಾದರೂ ಭಾರಿ ಕ್ರಾಂತಿಯ ಭವಿಷ್ಯಕ್ಕಾಗೇ ಇಂದು ನವೆಯುತ್ತಿದ್ದಾರೆ....’

‘ಸಾಕು ಬಿಡೀಂದ್ರೆ....ನಾನಂದದ್ದು ಹಾಗಲ್ಲ ನೋಡಿ. ನಮ್ಮ ಸರಕಾರಗಳು ಪ್ರಗತಿಯ ಹೆಸರಿನಲ್ಲಿ ಕೆಲವೇ ಮಂದಿಯ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುತ್ತ ಹೋಗುತ್ತಿವೆ; ನಮ್ಮಂಥವರನ್ನು ಕೇಳುತ್ತಾರೆಯಾರು? ಉತ್ಪಾದನೆಯನ್ನು ಹೆಚ್ಚಿಸುವತ್ತ ಗಮನನೀಡುತ್ತಿಲ್ಲ. ಆದುದರಿಂದಲೇ ಈ ವಿಪರ್ಯಾಸ. ಕಡಿಮೆ ವಸ್ತುಗಳಿಗೆ ಹೆಚ್ಚು ಬೆಲೆಕೊಡಬೇಕಾಗಿ ಬಂದಿದೆ.

‘ಅಂದ್ರೆ ನಮ್ಮ ದೇಶದಲ್ಲಿ ಹಣದ ಪೂರಯ್ಕೆಗೂ ತಾಳೀತಂತಿ ಇಲ್ಲಾಂತ ತಾನೇ ನೀನನ್ನೋದು?”

‘ನಾನ್ಯಾಕೆ ಅನ್ನಬೇಕು? ಹತ್ತು ರೂಪಾಯಿ ನೋಟು ಪ್ಯಾಟೆಗೆ ಒಯ್ರಿ. ಎರಡು ಕಿಲೋ ಅಕ್ಕಿ ಅದಕ್ಕೆ ಬೇಕಾದ ಮೇಲು ಸಾಹಿತ್ಯ ಕಟ್ಟಿಗೆ—ಎಣ್ಣೆ ತರೊದ್ರೊಳಗೆ ಕಾಲಿ. ಇನ್ನು ಬಟ್ಟೆಬರೆ ಯಾರು ಕೊಡ್ತೇಕು? ಮನೆ ಬಾಡಿಗೆ ಯಾರು ಮಾಫಿ ಮಾಡ್ತಾರೆ? ಮದುವೆ–ಮುಂಜಿಯನ್ನು ರಿಜಿಸ್ಟ್ರಾರರ ಆಫೀಸಿನಲ್ಲಾದರೂ ಮಾಡಬಹುದಾನ್ನಿ. ಆದ್ರೆ, ಸತ್ತ ಹೆಣವನ್ನೆಲ್ಲಿ ದಾಖಲು ಮಾಡಬೇಕು?’

‘ಸಾಕು ಬಿಡೆ.... ಆಬದ್ಧ ಏನೇನೋ .... ಇಂದಿರಾ ಗಾಂಧಿ ಸಮಾಜವಾದಿ ಸಮಾಜ ಕಟ್ಟೋಕೆ ಸೊಂಟಕಟ್ಟಿದ್ದಾರೆ.’

‘ಹ್ಞೂಂ. ತಾವೇ ಪ್ರತಿನಿತ್ಯ ೫೦ ಸಾವಿರ ರೂಪಾಯಿ ಕರ್ಚು ಮಾಡುವಾಕೆ ಸಮಾಜವಾದವನ್ನು ತರ್ತಾರೆ....’

‘ಸಮಾಜವಾದ ಅನ್ನೋದು ರಾತ್ರೆ ಬೆಳಗಾಗೋದ್ರೊಳ್ಗೆ ಹೇಗೆ ಬರುತ್ತೆ? ಅದಕ್ಕೆ ಸುದೀರ್ಘ ಕಾಲ ಬೇಕು....’

‘ಹ್ಞೂಂ.... ಅದೇ ಅಂಧವಿಶ್ವಾಸವನ್ನು ಮಾಡಿಸಿ ವರ್ತಮಾನ ಸುಖವನ್ನು ಕಳೆದುಕೊಳ್ಳೋದು....”

‘ಅಲ್ವೆ. ಭಾರೀ ನಿರಾಶಾವಾದಿಯಾಗಿದ್ದೀಯಾ?’

“ಆಶಾವಾದಿಯಾಗಿದ್ದರೆ ತಾನೇ ನಿರಾಶಾವಾದಿಯಾಗೋ ಮಾತು?’

‘ಅಂದ್ರೆ?’

‘ಅಂದ್ರೂ ಇಲ್ಲ; ಬಂದ್ರೂ ಇಲ್ಲ. ಈವತ್ತು ಬೇಳೆ ತಂದದ್ದಿರಲಿಲ್ಲ. ಗಂಜಿ ಬೇಯಿಸಿದ್ದೇನೆ....’

‘ಯಾಕೆ ಹೇಳ್ಲಿಲ್ಲ?’

“ತರೋಕೆ ಕಿಸೆ ಕಾಲಿ ಅಂತ ಹೇಳ್ಲಿಲ್ಲ....’

‘ಖುಣಂ....”

‘ಹೋಗ್ಲಿ ಬಿಡೀಂದ್ರೆ. ನಮಗೆ ಚಾರುವಾಕರೂ ಬೇಡ, ಗೀರುವಾಕರೂ ಬೇಡ....’

‘ಗೀರುವಾಕರೆಂದರೆ?’

‘ಹೃದಯ ಗೀರುವಂತೆ ಮಾತಾಡುವವರು, ಅಯ್ತಲ್ಲ?”

‘ಮತ್ತಿನ್ನೆಂಥ ವಾಕರು ಬೇಕು?”

“ಅವಾಕರು ಸದ್ಯಕ್ಕೆ....”

“ಭಾರೀ ಬುದ್ಧಿವಂತೆ ಕಣೇ....’

‘ಯಾಕೆ?’

‘ಯಾಕೂ ಇಲ್ಲ ಬಿಡು....’

‘ಊಹ್ಞೂಂ....’

—ಗೋರಾ.

ನವಯುಗ

ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

ಮೇ ತಿಂಗಳಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಅನಧಿಕಾರಿಗಳಲ್ಲಿ ಅಧಿಕಾರ

ಉತ್ಕಲದ ಬಹು ವರ್ಣೀಯ ರಾಜ್ಯ ಕಾರಣಿಯೆಂದರೆ ಡಾ| ಹರಿಕೃಷ್ಣ ಮೆಹತಾಬ ಮತ್ತು ಬಿಜೂ ಪಟ್ನಾಯಕರು. ಇಬ್ಬರೂ ಪಂ| ನೆಹರುರವರಿಗೆ ಅತ್ಯಂತ ಪ್ರಿಯರು; ಅವರ ಮಗಳು ಇಂದಿರಾಗಾಂಧಿಗೂ ದೂರದವರಲ್ಲ. ಕಾರಣಾಂತರಗಳಿಂದ ಮೆಹತಾಬರು ೧೯೬೬ರ ಸುಮಾರಿನಲ್ಲಿ ಕಾಂಗ್ರೆಸ್ ಬಿಟ್ಟು ಪ್ರತ್ಯೇಕರಾದರು; ಅಲ್ಲಲ್ಲಿ ಅವತರಿಸಿದ ಜನ ಕಾಂಗ್ರೆಸ್ಸನ್ನು ಸೇರಿದರು. ಪರಿಣಾಮವಾಗಿ ಅವರ ಆಶಯ ಈಡೇರಲಿಲ್ಲವಾಗಿ ೭೦ರಲ್ಲಿ ಇಂದಿರಾ ಕಾಂಗ್ರೆಸ್ಸನ್ನು ಸೇರಿದರು.

ರಾಜ್ಯಕೀಯದಲ್ಲೇ ತಮ್ಮ ಜೀವಮಾನದ ಬಹು ವರ್ಷಗಳನ್ನು ಕಳೆದ ಡಾ| ಮೆಹತಾಬರಿಗೆ ಕೂದಲು ನರೆತು ಉದುರಿದರೂ ಅಧಿಕಾರದ ಆಶೆ ಬಿಡಲಿಲ್ಲ. ಹೇಗೋ ಏನೋ ಪ್ರಯತ್ನ ನಡೆಸಿ ವಿಧಾನ ಸಭಾ ಇಂಡಿಕೇಟಿನ ನಾಯಕತ್ವ ಗಿಟ್ಟಿಸಿದರು. ತನ್ನ ಪಕ್ಷದವರಲ್ಲದ ಇತರ ಹಲವರ ಬೆಂಬಲ ತನಗಿದೆಯೆಂದು ಹೇಳಿ ಸಚಿವ ಸಂಪುಟ ರಚಿಸಲು ತನಗೆ ಆಹ್ವಾನ ನೀಡಬೇಕೆಂದು ರಾಜ್ಯಪಾಲರನ್ನು ಕೇಳಿಕೊಂಡರು. ಅವರ ಬೇಡಿಕೆಯನ್ನು ಮನ್ನಿಸುವ ಸಾಧ್ಯತೆಯೂ ಇತ್ತು. ಆದರೆ, ಕೈಗೆ ಬಂದ ತುತ್ತು ಬಾಯಿಗೆ ಬೀಳುವುದರೊಳಗೆ ಎರಡು ದುರ್ಘಟನೆಗಳು ನಡೆದು ಹೋದುವು. ಮೊದಲನೆಯದಾಗಿ ಅವರ ಪ್ರಥಮ ವಿರೋಧಿ ಬಿಜೂ ಪಟ್ನಾಯಕರು ಉತ್ಕಲ ಕಾಂಗ್ರೆಸ್ಸಿನ ಯಾವ ಸದಸ್ಯನ ಬೆಂಬಲವೂ ಅವರಿಗಿಲ್ಲವೆಂದು ಬಹಿರಂಗ ಹೇಳಿಕೆ ನೀಡಿದರು. ಡಾ| ಮೆಹತಾಬರು ತನ್ನ ಮೇಲಿನ ಆರೋಪಗಳಿಂದ ಮುಕ್ತರಾಗಿ ಬರಬೇಕೆಂದು ಅವರಿಗಾಗದವರು ಹುಯಿಲೆಬ್ಬಿಸಿದರು. ಇಂದಿರಾ ಗಾಂಧಿಯೂ ಅವರನ್ನು ದಿಲ್ಲಿಗೆ ಕರೆದುಕೊಂಡರು.

ಮುಖ್ಯಮಂತ್ರಿಯೆಂದು ಪ್ರಮಾಣ ವಚನ ಸ್ವೀಕರಿಸುವುದನ್ನೇ ಮೆಲುಕು ಹಾಕುತ್ತ ಡಾ| ಮೆಹತಾಬರು ವಿಮಾನವೇರಿದ್ದರು–ಆದರೆ, ಅವರು ಮರಳಿ ಬರುವುದರೊಳಗೆ ಸಿಂಹಾಸನ ಮತ್ತೊಬ್ಬರ ಪಾಲಿಗೆ ಹೋಗಿಯಾಗಿತ್ತು! ಪಾಪ, ಅವರಿನ್ನು ಕೆಲ ಕಾಲವಾದರೂ ವಿರೋಧಿ ಪಕ್ಷದ ನಾಯಕರಾಗೇ ಕುಳಿತುಕೊಳ್ಳುವಂತಾಯ್ತು.

ಡಾ| ಮೆಹತಾಬರ ಪ್ರಬಲ ಶತ್ರು ಬಿಜೂಪಟ್ನಾಯಕರು. ಹಿಂದೆ ಕಾಂಗ್ರೆಸ್ ಅವಿಭಜಿತವಾಗಿದ್ದಾಗಲೂ ಇವರಿಬ್ಬರ ಹೋರಾಟ ನಡೆದೇ ಇತ್ತು. ಡಾ| ಮೆಹತಾಬರು ಮುಖ್ಯ ಮಂತ್ರಿ ಪದವಿಗೆ ಎರವಾಗಲು ಪಟ್ನಾಯಕರ ಪಿತೂರಿಯೇ ಹಿಂದೆ ಕಾರಣವಾಗಿತ್ತು; ಇಂದೂ ಕಾರಣವಾಯ್ತು. ಬಿಜೂ ಪಟ್ನಾಯಕರು ಕಾಂಗ್ರೆಸ್ ವಿಭಜನೆಯ ಬಳಿಕ ಇಂಡಿಕೇಟಿನಲ್ಲೇ ಉಳಿದರು. ಆಗ ಡಾ| ಮೆಹತಾಬರು ಜನಕಾಂಗ್ರೆಸ್ಸಲ್ಲಿದ್ದರು. ಆದರೆ, ಪಟ್ನಾಯಕರು ಪಕ್ಷ ವಿರೋಧೀ ನೀತಿಯನ್ನನುಸರಿಸಿದರೆಂದು ಜಗಜ್ಜೀವನರಾಮರು ಅವರನ್ನು ಪಕ್ಷದಿಂದ ಕಿತ್ತು ಹಾಕಿದರು. ನಂದಿನಿ ಸತ್ಪತಿಯವರ ಮಾತಿಗೆ ಮರುಳಾಗಿ ಕೇಂದ್ರ ನಾಯಕರು ಈ ಕ್ರಮಕೈಕೊಂಡಿರಲೂ ಸಾಧ್ಯವಿದೆ. ಬಿಜೂ ಬೆದರಲಿಲ್ಲ; ನಿರಾಶೆ ಹೊಂದಲಿಲ್ಲ; ಉತ್ಕಲಕಾಂಗ್ರೆಸ್ ಕಟ್ಟಿದರು; ತಾನು ಎಲ್ಲಿಡೆ ಸೋತರೂ ತನ್ನವರನ್ನು ಗಣನೀಯವಾಗಿ ಗೆಲ್ಲಿಸಿ ತಂದರು. ಮಧ್ಯಾವಧಿ ಚುನಾವಣಾ ನಂತರ ಸತ್ಪತಿ–ಪಟ್ನಾಯಕರ ಮಾತಿನ ಜಗಳ ಮುಗಿಯಲಿಲ್ಲ. ಆದರೆ, ಬಿಜೂ ಆಕೆಯನ್ನು ಹುಲ್ಲಿಗಿಂತ ಕಡೆಯಾಗಿ ಕಂಡದ್ದರಿಂದ ಅವರೇ ಬಾಯ್ಮುಚ್ಚಿದರು.

ಡಾ| ಮೆಹತಾಬರು ಮತ್ತೆ ಮುಖ್ಯಮಂತ್ರಿಯಾಗ ಬಾರದೆಂಬ ಅವರ ಉದ್ದೇಶ. ಅದಕ್ಕಾಗಿ ಅವರು ಸ್ವತಂತ್ರ ಪಕ್ಷ ಮತ್ತು ಜಾರ್ಕಂಡ್ ಪಕ್ಷವನ್ನು ಕೂಡಿ ಸಂಯುಕ್ತರಂಗ ರಚಿಸಲು ಕೊನೆಗೂ ನಿರ್ಧರಿಸಿದರು. ಈ ನಿರ್ಧಾರವು ಮೊದಲೇ ಆಗುತ್ತಿದ್ದರೆ, ಅಲ್ಲಿನ ರಾಜ್ಯಕೀಯದ ಡೋಲಾಯಮಾನತೆ ಹದಿನೈದು ದಿನ ಮೊದಲೇ ಮುಗಿಯುತಿತ್ತು. ಸ್ವತಂತ್ರ ಪಕ್ಷದ ವಿಶ್ವನಾಥ ದಾಸರು ಮುಖ್ಯಮಂತ್ರಿಯಾಗಿ ಸಂಮಿಶ್ರ ಸರಕಾರವನ್ನು ನಡೆಸ ಹೊರಟಿದ್ದಾರೆ. ಉತ್ಕಲ ಕಾಂಗ್ರೆಸ್ ಮತ್ತು ಜಾರ್ಕಂಡ್ ಪಕ್ಷಗಳು ಮಂತ್ರಿ ಮಂಡಳದಲ್ಲಿ ಪಾಲ್ಗೊಂಡು ಬೆಂಬಲ ನೀಡುತ್ತಿವೆ.

ಬೆರಳೆಣಿಕೆಯ ಬಹುಮತದ ಸರಕಾರ ಸ್ಥಿರವಾಗಿ ನಿಲ್ಲುವುದೆಂದು ಹೇಳ ಬರುವುದಿಲ್ಲ. ಆದರೆ, ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ದಿಗ್ವಿಜಯದ ಗುಂಗಿನಲ್ಲಿ ರಾಜ್ಯಕೀಯದ ಬಗ್ಗೆ ವಿಶೇಷ ಕಾಳಜಿ ವಹಿಸದೆ ಮುಕ್ತ ಮನಸ್ಸಿನಿಂದಿರುವುದರಿಂದ ಉತ್ತರ ಪ್ರದೇಶ, ಗುಜರಾತ ಮತ್ತು ಕರ್ನಾಟಕಗಳಂತೆ ಪಕ್ಷಾಂತರಕ್ಕೆ ಇಲ್ಲಿ ಹೆಚ್ಚಿನ ಬಲ ಬರಲಾರದು. ಆದುದರಿಂದ ೧೯೬೭ರ ಸಿಂಗದೇವರ ಸಂಪುಟ ಯಾವ ಸದ್ದುಗದ್ದಲವಿಲ್ಲದೆ ನಾಲ್ಕು ವರ್ಷಗಳನ್ನು ದೂಡಿದಂತೆ ವಿಶ್ವನಾಥ ದಾಸರೂ ಐದು ವರ್ಷ ದೂಡುವ ಸಾಧ್ಯತೆಯಿದೆಯೆಂಬುದನ್ನು ಅಲ್ಲಗಳೆಯಲಾಗದು.

○ ○ ○

ಪಶ್ಚಿಮ ಬಂಗಾಳದ ರಾಜ್ಯಕೀಯ ೧೯೬೭ರಿಂದಲೂ ಅಸ್ಥಿರವೇ ಆಗಿದೆ. ನಡುವೆ ನಡೆದ ಮಧ್ಯಾವಧಿ ಚುನಾವಣೆಗಳ ನಂತರವೂ ಅದು ಸುಧಾರಿಸಲಿಲ್ಲ. ೧೯೬೭ಕ್ಕೆ ಮೊದಲು ಕಾಂಗ್ರೆಸ್ಸಿನಲ್ಲಿದ್ದ ಅಜಯ ಕುಮಾರ ಮುಖರ್ಜಿಯವರು ಬಂಗ್ಲಾ ಕಾಂಗ್ರೆಸ್ ಕಟ್ಟಿಕೊಂಡು ಕಾಂಗ್ರೆಸ್ ವಿರೋಧಿಯಾದರು. ಈ ವಿರೋಧದ ಕಾರಣ ದಿಂದಲೋ ಅಧಿಕಾರದ ವ್ಯಾಮೋಹದಿಂದಲೋ ಅವರು ಮಾರ್ಕ್ಸಿಸ್ಟರನ್ನೂ ಕೂಡಿಕೊಂಡು ಸರಕಾರದ ಸೂತ್ರಧಾರರಾಗಲೊಪ್ಪಿದರು. ೬೯ರಲ್ಲಿ ಮಧ್ಯಾವಧಿ ಚುನಾವಣೆ ವೇಳೆ ಮುಖರ್ಜಿಯವರು ಮುಖ್ಯ ಮಂತ್ರಿ ಪದ ನೀಡುವುದಾದರೆ ಮಾತ್ರ ಮಾರ್ಕ್ಸಿಸ್ಟರನ್ನು ಮತ್ತೆ ಕೂಡುವ ಶರ್ತ ಹೇರಿದರು; ಗೃಹಶಾಖೆಯನ್ನು ತನಗೇ ಬಿಟ್ಟುಕೊಡಬೇಕೆಂದು ಹಠ ಹಿಡಿದರು. ಪರಿಣಾಮ ಗೃಹಶಾಖೆ ಒಡೆಯಿತು; ಒಂದು ವಿಭಾಗ ಅಜಯ್‌ಗೂ ಇನ್ನೊಂದು ವಿಭಾಗ ಮಾರ್ಕ್ಸಿಸ್ಟರ ಜ್ಯೋತಿಬಸುವಿಗೂ ಸಿಕ್ಕಿತು. ಈ ಅಪವಿತ್ರ ಮೈತ್ರಿಯ ರುದ್ರಭೀಷಣತೆ ಇಂದೂ ಪ. ಬಂಗಾಳದಲ್ಲಿ ತಾಂಡವವಾಡುತ್ತಿದೆ. ಕೊಲೆ–ಸುಲಿಗೆ–ಅಭದ್ರತೆಗಳು ಅಲ್ಲಿನ ಮನೆಮಾತು. ಅಜಯ್ ಬಸು ದಾಂಪತ್ಯದಲ್ಲಿ ವಿರಸ ಮೂಡಿ ಅದು ವಿಕೋಪಕ್ಕೇರಿ, ಕೊನೆಗೂ ಅಜಯ್ ರಾಜಿನಾಮೆ ನೀಡಿದ್ದು, ರಾಷ್ಟ್ರಪತಿ ಆಳಿಕೆಯಲ್ಲೂ ರಾಜ್ಯದ ಪರಿಸ್ಥಿತಿ ಸುಧಾರಿಸದೆ ಹೋದದ್ದು ಲೋಕ ವಿದಿತ. ಮಾರ್ಕ್ಸಿಸ್ಟರನ್ನು ಎರಡು ಬಾರಿ ಅಪ್ಪಿಕೊಂಡ ಅಜಯ್ ಅವರ ಕಡು ವಿರೋಧಿಯಾಗಿ ಪರಿಣಮಿಸಿದ್ದು ಕಡಿಮೆ ಮಹತ್ವದ್ದಲ್ಲ.

ಈ ವರ್ಷದ ಮಧ್ಯಾವಧಿ ಚುನಾವಣೆಗಳಲ್ಲಿ ಬಂಗ್ಲಾ ಕಾಂಗ್ರೆಸ್ಸು –ಇಂಡಿಕೇಟ್ ಬೇರೆ ಬೇರೆಯಾಗಿ ಹೋರಾಡಿದರೂ ಚುನಾವಣಾ ನಂತರ ಮಾರ್ಕ್ಸಿಸ್ಟೇತರ ಸರಕಾರ ರಚಿಸಲು ಒಂದಾದುವು. ಮಾರ್ಕ್ಸಿಸ್ಟೇತರ ಸಂಯುಕ್ತ ರಂಗದಲ್ಲಿ ಇಂಡಿಕೇಟ್ ಅಧಿಕ ಸಂಖ್ಯಾ ಬಲವನ್ನು ಹೊಂದಿದ್ದರೂ ಬೆರಳೆಣಿಕೆಯ ಸ್ಥಾನಾಪನ್ನ ಅಜಯ ಮುಖರ್ಜಿಯವರನ್ನೇ, ನಾಯಕನೆಂದು ಒಪ್ಪಿಕೊಂಡಿತು. ಇದರಿಂದ, ಅಲ್ಲಿ ಅಜಯಕುಮಾರ ಮುಖರ್ಜಿಯವರ ವ್ಯಕ್ತಿತ್ವ ಹೇಗೆ ರಂಜಿತವಾಗಿದೆಯೆಂದು ಊಹಿಸಬಹುದು. ಹೀಗೆ ನಾಲ್ಕೇ ವರ್ಷಗಳಲ್ಲಿ ಮೂರನೆಯ ಬಾರಿಗೆ ಅಜಯ ಮುಖರ್ಜಿಯವರು ಮುಖ್ಯ ಮಂತ್ರಿಯಾದರು.

ಅಜಯರಿಗೆ ಇಂಡಿಕೇಟ್ ನೀಡಿದ ಈ ಸ್ಥಾನ ಮುಂದಿನ ಐದು ವರ್ಷವೂ ಉಳಿಯುವುದೆಂದು ನಂಬಲಾಗದು. ಯಾವುದೇ ಸಮಯದಲ್ಲಿ ಇಂಡಿಕೇಟ್ ರಾಜ್ಯನಾಯಕರು ತಿರುಗಿಬೀಳಬಹುದು. ಮಾರ್ಕ್ಸಿಸ್ಟರನ್ನು ದೂರವಿರಿಸಿ, ತಮಗೂ ಅವರಿಗೂ ಸಂಬಂಧವಿಲ್ಲವೆಂಬ ಅಭಿಪ್ರಾಯ ಜನತೆಯಲ್ಲಿ ಮೂಡಿಸುವುದು ಇಂಡಿಕೇಟಿಗೆ ಅಗತ್ಯವಿತ್ತು. ಅದು ಈಡೇರಿತೆಂದರೆ, ಮತ್ತೆ ಸ್ವಪಕ್ಷದ ಬೇರು ಹರಡಿಸಲು ನೆಲ ಹಸನು ಮಾಡಬಹುದು. ಹೀಗೆ ಅನಿಶ್ಚಿತತೆಗೆ ಹೆಸರಾದ ಪಶ್ಚಿಮ ಬಂಗಾಳದಲ್ಲಿ ಕೆಲಕಾಲವಾದರೂ ನಿಶ್ಚಿತತೆ ಮೂಡಿದ್ದು ಬಂಗಾಳಿಗಳ ಸುದೈವ.

○ ○ ○

ಗುಜರಾತದಲ್ಲಿ ಸಿಂಡಿಕೇಟ್ ಶಾಸಕರ ಪಕ್ಷಾಂತರದಿಂದಾಗಿ ಬಹುಮತ ಕಳೆದುಕೊಂಡ ಹಿತೇಂದ್ರ ದೇಸಾಯರು ರಾಜಿನಾಮೆ ನೀಡಿದರು. ಇಂಡಿಕೇಟ್ ನಾಯಕ ಕಾಂತಿಲಾಲ್ ಘಿಯರು ತಮಗೆ ಬಹುಮತವಿದ್ದು ತಾವು ಸರಕಾರ ರಚಿಸುವುದಾಗಿ ಹೇಳಿ, ಸಲಹೆ ಪಡೆಯಲು ದಿಲ್ಲಿಗೆ ಹಾರಿಹೋದರು. ಕರ್ನಾಟಕದಲ್ಲಿ ಸಿದ್ಧವೀರಪ್ಪನವರೂ ಅವರ ಬೆಂಬಲಿಗರೂ ತಮ್ಮ ಬಹುಮತವನ್ನು ಪರಿಪರಿಯಾಗಿ ಸಿದ್ಧಮಾಡಿತೋರಿಸಹೊರಟರೂ ಹೈಕಮಾಂಡು ಅವರಿಗೆ ಸರಕಾರ ರಚಿಸಲು ಅನುಮತಿ ಕೊಡಲಿಲ್ಲ; ಹಾಗೆಂದು ಅದನ್ನು ನಿರಾಕರಿಸಲೂ ಇಲ್ಲ. ಭಾರಿ ಪೇಚಿನಲ್ಲಿ ಸಿಕ್ಕಿಕೊಂಡಿದ್ದಂತೆ ಅರಸು—ಸಿದ್ಧವೀರಪ್ಪರಲ್ಲಿ ಶಾಶ್ವತ ವಿರಸ ಮೂಡದಂತೆ ಮಾಡಹೊರಟಿದ್ದಾರೆ. ಆದರೆ, ಅದೇ ಹೈಕಮಾಂಡ್ ಗುಜರಾತದಲ್ಲಿ ಸರಕಾರ ರಚಿಸಲು ಘಿಯವರಿಗೆ ತಡವಿಲ್ಲದೆ ಒಪ್ಪಿಗೆ ನೀಡಿ ಕಳಿಸಿತು! ದುರ್ದೈವದಿಂದ ಅವರು ಗಾಂಧಿ ನಗರಕ್ಕೆ ಬರುವಷ್ಟರಲ್ಲಿ ಸ್ವತಂತ್ರ ಪಕ್ಷದ ೧೭ ಶಾಸಕರನ್ನೂ ಮೂವರು ಪಕ್ಷೇತರರನ್ನೂ ಕೂಡಿಕೊಂಡು ೯೧ರ ಬಲ ತಮ್ಮದೆಂದು ಹೇಳಿ ಹಿತೇಂದ್ರ ದೇಸಾಯಿಯವರೇ ಮತ್ತೆ ಮುಖ್ಯಮಂತ್ರಿಯಾದರು!

ಕರ್ನಾಟಕದ ಬಗ್ಗೆ ಕೇಂದ್ರದ ತೀರ್ಮಾನ ತಡವಾಗುತ್ತಿದ್ದಂತೆ ಸಿದ್ಧವೀರಪ್ಪನವರ ಆಸೆಯೂ ದೂರವಾಗುತ್ತಿದೆ. ಪಕ್ಷಾಂತರಗೊಂಡ ಸದಸ್ಯರನ್ನು ಉತ್ತರ ಪ್ರದೇಶದಲ್ಲಿ ನಂಬಬಹುದು; ಕರ್ನಾಟಕದಲ್ಲಿ ಮಾತ್ರ ನಂಬಲಾಗದು—ಎಂದರೆ, ಇದರ ಹಿಂದೆ ಮತ್ತೇನೋ ಭಾರಿ ರಾಜ್ಯಕೀಯ ಇದೆಯೆಂದೇ ಹೇಳಬೇಕು.

● ●



ಬಂಗ್ಲಾದೇಶದತ್ತ ಜಾಗತಿಕದೃಷ್ಟಿ

ಪೂರ್ವ ಪಾಕಿಸ್ತಾನದಲ್ಲಿ ಮಾತ್ರವಲ್ಲ, ಇಡಿಯ ಪಾಕಿಸ್ತಾನದಲ್ಲೇ ಬಹುಮತ ಗಳಿಸಿ ಗೆದ್ದುಬಂದ ಶೇಕ್ ಮುಜಿಬುರ್ ರಹಮಾನರ ಅವಾಮಿ ಪಕ್ಷದ ಬೇಡಿಕೆಗಳು ಪಾಕಿಸ್ತಾನಿ ಹೃದಯದ ಮಿಡಿತದಿಂದ ಹೊರಟ ಜನವಾಣಿ ಪೀಪಲ್ಸ್ ಪಾರ್ಟಿಯ ಝುಡ್. ಎ. ಭುಟ್ಟೋ ಅವರು ಇದನ್ನು ಪಶ್ಚಿಮ ಪಾಕಿಸ್ತಾನದ ಮಟ್ಟಿಗೆ ಒಪ್ಪದಿರಲು ಕಾರಣವಿದೆ. ಏಕೆಂದರೆ ಅವರ ಪಕ್ಷ ಪ. ಪಾಕಿನಲ್ಲಿ ಮಾತ್ರ ಬಹುಮತ ಹೊಂದಿದೆ. ಆದರೆ, ಇಡಿಯ ಪಾಕಿಸ್ತಾನ ದೃಷ್ಟಿಯಿಂದ ನೋಡುವಾಗ ಅವಾಮಿ ಲೀಗು ನಿಚ್ಚಳ ಬಹುಮತ ಪಡೆದಿರುವುದರಿಂದ ಭುಟ್ಟೋ ಅಭಿಪ್ರಾಯಕ್ಕೆ ಬಹುಮತದ ಬಲವಿಲ್ಲ. ಪೂ. ಪಾಕಿಸ್ತಾನದ ಬಗ್ಗೆಯಂತೂ ಅವರದ್ದು ಬುಡವಿಲ್ಲದ ಮನೆ ಮಾತ್ರ. ಈ ಸ್ಥಿತಿ ಭುಟ್ಟೋರಿಗೆ ಅಪ್ರಿಯವಾದುದರಿಂದಲೇ ತಮ್ಮ ಹಿಂದಿನ ವಸಾಹತುಶಾಹಿಯನ್ನವರು ಪುನರುಜ್ಜೀವನಗೊಳಿಸಿದ್ದರಿಂದಲೇ ಯಾಹ್ಯಾಖಾನ್ ಕರೆದ ಎಸೆಂಬ್ಲಿ ಸಭೆಯನ್ನು ಬಹಿಷ್ಕರಿಸುವ ಪಾಪ್ಪರ್ಯ ತೋರಿದರು. ಯಾಹ್ಯಾಖಾನರಿಗೆ ತನ್ನ ಕೈಯಲ್ಲಿ ರಾಜದಂಡವುಳಿಸಲಿದೊಂದು ಸುವರ್ಣಾವಕಾಶವೆನಿಸಿದ್ದರಿಂದವರು ಎಸೆಂಬ್ಲಿ ಸಭೆಯನ್ನು ಮುಂದೂಡಿದರು.

ಬಂಗ್ಲಾ ದೇಶದ ಸರ್ವ ಅನರ್ಥಗಳಿಗೂ ನರಮೇಧಕ್ಕೂ ಮೂಲ ಕಾರಣ ಪುರುಷರು ಇವರಿಬ್ಬರು.– ಮುಖ್ಯವಾಗಿ ಭುಟ್ಟೋ ಮಹಾಶಯರು. ರಂಗು ರಂಗಿನ ವ್ಯಕ್ತಿತ್ವ ಹೊಂದಿದ ಇವರು ಭಾರಿ ಕನಸು ಕಾಣುತ್ತಿರುವವರು. ಅಯ್ಯೂಬ ಖಾನರನ್ನು ಅಜ್ಞಾತಕ್ಕೆ ತಳ್ಳಿದಂತೆಯೇ ಯಾಹ್ಯಾಖಾನರನ್ನೂ ಮೂಲೆಗೆ ತಳ್ಳಿ ತಾನು ಕೆಂಪು ಚೀಣೀಯ ನೂವನ ಪರಮಾನುಗ್ರಹದಿಂದ ಪಾಕ್ ಸಿಂಹಾಸನದ ಮೇಲೆ ಆಜೀವ ರಾರಾಜಿಸಬಹುದೆಂದವರು ಭಾವಿಸಿದ್ದರು; ಬಂಗ್ಲಾದ ಮೇಲೆ ಯಾಹ್ಯಾಖಾನರ ಹತೋಟಿ ಸಂಪೂರ್ಣ ತಪ್ಪಿ ಹೋಗುತಿದ್ದರೂ ಭುಟ್ಟೋ ಮಹಾಶಯರು ಮುರಿದ ಈ ಅದ್ಭುತ ಕನಸನ್ನು ಮತ್ತೆ ಮತ್ತೆ ಎಳೆಗೂಡಿಸ ಹೊರಟಿದ್ದಾರೆ.

ಬಂಗ್ಲಾದೇಶದ ಸ್ತ್ರೀ ಪುರುಷರು—ಆಬಾಲ ವೃದ್ಧರು—ಶೇಕ್ ಮುಜಿಬುರ್‌ರ ಮೇಲೆ ಅನನ್ಯ ವಿಶ್ವಾಸವಿಟ್ಟು ಪ. ಪಾಕಿಸ್ತಾನದ ವಸಾಹತುಶಾಹಿಯಿಂದ ಬಿಡುಗಡೆ ಹೊಂದಲು ದೃಢ ಸಂಕಲ್ಪ ಮಾಡಿದ್ದಾರೆ; ತಮ್ಮ ಸಂಕಲ್ಪವನ್ನವರು ದೃಢತೆಯಿಂದಲೇ ಕಾರ್ಯಗತಗೊಳಿಸುತ್ತಿದ್ದಾರೆ. ಬರಿಗೈಯಲ್ಲಿ ಚೀನ, ರಷ್ಯ, ಅಮೆರಿಕೆ ಮೊದಲಾದ ಬುದ್ಧಿವಂತ ದೇಶಗಳು ಪಾಕಿಸ್ತಾನಕ್ಕೆ ಬೇರೆ ಬೇರೆ ನೆಪವೊಡ್ಡಿ ನೀಡಿದ ಶಸ್ತ್ರಾಸ್ತ್ರ ಸಜ್ಜಿತ ಸೇನೆಯನ್ನು ಎದುರಿಸಿ ಬಹ್ವಂಶ ಸಫಲರಾಗಿದ್ದಾರೆ. ಅವರು ಯಶಗಳಿಸುವುದಿಂದು ನಿಸ್ಸಂದಿಗ್ಧವಾಗಿದೆ.

ಭುಟ್ಟೋ ಬೆಂಬಲಿತ ಯಾಹ್ಯಾಖಾನರು ಬಂಗ್ಲಾದಲ್ಲಿ ನರಮೇಧಕ್ಕೆಳಸಿದ ಆರಂಭದಲ್ಲೇ ಬಂಗ್ಲಾಗಳಿಗೆ ಸಂಪೂರ್ಣ ಸಹಾನುಭೂತಿ ತೋರಿಸಿದ ಏಕಮೇವ ರಾಷ್ಟ್ರ ಭಾರತ. ಈ ಸಂಬಂಧದಲ್ಲಿ ಪಕ್ಷ—ಪಂಗಡಗಳ ಭೇದವಿಲ್ಲದೆ ಲೋಕಸಭೆಯು ಸರ್ವಾನುಮತದಿಂದ ಗೊತ್ತುವಳಿ ಸ್ವೀಕರಿಸಿತು. ದೇಶದ ವಿವಿಧ ರಾಜ್ಯ ವಿಧಾನ ಸಭೆಗಳೂ ಯಾಹ್ಯಾಖಾನರ ನರಮೇಧವನ್ನು ಖಂಡಿಸಿ, ಬಂಗ್ಲಾ ನಾಗರಿಕರಿಗೆ ಸಹಾನುಭೂತಿ ವ್ಯಕ್ತಪಡಿಸಿತು. ಬಿಹಾರದ ಮುಖ್ಯಮಂತ್ರಿ ಕರ್ಪೂರೀ ಠಾಕುರರು ಬಂಗ್ಲಾ ನಾಗರಿಕರಿಗೆ ಶಸ್ತ್ರಾಸ್ತ್ರ ಸರಬರಾಜು ಮಾಡಲು ಸಿದ್ಧರೆಂದರೆ, ಉಳಿದ ಹಲವರು ಶಸ್ತ್ರಾಸ್ತ್ರ ನೆರವು ನೀಡಬೇಕೆಂದು ಕೇಂದ್ರವನ್ನು ಒತ್ತಾಯಪಡಿಸಿದರು. ಹೀಗೆ ಬಂಗ್ಲಾದೇಶವು ಪ. ಪಾಕಿಸ್ತಾನದ ವಿರುದ್ಧ ಹೂಡಿದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಭಾರತ ಒಕ್ಕೊರಲಿನ ಬೆಂಬಲ ನೀಡಿರುವುದು ಅತ್ಯಂತ ಮಹತ್ವದ್ದು.

ಆದರೆ, ಈ ಪ್ರಕರಣವು ಪಾಕಿಸ್ತಾನದ ಆಂತರಿಕ ವಿಷಯವೆಂದೂ ಇದರಲ್ಲಿ ತಲೆ ಹಾಕುವುದು ತಪ್ಪೆಂದೂ ಹೇಳುತ್ತಾರೆ ಇತರರು. ಆದುದರಿಂದಲೇ ಬಂಗ್ಲಾ ನಾಗರಿಕರು ಪ್ರತಿದಿನ ಅಮಾನವರ ಕೈಯಿಂದ ಅಮಾನುಷ ಕೊಲೆ—ಹಿಂಸೆಗಳಿಗೆ ಗುರಿಯಾಗುತ್ತಿರುವುದನ್ನು ಕಂಡೂ ಕುರುಡರಂತೆ ನಾವಿರಬೇಕಾಗಿದೆ. ಬಂಗ್ಲಾ ದೇಶೀಯರಿಗೆ ಶಸ್ತ್ರ ಸಹಾಯ ಮಾಡುವುದೆಂದರೆ ಹಲವು ಪ್ರಶ್ನೆಗಳು ಇವೆ. ಇದರಿಂದ ಪಾಕಿಸ್ತಾನವು ನಮ್ಮ ಮೇಲೆ ಮುನಿಯುತ್ತದೆಯೆಂಬುದಕ್ಕಿಂತ ಜಗತ್ತಿನ ಇತರ ದೇಶಗಳ ಪ್ರತಿಕ್ರಿಯೆಯನ್ನು ಯೋಚಿಸಬೇಕಾಗುತ್ತದೆ. ಪಾಕಿಸ್ತಾನವು ಭಾರತದ ಬಗ್ಗೆ ಸದಭಿಪ್ರಾಯ ಪಟ್ಟ ಘಟನೆ ಉಭಯ ದೇಶಗಳ ಸಂಬಂಧದ ಇತಿಹಾಸದಲ್ಲೇ ಇಲ್ಲವಾದುದರಿಂದ ಅದರ ಪ್ರತಿಕ್ರಿಯೆ ಸರ್ವಥಾ ಅಗಣ್ಯ.

ಮಾನವರೆಂದರೆ ತಾವು, ಮಾನವತೆಯೆಂಬುದನ್ನು ಗುತ್ತಿಗೆಗೆ ಪಡೆದವರು ತಾವು ಎಂದು ತಿಳಿದುಕೊಂಡಿರುವ ಮಹಾರಾಷ್ಟ್ರಗಳು ಬಂಗ್ಲಾ ಸ್ವಾತಂತ್ರ್ಯ ಹೋರಾಟವನ್ನು ಹೇಗೆ ನೋಡುತ್ತಿವೆ? ಮೊದಮೊದಲಿಗೆ ಅವು ಬೆಂಕಿಯೊಡನೆ ಇರುವೆಗಳ ಸೆಣಸಾಟವೆಂದೇ ದೃಢವಾಗಿ ನಂಬಿದ್ದುವು. ಇದಕ್ಕೆ ಕಾರಣವೂ ಇಲ್ಲದಿಲ್ಲ. ಪಾಕಿಸ್ತಾನವೆಂದರೆ ಅಮೆರಿಕೆ–ರಶ್ಯ—ಕೆಂಪು ಚೀನಾಗಳು ಹಾಲು ಹೊಯ್ದು ಬೆಳೆಸಿದ ನಾಗರ ಹಾವು. ಒಂದೊಂದು ದೇಶವೂ ಬೇರೆ ದೇಶಗಳನ್ನು ಕಡಿಯಲೆಂದೇ ಶಸ್ತ್ರಗಳ ಹಾಲುಣ್ಣಿಸಿದುವು. ತಮ್ಮ ಮಜಬೂತಾದ ಶಸ್ತ್ರಸಂಪನ್ನ ಯಾಹ್ಯಾಖಾನರು ನಿರಸ್ತ್ರ ಬಂಗಾಳಿಗಳಿಂದ ಸೋಲುವುದು ಅಂದರೆ ಅದು ಕಲ್ಪನಾತೀತವೆಂದೇ ಅವುಗಳ ದೃಢ ನಂಬಿಕೆ.

ಆದರೆ, ಜನಶಕ್ತಿಯ ಮುಂದೆ ಶಸ್ತ್ರಶಕ್ತಿ ತಲೆಬಾಗುತ್ತ ಬಂದಂತೆ ಮಹಾರಾಷ್ಟ್ರಗಳೂ ಅನಿವಾರ್ಯವಾಗಿ ಬಾಯಿ ಬಿಡತೊಡಗಿದುವು. ಯಾಹ್ಯಾ ಗೆಲ್ಲುತ್ತಾರೆ; ಅವರು ಗೆದ್ದುದು ತಮ್ಮಿಂದ ಎಂದು ಲೋಕ ಹೇಳಬೇಕು ಎಂದು ನಂಬಿದ್ದ ಅವರೀಗ, ಬಂಗ್ಲಾದೇಶ ನಿಜಕ್ಕೂ ಸ್ವತಂತ್ರವಾಗುತ್ತದೆ ಆದಾದುದು ತಮ್ಮಿಂದ ಎಂದು ಜಗತ್ತು ನಂಬಬೇಕು ಎಂಬ ಧೋರಣೆಯಂತೆ ಹೇಳಿಕೆ ನೀಡಿ ಯಾಹ್ಯಾಖಾನರ ನರಮೇಧದ ಬಗ್ಗೆ ತೀವ್ರ ಕಳವಳ ತೋರಿಸ ಹೊರಟಿವೆ.

ಭಾರತದ ಮಾಜಿ ವಿದೇಶಮಂತ್ರಿ ಎಂ. ಸಿ. ಛಗಲಾರು ಬಂಗ್ಲಾ ದೇಶಕ್ಕೆ ಮಾನ್ಯತೆ ನೀಡಲು ಭಾರತ ಮುಂದು ಬರಬೇಕು ಎಂದು ಕರೆ ನೀಡಿದ್ದಾರೆ. ಈ ಬಗೆಯ ಮಾನ್ಯತೆ ನೀಡದೆ ಬಂಗ್ಲಾ ದೇಶದ ಜನತೆಗೆ ಯಾವುದೇ ಪ್ರಯೋಜನ ದೊರಕದೆಂದವರು ಬಹಿರಂಗವಾಗಿ ಹೇಳಿದ್ದಾರೆ.

ರಶ್ಯದ ನಾಯಕರು ಬಂಗ್ಲಾ ಸಮರ ದಿನೇ ದಿನೇ ಬೆಳೆಯುತ್ತಿರುವುದನ್ನು ಖಂಡಿಸಿದ್ದಾರೆ. ಅಧ್ಯಕ್ಷ ಪೊಡ್ಗೊರ್ನಿಯವರು ಸ್ಪಷ್ಟವಾಗಿ ತಮ್ಮ ಬೆಂಬಲವನ್ನು ಬಂಗ್ಲಾಕ್ಕೆ ಘೋಷಿಸಲಿಲ್ಲವಾದರೂ ಯಾಹ್ಯಾ ಕೃತಿಗಳನ್ನು ಖಂಡಿಸಿದ್ದಾರೆ. ಇದೊಂದು ಸದ್ಯದ ಬೆಳವಣಿಗೆ.

ಅಮೆರಿಕೆಯ ಅಧ್ಯಕ್ಷ ನಿಕ್ಸನ್ನರು ಪಾಕಿನ ಮಿತ್ರರು. ಆದುದರಿಂದ ಅವರು ಈ ಮೈತ್ರಿಯನ್ನು ಕೆಡಿಸಿಕೊಳ್ಳಲು ಸಿದ್ಧರಿಲ್ಲ. ಹಾಗಿದ್ದರೂ ಯಾಹ್ಯಾಖಾನರು ತಮ್ಮ ಈಗಿನ ನಿಲುವನ್ನು ಬದಲಿಸುವಂತೆ ರಾಜತಾಂತ್ರಿಕ ಮಾರ್ಗಗಳಿಂದ ಪ್ರಯತ್ನ ನಡೆಸತೊಡಗಿದ್ದಾರೆ. ಅಂದರೆ, ಬಂಗ್ಲಾದೇಶವನ್ನು ಅಲ್ಲಿನ ಜನತೆಯ ಆಶಯದಂತೆ ಉಳಿಯಗೊಡುವುದೇ ಸದ್ಯ ಕಾಣುವ ಪರಿಹಾರವೆಂದು ಅವರು ಪರೋಕ್ಷವಾಗಿ ನಂಬಿದಂತಾಯಿತ್ತು.

ಲಂಡನ್ನಿನಲ್ಲಿ ಮಂತ್ರಿ ಡೌಗ್ಲಸರು 'ಪಾಕಿಸ್ತಾನ ಸರಕಾರ ಜಾಣ್ಮೆಯಿಂದ ವರ್ತಿಸುತ್ತಿದೆ' ಎಂದು ಹೇಳಿಕೆ ನೀಡಿ ಯಾಹ್ಯಾಖಾನರ ಬೆನ್ನು ಚಪ್ಪರಿಸಿದರು.

ಆದರೆ, ಅಲ್ಲಿನ ಗಾರ್ಡಿಯನ್ ಪತ್ರಿಕೆ ಡೌಗ್ಲಸರನ್ನು ಖಂಡಿಸಿ. 'ಪೂರ್ವ ಪಾಕಿಸ್ತಾನದ ಪ್ರಜಾಸತ್ತೆಗೆ ಬ್ರಿಟನ್ನಿನ ಬೆಂಬಲ ವ್ಯಕ್ತಪಡಿಸುವ ಅವಕಾಶವನ್ನು ಡೌಗ್ಲಸ್ ಕಳೆದುಕೊಂಡರು' ಎಂದು ಟೀಕಿಸಿತು

ಅಮೆರಿಕೆಯ ವಾಷಿಂಗ್ಟನ್ ಸ್ಟಾರ್ ಎಂಬ ಪತ್ರಿಕೆ ಮತ್ತೂ ಒಂದು ಹೆಜ್ಜೆ ಮುಂದಿಟ್ಟಿದೆ. 'ಪೂರ್ವ ಪಾಕಿಸ್ತಾನ ಮತ್ತು ಪಶ್ಚಿಮ ಪಾಕಿಸ್ತಾನಗಳು ಒಂದೇ ರಾಷ್ಟ್ರವಾಗಿರಲಿಲ್ಲ; ಮುಂದೆಯೂ ಆಗಿರುವುದಿಲ್ಲ. ಈ ವಿಭಜನೆಗೆ ಲೋಕಸಮ್ಮತಿ ಆದಷ್ಟು ಬೇಗ ಲಭಿಸಿದರೆ ಲೋಕಕ್ಕೇ ಒಳಿತು' ಎಂದದು ಹೇಳಿದೆ.

ವಸಾಹತು ಶಾಹಿಯ ವಿರುದ್ಧ ಧ್ವನಿಯೆತ್ತುವ ಆಫ್ರೋ—ಏಶ್ಯನ್ ದೇಶಗಳ ಗಂಭೀರ ಮೌನ ಅರ್ಥವತ್ತಾಗಿದೆ. ಬೃಹತ್ ರಾಷ್ಟ್ರಗಳ ಆಸಕ್ತಿಯನ್ನು ತಿಳಿದ ನಂತರವೇ ತಮ್ಮ ಪ್ರತಿಕ್ರಿಯೆಯನ್ನು ನೀಡಲು ಅವು ಮುಂದಾಗಬಹುದು. ಅಂದರೆ, ಅವುಗಳ ಅಂಜುಗುಳಿತನಕ್ಕೆ ಬೇರೆ ಸಾಕ್ಷಿ ಅನಗತ್ಯ.

ಈಗುಪ್ತದ ನಸ್ಸೇರರು ಸುಯೇಜ್ ಕಾಲುವೆಯನ್ನು ರಾಷ್ಟ್ರೀಕರಣಗೊಳಿಸಿದಾಗ ಪಂ. ನೆಹರು ನಸ್ಸೇರರನ್ನು ಮೊದಲಿಗೆ ಸಮರ್ಥಿಸಿದರು. ಪಾಕಿಸ್ತಾನ ಭಾರತದ ಮೇಲೆ ಆಕ್ರಮಣ ಮಾಡಿದಾಗ ಶಾಸ್ತ್ರಿಯವರು ಎಂಟೆದೆಯಿಂದ ಎದುರಿಸಿದರು. ಈಗ ಬಂಗ್ಲಾದ ಸ್ವಾತಂತ್ರ್ಯ ಹೋರಾಟ ಶ್ರೀಮತಿ ಗಾಂಧಿಯವರು ಸಹಾನುಭೂತಿ ತೋರಿಸುವ ಎದೆಗಾರಿಕೆ ಪ್ರದರ್ಶಿಸಿದರು. ಇದು ಭಾರತೀಯರ ದೃಢತೆಗೊಂದು ಜ್ವಲಂತ ಉದಾಹರಣೆ.

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕಲ್ಪವೃಕ್ಷದ ಅಭಿವೃದ್ಧಿಗೆ ನವೀನ ಯೋಜನೆ

ಭಾರತವು 9.78 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿರುವ ತೆಂಗಿನ ತೋಟಗಳಿಂದ 543.7 ಕೋಟಿ ತೆಂಗಿನ ಫಲವನ್ನು ಪಡೆಯುತ್ತಿದೆ. ಭಾರತ ತೆಂಗಿನ ಹುರಿ ಮತ್ತು ತೆಂಗಿನ ಹಿಂಡಿಯ ರಫ್ತಿನಿಂದ 14ಕೋಟಿ ರೂಪಾಯಿಗಿಂತಲೂ ಹೆಚ್ಚು ವಿದೇಶೀ ವಿನಿಮಯವನ್ನು ಗಳಿಸುತ್ತಿದೆ. ಆದರೂ ದೇಶದ ಆಂತರಿಕ ಬೇಡಿಕೆಯನ್ನು ಪೂರೈಸಲೆಂದು ಪ್ರತಿವರ್ಷವೂ 2 ಕೋಟಿ ರೂಪಾಯಿಗಿಂತಲೂ ಹೆಚ್ಚು ಬೆಲೆಯ ಕೊಬ್ಬರಿ ಮತ್ತು ತೆಂಗಿನ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುತ್ತಿದೆ.

ದೇಶದಲ್ಲಿ ತೆಂಗನ್ನು ಬೆಳೆಯುವ ಒಟ್ಟು ಪ್ರದೇಶದ ಮೂರನೇ ಎರಡು ಭಾಗವು ಕೇರಳ ರಾಜ್ಯದಲ್ಲಿದೆ. ಮೈಸೂರು, ಆಂಧ್ರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಒರಿಸ್ಸಾ ಪಶ್ಚಿಮ, ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ತೆಂಗನ್ನು ಬೆಳೆಯಲಾಗುತ್ತಿದೆ. ಭಾರತದಲ್ಲಿ ತೆಂಗಿನ ಬೆಳೆಯ ಪ್ರದೇಶ ಸಾಕಷ್ಟು ವ್ಯಾಪಕವಾಗಿದ್ದರೂ, ಉತ್ಪಾದನೆಯು ಅಗತ್ಯ ಮಟ್ಟಕ್ಕಿಂತ ಶೇಕಡ 25–30ರಷ್ಟು ಕಡಿಮೆಯಿದೆ. ಕೊಬ್ಬರಿ ಆಮದು ಮಾಡಿಕೊಳ್ಳುವ ಪ್ರಮಾಣವನ್ನು 1963–64ರಲ್ಲಿ 88 ಸಹಸ್ರ ಟನ್ ಗಳಿಂದ 1968–69ರಲ್ಲಿ 14.8[illegible] ಟನ್ ಗಳಿಗೆ ಇಳಿಸಲಾಗಿದೆ. ಆದರೆ ಇನ್ನೂ ಅಂತರವಿದೆ. ಈ ಅಂತರವು ಜನಸಂಖ್ಯಾ ಏರಿಕೆಯೊಂದಿಗೆ ಹಾಗೂ ಕೊಬ್ಬರಿ ಎಣ್ಣೆಯ ಕೈಗಾರಿಕಾ ಬಳಕೆಯ ಏರಿಕೆಯೊಂದಿಗೆ ಹೆಚ್ಚಾಗುತ್ತಿದೆ.

ಅಧಿಕ ಬೇಡಿಕೆ

ತೆಂಗಿನ ಉತ್ಪನ್ನಗಳ ರಫ್ತನ್ನು ಏರಿಸಿ ಕೊಬ್ಬರಿ ಆಮದನ್ನು ಇಳಿಸಲು ವೈಜ್ಞಾನಿಕ ಜ್ಞಾನ ಹಾಗೂ ಸಂಶೋಧನೆಯ ಸಹಾಯದಿಂದ ತೆಂಗಿನಕಾಯಿಯಂತಹ ವಾಣಿಜ್ಯ ಹಾಗೂ ಆಹಾರ ಬೆಳೆಯನ್ನು ಅಭಿವೃದ್ಧಿಪಡಿಸುವುದು ಅತಿಮುಖ್ಯವಾದುದು. 1973—74ರಲ್ಲಿ ತೆಂಗಿನ ಕಾಯಿಯ ಬೇಡಿಕೆ 800 ಕೋಟಿಗೆ ಏರುತ್ತದೆ. ಎಂದರೆ ಪ್ರಸಕ್ತ ಉತ್ಪಾದನಾ ಮಟ್ಟಕ್ಕಿಂತ 250 ಕೋಟಿ ತೆಂಗಿನ ಕಾಯಿಗಳ ಕೊರತೆಯೂ ಗುತ್ತದೆ. ಈ ಕೊರತೆಯನ್ನು ತುಂಬಲು ಉತ್ಪಾದನೆ ಹೆಚ್ಚಿಸುವ ಕಾರ್ಯಕ್ರಮ ರೂಪಿಸಲಾಗಿದೆ. 1973–74ರ ಕೊನೆಯ ವೇಳೆಗೆ ವಾರ್ಷಿಕ 100 ಕೋಟಿ ತೆಂಗಿನ ಕಾಯಿಯನ್ನು ಹೆಚ್ಚು ಉತ್ಪಾದಿಸುವಂತೆ ಗುರಿ ನಿರ್ಧರಿಸಲಾಗಿದೆ. ಅದಕ್ಕಾಗಿ ಈಗಿರುವ ಪ್ರದೇಶದಲ್ಲಿ ತೆಗೆಯುವ ಬೆಳೆಯನ್ನು ಹೆಚ್ಚಿಸಲು ರಾಸಾಯನಿಕ ಗೊಬ್ಬರ ಬಳಕೆ ನೀರಾವರಿ ಸೌಲಭ್ಯ ವಿಸ್ತರಣೆ ಹಾಗೂ ಸಸ್ಯ ಸಂರಕ್ಷಣಾ ಕಾರ್ಯವನ್ನು ಕೈಗೊಳ್ಳಲಾಗುತ್ತದೆ.

ರೋಗಕ್ಕೀಡಾಗದೆ ಚೆನ್ನಾಗಿ ಬೆಳೆಯುವ ಸಂಕರ ತಳಿ ಸಸಿಗಳನ್ನು ನೆಟ್ಟು ಉತ್ಪಾದನೆ ದ್ವಿಗುಣಗೊಳಿಸಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮವನ್ನು ಈಗಾಗಲೇ ಮೈಸೂರು, ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಜಾರಿಗೆ ತರಲಾಗಿದೆ. ಈ ಕಾರ್ಯಕ್ರಮದಂತೆ 1973 74ನೇ ಸಾಲಿನವೇಳೆಗೆ ಪ್ರತಿ ವರ್ಷವೂ 3 ಸಹಸ್ರ ಉದ್ದವಾದ ಹಾಗೂ ಮೋಟಾದ ಸಂಕರತಳಿ ತೆಂಗಿನ ಸಸಿಗಳನ್ನು ನೆಡಲಾಗುತ್ತವೆ. ಇವರಲ್ಲಿ 18 ಸಹಸ್ರ ಸಸಿಗಳನ್ನು ಕೇರಳದಲ್ಲೂ, 7 ಸಹಸ್ರ ಸಸಿಗಳನ್ನು ಮೈಸೂರಿನಲ್ಲೂ, 5ಸಹಸ್ರ ಸಸಿಗಳನ್ನು ತಮಿಳು ನಾಡಿನಲ್ಲೂ ಹಾಗೂ 3 ಸಹಸ್ರ ಸಸಿಗಳನ್ನು ಆಂಧ್ರಪ್ರದೇಶದಲ್ಲೂ ನೆಡಲಾಗುತ್ತದೆ.

ಮೈಸೂರಿನಲ್ಲಿ ಮೊಳಕೆ ತೋಟ

ಮೈಸೂರು ರಾಜ್ಯದಲ್ಲಿ 120 ಎಕರೆ ಪ್ರದೇಶದಲ್ಲಿ ಉತ್ಕೃಷ್ಟವಾದ ತೆಂಗಿನ ಮೊಳಕೆಯ ತೋಟ ಸ್ಥಾಪಿಸುವ ಪ್ರಮುಖ ಕಾರ್ಯಕ್ರಮವಿದೆ. ಇದು ಸುತ್ತಲಿನ ಪ್ರದೇಶದ ಬೆಳೆಗಾರರಿಗೆ ಅಧಿಕ ಫಲನೀಡುವ ತೆಂಗಿನ ಮೊಳಕೆಗಳನ್ನು ನೀಡುವ ಕೇಂದ್ರವಾಗುತ್ತದೆ. ಭಾರತೀಯ ತೆಂಗಿನ ಅಭಿವೃದ್ಧಿ ಮಂಡಳಿಯು ಇಂತಹುದೇ ಮತ್ತೊಂದು ತೆಂಗಿನ ಮೊಳಕೆ ತೋಟವನ್ನು ಕೇರಳದಲ್ಲಿ ಆರಂಭಿಸಲು ಶಿಫಾರಸು ಮಾಡಿದೆ. ಇಲ್ಲಿ ಎತ್ತರವಾದ ಹಾಗೂ ಗಿಡ್ಡನಾದ ತೆಂಗಿನ ಸಂಕರ ತಳಿ ಸಸಿಗಳನ್ನು ಬೆಳೆಯಲಾಗುತ್ತದೆ. ಮೈಸೂರು, ಅಸ್ಸಾಂ ಮತ್ತು ಅಂಡಮಾನ್, ನಿಕೋಬಾರ್ ದ್ವೀಪಗಳಲ್ಲಿ ಇಂತಹ ತೋಟಗಳನ್ನು ಆರಂಭಿಸಲು ಶಿಫಾರಸು ಮಾಡಲಾಗಿದೆ.

ತೆಂಗಿನ ಬೆಳೆಯ ಅಭಿವೃದ್ಧಿಗೆ ಯೋಗ್ಯವಾದ ಗುಜರಾತ್ ತೀರಪ್ರದೇಶಗಳನ್ನು ಬಳಸಿಕೊಳ್ಳುವ ಯೋಜನೆಯಿದೆ. ಈ ಪ್ರದೇಶದ ಬೆಳೆಗಾರರಿಗೆ ತೆಂಗಿನ ಸಸಿ ಸರಬರಾಜು ಮಾಡಲಾಗುತ್ತದೆ. ಈ ಯೋಜನೆಯಲ್ಲಿ 3.5 ಲಕ್ಷ ತೆಂಗಿನ ಸಸಿಗಳನ್ನು ಹಂಚಲಾಗುತ್ತದೆ.

ತೆಂಗಿನ ಬೆಳೆ ಹೆಚ್ಚಿಸಲು ಅಧಿಕ ಇಳುವರಿ ಯೋಜನೆಯೊಂದಿಗೆ ಅಲ್ಪಾವಧಿ ಯೋಜನೆ ಜಾರಿಗೆ ತರಲಾಗುತ್ತದೆ. ಭಾರತೀಯ ತೆಂಗಿನ ಅಭಿವೃದ್ಧಿ ಮಂಡಳಿಯು ಪ್ಯಾಕೇಜ್ ಕಾರ್ಯಕ್ರಮದ ಪ್ರಾಮುಖ್ಯತೆಯನ್ನು ಅರಿತುಕೊಂಡಿದೆ. ಇದಕ್ಕಾಗಿಯೇ ರಾಜ್ಯ ಸರ್ಕಾರಗಳ ಮೂಲಕ ಕೇಂದ್ರ ಯೋಜನೆಯೊಂದನ್ನು ರೂಪಿಸಲಾಗಿದೆ. ತೆಂಗಿನ ಬೆಳೆಗಾರರು ಗೊಬ್ಬರ ಹಾಗೂ ಕೀಟನಾಶಕ ರಾಸಾಯನಿಕಗಳನ್ನು ಕೊಳ್ಳಲೆಂದು ಪ್ರತಿ ಹೆಕ್ಟೇರ್ ತೆಂಗಿನ ತೋಟಕ್ಕೆ 525 ರೂ. ಸಾಲ ನೀಡಲಾಗುತ್ತದೆ. ಈ ಮೂಲಕ ತೆಂಗಿನ ಫಸಲಿನಲ್ಲಿ ಶೇಕಡ 40ರಷ್ಟು ಏರಿಕೆಯಾಗುವ ನಿರೀಕ್ಷೆಯಿದೆ.

ಸಂಘಟಿತ ಯೋಜನೆ

ತೆಂಗಿನ ಬೆಳೆ ಹೆಚ್ಚಿಸಲು ಅಖಿಲಭಾರತ ತೆಂಗು ಮತ್ತು ಅಡಕೆ ಅಭಿವೃದ್ಧಿ ಯೋಜನೆಯ ಸಂಘಟಿತ ಕಾರ್ಯಕ್ರಮ ರೂಪಿಸಲಾಗಿದೆ. ಈ ಯೋಜನೆಯನ್ನು 40 ಲಕ್ಷ ರೂಪಾಯಿ ವೆಚ್ಚದಲ್ಲಿ 1970ನೇ ಇಸವಿ ಅಕ್ಟೋಬರದಿಂದ 1974ನೇ ಇಸವಿ ಮಾರ್ಚಿಯೊಳಗೆ ಕೇರಳ, ಮೈಸೂರು, ತಮಿಳುನಾಡು, ಆಂಧ್ರ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಅಸ್ಸಾಂ, ಗುಜರಾತ್, ಮತ್ತು ಅಂಡಮಾನ್ ದ್ವೀಪಗಳಲ್ಲಿರುವ 17 ಸಂಶೋಧನಾ ಕೇಂದ್ರದಲ್ಲಿ ಅನುಷ್ಠಾನಕ್ಕೆ ತರಲಾಗುತ್ತದೆ. ಈ ದಿಸೆಯಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಕ್ರಮವನ್ನು ಭಾರತ ಕೃಷಿ ಸಂಶೋಧನಾ ಮಂಡಳಿಯ ನೇತೃತ್ವದಲ್ಲಿ ಜಾರಿಗೆ ತರಲಾಗುತ್ತದೆ

ತೆಂಗಿಗೆ ಸಂಬಂಧಿಸಿದ ಸಂಶೋಧನಾ ಕಾರ್ಯವನ್ನು ಕೇರಳ ಸರ್ಕಾರ ಸಣ್ಣ ಪ್ರಮಾಣದಲ್ಲಿ ಮಾಡುತ್ತಿತ್ತು. ಈಗ ಕೇರಳದಲ್ಲಿರುವ ಕಾಸರಗೋಡು ಮತ್ತು ಕಯಂಗುಲಂನಲ್ಲಿ ಸಂಶೋಧನ ಕೇಂದ್ರಗಳ ಸ್ಥಾಪನೆಯಿಂದ ಕಾರ್ಯ ವಿಸ್ತರಣೆಯಾಗಿದೆ. ಕಾಸರಗೋಡಿನ ಕೇಂದ್ರ ತೆಂಗು ಸಂಶೋಧನಾ ಕೇಂದ್ರವು ಕೃಷಿ ವಿಜ್ಞಾನ ಮತ್ತು ಮಣ್ಣಿನ ಸಮಸ್ಯೆಯ ಬಗ್ಗೆ ಗಮನ ಕೇಂದ್ರೀಕರಿಸಿದೆ. ಅಲ್ಲದೆ ತಾಳೆಮರಗಳು ವಿವಿಧ ಬಗೆಯ ಮಣ್ಣಿನಲ್ಲಿ ಬೆಳೆಯುವ ವಿಧಾನ ಪರೀಕ್ಷಿಸುವ ಅದ್ವಿತೀಯ ಸೌಲಭ್ಯ ಹೊಂದಿದೆ.

ಕಯಂಗುಲಂನಲ್ಲಿರುವ ಸಂಶೋಧನಾ ಕೇಂದ್ರವು ತೆಂಗಿಗೆ ಬರುವ ರೋಗಗಳ ಬಗ್ಗೆ ಅಧ್ಯಯನ ನಡೆಸುತ್ತಿದೆ. ಆದರೆ ತೆಂಗಿನ ಬೇರಿಗೆ ತಗಲುವ ರೋಗದ ಕಾರಣವನ್ನು ಇನ್ನೂ ಪತ್ತೆ ಮಾಡಲಾಗಿಲ್ಲ. ಗೋಧಿಯಂತಹ ಆಹಾರ ಧಾನ್ಯಗಳಂತೆಯೇ ತೆಂಗಿನ ಉತ್ಪಾದನೆಯ ಏರಿಕೆಗೆ ಬಳಸುವ ತಾಂತ್ರಿಕ ಜ್ಞಾನವನ್ನು ಅತಿಶೀಘ್ರವಾಗಿ ಬೆಳೆಗಾರರಿಗೆ ಪ್ರಸರಿಸಲಾಗುತ್ತದೆ.

●●

ಉಡುಪಿ ರೋಟರಿ ಕ್ಲಬ್ ಹೊಸ ಪದಾಧಿಕಾರಿ

ಉಡುಪಿ ರೋಟರಿ ಕ್ಲಬ್ಬಿನ 1971–72ನೆ ಸಾಲಿನ ಅಧ್ಯಕ್ಷರಾಗಿ ಡಾ| ಕೆ. ಮೋಹನದಾಸ ಪೈಗಳು ಸರ್ವಾನುಮತದಿಂದ ಆರಿಸಲ್ಪಟ್ಟರು. ಪ್ರಸಕ್ತ ಅಧ್ಯಕ್ಷ ಶ್ರೀ ಎ. ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿದ ರೋಟರಿ ಸರ್ವ ಸದಸ್ಯರ ಸಭೆಯಲ್ಲಿ ಕಾರ್ಯದರ್ಶಿ ಶ್ರೀ ಎ. ಜಿ. ಅತ್ರೆಯವರು ಮುಂದಿನ ವರುಷದ ಪದಾಧಿಕಾರಿಗಳ ಯಾದಿಯನ್ನು ಡೈರೆಕ್ಟರ್ ಮಂಡಳಿಯ ಪರವಾಗಿ ಈ ಕೆಳಗಿನಂತೆ ಪ್ರಕಟಿಸಿದರು.

ಡಾ| ಕೆ. ಮೋಹನದಾಸ ಪೈ (ಅಧ್ಯಕ್ಷ), ಡಾ| ಕೆ. ಶಾಂತಾರಾಮ, ಪಿ. ವಿ. ಭಟ್(ಉಪಾಧ್ಯಕ್ಷರು), ಕೆ. ರಂಗಸ್ವಾಮಿ (ಕಾರ್ಯದರ್ಶಿ), ಕೆ. ಎಂ. ಕಾರಂತ (ಸಹಕಾರ್ಯದರ್ಶಿ) ಕೆ. ಆರ್. ಭಟ್ (ಖಜಾಂಜಿ) ಅಲ್ಲದೆ ಕ್ಲಬ್ ಸರ್ವಿಸ್‌ನ ಡೈರೆಕ್ಟರರಾಗಿ ಶ್ರೀ ಬಿ. ಬಿ. ಶೆಟ್ಟರನ್ನೂ ಕಮ್ಯುನಿಟಿ ಸರ್ವಿಸ್‌ನ ಡೈರೆಕ್ಟರರಾಗಿ ಶ್ರೀ ಎ. ಜಿ. ಅತ್ರೆ, ಪ್ರೊಕೇಶನಲ್ ಸರ್ವಿಸ್ ಡೈರೆಕ್ಟರರಾಗಿ ಶ್ರೀ ಕೆ. ಎಲ್. ಶೌರಿ ಹಾಗೂ ಇಂಟರ್‌ನೇಶನಲ್ ಸರ್ವಿಸ್ ಡೈರೆಕ್ಟರರಾಗಿ ಶ್ರೀ ಎಂ. ಕೃಷ್ಣರಾಜರನ್ನೂ ಸೂಚಿಸಲಾಗಿದೆ. ಡಾ| ಟಿ. ರಾಮದಾಸ ಪೈ, ಶ್ರೀ ಅಂಬಲಪಾಡಿ ಕೃಷ್ಣರಾವ್ ಮತ್ತು ಶ್ರೀ ಕೆ. ಆರ್. ಪ್ರಸಾದರನ್ನು ಡೈರೆಕ್ಟರ್‌ಗಳಾಗಿಯೂ, ಶ್ರೀ ಡಿ. ಜಿ. ದೇಶಪಾಂಡೆಯವರನ್ನು ಬುಲ್ಲೆಟಿನ್ ಆಡಿಟರರಾಗಿಯೂ, ಶ್ರೀ ಕೆ. ಸತೀಶ ಶೆಟ್ಟರನ್ನು ಸಾರ್ಜೆಂಟ್ ಎಟ್-ಆರ್ಮ್ಸ್ ಆಗಿಯೂ ನಾಮಕರಣ ಮಾಡಲಾಗಿದೆ. ಇಷ್ಟರ ತನಕ ಕೈಗೊಂಡ ಕಾರ್ಯಕ್ರಮಗಳ ವಿಮರ್ಶೆ, ಮುಂದಿನ 3 ತಿಂಗಳಲ್ಲಿ ಮಾಡಬೇಕಾದ ಕೆಲಸಗಳ ಚಿಂತನೆಯ ಬಳಿಕ ಅಧ್ಯಕ್ಷ ಶ್ರೀ ಆಚಾರ್ಯರು ಈ ವಾರ ನಡೆಯುತ್ತಿರುವ ಸಾಮಾಜಿಕ ಸೇವಾ ಸಪ್ತಾಹದ ಪ್ರಾಮುಖ್ಯತೆಯನ್ನು ವಿವರಿಸಿದರು.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27

Phone No.— 1 72303 / 2 72304   Grams: HOST SATKAR

Vegetarian Cuisine

Attached Bath Rooms and Phones

Running H and C water

Moderate Charges

Railway Station, Laundry, Post office and Entertainments etc Nearby.

Large airy Rooms: Roof garden

Quiet, Calm Atmosphere

Personalised service

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17–4/65–66ರ ಪತ್ರದಂತೆ ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/- ಮಾತ್ರ.

ಮ್ಯಾನೇಜರ್, ನವಯುಗ, ಉಡುಪಿ.

ನರಮೇಧ ಯಜ್ಞಶಾಲೆಯಿಂದ

ಚುನಾವಣಾ ರಂಗದ ವಾರ್ತೆಗಳಿಗೂ ಸಮರ ರಂಗದ ವಾರ್ತೆಗಳಿಗೂ ಬಹಳಷ್ಟು ಸಾಮ್ಯವಿದೆ. ಎರಡೂ ಹೋರಾಟಗಳೇ. ಒಂದು ಅಹಿಂಸಾ ಪೋಷಕವಾದರೆ, ಇನ್ನೊಂದು ಹಿಂಸಾಮಯ. ಆದರೂ ಇವೆರಡರಲ್ಲೂ ಉತ್ಪ್ರೇಕ್ಷೆ-ಅತಿಶಯೋಕ್ತಿಗಳು ತುಂಬಿ ತುಳುಕಾಡುತ್ತಿರುವುದು ಸಹಜ.

ಪೂರ್ವ ಬಂಗಾಳದಲ್ಲಿ ಪಾಕ್ ಅಧ್ಯಕ್ಷ ಯೂಹ್ಯಾಖಾನರು ಆರಂಭಿಸಿದ ನರಮೇಧ ಯಜ್ಞಶಾಲೆಯಿಂದ ಬರುತ್ತಿರುವ ವಾರ್ತೆಗಳೂ ಚಿತ್ರವಿಚಿತ್ರವಾಗಿವೆ. ಢಾಕ್ಕಾದ ಮಿಲಿಟರಿ ರಾಜ್ಯಪಾಲರೆಂದು ಯೂಹ್ಯಾಖಾನರಿಂದ ನಿಯುಕ್ತರಾದ ಟಿಕ್ಕಾಖಾನರು ಮೊದಲ ದಿನದ ಹೋರಾಟದಲ್ಲೇ ಸ್ವಾತಂತ್ರ್ಯಯೋಧನೊಬ್ಬನ ಗುಂಡಿಗಾಹುತಿಯಾದರೆಂದು ಬಂಗ್ಲಾ ರೇಡಿಯೊ ಸಾರಿತು; ಖಾನರ ಶವವನ್ನು ಅನ್ಯತ್ರ ಒಯ್ಯುವ ಪ್ರಯತ್ನವನ್ನು ಪಾಕ್ ಸೇನೆ ಮಾಡಿತೆಂದೂ. ಅದನ್ನು ಬಂಗ್ಲಾ ಪಡೆ ನಿಷ್ಫಲಗೊಳಿಸಿತೆಂದೂ ವಿದೇಶೀ ವರದಿ ಮೂಲಗಳು ಹೇಳಿದುವು.

ಆದರೆ ಟಿಕ್ಕಾಖಾನರ ಕೊಲೆಯನ್ನು ಪ. ಪಾಕಿಸ್ತಾನಿ ರೇಡಿಯೊ ಪದೇ ಪದೇ ತಿರಸ್ಕರಿಸುತ್ತದೆ. ಅವರಿನ್ನೂ ಬದುಕಿದ್ದಾರೆಂದು ಹೇಳುತ್ತಿದೆ. ಆದರೆ ಟಿಕ್ಕಾಖಾನರ ಸ್ಥಾನದಲ್ಲಿ ಮತ್ತೊಬ್ಬನನ್ನು ಲಷ್ಕರೀ ಶಾಸನದ ರಾಜ್ಯಪಾಲರೆಂದು ಯೂಹ್ಯಾಖಾನರು ನೇಮಕ ಮಾಡಿರುವುದೇ ಸೋಜಿಗ. ಇದೇ ಮಾತನ್ನು ಮುಜಿಬುರ್‌ರವರ ಬಂಧನದ ಸಂಬಂಧದಲ್ಲೂ ಹೇಳಬಹುದು. ಪ. ಪಾಕ್ ಸೇನೆಗಳು ಬಂಗ್ಲಾದ ಈ ಮಹಾನಾಯಕರನ್ನು ಬಂಧಿಸಿವೆಯೆಂದು ಆರಂಭದಲ್ಲೇ ಕರಾಚಿ ರೇಡಿಯೋ ಬಹಿರಂಗಪಡಿಸಿತು. ಇದು ಅರ್ಥಶೂನ್ಯವೆಂದೂ ಬಂಗ್ಲಾ ಸ್ವತಂತ್ರ ಯೋಧರನ್ನು ಕಂಗೆಡಿಸಲು ಬಂಗ್ಲಾ ವಿರೋಧಿಗಳು ಮಾಡಿದ ಅಪಪ್ರಚಾರವೆಂದೂ ಢಾಕ್ಕಾ ರೇಡಿಯೋ ಉತ್ತರ ನೀಡಿತು. ಅಂದು ಆರಂಭವಾದ ಮುಜಿಬ್ ಜಿಜ್ಞಾಸೆ ಇನ್ನೂ ಕೊನೆಗೊಂಡಿಲ್ಲ; ದಿನದಿನಕ್ಕೂ ಒಂದೊಂದು ರೂಪ ತಳೆಯುತ್ತಿದೆ.

ಬಂಧನದ ಸುದ್ದಿಯನ್ನು ಅಲ್ಲಗಳೆದವರು ಅವರು ಭೂಗತರಾಗಿದ್ದಾರೆಂದೂ, ಅಲ್ಲಿಂದಲೇ ಸೂಕ್ತ ಮಾರ್ಗದರ್ಶನ ನೀಡುವರೆಂದೂ ಹೇಳುತ್ತಾರೆ, ಇನ್ನು ಕೆಲವರು ಭಾರತದ ಗಡಿದಾಟಿದರೆಂದೂ ಹೇಳಿದರು. ಅವರು ಹೇಗೋ ಹೇಗೋ ಇಂಡೋನೇಶ್ಯದೊಳಗೆ ನುಗ್ಗಿ ಅಲ್ಲಿ ಆಶ್ರಯ ಬೇಡಿದ್ದಾರೆಂದೂ ವದಂತಿ ಹಗಡಿತು. ಆದರೆ ಇದೀಗ ಬಂದ ಬ್ರಿಟಿಷ್ ವರದಿಯೊಂದು ಮುಜಿಬರ ಬಂಧನದ ಸುದ್ದಿಯನ್ನು ದೃಢಪಡಿಸುತ್ತಿದೆ. ಬಿ. ಬಿ. ಸಿ.ಯು ಪಶ್ಚಿಮ ಪಾಕಿಸ್ತಾನ ಪರ ಸುದ್ದಿಗಳನ್ನೇ ಪ್ರಕಟಿಸುತ್ತಿದೆಯೆಂಬ ಆರೋಪವನ್ನು ಸಂಪೂರ್ಣ ನಿರಾಕರಿಸಲಾಗುವುದಿಲ್ಲ.

“ಶೇಕ್ ಮುಜಿಬುರ್ ರೆಹಮಾನರನ್ನು ಪೂರ್ವ ಪಾಕಿಸ್ತಾನದಲ್ಲಿ ಬಂಧಿಸಿ ಪಶ್ಚಿಮ ಪಾಕಿಸ್ತಾನಕ್ಕೆ ತರಲಾಗಿದೆ. ಅಟಕ್ ಎಂಬಲ್ಲಿ ಅವರನ್ನು ಭದ್ರಪಹರೆಯಲ್ಲಿ ಬಂಧಿಸಿಡಲಾಗಿದೆ. ಪೂ. ಪಾಕಿಸ್ತಾನಿಗಳು ಪಾಕ್ ಸೇನೆಯ ಮುಂದೆ ತಮ್ಮ ಶಸ್ತ್ರಾಸ್ತ್ರಗಳನ್ನು ಮಡಗಿ ಶರಣಾಗುವಂತೆ ಹೇಳಿಕೆ ನೀಡುವಂತೆ ಅವರ ಮೇಲೆ ನಾನಾ ಪ್ರಕಾರದ ಬಲಾತ್ಕಾರ ಹೇರಲಾಗುತ್ತಿದೆ. ಹಗಲು ಹೊತ್ತಿನಲ್ಲಿ ಮಾನಸಿಕ ಒತ್ತಡವನ್ನು ತರಲಾಗುತ್ತಿದೆ. ರಾತ್ರೆ ಚಿತ್ರಹಿಂಸೆ ನೀಡಲಾಗುತ್ತಿದೆ. ಮುಜಿಬುರ್‌ರವರ ಜೀವನವು ಅಸಿಧಾರಾವ್ರತದಂತಾಗಿದೆ.”

ಈ ವರದಿಯ ಸತ್ಯಾಸತ್ಯತೆಗಳನ್ನು ಒತ್ತಟ್ಟಿಗಿಟ್ಟು ವಿವೇಚಿಸಿದರೆ, ಎರಡು ಸತ್ಯಗಳು ಬಹಿರಂಗವಾಗುತ್ತವೆ. ಬಂಗ್ಲಾದಲ್ಲಿ ಗುಂಡು—ಬಾಂಬು—ಟ್ಯಾಂಕ್—ಜೆಟ್ಟುಗಳಿಂದ ಪರಿಪೂರ್ಣವಾದ ಪಾಕ್ ಸೇನೆ ಯುದ್ಧೇನೂ ನಡೆಯುತ್ತಿಲ್ಲ; ನಿಶ್ಶಸ್ತ್ರರೂ ನಿಶ್ಶಕ್ತರೂ ಆದ ಮುಜಿಬುರ್‌ರವರ ಹೇಳಿಕೆಯೊಂದು, ಟೆಲಿವಿಜನ್ ಸಂದರ್ಶನವೊಂದು ಅಲ್ಲಿನ ನರಮೇಧಕ್ಕೆ ಪೂರ್ಣವಿರಾಮ ಹಾಕಬಲ್ಲುದು—ಇದು ಒಂದು. ಪಾಕ್ ರೇಡಿಯೋ ತನ್ನ ಪಡೆಗಳ ವಿಜಯ ಪಥವನ್ನೇ ಬಣ್ಣಿಸಿ ಬಿತ್ತರಿಸಿದರೂ ವಾಸ್ತವಿಕವಾಗಿ ಅದು ನುಚ್ಚುನೂರಾಗಿದೆ; ಪತನದ ದಾರಿಯಲ್ಲೇ ಮುಂದುವರಿದಿದೆ—ಇದು ಎರಡು.

ಮುಜಿಬುರ್ ರೆಹಮಾನರು ಬಂಗ್ಲಾದೇಶದ ಪ್ರಜೆಪ್ರಜೆಯ ನಾಡಿನಾಡಿಯಲ್ಲಿ ಉತ್ಸಾಹ ತುಂಬಿದ್ದಾರೆ; ಅವರ ಹೆಸರೇ ಬಂಗ್ಲಾ ಜನತೆಯನ್ನು ಹುರಿದುಂಬಿಸುತ್ತಿದೆ. ಆದುದರಿಂದಲೇ ಪಾಕ್ ಸೈನ್ಯದ ಬಹುಮುಖೀ, ಹಿಂಸ್ರ ಕಠೋರ ಅತ್ಯಾಚಾರಗಳನ್ನೂ ಎದುರಿಸಿ ಬಂಗ್ಲಾ ಜನತೆ ಜಯಭೇರಿ ಬಾರಿಸುತ್ತಿದೆ. ಪಾಕ್ ರೇಡಿಯೋವಿನ ಪ್ರಸಾರವನ್ನು ನಂಬುವುದಾದರೆ, ಅಲ್ಲಿ ಹೋರಾಟ ಕೊನೆಗೊಂಡು ಎರಡು ವಾರಗಳೇ ಮುಗಿಯಬೇಕಿತ್ತು.

ಮುಜಿಬುರ್‌ರವರು ಜನತೆಯ ಮೇಲೆ ಮಾಡಿಸಿದ ಪ್ರಭಾವ ವ್ಯರ್ಥವಾಗಲಿಲ್ಲ. ‘ಪಾಕಿನ ಆಂತರಿಕ ವ್ಯವಹಾರ’ವೆಂದಿದನ್ನು ಹೇಳಿದವರೂ ಅಲ್ಲಿ ನಡೆಯುತ್ತಿರುವ ಹಿಂಸಾಕಾಂಡಕ್ಕೆ ತಮ್ಮ ಆತಂಕವನ್ನೂ ಕಳವಳವನ್ನೂ ವ್ಯಕ್ತಪಡಿಸತೊಡಗಿದ್ದಾರೆ. ಏಕ ಸಂಖ್ಯೆಯ ಕೊಲೆ ಭಾರತದಲ್ಲಿ ನಡೆದಾಗ ತನ್ನ ತೀವ್ರ ಕಳವಳ ತೋರಿಸುತ್ತಿರುವ ಪಾಕಿಸ್ತಾನ ಈಗ ಕೋಟಿ ಸಂಖ್ಯೆಯ ‘ಸ್ವದೇಶ ಬಾಂಧವರನ್ನು’ ನಿಷ್ಕರುಣೆಯಿಂದ ಗುಂಡಿಕ್ಕಿ, ಬಾಂಬೆಸೆದು, ಟ್ಯಾಂಕು ಹರಿಸಿ ಕೊಲ್ಲಲು ಮುಂದುವರಿದುದರಿಂದ ಅವರೆಲ್ಲರೂ ಒಬ್ಬೊಬ್ಬರಾಗಿ ಬಾಯ್ಬಿಡ ತೊಡಗಿದ್ದಾರೆ.

ಪಾಕಿಸ್ತಾನದ ಹೊಸ ಮಿತ್ರ ರಷ್ಯವು ಕಠಿನ ಶಬ್ದಗಳನ್ನೇ ಬಳಸಿ ಈ ಹಿಂಸೆಯನ್ನು ನಿಲ್ಲಿಸುವಂತೆ ಯೂಹ್ಯಾಖಾನರಿಗೆ ಸೂಚನೆ ಕಳಿಸಿದೆ. ಪಾಕಿಸ್ತಾನದ ಭಾರಿ ಹಳೆಯ ಮಿತ್ರರಾದ ಬ್ರಿಟನ್ ಮತ್ತು ಅಮೆರಿಕೆಗಳಲ್ಲೂ ಹಲವರು ಆತಂಕ ತೋಡಿಕೊಂಡಿದ್ದಾರೆ. ವಿಶ್ವಸಂಸ್ಥೆಯು ಈ ನರಮೇಧದ ನಡುವೆ ಪ್ರವೇಶಿಸಿ ಅದನ್ನು ನಿಲ್ಲಿಸ ಬೇಕೆಂಬ ಕರೆಯೂ ಅಲ್ಲಲ್ಲಿ ಹೊರಟಿದೆ. ದಿನಗಳೆದಂತೆ ಬಂಗ್ಲಾ ಸ್ವಾತಂತ್ರ್ಯಯೋಧರು ಯಶಗಳಿಸುತ್ತಿದ್ದಂತೆ ಯೂಹ್ಯಾಖಾನರು ಸೋಲುತ್ತಿದ್ದಂತೆ ಸಂಧಾನದ ಮಾತುಗಳಿಗೊಂದು ಬಲಬರುವುದು ಸಹಜ. ಆದುದರಿಂದ ಯೂಹ್ಯಾಖಾನರು ತೊಡಗಿದ ಬಂಗ್ಲಾ ನರ—ಮೇಧ ಬಹು ಸಮಯ ಮುಂದುವರಿಯಲಾರದು



davp 70/661

ಶೇಕ್ ಮುಜಿಬುರ್ ಶರಣಾಗುವಂತೆ

ತನ್ನವರಿಗೆ ಕರೆನೀಡಲು ಯಾಹ್ಯಾಖಾನರು ಅಲ್ಲಸಲ್ಲದ ಪ್ರಯತ್ನ ಮಾಡಿದ್ದಾರೆ; ಅವರ ಬಂಧನದ ಸುದ್ದಿಯನ್ನೂ ಅವರ ಚಿತ್ರಹಿಂಸೆಯ ವರದಿಗಳನ್ನೂ ಪ್ರಚಾರ ಮಾಡಿ ಸ್ವಾತಂತ್ರ್ಯಯೋಧರನ್ನು ಕಂಗಾಲು ಮಾಡಲು ಕುತಂತ್ರ ನಡೆಸಿದ್ದಾರೆ. ಒಂದು ವೇಳೆ ಪಾಕ್ ನಾಯಕರ ವರದಿ ಸತ್ಯವೇ ಆದರೂ ತನ್ನ ಉಳಿವಿಗಾಗಿ ತನ್ನ ಸುಖಕ್ಕಾಗಿ ಬಂಗ್ಲಾದೇಶವನ್ನು ಬಲಿಗೊಡುವಷ್ಟು ಮೂರ್ಖರು ಮುಜಿಬುರ್ ಅಲ್ಲ.

ಮುಜಿಬುರ್ ತಾನು ತೇದು ಇತರರಿಗೆ ಗಂಧ ತಂಪು ನೀಡುವ ಚಂದನ ತಾನು ಬಿಸಿಲನ್ನುಂಡು ಇತರರಿಗೆ ನೆರಳೀಯುವ ಮರ. ಈ ಮನೋಧರ್ಮದ ಮುಜಿಬುರ್ ಬಂಗ್ಲಾಯೋಧರಿಗೆ ಶರಣಾಗಲು ಕರೆ ನೀಡಿ ಜೀವವುಳಿಸ ಬಯಸುತ್ತಾರೆಂದು ತಿಳಿಯುವವರ ತಲೆಯುರುಳೀತು.

●●

ಪುತ್ತೂರು IInd Adlo. ಮುನ್ಸಿಫ್ ಕೋರ್ಟಿನಲ್ಲಿ

Ex. C. 592/69 (O. S. 396/67)

B. ಈಶ್ವರ ಭಟ್ಟ—ಅರ್ಜಿದಾರರು
ಮಹಾಲಕ್ಷ್ಮಿ ಕೂಡಾ—ಎದ್ರಿರು

8ನೇ ಎದ್ರಿ:—
ಶ್ಯಾಮಲಾ-ಮಹಾಲಕ್ಷ್ಮಿಯ ಮಗಳು-ತೆಂಕಿಲ-ಪುತ್ತೂರು ಟೌನ್

ಸದ್ರಿ 8ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಈ ಅಮಲ್ಜಾರಿಯಲ್ಲಿ ದಾಕಲಾದ ಯೇಲಂ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸುವ ನೋಟೀಸಿನ ಬಗ್ಗೆ ತಾ. 4–6–71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವ್ಸ ಈ ಕೋರ್ಟು ಮುಂದೆ ಹಾಜರಾಗಿ ಉದಹರ್ಸಿತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ಯಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/-M. Rammohan Rao
Advocate for Petitioner

Puttur, 12—4—71

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ
ಮನೆ-ಮದ್ದು
ಬೆಲೆ: ರೂ. 2–00
❖ ❖ ❖
ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ
ಗೀತೆಯ ಕೈಗನ್ನಡಿ
ಪಾಕೆಟ್ ಎಡಿಶನ್ ಬೆಲೆ ರೂ. 1–50
❖ ❖ ❖
ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ. 2–00
❖ ❖ ❖
Letter Writing Made Easy
ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ವಿಜಯಾ ಕ್ಲಿನಿಕ್ ಹೊಸ ಚಿಕಿತ್ಸಾ ವಿಭಾಗ ಉದ್ಘಾಟನೆ

ಮಂಗಳೂರು ನಗರದ ಬಂಟ್ಸ್ ಹಾಸ್ಟೆಲ್ ರೋಡ್‌ನಲ್ಲಿ ನೂತನವಾಗಿ ಏರ್ಪಡಿಸಲಾದ ವಿಜಯಾ ಕ್ಲಿನಿಕ್‌ನ "ಔಟ್ ಪೇಶಂಟ್ ಅಂಡ್ ಮೆಡಿಕಲ್ ವಾರ್ಡ್"ನ ಉದ್ಘಾಟನಾ ಸಮಾರಂಭವು ತಾ. ೯ರಂದು ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಈ ನೂತನ ವೈದ್ಯಕೀಯ ಶುಶ್ರೂಷಾ ವಿಭಾಗವನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ಆರಂಭದಲ್ಲಿ ಡಾ। ಕೆ. ರತ್ನರಾಜ ಬಲ್ಲಾಳರು ಸ್ವಾಗತಿಸಿ ನೂತನ ವಿಭಾಗದ ವಿವರಣೆ ನೀಡಿದರು. ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಈ ನೂತನ ವಿಭಾಗದಿಂದ ಜನತೆಗೆ ಹೆಚ್ಚಿನ ಪ್ರಯೋಜನ ದೊರೆಯುವಂತಾಗಲಿ ಎಂದು ಹಾರೈಸಿದರು.

ಅತಿಥಿಗಳಲ್ಲಿ ಪ್ರಿನ್ಸಿಪಾಲ್ ಡಾ। ಎಂ. ಪಿ. ಪೈ ನಿವೃತ್ತ ಪ್ರಿನ್ಸಿಪಾಲ್ ಡಾ। ಜಿ. ಡಿ. ವೇರಿಯಲ್ ಡಾ। ಕೋಶಿಯವರು ಡಾ। ಬಲ್ಲಾಳರನ್ನು ಅಭಿನಂದಿಸಿದರು.

ಶ್ರೀ ಕೆ. ಕೆ. ಪೈಯವರು ಮಾತನಾಡುತ್ತಾ ಈ ವಿಭಾಗದಿಂದ ಜನತೆಗೆ ಹೆಚ್ಚಿನ ಪ್ರಯೋಜನ ದೊರೆಯುವಂತಾಗಲೆಂದೂ ಈ ಚಿಕಿತ್ಸಾ ವಿಭಾಗವು ಒಂದು ಪ್ರಶಾಂತ ವಾತಾವರಣವಿರುವ ಆರೋಗ್ಯಧಾಮವಾಗಿ ಪರಿಗಣಿಸಲಿ ಎಂದೂ ಹಾರೈಸಿದರು.

ಕೊನೆಯಲ್ಲಿ ಡಾ। ಬಲ್ಲಾಳರವರು ಧನ್ಯವಾದ ಅರ್ಪಿಸಿದರು.

ವಾರ್ಷಿಕೋತ್ಸವ

ದೇಲಂಪಾಡಿಯ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ಇಪ್ಪತ್ತೇಳನೇ ವಾರ್ಷಿಕೋತ್ಸವವು ತಾ. ೪ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ನಡೆಸಲ್ಪಟ್ಟಿತು.

ಸಂಘದ ಅಧ್ಯಕ್ಷ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಯು. ಬಿ. ಗೋವಿಂದ ಭಟ್ಟರು ಸಂಘದ ವರದಿಯನ್ನೊಪ್ಪಿಸಿದರು. ಜಾಲ್ಸೂರಿನ ಶ್ರೀ ಬಿ. ಆರ್. ಶೆಣ್ಯಾಯವರು ಕಲಾಮಂದಿರಕ್ಕೆ ಉದಾರವಾಗಿ ಕಳುಹಿಸಿಕೊಟ್ಟಿದ್ದ ಶ್ರೀಕೃಷ್ಣನ ಕಲಾಕೃತಿಯನ್ನು ಕೃತಜ್ಞತೆಗಳೊಂದಿಗೆ ಸ್ವೀಕರಿಸಲಾಯಿತು.

ಸಮಾರಂಭದ ಅಂಗವಾಗಿ "ಶ್ರೀಕೃಷ್ಣ ರಾಯಭಾರ" ಎಂಬ ಯಕ್ಷಗಾನ ಕೂಟ ಜರಗಿತು. ಸಂಗಮ ಕಲಾ ಸಂಘ ಕಲ್ಮಡ್ಕ – ಇವರ ವೇಷಭೂಷಣಗಳೊಂದಿಗೆ "ಕಂಸ ವಧೆ—ತಾಮ್ರಧ್ವಜ ವೀರವರ್ಮ ಕಾಳಗ" ಯಕ್ಷಗಾನ ನಾಟಕಗಳು ಪ್ರದರ್ಶಿತವಾದುವು. ಶ್ರೀ ಕೀ. ವ. ಕೇಶವ ಧನ್ಯವಾದವಿತ್ತರು.

ವಿಜಯ ಬೇಂಕಿನ ಹೊಸ ಶಾಖೆ

ಧಾರವಾಡ ಜಿಲ್ಲೆಯ ಸಂವಶಿ ಎಂಬಲ್ಲಿ ವಿಜಯ ಬೇಂಕ್ ಲಿಮಿಟೆಡ್‌ನ ಹೊಸ ಶಾಖೆಯು ತಾ. 5-4-71ರಂದು ತೆರೆಯಲ್ಪಟ್ಟಿದೆ. ಈ ಶಾಖೆಯ ತೆರೆಯುವಿಕೆಯಿಂದ 130 ಶಾಖೆಗಳಾದಂತಾದುವು.

ಕಡಂದಲೆಯ ಇತಿಹಾಸದ ಮೇಲೆ ಹೊಸಬೆಳಕು

ಎಂಬ ಕಳೆದ ಸಂಚಿಕೆಯ ನಾಲ್ಕನೆಯ ಪುಟದಲ್ಲಿ ಪ್ರಕಟವಾದ ಲೇಖನದ ಲೇಖಕರು ಡಾ. ಪಿ. ಗುರುರಾಜ ಭಟ್, ಪ್ರಿನ್ಸಿಪಾಲ್, ಮಿಲಾಗ್ರಿಸ್ ಕಾಲೇಜ್, ಕಲ್ಯಾಣಪುರ, ಅವರು. ಕಳೆದ ವಾರ ಅವರ ಹೆಸರು ಬಿಟ್ಟುಹೋದುದಕ್ಕಾಗಿ ವಿಷಾದಿಸುತ್ತೇವೆ. (ಸಂ. ನ.)

ನಿವೃತ್ತ ಅಧ್ಯಾಪಿಕೆಗೆ ವಿದಾಯ

ಉಡುಪಿ ಮೋಡರ್ನ್ ಹಾಯರ್ ಪ್ರ್ಯಾಮರಿ ಶಾಲೆಯಲ್ಲಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸಿ ಎಪ್ರಿಲ್ ಒಂದರಂದು ನಿವೃತ್ತರಾದ ಶ್ರೀಮತಿ ಕಾವೇರಿ ಬಾ—ಇವರನ್ನು ಬೀಳ್ಕೊಡುವ ಸಮಾರಂಭವು ತಾ. 3-4-71ರಂದು ಶ್ರೀ ಎ. ಜೆ. ಆಲ್ವಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯಕರು ಶ್ರೀಮತಿ ಕಾವೇರಿ ಬಾಯಿಯವರ ಸೇವಾ ದೀಕ್ಷೆಯನ್ನು ಪ್ರಶಂಸಿಸಿ, ಅಧ್ಯಾಪಕ ವೃಂದದವರ ಕಿರುಕಾಣಿಕೆಯನ್ನೂ ಮಕ್ಕಳ ಕೊಡುಗೆಯನ್ನೂ ಶ್ರೀಮತಿಯವರಿಗೆ ಅರ್ಪಿಸಿದರು. 7ನೇ ತರಗತಿಯ ವಿದ್ಯಾರ್ಥಿಗಳು ಶಾಲಾ ಜೀವನದಲ್ಲಿ ತಾವು ಅನುಭವಿಸಿದ ವಿಶೇಷ ಪ್ರೀತ್ಯಾದರಗಳನ್ನು ಸ್ಮರಿಸಿದರು. ಅಧ್ಯಾಪಕರ ಭಾಷಣಗಳ ಬಳಿಕ ಅಧ್ಯಕ್ಷರ ಭಾಷಣ, ಮುಖೋಪಾಧ್ಯಾಯ ಶ್ರೀ ಎಚ್. ಎಲ್. ಭಟ್ಟರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ನಿಧನ

ಶ್ರೀ ಪಾದೆಬೆಟ್ಟು ವಾಸು ಎ. ಶೆಟ್ರವರು ತಾ. ೫-೪-೭೧ರಂದು ತಮ್ಮ ಸ್ವಗೃಹವಾದ ಪಡುಬಿದ್ರಿಯ ಚಂದ್ರನಿವಾಸದಲ್ಲಿ ತಮ್ಮ ೬೦ನೇ ವಯಸ್ಸಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಪಡುತ್ತೇವೆ. ದಿವಂಗತರು ಜಿಲ್ಲೆಯ ಪ್ರಸಿದ್ಧ ಯಕ್ಷಗಾನ ಅರ್ಥದಾರಿಗಳಲ್ಲಿ ಒಬ್ಬರಾಗಿದ್ದರು. ದೇಶಭಕ್ತ ಕಾರ್ನಾಡು ಸದಾಶಿವ ರಾಯರ ಒಟ್ಟಿನ ಸ್ವಯಂ ಸೇವಕರಾಗಿ ದುಡಿದವರೂ ಆಗಿದ್ದರು. ಇಲ್ಲಿಯ ಪಡುಬಿದ್ರಿ ಮಹಾಲಿಂಗೇಶ್ವರ ಮತ್ತು ಮಹಾಗಣಪತಿ ದೇವಾಲಯ ಹಾಗೂ ಪಾದೆಬೆಟ್ಟು ಸುಬ್ರಹ್ಮಣ್ಯ ದೇವಾಲಯಗಳ ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯಕರ್ತರುಗಳಲ್ಲಿ ಒಬ್ಬರಾಗಿದ್ದು ಸೇವೆಸಲ್ಲಿಸಿರುತ್ತಾರೆ. ಪಾದೆಬೆಟ್ಟು ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡ ವಿಸ್ತರಣಾ ಸಮಿತಿಯ ಮುಂದಾಳುವೂ ಆಗಿದ್ದು ಶಾಲೆಗೆಂದು ಆಫೀಸು ಕೋಣೆಯನ್ನು ಕಟ್ಟಿಸಿಕೊಟ್ಟಿದ್ದರು.

ದಿವಂಗತರ ಆತ್ಮಕ್ಕೆ ಚಿರಶಾಂತಿ ಕೋರಿ ಪಾದೆಬೆಟ್ಟು ಹಾಯರ ಎಲಿಮೆಂಟರಿ ಶಾಲೆಯಲ್ಲಿ ಮೌನ ಪ್ರಾರ್ಥನೆಯನ್ನು ಮಾಡಲಾಯಿತು. ಶ್ರೀ ವೈ. ಜಗನ್ನಾಥ ಶೆಟ್ರವರು ದಿವಂಗತರ ಗುಣ ಕಥನವನ್ನು ಮಾಡಿದರು.

[ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ]
ಕಾಂಗ್ರೆಸ್ ವಸ್ತುಪ್ರದರ್ಶನ
1971
ಸುಭಾಷ್‌ನಗರ, ಬೆಂಗಳೂರು—9.
25—3—71 ರಿಂದ ಪ್ರಾರಂಭವಾಗಿದೆ
- ಪ್ರತಿ ದಿನವೂ ಖ್ಯಾತ ಕಲಾವಿದರಿಂದ ಮನರಂಜನೆ
- ರಾಜ್ಯದ ಅಭಿವೃದ್ಧಿಯ ವಿಹಂಗಮ ನೋಟ
- ಕೈಗಾರಿಕಾಭಿವೃದ್ಧಿಯ ಸತ್ಯ ಚಿತ್ರ
- ಗಾಂಧಿ ದರ್ಶನ ಮಂಟಪ
- ಸ್ವಾತಂತ್ರ್ಯ ಹೋರಾಟದ ಚಿತ್ರಶಾಲೆ
- ಎಲ್ಲವೂ ಕೂಡಿದ ಪುಟ್ಟದೊಂದು ಪ್ರಪಂಚ—
ಈ ಭವ್ಯ ಪ್ರದರ್ಶನ

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

1 A 1 O.S.289/69

ಅರ್ಜಿದಾರಳು—ಸಾವಿತ್ರಿ ಅಮ್ಮ
ಎದ್ರಿರು— 1) ಸೀತಾರಾಮ ಶೇಟ್
2) ಮಂಜುನಾಥ ಶೇಟ್ 3) ಲಕ್ಷ್ಮಿ ಅಮ್ಮ

ಈ ಮೂಲ್ಕ 2ನೇ ಎದ್ರಿಗೆ ತಿಳಿಯಪಡಿಸುವುದೇನೆಂದ್ರೆ—

ಅರ್ಜಿದಾರಳು ಮೇಲ್ಕಂಡ ಪ್ರಿಲಿಮಿನರಿ ಡಿಕ್ರಿಯ ಆಧಾರದ ಮೇಲೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಪ್ರಾರ್ಥಿಸಿ ಅರ್ಜಿ ಕೊಟ್ಟಿರುತ್ತಾಳೆ. ಅದು ತಾ. 4-6-71ಕ್ಕೆ ತನ್ಸಿಗೆ ಇದೆ.

ಕೋರ್ಟು ಹುಕುಂ ಪ್ರಕಾರ

H. Laxminarayanayya
Advocate for Applicaint

ಕುಂದಾಪುರ, 5–4–71

ಕುಂದಾಪುರ ಮು. ಕೋರ್ಟಿನಲ್ಲಿ

O. S. 173/70

ವಾದಿರು—ಸುಬ್ಬಕ್ಕ ಸೆಡ್ತಿ ಕೂಡಾ
ಪ್ರತಿವಾದಿರು—ಸೂರಿಯಣ್ಣ ಸೆಟ್ಟಿ ಕೂಡಾ

12ರಿಂದ 14ನೆ ವರೆಗಿನ ಪ್ರತಿವಾದಿರ ಬಗ್ಗೆ ಇವರ ಗಾರ್ಡಿಯನ್ ತಾಯಿ 11ನೇ ಪ್ರತಿವಾದಿಳಿಗೆ ತಿಳಿಸುವುದೇನೆಂದರೆ—

12ನೆ ಪ್ರ. ಮ್ಯಾನರ ಸೀತಾರಾಮ 13ನೆ ಪ್ರ. ಮ್ಯಾನರ ಪ್ರಫುಲ್ಲಾ 14ನೆ ಪ್ರ. ಮ್ಯಾನರ ಜ್ಯೋತಿ—11ನೆ ಪ್ರತಿವಾದಿಳು ಅಕ್ಕಯ್ಯ ಸೆಡ್ತಿ ಮಕ್ಕಳು. ಇವರ ಗಾರ್ಡಿಯನ್ ತಾಯಿ ಸದ್ರಿ 11ನೆ ಪ್ರತಿವಾದಿಳು ಅಕ್ಕಯ್ಯ ಸೆಡ್ತಿ, ಮಂಜಯ್ಯ ಸೆಟ್ರ ವಿಧವೆ. ಕುಂದಾಪುರ ತಾಲೂಕು ಆಲೂರು ಗ್ರಾಮದಲ್ಲಿರುವವರು.

ವಾದಿರು ಹಿಸೆ ಬಗ್ಗೆ ಮೇಲ್ಕಾಣ ದಾವೆಯನ್ನು ನಿಮಪು ವಗೈರೆರ ಮೇಲೆ ಕುಂದಾಪುರ ಮು. ಕೋರ್ಟಿನಲ್ಲಿ ಮೇಲ್ಕಂಡ ದಾವೆಯನು ದಾಕಲು ಮಾಡಿರುವುದರಿಂದ ಸದ್ರಿ ದಾವೆಯು ತಾರೀಕು 5-6-71ಕ್ಕೆ ತನ್ಸಿಗೆ ಯಿಟ್ಟಿರುವುದರಿಂದ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜ್ರು ಆಗಿ ನಿಂಮ ಉದಾರಣೆಯಿದ್ದಲ್ಲಿ ಹಾಜ್ರು ಮಾಡತಕ್ಕದ್ದು. ಯಿದ್ದೈ ತಪ್ಪಿದಲ್ಲಿ ಸದ್ರಿ ದಾವೆಯನ್ನು ನಿಂಮ ಗೈರು ಹಾಜರಿಯಲ್ಲಿ ಕೇಳಿ ಫೈಸಲು ಮಾಡೋಣಾದೀತೆಂತ ಈ ಮೂಲಕ ತಿಳಿಸೋಣಾಗುತ್ತದೆ.

M. Madhava Rao
Advocate for Plaintiff

ಮೊಕ್ಕಾಂ ಕುಂದಾಪುರ, ತಾ. 7–4–71

In the Court of the Principal Munsiff at Puttur, S K.

O. S. No. 505 of 1970.

Between:-
A. C. Ganapathi ... Plaintiff
and
Rama Gowda...Defendant.

To the Defendant:
Rama Gowda,
S/o Dooma Gowda,
Patrakodi of Kedila village,
Buntwal Taluk.

Please take notice that the above suit stands posted to 25—5—1971 for your appearance and you are hereby directed to appear before the Court on the said day at 10-30 a. m in person or through the Advocate failing which the case will be proceeded in your absence.

(By order of Court)

U. P. Shivarama,
Advocate for Plaintiff.

ಆಯುರ್ವೇದದ ಪ್ರಗತಿಗೆ ಸಮಾಜ ಮುಂದಾಗಬೇಕು

—ಶ್ರೀ ವೀರೇಂದ್ರ ಹೆಗ್ಗಡೆ.

ವಿಟ್ಲದಲ್ಲಿ ಎಪ್ರಿಲ್ 10ರಂದು ಸೇರಿದ ಅ. ಕ. ಪ್ರಾ. ಆಯುರ್ವೇದ ಸಮ್ಮೇಳನದ ಸ್ವಾಗತಾಧ್ಯಕ್ಷ ಧರ್ಮಸ್ಥಳದ ಧರ್ಮದರ್ಶಿ ಶ್ರೀ ವೀರೇಂದ್ರ ಹೆಗ್ಗಡೆಯವರು ಮಾತನಾಡುತ್ತಾ, ಮನುಷ್ಯನ ಆಯುರ್ಮಾನಕ್ಕೆ ಸಂಬಂಧಿಸಿದ ಮಹಾಶಾಸ್ತ್ರವೆನಿಸಿದ ಆಯುರ್ವೇದದ ಪ್ರಗತಿಗೆ ಇಡಿಯ ಸಮಾಜವೇ ಮುಂದೆ ಬರಬೇಕು ಎಂದರು.

ಅವರು ಮುಂದುವರಿಯುತ್ತಾ, ಪ್ರಾಚೀನ ಕಾಲದಲ್ಲಿ ಚಿಕಿತ್ಸಾ ಸಂಪ್ರದಾಯಗಳಲ್ಲಿ ಆಯುರ್ವೇದವು ಉನ್ನತ ಮಟ್ಟದ್ದಾಗಿತ್ತಾದರೂ ಕಾಲಾಂತರದಲ್ಲಿ ಅದರ ಪ್ರಗತಿ ಕುಂಠಿತವಾಗಿದೆ. ಇದಕ್ಕೆ ಮುಖ್ಯ ಕಾರಣ ಪಾಶ್ಚಾತ್ಯ ಪದ್ಧತಿಯ ಅನಿರ್ಬಂಧ ಬಳಕೆ ಎಂದು ಹೇಳಬಹುದು. ಆಯುರ್ವೇದದಲ್ಲಿ ಔಷಧ ತಯಾರಿಕೆಗೆ ಅಮೂಲ್ಯವಾದ ಗಿಡಮೂಲಿಕೆಗಳು, ಬೆಲೆಬಾಳುವ ರತ್ನಾದಿಗಳು ಬೇಕು. ಅಲ್ಲದೆ ದೀರ್ಘಕಾಲದ ಪರಿಶ್ರಮ ತಾಳ್ಮೆ ಅತ್ಯಗತ್ಯ. ಆದ್ದರಿಂದ ಕೇವಲ ಜನಹಿತದ ದೃಷ್ಟಿಯಿಂದ ಅಷ್ಟು ಧನ ಮತ್ತು ಕಾಲಾವಕಾಶ ವ್ಯಯಮಾಡಿ ಸಿದ್ಧೌಷಧ ತಯಾರಿಸಲು ಯಾರೂ ಮುಂದೆ ಬರಲಿಲ್ಲ. ಆದ್ದರಿಂದ ಆಯುರ್ವೇದ ಶಾಸ್ತ್ರ ಕ್ರಮೇಣ ಕ್ಷೀಣಿಸಲು ಇದೂ ಒಂದು ಕಾರಣ. ಇವಲ್ಲದೆ ಇನ್ನೂ ಕೆಲವು ಕಾರಣಗಳನ್ನು ಸೂಚಿಸಿದ ಶ್ರೀ ಹೆಗ್ಡೆಯವರು ಇವೆಲ್ಲಕ್ಕಿಂತಲೂ ಮಿಗಿಲಾಗಿ ಜನರನ್ನು ಆಕರ್ಷಿಸಿದ್ದು ಪಾಶ್ಚಾತ್ಯ ವೈದ್ಯಕೀಯ ಪದ್ಧತಿಯಲ್ಲಿನ ಶೀಘ್ರ ಪರಿಣಾಮಕಾರಿಯಾದಂಥ ಚುಚ್ಚು ಮದ್ದು; ಇನ್ನೂ ಕೆಲವು ವೈಜ್ಞಾನಿಕ ಪದ್ಧತಿಗಳು ಮಾತ್ರವಲ್ಲದೆ ಜನರನ್ನು ಸೂರೆಗೊಂಡುವು.

ಆದರೆ ಆಧುನಿಕ ಶಸ್ತ್ರ ಚಿಕಿತ್ಸೆಯಾಗಲೀ ಸೂಚಿಕಾ ಪ್ರಯೋಗವಾಗಲೀ ಭಾರತೀಯರಿಗೇನೂ ಹೊಸತಲ್ಲ. ಆದರೆ ಪ್ರಾಚೀನಕಾಲದ ಮಹಾವೈದ್ಯರ ವಿದ್ಯೆಯೆಲ್ಲಾ ಅವರೊಂದಿಗೇ ಮೂಲೆಸೇರಿತು. ಭಾರತೀಯರ ಬಚ್ಚಿಡುವ ಸ್ವಭಾವದಿಂದಾಗಿ ಈ ಪರಂಪರೆಯೇ ಕಡಿದು ಹೋಯಿತು. ಇವೆಲ್ಲವುಗಳ ಪರಿಣಾಮವಾಗಿ ಇಂದು ಮಿಶ್ರವೈದ್ಯಕೀಯ ಪದ್ಧತಿಯನ್ನು ಆಯುರ್ವೇದದ ಹೆಸರಿನಲ್ಲಿ ಪ್ರಾರಂಭಿಸಿದ್ದೇವೆ. ಆಯುರ್ವೇದ ಕಾಲೇಜುಗಳಲ್ಲಿ ಈ ಪ್ರಯೋಗ ನಡೆದಿದೆ. ಮೊದಲೇ ಆಯುರ್ವೇದವೆಂದರೆ ಅಪನಂಬಿಕೆ, ತಾತ್ಸಾರ ಮನೋಭಾವ ಬೆಳೆಸಿಕೊಂಡಿರುವ ನಮಗೆ ಮಿಶ್ರ ಪದ್ಧತಿ ಆಯುರ್ವೇದ ಶಾಸ್ತ್ರಕ್ಕೆ ತಿಲಾಂಜಲಿಯನ್ನೀಯುವಂತೆ ಮಾಡಿದೆ.

ಇನ್ನಾದರೂ ನಾವು ನಮ್ಮ ಹೆಜ್ಜೆ ಬದಲಾಯಿಸ ಬೇಕು ನಮ್ಮ ಧರ್ಮ, ಸಂಸ್ಕೃತಿ, ಪರಂಪರೆಗಳ ಬಗ್ಗೆ ನಮಗೆ ಹೆಮ್ಮೆ ಮೂಡಬೇಕು. ನಮ್ಮ ಸಂಪತ್ತಿನ ಸದುಪಯೋಗ ಪಡೆಯಬೇಕು. ನಮ್ಮ ಹಿರಿಯರು ವರ್ಷಗಟ್ಟಲೆ ತಪಸ್ಸು ನಡೆಸಿ ಪಡೆದ ಸಿದ್ಧಿಯ ಫಲ ಅರಿಯಬೇಕು; ಪಡೆಯಬೇಕು. ಇದಕ್ಕೆಲ್ಲ ಯಾವದೇ ಒಬ್ಬ ವ್ಯಕ್ತಿಯ ಪ್ರಯತ್ನ ಸಾಲದು. ಸಮಾಜವೇ ಇದರ ಭಾರ ಹೊರಲು ಮುಂದೆ ಬರಬೇಕು ಎಂದು ಶ್ರೀ ಹೆಗ್ಡೆಯವರು ಕರೆ ನೀಡಿ ಎಲ್ಲರಿಗೂ ಸುಸ್ವಾಗತ ಕೋರಿದರು.

● ●

ವಿಟ್ಲದಲ್ಲಿ ಕರ್ನಾಟಕ ಆಯುರ್ವೇದ ಸಮ್ಮೇಳನ

ತಾ. 10—4—71ರಂದು ಇಪ್ಪತ್ತೇಳನೇ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಳನವು ವಿಟ್ಲದ ಸಮೀಪದ ಕೇಂದ್ರ ಉದ್ಯಾನ ಬೆಳೆಗಳ ಸಂಶೋಧನಾ ಕ್ಷೇತ್ರದ ಪರಿಸರದಲ್ಲಿ ನಿರ್ಮಿಸಿದ ಆತ್ರೇಯ ನಗರದಲ್ಲಿ, ಮಂಗಳೂರಿನ ಡಾ| ಎನ್. ವಿ. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಸ್ವಾಗತಿಸಿದರು. ಪದ್ಮಭೂಷಣ ಡಾ| ಎಂ. ಸಿ. ಮೋದಿಯವರು ಸಮ್ಮೇಳನವನ್ನು ಉದ್ಘಾಟಿಸುತ್ತಾ ಆಯುರ್ವೇದದ ಮಹತ್ವವನ್ನು ವಿವರಿಸಿ, ಜನರು ಅದರ ಕಡೆಗೆ ಆಸಕ್ತಿ ವಹಿಸಿ, ಆಯುರ್ವೇದ, ನಿಸರ್ಗ ಚಿಕಿತ್ಸೆ, ಯೋಗ ಚಿಕಿತ್ಸೆ ಇವುಗಳನ್ನು ಒಂದುಗೂಡಿಸಿ ಅವುಗಳನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸಬೇಕು. ಅಭಿವೃದ್ಧಿಗಾಗಿ ಶ್ರಮಿಸುವವರಿಗೆ ಕೃತಜ್ಞರಾಗಿರಬೇಕು ಎಂದು ನುಡಿದರು.

ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಡಾ| ಪಿ. ಯಸ್. ಭಟ್‌ರವರು ಸಂದೇಶಗಳನ್ನೋದಿದರು. ಅಧ್ಯಕ್ಷರ ಭಾಷಣ, ಶ್ರೀಮದ್ ಎಡನೀರು ಮಠಾಧೀಶರವರಿಂದ ವಸ್ತು ಪ್ರದರ್ಶನದ ಉದ್ಘಾಟನೆಗಳು ನಡೆದ ನಂತರ ಶ್ರೀಗಳಾದ ಎಂ. ನಾರಾಯಣ ಭಟ್, ಡಾ| ಎನ್. ಸುಬ್ರಹ್ಮಣ್ಯ ಶಾಸ್ತ್ರಿ, ಕೆ. ಆರ್. ಭಾಗವತ್, ಕೆ. ವೆಂಕಪ್ಪ ಭಟ್ ಮೊದಲಾದವರು ಭಾಷಣ ಮಾಡಿದರು.

ವಿಟ್ಲ ಅಡಿಕೆ ಸಂಶೋಧನಾ ಕೇಂದ್ರದ ಸಂಶೋಧನಾ ಅಧಿಕಾರಿ ಶ್ರೀ ಕೆ. ಶ್ಯಾಮ ಭಟ್‌ರವರು ಸಂಸ್ಮರಣ ಸಂಚಿಕೆಯಾದ 'ಸ್ಮರಣ ದೀಪಿಕಾ'ವನ್ನು ಬಿಡುಗಡೆಗೊಳಿಸುತ್ತಾ, ಆಯುರ್ವೇದದ ಕುರಿತು ಜನರಿಗೆ ಸರಿಯಾದ ರೀತಿಯಲ್ಲಿ ತಿಳಿಸುವ ವ್ಯವಸ್ಥೆ ಅಗತ್ಯವೆಂದರು.

ಸಭೆಯ ನಿರ್ಧಾರಕ ಸಮಿತಿಯ ರಚನೆಯಾದ ನಂತರ ಶ್ರೀ ಜಿ. ಶ್ಯಾಮ ಭಟ್‌ರವರು ಧನ್ಯವಾದ ಸಮರ್ಪಿಸಿದರು.

ಅಧ್ಯಕ್ಷರ ಭಾಷಣ

ಸಮ್ಮೇಳನಾಧ್ಯಕ್ಷ ಡಾ| ಉಪಾಧ್ಯಾಯರು ಮಾತನಾಡುತ್ತಾ, ನಮ್ಮ ರಾಜ್ಯದಲ್ಲಿ ಇರುವ ಒಟ್ಟು 10 ಆಯುರ್ವೇದ ಕಾಲೇಜನ್ನು ಸರಕಾರದವರೇ ವಹಿಸಿಕೊಂಡು ಕ್ರಮವಾದ ರೀತಿಯಲ್ಲಿ ಅವನ್ನು ನಡೆಸಬೇಕು, ವಿದ್ಯಾರ್ಥಿಗಳಿಗೆ ತಮ್ಮ ಭವಿಷ್ಯದ ಬಗೆಗೆ ಭರವಸೆ ಉಂಟಾಗುವಂತೆ ಮಾಡುವ ಏರ್ಪಾಡುಗಳನ್ನು ಮಾಡಬೇಕು ಎಂದರು. ಮುಂದುವರಿಯುತ್ತಾ ಅವರು, ಆಯುರ್ವೇದ ಔಷಧಿ ನಿರ್ಮಾಣಕ್ಕೆ ಬೇಕಾದ ಕೆಲವು ದ್ರವ್ಯಗಳು ದುರ್ಲಭವಾಗಿದ್ದು; ಅವುಗಳನ್ನು ಹೊಂದಿಸಿಕೊಳ್ಳುವುದು ಕಷ್ಟವಾಗಿದೆ. ಅರಣ್ಯಗಳಲ್ಲಿ ಅನೇಕ ಔಷಧೋಪಯೋಗಿ ವನಸ್ಪತಿಗಳು ನಿರುಪಯೋಗಿಯಾಗಿ ಹಾಳಾಗುತ್ತಿದ್ದು ಅರಣ್ಯ ಇಲಾಖೆಯವರು ವನಸ್ಪತಿ ಶಾಸ್ತ್ರಜ್ಞರೊಡನೆ ಸಮಾಲೋಚಿಸಿ ಅಂಥ ವನಸ್ಪತಿಗಳನ್ನು ಸಂಗ್ರಹಿಸಬೇಕು, ಆಸವಾರಿಷ್ಟಗಳ ಮೇಲಿನ ನಿರ್ಬಂಧ ತೆಗೆಯಬೇಕು. ಬಡವರಿಗೆ ಕಡಿಮೆ ಬೆಲೆಯಲ್ಲಿ ಔಷಧ ದೊರೆಯುವಂತಾಗಬೇಕು ಎಂದು ನುಡಿದರು. ಆಯುರ್ವೇದದಲ್ಲಿ ಸರಿಯಾದ ರೀತಿಯ ಸಂಶೋಧನೆ ನಡೆದು, ರಕ್ತದ ಒತ್ತಡ, ಕ್ಯಾನ್ಸರ್, ಆನೆಕಾಲು ಮುಂತಾದ ರೋಗಗಳಿಗೂ ಪ್ರಭಾವೀ ಔಷಧಗಳನ್ನು ಶೋಧಿಸಬೇಕು ಎಂದರು. ಆಯುರ್ವೇದ ಅಭಿವೃದ್ಧಿ ಬಗ್ಗೆ ಅವರು ನವಾಂಶ ಕಾರ್ಯಕ್ರಮವೊಂದನ್ನು ಸೂಚಿಸಿದ್ದು ಅದರಲ್ಲಿ ಆಯುರ್ವೇದಕ್ಕೆ ಪ್ರತ್ಯೇಕ ವಿಭಾಗ ರಚಿಸಬೇಕು. ಆಯುರ್ವೇದ ಚಿಕಿತ್ಸೆಯ ಮಹತ್ವದ ದಾಖಲೆಗಳ ಮೂಲಕ ಪ್ರಚಾರ ಮಾಡುವ ಸಲುವಾಗಿ ಪ್ರತಿ ಜಿಲ್ಲೆಗಳಲ್ಲೂ 50 ಶಯ್ಯೆಗಳ ಸೌಕರ್ಯವಿರುವ ಆಯುರ್ವೇದಿಯ ವೈದ್ಯರ ಸ್ಥಾನ ಮಾನ ವೇತನಾದಿಗಳು ಮೆಡಿಕಲ್ ಡಿಪಾರ್ಟ್‌ಮೆಂಟಿನಂತೆಯೆ ಇರಬೇಕು. ಅದನ್ನು ಇಂಡಿಯನ್ ಮೆಡಿಸಿನ್ ಎಂತ ಕರೆಯದೆ ಆಯುರ್ವೇದ ಶಬ್ದವನ್ನೇ ಬಳಸಬೇಕು ಎಂದು ಸಲಹೆಗಳಿವೆ.

● ●

ವಿಜಯ ಬೇಂಕಿನ ಹೊಸ ಶಾಖೆ

ಅನ್ನುತಿಯ ಸಮೀಪ ಕೊಡಗು ಜಿಲ್ಲೆಯಲ್ಲಿ ವೆಂಟಯಂಗಡಿ ಎಂಬಲ್ಲಿ ವಿಜಯ ಬೇಂಕಿನ ಇನ್ನೊಂದು ಹೊಸ ಶಾಖೆಯು ೧೩೧ನೇ ಶಾಖೆಯಾಗಿ ತಾ. ೧೫-೪-೭೧ರಂದು ತೆರೆಯಲ್ಪಟ್ಟಿದೆ.

ಕಟೀಲಿಗೆ ಆನೆ

ಮುಂಬಯಿಯಲ್ಲಿ ಬ್ಯಾಪಾರೋದ್ಯಮಿಯಾಗಿದ್ದು ಸದ್ಯ ಪಡುಬಿದ್ರಿಯ ಬಂಕೆಡವಿನಲ್ಲಿರುವ ಕಿನ್ನಿಗೋಳಿ ರಾಜರತ್ನ ಪುರದ ಶ್ರೀ ಸುಂದರ ಶೆಟ್ಟರವತಿಯಲ್ಲಿ "ನಾಗರಾಜ"ನೆಂಬ ಹೆಸರ ಮರಿ ಆನೆ ಒಂದನ್ನು ತಾ. ೯-೪-೭೧ರಂದು ಕಟೀಲು ಶ್ರೀ ದೇವಿಯ ಸನ್ನಿಧಿಗೆ ವೈಭವದಿಂದ ತಂದೊಪ್ಪಿಸಲಾಯಿತು.

ಈ ಅಪೂರ್ವ ರೀತಿಯ ಕೊಡುಗೆಯ ಬಗ್ಗೆ ಮೆಚ್ಚುಗೆ ಸೂಚಿಸಿದ ಮೊಕ್ತೇಸರ ಡಾ| ಕೆ. ಗಣನಾಥ ಶೆಟ್ಟರು ಚಿನ್ನದ ಪದಕದ ಮೂಲಕ ಶ್ರೀ ಸುಂದರ ಶೆಟ್ಟರನ್ನು ಗೌರವಿಸಲು ಶ್ರೀ ಕೆ. ಗೋಪಾಲಕೃಷ್ಣ ಆಸ್ರಣ್ಣರು ಹೂಹಾರ ಹಾಗೂ ಶ್ರೀದೇವಿಯ ಪ್ರಸಾದದೊಂದಿಗೆ ಶ್ರೀ ಶೆಟ್ಟರನ್ನು ಅಭಿನಂದಿಸಿದರು.

● ●

1947 ॐ 1971

S.L. SHET DIAMOND HOUSE

HAMPANKATTA : : MANGALORE-1.

CELEBRATES SILVER JUBILEE

ON 15—4—1971

AT TOWN HALL — MANGALORE

ದಂಡೋಪಾಯ

(ಎರಡನೇ ಪುಟದಿಂದ)

ಭಾತೃತ್ಯಾಗ ಮಾಡಿದನು. 'ಹೇಡಿ, ಹೋದರೆ ಹೋಗಲಿ' ಎಂದ ಸಭಾಕಾರ್ಯಗಳು ಮೊದಲಿನಂತೆಯೇ ನಡೆದುವು. ತನ್ನ ಪುರೋಹಿತನನ್ನು ಉಪೇಕ್ಷಿಸಿದ ಶೈಲೂಷನು ರಾತ್ರೋರಾತ್ರಿಗೇನೇ ಭರತನ ಸೇನೆಯ ಮೇಲೆ ಆಕ್ರಮಣ ನಡೆಸಿ ಸೈನಿಕರ ಕೊಲೆ ಮಾಡುವಂತೆ ಆದೇಶಿಸಿದನು. ರಾಜನ ಮಾತಿಗೆಲ್ಲ ತಲೆದೂಗುವ ಸಭಾಸದರು ಈ ಸಲಹೆಯನ್ನು ಬಾಯಿ ತುಂಬ ಹೊಗಳಿದರು

'ನಾಳೆ ಮುಂಜಾನೆ ಆಕ್ರಮಣ ಮಾಡಬೇಕೆ'ಂಬ ಭರತಾಜ್ಞೆಯಿಂದ ಉತ್ಸುಕರಾದ ಸೈನಿಕರು ತಮ್ಮ ಶಿಬಿರಗಳಲ್ಲಿ ಯಾರೂ ಮಲಗಿರಲೇ ಇಲ್ಲ. ಹಾಗಾಗಿ ಶೈಲೂಷನ ಸೈನ್ಯ ರಾತ್ರೆ ಹತ್ಯಾಕಾಂಡವಾರಂಭಿಸಲು ಸುಳಿದರೂ ಅಸಫಲವಾಗಿ ಮರಳಿತು.

ಪ್ರಾತಃಕಾಲದಲ್ಲಿ ಭರತ ಸೇನೆಯು ಗಂಧರ್ವ ಸೇನೆಯೊಡನೆ ಯುದ್ಧಕ್ಕೆ ತೊಡಗಿತು. ಇಕ್ಕಡೆಯವರೂ ಸರ್ವಸನ್ನದ್ಧರಾದುದರಿಂದ, ಹೋರಾಟ ಬಿರುಸಿನಿಂದಲೇ ನಡೆಯಿತು. ವೀರರು ಹರ್ಷತುಂದಿಲರಾದರು. ಹೇಡಿಗಳು ಅಂಜಿ ಅಳುಕಿದರು ಸೂರ್ಯಾಸ್ತವಾದೊಡನೆಯೇ ಸಮರ ಸ್ತಬ್ಧವಾಗುತಿತ್ತು; ಉದಯದೊಡನೆಯೇ ರಣಭೇರಿ ಮೊಳಗುತ್ತಿತ್ತು. ಈ ರೀತಿ ಭಯಾನಕ ಹೋರಾಟವು ಆರು ದಿನ ಪರ್ಯಂತ ಮುಂದುವರಿಯಿತು. ಏಳನೆಯ ದಿನ ಭರತನ ಕೈಯಿಂದ ಶೈಲೂಷನ ಹತ್ಯೆ ನಡೆಯಿತು. ಇದರಿಂದ ಗಂಧರ್ವ ಸೇನೆಯು ಕಂಗಾಲಾಗಿ ಓಡ ತೊಡಗಿತ. ಅತ್ಯಾಚಾರಿ ಗಂಧರ್ವರ ಕೈಯಿಂದ ದೇಶವನ್ನು ವಿಮೋಚನೆಗೊಳಿಸಿದ ಭರತ ರಾಜಗೃಹಕ್ಕೆ ಮರಳಿ ಒಂದನು ಮತ್ತೆ ಗಂಧರ್ವರು ಬಂದಾರೆಂದು ಒಂದು ವರ್ಷ ಕಾಲ ಅಲ್ಲೇ ಸೇನಾಸಮೇತನಾಗಿ ನಿಂತನು. ಈ ಒಂದು ವರ್ಷದಲ್ಲಿ ಅವನು ಸಿಂಧುವಿನ ಇಕ್ಕಡೆಗಳಲ್ಲಿ ಪುಷ್ಪವತಿ ಮತ್ತು ತಕ್ಷಶಿಲೆಗಳೆಂಬೆರಡು ನಗರಗಳನ್ನು ನಿರ್ಮಿಸಿದನು. ತನ್ನ ಮಕ್ಕಳಲ್ಲಿ ಪುಷ್ಕರನನ್ನು ಪುಷ್ಪವತಿಯಲ್ಲೂ ತಕ್ಷನನ್ನು ತಕ್ಷಶಿಲೆಯಲ್ಲೂ ಇರಿಸಿ ದೇಶ ಸಂರಕ್ಷಣೆಯ ಭಾರವನ್ನು ಅವರಿಗೆ ಹೊರಿಸಿ ತಾನು ಅಯೋಧ್ಯೆಗೆ ಮರಳಿ ಬಂದು ರಾಮರಾಜ್ಯದ ಸೇವೆಯಲ್ಲಿ ನಿರತನಾದನು.

●●

ಮಿತ ಕುಟುಂಬ ಯೋಜನೆಗೆ

ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ,

(ನವಯುಗ ಪ್ರೆಸ್) ಉಡುಪಿ, ದ.ಕ

ಒಣ ಹರಟೆ—
ನೂರರಿಂದ ಐದು - ಐದರಿಂದ ಎರಡು

ಕರ್ನಾಟಕದಲ್ಲಿ ವೀರೇಂದ್ರ ಪಾಟೀಲರ ಮತ್ತು ಗುಜರಾತದಲ್ಲಿ ಹಿತೇಂದ್ರ ದೇಸಾಯಿಯವರ ಸಚಿವ ಸಂಪುಟಗಳು ಉರುಳಿ ಹೋದುದರಿಂದ ತಮಗೇನೂ ಆಶ್ಚರ್ಯವಾಗಲಿಲ್ಲವೆಂದು ಸಿಂಡಿಕೇಟ್ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಹೇಳಿದ್ದಾರೆ. ಉತ್ತರ ಪ್ರದೇಶದಲ್ಲಿ ಟಿ ಎನ್. ಸಿಂಗರ ಸಂಯುಕ್ತ ದಳದ ಸರಕಾರವೂ ರಾಜಿನಾಮೆ ಕೊಟ್ಟಾಗಲೂ, ಅವರು ಅದು ನಿರೀಕ್ಷಿತವೇ ಎಂದು ಸುಮ್ಮನಾದರು

ಹೀಗೆ ತಮ್ಮ ಚಂಚುಪ್ರವೇಶವಿದ್ದ ಸರಕಾರಗಳೆಲ್ಲವೂ ಉರುಳಿದ ಮೇಲೆಯೇ ನಿಜಲಿಂಗಪ್ಪನವರು ನಿಶ್ಚಿಂತರಾಗಿದ್ದಾರೆನ್ನಬೇಕು. ಮರದ ಮೇಲಿರುವ ಹಣ್ಣು ಒಮ್ಮೆಗೆ ಉದುರಿ ಹೋದರೆ, ರಕ್ಷಣೆಯ ಹೊಣೆಗಾರಿಕೆಯಿಲ್ಲ ತಾನೆ? ಇನ್ನು ಪಕ್ಷ ಸಂಘಟನೆಯತ್ತಲೇ ತಮ್ಮ ಪೂರ್ಣ ಸಮಯವನ್ನು ಮುಡುಪಿಡಬಹುದೆಂದು ನಿಟ್ಟುಸಿರು ಬಿಟ್ಟರೆ ಹೇಗೆ?

ಸಿಂಡಿಕೇಟ್ ನೇತೃತ್ವದ ಮೈತ್ರಿಕೂಟವು ಸುಮಾರು ಮುನ್ನೂರು ಸ್ಥಾನ ಪಡೆಯುವುದೆಂದೂ ತಮ್ಮೊಂದೇ ಪಕ್ಷವು ೧೦೦-೧೨೦ ಸ್ಥಾನ ಗಳಿಸುವುದೆಂದೂ ಲೆಕ್ಕಾಚಾರ ಹಾಕಿದ ನಿಜಲಿಂಗಪ್ಪನವರ ಊಹೆ ಬರಿಯ ಊಹಾಪೋಹವಾಗಿ ಹೋಯ್ತು. ಮೊನ್ನಿನ ಲೋಕ ಸಭಾ ಚುನಾವಣೆಗಳಲ್ಲಿ ಮೈತ್ರಿಕೂಟವು ನಿರೀಕ್ಷಿತ ಪರಿಣಾಮದಲ್ಲಿ ಆರನೇ ಒಂದಂಶದಷ್ಟು ಯಶ ಗಳಿಸಿದರೆ, ಅವರ ಪಕ್ಷವು ಏಳರಲ್ಲಿ ಒಂದಂಶ ಗಿಟ್ಟಿಸಿ ಕೊಂಡಿತು ಹೀಗೆಲ್ಲ ತಲೆಕೆಳಗು ವ್ಯವಹಾರ ಚುನಾವಣೆಗಳಲ್ಲಿ ನಡೆಯುತ್ತದೆ ಎಂದ ಮೇಲೆ ಚುನಾಯಿತ ಶಾಸಕರಲ್ಲಿ ವಿಶ್ವಾಸವಿಡುವುದೆಂತು?

ಲೋಕಸಭಾ ಚುನಾವಣಾನಂತರ ಪಕ್ಷಾಂತರ ಮಾಡಿ ಇಂಡಿಕೇಟ್ ಸೇರಿದವರು ಮತ್ತು ಚುನಾವಣೆಗೆ ಮೊದಲೇ ಆ ಬಣ ಸೇರಿದವರು ಪಕ್ಷದ್ರೋಹಿಗಳು, ಜನ ವಂಚಕರು ಎಂಬ ಆರೋಪ ಹೊರಿಸುವವರಿದ್ದಾರೆ ಇದರಲ್ಲೂ ಮೊದಲ ಬಣದವರ ವಿಶ್ವಾಸಘಾತದಿಂದಲೇ ಸಿಂಡಿಕೇಟ್ ಸರಕಾರಗಳು ಉರುಳೇ ಹೋದುವು ಆದರೆ, ಒಂದು ರೀತಿಯಿಂದ ನೋಡುವುದಾದರೆ ಶಾಸಕರ ತಪ್ಪೇನೂ ಇಲ್ಲ ಅವರನ್ನು ದೂರುವುದು ನಿಜಕ್ಕೂ ನ್ಯಾಯವಲ್ಲ.

ಅದೇಕೆ? ಕಳೆದ ೧೯೬೭ರ ಚುನಾವಣೆಗಳಲ್ಲಿ ಕಾಂಗ್ರೆಸ್‌ನ್ನು ಬೆಂಬಲಿಸಿದ ಮತದಾರರು ೧೯೭೧ರಲ್ಲಿ ಇಂಡಿಕೇಟನ್ನು ತಲೆಯ ಮೇಲೆ ಹೊತ್ತರು. ಹಾಗಿರುವಾಗ ಅವರಿಂದಲೇ ಆಯ್ಕೆಯಾಗಿದ್ದು ಇದುವರೆಗೂ ಸಿಂಡಿಕೇಟಿನಲ್ಲೇ ಉಳಿದುಕೊಂಡವರಿಗೆ ಇದು ಇಂಡಿಕೇಟಿಗರಾಗಿರಿ ಎಂಬ ಆದೇಶವೆನಿಸಿದರೆ ತಪ್ಪೇನು? ಚುನಾವಣೆಗೆ ಪೂರ್ವದಲ್ಲೇ ಇಂಡಿಕೇಟಿಗರಾದವರು ಜನತೆಯ ಹೃದಯವರಿತ ಇಂಗಿತಜ್ಞರೆಂದು ತಿಳಿಯುವುದೇ ಹೆಚ್ಚು ಸರಿಯಾಗಲಾರದೆ? ಆದುದರಿಂದ ಸಿಂಡಿಕೇಟಿನಿಂದ ಇಂಡಿಕೇಟ್ ಬೆಳ್ಳದತ್ತ ಶಾಸಕ ನೊಣಗಳು ಹಾರಿ, ಜನಹಿತಕ್ಕೆ ತಮ್ಮ ತನು—ಮನವನ್ನು ಮೀಸಲಿಟ್ಟು ಧನ ಕಮಾಯಿಸುವ ಪ್ರತಿಜ್ಞೆಯನ್ನು ಮತ್ತೊಮ್ಮೆ ದೃಢಪಡಿಸಿದ್ದಾರೆಂದು ತಿಳಿಯಬಾರದೇಕೆ?

ಇನ್ನೂ ಜನ ಹೃದಯವರಿತ ಬಳಿಕ ಸಿಂಡಿಕೇಟ್ ಪಾಳೆಯದಲ್ಲಿ ಉಳಿದುಕೊಂಡಿರುವ ಶಾಸಕರು ಜನ ಸೇವಕರೆಂದು ಹೇಳಿಕೊಳ್ಳುವುದು ಧರ್ಮವೇ ಎಂದು ವಿಚಾರಿಸಬೇಕಾಗುತ್ತದೆ. ಹೀಗೆ ಉಳಿದವರಲ್ಲೂ ಕೆಲವರಾದರೂ ಕೆಲವು ದಿನಗಳಲ್ಲೇ ಅತ್ತ ಹಾರಲಿದ್ದಾರೆಂದರೆ ಅತ್ಯುಕ್ತಿಯಲ್ಲ ಮತ್ತೆ ಉಳಿದವರು ಶಿಸ್ತಿನ ಸಿಪಾಯಿಗಳು ಮಾತ್ರ.

ಸಿಂಡಿಕೇಟ್ ಶಿಸ್ತಿನ ಸಿಪಾಯಿಗಳ ಗುಂಪು ಅದು ಹುಟ್ಟಿದ್ದೇ ಶಿಸ್ತಿನ ನಾಮಬಲದಿಂದ ಪಕ್ಷದ ಶಿಸ್ತು ಕೆಡಿಸಿದವರ ಗುಂಪು ಇಂಡಿಕೇಟ್. ಆದುದರಿಂದ ಶಿಸ್ತಾಗಿ ನಾಲ್ಕು ಜನರಿದ್ದರೂ ಸಾಕು ಇದಕ್ಕೆ. ಕೌರವರ ಹಾಗೆ ೧೦೦ ಜನ ಮಕ್ಕಳಿರುವುದಕ್ಕಿಂತ 'ಪಾಂಡವರೀತಿ' ಐವರೇ ಸಾಕು ಎಂದಿದ್ದಷ್ಟು ಹಿಂದಿನವರು. ಇಂದಿನವರಿಗೆ ಐವರೂ ಬೇಡ. ಹಸೆಗೊಬ್ಬ ಮಗ, ಆರತಿಗೊಬ್ಬಳು ಮಗಳು—ಹೀಗೆ "ನಾವಿಬ್ಬರು—ನಮಗಿಬ್ಬರೇ ಮಕ್ಕಳು" ಎನ್ನುವವರು. ಆದುದರಿಂದ ಶಿಸ್ತುಗೇಡಿ ಸೇನೆಗಿಂತ ಶಿಸ್ತುಯುತ ನಾಯಕರೇ ಸಾಕು; ಆಗ ಬೇರಾವ ಸಮಸ್ಯೆಯೂ ಇಲ್ಲ.

ಆದರೆ, ಇಂದಿನ ಸಮಾಜ ಶಾಸ್ತ್ರಜ್ಞರಿಗೆ ಎದ್ದು ತೋರುವ ಸಂಗತಿಯೆಂದರೆ ಅಶಿಸ್ತು. ಹುಟ್ಟಿನಿಂದ ಸಾಯುವವರೆಗೂ ಇಂದು ಅಶಿಸ್ತು ತನ್ನ ಕಾರುಭಾರ ಮಾಡುತ್ತಲಿರುತ್ತದೆ ಆಡುವುದು, ನಡೆಯುವುದು, ತಿನ್ನುವುದು, ತಿರುಗುವುದು, ಓದುವುದು, ಬರೆಯುವುದು, ನೋಡುವುದು, ಮಾಡುವುದು-ಎಲ್ಲೆಂದರಲ್ಲಿ ನಳರಾಯನನ್ನು ಶನಿ ಮಹಾರಾಜ ಕಾಡಿದಂತೆ ಅಶಿಸ್ತೇ ಬೆನ್ನು ಬಿಡುವುದಿಲ್ಲ. ಅದರಲ್ಲೂ ವಿದ್ಯಾರ್ಥಿಗಳಲ್ಲಿ, ಯುವ ಜನಾಂಗದಲ್ಲಿ ಅಶಿಸ್ತು ಹೆಮ್ಮರವಾಗಿದೆ ಈ ತಥ್ಯವನ್ನು ರಾಜಕಾರಣಿಗಳೂ ಒಪ್ಪುತ್ತಾರೆ; ಹೆತ್ತವರೂ ಸಮ್ಮತಿಸುತ್ತಾರೆ. 'ನಮ್ಮ ಮಗ/ಮಗಳು ಹೇಳಿದ್ದೊಂದು ಮಾತನ್ನೂ ಕೇಳುವುದಿಲ್ಲ' ಎನ್ನುವುದರಲ್ಲೇ ಆಧುನಿಕತೆ—ಪ್ರಗತಿಶೀಲತೆ ಇದೆ ಎಂದವರ ದೃಢವಿಶ್ವಾಸ. ಆದುದರಿಂದಲೇ ಹೇಳಿದಂತೆ ಮಾಡುವಂತೆಸಗುವುದಿಲ್ಲ ಅವರು

ಆದುದರಿಂದಲೇ ಇರಬೇಕು, ಒಪ್ಪ ಓರಣವೆಲ್ಲ ದೂರವೇ ದೂರ ಮಕ್ಕಳೆ ಬಟ್ಟೆ ಬರೆ ಪಾಟಿ—ಪುಸ್ತಕಗಳಿಂದ ಹಿಡಿದು ಮುದುಕರ ತಲೆ—ವಿ:ಸನಳವರೆಗೂ ಅಶಿಸ್ತು ತುಂಬಿ ತುಳುಕಾಡುವಾಗ, ಅಶಿಸ್ತು ಪ್ರಿಯರೇ ಜನಪ್ರಿಯತೆಗೆ ಪಾತ್ರರಾಗುವುದು ಸಹಜ ಸ್ವಾಭಾವಿಕ. ಆದುದರಿಂದಲೇ ಮೊನ್ನೆ ನಡೆದ ಲೋಕ ಸಭಾ ಚುನಾವಣೆಗಳಲ್ಲಿ ಅಶಿಸ್ತಿನ ಇಂದಿರಾ ಪ್ರಗತಿವಾದಿಗಳು ದಿಗ್ವಿಜಯ ಗಳಿಸುವುದು ಸಾಧ್ಯವಾಯ್ತು. ಶಿಸ್ತಿನ ಸ್ವಗೊಂಬೆಗಳನ್ನು ಜನತೆ ಕೈಬಿಟ್ಟಿತು

ದುರ್ಜನರ ಕೂಡೆ ಅಧಿಕ ಸ್ನೇಹಕ್ಕಿಂತ ಸಜ್ಜನರ ಸಂಗಡ ಕಲಹವೇ ಲೇಸೆಂದು ಸಾರಿದ ದಾಸವರೇಣ್ಯರು ಒಕ್ಕಣ್ಣರ ಊರಿನಲ್ಲಿ ಒಂದು ಕಣ್ಣು ಮುಚ್ಚಿಕೊಂಡು ನಡೆಯ ಬೇಕೆಂದೂ ಸಲಹೆ ನೀಡಿದ್ದಾರೆ. ಇಂದಿನ ವಾತಾವರಣದಲ್ಲಿ ಎರಡನೆಯ ಸಲಹೆಯೇ ಜನತೆಗೆ ಶಿರೋಧಾರ್ಯವಾಯಿತು ಎಂದು ಹೇಳ ಬಹುದೆ? ಹೂವಿನ ಗೆಳೆತನದಿಂದ ಹಗ್ಗವೂ ಭಗವನ್ಮೂರ್ತಿಯ ಕೊರಳೇರುವಂತೆ ಪ್ರಗತಿ ಲೇಬಲ್ ಹಚ್ಚಿಕೊಂಡವರನ್ನೇ ಆರಿಸಿ, ತಾವೂ ಪ್ರಗತಿಪರರೆಂದು ಮತದಾರರು ಲೇಬಲ್ ಅಂಟಿಸಿಕೊಂಡರೆ ತಪ್ಪಾಗದು.

ಆದುದರಿಂದ ನಿಜಲಿಂಗಪ್ಪನವರೂ ಅವರ ಅನುಯಾಯಿಗಳೂ ತಮ್ಮ ಪಕ್ಷವನ್ನು ಮತ್ತಷ್ಟು ಬಲಪಡಿಸುವ ನಿರ್ಧಾರ ಮಾಡಿದ್ದು ನ್ಯಾಯವೇ. ಅವರವರ ದಾರಿ ಅವರವರಿಗೆ ಸರಿಯೇ ನ್ಯಾಯಾಲಯದಿಂದ ಕಾಂಗ್ರೆಸ್ ಯಾವುದೆಂದು ನಿರ್ಣಯವಾಗುವವರೆಗೆ ಇಬ್ಬರೂ ಸರಿ ಇಬ್ಬರೂ ತಪ್ಪು.

—ರಾ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ

ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ

ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

NAVAYUGA 15–4–1971

Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 33
Licensed to Post without Prepayment

ಹಸಿರು ಕ್ರಾಂತಿಯಿಂದ ಕಡಲ ಕ್ರಾಂತಿಯೆಡೆಗೆ

ಭಾರತದ ಸಮುದ್ರ ಜೀವ ವಿಜ್ಞಾನ ಸಂಸ್ಥೆಯು ಇತ್ತೀಚೆಗೆ ಕೊಚ್ಚಿನ್‌ನಲ್ಲಿ ಅಂತರ ರಾಷ್ಟ್ರೀಯ ಸಮುದ್ರ ಜೀವ ವಿಜ್ಞಾನ ವಿಷಯವಾಗಿ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿತ್ತು. ಇದು ಮೀನುಗಾರಿಕೆ ಮತ್ತು ಸಮುದ್ರ ವಿಜ್ಞಾನ ಕ್ಷೇತ್ರದಲ್ಲಿ ಸಂಭವಿಸಿದ ಮಹತ್ವದ ಘಟನೆ. ಇದು ದಕ್ಷಿಣ ಆಫ್ರಿಕ ಮತ್ತು ಆಸ್ಟ್ರೇಲಿಯಾ ನಡುವೆ ಇರುವ ಹಿಂದೂ ಮಹಾಸಾಗರದ ಸೆರಗಿನಲ್ಲಿರುವ ದೇಶವೊಂದರಲ್ಲಿ ನಡೆದ ಅತ್ಯಂತ ಬೃಹತ್ತಾದ ವಿಚಾರ ಸಂಕಿರಣ.

ಈ ಸಂಕಿರಣದಲ್ಲಿ ಹಿಂದೂ ಮಹಾಸಾಗರದ ಭೂಗರ್ಭ, ಭೌತಿಕ ರಾಸಾಯನಿಕ, ಜೀವ ವೈಜ್ಞಾನಿಕ, ಹವಾಮಾನ ಹಾಗೂ ಸಂಪನ್ಮೂಲ ಕುರಿತು ಸಮಗ್ರವಾಗಿ ಚರ್ಚಿಸಲಾಯಿತು. ಇದರಿಂದ ಹಿಂದೂ ಮಹಾಸಾಗರದ ಬಗ್ಗೆ ಉತ್ತಮ ಜ್ಞಾನ ಸಂಚಯನವಾಯಿತು. ಈ ಸಂಕಿರಣದಲ್ಲಿ ವಿಷಯಗಳ ಸೂಕ್ತ ವಿಶ್ಲೇಷಣೆಯಿಂದ, ಭವಿತವ್ಯದ ಸಂಶೋಧನಾ ಕಾರ್ಯಕ್ರಮ ಏರ್ಪಡಿಸಲು ಸಾಧ್ಯವಾಯಿತು. ಈ ವಿಚಾರ ಸಂಕಿರಣದಲ್ಲಿ ಸುಪ್ರಸಿದ್ಧ ವಿಜ್ಞಾನಿಗಳು ಹಿಂದೂ ಮಹಾಸಾಗರದ ವಿವಿಧ ಅಂಶಗಳ ಬಗ್ಗೆ 30 ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಿ ಚರ್ಚೆ ನಡೆಸಿದರು. ಈ ಸಂಕಿರಣದಲ್ಲಿ ಸುಪ್ರಸಿದ್ಧ ಭಾರತೀಯ ವಿಜ್ಞಾನಿಗಳಲ್ಲದೆ, ಅಮೇರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸ್, ಜಪಾನ್, ಜರ್ಮನಿ ಮೊದಲಾದ ದೇಶಗಳಿಂದ 40ಕ್ಕಿಂತಲೂ ಹೆಚ್ಚು ವಿಜ್ಞಾನಿಗಳು ಭಾಗವಹಿಸಿದ್ದರು.

ನೀಲಕ್ರಾಂತಿಯ ಉಗಮ

ಹಸಿರು ಕ್ರಾಂತಿ ಇತ್ತೀಚಿನ ಸಾಧನೆ. ಆದರೆ, ಈ ಕ್ರಾಂತಿ ಭಾರತದ ಆಹಾರ ಬೇಡಿಕೆಯ ಎಲ್ಲಾ ಅಗತ್ಯಗಳನ್ನೂ ಪೂರೈಸಲಾರದು. ಆದ್ದರಿಂದ ನಮ್ಮ ಗಮನವನ್ನು ಸಮುದ್ರದ ಕಡೆಗೆ ಕೇಂದ್ರೀಕರಿಸಬೇಕಾಗಿದೆ ಸಮುದ್ರವು ನಮ್ಮ ಆಹಾರ ಅಗತ್ಯಗಳನ್ನು ಪೂರೈಸಲು ಅಲ್ಪ ಬೆಲೆಯ, ಆದರೆ ಸಸಾರಜನಕ ಸಮೃದ್ಧವಾದ ಆಹಾರವನ್ನು ಒದಗಿಸ ಬಲ್ಲುದು. ಸಮುದ್ರದ ಮೀನು ಮಾನವನಿಗೆ ನಿಸರ್ಗ ನೀಡುವ ಮುಕ್ತ ಬಳುವಳಿಯಾಗಿದೆ. ಬಿತ್ತನೆ ಇಲ್ಲದೆ ಬೆಳೆತೆಗೆಯುವ ಸಮೃದ್ಧ ಮೂಲವಾಗಿದೆ. ಈ ಮೂಲಕ ನೀಲ ಕ್ರಾಂತಿಯಾಗುವಂತೆ ಮಾಡಬಹುದು.

ಪ್ರಸಕ್ತದಲ್ಲಿ ಹಿಂದೂ ಮಹಾಸಾಗರದಿಂದ 25 ಲಕ್ಷ ಟನ್ ಮೀನನ್ನು ಹಿಡಿಯಲಾಗುತ್ತಿದೆ. ಈ ಸಾಗರದಿಂದ ಪ್ರತಿ ವರ್ಷವೂ ಒಂದು ಕೋಟಿ ಟನ್ನಿಗಿಂತಲೂ ಹೆಚ್ಚು ಮೀನನ್ನು ಹಿಡಿಯಬಹುದು. ಭಾರತದಲ್ಲಿ 10 ಲಕ್ಷ ಟನ್ ಸಮುದ್ರ ಮೀನನ್ನು ಹಿಡಿಯಲಾಗುತ್ತಿದೆ. ಭಾರತವು ಸಮುದ್ರ ತೀರದಿಂದ ಹಿಡಿಯುವ ಮೀನಿನ ಪ್ರಮಾಣವನ್ನು ದ್ವಿಗುಣಗೊಳಿಸಬಹುದು. ಈ ಜೀವಂತ ಸಂಪನ್ಮೂಲಗಳಲ್ಲದೆ, ಹಿಂದೂ ಮಹಾಸಾಗರದ ಖಂಡ ಸ್ಥಳಗಳಲ್ಲಿರುವ ಖನಿಜ ಹಾಗೂ ನೈಸರ್ಗಿಕ ಅನಿಲ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕಾಗಿದೆ.

ವಾಣಿಜ್ಯ ಪಥ

ಸುಮಾರು 7.5 ಕೋಟಿ ಚದರ ಕಿಲೋ ಮೀಟರ್ ವ್ಯಾಪಿಸಿರುವ ಹಿಂದೂ ಮಹಾಸಾಗರವು ಇಡೀ ವಿಶ್ವದ ಏಳನೆ ಒಂದು ಭಾಗ ಪ್ರದೇಶವನ್ನು ಆಕ್ರಮಿಸಿಕೊಂಡಿದೆ. ಶಾಂತ ಹಾಗೂ ಅಟ್ಲಾಂಟಿಕ್ ಸಾಗರಗಳನ್ನು ಬಿಟ್ಟರೆ, ಹಿಂದೂ ಮಹಾಸಾಗರವು ತಾನು ಆಕ್ರಮಿಸಿಕೊಂಡಿರುವ ಪ್ರದೇಶದಲ್ಲಿ ಮೂರನೇ ಸ್ಥಾನವನ್ನು ಪಡೆಯುತ್ತದೆ. ಐತಿಹಾಸಿಕ ದೃಷ್ಟಿಯಿಂದ ನೋಡುವುದಾದರೆ, ಮಾನವನು ಹಿಂದೂ ಮಹಾಸಾಗರದಲ್ಲಿ ಪ್ರಪ್ರಥಮವಾಗಿ ಯಾನ ಮಾಡಿದ್ದಾನೆ.

ಕ್ರಿಸ್ತ ಪೂರ್ವ 3,000ದಿಂದ 2,500ನೇ ಇಸವಿಯ ನಡುವಣ ಅವಧಿಯ ಸಿಂಧೂ ಕಣಿವೆ ನಾಗರೀಕತೆಯ ಅವಶೇಷಗಳಿಂದ ನಿರ್ಧರಿಸುವುದಾದರೆ, ಭಾರತ ಉಪಖಂಡ ಮತ್ತು ಕೆಂಪು ಸಮುದ್ರ ತೀರದವರೆಗೆ ಸಮುದ್ರ ಮಾರ್ಗದ ವಾಣಿಜ್ಯವಿದ್ದಿತು. ಅನಂತರ ರೋಮನ್ ಸಾಮ್ರಾಜ್ಯದ ಉಜ್ವಲ ದಿನಗಳಲ್ಲಿ ಭಾರತ ಮತ್ತು ಮಧ್ಯಪೂರ್ವ ರಾಷ್ಟ್ರಗಳ ಮಧ್ಯೆ ವಾಣಿಜ್ಯ ನಡೆಯುತ್ತಿತ್ತು. ಪೂರ್ವ ತೀರದ ಭಾರತೀಯ ರಾಜ್ಯಗಳು ಮಲೇಶಿಯ ಮತ್ತು ಇಂಡೋನೇಶಿಯ ದ್ವೀಪ ಸಮೂಹಗಳ ನಡುವೆ ಸಾಂಸ್ಕೃತಿಕ ಸಂಬಂಧವೊಂದಿದ್ದಿತು.

ಇಂದಿಗೂ, ಹಿಂದೂ ಮಹಾಸಾಗರದ ಜೀವ ರಾಸಾಯನಿಕ ಮತ್ತಿತರ ಸಂಪನ್ಮೂಲಗಳ ವಿಷಯ ಬೆಳಕಿಗೆ ಬರದಿರುವುದು ವಿರೋಧಾಭಾಸವೆನಿಸಿದೆ.

ಹಿಂದೂ ಮಹಾಸಾಗರದ ಸೆರಗಿನಲ್ಲಿರುವ ದೇಶಗಳು ಬಹುತೇಕ ಪ್ರವರ್ಧಮಾನ ರಾಷ್ಟ್ರಗಳಾಗಿವೆ. ಈ ದೇಶಗಳ ಜನತೆ, ಸಸಾರಜನಕ ಆಹಾರದ ಅಭಾವದಿಂದ ಅಶಕ್ತರಾಗಿದ್ದಾರೆ. ಹಿಂದೂ ಮಹಾಸಾಗರದ ತೀರ ಪ್ರದೇಶದಲ್ಲಿ, ಇತರ ಸಮುದ್ರಗಳ ತೀರ ಪ್ರದೇಶಗಳಿಗಿಂತಲೂ, ಅಧಿಕ ಪ್ರಮಾಣದಲ್ಲಿ ಜನ ಸಂಖ್ಯೆ ಏರುತ್ತಿದೆ.

ಇತ್ತೀಚೆಗೆ ಹಿಂದೂ ಮಹಾಸಾಗರವನ್ನು ಕುರಿತು ಸಮಗ್ರ ವಿವರಣ ಪಟ್ಟಿಯನ್ನು ಪ್ರಕಟಿಸಲಾಗಿದೆ. ಈ ಪುಸ್ತಕದಲ್ಲಿ 17,000 ವಿಷಯಗಳು ಅಡಕವಾಗಿವೆ. ಪ್ರದೇಶವೊಂದನ್ನು ಕುರಿತು ಈ ವರೆಗೆ ಪ್ರಕಟವಾಗಿರುವ ವಿವರಣ ಪಟ್ಟಿಗಳಲ್ಲಿ ಇದು ಅತ್ಯಂತ ದೊಡ್ಡದು. ಈ ವಿವರಣ ಪಟ್ಟಿ ಹಾಗೂ ಮುಂದೆ ಸಿದ್ಧಪಡಿಸಬಹುದಾದ ಪಟ್ಟಿ ಹಿಂದೂ ಮಹಾ ಸಾಗರ ಕುರಿತು ನಡೆಸುವ ಸಂಶೋಧನೆಗೆ ಉತ್ತೇಜನಕಾರಿಯಾಗುತ್ತದೆ.

●●

ಸರಳ ಸಂಜೀವಿನಿ ಗೋಧಿ ಗಿಡದ ರಸ

(ಒಂದನೇ ಪುಟದಿಂದ)

ನಿರ್ಮೂಲದಲ್ಲಿ ಇದು ಮತ್ತಷ್ಟು ಸಹಕಾರಿಯಾಗುವುದು. ಉಳಿದ ಸನೆದ ಗೋದಿಗೆ ಉಪ್ಪು-ಮೆಣಸು ಸೇರಿಸಿ ತಿನ್ನಬಹುದು; ಅರೆದು ಹಲ್ವಾ ತಯಾರಿಸಬಹುದು ಅಥವಾ ಒಣಗಿಸಿ ಹಿಟ್ಟು ಮಾಡಿಸಬಹುದು.

ಗೋದಿ ಇಷ್ಟೊಂದು ಲಾಭದಾಯಕ. ಅಮೆರಿಕನ್ ಮಹಿಳಾ ವೈದ್ಯಳು ಸತ್ಯವನ್ನು ರಹಸ್ಯದಲ್ಲಿಡದೆ ಎಲ್ಲರಿಗೂ ತಿಳಿಯುವಂತೆ, ಎಲ್ಲರೂ ಅದರಿಂದ ಲಾಭ ಗಳಿಸುವಂತೆ ಬಹಿರಂಗ ಮಾಡಿಬಿಟ್ಟಿದ್ದಾಳೆ. ಲೋಕವು ನಿರೋಗಿಯಾಗಬೇಕೆಂದು ಕೆಲವು ಧರ್ಮಾತ್ಮರು ಗುಜರಾತ ಮತ್ತು ಬೊಂಬಾಯಿಗಳಲ್ಲಿ ಇದನ್ನು ಪ್ರಚಾರ ಮಾಡತೊಡಗಿದ್ದಾರೆ. ಈ ಬಗ್ಗೆ ಹಲವಾರು ಪುಸ್ತಿಕೆಗಳೂ ಪ್ರಕಟಿತವಾಗಿವೆ.

ನಮ್ಮ ಋಷಿ-ಮುನಿಗಳು ಗೋದಿ ಗಿಡ ರಸದ ರಹಸ್ಯವನ್ನು ಅರಿತಿದ್ದರೆಂದು ತಿಳಿಯುತ್ತದೆ. ಅವರು ಆರೋಗ್ಯರಕ್ಷಕ ಸಸ್ಯಗಳನ್ನೂ ಪೂಜಿಸುವ ಪರಿಪಾಠವಿಟ್ಟುಕೊಂಡಿದ್ದರು. ತುಳಸಿ, ಬೇಲಪತ್ರ ಚಂದನ, ಗಂಗೋದಕ, ಗೋಮೂತ್ರ, ಎಳ್ಳು, ಜೇನು, ಧೂಪ—ದೀಪ, ರುದ್ರಾಕ್ಷಿ—ಇವೆಲ್ಲವೂ ಪೂಜನೀಯವೇ. ಪೂಜೆಗಳಲ್ಲಿ ಜೋಳವನ್ನಿಡುವುದು ಜೋಳ ಬಿತ್ತಿ ಅದರ ಗಿಡ ಬೆಳೆಸುವುದೂ ಪೂಜೆಯ ಒಂದು ವಿಧಾನ. ಆಟಿಯ ಹುಣ್ಣಿಮೆಗೆ ಮೊದಲು ಹುರುಳಿ ಬಿತ್ತಿ ಹುಣ್ಣಿಮೆಯ ದಿನ ಅದರ ಸಸಿಯನ್ನು ಹೊಸ್ತಿಲಿಗಿಟ್ಟು ಪೂಜಿಸುವ ಪರಿಪಾಠವೂ ಕೆಲವೆಡೆಯಿದೆ. ಗೋದಿ—ಜೋಳಗಳಲ್ಲಿ ಹೆಚ್ಚಿನಂತರವಿಲ್ಲ. ಜೋಳದ ಸಸಿಗಳಲ್ಲಿ ಸಂಜೀವಿನೀ ಶಕ್ತಿ ಹೆಚ್ಚಿರಬಹುದು; ಆದುದರಿಂದಲೇ ಅದಕ್ಕೆ ಪೂಜೆಯಲ್ಲಿ ಪ್ರಧಾನತೆ ದೊರೆತಿರ ಬಹುದು. ಕಾಲಕ್ರಮೇಣ ಪೂಜೆಗಳಲ್ಲಿ ಮಾತ್ರ ಅವನ್ನು ಉಳಿಸಿಕೊಂಡೆವು; ಆರೋಗ್ಯ ರಕ್ಷಣೆಗೆ ಬಳಸುವುದನ್ನು ಮರೆತು ಬಿಟ್ಟೆವು.

●●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 32

NAVAYUGA

22—4—1971

ರಾಜ್ಯಕೀಯ ಒಡಂಬಡಿಕೆ

ದೇವದಾನವರಲ್ಲಿ ಸಾವಿರಾರು ಯುದ್ಧಗಳಾದುವು. ಅವರು ಒಬ್ಬರಿನ್ನೊಬ್ಬರ ರಕ್ತ ಪಿಪಾಸುಗಳಾಗಿದ್ದರು; ಆದರೆ ನಿರಂತರ ಹೋರಾಟದಿಂದ ಅವರಿಬ್ಬರಿಗೂ ಸಾಕಾಯ್ತು. ಸಮರದಿಂದ ಸಂಭವಿಸಬಹುದಾದ ಮೃತ್ಯು ಪೀಡೆಯನ್ನು ಗೆಲ್ಲುವುದೆಂತು ಎಂದು ಅವರಿಬ್ಬರೂ ಯೋಚಿಸಿದರು. ಕೊನೆಗೆ. ಸಮುದ್ರದಿಂದ ಅಮೃತವನ್ನು ತೆಗೆದು ಸೇವಿಸಿ ಅಮರರಾಗಬಾರದೇಕೆ ಎಂದು ಇಕ್ಕಡೆಯವರಿಗೂ ಹೊಳೆಯಿತು.

ಈ ಉಪಾಯ ಉತ್ತಮವೆಂದಿಬ್ಬರಿಗೂ ಅನ್ನಿಸಿತು. ಆದರೆ, ದೇವತೆಗಳಾಗಲೀ ದಾನವರಾಗಲೀ ತಾವು ಏಕಪಕ್ಷೀಯವಾಗಿ ಅಮೃತವನ್ನು ಹೊರತೆಗೆಯಲು ಅಶಕ್ತರೆಂದುಕೊಂಡರು. ಈ ಮಹಾಕಾರ್ಯದಲ್ಲಿ ಒಬ್ಬರಿಗೆ ಇನ್ನೊಬ್ಬರ ಸಹಾಯ ಅನಿವಾರ್ಯವೆನಿಸಿತು. ಮತ್ತಿನ್ನೇನು? ಆಜನ್ಮ ಶತ್ರುಗಳು, ಹೃದಯಾಂತರಾಳದಲ್ಲಿ ಹಗೆತನದುರಿಯನ್ನು ಮುಚ್ಚಿಟ್ಟು ಪರಸ್ಪರರಲ್ಲಿ ಪ್ರೇಮ ತೋರಿಸಲಾರಂಭಿಸಿದರು. ಇಬ್ಬರೂ ದಿನದಿನವೂ ಹತ್ತಿರ ಬರತೊಡಗಿದರು; ಒಬ್ಬರು ಇನ್ನೊಬ್ಬರ ಮಾತನ್ನು ನಂಬಿದಂತೆ ತೋರಿಸತೊಡಗಿದರು. ಪಾರಸ್ಪರಿಕ ಹಿತಕ್ಕೆಂದು ಒಂದು ದಿನ ದೇವದಾನವರು ಮೇರು ಪರ್ವತದಲ್ಲಿ ಸಭೆ ಸೇರಿದರು.

"ಅಮೃತವನ್ನು ಮಥಿಸಿ ಅದನ್ನು ಕುಡಿಯೋಣ, ಅಮರರಾಗೋಣ, ಏಕೀಭೂತರಾಗಿ ಸರಕಾರ ರಚಿಸಿ ಜನಪಾಲನಾರತರಾಗೋಣ. ಸುಖದಿಂದ ಇರೋಣ. ನಾವಿಬ್ಬರೂ ಜಗಳವನ್ನು ಎಲ್ಲ ಕಾಲದಲ್ಲೂ ಬಿಟ್ಟುಬಿಟ್ಟು, ಧನ ಮೋಹವನ್ನು ತ್ಯಜಿಸಿ, ಅದನ್ನು ಒಂದಾಗಿ ಉಪಭೋಗಿಸೋಣ. ಪರಸ್ಪರ ಸ್ನೇಹಸಂವರ್ಧನೆಯಿಂದಲೇ ನಮ್ಮ ನಮ್ಮ ಸುಖವಿದೆಯೆಂಬುದನ್ನು ನಾವು ಕಂಡುಕೊಳ್ಳೋಣ. ನಮ್ಮ ಹಿಂದಿನ ಶತ್ರುತ್ವವನ್ನೆಲ್ಲ ಮರೆತು ಬಿಡೋಣ; ಮುಂದೆಂದೂ ಹಗೆತನ ಸಾಧಿಸದಿರೋಣ. ತ್ರಿಲೋಕ ಪ್ರಾಪ್ತಿಯಿಂದಲಾಗಲಿ, ಮುಕ್ತಿ ಅಥವಾ ಅದಕ್ಕೂ ಮಿಗಿಲಾದ ವಸ್ತು ಕೈವಶವಾದದ್ದರಿಂದಾಗಲೀ ದೊರಕಬಹುದಾದ ಸುಖಕ್ಕಿಂತ ವೈರ್ಯತ್ಯಾಗದಿಂದ ಲಭಿಸುವ ಸುಖವು ಸಾವಿರಪಾಲು ಹೆಚ್ಚಿನದು" — ಈ ರೀತಿ ದೇವದಾನವ ಸಭೆಯಲ್ಲಿ ಗೊತ್ತುವಳಿಯೊಂದು ಸರ್ವಾನುಮತದಿಂದ ಸ್ವೀಕಾರವಾಯ್ತು.

ನಿರ್ಣಯದಂತೆ ದೇವದಾನವರು ಒಂದಾಗಿ ಅತ್ಯಂತ ಪ್ರೇಮದಿಂದ ಸಮುದ್ರ ಮಂಥನ ಕಾರ್ಯಕ್ಕೆ ಉಜ್ಜುಗಿಸಿದರು. ಅಮೃತ ಸಿಕ್ಕೇ ಸಿಕ್ಕಿತು. ಆದರೆ. ಇಕ್ಕಡೆಯವರ ಮನಸ್ಸು ಕೊಳಕಾಗಿತ್ತು. ದೇವತೆಗಳು ದೈತ್ಯರನ್ನೂ ದೈತ್ಯರು ದೇವತೆಗಳನ್ನೂ ಅಮೃತದಿಂದ ವಂಚಿತರಾಗಿರಿಸಲು ಬಯಸಿದ್ದರು. 'ಏನು ಮಾಡಲಿ, ಹೇಗೆ ಮಾಡಲಿ?'— ಇಬ್ಬರಿಗೂ ಏಕಪ್ರಕಾರದ ಚಿಂತೆ. ದೇವತೆಗಳು ಸಹಜವಾಗಿ ಬೋಳೇ ಸ್ವಭಾವದವರು. ಅವರನ್ನು ಮೋಸಗೊಳಿಸುವುದು ಸುಲಭವೆಂದು ತಿಳಿದು ದೈತ್ಯರು ಯೋಚಿಸಿದರು. 'ಅಮೃತಕಲಶವನ್ನು ಮುಹೂರ್ತ ಬರುವ ವರೆಗೆ ಒಂದೆಡೆ ಇಡಬೇಕು. ನಾವು ಹೊರಟು ಹೋಗೋಣ. ಆಗ ದೇವತೆಗಳೂ ಅಲ್ಲಿಂದ ಹೊರಡುತ್ತಾರೆ ಅನಂತರ ದೇವತೆಗಳಿಗೆ ಅರಿವಾಗದಂತೆ ರಾತ್ರಿಯೋ ನಾಳೆಯೋ ಇಲ್ಲಿ ಬಂದು ಅಮೃತವನ್ನು ನಾವೇ ಕುಡಿದು ಬಿಡೋಣ.

ಹೀಗೆ ನಿರ್ಣಯಿಸಿದ ದಾನವರು ದೇವತೆಗಳ ಬಳಿ ಬಂದು ನಿವೇದಿಸಿಕೊಂಡರು. "ದೇವತೆಗಳಿರಾ, ನಮ್ಮ ಕಾರ್ಯ ಸಫಲವಾಯ್ತು. ಜತೆಗೆ ನಾವು ಸಾಕಷ್ಟು ಆಯಾಸಗೊಂಡಿದ್ದೇವೆ. ಆದುದರಿಂದ ಈಗ ನಾವೆಲ್ಲರೂ ನಂನಮ್ಮ ಮನೆಗಳಿಗೆ ತೆರಳಿ, ವಿಶ್ರಾಂತಿ ಪಡೆಯೋಣ. ಒಳ್ಳೆಯ ಮುಹೂರ್ತವೊಂದನ್ನು ಗೊತ್ತುಮಾಡಿ, ಆ ಹೊತ್ತು ಮತ್ತೆ ಇಲ್ಲಿ ಸೇರೋಣ. ಈ ಅಮೃತವನ್ನು ಸರಿಸಮವಾಗಿ ಹಂಚಿ ಕುಡಿದು ಅಮರರಾಗೋಣ."

ದೇವತೆಗಳ ಮನಸ್ಸೂ ಹುಳ್ಳಹುಳ್ಳಗಾಗಿತ್ತು. ಅವರು ಮಾತನಾಡದೆ ದೈತ್ಯರ ಮಾತಿಗೊಪ್ಪಿದರು. ಒಬ್ಬರಿನ್ನೊಬ್ಬರಿಗೆ ತಮ್ಮ ವರ್ತನೆಯಲ್ಲಿ ಸಂದೇಹ ತೋರಗೊಡದೆ ನೆಟ್ಟಗೆ ಅಲ್ಲಿಂದ ದೂರ ನಡೆದರು. ತುಸು ಮುಂದುವರಿದಿದ್ದ ದೈತರು ರಾಹುವಿನೊಡನೆಂದರು—"ನೀನೀಗಲೇ ವೇಷ ಬದಲಿಸಿ ಹೋಗು; ಯಾರಿಗೂ ಅರಿಯದಂತೆ ಅಮೃತ ಕಲಶ ಕದ್ದು ತಾ. ಮನಸ್ಸಿಗೆ ಮನಸ್ಸೇ ಸಾಕ್ಷಿಯೆನ್ನುತ್ತಾರೆ.

ದೈತ್ಯರೊಂದು ದಾರಿ ಹಿಡಿದ ಬಳಿಕ ದೇವತೆಗಳೂ ಬೇರೆ ದಾರಿ ಹಿಡಿದಂತೆ ಮಾಡಿದರು. ಅವರು ಅಂದುಕೊಂಡರು—'ದೈತ್ಯರು ಬಂದು ಅಮೃತ ಕಲಶ ಕದ್ದೊಯ್ದರೇನು ಗತಿ? ಅವರು ನಮ್ಮ ಹಗೆಗಳು ಅವರಿಗೆ ಅಮೃತ ಕೊಡಲೇಬಾರದು. ಗೊತ್ತುವಳಿಗಳಾದರೂ ಏಕೆ? ಬದುಕುವುದಕ್ಕೆ ಮತ್ತು ಸುಖಪಡುವುದಕ್ಕೆ. ಸಾಯುವುದಕ್ಕಾಗಲೀ ದುಃಖಾನುಭವಕ್ಕೆಂದಾಗಲೀ ರಾಜ್ಯಕೀಯ ಒಡಂಬಡಿಕೆ ಮಾಡಿಕೊಳ್ಳುವುದುಂಟೆ?" ದೇವತೆಗಳೆಲ್ಲರ ಅಭಿಪ್ರಾಯ ತಿಳಿದ ದೇವಗುರು ಬೃಹಸ್ಪತಿಯೆಂದನು—"ನಿಮ್ಮ ಎಣಿಕೆ ನಿಜವಾದುದು. ಆದುದರಿಂದ ಈಗಲೇ ಅಮೃತ ಕಲಶವನ್ನು ಎತ್ತಿ ತನ್ನಿರಿ. ಮೇರು ಪರ್ವತದ ಕಣಿವೆಯಲ್ಲಿ ಅಡಗಿಕೊಂಡು ಅಮೃತಪಾನ ಮಾಡಿರಿ. ಇದು ದೈತ್ಯರಿಗೂ ತಿಳಿಯುವುದಿಲ್ಲ. ತನಗೆ ಲಾಭ. ಶತ್ರುವಿಗೆ ಹಾನಿ ಸಂಭವಿಸುವಂತೆ ಮಾಡುವುದೇ ರಾಜ್ಯಕೀಯ ನಡಾವಳಿ."

ಗುರುವಿನ ಆದೇಶದಂತೆ ದೇವತೆಗಳು ಹಿಂದೆ ನಡೆದು ಅಮೃತಕಲಶವನ್ನು ತಂದರು. ಅದೇ ಕಲಶಕಾಗಿ ಹೊಂಚು ಹಾಕುತ್ತ ಅಡಗಿಕೊಂಡಿದ್ದ ರಾಹುವು ಇದನ್ನೆಲ್ಲ ಕಂಡನು. ಸಾವಿರ ಸಂಖ್ಯೆಯ ದೇವತೆಗಳೊಡನೆ ಏಕಾಕಿಯಾಗಿ ಹೋರಾಡುವ ಎಂಟೆದೆ ಆತನಿಗೆಲ್ಲಿಂದ ಬರಬೇಕು? ತತ್ಕ್ಷಣ ಓಡಿಹೋಗಿ, ತನ್ನವರನ್ನೆಲ್ಲ ಕರೆತಂದು ಅವರನ್ನು ಅಮೃತ ವಂಚನೆಯಿಂದ ಬದುಕಿಸಬೇಕೆಂದೊಮ್ಮೆಯಾತನಿಗನಿಸಿತು. ಆದರೆ, ಆತನ ಸ್ವಾರ್ಥವದನ್ನು ಅದುಮಿತು. "ದೇವತೆಗಳ ಗುಂಪಿನಲ್ಲಿ ವೇಷ ಮರೆಸಿಕೊಂಡಿರುವ ನಾನೂ ಸೇರಿಕೊಂಡರೆ. ಗುರುತು ಹತ್ತದು. ಆದುದರಿಂದ ದೇವತೆಗಳೊಡನೆ ಕುಳಿತುಬಿಟ್ಟ ನನಗೆ ಅಮೃತ ಸಿಕ್ಕೇ ಸಿಕ್ಕುವುದು. ನಾನೀ ಸಂಗತಿಯನ್ನು ದೈತ್ಯರಿಗೆ ತಿಳಿಸಿ ಅವರನ್ನು ಕರೆತಂದರೂ. ಯುದ್ಧ ಮತ್ತೊಮ್ಮೆ ನಡೆದರೂ ದೈತ್ಯರೇ ಪರಾಜಿತರಾಗುವುದು ಸಹಜ. ಏಕೆಂದರೆ ದೇವತೆಗಳು ಸಾಮಾನ್ಯವಾಗಿ ವಿಜಯಶೀಲರು. ಹಾಗಾದರೆ, ಉಳಿದ ದೈತ್ಯರಂತೆಯೇ ನನಗೂ ಅಮೃತವಿಲ್ಲದಂತಾಗುವುದು. ಕೈಗೊದಗಿದ ಸದವಕಾಶವನ್ನು ಸಮುಪಯೋಗಪಡಿಸಿಕೊಂಡು ಅಮರನಾಗದೆ ಹೋದರೆ, ಅದುವೇ ಮಹಾ ಮೂರ್ಖತನವಾಗುವುದು.' —ಹೀಗೆ ನಿರ್ಣಯಿಸಿದ ಮಾರು ವೇಷದ ರಾಹು ದೇವತೆಗಳ ಗುಂಪಿನಲ್ಲಿ ತೂರಿ ಹೋದನು.

ಮೇರು ಪರ್ವತದ ಕಣಿವೆಯಲ್ಲಿ ದೇವತೆಗಳು ಸೇರಿದರು; ಅಮೃತಪಾನ ಮಾಡಿದರು. ಹಂಚುವ ವೇಳೆ ರಾಹುವಿಗೂ ಅಮೃತ ಬಾಯಿ ಸೇರಿತು; ಆದರೆ, ಆಕ್ಷಣವೇ ಆತನು ದೈತ್ಯನೆಂದು ಗುರುತು ಹಿಡಿಯಲ್ಪಟ್ಟುದರಿಂದ ಹೊಟ್ಟೆಗೆ ಇಳಿಯಲಿಲ್ಲ. ಆತನ ಕುತ್ತಿಗೆಯನ್ನು ದೇವತೆಗಳು ತುಂಡರಿಸಿದರು.

ತಮ್ಮನ್ನು ವಂಚಿಸಿ ದೇವತೆಗಳು ಅಮೃತಪಾನ ಮಾಡಿದರೆಂಬ ಸಂಗತಿ ದೈತ್ಯರಿಗೆ ತಿಳಿಯಿತು. ಅವರು ಬಹಳ ಕಸಿವಿಸಿಗೊಂಡರು. ತಮ್ಮ ಗೊತ್ತುವಳಿಯ ಆಧಾರದ ಮೇಲೆ ದೇವತೆಗಳೊಡನೆ ದೂರಿದರು. ದೇವತೆಗಳು ಹೇಳಿದರು—'ನಿಮ್ಮ ರಾಹುವು ಅಮೃತ ಕಲಶವನ್ನು ಅಪಹರಿಸಲೆಂದು ಬಂದನು. ಹಾಗಾಗಿ ಗೊತ್ತುವಳಿಯನ್ನು ಮೊದಲಿಗೆ ಮುರಿದವರು ನೀವು; ನಾವಲ್ಲ.' ರಾಹುವನ್ನು ಅಮೃತ ಕದ್ದು ತರಲು ತಾವೇ ಕಳಿಸಿದ್ದು ಎಂಬುದರಿಂದ ದೈತ್ಯರಾದರೂ ಏನು ಮಾಡಿಯಾರು? ಅಮೃತ ದೊರಕದ ದುಃಖದಿಂದ ತಪ್ತರಾಗಿ ತಲೆತಗ್ಗಿಸಿ ಅಗಲಿ ಹೋದರು.

ರಾಹುವು ಕದಿಯ ಬಂದದ್ದು ದೇವತೆಗಳಿಗೆ ತಿಳಿದಿರಲಿಲ್ಲ; ಆತನು ಅಮೃತದಾಸೆಯಿಂದ ತಮ್ಮ ಗುಂಪಿನಲ್ಲಿ ಸೇರಿಕೊಂಡುದರಿಂದ ದೇವತೆಗಳಿಗೆ ತಮ್ಮ ಸಮರ್ಥನೆಗೊಂದು ನೆಪ ದೊರೆಯಿತು; ಅದು ಸತ್ಯವೂ ಇತ್ತು. ಹೀಗೆ ಅಮರರಾದ ದೇವತೆಗಳೊಡನೆ ಯುದ್ಧ ಮಾಡಿ ಗೆಲ್ಲುವುದು ದೈತ್ಯರಿಗೆ ಮುಂದೆಂದೂ ಸಾಧ್ಯವಾಗಲಿಲ್ಲ.

●●

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

ನವಯುಗ ಪ್ರೆಸ್, ಉಡುಪಿ, ದ.ಕ.

ಮಹೀಶೂರ ರಾಜ್ಯಕೀಯ ನಾಟಕಂ

ಕರ್ನಾಟಕ ಉರುಸ್ ಮೈಸೂರಿನಲ್ಲಿ ಇಂದಿರಾ ಗಾಳಿ ಬೀಸಿದ್ದರಿಂದ ಇಪ್ಪತ್ತೇಳರಲ್ಲಿ ಇಪ್ಪತ್ತೇಳು— ಸೆಂಟ್ ಪರ್ ಸೆಂಟು —ಎಂಪಿ ಸ್ಥಾನಗಳು (ಆಗ) ಜಗಜ್ಜೀವನರಾಮರ ಬುಟ್ಟಿಗೆ ಬಿದ್ದುವು. ರಾಜ್ಯಕೀಯ ಗಾಳಿಯೆತ್ತ ಬೀಸುತ್ತಿದೆಯೆಂದು ಅರಿತುಕೊಂಡ ರಾಜ್ಯನೀತಿ ವ್ಯಾಪಾರಿಗಳು ವೀರೇಂದ್ರರಿಗೆದುರು ನಿಂತರು— “ನೀವು ಸೋತಿದ್ದೀರಿ; ನಾಳೆ ನಾವೂ ಸೋಲಬೇಕಾದೀತು. ಆಗೇನು ಮಾಡಬೇಕು? ಆದ್ದರಿಂದ ನಮಗೆ ನಿಮ್ಮಲ್ಲಿನ ವಿಶ್ವಾಸ ಈಗ ತಾನೇ ಹಾರಿಹೋಯಿತು.”

'ತುಸ ನಿಲ್ಲಿ. ಈಟೊಂದು ಜಲ್ದೀ ಯಾಕಾಂತ ...'

“ನಿಲ್ಲೋದೂ ಇಲ್ಲ; ಕೂರೋದೂ ಇಲ್ಲ. ಸಿದ್ಧವೀರಪ್ಪನವರು ಇಂಡಿಕೇಟ್ ಮುಂಗೇಟು ವಿಶಾಲವಾಗಿ ತೆರೆದಿದ್ದಾರೆ; ನಮ್ಮ ಸ್ವಾಗತಕ್ಕೆ ಕಾದಿದ್ದಾರೆ ಜಲ್ದೀ ಮಾಡದಿದ್ರ ಗೇಟು ಮುಚ್ಚಿತ್ತು.'

'ಸರಿ. ನಿಮ್ಮ ಇಚ್ಛೆ. ನಾನೇನು ಮಾಡಲಿಕ್ಕಾಗುತ್ತೆ?'

o o o

ವೀರೇಂದ್ರರ ರಾಜಿನಾಮೆ. ಉಸ್ತುವಾರಿ ಸರಕಾರವಾಗಿ ನಿಲ್ಲಲು ರಾಜ್ಯಪಾಲರ ಮನವಿ. ಸಿದ್ಧವೀರಪ್ಪನವರಿಗೆ ಕರ.

“ಬಹು ಪರಾಕ್, ನನಗೆ ಬಹುಮತವಿದೆ; ನಾನು ಸರಕಾರ ರಚಿಸಿಯೇ ತೀರುತ್ತೇನೆ. ಗಾಬರಿ ಬೇಡ;'—ಭರವಸೆ.

'ಪಾಯಸದಲ್ಲಿ ಪಾಪಾಸು. ದೇವರಾಜರ ಗುಡುಗು. ದೀಕ್ಷಿತರ ಮಿಂಚು. ಯುವಜನರ ಗರ್ಜನೆ; ಹಳೆಯ ಹುಲಿಗಳ ದಂತದಂಶನ. ಆಯೊ ದೀಕ್ಷಿತ್, ಗಯೊ ದೀಕ್ಷಿತ್. ಅರಸು—ಅಪ್ಪ ದಿಲ್ಲಿ ಚಲಾವ್. ಜತೆಗೆ ಕೆಲವು ಬಾಡಿ ಗಾರ್ಡ್ಸ್. ಊಹ್ಞೂಂ ಪ್ರಧಾನಿ ಇಂದಿರಾ ಗಾಂಧಿ ಮೌನ; ಜಗಜ್ಜೀವನ ಬಾಯಿ ಬಂದು. 'ಕೆಲರು ಸಕಾರವ ರಚಿಸೆಂಬರು; ಕೆಲರಾಗದೆಂಬರಯ್ಯಾ, ನಿಮ್ಮೊಳಗೆ ನಿಶ್ಚಯವಾಗದಿರೆ ನೃಪರಾರ್ಯವೆಂತಹುದು?'

'ಶಾಸಕರನ್ನು ಕೇಳಿ, ಎಲ್ಲರೂ ಸರಕಾರ ಬೇಕು ಅನ್ನುತ್ತಾರೆ. ಕೆಲವರು ಬೇಡ ಅಂದರೂ ಬಹು ಮತಾಭಿಪ್ರಾಯ ನಮ್ಮದೇ.'

'ಆಗದಾಗದು. ಇದೀಗ ತಾನೇ ಹುರಿ ಮಾಡಿದ ಮೀಸೆ ಮುಸುಳಿಸೀತು ನೀವು ಸರಕಾರ ರಚಿಸ ಹೇಳಿದರೆ ಪಕ್ಷ ಅಕ್ಕ ಸಕ್ಕ ಅಸ್ತವ್ಯಸ್ತವಾದೀತು.'

'ನಾವು ಶಾಸಕರು; ಸರಕಾರ ರಚಿಸುವುದು ನಮ್ಮ ಜವಾಬ್ದಾರಿ. ನಿಮ್ಮನ್ನಾರು ಕೇಳುತ್ತಾರೆ?'

'ಓಹೋ, ಹಾಗೋ! ಮಾಡಿ ನೋಡೋಣ, ಮುಂದಿನ ಚುನಾವಣೆಗೆ ಟಿಕೇಟು ಯಾರು ಕೊಡಬೇಕು ಗೊತ್ತಿಲ್ಲ?'

'ಸಿದ್ಧ ವೀರಪ್ಪನವರಿಗೆ ಏಕ್ ದಿನ್ ಕಾ ಸುಲ್ತಾನನಾದ್ರೂ ಪರ್ವಾಗಿಲ್ಲ ಎಂಬ ಆಶೆ.'

'ಹಾಗೆಲ್ಲ ಅನ್ನಬೇಡಿ, ಬೇಕಾದ್ರೆ ಅವ್ರೇ ಸುಲ್ತಾನರಾಗಲಿ; ಸರಕಾರ ರಚಿಸಬೇಕು, ಅಷ್ಟೆ.'

'ಇಲ್ಲ, ಈ ಮಾತು ಮೊದಲೇ ಹೇಳಬಹುದಿತ್ತಲ್ಲ, ಕಾಲಮಿಂಚಿ ಹೋಯ್ತು. ನೋಡೋಣ....'

o o o

'ಬೆಂಗಳೂರಿನ ರಾಜ್ಯಕೀಯ ನಾಟಕದ ಅಂಕದ ಪರದೆ ಬೀಳಲಿಲ್ಲ; ಸದ್ಯ ಬೀಳುವ ಲಕ್ಷಣವೂ ಇಲ್ಲ. ಆದ್ದರಿಂದ ವಿಧಾನ ಸಭೆ ಅಮಾನತ್ತು ಮಾಡಿ, ನಿಮ್ಮ ಶಾಸನ ಕೂಡಲೇ ಘೋಷಿಸುವುದು'—ಧರ್ಮವೀರರ ವರದಿ.

ಮರುಕ್ಷಣ, ಇಂದಿರಾ ಸಂಪುಟದಿಂದ ಪರಿಶೀಲನೆ, ಶಿಫಾರಸು, ರಾಷ್ಟ್ರಪತಿ ಘೋಷಣೆ

o o o

'ಇನ್ನು ಹಿಂದಿನಂತಲ್ಲ. ಎಲ್ಲರೂ ಸಮರ್ಪಕವಾಗಿ ಕೆಲಸ ಮಾಡಬೇಕು; ಕರ್ತವ್ಯ ಲೋಪ ಅಕ್ಷಮ್ಯ. ರಾಷ್ಟ್ರಪತಿ ಆಳಿಕೆಯೆಂದರೆ, ತುಕ್ಕು ಹಿಡಿದ ಯಂತ್ರಕ್ಕೆ ಎಣ್ಣೆ ಸುರಿಯುವ ಮಧ್ಯಾವಧಿ....'

'ಯಸ್ ಸಾರ್ ...'

'ಸರ್,'

'ಏನು? ಗೌಡರೆ?'

'ನಾವು ವಿಧಾನ ಸಭೆಯ ವಿಸರ್ಜನೆ ತಡೆಯುವ ಭಗೀರಥ ಪ್ರಯತ್ನ ಮಾಡಿದ್ದೇವೆ. ನಮ್ಮ ಸ್ವತಂತ್ರ, ಪಕ್ಷೇತರ, ಜನಸಂಘ ಮತ್ತಿತರ ಇಪ್ಪತ್ತು ಶಾಸಕರಿದ್ದೇವೆ. ವೀರೇಂದ್ರ ಪಾಟೀಲರು ತೊಂಬತ್ತರೊಡನೆ ನಮಗೆಬೆಂಬಲ ನೀಡುತ್ತಾರೆ.'

“ಬಹಳ ಸಂತೋಷ. ನಿಮ್ಮ ಪ್ರಯತ್ನಕ್ಕೆ ಯಶಸ್ಸು ಸಿಗಲಿ. ಆದರೆ ನೋಡಿ, ಸರಕಾರ ರಚನೆಯೆಂದರೆ ಬೊಂಬರಾಟವಲ್ಲ. ಪಾಟೀಲರು ತಮ್ಮ ಪಟ್ಟಿಯೊಡನೆ ಹಾಜರಾಗಲಿ. ನಿಮ್ಮ ಪಟ್ಟಿಯನ್ನೂ ಕೊಡಿ. ಇದು ಅನುಭವದ ಮಾತು. ಬೇಸರಿಸಬೇಡಿ.'

'ಆಯಿತು ಮಹಾಸ್ವಾಮಿ, ಇನ್ನೊಂದೆರಡು ದಿನ ಕಳೆಯಲಿ.”

“ದಿನವೆಲ್ಲ ದೂಡಬಾರದು; ಏನಾಗುವುದಿದ್ದರೂ ಬೇಗನೇ ನಡೆಯಬೇಕು. ಮೇಯೊಳಗೆ ಚುನಾವಣೆ ನಡೆಯಬೇಕಾದರೆ ....'

'ಜನಪ್ರಿಯ ಸರಕಾರ ರಚನೆಗೆ ನಮ್ಮ ಕೈಲಾದ ಪ್ರಯತ್ನ ಮಾಡಿಯೇ ತೀರುತ್ತೇವೆ ಸಾರ್ ....”

“ಹ್ಞೂಂ....'

o o o

ದಿಲ್ಲಿಯಲ್ಲಿ ಜಗಜ್ಜೀವನರಾಮರ ಕಾಂಗ್ರೆಸು ಸಂಜೀವಯ್ಯನವರ ಕಾಂಗ್ರೆಸ್ಸಾಯಿತು. 'ಉತ್ತರ ಪ್ರದೇಶ, ಗುಜರಾತಗಳಲ್ಲಿ ಇಂಡಿಕೇಟಿಗೆ ಸರಕಾರ ರಚಿಸಲು ಅವಕಾಶ ನೀಡಿದ್ದೀರಿ. ನಮಗೆ ಮಾತ್ರ ಕೊಡಲಿಲ್ಲ ಇದು ಪಕ್ಷಪಾತ.'

'ನೋಡಿ ಸಿದ್ವೀರಪ್ಪನವ್ರೇ'

'ಏನು?'

'ಶಾಸಕ—ಸಂಸ್ಥೆಗಳ ನಡುವೆ ಹೊಡೆದಾಡಿದರೆ ಮುಂದಿನ ಚುನಾವಣೆಯೊದೀತು? ಆದ್ದರಿಂದ ದೇವರಾಜರೇ ಸರಿ.”

“ಮತ್ತೇನೂ ಇಲ್ಲ. ನನಗೊಂದು ಬಾರಿ ಮುಖ್ಯಮಂತ್ರಿಯಾಗಲು ...'

'ಅವಕ್ಕೇನಂತೆ, ಮುಂದಿನ ಬಾರಿ...'

'ಅವಕ್ಕೆ ಈಗಲೇ ಸಿಂಹಾಸನ ಗಟ್ಟಿ ಮಾಡಿಬಿಡೋಣಾಂತಿದ್ದೆ.”

'ಅದು ಸರೀನ್ನಿ. ಆದ್ರೆ ನೋಡಿ ಈಗ ಸರಕಾರ ರಚಿಸೋದು ಬೇಡ್ವಾಂತ ಪಕ್ಷೇತರರೆಲ್ಲ ಬೊಬ್ಬಿಡ್ತಿದ್ದಾರೆ; ಪಕ್ಷಾಂತರಿಗಳೂ ನಮ್ಮ ಪಕ್ಷದ ಸದಸ್ಯತನ ಕೊಡಬಿ ಸುಮ್ಮನಿರಿಸಿದ್ದಾರೆ. ಹಾಗಿರುವಾಗ, ನಾವೇನಾದರೂ ಅವರಿಗೆ ಆದೇಶ ನೀಡಿ, ಆದರಿಂದ ನಾಳೆ ಅನಾಹುತ ನಡೆದರೆ ...”

'ಏನು ಬೇಕಾದರೂ ಮಾಡಿ, ನಂಬಿ ಕೆಟ್ಟುಬಿಟ್ಟೆ ಈಗ. ನಿಮ್ಮ ಆಜ್ಞೆ ನನ್ನ ತಲೆ ಮೇಲೆ.'

'ನೋಡೋಣ ...'

o o o

'ನಾವು ಸರಕಾರ ರಚಿಸುತ್ತೇವೆ ಸಾರ್'

'ಸರಿ. ನಿಮ್ಮ ಬೆಂಬಲಿಗರ ಪಟ್ಟಿ ಸಹಿ ಸಮೇತ, ನಿಮ್ಮನ್ನು ನಾಯಕರನ್ನಾಗಿ ಆರಿಸಿದ ಗೊತ್ತುವಳಿಯೊಡನೆ ತನ್ನಿ.'

'ಜೀ ಹುಜೂರ್, ನಾವು ಸರಕಾರ ರಚಿಸಲು ಸಿದ್ಧರು'

'ಹ್ಞೂಂ ನೀವೂ ಬೆಂಬಲಿಗರ ಪಟ್ಟಿ ಸಮೇತ ಬನ್ನಿ.'

o o o

'ಇದು ಭಾರೀ ಕುಳ. ಅತ್ತ ಇತ್ತ ತಲ್ಲಾಡೋದಿಲ್ಲ ಸರಕಾರ ರಚನೆಯೆಂದರೆ ತನಗೆ ಖುಶಿಯಿಲ್ಲ ಅಂತೆ ಅದು ತನಗೆ ಖುಶಿಯಲ್ಲಿ ಮಾಡ್ತಿದ್ನೇನಂತೆ?'

o o o

'ನಾವೇ ಏಕೆ ಸರಕಾರ ರಚನೆ ಮಾಡಬಾರದು?'

'ಪೂರಸ್ತು ಸಂಖ್ಯೆಯಿಲ್ಲ. ಅಲ್ಲಿ ಸೀಟು ದೊರೆಯುವುದಿಲ್ಲ. ಇಲ್ಲಿ ಮರಳಿದ್ದಾರೆ ಪನ್ನೆ ಗಿಣಿಗೆ ಹೇಳಿದಾಗ ಹೇಳ್ರಿ ಗರಿಗೆದರಿ ಹಾರಿಯೇ ಹೋದ್ರಲ್ಲಾ?'

'ಅದು ಸರಿ. ಅವರನ್ನು ತೆಗೆದು ಕೊಳ್ಳಲೇ ಬಾರದು.'

'ಮತ್ತೀಗ ಏನು ಮಾಡೋಣ?'

'ತುಸು ಕಾದು ನಮ್ಮ ಸರಕಾರವಿಲ್ಲ ಅಂತ ಕೊನೆಯದಾಗಿ ಹೇಳಿ ಬಿಡೋಣ'

o o o

“ನಾಳೆ ಮಧ್ಯಾಹ್ನದೊಳಗೆ ಇತ್ಯರ್ಥವಾಗಬೇಕು. ನಾನು ನಿರೀಕ್ಷೆ ಮಾಡಿ ಕಾದಿದ್ದೇನೆ ಇನ್ನು ಕಾಯಲು ಸಾಧ್ಯವಿಲ್ಲ.”

'ರಾಜ್ಯದಲ್ಲಿ ಸರಕಾರ ರಚಿಸಬೇಕು—ಬೇಡವೆಂಬ ಜಿಜ್ಞಾಸೆ, ನಾಯಕತ್ವದ ಪ್ರಶ್ನೆ, ಪಕ್ಷಾಂತರಿಗಳ ಸದಸ್ಯತ್ವದ ಸಿಂಧುತ್ವ. ಈ ಮೂರು ಯಕ್ಷ ಪ್ರಶ್ನೆಗಳಿಗೆ ಉತ್ತರ ಕೊಟ್ಟು ನಾವು ಕೆಟ್ಟವರಾಗಬಯಸುವುದಿಲ್ಲ. ಆದ್ದರಿಂದ ಸದ್ಯ ಸರಕಾರ ರಚಿಸುವುದು ಬೇಡ.'

ಪಾಟೀಲರು ನಮಗೆ ಹೊರಗಿದ್ದುಕೊಂಡು ಬೆಂಬಲ ಕೊಡಬೇಕು. ಅವರೂ ಸರಕಾರದಲ್ಲಿ ಸೇರಿಕೊಂಡರೆಂದರೆ ನಮ್ಮನ್ನಾರು ಕೇಳುತ್ತಾರೆ? ಇಲ್ಲವಾದರೆ, ನಮ್ಮದೂ ಸರಕಾರ ಬೇಡ....”

'ನಮಗೆ ಒಂದೆರಡು ಜನಬೇಕು. ನೋಡೋಣ.'

'ಸ್ವಾಮಿ, ನಮಗೆ ಕಳೆದು ಹೋದ ಬಹುಮತ ಮತ್ತೆ ಬಂದಂತಿದೆ. ಆದ್ದರಿಂದ ಸಂಜೆಯ ವರೆಗೆ ಸಮಯ ನೀಡಬೇಕು.'

(ಏಳನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K

ಸಂಪುಟ : 50
ಸಂಚಿಕೆ : 32

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ರಾಷ್ಟ್ರಪತಿ ಆಳಿಕೆಗೊಂದು ಹೊಸ ಅರ್ಥಸೃಷ್ಟಿ

ರಾಜ್ಯಪಾಲ ಧರ್ಮವೀರರಿಗೆ ಈಗ ನಾಲ್ಕು ರೆಕ್ಕೆ ಮೂಡಿವೆ. ರಾಷ್ಟ್ರಪತಿ ಆಳಿಕೆಯು ಕರ್ನಾಟಕಕ್ಕೆ ಆಕಸ್ಮಿಕವಾಗಿ, ಅನಿವಾರ್ಯವಾಗಿ ಬಂದ ವರಪ್ರಸಾದವೆನಿಸುವ ಸಾಧ್ಯತೆಗಳನ್ನು ತೋರಿಸಹೊರಟಿದ್ದಾರೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭ್ರಷ್ಟಾಚಾರವೂ ಅನಿವಾರ್ಯವೋ ಏನೋ! ಪ್ರತಾಪಸಿಂಹ ಕೈರಾನರ ಪಂಜಾಬದಲ್ಲಿ ತಾಂಡವವಾಡಿದ್ದ ಭ್ರಷ್ಟಾಚಾರ—ಅತ್ಯಾಚಾರ—ಅನಾಚಾರಗಳನ್ನು ಶ್ರೀ ಧರ್ಮವೀರರು ರಾಷ್ಟ್ರಪತಿ ಆಳಿಕೆಯ ವೇಳೆ ರಾಜ್ಯಪಾಲರಾಗಿ ಮುಂದಿಲ್ಲವೆನಿಸಿದರು. ರಾಷ್ಟ್ರಪತಿ ಆಳಿಕೆಯು ಪ್ರಜಾಪ್ರಭುತ್ವಕ್ಕೆ ಮಾರಕವೆಂದು ಹೇಳಲಾಗುತ್ತಿದೆಯಾದರೂ ಸಮರ್ಥ ಅಧಿಕಾರಿಯಿಂದ ಪ್ರಜಾಸತ್ತಾತ್ಮಕ ಆಡಳಿತೆಯ ಕಲ್ಮಷಗಳ ಉಚ್ಚಾಟನೆಗೊಂದು ಸಾಧನವೆಂಬ ಭಾವನೆ ಮೂಡಿಸಿದರು. ಈಗ ಕರ್ನಾಟಕದಲ್ಲೂ ರಾಷ್ಟ್ರಪತಿಗಳ ಪ್ರತಿನಿಧಿಯಾಗಿ ಅವರು, ಜಿಲ್ಲಾಧಿಕಾರಿಗಳಿಗೆ, ಇಲಾಖೆಗಳ ಕಾರ್ಯದರ್ಶಿಗಳಿಗೆ ನೀಡಿದ ಸೂಚನೆಗಳು ಕಾರ್ಯರೂಪಕ್ಕೆ ಇಳಿದರೆ, ಬಹು ಕಾಲದಿಂದಲೂ ಮನೆಮಾತಾಗಿದ್ದ 'ಮೈಸೂರು ಲಂಚಾಸುರ'ನ ಗಂಟಲು ಮುರಿದು ಹೋಗಬಹುದು.

ಸರಕಾರದಿಂದ ದೈನಂದಿನ ಕೆಲಸವಾಗಬೇಕಾದರೂ ಸಂಬಂಧಿಸಿದ ವ್ಯಕ್ತಿ ಲಂಚ ನೀಡಬೇಕಾದ ಪ್ರಮೇಯವಿದೆಯೆಂಬುದು ಸರ್ವಜನವೇದ್ಯ. ನ್ಯಾಯ ರೀತಿಯಲ್ಲಿ ಕಟ್ಟಡದ ನಕಾಶೆ ಸಲ್ಲಿಸಿದರೂ ಲಂಚ ನೀಡದೆ ಸಕಾಲದಲ್ಲಿ ಅಪ್ಪಣೆ ಬರುವುದಿಲ್ಲ; ಬದಲು ನೂರಾರು ಅಲ್ಲಸಲ್ಲದ ಆಕ್ಷೇಪಣೆಗಳು ಬರುತ್ತವೆ. ಬಡ ಅಧ್ಯಾಪಕರ ವೇತನ ಸಂಬಂಧಿ ಬಿಲ್ಲುಗಳು ಸರಿಯಾಗಿ ಬರಬೇಕಾದರೆ ಅಲ್ಲಿ ಲಂಚ ನೀಡಬೇಕು; ನೇಮಕಗಳು ಕ್ರಮಬದ್ಧವೆನಿಸಬೇಕಾದರೆ, ನೇಮಿತ ವ್ಯಕ್ತಿ ಮೇಲಧಿಕಾರಿಗಳನ್ನು ಖುಷಿಗೊಳಿಸಬೇಕು; ಆಸ್ಪತ್ರೆಗಳಲ್ಲಿ ಹಾಸುಗೆ ಸಿಗಬೇಕಾದರೆ, ಯೋಗ್ಯ ಚಿಕಿತ್ಸೆ ದೊರಿಯಬೇಕಾದರೆ, ಸರಕಾರವೊದಗಿಸುವ ಔಷಧಿಗಳು, ನರ್ಸ್‌ಗಳ ಸೇವೆ ದೊರೆಯಬೇಕಾದರೆ, ಯಥಾಶಕ್ತಿ ನಡಕೊಳ್ಳಬೇಕು— ಇವೆಲ್ಲ ಕೆಲವು ಉದಾಹರಣೆಗಳು. ಯಾವ ಇಲಾಖೆಯಿಂದಲೇ ಇರಲಿ, ನಾಗರಿಕರ ಸೇವೆಯಾಗಬೇಕೆಂದಿದ್ದರೆ ಕೈ ಬೆಚ್ಚಗೆ ಮಾಡಲೇ ಬೇಕು. 'ತಾವು ನೌಕರರೇ ಅಲ್ಲ; ಜನತಾ ಪ್ರಭುಗಳೇ ತಾವು' ಎಂಬ ವರ್ತನೆ ಅಧಿಕಾರಿಗಳದ್ದು. ಇದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ. ಎಲ್ಲೆಡೆ ವ್ಯಾಪ್ತವಾದ ರೋಗ.'ಪಾಪ. ಬಡಪಾಯಿ ಅಧಿಕಾರಿ ಎಂದು ಅಧಿಕಾರಿಯ ಮೇಲೆ ಕರುಣೆ ತೋರುವವರೇ ಎಲ್ಲರೂ.ಯಾರಿಂದ ಅಧಿಕಾರಿ ಹಣವನ್ನು ಕಿತ್ತಿದ್ದಾನೋ ಆ ಬಡಪಾಯಿಯ ಗತಿಯ ಬಗ್ಗೆ ಯಾರಿಗೆ ಕರುಣೆ ಇದೆ?' ಎಂದು ರಾಜ್ಯಪಾಲರು ಪ್ರಶ್ನಿಸಿ ಲಂಚಕೋರತನಕ್ಕೆ ಉಗ್ರ ಶಿಕ್ಷೆಯೇ ಮದ್ದು ಎಂದು ಘೋಷಿಸಿದರು ಹೀಗೆ ಮಾಡಿದರೆ ಮಾತ್ರ ಆಡಳಿತ ಮಟ್ಟವೇರುವುದೆಂದು ಅವರು ಸ್ಪಷ್ಟಮಾತುಗಳಿಂದ ಎಚ್ಚರಿಕೆ ನೀಡಿದರು. 'ಮಂತ್ರಿಮಾಗಧರು ಅಥವಾ ಇನ್ನಾರಾದರೂ ಈಗ ನಿಮ್ಮ ಕಾರ್ಯದಲ್ಲಿ ಅಡ್ಡಿಯಾಗುವುದಿಲ್ಲ; ನೀವು ನಿರ್ದಿಷ್ಟ ವ್ಯಕ್ತಿಗಳನ್ನು ಮೆಚ್ಚಿಸಬೇಕಾಗಿಲ್ಲ; ಅವರ ಹಿಂದೆ ತಿರುಗಾಡಬೇಕಾಗಿಲ್ಲ; ನಿಮ್ಮ ಸಂಪೂರ್ಣ ಸಾಮರ್ಥ್ಯದಿಂದ ಜನಸೇವೆಯನ್ನು ಮಾಡಿ; ತಪ್ಪಿತಸ್ಥರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಿ' ಎಂದವರ ಕರೆ ಪರಿಶುದ್ಧ ಆಡಳಿತೆಗೊಂದು ಲಾಂಗೂಲಚಾಲನವಾದೀತು.

'ಗಾಡಿ ಹೊಡೆಯಲೂ ಬಾರದವನಿಗೆ ಡ್ರೈವಿಂಗ್ ಲೈಸನ್ಸ್ ನೀಡಿದ್ದಾರೆ' ಎಂಬ ರಾಜ್ಯಪಾಲರ ಉದ್ಗಾರ ವಾಚ್ಯಾರ್ಥದಲ್ಲಿ ಅತಿಶಯವೆಂದು ಅನ್ನಿಸಬಹುದು. ಆದರೆ, ಇತ್ತೀಚೆಗೆ ಹೆಚ್ಚಾಗುತ್ತಿರುವ ವಾಹನ ಅಪಘಾತಗಳನ್ನು ನೋಡುವಾಗ, ಇದರೊಳಗೆ ಅಡಗಿರುವ ಲಂಚಾಸುರನ ಬ್ರಹ್ಮದರ್ಶನವಾಗುವುದು. ದೂಡಿದಷ್ಟೂ ಮುಂದುವರಿಯಲೊಪ್ಪದ ವಾಹನಗಳಿಗೆ ಪರ್ಮಿಟ್ಟು, ಯೋಗ್ಯತೆಯ ಲೇಶವಿಲ್ಲದವನಿಗೆ ನೌಕರಿ, ಪ್ರಮೋಶನ್, ರೋಗಿಗಳಿಗೆ ಯಮಸದನವೆನಿಸುವ ಆಸ್ಪತ್ರೆ, ಆಗ ಬಾ ಈಗ ಬಾ ಹೋಗಿ ಬಾರೆನ್ನುವ ಸರಕಾರಿ ಕಛೇರಿಗಳು, ರಾಜ್ಯದ ವಿದ್ಯುನ್ಮಂಡಲಿಯ ಸ್ವೈರವೃತ್ತಿ, ಸಾರಿಗೆ ಮಂಡಳಿಯ ಸುನಿಯೋಜಿತ ವಂಚನಾ ಮೇಳ....ಒಂದೇ ಎರಡೇ ಎಲ್ಲೆಲ್ಲಿಯೂ ನಾಗರಿಕರಿಗೆ ಸೇವೆ ದೊರೆಯುವುದಿಲ್ಲ—ನ್ಯಾಯ ನಡೆಯುವುದಿಲ್ಲ. ಹೀಗೆಮಳೆ-ಚಳಿ-ಗಾಳಿಗಳಿಗೆ ಎದೆಯೊಡ್ಡಿ ನಿಂತ ಸರಕಾರಿ ಯಂತ್ರಕ್ಕೆ ತುಕ್ಕು ಹಿಡಿಯುವುದು ಸ್ವಾಭಾವಿಕವೆ. ಈಗ ಅದರ ತುಕ್ಕು ಕೆರೆದು ಮತ್ತೆ ಎಣ್ಣೆ ಸವರಿ ಅದನ್ನು ಚುರುಕುಗೊಳಿಸಬೇಕಾಗಿದೆ. 'ತಾವು ಸಾರ್ವಜನಿಕರ ಅಧಿಕಾರಿಗಳಲ್ಲ, ಸೇವಕರು' ಎಂಬ ಭಾವನೆ ಸರಕಾರಿ ನೌಕರರ ಹೃದಯದಲ್ಲಿ ಮೂಡುವಂತಾಗಬೇಕು. ಈ ಭಾವನೆ ಮೂಡಿದರೆ ಮಾತ್ರ ಆಡಳಿತೆ ಸುಗಮವಾದೀತು;ಸರಳವಾದೀತು; ಲಂಚಾಸುರನ ನಾಶವಾದೀತು. ಶ್ರೀ ಧರ್ಮವೀರರ ಆಡಳಿತಾವಧಿಯಲ್ಲಿ ಕರ್ನಾಟಕ ಸರಕಾರ ಕಳೆದುಕೊಂಡಿರುವ ತನ್ನ ಚುರುಕುತನವನ್ನು ಮತ್ತೆ ಗಳಿಸಿಕೊಂಡೀತೆನ್ನುವ ವಿಶ್ವಾಸ ಮೂಡುತ್ತದೆ; ಅದು ಸಾಧಿತವಾಯಿತೆಂದರೆ 'ರಾಷ್ಟ್ರಪತಿ ಆಳಿಕೆ'ಗೊಂದು ಹೊಸ ಅರ್ಥ ಸೃಷ್ಟಿಯಾಗುತ್ತದೆ.

ಯಕ್ಷಗಾನ ತರಬೇತು ಕೇಂದ್ರ

ಬಹು ಸಮಯದಿಂದಲೂ ನಿರೀಕ್ಷಿತವಾಗಿದ್ದ ಯಕ್ಷಗಾನ ಕೇಂದ್ರವೊಂದು ಮುಂದಿನ ಜೂನ್ ತಿಂಗಳಿಂದ ಉಡುಪಿಯಲ್ಲಿ ಆರಂಭಗೊಳ್ಳುವುದು ಪ್ರಶಂಸನೀಯ. ಎಲ್ಲ ಬಗೆಯ ಒಳ್ಳೆಯ ಕಾರ್ಯಗಳಿಗೆ ವಿಘ್ನವಿಡ್ಡೂರಗಳು ಅಡಹಾಯ್ದರೂ ಪರಿಣಾಮ ಶುಭವಾಗುವಂತೆ ಈ ಯಕ್ಷಗಾನ ಕೇಂದ್ರ ಕೊನೆಗೂ ಕೇಂದ್ರ ಸಂಗೀತ ನಾಟಕ ಅಕಾಡಮಿಯ ನೆರವು ದೊರೆತಿವೆಯೆಂದು ವರದಿಗಳು ಬಂದಿವೆ. ಕೇಂದ್ರದ ಗುರುಗಳಾಗಿ ಶ್ರೀ ವೀರಭದ್ರ ನಾಯಕರ ನೇಮಕವನ್ನು ಅದು ಅನುಮೋದಿಸಿದೆಯೆಂದೂ ಗೊತ್ತಾಗಿದೆ. ತನ್ನ ಜೀವಮಾನವನ್ನು ಯಕ್ಷಗಾನ ಕಲೆಗೆಂದೇ ಮೀಸಲಿಟ್ಟಿರುವ ಶ್ರೀ ವೀರಭದ್ರ ನಾಯಕರ ನೇತೃತ್ವದಲ್ಲಿ ಈ ಕೇಂದ್ರ ತನ್ನ ಉದ್ದೇಶಗಳನ್ನು ಈಡೇರಿಸುವುದೆಂದು ನಂಬಬಹುದು. ಯಕ್ಷಗಾನವನ್ನು ಸ್ಥಾನೀಯ ಕಲೆಯ ಮಟ್ಟದಿಂದ ಅಂತಾರಾಷ್ಟ್ರೀಯ ಮಟ್ಟಕ್ಕೆ ಎತ್ತರಿಸಲು ಕಾರಣರಾದ ಡಾ| ಶಿವರಾಮ ಕಾರಂತ ಮತ್ತಿತರರ ನಿರಂತರ ಶ್ರಮದ ದ್ಯೋತಕ

(ಆರನೇ ಪುಟ ನೋಡಿರಿ)

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

ಮೇ ತಿಂಗಳಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ವಾಚಕರಲ್ಲಿ ವಿನಂತಿ

ಕೆಲವೊಂದು ಅನಾನುಕೂಲತೆಗಳಿಂದಾಗಿ ಈ ಸಂಚಿಕೆಯಲ್ಲಿ ಎಂಟು ಪುಟಗಳನ್ನಷ್ಟೇ ಕೊಡಲಾಗಿದೆ. ಮುಂದಕ್ಕೆ ಎಂದಿನಂತೆ ಹನ್ನೆರಡು ಪುಟಗಳನ್ನು ಕೊಡಲಾಗುವುದು.

—ಮೆನೇಜರ್, ನವಯುಗ.

ಭಾಷಾ ಪಂಡಿತವರ್ಗವನ್ನು ಒಡೆದು ಆಳುವ ಬ್ರಿಟಿಷ್ ನೀತಿ

ಬರೆದವರು: ಶ್ರೀ ಶಿ. ಗೋ. ರಾವ್.

ತುಕೋಳ ಆಯೋಗವು ಸಿಫಾರಸು ಮಾಡಿದ ಮತ್ತು ಅನಂತರ ಸರಕಾರವು ಒಪ್ಪಿಕೊಂಡ ಭಾಷಾಪಂಡಿತ ವರ್ಗದ ವೇತನ ಶ್ರೇಣಿಗಳ ವೈವಿಧ್ಯವನ್ನು ಗಮನಿಸುವಾಗ ಕಂಡುಬರುವ ಒಂದು ಅಂಶವೆಂದರೆ, ಈ ವರ್ಗವನ್ನು ಸದಾ ದಮನ ಮಾಡುವ ಸ್ಪಷ್ಟ ಮತ್ತು ಅಧಿಕೃತ ಪ್ರಯತ್ನ.

1—1—71ಕ್ಕೆ ಮೊದಲು ಈ ವರ್ಗವು 130–230ರ ವೇತನ ಶ್ರೇಣಿಯನ್ನು ಪಡೆದಿತ್ತು. 1—1—70ರ ನಂತರ 130–290ರ ಶ್ರೇಣಿಯನ್ನು ಪಡೆಯಬೇಕಾಯ್ತು. ಪ್ರೌಢಶಾಲೆಗಳಲ್ಲಿ ತರಬೇತಾದ ಪದವೀಧರ ಅಧ್ಯಾಪಕರಿಗೂ ಭಾಷಾಪಂಡಿತರಿಗೂ ಕೆಲಸದಲ್ಲಾಗಲೀ, ಜವಾಬ್ದಾರಿಗಳಲ್ಲಾಗಲೀ ಯಾವ ಪರಿಭೇದವೂ ಇಲ್ಲ. ಆದುದರಿಂದ ಭಾಷಾಧ್ಯಾಪಕರಿಗೂ ತರಬೇತಾದ ಪದವೀಧರ ಅಧ್ಯಾಪಕರಂತೆಯೇ 175—450ರ ಶ್ರೇಣಿಯನ್ನು ನೀಡಬೇಕೆಂಬ ಕೇಳಿಕೆ ಬಲವಾಗಿ, ಈ ಬಗ್ಗೆ ಮಂತ್ರಿಗಳೂ ವಿಧಾನ ಪರಿಷತ್ತಿನಲ್ಲಿ ಭರವಸೆ ನೀಡಿ, ಸರಕಾರಿ ಆಜ್ಞೆ ಒಂದು–ಒಂದೂವರೆ ತಿಂಗಳಲ್ಲಿ ಹೊರಬೀಳುವುದಾಗಿ ಹೇಳಿದರು. ಭಾಷಾಧ್ಯಾಪಕ ವರ್ಗದ ವೇತನ ಶ್ರೇಣಿಯ ಸಮಸ್ಯೆ ಪರಿಹಾರವಾಯ್ತೆಂದೂ ಅವರು ಭಾಷಾಪಟ್ಟವನ್ನು ಎತ್ತರಿಸಲು ಶ್ರಮಿಸಬೇಕೆಂದೂ ಅವರ ಪ್ರತಿನಿಧಿಗಳು ಪತ್ರಿಕೆಗಳಲ್ಲಿ ಬರೆದರು.

ಹಲವಾರು ಊಹಾಪೋಹಗಳ ತರುವಾಯ ಸರಕಾರ ಗೊತ್ತುಮಾಡಿದ ಭಾಷಾ ಪಂಡಿತ ವರ್ಗದ ವೇತನ ಶ್ರೇಣಿ ಈ ರೀತಿಯಿದೆ—

1. ತರಬೇತಿ ಹೊಂದಿದ ಪದವೀಧರ ಭಾಷಾಧ್ಯಾಪಕರಿಗೆ 1–1–70ರಿಂದ 175–450.
2. ಬೇಸಗೆ ಶಿಬಿರವನ್ನು ಪೂರ್ಣ ಮಾಡುವ ಭಾಷಾಧ್ಯಾಪಕರಿಗೆ ಅದನ್ನು ಪೂರ್ಣ ಮಾಡಿದ ಮೇಲೆ 175–450.
3. ಹತ್ತು ವರ್ಷ ಸೇವೆ ಸಲ್ಲಿಸಿದವರಿಗೆ 160-350 4 ಸಿಲೆಕ್ಷನ್ ಗ್ರೇಡ್ 250–500. 5 ಇತರರಿಗೆ 130–290.

ಈ ವೈವಿಧ್ಯಮಯತೆಗೆ ಇರುವ ಕಾರಣ ಪಂಡಿತ ವರ್ಗಕ್ಕೆ ತರಬೇತಿಯಿಲ್ಲ; ಇದ್ದರೂ ಅದು ಮಾನ್ಯತೆ ಪಡೆದಿಲ್ಲವೆಂಬುದು 1–1–70ಕ್ಕೆ ಮೊದಲು ತರಬೇತು ಅಗತ್ಯವೆಂಬ ಭಾವನೆ ಸಹಕಾರಕ್ಕೆ ಮೂಡದೆ ಅನಂತರ ರಾತ್ರೆ ಬೆಳಗಾಗುವುದರೊಡನೆ ಅದರ ಅಗತ್ಯತೆಯ ಪರಿಜ್ಞಾನವಾದದ್ದು ಸೋಜಿಗ. ತರಬೇತು ಹೊಂದಿದ ಪದವೀಧರ ಅಧ್ಯಾಪಕರನ್ನೂ ಈ ತರಬೇತಿಯಿಲ್ಲದ ಭಾಷಾಧ್ಯಾಪಕರನ್ನೂ ಈಗ ಏಕಸಮವಾಗಿ ಕಾಣುತ್ತಿದೆ ಸರಕಾರ. ಆದರೆ ಈ ಸಮದೃಷ್ಟಿ ಮೊದಲಿರಲಿಲ್ಲ. ತರಬೇತಾಗದ ಪದವೀಧರರಿಗೆ ಮುಂದಿನ ಭಡ್ತಿ ದೊರೆಯುತ್ತಿರಲಿಲ್ಲ. ಆದರೆ, ನ್ಯಾಯಾಲಯದ ತೀರ್ಮಾನವೊಂದರಂತೆ ಭಡ್ತಿ ಕೊಡುವುದನ್ನು ಆರಂಭಿಸಿತು.

1–1–70ರಿಂದ ಸರಕಾರವು ಭಾಷಾ ಪಂಡಿತರನ್ನು ತರಬೇತಾಗದ ಪದವೀಧರರಿಗೆ ಸಮನೆಂದು ಪರಿಗಣಿಸಿದೆ. ಇದು ಯಾವ ನೀತಿಯಿಂದಲೂ ಸಮನಾಗದು. ಅದುವರೆಗೆ ಭಡ್ತಿ ನೀಡುವ ವಿಷಯದಲ್ಲಿಯೇ ಇಲ್ಲದ ಜಿಜ್ಞಾಸೆ ವೇತನ ಶ್ರೇಣಿಯಲ್ಲೇ ಕುತ್ತಿಗೆ ಅದುಮಿತು. ತರಬೇತಿಯನ್ನು ಪಂಡಿತ ವರ್ಗದಿಂದಲೂ ಸರಕಾರ ಬಯಸುತ್ತಿದೆ ಎಂಬುದೀಗ ಸ್ಪಷ್ಟ. ಆದರೆ, ಈ ಜಿಜ್ಞಾಸೆ 1–1–70ರ ವರೆಗೆ ಇರಲಿಲ್ಲ. ಪಂಡಿತರನ್ನು ತರಬೇತಿಗೊಳಿಸುವ ಯಾವುದೇ ವ್ಯವಸ್ಥೆಯನ್ನು ಸರಕಾರ ಇದುವರೆಗೆ ಮಾಡಿದ್ದೆಂಬುದೇ ಇಲ್ಲ. ತರಬೇತಿಯು ನೇಮಕಕ್ಕೆ ಅನಿವಾರ್ಯ ಅಥವಾ ಅಪೇಕ್ಷಿತ ವಿದ್ಯಾರ್ಹತೆಯೂ ಅಲ್ಲ; ಹಾಗಿರುವಾಗ ತರಬೇತಿ ಸೌಲಭ್ಯದಿಂದಲೇ ಸರಕಾರ ವಂಚಿತಗೊಳಿಸಿ ಇದೀಗ ಅವರಿಗೆ ತರಬೇತಿಯಿಲ್ಲವೆಂದು ಹೇಳಿ ಅವರನ್ನು ದ್ವಿತೀಯ ವರ್ಗವಾಗಿ ಕಾಣುವುದು ಎಂದರೆ, ತಾನು ಮಾಡಿದ ತಪ್ಪಿಗೆ ಪಂಡಿತವರ್ಗವನ್ನು ಬಲಿಗೊಡುವುದು ಎಂದೇ ಅರ್ಥ.

ತರಬೇತು ಪಡೆಯದ ಪದವೀಧರ ಅಧ್ಯಾಪಕರ ಬಗ್ಗೂ ಒಂದು ಮಾತು ಹೇಳಬೇಕಾಗುತ್ತದೆ. ಹೀಗೆ ಅಧ್ಯಾಪಕರಾಗುವವರು ಕೆಲವರು ಮಾತ್ರ. ತರಬೇತು ಪಡೆಯದೆ ಅದರಲ್ಲೇ ಮುಂದುವರಿಯುವವರು ಬೆರಳೆಣಿಕೆಯಷ್ಟು ಮಂದಿ. ಸರಕಾರವು ತನ್ನ ವೆಚ್ಚದಲ್ಲೇ ಡೆಪ್ಯೂಟ್ ಮಾಡಿ ಅವರನ್ನು ಇಂದಿಗೂ ತರಬೇತುಗೊಳಿಸುತ್ತದೆ. ಹೆಚ್ಚಾಗಿ ತರಬೇತಾಗದೆ ಅಧ್ಯಾಪಕರಾಗುವವರು ತಾತ್ಕಾಲಿಕ ಸಮಯ ಯಾಪನಾ ಮಾರ್ಗವೆಂದು ಇದಕ್ಕೆ ಸೇರಿದವರು. ಒಳ್ಳೆಯ ಬೇರೆ ಉದ್ಯೋಗ ಸಿಕ್ಕೊಡನೆಯೇ ಅವರು ಹೊರಟು ಹೋಗುತ್ತಾರೆ.

ಆದರೆ, ಪಂಡಿತರಾದವರು ಹಾಗಲ್ಲ. ಒಮ್ಮೆ ಪಂಡಿತನಾಗಿ ಸೇರಿದ ಮೇಲೆ ಆತನಿಗೆ ಮತ್ತಾವ ಉದ್ಯೋಗದ ಬಾಗಿಲೂ ತೆರೆಯುವುದಿಲ್ಲ. ತರಬೇತಿಯ ಸೌಕರ್ಯವಿರುತ್ತಿದ್ದರೆ, ಅವನೂ ತರಬೇತಿ ಹೊಂದಿಯೇ ಈ ಉದ್ಯೋಗಕ್ಕೆ ಬರುತ್ತಿದ್ದನು. ಅವನಿಗೆ ಸರಕಾರವಾಗಲೀ ವಿಶ್ವವಿದ್ಯಾಲಯವಾಗಲೀ ಇದುವರೆಗೂ ತರಬೇತಿ ಸೌಲಭ್ಯ ಒದಗಿಸಿಲ್ಲವೆಂದರೆ, ಅವನಿಗೆ ತರಬೇತಿ ಬೇಡವೆಂದೇ ಅರ್ಥ.

1—1—7 ಕ್ಕೆ ಮೊದಲು ಪಂಡಿತರ ಮತ್ತು ತರಬೇತಾದ ಪದವೀಧರರ ವೇತನ ಶ್ರೇಣಿಯಲ್ಲಿ ನಿಕಟ ಸಮಾನತೆಯಿತ್ತು. 130–5–150–8–19 –10–23 ಇದು ಪಂಡಿತರದ್ದು, ತರಬೇತಿ ಹೊಂದಿನ ಪದವೀಧರರಿಗೆ ಕೊನೆಗೆರಡು ಹೆಚ್ಚಿನ ಭಡ್ತಿ ದೊರೆತು ಅದು 250ಟನ್ನು ಮುಟ್ಟುತಿತ್ತು. ಅಂದರೆ, ಕೊನೆಯ ಹಂತದಲ್ಲಿ ಮಾತ್ರ 20 ರೂಪಾಯಿಗಳ ಅಂತರ. ಆದರೆ, ತುಕೋಳ ವೇತನ ಶ್ರೇಣಿಯಲ್ಲಿ ಆರಂಭದಲ್ಲೇ ರೂ 45ರ ಅಂತರ, ಕೊನೆಯಲ್ಲಿ ರೂ. 6 ರ ಅಂತರ ಹಳೇ ಪದ್ಧತಿಯಂತೆ ಆರಂಭವೊಂದೇ ಈ ರೀತಿಯಿದ್ದು ಕೊನೆಯಲ್ಲಿ 20–30 ರೂಪಾಯಿಗಳ ಅಂತರವಿದ್ದರೆ, ಅದಾದರೂ ಬೇರೆ ಮಾತು.

ಈ ದೃಷ್ಟಿಯಿಂದ ಸರಕಾರ ಪಂಡಿತ ವರ್ಗದ ಮೇಲೆ ಗದಾಪ್ರಹಾರ ಮಾಡಿದೆ. 1–1–7 ರ ಹಿಂದೆ ನೇಮಕರಾಗಿರುವ ಪಂಡಿತ ವರ್ಗದ ಮೇಲೆ ತರಬೇತಿ ಸೌಕರ್ಯ ಒದಗಿಸದ ತನ್ನ ತಪ್ಪಿನ ಹೊರೆಯನ್ನು ಹೊರಿಸಿ ಅವರನ್ನು ರಸಾತಳಕ್ಕೆ ದಬ್ಬಿದೆ. ಜತೆಗೆ ವೇತನ ಶ್ರೇಣಿಯಲ್ಲೇ ಅಜಗಜಾಂತರವನ್ನು ತಂದು ಹಾಕಿ ಅವರ ಮಾನ ಭಂಗವನ್ನು ಮಾಡಿ ಸ್ಥಾನ ಗೌರವವನ್ನು ಮುಸುಕಿಸಿ ಹಾಕಿದೆ. ಇವೆರಡು ಭಾಷೆಗೂ ಭಾಷಾಧ್ಯಾಪಕರಿಗೂ ಮಾಡಿದ ಮಹಾದ್ರೋಹ ಮಾತ್ರವಲ್ಲ, ಆಂಗ್ಲ ಭಾಷೆ ಮತ್ತು ಆಂಗ್ಲ ಪದವಿಗಳ ಮೇಲೆ ಸರಕಾರಕ್ಕಿರುವ ವಿಪರೀತ ಮೋಹಕ್ಕೊಂದು ನಿದರ್ಶನ. ಸಮಾನ ಉದ್ಯೋಗ....ಸಮಾನ ವೇತನವೆಂಬ ಸಾಮಾಜಿಕ ನ್ಯಾಯವನ್ನು ತಿಪ್ಪೆಗೆ ತಳ್ಳಿದ ಜ್ವಲಂತ ಉದಾಹರಣೆ. ಪ್ರಾದೇಶಿಕ ಭಾಷೆಗಳನ್ನು ಆಡಳಿತ ಭಾಷೆಯೆಂದು ಮಾಡುವವರು, ಶಿಕ್ಷಣ ಮಾಧ್ಯಮ ಮಾಡುವವರ ಮನೋವೃತ್ತಿಗೆ ಉದ್ಧನೆಯ ಕನ್ನಡಿ ಹಿಡಿಯುತ್ತದೆ.

ವೇತನ ಅಸಾಮಂಜಸ್ಯ. ನಿವಾರಣಾ ಸಮಿತಿಯು ಸಿಫಾರಸು ಮಾಡಿ ಸರಕಾರ ಅಂಗೀಕರಿಸಿದ ವೇತನ ಶ್ರೇಣಿಗಳು ಒಡೆದು ಆಳುವ ಬ್ರಿಟಿಷ್ ನೀತಿಯ ಪುನರವತಾರ. ಬೇಸಗೆ ಶಿಬಿರವನ್ನು ಸಂಪೂರ್ಣಗೊಳಿಸಿದ ಪಂಡಿತರನ್ನು ತರಬೇತಾದ ಪದವೀಧರರ ವೇತನ ಶ್ರೇಣಿ ನೀಡಿ ಗೌರವಿಸುತ್ತದೆ. ಈ ಬೇಸಗೆ ಶಿಬಿರ ಯಾವ ಬೇಸಗೆಯಲ್ಲಿ ಆರಂಭವಾಗುತ್ತದೆ? ಅದರಲ್ಲಿ ಎಷ್ಟು ಮಂದಿಗೆ ಪ್ರವೇಶ ದೊರೆಯುತ್ತದೆ? ಈ ಶಿಬಿರಗಳನ್ನು ಸರಕಾರ ಈ ಮೊದಲೇ ಏಕೆ ತೆರೆಯಲಿಲ್ಲ? –1 70ರಲ್ಲಿ ಸೇವೆಯಲ್ಲಿದ್ದ ಎಲ್ಲ ಪಂಡಿತರನ್ನೂ ಒಂದೇ ಬಾರಿ ಶಿಬಿರಕ್ಕೆ ಸೇರಿಸಿಕೊಳ್ಳುವುದು ಸಾಧ್ಯವಾದೀತೆ? ಇಲ್ಲವಾದರೆ ಅದು ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಎಣ್ಣೆ ಸುರಿಯುವ ಪಕ್ಷಪಾತದ ಪರಮಾವಧಿ ನೀತಿಯಾಗದೆ? ಈಗಿರುವ ಪಂಡಿತರನ್ನೆಲ್ಲ 'ಶಿಬಿರೀಕರಣ'ಗೊಳಿಸಿದ ಬಳಿಕವೂ ಈ ಶಿಬಿರಗಳು ಮುಂದುವರಿಯುವವೆ? ಇದು ಸಂದೇಹಾಸ್ಪದ. ಸರಕಾರದ ಬೇಧನೀತಿಯಿಂ ಈಗಾಗಲೇ ನೊಂದ ಕನ್ನಡಿಗರು ಇಂಗ್ಲಿಷ್ ಪದವಿಯನ್ನೇ ಆಲಿಂಗಿಸ ಬಯಸುವುದು ತಪ್ಪಲ್ಲ. ಅಪ್ಪಿತಪ್ಪಿ ಭಾಷಾಭಿಮಾನದ ಪಂಡಿತ ವರ್ಗಕ್ಕೆ ಸೇರುವವರು ಬೆರಳೆಣಿಕೆಯವರು. 'ಆವಶ್ಯಕ ಅಭ್ಯರ್ಥಿಗಳಿಲ್ಲ'ವೆಂದು ಹೇಳಿ ಶಿಬಿರಗಳನ್ನು ನಡೆಸದಿರಲು ಸರಕಾರಕ್ಕೆ ಆಗ ಬಹಳ ಸುಲಭ ಹೀಗೆ ಆಗುವುದೂ ವಾಸ್ತವ. ಸರಕಾರಿ ನೀತಿಯ ಹಿಂದೆ ಅಡಗಿರುವ ನಿಜ ಸ್ವರೂಪವೂ ಇದೇ.

ಇದಕ್ಕೆ ಪುಷ್ಟಿ ನೀಡುವಂತೆ 10 ವರ್ಷದ ಸೇವೆ ಸಲ್ಲಿಸಿದ ಭಾಷಾ ಪಂಡಿತರಿಗೆಂದು ಪ್ರತ್ಯೇಕ ವೇತನ ಶ್ರೇಣಿಯನ್ನು ಗೊತ್ತುಪಡಿಸಿದುದು. 'ಸಿಲೆಕ್ಷನ್ ಪಂಡಿತ' ಎಂಬ ಬಿರುದು ಹೊರಿಸಿ ಇವರನ್ನು ಉಳಿದವರಿಗಿಂತ ಪ್ರತ್ಯೇಕಿಸುವ ಹೊಸ ತಂತ್ರವಿದು. ಈ ವರ್ಗಕ್ಕೆ 160–350ರ ವೇತನ ಶ್ರೇಣಿ ನೀಡಿ ಪಂಡಿತ ವರ್ಗವನ್ನು ಒಡೆಯುವ ಹೊಸ ನೀತಿಯನ್ನು ಸರಕಾರ ಅನುಸರಿಸಿದೆ. ಸದ್ಯ ಗ್ರೇಡ್ I (ಸಿಲೆಕ್ಷನ್ ಗ್ರೇಡ್)ಒಂದು ಬೇರೆಯೇ ಇದ್ದು ಇವರಿಗೆ ...–50 ರ ಶ್ರೇಣಿ ನಿರ್ಧಾರಿತವಾಗಿದೆ. ತರಬೇತಾದ ಪದವೀಧರರಿಗೂ ಇದೇ ಶ್ರೇಣಿ.

ಭಾಷಾಧ್ಯಾಪಕರ ಸಂಖ್ಯೆ ಕಡಿಮೆ. ಇವರಲ್ಲಿ ಸುಮಾರು ಒಂದೂವರೆ ಸಾವಿರದಷ್ಟು ಪಂಡಿತವರ್ಗವಿದ್ದೀತು. ಇದರಲ್ಲೇ ಗ್ರೇಡ್ 1, ಸಿಲೆಕ್ಷನ್ ಪಂಡಿತ, ಬೇಸಿಗೆ ಶಿಬಿರ ಪೂರ್ಣ ಮಾಡಿದ ಪಂಡಿತ, ಬರಿಯ ಪಂಡಿತ, ತರಬೇತಾದ ಪದವೀಧರ ಪಂಡಿತ ಎಂದು ಮುಂತಾಗಿ ನೂರು ಭೇದ ಕಲ್ಪಿಸಿದುದರಿಂದ ಪಂಡಿತ ವರ್ಗವನ್ನು ಒಡೆಯಲು ಸುಲಭವಾಯ್ತು. ಮುಂದೆ, ಬೇಸಗೆ ಶಿಬಿರಗಳು ಇಲ್ಲವಾದಾಗ ಪಂಡಿತವರ್ಗವನ್ನು ಸದಾ ದ್ವಿತೀಯ ವರ್ಗದವರನ್ನಾಗಿ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 131 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ **"ಜೀವನ-ನಿಧಿ"**ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಬೆಳ್ಳಿ ಹಬ್ಬ ಆಚರಿಸಿದ
ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಪ್ರತಿಯೊಂದು ದೇಶದ ಅರ್ಥವ್ಯವಸ್ಥೆ, ಸ್ಥಿರತೆ ಮತ್ತು ವಿಶ್ವಾಸಾರ್ಹತೆಗಳು ಅದರ ಸುವರ್ಣ ಸಂಗ್ರಹವನ್ನು ಆಧರಿಸಿದೆ. ಭಾರತದಲ್ಲಿ ಸುವರ್ಣಾಭರಣಗಳು ಆವಶ್ಯಕ ವಸ್ತುಗಳೆನಿಸಿ ಅನಾದಿ ಕಾಲದಿಂದಲೂ ಉಳಿದಿವೆ. ಈ ಲೋಹವನ್ನುಪಯೋಗಿಸಿ ಕುಶಲ ಸ್ವರ್ಣಕಾರರು ನಯನ ಮನೋಹರ ಆಭೂಷಣ ತಯಾರಿಸುತಿದ್ದರು. ದೇವತಾ ವಿಗ್ರಹಗಳು, ಕವಚಗಳು, ಕಲಶಗಳು, ಮಂಟಪಗಳು.... ಹೀಗೆ ಹತ್ತಾರು ಪೂಜ್ಯ ವಸ್ತುಗಳೂ ಪಾತ್ರೆಗಳೂ ಸುವರ್ಣದಿಂದ ತಯಾರಾಗುತಿದ್ದುವು. ಇಂದಿಗೂ ರತ್ನಾಭರಣಗಳ ಕಲೆ ಭಾರತದಲ್ಲಿ ಪ್ರಸಿದ್ಧವಾಗಿದೆ.



ಸ್ಥಾಪಕ: ದಿ| ಎಸ್. ಎಲ್. ಶೇಟ್

ಆರ್ಯ ಸಮಾಜ ಚತುವರ್ಣಗಳ ಮೇಲೆ ನಿಂತಿದೆ; ಈ ವರ್ಣಗಳಾದರೂ ವೃತ್ತಿಪ್ರಧಾನವಾಗಿವೆ. ವೃತ್ತಿ ವಿಭಾಗಗಳೂ ಹತ್ತಾರು ಉಪವಿಭಾಗಗಳಾಗಿ ಕಾಲಕ್ರಮೇಣ ವಿಭಕ್ತವಾಗಿವೆ. ರತ್ನಾಭರಣ ತಯಾರಿಸುವ ವೃತ್ತಿಯೂ ಇತರ ವೃತ್ತಿಗಳಂತೆ ವಂಶಪಾರಂಪರ್ಯವಾಗಿ ಬೆಳೆಯಿತು. ಕಾಲಸ್ಥಿತಿಗನುಸಾರವಾಗಿ ರತ್ನಾಭರಣ ಕಲೆಯೂ ಬೆಳೆದು ಬಂತು; ಹಲವು ತಿರುವು ಕಂಡಿತು. ರತ್ನಾಭರಣ ತಯಾರಿಕೆ, ವ್ಯಾಪಾರ ವಿಧಾನಗಳಲ್ಲೂ ಸಾಕಷ್ಟು ಸುಧಾರಣೆ ಅನಿವಾರ್ಯವಾಯ್ತು.

ದಕ್ಷಿಣ ಕನ್ನಡ ಜಿಲ್ಲೆ ಸರ್ವ ಕಲೆಗಳಿಗೂ ತನ್ನ ಕಾಣಿಕೆಯನ್ನಿತ್ತು ಸುತ್ತಲೇ ಬಂದಿದೆ. ರತ್ನಾಭರಣ ಕಲೆಯಲ್ಲೂ ಅದು ಹಿಂದುಳಿಯಲಿಲ್ಲ. ಮಂಗಳೂರಿನ 'ಎಸ್. ಎಲ್. ಶೇಟ್ ಡೈಮಂಡ್ ಹೌಸ್' ಜಿಲ್ಲೆಯ ರತ್ನಾಭರಣ ಸಂಸ್ಥೆಗಳಿಗೆ ಕಲಶಪ್ರಾಯವಾದುದು. ಇಪ್ಪತ್ತೈದು ವರ್ಷಗಳಿಂದಲೂ ಈ ಸಂಸ್ಥೆ ಜನಾಭಿರುಚಿಯನ್ನು ಅರಿತು ಸೂಕ್ತ ರತ್ನಾಭರಣಗಳನ್ನು ತಯಾರಿಸಿ ಕೊಡುತ್ತದೆ; ವ್ಯಾಪಾರ ಮಾಡುತ್ತದೆ. ದಿ| ಎಸ್. ಎಲ್. ಶೇಟ್ ಇದರ ಸಂಸ್ಥಾಪಕರು.

ಶ್ರೀ ಸುಬ್ರಾಯ ಲಕ್ಷ್ಮಣ (ಎಸ್. ಎಲ್.) ಶೇಟರು ಹುಟ್ಟಿದ್ದು ಗಂಗೊಳ್ಳಿಯಲ್ಲಿ, ಕೋಟಿ ಮನೆತನದ ದೈವಜ್ಞ ಬ್ರಾಹ್ಮಣ ಶ್ರೀ ಲಕ್ಷ್ಮಣ ಶೇಟರ ಮಗನಾಗಿ, ೧೯೨೧ರ ಅಕ್ಟೋಬರ ೭ರಂದು. ಸ್ವರ್ಣವ್ಯಾಪಾರ ಅವರ ವಂಶಾನುಗತ ವೃತ್ತಿ. ಶ್ರೀ ಲಕ್ಷ್ಮಣ ಶೇಟರು ೧೯೨೮ರಲ್ಲಿ ದೈವಾಧೀನರಾದಾಗ, ೭ ವರ್ಷದ ಶ್ರೀ ಸುಬ್ರಾಯ ಶೇಟರು ತನ್ನ ಶಿಕ್ಷಣವನ್ನು ನಿಲ್ಲಿಸಿ ಜೀವನ ಯಾಪನೆಗಾಗಿ ಉದ್ಯೋಗವರಸುವುದು ಅನಿವಾರ್ಯವಾಯ್ತು. ಹಾಗಾಗಿ ೧೯೩೦ರಲ್ಲಿ ಮಂಗಳೂರು ನಗರ ಸೇರಿದ ಒಂಭತ್ತರ ಹುಡುಗ ಶ್ರೀ ಸುಬ್ರಾಯ ಶೇಟರು ನಗರದ ಪ್ರಮುಖ ರತ್ನಾಭರಣ ವ್ಯಾಪಾರಿಗಳಲ್ಲಿ ಕೆಲಸಕ್ಕೆ ಸೇರಿದರು. ಅಮಿತ ಲವಲವಿಕೆಯಿಂದ ನವರತ್ನಗಳ ವ್ಯಾಪಾರ-ಬಂಗಾರದ ವ್ಯವಹಾರಗಳನ್ನು ಮನವರಿಕೆ ಮಾಡಿಕೊಂಡರು.

೧೯೩೯ರ ಹೊತ್ತಿಗೆ ಬಿಡುವಿನ ಸಮಯದಲ್ಲಿ ಸಣ್ಣ ಪ್ರಮಾಣದ ರತ್ನ-ಸ್ವರ್ಣ ವ್ಯಾಪಾರಕ್ಕೆ ತೊಡಗಿದ ಶ್ರೀ ಸುಬ್ರಾಯ ಲಕ್ಷ್ಮಣ ಶೇಟರು ದೃಢ ಸಂಕಲ್ಪ ಮತ್ತು ನಿರಂತರ ದುಡಿಮೆಗಳಿಂದ ತಕ್ಕಷ್ಟು ಬಂಡವಳ ಕೂಡಿಸಿ ೧೯೪೭ರಲ್ಲಿ ಎಸ್. ಎಲ್. ಶೇಟ್ ಡೈಮಂಡ್ ಹೌಸ್' ಎಂಬ ಸ್ವತಂತ್ರ ಸಂಸ್ಥೆಯನ್ನು ಮಂಗಳೂರಿನ ಹಂಪನ ಕಟ್ಟೆಯಲ್ಲಿ ತೆರೆದರು. ಸಮರ್ಥ ವ್ಯಾಪಾರಿಯಲ್ಲಿರಬೇಕಾದ ಸರ್ವಗುಣೋಪೇತರಾದ ಶ್ರೀ ಶೇಟರು ಅಲ್ಪಾವಧಿಯಲ್ಲೇ ಸರ್ವ ಜನಾನುರಾಗಿಗಳಾಗಿ ಸರ್ವಜನಪ್ರಿಯರಾಗಿ ಹೆಸರು ಗಳಿಸಿದರು.

ವ್ಯಾಪಾರವೂ ಜನಾನುರಾಗದೊಡನೆ ಬೆಳೆದುಬಂತು. ಅವರು ಮುಂದಿನ ವರ್ಷವೇ ಸ್ವಂತ ಕಟ್ಟಡವೊಂದನ್ನು ಕೊಂಡು ಅದರಲ್ಲಿ ವ್ಯವಹಾರ ಆರಂಭಿಸಿದರು. ಇಂದಿಗೂ ಸಂಸ್ಥೆ ಅದೇ ಕಟ್ಟಡದಲ್ಲಿದೆ. ೧೯೬೩ರಲ್ಲಿ ಭಾರತ ಸರಕಾರವು ಸ್ವರ್ಣನಿಯಂತ್ರಣ ಕಾಯದೆ ತಂದುದರಿಂದ, ಈ ವ್ಯಾಪಾರವು ಕುಂಠಿತವಾಗಬಹುದೆಂದು ಸ್ಟೈಯಿನ್ ಲೆಸ್ ಸ್ಟೀಲ್ ಮತ್ತು ಫೊಟೋಗ್ರಾಫಿ ವಸ್ತುಗಳ ವ್ಯಾಪಾರವನ್ನೂ ಅವರು ಆರಂಭಿಸಿದರು. ಅಶೋಕ ಸ್ಟೈಯಿನ್ ಲೆಸ್ ಸ್ಟೀಲ್ ಸೆಂಟರ್ ಮತ್ತು ಐಡಿಯಲ್ ಫೋಟೋ ಹೌಸ್‌ಗಳೇ ಈ ವ್ಯಾಪಾರದ ಕೇಂದ್ರಗಳು. ಸ್ಟೈಯಿನ್‌ಲೆಸ್ ಸ್ಟೀಲ್ ಸೆಂಟರ್ ನಗರದ ಗೃಹಿಣಿಯರಿಗೆ ದೊಡ್ಡ ಆಕರ್ಷಣೆಯಾಗಿ ಬೆಳೆದು ಬಂದಿದೆ. ಫೊಟೊ ಹೌಸ್ ಫೊಟೊ ಗ್ರಾಫಿ ಸಂಸ್ಥೆಗಳಲ್ಲಿ ಹೆಸರುಗಳಿಸಿದೆ.

ಶ್ರೀ ಎಸ್. ಎಲ್. ಶೇಟರ ಪ್ರತಿಭೆ ವ್ಯಾಪಾರಕ್ಕಷ್ಟೇ ಸೀಮಿತವಾಗಿರಲಿಲ್ಲ. ಸಾರ್ವಜನಿಕ ರಂಗದಲ್ಲೇ ಅವರು ರಂಜಿತ ವ್ಯಕ್ತಿ. ದೈವಜ್ಞ ಬ್ರಾಹ್ಮಣ ಸಂಘದ ಮೂಲಕ ಸ್ವಜಾತಿ ಬಾಂಧವರ ಮೇಲ್ಮೆಯನ್ನು ಸಾಧಿಸಿದರು. ಅನೇಕ ದೇವಾಲಯ—ಧರ್ಮ ಸಂಸ್ಥೆಗಳಿಗೆ ದಾನ ನೀಡಿದರು. ಮೂಡಬಿದ್ರೆಯ ಸಮಾಜ ಮಂದಿರ, ದೈವಜ್ಞ ಬ್ರಾಹ್ಮಣ ಸಂಘದ ಕಟ್ಟಡಗಳಿಗೂ ಇವರು ಸಾವಿರಾರು ರೂಪಾಯಿ ದೇಣಿಗೆ ನೀಡಿದ್ದಾರೆ.

ಶ್ರೀ ಎಸ್. ಎಲ್. ಶೇಟರು ೧೯೭೧ನೆ ಫೆಬ್ರವರಿ ೧೧ರಂದು ದಿವಂಗತರಾದರು. ಇವರು ತಮ್ಮ ಹಿಂದೆ ಧರ್ಮಪತ್ನಿ, ಇಬ್ಬರು ಗಂಡು ನಾಲ್ವರು ಹೆಣ್ಣು ಮಕ್ಕಳನ್ನು ಬಿಟ್ಟುಹೋದರು. ಈಗ ಸಂಸ್ಥೆಯು ಶ್ರೀಮತಿ ವತ್ಸಲಾ ಬಾಯಿ ಶೇಟ್, ಶ್ರೀ ಎಂ. ರಘುನಾಥ ಶೇಟ್ ಮತ್ತು ಶ್ರೀ ಎಂ. ರವೀಂದ್ರ ಶೇಟರು ಪಾಲುದಾರರಾಗಿ ನಡೆಯುತ್ತಿದೆ. ದಿ| ಶೇಟರ ಪ್ರಥಮ ಪುತ್ರ ಶ್ರೀ ರಘುನಾಥ ಶೇಟರು ಸಂಸ್ಥೆಯ ಮೆನೇಜಿಂಗ್ ಪಾರ್ಟನರ್ ಆಗಿ ದುಡಿಯುತ್ತಿದ್ದಾರೆ. ತಮ್ಮ ತಂದೆಯಂತೆಯೇ ವ್ಯವಹಾರ ಕುಶಲರಾದ ಶ್ರೀ ರಘುನಾಥಶೇಟರು ಸಿಬ್ಬಂದಿ ಜನ ಸಮೂಹದ ಸಂಪೂರ್ಣ ಸಹಕಾರದಿಂದ ಕಾಲೋಚಿತ ಸುಧಾರಣೆಗಳೊಂದಿಗೆ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅನುಭವಿಗಳಾದ ಕುಶಲಕಲಾಕಾರರು ಇವರ ಸಿಬ್ಬಂದಿಯಲ್ಲಿದ್ದಾರೆ. ಶ್ರೀ ವರದರಾಜ ಆಚಾರ್ ಇವರಲ್ಲಿ ಅಗ್ರಗಣ್ಯರು.

ಜನಸೇವೆಯನ್ನೇ ತನ್ನ ಮುಖ್ಯಧ್ಯೇಯವಾಗಿಟ್ಟುಕೊಂಡಿರುವ ಎಸ್.ಎಲ್.ಶೇಟ್ ಡೈಮಂಡ್ ಹೌಸ್ ತನ್ನ ಜನಪ್ರಿಯತೆಯ ಕುರುಹಾಗಿ ಇದೀಗ ಜನಮಹೋತ್ಸವವನ್ನು ಆಚರಿಸಿತು. ತನ್ನ ಘನತೆಗೆ, ಜನಾನುರಾಗಕ್ಕೆ, ಗೌರವಕ್ಕೆ ತಕ್ಕಂತೆ ವೈಭವವಾಗಿ ಈ ಉತ್ಸವ ಮೂಲೆ ಮೂಲೆಯನ್ನು ಆಕರ್ಷಿಸಿತು.

●●

ಯೇ ಇಡ ಬಯಸುವ ಇರಾದೆಯೇ ಇಲ್ಲಿ ತಲೆಹಾಕಿ ನೋಡುತ್ತದೆ.

ಸರಕಾರದ ಈ ಇಂಗ್ಲಿಷ್ ನೀತಿಯನ್ನು ಪಂಡಿತ ವರ್ಗವು ಒಂದಾಗಿ ವಿರೋಧಿಸಬೇಕು. 1— —70ರಂದು ಸೇವೆಯಲ್ಲಿದ್ದ ಎಲ್ಲ ಪಂಡಿತರಿಗೂ 17-4 ರ ವೇತನ ಶ್ರೇಣಿಯನ್ನು ನೀಡುವಂತೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸರಕಾರವನ್ನು ಸರಿಯಾದ ಮಾರ್ಗದಲ್ಲಿ ಒತ್ತಾಯ ಪಡಿಸಬೇಕು. 1— —70ರಂದು ಗ್ರೇಡ್ 1ರಲ್ಲಿದ್ದ ಪಂಡಿತರಿಗೆ 250-500ರ ಶ್ರೇಣಿಯನ್ನು ಗೊತ್ತು ಪಡಿಸಿದ ಸರಕಾರವು ಬೇಸಗೆಯ ಶಿಬಿರ ಪೂರ್ಣಮಾಡಬೇಕೆಂಬ ಕರಾರು ಹಾಕಲಿಲ್ಲವೆಂಬುದು ಗಮನೀಯ. ಹಾಗಿರುವಾಗ ಉಳಿದವರ ಮಟ್ಟಿಗೆ ಅಂತಹ ಕುಂಟುಪಂಕ್ತಿಯು ಹಳೆಯ ಹುಲಿಗಳನ್ನು ತೃಪ್ತಿಪಡಿಸಿ ತಮ್ಮ ಉದ್ದೇಶಗಳನ್ನು ಸಾಧಿಸುವ ವಿಚಿತ್ರ ತಂತ್ರವೆಂಬುದು ಸುಸ್ಪಷ್ಟ.

ಪಂಡಿತ ವರ್ಗವನ್ನು ಒಡೆದು ಆಳುವ ಸರಕಾರಿ ನೀತಿಯನ್ನು ವಿರೋಧಿಸಬೇಕು; ಗೌರವ—ಪ್ರತಿಷ್ಠೆಯ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಪಂಡಿತವರ್ಗ ಒಂದಾಗಿ ಜನಾಭಿಪ್ರಾಯ ಮೂಡಿಸಬೇಕು. ಕೇಳಿಕೆ—ಬೇಡಿಗೆ—ವಿನಂತಿ— ಮನವಿಗಳಿಗೆ ಸರಕಾರವು ನ್ಯಾಯದಾನ ಮಾಡಲು ನಿರಾಕರಿಸಿದರೆ, ನೇರ ಕ್ರಮವನ್ನೇ ಕೈಕೊಂಡಾದರೂ ಗೌರವಕ್ಕಾಗಿ ಹೋರಾಡಲೇಬೇಕು.

'ಸಮಾನ ಕೆಲಸ—ಸಮಾನವೇತನ'ವೆಂಬ ಸಾಮಾಜಿಕ ನ್ಯಾಯಕ್ಕಾಗಿ, ಭಾರತದ ಒಂದು ರಾಜ್ಯದಲ್ಲಿ ಭಾರತೀಯ ಭಾಷ್ಯಾ ಪಂಡಿತರಿಗಾಗುತ್ತಿರುವ ಅಪಮಾನವನ್ನು ತೊಳೆಯಲು ಬದ್ಧಕಟಿಯಾಗಬೇಕು. ಮಾಧ್ಯಮಿಕ ಶಿಕ್ಷಣ ಮಂಡಳಿ, ಭಾಷಾ ಪಂಡಿತ ಸಂಘಗಳು ಒಂದಾಗಿ ಸೂಕ್ತ ವಿಧಾನಗಳನ್ನು ರೂಪಿಸಬೇಕು. ಪದವೀಧರ ಭಾಷಾ ಪಂಡಿತರೆಂಬ ಭೇದಭಾವನೆಯನ್ನು ಕಿತ್ತು ಹಾಕದೆ ಶಿಕ್ಷಣ ರಂಗ ಪವಿತ್ರವಾಗುವುದಿಲ್ಲ; ಆದುದರಿಂದ ಶಿಕ್ಷಣ ತಜ್ಞರ ಶ್ರೀ ಸಾಮಾನ್ಯರ, ಸಮಾಜವಾದಿಗೆ, ಭಾರತೀಯ ಭಾಷಾಭಿಮಾನಿಗಳ ಬೆಂಬಲ ಪಂಡಿತವರ್ಗಕ್ಕಿದೆಯೆಂಬುದು ನಿರ್ವಿವಾದ.

●●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಆಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು—1

Tele: GOLDKING Estd: 1947 Phone: 3242 Res: 3272

HOTEL SATKAR

Boarding, Lodging & Restaurant

Behind Corporation Office.

9 Mission Road — Bangalore—27.

Phone No.— 1 72303 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಗೇಹರಾಜ್ಯದಲ್ಲಿ
ಸರ್ವಾರ್ಥಸಿದ್ಧ ಸದ್ಭಾವನೆ

'ಮುಜಿಬುರ್ ರಹಮಾನರ ಬಂಗ್ಲಾ ದೇಶ ಸರಕಾರವೊಂದನ್ನು ಘೋಷಿಸಿಕೊಂಡಿದೆಯಂತಲ್ಲಾ?'

'ಹೌದು. ತಮ್ಮ ವಿಜಯ ಸನ್ನಿಹಿತವೆಂದು ಖಾತರಿಯಾದ ಮೇಲೆ ಅವರೀ ಕ್ರಮ ಕೈಗೊಂಡರು.'

"ಅದು ಸರೀನ್ನಿ. ಅಂದ್ರೆ ಬಂಗ್ಲಾ ದೇಶದ ಬಹು ಭಾಗ ಮುಕ್ತಿಸೇನೆಯ ಕೈಯಲ್ಲಿದೆ ಅಂದ ಹಾಗಾಯ್ತು.'

"ಅಷ್ಟೇನೇ ಮತ್ತೆ? ಹೆಚ್ಚಿನ ಮುಖ್ಯ ನಗರಗಳೂ ಅವರ ಹತೋಟಿಯಲ್ಲಿವೆಯೆಂದು ವರದಿ.'

'ಅಲ್ಲಾರಿ, ಯಾಹ್ಯಾಖಾನರು ತಮ್ಮದೇ ಮೇಲುಗೈಯೆಂದು ದಡಿಗಂಟಲಲ್ಲಿ ಒದರುತಿದ್ದಾರಲ್ಲಾ?"

"ಸುಳ್ಳು ಹೇಳುವುದು, ಅಪಪ್ರಚಾರ ಮಾಡುವುದು ಪಾಕ್-ಚೀನೀಯರ ಜನ್ಮಸಿದ್ಧ ಹಕ್ಕು. ಅದನ್ನು ಅಪಹರಿಸುವುದು ಯಾರಿಂದಲೂ ಸಾಧ್ಯವಿಲ್ಲ.'

'ಅಂದ್ರೆ ಪಾಕ್ ರೇಡಿಯೋ ಸುಳ್ಳು ಪ್ರಸಾರ ಮಾಡುತ್ತಿದೆಯೆನ್ನುತ್ತೀರಾ?'

'ಒಂದು ರೀತಿಯಿಂದ ಅದನ್ನು ಯಾಕೆ ದೂರಬೇಕು? ತಾವು ಸೋಲುತಿದ್ದೇವೆಂದು ಹೇಳಿದರೆ ಸೈನ್ಯ ಮುಂಮೆಟ್ಟುವುದುಂಟೆ?"

'ಅದಕ್ಕೇ ಈಯೆಲ್ಲ ಸುಳ್ಳು ಪಳ್ಳು ವರದಿ....'

'ಹ್ಞೂಂ....'

'ಸ್ವಾಧೀನ ಬಂಗ್ಲಾ ಸರಕಾರಕ್ಕೆ ರಹಮಾನರೇ ರಾಷ್ಟ್ರಪತಿಗಳಂತೆ.'

'ಅಲ್ಲವೇ ಮತ್ತೆ? ಏಳೂವರೆ ಕೋಟಿ ಬಂಗಾಳಿಗಳ ಆರಾಧ್ಯ ಮೂರ್ತಿಗೆ ಆ ಪಟ್ಟ ನ್ಯಾಯವಾಗೇ ಸಲ್ಲಬೇಕು;'

'ಹ್ಞೂಂ....'

'ಆದರೆ ಮುಜಿಬುರ್ ರಹಮಾನರು ಎಲ್ಲಿ ಇದ್ದಾರೆಂಬುದೇ ಸಂದೇಹಾಸ್ಪದವಿರುವಾಗ?'

'ಅಯ್ಯೋ, ಅವರನ್ನು ಪೂ. ಪಾಕಿಗೆ ತಂದು ಬಂಧನದಲ್ಲಿರಿಸಿದೆಯೆಂಬ ಸುದ್ದಿ..'

'ಸುದ್ದಿ ಮಾತ್ರವಲ್ಲ ಕಣೇ, ಚಿತ್ರವೊಂದೂ ಪ್ರಕಟವಾಗಿದೆ.'

'ಹ್ಞೂಂ....ಅದ್ರೆ ನೋಡಿ, ಚಿತ್ರದಲ್ಲಿ ಮುಜಿಬುರ್ ರೂಪವೇನೋ ಸ್ಪಷ್ಟವಿದ್ದಂತಿದೆ; ಆದರೆ, ಅವರನ್ನು ಕಾಯುತ್ತಿರುವವರನ್ನುವ ಪೋಲೀಸರದ್ದು ಅಸ್ಪಷ್ಟ....'

'ಅಂದರೆ, ಅದು ಸುಳ್ಳು ಚಿತ್ರ....'

'ಮುಜಿಬುರ್ ಸೋಗು ಹಾಕಿದ ಯಾವನಾದರೂ ಖಾನನೊಬ್ಬನದ್ದೇಕಿರಬಾರದು? ಚಿತ್ರ ತೆಗೆದ ಮೂಲವನ್ನು ಪ್ರಕಟ ಮಾಡಿದವರು ಬಚ್ಚಿಟ್ಟಿದ್ದಾರೆ....'

'ನೋಡು, ಅದು ಯುದ್ಧ ತಂತ್ರ. ಬಂಧಿ ಮುಜುಬರನ್ನು ಬಿಡಿಸಲು ಮುಕ್ತಿಸೇನೆ ಫೇರಾಯಿಸಿದರೆ?'

'ಫೋಟೋ ಮುಜಿಬರ ಚಿತ್ರ ಪ್ರಕಟನೆಯೂ ಮತ್ತೊಂದು ಬಗೆಯ ಯುದ್ಧ ತಂತ್ರ ..'

'ಅದು ಹೌದೂನ್ನು. ಈ ಚಿತ್ರ ಬಿಡುಗಡೆಯಾದ ಮೇಲೆ ಮುಕ್ತಿಸೇನೆಗೆ ವೀರಾವೇಶ ಬಂದಂತಿದೆ. ನೋಡು.'

'ಅಲ್ಲಾರಿ, ಮುಜಿಬರ ಕೆಚ್ಚೆದೆಯ ಪರಿಚಯವೀಗ ವಿಶಾಲ ಜಗತ್ತಿಗೆ ಆಗತೊಡಗಿಲ್ಲವಲ್ಲ?'

'ಛೆ, ಇಲ್ಲದೆ ಉಂಟೆ? ನೋಡು, ತಾನು ಒದಗಿಸಿದ ಗೋಧಿಯನ್ನು ಮಾನವೀಯ ಅವಶ್ಯಕತೆಗಳ ಆಧಾರದಲ್ಲಿ ವಿತರಣೆ ಮಾಡಬೇಕೆಂದು ಅಮೆರಿಕೆ ತಿಳಿಸಿದೆಯಂತೆ.'

'ಅಂದರೆ?'

'ಆ ಏಳು ಲಕ್ಷ ಟನ್ ಗೋದಿಯಾಗ ಪೂ. ಪಾಕಿಸ್ತಾನದಲ್ಲಿದೆ....'

'ಎಲ್ಲಿಯ ಪೂ. ಪಾಕಿಸ್ತಾನ? ಅವಾಗಲೇ ಸ್ವಾಧೀನ ಬಂಗ್ಲಾ ದೇಶವಾಗಿ ಹೋಗಿದೆಯಲ್ಲಾ?'

'ಹೌದು. ಆದರೂ ಅದಕ್ಕೆ ವಿಶ್ವಮಾನ್ಯತೆ ದೊರಕಿಲ್ಲ.'

'ಇದೆಂತಹ ಮಾನವೀಯ ದೃಷ್ಟಿಯೋ! ಇರಲಿ. ಆ ಗೋದಿಯನ್ನು....'

'ಪಾಕ್ ಸೇನೆಯ ಹೊಟ್ಟೆ ಹೊರೆಯಲು ಮಾತ್ರ ಬಳಸಿದರೆ ಮುಂದೆ ಗೋದಿ ಕೊಡುವುದಿಲ್ಲ; ಬಂಗಾಳಿಗಳಿಗೂ ಹಂಚಬೇಕು ಎನ್ನುತ್ತದೆ ಅಮೆರಿಕೆ.'

'ಅಲ್ಲಾರಿ ಗೋದಿಯಿರುವುದು ಯಾಹ್ಯಾಖಾನರ ಮುಷ್ಟಿಯಲ್ಲಿ. ಅದರ ಮೇಲೆ ನಿಕ್ಸನ್ನರದ್ದೇನು ನಡೆಯುತ್ತದೆ?'

"ನಡೆಯದೆ ಉಂಟೆ?"

"ನಡೆಯುತ್ತದೆ ನೋಡಿ, ಶಸ್ತ್ರಾಸ್ತ್ರಗಳಂತೆಯೇ. ತಾನು ನೀಡಿದ ಟ್ಯಾಂಕ್, ಬಾಂಬರ್ ಶಸ್ತ್ರಾಸ್ತ್ರಗಳಿಂದ ನಿರೀಹ ಬಂಗಾಳಿಗಳನ್ನು ಇರುವೆಗಳಂತೆ ಕೊಲ್ಲುತ್ತಿರುವಾಗ ...'

'ಅದಕ್ಕಾಗೇ ಅಸ್ತ್ರ ಸರಬರಾಜಿನ ಬಗ್ಗೆ ಪುನರಾಲೋಚಿಸುತ್ತಾರಂತೆ....'

'ಅದ್ರೆ ನೋಡಿ, ಈ ಇಬ್ಬಗೆಯ ನೀತಿಯಿಂದ ಅಮೆರಿಕೆ ಪಾಕಿಸ್ತಾನದ ಸ್ನೇಹವು ಳಿಸಿಕೊಳ್ಳಬಹುದಷ್ಟೆ....'

"ಏನೇ? ದುಡ್ಡಿದ್ದವನೇ ದೊಡ್ಡಪ್ಪನಾಗಿರುವಾಗ....'

'ಹ್ಞೂಂ...ಅದೂ ಹೌದು. ಆದರೂ ಅದು ಸ್ನೇಹ ವ್ಯವಹಾರವಲ್ಲ; ಅಸಹಾಯಕತೆಯ ವ್ಯಾಪಾರ....'

'ಅದ್ಯಾವ ಹೆಸರಿಂದಲೇ ಕರೀಲಿ, ಅಮೆರಿಕೆಗದು ಸ್ನೇಹ....'

'ಆಯ್ತಪ್ಪ. ಅಲ್ಲ, ಬಂಗ್ಲಾ ಜನತೆಗೆ ಸಹಾನುಭೂತಿ ತೋರಿಸುವ ಭಾರತ ಆ ಸರಕಾರಕ್ಕೆ ಮನ್ನಣೆ ನೀಡಬಾರದೇಕೆ?'

'ನೀಡಬಹುದು. ಬಂಗ್ಲಾ ದೇಶೀಯರ ಇರಾದೆಯೊದರೂ ಇದೇ. ವಿಶ್ವಮಾನ್ಯತೆ ಪಡೆಯುವ ಪ್ರಯತ್ನದಲ್ಲಿ ಸರಕಾರ ರಚನೆಯೊಂದು ಮಹತ್ವದ ಮೈಲಿಗಲ್ಲು. ಆದರೆ....'

'ಏನು?'

'ಸ್ವಾಧೀನ ಬಂಗ್ಲಾ ದೇಶದ ಸರಕಾರಕ್ಕೆ ಮಾನ್ಯತೆ ನೀಡುವುದೆಂದರೆ. ಯಾಹ್ಯಾಖಾನರ ಕಪಾಳಕ್ಕೆ ಹೊಡೆದು ಕೆಡೆದಂತೆ....'

'ಹ್ಞೂಂ....'

'ಆದ್ದರಿಂದ ಭಾರತ ಬಿಡು, ಯಾವ ದೇಶವೂ ಇಷ್ಟು ಶೀಘ್ರವಾಗಿ ಮಾನ್ಯತೆನೀಡಲಾರದು. ಅದ್ರಲ್ಲೂ ನಮ್ಮ ಮಾತೇ ಬೇರೆ....'

'ಏಕೆ?'

'ನೋಡು, ಇಂದಿರಾಗಾಂಧಿ ಅಂದಿದ್ದಾರೆ—ನಾನೇನೆಂದರೂ ಪಾಕಿಸ್ತಾನ ಬೇರೆಯೇ ತಿಳಿಯುತ್ತದೆಂತ....'

'ಅದು ಸರೀನ್ನಿ. ಆದರೂ ಮಾನವತೆಯ ನೆಲೆಯಲ್ಲಿ ಮಾನ್ಯತೆಯೇಕೆ ನೀಡಬಾರದು?'

'ಬಾರದೆಂದೇನೂ ಇಲ್ಲ. ಆದರೂ ದೀರ್ಘಾಲೋಚನೆ ಮಾಡಬೇಕಾಗುತ್ತದೆ. ಪ್ರಮುಖ ರಾಷ್ಟ್ರಗಳ ಪ್ರತಿಕ್ರಿಯೆಯೇನೆಂಬುದು ಮೊದಲು ಹೊರಪಡಬೇಕು; ಢಾಕ್ಕಾದಿಂದ ಅಧಿಕೃತ ಬೇಡಿಕೆ ಬಂದ ಮೇಲೆಯೇ ಈ ಪ್ರಶ್ನೆ ವಿಚಾರಣೀಯ....'

'ಮಹಾರಾಷ್ಟ್ರಗಳು ಮಹಾ ಮೌನ ವ್ರತ ಧರಿಸದೆ ಮತ್ತೇನು ಮಾಡಬಹುದು? ಗೆಲ್ಲುವ ಹಂತ ಕಾಣಿಸಿದಾಗ ಬಾಲ ಹಿಡಿಯ ಹೋಗುತ್ತವೆ.'

'ಅದು ಸರೀನ್ನು ಆದರೂ ಇದೆಲ್ಲ ನನ್ನ [illegible] ಜಗಳ [illegible]. ಒಂದು ನಿಜ್ಜ ಜಾಣರ [illegible] [illegible] ಪ್ರಶ್ನೆ [illegible]....'

'[illegible] ಸರಿ [illegible]'

'ಒಳ್ಳೆಯ ಕೆಲಸ ಮಾಡುತ್ತೀರ ನನಗೆ ನಾಲ್ಕು ಒಳ್ಳೆಯ ಮಾತುಗಳು—ಹೃದಯಾಂತರಾಳದ ಸದ್ಭಾವನೆ-ಸಹಾನುಭೂತಿ....'

'ಇದರಿಂದೇನಾಗುತ್ತದೆ?'

"ಸದ್ಭಾವನೆಯಿಂದ ಸಿದ್ಧವಾಗುತ್ತದೆ. ವಾಚ್ಯ ಸದ್ಭಾವನೆಗಿಂತ ಮೌನ ಸದ್ಭಾವನೆಯೇ ಹೆಚ್ಚು ಪರಿಣಾಮಕಾರಿಯಂತೆ.."

'ಹ್ಞೂಂ....'

'ಏನು?'

'ಏನಿಲ್ಲನ್ನಿ....'

'ಹ್ಞೂಂ...ಗೊತ್ತಾಯಿತು ಬಿಡು....'

'ಹ್ಞೂ....' —ಗೋದಾ

●●

(ಮೂರನೇ ಪುಟದಿಂದ)

ವಾಗಿ ಮೂಡಿಬರುವ ಈ ಕೇಂದ್ರ, ಉಡುಪಿಯ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿನ ಆವರಣದಲ್ಲಿ ನಡೆಯಲಿರುವುದು. ಯಕ್ಷಗಾನದ ವಿವಿಧ ಅಂಗಗಳಲ್ಲಿ ಪರಿಣತರಾದ ಶ್ರೀ ವೀರಭದ್ರ ನಾಯಕರ ಗುರುತನದಲ್ಲಿ ನಮ್ಮ ವೃತ್ತಿನಿರತ ತರುಣರು ತಮ್ಮ ಶಕ್ತಿಯನ್ನು ಊರ್ಜಿತಗೊಳಿಸಬಹುದು. ಯಕ್ಷಗಾನದಲ್ಲಿ ಆಸಕ್ತಿಯಿರುವವರು ಸೂಕ್ತ ತರಬೇತಿ ಹೊಂದಬಹುದು. ಜಾನಪದ ಕಲೆ ಯಕ್ಷಗಾನದ ತರಬೇತಿಗೊದಗಿದ ಈ ಸದವಕಾಶವನ್ನು ಆಸಕ್ತರು ಉಪಯೋಗಿಸಿ ಕೇಂದ್ರದ ಯಶಕ್ಕೆ ನಾಂದಿ ಹಾಡಬೇಕು.

●●

ಸನ್ಮಾನ ಸಮಾರಂಭ

ಕಟೀಲು:—ಸ್ಥಾನೀಯ ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ನಿರ್ಮಾಣದ ಪ್ರಧಾನ ಕಾರಣ ಕರ್ತ ಹಾಗೂ ಸ್ಥಾಯೀ ಸದಸ್ಯರಾದ ಶ್ರೀ ಕೆ. ಕೃಷ್ಣರಾಯರನ್ನು ಸನ್ಮಾನಿಸುವ ಕಾರ್ಯಕ್ರಮವೊಂದು ಕಟೀಲು ಶ್ರೀ ದೇವಿಯ ವಾರ್ಷಿಕೋತ್ಸವಾಂಗವಾದ ಸಾಂಸ್ಕೃತಿಕ ಸಮಾರಂಭದ, ತಾ. 16-4-71 ರಂದು ಕಟೀಲು ಶಾಲಾ "ಶಾರದಾ ಸದನ"ದಲ್ಲಿ ಮಂಗಳೂರಿನ ಪ್ರೊ| ಎಸ್. ವಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನಾ ಗೀತೆಯ ನಂತರ ಹೂ ಹಾರಗಳ ಮೂಲಕ ಅತಿಥಿಗಳನ್ನು ಗೌರವಿಸಲಾಯಿತು.

"ಯುಗ ಪುರುಷ" ಸಂಪಾದಕ ಶ್ರೀ ಕೊಡತ್ತೂರು ಅನಂತ ಪದ್ಮನಾಭ ಉಡುಪರು ಸ್ವಾಗತಭಾಷಣ ಮಾಡಿ ಸನ್ಮಾನ ಪತ್ರ ಓದಿದರು. ಶ್ರೀ ಕೆ. ಗೋಪಾಲಕೃಷ್ಣ ಅಸ್ರಣ್ಣರು, ಕಟೀಲಿನ ಬಗ್ಗೆ ಶ್ರೀ ಕೆ. ಕೃಷ್ಣರಾಯರಿಗಿರುವ ಅದರಾಭಿಮಾನವನ್ನು ಸೂಚಿಸಿದರು. ಶ್ರೀ ಕೃಷ್ಣರಾಯರು ತನ್ನನ್ನು ಆತ್ಮೀಯತೆಯಿಂದ ಸನ್ಮಾನಿಸಿದುದಕ್ಕಾಗಿ ಅಭಿನಂದಿಸಿದರು. ಅಧ್ಯಕ್ಷರ ಭಾಷಣಾನಂತರ ಕೊ. ಅ. ಉಡುಪರು ಧನ್ಯವಾದಾರ್ಪಣೆಗೈದರು.

[ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ]

ಕಾಂಗ್ರೆಸ್ ವಸ್ತುಪ್ರದರ್ಶನ

1971

ಸುಭಾಷ್‌ನಗರ, ಬೆಂಗಳೂರು—9.

25—3—71 ರಿಂದ ಪ್ರಾರಂಭವಾಗಿದೆ

- ಪ್ರತಿ ದಿನವೂ ಖ್ಯಾತ ಕಲಾವಿದರಿಂದ ಮನರಂಜನೆ
- ರಾಜ್ಯದ ಅಭಿವೃದ್ಧಿಯ ವಿಹಂಗಮ ನೋಟ
- ಕೈಗಾರಿಕಾಭಿವೃದ್ಧಿಯ ಸತ್ಯ ಚಿತ್ರ
- ಗಾಂಧಿ ದರ್ಶನ ಮಂಟಪ
- ಸ್ವಾತಂತ್ರ್ಯ ಹೋರಾಟದ ಚಿತ್ರಶಾಲೆ
- ಎಲ್ಲವೂ ಕೂಡಿದ ಪುಟ್ಟದೊಂದು ಪ್ರಪಂಚ—

ಈ ಭವ್ಯ ಪ್ರದರ್ಶನ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 557/1970

ಬಿ. ಯಮ್. ಮಹ್ಮದ್—ವಾದಿ

ಮತ್ತು

ಚಿನ್ನಮ್ಮ ಸಹಾ—ಪ್ರತಿವಾದಿ

ಬೆಳ್ತಂಗಡಿ ತಾಲ್ಲೂಕು ಕರಿಮಣೇಲು ಗ್ರಾಮದಲ್ಲಿರುವ 1ನೇ ಪ್ರತಿವಾದಿ ಚಿನ್ನಮ್ಮ ಹೆಗ್ಗಡ್ತಿಯವರಿಗೆ

ಮೇಲ್ಕಂಡ ವ್ಯವಹರಣೆಯಲ್ಲಿ ಗೇಣಿ ವಸೂಲಿ ಬಗ್ಗೆ ಅರ್ಜಿದಾರನು ಅರ್ಜಿಕೊಟ್ಟಿರುವುದರಿಂದ ಆ ಕುರಿತು ನಿಮಗೇನಾದರು ಆಕ್ಷೇಪಣೆ ಇದ್ದ ಪಕ್ಷದಲ್ಲಿ ಅದನ್ನು 1971ನೇ ಇಸವಿ ಮೇ ತಿಂಗಳ ತಾರೀಕು 31ರಲ್ಲು ಹಗಲು 11 ಗಂಟೆಗೆ ನೀವು ಖುದ್ದಿನಿಂದಾಗಲೀ ವಕೀಲ ದ್ವಾರಾ ಆಗಲೀ ಹಾಜರಾಗತಕ್ಕದ್ದು. ತಪ್ಪಿದರೆ ಸದರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(By order)

N. J. Kadamba

Advocate, Belthangady

ಕೆನರಾ ಬೇಂಕಿಂಗ್ ಕೊರ್ಪೊರೇಶನ್ನಿನ ಹೊಸ ಅಧ್ಯಕ್ಷರಿಗೆ ಸ್ವಾಗತ ಸಮಾರಂಭ

ಜಿಲ್ಲೆಯ ಹಿರಿಯ ಬೇಂಕುಗಳಲ್ಲಿ ಒಂದಾದ ಕೆನರಾ ಬೇಂಕಿಂಗ್ ಕೊರ್ಪೊರೇಶನ್ನಿನ ಹೊಸ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಶ್ರೀ ಎಂ. ಆರ್. ಕಾಮತರನ್ನು ಸನ್ಮಾನಿಸಲು ಬೇಂಕಿನ ಸಿಬ್ಬಂದಿಯವರು ತಾ. 6-4-71 ರಂದು ಮಂಗಳೂರಿನ ವುಡ್‌ಲೇಂಡ್ಸ್ ಹೋಟೆಲಿನಲ್ಲಿ ಸ್ವಾಗತ ಸಮಾರಂಭ ಏರ್ಪಡಿಸಿದ್ದರು. ಪ್ರಾರ್ಥನೆ ಹಾರ ಸಮರ್ಪಣೆಗಳಾದ ಬಳಿಕ ಶ್ರೀ ಯು. ವಿ.ಕೆ. ಪ್ರಭುಗಳು ಸ್ವಾಗತಿಸಿದರು. ಶ್ರೀ ಟಿ. ವಾಸುದೇವರಾಯರು ಮಾತನಾಡಿ ಬೇಂಕಿಂಗ್ ಕ್ಷೇತ್ರದಲ್ಲಿ ಪರಿಪಕ್ವ ಅನುಭವಸ್ಥರಾದ ಶ್ರೀ ಎಂ. ಆರ್. ಕಾಮತರನ್ನು ಅಧ್ಯಕ್ಷರನ್ನಾಗಿ ಡೈರೆಕ್ಟರ್ ಮಂಡಳಿಯವರು ಆರಿಸಿರುವುದು ಬೇಂಕಿನ ಭಾವೀ ಪ್ರಗತಿಯ ಸೂಚಕವೆಂದೂ, ಸಿಬ್ಬಂದಿಯವರು ಯೋಗ್ಯ ಸಹಕಾರ ನೀಡಬೇಕೆಂದೂ ಹೇಳಿದರು. ಶ್ರೀ ಕೆ. ವಿ. ಬಿ. ಪೈಯವರು ಮಾತನಾಡುತ್ತಾ ಶ್ರೀ ಎಂ. ಆರ್. ಕಾಮತರು ರಿಸರ್ವ್ ಬೇಂಕಿನಲ್ಲಿ ಹಲವು ವರುಷ ಸೇವೆ ಸಲ್ಲಿಸಿದ ಅನುಭವಶಾಲಿಗಳೆಂದೂ ಬೇಂಕು ಪ್ರಗತಿಯತ್ತ ಸಾಗುವುದು ನಿಶ್ಚಿತವೆಂದೂ ಹೇಳಿದರು.

ಅತಿಥಿ ಶ್ರೀ ಎಂ. ಆರ್. ಕಾಮತರು ಮಾತನಾಡುತ್ತಾ, ನಾನು ವಾಣಿಜ್ಯ ಬೇಂಕುಗಳೊಂದಿಗೆ ಸಂಪರ್ಕ ಇದ್ದವನು. ಜಿಲ್ಲೆಯ ಬೇಂಕುಗಳಿಗೆ ಭಾರತದಲ್ಲಿ ವಿಶಿಷ್ಟ ಸ್ಥಾನವಿದೆ. ಸಿಬ್ಬಂದಿಯ ಸಹಕಾರವೂ ಜನರ ಪ್ರೋತ್ಸಾಹವೂ ಇದ್ದರೆ ಬೇಂಕು ಶೀಘ್ರಗತಿಯಿಂದ ಉನ್ನತ ಸ್ಥಿತಿಗೇರುವುದಲ್ಲದೆ ಬೇಂಕು 'ಎ' ತರಗತಿಗೆ ಏರುವುದೆಂದೂ ತಿಳಿಸಿದರು. ಬಳಿಕ ಬೇಂಕಿನ ಪಬ್ಲಿಕ್ ರಿಲೇಶನ್ ಆಫೀಸರು ಕೆ. ಆರ್. ಕಾರಂತರು ಧನ್ಯವಾದಗಳನ್ನು ಸಮರ್ಪಣೆಗೈಯುತ್ತಾ ಬೇಂಕಿನ ಸರ್ವೋನ್ನತಿಗಾಗಿ ಪ್ರಯತ್ನಿಸುವ ಭರವಸೆ ಇತ್ತರು.

ಶ್ರೀ ಕೃಷ್ಣಾಪುರ ಸ್ವಾಮಿಗಳ ನಿರ್ಯಾಣ

ಉಡುಪಿಯ ಅಷ್ಟಮಠಗಳಲ್ಲಿ ಹಿರಿದೆನಿಸಿದ ಶ್ರೀ ಕೃಷ್ಣಾಪುರ ಮಠದ ಶ್ರೀವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ತಾ. 15-1-71 ನೇ ಸಾಯಂಕಾಲ ಆಕಸ್ಮಿಕವಾಗಿ ಹೃದಯಾಘಾತದಿಂದ ನಿರ್ಯಾಣ ಹೊಂದಿದುದು ವಿಷಾದಕರವಾಗಿದೆ. 2-3 ದಿನಗಳ ಹಿಂದೆ ಶ್ರೀಗಳವರಿಗೆ ಕಾಣಿಸಿಕೊಂಡ ಎದೆನೋವು ತಾ. 1 ರಂದು ವಿಶೇಷವಾದ್ದರಿಂದ ಅವರನ್ನು ನವೀನವಾಗಿ ನಿರ್ಮಿಸಿರುವ ರಾಮನಕಟ್ಟೆ ಮಠದಿಂದ ಉಡುಪಿ ಮಠಕ್ಕೆ ಕರೆತರಲಾಯಿತು. ಡಾಕ್ಟರರ ಚಿಕಿತ್ಸೆ ಫಲಿಸದೆ ಸಂಜೆ 7 ಗಂಟೆಗೆ ಶ್ರೀಗಳವರು ಹರಿಪದವನ್ನೈದಿದರು. ವಿಶೇಷ ಸಂಖ್ಯೆಯಲ್ಲಿ ಜನ ಧಾವಿಸಿ ಬಂದು ಶ್ರೀಗಳವರ ಅಂತ್ಯ ದರ್ಶನ ಪಡೆದರು. ಮೃತ ಶರೀರವನ್ನು ತೇರುಬೀದಿಯಲ್ಲಿ ಮೆರವಣಿಗೆಯೊಂದಿಗೆ ಪ್ರದಕ್ಷಿಣೆ ತಂದು ರಾಮನಕಟ್ಟೆಯ ಮಠಕ್ಕೆ ತಂದು ಅಲ್ಲಿಯೇ ಸಮಾಧಿಗೊಳಿಸಲಾಯಿತು.

ಶ್ರೀಪಾದಂಗಳವರು ಉಡುಪಿಯ ತಮ್ಮ ಮಠವನ್ನು ಕೆಲವು ವರುಷಗಳ ಹಿಂದೆ ಜೀರ್ಣೋದ್ಧಾರ ಮಾಡಿಸಿರುವುದಲ್ಲದೆ ಸಮೀಪದಲ್ಲೇ ಒಂದು ಬಯಲು ರಂಗಮಂಟಪವನ್ನು ನಿರ್ಮಿಸಿದ್ದರು. ಇತ್ತೀಚೆಗೆ ರಾಮನಕಟ್ಟೆಯಲ್ಲಿ ನೂತನ ಮಠವೊಂದನ್ನು ಕಟ್ಟಿಸಿ ಆಸುಪಾಸಿನ ತಮ್ಮ ಭೂಮಿಯನ್ನು ನಂದನವನವನ್ನಾಗಿ ಪರಿವರ್ತಿಸುವ ಉದ್ದೇಶವನ್ನಿಟ್ಟುಕೊಂಡಿದ್ದರು. ಅವರು ತಮ್ಮ ಪ್ರಥಮ ಪರ್ಯಾಯ ಕಾಲದಿಂದ "ಪ್ರಕಾಶಿನಿ" ಎಂಬ ಮಾಸಿಕವನ್ನು ಪ್ರಕಟಗೊಳಿಸುತ್ತಿದ್ದರಲ್ಲದೆ ಲಲಿತಕಲೆ ಸಾಹಿತ್ಯಾದಿಗಳಿಗೆ ಪ್ರಶಂಸನೀಯವಾಗಿ ಪ್ರೋತ್ಸಾಹ ಕೊಡುತ್ತಿದ್ದರು. 1920ರಲ್ಲಿ ಇವರ ಜನನ. 1935ರಲ್ಲಿ ಪುತ್ತಿಗೆ ಮಠದ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರಿಂದ ಸನ್ಯಾಸ ದೀಕ್ಷೆ ಸ್ವೀಕರಿಸಿ ಎರಡು ಬಾರಿ ವಿಜೃಂಭಣೆಯಿಂದ ಪರ್ಯಾಯ ನೆರವೇರಿಸಿದ್ದಲ್ಲದೆ 1974ರಲ್ಲಿ ಪರ್ಯಾಯ ಪಟ್ಟವನ್ನು ಏರುವವರಿದ್ದರು.

ವಾರ್ಷಿಕೋತ್ಸವ

ದ. ಕ. ಜಿಲ್ಲಾ ಮೂಲ್ಯರ ಯಾನೆ ಕುಲಾಲರ ಸಂಘದ 46ನೇ ವಾರ್ಷಿಕೋತ್ಸವವು ತಾ. 4-4-71 ರಂದು ಸಂಘದ ಶ್ರೀದೇವಿ ದೇವಸ್ಥಾನದಲ್ಲಿರುವ ಸೇಜಾವರ ದೂಮಪ್ಪ ಸ್ಮಾರಕ ಕಲಾಮಂಟಪದಲ್ಲಿ ಡಾ॥ ಅಮ್ಮೆಂಬಳ ಬಾಳಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ಮುಂದಿನ ವರ್ಷಕ್ಕೆ ಆಡಳಿತೆ ಸಮಿತಿಯ ಆಯ್ಕೆಯಾಗಿ ಈ ಕೆಳಗಿನವರು ಪದಾಧಿಕಾರಿಗಳಾಗಿ ಆರಿಸಲ್ಪಟ್ಟರು. ಶ್ರೀ ಬಿ. ಚಂದಪ್ಪ ಬಂಗೇರ(ಅಧ್ಯಕ್ಷ), ಡಾ॥ ಅಮ್ಮೆಂಬಳ ಬಾಳಪ್ಪ (ಉಪಾಧ್ಯಕ್ಷ), ಶ್ರೀ ಬಿ ಬಾಲಕೃಷ್ಣ, (ಪ್ರಧಾನ ಕಾರ್ಯದರ್ಶಿ) ಶ್ರೀ ಬಿ. ರಾಮಮೂಲ್ಯ (ಜತೆ ಕಾರ್ಯದರ್ಶಿ), ಶ್ರೀ ಕೆ. ಕೆ. ಜನಾರ್ಧನ(ಸಂಘಟನಾ ಕಾರ್ಯದರ್ಶಿ), ಶ್ರೀ ಎಂ. ಗಂಗಾಧರ(ಕೋಶಾಧಿಕಾರಿ)

ಅಲ್ಲದೆ ಕೆಲವರು ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟರು.

ಕಡಂದಲೆಯಲ್ಲಿ ನಾಗಮಂಡಲ

ಕಡಂದಲೆಯಲ್ಲಿ ಅಪೂರ್ವ ವೈಭವದಿಂದ ನಡೆದ ಬ್ರಹ್ಮಕಲಶಾಭಿಷೇಕೋತ್ಸವದ ಕೊನೆಯ ದಿನದ ನಾಗಮಂಡಲ ಸೇವೆಯು ತಾ. 10-4-71 ರಂದು ಸಂಭ್ರಮದಿಂದ ನೆರವೇರಿದೆ. ಸಾಯಂ ಗಂಟೆ ಆರರಿಂದ ತೊಡಗಿ ರಾತ್ರಿ ಗಂಟೆ 1-30ರ ತನಕ ಸಿದ್ಧವಾದ ಈ ಮಂಡಲದಲ್ಲಿ ನಾಗಪಾತ್ರಿ ಶ್ರೀ ಅನಂತ ಸಾಮುಗರಿಂದ ನಾಗ ಕನ್ನಿಕೆಯರ ಮನಮೋಹಕ ಶಾಸ್ತ್ರೋಕ್ತ ಕುಣಿತ, ನಗೆತ, ಹಾಗೂ ಜಿಗಿತದ ಸುತ್ತಾಟದೊಂದಿಗೆ ನಾಗದರ್ಶನದ ಕಾರ್ಯಕ್ರಮ ಮೊದಲ್ಗೊಂಡು ಮರುದಿನ ಪ್ರಾತಃ ಗಂಟೆ 6ಕ್ಕೆ ಶ್ರೀ ಸಾಮುಗರಿಂದ ಸಾನ್ನಿಧ್ಯದ ನುಡಿಗಟ್ಟು ಮೊದಲ್ಗೊಂಡು ಹಲವಾರು ದಿನಗಳ ಭಕ್ತಿಯ ಪರಿಶ್ರಮದೊಂದಿಗೆ, ಶ್ರೀ ಸಂಜೀವ ಶೆಟ್ಟರು ಹಾಗೂ ಊರವರೊಂದಿಗೆ ಶ್ರೀ ಕೃಷ್ಣರಾಯರು ಗೈದ ಸತ್ಕಾರ್ಯ ಸರ್ವರೀತಿಯಿಂದಲೂ ತೃಪ್ತಿಕರವಾಗಿದೆ ಎಂಬ ಅಭಿಪ್ರಾಯ ನಿವೇದಿಸಲ್ಪಡಲಾಯಿತು.

ನಾಗಮಂಡಲದಂದು ಮಧ್ಯಾಹ್ನ 17 ಸಹಸ್ರಕ್ಕಿಂತಲೂ ಮಿಕ್ಕಿದ ಅಭ್ಯಾಗತರಿಗೆ ಮಹಾ ಸಂತರ್ಪಣೆಯ ವಿಶೇಷ ವ್ಯವಸ್ಥೆ ಇದ್ದು ಈ ನಾಗಮಂಡಲದ ಸಂದರ್ಶನಾರ್ಥ ಜಿಲ್ಲೆಯೊದ್ಯಂತದ ಮಾತ್ರವಲ್ಲ ಮದ್ರಾಸಿನಂತಹ ಮಹಾನಗರದಿಂದಲೂ ಅಪರಿಮಿತ ಸಂಖ್ಯೆಯ ಹಿತಚಿಂತಕರು ಆಗಮಿಸಿದ್ದರು.

ತಾ. 11-4-71 ರಂದು ಈ ಬ್ರಹ್ಮ ಕಲಶೋತ್ಸವದ ಕೊನೆಯ ಕಾರ್ಯಕ್ರಮವಾದ ಮಹಾಮಂತ್ರಾಕ್ಷತೆಯು ನೆರವೇರಿ ನೂರಾರು ಮಂದಿ ಪುರೋಹಿತ ವೃಂದಕ್ಕೆ ಕೊಡುಗೈಯ ದಾನ ದಕ್ಷಿಣಾದಿಗಳ ವಿತರಣೆಯು ಜರತಾರಿ ಶಾಲುಗಳೊಂದಿಗೆ ನೆರವೇರಿತು.

ಹಲವಾರು ಕಡೆಗಳಲ್ಲಿ ಈ ರೀತಿಯ ಸಮಾರಂಭಗಳು ನೆರವೇರಿದ್ದರೂ ಅವೆಲ್ಲವೂ ಹಲವಾರು ಪ್ರಮುಖರ ಕಾರಣದಿಂದಾಗಿ ಜರಗಿದ್ದು ಕೇವಲ ಶ್ರೀ ಕೆ. ಕೃಷ್ಣರಾಯರಂತಹ ಏಕೈಕ ವ್ಯಕ್ತಿಯ ಕಾರಣದಿಂದಾಗಿ ಮೂಲೆ ಕೊಂಪೆಯ ಜೀರ್ಣವಾದ ದೇವಾಲಯವೊಂದು ಸರ್ವಾಂಗ ಸುಂದರವಾಗಿ ಈ ರೀತಿಯ ಸಂಭ್ರಮದ ಸಮಾರಂಭ ನೆರವೇರಿದ್ದುದು ಕಡಂದಲೆಯಲ್ಲಿ ಮಾತ್ರವೆಂದು ಹೇಳಿದರೆ ತಪ್ಪಾಗದು.

ಶ್ರೀ ಕಡಂದಲೆಗುತ್ತು ಸಂಜೀವ ಶೆಟ್ಟರು ಶ್ರೀ ಕೃಷ್ಣರಾಯರಿಗೆ ಹೆಗಲಿಗೆ ಹೆಗಲುಕೊಟ್ಟು ತನ್ನೂರವರೊಂದಿಗೆ ಸಹಕರಿಸಿದ ಸಂಗತಿಯೂ ನಿಜಕ್ಕೂ ಪ್ರಶಂಸನೀಯ.

ಎಸ್. ಎಲ್. ಶೇಟ್ ಡೈಮಂಡ್ ಹೌಸ್‌ನ ರಜತೋತ್ಸವ

ಮಂಗಳೂರಿನ ಹೆಸರಾಂತ ಆಭರಣ ಗೃಹವಾದ ಮೆ। ಎಸ್. ಎಲ್. ಶೇಟ್ ಡೈಮಂಡ್ ಹೌಸ್‌ನ ರಜತ ಮಹೋತ್ಸವವು ತಾ. ೧೫ರಂದು ಸಂಜೆ ನಗರದ ಪುರಭವನದಲ್ಲಿ ಪದ್ಮಶ್ರೀ ಡಾ। ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಬೆಂಗಳೂರಿನ ಮೆ। ಸಿ. ಕೃಷ್ಣ ಚೆಟ್ಟಿ ಎಂಡ್ ಸನ್ಸ್‌ರವರ ಪಾರ್ಟ್ನರ್ ಶ್ರೀ ಸಿ. ವಿ. ಹಯಗ್ರೀವ್ ಅವರು ಮುಖ್ಯ ಅತಿಥಿಗಳಾಗಿದ್ದರು.

ಪ್ರಾರಂಭದಲ್ಲಿ ಮೆನೇಜಿಂಗ್ ಪಾರ್ಟ್ನರ್ ಶ್ರೀ ರಘುನಾಥ ಶೇಟ್‌ರವರು ಸ್ವಾಗತಿಸುತ್ತಾ ೧೯೪೬ರಲ್ಲಿ ಸಣ್ಣ ಪ್ರಮಾಣದಲ್ಲಿ ತನ್ನ ತೀರ್ಥರೂಪರವರಿಂದ ಪ್ರಾರಂಭವಾದ ಈ ಸಂಸ್ಥೆ ೨೫ ವರ್ಷಗಳಿಂದ ಬೆಳೆದು ಬಂದ ರೀತಿಯನ್ನು ವಿವರಿಸಿದ್ದಲ್ಲದೆ, ತಮ್ಮ ತೀರ್ಥರೂಪರವರ ಸದಾಚಾರ, ನಯವಂತಿಕೆ, ಪರೋಪಕಾರ ಬುದ್ಧಿ, ಧರ್ಮನಿಷ್ಠೆ, ದೈವಭಕ್ತಿಗಳೇ ಈ ಸಂಸ್ಥೆಯ ಪ್ರಗತಿಗೆ ಮುಖ್ಯ ಕಾರಣವೆಂದೂ ಅವರು ಅನುಸರಿಸಿದ ದಾರಿಯಲ್ಲೇ ಸಾಗಲು ತಾವೂ ಶ್ರಮಿಸುವುದಾಗಿಯೂ ತಿಳಿಸಿ ಸರ್ವರ ಸಹಕಾರವನ್ನು ಕೋರಿದರು. ರಜತೋತ್ಸವ ಅಂಗವಾಗಿ ಅತ್ಯಾಧುನಿಕವಾಗಿ ಸಂಘಟಿಸಿದ ತಮ್ಮ ಅಂಗಡಿಯ ಶೋ ರೂಮಿನಲ್ಲಿ ಇದೇ ತಾ. ೩೦ರ ವರೆಗೆ ನವೀನ ಮಾದರಿಯ ಆಭರಣ ವಜ್ರ ವೈಢೂರ್ಯಾದಿಗಳ ಪ್ರದರ್ಶನವೇರ್ಪಡಿಸಿದ್ದು ಎಲ್ಲರೂ ಸಹಕರಿಸಬೇಕೆಂದೂ ಶ್ರೀ ಶೇಟ್ ಪ್ರಾರ್ಥಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಸಿ. ವಿ. ಹಯಗ್ರೀವ್ ಮಾತನಾಡುತ್ತಾ ದೇಶದಾದ್ಯಂತ ಪ್ರಸಿದ್ಧವಾಗಿರುವ ಈ ಎಸ್. ಎಲ್. ಶೇಟ್ ಡೈಮಂಡ್ ಹೌಸ್ ಇನ್ನಷ್ಟು ಪ್ರಗತಿ ಹೊಂದಲೆಂದು ಹಾರೈಸಿ, ತನಗೆ ಈ ಸಮಾರಂಭದಲ್ಲಿ ಪಾಲ್ಗೊಂಡು ಸಂತೋಷಪಡುವ ಅವಕಾಶವಿತ್ತುದಕ್ಕೆ ಕೃತಜ್ಞತೆ ಸೂಚಿಸಿದರು.

ಟಿ. ವಿ. ಎಸ್. ಜೇಡೀಸ್‌ನ ಮೆನೇಜಿಂಗ್ ಡೈರೆಕ್ಟರರಾದ ಶ್ರೀ ಮಧುಸೂದನ ದತ್ತಾರಾಮ ಕುಶೆಯವರು ಸಂಸ್ಥೆಯ ಸ್ಥಾಪಕರಾದ ಶ್ರೀ ಎಸ್. ಎಲ್. ಶೇಟ್‌ರವರ ಭಾವಚಿತ್ರವನ್ನು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಸಿದ್ಧಪಡಿಸಲಾದ ಸ್ಮರಣ ಸಂಚಿಕೆಯನ್ನು ಶ್ರೀ ಮಜೇಲ್ ಶ್ರೀನಿವಾಸ ನಾಯಕರು ಉದ್ಘಾಟಿಸಿದರು. ಅಲ್ಲದೆ ಸಂಸ್ಥೆಯಲ್ಲಿ ೨೫ ವರ್ಷಗಳಿಂದಲೂ ಕೆಲಸಮಾಡಿಕೊಂಡಿದ್ದ ಶ್ರೀ ವಾದಿರಾಜಾಚಾರ್ಯ ಮತ್ತು ಇಬ್ಬರಿಗೆ ಪಾರಿತೋಷಕ ನೀಡಲಾಯಿತು.

ಡಾ। ಟಿ. ಎಂ. ಎ. ಪೈಯವರು ಮಾತನಾಡುತ್ತಾ ನಿಧಾನವಾಗಿ ಜಾಗ್ರತೆಯಿಂದ ಮುಂದುವರಿದರೆ ಅಭಿವೃದ್ಧಿ ಹೊಂದುವುದು ಸಾಧ್ಯ ಎಂಬುದಕ್ಕೆ ಈ ಸಂಸ್ಥೆಯೇ ಉದಾಹರಣೆ. ಈ ಸಾರ್ಥಕತೆಯನ್ನು ಪ್ರಾಮಾಣಿಕ ಶ್ರದ್ಧೆಗಳಿಂದ ಉಳಿಸಿಕೊಂಡು ಬೆಳೆಸಿಕೊಂಡು ಹೋಗುವುದು ಮುಖ್ಯ ಎಂದು ಹೇಳಿ ಸಂಸ್ಥೆಗೆ ಶುಭಕೋರಿದರು. ಕೊನೆಯಲ್ಲಿ ಶ್ರೀ ಬಿ.ಪಿ. ಭಾಸ್ಕರ ಅವರು ಧನ್ಯವಾದಗಳನ್ನರ್ಪಿಸಿದರು. ●

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant Boarding & Lodging.
107 Police Road. City Market.
BANGALORE-2

Centrally situated, delicious food.
Comfortable rooms, Courteous service.
Attached bath rooms with running hot and cold water.
Telephone attached rooms.

ಮಹೀಶೂರ ...
ರಾಜ್ಯಕೀಯ ನಾಟಕಂ

(ಎರಡನೇ ಪುಟದಿಂದ)

'ಓಹೋ, ಧಾರಾಳವಾಗಿ ತೆಗೆದುಕೊಳ್ಳಿ. ಇಷ್ಟು ದಿನ ಕಾದವನಿಗೆ ಇದೊಂದು ಹೆಚ್ಚಿನದಲ್ಲ. ಆದರೆ ನೋಡಿ. ಇದು ಮೀರಿತೆಂದರೆ, ಮತ್ತೆ ಕಾಯುವನಲ್ಲ. ಅನಿಶ್ಚಯತೆಯನ್ನು ಬಹಳಷ್ಟು ದಿನ ಮುಂದುವರಿಸಿಬಿಟ್ಟಿದ್ದೇನೆ.'

'ಅಪ್ಪಣೆ ಸ್ವಾಮಿ....'

o o o

'ನಾವು ಕಾದದ್ದೇ ಬಂತು. ಇಂದು ಗಂಟೆಯಿಂದ ಯಾರೊಬ್ಬರೂ ನಮ್ಮ ಪಾಳಯಕ್ಕೆ ಬರಲೇ ಇಲ್ಲ. ಸಮಯ ಮೀರುತ್ತಿದೆ. ಸಚಿವ ಪದವಿಯೂ ಬೇಡವೆನಿಸಿತೆ?'

'ಹಾಗಲ್ಲ ಇದು. ಇದು ಯಾರಿಗೆ ಬೇಡವೆನಿಸುತ್ತದೆ? ಕೆಲವರ ಹೆಸರು ಬಹಿರಂಗವಾಗಿ ಹೋದದ್ದರಿಂದ ಅಂಥವರು ಈಗ ಮತ್ತೊಮ್ಮೆ ಬಹಿರಂಗಕ್ಕೆ ಬರಲು ನಾಚುತ್ತಿರಬೇಕು.'

'ಇರಬಹುದು. ಆದರೂ ನಮ್ಮನ್ನು ಬಂದು ಕಾಣಬೇಕಾಗಿತ್ತು.'

'ಇತ್ತು. ನಾವೇನು ಹೇಳುತ್ತೇವೋ ಎಂದು ಅಂಜಿರಬಹುದು.'

'ಹ್ಞಾಂ.... ಹೋಗಲಿ ಬಿಡಿ. ಇನ್ನು ತಡ ಮಾಡುವುದೇಕೆ? ನಮ್ಮದಿಲ್ಲವೆಂದು ಹೇಳಿ ಬರೋಣ.'

o o o

'ಏನಂತೆ ಸಮಾಚಾರ?'

'ಮಹಾಸ್ವಾಮಿ, ನಮಗೇನೋ ಬಹುಮತವಿದೆ; ಆದರೂ ಸದ್ಯ ನಾವು ಸರಕಾರ ರಚಿಸಬಯಸುವುದಿಲ್ಲ.'

ಸರಿ. ನೀವಿನ್ನು ಹೋಗಬಹುದು; ನನ್ನ ಕೆಲಸ ಮುಂದುವರಿಸುತ್ತೇನೆ."

"ಅಪ್ಪಣೆ."

o o o

"ಸರಕಾರ ಕಟ್ಟುವುದು ಉರುಳಿಸುವುದು ಇವರಿಗೆಂದು ಫ್ಯಾಷನ್. ಪ್ರಜಾಪ್ರಭುತ್ವದ ದೊಡ್ಡ ರೋಗವಿದು. ಮುಂದೆ ಬರುವುದು ಮಳೆಗಾಲ ಅಕ್ಟೋಬರ— ನವೆಂಬರಗಳಲ್ಲಿ ಚುನಾವಣೆ ನಡೆದೀತು. ಆಗಾಗ ... ದಿ ... ವರೆಗಿನ ಸಮಯವನ್ನು ... ತಿಳಿಸಿಯೆಂದರೆ ನಾಳಿನ ಭಾವಿ ಶಾಸಕರಿಗೂ ಅಧಿಕಾರಿಗಳಿಗೂ ತಿಳಿಸಿಬಿಡುವ"

ಮಾನ್ಯ ರಾಷ್ಟ್ರಪತಿ ಅವರಿಗೆ— ನನ್ನ ಈ ಹಿಂದಿನ ವರದಿಯನ್ನು ಮಾನ್ಯ ಮಾಡಿ ಇಲ್ಲಿ ತಮ್ಮ ಆಡಳಿತೆ ಹೇರಿದ್ದನ್ನು ತಾವು ಮರೆತಿರಲಾರಿರಿ. ಅಂದು ವಿಧಾನ ಸಭೆಯನ್ನು ವಿಸರ್ಜಿಸಲಿಲ್ಲ. ಯಾರಾದರೂ ಮುಂದೆ ಬಂದು ಜನಪ್ರಿಯ ಸರಕಾರ ರಚಿಸಲೂ ಬಹುದೆಂಬ ಸಂದೇಹದಿಂದ ಹಾಗೆ ಮಾಡಲಾಗಿತ್ತು. ಆದರೆ, ಇಷ್ಟು ದಿನ ಕಾದ ಮೇಲೆ ವಿಧಾನ ಸಭೆಯ ಮೂರು ರಂಗಗಳೂ ತಾವು ಸರಕಾರ ರಚಿಸುವುದಿಲ್ಲವೆಂದು ಸ್ಪಷ್ಟ ಮಾತುಗಳಿಂದ ಹೇಳಿರುವುದರಿಂದ ವಿಧಾನ ಸಭೆಯ ವಿಸರ್ಜನೆ ಮಾಡಿ ಸಾಧ್ಯವಾದಷ್ಟು ಬೇಗನೇ ಚುನಾವಣೆಗೆ ಏರ್ಪಾಡು ಮಾಡಬೇಕೆಂದು ವಿನಂತಿ ಮಾಡಿ ಮಹೀಶೂರ ರಾಜ್ಯಕೀಯ ನಾಟಕಕ್ಕೆ ಅಂಕದ ಪರದೆ ಹಾಕಿಸಬಯಸುತ್ತೇನೆ."

"ಅಸ್ತು."

●●

NAVAYUGA 22-4-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಇದು ನಮ್ಮ ಭಾರತ

ಜಪಾನಿ ಪತ್ನಿಯ ಪತಿಪ್ರೇಮ

೧೯೪೨. ಜಪಾನ ಮತ್ತು ಮಿತ್ರ ರಾಷ್ಟ್ರಗಳ ನಡುವೆ ಭೀಕರ ಹೋರಾಟ ನಡೆಯುತಿತ್ತು. ಇದೇ ಹೊತ್ತು ಸಿಂಗಾಪುರದಿಂದ ಭಾರತೀಯನೊಬ್ಬನು ದೀಪವುರಿಸಿದನು. ಆತನು ಭಾರತೀಯ ವಿಮೋಚನಾ ಪಡೆಯ ಸೈನಿಕನಿದ್ದನು. ಆತನ ಪತ್ನಿ ಒಬ್ಬಾಕೆ ಜಪಾನೀಯಳಿದ್ದಳು. ಆವನು ಪತ್ನಿಯನ್ನು ಭೆಟ್ಟಿಯಾಗಿ ಆಕೆಗೆ ತಿಳಿಸಿದನು— 'ಪ್ರಿಯೆ ಮಾತೃಭೂಮಿ ಕರೆಯುತ್ತಿದೆ. ವಿಜಯಿಯಾಗಿ ನಿನ್ನೆಡೆಗೆ ಮರಳಿ ಬರುವೆ. ಒಂದುವೇಳೆ ಆದಾಗದೆ ಹೋದರೆ, ಮುಂದಿನ ಜನ್ಮದಲ್ಲಂತೂ ಇದ್ದೇ ಇದೆಯಲ್ಲಾ?"

ತನ್ನ ಸ್ವಾಮಿ ಭಾರತೀಯ ಸೈನಿಕನ ದಾರಿಕಾಯುತ್ತ ಜಪಾನಿ ರಮಣಿ ಸಿಂಗಾಪುರದಲ್ಲಿ ದಿನಕಳೆಯುತಿದ್ದಳು. ಪ್ರತಿದಿನ ರೇಡಿಯೊವಿನಿಂದ ಸುದ್ದಿ ಕೇಳುತ್ತಿದ್ದಳು. ಮಣಿಪುರ, ಡಾಕಾ, ಪಾಲಮ್, ಇಂಫಾಲ್ ಮತ್ತು ಕೊಹಿಮಾ.... ವಿಮೋಚನಾ ಪಡೆ ಒಂದಾದ ಬಳಿಕೊಂದು ನಗರವನ್ನು ವಶಪಡಿಸಿಕೊಳ್ಳುತ್ತ ಮುಂದರಿಯುತಿತ್ತು. ಇದರಿಂದ ಉತ್ಸಾಹಿತಳಾದ ಜಪಾನಿ ಮಹಿಳೆ ತಾನೂ ವಿಮೋಚನಾ ಪಡೆಯನ್ನು ಸ್ವಸಂತೋಷದಿಂದ ಸೇರಿದಳು. ಆಕೆ ಝಾನ್ಸಿ ರಾಣಿ ರೆಜಿಮೆಂಟನಲ್ಲಿ ಒಬ್ಬಳಾದಳು.

ಕೊನೆಗೆ ವಿಜಯ ಪತಾಕೆಯು ಪರಾಜಯದ ಸಂಕೇತವಾಯ್ತು. ವಿಮೋಚನಾ ಪಡೆ ಹಿಂದೆ ಸರಿಯುತ್ತಿದೆ; ಸೇನಾನಿಗಳು ಸೆರೆಸಿಕ್ಕರು. ಅಥವಾ ಸತ್ತುಹೋದರು– ಈ ರೀತಿಯ ಸಮಾಚಾರಗಳು ಓತಪ್ರೋತವಾಗಿ ಹರಡಿದುವು. ಹಾಗಿದ್ದರೂ ಆ ಜಪಾನಿ ಮಹಿಳೆ ತನ್ನ ಕರ್ತವ್ಯದಿಂದ ವಿಮುಖಳಾಗಲಿಲ್ಲ.

ಒಂದು ದಿನ ವಾರ್ತೆಯೊಂದು ಆಕೆಗೆ ದೊರೆಯಿತು. 'ಇಂಫಾಲದ ದಟ್ಟಡವಿ. ವಿಮೋಚನಾ ಪಡೆಯ ನಾಲ್ಕಾರು ಸಿಪಾಯಿನಿಂದ ಮಿತ್ರರಾಷ್ಟ್ರಗಳ ಆಕ್ರಮಣ, ಪಡೆಯ ಸೆರೆ; ಸೆರೆಯಾಳುಗಳಲ್ಲಿ ಆಕೆಯ ಪತಿಯೂ ಒಬ್ಬ.

'ಆ ಸೈನಿಕನು ಸೆರೆಗಿಂತ ಸಾವು ಮಿಗಿಲೆಂದು ತಿಳಿದ. ತನ್ನ ರಾಯ್‌ಫಲನ್ನು ತನ್ನೆದೆಯ ಮೇಲೆಯೇ ಗುರಿಯಿಟ್ಟು "ಜಯ್ ಹಿಂದ್" ಘೋಷ ಮಾಡಿ ಟ್ರಿಗರ್ ಒತ್ತಿದ

ತನ್ನ ಕೆಂಪು ಕುಂಕುಮ ಭಾಗ್ಯವನ್ನು ಮಸಿಗೂಡಿಸಿದ ಈ ಸಮಾಚಾರ ಕೇಳಿದ ರಮಣಿಯ ದೆಸೆಯೇನಾಗಿರಬೇಕು? ಮಾತೃಭೂಮಿಗಾಗಿ ಆತ್ಮಾರ್ಪಣೆ ಗೆಯ್ದ ತನ್ನ ಪ್ರಿಯತಮನ ಈ ಗೌರವ ಪೂರ್ಣ ಮೃತ್ಯು ವಾರ್ತೆ ಕೇಳಿದಾಕ್ಷಣ ಆಕೆಯ ಕಣ್ಣುಗಳು ತುಂಬಿ ಬಂದುವು. ನೀರು ಹರಿಯತೊಡಗಿತು. ಆದರೆ, ಇದು ಶೋಕ ತಪ್ತವಾಗಿರಲಿಲ್ಲ; ಗೌರವಾನ್ವಿತವಾಗಿತ್ತು. ಆಕೆ ಮೊದಲಿಂದಲೇ ಕೂಡಿಸಿಟ್ಟಿದ್ದ ವಿಷವನ್ನು ನೀರಲ್ಲಿ ಸೇರಿಸಿ ಕುಡಿದಳು; ಪ್ರಿಯತಮನನ್ನು ಮೃತ್ಯು ಮಾರ್ಗದಲ್ಲಿ ಹಿಂಬಾಲಿಸಿದಳು.

ಭಾರತ ವಿಮೋಚನಾ ಪಡೆಯ ಸೈನಿಕನ ಹೆಸರು ಶ್ರೀ ಎಸ್. ಎನ್. ಕಪೂರ್. ಆದರೆ, ಆತನ ಪ್ರಿಯತಮೆ ಜಪಾನಿ ಮಹಿಳೆಯ ಹೆಸರು ಮಾತ್ರ ಇದುವರೆಗೂ ದೊರೆತಿಲ್ಲ. ಆದರೂ ಭಾರತೀಯ ವೀರ ಗಾಥೆಯಲ್ಲಿ ಗುಲಾಬಿ ಹೂವಿನಂತೆ ಆಕೆಯ ಹೆಸರು ಸುಗಂಧಮಯವಾಗೇ ಉಳಿಯುತ್ತದೆ.

ಜಪಾನಿ ಮಹಿಳೆಯೊದರೂ ಪ್ರಿಯತಮನ ಬಲಿದಾನದಿಂದ ಉತ್ತೇಜಿತಳಾಗಿ ಆತ್ಮಾರ್ಪಣೆ ಗೆಯ್ದ ಈ ಮಹಿಳೆಯ ಪತಿಪ್ರೇಮ ಮರೆಯಲಾದೀತೆ?

●●

ಮುನ್ನಡೆಯಲ್ಲಿ ರಕ್ಷಣಾ ಉತ್ಪಾದನೆ

ಸರ್ಕಾರಿ ಕ್ಷೇತ್ರದ ರಕ್ಷಣಾ ಶಾಖೆಯ ಏಳು ಕೈಗಾರಿಕಾ ವಿಭಾಗಗಳು ಕಳೆದ ವರ್ಷ 134 ಕೋಟಿ ರೂಪಾಯಿ ಬೆಲೆಯ ವಸ್ತುಗಳನ್ನು ಉತ್ಪಾದಿಸಿವೆ. 1967–68ರಲ್ಲಿ ಈ ವಿಭಾಗಗಳು 89 ಕೋಟಿ ರೂಪಾಯಿ ವಸ್ತುಗಳನ್ನು ಉತ್ಪಾದಿಸಿದ್ದವು ಭಾರತ್ ಇಲೆಕ್ಟ್ರಾನಿಕ್ ಲಿಮಿಟೆಡ್, ಭಾರತ್ ಎರ್ತ್‌ಮೂವರ್ಸ್ ಸಂಸ್ಥೆಗಳು ತಮ್ಮ ಪಾಲುಗಾರರಿಗೆ ಲಾಭಾಂಶಗಳನ್ನು ನೀಡಿವೆ. ಈ ರಕ್ಷಣಾ ಶಾಖೆಯ ಕೈಗಾರಿಕಾ ವಿಭಾಗದಲ್ಲಿನ ಕೈಗಾರಿಕಾ ವಸ್ತುಗಳ ರಫ್ತಿನಿಂದಾಗಿ 1968–69ರಲ್ಲಿ 1·6 ಕೋಟಿ ರೂಪಾಯಿ ವಿದೇಶ ವಿನಿಮಯಗಳನ್ನು ಗಳಿಸಿದೆ.

ಹಿಂದೂಸ್ಥಾನ್ ಏರೊನಾಟಿಕ್ಸ್ ಸಂಸ್ಥೆ ರಕ್ಷಣಾ ಶಾಖೆಗೆ ಅಗತ್ಯವಾದ ವಿಮಾನಗಳನ್ನು ತಯಾರಿಸುತ್ತಿದೆ. ಸದ್ಯದಲ್ಲಿ ಈ ವಿಮಾನ ಕಾರ್ಖಾನೆಯಲ್ಲಿ ಜೆಟ್ ಫೈಟರ್ ಹೆಚ್ ಎಫ್–24, ಸೂಪರ್‌ಸಾನಿಕ್ ಇನ್‌ಟರ್‌ಸೆಪ್ಟರ್ ಮಿಗ್–21, ನ್ಯಾಟ್ ವಿಮಾನ, ಟ್ರೈನರ್ ಹೆಚ್ ಜೆ ಟಿ—16, ಹೆಲಿಕ್ಯಾಪ್ಟರುಗಳು, ಮತ್ತು ಸಾರಿಗೆ ವಿಮಾನಗಳನ್ನು ತಯಾರಿಸಲಾಗುತ್ತಿದೆ. ವಿದೇಶಗಳಿಂದ ಆಮದು ಮಾಡಿಕೊಂಡ ಕಚ್ಚಾ ವಸ್ತುಗಳನ್ನು ಬಳಸಿ ಇತ್ತೀಚೆಗೆ ಮಿಗ್ ವಿಮಾನವೊಂದನ್ನು ಈ ಕಾರ್ಖಾನೆಯಲ್ಲಿ ತಯಾರಿಸಲಾಗಿದೆ. 1951ರಿಂದ ಅಂದರೆ ಹೆಚ್. ಎ ಎಲ್ ಕಾರ್ಖಾನೆಯ ಸ್ಥಾಪನೆಯಿಂದ ಇಂದಿನವರೆಗೆ [illegible] ವಿಮಾನಗಳನ್ನು ತಯಾರಿಸಲಾಗಿದೆ. ರಕ್ಷಣಾ ವಸ್ತುಗಳ ಉತ್ಪಾದನೆಯ ವಿಷಯದಲ್ಲಿ ಇದೊಂದು ಮಹತ್ವದ ಘಟನೆ. ಬೇರೆ ಬೇರೆ ಮಾದರಿಯ ವಿಮಾನಗಳು ಅವುಗಳಿಗೆ ಅಗತ್ಯವಾದ ಉಪಕರಣಗಳು. ಚಕ್ರಗಳು ಬ್ರೇಕ್ ಮುಂತಾದ ವಸ್ತುಗಳ ಉತ್ಪಾದನೆಗಾಗಿ [illegible].5. ಕೋಟಿ ರೂಪಾಯಿಗಳ ಹೊಸ ಯೋಜನೆಯನ್ನು ಕೈಗೊಳ್ಳಲಾಗಿದೆ.

ಭಾರತ್ ಇಲೆಕ್ಟ್ರಾನಿಕ್ ಕಾರ್ಖಾನೆ ಅತಿ ಸೂಕ್ಷ್ಮ ಹಾಗೂ ವಿಶೇಷತೆಯುಳ್ಳ ನಿಸ್ತಂತು ಪ್ರಸಾರ ವಾಹಕಗಳು, ನಿಸ್ತಂತು ವಾರ್ತಾ ಗ್ರಾಹಕಗಳು, ರಾಡಾರ್‌ಗಳು ತಯಾರಿಸುತ್ತಿದೆ. ಇವು ರಕ್ಷಣಾ ಶಾಖೆಗೆ ಅಗತ್ಯವಾಗಿ ಬೇಕಾಗಿರುವ ವಸ್ತುಗಳು. ಭಾರತ್ ಇಲೆಕ್ಟ್ರಾನಿಕ್ ಸಂಸ್ಥೆ ವರ್ಷಕ್ಕೆ 24 ಕೋಟಿ ರೂಪಾಯಿಗಳಷ್ಟು ವಸ್ತುಗಳನ್ನು ತಯಾರಿಸುತ್ತಿದೆ ಈ ಕಾರ್ಖಾನೆಯಲ್ಲಿ ವಿಶೇಷ ಬಗ್ಗೆ ಟ್ರಾನ್ಸಿಸ್ಟರ್ ಕೊಳವೆಗಳು, ಎಕ್ಸರೆ ಕೊಳವೆಗಳು ರೇಡಿಯೋ ಮತ್ತು ಟೆಲಿವಿಷನ್‌ಗಳಲ್ಲಿ ಬಳಸುವ ವಾಲ್ವಗಳನ್ನು ಉತ್ಪಾದಿಸಲಾಗುತ್ತಿದೆ. ಘಜಿಯಾಬಾದ್‌ನಲ್ಲಿ ಸ್ಥಾಪನೆಯಾಗಲಿರುವ ಹೊಸ ಬಿ.ಇ. ಎಲ್. ಕಾರ್ಖಾನೆಯಲ್ಲಿ ಮೈಕ್ರೋವೇವ್ ಕಾಂಪೋನೆಂಟಗಳು ಮತ್ತು ರಾಡಾರ್‌ಗಳನ್ನು ಉತ್ಪಾದಿಸಲಾಗುವುದು.

ಮೆಝಗಾನ್ ಹಡಗು ನಿರ್ಮಾಣ ಕೇಂದ್ರ ಯುದ್ಧ ನೌಕೆಗಳು ಪ್ರಯಾಣಿಕರ ಸಾರಿಗೆ ಹಡಗು ಪ್ರಯೋಜಕ ರಕ್ಷಣೆ ಇಲ್ಲದೆ ವಸ್ತುಗಳನ್ನು ಸಾಗಿಸಲು ಬಳಸುವ ಹಡಗುಗಳು ಮೀನನ್ನು ಎತ್ತಲು ಬಳಸುವ ದೋಣಿಗಳು. ವಿಹಾರಕ್ಕಾಗಿ ಬಳಸುವ ದೋಣಿಗಳನ್ನು ತಯಾರಿಸುತ್ತಿರುವ ಪ್ರಮುಖ ಕೈಗಾರಿಕಾ ಸಂಸ್ಥೆ. ದೋಣಿ ಮತ್ತು ಹಡಗುಗಳ ನಿರ್ಮಾಣ ಅಷ್ಟೆ ಅಲ್ಲದೆ ಇಲ್ಲಿ ಅವುಗಳ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಭಾರತ ಎರ್ತಮೂವರ್ಸ್ ಕಾರ್ಖಾನೆ ಮಣ್ಣು ಎತ್ತುವ ಯಂತ್ರಗಳನ್ನು ತಯಾರಿಸುತ್ತಿದೆ

ದೇಶದಲ್ಲಿ ಈಗ ಯುದ್ಧೋಪಕರಣಗಳನ್ನು ಉತ್ಪಾದಿಸುವ 27 ಕಾರ್ಖಾನೆಗಳಿವೆ. ರಕ್ಷಣಾ ವಿಭಾಗಗಳಿಗೆ ಅಗತ್ಯವಾದ ಎಲ್ಲಾ ರಕ್ಷಣಾ ವಸ್ತುಗಳು, ಶಸ್ತ್ರಾಸ್ತ್ರಗಳು, ವಾಹನಗಳು, ಇಂಜಿನಿಯರಿಂಗ್ ಮತ್ತು ಇತರ ನಮೂನೆ ವಸ್ತುಗಳನ್ನು ಈ ಕಾರ್ಖಾನೆಗಳು ಉತ್ಪಾದಿಸುತ್ತಿವೆ. ಈ ಕಾರ್ಖಾನೆಗಳ ವಾರ್ಷಿಕ ಉತ್ಪಾದನೆ ಸದ್ಯದಲ್ಲಿ 11[illegible] ಕೋಟಿ ರೂಪಾಯಿಗಳಷ್ಟು. ಇದು 19[illegible]2ರಲ್ಲಿ ಇದ್ದ ಉತ್ಪಾದನೆಗಿಂತ ಮೂರರಷ್ಟು ಬಾರಿ ಹೆಚ್ಚಿದೆ. ಇದರಿಂದಾಗಿ ಸಣ್ಣ ಶಸ್ತ್ರಾಸ್ತ್ರಗಳ ಪೂರೈಕೆ ವಿಷಯದಲ್ಲಿ ಭಾರತ ಈಗ ಸ್ವಾವಲಂಬನವನ್ನು ಸಾಧಿಸಿದೆ. ನವೀನ ವಾಹನಗಳ ಕಾರ್ಖಾನೆಯೊಂದು ಜಬಲಪುರದಲ್ಲಿ ನಿರ್ಮಾಣ ಘಟ್ಟದಲ್ಲಿದ್ದು ಅದು ಉತ್ಪಾದನೆಯನ್ನು ಆರಂಭಿಸಿದರೆ, ರಕ್ಷಣಾ ವಾಹನಗಳ ಪೂರೈಕೆ ದ್ವಿಗುಣಗೊಳ್ಳುವುದು. ಆವಡಿಯಲ್ಲಿ ಸ್ಥಾಪಿಸಲಾಗಿರುವ ಭಾರಿ ವಾಹನಗಳ ಕಾರ್ಖಾನೆಯಲ್ಲಿ ಹೊಸ ಮಾದರಿಯ ವಿಜಯಂತ ಟ್ಯಾಂಕ್‌ಗಳನ್ನು ತಯಾರಿಸಲಾಗುತ್ತಿದೆ.

●●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ–

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 33

NAVAYUGA

29—4—1971

ಪ್ರಚ್ಛನ್ನ ಸಮರ

ಸಿಂಧುರಾಜ-ವಿದೂರಥರು ನೆರೆಹೊರೆಯ ರಾಜರು. ಇಬ್ಬರೂ ಶಕ್ತಿಯ ಉಪಾಸಕರು; ಹಾಗಿದ್ದರೂ ಇಬ್ಬರಲ್ಲೂ ಆಗಾಗ ವಿರಸ. ಸ್ವಾರ್ಥಪ್ರೇರಿತ ವಿಭಿನ್ನತೆಯನ್ನು ದೂರ ಮಾಡಲು ಧಾರ್ಮಿಕ ಏಕತೆ ಅಸಮರ್ಥ—ಈರ್ಷ್ಯೆಯಿಂದ ಇಬ್ಬರೂ ಜ್ಞಾನ ದೇವತೆ ಸರಸ್ವತಿಯ ಉಪಾಸನೆಗೆ ತೊಡಗಿದರು. ಆದರೆ ಮತಭೇದದಿಂದ ಉದ್ದೇಶ್ಯ ಭಿನ್ನ. ಪರದೇಶ ವಿಜಯವೇ ಸಿಂಧುರಾಜನ ಮಹೋದ್ದೇಶ; ಮುಕ್ತಿಯೇ ವಿದೂರಥನ ಆರಾಧನೋದ್ದೇಶ. ವಿದೂರಥನಿಗೆ ಶಸ್ತ್ರಾಸ್ತ್ರಗಳ ಕೊರತೆಯಿಲ್ಲ; ಯಾರ ಭಯವೂ ಇಲ್ಲ. ತಮ್ಮ ಸೀಮಾರಾಜನಲ್ಲಿನ ಹೇರಳ ಶಸ್ತ್ರಾಸ್ತ್ರ ಸಂಗ್ರಹ ಸಿಂಧುರಾಜನನ್ನು ಕಂಗಾಲು ಮಾಡಿತ್ತು. ಹಾಗಾಗಿ ಶಸ್ತ್ರಸಂಗ್ರಹವೇ ಆತನ ಜೀವನಾಡಿಯ ಮಿಡಿತ. ವಿದೇಶಗಳಿಂದ ಲಭ್ಯವಾದಷ್ಟು ಆಯಾತ; ಕೆಲವಷ್ಟು ಸ್ವಯಂನಿರ್ಮಿತ. ಪರಿಣಾಮ ಸ್ಪಷ್ಟ. ಶಸ್ತ್ರಾಸ್ತ್ರಗಳ ಕೊಬ್ಬಿನಲ್ಲಿ ಮಾತು ಮಾತಿಗೆ ಕಾಲು ಕೆದರಿ ಜಗಳ ಕರೆಯುವುದು ಸಿಂಧುರಾಜನಿಗೆ ಚಟವೆನಿಸಿತು. ಯುದ್ಧೇಚ್ಛೆ ಬಲಿಯಿತು. ಕಾರಣವೊಂದು ಬೇಕಾಯ್ತು. ಸಾಮಾನ್ಯ ಕಾರಣವೊಂದನ್ನೆತ್ತಿ ಸಿಂಧುರಾಜನು ವಿದೂರಥನಿಗೆ ಯುದ್ಧದ ಬೆದರಿಕೆ ಹಾಕಿದನು. ವಿದೂರಥನಾದರೂ ಅದಕ್ಕೆ ವೀರೋಚಿತ ಉತ್ತರ ನೀಡಿದನು. ಸಮರಾರಂಭವಾಯ್ತು. ಸಿಂಧುರಾಜನು ಮೊದಲಿಗೆ ವಿದೂರಥನ ದೇಶವನ್ನು ಆಕ್ರಮಿಸಿದನು. ತನ್ನ ಮಂತ್ರಿ-ಸೇನಾಪತಿಗಳೊಡನೆ ಸಮಾಲೋಚಿಸಿದ ವಿದೂರಥ ಎಂಟು ಕುದುರೆ ಹೂಡಿದ ರಥವೇರಿದನು. ರಥವನ್ನು ಆನೆಗಳು ರಕ್ಷಿಸಲು ಸುತ್ತುವರಿದವು. ಬಿರುಗಾಳಿಯಂತೆ ಸೇನೆ ಎದ್ದಿತು. ಅದರ ಪಾದಧೂಳಿ ಆಕಾಶದಲ್ಲಿ ಕತ್ತಲು ಹರಡಿತು.

ಶತ್ರು ಸೇನೆ ಎದುರಾಯ್ತು. ವಂದಿಮಾಗಧರು ಉತ್ಸಾಹವರ್ಧಕ ಸ್ತುತಿ ಮಾಡಿದರು. ವೀರರ ಕೆಚ್ಚು ಮಿಂಚಿತು. ಇಕ್ಕಡೆಯ ಪಟುಭಟರು ರಣೋತ್ಸಾಹದಿಂದ ಹೋರಾಟಕ್ಕೆ ಕಾಲೆತ್ತಿದ್ದರು. ಎರಡೂ ಸೇನೆಗಳು ಒಂದನ್ನೊಂದು ತಾಗಿದುವು. ಕತ್ತಿ ಕತ್ತಿಗೆ ತಗಲಿ ಮಿಂಚು ಕಣ್ಣೋರೈಸಿತು. ವೀರರು ವಾಹ್ ವಾಹ್ ಎಂದಬ್ಬರಿಸಿದರು; ಗಾಯಾಳುಗಳು ಆಹ್ ಆಹ್ ಎಂದು ತಲ್ಲಣಿಸಿದರು. ವಿದೂರಥನ ಸೇನೆಯು ಸಿಂಧೂರಾಜನ ಸೇನೆಯನ್ನು ಕತ್ತರಿಸಿತು; ಕಂಗೆಡಿಸಿತು; ದಿಕ್ಕುಪಾಲು ಮಾಡಿತು. ನೊಂದು ಬೆಂದ ಸೇನೆಯನ್ನು ವಿದೂರಥ ನೋಡಿದನು—ಅದು ಸಂಧಿಯನ್ನು ಯಾಚಿಸುವಂತಿತ್ತು. ಆದರೆ, ಅಭಿಮಾನಿ ವಿದೂರಥನಿದಕ್ಕೆ ಸೊಪ್ಪು ಹಾಕಲಿಲ್ಲ. ಸಿಂಧುರಾಜನನ್ನು ಇನ್ನಿಲ್ಲವೆಂದು ಮಾಡಿ ಈ ಕಲಹಕ್ಕೆ ಕೊನೆಯ ಪರದೆಯೆಳೆದುಬಿಡಬೇಕೆಂಬುದು ಅವನ ಆಶಯವಿತ್ತು.

ವಿದೂರಥನಿಗೆ ಶತ್ರುಸೇನೆಯ ಬಲಾಬಲಗಳ ಪೂರ್ಣ ಜ್ಞಾನವಿರಲಿಲ್ಲ. ತನ್ನ ಶಸ್ತ್ರ ಸಂಗ್ರಹದಿಂದ ಕೊಬ್ಬಿದ ಆತ ತನ್ನೆದುರು ಎಲ್ಲರನ್ನೂ ಹುಲ್ಲಿಗೆ ಕಡೆಯಾಗಿ ಕಾಣುತ್ತಿದ್ದ. ಆದುದರಿಂದ ಅವನು ಬೊಬ್ಬಿರಿದ—"ಸಾಯಲು ಬಂದವರಿಗೀಗ ಜೀವದ ಮೇಲೆ ಆಸೆಯೇ?" ಇದನ್ನು ಕೇಳಿದ ಸಿಂಧುರಾಜನ ಸೇನೆ ಮತ್ತೆ ಉತ್ತೇಜಿತವಾಗಲೇ ಬೇಕಾಯ್ತು. ಅದು ಮತ್ತೊಮ್ಮೆ ಯುದ್ಧಕ್ಕಣಿಯಾಯ್ತು.

ಶತ್ರುಗಳ ಶಸ್ತ್ರಾಸ್ತ್ರಗಳು ಹಕ್ಕಿಗಳ ಹಿಂಡಿನಂತೆ ಆಕಾಶದಲ್ಲಿ ಸುತ್ತಾಡತೊಡಗಿದುವು. ಅವುಗಳ ಹೊಳಪು ದಿಗ್ದೇಶಗಳಲ್ಲಿ ಹರಡಿತು. ಕಿಡಿಗಳುರುಳಿದುವು. ಭರ್ಜಿಗಳು ಉರಿಯುವ ಕೊಳ್ಳಿಗಳಂತಾದುವು; ಬಾಣಗಳ ಮಳೆ ಸುರಿಯಿತು. ಎಸೆದ ಬರ್ಚಿಗಳು ಒನಕೆಧಾರೆಯೆನಿಸಿದುವು. ವೀರ ಜಲಧರರು ಗರ್ಜಿಸುತ್ತಿದ್ದರು. ಕವಿದ ದೂಳಿನ ಕತ್ತಲೆಯನ್ನು ಶಸ್ತ್ರಾಸ್ತ್ರಗಳ ಮಿಂಚು ದೂರ ಮಾಡಿತು. ರುಂಡಗಳು ಯಮಯಾತ್ರೆಗೆ ಸರದಿ ಕಾಯತೊಡಗಿದುವು. ಬಿರುಗಾಳಿಗುದುರುವ ಮಾವಿನ ಹಣ್ಣುಗಳಂತೆ ವೀರರು ಕೆಡೆದರು, ತರಗೆಲೆಗಳು ಹಾರುವಂತೆ ಅಂಗಾಂಗಗಳು ಆಕಾಶದಲ್ಲಿ ಕುಣಿದಾಡಿದವು. ಹೆಣಗಳ ರಾಶಿಯನ್ನು ಹಾರಿಹಾರಿ, ವೀರರು ರಕ್ತ ನದಿಯಲ್ಲಿ ಮುಳುಗುತ್ತಿದ್ದರು. ನೆತ್ತರ ಮಡುಗಳಲ್ಲಿ ಹೆಣಗಳು ಕೊಚ್ಚಿಹೋಗುತ್ತಿದ್ದುವು.

ಆನೆಗಳು ಪದಾತಿಯ ಮೇಲೆ ಬಿದ್ದುವು. ಗದೆ ಗದೆಗಳು ತಾಗಿದುವು. ಮಿಂಚು ಮಿಂಚಿತು. ಮಾತು ನಿಂತಿತು. 'ಹೊಡೆ, ಬಡೆ, ಹಿಡಿ' ಎಂಬುದಲ್ಲದೆ ಬೇರೆ ವೀರೋದ್ಗಾರವಿಲ್ಲವಾಯ್ತು. 'ಅಯ್ಯೋ' ಎಂಬ ಕರುಣಾಕ್ರಂದನವಲ್ಲದೆ ಬೇರೆ ಕೂಗಿಲ್ಲವಾಯ್ತು. ಆನೆಗಳು ಕೆಡೆದುವು; ಕುದುರೆಗಳು ಕಮರಿದುವು; ರಥಗಳು ಮುರಿದುವು; ಪದಾತಿಗಳು ಮಡಿದುವು. ವಿದೂರಥನ ಮಹಾಸೇನೆಯ ರಕ್ತವನ್ನು ಗಟಗಟನೆ ಯೋಗಿನೀ ದಳ ಕುಡಿಯಿತು, ಆದರೂ ಸರಸರನೆ ಬಾಣವುದುರುತ್ತಿತ್ತು.

ಸಮರರಂಗದ ಮೂಲೆಯೊಂದರಲ್ಲಿ ವಿದೂರಥನ ಪಟ್ಟದ ರಾಣಿ ಲೀಲಾ ಈ ಭಯಾನಕತೆಯನ್ನು ನೋಡುತ್ತಿದ್ದಳು. ತಡೆಯಲಾಗದ ಉದ್ವೇಗದಿಂದ ಆಕೆ ತಟಸ್ಥೆಯಾಗಿ ನಿಂತಿದ್ದ ಜ್ಞಾನ—ವಿಜ್ಞಾನಾಧಿದೇವಿ ಸರಸ್ವತಿಯ ಬಳಿಗೋಡಿ ಕೈಮುಗಿದು ಕೇಳಿದಳು—"ದೇವಿ, ಯಾರು ಗೆಲ್ಲುತ್ತಾರೆ?"

ಸರಸ್ವತಿ ಉತ್ತರಿಸಿದಳು—"ಸಿಂಧುರಾಜ" ಲೀಲಾ ಆಶ್ಚರ್ಯದಿಂದಲೇ ಪ್ರಶ್ನಿಸಿದಳು—"ದೇವಿ ನನ್ನ ಪತಿ ವಿದೂರಥ-ನಿನ್ನ ಪರಮ ಕೃಪಾಪಾತ್ರ, ಆತನ ಮೇಲೆ ನೀನು ಪ್ರಸನ್ನಳಾಗಿದ್ದರೂ ಯುದ್ಧದಲ್ಲೇಕೆ ಸೋಲು?" ಸರಸ್ವತಿ ಹೇಳಿದಳು—"ಮಗಳೆ, ಸಿಂಧುರಾಜನು ವಿಜಯಾಭಿಲಾಷಿಯಾಗಿದ್ದುಕೊಂಡೇ ನನ್ನನ್ನು ಅನೇಕ ಕಾಲದಿಂದ ಆರಾಧಿಸಿಕೊಂಡು ಬಂದಿದ್ದಾನೆ. ಆದರೆ, ರಾಜಾ ವಿದೂರಥನು ಜಯಕಾಮನೆಯಿಂದ ಎಂದೂ ಸೇವಿಸಿದ್ದಿಲ್ಲ. ಆತನು ಮುಕ್ತಿಗಾಗಿ ನನ್ನನ್ನು ಉಪಾಸನೆ ಮಾಡುತ್ತ ಬಂದಿದ್ದಾನೆ. ಆದುದರಿಂದ ಸಿಂಧುರಾಜ ವಿಜಯಿಯಾಗುತ್ತಾನೆ; ವಿದೂರಥ ಪರಾಜಿತನಾಗುತ್ತಾನೆ. ಭಕ್ತೋಪಾಸಕರ ಮನಸ್ಸಿನ ಸಂಕಲ್ಪವನ್ನು ಈಡೇರಿಸುವುದು ನನ್ನ ಧರ್ಮ.'

ಲೀಲಾ ಸುಮ್ಮನಾದಳು. "ಆರಂಭದಲ್ಲೇ ಪ್ರಯತ್ನಿಸದೆ ಹೋದರೆ—ಫಲ ಹೇಗೆ ಸಿಗಬೇಕು? ಬಿತ್ತದವರಿಗೆ ಕೊಯ್ಯುವ ಹಂಬಲವೇಕೆ?' ಎಂದು ದುಃಖಿಯಾಗಿ ಕುಳಿತಳು.

ಯುದ್ಧವು ಕ್ಷಣಕ್ಷಣಕ್ಕೆ ಭಯಂಕರವಾಗುತಿತ್ತು. ವಿದೂರಥನು ಹೊಡೆದ ಒಂದೊಂದು ಬಾಣವೂ ಆಕಾಶದಲ್ಲಿ ಸಾವಿರವಾಗುತಿತ್ತು; ಶತ್ರು ಸೇನೆಯ ಮೇಲೆ ಬಿದ್ದಾಗ ಅದು ಲಕ್ಷವಾಗುತಿತ್ತು. ಸಿಂಧೂರಾಜನೇನೂ ಕಡಿಮೆಯವನಲ್ಲ. ಅವನು ವಿದೂರಥ ನಗರವನ್ನು ಸುಟ್ಟುಬಿಟ್ಟನು. ಲೋಕ ಮರ್ಯಾದೆಯನ್ನೂ ಮೀರಿ ಇಕ್ಕಡೆಯಲ್ಲಿ ಮತ್ತೆ ಭೀಕರ ಸಮರ ನಡೆಯಿತು. ಪ್ರಹಾರ-ಪ್ರತಿಕಾರಗಳಿಂದ ಶಸ್ತ್ರಾಸ್ತ್ರಗಳು ಹೇಳಹೆಸರಿಲ್ಲವಾದುವು. ಸಿಂಧು ರಾಜನು ಇದರಿಂದ ರೇಗಿ ವಿಮೋಹನಾಸ್ತ್ರವನ್ನು ಹೂಡಿದನು; ವಿದೂರಥ ಸೈನಿಕರ ಕೈಗಳಿಂದ ಕೈದುಗಳು ಜಾರಿದುವು, ವಸ್ತ್ರ ಅಸ್ತವ್ಯಸ್ತವಾದುವು. ಸ್ವರ ನಿಂತಿತು, ಮುಖ-ನೇತ್ರಗಳಲ್ಲಿ ಮೃತಚ್ಛಾಯೆ ಮೂಡಿತು; ಸೇನೆ ಚಿತ್ರಾರ್ಪಿತವಾದಂತಾಯ್ತು. ವಿದೂರಥನು ಪ್ರಬೋಧನಾಸ್ತ್ರ ಪ್ರಯೋಗಿಸಿ ಸೇನೆಯನ್ನು ಎಚ್ಚರಿಸಿದನು. ಸಿಂಧು ರಾಜನ ನಾಗಾಸ್ತ್ರದಿಂದ ಸರ್ಪಗಳು ತುಂಬಿದುವು; ವಿದೂರಥನ ಗರುಡಾಸ್ತ್ರದಿಂದ ಸರ್ಪಬಾಧೆ ದೂರವಾಯ್ತು. ಸಿಂಧು ರಾಜನು ತಮೋಸ್ತ್ರ ಹೂಡಿ, ಕತ್ತಲೆ ಹರಡಿಸಿದರೆ, ವಿದೂರಥನು ಸೂರ್ಯಾಸ್ತ್ರದಿಂದ ಅದನ್ನು ಓಡಿಸಿದನು, ಆಗ್ನೇಯಾಸ್ತ್ರದಿಂದ ಸಿಂಧು ರಾಜ ಶತ್ರುಪಕ್ಷವನ್ನು ಸುಡತೊಡಗಿದಾಗ, ವಿದೂರಥನು ವಾರುಣಾಸ್ತ್ರದಿಂದ ಅದನ್ನು ತಡೆದನು; ಸಿಂಧುರಾಜನು ಶೇಷಾಸ್ತ್ರದಿಂದ ನೀರೆಲ್ಲವನ್ನೂ ಆರಿಸಿದನು.

ವಿದೂರಥ— ಸಿಂಧುರಾಜರ ಯುದ್ಧ ಮತ್ತೂ ಮುಂದುವರಿಯಿತು. ಪರ್ಜನ್ಯಾಸ್ತ್ರವನ್ನು ವಾಯವ್ಯಾಸ್ತ್ರದಿಂದ, ಪರ್ವತಾಸ್ತ್ರವನ್ನು ವಜ್ರಾಸ್ತ್ರದಿಂದ, ಸಿಂಧುರಾಜನು ನಿರರ್ಥಕಗೊಳಿಸಿದಾಗ, ವಿದೂರಥನು ತನ್ನ ಅಂತಿಮ ಪ್ರಯೋಗವೆಂದು ವೈಷ್ಣವಾಸ್ತ್ರವನ್ನು ಪ್ರಯೋಗಿಸಿದನು. ಸಿಂಧು ಮತ್ತೊಂದು ವೈಷ್ಣವಾಸ್ತ್ರವನ್ನು ಬಿಟ್ಟನು. ಎರಡು ವೈಷ್ಣವಾಸ್ತ್ರಗಳು ಆಕಾಶದಲ್ಲಿ ಬಹಳ ಎತ್ತರದಲ್ಲಿ ಹೋರಾಡಿ ಕ್ಷೀಣ ಶಕ್ತಿಯಾಗಿ ಕೆಳಗುರುಳಿದುವು.

ಇಬ್ಬರು ರಾಜರೂ ತಮ್ಮ ಜನ-ಧನ ಸಂಹಾರವಾದುದನ್ನು ನೋಡಿದರು; ಆದರೆ, ಅವರ ಅಹಂಕಾರ ಯುದ್ಧ ಮುಗಿಯಗೊಡಲಿಲ್ಲ. ಸಿಂಧುರಾಜನ ಬಾಣವೊಂದನ್ನು ತುಂಡರಿಸಲಾಗದ ವಿದೂರಥನು ತನ್ನ ಕುತ್ತಿಗೆಯನ್ನೇ ಅದಕ್ಕೆ ಆಹುತಿ ನೀಡಿದಾಗ ಯುದ್ಧ ತಾನಾಗಿ ಕೊನೆಗಂಡಿತು. ಅವನ ಸೇನೆ ಓಡಿತು; ನೂರಾರು ದಿನಗಳು ಸಾವಿರಾರು ಶಸ್ತ್ರಾಸ್ತ್ರಗಳು, ಲಕ್ಷಾಂತರ ಯೋಧರು, ಕೋಟ್ಯಂತರ ರೂಪಾಯಿಗಳು ನಿರ್ಣಯಿಸಲಾಗದ ಪರಿಣಾಮವನ್ನು ವಿದೂರಥನ ಸಾವು ಒಂದೇ ಕ್ಷಣದಲ್ಲಿ ಸಾರಿಬಿಟ್ಟಿತು.

ವಿಜಯಿ ಸಿಂಧುರಾಜನು ಶತ್ರು ಸೇನೆ

(ಹನ್ನೆರಡನೇ ಪುಟ ನೋಡಿರಿ)

ಹೆಬ್ರಿ–ಮುದ್ರಾಡಿಯ ಐತಿಹಾಸಿಕ ಹಿನ್ನೆಲೆ

ಲೇಖಕರು : ಡಾ| ಪಿ. ಗುರುರಾಜ ಭಟ್.

ಒಂದು ತಿಂಗಳ ಹಿಂದೆ ಅನ್ವೇಷಣಾ ಕಾರ್ಯ ನಿಮಿತ್ತವಾಗಿ ಕಾರ್ಕಳ ತಾಲೂಕಿನ ಹೆಬ್ರಿ ಮತ್ತು ಮುದರಾಡಿಗೆ ಹೋಗಿದ್ದೆ. ನನ್ನ ಮಿತ್ರರೂ ಒಮ್ಮೆ ಆ ಸ್ಥಳಗಳಿಗೆ ಬರಬೇಕೆಂದು ತಿಳಿಸಿದ್ದರು. ನನ್ನ ಸಂದರ್ಶನವು ತುಂಬ ಫಲಕಾರಿಯಾಗಿತ್ತು.

ಹೆಬ್ರಿಯಲ್ಲಿ ಮುಖ್ಯವಾಗಿ ಎರಡು ಚಾರಿತ್ರಿಕ ಸ್ಥಳಗಳಿವೆ. (1) ಶ್ರೀ ಅನಂತಪದ್ಮನಾಭ ದೇವಾಲಯ. (ಇಲ್ಲಿ ಕೃಷ್ಣದೇವರಾಯನ ಕಾಲದ ಒಂದು ಶಿಲಾಶಾಸನವಿದೆ). (2) ಅರ್ಧನಾರೀಶ್ವರ ಬ್ರಹ್ಮಸ್ಥಾನ. ಈ ಎರಡೂ ಸ್ಥಳಗಳು ಸಂಶೋಧನೆಗೆ ಯೋಗ್ಯವಾಗುವ ಅವಶೇಷಗಳಾಗಿವೆ.

ಶ್ರೀ ಅನಂತಪದ್ಮನಾಭ ದೇವಾಲಯ

ಈ ದೇವಾಲಯದ ಪ್ರಧಾನ ಮೂರ್ತಿಯು ಶ್ರೀ ಅನಂತಪದ್ಮನಾಭವೆಂದು ಕರೆಯಲ್ಪಡುವುದಾದರೂ ಇದು ಆದಿಮೂರ್ತಿ ಎಂದು ನನಗನಿಸುತ್ತದೆ. ಮೇಲ್ಕೈಗಳಲ್ಲಿ ಚಕ್ರ, ಶಂಖಗಳಿವೆ. ಕೆಳಕೈಗಳು ಅಭಯ ವರದಗಳಾಗಿವೆ. ಕಡು ಕರಿ ಶಿಲೆಯಿಂದ ಕೊರೆದ ಸಮಭಂಗದಲ್ಲಿರುವ 2¼' ಲಾವಣ್ಯಮಯವಾದ ಮೂರ್ತಿಯಿದಾಗಿದೆ. ಇಡೀ ವಿಗ್ರಹಕ್ಕೆ ಪ್ರಭಾವಳಿ ಇದೆ. ವಿಗ್ರಹದ ಶಿರಶ್ಚಕ್ರವಿರುವಲ್ಲಿ ನಾಗನ ಹೆಡೆಯ ಒರಟಾದ ಶಿಲ್ಪನಿರ್ದೇಶನ ಕಂಡುಬರುತ್ತದೆ. ದುಂಡಗಾದ ಮುಖ, ಅಲಂಕಾರಿಕ ತೊಡಿಗೆ, ಪದ್ಮಪೀಠಗಳಿಂದೊಪ್ಪುವ ಈ ಮೂರ್ತಿಯು ಸು. 600 ವರ್ಷಗಳಷ್ಟಾದರೂ ಪ್ರಾಚೀನವಿರಬಹುದು. ಇಲ್ಲಿಯ ಬಲಿ ದೇವತಾ ಬಿಂಬವು ಪಂಚಲೋಹದ್ದಾಗಿದ್ದು ಲಕ್ಷಣಗಳಲ್ಲಿ ಮೂಲವಿಗ್ರಹವನ್ನೇ ಹೋಲುವುದು ಮಾತ್ರವಲ್ಲದೆ ಅದೇ ಕಾಲಕ್ಕೆ ಒಪ್ಪುತ್ತದೆ ಎನ್ನಬಹುದು.

ಅರ್ಧನಾರೀಶ್ವರ ಬ್ರಹ್ಮಸ್ಥಾನ

ಹೆಬ್ರಿಯ ಅರ್ಧನಾರೀಶ್ವರ ಬ್ರಹ್ಮಸ್ಥಾನವು ದೈವಗಳ ಒಂದು ಹಿರಿದಾದ ತಾಣ.

ಬ್ರಹ್ಮಸ್ಥಾನ, ಆಲಡೆ–ಈ ಎರಡೂ ಪದಗಳು ಸಮಾನಾರ್ಥದವುಗಳಾಗಿವೆ. ಆಲಡೆ ಎಂಬುದು ತುಳು ಯಾ ಹಳೆಗನ್ನಡ. ಬ್ರಹ್ಮಸ್ಥಾನ ಸಂಸ್ಕೃತ ಪದ. ಸಾಮಾನ್ಯವಾಗಿ ಬ್ರಹ್ಮಸ್ಥಾನಗಳಲ್ಲಿ ಪಂಚದೈವಗಳು ಆರಾಧಿಸಲ್ಪಡುತ್ತವೆ. 1) ಬ್ರಹ್ಮ 2) ನಾಗ 3) ನಂದಿಗೋಣ 4) ರಕ್ತೇಶ್ವರಿ (ಲೆಕ್ಕೆಸಿರಿ) ಮತ್ತು 5) ಕ್ಷೇತ್ರಪಾಲ. ಬ್ರಹ್ಮಸ್ಥಾನದ ಬ್ರಹ್ಮನು ವೇದಬ್ರಹ್ಮನಲ್ಲ; ಭೂತಬ್ರಹ್ಮ; ಈ ಭೂತಬ್ರಹ್ಮನು ಚತುರ್ಬಾಹುವಾಗಿ ಕಪಾಲಿ, ಖಡ್ಗ, ಢಕ್ಕೆ ಹಾಗೂ ಕಮಲಧಾರಿಯಾಗಿಯೂ ಮೂರು ಕಣ್ಣುಳ್ಳವನಾಗಿಯೂ ನಾಲ್ಕು ಮುಖಗಳುಳ್ಳವನಾಗಿಯೂ ನಾಗಭೂಷಣನಾಗಿಯೂ ಇರುವವನು. ಈ ಬಹ್ಮಸ್ಥಾನದಲ್ಲಿರುವ ದೈವಗಳ ಕಲ್ಪನೆ ಇದೆಯೇ? ಪ್ರಾಮುಖ್ಯವಾಗಿ ಅಬ್ಬಕ್ಕ, ದಾರಕ್ಕ ಎಂಬ ಸಿರಿಗಳಿವೆ. ಬ್ರಾಹ್ಮಣೇತರ ವರ್ಗಕ್ಕೆ ಇಂದಿಗೂ ಈ ಸಿರಿಗಳು ಮುಖ್ಯವಾದ ದೈವಗಳಾಗಿವೆ. ಹೆಬ್ರಿ ತಾಣದ ದೈವಗಳು ಇಂತಿವೆ.

ಅರ್ಧನಾರೀಶ್ವರ (ಪ್ರಧಾನ ದೈವ), ಬ್ರಹ್ಮ, ಖಡ್ಗೇಶ್ವರ, ಅಬ್ಬಕ್ಕ–ದಾರಕ್ಕ, ನಂದಿಗೋಣ, ಮಹಿಷಂತಾಯ (ಇದು ನಿಜವಾಗಿಯೂ ಲಕ್ಷ್ಮಿ ವಿಗ್ರಹ), ಧೂಮಾವತಿ, ನಾರಳತ್ತಾಯ, ನಂದಿಕೇಶ್ವರ, ಪಂಚಮುಖನಂದಿ, ಭಟಾರಿ, ರಕ್ತೇಶ್ವರಿ, ಪಂಜುರ್ಲಿ, ವಾರಾಹಿ, ಬಾಗಿಲಬೊಬ್ಬರ್ಯ, ಕ್ಷೇತ್ರಪಾಲ, ಹಿರಿಯಡ್ಕತ್ತಾಯ, ನಾಗ, ಗಣಪತಿ, ಭೂತರಾಜ, ಮಳಯಾಳಿ ಬೊಬ್ಬರ್ಯ, ಅಮ್ಮನವರು; ಯಕ್ಷಿ, ಚಿಕ್ಕು, ಹಾಯಿಗುಳಿ, ಶಿವರಾಯ, ಪಿಲಿಭೂತ, ಮಹಿಂದಳಮ್ಮ, ಬೈದರ್ಕಳ, ಜೋಗಿಪುರುಷ, ಗಣಪತಿ.

ಇಲ್ಲಿಯ ಪ್ರಧಾನ ದೇವತೆ ಅರ್ಧನಾರೀಶ್ವರ ಹೇಗಾಯಿತೆಂದು ತಿಳಿದು ಬರುವುದಿಲ್ಲ. ಈಗ ಇರುವ ಮೂರ್ತಿ ಶಿಲಾಬಿಂಬ (1½' ಎತ್ತರ) ಸುಮಾರು 250 ವರ್ಷಗಳ ಹಿಂದಿನ ಮೂರ್ತಿ. ಆದರೆ ಇಲ್ಲಿಯೇ ಭಿನ್ನವಾದ ಅತಿ ಸುಂದರವಾದ 12" ಎತ್ತರದ ಪಂಚಲೋಹದ ಮೂರ್ತಿಯಿದೆ. ಇದು ಸುಮಾರು 600 ವರ್ಷಗಳ ಹಿಂದಣ ಬಿಂಬ. ಇಲ್ಲಿಯ ಮೂಲಮೂರ್ತಿಯೇ ಇದಾಗಿತ್ತೆಂದು ತಿಳಿದು ಬಂದಿದೆ. ಈ ಬಿಂಬವು ಚೋಳ—ವಿಜಯನಗರ ಕಾಲದ ಶಿಲ್ಪ ರೂಪಾಂತರವನ್ನು ತೋರಿಸುವಂತಿದೆ. ಇಲ್ಲಿಯ ಬಲಿದೇವತಾ ಅರ್ಧನಾರೀಶ್ವರ ಮೂರ್ತಿಯೂ 12" ಎತ್ತರವಾಗಿದ್ದು ಎಡಭಾಗದಲ್ಲಿ ಹೆಂಗಸಿನ ಮತ್ತು ಬಲಭಾಗದಲ್ಲಿ ಗಂಡಸಿನ ಎಂದರೆ ಶಿವ ಮತ್ತು ಶಕ್ತಿಯ ಲಕ್ಷಣಗಳನ್ನು ಎಲ್ಲಾ ವಿಧದಲ್ಲೂ ಹೊಂದಿಕೊಂಡ ಮೂರ್ತಿ ಇದೂ 400 ವರ್ಷಗಳಷ್ಟು ಹಿಂದಣ ಬಿಂಬ. ಇಲ್ಲಿಯ ಬ್ರಹ್ಮ ವಿಗ್ರಹವು 4½" ಎತ್ತರವಾಗಿದೆ. ಇಲ್ಲಿ ಅತ್ಯಂತ ವಿಶೇಷವೆಂದು ಹೇಳಬಹುದಾದ ಒಂದು ಶಿಲ್ಪವಿದೆ. ಅದು ಗಣೇಶ ಬಿಂಬ. ಲಿಂಗದ ತುದಿಯು ಗಣೇಶನ ತಲೆಯಾಗಿದೆ. ಕಿವಿಗಳಿಲ್ಲ. ಸೊಂಡಿನ ರೂಪವಿದ್ದು ಅದು ಬಲಭಾಗಕ್ಕೆ ತಿರುಗಿ ಎಡಕ್ಕೆ ತಿರುಗಿದ ನಿರ್ದೇಶ. ಇದರ ಕಾಲಮಾನ ನಿರ್ಧರಿಸುವುದು ಕಷ್ಟವಾದರೂ ಖಂಡಿತವಾಗಿಯೂ ಅರ್ವಾಚೀನವಲ್ಲ. ಇದು ಭೂಗತವಾಗಿತ್ತೆಂದೂ ಅಗೆದು ತೆಗೆದು ಪುನಃ ಪುನಃ ಪ್ರತಿಷ್ಠೆ ಮಾಡಿದ್ದೆಂದೂ ತಿಳಿದು ಬರುತ್ತದೆ. ಏನೇ ಇರಲಿ, ಇಂತಹ ಗಣೇಶ ನಿರ್ದೇಶವನ್ನು ನಾನೆಂದೂ ನಮ್ಮ ಜಿಲ್ಲೆಯಲ್ಲಾಗಲೀ ಇತರತ್ರವಾಗಲೀ ಕಂಡಿರಲಿಲ್ಲ. ದೈವಗಳ ಇನ್ನಿತರ ಮರದ ಬಿಂಬಗಳು ಬಹುಕಡೆ ಇರುವಂತೆಯೇ ಇವೆ. ಅರ್ಧನಾರೀಶ್ವರನು ಈ ದೈವಗಳೆಡೆಯಲ್ಲಿ ಮೂಲಸ್ಥಾನ ದೇವತೆಯಾಗಿ ಆರಾಧಿಸಲ್ಪಡುವ ಸಂಪ್ರದಾಯ ಹೇಗೆ ಪ್ರಾರಂಭವಾಯಿತೆನ್ನುವುದನ್ನು ತಿಳಿಯಬೇಕಷ್ಟೆ!

ಮುದರಾಡಿಯು ಹೆಬ್ರಿಯಿಂದ 2½ ಮೈಲು ದೂರದಲ್ಲಿದೆ. ಇದೊಂದು ಕಾಡು ಪ್ರದೇಶ. ಮಧ್ಯಕಾಲದ ಇತಿಹಾಸದಲ್ಲಿ ಇದೊಂದು ಜೈನ ಪಾಳಯಗಾರರ ಕೇಂದ್ರವಾಗಿತ್ತು. ಸಾಮಂತ ಮನೆತನದವರಿಂದ ಆಳಲ್ಪಡುತ್ತಿತ್ತು. ಅರಮನೆಯ ಅಡಿಸ್ಥಳವು ಇಂದಿಗೂ ಇದೆ. ಬಸದಿಯ ಕುರುಹುಗಳಿವೆ. ಮುದರಾಡಿಯಲ್ಲಿಯೂ ಎರಡು ಪ್ರಾಮುಖ್ಯ ಧರ್ಮ ಕ್ಷೇತ್ರಗಳಿವೆ 1) ಬಕ್ರೆಮಠ ಮತ್ತು 2) ಬಲ್ಲಾಡಿ ಬ್ರಹ್ಮಸ್ಥಾನ.

ಬಕ್ರೆ ಮಠ

ಇದರ ಪ್ರಾಚೀನತೆಯನ್ನು ನಿರ್ಧರಿಸಲು ಶಿಲಾಶಾಸನಗಳೇನೂ ದೊರಕಿಲ್ಲ. ಆದರೆ ಈ ಮಠದಲ್ಲಿ ಆರಾಧಿಸಲ್ಪಡುವ ಎರಡು ದೇವತಾ ಬಿಂಬಗಳು ಇಲ್ಲಿಯ ಕಾಲಮಾನದ ನಿಶ್ಚಯಕ್ಕೆ ಸಹಾಯಕವಾಗುತ್ತವೆ—1) ಶ್ರೀಕೃಷ್ಣ ವಿಗ್ರಹ 2) ಭದ್ರಕಾಳೀ ವಿಗ್ರಹ. ಎರಡೂ ಪಂಚಲೋಹದ ಬಿಂಬಗಳಾಗಿವೆ. ಶ್ರೀಕೃಷ್ಣ ಬಿಂಬವು 7' ಎತ್ತರವಾಗಿದ್ದು ಮಧ್ವಾಚಾರ್ಯರ ಕಾಲಕ್ಕಿಂತ ಮುಂಚಿನ ಬಿಂಬವಾಗಿದೆ ಎಂದರೆ ಕ್ರಿ. ಶ. 11ನೇ ಶತಕದ ಮೂರ್ತಿ. ಭದ್ರಕಾಳೀ ವಿಗ್ರಹವು ನಾಲ್ಕೂವರೆ ಇಂಚು ಎತ್ತರವಾಗಿದ್ದು ತ್ರಿಶೂಲ. ಕುಠಾರ. ಪಾನಪಾತ್ರ. ಖಡ್ಗ. ಆಯುಧಗಳಾಗಿವೆ. ರುಂಡ ಮಾಲೆ ಇದೆ. ಲಲಿತಾಸನ ಮೂರ್ತಿ ಇದು. ಶಿಲ್ಪದ ವೈಖರಿಯನ್ನಾಧರಿಸಿ ಸು. 13ನೇ ಶತಮಾನದ ಬಿಂಬವೆನ್ನಬಹುದು. ಇಲ್ಲಿ ಪೂಜೆ ಮಾಡುವ ವಿಠಲ ಭಟ್ಟರ ಸಂತತಿಯವರು ನಡ್ವಂತಿಲ್ಲಾಯ ಕುಲದವರೆಂದು ತಿಳಿದುಬರುತ್ತದೆ. ನಡ್ವಂತಿಲ್ಲಾಯ ಕುಲಕ್ಕೆ ಶ್ರೀಮದಾಚಾರ್ಯರು ಸೇರಿದ್ದರು. ಹಾಗಾದರೆ ನಡ್ವಂತಿಲ್ಲಾಯ ಕುಟುಂಬಕ್ಕೆ ಶ್ರೀ ಕೃಷ್ಣನು ಆರಾಧ್ಯ ದೇವತೆ ಎಂಬುದಾಗಿ ತಿಳಿದುಕೊಳ್ಳಬಹುದು. ಈ ಪಂಚಲೋಹದ ಮೂರ್ತಿಯನ್ನೇ ಹೋಲುವ ಶಿಲಾವಿಗ್ರಹವು ಉಡುಪಿ ಶ್ರೀಕೃಷ್ಣ ಮಠದಲ್ಲಿದೆ. ಇದು ಶ್ರೀ ಮದಾಚಾರ್ಯರಿಗಿಂತ ಪೂರ್ವದ್ದಾಗಿದೆ.

ಬಲ್ಲಾಡಿ ಬ್ರಹ್ಮಸ್ಥಾನ

ಈ ಬ್ರಹ್ಮಸ್ಥಾನವು ಸಂಪೂರ್ಣವಾಗಿ ಜೀರ್ಣವಾಗಿದೆ. ಇಲ್ಲಿ ಅರ್ಧನಾರೀಶ್ವರ, ಅಬ್ಬಕ್ಕ–ದಾರಕ್ಕ, ಬ್ರಹ್ಮ, ಬೊಬ್ಬರ್ಯ, ಮಹಿಷಾಂತಿಕ, ನಾಗ, ಹಿರಿಯಡ್ಕತಾಯ್ತ, ಭೂತರಾಜ, ಕ್ಷೇತ್ರಪಾಲ, ರಕ್ತೇಶ್ವರೀ, ನಂದಿಗೋಣ, ಕೋಟಿ ಚನ್ನಯ, ಜೋಗಿಪುರುಷ ದೈವಗಳಿವೆ. ಇಲ್ಲಿಯ 1?" ಎತ್ತರದ ಪ್ರಧಾನ ಅರ್ಧನಾರೀಶ್ವರ ಬಿಂಬವು ವಿಶ್ವರೂಪ ಕಲಾಕೃತಿ ಶಿವ—ಶಕ್ತಿಯ ನಿರ್ದೇಶ ಸ್ಪಷ್ಟವಾಗಿ ತೋರಿಸಲ್ಪಟ್ಟಿದೆ. ಬಲಿಮೂರ್ತಿಯು ಪರಶು, ಮೃಗ ಆಯುಧಗಳನ್ನು ಧರಿಸಿದಚಿತ್ತಾದ ಕಲಾಕೃತಿಯಾಗಿದೆ. ಅಂತೆಯೇ ಅಬ್ಬಕ್ಕ, ದಾರಕ್ಕ ಸಿರಿಗಳ 7" ಎತ್ತರದ ಬಿಂಬಗಳು ಮಧ್ಯಕಾಲೀನ ಉತ್ತ ಬಿಂಬಗಳು. ಕೈಯ್ಯಲ್ಲಿ ಹಿಂಗಾರ ಹೂವು ಧರಿಸಲ್ಪಟ್ಟಿದೆ. ಬೇಗುಲದ ಹೊರಗಡೆಯಿಂದಿರುವ ಕೋಟಿ ಚನ್ನಯ್ಯ ಮತ್ತು ವೀಣೆ ಹಿಡಿದುಕೊಂಡ ಜೋಗಿಪುರುಷ ಮೂರ್ತಿಗಳೂ ಚೊಕ್ಕವಾದ ಆಕರ್ಷಣೀಯವಾದ ಕಲಾಕೃತಿಗಳಾಗಿವೆ ಈ ಬ್ರಹ್ಮಸ್ಥಾನದ ಐತಿಹಾಸಿಕ ಅಸ್ತಿತ್ವವು ಸು. ಕ್ರಿ ಶ. 12–13ನೇ ಶತಕಕ್ಕೆ ಅನ್ವಯಿಸ ಬಹುದು.

ಅರ್ಧನಾರೀಶ್ವರ ಪಂಥವು ಹೆಬ್ರಿ–ಮುದ್ರಾಡಿಯಲ್ಲಿ ಕೇಂದ್ರೀಕೃತವಾಗಲು ಕಾರಣವೇನೆಂಬುದನ್ನು ಕೂಲಂಕಷವಾದ ಸಂಶೋಧನೆಯಿಂದ ತಿಳಿದುಕೊಳ್ಳತಕ್ಕದ್ದು.

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ಶ್ರೀ ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 33

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಪಾಕಿಸ್ತಾನದ ರಾಜ್ಯಕೀಯ ಆಕ್ರಮಣ

ಕಲ್ಕತ್ತೆಯಲ್ಲಿನ ಪಾಕ್ ಡಿಪ್ಯುಟಿ ಹೈಕಮಿಶನರ್ ಶ್ರೀ ಹುಸೇನ್ ಅಲಿ ಮತ್ತವರ ಸುಮಾರು ೭೦ರಷ್ಟು ನೌಕರರು ಸ್ವತಂತ್ರ ಬಂಗ್ಲಾದೇಶಕ್ಕೆ ನಿಷ್ಠೆಯನ್ನು ತೋರಿಸಿದರು. ತಮ್ಮದು ಪಾಕಿಸ್ತಾನ್ ಸರಕಾರದ ಕಛೇರಿಯಲ್ಲ, ಬಂಗ್ಲಾದೇಶದ ಕಛೇರಿಯೆಂದು ಸಾರಿದರು. ಪರಿಣಾಮವಾಗಿ, ಶ್ರೀ ಹುಸೇನ್ ಅಲಿಯವರ ವಿರುದ್ಧ ಕ್ರಮ ಕೈಕೊಳ್ಳುವ ಉದ್ದೇಶದಿಂದ ಅವರ ಸ್ಥಾನದಲ್ಲಿ ದೆಹಲಿಯಲ್ಲಿದ್ದ ಶ್ರೀ ಮಸೂದರನ್ನು ನೇಮಿಸಿ, ಕಲಕತ್ತೆಯಲ್ಲಿನ ತನ್ನ ಕಛೇರಿಯನ್ನು ಆಕ್ರಮಣಕಾರರಿಂದ ಬಿಡಿಸಿ ಕೊಡಬೇಕೆಂದು ಪಾಕ್ ಸರಕಾರವನ್ನು ಯೋಚಿಸಿತು. ಹೊಸ ನೇಮಕವನ್ನು ಒಪ್ಪಿಕೊಂಡ ಭಾರತ ಸರಕಾರ ಕಛೇರಿ ತೆರವು ಮಾಡಿಕೊಳ್ಳುವ ಪ್ರಶ್ನೆ ಪಾಕಿಸ್ತಾನದ ಆಂತರಿಕ ಪ್ರಶ್ನೆಯೆಂದು ತಳ್ಳಿಹಾಕಿತು. ಬಾಡಿಗೆ ಕಟ್ಟಡದಲ್ಲಿರುವವರನ್ನು ಬಲಾತ್ಕಾರವಾಗಿ ಹೊರಹಾಕುವುದು ಭಾರತೀಯ ಕಾಯದೆಗಳಿಗೆ ವಿರೋಧವಾಗುತ್ತದೆ. ಅವೇನಿದ್ದರೂ ಸೂಕ್ತ ನ್ಯಾಯಾಲಯಗಳ ಮೂಲಕ ಪಾಕಿಸ್ತಾನ ತನ್ನ ಈ ಪ್ರಶ್ನೆಗೆ ಉತ್ತರವರಸಿಕೊಳ್ಳಬೇಕು ಎಂದು ಭಾರತದ ನಿಲುವು. ಯೇನಕೇನ ಭಾರತವನ್ನು ರಣಕಣಕ್ಕೆಳೆಯುವ ಚಟದಿಂದ ಪ್ರೇರಿತವಾದ ಪಾಕಿಸ್ತಾನ ಮತ್ತೊಂದು ಹೆಜ್ಜೆಯಿಟ್ಟಿತು—ಕಲ್ಕತ್ತೆಯ ತನ್ನ ಕಛೇರಿಯನ್ನು ಮುಚ್ಚುವುದಾಗಿ ಘೋಷಿಸಿ ಭಾರತವೂ ತನ್ನ ಡಾಕಾದಲ್ಲಿನ ಕಛೇರಿಯನ್ನು ಮುಚ್ಚಬೇಕೆಂದು ಸೂಚಿಸಿತು. ಕಲ್ಕತ್ತ ಮತ್ತು ಡಾಕಾಗಳ ಕಛೇರಿಗಳು ಪರಸ್ಪರ ಸಮ್ಮತಿಯಿಂದ ತೆರೆಯಲಾದುವಾದ್ದರಿಂದ ಪಾಕ್ ವಿನಂತಿಯನ್ನು ಭಾರತ ಮನ್ನಿಸಿತು, ಅಂದರೆ ಈಗ ಪಶ್ಚಿಮ ಪಾಕಿಸ್ತಾನದಲ್ಲಿ ಭಾರತದ ಕಛೇರಿಯಿರುವುದಿಲ್ಲ. ಕಲ್ಕತ್ತೆಯಲ್ಲಿನ ಪಾಕ್ ಕಛೇರಿಯನ್ನು ಶ್ರೀ ಹುಸೇನ್ ಅಲಿಯವರೇ ಮುಚ್ಚಿಬಿಟ್ಟಿದ್ದಾರೆ. (ಜ| ಯಾಹ್ಯಾಖಾನರಲ್ಲ).

ಹೊಸತಾಗಿ ಕಲ್ಕತ್ತೆಯ ಡಿ| ಹೈಕಮಿಶನರೆಂದು ನಿಯುಕ್ತರಾದ ಶ್ರೀ ಮಸೂದ್ ಅವರಿಗೆ ಕಾರ್ಯನಿರ್ವಹಿಸಲು ಭಾರತ ಅವಕಾಶವನ್ನು ತಿಳಿಗೊಳಿಸಿಕೊಡದ್ದರಿಂದ ಈ ಕ್ರಮ ಕೈಕೊಳ್ಳುವುದು ಅನಿವಾರ್ಯವಾಯ್ತೆಂದು ಪಾಕಿಸ್ತಾನ ಹೇಳುತ್ತದೆ. ಆದರೆ, ತನ್ನ ಕಛೇರಿಯ ಮೇಲೆ, ಅಲ್ಲಿನ ನೌಕರರ ಮೇಲೆ ತನ್ನ ಹತೋಟಿಯಿಟ್ಟುಕೊಳ್ಳಲು ಅಶಕ್ತರಾದ ಜ| ಯಾಹ್ಯಾಖಾನರು ಬೇಕಾಯದೆಯಾಗಿ ಅವರನ್ನು ಓಡಿಸ ಬೇಕೆಂದು ಕೇಳುವುದು ಅಸಮಂಜಸವೇ. ದಂಡಿನಾಳಿಕೆಯಲ್ಲಿ ದಂಡಪತಿ ಏನನ್ನು ಮಾಡಿದರೂ ಧಕ್ಕುತ್ತದೆ; ಆದರೆ, ಪ್ರಜಾಸತ್ತೆಯಲ್ಲಿ ಹಾಗಾಗುವುದಿಲ್ಲವೆಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕಿತ್ತು. ತನ್ನ ಈ ಕ್ರಮದಿಂದ ಜ| ಯಾಹ್ಯಾಖಾನ್ ಭಾರತದ ಮುಖಭಂಗ ಮಾಡಿದೆನೆಂದು ಮೀಸೆ ಹುರಿ ಮಾಡಬಹುದು; ಆದರೆ, ಸ್ವತಂತ್ರ ಬಂಗ್ಲಾದೇಶಕ್ಕೆ ಭಾರತ ಮನ್ನಣೆ ನೀಡುವ ದಾರಿಯಲ್ಲಿನ ಬಿದಿರ ಮುಳ್ಳೊಂದೀಗ ತಾನೇ ತಾನಾಗಿ ದೂರವಾದಂತಾಯ್ತು ಎಂಬುದನ್ನವರು ಮರೆತಿದ್ದಾರೆ. ಇಷ್ಟರಿಂದಲೇ ತೃಪ್ತರಾಗದ ಜ| ಯಾಹ್ಯಾಖಾನರು ಬೊಂಬಾಯಿಯಲ್ಲಿ ತನ್ನ ಕಛೇರಿಯ ನೌಕರರಲ್ಲೂ ಮಹತ್ವದ ಬದಲಾವಣೆ ಮಾಡಿದ್ದಾರೆ. ಈ ಬದಲಾವಣೆಗಳು ಹುಸೇನ್ ಅಲಿ ಕಲಿಸಿದ ಪಾಠದಿಂದ ಪ್ರೇರಿತವಾದದ್ದಿರಬಹುದು. ತನ್ನಲ್ಲಿ ಅತ್ಯಂತ ನಿಷ್ಠೆ ತೋರಿಸುವವರನ್ನೇ ಕಛೇರಿಗಳಲ್ಲಿ ಇರಿಸಿಕೊಳ್ಳುವುದು ರಾಜ್ಯಕೀಯ ದೃಷ್ಟಿಯಿಂದ ಅತ್ಯಗತ್ಯ. ಇಲ್ಲವಾದರೆ, ಬೊಂಬಾಯಿ ಕಛೇರಿಯೂ ಕಲಕತ್ತೆಯ ದಾರಿ ಹಿಡಿಯ ಬಹುದು. ಇದೆಲ್ಲ ಪಾಕ್ ಆಡಳಿತಗಾರರ ಸ್ವಪ್ರಶ್ನೆಗಳು. ಆದರೆ, ಈಗಾಗಲೇ ದಿವಾಳಿಯೆದ್ದಿರುವ ಪಾಕ್ ರಾಜನೀತಿಯು ಭಾರತದ ಮೇಲೆ 'ರಾಜ್ಯಕೀಯ ಆಕ್ರಮಣ' ನಡೆಸಿದಂತಿದೆ. ಸ್ವತಂತ್ರ ಬಂಗ್ಲಾದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಮೊದಲ ಕ್ಷಣದಿಂದಲೂ ಪ್ರಚಾರ–ಸಹಾನುಭೂತಿ ನೀಡುತ್ತ ಬಂದಿರುವ ಭಾರತವು ಸ್ವತಂತ್ರ ಬಂಗ್ಲಾದೇಶಕ್ಕೆ ಮನ್ನಣೆಯನ್ನು ನೀಡುವ ಬಗ್ಗೆ ತೀವ್ರ ಪರ್ಯಾಲೋಚಿಸುತ್ತಿದೆ. ಭಾರತವನ್ನು ತನ್ನ ಶತ್ರುವಿನಂತೆಯೇ ನಡೆಸಿಕೊಂಡು ಬಂದ ಪಾಕಿಸ್ತಾನದ ಕಾಲು ಶತಮಾನದ ಇತಿಹಾಸದ ಪುಟಗಳಲ್ಲಿ ಈಗಿನ ಪಾಕ್ ಕೃತಿಯೂ ಒಂದು ಘಟನೆ ಮಾತ್ರವಾಗುತ್ತದೆ.

ಈಗ ಉಳಿದಿರುವ ಪ್ರಶ್ನೆ ಕಲ್ಕತ್ತೆಯಲ್ಲಿನ ಪಾಕ್ ಕಛೇರಿ ಮತ್ತು ಡಾಕಾದಲ್ಲಿನ ಭಾರತ ಕಛೇರಿಯ ನೌಕರ–ಪರಿವಾರಗಳ ವಿನಿಮಯ. ಪೂರ್ವ ಬಂಗಾಳದಲ್ಲಿ ಜ| ಯಾಹ್ಯಾಖಾನರು ನಡೆಸುತ್ತಿರುವ ನರಮೇಧದಿಂದ ಅಲ್ಲಿನ ಹಾಗೂ ಭಾರತೀಯ ನಾಗರಿಕರು ಉದ್ರಿಕ್ತಗೊಂಡಿದ್ದಾರೆ. ಪಾಕ್ ನೌಕರರಲ್ಲಿ ಹೆಚ್ಚಿನವರು ಸ್ವತಂತ್ರ ಬಂಗ್ಲಾಕ್ಕೆ ನಿಷ್ಠೆ ತೋರಿ ಯಾಹ್ಯಾ ವಿರುದ್ಧ ಕೈಯೆತ್ತಿದ್ದಾರೆ. ಈಗ ನೌಕರರನ್ನು ಹಿಂದಿರುಗಿಸುವಾಗ ಜ| ಯಾಹ್ಯಾಖಾನರು ಎಲ್ಲರನ್ನೂ ಕೇಳುತ್ತಾರೆಯೇ, ಅಥವಾ ತಮಗೆ ನಿಷ್ಠೆ ತೋರಿಸುವ ಕೆಲವರನ್ನು ಮಾತ್ರ ಕೇಳುತ್ತಾರೆಯೆ? ಎಲ್ಲರನ್ನೂ ಕೇಳಿದಾಗ, ಬಂಗ್ಲಾ ನಿಷ್ಠರು ಹೋಗಲು ನಿರಾಕರಿಸಿದರೆ, ಏನು ಮಾಡಬಹುದು? 'ರಾಜ್ಯಕೀಯ ಆಶ್ರಯ' ಮಾದರಿಯ ಆಶ್ರಯ ನೀಡಲು ಭಾರತ ಸರಕಾರ ಸಿದ್ಧವಿದೆಯೆ? ಡಾಕಾದಲ್ಲಿನ ಭಾರತೀಯ ಪರಿವಾರಗಳು ನೆಮ್ಮದಿಯಿಂದ ಪಾಕ್ ಗಡಿ ದಾಟ ಬಲ್ಲವೆ?—ಈ ಯೆಲ್ಲ ಆತಂಕಗಳು–ತೊಂದರೆಗಳು ಮುಂದಿವೆ. ಜ| ಯಾಹ್ಯಾಖಾನರೂ ಅವರ ಸುತ್ತ ಹಾಕಿಕೊಂಡ ಪಾಕ್ ಖಳನಾಯಕರೂ ಮಾನವತೆಯನ್ನು ತಳ್ಳಿ ದಾನವತೆಯನ್ನಪ್ಪಿಕೊಂಡಿದ್ದಾರೆಂಬುದಕ್ಕೆ ಈಗ ಇನ್ನೊಂದು ನಿದರ್ಶನ ದೊರೆಯಿತು.

ಯೋಜನಾ ಸಚಿವರು

ಕೆಲವರು ಆದೆಷ್ಟು ವಿವಾದಾತ್ಮಕ ವ್ಯಕ್ತಿಯಾಗಿದ್ದರೂ ಉನ್ನತ ಪದವಿ ಪಡೆಯುತ್ತಲೇ ಹೋಗುತ್ತಾರೆ. ಇದಕ್ಕೆ ತಮಿಳುನಾಡಿನ ಶ್ರೀ ಸಿ. ಸುಬ್ರಹ್ಮಣ್ಯಂ ಒಂದು ಉದಾಹರಣೆ. ೧೯೫೨ರಲ್ಲಿ ಶ್ರೀ ರಾಜಾಜಿಯವರಿಂದ ಮಂತ್ರಿಪದವಿಗಳಿಸಿದ ನವಯುವಕ (೪೨) ಸುಬ್ರಹ್ಮಣ್ಯಂ ಹತ್ತು ವರ್ಷಗಳಲ್ಲಿ ರಾಜಾಜಿ, ಕಾಮರಾಜ ಮತ್ತು ಭಕ್ತವತ್ಸಲಂ ಎಂಬ ಮೂವರು ಮುಖ್ಯಮಂತ್ರಿಗಳಿಗೂ ಬಲಗೈ ಬಂಟರಾಗಿ ತಮಿಳುನಾಡಿನ ಸುಭದ್ರ ಆಡಳಿತಕ್ಕೆ ಕಾರಣ ಪುರುಷರಾಗಿ ಬಂದರು. ೧೯೬೨ರ ನಂತರ ಪಂ. ನೆಹರುರವರ ಸಂಪುಟದಲ್ಲಿ ಕೇಂದ್ರ ಕ್ಯಾಬಿನೆಟ್ ಸಚಿವರಾದ ಸುಬ್ರಹ್ಮಣ್ಯಂ ಆಹಾರ, ಉಕ್ಕು, ಘನೋದ್ಯಮ ಮೊದಲಾದ ಮಂತ್ರಿ ಶಾಖೆಯನ್ನು ನೋಡಿಕೊಂಡರು ಐದು ವರ್ಷಗಳಲ್ಲಿ ಪಂ. ನೆಹರು, ಶ್ರೀ ಶಾಸ್ತ್ರಿ, ಶ್ರೀಮತಿ ಗಾಂಧಿಯವರ ಮೂರೂ ಸಚಿವ ಸಂಪುಟವನ್ನು ಕಂಡ ಅವರು ೧೯೬೭ರ ಚುನಾವಣೆಯಲ್ಲಿ ಪ್ರಾಮುಕಕ್ಕೆ ಸೋತರು. ಅನಂತರವೂ ಅವರನ್ನು ಎಂತಾದರೂ ಮಾಡಿ ಪಾರ್ಲಿಮೆಂಟಿಗೆ ತರುವ ಪ್ರಯತ್ನ ಶ್ರೀಮತಿ ಗಾಂಧಿ ಮಾಡಿದರೂ ಅವರಿಗೆ ಯಶ ಸಿಗಲಿಲ್ಲ. ಈ ವರ್ಷದ ಮಧ್ಯಾವಧಿ ಚುನಾವಣೆಗಳಲ್ಲೂ ಅವರು ಸ್ಪರ್ಧಿಸುವುದು ಸಾಧ್ಯವಾಗಲಿಲ್ಲ. ಪಕ್ಷದ ಆಂತರಿಕ ವಿವಾದವೇ ಸುಬ್ರಹ್ಮಣ್ಯಂ ಭವಿಷ್ಯವನ್ನು ಕಪ್ಪು ಮಾಡಿದುವು. ಆದರೆ, ಶ್ರೀಮತಿ ಗಾಂಧಿಯವರು ಅವರನ್ನು ಬಿಟ್ಟುಕೊಡಲು ಒಪ್ಪಲಿಲ್ಲ. ೭೧ ವರ್ಷದ ಅವರನ್ನು ಯೋಜನಾ ಸಚಿವರಾಗಿ ಈಗ ಸೇರಿಸಿಕೊಂಡಿದ್ದಾರೆ. ಕಾಂಗ್ರೆಸ್ ವಿಭಜನಾ ವೇಳೆ ಇಂದಿರಾ ಗಾಂಧಿಯ ಪ್ರಬಲ ಕೈವಾರಿಯಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದ ಇವರು ಪಕ್ಷದಲ್ಲಿ ವಿವಾದಾತ್ಮಕ ವ್ಯಕ್ತಿಯಾಗಿದ್ದಾರೆ. ಲೋಕಸಭೆ–ರಾಜ್ಯಸಭೆಗಳ ಸದಸ್ಯರಲ್ಲದ ಇವರು ಹೇಗಾದರೂ ಎಂ.ಪಿ. ಆಗಬೇಕು. ಪಂ. ನೆಹರುರವರು ಒಲಿದ ಶ್ರೀ ಕೃಷ್ಣ ಮೆನನ್ ಗೆಲ್ಲುತಿದ್ದರು; ಶ್ರೀಮತಿ ಗಾಂಧಿ ದಯೆದೋರಿದ ಶ್ರೀ ಸುಬ್ರಹ್ಮಣ್ಯಂ ಇದುವರೆಗೆ ಗೆದ್ದದ್ದಿಲ್ಲ. ಈ ಬಾರಿ ಇಂಡಿಕೇಟಿನ ದಿಗ್ವಿಜಯ ಸಿ.ಸು.ರನ್ನು ಮೇಲೆ ಎತ್ತಿಹಾಕುವ ನಿರೀಕ್ಷೆಯಿದೆ. ಶ್ರೀ ಸಿ. ಸುಬ್ರಹ್ಮಣ್ಯಂರಂತಹ ಸಮರ್ಥರು ಸರಕಾರದಲ್ಲಿ ಸಕ್ರಿಯವಾಗಿ ಇರಬೇಕಾದುದು ಅಗತ್ಯ. ಯೋಜನಾ ಸಚಿವರಾಗಿ ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಇವರು ದೇಶದ ಆರ್ಥಿಕ ಪ್ರಗತಿಯನ್ನು ಸುಯೋಜಿತವಾಗಿ ಸಾಗಿಸಬಲ್ಲರು. ಪಕ್ಷದ ಕಾರ್ಯಗಳಿಗೆ ನಾಲಾಯಕ್ಕಾದರೂ ಸರಕಾರಿ ಕೆಲಸಕ್ಕೆ ಸಮರ್ಥರೆಂಬ ಕೀರ್ತಿ ಅವರಿಗಿದ್ದೇ ಇದೆ.

●●

ಬೇಕಾಗಿದ್ದಾರೆ

ಕನಿಷ್ಠ 8ನೇ ತರಗತಿ ವರೆಗೆ ಓದಿದ ಕೆಲವು ಉತ್ಸಾಹಿ ಹುಡುಗರನ್ನು ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಜಂಬೂಕ - ಮೇಷ ಪ್ರಸಂಗ

ಯಾಹ್ಯಾಖಾನರ ಶೋಷಣೆಯ ವಿರುದ್ಧ ಬಂಗ್ಲಾ ದೇಶೀಯರು ಪುಟಿದೆದ್ದು ಸ್ವತಂತ್ರ ಬಂಗ್ಲಾ ದೇಶವನ್ನು ಘೋಷಿಸಿಕೊಂಡಾಗ, ಅವರ ಹೋರಾಟಕ್ಕೆ ಮೊತ್ತಮೊದಲ ಸಹಾನುಭೂತಿ ಹೊರಟದ್ದು ಭಾರತದಿಂದ. ಲೋಕಸಭೆಯಲ್ಲಿ ಹಲವು ಶಾಸಕರು ಸಹಾನುಭೂತಿ ತೋರಿಸುತ್ತ ಮಾತನಾಡಿದರು; ಸ್ವಯಂ ಪ್ರಧಾನಿ ಗಾಂಧಿಯೇ ತನ್ನ ವ್ಯಕ್ತಿಗತ ಅನುತಾಪ ವ್ಯಕ್ತಪಡಿಸಿದರು; ಸದಸ್ಯರು ಒಪ್ಪುವುದಾದರೆ, ಈ ಬಗ್ಗೆ ಗೊತ್ತುವಳಿಯನ್ನು ಮಂಡಿಸುವುದಕ್ಕೂ ಮುಂದೆ ಬಂದರು. ಒಂದೆರಡು ದಿನಗಳಲ್ಲಿ ಬಂಗ್ಲಾ ದೇಶದ ಮುಕ್ತಿ ಸಿಪಾಹಿಗಳಿಗೆ ಸಹಾನುಭೂತಿ ವ್ಯಕ್ತಪಡಿಸುವ ನಿರ್ಣಯವನ್ನು ಭಾರತದ ಲೋಕಸಭೆ ಅಂಗೀಕರಿಸಿತು. ಭಾರತೀಯ ಆಕಾಶವಾಣಿಯು ಇತರೇ ಸುದ್ದಿಗಳಿಗಿಂತ ಬಂಗ್ಲಾ ದೇಶದ ಸುದ್ದಿಗಳಿಗೆ ಹೆಚ್ಚಿನಪ್ರಾಶಸ್ತ್ಯ ನೀಡತೊಡಗಿತು.

ಬಂಗ್ಲಾವು ಭಾರತದ ಗಡಿಯಲ್ಲಿರುವುದರಿಂದ, ಅಲ್ಲಿನ ಆಗು ಹೋಗುಗಳನ್ನು ಭಾರತ ನಿರ್ಲಕ್ಷ್ಯದಿಂದ ನೋಡುವಂತಿಲ್ಲ. ಭಾರತೀಯ ಸಂಸತ್ತು ಮತ್ತು ಆಕಾಶವಾಣಿಗಳ ಕೃತಿಯಿಂದ ತನ್ನ ಆಂತರಿಕ ವ್ಯವಹಾರದಲ್ಲಿ ಭಾರತವು ಕೈಹಾಕಿದಂತಾಗಿದೆಯೆಂದು ಯಾಹ್ಯಾಖಾನರು ದೂರಿದರೇನೋ ನಿಜ. ಆದರೆ, ಸಂಸತ್ತು ಯಾವುದರ ಬಗ್ಗೆಯಾದರೂ ಚರ್ಚಿಸ, ನಿರ್ಣಯಿಸ ಬಯಸಿದರೆ, ಅದನ್ನು ತಡೆಯುವ ಅಧಿಕಾರ ಮತ್ತಾರಿಗೂ ಇಲ್ಲವೆಂಬುದನ್ನೂ ವಾರ್ತಾರಂಗವು ಸ್ವಾಯತ್ತವೆಂಬುದನ್ನೂ ಅವರಿಗೆ ನೆನಪಿಸಿ ಕೊಡಲಾಯ್ತು. ಯಾಹ್ಯಾಖಾನರು ಇದನ್ನು ಒಪ್ಪಿಕೊಂಡರೆಂದು ಹೇಳುವಂತಿಲ್ಲ. ಆದರೆ, ಅವರಿಂದ ಮುಂದೇನೂ ಮಾಡುವುದು ಸಾಧ್ಯವಾಗಲಿಲ್ಲ. ಬಂಗ್ಲಾ ದೇಶದಲ್ಲಿನ ತನ್ನ ಒಡೆತನದ ಪರದೆ ಜಾರುತ್ತಿರುವಾಗ ಅದನ್ನು ಹೇಗಾದರೂ ಮಾಡಿ ಉರುಳಗೊಡದಂತೆ ಲಕ್ಷ್ಯ ಏಕೀಕೃತಗೊಳಿಸುವುದು ಅವರಿಗೆ ಅತ್ಯಗತ್ಯವಾಯ್ತು. ಆದುದರಿಂದ ಸೈನ್ಯ ಸಂಗ್ರಹ—ರವಾನೆ—ನರಮೇಧಗಳಲ್ಲೇ ಅವರು ನಿರತರಾದರು.

ಸೋಲಿನ ದಾರಿಯಲ್ಲಿ ಮುಂದುವರಿಯುತ್ತಿದ್ದಂತೆ ಯಾಹ್ಯಾಖಾನರು ಭಾರತದ ಮುಖಭಂಗ ಮಾಡಲು ಹವಣಿಸಿದ್ದಾರೆ. ಬಂಗ್ಲಾದೇಶೀಯರ ಸ್ವಾತಂತ್ರ್ಯಪ್ರಿಯತೆ ಮತ್ತು ಪಾಕ್ ಸರಕಾರದ ಬಗ್ಗಿನ ತಿರಸ್ಕಾರ ಭಾವನೆಗಳೇ ಆನೆಬಲವನ್ನು ತಂದುಕೊಟ್ಟಿವೆಯೆಂಬುದನ್ನು ಅರಿತರಿತೂ ಅವರು ಭಾರತವನ್ನು ಬೊಟ್ಟುಮಾಡುತ್ತಿದ್ದಾರೆ. ಭಾರತೀಯ ನಾಗರಿಕರೂ ಸೇನೆಗಳೂ ಸಶಸ್ತ್ರರಾಗಿ ಗಡಿ ಉಲ್ಲಂಘಿಸಿದ್ದಾರೆಂಬ ಅವರ ಆರೋಪ. ಬಂಗ್ಲಾ ದೇಶದ ಮುಕ್ತಿ ಸೇನೆಗೆ ಭಾರತ ಸೈನಿಕ ಸಹಾಯ ನೀಡುತ್ತಿದೆಯೆಂಬ ದೂರು. ತಾವು 'ದಂಗೆಖೋರ'ರಿಂದ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳಲ್ಲಿ ಭಾರತದ ಗುರುತಿದೆ—ಎಂದದರ ಸಮರ್ಥನೆ.

ಬಂಗ್ಲಾ ದೇಶದ ಮುಕ್ತಿಸೇನೆಗೆ ಸೈನಿಕ ನೆರವು ನೀಡಬೇಕು; ಕಾಗದದ ಸಹಾನುಭೂತಿ ಸಾಲದು ಎನ್ನುತ್ತಾರೆ, ಕೆಲವು ಭಾರತೀಯ ನಾಯಕರು. ಸ್ವತಂತ್ರ ಬಂಗ್ಲಾ ದೇಶದ ಸರಕಾರವನ್ನು ಮನ್ನಿಸಿ ಕೂಡಲೇ ಸಹಾಯ ಕೊಡಬೇಕು ಎನ್ನುತ್ತಾರೆ ಇನ್ನುಕೆಲವರು. ಮಾನ್ಯತೆಯಾಗಲಿ, ನೆರವಾಗಲೀ, ನೀಡುವುದು ವಿಶ್ವ ರಾಜಕೀಯದ ಮೇಲೆ ಪರಿಣಾಮ ಬೀರುವುದರಿಂದ ಭಾರತ ಸರಕಾರ ಆ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಿದೆ ಮಾತ್ರ.

ತಾನು ಕಮ್ಯುನಿಜಂ ವಿರೋಧಕ್ಕೆಂದು ತಂದ ಅಮೆರಿಕನ್ ಶಸ್ತ್ರ ಬಲವನ್ನು ಸ್ವದೇಶೀಯರ ನರಮೇಧದಲ್ಲಿ ಬಳಸಿದ ತಪ್ಪನ್ನು ಮುಚ್ಚಲೆಂದು ಪಾಕ್ ಅಧಿನಾಯಕರು ಭಾರತದ ಮೇಲೆ ಮಿಥ್ಯಾರೋಪ ಹೊರಿಸಿದ್ದಾರೆ. ಅಂತಾರಾಷ್ಟ್ರೀಯ ರಂಗದಲ್ಲಿ ಭಾರತವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ವ್ಯರ್ಥ ಪ್ರಯತ್ನವಿದು. ಒಂದು ವೇಳೆ ಭಾರತವು ಬಂಗ್ಲಾದೇಶಕ್ಕೆ ಸೈನಿಕ ನೆರವು ನೀಡುತ್ತಿದ್ದರೆ, ಯಾಹ್ಯಾಖಾನರು ಅಲ್ಲಿಂದ ಎಂದೋ ಪೆಟ್ಟಿಗೆ ಕಟ್ಟಬೇಕಿತ್ತು ಎನ್ನುತ್ತಾರೆ ಅಮೆರಿಕನ್ ರಾಜತಾಂತ್ರಿಕರಲ್ಲಿ ಕೆಲವರು. ಪಾಕ್ ಪಡೆಗಳ ದೌರ್ಜನ್ಯದಿಂದ, ಚಿತ್ರಹಿಂಸೆಯಿಂದ ದಿಕ್ಕೆಟ್ಟ ಬಂಗಾಳಿಗಳು ತ್ರಿಪುರ-ಪ. ಬಂಗಾಳಗಳಿಗೆ ನಿರಾಶ್ರಿತರಾಗಿ ಬರುತ್ತಿದ್ದಾರೆ. ಸತ್ಯ ಸಂಗತಿ ಹೀಗಿರುವಾಗ, ಯಾಹ್ಯಾಖಾನರ ಆರೋಪ ಹುರುಳಿಲ್ಲದ್ದೆಂಬುದು ಸುಸ್ಪಷ್ಟ.

ಇದುವರೆಗೂ ಪರಿಸ್ಥಿತಿಯನ್ನು ಲಕ್ಷಿಸುತ್ತ ಬಂದ ಭಾರತವನ್ನು ಇಕ್ಕಟ್ಟಿಗೆ ಸಿಕ್ಕಿಸುವ ಘಟನೆಯೊಂದು ಮೊನ್ನೆನಡೆಯಿತು. ಕಲ್ಕತ್ತೆಯಲ್ಲಿರುವ ಪಾಕ್ ಡಿ| ಹೈಕಮಿಶನರರು ತನ್ನದು ಬಂಗ್ಲಾದೇಶದ ರಾಯಭಾರಿ ಕಛೇರಿಯೆಂದು ಘೋಷಿಸಿ ಯಾಹ್ಯಾಖಾನರ ವಿರುದ್ಧ ಕೈಯೆತ್ತಿದರು. ಎರಡು ದಿನಗಳ ತನಕ ಸುಮ್ಮನಿದ್ದ ಯಾಹ್ಯಾಖಾನರು ಆ ಬಳಿಕ ಮತ್ತೊಬ್ಬನನ್ನು ಕಲ್ಕತ್ತೆಯಲ್ಲಿ ತನ್ನ ಡಿ| ಹೈಕಮಿಶನರನೆಂದು ನೇಮಿಸಿದರು; ಕಛೇರಿಯನ್ನು ಅವರಿಗೆ ಬಿಡಿಸಿಕೊಡಬೇಕೆಂದು ಭಾರತವನ್ನು ಕೇಳಿಕೊಂಡರು. ಭಾರತ ಸರಕಾರವು ತುಂಬ ಆಲೋಚನೆ ಮಾಡಿತು. ಹೊಸ ಡಿ| ಹೈಕಮಿಶನರರ ನೇಮಕಕ್ಕೆ ತನ್ನ ಆತಂಕವೇನೂ ಇಲ್ಲವೆಂದೂ ಕಟ್ಟಡ ಸ್ವಾಧೀನತೆಯ ಪ್ರಶ್ನೆ ಪಾಕಿಸ್ತಾನದ ಆಂತರಿಕವೆಂದೂ ಅಭಿಪ್ರಾಯ ಪಟ್ಟಿತು.

ಮೊದಲು ರಾಯಭಾರಿಯಾಗಿದ್ದ ಹುಸೇನ್ ಆಲಿಯವರೀಗ, ಭಾರತ ಮನ್ನಣೆ ಕೊಡಲಿ, ಬಿಡಲಿ, ಬಂಗ್ಲಾ ದೇಶದ ರಾಯಭಾರಿ ತಾನೆಂದು ಹೇಳುತ್ತಾರೆ. ಈ ಕಛೇರಿಯಿರುವುದು ಬಾಡಿಗೆ ಕಟ್ಟಡದಲ್ಲಿ; ಕಟ್ಟಡ ತನ್ನ ಸ್ವಾಧೀನತೆಯಲ್ಲಿದ್ದು ಅದನ್ನು ಪಾಕ್ ರಾಯಭಾರಿಗೆ ಬಿಟ್ಟು ಕೊಡಲಾರೆ' ಎನ್ನುತ್ತಾರೆ ಹುಸೇನ್. ಬಾಡಿಗೆಯ ಕಟ್ಟಡವನ್ನು ಅದರ ನಿವಾಸಿಗಳಿಂದ ಬಲವಂತದಿಂದಬಿಡಿಸಿಕೊಡಲು ಭಾರತದ ಕಾನೂನಿನಲ್ಲಿ ಅವಕಾಶವಿಲ್ಲವೆಂದು ವಿದೇಶಾಂಗ ಕಛೇರಿ ಪಾಕಿಗೆ ತಿಳಿಸಿದೆ.

ಈ ಪ್ರಶ್ನೆ ಇಲ್ಲಿಗೇ ಮುಗಿಯುವುದಿಲ್ಲ. ಹೊಸ ರಾಯಭಾರಿ ಮೆಹದಿ ಮಸೂದಿಯವರು ಕಲ್ಕತ್ತೆಗೆ ಹೋಗುತ್ತಾರೆಂದೂ ಹೇಳುವಂತಿಲ್ಲ. ಆಂತರಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲಾಗದ ಯಾಹ್ಯಾಖಾನರು ಮತ್ತೂ ಮತ್ತೂ ಸಮಸ್ಯೆಗಳನ್ನು ಸೃಷ್ಟಿಸುತ್ತ ಹೋಗುತ್ತಾರೆ; ಈ ಸುಳಿಯಲ್ಲಿ ತಾವು ಬಿದ್ದು ತಿರುಗುವುದಲ್ಲದೆ ಇತರರನ್ನೂ ಉದ್ದೇಶ್ಯ ಪೂರ್ವಕ ಎಳೆದು ಹಾಕುತ್ತಾರೆ.

ಭಾರತದಲ್ಲಿ ಬಂಗ್ಲಾ ದೇಶದ ರಾಯಭಾರಿ ಕಛೇರಿಯೊಂದು ತೆರೆದುದಾಯ್ತು; ಆದರೆ, ಈ ಕಛೇರಿಗೆ ಭಾರತ ಮಾನ್ಯತೆ ನೀಡಿದೆಯೆ ? ಮಾನ್ಯತೆ ನೀಡುವವರೆಗೆ 'ಹುಸೇನ್ ಆಲಿ ಅಲ್ಲಿದ್ದಾರೆ' ಮಾತ್ರ. ಹುಸೇನ್ ಆಲಿಯವರು ತಮ್ಮ ಕಛೇರಿಯಲ್ಲಿ ಸುಮ್ಮನೆ ಕುಳಿತಿರುವುದಿಲ್ಲ. ಯಾಹ್ಯಾಖಾನರ ವಿರುದ್ಧ ಏನಾದರೂ ಮಾಡುತ್ತಿರುತ್ತಾರೆ. ಆಗ ಯಾಹ್ಯಾ ಸುಮ್ಮನಿರುವುದು ಸಾಧ್ಯವಾದೀತೆ? ಪಾಕ್ ಪ್ರಜೆಯೊಬ್ಬನು ಭಾರತದಲ್ಲಿ ಕುಳಿತು ಪಾಕ್ ದೇಶದ್ರೋಹೀ ವರ್ತನೆಯಲ್ಲಿ ತೊಡಗಿರುವಾಗ ಅವನನ್ನು ತನ್ನ ವಶಕ್ಕೆ ಒಪ್ಪಿಸುವಂತೆ ಹೇಳಬಹುದಲ್ಲವೆ?

ಭಾರತೀಯ ವಿಮಾನಾಪಹರಣ ಮಾಡಿದವರನ್ನು 'ಅವರು ಭಾರತೀಯ ನಾಗರಿಕರಲ್ಲ'ವೆಂದು ಹೇಳಿ ಒಪ್ಪಿಸಲು ನಿರಾಕರಿಸಿದ ಯಾಹ್ಯಾಖಾನರ ನೀತಿಯೀಗ ನೆನಪಿಗೆ ಬರುತ್ತಿದೆ. ವಿಮಾನಾಪಹರಣ- ವಿಮಾನ ಧ್ವಂಸ ಕೃತಿಗಳಲ್ಲಿ ಪಾಕಿಸ್ತಾನಿಗಳ ಕೈವಾಡವೇನೂ ಇಲ್ಲವೆಂದೂ ಈ ಕೃತಿಗಳನ್ನು ಭಾರತವೇ ನಿಯೋಜಿಸಿದ್ದು ಪಾಕಿಸ್ತಾನದ ಮೇಲೆ ವ್ಯಥಾರೋಪ ಹೊರಿಸುವುದು ದುರುದ್ದೇಶದಿಂದ ಕೂಡಿದ್ದೆಂದೂ ಪಾಕ್ 'ವಿಚಾರಣಾ ಸಮಿತಿ' ತನ್ನ ವರದಿಯನ್ನು ಸಲ್ಲಿಸಿದೆ. ಅಂದರೆ, ಯಾಹ್ಯಾಖಾನರು ತನ್ನ ಒರಟು ಬರ್ಬರ ನೀತಿಯನ್ನು ಬದಲಿಸಲು ಇಷ್ಟಪಡುವುದಿಲ್ಲವೆಂದು ಅರ್ಥ. ಭಾರತ ಸರಕಾರವೀಗ ತುಸ ಜಾರಿದರೂ ಪಾತಳಿಗಿಳಿಯುತ್ತದೆಂಬುದು ಸರ್ವವೇದ್ಯ. ಹುಸೇನ್ ಆಲಿ ಮತ್ತವರ ಕಛೇರಿಗೆ ಪೋಲೀಸ್ ಭದ್ರತೆ ನೀಡಿದ್ದಷ್ಟರಿಂದಲೇ ಸಮಸ್ಯೆ ಕೊನೆಗೊಳ್ಳುವುದಿಲ್ಲ; ಅದು ಮತ್ತೂ ಒಂದು ಹೆಜ್ಜೆ ಮುಂದುವರಿಯುತ್ತದೆ. ಇಲ್ಲಿ ಭಾರತವಿಡುವ ಹೆಜ್ಜೆಯನ್ನು ಲೋಕ ಗಮನಿಸುತ್ತಿದೆ.

● ●

ಧರ್ಮಸ್ಥಳದಲ್ಲಿ ಡಾ| ಮೋದಿ ಶಿಬಿರ ಉದ್ಘಾಟನೆ

ತಾ. ೨೧-೪-೭೧ರಂದು ಡಾ| ಮೋದಿಯವರ ಶಿಬಿರವನ್ನು ಧರ್ಮಸ್ಥಳದಲ್ಲಿ ಜಿಲ್ಲಾ ವೈದ್ಯಾಧಿಕಾರಿ ಡಾ| ನಾಭಿರಾಜ ಅರಿಗರು ಉದ್ಘಾಟಿಸಿದರು. ಡಾ| ಮೋದಿಯವರು ಮಾತನಾಡುತ್ತ, ತಾನೊಬ್ಬ ಕಣ್ಣಿನ ರೋಗಿ, ಧರ್ಮಸ್ಥಳ ಕ್ಷೇತ್ರವೇ ಆಸ್ಪತ್ರೆ, ಮಂಜುನಾಥ ಸ್ವಾಮಿಯೇ ಡಾಕ್ಟರ್ ಎಂದು ಹೇಳಿ ಜ್ಞಾನದ ಬೆಳಕು ಕಾಣಬೇಕೆಂಬ ಹಂಬಲ ವ್ಯಕ್ತಪಡಿಸಿದರು. ಪರಮ ಹಂಸ ಭಾಸ್ಕರಂ ಶಿಕ್ಷಾಚಾರ್ಯರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಪ್ರಾರಂಭದಲ್ಲಿ ಕ್ಷೇತ್ರದ ಧರ್ಮದರ್ಶಿ ಶ್ರೀ ವೀರೇಂದ್ರ ಹೆಗ್ಗಡೆಯವರು ಸ್ವಾಗತಿಸಿ ಡಾ| ಮೋದಿಯವರ ಧರ್ಮನಿಷ್ಠೆ, ಸೇವಾ ಮನೋಭಾವ, ನಿಸ್ವಾರ್ಥತೆಗಳ ಬಗ್ಗೆ ಮಾತನಾಡಿ ಅವರು ಭಾರತರತ್ನ ಪ್ರಶಸ್ತಿಗೆ ಅರ್ಹರೆಂದರು. ಕೊನೆಯಲ್ಲಿ ಕನ್ನಡ ಪಂಡಿತ ಶ್ರೀ ಕೆ. ಆರ್. ಚಂದ್ರ ಧನ್ಯವಾದ ಸಲ್ಲಿಸಿದರು.

ಮೊಗವೀರ ಜ್ಞಾನೋದಯ ಸಮಾಜದ ವಾರ್ಷಿಕೋತ್ಸವ

ಇದೇ ಸೌರಮಾನ ಯುಗಾದಿ ದಿವಸ ಮಂಗಳೂರು ಜ್ಞಾನೋದಯ ಮಂದಿರದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಬಿ. ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ತುಳು ಕರ್ನಾಟಕ ಮೊಗವೀರ ಶ್ರೀ ಜ್ಞಾನೋದಯ ಸಮಾಜದ ೬೨ನೆಯ ವಾರ್ಷಿಕೋತ್ಸವವು ವಿಜೃಂಭಣೆಯಿಂದ ನೆರವೇರಿತು. ಸಮಾಜದ ಅಧ್ಯಕ್ಷ ಶ್ರೀ ಎಚ್. ಕೆ. ತಿಂಗಳಾಯರು ಸ್ವಾಗತಿಸಿ ಸಮಾಜದ ಇತಿಹಾಸ ಹಾಗೂ ದಿ| ಬಿ. ಮೋನಪ್ಪ ತಿಂಗಳಾಯರ ಕುರಿತು ವಿವರಿಸಿದರು. ಶ್ರೀ ಎಸ್. ಕೆ. ಅಮೀನರು ದಿ| ಬಿ. ಎಂ. ತಿಂಗಳಾಯರ ಭಾವಚಿತ್ರವನ್ನು ಅನಾವರಣಗೈದು ದಿವಂಗತರ ಗುಣಗಾನ ಮಾಡಿದರು.

ಶ್ರೀ ಕೆ. ಆರ್. ಆಚಾರ್ ಅವರು ಮೊಗವೀರ ಮತ್ತು ಹಿಂದುಳಿದ ಜನಾಂಗದ ಏಳಿಗೆಗಾಗಿ ದುಡಿದ ಪವಾಡ ಪುರುಷ ದಿ|| ಬಿ. ಎಂ. ತಿಂಗಳಾಯರು ರಚಿಸಿದ್ದ ಪುನರ್ ಮುದ್ರಿತ ಪದ್ಯಾವಳಿ ಪುಸ್ತಕವನ್ನು ಬಿಡುಗಡೆಗೊಳಿಸಿದರು. ಸಭಿಕರಲ್ಲಿ ಕೆಲವರು ಮಾತನಾಡಿದ ಬಳಿಕ ಅಧ್ಯಕ್ಷರು ದಿ| ತಿಂಗಳಾಯರ ಬಹುಮುಖ ಸೇವೆಯನ್ನು ಸ್ಮರಿಸಿ ಮಾತನಾಡಿದರು. ಶ್ರೀ ಕೇಶವ ಎ. ಕಂಗೆನರು ಸಂದೇಶವಾಚನಮಾಡಿದರು. ಡಾ| ನವೀನ ಚಂದ ತಿಂಗಳಾಯರು ವಂದನಾರ್ಪಣೆಗೈದರು.

[ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ]

ಕಾಂಗ್ರೆಸ್ ವಸ್ತುಪ್ರದರ್ಶನ

1971

ಸುಭಾಷ್‌ನಗರ, ಬೆಂಗಳೂರು—9.

25—3—71 ರಿಂದ ಪ್ರಾರಂಭವಾಗಿದೆ

- ಪ್ರತಿ ದಿನವೂ ಖ್ಯಾತ ಕಲಾವಿದರಿಂದ ಮನರಂಜನೆ
- ರಾಜ್ಯದ ಅಭಿವೃದ್ಧಿಯ ವಿಹಂಗಮ ನೋಟ
- ಕೈಗಾರಿಕಾಭಿವೃದ್ಧಿಯ ಸತ್ಯ ಚಿತ್ರ
- ಗಾಂಧಿ ದರ್ಶನ ಮಂಟಪ
- ಸ್ವಾತಂತ್ರ್ಯ ಹೋರಾಟದ ಚಿತ್ರಶಾಲೆ
- ಎಲ್ಲವೂ ಕೂಡಿದ ಪುಟ್ಟದೊಂದು ಪ್ರಪಂಚ—

ಈ ಭವ್ಯ ಪ್ರದರ್ಶನ

READ &
ADVERTISE IN
NAVAYUGA WEEKLY

ಚಾರುಚತೆಯನ

ಸ್ವತಂತ್ರ ಬಂಗ್ಲಾವಲ್ಲ - ಸ್ಮಶಾನ ಬಂಗ್ಲಾ

ಬಂಗ್ಲಾದೇಶ ಸ್ವತಂತ್ರ ಗಣರಾಜ್ಯವಾಯ್ತು. ತನ್ನದೇ ಆದ ಸಂವಿಧಾನವನ್ನು, ಧ್ವಜವನ್ನು, ಸರಕಾರವನ್ನು ಹೊಂದಿತು. ವಂಗ ಬಂಧು ಮುಜಿಬುರ್ ರಹಮಾನ್ ಅಧ್ಯಕ್ಷರು; ತಾಜುದ್ದೀನ್ ಪ್ರಧಾನಿ ಮತ್ತೆ ಕೆಲವರು ಮಂತ್ರಿಗಳು.

ಮುಜಿಬುರ್ ಎಲ್ಲಿದ್ದಾರೆ? ಅವರು ರಾಷ್ಟ್ರಪತಿಯಾಗಿ ಅಧಿಕಾರ ಹೇಗೆ ನಿರ್ವಹಿಸುತ್ತಾರೆ? ಮುಜಿಬುರ್ ಅಜ್ಞಾತವಾಗಿದ್ದಾರೆ; ಆದುದರಿಂದಲೇ ಅವರ ಸ್ಥಾನದಲ್ಲಿ ಹಂಗಾಮಿಯೆಂದು ನುಜ್ರುಲ್ ಇಸ್ಲಾಮರು ಅಧ್ಯಕ್ಷರಾಗಿದ್ದಾರೆ.

'ಮುಜಿಬ್ ನಮ್ಮ ನಡುವೆಯೇ ಇದ್ದಾರೆ; ನಾವು ಅವರ ಆಜ್ಞೆಗಳನ್ನೇ ಪಾಲಿಸುತ್ತಿದ್ದೇವೆ. ಸೂಕ್ತಾವಕಾಶದಲ್ಲಿ ಈ ಜನಗಣದ ನಾಯಕ ಪ್ರತ್ಯಕ್ಷರಾಗುತ್ತಾರೆ'—ಇದು ನುಜ್ರುಲ್ ಕಥನ.

'ಮುಜಿಬ್ ಎಲ್ಲಿ?'—ಈ ಪ್ರಶ್ನೆಗೆ ಉತ್ತರ ಸ್ವತಂತ್ರ ಬಂಗ್ಲಾ ಸರಕಾರ ನೀಡುವುದಿಲ್ಲ. ಇದು ಸಹಜ. ಏಳೂವರೆ ಕೋಟಿ ಬಂಗಾಳಿಗಳ ಕಣ್ಮಣಿಯ ರಹಸ್ಯ ನೆಲೆ ಬಹಿರಂಗವಾದರೆ, ಅವರ ಜೀವಕ್ಕೆ ಅಪಾಯ ಶತಸ್ಸಿದ್ಧ.

ಮುಜಿಬ್ ಮನೀಷೆಯೊಂದೇ—ಪಶ್ಚಿಮ ಪಾಕಿಸ್ತಾನದ ಸುಲಿಗೆಯಿಂದ, ದಬ್ಬಾಳಿಕೆಯಿಂದ ಬಂಗ್ಲಾದೇಶದ ಬಡ ನಾಗರಿಕರನ್ನು ರಕ್ಷಿಸಬೇಕು; ಸ್ವತಂತ್ರ ಬಂಗ್ಲಾದೇಶ ರಚನೆಯಾಗಬೇಕು.

ಮುಜಿಬ್ ಅನುಯಾಯಿಗಳು ಈಗ ಮಾಡುತ್ತಿರುವುದಾದರೂ ಇದನ್ನೇ. ದೇಶದ ಬಹು ಭಾಗವೀಗ ಮುಕ್ತಿಸೇನೆಯ ಕೈಯಲ್ಲಿದೆ. ಪಾಕ್ ಸೇನೆ ತತ್ತರಿಸಿವೆ. ಮುಕ್ತಿ ಸೇನೆಯವನ್ನು ತೊತ್ತಳದುಳಿದಿದೆ.

ಹೆಚ್ಚು ಶಸ್ತ್ರ, ಹೆಚ್ಚು ಅಸ್ತ್ರ, ಹೆಚ್ಚು ಸೈನ್ಯ—ಇದು ಪಾಕ್ ಸೇನಾಪತಿಗಳ ಕ್ಷಣ ಕ್ಷಣದ ಕೂಗು. ಜ| ಯಾಹ್ಯಾಖಾನರು ತಮ್ಮ ಶಸ್ತ್ರಾಸ್ತ್ರಗಳೆಲ್ಲವನ್ನೂ ಕಳಿಸಿದರು. ಕೆಂಪು ಚೀನ, ರಶ್ಯ ಮತ್ತು ಅಮೆರಿಕೆಗಳಿಂದ ಬಂದುವನ್ನೂ ಕಳಿಸಿದರು. 'ಸಾಲದೋ ಸಾಲದು; ಇನ್ನೂ ಬೇಕು.'

ಅಮೆರಿಕೆ—ರಶ್ಯ ಮೊದಲ್ಗೊಂಡ ವಿದೇಶಗಳಿಗೆ ಬಂಗ್ಲಾ ಹೋರಾಟ ನುಂಗಲಾರದ ತುತ್ತು. ತಮಗಿಂತ ಹಿರಿಯ ಮಾನವತೆಯ ಕೈವಾರಿಗಳಿಲ್ಲವೆಂಬ ಹಮ್ಮು ಅವಕ್ಕೆ. ಆದರೆ, ಬಂಗ್ಲಾದೇಶದಲ್ಲಿ ಯಾಹ್ಯಾ ಕೈಕೊಂಡ ನರಮೇಧವನ್ನು ಖಂಡಿಸುವ ಎದೆಗಾರಿಕೆ ಇವಕ್ಕಿಲ್ಲ. ಬಳಸು ಮಾತುಗಳು ಯಾಹ್ಯಾರಿಗೆ ಅರ್ಥವಾಗುವುದಿಲ್ಲ.

ಯಾಹ್ಯಾಖಾನರು ತಮ್ಮ ದುಸ್ಸಾಹಸದಲ್ಲಿ ಸಫಲರಾಗುವುದಿಲ್ಲವೆಂದು ಅರಿತಿದ್ದಾರೆ. ಪಶ್ಚಿಮ ಪಾಕಿಸ್ತಾನದ ಮೇಲೆಯೂ ಹೋರಾಟದ ಪರಿಣಾಮ ಭೀಕರವಾಗಿದೆ. ಆಹಾರ ಪದಾರ್ಥಗಳು, ಆವಶ್ಯಕ ವಸ್ತುಗಳು, ಕೈಗಾರಿಕೆಗಳಿಗೆ ಕಚ್ಚಾ ಮಾಲುಗಳು ಅಭಾವವಾಗಿ ಆರ್ಥಿಕ ಪರಿಸ್ಥಿತಿ ತೀರ ಡೋಲಾಯಮಾನವಾಗಿದೆ. ಇದರ ಪರಿಣಾಮವೇನಾಗಬಹುದು?

ವಿದೇಶಗಳಿಂದ ಆಯಾತ ಮಾಡಿಕೊಳ್ಳುವುದು ಯಾಹ್ಯಾರ ಆಶಯ. ಆದರೆ, ಈ ವ್ಯವಹಾರವು ಬಂಗ್ಲಾ ಹೋರಾಟದ ವಿರುಕ್ರಮವಾಗುವುದರಿಂದ ಇದಕ್ಕೂ ವಿದೇಶಗಳು ಮುಂದೆ ಬರುವಂತಿಲ್ಲ. ಪಾಕಿಸ್ತಾನಿ ರೂಪಾಯಿಯ ಅಪಮೌಲ್ಯದ ಬಗ್ಗೆ ಭಾರೀ ವದಂತಿಯಿದೆ; ಆದರೆ, ಅಪಮೌಲ್ಯ ಬಲದಿಂದಲಾದರೂ ಪಾಕ್ ಸ್ಥಿತಿ ಸುಧಾರಣೆಗೊಳ್ಳುವಂತಿಲ್ಲ.

ಯಾಹ್ಯಾಖಾನರು ಇಡಿಯ ಪಶ್ಚಿಮ ಪಾಕಿಸ್ತಾನವನ್ನೇ ಪಣವಿಟ್ಟು ಬಂಗಾಳದ ಮೇಲೆ ಜೂಜಾಡಿದ್ದಾರೆ; ಸೋಲುವ ದಾರಿಯಲ್ಲಿದ್ದಾರೆ. ಯಾವ ವಿದೇಶೀಯ ಮಿತ್ರರೂ ಈ ಕೆಟ್ಟಕಾಲದಲ್ಲಿ ಅವರಿಗೆ ಬೆಂಬಲವಾಗಲು ಹಿಂದೆ ಮುಂದೆ ನೋಡುತ್ತಾರೆ.

ಕೆಂಪು ಚೀನವೇನೋ ಮಾತಿನ ಸಹಾಯ ನೀಡುತ್ತದೆ; ರಹಸ್ಯವಾಗಿ ಶಸ್ತ್ರಾಸ್ತ್ರಗಳನ್ನೂ ನೀಡಬಹುದು. ಆದರೆ, ಬಂಗಾಳಿಗಳ ದೃಢ ಸಂಕಲ್ಪದ ಮುಂದೆ ಈ ಶಸ್ತ್ರಾಸ್ತ್ರಗಳು ಹುಲ್ಲುಕಡ್ಡಿಗಿಂತ ಕೀಳು.

ಕೆಂಪು ಚೀನ ಬಯಸಿದರೆ, ಹೆಚ್ಚಿನ ಸೈನಿಕ ಬಲವನ್ನು ಪಾಕಿಸ್ತಾನಕ್ಕೆ ನೀಡಬಲ್ಲುದು. ಆದರೆ, ಇದರ ಪರಿಣಾಮ ನೆನೆದಾಗಲೇ ರುದ್ರ ಭಯಾನಕ. ಕೆಂಪು ಚೀನಾವು ಬಹಿರಂಗವಾಗಿ ಯಾಹ್ಯಾಖಾನರ ಸಹಾಯಕ್ಕೆ ಬಂದರೆ, ಬಂಗ್ಲಾದೇಶವನ್ನು ರಶ್ಯ—ಅಮೆರಿಕೆಗಳು ಅವಶ್ಯ ಬೆಂಬಲಿಸುತ್ತವೆ. ಇದರಿಂದ ಚೀನಾವು ತನ್ನ ಕಾಲುಗಳಿಗೆ ತಾನೇ ಕೊಡಲಿ ಹಾಕಿಕೊಂಡಂತೆ.

ಆದುದರಿಂದಲೇ 'ಬಂಗಾಳ ಪ್ರಶ್ನೆ ಪಾಕಿಸ್ತಾನದ ಆಂತರಿಕ ಪ್ರಶ್ನೆ, ಇದರಲ್ಲಿ ಭಾರತವು ತಲೆಹಾಕಿ ಅಧಿಕ ಪ್ರಸಂಗತನ ತೋರಿಸಿದೆಯೆಂದು ಯಾಹ್ಯಾಪರ ಮಾತನಾಡುತ್ತ ಗುಪ್ತ ಸೈನಿಕ ಸಹಾಯ ನೀಡುತ್ತಿದೆ.

ಬಂಗ್ಲಾ ದೇಶವೆಂದೋ ಯಾಹ್ಯಾಖಾನರ ಕೈತಪ್ಪಿ ಹೋಗಿದೆ. ಅವರು ಮುಜಿಬ್‌ರನ್ನು ಸೆರೆಹಿಡಿದಿರಬಹುದು; ಇಲ್ಲದ ಹೃದ್ರೋಗಕ್ಕೆ ಚಿಕಿತ್ಸೆ ಕೊಡಿಸಿರ ಬಹುದು; ಚಿತ್ರಹಿಂಸೆಗೆ ಗುರಿ ಮಾಡಿರ ಬಹುದು; ಮುಂದೊಂದು ದಿನ ಅವರ ಕಥೆಯನ್ನೇ ಮುಗಿಸಲೂ ಬಹುದು.

ಜೇಲಿನಲ್ಲಿ ಮುಜಿಬ್ ನಿರಶನ ವ್ರತಕ್ಕೆ ತೊಡಗಿದ್ದಾರೆ ಎಂಬ ಪಾಕ್ ಹೇಳಿಕೆ ಈ ದುರಂತವನ್ನು ಸಹಜಾಂತ ಮಾಡುವ ಮೊದಲ ಹವಣಿಕೆಯಿರಬಹುದು.

ಆದರೂ, ಯಾಹ್ಯಾಖಾನರು ಬಂಗ್ಲಾದೇಶದ ಮೇಲೆ ಅಧಿಕಾರ ಮಾಡುವುದಿಲ್ಲ. ಇದು ಅವರಿಗೂ ಗೊತ್ತು. ಆದುದರಿಂದ ಈಗ ಬಂಗ್ಲಾ ಧ್ವಂಸ ಕಾರ್ಯಕ್ರಮವನ್ನು ಅವರು ಯೋಜಿಸಿದ್ದಾರೆ.

ಪ್ರಾಣ—ಆಸ್ತಿ ಎಲ್ಲವನ್ನೂ ಅಪಹರಿಸುವುದು, ಬಂಗ್ಲಾವನ್ನು ಸುಟ್ಟು ಬೂದಿಮಾಡಿ ಹೋಗುವುದು ಅವರ ಆಶಯ. ಸ್ವತಂತ್ರ ಬಂಗ್ಲಾವಲ್ಲ; ಸ್ಮಶಾನ ಬಂಗ್ಲಾ ಅವರ ಗುರಿ. ತನ್ನ ಪ್ರತೀಕಾರವನ್ನು ಅವರು ಈ ರೀತಿ ತೋರಿಸಲು ನಿರ್ಧರಿಸಿದ್ದಾರೆ.

o o o

ಸ್ವತಂತ್ರ ಬಂಗ್ಲಾ ಸರಕಾರವನ್ನು ಮನ್ನಿಸಬೇಕೆಂದು ಬಂಗ್ಲಾದೇಶ ಕೇಳಿಕೊಂಡಿದೆ. ಈ ಮನ್ನಣೆಗಾಗಿ ಅದು ಹಲವಾರು ಪ್ರಯತ್ನಗಳನ್ನು ಮಾಡ ಹೊರಟಿದೆ.

ಭಾರತ ಸರಕಾರವು ಇದನ್ನು ಗಂಭೀರವಾಗಿ ಪರಿಶೀಲಿಸುತ್ತಿದೆ. ಹಲವಾರು ನಾಯಕರು ಈ ಅವಕಾಶವನ್ನು ಕಳೆದುಕೊಳ್ಳದೆ ಕೂಡಲೇ ಮನ್ನಣೆ ನೀಡಬೇಕೆಂದು ಒತ್ತಾಯ ಮಾಡ ಹೊರಟಿದ್ದಾರೆ.

ಬಂಗ್ಲಾ ನಾಯಕರನ್ನುವಂತೆ ನಾಲ್ಕು ದೇಶಗಳು ಈ ಸರಕಾರವನ್ನು ಮಾನ್ಯಮಾಡಲು ಸಿದ್ಧವಿವೆ. ಈ ದೇಶಗಳು ಯಾವುವು? ಅದು ರಹಸ್ಯ.

ಯಾಹ್ಯಾರ ಸೋಲು ಸುನಿಶ್ಚಿತವಾಗುತ್ತ ಬಂದಂತೆ ಮಾನ್ಯತೆಯ ಸಾಧ್ಯತೆಗಳು ಹೆಚ್ಚುತ್ತಿವೆ. ವಿದೇಶೀ ನೆರವಿಲ್ಲದ ಯಾಹ್ಯಾಖಾನರು ಕೊನೆಗೂ ಸ್ವತಂತ್ರ ಬಂಗ್ಲಾದೇಶದ ಸರಕಾರಕ್ಕೆ ಮನ್ನಣೆ ಅನೌಪಚಾರಿಕವಾಗಿ ನೀಡ ಬೇಕಾಗುತ್ತದೆ.

ಅಮೆರಿಕೆ—ರಶ್ಯ—ಭಾರತ—ಇಂಗ್ಲೆಂಡ್‌ಗಳು ಒಂದಾಗಿ ಸ್ವತಂತ್ರ ಬಂಗಾಳದ ಸರಕಾರವನ್ನು ಮಾನ್ಯ ಮಾಡುವವೆ?

o o o

ಕಲ್ಕತ್ತೆಯಲ್ಲಿರುವ ಪಾಕ್ ಡೆಪ್ಯುಟಿ ಹೈ ಕಮಿಶನರ ಕಛೇರಿಯ ಅಧಿಕಾರಿ-ಅನಧಿಕಾರಿಗಳು ತಮ್ಮ ಬಂಗ್ಲಾಪರ ನಿಲುವೆಯನ್ನು ತೋರಿಸಿ ಲೋಕವನ್ನು ಬೆರಗುಗೊಳಿಸಿದರು. ತಮ್ಮ ಕಛೇರಿಯು ಸ್ವತಂತ್ರ ಬಂಗ್ಲಾ ದೇಶದ ರಾಯಭಾರಿ ಕಛೇರಿಯಾಗಿ ಪರಿವರ್ತನೆಗೊಂಡಿದೆಯೆಂದಿದ್ದಾರೆ-ಡಿ| ಹೈ| ಕಮಿಶನರ್ ಹುಸೇನ್‌ಅಲಿ.

ಇದನ್ನು ತನ್ನ ಕಛೇರಿಯ ಸಿಬ್ಬಂದಿಯ ಶೇ. ೭೦ರಷ್ಟು ಜನರ ಸಮ್ಮತಿಯಿಂದ ನಿರ್ಧರಿಸಿರುವುದಾಗಿ ಅವರು ಘೋಷಿಸಿದರು. ಕಛೇರಿಯಲ್ಲಿ ಹಾರಾಡುತ್ತಿದ್ದ ಪಾಕ್ ಧ್ವಜವನ್ನು ಇಳಿಸಿ ಸ್ವತಂತ್ರ ಬಂಗ್ಲಾದೇಶ್ ಧ್ವಜವನ್ನು ಹಾರಿಸಿದರು.

(ಎಂಟನೇ ಪುಟ ನೋಡಿರಿ)



ನೇತಾಜಿ ವಸ್ತು ಸಂಗ್ರಹಾಲಯ

ಮತ್ತೊಂದು ವರ್ಷ ಉರುಳಿತು....... ನಾವು ನಮ್ಮ ಧ್ಯೇಯದತ್ತ ಸಾಗುತ್ತಿದ್ದೇವೆಯೆ? ನಮ್ಮ ಭಾರತ ಅಭಿವೃದ್ಧಿಯತ್ತ ನಡೆಯುತ್ತಿದೆಯೆ? ಎಂದು 16 ವಯಸ್ಸಿನ ನೇತಾಜಿ ಸುಭಾಸ್ ಚಂದ್ರ ಬೋಸ್ 1913ರಲ್ಲಿ ತಮ್ಮ ಹಿರಿಯಣ್ಣ ಅವರನ್ನು ಕಳಕಳಿಯಿಂದ ಪ್ರಶ್ನಿಸಿ ಪತ್ರ ಒಂದನ್ನು ಬರೆದಿದ್ದರು. “ನಮ್ಮ ತಾಯ್ನಾಡು ದೇವರಿಗೆ ಅತ್ಯಂತ ಪ್ರಿಯವಾದದ್ದು.... ವಿಶ್ವಕ್ಕೆ ಬೇಕಾದುದೆಲ್ಲಾ ಭಾರತದಲ್ಲಿದೆ” ಎಂದು ಚಿಕ್ಕ ಹುಡುಗನಾಗಿದ್ದಾಗ, ತಮ್ಮ ತಾಯಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ. ನೇತಾಜಿಯ ಇಂತಹ ಅನೇಕ ಪತ್ರಗಳು ಕಲ್ಕತ್ತೆಯ ‘ನೇತಾಜಿ ವಸ್ತು ಸಂಗ್ರಹಾಲಯ’ದಲ್ಲಿವೆ.

ಕಲ್ಕತ್ತೆಯ ಎಲ್ಜಿನ್ ರಸ್ತೆಯಲ್ಲಿ ಇರುವ ಮೂರು ಅಂತಸ್ತಿನ ಭವ್ಯ ಭವನದಲ್ಲಿ ‘ನೇತಾಜಿ ವಸ್ತು ಸಂಗ್ರಹಾಲಯ’ ಇದೆ. ನೇತಾಜಿ ಅವರು ಜನವರಿ 1941ರ ತನಕ ಇಲ್ಲಿ ವಾಸಿಸುತ್ತಿದ್ದರು. ಈ ವಸ್ತು ಸಂಗ್ರಹಾಲಯದಲ್ಲಿ ನೇತಾಜಿ ಅವರ ಬಹುಮುಖ ಪ್ರತಿಭೆಯ ಮತ್ತು ಚಟುವಟಿಕೆಯ ಜೀವನಕ್ಕೆ ಸಂಬಂಧಿಸಿದ ವಿವಿಧ ಛಾಯಾ ಚಿತ್ರಗಳೂ, ಪತ್ರಗಳೂ, ಪ್ರಮಾಣ ಪತ್ರಗಳು ಹಾಗೂ ಹಸ್ತಪ್ರತಿಗಳು ಅಡಕವಾಗಿವೆ.

ನೇತಾಜಿ ವಸ್ತು ಸಂಗ್ರಹಾಲಯದಲ್ಲಿ ಒಂದು ಅಪರಾಹ್ನ ಕಳೆದರೆ ಸಾಕು. ಈ ಅನುಭವ ಆತ್ಮವನ್ನೇ ಕದಲಿಸಿಬಿಡುವುದು. ನೇತಾಜಿ ಅವರು ತಮ್ಮ ತಾಯ್ನಾಡಿನ ಬಗ್ಗೆ ಇಟ್ಟುಕೊಂಡಿದ್ದ ಅಭಿಪ್ರಾಯ ಹಾಗೂ ಅದರ ವಿಮೋಚನೆಗೆ ಹೋರಾಡಿದ ವೀರ ಕತೆಯನ್ನು ಈ ವಸ್ತು ಸಂಗ್ರಹಾಲಯ ಪ್ರತಿಬಿಂಬಿಸುತ್ತದೆ. ಏಳು ಕೋಣೆಗಳಲ್ಲಿರುವ ಪ್ರದರ್ಶನ ವಸ್ತುಗಳು ನೇತಾಜಿ ಅವರ ಸರ್ವತೋಮುಖ ಪ್ರತಿಭೆ ಮತ್ತು ತತ್ವಕ್ಕೊಂದು ಕೈಗನ್ನಡಿ. “ವ್ಯಕ್ತಿ ಒಬ್ಬನು ಒಂದು ಆದರ್ಶಕ್ಕಾಗಿ ಪ್ರಾಣಾರ್ಪಣೆ ಮಾಡಬಹುದು.... ಅನಂತರ ಅದೇ ಆದರ್ಶವು ಸಾವಿರಾರು ಜನರಲ್ಲಿ ಅವತರಿಸುವುದು. ಒಂದು ಜನಸಮುದಾಯದ ಆದರ್ಶಗಳು, ಧ್ಯೇಯಗಳು ಹಾಗೂ ವಿಚಾರಗಳು ಇನ್ನೊಂದು ಜನಾಂಗಕ್ಕೆ ಬಳುವಳಿಯಾಗಿ ಬರುತ್ತವೆ.. ಇದೇ ಪ್ರಕೃತಿ ನಿಯಮ” ಎಂದು ನೇತಾಜಿ ಅವರು ತಮ್ಮ ಮುಗಿಯದ ಆತ್ಮಕತೆಯ ಪುಟ ಒಂದರಲ್ಲಿ ಹೇಳಿದ್ದಾರೆ.

ರಚನಾತ್ಮಕ ಕಾಲ

ಕತ್ತಲು ಸರಿದಂತೆ ಬೆಳಕು ಹರಿಯುತ್ತದೆ. ನೇತಾಜಿ ಅವರ ಬಾಲ್ಯ ಜೀವನದ ಭಾವುಕತೆ, ಮನೆ ಮತ್ತು ಇಂಗ್ಲೆಂಡಿನ ವಿದ್ಯಾರ್ಥಿ ಜೀವನ ಅವರ ಜೀವನಕ್ಕೊಂದು ಆದರ್ಶ ರೂಪ “ನನ್ನ ಆದರ್ಶದ ಗುರಿ ಮುಟ್ಟುವುದರಲ್ಲಿ ನಾನು ದಾರಿ ತಪ್ಪಿರುವೆನೆ? ನನಗೆ ಇನ್ನೂ ಸಂಶಯವಿದೆ. ಐ ಸಿ ಎಸ್. ಪರೀಕ್ಷೆಗೆ ಓದುವುದು ಒಳ್ಳೆಯದು ಎಂದು ನಾನು ನನ್ನ ಆತ್ಮ ವಂಚನೆಯನ್ನು ಮಾಡಿಕೊಳ್ಳಲಾರೆ. ಇದನ್ನು ಜೀವನದ ಉದ್ದಕ್ಕೂ ದ್ವೇಷಿಸಿದೆ. ಈಗಲೂ ದ್ವೇಷಿಸುತ್ತಿದ್ದೇನೆ” ಎಂದು ಸುಭಾಸ್ 1920ರಲ್ಲಿ ತಮ್ಮ ಗೆಳೆಯರೊಬ್ಬರಿಗೆ ಇಂಗ್ಲೆಂಡಿನಿಂದ ಬರೆದ ಪತ್ರ ಒಂದರಲ್ಲಿ ತಮ್ಮ ಅಂತರಂಗದ ತುಮುಲವನ್ನು ತೋಡಿಕೊಂಡಿದ್ದಾರೆ.

ನೇತಾಜಿ ಅವರು ಐ.ಸಿ.ಎಸ್.ಗೆ ರಾಜೀನಾಮೆ ನೀಡಿದ ನಂತರ ಅವರ ತಂದೆ ಜಾನಕಿನಾಥ ಬೋಸ್ ಅವರು ನೀಡಿದ ಪ್ರೀತ್ಯಾದರ ಅವರ ಭಾವೀ ಜೀವನದ ಅಡಿಗಲ್ಲು. ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷ ಪಂಡಿತ ಮೋತಿಲಾಲ್ ನೆಹರು ಮತ್ತು ಕಾಂಗ್ರೆಸ್ ಸೇವಾದಳದ ಮುಖ್ಯಾಧಿಕಾರಿಯಾಗಿ ನೇತಾಜಿ ಒಟ್ಟಿಗೆ ಇರುವ ಭವ್ಯ ಛಾಯಾ ಚಿತ್ರ ಮನಮೋಹಕವಾಗಿದೆ ಅನಂತರದ ಕಾಂಗ್ರೆಸ್ಸಿನ ಸದಸ್ಯ ಹಾಗು ನಾಯಕರಾಗಿ ಸಾಗಿದ ಅವರ ರಾಜಕೀಯ ಜೀವನ ಆಗಾಗ್ಗೆ ಅವರಿಗೆ ಕಾರಾಗ್ರಹವಾಸದ ಕಹಿ ಅನುಭವವನ್ನು ತಂದಿತು. ಆದರೂ ಅವರ ಪ್ರಭಾವಶಾಲಿ ಚೈತನ್ಯ ನಿರುತ್ಸಾಹಗೊಳ್ಳಲಿಲ್ಲ... ಅವರ ಜೈಲು ವಾಸಕ್ಕೆ ಸಂಬಂಧಿಸಿದ ಅನೇಕ ಪತ್ರಗಳು ಮತ್ತು ಛಾಯಾ ಕೃತಿಗಳು ಸಂದರ್ಶಕನೊಬ್ಬನ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರುವುದು. ಅದರಲ್ಲೂ ನೇತಾಜಿ ಅವರು ಬರ್ಮಾದ ಮಂಡಾಲೆ ಬಂದೀಖಾನೆಯಲ್ಲಿದ್ದ ಛಾಯಾ ಚಿತ್ರದ ಪರಿಣಾಮ ಅಗಾಧ “ಒಬ್ಬ ವ್ಯಕ್ತಿಯ ರಚನಾತ್ಮಕ ಜೀವನದ ಬಹುಭಾಗವೆಲ್ಲಾ ಕಾರಾಗ್ರಹದಲ್ಲಿ ಕಳೆಯುವುದು ನಿಜವಾಗಿಯೂ ಒಂದು ರುದ್ರ ನಾಟಕ ಆದರೆ ಈ ಜಗತ್ತಿನಲ್ಲಿ ದಾಸ್ಯದ ಸಂಕೋಲೆಗೆ ಸಿಕ್ಕಿರುವ ಮತ್ತು ಸಿಕ್ಕುವ ಜನರು ವಿಮೋಚನೆಗೆ ತೆರಬೇಕಾದ ಬೆಲೆಯೇ ಇದು” ಎಂದು ನೇತಾಜಿ ಅವರು ರೋಮ್ಯಾನ್ ರೋಲಾಂಡ್ ಅವರಿಗೆ ಬರೆದ ಒಂದು ಪತ್ರದಲ್ಲಿ ಮಾನವ ಕುಲದ ಆತ್ಮವನ್ನೇ ತೆರೆದಿಟ್ಟಿದ್ದಾರೆ.

“ನಮ್ಮ ಸಹಾನುಭೂತಿಯು ಮತ್ತು ಪ್ರೀತ್ಯಾದರಗಳು ನಿಮ್ಮ ಹೋರಾಟ ಜೀವನದ ಸಂಗಾತಿ ಆಗಿರುವುವು. ನಾವು ನಿಮ್ಮ ರಾಷ್ಟ್ರ ಸ್ವತಂತ್ರವಾಗುವುದನ್ನು ಹಾಗೂ ಸಾಮಾಜಿಕ ಸುಧಾರಣೆ ಸಾಧಿಸುವುದನ್ನು ನೋಡಬಯಸುತ್ತೇವೆ. ಒಳ್ಳೆಯ ಹೋರಾಟಗಾರರ ಬಗ್ಗೆಯೇ ನಾವು ಯಾವಾಗಲೂ ಚಿಂತಿಸುತ್ತೇವೆ. ಅವರಿಗೆ ಶುಭವಾಗಲೆಂದು ನಾವು ಯಾವಾಗಲೂ ಹಾರೈಸುತ್ತೇವೆ” ಎಂದು ರೋಮ್ಯಾನ್ ರೋಲಾಂಡ್ ಅವರು ನೇತಾಜಿಗೆ ಬರೆದ ಪತ್ರದ ಪತ್ರಿಕಾ ವರದಿ ಇಲ್ಲಿದೆ.

ಕಾಂಗ್ರೆಸ್ ಅಧ್ಯಕ್ಷರಾಗಿ

ನೇತಾಜಿ 1938ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾದರು. ಆ ಸಂದರ್ಭದಲ್ಲಿ ನೆಹರು ಅವರು ನೇತಾಜಿಯವರಿಗೆ ಪುಷ್ಪಹಾರ ಹಾಕಿ ಗೌರವಿಸಿದ್ದರು ಈ ಚಿತ್ರವು ಭಾರತೀಯರು ಅವರಲ್ಲಿಟ್ಟಿದ್ದ ಪ್ರೀತ್ಯಾದರ ಹಾಗೂ ಗೌರವದ ಪ್ರತೀಕ. ನೇತಾಜಿಯವರು ಇತರ ರಾಷ್ಟ್ರ ನಾಯಕರೊಂದಿಗೆ ಇರುವ ಚಿತ್ರಗಳನ್ನು ಇಲ್ಲಿ ಕಾಣಬಹುದಾಗಿದೆ.

ನೇತಾಜಿ ಅವರು ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ನೀಡಿದ ಹಸ್ತಪ್ರತಿ ಮತ್ತು ಅವರು ಅಸ್ವಸ್ಥರಾದಾಗಿನ ಛಾಯಾ ಚಿತ್ರ ಹೃದಯ ಸ್ಪರ್ಶಿಯಾಗಿವೆ ಈ ಹಸ್ತ ಪ್ರತಿ ನೇತಾಜಿ ಅವರು ರಾಷ್ಟ್ರಪಿತ ಬಾಪೂಜಿ ಅವರಲ್ಲಿಟ್ಟಿದ್ದ ಪೂಜ್ಯ ಭಾವನೆ, ಗೌರವ ಹಾಗೂ ನಿಷ್ಠೆಯ ಪ್ರತೀಕ. “ನನ್ನ ಪ್ರೀತಿಯ ಸುಭಾಸ್, ನೀನು ಸ್ವಸ್ಥನಾಗಿದ್ದಾಗಲೂ ಅಸ್ವಸ್ಥನಾಗಿದ್ದಾಗಲೂ ಅದಮನೀಯ ವ್ಯಕ್ತಿ ಕ್ರಾಂತಿಕಾರಿ ಹೋರಾಟಕ್ಕೆ ಮುನ್ನ ನಿನ್ನ ಆರೋಗ್ಯದ ಕಡೆ ಗಮನವನ್ನಿಡು” ಎಂದು ಗಾಂಧೀಜಿ 29ನೇ ಡಿಸೆಂಬರ್ 1939ರಲ್ಲಿ ವಾರ್ಧಾದಿಂದ ಬರೆದ ಪತ್ರ, ನೇತಾಜಿಯ ಬಗ್ಗೆ ಅವರ ಮಮತೆಯ ಸಂಕೇತ.

‘ನನ್ನ ರಾಷ್ಟ್ರದವರಿಗೆ ಇದೊಂದು ಸಂದೇಶ ಹಾಗೂ ರಾಜಕೀಯ ಉಯಿಲು ನಮ್ಮ ಮುಂದಿನ ನಾಯಕರಿಗೆ ಸಿಗುವಂತೆ ಇದನ್ನು ಸರಕಾರದ ಪತ್ರಗಾರದಲ್ಲಿ ಇಡಬೇಕು’ ಎಂದು ನೇತಾಜಿ ಅವರು 1940ರಲ್ಲಿ ಅಂತಿಮ ಉಪವಾಸಕ್ಕೆ ಮೊದಲು, ಬಂಗಾಲದ ಗವರ್ನರ್, ಮುಖ್ಯಮಂತ್ರಿ ಹಾಗೂ ಸಚಿವ ಸಂಪುಟಕ್ಕೆ ಬರೆದ ಹಸ್ತ ಪ್ರತಿಯಲ್ಲಿ ತಿಳಿಸಿದ್ದಾರೆ.

ಗುರುದೇವ ಮತ್ತು ನೇತಾಜಿ

ರವೀಂದ್ರನಾಥ್ ಠಾಕೂರ್ ಅವರು 1939ರಲ್ಲಿ ನೇತಾಜಿ ಅವರಿಗೆ ಶಾಂತಿನಿಕೇತನದಲ್ಲಿ ಏರ್ಪಡಿಸಿದ ಸತ್ಕಾರ ಕೂಟದ ಛಾಯಾ ಚಿತ್ರ ಮನಮೋಹಕವಾಗಿದೆ ‘ಬಂಗಾಲದ ಕವಿಯಾದ ನಾನು ಗೌರವಾನ್ವಿತ ಜನನಾಯಕ ಸ್ಥಾನಕ್ಕೆ ನಿಮ್ಮನ್ನು ಸ್ವಾಗತಿಸುತ್ತೇನೆ. ರಾಷ್ಟ್ರದ ದುಃಖ ನಿಮದೆಂದು ಪರಿಗಣಿಸಿರುವಿರಿ. ನಿಮ್ಮ ತ್ಯಾಗಕ್ಕೆ ಪ್ರತಿಫಲ ರಾಷ್ಟ್ರದ ವಿಮೋಚನೆ’ ಎಂದು ವಿಶ್ವಕವಿ ರವೀಂದ್ರ ಹಸ್ತ ಪ್ರತಿಯೊಂದರಲ್ಲಿ ಬರೆಯಲಾಗಿದೆ.

ಯುರೋಪಿನ ಗೊಂದಲದ ರಾಜಕೀಯ ಸ್ಥಿತಿ ನಂತರದ ಎರಡನೆಯ ಜಾಗತಿಕ ಯುದ್ಧ ಇಂಗ್ಲೆಂಡಿನ ಮೇಲೆ ಅಗಾಧ ಪರಿಣಾಮವನ್ನು ಬೀರಿ ಗುರುದೇವರ ಭವಿಷ್ಯವಾಣಿಯನ್ನು ದಿಟಗೊಳಿಸಿತು.

‘ಗೆಳೆಯರೇ ನಿಮ್ಮ ತ್ಯಾಗವು ಅಮರ ಅದರ ಪ್ರತಿಫಲ ದೊರೆಯುತ್ತದೆ ಭಾರತವನ್ನು ದಾಸ್ಯ ಸಂಕೋಲೆಯಿಂದ ಯಾವ ಶಕ್ತಿಯೂ ಬಂಧಿಸಿಡಲಾರದು. ಭಾರತ ಶೀಘ್ರದಲ್ಲಿಯೇ ವಿಮೋಚನೆ ಹೊಂದಲೇಬೇಕು’ ಎಂದು 15ನೇ ಆಗಸ್ಟ್ 1945ರಲ್ಲಿ ಅಜಾದ್ ಹಿಂದ್ ಸೇನೆಯ ಮಹಾದಂಡನಾಯಕರಾದ ನೇತಾಜಿ ವೀರವಾಣಿಯಿಂದ ಗರ್ಜಿಸಿದರು. ಹೃದಯ ಸ್ಪರ್ಶಿಯಾದ ಈ ಪ್ರಮಾಣ ಪತ್ರವನ್ನು ಅಚ್ಚಳಿಯದೆ ಹಾಗೆಯೇ ಇಡಲಾಗಿದೆ.

ಹೊರ ದೇಶಗಳಲ್ಲಿ

ಮಿಕ್ಕುಳಿದ ಪ್ರದರ್ಶನಗಳು ನೇತಾಜಿ ಅವರು 1941ರಲ್ಲಿ ಭಾರತವನ್ನು ಬಿಟ್ಟು ಹೋದ ನಂತರದ ಚಟುವಟಿಕೆಗಳಿಗೆ ಸಂಬಂಧಿಸಿದವುಗಳು. ಅವರು ಯುರೋಪಿನಲ್ಲಿ ನಡೆಸಿದ ಚಟುವಟಿಕೆಗಳಿಗೆ ಸ್ವತಂತ್ರ ಭಾರತ ಕೇಂದ್ರದ ಹಾಗೂ ಸ್ವತಂತ್ರ ಭಾರತದ ಮೊದಲ ಸೈನ್ಯಾ ದಳ ರಚನೆ ಮತ್ತು ಯುರೋಪಿನಿಂದ ಪೂರ್ವ ಏಷ್ಯಾಕ್ಕೆ ಕೈಗೊಂಡ ಜಲಾಂತರ್ಗಾಮಿಯಲ್ಲಿ ಕೈಗೊಂ

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
131 ಶಾಖೆಗಳಿಂದ ಹಬ್ಬಿರುವ “ವಿಜಯಾ ಬ್ಯಾಂಕ್”ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
“ಜೀವನ–ನಿಧಿ”ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ರಕ್ಷದತ್ತ ಭಾರತ ಒಲಿದಿದೆಯೆ?

ಇದೋ, ಈ ಇಂದಿರಾ ಕಮ್ಯೂನಿಸ್ಟರಿಂದು ಇಂದು ಕಮ್ಯುನಿಸ್ಟ್ ಹಾಗೂ ಅವರ ಸಹಚರ ಪಕ್ಷಗಳವರನ್ನು ಬಿಟ್ಟುಳಿದ ಜನತೆ ಬೆಟ್ಟುಮಾಡಿ ತೋರಿಸುತ್ತಿದೆ. ದಿ ಇಂಡಿಯನ್ ಎಕ್ಸ್‌ಪ್ರೆಸ್ಸಿನ ಸಂಪಾದಕ ಫ್ರೇಂಕ್ ಮೋರೇಸರು ಯಾವ ಪಕ್ಷದವರೂ ಅಲ್ಲವಾದರೂ ಭಾರತದ ರಾಜಧಾನಿ ಮೋಸ್ಕೋದಲ್ಲಿರುವಂತಿದೆ, ಭಾರತವನ್ನಾಳುತ್ತಿರುವದು ಇಂದಿರಾ ಸರ್ಕಾರವಲ್ಲ, ರಷ್ಯಾ ಸರಕಾರವೆಂದು ತಮ್ಮ ಪತ್ರಿಕೆಯಲ್ಲಿ ಬರೆದಿರುವರು. ಚುನಾವಣೆಯ ಸಮಯ ಅವರು ಅದೇ ಪತ್ರಿಕೆಯಲ್ಲಿ ಯಾವದು ಮಿಥ್ಯ, ಯಾವದು ಸತ್ಯವೆಂದು ಇಂದಿರಾಜೀಯವರ ಕಮ್ಯೂನಿಸ್ಟ್ ಮನೋಭಾವನೆಯ ಸ್ಪಷ್ಟ ಚಿತ್ರವನ್ನು ವಾಚಕರ ಮುಂದಿಟ್ಟಿದ್ದರು.

ಎಡಪಕ್ಷಗಳಿಂದು ಕರೆದುಕೊಳ್ಳುವದರಲ್ಲಿ ಹೆಮ್ಮೆಪಟ್ಟುಕೊಳ್ಳುತ್ತಿರುವ ಸಂಯುಕ್ತ ಸೋಷ್ಯಾಲಿಸ್ಟ್ ಪಾರ್ಟಿ ಹಾಗೂ ಪ್ರಜಾ ಸೋಷ್ಯಾಲಿಸ್ಟ್ ಪಾರ್ಟಿ ಕೂಡಾ ಅವರನ್ನು ಕಮ್ಯುನಿಸ್ಟರೆಂದು ಕರೆಯುತ್ತಿದೆ. ಕಮ್ಯುನಿಸ್ಟ್ ಇಂದಿರಾಜಿಯನ್ನೆದುರಿಸಲು ದೇಶಭಕ್ತರೆಲ್ಲರೂ ಒಂದಾಗಬೇಕೆಂದು ಜಾರ್ಜ್ ಫೆರ್ನಾಂಡಿಸ್ ಹೇಳಿದಲ್ಲಿ ರಾಜನಾರಾಯಣರು ಇಂದಿರೆಯನ್ನು ಸೋಲಿಸಿರೆಂಬ ಕರೆಯನ್ನಿತ್ತು ಅವರಿಗೆದುರಾಗಿ ನಿಂತರು.

ಮೊನ್ನೆಯವರೆಗೂ ಅವರೊಡನೆ ಒಂದಾಗಿದ್ದವರಿಗೆ ಈ ವಿಷಯ ಇನ್ನು ಚೆನ್ನಾಗಿ ಗೊತ್ತು. ೧೯೭೦ ಜೂನ್ ಇಪ್ಪತ್ತರಂದು ನಿಜಲಿಂಗಪ್ಪನವರು ಮಾತಾಡುತ್ತ, ಆಡಳಿತ ಪಕ್ಷವು ಪ್ರಜಾಪ್ರಭುತ್ವ ಹಾಗೂ ಸಮಾಜವಾದದ ಹೆಸರಿನಲ್ಲಿ ರಷ್ಯಾದ ಬಳಿ ದೇಶವನ್ನು ಅಡವು ಇಡುತ್ತದೆಯೆಂದರು.

೧೯೭೦ ಜುಲೈ ಇಪ್ಪತ್ತೊಂದರಂದು ದಕ್ಷಿಣಾಂಚಲ ಪ್ರದೇಶ ಸಂಸ್ಥಾ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ತಿರುಪತಿಯಲ್ಲಿ ಸೇರಿದ್ದಾಗ ಪ್ರಜಾಪ್ರಭುತ್ವವನ್ನೂ ಸ್ವಾತಂತ್ರ್ಯವನ್ನೂ ಭಾರತವನ್ನೂ ರಕ್ಷಿಸಲು ಕರೆ ಇತ್ತಿತು.

೧೯೭೦ ದಶಂಬರದಲ್ಲಿ ಜವಾಹರಲಾಲ ನೆಹ್ರೂ ನಗರದಲ್ಲಿ ಆಲ್ ಇಂಡಿಯಾ ಸಂಸ್ಥಾ ಕಾಂಗ್ರೆಸ್ ಕಮಿಟಿ ಸೇರಿದ್ದಾಗ ಅಲ್ಲಿ ಮಾತಾಡುತ್ತಿದ್ದ ಮುರಾರ್ಜಿ ದೇಸಾಯಿಯವರು ಸರಕಾರವು ಕಮ್ಯೂನಿಸ್ಟರ ಮತ್ತು ಜಾತೀಯವಾದಿಗಳ ಆಧಾರದ ಮೇಲಿರುವದರಿಂದ ಪ್ರಜಾಪ್ರಭುತ್ವಕ್ಕೆ ಅಪಾಯವನ್ನು ತಂದೊಡ್ಡಿದೆಯೆಂದರು ಮತ್ತು ಮುಂದರಿದು, ಅಂತರಾಷ್ಟ್ರೀಯ ಅಂಗದಲ್ಲಿ ಭಾರತವನ್ನು ಇಂದಿರಾ ಸರ್ಕಾರವು ರಷ್ಯಾದ ಪ್ರಭಾವಕ್ಕೊಳಪಡಿಸಿದೆಯೆಂದರು. ಸುಚೇತಾ ಕೃಪಲಾನಿಯವರು, ಅಬ್ದುಲ್ ಗನಿಧಾರ್, ಸದೋಬಾ ಪಾಟೀಲ್ ಮೊದಲಾದವರೂ ಇದೇ ಅಭಿಪ್ರಾಯ ಪಟ್ಟರು.

ಹಿರಿಯ ರಾಜಕಾರಣಿ ರಾಜಾಜಿಯವರು ಆದೇ ವೇಳೆ ಇವರೊಡನೆ ದನಿಗೂಡಿಸಿದರು. 'ನನಗೆ ಬೇಕಾಗಿರುವದಾದರೂ ಆಕೆಯ ರಷ್ಯಾಪರ ವರ್ತನೆಯಿಂದಾಗಿ ದೇಶಕ್ಕೆ ಬಂದಿರುವ ಕುತ್ತಿನಿಂದ ದೇಶವನ್ನು ಕಾಪಾಡುವದೇ ಇದೆ ...' ಎಂದರು. 'ಇಂದಿರಾ ಗಾಂಧಿ ಹಾಗೂ ಅವರ ಸರಕಾರವು ಸರ್ವಾಧಿಕಾರಿ ರಷ್ಯಾದ ಉಪಭೂಗ್ರಹವಾಗುತ್ತಿದೆ' ಎಂದು ಮಿನು ಮಸಾನಿ ಸೂಚಿಸಿದರು.

೧೯೭೦ ಜುಲೈ ಇಪ್ಪತ್ತಮೂರರಂದು ಅಟಲಬಿಹಾರಿ ವಾಜಪೇಯಿಯವರು. ಅಧಿಕಾರದ ಅಂತಸ್ತನ್ನು ಆಕ್ರಮಿಸಲು ಕಮ್ಯುನಿಸ್ಟರು ಕಾತರರಾಗಿದ್ದಾರೆ. ಅದಕ್ಕೆ ಇಂದಿರಾ ಕಾಂಗ್ರೆಸ್ಸಿನೊಂದಿಗಿರುವ ಸ್ನೇಹ ಸಂಬಂಧವೇ ಕಾರಣವಿದೆಯೆಂದರು.

ಇಂದಿರಾ ಸಚಿವ ಸಂಪುಟದ ಬಳಿ ಕೊಸಿಗಿನರು ಭಾರತೀಯ ಜನಸಂಘದ ಬೆಳವಣಿಗೆ ಕುರಿತು ಕಳವಳ ವ್ಯಕ್ತಪಡಿಸುತ್ತ, ಅದನ್ನು ಬೆಳೆಯಲು ಬಿಡಬಾರದೆಂದು ಹೇಳಿದಾಗ ಆರ್ಥಿಕ ಮಂತ್ರಿ ಮುರಾರ್ಜಿಯವರು, ಇದು ದೇಶದೊಳಗಿನ ವಿಷಯವಿದೆ, ಇದರಲ್ಲಿ ನೀವು ತಲೆಹಾಕಬಾರದೆಂದು ತಡೆಗಟ್ಟಿದರು. ಕೆಲವು ದಿನಗಳ ನಂತರ ಮುರಾರ್ಜಿಯವರಿಗೆ ಇಂದಿರಾಜೀ ಅರ್ಧ ಚಂದ್ರ ಪ್ರಯೋಗ ನಡೆಸಿದರು.

ಕೇರಳದಲ್ಲಿ ಮಧ್ಯಕಾಲ ಚುನಾವಣೆ ನಡೆದಾಗ ಅಲ್ಲಿಗೆ ಪ್ರಚಾರಕ್ಕಾಗಿ ಇಂದಿರಾ ಗಾಂಧಿ ಹೋಗಿದ್ದರು. ತನ್ನ ಪಕ್ಷದ ಅಭ್ಯರ್ಥಿಗಳಿಗೆ ಅವರು ಮತ ಕೇಳುವದು ಸರಿಯೇ. ಆದರೆ ಹೋದೆಡೆಗಳಲ್ಲೆಲ್ಲೂ ತನ್ನ ಪಕ್ಷದ ಅಭ್ಯರ್ಥಿಗಳಿಗೂ ಸಮಾಜವಾದಿ ಕಾರ್ಯಗಳನ್ನೂ ಬೆಂಬಲಿಸುವ ಪಕ್ಷಗಳ ಅಭ್ಯರ್ಥಿಗಳಿಗೂ ಮತದಾನ ಮಾಡಲು ಅವರು ಕೇಳಿಕೊಂಡರು, ಈ ಬೆಂಬಲಿಸುವ ಪಕ್ಷಗಳ್ಯಾವವು? ಮುಖ್ಯವಾಗಿ ಮುಸ್ಲಿಂ ಲೀಗು ಮತ್ತು ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ (ರಷ್ಯಾಪರ–ಬಲಕಮ್ಯುನಿಸ್ಟರು) ಅವರು ಮಾತಾಡುವಾಗ ಕಮ್ಯೂನಿಸ್ಟ್ ಧುರೀಣರೂ ಅದೇ ವೇದಿಕೆಯ ಮೇಲಿರುತ್ತಿದ್ದರು. ಅಟಲಬಿಹಾರಿ ವಾಜಪೇಯಿಯವರಿಗೆ ಬಹಳ ಆಶ್ಚರ್ಯವನ್ನುಂಟುಮಾಡಿದುವು. ಅವರು ಕೇರಳದಲ್ಲಿ ಪ್ರಚಾರ ಸಭೆಯಲ್ಲಿ ಮಾತಾಡುತ್ತ ಅದನ್ನು ವ್ಯಕ್ತಪಡಿಸಿದರು:–'ಯಾವಾಕೆಯು ಕಮ್ಯುನಿಸ್ಟರ ವಿರುದ್ಧ ಪ್ರಚಾರ ನಡೆಸಲು ಒಮ್ಮೆ ಬಂದಿದ್ದರೋ ಅವರೇ ಇಂದು ಕಮ್ಯುನಿಸ್ಟರ ಪರ ಪ್ರಚಾರ ನಡೆಸಲು ಬಂದಿರುವದು ಬಹಳ ಆಶ್ಚರ್ಯ.'

ಬೆಂಗಳೂರಿನ ಜನತೆ ಅಟಲಜೀಯವರಿಗೆ ನಿಧಿ ಸಮರ್ಪಿಸಿದಾಗ ಅವರು ಮಾತಾಡುತ್ತ, ಹಿಂಸಾಚಾರದಲ್ಲಿ ತೊಡಗಿರುವ ನಕ್ಸಲೀಯರಿಂದಲೇ ಅಲ್ಲದೆ ಪ್ರಧಾನಿ ಇಂದಿರಾಜೀ ಮತ್ತು ಅವರ ಬೆಂಬಲಿಗರ ಸರ್ವಾಧಿಕಾರಿ ಪ್ರವೃತ್ತಿಯಿಂದಲೂ ಪ್ರಜಾತಂತ್ರಕ್ಕೆ ಅಪಾಯ ಬಂದಿದೆ. ಕಮ್ಯೂನಿಸಂ ಮತ್ತು ಜಾತೀಯತೆಗೆ ಪ್ರಧಾನಿ ಬುದ್ಧಿಪೂರ್ವಕವಾಗಿ ಪ್ರೋತ್ಸಾಹಿಸುತ್ತಿದ್ದಾರೆ. ಕಮ್ಯೂನಿಸ್ಟರೊಡನೆ ನಾವು ಸಂಸತ್ತಿನಲ್ಲಿಯೇ ಅಲ್ಲ, ಅಗತ್ಯ ಬಂದರೆ ರಸ್ತೆಗಳಲ್ಲೂ ಹೋರಾಡಲು ಸಿದ್ಧವೆಂದು ಘೋಷಿಸಿದರು.

ಬಲರಾಜ ಮಧೋಕರು, ಕೇಂದ್ರ ಮಂತ್ರಿಮಂಡಲದಲ್ಲಿ ಕಮ್ಯುನಿಸ್ಟರು ಸೇರಿಕೊಂಡಿದ್ದಾರೆ.... ಅವರು ಒಂದೆಡೆ ಸರಕಾರೀ ಅಂಕುಶವನ್ನು ಕೈಗೆ ತೆಗೆದುಕೊಳ್ಳಲು ಆ ರೀತಿ ಪ್ರಯತ್ನಿಸುತ್ತಿರುವರಾದಲ್ಲಿ ಇನ್ನೊಂದು ದಿಕ್ಕಿನಲ್ಲಿ ಸಶಸ್ತ್ರ ಬಂಡೇಳಲು ಸಿದ್ಧತೆ ನಡೆಸುತ್ತಿದ್ದಾರೆ........ ಇಂದಿರಾ ಗಾಂಧಿ ಟ್ರೋಜನ್ ಕುದುರೆಯ ಹಾಗೆ ಇದ್ದಾರೆಂದರು.

ಕೇಂದ್ರಮಂತ್ರಿ ಮಂಡಳದೊಳಗೆ ಸೇರಿಕೊಂಡಿರುವ ಆ ಮಾಜಿ ಕಮ್ಯೂನಿಸ್ಟರ ಹೆಸರುಗಳು:–ಖಾಡಿಲ್ಕರ್, ರಘುನಾಥ ರೆಡ್ಡಿ, ಗುಜ್ರಾಲ್, ನಂದಿನಿ ಸತಪತಿ, ಗಣೇಶ್ ಇನ್ನಾಡಿ ಎಂದು ಪ್ರಕಟವಾಯ್ತು. ಇಂದಿರಾಜೀಯವರ ಸಮೀಪದಲ್ಲಿರುವವರಲ್ಲಿ ಅರ್ಜುನಅರೋರಾ, ಶಶಿಭೂಷಣ್. ಚಂದ್ರಜಿತ ಯಾದವ, ಲಕ್ಷ್ಮೀಕಾಂತಮ್ಮ, ಸಾವಿತ್ರಿ ನಿಗಂ ಮುಂತಾದವರು ಹಿಂದೆ ಕಮ್ಯುನಿಸ್ಟ್ ಪಕ್ಷದಲ್ಲಿದ್ದು ಈಗ ಆ ಪಕ್ಷದ ಉದ್ದೇಶ ಸಾಧಿಸಲು ಕ್ರುಶ್ಚೇವ್–ಬುಲ್ಗಾನಿನ್ ಹಂಚಿಕೆಗನುಸಾರವಾಗಿ ಪ್ರಧಾನಿ ಗುಂಪಿನಲ್ಲಿದ್ದಾರೆ. ಇಲ್ಲಿರುವ ಕಮ್ಯುನಿಸ್ಟರಲ್ಲಿ ಕೆಲವರು ಕಾಂಗ್ರೆಸ್ಸಿಗೆ ಸೇರಿ ಕಾಂಗ್ರೆಸ್ಸನ್ನೇ ಕಮ್ಯುನಿಸ್ಟ್ ಪಾರ್ಟಿಯನ್ನಾಗಿ ಪರಿವರ್ತಿಸಬೇಕೆಂದೂ ಹಾಗೆ ಅಧಿಕಾರದ ಅಂಕುಶವನ್ನು ಕಿತ್ತುಕೊಳ್ಳಬೇಕೆಂದೂ ಅವರ ಹಂಚಿಕೆಯೆಂದು ಹೇಳಲಾಯ್ತು.

ಇವೆಲ್ಲದಕ್ಕೂ ಇಂದಿರಾಗಾಂಧಿಯವರ ಉತ್ತರ—ನಾನು ದೇಶವನ್ನು ಕಮ್ಯೂನಿಸಮಿನತ್ತ ಕೊಂಡೊಯ್ಯುತ್ತಿರುವದಿಲ್ಲ.

—ಶ್ರೀ ಶಿವಶಂಕರ

●●

ಡ ಪ್ರಯಾಣ. ಅಜಾದ್ ಹಿಂದ್ ಫೌಜ್‌ನ ರಚನೆ, ಯುದ್ಧರಂಗದಲ್ಲಿ ಅವರ ಚಟುವಟಿಕೆ ಮತ್ತು 1943ನೇ ಡಿಸೆಂಬರ್ ತಿಂಗಳಲ್ಲಿ ಅವರು ಅಂಡಮಾನ ದ್ವೀಪದ 'ಸೆಲ್ಯುಲರ್ ಕಾರಾಗೃಹ'ಕ್ಕೆ ನೀಡಿದ ಭೇಟಿ ಇತ್ಯಾದಿ ಛಾಯ ಚಿತ್ರಗಳು ಆಕರ್ಷಣೀಯವಾಗಿವೆ. ನೇತಾಜಿ ಅವರು 1944ರಲ್ಲಿ ಅಂಡಮಾನ್ ದ್ವೀಪ ಕರಾವಳಿಯಿಂದ ಭಾರತದತ್ತ ನೋಡುತ್ತಿರುವ ಚಿತ್ರವು ಅವರ ಭಾವುಕತೆಯ ಪ್ರತಿಬಿಂಬವಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಹಾಗೂ ಮೋಕ್ಷವನ್ನು ಕೊಡಬಲ್ಲ ಗುರುವನ್ನು ಹುಡುಕಿಕೊಂಡು ಹೊರಟ ಯುವಕ ಸುಭಾಸರಿಗೆ ದೊರೆತದ್ದು ನಿರಾಶೆಯ ಮರೀಚಿಕೆ.

ನೇತಾಜಿ 'ವಾಂಡರರ್'—ಬಿ.ಎಲ್.ಎ. 7169–ಕಾರಿನಲ್ಲಿ ರಾತ್ರಿ ನೇತಾಜಿ ಭವನದಿಂದ ಅಜ್ಞಾತ ಪ್ರಯಾಣ ಆರಂಭಿಸಿದ ಚಿತ್ರ ಅರ್ಥಗರ್ಭಿತವಾಗಿದೆ.

ನೇತಾಜಿ ಐ.ಎನ್.ಎ. ದಂಡನಾಯಕರಾಗಿದ್ದಾಗ, ಅವರಿಗೆ ಅರ್ಪಿಸಲಾದ ಅನೇಕ ಕಾಣಿಕೆಗಳು ಈ ಸಂಗ್ರಹಾಲಯದಲ್ಲಿವೆ. ರೋಮಾಂಚನಕಾರಿಯಾದ ಅವರ ಜೀವನ ಚರಿತ್ರೆ ಜಗತ್ತಿಗೆ ಈಗ ಒಂದು ದಂತಕತೆ.

●●

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಸಿಂಡಿಕೇಟ್ ಬ್ಯಾಂಕಿನಿಂದ ಉದ್ಯಮಕ್ಕೆ ನೆರವು

ಉತ್ತರಕನ್ನಡದ ಕಾರವಾರದಲ್ಲಿ ಕಳೆದ ತಿಂಗಳ ಕೊನೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ಸಂಬಂಧಿ ವಿಚಾರಗೋಷ್ಠಿಯೊಂದು ನಡೆಯಿತು. ಸಿಂಡಿಕೇಟ್ ಬ್ಯಾಂಕ್ ಮತ್ತು ಜಿಲ್ಲಾಭಿವೃದ್ಧಿ ಮಂಡಳಿಗಳು ಸಂಯುಕ್ತವಾಗಿ ಇದನ್ನು ಏರ್ಪಡಿಸಿದುವು. ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ.ಕೆ. ಪೈಯವರು ಈ ಗೋಷ್ಠಿಯಲ್ಲಿ ಮಾತನಾಡುತ್ತ ಬ್ಯಾಂಕಿನ ರೂ. ೧೨ ಲಕ್ಷಗಳ ಸಾಲ ಸೌಲಭ್ಯದಿಂದ ರೂ. ೨೨ ಲಕ್ಷ ಬಂಡವಾಳದಲ್ಲಿ ಎಂಟು ಚಿಕ್ಕ ಪ್ರಮಾಣದ ಉದ್ಯಮಗಳು ಉತ್ತರಕನ್ನಡ ಜಿಲ್ಲೆಯಲ್ಲಿ ಶೀಘ್ರದಲ್ಲಿ ಸ್ಥಾಪನೆಗೊಳ್ಳುವುವೆಂದು ಘೋಷಿಸಿದರು. ಇವುಗಳಲ್ಲಿ ರಾಸಾಯನಿಕ, ಮುದ್ರಣ, ತಾಂತ್ರಿಕ, ಮೋಪು, ಸಿಗಿಯಂತ್ರ ಮತ್ತು ಸಿಮೆಂಟು ಉದ್ಯಮಗಳು ಸೇರಿದ್ದು ಇವು ಒಟ್ಟು ೨೦೦ ಜನರಿಗೆ ಉದ್ಯೋಗ ದೊರಕಿಸಬಲ್ಲವೆಂದವರು ಹೇಳಿದರು.

ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಎಚ್. ಎನ್. ಪೈಯವರು ಆರಂಭ ಭಾಷಣ ಮಾಡುತ್ತ ಉತ್ತರಕನ್ನಡ ಜಿಲ್ಲೆಯಲ್ಲಿ ಬ್ಯಾಂಕು ಈಗಾಗಲೇ ರೂ. ೭೮ ಲಕ್ಷವನ್ನು ಹಲವು ಪ್ರಮುಖ ಉದ್ಯಮಗಳಲ್ಲೂ ರೂ. ೪ ಲಕ್ಷವನ್ನು ಮೀನುಗಾರಿಕಾಭಿವೃದ್ಧಿಗೂ ವಿನಿಯೋಗಿಸಿದೆಯೆಂದರು.

ಶ್ರೀ ಟಿ. ಎ. ಪೈ ಶ್ರಮದ ಫಲ

'ಎಲ್ಐಸಿ'ಯ ಅಪೂರ್ವ ದಾಖಲೆ

ಜೀವವಿಮಾ ಕಾರ್ಪೊರೇಶನ್ ೧೯೭೦—೭೧ನೆಯ ವರ್ಷದಲ್ಲಿ ಇದುವರೆಗಿನ ತನ್ನೆಲ್ಲ ದಾಖಲೆಗಳನ್ನು ಮುರಿದು ೧೬.೨೨ ಸಾವಿರ ಪಾಲಿಸಿಗಳ ಮೂಲಕ ರೂ. ೧೩೦೩ ಕೋಟಿಗಳ ಹೊಸ ವ್ಯವಹಾರವನ್ನು ಸಾಧಿಸಿದೆ. ಇದಕ್ಕೆ ಹಿಂದಿನ ವರ್ಷದಲ್ಲಿ ಅದರ ವ್ಯವಹಾರವು ೧೪೦೦ ಸಾವಿರ ಪಾಲಿಸಿಗಳ ಮೂಲಕ ೧೦೩೬ ಕೋಟಿ ರೂಪಾಯಿಗಳಷ್ಟಾಗಿತ್ತು. ಅಂದರೆ, ಈ ವರ್ಷ ಪಾಲಿಸಿಗಳ ಸಂಖ್ಯೆಯಲ್ಲಿ ಸೇ. ೧೬ರಷ್ಟು ಮತ್ತು ವ್ಯವಹಾರದಲ್ಲಿ ಸೇ. ೨೬ರಷ್ಟು ಪ್ರಗತಿಹೊಂದಿದೆ. ಈ ಪ್ರಗತಿಯು ಜೀವವಿಮಾ ವ್ಯವಹಾರದಲ್ಲಿ ಮಹತ್ವದ ಮೈಲಿಗಲ್ಲು.

ಕಾರ್ಪೊರೇಶನ್ ತನ್ನ ಬಂಡವಳ ಹೂಡಿಕೆಯ ಮೂಲಕ ಸಾಮಾಜಿಕ ಆರ್ಥಿಕರಂಗದ ತನ್ನ ಪಾತ್ರವನ್ನು ಹೊಸ ಕ್ಷೇತ್ರಗಳಿಗೂ ವಿಸ್ತರಿಸಿದೆ. ಈ ವರ್ಷ ಅದು ರೂ. ೨೬೮ ಕೋಟಿಗೂ ಮಿಕ್ಕಿ ಒಟ್ಟು ಬಂಡವಳ ಹೂಡಿದೆ. ಕಳೆದ ವರ್ಷಕ್ಕಿಂತ ಇದು ರೂ. ೪೦ ಕೋಟಿಯಷ್ಟು ಏರಿಕೆಯನ್ನು ಸೂಚಿಸುತ್ತದೆ.

ನಗರ ಸಭೆಗಳು ಮತ್ತು ಜಿಲ್ಲಾ ಪರಿಷತ್ತುಗಳಿಗೆ ಜಲ ಪೂರೈಕೆ ಯೋಜನೆಗಳಿಗೆಂದು ನೀಡಿದ ಸಾಲ ಹಿಂದಿನ ವರ್ಷ ರೂ. ೫.೫ ಕೋಟಿಯಿದ್ದು ಈ ವರ್ಷ ಆ ಮೊತ್ತ ಇಮ್ಮಡಿಸಿದೆ.

ಸಾರ್ವಜನಿಕರು ಮತ್ತು ಪಾಲಿಸಿದಾರರಿಗಾಗಿ ಬಡಾವಣೆಗಳನ್ನು ಕಟ್ಟಿಸುವ ಯೋಜನೆಯಲ್ಲಿ ಕಾರ್ಪೊರೇಶನ್ ನೇರವಾಗಿ ಭಾಗವಹಿಸಲಾರಂಭಿಸಿದೆ. ಇಂತಹ ಬಡಾವಣೆಗಳಲ್ಲಿ ಮುಂಬಯಿಯ ಬೋರಿವ್ಲಿಯ ೪೦೦೦ ಮನೆಗಳ ಒಂದು ಬಡಾವಣೆ ಮುಕ್ತಾಯದ ಹಂತ ತಲುಪಿದೆ. ಪೂನಾ, ಬೆಂಗಳೂರು ಮತ್ತು ವಿಶಾಖಪಟ್ಟಣಗಳಲ್ಲಿಯೂ ಇದೇ ರೀತಿಯ ಬಡಾವಣೆಗಳನು ನಿರ್ಮಿಸುವ ಕಾರ್ಯಕ್ಕೆ ಕಾರ್ಪೊರೇಶನ್ ಕೈ ಹಾಕಿದೆ.

ಈಗ ಬ್ಯಾಂಕುಗಳ ಕರೆಂಟ್ ಖಾತೆಯಲ್ಲಿರುವ ಕಾರ್ಪೊರೇಶನ್ ನಿಧಿಯು ನಿರುಪಯುಕ್ತವಾಗಿದೆ. ಇದನ್ನು ಇಂಟರ್ ಬ್ಯಾಂಕ್ ಕಾಲ್‌ಮನಿ ಮಾರುಕಟ್ಟೆಯಲ್ಲಿನ ಹೆಚ್ಚು ದರದ ಬಡ್ಡಿ ದೊರೆಯಬಲ್ಲ ಅಲ್ಪಾವಧಿ ಠೇವಣಿಗಳಿಗೆ ಬದಲಾಯಿಸಲು ಕಾರ್ಪೊರೇಶನ್ ನಿರ್ಧರಿಸಿದೆ. ಈ ಕ್ರಮಗಳನ್ನು ಸ್ಟೇಟ್ ಬ್ಯಾಂಕಿನ ಅಧ್ಯಕ್ಷರು ಟೀಕಿಸ ಹೊರಟರೂ ಸಾವಿರಾರು ಪಾಲಿಸಿದಾರರ ಹಿತಾಸಕ್ತಿಯಿಂದ ಇಪ್ಪತ್ತರಿಂದ ಮೂವತ್ತು ಕೋಟಿ ರೂಪಾಯಿಗಳ ನಿಧಿಯನ್ನು ನಿರುಪಯೋಗಿಯಾಗಿರಿಸಲು ಕಾರ್ಪೊರೇಶನ್ ಬಯಸುವುದಿಲ್ಲ. ಕಾರ್ಪೊರೇಶನ್‌ನ ದೈನಂದಿನ ನಗದು ವ್ಯವಹಾರ ಸುಮಾರು ೨೫ ಕೋಟಿಯಷ್ಟಿದ್ದು ಇದು ಬ್ಯಾಂಕುಗಳ ಕರೆಂಟ್ ಖಾತೆಯಲ್ಲಿ ಕೊಳೆಯುತ್ತಿರುವುದು ಸರಿಯಲ್ಲವೆಂಬುದರ ನಿರ್ಧಾರ.

ಬ್ಯಾಂಕುಗಳಲ್ಲಿರುವ ಎಲ್ಐಸಿನಿಧಿಯು ಅದರ ಆರ್ಥಿಕ ಮೂಲವಲ್ಲ. ಹೆಚ್ಚು ಠೇವಣಾತಿಗಳನ್ನು ಸಂಗ್ರಹಿಸಲು ಬ್ಯಾಂಕುಗಳು ಹೆಚ್ಚೆಚ್ಚು ಪ್ರಯತ್ನ ನಡೆಸಬೇಕು.

ಜೀವವಿಮಾ ಕೋರ್ಪೊರೇಶನಿನ ಅಧ್ಯಕ್ಷರೂ, ಸಮರ್ಥ ಮಾರ್ಗದರ್ಶಕರೂ ಆದ

ಶ್ರೀ ಟಿ. ಎ. ಪೈ

ತನ್ನ ಸಾಲಗಳು ಮತ್ತು ಇತರ ಬಂಡವಾಳ ಹೂಡಿಕೆಯ ಮಂಜೂರಾತಿ ಹಾಗೂ ಹಣದ ಬಟವಾಡೆಗಳ ನಡುವಣ ಭಾರಿ ಕಾಲಾಂತರವನ್ನು ಕಡಿಮೆಗೊಳಿಸಲು ಕಾರ್ಪೊರೇಶನ್ ನಿರ್ಧರಿಸಿದೆ. ಮಂಜೂರಾದ ಹಣವನ್ನು ಸಾಧ್ಯವಿದ್ದಷ್ಟು ಶೀಘ್ರದಲ್ಲಿ ಬಟವಾಡೆ ಮಾಡಿ ಅದು ಬಡ್ಡಿ ಗಳಿಸುವಂತಾಗಬೇಕೆಂಬುದೇ ಅದರ ಮುಂದಿನ ಧೋರಣೆ.

ಈ ಸಂಗತಿಗಳನ್ನು ಕಾರ್ಪೊರೇಶನ್ನಿನ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಪತ್ರಿಕಾ ಸಮ್ಮೇಳನವೊಂದರಲ್ಲಿ ಬಹಿರಂಗಪಡಿಸಿದರು. ಕಾರ್ಪೊರೇಶನ್ನಿನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಪ್ರಥಮ ವರ್ಷದಲ್ಲೇ ಅದು ಸಾಧಿಸಿದ ಪ್ರಗತಿಗೆ ಶ್ರೀ ಪೈಯವರ ಸಮರ್ಥ ಮಾರ್ಗದರ್ಶನ ಮತ್ತು ಆಡಳಿತ ವಿಧಾನವೇ ಕಾರಣವೆನ್ನುವುದು ನಿರ್ವಿವಾದ.

●●

ಸ್ವತಂತ್ರ ಬಂಗ್ಲಾವಲ್ಲ— ಸ್ಮಶಾನ ಬಂಗ್ಲಾ

(ಐದನೇ ಪುಟದಿಂದ)

ಬಂಗ್ಲಾದೇಶಕ್ಕೆ ಅನಾಯಾಸವಾಗಿ ರಾಯಭಾರಿ ಕಛೇರಿಯೊಂದು ಸಿಕ್ಕಂತಾಯ್ತು. ಇದನ್ನು ಭಾರತ ಸರಕಾರ ಮಾನ್ಯ ಮಾಡಲೇ ಬೇಕಾಗುತ್ತದೆ.

ಕಛೇರಿಯಲ್ಲಿನ ಪಾಕ್ ಪಿತಾಮಹ ಮಹಮ್ಮದಾಲಿ ಜಿನ್ನಾರ ಚಿತ್ರ ಹಳೆಯ ಧ್ವಜದೊಂದಿಗೆ ಕೆಳಗಿಳಿಯಿತು; ವಂಗಬಂಧು ಮುಜಿಬರ ಚಿತ್ರ ಬಂಗ್ಲಾಧ್ವಜದೊಂದಿಗೆ ಮೇಲೇರಿತು.

○ ○ ○

'ಪಾಕಿಸ್ತಾನ ತುಕುಡಿ' ಬಂಗ್ಲಾದಲ್ಲಿ ಬಡಿದಾಡುತ್ತಿರುವಾಗ ಮಧ್ಯಪ್ರಾಚ್ಯದಲ್ಲಿ ಐಕ್ಯರಾಜ್ಯ ಘೋಷಣೆಯೊಂದು ಹೊರಟಿತು.

ಐಗುಪ್ತ (ಸಂಯುಕ್ತ ಅರಬ ಪ್ರಜಾರಾಜ್ಯ), ಸಿರಿಯಾ ಮತ್ತು ಲಿಬಿಯಾಗಳು ತಮ್ಮದೊಂದು ಒಕ್ಕೂಟವನ್ನು ಸ್ಥಾಪಿಸಿಕೊಂಡಿವೆಯೆಂದು ಕೈರೋ ಘೋಷಿಸಿತು.

ಹಲವು ವರ್ಷಗಳಿಗೆ ಹಿಂದೆ ಮಧ್ಯಪ್ರಾಚ್ಯದ ಅನಭಿಷಿಕ್ತ ದೊರೆ ನಸ್ಸೇರರ ಯೌವನಾವಧಿಯಲ್ಲಿ ಇಂತಹದೇ ಒಕ್ಕೂಟವೊಂದು ರಚನೆಯಾಗಿ ಕ್ರಮೇಣ ಮುರಿದು ಹೋದುದನ್ನು ಇತಿಹಾಸ ಮರೆತಿಲ್ಲ.

ಅಂದು ಅರಬ ಜಗತ್ತನ್ನು ಒಗ್ಗೂಡಿಸುವ ಇಚ್ಛೆಯಿಂದ ಆ ಕ್ರಮ ಕೈಕೊಳ್ಳಲಾಗಿತ್ತು. ಆದರೆ, ಅದೇಕೋ ಸರಿಹೊಂದಲಿಲ್ಲ; ಅದು ಸಿಡಿದು ಹೋಯಿತು.

ಈಗ ನಡೆದುದು ಎರಡನೆಯ ಪ್ರಯತ್ನ. ಬರಿಯ ಮತೀಯ ಆಧಾರದ ಮೇಲೆ ಒಕ್ಕೂಟ ಅಸಾಧ್ಯವೆಂಬುದನ್ನು ಪಾಕಿಸ್ತಾನ ಲೋಕಕ್ಕೆ ಬಹಿರಂಗಪಡಿಸುತ್ತಿರುವ ವೇಳೆಯೇ ಇದು ಸಾಧ್ಯವೆಂದು ಮರಳಿ ಯತ್ನ ಮಾಡಿದ ಐಗುಪ್ತ—ಲಿಬಿಯಾ—ಸಿರಿಯಾಗಳನ್ನು ಪ್ರಶಂಸಿಸಬೇಕು. ಸುಡಾನನ್ನು ಒಳಗೊಂಡ ಇನ್ನಿತರ ಅರಬ ದೇಶಗಳಿಗೂ ಒಕ್ಕೂಟಕ್ಕೆ ಸ್ವಾಗತವಿದೆ.

ಆಗಮನಕ್ಕೆ ದ್ವಾರ ಮುಕ್ತವಿರುವಂತೆಯೇ ನಿರ್ಗಮನಕ್ಕೂ ಬಾಗಿಲು ತೆರೆದಿದೆ ಎಂಬುದು ಮೊದಲ ಅನುಭವ. ●

ಸೆಕೆಂಡರಿ ಶಾಲೆ ಮುಖ್ಯೋಪಾಧ್ಯಾಯರ ಸಂಘದ ಮಹಾಸಭೆ

ಜಿಲ್ಲಾ ಸೆಕೆಂಡರಿ ಶಾಲೆ ಮುಖ್ಯೋಪಾಧ್ಯಾಯರ ಸಂಘದ ಮಹಾಸಭೆಯು ತಾ. 11ರಂದು ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಸಂಘದ ಅಧ್ಯಕ್ಷ ಶ್ರೀ ಕೆ. ಶಂಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಮುಖ್ಯೋಪಾಧ್ಯಾಯರುಗಳಿಗೆ ಸೆಕ್ಷನುಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲರಿಗೂ ಅಷ್ಟೇ ಜವಾಬ್ದಾರಿಕೆಯಿರುವ ಬಿ. ಡಿ. ಓ. ಯಾ ತಹಸಿಲ್ದಾರರಿಗೆ ಕೊಡುತ್ತಿರುವಂತೆ ರೂ. ೩೦೦ರಿಂದ ೭೦೦ ವೇತನ ಸ್ಕೇಲ್ ಕೊಡಬೇಕು. ಸೆಕ್ಷನ್‌ಗಳ ಸಂಖ್ಯೆ ೧೦ನ್ನು ಮೀರಿದ್ದಲ್ಲಿ ಪ್ರತೀ ಸೆಕ್ಷನ್‌ಗೆ ೨೦ ರೂ.ಗಳಂತೆ ರೂ. ೧೦೦ಕ್ಕೆ ಮೀರದಂತೆ ಅಲೊವೆನ್ಸ್ ಕೊಡಬೇಕೆಂದೂ ಸೆಕೆಂಡರಿ ಶಾಲೆಗಳ ಮುಖ್ಯೋಪಾಧ್ಯಾಯರು ಆಫೀಸು ಶಿಬಂದಿಯೊಂದಿಗೆ ರಜಾದಿನಗಳಲ್ಲೂ ಶಾಲೆಯಲ್ಲಿರಬೇಕಾಗುವುದರಿಂದ ಅವರುಗಳನ್ನು ರಜೆಯಿಲ್ಲದ ಅಧಿಕಾರಿಗಳೆಂದು ಪರಿಗಣಿಸಬೇಕೆಂದೂ ೫೮ ವರುಷಗಳ ನಂತರ ಸೇವೆಯನ್ನು ಮುಂದುವರಿಸುವ ಅಧ್ಯಾಪಕರಿಗೆ ೫೮ನೇ ವರ್ಷದಲ್ಲಿ ಅವರು ಪಡೆಯುತ್ತಿರುವ ಸಂಬಳವನ್ನೇ ನಿಗದಿಗೊಳಿಸಬೇಕೆಂದೂ ಪ್ರತಿಯೊಬ್ಬ ಅಧ್ಯಾಪಕರಿಗೆ ೨೬ ಪಿರಿಯಡ್‌ಗಳ ಕೆಲಸ ದೊರೆಯುವ ಪ್ರಮಾಣದಲ್ಲಿ ಶಿಕ್ಷಕರನ್ನು ನೇಮಿಸಲು ಅವಕಾಶಕೊಡಬೇಕೆಂದೂ ೫ಳನೇ ತರಗತಿಯಲ್ಲಿ ಜಿಲ್ಲಾಮಟ್ಟದ ಪರೀಕ್ಷೆಯಲ್ಲಿ ಕನ್ನಡ ಒಂದು ಮತ್ತು ಎರಡನೆ ಪೇಪರುಗಳನ್ನು ಒಂದೇ ಯುನಿಟ್ ಆಗಿ ಪರಿಗಣಿಸಿ ಒಟ್ಟು ಮಾರ್ಕು ೧೫೦ರಲ್ಲಿ ವಿದ್ಯಾರ್ಥಿಯು ಪಡೆಯುವ ಒಟ್ಟು ಮಾರ್ಕುಗಳ ಆಧಾರದ ಮೇಲೆ ಕನ್ನಡ ಫಲಿತಾಂಶವನ್ನು ನಿರ್ಧರಿಸಬೇಕೆಂದೂ ಮುಂದಿನ ತಿಂಗಳು ೧೫ನೇ ತಾರೀಕಿನೊಳಗೆ ಸಂಬಳ ಪಾವತಿ ಮಾಡದ ವಿದ್ಯಾರ್ಥಿಯ ಹೆಸರನ್ನು ಹಾಜರು ಪಟ್ಟಿಯಿಂದ ವಜಾಗೊಳಿಸುವ ಈಗಿನ ಕ್ರಮದಿಂದ ಆಡಳಿತೆಯವರಿಗೆ ನಷ್ಟವಾಗುವುದರಿಂದ ಪ್ರಥಮ ಅಥವಾ ದ್ವಿತೀಯ ಟರ್ಮುಗಳ ವರೆಗೆ ವಿದ್ಯಾರ್ಥಿಗಳಿಗೆ ಅವರ ಹೆಸರು ಹಾಜರು ಪಟ್ಟಿಯಲ್ಲಿರುವಂತೆ ಅವಕಾಶ ಕೊಡುವ ಪ್ರಚಲಿತ ಕ್ರಮವನ್ನೇ ಮುಂದುವರಿಸಬೇಕೆಂದೂ ಸಂಬಂಧಪಟ್ಟವರನ್ನು ವಿನಂತಿಸಲು ನಿರ್ಧರಿಸಲಾಯಿತು.

SARVODAYA TEACHERS' TRAINING COLLEGE

VIRAJPET

Applications are invited from S.S.L.C. passed Candidates above 16 years of age up to 30-4-71 for admission to T.C.H. I year class. Application forms will be sent after registration for which Rs. 2/- has to be sent in advance to the Principal. Hostel facilities available.

B.V. Ramana
Principal,
Sarvodaya Teachers' Training College,
Virajpet.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಹೊಸ ಉತ್ಸಾಹದ ಹೊಸ್ತಿಲಲ್ಲಿ

ಕಾರ್ಪೊರೇಶನ್ ಬ್ಯಾಂಕ್

ಶ್ರೀ

ದಕ್ಷಿಣ ಕನ್ನಡ ಜಿಲ್ಲೆಯ ಶೆಡ್ಯೂಲ್ಡ್ ಬ್ಯಾಂಕುಗಳಲ್ಲಿ ಹಳೆಯದಾದ ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿ.ನ ೧೯೭೦ ನೆ ವರ್ಷಕ್ಕೆ ಸಂಬಂಧಪಟ್ಟ ಡೈರೆಕ್ಟರರ ವರದಿ, ಸಾಲ-ಮೂಲ ಮತ್ತು ಲಾಭ-ನಷ್ಟಗಳ ಲೆಕ್ಕಪತ್ರಗಳನ್ನು ಅವಲೋಕಿಸುವಾಗ, ಬ್ಯಾಂಕು ತನ್ನ ಯಥಾಸ್ಥಿತಿಯನ್ನು ಉಳಿಸಿಕೊಂಡು ಬರುವಲ್ಲಿ ಸಶಕ್ತವಾಗಿದೆಯೆಂದೆನಿಸುತ್ತದೆ. ಯಾವುದೇ ಗುಲ್ಲು-ಅಬ್ಬರಗಳಿಗೆ ಇಳಿಯದೆ ಪ್ರಶಾಂತವಾಗಿಪ್ಪ ಭದ್ರ ಬ್ಯಾಂಕಿಂಗಿಗೆ ಕಾರ್ಪೊರೇಶನ್ ಇನ್ನೊಂದು ಹೆಸರು.

ವರದಿ ವರ್ಷದಲ್ಲಿ ಬ್ಯಾಂಕಿನ ಠೇವಣಾತಿಗಳು ಹಿಂದಿನ ವರ್ಷಕ್ಕಿಂತ ಸೆ. ೫೧ರಷ್ಟು ಹೆಚ್ಚಿ ರೂ. ೨೨ ಕೋಟಿಯನ್ನು ಮುಟ್ಟಿತು. ಸಾಲ ನೀಡಿಕೆಯು ರೂ. ೧೫ ಕೋಟಿಗೆ ಮೀರಿದ್ದು ಇದು ಠೇವಣಿಯ ಸೇ.೬೫ ಆಗುತ್ತದೆ. ರೂ. ೩೭.೫ ಲಕ್ಷಗಳ ತೆತ್ತ ನಿಧಿಯಿರುವಾಗ ರೂ. ೩೮.೭೫ ಲಕ್ಷ ಕಾಯ್ದಿಟ್ಟ ನಿಧಿಯೂ ಇದೆ. ವರದಿ ವರ್ಷದಲ್ಲಿ ಬ್ಯಾಂಕು ರೂ. ೫.೮೮ಸಾವಿರ ಲಾಭಗಳಿಸಿದ್ದು ಸಾಮಾನ್ಯ ಪಾಲುಗಾರರಿಗೆ ಸೇ. ೧೦ರಂತೆ ಡಿವಿಡೆಂಡ್ ನೀಡಲು ನಿರ್ಧರಿಸಿದೆ.

೧೯೭೦ರಲ್ಲಿ ಬ್ಯಾಂಕು ತುಮಕೂರು ಮತ್ತು ಕೋಲಾರಗಳಲ್ಲಿ ಹೊಸತಾಗಿ ಶಾಖೆಗಳನ್ನು ತೆರದು ವರ್ಷಾಂತ್ಯದಲ್ಲಿ ೮೦ ಶಾಖೆಗಳ ಮೂಲಕ ವ್ಯವಹಾರ ನಡೆಸುತಿತ್ತು. ಭಾರತೀಯ ಬ್ಯಾಂಕುಗಳು ಮುಖ್ಯವಾಗಿ ದಕ್ಷಿಣ ಕನ್ನಡದ ಬ್ಯಾಂಕುಗಳು ದ್ರುತಗತಿಯಿಂದ ಬೆಳೆಯುತ್ತ ಬರುತ್ತಿರುವಾಗ ಕಾರ್ಪೊರೇಶನ್ ಬ್ಯಾಂಕಿನ ವ್ಯವಹಾರಗಳನ್ನೂ ಬೆಳೆಸ ಬಯಸುವುದು ತಪ್ಪಲ್ಲ. ಈ ಕಾರಣದಿಂದಲೇ ಬ್ಯಾಂಕಿಂಗ್ ಅನುಭವವಿರುವ ಶ್ರೀ ಎಂ. ಆರ್. ಕಾಮತರನ್ನು ಇತ್ತೀಚೆಗೆ ಪೂರ್ಣಾವಧಿಯ ಅಧ್ಯಕ್ಷರೆಂದು ನೇಮಿಸಿಕೊಂಡಿದೆ. ಶ್ರೀ ಕಾಮತರು ಹೊಸ ಶಾಖೆಗಳನ್ನು ತೆರೆಯುವಲ್ಲಿ, ಹೊಸ ಉಳಿತಾಯ ಯೋಜನೆಗಳನ್ನು ರೂಪಿಸುವಲ್ಲಿ ತುಂಬ ಆಸಕ್ತರಾಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಶುಭದಿನಗಳನ್ನು ಕಾಣುವ ಬ್ಯಾಂಕಿನ ಕನಸು ನನಸಾಗಲಿ.

ಬ್ಯಾಂಕಿನ ಡೈರೆಕ್ಟರರ ಮಂಡಲಿ, ಮೊನ್ನಿನವರೆಗೆ ಅದರ ಅಧ್ಯಕ್ಷರಾಗಿದ್ದ ಶ್ರೀ ಯು. ವಿ. ಕೆ. ಪ್ರಭು ಹಾಗೂ ಇನ್ನಿತರ ಸಿಬಂಧಿ ವರ್ಗವು ಬದಲಾದ ವಾತಾವರಣಕ್ಕೆ ಹೊಂದಿಕೊಂಡು, ಹೊಸ ಹೊಸ ಸಂಪನ್ಮೂಲಗಳನ್ನು ಅರಸಿ, ಅವನ್ನು ದೇಶದ ಸಾಂಪತ್ತಿಕ ಅಭಿವೃದ್ಧಿಗೆ ನೀಡುವಲ್ಲಿ ಹೊಸ ಅಧ್ಯಕ್ಷರಿಗೆ ಸಹಕಾರ ನೀಡಿದಲ್ಲಿ ಶೀಘ್ರ ಪ್ರಗತಿ ಅಸಾಧ್ಯವಾದುದಲ್ಲ.

●●

ಭದ್ರಾವತಿ ಲಯನ್ಸ್ ಕ್ಲಬ್ಬಿನ "ಚಾರ್ಟರ್ ನೈಟ್" ಸಮಾರಂಭ

ತಾ. ೧೭-೪-೭೧ನೇ ಸಂಜೆ ಎಮ್. ಐ. ಎಸ್. ಲಿಮಿಟೆಡ್‌ನ ಹಳೆಯ ಅತಿಥಿ ಗೃಹದ ರೋಟರಿ ಸಭಾಂಗಣದಲ್ಲಿ "ಚಾರ್ಟರ್ ನೈಟ್" ಸಮಾರಂಭವು ವಿಜೃಂಭಣೆಯಿಂದ ಜರಗಿತು. ಎಮ್. ಐ. ಎಸ್. ಲಿಮಿಟೆಡ್‌ನ ಉಪಾಧ್ಯಕ್ಷರೂ ಮೆನೇಜಿಂಗ್ ಡೈರೆಕ್ಟರರೂ ಆದ ಐ. ಪಿ. ಮುಲ್ಲಪ್ಪನವರು ಮುಖ್ಯ ಅತಿಥಿಗಳಾಗಿ ಭಾಷಣ ಮಾಡುತ್ತಾ, ಇನ್ನೊಬ್ಬರಿಗೆ ನಮ್ರತೆಯಿಂದ ಸೇವೆ ಸಲ್ಲಿಸುವ ವ್ಯಕ್ತಿಯ ಗುಣವು ಜನರಿಂದ ಮೆಚ್ಚಲ್ಪಡುತ್ತದೆ ಎಂದರು. ಇಂತಹ ಸೇವೆಯಿಂದ ಒಬ್ಬನು ವಿಧಿಸಲ್ಪಡುವ ಧ್ಯೇಯೋದ್ದೇಶವು ವಿಶಾಲವಾಗುವುದಲ್ಲದೆ ಅವನ ಸೇವೆಯನ್ನು ಅಭಿವೃದ್ಧಿಗೊಳಿಸುತ್ತದೆ. ಕ್ಲಬ್ಬು ಸಲ್ಲಿಸುತ್ತಿರುವ, ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಅದು ನಡೆಸುತ್ತಿರುವ ವೈದ್ಯಕೀಯ ರೋಗ ನಿಧಾನ ಶಿಬಿರವನ್ನು ಶ್ಲಾಘಿಸುತ್ತಾ ಕ್ಲಬ್ ವರ್ಷಕ್ಕೊಮ್ಮೆ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರಗಳನ್ನು ಕಡ್ಡಾಯ ಸೇವಾಕಾರ್ಯಕ್ರಮವಾಗಿ ಕ್ಲಬ್ಬು ಇರಿಸಿಕೊಳ್ಳುವುದು ಉಚಿತವೆಂದು ಸೂಚಿಸಿದರು.

ಕ್ಲಬ್ಬಿನ ಅಧ್ಯಕ್ಷ ಡಾ। ಜಿ. ಎಂ. ಮುರಿಗೇಂದ್ರಯ್ಯನವರು ಸಭಿಕರನ್ನು ಸ್ವಾಗತಿಸಿದರು. ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರು ಮುಖ್ಯ ಅತಿಥಿಗಳ ಪರಿಚಯ ಭಾಷಣ ಮಾಡಿದರು. ಕ್ಲಬ್ಬಿನ ಕಾರ್ಯದರ್ಶಿ ಡಾ। ಎ. ಆನಂದ ಶೆಟ್ಟರು ಕ್ಲಬ್‌ನ ವರದಿಯನ್ನೊಪ್ಪಿಸಿದರು. ಈ ಸಂದರ್ಭದಲ್ಲಿ ಏರ್ಪಡಿಸಲಾದ ಛದ್ಮವೇಷ ಸ್ಪರ್ಧೆಯಲ್ಲಿ ಡಾ। ಕರುಣಾಕರ ಅವರು ಅತ್ಯುತ್ತಮ ಎಂದು ಪರಿಗಣಿಸಲ್ಪಟ್ಟು ಪ್ರಥಮ ಪಾರಿತೋಷ ಪಡೆದರು. ಡಾ। ಎ. ಆನಂದ ಶೆಟ್ಟಿ ಮತ್ತು ಡಾ। ಶಂಕರ ಭಟ್ ಇವರು ಅನುಕ್ರಮವಾಗಿ ದ್ವಿತೀಯ ಮತ್ತು ತೃತೀಯ ಬಹುಮಾನ ಪಡೆದರು. ಡಾ। ಎಂ. ಎಸ್. ಭಟ್ಟರು ಸಮಾಧಾನ ಪಾರಿತೋಷಕ ಪಡೆದರು. ಚುನಾಯಿತ ಅಧ್ಯಕ್ಷ ಡಾ। ಎಸ್. ಎಸ್. ಭಟ್ಟರು ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು. ಶ್ರೀ ಎಸ್. ಎಸ್. ವೀರಭದ್ರಆರಾಧ್ಯರು ಸದಸ್ಯರಿಗೆ ಭೋಜನಕೂಟವನ್ನೇರ್ಪಡಿಸಿದ್ದರು.

ಛದ್ಮವೇಷ ಸ್ಪರ್ಧೆಯ ಬಹುಮಾನಿತರು; ಎಡದಿಂದ ಬಲಕ್ಕೆ:—
ಡಾ। ಎಂ. ಎಸ್. ಭಟ್ (ಪಾಲಕ್ಕಿ ನರಸಣ್ಣ), ಡಾ। ಯು. ಕರುಣಾಕರ ಶೆಟ್ಟಿ (ಧುರ್ ಕುರ್‌ಮಾಪ), ಡಾ। ಎ. ವಿ. ಶೆಟ್ಟಿ (ಗೋಪಾಲಕ), ಡಾ। ಎಸ್. ಎಸ್. ಭಟ್ (ಭಿಕ್ಷುಕ).

ಕೃಷ್ಯಭಿವೃದ್ಧಿ ಸಂಘದ ಸೇವಾ ವಿಭಾಗದ ಉದ್ಘಾಟನೆ

ತಾ. 21-4-71ರಂದು ಮಂಗಳೂರಲ್ಲಿನ ದ.ಕ. ಜಿಲ್ಲಾ ಸಹಕಾರಿ ಕೃಷಿ ಅಭಿವೃದ್ಧಿ ಸಂಘದವರ ನೂತನ ಮಾರಾಟ ಮತ್ತು ಸೇವಾ ವಿಭಾಗದ ಉದ್ಘಾಟನೆಯನ್ನು ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ.ಕೆ. ಪೈಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಶ್ರೀ ಎಚ್. ಮಹಾರುದ್ರಯ್ಯನವರು ನೆರವೇರಿಸಿದರು.

ಶ್ರೀ ಮಹಾರುದ್ರಯ್ಯನವರು ಮಾತನಾಡುತ್ತಾ ಕೃಷಿಕರಿಗೆ ನಿಜವಾದ ಕಲ್ಯಾಣ ಸಾಧನೆಯಾಗಬೇಕಾದರೆ ಸಹಕಾರೀ ಸಂಸ್ಥೆಗಳು ಆರ್ಥಿಕವಾಗಿ ಸ್ವಂತ ಕಾಲಮೇಲೆ ನಿಲ್ಲುವ ತ್ರಾಣ ಹೊಂದಿರಬೇಕು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ನಿರೀಕ್ಷಿಸಿದ ಪ್ರಗತಿ ಸಾಧಿಸಲಾಗಲಿಲ್ಲ. ಇದರ ಅಭಿವೃದ್ಧಿಗೆ ಸಹಕಾರ ತತ್ವದಿಂದ ಸಾಧ್ಯವೆಂದರು. ಈ ರಂಗದಲ್ಲಿ ದ.ಕ. ಜಿಲ್ಲೆಯಲ್ಲನೇಕ ಒಳ್ಳೆಯ ಕೆಲಸವಾಗಿದ್ದು ಇದಕ್ಕೆ ಕಾರಣರಾದ ಶ್ರೀ ನಾರಾಯಣ ನಾಯಕ್ ಮತ್ತಿತರರು ಅಭಿನಂದನಾರ್ಹರೆಂದರು.

ರೈತರ ಅಭಿವೃದ್ಧಿಗೆ ಜಾಗತಿಕ ಬೇಂಕು ನೆರವು ನೀಡಲು ಸರಕಾರ ಪ್ರಯತ್ನಿಸುತ್ತಿದೆಯೆಂದೂ, ರೈತರಿಗೆ ಅನುಕೂಲವಾಗುವಂತೆ ಸಂಚಾರಿ ಯೂನಿಟ್‌ಗಳನ್ನು ಪ್ರಾರಂಭಿಸಬೇಕೆಂದೂ ಯೋಗ್ಯ ಮಾರುಕಟ್ಟೆ ವ್ಯವಸ್ಥೆ ಕೈಗೊಳ್ಳಬೇಕೆಂದೂ ಹೇಳಿದರು. ದೇಶದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಸರಕಾರ । ಸಹಕಾರ ಸಂಘಗಳು ಮತ್ತು ಸಾರ್ವಜನಿಕರು ಒಟ್ಟಾಗಿ ಜತೆಯಲ್ಲಿ ಸಹಕರಿಸಿ ದುಡಿಯಬೇಕೆಂದೂ ಕರೆನೀಡಿದರು.

ಆರಂಭದಲ್ಲಿ ಜಿಲ್ಲಾ ಸಹಕಾರೀ ಕೃಷಿ ಅಭಿವೃದ್ಧಿ ಸಂಘದ ಅಧ್ಯಕ್ಷ ಶ್ರೀ ಬಿ. ನಾಯಕರು ಸ್ವಾಗತಿಸಿ ಈ ಸಂಘದಸ್ಥಾಪನೆಗೆ ದಿ। ಬಿ. ವಿ. ಬಾಳಿಗಾ ಮತ್ತು ಶ್ರೀ ಟಿ. ಎ. ಪೈಯವರು ನೀಡಿದ ಸಲಹೆ ಮಾರ್ಗದರ್ಶನವನ್ನು ಸ್ಮರಿಸಿದರು.

ಶ್ರೀ ಕೆ. ಕೆ. ಪೈ ತಮ್ಮ ಅಧ್ಯಕ್ಷ ಭಾಷಣದಲ್ಲಿ, ಸಹಕಾರೀ ಸಂಸ್ಥೆಗಳಿಗೂ ಸಿಂಡಿಕೇಟ್ ಬೇಂಕ್‌ಗೂ ಅನೇಕ ವರುಷಗಳಿಂದ ಇರುವ ನಿಕಟ ಸಂಪರ್ಕವನ್ನು ಸ್ಮರಿಸಿದರು. ಬೇಂಕಿಂಗ್ ಒಂದು ಸೇವಾ ಉದ್ಯಮ ಅದು ಸಹಕಾರೀ ಕ್ಷೇತ್ರದಲ್ಲಿಯೂ ಸೇವೆ ಸಲ್ಲಿಸುವವರಲ್ಲಿ ಹಿಂದುಳಿದಿಲ್ಲ ಎಂದರು. ಅವರು ಮುಂದುವರಿಯುತ್ತಾ, ನಮ್ಮ ಜಿಲ್ಲೆಯಲ್ಲಿ ಆರ್ಥಿಕ ಕೃಷಿ ಅಭಿವೃದ್ಧಿ ಹಿಂದಿಗಿಂತ ಹೆಚ್ಚಾಗಿ ಆಗುತ್ತಿರುವುದಕ್ಕೆ ನಿಮ್ಮ ಸಂಘದ ಅಭಿವೃದ್ಧಿಯೇ ನಿದರ್ಶನವೆಂದು ಹೇಳಿ ಜನರ ಮೇಲೆ ನಾವು ವಿಶ್ವಾಸವಿರಿಸಿದರೆ ಅವರ ಪರಿಣಾಮ ನಮಗೆ ಸಿಗುತ್ತದೆಂದರು. ಪ್ರಾಮಾಣಿಕತೆಯಿಂದ ದುಡಿವ ಸಿಬಂದಿಯವರು ಇರುವಲ್ಲಿ ಕೆಲಸಗಳು ಉತ್ತಮವಾಗಿ ನಡೆಯುತ್ತದೆಂದರು.

ಮಾರಾಟ ಮತ್ತು ಸೇವಾ ವಿಭಾಗ ಈ ಕ್ಷೇತ್ರದಲ್ಲಿ ಹೊಸ ಪ್ರಯೋಗವೆಂದೂ, ಯಾಂತ್ರೀಕರಣದಲ್ಲಿ ಹೆಚ್ಚು ಪ್ರಗತಿ ಸಾಧಿಸಿದಂತೆ ಮಾರಾಟ ಸೇವಾ ವಿಭಾಗಕ್ಕೆ ಹೆಚ್ಚಿನ ಮಹತ್ವ ಬರುವುದೆಂದೂ ತಿಳಿಸಿ ಈ ವಿಭಾಗವನ್ನು ತೆರೆದುದಕ್ಕೆ ಸಂಘಕ್ಕೆ ಅಭಿನಂದನೆ ಸಲ್ಲಿಸಿದರು.

ಅಂತ್ಯದಲ್ಲಿ ಸಂಘದ ಉಪಾಧ್ಯಕ್ಷ ಶ್ರೀ ಬಿ. ಪ್ರಭಾಕರ ರಾಯರು ಧನ್ಯವಾದ ಅರ್ಪಿಸಿದರು.

ಕುಂದಾಪುರದಲ್ಲಿ ರಂಗನಾಥ ಶೆಣೈ ಅಭಿನಂದನೆ

ಉಡುಪಿ ಕ್ಷೇತ್ರದಿಂದ ಸಂಸತ್ ಸದಸ್ಯರಾಗಿ ಆಯ್ಕೆಯಾದ ಶ್ರೀ ಪಿ. ರಂಗನಾಥ ಶೆಣೈಯವರನ್ನು ಅಭಿನಂದಿಸಲು ಕುಂದಾಪುರ ತಾಲೂಕಿನ ಆಡಳಿತ ಕಾಂಗ್ರೆಸ್ ಪಕ್ಷ ತಾ. 19ರಂದು ಸಾರ್ವಜನಿಕ ಸಮಾರಂಭವೊಂದನ್ನು ಏರ್ಪಡಿಸಿದ್ದು ಸಮಾರಂಭದಲ್ಲಿ ಶ್ರೀ ಪಿ. ಅನಂದಕುಂದ ಹೆಗ್ಡೆ, ಶ್ರೀ ಶ್ರೀನಿವಾಸ ಶೆಟ್ಟಿ, ಶ್ರೀ ಎನ್. ಎಸ್. ಪರಮೇಶ್ವರಯ್ಯ, ಶ್ರೀ ಎ. ಗೋಪಾಲಕೃಷ್ಣ ಕೊಡ್ಗಿ ಉಪಸ್ಥಿತರಿದ್ದು ಶ್ರೀ ಶೆಣೈಯವರನ್ನು ಅಭಿನಂದಿಸಿದರು.

ಅಡ್‌ಹಾಕ್ ಸಮಿತಿ ಸದಸ್ಯ ಶ್ರೀ ವೈ. ತೇಜಪ್ಪ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ವಿ. ಕೃಷ್ಣಪ್ಪ ಶೆಟ್ಟಿ ಸ್ವಾಗತಿಸಿದರು. ಶ್ರೀ ರಂಗನಾಥ ಶೆಣೈ ಜನರ ಆದರಾಭಿಮಾನಗಳಿಗಾಗಿ ಋಣಭಾರ ಮನ್ನಿಸಿದರು. ಶ್ರೀ ವೈ. ತೇಜಪ್ಪ ಶೆಟ್ಟರು ಶ್ರೀ ಶೆಣೈಯವರ ಸರಳತೆಯನ್ನು ಕೊಂಡಾಡಿದರು. ಅಡ್‌ಹಾಕ್ ಸಮಿತಿ ಅಧ್ಯಕ್ಷ ಶ್ರೀ ಬಿ. ಎಸ್. ಜಗನ್ನಾಥ ಶೆಟ್ಟಿ ವಂದನಾರ್ಪಣೆ ಮಾಡಿದರು.

ಭಾವಗೀತೆ

ರಚನೆ. ಶ್ರೀನಿವಾಸ, ಸಾಗರ್.

ಜಗದ ಅಚ್ಚರಿಯಲ್ಲಿ ಅರಳಿ ಮಲ್ಲಿಗೆಯಾಗಿ
ನಿನ್ನ ಕಣ್ಣೊಳು ಮಿಂಚು ಬಳ್ಳಿಯಾಗೀ
ಸಪ್ತಸಾಗರವೆಲ್ಲ ತಿಳಿಯಾಗಿ ಕೊಳವಾಗಿ
ನಿನ್ನ ಮುಖದೊಳು ಅರಳಿ
ಕಮಲವಾಗೀ.....

ಒಂದು ಕಣ್ಣೊಳಲಿ ವೃಕ್ಷ ಇನ್ನೊಂದರಲಿ
ಧೇನು
ತುಂಬು ಚಂದಿರ ಮೊಗದಿ ಜೊಲ್ಲ
ಜೇನೂ....
ಲಕ್ಷ ನಕ್ಷತ್ರಗಳ ಆಕಾಶದಂದಕ್ಕೆ
ಎತ್ತಿದಾರತಿ ಕಲಶ ಕನ್ನಡಿಯೂ ನೀನೂ

ಜೀವನದ ಒಳ ತಿರುಳು ನಿನ್ನೊಳವು ನಗುವೂ
ಕಾಜಾಣ ಕೋಗುಡುವ
ಕೇಕೆರಾಗಗಳೂ....
ಹಾರುವಕ್ಕಿಯ ನೆರಳು
ಮನಸಿನಾವೇಶಗಳೂ
ಸಂಜೆ ಬಾನಿನ ಬಣ್ಣ ಭಾವನೆಗಳೂ....

ಆನಂದಸಾಗರವೆ ಓ ಕ್ಷೀರ ಸಾಗರವೇ
ಅಲದೆಲೆಯಲಿ ತೇಲುವಾದಿದೈವಾ....
ಎನ್ನ ಮನದಂಗಳಂ ಕಂದ ನಿನ್ನಾಟದಲಿ
ವೈಮರೆಸು ಕಳೆದೆಲ್ಲ ಜಗದ ನೋವಾ....

●●

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65-66ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

'ಧರ್ಮಪತ್ನಿ' ಕನ್ನಡ ಚಿತ್ರದ ಮುಹೂರ್ತ

ತುಳುಚಿತ್ರ "ದಾರೆದ ಬುಡೆದಿ"ಯ ಕನ್ನಡ ಅವತರಣಿಕೆಯಾದ "ಧರ್ಮಪತ್ನಿ"ಗೆ ಇದೇ ಏಪ್ರಿಲ್ ೧೯ರಂದು ಮದ್ರಾಸಿನ "ಸ್ವಾಗತಂ"ನಲ್ಲಿ ಶ್ರೀ ಮಧ್ವರಾಜ್ ಕ್ಯಾಮರಾ ಸ್ವಿಚ್ ಆನ್ ಮಾಡಿದರು. ಶ್ರೀಮತಿ ಮನೋರಮಾ ಮಧ್ವರಾಜ್ ಕ್ಲ್ಯಾಪ್ ಮಾಡಿದರು.

ಸ್ಟುಡಿಯೋದಿಂದ ಹೊರಗಡೆಯೇ ಖಾಸಗಿ ಬಂಗಲೆಯಲ್ಲಿಯೇ "ಧರ್ಮಪತ್ನಿ"ಗೆ ಎಲ್ಲ ಚಿತ್ರೀಕರಣ ನಡೆಯಲಿದೆ. ಲೀಲಾವತಿ, ರಾಜಾಶಂಕರ್, ಭವಾನಿಶಂಕರ್, ವಿಜಯಕಲಾ, ಶಶಿಕಲಾ, ಇಂದ್ರಕಲಾ ಮೊದಲಾದವರು ಅಭಿನಯಿಸುತ್ತಿರುವ ಈ ಚಿತ್ರವನ್ನು ಶ್ರೀ ಆರೂರು ಪಟ್ಟಾಭಿ ನಿರ್ದೇಶಿಸುತ್ತಾರೆ. ಚಿತ್ರನಾಟಕ ಬರೆದ ಶ್ರೀ ಕೆ. ಎನ್. ಟೈಲರ್ ಮುಖ್ಯ ಪಾತ್ರದಲ್ಲಿದ್ದಾರೆ. ನಾರಾಯಣ ಪುತ್ರನ್, ರಾಮಚಂದ್ರ ಕೂಳೂರ್ ಅವರೂ ಪಾತ್ರವರ್ಗದಲ್ಲಿದ್ದಾರೆ. ರಾಜನ್—ನಾಗೇಂದ್ರರ ಸಂಗೀತವಿದೆ.

ಅಭಿನಂದನಾ ಸಭೆ

ಲೋಕಸಭೆಗೆ ಚುನಾಯಿಸಲ್ಪಟ್ಟ ಶ್ರೀ ಕೆ.ರಂಗನಾಥ ಶೆಣೈಯವರನ್ನು ಅಭಿನಂದಿಸಲು ತಾ. ೨೧-೪-೭೧ರಂದು ಕಲ್ಯಾಣಪುರದ ನಾಗರಿಕರು ಮಿಲಾಗ್ರಿಸ್ ಕಾಲೇಜಿನ ಸಭಾಭವನದಲ್ಲಿ ಪ್ರಿನ್ಸಿಪಾಲ್ ಡಾ| ಪಿ. ಗುರುರಾಜ ಭಟ್ಟರ ಅಧ್ಯಕ್ಷತೆಯಲ್ಲಿ ಸಮಾರಂಭವನ್ನು ಏರ್ಪಡಿಸಿದ್ದರು. ರೆ. ಫಾ. ಗೋನ್ಸಾಲಿಸ್ಸರು ಸ್ವಾಗತಿಸಿದ ಬಳಿಕ ಶ್ರೀಗಳಾದ ಶ್ರೀನಿವಾಸ ರಾವ್, ವಿಶ್ವನಾಥ ಶೆಟ್ಟಿಗಾರ ಮಾತನಾಡಿ ಸ್ಥಳೀಯ ಆವಶ್ಯಕತೆಗಳನ್ನು ವಿವರಿಸಿದರು. ಶ್ರೀ ಶೆಣೈಯವರು ಸಮಾರಂಭಕ್ಕಾಗಿ ಸಂತೋಷ ವ್ಯಕ್ತಪಡಿಸಿ ತನ್ನ ಕ್ಷೇತ್ರದ ಅಭಿವೃದ್ಧಿಗಾಗಿ ದುಡಿಯುವ ಆಶ್ವಾಸನೆಯಿತ್ತರು.

ಅಧ್ಯಕ್ಷ ಡಾ| ಭಟ್ಟರು ಮಾತನಾಡುತ್ತಾ ಜನರು ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ಮಾಡಬೇಕೆಂದೂ ಈಗಿನ ಸಮಸ್ಯಾ ಪರಿಹಾರಕ್ಕೆ ಕಷ್ಟಪಟ್ಟು ದುಡಿಯುವುದೇ ಪರಿಹಾರವೆಂದೂ ಹೇಳಿ ಶ್ರೀ ಶೆಣೈಯವರು ತಮ್ಮ ಕ್ಷೇತ್ರಕ್ಕೆ ಒಳ್ಳೆಯದನ್ನು ಒದಗಿಸಲೆಂದು ಹಾರೈಸಿದರು. ಶ್ರೀ ಜಯರಾಂ ಪಡಿಯಾರರು ಧನ್ಯವಾದವರ್ಪಿಸಿದರು.

ಬಂಟರ ಯಾನೆ ನಾಡವರ ಸಂಘದ ಮಹಾಸಭೆ

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾಸಭೆಯು ತಾರೀಕು ೨-೫-೭೧ನೇ ಆದಿತ್ಯವಾರ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿಜಯಾ ಬ್ಯಾಂಕಿನ ಚೆಯರ್‌ಮೇನ್ ಶ್ರೀ ಎಂ. ಸುಂದರರಾಮ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಸತ್ಕಾರ ಸಭೆ

ಸುರತ್ಕಲ್‌ನಿಂದ ವರ್ಗವಾದ ಸಬ್ ಪೋಸ್ಟ್ ಮಾಸ್ಟರ್ ಶ್ರೀ ಎಂ. ಜಿ. ಶೆಣೈ ಹಾಗೂ ಇಲ್ಲಿಗೆ ಆಗಮಿಸಿದ ಶ್ರೀ ಎಚ್. ನಾಗರಾಜ ಇವರನ್ನು ಸತ್ಕರಿಸಲು ತಾ. ೨೦-೪-೭೧ರಂದು ಶ್ರೀ ಕೆ. ವೆಂಕಟರಾಯಾಚಾರ್ಯರ ಅಧ್ಯಕ್ಷತೆಯಲ್ಲಿ ಅಂಚೆ ಕಛೇರಿಯಲ್ಲಿ ಸಭೆಯೊಂದು ಜರಗಿತು.

ಕಟೀಲಿನಲ್ಲಿ ಸಾಂಸ್ಕೃತಿಕೋತ್ಸವಗಳು

ತಾ. 13-4-71ರಂದಿನ ಧ್ವಜಾರೋಹಣದ ಮೂಲಕ ಆರಂಭವಾದ ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ವಾರ್ಷಿಕೋತ್ಸವದ ಅಂಗವಾದ ಸಾಂಸ್ಕೃತಿಕ ಸಮಾರಂಭಗಳು ತಾ. 16ರಿಂದ 19ರ ತನಕ ಜರಗಿದುವು. ತಾ. 16ರಂದಿನ ಕಾರ್ಯಕ್ರಮವು ಶ್ರೀ ಎಸ್. ಪಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರು ತುಳು ಜಾನಪದ ಸಾಹಿತ್ಯದ ಕುರಿತು ಉಪನ್ಯಾಸವಿತ್ತರು.

ಅಧ್ಯಕ್ಷರು ಸತ್ಯದ ಸಾಕ್ಷಾತ್ಕಾರಕ್ಕಾಗಿ ಅಲಿಪ್ತತೆ, ಪರಹಿತದೃಷ್ಟಿ, ವಿನಯ ಮೊದಲಾದ ಸದ್ಗುಣಗಳನ್ನು ಅಳವಡಿಸಿಕೊಂಡಾಗ ಮಾನವ ದಾರಿದೀಪವಾಗಿ ನಾಡಿನ ಏಳಿಗೆಯಾಗ ಬಹುದೆಂದರು.

ತಾ. 17ರ ಕಾರ್ಯಕ್ರಮವು ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ ಪೆರ್ಲ ಕೃಷ್ಣ ಭಟ್ಟರು 'ಜೀವನದ ದಾರಿದೀಪ ರಾಮಾಯಣ' ಎಂಬ ಕುರಿತು ಉಪನ್ಯಾಸ ಗೈದರು. ಅಧ್ಯಕ್ಷರು ಮಾತನಾಡುತ್ತಾ ಊರ ದೇವಾಲಯಗಳು ದೈವೀ ಸಂಸ್ಕರಣೆಯುದಿಸಲು ಸಹಾಯಕವೆಂದೂ, ಇಂತಹ ದೇವಾಲಯಗಳ ಮೂಲಕ ಭಕ್ತಿಯಿಂದ ವೇದಾಧಿಕಾರ ಇಲ್ಲದವರೂ ಭಗವತ್ ಸಾಕ್ಷಾತ್ಕಾರ ಮಾಡಿಕೊಳ್ಳಬಹುದಾಗಿದೆ ಎಂದು ಹೇಳಿ ಕಟೀಲಿನ ಪ್ರಗಾಂಚೆಯ ವೈಭವದ ಹಿರಿಮೆಯನ್ನು ಕೊಂಡಾಡಿದರು.

ತಾ. 18ರ ಕಾರ್ಯಕ್ರಮವು ಶ್ರೀ ಪಡಿಯೂಲ ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕಾಂತ ರೈಗಳು ನಾವು ಎಂದರೇನು? ಎಂಬ ವಿಷಯದ ಕುರಿತು ಮಾತನಾಡುತ್ತಾ, ಮಾನವನು ದಾನವನಂತೆ ವರ್ತಿಸುತ್ತಿರುವುದಕ್ಕೆ ಖೇದ ಸೂಚಿಸಿ ಪ್ರತಿಯೊಬ್ಬರೂ ಸ್ವಧರ್ಮಕ್ಕಾಗಿ ತ್ಯಾಗ ಮಾಡಲು ಸಿದ್ಧವಿರಬೇಕೆಂದರು.

ಅಧ್ಯಕ್ಷರು ಮಾತನಾಡುತ್ತಾ ಭಾರತೀಯ ಸಂಸ್ಕೃತಿಯನ್ನು ವಿವರಿಸಿ ಅಧ್ಯಾತ್ಮದ ವಿಶ್ಲೇಷಣೆಗೈದರು.

ಪ್ರತಿದಿನವೂ ಆಡಳಿತ ಮೊಕ್ತೇಸರ ಡಾ| ಕೆ. ಗಣನಾಥ ಶೆಟ್ಟಿ, ಪ್ರಧಾನಾರ್ಚಕ ಶ್ರೀ ಕೆ. ಗೋಪಾಲ ಅಸ್ರಣ್ಣ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ. ಎಂ. ಶ್ಯಾಮ ಶೆಟ್ಟಿ ಇವರು ಹೂಹಾರಗಳ ಮೂಲಕ ಅತಿಥಿಗಳನ್ನು ಗೌರವಿಸಿದರು. ಕೊಡತ್ತೂರು ಅನಂತ ಪದ್ಮನಾಭ ಉಡುಪರು ಪ್ರತಿದಿನವೂ ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದಾರ್ಪಣೆ ಗೈದರು.

ದಿನಂಪ್ರತಿ ಮನರಂಜನಾ ಕಾರ್ಯಕ್ರಮಗಳು ಜರಗಿದವು.

ಶ್ರೀ ನರಸಿಂಹ ಜಯಂತೀ ರಥೋತ್ಸವ

ಸುಬ್ರಹ್ಮಣ್ಯದ ಶ್ರೀ ಸಂಪುಟ ನರಸಿಂಹ ಸ್ವಾಮಿ ಸುಬ್ರಹ್ಮಣ್ಯ ಮಠದ ಶ್ರೀ ನರಸಿಂಹ ಜಯಂತೀ ಮಹಾರಥೋತ್ಸವವು ತಾ. ೭-೫-೭೧ರಿಂದ ೧೧-೫-೭೧ರ ತನಕ ಜರಗಲಿರುವುದು. ಇದೇ ಸಂದರ್ಭದಲ್ಲಿ ಮೇ ೯ ಮತ್ತು ೧೧ರಂದು ಶ್ರೀಮದಾನಂದ ತೀರ್ಥ ತತ್ವದರ್ಶಿನಿ ಸಭೆಯೂ ಜರಗಲಿವೆ.

●●

ಮಹಾಪುರುಷರ ವಾಣಿಗಳು

ತನ್ನ ನಿಜ ಸ್ವರೂಪವು ಯಾವುದೆಂದು ಕಂಡುಕೊಂಡ ನಂತರ ನಾಶ ಉತ್ಪತ್ತಿಗಳೆರಡೂ ಇಲ್ಲದ ಪರಿಪೂರ್ಣ ಜ್ಞಾನಾನಂದವೇ ಉಳಿಯುತ್ತದೆ.

(ರಮಣ ಮಹರ್ಷಿ)

ಜನಸೇವೆಯ ಹೊರತಾಗಿ ಪ್ರಭುಸೇವಾ ಅಪೂರ್ಣವೇ ಆಗಿರುತ್ತದೆ. ಮತ್ತು ಪರಮಾತ್ಮನ ಭಕ್ತಿಯಿಂದಲ್ಲದ ಜನಸೇವೆಯೂ ಸಹ ಪರಮಕಲ್ಯಾಣದ ಸಾಧಕವಾಗಲಾರದು. (ವಿವೇಕಾನಂದ)

ಕೃತಜ್ಞತೆ ಸಮರ್ಪಣೆ

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಇದೇ ಕಳೆದ ತಾ. 10ರಿಂದ 19ರ ವರೆಗೆ ಜಾತ್ರೆ ಉತ್ಸವಾದಿಗಳನ್ನು ಚಂದಗಾಣಿಸಲಿಕ್ಕಾಗಿ ತನು ಮನ ಧನಗಳಿಂದ ಸಹಕರಿಸಿದ ಭಕ್ತಾದಿ ಮಹನೀಯರಿಗೆ ಈ ಮೂಲಕ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಕಿಕ್ಕಿರಿದ ಜನಸ್ತೋಮದ ನಡುವೆ ಪುತ್ತೂರು ಪೋಲೀಸು ಸರ್ಕಲ್ ಇನ್ಸ್‌ಪೆಕ್ಟರರೂ ಅವರ ಸಿಬಂದಿಯವರೂ ಬಂದೋಬಸ್ತು ವ್ಯವಸ್ಥೆ ಏರ್ಪಡಿಸಿರುತ್ತಾರೆ. ಹಾಗೂ ಸಬ್ ಇನ್ಸ್‌ಪೆಕ್ಟರರಾಗಿರುವ ಶ್ರೀ ಮಹಮ್ಮದ್ ಇಕ್ಬಾಲ್‌ರವರೂ ಶ್ರೀ ಪಿ.ಪಿ. ನಾಯರ್‌ರವರೂ ಪ್ರತಿದಿನ ಉತ್ಸವಾದಿಗಳ ಕಾಲದಲ್ಲಿ ಸ್ವತಹ ಹಾಜರಿದ್ದು ಪೋಲೀಸು ಶಿಬಂದಿಯವರಿಂದ ಉತ್ತಮ ಬಂದೋಬಸ್ತು ವ್ಯವಸ್ಥೆಯನ್ನು ಏರ್ಪಡಿಸಿರುತ್ತಾರೆ. ಶ್ರೀ ಭಗವಂತನು ಅವರಿಗೆ ಹೆಚ್ಚಿನ ಪದವಿ ಶ್ರೇಯೋಭಿವೃದ್ಧಿಗಳನ್ನು ಅನುಗ್ರಹಿಸಲಿ ಎಂದು ಪ್ರಾರ್ಥಿಸಿ ಅವರಿಗೆ ಕೃತಜ್ಞತೆಗಳನ್ನರ್ಪಿಸುತ್ತೇನೆ.

ಟ್ರಸ್ಟಿಗಳಾದ ಶ್ರೀ ಕೆ.ಸಿ. ನ್ಯಾಕ್‌ರವರೂ ಶ್ರೀ ಪಿ. ರಾಮಚಂದ್ರ ಭಟ್‌ರವರೂ ನನ್ನೊಡನೆ ಸಹಕರಿಸಿರುತ್ತಾರೆ. ಅವರಿಗೂ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಪುತ್ತೂರು — **ಡಿ. ಕೆ. ಹೆಬ್ಬಾರ್**
21-4-71 — ಆಡಳ್ತೆ ಮೊಕ್ತೇಸರ್
ಶ್ರೀ ಮಹಾಲಿಂಗೇಶ್ವರ ದೇವಸ್ಥಾನ

ಕೃತಜ್ಞತಾ ಸಮರ್ಪಣೆ

ಇದೇ ತಾ. ೨೪-೪-೭೧ರಂದು ಉಡುಪಿ ಕಲ್ಪನಾ ಥಿಯೇಟರಿನಲ್ಲಿ ನನ್ನ ಪುತ್ರ ಚಿ. ಬಾಲಕೃಷ್ಣನಿಗೆ ಶ್ರೀ ಬಿಲ್ಲಾಡಿ ದೊಡ್ಡಮನೆ ಆನಂದ ಹೆಗ್ಡೆಯವರ ಪುತ್ರಿ ಚಿ. ಸೌ. ಶಾರದಾಳೊಂದಿಗೂ, ನನ್ನ ಮೊಮ್ಮಗಳು ವ ದಿ| ಬಿ. ವಿಟ್ಠಲದಾಸ ಹೆಗ್ಡೆಯವರ ಪುತ್ರಿ ಚಿ. ಸೌ. ಅನಿತಾಳಿಗೆ ದಿ| ವಕೀಲ್ ಕೆದಿಂಜೆ ಮಹಾಬಲ ಹೆಗ್ಡೆಯವರ ಪುತ್ರ ಚಿ. ಸತೀಶ್ಚಂದ್ರನೊಂದಿಗೂ ಜರಗಿದ ವಿವಾಹ ಸಮಾರಂಭಕ್ಕೆ ಬಂದು ಚಂದಗಾಣಿಸಿ ಸಹಕರಿಸಿದವರಿಗೂ, ಉಡುಗೊರೆಗಳನ್ನಿತ್ತು ವಧೂವರರನ್ನು ಹರಸಿದವರಿಗೂ ಬೇರೆ ಬೇರೆ ವಿಧಗಳಿಂದ ಸಹಕರಿಸಿದವರಿಗೂ ನನ್ನ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬೇಳಂಜೆ ವಿಠ್ಠಲ ಹೆಗ್ಡೆ

ನವಯುಗದ ಸುವರ್ಣ ಮಹೋತ್ಸವ

ನಿವೇದನೆ

ಇದೇ 1971ನೆಯ ವರ್ಷಕ್ಕೆ, ನಾಡಿನ ಜನಪ್ರಿಯ ಸಾಪ್ತಾಹಿಕ 'ನವಯುಗ' ತನ್ನ ಸಾರ್ಥಕ ಜೀವನದ ಐವತ್ತು ವರ್ಷಗಳನ್ನು ಕಳೆದು ತನ್ನ ಚಿನ್ನದ ಹಬ್ಬದ ವರ್ಷಕ್ಕೆ ಕಾಲಿರಿಸಿದೆ. ಈ ಶುಭ ಸಂದರ್ಭದಲ್ಲಿ ನಾಡಿನ ಸಾರ್ವಜನಿಕ ಅಭಿಪ್ರಾಯದ ಈ ನಿರೂಪಣ ಮತ್ತು ರೂಪಣದಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಪತ್ರಿಕೋದ್ಯಮಿಗಳು, ಲೇಖಕರು ಮತ್ತು ಸರ್ಕಾರದ ಮುಂದಾಳುಗಳನ್ನು ಒತ್ತಟ್ಟಿಗೆ ಸೇರಿಸಿ ಭಾರತೀಯ ಪ್ರಜಾಪ್ರಭುತ್ವದ ಯಶಸ್ಸಿಗಾಗಿ ನಾವು ಇನ್ನೂ ಮಾಡಬೇಕಾದ ಕೆಲಸ, ಹಿಡಿಯಬೇಕಾದ ದಾರಿಯ ಕುರಿತು ಚರ್ಚೆ ನಡೆಸಲು ಅನುಕೂಲ ಕಲ್ಪಿಸುವ ಬಯಕೆ ನಮ್ಮದು "ನವಯುಗ"ದ ಚಿನ್ನದ ಹಬ್ಬ ನಮ್ಮ ರಾಜ್ಯದ ಸರ್ವತೋಮುಖ ಬೆಳವಣಿಗೆಯ ಸೂತ್ರಗಳನ್ನು ಕಂಡುಕೊಳ್ಳಲು ನೆರವಾಗುವಂತೆ ಆ ಹಬ್ಬವನ್ನು ಒಂದು ಸಾಂಸ್ಕೃತಿಕ ಉತ್ಸವವಾಗಿ ಆಚರಿಸಬೇಕೆಂದು ನಾವು ನಿರ್ಧರಿಸಿರುತ್ತೇವೆ. ಈ ಬಗ್ಗೆ ಈಗಾಗಲೇ ಪ್ರಾತಿನಿಧಿಕ ಸಮಾರಂಭ ಸಮಿತಿಯನ್ನು ರಚಿಸಲಾಗಿದೆ.

ನಮ್ಮ ಕೆಲವು ಆಪ್ತ ಸ್ನೇಹಿತರು ಈ ಚಿನ್ನದ ಹಬ್ಬದ ವರ್ಷದಲ್ಲಿ 'ನವಯುಗ'ದ ನವೀಕರಣವೂ ನಡೆಯಬೇಕೆಂದು ಸೂಚಿಸಿದ್ದಾರೆ. ಆಧುನಿಕ ಯುಗಕ್ಕೆ ಹೊಂದಿಕೊಳ್ಳುವ ಲೇಖನ, ಶೀರ್ಷಿಕೆ, ಮತ್ತು ಚಿತ್ರಗಳ ಮೂಲಕ ರಾಜ್ಯದ ಜನತೆಯ ಓದಿಕೆಯ ಹಸಿವನ್ನು ನೀಗಿಸುವ ಆಕರ್ಷಕ ವಿಧಾನಗಳನ್ನು ಅನುಸರಿಸಬೇಕಾಗಿದೆ. ಜನರಲ್ಲಿ ವೈಜ್ಞಾನಿಕ ಮನೋವೃತ್ತಿ ಕುದುರುವಂತೆ ವಿಜ್ಞಾನ ಲೇಖನಗಳ ವ್ಯಾಪ್ತಿಯನ್ನು ಹಿಗ್ಗಿಸಬೇಕಾಗಿದೆ. ಸಾಮಾಜಿಕ ರಾಜಕೀಯ ಪ್ರಶ್ನೆಗಳಿಗೆ ಜನ ಸ್ವತಂತ್ರವಾಗಿಯೂ ವಿವೇಕ ಪೂರ್ಣವಾಗಿಯೂ ಉತ್ತರಿಸುವಂತೆ ಪ್ರೇರಿಸಬೇಕಾಗಿದೆ. ದೈನಂದಿನ ವರ್ತಮಾನಪತ್ರಗಳು ಸುದ್ದಿ ಸಂಗ್ರಹದ ಮೇಲೆ ಹೆಚ್ಚಾಗಿ ಕಣ್ಣಿಟ್ಟಿರುವುದರಿಂದ, ಅಭಿಪ್ರಾಯ ರೂಪಣದ ಕೆಲಸ ಸಾಪ್ತಾಹಿಕಗಳ ಮೂಲಕವೇ ನಡೆಯಬೇಕಾದ ಪ್ರಸಂಗದಲ್ಲಿ ನವಯುಗ ತನ್ನ ಪಾತ್ರವನ್ನು ಹೊಸದಾಗಿ ನಿರ್ಧರಿಸಿಕೊಳ್ಳಬೇಕಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಹೇಗೋ ಹಾಗೆ ಅನಂತರವೂ 'ನವಯುಗ'ವು ತನ್ನತನವನ್ನು ಕಾಯ್ದುಕೊಂಡು ವಿಶಿಷ್ಟ ರೀತಿಯ ಬರವಣಿಗೆಯಿಂದ ತನ್ನ ಸತ್ಯವನ್ನೂ, ಸತ್ವವನ್ನೂ ಕಾಪಾಡಿಕೊಂಡು ಬಂದಿರುವುದನ್ನು ತಾವು ಗಮನಿಸಿರಬಹುದು. ಅನಾಕರ್ಷಕವಾದ ರಾಷ್ಟ್ರೀಯ ಪುನಾರಚನೆಯ ಕಾರ್ಯದಲ್ಲಿ 'ನವಯುಗ' ಆಡಂಬರವಿಲ್ಲದೆ, ಸದ್ದುಗದ್ದಲ್ಲವಿಲ್ಲದೆ ನಡೆಸಿದ ಕರ್ತವ್ಯವನ್ನು ತಾವು ಮೆಚ್ಚಿಕೊಂಡಿರುವಿರೆಂದು ನಮ್ಮ ಭಾವನೆ.

'ನವಯುಗ'ದ ನವೀಕರಣದ ಯೋಜನೆ ಸಾರ್ವಜನಿಕರ ಆರ್ಥಿಕ ಬೆಂಬಲವಿಲ್ಲದೆ ಅಸಾಧ್ಯ. ನವಯುಗದ ಶ್ರೇಯಃಕಾಂಕ್ಷಿಗಳಾದ ತಮ್ಮಂಥವರಿಂದ, ತಮ್ಮ ಸ್ನೇಹಿತ ವರ್ಗದಿಂದ ದೊರೆಯುವ ಸಹಾಯವನ್ನು ನಾವು ಸಂತೋಷದಿಂದ ಸ್ವೀಕರಿಸುತ್ತೇವೆ.

ಇತಿ ಭವದೀಯ

ನವಯುಗ ಆಫೀಸು,
ಉಡುಪಿ.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ-ಸಂಪಾದಕ

ನವಯುಗ

ಕೃತಜ್ಞತಾ ಸಮರ್ಪಣೆ

ನವಯುಗದ ನವೀಕರಣಕ್ಕಾಗಿ ಯೋಜಿಸಲಾಗಿರುವ ಸುವರ್ಣೋತ್ಸವ ನಿಧಿ ಸಂಗ್ರಹ ಹಾಗೂ ಚಿನ್ನದ ಹಬ್ಬದ ಸಂಚಿಕೆಗೆ ಜಾಹಿರಾತು ಸಂಗ್ರಹಕ್ಕಾಗಿ ಕೆಲವು ಮಿತ್ರರೊಂದಿಗೆ ಇತ್ತೀಚೆಗೆ ಸಂಚರಿಸಿದಾಗ ನಮಗೆ ಬೇರೆ ಬೇರೆ ಕಡೆಗಳಲ್ಲಿ ವಿವಿಧ ರೀತಿಯಲ್ಲಿ ಸಹಕಾರ ಪ್ರೋತ್ಸಾಹಗಳನ್ನಿತ್ತ ಈ ಕೆಳಗಿನ ಮಹನೀಯರಿಗೆ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಕಾರವಾರದಲ್ಲಿ ಶ್ರೀಗಳಾದ ಕೆ. ಸಂಜೀವ ರಾವ್, ಎಂ.ಎಲ್. ಶೆಟ್ಟಿ, ಅರವಿಂದ ಮೋಟಾರ್ಸ್‌ನ ಮೆನೇಜರ್ ಶ್ರೀ ಐತಾಳ್ ಮತ್ತು ಶಿಬಂದಿಯವರು, ಸಿದ್ದಾಪುರದಲ್ಲಿ ಡಾ| ಎಂ.ಸಿ. ಶೆಟ್ಟಿ, ಶ್ರೀ ಎಸ್. ವಿ. ಹೆಗ್ಡೆ, ಭದ್ರಾವತಿಯಲ್ಲಿ ಶ್ರೀ ಬಡೆಕ್ಕಿಲ ಕೃಷ್ಣ ಭಟ್, ಬಿ. ಮಾಧವಾಚಾರ್, ಶ್ರೀ ಎನ್. ಸುಧಾಕರ ಶೆಟ್ಟಿ, ಶಿವಮೊಗ್ಗದಲ್ಲಿ ಡಾ| ಎಚ್. ಎಸ್. ಹೆಗ್ಡೆ, ಮನೋಹರ ಕೆಫೆಯ ಶ್ರೀ ಪಿ.ಕೆ. ಜನಾರ್ಧನ ನೆಲ್ಲಿ, ನಮಗೆ ಬೇರೆ ಬೇರೆ ಕಡೆಗಳಲ್ಲಿ ಚಂದಾದಾರರಾಗಿ ಪ್ರೋತ್ಸಾಹಿಸಿದ ಮಹನೀಯರಿಗೂ ನಮ್ಮ ಧನ್ಯವಾದಗಳು.

ಕೆ. ಹೊನ್ನಯ ಶೆಟ್ಟಿ
ಸಂಚಾಲಕ-ಸಂಪಾದಕ

ಪಾಕಿಸ್ತಾನದ ಮೇಲೊಂದು 'ಕ್ಷ' ಕಿರಣ

ಯಾಹ್ಯಾಖಾನರ ದಂಡಯಾತ್ರೆ

ಲೇಖಕರು : "ವಿಶ್ಲೇಷಕ"

ಯಾಹ್ಯಾರಿಗೆ ಈಗ ಅಗ್ನಿಪರೀಕ್ಷೆ. ದೂರದ ಪೂರ್ವಬಂಗಾಳ ಅವರ ಪಾಲಿಗೆ ಅಗ್ನಿಕುಂಡ. ಅಲ್ಲಿ ಸ್ವಾತಂತ್ರ್ಯ ಯೋಧರ ಕೆಚ್ಚು ಪ್ರಜ್ವಲಿಸುತ್ತಿದೆ. ಈ ಕೆಚ್ಚನ್ನು ನಂದಿಸಲೆಂದೇ ಯಾಹ್ಯಾಖಾನರ ದಂಡಯಾತ್ರೆ. ಲೆಕ್ಕವಿಲ್ಲದಷ್ಟು ಬಂಗ್ಲಾ ದೇಶಭಕ್ತರ ಸಾಮೂಹಿಕ ಕಗ್ಗೊಲೆ ಆದರೂ ವೀರ ಬಂಗಾಳಿಗಳು ಕಂಗೆಡಲಿಲ್ಲವೆಂದು ಯಾಹ್ಯಾಖಾನರ ಕೊರಗು. ಸಾಲದ್ದಕ್ಕೆ ಅಸಾಮಾನ್ಯವಾದ ಪ್ರತಿರೋಧವನ್ನು ಅವರು ಎದುರಿಸಬೇಕಾಗಿದೆ. ಇದರಿಂದಾಗಿ ದಂಡಿನ ಪ್ರಭುಗಳಿಗೆ ಹಲವು ಹನ್ನೊಂದು ಸಮಸ್ಯೆಗಳು ತಲೆದೋರಿವೆ. ಇದೆಲ್ಲ ಅವರದೇ ಸೃಷ್ಟಿ. ಮೊದಲನೆಯದಾಗಿ ದಂಡಿನ ಆಡಳಿತಗಾರರು ತಮ್ಮ ಅಮಾನುಷ ಕಾರ್ಯಾಚರಣೆಗೆ, ಬಂಗ್ಲಾ ದೇಶದ ಯಾರಿಂದಲೂ ಸೈ ಎನ್ನಿಸಿಕೊಳ್ಳಲಿಲ್ಲ. ಯಾಹ್ಯಾರಿಗೆ ಬಂಗ್ಲಾ ದೇಶದ ಯಾರೊಬ್ಬರ ಬೆಂಬಲವೂ ಇಲ್ಲ. ಬಂಗ್ಲಾ ದೇಶವನ್ನು ಮೊದಲಿನಿಂದಲೂ ವಸಾಹತಿನಂತೆ ನೋಡಿಕೊಂಡರೆನ್ನುವುದು. ಪಶ್ಚಿಮ ಪಾಕಿಸ್ತಾನದ ರಾಜಕೀಯ ನೀತಿಯ ದಿವಾಳಿಯನ್ನೇ ತೋರಿಸುತ್ತದೆ. ಮಿಲಿಟರಿ ಪ್ರಭುಗಳ ಈ ನೀತಿ ಮುಂಬರುವ ದಿನಗಳಲ್ಲಿ ಮಿಲಿಟರಿ ಸ್ಥಿತಿಯ ಮೇಲೆ ಗಹನವಾದ ಪ್ರಭಾವವನ್ನೇ ಬೀರುವುದು. ಬಂಗ್ಲಾದೇಶಭಕ್ತರ ಅಸಹಕಾರದ ಫಲವಾಗಿ ಅನೇಕ ಕಡೆಗಳಲ್ಲಿ ಪಾಕ್ ಸೈನಿಕರಿಗೆ ಆಹಾರ—ನೀರು ಸಿಗದಂತಾಗಿದೆ; ಪಾಕಿಸ್ತಾನದ ವಿಮಾನಗಳಿಗೆ ಇಂಧನ ಪೂರೈಸಲು ಬರ್ಮಾ ನಿರಾಕರಿಸಿದೆ. ಸಿಲೋನ್ ಸಹ ಇಂತಹ ಸೌಕರ್ಯಗಳನ್ನು ಮೊಟಕುಗೊಳಿಸಿದೆ. ಇದರಿಂದಾಗಿ-ಪಾಕಿಸ್ತಾನ ಮಿಲಿಟರಿ ಪ್ರಭುಗಳು ಇಂಧನಕ್ಕಾಗಿ ಪರದಾಟ ಪ್ರಾರಂಭಿಸಿದ್ದಾರೆ.

ಬಲದ ಮದ

ಬಂಗ್ಲಾ ದೇಶದಲ್ಲಿ ಈಗ ಆರಂಭವಾಗಿರುವ ಯುದ್ಧ ಬಹಳ ದಿನಗಳ ವರೆಗೆ ನಡೆಯುವ ಸಂಭವವಿದೆ. ಬಲಪ್ರದರ್ಶನ ಮಾಡಿ ಬಂಗ್ಲಾದೇಶದ ನಿಶ್ಶಸ್ತ್ರ ನಾಗರಿಕರನ್ನು ಬಗ್ಗು ಬಡಿಯಬಹುದೆಂದು ಪಾಕಿಸ್ತಾನದ ಆಡಳಿತಗಾರರು ಮಾಡಿದ ಲೆಕ್ಕಾಚಾರ ಈಗ ತಲೆಕೆಳಗಾಗಿದೆ. 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯ ಪ್ರತಿನಿಧಿ ಹೇಳುವುದಾದರೆ 'ಆಡಳಿತಗಾರರ ಕಾರ್ಯಾಚರಣೆ, ವಸಾಹತು ಉಳಿಸಿಕೊಳ್ಳಲು ನಡೆಸಿದ ಹೋರಾಟವಾಗಿದೆ. ವಸಾಹತು ಶಾಹಿಯ ದಿನಗಳು ಈಗ ಮುಗಿದಿವೆ....'

ಮುಂಗಾರು ಮಳೆ ಪ್ರಾರಂಭವಾಯಿತೆಂದರೆ ಪಾಕ್ ಸೈನಿಕರಿಗೆ ಇನ್ನೂ ಕಷ್ಟ. ಸೇನೆಯ ಸರಬರಾಜು ಮಾರ್ಗಗಳನ್ನು ಸುಸ್ಥಿತಿಯಲ್ಲಿಡುವುದಾಗಲೀ ಸಂಪರ್ಕ ಸಾಧನಗಳನ್ನು ಕಾಪಾಡಿಕೊಳ್ಳುವುದಾಗಲೀ ಅವರಿಗೆ ಅಸಾಧ್ಯವಾಗುವುದು.

ಇಸ್ಲಾಂಬಾದ್ ತನ್ನ ಬಳಿಯಲ್ಲಿರುವ ಎಲ್ಲಾ ಸೇನಾಬಲವನ್ನು ಶಸ್ತ್ರಾಸ್ತ್ರಗಳನ್ನೂ ಬಳಸಿಕೊಂಡು ಬಂಗ್ಲಾ ದೇಶದ ಸ್ವಾತಂತ್ರ್ಯ ಹೋರಾಟವನ್ನು ದಮನ ಮಾಡಲು ಯತ್ನಿಸುತ್ತಿದೆ. ಈ ಕಾರ್ಯದಲ್ಲಿ ಹತಾಶಗೊಂಡ ಅದು ವಾಯುವ್ಯ ಸರಹದ್ದಿನ ಕಮ್ಯಾಂಡೊಗಳನ್ನು ಅಧಿಕ ಸಂಖ್ಯೆಯಲ್ಲಿ ಕರೆಸಿಕೊಂಡು ಅವರನ್ನು ಪೂರ್ವ ಬಂಗಾಳಕ್ಕೆ ರವಾನಿಸಿದೆ.

ಪಶ್ಚಿಮ ಪಾಕಿಸ್ತಾನದ ಜನಸಂಪರ್ಕ ಮಾಧ್ಯಮಗಳು ಸೇನಾಭರತಿಗಾಗಿ ಒಂದೇ ಸಮನೆ ಪ್ರಚಾರಮಾಡುತ್ತಿವೆ. ದೃಢಕಾಯರಾದ ಎಲ್ಲಾ ಯುವಕರೂ 'ರಾಷ್ಟ್ರ ರಕ್ಷಣೆ'ಗಾಗಿ ಸೇನೆಯನ್ನು ಸೇರಬೇಕೆಂದು ಕರೆಯುತ್ತಿವೆ. ಸೇನಾಭರತಿಗಾಗಿ ವಾಯುವ್ಯ ಸರಹದ್ ಪ್ರಾಂತ್ಯ ಹಾಗೂ ಪಂಜಾಬ್ ರಾಜ್ಯದ ಅನೇಕ ಕಡೆಗಳಲ್ಲಿ ಕಳೆದ ವಾರ ಸೇನಾಭರತಿಯ ಮೇಳಗಳು ನಡೆದುವೆಂದು ವರದಿ.

ಹೊರಲಾಗದ ಹೊರೆ

ಬಂಗ್ಲಾದೇಶದಲ್ಲಿ ಪಾಕಿಸ್ತಾನ್ ನಡೆಸಿರುವ ಮಿಲಿಟರಿ ಸಾಹಸ, ಪಾಕಿಸ್ತಾನದ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರಿದೆ ಎಂಬುದು ಪಶ್ಚಿಮ ಪಂಜಾಬ್ ವಾಣಿಜ್ಯ ಸಂಘದ ಅಧ್ಯಕ್ಷರ ಮಾತಿನಿಂದ ಸ್ಪಷ್ಟವಾಗಿದೆ. ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನ ನಡುವೆ ವ್ಯಾಪಾರ ವ್ಯವಹಾರಗಳು ಸಂಪೂರ್ಣವಾಗಿ ನಿಂತುಹೋಗಿರುವುದರಿಂದ ಪಶ್ಚಿಮ ಪಾಕ್ ವ್ಯಾಪಾರಿಗಳು ವಾರಕ್ಕೆ 3 ಕೋಟಿ ರೂ ಗಳಷ್ಟು ನಷ್ಟವನ್ನು ಅನುಭವಿಸುತ್ತಿದ್ದಾರೆ. ಬಂಗ್ಲಾದೇಶದಲ್ಲಿ ಕೈಗಾರಿಕೆಗಳು ಕೆಲಸವನ್ನು ನಿಲ್ಲಿಸಿರುವುದರಿಂದ ಪಶ್ಚಿಮ ಪಾಕಿಸ್ತಾನಕ್ಕೆ ಕೈಗಾರಿಕಾ ವಸ್ತುಗಳ ಪೂರೈಕೆಯಾಗುತ್ತಿಲ್ಲ. ಇದರಿಂದಾಗಿ ಪೂರ್ವಬಂಗಾಳದಲ್ಲಿ ನಡೆದಿರುವ ಯುದ್ಧ ಪಶ್ಚಿಮ ಪಾಕಿಸ್ತಾನ ಹೊರಲಾರದ ಹೊರೆಯಾಗಿ ಪರಿಣಮಿಸಿದೆ.

ಆರ್ಥಿಕಸ್ಥಿತಿ ದಿನ—ದಿನವೂ ಚಿಂತಾಜನಕವಾಗುತ್ತ ನಡೆದಿದೆ. ಪೂರ್ವಬಂಗಾಳದೊಂದಿಗೆ ಸಮರವನ್ನು ಆರಂಭಿಸಿರುವುದು ಪಶ್ಚಿಮ ಪಾಕಿಸ್ತಾನದ ಜನರಿಗೆ "ನೀರಿಳಿಯದ ಗಂಟಲೊಳು ಕಡುಬನ್ನು ತುರುಕಿದಂತಾಗಿದೆ." ಪಾಕಿಸ್ತಾನದ ಪ್ರಜೆಗಳು ಇದೆಲ್ಲವನ್ನೂ ಅನುಭವಿಸಬೇಕಾಗಿದೆ ಅಧಿಕಾರದಾಹ ಯಾಹ್ಯಾಖಾನರನ್ನು ಅಮಾನುಷ ಕೃತ್ಯಗಳಿಗೆ ಪ್ರೇರೇಪಿಸಿದೆ.

ಪಶ್ಚಿಮ ಪಾಕಿಸ್ತಾನಿನ ಪ್ರಧಾನ ಕೈಗಾರಿಕಾ ಕೇಂದ್ರಗಳಾದ ಲೈಲಾಪುರ ಲಾಹೋರ್—ಮತ್ತು ಕರಾಚಿ ಇವೇ ಮೊದಲಾದ ನಗರಗಳಲ್ಲಿ ಕೈಗಾರಿಕಾ ಅಶಾಂತಿ ತಲೆದೋರಿದೆಯೆಂದೂ ಇಡೀ ಪಶ್ಚಿಮ ಪಾಕಿಸ್ತಾನವೇ ಈಗ ಕೈಗಾರಿಕಾ ಕ್ಷೋಭೆಗೆ ಒಳಗಾಗಿದೆ ಎಂದು ಪತ್ರಿಕಾ ವರದಿಗಳು ತಿಳಿಸಿವೆ.

ಪೂರ್ವಬಂಗಾಳದಲ್ಲಿ ಪಾಕ್ ಮಿಲಿಟರಿ ಪ್ರಭುಗಳ ಸಮರವನ್ನು ಪ್ರಾರಂಭಿಸಿದ ಬಳಿಕ ಪಶ್ಚಿಮ ಪಂಜಾಬಿನ ಲೈಲಾಪುರದ ಕಾರ್ಮಿಕರು ಭಾರೀ ಮತಪ್ರದರ್ಶನ ಮಾಡಿದರೆಂದು ವರದಿಯಾಗಿದೆ. ಬಹಳ ದಿನಗಳಿಂದಲೂ ಇತ್ಯರ್ಥವಾಗದೇ ಇರುವ ಅನೇಕ ವಿವಾದಗಳನ್ನು ಕೂಡಲೇ ಬಗೆಹರಿಸಬೇಕೆಂದೂ ಸೇನಾಕಾರ್ಯಾಚರಣೆಯ ಮುನ್ನಾದಿನ ರದ್ದುಪಡಿಸಲಾದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಪುನಃ ಕೊಡಬೇಕೆಂದೂ ಅವರು ಒತ್ತಾಯಿಸಿದ್ದಾರೆ.

ಲಾಹೋರಿನಲ್ಲೂ ಇದೇ ಬಗೆಯ ಪ್ರದರ್ಶನಗಳು ನಡೆದುವೆಂದು ಹೇಳಲಾಗಿದೆ. ಪ್ರದರ್ಶನಕಾರರನ್ನು ಚದುರಿಸಲು ದಂಡಿನ ಆಡಳಿತಗಾರರು ಗುಂಡುಹಾರಿಸಿದರೆಂದೂ ಅನೇಕರು ಮರಣಹೊಂದಿದರೆಂದೂ ಗೊತ್ತಾಗಿದೆ. ಕರಾಚಿಗೂ ಈ ಅಶಾಂತಿಯ ಬಿಸಿ ತಗುಲಿದೆ ಈ ನಗರದ ಅನೇಕ, ಭಾಗಗಳಲ್ಲಿ ಪ್ರಕ್ಷುಬ್ಧತೆ ಕಂಡುಬರುತ್ತಿದೆ. ಪತ್ರಿಕೆಗಳ ಮೇಲೆ ದಂಡಿನಾಡಳಿತಗಾರರ ಬಲವಾದ ನಿಯಂತ್ರಣವಿರುವುದರಿಂದ ಅವು ಈ ಘಟನೆಗಳ ಸಂಕ್ಷಿಪ್ತವಾದ ವರದಿಗಳನ್ನು ಪ್ರಕಟಿಸಿವೆ. ಕರಾಚಿ ನಗರದಲ್ಲಿ ಅನೇಕ ಕಡೆಗಳಲ್ಲಿ ಕರ್ಫ್ಯೂವಿಧಿಸಲಾಯಿತೆಂಬುದು ಗಲಭೆಯ ಭೀಕರತೆಯನ್ನು ಎತ್ತಿ ತೋರಿಸುತ್ತಿದೆ ಕ್ರಮೇಣ ಈ ಅಶಾಂತತೆ ಇಡೀ ಪಾಕಿಸ್ತಾನವನ್ನು ಆವರಿಸುವ ಸಂಭವವಿದೆ.

ದೈನಂದಿನ ಕೆಲಸಕಾರ್ಯಗಳಿಗೆ ಅಡಚಣೆ ಒಡ್ಡುವವರನ್ನು ಗುಂಡಿಕ್ಕಿ ಕೊಲ್ಲಲಾಗುವುದೆಂದು ದಂಡಿನ ಆಡಳಿತಗಾರರು ಬೆದರಿಕೆ ಹಾಕುತ್ತಲೇ ಇದ್ದಾರೆ. ಈ ಎಲ್ಲಾ ಘಟನೆಗಳು ಪರಿಸ್ಥಿತಿಯ ತೀವ್ರತೆಯನ್ನು ಅದೂ ಪಾಕ್ ಆಡಳಿತಗಾರರಿಗೆ ಪ್ರತಿಕೂಲವಾಗಿದೆ, ಎಂಬುದನ್ನೂ ಜಗಜ್ಜಾಹೀರು ಮಾಡಿವೆ. ಪೂರ್ವಬಂಗಾಳದಲ್ಲಿ ನಡೆದಿರುವ ದಂಡಿನ ಕಾರ್ಯಾಚರಣೆಗೆ ಪಶ್ಚಿಮ ಪಾಕಿಸ್ತಾನಿನ ಪ್ರಜೆಗಳು ಬೆಂಬಲ ನೀಡಿಲ್ಲವೆಂಬುದನ್ನು ಈ ಘಟನೆಗಳು ಸ್ಪಷ್ಟಪಡಿಸಿವೆ. ದಂಡಿನ ಪ್ರಭುಗಳ ಈ ದುಸ್ಸಾಹಸ ಪ್ರಜಾಪ್ರಭುತ್ವದ ಅವಕಾಶವನ್ನು ಮಣ್ಣುಪಾಲು ಮಾಡಿದೆಯೆಂದೂ ಪಾಕ್ ಪ್ರಜೆಗಳಿಗೆ ಮನದಟ್ಟಾಗಿದೆ.

● ●

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ-ರೂ. 1 50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪ್ರವಾಸಿಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit **ಫೋನ್: 77**

HOTEL SHIVAPRASAD

High Class Boarding, Lodging & Restaurant

COONDAPUR, S. K.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

NAVAYUGA 29-4-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಪ್ರಚ್ಛನ್ನ ಸಮರ

(ಒಂದನೇ ಪುಟದಿಂದ)

ಯನ್ನೋಡಿಸಿದನು. ಅವರ ಶಸ್ತ್ರಾಸ್ತ್ರಗಳನ್ನು ವಾಹನಗಳಿಗೆ ತುಂಬಿದನು. ಸೈನಿಕರು ವಿದೂರಥ ನಗರವನ್ನು ಹೊಕ್ಕು ಲೂಟಿ-ಕೊಲೆಗೆ ತೊಡಗಿದರು. "ನಿರ್ಬಲರನ್ನು ಪೀಡಿಸುವುದು ಮಹಾಪಾಪ, ನಮ್ಮ ರಾಜನೇನೋ ಸತ್ತನು; ಆದರೆ, ದೇವರಿಗಾದರೂ ಹೆದರು. ನಮ್ಮ ಮೇಲೆ ಅತ್ಯಾಚಾರವೆಸಗಬೇಡ, ದಯೆದೋರು" ಎಂದು ನಿರೀಹ ನಾಗರಿಕರು ಓಡುತ್ತ ಕೂಗಾಡುತ್ತಿದ್ದರು. ಹೀಗೆ ಕೂಗಾಡುತ್ತಿದ್ದವರಲ್ಲೇ ಹಲವರು ತಮಗಿಂತ ನಿರ್ಬಲರನ್ನು ಲೂಟಿ ಮಾಡುತ್ತಿದ್ದರು. ಲೂಟಿಯ ಮಾಲು ಹೊತ್ತು ನಡೆಯುತ್ತಿದ್ದ ಸೈನಿಕರು ತಮ್ಮ ಅಳಿದುಳಿದ ವಸ್ತು-ಒಡವೆಗಳನ್ನು ಅಡಗಿಸಿ ಒಯ್ಯುತ್ತಿದ್ದ ನಾಗರಿಕರನ್ನು ದರೋಡೆಕೋರರೆಂದು ಹಿಂಸಿಸುತ್ತಿದ್ದರು.

ವಿದೂರಥನ ರಾಣಿಯರು ಸೆರೆಸಿಗುವ ಭಯದಿಂದ ಆಶ್ರಯವರಸ ಹೋದರು. ಈ ವರೆಗೆ ಸ್ವಾಗತಕ್ಕಾಗಿ ತೆರೆಯುತ್ತಿದ್ದ ಬಾಗಿಲುಗಳೀಗ ಅವರಿಗೆ ಮುಚ್ಚಿದುವು. ರಾಣಿಯರು ಓಡ ತೊಡಗಿದರು. ನಗರ ಅರಾಜಕವಾಗಿತ್ತು. ಸೈನಿಕರೂ ಲೂಟಿಗಾರರು ಮನೆ ಮನೆಯನ್ನೂ ಲೂಟಿ ಮಾಡಿದರು. ಸಿಂಧು ರಾಜನು ಶಾಂತಿ ಸ್ಥಾಪಿಸಲೆಂದು ಸೈನ್ಯವನ್ನಟ್ಟಿದನು. ಅದರಿಂದ ಹೆದರಿದ ಲೂಟಿಗಾರರು ಅಡಗುವ ಭಯದಿಂದ ಒಡವೆ ವಸ್ತುಗಳನ್ನು ಎಲ್ಲೆಲ್ಲೋ ಚೆಲ್ಲಿದರು. ಅವನ್ನು ಸರಕಾರಿ ವಸ್ತುಗಳೆಂದು ಬೊಕ್ಕಸಕ್ಕೆ ಸೇರಿಸಲಾಯ್ತು.

ವಿಜಯೀ ಸಿಂಧುರಾಜನು ತನ್ನ ರಾಣಿಯರೊಂದಿಗೆ ನಗರಕ್ಕಾಗಮಿಸಿ, ಅದನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ ಘೋಷಣೆ ಮಾಡಿದನು. ಅಳಿದುಳಿದ ನಾಗರಿಕರು ಹೊಸ ರಾಜನಿಗೆ ವಿಧೇಯರಿರುವುದಾಗಿ ಪ್ರತಿಜ್ಞೆ ಮಾಡಿದರು. ಮೊದಲಿನ ರಾಜನ ಭಕ್ತರಲ್ಲಿ ಕೆಲವರು ಮನೆಮಾರು ಬಿಟ್ಟು ಪ್ರಾಣ ಭಯದಿಂದ ಓಡಿ ಹೋದರು. ವಿದೂರಥನ ಬಲಗೈ ಬಂಟರೆಂದು ಹೇಳಲಾದ ಹಲವರನ್ನು ಹಿಡಿದು ಗಲ್ಲಿಗೇರಿಸಲಾಯ್ತು. ವಿದೂರಥನು ಸೆರೆಹಿಡಿದಿದ್ದ ಸಿಂಧುರಾಜನ ಸೈನಿಕರಿಗೆ ಮುಕ್ತಿ ದೊರೆಯಿತು. ವಿಸ್ತಾರವಾದ ಜಹಗೀರು ಸಿಕ್ಕಿತು.

ಎರಡೂ ದೇಶಗಳಲ್ಲಿ ಮುದುಕರು, ಮಕ್ಕಳು ಮತ್ತು ವಿಧವೆಯರು ಮಾತ್ರ ಉಳಿದರು. ವ್ಯವಹಾರವೆಲ್ಲವೂ ಸ್ತಬ್ಧವಾಗಿ ಹೋಗಿತ್ತು. ಗೆದ್ದ ದೇಶದಲ್ಲಿ ಭಯಾನಕ ರೋಗ ಹರಡಿತ್ತು. ಹಸಿವೆಯಿಂದ ಜನ ಸತ್ತಿತು. ಸಿಂಧುರಾಜನು ಯುದ್ಧದಲ್ಲಿ ಧನ-ಕನಕಾದಿಗಳೆಗೆರವಾದದ್ದರಿಂದ ನಿಸ್ಸತ್ವನಾಗಿದ್ದನು. ಆತನು ದುರ್ಬಲನೆಂಬುದನ್ನು ಮನವರಿಕೆ ಮಾಡಿಕೊಂಡ ನೆರೆಯ ಇಬ್ಬರು ರಾಜರು ಇಕ್ಕಡೆಯಿಂದ ನುಗ್ಗಿ ಬಂದರು, ಅವನನ್ನು ಸೆರೆಹಿಡಿದರು. ಅವನೆರಡು ದೇಶಗಳನ್ನೂ ತಂತಮ್ಮಲ್ಲಿ ಹಂಚಿಕೊಂಡರು. ಈಗ ಈ 'ಇಬ್ಬರಲ್ಲಿ ಈರ್ಷ್ಯೆ ಮೂಡಿತು. ಒಬ್ಬರು ಇನ್ನೊಬ್ಬರ ಬಗೆಗೆ ಒಳಗೊಳಗೇ ಉರಿಯತೊಡಗಿದರು. ಒಬ್ಬರಿನ್ನೊಬ್ಬರನ್ನು ನೆಲಸಮ ಮಾಡುವ ಆವಕಾಶವನ್ನು ನಿರೀಕ್ಷಿಸತೊಡಗಿದರು....

●●

ಬ್ಯಾಂಕಿಂಗ್ ಸಂಸ್ಥೆಗಳ ಧ್ರುವತಾರೆ

ಸಿಂಡಿಕೇಟ್ ಬ್ಯಾಂಕ್

ಶ್ರೀ

೧೯೭೦ನೆ ವರ್ಷಕ್ಕೆ ಸಂಬಂಧಿಸಿದ ಸಾಲ—ಮೂಲ. ಮತ್ತು ಲಾಭ ನಷ್ಟಗಳ ಲೆಕ್ಕ ಪತ್ರಗಳನ್ನು ಗಮನಿಸಿದಾಗ ಸಿಂಡಿಕೇಟ್ ಬ್ಯಾಂಕ್ ತನ್ನ ಹಿಂದಿನ ಪರಂಪರೆಯಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟದೆಯೆಂದು ಗೊತ್ತಾಗುತ್ತದೆ. ೧೯೬೯ನೆಯ ಜುಲೈ ೧೯ರಿಂದ ರಾಷ್ಟ್ರೀಕರಣಕ್ಕೊಳಗಾದ ಬ್ಯಾಂಕು ತನ್ನ ಹೊಸ ಸ್ವರೂಪದಲ್ಲಿಯೂ ಜನಸೇವಾ ದೀಕ್ಷೆಯಿಂದ ಹಿಂದೆಗೆಯದೆ ಮುಂದುವರಿದುದು ಗೋಚರವಾಗುತ್ತದೆ.

೧೯೬೯ನೆಯ ವರ್ಷದಲ್ಲಿ ಬ್ಯಾಂಕು ಮುಟ್ಟಿದ ಮೈಲಿಗಲ್ಲುಗಳು ಇವು-ಒಟ್ಟು ಠೇವಣಾತಿ ರೂ. ೧೪೫ ಕೋಟಿ. ಇದು ಹಿಂದಿನ ವರ್ಷಕ್ಕಿಂತ ಸೇ. ೩೩ರಷ್ಟು ಹೆಚ್ಚು. ಹೊರಗೆ ನೀಡಿದ ಒಟ್ಟು ಸಾಲ ರೂ. ೧೦೫ ಕೋಟಿ. ಇದು ಹಿಂದಿನ ವರ್ಷಕ್ಕಿಂತ ಸೇ. ೩೫ರಷ್ಟು ಹೆಚ್ಚು. ಠೇವಣಾತಿ ಮತ್ತು ಸಾಲಗಳಿಗಿರುವ ಪ್ರಮಾಣ ನೂರಕ್ಕೆ ಎಪ್ಪತ್ತೆರಡು. ನೀಡಿದ ಸಾಲಗಳಲ್ಲಿ ಸೇ. ೭೮ರಷ್ಟು ಸುಭದ್ರವಾದುವು. ಬ್ಯಾಂಕಿನ ಒಟ್ಟು ಬಂಡವಾಳವು ೧೪೨ ಲಕ್ಷ ತಲುಪಿದ್ದು ಕಾಯ್ದಿಟ್ಟ ನಿಧಿಯು ೧೫೬ ಲಕ್ಷವಿದೆ. ಇದು ಬ್ಯಾಂಕಿಂಗ್ ವ್ಯವಹಾರದ ಭದ್ರತೆಯ ದ್ಯೋತಕ.

೧೯೬೯ರ ಜುಲೈ ೧೯ರ ತನಕದ ವ್ಯವಹಾರದಲ್ಲಿ ಬ್ಯಾಂಕು ರೂ. ೧೬ ಲಕ್ಷದಷ್ಟು ಆನಂತರ ವರ್ಷಾಂತ್ಯದ ವರೆಗಿನ ವ್ಯವಹಾರದಲ್ಲಿ ರೂ. ೧೩ ಲಕ್ಷ ಲಾಭವನ್ನು ಗಳಿಸಿದೆ. ಹಿಂದಿನ ವರ್ಷದೊಡನೆ ಹೋಲಿಸುವಾಗ ಲಾಭಾಂಶದ ಪ್ರಮಾಣ ಕಡಮೆಯೆಂದೆನಿಸಿದರೂ ನೌಕರರ ಗ್ರಾಚುವಿಟಲಯೆಬಿಲಿಟಿಗೆ ಬೇಕಷ್ಟು ಸೌಲಭ್ಯ ನೀಡಿದ್ದು ನೌಕರರಿಗೆ ನೀಡಬೇಕಾದ ಬೋನಸ್ಸಿನಲ್ಲಿ ಹೆಚ್ಚಳವಾದದ್ದು-ಈ ಮೊದಲಾದ ವಸ್ತುಸ್ಥಿತಿಗಳಿಂದ ಸಮಾಧಾನಕರ.

೧೯೬೯ರಲ್ಲಿ ಬ್ಯಾಂಕು ೧೦೧ ಶಾಖೆಗಳನ್ನು ಹೊಸತಾಗಿ ತೆರೆಯಿತು—ಇವುಗಳಲ್ಲಿ ೫೨ ಗ್ರಾಮೀಣ ಪ್ರದೇಶಗಳಲ್ಲಿ. ೧೯೭೦ರಲ್ಲಿ ಇನ್ನೂ ೧೦೬ ಶಾಖೆಗಳನ್ನು ತೆರೆದ ಬ್ಯಾಂಕು ೩೧-೧೨-೭೦ರಂದು ೪೬೦ ಶಾಖಾ ಸಮುದಾಯ ಹೊಂದಿದೆ. ಇವುಗಳಲ್ಲಿ ೧೭೪ ಗ್ರಾಮೀಣ ಪ್ರದೇಶಗಳಲ್ಲಿ, ೧೬೨ ಪಟ್ಟಣ ಪ್ರದೇಶಗಳಲ್ಲಿ ಮತ್ತು ೧೨೬ ನಗರ ಪ್ರದೇಶಗಳಲ್ಲಿವೆ. ಬ್ಯಾಂಕಿಂಗ್ ಸೌಕರ್ಯಗಳಿಲ್ಲದ ಸ್ಥಳಗಳನ್ನೇ ಹೆಚ್ಚಾಗಿ ಆರಿಸಿ ಅಲ್ಲಿನ ನಾಗರಿಕರಲ್ಲಿ ಬ್ಯಾಂಕಿಂಗ್ ಹವ್ಯಾಸವನ್ನು ಹುಟ್ಟಿಸುವ ತನ್ನ ಅಭಿರುಚಿಯನ್ನು ಸಿಂಡಿಕೇಟ್ ಬ್ಯಾಂಕು ಮುಂದುವರಿಸಿಕೊಂಡು ಬಂದಿದೆ.

ಬ್ಯಾಂಕು ನೀಡಿದ ಸಾಲಗಳಾದರೂ ಚಿಕ್ಕ ಮತ್ತು ಮಧ್ಯಮ ಪ್ರಮಾಣದವುಗಳೇ. ರೂ. ೧೦ ಸಾವಿರಕ್ಕೆ ಮಿಕ್ಕಿದ ಸಾಲಗಳು ೧೨ ಸಾವಿರ-ಅಂದರೆ ಸೇ. ೪ರಷ್ಟು ಮಾತ್ರ. ರೂ. ೧೦೦ರಿಂದ ೧೦೦೦ದವರೆಗಿನವು ೧೬೨ ಸಾವಿರ. ಅಂದರೆ ಸೇ. ೫೪ರಷ್ಟು ಕೃಷಿಕರು, ಇಂಜಿನಿಯರು, ವೈದ್ಯರು, ವಿದ್ಯಾರ್ಥಿಗಳು, ಸ್ವತಂತ್ರ ಉದ್ಯೋಗಿಗಳು-ಹೀಗೆ ಜೀವನದ ನೂರಾರು ರಂಗಗಳಲ್ಲಿ ದುಡಿಯುವ ಸಾವಿರಾರು ವ್ಯಕ್ತಿಗಳ ಆವಶ್ಯಕತೆಗಳನ್ನು ಬ್ಯಾಂಕು ಪೂರಯ್ಸುತ್ತ ಬಂದಿದೆ. ಚಿಕ್ಕ ಕೈಗಾರಿಕೆಗಳನ್ನೂ ರೈತರನ್ನೂ ಇದೆಂದೂ ಮರೆತುದಿಲ್ಲ.

ಹಲವಾರು ರೀತಿಯ ಚಿಕ್ಕ ದೊಡ್ಡ ಉಳಿತಾಯ ಯೋಜನೆಗಳು, ಸಾಲ ಸೌಕರ್ಯಗಳು ಸಿಂಡಿಕೇಟಿನ ಆಜನ್ಮ ಗುಣ. ಇದರಂತೆ ಬ್ಯಾಂಕು ದೇಶದ ೧೬ ಜಿಲ್ಲೆಗಳಿಗೆ ಮಾರ್ಗದರ್ಶಿಯೆಂದು ನಿಯುಕ್ತವಾಗಿದೆ. ಈ ಜಿಲ್ಲೆಗಳ ಸರ್ವೆ ಕಾರ್ಯವನ್ನು ಬ್ಯಾಂಕು ತೊಡಗಿದೆ. ಇವುಗಳಲ್ಲಿ ಆಂಧ್ರದ ೪, ಹರಿಯಾನದ ೧, ಕೇರಳದ ೧, ಮೈಸೂರಿನ ೬, ಉತ್ತರ ಪ್ರದೇಶದ ೩ ಮತ್ತು ಲಕ್ಕದಿವಿ ದ್ವೀಪಗಳು ಸೇರಿವೆ.

೧೯೬೯ರ ಆರಂಭದಲ್ಲಿ ಬ್ಯಾಂಕಿನ ಅಧ್ಯಕ್ಷರಾಗಿದ್ದ ಶ್ರೀ ಟಿ. ಎ. ಪೈಯವರು ಮುಂದೆ ಕಸ್ಟೋಡಿಯನ್ನರಾದರು. ಕಾಲುಶತಮಾನಕ್ಕೂ ಮಿಕ್ಕಿ ಬ್ಯಾಂಕಿನ ಅಭಿವೃದ್ಧಿಗಾಗಿ ಜೀವನ ಮುಡುಪಿಟ್ಟ ಇವರ ಶ್ರಮ, ಪೂರ್ವ ಪರಂಪರೆ, ನೌಕರ-ಸಾರ್ವಜನಿಕರ ಸಹಕಾರಗಳ ಹೆಮ್ಮರವಾಗಿ ಬ್ಯಾಂಕು ಬೆಳೆದಿದೆ. ೧೯೭೦ರ ಆರಂಭದಲ್ಲಿ ಅವರು ಜೀವವಿಮಾ ಕಾರ್ಪರೇಶನ್ನಿನ ಅಧ್ಯಕ್ಷರಾಗಿ ಹೋದುದರಿಂದ ಅವರ ಹೆಗಲಿಗೆ ಹೆಗಲಿತ್ತು ದುಡಿದ ಶ್ರೀ ಕೆ. ಕೆ. ಪೈಯವರು ಕಸ್ಟೋಡಿಯನ್ನರಾದರು. ಶ್ರೀ ಕೆ. ಕೆ. ಪೈಯವರ ಮುಂದಾಳುತನ, ದೂರದರ್ಶಿತೆ, ದಕ್ಷ ಆಡಳಿತೆಯಲ್ಲಿ ಬ್ಯಾಂಕು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿಯೇ ಅಗ್ರಗಾಮಿಯಾಗಬಲ್ಲುದು. ಜನರಲ್ ಮೆನೇಜರ್ ಶ್ರೀ ಎಚ್. ಎನ್. ಪೈ ಮತ್ತಿತರ ಸಿಬ್ಬಂಧಿ ವರ್ಗದ ಸಹಕಾರ ಅವರಿಗೆ ಸದಾ ಸಿದ್ಧವಿದೆ. ರಾಷ್ಟ್ರೀಕರಣಕ್ಕೆ ಮೊದಲೇ ರಾಷ್ಟ್ರೀಯ ದೃಷ್ಟಿಯಿಂದ ದುಡಿಯುತ್ತಿದ್ದ ಸಿಂಡಿಕೇಟ್ ಬ್ಯಾಂಕ್ ಭಾರತೀಯ ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಧ್ರುವತಾರೆಯಾಗಿ ನಿಲ್ಲುವುದು ಸಹಜವೇ.

●●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 34

NAVAYUGA

6—5—1971

ಮೌನಂ ಸರ್ವಾರ್ಥ ಸಾಧನಂ

ಮೌನವೆಂದರೇನು? ಮುನೇರ್ಭಾವ ಇತಿ ಮೌನಮುಸ್ತ್ಯಸ್ತ್ರೀತಿ. ಕ್ಲೀಯಿಂದ ಮೌನ ಉತ್ಪನ್ನವಾಗಿದೆಯೆಂದು ನಿಘಂಟು ಹೇಳುತ್ತದೆ. ಮಾತಿಲ್ಲದಿರುವಿಕೆ, ಮಾತಾಡದಿರುವಿಕೆ, ಸದ್ದಿಲ್ಲದಿರುವಿಕೆ, ಮುನಿಸುಗುಡುವಿಕೆ ಎಂದು ಈ ಶಬ್ದ ಅರ್ಥ ಹೇಳುತ್ತದೆ. (ಸಚಿತ್ರ ಕಸ್ತೂರಿ ಕೋಶ ಪು. ೬೬೭). 'ಮುನಿ' ಶಬ್ದಕ್ಕೆ 'ಅಣ' ಪತ್ಯಯವು ಸೇರಿದಾಗ 'ಮೌನ' ರೂಪವಾಗುವುದರಿಂದ 'ಮುನಿ' ಶಬ್ದದಿಂದಲೇ 'ಮೌನ' ಶಬ್ದ ಉತ್ಪತ್ತಿಯಾಯಿತು. 'ಮೌನ' ಶಬ್ದವನ್ನು ಮೊದಮೊದಲಿಗೆ ಮುನಿಗಳ ಆಚರಣೆಗೇ ಬಳಸುತ್ತಿದ್ದರು. ಮುನಿಗಳ ತಪಃ ಪ್ರಧಾನ ಜೀವನ ಶಾಂತಿ ಪೂರ್ವಕವಾಗಿರುತಿತ್ತು; ಅವರು ವಾಕ್ ಸಂಯಮ, ಏಕಾಂತವಾಸ ನಿರತರಾಗಿರುತಿದ್ದರು ಕಾಲಕ್ರಮೇಣ 'ಮಾತಿಲ್ಲದಿರುವುದು' ಎಂಬುದೇ 'ಮೌನ' ಶಬ್ದದ ಅರ್ಥವಾಗಿ ಪರಿಣಮಿಸಿತು. ಅರ್ಥ ವಿಕಾಸ ನಿಯಮಾನುಸಾರ ಇಲ್ಲಿ ಅರ್ಥಾದೇಶವಾಯಿತು. ಕೆಲವೆಡೆ ಮೌನವು ಸ್ವೀಕೃತಿ ಎಂಬರ್ಥ ನೀಡುವುದೂ ಉಂಟು. ಉದಾಃ 'ಮೌನಂ ಸ್ವೀಕೃತಿ ಸೂಚನಮ್'.

ಮಾತು ಹೊರಡದೆ ಇರುವ ಲಕ್ಷಣವಷ್ಟೇ ತಾತ್ವಿಕ ದೃಷ್ಟಿಯಿಂದ 'ಮೌನ'ಕ್ಕೆ ಸಾಲದು. ಮುನಿಗಳು ಏಕಾಂತಚಿತ್ತರಾಗಿ ತಪಸ್ಸು ಗೈಯ್ಯುತಿದ್ದರು. ಆಗ ಅವರ ಮನಸ್ಸೂ ಮೌನವಿರುತಿತ್ತು. ಮೂಲಾರ್ಥದಲ್ಲಿ ಮೌನ ಶಬ್ದವು ಮಾನಸಿಕ ಮೌನವೆಂಬರ್ಥವನ್ನೂ ಒಳಗೊಂಡಿತ್ತು. ಮನೋವೈಜ್ಞಾನಿಕ ದೃಷ್ಟಿಯಿಂದ ಮನಸ್ಸು ಮೌನವಾಗಿರುವುದು ಅಥವಾ ಅಲ್ಪಕಾಲವಾದರೂ ಸುಮ್ಮನಿರುವುದು ವಿಚಾರಣೀಯಾಂಶ. ಸಾಮಾನ್ಯವಾಗಿ ಮನಸ್ಸು ನಿಷ್ಕ್ರಿಯವಾಗಿರುವುದಿಲ್ಲವೆಂಬುದೇ ಸಿದ್ಧಾಂತ. ಸಕ್ರಿಯ ಮಾನಸಿಕ ಸ್ಥಿತಿಯಲ್ಲಿ, ಕರ್ಮೇಂದ್ರಿಯ ವ್ಯಾಪಾರರಹಿತವಾಗಿರುವಾಗ, ವಿಧೇಯಾತ್ಮಕ ಸಂಕಲ್ಪ ಸದಾ ಶ್ರೇಷ್ಠವೆಂದು ತಿಳಿಯಲ್ಪಡುತ್ತದೆ; ನಿಷೇಧಾತ್ಮಕವಲ್ಲ. ಚಂಚಲ ಮನಸ್ಸು ದುರ್ವಿಚಾರಗಳತ್ತ ಹೊರಳುವುದು ಸಹಜ. ಆದುದರಿಂದಲೇ ದಾಸರು ಮನವನ್ನು ಮರ್ಕಟನಿಗೆ ಹೋಲಿಸಿದ್ದಾರೆ. ಋಷಿಗಳು...'ತನ್ಮೇ ಮನಃ ಶಿವಸಂಕಲ್ಪಮಸ್ತು' ಎಂದು ಪ್ರಾರ್ಥಿಸಿ ಮನಸ್ಸನ್ನು ಶುಭಕಾರ್ಯಗಳತ್ತ ಪ್ರವೃತ್ತಗೊಳಿಸುವ ಪ್ರಾರ್ಥನೆ ಮಾಡಿದ್ದಾರೆ. ಭಗವಾನ್ ಶ್ರೀಕೃಷ್ಣನು ಮೌನವನ್ನು 'ಮಾನಸಿಕ ತಪಸ್ಸು' ಎಂದು ಗೀತೆಯಲ್ಲಿ ಹೇಳಿದ್ದಾನೆ. ಅದನ್ನು ಮಾತಿನ (ವಾಕ್)ತಪಸ್ಸೆಂದು ಕರೆಯಲಿಲ್ಲ. (ಮನಃ ಪ್ರಸಾದಃ ಸೌಮ್ಯತ್ವಂ ಮೌನಮಾತ್ಮ ವಿಗ್ರಹಃ| ಭಾವ ಸಂಶುದ್ಧಿರಿತ್ಯೇತತ್ತಪೋ ಮಾನಸಮುಚ್ಯತೇ|| ಗೀತೆ ೧೭–೧೬)

ವಾಕ್ ತಪದಲ್ಲಿ 'ಸತ್ಯ ಪ್ರಿಯಂ ಹಿತಂ' ವಾಕ್ಯಕ್ಕೆ ಮನ್ನಣೆಯಿದೆ. ಶರೀರ ಅಥವಾ ಮಾತುಗಳಿಗಿಂತ ಮನಸ್ಸು ಸೂಕ್ಷ್ಮತರವಾದುದು; ಮಹಾನಾದುದು. ಆದುದರಿಂದ 'ಮಾನಸ ತಪವಾದ ಮೌನವೂ ಶ್ರೇಷ್ಠ, ಗುಹ್ಯ ಮತ್ತು ಮಹಾನ್. ಸಾಮಾನ್ಯ ದೃಷ್ಟಿಯಿಂದ ಮಾತು ಹೊರಡಿಸದಿರುವುದು 'ಮೌನ'ವಾಗುವುದಿಲ್ಲ. ಅಂತಹ ಶಕ್ತಿಯಿಲ್ಲದವನು ಮೂಕನಾಗುತ್ತಾನೆ. ಸಾಭಿಪ್ರಾಯ ಮತ್ತು ಸ್ವೇಚ್ಛಿತ ವಿಧಾನಗಳಿಂದ ಮಾತನಾಡದಿರುವುದು ಮೌನದ ಅರ್ಥವ್ಯಾಪ್ತಿಯಲ್ಲಿ ಬರಬಲ್ಲದು.

ಪಾತ್ರಃ ಕಾಲ, ಸ್ಥಾನ ಮೊದಲಾದ ದೃಷ್ಟಿಗಳಿಂದ ಮೌನದ ಇತರ ಸ್ತರಗಳನ್ನು ತಿಳಿಯಬಹುದು. ಮಗುವಿನ ಮೌನ ಹೇಡಿ, ಮೂರ್ಖ, ಮೂಕ, ಗುಮ್ಮ ಮೊದಲಾದ ವಿಶೇಷಣಗಳನ್ನು ಅದಕ್ಕೆ ತಂದುಕೊಡಬಹುದು. ಅದೇ ಮೌನವು ಮೂರ್ಖ ವಯೋವೃದ್ಧರಲ್ಲಿ 'ಗಂಭೀರತೆ'ಯನ್ನು ಮೂಡಿಸಬಲ್ಲುದು. ಪ್ರಜಾಪ್ರಭುತ್ವ ಯುಗದಲ್ಲಿ ನಾಲಗೆ ಸಡಿಲುಬಿಡದಿದ್ದವನನ್ನು ಯಾರು ಕೇಳುತ್ತಾರೆ?

ಸ್ವಾಭಾವಿಕವಾಗಿ ಅಲ್ಪಭಾಷಿಯಾದವನು ಮನೋವೈಜ್ಞಾನಿಕ ದೃಷ್ಟಿಯಲ್ಲಿ ಅಂತರ್ಮುಖೀ ವ್ಯಕ್ತಿತ್ವ ಹೊಂದಿದವನೆನಿಸುತ್ತಾನೆ. ಭಾರತೀಯ ವಿಚಾರಕರು ಮೌನದ ಆಗತ್ಯವನ್ನು ಬಹಳಷ್ಟು ಹಿಂದೆಯೇ ಕಂಡುಕೊಂಡಿದ್ದರು. ಆದುದರಿಂದಲೇ ಹಲವಾರು ಕಾಲವಿಶೇಷ ಮತ್ತು ಕ್ರಿಯಾ ವಿಶೇಷಗಳಲ್ಲಿ "ಮೌನವ್ರತ"ಕ್ಕೂ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. (ಉಚ್ಚಾರೇ ಮೈಥುನೇ ಚೈವ ಪ್ರಸ್ರಾವೇ ದಂತಧಾವನೇ ಸ್ನಾನೇ ಭೋಜನಕಾಲೇ ಚ ಷಟ್ಸು ಮೌನಂ ಸಮಾಚರೇತ್||

ಮೌನಕ್ಕೂ ಚರಿತ್ರಕ್ಕೂ ನಿಕಟ ಸಂಬಂಧವಿದೆ. ಮೌನಿಯು ಸರ್ವ ಸಾಮಾನ್ಯವಾಗಿ ಗಂಭೀರನಾಗಿರುತ್ತಾನೆ. ಗಂಭೀರತೆಯಲ್ಲಿ ಚಾಟುತನಕ್ಕೆ ಸ್ಥಾನವಿಲ್ಲ. ಧೈರ್ಯ ಗಂಭೀರತೆಯ ಸಹೋದರ. ಗಂಭೀರತೆಯು ಜ್ಞಾನೋತ್ಪನ್ನ. ಮೌನ ಜ್ಞಾನಾಶ್ರಿತ. ಅರೆದುಂಬಿದ ಗಡಿಗೆ ತುಳುಕುತ್ತದೆ. ತುಂಬಿದ ಬಿಂದಿಗೆ ತುಳುಕುವುದಿಲ್ಲ. ಇಂದಿಗೂ ಭಾರತೀಯರಲ್ಲಿ ಕೆಲವರಾದರೂ ಶೌಚಾದಿ ಷಟ್ಕರ್ಮಗಳ ವೇಳೆ ಮೌನವ್ರತವನ್ನಾಚರಿಸುತ್ತಿದ್ದಾರೆ. ಇದರಲ್ಲಿ ಎಷ್ಟರ ಮಟ್ಟಿಗೆ ವೈಜ್ಞಾನಿಕತೆಯಿದೆಯೆಂದು ಆಳವಾಗಿ ಪರಿಶೋಧಿಸಬೇಕಷ್ಟೆ.

ಶಾಂತಿ ಪ್ರಿಯ ಅಧ್ಯಾತ್ಮೋನ್ಮುಖಿ ವ್ಯಕ್ತಿಗಳಿಗೆ ವಾಸ್ತವಿಕ ಮೌನವು ಸತ್ಪಥ ಎಂಬುದು ಸರಿ. ಆದರೆ, ಇಂದಿನ ವ್ಯಸ್ತ ಜೀವನದಲ್ಲಿ ಮೌನವು ಅಂತಹ ಸಾಧನವೆಂಬುದು ಸರಿಯಾಗದು. ಮಿತಭಾಷಿಯಾಗಿರುವುದು ಒಳ್ಳೆಯದು, ವಾಚಾಲನಿಂದ ಎಲ್ಲರೂ ಅಪಾಯಭೀತರಾಗುತ್ತಾರೆ. ಸಾಂಸಾರಿಕ ವ್ಯಾಪಾರಗಳಲ್ಲಿ ಮೌನದಿಂದ ಸಫಲತೆಯ ಬದಲಿಗೆ ಹಾನಿಯೂ ಆಗಬಹುದು; ಆದರೆ, ಕಾರ್ಯ ವಿಶೇಷಗಳಲ್ಲಿ ಚಿಪಾವಣೆಯಿಂದ ಅಭೀಷ್ಟ ಸಂಪಾದನೆಯೂ ಆಗಬಹುದು. ಚಿಪಾವಣೆಯು ಮಿಥ್ಯಾರೋಪಣೆಯ ಭಾವವಿದೆಯಾದರೂ ವಸ್ತುಸ್ಥಿತಿಯ ಗೋಪನವಷ್ಟಿಲ್ಲ. 'ಗೋಪನ'ವು ಯಾವುದಕ್ಕೂ ಅನ್ವಯವಾಗುತ್ತದೆ. ಮೌನವಾದರೂ ಅಪ್ರಕಟೀಕರಣ ಗೋಪನ.

ವಸ್ತುತಃ ವೈಜ್ಞಾನಿಕತೆಗೂ ಮೌನಕ್ಕೂ ದೃಢ ಸಂಬಂಧವಿದೆ ಮಾನಸಿಕ ತಪ ಮೌನದ ಉಪಾದೇಯತೆಯ ಮೇಲೆ ವಿವೇಚನೆಗೊಳಗಾಗುತ್ತದೆ ಚಿತ್ತ ವೃತ್ತಿ ನಿರೋಧ—ಮೌನದಿಂದ ಯೋಗ ಸಾಧನೆ–ಯಾಗುತ್ತದೆ; ಇದು ಜ್ಞಾನ–ಈಶ್ವರ ಪ್ರಾಪ್ತಿಗೊಂದು ಸೋಪಾನ. ಕಡಿಮೆ ಮಾತಾಡುವುದು ಒಳ್ಳೆಯದು. ನಮ್ಮ ಪ್ರತಿ ಚಿಂತನೆ, ಉಚ್ಚಾರಣೆಯಲ್ಲಿ ಶಕ್ತಿ ವ್ಯಯವಾಗುತ್ತದೆ. ಮಾತಾಡುವುದರಿಂದ ಪ್ರಾಣಶಕ್ತಿ ಹರಣವಾಗುತ್ತದೆ. ವಾಚಾಲ ಈ ಪ್ರಾಣ ಶಕ್ತಿಯನ್ನು ಅಪವ್ಯಯ ಮಾಡುತ್ತಾನೆ. ಮಿತ ಭಾಷಿ ಮಿತವ್ಯಯಿ; ಮೌನಿ ಸಂಗ್ರಹಿಯಾಗುತ್ತಾನೆ. ಮಾತನಾಡದಿರುವುದರಿಂದ ಈ ಪ್ರಾಣಶಕ್ತಿ ಒಳಗೆ ಸಂಚಿತವಾಗಿರುತ್ತದೆ–ಅದನ್ನು ಸುನಿಯೋಜಿಸಿಟ್ಟುಕೊಂಡರೆ ಮಾತ್ರ. ಆದುದರಿಂದಲೇ ಸೈಜ ಸಾಧು—ಮುನಿಗಳ ಮಾತು ಸತ್ಯವಾಗಿ ಪರಿಣಮಿಸಿತ್ತು. ಆತ್ಮ ಸಂಕಲ್ಪದೊಡನೆ ಒಂದು ಮಾತಾಡಿ ಬಿಟ್ಟರೆ, ಸಂಚಿತ ಪ್ರಾಣ ಶಕ್ತಿ, ಸುನಿಯೋಜಿತ ಇಚ್ಛಾಶಕ್ತಿ ಮತ್ತು ಭಗವದಿಚ್ಛೆಯ ಕಾರಣದಿಂದ, ಸತ್ಯ ಸಿದ್ಧವಾಗಿ ಬಿಡುತ್ತದೆ. ಇದು ಮೌನದಲ್ಲಿ ವಿಧೇಯಾತ್ಮಕತೆಯಾಯಿತು. ಆದುದರಿಂದಲೇ ಶುಭ ಸಂಕಲ್ಪಗಳಲ್ಲಿ ವ್ಯಕ್ತಿ ತನ್ನ ಸುತ್ತ ಮತ್ತು ಶುಭ—ಶಿವ ಭಾವಗಳ ವಿದ್ಯುನ್ಮಯಿ ತರಂಗಗಳನ್ನೇ ಹಬ್ಬಿಸುತ್ತಾನೆ. ಇದರಿಂದ ವಾತಾವರಣ ಪವಿತ್ರವಾಗಿ ಅಮೂರ್ತ ಸಂಕಲ್ಪ ಕ್ರಿಯಾನ್ವಿತ ಮೂರ್ತವಾಗಿ ಪರಿಣಮಿಸುತ್ತದೆ. ವಾಚ್ಯ ಸಂವೇದನೆಗಿಂತ ಮೌನ ಸಂವೇದನೆಯು ತೀವ್ರವಾಗಿದೆ; ಶಾಬ್ದಿಕ ಆಶೀರ್ವಾದದಿಂದ ಮೌನಾಶೀರ್ವಾದವು ಅಧಿಕ ಪ್ರಭಾವಶಾಲಿಯಾಗುತ್ತದೆ. ಆಮೆ ತನ್ನ ಮೊಟ್ಟೆಗಳನ್ನು ಒಣ ಹೊಯ್ಗೆಯಲ್ಲಿ ಮುಚ್ಚಿಡುತ್ತದೆ. ಅವನ್ನು ಮುಟ್ಟಿಯಾಗಲಿ, ಅವುಗಳಿಗೆ ಕಾವು ಕೊಟ್ಟಾಗಲೀ ಬೆಳೆಸುವುದಿಲ್ಲ. ನೀರ ಬದಿಯಲ್ಲಿ ಕುಳಿತು ತನ್ನ ಸದ್ಭಾವನೆಗಳನ್ನು ಅವಕ್ಕೆ ಕಳಿಸುತ್ತದೆ. ಮೊಟ್ಟೆಗಳು ಬೆಳೆಯುತ್ತವೆ; ಮೊಟ್ಟೆಯಿಟ್ಟ ಆಮೆಯನ್ನು ಕೊಂದು ಬಿಟ್ಟರೆ, ಅದರ ಮೊಟ್ಟೆಗಳು ತಮಗೆ ತಾವಾಗಿಯೇ ಕೊಳೆತು ನಾರತೊಡಗುತ್ತವೆ. ಸದ್ಭಾವನೆಗಳ ಅಭಾವವೇ ಇದಕ್ಕೆ ಕಾರಣ. ಮೌನ ಸಹಾನುಭೂತಿ, ಸಹಾನುಭೂತಿ ಶುಭಸಂಕಲ್ಪ ಮತ್ತು ಸತ್ಯಪ್ರಿಯ ಹಿತಕರ ಮಿತಭಾಷಿತೆಗಳು ಇಂದು ಅತ್ಯಗತ್ಯ.

ಷಟ್ಕರ್ಮಗಳಲ್ಲಿ ಮೌನಾಚರಣೆಯೇಕೆ ಬೇಕೆಂಬುದು ಪರಿಶೀಲನೀಯವೇ. ಭೋಜನದ ವೇಳೆ ಮೌನ ಪಾಲನೆ ವ್ಯಾವಹಾರಿಕ ಸತ್ಯದ ಆಧಾರದಲ್ಲಿ ಬಂದಿದೆಯೆನ್ನಬಹುದು. ಶಾಂತಚಿತ್ತರೊಡನೆ ಉಂಡ ಊಟ ಅಧಿಕ ಹಿತಕಾರಕ. ಭೋಜನ ಸುತ್ತ ಕುಳಿತು ಬಾಯಿ ತುಂಬ ಮಾತಾಡಿ ನಕ್ಕು ನಲಿದು ಎಂಜಲಿಸಿಮುಕೊಂಡು ಕೈಕಾಲೊಂದು ಮಾಡಿ ತಿನ್ನುವುದರಿಂದ ಆಹಾರ ಮೂಗಿನಲಿ ಬರುವುದು ಅನ್ನನಾಳದಲ್ಲೋ ಶ್ವಾಸನಾಳದಲ್ಲೋ ಸಿಕ್ಕಿಕೊಂಡು ಪ್ರಾಣಕ್ಕೆರವಾಗುವುದೂ ಉಂಟು.

(ಸಶೇಷ)

●●

ಅಹಂಕಾರದ ಆಕ್ರಮಣ

ಬಾಹು ಸೂರ್ಯವಂಶದ ರಾಜನು. ಅವನು ಮಹಾ ಧರ್ಮಾತ್ಮನು. ತಾನು ಧರ್ಮಾನುಸಾರ ಪ್ರಜಾಪಾಲನೆ ಮಾಡುತ್ತಿದ್ದನು; ಇತರರೂ ತಂತಮ್ಮ ಧರ್ಮಪಾಲನೆ ಮಾಡುವಂತೆ ನೋಡಿಕೊಳ್ಳುತಿದ್ದನು. ಅವನು ಅಶ್ವಮೇಧಾದಿ ಹಲವು ಯಜ್ಞ ಮಾಡಿದನು; ಅನೇಕ ಗೋದಾನ ನಡೆಸಿದನು. ಪ್ರತಿನಿತ್ಯ ಬ್ರಾಹ್ಮಣರನ್ನು ಅರಮನೆಗೆ ಕರೆಸಿ, ಅನ್ನ-ವಸ್ತ್ರ-ಧನ-ಕನಕ-ವಸ್ತು-ವಾಹನಗಳನ್ನು ದಾನ ನೀಡಿ ಅವರನ್ನು ತೃಪ್ತಿಪಡಿಸುತಿದ್ದನು. ಮಹಾರಾಜ ಬಾಹುವಿನ ನ್ಯಾಯಪರತೆ ಮತ್ತು ಪ್ರಶಾಸನ ವ್ಯವಸ್ಥೆಗಳಿಂದ ಪ್ರಜಾಕೋಟಿ ಸುಪ್ರಸನ್ನವಾಗಿತ್ತು. ದೇಶವು ಸುಖಿಯಾಗಿತ್ತು, ಸಮೃದ್ಧವಾಗಿತ್ತು. ಅನ್ನಕ್ಕೆ ಅಭಾವವಿಲ್ಲ; ವಸ್ತ್ರಕ್ಕೆ ಕಡಿಮೆಯಿಲ್ಲ; ಸಂಪತ್ತಿಗೆ ಕೊರತೆಯಿಲ್ಲ; ಸುಖಕ್ಕೆ ಮಿತಿಯಿಲ್ಲ.

ತನ್ನ ನೀತಿ ನಿಪುಣತೆಯಿಂದ ಬಾಹುವು ನೆರೆರಾಜ್ಯಗಳ ಮೇಲೂ ಅಧಿಕಾರ ನಡೆಸುತಿದ್ದನು. ಆ ರಾಜ್ಯಾಧೀಶರ ತಲೆ ಮೇಲೆ ಬಾಹು ತನ್ನ ಪಾದವಿಡುತಿದ್ದನು. ಒಂದೊಮ್ಮೆ ತನ್ನ ಶಕ್ತಿ, ಬುದ್ಧಿ ಮತ್ತು ನೈಪುಣ್ಯಗಳನ್ನು ಸ್ಮರಿಸಿಕೊಂಡ ಬಾಹು ತಾನೇ ತಲೆದೂಗಿಕೊಂಡನು. ತತ್‌ಕ್ಷಣನೇ ಆತನಲ್ಲಿ ಅಹಂಕಾರವು ಮನೆಮಾಡಿತು. ಅಹಂಕಾರವೆಂಬ ಗೆದ್ದಲು ಬಾಹುವನ್ನು ಹೊಕ್ಕದ್ದೇ ತಡ, ಅದು ಆತನನ್ನೇ ತಿನ್ನತೊಡಗಿತು.

ಅಹಂಕಾರದಿಂದ ಉಬ್ಬಿದ ರಾಜನು ಹೇಳಿಕೊಳ್ಳತೊಡಗಿದನು– "ಜಗತ್ತಿಗೆಲ್ಲಾ ನಾನೇ ಮಹಾರಾಜಾಧಿರಾಜ. ಎಲ್ಲರ ಸಂರಕ್ಷಕನೂ ನಾನೇ. ನನಗಿಂತ ಶಕ್ತಿಸಂಪನ್ನರು, ಬುದ್ಧಿಸಂಪನ್ನರು, ಸಂಪತ್‌ಸಂಪನ್ನರು ಬೇರಿನ್ನಾರಿದ್ದಾರೆ? ನನ್ನ ದಾನ—ಧರ್ಮಗಳನ್ನು ಯಾರವು ಸರಿಗಟ್ಟಬಲ್ಲುವು? ಆದುದರಿಂದ ನಾನೇ ಸಂಪೂಜ್ಯ, ಅನೇಕಾನೇಕ ಯಜ್ಞಯಾಗಾದಿಗಳನ್ನು ಮಾಡಿದ ನನಗಿಂತ ಧರ್ಮಾತ್ಮರು ಯಾರೂ ಇಲ್ಲ. ಬುದ್ಧಿಶಕ್ತಿಯಿಂದಲೂ ಚಾತುರ್ಯದಿಂದಲೂ ಸೈನಿಕ ಬಲದಿಂದಲೂ ಶತ್ರುಗಳೆಲ್ಲರನ್ನೂ ನಾಮಾವಶೇಷ ಮಾಡಿದ ನನಗೆ ಸಮಾನರಾರಿಹರು? ವೇದ-ವೇದಾಂತಗಳನ್ನು ಅಧ್ಯಯನ ಮಾಡಿದ ನಾನು ಅವುಗಳಲ್ಲೂ ಅಗಾಧ ಪಾಂಡಿತ್ಯ ಸಂಪಾದಿಸಿಕೊಂಡಿರುವಾಗ, ನನ್ನನ್ನು ಕೀಳುಕಾಣುವವರು ಯಾರು? ನೀತಿಶಾಸ್ತ್ರ ಪಾರಂಗತನಾದ ನನ್ನನ್ನು ಸರಿಗಟ್ಟುವ ನೀತಿವಿದರು ಇನ್ನು ಹುಟ್ಟಬೇಕಷ್ಟೆ. ನನಗೆ ನಾನೇ ಸರಿ; ಎಲ್ಲರೂ ನನ್ನ ಮುಂದೆ ಹೀನರೇ ಸರಿ; ಸಿಂಹದ ಮುಂದೆ ನರಿ!

"ನನ್ನನ್ನೀಗ ಸೋಲಿಸಲು ಯಾರಿಗೂ ಸಾಧ್ಯವಿಲ್ಲ. ನನ್ನ ಸಂಪತ್ತಾದರೂ ಅಕ್ಷುಣ್ಣ. ಅದನ್ನು ಯಾರೂ ಕಣ್ಣೆತ್ತಿ ನೋಡಲಾರರು. ಒಂದು ವೇಳೆ ಯಾರಾದರೂ ನೋಡಿದರೆಂದರೆ, ಅವರ ಕಣ್ಣುಪಾಪೆ ಕಿತ್ತು ಅವರ ಕೈಯಲ್ಲೇ ಕೊಟ್ಟುಬಿಡುವಷ್ಟು ಎದೆಗಾರಿಕೆ ನನಗಿದೆ. ತ್ರಿಭುವನಗಳಲ್ಲಿ ನನ್ನನ್ನು ಮೀರಿ ನಿಲ್ಲುವವರು ಯಾರು?

ಬಾಹು ಮಹಾರಾಜನ ಶರೀರವನ್ನು ಅಹಂಕಾರ ಹೊಕ್ಕು ಮನೆ ಮಾಡಿತು. ಆತನ ಮನಸ್ಸಿನಲ್ಲಿ 'ಅಸೂಯೆ' ಹುಟ್ಟಿ ತನ್ನ ಸಿಂಹಾಸನವನ್ನು ಭದ್ರ ಪಡಿಸಿತು. ಇದರಿಂದ ಬಾಹುವಿಗೆ ಇತರರಲ್ಲಿರುವ ಗುಣಗಳಲ್ಲಿಯೂ ದೋಷಗಳು ಗೋಚರವಾಗ ತೊಡಗಿದವು; 'ತಾನು ಸರ್ವಜ್ಞ; ಸರ್ವಶಕ್ತಿಸಂಪನ್ನ' ಎಂಬ ಭಾವನೆಯಿಂದ 'ಇತರರೆಲ್ಲರೂ ತಿಳಿಗೇಡಿಗಳು, ನಿಶ್ಶಕ್ತರು' ಎಂಬ ಭ್ರಮೆ ಆತನನ್ನು ಕವಿಯಿತು. ಹೆಜ್ಜೆ ಹೆಜ್ಜೆಗೂ ತನ್ನ ಘನಸ್ತಿಕೆಯನ್ನು ಪ್ರದರ್ಶಿಸುವ ಉದ್ದೇಶದಿಂದಾಗಿ ಪರರನ್ನು ಉಪೇಕ್ಷೆಯಿಂದ ಕಾಣುವ, ಅವರನ್ನು ಉಪಹಾಸ ಮಾಡುವ ಚಟ ರಕ್ತಗತವಾಯ್ತು.

ಮಹಾರಾಜ ಬಾಹುವಿನ ಪರಿವರ್ತಿತ ವರ್ತನೆ ಪ್ರಜೆಗಳಿಗೆ ಹಿಡಿಸಲಿಲ್ಲ. ಅವರಿಗೆ ಆತನಲ್ಲಿದ್ದ ಭಯ-ಭಕ್ತಿ; ಗೌರವ-ಆದರಗಳು ಕಡಿಮೆಯಾಗತೊಡಗಿದುವು. ಬರಬರುತ್ತ ರಾಜನನ್ನು ಅವರು ತಿರಸ್ಕಾರದಿಂದ ಕಾಣಲಾರಂಭಿಸಿದರು. ಅವನನ್ನು ಪರಕೀಯನೆಂದು ತಿಳಿಯತೊಡಗಿದರು. ರಾಜನ ಹಿಂದಿನ ಸದ್ಗುಣಗಳನ್ನು ನೆನೆದುಕೊಂಡು ಕೆಲವರು ಸ್ವಾರ್ಥವಶರಾಗಿ ಕೆಲವರು ರಾಜದಂಡದ ಭಯದಿಂದ ಕೆಲವರು ಬಾಹುವಿನ ಕೃತಿ-ವೃತ್ತಿಗಳನ್ನು ಸಹಿಸಿ ಮೌನವಿರುತ್ತಿದ್ದರು. ಇದರಿಂದ ಮಹಾರಾಜನು ತಾನು ಮಾಡಿದ್ದು ಸರಿಯೆಂದು ತಿಳಿಯತೊಡಗಿದನು; ತನ್ನ ಅಹಂಕಾರವನ್ನು ಸಂತುಷ್ಟಗೊಳಿಸಲು ಮತ್ತಷ್ಟು ನಿರಂಕುಶನಾಗುತ್ತಿದ್ದನು. ಸ್ವೈರ ವೃತ್ತಿಗೆ ತಲೆಹಾಕಿದನು.

ಮಹಾರಾಜ ಬಾಹುವು ತನ್ನ ಅಹಂಕಾರ ಬಲದಿಂದ ಹುತ್ತವಾಗಿ ಹೋದನು. ಅಸಾಧಾರಣ ಬುದ್ಧಿಶಕ್ತಿ ತನ್ನದೆಂದು ತಿಳಿದುಕೊಂಡವನು ಎಲ್ಲರನ್ನೂ ಅಪಮಾನಿಸುವುದರಲ್ಲೇ ತನ್ನ ಮಹತ್ತಿಕೆಯೆಂದು ದೃಢಪಡಿಸಿಕೊಂಡನು. ತನ್ನ ಸಂಪರ್ಕದಲ್ಲಿರುವ ಸಚಿವ ಸಂಪುಟದ ಸದಸ್ಯರು, ಅಧಿಕಾರಿಗಳು, ನೌಕರರು ಮತ್ತು ಪ್ರಜಾ ಪರಿವಾರಗಳನ್ನು ನಿಂದಿಸಿ ಜರೆದು ಮಾತಾಡತೊಡಗಿದನು. ಇದರಿಂದ ಅವರ ವಿರೋಧವನ್ನು ಕಟ್ಟಿಕೊಂಡನು. ನೆರೆರಾಜ್ಯಗಳ ಹೇಹಯ ಮತ್ತು ತಾಲ ಜಂಘರ ಮೇಲೆ ಪದೇ ಪದೇ ತನ್ನ ಶಕ್ತಿಮದವನ್ನು ಪ್ರದರ್ಶಿಸಿ ಅವರನ್ನು ತನ್ನ ಶತ್ರುಗಳಾಗಿ ಸಂಪಾದಿಸಿದನು. ಬಾಹುವಿನ ಅಧಿಕಾರ, ಸ್ವಾರ್ಥಗಳಿಂದ ನೊಂದುಕೊಂಡ ಪ್ರಜೆಗಳು ಭಯದಿಂದ ತೆಪ್ಪಗಿದ್ದರು; ಅವಕಾಶ ನಿರೀಕ್ಷಿಸುತ್ತಿದ್ದರು.

ಹೇಹಯ ಮತ್ತು ತಾಲ ಜಂಘರು ತಮ್ಮ ಅಭಿಮಾನದ ಹತ್ಯೆಯನ್ನು ಸಹಿಸಿಕೊಂಡಿರಲಾಗಲಿಲ್ಲ. ಅವರಿಬ್ಬರೂ ಒಂದಾಗಿ ಬಾಹುವಿನ ರಾಜ್ಯವನ್ನು ಆಕ್ರಮಿಸಿದರು. ಬಾಹುವೇಕೆ ಅಂಜಬೇಕು? ಆತನ ಸೇನೆ, ಸೈನಿಕ ಶಕ್ತಿ ಭೂಮಂಡಲದ ಅನ್ಯ ರಾಜರಲ್ಲಿರಲಿಲ್ಲ. ಆದರೆ ಬರಿಯ ಶಕ್ತಿಯಿಂದ ಕಾರ್ಯಸಿದ್ಧಿಯಾಗುವುದಿಲ್ಲವೆಂದು ಆತನಿಗೆ ಮರೆತೇ ಹೋಗಿತ್ತು.

ಬಾಹುವಿನ ಅಹಂಕಾರದಿಂದ ರೋಸಿಹೋದ ಆತನ ಸೇನೆ ತಮ್ಮ ರಾಜನು ಸೋತುಹೋಗಲೇಬೇಕೆಂದು ಬಯಸಿತ್ತು! ರಾಜನಿಂದ ದಿನದಿನವೂ ಅಪಮಾನಿತರಾಗುತ್ತಿದ್ದ ಸಚಿವರು, ಅಧಿಕಾರಿಗಳು, ನೌಕರರು, ಜನರು–ಹೀಗೆ ಎಲ್ಲರೂ ಈಗ ರಾಜನ ತಲೆ ಬಾಗುವುದನ್ನೇ ಕಾಯುತ್ತಿದ್ದರು ಬಾಹುವು ಹೇಹಯ—ತಾಲಜಂಘರಿಗಿಂತ ಸಂಪನ್ನನಾದುದರಿಂದ ಒಂದು ತಿಂಗಳ ಕಾಲ ಯುದ್ಧ ನಡೆಯಿತು; ಕೊಟ್ಟ ಕೊನೆಗೆ ದೇವರ ಮುಂದೆಯೂ ಬಾಗುವ ಅಭ್ಯಾಸ ತೋರಿದ ಬಾಹುವಿನ ತಲೆ ಶತ್ರುಗಳ ಮುಂದೆ ಬಗ್ಗಿತು.

ಪರಾಜಿತನಾದ ಬಾಹು ತನ್ನ ನಗರಕ್ಕೆ ಮರಳಿದನು. ನಿನ್ನೆ ಇಂದುಗಳ ನಡುವೆ ಬಹಳಷ್ಟು ಅಂತರವಾತನಿಗೆ ಅನುಭವವಾಯ್ತು. ನಿನ್ನೆ ಅವನು ಯಾರ ಮಾತುಗಳಿಗೆ ಕಿವಿಗೊಡುತ್ತಿರಲಿಲ್ಲವೋ ಅವರೇ ಇಂದು ರಾಜನನ್ನು ಉಪೇಕ್ಷೆಯಿಂದ ಕಾಣತೊಡಗಿದ್ದರು! ರಾಜನು ಪರಾಜಿತನಾದನೆಂದು ಅಲ್ಲಲ್ಲಿ ಸಂತೋಷ ಕೂಟಗಳು ನಡೆಯುತಿದ್ದುವು! ಹೀಗೆ ಸೇನೆ ಪ್ರಜೆಗಳೂ ತನಗೆ ವಿರುದ್ಧವಿವೆಯೆಂಬುದನ್ನು ಮನವರಿಕೆ ಮಾಡಿಕೊಂಡ ಬಾಹುವು ರಾಜ್ಯದಲ್ಲಿ ನಿಲ್ಲದೆ ತನ್ನಿಬ್ಬರು ಪತ್ನಿಯರನ್ನು ಕಟ್ಟಿಕೊಂಡು ನಗರ ತ್ಯಜಿಸಿ ವನಪ್ರವೇಶ ಮಾಡಿದನು.

ಬಾಹುವು ಓಡಿಹೋಗುತ್ತಿರುವುದನ್ನು ಕಂಡ ಪ್ರಜಾ ವರ್ಗಕ್ಕೆ ಆತನ ಅಭಿಮಾನ ಪೂರ್ಣ ದುರ್ವ್ಯವಹಾರಗಳು ನೆನಪಾಗತೊಡಗಿದುವು. ಅವರೆಲ್ಲರೂ ಒಂದಾಗಿ 'ಬಾಹುವಿಗೆ ಧಿಕ್ಕಾರ, ಧಿಕ್ಕಾರ' ಎಂದು ಆಕಾಶ ಬಿರಿಯುವಂತೆ ಬೊಬ್ಬೆ ಹತ್ತಿದರು. ತಮ್ಮ ಮಹಾರಾಜನು ಸೋತು ಕಾಡಿಗೆ ಓಡಿಹೋದದ್ದರಿಂದ ಅವರ ಮನಸ್ಸಿಗೆ ಬಹಳಷ್ಟು ನೆಮ್ಮದಿಯಾಯ್ತು.

ವನಸೇರಿದ ಬಾಹುವು ಮರವೊಂದರಡಿ ಕುಳಿತಿದ್ದನು. ಹಸಿವು-ನೀರಡಿಕೆಗಳಿಂದಾತನು ಕಂಗೆಟ್ಟಿದ್ದನು; ಸೋತು ಸುಣ್ಣವಾಗಿದ್ದನು; ತನ್ನ ಇಂದಿನ ದುರವಸ್ಥೆಯನ್ನು ನೆನೆದು ಆತನ ಕಣ್ಣುಗಳು ಹನಿಗೂಡಿದುವು. 'ಅಯ್ಯೋ, ನನ್ನ ಅಹಂಕಾರವೇ ನನ್ನನ್ನು ನಿರುಪಯೋಗಿಯನ್ನಾಗಿ ಮಾಡಿತು. ನನ್ನ ಧನ, ಮಾನ, ಯಶ, ಸುಖ ಎಲ್ಲವನ್ನೂ ಕೆಡಿಸಿತು. ಅಹಂಕಾರವು ನನಗೆ ಬಡಿಯದಿರುತಿದ್ದರೆ, ನನಗಿಂತಹ ದುರ್ಗತಿ ಬರುತ್ತಿರಲಿಲ್ಲ" ಎಂದು ಕೂಗಿಕೊಂಡನು

ತನ್ನ ಗತ ಜೀವನಕ್ಕಾಗಿ ಬಾಹುವಿಂದು ಪಶ್ಚಾತ್ತಾಪತಪ್ತನಾಗತೊಡಗಿದನು. ಹೋರಿ ಹೊಲ ಮೇದ ಮೇಲೆ ಬೇಲಿಯಿಂದೇನಾದೀತು? ಆತನನ್ನು ಮಾನಸಿಕ ದುಃಖವಾವರಿಸಿತು. ದುಃಖತಪ್ತನಾದ ಬಾಹುವಿನ ಅಂಗಾಂಗಗಳು ಜೀರ್ಣವಾಗತೊಡಗಿದುವು; ಅವನು ಅಕಾಲವೃದ್ಧನಾದನು. ಅಶಕ್ತಿ—ಅನಾರೋಗ್ಯ—ಅಸ್ವಾಸ್ಥ್ಯಗಳಿಂದ ಕಂಗಾಲಾದ ಅವನು ತನ್ನ ಅಹಂಕಾರದ ಫಲವನ್ನು ಅನುಭವಿಸುತ್ತ ಬಹುದಿನಗಳ ಬಳಿಕ ಓರ್ವ ಮುನಿಯ ಆಶ್ರಮದ ಸಮೀಪ ದೇಹತ್ಯಜಿಸಿದನು.

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡೆಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ಮಂಗಳೂರು.
ಆಡಳಿತ ಕಚೇರಿ: ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೂಲ್ಕಿ ಸುಂದರ್‌ರಾವ್ ಶೆಟ್ಟಿ ಇವರಿಂದ

ಬ್ಯಾಂಕಿನ ಪ್ರಗತಿಯ ವರದಿ

1971ನೇ ಎಪ್ರಿಲ್ 30ರಂದು ಮಂಗಳೂರಿನಲ್ಲಿ ನಡೆದ ವಿಜಯ ಬ್ಯಾಂಕಿನ ಪಾಲುದಾರರ 39ನೇ ವಾರ್ಷಿಕ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರು ನೀಡಿದ ಹೇಳಿಕೆಯನ್ನು ಕೆಳಗೆ ಕೊಡಲಾಗಿದೆ.

ಶ್ರೀ ಮೂಲ್ಕಿ ಸುಂದರ್‌ರಾವ್ ಶೆಟ್ಟಿ

ಮಿತ್ರರೇ,

ತಮ್ಮನ್ನಿಂದು ಬ್ಯಾಂಕಿನ 39ನೇ ವಾರ್ಷಿಕ ಮಹಾಸಭೆಗೆ ಸ್ವಾಗತಿಸಲು ನನಗೆ ಆನಂದವಾಗುತ್ತದೆ. ಕಳೆದ ವರ್ಷ ಠೇವಣಿಗಳು ಮತ್ತು ಲಾಭದಲ್ಲಿ ಅಭೂತಪೂರ್ವ ಪ್ರಗತಿಯೊಡನೆ ನಮ್ಮ ಯಶಸ್ವಿ ಕಾರ್ಯ ನಿರ್ವಹಣೆಯೊಂದಿಗೆ ಇಲ್ಲಿ ಸೇರಲು ಇನ್ನಷ್ಟು ಆನಂದವಿದೆ.

ಭವಿಷ್ಯದಲ್ಲೇನಾಗುತ್ತದೆಂದು ಹೇಳುವುದು ನನ್ನ ಶಕ್ತಿಗೆ ಮೀರಿದ್ದಾದರೂ ಈಗ ನಾವು ಸಾಧಿಸಿದ ಪ್ರಗತಿಯ ವೇಗವನ್ನು ಕಾಯ್ದು ಕೊಳ್ಳಬಹುದೆಂಬುದರಲ್ಲಿ ನಮಗೆ ಆಶೆಯಿದೆ. ನೀವು ಈಗಾಗಲೇ ಬ್ಯಾಲೆನ್ಸ್ ಶೀಟ್ ಮತ್ತು ಲಾಭನಷ್ಟದ ಲೆಕ್ಕವನ್ನು ಓದಿರಬಹುದೆಂದು ಭಾವಿಸುತ್ತೇನೆ.

1970ರಲ್ಲಿ ಸಾಮಾನ್ಯ ಆರ್ಥಿಕ ವ್ಯವಸ್ಥೆ

ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಅನಿಶ್ಚಿತ ಪರಿಸ್ಥಿತಿಗೆ ಹೆಸರಾದ ವರ್ಷ ಇನ್ನೊಂದು ಕಳೆದಿದೆ.

ಕೃಷಿ ಉತ್ಪಾದನೆಯಲ್ಲಿ ಏರಿಕೆಯಿಂದಾಗಿ ಸ್ವಲ್ಪಮಟ್ಟಿನ ಆರ್ಥಿಕ ಪುನರ್ಜಾಗೃತಿಯಾದುದು ನಿಜವಾದರೂ, ಕೈಗಾರಿಕಾ ಉತ್ಪಾದನೆಗೆ ತೊಂದರೆಯಾಗಿದೆ. ಹತ್ತಿ ಮತ್ತು ಉಕ್ಕು ಮೊದಲಾದ ಕಚ್ಚಾ ವಸ್ತುಗಳ ಅಭಾವವು ಕೈಗಾರಿಕಾ ಸಾಮರ್ಥ್ಯದ ಕಡಿಮೆ ಉಪಯೋಗಕ್ಕೆ ಎಡೆ ಮಾಡಿದೆ. ಸತತ ಹಣದುಬ್ಬರದಿಂದಾಗಿ ಬೆಲೆಯ ಮಟ್ಟವು ಏರಿ ಜೀವನವೆಚ್ಚವು ಹೆಚ್ಚಿದೆ. ಕೆಲ ರಾಜ್ಯಗಳಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಶಾಂತಿಯು ಕೈಗಾರಿಕಾ ಚಟುವಟಿಕೆಗಳಿಗೆ ತೊಡಕು ಮಾಡಿದೆ.

ಕಳೆದ ವರ್ಷವು ಹೀಗಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಬ್ಯಾಂಕುಗಳ ಪಾತ್ರವು ವಿಶಾಲಗೊಂಡಿರುವುದರಿಂದ, ಬ್ಯಾಂಕಿಂಗ್ ಉದ್ಯಮವು ವರ್ಷವಿಡೀ ಸಾರ್ವಜನಿಕರ ಲಕ್ಷವನ್ನು ಗಣನೀಯ ಪ್ರಮಾಣದಲ್ಲಿ ಸೆಳೆದಿದೆ.

ಬ್ಯಾಂಕಿಂಗ್ ಪದ್ಧತಿ

ಪ್ರಚಲಿತ ವಿಚಾರಗಳಲ್ಲಿ, ಆರ್ಥಿಕ ಅಭಿವೃದ್ಧಿಯಲ್ಲಿ ಬ್ಯಾಂಕಿಂಗಿಗೆ ಪ್ರಮುಖ ಜವಾಬ್ದಾರಿಯನ್ನು ನೀಡಲಾಗಿದೆ. ಸಮಾಜದ ಉಳಿತಾಯವನ್ನು ಒಟ್ಟುಗೂಡಿಸುವುದು ಬ್ಯಾಂಕಿನ ಪರಂಪರಾನುಗತ ಕಾರ್ಯ. ಇಂತಹ ಉಳಿತಾಯವನ್ನು ಅಭಿವೃದ್ಧಿ ಹೊಂದಬಯಸುವ ಆಯ್ದ ಕ್ಷೇತ್ರಗಳಿಗೆ ಹರಿಯಿಸುವುದು ಈ ಸಮಾಜದಲ್ಲಿ ಬ್ಯಾಂಕುಗಳ ಅನಿವಾರ್ಯ ಕಾರ್ಯವಾಗಿದೆ.

1970ನೇ ವರ್ಷದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಎರಡು ಕ್ಷೇತ್ರಗಳಲ್ಲಿನ ಬ್ಯಾಂಕುಗಳು ಚೆನ್ನಾಗಿ ಕಾರ್ಯ ನಿರ್ವಹಿಸಿವೆ. 1970ನೇ ಡಿಸೆಂಬರಿನ ಕೊನೆಯ ಶುಕ್ರವಾರದ ಹೊತ್ತಿಗೆ ಎಲ್ಲ ಬ್ಯಾಂಕುಗಳ ಒಟ್ಟು ಠೇವಣಾತಿ 5,675 ಕೋಟಿ ರೂಪಾಯಿಗಳಿಗೆ ಮತ್ತು ಒಟ್ಟು ಎಡ್ವಾನ್ಸುಗಳು 4,428 ಕೋಟಿ ರೂಪಾಯಿಗಳಿಗೆ ಮುಟ್ಟಿವೆ. 1969ರಲ್ಲಿ ಠೇವಣಿಗಳ ಸರಾಸರಿ ಪ್ರಗತಿಯು ಸೇ. 15.02ರಷ್ಟಾಗಿದ್ದರೆ, 1970ರಲ್ಲಿ ಅದು ಸೇ. 16.4ಕ್ಕೇರಿದೆ. ಸಾಲ ವಿಸ್ತರಣೆಯು 1969ರಲ್ಲಿ ಸೇ. 19 ಆಗಿದ್ದರೆ 1970ರಲ್ಲಿ ಸೇ. 22.5ಕ್ಕೇರಿದೆ.

1970ರಲ್ಲಿ ವಾಣಿಜ್ಯ ಬ್ಯಾಂಕುಗಳ ಶಾಖೆಗಳು 10,000ಕ್ಕಿಂತಲೂ ಹೆಚ್ಚಾದುವು. ವರ್ಷದ ಕೊನೆಯಲ್ಲಿ ವಾಣಿಜ್ಯ ಬ್ಯಾಂಕುಗಳ ಕಚೇರಿಗಳು 11,184 ರಷ್ಟಾಗಿವೆ. ಶಾಖಾ ವಿಸ್ತರಣೆಯು ತುಂಬಾ ಪ್ರಗತಿ ಸಾಧಿಸಿದೆ. ಮೊದಲಿನ ವರ್ಷ ಎಲ್ಲ ಬ್ಯಾಂಕುಗಳು 1,369 ಶಾಖೆಗಳನ್ನು ತೆರೆದಿದ್ದರೆ 1970ರಲ್ಲಿ ಈ ಸಂಖ್ಯೆ 2,000ಕ್ಕೂ ಹೆಚ್ಚಿದೆ. ದೇಶದಲ್ಲಿ ಪ್ರತಿ ಬ್ಯಾಂಕಿನ ಕಚೇರಿಯು ಸೇವೆ ಸಲ್ಲಿಸಿದ ಜನರ ಸರಾಸರಿ ಸಂಖ್ಯೆಯು 1970ರಲ್ಲಿ 52,000ಕ್ಕಿಳಿದಿದೆ. 1968ರಲ್ಲಿ ಇದು 70,000ದಷ್ಟಿತ್ತು.

ಸಾಲದ ಬೇಡಿಕೆಯು ಹೆಚ್ಚುತ್ತಿದೆ. ಮಿತಿಮೀರಿದ ಸಾಲದ ಬೇಡಿಕೆಗೆ ಠೇವಣಿ ಸಂಗ್ರಹವು ಏಕಮಾತ್ರ ತಡೆಯಾಗಿದ್ದು, ಇನ್ನೂ ಹೆಚ್ಚು ಠೇವಣಿಗಳನ್ನು ಸಂಗ್ರಹಿಸುವ ಸವಾಲನ್ನು ಬ್ಯಾಂಕುಗಳು ಎದುರಿಸಬೇಕಾಗಿತ್ತು. ಸೇವಾ ಉದ್ಯಮವಾದ ಬ್ಯಾಂಕಿನಲ್ಲಿ ಮಾರುಕಟ್ಟೆಯ ಕಲ್ಪನೆಯು ಸೇರಿಕೊಂಡಿದೆ. ಸಮಾಜದ ಅವಶ್ಯಕತೆಗಳನ್ನು ಪೂರೈಸಲು ಅವರ ಮನೋ ಇಂಗಿತವನ್ನರಿತು ಠೇವಣಿಯ ಪ್ರಗತಿಯನ್ನು ತೀವ್ರಗೊಳಿಸಲು ಹೊಸತಂತ್ರಗಳನ್ನು ಯೋಜಿಸಲಾಗುತ್ತಿದೆ. ಅರ್ಥ ವ್ಯವಸ್ಥೆಯ ಉಪೇಕ್ಷಿತ ಕ್ಷೇತ್ರಗಳಿಗೆ ಆರ್ಥಿಕ ಸಹಾಯ ನೀಡುವುದನ್ನು ಬ್ಯಾಂಕುಗಳು ಕರ್ತವ್ಯ ಹಾಗೂ ಸವಾಲಾಗಿ ಸ್ವೀಕರಿಸಿವೆ.

ಎಲ್ಲ ಬ್ಯಾಂಕುಗಳ ಮೇಲ್ವಿಚಾರಣೆ ಹಾಗೂ ನಿಯಂತ್ರಣದಲ್ಲಿ ರಿಸರ್ವ್ ಬ್ಯಾಂಕ್ ತನ್ನ ಸಹಾಯ ಪ್ರವೃತ್ತಿ ಹಾಗೂ ಅಪಾರ ಆಸಕ್ತಿಯನ್ನು ತೋರಿಸುತ್ತಲಿದೆ.

ನಮ್ಮ ಬ್ಯಾಂಕಿನ ಪ್ರಗತಿ

ದೇಶದಲ್ಲಿ ಅಪರಿಹಾರ ಸಮಸ್ಯೆಗಳಿಷ್ಟಿದ್ದರೂ 1970ರಲ್ಲಿ ನಮ್ಮ ಬ್ಯಾಂಕ್ ಸಾಧಿಸಿದ ಪ್ರಗತಿಯು ಅದ್ಭುತವೆನ್ನಲು ನಾವು ಹೆಮ್ಮೆ ಪಡಬಹುದಾಗಿದ್ದು, ದೇಶದಲ್ಲಿನ ಎಲ್ಲ ಬ್ಯಾಂಕುಗಳ ಸರಾಸರಿ ಠೇವಣಿ ಏರಿಕೆಯು ಸೇ. 16.4 ಮಾತ್ರ ಇದ್ದು ನಮ್ಮ ಬ್ಯಾಂಕಿನ ಠೇವಣಿ ಬೆಳವಣಿಗೆಯು ಸೇ. 47ರಷ್ಟಾಗಿದೆ. 1969ರಲ್ಲಿ ನಮ್ಮ ಠೇವಣಿಗಳ ಏರಿಕೆಯು ಸೇ. 42 ಆಗಿತ್ತು. 1969ರ ಕೊನೆಯಲ್ಲಿ 18.71 ಕೋಟಿ ರೂಪಾಯಿಗಳಷ್ಟಿದ್ದ ಠೇವಣಿಯು 31–12–1970ಕ್ಕೆ 27.52ಕೋಟಿ ರೂಪಾಯಿಗಳಿಗೇರಿತು. 1969ರಲ್ಲಿ 13.01 ಕೋಟಿ ರೂಪಾಯಿಗಳಷ್ಟಾಗಿದ್ದ ನಾವು ಕೊಟ್ಟ ಸಾಲಗಳು 1970ರಲ್ಲಿ 17.54 ಕೋಟಿ ರೂಪಾಯಿಗಳಿಗೇರಿತು.

ಬ್ಯಾಂಕಿನ ಸಾಲ–ಠೇವಣಿ ಪ್ರಮಾಣವು ವರ್ಷವಿಡೀ ಸರಾಸರಿ ಸೇ. 70.71ರಲ್ಲಿತ್ತು. ಕೃಷಿ ಹಾಗೂ ಸಣ್ಣ ಪ್ರಮಾಣದ ಉದ್ಯಮಗಳೇ ಮೊದಲಾದ ಆದ್ಯತೆಯ ಕ್ಷೇತ್ರಗಳಿಗೆ ಅಡ್ವಾನ್ಸನ್ನು ಯೋಗ್ಯ ಪ್ರಮಾಣದಲ್ಲಿ ಕೊಡಲಾಯಿತು. ವರ್ಷದ ಕೊನೆಯಲ್ಲಿ ಕೃಷಿಗೆ ನಮ್ಮ ಅಡ್ವಾನ್ಸ್ ಒಟ್ಟು ಅಡ್ವಾನ್ಸಿನ ಸೇ. 12 ಮತ್ತು ಸಣ್ಣ ಪ್ರಮಾಣದ ಉದ್ಯಮಗಳಿಗೆ ಸೇ. 19 ಆಗಿತ್ತು.

ನಮ್ಮ ಒಟ್ಟು ಆದಾಯವು 1969ರಲ್ಲಿ 142.52 ಲಕ್ಷ ರೂಪಾಯಿಗಳಿದ್ದುದು 1970ರಲ್ಲಿ 201.97 ಲಕ್ಷ ರೂಪಾಯಿಗಳಿಗೆ ಏರಿತು. 1969ರಲ್ಲಿ ನಮ್ಮ ನಿವ್ವಳ ಆದಾಯವು 4.60 ಲಕ್ಷ ರೂಪಾಯಿಗಳಿದ್ದು ದ್ವಿಪಕ್ಷೀಯ ತೀರ್ಮಾನಕ್ಕೆ ಸರಿಯಾಗಿ ನಮ್ಮ ಸಿಬಂದಿಗಳಿಗೆ 6.14 ಲಕ್ಷ ರೂಪಾಯಿಗಳ ಪ್ರತ್ಯೇಕ ವೇತನ ಬಿಲ್ ಪಾವತಿಮಾಡಿದ ನಂತರವೂ ನಮ್ಮ ನಿವ್ವಳ ಆದಾಯವು 1970ರಲ್ಲಿ 8.49 ಲಕ್ಷ ರೂಪಾಯಿಗಳಿಗೆ ಏರಿತು. ಪರಿಣಾಮವಾಗಿ 1970ರಲ್ಲಿ ನಮ್ಮ ಲಾಭಾಂಶದ ದರವನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಅನುಮತಿಯೊಂದಿಗೆ, ಸೇ. 10ಕ್ಕೆ (ತೆರಿಗೆಗೆ ಬಾಧ್ಯವಾಗಿದೆ) ಏರಿಸಲು ನಾವು ಶಕ್ತರಾಗಿದ್ದೇವೆ.

ನಮ್ಮ ಆಡಳಿತ ಕಚೇರಿಯನ್ನು 1969ರ ನವಂಬರಿನಲ್ಲಿ ಬೆಂಗಳೂರಿಗೆ ವರ್ಗಾಯಿಸಿದೆವು. ಈ ಸರಳ ಹೇಳಿಕೆಯ ಹಿಂದೆ ದೊಡ್ಡದೊಂದು ಸಾಧನೆಯು ಅಡಗಿದೆ. ನಮ್ಮ ಬದಲಾದ ವ್ಯವಸ್ಥೆ ಹಾಗೂ ಬೆಂಗಳೂರಿಗೆ ವರ್ಗಾಯಿಸುವುದರೊಂದಿಗೆ ನಾವು ಬೃಹತ್ಪ್ರಮಾಣದಲ್ಲಿ ಮುಂದಡಿ ಇಡುವೆವೆಂದು ಕಳೆದ ಮೇ ತಿಂಗಳಲ್ಲಿ ನಿಮಗೆ ನಾವು ಭರವಸೆ ನೀಡಿದ್ದೆವು. ನಮ್ಮ ಭರವಸೆಯನ್ನು ಕಾಯ್ದುಕೊಂಡಿದ್ದೇವೆನ್ನಲು ಸಂತೋಷವಾಗುತ್ತಿದೆ.

1970ರಲ್ಲಿ ನಾವು ಆರ್ಡಿ, ಬೆಳಗಾವಿ, ಕಲ್ಲಡ್ಕ, ಕುಕ್ಕುಂದೂರು, ಮಂದರ್ತಿ, ಜೆಪ್ಪು (ಮಂಗಳೂರು), ಮಾಣಿ, ಮೂಡಬೆಟ್ಟು, ನಾಡ, ಪೂನಾ, ಸಾಣೂರು ಮತ್ತು ಹೊಸ ದಿಲ್ಲಿ—ಹೀಗೆ ಒಟ್ಟು 12 ಶಾಖೆಗಳನ್ನು ತೆರೆದಿರುವೆವು. ಹೆಚ್ಚಿನ ಶಾಖೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ತೆರೆಯಲಾಯಿತು. ಶಾಖೆಗಳ ಒಟ್ಟು ಸಂಖ್ಯೆ 1970ರ ಡಿಸೆಂಬರ್ 31ರಲ್ಲಿ 126ಕ್ಕೆ ತಲಪಿತು.

ಬಂಡವಾಳದಲ್ಲಿ ಏರಿಕೆ

ಠೇವಣಿಯ ಪ್ರಗತಿಯೊಡನೆ ಬಂಡವಾಳದ ನೆಲೆಯನ್ನು ಬಲಪಡಿಸಲು, 1970ರಲ್ಲಿ ನಾವು ಇನ್ನೂ 20 ಲಕ್ಷ ರೂಪಾಯಿಗಳ ಪಾಲುಗಳನ್ನು ಸಾರ್ವಜನಿಕರ ಚಂದಾ ನೀಡಿಕೆಗಾಗಿ ತೆರವು ಮಾಡಿದೆವು. ನಮ್ಮ ಪಾಲುಗಳಿಗೆ ಆಗತ್ಯಕ್ಕೂ ಹೆಚ್ಚು ಚಂದಾ ಸಂಗ್ರಹವಾಯಿತು. ಈ ದಿಶೆಯಲ್ಲಿ ನಿಮ್ಮಿಂದ ಸಿಕ್ಕಿದ ಅಪಾರ ಬೆಂಬಲಕ್ಕಾಗಿ ನಿಮಗೆ ನಾವು ಕೃತಜ್ಞರಾಗಿದ್ದೇವೆ. 50 ಲಕ್ಷ ರೂಪಾಯಿಗಳ ಅಧಿಕೃತ ಬಂಡವಾಳವು ಸಾಧಾರಣ ಎಲ್ಲ ಚಂದಾ ನೀಡಿಕೆಯಾಗಿದ್ದು, ಪಾವತಿ ಬಂಡವಾಳವು ಈಗ 43.84 ಲಕ್ಷ ರೂಪಾಯಿಗಳಷ್ಟಿದೆ.

ಪ್ರಚಲಿತ ವರ್ಷದ ಮುನ್ನೋಟ

ಬ್ಯಾಂಕಿಂಗ್ ಆಯೋಗವು ಇನ್ನೂ ತನ್ನ ವರದಿ ಒಪ್ಪಿಸಿಲ್ಲ. ಹಲವು ಕಾಲದಿಂದ ಕಾಯುತ್ತಿರುವ ಆಯೋಗದ ವರದಿ ಪ್ರಕಟವಾದಾಗ ಸ್ವರೂಪ ಹಾಗೂ ಕಾರ್ಯಕ್ಕೆ ಸಂಬಂಧಿಸಿದ ಬದಲಾವಣೆಗಳಾಗಬಹುದು. ಪದ್ಧತಿಯ ನಿರ್ಣಯವಿನ್ನೂ ಆಗಬೇಕಷ್ಟೆ.

ದೊಡ್ಡ ಬ್ಯಾಂಕುಗಳ ರಾಷ್ಟ್ರೀಕರಣದ ಬಳಿಕ ಖಾಸಗಿ ಬ್ಯಾಂಕುಗಳಿಗೆ ಹೆಚ್ಚಿನ ಸ್ಪರ್ಧೆ ನೀಡುತ್ತಿವೆ. ಸಾರ್ವಜನಿಕ ಕ್ಷೇತ್ರದ ಬ್ಯಾಂಕಿನ ಶಾಖೆಗಳನ್ನು ದೇಶದ ಹೆಚ್ಚಿನ ಭಾಗಗಳಲ್ಲಿ ಕಾಣಬಹುದು. ಹೆಚ್ಚಿನ ಸಂಪನ್ಮೂಲಗಳನ್ನೊಳಗೊಂಡಿರುವ ಅವುಗಳು, ಸಾರ್ವಜನಿಕರ ಸೇವೆಯಲ್ಲಿ ಸಣ್ಣ ಬ್ಯಾಂಕುಗಳಿಗಿಂತ ಉತ್ತಮ ಸ್ಥಿತಿಯಲ್ಲಿವೆ; ಇಂತಹ ಪರಿಸ್ಥಿತಿಯಲ್ಲಿ 1970ಲ್ಲಿ ನಮ್ಮ ಬ್ಯಾಂಕ್ ಸಾಧಿಸಿದ ಪ್ರಗತಿಯು ಉಲ್ಲೇಖನೀಯವಾಗಿದೆ. ಇದನ್ನು ಕಾಯ್ದುಕೊಳ್ಳುವುದೇ ನಮ್ಮ ಸಮಸ್ಯೆಯಾಗಿದೆ. ಇದು ನಮಗೊಂದು ಅಸಾಧಾರಣ ಹೊರೆಯಾಗಿದೆ.

ಬಡ್ಡಿ ದರದ ಸ್ವರೂಪವು ನಿವ್ವಳ ಆದಾಯದ ಮೇಲೆ ಪ್ರಮುಖ ಸಂಬಂಧ ಹೊಂದಿದೆ. 1971 ಜನವರಿಯಿಂದ ಬ್ಯಾಂಕ್ ದರವು ಸೇ. 6ರಷ್ಟು ಏರಿದ್ದು ಇದರಿಂದಾಗಿ ಠೇವಣಿ ದರವೂ ಏರಿದೆ. ನಮ್ಮ ಒಟ್ಟು ಠೇವಣಿಗಳ ದೊಡ್ಡ ಭಾಗವನ್ನು ಬಡ್ಡಿ ಗಳಿಸುವ ಠೇವಣಿಯ [illegible] ಇಡಲಾಗಿರುವುದರಿಂದ, 1971ರಲ್ಲಿ ಹೆಚ್ಚು ಬಡ್ಡಿ ತೆರಬೇಕಾಗಿದೆ.

ಒಟ್ಟು ಆದಾಯವು ಗಮನಾರ್ಹವಾಗಿ ಬಡ್ಡಿದರದ ಮಟ್ಟದಿಂದ ಪ್ರಭಾವಿತವಾಗುವಂತೆಯೇ, ಒಟ್ಟು ವೆಚ್ಚವು ಮುಖ್ಯವಾಗಿ

(ಹತ್ತನೇ ಪುಟ ನೋಡಿರಿ)

ಗೇರಾಜ್ಯದಲ್ಲಿ
ಲಂಚಾಸುರ ಸಂಹಾರ ಸರಳ ಸೂತ್ರ

'ಲೇ, ಇಲ್ಲಿ ಕೇಳೇ....'

"ಕೇಳ್ತಿದ್ದೀನಿ ಅದೇನಲ್ಲಾ...."

'ನೋಡು, ಲಂಚ ನೀಡಿಕೆ ಮತ್ತು ಲಂಚ ಸ್ವೀಕಾರಕ್ಕೆ, ಏನು ಕಾರಣಾಂತ ಗೊತ್ತಾ ನಿನ್ಗೆ?'

"ಅಯ್ಯೋ, ಅದ್ರಲ್ಲೇನೂಂತ? ವಾಮ ಮಾರ್ಗದಲ್ಲಾದರೂ ಅನ್ಯಾಯವಾಗಿಯಾದರೂ ತನ್ನ ಕಾರ್ಯ ಈಡೇರಿಸಿಕೊಳ್ಳ ಬೇಕೆಂಬ ಅರ್ಜಿಕೆಂಟಿನ ಮನೀಷೆ ಮತ್ತು ಹೇಗಾದರೂ ಹಣಗಳಿಸಬೇಕೆಂಬ ಸರಕಾರಿ ನೌಕರರ ಮನೋವೃತ್ತಿ....'

"ಊಹ್ಞೂಂ....ಇದು ಹಳೆಯ ಕಾರಣವಾಯ್ತು. ಇದೀಗ ಹೊಸಾ ಹೊಸ್ದು ಕಾರಣವನ್ನ ಸಂಶೋಧನೆ ಮಾಡಿದ್ದಾರೆ...."

'ಇದಕ್ಕೆ ಅಧಿಷ್ಠಾತ್ರಿ ಋಷಿ, ಛಂದ, ದೇವತೆಗಳು ಯಾರೋ?'

'ಅದೆಲ್ಲ ಯಾರಾದ್ರೇನಂತೆ? ಗಾಯತ್ರಿ ಹೇಳೋನಿಗೇ ಋಷಿ ಛಂದ ದೇವತೆಗಳ ಹೆಸ್ರು ಗೊತ್ತಿಲ್ಲಾಂತಾದ ಮೇಲೆ....'

"ಅದು ಸರೀನ್ನಿ. ಆದ್ರೂ...."

'ನೋಡನ್ಮಾ.....'

'ಅದು ನೋಡೋಣ, ಸದ್ಯ ಆ ಕಾರಣವನ್ನಾದ್ರೂ ಹೇಳಬಾರದೆ?'

'ಹೇಳದೆ ಉಂಟೆ? ಶ್ರೀ ಜಿ. ನಾರಾಯಣ ಅವರು ಆಡಳಿತ ಭಾಷೆ ಕನ್ನಡವಾಗುವುದರಿಂದಲೇ ಲಂಚಾಸುರ ದೇಶಾಂತರಗೊಳ್ಳುತ್ತಾನೆಂದು ಹೇಳುತ್ತಾರೆ.'

"ನಾರಾಯಣ ಅಂದ್ರೆ...."

"ಅದೇ ಸದ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು...."

'ಓ, ಇದ್ರಲ್ಲೇನೂಂತ? ಅವರು ಸಾಹಿತ್ಯಿಕವಾಗಿ ಮಾತಾಡಿರಬಹುದು.'

'ಅಂದರೆ?'

'ಅಲ್ಲಾರಿ, ಪಲ್ಲವಾಧರೆ, ಮೃಗಲೋಚನೆ ಚಂದ್ರಮುಖಿ, ದುಂಬಿಗುರುಳೆ, ಕಮಲೆನಯನೆ, ಹಂಸಗಮನೆ ಎಂದು ಮುಂತಾಗಿ ಹೇಳುತ್ತಾರಲ್ಲಾ ಹಾಗೆ ಕನ್ನಡದ ಮೇಲಿನ ಮಿತಿಮೀರಿದ ಮೋಹ ಹೀಗೆ ಅವರಿಂದ ಹೇಳಿಸಿರಬಹುದು....'

'ಛೆ, ಛೆ ...ಏನನ್ನುತ್ತೀಯೊ ನೀನು? ಶ್ರೀ ನಾರಾಯಣರು ರಾಜ್ಯ ಸರ್ಕಾರ ರಚಿಸಿದ್ದ ಕನ್ನಡ ಭಾಷಾ ಸಮಿತಿಯ ಸದಸ್ಯರಾಗಿದ್ದರು. ಆ ಸಮಿತಿ ಇದೀಗಲೇ ತನ್ನ ವರದಿ ಅರ್ಪಿಸಿದೆ.'

'ಅದು ಇರಬಹುದು. ಇದೀಗ ವರದಿಯನ್ನು ಅಂಗೀಕರಿಸುವುದು, ಅನುಷ್ಠಾನಕ್ಕೆ ತರುವುದು, ಬಿಡುವುದು ರಾಜ್ಯಪಾಲರ ಅಧಿಕಾರಕ್ಕೆ ಸೇರಿದೆ.'

'ಅದಕ್ಕೇ ಶ್ರೀ ನಾರಾಯಣರು ಅಂದದ್ದು—ತನ್ನ ಕಾರ್ಯತತ್ಪರತೆಯಿಂದ ಎಲ್ಲರನ್ನೂ ಸಿಬ್ಬೆರಗುಗೊಳಿಸಿರುವ ರಾಜ್ಯಪಾಲರು ಈ ಕಾರ್ಯವನ್ನೂ ಆಗುಮಾಡಿ ಕನ್ನಡಿಗರ ಕೃತಜ್ಞತೆಗೆ ಮಾತ್ರರಾಗಬೇಕೆಂದು....'

ಈ ಕಾರ್ಯನೆಂದರೆ?'

'ಜೂನ್ ಮೊದಲ ದಿನದಿಂದ ಜಿಲ್ಲಾ ಮಟ್ಟದಲ್ಲಿ, ನವಂಬರ ಒಂದರಿಂದ ರಾಜ್ಯ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯೆಂದು....'

'ಯಾವ ವರ್ಷಾಂತೆ?'

"ಶುಭಸ್ಯ ಶೀಘ್ರಂ....೧೯೭೧."

'ಸರೀನ್ನಿ. ಇದರಿಂದ ಲಂಚಾಸುರ ಮರ್ದನ ಹೇಗಾಗುತ್ತದೆಂತ....'

'ಅದೇ ಇದರ ರಹಸ್ಯ.'

'ಏನು?'

'ಈಗ ಸಬ್ ಡಿವಿಜನ್ ಮಟ್ಟದಲ್ಲಿ ಕನ್ನಡ ಆಡಳಿತ ಭಾಷೆಯಾಗಿದೆ ..."

'ಆಗಿದೆಯೆಲ್ಲಿ? ಆಗಿವೆಯೆಂದು ಸೇಳುತ್ತಾರೆ.'

"ಯಾಕೆ ಅದರಲ್ಲೂ ಸಂದೇಹವೆ?'

'ಅಲ್ಲಾರಿ, ಎ. ಸಿ.ಯವರು ತಮ್ಮ ತೀರ್ಪಿಗೆ ಅಪೀಲು ಜಜ್‌ಮೆಂಟನ್ನು ಇಂಗ್ಲಿಷಿನಲ್ಲೇ ಕೊಟ್ಟಿದ್ದಾರಂತೆ....'

'ಇರಬಹುದೂನ್ನು. ಪ್ರಾಯಃ ಅದು ಕೋರ್ಟು ಭಾಷೆಯೋ ಏನೋ ಯಾರಿಗೆ ಗೊತ್ತು? ಅಂತೂ ಸರಕಾರ ಮಾಡಿದೆ. ಆದರೆ, ಜಿಲ್ಲಾ ಮಟ್ಟದಲ್ಲಿ ಕನ್ನಡವಿಲ್ಲದ್ದರಿಂದ ಅನೇಕ ಅಡಚಣೆಗಳು ತಲೆಹಾಕುತ್ತಿವೆ ಎನ್ನುತ್ತಾರಂತೆ ಅಧಿಕಾರಿಗಳು.'

'ತಮ್ಮ ಸೋಮಾರಿತನಕ್ಕೆ ಅವರೊಂದು ನೆಪ ಹುಡುಕಿದರೆಂದು ತೋರುತ್ತದೆ....'

'ಅದೇನೇ ಇರಲಿ, ನೂರಕ್ಕೆ ತೊಂಭತ್ತರಷ್ಟು ವ್ಯವಹಾರಗಳು ಜಿಲ್ಲಾ ಮಟ್ಟದಲ್ಲಿ ಕೊನೆಗೊಳ್ಳುತ್ತವಾದ್ದರಿಂದ ಜಿಲ್ಲಾ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದರಿಂದ ಹೆಚ್ಚಿನ ಲಾಭ ದೊರಕುತ್ತದೆ.'

"ಯಾರು ಅಲ್ಲಾಂತಾರೆ? ಆದರೆ, ನೋಡಿ ಅಧಿಕಾರಿಗಳು....'

'ಛೆ.... ಹಾಗೆಲ್ಲನ್ನಬಾರದು ನೋಡು. ಸಧಿಕಾರಿಗಳೆಲ್ಲರೂ ಕನ್ನಡಕ್ಕೇ ಪರರಾಗಿದ್ದಾರೆ....'

'ಅದೀಗ ಸರಿಯೋಯ್ತು. ಮತ್ತೆ ಅದು ಆಡಳಿತ ಭಾಷೆಯಾಗುವುದಾದರೂ ಹೇಗೆ?'

'ಏನು?'

'ಅಧಿಕಾರಿಗಳೆಲ್ಲರೂ ಕನ್ನಡಕ್ಕೇ ಪರರಾಗಿದ್ದರೆ....'

"ಛೆ....ಛೆ.... ಶಾಂತಂ ಪಾಪಂ. ಕನ್ನಡಕ್ಕೇ ಪರರೆಂದರೆ, ಕನ್ನಡಕ್ಕೆ ಪರಕೀಯರೆಂದೋ ವಿರೋಧಿಗಳೆಂದೋ ಅರ್ಥವಲ್ಲ ಕಣೇ, ಸ್ವಕೀಯರೆಂದರ್ಥ. ಫಾರ್ ಕನ್ನಡ.'

'ಫಾರ್ ಕನ್ನಡವೊ, ಫಾರ್ ಎವೇ ಫ್ರಾಮ್ ಕನ್ನಡವೋ....'

"ಅಲ್ವೆ, ಇದು ಶ್ರೀ ನಾರಾಯಣರ ಅನುಭವ. ಎಲ್ಲಿಯ ವರೆಗೆಂದರೆ, ಪರರಾಜ್ಯಗಳಿಂದ ಬಂದಿರುವ ಐಎಎಸ್ ಅಧಿಕಾರಿಗಳೂ ಕನ್ನಡದ ಬಗ್ಗೆ ಆಸಕ್ತರಿದ್ದಾರೆ.'

'ಮತ್ತೇನಂತೆ ತೊಂದರೆ?'

'ವಿಧಾನ ಸೌಧದಲ್ಲಿ ಮಾತ್ರ ಇದಕ್ಕೆ ಭಾರಿ ಡಾಮ್ ಬಿದ್ದಿದೆಯಂತೆ.'

"ಅದು ಹೇಗೆ?"

"ಹೇಗೆಂದರೇನು? ಬಹುರೂಪೇಣ....'

"ಆದ್ರೂ ಒಂದ್ರೂಪ...."

'ವಿಧಾನ ಸೌಧೋಪಯೋಗಕ್ಕೆಂದು ಒಂದು ಸಾವಿರ ಕನ್ನಡ ಟೈಪುರೈಟರು ಕೊಳ್ಳಲು ಬಜೆಟ್ಟಿನಲ್ಲಿ ಪ್ರೊವಿಜನ್ ಮಾಡಿತ್ತು. ಆದರೆ, ಅದರ ಉಪಯೋಗವಾಗಲಿಲ್ಲ; ಆದರೂ ಎಳ್ಳಿನಂಶ....'

'ಅದು ಸರೀನ್ನಿ. ಮೆಷೀನು ಬಂದ್ರೆ ಸಾಕೆ? ಅದನ್ನು ಹೊಡೆಯುವವರು ಬೇಡವೆ?'

'ವಿಧಾನ ಸೌಧ ಬಯಸಿದರೆ ಹೊಡೆಯುವ ಲಲನೆಯರು ಕರಗವೇ ಸೇರುತ್ತೆ.'

"ಆಯ್ತಪ್ಪ, ಗೋಕುಲಾಷ್ಟಮಿ ಕಡುಬಿನ ಸುದ್ದಿ ಮಾತಾಡ್ತಿರುವವರು ಹುಸೇನ್ ಸಾಬಿಗಳ ಮುಹರ್ರಮ್‌ನ ಬಿರ್ಯಾನಿಗೆ ಬಂದ್ರಿ...."

'ಅಂದ್ರೆ....?'

'ಅಲ್ರಿ, ಲಂಚಾಸುರ ಸಂಹಾರಕ್ಕೂ ಕನ್ನಡ ಆಡಳಿತ ಭಾಷೆಯಾಗುವುದಕ್ಕೂ ಯಾವ ಬಾದರಾಯಣ ಸಂಬಂಧಾಂತ?'

'ಓ, ಅದೋ, ನೌಕರರಲ್ಲಿ ಅನೇಕ ಮಂದಿಗೆ ಇಂಗ್ಲಿಷ್ ಭಾಷೆಯ ಬಗ್ಗೆ ಹೆಚ್ಚಿನ ಜ್ಞಾನವಿರುವುದಿಲ್ಲ.

'ಅಯ್ಯೋ, ಒಪ್ಪಿಕೊಂಡು ಬಿಡ್ತೋದ?'

"ಇವರಿಗೆ ಮೇಲಧಿಕಾರಿಗಳ ಬರಹ ಅರ್ಥವಾಗುವುದಿಲ್ಲ."

"ತುಂಬ ಕಲಿತವ್ರು ಇಂಗ್ಲೆಂಡ್—ಅಮೆರಿಕ ರಿಟರ್ನ್ಡ್ ಅಥವಾ ಕ್ವ್ಯಾಡ್...."

"ಅಲ್ವೆ, ರಿಟರ್ನ್ಡ್ ಅಂದ್ರೆ ಅರ್ಥವಾಯ್ತು. ಆದ್ರೆ ಕ್ವ್ಯಾಡ್ ಅಂದ್ರೆ...."

'ಕ್ವ್ಯಾಟಿನಲ್ಲಿ ನಿಂತವ್ರೂಂತ.'

"ಹ್ಹ ಹ್ಹ....ಸರೀನ್ನು. ಬರವಣಿಗೆ ಓದಲು ಬರೆಯಲು ತ್ರಾಸವಾದಾಗ, ಆ ಫೈಲು ಮೂಲೆಗೆ ಬೀಳುತ್ತೆ-ಸಿಧಾನ ಮಾಡೋಣವೆಂದು. ಅಡಿಗೆ ಬಿದ್ದ ಫೈಲನ್ನು ಮೇಲೆತ್ತಲೆಂದು ಅಪ್ಲಿಕೆಂಟ್ ಹಾಜರಾಗುತ್ತಾನೆ. ಲಂಚದ ಆಸೆ ತೋರಿಸುತ್ತಾನೆ. ನೌಕರ ಬಲಿಯಾಗುತ್ತಾನೆ. ಮೇಲಧಿಕಾರಿಗಳು ಕನ್ನಡದಲ್ಲೇ ಷರಾ ಬರೆದರೆ, ಈ ಯೆಲ್ಲ ಆತಂಕ ದೂರ. ಒಂದು ಕಲ್ಲು ಎರಡು ಹಣ್ಣು.'

'ಆಡಳಿತೆಯಲ್ಲಿ ಚುರುಕುತನ, ಲಂಚಾಸುರನ ಸರ್ವನಾಶ....'

"ಹ್ಞೂಂ. ಅಲ್ಲವೇ ಮತ್ತೆ? ಹೇಗಿದೆ ಶ್ರೀ ನಾರಾಯಣರ ಸಲಹೆ?"

"ಸಲಹೆಯೇನೋ ಭಾರಿ ಛಲೋದು. ಆದರೆ ನೋಡಿ, ವಿಧಾನ ಸೌಧದಲ್ಲೇ ಕನ್ನಡ ಬಾರದವರು ಕನ್ನಡ ದ್ವೇಷಿಗಳು, ಕನ್ನಡವೆಂದರೆ ಹಾರುವವರು ತುಂಬಿದ್ದಾರೆಂದ ಹಾಗಾಯ್ತು. ಮತ್ತೆ ಅದು ರಾಜ್ಯಕ್ಕೆ ಬರುವುದಾದರೂ ಹೇಗೆ?"

"ರಾಜ್ಯಪಾಲರು ಮನಸ್ಸು ಮಾಡಿದರೆ ಆಗುತ್ತೆ."

"ಅಲ್ಲಾರಿ. ೧೯೫೬ರಿಂದ ಇದುವರೆಗೂ ಜನಪ್ರಿಯ ಸರಕಾರಗಳು ಮಾಡಲಾಗದ್ದನ್ನೆಲ್ಲ ಈ ಮೂರು ನಾಲ್ಕು ತಿಂಗಳುಗಳಲ್ಲಿ ರಾಜ್ಯಪಾಲರು ಮಾಡಬೇಕೇನು?"

'ಯಾಕಾಗಬಾರದು?'

"ಬಹುದೂನ್ನಿ. ಅಷ್ಟರಲ್ಲಿ ಕನ್ನಡ ಬೇಡವಾದವರು ರಾಷ್ಟ್ರಪತಿಗಳಿಗೆ ತಂತಿ ನೀಡಿದರೆ?"

'ಏನೂಂತ?'

'ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡುವಲ್ಲಿನ ರಾಜ್ಯಪಾಲರ ಉತ್ಸಾಹ ಮಿತಿಮೀರುತ್ತಿದೆ; ಇದು ರಾಜ್ಯದ ಹಿತಕ್ಕೆ ಸಲ್ಲದು. ಈ ಬಗ್ಗೆ ಸದ್ಯಕ್ಕೆ ಯಥಾಸ್ಥಿತಿ ಮುಂದುವರಿಯಬೇಕು. ಜನಪ್ರಿಯ ಸರಕಾರಕ್ಕೇ ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಬಿಡುವ ಬಗ್ಗೆ ಅವಕಾಶವಿರಿಸಬೇಕು....'

'ಅಲ್ವೆ, ಹೀಗೆಲ್ಲ ರಾಜ್ಯಪಾಲರು ಏನೂ ಮಾಡಬಾರದೆಂದು ಅವರ ಕೈಕಟ್ಟಿ ಬಿಡುವುದೆ?'

'ನೋಡಿ, ಇದು ಪ್ರಜಾಸತ್ತೆ ತಾನೆ? ರಾಷ್ಟ್ರಪತಿಯಾಡಳಿತ ಪ್ರಜಾಸತ್ತೆಗೆ ಮಾರಕ. ಆದ್ದರಿಂದ ಈ ಅವಧಿಯಲ್ಲಿ ಏನೇ ಆದರೂ ಅದು ಪ್ರಜೆಗಳಿಗೆ ಹಿತ ತರುವುದಿಲ್ಲ. ಆದ್ದರಿಂದ ರಾಜ್ಯಪಾಲರು ತೆಪ್ಪಗೆ ಕುಳಿತಿರುವುದರಿಂದಲೇ ಪ್ರಜಾಸತ್ತೆಗೆ ಅಹಿತವಾಗುವುದಾದರೂ ತಪ್ಪುತ್ತದೆ....'

'ಅಲ್ವೆ, ರಾಷ್ಟ್ರಪತಿ ಆಡಳಿತೆಯು ಚುರುಕುತನ....'

'ನೋಡಿ, ಪ್ರಜಾಸತ್ತೆಯೊಂದೇ ಪ್ರೌಢ. ಉಳಿದದ್ದೆಲ್ಲ ಬಾಲಿಷ; ಹುಡುಗನ ಚು

(ಐಂಬತ್ತನೇ ಪುಟ ನೋಡಿರಿ)

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ !

ಶ್ರೀ ಕರುಣಾನಿಧಿಯವರ

ಅಸಾಧ್ಯವಾದ ಅಸಾಧು ಬಯಕೆ

ಬಂಗ್ಲಾ ದೇಶದಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಹೋರಾಟ ಬಿಗಿಯಾಗುತ್ತಲೇ ಇದೆ. ಚಳುವಳಿಗಾರರನ್ನು ಅಡಗಿಸಲು ಪಾಕ್ ಸೈನ್ಯ ಅಶಕ್ತವಾಗುತ್ತಿದೆ; ಅಮೆರಿಕೆ–ರಶ್ಯ–ಚೀನಗಳು ನೀಡಿದ ಟ್ಯಾಂಕರ್–ಬಾಂಬರ್ ಫೈಟರ್‌ಗಳೂ ಬಂಗಾಳಿಗಳ ದೃಢ ಸಂಕಲ್ಪದ ಮುಂದೆ ತಲೆಬಾಗಿವೆ.

ಸಂರಕ್ಷಣೆ, ವಿದೇಶ ನೀತಿಗಳಂತಹ ಒಂದೆರಡು ಪ್ರಮುಖ ವಿಷಯಗಳನ್ನು ಬಿಟ್ಟು ಬಂಗ್ಲಾಕ್ಕೆ ಸ್ವಾಯತ್ತತೆ ಬೇಕು ಎಂಬುದು ವಂಗಬಂಧು ಮುಜಿಬುರ್ ರಹಮಾನರ, ಅವರ ಪಕ್ಷದ ನೀತಿಯಾಗಿತ್ತು. ಆದರೆ, ಮಾಜಿ ವಿದೇಶ ಮಂತ್ರಿ ಜಡ್. ಎ. ಭುಟ್ಟೊ ಪ್ರಭುಗಳು ಕಿವಿಯೂದಿದ್ದರಿಂದಲೂ ತನ್ನ ಅಧಿಕಾರ ಸಡಿಲವಾಗುವುದರಿಂದಲೂ ದಂಡಪತಿ ಯಾಹ್ಯಾಖಾನರು ಈ ನೀತಿಯನ್ನು ವಿರೋಧಿಸಲೇ ಬೇಕಾಯ್ತು. ಬಂಗ್ಲಾ ದೇಶೀಯರು ತನ್ನ ಬೇಡಿಕೆಯನ್ನು ಕೇಂದ್ರ ಮನ್ನಿಸದ್ದರಿಂದ ಏಕಪಕ್ಷೀಯವಾಗಿ ಸ್ವಾತಂತ್ರ್ಯ ಘೋಷಿಸಿಕೊಂಡರು; ಸ್ವತಂತ್ರ ಬಂಗ್ಲಾದೇಶವನ್ನು ಗಣರಾಜ್ಯವನ್ನಾಗಿ ಕರೆದುಕೊಂಡರು.

ಬಂಗ್ಲಾ ಸ್ವಾತಂತ್ರ್ಯ ಹೋರಾಟವು ಸದ್ಯ ಪಾಕಿಸ್ತಾನದ ಆಂತರಿಕ ವಿಷಯ. ಆದರೂ ಈ ಹೋರಾಟಕ್ಕೆ ಮೊತ್ತಮೊದಲಿಗೆ ಭಾರತೀಯ ಸಂಸತ್ತು ಮಾನವತೆಯ ನೆಲೆಯಲ್ಲಿ ತನ್ನ ಸಹಾನುಭೂತಿ ತೋರಿಸಿತು. ಬಂಗ್ಲಾ ಸರಕಾರವನ್ನು ಮನ್ನಿಸುವ ಕುರಿತಾಗಿಯೂ ಭಾರತೀಯ ನಾಯಕರಲ್ಲಿ ಭಿನ್ನಮತವಿಲ್ಲ. ಆದರೂ ಪರಿಣಾಮವನ್ನು ಬಹುದೂರ ಗಮನಿಸಬೇಕಾದ್ದರಿಂದ ತುಸು ವಿಳಂಬವಾಗುತ್ತಿದೆಯಷ್ಟೆ. ಬಂಗ್ಲಾ ಸರಕಾರಕ್ಕೆ ಮನ್ನಣೆ ನೀಡುವಲ್ಲಿಯೂ ಭಾರತ ಮೊತ್ತಮೊದಲಿಗನಾಗುವುದು ಅಸಂಭವವಲ್ಲ.

ಪಾಕಿಸ್ತಾನದ ಸೈನ್ಯಪಡೆಗಳು ವಿಮುಖಗೊಳ್ಳುತ್ತಲೇ ಬರುತ್ತಿವೆ. ತನ್ನ ಸೋಲಿನ ಸೇಡನ್ನು ಪಾಕ್ ಸೇನೆಯು ನಿಸ್ಪೃಹ ಬಂಗಾಳಿಗಳ ಮೇಲೆ ತೋರಿಸಹೊರಟಿದೆ; ಪಾಕ್ ಸರಕಾರವು ಭಾರತ ಸರಕಾರದ ಮೇಲೆ ಪ್ರಯೋಗ ಮಾಡುತ್ತಿದೆ. ಕಲ್ಕತ್ತೆಯಲ್ಲಿನ ತನ್ನ ಡೆ| ಹೈಕಮಿಶನರ್ ಕಛೇರಿಯನ್ನು ಮುಚ್ಚಲು ನಿರ್ಧಾರ ಮಾಡಿದ ಪಾಕ್ ಸರಕಾರ ಢಾಕ್ಕಾದಲ್ಲಿನ ಅಂತಹುದೇ ಭಾರತೀಯ ಕಛೇರಿಯನ್ನು ಮುಚ್ಚುವಂತೆ ಕೇಳಿಕೊಂಡದ್ದು ಈ ದಾರಿಯಲ್ಲಿನ ಒಂದು ಹೆಜ್ಜೆ. ಭಾರತದ ಬಂಗ್ಲಾಪರ ನೀತಿಯಿಂದಾಗಿ ಪಾಕಿಸ್ತಾನ ಭಾರತದೊಂದಿಗಿನ ತನ್ನೆಲ್ಲ ರಾಜ್ಯಕೀಯ ಸಂಬಂಧವನ್ನೂ ಕಡಿದುಕೊಂಡರೆ ಅಸಹಜವಾಗುವುದಿಲ್ಲ. ಈ ನಡುವೆ ಬಂಗ್ಲಾ ಸರಕಾರವನ್ನು ಭಾರತವು ಮನ್ನಿಸಿದರೆ, ಮರುಕ್ಷಣವೇ ಇಸ್ಲಾಮಾಬಾದಕ್ಕೂ ಡಿಲ್ಲಿಗೂ ಇರುವ ಶಿಥಿಲ ಸಂಬಂಧ ನುಚ್ಚುನೂರಾಗುವುದು.

ಭಾರತ ಸರಕಾರದ ಬಂಗ್ಲಾ ನೀತಿಯು ತಮಿಳುನಾಡಿನ ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರಿಗೊಂದು ಬಗೆಯ ನವಚೈತನ್ಯ ತಂದುಕೊಟ್ಟಿದೆ. ಪ್ರತ್ಯೇಕ ದ್ರವಿಡಸ್ಥಾನದ ದೊಡ್ಡ ಕನಸನ್ನು ಹೊತ್ತುಕೊಂಡೇ ದ್ರಾವಿಡ ಕಳ್ರಗಂ ಹುಟ್ಟಿದ್ದು. ಹಿಂದೂ ದೇವದೇವತೆಗಳ ಮೂರ್ತಿಭಂಜನ, ಚಿತ್ರದಹನ ಇವೆರಡರ ಅವಹೇಳನಗಳಿಂದ ವ್ಯಕ್ತವಾದ ಅದರ ಹೋರಾಟ ಬ್ರಾಹ್ಮಣ ವಿರೋಧವನ್ನೂ ತೋರ್ಪಡಿಸಿತು. ಪವಿತ್ರವಾದ ಭಾರತೀಯ ಸಂವಿಧಾನದ ಪ್ರತಿಗಳನ್ನೇ ಸುಟ್ಟಿತು; ಹಿಂದೀ–ಸಂಸ್ಕೃತ ಭಾಷೆಗಳನ್ನು ತ್ಯಜಿಸಿ ಇಂಗ್ಲಿಷನ್ನು ಮುತ್ತಿಟ್ಟಿತು.

ಇದರಿಂದ ತನ್ನ ಬೇಳೆ ಬೇಯಿಸಿಕೊಳ್ಳಲು ಅಶಕ್ಯವೆಂಬುದನ್ನು ಕಂಡುಕೊಂಡ ದೂರಾಲೋಚಕರಾದ ಕೆಲವರು ಸಂವಿಧಾನದ ತಳಹದಿಯ ಮೇಲೆಯೇ ನಿಲ್ಲುವುದಾಗಿ ಹೇಳಿ, ಅಧಿಕಾರಕ್ಕೆ ಬಂದರು. ಪ್ರತ್ಯೇಕತೆಯ ಬೇಡಿಕೆಯನ್ನು ಬಿಟ್ಟುಕೊಟ್ಟ ಶ್ರೀ ಅಣ್ಣಾ ದೊರೈಯವರ ಗುಂಪು ದ್ರಾವಿಡ ಮುನ್ನೇತ್ರ ಕಳ್ರಗಂ ಆಯ್ತು. ಹಾಗಿದ್ದರೂ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಬೇಕೆಂಬ ಮಾತಿಗೆ ಬಲವುಳಿಯಿತು.

ಅಣ್ಣಾದೊರೈಯವರು ನಿಧನರಾದ ಬಳಿಕ ಶ್ರೀ ಕರುಣಾ ನಿಧಿಯವರು ಅವರ ಸ್ಥಾನವೇರಿದರು. ಇವರು ತಮ್ಮ ಹಳೆಯ ಗುಳಿಗೆಗಳನ್ನು ಒಂದೊಂದಾಗಿ ಉರುಳಿಸಹೊರಟಿದ್ದಾರೆ. ತಮಿಳುನಾಡು ಸರಕಾರಕ್ಕೆ ಪ್ರತ್ಯೇಕ ಧ್ವಜವೊಂದುಬೇಕೆಂದವರು ಸಾಕಷ್ಟು ಹಗರಣವೆಬ್ಬಿಸಿದರು. 'ಉಳಿದವರಿಗೆ ಬೇಡವಾದರೆ ಕೊಡಬೇಡಿ; ನಾವು ಕೇಳುತ್ತೇವೆ; ನಮಗೆ ಕೊಡಿ' ಎಂದೂ ಹೇಳಿದರು. ರಾಜ್ಯಗಳಿಗೆ ಅಧಿಕ ಸ್ವಾಯತ್ತತೆಯನ್ನು ನೀಡುವಂತೆ ರಾಜ್ಯಾಂಗ ತಿದ್ದುಪಡಿ ಮಾಡಬೇಕೆಂಬ ಅವರ ಬೇಡಿಕೆ ಹೊಸತಲ್ಲ.

ವಂಗ ಬಂಧು ಮುಜಿಬುರ್ ರಹಮಾನರು ಬಯಸಿದ್ದ ಅಧಿಕ ಸ್ವಾಯತ್ತತೆಗೂ ಕರುಣಾನಿಧಿ ಕೇಳುತ್ತಿರುವ ಸ್ವಾಯತ್ತಾಧಿಕಾರಕ್ಕೂ ಹೆಚ್ಚಿನ ಅಂತರವಿರುವುದಿಲ್ಲ. ಮುಜಿಬರನ್ನು ಭಾರತೀಯ ಸಂಸತ್ತು ಸಹಾನುಭೂತಿಯಿಂದ ಕಾಣುವುದಾದರೆ, ಕರುಣಾನಿಧಿಯವರಿಗೆ ಅದೇಕೆ ಪ್ರತ್ಯೇಕ ಧ್ವಜ ಕೊಡಬಾರದು? ಅವರನ್ನು ಮರಿ ಪ್ರಧಾನಿಯೆಂದೇಕೆ ಕರೆಯ ಬಾರದು? ಅದುದರಿಂದಲೇ ತಮ್ಮ ಪಕ್ಷದ ಸಾಮಾನ್ಯ ಸಭೆಯಲ್ಲಿ ಕರುಣಾನಿಧಿ ಮಾತನಾಡುತ್ತ ತನ್ನ ಹೃದಯವನ್ನು ಬಿಚ್ಚಿ ತೋರಿಸಿದರು.

'ರಾಜ್ಯಗಳಿಗೆ ಸ್ವಾಯತ್ತಾಧಿಕಾರ ನೀಡಬೇಕೆಂಬ ಬೇಡಿಕೆಯನ್ನು ದೀರ್ಘಕಾಲ ಅಲಕ್ಷಿಸಿದ್ದೇ ಆದರೆ, ಅವು ಪ್ರತ್ಯೇಕಗೊಳ್ಳುವುದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಪ್ರತ್ಯೇಕಗೊಳ್ಳುವ ಭಾವನೆ ಬೇರೂರಿದರೆ ಅದಕ್ಕೆ ಕೇಂದ್ರವೇ ಹೊಣೆ...ರಾಜ್ಯಗಳನ್ನು ನಿಷ್ಪಕ್ಷಪಾತವಾಗಿ ನೋಡಿಕೊಳ್ಳಲು ಸಂವಿಧಾನದಲ್ಲಿ ಸೂಕ್ತ ತಿದ್ದುಪಡಿ ಅಗತ್ಯ.... ಸ್ವಾಯತ್ತತೆಯ ಗುರಿ ದೇಶದ ಐಕ್ಯವನ್ನು ಮತ್ತಷ್ಟು ಬಲಪಡಿಸುವುದೇ ಆಗಿದೆ....'

ಅಂದರೆ, ಸದ್ಯದ ಸಂವಿಧಾನವು ರಾಜ್ಯಗಳಿಗೆ ಕೊಡ ಮಾಡಿರುವ ಅಧಿಕಾರಗಳಿಂದ ದ್ರಾ. ಮು. ಕ. ತೃಪ್ತವಾಗಿಲ್ಲ. ಕೇಂದ್ರದಿಂದ ಯಾವ ಯಾವ ಅಧಿಕಾರಗಳನ್ನು ರಾಜ್ಯ ಬಯಸುತ್ತದೆಯೆಂಬುದನ್ನು ಪಟ್ಟಿ ಮಾಡಲು ಅದೊಂದು ಸಮಿತಿಯನ್ನು ಮಾಡಲಿದೆ. ಸಮಿತಿಯ ಸಿಫಾರಸುಗಳ ಮೇಲೆ ನಾಣ್ಯ–ವಿದೇಶ ನೀತಿ–ರಕ್ಷಣೆ ಹೀಗೆ ಕೆಲವೊಂದನ್ನು ಬಿಟ್ಟು ಉಳಿದೆಲ್ಲ ಅಧಿಕಾರಗಳನ್ನದು ಬಯಸ ಬಹುದು.

ಆದರೆ, ಶ್ರೀ ಕರುಣಾನಿಧಿಯವರಿಗೇ ತನ್ನ ಬಯಕೆಯು ಅದೆಷ್ಟು ಅಸಾಧುವೆಂದು ಅನಿಸಿರ ಬೇಕು. ಆದುದರಿಂದಲೇ ಮರುದಿನವೇ 'ಚಳುವಳಿ ಹೂಡುವುದೆಂದು' ತನ್ನ ಮಾತಿನ ಅರ್ಥವಲ್ಲವೆಂದು ಸ್ಪಷ್ಟೀಕರಿಸಿದರು. ತನ್ನ ಬಯಕೆಯ ಬಗ್ಗೆ ಕಳೆದ ವರ್ಷವೇ ಬಿಗು ಧೋರಣೆವಹಿಸಿದ್ದರೆ ಅವರು ಯಶಗಳಿಸುವ ಸಾಧ್ಯತೆಯಿದ್ದಿರ ಬಹುದಿತ್ತು. ಆದರೆ, ನಿಕಟ ಭವಿಷ್ಯದಲ್ಲಿ ಅವರ ಆಶೆ ಈಡೇರುವುದಿಲ್ಲ. ಪ್ರಧಾನಿ ಇಂದಿರಾ ಗಾಂಧಿ ಅಧಿಕಾರವಿಲ್ಲದ ಕೇಂದ್ರ ನಾಯಿಕೆಯಾಗಿ ಉಳಿಯ ಬಯಸುವುದಿಲ್ಲ. ಆಕೆಯು ಕೂದಲು ಕೊಂಕಿಸಲಾರದಷ್ಟು ದೃಢವಾಗಿ ಸದ್ಯ ನಿಂತಿದ್ದಾರೆ.

'ಪ್ರತ್ಯೇಕತೆಯನ್ನು ತಪ್ಪಿಸಲಾಗುವುದಿಲ್ಲ'ವೆಂಬ ಕರುಣಾನಿಧಿ ಸೂಕ್ತಿ ಪ್ರಧಾನಿಗೊಂದು ಆಹ್ವಾನ. ಇದೀಗ ಮುಜಿಬುರ್ ಮಾಡಿದಂತೆಯೇ ನಾಳೆ ಕರುಣಾನಿಧಿಯವರೂ ಸ್ವಾಯತ್ತತೆಯ ಹೆಸರಲ್ಲಿ ಚಳುವಳಿ ತೊಡಗಿಯಾರೆ? ಮುಜಿಬ್ ಪರರಾದವರು ನಿಧಿಪರರೂ ಆಗುತ್ತಾರೆಯೆ? ಆದರೆ, ಕರುಣಾನಿಧಿಯವರ ಮಾರ್ಗ ಕಲ್ಲು ಮುಳ್ಳುಗಳಿಂದ ತುಂಬಿದೆ. ಮುಜಿಬುರ್ ಅವರಿಗಿದ್ದ ಏಕ ಕಂಠೀಯತೆ, ಏಕ ಮನೋವೃತ್ತಿ ಇವರಿಗಿಲ್ಲ. ಮುಖ್ಯವಾಗಿ ಪಾಕಿಸ್ತಾನಗಳಲ್ಲಿ ಬಹುಸಂಖ್ಯಾಕರೇ ಬಂಗಾಳಿಗಳು. ೫೫ ಕೋಟಿ ಭಾರತೀಯರಲ್ಲಿ ೩ಕೋಟಿ ತಮಿಳರ ಬೇಡಿಕೆ ಬಹು ಸಂಖ್ಯಾಕರ ಇಚ್ಛೆಯಾಗುವುದು ಸಾಧ್ಯವಿಲ್ಲ.

ಕೈಗೆ ಬಂದಿರುವ ಅಧಿಕಾರಗಳಿಂದಲೇ ತೃಪ್ತಿಹೊಂದಿ ಅವನ್ನು ಸಮರ್ಥ ರೀತಿಯಿಂದ ಬಳಸಿ ರಾಜ್ಯ ಹಿತ ಸಾಧಿಸುವುದೇ ಸದ್ಯ ಶ್ರೀ ಕರುಣಾನಿಧಿಯವರಿಗೆ ಒಳ್ಳೆಯದು. ಇದಕ್ಕೆ ವ್ಯತಿರಿಕ್ತವಾಗಿ ಸ್ವಾಯತ್ತತೆಯ ಕೂಗು ಹಾಕುತ್ತ ಜನಮನವನ್ನು ಕಲಕ ತೊಡಗಿದರೆ, ಅವರು ಮತ್ತೊಬ್ಬ ಶೇಖ ಅಬ್ದುಲ್ಲಾ ಮಾತ್ರ ಆಗುತ್ತಾರೆ.

●●

ಹಿಂಸೆ ಮಾಡಬೇಡ. ಪ್ರತಿಯೊಂದು ಕಾರ್ಯದಲ್ಲಿಯೂ ಇದೇ ವ್ರತವನ್ನಿಡು. ಯಾಕಂದರೆ ನಮ್ಮ ಧರ್ಮಶಾಸ್ತ್ರದಲ್ಲಿಯೂ ಹೇಳಿದ್ದೇನೆಂದರೆ ಹಿಂಸೆಯಕ್ಕಿಂತಲೂ ಹೆಚ್ಚಿನ ತಪ್ಪು ಮತ್ತಾವುದೂ ಇಲ್ಲ.

(ಕವಿ ಹಾಫೀಜ್)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
131 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¾ % ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ

ಮನೆ–ಮದ್ದು

ಬೆಲೆ: ರೂ. 2–00

❖ ❖ ❖

ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1–50

❖ ❖ ❖

ಸುಲಭದಲ್ಲಿ ಇಂಗ್ಲೀಷ್

ಆಂಗ್ಲ ಸ್ವಯಂಬೋಧಿನಿ ರೂ. 2–00

❖ ❖ ❖

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು
ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ರಶ್ಯದತ್ತ ಭಾರತ ಒಲಿದಿದೆಯೆ?

ಇನ್ನೋ, ಈ ಇಂದಿರಾ ಕಮ್ಯೂನಿಸ್ಟರಿಂದು ಇಂದು ಕಮ್ಯುನಿಸ್ಟ್ ಹಾಗೂ ಅವರ ಸಹಚರ ಪಕ್ಷಗಳವರನ್ನು ಬಿಟ್ಟುಳಿದ ಜನತೆ ಬೆಟ್ಟುಮಾಡಿ ತೋರಿಸುತ್ತಿದೆ. ದಿ ಇಂಡಿಯನ್ ಎಕ್ಸ್‌ಪ್ರೆಸ್ಸಿನ ಸಂಪಾದಕ ಫ್ರೇಂಕ್ ಮೋರೇಸರು ಯಾವ ಪಕ್ಷದವರೂ ಅಲ್ಲವಾದರೂ ಭಾರತದ ರಾಜಧಾನಿ ಮೋಸ್ಕೋದಲ್ಲಿರುವಂತಿದೆ, ಭಾರತವನ್ನಾಳುತ್ತಿರುವದು ಇಂದಿರಾ ಸರ್ಕಾರವಲ್ಲ, ರಷ್ಯಾ ಸರಕಾರವೆಂದು ತಮ್ಮ ಪತ್ರಿಕೆಯಲ್ಲಿ ಬರೆದಿರುವರು. ಚುನಾವಣೆಯ ಸಮಯ ಅವರು ಅದೇ ಪತ್ರಿಕೆಯಲ್ಲಿ ಯಾವದು ಮಿಥ್ಯ, ಯಾವದು ಸತ್ಯವೆಂದು ಇಂದಿರಾಜೀಯವರ ಕಮ್ಯೂನಿಸ್ಟ್ ಮನೋಭಾವನೆಯ ಸ್ಪಷ್ಟ ಚಿತ್ರವನ್ನು ವಾಚಕರ ಮುಂದಿಟ್ಟಿದ್ದರು.

ಎಡಪಕ್ಷಗಳಿಂದು ಕರೆದುಕೊಳ್ಳುವದರಲ್ಲಿ ಹೆಮ್ಮೆಪಟ್ಟುಕೊಳ್ಳುತ್ತಿರುವ ಸಂಯುಕ್ತ ಸೋಷ್ಯಾಲಿಸ್ಟ್ ಪಾರ್ಟಿ ಹಾಗೂ ಪ್ರಜಾ ಸೋಷ್ಯಾಲಿಸ್ಟ್ ಪಾರ್ಟಿ ಕೂಡಾ ಅವರನ್ನು ಕಮ್ಯುನಿಸ್ಟರೆಂದು ಕರೆಯುತ್ತಿದೆ. ಕಮ್ಯುನಿಸ್ಟ್ ಇಂದಿರಾಜಿಯನ್ನೆದುರಿಸಲು ದೇಶಭಕ್ತರೆಲ್ಲರೂ ಒಂದಾಗಬೇಕೆಂದು ಜಾರ್ಜ್ ಫೆರ್ನಾಂಡಿಸ್ ಹೇಳಿದಲ್ಲಿ ರಾಜನಾರಾಯಣರು ಇಂದಿರೆಯನ್ನು ಸೋಲಿಸಿರೆಂಬ ಕರೆಯನ್ನಿತ್ತು ಅವರಿಗೆದುರಾಗಿ ನಿಂತರು.

ಮೊನ್ನೆಯವರೆಗೂ ಅವರೊಡನೆ ಒಂದಾಗಿದ್ದವರಿಗೆ ಈ ವಿಷಯ ಇನ್ನು ಚೆನ್ನಾಗಿ ಗೊತ್ತು. ೧೯೭೦ ಜೂನ್ ಇಪ್ಪತ್ತರಂದು ನಿಜಲಿಂಗಪ್ಪನವರು ಮಾತಾಡುತ್ತ, ಆಡಳಿತ ಪಕ್ಷವು ಪ್ರಜಾಪ್ರಭುತ್ವ ಹಾಗೂ ಸಮಾಜವಾದದ ಹೆಸರಿನಲ್ಲಿ ರಷ್ಯಾದ ಬಳಿ ದೇಶವನ್ನು ಅಡವು ಇಡುತ್ತದೆಯೆಂದರು.

೧೯೭೦ ಜುಲೈ ಇಪ್ಪತ್ತೊಂದರಂದು ದಕ್ಷಿಣಾಂಚಲ ಪ್ರದೇಶ ಸಂಸ್ಥಾ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ತಿರುಪತಿಯಲ್ಲಿ ಸೇರಿದ್ದಾಗ ಪ್ರಜಾಪ್ರಭುತ್ವವನ್ನೂ ಸ್ವಾತಂತ್ರ್ಯವನ್ನೂ ಭಾರತವನ್ನೂ ರಕ್ಷಿಸಲು ಕರೆ ಇತ್ತಿತು.

೧೯೭೦ ದಶಂಬರದಲ್ಲಿ ಜವಾಹರಲಾಲ ನೆಹ್ರೂ ನಗರದಲ್ಲಿ ಆಲ್ ಇಂಡಿಯಾ ಸಂಸ್ಥಾ ಕಾಂಗ್ರೆಸ್ ಕಮಿಟಿ ಸೇರಿದ್ದಾಗ ಅಲ್ಲಿ ಮಾತಾಡುತ್ತಿದ್ದ ಮುರಾರ್ಜಿ ದೇಸಾಯಿಯವರು ಸರಕಾರವು ಕಮ್ಯೂನಿಸ್ಟರ ಮತ್ತು ಜಾತೀಯವಾದಿಗಳ ಆಧಾರದ ಮೇಲಿರುವದರಿಂದ ಪ್ರಜಾಪ್ರಭುತ್ವಕ್ಕೆ ಅಪಾಯವನ್ನು ತಂದೊಡ್ಡಿದೆಯೆಂದರು ಮತ್ತು ಮುಂದರಿದು, ಅಂತರಾಷ್ಟ್ರೀಯ ಅಂಗದಲ್ಲಿ ಭಾರತವನ್ನು ಇಂದಿರಾ ಸರ್ಕಾರವು ರಷ್ಯಾದ ಪ್ರಭಾವಕ್ಕೊಳಪಡಿಸಿದೆಯೆಂದರು. ಸುಚೇತಾ ಕೃಪಲಾನಿಯವರು, ಅಬ್ದುಲ್ ಗನಿಧಾರ್, ಸದೋಬಾ ಪಾಟೀಲ್ ಮೊದಲಾದವರೂ ಇದೇ ಅಭಿಪ್ರಾಯ ಪಟ್ಟರು.

ಹಿರಿಯ ರಾಜಕಾರಣಿ ರಾಜಾಜಿಯವರು ಅದೇ ವೇಳೆ ಇವರೊಡನೆ ದನಿಗೂಡಿಸಿದರು. 'ನನಗೆ ಬೇಕಾಗಿರುವದಾವರೂ ಆಕೆಯ ರಷ್ಯಾಪರ ವರ್ತನೆಯಿಂದಾಗಿ ದೇಶಕ್ಕೆ ಬಂದಿರುವ ಕುತ್ತಿನಿಂದ ದೇಶವನ್ನು ಕಾಪಾಡುವದೇ ಇದೆ...' ಎಂದರು. 'ಇಂದಿರಾ ಗಾಂಧಿ ಹಾಗೂ ಅವರ ಸರಕಾರವು ಸರ್ವಾಧಿಕಾರಿ ರಷ್ಯಾದ ಉಪಭೂಗ್ರಹವಾಗುತ್ತಿದೆ' ಎಂದು ಮಿನು ಮಸಾನಿ ಸೂಚಿಸಿದರು.

೧೯೭೦ ಜುಲೈ ಇಪ್ಪತ್ತಮೂರರಂದು ಅಟಲಬಿಹಾರಿ ವಾಜಪೇಯಿಯವರು. ಅಧಿಕಾರದ ಅಂತಸ್ತನ್ನು ಆಕ್ರಮಿಸಲು ಕಮ್ಯುನಿಸ್ಟರು ಕಾತರರಾಗಿದ್ದಾರೆ. ಅದಕ್ಕೆ ಇಂದಿರಾ ಕಾಂಗ್ರೆಸ್ಸಿನೊಂದಿಗಿರುವ ಸ್ನೇಹ ಸಂಬಂಧವೇ ಕಾರಣವಿದೆಯೆಂದರು.

ಇಂದಿರಾ ಸಚಿವ ಸಂಪುಟದ ಬಳಿ ಕೆಲಸಿಗಿನರು ಭಾರತೀಯ ಜನಸಂಘದ ಬೆಳವಣಿಗೆ ಕುರಿತು ಕಳವಳ ವ್ಯಕ್ತಪಡಿಸುತ್ತ, ಅದನ್ನು ಬೆಳೆಯಲು ಬಿಡಬಾರದೆಂದು ಹೇಳಿದಾಗ ಆರ್ಥಿಕ ಮಂತ್ರಿ ಮುರಾರ್ಜಿಯವರು, ಇದು ದೇಶದೊಳಗಿನ ವಿಷಯವಿದೆ, ಇದರಲ್ಲಿ ನೀವು ತಲೆಹಾಕಬಾರದೆಂದು ತಡೆಗಟ್ಟಿದರು. ಕೆಲವು ದಿನಗಳ ನಂತರ ಮುರಾರ್ಜಿಯವರಿಗೆ ಇಂದಿರಾಜೀ ಅರ್ಧ ಚಂದ್ರ ಪ್ರಯೋಗ ನಡೆಸಿದರು.

ಕೇರಳದಲ್ಲಿ ಮಧ್ಯಕಾಲ ಚುನಾವಣೆ ನಡೆದಾಗ ಅಲ್ಲಿಗೆ ಪ್ರಚಾರಕ್ಕಾಗಿ ಇಂದಿರಾ ಗಾಂಧಿ ಹೋಗಿದ್ದರು. ತನ್ನ ಪಕ್ಷದ ಅಭ್ಯರ್ಥಿಗಳಿಗೆ ಅವರು ಮತ ಕೇಳುವದು ಸರಿಯೇ. ಆದರೆ ಹೋದೆಡೆಗಳಲ್ಲೆಲ್ಲೂ ತನ್ನ ಪಕ್ಷದ ಅಭ್ಯರ್ಥಿಗಳಿಗೂ ಸಮಾಜವಾದಿ ಕಾರ್ಯಗಳನ್ನೂ ಬೆಂಬಲಿಸುವ ಪಕ್ಷಗಳ ಅಭ್ಯರ್ಥಿಗಳಿಗೂ ಮತದಾನ ಮಾಡಲು ಅವರು ಕೇಳಿಕೊಂಡರು, ಈ ಬೆಂಬಲಿಸುವ ಪಕ್ಷಗಳ್ಯಾವವು? ಮುಖ್ಯವಾಗಿ ಮುಸ್ಲಿಂ ಲೀಗು ಮತ್ತು ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ (ರಷ್ಯಾಪರ-ಬಲಕಮ್ಯುನಿಸ್ಟರು) ಅವರು ಮಾತಾಡುವಾಗ ಕಮ್ಯೂನಿಸ್ಟ್ ಧುರೀಣರೂ ಅದೇ ವೇದಿಕೆಯ ಮೇಲಿರುತ್ತಿದ್ದರು. ಅಟಲಬಿಹಾರಿ ವಾಜಪೇಯಿಯವರಿಗೆ ಬಹಳ ಆಶ್ಚರ್ಯವನ್ನುಂಟುಮಾಡಿದುವು. ಅವರು ಕೇರಳದಲ್ಲಿ ಪ್ರಚಾರ ಸಭೆಯಲ್ಲಿ ಮಾತಾಡುತ್ತ ಅದನ್ನು ವ್ಯಕ್ತಪಡಿಸಿದರು:—'ಯಾವಾಕೆಯು ಕಮ್ಯುನಿಸ್ಟರ ವಿರುದ್ಧ ಪ್ರಚಾರ ನಡೆಸಲು ಒಮ್ಮೆ ಬಂದಿದ್ದರೋ ಅವರೇ ಇಂದು ಕಮ್ಯುನಿಸ್ಟರ ಪರ ಪ್ರಚಾರ ನಡೆಸಲು ಬಂದಿರುವದು ಬಹಳ ಆಶ್ಚರ್ಯ.'

ಬೆಂಗಳೂರಿನ ಜನತೆ ಅಟಲಜೀಯವರಿಗೆ ನಿಧಿ ಸಮರ್ಪಿಸಿದಾಗ ಅವರು ಮಾತಾಡುತ್ತ, ಹಿಂಸಾಚಾರದಲ್ಲಿ ತೊಡಗಿರುವ ನಕ್ಸಲೀಯರಿಂದಲೇ ಅಲ್ಲದೆ ಪ್ರಧಾನಿ ಇಂದಿರಾಜೀ ಮತ್ತು ಅವರ ಬೆಂಬಲಿಗರ ಸರ್ವಾಧಿಕಾರಿ ಪ್ರವೃತ್ತಿಯಿಂದಲೂ ಪ್ರಜಾತಂತ್ರಕ್ಕೆ ಅಪಾಯ ಬಂದಿದೆ. ಕಮ್ಯೂನಿಸಂ ಮತ್ತು ಜಾತೀಯತೆಗೆ ಪ್ರಧಾನಿ ಬುದ್ಧಿಪೂರ್ವಕವಾಗಿ ಪ್ರೋತ್ಸಾಹಿಸುತ್ತಿದ್ದಾರೆ. ಕಮ್ಯೂನಿಸ್ಟರೊಡನೆ ನಾವು ಸಂಸತ್ತಿನಲ್ಲಿಯೇ ಅಲ್ಲ, ಅಗತ್ಯ ಬಂದರೆ ರಸ್ತೆಗಳಲ್ಲೂ ಹೋರಾಡಲು ಸಿದ್ಧವೆಂದು ಘೋಷಿಸಿದರು.

ಬಲರಾಜ ಮಧೋಕರು, ಕೇಂದ್ರ ಮಂತ್ರಿಮಂಡಲದಲ್ಲಿ ಕಮ್ಯುನಿಸ್ಟರು ಸೇರಿಕೊಂಡಿದ್ದಾರೆ.... ಅವರು ಒಂದೆಡೆ ಸರಕಾರೀ ಅಂಕುಶವನ್ನು ಕೈಗೆ ತೆಗೆದುಕೊಳ್ಳಲು ಆ ರೀತಿ ಪ್ರಯತ್ನಿಸುತ್ತಿರುವರಾದಲ್ಲಿ ಇನ್ನೊಂದು ದಿಕ್ಕಿನಲ್ಲಿ ಸಶಸ್ತ್ರ ಬಂಡೇಳಲು ಸಿದ್ಧತೆ ನಡೆಸುತ್ತಿದ್ದಾರೆ........ ಇಂದಿರಾ ಗಾಂಧಿ ಟ್ರೋಜನ್ ಕುದುರೆಯ ಹಾಗೆ ಇದ್ದಾರೆಂದರು.

ಕೇಂದ್ರಮಂತ್ರಿ ಮಂಡಳದೊಳಗೆ ಸೇರಿಕೊಂಡಿರುವ ಆ ಮಾಜಿ ಕಮ್ಯೂನಿಸ್ಟರ ಹೆಸರುಗಳು:—ಖಾಡಿಲ್ಕರ್, ರಘುನಾಥ ರೆಡ್ಡಿ, ಗುಜ್ರಾಲ್, ನಂದಿನಿ ಸತಪತಿ, ಗಣೇಶ್ ಇಗ್ನಾಡಿ ಎಂದು ಪ್ರಕಟವಾಯ್ತು. ಇಂದಿರಾಜೀಯವರ ಸಮೀಪದಲ್ಲಿರುವವರಲ್ಲಿ ಅರ್ಜುನ ಅರೋರಾ, ಶಶಿಭೂಷಣ್, ಚಂದ್ರಜಿತ ಯಾದವ, ಲಕ್ಷ್ಮೀಕಾಂತಮ್ಮ, ಸಾವಿತ್ರಿ ನಿಗಂ ಮುಂತಾದವರು ಹಿಂದೆ ಕಮ್ಯುನಿಸ್ಟ್ ಪಕ್ಷದಲ್ಲಿದ್ದು ಈಗ ಆ ಪಕ್ಷದ ಉದ್ದೇಶ ಸಾಧಿಸಲು ಕ್ರುಶ್ಚೇವ್-ಬುಲ್ಗಾನಿನ್ ಹಂಚಿಕೆಗನುಸಾರವಾಗಿ ಪ್ರಧಾನಿ ಗುಂಪಿನಲ್ಲಿದ್ದಾರೆ. ಇಲ್ಲಿರುವ ಕಮ್ಯುನಿಸ್ಟರಲ್ಲಿ ಕೆಲವರು ಕಾಂಗ್ರೆಸ್ಸಿಗೆ ಸೇರಿ ಕಾಂಗ್ರೆಸ್ಸನ್ನೇ ಕಮ್ಯುನಿಸ್ಟ್ ಪಾರ್ಟಿಯನ್ನಾಗಿ ಪರಿವರ್ತಿಸಬೇಕೆಂದೂ ಹಾಗೆ ಅಧಿಕಾರದ ಅಂಕುಶವನ್ನು ಕಿತ್ತುಕೊಳ್ಳಬೇಕೆಂದೂ ಅವರ ಹಂಚಿಕೆಯೆಂದು ಹೇಳಲಾಯ್ತು.

ಇವೆಲ್ಲದಕ್ಕೂ ಇಂದಿರಾಗಾಂಧಿಯವರ ಉತ್ತರ—ನಾನು ದೇಶವನ್ನು ಕಮ್ಯೂನಿಸಮಿನತ್ತ ಕೊಂಡೊಯ್ಯುತ್ತಿರುವದಿಲ್ಲ.

—ಶ್ರೀ ಶಿವಶಂಕರ

●●

ಡ ಪ್ರಯಾಣ. ಅಜಾದ್ ಹಿಂದ್ ಫೌಜ್‌ನ ರಚನೆ, ಯುದ್ಧರಂಗದಲ್ಲಿ ಅವರ ಚಟುವಟಿಕೆ ಮತ್ತು 1943ನೇ ಡಿಸೆಂಬರ್ ತಿಂಗಳಲ್ಲಿ ಅವರು ಅಂಡಮಾನ ದ್ವೀಪದ 'ಸೆಲ್ಯುಲರ್ ಕಾರಾಗ್ರಹ'ಕ್ಕೆ ನೀಡಿದ ಬೇಟಿ ಇತ್ಯಾದಿ ಛಾಯ ಚಿತ್ರಗಳು ಆಕರ್ಷಣೀಯವಾಗಿವೆ. ನೇತಾಜಿ ಅವರು 1944ರಲ್ಲಿ ಅಂಡಮಾನ್ ದ್ವೀಪ ಕರಾವಳಿಯಿಂದ ಭಾರತದತ್ತ ನೋಡುತ್ತಿರುವ ಚಿತ್ರವು ಅವರ ಭಾವುಕತೆಯ ಪ್ರತಿಬಿಂಬವಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಹಾಗೂ ಮೋಕ್ಷವನ್ನು ಕೊಡಬಲ್ಲ ಗುರುವನ್ನು ಹುಡುಕಿಕೊಂಡು ಹೊರಟ ಯುವಕ ಸುಭಾಸರಿಗೆ ದೊರೆತದ್ದು ನಿರಾಶೆಯ ಮರೀಚಿಕೆ.

ನೇತಾಜಿ 'ವಾಂಡರರ್'—ಬಿ.ಎಲ್.ಎ. 7169–ಕಾರಿನಲ್ಲಿ ರಾತ್ರಿ ನೇತಾಜಿ ಭವನದಿಂದ ಅಜ್ಞಾತ ಪ್ರಯಾಣ ಆರಂಭಿಸಿದ ಚಿತ್ರ ಅರ್ಥಗರ್ಭಿತವಾಗಿದೆ.

ನೇತಾಜಿ ಐ.ಎನ್.ಎ. ದಂಡನಾಯಕರಾಗಿದ್ದಾಗ, ಅವರಿಗೆ ಅರ್ಪಿಸಲಾದ ಅನೇಕ ಕಾಣಿಕೆಗಳು ಈ ಸಂಗ್ರಹಾಲಯದಲ್ಲಿವೆ. ರೋಮಾಂಚನಕಾರಿಯಾದ ಅವರ ಜೀವನ ಚರಿತ್ರೆ ಜಗತ್ತಿಗೆ ಈಗ ಒಂದು ದಂತಕತೆ.

●●

ನವಯುಗ

ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಸಿಂಡಿಕೇಟ್ ಬ್ಯಾಂಕಿನಿಂದ ಉದ್ಯಮಕ್ಕೆ ನೆರವು

ಉತ್ತರಕನ್ನಡದ ಕಾರವಾರದಲ್ಲಿ ಕಳೆದ ತಿಂಗಳ ಕೊನೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ಸಂಬಂಧಿ ವಿಚಾರಗೋಷ್ಠಿಯೊಂದು ನಡೆಯಿತು. ಸಿಂಡಿಕೇಟ್ ಬ್ಯಾಂಕ್ ಮತ್ತು ಜಿಲ್ಲಾಭಿವೃದ್ಧಿ ಮಂಡಳಿಗಳು ಸಂಯುಕ್ತವಾಗಿ ಇದನ್ನು ಏರ್ಪಡಿಸಿದುವು. ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ.ಕೆ. ಪೈಯವರು ಈ ಗೋಷ್ಠಿಯಲ್ಲಿ ಮಾತನಾಡುತ್ತ ಬ್ಯಾಂಕಿನ ರೂ. ೧೨ ಲಕ್ಷಗಳ ಸಾಲ ಸೌಲಭ್ಯದಿಂದ ರೂ. ೩೨ ಲಕ್ಷ ಬಂಡವಾಳದಲ್ಲಿ ಎಂಟು ಚಿಕ್ಕ ಪ್ರಮಾಣದ ಉದ್ಯಮಗಳು ಉತ್ತರಕನ್ನಡ ಜಿಲ್ಲೆಯಲ್ಲಿ ಶೀಘ್ರದಲ್ಲಿ ಸ್ಥಾಪನೆಗೊಳ್ಳುವುವೆಂದು ಘೋಷಿಸಿದರು. ಇವುಗಳಲ್ಲಿ ರಾಸಾಯನಿಕ, ಮುದ್ರಣ, ತಾಂತ್ರಿಕ, ಸೋಪು, ಸಿಗಿಯಂತ್ರ ಮತ್ತು ಸಿಮೆಂಟು ಉದ್ಯಮಗಳು ಸೇರಿದ್ದು ಇವು ಒಟ್ಟು ೩೦೦ ಜನರಿಗೆ ಉದ್ಯೋಗ ದೊರಕಿಸಬಲ್ಲವೆಂದವರು ಹೇಳಿದರು.

ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಎಚ್. ಎನ್. ಪೈಯವರು ಆರಂಭ ಭಾಷಣ ಮಾಡುತ್ತ ಉತ್ತರಕನ್ನಡ ಜಿಲ್ಲೆಯಲ್ಲಿ ಬ್ಯಾಂಕು ಈಗಾಗಲೇ ರೂ. ೭೮ ಲಕ್ಷವನ್ನು ಹಲವು ಪ್ರಮುಖ ಉದ್ಯಮಗಳಲ್ಲೂ ರೂ. ೪ ಲಕ್ಷವನ್ನು ಮೀನುಗಾರಿಕಾಭಿವೃದ್ಧಿಗೂ ವಿನಿಯೋಗಿಸಿದೆಯೆಂದರು.

ಶ್ರೀ ಟಿ. ಎ. ಪೈ ಶ್ರಮದ ಫಲ

'ಎಲ್ಐಸಿ'ಯ ಅಪೂರ್ವ ದಾಖಲೆ

ಜೀವವಿಮಾ ಕಾರ್ಪೊರೇಶನ್ ೧೯೭೦—೭೧ನೆಯ ವರ್ಷದಲ್ಲಿ ಇದುವರೆಗಿನ ತನ್ನೆಲ್ಲ ದಾಖಲೆಗಳನ್ನು ಮುರಿದು ೧೬೨೨ ಸಾವಿರ ಪಾಲಿಸಿಗಳ ಮೂಲಕ ರೂ. ೧೩೦೩ ಕೋಟಿಗಳ ಹೊಸ ವ್ಯವಹಾರವನ್ನು ಸಾಧಿಸಿದೆ. ಇದಕ್ಕೆ ಹಿಂದಿನ ವರ್ಷದಲ್ಲಿ ಅದರ ವ್ಯವಹಾರವು ೧೪೦೦ ಸಾವಿರ ಪಾಲಿಸಿಗಳ ಮೂಲಕ ೧೦೩೬ ಕೋಟಿ ರೂಪಾಯಿಗಳಷ್ಟಾಗಿತ್ತು. ಅಂದರೆ, ಈ ವರ್ಷ ಪಾಲಿಸಿಗಳ ಸಂಖ್ಯೆಯಲ್ಲಿ ಸೇ. ೧೬ರಷ್ಟು ಮತ್ತು ವ್ಯವಹಾರದಲ್ಲಿ ಸೇ. ೨೬ರಷ್ಟು ಪ್ರಗತಿಹೊಂದಿದೆ. ಈ ಪ್ರಗತಿಯು ಜೀವವಿಮಾ ವ್ಯವಹಾರದಲ್ಲಿ ಮಹತ್ವದ ಮೈಲಿಗಲ್ಲು.

ಜೀವವಿಮಾ ಕೋರ್ಪರೇಶನಿನ ಅಧ್ಯಕ್ಷರೂ, ಸಮರ್ಥ ಮಾರ್ಗದರ್ಶಕರೂ ಆದ

ಶ್ರೀ ಟಿ. ಎ. ಪೈ

ಕಾರ್ಪೊರೇಶನ್ ತನ್ನ ಬಂಡವಳ ಹೂಡಿಕೆಯ ಮೂಲಕ ಸಾಮಾಜಿಕ ಆರ್ಥಿಕರಂಗದ ತನ್ನ ಪಾತ್ರವನ್ನು ಹೊಸ ಕ್ಷೇತ್ರಗಳಿಗೂ ವಿಸ್ತರಿಸಿದೆ. ಈ ವರ್ಷ ಅದು ರೂ. ೨೬೮ ಕೋಟಿಗೂ ಮಿಕ್ಕಿ ಒಟ್ಟು ಬಂಡವಳ ಹೂಡಿದೆ. ಕಳೆದ ವರ್ಷಕ್ಕಿಂತ ಇದು ರೂ. ೪೦ ಕೋಟಿಯಷ್ಟು ಏರಿಕೆಯನ್ನು ಸೂಚಿಸುತ್ತದೆ.

ನಗರ ಸಭೆಗಳು ಮತ್ತು ಜಿಲ್ಲಾ ಪರಿಷತ್ತುಗಳಿಗೆ ಜಲ ಪೂರೈಕೆ ಯೋಜನೆಗಳಿಗೆಂದು ನೀಡಿದ ಸಾಲ ಹಿಂದಿನ ವರ್ಷ ರೂ. ೫.೫ ಕೋಟಿಯಿದ್ದು ಈ ವರ್ಷ ಆ ಮೊತ್ತ ಇಮ್ಮಡಿಸಿದೆ.

ಸಾರ್ವಜನಿಕರು ಮತ್ತು ಪಾಲಿಸಿದಾರರಿಗಾಗಿ ಬಡಾವಣೆಗಳನ್ನು ಕಟ್ಟಿಸುವ ಯೋಜನೆಯಲ್ಲಿ ಕಾರ್ಪೊರೇಶನ್ ನೇರವಾಗಿ ಭಾಗವಹಿಸಲಾರಂಭಿಸಿದೆ. ಇಂತಹ ಬಡಾವಣೆಗಳಲ್ಲಿ ಮುಂಬಯಿಯ ಬೋರಿವ್ಲಿಯ ೪೦೦೦ ಮನೆಗಳ ಒಂದು ಬಡಾವಣೆ ಮುಕ್ತಾಯದ ಹಂತ ತಲುಪಿದೆ. ಪೂನಾ, ಬೆಂಗಳೂರು ಮತ್ತು ವಿಶಾಖಪಟ್ಟಣಗಳಲ್ಲಿಯೂ ಇದೇ ರೀತಿಯ ಬಡಾವಣೆಗಳನು ನಿರ್ಮಿಸುವ ಕಾರ್ಯಕ್ಕೆ ಕಾರ್ಪೊರೇಶನ್ ಕೈ ಹಾಕಿದೆ.

ಈಗ ಬ್ಯಾಂಕುಗಳ ಕರೆಂಟ್-ಖಾತೆಯಲ್ಲಿರುವ ಕಾರ್ಪೊರೇಶನ್ ನಿಧಿಯು ನಿರುಪಯುಕ್ತವಾಗಿದೆ. ಇದನ್ನು ಇಂಟರ್ ಬ್ಯಾಂಕ್ ಕಾಲ್‌ಮನಿ ಮಾರುಕಟ್ಟೆಯಲ್ಲಿನ ಹೆಚ್ಚು ದರದ ಬಡ್ಡಿ ದೊರೆಯಬಲ್ಲ ಅಲ್ಪಾವಧಿ ಠೇವಣೆಗಳಿಗೆ ಬದಲಾಯಿಸಲು ಕಾರ್ಪೊರೇಶನ್ ನಿರ್ಧರಿಸಿದೆ. ಈ ಕ್ರಮಗಳನ್ನು ಸ್ಟೇಟ್ ಬ್ಯಾಂಕಿನ ಅಧ್ಯಕ್ಷರು ಟೀಕಿಸ ಹೊರಟರೂ ಸಾವಿರಾರು ಪಾಲಿಸಿದಾರರ ಹಿತಾಸಕ್ತಿಯಿಂದ ಇಪ್ಪತ್ತರಿಂದ ಮೂವತ್ತು ಕೋಟಿ ರೂಪಾಯಿಗಳ ನಿಧಿಯನ್ನು ನಿರುಪಯೋಗಿಯಾಗಿರಿಸಲು ಕಾರ್ಪೊರೇಶನ್ ಬಯಸುವುದಿಲ್ಲ. ಕಾರ್ಪೊರೇಶನ್‌ನ ದೈನಂದಿನ ನಗದು ವ್ಯವಹಾರ ಸುಮಾರು ೨೫ ಕೋಟಿಯಷ್ಟಿದ್ದು ಇದು ಬ್ಯಾಂಕುಗಳ ಕರೆಂಟ್ ಖಾತೆಯಲ್ಲಿ ಕೊಳೆಯುತ್ತಿರುವುದು ಸರಿಯಲ್ಲವೆಂದದರ ನಿರ್ಧಾರ.

ಬ್ಯಾಂಕುಗಳಲ್ಲಿರುವ ಎಲ್ಐಸಿ ನಿಧಿಯು ಅದರ ಆರ್ಥಿಕ ಮೂಲವಲ್ಲ. ಹೆಚ್ಚು ಠೇವಣಾತಿಗಳನ್ನು ಸಂಗ್ರಹಿಸಲು ಬ್ಯಾಂಕುಗಳು ಹೆಚ್ಚೆಚ್ಚು ಪ್ರಯತ್ನ ನಡೆಸಬೇಕು.

ತನ್ನ ಸಾಲಗಳು ಮತ್ತು ಇತರ ಬಂಡವಾಳ ಹೂಡಿಕೆಯ ಮಂಜೂರಾತಿ ಹಾಗೂ ಹಣದ ಬಟವಾಡೆಗಳ ನಡುವಣ ಭಾರಿ ಕಾಲಾಂತರವನ್ನು ಕಡಿಮೆಗೊಳಿಸಲು ಕಾರ್ಪೊರೇಶನ್ ನಿರ್ಧರಿಸಿದೆ. ಮಂಜೂರಾದ ಹಣವನ್ನು ಸಾಧ್ಯವಿದ್ದಷ್ಟು ಶೀಘ್ರದಲ್ಲಿ ಬಟವಾಡೆ ಮಾಡಿ ಅದು ಬಡ್ಡಿ ಗಳಿಸುವಂತಾಗಬೇಕೆಂಬುದೇ ಅದರ ಮುಂದಿನ ಧೋರಣೆ.

ಈ ಸಂಗತಿಗಳನ್ನು ಕಾರ್ಪೊರೇಶನ್ನಿನ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ಪತ್ರಿಕಾ ಸಮ್ಮೇಳನವೊಂದರಲ್ಲಿ ಬಹಿರಂಗಪಡಿಸಿದರು. ಕಾರ್ಪೊರೇಶನ್ನಿನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಪ್ರಥಮ ವರ್ಷದಲ್ಲೇ ಅದು ಸಾಧಿಸಿದ ಪ್ರಗತಿಗೆ ಶ್ರೀ ಪೈಯವರ ಸಮರ್ಥ ಮಾರ್ಗದರ್ಶನ ಮತ್ತು ಆಡಳಿತ ವಿಧಾನವೇ ಕಾರಣವೆನ್ನುವುದು ನಿರ್ವಿವಾದ.

●●

ಸ್ವತಂತ್ರ ಬಂಗ್ಲಾವಲ್ಲ— ಸ್ಮಶಾನ ಬಂಗ್ಲಾ

(ಐದನೇ ಪುಟದಿಂದ)

ಬಂಗ್ಲಾದೇಶಕ್ಕೆ ಅನಾಯಾಸವಾಗಿ ರಾಯಭಾರಿ ಕಛೇರಿಯೊಂದು ಸಿಕ್ಕಂತಾಯ್ತು. ಇದನ್ನು ಭಾರತ ಸರಕಾರ ಮಾನ್ಯ ಮಾಡಲೇ ಬೇಕಾಗುತ್ತದೆ.

ಕಛೇರಿಯಲ್ಲಿನ ಪಾಕ್ ಪಿತಾಮಹ ಮಹಮ್ಮದಾಲಿ ಜಿನ್ನಾರ ಚಿತ್ರ ಹಳೆಯ ಧ್ವಜದೊಂದಿಗೆ ಕೆಳಗಿಳಿಯಿತು; ವಂಗಬಂಧು ಮುಜಿಬರ ಚಿತ್ರ ಬಂಗ್ಲಾಧ್ವಜದೊಂದಿಗೆ ಮೇಲೇರಿತು.

o o o

'ಪಾಕಿಸ್ತಾನ ತುಕಡಿ' ಬಂಗ್ಲಾದಲ್ಲಿ ಬಡಿದಾಡುತ್ತಿರುವಾಗ ಮಧ್ಯಪ್ರಾಚ್ಯದಲ್ಲಿ ಐಕ್ಯರಾಜ್ಯ ಘೋಷಣೆಯೊಂದು ಹೊರಟಿತು.

ಐಗುಪ್ತ (ಸಂಯುಕ್ತ ಅರಬ ಪ್ರಜಾರಾಜ್ಯ), ಸಿರಿಯಾ ಮತ್ತು ಲಿಬಿಯಾಗಳು ತಮ್ಮದೊಂದು ಒಕ್ಕೂಟವನ್ನು ಸ್ಥಾಪಿಸಿಕೊಂಡಿವೆಯೆಂದು ಕೈರೋ ಘೋಷಿಸಿತು.

ಹಲವು ವರ್ಷಗಳಿಗೆ ಹಿಂದೆ ಮಧ್ಯಪ್ರಾಚ್ಯದ ಅನಭಿಷಿಕ್ತ ದೊರೆ ನಸ್ಸೇರರ ಯೌವನಾವಧಿಯಲ್ಲಿ ಇಂತಹದೇ ಒಕ್ಕೂಟವೊಂದು ರಚನೆಯಾಗಿ ಕ್ರಮೇಣ ಮುರಿದು ಹೋದುದನ್ನು ಇತಿಹಾಸ ಮರೆತಿಲ್ಲ.

ಅಂದು ಅರಬ ಜಗತ್ತನ್ನು ಒಗ್ಗೂಡಿಸುವ ಇಚ್ಛೆಯಿಂದ ಆ ಕ್ರಮ ಕೈಕೊಳ್ಳಲಾಗಿತ್ತು. ಆದರೆ, ಅದೇಕೋ ಸರಿಹೊಂದಲಿಲ್ಲ; ಅದು ಸಿಡಿದು ಹೋಯಿತು.

ಈಗ ನಡೆದುದು ಎರಡನೆಯ ಪ್ರಯತ್ನ. ಬರಿಯ ಮತೀಯ ಆಧಾರದ ಮೇಲೆ ಒಕ್ಕೂಟ ಅಸಾಧ್ಯವೆಂಬುದನ್ನು ಪಾಕಿಸ್ತಾನ ಲೋಕಕ್ಕೆ ಬಹಿರಂಗಪಡಿಸುತ್ತಿರುವ ವೇಳೆಯೋ ಇದು ಸಾಧ್ಯವೆಂದು ಮರಳಿ ಯತ್ನ ಮಾಡಿದ ಐಗುಪ್ತ—ಲಿಬಿಯಾ—ಸಿರಿಯಾಗಳನ್ನು ಪ್ರಶಂಸಿಸಬೇಕು. ಸುಡಾನನ್ನು ಒಳಗೊಂಡ ಇನ್ನಿತರ ಅರಬ ದೇಶಗಳಿಗೂ ಒಕ್ಕೂಟಕ್ಕೆ ಸ್ವಾಗತವಿದೆ.

ಆಗಮನಕ್ಕೆ ದ್ವಾರ ಮುಕ್ತವಿರುವಂತೆಯೇ ನಿರ್ಗಮನಕ್ಕೂ ಬಾಗಿಲು ತೆರೆದಿದೆ ಎಂಬುದು ಮೊದಲ ಅನುಭವ. ●

ಸೆಕೆಂಡರಿ ಶಾಲೆ ಮುಖ್ಯೋಪಾಧ್ಯಾಯರ ಸಂಘದ ಮಹಾಸಭೆ

ಜಿಲ್ಲಾ ಸೆಕೆಂಡರಿ ಶಾಲೆ ಮುಖ್ಯೋಪಾಧ್ಯಾಯರ ಸಂಘದ ಮಹಾಸಭೆಯು ತಾ. 11ರಂದು ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಸಂಘದ ಅಧ್ಯಕ್ಷ ಶ್ರೀ ಕೆ. ಶಂಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಮುಖ್ಯೋಪಾಧ್ಯಾಯರುಗಳಿಗೆ ಸೆಕ್ಷನುಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲರಿಗೂ ಅಷ್ಟೇ ಜವಾಬ್ದಾರಿಕೆಯಿರುವ ಬಿ. ಡಿ. ಓ. ಯಾ ತಹಸಿಲ್ದಾರರಿಗೆ ಕೊಡುತ್ತಿರುವಂತೆ ರೂ. ೩೦೦ರಿಂದ ೭೦೦ ವೇತನ ಸ್ಕೇಲ್ ಕೊಡಬೇಕು. ಸೆಕ್ಷನ್‌ಗಳ ಸಂಖ್ಯೆ ೧೦ನ್ನು ಮೀರಿದ್ದಲ್ಲಿ ಪ್ರತೀ ಸೆಕ್ಷನ್‌ಗೆ ೨೦ ರೂ.ಗಳಂತೆ ರೂ. ೧೦೦ಕ್ಕೆ ಮೀರದಂತೆ ಅಲೋವೆನ್ಸ್ ಕೊಡಬೇಕೆಂದೂ ಸೆಕೆಂಡರಿ ಶಾಲೆಗಳ ಮುಖ್ಯೋಪಾಧ್ಯಾಯರು ಆಫೀಸು ಶಿಬಂದಿಯೊಂದಿಗೆ ರಜಾದಿನಗಳಲ್ಲೂ ಶಾಲೆಯಲ್ಲಿರಬೇಕಾಗುವುದರಿಂದ ಅವರುಗಳನ್ನು ರಜೆಯಿಲ್ಲದ ಅಧಿಕಾರಿಗಳೆಂದು ಪರಿಗಣಿಸಬೇಕೆಂದೂ ೫೮ ವರುಷಗಳ ನಂತರ ಸೇವೆಯನ್ನು ಮುಂದುವರಿಸುವ ಅಧ್ಯಾಪಕರಿಗೆ ೫೮ನೇ ವರ್ಷದಲ್ಲಿ ಅವರು ಪಡೆಯುತ್ತಿರುವ ಸಂಬಳವನ್ನೇ ನಿಗದಿಗೊಳಿಸಬೇಕೆಂದೂ ಪ್ರತಿಯೊಬ್ಬ ಅಧ್ಯಾಪಕರಿಗೆ ೨೬ ಪಿರಿಯಡ್‌ಗಳ ಕೆಲಸ ದೊರೆಯುವ ಪ್ರಮಾಣದಲ್ಲಿ ಶಿಕ್ಷಕರನ್ನು ನೇಮಿಸಲು ಅವಕಾಶಕೊಡಬೇಕೆಂದೂ ಏಳನೇ ತರಗತಿಯಲ್ಲಿ ಜಿಲ್ಲಾಮಟ್ಟದ ಪರೀಕ್ಷೆಯಲ್ಲಿ ಕನ್ನಡ ಒಂದು ಮತ್ತು ಎರಡನೆ ಪೇಪರುಗಳನ್ನು ಒಂದೇ ಯುನಿಟ್ ಆಗಿ ಪರಿಗಣಿಸಿ ಒಟ್ಟು ಮಾರ್ಕು ೧೫೦ರಲ್ಲಿ ವಿದ್ಯಾರ್ಥಿಯು ಪಡೆಯುವ ಒಟ್ಟು ಮಾರ್ಕುಗಳ ಆಧಾರದ ಮೇಲೆ ಕನ್ನಡ ಫಲಿತಾಂಶವನ್ನು ನಿರ್ಧರಿಸಬೇಕೆಂದೂ ಮುಂದಿನ ತಿಂಗಳು ೧೫ನೇ ತಾರೀಕಿನೊಳಗೆ ಸಂಬಳ ಪಾವತಿ ಮಾಡದ ವಿದ್ಯಾರ್ಥಿಯ ಹೆಸರನ್ನು ಹಾಜರು ಪಟ್ಟಿಯಿಂದ ವಜಾಗೊಳಿಸುವ ಈಗಿನ ಕ್ರಮದಿಂದ ಆಡಳಿತೆಯವರಿಗೆ ನಷ್ಟವಾಗುವುದರಿಂದ ಪ್ರಥಮ ಅಥವಾ ದ್ವಿತೀಯ ಟರ್ಮುಗಳ ವರೆಗೆ ವಿದ್ಯಾರ್ಥಿಗಳಿಗೆ ಅವರ ಹೆಸರು ಹಾಜರು ಪಟ್ಟಿಯಲ್ಲಿರುವಂತೆ ಅವಕಾಶ ಕೊಡುವ ಪ್ರಚಲಿತ ಕ್ರಮವನ್ನೇ ಮುಂದುವರಿಸಬೇಕೆಂದೂ ಸಂಬಂಧಪಟ್ಟವರನ್ನು ವಿನಂತಿಸಲು ನಿರ್ಧರಿಸಲಾಯಿತು.

SARVODAYA TEACHERS' TRAINING COLLEGE

VIRAJPET

Applications are invited from S.S.L.C. passed Candidates above 16 years of age up to 30-4-71 for admission to T.C.H. I year class. Application forms will be sent after registration for which Rs. 2/- has to be sent in advance to the Principal, Hostel facilities available.

B.V. Ramana
Principal,
Sarvodaya Teachers' Training College,
Virajpet.

HOTEL SATKAR

Boarding, Lodging & Restaurant
Behind Corporation Office,
9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine.
Attached Bath Rooms and Phones.
Running H and C water.
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

ಹೊಸ ಉತ್ಸಾಹದ ಹೊಸ್ತಿಲಲ್ಲಿ

ಕಾರ್ಪೊರೇಶನ್ ಬ್ಯಾಂಕ್

ಶ್ರೀ

ದಕ್ಷಿಣ ಕನ್ನಡ ಜಿಲ್ಲೆಯ ಶೆಡ್ಯೂಲ್ಡ್ ಬ್ಯಾಂಕುಗಳಲ್ಲಿ ಹಳೆಯದಾದ ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿ ನ ೧೯೭೦ ನೆ ವರ್ಷಕ್ಕೆ ಸಂಬಂಧಪಟ್ಟ ಡೈರೆಕ್ಟರರ ವರದಿ, ಸಾಲ-ಮೂಲ ಮತ್ತು ಲಾಭ-ನಷ್ಟಗಳ ಲೆಕ್ಕಪತ್ರಗಳನ್ನು ಅವಲೋಕಿಸುವಾಗ, ಬ್ಯಾಂಕು ತನ್ನ ಯಥಾಸ್ಥಿತಿಯನ್ನು ಉಳಿಸಿಕೊಂಡು ಬರುವಲ್ಲಿ ಸಶಕ್ತವಾಗಿದೆಯೆಂದೆನಿಸುತ್ತದೆ ಯಾವುದೇ ಗುಲ್ಲು-ಅಬ್ಬರಗಳಿಗೆ ಇಳಿಯದೆ ಪ್ರಶಾಂತವಾಗಿದ್ದು ಭದ್ರ ಬ್ಯಾಂಕಿಂಗಿಗೆ ಕಾರ್ಪೊರೇಶನ್ ಇನ್ನೊಂದು ಹೆಸರು

ವರದಿ ವರ್ಷದಲ್ಲಿ ಬ್ಯಾಂಕಿನ ಠೇವಣಾತಿಗಳು ಹಿಂದಿನ ವರ್ಷಕ್ಕಿಂತ ಸೆ ೫ರಷ್ಟು ಹೆಚ್ಚಿ ರೂ. ೨೨ ಕೋಟಿಯನ್ನು ಮುಟ್ಟಿತು ಸಾಲ ನೀಡಿಕೆಯು ರೂ ೧೫ ಕೋಟಿಗೆ ಏರಿದ್ದು ಇದು ಠೇವಣಿಯ ಸೇ ೬೫ ಆಗುತ್ತದೆ. ರೂ. ೩೭೫ ಲಕ್ಷಗಳ ತೆತ್ತ ನಿಧಿಯಿರುವಾಗ ರೂ ೩೮ ೭೫ ಲಕ್ಷ ಕಾಯ್ದಿಟ್ಟ ನಿಧಿಯೂ ಇದೆ ವರದಿ ವರ್ಷದಲ್ಲಿ ಬ್ಯಾಂಕು ರೂ ೫ ಲಕ್ಷಸಾವಿರ ಲಾಭಗಳಿಸಿದ್ದು ಸಾಮಾನ್ಯ ಪಾಲುಗಾರರಿಗೆ ಸೇ ೧೦ರಂತೆ ಡಿವಿಡೆಂಡ್ ನೀಡಲು ನಿರ್ಧರಿಸಿದೆ

೧೯೭೦ರಲ್ಲಿ ಬ್ಯಾಂಕು ತುಮಕೂರು ಮತ್ತು ಕೋಲಾರಗಳಲ್ಲಿ ಹೊಸತಾಗಿ ಶಾಖೆಗಳನ್ನು ತೆರೆದು ವರ್ಷಾಂತ್ಯದಲ್ಲಿ ೮೦ ಶಾಖೆಗಳ ಮೂಲಕ ವ್ಯವಹಾರ ನಡೆಸುತಿತ್ತು. ಭಾರತೀಯ ಬ್ಯಾಂಕುಗಳು ಮುಖ್ಯವಾಗಿ ದಕ್ಷಿಣ ಕನ್ನಡದ ಬ್ಯಾಂಕುಗಳು ದ್ರುತಗತಿಯಿಂದ ಬೆಳೆಯುತ್ತ ಬರುತ್ತಿರುವಾಗ ಕಾರ್ಪೊರೇಶನ್ ಬ್ಯಾಂಕಿನ ವ್ಯವಹಾರಗಳನ್ನೂ ಬೆಳೆಸ ಬಯಸುವುದು ತಪ್ಪಲ್ಲ ಈ ಕಾರಣದಿಂದಲೇ ಬ್ಯಾಂಕಿಂಗ್ ಅನುಭವವಿರುವ ಶ್ರೀ ಎಂ ಆರ್. ಕಾಮತರನ್ನು ಇತ್ತೀಚೆಗೆ ಪೂರ್ಣಾವಧಿಯ ಅಧ್ಯಕ್ಷರೆಂದು ನೇಮಿಸಿಕೊಂಡಿದೆ ಶ್ರೀ ಕಾಮತರು ಹೊಸ ಶಾಖೆಗಳನ್ನು ತೆರೆಯುವಲ್ಲಿ, ಹೊಸ ಉಳಿತಾಯ ಯೋಜನೆಗಳನ್ನು ರೂಪಿಸುವಲ್ಲಿ ತುಂಬ ಆಸಕ್ತರಾಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಶುಭದಿನಗಳನ್ನು ಕಾಣುವ ಬ್ಯಾಂಕಿನ ಕನಸು ನನಸಾಗಲಿ.

ಬ್ಯಾಂಕಿನ ಡೈರೆಕ್ಟರರ ಮಂಡಲಿ, ಮೊನ್ನಿನವರೆಗೆ ಅದರ ಅಧ್ಯಕ್ಷರಾಗಿದ್ದ ಶ್ರೀ ಯು. ವಿ ಕೆ ಪ್ರಭು ಹಾಗೂ ಇನ್ನಿತರ ಸಿಬಂಧಿ ವರ್ಗವು ಬದಲಾದ ವಾತಾವರಣಕ್ಕೆ ಹೊಂದಿಕೊಂಡು, ಹೊಸ ಹೊಸ ಸಂಪನ್ಮೂಲಗಳನ್ನು ಅರಸಿ, ಅವನ್ನು ದೇಶದ ಸಾಂಪತ್ತಿಕ ಅಭಿವೃದ್ಧಿಗೆ ನೀಡುವಲ್ಲಿ ಹೊಸ ಅಧ್ಯಕ್ಷರಿಗೆ ಸಹಕಾರ ನೀಡಿದಲ್ಲಿ ಶೀಘ್ರ ಪ್ರಗತಿ ಅಸಾಧ್ಯವಾದುದಲ್ಲ.

●●

ಕೃಷ್ಯಭಿವೃದ್ಧಿ ಸಂಘದ ಸೇವಾ ವಿಭಾಗದ ಉದ್ಘಾಟನೆ

ತಾ. 21.4.71ರಂದು ಮಂಗಳೂರಲ್ಲಿನ ದ ಕ. ಜಿಲ್ಲಾ ಸಹಕಾರಿ ಕೃಷಿ ಅಭಿವೃದ್ಧಿ ಸಂಘದವರ ನೂತನ ಮಾರಾಟ ಮತ್ತು ಸೇವಾ ವಿಭಾಗದ ಉದ್ಘಾಟನೆಯನ್ನು ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನಾ ಶ್ರೀ ಕೆ.ಕೆ. ಪೈಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಶ್ರೀ ಎಚ್. ಮಹಾರುದ್ರಯ್ಯನವರು ನೆರವೇರಿಸಿದರು.

ಶ್ರೀ ಮಹಾರುದ್ರಯ್ಯನವರು ಮಾತನಾಡುತ್ತಾ ಕೃಷಿಕರಿಗೆ ನಿಜವಾದ ಕಲ್ಯಾಣ ಸಾಧನೆಯಾಗಬೇಕಾದರೆ ಸಹಕಾರೀ ಸಂಸ್ಥೆಗಳು ಆರ್ಥಿಕವಾಗಿ ಸ್ವಂತ ಕಾಲಮೇಲೆ ನಿಲ್ಲುವ ತ್ರಾಣ ಹೊಂದಿರಬೇಕು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ನಿರೀಕ್ಷಿಸಿದ ಪ್ರಗತಿ ಸಾಧಿಸಲಾಗಲಿಲ್ಲ ಇದರ ಅಭಿವೃದ್ಧಿಗೆ ಸಹಕಾರ ತತ್ವದಿಂದ ಸಾಧ್ಯವೆಂದರು. ಈ ರಂಗದಲ್ಲಿ ದ.ಕ. ಜಿಲ್ಲೆಯಲ್ಲಿನೇ ಕ ಒಳ್ಳೆಯ ಕೆಲಸವಾಗಿದ್ದು ಇದಕ್ಕೆ ಕಾರಣರಾದ ಶ್ರೀ ನಾರಾಯಣ ನಾಯಕ್ ಮತ್ತಿತರರು ಅಭಿನಂದನಾರ್ಹರೆಂದರು.

ರೈತರ ಅಭಿವೃದ್ಧಿಗೆ ಜಾಗತಿಕ ಬೇಂಕು ನೆರವು ನೀಡಲು ಸರಕಾರ ಪ್ರಯತ್ನಿಸುತ್ತಿದೆಯೆಂದೂ, ರೈತರಿಗೆ ಅನುಕೂಲವಾಗುವಂತೆ ಸಂಚಾರಿ ಯೂನಿಟ್‌ಗಳನ್ನು ಪ್ರಾರಂಭಿಸಬೇಕೆಂದೂ ಯೋಗ್ಯ ಮಾರುಕಟ್ಟೆ ವ್ಯವಸ್ಥೆ ಕೈಗೊಳ್ಳಬೇಕೆಂದೂ ಹೇಳಿದರು. ದೇಶದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಸರಕಾರ । ಸಹಕಾರ ಸಂಘಗಳು ಮತ್ತು ಸಾರ್ವಜನಿಕರು ಒಟ್ಟಾಗಿ ಜತೆಯಲ್ಲಿ ಸಹಕರಿಸಿ ದುಡಿಯಬೇಕೆಂದೂ ಕರೆನೀಡಿದರು.

ಆರಂಭದಲ್ಲಿ ಜಿಲ್ಲಾ ಸಹಕಾರೀ ಕೃಷಿ ಅಭಿವೃದ್ಧಿ ಸಂಘದ ಅಧ್ಯಕ್ಷ ಶ್ರೀ ಬಿ. ನಾಯಕರು ಸ್ವಾಗತಿಸಿ ಈ ಸಂಘದಸ್ಥಾಪನೆಗೆ ದಿ। ಟಿ ವಿ. ಬಾಳಿಗಾ ಮತ್ತು ಶ್ರೀ ಟಿ. ಎ. ಪೈಯವರು ನೀಡಿದ ಸಲಹೆ ಮಾರ್ಗದರ್ಶನವನ್ನು ಸ್ಮರಿಸಿದರು.

ಶ್ರೀ ಕೆ. ಕೆ. ಪೈ ತಮ್ಮ ಅಧ್ಯಕ್ಷ ಭಾಷಣದಲ್ಲಿ, ಸಹಕಾರೀ ಸಂಸ್ಥೆಗಳಿಗೂ ಸಿಂಡಿಕೇಟ್ ಬೇಂಕಿಗೂ ಅನೇಕ ವರುಷಗಳಿಂದ ಇರುವ ನಿಕಟ ಸಂಪರ್ಕವನ್ನು ಸ್ಮರಿಸಿದರು. ಬೇಂಕಿಂಗ್ ಒಂದು ಸೇವಾ ಉದ್ಯಮ ಅದು ಸಹಕಾರೀ ಕ್ಷೇತ್ರದಲ್ಲಿಯೂ ಸೇವೆ ಸಲ್ಲಿಸುವದರಲ್ಲಿ ಹಿಂದುಳಿದಿಲ್ಲ ಎಂದರು. ಅವರು ಮುಂದುವರಿಯುತ್ತಾ, ನಮ್ಮ ಜಿಲ್ಲೆಯಲ್ಲಿ ಆರ್ಥಿಕ ಕೃಷಿ ಅಭಿವೃದ್ಧಿ ಹಿಂದಿಗಿಂತ ಹೆಚ್ಚಾಗಿ ಆಗುತ್ತಿರುವುದಕ್ಕೆ ನಿಮ್ಮ ಸಂಘದ ಅಭಿವೃದ್ಧಿಯೇ ನಿದರ್ಶನವೆಂದು ಹೇಳಿ ಜನರ ಮೇಲೆ ನಾವು ವಿಶ್ವಾಸವಿರಿಸಿದರೆ ಅದರ ಪರಿಣಾಮ ನಮಗೆ ಸಿಗುತ್ತದೆಂದರು. ಪ್ರಾಮಾಣಿಕತೆಯಿಂದ ದುಡಿವ ಸಿಬಂದಿಯವರು ಇರುವಲ್ಲಿ ಕೆಲಸಗಳು ಉತ್ತಮವಾಗಿ ನಡೆಯುತ್ತದೆಂದರು.

ಮಾರಾಟ ಮತ್ತು ಸೇವಾ ವಿಭಾಗ ಈ ಕ್ಷೇತ್ರದಲ್ಲಿ ಹೊಸ ಪ್ರಯೋಗವೆಂದೂ, ಯಾಂತ್ರೀಕರಣದಲ್ಲಿ ಹೆಚ್ಚು ಪ್ರಗತಿ ಸಾಧಿಸಿದಂತೆ ಮಾರಾಟ ಸೇವಾ ವಿಭಾಗಕ್ಕೆ ಹೆಚ್ಚಿನ ಮಹತ್ವ ಬರುವುದೆಂದೂ ತಿಳಿಸಿ ಈ ವಿಭಾಗವನ್ನು ತೆರೆದುದಕ್ಕೆ ಸಂಘಕ್ಕೆ ಅಭಿನಂದನೆ ಸಲ್ಲಿಸಿದರು.

ಅಂತ್ಯದಲ್ಲಿ ಸಂಘದ ಉಪಾಧ್ಯಕ್ಷ ಶ್ರೀ ಬಿ. ಪ್ರಭಾಕರ ರಾಯರು ಧನ್ಯವಾದ ಅರ್ಪಿಸಿದರು.

ಕುಂದಾಪುರದಲ್ಲಿ ರಂಗನಾಥ ಶೆಣೈ ಅಭಿನಂದನೆ

ಉಡುಪಿ ಕ್ಷೇತ್ರದಿಂದ ಸಂಸತ್ ಸದಸ್ಯರಾಗಿ ಆಯ್ಕೆಯಾದ ಶ್ರೀ ಪಿ. ರಂಗನಾಥ ಶೆಣೈಯವರನ್ನು ಅಭಿನಂದಿಸಲು ಕುಂದಾಪುರ ತಾಲೂಕಿನ ಆಡಳಿತ ಕಾಂಗ್ರೆಸ್ ಪಕ್ಷ ತಾ. 13ರಂದು ಸಾರ್ವಜನಿಕ ಸಮಾರಂಭವೊಂದನ್ನು ಏರ್ಪಡಿಸಿದ್ದು ಸಮಾರಂಭದಲ್ಲಿ ಶ್ರೀ ಪಿ ಆನಂದಕುಂದ ಹೆಗ್ಡೆ, ಶ್ರೀ ಶ್ರೀನಿವಾಸ ಶೆಟ್ಟಿ, ಶ್ರೀ ಎನ್. ಎಸ್. ಪರಮೇಶ್ವರಯ್ಯ, ಶ್ರೀ ಎ. ಗೋಪಾಲಕೃಷ್ಣ ಕೊಡ್ಗಿ ಉಪಸ್ಥಿತರಿದ್ದು ಶ್ರೀ ಶೆಣೈಯವರನ್ನು ಅಭಿನಂದಿಸಿದರು.

ಅಡ್‌ಹಾಕ್ ಸಮಿತಿ ಸದಸ್ಯ ಶ್ರೀ ವೈ ತೇಜಪ್ಪ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು ಶ್ರೀ ವಿ. ಕೃಷ್ಣಪ್ಪ ಶೆಟ್ಟಿ ಸ್ವಾಗತಿಸಿದರು. ಶ್ರೀ ರಂಗನಾಥ ಶೆಣೈ ಜನರ ಆದರಾಭಿಮಾನಗಳಿಗಾಗಿ ಋಣಭಾರ ಮನ್ನಿಸಿದರು ಶ್ರೀ ವೈ. ತೇಜಪ್ಪ ಶೆಟ್ಟರು ಶ್ರೀ ಶೆಣೈಯವರ ಸರಳತೆಯನ್ನು ಕೊಂಡಾಡಿದರು. ಆಡ್‌ಹಾಕ್ ಸಮಿತಿ ಅಧ್ಯಕ್ಷ ಶ್ರೀ ಬಿ. ಎಸ್. ಜಗನ್ನಾಥ ಶೆಟ್ಟಿ ವಂದನಾರ್ಪಣೆ ಮಾಡಿದರು.

ಭದ್ರಾವತಿ ಲಯನ್ಸ್ ಕ್ಲಬ್ಬಿನ "ಚಾರ್ಟರ್ ನೈಟ್" ಸಮಾರಂಭ

ತಾ. ೧೭-೪-೭೧ನೇ ಸಂಜೆ ಎಮ್.ಐ.ಎಸ್. ಲಿಮಿಟೆಡ್‌ನ ಹಳೆಯ ಅತಿಥಿ ಗೃಹದ ರೋಟರಿ ಸಭಾಂಗಣದಲ್ಲಿ "ಚಾರ್ಟರ್ ನೈಟ್" ಸಮಾರಂಭವು ವಿಜೃಂಭಣೆಯಿಂದ ಜರಗಿತು. ಎಮ್. ಐ. ಎಸ್. ಲಿಮಿಟೆಡ್‌ನ ಉಪಾಧ್ಯಕ್ಷರೂ ಮೆನೇಜಿಂಗ್ ಡೈರೆಕ್ಟರರೂ ಆದ ಎ ಪಿ ಮಲ್ಲಪ್ಪನವರು ಮುಖ್ಯ ಅತಿಥಿಗಳಾಗಿ ಭಾಷಣ ಮಾಡುತ್ತಾ, ಇನ್ನೊಬ್ಬರಿಗೆ ನಮ್ರತೆಯಿಂದ ಸೇವೆ ಸಲ್ಲಿಸುವ ವ್ಯಕ್ತಿಯ ಗುಣವು ಜನರಿಂದ ಮೆಚ್ಚಲ್ಪಡುತ್ತದೆ ಎಂದರು. ಇಂತಹ ಸೇವೆಯಿಂದ ಒಬ್ಬನು ವಿಧಿಸಲ್ಪಡುವ ಧ್ಯೇಯೋದ್ದೇಶವು ವಿಶಾಲವಾಗುವುದಲ್ಲದೆ ಅವನ ಸೇವೆಯನ್ನು ಅಭಿವೃದ್ಧಿಗೊಳಿಸುತ್ತದೆ. ಕ್ಲಬ್ಬು ಸಲ್ಲಿಸುತ್ತಿರುವ, ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಅದು ನಡೆಸುತ್ತಿರುವ ವೈದ್ಯಕೀಯ ರೋಗ ನಿಧಾನ ಶಿಬಿರವನ್ನು ಶ್ಲಾಘಿಸುತ್ತಾ ಕ್ಲಬ್ ವರ್ಷಕ್ಕೊಮ್ಮೆ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರಗಳನ್ನು ಕಡ್ಡಾಯ ಸೇವಾಕಾರ್ಯಕ್ರಮವಾಗಿ ಕ್ಲಬ್ಬು ಇರಿಸಿಕೊಳ್ಳುವುದು ಉಚಿತವೆಂದು ಸೂಚಿಸಿದರು

ಕ್ಲಬ್ಬಿನ ಅಧ್ಯಕ್ಷ ಡಾ। ಜಿ. ಎಂ ಮುರಿಗೇಂದ್ರಯ್ಯನವರು ಸಭಿಕರನ್ನು ಸ್ವಾಗತಿಸಿದರು. ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರು ಮುಖ್ಯ ಅತಿಥಿಗಳ ಪರಿಚಯ ಭಾಷಣ ಮಾಡಿದರು ಕ್ಲಬ್ಬಿನ ಕಾರ್ಯದರ್ಶಿ ಡಾ। ಎ ಆನಂದ ಶೆಟ್ಟರು ಕ್ಲಬ್‌ನ ವರದಿಯನ್ನೊಪ್ಪಿಸಿದರು ಈ ಸಂದರ್ಭದಲ್ಲಿ ಏರ್ಪಡಿಸಲಾದ ಛದ್ಮವೇಷ ಸ್ಪರ್ಧೆಯಲ್ಲಿ ಡಾ। ಕರುಣಾಕರ ಅವರು ಅತ್ಯುತ್ತಮ ಎಂದು ಪರಿಗಣಿಸಲ್ಪಟ್ಟು ಪ್ರಥಮ ಪಾರಿತೋಷಕ ಪಡೆದರು ಡಾ। ಎ. ಆನಂದ ಶೆಟ್ಟಿ ಮತ್ತು ಡಾ। ಶಂಕರ ಭಟ್ ಇವರು ಅನುಕ್ರಮವಾಗಿ ದ್ವಿತೀಯ ಮತ್ತು ತೃತೀಯ ಬಹುಮಾನ ಪಡೆದರು ಡಾ। ಎಂ ಎಸ್. ಭಟ್ಟರು ಸಮಾಧಾನ ಪಾರಿತೋಷಕ ಪಡೆದರು. ಚುನಾಯಿತ ಅಧ್ಯಕ್ಷ ಡಾ। ಎಸ್ ಎಸ್ ಭಟ್ಟರು ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು ಶ್ರೀ ಎಸ್ ಎಸ್. ವೀರಭದ್ರಆರಾಧ್ಯರು ಸರ್ವರಿಗೆ ಭೋಜನಕೂಟವನ್ನೇರ್ಪಡಿಸಿದ್ದರು

ಛದ್ಮವೇಷ ಸ್ಪರ್ಧೆಯ ಬಹುಮಾನಿತರು, ಎಡದಿಂದ ಬಲಕ್ಕೆ —
ಡಾ। ಎಂ ಎಸ್ ಭಟ್ (ಪಾಲಕಿ ನರಸಣ್ಣ), ಡಾ। ಯು. ಕರುಣಾಕರ ಶೆಟ್ಟಿ (ಕುರ್ ಕುರ್‌ಮಾವ), ಡಾ। ಎ. ವಿ. ಶೆಟ್ಟಿ (ಗೋಪಾಲಕ), ಡಾ। ಎಸ್. ಎಸ್ ಭಟ್ (ಭಿಕ್ಷುಕ)

ಭಾವಗೀತೆ

ರಚನೆ. ಶ್ರೀನಿವಾಸ, ಸಾಗರ್.

ಜಗದ ಅಚ್ಚರಿಯಲ್ಲಿ ಅರಳಿ ಮಲ್ಲಿಗೆಯಾಗಿ
ನಿನ್ನ ಕಣ್ಣೊಳು ಮಿಂಚು ಬಳ್ಳಿಯಾಗೀ
ಸಪ್ತಸಾಗರವೆಲ್ಲ ತಿಳಿಯಾಗಿ ಕೊಳವಾಗಿ
ನಿನ್ನ ಮುಖದೊಳು ಅರಳಿ
ಕಮಲವಾಗೀ.....

ಒಂದು ಕಣ್ಣೊಳಲಿ ವೃಕ್ಷ ಇನ್ನೊಂದರಲಿ
ಧೇನು
ತುಂಬು ಚಂದಿರ ಮೊಗದಿ ಜೊಲ್ಲ
ಜೇನೂ ...
ಲಕ್ಷ ನಕ್ಷತ್ರಗಳ ಆಕಾಶದಂಡಕ್ಕೆ
ಎತ್ತಿವಾರತಿ ಕಲಶ ಕನ್ನಡಿಯೂ ನೀನೂ

ಜೀವನದ ಒಳ ತಿರುಳು ನಿನ್ನಳವು ನಗುವೂ
ಕಾಜಾಣ ಕೋಗುಡುವ
ಕೇಕೆರಾಗಗಳೂ....
ಹಾಲುವಕ್ಕಿಯ ನೆರಳು
ಮನಸಿನಾವೇಶಗಳೂ
ಸಂಜೆ ಬಾನಿನ ಬಣ್ಣ ಭಾವನೆಗಳೂ....

ಆನಂದಸಾಗರವೆ ಓ ಕ್ಷೀರ ಸಾಗರವೇ
ಆಲದೆಲೆಯಲಿ ತೇಲುವಾದಿದೈವಾ ...
ಎನ್ನ ಮನದಂಗಳಂ ಕಂದ ನಿನ್ನಾಟದಲಿ
ವೈಮರೆಸು ಕಳೆದೆಲ್ಲ ಜಗದ ನೋವಾ....

●●

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ದಿ ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ ಸಿ ಎಲ್. 4 17-4/65-66ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/- ಮಾತ್ರ
ಮೆನೇಜರ್, ನವಯುಗ, ಉಡುಪಿ.

'ಧರ್ಮಪತ್ನಿ' ಕನ್ನಡ ಚಿತ್ರದ ಮುಹೂರ್ತ

ತುಳುಚಿತ್ರ "ದಾರೆದ ಬುಡೆದಿ"ಯ ಕನ್ನಡ ಅವತರಣಿಕೆಯಾದ "ಧರ್ಮಪತ್ನಿ"ಗೆ ಇದೇ ಏಪ್ರಿಲ್ ೧೯ರಂದು ಮದ್ರಾಸಿನ "ಸ್ವಾಗತಂ"ನಲ್ಲಿ ಶ್ರೀ ಮಧ್ವರಾಜ್ ಕ್ಯಾಮರಾ ಸ್ವಿಚ್‌ಆನ್ ಮಾಡಿದರು. ಶ್ರೀಮತಿ ಮನೋರಮಾ ಮಧ್ವರಾಜ್ ಕ್ಲ್ಯಾಪ್ ಮಾಡಿದರು.

ಸ್ಟುಡಿಯೋದಿಂದ ಹೊರಗಡೆಯೇ ಖಾಸಗಿ ಬಂಗಲೆಯಲ್ಲಿಯೇ "ಧರ್ಮಪತ್ನಿ"ಗೆ ಎಲ್ಲ ಚಿತ್ರೀಕರಣ ನಡೆಯಲಿದೆ. ಲೀಲಾವತಿ, ರಾಜಾಶಂಕರ್, ಭವಾನಿಶಂಕರ್, ವಿಜಯಕಲಾ, ಶಶಿಕಲಾ, ಇಂದ್ರಕಲಾ ಮೊದಲಾದವರು ಅಭಿನಯಿಸುತ್ತಿರುವ ಈ ಚಿತ್ರವನ್ನು ಶ್ರೀ ಆರೂರು ಪಟ್ಟಾಭಿ ನಿರ್ದೇಶಿಸುತ್ತಾರೆ. ಚಿತ್ರನಾಟಕ ಬರೆದ ಶ್ರೀ ಕೆ. ಎನ್. ಟೈಲರ್ ಮುಖ್ಯ ಪಾತ್ರದಲ್ಲಿದ್ದಾರೆ. ನಾರಾಯಣ ಪುತ್ರನ್, ರಾಮಚಂದ್ರ ಕೊಳೂರ್ ಅವರೂ ಪಾತ್ರವರ್ಗದಲ್ಲಿದ್ದಾರೆ. ರಾಜನ್—ನಾಗೇಂದ್ರರ ಸಂಗೀತವಿದೆ.

ಅಭಿನಂದನಾ ಸಭೆ

ಲೋಕಸಭೆಗೆ ಚುನಾಯಿಸಲ್ಪಟ್ಟ ಶ್ರೀ ಕೆ. ರಂಗನಾಥ ಶೆಣೈಯವರನ್ನು ಅಭಿನಂದಿಸಲು ತಾ. ೨೧-೪-೭೧ರಂದು ಕಲ್ಯಾಣಪುರದ ನಾಗರಿಕರು ಮಿಲಾಗ್ರಿಸ್ ಕಾಲೇಜಿನ ಸಭಾಭವನದಲ್ಲಿ ಪ್ರಿನ್ಸಿಪಾಲ್ ಡಾ| ಪಿ. ಗುರುರಾಜ ಭಟ್ಟರ ಅಧ್ಯಕ್ಷತೆಯಲ್ಲಿ ಸಮಾರಂಭವನ್ನು ಏರ್ಪಡಿಸಿದ್ದರು. ರೆ. ಫಾ. ಗೋನ್ಸಾಲ್ವಿಸ್ಸರು ಸ್ವಾಗತಿಸಿದ ಬಳಿಕ ಶ್ರೀಗಳಾದ ಶ್ರೀನಿವಾಸ ರಾವ್, ವಿಶ್ವನಾಥ ಶೇರಿಗಾರರ ಮಾತನಾಡಿ ಸ್ಥಳೀಯ ಆವಶ್ಯಕತೆಗಳನ್ನು ವಿವರಿಸಿದರು. ಶ್ರೀ ಶೆಣೈಯವರು ಸಮಾರಂಭಕ್ಕಾಗಿ ಸಂತೋಷ ವ್ಯಕ್ತಪಡಿಸಿ ತನ್ನ ಕ್ಷೇತ್ರದ ಅಭಿವೃದ್ಧಿಗಾಗಿ ದುಡಿಯುವ ಆಶ್ವಾಸನೆಯಿತ್ತರು.

ಅಧ್ಯಕ್ಷ ಡಾ| ಭಟ್ಟರು ಮಾತನಾಡುತ್ತಾ ಜನರು ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ಮಾಡಬೇಕೆಂದೂ ಈಗಿನ ಸಮಸ್ಯಾ ಪರಿಹಾರಕ್ಕೆ ಕಷ್ಟಪಟ್ಟು ದುಡಿಯುವುದೇ ಪರಿಹಾರವೆಂದೂ ಹೇಳಿ ಶ್ರೀ ಶೆಣೈಯವರು ತಮ್ಮ ಕ್ಷೇತ್ರಕ್ಕೆ ಒಳ್ಳೆಯದನ್ನು ಒದಗಿಸಲೆಂದು ಹಾರೈಸಿದರು. ಶ್ರೀ ಜಯರಾಂ ಪಡಿಯಾರರು ಧನ್ಯವಾದವರ್ಪಿಸಿದರು.

ಬಂಟರ ಯಾನೆ ನಾಡವರ ಸಂಘದ ಮಹಾಸಭೆ

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾಸಭೆಯು ತಾರೀಖು ೨-೫-೭೧ನೇ ಆದಿತ್ಯವಾರ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿಜಯಾ ಬ್ಯಾಂಕಿನ ಚೆಯರ್‌ಮೇನ್ ಶ್ರೀ ಎಂ. ಸುಂದರರಾಮ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಸತ್ಕಾರ ಸಭೆ

ಸುರತ್ಕಲ್‌ನಿಂದ ವರ್ಗವಾದ ಸಬ್ ಪೋಸ್ಟ್ ಮಾಸ್ಟರ್ ಶ್ರೀ ಎಂ. ಜಿ. ಶೆಣೈ ಹಾಗೂ ಇಲ್ಲಿಗೆ ಆಗಮಿಸಿದ ಶ್ರೀ ಎಚ್. ನಾಗರಾಜ ಇವರನ್ನು ಸತ್ಕರಿಸಲು ತಾ. ೨೦-೪-೭೧ರಂದು ಶ್ರೀ ಕೆ. ವೆಂಕಟರಾಯಾಚಾರ್ಯರ ಅಧ್ಯಕ್ಷತೆಯಲ್ಲಿ ಅಂಚೆ ಕಛೇರಿಯಲ್ಲಿ ಸಭೆಯೊಂದು ಜರಗಿತು.

ಕಟೀಲಿನಲ್ಲಿ ಸಾಂಸ್ಕೃತಿಕೋತ್ಸವಗಳು

ತಾ. 13-4-71ರಂದಿನ ಧ್ವಜಾರೋಹಣದ ಮೂಲಕ ಆರಂಭವಾದ ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ವಾರ್ಷಿಕೋತ್ಸವದ ಅಂಗವಾದ ಸಾಂಸ್ಕೃತಿಕ ಸಮಾರಂಭಗಳು ತಾ. 16ರಿಂದ 19ರ ತನಕ ಜರಗಿದುವು. ತಾ. 16ರಂದಿನ ಕಾರ್ಯಕ್ರಮವು ಶ್ರೀ ಎಸ್. ವಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪೊಳಲಿ ಲಕ್ಷ್ಮೀನಾರಾಯಣ ಆಳ್ವರು ತುಳು ಜಾನಪದ ಸಾಹಿತ್ಯದ ಕುರಿತು ಉಪನ್ಯಾಸವಿತ್ತರು.

ಅಧ್ಯಕ್ಷರು ಸತ್ಯದ ಸಾಕ್ಷಾತ್ಕಾರಕ್ಕಾಗಿ ಅಲಿಪ್ತತೆ, ಪರಹಿತದೃಷ್ಟಿ, ವಿನಯ ಮೊದಲಾದ ಸದ್ಗುಣಗಳನ್ನು ಅಳವಡಿಸಿಕೊಂಡಾಗ ಮಾನವ ದಾರಿದೀಪವಾಗಿ ನಾಡಿನ ಏಳಿಗೆಯಾಗಬಹುದೆಂದರು.

ತಾ. 17ರ ಕಾರ್ಯಕ್ರಮವು ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ ಪೆರ್ಲ ಕೃಷ್ಣ ಭಟ್ಟರು 'ಜೀವನದ ದಾರಿದೀಪ ರಾಮಾಯಣ' ಎಂಬ ಕುರಿತು ಉಪನ್ಯಾಸ ಗೈದರು. ಅಧ್ಯಕ್ಷರು ಮಾತನಾಡುತ್ತಾ ಊರ ದೇವಾಲಯಗಳು ದೈವೀ ಸಂಸ್ಕಾರಣೆಯು ದಿಸಲು ಸಹಾಯಕವೆಂದೂ, ಇಂತಹ ದೇವಾಲಯಗಳ ಮೂಲಕ ಭಕ್ತಿಯಿಂದ ವೇದಾಧಿಕಾರ ಇಲ್ಲದವರೂ ಭಗವತ್ ಸಾಕ್ಷಾತ್ಕಾರ ಮಾಡಿಕೊಳ್ಳಬಹುದಾಗಿದೆ ಎಂದು ಹೇಳಿ ಕಟೀಲಿನ ಶೃಂಗಾರಂಚೆಯ ವೈಭವದ ಹಿರಿಮೆಯನ್ನು ಕೊಂಡಾಡಿದರು.

ತಾ. 18ರ ಕಾರ್ಯಕ್ರಮವು ಶ್ರೀ ಪಡ್ರೆಯಾಲ ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕಾಂತ ರೈಗಳು ನಾವು ಎಂದರೇನು? ಎಂಬ ವಿಷಯದ ಕುರಿತು ಮಾತನಾಡುತ್ತಾ, ಮಾನವನು ದಾನವನಂತೆ ವರ್ತಿಸುತ್ತಿರುವುದಕ್ಕೆ ಖೇದ ಸೂಚಿಸಿ ಪ್ರತಿಯೊಬ್ಬರೂ ಸ್ವಧರ್ಮಕ್ಕಾಗಿ ತ್ಯಾಗ ಮಾಡಲು ಸಿದ್ಧವಿರಬೇಕೆಂದರು.

ಅಧ್ಯಕ್ಷರು ಮಾತನಾಡುತ್ತಾ ಭಾರತೀಯ ಸಂಸ್ಕೃತಿಯನ್ನು ವಿವರಿಸಿ ಆಧ್ಯಾತ್ಮದ ವಿಶ್ಲೇಷಣೆಗೈದರು.

ಪ್ರತಿದಿನವೂ ಆಡಳಿತ ಮೊಕ್ತೇಸರ ಡಾ| ಕೆ. ಗಣನಾಥ ಶೆಟ್ಟಿ, ಪ್ರಧಾನಾರ್ಚಕ ಶ್ರೀ ಕೆ. ಗೋಪಾಲ ಅಸ್ರಣ್ಣ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ. ಎಂ. ಶ್ಯಾಮ ಶೆಟ್ಟಿ ಇವರು ಹೂಹಾರಗಳ ಮೂಲಕ ಅತಿಥಿಗಳನ್ನು ಗೌರವಿಸಿದರು. ಕೊಡತ್ತೂರು ಅನಂತ ಪದ್ಮನಾಭ ಉಡುಪರು ಪ್ರತಿದಿನವೂ ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದಾರ್ಪಣೆ ಗೈದರು.

ದಿನಂಪ್ರತಿ ಮನರಂಜನಾ ಕಾರ್ಯಕ್ರಮಗಳು ಜರಗಿದವು.

ಶ್ರೀ ನರಸಿಂಹ ಜಯಂತೀ ರಥೋತ್ಸವ

ಸುಬ್ರಹ್ಮಣ್ಯದ ಶ್ರೀ ಸಂಪುಟ ನರಸಿಂಹ ಸ್ವಾಮಿ ಸುಬ್ರಹ್ಮಣ್ಯ ಮಠದ ಶ್ರೀ ನರಸಿಂಹ ಜಯಂತೀ ಮಹಾರಥೋತ್ಸವವು ತಾ. ೭-೫-೭೧ರಿಂದ ೧೧-೫-೭೧ರ ತನಕ ಜರಗಲಿರುವುದು. ಇದೇ ಸಂದರ್ಭದಲ್ಲಿ ಮೇ ೯ ಮತ್ತು ೧೦ರಂದು ಶ್ರೀಮದಾನಂದ ತೀರ್ಥ ತತ್ವದರ್ಶಿನಿ ಸಭೆಯೂ ಜರಗಲಿವೆ.

●●

ಮಹಾಪುರುಷರ ವಾಣಿಗಳು

ತನ್ನ ನಿಜ ಸ್ವರೂಪವು ಯಾವುದೆಂದು ಕಂಡುಕೊಂಡ ನಂತರ ನಾಶ ಉತ್ಪತ್ತಿಗಳೆರಡೂ ಇಲ್ಲದ ಪರಿಪೂರ್ಣ ಜ್ಞಾನಾನಂದವೇ ಉಳಿಯುತ್ತದೆ.

(ರಮಣ ಮಹರ್ಷಿ)

ಜನಸೇವೆಯ ಹೊರತಾಗಿ ಪ್ರಭುಸೇವಾ ಅಪೂರ್ಣವೇ ಆಗಿರುತ್ತದೆ. ಮತ್ತು ಪರಮಾತ್ಮನ ಭಕ್ತಿಯಿಂದಲ್ಲದ ಜನಸೇವೆಯೂ ಸಹ ಪರಮಕಲ್ಯಾಣದ ಸಾಧಕವಾಗಲಾರದು. (ವಿವೇಕಾನಂದ)

ಕೃತಜ್ಞತೆ ಸಮರ್ಪಣೆ

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಇದೇ ಕಳೆದ ತಾ. 10ರಿಂದ 19ರ ವರೆಗೆ ಜಾತ್ರೆ ಉತ್ಸವಾದಿಗಳನ್ನು ಚಂದಗಾಣಿಸಲಿಕ್ಕಾಗಿ ತನು ಮನ ಧನಗಳಿಂದ ಸಹಕರಿಸಿದ ಭಕ್ತಾದಿ ಮಹನೀಯರಿಗೆ ಈ ಮೂಲಕ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಕಿಕ್ಕಿರಿದ ಜನಸ್ತೋಮದ ನಡುವೆ ಪುತ್ತೂರು ಪೋಲೀಸು ಸರ್ಕಲ್ ಇನ್ಸ್‌ಪೆಕ್ಟರೂ ಅವರ ಸಿಬಂದಿಯವರೂ ಬಂದೋಬಸ್ತು ವ್ಯವಸ್ಥೆ ಏರ್ಪಡಿಸಿರುತ್ತಾರೆ. ಹಾಗೂ ಸಬ್ ಇನ್ಸ್‌ಪೆಕ್ಟರರಾಗಿರುವ ಶ್ರೀ ಮಹಮ್ಮದ್ ಇಕ್ಬಾಲ್‌ರವರೂ ಶ್ರೀ ಪಿ.ಪಿ. ನಾಯರ್‌ರವರೂ ಪ್ರತಿದಿನ ಉತ್ಸವಾದಿಗಳ ಕಾಲದಲ್ಲಿ ಸ್ವತಃ ಹಾಜರಿದ್ದು ಪೋಲೀಸು ಶಿಬಂದಿಯವರಿಂದ ಉತ್ತಮ ಬಂದೋಬಸ್ತು ವ್ಯವಸ್ಥೆಯನ್ನು ಏರ್ಪಡಿಸಿರುತ್ತಾರೆ. ಶ್ರೀ ಭಗವಂತನು ಅವರಿಗೆ ಹೆಚ್ಚಿನ ಪದವಿ ಶ್ರೇಯೋಭಿವೃದ್ಧಿಗಳನ್ನು ಅನುಗ್ರಹಿಸಲಿ ಎಂದು ಪ್ರಾರ್ಥಿಸಿ ಅವರಿಗೆ ಕೃತಜ್ಞತೆಗಳನ್ನರ್ಪಿಸುತ್ತೇನೆ.

ಟ್ರಸ್ಟಿಗಳಾದ ಶ್ರೀ ಕೆ.ಸಿ. ನ್ಯಾಕ್‌ರವರೂ ಶ್ರೀ ಪಿ. ರಾಮಚಂದ್ರ ಭಟ್‌ರವರೂ ನನ್ನೊಡನೆ ಸಹಕರಿಸಿರುತ್ತಾರೆ. ಅವರಿಗೂ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಪುತ್ತೂರು
21—4—71

ಡಿ. ಕೆ. ಹೆಬ್ಬಾರ್
ಆಡಳಿತ ಮೊಕ್ತೇಸರ್
ಶ್ರೀ ಮಹಾಲಿಂಗೇಶ್ವರ ದೇವಸ್ಥಾನ

ಕೃತಜ್ಞತಾ ಸಮರ್ಪಣೆ

ಇದೇ ತಾ. ೨೬-೪-೭೧ರಂದು ಉಡುಪಿ ಕಲ್ಪನಾ ಥಿಯೇಟರಿನಲ್ಲಿ ನನ್ನ ಪುತ್ರ ಚಿ. ಬಾಲಕೃಷ್ಣನಿಗೆ ಶ್ರೀ ಬಿಲ್ಲಾಡಿ ದೊಡ್ಡಮನೆ ಆನಂದ ಹೆಗ್ಡೆಯವರ ಪುತ್ರಿ ಚಿ. ಸೌ. ಶಾರದಾಳೊಂದಿಗೂ, ನನ್ನ ಮೊಮ್ಮಗಳು ವ ದಿ| ಬಿ. ವಿಟ್ಠಲದಾಸ ಹೆಗ್ಡೆಯವರ ಪುತ್ರಿ ಚಿ. ಸೌ. ಅನಿತಾಳಿಗೆ ದಿ| ವಕೀಲ್ ಕೆದಿಂಜೆ ಮಹಾಬಲ ಹೆಗ್ಡೆಯವರ ಪುತ್ರ ಚಿ. ಸತೀಶ್ಚಂದ್ರನೊಂದಿಗೂ ಜರಗಿದ ವಿವಾಹ ಸಮಾರಂಭಕ್ಕೆ ಬಂದು ಚಂದಗಾಣಿಸಿ ಸಹಕರಿಸಿದವರಿಗೂ, ಉಡುಗೊರೆಗಳನ್ನಿತ್ತು ವಧೂವರರನ್ನು ಹರಸಿದವರಿಗೂ ಬೇರೆ ಬೇರೆ ವಿಧಗಳಿಂದ ಸಹಕರಿಸಿದವರಿಗೂ ನನ್ನ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬೇಳಂಜೆ ವಿಠ್ಠಲ ಹೆಗ್ಡೆ

ನವಯುಗದ ಸುವರ್ಣ ಮಹೋತ್ಸವ

ನಿವೇದನೆ

ಇದೇ 1971ನೆಯ ವರ್ಷಕ್ಕೆ, ನಾಡಿನ ಜನಪ್ರಿಯ ಸಾಪ್ತಾಹಿಕ 'ನವಯುಗ' ತನ್ನ ಸಾರ್ಥಕ ಜೀವನದ ಐವತ್ತು ವರ್ಷಗಳನ್ನು ಕಳೆದು ತನ್ನ ಚಿನ್ನದ ಹಬ್ಬದ ವರ್ಷಕ್ಕೆ ಕಾಲಿರಿಸಿದೆ. ಈ ಶುಭ ಸಂದರ್ಭದಲ್ಲಿ ನಾಡಿನ ಸಾರ್ವಜನಿಕ ಅಭಿಪ್ರಾಯದ ಈ ನಿರೂಪಣ ಮತ್ತು ರೂಪಣದಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಪತ್ರಿಕೋದ್ಯಮಿಗಳು, ಲೇಖಕರು ಮತ್ತು ಸರ್ಕಾರದ ಮುಂದಾಳುಗಳನ್ನು ಒತ್ತಟ್ಟಿಗೆ ಸೇರಿಸಿ ಭಾರತೀಯ ಪ್ರಜಾಪ್ರಭುತ್ವದ ಯಶಸ್ಸಿಗಾಗಿ ನಾವು ಇನ್ನೂ ಮಾಡಬೇಕಾದ ಕೆಲಸ, ಹಿಡಿಯಬೇಕಾದ ದಾರಿಯ ಕುರಿತು ಚರ್ಚೆ ನಡೆಸಲು ಅನುಕೂಲ ಕಲ್ಪಿಸುವ ಬಯಕೆ ನಮ್ಮದು "ನವಯುಗ"ದ ಚಿನ್ನದ ಹಬ್ಬ ನಮ್ಮ ರಾಜ್ಯದ ಸರ್ವತೋಮುಖ ಬೆಳವಣಿಗೆಯ ಸೂತ್ರಗಳನ್ನು ಕಂಡುಕೊಳ್ಳಲು ನೆರವಾಗುವಂತೆ ಆ ಹಬ್ಬವನ್ನು ಒಂದು ಸಾಂಸ್ಕೃತಿಕ ಉತ್ಸವವಾಗಿ ಆಚರಿಸಬೇಕೆಂದು ನಾವು ನಿರ್ಧರಿಸಿರುತ್ತೇವೆ. ಈ ಬಗ್ಗೆ ಈಗಾಗಲೇ ಪ್ರಾತಿನಿಧಿಕ ಸಮಾರಂಭ ಸಮಿತಿಯನ್ನು ರಚಿಸಲಾಗಿದೆ.

ನಮ್ಮ ಕೆಲವು ಆಪ್ತ ಸ್ನೇಹಿತರು ಈ ಚಿನ್ನದ ಹಬ್ಬದ ವರ್ಷದಲ್ಲಿ 'ನವಯುಗ'ದ ನವೀಕರಣವೂ ನಡೆಯಬೇಕೆಂದು ಸೂಚಿಸಿದ್ದಾರೆ. ಆಧುನಿಕ ಯುಗಕ್ಕೆ ಹೊಂದಿಕೊಳ್ಳುವ ಲೇಖನ, ಶೀರ್ಷಿಕೆ, ಮತ್ತು ಚಿತ್ರಗಳ ಮೂಲಕ ರಾಜ್ಯದ ಜನತೆಯ ಓದಿಕೆಯ ಹಸಿವನ್ನು ನೀಗಿಸುವ ಆಕರ್ಷಕ ವಿಧಾನಗಳನ್ನು ಅನುಸರಿಸಬೇಕಾಗಿದೆ. ಜನರಲ್ಲಿ ವೈಜ್ಞಾನಿಕ ಮನೋವೃತ್ತಿ ಕುದುರುವಂತೆ ವಿಜ್ಞಾನ ಲೇಖನಗಳ ವ್ಯಾಪ್ತಿಯನ್ನು ಹಿಗ್ಗಿಸಬೇಕಾಗಿದೆ. ಸಾಮಾಜಿಕ ರಾಜಕೀಯ ಪ್ರಶ್ನೆಗಳಿಗೆ ಜನ ಸ್ವತಂತ್ರವಾಗಿಯೂ ವಿವೇಕ ಪೂರ್ಣವಾಗಿಯೂ ಉತ್ತರಿಸುವಂತೆ ಪ್ರೇರಿಸಬೇಕಾಗಿದೆ. ದೈನಂದಿನ ವರ್ತಮಾನಪತ್ರಗಳು ಸುದ್ದಿ ಸಂಗ್ರಹದ ಮೇಲೆ ಹೆಚ್ಚಾಗಿ ಕಣ್ಣಿಟ್ಟಿರುವುದರಿಂದ, ಅಭಿಪ್ರಾಯ ರೂಪಣದ ಕೆಲಸ ಸಾಪ್ತಾಹಿಕಗಳ ಮೂಲಕವೇ ನಡೆಯಬೇಕಾದ ಪ್ರಸಂಗದಲ್ಲಿ ನವಯುಗ ತನ್ನ ಪಾತ್ರವನ್ನು ಹೊಸದಾಗಿ ನಿರ್ಧರಿಸಿಕೊಳ್ಳಬೇಕಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಹೇಗೋ ಹಾಗೆ ಅನಂತರವೂ 'ನವಯುಗ'ವು ತನ್ನತನವನ್ನು ಕಾಯ್ದುಕೊಂಡು ವಿಶಿಷ್ಟ ರೀತಿಯ ಬರವಣಿಗೆಯಿಂದ ತನ್ನ ಸತ್ಯವನ್ನೂ, ಸತ್ವವನ್ನೂ ಕಾಪಾಡಿಕೊಂಡು ಬಂದಿರುವುದನ್ನು ತಾವು ಗಮನಿಸಿರಬಹುದು. ಅನಾಕರ್ಷಕವಾದ ರಾಷ್ಟ್ರೀಯ ಪುನಾರಚನೆಯ ಕಾರ್ಯದಲ್ಲಿ 'ನವಯುಗ' ಆಡಂಬರವಿಲ್ಲದೆ, ಸದ್ದುಗದ್ದಲ್ಲವಿಲ್ಲದೆ ನಡೆಸಿದ ಕರ್ತವ್ಯವನ್ನು ತಾವು ಮೆಚ್ಚಿಕೊಂಡಿರುವಿರೆಂದು ನಮ್ಮ ಭಾವನೆ.

'ನವಯುಗ'ದ ನವೀಕರಣದ ಯೋಜನೆ ಸಾರ್ವಜನಿಕರ ಆರ್ಥಿಕ ಬೆಂಬಲವಿಲ್ಲದೆ ಅಸಾಧ್ಯ. ನವಯುಗದ ಶ್ರೇಯಃಕಾಂಕ್ಷಿಗಳಾದ ತಮ್ಮಂಥವರಿಂದ, ತಮ್ಮ ಸ್ನೇಹಿತ ವರ್ಗದಿಂದ ದೊರೆಯುವ ಸಹಾಯವನ್ನು ನಾವು ಸಂತೋಷದಿಂದ ಸ್ವೀಕರಿಸುತ್ತೇವೆ.

ಇತಿ ಭವದೀಯ

ನವಯುಗ ಆಫೀಸು,
ಉಡುಪಿ.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ-ಸಂಪಾದಕ

ನವಯುಗ

ಕೃತಜ್ಞತಾ ಸಮರ್ಪಣೆ

ನವಯುಗದ ನವೀಕರಣಕ್ಕಾಗಿ ಯೋಜಿಸಲಾಗಿರುವ ಸುವರ್ಣೋತ್ಸವ ನಿಧಿ ಸಂಗ್ರಹ ಹಾಗೂ ಚಿನ್ನದ ಹಬ್ಬದ ಸಂಚಿಕೆಗೆ ಜಾಹಿರಾತು ಸಂಗ್ರಹಕ್ಕಾಗಿ ಕೆಲವು ಮಿತ್ರರೊಂದಿಗೆ ಇತ್ತೀಚೆಗೆ ಸಂಚರಿಸಿದಾಗ ನಮಗೆ ಬೇರೆ ಬೇರೆ ಕಡೆಗಳಲ್ಲಿ ವಿವಿಧ ರೀತಿಯಲ್ಲಿ ಸಹಕಾರ ಪ್ರೋತ್ಸಾಹಗಳನ್ನಿತ್ತ ಈ ಕೆಳಗಿನ ಮಹನೀಯರಿಗೆ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಕಾರವಾರದಲ್ಲಿ ಶ್ರೀಗಳಾದ ಕೆ. ಸಂಜೀವ ರಾವ್, ಎಂ.ಎಲ್. ಶೆಟ್ಟಿ, ಅರವಿಂದ ಮೋಟಾರ್ಸ್‌ನ ಮೆನೇಜರ್ ಶ್ರೀ ಐತಾಳ್ ಮತ್ತು ಶಿಬಂದಿಯವರು, ಸಿದ್ಧಾಪುರದಲ್ಲಿ ಡಾ| ಎಂ.ಪಿ. ಶೆಟ್ಟಿ, ಶ್ರೀ ಎಸ್. ವಿ. ಹೆಗ್ಡೆ, ಭದ್ರಾವತಿಯಲ್ಲಿ ಶ್ರೀ ಬಡೆಕ್ಕಿಲ ಕೃಷ್ಣ ಭಟ್, ಬಿ. ಮಾಧವಾಚಾರ್, ಶ್ರೀ ಎನ್. ಸುಧಾಕರ ಶೆಟ್ಟಿ, ಶಿವಮೊಗ್ಗದಲ್ಲಿ ಡಾ| ಎಚ್. ಎಸ್. ಹೆಗ್ಡೆ. ಮನೋಹರ ಕೆಫೆಯ ಶ್ರೀ ಪಿ.ಕೆ. ಜನಾರ್ಧನ ನೆಲ್ಲಿ, ನಮಗೆ ಬೇರೆ ಬೇರೆ ಕಡೆಗಳಲ್ಲಿ ಚಂದಾದಾರರಾಗಿ ಪ್ರೋತ್ಸಾಹಿಸಿದ ಮಹನೀಯರಿಗೂ ನಮ್ಮ ಧನ್ಯವಾದಗಳು.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ-ಸಂಪಾದಕ

ಪಾಕಿಸ್ತಾನದ ಮೇಲೊಂದು 'ಕ್ಷ' ಕಿರಣ

ಯಾಹ್ಯಾಖಾನರ ದಂಡಯಾತ್ರೆ

ಲೇಖಕರು : "ವಿಶ್ಲೇಷಕ"

ಯಾಹ್ಯಾರಿಗೆ ಈಗ ಅಗ್ನಿಪರೀಕ್ಷೆ. ದೂರದ ಪೂರ್ವಬಂಗಾಳ ಅವರ ಪಾಲಿಗೆ ಅಗ್ನಿಕುಂಡ. ಅಲ್ಲಿ ಸ್ವಾತಂತ್ರ್ಯ ಯೋಧರ ಕೆಚ್ಚು ಪ್ರಜ್ವಲಿಸುತ್ತಿದೆ. ಈ ಕೆಚ್ಚನ್ನು ನಂದಿಸಲೆಂದೇ ಯಾಹ್ಯಾಖಾನರ ದಂಡಯಾತ್ರೆ. ಲೆಕ್ಕವಿಲ್ಲದಷ್ಟು ಬಂಗ್ಲಾ ದೇಶಭಕ್ತರ ಸಾಮೂಹಿಕ ಕಗ್ಗೊಲೆ ಆದರೂ ವೀರ ಬಂಗಾಳಿಗಳು ಕಂಗೆಡಲಿಲ್ಲವೆಂದು ಯಾಹ್ಯಾಖಾನರ ಕೊರಗು. ಸಾಲದ್ದಕ್ಕೆ ಅಸಾಮಾನ್ಯವಾದ ಪ್ರತಿರೋಧವನ್ನು ಅವರು ಎದುರಿಸಬೇಕಾಗಿದೆ. ಇದರಿಂದಾಗಿ ದಂಡಿನ ಪ್ರಭುಗಳಿಗೆ ಹಲವು ಹನ್ನೊಂದು ಸಮಸ್ಯೆಗಳು ತಲೆದೋರಿವೆ. ಇದೆಲ್ಲ ಅವರದೇ ಸೃಷ್ಟಿ. ಮೊದಲನೆಯದಾಗಿ ದಂಡಿನ ಆಡಳಿತಗಾರರು ತಮ್ಮ ಅಮಾನುಷ ಕಾರ್ಯಾಚರಣೆಗೆ, ಬಂಗ್ಲಾ ದೇಶದ ಯಾರಿಂದಲೂ ಸೈ ಎನ್ನಿಸಿಕೊಳ್ಳಲಿಲ್ಲ. ಯಾಹ್ಯಾರಿಗೆ ಬಂಗ್ಲಾ ದೇಶದ ಯಾರೊಬ್ಬರ ಬೆಂಬಲವೂ ಇಲ್ಲ. ಬಂಗ್ಲಾ ದೇಶವನ್ನು ಮೊದಲಿನಿಂದಲೂ ವಸಾಹತಿನಂತೆ ನೋಡಿಕೊಂಡರೆನ್ನುವುದು. ಪಶ್ಚಿಮ ಪಾಕಿಸ್ತಾನದ ರಾಜಕೀಯ ನೀತಿಯ ದಿವಾಳಿಯನ್ನೇ ತೋರಿಸುತ್ತದೆ. ಮಿಲಿಟರಿ ಪ್ರಭುಗಳ ಈ ನೀತಿ ಮುಂಬರುವ ದಿನಗಳಲ್ಲಿ ಮಿಲಿಟರಿ ಸ್ಥಿತಿಯ ಮೇಲೆ ಗಹನವಾದ ಪ್ರಭಾವವನ್ನೇ ಬೀರುವುದು. ಬಂಗ್ಲಾದೇಶಭಕ್ತರ ಅಸಹಕಾರದ ಫಲವಾಗಿ ಅನೇಕ ಕಡೆಗಳಲ್ಲಿ ಪಾಕ್ ಸೈನಿಕರಿಗೆ ಆಹಾರ—ನೀರು ಸಿಗದಂತಾಗಿದೆ; ಪಾಕಿಸ್ತಾನದ ವಿಮಾನಗಳಿಗೆ ಇಂಧನ ಪೂರೈಸಲು ಬರ್ಮಾ ನಿರಾಕರಿಸಿದೆ. ಸಿಲೋನ್ ಸಹ ಇಂತಹ ಸೌಕರ್ಯಗಳನ್ನು ಮೊಟಕುಗೊಳಿಸಿದೆ. ಇದರಿಂದಾಗಿ-ಪಾಕಿಸ್ತಾನ ಮಿಲಿಟರಿ ಪ್ರಭುಗಳು ಇಂಧನಕ್ಕಾಗಿ ಪರದಾಟ ಪ್ರಾರಂಭಿಸಿದ್ದಾರೆ.

ಬಲದ ಮದ

ಬಂಗ್ಲಾ ದೇಶದಲ್ಲಿ ಈಗ ಆರಂಭವಾಗಿರುವ ಯುದ್ಧ ಬಹಳ ದಿನಗಳ ವರೆಗೆ ನಡೆಯುವ ಸಂಭವವಿದೆ ಬಲಪ್ರದರ್ಶನ ಮಾಡಿ ಬಂಗ್ಲಾದೇಶದ ನಿಶ್ಶಸ್ತ್ರ ನಾಗರಿಕರನ್ನು ಬಗ್ಗುಬಡಿಯಬಹುದೆಂದು ಪಾಕಿಸ್ತಾನದ ಆಡಳಿತಗಾರರು ಮಾಡಿದ ಲೆಕ್ಕಾಚಾರ ಈಗ ತಲೆಕೆಳಗಾಗಿದೆ. 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯ ಮಾತಿನಲ್ಲಿ ಹೇಳುವುದಾದರೆ 'ಆಡಳಿತಗಾರರ ಕಾರ್ಯಾಚರಣೆ, ವಸಾಹತು ಉಳಿಸಿಕೊಳ್ಳಲು ನಡೆಸಿದ ಹೋರಾಟವಾಗಿದೆ. ವಸಾಹತು ಶಾಹಿಯ ದಿನಗಳು ಈಗ ಮುಗಿದಿವೆ....'

ಮುಂಗಾರು ಮಳೆ ಪ್ರಾರಂಭವಾಯಿತೆಂದರೆ ಪಾಕ್ ಸೈನಿಕರಿಗೆ ಇನ್ನೂ ಕಷ್ಟ. ಸೇನೆಯ ಸರಬರಾಜು ಮಾರ್ಗಗಳನ್ನು ಸುಸ್ಥಿತಿಯಲ್ಲಿಡುವುದಾಗಲೀ ಸಂಪರ್ಕ ಸಾಧನಗಳನ್ನು ಕಾಪಾಡಿಕೊಳ್ಳುವುದಾಗಲೀ ಅವರಿಗೆ ಅಸಾಧ್ಯವಾಗುವುದು.

ಇಸ್ಲಾಂಬಾದ್ ತನ್ನ ಬಳಿಯಲ್ಲಿರುವ ಎಲ್ಲಾ ಸೇನಾಬಲವನ್ನು ಶಸ್ತ್ರಾಸ್ತ್ರಗಳನ್ನೂ ಬಳಸಿಕೊಂಡು ಬಂಗ್ಲಾ ದೇಶದ ಸ್ವಾತಂತ್ರ್ಯ ಹೋರಾಟವನ್ನು ದಮನ ಮಾಡಲು ಯತ್ನಿಸುತ್ತಿದೆ. ಈ ಕಾರ್ಯದಲ್ಲಿ ಹತಾಶಗೊಂಡ ಅದು ವಾಯುವ್ಯ ಸರಹದ್ದಿನ ಕಮ್ಯಾಂಡೊಗಳನ್ನು ಅಧಿಕ ಸಂಖ್ಯೆಯಲ್ಲಿ ಕಳಿಸಿಕೊಂಡು ಅವರನ್ನು ಪೂರ್ವ ಬಂಗಾಳಕ್ಕೆ ರವಾನಿಸಿದೆ.

ಪಶ್ಚಿಮ ಪಾಕಿಸ್ತಾನದ ಜನಸಂಪರ್ಕ ಮಾಧ್ಯಮಗಳು ಸೇನಾಭರತಿಗಾಗಿ ಒಂದೇ ಸಮನೆ ಪ್ರಚಾರಮಾಡುತ್ತಿವೆ. ದೃಢಕಾಯರಾದ ಎಲ್ಲಾ ಯುವಕರೂ 'ರಾಷ್ಟ್ರ ರಕ್ಷಣೆ'ಗಾಗಿ ಸೇನೆಯನ್ನು ಸೇರಬೇಕೆಂದು ಕರೆಯುತ್ತಿವೆ. ಸೇನಾಭರತಿಗಾಗಿ ವಾಯುವ್ಯ ಸರಹದ್ ಪ್ರಾಂತ್ಯ ಹಾಗೂ ಪಂಜಾಬ್ ರಾಜ್ಯದ ಅನೇಕ ಕಡೆಗಳಲ್ಲಿ ಕಳೆದ ವಾರ ಸೇನಾಭರತಿಯ ಮೇಳಗಳು ನಡೆದುವೆಂದು ವರದಿ.

ಹೊರಲಾಗದ ಹೊರೆ

ಬಂಗ್ಲಾದೇಶದಲ್ಲಿ ಪಾಕಿಸ್ತಾನ್ ನಡೆಸಿರುವ ಮಿಲಿಟರಿ ಸಾಹಸ, ಪಾಕಿಸ್ತಾನದ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರಿದೆ ಎಂಬುದು ಪಶ್ಚಿಮ ಪಂಜಾಬ್ ವಾಣಿಜ್ಯ ಸಂಘದ ಅಧ್ಯಕ್ಷರ ಮಾತಿನಿಂದ ಸ್ಪಷ್ಟವಾಗಿದೆ. ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನ ನಡುವೆ ವ್ಯಾಪಾರ ವ್ಯವಹಾರಗಳು ಸಂಪೂರ್ಣವಾಗಿ ನಿಂತುಹೋಗಿರುವುದರಿಂದ ಪಶ್ಚಿಮ ಪಾಕ್ ವ್ಯಾಪಾರಿಗಳು ವಾರಕ್ಕೆ 3 ಕೋಟಿ ರೂ ಗಳಷ್ಟು ನಷ್ಟವನ್ನು ಅನುಭವಿಸುತ್ತಿದ್ದಾರೆ. ಬಂಗ್ಲಾದೇಶದಲ್ಲಿ ಕೈಗಾರಿಕೆಗಳು ಕೆಲಸವನ್ನು ನಿಲ್ಲಿಸಿರುವುದರಿಂದ ಪಶ್ಚಿಮ ಪಾಕಿಸ್ತಾನಕ್ಕೆ ಕೈಗಾರಿಕಾ ವಸ್ತುಗಳ ಪೂರೈಕೆಯಾಗುತ್ತಿಲ್ಲ. ಇದರಿಂದಾಗಿ ಪೂರ್ವಬಂಗಾಳದಲ್ಲಿ ನಡೆದಿರುವ ಯುದ್ಧ ಪಶ್ಚಿಮ ಪಾಕಿಸ್ತಾನ ಹೊರಲಾರದ ಹೊರೆಯಾಗಿ ಪರಿಣಮಿಸಿದೆ.

ಆರ್ಥಿಕಸ್ಥಿತಿ ದಿನ—ದಿನವೂ ಚಿಂತಾಜನಕವಾಗುತ್ತ ನಡೆದಿದೆ. ಪೂರ್ವಬಂಗಾಳದೊಂದಿಗೆ ಸಮರವನ್ನು ಆರಂಭಿಸಿರುವುದು ಪಶ್ಚಿಮ ಪಾಕಿಸ್ತಾನದ ಜನರಿಗೆ "ನೀರಿಳಿಯದ ಗಂಟಲೊಳು ಕಡುಬನ್ನು ತುರುಕಿದಂತಾಗಿದೆ." ಪಾಕಿಸ್ತಾನದ ಪ್ರಜೆಗಳು ಇದೆಲ್ಲವನ್ನೂ ಅನುಭವಿಸಬೇಕಾಗಿದೆ ಅಧಿಕಾರದಾಹ ಯಾಹ್ಯಾಖಾನರನ್ನು ಅಮಾನುಷ ಕೃತ್ಯಗಳಿಗೆ ಪ್ರೇರೇಪಿಸಿದೆ.

ಪಶ್ಚಿಮ ಪಾಕಿಸ್ತಾನಿನ ಪ್ರಧಾನ ಕೈಗಾರಿಕಾ ಕೇಂದ್ರಗಳಾದ ಲೈಲಾಪುರ ಲಾಹೋರ್—ಮತ್ತು ಕರಾಚಿ ಇವೇ ಮೊದಲಾದ ನಗರಗಳಲ್ಲಿ ಕೈಗಾರಿಕಾ ಅಶಾಂತಿ ತಲೆದೋರಿದೆಯೆಂದೂ ಇಡೀ ಪಶ್ಚಿಮ ಪಾಕಿಸ್ತಾನವೇ ಈಗ ಕೈಗಾರಿಕಾ ಕ್ಷೋಭೆಗೆ ಒಳಗಾಗಿದೆ ಎಂದು ಪತ್ರಿಕಾ ವರದಿಗಳು ತಿಳಿಸಿವೆ.

ಪೂರ್ವಬಂಗಾಳದಲ್ಲಿ ಪಾಕ್ ಮಿಲಿಟರಿ ಪ್ರಭುಗಳ ಸಮರವನ್ನು ಪ್ರಾರಂಭಿಸಿದ ಬಳಿಕ ಪಶ್ಚಿಮ ಪಂಜಾಬಿನ ಲೈಲಾಪುರದ ಕಾರ್ಮಿಕರು ಭಾರೀ ಮತಪ್ರದರ್ಶನ ಮಾಡಿದರೆಂದು ವರದಿಯಾಗಿದೆ. ಬಹಳ ದಿನಗಳಿಂದಲೂ ಇತ್ಯರ್ಥವಾಗದೇ ಇರುವ ಅನೇಕ ವಿವಾದಗಳನ್ನು ಕೂಡಲೇ ಬಗೆಹರಿಸಬೇಕೆಂದೂ ಸೇನಾಕಾರ್ಯಾಚರಣೆಯ ಮುನ್ನಾದಿನ ರದ್ದುಪಡಿಸಲಾದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಪುನಃ ಕೊಡಬೇಕೆಂದೂ ಅವರು ಒತ್ತಾಯಿಸಿದ್ದಾರೆ.

ಲಾಹೋರಿನಲ್ಲೂ ಇದೇ ಬಗೆಯ ಪ್ರದರ್ಶನಗಳು ನಡೆದವೆಂದು ಹೇಳಲಾಗಿದೆ. ಪ್ರದರ್ಶನಕಾರರನ್ನು ಚದುರಿಸಲು ದಂಡಿನ ಆಡಳಿತಗಾರರು ಗುಂಡುಹಾರಿಸಿದರೆಂದೂ ಅನೇಕರು ಮರಣಹೊಂದಿದರೆಂದೂ ಗೊತ್ತಾಗಿದೆ. ಕರಾಚಿಗೂ ಈ ಅಶಾಂತಿಯ ಬಿಸಿ ತಗುಲಿದೆ ಈ ನಗರದ ಅನೇಕ, ಭಾಗಗಳಲ್ಲಿ ಪ್ರಕ್ಷುಬ್ಧತೆ ಕಂಡುಬರುತ್ತಿದೆ. ಪತ್ರಿಕೆಗಳ ಮೇಲೆ ದಂಡಿನಾಡಳಿತಗಾರರ ಬಲವಾದ ನಿಯಂತ್ರಣವಿರುವುದರಿಂದ ಅವು ಈ ಘಟನೆಗಳ ಸಂಕ್ಷಿಪ್ತವಾದ ವರದಿಗಳನ್ನು ಪ್ರಕಟಿಸಿವೆ. ಕರಾಚಿ ನಗರದಲ್ಲಿ ಅನೇಕ ಕಡೆಗಳಲ್ಲಿ ಕರ್ಫ್ಯೂವಿಧಿಸಲಾಯಿತೆಂಬುದು ಗಲಭೆಯ ಭೀಕರತೆಯನ್ನು ಎತ್ತಿ ತೋರಿಸುತ್ತಿದೆ ಕ್ರಮೇಣ ಈ ಅಶಾಂತತೆ ಇಡೀ ಪಾಕಿಸ್ತಾನವನ್ನು ಆವರಿಸುವ ಸಂಭವವಿದೆ.

ದೈನಂದಿನ ಕೆಲಸಕಾರ್ಯಗಳಿಗೆ ಅಡಚಣೆ ಒಡ್ಡುವವರನ್ನು ಗುಂಡಿಕ್ಕಿ ಕೊಲ್ಲಲಾಗುವುದೆಂದು ದಂಡಿನ ಆಡಳಿತಗಾರರು ಬೆದರಿಕೆ ಹಾಕುತ್ತಲೇ ಇದ್ದಾರೆ. ಈ ಎಲ್ಲಾ ಘಟನೆಗಳು ಪರಿಸ್ಥಿತಿಯ ತೀವ್ರತೆಯನ್ನು ಅದೂ ಪಾಕ್ ಆಡಳಿತಗಾರರಿಗೆ ಪ್ರತಿಕೂಲವಾಗಿದೆ, ಎಂಬುದನ್ನೂ ಜಗಜ್ಜಾಹೀರು ಮಾಡಿವೆ. ಪೂರ್ವಬಂಗಾಳದಲ್ಲಿ ನಡೆದಿರುವ ದಂಡಿನ ಕಾರ್ಯಾಚರಣೆಗೆ ಪಶ್ಚಿಮ ಪಾಕಿಸ್ತಾನಿನ ಪ್ರಜೆಗಳು ಬೆಂಬಲ ನೀಡಿಲ್ಲವೆಂಬುದನ್ನು ಈ ಘಟನೆಗಳು ಸ್ಪಷ್ಟಪಡಿಸಿವೆ. ದಂಡಿನ ಪ್ರಭುಗಳ ಈ ದುಸ್ಸಾಹಸ ಪ್ರಜಾಪ್ರಭುತ್ವದ ಅವಕಾಶವನ್ನು ಮಣ್ಣುಪಾಲು ಮಾಡಿದೆಯೆಂದೂ ಪಾಕ್ ಪ್ರಜೆಗಳಿಗೆ ಮನದಟ್ಟಾಗಿದೆ.

● ●

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ
ಮನೆ-ಮದ್ದು
ಬೆಲೆ: ರೂ. 2-00

ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ
ಗೀತೆಯ ಕೈಗನ್ನಡಿ
ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy
ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು
ಸಹಕಾರಿಯಾದ ದಿನವಹಿ-ಪತ್ರಸಂಕಲನ
ಬೆಲೆ ರೂ. 1 50.

ನವಭಾರತ-ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit **ಫೋನ್: 77**

HOTEL SHIVAPRASAD
High Class Boarding, Lodging & Restaurant
COONDAPUR, S. K.

ಸಿಗುತ್ತವೆ
ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

NAVAYUGA 29-4-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಪ್ರಚ್ಛನ್ನ ಸಮರ

(ಒಂದನೇ ಪುಟದಿಂದ)

ಯನ್ನೋಡಿಸಿದನು. ಅವರ ಶಸ್ತ್ರಾಸ್ತ್ರಗಳನ್ನು ವಾಹನಗಳಿಗೆ ತುಂಬಿದನು. ಸೈನಿಕರು ವಿದೂರಥ ನಗರವನ್ನು ಹೊಕ್ಕು ಲೂಟಿ-ಕೊಳ್ಳೆಗೆ ತೊಡಗಿದರು. "ನಿರ್ಬಲರನ್ನು ಪೀಡಿಸುವುದು ಮಹಾಪಾಪ, ನಮ್ಮ ರಾಜನೇನೋ ಸತ್ತನು; ಆದರೆ, ವೀರರಿಗಾದರೂ ಹೆದರು. ನಮ್ಮ ಮೇಲೆ ಅತ್ಯಾಚಾರವೆಸಗಬೇಡ, ದಯೆದೋರು" ಎಂದು ನಿರೀಹ ನಾಗರಿಕರು ಓಡುತ್ತ ಕೂಗಾಡುತ್ತಿದ್ದರು. ಹೀಗೆ ಕೂಗಾಡುತಿದ್ದವರಲ್ಲೇ ಹಲವರು ತಮಗಿಂತ ನಿರ್ಬಲರನ್ನು ಲೂಟಿ ಮಾಡುತ್ತಿದ್ದರು. ಲೂಟಿಯ ಪಾಲು ಹೊತ್ತು ನಡೆಯುತ್ತಿದ್ದ ಸೈನಿಕರು ತಮ್ಮ ಅಳಿದುಳಿದ ವಸ್ತು-ಒಡವೆಗಳನ್ನು ಅಡಗಿಸಿ ಒಯ್ಯುತ್ತಿದ್ದ ನಾಗರಿಕರನ್ನು ದರೋಡೆಕೋರರೆಂದು ಹಿಂಸಿಸುತ್ತಿದ್ದರು.

ವಿದೂರಥನ ರಾಣಿಯರು ಸೆರೆಸಿಗುವ ಭಯದಿಂದ ಆಶ್ರಯವರಸಿ ಹೋದರು. ಈ ವರೆಗೆ ಸ್ವಾಗತಕ್ಕಾಗಿ ತೆರೆಯುತಿದ್ದ ಬಾಗಿಲುಗಳೀಗ ಅವರಿಗೆ ಮುಚ್ಚಿದುವು. ರಾಣಿಯರು ಓಡ ತೊಡಗಿದರು. ನಗರ ಅರಾಜಕವಾಗಿತ್ತು. ಸೈನಿಕರೂ ಲೂಟಿಗಾರರು ಮನೆ ಮನೆಯನ್ನೂ ಲೂಟಿ ಮಾಡಿದರು. ಸಿಂಧು ರಾಜನು ಶಾಂತಿ ಸ್ಥಾಪಿಸಲೆಂದು ಸೈನ್ಯವನ್ನಟ್ಟಿದನು. ಅದರಿಂದ ಹೆದರಿದ ಲೂಟಿಗಾರರು ಅಡಗುವ ಭಯದಿಂದ ಒಡವೆ ವಸ್ತುಗಳನ್ನು ಎಲ್ಲೆಲ್ಲೋ ಚೆಲ್ಲಿದರು. ಅವನ್ನು ಸರಕಾರಿ ವಸ್ತುಗಳೆಂದು ಬೊಕ್ಕಸಕ್ಕೆ ಸೇರಿಸಲಾಯ್ತು.

ವಿಜಯಿ ಸಿಂಧುರಾಜನು ತನ್ನ ರಾಣಿಯರೊಂದಿಗೆ ನಗರಕ್ಕಾಗಮಿಸಿ, ಅದನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ ಘೋಷಣೆ ಮಾಡಿದನು. ಅಳಿದುಳಿದ ನಾಗರಿಕರು ಹೊಸ ರಾಜನಿಗೆ ವಿಧೇಯರಿರುವುದಾಗಿ ಪ್ರತಿಜ್ಞೆ ಮಾಡಿದರು. ಮೊದಲಿನ ರಾಜನ ಭಕ್ತರಲ್ಲಿ ಕೆಲವರು ಮನೆಮಾರು ಬಿಟ್ಟು ಪ್ರಾಣಭಯದಿಂದ ಓಡಿ ಹೋದರು. ವಿದೂರಥನ ಬಲಗೈ ಬಂಟರೆಂದು ಹೇಳಲಾದ ಹಲವರನ್ನು ಹಿಡಿದು ಗಲ್ಲಿಗೇರಿಸಲಾಯ್ತು. ವಿದೂರಥನು ಸೆರೆಹಿಡಿದಿದ್ದ ಸಿಂಧುರಾಜನ ಸೈನಿಕರಿಗೆ ಮುಕ್ತಿ ದೊರೆಯಿತು. ವಿಸ್ತಾರವಾದ ಜಹಗೀರು ಸಿಕ್ಕಿತು.

ಎರಡೂ ದೇಶಗಳಲ್ಲಿ ಮುದುಕರು, ಮಕ್ಕಳು ಮತ್ತು ವಿಧವೆಯರು ಮಾತ್ರ ಉಳಿದರು. ವ್ಯವಹಾರವೆಲ್ಲವೂ ಸ್ತಬ್ಧವಾಗಿ ಹೋಗಿತ್ತು. ಗೆದ್ದ ದೇಶದಲ್ಲಿ ಭಯಾನಕ ರೋಗ ಹರಡಿತ್ತು. ಹಸಿವೆಯಿಂದ ಜನ ಸತ್ತಿತು. ಸಿಂಧುರಾಜನು ಯುದ್ಧದಲ್ಲಿ ಧನ-ಕನಕಾದಿಗಳಿಗೆರವಾದದ್ದರಿಂದ ನಿಸ್ಸತ್ವನಾಗಿದ್ದನು. ಆತನು ದುರ್ಬಲನೆಂಬುದನ್ನು ಮನವರಿಕೆ ಮಾಡಿಕೊಂಡ ನೆರೆಯ ಇಬ್ಬರು ರಾಜರು ಇಕ್ಕಡೆಯಿಂದ ನುಗ್ಗಿ ಬಂದರು, ಅವನನ್ನು ಸೆರೆಹಿಡಿದರು. ಅವನೆರಡು ದೇಶಗಳನ್ನೂ ತಂತಮ್ಮಲ್ಲಿ ಹಂಚಿಕೊಂಡರು. ಈಗ ಈ ಇಬ್ಬರಲ್ಲಿ ಈರ್ಷ್ಯೆ ಮೂಡಿತು. ಒಬ್ಬರು ಇನ್ನೊಬ್ಬರ ಬಗೆಗೆ ಒಳಗೊಳಗೇ ಉರಿಯತೊಡಗಿದರು. ಒಬ್ಬರಿನ್ನೊಬ್ಬರನ್ನು ನೆಲಸಮ ಮಾಡುವ ಅವಕಾಶವನ್ನು ನಿರೀಕ್ಷಿಸತೊಡಗಿದರು....

●●

ಬ್ಯಾಂಕಿಂಗ್ ಸಂಸ್ಥೆಗಳ ಧ್ರುವತಾರೆ

ಸಿಂಡಿಕೇಟ್ ಬ್ಯಾಂಕ್

ಶ್ರೀ

೧೯೭೦ನೆ ವರ್ಷಕ್ಕೆ ಸಂಬಂಧಿಸಿದ ಸಾಲ—ಮೂಲ ಮತ್ತು ಲಾಭ ನಷ್ಟಗಳ ಲೆಕ್ಕ ಪತ್ರಗಳನ್ನು ಗಮನಿಸಿದಾಗ ಸಿಂಡಿಕೇಟ್ ಬ್ಯಾಂಕ್ ತನ್ನ ಹಿಂದಿನ ಪರಂಪರೆಯಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟಿದೆಯೆಂದು ಗೊತ್ತಾಗುತ್ತದೆ. ೧೯೬೯ನೆಯ ಜುಲೈ ೧೯ರಿಂದ ರಾಷ್ಟ್ರೀಕರಣಕ್ಕೊಳಗಾದ ಬ್ಯಾಂಕು ತನ್ನ ಹೊಸ ಸ್ವರೂಪದಲ್ಲಿಯೂ ಜನಸೇವಾ ದೀಕ್ಷೆಯಿಂದ ಹಿಂದೆಗೆಯದೆ ಮುಂದುವರಿದುದು ಗೋಚರವಾಗುತ್ತದೆ.

೧೯೭೦ನೆಯ ವರ್ಷದಲ್ಲಿ ಬ್ಯಾಂಕು ಮುಟ್ಟಿದ ಮೈಲಿಗಲ್ಲುಗಳು ಇವು-ಒಟ್ಟು ಠೇವಣಾತಿ ರೂ. ೧೪೫ ಕೋಟಿ. ಇದು ಹಿಂದಿನ ವರ್ಷಕ್ಕಿಂತ ಸೇ. ೩೩ರಷ್ಟು ಹೆಚ್ಚು. ಹೊರಗೆ ನೀಡಿದ ಒಟ್ಟು ಸಾಲ ರೂ. ೧೦೫ ಕೋಟಿ. ಇದು ಹಿಂದಿನ ವರ್ಷಕ್ಕಿಂತ ಸೇ. ೩೫ರಷ್ಟು ಹೆಚ್ಚು. ಠೇವಣಾತಿ ಮತ್ತು ಸಾಲಗಳಿಗಿರುವ ಪ್ರಮಾಣ ನೂರಕ್ಕೆ ಎಪ್ಪತ್ತೆರಡು. ನೀಡಿದ ಸಾಲಗಳಲ್ಲಿ ಸೇ. ೭೮ರಷ್ಟು ಸುಭದ್ರವಾದುವು. ಬ್ಯಾಂಕಿನ ಒಟ್ಟು ಬಂಡವಾಳವು ೧೪೨ ಲಕ್ಷ ತಲುಪಿದ್ದು ಕಾಯ್ದಿಟ್ಟ ನಿಧಿಯು ೧೫೬ ಲಕ್ಷವಿದೆ. ಇದು ಬ್ಯಾಂಕಿಂಗ್ ವ್ಯವಹಾರದ ಭದ್ರತೆಯ ದ್ಯೋತಕ.

೧೯೬೯ರ ಜುಲೈ ೧೮ರ ತನಕದ ವ್ಯವಹಾರದಲ್ಲಿ ಬ್ಯಾಂಕು ರೂ. ೧೬ ಲಕ್ಷದಷ್ಟು ಆನಂತರ ವರ್ಷಾಂತ್ಯದ ವರೆಗಿನ ವ್ಯವಹಾರದಲ್ಲಿ ರೂ. ೧೩ ಲಕ್ಷ ಲಾಭವನ್ನು ಗಳಿಸಿದೆ. ಹಿಂದಿನ ವರ್ಷದೊಡನೆ ಹೋಲಿಸುವಾಗ ಲಾಭಾಂಶದ ಪ್ರಮಾಣ ಕಡಮೆಯೆಂದೆನಿಸಿದರೂ ನೌಕರರ ಗ್ರ್ಯಾಚುವಿಟಿ ಲಯೆಬಿಲಿಟಿಗೆ ಬೇಕಷ್ಟು ಸೌಲಭ್ಯ ನೀಡಿದ್ದು ನೌಕರರಿಗೆ ನೀಡಬೇಕಾದ ಬೋನಸ್ಸಿನಲ್ಲಿ ಹೆಚ್ಚಳವಾದದ್ದು-ಈ ಮೊದಲಾದ ವಸ್ತುಸ್ಥಿತಿಗಳಿಂದ ಸಮಾಧಾನಕರ.

೧೯೬೯ರಲ್ಲಿ ಬ್ಯಾಂಕು ೧೦೧ ಶಾಖೆಗಳನ್ನು ಹೊಸತಾಗಿ ತೆರೆಯಿತು—ಇವುಗಳಲ್ಲಿ ೫೨ ಗ್ರಾಮೀಣ ಪ್ರದೇಶಗಳಲ್ಲಿ. ೧೯೭೦ರಲ್ಲಿ ಇನ್ನೂ ೧೦೬ ಶಾಖೆಗಳನ್ನು ತೆರೆದ ಬ್ಯಾಂಕು ೩೧-೧೨-೭೦ರಂದು ೪೬೦ ಶಾಖಾ ಸಮುದಾಯ ಹೊಂದಿದೆ. ಇವುಗಳಲ್ಲಿ ೧೭೪ ಗ್ರಾಮೀಣ ಪ್ರದೇಶಗಳಲ್ಲಿ, ೧೬೩ ಪಟ್ಟಣ ಪ್ರದೇಶಗಳಲ್ಲಿ ಮತ್ತು ೧೨೬ ನಗರ ಪ್ರದೇಶಗಳಲ್ಲಿವೆ. ಬ್ಯಾಂಕಿಂಗ್ ಸೌಕರ್ಯಗಳಿಲ್ಲದ ಸ್ಥಳಗಳನ್ನೇ ಹೆಚ್ಚಾಗಿ ಆರಿಸಿ ಅಲ್ಲಿನ ನಾಗರಿಕರಲ್ಲಿ ಬ್ಯಾಂಕಿಂಗ್ ಹವ್ಯಾಸವನ್ನು ಹುಟ್ಟಿಸುವ ತನ್ನ ಅಭಿರುಚಿಯನ್ನು ಸಿಂಡಿಕೇಟ್ ಬ್ಯಾಂಕು ಮುಂದುವರಿಸಿಕೊಂಡು ಬಂದಿದೆ.

ಬ್ಯಾಂಕು ನೀಡಿದ ಸಾಲಗಳಾದರೂ ಚಿಕ್ಕ ಮತ್ತು ಮಧ್ಯಮ ಪ್ರಮಾಣದವುಗಳೇ. ರೂ. ೧೦ ಸಾವಿರಕ್ಕೆ ಮಿಕ್ಕದ ಸಾಲಗಳು ೧೨ ಸಾವಿರ-ಅಂದರೆ ಸೇ.೪೮ರಷ್ಟು ಮಾತ್ರ. ರೂ. ೧೦೦೦ರಿಂದ ೧೦೦೦೦ದವರೆಗಿನವು ೧೬೨ ಸಾವಿರ. ಅಂದರೆ ಸೇ. ೫೪ರಷ್ಟು ಕೃಷಿಕರು, ಇಂಜನಿಯರು, ವೈದ್ಯರು, ವಿದ್ಯಾರ್ಥಿಗಳು, ಸ್ವತಂತ್ರ ಉದ್ಯೋಗಿಗಳು-ಹೀಗೆ ಜೀವನದ ನೂರಾರು ರಂಗಗಳಲ್ಲಿ ದುಡಿಯುವ ಸಾವಿರಾರು ವ್ಯಕ್ತಿಗಳ ಆವಶ್ಯಕತೆಗಳನ್ನು ಬ್ಯಾಂಕು ಪೂರಯ್ಸುತ್ತ ಬಂದಿದೆ. ಚಿಕ್ಕ ಕೈಗಾರಿಕೆಗಳನ್ನೂ ರೈತರನ್ನೂ ಇದೆಂದೂ ಮರೆತುದಿಲ್ಲ.

ಹಲವಾರು ರೀತಿಯ ಚಿಕ್ಕ ದೊಡ್ಡ ಉಳಿತಾಯ ಯೋಜನೆಗಳು, ಸಾಲ ಸೌಕರ್ಯಗಳು ಸಿಂಡಿಕೇಟಿನ ಅಜನ್ಮ ಗುಣ. ಇದರಂತೆ ಬ್ಯಾಂಕು ದೇಶದ ೧೬ ಜಿಲ್ಲೆಗಳಿಗೆ ಮಾರ್ಗದರ್ಶಿಯೆಂದು ನಿಯುಕ್ತವಾಗಿದೆ. ಈ ಜಿಲ್ಲೆಗಳ ಸರ್ವೆ ಕಾರ್ಯವನ್ನು ಬ್ಯಾಂಕು ತೊಡಗಿದೆ. ಇವುಗಳಲ್ಲಿ ಆಂಧ್ರದ ೪, ಹರಿಯಾನದ ೧, ಕೇರಳದ ೧, ಮೈಸೂರಿನ ೬, ಉತ್ತರ ಪ್ರದೇಶದ ೩ ಮತ್ತು ಲಕ್ಕದಿವಿ ದ್ವೀಪಗಳು ಸೇರಿವೆ.

೧೯೬೯ರ ಆರಂಭದಲ್ಲಿ ಬ್ಯಾಂಕಿನ ಅಧ್ಯಕ್ಷರಾಗಿದ್ದ ಶ್ರೀ ಟಿ. ಎ. ಪೈಯವರು ಮುಂಬೆ ಕಸ್ಟೋಡಿಯನ್ನರಾದರು. ಕಾಲುಶತಮಾನಕ್ಕೂ ಮಿಕ್ಕಿ ಬ್ಯಾಂಕಿನ ಅಭಿವೃದ್ಧಿಗಾಗಿ ಜೀವನ ಮುಡುಪಿಟ್ಟ ಇವರ ಶ್ರಮ, ಪೂರ್ವ ಪರಂಪರೆ, ನೌಕರ-ಸಾರ್ವಜನಿಕರ ಸಹಕಾರಗಳ ಹೆಮ್ಮರವಾಗಿ ಬ್ಯಾಂಕು ಬೆಳೆದಿದೆ. ೧೯೭೦ರ ಆರಂಭದಲ್ಲಿ ಅವರು ಜೀವವಿಮಾ ಕಾರ್ಪರೇಶನ್ನಿನ ಅಧ್ಯಕ್ಷರಾಗಿ ಹೋದುದರಿಂದ ಅವರ ಹೆಗಲಿಗೆ ಹೆಗಲಿತ್ತು ದುಡಿದ ಶ್ರೀ ಕೆ. ಕೆ. ಪೈಯವರು ಕಸ್ಟೋಡಿಯನ್ನರಾದರು. ಶ್ರೀ ಕೆ. ಕೆ. ಪೈಯವರ ಮುಂದಾಳುತನ, ದೂರದರ್ಶಿತೆ, ದಕ್ಷ ಆಡಳಿತೆಯಲ್ಲಿ ಬ್ಯಾಂಕು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿಯೇ ಅಗ್ರಗಾಮಿಯಾಗಬಲ್ಲುದು. ಜನರಲ್ ಮೆನೇಜರ್ ಶ್ರೀ ಎಚ್. ಎನ್. ಪೈ ಮತ್ತಿತರ ಸಿಬ್ಬಂಧಿ ವರ್ಗದ ಸಹಕಾರ ಅವರಿಗೆ ಸದಾ ಸಿದ್ಧವಿದೆ. ರಾಷ್ಟ್ರೀಕರಣಕ್ಕೆ ಮೊದಲೇ ರಾಷ್ಟ್ರೀಯ ದೃಷ್ಟಿಯಿಂದ ದುಡಿಯುತ್ತಿದ್ದ ಸಿಂಡಿಕೇಟ್ ಬ್ಯಾಂಕ್ ಭಾರತೀಯ ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಧ್ರುವತಾರೆಯಾಗಿ ನಿಲ್ಲುವುದು ಸಹಜವೇ.

●●

ಸಂದರ್ಶಿಸಿರಿ! — ಸುತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 34

NAVAYUGA

6—5—1971

ಮೌನಂ ಸರ್ವಾರ್ಥ ಸಾಧನಂ

ಮೌನವೆಂದರೇನು? ಮುನೇರ್ಭಾವ ಇತಿ ಮೌನಮಸ್ಯಾಸ್ತ್ರೀತಿ. ಕ್ಲೀಯಿಂದ ಮೌನ ಉತ್ಪನ್ನವಾಗಿದೆಯೆಂದು ನಿಘಂಟು ಹೇಳುತ್ತದೆ. ಮಾತಿಲ್ಲದಿರುವಿಕೆ, ಮಾತಾಡದಿರುವಿಕೆ, ಸದ್ದಿಲ್ಲದಿರುವಿಕೆ, ಮುನಿಸುಗುಡುವಿಕೆ ಎಂದು ಈ ಶಬ್ದ ಅರ್ಥ ಹೇಳುತ್ತದೆ. (ಸಚಿತ್ರ ಕಸ್ತೂರಿ ಕೋಶ ಪು. ೬೭೬). 'ಮುನಿ' ಶಬ್ದಕ್ಕೆ 'ಅಣ' ಪತ್ಯಯವು ಸೇರಿದಾಗ 'ಮೌನ' ರೂಪವಾಗುವುದರಿಂದ 'ಮುನಿ' ಶಬ್ದದಿಂದಲೇ 'ಮೌನ' ಶಬ್ದ ಉತ್ಪತ್ತಿಯಾಯಿತು. 'ಮೌನ' ಶಬ್ದವನ್ನು ಮೊದಮೊದಲಿಗೆ ಮುನಿಗಳ ಆಚರಣೆಗೇ ಬಳಸುತ್ತಿದ್ದರು. ಮುನಿಗಳ ತಪಃ ಪ್ರಧಾನ ಜೀವನ ಶಾಂತಿ ಪೂರ್ವಕವಾಗಿರುತಿತ್ತು; ಅವರು ವಾಕ್ ಸಂಯಮ, ಏಕಾಂತವಾಸ ನಿರತರಾಗಿರುತಿದ್ದರು ಕಾಲಕ್ರಮೇಣ 'ಮಾತಿಲ್ಲದಿರುವುದು' ಎಂಬುದೇ 'ಮೌನ' ಶಬ್ದದ ಅರ್ಥವಾಗಿ ಪರಿಣಮಿಸಿತು. ಅರ್ಥ ವಿಕಾಸ ನಿಯಮಾನುಸಾರ ಇಲ್ಲಿ ಅರ್ಥಾದೇಶವಾಯಿತು. ಕೆಲವೆಡೆ ಮೌನವು ಸ್ವೀಕೃತಿ ಎಂಬರ್ಥ ನೀಡುವುದೂ ಉಂಟು. ಉದಾಃ 'ಮೌನಂ ಸ್ವೀಕೃತಿ ಸೂಚನಮ್'.

ಮಾತು ಹೊರಡದೆ ಇರುವ ಲಕ್ಷಣವಷ್ಟೇ ತಾತ್ವಿಕ ದೃಷ್ಟಿಯಿಂದ 'ಮೌನ'ಕ್ಕೆ ಸಾಲದು. ಮುನಿಗಳು ಏಕಾಂತಚಿತ್ತರಾಗಿ ತಪಸ್ಸು ಗೈಯ್ಯುತಿದ್ದರು. ಆಗ ಅವರ ಮನಸ್ಸೂ ಮೌನವಿರುತಿತ್ತು. ಮೂಲಾರ್ಥದಲ್ಲಿ ಮೌನ ಶಬ್ದವು ಮಾನಸಿಕ ಮೌನವೆಂಬರ್ಥವನ್ನೂ ಒಳಗೊಂಡಿತ್ತು. ಮನೋವೈಜ್ಞಾನಿಕ ದೃಷ್ಟಿಯಿಂದ ಮನಸ್ಸು ಮೌನವಾಗಿರುವುದು ಅಥವಾ ಅಲ್ಪಕಾಲವಾದರೂ ಸುಮ್ಮನಿರುವುದು ವಿಚಾರಣೀಯಾಂಶ. ಸಾಮಾನ್ಯವಾಗಿ ಮನಸ್ಸು ನಿಷ್ಕ್ರಿಯವಾಗಿರುವುದಿಲ್ಲವೆಂಬುದೇ ಸಿದ್ಧಾಂತ. ಸಕ್ರಿಯ ಮಾನಸಿಕ ಸ್ಥಿತಿಯಲ್ಲಿ, ಕರ್ಮೇಂದ್ರಿಯ ವ್ಯಾಪಾರರಹಿತವಾಗಿರುವಾಗ, ವಿಧೇಯಾತ್ಮಕ ಸಂಕಲ್ಪ ಸದಾ ಶ್ರೇಷ್ಠವೆಂದು ತಿಳಿಯಲ್ಪಡುತ್ತದೆ; ನಿಷೇಧಾತ್ಮಕವಲ್ಲ. ಚಂಚಲ ಮನಸ್ಸು ದುರ್ವಿಚಾರಗಳತ್ತ ಹೊರಳುವುದು ಸಹಜ. ಆದುದರಿಂದಲೇ ದಾಸರು ಮನವನ್ನು ಮರ್ಕಟನಿಗೆ ಹೋಲಿಸಿದ್ದಾರೆ. ಋಷಿಗಳು...'ತನ್ಮೇ ಮನಃ ಶಿವಸಂಕಲ್ಪಮಸ್ತು' ಎಂದು ಪ್ರಾರ್ಥಿಸಿ ಮನಸ್ಸನ್ನು ಶುಭಕಾರ್ಯಗಳತ್ತ ಪ್ರವೃತ್ತಗೊಳಿಸುವ ಪ್ರಾರ್ಥನೆ ಮಾಡಿದ್ದಾರೆ. ಭಗವಾನ್ ಶ್ರೀಕೃಷ್ಣನು ಮೌನವನ್ನು 'ಮಾನಸಿಕ ತಪಸ್ಸು' ಎಂದು ಗೀತೆಯಲ್ಲಿ ಹೇಳಿದ್ದಾನೆ. ಅದನ್ನು ಮಾತಿನ (ವಾಕ್)ತಪಸ್ಸೆಂದು ಕರೆಯಲಿಲ್ಲ. (ಮನಃ ಪ್ರಸಾದಃ ಸೌಮ್ಯತ್ವಂ ಮೌನಮಾತ್ಮ ವಿಗ್ರಹಃ| ಭಾವ ಸಂಶುದ್ಧಿರಿಸ್ಯೇತತ್ತಪೋ ಮಾನಸಮುಚ್ಯತೇ|| ಗೀತೆ ೧೭–೧೬)

ವಾಕ್ ತಪದಲ್ಲಿ 'ಸತ್ಯ ಪ್ರಿಯಂ ಹಿತಂ' ವಾಕ್ಯಕ್ಕೆ ಮನ್ನಣೆಯಿದೆ. ಶರೀರ ಅಥವಾ ಮಾತುಗಳಿಗಿಂತ ಮನಸ್ಸು ಸೂಕ್ಷ್ಮತರವಾದುದು; ಮಹಾನಾದುದು. ಆದುದರಿಂದ 'ಮಾನಸ ತಪವಾದ ಮೌನವೂ ಶ್ರೇಷ್ಠ, ಗುಹ್ಯ ಮತ್ತು ಮಹಾನ್. ಸಾಮಾನ್ಯ ದೃಷ್ಟಿಯಿಂದ ಮಾತು ಹೊರಡಿಸದಿರುವುದು 'ಮೌನ'ವಾಗುವುದಿಲ್ಲ. ಅಂತಹ ಶಕ್ತಿಯಿಲ್ಲದವನು ಮೂಕನಾಗುತ್ತಾನೆ. ಸಾಭಿಪ್ರಾಯ ಮತ್ತು ಸ್ವೇಚ್ಛಿತ ವಿಧಾನಗಳಿಂದ ಮಾತನಾಡದಿರುವುದು ಮೌನದ ಅರ್ಥವ್ಯಾಪ್ತಿಯಲ್ಲಿ ಬರಬಲ್ಲದು.

ಪಾತ್ರಃ ಕಾಲ, ಸ್ಥಾನ ಮೊದಲಾದ ದೃಷ್ಟಿಗಳಿಂದ ಮೌನದ ಇತರ ಸ್ತರಗಳನ್ನು ತಿಳಿಯಬಹುದು. ಮಗುವಿನ ಮೌನ ಹೇಡಿ, ಮೂರ್ಖ, ಮೂಕ, ಗುಮ್ಮ ಮೊದಲಾದ ವಿಶೇಷಣಗಳನ್ನು ಅದಕ್ಕೆ ತಂದುಕೊಡಬಹುದು. ಅದೇ ಮೌನವು ಮೂರ್ಖ ವಯೋವೃದ್ಧರಲ್ಲಿ 'ಗಂಭೀರತೆ'ಯನ್ನು ಮೂಡಿಸಬಲ್ಲುದು. ಪ್ರಜಾಪ್ರಭುತ್ವ ಯುಗದಲ್ಲಿ ನಾಲಗೆ ಸಡಿಲುಬಿಡದಿದ್ದವನನ್ನು ಯಾರು ಕೇಳುತ್ತಾರೆ?

ಸ್ವಾಭಾವಿಕವಾಗಿ ಅಲ್ಪಭಾಷಿಯಾದವನು ಮನೋವೈಜ್ಞಾನಿಕ ದೃಷ್ಟಿಯಲ್ಲಿ ಅಂತರ್ಮುಖೀ ವ್ಯಕ್ತಿತ್ವ ಹೊಂದಿದವನೆನಿಸುತ್ತಾನೆ. ಭಾರತೀಯ ವಿಚಾರಕರು ಮೌನದ ಅಗತ್ಯವನ್ನು ಬಹಳಷ್ಟು ಹಿಂದೆಯೇ ಕಂಡುಕೊಂಡಿದ್ದರು. ಆದುದರಿಂದಲೇ ಹಲವಾರು ಕಾಲವಿಶೇಷ ಮತ್ತು ಕ್ರಿಯಾ ವಿಶೇಷಗಳಲ್ಲಿ "ಮೌನವ್ರತ"ಕ್ಕೂ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. (ಉಚ್ಚಾರೇ ಮೈಥುನೇ ಚೈವ ಪ್ರಸ್ರಾವೇ ದಂತಧಾವನೇಸ್ನಾನೇ ಭೋಜನಕಾಲೇ ಚ ಷಟ್ಸು ಮೌನಂ ಸಮಾಚರೇತ್||

ಮೌನಕ್ಕೂ ಚರಿತ್ರಕ್ಕೂ ನಿಕಟ ಸಂಬಂಧವಿದೆ. ಮೌನಿಯು ಸರ್ವ ಸಾಮಾನ್ಯವಾಗಿ ಗಂಭೀರನಾಗಿರುತ್ತಾನೆ. ಗಂಭೀರತೆಯಲ್ಲಿ ಚಾಟುತನಕ್ಕೆ ಸ್ಥಾನವಿಲ್ಲ. ಧೈರ್ಯ ಗಂಭೀರತೆಯು ಸಹೋದರ. ಗಂಭೀರತೆಯು ಜ್ಞಾನೋತ್ಪನ್ನ. ಮೌನ ಜ್ಞಾನಾಶ್ರಿತ. ಅರೆದುಂಬಿದ ಗಡಿಗೆ ತುಳುಕುತ್ತದೆ. ತುಂಬಿದ ಬಿಂದಿಗೆ ತುಳುಕುವುದಿಲ್ಲ. ಇಂದಿಗೂ ಭಾರತೀಯರಲ್ಲಿ ಕೆಲವರಾದರೂ ಶೌಚಾದಿ ಷಟ್ಕರ್ಮಗಳ ವೇಳೆ ಮೌನವ್ರತವನ್ನಾಚರಿಸುತ್ತಿದ್ದಾರೆ. ಇದರಲ್ಲಿ ಎಷ್ಟರ ಮಟ್ಟಿಗೆ ವೈಜ್ಞಾನಿಕತೆಯಿದೆಯೆಂದು ಆಳವಾಗಿ ಪರಿಶೋಧಿಸಬೇಕಷ್ಟೆ.

ಶಾಂತಿ ಪ್ರಿಯ ಅಧ್ಯಾತ್ಮೋನ್ಮುಖ ವ್ಯಕ್ತಿಗಳಿಗೆ ವಾಸ್ತವಿಕ ಮೌನವು ಸತ್ಪಥ ಎಂಬುದು ಸರಿ. ಆದರೆ, ಇಂದಿನ ವ್ಯಸ್ತ ಜೀವನದಲ್ಲಿ ಮೌನವು ಅಂತಹ ಸಾಧನವೆಂಬುದು ಸರಿಯಾಗದು. ಮಿತಭಾಷಿಯಾಗಿರುವುದು ಒಳ್ಳೆಯದು, ವಾಚಾಲನಿಂದ ಎಲ್ಲರೂ ಅಪಾಯಭೀತರಾಗುತ್ತಾರೆ. ಸಾಂಸಾರಿಕ ವ್ಯಾಪಾರಗಳಲ್ಲಿ ಮೌನದಿಂದ ಸಫಲತೆಯ ಬದಲಿಗೆ ಹಾನಿಯೂ ಆಗಬಹುದು; ಆದರೆ, ಕಾರ್ಯ ವಿಶೇಷಗಳಲ್ಲಿ ಚಿಪಾವಣೆಯಿಂದ ಅಭೀಷ್ಟ ಸಂಪಾದನೆಯೂ ಆಗಬಹುದು. ಚಿಪಾವಣೆಯು ಮಿಥ್ಯಾರೋಪಣೆಯ ಭಾವವಿದೆಯಾದರೂ ವಸ್ತುಸ್ಥಿತಿಯ ಗೋಪನದಷ್ಟಿಲ್ಲ. 'ಗೋಪನ'ವು ಯಾವುದಕ್ಕೂ ಅನ್ವಯವಾಗುತ್ತದೆ. ಮೌನವಾದರೂ ಅಪ್ರಕಟೀಕರಣ ಗೋಪನ.

ವಸ್ತುತಃ ವೈಜ್ಞಾನಿಕತೆಗೂ ಮೌನಕ್ಕೂ ದೃಢ ಸಂಬಂಧವಿದೆ ಮಾನಸಿಕ ತಪ ಮೌನದ ಉಪಾದೇಯತೆಯ ಮೇಲೆ ವಿವೇಚನೆಗೊಳಗಾಗುತ್ತದೆ ಚಿತ್ತ ವೃತ್ತಿ ನಿರೋಧ—ಮೌನದಿಂದ ಯೋಗ ಸಾಧನೆಯಾಗುತ್ತದೆ; ಇದು ಜ್ಞಾನ–ಈಶ್ವರ ಪ್ರಾಪ್ತಿಗೊಂದು ಸೋಪಾನ. ಕಡಿಮೆ ಮಾತಾಡುವುದು ಒಳ್ಳೆಯದು. ನಮ್ಮ ಪ್ರತಿ ಚಿಂತನೆ, ಉಚ್ಚಾರಣೆಯಲ್ಲಿ ಶಕ್ತಿ ವ್ಯಯವಾಗುತ್ತದೆ. ಮಾತಾಡುವುದರಿಂದ ಪ್ರಾಣಶಕ್ತಿ ಹರಣವಾಗುತ್ತದೆ. ವಾಚಾಲ ಈ ಪ್ರಾಣ ಶಕ್ತಿಯನ್ನು ಅಪವ್ಯಯ ಮಾಡುತ್ತಾನೆ. ಮಿತ ಭಾಷಿ ಮಿತವ್ಯಯಿ; ಮೌನಿ ಸಂಗ್ರಹಿಯಾಗುತ್ತಾನೆ. ಮಾತನಾಡದಿರುವುದರಿಂದ ಈ ಪ್ರಾಣಶಕ್ತಿ ಒಳಗೆ ಸಂಚಿತವಾಗಿರುತ್ತದೆ–ಅದನ್ನು ಸುನಿಯೋಜಿಸಿಟ್ಟುಕೊಂಡರೆ ಮಾತ್ರ. ಆದುದರಿಂದಲೇ ಸೈಜ ಸಾಧು—ಮುನಿಗಳ ಮಾತು ಸತ್ಯವಾಗಿ ಪರಿಣಮಿಸಿತ್ತು. ಆತ್ಮ ಸಂಕಲ್ಪದೊಡನೆ ಒಂದು ಮಾತಾಡಿ ಬಿಟ್ಟರೆ, ಸಂಚಿತ ಪ್ರಾಣ ಶಕ್ತಿ, ಸುನಿಯೋಜಿತ ಇಚ್ಛಾಶಕ್ತಿ ಮತ್ತು ಭಗವದಿಚ್ಛೆಯ ಕಾರಣದಿಂದ, ಸತ್ಯ ಸಿದ್ಧವಾಗಿ ಬಿಡುತ್ತದೆ. ಇದು ಮೌನದಲ್ಲಿ ವಿಧೇಯಾತ್ಮಕತೆಯಾಯಿತು. ಆದುದರಿಂದಲೇ ಶುಭ ಸಂಕಲ್ಪಗಳಲ್ಲಿ ವ್ಯಕ್ತಿ ತನ್ನ ಸುತ್ತ ಮತ್ತು ಶುಭ—ಶಿವ ಭಾವಗಳ ವಿದ್ಯುನ್ಮಯಿ ತರಂಗಗಳನ್ನೇ ಹಬ್ಬಿಸುತ್ತಾನೆ. ಇದರಿಂದ ವಾತಾವರಣ ಪವಿತ್ರವಾಗಿ ಅಮೂರ್ತ ಸಂಕಲ್ಪ ಕ್ರಿಯಾನ್ವಿತ ಮೂರ್ತವಾಗಿ ಪರಿಣಮಿಸುತ್ತದೆ. ವಾಚ್ಯ ಸಂವೇದನೆಗಿಂತ ಮೌನ ಸಂವೇದನೆಯು ತೀವ್ರವಾಗಿದೆ; ಶಾಬ್ದಿಕ ಆಶೀರ್ವಾದದಿಂದ ಮೌನಾಶೀರ್ವಾದವು ಅಧಿಕ ಪ್ರಭಾವಶಾಲಿಯಾಗುತ್ತದೆ. ಆಮೆ ತನ್ನ ಮೊಟ್ಟೆಗಳನ್ನು ಒಣಹೊಯ್ಗೆಯಲ್ಲಿ ಮುಚ್ಚಿಡುತ್ತದೆ. ಅವನ್ನು ಮುಟ್ಟಿಯಾಗಲಿ, ಅವುಗಳಿಗೆ ಕಾವು ಕೊಟ್ಟಾಗಲೀ ಬೆಳೆಸುವುದಿಲ್ಲ. ನೀರ ಬದಿಯಲ್ಲಿ ಕುಳಿತು ತನ್ನ ಸದ್ಭಾವನೆಗಳನ್ನು ಅವಕ್ಕೆ ಕಳಿಸುತ್ತದೆ. ಮೊಟ್ಟೆಗಳು ಬೆಳೆಯುತ್ತವೆ; ಮೊಟ್ಟೆಯಿಟ್ಟ ಆಮೆಯನ್ನು ಕೊಂದು ಬಿಟ್ಟರೆ, ಅದರ ಮೊಟ್ಟೆಗಳು ತಮಗೆ ತಾವಾಗಿಯೇ ಕೊಳೆತು ನಾರತೊಡಗುತ್ತವೆ. ಸದ್ಭಾವನೆಗಳ ಅಭಾವವೇ ಇದಕ್ಕೆ ಕಾರಣ. ಮೌನ ಸಹಾನುಭೂತಿ, ಸಹಾನುಭೂತಿ ಶುಭಸಂಕಲ್ಪ ಮತ್ತು ಸತ್ಯಪ್ರಿಯ ಹಿತಕರ ಮಿತಭಾಷಿತೆಗಳು ಇಂದು ಅತ್ಯಗತ್ಯ.

ಷಟ್ಕರ್ಮಗಳಲ್ಲಿ ಮೌನಾಚರಣೆಯೇಕೆ ಬೇಕೆಂಬುದು ಪರಿಶೀಲನೀಯವೇ. ಭೋಜನದ ವೇಳೆ ಮೌನ ಪಾಲನೆ ವ್ಯಾವಹಾರಿಕ ಸತ್ಯದ ಆಧಾರದಲ್ಲಿ ಬಂದಿದೆಯೆನ್ನಬಹುದು. ಶಾಂತಚಿತ್ತರೊಡನೆ ಉಂಡ ಊಟ ಅಧಿಕ ಹಿತಕಾರಕ. ಮೇಜಿನ ಸುತ್ತ ಕುಳಿತು ಬಾಯಿ ತುಂಬ ಮಾತಾಡಿ ನಕ್ಕು ನಲಿದು ಎಂಜಲೆಸೆದುಕೊಂಡು ಕೈಕಾಲೊಂದು ಮಾಡಿ ತಿನ್ನುವುದರಿಂದ ಆಹಾರ ಮೂಗಿನಲಿ ಬರುವುದು ಅನ್ನನಾಳದಲ್ಲೋ ಶ್ವಾಸನಾಳದಲ್ಲೋ ಸಿಕ್ಕಿಕೊಂಡು ಪ್ರಾಣಕ್ಕೆರವಾಗುವುದೂ ಉಂಟು.

(ಸಶೇಷ)

ಅಹಂಕಾರದ ಆಕ್ರಮಣ

ಬಾಹು ಸೂರ್ಯವಂಶದ ರಾಜನು. ಆವನು ಮಹಾ ಧರ್ಮಾತ್ಮನು. ತಾನು ಧರ್ಮಾನುಸಾರ ಪ್ರಜಾಪಾಲನೆ ಮಾಡುತ್ತಿದ್ದನು; ಇತರರೂ ತಂತಮ್ಮ ಧರ್ಮಪಾಲನೆ ಮಾಡುವಂತೆ ನೋಡಿಕೊಳ್ಳುತಿದ್ದನು. ಆವನು ಅಶ್ವಮೇಧಾದಿ ಹಲವು ಯಜ್ಞ ಮಾಡಿದನು; ಅನೇಕ ಗೋದಾನ ನಡೆಸಿದನು. ಪ್ರತಿನಿತ್ಯ ಬ್ರಾಹ್ಮಣರನ್ನು ಅರಮನೆಗೆ ಕರೆಸಿ, ಅನ್ನ–ವಸ್ತ್ರ–ಧನ–ಕನಕ–ವಸ್ತು–ವಾಹನಗಳನ್ನು ದಾನ ನೀಡಿ ಅವರನ್ನು ತೃಪ್ತಿಪಡಿಸುತಿದ್ದನು. ಮಹಾರಾಜ ಬಾಹುವಿನ ನ್ಯಾಯಪರತೆ ಮತ್ತು ಪ್ರಶಾಸನ ವ್ಯವಸ್ಥೆಗಳಿಂದ ಪ್ರಜಾಕೋಟಿ ಸುಪ್ರಸನ್ನವಾಗಿತ್ತು. ದೇಶವು ಸುಖಿಯಾಗಿತ್ತು. ಸಮೃದ್ಧವಾಗಿತ್ತು. ಅನ್ನಕ್ಕೆ ಅಭಾವವಿಲ್ಲ; ವಸ್ತ್ರಕ್ಕೆ ಕಡಿಮೆಯಿಲ್ಲ; ಸಂಪತ್ತಿಗೆ ಕೊರತೆಯಿಲ್ಲ; ಸುಖಕ್ಕೆ ಮಿತಿಯಿಲ್ಲ.

ತನ್ನ ನೀತಿ ನಿಪುಣತೆಯಿಂದ ಬಾಹುವು ನೆರೆರಾಜ್ಯಗಳ ಮೇಲೂ ಅಧಿಕಾರ ನಡೆಸುತಿದ್ದನು. ಆ ರಾಜ್ಯಾಧೀಶರ ತಲೆ ಮೇಲೆ ಬಾಹು ತನ್ನ ಪಾದವಿಡುತಿದ್ದನು. ಒಂದೊಮ್ಮೆ ತನ್ನ ಶಕ್ತಿ, ಬುದ್ಧಿ ಮತ್ತು ನೈಪುಣ್ಯಗಳನ್ನು ಸ್ಮರಿಸಿಕೊಂಡ ಬಾಹು ತಾನೇ ತಲೆದೂಗಿಕೊಂಡನು. ತತ್‌ಕ್ಷಣವೇ ಆತನಲ್ಲಿ ಅಹಂಕಾರವು ಮನೆಮಾಡಿತು. ಅಹಂಕಾರವೆಂಬ ಗೆದ್ದಲು ಬಾಹುವನ್ನು ಹೊಕ್ಕದ್ದೇ ತಡ, ಅದು ಆತನನ್ನೇ ತಿನ್ನತೊಡಗಿತು.

ಅಹಂಕಾರದಿಂದ ಉಬ್ಬಿದ ರಾಜನು ಹೇಳಿಕೊಳ್ಳತೊಡಗಿದನು– "ಜಗತ್ತಿಗೆಲ್ಲಾ ನಾನೇ ಮಹಾರಾಜಾಧಿರಾಜ. ಎಲ್ಲರ ಸಂರಕ್ಷಕನೂ ನಾನೇ. ನನಗಿಂತ ಶಕ್ತಿಸಂಪನ್ನರು, ಬುದ್ಧಿಸಂಪನ್ನರು, ಸಂಪತ್‌ಸಂಪನ್ನರು ಬೇರಾರಿದ್ದಾರೆ? ನನ್ನ ದಾನ—ಧರ್ಮಗಳನ್ನು ಯಾರವು ಸರಿಗಟ್ಟಬಲ್ಲುವು? ಆದುದರಿಂದ ನಾನೇ ಸಂಪೂಜ್ಯ, ಅನೇಕಾನೇಕ ಯಜ್ಞಯಾಗಾದಿಗಳನ್ನು ಮಾಡಿದ ನನಗಿಂತ ಧರ್ಮಾತ್ಮರು ಯಾರೂ ಇಲ್ಲ. ಬುದ್ಧಿಶಕ್ತಿಯಿಂದಲೂ ಚಾತುರ್ಯದಿಂದಲೂ ಸೈನಿಕ ಬಲದಿಂದಲೂ ಶತ್ರುಗಳೆಲ್ಲರನ್ನೂ ನಾಮಾವಶೇಷ ಮಾಡಿದ ನನಗೆ ಸಮಾನರಾರಿಹರು? ವೇದ–ವೇದಾಂತಗಳನ್ನು ಅಧ್ಯಯನ ಮಾಡಿದ ನಾನು ಅವುಗಳಲ್ಲೂ ಅಗಾಧ ಪಾಂಡಿತ್ಯ ಸಂಪಾದಿಸಿಕೊಂಡಿರುವಾಗ, ನನ್ನನ್ನು ಕೀಳುಕಾಣುವವರು ಯಾರು? ನೀತಿಶಾಸ್ತ್ರ ಪಾರಂಗತನಾದ ನನ್ನನ್ನು ಸರಿಗಟ್ಟುವ ನೀತಿವಿದರು ಇನ್ನು ಹುಟ್ಟಬೇಕಷ್ಟೆ. ನನಗೆ ನಾನೇ ಸರಿ; ಎಲ್ಲರೂ ನನ್ನ ಮುಂದೆ ಹೇಸರೇ ಸರಿ; ಸಿಂಹದ ಮುಂದೆ ನರಿ!

"ನನ್ನನ್ನೀಗ ಸೋಲಿಸಲು ಯಾರಿಗೂ ಸಾಧ್ಯವಿಲ್ಲ. ನನ್ನ ಸಂಪತ್ತಾದರೂ ಅಕ್ಷಣ್ಣ. ಅದನ್ನು ಯಾರೂ ಕಣ್ಣೆತ್ತಿ ನೋಡಲಾರರು. ಒಂದು ವೇಳೆ ಯಾರಾದರೂ ನೋಡಿದರೆಂದರೆ, ಅವರ ಕಣ್ಣುಪಾಪೆ ಕಿತ್ತು ಅವರ ಕೈಯಲ್ಲೇ ಕೊಟ್ಟುಬಿಡುವಷ್ಟು ಎದೆಗಾರಿಕೆ ನನಗಿದೆ. ತ್ರಿಭುವನಗಳಲ್ಲಿ ನನ್ನನ್ನು ಮೀರಿ ನಿಲ್ಲುವವರು ಯಾರು?

ಬಾಹು ಮಹಾರಾಜನ ಶರೀರವನ್ನು ಅಹಂಕಾರ ಹೊಕ್ಕು ಮನೆ ಮಾಡಿತು. ಆತನ ಮನಸ್ಸಿನಲ್ಲಿ 'ಅಸೂಯೆ' ಹುಟ್ಟಿ ತನ್ನ ಸಿಂಹಾಸನವನ್ನು ಭದ್ರ ಪಡಿಸಿತು. ಇದರಿಂದ ಬಾಹುವಿಗೆ ಇತರರಲ್ಲಿರುವ ಗುಣಗಳಲ್ಲಿಯೂ ದೋಷಗಳು ಗೋಚರವಾಗ ತೊಡಗಿದವು; 'ತಾನು ಸರ್ವಜ್ಞ; ಸರ್ವಶಕ್ತಿ ಸಂಪನ್ನ' ಎಂಬ ಭಾವನೆಯಿಂದ 'ಇತರರೆಲ್ಲರೂ ತಿಳಿಗೇಡಿಗಳು, ನಿಶ್ಶಕ್ತರು' ಎಂಬ ಭ್ರಮೆ ಆತನನ್ನು ಕವಿಯಿತು. ಹೆಜ್ಜೆ ಹೆಜ್ಜೆಗೂ ತನ್ನ ಘನಸ್ತಿಕೆಯನ್ನು ಪ್ರದರ್ಶಿಸುವ ಉದ್ದೇಶದಿಂದಾಗಿ ಪರರನ್ನು ಉಪೇಕ್ಷೆಯಿಂದ ಕಾಣುವ, ಅವರನ್ನು ಉಪಹಾಸ ಮಾಡುವ ಚಟ ರಕ್ತಗತವಾಯ್ತು.

ಮಹಾರಾಜ ಬಾಹುವಿನ ಪರಿವರ್ತಿತ ವರ್ತನೆ ಪ್ರಜೆಗಳಿಗೆ ಹಿಡಿಸಲಿಲ್ಲ. ಅವರಿಗೆ ಆತನಲ್ಲಿದ್ದ ಭಯ–ಭಕ್ತಿ; ಗೌರವ–ಆದರಗಳು ಕಡಿಮೆಯಾಗತೊಡಗಿನುವು. ಬರಬರುತ್ತ ರಾಜನನ್ನು ಅವರು ತಿರಸ್ಕಾರದಿಂದ ಕಾಣಲಾರಂಭಿಸಿದರು. ಆವನನ್ನು ಪರಕೀಯನೆಂದು ತಿಳಿಯತೊಡಗಿದರು. ರಾಜನ ಹಿಂದಿನ ಸದ್ಗುಣಗಳನ್ನು ನೆನೆದುಕೊಂಡು ಕೆಲವರು ಸ್ವಾರ್ಥವಶರಾಗಿ ಕೆಲವರು ರಾಜದಂಡದ ಭಯದಿಂದ ಕೆಲವರು ಬಾಹುವಿನ ಕೃತಿ–ವೃತ್ತಿಗಳನ್ನು ಸಹಿಸಿ ಮೌನವಿರುತ್ತಿದ್ದರು. ಇದರಿಂದ ಮಹಾರಾಜನು ತಾನು ಮಾಡಿದ್ದು ಸರಿಯೆಂದು ತಿಳಿಯತೊಡಗಿದನು; ತನ್ನ ಅಹಂಕಾರವನ್ನು ಸಂತುಷ್ಟಗೊಳಿಸಲು ಮತ್ತಷ್ಟು ನಿರಂಕುಶನಾಗುತ್ತಿದ್ದನು. ಸ್ವೈರ ವೃತ್ತಿಗೆ ತಲೆಹಾಕಿದನು.

ಮಹಾರಾಜ ಬಾಹುವು ತನ್ನ ಅಹಂಕಾರ ಬಲದಿಂದ ಹುತ್ತವಾಗಿ ಹೋದನು. ಅಸಾಧಾರಣ ಬುದ್ಧಿಶಕ್ತಿ ತನ್ನದೆಂದು ತಿಳಿದು ಕೊಂಡವನು ಎಲ್ಲರನ್ನೂ ಅಪಮಾನಿಸುವುದರಲ್ಲೇ ತನ್ನ ಮಹತ್ತಿಕೆಯೆಂದು ದೃಢ ಪಡಿಸಿಕೊಂಡನು. ತನ್ನ ಸಂಪರ್ಕದಲ್ಲಿರುವ ಸಚಿವ ಸಂಪುಟದ ಸದಸ್ಯರು, ಅಧಿಕಾರಿಗಳು, ನೌಕರರು ಮತ್ತು ಪ್ರಜಾ ಪರಿವಾರಗಳನ್ನು ನಿಂದಿಸಿ ಜರೆದು ಮಾತಾಡತೊಡಗಿದನು. ಇದರಿಂದ ಅವರ ವಿರೋಧವನ್ನು ಕಟ್ಟಿಕೊಂಡನು. ನೆರೆರಾಜ್ಯಗಳ ಹೇಹಯ ಮತ್ತು ತಾಲ ಜಂಘರ ಮೇಲೆ ಪದೇ ಪದೇ ತನ್ನ ಶಕ್ತಿಮದವನ್ನು ಪ್ರದರ್ಶಿಸಿ ಅವರನ್ನು ತನ್ನ ಶತ್ರುಗಳಾಗಿ ಸಂಪಾದಿಸಿದನು. ಬಾಹುವಿನ ಅಧಿಕಾರ, ಸ್ವಾರ್ಥಗಳಿಂದ ನೊಂದುಕೊಂಡ ಪ್ರಜೆಗಳು ಭಯದಿಂದ ತೆಪ್ಪಗಿದ್ದರು; ಅವಕಾಶ ನಿರೀಕ್ಷಿಸುತ್ತಿದ್ದರು.

ಹೇಹಯ ಮತ್ತು ತಾಲ ಜಂಘರು ತಮ್ಮ ಅಭಿಮಾನದ ಹತ್ಯೆಯನ್ನು ಸಹಿಸಿಕೊಂಡಿರಲಾಗಲಿಲ್ಲ. ಅವರಿಬ್ಬರೂ ಒಂದಾಗಿ ಬಾಹುವಿನ ರಾಜ್ಯವನ್ನು ಆಕ್ರಮಿಸಿದರು. ಬಾಹುವೇಕೆ ಅಂಜಬೇಕು? ಆತನ ಸೇನೆ, ಸೈನಿಕ ಶಕ್ತಿ ಭೂಮಂಡಳದ ಅನ್ಯ ರಾಜರಲ್ಲಿರಲಿಲ್ಲ. ಆದರೆ ಬರಿಯ ಶಕ್ತಿಯಿಂದ ಕಾರ್ಯಸಿದ್ಧಿಯಾಗುವುದಿಲ್ಲವೆಂದು ಆತನಿಗೆ ಮರೆತೇ ಹೋಗಿತ್ತು.

ಬಾಹುವಿನ ಅಹಂಕಾರದಿಂದ ರೋಸಿಹೋದ ಆತನ ಸೇನೆ ತಮ್ಮ ರಾಜನು ಸೋತುಹೋಗಲೇಬೇಕೆಂದು ಬಯಸಿತ್ತು! ರಾಜನಿಂದ ದಿನದಿನವೂ ಅಪಮಾನಿತರಾಗುತ್ತಿದ್ದ ಸಚಿವರು, ಅಧಿಕಾರಿಗಳು, ನೌಕರರು, ಜನರು–ಹೀಗೆ ಎಲ್ಲರೂ ಈಗ ರಾಜನ ತಲೆ ಬಾಗುವುದನ್ನೇ ಕಾಯುತ್ತಿದ್ದರು. ಬಾಹುವು ಹೇಹಯ—ತಾಲಜಂಘರಿಗಿಂತ ಸಂಪನ್ನನಾದುದರಿಂದ ಒಂದು ತಿಂಗಳ ಕಾಲ ಯುದ್ಧ ನಡೆಯಿತು; ಕಟ್ಟ ಕೊನೆಗೆ ದೇವರ ಮುಂದೆಯೂ ಬಾಗುವ ಅಭ್ಯಾಸ ತೋರದ ಬಾಹುವಿನ ತಲೆ ಶತ್ರುಗಳ ಮುಂದೆ ಬಗ್ಗಿತು.

ಪರಾಜಿತನಾದ ಬಾಹು ತನ್ನ ನಗರಕ್ಕೆ ಮರಳಿದನು. ನಿನ್ನೆ ಇಂದುಗಳ ನಡುವೆ ಬಹಳಷ್ಟು ಅಂತರವಾತನಿಗೆ ಅನುಭವವಾಯ್ತು. ನಿನ್ನೆ ಅವನು ಯಾರ ಮಾತುಗಳಿಗೆ ಕಿವಿಗೊಡುತ್ತಿರಲಿಲ್ಲವೋ ಅವರೇ ಇಂದು ರಾಜನನ್ನು ಉಪೇಕ್ಷೆಯಿಂದ ಕಾಣತೊಡಗಿದ್ದರು! ರಾಜನು ಪರಾಜಿತನಾದನೆಂದು ಅಲ್ಲಲ್ಲಿ ಸಂತೋಷ ಕೂಟಗಳು ನಡೆಯುತಿದ್ದುವು! ಹೀಗೆ ಸೇನೆ ಪ್ರಜೆಗಳೆಲ್ಲರೂ ತನಗೆ ವಿರುದ್ಧವಿವೆಯೆಂಬುದನ್ನು ಮನವರಿಕೆ ಮಾಡಿಕೊಂಡ ಬಾಹುವು ರಾಜ್ಯದಲ್ಲಿ ನಿಲ್ಲದೆ ತನ್ನಿಬ್ಬರು ಪತ್ನಿಯರನ್ನು ಕಟ್ಟಿಕೊಂಡು ನಗರ ತ್ಯಜಿಸಿ ವನಪ್ರವೇಶ ಮಾಡಿದನು.

ಬಾಹುವು ಓಡಿಹೋಗುತ್ತಿರುವುದನ್ನು ಕಂಡ ಪ್ರಜಾ ವರ್ಗಕ್ಕೆ ಆತನ ಅಭಿಮಾನ ಪೂರ್ಣ ದುರ್ವ್ಯವಹಾರಗಳು ನೆನಪಾಗತೊಡಗಿದುವು. ಅವರೆಲ್ಲರೂ ಒಂದಾಗಿ 'ಬಾಹುವಿಗೆ ಧಿಕ್ಕಾರ, ಧಿಕ್ಕಾರ' ಎಂದು ಆಕಾಶ ಬಿರಿಯುವಂತೆ ಬೊಬ್ಬಿಡಹತ್ತಿದರು. ತಮ್ಮ ಮಹಾರಾಜನು ಸೋತು ಕಾಡಿಗೆ ಓಡಿಹೋದದ್ದರಿಂದ ಅವರ ಮನಸ್ಸಿಗೆ ಬಹಳಷ್ಟು ನೆಮ್ಮದಿಯಾಯ್ತು.

ವನಸೇರಿದ ಬಾಹುವು ಮರವೊಂದರಡಿ ಕುಳಿತಿದ್ದನು. ಹಸಿವು–ನೀರಡಿಕೆಗಳಿಂದ ಆತನು ಕಂಗೆಟ್ಟಿದ್ದನು; ಸೋತು ಸುಣ್ಣವಾಗಿದ್ದನು; ತನ್ನ ಇಂದಿನ ದುರವಸ್ಥೆಯನ್ನು ನೆನೆದು ಆತನ ಕಣ್ಣುಗಳು ಹನಿಗೂಡಿದುವು. 'ಅಯ್ಯೋ, ನನ್ನ ಅಹಂಕಾರವೇ ನನ್ನನ್ನು ನಿರುಪಯೋಗಿಯನ್ನಾಗಿ ಮಾಡಿತು. ನನ್ನ ಧನ, ಮಾನ, ಯಶ, ಸುಖ ಎಲ್ಲವನ್ನೂ ಕೆಡಿಸಿತು. ಅಹಂಕಾರವು ನನಗೆ ಬಡೆಯದಿರುತಿದ್ದರೆ, ನನಗಿಂತಹ ದುರ್ಗತಿ ಬರುತ್ತಿರಲಿಲ್ಲ" ಎಂದು ಕೂಗಿಕೊಂಡನು

ತನ್ನ ಗತ ಜೀವನಕ್ಕಾಗಿ ಬಾಹುವಿಂದು ಪಶ್ಚಾತ್ತಾಪತಪ್ತನಾಗತೊಡಗಿದನು. ಹೋರಿ ಹೊಲ ಮೇದ ಮೇಲೆ ಬೇಲಿಯಿಂದೇನಾದೀತು? ಆತನನ್ನು ಮಾನಸಿಕ ದುಃಖವಾವರಿಸಿತು. ದುಃಖತಪ್ತನಾದ ಬಾಹುವಿನ ಅಂಗಾಂಗಗಳು ಜೀರ್ಣವಾಗತೊಡಗಿದುವು; ಅವನು ಅಕಾಲವೃದ್ಧನಾದನು. ಅಶಕ್ತಿ—ಅನಾರೋಗ್ಯ—ಅಸ್ವಾಸ್ಥ್ಯಗಳಿಂದ ಕಂಗಾಲಾದ ಅವನು ತನ್ನ ಅಹಂಕಾರದ ಫಲವನ್ನು ಅನುಭವಿಸುತ್ತ ಬಹುದಿನಗಳ ಬಳಿಕ ಓರ್ವ ಮುನಿಯ ಆಶ್ರಮದ ಸಮೀಪ ದೇಹತ್ಯಜಿಸಿದನು.

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ಮಂಗಳೂರು.

ಆಡಳಿತ ಕಚೇರಿ: ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1.

ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೂಲ್ಕಿ ಸುಂದರ್‌ರಾಮ್ ಶೆಟ್ಟಿ ಇವರಿಂದ

ಬ್ಯಾಂಕಿನ ಪ್ರಗತಿಯ ವರದಿ

1971ನೇ ಎಪ್ರಿಲ್ 30ರಂದು ಮಂಗಳೂರಿನಲ್ಲಿ ನಡೆದ ವಿಜಯ ಬ್ಯಾಂಕಿನ ಪಾಲುದಾರರ 39ನೇ ವಾರ್ಷಿಕ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರು ನೀಡಿದ ಹೇಳಿಕೆಯನ್ನು ಕೆಳಗೆ ಕೊಡಲಾಗಿದೆ.

ಶ್ರೀ ಮೂಲ್ಕಿ ಸುಂದರ್‌ರಾಮ್ ಶೆಟ್ಟಿ

ಮಿತ್ರರೇ,

ತಮ್ಮನ್ನಿಂದು ಬ್ಯಾಂಕಿನ 39ನೇ ವಾರ್ಷಿಕ ಮಹಾಸಭೆಗೆ ಸ್ವಾಗತಿಸಲು ನನಗೆ ಆನಂದವಾಗುತ್ತದೆ. ಕಳೆದ ವರ್ಷ ಠೇವಣಿಗಳು ಮತ್ತು ಲಾಭದಲ್ಲಿ ಅಭೂತಪೂರ್ವ ಪ್ರಗತಿಯೊಡನೆ ನಮ್ಮ ಯಶಸ್ವಿ ಕಾರ್ಯ ನಿರ್ವಹಣೆಯೊಂದಿಗೆ ಇಲ್ಲಿ ಸೇರಲು ಇನ್ನಷ್ಟು ಆನಂದವಿದೆ.

ಭವಿಷ್ಯದಲ್ಲೇನಾಗುತ್ತದೆಂದು ಹೇಳುವುದು ನನ್ನ ಶಕ್ತಿಗೆ ಮೀರಿದ್ದಾದರೂ ಈಗ ನಾವು ಸಾಧಿಸಿದ ಪ್ರಗತಿಯ ವೇಗವನ್ನು ಕಾಯ್ದು ಕೊಳ್ಳಬಹುದೆಂಬುದರಲ್ಲಿ ನಮಗೆ ಆಶೆಯಿದೆ. ನೀವು ಈಗಾಗಲೇ ಬ್ಯಾಲೆನ್ಸ್ ಶೀಟ್ ಮತ್ತು ಲಾಭನಷ್ಟದ ಲೆಕ್ಕವನ್ನು ಓದಿರಬಹುದೆಂದು ಭಾವಿಸುತ್ತೇನೆ.

1970ರಲ್ಲಿ ಸಾಮಾನ್ಯ ಆರ್ಥಿಕ ವ್ಯವಸ್ಥೆ

ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಅನಿಶ್ಚಿತ ಪರಿಸ್ಥಿತಿಗೆ ಹೆಸರಾದ ವರ್ಷ ಇನ್ನೊಂದು ಕಳೆದಿದೆ.

ಕೃಷಿ ಉತ್ಪಾದನೆಯಲ್ಲಿ ಏರಿಕೆಯಿಂದಾಗಿ ಸ್ವಲ್ಪಮಟ್ಟಿನ ಆರ್ಥಿಕ ಪುನರ್ಜಾಗೃತಿಯಾದುದು ನಿಜವಾದರೂ, ಕೈಗಾರಿಕಾ ಉತ್ಪಾದನೆಗೆ ತೊಂದರೆಯಾಗಿದೆ. ಹತ್ತಿ ಮತ್ತು ಉಕ್ಕು ಮೊದಲಾದ ಕಚ್ಚಾ ವಸ್ತುಗಳ ಅಭಾವವು ಕೈಗಾರಿಕಾ ಸಾಮರ್ಥ್ಯದ ಕಡಿಮೆ ಉಪಯೋಗಕ್ಕೆ ಎಡೆ ಮಾಡಿದೆ. ಸತತ ಹಣದುಬ್ಬರದಿಂದಾಗಿ ಬೆಲೆಯ ಮಟ್ಟವು ಏರಿ ಜೀವನವೆಚ್ಚವು ಹೆಚ್ಚಿದೆ. ಕೆಲ ರಾಜ್ಯಗಳಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಶಾಂತಿಯು ಕೈಗಾರಿಕಾ ಚಟುವಟಿಕೆಗಳಿಗೆ ತೊಡಕು ಮಾಡಿದೆ.

ಕಳೆದ ವರ್ಷವು ಹೀಗಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಬ್ಯಾಂಕುಗಳ ಪಾತ್ರವು ವಿಶಾಲಗೊಂಡಿರುವುದರಿಂದ, ಬ್ಯಾಂಕಿಂಗ್ ಉದ್ಯಮವು ವರ್ಷವಿಡೀ ಸಾರ್ವಜನಿಕರ ಲಕ್ಷವನ್ನು ಗಣನೀಯ ಪ್ರಮಾಣದಲ್ಲಿ ಸೆಳೆದಿದೆ.

ಬ್ಯಾಂಕಿಂಗ್ ಪದ್ಧತಿ

ಪ್ರಚಲಿತ ವಿಚಾರಗಳಲ್ಲಿ, ಆರ್ಥಿಕ ಅಭಿವೃದ್ಧಿಯಲ್ಲಿ ಬ್ಯಾಂಕಿಂಗಿಗೆ ಪ್ರಮುಖ ಜವಾಬ್ದಾರಿಯನ್ನು ನೀಡಲಾಗಿದೆ. ಸಮಾಜದ ಉಳಿತಾಯವನ್ನು ಒಟ್ಟುಗೂಡಿಸುವುದು ಬ್ಯಾಂಕಿನ ಪರಂಪರಾನುಗತ ಕಾರ್ಯ. ಇಂತಹ ಉಳಿತಾಯವನ್ನು ಅಭಿವೃದ್ಧಿ ಹೊಂದಬಯಸುವ ಆಯ್ದ ಕ್ಷೇತ್ರಗಳಿಗೆ ಹರಿಯಿಸುವುದು ಈ ಸಮಾಜದಲ್ಲಿ ಬ್ಯಾಂಕುಗಳ ಅನಿವಾರ್ಯ ಕಾರ್ಯವಾಗಿದೆ.

1970ನೇ ವರ್ಷದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಎರಡು ಕ್ಷೇತ್ರಗಳಲ್ಲಿನ ಬ್ಯಾಂಕುಗಳು ಚೆನ್ನಾಗಿ ಕಾರ್ಯ ನಿರ್ವಹಿಸಿವೆ. 1970ನೇ ಡಿಸೆಂಬರಿನ ಕೊನೆಯ ಶುಕ್ರವಾರದ ಹೊತ್ತಿಗೆ ಎಲ್ಲ ಬ್ಯಾಂಕುಗಳ ಒಟ್ಟು ಠೇವಣಾತಿ 5,675 ಕೋಟಿ ರೂಪಾಯಿಗಳಿಗೆ ಮತ್ತು ಒಟ್ಟು ಎಡ್ವಾನ್ಸ್‌ಗಳು 4,428 ಕೋಟಿ ರೂಪಾಯಿಗಳಿಗೆ ಮುಟ್ಟಿವೆ. 1969ರಲ್ಲಿ ಠೇವಣಿಗಳ ಸರಾಸರಿ ಪ್ರಗತಿಯು ಸೇ. 15.02ರಷ್ಟಾಗಿದ್ದಿದ್ದರೆ, 1970ರಲ್ಲಿ ಅದು ಸೇ. 16.4ಕ್ಕೇರಿದೆ. ಸಾಲ ವಿಸ್ತರಣೆಯು 1969ರಲ್ಲಿ ಸೇ. 19 ಆಗಿದ್ದರೆ 1970ರಲ್ಲಿ ಸೇ. 22.5ಕ್ಕೇರಿದೆ.

1970ರಲ್ಲಿ ವಾಣಿಜ್ಯ ಬ್ಯಾಂಕುಗಳ ಶಾಖೆಗಳು 10,000ಕ್ಕಿಂತಲೂ ಹೆಚ್ಚಾದುವು. ವರ್ಷದ ಕೊನೆಯಲ್ಲಿ ವಾಣಿಜ್ಯ ಬ್ಯಾಂಕುಗಳ ಕಚೇರಿಗಳು 11,184 ರಷ್ಟಾಗಿವೆ. ಶಾಖಾ ವಿಸ್ತರಣೆಯು ತುಂಬಾ ಪ್ರಗತಿ ಸಾಧಿಸಿದೆ. ಮೊದಲಿನ ವರ್ಷ ಎಲ್ಲ ಬ್ಯಾಂಕುಗಳು 1,369 ಶಾಖೆಗಳನ್ನು ತೆರೆದಿದ್ದರೆ 1970ರಲ್ಲಿ ಈ ಸಂಖ್ಯೆ 2,000ಕ್ಕೂ ಹೆಚ್ಚಿದೆ. ದೇಶದಲ್ಲಿ ಪ್ರತಿ ಬ್ಯಾಂಕಿನ ಕಚೇರಿಯು ಸೇವೆ ಸಲ್ಲಿಸಿದ ಜನರ ಸರಾಸರಿ ಸಂಖ್ಯೆಯು 1970ರಲ್ಲಿ 52,000ಕ್ಕಿಳಿದಿದೆ. 1968ರಲ್ಲಿ ಇದು 70,000ದಷ್ಟಿತ್ತು.

ಸಾಲದ ಬೇಡಿಕೆಯು ಹೆಚ್ಚುತ್ತಿದೆ. ಮಿತಿಮೀರಿದ ಸಾಲದ ಬೇಡಿಕೆಗೆ ಠೇವಣಿ ಸಂಗ್ರಹವು ಏಕಮಾತ್ರ ತಡೆಯಾಗಿದ್ದು, ಇನ್ನೂ ಹೆಚ್ಚು ಠೇವಣಿಗಳನ್ನು ಸಂಗ್ರಹಿಸುವ ಸವಾಲನ್ನು ಬ್ಯಾಂಕುಗಳು ಎದುರಿಸಬೇಕಾಗಿತ್ತು. ಸೇವಾ ಉದ್ಯಮವಾದ ಬ್ಯಾಂಕಿನಲ್ಲಿ ಮಾರುಕಟ್ಟೆಯ ಕಲ್ಪನೆಯು ಸೇರಿಕೊಂಡಿದೆ. ಸಮಾಜದ ಅವಶ್ಯಕತೆಗಳನ್ನು ಪೂರೈಸಲು ಅವರ ಮನೋ ಇಂಗಿತವನ್ನರಿತು ಠೇವಣಿಯ ಪ್ರಗತಿಯನ್ನು ತೀವ್ರಗೊಳಿಸಲು ಹೊಸತಂತ್ರಗಳನ್ನು ಯೋಜಿಸಲಾಗುತ್ತಿದೆ. ಅರ್ಥ ವ್ಯವಸ್ಥೆಯ ಉಪೇಕ್ಷಿತ ಕ್ಷೇತ್ರಗಳಿಗೆ ಆರ್ಥಿಕ ಸಹಾಯ ನೀಡುವುದನ್ನು ಬ್ಯಾಂಕುಗಳು ಕರ್ತವ್ಯ ಹಾಗೂ ಸವಾಲಾಗಿ ಸ್ವೀಕರಿಸಿವೆ.

ಎಲ್ಲ ಬ್ಯಾಂಕುಗಳ ಮೇಲ್ವಿಚಾರಣೆ ಹಾಗೂ ನಿಯಂತ್ರಣದಲ್ಲಿ ರಿಸರ್ವ್ ಬ್ಯಾಂಕ್ ತನ್ನ ಸಹಾಯ ಪ್ರವೃತ್ತಿ ಹಾಗೂ ಅಪಾರ ಆಸಕ್ತಿಯನ್ನು ತೋರಿಸುತ್ತಲಿದೆ.

ನಮ್ಮ ಬ್ಯಾಂಕಿನ ಪ್ರಗತಿ

ದೇಶದಲ್ಲಿ ಅಪರಿಹಾರ ಸಮಸ್ಯೆಗಳಿದ್ದರೂ 1970ರಲ್ಲಿ ನಮ್ಮ ಬ್ಯಾಂಕ್ ಸಾಧಿಸಿದ ಪ್ರಗತಿಯು ಅದ್ಭುತವೆನ್ನಲು ನಾವು ಹೆಮ್ಮೆ ಪಡಬಹುದಾಗಿದ್ದು, ದೇಶದಲ್ಲಿನ ಎಲ್ಲ ಬ್ಯಾಂಕುಗಳ ಸರಾಸರಿ ಠೇವಣಿ ಏರಿಕೆಯು ಸೇ. 16.4 ಮಾತ್ರ ಇದ್ದು ನಮ್ಮ ಬ್ಯಾಂಕಿನ ಠೇವಣಿ ಬೆಳವಣಿಗೆಯು ಸೇ. 47ರಷ್ಟಾಗಿದೆ. 1969ರಲ್ಲಿ ನಮ್ಮ ಠೇವಣಿಗಳ ಏರಿಕೆಯು ಸೇ. 42 ಆಗಿತ್ತು. 1969ರ ಕೊನೆಯಲ್ಲಿ 18.71 ಕೋಟಿ ರೂಪಾಯಿಗಳಷ್ಟಿದ್ದ ಠೇವಣಿಯು 31–12–1970ಕ್ಕೆ 27.52ಕೋಟಿ ರೂಪಾಯಿಗಳಿಗೇರಿತು. 1969ರಲ್ಲಿ 13.01 ಕೋಟಿ ರೂಪಾಯಿಗಳಷ್ಟಾಗಿದ್ದ ನಾವು ಕೊಟ್ಟ ಸಾಲಗಳು 1970ರಲ್ಲಿ 17.54 ಕೋಟಿ ರೂಪಾಯಿಗಳಿಗೇರಿತು.

ಬ್ಯಾಂಕಿನ ಸಾಲ–ಠೇವಣಿ ಪ್ರಮಾಣವು ವರ್ಷವಿಡೀ ಸರಾಸರಿ ಸೇ 70.71ರಲ್ಲಿತ್ತು. ಕೃಷಿ ಹಾಗೂ ಸಣ್ಣ ಪ್ರಮಾಣದ ಉದ್ಯಮಗಳೇ ಮೊದಲಾದ ಆದ್ಯತೆಯ ಕ್ಷೇತ್ರಗಳಿಗೆ ಅಡ್ವಾನ್ಸನ್ನು ಯೋಗ್ಯ ಪ್ರಮಾಣದಲ್ಲಿ ಕೊಡಲಾಯಿತು. ವರ್ಷದ ಕೊನೆಯಲ್ಲಿ ಕೃಷಿಗೆ ನಮ್ಮ ಅಡ್ವಾನ್ಸ್ ಒಟ್ಟು ಅಡ್ವಾನ್ಸಿನ ಸೇ. 12 ಮತ್ತು ಸಣ್ಣ ಪ್ರಮಾಣದ ಉದ್ಯಮಗಳಿಗೆ ಸೇ. 19 ಆಗಿತ್ತು.

ನಮ್ಮ ಒಟ್ಟು ಆದಾಯವು 1969ರಲ್ಲಿ 142.52 ಲಕ್ಷ ರೂಪಾಯಿಗಳಿದ್ದುದು 1970ರಲ್ಲಿ 201.97 ಲಕ್ಷ ರೂಪಾಯಿಗಳಿಗೆ ಏರಿತು. 1969ರಲ್ಲಿ ನಮ್ಮ ನಿವ್ವಳ ಆದಾಯವು 4.60 ಲಕ್ಷ ರೂಪಾಯಿಗಳಿದ್ದು ದ್ವಿಪಕ್ಷೀಯ ತೀರ್ಮಾನಕ್ಕೆ ಸರಿಯಾಗಿ ನಮ್ಮ ಸಿಬಂದಿಗಳಿಗೆ 6.14 ಲಕ್ಷ ರೂಪಾಯಿಗಳ ಪ್ರತ್ಯೇಕ ವೇತನ ಬಿಲ್ ಪಾವತಿಮಾಡಿದ ನಂತರವೂ ನಮ್ಮ ನಿವ್ವಳ ಆದಾಯವು 1970ರಲ್ಲಿ 8.49 ಲಕ್ಷ ರೂಪಾಯಿಗಳಿಗೆ ಏರಿತು. ಪರಿಣಾಮವಾಗಿ 1970ರಲ್ಲಿ ನಮ್ಮ ಲಾಭಾಂಶದ ದರವನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಅನುಮತಿಯೊಂದಿಗೆ, ಸೇ. 10ಕ್ಕೆ (ತೆರಿಗೆಗೆ ಬಾಧ್ಯವಾಗಿದೆ) ಏರಿಸಲು ನಾವು ಶಕ್ತರಾಗಿದ್ದೇವೆ.

ನಮ್ಮ ಆಡಳಿತ ಕಚೇರಿಯನ್ನು 1969ರ ನವಂಬರಿನಲ್ಲಿ ಬೆಂಗಳೂರಿಗೆ ವರ್ಗಾಯಿಸಿದೆವು. ಈ ಸರಳ ಹೇಳಿಕೆಯ ಹಿಂದೆ ದೊಡ್ಡದೊಂದು ಸಾಧನೆಯು ಅಡಗಿದೆ. ನಮ್ಮ ಬದಲಾದ ವ್ಯವಸ್ಥೆ ಹಾಗೂ ಬೆಂಗಳೂರಿಗೆ ವರ್ಗಾಯಿಸುವುದರೊಂದಿಗೆ ನಾವು ಬೃಹತ್ಪ್ರಮಾಣದಲ್ಲಿ ಮುಂದಡಿ ಇಡುವೆವೆಂದು ಕಳೆದ ಮೇ ತಿಂಗಳಲ್ಲಿ ನಿಮಗೆ ನಾವು ಭರವಸೆ ನೀಡಿದ್ದೆವು. ನಮ್ಮ ಭರವಸೆಯನ್ನು ಕಾಯ್ದುಕೊಂಡಿದ್ದೇವೆನ್ನಲು ಸಂತೋಷವಾಗುತ್ತಿದೆ.

1970ರಲ್ಲಿ ನಾವು ಆರ್ಡಿ, ಬೆಳಗಾವಿ, ಕಲ್ಲಡ್ಕ, ಕುಕ್ಕುಂದೂರು, ಮುಂದರ್ಕಿ, ಜೆಪ್ಪು (ಮಂಗಳೂರು), ಮಾಣಿ, ಮೂಡಬೆಟ್ಟು, ನಾಡ, ಪೂನಾ, ಸಾಣೂರು ಮತ್ತು ಹೊಸ ದಿಲ್ಲಿ—ಹೀಗೆ ಒಟ್ಟು 12 ಶಾಖೆಗಳನ್ನು ತೆರೆದಿರುವೆವು. ಹೆಚ್ಚಿನ ಶಾಖೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ತೆರೆಯಲಾಯಿತು. ಶಾಖೆಗಳ ಒಟ್ಟು ಸಂಖ್ಯೆ 1970ರ ಡಿಸೆಂಬರ್ 31ರಲ್ಲಿ 126ಕ್ಕೆ ತಲಪಿತು.

ಬಂಡವಾಳದಲ್ಲಿ ಏರಿಕೆ

ಠೇವಣಿಯ ಪ್ರಗತಿಯೊಡನೆ ಬಂಡವಾಳದ ನೆಲೆಯನ್ನು ಬಲಪಡಿಸಲು, 1970ರಲ್ಲಿ ನಾವು ಇನ್ನೂ 20 ಲಕ್ಷ ರೂಪಾಯಿಗಳ ಪಾಲುಗಳನ್ನು ಸಾರ್ವಜನಿಕರ ಚಂದಾ ನೀಡಿಕೆಗಾಗಿ ತೆರವು ಮಾಡಿದೆವು. ನಮ್ಮ ಪಾಲುಗಳಿಗೆ ಆಗತ್ಯಕ್ಕೂ ಹೆಚ್ಚು ಚಂದಾ ಸಂಗ್ರಹವಾಯಿತು. ಈ ದಿಶೆಯಲ್ಲಿ ನಿಮ್ಮಿಂದ ಸಿಕ್ಕಿದ ಅಪಾರ ಬೆಂಬಲಕ್ಕಾಗಿ ನಿಮಗೆ ನಾವು ಕೃತಜ್ಞರಾಗಿದ್ದೇವೆ. 50 ಲಕ್ಷ ರೂಪಾಯಿಗಳ ಅಧಿಕೃತ ಬಂಡವಾಳವು ಸಾಧಾರಣ ಎಲ್ಲ ಚಂದಾ ನೀಡಿಕೆಯಾಗಿದ್ದು, ಪಾವತಿ ಬಂಡವಾಳವು ಈಗ 43.84 ಲಕ್ಷ ರೂಪಾಯಿಗಳಷ್ಟಿದೆ.

ಪ್ರಚಲಿತ ವರ್ಷದ ಮುನ್ನೋಟ

ಬ್ಯಾಂಕಿಂಗ್ ಆಯೋಗವು ಇನ್ನೂ ತನ್ನ ವರದಿ ಒಪ್ಪಿಸಿಲ್ಲ. ಹಲವು ಕಾಲದಿಂದ ಕಾಯುತ್ತಿರುವ ಆಯೋಗದ ವರದಿ ಪ್ರಕಟವಾದಾಗ ಸ್ವರೂಪ ಹಾಗೂ ಕಾರ್ಯಕ್ಕೆ ಸಂಬಂಧಿಸಿದ ಬದಲಾವಣೆಗಳಾಗಬಹುದು. ಪದ್ಧತಿಯ ನಿರ್ಣಯವಿನ್ನೂ ಆಗಬೇಕಷ್ಟೆ.

ದೊಡ್ಡ ಬ್ಯಾಂಕುಗಳು ರಾಷ್ಟ್ರೀಕರಣದ ಬಳಿಕ ಖಾಸಗಿ ಬ್ಯಾಂಕುಗಳಿಗೆ ಹೆಚ್ಚಿನ ಸ್ಪರ್ಧೆ ನೀಡುತ್ತಿವೆ. ಸಾರ್ವಜನಿಕ ಕ್ಷೇತ್ರದ ಬ್ಯಾಂಕಿನ ಶಾಖೆಗಳನ್ನು ದೇಶದ ಹೆಚ್ಚಿನ ಭಾಗಗಳಲ್ಲಿ ಕಾಣಬಹುದು. ಹೆಚ್ಚಿನ ಸಂಪನ್ಮೂಲಗಳನ್ನೊಳಗೊಂಡಿರುವ ಅವುಗಳು, ಸಾರ್ವಜನಿಕರ ಸೇವೆಯಲ್ಲಿ ಸಣ್ಣ ಬ್ಯಾಂಕುಗಳಿಗಿಂತ ಉತ್ತಮ ಸ್ಥಿತಿಯಲ್ಲಿವೆ; ಇಂತಹ ಪರಿಸ್ಥಿತಿಯಲ್ಲಿ 1970ಲ್ಲಿ ನಮ್ಮ ಬ್ಯಾಂಕ್ ಸಾಧಿಸಿದ ಪ್ರಗತಿಯು ಉಲ್ಲೇಖನೀಯವಾಗಿದೆ. ಇದನ್ನು ಕಾಯ್ದುಕೊಳ್ಳುವುದೇ ನಮ್ಮ ಸಮಸ್ಯೆಯಾಗಿದೆ. ಇದು ನಮಗೊಂದು ಅಸಾಧಾರಣ ಹೊರೆಯಾಗಿದೆ.

ಬಡ್ಡಿ ದರದ ಸ್ವರೂಪವು ನಿವ್ವಳ ಆದಾಯದ ಮೇಲೆ ಪ್ರಮುಖ ಸಂಬಂಧ ಹೊಂದಿದೆ. 1971 ಜನವರಿಯಿಂದ ಬ್ಯಾಂಕ್ ದರವು ಸೇ. 6ರಷ್ಟು ಏರಿದ್ದು ಇದರಿಂದಾಗಿ ಠೇವಣಿ ದರವೂ ಏರಿದೆ. ನಮ್ಮ ಒಟ್ಟು ಠೇವಣಿಗಳ ದೊಡ್ಡ ಭಾಗವನ್ನು ಬಡ್ಡಿ ಗಳಿಸುವ ಠೇವಣಿಯ ಲೆಕ್ಕದಲ್ಲಿ ಇಡಲಾಗಿರುವುದರಿಂದ, 1971ರಲ್ಲಿ ಹೆಚ್ಚು ಬಡ್ಡಿ ತೆರಬೇಕಾಗಿದೆ.

ಒಟ್ಟು ಆದಾಯವು ಗಮನಾರ್ಹವಾಗಿ ಬಡ್ಡಿದರದ ಮಟ್ಟದಿಂದ ಪ್ರಭಾವಿತವಾಗುವಂತೆಯೇ, ಒಟ್ಟು ವೆಚ್ಚವು ಮುಖ್ಯವಾಗಿ

(ಹತ್ತನೇ ಪುಟ ನೋಡಿರಿ)

ಗೇರಾಜ್ಯದಲ್ಲಿ

ಲಂಚಾಸುರ ಸಹಾರ ಸರಳ ಸೂತ್ರ

'ಲೇ, ಇಲ್ಲಿ ಕೇಳೇ....'

"ಕೇಳ್ತಿಲ್ಲೇ ಇವೇನಲ್ಲಾ...."

'ನೋಡು, ಲಂಚ ನೀಡಿಕೆ ಮತ್ತು ಲಂಚ ಸ್ವೀಕಾರಕ್ಕೆ, ಏನು ಕಾರಣಾಂತ ಗೊತ್ತಾ ನಿನ್ಗೆ?'

"ಅಯ್ಯೋ, ಅದ್ರಲ್ಲೇನೂಂತ? ಪಾಪ ಮಾರ್ಗದಲ್ಲಾದರೂ ಅನ್ಯಾಯವಾಗಿಯಾದರೂ ತನ್ನ ಕಾರ್ಯ ಈಡೇರಿಸಿಕೊಳ್ಳಬೇಕೆಂಬ ಅಪ್ಲಿಕೆಂಟಿನ ಮನೀಷೆ ಮತ್ತು ಹೇಗಾದರೂ ಹಣಗಳಿಸಬೇಕೆಂಬ ಸರಕಾರಿ ನೌಕರರ ಮನೋವೃತ್ತಿ....'

"ಊಹ್ಞೂಂ....ಇದು ಹಳೆಯ ಕಾರಣ ಹಾಯ್ತು. ಇದೀಗ ಹೊಸಾ ಹೊಸ್ದು ಕಾರಣವನ್ನ ಸಂಶೋಧನೆ ಮಾಡಿದ್ದಾರೆ...."

'ಇವಕ್ಕೆ ಅಧಿಷ್ಠಾತ್ರಿ ಋಷಿ, ಛಂದ, ದೇವತೆಗಳು ಯಾರೋ?'

'ಅದೆಲ್ಲ ಯಾರಾದ್ರೇನಂತೆ? ಗಾಯತ್ರಿ ಹೇಳೋನಿಗೇ ಋಷಿ ಛಂದ ದೇವತೆಗಳ ಹೆಸ್ರು ಗೊತ್ತಿಲ್ಲಾಂತಾದ ಮೇಲೆ....'

"ಅದು ಸರೀನ್ರಿ, ಆದ್ರೂ...."

'ನೋಡಮ್ಮ,....'

'ಆದು ನೋಡೋಣ, ಸದ್ಯ ಆ ಕಾರಣವನ್ನಾದ್ರೂ ಹೇಳಬಾರದೆ?'

'ಹೇಳದೆ ಉಂಟೆ? ಶ್ರೀ ಜಿ. ನಾರಾಯಣ ಅವರು ಆಡಳಿತ ಭಾಷೆ ಕನ್ನಡವಾಗುವುದರಿಂದಲೇ ಲಂಚಾಸುರ ದೇಶಾಂತರಗೊಳ್ಳುತ್ತಾನೆಂದು ಹೇಳುತ್ತಾರೆ.'

"ನಾರಾಯಣ ಅಂದ್ರೆ...."

"ಅದೇ ಸದ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು...."

'ಓ, ಇದ್ರಲ್ಲೇನೂಂತ? ಅವರು ಸಾಹಿತ್ಯಿಕವಾಗಿ ಮಾತಾಡಿರಬಹುದು.'

'ಅಂದರೆ?'

'ಅಲ್ಲಾರಿ, ಪಲ್ಲವಾಧರೆ, ಮೃಗಲೋಚನೆ ಚಂದ್ರಮುಖಿ, ದುಂಬಿಗುರುಳೆ, ಕಮಲೆನಯನೆ, ಹಂಸಗಮನೆ ಎಂದು ಮುಂತಾಗಿ ಹೇಳುತ್ತಾರಲ್ಲಾ ಹಾಗೆ ಕನ್ನಡದ ಮೇಲಿನ ಮಿತಿಮೀರಿದ ಮೋಹ ಹೀಗೆ ಅವರಿಂದ ಹೇಳಿಸಿರಬಹುದು....'

'ಛೆ. ಛೆ...ಏನನ್ನುತ್ತೀಯೊ ನೀನು? ಶ್ರೀ ನಾರಾಯಣರು ರಾಜ್ಯ ಸರ್ಕಾರ ರಚಿಸಿದ್ದ ಕನ್ನಡ ಭಾಷಾ ಸಮಿತಿಯ ಸದಸ್ಯರಾಗಿದ್ದರು. ಆ ಸಮಿತಿ ಇದೀಗಲೇ ತನ್ನ ವರದಿ ಅರ್ಪಿಸಿದೆ.'

'ಅದು ಇರಬಹುದು. ಇದೀಗ ವರದಿಯನ್ನು ಅಂಗೀಕರಿಸುವುದು, ಅನುಷ್ಠಾನಕ್ಕೆ ತರುವುದು, ಬಿಡುವುದು ರಾಜ್ಯಪಾಲರ ಅಧಿಕಾರಕ್ಕೆ ಸೇರಿದೆ.'

'ಅದಕ್ಕೇ ಶ್ರೀ ನಾರಾಯಣರು ಅಂದದ್ದು—ತನ್ನ ಕಾರ್ಯತತ್ಪರತೆಯಿಂದ ಎಲ್ಲರನ್ನೂ ನಿಬ್ಬೆರಗುಗೊಳಿಸಿರುವ ರಾಜ್ಯಪಾಲರು ಈ ಕಾರ್ಯವನ್ನೂ ಆಗುಮಾಡಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಬೇಕೆಂದು....'

ಈ ಕಾರ್ಯನೆಂದರೆ?'

'ಜೂನ್ ಮೊದಲ ದಿನದಿಂದ ಜಿಲ್ಲಾ ಮಟ್ಟದಲ್ಲಿ, ನವಂಬರ ಒಂದರಿಂದ ರಾಜ್ಯ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯೆಂದು....'

'ಯಾವ ವರ್ಷಾಂತ?'

"ಶುಭಸ್ಯ ಶೀಘ್ರಂ....೧೯೭೧."

'ಸರೀನ್ರಿ. ಇದರಿಂದ ಲಂಚಾಸುರ ಮರ್ದನ ಹೇಗಾಗುತ್ತದೇಂತ....'

'ಅದೇ ಇದರ ರಹಸ್ಯ.'

'ಏನು?'

'ಈಗ ಸಬ್ ಡಿವಿಜನ್ ಮಟ್ಟದಲ್ಲಿ ಕನ್ನಡ ಆಡಳಿತ ಭಾಷೆಯಾಗಿದೆ ..."

'ಆಗಿದೆಯೆಲ್ಲಿ? ಆಗಿವೆಯೆಂದು ಹೇಳುತ್ತಾರೆ.'

"ಯಾಕೆ ಅದರಲ್ಲೂ ಸಂದೇಹವೆ?'

'ಅಲ್ಲಾರಿ, ಎ. ಸಿ.ಯವರು ತಮ್ಮ ತೀರ್ಗೆ ಅಪೀಲು ಜಜ್‌ಮೆಂಟನ್ನು ಇಂಗ್ಲಿಷಿನಲ್ಲೇ ಕೊಟ್ಟಿದ್ದಾರಂತೆ....'

'ಇರಬಹುದೂನ್ನು. ಪ್ರಾಯಃ ಅದು ಕೋರ್ಟು ಭಾಷೆಯೋ ಏನೋ ಯಾರಿಗೆ ಗೊತ್ತು? ಅಂತೂ ಸರಕಾರ ಮಾಡಿದೆ. ಆದರೆ, ಜಿಲ್ಲಾ ಮಟ್ಟದಲ್ಲಿ ಕನ್ನಡವಿಲ್ಲದ್ದರಿಂದ ಅನೇಕ ಅಡಚಣೆಗಳು ತಲೆಹಾಕುತ್ತಿವೆ ಎನ್ನುತ್ತಾರಂತೆ ಅಧಿಕಾರಿಗಳು.'

'ತಮ್ಮ ಸೋಮಾರಿತನಕ್ಕೆ ಅವರೊಂದು ನೆಪ ಹುಡುಕಿದರೆಂದು ತೋರುತ್ತದೆ....'

'ಅದೇನೇ ಇರಲಿ, ನೂರಕ್ಕೆ ತೊಂಭತ್ತರಷ್ಟು ವ್ಯವಹಾರಗಳು ಜಿಲ್ಲಾ ಮಟ್ಟದಲ್ಲಿ ಕೊನೆಗೊಳ್ಳುತ್ತವಾದ್ದರಿಂದ ಜಿಲ್ಲಾ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದರಿಂದ ಹೆಚ್ಚಿನ ಲಾಭ ದೊರಕುತ್ತದೆ.'

"ಯಾರು ಅಲ್ಲಾಂತಾರೆ? ಆದರೆ, ನೋಡಿ ಅಧಿಕಾರಿಗಳು....'

'ಛೆ.... ಹಾಗೆಲ್ಲನ್ನಬಾರದು ನೋಡು. ಪಧಿಕಾರಿಗಳೆಲ್ಲರೂ ಕನ್ನಡಕ್ಕೇ ಪರರಾಗಿದ್ದಾರೆ....'

'ಅದೀಗ ಸರಿಯೋಯ್ತು. ಮತ್ತೆ ಅದು ಆಡಳಿತ ಭಾಷೆಯಾಗುವುದಾದರೂ ಹೇಗೆ?'

'ಏನು?'

'ಅಧಿಕಾರಿಗಳೆಲ್ಲರೂ ಕನ್ನಡಕ್ಕೇ ಪರರಾಗಿದ್ದರೆ....'

"ಛೆ....ಛೆ.... ಶಾಂತಂ ಪಾಪಂ. ಕನ್ನಡಕ್ಕೇ ಪರರೆಂದರೆ, ಕನ್ನಡಕ್ಕೆ ಪರಕೀಯರೆಂದೋ ವಿರೋಧಿಗಳೆಂದೋ ಅರ್ಥವಲ್ಲ ಕಣೇ, ಸ್ವಕೀಯರೆಂದರ್ಥ. ಫಾರ್ ಕನ್ನಡ.'

'ಫಾರ್ ಕನ್ನಡವೊ, ಫಾರ್ ಎವೇ ಫ್ರಾಮ್ ಕನ್ನಡವೋ....'

"ಅಲ್ವೆ, ಇದು ಶ್ರೀ ನಾರಾಯಣರ ಅನುಭವ. ಎಲ್ಲಿಯ ವರೆಗೆಂದರೆ, ಪರರಾಜ್ಯಗಳಿಂದ ಬಂದಿರುವ ಐಎಎಸ್ ಅಧಿಕಾರಿಗಳೂ ಕನ್ನಡದ ಬಗ್ಗೆ ಆಸಕ್ತರಿದ್ದಾರೆ.'

'ಮತ್ತೇನಂತೆ ತೊಂದರೆ?'

'ವಿಧಾನ ಸೌಧದಲ್ಲಿ ಮಾತ್ರ ಇದಕ್ಕೆ ಭಾರಿ ಡಾಮ್ ಬಿದ್ದಿದೆಯಂತೆ.'

'ಅದು ಹೇಗೆ?"

"ಹೇಗೆಂದರೇನು? ಬಹುರೂಪೇಣ....'

"ಆದ್ರೂ ಒಂದ್ರೂಪ...."

'ವಿಧಾನ ಸೌದೋಪಯೋಗಕ್ಕೆಂದು ಒಂದು ಸಾವಿರ ಕನ್ನಡ ಟೈಪುರೈಟರು ಕೊಳ್ಳಲು ಬಜೆಟ್ಟಿನಲ್ಲಿ ಪ್ರೊವಿಜನ್ ಮಾಡಿತ್ತು. ಆದರೆ, ಅದರ ಉಪಯೋಗವಾಗಲಿಲ್ಲ; ಆದರೂ ಎಳ್ಳಿನಂಶ....'

'ಅದು ಸರೀನ್ರಿ. ಮೆಷೀನು ಬಂದ್ರೆ ಸಾಕೆ? ಅದನ್ನು ಹೊಡೆಯುವವರು ಬೇಡವೆ?'

'ವಿಧಾನ ಸೌಧ ಬಯಸಿದರೆ ಹೊಡೆಯುವ ಲಲನೆಯರ ಕರಗವೇ ಸೇರುತ್ತೆ'

"ಆಯ್ತಪ್ಪ. ಗೋಕುಲಾಷ್ಟಮಿ ಕಡುಬಿನ ಸುದ್ದಿ ಮಾತಾಡ್ತಿರುವವರು ಹುಸೇನ್ ಸಾಬಿಗಳ ಮುಹರ್ರಮ್‌ನ ಬಿರ್ಯಾನಿಗೆ ಬಂದ್ರಿ...."

'ಅಂದ್ರೆ....?'

'ಅಲ್ರಿ, ಲಂಚಾಸುರ ಸಂಹಾರಕ್ಕೂ ಕನ್ನಡ ಆಡಳಿತ ಭಾಷೆಯಾಗುವುದಕ್ಕೂ ಯಾವ ಬಾದರಾಯಣ ನಂಟೂಂತ?'

'ಓ, ಅದೋ, ನೌಕರರಲ್ಲಿ ಅನೇಕ ಮಂದಿಗೆ ಇಂಗ್ಲಿಷ್ ಭಾಷೆಯ ಬಗ್ಗೆ ಹೆಚ್ಚಿನ ಜ್ಞಾನವಿರುವುದಿಲ್ಲ.

'ಅಯ್ಯೋ, ಒಪ್ಪಿಕೊಂಡು ಬಿಡೋಣ'

"ಇವರಿಗೆ ಮೇಲಧಿಕಾರಿಗಳ ಬರಹ ಅರ್ಥವಾಗುವುದಿಲ್ಲ."

"ತುಂಬ ಕಲಿತವ್ರು ಇಂಗ್ಲೆಂಡ್—ಅಮೆರಿಕ ರಿಟರ್ನ್ಡ್ ಅಥವಾ ಕ್ವ್ಯಾಡ್...."

"ಅಲ್ವೆ, ರಿಟರ್ನ್ಡ್ ಅಂದ್ರೆ ಅರ್ಥವಾಯ್ತು. ಆದ್ರೆ ಕ್ವ್ಯಾಡ್ ಅಂದ್ರೆ...."

'ಕ್ವ್ಯಾವಿನಲ್ಲಿ ನಿಂತವ್ರೂಂತ.'

"ಹ್ಹ ಹ್ಹ....ಸರೀನ್ನು. ಬರವಣಿಗೆ ಓದಲು ಬರೆಯಲು ತ್ರಾಸವಾದಾಗ, ಆ ಫೈಲು ಮೂಲೆಗೆ ಬೀಳುತ್ತೆ-ನಿಧಾನ ಮಾಡೋಣವೆಂದು. ಅಡಿಗೆ ಬಿದ್ದ ಫೈಲನ್ನು ಮೇಲೆತ್ತಲೆಂದು ಅಪ್ಲಿಕೆಂಟ್ ಹಾಜರಾಗುತ್ತಾನೆ. ಲಂಚದ ಆಸೆ ತೋರಿಸುತ್ತಾನೆ. ನೌಕರ ಬಲಿಯಾಗುತ್ತಾನೆ. ಮೇಲಧಿಕಾರಿಗಳು ಕನ್ನಡದಲ್ಲೇ ಷರಾ ಬರೆದರೆ, ಈ ಯೆಲ್ಲ ಆತಂಕ ದೂರ. ಒಂದು ಕಲ್ಲು ಎರಡು ಹಣ್ಣು'

'ಆಡಳಿತೆಯಲ್ಲಿ ಚುರುಕುತನ, ಲಂಚಾಸುರನ ಸರ್ವನಾಶ....'

"ಹ್ಞೂಂ. ಅಲ್ಲವೇ ಮತ್ತೆ? ಹೇಗಿದೆ ಶ್ರೀ ನಾರಾಯಣರ ಸಲಹೆ?"

"ಸಲಹೆಯೇನೋ ಭಾರಿ ಛಲೋದು. ಆದರೆ ನೋಡಿ, ವಿಧಾನ ಸೌಧದಲ್ಲೇ ಕನ್ನಡ ಬಾರದವ್ರು ಕನ್ನಡ ದ್ವೇಷಿಗಳು, ಕನ್ನಡವೆಂದರೆ ಹಾರುವವರು ತುಂಬಿದ್ದಾರೆಂದ ಹಾಗಾಯ್ತು. ಮತ್ತೆ ಅದು ರಾಜ್ಯಕ್ಕೆ ಬರುವುದಾದರೂ ಹೇಗೆ?"

"ರಾಜ್ಯಪಾಲರು ಮನಸ್ಸು ಮಾಡಿದರೆ ಆಗುತ್ತೆ."

"ಅಲ್ಲಾರಿ. ೧೯೫೬ರಿಂದ ಇದುವರೆಗೂ ಜನಪ್ರಿಯ ಸರಕಾರಗಳು ಮಾಡಲಾಗದ್ದನ್ನೆಲ್ಲ ಈ ಮೂರು ನಾಲ್ಕು ತಿಂಗಳುಗಳಲ್ಲಿ ರಾಜ್ಯಪಾಲರು ಮಾಡಬೇಕೇನು?"

'ಯಾಕಾಗಬಾರದು?'

"ಬಹುದೂನ್ನಿ. ಅಷ್ಟರಲ್ಲಿ ಕನ್ನಡ ಬೇಡವಾದವರು ರಾಷ್ಟ್ರಪತಿಗಳಿಗೆ ತಂತಿ ನೀಡಿದರೆ?"

'ಏನೂಂತ?'

'ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡುವಲ್ಲಿನ ರಾಜ್ಯಪಾಲರ ಉತ್ಸಾಹ ಮಿತಿಮೀರುತ್ತಿದೆ; ಇದು ರಾಜ್ಯದ ಹಿತಕ್ಕೆ ಸಲ್ಲದು. ಈ ಬಗ್ಗೆ ಸದ್ಯಕ್ಕೆ ಯಥಾಸ್ಥಿತಿ ಮುಂದುವರಿಯಬೇಕು. ಜನಪ್ರಿಯ ಸರಕಾರಕ್ಕೇ ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಬಿಡವ ಬಗ್ಗೆ ಅವಕಾಶವಿರಿಸಬೇಕು....'

'ಅಲ್ವೆ, ಹೀಗೆಲ್ಲ ರಾಜ್ಯಪಾಲರು ಏನೂ ಮಾಡಬಾರದೆಂದು ಅವರ ಕೈಕಟ್ಟಿ ಬಿಡುವುದೆ?

'ನೋಡಿ, ಇದು ಪ್ರಜಾಸತ್ತೆ, ತಾನೆ? ರಾಷ್ಟ್ರಪತಿಯಾಡಳಿತ ಪ್ರಜಾಸತ್ತೆಗೆ ಮಾರಕ. ಆದ್ದರಿಂದ ಈ ಅವಧಿಯಲ್ಲಿ ಏನೇ ಆದರೂ ಅದು ಪ್ರಜೆಗಳಿಗೆ ಹಿತ ತರುವುದಿಲ್ಲ. ಆದ್ದರಿಂದ ರಾಜ್ಯಪಾಲರು ತೆಪ್ಪಗೆ ಕುಳಿತಿರುವುದರಿಂದಲೇ ಪ್ರಜಾಸತ್ತೆಗೆ ಅಹಿತವಾಗುವುದಾದರೂ ತಪ್ಪುತ್ತದೆ....'

'ಅಲ್ವೆ, ರಾಷ್ಟ್ರಪತಿ ಆಡಳಿತೆಯು ಚುರುಕುತನ....'

'ನೋಡಿ, ಪ್ರಜಾಸತ್ತೆಯೊಂದೇ ಪ್ರೌಢ. ಉಳಿದದ್ದೆಲ್ಲ ಬಾಲಿಶ; ಹುಡುಗನ ಚು

(ಒಂಭತ್ತನೇ ಪುಟ ನೋಡಿರಿ)

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ

ನವಯುಗದ ನವೀಕರಣಕ್ಕಾಗಿ
ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಶ್ರೀ ಕರುಣಾನಿಧಿಯವರ

ಅಸಾಧ್ಯವಾದ ಅಸಾಧು ಬಯಕೆ

ಬಂಗ್ಲಾ ದೇಶದಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಹೋರಾಟ ಬಿಗಿಯಾಗುತ್ತಲೇ ಇದೆ. ಚಳುವಳಿಗಾರರನ್ನು ಅಣಗಿಸಲು ಪಾಕ್ ಸೈನ್ಯ ಅಶಕ್ತವಾಗುತ್ತಿದೆ; ಅಮೆರಿಕೆ–ರಶ್ಯ–ಚೀನಗಳು ನೀಡಿದ ಟ್ಯಾಂಕರ್–ಬಾಂಬರ್ ಫೈಟರ್‌ಗಳೂ ಬಂಗಾಳಿಗಳ ದೃಢ ಸಂಕಲ್ಪದ ಮುಂದೆ ತಲೆಬಾಗಿವೆ.

ಸಂರಕ್ಷಣೆ, ವಿದೇಶ ನೀತಿಗಳಂತಹ ಒಂದೆರಡು ಪ್ರಮುಖ ವಿಷಯಗಳನ್ನು ಬಿಟ್ಟು ಬಂಗ್ಲಾಕ್ಕೆ ಸ್ವಾಯತ್ತತೆ ಬೇಕು ಎಂಬುದು ವಂಗಬಂಧು ಮುಜಿಬುರ್ ರಹಮಾನರ, ಅವರ ಪಕ್ಷದ ನೀತಿಯಾಗಿತ್ತು. ಆದರೆ, ಮಾಜಿ ವಿದೇಶ ಮಂತ್ರಿ ಜಡ್. ಎ. ಭುಟ್ಟೊ ಪ್ರಭುಗಳು ಕಿವಿಯೂದಿದ್ದರಿಂದಲೂ ತನ್ನ ಅಧಿಕಾರ ಸಡಿಲವಾಗುವುದರಿಂದಲೂ ದಂಡಪತಿ ಯಾಹ್ಯಾಖಾನರು ಈ ನೀತಿಯನ್ನು ವಿರೋಧಿಸಲೇ ಬೇಕಾಯ್ತು. ಬಂಗ್ಲಾ ದೇಶೀಯರು ತನ್ನ ಬೇಡಿಕೆಯನ್ನು ಕೇಂದ್ರ ಮನ್ನಿಸದ್ದರಿಂದ ಏಕಪಕ್ಷೀಯವಾಗಿ ಸ್ವಾತಂತ್ರ್ಯ ಘೋಷಿಸಿಕೊಂಡರು; ಸ್ವತಂತ್ರ ಬಂಗ್ಲಾ ದೇಶವನ್ನು ಗಣರಾಜ್ಯವನ್ನಾಗಿ ಕರೆದುಕೊಂಡರು.

ಬಂಗ್ಲಾ ಸ್ವಾತಂತ್ರ್ಯ ಹೋರಾಟವು ಸದ್ಯ ಪಾಕಿಸ್ತಾನದ ಆಂತರಿಕ ವಿಷಯ. ಆದರೂ ಈ ಹೋರಾಟಕ್ಕೆ ಮೊತ್ತಮೊದಲಿಗೆ ಭಾರತೀಯ ಸಂಸತ್ತು ಮಾನವತೆಯ ನೆಲೆಯಲ್ಲಿ ತನ್ನ ಸಹಾನುಭೂತಿ ತೋರಿಸಿತು. ಬಂಗ್ಲಾ ಸರಕಾರವನ್ನು ಮನ್ನಿಸುವ ಕುರಿತಾಗಿಯೂ ಭಾರತೀಯ ನಾಯಕರಲ್ಲಿ ಭಿನ್ನಮತವಿಲ್ಲ. ಆದರೂ ಪರಿಣಾಮವನ್ನು ಬಹುದೂರ ಗಮನಿಸಬೇಕಾದ್ದರಿಂದ ತುಸು ವಿಳಂಬವಾಗುತ್ತಿದೆಯಷ್ಟೆ. ಬಂಗ್ಲಾ ಸರಕಾರಕ್ಕೆ ಮನ್ನಣೆ ನೀಡುವಲ್ಲಿಯೂ ಭಾರತ ಮೊತ್ತಮೊದಲಿಗನಾಗುವುದು ಅಸಂಭವವಲ್ಲ.

ಪಾಕಿಸ್ತಾನದ ಸೈನ್ಯಪಡೆಗಳು ವಿಮುಖಗೊಳ್ಳುತ್ತಲೇ ಬರುತ್ತಿವೆ. ತನ್ನ ಸೋಲಿನ ಸೇಡನ್ನು ಪಾಕ್ ಸೇನೆಯು ನಿಸ್ಪೃಹ ಬಂಗಾಳಿಗಳ ಮೇಲೆ ತೋರಿಸಹೊರಟಿದೆ; ಪಾಕ್ ಸರಕಾರವು ಭಾರತ ಸರಕಾರದ ಮೇಲೆ ಪ್ರಯೋಗ ಮಾಡುತ್ತಿದೆ. ಕಲ್ಕತ್ತೆಯಲ್ಲಿನ ತನ್ನ ಡಿ| ಹೈಕಮಿಶನರ್ ಕಛೇರಿಯನ್ನು ಮುಚ್ಚಲು ನಿರ್ಧಾರ ಮಾಡಿದ ಪಾಕ್ ಸರಕಾರ ಡಾಕ್ಕಾದಲ್ಲಿನ ಅಂತಹುದೇ ಭಾರತೀಯ ಕಛೇರಿಯನ್ನು ಮುಚ್ಚುವಂತೆ ಕೇಳಿಕೊಂಡದ್ದು ಈ ದಾರಿಯಲ್ಲಿನ ಒಂದು ಹೆಜ್ಜೆ. ಭಾರತದ ಬಂಗ್ಲಾಪರ ನೀತಿಯಿಂದಾಗಿ ಪಾಕಿಸ್ತಾನ ಭಾರತದೊಂದಿಗಿನ ತನ್ನೆಲ್ಲ ರಾಜ್ಯಕೀಯ ಸಂಬಂಧವನ್ನೂ ಕಡಿದುಕೊಂಡರೆ ಅಸಹಜವಾಗುವುದಿಲ್ಲ. ಈ ನಡುವೆ ಬಂಗ್ಲಾ ಸರಕಾರವನ್ನು ಭಾರತವು ಮನ್ನಿಸಿದರೆ, ಮರುಕ್ಷಣವೇ ಇಸ್ಲಾಮಾಬಾದಕ್ಕೂ ಡಿಲ್ಲಿಗೂ ಇರುವ ಶಿಥಿಲ ಸಂಬಂಧ ನುಚ್ಚುನೂರಾಗುವುದು.

ಭಾರತ ಸರಕಾರದ ಬಂಗ್ಲಾ ನೀತಿಯು ತಮಿಳುನಾಡಿನ ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರಿಗೊಂದು ಬಗೆಯ ನವಚೈತನ್ಯ ತಂದುಕೊಟ್ಟಿದೆ. ಪ್ರತ್ಯೇಕ ದ್ರವಿಡಸ್ಥಾನದ ದೊಡ್ಡ ಕನಸನ್ನು ಹೊತ್ತುಕೊಂಡೇ ದ್ರಾವಿಡ ಕಳಗಂ ಹುಟ್ಟಿದ್ದು. ಹಿಂದೂ ದೇವದೇವತೆಗಳ ಮೂರ್ತಿಭಂಜನ, ಚಿತ್ರದಹನ ಅವೆರಡರ ಅವಹೇಳನಗಳಿಂದ ವ್ಯಕ್ತವಾದ ಅದರ ಹೋರಾಟ ಬ್ರಾಹ್ಮಣ ವಿರೋಧವನ್ನೂ ತೋರ್ಪಡಿಸಿತು. ಪವಿತ್ರವಾದ ಭಾರತೀಯ ಸಂವಿಧಾನದ ಪ್ರತಿಗಳನ್ನೇ ಸುಟ್ಟಿತು; ಹಿಂದೀ–ಸಂಸ್ಕೃತ ಭಾಷೆಗಳನ್ನು ತ್ಯಜಿಸಿ ಇಂಗ್ಲಿಷನ್ನು ಮುತ್ತಿಟ್ಟಿತು.

ಇದರಿಂದ ತನ್ನ ಬೇಳೆ ಬೇಯಿಸಿಕೊಳ್ಳಲು ಅಶಕ್ಯವೆಂಬುದನ್ನು ಕಂಡುಕೊಂಡ ದೂರಾಲೋಚಕರಾದ ಕೆಲವರು ಸಂವಿಧಾನದ ತಳಹದಿಯ ಮೇಲೆಯೇ ನಿಲ್ಲುವುದಾಗಿ ಹೇಳಿ, ಅಧಿಕಾರಕ್ಕೆ ಬಂದರು. ಪ್ರತ್ಯೇಕತೆಯ ಬೇಡಿಕೆಯನ್ನು ಬಿಟ್ಟುಕೊಟ್ಟ ಶ್ರೀ ಅಣ್ಣಾ ದೊರೈಯವರ ಗುಂಪು ದ್ರಾವಿಡ ಮುನ್ನೇತ್ರ ಕಳಗಂ ಆಯ್ತು. ಹಾಗಿದ್ದರೂ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಬೇಕೆಂಬ ಮಾತಿಗೆ ಬಲವುಳಿಯಿತು.

ಅಣ್ಣಾದೊರೈಯವರು ನಿಧನರಾದ ಬಳಿಕ ಶ್ರೀ ಕರುಣಾ ನಿಧಿಯವರು ಅವರ ಸ್ಥಾನವೇರಿದರು. ಇವರು ತಮ್ಮ ಹಳೆಯ ಗುಳಿಗೆಗಳನ್ನು ಒಂದೊಂದಾಗಿ ಉರುಳಿಸ ಹೊರಟಿದ್ದಾರೆ. ತಮಿಳುನಾಡು ಸರಕಾರಕ್ಕೆ ಪ್ರತ್ಯೇಕ ಧ್ವಜವೊಂದುಬೇಕೆಂದವರು ಸಾಕಷ್ಟು ಹಗರಣವೆಬ್ಬಿಸಿದರು. 'ಉಳಿದವರಿಗೆ ಬೇಡವಾದರೆ ಕೊಡಬೇಡಿ; ನಾವು ಕೇಳುತ್ತೇವೆ; ನಮಗೆ ಕೊಡಿ' ಎಂದೂ ಹೇಳಿದರು. ರಾಜ್ಯಗಳಿಗೆ ಅಧಿಕ ಸ್ವಾಯತ್ತತೆಯನ್ನು ನೀಡುವಂತೆ ರಾಜ್ಯಾಂಗ ತಿದ್ದುಪಡಿ ಮಾಡಬೇಕೆಂಬ ಅವರ ಬೇಡಿಕೆ ಹೊಸತಲ್ಲ.

ವಂಗ ಬಂಧು ಮುಜಿಬುರ್ ರಹಮಾನರು ಬಯಸಿದ್ದ ಅಧಿಕ ಸ್ವಾಯತ್ತತೆಗೂ ಕರುಣಾನಿಧಿ ಕೇಳುತ್ತಿರುವ ಸ್ವಾಯತ್ತಾಧಿಕಾರಕ್ಕೂ ಹೆಚ್ಚಿನ ಅಂತರವಿರುವುದಿಲ್ಲ. ಮುಜಿಬರನ್ನು ಭಾರತೀಯ ಸಂಸತ್ತು ಸಹಾನುಭೂತಿಯಿಂದ ಕಾಣುವುದಾದರೆ, ಕರುಣಾನಿಧಿಯವರಿಗೆ ಅದೇಕೆ ಪ್ರತ್ಯೇಕ ಧ್ವಜ ಕೊಡಬಾರದು? ಅವರನ್ನು ಮರಿ ಪ್ರಧಾನಿಯೆಂದೇಕೆ ಕರೆಯ ಬಾರದು? ಆದುದರಿಂದಲೇ ತಮ್ಮ ಪಕ್ಷದ ಸಾಮಾನ್ಯ ಸಭೆಯಲ್ಲಿ ಕರುಣಾನಿಧಿ ಮಾತನಾಡುತ್ತ ತನ್ನ ಹೃದಯವನ್ನು ಬಿಚ್ಚಿ ತೋರಿಸಿದರು.

'ರಾಜ್ಯಗಳಿಗೆ ಸ್ವಾಯತ್ತಾಧಿಕಾರ ನೀಡಬೇಕೆಂಬ ಬೇಡಿಕೆಯನ್ನು ದೀರ್ಘಕಾಲ ಅಲಕ್ಷಿಸಿದ್ದೇ ಆದರೆ, ಅವು ಪ್ರತ್ಯೇಕಗೊಳ್ಳುವುದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಪ್ರತ್ಯೇಕಗೊಳ್ಳುವ ಭಾವನೆ ಬೇರೂರಿದರೆ ಅದಕ್ಕೆ ಕೇಂದ್ರವೇ ಹೊಣೆ...ರಾಜ್ಯಗಳನ್ನು ನಿಷ್ಪಕ್ಷಪಾತವಾಗಿ ನೋಡಿಕೊಳ್ಳಲು ಸಂವಿಧಾನದಲ್ಲಿ ಸೂಕ್ತ ತಿದ್ದುಪಡಿ ಅಗತ್ಯ.... ಸ್ವಾಯತ್ತತೆಯ ಗುರಿ ದೇಶದ ಐಕ್ಯವನ್ನು ಮತ್ತಷ್ಟು ಬಲಪಡಿಸುವುದೇ ಆಗಿದೆ....'

ಅಂದರೆ, ಸದ್ಯದ ಸಂವಿಧಾನವು ರಾಜ್ಯಗಳಿಗೆ ಕೊಡ ಮಾಡಿರುವ ಅಧಿಕಾರಗಳಿಂದ ದ್ರಾ. ಮು. ಕ. ತೃಪ್ತವಾಗಿಲ್ಲ. ಕೇಂದ್ರದಿಂದ ಯಾವ ಯಾವ ಅಧಿಕಾರಗಳನ್ನು ರಾಜ್ಯ ಬಯಸುತ್ತದೆಯೆಂಬುವನ್ನು ಪಟ್ಟಿ ಮಾಡಲು ಅದೊಂದು ಸಮಿತಿಯನ್ನು ಮಾಡಲಿದೆ. ಸಮಿತಿಯ ಸಿಫಾರಸುಗಳ ಮೇಲೆ ನಾಣ್ಯ–ವಿದೇಶ ನೀತಿ–ರಕ್ಷಣೆ ಹೀಗೆ ಕೆಲವೊಂದನ್ನು ಬಿಟ್ಟು ಉಳಿದೆಲ್ಲ ಅಧಿಕಾರಗಳನ್ನದು ಬಯಸ ಬಹುದು.

ಆದರೆ, ಶ್ರೀ ಕರುಣಾನಿಧಿಯವರಿಗೇ ತನ್ನ ಬಯಕೆಯು ಅದೆಷ್ಟು ಅಸಾಧುವೆಂದು ಅನಿಸಿರ ಬೇಕು. ಆದುದರಿಂದಲೇ ಮರುದಿನವೇ 'ಚಳುವಳಿ ಹೂಡುವುದೆಂದು' ತನ್ನ ಮಾತಿನ ಅರ್ಥವಲ್ಲವೆಂದು ಸ್ಪಷ್ಟೀಕರಿಸಿದರು. ತನ್ನ ಬಯಕೆಯ ಬಗ್ಗೆ ಕಳೆದ ವರ್ಷವೇ ಬಿಗು ಧೋರಣೆವಹಿಸಿದ್ದರೆ ಅವರು ಯಶಗಳಿಸುವ ಸಾಧ್ಯತೆಯಿದ್ದಿರ ಬಹುದಿತ್ತು. ಆದರೆ, ನಿಕಟ ಭವಿಷ್ಯದಲ್ಲಿ ಅವರ ಆಶೆ ಈಡೇರುವುದಿಲ್ಲ. ಪ್ರಧಾನಿ ಇಂದಿರಾ ಗಾಂಧಿ ಅಧಿಕಾರವಿಲ್ಲದ ಕೇಂದ್ರ ನಾಯಿಕೆಯಾಗಿ ಉಳಿಯ ಬಯಸುವುದಿಲ್ಲ. ಆಕೆಯು ಕೂದಲು ಕೊಂಕಿಸಲಾರದಷ್ಟು ದೃಢವಾಗಿ ಸದ್ಯ ನಿಂತಿದ್ದಾರೆ.

'ಪ್ರತ್ಯೇಕತೆಯನ್ನು ತಪ್ಪಿಸಲಾಗುವುದಿಲ್ಲ'ವೆಂಬ ಕರುಣಾನಿಧಿ ಸೂಕ್ತಿ ಪ್ರಧಾನಿಗೊಂದು ಆಹ್ವಾನ. ಇದೀಗ ಮುಜಿಬುರ್ ಮಾಡಿದಂತೆಯೇ ನಾಳೆ ಕರುಣಾನಿಧಿಯವರೂ ಸ್ವಾಯತ್ತತೆಯ ಹೆಸರಲ್ಲಿ ಚಳುವಳಿ ತೊಡಗಿಯಾರೆ? ಮುಜಿಬ್ ಪರರಾದವರು ನಿಧಿಪರರೂ ಆಗುತ್ತಾರೆಯೆ? ಆದರೆ, ಕರುಣಾನಿಧಿಯವರ ಮಾರ್ಗ ಕಲ್ಲು ಮುಳ್ಳುಗಳಿಂದ ತುಂಬಿದೆ. ಮುಜಿಬುರ್ ಅವರಿಗಿದ್ದ ಏಕ ಕಂಠೀಯತೆ, ಏಕ ಮಾನೋವೃತ್ತಿ ಇವರಿಗಿಲ್ಲ. ಮುಖ್ಯವಾಗಿ ಪಾಕಿಸ್ತಾನಗಳಲ್ಲಿ ಬಹುಸಂಖ್ಯಾಕರೇ ಬಂಗಾಳಿಗಳು. ೫೫ ಕೋಟಿ ಭಾರತೀಯರಲ್ಲಿ ೩ಕೋಟಿ ತಮಿಳರ ಬೇಡಿಕೆ ಬಹು ಸಂಖ್ಯಾಕರ ಇಚ್ಛೆಯಾಗುವುದು ಸಾಧ್ಯವಿಲ್ಲ.

ಕೈಗೆ ಬಂದಿರುವ ಅಧಿಕಾರಗಳಿಂದಲೇ ತೃಪ್ತಿಹೊಂದಿ ಅವನ್ನು ಸಮರ್ಥ ರೀತಿಯಿಂದ ಬಳಸಿ ರಾಜ್ಯ ಹಿತ ಸಾಧಿಸುವುದೇ ಸದ್ಯ ಶ್ರೀ ಕರುಣಾನಿಧಿಯವರಿಗೆ ಒಳ್ಳೆಯದು. ಇದಕ್ಕೆ ವ್ಯತಿರಿಕ್ತವಾಗಿ ಸ್ವಾಯತ್ತತೆಯ ಕೂಗು ಹಾಕುತ್ತ ಜನಮನವನ್ನು ಕಲಕ ತೊಡಗಿದರೆ, ಅವರು ಮತ್ತೊಬ್ಬ ಶೇಖ ಅಬ್ದುಲ್ಲಾ ಮಾತ್ರ ಆಗುತ್ತಾರೆ.

● ●

ಹಿಂಸೆ ಮಾಡಬೇಡ. ಪ್ರತಿಯೊಂದು ಕಾರ್ಯದಲ್ಲಿಯೂ ಇದೇ ವ್ರತವನ್ನಿಡು. ಯಾಕೆಂದರೆ ನಮ್ಮ ಧರ್ಮಶಾಸ್ತ್ರದಲ್ಲಿಯೂ ಹೇಳಿದ್ದೇನೆಂದರೆ ಹಿಂಸೆಯಕ್ಕಿಂತಲೂ ಹೆಚ್ಚಿನ ತಪ್ಪು ಮತ್ಯಾವುದೂ ಇಲ್ಲ.

(ಕವಿ ಹಾಫೀಜ್)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
131 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಮನೆಯೆಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2–00

❖ ❖ ❖

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1–50

❖ ❖ ❖

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2–00

❖ ❖ ❖

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಶಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಚಾರುಚಯನ

ಕಾವೇರಿಕೊಳ್ಳದಲ್ಲಿ ಮರಳುಸಂಗ್ರಹ

ಸಮರ್ಥ ಆಡಳಿತಗಾರರೆಂದು ಹೆಸರು ಪಡೆದ ರಾಜ್ಯಪಾಲರು ಶ್ರೀ ಧರ್ಮವೀರರು. ಅವರಲ್ಲಿನ ಚೈತನ್ಯ—ಉತ್ಸಾಹವೆರಡೂ ಅಪಾರ.

ಅವರ ಉತ್ಸಾಹ ಕರ್ನಾಟಕದ ಜಲ ಸಮಸ್ಯೆಯತ್ತಲೂ ಹರಡಿದೆ. ಕಾವೇರಿ ನದಿ ಕೊಳ್ಳದ ಯೋಜನೆಗಳಿಗೆ ಕೇಂದ್ರದ ಮಂಜೂರಾತಿ ದೊರಕಿಸುವ ಬಗ್ಗೆ ಅವರು ಪ್ರಯತ್ನಕ್ಕೆ ಆರಂಭಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಕಾವೇರಿಯ ಯೋಜನೆಗಳಿಗೆ ಮನ್ನಣೆ ದೊರಕಿಸಲು ಭಗೀರಥ ಪ್ರಯತ್ನವನ್ನೇ ಮಾಡಿದ್ದರು. ಆದರೆ, ತಮಿಳುನಾಡನ್ನು ತೃಪ್ತಿಗೊಳಿಸುವುದಕ್ಕಾಗಿ ಕೇಂದ್ರ ಕರ್ನಾಟಕದ ಮೊರೆಯನ್ನು ಕಿವಿಯಿದ್ದೂ ಕಿವುಡನಾಗಿ ಕೇಳಲಿಲ್ಲ.

ರಾಜ್ಯದ ಕಪಿನಿ, ಹಾರಂಗಿ ಮೊದಲಾದ ಯೋಜನೆಗಳಿಗೆ ಕೇಂದ್ರದ ಮನ್ನಣೆ ದೊರೆತರೆ, ಆರ್ಥಿಕ ನೆರವೂ ಲಭ್ಯವಾಗುವುದು. ಅದಿಲ್ಲವಾದರೂ ರಾಜ್ಯದ ಹಿತದೃಷ್ಟಿಯಿಂದ ಈ ಯೋಜನೆಗಳನ್ನು ಕೈಬಿಡಲಾಗದೆಂದು ಶ್ರೀ ವೀರೇಂದ್ರರು ದಿಟ್ಟ ಹೆಜ್ಜೆಯಿಟ್ಟರು.

ಅವರ ದಾರಿಯನ್ನೇ ತಾನೂ ಮೆಟ್ಟಿರುವುದಾಗಿ ರಾಜ್ಯಪಾಲರು ಹೇಳುತ್ತಾರೆ. ರಾಜ್ಯದ ನಿಲುವಿನಲ್ಲಿ ಯಾವುದೇ ಬದಲಾವಣೆ ಮಾಡದೆ ಕಾವೇರಿ ಕೊಳ್ಳದ ಯೋಜನೆಗಳಿಗೆ ಕೇಂದ್ರದ ಅನುಮತಿ ಪಡೆಯುವ ಸ್ಪಷ್ಟ ಪ್ರಯತ್ನವನ್ನು ಅವರು ಮಾಡಿರುವುದಾಗಿ ತಿಳಿಸಿದ್ದಾರೆ.

ರಾಜ್ಯದ ನಿಲುವಿನ ಪೂರ್ತಿ ಅರಿವು ಕನ್ನಡಿಗರಲ್ಲೂ ಹೆಚ್ಚಿನವರಿಗೆ ಆಗಿಲ್ಲವೆಂದೇ ಹೇಳಬೇಕು. ಕೆಲವು ಮಾಜಿ ಶಾಸಕರು ಹೇಳುವಂತೆ ರಾಜ್ಯಪಾಲರಿಗೂ ಮನವರಿಕೆಯಾಗಿಲ್ಲ.

೧೯೨೪ರಲ್ಲಿ ಆಗಿನ ಮದ್ರಾಸು ಮತ್ತು ಮೈಸೂರು ಸರಕಾರಗಳ ನಡುವಾದ ನೀರಿನ ಒಡಂಬಡಿಕೆಯ ಆಧಾರದ ಮೇಲೆ ಕೇಂದ್ರದ ಅನುಮತಿಯನ್ನು ಬಯಸುವುದಾದರೆ, ಅದಕ್ಕಾಗಿ ಇದುವರೆಗೆ ಕಾಯಬೇಕಾಗಿರಲಿಲ್ಲ. ೧೯೨೪ರ ಹಳೆಯ ರಾಜ್ಯಗಳ ಹಳೆಯ ಒಪ್ಪಂದಗಳು ಹೊಸ ವಾತಾವರಣದಲ್ಲಿ, ಹೊಸ ಪರಿಸ್ಥಿತಿಯಲ್ಲಿ ಊರ್ಜಿತಗೊಳ್ಳಲು ಯೋಗ್ಯವಲ್ಲ.

ಅಂದು ಕಾವೇರಿಯ ನೀರನ್ನು ಮೈಸೂರು ಹೆಚ್ಚಾಗಿ ಬಳಸುತ್ತಿರಲಿಲ್ಲ. ಇಂದು ಪರಿಸ್ಥಿತಿ ಬದಲಾಗಿದೆ. ಕರ್ನಾಟಕವನ್ನಣಿಸಲೆಂದು ಹರಿಯುವ ಮಾತೆ ಕಾವೇರಿಯ ನೀರುಣ್ಣದೆ ಅದನ್ನು ತಮಿಳುನಾಡಿಗೆ ಹರಿಯಗೊಡಲು ಕನ್ನಡಿಗರು ಸಿದ್ಧರಿಲ್ಲ. ನ್ಯಾಯವಾದ ಪಾಲು ತಮಗೂ ಸಿಗಲೆಂದವರ ಬೇಡಿಕೆ.

ತಮಿಳುನಾಡು ಪಕ್ಷಪಾತಿಯಾಗಿ ಕೇಂದ್ರ ಸರಕಾರ ೧೯೨೪ರ ಒಡಂಬಡಿಕೆಯಿಂದ ಚಲಿಸಲಿಚ್ಛಿಸುವುದಿಲ್ಲ. ಆದ್ದರಿಂದ ಅದಕ್ಕೆ ವಿರುದ್ಧವಾದ ಕಪಿನಿ–ಹಾರಂಗಿ ಮೊದಲಾದವುಗಳಿಗೆ ಕೇಂದ್ರದ ಅಂಗೀಕಾರವಿಲ್ಲ; ನೆರವೂ ಇಲ್ಲ.

ಈ ಜಲ ವಿವಾದಕ್ಕೆ ಈಗಲೇ ಹನ್ನೆರಡು ವರ್ಷ. ಆದರ ತಂಟೆ ಜಗಜ್ಜನಿತವಾದದ್ದು ಇತ್ತೀಚಿಗಿನ ನಾಲ್ಕಾರು ವರ್ಷಗಳಲ್ಲಿ. ೧೯೨೪ರ ಒಡಂಬಡಿಕೆ ದೇಶ–ಕಾಲ ವಾತಾವರಣ ವಿರೋಧಿ. ಅದನ್ನು ತಿದ್ದಬೇಕು—ತನ್ನ ಹಕ್ಕಿನ ೪೫ಸಾವಿರ ದಶಲಕ್ಷ ಘನ ಅಡಿ ನೀರನ್ನು ಕೃಷ್ಣರಾಜ ಸಾಗರದ ಮೇಲ್ಭಾಗದಲ್ಲಿ ಶೇಖರಿಸಲು ಅನುಮತಿ ನೀಡಬೇಕು ಇದು 'ಕರ್ನಾಟಕದ ನ್ಯಾಯವಾದ ಬೇಡಿಕೆ. ಈ ಬೇಡಿಕೆಯೂ ಒಪ್ಪಂದಕ್ಕೆ ವಿರುದ್ಧವಾದುದಲ್ಲವೆಂದೂ ಅದು ತೋರಿಸಿ ಕೊಟ್ಟಿದೆ, ಕಾಣಬಲ್ಲವರಿಗೆ.

ಇದರಿಂದಾಗಿ ತಮಿಳುನಾಡಿನ ಸಿಂಹಪಾಲಿಗೆ ಚ್ಯುತಿ ಬರುವುದರಿಂದ ಈ ಬೇಡಿಕೆಯನ್ನು ಅದೂ ಕೇಂದ್ರವೂ ತಿಪ್ಪೆಗೆಸೆಯುತ್ತಲೇ ಬಂದಿವೆ.

೪೫ ಸಾವಿರ ದಶಲಕ್ಷ ಘನ ಅಡಿ ನೀರನ್ನು ಶೇಖರಿಸಿಕೊಳ್ಳುವ ಬಗ್ಗೆ ನ್ಯಾಯವಾದ ಅಂಗೀಕಾರ ದೊರೆಯದೆ ಹೋದಲ್ಲಿ ಕರ್ನಾಟಕಕ್ಕೆ ಕಪಿನಿ — ಹಾರಂಗಿ ಮೊದಲಾದುವುಗಳಿಂದ ಕಾಲಂಶದಷ್ಟೂ ಲಾಭವಿಲ್ಲ. ಕೇಂದ್ರದ ನೆರವು ಮಾತ್ರ ದೊರೆತೀತು. ಇಂತಹ ಅಂಗೀಕಾರದಿಂದ ನೀರಿನ ಸಮಸ್ಯೆ ಪರಿಹಾರಗೊಳ್ಳುವುದಿಲ್ಲ; ಯೋಜನೆ ಮಾನ್ಯವಾದೀತು.

ಕಪಿನೀ–ಹಾರಂಗ್ಯಾದಿ ಯೋಜನೆಗಳು ಪೂರ್ಣಗೊಂಡರೂ ೧೯೨೪ರ ಒಡಂಬಡಿಕೆಯಂತೆ ಕೃಷ್ಣರಾಜ ಸಾಗರದಿಂದ ನಿರ್ದಿಷ್ಟ ಪ್ರಮಾಣದ ನೀರನ್ನು ಹೊರಗೆ ಬಿಡಬೇಕಾಗುತ್ತದೆ. ಹಾಗೆ ನೀರು ಬಿಟ್ಟರೆ, ಈ ಯೋಜನೆಗಳಿಂದ ಹೆಚ್ಚಿನ ಲಾಭವಿಲ್ಲ.

ಮತ್ತೆ ಈ ಯೋಜನೆಗಳನ್ನು ಆರಂಭಿಸಿದ್ದಾದರೂ ಏಕೆ?

ಯೋಜನೆಗಳು ಮುಕ್ತಾಯಗೊಳ್ಳುವ ಹೊತ್ತಿಗಾದರೂ ಒಡಂಬಡಿಕೆಯಲ್ಲಿ ಸೂಕ್ತ ಬದಲಾವಣೆಯಾದರೂ ಆಗಬಹುದೆಂಬ ಆಶಯವೆ?

ಬದಲಾವಣೆಯಾಗದೆ ಹೋದರೆ, ನೀರು ಬಿಡುವುದನ್ನೇ ನಿಲ್ಲಿಸುವ ತಂತ್ರವಿರಬಹುದೆ?

ಅಥವಾ ಜನರನ್ನು ಒಲಿಸಿಕೊಳ್ಳುವುದಕ್ಕೆಂದೇ ಸರಕಾರ ಯೋಜಿಸಿದ ತಂತ್ರವೆ? ಸಾರ್ವಜನಿಕ ಹಣಕಾಸನ್ನು ಉತ್ಪತ್ತಿಬಾರದಂತೆ ಸತ್ತ ಬಂಡವಳವನ್ನಾಗಿಸುವ ಹವಣಿಕೆಯೆ?

ಇದೇ ಅರ್ಥ ಬರುವ ಪ್ರಶ್ನೆಯನ್ನೇ ರಾಜ್ಯಪಾಲರೂ ಕೇಳಿದ್ದಾರೆ.

ಅದಕ್ಕೆ ಸಮರ್ಪಕವಾದ ಉತ್ತರ ಯಾರ ಬಳಿಯೂ ಇಲ್ಲ. 'ನಿಮಗೆ ಬೇಡ; ಚುನಾವಣೆ ನಡೆಯಲಿ; ನಾವು ಬರುತ್ತೇವೆ; ಎಲ್ಲ ಮುಂದುವರಿಸುತ್ತೇವೆ' ಎಂಬ ಧಾಟಿ.

'ನಮ್ಮ ಹಾದಿಯಲ್ಲಿ ಕಲ್ಲು–ಮುಳ್ಳು ತಂದು ಹಾಕ ಬೇಡಿ' ಎಂದು ರಾಜ್ಯಪಾಲರಿಗೆ ವಿನಂತಿ.

'ರಾಜ್ಯಪಾಲರು ಈ ಸಂಗತಿಯಲ್ಲಿ ಕೈಹಾಕದಂತೆ ತಡೆಯಿರಿ' ಎಂದು ರಾಷ್ಟ್ರಪತಿಗಳಿಗೆ ತಂತಿ.

೧೯೨೪ರ ಒಡಂಬಡಿಕೆಯ ನಿಬಂಧನೆಗಳಿಗೆ ಒಪ್ಪುವುದಾಗಿ ಕರ್ನಾಟಕದ ಪರ ರಾಜ್ಯಪಾಲರು ಸಹಿ ಹಾಕಿದರೆ ಆಕ್ಷಣ ಹಲವು ಸಮಸ್ಯೆಗಳ ಪರಿಹಾರ.

ಕಾವೇರಿಕೊಳ್ಳದ ಯೋಜನೆಗಳಿಗೆ ಕೇಂದ್ರದ ಅಂಗೀಕಾರ, ಆರ್ಥಿಕ ನೆರವು, ಹನ್ನೆರಡು ವರ್ಷಗಳಿಂದಲೂ ನಡೆದು ಬಂದ ಮಹಾಸಮಸ್ಯೆಗೆ ತಮಿಳುನಾಡು ಬಯಸುವ ಉತ್ತರ

ಒಂದು ಮಾತ್ರ ಪ್ರಶ್ನೆ.

ಕಾವೇರಿ ನದೀಕೊಳ್ಳ ಯೋಜನೆಗಳು ನೀರಿನ ಬದಲು ಮರಳನ್ನು ಶೇಖರಿಸ ಬೇಕಾಗುತ್ತವೆ!

ಆದುದರಿಂದ 'ಗಡಿಬಿಡಿ ಬೇಡ'ವೆಂಬ ಕಳಕಳಿ. ಹೇಗೂ ಕರ್ನಾಟಕದ ಜಲ— ನೆಲ ವಿವಾದಗಳು ಸವಕಳಿ.

ಶ್ರೀ ನಿಜಲಿಂಗಪ್ಪ ಮತ್ತವರ ಆಪ್ತರು ಈಯೆರಡು ವಿವಾದಗಳ ಬಲದಿಂದಲೇ ಕರ್ನಾಟಕದಲ್ಲಿ ರಾಜ್ಯಕೀಯ ಸ್ಥಿರತೆಯನ್ನು ಉಳಿಸಿಕೊಂಡರು. ಇಂಡಿಕೇಟ್ ಬಿರುಗಾಳಿಯನ್ನು ಈ ಪರ್ವತಗಳಿಂದಲೇ ಎದುರಿಸ ಬಯಸಿದರು.

ಆದರೆ, ಪರ್ವತಗಳು ನುಚ್ಚುನೂರಾದುವು. ಅಧಿಕಾರ ಮೋಹದ ಮುಂದೆ 'ಆತ್ಮಸಾಕ್ಷಿ'ಯೂ ತೃಣವೆಂದು ಕಂಡು ಬಂತು.

ಶ್ರೀ ವೀರೇಂದ್ರ ಪಾಟೀಲರು ಹಣ್ಣು ಉದುರುವಂತೆ ಉರುಳಿದರು; ನೆಲ–ಜಲ ವಿವಾದ ಮಾತ್ರ ತಲೆಯೆತ್ತಿಯೇ ನಿಂತಿತು.

ಈಗ ರಾಜ್ಯಪಾಲರು ೧೯೨೪ರ ಒಡಂಬಡಿಕೆಯನ್ನು ಸೂಕ್ತ ತಿದ್ದುಪಡಿ ಮಾ

ನವಯುಗದ ಸುವರ್ಣ ಮಹೋತ್ಸವ

ನಿವೇದನೆ

ಇದೇ 1971ನೆಯ ವರ್ಷಕ್ಕೆ, ನಾಡಿನ ಜನಪ್ರಿಯ ಸಾಪ್ತಾಹಿಕ 'ನವಯುಗ' ತನ್ನ ಸಾರ್ಥಕ ಜೀವನದ ಐವತ್ತು ವರ್ಷಗಳನ್ನು ಕಳೆದು ತನ್ನ ಚಿನ್ನದ ಹಬ್ಬದ ವರ್ಷಕ್ಕೆ ಕಾಲಿರಿಸಿದೆ. ಈ ಶುಭ ಸಂದರ್ಭದಲ್ಲಿ ನಾಡಿನ ಸಾರ್ವಜನಿಕ ಅಭಿಪ್ರಾಯದ ಈ ನಿರೂಪಣ ಮತ್ತು ರೂಪಣದಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಪತ್ರಿಕೋದ್ಯಮಿಗಳು, ಲೇಖಕರು ಮತ್ತು ಸರ್ಕಾರದ ಮುಂದಾಳುಗಳನ್ನು ಒತ್ತಟ್ಟಿಗೆ ಸೇರಿಸಿ ಭಾರತೀಯ ಪ್ರಜಾಪ್ರಭುತ್ವದ ಯಶಸ್ಸಿಗಾಗಿ ನಾವು ಇನ್ನೂ ಮಾಡಬೇಕಾದ ಕೆಲಸ, ಹಿಡಿಯಬೇಕಾದ ದಾರಿಯ ಕುರಿತು ಚರ್ಚೆ ನಡೆಸಲು ಅನುಕೂಲ ಕಲ್ಪಿಸುವ ಬಯಕೆ ನಮ್ಮದು "ನವಯುಗ"ದ ಚಿನ್ನದ ಹಬ್ಬ ನಮ್ಮ ರಾಜ್ಯದ ಸರ್ವತೋಮುಖ ಬೆಳವಣಿಗೆಯ ಸೂತ್ರಗಳನ್ನು ಕಂಡುಕೊಳ್ಳಲು ನೆರವಾಗುವಂತೆ ಆ ಹಬ್ಬವನ್ನು ಒಂದು ಸಾಂಸ್ಕೃತಿಕ ಉತ್ಸವವಾಗಿ ಆಚರಿಸಬೇಕೆಂದು ನಾವು ನಿರ್ಧರಿಸಿರುತ್ತೇವೆ. ಈ ಬಗ್ಗೆ ಈಗಾಗಲೇ ಪ್ರಾತಿನಿಧಿಕ ಸಮಾರಂಭ ಸಮಿತಿಯನ್ನು ರಚಿಸಲಾಗಿದೆ.

ನಮ್ಮ ಕೆಲವು ಆಪ್ತ ಸ್ನೇಹಿತರು ಈ ಚಿನ್ನದ ಹಬ್ಬದ ವರ್ಷದಲ್ಲಿ 'ನವಯುಗ'ದ ನವೀಕರಣವೂ ನಡೆಯಬೇಕೆಂದು ಸೂಚಿಸಿದ್ದಾರೆ. ಆಧುನಿಕ ಯುಗಕ್ಕೆ ಹೊಂದಿಕೊಳ್ಳುವ ಲೇಖನ, ಶೀರ್ಷಿಕೆ, ಮತ್ತು ಚಿತ್ರಗಳ ಮೂಲಕ ರಾಜ್ಯದ ಜನತೆಯ ಓದಿಕೆಯ ಹಸಿವನ್ನು ನೀಗಿಸುವ ಆಕರ್ಷಕ ವಿಧಾನಗಳನ್ನು ಅನುಸರಿಸಬೇಕಾಗಿದೆ. ಜನರಲ್ಲಿ ವೈಜ್ಞಾನಿಕ ಮನೋವೃತ್ತಿ ಕುದುರುವಂತೆ ವಿಜ್ಞಾನ ಲೇಖನಗಳ ವ್ಯಾಪ್ತಿಯನ್ನು ಹಿಗ್ಗಿಸಬೇಕಾಗಿದೆ. ಸಾಮಾಜಿಕ ರಾಜಕೀಯ ಪ್ರಶ್ನೆಗಳಿಗೆ ಜನ ಸ್ವತಂತ್ರವಾಗಿಯೂ ವಿವೇಕ ಪೂರ್ಣವಾಗಿಯೂ ಉತ್ತರಿಸುವಂತೆ ಪ್ರೇರಿಸಬೇಕಾಗಿದೆ. ದೈನಂದಿನ ವರ್ತಮಾನಪತ್ರಗಳು ಸುದ್ದಿ ಸಂಗ್ರಹದ ಮೇಲೆ ಹೆಚ್ಚಾಗಿ ಕಣ್ಣಿಟ್ಟಿರುವುದರಿಂದ, ಅಭಿಪ್ರಾಯ ರೂಪಣದ ಕೆಲಸ ಸಾಪ್ತಾಹಿಕಗಳ ಮೂಲಕವೇ ನಡೆಯಬೇಕಾದ ಪ್ರಸಂಗದಲ್ಲಿ ನವಯುಗ ತನ್ನ ಪಾತ್ರವನ್ನು ಹೊಸದಾಗಿ ನಿರ್ಧರಿಸಿಕೊಳ್ಳಬೇಕಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಹೇಗೋ ಹಾಗೆ ಅನಂತರವೂ 'ನವಯುಗ'ವು ತನ್ನತನವನ್ನು ಕಾಯ್ದುಕೊಂಡು ವಿಶಿಷ್ಟ ರೀತಿಯ ಬರವಣಿಗೆಯಿಂದ ತನ್ನ ಸತ್ಯವನ್ನೂ, ಸತ್ವವನ್ನೂ ಕಾಪಾಡಿಕೊಂಡು ಬಂದಿರುವುದನ್ನು ತಾವು ಗಮನಿಸಿರಬಹುದು. ಅನಾಕರ್ಷಕವಾದ ರಾಷ್ಟ್ರೀಯ ಪುನಾರಚನೆಯ ಕಾರ್ಯದಲ್ಲಿ 'ನವಯುಗ' ಆಡಂಬರವಿಲ್ಲದೆ, ಸದ್ದುಗದ್ದಲ್ಲವಿಲ್ಲದೆ ನಡೆಸಿದ ಕರ್ತವ್ಯವನ್ನು ತಾವು ಮೆಚ್ಚಿಕೊಂಡಿರುವಿರೆಂದು ನಮ್ಮ ಭಾವನೆ.

'ನವಯುಗ'ದ ನವೀಕರಣದ ಯೋಜನೆ ಸಾರ್ವಜನಿಕರ ಆರ್ಥಿಕ ಬೆಂಬಲವಿಲ್ಲದೆ ಅಸಾಧ್ಯ. ನವಯುಗದ ಶ್ರೇಯಃಕಾಂಕ್ಷಿಗಳಾದ ತಮ್ಮಂಥವರಿಂದ, ತಮ್ಮ ಸ್ನೇಹಿತ ವರ್ಗದಿಂದ ದೊರೆಯುವ ಸಹಾಯವನ್ನು ನಾವು ಸಂತೋಷದಿಂದ ಸ್ವೀಕರಿಸುತ್ತೇವೆ.

ಇತಿ ಭವದೀಯ

ನವಯುಗ ಆಫೀಸು,
ಉಡುಪಿ.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ-ಸಂಪಾದಕ

ಭುಟ್ಟೋ ಅವರಿಗೇ ತಿರುಮಂತ್ರ

"ವಿಶ್ಲೇಷಕ"

ವಂಗಬಂಧು ಶೇಖ ಮುಜೀಬುರ್, ಬಂಗ್ಲಾದೇಶದ ಸರ್ವಸ್ವ. ಅವರ ಜನಪ್ರಿಯತೆಯನ್ನು ಕಂಡು ಝುಲ್ಫೀಕರ್ ಅಲಿ ಭುಟ್ಟೋರಿಗೆ ಹೊಟ್ಟೆಯಲ್ಲಿ ತಳಮಳ. ಹೇಗಾದರೂ ಮಾಡಿ ಎಂತಾದರೂ ಮಾಡಿ ಅವರು ಪಾಕಿಸ್ತಾನದ ಪ್ರಧಾನ ಮಂತ್ರಿಯಾಗವಂತೆ ಮಾಡಿದರೇ ಸಾಕು. ಅಧಿಕಾರದ ಗದ್ದುಗೆ ಏರಲು ತಮ್ಮ ಹಾದಿ ಸುಗಮ ಎಂದು ಭುಟ್ಟೋ ಭಾವಿಸಿದರು. ಯಾಹ್ಯಾಖಾನರಲ್ಲಿ ತಮ್ಮ ಅಳಲನ್ನು ತೋಡಿಕೊಂಡರು. ರೋಗಿ ಬಯಸಿದ್ದು ಹಾಲೇ ವೈದ್ಯರು ಹೇಳಿದ್ದು ಹಾಲೇ ಎಂದಂತಾಯಿತು. ಇಂತಹ ಬೇಟಿಗಾಗಿಯೇ ಕಾಯುತ್ತಿದ್ದ ಯಾಹ್ಯಾರಿಗೆ ಪರಮಾನಂದವಾಯಿತು. ಶೇಖ ಮುಜೀಬುರ್ ಅಧಿಕಾರಕ್ಕೆ ಬಾರದಂತೆ ಮಾಡಲು ಏನು ಉಪಾಯ? ಎಂದರು. ಭುಟ್ಟೋ ಅವರು ತಮ್ಮ ಕುತಂತ್ರವನ್ನು ಯಾಹ್ಯಾರ ಕಿವಿಯಲ್ಲಿ ಉಸುರಿದರು. ಯಾಹ್ಯಾಖಾನರು ಪೂರ್ವಬಂಗಾಳದಲ್ಲಿ ಇದರಿಂದ ಸಾಕಷ್ಟು ಲಾಭ ಪಡೆದ ಬಳಿಕ, ಭುಟ್ಟೋ ಅವರಿಗೆ ಅಧಿಕಾರ ಕೊಡುವ ಪ್ರಶ್ನೆ ಎದುರಾಯಿತು. ಭುಟ್ಟೋ ಅವರಿಂದ ಕೇಳಿದ ಮಂತ್ರವನ್ನು ಯಾಹ್ಯಾಖಾನರು ಈಗ ಅವರ ಕಿವಿಯಲ್ಲೇ ಊದಿದ್ದಾರೆ. ಪರಿಣಾಮವಾಗಿ ಭುಟ್ಟೋ ಅಧಿಕಾರದ ಆಸೆಯನ್ನು ಕೈಬಿಡಬೇಕಾಗಿದೆ. ಹತಾಶರಾದ ಭುಟ್ಟೋ ಪಶ್ಚಿಮ ಪಾಕಿಸ್ತಾನದಲ್ಲಿ ಸರ್ಕಾರ ರಚನೆಗೆ ಅವಕಾಶ ಕೊಡಬೇಕೆಂದು ಆಕಾಶ-ಪಾತಾಳ ಒಂದುಮಾಡಿ ಬೊಬ್ಬೆ ಹಾಕುತ್ತಿದ್ದಾರೆ. ಮಿಲಿಟರಿ ಆಡಳಿತಗಾರರು ಅವರ ಬೇಡಿಕೆಯನ್ನು ತಿರಸ್ಕರಿಸಿದ್ದಾರೆ. ಮಾತ್ರವಲ್ಲ, ಮಿಲಿಟರಿ ಆಡಳಿತವನ್ನು ಇನ್ನಷ್ಟು ಬಲಪಡಿಸಿ ಭುಟ್ಟೋ ಅವರ ಕಲ್ಪನಾ ಸೌಧದ ಬುಡಕ್ಕೇ ಏಟು ಹಾಕಿದ್ದಾರೆ.

ಅಶಾಂತಿಯ ದಳ್ಳುರಿ

ಪೂರ್ವ ಬಂಗಾಳದಲ್ಲಿ ಆರಂಭವಾದ ಸ್ವಾತಂತ್ರ್ಯ ಹೋರಾಟ ಈಗ ಪಶ್ಚಿಮಕ್ಕೆ ಹಬ್ಬಿದೆ. ಬಂಗ್ಲಾದೇಶದಲ್ಲಿ ಯುದ್ಧ ಆರಂಭವಾದ ಬಳಿಕ ಪಶ್ಚಿಮ ಪಂಜಾಬಿನ ಕೃಷಿ ಕ್ಷೇತ್ರದಲ್ಲಿ ಅಶಾಂತಿ ಉಗ್ರರೂಪತಳೆದ ವರದಿಗಳು ಬಂದಿವೆ ಗೇಣಿದಾರರು ಭೂಮಿಯ ಒಡೆತನದ ಹಕ್ಕುಗಳಿಗಾಗಿ ಹೋರಾಟವನ್ನು ಆರಂಭಿಸಿದ್ದಾರೆ. ಜಾಂಗ್, ಲೈಲಾಪುರ, ಶೇಖುಪುರ ಮತ್ತು ಮುಲ್ತಾನ ನಗರಗಳು ಈಗ ಈ ಅಶಾಂತಿಯ ದಳ್ಳುರಿಯಲ್ಲಿ ಸಿಕ್ಕಿವೆ. ಇದು ಪೋಲೀಸರು ಮತ್ತು ಗೇಣಿದಾರರ ನಡುವೆ ಘರ್ಷಣೆ ಕಾರಣವಾಗಿ ಅನೇಕರು ಪ್ರಾಣಕ್ಕೆ ಎರವಾಗಿದ್ದಾರೆಂದು ಹೇಳಲಾಗುತ್ತಿದೆ. ಪಾಕಿಸ್ತಾನದ ಪತ್ರಿಕೆಗಳು ಈ ಹೋರಾಟವನ್ನು 'ಭೂಗ್ರಹಣ ಚಳುವಳಿ' ಎಂದು ಬಣ್ಣಿಸಿವೆ. ಭುಟ್ಟೋ ಅವರ ಪಕ್ಷದ ಪ್ರಮುಖ ನಾಯಕರು ಈ ಚಳುವಳಿಯಲ್ಲಿ ಧುಮುಕಿದ್ದಾರೆ ದಂಡಿನಾಡಳಿತದವರು, ಪಾಕ್ ರಾಷ್ಟ್ರೀಯ ಅಸೆಂಬ್ಲಿಯ ಸದಸ್ಯರೂ, ಭುಟ್ಟೋ ಅವರ ಪೀಪಲ್ಸ್‌ಪಾರ್ಟಿಯ ಪಂಜಾಬ್ ಶಾಖೆಯ ಮುಖಂಡರೂ ಆದ ಮುಖ್ತಿಯಾರ ರಾಣಾ ಅವರ ಬಂಧನದ ವಾರಂಟ್ ಹೊರಡಿಸಿದ್ದಾರೆ. ಭುಟ್ಟೋ ಅವರ ಪಕ್ಷದ ಇಬ್ಬರು ಪ್ರಾಂತೀಯ ಅಸೆಂಬ್ಲಿ ಸದಸ್ಯರ ಮೇಲೂ, ಹಿಂಸೆಯನ್ನು ಪ್ರಚೋದಿಸಿದರೆಂದು ಆರೋಪ ಹೊರಿಸಲಾಗಿದೆ. ಈ ಎಲ್ಲಾ ಮುಖಂಡರೂ ಈಗ ತಲೆಮರೆಸಿಕೊಂಡಿದ್ದಾರೆಂದು ಹೇಳಲಾಗುತ್ತಿದೆ.

ಒಂದು ತಿಂಗಳೊಳಗಾಗಿ ಕಾನೂನು ಮಾಡದೇ ಹೋದರೇ ಭಾರೀ ಜಮೀನುದಾರರ ಜಮೀನುಗಳನ್ನು ಬಲಪ್ರಯೋಗದಿಂದ ಕಸಿದುಕೊಳ್ಳಲು ಭೂಹೀನ ರೈತರ ಒಂದು ಸಾಮೂಹಿಕ ಆಂದೋಳನವನ್ನು ಆರಂಭಿಸುವುದಾಗಿ ಪೀಪಲ್ಸ್ ಪಾರ್ಟಿಯ ಪಂಜಾಬು ಶಾಖೆ ಬೆದರಿಕೆ ಹಾಕಿದೆ.

ಪಶ್ಚಿಮ ಪಾಕಿಸ್ತಾನದಲ್ಲಿ ದಂಡಿನ ಆಡಳಿತಗಾರರು ಹೊರಡಿಸಿರುವ ದಂಡಿನ ಶಾಸನದ ಕ್ರಮಗಳಿಗೆ ತೀವ್ರ ಪ್ರತಿರೋಧ ಕಂಡುಬರುತ್ತಿದೆ. ದಂಡಿನ ಆಡಳಿತಗಾರರು ಅನೇಕ ಕಾರ್ಮಿಕ ಸಂಘಗಳ ಮುಂದಾಳುಗಳ ಮೇಲೆ ಈಗ ಸುಳ್ಳು ಆರೋಪ ಹೊರಿಸುತ್ತಿದ್ದಾರೆಂದು ಪಾಕ್ ಕಾರ್ಮಿಕ ಸಂಘಗಳ ಮಹಾಮಂಡಳಿಯ ಅಧ್ಯಕ್ಷ ಮಿರ್ಜಾ ಇಬ್ರಾಹಿಂ ಹೇಳಿದ್ದಾರೆ.

ಪಾಕಿಸ್ತಾನಿನ ಕಾರ್ಮಿಕ ಸಂಘಗಳ ಮಹಾಮಂಡಳಿಯ ಉಪಾಧ್ಯಕ್ಷರೂ ಕರಾಚಿ ಹಡಗುಕಟ್ಟೆ ಕೆಲಸಗಾರರ ಸಂಘದ ಮುಖಂಡರೂ ಆದ ಶ್ರೀಮತಿ ಕನೀಜ್ ಫಾತೀಮಾ. ಕರಾಚಿ ಹಡಗುಕಟ್ಟೆಯ ಅಧಿಕಾರಿಯೊಬ್ಬರನ್ನು ಕೊಲೆಮಾಡಲು ಯತ್ನಿಸಿದರೆಂದು ಆರೋಪಹೊರಿಸಿ ದಂಡಿನ ಆಡಳಿತಗಾರರು ಅವರನ್ನು ಬಂಧಿಸಿದ್ದಾರೆ. ಕನೀಜ ಫಾತೀಮಾ ಅವರ ಬಗ್ಗೆ ಮಾಡಲಾಗಿರುವ ಆರೋಪ ಸುಳ್ಳಿನ ಕಂತೆಯೆಂದು ಪಾಕಿಸ್ತಾನದ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಅಭಿಪ್ರಾಯಪಟ್ಟಿದ್ದಾರೆ. ಕನಿಜ ಫಾತಿಮಾ ಅವರ ಮೇಲೆ ಹೊರಿಸಿರುವ ಆಪಾದನೆಗಳನ್ನು ತಕ್ಷಣ ಹಿಂತೆಗೆದುಕೊಳ್ಳದಿದ್ದರೆ ತಾವು ಕೆಲಸ ನಿಲ್ಲಿಸಿ ಅಸಹಕಾರ ಪ್ರಾರಂಭಿಸುವುದಾಗಿ ಕರಾಚಿ ಹಡಗುಕಟ್ಟೆ ಕಾರ್ಮಿಕರ ಸಂಘ ಸೇನಾಧಿಕಾರಿಗಳಿಗೆ ಎಚ್ಚರಿಕೆ ನೀಡಿದೆ.

ಇನ್ನೊಂದು ಬಿರುಗಾಳಿ?

ಈ ಮಧ್ಯೆ ಪಾಕಿಸ್ತಾನಿನ ಜಮಾತ್-ಎ-ಇಸ್ಲಾಮಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾದ ಮಿ: ತುಫೈಲ್ ಅಹ್ಮದ್ ಅವರು 'ಭುಟ್ಟೋ ಪಶ್ಚಿಮ ಪಾಕಿಸ್ತಾನವನ್ನು ಯಾದವೀ ಕಲಹದ ದಳ್ಳುರಿಯಲ್ಲಿ ತಳ್ಳಿದ್ದಾರೆ' ಎಂದು ಆರೋಪ ಹೊರಿಸಿದ್ದಾರೆ. ಭುಟ್ಟೋ ಅವರ ಪೀಪಲ್ಸ ಪಾರ್ಟಿಯ ನಿಯಂತ್ರಣದಲ್ಲಿರುವ 'ಜನ—ರಕ್ಷಕ ಪಡೆ'ಯ ಕಾರ್ಯಚಟುವಟಿಕೆಗಳ ಬಗೆಗೂ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ. ತುಫೈಲ್ ಅಹ್ಮದರ ಹೇಳಿಕೆ; ರಾಜಕೀಯ ಬಿರುಗಾಳಿಯ ಮುನ್ಸೂಚನೆ.

ಭುಟ್ಟೋ ಅವರ ಈ 'ಜನ ರಕ್ಷಕ ಪಡೆಗೆ ಮೆ: ಜ: ಅಕ್ಬರ್‌ಖಾನರು ಮುಖ್ಯಸ್ಥರು. 1947—48ರಲ್ಲಿ ಪಾಕಿಸ್ತಾನ ಕಾಶ್ಮೀರದಲ್ಲಿ ದುರಾಕ್ರಮಣ ಮಾಡಿದಾಗ ಇವರದು ಪ್ರಮುಖ ಪಾತ್ರ. ಮೆ: ಜ: ಅಕ್ಬರ್‌ಖಾನರು ತಮ್ಮ ರಾಜಕೀಯ ಗುರುವಾದ ಭುಟ್ಟೋರಿಗಿಂತ ಒಂದು ಅಡಿ ಮುಂದೆ.

'ಜನತಾ ರಕ್ಷಕಪಡೆ ಭುಟ್ಟೋ ಪೀಪಲ್ಸ್ ಪಾರ್ಟಿ ಅಧಿಕಾರಕ್ಕೆ ಬರುವವರೆಗೂ ಕಾಯುವುದಿಲ್ಲ. ಜಮಾತ್—ಇ—ಇಸ್ಲಾಮಿಯಂತಹ ಎಲ್ಲಾ ಪ್ರತಿಗಾಮಿಗಳನ್ನೂ ಮರಕ್ಕೆ ನೇಣುಹಾಕಿ ಅವರ ನಿರ್ನಾಮ ಮಾಡಲು ನಾವು ಸಮರ್ಥರಿದ್ದೇವೆ' ಎಂದು ಮೆ:ಜ:ಅಕ್ಬರ್‌ಖಾನರು ಹೇಳಿದರೆಂದು ವರದಿಯಾಗಿದೆ. ಪೀಪಲ್ಸ್ ಪಾರ್ಟಿಯನ್ನು ವಿರೋಧಿಸುವವರನ್ನೂ, ಪಶ್ಚಿಮ ಪಾಕಿಸ್ತಾನದಲ್ಲಿ ಭುಟ್ಟೋ ಅವರ ಪ್ರಭುತ್ವವನ್ನು ಪ್ರಶ್ನಿಸುವವರನ್ನೂ ಉಗ್ರವಾಗಿ ದಂಡಿಸುವುದಾಗಿ ಅವರು ಬೆದರಿಕೆ ಹಾಕಿದ್ದಾರೆ. ಈ ಅಗ್ನಿ ಭಕ್ಷಕರ ಹೇಳಿಕೆಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ ಜಮಾತ್—ಇ—ಇಸ್ಲಾಮಿ ಪ್ರಧಾನ ಕಾರ್ಯದರ್ಶಿಗಳು "ಪೂರ್ವ ಬಂಗಾಳದ ರಕ್ತಪಾತಕ್ಕೆ ಬಹುಮಟ್ಟಿಗೆ ಭುಟ್ಟೋ ಪ್ರಭುಗಳೇ'ಕಾರಣವಾಗಿದ್ದಾರೆ. ಬಂಗಾಳದಲ್ಲಿ ಆಡಿದ ಕಪಟ ನಾಟಕವನ್ನು ಅವರು ಈಗ ಪಶ್ಚಿಮದಲ್ಲೂ ಅಭಿನಯಿಸಲು ಯತ್ನಿಸುತ್ತಿದ್ದಾರೆ. ಮೆ. ಜ. ಅಕ್ಬರ್‌ಖಾನರಂತಹ ನಾಯಕರ ಹೇಳಿಕೆಗಳು ಅನಿಷ್ಟಸೂಚಕವಾಗಿದ್ದು ವಿರೋಧಿಗಳ ನಿರ್ಮೂಲನಕ್ಕೆ ಪೀಪಲ್ಸ ಪಾರ್ಟಿಯ ಯೋಜನೆಗಳೇನಿವೆ ಎಂಬುದನ್ನು ಬೆಳಕಿಗೆ ತಂದಿವೆ. ಇಸ್ಲಾಂಪರ ಪಕ್ಷಗಳು ಈ ಬೆದರಿಕೆಗೆ ಸೊಪ್ಪು ಹಾಕುವುದಿಲ್ಲ. ಅವರು ನಮ್ಮ ಮೇಲೆ ಎರಗಿ, ನಮಗೆ ಒಂದು ಏಟುಕೊಟ್ಟರೆ ನಾವು ಎರಡು ಏಟು ಕೊಡುತ್ತೇವೆ ಎಂದು ಘರ್ಜಿಸಿದ್ದಾರೆ.

ಸಿಂಧು ದೇಶದ ಸರತಿ

ಬಂಗ್ಲಾದೇಶದ ಸ್ವಾತಂತ್ರ್ಯ ಘೋಷಣೆಯಿಂದಾಗಿ ಸಿಂಧುಪ್ರಾಂತ ಸ್ಫೂರ್ತಿಪಡೆದಿದೆ. ಸಂಪೂರ್ಣ ಸ್ವಾಯತ್ತತೆಗಾಗಿ ಒತ್ತಾಯವನ್ನು ಮಾಡುತ್ತಿದೆ. ಸಿಂಧು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತಮ್ಮ ಪ್ರಾಂತವನ್ನು ಈಗಾಗಲೇ ಸಿಂಧು ದೇಶ, ಎಂದು ಕರೆಯತೊಡಗಿದ್ದಾರೆಂದು ಪಾಕಿಸ್ತಾನದ ಅತ್ಯಧಿಕ ಪ್ರಸಾರವುಳ್ಳ 'ಜಂಗ್' ದಿನಪತ್ರಿಕೆ ಬರೆದಿದೆ. ಖ್ಯಾತ ವಿದ್ಯಾರ್ಥಿ ನಾಯಕರೊಬ್ಬರು ಜಂಗ್‌ಪತ್ರಿಕಾ ವರದಿಗಾರನೊಂದಿಗೆ ಮಾತನಾಡುತ್ತ 'ಸಿಂಧು ದೇಶ, ಒಂದು ಐತಿಹಾಸಿಕ ಸತ್ಯ. ಅದು ವಿಶ್ವದ ಅತ್ಯಂತ ಪುರಾತನ ಸಂಸ್ಕೃತಿಗಳಲ್ಲೊಂದಾಗಿದೆ' ಎಂದು ಹೇಳಿದ್ದಾರೆ. ಬಂಗ್ಲಾದೇಶದ ಸ್ವಾತಂತ್ರ್ಯ ಹೋರಾಟದಿಂದ ಭಯಭೀತರಾಗಿರುವ ದಂಡಿನ ಆಡಳಿತಗಾರರು ಬಂಗ್ಲಾದೇಶದಂತೆ ಸಿಂಧ ಪ್ರಾಂತ್ಯವೂ ಎಲ್ಲಿ ತಮ್ಮ ಕೈಬಿಡುವುದೋ ಎಂದು ಈಗ ಇನ್ನಷ್ಟು ಭಯಭೀತರಾಗಿದ್ದಾರೆ.

● ●

ಡಿ ಯೋಜನೆಗಳಿಗೆ ಅಂಗೀಕಾರ ಪಡೆಯಲು ಯಶಗಳಿಸಬಲ್ಲರೆ?

ಮಾತುಕತೆಯ ಎಲ್ಲ ಹಂತಗಳನ್ನೂ ಮೆಟ್ಟಿನಿಂತ ಜಲ ವಿವಾದಕ್ಕೆ ಕೇಂದ್ರವೇ ತೀರ್ಪು ಬರೆಯಬೇಕು. ಅದು ಬರೆಯದೆ ಹೋದರೆ, ಇದು ಹೀಗೆಯೇ ಮುಂದುವರಿಯುತ್ತದೆ.

ಅತ್ತ ಯೋಜನೆಗಳು ಮುಂದುವರಿದು ಮುಕ್ತಾಯಗೊಳ್ಳುತ್ತವೆ; ಇತ್ತ ಕಾವೇರಿ ನೀರು ತಮಿಳುನಾಡಿಗೆ ಹರಿಯುತ್ತಲೇ ಇರುತ್ತದೆ.

ಮತ್ತೆ ಯೋಜನೆಗಳು? ಹತ್ತು ಸಾವಿರ ದಶಲಕ್ಷ ಘನ ಅಡಿ ನೀರನ್ನು ಸೆರೆಹಿಡಿದು ಅಲ್ಪತೃಪ್ತಿಯ ನಿಟ್ಟುಸಿರು ಬಿಡುತ್ತ ಧ್ಯಾನಮಗ್ನವಾಗುತ್ತವೆ.

ಇಲ್ಲ. ಒಡಂಬಡಿಕೆಯನ್ನು ಕರ್ನಾಟಕ ಮುರಿಯಲೇ ಬೇಕಾಗುತ್ತದೆ. ಮಾಡಿಕೊಂಡ ಒಡಂಬಡಿಕೆಗಳನ್ನು ಸಮಾಜ-ಕಾಲ ವಿರೋಧಿಯೆಂದು ಭಂಗಗೊಳಿಸಿ ರಾಜಧನಾದಿ ರದ್ದತಿ ಸಾಧಿಸಬಹುದಾದರೆ, ೧೯೨೪ರ ಒಡಂಬಡಿಕೆ ಕರ್ನಾಟಕ ಜನಹಿತ ಮಾರಕವೆಂದು ಏಕೆ ಮೂಲೆಗೆ ತಳ್ಳಬಾರದು?

ಯೋಚನೆಗೊಂದು ಉತ್ತಮ ಆಹಾರವಿದು.

'ನೀನೊಲಿದರೆ ಕಪಿನಿಯುಳಿಯುವಳಮ್ಮ, ನೀನೊಲಿದರೆ, ಹಾರಂಗಿ ನಲಿಯುವುದಮ್ಮ, ನೀನೊಲಿದರೆ ಕನ್ನಡಿಗರು ನೀರುಂಬರಮ್ಮ, ಹೇ ಡಿಲ್ಲೀಶ್ವರೀ ಇಂದಿರಮ್ಮ.'

● ●

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303   2 72304   Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಹರಟೆ

ರಾಜಕೀಯ ಕಾಮಧೇನು– ಚಳುವಳಿ

ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರನ್ನು ಸನ್ಮಾನಿಸುವ ಸಮಾರಂಭವೊಂದರಲ್ಲಿ ರಾಜ್ಯಪಾಲ ಧರ್ಮವೀರರು ಅವರಿಗೆ ದಕ್ಷ ಆಡಳಿತಗಾರ, ಸೇವಾದೀಕ್ಷಿತ, ಕಿರಿಯ ಸೋದರಳಿಯ ಎಂದು ಮುಂತಾಗಿ ಬಿರುದು ನೀಡಿದರು.

ಅವರು ಮತ್ತು ರಾಮಕೃಷ್ಣ ಹೆಗ್ಗಡೆಯವರು ಈ ರಾಜ್ಯಕ್ಕೆ ದೃಢ ಮತ್ತು ಚೈತನ್ಯ ಪೂರ್ಣವಾದ ಆಡಳಿತೆ ನೀಡಿದ್ದಾರೆಂದರು. ಈ ಇಬ್ಬರ ಸೇವೆ ಮುಂದೆಯೂ ರಾಜ್ಯಕ್ಕೆ ಲಭ್ಯವಾಗಲೆಂದು ಹಾರಯ್ಸಿದರು.

ಸತ್ಯವನ್ನೇ ಹೇಳಿದ್ದಾರೆ ಎಂದು ತಲೆದೂಗಿದರು ಕೆಲವರು.

ಶ್ರೀ ಧರ್ಮವೀರರ ಈ ಭಾವನೆ–ಕಾಮನೆಗಳು ವ್ಯಕ್ತಿಗತವಿದ್ದರೇನೇ ಚೆನ್ನಾಗಿತ್ತು. ಒಂದು ರಾಜ್ಯದ ಭಾರವೆಲ್ಲವನ್ನೂ ತನ್ನ ವಯಸ್ಸಾದ ತೋಳುಗಳೆರಡರಲ್ಲಿ ಹೊತ್ತುಕೊಂಡ ಅವರು ಬಹಿರಂಗವಾಗಿ ಪಾಟೀಲ–ಹೆಗ್ಗಡೆಗಳಿಗೆ ಜಿಂದಾಬಾದ್ ಹೇಳುವುದೆಂದರೇನು?

ಮುಂದಿನ ಮಳೆಗಾಲ ದಾಟುತ್ತಲೇ ಚುನಾವಣೆಗಳು ನಡೆಯಲಿರುವಾಗ 'ದಕ್ಷ ಆಡಳಿತಗಾರ'ರೆಂದು ಹೆಸರಾದ ಶ್ರೀ ಧರ್ಮವೀರರು 'ವೀರೇಂದ್ರ–ರಾಮಕೃಷ್ಣರನ್ನು ದಕ್ಷರೆಂದು ಕರೆದು ಅವರ ಪರ ಚುನಾವಣಾ ಭಾಷಣ ಮಾಡಲು ತೊಡಗಿದಂತಾಯಿತಲ್ಲ ಎನ್ನುತ್ತಾರೆ ಕುಡಿಮೀಸೆಯ ಇಂಡಿಕೇಟಿಗರೊಬ್ಬರು.

ನಿಷ್ಪಕ್ಷಪಾತಿಗಳಾಗಿರಬೇಕಾದ ರಾಜ್ಯಪಾಲರು ಈ ಖದೀಮದ್ವಯರನ್ನು ಪ್ರಶಂಸಿಸಿ ಅವರೇ ಗೆದ್ದುಬರಲೆಂದು ಪರೋಕ್ಷವಾಗಿ ಹಾರಯ್ಸುವ ಮೂಲಕ ಸಿಂಡಿಕೇಟಿನ ಪಕ್ಷ ವಹಿಸುವುದು ಯಾವ ನ್ಯಾಯ? ಎಂದರು ಎರಡುಗೂದಲು ನರೆತ ತರುಣರೊಬ್ಬರು.

ಹಠಾತ್ತಾಗಿ ಅನಿರೀಕ್ಷಿತವಾಗಿ ಪಾಟೀಲ ಸಂಪುಟ ಕೊನೆಗೊಂಡ ಬಗ್ಗೆ ಶ್ರೀ ಧರ್ಮವೀರರು ವಿಷಾದವನ್ನು ವ್ಯಕ್ತಪಡಿಸಿದ್ದು ಬರಿಯ ಪಕ್ಷಪಾತತನ; ಇದಕ್ಕೆಲ್ಲಾ ರಾಜಕೀಯ ಗಾಳಿಯೇ ಕಾರಣವೆಂದು ಇಂಡಿಕೇಟನ್ನು ಬೊಟ್ಟುಮಾಡಿದ್ದು ಸರಿಯಲ್ಲ ಎಂದರು. ಇಂಡಿಕೇಟಿಗೆ ಲಾಗಾಂತರ ಹಾಕಿದ ಮಾಜಿ ಶಾಸಕರೊಬ್ಬರು.

'ಏನಾಯ್ತು? ಇದಕ್ಕೆಲ್ಲ ಯಾರನ್ನೂ ದೂರುವಂತಿಲ್ಲ' ಎಂದು ಸಿಮ್ಮ ಲಾಗಾಂತರವನ್ನೂ ಸಮರ್ಥಿಸಿದ್ದಾರಲ್ಲಾ ಅಂದರೊಬ್ಬರು ಹಳೆ ಹುಲಿ ಇಂಡಿಕೇಟಿಗರ ಆಶ್ಚರ್ಯ.

ಅಂದ ಹಾಗೆ ಲಾಗಾಂತರಕ್ಕೆ ಉತ್ತೇಜನ ನೀಡಿ, ಮುಖ್ಯಮಂತ್ರಿಯಾಗುವ ಕನಸನ್ನು ಕಂಡೇ ತೃಪ್ತರಾದ ಸಿದ್ಧವೀರಪ್ಪಾದಿಗಳನ್ನು ಉಚ್ಚಾಟನೆ ಮಾಡಬೇಕು ಎಂದು ಇಂಡಿಕೇಟಿನಲ್ಲಿ ಒಂದು ಗುಂಪು ಹೇಳುತ್ತಿದೆಯಂತೆ. ಅವರು ಅಧಿಕಾರಲಾಲಸಿ, ಪಕ್ಷದ್ರೋಹಿ ಎಂದು ಮರೆಯಲ್ಲೇ ಮೊರೆಯಿಡುತ್ತಿದೆಯಂತೆ.

ಶಾಲೆಯಲ್ಲಿ ಮೇಸ್ತ್ರರು ಬೆಂಚಿನ ಮೇಲೆ ನಿಲ್ಲಿಸಿದರಂತೆ ಆ ಹತ್ತು ವಯಸ್ಸಿನ ಹೈದನನ್ನು. ಹುಚ್ಚಾಭಿಮಾನಿ ಅವನಿಗೆ ಅಪಮಾನವಾಗದಿದ್ದೀತೆ? ದೂರದಲ್ಲೇ ಬರುತ್ತಿದ್ದ ಎತ್ತರ ಶಾಲೆಯ ಭೀಮು ದೋಸ್ತಿ ಮಾಡಿದ- ಹೊಟ್ಟೆಬಾಕನಿಗೆ ಮೇಸ್ತರ ನಾಲ್ಕು ತೆಂಗಿನ ಮರಗಳನ್ನು ತೋರಿಸಿದ. ಮಾಡಿದ ತಪ್ಪಿಗೆ ಮೇಸ್ತರಿಗೆ ಶಿಕ್ಷೆಯೂ ಆಯ್ತು. ಮನೆಯ ಸೂರು ಮುರಿಯಿತು; ಎಳೆ ಬೊಂಡ ಖಾಲಿಯಾಯ್ತು. ಭೀಮು ಮತ್ತವನ ನಾಲ್ವರು ಸಹಾಯಕರು ಪಂಚಪಾಂಡವರಾಗಿ ಭೀಷ್ಮ ಗರ್ವ ಭಂಗ ಮಾಡೇ ತೀರಿದರು. ಹೈದ ಕೃಷ್ಣನಾಗಿ ದೂರದಲ್ಲೇ ನಿಂತು ನೋಡಿ ತಾಳಿ ಬಡಿಯುತ್ತಿದ್ದ.

ತನಗಾಗದವರ ಮೇಲೆ ಸೇಡು ತೀರಿಸಲು ಭಾರಿ ಸುಲಭ. ಸಿದ್ಧವೀರಪ್ಪನವರ ಬಾಯಿಗೆ ಬಿದ್ದ ರೊಟ್ಟಿಯನ್ನು ನುಂಗದಂತೆ ತಡೆದವರು ಯಾರು? ದೇವರಾಜ ಅರಸು ಎಂದು ಗೊತ್ತು. ಆದರೆ, ಈ ಅರಸು 'ಯುವಕ' ಕಪಿ ಪಡೆಯನ್ನು ಛೂಬಿಟ್ಟದ್ದನ್ನು ಮರೆಯ ಬಹುದೆ? ಮೈಸೂರಲ್ಲಿ ಸಂಪುಟ ರಚನೆಗೆ ಅವಕಾಶ ಕೊಡಬಾರದೆಂದು ಧರಣಿ ಕುಳಿತಿತು ಈ ಸೇನೆ. ಯುವಕರೆಂದು ಕರೆಯಲ್ಪಡುವವರು ಹಿರಿಯರೆಂದು ಹೇಳಲ್ಪಡುವವರ ಮೇಲೆ ಯಾವಾಗಲಾದರೂ ಯಾಕಾಗಿಯಾದರೂ ಆಕ್ರಮಣ ಮಾಡಬಹುದು ಇದನ್ನು ಇಂದಿರಾ ಗಾಂಧಿಯೇ ಸಿದ್ಧಿಸಿ ತೋರಿಸಿರುವಾಗ ಸಿದ್ಧವೀರಪ್ಪನವರದ್ದೇನು ಮಹಾ?

ದೇವರಾಜ ಅರಸರೂ ಇದನ್ನೇ ಯೋಚಿಸುತ್ತಾರೆ. ಚುನಾವಣೆಗಳಿಗೆ ಟಿಕೇಟು ದಾನಿ ತಾನಾದದ್ದರಿಂದ ನಿಜಲಿಂಗಪ್ಪ ವಿರೋಧವನ್ನು ಸಾಧಿಸಿ ಅದರ ಫಲವನ್ನುಣ್ಣಲೇ ಬೇಕು. ಅದಕ್ಕೆ ತಕ್ಕಂತೆ ನಡೆದುಕೊಳ್ಳಬೇಕು. ನೊಂದ ಸಿದ್ಧವೀರಪ್ಪನವರ ಉಚ್ಚಾಟನೆಯಿಂದ ತನ್ನ ಕಾರ್ಯ ಸಿದ್ಧಿಯಾಗುವುದಾದರೆ ಯಾಕಾಗಬಾರದು? ಮುರಿದ ಮಡಕೆಯನ್ನೆಸೆದು ಬಿಡುವುದೇ ಸರಿ.

ಅಂತಲೇ ಸಿದ್ಧವೀರಪ್ಪೋಚ್ಚಾಟನಾ ಚಳುವಳಿ ತೀವ್ರವಾಗಬಹುದು. ಶಾಲೆ, ಕಾಲೇಜುಗಳಿಗೆಲ್ಲ ರಜಾ ಆದದ್ದರಿಂದ ಕಪಿದಂಡು ಬೆಳೆಯಲು ಮನವೊಲಿಸುವ ತ್ರಾಸ ಪಡಬೇಕಾಗಿಲ್ಲ.

ಇಂದು ಸಿದ್ಧವೀರಪ್ಪನವರಿಗೆ ಬಂದದ್ದು ನಾಳೆ ದೇವರಾಜ ಅರಸರಿಗೂ ಆಗಬಹುದು; ಇನ್ನಾರಿಗಾದರೂ ನಡೆಯ ಬಹುದು. ಏನಾದರೂ ಮಾಡುತ್ತಿರಬೇಕೆನ್ನುವವರಿಗೆ ಚಳುವಳಿಯೊಂದೇ ಕಾಮಧೇನು.

'ರಾಜ್ಯಪಾಲ ಧರ್ಮವೀರರು ಧರ್ಮ ತಪ್ಪಿ ವೀರೇಂದ್ರರ ಪರ ಮಾತಾಡಿದ್ದಾರೆ; ಅವರು ರಾಜ್ಯಪಾಲರಾಗಿರಲು ನಾಲಾಯಕ್ಕು' ಎಂದು ಅವರ ಉಚ್ಚಾಟನೆಗೇ ಚಳುವಳಿ ಹೂಡಿದರೆ ಸರಕಾರಿ ನೌಕರರ ಬಹುಮುಖಿ ಬೆಂಬಲವೂ ದೊರೆಯ ಬಹುದು.

● ●

ಈಶ್ವರನು ಕೇವಲ ಮಾನವತೆಯಲ್ಲಿಯೆ ವ್ಯಾಪ್ತನಿಲ್ಲ. ಆದರೆ ನಾವು ಮಾನವತೆಯಲ್ಲಿಯೂ ಈಶ್ವರನನ್ನು ಹೊಂದಬೇಕು.

(ಅರವಿಂದ)



davp 70/641

ಭಾರತದ ಪ್ರಗತಿಗೆ
ವಿಶ್ವ ಆಹಾರ ಸಂಸ್ಥೆಯ ವಿಶೇಷ ಕೊಡುಗೆ

ಭಾರತ ವಿಶ್ವಸಂಸ್ಥೆಯ ಆಹಾರ ಮತ್ತು ಬೇಸಾಯ ಸಂಸ್ಥೆಯ ಸ್ಥಾಪಕ ಸದಸ್ಯರಾಷ್ಟ್ರಗಳಲ್ಲಿ ಒಂದು. ಈ ಸಂಸ್ಥೆಯ ಮೂಲಕ ಭಾರತವು ಅಭಿವೃದ್ಧಿಶೀಲ ರಾಷ್ಟ್ರಗಳ ಹಕ್ಕುಬಾಧ್ಯತೆಗಳಿಗಾಗಿ ಹೋರಾಡಿದೆ. ಇದರ ವಾರ್ಷಿಕ ಬಜೆಟ್‌ನಲ್ಲಿ ನೂರರಲ್ಲಿ 2·23 ಭಾಗವನ್ನು ಭಾರತವು ಒದಗಿಸುತ್ತದೆ. ಭಾರತ 1970-71ರಲ್ಲಿ ಸುಮಾರು 56 ಲಕ್ಷ ರೂಪಾಯಿಗಳನ್ನು ಈ ಸಂಸ್ಥೆಗೆ ವಂತಿಕೆಯಾಗಿ ನೀಡಿದೆ. ಇದರಿಂದಾಗಿ ಭಾರತ ಏಷ್ಯಾದಲ್ಲಿ ವಂತಿಕೆ ನೀಡುವ ರಾಷ್ಟ್ರಗಳಲ್ಲಿ ಎರಡನೇ ಸ್ಥಾನವನ್ನು ಪಡೆದಿದೆ.

ಏಷ್ಯಾ ಮತ್ತು ಆಫ್ರಿಕಾ ಖಂಡಗಳಲ್ಲಿ ವಿಶ್ವಸಂಸ್ಥೆ ಕೈಗೊಂಡಿರುವ ಆರ್ಥಿಕ ಅಭಿವೃದ್ಧಿ ಕಾರ್ಯಗಳಲ್ಲಿ ಭಾರತದ 130 ತಜ್ಞರು ಸೇವೆ ಸಲ್ಲಿಸುತ್ತಿದ್ದಾರೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ತಜ್ಞರಿಗೆ ಭಾರತ ವಿಶೇಷ ತರಬೇತಿ ಸೌಲಭ್ಯಗಳನ್ನು ನೀಡಿದೆ. ಭಾರತದ ಅಧಿಕಾರಿಗಳು ಈ ಸಂಸ್ಥೆಯ ಕಾರ್ಯಸಮಿತಿಯ ಸದಸ್ಯರಾಗಿದ್ದಾರೆ. ಈ ಸಮಿತಿ ಆಹಾರ ಮತ್ತು ಬೇಸಾಯ ಸಂಸ್ಥೆಯ ಯೋಜನೆ ಮತ್ತು ಬಜೆಟ್ ಇವುಗಳನ್ನು ರೂಪಿಸುತ್ತದೆ.

ಭಾರತ, ಈ ಸಂಸ್ಥೆಯ ತಾಂತ್ರಿಕ ನೆರವು ವಿಭಾಗದಿಂದ 17 ಯೋಜನೆಗಳಿಗೆ, 1[illegible] ಕೋಟಿ ರೂಪಾಯಿಗಳ ನೆರವನ್ನು ಪಡೆದಿದೆ. ಬೇಸಾಯ ಮತ್ತು ಆಹಾರ ಸಂಸ್ಥೆ ಮತ್ತು ಅಂತರ ರಾಷ್ಟ್ರೀಯ ಪುನಃರಚನೆ ಮತ್ತು ಅಭಿವೃದ್ಧಿ ಬ್ಯಾಂಕು ಇವುಗಳ ಸಂಯುಕ್ತ ಕಾರ್ಯಯೋಜನೆಯಲ್ಲಿ ಬೀಜ ಉತ್ಪಾದನೆ, ಅಂತರ್ಜಲ ಅಭಿವೃದ್ಧಿ, ಯಾಂತ್ರೀಕರಣ ಹಾಗೂ ಬೇಸಾಯ ಸಾರಿಗೆ ಇವುಗಳಿಗಾಗಿ ಭಾರತಕ್ಕೆ 77 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಬೇಸಾಯ ಮತ್ತು ಆಹಾರ ಸಂಸ್ಥೆಯ ಆಹಾರ ವಿಷಯದಲ್ಲಿ ಸ್ವಾವಲಂಬನೆ ಯೋಜನೆ ಅನ್ವಯ ಕೈಗೊಳ್ಳುತ್ತಿರುವ ರಾಸಾಯನಿಕ ಗೊಬ್ಬರ ಪೂರೈಕೆಯ ಮೂರು ಯೋಜನೆಗಳನ್ನು ಭಾರತದಲ್ಲಿ ಕಾರ್ಯಾರಂಭಮಾಡಲಾಗಿದೆ.

ಬೇಸಾಯ ಮತ್ತು ಆಹಾರ ಸಂಸ್ಥೆಯು, ಡಬ್ಲ್ಯು. ಎಫ್. ಪಿ. ಸಂಸ್ಥೆಯಿಂದ ನೆರವು ಪಡೆದ ರಾಷ್ಟ್ರಗಳಲ್ಲಿ ಭಾರತ ಒಂದು. ಈ ಸಂಸ್ಥೆ ಈಗಾಗಲೇ ಭಾರತಕ್ಕೆ 90 ಕೋಟಿ ರೂಪಾಯಿಗಳ ನೆರವು ನೀಡಿದೆ. ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಳಿಗಾಗಿ 24 ಯೋಜನೆಗಳನ್ನು ಮಂಜೂರು ಮಾಡಿದೆ. ಮುಂಬಯಿ, ಕಲ್ಕತ್ತ, ದೆಹಲಿ, ಮತ್ತು ಮದರಾಸು ಈ ನಗರಗಳ ಜನತೆಗೆ ನಿರಂತರವಾಗಿ ಹಾಲು ಮತ್ತು ಬೆಣ್ಣೆ ಇವುಗಳನ್ನು ಪೂರೈಸಲು ಇತ್ತೀಚೆಗೆ ಕೈಗೊಂಡಿರುವ ಯೋಜನೆಗಳಿಗಾಗಿ, ಈ ಸಂಸ್ಥೆಯಿಂದ ನೆರವನ್ನು ಪಡೆಯಲಾಗಿದೆ. 1969ರಲ್ಲಿ ಆಹಾರ ಮತ್ತು ಬೇಸಾಯ ಸಂಸ್ಥೆಯು, ಭಾರತದ ಏಳು ಯೋಜನೆಗಳಿಗಾಗಿ 2.13 ಲಕ್ಷ ರೂಪಾಯಿಗಳ ನೆರವನ್ನು ನೀಡಿದೆ. ಆಹಾರ ಸ್ವಾವಲಂಬನೆ ದೃಷ್ಟಿಯಿಂದ ಕೈಗೊಂಡಿರುವ 105 ಯೋಜನೆಗಳಿಗೆ ಸುಮಾರು 6.5 ಕೋಟಿ ರೂಪಾಯಿಗಳ ನೆರವನು ಭಾರತವು ಈ ಸಂಸ್ಥೆಯಿಂದ ಪಡೆಯುವುದು. ಈ ಹಣದಲ್ಲಿ ಅಧಿಕಾಂಶ ಪರಸ್ಪರ ಸಂಪನ್ಮೂಲಗಳಿಂದ ಲಭ್ಯವಾಗುತ್ತವೆ.

● ●

ಧರ್ಮಸ್ಥಳದಲ್ಲಿ
ಜಿಲ್ಲಾ ಪ್ರಾಥಮಿಕ ಶಿಕ್ಷಣ ಸಮ್ಮೇಳನ

ತಾ. ೧೭-೪-೭೧ರಂದು ಶ್ರೀ ಕ್ಷೇತ್ರ ಧರ್ಮಸ್ಥಳದ ವಸಂತ ಮಹಲಿನಲ್ಲಿ ಏರ್ಪಡಿಸಿದ್ದ ಎರಡು ದಿನಗಳ ದ. ಕ. ಜಿಲ್ಲಾ ಪ್ರಾಥಮಿಕ ಶಿಕ್ಷಣ ಸಮ್ಮೇಳನವನ್ನು ಉಡುಪಿ ಎಂ.ಜಿ.ಎಂ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ವಿದ್ಯಾಖಾತೆಯ ಡೈರೆಕ್ಟರ್ ಶ್ರೀ ಎಸ್. ವಿ. ಜೇವೂರ್ ಉದ್ಘಾಟಿಸಿದರು.

ಆರಂಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಸ್ವಾಗತಿಸಿ ನಮ್ಮ ಪ್ರಾಥಮಿಕ ಶಿಕ್ಷಣ—ಶಿಕ್ಷಕರ ಸಮಸ್ಯೆಯನ್ನು ಪರ್ಯಾಲೋಚಿಸುವ ಅಗತ್ಯವಿದೆಯೆಂದೂ ಇಂದಿನ ವಿದ್ಯಾಮಟ್ಟದ ಕುಸಿಯುವಿಕೆಗೆ ಕಾರಣರಾರು ಎಂಬುದನ್ನು ಸಾಪಿಂದು ವಿಚಾರಿಸಿ ಚರ್ಚಿಸಬೇಕೆಂದೂ ಸಲಹೆನೀಡಿದರು.

ಶ್ರೀ ಜೇವೂರ್‌ರವರು ಉದ್ಘಾಟನಾ ಭಾಷಣಮಾಡುತ್ತಾ, ಸಮಾಜ ಮುಂದೆ ಬಂದು ಉಪಾಧ್ಯಾಯರುಗಳನ್ನು ಗೌರವಿಸಿದರೆ ಶಿಕ್ಷಣ ಮುಂದೆ ಬರಲು ಸಾಧ್ಯ ಎಂದರು. ಜಿಲ್ಲೆಯ ಸುಮಾರು ೪೩ ಲಕ್ಷ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಸರಕಾರ ನಡೆಸುತ್ತಿರುವ ಕಾರ್ಯಗಳನ್ನು ವಿವರಿಸಿದರು.

ಶ್ರೀ ಕು. ಶಿ. ಹರಿದಾಸ ಭಟ್ಟರು ತಮ್ಮ ಅಧ್ಯಕ್ಷ ಭಾಷಣ ಮಾಡುತ್ತಾ ಪ್ರಾಥಮಿಕ ಶಿಕ್ಷಣ ಪದ್ಧತಿಯಲ್ಲಿ ಯಾವುದೊಂದೂ ಸುಧಾರಣೆಯೂ ಕಂಡು ಬರುವುದಿಲ್ಲ. ಶಿಕ್ಷಣ ಶಿಕ್ಷಾಚಾರದ ವಿಷಯದಲ್ಲಿ ಬುದ್ಧಿಯ ಹೃದಯದ ವಿಷಯ. ಇದನ್ನು ಚೆನ್ನಾಗಿ ತಿಳಿದುಕೊಂಡು ಶಿಕ್ಷಣದ ಸುಧಾರಣೆಗೆ ಕೈಹಾಕ ಬೇಕೆಂದವರು ವಿವರಿಸಿದರು.

ಅಂತ್ಯದಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ಕೆ. ಎಂ. ಆಳ್ವರು ಧನ್ಯವಾದ ಸಮರ್ಪಿಸಿದರು.

ಸಮ್ಮೇಳನ ಸಮಾರೋಪ

ಸಮಾರೋಪ ಸಮಾರಂಭದ ಅಧ್ಯಕ್ಷ, ಮೈಸೂರು ವಿಭಾಗದ ವಿದ್ಯಾಂಗ ಜಂಟಿ ಡೈರೆಕ್ಟರ್ ಎಸ್. ಮಂಜಯ್ಯನವರು ಮಾತನಾಡುತ್ತಾ, ಶಿಕ್ಷಕರ ಸಹನೆಯನ್ನು ಅಗ್ನಿ ಪರೀಕ್ಷೆಗೆ ಒಳಪಡಿಸುವುದರಿಂದ ಸಮಾಜದ ಅಸ್ತಿತ್ವಕ್ಕೆ ಹಾನಿಯಿದೆ ಎಂದೂ ಶಿಕ್ಷಕರ ಸಮಸ್ಯಾ ಪರಿಹಾರಕ್ಕೆ ನೇರವಾಗಿ ಅಧಿಕಾರಿಗಳನ್ನೇ ನೋಡಿ—ನಾವಿಬ್ಬರೂ ಒಂದೇ ರಥದ ಗಾಲಿಗಳು ಎಂದೂ ಹೇಳಿದರು.

ಮಂಗಳೂರು ವಿಭಾಗದ ಡಿ.ಡಿ.ಪಿ.ಐ. ಶ್ರೀಮತಿ ರುಕ್ಮಿಣಿ ಅಮ್ಮನವರು ಸಮ್ಮೇಳನದ ಸಮಾರೋಪ ಭಾಷಣ ಮಾಡಿದರು. ಕೆಲವರು ವಿವಿಧ ವಿಷಯಗಳ ಕುರಿತು ಲೇಖನಗಳನ್ನು ಓದಿದರು. ಶಿಕ್ಷಕ ಸಂಘಟನೆಯ ಕುರಿತು ಕೆಲವರು ಭಾಷಣವಿತ್ತರು.

ಆರಂಭದಲ್ಲಿ ಸ್ವಾಗತ ಸಮಿತಿಯ ಉಪಾಧ್ಯಕ್ಷ ಪ್ರಿನ್ಸಿಪಾಲ್ ಶ್ರೀ ಎಸ್. ಪ್ರಭಾಕರ್ ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಕೆ. ಭೋಜರಾಜ ಶೆಟ್ಟರು ಸಂದೇಶಗಳನ್ನೋದಿದರು. ಸಹ ಕಾರ್ಯದರ್ಶಿ ಶ್ರೀ ಕೇಶವ ಶೆಟ್ಟಿಗಾರರು ಧನ್ಯವಾದ ಅರ್ಪಿಸಿದರು.

ಸಮ್ಮೇಳನದ ಯಶಸ್ಸಿಗೆ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ವೀರೇಂದ್ರ ಹೆಗ್ಗಡೆಯವರು ಕಾರಣರಾಗಿದ್ದರು.

● ●

ಅತ್ಯಕಳಭಾವ ಪದ್ದಕ್ಕ ಶೆಡ್ತಿರ ನಿಧನ

ಕಣಂಜಾರ್ ಪಟೇಲ್ ದಿವಂಗತ ಅಚ್ಚಣ್ಣ ಹೆಗ್ಗಡೆಯವರ ಧರ್ಮಪತ್ನಿ ಅತ್ಯಕಳಭಾವ ಶ್ರೀಮತಿ ಪದ್ದಕ್ಕ ಶೆಡ್ತಿಯವರು ೮೦ನೇ ವರ್ಷದಲ್ಲಿ ತಾ. 26-4-71ರಂದು ಸ್ವರ್ಗಸ್ಥರಾದರು. ಮೃತರು ಅತ್ಯಕಳಭಾವದ ಹಿರಿಯ ಬಂಟ ಮನೆತನದವರಾಗಿದ್ದು, ದೈವ ಧರ್ಮನಿಷ್ಠೆಯಾಗಿದ್ದು, ತಮ್ಮ ಅಪಾರ ಬಂಧುವರ್ಗದವರ ಪ್ರೀತಿ ಆದರಗಳಿಗೆ ಪಾತ್ರರಾಗಿದ್ದರು. ದಿವಂಗತೆಯವರಿಗೆ ನಾಲ್ಕು ಗಂಡು ಮೂರು ಹೆಣ್ಣು ಮಕ್ಕಳು.

ಲಂಚಾಸುರ ಸಂಹಾರ
ಸರಳ ಸೂತ್ರ

(ನಾಲ್ಕನೇ ಪುಟದಿಂದ)

ರುಕೊತನ—ನೆರೆಯ ನೀರು-ದಿಂದ ಅನಾಹುತ....”

“ಅಂದ್ರೆ ನೀನನ್ನುವುದೆಂದ್ರೆ ರಾಜ್ಯಪಾಲರು ಮೂಕ ಗೊಂಬೆಯಾಗೇ ಉಳಿಯಬೇಕೂಂತ....’

‘ಹಾಗಲ್ಲಾರಿ. ನೋಡಲಿ. ಆದರೆ, ಪ್ರಜಾಸತ್ತೆ ಮಾಡಿದ್ದನ್ನು ಅವರ್ಯಾಕೆ ಮಾಡಬೇಕು?’

‘ಒಮ್ಮೆ ಮಾಡಿದ್ದನ್ನು ಮತ್ತೊಮ್ಮೆ ಮಾಡಲೇನಿದೆ?’

‘ಏನಿದೆ ಅಂದರೆ? ಸಬ್‌ಡಿವಿಜನ್ ಮಟ್ಟದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಮುಂದುವರಿಯಲು ನಾಲಾಯಕ್ಕೂಂತ ವರದಿ ಕೊಡೋಕೊಂದು ಸಮಿತಿ ಮಾಡಲಿಲ್ಲ?”

‘ಹ್ಞೂ ಇದೊಳ್ಳೇ ಭೇಷಾಯ್ತು...’

‘ಮತ್ತೆ ರಾಜ್ಯಪಾಲರು ಹಾಗೆಲ್ಲ ಕೆಲಸ ಸಾಧಿಸುತ್ತ ಹೋದರೆ ಪ್ರಜಾಸತ್ತೆ ಹೇಗೆ ಉಳಿಯಬೇಕು? ಹಿಟ್ಲರಿಜಂ ಆಗೋಲ್ಲವೇ ಅದು?’

“ಹ್ಞೂಂ.... ಆಯ್ತಮ್ಮ, ಸಾಕು.’

“ಏನು ಸಾಕು?’

‘ಮಾತು. ಗಂಟೆ ಆಗ್ಲೇ ಹನ್ನೊಂದು. ಯಾರ್ಯಾರೋ ಹೊಡ್ದಾಡಿದ್ರೂಂತ ನಾನ್ಯಾಕೆ ಪಟ್ಟಿಕೊಳ್ಬೇಕು?’

‘ಮತ್ತೆ........’

‘ಮತ್ತೆ........’

—ಗೋರಾ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 5/1970

ವಾದಿ— S.J.D.ಸೋಜ

ಪ್ರತಿವಾದಿರು— ಎಲ್ಲನ್ ಫೆರ್ನಾಂಡಿಸ್ ಕೂಡಾ

ಬೊಂಬಾಯಿ ಶಹರು ಬಾಟ್ಲಿವಾಲಾ ಬ್ಲೋಕ್ಸ್, ಮೌಂಟ್ ರೋಡ್ ಮಜಗಾಂವ್‌ನಲ್ಲಿರುವ ಜೆ. ಆ. ಫೆರ್ನಾಂಡಿಸರ ಹೆಂಡ್ತಿ ಕೊನ್ಸಿಕಾ ಫೆರ್ನಾಂಡಿಸ್। J. R. ಫೆರ್ನಾಂಡಿಸರ ಮಕ್ಕಳು ಬೆಂಜಿಲ್ ಫೆರ್ನಾಂಡಿಸ್। ಎರಿಕ್ ಫೆರ್ನಾಂಡಿಸ್। ಪಿ. ಎ. ಫೆರ್ನಾಂಡಿಸರ ಮಗ ಕ್ವೆಂಟಿನ್ ಫೆರ್ನಾಂಡಿಸ್। ಕುಂದಾಪುರ ಕಸ್ಬಾಗ್ರಾಮದ ಖಾರ್ವಿಕೇರಿಯಲ್ಲಿರುವ J.R. ಫೆರ್ನಾಂಡಿಸರ ಮಗಳು ಸಿಂತಿಯಾ ಡಿ. ಕ್ರೂಜ್। ಕೂಡಾ ಜನರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ,

1ನೇ ಪ್ರತಿವಾದಿಯ ಸಹೋದರ ಮೃತ F. X. M. ಫೆರ್ನಾಂಡಿಸರು ವಾದಿಗೆ ತಾ. 26-9-67ರಲ್ಲು ರೂಪಾಯಿ 1500-00ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಅಸ್ಲು ಬಡ್ಡಿ ಹಣಗಳನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ಹಾಕ್ಲು ಮಾಡಿದ ಮೇಲಿನ ದಾವೆಯು ತಾ. 26-5-1971ಕ್ಕೆ ತನ್ಸಿಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ವಾಬೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

By order
(Sd) G. V. AITHAL
Advocate for Plff.
Date 13-3-1971. Coondapoor

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕೊಲಿಟಿಯಲ್ಲಿ, ಸ್ಯಾಜಿನಲ್ಲಿ, ಕ್ರಮದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ವಿಜಯ ಬ್ಯಾಂಕ್ ಲಿಮಿಟೆಡ್

(ಮೊದಲನೇ ಪುಟದಿಂದ)

ವೇತನಪಟ್ಟದ ಮೇಲೆ ಅವಲಂಬಿತವಾಗಿದೆ. ಏರುತ್ತಿರುವ ವೇತನಪಟ್ಟವು ನಮ್ಮ ಖರ್ಚು ವೆಚ್ಚಗಳನ್ನು ಹೆಚ್ಚಿಸಬಹುದು ಮತ್ತು ಇದು 1971ರಲ್ಲಿ ನಮ್ಮ ಆದಾಯವನ್ನು ಹ್ರಸ್ವಗೊಳಿಸುವ ಬೆದರಿಕೆಯನ್ನೊಡ್ಡಬಹುದು.

ಸಿಬಂದಿ ಮತ್ತು ತರಬೇತಿ

1969ರ ದಶಂಬರದಲ್ಲಿ 1160ರಷ್ಟಿದ್ದ ನೌಕರರ ಸಂಖ್ಯೆಯು 1970ರ ದಶಂಬರದ ವೇಳೆಗೆ 1462ಕ್ಕೇರಿದೆ. ನಮ್ಮ ಸಿಬ್ಬಂದಿಗಳ ತರಬೇತಿಗೆ ನಾವು ಹೆಚ್ಚಿನ ಗಮನ ನೀಡುವುದಾಗಿ ನಮ್ಮ ಹಿಂದಿನ ಹೇಳಿಕೆಗಳಲ್ಲಿ ತಿಳಿಸಿರುವೆವು. ತರಬೇತಿ ಹೊಂದಿದ ಸಿಬಂದಿಗಳ ಅಭಾವವು ಎಲ್ಲ ಬ್ಯಾಂಕುಗಳ ಸಾಮಾನ್ಯ ಸಮಸ್ಯೆಯಾಗಿದೆ. ಹೆಚ್ಚಿನ ಬ್ಯಾಂಕುಗಳು ತಮ್ಮದೇ ತರಬೇತಿ ಸಂಸ್ಥೆಗಳನ್ನು ಹೊಂದಿವೆ. 1970ನೇ ಅಕ್ಟೋಬರಿನಿಂದ ನಾವೊಂದು ಸಿಬ್ಬಂದಿ ತರಬೇತಿ ಸಂಸ್ಥೆಯನ್ನು ಸ್ಥಾಪಿಸಿದ್ದು, ಈ ಸಂಸ್ಥೆಯನ್ನು ಸಿಬಂದಿ ತರಬೇತಿ ಸಂಸ್ಥೆ ಮಾತ್ರವಲ್ಲದೆ ಸೂಕ್ತ ಸಮಯದಲ್ಲಿ ಆಡಳಿತೆಗೆ ಸಂಬಂಧಿಸಿದ ಅಧ್ಯಯನ ಮತ್ತು ಸಂಶೋಧನೆಯ ವ್ಯವಸ್ಥೆ ಮಾಡುವ ಮಹತ್ವಾಕಾಂಕ್ಷಿ ಕಾರ್ಯಕ್ರಮವಿದೆ. ಅಲ್ಲದೆ, ಮೊದಲಿನ ವರ್ಷಗಳಲ್ಲಿದ್ದಂತೆಯೇ, ನಾವು ರಿಸರ್ವ್ ಬ್ಯಾಂಕ್ ತರಬೇತಿ ಕಾಲೇಜಿಗೆ ನಮ್ಮ ಅಧಿಕಾರಿಗಳನ್ನು ವಿವಿಧ ವಿಷಯಗಳ ತರಬೇತಿಗೆ ಕಳುಹಿಸುತ್ತಿದ್ದೇವೆ.

ಅಲ್ಲದೆ ನಾವು ಸಿಬಂದಿಗಳಿಗೆ ಗ್ರಾಚ್ಯುಇಟಿ ಅವಕಾಶವನ್ನು ಕ್ರಮಬದ್ಧ ರೀತಿಯಲ್ಲಿ ಮಾಡಿರುತ್ತೇವೆ. ಇಂತಹ ಈಗಿನ ಖರ್ಚಿನ ಲೆಕ್ಕಾಚಾರದ ವೆಚ್ಚವನ್ನು ನಿರ್ಧರಿಸಲಾಗಿದ್ದು ಐದು ವರ್ಷಗಳ ಅವಧಿಗೆ ವಿಸ್ತರಿಸಲು ನಿಶ್ಚೈಸಲಾಗಿದೆ. ಮೊದಲ ಕ್ರಮವಾಗಿ, ಈಗಿನ ಅವಕಾಶವನ್ನು 1970ನೇ ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳಿಂದ 3, 63, 646 ರೂಪಾಯಿಗಳಿಗೆ ಏರಿಸಲಾಗಿದೆ.

ಡೈರೆಕ್ಟರರ ಮಂಡಲಿ.

1970ನೇ ಮೇ 23ರಂದು ನಡೆದ ಕಳೆದ ಪಾಲುದಾರರ ಸಭೆಯ ಬಳಿಕ ಶ್ರೀ ಕೆ. ಪಿ. ಮಾಧವನ್ ನಾಯರ್ ಅವರು ಡೈರೆಕ್ಟರರಾಗಿಲ್ಲ. ಶ್ರೀ ಡಿ.ವೀರೇಂದ್ರ ಹೆಗ್ಡೆಯವರು 20-7-1970ರಂದು ಮಂಡಲಿಗೆ ರಾಜೀನಾಮೆ ಸಲ್ಲಿಸಿದರು. ಪ್ರಕೃತ ನಮ್ಮ ಮಂಡಲಿಯಲ್ಲಿ 10 ಮಂದಿ ಡೈರೆಕ್ಟರರಿರುವರು.

ಈ ಸಂದರ್ಭದಲ್ಲಿ ನಾನು ಮಂಡಲಿಯಲ್ಲಿರುವ ನನ್ನ ಸಹೋದ್ಯೋಗಿಗಳಿಂದ ಪಡೆದ ಅವಿಚಲ ಸದ್ಭಾವನೆ ಮತ್ತು ಸಹಕಾರವನ್ನು ಉಲ್ಲೇಖಿಸಲೇ ಬೇಕಾಗುತ್ತದೆ. ಅವರೆಲ್ಲರಿಗೂ ಮತ್ತು ಸ್ಥಳೀಯ ಸಲಹಾ ಸಮಿತಿಗಳ ಸದಸ್ಯರಿಗೆ, ಅವರ ಅಮೂಲ್ಯ ಮಾರ್ಗದರ್ಶನಕ್ಕಾಗಿ ನಾನು ಕೃತಜ್ಞನಾಗಿರುವೆನು.

ನಮ್ಮ ಕೃತಜ್ಞತೆಗಳು

ಬ್ಯಾಂಕಿನ ಪ್ರಗತಿಗಾಗಿ ಶ್ರಮ ವಹಿಸಿದ ಹಾಗೂ ಕರ್ತವ್ಯದಲ್ಲಿ ಶ್ರದ್ಧೆ ತೋರಿದ ಪ್ರತಿಯೊಬ್ಬ ಸಿಬಂದಿಗೂ ನಾನು ನನ್ನ ಪರವಾಗಿ ಹಾಗೂ ಡೈರೆಕ್ಟರರ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಮುಂದಿನ ವರ್ಷಗಳಲ್ಲಿಯೂ ಅವರಿಂದಾದಷ್ಟು ಉತ್ತಮ ರೀತಿಯಲ್ಲಿ ಕೆಲಸ ಮುಂದುವರಿಸುವಂತೆ ನಾನು ಅವರನ್ನು ಒತ್ತಾಯಿಸುತ್ತೇನೆ. ನಮ್ಮ ಸಿಬಂದಿಗಳ ನಿಷ್ಠೆಯೇ ನಮ್ಮ ನಿಜವಾದ ಶಕ್ತಿ.

ತಿಳುವಳಿಕೆ ಹಾಗೂ ಸಹಕಾರದಿಂದ ವರ್ಷಾವಧಿಯಲ್ಲಿ ಕಾರ್ಯ ನಿರ್ವಹಿಸಿದ ಕಾರ್ಯದರ್ಶಿ, ವಿಶೇಷ ಅಧಿಕಾರಿ, ಉಪ ಕಾರ್ಯದರ್ಶಿಗಳು ಮತ್ತಿತರ ಬ್ಯಾಂಕಿನ ಹಿರಿಯ ಅಧಿಕಾರಿಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಕೊನೆಯದಾಗಿ, ನನ್ನ ಮೇಲೆ ಮತ್ತು ಮಂಡಲಿಯ ನನ್ನ ಸಹಕಾರಿಗಳ ಮೇಲೆ ವಿಶ್ವಾಸವಿಟ್ಟು ಸದ್ಭಾವನೆ ಮತ್ತು ಸಹಕಾರ ನೀಡಿದ ಪಾಲುದಾರರಾದ ನಿಮಗೂ, ನಮ್ಮ ಠೇವಣಿದಾರರಿಗೂ, ಇತರ ಆತ್ಮೀಯ ಗಿರಾಕಿಗಳಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನಿಮ್ಮ ಬೆಂಬಲವೇ ನಮ್ಮ ಶಕ್ತಿ
ಧನ್ಯವಾದಗಳು.

ಸೂಚನೆ: ಇದು ವಾರ್ಷಿಕ ಮಹಾಸಭೆಯ ವರದಿಯ ತಾತ್ಪರ್ಯವೆಂದು ಪರಿಗಣಿಸಲಾಗದು.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಅಕಾಡೆಮಿ ಸ್ಥಾಪನಾ ದಿನಾಚರಣೆ

ಇದೇ ತಾ. ೩೦-೪-೭೧ ರಂದು ಮಣಿಪಾಲ ವ್ಯಾಲಿವ್ಯೂ ಹೆಲ್ತ್ ಕ್ಲಬ್‌ನ ಸಭಾಭವನದಲ್ಲಿ ಜರಗಿದ ಮಣಿಪಾಲ ಶೈಕ್ಷಣಿಕ ಅಕಾಡೆಮಿಯ ಸ್ಥಾಪನಾ ದಿನಾಚರಣೆ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ತಿರುಪತಿ ವೆಂಕಟೇಶ್ವರ ವಿಶ್ವವಿದ್ಯಾಲಯದ ಉಪಕುಲಪತಿ ಡಾ। ಜಗನ್ನಾಥ ರೆಡ್ಡಿಯವರು ಮಾತನಾಡುತ್ತಾ ರಾಷ್ಟ್ರದಲ್ಲಿಯೇ ಶ್ರೇಷ್ಠ ಮಟ್ಟದ ವಿದ್ಯಾ ಕೇಂದ್ರ ಎನಿಸಿಕೊಂಡಿರುವ ಮಣಿಪಾಲ ವಿದ್ಯಾ ಕೇಂದ್ರಕ್ಕೆ ಸರಕಾರ ಸಹೃದಯತೆಯಿಂದ ಮುಂದೆ ಬಂದು ವಿಶ್ವವಿದ್ಯಾಲಯದ ಮನ್ನಣೆ ನೀಡಬೇಕು ಎಂದರು. ಅವರು ಮುಂದುವರಿಯುತ್ತಾ, ಮಣಿಪಾಲ ಕೇವಲ ಶೈಕ್ಷಣಿಕ ಕೇಂದ್ರ ಮಾತ್ರವಲ್ಲ ಉತ್ತಮ ವಾಣಿಜ್ಯ, ಔದ್ಯಮಿಕ ಮತ್ತು ಸಾಂಸ್ಕೃತಿಕ ಕೇಂದ್ರವೂ ಆಗಿದ್ದು ಇಲ್ಲಿನ ಸಾಂಸ್ಕೃತಿಕ ವಿಭಾಗಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸುವುದರಿಂದ ವಿದೇಶಿ ವಿದ್ಯಾರ್ಥಿಗಳನ್ನು ಆಕರ್ಷಿಸುವುದು ಸಾಧ್ಯವಿದೆ. ಮಣಿಪಾಲದಂಥ ಊರಿನಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆ ಮಹಾಸಾಹಸವೆಂದವರು ನುಡಿದು ದೇಶದ ನಿರಕ್ಷರತೆಯ ಗಂಭೀರ ಸ್ವರೂಪವನ್ನು ವಿವರಿಸುತ್ತಾ ಶಾಲೆ ಕಾಲೇಜುಗಳು ವಯಸ್ಕರ ಶಿಕ್ಷಣ ಯೋಜನೆಯನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

ಅಕಾಡೆಮಿಯ ಸ್ಥಾಪಕ ಡಾ। ಟಿ. ಮಾಧವ ಪೈ ಅವರ ೭೩ನೇ ಜನ್ಮ ದಿನಾಚರಣೆಯ ಈ ಸಮಾರಂಭದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲ್ ಡಾ। ಜಿ. ಬಿ. ವೇಲಿಯತ್, ಕರ್ನಾಟಕ ಬೇಂಕಿನ ಅಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗ ಅವರು ಡಾ। ಪೈಯವರಿಗೆ ಶುಭಾಶಯಗಳನ್ನರ್ಪಿಸಿದರು.

ಡಾ। ಪೈ, ಅಭಿನಂದನೆಗಳಿಗೆ ಉತ್ತರವೀಯುತ್ತಾ, ೧೯೫೩ರಲ್ಲಿ ಈ ಅಕಾಡೆಮಿ ಸ್ಥಾಪಿಸುವುದಕ್ಕೆ ಜನತೆ ನೀಡಿದ ಸಹಕಾರಕ್ಕೆ ಕೃತಜ್ಞತೆ ಅರ್ಪಿಸಿದರು. ಅವರು ತಾನು ಕಟ್ಟಿದ ವಿವಿಧ ಸಂಸ್ಥೆಗಳ ಕಷ್ಟದ ದಿನಗಳನ್ನು ಸ್ಮರಿಸಿ ಈಗ ಅಕಾಡೆಮಿಯ ಸಂಸ್ಥೆಗಳೆಲ್ಲ ಶ್ರೇಷ್ಠ ಮಟ್ಟ ಕಾಯ್ದುಕೊಂಡಿರುವುದಕ್ಕೆ ತೃಪ್ತಿ ವ್ಯಕ್ತಪಡಿಸಿದರು.

ಶ್ರೀ ಟಿ. ರಮೇಶ ಪೈಯವರು ಆರಂಭದಲ್ಲಿ ಸ್ವಾಗತಿಸಿ ಅಕಾಡೆಮಿಯ ಸಾಧನೆಗಳನ್ನು ವಿವರಿಸಿ ಈ ತನಕ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಿಂದ ೪೮೦೦ ಮಂದಿ ವೈದ್ಯರು ಹೊರ ತೆರಳಿ ದೇಶದ ಮತ್ತು ಜಗತ್ತಿನ ಹಲವೆಡೆ ಸೇವೆ ಸಲ್ಲಿಸುತ್ತಿದ್ದಾರೆ ಎಂದು ತಿಳಿಸಿದರು.

ಅಕಾಡೆಮಿಯ ವಿವಿಧ ಸಂಸ್ಥೆಗಳ ಪರವಾಗಿ ಡಾ। ಪೈಯವರಿಗೆ ಹಾರಗಳನ್ನು ಸಮರ್ಪಿಸಲಾಯಿತು. ಅಕಾಡೆಮಿಯ ಉಪಾಧ್ಯಕ್ಷ ಶ್ರೀ ಪಿ. ಶ್ರೀಪತಿ ಆಚಾರ್ಯರು ಧನ್ಯವಾದ ಅರ್ಪಿಸಿದರು.

ಬಂಟರ ಯಾನೆ ನಾಡವರ ಸಂಘದ ಮಹಾಸಭೆ

ತಾ. 2-5-71ರಂದು ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಮಹಾಧಿವೇಶನವು ವಿಜಯ ಬೇಂಕಿನ ಅಧ್ಯಕ್ಷ ಶ್ರೀ ಎಂ. ಸುಂದರರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಉಲ್ಲಾಸಕರವಾಗಿ ಜರಗಿತು. ಸಂಘದ ಅಧ್ಯಕ್ಷ (ಇನ್ ಚಾರ್ಜ್) ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರು ಸ್ವಾಗತ ಭಾಷಣ ಮಾಡುತ್ತಾ ಶ್ರೀ ಸುಂದರರಾಮ ಶೆಟ್ಟರ ಸಮರ್ಥ ಅಧ್ಯಕ್ಷತೆಯಲ್ಲಿ ವಿಜಯಾ ಬೇಂಕು ಪ್ರಗತಿ ಹೊಂದುವಂತಾದುದಕ್ಕೆ ಅವರ ಕಾರ್ಯದಕ್ಷತೆಯನ್ನು ಕೊಂಡಾಡಿದರು. ಬೆಂಗಳೂರು ಕೃಷಿ ವಿದ್ಯಾನಿಲಯದ ಉಪಕುಲಪತಿ ಡಾ। ಕೆ. ಸಿ ನಾಯ್ಕರು ಸಂಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿ ದಿ। ಎ. ಬಿ. ಶೆಟ್ರ ಪ್ರಾಮಾಣಿಕ ಕಾರ್ಯ ಸ್ಮರಣೆಗೈದರು. ಶ್ರೀ ಎಂ. ಎಂ. ಚೌಟರು ಇತ್ತ ಅವರ ತೀರ್ಥರೂಪ ದಿ! ಸುಬ್ಬಣ್ಣ ಚೌಟರ ತೈಲ ಚಿತ್ರವನ್ನು ಅಧ್ಯಕ್ಷರು ಅನಾವರಣಗೊಳಿಸಿದರು. ಶ್ರೀ ಕೆ. ಉಗ್ಗಪ್ಪ ಶೆಟ್ಟರು ದಿ। ಚೌಟರ ಗುಣಕಥನ ಮಾಡಿದರು. ರಾಷ್ಟ್ರಪ್ರಶಸ್ತಿ ವಿಜೇತ ಶ್ರೀ ಪುಷ್ಪರಾಜ ಶೆಟ್ಟರನ್ನು ಸನ್ಮಾನಿಸಿದ ಬಳಿಕ ಬೊಂಬಾಯಿಯ ಶ್ರೀ ಎಚ್. ಟಿ. ಭಂಡಾರಿ (ಹಾಜರಿರಲಿಲ್ಲ) (ಉದ್ದಿಮೆಗಾಗಿ) ಶ್ರೀ ಬಿ. ನಾರಾಯಣ ಶೇಕ (ಕೃಷಿ), ಶ್ರೀ ಎಂ. ವಿ ಹೆಗ್ಡೆ (ಸಾಹಿತ್ಯ ಮತ್ತು ಪತ್ರಿಕೋದ್ಯಮ), ಶ್ರೀ ಬೋಳಾರ ನಾರಾಯಣ ಶೆಟ್ಟಿ (ಲಲಿತ ಕಲೆ) ಇವರನ್ನು ಮಾನಪತ್ರವಿತ್ತು ಸನ್ಮಾನಿಸಲಾಯಿತು. ಸನ್ಮಾನಿತರಿಂದ ಉತ್ತರವಾದ ಬಳಿಕ ಅಧ್ಯಕ್ಷ ಶ್ರೀ ಸುಂದರರಾಮ ಶೆಟ್ಟರು ಪ್ರಚಲಿತ ಸಮಸ್ಯೆಗಳ ಕುರಿತು ವಿಚಾರ ಪ್ರಚೋದಕ ಭಾಷಣ ಮಾಡಿದರು. (ಇದರ ವಿವರವನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು). ಶ್ರೀ ಬಿ. ಶ್ರೀನಾಥ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದ ನಂತರ ವಿವಿಧ ಮನರಂಜನಾ ಕಾರ್ಯಕ್ರಮಗಳಾದುವು.

ಬೆಳಿಗ್ಗೆ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದಿ। ಬಿ. ಮಂಜಯ್ಯ ಹೆಗ್ಡೆ, ದಿ। ಎಂ. ಉಮ್ಮಣ್ಣ ನೇಮಿತ ಇವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಲಯಗಳ ಹಾಗೂ ಸಂಘದ ವರದಿ ವಾಚನಗಳಾದ ಬಳಿಕ ಸಂಘದ ಅಭಿವೃದ್ಧಿಗೆ ದುಡಿದ ಕೆ. ಸುಂದರರಾಮ ಶೆಟ್ಟರಿಗೆ ಮಾನಪತ್ರ ಸಮರ್ಪಣೆಯಾಗಿ ಶ್ರೀ. ಪಿ. ಎಸ್. ತಿಮ್ಮಪ್ಪ ಶೆಟ್ಟರ ಉತ್ತಮ ಸಮಾಜ ಸೇವಕ ಚಿನ್ನದ ಪದಕವನ್ನು ಡಾ. ಕೆ. ಬಾಳಪ್ಪ ಶೆಟ್ಟರಿಗೆ ನೀಡಲಾಯಿತು. ಸಂಘದ ಬಲವರ್ಧನೆಗಾಗಿ ವಿಚಾರ ವಿನಿಮಯ ನಡೆದು ಹೊಸ ಆಡಳಿತ ಸಮಿತಿಯು ಆಯ್ಕೆಯಾಯಿತು.

ಪಡುಬಿದ್ರಿಯಲ್ಲಿ ಸನ್ಮಾನ ಸಮಾರಂಭ

ತನ್ನ ಜೀವಮಾನವನ್ನೇ ಯಕ್ಷಗಾನ ಕಲಾದೇವಿಗೆ ಸಮರ್ಪಿಸಿ ಜನಪ್ರಿಯರಾಗಿರುವ ಶ್ರೀ ಕಡಂದೇಲು ಪುರುಷೋತ್ತಮ ಭಟ್ಟರನ್ನು ಸನ್ಮಾನಿಸಲಾದ ಸಮಾರಂಭವೊಂದು ಪಡುಬಿದ್ರಿ ಬಂಕೆದವಿನ ಬ್ರಹ್ಮಸ್ಥಾನದ ವಿವಿಧ ಧಾರ್ಮಿಕ ಕಾರ್ಯಕ್ರಮಗಳ ಮಧ್ಯಂತರದಲ್ಲಿ ಕಿನ್ನಿಗೋಳಿ ರಾಜರತ್ನಪುರದ ಶ್ರೀ ಸುಂದರ ಶೆಟ್ಟಿ ಮತ್ತು ಬಂಧುಗಳ ವತಿಯಲ್ಲಿ ಶ್ರೀ ಗೋಪಾಲಕೃಷ್ಣ ಆಸ್ರಣ್ಣರ ಅಧ್ಯಕ್ಷತೆಯಲ್ಲಿ ತಾ. 27-4-71 ರಂದು ವಿಜೃಂಭಣೆಯಿಂದ ನೆರವೇರಿತು.

ಶ್ರೀ ಪೆರ್ಲ ಕೃಷ್ಣ ಭಟ್ಟರು ಅಭಿನಂದನಾ ಉಪನ್ಯಾಸ ಗೈಯುತ್ತಾ- ಶ್ರೀ ಸುಂದರ ಶೆಟ್ಟರ ಸೌಜನ್ಯವನ್ನು ಕೊಂಡಾಡಿದರು.

ಶ್ರೀ ಕೊ. ಅ. ಉಡುಪರು ಸನ್ಮಾನ ಪತ್ರವನ್ನೋದಿದ ಬಳಿಕ ಶ್ರೀ ಸುಂದರ ಶೆಟ್ಟರು ಬೆಲೆ ಬಾಳುವ ಕಾಶ್ಮೀರಿ ಶಾಲು ಅಮೂಲ್ಯ ಚಿನ್ನದ ಪದಕ ಹಾಗೂ ಅನರ್ಘ್ಯವಾದ ಸ್ವಯಂ ಚಾಲಿತ ಕೈಗಡಿಯಾರದ ಉಡುಗೊರೆಯ ಕೊಡುಗೆಯ ಮೂಲಕ ಶ್ರೀ ಪುರುಷೋತ್ತಮ ಭಟ್ಟರನ್ನು ಅಪೂರ್ವ ರೀತಿಯಲ್ಲಿ ಸನ್ಮಾನಿಸಿದರು.

ಅಂತೆಯೇ ಅಧ್ಯಕ್ಷರನ್ನೂ ಶ್ರೀ ಪೆರ್ಲ ಕೃಷ್ಣ ಭಟ್ಟರನ್ನೂ, ನಾಗದರ್ಶನ ಪಾತ್ರಿ ಶ್ರೀ ಅನಂತ ಸಾಮಗರನ್ನೂ ಉಡುಗೊರೆಯಿತ್ತು ಗೌರವಿಸಿದ ಶ್ರೀ ಸುಂದರ ಶೆಟ್ಟರು ಸ್ಥಾನೀಯ ಪ್ರಧಾನ ಸೇವಾಕಾರ್ಯಕರ್ತ ಶ್ರೀ ಮುದ್ದು ಮೊಯ್ಲಿ ಅವರನ್ನು ಚಿನ್ನದ ಪದಕದ ಮೂಲಕವೂ ಅಂತೆಯೇ ಇನ್ನುಳಿದ ಹತ್ತೈವತ್ತಕ್ಕಿಂತಲೂ ಮಿಕ್ಕಿದ ಸ್ಥಾನೀಯ ನಿರಂತರ ಸೇವಾ ಕಾರ್ಯಕರ್ತರಾದ ಗಂಡಸರನ್ನು ಪಂಚೆ ಹಾಗೂ ಶಾಲಿನ ಮೂಲಕ, ಹೆಂಗಸರನ್ನು ಸೀರೆಗಳ ಕೊಡುಗೆಗಳ ಮುಖಾಂತರವೂ ಉಪಚರಿಸಿದರು.

ಶ್ರೀ ಕೆ. ಪುರುಷೋತ್ತಮ ಭಟ್ಟರು ಮಾತನಾಡುತ್ತಾ ಕೃತಜ್ಞತೆಯನ್ನು ಅರ್ಪಿಸಿದರು.

ಶ್ರೀ ಕೆ. ಗೋಪಾಲಕೃಷ್ಣ ಆಸ್ರಣ್ಣರು ಅಧ್ಯಕ್ಷೀಯ ಭಾಷಣಮಾಡಿ ಶ್ರೀ ದೇವರ ದಯೆಯಿಂದ ಲಭಿಸಿದ ಸಂಪತ್ತನ್ನು ಸದ್ಧಾರ್ಮಿಕ ಕಾರ್ಯಕ್ಕಾಗಿ ಸದ್ವಿನಿಯೋಗಿಸುತ್ತಿರುವ ಶ್ರೀ ಪುರುಷೋತ್ತಮ ಭಟ್ಟರ ಔದಾರ್ಯವನ್ನು ಕೊಂಡಾಡಿ ಶ್ರೀ ಕೆ. ಪುರುಷೋತ್ತಮ ಭಟ್ಟರ ಶ್ರೇಯೋಭಿವೃದ್ಧಿಯನ್ನು ಹಾರೈಸಿದರು. ಹರಿಕಥಾ ಕಾಲಕ್ಷೇಪವು ಜರಗಲು ಶ್ರೀ ಕೊ. ಅ. ಉಡುಪರು ಧನ್ಯವಾದಾರ್ಪಣೆ ಗೈದರು.

ಓದಿರಿ! "ಗುಡಿ ಗೃಹಕಾರ್ಯ"

ಕನ್ನಡ ಪುಸ್ತಕ ಚಿಕ್ಕ ಬಂಡವಲಿನಲ್ಲಿ ನಿಮ್ಮ ಮನೆಯಲ್ಲಿ ಉದ್ಯೋಗ—ವ್ಯವಹಾರ ಮಾಡಿ ನಿಮ್ಮ ಆದಾಯ ಬೆಳೆಸಿಕೊಳ್ಳಿರಿ. ಪುಟ 224 ಬೆಲೆ ರೂ. 10 ಅಂಚೆ ವೆಚ್ಚ ರೂ. 2.50

Cottage Industry (NU-4) P.B.No.1262
Anguri Bagh Market, Delhi-6.

ಡಿಲ್ಲಿ ರಾಜ್ಯಕೀಯ

ಹೊಸ ಮುಖಗಳ ಶೋಧಕಾರ್ಯ

ಸಂಸತ್ತಿನ ಉಭಯ ಸಭೆಗಳ ಅಧಿವೇಶನ ಪ್ರಾರಂಭವಾಗಲಿದೆಯೆನ್ನುವಾಗ ಕೇಂದ್ರ ಸಚಿವ ಸಂಪುಟದ ಪುನಾರಚನೆಯೂ ಗುತ್ತದೆಂಬುದು ಸಂಪ್ರದಾಯವಾಗಿರುವಂತೆ ತೋರುತ್ತದೆ. ಶ್ರೀಮತಿ ಗಾಂಧಿಯವರು ಪ್ರಧಾನಿಯಾದ ಬಳಿಕ ಈ ಪರಿಪಾಠ ಬೆಳೆದು ಬಂದಂತಿದೆ.

ಫೆಬ್ರವರಿ–ಮಾರ್ಚಿ ೧೯೭೧ರ ಚುನಾವಣೆಗಳಲ್ಲಿ ಆಕೆ ತುಂಬಿ ತುಳುಕಾಡುವ ಬಹುಮತವನ್ನು ಲೋಕಸಭೆಯಲ್ಲಿ ಪಡೆದರು. ಒಕ್ಕೊರಲಿನಿಂದ ಶಾಸಕರ ನಾಯಿಕೆಯಾಗಿ ಆಯ್ಕೆಗೊಂಡರು. ಪಕ್ಷದ, ತನ್ಮೂಲಕ ದೇಶದ ಪ್ರಶ್ನಾತೀತ ನಾಯಿಕೆಯ ಪಟ್ಟಗಳಿಸಿದರು; ಸಚಿವ ಸಂಪುಟ ರಚಿಸಿದರು.

ಸಾಕಷ್ಟು ಮಿತ ಪರಿಮಾಣದ ಆಕೆಯ ಸಂಪುಟ ಕೆಲವರು ಹಳೆಯ ಹಾಗೋ ರಾಜ್ಯಕೀಯ ವೃದ್ಧರನ್ನು ದೂರವಿರಿಸಿತು. ಒಂದೆರಡು ಹೊಸಮುಖಗಳನ್ನು ಬಹಿರಂಗಪಡಿಸಿತು. 'ಇದೆಲ್ಲ ತಾತ್ಕಾಲಿಕ; ಹೊಸ ಸದಸ್ಯರ ಯೋಗ್ಯತೆಯರಿತುಕೊಂಡು ಮೇ ತಿಂಗಳಲ್ಲಿ ಸಂಪುಟವನ್ನು ವಿಸ್ತರಿಸಲಾಗುವುದು' ಎಂದು ಎಲ್ಲರನ್ನೂ ಆಗ ಸಮಾಧಾನಗೊಳಿಸಲಾಯ್ತು.

ಇಂಡಿಕೇಟಿನ ಟಿಕೇಟಿನಲ್ಲಿ ನಿಂತು ಸಹಸ್ರಾರು ಬಹುಮತದಿಂದ ಗೆದ್ದುಬಂದ ಗುಂಗಿನಲ್ಲೇ ತೃಪ್ತರಾಗುವವರು ಹೆಚ್ಚು ಮಂದಿ, ಮಂತ್ರಿಯಾಗುವ ಆಶೆ ಕಟ್ಟಿಕೊಂಡವರು ಎಲ್ಲೋ ಕೆಲವರು ಮಾತ್ರ. ಆದರೆ, ಎಲ್ಲರಲ್ಲಿ ಎಲ್ಲರನ್ನೂ ಗೊಂಬೆಯಾಡಿಸುವ ಶಕ್ತಿ ಸಂಪನ್ನೆ ಶ್ರೀಮತಿ ಗಾಂಧಿಯ ಮುಂದೆ ಪದವಿಗಾಗಿ ಅಂಗಲಾಚುವ ಧೈರ್ಯ ಯಾರಿಗೂ ಇಲ್ಲ. ಆದುದರಿಂದ ತನಗೆ ಮನಸ್ಸಿಗೆ ಹಿಡಿಸಿದವರನ್ನು ಶ್ರೀಮತಿ ಗಾಂಧಿ ಮಂತ್ರಿ ಮಾಡುತ್ತಾರೆ; ಹಿಡಿಸದವರನ್ನು ತಳ್ಳಿಬಿಡುತ್ತಾರೆ.

ತಮಿಳುನಾಡಿನ ಶ್ರೀ ಸುಬ್ರಹ್ಮಣ್ಯಂರನ್ನು ಯೋಜನಾ ಸಚಿವರೆಂದು ಕ್ಯಾಬಿನೆಟ್ಟಿಗೆ ಸೇರಿಸಿಕೊಳ್ಳುವುದರಿಂದ ಈ ಬಾರಿಯ ಪರಿಷ್ಕರಣ ಆರಂಭವಾಗಿದೆ. ಸಂಸತ್ ಸದಸ್ಯರಲ್ಲವಾದರೂ ಶ್ರೀ ಸಿ. ಸು.ರನ್ನು ಲೋಕಸಭೆಗೆ ಅಥವಾ ರಾಜ್ಯಸಭೆಗೆ ಆಯ್ಕೆಯಾಗಿ ಬರುವಂತೆ ಅವರು ನೋಡಿಕೊಂಡಾರು. ಸಚಿವತನದೊಂದಿಗೆ ಯೋಜನಾ ಆಯೋಗದ ಉಪಾಧ್ಯಕ್ಷ ಪದವಿಯನ್ನೂ ಶ್ರೀ ಸಿ. ಸು. ವಹಿಸಿಕೊಂಡಿದ್ದಾರೆ. ತನ್ನ ಸಮಾಜವಾದದಲ್ಲಿ ಹೊಸ ಅರ್ಥನೀತಿಯಲ್ಲಿ ದೃಢ ವಿಶ್ವಾಸವಿಟ್ಟವರನ್ನೇ ಕೀಲಿ ಪದಗಳಿಗೆ ನೇಮಕ ಮಾಡುವುದು ಶ್ರೀಮತಿ ಗಾಂಧಿಗೆ ಬೇಕಾಗಿದೆ, ಕಾಂಗ್ರೆಸ್ ವಿಘಟನೆಯ ವೇಳೆ ಶ್ರೀಮತಿಯ ಕೈಹಿಡಿದು ನಡೆಸಿದ ಶಾಸಕೇತರರಲ್ಲಿ ಶ್ರೀ ಸಿ. ಸು. ಏಕಮೇವಾದ್ವಿತೀಯರು. ಇಂಡಿಕೇಟಿನ ಆಪತ್ಕಾಲದ ಅಧ್ಯಕ್ಷರಾದ ಇವರು ಮಂತ್ರಿತನಕ್ಕೇ ಲಾಯಕ್ಕೆಂದು ಅನ್ನಿಸಿಕೊಂಡಿರಬೇಕು. ಕ್ಷಿಪ್ರ ಪ್ರಗತಿ—ಶೀಘ್ರ ಸಮಾಜವಾದ ಸ್ಥಾಪನೋದ್ದೇಶದ ಯೋಜನೆಯನ್ನು ಆಮೂಲಾಗ್ರ ಬದಲಾಯಿಸುವುದೇ ಅವರ ಮೊದಲ ಕರ್ತವ್ಯ.

ಯೋಜನೆಗೇನಂತೆ, ಸಂಪನ್ಮೂಲಗಳ ಅಗತ್ಯ ಅದಕ್ಕಿಂತ ಹೆಚ್ಚು. ಇಂದಿರಾ ಸಮಾಜವಾದದ ಮತ್ತೊಬ್ಬ ಬಂಟ ಶ್ರೀ ವೈ. ಬಿ. ಚವಣರನ್ನೂ ಅರ್ಥ ಶಾಖಾಮಾತ್ಯಗವನ್ನಾಗಿರಿಸಿದ ಶ್ರೀಮತಿಯವರು ಸಮಾಜವಾದವನ್ನು ಜ್ಯಾರಿಗೆ ತರುವ ಸಂಪೂರ್ಣ ಜವಾಬುದಾರಿ ಈ ಯಿಬ್ಬರಿಗೆ ವಹಿಸಿ ತನ್ನ ಲೇಬಲ್ ಹಚ್ಚಲಿದ್ದಾರೆ. ಇದೀಗ ತಾನೇ ಸಂಸತ್ತಿನ ಮುಂದೆ ಬರಲಿರುವ ಪೂರ್ಣ ರೂಪದ ಬಜೆಟ್ಟು ಈ ಸಮಾಜವಾದದ ದಿವ್ಯ ಮುಖದರ್ಶನ ಮಾಡಲಿದೆ.

ಸಂಪುಟ ಪುನಾರಚನೆಯೆಂದಾಗ ಹಲವಾರು ಹೊಸ ಹೆಸರು ಕೇಳಿ ಬರುವುದು ಸಹಜ. ಆದರೆ, ಅಂತಹ ಹೆಸರುಗಳು ಮುಂದೆ ಬಾರದೆ ಕೆಲವು ಹಳೆಯ ಹೆಸರುಗಳೇ ಇದೀಗ ಕೇಳಿ ಬರುತ್ತವೆ. ಈಗ ತಾನೇ ಯೋಜನಾ ಮಂತ್ರಿಯಾದ ಶ್ರೀ ಸಿ. ಸು. ರವರೂ ಹೊಸಬರೇನಲ್ಲ. ತನ್ನ ೪೧ನೆಯ ವಯಸ್ಸಿನಿಂದಲೇ ಮದ್ರಾಸದಲ್ಲಿ ಸಚಿವತನ ನೋಡಿದವರು. ಡಿಲ್ಲಿಯೂ ಅವರಿಗೆ ಅಪರಿಚಿತವಲ್ಲ. ಇದೀಗ ೬೧ ವಯಸ್ಸಿನ ಗಡಿಮುಟ್ಟಿರುವ ಅವರನ್ನು ವಯಸ್ಸಿನ ದೃಷ್ಟಿಯಿಂದ ಯುವಕರೆಂದೂ ಹೇಳಲಾಗದು. ಈ ನಡುವೆ ಮಂತ್ರಿ ಶ್ರೀ ಕೆ. ಕೆ. ಶಹರನ್ನು ಸಂಪುಟದಿಂದ ಹೊರಗಿಡಲಾಯ್ತು. ಮಂತ್ರಿತನದ ಪ್ರತಿಜ್ಞೆ ಸ್ವೀಕರಿಸಿದ ಒಂದು ತಿಂಗಳಲ್ಲೇ ಅವರನ್ನು ದೂರವಿಡುವಂತಾಗಬೇಕಾದುದು ವಿಚಿತ್ರವೇ. ಅವರಿಗೆ ತತ್ಕಾಲಕ್ಕೆ ತಮಿಳುನಾಡಿನ ರಾಜ್ಯಪಾಲ ಪದವಿ ನೀಡಲಾಗಿದೆ. ಶ್ರೀ ಉಜ್ವಲ ಸಿಂಗರ ಅವಧಿ ಇದೀಗ ಮುಗಿಯಲಿದ್ದು ಅವರ ಸ್ಥಾನಕ್ಕೆ ಶ್ರೀ ಶಹಾ ಏರಲಿದ್ದಾರೆ. ತನಗೆ ಅತ್ಯಂತ ಆಪ್ತರಾದವರನ್ನೇ ಉನ್ನತ ಪದ ಪ್ರತಿಷ್ಠಿತಗೊಳಿಸುವುದಾದರೆ, ಶ್ರೀ ಶಹಾರ ಟೊಪ್ಪಿಗೆಯ ಮೇಲೊಂದು ನವಿಲು ಗರಿಕೂತಂತಾಯ್ತು.

ಮತ್ತೆರಡು ಹೆಸರುಗಳು ಬಹಳ ಜೋರಾಗಿ ಕೇಳಿ ಬರುತ್ತಿವೆ. ಮೊದಲನೆಯದಾಗಿ ಕರ್ನಾಟಕದ ಶ್ರೀ ಕೆಂಗಲ್ ಹನುಮಂತಯ್ಯನವರು. ಶ್ರೀ ಸಿ. ಎಂ. ಪೂಣಚ್ಚ ಸಿಂಡಿಕೇಟಿಗರಾದ ಬಹು ಸಮಯಾನಂತರ ಕರ್ನಾಟಕಕ್ಕೆ, ಮುಖ್ಯವಾಗಿ ದಕ್ಷಿಣ ಭಾಗಕ್ಕೆ ಪ್ರಾತಿನಿಧ್ಯ ನೀಡಬೇಕೆಂದು ಶ್ರೀ ಕೆಂಗಲ್‌ರ ನೇಮಕವಾಯ್ತು. ಹಳೆಯ ಮೈಸೂರಿನಲ್ಲಿ ಸಾಕಷ್ಟು ಜನ ಮೆಚ್ಚುಗೆ ಪಡೆದ ಶ್ರೀ ಕೆಂಗಲ್ ರಾಜ್ಯದಲ್ಲಿ ಇಂಡಿಕೇಟ್ ಬೀಜವನ್ನು ನೀರೆರೆದು ಗಿಡ ಮಾಡಿದ್ದಾರೆ. ಇನ್ನೀಗ ಇವರ ಅಗತ್ಯ ಶ್ರೀ ದೇವರಾಜ ಅರಸರಿಗಾಗಲೀ ಶ್ರೀಮತಿ ಗಾಂಧಿಗಾಗಲಿ ಇದ್ದಂತಿಲ್ಲ. ಅದೂ ಅಲ್ಲದೆ ಅರಸ–ವೀರಪ್ಪ ಹೋರಾಟದಲ್ಲಿ ಶ್ರೀ ಕೆಂಗಲ್ ಯಾರ ಪರವಾಗಿದ್ದರೆಂಬುದೂ ಅಸ್ಪಷ್ಟ. ಇಂಡಿಕೇಟ್ ಶಾಸಕ ಪಕ್ಷದ ನಾಯಕತ್ವ ವಹಿಸಿ ಮತ್ತೆ ಮುಖ್ಯ ಮಂತ್ರಿಯಾಗುವುದಕ್ಕೂ ಅವರು ಸಿದ್ಧರಿದ್ದರೆನ್ನಲಾಗಿದೆ.

ಜತೆಗೆ ವಯಸ್ಸೂ ಮೀರ ಹತ್ತಿದೆ. ಶ್ರೀ ಸಿ. ಸು. ರವರು ಮಂತ್ರಿಯಾಗಿ ಉಳಿಯಬಹುದಾದರೆ, ಶ್ರೀ ಜಗಜ್ಜೀವನರಾಮರು ಸಚಿವರಾಗಿ ಮುಂದರಿಯಬಹುದಾದರೆ, ಶ್ರೀ ಕೆಂಗಲ್ಲರಿಗೇನೂ ವಯಸ್ಸು ಹೆಚ್ಚೇನ್ನ ಬರುವುದಿಲ್ಲ. ಶ್ರೀ ಕೆಂಗಲ್ಲರನ್ನು ಪ್ರತ್ಯಕ್ಷ ರಾಜ್ಯಕೀಯದಿಂದ ದೂರವಿರಿಸಬಯಸಿದ್ದರು ಪಂ. ನೆಹರು. ಇದನ್ನೇ ಮುಂದುವರಿಸಿದರು ಶ್ರೀ ಶಾಸ್ತ್ರಿ. ಮೊದಲಿಗೆ ಶ್ರೀಮತಿ ಗಾಂಧಿಯವರೂ ಅವರನ್ನು ದೂರವಿಟ್ಟರೂ ಅದೇನೋ ಕಾರಣದಿಂದ ಮಂತ್ರಿ ಮಾಡಿದರು. ಇದೀಗ ಬೆರಳೆಣಿಕೆಯಷ್ಟು ತಿಂಗಳು ಮಂತ್ರಿತನದ ಸುಖವುಂಡು ಅವರನ್ನು ದೂರ ಕಳಿಸುವ ಮಂತ್ರಣ ನಡೆಯುತ್ತಿವೆ.

ಶ್ರೀ ಕೆಂಗಲ್ಲರನ್ನು ಶ್ರೀ ಶಹಾರಂತೆ ಯಾವುದಾದರೊಂದು ರಾಜ್ಯದಲ್ಲಿ ರಾಜ್ಯಪಾಲರಾಗಿ ನೇಮಿಸಲಾಗುವುದೆಂದು ವದಂತಿಯಿದೆ. ಇನ್ನು ಕೆಲವರು ಅವರನ್ನು ದೇಶದಲ್ಲೇ ಇರಿಸಬಾರದೆನ್ನುತ್ತಾರೆ. ದೂರದ ಆಸ್ಟ್ರೇಲಿಯಾದಲ್ಲಿ ರಾಯಭಾರಿಯಾಗಿ ನೇಮಿಸುವ ವಿಚಾರವಿದೆ. ಯೆಂದೂ ವರದಿಗಳಿವೆ. ರಾಜ್ಯಪಾಲತನಕ್ಕಿಂತ ರಾಯಭಾರಿತನವನ್ನೇ ಶ್ರೀ ಕೆಂಗಲ್ ಇಷ್ಟಪಡಬಹುದು. ರಾಜ್ಯಕೀಯದ ಉರಿಯಿಂದ ತಲೆಸುಟ್ಟುಕೊಳ್ಳುವುದಕ್ಕಿಂತ ಕೆನ್‌ಬೆರಾದ ತಂಪು ಹವೆಯನ್ನುಣ್ಣುವುದೇ ಹಿತಕರವಾದೀತು. ಆದರೆ, ಇವೆರಡೂ ಅವರಿಗೆ ಧಕ್ಕದೆ ಹೋದರೂ ಅಚ್ಚರಿಪಡಬೇಕಾಗಿಲ್ಲ.

ಕಾಂಗ್ರೆಸ್ ವಿಘಟನೆಯಲ್ಲಿ ಶ್ರೀಮತಿ ಗಾಂಧಿಯ ಸವ್ಯಸಾಚಿತನದಲ್ಲಿ ಆಕೆಯ ಬಂಟರಾಗಿ ದುಡಿದವರು ಇಬ್ಬರು—ಶ್ರೀ ಜಗಜ್ಜೀವನರಾಮ ಮತ್ತು ಶ್ರೀ ಫಕ್ರುದ್ದೀನ್ ಅಲಿ ಅಹಮ್ಮದರು. ಒಂದು ಕಾಲದಲ್ಲಿ ಇಂದಿನ ಸಿಂಡಿಕೇಟಿನ ಶಿಷ್ಯರೆನಿಸಿದ್ದ ಇವರಿಬ್ಬರೂ ಎರಡು ಅಲ್ಪಸಂಖ್ಯಾಕರ ಕೋಮಿನ ಅಧ್ವರ್ಯುಗಳು. ಇವರ ನೆರವಿನ ಬಲದಿಂದಲೇ ಶ್ರೀಮತಿ ಗಾಂಧಿ ಬಲವಾಗಿ ಕಾಲೂರಿದರು.

ಇದೀಗ ಶ್ರೀಮತಿ ಗಾಂಧಿಯನ್ನು ಏಕೈಕ ನಾಯಿಕೆಯೆಂದು ದೇಶ ಒಪ್ಪಿಕೊಂಡಿದೆ. ಆದುದರಿಂದ ತನ್ನ ನಾಯಕತ್ವ ಬಲಪಡಿಸಲು ಶ್ರೀ ಫಕ್ರುದ್ದೀನರು ಆಕೆಗೆ ಅಗತ್ಯವಿಲ್ಲ. ಅವರದ್ದೇ ಕೋಮಿನ ಬಿಸಿ ರಕ್ತ ಪೀಳಿಗೆಗೆ ಸೇರಿದವರು ಆಕೆಯ ಸೆರಗಿನ ಹಿಂದೆ ಆಶ್ರಯ ಪಡೆದಿದ್ದಾರೆ. ಆದುದರಿಂದ ವಯಸ್ಸಾಯಿತೆಂಬ ಕಾರಣದಿಂದ ಶ್ರೀ ಫಕ್ರುದ್ದೀನರನ್ನು ಪ್ರತ್ಯಕ್ಷ ರಾಜ್ಯಕೀಯದಿಂದ ದೂರವಿಟ್ಟು ಅವರಿಗೆ ರಾಜ್ಯಕೀಯ ನಿವೃತ್ತಿವೇತನ ನೀಡುವ ಸಂಚು ನಡೆಯುತ್ತಿದೆ. ಅವರು ಯಾವುದಾದರೊಂದು ರಾಜ್ಯದಲ್ಲಿ ರಾಜ್ಯಪಾಲರಾಗಿ ನಿಯುಕ್ತಗೊಳ್ಳುವುದೀಗ ಹಾಲಿನಷ್ಟು ಬೆಳ್ಳಗಿದೆ.

ಶ್ರೀ ರಘುರಾಮಯ್ಯನವರು ಕೆಲಕಾಲದಿಂದ ಸಾಂಸದಿಕ ವ್ಯವಹಾರ ಸಚಿವರಾಗಿದ್ದರು. ಮೊನ್ನೆ ತಾನೇ ಕೈಬಿಟ್ಟ ಅವರಿಗೆ ಮತ್ತೆ ಕೈಕೊಡುವರೆಂಬ ಸುದ್ದಿಯೂ ಇದೆ. ಇಂಡಿಕೇಟಿನ ಮಹಾಪ್ರಧಾನರಾಗಿ ಅದಕ್ಕೆ ಜಯ ತಂದುಕೊಟ್ಟ ಶ್ರೀಗಳಾದ ಶಂಕರಾನಂದ ಮತ್ತು ಬಹುಗುಣರ ಸೇವೆಯಿಂದ ಶ್ರೀಮತಿ ಗಾಂಧಿ ತೃಪ್ತರಾದರೆ ಅದು ಸಹಜ. ಪಕ್ಷ ಸಂಘಟನೆಯಲ್ಲಿ ಯಶ ಗಳಿಸಿದ ಅವರು ಸಮಾಜವಾದದ ಅನುಷ್ಠಾನದ ಕಾರ್ಯಕ್ರಮಗಳಲ್ಲೂ ಯಶದಾಯಕ ಶ್ರಮ ವಹಿಸಬಹುದೆಂದು ಶ್ರೀಮತಿ ಗಾಂಧಿ ನಿರೀಕ್ಷೆ. ಹಾಗಾಗಿ ಇವರಿಬ್ಬರೂ 'ಹೊಸ ಮುಖ'ಗಳೆಂದು ಸಚಿವರಾದರೆ ಆಶ್ಚರ್ಯವಿಲ್ಲ.

ಉಳಿದ ಹೊಸ ಮುಖಗಳು ಪ್ರಾಯಃ ಎಲ್ಲರಿಗೂ ಹೊಸತೇ. ಶ್ರೀಮತಿ ಗಾಂಧಿಯವರು ಕೆಲವೊಂದು ಬದಲಾವಣೆಗಳನ್ನು ಈಗ ಮಾಡಿ, ತಮ್ಮ ಹೊಸ ಮುಖ ಶೋಧಕಾರ್ಯವನ್ನು ಇನ್ನೂ ಬಹುಕಾಲ ಮುಂದುವರಿಸಿದರೆ ಅಚ್ಚರಿಯಿಲ್ಲ.

● ●

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

READ &
ADVERTISE IN
NAVAYUGA WEEKLY



NAVAYUGA 6-5-1971
Registered with the Registrar
of News Papers for India
under No- R. N. 3546/'57

REGD. No. B. G. 176
LICENCE No. 33
Licensed to Post without Prepayment

ಸಣ್ಣ ರೈತನಿಗೆ ನೆರವು

ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಕೈಗೊಳ್ಳುವ ಬೇಸಾಯಕ್ಕೆ ಹೆಚ್ಚು ಬಂಡವಾಳ ಬೇಕು. ಇದರಿಂದಾಗಿ ನಮ್ಮ ದೇಶದ ಹಸಿರು ಕ್ರಾಂತಿಯು ಯಶಸ್ವಿಗಾಗಿ ಕೇವಲ ಸ್ಥಿತಿವಂತ ರೈತರೇ ಮಹತ್ವದ ಪಾತ್ರ ವಹಿಸಿದ್ದಾರೆ. ಆದರೆ ಸಾಮಾಜಿಕ ನ್ಯಾಯ ಹಾಗೂ ದೇಶದ ಒಟ್ಟು ಬೇಸಾಯ ಉತ್ಪನ್ನವನ್ನು ಹೆಚ್ಚಿಸುವ ದೃಷ್ಟಿಯಿಂದ ಸಣ್ಣ ಹಿಡುವಳಿದಾರನಿಗೂ ಸರ್ವರೀತಿಯಲ್ಲಿ ಉತ್ತೇಜನ ನೀಡಬೇಕು. ಸಣ್ಣ ರೈತನೂ ದೇಶದ ಅಭ್ಯುದಯಕ್ಕೆ ತನ್ನದೇ ಆದ ಕಾಣಿಕೆಯನ್ನು ನೀಡುವಂತಾಗಬೇಕು. ಇಷ್ಟೇ ಅಲ್ಲದೆ ದೇಶದ ಬೇಸಾಯ ಭೂಮಿಯ ಶೇಕಡಾ 62 ಹಿಡುವಳಿಗಳು ವಿಸ್ತಾರದಲ್ಲಿ ಐದು ಎಕರೆಗಳಿಗಿಂತ ಕಡಿಮೆ ಇದೆ. ಇದು ಬೇಸಾಯಕ್ಕಾಗಿ ಬಳಸುವ ಒಟ್ಟು ಕ್ಷೇತ್ರದಲ್ಲಿ ಶೇಕಡಾ 19ರಷ್ಟಿದೆ. ದೇಶದ ಅಭಿವೃದ್ಧಿ ಮುಖ್ಯವಾಗಿ ಸಣ್ಣ ರೈತರ ಅಭಿವೃದ್ಧಿಯನ್ನು ಅವಲಂಬಿಸಿದೆ ಎಂಬುದನ್ನು ಮನಗೊಂಡು ಸಣ್ಣ ರೈತರಿಗಾಗಿಯೇ ಮೀಸಲಾದ ಅನೇಕ ಅಭಿವೃದ್ಧಿ ಯೋಜನೆಗಳನ್ನೂ ನಮ್ಮ ಸರ್ಕಾರದವರು ಕೈಗೊಂಡಿದ್ದಾರೆ.

ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿ ಸಣ್ಣ ರೈತರ ಅಭಿವೃದ್ಧಿಗಾಗಿ ರೂಪಿಸಲಾಗಿರುವ ಯೋಜನೆಗಾಗಿ 67.5 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಈ ಯೋಜನೆಯನ್ವಯ ದೇಶದಲ್ಲಿನ 46 ಜಿಲ್ಲೆಗಳಲ್ಲಿ ಸಣ್ಣ ರೈತರ ಅಭಿವೃದ್ಧಿ ಸಂಸ್ಥೆಗಳನ್ನೂ ಸ್ಥಾಪಿಸಲಾಗುವುದು. ಈ ಸಂಸ್ಥೆಗಳು ಸಣ್ಣ ರೈತರು ಯಾರು ಎಂಬುದನ್ನು ಗುರುತಿಸಿ ಅವರ ಸಮಸ್ಯೆಗಳನ್ನು ಪರಿಶೀಲಿಸುವುವು. ಸಮಸ್ಯೆಗಳ ನಿವಾರಣೆಗಾಗಿ ಅಂತಹ ಹಿಡುವಳಿದಾರರಿಗೆ ಆರ್ಥಿಕವಾಗಿಯೂ ತಾಂತ್ರಿಕವಾಗಿಯೂ ನೆರವು ನೀಡುವುವು ಈ ಸಂಸ್ಥೆಗಳಿಂದ ರೈತರಿಗೆ ಅಗತ್ಯವಾದ ಬೇಸಾಯ ಉಪಕರಣಗಳು, ರಾಸಾಯನಿಕ ಗೊಬ್ಬರಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪೂರೈಸಲಾಗುವುದು. ನಿಯೋಜಿಸಲಾಗಿರುವ 46 ಜಿಲ್ಲೆಗಳ ಯೋಜನೆಗಳಲ್ಲಿ 36 ಯೋಜನೆಗಳಿಗೆ ಈಗಾಗಲೇ ಅನುಮತಿ ದೊರೆತಿದ್ದು 13 ಯೋಜನೆಗಳು ಕಾರ್ಯಾರಂಭ ಮಾಡಿವೆ.

ಸಣ್ಣ ರೈತರಿಗಾಗಿ ಕೈಗೊಂಡಿರುವ ಇನ್ನೊಂದು ಯೋಜನೆಯನ್ನು ಕಾರ್ಯರೂಪಕ್ಕೆ ತರಲು ನಾಲ್ಕನೆ ಯೋಜನೆಯಲ್ಲಿ 47.5 ಕೋಟಿ ರೂ ಗಳನ್ನು ಒದಗಿಸಲಾಗಿದೆ. ಬೇಸಾಯ ಕಾರ್ಮಿಕರು ಹಾಗೂ ಅಲ್ಪಸ್ವಲ್ಪ ಭೂಮಿ ಇರುವವರಿಗೇ ನೆರವು ನೀಡಲು ಈ ಯೋಜನೆಯನ್ನು ರೂಪಿಸಲಾಗಿದೆ ಕೋಳಿ ಸಾಕಣೆ, ಪಶು ಸಂಗೋಪನೆ, ಹಾಲು ಉದ್ಯಮ, ತರಕಾರಿ ಬೆಳೆಯುವುದು ಇತ್ಯಾದಿ ಉದ್ಯಮಗಳನ್ನು ಕೈಗೊಳ್ಳುವ ಬೇಸಾಯ ಕಾರ್ಮಿಕರಿಗೆ ಈ ಹೊಸ ಯೋಜನೆಯಿಂದ ನೆರವು ದೊರೆಯುತ್ತಿದೆ. ಮೇಲಿನ ಇದೇ ಉದ್ದೇಶಕ್ಕೆ ಹಣಕಾಸಿನ ನೆರವು ನೀಡುವ ಬೇಸಾಯಗಾರರ ಸಹಕಾರ ಸಂಘಗಳಿಗೆ ಈ ಯೋಜನೆಯಿಂದ ಧನಸಹಾಯವೂ ದೊರೆಯುವುದು

ತೀವ್ರ ಅಭಾವವಿರುವ ಪ್ರದೇಶಗಳು ಹಾಗೂ ನೀರಾವರಿ ಸೌಲಭ್ಯಗಳು ಇಲ್ಲದಿರುವ ಸ್ಥಳಗಳಲ್ಲಿ ಜೀವನಮಟ್ಟ ಸುಧಾರಿಸಿಲ್ಲ. ಇಂತಹ ಕಡೆಗಳಲ್ಲಿ ಉದ್ಯೋಗಪ್ರಧಾನವಾದ ಕಾರ್ಯಕ್ರಮಗಳನ್ನೂ ಈಗ ಕೈಗೊಳ್ಳಲಾಗುತ್ತಿದೆ. ಈ ಉದ್ದೇಶಕ್ಕಾಗಿ ಈಗಾಗಲೇ ದೇಶದ ಏಳು ರಾಜ್ಯಗಳ 23 ಜಿಲ್ಲೆಗಳನ್ನು ಆರಿಸಿಕೊಳ್ಳಲಾಗಿದೆ. 16 ಜಿಲ್ಲೆಗಳಲ್ಲಿ ಈ ಯೋಜನೆ ತನ್ನ ಕಾರ್ಯವನ್ನು ಆರಂಭಿಸಿದೆ. ಸದ್ಯದ ಖುಷ್ಕಿ ಭೂಮಿಯಿಂದಲೇ ಉತ್ಪಾದನೆಯನ್ನು ಹೆಚ್ಚಿಸಲು ನೆರವಾಗುವ ವಿಧಾನಗಳನ್ನು ಕಂಡುಹಿಡಿಯುವ ಸಲುವಾಗಿ ಖುಷ್ಕಿ ಸಂಶೋಧನೆಗಳನ್ನೂ ತೀವ್ರಗೊಳಿಸಲಾಗಿದೆ ದೇಶಾದ್ಯಂತ 24 ಪ್ರಾಯೋಗಿಕ ಖುಷ್ಕಿ ಬೇಸಾಯ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಇಂಜಿನಿಯರಿಂಗ್ ಪದವೀಧರರ ನಿರುದ್ಯೋಗ ಸಾಧ್ಯವಾದಷ್ಟು ನಿವಾರಿಸಲು ಹಾಗೂ ಯಾಂತ್ರೀಕರಣ ಬೇಸಾಯವನ್ನು ತೀವ್ರಗೊಳಿಸಲು ಇತ್ತೀಚೆಗೆ ಹೊಸ ಯೋಜನೆಯನ್ನು ಕೈಗೊಳ್ಳಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬೇಸಾಯ ಉಪಕರಣಗಳನ್ನು ತಯಾರಿಸಲು ಹಾಗೂ ದುರಸ್ತಿ ಮಾಡುವ ಸಣ್ಣಪುಟ್ಟ ಕಾರ್ಖಾನೆಗಳನ್ನು ಸ್ಥಾಪಿಸುವ ಇಂಜಿನಿಯರಿಂಗ್ ಪದವೀಧರರಿಗೆ ಹಣಕಾಸಿನ ನೆರವು ನೀಡಲಾಗುವುದು.

●●

ಪ್ರಜಾಪ್ರಭುತ್ವದಲ್ಲಿ ನಮ್ಮ ವಿಶ್ವಾಸ

ಭಾರತ ಒಂದು ಪರಮಾಧಿಕಾರವುಳ್ಳ ಪ್ರಜಾಪ್ರಭುತ್ವ ಗಣರಾಜ್ಯ. ಪ್ರಜಾಪ್ರಭುತ್ವದ ಮೂಲಭೂತ ಶಕ್ತಿ, ನಮ್ಮ ರಾಷ್ಟ್ರದ ವಿಮೋಚನೆಗೆ ಒಂದು ಪ್ರಚೋದನೆ. ಈ ಶಕ್ತಿಯೇ ನಮ್ಮ ಸ್ವಾತಂತ್ರ್ಯ ಸಮರದ ಹಾಗೂ ಸ್ವತಂತ್ರ ಭಾರತದ ಅಡಿಗಲ್ಲು.

ಚುನಾವಣೆ, ವಯಸ್ಕರ ಮತದಾನ ಪದ್ಧತಿ ಆಧಾರದ ಮೇಲೆ ನಡೆಯುವುದು. ಭಾರತದ ಸಂವಿಧಾನ ಜಾತಿ, ಮತ, ಹಾಗೂ ಲಿಂಗ ಭೇದವಿಲ್ಲದೆ ಪ್ರತಿಯೊಬ್ಬ ಭಾರತೀಯ ವಯಸ್ಕರ ಪ್ರಜೆಗೂ ಮತ ಚಲಾಯಿಸುವ ಹಕ್ಕನ್ನು ನೀಡಿದೆ. ಆದರೆ ಮತವನ್ನು ಚಲಾಯಿಸಲೇಬೇಕೆಂಬ ನಿರ್ಬಂಧವೂ ಇಲ್ಲ. ಪ್ರತಿನಿಧಿ ಒಬ್ಬರನ್ನು ಚುನಾಯಿಸುವ ಪೂರ್ಣ ಹಕ್ಕು ಮತದಾರರಿಗೆ ಸೇರಿದ್ದು. ರಾಜಕೀಯ ಪಕ್ಷಗಳಿಗೆ ತಮ್ಮ ಕಾರ್ಯನೀತಿಯನ್ನು ಪ್ರಚಾರ ಮಾಡುವ ಹಾಗೂ ಶ್ರೀಸಾಮಾನ್ಯರ ಸಹಕಾರವನ್ನು ಕೇಳುವ ಹಕ್ಕುಗಳು ಇವೆ.

ಚುನಾವಣೆಯ ಮೇಲ್ವಿಚಾರಣೆಗಾಗಿ ಶಾಸನ ಬದ್ಧ ಸಂಸ್ಥೆಯಾದ 'ಚುನಾವಣಾ ಆಯೋಗ' ಒಂದಿದೆ ಈ ಆಯೋಗ ಚುನಾವಣೆಗಳಲ್ಲಿ ದುರಾಚಾರಗಳನ್ನು ತಡೆಗಟ್ಟುವುದು. ಭಾರತದ ಸರಕಾರವು ಚುನಾಯಿತರಾದ ಪ್ರತಿನಿಧಿಗಳ ಮೂಲಕ ನಡೆಯುತ್ತದೆ. 'ಭಾರತೀಯರಾದ ನಾವು ನಮ್ಮ ರಾಷ್ಟ್ರವನ್ನು ಪರಮಾಧಿಕಾರವುಳ್ಳ ಪ್ರಜಾಪ್ರಭುತ್ವ ಗಣರಾಜ್ಯವನ್ನಾಗಿ ರೂಪಿಸಲು ದೃಢ ಸಂಕಲ್ಪ ಮಾಡಿ ನಮಗೆ ಈ ಸಂವಿಧಾನವನ್ನು ರೂಪಿಸಿಕೊಂಡಿದ್ದೇವೆ. ದೇಶದ ಎಲ್ಲಾ ಪ್ರಜೆಗಳಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಹಾಗೂ ಸೋದರ ಭಾವವನ್ನು ಕೊಡುವುದು ಈ ಸಂವಿಧಾನದ ಗುರಿಯಾಗಿದೆ' ಎಂದು ಭಾರತ ಸಂವಿಧಾನದ ಪ್ರಸ್ತಾವನೆಯಲ್ಲಿ ಹೇಳಿದೆ. ಭಾರತದಲ್ಲಿ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯಿದೆ. ಇದು ಶಾಸನ ಅಧಿಕಾರ ಆಡಳಿತದ ಅಡಿಗಲ್ಲಾಗಿದೆ.

ಗ್ರಾಮ ಪಂಚಾಯಿತಿ

ಗ್ರಾಮ ಪಂಚಾಯಿತಿಗಳ ಮೂಲಕ ಪ್ರಜಾಪ್ರಭುತ್ವವನ್ನು ದೇಶದ ಎಲ್ಲಾ ಮೂಲೆ ಮೂಲೆಗಳಿಗೂ ಕೊಂಡೊಯ್ಯಲಾಗಿದೆ. ಗ್ರಾಮ ಪಂಚಾಯಿತಿ ಸದಸ್ಯರನ್ನು ಆಯಾ ಗ್ರಾಮಾಂತರ ಮಂದಿ ಚುನಾಯಿಸುವರು.ಪಂಚಾಯತಿ ಸದಸ್ಯರು ಆಯಾ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಜವಾಬ್ದಾರರು. ಗ್ರಾಮ ಪಂಚಾಯಿತಿಗಳು ಗ್ರಾಮಾಡಳಿತವನ್ನು ನೋಡಿಕೊಳ್ಳುವುದು ನ್ಯಾಯಾಂಗಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಆಯಾ ಗ್ರಾಮಗಳಲ್ಲಿರುವ 'ನ್ಯಾಯ ಪಂಚಾಯಿತಿ' ನಿರ್ವಹಿಸುವುದು. ಈ ನ್ಯಾಯ ಪಂಚಾಯತಿಗೆ, ಇಂಡಿಯನ್ ಫೀನಲ್ ಕೋಡ್ ಮತ್ತು ಸಿವಿಲ್ ಪ್ರೊಸೀಜರ್ ಕೋಡ್‌ಗಳಿಗೆ ಸಂಬಂಧಿಸಿದ ಲಘು ಮೊಕದ್ದಮೆ ಹಾಗೂ ವ್ಯಾಜ್ಯಗಳನ್ನು ತೀರ್ಮಾನಿಸುವ ಅಧಿಕಾರವನ್ನು ನೀಡಲಾಗಿದೆ ವಕೀಲರು ಈ ವ್ಯಾಜ್ಯಗಳಿಗೆ ಮತ್ತು ಲಘು ಮೊಕದ್ದಮೆಗಳಿಗೆ ಪ್ರವೇಶಿಸಲು ಹಕ್ಕಿಲ್ಲ. ಇಂತಹ ಸಂದರ್ಭಗಳಲ್ಲಿ ಗ್ರಾಮ ಪಂಚಾಯಿತಿಗಳ ತೀರ್ಮಾನವೇ ಅಂತಿಮ ತೀರ್ಮಾನ.

●●

ಮಹಾಪುರುಷರ ವಾಣಿಗಳು

ಅಹಂಕಾರ ನಾಶಹೊಂದಿದ ನಂತರ ಅಖಂಡ ಪರಿಪೂರ್ಣ 'ಸತ್' ಆದ ಹೃದಯವು ನಾನು, ನಾನು ಎಂದು ತಾನಾಗಿ ಸ್ಫುರಿಸುತ್ತದೆ.

ಹಸಿದೊಡನೆ ಭಿಕ್ಷಾನ್ನಗಳುಂಟು, ತೃಷೆಯಾದೊಡನೆ ಕೆರೆ ಹಳ್ಳ ಬಾವಿಗಳುಂಟು, ಶಯನಕ್ಕೆ ಹಾಳು ದೇಗುಲಗಳುಂಟು, ಚೆನ್ನಮಲ್ಲಿಕಾರ್ಜುನಾ ಆತ್ಮಸಂಗಕ್ಕೆ ನೀನೆನಗುಂಟು. (ಅಕ್ಕಮಹಾದೇವಿ)

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ? ಜಾತಿ ವಿಜಾತಿ ಎನಬೇಡ ದೇವನೊಲಿದಾತನೇ ಜಾತ ಸರ್ವಜ್ಞ.
(ಸರ್ವಜ್ಞ)

ಯಾರ ಸಂಗಡ ಸದ್ವಿಚಾರ ಇರುತ್ತವೊ ಅಂಥ ಜನರು ಒಬ್ಬಂಟಿಗರಾಗಿ ಇರುವದಿಲ್ಲ. (ಸರ್ ಫಿಲಿಪ್ ಸಿಡನಿ)

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೇಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ 50
ಸಂಚಿಕೆ 35

NAVAYUGA

13—5—1971

ಸಹಕಾರಿ ಸಂಘಗಳಿಗೆ ಕಾಯಾಕಲ್ಪ ಚಿಕಿತ್ಸೆ

ಸ್ವಾತಂತ್ರ್ಯಪೂರ್ವಯುಗದಲ್ಲಿ ವಾಮನವಾಗಿದ್ದು ಉತ್ತರಯುಗದಲ್ಲಿ ತ್ರಿವಿಕ್ರಮ ರೂಪ ತಳೆದ ಚಳುವಳಿಗಳಲ್ಲಿ 'ಸಹಕಾರ'ವೂ ಒಂದು. ಎಲ್ಲೆಂದರಲ್ಲಿ ಏಕಾದರೂ ಸಹಕಾರ ಸಂಘಗಳು ಹುಟ್ಟಿಕೊಂಡವು. ಇವುಗಳಿಗೆ ಸರಕಾರದಿಂದ ಸುಲಭವಾಗಿ ಆರ್ಥಿಕ ನೆರವೂ ದೊರೆಯುತ್ತದೆ. ಇಂದು ನಮ್ಮ ರಾಜ್ಯದಲ್ಲಿ ಸುಮಾರು ೯,೫೦೦ ಸಹಕಾರಿ ಸಂಘಗಳಿವೆಯೆಂದು ಅಂದಾಜು. ಈ ಬೃಹತ್ ಸಂಖ್ಯೆಯ ಸಂಘಗಳ ಆರೋಗ್ಯ ನೋಡಿಕೊಳ್ಳುವುದೇ ಸರಕಾರಕ್ಕೆ ದೊಡ್ಡ ತಲೆಸಿಡಿತವೆಂದೆನಿಸಿರಬೇಕು. ಮುಖ್ಯವಾಗಿ ಜನತೆಯ ಸಾಮಾನ್ಯ ಆರ್ಥಿಕ ಆವಶ್ಯಕತೆಗಳನ್ನು ಪೂರಯ್ಸಲು ನೆರವಾಗುವುದೇ ಈ ಸಂಘಗಳ ಉದ್ದೇಶ. ಇದರ ಸದಸ್ಯರಿಗೆ ಉದಾರ ನೀತಿಯಲ್ಲಿ ಸಾಲಸೌಲಭ್ಯಗಳು ದೊರೆಯುತ್ತವೆ. ನಮ್ಮ ಸಹಕಾರ ಸಂಘಗಳ ಸಂಖ್ಯೆಯನ್ನು ನೋಡುವಾಗ ಈ ಚಳುವಳಿ ಯಶಗಳಿಸುತ್ತಲೇ ಹೋಗಿದೆಯೆನ್ನಬೇಕು; ಆದರೆ, ಈ ಯಶಸ್ಸು ನಾವು ಪಡೆದಿಲ್ಲವೆಂದಾದರೆ (ಇದಕ್ಕೆ ಸಂಶಯವಿಲ್ಲ) ಸಹಕಾರಿ ಸಂಘಗಳಿಗೆ ಮನ್ನಣೆ ನೀಡುವಲ್ಲಿ, ಅವುಗಳ ಕಾರ್ಯಕಲಾಪಗಳನ್ನು ತೃಪ್ತಿಕರವಾಗಿ ನಡೆಸುವಲ್ಲಿ ಅಸಫಲರಾಗಿದ್ದೇವೆಂದೇ ಅರ್ಥ. ನಮ್ಮ ಸರಕಾರ ಪ್ರತಿ ಕ್ಷೇತ್ರವನ್ನೂ ಭೀಮಕಾಯವಾಗಿ ವಿಸ್ತರಿಸುವತ್ತ ನೀಡಿದ ಲಕ್ಷ್ಯದಲ್ಲಿ ಒಂದಂಶದಷ್ಟಾದರೂ ಅವುಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವತ್ತ ಹರಿಸುವ ಪರಿಪಾಠವಿಟ್ಟುಕೊಂಡಿಲ್ಲವೆಂಬುದು ಸರ್ವವೇದ್ಯ.

ಕೆಲವು ಸಹಕಾರಿ ಸಂಘಗಳು ಕೆಲವೇ ಪ್ರತಿಷ್ಠಿತರ ಕೈಗೊಂಬೆಗಳಾಗಿ ತಮ್ಮವರ ಹಿತಸಾಧನೆಗಷ್ಟೇ ದುಡಿಯುತ್ತಿರುವ ಉದಾಹರಣೆಗಳು ಅಪರೂಪವಲ್ಲ. ಇನ್ನು ಕೆಲವು ಸಾಲ–ಸೌಲಭ್ಯ ನೀಡುವಲ್ಲಿ ತೋರಿಸುವ ಉತ್ಸಾಹವನ್ನು ವಸೂಲಿಕಾರ್ಯದಲ್ಲಿ ವ್ಯಕ್ತಪಡಿಸುತ್ತಿಲ್ಲವೆಂಬುದೂ ಸತ್ಯಕ್ಕೆ ಹತ್ತಿರವಾದುದು. ಕೆಲವು ಸಂಘಗಳು ಜೀವಂತ ಹೆಣಗಳಾಗಿವೆಯೆಂದೂ ಇನ್ನು ಕೆಲವು ತಮ್ಮ ವೆಚ್ಚವನ್ನೇ ಕೂಡಿಸಿಕೊಳ್ಳಲಾಗದೆ ಸದಾ ನಷ್ಟವನ್ನೇ ತೋರಿಸುತ್ತಿವೆಯೆಂದೂ ಸರಕಾರ ಧ್ವನಿಸಿದೆ. ಸಹಕಾರ ಸಂಘಗಳು ಸ್ವಯಂ ಆರ್ಥಿಕ ದಾರ್ಢ್ಯತೆ ಹೊಂದಿ ಬೆಳೆದು ಬರಬೇಕೆಂಬುದು ಅಖಿಲ ಭಾರತೀಯ ನೀತಿ, ರಾಜ್ಯ ಸರಕಾರವೂ ಈ ನೀತಿಗೆ ದೃಢವಾಗಿ ಅಂಟಿಕೊಳ್ಳಲು ಈಗಲಾದರೂ ನಿರ್ಧರಿಸಿದ್ದು ಪ್ರಶಂಸನೀಯ. ಸಂಖ್ಯಾ ಪ್ರಮಾಣವು ಬೆಳೆದಂತೆ ಸಾಮರ್ಥ್ಯ ಪ್ರಮಾಣವು ಅನುಲೋಮವಾಗಿ ಬೆಳೆಯುತ್ತದೆ ಎಂದು ಇದುವರೆಗೆ ನಂಬಿಕೊಂಡಿದ್ದರೆ, ಇದು ಕುರುಡು ನಂಬಿಕೆ ಎಂಬುದು ಮನವರಿಕೆಯಾಗಿರುವುದು ಸ್ತುತ್ಯ. ಈಗ, ಅನಾರೋಗ್ಯಕರವೆನಿಸಿದ ಸಂಘಗಳನ್ನು ಮುಚ್ಚುವ ಬಗ್ಗೆ ಸರಕಾರ ನಿರ್ಧರಿಸಿದೆ. ಸರಕಾರಿ ಲೆಕ್ಕಾಚಾರದಂತೆ ವರ್ಷವೊಂದರ ಒಂದು ಲಕ್ಷ ರೂಪಾಯಿಗಳ ವ್ಯವಹಾರ ನಡೆಸುವ ಸಂಘಗಳು ಮಾತ್ರ ತಮ್ಮ ಕಾಲುಗಳ ಮೇಲೆ ನಿಲ್ಲಬಲ್ಲವು. ಹಾಗಿಲ್ಲವೆಂದಾದರೆ, ಅವುಗಳು ಆರ್ಥಿಕವಾಗಿ ದೃಢವಾಗಿಲ್ಲವೆಂದೇ ಅರ್ಥ. ಈ ಪರಿಭಾಷೆಯನ್ವಯ ನಮ್ಮಲ್ಲಿ ನಡೆಯುವ ೪೦೦೦ ಸಹಕಾರಿ ಸಂಘಗಳು ನಮ್ಮ ರಾಜ್ಯದಲ್ಲಿವೆಯೆಂದರೆ ಯಾರಾದರೂ ನಿಬ್ಬೆರಗಾಗಬೇಕು! ಈ ಸಂಘಗಳನ್ನು ಮುಂದೆ ನಡೆಯಗೊಟ್ಟರೆ, ಅವು ದಿವಾಳಿಯೇಳುವ ಅವಕಾಶವೇ ಹೆಚ್ಚು. ಆದುದರಿಂದ ಇವುಗಳನ್ನು ಮುಚ್ಚುವುದು ಸಮಾಜದ ಸದಸ್ಯರ ಆರೋಗ್ಯಕ್ಕೂ ಒಳ್ಳೆಯದು.

೪೦೦೦ ಸಹಕಾರಿ ಸಂಘಗಳಲ್ಲಿ ಕೆಲವನ್ನು ಭಗೀರಥ ಪ್ರಯತ್ನದಿಂದ ದುರಸ್ತಿಪಡಿಸಲೂ ಬಹುದು. ಹೀಗೆ ಆರ್ಥಿಕ ದೃಢತೆಯನ್ನು ಸಾಧಿಸಲು ಅವಕ್ಕೆ ಕಾಲಾವಕಾಶವನ್ನು ಗೊತ್ತುಪಡಿಸಬಹುದು. ಎಂದಿಗೂ ಸ್ವಸ್ಥಗೊಳ್ಳಲಾಗದ ನಿತ್ಯರೋಗಿ ಸಂಘಗಳನ್ನು ಕೊನೆಗೊಳಿಸದೇ ಗತ್ಯಂತರವಿಲ್ಲ. ಕೊನೆಗೊಳಿಸುವುದು ಎಂದರೆ, ಸದಸ್ಯರಿಗೆ ಸಂಘ ಸೌಕರ್ಯವನ್ನೇ ತೆಗೆದು ಹಾಕುವುದಲ್ಲ, ಆರೋಗ್ಯವಂತ ಸಂಘಗಳಲ್ಲಿ ವಿಲೀನಗೊಳಿಸುವುದು; ಇನ್ನೊಂದು ಸುದೃಢ ಸಂಘದ ಶಾಖೆಯಾಗಿ ಕೆಲಸ ಮಾಡುವಂತೆ ಸಗುವುದು— ಹೀಗೆ ಜನತೆಗೆ ಸಹಕಾರ ಸಂಘಗಳ ಸೌಲಭ್ಯವೂ ಮುಂದುವರಿಯಬೇಕು; ಜತೆಗೆ ಸಂಘಗಳು ಆರ್ಥಿಕವಾಗಿಯೂ ದೃಢವಾಗಬೇಕು ಎಂಬ ನಿಲುವು ರಾಜ್ಯ ಸರಕಾರದ್ದು. ಇದರಿಂದ ಸಹಕಾರ ಸಂಘಗಳಿಗೆ ಬಡಿದ ಪಕ್ಷಪಾತವು ದೂರವಾಗುವ ಸಾಧ್ಯತೆಯಿದೆ. ಇಷ್ಟಾದ ಮೇಲೂ ರಾಜ್ಯದಲ್ಲಿ ಸುಮಾರು ಐದೂವರೆ ಸಾವಿರ ಸಹಕಾರಿ ಸಂಘಗಳು ಉಳಿಯುವುವು. ಅಂದರೆ, ಸರಾಸರಿ ಐದೂವರೆ ಸಾವಿರ ಜನಗಳಿಗೆ ಒಂದೊಂದು ಸಹಕಾರಿ ಸಂಘವಿದ್ದಂತಾಯ್ತು. ಇದೇನೂ ಅತೃಪ್ತಿಕರವೆಂದಿಗೂ ಅಲ್ಲ. ವಾಣಿಜ್ಯ ಬ್ಯಾಂಕುಗಳಲ್ಲಿಯೂ ಆರ್ಥಿಕ ದೃಢತೆಯಿಲ್ಲದವುಗಳನ್ನು ಉಳಿದ ಬ್ಯಾಂಕುಗಳಲ್ಲಿ ವಿಲೀನಗೊಳಿಸಿದ ರಿಜರ್ವ್ ಬ್ಯಾಂಕಿನ ಕ್ರಮದ ಮಾದರಿಯಲ್ಲೇ ರಾಜ್ಯ ಸರಕಾರ ಸಹಕಾರಿ ಸಂಘಗಳನ್ನು ಆರೋಗ್ಯವಂತಗೊಳಿಸಲು ಕೈಕೊಳ್ಳುವ ಈ ಕ್ರಮವು ನಿಜಕ್ಕೂ ಸ್ವಾಗತಾರ್ಹ. ಇದೇ ರೀತಿಯಲ್ಲಿ ಸರಕಾರಿ ಸಹಾಯ ಧನ ಪಡೆಯುವುದಕ್ಕೆಂದೇ ಸ್ಥಾಪಿತವಾದ ಯುವಕ ಮಂಡಳ, ಕಲಾಪ್ರಸಾರಕ ಸಂಘ, ಮಹಿಳಾ ಸಮಾಜ ಮೊದಲಾದ ನಾಮ ಮಾತ್ರ ಸಂಸ್ಥೆಗಳಿಗೂ ಹೊಸ ಚೇತನ ಮೂಡುವಂತೆ ಮಾಡಬೇಕು. ನಿರಾಸಕ್ತ ಸಂಸ್ಥೆಗಳಿಗೆ ಸರಕಾರಿ ಸಹಾಯ ದ್ರವ್ಯ ನೀಡದಂತೆ ತಡೆಯಬೇಕು. 'ದುಡಿಯುವವರಿಗೇ ಅನ್ನ'ವೆನ್ನುವ ಕಾಯಕದ ಪಾಠ ಎಲ್ಲ ಕ್ಷೇತ್ರಕ್ಕೂ ಅನ್ವಯವಾಗ ಬೇಕು; ಸಂತಾನಕ್ಕೆ ನಿಯಂತ್ರಣವಿರುವಂತೆಯೇ ಈ ಸೇವಾ ಸಂಘಗಳ ಸಂಖ್ಯೆಗೂ ಮಿತಿಯೊಂದಿರಬೇಕು. ಇದು ಸಮಾಜದ ಆರೋಗ್ಯಕ್ಕೆ ದಿವ್ಯೌಷಧ. ●

ನಾಣ್ಯಗಳ ವ್ಯಾಪಾರ

ರೂಪಾಯಿ ನೋಟುಗಳನ್ನು ದ್ವಿಗುಣಿತ ಮಾಡಿಕೊಡುವುದಾಗಿ ನಂಬಿಸಿ ಪರಾರಿಯಾದವರು ಎಂಬ ವಾರ್ತೆಗಳನ್ನು ನಾವು ಪತ್ರಿಕೆಗಳಲ್ಲಿ ವಾರಕ್ಕೆ ಮೂರಾವರ್ತಿಯಾದರೂ ಓದುತ್ತೇವೆ. ಅಂತಹ ವಂಚಕರು ಎಂದೂ ಸಿಗದಂತೆ ತಲೆ ತಪ್ಪಿಸಿಕೊಂಡದ್ದೂ ಉಂಟು. ಈ ಬಗೆಯ ವಂಚನೆಯ ಪ್ರಕರಣಗಳ ವರದಿಗಳನ್ನು ಓದುತ್ತಿದ್ದವರೇ ಹಣದಾಸೆಯಿಂದ ವಂಚಕರಿಗೆ ತಮ್ಮ ನೋಟುಗಳನ್ನು ಒಪ್ಪಿಸಿ ಚೋಟು ಹಿಡಿಸಿಕೊಳ್ಳುತ್ತಲೇ ಹೋಗುತ್ತಿದ್ದಾರೆ. ಹಣದ ಮೇಲಿನ ಮೋಹ ಅವರ ಕಾಲಕೆಳಗಿನ ನೆಲವನ್ನೇ ಕಿತ್ತು ಬಿಡುತ್ತದೆ. ಇತ್ತೀಚೆಗೆ ಹೊಸ ಬಗೆಯ ವ್ಯಾಪಾರವೊಂದು ಆರಂಭವಾಗಿದೆಯೆಂದು ಸುದ್ದಿ. ಭಾರತ ಸರಕಾರ ವಿಶ್ವ ಸಂಸ್ಥೆಯ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಬೆಳ್ಳಿ ಹಬ್ಬದ ನೆನಪಿಗೆಂದು ಹೊರಡಿಸಿದ ಇಪ್ಪತ್ತು ಪೈಸೆಯ ಹಳದಿ ಬಣ್ಣದ ನಾಣ್ಯಗಳ ವ್ಯಾಪಾರವಿದು. ಒಂದು ನಾಣ್ಯದ ಬೆಲೆ ಒಂದು ರೂಪಾಯಿಯನ್ನೂ ಮೀರಿದೆಯೆಂದೂ ಈ ವ್ಯಾಪಾರದಲ್ಲಿ ಹಲವರು ಈಗಾಗಲೇ ತೊಡಗಿದ್ದಾರೆಂದೂ ವದಂತಿ. ಇಪ್ಪತ್ತು ಪೈಸೆಗೆ ರೂಪಾಯಿ ಕೊಡುವುದು ವಂಚನೆಯಲ್ಲ; ಮೋಸವೂ ಅಲ್ಲ. ಅದು ವ್ಯಾಪಾರ. ಅದ್ದರಿಂದ ಈ ನಾಣ್ಯಗಳ ಸಂಗ್ರಹಕ್ಕಾಗಿ ಪರದಾಡುವವರು ಇದ್ದಾರಂತೆ. ಈ ಹಿಂದೆ ಪೈಸೆಯ ನಾಣ್ಯದ ನೂರುಕಟ್ಟಿ ದರ ಏರಿದ್ದರೂ ಈ ಗಡಿ ಮುಟ್ಟಿದ್ದಿಲ್ಲ. ಹಿಂದಿನ ರಾಣಿ ನಾಣ್ಯಗಳ ಬೆಲೆಯೂ ದೊರೆ ರಾಜನ ಕಾಲದಲ್ಲಿ ರೂಪಾಯಿಗೆ ನಾಲ್ಕಂಟಾಣೆ ಹೆಚ್ಚಿತ್ತು ಮಾತ್ರ, ಅದೂ ನಡೆಯದ ನಾಣ್ಯವೆನಿಸಿದಾಗ. ಈಗಲಾದರೋ ಹಾಗಲ್ಲ, ಈ ಬಂಗಾರ ವರ್ಣದ ನಡೆಯುವ ನಾಣ್ಯ ಎಲ್ಲ ದಾಖಲೆಗಳನ್ನೂ ಮುರಿದಂತಿದೆ. ಚಿಲ್ಲರೆ ನಾಣ್ಯ ತಯಾರಿಯು ಅದೇಕೋ ಬಂದು ಬಿದ್ದಿದೆ; ಕೆಲವು ನಾಣ್ಯಗಳಲ್ಲಿನ ಲೋಹವು ನಾಣ್ಯದ ಮುಖಮೌಲ್ಯಕ್ಕಿಂತ ಹೆಚ್ಚಿರುವುದರಿಂದ ಕರಗಿಸಲಾಗುತ್ತವೆ- ಹೀಗೆ ಚಿಲ್ಲರೆಯ ಅಭಾವ ತಲೆದೋರಿದೆ. ನಾಣ್ಯಗಳನ್ನು ಕರಗಿಸುವುದನ್ನು ತಡೆಯುವುದು ಸರಕಾರಕ್ಕೆ ಸಾಧ್ಯವಾಗದೆಂದು ಆದರ ವಕ್ತಾರರೇ ಹೇಳಿದ್ದಾರೆಂದ ಮೇಲೆ ನಾಣ್ಯದಲ್ಲಿ ಬಳಸುವ ಲೋಹದ ಬೆಲೆಯನ್ನು ಕಡಮೆ ಮಾಡುವುದೊಂದೇ ಇದನ್ನು ತಡೆಯಲಿರುವ ಉಪಾಯವೆಂದು ತೋರುತ್ತದೆ. ಆದರೆ, ದಿನದಿನಕ್ಕೂ ಎತ್ತರೆತ್ತರ ಏರುತ್ತಿರುವ ಬೆಲೆಗಳು ಮುಂದೆಯೂ ಗಾಳಿಪಟ ನಾಣ್ಯಗಳ ಬೆಲೆಯನ್ನು ಏರಿಸುತ್ತಲೇ ಸಾಗುವಂತಾದರೆ ಅಚ್ಚರಿಯಲ್ಲ. 'ಧಾರಣೆ'ಯಲ್ಲಿ ಸ್ಥಿರತೆಯನ್ನು ಕಾಪಾಡಲು ನಾವು ಸಮರ್ಥರಾದಂದೇ ನಮ್ಮ ನೂರಾರು ಸಮಸ್ಯೆಗಳಿಗೆ ಸೂಕ್ತ ಪರಿಹಾರ ದೊರೆಯುತ್ತದೆಂಬುದು ನಿಸ್ಸಂದೇಹ; ಇಲ್ಲವಾದರೆ, ರೂಪಾಯಿಯ ಬೆಲೆಯೇ ಕಳೆದು ಹೋಗುತ್ತದೆ.

ಚರಿತ್ರಾರ್ಹ ಮೊಕದ್ದಮೆಗಳು—೧

ಶ್ರೀ ಬಾವ್ಲ ಕೊಲೆ

ಬರೆದವರು : ಶ್ರೀ ಬಿ. ಕೃಷ್ಣ ಭಟ್, ಭದ್ರಾವತಿ.

ಸಾವಿರದ ಒಂಭೈನೂರ ಇಪ್ಪತ್ತೈದನೆಯ ಜನವರಿ ಹನ್ನೆರಡರ ತನಕ ಲೋಕ ಮುಮ್ತಾಜಳ ಹೆಸರು ಕೇಳಿರಲಿಲ್ಲ. ಆಕೆ ಗಾಯಕಿ; ನರ್ತಕಿ. ಅವಳ ಹಿರಿಯರು ಆ ಕಸುಬು ನಡೆಸಿದವರು. ಆಕೆ ತುಂಬು ಚೆಲುವೆ. ಅವಳ ಸಮಕಾಲೀನರಲ್ಲಿ ಅವಳನ್ನು ಸರಿಗಟ್ಟುವವರು ಇರಲಿಲ್ಲ. ಇಂದೂರು, ಹೈದರಾಬಾದು, ಮುಂಬಯಿಗಳಲ್ಲಿ ಖ್ಯಾತಿ ಪಡೆದಿದ್ದಳು. ರೂಪು ಅವಳ ಬಂಡವಾಳ- ಬೆಡಗು—ಬಿನ್ನಾಣಗಳಿಂದ ಬದುಕು ನಡೆಸುವ ಜಾಣ್ಮೆ ಅವಳಿಗೆ ಹುಟ್ಟನಿಂದ ಬಂದುದು. ಈ ಸ್ವಚ್ಛರದ್ರೂಪಿ ಹೂವನ್ನು ಇನ್ನೂ ಅರಳುತ್ತಿದ್ದಂತೆಯೇ ಹೊಂದಲು ಇಂದೂರಿನ ರಾಜರು ಪ್ರಯತ್ನಿಸಿದ್ದರಲ್ಲಿ ಅಚ್ಚರಿಯಿಲ್ಲ. ಹತ್ತು ವರ್ಷಗಳ ಕಾಲ ಆಕೆ ಇಂದೂರಿನ ತುಕೋಜಿರಾಯರ ಬಾಳ ಉಸಿರಾಗಿ ಬಾಳಿದಳು. ಅವರ ಹಿಡಿತದಿಂದ ಆಕೆ ತಪ್ಪಿಸಿಕೊಳ್ಳಲು ಹೆಣಗಿದಾಗ, ಅವಳನ್ನು ಮರಳಿ ಪಡೆಯಲು ಅವರು ಭಗೀರಥ ಯತ್ನ ನಡೆಸಿದರು. ಒಂದಿಷ್ಟು ಕಾಲ ಆಕೆ ಮುಂಬಯಿಯ ಆಗರ್ಭ ಶ್ರೀಮಂತ ಶ್ರೀ ಅಬ್ದುಲ್ ಖಾದಿರ್ ಬಾವ್ಲ, ಅವರನ್ನು ಕಣ್ಸನ್ನೆಯಿಂದಲೇ ಕುಣಿಸಿದಳು. ಆ ಸಂಬಂಧ ಕಡಿದುಹೋಗಲು, ಅಷ್ಟು ಪ್ರಸಿದ್ಧರಲ್ಲದ, ಆದರೆ ಅಷ್ಟೇ ನಿಷ್ಠೆಯ ಯುವಕರನ್ನು ಆಕರ್ಷಿಸಿದಳು.

ಮುಂಬಯಿಯ ಪ್ರತಿಷ್ಠಿತ ಪ್ರಜೆ, ಪುರ ಪಿತೃ, ಶ್ರೀ ಬಾವ್ಲರ ಕೊಲೆ ಮಲಬಾರ್ ಗುಡ್ಡದಲ್ಲಿ ನಡೆಯಿತು. ಆಟ ಮುಗಿಸಿ, ಮನೆಗೆ ಹಿಂದಿರುಗುತ್ತಿದ್ದ ನಾಲ್ವರು ಬ್ರಿಟಿಷ್ ಅಧಿಕಾರಿಗಳು, ದಾರಿತಪ್ಪಿ, ಆ ರಸ್ತೆಯಲ್ಲಿ ಬಂದು, ದುರಂತದ ಪ್ರತ್ಯಕ್ಷದರ್ಶಿಗಳಾದರು. ಅವರು ಅಲ್ಲಿಗೆ ಬಾರದೆ ಹೋಗುತ್ತಿದ್ದರೆ ಮುಮ್ತಾಜ್ ಬೇಗಂ ತನ್ನ ವೈವಿಧ್ಯಮಯ ಜೀವನವನ್ನು ಬಣ್ಣಿಸಲು ಜೀವದಿಂದಿರುತ್ತಿರಲಿಲ್ಲ. ಶ್ರೀ ಬಾವ್ಲರ ಕೊಲೆಗಡುಕರನ್ನು ಗುರುತಿಸುವವರೇ ಇರಲಿಲ್ಲ. ಶ್ರೀ ಬಾವ್ಲ ಜೊತೆ ಅವಳೂ ಅಂದು ಸತ್ತಿದ್ದರೆ ಇಂದೂರಿನ ಶ್ರೀ ತುಕೋಜಿರಾವ್ ಹೋಳ್ಕರರಿಗೆ ಗದ್ದುಗೆಯಿಂದಿಳಿಯುವ ಪ್ರಮೇಯ ಉದ್ಭವಿಸುತ್ತಿರಲಿಲ್ಲ.

ನಜೀರ್ ಬೇಗಂ ಮುಮ್ತಾಜಳ ತಾಯಿ. ವಯಸ್ಸಿನಲ್ಲಿ ಅವಳೂ ಮಗಳಂತೆ ಪ್ರಸಿದ್ಧ ನರ್ತಕಿ; ಗಾಯಕಿ. ಕುಲವೃತ್ತಿಯನ್ನು ಶ್ರದ್ಧೆಯಿಂದ ನಡೆಸಿದವಳು. ಮುಂಬಯಿಯ ಪೋಲಿಸ್ ಕಮಿಶನರರಿಗೆ ಆಕೆ 24-6-1924ರಲ್ಲಿ ಒಂದು ಅರ್ಜಿ ಬರೆದಳು. ಆ ಅರ್ಜಿಯ ಯಥಾಪ್ರತಿ ಲಾಹೋರಿನ ಮಿಲಿಟರಿ ಗಜೆಟ್ಟನಲ್ಲಿ ಪ್ರಕಟವಾಯಿತು. ಆಕೆ ಬರೆದುಕೊಂಡ ಫಿರ್ಯಾದಿಯ ಪೂರ್ಣ ಪಾಠ ಇಂತಿದೆ—

"ವೃತ್ತಿಯಿಂದ ನಾನು ಗಾಯಕಿ. ನನ್ನ ಮಗಳು ಮುಮ್ತಾಜಳಿಗೆ ಗಾಯನ, ನರ್ತನ ಎರಡೂ ನೀರು ಕುಡಿದಂತೆ. 1917ರ ಸುಮಾರಿನಲ್ಲಿ ಇಂದೂರಿನ ಮಹಾರಾಜರು ನಮ್ಮಿಬ್ಬರನ್ನು ಸಂಬಳದ ಮೇಲೆ ಆಸ್ಥಾನದ ಗಾಯಕಿಯರನ್ನಾಗಿ ನೇಮಿಸಿಕೊಂಡರು.

ಇಂದೂರು ಸೇರಿದ ಕೆಲಕಾಲದ ಮೇಲೆ ಮಗಳು ಋತುಮತಿಯಾದಳು. ಅಂದಿನಿಂದ ಮಹಾರಾಜರು ನನ್ನ ಮಗಳನ್ನು ತಮ್ಮ ಸ್ತ್ರೀಯನ್ನಾಗಿ ಇಟ್ಟುಕೊಂಡರು. ನಾವು ಇಂದೂರು ಬಿಟ್ಟು ಬರದಂತೆ ನಮ್ಮ ಮೇಲೆ ದಿಗ್ಬಂಧನ ಹಾಕಿದರು.

1919ರ ಏಪ್ರಿಲಿನಲ್ಲಿ ಮುಂಬಯಿಗೆ ಮಹಾರಾಜರು ದಯಮಾಡಿಸಿದರು. ನಮ್ಮನ್ನೂ ಮುಂಬಯಿಗೆ ಕರೆತಂದರು. ನಮ್ಮನ್ನು ಹುಸೇನ್ ಭಾಯಿ ಬಂಗಲೆಯಲ್ಲಿ ಇರಿಸಿ, ಅವರು ತಾಜಮಹಲ್ ಹೋಟೆಲಿನಲ್ಲಿ ತಂಗಿದರು.

ಏಪ್ರಿಲ್ 27ರಂದು ಮಹಾರಾಜರು ನಾವಿದ್ದ ಬಂಗಲೆಗೆ ಬಂದರು. ಆಗ ಅವರ ಜೊತೆಯಲ್ಲಿ ಶ್ರೀ ಶಂಕರರಾವ್ ಬಾಪೂರಾವ್ ಎನ್ನುವ ಅವರ ಮ್ಯಾನೆಜರ್ ಬಂದಿದ್ದರು. ಮುಮ್ತಾಜಳನ್ನು ಸಿನೆಮಕ್ಕೆ ಕರೆದೊಯ್ಯುದುವುದಾಗಿಯೂ, ಸಂಜೆ ತಂದುಬಿಡುವುದಾಗಿಯೂ ಹೇಳಿ ಆಕೆಯನ್ನು ತಮ್ಮೊಡನೆ ಕರೆದುಕೊಂಡು ಹೋದರು. ಆದರೆ ಮಗಳನ್ನು ಹಿಂತಿರುಗಿಸಲಿಲ್ಲ. ಆಕೆ ಪ್ರೈನರಳು. ಆಕೆಯನ್ನು ನನ್ನ ಒಪ್ಪಿಗೆಯಿಲ್ಲದೆ, ಅವಳ ಇಚ್ಛೆಗೆ ವಿರೋಧವಾಗಿ ಇಂದೂರಿಗೆರವಾನಿಸಿದ್ದಾರೆ. ಹೀಗೆಂದು ನಾನು ಮುಂಬಯಿಯ ಪೋಲಿಸ್ ಕಮಿಷನರಿಗೆ ದೂರುಕೊಟ್ಟೆ. ನನ್ನ ಫಿರ್ಯಾದಿಯ ತನಿಖೆ ನಡೆಯಿತು. ಮಹಾರಾಜರ ಮ್ಯಾನೆಜರ್ ಶ್ರೀ ಶಂಕರರಾಯರನ್ನು ಪೋಲಿಸರು ಬಂಧಿಸಿದರು. ಆದರೆ ಮುಮ್ತಾಜಳು ಪ್ರೈನರಳೆಂಬುದಕ್ಕೆ ಆಧಾರಗಳಿಲ್ಲವೆಂದು ತನಿಖೆಯನ್ನು ಪೋಲಿಸರು ಕೈಬಿಟ್ಟರು. ನನ್ನ ಮಗಳು ಮಹಾರಾಜರ ಬಂಧನದಲ್ಲಿ ಉಳಿದಳು.

1921ರ ಏಪ್ರಿಲ್ ತಿಂಗಳಲ್ಲಿ ಇಂದೂರಿನ ಪ್ರಭುಗಳು ಇಂಗ್ಲಂಡಿಗೆ ಪ್ರವಾಸ ಹೊರಟರು. ಅವರು ವಿಲಾಯತಿಗೆ ಹೊರಟು ಹೋದ ನಂತರ ನನ್ನ ಮಗಳನ್ನು ಇಂದೂರಿನಿಂದ ಮುಂಬಯಿಗೆ ಕರೆತರಲಾಯಿತು. ಹಾಗೆ ಮುಂಬಯಿಗೆ ಕರೆತಂದ ಅವಳನ್ನು ಚೌಪಾತಿಯಲ್ಲಿನ ಒಂದು ಬಂಗಲೆಯಲ್ಲಿ ಗೋಪ್ಯವಾಗಿ ಇಟ್ಟರು. ಅದು ಹೇಗೋ ನನಗೆ ತಿಳಿಯಿತು. ಅವಳನ್ನು ವಿಲಾಯತಿಗೆ ಕರೆತರುವಂತೆ ಮಹಾರಾಜರು ಶ್ರೀ ಶಂಕರರಾಯರಿಗೆ ಆಜ್ಞೆ ಮಾಡಿದ್ದರು. ಕಮಲಾಬಾಯಿ ಎನ್ನುವ ಹೆಸರಿನಲ್ಲಿ ಅವಳಿಗಾಗಿ ಸ್ಟೀಮರಿನಲ್ಲಿ ಸ್ಥಳ ಕಾಯ್ದಿರಿಸಿದ್ದರು. ಈ ಗುಪ್ತನಾಮದಲ್ಲಿ ನನ್ನ ಮಗಳನ್ನು ಶ್ರೀ ಹೋಳ್ಕರ್ ವಿಲಾಯತಿಗೆ ಒಯ್ಯುತ್ತಿದ್ದಾರೆ ಎಂದು ನಾನು ಪೋಲೀಸರಲ್ಲಿ ಇನ್ನೊಮ್ಮೆ ಮೊರೆಯಿಟ್ಟೆ.

ಶ್ರೀ ಫುಲ್ಲರರನ್ನು ತನಿಖೆಗೆ ನೇಮಿಸಿದರು. ನನ್ನ ಮಗಳನ್ನು ಅಷ್ಟರಲ್ಲಿ ಸ್ಟೀಮರಲ್ಲಿ ಕುಳ್ಳಿರಿಸಿದ್ದರು. ಒಬ್ಬ ಆಂಗ್ಲ ಮಹಿಳೆ ಸ್ಟೀಮರಲ್ಲಿದ್ದ ನನ್ನ ಮಗಳನ್ನು ಸಂದರ್ಶಿಸಿದಳು. ಅವರಿಬ್ಬರೂ ಮಾತನಾಡಿಕೊಂಡರು. ನಾನು ಅವರ ಇದಿರು ಇರಲಿಲ್ಲ. ಮಗಳು ಏನು ಹೇಳಿದಳೋ ತಿಳಿಯದು. ಆದರೆ ಮಗಳನ್ನು ಭೆಟ್ಟಿಯಾದ ಬಿಳಿಯಾಕೆ ಮುಮ್ತಾಜ್ ಸ್ವಸಂತೋಷದಿಂದ ಇಂಗ್ಲೆಂಡಿಗೆ ಹೊರಟಿರುವಳೆಂದು ತಿಳಿಸಿದಳು. ಆದ್ದರಿಂದ ಆ ವಿಚಾರವನ್ನು ಪೋಲೀಸರು ಅಲ್ಲಿಗೇ ಬಿಟ್ಟುಕೊಟ್ಟರು.

ಆಕೆ ಸ್ಟೀಮರಲ್ಲಿ ಇಂಗ್ಲೆಂಡಿಗೆ ಹೊರಟು ಹೋದಳು.

ಇದು ನಡೆದ 2 ವರ್ಷಗಳ ನಂತರ ನಾನು ಶ್ರೀ ಮಹಮ್ಮದಾಲಿ ಎನ್ನುವವರನ್ನು ಮದುವೆಯಾದೆ. ಅವರೊಡನೆಯೇ ನಾನು ಈಗ ಇದ್ದೇನೆ. ಈ ಎರಡು ವರ್ಷಗಳ ಅವಧಿಯಲ್ಲಿ ನನ್ನ ಮಗಳನ್ನು ನೋಡುವುದಕ್ಕೂ ನನಗೆ ಅವಕಾಶ ಕೊಡಲಿಲ್ಲ. ಅವಳು ಇಂದೂರಿನ ಮಹಾರಾಜರ ಬಾಂದಿಯಾಗಿ ಬಾಳುವೆ ಮಾಡುತ್ತಿದ್ದಳು

ಇಂಗ್ಲೆಂಡಿನಿಂದ ಹಿಂತಿರುಗಿದ ಮೇಲೆ ನನ್ನ ಮಗಳು ಗರ್ಭ ಧರಿಸಿದಳು. ಅವಳ ಹೊಟ್ಟೆಯಲ್ಲಿ ಮಹಾರಾಜರ ಕೂಸು ಬೆಳೆಯುತ್ತಿತ್ತು. ಆಕೆ ಏಳನೆಯ ತಿಂಗಳಲ್ಲಿ ಕಾಲಿರಿಸಿದಳು. ಅವಳಿಗೆ ನನ್ನನ್ನು ಕಾಣುವ ಬಯಕೆಯಾಯಿತು. ಅವಳ ಒತ್ತಾಯಕ್ಕೆ ಮಣಿದು ಮಹಾರಾಜರು ನಮ್ಮನ್ನು ಇಂದೂರಿಗೆ ಕರೆಸಿಕೊಂಡರು. ಅವಳ ಹೆರಿಗೆಯ ಕಾಲದಲ್ಲೂ, ಅನಂತರವೂ ನಾನು ಅವಳ ಜೊತೆ ಇದ್ದೆ. ಅಲ್ಲಿ ಉಳಿದಷ್ಟು ದಿನ ಶ್ರೀ ತುಕೋಜಿರಾಯರ ಸರ್ಪಗಾವಲು ನಮ್ಮ ಮೇಲಿತ್ತು. ತಿಂಗಳು ತುಂಬಲು ಮುಮ್ತಾಜ್ ಹೆಣ್ಣುಮಗುವಿಗೆ ಜನ್ಮಕೊಟ್ಟಳು. ಹುಟ್ಟಿದಾಗ ಮಗುವಿಗೆ ಜೀವವಿತ್ತು. ಆದರೆ ಹುಟ್ಟಿದ ಸ್ವಲ್ಪ ವೇಳೆಯ ನಂತರ ದಾದಿಯರು ಒಂದು ಮಗು ಸತ್ತುಹೋಯಿತು ಎಂದು ನುಡಿದರು. ಕೂಸಿನ ಹೆಣವನ್ನು ನಮಗಾರಿಗೂ ತೋರಿಸದೆ ಮಣ್ಣು ಮಾಡಿದರು. ಇದರಿಂದ ನನ್ನ ಮಗಳು ಭೂಮಿಗಿಳಿದು ಹೋದಳು. ಅವಳಿಗೆ ಅರಮನೆ ಬೇಡವಾಯಿತು. ಮಹಾರಾಜರ ಆಶ್ರಯವನ್ನು ತೊರೆಯಲು ಅವಳು ನಿರ್ಧರಿಸಿದಳು. ಆದರೆ ಇಂದೂರನ್ನು ಬಿಡುವುದು ಸುಲಭವಿರಲಿಲ್ಲ.

192೧ರ ಫೆಬ್ರವರಿಯಲ್ಲಿ ಮಹಾರಾಜರು ಭಾನುಪುರಕ್ಕೆ ಶಿಕಾರಿಗೆ ಹೊರಟುನಿಂತರು. ಅಲ್ಲಿಗೆ ನಮ್ಮಿಬ್ಬರನ್ನು ಕರೆತರಲು ಆಜ್ಞೆ ಮಾಡಿದರು. ಸಾಮಾನ್ಯ ಬಟ್ಟೆ—ಬರೆ, ಆಭರಣ, ಪಾತ್ರೆ—ಪರಡಿಯೊಡನೆ ನಾವು ಭಾನುಪುರಕ್ಕೆ ಶ್ರೀ ಸುಳಿಯವರ ಕಾವಲಿನಲ್ಲಿ ಬಂದೆವು. ನಮ್ಮ ಅಮೂಲ್ಯ ಒಡವೆ—ವಸ್ತುಗಳು ಇಂದೂರಲ್ಲುಳಿಯಿತು. ಅದನ್ನೊಯ್ಯುವುದಕ್ಕೆ ಮಹಾರಾಜರ ಒಪ್ಪಿಗೆ ಬೇಕೆಂದು ಶ್ರೀ ಸುಳೆ ತಿಳಿಸಿದರು. ಅವರು ಅರಮನೆಯ ಚಾಕರರ ಮೇಲ್ವಿಚಾರಕರು. ತೀರ ನೊರಗಿ ಹೋಗಿದ್ದ ಮುಮ್ತಾಜ್ ಮಹಾರಾಜರನ್ನು ರಮಿಸುವಂತಿರಲಿಲ್ಲ. ಜಿಗುಪ್ಸೆ ತಳೆದ ಮಹಾರಾಜರು "ಇಷ್ಟಪಟ್ಟಲ್ಲಿ ನೀನು ಇಂದೂರು ಬಿಟ್ಟು ಹೋಗಬಹುದು" ಎಂದು ತಿಳಿಸಿದರು. ಆದರೆ ಹಾಗೆ ಆಜ್ಞೆ ಮಾಡಲು ಮನಸ್ಸು ಮಾಡಲಿಲ್ಲ.

ಭಾನುಪುರದಲ್ಲಿ ನಾವು ಕೆಲವು ದಿನ ಕಳೆದೆವು. ಮಹಾರಾಜರು ಅಲ್ಲಿಂದ ಮುಸೋರಿಗೆ ಹೊರಡಲನುವಾದರು. ನಮಗೂ ಬರುವಂತೆ ಬಲವಂತ ಪಡಿಸಿದರು. ನಾವು ಮುಸೋರಿಗೆ ಹೋಗಲು ನಿರಾಕರಿಸಿದೆವು. ಅಮೃತಸರಕ್ಕೆ ಕಳುಹಿಸಿ ಕೊಡುವಂತೆ ಬೇಡಿಕೊಂಡೆವು. ಶ್ರೀ ಸುಳೆ ನಮ್ಮನ್ನು ಬೆದರಿಸಿದ, ರಕ್ಷಣೆಗಾಗಿನಾನು ಮುಂಬಯಿಯ, ದೆಹಲಿಯ ಪೋಲಿಸರನ್ನು ಅಂಗಲಾಚಿದೆ. ಮಾರ್ಚ 22ರಂದು ನಮ್ಮ ಪರಿವಾರ ದೆಹಲಿ ತಲುಪಿತು. ಅಂದೇ ನಾನು ವೈಸರಾಯರಿಗೆ ಇದ್ದ ಸಂಗತಿಯನ್ನು ತಂತಿಯ ಮುಖೇನ ತಿಳಿಸಿದೆ. ದೆಹಲಿಯ ರೈಲ್ವೇ ನಿಲ್ದಾಣದಲ್ಲಿ ಶ್ರೀ ಸುಳೆ ನಮ್ಮನ್ನು ಬಲವಂತದಿಂದ ಮುಸೋರಿಗೆ ಒಯ್ಯಲು ಹವಣಿಸಿದ. ರೈಲ್ವೇ ಪೋಲಿಸರು ಮಧ್ಯೆ ಪ್ರವೇಶಿಸಿದರು. ಅವರು ನಮ್ಮಿಬ್ಬರನ್ನು ಅಮೃತಸರಕ್ಕೆ ಕಳುಹಿಸಿದರು–ಅಮೃತಸರ ಮುಟ್ಟಿದೊಡನೆ ನಾನು ಮಹಾರಾಜರಿಗೊಂದು ತಂತಿ ಕಳುಹಿಸಿದೆ. ಅವರಿಂದ ಮರು ತಂತಿಯೂ ಬಂತು.

ಅಮೃತಸರದಲ್ಲಿದ್ದಾಗ ಇಂದೂರಿನ ಮಹಾರಾಜರ ನೌಕರ ಶ್ರೀ ರಾಮ ಬಾಬು ನನ್ನನ್ನು ಭೆಟ್ಟಿ ಮಾಡಿ ಇಂದೂರಿಗೆ ಬರಲು ಆಗ್ರಹ ಪಡಿಸಿದರು. ಬಾರದಿದ್ದರೆ ಅನರ್ಥ ಪರಂಪರೆ ಬಂದೊದಗುವುದು ಖಂಡಿತ ಎಂ

(ಹನ್ನೊಂದನೇ ಪುಟ ನೋಡಿರಿ)

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಪ್ರತಿ ಗುರುವಾರ ಪ್ರಕಟವಾಗುವ
ನಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 35

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಎಲ್ಲ ಶಾಲೆಗಳನ್ನೂ ಸರಕಾರವೇ ವಹಿಸಲಿ

ಸುಮಾರು ಒಂದು ದಶಕದ ನಿರಂತರ ಹೋರಾಟದ ಬಳಿಕ ರಾಜ್ಯದ ಸ್ಥಳೀಯ ಸಂಸ್ಥೆಗಳ ಪ್ರೌಢ ಶಾಲಾ ಶಿಕ್ಷಕರ ಮೊರೆಯನ್ನು ಸರಕಾರ ಕೇಳಿಕೊಂಡಿತು. ಈ ಪ್ರೌಢ ಶಾಲೆಗಳನ್ನು ನಿಶ್ಶರ್ತವಾಗಿ ಸರಕಾರಕ್ಕೆ ಒಪ್ಪಿಸಲು ಸ್ಥಳೀಯ ಸಂಸ್ಥೆಗಳನ್ನು ಬಿಡು ಕೆಲಸಮಯಕ್ಕೆ ಹಿಂದೆಯೇ ಕೇಳಿತ್ತು. ಹೀಗೆ ಬರುವ ಪ್ರೌಢ ಶಾಲೆಗಳನ್ನು ಸರಕಾರವು ವಹಿಸಿಕೊಳ್ಳಲು ಮುಂದೆ ಬಂದಿತ್ತು. ಆದರೆ, ಕೆಲವು ಸ್ಥಳೀಯ ಸಂಸ್ಥೆಗಳು ನಿಶ್ಶರ್ತವಾಗಿ ತಮ್ಮ ವಶದಲ್ಲಿರುವ ಪ್ರೌಢಶಾಲೆಗಳನ್ನು ಸರಕಾರಕ್ಕೆ ಒಪ್ಪಿಸಲು ನಿರಾಕರಿಸಿದವು. ಆದುದರಿಂದ ಈ ಬಗ್ಗೆ ಹಿಂದಿನ ವೀರೇಂದ್ರ ಪಾಟೀಲರ ಸರಕಾರವು ಬಹಳವಾಗಿ ಆಲೋಚಿಸಿ ಶಿಕ್ಷಕರ ಹಿತದೃಷ್ಟಿಯಿಂದ ಮಹತ್ವದ ನಿರ್ಣಯವನ್ನು ಕೈಗೊಂಡಿತ್ತು. ಇದರಂತೆ, ನಿಶ್ಶರ್ತವಾಗಿಬರುವ ಪ್ರೌಢಶಾಲೆಗಳ ಆಡಳಿತವನ್ನು ಸರಕಾರವು ನೇರವಾಗಿ ವಹಿಸುವುದು.ಬಾರದವುಗಳ ಶಿಕ್ಷಕರನ್ನೂ ಸರಕಾರಿ ನೌಕರರೆಂದೇ ಪರಿಗಣಿಸಲಾಗುವುದು. ಈ ಸಂಬಂಧದ ಸರಕಾರಿ ಆಜ್ಞೆ ಇದೀಗ ಹೊರಬಿದ್ದು ಇದು ಮೊನ್ನೆ ಎಪ್ರಿಲ್ ೧ರಿಂದ ಕಾರ್ಯರೂಪಕ್ಕೆ ಬಂದಿದೆ.

ರಾಜ್ಯದಲ್ಲಿ ೧೦೭ ಪುರಸಭಾ ಆಡಳಿತದ ಪ್ರೌಢ ಶಾಲೆಗಳು, ೩೭೧ ತಾಲೂಕು ಅಭಿವೃದ್ಧಿ ಮಂಡಳಿಯ ಆಡಳಿತದವುಗಳು ಮತ್ತು ೪ ಪಂಚಾಯತ ಆಡಳಿತದವುಗಳು ಹೀಗೆ ಒಟ್ಟು ೪೮೨ ಪ್ರೌಢ ಶಾಲೆಗಳನ್ನು ಸ್ಥಳೀಯ ಸಂಸ್ಥೆಗಳು ನಡೆಸುತ್ತಿದ್ದವು. ಇವುಗಳಲ್ಲಿ ೩೬೯ (ಪುರಸಭಾಡಳಿತ-೭೧, ತಾಲೂಕು ಬೋರ್ಡು ೨೯೫, ಪಂಚಾಯತ ೩)ಶಾಲೆಗಳನ್ನು ನಿಶ್ಶರ್ತವಾಗಿ ಸರಕಾರಕ್ಕೆ ಒಪ್ಪಿಸಲು ಸಂಬಂಧಿಸಿದ ಆಡಳಿತಗಳು ಒಪ್ಪಿದ್ದು ಅವುಗಳನ್ನು ಸರಕಾರವು ವಹಿಸಿದೆ. ಇನ್ನೂ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿರುವ ಪ್ರೌಢಶಾಲೆಗಳ ಶಿಕ್ಷಕರಿಗೆ ಸರಕಾರಿ ಶಾಲೆಗಳಲ್ಲಿ ಅವಕಾಶ ಕಲ್ಪಿಸಬಹುದು. ಅಥವಾ ಅವರ ಸೇವೆಯನ್ನು ಸ್ಥಳೀಯ ಸಂಸ್ಥೆಗಳಿಗೆ ಎರವಲ ಕೊಟ್ಟಂತೆ ಪರಿಗಣಿಸಲೂಬಹುದು. ಅಂದರೆ, ೧-೪-೭೧ರಂದು ನೌಕರಿಯಲ್ಲಿದ್ದ ಎಲ್ಲ ನೌಕರರೂ ಸರಕಾರಿ ನೌಕರರೆಂದು ಪರಿಗಣಿತರಾಗುತ್ತಾರೆ. ಇದು ಸಮಾಧಾನಕರ. ಇತ್ತೀಚೆಗೆ ಪ್ರೌಢಶಾಲಾ ಸಿಬಂಧಿಯ ವೇತನ-ಭತ್ತೆಗಳನ್ನು ಸರಕಾರವೇ ನೇರವಾಗಿ ಬಟವಾಡೆ ಮಾಡುತ್ತಿರುವುದರಿಂದ ಸ್ಥಳೀಯ ಸಂಸ್ಥೆಗಳು ನಾಮಮಾತ್ರ ಆಡಳಿತದಾರರಾಗಿವೆ. ಆದರೂ ನೇಮಕ-ಭಡ್ತಿ-ವರ್ಗಾವಣೆಗಳಲ್ಲಿ ಸ್ಥಳೀಯ ರಾಜ್ಯಕಾರಣ ತಲೆಹಾಕುತ್ತಿದ್ದ ಉದಾಹರಣೆಗಳೂ ಧಾರಾಳವಿವೆ. ಇದಕ್ಕೆ ಅಪವಾದಗಳು ಕೆಲವಿರಬಹುದೆಂಬುದನ್ನು ಅಲ್ಲಗಳೆಯಲಾಗದೆಂಬುವನ್ನೂ ಒಪ್ಪಿಕೊಳ್ಳಬೇಕು.

ಶಿಕ್ಷಣದ ಮಹತ್ವ ರಾಷ್ಟ್ರೀಯವಾದುದು. ದೇಶದ ಆವಶ್ಯಕತೆಗೆ ತಕ್ಕಂತೆ ಸಮಾನಪಾಠಪಟ್ಟಿ-ಸಮಾನ ಪರೀಕ್ಷಾವಿಧಾನಗಳಿದ್ದರೂ ಆಡಳಿತದಲ್ಲಿಯೂ ಸಮಾನತೆಯಿರುವುದು ಅಗತ್ಯ. ಯಾವುದೇ ವಿಧಿ-ವಿಧಾನವನ್ನು ಅನುಷ್ಠಾನಕ್ಕೆ ತರುವಲ್ಲಿ ಏಕ ಆಡಳಿತೆಯು ಅನುಕೂಲವಾಗುತ್ತದೆ. ಶಾಲಾ ಶಿಕ್ಷಣದ ಹೊಣೆಗಾರಿಕೆ ಸರಕಾರದ್ದೇ ಆದುದರಿಂದ ಎಲ್ಲ ಪ್ರಾಥಮಿಕ-ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳನ್ನೂ ಸರಕಾರವೇ ವಹಿಸಿಕೊಳ್ಳುವುದು ಅತ್ಯಂತ ಅಪೇಕ್ಷಣೀಯವಾಗಿದೆ. ಖಾಸಗಿ ಶಾಲಾ ಶಿಕ್ಷಕರ ಗೋಳನ್ನು ನಾವು ಪ್ರತಿನಿತ್ಯ ಕೇಳುತ್ತಿರುತ್ತೇವೆ. ಖಾಸಗಿ ವ್ಯಕ್ತಿಗಳೂ, ಸ್ಥಳೀಯ ಸಂಸ್ಥೆಗಳೂ ಶಿಕ್ಷಕರನ್ನು ಕಾಣುತ್ತಿರುವ ದೃಷ್ಟಿ ಅತ್ಯಂತ ಕ್ರೂರವಾಗಿದ್ದು ಅವರೆಲ್ಲರನ್ನೂ ವಿದ್ಯಾ ಇಲಾಖೆಯ ಸುಪರ್ದಿಗೆ ತಂದರೆ, ಭದ್ರತೆ-ಸೌಲಭ್ಯಗಳು ಹೆಚ್ಚಿ ಶಿಕ್ಷಕರು ತಮ್ಮೆಲ್ಲ ಸಮಯವನ್ನೂ ತಮ್ಮ ಉದ್ಯೋಗದಲ್ಲಿ ಕೇಂದ್ರೀಕರಿಸುವಂತೆ ಮಾಡಬಹುದು. 'ಸಮಾಜವಾದ'ವನ್ನು ಈ ಕ್ಷೇತ್ರದಲ್ಲಿ ವ್ಯವಹಾರಕ್ಕೆ ತರಬಹುದು. ಖಾಸಗಿ ಶಾಲೆಗಳ ಶಿಕ್ಷಕರಿಗೆ ಭಡ್ತಿಯ ಯಾವ ಅವಕಾಶವೂ ಇಲ್ಲವಾದುದರಿಂದ ಅವರದ್ದು ಅಸಹಾಯಕ ಪರಿಸ್ಥಿತಿಯೆಂಬುದನ್ನು ಮರೆಯಬಾರದು.

ಸದ್ಯ ಖಾಸಗಿ ಶಾಲೆಗಳ ಶಿಕ್ಷಣ ಮಟ್ಟ ಉತ್ತಮವಾಗಿದ್ದು, ಅವನ್ನೂ ಸರಕಾರ ವಹಿಸಿಕೊಂಡರೆ, ಅದು ಇಳಿಯಬಹುದೆಂಬ ಭೀತಿ ಕೆಲವರು ವ್ಯಕ್ತಪಡಿಸಬಹುದು. ಈ ಭೀತಿ 'ಸರಕಾರಿ ಅಧ್ಯಾಪಕ'ರಲ್ಲಿ ಅವಿಶ್ವಾಸ ತೋರಿಸಿದಂತೆ. ಆದರೆ, ಸರಿಯಾದ ರೀತಿಯಲ್ಲಿ ಆಡಳಿತೆ ನಡೆಸಿಕೊಂಡು ಹೋದರೆ ಶಿಕ್ಷಣದ ಮಟ್ಟ ಇಳಿಯಲಾರದು. ಅರ್ಹತೆಯ ಮೇಲೆ ಶಿಕ್ಷಕರ ನೇಮಕ, ನೇಮಕದಲ್ಲಿ ವೈಧಾನಿಕ ಸರಳತೆ, ಆವಶ್ಯಕ ಸಂಖ್ಯೆಯಷ್ಟು ಅಧ್ಯಾಪಕರ ನೇಮಕ, ವರ್ಗಾವಣೆಯಲ್ಲಿ ಸೌಕರ್ಯ ಕಲ್ಪನೆ, ಹುದ್ದೆಯನ್ನು ಕೂಡಲೆ ತುಂಬಿಕೊಳ್ಳುವುದು -ಈಯಲ್ಲೆಡೆಯಾಗುತ್ತಿರುವ ನಿಧಾನ ಪ್ರವೃತ್ತಿಯೇ ಶಿಕ್ಷಣದ ಮಟ್ಟ ಇಳಿಯಲು ಮುಖ್ಯ ಕಾರಣ. ಮಂದಮತಿ ವಿದ್ಯಾರ್ಥಿಗಳೂ ತರಲೆ ಸ್ವಭಾವದ ಶಿಕ್ಷಕರೂ ಇಲ್ಲಿ ಗೌಣಾಂಶ. ಇದೀಗ ೧-೪-೭೧ರ ನಂತರವೂ ಸ್ಥಳೀಯ ಸಂಸ್ಥೆಗಳ ಪ್ರೌಢ ಶಾಲೆಗಳು ಉಳಿಯುವಂತಾಗಿದೆ; ಅವುಗಳಲ್ಲಿ ಅಂದಿದ್ದ ನೌಕರರೇನೋ ಸರಕಾರಿ ನೌಕರರಾದರು. ಮುಂದೆ ಸೇರುವವರು ಸ್ಥಳೀಯ ಸಂಸ್ಥೆಗಳ ನೌಕರರೇ ಆಗುತ್ತಾರೆ. ಆಗ ಇವರದ್ದೊಂದು ಸಮೂಹ ನಿರ್ಮಾಣವಾಗೇ ತೀರುತ್ತದೆ. ಇದೆಲ್ಲ ಸಮರ್ಪಕವಾಗುವುದಿಲ್ಲ. ಸರಕಾರ ದೊಡ್ಡ ದೊಡ್ಡ ಮೆಡಿಕಲ್—ಇಂಜಿನಿಯರಿಂಗ್ ಕಾಲೇಜುಗಳನ್ನು ವಹಿಸಿಕೊಳ್ಳುವುದರ ಬದಲಿಗೆ ಎಲ್ಲ ಖಾಸಗಿ ಮತ್ತು ಸ್ಥಳೀಯ ಸಂಸ್ಥೆಗಳ ಆಡಳಿತೆಯಲ್ಲಿನ ಪ್ರಾಥಮಿಕ-ಮಾಧ್ಯಮಿಕ ಶಾಲೆಗಳನ್ನು ವಹಿಸಿಕೊಂಡು, ಶಾಲಾಶಿಕ್ಷಣದ ಸಂಪೂರ್ಣ ಹೊಣೆಗಾರಿಕೆಯನ್ನು ತಾನೇ ವಹಿಸುವ ಎದೆಗಾರಿಕೆಯನ್ನು ತೋರಿಸುವುದೀಗ ಅಪೇಕ್ಷಣೀಯ. ಅದಾದ ಮೇಲೆ ಶಿಕ್ಷಣದ ಕುಂದು ಕೊರತೆಗಳನ್ನು ನೀಗಿಸಲು ಏಕಮುಖವಾಗಿ ಪ್ರಯತ್ನಿಸುವುದು ಸುಲಭಸಾಧ್ಯವಾಗುವುದು.

ಡಾ| ಗಾಡಗೀಳ

ಯೋಜನಾ ಆಯೋಗದ ಉಪಾಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಿ, ಅದನ್ನು ತ್ಯಜಿಸಿ ದಿಲ್ಲಿಯಿಂದ ಪುಣೆಗೆ ಪ್ರಯಾಣಮಾಡುತ್ತಿದ್ದ ಡಾ| ಡಿ. ಆರ್. ಗಾಡಗೀಳರು ಪ್ರಯಾಣ ವೇಳೆಯಲ್ಲೇ ಹಠತ್ತಾಗಿ ನಿಧನರಾದರು. ರೇಲಿನಲ್ಲಿ ಆ ವೇಳೆ ಅವರ ಪತ್ನಿ ಮತ್ತು ಕುಟುಂಬದ ಕೆಲವು ಸದಸ್ಯರೂ ಇದ್ದರು. ಹೃದಯ ವೇದನೆಯ ಕುರುಹು ಪ್ರಯಾಣದ ಮುನ್ನಾ ದಿನವೇ ಇದ್ದುದರಿಂದ ಜತೆಯಲ್ಲೊಬ್ಬ ವೈದ್ಯರೂ ಇದ್ದರು.

ಅವರಿಗೆ ಎಪ್ಪತ್ತು ನಡೆಯುತ್ತಿತ್ತು. ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರಾಗಿದ್ದ ಡಾ| ಗಾಡಗೀಳರದು ಬಹು ಬಣ್ಣದ ಬದುಕಾಗಿತ್ತು.

ನಾಗಪುರ ಮತ್ತು ಕೇಂಬ್ರಿಜ್‌ಗಳಲ್ಲಿ ಶಿಕ್ಷಣ ಪಡೆದನಂತರ ಪುಣೆಯ ಗೋಖಲೆ ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ಸಂಸ್ಥೆಯ ಸ್ಥಾಪಕ ನಿರ್ದೇಶಕರಾಗಿದ್ದು ಮೂವತ್ತೇಳು ವರ್ಷಕಾಲ ಅದರ ಸೇವೆ ಸಲ್ಲಿಸಿದರು. ಈ ನಡುವೆ ೧೯೫೦ರಿಂದ ೫೨ರ ವರೆಗೆ ಪಂ. ನೆಹರು ಕಾಲದಲ್ಲಿ ರಾಷ್ಟ್ರೀಯ ಪರಮಾನ ಸಮಿತಿಯ ಸದಸ್ಯರಾಗಿದ್ದರು. ಆ ಬಳಿಕ, ರಾಜ್ಯಸಭೆಯ ಸದಸ್ಯರಾದರು. ಪುಣೆ ವಿಶ್ವವಿದ್ಯಾಲಯದ ಉಪಕುಲಪತಿಯಾದರು. ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಯೋಜನಾ ಆಯೋಗದ ಉಪಾಧ್ಯಕ್ಷ ಪದವಿಯನ್ನು ಅವರಿಗೆ ಕೊಡಮಾಡಿದರು. ಈ ಹುದ್ದೆಯಲ್ಲಿರುವಾಗ, ಅವರು ಯೋಜನೆಯ ವಿಕೇಂದ್ರೀಕರಣಕ್ಕೆ ಬಹಳ ಮಹತ್ವವನ್ನು ನೀಡಿದರು. ಜಿಲ್ಲಾ ಮಟ್ಟದ ಯೋಜನೆಯನ್ನು ಜ್ಯಾರಿಗೆ ತಂದರು. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸೂತ್ರವೊಂದರಂತೆ ರಾಜ್ಯಗಳಿಗೆ ಕೇಂದ್ರದ ಸಹಾಯಧನದ ಪ್ರಮಾಣದ ಸಮಸ್ಯೆಯನ್ನು ಪರಿಹಾರ ಮಾಡಿದರು. ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯಲ್ಲಿ ಇವರಿಗೆ ತುಂಬ ಕಾಳಜಿಯಿತ್ತು. ಡಾ| ಗಾಡಗೀಳರು ಪ್ರಸಿದ್ಧ ಅರ್ಥಶಾಸ್ತ್ರಿ, ಶಿಕ್ಷಣ ತಜ್ಞ ಮತ್ತು ಸಹಕಾರ ಪಂಡಿತ. ದಿವಂಗತ ಗಾಡಗೀಳರು ಸುಮಾರು ೨೪ ಗ್ರಂಥಗಳ ಕರ್ತರು. ಪ್ರಧಾನಿಯವರು ಯೋಜನಾ ಆಯೋಗ-ಸರಕಾರಗಳ ನಡುವಣ ಭಿನ್ನಾಭಿಪ್ರಾಯವನ್ನು ಕಡಿಮಾಡಲು ಆಯೋಗವನ್ನು ಯೋಜನಾ ಮಂತ್ರಿಶಾಖೆಗೇ ಸೇರಿಸಿ ಯೋಜನಾ ಆಯೋಗವನ್ನು ಸರಕಾರೀ ಆಯೋಗವಾಗಿ ಪುನಾರೂಪಿಸ ಹೊರಟದ್ದರಿಂದ ಡಾ| ಗಾಡಗೀಳರು ರಾಜಿನಾಮೆ ನೀಡಿದರು.

ಸ್ವಾತಂತ್ರ್ಯಪೂರ್ವದ ಕೆಲವೇ ಪ್ರತಿಭಾಸಂಪನ್ನ ವ್ಯಕ್ತಿಗಳಲ್ಲಿ ಒಬ್ಬರಾದ ಡಾ| ಗಾಡಗೀಳರ ಆತ್ಮಕ್ಕೆ ಚಿರಶಾಂತಿಯಿರಲಿ.

● ●

ಜೀವವಿಮಾ ಸಂಸ್ಥೆಯ ಜನಜೀವನ

ರೂ. 1750 ಕೋಟಿ ವ್ಯವಹಾರದ ನಿರೀಕ್ಷೆ

ಇದೇ ತಾ. 7ರಂದು ವಿಮಾ ಏಜಂಟರಿಗೆ ಬಹುಮಾನ ವಿತರಣೆ ಮಾಡುವ ಸಮಾರಂಭವು ಮಣಿಪಾಲ ವ್ಯಾಲಿವ್ಯೂ ಸಭಾಂಗಣದಲ್ಲಿ ಜೀವವಿಮಾ ಸಂಸ್ಥೆಯ ಅಧ್ಯಕ್ಷ ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಅವರು ಮಾತನಾಡುತ್ತ ಕಳೆದ ವರ್ಷ ಎಲ್. ಐ. ಸಿ. ಯ ವ್ಯವಹಾರ ರೂ. 1303 ಕೋಟಿಯಷ್ಟು ಆಗಿದೆ. ಇವರ ಬೆಳವಣಿಗೆಯು ಒಂದು ಅಪೂರ್ವ ದಾಖಲೆಯನ್ನು ನಿರ್ಮಿಸಿದೆ ಆದರೆ ಈ ವರುಷದಲ್ಲಿ ರೂ. 1750 ಕೋಟಿಯ ವ್ಯವಹಾರ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇವೆ. ಕನಿಷ್ಟ 2 ಲಕ್ಷ ಹೆಚ್ಚು ಜನರಿಗೆ ವಿಮಾ ಪ್ರಯೋಜನವನ್ನು ದೊರಕಿಸಬೇಕೆಂಬ ಹಂಬಲ ಇದೆ. ಇದು ರಾಷ್ಟ್ರಕ್ಕಾಗಿ ಎಲ್. ಐ. ಸಿ. ನೀಡಿರುವ ಪ್ರತಿಜ್ಞೆ. ಇದನ್ನು ಸಾಧ್ಯಗೊಳಿಸಲು ಏಜಂಟರು 'ವಿಮಾಯಜ್ಞ'ದ ದೀಕ್ಷೆ ತೊಡಬೇಕಾಗಿದೆ. 1971ನೆಯ ಇಸವಿಯನ್ನು ಪಾಲಿಸಿದಾರರ ಸೇವೆಗಾಗಿಯೇ ಮೀಸಲಾಗಿಡಲಾಗುವುದು ಎಂದರು. ಶತಮಾನೋತ್ಸವ ವರುಷದಲ್ಲಿ ಎಲ್. ಐ. ಸಿ.ಯು ಮುಂದೆ ತನ್ನ ಮಹತ್ವಪೂರ್ಣ ಪಾತ್ರ ನಿರ್ವಹಣೆಗೆ ಸಜ್ಜುಗೊಳ್ಳುತ್ತಿದೆ ಎಂದು ಸೂಚಿಸಿದ ಶ್ರೀ ಪೈಗಳು 'ಶತಮಾನೋತ್ಸವ ವಿಮಾ ಯೋಜನೆ'ಯ ಮಾಹಿತಿಯನ್ನು ನೀಡಿದರು.

ಜಗತ್ತಿನ ವಿಮಾ ಕ್ಷೇತ್ರದಲ್ಲಿ ಎಲ್. ಐ. ಸಿ.ಯ ಇಂದಿನ ಸ್ಥಾನ 19ನೆಯದು. ಎಲ್. ಐ. ಸಿ.ಗೆ ತನ್ನ ಸ್ಥಾನವನ್ನು ಉನ್ನತಗೊಳಿಸಲು ಅವಕಾಶವಿದೆ. ಈ ಕೆಲಸವನ್ನು ನಾವು ಮಾಡಿದರೆ ರಾಷ್ಟ್ರೀಕರಣದ ಸಾರ್ಥಕ್ಯವಾಗುವುದೆಂದು ತಿಳಿಸಿದ ಶ್ರೀ ಪೈಗಳು ಬಹುಮಾನ ಗಳಿಸಿರುವ ಏಜಂಟರನ್ನು ಅಭಿನಂದಿಸಿದರು.

ಆರಂಭದಲ್ಲಿ ಡಿವಿಜನಲ್ ಮೆನೇಜರ್



ಜೀವವಿಮಾ ಸಂಸ್ಥೆಗೆ
ನವಜೀವನವೀಯುತ್ತಿರುವ ಅಧ್ಯಕ್ಷ
ಶ್ರೀ ಟಿ. ಎ. ಪೈ

\+\+ \+\+

ಶ್ರೀ ವಿ. ಕೆ. ಶ್ರೀನಿವಾಸನ್ ಸ್ವಾಗತಿಸಿದರು. ಡಾ| ಮಾಧವ ಪೈಗಳು ಚೇರ್‌ಮೆನ್ ಶ್ರೀ ಟಿ. ಎ. ಪೈಗಳನ್ನು ಅಭಿನಂದಿಸಿ ಮಾತಾಡಿದರು. ಬಹುಮಾನ ವಿತರಣೆಯ ಬಳಿಕ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಚ್. ಎನ್. ನಾಯಕರು ಡಿವಿಜನ್‌ನಲ್ಲಿ ಪ್ರಥಮಸ್ಥಾನಗಳಿಸಿರುವತನ್ನ ಏಜೆಂಟ್ ಶ್ರೀಮತಿ ಶಾಂತಿ ಡಿ. ಶೆಣೈಯವರನ್ನು ಪುರಸ್ಕರಿಸಿದರು. ಶ್ರೀಮತಿ ಶೆಣೈಯವರು ತನಗೆ ಸಹಕಾರವಿತ್ತ ಸ್ನೇಹಿತರಿಗೆಲ್ಲ ಕೃತಜ್ಞತೆಯನ್ನು ಸೂಚಿಸಿದರು. ಅಂತ್ಯದಲ್ಲಿ ಅಸಿಸ್ಟಾಂಟ್ ಡಿವಿಜನಲ್ ಮೆನೇಜರ್ ಶ್ರೀ ಕೆ. ವಿ ಪೈಗಳು ವಂದಿಸಿದರು. ಬೆಳಿಗ್ಗೆ ವಿಮಾ ಏಜೆಂಟರ ಸಮ್ಮೇಳನವನ್ನು ಶ್ರೀ ಟಿ. ಎ. ಪೈಗಳು ಉದ್ಘಾಟಿಸಿದರು. ಆರಂಭದಲ್ಲಿ ಶ್ರೀ ವಿ. ಕೆ. ಶ್ರೀನಿವಾಸನ್ನರು ಸ್ವಾಗತಿಸಿದರು.

ಶ್ರೀ ಪೈಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ, ಉಡುಪಿಯಲ್ಲಿ ಆರಂಭಿಸಿದ 'ಜೀವವಿಮಾ' ಯಜ್ಞ ಇಂದಿನ ಏಜೆಂಟರಲ್ಲಿ ಹೊಸ ಉತ್ಸಾಹ, ಸಾಹಸಕ್ಕೆ ಎಡೆಮಾಡಿದೆ. ಉಡುಪಿಯ 53ಮಂದಿ ಸಾಹಸಿ ಏಜೆಂಟರು ಮುಂದಾಳುಗಳಾಗಿದ್ದಾರೆ ಜೀವವಿಮಾ ಕಾರ್ಪೊರೇಶನಿನ ಸಂಜ್ಞೆಯು 'ದೀಪ'ವಾಗಿದೆ. ಈ ದೀಪವು ಪ್ರತಿಯೊಂದು ಮನೆಯಲ್ಲೂ ಬೆಳಗುವಂತೆ ಮಾಡತಕ್ಕವರು ನಮ್ಮ ಏಜೆಂಟರು. ಆದರೆ ನಮ್ಮ ಏಜೆಂಟರಲ್ಲಿ ಒಂದು ಲಕ್ಷ ನಲುವತ್ತು ಸಾವಿರ ಜನರಲ್ಲಿ ಕೇವಲ ನಲುವತ್ತು ಸಾವಿರ ಮಾತ್ರ ಏಜೆಂಟರಾಗಿ ಉಳಿಯಲು ಅರ್ಹರು. ಉಳಿದವರಿಗೆಲ್ಲಾ ಕಾರ್ಪರೇಶನಿನ ಮೂಲ ಉದ್ದೇಶದ ಅರಿವು ಇರುವುದಿಲ್ಲ. ನಾನು ಅವರಿಗೆ ಮೂರು ವರುಷ ವಾಯಿದೆ ಕೊಡುತ್ತೇನೆ ಅಷ್ಟರೊಳಗೆ ಅವರು ಉಳಿಯಬೇಕೆ ಬೇಡವೆ ಎಂದು ನಿರ್ಧರಿಸಲಿ. ಉಳಿಯಬೇಕಾದರೆ ಕಾರ್ಪೊರೇಶನು ನಿರೀಕ್ಷಿಸುವ ಮಟ್ಟದಲ್ಲಿ ವ್ಯವಹಾರ ಮಾಡಬೇಕಾಗುತ್ತದೆ. ಜೀವ ವಿಮೆಯ ಸಂದೇಶ ಹಳ್ಳಿ ಹಳ್ಳಿಗಳಲ್ಲಿ ಕಡುಬಡವನನ್ನೂ ಮುಟ್ಟಬೇಕು. ಇದು ಸಾಮಾನ್ಯ ಕೆಲಸವಲ್ಲ. ಇದನ್ನು ನೆರವೇರಿಸಲು ನಿಷ್ಠೆ, ದಕ್ಷತೆ ಸಾಮರ್ಥ್ಯ ಅಗತ್ಯ. ಇದು ಪ್ರತಿ ಏಜಂಟರಿಗೂ ಸಾಧ್ಯವಿದೆ. ಎಂದು ತೋರಿಸುವ ಏಜೆಂಟರು ಈಗ ಬೇಕು. ವಿಮಾ ಏಜೆಂಟರಾಗಿ ಸೇರುವುದು ಸುಲಭವಾಗಿರಕೂಡದು. ಮುಂದೆ ಅನೇಕ ನಿರ್ಬಂಧಗಳನ್ನು ಹಾಕಲಾಗುವುದು. ತಕ್ಕ ತರಬೇತಿ ನೀಡಿಯೇ ಏಜೆಂಟರನ್ನು ನೇಮಿಸಲಾಗುವುದು. ಇಂತಹ ಕ್ರಿಯಾತ್ಮಕ ಸಶಕ್ತ ಏಜೆಂಟರ ಮೂಲಕ ಕಾರ್ಪೊರೇಶನ್ ತನ್ನ ವ್ಯವಹಾರವನ್ನು ಸಾಧಿಸಿ ಕೊಳ್ಳುವುದಲ್ಲದೆ ಭಾರತದ ಪ್ರತಿಯೊಂದು ಕುಟುಂಬಕ್ಕೂ ತಕ್ಕ ರಕ್ಷಣೆ ನೀಡಲಾಗುವುದು ಎಂದು ಶ್ರೀ ಪೈ ಹೇಳಿದರು.

ಕಾರ್ಪೊರೇಶನಿನ ಚೀಫ್ ವಿಕ್ಟ್ಯುಮಿ ಶ್ರೀ ರಣದಿವ್‌ರು ಅಧ್ಯಕ್ಷರು ನೀಡಿದ ಕರೆಯನ್ನು ವಿನಂತಿಯನ್ನು ಮನ್ನಿಸಬೇಕಾಗಿ ಕೋರಿದರು.

●●

ದುಡಿಯದೇ ಸಾಂಪತ್ತಿಕ ಸ್ವರ್ಗ ಹೇಗೆ?

ಭಾರತದಲ್ಲಿ ಸಾಂಪತ್ತಿಕ ಸ್ವರ್ಗ ನಿರ್ಮಾಣಗೊಳ್ಳಬೇಕೆನ್ನುವುದು ನಮ್ಮೆಲ್ಲರ ಆಸೆ. ಈ ಸ್ವರ್ಗವು, ಜನತೆಯಲ್ಲಿ ದುಡಿಯುವ ಆಸಕ್ತಿಯನ್ನು ತುಂಬದಿದ್ದರೆ, ನಿರ್ಮಾಣಗೊಳ್ಳುವುದಿಲ್ಲ. ಉತ್ಪಾದನೆಯ ಒಂದೊಂದೇ ಇಟ್ಟಿಗೆಯಿಂದ ಸಮೃದ್ಧಿಯ ಸೌಧ ನಿರ್ಮಾಣಗೊಳ್ಳುತ್ತದೆ. ಆದರೆ, ನಮ್ಮ ದೇಶದಲ್ಲಿ ನಾವು ದುಡಿಮೆಯ ಹಾಗೂ ಸಾಧನ ಸಂಪತ್ತಿನ ಬಂಡವಾಳವಿಲ್ಲದೆ, ಜನತೆಯಲ್ಲಿ ಕ್ರಾಂತಿಕಾರಕ ಆಶೋತ್ತರಗಳನ್ನು ಕೆರಳಿಸಿದ್ದೇವೆ. ಕೊಡುವುದಕ್ಕೆ ಜೇಬಿನಲ್ಲಿ ಒಂದು ರೂಪಾಯಿಯೂ ಇಲ್ಲದಿರುವಾಗ ನೂರು ರೂಪಾಯಿ ಸಿಕ್ಕುತ್ತವೆ ಎನ್ನುವ ಭರವಸೆಯನ್ನು ಉಂಟು ಮಾಡಿದರೆ, ಆ ಭರವಸೆ ಜನರನ್ನು ಎಷ್ಟು ದೂರಕ್ಕೆ ಕರೆದುಕೊಂಡು ಹೋಗಬಲ್ಲದು?

ದುಡಿಯದೆ, ದುಃಖ ಪಡದೇ, ದೇಹದಂಡನೆ ಮಾಡದೆ, ಸಮೃದ್ಧಿ ಸಾಧ್ಯವಾಗುವಂತಿದ್ದರೆ, ನಮ್ಮ ಆಸೆಯಿಂದಲೇ ಅದು ಎಂದೋ ನಿರ್ಮಾಣವಾಗುತ್ತಿತ್ತು. ಆಸೆ ಎನ್ನುವುದೇ ಒಂದು ಕುದುರೆಯಾಗಿದ್ದರೆ, ಭಿಕ್ಷುಕರು ಕೂಡ ಅದನ್ನು ಹತ್ತಿಕೊಂಡು ಸವಾರಿ ಮಾಡುತ್ತಿದ್ದರೆನ್ನುವ ಮಾತನ್ನು ಇಂಗ್ಲಿಷ್ ಗಾದೆಯೊಂದು ಹೇಳುತ್ತದೆ. ಸಮೃದ್ಧಿ, ಶ್ರೀಮಂತಿಕೆ ನಿರ್ಮಾಣಗೊಳ್ಳುವುದಕ್ಕೆ ಸುಲಭದ ಸಮೀಪದ ದಾರಿಯೊಂದೂ ಇಲ್ಲ. ಇದನ್ನು ನಮ್ಮ ಜನರ ತಲೆಯಲ್ಲಿ ಯಾರು ಹಾಕಬೇಕು?

ಪ್ರತಿಯೊಬ್ಬನೂ ತನಗೆ ರೊಟ್ಟಿಯ ದೊಡ್ಡ ತುಂಡೇ ಬೇಕೆಂದು ಕೇಳತೊಡಗಿದ್ದಾನೆ. "ಪ್ರತಿಯೊಬ್ಬನಿಗೂ ಅವನ ಅವಶ್ಯಕತೆಗೆ ಸಾಲುವಷ್ಟು, ಪ್ರತಿಯೊಬ್ಬನಿಗೂ ಅವನ ಅರ್ಹತೆಗೆ ಸಾಲುವಷ್ಟು" ಎಂಬುದರಲ್ಲಿಯ ಎರಡನೆಯ ಮಾತನ್ನು ಮರೆತು ಎಲ್ಲರೂ ಮೊದಲನೆಯ ಮಾತನ್ನೇ ಹಿಡಿದುಕೊಂಡಿದ್ದಾರೆ. ಸಂಬಳ ಎಷ್ಟು ಎನ್ನುವುದು ಉತ್ಪಾದನೆಗೆ ಸಂಬಂಧಪಟ್ಟಿರಬೇಕು; ಆದರೆ, ಉತ್ಪಾದನೆ, ಏನಾದರಾಗಲಿ. ನನ್ನ ಪಾಲು ನನಗೆ ಬೇಕು ಎನ್ನುವ ಪ್ರವೃತ್ತಿ ಬೆಳೆದರೆ, ಅದರಿಂದ ದೇಶ ದಿವಾಳಿ ಎದ್ದೀತಲ್ಲದೆ, ಸೌಲತು ಪಡೆಯುವುದಿಲ್ಲ.

(ಪ್ರ)

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭದರದಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
131 ಶಾಖೆಗಳಿಂದ ಹಬ್ಬಿರುವ **"ವಿಜಯಾ ಬ್ಯಾಂಕ್"**ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¾% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಕೃತಜ್ಞತಾ ಸಮರ್ಪಣೆ

ತಾ. 7-5-71ರಂದು ಕುಂದಾಪುರ ಕಲಾಮಂದಿರದಲ್ಲಿ ನಮ್ಮ ಪುತ್ರ **ಚಿ| ಅರುಣ ಕುಮಾರನಿಗೆ** ಉಡುಪಿ ಸಿವಿಲ್ ಜಡ್ಜ್ ಶ್ರೀ ಬಿ. ವಿಶ್ವನಾಥ ರೈಗಳ **ಪುತ್ರಿ ಚಿ| ಅಂಬುಜಾಳೊಂದಿಗೆ** ಜರಗಿದ ವಿವಾಹಸಮಾರಂಭಕ್ಕೆ ಪ್ರೀತಿ ವಿಶ್ವಾಸಗಳಿಂದ ಜಿಲ್ಲೆಯ ನಾನಾ ಕಡೆಗಳಿಂದಲೂ ಹೊರ ಜಿಲ್ಲೆಗಳಿಂದಲೂ ದಯಮಾಡಿ ಬಂದು ಸಮಾರಂಭವನ್ನು ಚಂದಗಾಣಿಸಿ ವಧೂವರರನ್ನು ಹರಸಿದ ಬಂಧು ಮಿತ್ರರಾದಿ ಸರ್ವರಿಗೂ ಸಮಾರಂಭದ ಯಶಸ್ವಿಗಾಗಿ ನಾನಾ ವಿಧಗಳಿಂದ ನೆರವಾಗಿ ಸಹಕರಿಸಿದ ಸಮಸ್ತರಿಗೂ ನಮ್ಮ ಹಾರ್ದಿಕ ಕೃತಜ್ಞತೆಗಳನ್ನು ಈ ಮೂಲಕ ಸಲ್ಲಿಸುತ್ತೇವೆ.

ಫೋರ್ಟ್‌ಗೇಟ್ }
ಕುಂದಾಪುರ }

ಶ್ರೀಮತಿ ಮತ್ತು ಶ್ರೀ ವಿ. ಕೃಷ್ಣಪ್ಪ ಶೆಟ್ಟಿ
(ನಿವೃತ್ತ ಮುನ್ಸಿಫ್)

ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಮಹಾಧಿವೇಶ

ಶ್ರೀ ಮೂಲ್ಕಿ ಸುಂದರರಾಮ ಶೆಟ್ಟರ ಅಧ್ಯಕ್ಷ ಭಾಷಣ

ನಮ್ಮ ಸಂಘದ 63ನೆಯ ಮಹಾಸಭೆಯ ಅಧ್ಯಕ್ಷರನ್ನಾಗಿ ಆರಿಸಿ ನನ್ನನ್ನು ಗೌರವಿಸಿದ ಬಗ್ಗೆ ನಿಮಗೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಬದಲಾವಣೆಗಳ ಗಾಳಿ ಬಲವಾಗಿ ಬೀಸುತ್ತಲಿರುವ ಅತ್ಯಂತ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಇಂದು ಇದ್ದೇವೆ. ಅಸಹನೆ, ಅಸಧೈರ್ಯ ಮತ್ತು ಚಾಂಚಲ್ಯಗಳ ಸುಳಿವಿನಲ್ಲಿ ಸಿಕ್ಕಿ ನಮ್ಮ ಯುವಕರು ಸಾಂಪ್ರದಾಯಿಕವಾಗಿ ಬಂದ ಸಂಘ ಸಂಸ್ಥೆಗಳ ವಿಷಕವಾಗಿ ಅನಾದರ ಬುದ್ಧಿ ತೋರುವ ಈ ಕಾಲದಲ್ಲಿ, ಇಂಥ ಸಂಘಗಳಿಗಾಗಿ ಅವಿಶ್ರಾಂತವಾಗಿ ದುಡಿದ ಅನೇಕ ಸಹೃದಯರ, ಆಶೆ, ಆಕಾಂಕ್ಷೆ ಮತ್ತು ದುಡಿತಗಳ ಫಲವಾಗಿಯೇ ಇಂಥ ಸಂಸ್ಥೆಗಳು ಇಷ್ಟು ಕಾರ್ಯೋನ್ಮುಖವಾಗಿದು, ನಿರಾಸೆಯ ಹೊನಲನ್ನು ತಡೆಯಲು ಶಕ್ತವಾಗಿವೆ ಎಂದರೆ ಉತ್ಪ್ರೇಕ್ಷೆ ಇಲ್ಲ.

ಇಂಥ ಸಂದಿಗ್ಧತೆಗಳ ಅವಸರದಲ್ಲಿ ನಮ್ಮೆಲ್ಲರ ಕಾರ್ಯವೆಂತಹದು? ಅವಶ್ಯವಾಗಿ ನಮ್ಮ ಸಂಘಟನೆಯ ವಿಚಾರವಾಗಿ ಸಂದೇಹ ತೋರಿದವರನ್ನು ನಮ್ಮ ಪಕ್ಷಕ್ಕೆ ಗೆಲ್ಲುವುದು ಅತ್ಯವಶ್ಯ. ಯಾವ ಕಾರಣಗಳು ಇಂಥ ವಿರಸವನ್ನು ತಂದಿರಬಹುದು ಎಂದು ಪರೀಕ್ಷಿಸಿ ಕುಂದುಕೊರತೆಗಳನ್ನು ನಮ್ಮ ಜೀವನ ವಿಧಾನಗಳಲ್ಲಿನೀಗಿಸುವುದು ಅತ್ಯವಶ್ಯ. ಅಂತೂ ಏಸು? ಏಕೆ? ಎಂಬ ಪ್ರಶ್ನೆಗಳ ಸಮ್ಯಕ್ ಉತ್ತರವನ್ನು ಪ್ರತಿಯೊಬ್ಬನೂ ನಿರೀಕ್ಷಿಸಬೇಕು. ಸಂದರ್ಭದಲ್ಲಿ ನಾನೂ ನನ್ನ ಕೈಲಾದ ಮಟ್ಟಿಗೆ ನಮ್ಮ ಈ ಸಮಸ್ಯೆಯನ್ನು ವಿಶ್ಲೇಷಿಸಲು ಯತ್ನಿಸುತ್ತೇನೆ.

ಈ ಅನಾದರ, ಜಿಗುಪ್ಸೆ ಮತ್ತು ಸಾಂಪ್ರದಾಯಿಕ ವಿಚಾರಗಳನ್ನು ಕುರಿತ ಅಶ್ರದ್ಧೆ ನಮ್ಮ ಜಾತಿಗೆ ಮಾತ್ರ ಅನ್ವಯಿಸಿದ ವಿಚಾರವಲ್ಲ. ಇಂಥ ಅಶ್ರದ್ಧೆ ಅನಾದರಗಳ ಸುಳಿ ಪ್ರಪಂಚವನ್ನೆಲ್ಲ ಸುತ್ತಲಾರಂಭಿಸಿದೆ. ಇಂಥ ಅಶ್ರದ್ಧೆಯೇ ಆಧುನಿಕತೆಯ ಕುರುಹು ಎನ್ನುವಷ್ಟರ ಮಟ್ಟಿಗೆ ಇದು ನಮ್ಮ ಯುವಕರ (ಪ್ರಪಂಚದಲ್ಲೆಲ್ಲಾ) ಮನಸ್ಸಿನಲ್ಲಿ ಮನೆ ಮಾಡಿರುತ್ತದೆ. ಹೀಗೆ ಇದು ಪ್ರಾಪಂಚಿಕ ಪಿಡುಗು ಎಂದಿಟ್ಟುಕೊಂಡರೆ ಈ ಸಮಸ್ಯೆಯ ಪರಿಹಾರದ ಕ್ರಮಗಳನ್ನು ಯೋಚಿಸತಕ್ಕದು.

ಇಂಥ ಚಿಕ್ಕ ಪುಟ್ಟ ಸಂಘಗಳು ಎಳೆಯರಲ್ಲಿ ಸಂಘಟನೆಗಿಂತಲೂ ಪರಸ್ಪರ ಸಹಕಾರ ಮತ್ತು ಸಮ್ಯಕ್ ಸಮಾಜ ಜೀವನದ ಕಟ್ಟಳೆಗಳನ್ನು ರೂಢಿಸುತ್ತದೆ. ವೈಯುಕ್ತಿಕ ಒಲವು ಶಕ್ತಿಗಳನ್ನು ಇವು ಪೋಷಿಸುವುದಲ್ಲದೆ ಹತ್ತು ಸಮಸ್ತರ ಸಹಬಾಳ್ವೆಯನ್ನು ಬಲಪಡಿಸಬಲ್ಲ ನೀತಿ ನಿಯಮಗಳನ್ನೂ ಎಳೆಯರಲ್ಲಿ ರಕ್ತಗತ ಮಾಡುವುದಿದ್ದರೆ ಇಂಥ ಸುಸಂಘಟಿತ ಉತ್ತಮಾದರ್ಶಗಳ ಸಂಘಗಳೇ ಎನ್ನುವುದರಲ್ಲಿ ಏನೇನೂ ಉತ್ಪ್ರೇಕ್ಷೆ ಇಲ್ಲ. ಜೀವನದ ಮೌಲ್ಯಗಳು,

ಶ್ರೀ ಮೂಲ್ಕಿ ಸುಂದರರಾಮ ಶೆಟ್ಟಿ

ನಂಬಿಕೆಗಳು ಮತ್ತು ಸದ್ವರ್ತನೆಗಳ ವಿಕಾಸ, ಪೋಷಣೆಗಳು ಇಂಥಸಂಘಗಳಿಂದಲೇ. ಇವುಗಳ ಮೂಲಕ ನಮ್ಮ ಸಮಾಜದಲ್ಲಿ ಹಾಸು ಹೊಕ್ಕಾಗಿವೆ ಎಂಬುದನ್ನು ಇಲ್ಲಿ ಯಾವನೂ ಅಲ್ಲಗಳೆಯಲಾರ.

ಇಂಥ ಜೀವನದ ಮೌಲ್ಯಗಳನ್ನು ನಮ್ಮ ಸಾಂಪ್ರದಾಯಿಕ ಪದ್ಧತಿಗಳನ್ನೇತಕ್ಕೆ ಇಂದು ಜನ ಪ್ರಶ್ನಿಸುವರೆನ್ನುವಿರಾ? ಉತ್ತರವಿಷ್ಟೆ. ಪ್ರಪಂಚವೆಲ್ಲವೂ ಬದಲಾಗುತ್ತಲಿದೆ. ಇಂಥದರಲ್ಲಿ ನಮ್ಮ ಕಟ್ಟಳೆ, ನಂಬಿಕೆಗಳು ಅಚಲವಾಗಿರುವುದು ಸಾಧ್ಯವೆ? ಇವೂ ಬದಲಾಗುವಂತಿದ್ದರೆ ಬದಲಾವಣೆಗಳನ್ನು ಯಥಾಯೋಗ್ಯವಾಗಿ ನಾವು ಸ್ವೀಕರಿಸಬಾರದೇಕೆ?

ಇದು ಯಂತ್ರ ಯುಗ. ಇಷ್ಟೇ ಅಲ್ಲದೆ, ಆಧುನಿಕ ವೃತ್ತಪತ್ರಿಕೆ, ನಮ್ಮನ್ನು ಕೊಚ್ಚಿಕೊಂಡು ಹೋಗಬಹುದೇನೋ ಎನಿಸುತ್ತದೆ. ನಿತ್ಯ ಜೀವನದ ಕ್ರಮದಲ್ಲಿನ ಸುಧಾರಣೆಗಳೂ ಆರ್ಥಿಕ ರಾಜಕೀಯ ಮತ್ತು ಸಮಾಜ ಕ್ಷೇತ್ರಗಳಲ್ಲೂ ತಾಂತ್ರಿಕ ಸುಧಾರಣೆಗಳು ತಕ್ಕ ಅನುಷಂಗಿಕ ಸುಧಾರಣೆಗಳನ್ನು ತೋರುತ್ತವೆ. ಇದನ್ನು ನಾವು ಪ್ರತಿಭಟನೆ ಮಾಡಲೆಳಸುವುದು ನಿರರ್ಥಕ. ಹಳತೆಲ್ಲವೂ ಚೆನ್ನು ಎನ್ನುವುದು ಜಾಣತನದ ಮಾತಲ್ಲ. ಆ ಪ್ರಯುಕ್ತ ಆಧುನಿಕ ಜೀವನದಲ್ಲಿ ಇಂದಿನ ಜನರ ಇಚ್ಛೆ ಆಸೆ, ಹಂಬಲ ಮತ್ತು ವ್ಯವಹಾರಗಳಿಗೆ ತಕ್ಕಂತೆ ನಮ್ಮ ಸಂಪ್ರದಾಯಗಳನ್ನೂ, ಸಾಮಾಜಿಕ ವ್ಯವಹಾರಗಳನ್ನೂ ಅನಿವಾರ್ಯವಾಗಿ ಬದಲಾಯಿಸುವುದು ಸೂಕ್ತವೇ.

ಒಂದು ಮಾತಿನಿಂದ ಇದನ್ನು ವಿವರಿಸುತ್ತೇನೆ. ನಮ್ಮ ಪೂರ್ವಜರೆಲ್ಲ ಕೃಷಿಕರು. ಭೂಮಿತಾಯಿಯ ಆಶ್ರಯದಲ್ಲಿ ಸುಖವಾಗಿ, ಕಷ್ಟಕಾರ್ಪಣ್ಯಗಳಿದ್ದರೂ, ನೆಮ್ಮದಿಯಿಂದ ಬದುಕಿದವರು. ಇಂದಿನ ಜೀವನದಲ್ಲಿ, ಇಂದಿನ ರಾಜಕೀಯ ಡೊಂಬರಾಟಗಳಲ್ಲಿ ಇಂಥ ಭದ್ರತೆ ಕೃಷಿಕನಿಗಿಲ್ಲ ಎಂತಲೇ ಆತ ಪಟ್ಟಣ ಹೊಕ್ಕು ಇತರ ಉದ್ಯೋಗಗಳನ್ನು ಸ್ವೀಕರಿಸಿದ್ದಾನೆ. ಇಂಥ ಬದಲಾವಣೆಗಳು ಸ್ವೀಕಾರಾರ್ಹವೇ. ಇಲ್ಲದೆ ಹೋದರೆ, ನಮ್ಮ ಜನ ನಿರಾಶೆಗೀಡಾಗಿ ತ್ರಾಸಕ್ಕೀಡಾಗಬೇಕಿತ್ತು. ಗಾಂಧೀಜಿ ಹೇಳಿದ್ದ 'ಮಾಡು ಇಲ್ಲವೆ ಮಡಿ' ಎಂಬ ಸೂಕ್ತಿಯನ್ನು ಇಲ್ಲಿ ಸ್ಮರಿಸಿ ನಮ್ಮ ಜನ ಹೊಸ ಪಂಥಾಹ್ವಾನವನ್ನು ಸ್ವೀಕರಿಸಿರುವುದು ಸ್ತುತ್ಯವೇ. ಹೊಸ ಜೀವನ ಹೊಸ ಸಮಸ್ಯೆಗಳನ್ನೂ ರೂಪಿಸಿದಲ್ಲಿ ಅದನ್ನು ಧೈರ್ಯದಿಂದ ಇದಿರಿಸಿ ಮತ್ತು ಬೆಳೆಯುವುದೇ ನಮ್ಮ ಮುನ್ನಡೆಯ ಘೋಷವಾಗಿರತಕ್ಕುದು. ಹಳತನ್ನೇ ಜ್ಞಾಪಿಸಿ ಹಂಬಲಿಸುವ, ಇಲ್ಲದಕ್ಕಾಗಿ ಕೊರಗುವ ಪಾಡು ನಮ್ಮದಾಗಬಾರದು. ಈ ದಿನವೆಲ್ಲ ಇಂಥ ಸಂಘಗಳು ಸಮ್ಯಕ್‌ಮಾರ್ಗದರ್ಶನ ಮಾಡಿ ನಮ್ಮ ಎಳೆಯರಿಗೆ ತಕ್ಕ ಜೀವನಾಧಾರಗಳನ್ನು ಕಲ್ಪಿಸಲು ಯತ್ನಿಸಿದರೆ ಇವರಲ್ಲಿ ಇಂಥ ಸಂಘ ಸಂಘಟನೆಗಳ ಬಗ್ಗೆ ಅಶ್ರದ್ಧೆ ಎಂದೆಂದಿಗೂ ಮೂಡಲಾರದು ಎಂಬುದನ್ನು ಇಲ್ಲಿ ಒತ್ತಿ ಹೇಳುತ್ತೇನೆ. ಇದರೊಡನೆ ಪ್ರಾಮಾಣಿಕ ದುಡಿತವು ಎಲ್ಲರಲ್ಲೂ ಅತ್ಯವಶ್ಯ. ಈ ದಿಸೆಯಲ್ಲಿ ನಮ್ಮ ಎಳೆಯರನೇಕರು ಮುಂದುವರಿಯುತ್ತಿರುವುದು ನಮ್ಮ ಜಾತಿಯ ಸೌಭಾಗ್ಯ. ಇವರನ್ನು ತಕ್ಕಂತೆ ಪ್ರೋತ್ಸಾಹಿಸುವುದು ಹಿರಿಯರ ಕರ್ತವ್ಯ. 'ಟೀಕೆ ವಿಮರ್ಶೆಗಳು ಇದ್ದರೂ ಇದು ಸದುದ್ದೇಶ ಪ್ರೇರಿತವಾದುವುಗಳಿರಬೇಕು' ಎಂಬುದು ಲಿಂಕನನ ಮಾತು.

ನಮ್ಮ ಸಂಘ, ನಮ್ಮ ಸಮಾಜ ವಿಶಾಲ ಮನೋಭಾವವನ್ನುತೋರುತ್ತ ಭಾರತದ ಬೃಹತ್ತರ ಜೀವ ಕೋಟಿಯೊಡನೆ, ಇದು ಸಮರಸವಾಗಿ ಬೆಳೆಯುತ್ತ ಬಾಳಬೇಕು. ಇದೇ ಚೆನ್ನು. ಇದು ಪ್ರತ್ಯೇಕತೆಯ ಕಾಲವಲ್ಲ. ಪ್ರತ್ಯೇಕ ಆಪತ್ತು, ನಾಶಗಳ ಸಂಕೇತ. ಇಂಥ ಆಪತ್ತನ್ನು ನಾವೇ ತಂದುಕೊಳ್ಳಬಾರದು ಎಂದು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ನಮ್ಮ ಮುಖ್ಯ ಕಸುಬಾದ ಕೃಷಿಯಲ್ಲಿ ಹೊಸ ಪಂಥವನ್ನು ತುಳಿಯುವುದಲ್ಲದೆ, ನಮ್ಮ ಜನ ಇತರ ಉದ್ಯಮಗಳಗಳಲ್ಲಿ ಮುಂದೆ ಬರುವುದು ಅವಶ್ಯ. ಯಾವ ವೃತ್ತಿಯೂ ಹೇಯವಲ್ಲ ಯಾವ ವೃತ್ತಿಯೂ ನಮಗೆ ಎಟಕದಂತಿಲ್ಲ ಎಂಬುದನ್ನು ತಿಳಿದು ಶುದ್ಧ ಮನಸ್ಸಿನಿಂದ, ಶ್ರದ್ಧೆಯಿಂದ, ತನ್ನ ಉದ್ಧಾರಕ್ಕಾಗಿ ದುಡಿತ ಪಣವನ್ನು ಮಾಡುವುದು ಅತ್ಯವಶ್ಯ. ಇಂಥ ವ್ಯಾಪಕ ಮನೋವೃತ್ತಿ ಮತ್ತು ನಿಷ್ಕಪಟ ಶೀಲವಿರುವ ಜನರೇ ನಮ್ಮ ಮುಂದಾಳುಗಳಾಗುವರೆನ್ನುವುದರಲ್ಲಿ ಸಂದೇಹವಿಲ್ಲ.

ಕೊನೆಯದಾಗಿ ನಾವು ಹೇಳಲು ಇಚ್ಛಿಸುವ ಮಾತುಗಳಿವು: ಸುಖವು ಮನುಷ್ಯ ಸಾಧನೆಯ ಫಲ. ಇದು ಅವನದೇ ಕಲ್ಪನೆ ಮತ್ತು ವೈಯಕ್ತಿಕ ಸುಖಕ್ಕಿಂತಲೂ ಸಾಮೂಹಿಕ ಸುಖವೇ ಶ್ರೇಯಸ್ಕರ ಎಂತಲೇ ಇಂಥ ಸಂಘ ಸಮಾಜಗಳಿಗೆ ಇನ್ನೂ ಉಜ್ವಲ ಭವಿಷ್ಯವಿದೆ. ಇಂಥ ಸಮಾಜಗಳು ಮನುಷ್ಯನ ಮುಂದೆ ಉತ್ತಮಾದರ್ಶಗಳ ಪಂಥವನ್ನು ತೋರುತ್ತ ಅವನನ್ನು ಮುನ್ನಡೆಸುತ್ತ ಮಾನವ ಜೀವನವನ್ನು ಸುಖಮಯವಾಗಿ ಮಾಡುತ್ತವೆ.

ಪ್ರಜಾಸತ್ತೆಯನ್ನು ಸ್ವೀಕರಿಸಿದ ಜನ ನಾವು. ಕಾರಣ ಇಂಥ ಪ್ರಜಾಸತ್ತೆಯ ನೀತಿ, ಧರ್ಮಗಳನ್ನೇ ತಮ್ಮ ಚಿಕ್ಕಪುಟ್ಟ ಸಂಘಗಳಲ್ಲಿಯೂ ಅನುಸರಿಸುತ್ತ ನಮ್ಮ ಎಳೆಯರಿಗೆ ಚಿಕ್ಕದರಲ್ಲಿ ಮಾರ್ಗದರ್ಶನ ಮಾಡಿ ಮುಂದೆ ಬೃಹದ್ಭಾರತದಲ್ಲಿ ಅವರು ಉತ್ತಮ ಮುಂದಾಳುಗಳಾಗುವಂತೆ ಮಾಡುವ ಭಾರ ನಮ್ಮದು, ಇಂಥ ಸಂಘ ಸಂಸ್ಥೆಗಳ ಭಾರ ನಿರ್ವಹಿಸಿರುವ ಹಿರಿಯರದು. ಹಿರಿಯರ ಮಾರ್ಗದರ್ಶನ ಮತ್ತು ತ್ಯಾಗಗಳೇ ಮಾತ್ರವಲ್ಲದೆ ಕಿರಿಯರ ಆಸೆ ಆಕಾಂಕ್ಷೆಗಳ ಸಮ್ಯಕ್ ಅರ್ಥ ಕಲ್ಪನೆ ಮತ್ತು ಕಿರಿಯರ ಪ್ರೋತ್ಸಾಹಗಳೇ ನಮ್ಮ ಇಂದಿನ ಕರ್ತವ್ಯವಾಗಿದೆ. ಇಂಥ ಕರ್ತವ್ಯದ ನಿರ್ವಹಣೆಯು ಎಲ್ಲರಿಗೂ ಶ್ರೇಯಸ್ಸು ತರಲಿದೆ ಎಂದೇ ನನ್ನ ಭಾವನೆ.

(ತಾ. ೨–೫–೭೧ರಂದು ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿದ ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಮಹಾಸಭೆಯ ಸಂದರ್ಭದಲ್ಲಿ ಬಹಿರಂಗ ಅಧಿವೇಶನದಲ್ಲಿ ಮಾಡಿದ ಭಾಷಣದ ಸಾರಾಂಶ.)

●●

SYNDICATE BANK, BARKUR, (S-K.)

ಏಲಂ ನೋಟೀಸ್

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಲ್ಲಿ ಚಿನ್ನಾಭರಣಗಳ ಜವಾಬ್ದಾರಿಯ ಮೇಲೆ ಪಡಕೊಂಡ ಸಾಲದ ಮೊಬಲಗು ಯಾ ಅದರ ಮೇಲಣ ಬಡ್ಡಿಯನ್ನು ವಾಯಿದೆಗೆ ಸರಿಯಾಗಿ ಕೊಡದೇ ಇರುವುದರಿಂದಲೂ ಸದ್ರಿಯವರೀಗೆ ಕೊಟ್ಟ ರಿಜಿಸ್ತ್ರಿನೋಟೀಸುಗಳನ್ನು ಪಡೆದು ಕೂಡಾ ಹಣ ಪಾವತಿ ಮಾಡದೇ ಇರುವುದರಿಂದಲೂ ಸದ್ರಿಯವರೀಗೆ ಯಾ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರು ತಮ್ಮ ಸಾಲದ ಮೊಬಲಗು ಮತ್ತು ಬಡ್ಡಿಯನ್ನು ಇದೇ ತಾರೀಕು 25-5-1971ರೊಳಗೆ ಪುರುಪಾವತಿ ಮಾಡದಿದ್ದಲ್ಲಿ ತಾರೀಕು 29-5-1971ರಂದು ಮಧ್ಯಾಹ್ನ 12 ಗಂಟೆಗೆ ಅಥವಾ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇ ಈಡಿಟ್ಟ ನಗಗಳನ್ನು ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಸಾಲದ ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಸಾಲದ ಮೊಬಲಗು
134/70 3-9-1970	ಬಿ. ಅಬ್ದುಲ್ ಬ್ಯಾರಿ, ಕುಂಜಿಮಿನ್ ಬ್ಯಾರಿಯವರ ಮಗ, ಕಚ್ಚೂರು ಗ್ರಾಮ, ಪೋಸ್ಟು ಬಾರಕೂರು, ದ. ಕ.	Rs. 1800-00
136/70 8-3-1970	ಬಿ. ಅಬ್ದುಲ್ ಬ್ಯಾರಿ, ಕುಂಜಮಿನ್ ಬ್ಯಾರಿಯವರ ಮಗ, ಕಚ್ಚೂರು ಗ್ರಾಮ, ಪೋಸ್ಟು ಬಾರಕೂರು, ದ. ಕ.	Rs. 350-00

ಸಿಂಡಿಕೇಟ್ ಬ್ಯಾಂಕ್,
ಬಾರ್ಕೂರು, ದ. ಕ.

Leo. D. Almeida
Manager

ಅಂದು ಇಂದುಗಳ ಅಜಗಜ

ಕಮ್ಯುನಿಸ್ಟರುಗಳ, ಮುಸ್ಲಿಂ ಲೀಗಿನವರ, ದ್ರಾವಿಡ ಮುನ್ನೇತ್ರ ಕಳಗಂ ವರ್ಗಗಳಂತಹ ದೇಶದ್ರೋಹಿ, ರಾಷ್ಟ್ರಘಾತುಕ, ವಿಭಜನಾಪ್ರಿಯ, ಮಾರಕ ದುಃಶಕ್ತಿಗಳನ್ನು ಆಧರಿಸಿ ಇಂದಿರಾಗಾಂಧಿ ಗಾದಿಯಲ್ಲಿದ್ದು ದೇಶವನ್ನು ಪುನರ್ವಾಸ್ಯದತ್ತ, ನಾಶದತ್ತ ಕೊಂಡೊಯ್ಯುತ್ತಿದ್ದಾರೆಂಬ ಮಾತು ಎಲ್ಲೆಲ್ಲೂ ಕೇಳಿಬರುತ್ತಿತ್ತು.

ಅವರು ಹೋದೆಡೆಗಳಲ್ಲಿ ತನ್ನ ಜೀವಕ್ಕೆ (ದೇಹಕ್ಕಲ್ಲ) ಅಪಾಯವಿದೆಯೆಂದು ಹೇಳುತ್ತ ಬರುತ್ತಿದ್ದರು. ಯಾರಿಂದ? ... ಕಳೆದ ಸಂಸತ್ತಿನಲ್ಲೂ ಅಂತಹ ಪ್ರಶ್ನೆಗಳು ಬರುತ್ತಿದ್ದುವು. ಅದನ್ನು ಕೇಳಿದಾಗಲೆಲ್ಲಾ ನಗೆ ಬರುತ್ತಿತ್ತೆನಗೆ.

ಗಾಂಧಿಯನ್ನು ಕೊಂದದ್ದು ಜನಸಂಘ. ಅದು ಜಾತೀಯ ಸಂಸ್ಥೆ– ಮುಸ್ಲಿಮರ ಶತ್ರು.... ಇಂದಿರಾಜೀಯವರಿಂದ ಜನಸಂಘದ ಪ್ರಚಾರ. ಮಹಾತ್ಮಾಜೀ ಕೊಲೆಯ ಕುರಿತು ಚೆನ್ನಾಗಿ ಗೊತ್ತಿರುವ ಮುರಾರ್ಜಿಯವರ ಮಾತುಗಳು ಇಂದಿರಾಜೀಯವರ ಮಾತಿನ ಪ್ರತಿಧ್ವನಿ. ಮುರಾರ್ಜಿ ಬಾಯಿಯವರು ಸೂರತಿನಲ್ಲಿ ಜನಸಾಗರದ ಹೃದಯವನ್ನು ಸೂರೆಗೈಯ್ಯುತ್ತಾ ಜನಸಂಘ ಆರಂಭವಾದದ್ದು ೧೯೫೧ರಲ್ಲಿ, ಗಾಂಧೀಜೀಯವರ ಕೊಲೆ ನಡೆದದ್ದು ೧೯೪೮ರಲ್ಲಿ. ಅಂದರೆ ಆಗ ಜನಸಂಘ ಇರಲಿಲ್ಲ. ಹುಟ್ಟಿರದ ಪಕ್ಷ ಕೊಲೆ ಮಾಡಿತ್ತೆಂದು ಹೇಳುವದು ಹಾಸ್ಯಕರವೇ ಹೌದು. ಅದು ಜಾತೀಯ ಪಕ್ಷ ಅಲ್ಲ. ಅದರಲ್ಲಿ ಮುಸ್ಲಿಮರಿದ್ದಾರೆ. ದೇಶದ ರಾಜಧಾನಿ ದಿಲ್ಲಿಯ ನಗರ ಸಭೆ ಜನಸಂಘದ ಆಡಳಿತದಲ್ಲಿದೆ. ದಿಲ್ಲಿ ಜಾತೀಯ ಹಿಂಸಾಚಾರದಿಂದ ಮುಕ್ತವಾಗಿದೆಂದು ಹೇಳಿರುವರಾದರೂ ಇಂದಿರಾ ಬಾಯಿಯವರು ಒಪ್ಪಲು ಸಿದ್ಧರಿಲ್ಲ. ಮತ್ತೆ ಮತ್ತೆ ಅದೇ ಮಾತನ್ನು ಕೇಳಿದಾಗ ನಗೆ ಬರದಿರಲು ಸಾಧ್ಯವೇನು?

ಇಂದಿರಾ ಗಾಂಧಿಯವರಿಗೆ ಭಯ ಉಂಟಾಗಲು ಕಾರಣವೆಂದರೆ ಅವರ ಹೆಸರಿನಲ್ಲಿ ಇಂದೂ ಗಾಂಧಿ ಶಬ್ದವಿರುವದಿದೆ. ಮಹಾತ್ಮಾಗಾಂಧಿಯವರನ್ನು ಕೊಂದಿರುವ (?) ಜನಸಂಘ ಇಂದಿರಾಗಾಂಧಿಯನ್ನಿಂದು ಬಿಡುವದುಂಟೇನೆಂದು ಅವರ ಮನಸ್ಸಾಕ್ಷಿ ಹೇಳುತ್ತಿರಬಹುದು, ಅದನ್ನು ಕಂಡು ನಗದಿರಲು ನನಗೆ ಸಾಧ್ಯವೇನು?

ಅವರು ಬಿರುಗಾಳಿ ಪ್ರಚಾರ, ಸುಂಟರಗಾಳಿ ಪ್ರಚಾರ ನಡೆಸುತ್ತ ಮದರಾಸಿಗೂ ಹೋಗಿದ್ದರು. ಮದರಾಸಿಗೂ ಗೂನೋಡಿ ನಗಲೇನಿಲ್ಲ. ತಮಿಳ್ನಾಡಿನ ವಿಧಾನ ಸಭೆಗೂ ಲೋಕಸಭೆಯ ಚುನಾವಣೆಯ ಸಮಯದಲ್ಲೇ ಚುನಾವಣೆ ನಡೆದಿದ್ದು ಇಂದಿರಾ ಕಾಂಗ್ರೆಸ್ಸಿನ ವತಿಯಿಂದ ವಿಧಾನಸಭೆಗೆ ಒಬ್ಬರು ಕೂಡಾ ಸ್ಪರ್ಧಿಸಿರಲಿಲ್ಲ. ಲೋಕಸಭೆಗೆ ನವಮಣಿಗಳು ಸ್ಪರ್ಧಿಸಿ ಗೆದ್ದು ಬಂದಿರುವರು. ಇದನ್ನು ಕಂಡು ವಿಧಾನ ಸಭೆಗವರು ಸ್ಪರ್ಧಿಸದಿರುವದಕ್ಕೆ ಕೆಲವರು ನಕ್ಕದ್ದುಂಟು. ಅವರು ನಗಲಿ, ಇಂದಿರಾಜೀ ನಗದಿರಲಿಲ್ಲ. ಇಂದಿರಾಜೀಯವರ 'ಹೆಂಗಸುತನ'ವನ್ನು ಕಂಡು ನಕ್ಕವರು, ಫಲಿತಾಂಶವನ್ನು ಕೇಳಿದಾಗ ಇಂದಿರಾಜೀ ನಗುತ್ತಿರುವದನ್ನು ಕಂಡರು. ಇದೆಲ್ಲಾ ತನಗೆ ಮೊದಲೇ ಗೊತ್ತಿದ್ದು ಅವರಂದಾಗ ನಗದಿನ್ನೇನು ಮಾಡಲಿ?

ಅವರು ಪ್ರಚಾರದ ಸಮಯ ತಮಿಳ್ನಾಡಿನ ಸಣ್ಣ ನಗರದ ಕಡಲಕರೆಗೆ ಒಂದು ಘಂಟೆ ಕಾಲ ತಡವಾಗಿ ಬಂದಿದ್ದರು. ಬಂದವರೇ ಜನ ಸಂಘವನ್ನು ಜರೆಯಲಾರಂಭಿಸಿದರು. ಜನಸಂಘದವರು ಹದಿನೆಂಟನೇ ಶತಮಾನಕ್ಕೆ ಸೇರಿದವರೆಂಬುದು ಇಂದಿರಾಜೀಯವರ ಇಂದಿನ ಆರೋಪ. ಒಂದು ಘಂಟೆ ಮುಂದಕ್ಕೆ ಹೋಗಿರುವ ಇಂದಿರಾಜೀ ಜನಸಂಘವನ್ನು ಹಳೆಯಕಾಲದವರೆಂದು ಹಳಿಯುತ್ತಿರುವಾಗ ಹ್ಹ! ಹ್ಹ! ನಗಬಾರದೇನು?

ತಮಿಳ್ನಾಡಿನಲ್ಲಿ ಇದುಗಂಟನ್ನು ಹೇಳಿಕೊಳ್ಳುವಷ್ಟು ಪ್ರಾಬಲ್ಯವೂ ಜನಸಂಘಕ್ಕಿರುವದಿಲ್ಲ. ಹಾಗಿದ್ದರೂ ಪಟ್ಟಣಗಳಲ್ಲೂ ಹಳ್ಳಿಗಳಲ್ಲೂ ಹೋದೆಡೆಗಳಲ್ಲೆಲ್ಲಾ ಇಂದಿರಾಜಿಯವರು ಜನಸಂಘವನ್ನು ಜರೆಯುತ್ತಿದ್ದಾಗ ನಕ್ಕವರು ಅದೆಷ್ಟೋ ಮಂದಿ. ಇಂದಿರಾಜೀಯವರ ಕಣ್ಣಿಗೆ ಅದೆಲ್ಲೆಲ್ಲೂ ಜನಸಂಘದ ಜನರೇ ಕಾಣುತ್ತಿದ್ದಾರೆಂಬುದು ನಕ್ಕವರ ವಾದ. ಇಂದಿರಾಬಾಯಿಯವರ ಸಿಂಗಿಬಾಯಿಯನ್ನು ಕಡೆಗಣಿಸಿಯೂ ಇಪ್ಪತ್ತೆರಡು ಅಭ್ಯರ್ಥಿಗಳು ಆರಿಸಿ ಬಂದಿರುವರೆಂಬುದನ್ನು ಕೇಳಿದಾಗ ನಗದಿರಲು ಸಾಧ್ಯವೇನು? ಅದರಲ್ಲಿ ರಾಮನಾಥ ಗೋಯೆಂಕಾ ತಾನು ಜನಸಂಘದ ಅಭ್ಯರ್ಥಿ ಅಲ್ಲವೆಂದಾಗ ಇಂದಿರಾಜೀ ಇಷ್ಟಗಲ ಮುಖಮಾಡಿ ನಕ್ಕೇ ಬಿಟ್ಟರು. ಅವರ ಮುಖಾರವಿಂದ ಮತ್ತಷ್ಟಗಲವಾದದ್ದು ವಾಜಪೇಯಿಯವರ ಚುನಾವಣಾ ಫಲಿತಾಂಶವನ್ನು ಕೇಳಿದಾಗ.

ಪ್ರತಿಪಕ್ಷೀಯರ ಚುನಾವಣಾ ಘೋಷಣೆ ಫ್ಯಾಸಿಸ್ಟೆಂದು ಹೇಳಿ ಇಂದಿರಾಜೀ ನಗೆಬರಿಸಿರುವರು. ಅವರು ಹಿಟ್ಲರನ ಘೋಷಣೆಯನ್ನು ನೋಡದಿರುತ್ತಿದ್ದಲ್ಲಿ ಈ ಘೋಷಣೆಗೆ ಮಾರುಹೋಗುತ್ತಿದ್ದರಂತೆ. ಹಿಟ್ಲರ್ ಫ್ಯಾಸಿಸಮನ್ನೂ ಮುಸಲೋನಿ ನಾಝೀಸಮನ್ನೂ ಬಳಕೆಗೆ ತಂದಿರುವರು! ಸಾಲದ ಹೊರೆ ಹೊತ್ತುಕೊಂಡೇ ಇಂದು ಇಲ್ಲಿ ಶಿಶು ಜನನವಾಗುವ ಏರ್ಪಾಡನ್ನು ಮಾಡಿರುವ ಇಂದಿರಾದೇವಿಯವರು ಪ್ರತಿಪಕ್ಷೀಯರು ಹಿಟ್ಲರನಿಂದ ಘೋಷಣೆಯನ್ನು ಸಾಲಪಡೆದುಕೊಂಡಿದ್ದಾರೆನ್ನುವಾಗ ನಗದೆ ಅಳಲೇನು? ಅವರೆದುರಿನಲ್ಲೇ ಅವರ ಮದರಾಸು ಮಹಾರಥರು ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್, ದಿನಮಣಿಗಳಂತಹ ಪತ್ರಿಕೆಗಳನ್ನು ಮುದ್ರೆ ಮಾಡಲಾದೀತೆಂದು ಘೋಷಿಸಿದಾಗ, ಅದೇ ಹಿಟ್ಲರ್, ಸ್ಟಾಲಿನ್ ಸಹಿತ ಇಲ್ಲೇ ಬಂದು ಬಿಟ್ಟನೆಂದು ನಡುಗುತ್ತಿದ್ದಾಗಲೂ ನಗೆ ಬರುತ್ತಿತ್ತು. ಚುನಾವಣೆಯ ನಂತರ ಈ ಪತ್ರಿಕೆಗಳು ಇಂದಿರಾ ದೇವಿಯನ್ನು ಇಂದಿರ, ಚಂದಿರನೆಂದಾಗ ನಕ್ಕದ್ದು ಇಂದಿರಾಜೀ.

ಆಂಧ್ರ ಪ್ರದೇಶದ ಎಲೂರಿನಲ್ಲಿ ಚುನಾವಣಾ ಭಾಷಣ ಮಾಡುತ್ತಿದ್ದ ಇಂದಿರಾಜೀಯವರು, ಪ್ರಧಾನಿಯಾದೊಡನೆಯೇ ಒಮ್ಮೆ ಇಲ್ಲಿಗೆ ಬಂದಿದ್ದೆ. ಪುನಃ ಈಗ ಬರಲು ತನಗೆ ಸಂತೋಷವಾಗುತ್ತಿದೆಯೆಂದು ಮುಂದರಿಸಲಿಕ್ಕಿದ್ದಾಗ ಅಲ್ಲಿಯ ಮುಖ್ಯಮಂತ್ರಿ ಬ್ರಹ್ಮಾನಂದ ರೆಡ್ಡಿಯವರೆದ್ದು ಅವರಿಗೆ ಅದೇನೋ ಅಂದರು. ಆಗ ಅವರು ಗೊಳ್ಳನೆ ನಕ್ಕು, ನಾನಿಲ್ಲಿಗೆ ಆಗ ಬಂದಿರಲಿಲ್ಲವೆಂದು ನಿಮ್ಮ ಮುಖ್ಯಮಂತ್ರಿಯವರೆನ್ನುತ್ತಿದ್ದಾರೆಂದಾಗ ಎಲ್ಲರೂ ನಕ್ಕುಬಿಟ್ಟರು; ಅಲ್ಲಿ ಅವರನ್ನು ತಿದ್ದಲು ಬ್ರಹ್ಮಾನಂದ ರೆಡ್ಡಿಯವರು ರೆಡಿಯಾಗಿದ್ದರು ತಮಿಳ್ನಾಡಿನಲ್ಲಿ ಹಾಗಲ್ಲ. ಬಡತನವೇ ತೊಲಗೆಂದು ಆಜ್ಞಾಪಿಸಿದ್ದ ಇಂದಿರಾರಾಣಿಯವರು ಮದರಾಸು ಮಹಾನಗರದ ಶೀತಲ ಕಡಲ ತರೆಯ ಗಾಳಿಯಲ್ಲಿ, ಬಡತನ ಈ ದೇಶಕ್ಕೇನೂ ಹೊಸದಲ್ಲ, ತಾನು ಪ್ರಧಾನಿಯಾಗಿರುವ ಈ ನಾಲ್ಕು ವರ್ಷದೊಳಗೇನೂ ಅದು ಬಂದಿರುವಂತಹದ್ದಲ್ಲವೆಂದರು. ಇದನ್ನು ಕೇಳಿ ಅವರ ಸಮಕ್ಷಮದಲ್ಲಿ ಅದ್ಯಾರಾದರೂ ನಕ್ಕುಬಿಟ್ಟಿಲ್ಲ!

ತಿರುವನಂತಪುರದ ಪ್ರಚಾರ ಸಭೆಯಲ್ಲಿ ಮಾತಾಡುತ್ತ ಇಂದಿರಾ ಗಾಂಧಿಯವರು ಬೊಂಬಾಯಿಯಲ್ಲಿ ಶಿವಸೇನೆ ದಕ್ಷಿಣ ಹಿಂದೂಸ್ಥಾನದವರನ್ನು ಬೇಟೆಯಾಡುತ್ತಿದೆ, ಅವರ ಅಂಗಡಿಗಳನ್ನು ಸುಟ್ಟು ನಾಶ ಮಾಡಿದೆ, ಅವರನ್ನು ನಗರದಿಂದ ಹೊರ ಗೋಡಿಸಿರುತ್ತದೆಂದು ಖಾರಸಾರವಾಗಿ ಹೇಳಿ ಶಿವಸೇನೆಯನ್ನು ಟೀಕಿಸಿದರು. ಶಿವಸೇನೆ (ಶವಸೇನೆ) ಇರುವದೆಲ್ಲಿ? ಬೊಂಬಾಯಿಯಲ್ಲಿ— ಬೊಂಬಾಯಿ ಮಹಾರಾಷ್ಟ್ರದಲ್ಲಿದೆ. ಮಹಾರಾಷ್ಟ್ರ ಇಂದಿರಾ ಕಾಂಗ್ರೆಸ್ಸಿಗರ ತಳ್ಳಿಕೆಯೊಳಗಿದೆ. ಮಾಜಿ ಗೃಹಮಂತ್ರಿ, ಇಂದಿನ ಆರ್ಥಿಕ ಅಮಾತ್ಯ ಚವಾನರ ರಾಜ್ಯವದು. ಅಂದರೆ ಶಿವಸೇನೆ ಬೆಳೆಯಲು ಇಂದಿರಾದೇವಿಯವರ ಕೃಪಾಕಟಾಕ್ಷ ಇತ್ತೆಂಬುದು ಸ್ಪಷ್ಟ. ಅಂದು ಹೊಸ ಕಾಂಗ್ರೆಸ್ಸಿಗೆ ಶಿವಸೇನೆ ಆಧಾರವಾಗಿತ್ತು. ಇಂದು ಹಾಗಲ್ಲ. ಅದು ಹೊಸ ಕಾಂಗ್ರೆಸ್ಸನ್ನೆದುರಿಸುತ್ತದೆ. ತನ್ನ ಕಾಂಗ್ರೆಸ್ಸಿಗೆ ಮತದಾನ ಮಾಡದಿದ್ದಲ್ಲಿ ಬೊಂಬಾಯಿಯಿಂದ ಎಲ್ಲ ಮಲೆಯಾಳಿಗಳನ್ನೋಡಿಸುವಂತೆ ಶಿವಸೇನೆಗೆ ಆಜ್ಞೆ ಕೊಡಲಾಗುತ್ತದೆ! ಕೇರಳದಲ್ಲಿ ಸಮಾಜವಾದಿಪ್ರಿಯ ಅಭ್ಯರ್ಥಿಗಳು ಆರಿಸಿ ಬಂದಿದ್ದಾರೆ. ಬೊಂಬಾಯಿಯಲ್ಲಿ ಶಿವಸೇನೆಯ ಅಭ್ಯರ್ಥಿಗಳು ಸೋತಿದ್ದಾರೆಂದು ಸಮಾಚಾರ ಬಂದಾಗ ಅರ್ಥವತ್ತಾಗಿ ಇಂದಿರಾಜೀ ನಕ್ಕುಬಿಟ್ಟರು.

ದಿಲ್ಲಿ ಮಹಾನಗರದಲ್ಲಿ ಧೀರೇಂದ್ರ ಬ್ರಹ್ಮಚಾರಿಯವರ ಆಶ್ರಮದಲ್ಲಿ ಚುನಾವಣೆಯ ಸಮಯ ಹಲವಾರು ಜೋಕುಗಳು ಕಂಡುಬಂದುವು. ಕೆಲವು ಪತ್ರಿಕೆಗಳವರು ಅವರ ಚಿತ್ರ ತೆಗೆಯಲು ಪ್ರಯತ್ನಿಸಿದರು. ಆಗ ಅಲ್ಲೇ ಇದ್ದ ಇಂದಿರಾಜೀಯವರ ಮುದ್ದಿನ ಮಗ ಸಂಜಯ ಅವರ ಕೆಮರಾವನ್ನು ಕಿತ್ತುಕೊಂಡುದಲ್ಲದೆ ಚೆನ್ನಾಗಿ ಥಳಿಸಿ ಓಡಿಸಿಬಿಟ್ಟನು. ಒಡನೆ ಇಂದಿರಮ್ಮನವರೂ ಸಂಜಯ ಮಾಡಿದ್ದೇ ಸರಿಯೆಂದರು. ಕೆಲವು ತಿಂಗಳುಗಳ ಹಿಂದೆ ದಿಲ್ಲಿಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಿಕ್ಷಾ ಶಿಬಿರ ನಡೆಯುತ್ತಿತ್ತು. ಅಲ್ಲೊಮ್ಮೆ ಬರೀ ಬನಿಯನ್ ಧರಿಸಿಕೊಂಡಿದ್ದ ವ್ಯಕ್ತಿಯೊಬ್ಬ ಕೆಮರಾ ಹಿಡಿದುಕೊಂಡು ಗೋಡೆ ಹಾರಿ ಕಳ್ಳತನದಿಂದ ಒಳಪ್ರವೇಶಿಸಿದನು. ಅವನನ್ನು ಹಿಡಿದು ಸಂಬಂಧಪಟ್ಟವರು ಪೋಲೀಸರಿಗೊಪ್ಪಿಸಿದರು. ಇದನ್ನು ಕೇಳಿದ ಇಂದಿರಾಜೀ ಸಂಘದವರಿಗೆ ತಮ್ಮ ಗುಟ್ಟು ಬಯಲಾಗುತ್ತದೆಂಬ ಹೆದರಿಕೆ ಉಂಟಾದುದರಿಂದ ಪತ್ರಿಕಾ ಪ್ರತಿನಿಧಿಯನ್ನು ಹಿಡಿದು ಪೋಲೀಸರಿಗೊಪ್ಪಿಸಿರುವರೆಂದರು. ಅವರ ಪಾಲಿಗೆ ಅಂದಿಗೆ ಅದೇ ಸುಖ, ಇಂದಿಗೆ ಇದೇ ಸುಖವಾಯಿತು.

ರಾಜಧನ ರದ್ದಿಯಾತಿ ಬಿದ್ದುಹೋದದ್ದು ರಾಜ್ಯಸಭೆಯಲ್ಲಿ. ಇವರು ಖಾಲಿಮಾಡಿದ್ದು ಲೋಕಸಭೆಯನ್ನು! ಆಗ ನಗೆ ಬಂದಿತ್ತೆನಗೆ. ಆದರೆ ಚುನಾವಣಾ ಫಲಿತಾಂಶ ಪ್ರಕಟವಾದಾಗ ನಗೆ ಬಂದದ್ದು ಇಂದಿರಾಜೀಗೆ.

ಆಹಾರ ಅಭಾವ ಕಾಲದಲ್ಲಿ ಗೋಮಾಂಸ ತಿನ್ನಬೇಕೆಂದು ಜನತೆಗೆ ಉಪದೇಶ ಮಾಡುತ್ತಿದ್ದ ಕೃಷ್ಣಪ್ಪನವರೇ ತಮ್ಮ ಪಕ್ಷಕ್ಕೆ ಗೋಚಿಹ್ನೆ ಬೇಕೆಂದು ಕೇಳಿಕೊಂಡರು. ಚುನಾವಣಾ ಸಮಿತಿಯು ದನದೊಂದಿಗೆ ಕರುವನ್ನು ಕೊಟ್ಟಾಗ ಇಂದಿರಾ ಕಾಂಗ್ರೆಸ್ಸಿನ ಚಿಹ್ನೆ ಅದೆಂದು ಅನೇಕರು ನಗಾಡಿದ್ದರು. ಚುನಾವಣೆಯ ಫಲಿತಾಂಶ ಪ್ರಕಟವಾದಾಗ ನಗೆ ಬಂದದ್ದು ಇಂದಿರಾಜೀಗೆ. ಕಾಮಧೇನು ಅವರಿಗೆ ಬೇಕಾದುದನ್ನು ಕೊಟ್ಟಿತ್ತು.

ಹೀಗೆ, ನಗೆ ಬರುತ್ತಿತ್ತಂದೆನಗೆ–ಬರುತ್ತದಿಂದು ಇಂದಿರಾಜೀಗೆ.

—ಶ್ರೀ ಶಿವಶಂಕರ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 Grams: HOST SATKAR
2 72304

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry. Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಮೌನಂ ಸರ್ವಾರ್ಥ ಸಾಧನಂ

ಮಾತು ಮತ್ತು ಕಣ್ಣುಗಳ ನಡುವೆ ಹಾಲು–ನೀರಿನ ಸಂಬಂಧವಿದೆ. ಮಾತು ಹೊರಡದಿದ್ದಾಗ ಕಣ್ಣುಗಳು ಹೃದಯದ ಭಾವಗಳನ್ನು ವ್ಯಕ್ತಪಡಿಸುತ್ತವೆ. ಮನಸ್ಸಿನ ಒಳ್ಳೆಯ–ಕೆಟ್ಟ ಭಾವನೆಗಳು ದೃಷ್ಟಿಯಿಂದ ಹೆಚ್ಚು ಪ್ರಭಾವಶಾಲಿಯಾಗಿ ಪ್ರಕಟವಾಗುತ್ತವೆ. ವಿಶಾಲಾಕ್ಷಗಳು ಸುಕೋಮಲ ಭಾವಗಳ ಪ್ರತೀಕ, ತೀಕ್ಷ್ಣವಾದುವು ಸಂಕೀರ್ಣಭಾವ ದ್ಯೋತಕಗಳು. ಕಣ್ಣು-ಭಾವ ಮತ್ತು ಚರಿತ್ರಗಳ ಪರಸ್ಪರ ಸಂಬಂಧಿಗಳು. ಮುಕ್ಕಣ್ಣ ಶಂಕರ ಕ್ರೋಧದ ಪ್ರತೀಕ. ಮುನಿಗಳ ದೃಷ್ಟಿಪಾತದಿಂದಲೇ ಶೀತಲತೆಯ ತಾಂಡವವಾಗುತ್ತದೆ. ಆದುದರಿಂದಲೇ ಅವು ಕೃಪಾದೃಷ್ಟಿ. ಮುಗ್ಧ ಹಾಲುಹಸುಗೂಸಿಗೆ ಮಾತಿನಿಂದೇನಾಗಬೇಕು? ತನ್ನ ಕಣ್ಣುಗಳೇ ಅದಕ್ಕೆ ಸರ್ವಸ್ವ! ಇನ್ನೊಬ್ಬರ ಮೌನ ಭಾಷೆ, ಹೃದಯದ ಭಾವವೆಲ್ಲವನ್ನೂ ತನ್ನ ನಯನದ್ವಯಗಳಿಂದಲೇ ಓದಿಕೊಳ್ಳುತ್ತದೆ; ಅವೇ ನೇತ್ರಗಳಿಂದ ಮಾತಾಡುತ್ತದೆ. ಮಾತುಗಳ ಭಾವ ನೇತ್ರಭಂಗಿಯಿಂದಲೇ ಪ್ರಭಾವಶಾಲಿಯಾಗುತ್ತದೆ. ಪ್ರೇಕ್ಷಕರಿಗೆ ಭಾಷಣಕರ್ತನ ಮುಖ ಕಾಣಿಸಿದರೇನೇ ಮಾತು ಆಕರ್ಷಕವಾಗುತ್ತದೆ; ಆ ಮಾತು ನೇತ್ರಾದಿ ದ್ವಾರಾ ಅಭಿನಯಪೂರ್ಣವಿದ್ದರೆ, ಹೃದಯಂಗಮವಾಗುತ್ತದೆ. ತಿಳಿಯದ ಭಾಷೆಯಾಡುವವರ ನಡುವೆ ಮಾತಾಡಿದರೂ ಒಂದೆ; ಆಡದಿದ್ದರೂ ಒಂದೇ. ಪಶುಗಳ ಮೌನ ವ್ಯಥೆಯನ್ನು ಯಾರು ಹೇಳಬಲ್ಲರು? ಕಟುಕನನ್ನು ಕಂಡ ದನದ ರೋಮರೋಮವೂ ನಡುಗುತ್ತದೆ;ಆಡು ನೊಂದು ತನ್ನ ವ್ಯಥೆಯನ್ನು ಹೊರಗೆಡಹುತ್ತದೆ. ಪ್ರಕೃತಿಯ ಅಧಿಕಾಂಶ ಪ್ರಾಣಿ ಮೊತ್ತ ಮೊದಲಿಗೆ ತನ್ನ ಕಣ್ಣುಗಳಿಂದಲೇ ಭಾವ ಅರಿಯತೊಡಗಿತು; ಅವುಗಳಿಂದಲೇ ಭಾವ ತಿಳಿಸ ಹೊರಟಿತು.

ಶ್ರೀಕೃಷ್ಣನು ತನ್ನ ವಿಭೂತಿಗಳನ್ನು ಗೀತೆಯಲ್ಲಿ ತಿಳಿಸಿದ್ದಾನೆ. ಜಗತ್ತಿನ ಪ್ರಮುಖ ವಸ್ತುಗಳಲ್ಲೂ ತತ್ವಗಳಲ್ಲೂ ತನ್ನತನವನ್ನು ಅವನು ಗಣಿಸಿದನು. "ಕಪಟಿಗಳಲ್ಲಿ ಜೂಜು, ತೇಜಸ್ವಿಗಳಲ್ಲಿ ತೇಜಸ್ಸು.... ಪಾಂಡವರಲ್ಲಿ ಧನಂಜಯ, ಮುನಿಗಳಲ್ಲಿ ವ್ಯಾಸ, ಕವಿಗಳಲ್ಲಿ ಉಶನಾ ಕವಿ ನಾನು" ಎಂದವನು ಮುಂದುವರಿದು, 'ಗೋಪನೀಯಗಳಲ್ಲಿ ಮೌನವೂ ನಾನೇ' ಎಂದನು. (ಮೌನಂ ಚೈವಾಸ್ಮಿ ಗುಹ್ಯಾನಾಂ–೧೦–೩೮)

ಸುರಕ್ಷಿತತೆಯ ನೂರಾರು ಸಾಧನಗಳು ಜಗತ್ತಿನಲ್ಲಿವೆ; ಅವುಗಳಲ್ಲೆಲ್ಲಾ ಮೌನವೇ ಸರ್ವಶ್ರೇಷ್ಠ. ವಿಶ್ವಾಸ ಪಾತ್ರರಲ್ಲಿ ವಿಶ್ವಾಸ್ತರಾದವರೊಡನೆ ಹೇಳಿದ ರಹಸ್ಯವಾದರೂ ಬಹಿರಂಗಗೊಳ್ಳಬಹುದು; ಆದರೆ, ಮೌನ ಸಾಧನದಿಂದ ಯಾವ ಅಂಜಿಕೆಯೂ ಇಲ್ಲ. ಗುಹ್ಯತತ್ವ ಅಥವಾ ವಸ್ತುವನ್ನು ಅಡಗಿಸುವ ಭಾವವೇ ಮೌನ; ಗೋಪನ. ಮೌನದಲ್ಲಿ ಭಗವಂತನು ಪ್ರತಿಷ್ಠಿತನಾಗಿದ್ದಾನೆ. ಗೋಪನೀಯತೆಯಿಂದಾಗಿ ಮೌನದೊಡನೆ ರಹಸ್ಯಾತ್ಮಕತೆ ಮತ್ತು ಅನಿರ್ವಚನೀಯತೆಗಳ ಸಹಜ ಸಂಬಂಧವಿದ್ದೇ ಇದೆ. ಭಗವಾನ್ ಗೌತಮನೊಡನೆ ಯಾರಾದರೂ ದೇವರ ಬಗ್ಗೆ ಪ್ರಶ್ನೆಯೆತ್ತಿದರೆ, ಅವನು ತತ್‌ಕ್ಷಣ ಮೌನನಾಗಿ ಹೋಗುತ್ತಿದ್ದನಂತೆ. ಆತನ ಈ 'ಮೌನ'ಕ್ಕೆ ಅನೇಕ ಅರ್ಥ ಕಲ್ಪನೆಯಾಯ್ತು; ಅದರಿಂದ ಅನೇಕ ದಾರ್ಶನಿಕ ಸಂಪ್ರದಾಯಗಳು ಹುಟ್ಟಿ ಬಂದುವು; ಆದರೆ, ಆ "ಮೌನ"ದ ನಿಜಾರ್ಥ ಇನ್ನೂ ಗುಹ್ಯವಾಗೇ ಉಳಿದಿದೆ; ಅನಿರ್ಣೀತವಾಗೇ ಇದೆ. ಶಬ್ದಗಳಿಂದ ಮನವರಿಕೆ ಮಾಡಲಾಗದ ಭಗವತ್ತತ್ವವನ್ನು ಗೌತಮ ಮೌನದಿಂದಲೇ ವ್ಯಕ್ತ ಪಡಿಸಲಿಲ್ಲವೆನ್ನುವವರಾರು?

ಪ್ರಕೃತಿಯನ್ನೇ ತೆಗೆದುಕೊಂಡರೆ, ಕಣಕಣದಲ್ಲೂ ಮೌನ ವ್ಯಾಪ್ತವಾಗಿದೆ. ಆದುದರಿಂದಲೇ ಪ್ರಕೃತಿಯಿಂದಿಗೂ ಗೋಪನೀಯ ರಹಸ್ಯಮಯ. ಹಿಮಾಲಯ ಪರ್ವತವು ಕವಿ ಕಾಳಿದಾಸನಿಗೆ ಪೂರ್ವಾಪರ ಸಮುದ್ರಗಳನ್ನಳೆಯುವ ಮಾನದಂಡವಾಯಿತು; ಕವಿ ದಿನಕರನಿಗೆ ಮೌನ ವ್ರತಮಗ್ನ ಯೋಗಿಯಾಯಿತು. ಇನ್ನೊಬ್ಬ ಮಹಾಕವಿಗೆ ದೇಶದ ಜಡಗೌರವದ ಪ್ರತೀಕವಾಯಿತು. ಚಂದ್ರನಾದರೋ ಪ್ರಣಯಿಗಳಿಗೆ ಶೀತಲನಾದರೆ, ವಿರಹಿಗಳಿಗೆ ತಾಪದಾಯಕನಾದ. ಸೂರ್ಯಕಾಂತಿ ಹೂವಿನ ಸುತ್ತುವರಿಕೆ ಕವಿಯ ಹೃದಯದಲ್ಲಿ ರಾಗವಿರಾಗದ ಅಂತರ್ದ್ವಂದ್ವವನ್ನೇಳಿಸುತ್ತದೆ; ಅದುವೇ ವೈಜ್ಞಾನಿಕನಲ್ಲಿ ಆಕರ್ಷಣ ವಿಕರ್ಷಣದ ಚಿಂತನೆಗೆ ಅವಕಾಶ ಕೊಡುತ್ತದೆ. ಅವನು ಪರಾಗ, ಬಣ್ಣ, ಕೇಸರಗಳ ವಿಶ್ಲೇಷಣೆಗೆ ಹೊರಡುತ್ತಾನೆ. ಸೂರ್ಯಕಾಂತಿ ಪ್ರಿಯತಮೆಯ ಹೃದಯದ ಮೌನ ಸಂವೇದನೆಯನ್ನು ಕವಿ ಮಾತ್ರ ಅರಿತುಕೊಳ್ಳಬಲ್ಲ; ಆ ಶಕ್ತಿ ವೈಜ್ಞಾನಿಕನಿಗೆಲ್ಲಿಂದ ಬರಬೇಕು? ಕವಿಯದು ಹೃದಯದೊಡನೆ ಸಂಬಂಧ; ವೈಜ್ಞಾನಿಕನದು ಬುದ್ಧಿಯೊಡನೆ. ಒಬ್ಬನ ಭಾವನೆಗಳು ಉದ್ವೇಲಿತಗೊಳ್ಳುತ್ತವೆ; ಇನ್ನೊಬ್ಬನ ವಿಚಾರ ಜಾಗೃತವಾಗುತ್ತವೆ. ಇದೇಕೆ ಹೀಗೆ?

ಉತ್ತರ ಸ್ಪಷ್ಟ. ಹಿಮಾಲಯವಿರಲಿ, ಚಂದ್ರನಿರಲಿ, ಸೂರ್ಯಕಾಂತಿಯಿರಲಿ ಎಲ್ಲವೂ ಮೌನವಾಗಿವೆ; ಗೋಪನೀಯವಾಗಿವೆ; ಗುಹ್ಯವಾಗಿವೆ; ಮಾತಾಡುವುದಿಲ್ಲ, ಸಂಕೇತ ಮಾತ್ರ ಮಾಡುತ್ತವೆ; ನಾವು ಅವನ್ನು ನಮ್ಮ ಕನ್ನಡಕಗಳಿಂದ ನೋಡುತ್ತೇವೆ; ಕಾಗೆ–ಕೋಗಿಲೆಗಳು ಬಾಯ್ಬಿಡುವವರೆಗೆ ಅಭೇದವಾಗಿರುತ್ತವೆ. ಕೋಗಿಲೆಯ ಮೊಟ್ಟೆಗಳು ಮೌನವಾಗಿರುವುದರಿಂದಲೇ ಕಾಗೆಯ ಗೂಡಿನಲ್ಲಿ ಬಲಿಯುತ್ತವೆ. ಅವು ಮೌನ ವ್ರತಕ್ಕೆ ಭಂಗ ತಂದು ಕೊಂಡಾಕ್ಷಣವೇ ಗೂಡು ಪಾರಾಗಿ ಹೋಗುತ್ತವೆ.

ಸಚರಾಚರ ಪ್ರಕೃತಿಯ ಕಣಕಣಕ್ಕೂ ತನ್ನದೇ ರಾಮಾಯಣವಿದೆ; ಆದರೆ, ಅವು ಮಾತಾಡಿ ಅದನ್ನು ಹೇಳುವುದಿಲ್ಲ. ಅವುಗಳಿಗೂ ತಮ್ಮದೇ ಆದ ಭಾಷೆಯಿದೆ; ಆದರೆ, ಆ ಭಾಷೆ ಧ್ವನಿಮೂಲವಲ್ಲ. 'ರಾಗ ವಿರಾಗ, ಉದಾಸೀನತೆಗಳ ಪಾಠ ಕಲಿಸುತ್ತವೆ; ಆದರೆ, ಆಲೋಚಿಸಿ ವಿಚಾರಿಸಿಯಲ್ಲ. ಅನಾದಿಕಾಲದಿಂದಲೂ ಆ ಕಣಗಳು ಮಾನವ ಲೀಲೆಯನ್ನು ಮೌನವಾಗಿಯೇ ನೋಡಿ ಬಂದಿವೆ; ಉದಾಸೀನ ಯೋಗಿಯಂತೆ ದ್ರಷ್ಟಾರರಾಗಿವೆ. ಉದಾಸೀನತೆ ಮೌನವ್ರತಾಚರಣೆಯಿಂದಾಗಿಯೇ ಅವುಗಳ ಅಂತರಾಳವನ್ನು ಮಾನವ ಹೃದಯವಾಗಲೀ ಬುದ್ಧಿಯಾಗಲೀ ಸಂಪೂರ್ಣ ತಿಳಿದುಕೊಂಡಿಲ್ಲ. ತಂತಮ್ಮ ಕೈಗೆ ತಾಗಿದ ಅಂಗವನ್ನೇ ಆನೆಯೆಂದು ಕೂಗಾಡಿದ ಕುರುಡರಂತೆ ಹೃದಯವಿದ್ದರೂ ಬುದ್ಧಿ ಇದ್ದರೂ ತಮ್ಮ ಅಪೂರ್ಣತೆಯನ್ನೇ ಪೂರ್ಣತೆಯೆಂಬ ವಿಭ್ರಮೆ–ಭ್ರಮೆಯಲ್ಲಿ ಮುಳುಗಿದ್ದಾರೆ.

ಈ ವಿಭ್ರಮೆ–ಭ್ರಮೆಗಳು ಎಂದಿನ ತನಕ ಉಳಿಯಬಲ್ಲುವು? ಮೌನವಿರುವ ವರೆಗೆ ಆ ಮೌನದಿಂದಲೇ ಮಾನವ ಅವುಗಳತ್ತ ಆಕರ್ಷಿತನಾಗಿದ್ದಾನೆ; ಅವು ಮೌನ ಮುರಿಯದೆ, ನಗುನಗುತ್ತಿರುವ ತನಕ, ತಮ್ಮ ಸಹಜ ಸ್ಥಿತಿಯನ್ನು ಅವುಗಳೇ ಬಾಯ್ಬಿಟ್ಟು ಹೇಳುವನಕ ಮಾನವ ಭ್ರಮೆ–ವಿಭ್ರಮೆಯ ಚಕ್ರದಲ್ಲೇ ತಿರುಗುತ್ತಿರುತ್ತಾನೆ.

ಆದುದರಿಂದಲೇ 'ಮೌನ'ವೆಂಬುದು ಬಹು ಅರ್ಥವತ್ತಾದುದು; ಬಹು ಮೌಲ್ಯವಾದುದು, ಗೌರವಾನ್ವಿತವಾದುದು. ಅದಕ್ಕೆ ಅದುವೇ ಸಮ ಹೊರತು ಅದನ್ನು ಸಮಗಟ್ಟುವ ಪೆರತೊಂದಿಲ್ಲ.

(ಸಂಪೂರ್ಣ)

●●

ನವಯುಗದ ಸುವರ್ಣ ಮಹೋತ್ಸವ

ನಿವೇದನೆ

ಇದೇ 1971ನೆಯ ವರ್ಷಕ್ಕೆ, ನಾಡಿನ ಜನಪ್ರಿಯ ಸಾಪ್ತಾಹಿಕ 'ನವಯುಗ' ತನ್ನ ಸಾರ್ಥಕ ಜೀವನದ ಐವತ್ತು ವರ್ಷಗಳನ್ನು ಕಳೆದು ತನ್ನ ಚಿನ್ನದ ಹಬ್ಬದ ವರ್ಷಕ್ಕೆ ಕಾಲಿರಿಸಿದೆ. ಈ ಶುಭ ಸಂದರ್ಭದಲ್ಲಿ ನಾಡಿನ ಸಾರ್ವಜನಿಕ ಅಭಿಪ್ರಾಯದ ಈ ನಿರೂಪಣ ಮತ್ತು ರೂಪಣದಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಪತ್ರಿಕೋದ್ಯಮಿಗಳು, ಲೇಖಕರು ಮತ್ತು ಸರ್ಕಾರದ ಮುಂದಾಳುಗಳನ್ನು ಒತ್ತಟ್ಟಿಗೆ ಸೇರಿಸಿ ಭಾರತೀಯ ಪ್ರಜಾಪ್ರಭುತ್ವದ ಯಶಸ್ಸಿಗಾಗಿ ನಾವು ಇನ್ನೂ ಮಾಡಬೇಕಾದ ಕೆಲಸ, ಹಿಡಿಯಬೇಕಾದ ದಾರಿಯ ಕುರಿತು ಚರ್ಚೆ ನಡೆಸಲು ಅನುಕೂಲ ಕಲ್ಪಿಸುವ ಬಯಕೆ ನಮ್ಮದು. "ನವಯುಗ"ದ ಚಿನ್ನದ ಹಬ್ಬ ನಮ್ಮ ರಾಜ್ಯದ ಸರ್ವತೋಮುಖ ಬೆಳವಣಿಗೆಯ ಸೂತ್ರಗಳನ್ನು ಕಂಡುಕೊಳ್ಳಲು ನೆರವಾಗುವಂತೆ ಆ ಹಬ್ಬವನ್ನು ಒಂದು ಸಾಂಸ್ಕೃತಿಕ ಉತ್ಸವವಾಗಿ ಆಚರಿಸಬೇಕೆಂದು ನಾವು ನಿರ್ಧರಿಸಿರುತ್ತೇವೆ. ಈ ಬಗ್ಗೆ ಈಗಾಗಲೇ ಪ್ರಾತಿನಿಧಿಕ ಸಮಾರಂಭ ಸಮಿತಿಯನ್ನು ರಚಿಸಲಾಗಿದೆ.

ನಮ್ಮ ಕೆಲವು ಆಪ್ತ ಸ್ನೇಹಿತರು ಈ ಚಿನ್ನದ ಹಬ್ಬದ ವರ್ಷದಲ್ಲಿ 'ನವಯುಗ'ದ ನವೀಕರಣವೂ ನಡೆಯಬೇಕೆಂದು ಸೂಚಿಸಿದ್ದಾರೆ. ಆಧುನಿಕ ಯುಗಕ್ಕೆ ಹೊಂದಿಕೊಳ್ಳುವ ಲೇಖನ, ಶೀರ್ಷಿಕೆ, ಮತ್ತು ಚಿತ್ರಗಳ ಮೂಲಕ ರಾಜ್ಯದ ಜನತೆಯ ಓದಿಕೆಯ ಹಸಿವನ್ನು ನೀಗಿಸುವ ಆಕರ್ಷಕ ವಿಧಾನಗಳನ್ನು ಅನುಸರಿಸಬೇಕಾಗಿದೆ. ಜನರಲ್ಲಿ ವೈಜ್ಞಾನಿಕ ಮನೋವೃತ್ತಿ ಕುದುರುವಂತೆ ವಿಜ್ಞಾನ ಲೇಖನಗಳ ವ್ಯಾಪ್ತಿಯನ್ನು ಹಿಗ್ಗಿಸಬೇಕಾಗಿದೆ. ಸಾಮಾಜಿಕ ರಾಜಕೀಯ ಪ್ರಶ್ನೆಗಳಿಗೆ ಜನ ಸ್ವತಂತ್ರವಾಗಿಯೂ ವಿವೇಕಪೂರ್ಣವಾಗಿಯೂ ಉತ್ತರಿಸುವಂತೆ ಪ್ರೇರಿಸಬೇಕಾಗಿದೆ. ದೈನಂದಿನ ವರ್ತಮಾನಪತ್ರಗಳು ಸುದ್ದಿ ಸಂಗ್ರಹದ ಮೇಲೆ ಹೆಚ್ಚಾಗಿ ಕಣ್ಣಿಟ್ಟಿರುವುದರಿಂದ, ಅಭಿಪ್ರಾಯ ರೂಪಣದ ಕೆಲಸ ಸಾಪ್ತಾಹಿಕಗಳ ಮೂಲಕವೇ ನಡೆಯಬೇಕಾದ ಪ್ರಸಂಗದಲ್ಲಿ ನವಯುಗ ತನ್ನಪಾತ್ರವನ್ನು ಹೊಸದಾಗಿ ನಿರ್ಧರಿಸಿಕೊಳ್ಳಬೇಕಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಹೇಗೋ ಹಾಗೆ ಅನಂತರವೂ 'ನವಯುಗ'ವು ತನ್ನತನವನ್ನು ಕಾಯ್ದುಕೊಂಡು ವಿಶಿಷ್ಟ ರೀತಿಯ ಬರವಣಿಗೆಯಿಂದ ತನ್ನ ಸತ್ಯವನ್ನೂ, ಸತ್ವವನ್ನೂ ಕಾಪಾಡಿಕೊಂಡು ಬಂದಿರುವುದನ್ನು ತಾವು ಗಮನಿಸಿರಬಹುದು. ಅನಾಕರ್ಷಕವಾದ ರಾಷ್ಟ್ರೀಯ ಪುನಾರಚನೆಯ ಕಾರ್ಯದಲ್ಲಿ 'ನವಯುಗ' ಆಡಂಬರವಿಲ್ಲದೆ, ಸದ್ದುಗದ್ದಲ್ಲವಿಲ್ಲದೆ ನಡೆಸಿದ ಕರ್ತವ್ಯವನ್ನು ತಾವು ಮೆಚ್ಚಿಕೊಂಡಿರುವಿರೆಂದು ನಮ್ಮ ಭಾವನೆ.

'ನವಯುಗ'ದ ನವೀಕರಣದ ಯೋಜನೆ ಸಾರ್ವಜನಿಕರ ಆರ್ಥಿಕ ಬೆಂಬಲವಿಲ್ಲದೆ ಅಸಾಧ್ಯ. ನವಯುಗದ ಶ್ರೇಯಃಕಾಂಕ್ಷಿಗಳಾದ ತಮ್ಮಂಥವರಿಂದ, ತಮ್ಮ ಸ್ನೇಹಿತ ವರ್ಗದಿಂದ ದೊರೆಯುವ ಸಹಾಯವನ್ನು ನಾವು ಸಂತೋಷದಿಂದ ಸ್ವೀಕರಿಸುತ್ತೇವೆ.

ಇತಿ ಭವದೀಯ

ನವಯುಗ ಆಫೀಸು,
ಉಡುಪಿ.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ-ಸಂಪಾದಕ

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4

೧೦-೧೫ನೇ ದಶಕದಲ್ಲಿ

ದಕ್ಷಿಣ ಭಾರತದ ವಿದ್ಯಾಲಯಗಳು

ಕ್ರಿ. ಶ. ೧೦ನೆಯ ಶತಕದ ಹೊತ್ತಿಗೆ ಉತ್ತರ ಭಾರತವು ವಿದೇಶೀಯರ ಆಕ್ರಮಣಕ್ಕೊಳಗಾಯ್ತು. ದೇಶದಲ್ಲಿ ರಾಜ್ಯಕೀಯ ಏರಿಳಿತಗಳು ಸಾಮಾನ್ಯವಾದುವು. ಅದುವರೆಗೆ ವಿದ್ಯಾಕೇಂದ್ರಗಳೆಂದು ಪ್ರಸಿದ್ಧವಿದ್ದ ತಕ್ಷಶಿಲೆ, ವಿಕ್ರಮಶಿಲೆ,ಉಜ್ಜಯಿನಿ, ವಲ್ಲಭಿ ಮೊದಲಾದುವುಗಳು ಶಿಥಿಲವಾಗ ಹತ್ತಿದುವು. ಆಕ್ರಮಣಕಾರ ಮುಸ್ಲಿಮರು ಇಲ್ಲಿನ ರಾಜ್ಯಕೀಯ ರೂಪರೇಖೆಗಳನ್ನೇ ಬದಲಿಸಿದರು; ಜತೆಗೆ ವಿಶ್ವವಿದ್ಯಾಲಯಗಳನ್ನೂ ನಾಮಾವಶೇಷಗೊಳಿಸಿದರು.

ಈ ಹೊತ್ತಿನಲ್ಲಿ ದಕ್ಷಿಣ ಭಾರತದ ವಿಶ್ವವಿದ್ಯಾಲಯಗಳು ಆರ್ಯ ವಿದ್ಯಾದೀಪಕಗಳಾಗಿ ಬೆಳಗಿ ನಿಂತವು. ಕ್ರಿ. ಶ. ೯ನೆಯ ಶತಕದಲ್ಲಿಯೇ ದ. ಭಾರತದ ನತಾರ ಮತ್ತು ಅದಕ್ಕೂ ದಕ್ಷಿಣ ಭಾಗಗಳಲ್ಲಿನ ಹಿಂದೂ ದೇವಾಲಯಗಳಲ್ಲಿ ಉಚ್ಚ ಶಿಕ್ಷಣದ ವ್ಯವಸ್ಥೆ ನಡೆದಿತ್ತೆಂಬುದಕ್ಕೆ ಬಲವಾದ ಆಧಾರಗಳು ದೊರೆತಿವೆ.

ಗ್ರಾಮೀಣ ವಿದ್ಯಾಲಯ

ಕರ್ನಾಟಕದ ಬಿಜಾಪುರ ಜಿಲ್ಲೆಯಲ್ಲಿ ಸಲ್ಲೋತ್ಗಿಯೆಂಬ ಹಳ್ಳಿಯಿದೆ. ಇದು ಒಂದು ಕಾಲದಲ್ಲಿ ಉಚ್ಚ ಶಿಕ್ಷಣದ ಕೇಂದ್ರವಾಗಿದ್ದು ಅತ್ಯಂತ ಪ್ರಖ್ಯಾತವಿತ್ತು. ಇಲ್ಲಿರುವ ತ್ರಯೀಪುರುಷ ಮಂದಿರವನ್ನು ರಾಷ್ಟ್ರಕೂಟರ ಅರಸ ಮೂರನೆಯ ಕೃಷ್ಣನ ಮಂತ್ರಿ ನಾರಾಯಣನು ಕಟ್ಟಿಸಿದ್ದನು. ಈ ದೇವಾಲಯದ ಪ್ರಧಾನ ಕಕ್ಷದಲ್ಲಿ ತರಗತಿಗಳು ನಡೆಯುತಿದ್ದುವು. ಸಂಸ್ಕೃತ ಭಾಷೆಯ ಜತೆಗೆ ಇನ್ನಿತರ ವ್ಯವಹಾರ ಯೋಗ್ಯ ವಿಷಯಗಳನ್ನು ಇಲ್ಲಿ ಕಲಿಸುತಿದ್ದರು. ದೂರ ದೂರದ ವಿದ್ಯಾರ್ಥಿಗಳು ಜ್ಞಾನಾರ್ಜನೆಗಾಗಿ ಇಲ್ಲಿಗೆ ಬರುತಿದ್ದರು. ವಿದ್ಯಾರ್ಥಿಗಳಿಗಾಗಿ ೨೭ ನಿಲಯಗಳು ಇಲ್ಲಿದ್ದುವು.

ಈ ವಿದ್ಯಾರ್ಥಿ ನಿಲಯಗಳಿಗಾಗಿ ೧೨ ನಿವರ್ತನ (ಸುಮಾರು ೬೦ ಎಕ್ರೆ)ಗಳಷ್ಟು ಭೂಮಿ ದಾನವಾಗಿ ದೊರೆತಿತ್ತು. ವಿದ್ಯಾರ್ಥಿಗಳ ಭೋಜನ ವ್ಯವಸ್ಥೆಗೆಂದು ವಿದ್ಯಾಲಯಕ್ಕೆ ೫೦೦ ನಿವರ್ತನ (ಸುಮಾರು ೨೫೦೦ ಎಕ್ರೆ) ಭೂಮಿಯು ಇತ್ತು. ಇದರ ಹುಟ್ಟುವಳಿಯಲ್ಲಿ ವಿದ್ಯಾರ್ಥಿಗಳಿಗೆ ನಿರ್ವಂಚನೆಯಿಂದ ಊಟೋಪಚಾರವು ನಡೆಯುತಿತ್ತು. ಇಲ್ಲಿ ಸುಮಾರು ೨೦೦ ವಿದ್ಯಾರ್ಥಿಗಳಿಗೆ ಅಶನ–ವಸತಿ ಶಿಕ್ಷಣಗಳು ನಿರಾತಂಕವಾಗಿ ದೊರೆಯುತಿದ್ದುವೆಂದು ತಿಳಿಯುತ್ತದೆ. ವಿದ್ಯಾಲಯದ ಪ್ರಧಾನಾಚಾರ್ಯನಿಗೆ ವೇತನವೆಂದು ೫೦ ನಿವರ್ತನ ಭೂಮಿಯನ್ನೇ ಬಿಡಲಾಗಿತ್ತೆಂಬುದೂ ತಿಳಿಯುತ್ತದೆ.

ಸಲೋತ್ಗಿ ಗ್ರಾಮದ ನಿವಾಸಿಗಳೂ ವಿದ್ಯಾಲಯವನ್ನು ಕಡೆಗಣಿಸುತ್ತಿರಲಿಲ್ಲ. ಆಗಾಗ ಉಳ್ಳವರು ವಿದ್ಯಾಲಯಕ್ಕೆ ದಾನ ನೀಡುತಿದ್ದರು. ಹಳ್ಳಿಯಲ್ಲಿ ನಡೆಯುವ ಮದುವೆ—ಮುಂಜಿವೆ ಮೊದಲಾದ ಶುಭ ಸಮಾರಂಭಗಳ ವೇಳೆ ವಿದ್ಯಾಲಯಕ್ಕೆ ಕಿಂಚಿತ್ ದಾನ ನೀಡುವ ಸಂಪ್ರದಾಯ ಹಳ್ಳಿಗರಲ್ಲಿತ್ತು. ಊರಲ್ಲಿ ನಡೆಯುವ ಭೋಜನ ಕೂಟಗಳಲ್ಲಿ ವಿದ್ಯಾಲಯದ ವಿದ್ಯಾರ್ಥಿ—ಶಿಕ್ಷಕರಿಗೆ ತಪ್ಪದೆ ಆಹ್ವಾನ ಹೋಗುತಿತ್ತು. ಕ್ರಿ. ಶ. ೯೪೫ರ ಶಾಸನವೊಂದು ಕಾರಣಾಂತರಗಳಿಂದ ಮುರಿದುಬಿದ್ದ ಮಂದಿರದ ಪ್ರಧಾನ ಕಕ್ಷವನ್ನು ಸ್ಥಾನೀಯ ವ್ಯಕ್ತಿಯೋರ್ವನು ತನ್ನ ವೆಚ್ಚದಲ್ಲಿ ಮರಳಿ ಕಟ್ಟಿಸಿದ್ದನ್ನು ಉಲ್ಲೇಖಿಸುತ್ತದೆ. ಇದರಿಂದ ಹಳ್ಳಿಗರಿಗೂ ಮಂದಿರ—ವಿದ್ಯಾಲಯಗಳಿಗೂ ಇರುವ ಸುಮಧುರ ಬಾಂಧವ್ಯವನ್ನು ಊಹಿಸಿಕೊಳ್ಳಬಹುದು.

ಬೃಹತ್ ವಿದ್ಯಾಲಯ

ಹನ್ನೊಂದನೆಯ ಶತಮಾನದ ಹೊತ್ತಿಗೆ ದಕ್ಷಿಣ ಆರ್ಕಾಟ್ ಜಿಲ್ಲೆಯ ಎನ್ನಾಯಿರಮ್ ಎಂಬಲ್ಲಿ ಅತ್ಯಂತ ಸುವ್ಯವಸ್ಥಿತವಾದ ವಿದ್ಯಾಲಯವೊಂದಿತ್ತು. ಈ ವಿದ್ಯಾಲಯದ ಸುವಿಸ್ತೃತ ವರ್ಣನೆಯನ್ನು ನೋಡುವಾಗ, ಅದರಲ್ಲಿ ಆಧುನಿಕ ವಿದ್ಯಾಲಯಗಳ ಸಕಲ ಸೌಕರ್ಯಗಳೂ ಇದ್ದುವೆಂದು ತಿಳಿಯಬಹುದು. ೧೬ ಶಿಕ್ಷಕರು ಇಲ್ಲಿ ದುಡಿಯುತಿದ್ದರು. ವಿದ್ಯಾಲಯದ ವ್ಯವಸ್ಥೆಗೆಂದು ಹಳ್ಳಿಗರು ಸುಮಾರು ೬೦೦ ಎಕರೆ ಜಮೀನನ್ನು ಉಂಬಳಿ ಬಿಟ್ಟಿದ್ದರು. ಇದರಿಂದ ೩೪೦ ವಿದ್ಯಾರ್ಥಿಗಳ ಶಿಕ್ಷಣವ್ಯಯ ನಡೆಯುತಿತ್ತು.

ಈ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಸುಲಭದಲ್ಲಿ ಪ್ರವೇಶ ದೊರೆಯುತ್ತಿರಲಿಲ್ಲ. ಮೊದಲಿಗೆ ಅಭ್ಯರ್ಥಿಗಳಿಗೊಂದು ಪರೀಕ್ಷೆ ನಡೆಯುತಿತ್ತು. ಬೇರೆ ಬೇರೆ ಶಾಖೆಗಳಲ್ಲಿ ಪರಮಾಧಿಕ ಸ್ಥಾನಗಳೂ ಗೊತ್ತಾಗಿದ್ದುವು:

ಋಗ್ವೇದ —೭೫
ಕೃಷ್ಣಯಜುರ್ವೇದ —೭೫
ಸಾಮವೇದ —೪೦
ಶುಕ್ಲಯಜುರ್ವೇದ —೨೦
ಅಥರ್ವವೇದ —೧೦
ಬೌಧಾಯನಧರ್ಮಸೂತ್ರ—೧೦
ರೂಪಾವತಾರ —೪೦
ವ್ಯಾಕರಣ —೨೫
ಮೀಮಾಂಸೆ —೩೫
ವೇದಾಂತ —೧೦
ಒಟ್ಟು —೩೪೦

ಒಂದೊಂದು ವಿಭಾಗಕ್ಕೂ ಶಿಕ್ಷಕರ ಸಂಖ್ಯೆಯೂ ನಿರ್ಧಾರಿತವಾಗಿತ್ತು. ಋಗ್ವೇದ ಮತ್ತು ಕೃಷ್ಣಯಜುರ್ವೇದಗಳಿಗೆ ಮೂರು ಮೂರು, ಮೀಮಾಂಸೆಗೆ ಎರಡು, ಉಳಿದ ವಿಷಯಗಳಿಗೆ ಒಂದೊಂದು. ಪ್ರತಿ ೨೨ ವಿದ್ಯಾರ್ಥಿಗಳ ಮೇಲ್ವಿಚಾರಕನಾಗಿ ಒಬ್ಬ ಶಿಕ್ಷಕರಿರುತಿದ್ದರು; ಇವರು ವಿದ್ಯಾರ್ಥಿಯ ವ್ಯಕ್ತಿಗತ ಮೇಲ್ಮೆಗಾಗಿ ಎಚ್ಚರಿಕೆ ವಹಿಸುತಿದ್ದರು.

ಇಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನ ದೊರೆಯುತಿತ್ತು. ಪ್ರತಿಯೊಬ್ಬ ವೈದಿಕ ವಿದ್ಯಾರ್ಥಿಯು ಪ್ರತಿದಿನ ಒಂದು ಸೇರಿನಷ್ಟು ಅಕ್ಕಿಪಡೆಯುತಿದ್ದ. ಅವನ ಬಟ್ಟೆಬರೆಗಾಗಿ ವರ್ಷಕ್ಕೆ ಎಂಟನೆ ಒಂದು ತೊಲೆ ಬಂಗಾರವೂ ದೊರೆಯುತಿತ್ತು. ಶಿಕ್ಷಕರು ಪ್ರತಿದಿನ ಹದಿನೈದು ಸೇರು ಅಕ್ಕಿ ಪಡೆಯುತಿದ್ದರು. ವೇದಾಂತ ಶಿಕ್ಷಕನಿಗೆ ಉಳಿದವರಿಗಿಂತ ಸೇ. ೨೫ರಷ್ಟು ಹೆಚ್ಚು ವೇತನ ದೊರೆಯುತಿತ್ತು. ವೇದಾಂತವು ಉಳಿದ ವಿಷಯಗಳಿಗಿಂತ ಕಠಿನವೆಂದು ತಿಳಿಯಲಾಗುತಿದ್ದುದೇ ಇದಕ್ಕೆ ಕಾರಣ.

ವೆಂಕಟೇಶ್ವರ ಪೆರುಮಾಳ್

ತಮಿಳುನಾಡಿನ ಚೆಂಗಲ್ಪೇಟೆಯ ತಿರುಮುಕ್ಕುದಲ್‌ನ ವೆಂಕಟೇಶ್ವರ ಪೆರುಮಾಳ್ ದೇವಾಲಯವೂ ಹನ್ನೊಂದನೆಯ ಶತಮಾನದಲ್ಲಿ ಉಚ್ಚ ಶಿಕ್ಷಾ ಕೇಂದ್ರವೆನಿಸಿತ್ತು. ಅಧ್ಯಾಪಕರು – ವಿದ್ಯಾರ್ಥಿಗಳ ವಸತಿ ಮಾತ್ರವಲ್ಲ ಆರೋಗ್ಯ ರಕ್ಷಣೆಯತ್ತವೂ ಇಲ್ಲಿ ಗಮನ ನೀಡಲಾಗುತಿತ್ತು. ಇಲ್ಲಿ ಒಟ್ಟು ೬೦ ವಿದ್ಯಾರ್ಥಿಗಳಿಗೆ ಮಾತ್ರ ಅಧ್ಯಯನಾವಕಾಶವಿತ್ತು. ಇದರಲ್ಲಿ ಋಗ್ವೇದ ೧೦, ಯಜುರ್ವೇದ ೧೦, ವ್ಯಾಕರಣ ೨೦, ಪಾಂಚರಾತ್ರ ಆಗಮ ೧೦, ಶೈವಾಗಮ ೩ ಮತ್ತು ವಾನಪ್ರಸ್ಥ ಮತ್ತು ಸನ್ಯಾಸಿಗಳಿಗೆ ೭.

ಎಲ್ಲಾಯಿರಮ್ ವಿದ್ಯಾಲಯದ ಶಿಕ್ಷಕರ ವೇತನಕ್ಕಿಂತ ಇಲ್ಲಿನವರ ವೇತನವು ಕಡಿಮೆಯಿತ್ತು. ವೈದಿಕ ಶಿಕ್ಷಕರಿಗೆ ದಿನಾ ಮೂರು ಸೇರು ಅಕ್ಕಿ ಮಾತ್ರ ದೊರೆಯುತಿತ್ತು. ಅವರು ಅರ್ಧ ದಿನ ಮಾತ್ರ ಕಲಿಸುತಿದ್ದರೆಂದು ಇದರಿಂದ ಊಹಿಸಬಹುದು.

ವ್ಯಾಕರಣ ವಿದ್ಯಾಲಯ

ಹದಿಮೂರನೆಯ ಶತಮಾನದಲ್ಲಿ ಚೆಂಗಲ್ಪೇಟೆ ಜಿಲ್ಲೆಯ ತಿರುವೋರಿಯೂರಿನಲ್ಲಿ ವ್ಯಾಕರಣ ವಿದ್ಯಾಲಯವೊಂದಿತ್ತು. ಅಲ್ಲಿನ ಶಿವ ಮಂದಿರಕ್ಕೆ ಸೇರಿದ ವಿಶಾಲ ಕೋಣೆಯೊಂದರಲ್ಲಿದು ನಡೆಯುತಿತ್ತು. ಸಂಸ್ಕೃತ ವೈಯಾಕರಣ ಪಾಣಿನಿಯು ಹುಟ್ಟುವುದಕ್ಕೆ ಮೊದಲು ಈ ಸ್ಥಳದಲ್ಲಿ ಭಗವಾನ್ ಶಿವನು ೧೪ ದಿನಗಳ ಕಾಲ ನಿರಂತರವಾಗಿ ವ್ಯಾಕರಣ ಕಲಿಸಿದನೆಂದೂ ಆದುದರಿಂದ ಗ್ರಾಮವಾಸಿಗಳು ಶಿವಮಂದಿರದಲ್ಲಿ ವ್ಯಾಕರಣ ವಿದ್ಯಾಲಯವನ್ನು ಸ್ಥಾಪಿಸಿದರೆಂದೂ ದಂತಕಥೆಯೊಂದಿದೆ.

ವಿದ್ಯಾಲಯದ ವೆಚ್ಚಗಳಿಗೆಂದು ೪೦೦ ಎಕ್ರೆ ಭೂಮಿ ದೊರೆತಿತ್ತು. ಸುಮಾರು ೪೫೦ ವಿದ್ಯಾರ್ಥಿಗಳಿದ್ದರು. ಸು. ೨೦-೨೫ ಆಚಾರ್ಯರೂ ಇದ್ದರು. ೧೪ನೆಯ ಶತಮಾನದವರೆಗೆ ಈ ವಿದ್ಯಾಲಯ ನಡೆದು ಬಂದಿತ್ತು.

ಮಲಕಾಪುರಂ

ಮಲಕಾಪುರಂನಲ್ಲಿ ೧೩ನೆಯ ಶತಮಾನಕ್ಕೆ ಸಂಬಂಧಿಸಿದ ಶಿಲಾಲೇಖವೊಂದು ದೊರೆತಿದೆ. ಇದರಲ್ಲಿ ಇಲ್ಲಿ ದೇವಾಲಯ, ವಿದ್ಯಾಲಯ, ವಿದ್ಯಾರ್ಥಿನಿಲಯ ಮತ್ತು ಚಿಕಿತ್ಸಾಲಯಗಳಿದ್ದುವೆಂದು ತಿಳಿಯುತ್ತದೆ. ಇಲ್ಲಿನ ವಿದ್ಯಾಲಯದಲ್ಲೆಂಟು ಜನ ಶಿಕ್ಷಕರಿದ್ದರೆಂದೂ ಇವರಲ್ಲಿ ನಾಲ್ವರು ವೇದ ಮತ್ತು ಆಗಮಗಳನ್ನೂ ಉಳಿದ ನಾಲ್ವರು ವ್ಯಾಕರಣ, ಸಾಹಿತ್ಯ ಮತ್ತು ತರ್ಕ ಶಾಸ್ತ್ರ ಮೊದಲಾದುವನ್ನು ಕಲಿಸುತ್ತಿದ್ದರೆಂದೂ ಗೊತ್ತಾಗುತ್ತದೆ. ಚಿಕಿತ್ಸಾಲಯದಲ್ಲಿಒಬ್ಬ ಪರಿಣತ ವೈದ್ಯನಿರುತಿದ್ದನು. ೧೫೦ ವಿದ್ಯಾರ್ಥಿಗಳಿದ್ದು ಇವರೆಲ್ಲರಿಗೂ ಅಶನ–ವಸತಿ–ಶಿಕ್ಷಣ ಮತ್ತು ಚಿಕಿತ್ಸೆಗಳು ಉಚಿತವಾಗಿ ದೊರೆಯುತಿದ್ದುವು. ಪ್ರತಿಯೊಬ್ಬ ಶಿಕ್ಷಕನಿಗೂ ದಾನವಾಗಿ ಭೂಮಿ ದೊರೆತಿತ್ತು; ಇದುವೇ ಆತನಿಗೆ ವೇತನವಾಗಿತ್ತು. ಪ್ರಧಾನಾಚಾರ್ಯನಿಗೆ ೧೦೦ ನಿಷ್ಕಗಳ ವೇತನವಿತ್ತು.

ಇತರ ವಿದ್ಯಾಲಯಗಳು

ಮೇಲಿನವುಗಳಲ್ಲದೆ ಇನ್ನೂ ಕೆಲವಾರು ಚಿಕ್ಕ ಪುಟ್ಟ ವಿದ್ಯಾಲಯಗಳು ೧೦ರಿಂದ ೧೫ನೆ ಶತಮಾನಾವಧಿಯಲ್ಲಿ ದಕ್ಷಿಣ ಭಾರತದಲ್ಲಿದ್ದುವು. ೧೦ನೆಯ ಶತಮಾನದಲ್ಲಿ ಧಾರವಾಡ ಜಿಲ್ಲೆಯ ಹೆಬ್ಬಾಳದ ಭುಜಂಗೇಶ್ವರ ದೇವಾಲಯಕ್ಕೆ ಇನ್ನೂರು ಎಕ್ರೆ ಜಮೀನು ದಾನವಾಗಿ ದೊರಕಿತ್ತು. ಇಲ್ಲಿ ಸುಮಾರು ೨೦೦ ವಿದ್ಯಾರ್ಥಿಗಳಿಗೆ ನಿಶ್ಶುಲ್ಕ ಶಿಕ್ಷಣ, ವಸತಿಗಳು ದೊರೆಯುತ್ತಿದ್ದುವು.

ಹನ್ನೊಂದನೆಯ ಶತಮಾನದಲ್ಲಿ ನಗಯಿ ಎಂಬಲ್ಲಿ ಬೃಹತ್ ಸ್ವರೂಪದ ವಿದ್ಯಾಲಯವೊಂದಿದ್ದುದು ತಿಳಿಯುತ್ತದೆ. ಇಲ್ಲಿ ೨೦೦ ವಿದ್ಯಾರ್ಥಿಗಳು ವೇದ, ೨೦೦ ವಿದ್ಯಾರ್ಥಿಗಳು ಸ್ಮೃತಿ, ೧೦೦ ವಿದ್ಯಾರ್ಥಿಗಳು ಮಹಾಕಾವ್ಯ ಮತ್ತು ೫೨ ವಿದ್ಯಾರ್ಥಿಗಳು ದರ್ಶನ ಶಾಸ್ತ್ರಗಳನ್ನು ಕಲಿಯುತಿದ್ದರು. ವಿದ್ಯಾಲಯ ಗ್ರಂಥಾಲಯವನ್ನು ನೋಡಿಕೊಳ್ಳಲು ಆರು ಜನರಿದ್ದರು. ಇದೇ ಶತಮಾನದಲ್ಲಿ ಬಿಜಾಪುರದ ಮಂದಿರವೊಂದಕ್ಕೆ ೧೨೦೦ ಎಕ್ರೆ ಭೂಮಿ ದೊರೆತ್ತಿತ್ತು. ಇದರಿಂದ ವಿದ್ಯಾರ್ಥಿಗಳ ವಸನ–ವಸತಿಗಳ ವ್ಯವಸ್ಥೆ ನಿರಾತಂಕವಾಗಿ ಸಾಗುತ್ತಿತ್ತು.

ಹನ್ನೆರಡನೆಯ ಶತಕದಲ್ಲಿ ಬಿಜಾಪುರದ ಮಣಗೋಳಿಯ ಒಂದು ದೇವಾಲಯದಲ್ಲಿ ಕೌಮಾರ ವ್ಯಾಕರಣವನ್ನು ಕಲಿಸುತಿದ್ದರು. ೨೦ ಎಕ್ರೆ ಜಮೀನಿನ ಬಲದಿಂದ ಈ ವಿದ್ಯಾಲಯ ನಡೆಯುತ್ತಿತ್ತು.

ದಕ್ಷಿಣ ಭಾರತದಲ್ಲಿನ ಈ ವಿದ್ಯಾಲಯಗಳು ಸಂಸ್ಕೃತ ಭಾಷೆ ಮತ್ತು ವೈದಿಕ ವಿದ್ಯೆಗಳಿಗೆ ಮಹತ್ವ ನೀಡುತಿದ್ದುವು. ಭಾರತವು ಏಕ ಸೂತ್ರದಲ್ಲಿ ಕೋದಿರಲು ಇವು ಬಲವಾದ ಬುನಿಯಾದಿ ಹಾಕಿದ್ದುವು.

●●

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಎಂ. ಜಿ. ಎಂ.ನಲ್ಲಿ ಬೇಸಿಗೆ ತರಬೇತಿ ಸಂಸ್ಥೆ

ಉಡುಪಿಯ ಎಂ. ಜಿ. ಎಂ. ಕಾಲೇಜಿನಲ್ಲಿ ತಾ. 3-5-71ರಂದು "ಜೀವ ವಿಜ್ಞಾನದಲ್ಲಿ ಬೇಸಿಗೆ ತರಬೇತಿ ನೀಡುವ ಸಂಸ್ಥೆಯ ಉದ್ಘಾಟನೆಯನ್ನು ಡಾ॥ ಟಿ. ಎಂ. ಎ. ಪೈಯವರು ನೆರವೇರಿಸಿದರು. ಪ್ರಾರಂಭದಲ್ಲಿ ಪ್ರಿನ್ಸಿಪಾಲ್ ಶ್ರೀ ಕೆ. ಎಸ್. ಹರಿದಾಸ್ ಭಟ್‌ರವರು ಸ್ವಾಗತಿಸಿದರು. ಸಂಸ್ಥೆಯ ಡೈರೆಕ್ಟರ್ ಪ್ರೊ. ಕೆ. ಕೆ. ಈಶ್ವರನ್ ಅವರು ವಂದನೆಗಳನ್ನರ್ಪಿಸಿದರು.

ಯು. ಜಿ. ಸಿ. ವೆಚ್ಚದಲ್ಲಿ ನಲವತ್ತು ದಿನಗಳ ಸಮಯ ನಡೆಸಲಾಗುವ ಈ ತರಗತಿಗಳಲ್ಲಿ ಮೈಸೂರು ರಾಜ್ಯದ ನಾನಾ ಭಾಗಗಳಿಂದ ಬಂದ 40 ಜನ ತರಬೇತಿ ಹೊಂದಲಿದ್ದಾರೆ.

ಶೆಟ್ಟಿ ಐಸ್‌ಕ್ರೀಂ ಮತ್ತು ಅರುಣಾ ಡೈರಿ ಫಾರ್ಮಿನ ಉದ್ಘಾಟನೆ

ಮಂಗಳೂರಿಗೆ ಸಮೀಪದ ಕುಳ್ಯಾಯಲ್ಲಿ ನಿರ್ಮಿಸಲಾದ ಶೆಟ್ಟಿ ಐಸ್‌ಕ್ರೀಂ ಕಂಪನಿ ಮತ್ತು ಅರುಣಾ ಡೈರಿ ಫಾರ್ಮಿನ ಹೊಸ ಕಾರ್ಖಾನೆ ಕಟ್ಟಡದ ಉದ್ಘಾಟನೆಯನ್ನು ತಾ. 7-6-71ರಂದು ಮೈಸೂರಿನ ರಾಜ್ಯಪಾಲ ಶ್ರೀ ಧರ್ಮವೀರರು, ವಿಜಯಾ ಬೇಂಕಿನ ಅಧ್ಯಕ್ಷ ಶ್ರೀ ಸುಂದರರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಆರಂಭದಲ್ಲಿ ಕುಮಾರಿ ಮೀರಾಶೆಟ್ಟಿಯವರಿಂದ ಪ್ರಾರ್ಥನೆಯಾದ ಬಳಿಕ ಕುಮಾರಿ ಅರುಣಾರವರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿದರು. ಶ್ರೀ ಕೆ. ಬಿ. ಶೆಟ್ಟಿಯವರು ಸಂಸ್ಥೆಯು ಈ ವರೆಗೆ ಪ್ರಗತಿ ಪಥದಲ್ಲಿ ಬೆಳೆದುಬಂದ ರೀತಿಯನ್ನು ವಿವರಿಸಿದರು.

ಮಾನ್ಯ ರಾಜ್ಯಪಾಲರು ಮಾತನಾಡುತ್ತಾ, ಶ್ರೀ ಆರ್. ಸಿ. ಶೆಟ್ಟರು ಬೃಹತ್ ಐಸ್‌ಕ್ರೀಂ ಕಾರ್ಖಾನೆ ಮತ್ತು ಡೈರಿ ಫಾರ್ಮನ್ನು ನಡೆಸುವಂತಾದುದಕ್ಕೆ ಸಂತೋಷ ವ್ಯಕ್ತಪಡಿಸಿ ಶ್ರೀ ಶೆಟ್ಟರ ಕಠಿಣ ಪರಿಶ್ರಮ, ಅರ್ಪಣಾ ಮನೋಭಾವಗಳೇ ಈ ಪ್ರಗತಿಗೆ ಮುಖ್ಯ ಕಾರಣವೆಂದು ತಿಳಿಸಿದರು. ಅವರಿಗೆ ಸರಕಾರದಿಂದ ಸಾಧ್ಯವಾದ ಎಲ್ಲ ಸಹಕಾರ ಕೊಡುವಂತೆ ಪ್ರಯತ್ನಿಸುವುದಾಗಿ ಭರವಸೆಯಿತ್ತರು. ಈ ಉದ್ಯಮದಲ್ಲಿ ಅಪೂರ್ವ ಪ್ರಗತಿ ಸಾಧಿಸಿದ ಶ್ರೀ ಶೆಟ್ಟರನ್ನು ಶ್ರೀ ಧರ್ಮವೀರರು ಅಭಿನಂದಿಸಿದರು.

ಶ್ರೀ ಎಂ. ಸುಂದರರಾಮ ಶೆಟ್ಟರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಸಂಸ್ಥೆಗಳನ್ನು ಸ್ಥಾಪಿಸುವುದು ಉತ್ಸಾಹಕರವಾಗಿದೆ. ಇದೊಂದು ಅಪೂರ್ವ ಸಾಧನೆ. ಶ್ರೀ ಆರ್. ಸಿ. ಶೆಟ್ಟರು ಸ್ವಂತ ಪರಿಶ್ರಮದಿಂದ ಈ ಸಿದ್ಧಿಯನ್ನು ಪಡೆದಿದ್ದಾರೆ ಎಂದು ಹೇಳಿ ಶುಭಕೋರಿದರು. ಶ್ರೀ ಎಂ.ಆರ್.ಎಚ್. ಪೂಂಜರು ಧನ್ಯವಾದ ಸಮರ್ಪಿಸಿದರು.

ಎಸ್. ವಿ. ಎಸ್. ಹೈಯರ್ ಸೆಕೆಂಡರಿ ಶಾಲೆಯ ರಜತೋತ್ಸವ ಸಮಾರಂಭದ ಉದ್ಘಾಟನೆ

ಕಟಪಾಡಿಯ ಎಸ್. ವಿ. ಎಸ್. ಹೈಯರ್ ಸೆಕೆಂಡರಿ ಶಾಲೆಯ ರಜತೋತ್ಸವವನ್ನು ರಾಜ್ಯಪಾಲ ಶ್ರೀ ಧರ್ಮವೀರ ಅವರು ಡಾ॥ ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ತಾ. ೬-೫-೭೧ ರಂದು ಉದ್ಘಾಟಿಸಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ದ. ಕ. ಜಿಲ್ಲೆಯು ಶೈಕ್ಷಣಿಕ ಚಟುವಟಿಕೆಗಳಿಗೆ ಹೆಸರುಗಳಿಸಿದೆ. ಜಿಲ್ಲೆಯ ಎಲ್ಲೆಡೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಾಣಬಹುದು ಎಂದರು. ಇಲ್ಲಿನ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಶಂಸಿಸಿ ಇಲ್ಲಿ ಕಾಲೇಜು ಸ್ಥಾಪನೆಯ ಬಗ್ಗೆ ಕಾರ್ಯಕರ್ತರು ಕಾಣುತ್ತಿರುವ ಕನಸು ಬೇಗನೆ ನನಸಾಗಲೆಂದು ಹಾರೈಸಿದರು.

ಆರಂಭದಲ್ಲಿ ಎಸ್.ವಿ.ಎಸ್. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶ್ರೀ ಕೆ.ವಾಸುದೇವ ಕಿಣಿಯವರು ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಶ್ರೀ ಪಿ. ಶಂಕರನಾರಾಯಣ ನಾಯಕ್‌ರವರು ವರದಿ ಓದಿದರು. ಶ್ರೀ ಕೆ. ರಮೇಶ ಕಾಮತರು ಸಂದೇಶಗಳನ್ನೋದಿದರು. ಶ್ರೀ ಜಿ. ಎಸ್. ರಾವ್ ಅವರು ಹಳೇವಿದ್ಯಾರ್ಥಿ ಸಂಘದ ಪರವಾಗಿ ಮಾತಾಡಿದರು. ಪಿ. ವಿ. ಎಸ್. ಬೀಡೀಸ್ ಪ್ರೈ. ಲಿ.ನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಮಧುಸೂದನ ಡಿ. ಕುಶೆಯವರು ಸ್ಮರಣ ಸಂಚಿಕೆಯನ್ನು ಬಿಡುಗಡೆಮಾಡಿದರು.

ಅಧ್ಯಕ್ಷ ಶ್ರೀ ಪೈಯವರು ಮಾತಾಡುತ್ತಾ ಶಾಲೆಯ ಶೈಕ್ಷಣಿಕ ಚಟುವಟಿಕೆಯನ್ನು ಪ್ರಸ್ತಾಪಿಸಿ ಶ್ರೀ ವಾಸುದೇವ ಕಿಣಿಯವರು ನಡೆಸುತ್ತಿರುವ ಮೌನ ಸಾಧನೆಯನ್ನು ಪ್ರಶಂಸಿಸಿ ಈ ಸಂಘವು ಪ್ರಗತಿ ಸಾಧಿಸಲಿ ಎಂದು ಹಾರೈಸಿದರು.

ಶ್ರೀ ಕೆ. ಪಿ. ಶೆಣೈಯವರು ಧನ್ಯವಾದ ಅರ್ಪಿಸಿದರು.

ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಷನಿನ ವಾರ್ಷಿಕ ಮಹಾಸಭೆ

ಸಿಂಡಿಕೇಟ್ ಎಗ್ರಿಕಲ್ಚರ್ ಫೌಂಡೇಷನ್, ಮಣಿಪಾಲ, ಇದರ ವಾರ್ಷಿಕ ಮಹಾಸಭೆಯು ತಾ. 24-4-71ರಂದು ಸಿಂಡಿಕೇಟ್ ಬ್ಯಾಂಕಿನ ಕಟ್ಟಡದಲ್ಲಿ ಶ್ರೀ ಕೆ.ಕೆ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಸಂಘದ ಕಾರ್ಯಕಲಾಪಗಳ ವರದಿಯನ್ನೂ ಲೆಕ್ಕಪತ್ರಗಳ ತಖ್ತೆಯನ್ನೂ ಪರಿಶೀಲಿಸಿ ಮಂಜೂರು ಮಾಡಲಾಯಿತು. ಅನಂತರ ಹೊಸ ವರ್ಷದ ಕಾರ್ಯಕಾರೀ ಸಮಿತಿಗೆ ಈ ಕೆಳಗಿನವರನ್ನು ಸರ್ವಾನುಮತದಿಂದ ಆರಿಸಲಾಯಿತು.

ಶ್ರೀಗಳಾದ ಕೆ.ಕೆ.ಪೈ, ಎಚ್. ಎನ್. ಪೈ, ಪಿ. ಅಚ್ಯುತ ಪ್ರಭು, ಎಚ್. ಮುದ್ದಣ್ಣ ಶೆಟ್ಟಿ, ಪಿ. ಆನಂದ ಕುಂದ ಹೆಗ್ಡೆ, ಪಿ.ಕೆ. ಸಂಜೀವ ಶೆಟ್ಟಿ, ಪಿ. ಶ್ರೀನಿವಾಸ ರಾವ್, ಡಾ॥ ಎಲ್. ಸಿ. ಸೋನ್ಸ್, ಬಿ. ನಾರಾಯಣ ನಾಯಕ್, ಬಿ. ಸಿ. ಹೊಳ್ಳ, ಶಂಕರ ನಾರಾಯಣ ಹಂದೆ, ಎ. ಶಿವಶಂಕರ್ ರಾವ್, ಕೆ. ಶ್ರೀಧರ ನಾಯಕ್, ಜಿ. ಎಸ್. ಲೂಯಿಸ್, ಎಸ್. ಡಿ. ಕೊಂಬ್ರಬೈಲ್, ಡಾ॥ ಕೆ.ಎಸ್. ಪಣಿಯಾಡಿ, ಡಾ॥ ಯು. ಎನ್. ಕಲ್ಕೂರ್, ಮಂಚಿ ನಾರಾಯಣ ಆಚಾರ್, ಪಿ. ಸುಂದರ ಶೆಟ್ಟಿ ಮತ್ತು ಕೆ. ಎಮ್. ಉಡುಪ.

ಗೌರವ ಲೆಕ್ಕ ಪರಿಶೋಧಕರನ್ನಾಗಿ ಶ್ರೀ ಪಿ. ಸುಂದರ ರಾಯರನ್ನು ಪುನರಾಯ್ಕೆ ಮಾಡಲಾಯಿತು.

ಅನಂತರ ಮುಂದಿನ ವರ್ಷದ ಕಾರ್ಯಕ್ರಮಗಳನ್ನು ನಿಯೋಜಿಸಲಾಯಿತು. ಶ್ರೀ ಕೆ. ಎಂ. ಉಡುಪರು ಧನ್ಯವಾದಗಳನ್ನರ್ಪಿಸಿದರು.

ಕಲಾಪ್ರದರ್ಶನದ ಉದ್ಘಾಟನೆ

ಕಟಪಾಡಿಯ ಎಸ್.ವಿ.ಎಸ್. ಹಾಯರ್ ಸೆಕೆಂಡರಿ ಶಾಲೆಯ ರಜತೋತ್ಸವದ ಅಂಗವಾಗಿ ತಾ. 5ರಂದು ಏರ್ಪಡಿಸಲಾದ ಚಿತ್ರಕಲಾ ಪ್ರದರ್ಶನವನ್ನು ಉಡುಪಿ ತಾಲೂಕು ಅಭಿವೃದ್ಧಿ ಮಂಡಲಿಯ ಸದಸ್ಯ ಶ್ರೀ ಕೆ. ಮುದ್ದು ಸುವರ್ಣರ ಅಧ್ಯಕ್ಷತೆಯಲ್ಲಿ ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ.ಕೆ. ಪೈಯವರು ಉದ್ಘಾಟಿಸಿದರು.

ಆರಂಭದಲ್ಲಿ ಡಾ॥ ಕೆ. ಆರ್. ಕೊರಡ್ಕಲ್‌ರವರು ಶ್ರೀ ವಾಸುದೇವ ಕಿಣಿಯವರಿಂದ ಕೊಡಲ್ಪಟ್ಟ ಧ್ವಜಸ್ತಂಭವನ್ನು ಉದ್ಘಾಟಿಸಿದರು. ಶ್ರೀ ಪಿ. ಎನ್. ನಾಯಕರು ಸ್ವಾಗತಿಸಿದರು.

ಶ್ರೀ ಕೆ.ಕೆ. ಪೈಯವರು ಶಾಲೆಯ ಪ್ರಗತಿಯ ಕುರಿತು ಸಂತೋಷ ವ್ಯಕ್ತಪಡಿಸಿ ಅದರ ಬೆಳವಣಿಗೆಗೆ ಕಾರಣರಾದವರ ಕರ್ತೃತ್ವಶಕ್ತಿಯನ್ನು ಶ್ಲಾಘಿಸಿದರು. ಈ ಶಾಲೆಯ ವ್ಯವಸ್ಥಾಪಕರು ಶಾಲೆಯನ್ನು ಸಮರ್ಥವಾಗಿ ನಡೆಸಿದ್ದು ಶಾಲೆಯೀಗ ರಜತೋತ್ಸವ ಆಚರಿಸುತ್ತಿದೆ. ಶಾಲೆಯ ಮಹನೀಯರು ಸಾಧಿಸಿದ ಈ ಯಶಸ್ಸು ಅಭಿನಂದನೀಯ ಎಂದರು ಅವರು ವಸ್ತು ಪ್ರದರ್ಶನದ ಕುರಿತು ಪ್ರಸ್ತಾಪಿಸುತ್ತಾ ಪ್ರದರ್ಶಿತ ಕಲಾಕೃತಿಗಳ ಕುರಿತು ಮೆಚ್ಚುಗೆ ಸೂಚಿಸಿ, ಪ್ರದರ್ಶನವನ್ನು ಸಂಘಟಿಸಿದ ಚಿತ್ರಕಲಾ ಮಂದಿರದ ಸೂತ್ರಧಾರಿ ಶ್ರೀ ಎಲ್. ಜಿ. ಕಾಮತರನ್ನು ಅಭಿನಂದಿಸಿದರು.

ಅಧ್ಯಕ್ಷ ಶ್ರೀ ಮುದ್ದು ಸುವರ್ಣರು ಮಾತನಾಡುತ್ತಾ ಕಟಪಾಡಿಯಲ್ಲಿ ಬೇಗನೆ ಕಾಲೇಜು ಆಗಲೆಂದು ಹಾರೈಸಿದರು.

ಅಂತ್ಯದಲ್ಲಿ ಶ್ರೀ ಕೆ. ಗೋಪಾಲ ಶೆಟ್ಟಿಯವರು ಧನ್ಯವಾದಗಳನ್ನರ್ಪಿಸಿದರು.

ಉಡುಪಿಯಲ್ಲಿ ಒಳ ಚರಂಡಿ ಯೋಜನೆಗೆ ಶಿಲಾನ್ಯಾಸ

ಇದೇ ತಾ. 6ರಂದು ನಲುವತ್ತೈದು ಲಕ್ಷ ರೂ. ವೆಚ್ಚದ ಉಡುಪಿ ಭೂಗತ ಚರಂಡಿ ಯೋಜನೆಯ ಕಾರ್ಯಾರಂಭಕ್ಕೆ ರಾಜ್ಯದ ರಾಜ್ಯಪಾಲ ಶ್ರೀ ಧರ್ಮವೀರ ಅವರು ಜೀವ ವಿಮಾ ಸಂಸ್ಥೆಯ ಅಧ್ಯಕ್ಷ ಶ್ರೀ ಟಿ. ಎ. ಪೈ ಅವರ ಅಧ್ಯಕ್ಷತೆಯಲ್ಲಿ ಅಸ್ತಿವಾರ ಹಾಕಿದರು. ಉಡುಪಿಯ ಜನತೆ ಈ ಯೋಜನೆ ಶೀಘ್ರವಾಗಿ ಸಿದ್ಧಗೊಳ್ಳಲು ಸಹಕರಿಸಬೇಕೆಂದು ಅವರು ಕರೆ ಇತ್ತರು. ಈ ಸಂದರ್ಭದಲ್ಲಿ ಅಗತ್ಯವಿರುವ ಭೂ ಸ್ವಾಧೀನತೆಯ ವಿಷಯದಲ್ಲಿ ಜನತೆ ಉದಾರ ಮನಸ್ಸಿನಿಂದ ಸಹಕರಿಸಬೇಕೆಂದೂ ರಾಜ್ಯಪಾಲರು ಹೇಳಿದರು.

ಶ್ರೀ ಟಿ. ಎ. ಪೈಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ನೀರು ಪೂರೈಕೆ ಮತ್ತು ಒಳ ಚರಂಡಿಯೋಜನೆಗಳಿಗೆ ಸಾಲ ಒದಗಿಸುವ ಮತ್ತು ವಸತಿ ಗೃಹ ರಚನೆಗೆ ನೆರವು ನೀಡುವ ವಿಷಯಗಳಲ್ಲಿ ಎಲ್. ಐ. ಸಿ. ಯು ಕಳೆದ ವರುಷ ಹೊಸ ಯೋಜನೆಗಳನ್ನು ರೂಪಿಸಿದ್ದು ಈಗ ದೇಶದಲ್ಲಿನ ನಗರ ನೀರು ಪೂರೈಕೆ ಯೋಜನೆಗಳಲ್ಲಿ ಶೇಕಡಾ ಹದಿನೇಳರಷ್ಟು ಜೀವವಿಮಾ ಸಂಸ್ಥೆಯ ನೆರವಿನಿಂದ ಆಗುತ್ತಿದೆ ಎಂದು ತಿಳಿಸಿದರು. ಜೀವವಿಮಾ ಸಂಸ್ಥೆ ಜನತೆಯದೇ ಸಂಸ್ಥೆ. ಈ ಸಂಸ್ಥೆ ಜನರಿಗಾಗಿ ಏನು ಮಾಡುತ್ತಿದೆ ಎಂಬುದು ತಿಳಿದಿರಬೇಕಾಗಿದೆ ಎಂದು ಶ್ರೀ ಪೈ ತಿಳಿಸಿದರು. ಮುಲ್ಕಿಗೂ ಉಡುಪಿ ಯೋಜನೆಯೊಂದಿಗೇ ನೀರು ಪೂರೈಕೆ ಯೋಜನೆ ಸಿದ್ಧವಾಗಲಿ ಎಂದ ಅವರು ಇದಕ್ಕೆ ಜೀವ ವಿಮಾ ಸಂಸ್ಥೆಯ ನೆರವಿನ ಭರವಸೆಯನ್ನೂ ನೀಡಿದರು. ಉಳಿದ ರಾಜ್ಯಗಳಂತೆ ಜೀವವಿಮಾ ಸಂಸ್ಥೆ ನೀಡುವ ನೆರವನ್ನು ಮೈಸೂರು ರಾಜ್ಯವೂ ಪಡೆಯಬಹುದೆಂದೂ ಶ್ರೀ ಧರ್ಮವೀರರ ಆಡಳಿತಾವಧಿಯಲ್ಲಿ ಇದು ನೆರವೇರುವಂತಾಗಲೆಂದೂ ಅವರು ಹಾರೈಸಿದರು.

ಸಮಾರಂಭದ ಆರಂಭದಲ್ಲಿ ನಗರ ಸಭಾಪತಿ ಡಾ॥ ವಿ.ಎಸ್. ಆಚಾರ್ಯರು ಸ್ವಾಗತಿಸಿದ್ದು, ಚೀಫ್ ಎಂಜಿನಿಯರ್ ಶ್ರೀ ಎಂ.ಸಿ. ಎಂಟನ್ ಅವರು ತಾಂತ್ರಿಕ ವರದಿ ಓದಿದರು. ಸುಪರಿಂಟೆಂಡಿಗ್ ಇಂಜಿನಿಯರ್ ಶ್ರೀ ನಾರಾಯಣ ಸ್ವಾಮಿಯವರು ಧನ್ಯವಾದ ಅರ್ಪಿಸಿದರು.

"ಗೀತಾಂಜಲಿ" ಕಟ್ಟಡ ಉದ್ಘಾಟನೆ

ಉಡುಪಿಯ ವಿದ್ಯಾಸಮುದ್ರ ರಸ್ತೆಯಲ್ಲಿ ಕಾಣಿಯೂರು ಸ್ವಾಮಿಯವರು ಹೊಸತಾಗಿ ನಿರ್ಮಿಸಿದ ಸಾವಿರ ಜನ ಕುಳಿತುಕೊಳ್ಳಬಹುದಾದ "ಗೀತಾಂಜಲಿ" ಕಟ್ಟಡವನ್ನು ತಾ. [illegible]-71ರಂದು ಶ್ರೀ ಪಿ. ರಂಗನಾಥ ಶೆಣೈ, ಎಂ.ಪಿ. ಇವರು ನಗರ ಸಭಾಪತಿ ಡಾ॥ ವಿ.ಎಸ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು.

ಕಾಣಿಯೂರು ಮಠದ ಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀ ಪಾದಂಗಳವರು ಪ್ರಾಸ್ತಾವಿಕ ಭಾಷಣ ಮಾಡುತ್ತಾ ಕಟ್ಟಡದ ನಿರ್ಮಾಣಕ್ಕಾದ ಸಾಲ ತೀರಿದೊಡನೆ ಇದರಿಂದ ಬರುವ ಪೂರ್ಣ ಆದಾಯವನ್ನು ತಾವು ನಡೆಸುತ್ತಿರುವ ವಿದ್ಯಾಸಂಸ್ಥೆಗಳ ವೆಚ್ಚಕ್ಕೆ ಉಪಯೋಗಿಸಲಾಗುವುದು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಮನೋಜ್ಞ ತೀರ್ಥ ಶ್ರೀಪಾದಂಗಳವರೂ, ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆ.ಸಿ. ರೆಡ್ಡಿ ಮತ್ತು ಕೆನರಾ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ.ಪಿ.ಜೆ. ಪ್ರಭು ಇವರುಗಳು ಸಂದರ್ಭೋಚಿತವಾಗಿ ಮಾತನಾಡಿದರು.

ಅಧ್ಯಕ್ಷರ ಭಾಷಣವಾದ ಬಳಿಕ ಶ್ರೀ ಆರ್. ಎಸ್. ಪಾಂಗಣ್ಣಾಯರು ಧನ್ಯವಾದ ಅರ್ಪಿಸಿದರು.

ಈ ಶುಭ ಸಂದರ್ಭದಲ್ಲಿ ನರಸಿಂಹ ಜಯಂತಿ ಸಂಬಂಧ ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಬ್ರಾಹ್ಮಣ, ಸ್ಥಾನಿಕ ಬ್ರಾಹ್ಮಣಸಹಪಂಕ್ತಿ ಸಮಾರಾಧನೆಯೂ, ಸಂಜೆ ಗೀತಾಂಜಲಿಯಲ್ಲಿ ಪೇಜಾವರ ಶ್ರೀ ಪಾದರಿಂದ ಡಾ॥ ಸಿ. ಗುರುರಾಜ ಭಟ್ಟರು ಬರೆದ ಸ್ಥಾನಿಕ ಬ್ರಾಹ್ಮಣರ ಇತಿಹಾಸದ ಕುರಿತ ಪುಸ್ತಕ ಉದ್ಘಾಟನೆಯೂರಾತ್ರಿ ಶ್ರೀಮತಿ ಶಾಷಾ ಚೂಪಾಸುಣೆಯವರ ಸಂಗೀತಕಾರ್ಯಕ್ರಮಗಳೂಜರಗಿದವು

ಎರಡು ದಿನಗಳ ವಿವಾಹ ಕಾರ್ಯಕ್ರಮ

ಸುಪ್ರಸಿದ್ಧ ಹೊಟೆಲ್ ಮ್ಹಾಲಕ ಶ್ರೀ ಕೆ. ಶಾಮರಾವ್ ಆಲೆವೂರು ಇವರ ಪುತ್ರ ಚಿ. ರಮೇಶ ರಾಯರ ವಿವಾಹವು ಹೆಗಡೆ ಸುಬ್ರಾಯ ಶಾನುಭೋಗರ ಪುತ್ರಿ ಚಿ. ಸೌ. ಉಷಾದೇವಿಯೊಂದಿಗೆ ಇದೇ ತಾ. ೭ರಂದು ಉಡುಪಿ ಗೋವಿಂದ ಕಲ್ಯಾಣ ಮಂಟಪದಲ್ಲಿ ವೈಭವದಿಂದ ಜರಗಿತು. ಆರಂಭದಲ್ಲಿ ಮೆರವಣಿಗೆಯಿಂದ ದಿಬ್ಬಣ ಬಂದೊಡನೆ ಉಪಾಹಾರ, ಸಂಗೀತ ಕಚೇರಿ ನಡೆಯಿತು. ವಿವಾಹದ ನಂತರ ರಾತ್ರಿ ಭೋಜನ ಸಮಾರಂಭವಾಗಿ ಆಲೆವೂರು ಆನಂದ ನಿವಾಸಕ್ಕೆ ಗೃಹ ಪ್ರವೇಶವಾಯಿತು. ಮರುದಿನ ಬೆಳಿಗ್ಗೆ ಗೋವಿಂದ ಕಲ್ಯಾಣ ಮಂಟಪದಲ್ಲಿ ಉಪಾಹಾರ, ಮಧ್ಯಾಹ್ನ ಬೀಗರ ಔತಣ, ಸಂಜೆ ಉಪಾಹಾರ ಮತ್ತು ಮನರಂಜನ ಕಾರ್ಯಕ್ರಮಗಳಿದ್ದವು. ಅತಿ ವಿಜೃಂಭಣೆಯಿಂದ ಜರಗಿದ ಈ ವಿವಾಹ ಸಮಾರಂಭಕ್ಕೆ ಊರ, ಪರವೂರ ಗಣ್ಯ ಮಹನೀಯರು ಅಸಂಖ್ಯ ಸಂಖ್ಯೆಯಲ್ಲಿ ಆಗಮಿಸಿ ವಧೂವರರನ್ನು ಹರಸಿದರು.

ಹರಿಕಥಾ ನಿರೂಪಣೆ

ಆ್ಯವರ್ಸಾಡು ಬಾಂಜಿಕೋಡಿ ಸರಕಾರೀ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ತಾ. ೩೦-೪-೭೧ರಂದು ಮುಂಡಕಜೆಯಲ್ಲಿರುವ ಹರಿದಾಸ್ ಎಂಡ್ ನಟರಾಜ್ ಶ್ರೀ ನೆರಿಯ ಗೋವಿಂದ ಭಟ್ರಿಂದ "ಶಂಖಾಸುರವಧೆ ಎಂಬ ಕಥಾ ಭಾಗದ ಹರಿಕಥಾ ನಿರೂಪಣೆಯುನೃತ್ಯಜೋಡಣೆಯೊಂದಿಗೆ ಯಶಸ್ವಿಯಾಗಿ ನಡೆಸಲ್ಪಟ್ಟಿತು.

ಅಧ್ಯಕ್ಷತೆ ವಹಿಸಿದ್ದ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎ.ಶಿವರಾಮನವರು ಶ್ರೀ ಭಟ್ಟರನ್ನು ಅಭಿನಂದಿಸಿದರು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ದಯಮಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

ವಾಗ್ದೋಷಕ್ಕೆ ಚಿಕಿತ್ಸಕ ಶಾಲೆಗಳು

ವಾಗ್ದೋಷವುಳ್ಳ ಮಕ್ಕಳಿಗಾಗಿಯೇ ವಿಶೇಷ ಚಿಕಿತ್ಸೆಯನ್ನು ನೀಡುವಂಥ ನರ್ಸರಿಗಳೂ ಕಿಂಡರ್‌ಗಾರ್ಟನ್‌ಗಳೂ ಶಾಲೆಗಳೂ ಸೋವಿಯೆತ್ ಒಕ್ಕೂಟದಲ್ಲಿವೆ.

ಈ ಶಾಲೆಗಳ ಸಿಬ್ಬಂದಿಯಲ್ಲಿ ಡಾಕ್ಟರುಗಳು, ನರ್ಸುಗಳು, ವಾಗ್ದೋಷ ಚಿಕಿತ್ಸಾ ವೈದ್ಯರು ಮತ್ತು ವಿಶೇಷ ರೀತಿಯ ತರಬೇತು ಪಡೆದ ಅಧ್ಯಾಪಕರು ಇದ್ದಾರೆ.

ಸುಮಾರು ಹತ್ತು ಜನ ಮಕ್ಕಳು ಇರುವ ಒಂದೊಂದು ಗುಂಪಿಗೂ ಒಬ್ಬ ವಾಗ್ದೋಷ ಚಿಕಿತ್ಸಾ ವೈದ್ಯರು ಇರುತ್ತಾರೆ.

ಮಗುವಿನ ಬೆಳವಣಿಗೆಗೆ ಅವಶ್ಯಕವಾದ ರೀತಿಯಲ್ಲಿ ಪಾಠ, ಕೆಲಸ, ನಿದ್ರೆ ಮತ್ತು ವಿಶ್ರಾಂತಿಗಳಿಗೆ ವ್ಯಯವಾಗುವ ಕಾಲವನ್ನು ಅತ್ಯಂತ ಜಾಗರೂಕತೆಯಿಂದ ಹೊಂದಿಸಲಾಗುತ್ತದೆ. ಅಂದರೆ, ಸೂಕ್ತ, ಛಂದೋಬದ್ಧ ಚಟುವಟಿಕೆಗೆ ಮಗು ರೂಢಿಗೊಳ್ಳುತ್ತದೆ. ಉನ್ನತ ನರಮಂಡಲ ವ್ಯವಸ್ಥೆಗೆ ಇದೊಂದು ಚೈತನ್ಯವಾಗಿಯೂ ಬಳಲಿಕೆ ಮತ್ತು ಹತಾಶತನಗಳಿಗೆ ಒಂದು ತಡೆಯಾಗಿಯೂ ಕಂಡು ಬಂದಿದೆ.

ಪಾಠ ಕೇವಲ ಅರ್ಧ ಗಂಟೆ ಮಾತ್ರ. ಐದರಿಂದ ಹತ್ತು ನಿಮಿಷಗಳು ಹಳೆಯದನ್ನು ಸಮೀಕ್ಷಿಸಿ ಹೊಸದನ್ನು ಪರಿಚಯ ಮಾಡಿಕೊಳ್ಳುವಲ್ಲಿ ಕಳೆಯುತ್ತವೆ. ಮಿಕ್ಕುಳಿದ ಕಾಲವನ್ನು ಹೊಸ ವಿಷಯಗಳನ್ನು ವಿವರಿಸುವುದಕ್ಕೂ ಆ ವಿಷಯಗಳನ್ನು ಮಕ್ಕಳು ಗ್ರಹಿಸಿದರೋ ಹೇಗೆ ಎಂಬುದನ್ನು ಖಾತರಿಮಾಡಿಕೊಳ್ಳಲೂ ವ್ಯಯಮಾಡಲಾಗುತ್ತದೆ.

ಮಕ್ಕಳು ಸಾಮಾನ್ಯ ಪಾಠಗಳನ್ನೇ ಅಲ್ಲದೆ ಪ್ರತಿನಿತ್ಯ ವಿಶೇಷ ರೀತಿಯ ವಾಕ್ ಪಾಠಗಳಿಗೂ ಹಾಜರಾಗುತ್ತಾರೆ.

ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ತುಂಬಲು ಪ್ರತಿಯೊಂದು ಅವಕಾಶವನ್ನೂ ಉಪಯೋಗಿಸಿಕೊಳ್ಳಲಾಗುತ್ತದೆ. ಅಧ್ಯಾಪಕರು ಆಗಾಗ ಮತ್ತು ಉದ್ದೇಶ್ಯಪೂರ್ವಕವಾಗಿಯೇ ತರಗತಿಯಿಂದ ಹೊರಗಡೆ ಇರುತ್ತಾರೆ. ಆಗ ದೊಡ್ಡ ಮಕ್ಕಳು ಸಣ್ಣ ಮಕ್ಕಳನ್ನು ನೋಡಿಕೊಳ್ಳುತ್ತಾರೆ.

ವಾಗ್ದೋಷವಿರುವ ಮಕ್ಕಳಿಗೆ ಪಾಠಗಳ ಕಡೆಗೆ ಗಮನಕೊಡುವುದು ತುಂಬಾ ಕಷ್ಟ. ಇದೇ ಒಂದು ಕಠಿಣ ಸಂಗತಿಯಾಗಿದೆ.

ಈ ನ್ಯೂನತೆಯ ಪ್ರಮಾಣವೂ ಭಿನ್ನ ಭಿನ್ನವಾಗಿರುತ್ತದೆ. ಕೆಲವರಿಗೆ ನಾಲಿಗೆಯಷ್ಟೇ ಬಿಗಿ ಇರಬಹುದು. ಇನ್ನು ಕೆಲವರಿಗೆ ಮಾತನಾಡುವುದೂ, ಬರೆಯುವುದೂ ಎರಡೂ ಕಷ್ಟವಾಗಬಹುದು.

ಆದುದರಿಂದ ಒಬ್ಬೊಬ್ಬ ಪ್ರತ್ಯೇಕ ವಿದ್ಯಾರ್ಥಿಗೆ ಶಿಕ್ಷಣ ನೀಡುವುದಕ್ಕೇ ಆದ್ಯತೆ ನೀಡಲಾಗಿದೆ. ಹೀಗೆ ಮಾಡಿದಾಗ ಆ ಮಗುವಿನ ಮೇಧಾಶಕ್ತಿ, ಇಲ್ಲಿಯವರೆಗೆ ಆತ ತಿಳಿದುಕೊಂಡಿರುವ ಜ್ಞಾನ, ಅವನ ಸಾಮಾಜಿಕ ಮತ್ತು ಜೀವಿತ ಸ್ಥಿತಿಗತಿಗಳು ಮತ್ತು ಅವನ ವಾಗ್ದೋಷ ಎಂಥದು ಹಾಗೂ ಎಷ್ಟು ಎಂಬುದು ಮೊದಲಾದವೆಲ್ಲವನ್ನೂ ಪರಿಗಣನೆಗೆ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಪ್ರತಿಯೊಂದು ಮಗುವಿಗೂ ಮನೆಯಲ್ಲಿ ಮತ್ತು ಶಾಲೆಯಲ್ಲಿ ತನ್ನದೇ ಆದ ಪರಿಸರ, ಅವನದೇ ಆದ ಅಭ್ಯಾಸಗಳು ಜೀವನದೊಂದಿಗೆ ಸಂಪರ್ಕಗಳು ಇದ್ದು, ಇವೆಲ್ಲವೂ ವ್ಯಕ್ತಿತ್ವ ರಚನೆಯ ಮೇಲೆ, ನಡೆವಳಿಕೆಯ ಮೇಲೆ ಪ್ರಭಾವ ಬೀರಿಯೇ ಬೀರುತ್ತವೆ ಮತ್ತು ಅವನಿಗೆ ಹೇಗೆ ಕಲಿಸಿಕೊಡಬೇಕೆಂಬುದನ್ನೂ ಆಗ ನೋಡಬೇಕಾಗುತ್ತದೆ.

ಆ ಹುಡುಗನ ಮೇಲೆ ಪ್ರಭಾವ ಬೀರುವಂತ ಶಕ್ತಿಗಳನ್ನು ಸೂಕ್ತವಾಗಿ ಅನ್ವಯಿಸಿಕೊಳ್ಳುವುದರ ಮೇಲೆ ಮತ್ತು ಮಗು ಅದಕ್ಕೆ ಸರಿಸಾಟಿಯಾಗಿ ನಿಲ್ಲುವುದರ ಮೇಲೆಯೇ ಉತ್ತಮ ಫಲಿತಾಂಶಗಳು ಅವಲಂಬಿಸಿವೆ.

ಶಾಲೆಗಳು, ಮಗು ಕೊಡಬಹುದಾದುದನ್ನು ಮಾತ್ರವೇ ಅಪೇಕ್ಷಿಸುತ್ತವೆ.

ಈ ಕಾರಣದಿಂದಲೇ ಅಧ್ಯಾಪಕರು ಒಬ್ಬೊಬ್ಬ ಹುಡುಗನನ್ನೂ ಆರಿಸಿಕೊಂಡು ಇನ್ನೊಬ್ಬ ನೆರೆಹುಡುಗನೊಡನೆ ಜೊತೆ ಸೇರಿಸಿ ಬೆಳೆಸುತ್ತಾರೆ. ಸಂಭವನೀಯ ಘಟನೆಗಳ ಬಗ್ಗೆ ಅವನೂ ಯೋಚಿಸುವಂತಿರಬೇಕು, ಮತ್ತೆ ಅವುಗಳಿಂದ ರಕ್ಷಣೆಯನ್ನೂ ತಿಳಿದುಕೊಳ್ಳಬೇಕು.

ಉದಾಹರಣೆಗೆ ಮಗುವಿನ ಲಕ್ಷ್ಯ ಎಲ್ಲೆಲ್ಲೂ ಹರಿದಾಡುತ್ತಿದೆಯೆಂಬುದನ್ನು ಗಮನಿಸಿದರೆ ಅಥವಾ ದಣಿದಿದ್ದಾನೆ ಎಂದು ಅನಿಸಿದರೆ, ತರಗತಿ ಕೋಣೆಯಿಂದ ಹೊರಗಡೆ ಕಳಿಸಿಕೊಡುತ್ತಾನೆ.

ಹೆಚ್ಚು ಎಚ್ಚರವಂತ ಮಗು ಅನುಮೋದನೆ ಪಡೆಯುತ್ತಾನೆ. ಮೂರನೆ ಹುಡುಗನಿಗೆ ವಿಶೇಷ ಸಹಾಯ ಹಾಗೂ ಆರಾಮವೆ ಬೇಕಾದೀತು.

ಚೂರು ಚೂರಾಗಿ ಮಗುವಿನ ಕೆಲಸದ ಯೋಜನೆಯನ್ನು ರಚಿಸಲಾಗುತ್ತದೆ. ಮಗು ಆಸಕ್ತಿ ವಹಿಸಿರುವಂತೆ, ಜಾಗೃತನಾಗಿರುವಂತೆ ನೋಡಿಕೊಳ್ಳುತ್ತ ಅವನ ಭಾವನೆ, ಅನಿಸಿಕೆ, ಉದ್ವೇಗಗಳ ಆಧಾರದ ಮೇಲೆ ಉತ್ತಮವಾದ ಹಾದಿಯನ್ನು ಹುಡುಕುವುದೇ ಶಿಕ್ಷಕನ ಕೆಲಸ.

ವಾಗ್ದೋಷ ಚಿಕಿತ್ಸಾ ವೈದ್ಯನು ಅಧ್ಯಾಪಕರಿಗೆ ಮಗುವಿನ ಪ್ರಗತಿಯ ಬಗ್ಗೆ ತಿಳಿಸುತ್ತಲೇ ಇರುತ್ತಾನೆ. ಪ್ರಗತಿಯನ್ನು ಶೀಘ್ರಗೊಳಿಸುವುದೆಂತು ಎಂಬುದನ್ನೂ ಅವರು ಸೂಚಿಸುತ್ತಿರುತ್ತಾರೆ.

ಅಧ್ಯಾಪಕರು, ಡಾಕ್ಟರರು ಮತ್ತು ವಾಗ್ದೋಷ ಚಿಕಿತ್ಸಾ ವೈದ್ಯರು ಒಟ್ಟೊಟ್ಟಿಗೇ ಕಾರ್ಯ ಮಾಡುತ್ತಾರೆ. ಹಠಮಾರಿಯಾದ, ಅಂಜುಬುರುಕನಾದ ಇಲ್ಲವೆ ಮಂದನಾದ ಹುಡುಗನನ್ನು ನೋಡಿಕೊಳ್ಳುವ ಉತ್ತಮ ವಿಧಾನಗಳನ್ನು ನಿರ್ಣಯಿಸಲಾಗುತ್ತದೆ.

ವಾಕ್‌ಪಾಠಗಳ ಕಾಲದಲ್ಲಿ ಮಗುವಿನ ಲಕ್ಷ್ಯವನ್ನು ಶಾರೀರಿಕ ದೋಷದಿಂದ ಮಾತನಾಡಲು ಕಷ್ಟವನ್ನುಂಟುಮಾಡುವ ದೋಷದಿಂದ ಬೇರೆ ಕಡೆಗೆ ತಿರುಗಿಸುವುದು ಅತ್ಯಂತ ಮುಖ್ಯವಾದ ಸಂಗತಿ.

ಔಷಧ ಚಿಕಿತ್ಸೆಯಂತೂ ಶಕ್ತಿವರ್ಧಕಗಳಿಂದ ಹಿಡಿದು ಚಿತ್ತಸ್ವಾಸ್ಥ್ಯವನ್ನುಂಟುಮಾಡುವ ಔಷಧಗಳ ವರೆಗೂ ಹರಡುತ್ತದೆ. ಇದರಲ್ಲಿ ಬ್ರೋಮೈಡ್, ಕ್ಯಾಲ್ಸಿಯಂ ಮತ್ತು ನಾನಾ ಬಗೆಯ ವಿಟಮಿನ್ ಮೊದಲಾದುವುಗಳೂ ಸೇರುತ್ತವೆ.

ಜಾಲಕ ನರಗಳಲ್ಲಿ ದೋಷವಿದ್ದರೆ ಆಗಾಗ ಅಲ್ಪ ಪ್ರಮಾಣದಲ್ಲಿ ಅಮಿನಜಿನನ್ನು ಕೊಡಲಾಗುತ್ತದೆ.

ಶ್ವಾಸೋಚ್ಛ್ವಾಸದ ಸ್ನಾಯುಗಳ ಅಥವಾ ಮಾತು ಹುಟ್ಟುವ ಅಂಗಗಳಲ್ಲಿಯ ಸೆಳೆತದಿಂದ ವಾಗ್ದೋಷವು ಉಂಟಾಗಿದ್ದ ಪಕ್ಷದಲ್ಲಿ ಪರಿಹಾರಕ ನಮೂನೆಯ ಔಷಧಗಳನ್ನು ಉಪಯೋಗಿಸಲಾಗುತ್ತದೆ.

ಸ್ಫುಟೋಚ್ಚಾರಣೆ ಸ್ನಾಯುಗಳು ಜಬ್ಬಲಾಗಿದ್ದರೆ, ಬಿ ಗುಂಪಿನ ವಿಟಮಿನ್ನುಗಳನ್ನೂ, ಪ್ರೋಸರಿನ್ ಮತ್ತು ಗಾಲಂತಾಮೈನ್‌ಗಳನ್ನೂ ಉಪಯೋಗಿಸಲಾಗುತ್ತದೆ.

ಯಾವುದೇ ಔಷಧವನ್ನು ತೆಗೆದುಕೊಂಡ ಮಕ್ಕಳನ್ನು ಸದಾಕಾಲ ಅಧ್ಯಾಪಕರ ಕಣ್ಣಾರಿಕೆಯಲ್ಲಿ ಇಟ್ಟಿರಲಾಗುತ್ತದೆ. ಅವರು ಯಾವುದೇ ಬಗೆಯ ಗ್ರಹಣಶಕ್ತಿ ಪರಿಣಾಮಗಳ ಬಗ್ಗೆ ತಕ್ಷಣವೆ ಡಾಕ್ಟರಿಗೆ ತಿಳಿಸುತ್ತಾರೆ.

ಈ ಎಲ್ಲ ರೀತಿಯಿಂದಾಗಿ ತೊದಲುವಿಕೆ, ಗುಗ್ಗುವಿಕೆ ಮುಂತಾದುವು ಎರಡು ಮೂರು ತಿಂಗಳಲ್ಲೇ ಸಂಪೂರ್ಣ ನಿವಾರಣೆಗೊಂಡಿರುತ್ತವೆ.

ಶಾಲೆಯಲ್ಲಿಯ ವಾತಾವರಣವೂ ಮನೆಯಲ್ಲಿಯಂತೆಯೆ ಇರುವುದರಿಂದ ಅದೇ ಒಂದು ಉತ್ತಮ ಮನೋ ವೈಜ್ಞಾನಿಕ ಚಿಕಿತ್ಸೆಯಂತಾಗುತ್ತದೆ.

ಹೀಗೆ ಮಕ್ಕಳು ತಮ್ಮ ವಯೋಗುಂಪಿನವರ ಚಟುವಟಿಕೆಗಳಲ್ಲಿ ಸೇರಿಕೊಂಡು ಆಟವಾಡುತ್ತಾರೆ, ಮಾತನಾಡುತ್ತಾರೆ.

●●

ಶಿರ್ವ ರೋಟರಿ ಕ್ಲಬ್‌ಗೆ ಸನದು ಪ್ರದಾನ

ತಾ. ೧-೫-೭೧ರಂದು ಶಿರ್ವದಲ್ಲಿ ನೂತನವಾಗಿ ಆರಂಭಿಸಲ್ಪಟ್ಟ ರೋಟರಿ ಕ್ಲಬ್‌ಗೆ ಚಾರ್ಟರ್ ಒಪ್ಪಿಸುವ ಸಮಾರಂಭವೊಂದು ಜರಗಿತು. ರೋಟರಿ ಗವರ್ನರ್ ಶ್ರೀ ಟಿ. ರಮೇಶ ಪೈಗಳು ಚಾರ್ಟರ್ ಒಪ್ಪಿಸುತ್ತಾ ರೋಟರಿ ಕ್ಲಬ್ ಒಂದು "ಸೇವಾ ಸಂಸ್ಥೆ" ಎಂದು ಸ್ಪಷ್ಟಪಡಿಸಿದರು. ಸಮಾಜದ ವಿವಿಧ ಉದ್ಯೋಗ ಉದ್ದಿಮೆಗಳ ನಾಯಕ ಪ್ರತಿನಿಧಿಗಳು ಒಂದಾಗಿ ಆಯಾಯ ಪ್ರದೇಶಗಳಲ್ಲಿರುವ ಸಮಸ್ಯೆಗಳಿಗೆ ಉತ್ತರ ಹುಡುಕುವ ಕ್ರಿಯಾತ್ಮಕ ಸಾಂಘಿಕ ಸಂಘಟನೆಯೇ ರೋಟರಿ ಕ್ಲಬ್. ಭಾರತದ ಸಮಸ್ಯೆಗಳನ್ನು ಬಗೆಹರಿಸಲು ನಾವು ನಮ್ಮಿಂದಾಗುವ ಪ್ರಯತ್ನ ಮಾಡಬೇಕೆಂದವರು ತಿಳಿಸಿದರು. ಚಿಕ್ಕಮಕ್ಕಳ ಬೆಳವಣಿಗೆ, ಆರೋಗ್ಯದ ಕಡೆಗೆ ನಾವು ಸಾಕಷ್ಟು ಗಮನ ಕೊಟ್ಟಿಲ್ಲ. ಈ ಕ್ಷೇತ್ರಗಳಲ್ಲಿ ತನ್ಮಯತೆಯಿಂದ, ತಿಳುವಳಿಕೆಯಿಂದ ನಾವು ದುಡಿದರೆ ಅದಕ್ಕಿಂತ ದೊಡ್ಡ ದೇಶಸೇವೆ ಇರಲಾರದು ಎಂದರು. ಈ ಎಲ್ಲ ಕೆಲಸಗಳನ್ನು ನಿಮ್ಮ ನಿಮ್ಮ ಕಾರ್ಯಕ್ಷೇತ್ರದಲ್ಲಿ ಉಚಿತವಾಗಿ ಕಂಡ ರೀತಿಯಲ್ಲಿ ಮಾಡಿದರೆ ರೋಟರಿ ಕ್ಲಬ್‌ನ ಸಾರ್ಥಕವಾಗುವುದೆಂದು ಶ್ರೀ ಪೈಗಳು ನುಡಿದರು.

ಆರಂಭದಲ್ಲಿ ಉಡುಪಿ ರೋಟರಿ ಕ್ಲಬ್‌ನ ಅಧ್ಯಕ್ಷ ಶ್ರೀ ಪಿ. ಶ್ರೀಪತಿ ಆಚಾರ್ಯರು ಹೊಸ ಕ್ಲಬ್‌ನ ಅಧ್ಯಕ್ಷ ರೆ|ಫಾ| ನಿಕ್ಸರ್ ಸಾಲ್ಡಾನರನ್ನು ಸ್ವಾಗತಿಸಿ ಅವರಿಗೆ "ರೋಟರಿ ಕಾಲರ್"ನಿಂದ ಅಲಂಕರಿಸಿ ಹೊಸತಾಗಿ ಆರಂಭಿಸಲ್ಪಟ್ಟ ಈ ಕ್ಲಬ್‌ಗೆ ಗವರ್ನರ್ ಪೈಗಳು ಚಾರ್ಟರನ್ನಿತ್ತು ಆಶೀರ್ವದಿಸಬೇಕೆಂದು ಕೇಳಿಕೊಂಡರು. ಡಾ| ಮೋಹನದಾಸ ಪೈಗಳು ರೋಟರಿಯ ತತ್ತ್ವೋಪದೇಶಗಳ ಸೂಕ್ಷ್ಮ ಪರಿಚಯವನ್ನಿತ್ತು ಎಲ್ಲರನ್ನೂ ಸ್ವಾಗತಿಸಿದರು.

ಕ್ಲಬ್‌ನ ಕಾರ್ಯದರ್ಶಿ ಡಾ| ಕೆ.ಆರ್. ವೆಂಕಟಕೃಷ್ಣನವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ಬಿ. ಜಯರಾಮ ಶೆಟ್ಟರು ಸಂದೇಶಗಳನ್ನು ಓದಿದರು. ವೆರಿ ರೆವರೆಂಡ್ ಮೊನ್ಸಿಜಿರ್ ಎಚ್. ಗೋನ್ಸಾಲ್ವಿಸರು ಹೊಸ ಕ್ಲಬ್‌ನ ಮೊದಲನೆಯ ಯೋಜನೆಯಾದ "ಟಿ.ಎ.ಬಿ. ವ್ಯಾಕ್ಸಿನ್"ನ್ನು ಉದ್ಘಾಟಿಸಿದರು.

ಡಾ| ಎ. ಡಿ. ಅಡಪ್ಪರು ಮಕ್ಕಳ ಜಗತ್ತು ಎಂಬ ಪತ್ರಿಕೆಯ ವಿತರಣೆಯನ್ನು ಸ್ಥಳೀಯ ಶಾಲೆಗಳಿಗೆ ನೆರವೇರಿಸಿದರು. ಮಾಜಿ ಗವರ್ನರ್ ಡಾ| ಟಿ.ಎಂ.ಎ. ಪೈಗಳು ಕ್ಲಬ್‌ನ ಸಂಸ್ಮರಣ ಸಂಚಿಕೆಯನ್ನು ಉದ್ಘಾಟಿಸಿದರು. ಕಾರ್ಕಳ, ಮಂಗಳೂರು, ಮಂಗಳೂರು ಉತ್ತರ ಕ್ಲಬ್‌ಗಳ ಪರವಾಗಿ ಶ್ರೀ ರಾಮಚಂದ್ರ, ಡಾ| ಅಡ್ಯಂತಾಯ ಮತ್ತು ಶ್ರೀ ಕೆ. ಎನ್ ಶಾಸ್ತ್ರಿಯವರು ಆಯಾಯ ಕ್ಲಬ್‌ಗಳ ಫ್ಲೇಗ್‌ಗಳನ್ನಿತ್ತು ಶುಭಾಶಯ ಕೋರಿದರು. ಅಧ್ಯಕ್ಷ ರೆ|ಫಾ| ಸಾಲ್ಡಾನರು ಕ್ಲಬ್‌ನ ಹುಟ್ಟಿಗೆ ಕಾರಣರಾದ ಸನ್ಮಿತ್ರರನ್ನು ಅಭಿನಂದಿಸಿದರು. ಶ್ರೀ ಪಿ. ವಿಠಲ ಶೆಣೈಯವರು ವಂದಿಸಿದರು.

ರಜತೋತ್ಸವ — ವರ್ಧಂತ್ಯುತ್ಸವ

ಕಟಪಾಡಿಯ ಎಸ್. ವಿ. ಎಸ್. ಹಾಯರ್ ಸೆಕೆಂಡರಿ ಶಾಲೆಯ ರಜತೋತ್ಸವ ಸಮಾರಂಭದ ಅಂಗವಾಗಿ ಇದೇ ತಾ. ೫ನೇ ಸಂಜೆ ಉಡುಪಿ ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ಶಾಲಾ ವರ್ಧಂತ್ಯುತ್ಸವ ಸಮಾರಂಭವು ವಿಜೃಂಭಣೆಯಿಂದ ನೆರವೇರಿತು. ಶ್ರೀಮತಿ ಮನೋರಮಾ ಮಧ್ವರಾಜರು ಬಹುಮಾನ ವಿತರಣೆ ಗೈದರು. ಬೊಂಬಾಯಿಯ ಫಸ್ಟ್ ಕ್ಲಾಸ್ ಇನ್‌ಕಂ ಟೇಕ್ಸ್ ಆಫೀಸರ್ ಶ್ರೀ ಜೆ. ಎಸ್. ರಾಯರು ಶಾಲಾ ಸ್ವಸ್ತಿವಾಚನಮಾಡಿದರು. ಅಧ್ಯಕ್ಷ ಶ್ರೀ ಮಧ್ವರಾಜರು ಭಾಷಣ ಮಾಡುತ್ತಾ, ಶಾಲಾ ಪ್ರಗತಿಗಾಗಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ರಾತ್ರಿ ವಿವಿಧ ವಿನೋದಾವಳಿಗಳು ನಡೆದವು.

ಹಳೆ ವಿದ್ಯಾರ್ಥಿ ದಿನಾಚರಣೆ

ತಾ. ೭ರಂದು ರಜತೋತ್ಸವ ಸಮಾರಂಭದ ಅಂಗವಾಗಿ ಹಳೆ ವಿದ್ಯಾರ್ಥಿ ದಿನಾಚರಣೆಯು ಬೆಳಿಗ್ಗೆ ಹಳೆ ವಿದ್ಯಾರ್ಥಿಗಳ ಸಮಾವೇಶದೊಂದಿಗೆ ಪ್ರಾರಂಭವಾಗಿ ಸಂಜೆ ಡಾ|| ಕೆ. ಜಿ. ಕಿಣಿಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಶ್ರೀ ಕೆ. ಭಾಸ್ಕರ ಶೆಟ್ಟರು ಸಮಾರೋಪ ಭಾಷಣಮಾಡಿದರು. ಲೋಕಸಭಾ ಸದಸ್ಯ ಶ್ರೀ ಪಿ. ರಂಗನಾಥ ಶೆಣೈಯವರು ಮುಖ್ಯ ಅತಿಥಿಗಳಾಗಿದ್ದು ಸಂದರ್ಭೋಚಿತ ಉಪನ್ಯಾಸವಿತ್ತರು. ರಾತ್ರಿ ವಿವಿಧ ವಿನೋದಾವಳಿಗಳು ಜರಗಿದವು.

ಸಂತಾಪ ಸೂಚಕ ಸಭೆ

ಉಡುಪಿ, ಕೊರಂಗ್ರಪಾಡಿ ಸರಕಾರಿ ಹಾಯರ್ ಪ್ರೈಮರಿ ಶಾಲೆಯಲ್ಲಿ ದಿನಾಂಕ ೩ರಂದು ಶಾಲಾಭಿವೃದ್ಧಿ ಸಮಿತಿ ಹಾಗೂ ಪಂಚಾಯತ ಸದಸ್ಯರಾದ ಕೆಮ್ತೂರು ಭೋಜರಾಜ ಶೆಟ್ಟರು ತಾ. ೧-೫-೭೧ರಂದು ಅಕಾಲ ನಿಧನ ಹೊಂದಿದ ಬಗ್ಗೆ ಪಂಚಾಯತ್ ಅಧ್ಯಕ್ಷ ಶ್ರೀ ಕೆ. ಬಾಲಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸಂತಾಪ ಸೂಚಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಕೇಶವ ಕುದ್ವರು ಪ್ರಾಸ್ತಾವಿಕ ಭಾಷಣಮಾಡಿದರು. ಸಭಿಕರಲ್ಲಿ ಸರ್ವ ಶ್ರೀ ಕೆ. ಶೇಖರ ಶೆಟ್ಟಿ ಹಾಗೂ ಕೆ. ಸುಂದರ ಶೆಟ್ಟರು ಮೃತರ ಸಾರ್ವಜನಿಕ ಸೇವಾಸಕ್ತಿಯನ್ನು ಕೊಂಡಾಡಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಬಯಸಿದರು. ಅಧ್ಯಕ್ಷರ ಭಾಷಣ ಹಾಗೂ ಮೌನ ಪ್ರಾರ್ಥನೆಯೊಂದಿಗೆ ಸಭಾಂತ್ಯವಾಯಿತು.

ನಿಧನ

ಗುಲ್ಬರ್ಗಾದಲ್ಲಿ ತಾಜಮಹಲ್ ಮತ್ತು ಮಾಧವ ನಿವಾಸ ಹೊಟೇಲುಗಳ ಮಾಲಕರಾಗಿದ್ದ ಜನಪ್ರಿಯರಾದ ಪಾದೂರು ವ್ಯಾಸತಂತ್ರಿಗಳು ೫೭ನೇ ವರ್ಷದಲ್ಲಿ ತಾ. ೧೭-೪-೭೧ರಂದು ನಿಧನರಾದರೆಂದು ತಿಳಿದುಬಂದಿದೆ.

ತಿದ್ದುಪಡಿ

ಈ ಸಂಚಿಕೆಯ ೫ನೆಯ ಪುಟದಲ್ಲಿ ಪ್ರಕಟವಾದ ಶ್ರೀ ಮೂಲ್ಕಿ ಸುಂದರರಾಮ ಶೆಟ್ಟರ ಅಧ್ಯಕ್ಷ ಭಾಷಣದ ೨ನೇ ಕಲಮಿನ ಕೊನೆಯ ಪಾರದಲ್ಲಿ ಆಧುನಿಕ ವೃತ್ತಪತ್ರಿಕೆ ಎಂದಾದ ನಂತರ ನಮ್ಮನ್ನು ಕೊಚ್ಚಿಕೊಂಡು ಎಂಬುದರ ನಡುವೆ—ರೇಡಿಯೋ, ಚಲಚ್ಚಿತ್ರಗಳ ಯುಗದಲ್ಲಿ ಭಾವನೆಗಳ ಮಹಾಪೂರವೇ—ಎಂಬುದನ್ನೂ ೪ನೇ ಕಲಮಿನ ೨ನೇ ಪಾರದ ತನ್ನ ಉದ್ಧಾರಕ್ಕಾಗಿ ಎಂದಾದ ನಂತರ ಪಣವನ್ನು ಎಂಬುದರ ನಡುವೆ—ತನ್ಮೂಲಕ ಸಮಾಜದ ಉದ್ಧಾರಕ್ಕಾಗಿ, ತನ್ಮೂಲಕ ದೇಶದ ಉದ್ಧಾರಕ್ಕಾಗಿ ದುಡಿವ—ಎಂಬುದನ್ನೂ ಸೇರಿಸಿ ಓದುವಂತೆ ವಿನಂತಿ.

ಶ್ರೀ ಬಾವ್ಲ ಕೊಲೆ

(ಎರಡನೇ ಪುಟದಿಂದ)

ವು ಎಚ್ಚರಿಸಿದ. ಆದರೆ ನಾವು ಇಂದೂರಿಗೆ ಹೋಗಲು ಒಪ್ಪಲಿಲ್ಲ.

ನಮ್ಮ ಕಾರಿನ ಚಾಲಕನ ಮುಖೇನ ನನ್ನ ಯಜಮಾನರಿಗೆ ಬಿಹಾರಿಲಾಲ್ ಎನ್ನುವವನ ಸ್ನೇಹವಾಯಿತು. ಅವನ ಚರಿತ್ರೆ ನನಗೆ ತಿಳಿಯದು ಅವನ ಹೇಳಿಕೆಯಂತೆ ಅವನೊಬ್ಬ ಶ್ರೀಮಂತ ವ್ಯಾಪಾರಿ. ದೆಹಲಿ–ಮುಂಬಯಿಗಳಲ್ಲಿ ಆತನಿಗೆ ಅಂಗಡಿಗಳಿವೆಯಂತೆ. ಆತನ ತಮ್ಮನೊಬ್ಬ ಮುಂಬಯಿಯಲ್ಲಿ ಬ್ಯಾರಿಸ್ಟರ್; ಇನ್ನೊಬ್ಬ ಬುಲಾಖಿದಾಸ್ ಇಂಜಿನಿಯರ್. ನನ್ನ ಬಳಿಯಿದ್ದ ಕಾಗದ–ಪತ್ರಗಳನ್ನು ನಾನು ಅವನಿಗೆ ತೋರಿಸಿದೆ. ತಮ್ಮನ ಮುಖಾಂತರ ಮಹಾರಾಜರ ಮೇಲೆ ವ್ಯಾಜ್ಯ ಹೂಡಬಹುದೆಂದೂ, ದ್ರವ್ಯ ಸಹಾಯ ಮಾಡುವುದಾಗಿಯೂ ಆತ ಮಾತುಕೊಟ್ಟ. ಅದಕ್ಕಾಗಿ ಮುಂಬಯಿಗೆ ಹೋಗಬೇಕೆಂದೂ, ಮುಂಬಯಿಯಲ್ಲಿ ತನ್ನ ತಮ್ಮನ ಮನೆಯಲ್ಲಿ ಬಿಡಾರ ಮಾಡಬಹುದೆಂದೂ ಸಲಹೆ ಕೊಟ್ಟ. ಅವನ ಭರವಸೆಯ ಮೇಲೆ ನಾವು ಜೂನ್ 18ರಂದು ಮುಂಬಯಿಗೆ ಬಂದೆವು. ಶ್ರೀ ಬುಲಾಖಿದಾಸ್ ನಮ್ಮನ್ನು ರೈಲು ನಿಲ್ದಾಣದಲ್ಲಿ ಇದಿರ್ಗೊಂಡು ತನ್ನ ವಾಸದ ಮನೆಗೆ ಕರೆದು ತಂದ.

ಅವನ ಬಂಗಲೆ ಜನಸಾಂದ್ರತೆ ಇಲ್ಲದ ಪ್ರದೇಶಲ್ಲಿತ್ತು. ನಮಗೆ ಅನುಮಾನ ಬಂತು. ಅಲ್ಲಿರಲು ಭಯವಾಯಿತು. ಮಹಾರಾಜರಿಗೆ ಹಸ್ತಕರಾಗಿ ಕೆಲಸ ಮಾಡುವವರಿರಬೇಕೆಂಬ ಶಂಕೆಯುಂಟಾಯಿತು. ಶ್ರೀ ರಾಮು ಬಾಬುವಿನ ಚಿತಾವಣೆಯ ಮೇಲೆ ನಮ್ಮನ್ನು ಕೊಲ್ಲಲೋ, ಅಥವಾ ನಮಗೆ ಕಷ್ಟ ಪರಂಪರೆಯನ್ನು ತರಲೋ ಪ್ರೇರಿತರಾದವರೆಂದು ಅನುಮಾನಿಸಿ ವಾಸ್ತವ್ಯವನ್ನು ಬದಲಾಯಿಸಿದೆವು. ಬುಲಾಖಿದಾಸ್ ಬಹಳವಾಗಿ ನಮ್ಮನ್ನು ಕೇಳಿಕೊಂಡರೂ ನಾವು ಹಕೀಂ ಬಿಲ್ಡಿಂಗಿಗೆ ಬಂದೆವು. ಅವರ ಸೇವಕ ರಾಮುಲಾಲ್ ನಮ್ಮನ್ನು ಕಳಿಸಿಕೊಡಲು ನಾವಿಳಿದುಕೊಂಡ ಮನೆಯ ತನಕ ಬಂದ. ಆತ ನಮ್ಮ ಸಹಾಯಕ್ಕೆ ಬಂದವನಲ್ಲ. ನನ್ನ ಈ ಆತಂಕವನ್ನು ಜಿಲ್ಲಾ ರಕ್ಷಣಾಧಿಕಾರಿಗಳಿಗೆ ನಿವೇದಿಸಿಕೊಂಡೆ. ರಕ್ಷಣೆಯ ದೃಷ್ಟಿಯಿಂದ ಸ್ಥಳ ಬದಲಾವಣೆ ಒಳ್ಳೆಯದೆಂದು ಅವರೂ ಅಭಿಪ್ರಾಯಪಟ್ಟರು.

ಜೂನ್ 25ರಂದು ರಾತ್ರಿ 11–30ರ ಸುಮಾರಿಗೆ ರಾಮುಲಾಲ್ ಬೇಹಾರಿಲಾಲರನ್ನು ನಾವಿದ್ದ ಮನೆಗೆ ಕರೆತಂದ. ಆ ರಾತ್ರಿ ಅವರಿಬ್ಬರೂ ನಮ್ಮ ಮನೆಯಲ್ಲಿ ಮಲಗಿದರು. 25ರಂದು ಬೆಳಗಿನ ಝಾವ ನಮ್ಮ ಯಜಮಾನರು ಪ್ರಾರ್ಥನೆ ಸಲ್ಲಿಸಲು ಮಸೀದಿಗೆ ಹೋದರು. ಹೋಗುತ್ತಾ ತಮ್ಮ ಬಳಿಯಿದ್ದ 1400–00 ರೂ.ಗಳನ್ನೂ, ಕಾಗದಪತ್ರಗಳನ್ನೂ ತಾವು ಮಲಗಿದ್ದ ಹಾಸುಗೆಯ ಅಡಿಯಲ್ಲಿ ಬಚ್ಚಿಟ್ಟಿದ್ದರು. ಅವರು ಮನೆ ಬಿಟ್ಟು ಹೊರಟಾಗ, ರಾಮುಲಾಲ್, ಬೇಹಾರಿಲಾಲ್ ಗಾಢ ನಿದ್ರೆಯಲ್ಲಿದ್ದರು. ಆ ರಾತ್ರಿ ಅವರೆಲ್ಲ ಒಂದೇ ಕೋಣೆಯಲ್ಲಿ ಮಲಗಿದ್ದರು.

ಮಸೀದಿಯಿಂದ ಹಿಂದಿರುಗುತಿದ್ದಾಗ ಬೇಹಾರಿಲಾಲ್ ಮಹಡಿಯ ಮೆಟ್ಟಲಿಳಿದು ಬರುವುದನ್ನು ಕಂಡು, ನನ್ನ ಯಜಮಾನರು 'ಈ ನಸುಕಿನಲ್ಲಿ ಎಲ್ಲಿಗೆ' ಎಂದು ಸಹಜವಾಗಿಯೇ ಕೇಳಿದರು. ಚಹ ಕುಡಿದು ಬರುತ್ತೇನೆಂದು ಹೇಳಿ ಹೊರಟು ಹೋದ. ನಮ್ಮ ಯಜಮಾನರು ಕೋಣೆಯೊಳಕ್ಕೆ ಪ್ರವೇಶ ಮಾಡಿದರು. ಆಗ ರಾಮುಲಾಲ್ ಹೊರಡಲು ಸಿದ್ಧನಾಗುತಿದ್ದುದು ಕಂಡು ಸಂದೇಹ ಬಂತು. ಅವರು ಹಣಕ್ಕಾಗಿ ಹಾಸಿಗೆಯನ್ನು ತಡಕಾಡಿದರು. ಆವರಿಟ್ಟ ಕಾಗದಪತ್ರಗಳು, ಹಣ ಎರಡೂ ಮಾಯವಾಗಿದ್ದುವು— ಅವರು ರಾಮುಲಾಲನನ್ನು ಪ್ರಶ್ನಿಸಿದರು—ಆತ ಬೇಹಾರಿಲಾಲ್ ಅವುಗಳನ್ನು ಒಯ್ದನೆಂದು ತಿಳಿಸಿದ. ನಾವು ಆತನನ್ನು ಹಿಡಿದು ಪೋಲಿಸರ ವಶಕ್ಕೊಪ್ಪಿಸಿದೆವು.

ರಾಮುಲಾಲನ ಹೇಳಿಕೆಯಂತೆ ಅವರೆಲ್ಲ ಶ್ರೀ ರಾಮು ಬಾಬುವಿನ ಹಸ್ತಕರು. ಈ ಚಟುವಟಿಕೆಯಲ್ಲಿ ಮಹಾರಾಜರ ಹಸ್ತಕ್ಷೇಪವೂ ಇದೆ. ಆ ಗುಂಪಿನಲ್ಲಿ ಅರಮನೆಯ ಕರಣಿಕ ಬೇಹಾರಿಲಾಲ್, ಮಹಾರಾಜರ ಅಂಗರಕ್ಷಕ ಅಣ್ಣಾ ಸಾಹೇಬ, ಇತ್ತೀಚೆಗೆ ತಿಂಗಳೊಂದರ 300 ರೂಪಾಯಿನ ಸಂಬಳಕ್ಕೆ ಸೇರಿಕೊಂಡ ನನ್ನ ಸೋದರಿ, ಇನ್ನೂ ಅನೇಕರು ಇದ್ದಾರೆ. ಈ ಅಕ್ರಮ ಗುಂಪನ್ನು ಕಟ್ಟಲು ಮಹಾರಾಜರು ರಾಮು ಬಾಬುವಿಗೆ ತಿಂಗಳಿಗೆ 200 ರೂ. ಸಂಬಳ ಪಾವತಿ ಮಾಡುತ್ತಾರೆ.

ಮಮ್ತಾಜಳನ್ನು ಇಂದೂರಿಗೆ ಅಪಹರಿಸಿಕೊಂಡು ಹೋಗುವುದು ಈ ಕೂಟದ ಮುಖ್ಯ ಧ್ಯೇಯ. ಆಗಲಿಲ್ಲ—ಅವಳ ಮೂಗು ಕೊಯ್ದು ವಿಕೃತಗೊಳಿಸಿ ಬಿಡುವುದು. ನನ್ನನ್ನೂ, ನನ್ನ ಯಜಮಾನರನ್ನೂ ತೀರಿಸಿ ಬಿಡುವುದು ಅವರ ಇನ್ನೊಂದು ಗುರಿ.

ನಮ್ಮ ಶತ್ರುಗಳಲ್ಲಿ ಅಧಿಕಾರ, ಹಣ, ಪ್ರಭಾವ ಇದೆ. ನಾವು ಬಡವರು; ಅಸಹಾಯಕರು. ಅವರು ತಮ್ಮ ದುಷ್ಕೃತ್ಯಗಳನ್ನು ಮುಚ್ಚಿಡಲು ಶಕ್ತರು. ಅವರಿಂದ ನಮ್ಮ ಜೀವಕ್ಕೆ, ಮಾನಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವುದು ನಿಮ್ಮ ಹೊಣೆ."

ಜೂನ್ 25ರಂದು ಆಕೆ ಇನ್ನೊಂದು ಅರ್ಜಿಯನ್ನು ಅಮೃತಸರದ ಜಿಲ್ಲಾಧಿಕಾರಿಗಳಿಗೆ ಬರೆದಳು. ಆ ಅರ್ಜಿಯ ಜೊತೆಯಲ್ಲಿ ಮೇಲೆ ಕಾಣಿಸಿದ ಕಾಗದದ ಪ್ರತಿಯನ್ನೂ ಲಗತ್ತಿಸಿದಳು–ಅಮೃತಸರಕ್ಕೆ ಅವಳು ಬರಕೊಂಡ ದೂರನ್ನು, ಅಲ್ಲಿಯ ಜಿಲ್ಲಾಧಿಕಾರಿಗಳು ಅವಳಿಗೇ ಕಳುಹಿಸಿಕೊಟ್ಟರು–ಅಧಿಕಾರಿಗಳ ಲಹರಿಗೆ ಅದೊಂದು ನಿದರ್ಶನ.

ನಜೀರ್ ಬೇಗಂ ಅರ್ಜಿಯಲ್ಲಿ ಕಾಣಿಸಿದ ಭಯಾತಂಕಗಳು ಕಲ್ಪಿತವಿರಲಿಲ್ಲ. ಆಕೆಯ ಅರ್ಜಿ ಬರಕೊಂಡ ವಾರದಲ್ಲಿ ನಡೆದ ವಿದ್ಯಮಾನಗಳು ಅವನ್ನು ಸಿದ್ಧಪಡಿಸಿದವು.

ಅಬ್ದುಲ್ ಖಾದಿರ್ ಬಾವ್ಲ ಕುಳಿತಿದ್ದ ಕಾರು, ಮುಂಬಯಿಯ ತೂಗಾಡುವ ತೋಟದ ಸಮೀಪದ ತಿರುವನ್ನು ದಾಟಿ ಭರದಿಂದ ಸಾಗುತಿತ್ತು. ಅಷ್ಟರಲ್ಲಿ ಕಾರೊಂದು ನುಗ್ಗಿಬಂದು ಅವರ ಸೊಗಸಾದ ಕಾರನ್ನು ಢಿಕ್ಕಿ ಹೊಡೆಯುವುದರಲ್ಲಿತ್ತು—ನುಗ್ಗಿ ಬಂದ ಕಾರಿನ ಡ್ರೈವರ್ ಕುಡಿದು ಮತ್ತೇರಿದವನೆಂದೂಹಿಸಿ ಬಾವ್ಲರ ಕಾರಿನ ಚಾಲಕ ತನ್ನ ಕಾರನ್ನು ನಿಲ್ಲಿಸಿದ. ತತ್‌ಕ್ಷಣ ಆ ಎರಡನೆಯ ಕಾರು ನಿಂತಿತು. ಐದು ಜನ ಆ ಕಾರಿನಿಂದ ಧುಮುಕಿ ಬಾವ್ಲರ ಕಾರಿನತ್ತ ಧಾವಿಸಿ ಬಂದರು. ಅವರು ಮೊದಲು ಕಾರಿನ ಚಾಲಕನ ಮೇಲೆ ಏರಿ ಹೋದರು. ಆ ಬಡಪಾಯಿ ಅವರ ಹೊಡೆತ ತಾಳಲಾರದೆ ಮೂಲೆಯಲ್ಲಿ ಮುದುಡಿದ.

ಹಿಂಭಾಗದ ಸೀಟಿನಲ್ಲಿ, ಬಾಗಿಲಪಕ್ಕದಲ್ಲಿ ಶ್ರೀ ಬಾವ್ಲ ಕುಳಿತಿದ್ದರು. ಅವರಿಗೆ ಆತುಕೊಂಡೇ ಕುಳಿತಿದ್ದಳು ಮಮ್ತಾಜ್. ಆಚೆಯ ಬದಿಯಲ್ಲಿ ಬಾವ್ಲರ ಮ್ಯಾನೇಜರ್ ಮ್ಯಾಥ್ಯೂ ಆಸೀನರಾಗಿದ್ದರು. ಈ ದುರ್ಘಟನೆ ಸಂಭವಿಸುವುದಕ್ಕೆ ಮೊದಲಷ್ಟೆ ಅವರು ಆ ಕಾರು ಹತ್ತಿದ್ದರು.

ಯಾವ ಬದಿಯಿಂದ ಆಕ್ರಮಣಕಾರರು ಕಾರಿನತ್ತ ಧಾವಿಸಿ ಬಂದರೋ ಆ ಬದಿಯಲ್ಲೇ ಬಾವ್ಲ ಕುಳಿತಿದ್ದುದರಿಂದ, ಅವರನ್ನೇ ಮೊದಲು ಗುಂಡಿಟ್ಟು ಹೊಡೆದರು. ಅನಂತರ ಕಾರಿನಿಂದೆಳೆದು ರಸ್ತೆಗೆ ಹಾಕಿದರು. ಅವರೊಳಗಾಗಿ ತಾನು ಕುಳಿತ ಬದಿಯ ಬಾಗಿಲಿಂದ ಸುರಕ್ಷಿತ ಸ್ಥಳ ಮುಟ್ಟಲು ಪ್ರಯತ್ನಿಸಿದರು. ಅವರಿಗೂ ಗಾಯಗಳಾದುವು. ಈ ಹಲ್ಲೆ ನಡೆಯುತ್ತಿದ್ದಂತೆಯೇ ಇನ್ನೊಂದು ಕಾರಿನಲ್ಲಿ ಮಿಲಿಟರಿ ಅಧಿಕಾರಿಗಳು ಸ್ಥಳಕ್ಕೆ ಬಂದರು. ಅವರು ದಿಕ್ಕು ತಪ್ಪಿ ಅಂದಿನ ರಾತ್ರಿ ಆ ಜಾಗಕ್ಕೆ ಬಂದಿದ್ದರು. ಗುಂಡಿನ ಸದ್ದು ಅವರ ಕುತೂಹಲವನ್ನು ಕೆರಳಿಸಿತು. ಅವರೂ ಕಾರಿನಿಂದ ಧುಮುಕಿದರು. ಅಷ್ಟರಲ್ಲಿ ಬಾವ್ಲ ರಸ್ತೆಯಲ್ಲಿ ಬಿದ್ದಿದ್ದರು. ಕೊಲೆಗಡುಕರಲ್ಲೊಬ್ಬ ಬಾವ್ಲರ ಪಕ್ಕದಲ್ಲಿ ಕುಳಿತಿದ್ದ ಮಮ್ತಾಜಳನ್ನು ಕಾರಿನಿಂದ ಎತ್ತಿಕೊಳ್ಳಲು ಪ್ರಯತ್ನಿಸಿದ. ಅವಳು ಕೊಸರಾಡಲು ಪಣೆಯ ಮೇಲೆ ಚಾಕುವಿನಿಂದೆ ಇರಿದು ಗಾಯಗೊಳಿಸಿದ. ಸೈಗರ್ಟರು ಅವನನ್ನು ಹಿಡಿದುಕೊಂಡರು. ಆತ ಕೈಯಲ್ಲಿದ್ದ ರಿವಾಲ್ವರಿನಿಂದ ಮೂರು ಬಾರಿ ಗುಂಡುಹಾರಿಸಿದ. ಅವು ಸೈಗರ್ಟರನ್ನು ತಗಲಿದುವು. ಗಾಯದಿಂದ ರಕ್ತ ಸೋರಿತು. ಆದರೂ ಸೈಗರ್ಟರು ಹಿಡಿದವನನ್ನು ಬಿಡಲಿಲ್ಲ. ನೆಲಕ್ಕೆ ಕೊಡವಿಕೊಂಡರು. ಸೈಗರ್ಟರ ಜೊತೆಯಲ್ಲಿದ್ದ ಲೆಫ್ಟಿನೆಂಟ್ ಬೇಟ್ಲಿಯವರ ಕೈಯಲ್ಲಿ ಗಾಲ್ಫ್ ಆಟದ ಕೋಲು ಇತ್ತು. ಅದೊಂದೇ ಅವರ ಹತ್ತಿರವಿದ್ದ ಆಯುಧ. ಅದನ್ನವರು ಧಾರಾಳವಾಗಿ ಬಳಸಿದರು. ಅಷ್ಟರಲ್ಲಿ ಆಕ್ರಮಣಗಾರರು ಮಮ್ತಾಜಳನ್ನು ತಾವು ಬಂದ ಕಾರಿಗೆ ಹೊತ್ತು ಸಾಗಿಸಿದ್ದರು. ಅವಳು ಕಿರುಚಿಕೊಂಡಳು. ಆ ಆಂಗ್ಲ ಅಧಿಕಾರಿಗಳು ಅವಳನ್ನಪಹರಿಸಲು ಬಿಡಲಿಲ್ಲ. ಕೊಲೆಗಡುಕರು ಅವಳ ಹಣೆ, ತಲೆ, ಮುಖಗಳಿಗೆ ಭರ್ಜರಿ ಗಾಯಗಳನ್ನು ಮಾಡಿದ್ದರು. ಅವಳ ಮೂಗನ್ನು ಕತ್ತರಿಸಿರಲಿಲ್ಲ. ಆದರೂ ಮುಖವನ್ನು ಆ ಗಾಯಗಳು ವಿರೂಪಗೊಳಿಸಿದ್ದುವು. ಅಜು. ಬಾಜಿನ ಜನ ಕೃತ್ಯ ನಡೆದಲ್ಲಿಗೆ ಬಂದರು. ಅದನ್ನು ಕಂಡು ಹಂತಕರು ದಿಕ್ಕಾಪಾಲು ಓಡಿದರು. ಸೈಗರ್ಟರ ಹಿಡಿತದಲ್ಲಿ ಸಿಕ್ಕಿಬಿದ್ದ ಆಸಾಮಿಯ ಹೆಸರು ಶಫಿ ಅಹಮದ್.

ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಶ್ರೀ ಬಾವ್ಲ ಮರುದಿನ ಬೆಳಗಿನ ಹೊತ್ತಿನಲ್ಲಿ ವಿಧಿವಶರಾದರು–ಅವರ ಹೊಟ್ಟೆಯಲ್ಲೊಂದು ತೂತು ಬಿದ್ದಿತ್ತು; ಯಕೃತು ಹರಿದಿತ್ತು, ಮೂಳೆಮುರಿದಿತ್ತು. ಮರಣೋತ್ತರ ಶವ ಪರೀಕ್ಷೆ ನಡೆಸಿದಾಗ ಈ ಅಂಶಗಳು ಹೊರ ಬಿದ್ದುವು. ಶರವೇಗದಿಂದ ತನಿಖೆ ಆರಂಭವಾಯಿತು. ಹಂತಕರು ಮಹಾರಾಜರ ಹಸ್ತಕರಲ್ಲದಿದ್ದರೂ, ಇಂದೂರಿನವರೆಂದೂಹಿಸಲು ಕಷ್ಟವಾಗಲಿಲ್ಲ.

ಕೊಲೆ, ಅಪಹರಣದ ಹಿಂದಿರುವ ಒಳಸಂಚನ್ನು ಹುಡುಕಿ ಹಿಡಿಯಲು ಪೋಲೀಸರು ಮುಂಬಯಿಯಿಂದ, ಪುಣೆ, ಇಂದೂರು, ಅಮೃತಸರಗಳಿಗೆ ಹೋಗಿ ಬಂದರು. ಶಫಿ ಅಹಮ್ಮದ್‌ನಿಂದ ಅಗತ್ಯದ ಸುಳಿವನ್ನು ಸಂಗ್ರಹಿಸಿದ ಪೋಲಿಸರಿಗೆ ಆರೋಪಿಗಳ ಶೋಧದ ಕೆಲಸ ಸುಲಭವಾಯಿತು. ಮಮ್ತಾಜ್, ನಜೀರ್ ಬೇಗಂ ಈ ಕೆಲಸದಲ್ಲಿ ಸಹಕರಿಸಿದರು. ಕೊಲೆಯ ಹಿನ್ನೆಲೆಯನ್ನು ಅವರು ವಿವರಿಸಿದರು.

ಪತ್ತೆಯ ಕೆಲಸ ಮುಗಿದ ತರುವಾಯ ಪೋಲೀಸರು, ಕೊಲೆ, ಫಿತೂರಿ, ಅಪಹರಣದ ಆರೋಪ ಹೊರಿಸಿ ನ್ಯಾಯಾಲಯದ ಮುಂದು ಈ ಕೆಳಗೆ ಕಾಣಿಸಿದ 9 ಮಂದಿಯನ್ನು ವಿಚಾರಣೆಗೆ ನಿಲ್ಲಿಸಿದರು. 1)ಶಫಿ ಅಹಮ್ಮದ್ 2) ಇಂದೂರಿನ ಪೋಲಿಸ್ ಜಮೇದಾರ ಶ್ರೀ ರಿಸಾಲ್ದಾರ 3) ಮಹಾರಾಜರ ಸಹಾಯಕ ಅಂಗರಕ್ಷಕ ಪುಷ್ಪಶೀಲ ಪಾಂಡೆ 4) ಇಂದೂರಿನ ಅರಮನೆಯ ಕಾರಿನ ಚಾಲಕ ಬಹದ್ದೂರ್ ಷಹಾ 5) ಇಂದೂರಿನ ಗುಪ್ತ ಪೋಲಿಸು ಸಬ್ ಇನ್ಸ್‌ಪೆಕ್ಟರ್ ಮಮ್ತಾಜ್ ಮಹಮ್ಮದ್. 6) ಇಂದೂರಿನ ವಿಮಾನ ಪಡೆಯ ಕ್ಯಾಪ್ಟನ್ ಶಾಮ ರಾವ್ ಫಿಗೆ 7) ಇಂದೂರಿಗೆ ಸೇರಿದ ಇನ್ನೊಬ್ಬ ಡ್ರೈವರ್ ಅಬ್ದುಲ್ ಲತೀಫ್ 8) ಇಂದೂರಿನ ಇನ್ನೊಬ್ಬ ಹಿರಿ

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!
ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—
ಐಡಿಯಲ್ ಫೋಟೋ ಹೌಸ್ PHONE: 3131
ಆಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಓಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1
Tele: GOLDKING Estd: 1947 Phone: 3242 Res: 3272

NAVAYUGA 13–5–1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಯ ಅಧಿಕಾರಿ ಖರಾಮಲ್ ಖಾನ್ 9) ಇಂದೂರಿನ ಅಡ್ಜುಟೆಂಟ್ ಜನರಲ್ ಆನಂದರಾವ್ ಫಾಸ್ಸೆ.

ಆಗಿದ್ದ ಕಾನೂನಿನಂತೆ ಆಪಾದಿತರನ್ನು ವಿಚಾರಣೆಗೆ ಮುಂಬಯಿ ಹೈಕೋರ್ಟಿಗೆ ಕಳಿಸಲಾಯಿತು. ಈ ಚರಿತ್ರಾರ್ಹ ಮೊಕದ್ದಮೆ 1925ರ ಎಪ್ರಿಲ್ 27ರಂದು ನ್ಯಾಯಮೂರ್ತಿ ಕ್ರಂಪ್ಸ್‌ರ ಮುಂದು ತನಿಖೆಗೆ ಬಂತು ಸರಕಾರದ ಪರ ಅಡ್ವಕೇಟ್–ಜನರಲ್ಲರು ಹಾಜರಾದರು. ಆಪಾದಿತರ ಪರ ಅಖಿಲ ಭಾರತ ಖ್ಯಾತಿಯ ಶ್ರೀ ಮಹಮ್ಮದಾಲಿ ಜಿನ್ನಾ. ಬ್ಯಾರಿಸ್ಟರ್ ಜೆ. ಯಸ್. ಸೇನ ಗುಪ್ತ ಹಾಜರಾಗಿದ್ದರು. ಅವರ ಬೆಂಬಲಕ್ಕೆ ನಿಂತರು ಇಂದೂರಿನ ಸರಕಾರಿ ವಕೀಲ ಶ್ರೀ ಟಿ. ಕೆ. ರಾಮಸಿಂಗ್.

ಇಂದೂರಿನ ರಾಜರಿಗೆ ಸೇರಿದ ಅನೇಕ ಬಂಗಲೆಗಳು ಮುಂಬಯಿಯಲ್ಲಿದ್ದುವು. ಅವುಗಳಲ್ಲಿ ಪ್ರಸಿದ್ಧವಾದವು 'ಅರೋರಾ' 'ಸೋಮರ್‌ಸೆಟ್' ಬಂಗಲೆಗಳು. ಈ ಬಂಗಲೆಗಳಲ್ಲಿ ಮುಮ್ತಾಜಳ ಅಪಹರಣದ ಒಳಸಂಚು ನಡೆದುದು. ಆ ಕೆಲಸದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿದವರು 2 ಮತ್ತು 9ನೆಯ ಆರೋಪಿಗಳು. ಆ ಬಂಗಲೆಗಳಲ್ಲಿ ಅವರು ಅನೇಕ ಬಾರಿ ಬಂದು ಉಳಿದುಕೊಂಡಿದ್ದರು. 16 ಸಾವಿರ ರೂಪಾಯಿಗಳಿಗೆ ಅಕ್ಟೋಬರ್ 14ರಂದು ಅವರೊಂದು ಕಾರಿನ ಖರೀದಿ ಮಾಡಿದರು. ಆ ಕಾರಿನಲ್ಲಿ ಮುಮ್ತಾಜಳನ್ನು ಇಂದೂರಿಗೆ ಸಾಗಿಸಲು ಅವರು ಸಂಚು ನಡೆಸಿದರು. ಉದ್ದಿಶ್ಯ ಸಾಧನೆಗಾಗಿ ಅನಂತರ ಮುಮ್ತಾಜಳ ಚಲನ–ವಲನ ತಿಳಿದುಕೊಳ್ಳಲು ಅವಳ ನೆಂಟರಿಷ್ಟರ ಸಖ್ಯ ಸಂಪಾದಿಸಿದರು. ಡಿಸೆಂಬರ್ ತಿಂಗಳಲ್ಲಿ ಶ್ರೀ ಬಾವ್ಲ ಜೊತೆ ಮುಮ್ತಾಜ್ ಲೋನಾವಾಲದಲ್ಲಿದ್ದಳು. ಅದು ಪುಣೆಗೆ ಹತ್ತಿರದಲ್ಲಿದೆ—ಅದನ್ನು ತಿಳಿದುಕೊಂಡ, ಅಕ್ರಮ ಕೂಟಕ್ಕೆ ಸೇರಿದ ಆಪಾದಿತರು ಪುಣೆಯಲ್ಲಿ ಠಿಕಾಣಿ ಹಾಕಿದರು. ಈ ವಿವರಗಳನ್ನು ವಜೀರ್ ಬೇಗಮಳ ಸೋದರ ಸಂಬಂಧಿ ಅಲ್ಲಾ ಬಕ್ಷ್ ಕೋರ್ಟಿಗೆ ತಿಳಿಸಿದ. ಬಾವ್ಲರನ್ನು ಮುಮ್ತಾಜಳಿಗೆ ಗಂಟು ಹಾಕಿದ್ದು ಈತನೇ. ಈ ಸಂಬಂಧ ಕುದುರಿದ ಕೆಲ ಸಮಯದ ನಂತರ ಇಂದೂರಿನ ಮಹಾರಾಜರು ತನ್ನ ಭೆಟ್ಟಿಯನ್ನು ಬಯಸಿರುವರೆಂದು ಅಬ್ದುಲ್ ಕರೀಂ ಮೂಲಕ ತಿಳಿದುಕೊಂಡ ಆತ 'ಅರೋರಾ' ಬಂಗಲೆಗೆ ಹೋದ. ಅಂದು ಅಲ್ಲಿಗೆ ಅವನನ್ನು ಕರೆಸಿಕೊಂಡವರು ಮಹಾರಾಜರ ಸಹಾಯಕ ಅಂಗರಕ್ಷಕ ಝುಕವುಲ್ಲಾರು. ಆ ಬಂಗಲೆಯಲ್ಲಿ ಅಂದು ಶಫಿ ಅಹಮದ್, ಪಾಂಡೆ, ಮುಮ್ತಾಜಮಹಮದ್, ಪಾಸ್ಸೆ, ಇನ್ನೂ ಅನೇಕರು ಇದ್ದರೆಂಬುದು ಆತನಿಂದ ಹೊರ ಬಂತು. ಅವರ ಸಂಭಾಷಣೆಗಳಿಂದ ಅವರೆಲ್ಲ ಮುಮ್ತಾಜಳನ್ನು ಅಪಹರಿಸಲು ಸಜ್ಜಾಗಿರುವುದು ಸ್ಪಷ್ಟವಾಯಿತು. ಈ ಕೃತ್ಯಕ್ಕೆ ಇಂದೂರಿನ ಮಹಾರಾಜರ ಅಪರೋಕ್ಷ ಉತ್ತೇಜನವಿರುವುದೂ ನಿಚ್ಚಳವಾಯಿತು. ಶಫಿ, ಪಾಂಡೆ, ಮುಮ್ತಾಜಳನ್ನೂ, ಮೃತನನ್ನೂ ನೆರಳಿನಂತೆ ಹಿಂಬಾಲಿಸುತ್ತಿದ್ದರು ಮತ್ತು ಅಪಹರಿಸಲು ಸಮಯ ಕಾಯುತ್ತಿದ್ದರು. ಆತ ತಾನು ಬಾವ್ಲರಿಗೆ ಎಚ್ಚರಿಕೆಯಿಂದಿರಲು ಹೇಳಿರುವುದಾಗಿ ಅರಿಕೆ ಮಾಡಿದ.

ಬಾವ್ಲರ ಮನೆಯ ಕಾವಲುಗಾರ, ಕರೀಂ, ಝುಕವುಲ್ಲಾರಿಂದ ಹಣ ತಿಂದು, ಅವರ ಹಸ್ತಕನಾದುದು ತಿಳಿದೊಡನೆ ಅವರಿಗೆ ಸಂಗತಿ ತಿಳಿಸಲು ಶ್ರೀ ಬಾವ್ಲ ಅವನನ್ನು ಕೆಲಸದಿಂದ ತೆಗೆದರು

ಮುಮ್ತಾಜಳು ತನ್ನ ತಾಯಿ, ಫಿರ್ಯಾದಿಯಲ್ಲಿ ಕಾಣಿಸಿದ ಸಂಗತಿಗಳನ್ನು ತಪ್ಪದೆ ವಿವರಿಸಿದಳು. ತನ್ನ ಮೇಲೂ, ಬಾವ್ಲರ ಮೇಲೂ ಕೈಮಾಡಿದವರನ್ನು ಗುರುತಿಸಿದಳು. ಆ ರೀತಿ, ತಮ್ಮ ಮೇಲೆ ಮುಗಿದುಬಿದ್ದ ಜನ ನಡೆಸಿದ ಕೃತ್ಯಗಳನ್ನು ಸ್ಪಷ್ಟಪಡಿಸಿದಳು. ಆ ದುರಂತದ ದಿನ ಬಾವ್ಲ ಧರಿಸಿದ್ದ ರಕ್ತ ಸಿಕ್ತ ಬಟ್ಟೆಗಳನ್ನು ಅವರಿಗೆ ಸೇರಿದ್ದೆಂದು ಹೇಳುವಾಗ, ಅವಳ ಕಣ್ಣುಗಳು ತೇವಗೊಂಡುವು. ಸ್ಟೀಮರಿನಲ್ಲಿ ಕುಳಿತಿದ್ದಾಗ ಬ್ರಿಟಿಷ್ ಮಹಿಳೆಯೊಬ್ಬಳು ತನ್ನನ್ನು ಪ್ರಶ್ನಿಸಿದುದಾಗಿಯೂ, ಪ್ರಾಣಭಯದಿಂದ ತಾನು ಕಮಲಾ ಎಂಬ ಹೆಸರಿನಲ್ಲಿ ಇಂಗ್ಲೆಂಡಿಗೆ ಹೋಗಲೊಪ್ಪಿಕೊಂಡುದಾಗಿಯೂ ನುಡಿದಳು. ತೀರ ಸರಳ ಸಹಜ ರೀತಿಯ ಹೇಳಿಕೆ ಕೊಟ್ಟಳು.

ಎರಡು ದಿನಗಳ ಕಾಲ ಅವಳ ಪಾಟೀಸವಾಲು ನಡೆಯಿತು. ಶ್ರೀ ಜಿನ್ನಾ, ಶ್ರೀ ಸೇನಗುಪ್ತ ತಮ್ಮ ಚಾಕ-ಚಕ್ಯತೆಯನ್ನು ಪ್ರದರ್ಶಿಸಿದರು. ಆದರೆ ಮುಮ್ತಾಜಳನ್ನು ಅಲ್ಲಾಡಿಸುವುದು ಅವರಿಗೆ ಆಗದೆಹೋಯಿತು. ಅದನ್ನು ಕೇಳಲು ಕೋರ್ಟಿನ ತುಂಬ ಜನ ಕಿಕ್ಕಿರಿದು ಸೇರಿದ್ದರು. ಸೇನಗುಪ್ತರ ಒಂದು ಪ್ರಶ್ನೆಗೆ ಅವಳು ಮಹಾರಾಜರು ತನಗೆ ಒಡವೆ–ಬಟ್ಟೆಗಳನ್ನೂ, ಉಳಿದುಕೊಳ್ಳಲು ಒಂದು ಬಂಗಲೆಯನ್ನೂ ಕೊಟ್ಟಿದ್ದರೆಂದು ಒಪ್ಪಿಕೊಂಡಳು. ಕೊಡುಗೈಯ ದೊರೆ ಏಳು ಬೃಹತ್ ಪೆಟ್ಟಿಗೆಗಳಲ್ಲಿ ಹಿಡಿಸುವಷ್ಟು ಆಭರಣಗಳನ್ನು ಅವಳಿಗೆ ಕಾಣಿಕೆಯಾಗಿ ಕೊಟ್ಟಿದ್ದರಂತೆ.

ಲಕ್ಷ್ಯವೆಲ್ಲ ಅವಳಲ್ಲಿ ನಟ್ಟಿರುವಾಗ, ಲಕ್ಷಗಟ್ಟಲೆ ಸುರಿಯಲು ಮಹಾರಾಜರು ಲಕ್ಷ್ಯಮಾಡುತ್ತಾರೆಯೇ?

ಅನಂತರ ಪ್ರತ್ಯಕ್ಷದರ್ಶಿಗಳಾದ ಮಿಲಿಟರಿ ಅಧಿಕಾರಿಗಳು ಶ್ರೀ ಬೇಟ್ಲೆ, ಸ್ಟೀವನ್ಸ್, ಸೈಗರ್ಟ್, ವೀಕರ್ಸ್ ವಿಚಾರಣೆ ನಡೆಯಿತು. ಅವರು ಅಂದು ತಾವು ತಿಂದ ಏಟುಗಳ ವಿವರ ಕೊಟ್ಟರು. ಹೊಡೆದವರನ್ನು ಗುರುತಿಸಿದರು. ಬಾವ್ಲರ ಮ್ಯಾನೇಜರ್ ಶ್ರೀ ಮ್ಯಾಥ್ಯೂ ಅವರ ಹೇಳಿಕೆಯನ್ನು ತೆಗೆದುಕೊಳ್ಳಲಾಯಿತು.

ಆರೋಪಿಗಳಲ್ಲಿ ನಾಲ್ವರು ಜನವರಿ 6ರಂದು ರಜಾ ಹಾಕಿ ಮುಂಬಯಿಗೆ ಬಂದಿದ್ದರು. ಉಳಿದಿಬ್ಬರು ಜನವರಿ 9ರಂದು ರಜಕ್ಕೆ ಅರ್ಜಿಹಾಕಿ ಮುಂಬಯಿಗೆ ಧಾವಿಸಿದ್ದರು. ರಜ ಬರೆಯುವುದಕ್ಕೆ ಮುನ್ನ ಆರೋಪಿಗಳಲ್ಲೊಬ್ಬರಿಗೆ, ಮುಂಬಯಿಯಿಂದ ಇನ್ನೊಬ್ಬ ಆಪಾದಿತನಿಗೆ "ಹಣ್ಣು ರವಾನೆಗೆ ಸಿದ್ಧವಾಗಿದೆ" ಎಂದು ತಾರು ಕೊಟ್ಟಿದ್ದ. ಇತರ ಸಾಕ್ಷಿಗಳ ವಿಚಾರಣೆ ಕಾಲದಲ್ಲಿ ಈ ಸಂಗತಿಗಳು ಹೊರಬಿದ್ದವು. ದಸ್ತಗಿರಿಯಾದ ಸಮಯದಲ್ಲಿ ಕೆಲವು ಆರೋಪಿಗಳ ಮೈಮೇಲೆ ಗಾಯಗಳಿದ್ದವು–ಆ ಗಾಯಗಳು ಪರೀಕ್ಷಿಸಿದ ವೈದ್ಯರ ಪ್ರಕಾರ ಒಂದು ವಾರದೊಳಗಿನವು–ಆ ಗಾಯಗಳು ಹೇಗಾದುವು ಎಂಬುದಕ್ಕೆ ಆರೋಪಿಗಳು ಕೊಟ್ಟ ವಿವರಣೆ ಸಮಂಜಸವಿರಲಿಲ್ಲ. ಕೃತ್ಯ ನಡೆದ ದಿನ, ಪ್ರತ್ಯಕ್ಷದರ್ಶಿಗಳ ಪ್ರಕಾರ ಹೊಡೆದಾಟ ಆಗಿತ್ತು. ಗಾಲ್ಫ್ ಕೋಲಿನ ಏಟುಗಳೂ ಕೆಲವರಿಗೆ ತಗಲಿದ್ದುವು. ಆತ್ಮರಕ್ಷಣೆಗಾಗಿ ಹಿಡಿದುಕೊಂಡವರನ್ನು ಮುಮ್ತಾಜ್ ಕಚ್ಚಿ, ಪರಚಿಗಾಯಗೊಳಿಸಿದ್ದಳು. ಆದ್ದರಿಂದ ಅವರ ಮೈಮೇಲಿನ ಗಾಯಗಳು ಘರ್ಷಣೆಯ ಸಮಯದಲ್ಲಿ ಆಯಿತೆಂಬುದು ಸುಸ್ಪಷ್ಟ.

ವಾದ–ಪ್ರತಿವಾದಗಳನ್ನು ಕೇಳಿದ ನ್ಯಾಯಮೂರ್ತಿಗಳು ಪಂಚರಿಗೆ ಎಲ್ಲ ಅಂಶಗಳನ್ನೂ ವಿವರವಾಗಿ ತಿಳಿಯಪಡಿಸಿ, ಅವರ ಅಭಿಪ್ರಾಯ ತಿಳಿಸಲು ಕೇಳಿಕೊಂಡರು.

ಒಂದು ತಾಸಿನ ಚರ್ಚೆಯ ನಂತರ 'ಆರೋಪಿಗಳು ತಪ್ಪಿತಸ್ಥರು' ಎಂದವರು ಒಕ್ಕೊರಲಿನಿಂದ ನುಡಿದರು. ಮುಮ್ತಾಜ್ ಮಹಮ್ಮದ್, ಖರಾಮಲ್ ಖಾನ್‌ರು ನಿರ್ದೋಷಿಗಳೆಂದು ಅಭಿಪ್ರಾಯಪಟ್ಟರು.

ಪಂಚರ ಅಭಿಮತವನ್ನು ಅಂಗೀಕರಿಸಿದ ನ್ಯಾಯಮೂರ್ತಿಗಳು ಅವರಿಬ್ಬರನ್ನು ಬಿಡುಗಡೆ ಮಾಡಿದರು. ಶ್ರೀ ಧಿಗೆ, ಶಫಿ, ಮತ್ತು ಪಾಂಡೆಯವರಿಗೆ ಮರಣ ದಂಡನೆಯನ್ನೂ, ಉಳಿದವರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿದರು.

ತೀರ್ಪಿನ ವಿರುದ್ಧ ಆಪಾದಿತರು ಪ್ರಿವಿ ಕೌನ್ಸಿಲ್‌ಗೆ ಅಪೀಲು ಹಾಕಿ ಕೊಂಡರು. ಆ ಅಪೀಲು ತಿರಸ್ಕೃತವಾಯಿತು.

ಮೊಕದ್ದಮೆ ಹೀಗೆ ಅಂತ್ಯಗೊಂಡಿತು. ಆದರೆ ಅದರ ಪ್ರತಿಧ್ವನಿ ಹಲವು ಹತ್ತು ಕಡೆಯಲ್ಲಿ ಮೂಡಿತು. ಮುಮ್ತಾಜಳ ಅಪಹರಣದ ಯತ್ನಕ್ಕೆ ಶ್ರೀ ತುಕೋಜಿ ರಾಯರ ಕೈವಾಡ, ಉತ್ತೇಜನವಿತ್ತೆಂಬುದು ಬೀದಿಯ ಮಾತಾಯಿತು. 19 6ನೇ ಜನವರಿ ತಿಂಗಳಲ್ಲಿ ಈ ವಿಷಯವನ್ನು ಹಗುರವಾಗಿ ಕಾಣುವುದಿಲ್ಲವೆಂಬುದು ನಿಚ್ಚಳವಾಯಿತು. ವಿಚಾರಣೆಗೆ ಭಾರತ ಸರಕಾರ ಒಂದು ಆಯೋಗವನ್ನು ರಚಿಸಿತು. ಆಯೋಗದ ಮುಂದು ಹಾಜರಾಗಲು ಮಹಾರಾಜರಿಗೆ ಆದೇಶ ಕೊಟ್ಟಿತು. ಜೊತೆಗೇ ಸಿಂಹಾಸನದಿಂದಿಳಿಯುವ ಸಲಹೆಯನ್ನೂ ಮಾಡಿತು. 1926ನೇ ಮಾರ್ಚಿ ಒಂದರಂದು ಶ್ರೀ ತುಕೋಜಿರಾಯರು ಗದ್ದುಗೆಯಿಂದಿಳಿದರು. ಧಿಗೆ, ಶಫಿ, ಪಾಂಡೆ ನೇಣುಗಂಬಕ್ಕೆ ಕೊರಳೊಡ್ಡಿದರು. ಉಳಿದವರು ಶಿಕ್ಷೆ ಅನುಭವಿಸಿದರು.

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

READ &
ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 36

NAVAYUGA

20—5—1971

ಪಾಕಿಸ್ತಾನದ ಮೇಲೊಂದು ಕ್ಷ-ಕಿರಣ

'ಸತ್ಯಮೇವ ಜಯತೆ'

ಸತ್ಯ ಸದಾ ಜಯಶಾಲಿ. ಇದನ್ನು ಅರಿತೋ, ಅರಿಯದೆಯೋ ಸುಳ್ಳಿನ ಬೆನ್ನ ಹತ್ತಿದಾಗ ಬುದ್ಧಿಯ ಅಪವ್ಯಯ. ಪಾಕಿಸ್ತಾನದ ಪ್ರಚಾರಕರು ಈಗ ಅದನ್ನೇ ಮಾಡುತ್ತಿದ್ದಾರೆ. ಬುದ್ಧಿಯ ಅಪವ್ಯಯದ ಜೊತೆಗೆ ಪ್ರಜಾಪೀಡಕರೆಂದು ಅಪಖ್ಯಾತಿಗೂ ಗುರಿಯಾಗಿದ್ದಾರೆ. ಪೂರ್ವ ಬಂಗಾಳದ ದಂಡಿನಾಡಳಿತ ನಡೆಸುತ್ತಿರುವ ದಬ್ಬಾಳಿಕೆ ಜಗತ್ತಿಗೆ ಗೊತ್ತಾಗಬಾರದೆಂದು ಪಾಕಿಸ್ತಾನ ರಹಸ್ಯದ ಗೋಡೆಯನ್ನು ನಿರ್ಮಿಸಲು ಯತ್ನಿಸಿತು. ಇಡೀ ಪೂರ್ವ ಬಂಗಾಳ ಪಾಕ್ ಸೈನಿಕರ ಅಮಾನುಷ ದಬ್ಬಾಳಿಕೆಗೆ ಗುರಿಯಾಗಿರುವಾಗ– "ಅಲ್ಲಿ ಏನೂ ಆಗಿಲ್ಲ", "ಎಲ್ಲವೂ ಶಾಂತವಿದೆ" ಎಂದು ಪಾಕ್ ಪ್ರಚಾರಕರು ಲೋಕಕ್ಕೆ ಹೇಳಿದರು. ಲೋಕ ನಂಬಲಿಲ್ಲ. ಸತ್ಯ ಸ್ವಯಂ ಪ್ರಕಟವಾಗುತ್ತದೆ. ಇಲ್ಲಿ ಆದದ್ದು ಹಾಗೆಯೇ. ದೇಶ–ವಿದೇಶಗಳ ಪತ್ರಕರ್ತರು ನಿಜಸ್ಥಿತಿಯನ್ನು ಅರಿಯಲು ಪೂರ್ವ ಬಂಗಾಳಕ್ಕೆ ಹೋಗಿ ಬಂದರು. ಪ್ರತ್ಯಕ್ಷದರ್ಶಿಗಳು ಯಾಹ್ಯಾಖಾನರ ದಂಡು ಅಲ್ಲಿ ನಡೆಸಿರುವ ಕಿರಾತನೃತ್ಯವನ್ನು ಕಣ್ಣಾರೆ ಕಂಡರು. ಜಗತ್ತಿಗೆ ತಿಳಿಸಿದರು. ಸ್ವಯಂ ಪಾಕಿಸ್ತಾನದ ಪ್ರಚಾರಕರೇ– ತಮಗೆ ಅರಿಯದಂತೆಯೇ ಸತ್ಯವನ್ನು ಬಯಲಿಗೆ ಎಳೆದರು!

ಕಳೆದ ವಾರ ಪೂರ್ವ ಬಂಗಾಳಿನ ಮಿಲಿಟರಿ ಗವರ್ನರ ಕೆಲಸಕ್ಕೆ ಹಾಜರಾಗದ ಸರ್ಕಾರಿ ಉದ್ಯೋಗಿಗಳನ್ನು ಉದ್ದೇಶಿಸಿ ಢಾಕ್ಕಾ ರೇಡಿಯೋದಲ್ಲಿ ಪ್ರಸಾರ ಭಾಷಣ ಮಾಡುತ್ತ "ಕೊನೆಯ ಬಾರಿ ನಾನು ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ. ಏಪ್ರಿಲ್ [illegible]ರೊಳಗಾಗಿ ಎಲ್ಲರೂ ಕೆಲಸದ ಮೇಲೆ ಹಾಜರಾಗಬೇಕು" ಎಂದು ಪೂರ್ವಬಂಗಾಳದ ದೇಶಭಕ್ತರನ್ನು ಕೇಳಿಕೊಂಡರು. ಸರ್ಕಾರ ವಿರೋಧಿ ಶಕ್ತಿಗಳ ಒತ್ತಡಕ್ಕೆ ಮಣಿದೋ ಅಥವಾ ಸಂಪರ್ಕ ಮಾಧ್ಯಮಗಳ ಅಭಾವದಿಂದಲೋ ಕೆಲಸಕ್ಕೆ ಹಾಜರಾಗಲು ಸಾಧ್ಯವಾಗದವರ ವಿಷಯದಲ್ಲಿ ತಮ್ಮ ಸರ್ಕಾರ ಔದಾರ್ಯದಿಂದ ನಡೆದುಕೊಳ್ಳುವುದೆಂದು ಅವರು ಭರವಸೆ ನೀಡಿದರು. ಸೈನ್ಯಾಡಳಿತದ ವಿಷಯದಲ್ಲಿ ಪೂರ್ವ ಬಂಗಾಳದ ಪ್ರಜೆಗಳು ಸಹಕರಿಸುತ್ತಿಲ್ಲವೆಂದೂ, ಅಲ್ಲಿ ಸಾರಿಗೆ ವ್ಯವಸ್ಥೆ ಈಗ ಅಸ್ತವ್ಯಸ್ತಗೊಂಡಿದೆ ಎಂದೂ ಪಾಕಿಸ್ತಾನದ ಹಿರಿಯ ಅಧಿಕಾರಿ ಒಪ್ಪಿಕೊಂಡಿರುವುದು ಇದೇ ಮೊದಲು. ಇದು ಒಂದು ನಿದರ್ಶನವಾದರೆ ಪಾಕ್ ರೇಡಿಯೋ ಇನ್ನೊಂದು ನಿದರ್ಶನವನ್ನು ಒದಗಿಸಿದೆ. ಅದು ತನ್ನ ಒಂದು ಪ್ರಸಾರದಲ್ಲಿ, ಪೂರ್ವ ಬಂಗಾಳಿನಲ್ಲಿ ಸಾರಿಗೆ ವ್ಯವಸ್ಥೆ ಧ್ವಂಸಗೊಂಡಿದೆ ಎಂದು ಒಪ್ಪಿಕೊಂಡಿದೆ.

ಜ. ಟಿಕ್ಕಾಖಾನರ ಮನವಿಯ ನಂತರ ಸರ್ಕಾರಿ ಉದ್ಯೋಗಿಗಳಲ್ಲಿ ಬಹುತೇಕ ಮಂದಿ ಈಗಾಗಲೇ ಕೆಲಸಕ್ಕೆ ಹಾಜರಾಗಿದ್ದಾರೆ. ಕೆಲಸಕ್ಕೆ ಹಾಜರಾದವರಲ್ಲಿ ಕೆಲವರು ವಾಹನಗಳಿಲ್ಲದ್ದರಿಂದ ಮೈಲಿಗಟ್ಟಳೆ ಅಂತರವನ್ನು ಕಾಲ್ನಡಿಗೆಯಲ್ಲೇ ಕ್ರಮಿಸಿ ಆಫೀಸಿಗೆ ಬಂದರು ಎಂದು ಪಾಕ್ ರೇಡಿಯೊ ಹೇಳಿದೆ. ಏಪ್ರಿಲ್ 24ರಂದು ಇನ್ನೊಂದು ಪ್ರಸಾರದಲ್ಲಿ ಅದು ಪಾಕ್ ಸೈನಿಕರು ಸರ್ಕಾರ ವಿರೋಧಿಗಳನ್ನು ಬೆನ್ನಟ್ಟಿದ್ದು, ಸಿಲೇಟ್, ರಾಜಶಾಹಿ ಮತ್ತು ಚುಆಡಂಗಾ ಇವೂ ಸೇರಿದಂತೆ ಪ್ರತಿರೋಧವಿರುವ ಪ್ರದೇಶಗಳನ್ನೆಲ್ಲ ಧ್ವಂಸ ಮಾಡುತ್ತಿದ್ದಾರೆ" ಎಂದು ಸ್ಪಷ್ಟಪಡಿಸಿದೆ.

"ಸರ್ಕಾರಿ ನೌಕರರು ಕೆಲಸಕ್ಕೆ ಬರುತ್ತಿದ್ದಾರೆ. ಮಿಲಿಟರಿ ಸರ್ಕಾರ ವಿರೋಧಿಗಳ ಮೇಲೆ ಜಯಗಳಿಸಿದೆ" ಇತ್ಯಾದಿ ವರದಿಗಳು ನಂಬಲನರ್ಹವೆಂದು ತಳ್ಳಿಹಾಕಬಹುದಾದರೂ ಈ ಘಟನೆಗಳಿಂದ ಮೂರು ಅಂಶಗಳು ಮಾತ್ರ ಸ್ಪಷ್ಟವಾಗುತ್ತವೆ. ಮೊದಲನೆಯದು, ಪೂರ್ವಬಂಗಾಳದಲ್ಲಿ ಬಹುತೇಕ ಜನ ಉದ್ಯೋಗಿಗಳು ಕೆಲಸಕ್ಕೆ ಹಾಜರಾಗಿಲ್ಲ. ಎರಡನೆಯದು ಬಂಗಾಳದ ಸ್ವಾತಂತ್ರ್ಯ ಯೋಧರು ಸಂಪರ್ಕ ಸಾಧನಗಳನ್ನು ಕಡಿದು ಹಾಕಿದ್ದಾರೆ. ಮೂರನೆಯದು, ಸಾರಿಗೆ ಸಂಸ್ಥೆಗಳ ನೌಕರರು ಪಾಕ್ ಸೇನಾಧಿಕಾರಿಗಳೊಂದಿಗೆ ಅಸಹಕಾರ ಚಳುವಳಿಯನ್ನು ಆರಂಭಿಸಿದ್ದಾರೆ. ಎಂಬಿವೇ ಆ ಮೂರು ಅಂಶಗಳು. ವಸ್ತುಸ್ಥಿತಿ ಹೀಗಿದೆ ಎಂದು ಪಾಕ್ ಅಧಿಕಾರಿಗಳೇ ಒಪ್ಪಿಕೊಂಡಿದ್ದಾರೆ. ಪೂರ್ವಪಾಕಿಸ್ತಾನದಲ್ಲಿ ಎಲ್ಲವೂ ಶಾಂತವಾಗಿದೆ. ಪಾಕ್ ಆಡಳಿತಗಾರರು 'ಸರ್ಕಾರಿ ಉದ್ಯೋಗಿಗಳೇ ಕೆಲಸಕ್ಕೆ ಬನ್ನಿ' ಎಂದು ದಿನಕ್ಕೆ ಹನ್ನೆರಡು ಬಾರಿ ಮನವಿಗಳನ್ನು ಪ್ರಸಾರ ಮಾಡುತ್ತಿದ್ದಾರೆ. ಹೀಗೆ ಒಂದೇ ನಾಲಿಗೆಯಲ್ಲಿ ಎರಡು ರೀತಿ ಮಾತನಾಡುವುದು ಪಾಕ್ ಪ್ರಚಾರಕರ ವೈಶಿಷ್ಟ್ಯ.

ಪಾಕಿಸ್ತಾನದ ಮಿಲಿಟರಿ ಪ್ರಭುಗಳು ಪೂರ್ವಬಂಗಾಳ ಜನತೆಯ ಮನವೊಲಿಸಲು ಆಗಾಗ್ಗೆ ಮಾಡುವ ಪ್ರಾರ್ಥನೆಗಳಿಗೆ ಪೂರ್ವ ಬಂಗಾಳದ ಜನ ಕಿವಿಗೊಟ್ಟಿಲ್ಲವೆಂಬುದನ್ನೂ, ಪಾಕ್ ಆಳರಸರನ್ನು ಅವರು ವಸಾಹತುಶಾಹಿಯೆಂದು ಭಾವಿಸಿರುವುದನ್ನೂ ಸುವ್ಯಕ್ತಗೊಳಿಸಿವೆ.

ಟಿಕ್ಕಾಖಾನ್ ಉವಾಚ

ಜ. ಟಿಕ್ಕಾಖಾನರು ಏಪ್ರಿಲ್ 21ರಂದು ಮಾಡಿದರೆಂದು ಹೇಳಲಾದ ಪ್ರಸಾರ ಭಾಷಣದಲ್ಲಿ ಇನ್ನೊಂದು ವಿಸ್ಮಯಕಾರಿ ಸಂಗತಿಯನ್ನು ಒಪ್ಪಿಕೊಂಡಿದ್ದಾರೆ.

'ಪೂರ್ವಪಾಕಿಸ್ತಾನ ರೈಫಲ್ಸ್; ಪೂರ್ವ ಬಂಗಾಳ ರೆಜಿಮೆಂಟ್, ಪೋಲೀಸ್ ದಳ, ಹಾಗು ಅನ್ಸಾರ್ ಪಡೆಗಳ ಬಹುತೇಕ ಮಂದಿ ಕೆಲಸಕ್ಕೆ ಹಾಜರಾಗಿಲ್ಲ. ಇವರಲ್ಲಿ ಕೆಲವರು ಸರ್ಕಾರ ವಿರೋಧಿಗಳ ಒತ್ತಾಯಕ್ಕೆ ಮಣಿದು ಇನ್ನು ಕೆಲವರು ಸಂಕಟ ಸಮಯದಲ್ಲಿ ಕುಟುಂಬದವರೊಂದಿಗೆ ಇದ್ದರೆ ಲೇಸು ಎಂದು ಕೆಲಸಕ್ಕೆ ಬರಲಿಲ್ಲ. ಇನ್ನು ಕೆಲವರು ವಾಹನಗಳ ಹಾಗು ಸಂಪರ್ಕ ಮಾಧ್ಯಮಗಳ ಅವ್ಯವಸ್ಥೆಯಿಂದಾಗಿ ಕಚೇರಿಗಳಿಗೆ ಬರಲಿಲ್ಲ! ಎಂದು ಹೇಳಿದ್ದಾರೆ. ಎಲ್ಲವನ್ನೂ ಮರೆತು ಕಚೇರಿಗೆ ಬಂದರೆ ಅವರನ್ನು ಕ್ಷಮಿಸುವುದಾಗಿಯೂ ಟಿಕ್ಕಾಖಾನ ಹೇಳಿದರೆಂದು ವರದಿಯಾಗಿದೆ. ಟಿಕ್ಕಾಖಾನರಿಂದ ಮೊದಲುಗೊಂಡು ಯಾಹ್ಯಾಖಾನರವರೆಗೆ ಪಾಕಿಸ್ತಾನಿನ ಎಲ್ಲ ದಂಡಾಧಿಕಾರಿಗಳು ಮಾಡಿಕೊಂಡಿರುವ "ಪ್ರಾರ್ಥನೆ"ಗಳು ಪೂರ್ವ ಬಂಗಾಳಿನಲ್ಲಿ ಅರಣ್ಯರೋದನವಾಗಿದೆ. ಸ್ವಯಂ ಟಿಕ್ಕಾಖಾನರೇ ಪೂರ್ವಬಂಗಾಳದಲ್ಲಿ ಅನ್ಯರ ಹಸ್ತಕ್ಷೇಪವಿಲ್ಲವೆಂದು ಹಿಂದೊಮ್ಮೆ, ಪಾಕಿಸ್ತಾನದ ಸೇನೆಯಲ್ಲಿದ್ದವರೇ ಈಗ ಪಾಕ್ ಸರ್ಕಾರದ ಬಂಡೆದ್ದಿರುವವರೆಂದು ಒಪ್ಪಿಕೊಂಡಿರುವುದರಿಂದ ಪಾಕಿಸ್ತಾನದ ಪ್ರಚಾರಯಂತ್ರದ ಪೊಳ್ಳುತನ ಪ್ರಕಟವಾಗಿದೆ.

ಪೂರ್ವಬಂಗಾಳದ ಸ್ವಾತಂತ್ರ್ಯಯೋಧರಿಗೆ ಭಾರತವೇ ಪ್ರೋತ್ಸಾಹ ನೀಡಿದೆಯೆಂದೂ ಇದು ಅವರದೇ ಸಂಚು ಎಂದು ಹೊತ್ತು ಗೊತ್ತಿಲ್ಲದೇ ಅಬ್ಬರಿಸುತ್ತಿದ್ದ ಪಾಕ್ ರೇಡಿಯೋ ಈಗ ಟಿಕ್ಕಾಖಾನರೇ ಸತ್ಯನುಡಿದಿರುವುದರಿಂದ ಕಂಗಾಲಾಗಿ ಕಣ್ತೆರೆದಿದೆ. ಪೂರ್ವಬಂಗಾಳದಲ್ಲಿ ಎಲ್ಲವೂ ಸರಿಯಾಗಿಲ್ಲ. ಪಾಕ್ ಸೇನೆ ವಿರೋಧವನ್ನು ಎದುರಿಸುತ್ತಿದೆ ಎಂದು ಪ್ರಸಾರ ಮಾಡತೊಡಗಿದೆ.

ಕಮ್ಯೂನಿಸ್ಟರ ನಿಲುವು

ದಂಡಿನ ಅಧಿಕಾರಿಗಳು ಪೂರ್ವಬಂಗಾಳಿನಲ್ಲಿ ನಿಷ್ಕರುಣೆಯಿಂದ ಪ್ರಜೆಗಳ ಸಂಹಾರ ಮಾಡುತ್ತಿರುವುದು ಪಶ್ಚಿಮ ಪಾಕಿಸ್ತಾನದಲ್ಲಿನ ಸಹೃದಯರ ಮನವನ್ನು ಕರಗಿಸಿದೆ. ಸೇನೆಯ ಈ ಪ್ರಳಯಕೃತ್ಯದ ಬಗ್ಗೆ ಅನೇಕರು ಬಹಿರಂಗವಾಗಿಯೇ ತಮ್ಮ ಅಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಪಶ್ಚಿಮ ಪಾಕಿಸ್ತಾನಿನ ಕಮ್ಯೂನಿಸ್ಟ್ ಪಕ್ಷವೂ ಪೂರ್ವ ಬಂಗಾಳಿನ ಘಟನೆಗಳ ಬಗ್ಗೆ ತಮ್ಮ ಸಂತಾಪವನ್ನು ವ್ಯಕ್ತಪಡಿಸಿದೆಯಲ್ಲದೇ ಅಲ್ಲಿ ವಿಧ್ವಂಸ ಕಾರ್ಯ ನಡೆಸಿದ್ದಕ್ಕಾಗಿ ದಂಡಿನಾಡಳಿತಕ್ಕೆ ಎಚ್ಚರಿಕೆ ನೀಡಿದೆ. ಪೂರ್ವಬಂಗಾಳಿನಲ್ಲಿ ಪಾಕ್ ಸೇನೆಯ ಸೋಲು ಖಚಿತ. ಗುಂಡುಗಳು, ಜೈಲುವಾಸದ ಬೆದರಿಕೆ, ಒಳಸಂಚುಗಳ ಸರಮಾಲೆ, ದಬ್ಬಾಳಿಕೆ ಹಾಗೂ ಪಾಶವೀವರ್ತನೆ ಇದಾವುದೂ ಸ್ವಾತಂತ್ರ್ಯಯೋಧರ ಕೆಚ್ಚನ್ನು ಕುಗ್ಗಿಸಲಾರದು.

ಬಲೂಚಿಗಳ ಬಂಡಾಯ?

ಬಲೂಚಿಸ್ತಾನ ವಿದ್ಯಾರ್ಥಿ ಸಂಘ ಒಂದು ಮಹತ್ವಪೂರ್ಣ ಹೇಳಿಕೆಯನ್ನು ಪ್ರಸಾರ ಮಾಡಿದೆ. ಸರ್ವಾಧಿಕಾರಿಯ ವಿರುದ್ಧ ಅಂತಿಮ ದಾಳಿಗೆ ಸಜ್ಜಾಗಬೇಕೆಂದು ಅದು ಜನತೆಗೆ ಕರೆ ನೀಡಿದೆ. ಪಾಕಿಸ್ತಾನ ಅಸ್ತಿತ್ವಕ್ಕೆ ಬಂದ ದಿನದಿಂದ ಈವರೆಗೂ ಬಲೂಚಿಗಳ ಮೇಲೆ ಫಕ್ತೂನರ ಮೇಲೆ ಎಡೆಬಿಡದೆ ದಬ್ಬಾಳಿಕೆ ನಡೆಸಿದೆ. ನಿರಾಯುಧರಾದ ಬಲೂಚಿಗಳ ಮೇಲೆ ವಿಮಾನಗಳಿಂದ ಬಾಂಬ್‌ಗಳನ್ನು ಚೆಲ್ಲಿದೆ. ಫಕ್ತೂನರ ಮೇಲೆ ಗುಂಡಿನ ಸುರಿಮಳೆ ಮಾಡಿದೆ. ಒಂದೇ-ಎರಡೇ ಹಲವಾರು ಅಕೃತ್ಯಗಳನ್ನು ಮಾಡಿದೆ ಎಂದು ಈ ವಿದ್ಯಾರ್ಥಿ ಸಂಘ ಪಾಕಿಸ್ತಾನದ ಕುಕೃತ್ಯಗಳ ಪಟ್ಟಿ ಮಾಡಿ ಹೇಳಿದೆ.

—ವಿಶ್ಲೇಷಕ

ಚರಿತ್ರಾರ್ಹ ಮೊಕದ್ದಮೆಗಳು—೨

ಲಾಲ್ ಸಿಂಗನ ಕೊಲೆ

ಬರೆದವರು: ಶ್ರೀ ಬಿ.ಕೃಷ್ಣ ಭಟ್, ಭದ್ರಾವತಿ.

1912ರಲ್ಲಿ ಶ್ರೀ ಭೂಪೇಂದ್ರ ಸಿಂಗ್ ಬಹದ್ದೂರ್ ಪಾಟಿಯಾಲಾವನ್ನು ಆಳುತ್ತಿದ್ದರು. ಸರಿಕೆಯವರಲ್ಲಿ ಅವರದು ಎದ್ದು ಕಾಣುವ ವ್ಯಕ್ತಿತ್ವ. ಕಾಶ್ಮೀರವನ್ನುಳಿದರೆ ಉತ್ತರ ಹಿಂದುಸ್ಥಾನದಲ್ಲಿಯೇ ಪಾಟಿಯಾಲ ಅತಿದೊಡ್ಡ ಸಂಸ್ಥಾನ. ವಿಸ್ತಾರ ಆರು ಸಾವಿರ ಚದುರ ಮೈಲಿಗಳು. ಆದಾಯವೂ ಅಷ್ಟೇ ದೊಡ್ಡದು. ಪಂಜಾಬಿನ ಇತರ ಒಟ್ಟು ಸ್ಥಾನಿಕ ರಾಜ್ಯಗಳ ಒಟ್ಟು ಆದಾಯಕ್ಕಿಂತ ಹೆಚ್ಚು. ಅವರಂತೆ ರೋಲ್ಸ್ ರಾಯ್ಸ್ ಕಾರುಗಳನ್ನು ಇಟ್ಟವರು ಪ್ರಪಂಚದಲ್ಲಿರಲಿಲ್ಲ. ಅವರು ಸಾಕಿದ ನಾಯಿಗಳ ಸಂಖ್ಯೆಯೂ ದೊಡ್ಡದು. ನೆರೆ-ಹೊರೆಯ ರಾಜರು ಅದನ್ನು ಕಂಡು ಕರುಬುತ್ತಿದ್ದರು.

ಮೊದಲ ಮಹಾಯುದ್ಧ ಪ್ರಾರಂಭವಾಯಿತು. ರಾಜ್ಯದ ಬೊಕ್ಕಸವನ್ನು ಅವರು ಬ್ರಿಟಿಷ್ ಸರಕಾರದ ಉಡಿಯಲ್ಲಿ ಹಾಕಿದರು. ಖಾಕಿ ಧರಿಸಿ, ಯುದ್ಧ ಭೂಮಿಯನ್ನು ಪ್ರವೇಶಿಸಿದರು. ಯುದ್ಧ ಸಮಿತಿಯ ಸದಸ್ಯರಾಗಿ, ಮಿತ್ರ ರಾಷ್ಟ್ರಗಳ ಗೌರವಾದರಗಳಿಗೆ ಪಾತ್ರರಾದರು— ಪ್ರಶಸ್ತಿ, ಪದಕ, ಬಿರುದು-ಬಾವಲಿಗಳನ್ನು ಸಂಪಾದಿಸಿದರು.

ಅವರು ಕೀರ್ತಿಯನ್ನು ಸಂಪಾದಿಸಿದರು. ಆದರಿಂದ ಅವರು ದಕ್ಷ ಆಡಳಿತಗಾರರೆಂದು ತಿಳಿಯುವುದು ತಪ್ಪು. ಅದು ಸಮರ್ಥವೂ ಇರಲಿಲ್ಲ; ಪ್ರಾಮಾಣಿಕವೂ ಆಗಿರಲಿಲ್ಲ. ಆ ಕುರಿತು ವೈಸರಾಯರಿಗೆ ಆಗಾಗ್ಗೆ ದೂರುಗಳು ಹೋಗುತ್ತಲಿದ್ದುವು- ಹಾಗೆ ಬಂದ ಹತ್ತು—ಹಲವು ದೂರುಗಳಲ್ಲಿ ಲಾಲ್ ಸಿಂಗನ ಹೆಂಡತಿಗೆ ಸಂಬಂಧಿಸಿದ್ದು ಒಂದು. ಇದು ಅವರ ವೈಯಕ್ತಿಕ ಜೀವನದ ಮೇಲೂ ಬೆಳಕು ಚೆಲ್ಲಿತು.

ಲಾಲ್‌ಸಿಂಗ ಮಹಾರಾಜರ ಹತ್ತಿರದ ಸಂಬಂಧಿ. ಮಹಾರಾಜರು ಮದುವೆಯಾದ ಹಲವು ಸ್ತ್ರೀಯರಲ್ಲಿ, ಪಾಟಿಯಾಲದ ಗೃಹ ಖಾತೆಯ ಕಾರ್ಯದರ್ಶಿ ಶ್ರೀ ಗುರ್ನಾಮ ಸಿಂಗರ ಮಗಳು ಮುಖ್ಯಳು. ಲಾಲ್ ಸಿಂಗ್ ಗುರ್ನಾಮ ಸಿಂಗರ ದಾಯಾದಿ. ಆರಂಭದಲ್ಲಿ ಲಾಲ್ ಸಿಂಗ ಸೈನ್ಯ ಖಾತೆಯಲ್ಲಿ ತುತ್ತೂರಿ ಊದುವ ಹುದ್ದೆಯಲ್ಲಿದ್ದ. ಗುರುನಾಮ ಸಿಂಗರ ಮಗಳು ಮಹಾರಾಣಿಯಾಗಿ ಪಾಟಿಯಾಲ ಪ್ರವೇಶಿಸಿದ ಮೊದಲುಗೊಂಡು ಆತ ತುತ್ತೂರಿ ಊದುವುದನ್ನು ನಿಲ್ಲಿಸಿದ. ಸಂಬಂಧದ ಮೂಲಕ ಸೈನ್ಯ ಖಾತೆಯಲ್ಲಿ ಬಹುದೊಡ್ಡ ಅಧಿಕಾರ ಗಿಟ್ಟಿಸಿಕೊಂಡ.

ಅಷ್ಟರಲ್ಲಿ ಅವನ ಮೊದಲ ಹೆಂಡತಿ ತೀರಿಕೊಂಡಳು. ಆತ ತಿರುಗಿ ಮದುವೆಯಾದ. ಆ ಹೆಂಡತಿಯ ಹೆಸರು ದಲೀಪ್. ಅವಳದು ಆಕರ್ಷಕ ವ್ಯಕ್ತಿತ್ವ. ನೋಡಿದವರನ್ನು ಮರುಳುಗೊಳಿಸುವ ರೂಪವತಿ ಬೇರೆ. ಆ ಹೊಸ ಹೆಂಡತಿಯೊಡನೆ ಲಾಲ್ ಸಿಂಗ್, ಸಿಮ್ಲಾದಲ್ಲಿ ತಂಗಿದ್ದ ಪ್ರಭು ದರ್ಶನಕ್ಕೆ ಹೊರಟ. ರಾಜಾಜ್ಞೆಯೋ, ಪತಿಯ ಸಮ್ಮತಿಯೋ, ಅಥವಾ ಅಲ್ಲಿನ ಪದ್ಧತಿಯೋ ತಿಳಿಯುವುದು ಕಷ್ಟ—ದಲೀಪಳನ್ನು ಪ್ರಭುಗಳು ತಮ್ಮ ಬಳಿಗೆ ಕರೆಸಿಕೊಂಡರು. ಅವರು ಪರಸ್ಪರ ಸಂಧಿಸಿದಾಗ ಅನ್ಯರಿರಲಿಲ್ಲ. ಏಕಾಂತದಲ್ಲಿ ಏನು ನಡೆಯಿತೆಂಬುದು ಬಯಲಿಗೆ ಬರಲಿಲ್ಲ. ಅವಳ ಪ್ರತಿಕ್ರಿಯೆಯಿಂದ ಪ್ರಭುಗಳು ಪ್ರೀತರಾದರು. ಸಮಯ ಸಿಕ್ಕಿದಾಗಲೆಲ್ಲ ಬಂದು ಹೋಗಲು ಪ್ರಭುಗಳು ಆಕೆಯನ್ನು ಆಹ್ವಾನಿಸಿದರು. ಒಂದಲ್ಲ ಒಂದು ನೆಪದಿಂದ ಆಕೆಯನ್ನು ಮಹಾರಾಜರು ಕರೆಸಿಕೊಳ್ಳುತ್ತಿದ್ದರು.

ಅವರಿಬ್ಬರು ಬೇಸಿಗೆಯನ್ನು ಸುಖವಾಗಿ ಸಿಮ್ಲಾದಲ್ಲಿ ಕಳೆದರು. ಮಳೆ ಬೀಳಲು ಮಹಾರಾಜರು ಪಾಟಿಯಾಲಕ್ಕೆ ಹೊರಟರು. ಮಳೆ- ಚಳಿಗಾಲಗಳನ್ನೂ ಮಹಾರಾಜರು ಸಂತೋಷವಾಗಿಯೇ ಅವಳೊಡನೆ ಕಳೆದರು. ಕಾಲ ಬುಡದಲ್ಲಿ ಭಾಗ್ಯ ಬಂದು ಬಿದ್ದಾಗ ದಲೀಪ್ ಬೇಡವೆನ್ನಲಿಲ್ಲ.

ದಲೀಪಳಲ್ಲಿ ಮಹಾರಾಜರು ತೋರಿಸಿದ ಆಸಕ್ತಿ, ಇತರ ಪತ್ನಿಯರಲ್ಲಿ ಮಾತ್ಸರ್ಯವನ್ನು ಹುಟ್ಟಿಸಿತು. ಆ ಸರಸ ಸಂಬಂಧಕ್ಕೆ ಅರಮನೆಯಲ್ಲೇ ಅಪಸ್ವರ ಹುಟ್ಟಿಕೊಂಡಿತು. ರಾಜರ ಅನುಗ್ರಹಕ್ಕೆ ಪಾತ್ರರಾಗಿ ಅನೇಕರು ಅಂತಃಪುರಕ್ಕೆ ಬಂದಿದ್ದರು. ಆದರೆ ಹೇಗೆ ಬಂದಿದ್ದರೋ ಹಾಗೆಯೇ ಹೊರಟು ಹೋದರು. ದಲೀಪಳೊಡನಿರುವ ಸಂಬಂಧವನ್ನೂ ಕ್ಷಣಿಕವೆಂದು ಅವರು ಭಾವಿಸಿದ್ದರು. ಆದ್ದರಿಂದ ಸುಮ್ಮನಿದ್ದರು. ಅವರು ಗ್ರಹಿಸಿದಂತೆ ಆಗಲಿಲ್ಲ. ದಲೀಪಳನ್ನು ಅರಮನೆಯಿಂದೋಡಿಸಲು ಒಂದು ಕಾರಸ್ಥಾನ ನಡೆಸಿದರು. ಅದರ ಪರಿಣಾಮ-ದಲೀಪಳಿಗೆ ಪತಿಯ ಬಾಹುಗಳು ಆಶ್ರಯವಾದುವು.

ಲಾಲ್‌ಸಿಂಗ್, ಇತರ ಅನೇಕ ಗಂಡಂದಿರಂತೆ ಮಹಾರಾಜರಿಂದ ಹೇರಳ ಹಣ ಪಡೆದು ಪತ್ನಿಯನ್ನು ರಾಜರಿಗೊಪ್ಪಿಸಬಹುದಿತ್ತು. ಅವಳನ್ನು ಪೂರ್ಣವಾಗಿ ಪರಿತ್ಯಜಿಸಿ ಪ್ರತಿಯಾಗಿ, ಅಧಿಕಾರದಲ್ಲಿ ಬಡ್ತಿಯನ್ನು ಪಡೆಯಬಹುದಿತ್ತು.

ಆತ ಎರಡನ್ನೂ ಮಾಡಲಿಲ್ಲ.

ಅವನಿಗೇ ಬಿಟ್ಟಿದ್ದರೆ ಏನು ಮಾಡುತ್ತಿದ್ದನೋ!

ಗೃಹಖಾತೆಯ ಕಾರ್ಯದರ್ಶಿ ಗುರುನಾಮ ಸಿಂಗ್ ಅವನಿಗೆ ಅವಕಾಶ ಕೊಡಲಿಲ್ಲ. ಮಗಳ ಮೇಲೆ ಮಹಾರಾಜರಿಗಿರುವ ಪ್ರೀತಿ ಕಡಿಮೆಯಾಗುವುದು ಅವರಿಗೆ ಬೇಕಿರಲಿಲ್ಲ. ಮಗಳ ಮೇಲಿನ ಮೋಹ ಮಾಯವಾಗುವುದೂ, ಮಹಾರಾಜರ ಮೇಲಿರುವ ತಮ್ಮ ಪ್ರಭಾವ ಕುಗ್ಗುವುದೂ ಒಂದೇ ಎಂಬುದು ಸಿಂಗರಿಗೆ ತಿಳಿದಿತ್ತು. ತಮ್ಮ ಗುರಿಸಾಧನೆಗೆ ಗುರುನಾಮಸಿಂಗರು ಲಾಲಸಿಂಗನನ್ನು ದಾಳವಾಗಿ ಬಳಸಿದರು. ಅವರ ಪ್ರೇರಣೆಯಿಂದ ಲಾಲ್ ಸಿಂಗ್ ಮಹಾರಾಜರ ಇಚ್ಛೆಗೆ ವಿರುದ್ಧವಾಗಿ ವರ್ತಿಸಿದ. ಹೆಂಡತಿಯಿಂದ ಬಿಡುಗಡೆ ಹೊಂದಲು ನಿರಾಕರಿಸಿದ. ಅವಳ ಭಾರದಷ್ಟು ಬಂಗಾರವನ್ನು ಪ್ರತಿಯಾಗಿ ಸ್ವೀಕರಿಸಲು ಒಲ್ಲದಾದ. ತನ್ನ ಹೆಂಡತಿ ಮಹಾರಾಜರೊಡನೆ ನಡೆಸಿದ ಅನೈತಿಕ ಸಂಬಂಧದ ಹೊರೆ ಹೊತ್ತುಕೊಂಡು ಆತ ಸ್ವಗ್ರಾಮಕ್ಕೆ ತೆರಳಿದ

ಶ್ರೀ ಭೂಪೇಂದ್ರ ಸಿಂಗರ ಹೃದಯ ದಲೀಪಳಿಗಾಗಿ ತಹತಹಿಸಿತು. ಅವಳ ಅಗಲುವಿಕೆಯನ್ನು ಅವರು ಸಹಿಸದಾದರು. ದಲೀಪಳ ದೇಹ—ರೂಪಗಳು ಅವರ ಬಗೆಯನ್ನು ಕಡಡಿತು; ಕಾಡಿತು. ಅವರು ಲಾಲ್‌ಸಿಂಗರನ್ನೂ, ಮಹಾರಾಣಿಯನ್ನೂ ಒತ್ತಾಯಿಸಿ ತಮ್ಮ ಬಯಕೆಯನ್ನು ತೀರಿಸಿಕೊಂಡರು. ದಲೀಪ್ ಪುನಃ ಅರಮನೆಯನ್ನು ಪ್ರವೇಶಿಸಿದಳು.

ಮಹಾರಾಜರಿಗೆ ಆಕೆಯ ಹೊಟ್ಟೆಯಲ್ಲಿ ಎರಡು ಹೆಣ್ಣು ಮಕ್ಕಳು ಜನಿಸಿದುವು. 1915ರ ಸುಮಾರಿಗೆ ಪುನಃ ಬಿರುಕು ಕಾಣಿಸಿತು. ಒಂದು ರಾತ್ರಿ ದಲೀಪಳು ತನ್ನ ಬಳಿಗೆ ಬಂದ ಅಣ್ಣನಲ್ಲಿ ತನ್ನ ಕೊರಗನ್ನು ಹೇಳಿಕೊಂಡಳು. "ಉಳಿಕೆ ರಾಜಸ್ತ್ರೀಯರಿಗೆ ನನ್ನನ್ನು ಕಂಡರೆ ಸಹನೆಯಿಲ್ಲ ಹಿಂದಿನಿಂದ ನನ್ನನ್ನು ಜರೆಯುತ್ತಾರೆ. ಅವರ ದೃಷ್ಟಿಯಲ್ಲಿ ನಾನು ನಿಮ್ಮ ಭೋಗದ ವಸ್ತು; ಊಳಿಗಕ್ಕೆ ಬಂದ ತೊತ್ತು. ಅಪೇಕ್ಷಿಸುವಷ್ಟು ದಿನ ಇಲ್ಲಿದ್ದು, ಬೇಡೆನಿಸಿದಾಗ ಹೊರಹೋಗಲಿರುವ 'ಸಾಮಾನ್ಯ' ಹೆಂಗುಸು. ಎಂದೆಂದೂ ರಾಣಿಯಾಗಿ ಇರಲಾರೆ."

ಈ ಅಪಮಾನವನ್ನು ದಲೀಪಳು ಸಹಿಸದಾದಳು. ನುಂಗಿಕೊಂಡು ಅಲ್ಲಿರಲು ಅವಳು ಸಿದ್ಧಳಿರಲಿಲ್ಲ.

ಕೇಳಿದ ಪ್ರಭುಗಳು ಕೆರಳಿದ ಸಿಂಹವಾದರು. ದಲೀಪಳನ್ನು ರಾಣಿ ಪದವಿಗೇರಿಸುವ ಪಣ ತೊಟ್ಟರು. ಆ ಪಟ್ಟಕ್ಕೆ ದಲೀಪಳನ್ನು ಏರಿಸುವ ಹಂಚಿಕೆ ಹಾಕಿದರು.

ಆ ಹಂಚಿಕೆಯ ವಿವರಗಳನ್ನು ಪಾಟಿಯಾಲದ ಹಿರಿಯ ಪೋಲಿಸು ಅಧಿಕಾರಿ ಸರದಾರ ನಾನಕ ಸಿಂಗರು ತಮ್ಮ ಡೈರಿಯಲ್ಲಿ ಹೀಗೆ ಬರೆದಿರುತ್ತಾರೆ.

"ಮಹಾರಾಜರು, ತಮ್ಮ ಪ್ರಧಾನಿ ದಯಾಳ್ ಕಿಶನ್ ಶರ್ಮರನ್ನು ತಮ್ಮ ಹತ್ತಿರಕ್ಕೆ ಕರೆಸಿಕೊಂಡು, ಬಯಕೆಯನ್ನು ಅವರ ಮುಂದೆ ಬಹಿರಂಗಪಡಿಸಿದರು. ರಾಜರ ರಹಸ್ಯಜೀವನದ ಪರಿಚಯ, ಅವರನ್ನು ಕೈಗೊಂಬೆಯಾಗಿ ಕುಣಿಸಲು ಅನುಕೂಲವಾಗಬಹುದೆಂದು ಅವರು ಗ್ರಹಿಸಿ, ಅದನ್ನು ಸ್ವಾಗತಿಸಿದರು. ದಲೀಪಳನ್ನು ಮಹಾರಾಣಿಯ ಹಂತಕ್ಕೇರಿಸಲು ಗೃಹಖಾತೆಯ ಕಾರ್ಯದರ್ಶಿ ಗುರುನಾಮ ಸಿಂಗರು ತೊಡರುಗಾಲು ಆಗಿದ್ದರು." ಅವರಿರುವಷ್ಟು ದಿನ, ಅವರ ಪ್ರಭಾವದಿಂದ ಲಾಲ್‌ಸಿಂಗರನ್ನು ತಪ್ಪಿಸುವುದು ಪ್ರಯಾಸದ ಕೆಲಸವಾಗಿತ್ತು. ಆದ್ದರಿಂದ ಗುರುನಾಮ ಸಿಂಗರನ್ನು ದಯಾಳ್ ಶರ್ಮರು ಯುದ್ಧಕ್ಷೇತ್ರಕ್ಕೆ ಕಳಿಸಿದರು. ಅವರು ಯುದ್ಧಭೂಮಿಗೆ ಹೋದುದೇ ತಡ, ಲಾಲ್ ಸಿಂಗನನ್ನು ಕರೆಸಿಕೊಂಡು ದಲೀಪಳಿಂದ ವಿಚ್ಛೇದನ ಹೊಂದಲು ಒತ್ತಾಯಿಸಿದರು. ಆತ ಜಗ್ಗಲಿಲ್ಲ. ಪ್ರತಿಯಾಗಿ ಆತ "ಇಂದು ನನ್ನ ಹೆಂಡತಿಯನ್ನು ಬಯಸಿದ ರಾಜರು, ತಮ್ಮ ಹಸಿವನ್ನು ತೀರಿಸಿಕೊಳ್ಳಲು ನಾಳೆ ನಿಮ್ಮ ಪತ್ನಿಯನ್ನು ಆಶಿಸಬಹುದು. ನೀವು ಅದಕ್ಕೆ ಆಗ ನಿಮ್ಮ ಮುದ್ರೆಯೊತ್ತುವಿರಾ ಎಂದು ಕೇಳಿದ. ದಿವಾನರು ಏನೂ ಹೇಳಲಿಲ್ಲ. ಅವರು ಮೂಕರಾದರು. ವಿಚ್ಛೇದನ ಪಡೆಯುವುದು ಕೈಗೂಡಲಿಲ್ಲ. ಅನ್ಯ ಮಾರ್ಗ ಕಾಣದೆ ಮಹಾರಾಜರು ದಲೀಪಳನ್ನು—ಪತಿಯಿಂದ ವಿಚ್ಛೇದನ ಪಡೆಯದಿದ್ದರೂ—ಮದುವೆಯಾಗಲು ನಿರ್ಧರಿಸಿದರು.

ನಿಶ್ಚಯಿಸಿದಂತೆ ದಲೀಪಳ ಮದುವೆ ಮಹಾರಾಜರೊಡನೆ ಶಾಸ್ತ್ರೋಕ್ತವಾಗಿ ನಡೆಯಿತು. ಆ ಮದುವೆ ನಡೆದಾಗ ದಲೀಪಳು ಪರ ಸ್ತ್ರೀ ಇದ್ದಳು. ಆ ಮದುವೆಗೆ ಗಂಡನ ಅನುಮತಿ ಅಥವಾ ಶಾಸ್ತ್ರೋಕ್ತ ವಿಚ್ಛೇದನ, ಎರಡೂ ಇರಲಿಲ್ಲ. ಅಂತೂ ದಲೀಪ್ ಮಹಾರಾಣಿಯಾದಳು.

ಆಳುವವರು ಮಾಡಿದುದನ್ನು ಕೇಳುವವರು ಯಾರು? ಅವರನ್ನು ಅಂದು-ಇಂದು —ಎಂದೂ ಹಿಡಿಯುವವರಿಲ್ಲ.

(ಹನ್ನೊಂದನೆ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
131 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{4}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, **ರೇಸ್ ಕೋರ್ಸ್ ರೋಡ್, ಬೆಂಗಳೂರು-1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೇರ್‌ಮನ್.

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 36

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು
ಸರಕಾರಗಳಲ್ಲಿ ಆರೋಗ್ಯ
ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಸಂಜೀವಿನಿ ಚಿಕಿತ್ಸೆಗೆ ಸರ್ವ ಸನ್ನಾಹ

ಸಿಂಡಿಕೇಟ್ ಕಾಂಗ್ರೆಸ್ಸು ಮುಂಬಯಿಯಲ್ಲಿ ಅಧಿವೇಶನ ಸೇರಿತು; ಹೊಸ ಅಧ್ಯಕ್ಷರನ್ನು ಆರಿಸಿಕೊಂಡಿತು. ಶ್ರೀ ನಿಜಲಿಂಪ್ಪನವರು ಪಕ್ಷದ ಉನ್ನತ ಹುದ್ದೆಯಿಂದ ಇಳಿಯುವುದು ಬಹು ಹಿಂದಿನ ನಿರ್ಧಾರ. ರಾಜ್ಯದ ರಾಜ್ಯಕೀಯದಲ್ಲೇ ನೆಮ್ಮದಿಯಿಂದ ಉಸಿರಾಡುತಿದ್ದ ಅವರನ್ನು ಶ್ರೀಮತಿ ಗಾಂಧಿಯವರು ದಿಲ್ಲಿಗೆಳೆದು ಅವಕಾಶವರಿತು ಕಪಾಲಮೋಕ್ಷವನ್ನೇ ಮಾಡಿದರು. ಕಾಂಗ್ರೆಸ್ ವಿಘಟನೆಯಲ್ಲಿ ತಪ್ಪು ಯಾರದೇ ಇರಲಿ, ಅದು ನಡೆಯಬಾರದಿತ್ತು; ಆದರೆ ನಡೆದೇ ಹೋಯ್ತು. ಈ ದುರಂತ ಶ್ರೀ ನಿಜಲಿಂಗಪ್ಪನವರ ಉತ್ಸಾಹ, ಕಾರ್ಯಕ್ಷಮತೆಯೆಲ್ಲವನ್ನೂ ಆಹುತಿ ತೆಗೆದುಕೊಡಿತು. ಒಂದು ಬಗೆಯ ಆವೇಗಕವಿದಿದ್ದರಿಂದಲೇ 'ಚುನಾವಣಾ ಹೊಂದಾಣಿಕೆ'ಗೆ ಅವರು ಮುಂದಾದರು. ಅವರು ಅಧ್ಯಕ್ಷ ಗದ್ದುತೆಯಿಂದಿಳಿಯುತ್ತಿರುವಂತೆಯೇ ಕೊಟ್ಟಕೊನೆಯ ಅವರ ಪಕ್ಷದ ಸರಕಾರವೂ ಉರುಳಿ ಹೋಯ್ತು. ಒಂದು ರೀತಿಯಿಂದ ಹೇಳುವುದಾದರೆ, ಸಿಂಡಿಕೇಟು ಅಧಿಕಾರ ಕಳೆದುಕೊಂಡು ಮೂಲೆಗುಂಪಾಯ್ತು.

ಕಾಂಗ್ರೆಸ್ ವಿಘಟನಾನಂತರದ ರಾಜ್ಯಕೀಯವನ್ನು ಅವಲೋಕಿಸಿದರೆ, ಪಕ್ಷಾಂತರ ಪೀಡೆಯ ತಾಂಡವವೆದ್ದುತೋರುತ್ತದೆ. ಸಿಂಡಿಕೇಟಾದಿ ವಿವಿಧ ಪಕ್ಷಗಳಿಂದ ಇಂಡಿಕೇಟಿಗೆ ಪಕ್ಷಾಂತರದ ಪ್ರವಾಹ ಸರಿಯುತ್ತಲೇ ಬರುತ್ತಿದೆ. ಲೋಕಸಭೆಗೆ ನಡೆದ ಮಧ್ಯಕಾಲೀನ ಚುನಾವಣೆಗಳ ಪರಿಣಾಮಗಳು ಇಂಡಿಕೇಟಿನ ತ್ರಿವಿಕ್ರಮ ಬಲವನ್ನು ಪ್ರದರ್ಶಿಸಿದಂತೆ ಕಂಡವು. ಇದರ ಪರಿಣಾಮವಾಗಿ ಕರ್ನಾಟಕ ಮತ್ತು ಗುಜರಾತಗಳ ಸುಭದ್ರ ಸಿಂಡಿಕೇಟ್ ಸರಕಾರಗಳೂ ಭೂಕಂಪಕ್ಕೆ ಗುರಿಯಾಗಿ ಉರುಳಿದುವು. ಇದು ಅನಿರೀಕ್ಷಿತ, ಆಶ್ಚರ್ಯಜನಕ. ಚುನಾವಣೆಗಳಿಗೆ ಮುನ್ನ ಇಂಡಿಕೇಟ್ ನಾಯಕರು ಪ್ರಚಾರ ಭಾಷಣಗಳಲ್ಲಿ ರಾಜ್ಯದ ಸಿಂಡಿಕೇಟ್ ಸರಕಾರದ ಆಯುಷ್ಯ ಬರಿಯ ಆರು ತಿಂಗಳು ಎಂದು ಉಗ್ಗಡಿಸುತ್ತಿದ್ದುದರಲ್ಲಿ ವಿಶೇಷ ಅರ್ಥವಿರುವಂತೆ ಈಗ ಭಾಸವಾಗ ಹತ್ತಿದೆ. ಪಕ್ಷಾಂತರಕ್ಕೆ ಹಲವು ರೀತಿಯಿಂದ ಪ್ರಚೋದಿಸುತ್ತ ನಡೆದ ಇಂಡಿಕೇಟು ಸಿಂಡಿಕೇಟ್ ಸರಕಾರಗಳನ್ನು ಎಂತಾದರೂ ಮಾಡಿ ಉರುಳಿಸಿಯೇ ಬಿಡುವ ದೃಢ ಸಂಕಲ್ಪ ಮಾಡಿತ್ತು. ಇದೀಗ ಆ ಮಹಾಸಂಕಲ್ಪ ಸಿದ್ಧಿಸಿತು.

ಕರ್ನಾಟಕ–ಗುಜರಾತಗಳ ಶ್ರೀಗಳಾದ ಪಾಟೀಲ–ದೇಸಾಯರು ಅನ್ಯ ಪಕ್ಷೀಯ ಮೈತ್ರಿಯನ್ನು ಮೊದಲಿಂದಲೂ ವಿರೋಧಿಸಿದವರು. ಹೈಕಮಾಂಡಿನ ಮನಸ್ಸು ಮುರಿಯ ಬಯಸದೆ ತಮ್ಮ ಮನೆಗಳನ್ನೇ ಮುರಿದುಕೊಂಡರು. ಇದೀಗ ಅವರಿಬ್ಬರೂ ಹೊಸ ಚುನಾವಣೆಗಳನ್ನು ಎದುರಿಸಬೇಕಾಗಿದೆ. ಶ್ರೀ ಪಾಟೀಲರು ಪ್ರಾದೇಶಿಕ ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ಒಪ್ಪಿಕೊಂಡರು. 'ದಕ್ಷರನ್ನೂ ನಿಷ್ಠಾವಂತರನ್ನೂ ಯೋಗ್ಯರನ್ನೂ ಈ ಹುದ್ದೆಗೆ ಆರಿಸಲಾಯ್ತು' ಎಂಬ ಶ್ರೀ ಎಸ್ಸೆನ್ನರ ಉದ್ಗಾರಕ್ಕೆ ವಿಪರೀತಾರ್ಥ ಕಟ್ಟಿಕೊಂಡವರಿದ್ದಾರೆ. ಶ್ರೀ ಎಸ್ಸೆನ್‌ರ ಗುಂಪುಗಾರಿಕೆಯಿದು ಎಂದವರಿಗಾಗದವರು ಹೇಳುತ್ತಾರೆ. ಆದರೆ, ಶ್ರೀ ಪಾಟೀಲರ ದಕ್ಷತೆ, ನಿಷ್ಠೆ ಮತ್ತು ಯೋಗ್ಯತೆಗಳನ್ನು ಪ್ರಶ್ನಿಸುವವರು ಪೂರ್ವಗ್ರಹ ಪೀಡಿತರೇ ಇರಬೇಕು. ಶ್ರೀ ಪಾಟೀಲರು ಬದಲಾದ ವಾತಾವರಣದಲ್ಲಿ ಪಕ್ಷದ ಬಲ ಸಂವರ್ಧನೆಗೆ ಸೊಂಟಕಟ್ಟಿದ್ದಾರೆ. ದೇಶದಲ್ಲಿ ಬೀಸಿದ ಇಂದಿರಾಗಾಳಿ ಅಥವಾ ಇಂದಿರಾ ಪ್ರವಾಹ ನಿತ್ಯವಲ್ಲವೆಂದೂ ಸೋಲನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸಬೇಕೆಂದೂ ಅವರ ಅಭಿಪ್ರಾಯ. ಶ್ರೀ ಹಿತೇಂದ್ರ ದೇಸಾಯಿಯವರು ಇಷ್ಟೊಂದು ಕಟ್ಟುನಿಟ್ಟಾಗಿ ಹೇಳಿಲ್ಲವಾದರೂ ಸೋಲಿನಿಂದ ಎದೆಗೆಡಲಿಲ್ಲ. ಡಿಲ್ಲಿಯಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಜನಸಂಘವನ್ನು ಧರಾಶಾಹಿಯನ್ನಾಗಿ ಮಾಡಿದ ಇಂಡಿಕೇಟು ಕಾರ್ಪರೇಶನ್ ಚುನಾವಣೆಗಳಲ್ಲಿ ಜನಸಂಘದ ಮುಂದೆ ತಲೆತಗ್ಗಿಸಿದುದನ್ನು ನೋಡಿದಾಗ, ನೆರೆ–ಬಿರುಗಾಳಿ ಸ್ಥಿರವಲ್ಲವೆಂಬುದು ಕಂಡಿತಪಾಗುತ್ತದೆ. ಯಜಮಾನರನ್ನು ಮೇಜವಾನಿ ಮಾಡಿ ಓಟು ಕೇಳುವ ಕಾಲವಿದಲ್ಲ, ಮನೆ ಮನೆಯ ಪ್ರತಿ ಮತದಾರರನ್ನೂ ಒಲಿಸಿಕೊಳ್ಳುವ ಮಹಾಕಾರ್ಯವಿಂದು ಅತ್ಯಗತ್ಯ. ಅಕ್ಟೋಬರ–ನವೆಂಬರದ ಸುಮಾರಿಗೆ ಎರಡೂ ರಾಜ್ಯಗಳಲ್ಲಿ ಚುನಾವಣೆ ನಡೆಯ ಬಹುದಾದುದರಿಂದ ಈಗಿಂದೀಗಲೇ ಅದಕ್ಕೆ ವೇದಿಕೆ ನಿರ್ಮಿಸುವುದು ಅಗತ್ಯ.

ಇದುವರೆಗೆ ಸಿಂಡಿಕೇಟಿನ ಮಹಾಸಚಿವರಲ್ಲಿ ಒಬ್ಬರಾಗಿದ್ದ ಶ್ರೀ ಸಾದಿಕ್ ಆಲಿಯವರು ಪಕ್ಷದ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ. ಈ ಹುದ್ದೆಗೆ ಐದಾರು ಹೆಸರುಗಳು ಮುಂದೆ ಬಂದಿದ್ದರೂ ಒಮ್ಮತದ ಆಯ್ಕೆ ಸಾಧ್ಯವಾದುದು ಸಂತೋಷಕರ. ಶ್ರೀ ಆಲಿಯವರು ಉತ್ಸಾಹಿಗಳು, ಕಿರಿಯರು. ಯುವಕರ ಮನೋಭೀಷ್ಟವನ್ನರಿತು, ಅದಕ್ಕೆ ತಕ್ಕಂತೆ ಕಾರ್ಯ ಕೈಗೊಂಡು ಎಳೆಯ ಜನಾಂಗವನ್ನು ಪಕ್ಷದತ್ತ ಆಕರ್ಷಿಸಲು ಇವರು ಸಶಕ್ತರಾದಾರು. 'ಮೃತಪ್ರಾಯ'ವೆನ್ನಲಾಗುವ ಪಕ್ಷಕ್ಕೆ ಸಂಜೀವಿನೀ ಚಿಕಿತ್ಸೆಯನ್ನು ನೀಡಲು ಈಗ ಮುಂಬರಬೇಕು. 'ನನ್ನ ಆಯ್ಕೆ ಬರಿಯ ತಾತ್ಕಾಲಿಕ'ವೆಂದು ಹೇಳಿದ ಶ್ರೀ ಆಲಿಯವರು ಅದನ್ನು ಮರೆತು, ಪಕ್ಷದ ಪುನಸ್ಸಂಘಟನೆಗಾಗಿ ಶತಪ್ರಯತ್ನ ಮಾಡುತ್ತಾರೆಂದು ನಂಬಬಹುದು. ಭಾಷಣ–ವ್ಯಕ್ತಿ ಪ್ರಶಂಸೆಗಳಿಂದಷ್ಟೇ ಜನ ಆಕರ್ಷಿತವಾಗುವುದಿಲ್ಲ. ಇಂದು ಜನತೆಯಲ್ಲಿ ರಾಜ್ಯಕೀಯ ಪ್ರಜ್ಞೆ ಬೆಳೆದಿದೆ. ಆದುದರಿಂದ ತಮ್ಮ ಪಕ್ಷದ ಕಾರ್ಯಕಲಾಪಗಳನ್ನೂ ಉದ್ದೇಶಗಳನ್ನೂ ಆ ಉದ್ದೇಶಗಳನ್ನು ಕಾರ್ಯಗತಗೊಳಿಸುವ ವಿಧಿವಿಧಾನಗಳನ್ನೂ ಮತದಾರರಿಗೆ ಮುಂದಟ್ಟು ಮಾಡುವ ಅಗತ್ಯವಿದೆ. ಇದಕ್ಕೆ ಅಧಿಕಾರಲೋಲುಪರು ನಿಷ್ಪ್ರಯೋಜಕರು; ನಿಸ್ವಾರ್ಥಿ ಸ್ವಯಂ ಸೇವಕರ ಬೃಹತ್ ಪಡೆಯೇ ಬೇಕು. ಈ ಪಡೆಯನ್ನು ಕಟ್ಟುವಲ್ಲಿ ಶ್ರೀ ಆಲಿ ಶಕ್ತರಾದರೆ, ಪಕ್ಷ ಶಕ್ತಿಯನ್ನು ಗಳಿಸಿಕೊಳ್ಳುತ್ತದೆ. ಶ್ರೀ ಎಸ್ಸೆನ್ ಅಧ್ಯಕ್ಷಸ್ಥಾನವೇರಿದಂದಿನಿಂದ ಇಳಿಯುವ ವರೆಗಿನ ರಾಜ್ಯಕೀಯ ವಿದ್ಯಮಾನಗಳು ಪ್ರಾಯಃ ಜಾಗತಿಕ ರಾಜ್ಯಕೀಯದಲ್ಲೇ ಅತ್ಯಪೂರ್ವ ದಾಖಲೆ. ತುಂಬಿದ ಬಟ್ಟಲನ್ನು ಯಾರ್‍ಯಾರೋ ಕಿತ್ತುಕೊಂಡರು. ಬರಿಯ ಬಟ್ಟಲೀಗ ಉಳಿದಿದೆ. ಅದನ್ನು ತುಂಬುವುದು ಸಾಧ್ಯವಾದೀತೆ? ಭಾರತದಲ್ಲಿ ಪ್ರಜಾಸತ್ತೆ ಬಲವಾಗಲು ಇದು ಸಾಧ್ಯವಾಗಬೇಕು.

ಡಿ. ಎಲ್. ಎನ್.

ಕನ್ನಡದ ಹಿರಿಯ ಆಚಾರ್ಯರೆನಿಸಿದ ಶ್ರೀ ದೊಡ್ಡಬೆಲೆ ಲಕ್ಷ್ಮೀನರಸಿಂಹಾಚಾರ್ಯರು ತಮ್ಮ ೬೫ನೆಯ ವಯಸ್ಸಿನಲ್ಲೇ ದಿವಂಗತರಾದುದು ಕನ್ನಡಿಗರ ದುರ್ದೈವ. ಡಿ.ಎಲ್.ಎನ್. ಎಂದೇ ಹೆಸರಾಂತ ಶ್ರೀ ಆಚಾರ್ಯರು ಸುಮಾರು ನಾಲ್ಕು ದಶಕಗಳ ಕಾಲ ಕನ್ನಡಾಂಬೆಯ ಸಾರಸ್ವತ ಸೇವೆಯಲ್ಲೇ ತಮ್ಮ ಜೀವನ ಸವೆದವರು. ಕನ್ನಡದಲ್ಲಿ ಎಂ. ಎ. ಪದವಿಗಳಿಸಿದ ಇವರು ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿ ಕನ್ನಡ ಪಂಡಿತರಾಗಿ ದುಡಿದರು. ೧೯೩೨ರಿಂದ ಮಹಾರಾಜಾ ಕಾಲೇಜದಲ್ಲಿ ಬೋಧಕರಾಗಿ, ಪ್ರಾಧ್ಯಾಪಕರಾಗಿ ೧೯೬೨ರಲ್ಲಿ ನಿವೃತ್ತರಾದರು. ಅಧ್ಯಯನ–ಸಂಶೋಧನೆಗಳನ್ನೇ ಏಕಮೇವ ಉದ್ದೇಶವಾಗಿಟ್ಟುಕೊಂಡ ಆಚಾರ್ಯರು ಕನ್ನಡದ ಸಾರ್ಥಕ ಸೇವೆ ಸಲ್ಲಿಸಿದರು. ಕನ್ನಡ ಸಾಹಿತ್ಯ ಪರಿಷತ್ತು ೧೯೬೦ರಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನೂ ಮೈಸೂರು ವಿಶ್ವ ವಿದ್ಯಾಲಯವು ೧೯೬೭ರಲ್ಲಿ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನೂ ನೀಡಿ ಇವರನ್ನು ಸಮ್ಮಾನಿಸಿದುವು.

ಹಳೆಗನ್ನಡ–ನಡುಗನ್ನಡಗಳಲ್ಲಿ ಪಾರಂಗತರಾದ ಶ್ರೀ ಆಚಾರ್ಯರು ೧೯೪೫ರಿಂದಲೇ ಕನ್ನಡ–ಕನ್ನಡ ನಿಘಂಟಿನ (ಕ. ಸಾ. ಪರಿಷತ್ತು) ಸಂಪಾದಕರಾಗಿದ್ದರು. ಮೂರು ವರ್ಷಗಳಿಂದ ಅದರ ಪ್ರಧಾನ ಸಂಪಾದಕರಾಗಿದ್ದರು. ಸಂಶೋಧನೆ ಮತ್ತು ವಿಮರ್ಶೆಗಳಲ್ಲಿ ಇವರು ಶಿಖರವೇರಿನಿಂತಿದ್ದಾರೆ. ಗ್ರಂಥಸಂಪಾದನೆಯನ್ನು ಶಾಸ್ತ್ರೀಯಗೊಳಿಸಿ, ತುಂಬ ಉಪಕಾರ ಮಾಡಿದ್ದಾರೆ. ಸಂಪಾದಿತ ಗ್ರಂಥಗಳಿಗೆ ಸೂಕ್ತ ಮುನ್ನುಡಿ–ಉಪೋದ್ಘಾತಗಳನ್ನು ಬರೆದು ತನ್ನ ನಿಷ್ಪಕ್ಷಪಾತ ಒರೆಗಲ್ಲಿನಲ್ಲಿ ಅವನ್ನು ಒರೆದು ಜಳ್ಳು–ಪೊಳ್ಳುಗಳನ್ನು ಮುಂದಿಟ್ಟಿದ್ದಾರೆ. 'ಜನಪ್ರಿಯ ಸಾಹಿತಿ'ಯೆನಿಸಲು ಅವರು ಆಶಿಸಲೇ ಇಲ್ಲ. ತನ್ನ ಎತ್ತರದಿಂದ ಅವರು ಇಳಿದು ಬರಲಿಲ್ಲವೆಂದು ಕೆಲವರು ದೂರಬಹುದಾದರೂ ಅದಕ್ಕೆ ಅವರಿಗೆ ಬಿಡುವೇ ದೊರೆಯಲಿಲ್ಲ. ಹತ್ತಾರು ಹಳಗನ್ನಡ–ನಡುಗನ್ನಡ ಗ್ರಂಥಗಳ ಸಂಪಾದನೆಯಲ್ಲಿ ನಿಮಗ್ನರಾದ ಬಹು ಭಾಷಾವಿದ ಆಚಾರ್ಯರು 'ಗ್ರಂಥ ಸಂಪಾದನಾ ಶಾಸ್ತ್ರ'ವನ್ನು ಬರೆದದ್ದೇ ನಮ್ಮ ಪುಣ್ಯ. ಡಿ. ಎಲ್. ಎನ್. ಜನಪ್ರಿಯ ಸಾಹಿತಿಯಲ್ಲ; ಆದರೆ ಅದ್ವಿತೀಯ ಸಂಶೋಧಕ, ಉತ್ತಮ ಮಟ್ಟದ ವಿಮರ್ಶಕ. ಶ್ರೀಯುತರ ನಿಧನದಿಂದ ಈ ಮಟ್ಟಿಗೆ ಕನ್ನಡಾಂಬೆ ಬಡವಾದಳೆಂಬುದು ನಿಸ್ಸಂದೇಹ. ಸಂಶೋಧನೆ — ವಿಮರ್ಶೆಗಳ ಮಹತ್ವ ಇದೀಗ ಕನ್ನಡಿಗರಿಗೆ ಮನವರಿಕೆಯಾಗಹತ್ತಿದೆ. ● ●

ಗೇಹರಾಜ್ಯದಲ್ಲಿ

ನೀರು ಸಲೀಸಾಗೇ ಹರಿಯುತ್ತೆ

"ಅಲ್ರೀ, ಕರ್ನಾಟಕಕ್ಕೆ ರಾಷ್ಟ್ರಪತಿ ಆಡಳಿತ ಬಂದದ್ದು ಭಾರೀ ಒಳ್ಳೆಯದೇ ಆಯ್ತೂಂತ ತೋರುತ್ತೆ."

"ಏಕೆ?"

'ಪ್ರಾಯಃ ನಮ್ಮ ರಾಜ್ಯದ ಮುಖ್ಯ ಸಮಸ್ಯೆಗಳಿಗೆಲ್ಲ ಪರಿಹಾರವರಸುವುದು ಈ ಯುವಧಿಯಲ್ಲಿ ಸಾಧ್ಯಾಂತ ತೋರುತ್ತೆ....'

"ಏನಂತೀಯೊ ನೀನು?".

'ಅಲ್ಲಾರೀ, ರಾಜ್ಯಕೀಯ ನಾಯಕರು ತಲೆಕೆಳಗೆ ಮಾಡಿದರೂ ಸಾಧಿಸಲಾಗದ್ದನ್ನು ರಾಜ್ಯಪಾಲರು ಸಲೀಸಾಗಿ ಸಾಧಿಸಬಲ್ಲರು ಅಂದ್ರೆ ಅದು ಭಾರೀ ಮೋಜೆನಿಸುತ್ತೆ."

'ಸರೀಮ್ಮ, ಆದ್ರೆ ಯಾವ ವಿಚಾರವಾಗಿ ಇಷ್ಟೆಲ್ಲ ...'

'ನೋಡಿಲ್ಲವೆ ನೀವು? ಕಾವೇರೀ ನದೀ ನೀರಿನ ಬಗ್ಗಿನ ಮಹಾ ವಿವಾದವನ್ನು ಲೀಲಾಜಾಲವಾಗಿ ಈಗ ಕೇಂದ್ರ ಸರಕಾರ ಪರಿಹರಿಸಲು ನಿರ್ಧರಿಸಿದೆಯಂತೆ ...'

'ಭಾರೀ ಒಳ್ಳೆಯದಾಯ್ತು. ಹತ್ತು ವರ್ಷಗಳಿಂದಲೂ ಮನಸ್ತಾಪಕ್ಕೆ ಕಾರಣವಾದ ಒಂದು ಸಂಗ್ತಿ ಕಡಿಮೆಯಾಗುವುದಾದ್ರೆ ಸಂತೋಷ ಪಡ್ಬೇಕು ತಾನೆ?'

'ಇರ್ಬಹುದು. ಆದ್ರ ನಾವು ಮಾತ್ರ ಅಳಬೇಕೋ ನಗಬೇಕೊ ತಿಳಿಯೋದಿಲ್ಲ....'

"ಅಲ್ವೆ, ವಿವಾದ ಇನ್ನಿಲ್ಲವಾದಾಗ ನಗದಿರೋದು ಹೇಗೆ ಸಾಧ್ಯ?'

'ಅದ್ರೂ ನೋಡಿ, ಕಾವೇರಿ ಕೊಳ್ಳದ ಕೇಂದ್ರ ನೀತಿ ಉಭಯ ತುಷ್ಟೀಕರಣ."

'ಇರಬೇಕಾದದ್ದೂ ಅದೇ ತಾನೆ?'

'ಹೌದು;ಆದರೆ ನ್ಯಾಯವಾಗಿ ಹೇಳುವುದಾದರೆ, ಇದು ಉಭಯ ತುಷ್ಟೀಕರಣವಲ್ಲ, ತಮಿಳು ನಾಡಿನ ತೃಪ್ತೀಕರಣ....'

'ಅದು ಹೇಗೇಂತ?'

'ಅಲ್ರಿ' ಈಗೀಗ ನಿಂತಲ್ಲೆ ಕೆಲ್ಸ ಮಾಡೋದು ಕಡಿಮೆ ಯಾಗಿದೆಯೇಂತ?"

'ಯಾಕೆ ಹಾಗಂತೀಯ?'

'ಮತ್ತೆ ಇಷ್ಟೊ ಕಾಮನ್ ಸೆನ್ಸೂ ಇಲ್ಲಾಂತ ಡಣಾ ಡಂಗುರ ಹಾಗ್ತೀರಲ್ಲಾ....'

'ಏನು ಮಾಡೋದು ಹೇಳು, ಇಂದಿರಾ ಸರಕಾರದ ನೀತಿ ಯಾವ ಕಾಲಕ್ಕೆ ಯಾವ ಯಾವ ತಿರುವು ಕಾಣ್ತದೋ ಪರಬ್ರಹ್ಮನಿಗೂ ನಾಮಾಲೂಮ್....'

'ಹ್ಞೂಂ. ಅದೇ ನೋಡಿ, ಕಾವೇರಿ ಕೊಳ್ಳದಲ್ಲಿ ಕರ್ನಾಟಕ ಕೈಕೊಂಡ ಯೋಜನೆಗಳಿಗೆ ಇದುವರೆಗೂ ಮಂಜೂರಾತಿ ನೀಡದ ಕೇಂದ್ರ ಸರಕಾರ....'

'ಹೌದು, ಅದು ೧೯೨೪ರ ಮೈಸೂರು–ಮದ್ರಾಸು ಒಡಂಬಡಿಕೆಯನ್ನು ಇದ್ದಕ್ಕಿದ್ದಂತೆ ಉಳಿಯಗೊಡಬೇಕೆಂದು ಬಯ್ಯುತ್ತೆ....'

'ಈಗ ಏಕಾಏಕ್ಯಾಗಿ ಒಪ್ಪಿಗೆ ನೀಡಲಿದೆಯಂತೆ....'

'ಆಗಲಪ್ಪ, ಇದರಿಂದ ಯೋಜನೆಗಾದ್ರೂ ಕೇಂದ್ರದ ನೆರವು ದೊರಕೀತು....'

"ಅಯ್ಯೊ, ಯಾರಿಗೆ ಬೇಕ್ರಿ ಅಂಥ ನೆರವು?"

"ಏನು? ಇದುವರೆಗೂ ದೊರೆಯಲಾರದೆಂದು ಭಾವಿಸಿದ್ದ ಕೇಂದ್ರ ಕೊಪ್ಪರಿಗೆ ಈಗ ದೊರೆಯುತ್ತದೆಂದಾಗ ಮುಖ ತಿರುಗಿಸುವುದಾವ ಶೋಭೆ?'

"ಏನಂತೀರಾ ನೀವು? ನಿಮಗೆ ಕಾವೇರಿಯ ಕತೆಯೇ ಮರೆತು ಹೋಯ್ತು. ಅಲ್ರಿ, ಬರಿಯ ಮಂಜೂರಾತಿಯಾದರೆ ಅದೆಂದೋ ಸಿಗುತಿತ್ತು. ಆದ್ರೆ ೧೯೨೪ರ ಒಡಂಬಡಿಕೆಯನ್ನು ಇದ್ದಕ್ಕಿದ್ದಂತೆ ಊರ್ಜಿತಗೊಳಿಸಿದರೆ, ಈ ಯೋಜನೆಗಳಲ್ಲಿ ನೀರಲ್ಲ, ಮರಳು ಕೂಡಿಡಬೇಕಾದೀತು...."

'ಓ,ಸರೀನ್ನು. ಇದನ್ನೇ ಕೆಲಸಮಯಕ್ಕೆ

ಮೊದಲು ಮಾಜಿ ಎಮ್ಮೆಲ್ಲೆಗಳು ಹೇಳುತ್ತಿದ್ದದ್ದು....'

"ಹ್ಞೂಂ. ರಾಜ್ಯಪಾಲರು ಡಿಲ್ಲಿಗೆ ಹೋಗಿ ಮಂಜೂರಾತಿ ಪಡೆಯಬಯಸಿದಾಗ ಹೇಳಿಕೆ ನೀಡಿದ್ದು; ಕೇಂದ್ರವನ್ನು ವಿನಂತಿಸಿದ್ದು. ಆದರೆ, ಆ ವಿನಂತಿಯನ್ನು ಇಂದಿರಾ ಸರ್ಕಾರ ಯಾಕೆ ಕೇಳಬೇಕು?"

'ಅಗತ್ಯವಿಲ್ಲಾನ್ನು. ಇಪ್ಪತ್ತೇಳರಲ್ಲಿ ಇಪ್ಪತ್ತೇಳನ್ನೂ ಹೊಡೆದುಕೊಂಡ ಮೇಲೆ ಇಲ್ಲಿ ಆಕೆಗೇನು ಕೆಲಸ?'

'ನೆಲ–ಜಲಗಳ ಜಾಡನ್ನು ಹಿಡಿದುಕೊಂಡೇ ವೀರೇಂದ್ರ ಪಾಟೀಲರು ನೆಲಕ್ಕುರುಳಿದರು. ಜಲ ಪ್ರವಾಹದಲ್ಲಿ ಕೊಚ್ಚಿ ಹೋದರು....'

'ಆದ್ದರಿಂದ ಈ ವಿವಾಹದಲ್ಲಿ ವೀರೇಂದ್ರರ ನಿಲುವು ರಾಜ್ಯಕ್ಕೆ ಒಪ್ಪಿಗೆಯಿಲ್ಲ ಅಂತ ಜನ ತೀರ್ಮಾನ ಕೊಟ್ಟಂತಾಯ್ತು. ಆದ್ದರಿಂದ, ಕರ್ನಾಟಕದ ಕಾವೇರಿಕೊಳ್ಳ ಯೋಜನೆಗಳಿಗೆ ಧನ ಸಹಾಯ, ತಮಿಳು ನಾಡಿಗೆ ಜಲ ಸಹಾಯ ನೀಡಿ ವಿವಾದವನ್ನು ಇಲ್ಲಾಂತ ಮಾಡಿದರೆ, ಎರಡೂ ರಾಜ್ಯಗಳ ಜನ ತೃಪ್ತಿ ಪಡಲೇಬೇಕು?

'ಕೇಂದ್ರದ ಆಲೋಚನೆ ಅದೇ ಅನ್ನಿ. ಯಾರಾದರೂ ಅತೃಪ್ತಿ ತೋರ್ಪಡಿಸಿದರೆ, ರಾಜ್ಯದ ರಾಜ್ಯಕೀಯ ನಾಯಕರಿಗೆ ದೂರಿಲ್ಲ ಇಂದಿರಾ ಕೈಯಿಂದ ರಾಜ್ಯಕ್ಕೆ ಅನ್ಯಾಯವಾಗಿಲ್ಲ....'

"ಅದು ಹೇಗಾಗುತ್ತೆ ಅರ್ವರಿಗೊಬ್ಬನಂತೆ ಮಂತ್ರಿ ಮಾಡಿದ ಮೇಲೆ...."

'ಅಲ್ಲ ೧೯೨೪ರ ಒಡಂಬಡಿಕೆಯ ಬಗ್ಗೆ ತಮಿಳುನಾಡಿನ ಬೇಡಿಕೆಗಳನ್ನೆಲ್ಲ ಮನ್ನಿಸಿದ ಮೇಲೆಯೂ ಕಾವೇರಿಕೊಳ್ಳದ ಕರ್ನಾಟಕ ಯೋಜನೆಗಳಿಗೆ ಸಾಕಷ್ಟು ನೀರು ಉಳಿಯುವುದೊಂದೇ ಕೇಂದ್ರದ ಅಭಿಪ್ರಾಯ. ಆದ್ದರಿಂದ ಅದು ಸದ್ಯವೇ ಆದೇಶ ಹೊರಡಿಸುವ ನಿರೀಕ್ಷೆಯಿದೆ.'

'ಅಯ್ತಮ್ಮ, ಅಲ್ಲಿಗೆ ಒಂದು ನ್ಯಾಯ ಕನ್ನಡಿಗರಿಗೆ ಸಿಕ್ಕಂತಾಯ್ತು. ಇನ್ನು, ಬೆಳಗಾಂವಿಯನ್ನು ಮರಾಠಿಗರಿಗೆ ಕೊಟ್ಟುಬಿಟ್ಟು ಇನ್ನೊಂದು ನ್ಯಾಯ ದಾನವನ್ನೂ ಇಂದಿರಾ ಗಾಂಧಿ ಮಾಡಿದರೆ, ನೆಲ–ಜಲ ವಿವಾದ ಪರಿಹಾರವಾಯ್ತು. ಮುಂದಿನ ಚುನಾವಣೆಗಳೊಳಗೆ ಬೇರೆ ಕೆಲವು ಸಮಸ್ಯೆಗಳನ್ನು ನಿರ್ಮಾಣಮಾಡಿಕೊಳ್ಳಬಹುದು.

"ಆಗ ಬಹುದೂನ್ನಿ. ಆದರೂ ನೀರು ಹರಿಯುವಷ್ಟು ಸಲೀಸಾಗಿ ಮಣ್ಣು ಉರುಳುವುದಿಲ್ಲ."

"ಅದೊಂದು ಖರೆ. ಆದರೆ ಮನಸ್ಸಿಗೆ ಅಸಾಧ್ಯವಾದುದಾದರೂ ಯಾವುದು?ನೋಡು, ಸಾಮಾನ್ಯ ವಿಮೆಯನ್ನೆಲ್ಲ ರಾಷ್ಟ್ರೀಕರಣ ಮಾಡಿ ಬಿಟ್ರಲ್ಲಾ...."

'ಹ್ಞೂಂ, ದೇಶಿ–ವಿದೇಶಿ ಎಲ್ಲ ವಿಮಾ ಕಂಪನಿಗಳನ್ನೂ ಸರಕಾರ ವಹಿಸಿಕೊಂಡಿತು. ಇನ್ನು, ಉಳಿದ ಬ್ಯಾಂಕುಗಳ ಸರದಿ'

'ಅದ್ರೂ ನೋಡು, ರಾಷ್ಟ್ರೀಕರಣದ ಮೂಲೋದ್ದೇಶವನ್ನು ಬ್ಯಾಂಕುಗಳು ಮುಟ್ಟಲ್ಲವೆಂದು ಅರ್ಥ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ'

'ಒಪ್ಪಿಕೊಂಡರೇನು, ಬಿಟ್ಟರೇನು? ರಾಷ್ಟ್ರೀಕರಣವೇನು ನಿಂತು ಹೋಗುವುದಿಲ್ಲ. ಅದೊಂದು ಗತ್ತುಗಾರಿಕೆ; ನಡೆಯುತ್ತದೆ. ಯಾರು ಏನಾದರೆ 'ಯಾರಿಗೇನಂತೆ? ಹಾಗೆಯೇ ವಿಮೆಯೂ ಕೂಡ. ವೇತನ ಸೌಲಭ್ಯಗಳು ಹೆಚ್ಚಿದಂತೆ ನೌಕರರ ಕೆಲಸದ ಗುಣಮಟ್ಟ ಇಳಿಯುತ್ತ ಬರುತ್ತಿದೆ'

'ಹ್ಞೂಂ, ಸರಕಾರಿ ಕೆಲಸವೆಂದರೆ, ನಮ್ಮ ಕೆಲಸವೆಂಬ ಭಾವನೆ ನೌಕರರಲ್ಲಿ ಮೂಡಿದರೆ ಮಾತ್ರ ರಾಷ್ಟ್ರೀಕರಣ ಪ್ರಯೋಜನಕಾರಿಯಾದೀತು.

"ಅಲ್ರಿ, ಗುಜರಾತದ ಮುಖ್ಯಮಂತ್ರಿಗೆ ಮತ್ತೆ ಶನಿಕಾಟ ಬಡೀತಂತೆ ...'

'ಹೌದಂತೆ ಕೆಲವರು ಸಿಂಡಿಕೇಟಿಗರು ಇಂಡಿಕೇಟಿಗೆ ಲಾಗಹಾಕಿದರಂತೆ ...'

'ಅಂತೂ ಈ ಕೋತಿಕುಣಿತಕ್ಕೆ ಇನ್ನೂ ಕೊನೆ ಬರಲಿಲ್ಲ.'

'ಬೆಲ್ಲ ಇರುವವರೆಗೆ ಇರುವೆ. ಆ ಮೇಲೆಲ್ಲಿಯದು?'

'ಅದೇನು ಮಧ್ಯಾವಧಿ ಚುನಾವಣೆಗಳಿಗೆ ಶಿಫಾರಸು ಮಾಡಿದರಂತೆ, ಅದನ್ನು ರಾಜ್ಯಪಾಲರು ಒಪ್ಪಲಿಲ್ಲವಂತೆ ..."

'ಅದೇನಿದ್ದರೂ ಒಂದು ನಾಟಕ ಅಂತೂ ಗುಜರಾತದಲ್ಲಿಯೂ ಮಧ್ಯಾವಧಿ ಚುನಾವಣೆಗಳು ನಡೆಯುವುದು ಗ್ಯಾರಂಟಿಯೆಂದಾಯ್ತು....'

"ಆಗ ಬಾಕಿಯುಳಿಯುವುದು ಆಸಾಮ ಆಂಧ್ರ ಮತ್ತು ಮಹಾರಾಷ್ಟ್ರಗಳು ಮಾತ್ರ ...'

(ಒಂಭತ್ತನೇ ಪುಟ ನೋಡಿರಿ)

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

P. & S. C. No. 3 of 1971

ರಾಮಕೃಷ್ಣ S. ವೈಲಾಯ-ಜನರಲ್ ಯೇಜೆಂಟ್–K. ಸುಬ್ರಹ್ಮಣ್ಯಾಚಾರ್ಯ—ಅರ್ಜಿದಾರ

ಮತ್ತು

(1) ಕಮಲಮ್ಮ–ಸುಬ್ರಾಯ ವೈಲಾಯರ ವಿಧವೆ–(2) ಸೀತಮ್ಮ–ಸುಬ್ರಾಯ–ವೈಲಾಯರ ಮಗಳು–ಉಡ್ಪಿ ತಾಲೂಕು ಪೆರ್ಡೂರು ಗ್ರಾಮದ ಕೈತಾರು ಮಠ —ಎದ್ರಿರು

ಯಿವರೊಳಗೆ

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದ್ರೆ:-

ತಾರೀಕು 30-6-1968ರಲ್ಲಿ ಮೃತಪಟ್ಟ ಪೆರ್ಡೂರು ಕೈತಾರು ಮಠ ರಾಮಪ್ಪ ವೈಲಾಯರ ಮಗ ಸುಬ್ರಾಯ ವೈಲಾಯರ ಬಾಬ್ತು ಅರ್ಜಿಯಲ್ಲಿ ಕಾಣಿಸಿದ ಪ್ರೊ ನೋಟುಗಳ ಪ್ರಕಾರವೂ ಅವುಗಳ ಮೇಲೆ ಮಾಡಿರುವ ದಾವೆಗಳ ನಿವೃತ್ತಿಗಳ ಪ್ರಕಾರವೂ ಬರತಕ್ಕ ಐವೇಜುಗಳನ್ನು ವಸೂಲು ಪಡಿಯಲು ಸದ್ರಿ ಮೃತನು ತಾರೀಕು 2-6-1968ರಲ್ಲು ಬರೆದಿಟ್ಟ ರಿಜಿಸ್ಟ್ರ ವಿಲ್ ವೀಲು ಪ್ರಕಾರ ಹಕ್ಕುವುಳ್ಳವನಾದ ಅರ್ಜಿದಾರನು ತನ್ನ ಹೆಸರಲ್ಲಿ ಒಂದು ವಾರೀಸು ಹಕ್ಕು ಸರ್ಟಿಫಿಕೇಟು ಕೊಡಿಸಬೇಕಾಗಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 27-6-1971 ಕ್ಕೆ ಯಿಟ್ಟಿದೆ. ಆಕ್ಷೇಪವುಳ್ಳವರು ಆ ದಿವ್ಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

By order of the Court.

K. Balachandra Rao

Advocate for Petitioners

Udipi. 15—5—1971

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

Exc. 292/1970 S. C. 342/1958

ಅನಂತರಾಜ ಶೆಟ್ಟಿ —ಅರ್ಜಿದಾರ.

ಪುಟ್ಟಮ್ಮ ಸಹಾ —ಎದ್ರಿರು.

9. ಶಿಶುಪಾಲ–10 ನೇಮಿರಾಜ ಶೆಟ್ಟಿ, ಶ್ರೀದೇವಿ ಮಕ್ಕಳು, ಕಾರ್ಕಳ ತಾಲ್ಲೂಕು ನಲ್ಲೂರು ಗ್ರಾಮದ ಚಂಡೆಮನೆಯಂಬಲ್ಲಿರುವವರು–9,10ನೇ ಎದ್ರಿರಾದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ—

ನಿಮ್ಮ ವ ಮಿಕ್ಕ ಎದ್ರಿರ ಕುಟುಂಬದ ಪಕ್ಷಿನ ಸ್ಥಿರಾಸ್ತಿಗಳನ್ನು ಜಪ್ತಿ ಯೇಲಂಗೆ ಅಪೇಕ್ಷಿಸಿ ಅರ್ಜಿದಾರನು ದಾಖ್ಲು ಮಾಡಿದ ಸದ್ರಿ ಅಮ್ಲಜ್ಯಾರಿಯು ತಾರೀಕು 30-6-71ಕ್ಕೆ ನಿಮ್ಮ ಹಾಜ್ರಿ ಬಗ್ಗೆ ಇಡೋಣಾಗಿಯದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath

Advocate for Petitioner

Karkala, 13—5—71

ಚಿನ್ನ-ಬೆಳ್ಳಿಯ ತಗಡುಗಳಲ್ಲಿ ಐತಿಹಾಸಿಕ ದಾಖಲೆಯುಳ್ಳ

ಇಂಡಿಯಾ ಆಫೀಸ್ ಲೈಬ್ರರಿ

ಲೇಖಕರು: ಶ್ರೀ ಎಚ್. ಎಂ. ನಾರಾಯಣ ಭಟ್

ಭಾರತಕ್ಕೆ 1947ರಲ್ಲಿಯೇ ಸ್ವಾತಂತ್ರ್ಯ ನೀಡಿ ಉದಾರತೆ ವ್ಯಕ್ತಪಡಿಸಿದ್ದಾಗಿ ಹೇಳಿಕೊಳ್ಳುವ ಬ್ರಿಟನ್ ಅಲ್ಲಿದ್ದ "ಇಂಡಿಯಾ ಆಫೀಸ್ ಲೈಬ್ರರಿಯನ್ನು ಇನ್ನೂ ಬಿಟ್ಟು ಕೊಡಲಿಲ್ಲ. ಇದರ ಹಸ್ತಾಂತರಕ್ಕೆ ಸಂಬಂಧಿಸಿ ಅನೇಕ ನಿವೇದನಗಳನ್ನು ಮುಂದಿರಿಸಿದ್ದರೂ ಇದೀಗ ಬ್ರಿಟನ್, ಭಾರತ–ಪಾಕಿಸ್ತಾನಗಳೊಳಗೆ ವಿಚಾರವಿನಿಮಯ ಪ್ರಾರಂಭಿಸಿದ್ದು ಒಂದು ಇತ್ಯರ್ಥವಾಗುವ ದಿನ ಸಮೀಪಿಸುವ ಹಾಗಿದೆ. ಈ ಮಹಾ ಗ್ರಂಥಾಲಯದಲ್ಲಿ ಅಡಕವಾಗಿರುವ ವಿಶಿಷ್ಟ—ಅಮೂಲ್ಯ ಗ್ರಂಥ ಸಂಪತ್ತಿನ ಪ್ರಾಧಾನ್ಯತೆಯನ್ನು ಪರಿಗಣಿಸಿಯೇ ಬ್ರಿಟನ್ ಇದರ ಬಗ್ಗೂ ಉದಾರತೆ ವ್ಯಕ್ತಪಡಿಸಲು ಆಸಕ್ತಿ ವಹಿಸದಿದ್ದುದೆನ್ನಲಾಗಿದೆ.

ಹದಿನೆಂಟನೇ ಶತಮಾನದ ಕೊನೆಯಲ್ಲಿ ಐರೋಪ್ಯ ರಾಷ್ಟ್ರಗಳಲ್ಲಿ ಹರಡಿ ಹಬ್ಬಿದ ವಿಶೇಷ ಆಸಕ್ತಿಗಳಲ್ಲೊಂದು. ಪೌರ್ವಾತ್ಯ ಪಠನ ಪ್ರೇಮ (Orientalism)ವಾಗಿತ್ತು. ಪೌರ್ವಾತ್ಯ ಭಾಷೆ–ಸಾಹಿತ್ಯ–ಸಂಸ್ಕೃತಿ—ಸಾಮಾಜಿಕ ಪದ್ಧತಿಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಬೇಕೆಂಬ-ಕಲಿಯಬೇಕೆಂಬ ಕುತೂಹಲ ಪಾಶ್ಚಾತ್ಯ ಪಂಡಿತರಲ್ಲಿ ಬೆಳೆಯುತ್ತಿದ್ದಾಗಲೇ "ಈಸ್ಟ್ ಇಂಡಿಯಾ ಕಂಪೆನಿ" ಇಂಡಿಯಾದಲ್ಲಿ ಅಧಿಕಾರ ಸ್ಥಾಪಿಸಿದುದೂ!

ಭಾರತದ ಭೌಗೋಳಿಕ, ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ನಿಯಮ ಸಂಹಿತೆಗಳು ಕಂಪೆನಿಯ ಕಾರ್ಯವಾಹಿಗಳನ್ನು ಆಕರ್ಷಿಸಿದ್ದು ಅವರು ಸಂಸ್ಕೃತ, ಪರ್ಶಿಯನ್, ಅರಬಿ ಇತ್ಯಾದಿ ಭಾಷಾ ಪಠನವನ್ನು ಪ್ರೋತ್ಸಾಹಿಸಿದರು. ಈ ಭಾಷೆಗಳಲ್ಲಿನ ಅನೇಕ ಅಮೂಲ್ಯ ಗ್ರಂಥಗಳನ್ನೂ ಪುಸ್ತಕಗಳನ್ನೂ ಸಂಗ್ರಹಿಸಿ ಲಂಡನ್‌ಗೆ ಸಾಗಿಸಿದರು.

ಇಂಡಿಯಾ ದೇಶದ ಅನೇಕ ದಾಖಲೆಗಳನ್ನೂ ಸಂಗ್ರಹಿಸಲು 179੨ರಲ್ಲಿಯೇ ಕಂಪೆನಿಯು ಅಧಿಕೃತರಿಗೆ ನಿರ್ದೇಶ ನೀಡಿತ್ತೆನ್ನಲಾಗಿದೆ.

ಆ ಉದ್ದೇಶ

ಕ್ರಿ. ಶ. 1801ರಲ್ಲಿ ಲಂಡನ್ ನಗರದಲ್ಲಿ ಸ್ಥಾಪಿಸಲ್ಪಟ್ಟ ಈಸ್ಟ್ ಇಂಡಿಯಾ ಕಂಪೆನಿಯ ನಿರ್ಧಾರಕ್ಕನುಗುಣವಾಗಿ–ಇಂಡಿಯನ್ ಜನತೆಯ ಜೀವನಕ್ಕೆ ಸಂಬಂಧಿಸಿದ ವಿವಿಧ ವಿಚಾರಗಳನ್ನೊಳಗೊಂಡ ಗ್ರಂಥಗಳನ್ನೂ ಪ್ರಕಟನೆಗಳನ್ನೂ ಸಂಗ್ರಹಿಸಿ ಜೋಪಾನವಾಗಿ ಇರಿಸುವುದೇ 'ಇಂಡಿಯಾ ಆಫೀಸ್ ಲೈಬ್ರರಿ'ಯ ಉದ್ದೇಶ.

1808ರಲ್ಲಿ ಇಂಡಿಯಾದ ಆಡಳಿತೆಯನ್ನು ಬ್ರಿಟಿಷ್ ರಾಜ್ಞಿ ವಹಿಸಿಕೊಂಡಾಗ ಈ ಲೈಬ್ರರಿ 'ಇಂಡಿಯಾ ಆಫೀಸ್'ನ ಆಶ್ರಯದಲ್ಲಾಯಿತು.

1947ರಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟುಕೊಟ್ಟಾಗ ಈ 'ಲೈಬ್ರರಿ' ವಸಾಹತುಗಳ ಖಾತೆಯ ಅಧೀನವಾಯಿತು.

ಭಾರತ–ಪಾಕಿಸ್ತಾನಗಳಿಗೆ ಸಂಬಂಧಿಸಿದ ಎಲ್ಲಾ ಪ್ರಧಾನ ಪ್ರಕಟನೆಗಳು–ಅವು ಯಾವ ಭಾಷೆಯಲ್ಲೇ ಆಗಿರಲಿ–ಈಗಲೂ ಈ ಗ್ರಂಥಾಲಯ ಸಂಗ್ರಹಿಸುತ್ತಿದೆ.

ಅಮೂಲ್ಯ ಹಸ್ತಾಕ್ಷರ ಗ್ರಂಥಗಳೂ

ಪಾಶ್ಚಾತ್ಯ–ಪೌರ್ವಾತ್ಯ ಭಾಷೆಗಳಲ್ಲಿನ ಅನೇಕ ಕೈ ಬರೆಹದ ಗ್ರಂಥಗಳೂ, ಮುದ್ರಿತ ಪುಸ್ತಕಗಳೂ, ತಾಳೆಯೋಲೆ ಗ್ರಂಥಗಳೂ, ಚಿತ್ರ ಕಲಾಕೃತಿಗಳೂ, ಹಳೆಯ ವೈಸರಾಯ ಗವರ್ನರ್‌ಗಳ ಖಾಸಗಿ ಸಂಗ್ರಹಗಳೂ ಇದರಲ್ಲಿವೆ. ಇಲ್ಲಿನ 'ಹಸ್ತಾಕ್ಷರ ಗ್ರಂಥ ಶೇಖರಣೆ ಭಾರತದ ಮಟ್ಟಿಗೆ ಅತಿ ಅಮೂಲ್ಯವಾಗಿ ಪರಿಗಣಿಸಲ್ಪಡುತ್ತವೆ

ಟಿಪ್ಪೂ ಸುಲ್ತಾನನ ವಶವಿದ್ದ ಅಮೂಲ್ಯ ಗ್ರಂಥ ಭಂಡಾರವನ್ನೂ ಇದರೊಂದಿಗೆ ವಿಲೀನಗೊಳಿಸಲು ಕಂಪೆನಿಗೆ ಸಾಧ್ಯವಾಗಿದೆ. ತಾವು ಜಯಿಸಿದ್ದ ಅನೇಕ ರಾಜ–ಮಹಾರಾಜರುಗಳ ವಶವಿದ್ದ ಅಪೂರ್ವ ಹಾಗೂ ಅಮೂಲ್ಯ ಗ್ರಂಥಗಳನ್ನೂ ವಸ್ತುಗಳನ್ನೂ ಸಂಗ್ರಹಿಸಲು ಟಿಪ್ಪೂ ಸುಲ್ತಾನನಾಗಲೀ ಹೈದರ್ ಅಲಿಯಾಗಲೀ ಎಂದೂ ವಿಸ್ಮರಿಸುತ್ತಿದ್ದಿಲ್ಲವೆನ್ನುವಾಗ ಹೀಗೆ ಲಭಿಸಿದ ಗ್ರಂಥ ಸಂಪತ್ತು ಎಷ್ಟೆಂದು ಲೆಕ್ಕ ಹಾಕಲೇ ಸಾಧ್ಯವಿಲ್ಲ. ಹೀಗೆ ಅಮೂಲ್ಯ ಗ್ರಂಥಗಳು ಸುಲಭವಾಗಿ ಒದಗಿದ್ದರಿಂದಲೇ ಈ ಗ್ರಂಥಾಲಯ ಪ್ರಸಿದ್ಧಿ ಹೊಂದಿದೆ.

ಇತರ ಮೂಲಗಳಿಂದ

ಸಂಸ್ಕೃತ,ಪರ್ಶಿಯನ್, ಅರಬಿ ಇತ್ಯಾದಿ ಭಾಷೆಗಳಲ್ಲಿನ ಮೆಕಂಜಿ ಶೇಖರಿಸಿದ್ದ ಗ್ರಂಥಗಳೂ, ವಾರನ್‌ಹೇಸ್ಟಿಂಗ್ಸ್(ವೈಸರಾಯಿ)ನ ಗ್ರಂಥಶೇಖರಣೆಯೂ, ಇದೇ ಗ್ರಂಥಾಲಯವನ್ನು ಸೇರಿದವು.

180।ರಲ್ಲಿ ಬರೋಡಾ ಮಹಾರಾಜರೂ ತನ್ನಲ್ಲಿದ್ದ ಕೆಲವು ಅಪೂರ್ವ ಹಸ್ತಾಕ್ಷರ ಗ್ರಂಥಗಳನ್ನು ನೀಡಿದ್ದರು.

ಬಂಗಾಳದ ಸರ್ ಸೌರೀಂದ್ರ ಮೋಹನ ಟಾಗೂರ್, ಎ. ಸಿ. ಬನರ್ಜೀ, ಎಚ್. ಟಿ. ಕೋಲ್‌ಬ್ರೂಕ್ ಮುಂತಾದ ಪಾಶ್ಚಾತ್ಯ ಬಹುಭಾಷಾ ಪಂಡಿತರೂ ತಂತಮ್ಮ ಗ್ರಂಥ ಶೇಖರಣೆಗಳನ್ನು ಈ ಗ್ರಂಥಾಲಯಕ್ಕೆ ಒದಗಿಸಿಕೊಟ್ಟರು.

ಚಿನ್ನದ ತಗಡಿನ ಗ್ರಂಥ

ಈ ಗ್ರಂಥಾಲಯದ ಹಸ್ತಾಕ್ಷರ ವಿಭಾಗದಲ್ಲಿ ಚಿನ್ನದ ತಗಡಿನ ಗ್ರಂಥವೂ ಬೆಳ್ಳಿತಗಡಿನ ಗ್ರಂಥವೂ ಸೇರಿದೆ. ಐತಿಹಾಸಿಕ ಪ್ರಾಧಾನ್ಯತೆಯುಳ್ಳ ಈ 'ಲೋಹಗ್ರಂಥ'ಗಳು ಮಲಬಾರಿನ ಸಾಮೂದಿರಿ (Zamorin)ಅರಸರು ಡಚ್ಚರಿಗೂ (1961) ಈಸ್ಟ್ ಇಂಡಿಯಾ ಕಂಪೆನಿಗೂ (171੭) ನೀಡಿದ ದಾಖಲೆ ಪತ್ರಗಳೆಂದು ಪ್ರತೀತಿ!

19੩3ರಲ್ಲಿ ಮೌಲಾನಾ ಆಜಾದರು ಈ ಮಹಾ ಗ್ರಂಥಾಲಯದ ಭವಿಷ್ಯದ ಬಗ್ಗೆ ಬ್ರಿಟನಿನೊಂದಿಗೆ ಪ್ರಥಮ ಬಾರಿಗೆ ವಿಚಾರ ವಿನಿಮಯ ನಡೆಸಿದರು. ಆ ಬಳಿಕ ಭಾರತ ಪಾಕಿಸ್ತಾನಗಳ ಸಂಯುಕ್ತ ಬೇಡಿಕೆಯೂ ಮುಂದಿರಿಸಲ್ಪಟ್ಟಿತು ಇದು ಬ್ರಿಟನಿನ ಸೊತ್ತೆಂದೇ ಬ್ರಿಟನ್ ಈ ತನಕವೂ ವಾದಿಸುತ್ತಿತ್ತು. ಈ ಗ್ರಂಥಾಲಯ ಲಭಿಸಿದರೆ ಭಾರತಕ್ಕೆ ಅದೊಂದು ಮಹಾ ಅನುಗ್ರಹವಾಗದಿರದು.

25 ಲಕ್ಷಕ್ಕೂ ಮಿಕ್ಕ

ಪೌರ್ವಾತ್ಯ–ಭಾರತೀಯ ಪಠನಗಳಿಗೆ ಸಹಾಯಕವಾದ ಎರಡೂವರೆ ಲಕ್ಷಕ್ಕೂ ಮಿಕ್ಕಿ ಪುಸ್ತಕಗಳು ಈ ಮಹಾ ಗ್ರಂಥಾಲಯದಲ್ಲಿವೆ. ಈ ಪೈಕಿ ,50 ಇಂಗ್ಲೀಷ್ ಮತ್ತಿತರ ಪಾಶ್ಚಾತ್ಯ ಭಾಷೆಗಳಲ್ಲಿ!

ಒಂದು ಹಳೆಯ ಪಟ್ಟಿಯನ್ವಯ ಇದರಲ್ಲಿನ ಭಾರತೀಯ ಭಾಷಾ ಪುಸ್ತಕಗಳ ಮಾಹಿತಿ ಹೀಗಿದೆ.

ಕನ್ನಡ	3 0 0 ;
ತಮಿಳು	1੫,500 ;
ಬಂಗಾಳಿ	24,੦00 ;
ಹಿಂದಿ	23,000 ;
ಮರಾಠಿ	9,500 ;
ಒರಿಯ	4,000 ;
ಮಲೆಯಾಳ	2,650 ;
ಗುಜರಾತ್	10,0'0 ;
ಸಂಸ್ಕೃತ	20,000 ;
ಉರ್ದು	16,000 ;
ತೆಲುಗು	6,500 :
ಅಸಾಮಿ	700 ;

ಮತ್ತು ಪಂಜಾಬಿ 600.

"।867ರ ಇಂಡಿಯಾ ಆಕ್ಟ್"ನನ್ವಯ ಇಂಡಿಯಾದಲ್ಲಿ ಪ್ರಕಟಿಸಲ್ಪಡುವ ಪುಸ್ತಕಗಳ ಒಂದು ಪ್ರತಿಯನ್ನು ಸಂಗ್ರಹಿಸಲು ಗ್ರಂಥಾಲಯಕ್ಕೆ ಅನುಮತಿ ನೀಡಿದ್ದರಿಂದಾಗಿ ಆಧುನಿಕ ಭಾರತೀಯ ಸಾಹಿತ್ಯದ ಅನೇಕ ಭಾಷಾ ಪುಸ್ತಕಗಳೂ ಸಂಗ್ರಹಿಸಲ್ಪಟ್ಟವು.

(—ಸಂಗ್ರಹ)



ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

READ & ADVERTISE IN NAVAYUGA WEEKLY

ಚಿಕಿತ್ಸಕ ಗುಣ ತುಂಬಿದ ಚಹಾ

ಲೇಖಕರು: ಶ್ರೀ ಇಗೋರ್ ಫ್ರೊಲೊವ್.

ಚಹಾ ಜಗತ್ತಿನ ಅತ್ಯಂತ ಜನಪ್ರಿಯವಾದ ಪುರಾತನ ಪೇಯ. 4,000 ವರ್ಷಗಳಿಗಿಂತಲೂ ಹೆಚ್ಚು ಹಿಂದೆ ಚೀಣದಲ್ಲಿ ಚಹಾ ಸೇವನೆಯು ಪ್ರಾರಂಭವಾಯಿತು. ಅರಬರ ಮೂಲಕ ಅದು ಪಾಶ್ಚಾತ್ಯ ಜಗತ್ತಿಗೆ ಬಂದಿತು. ಅದು ಯುರೋಪನ್ನು ತಲಪಿದುದು ಹದಿನಾರನೆಯ ಶತಮಾನದಲ್ಲಿ.

ಪ್ರಪಂಚ ಸಂಸ್ಥೆಯ ವಾರ್ಷಿಕ ಅಂಕಿ–ಅಂಶ ಸಂಗ್ರಹದಲ್ಲಿ ಸೂಚಿಸಲಾಗಿರುವ ಪ್ರಕಾರ, ಪ್ರತಿ 'ಗಂಡು-ಹೆಣ್ಣು–ಮಗು' ಕುಟುಂಬವು ಪ್ರತಿ ವರ್ಷವೂ ಅತ್ಯಧಿಕ ಪ್ರಮಾಣದಲ್ಲಿ ಚಹಾ (ಸುಮಾರು ೪ ಪೌಂಡು 6 ಔನ್ಸ್) ಬಳಸುತ್ತಿರುವುದು ಬ್ರಿಟನ್ನಿನಲ್ಲಿ. ಸೋವಿಯೆತ್ ಒಕ್ಕೂಟ, ಚೀಣ, ಜಪಾನ್, ಐರ್ಲೆಂಡ್, ಆಸ್ಟ್ರೇಲಿಯ, ನ್ಯೂಜೀಲ್ಯಾಂಡ್ ದೇಶಗಳಲ್ಲಿಯೂ ಮಧ್ಯ ಏಶಿಯದಲ್ಲಿಯೂ ಉನ್ನತ ಪ್ರಮಾಣದಲ್ಲಿದೆ.

ಚಹಾ ಪೇಯದ ವೈದ್ಯಕೀಯ ಗುಣಗಳು ಬಹುಕಾಲದಿಂದಲೂ ಪೂರ್ವ ದೇಶಗಳಲ್ಲಿ ಸುಪರಿಚಿತವಾಗಿವೆ. ಯುರೋಪಿನ ಡಾಕ್ಟರರು ಹಿಂದಿನ ಕಾಲದಲ್ಲಿ ಜಾನಪದ ಔಷಧ ಚಿಕಿತ್ಸೆಯನ್ನು ನಂಬುತ್ತಿರಲಿಲ್ಲವಾದರೂ ಈ ಶತಮಾನದಲ್ಲಿ ಚಹಾ ಪೇಯದ ರೋಗ ಚಿಕಿತ್ಸಕ ಗುಣಗಳಿಗೆ ಕ್ರಮಶಃ ಮನ್ನಣೆಯನ್ನು ನೀಡಿದ್ದಾರೆ.

ಉಕ್ರೇನಿನ ಕೀಯೆವ್ ನಗರದಲ್ಲಿ ಬೊಗೋಮೊಲೆತ್ಸ್ ಶರೀರ ವಿಜ್ಞಾನ ಸಂಸ್ಥೆಯಲ್ಲಿ ನಡೆಸಲಾದ ಪ್ರಯೋಗದಲ್ಲಿ, ಇಲಿಗಳನ್ನು ಕಿರಣ ಪ್ರಸಾರಕ್ಕೆ ಗುರಿಪಡಿಸಲಾಯಿತು. 'ಲ್ಯುಕೇಮಿಯ' ರೋಗ ಉಂಟಾದಾಗ, ಅವುಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಯಿತು. ಒಂದು ಗುಂಪಿಗೆ ಯಾವ ಔಷಧವನ್ನೂ ನೀಡಲಿಲ್ಲ. ಮತ್ತೊಂದಕ್ಕೆ ಕ್ರಮಬದ್ಧವಾಗಿ ಚಹಾದಿಂದ ತೆಗೆಯಲಾದ ಜೈವಿಕ ಸಂಯುಕ್ತಗಳನ್ನು ನೀಡಲಾಯಿತು. ಈ ಔಷಧ ಸೇವಿಸಿದ ಇಲಿಗಳು ಮಾತ್ರವೇ ಉಳಿದುವು. ಇದರಿಂದ "ಲ್ಯುಕೇಮಿಯ" ರೋಗವನ್ನು ಗುಣಪಡಿಸಲು ಅಥವಾ ಅದನ್ನು ತಡೆಗಟ್ಟಲು ಸಮರ್ಥವಾದ ಔಷಧವನ್ನು ವಿಕಾಸಗೊಳಿಸುವುದಕ್ಕೆ ಚಹಾದಿಂದ ಪಡೆಯಲಾದ ಕಟೇಟಿನ್ ಸಂಯುಕ್ತಗಳೇ ಮುಂದೆ ಎಂದಾದರೂ ಬುನಾದಿಯನ್ನೊದಗಿಸುವುವೆಂಬ ಭರವಸೆಯು ಮೂಡಿದೆ.

ಚಹಾದಲ್ಲಿ ಉತ್ತೇಜಕವಾದ "ಕ್ಯಾಫೀನ್" ಎಂಬ ವಸ್ತುವೂ, ಸ್ವಲ್ಪ ಪ್ರಮಾಣದಲ್ಲಿ 'ಥಿಯೋಬ್ರೊಮೈನ್' ಹಾಗೂ 'ಟ್ಯಾನಿನ್' ಅಂಶಗಳೂ ಇರುತ್ತವೆ. ಉರಿಯೂತದ ಪ್ರಕ್ರಿಯೆಗಳನ್ನು ಮಂದಗೊಳಿಸುವ ಶಕ್ತಿಯು 'ಟ್ಯಾನಿನ್' ವಸ್ತುವಿನಲ್ಲಿದೆಯೆಂಬ ವಿಷಯ ಬಹುಕಾಲದಿಂದ ಸುಪರಿಚಿತವಾಗಿದೆ. ವಿಕಿರಣ ಕ್ರಿಯಾಶಕ್ತಿಯಿಂದ ಪೀಡಿತವಾದ ಜೀವಿಗಳ ಮೇಲೆ ಚಹಾದ ಪ್ರಯೋಜನಕರ ಪರಿಣಾಮವನ್ನು ಟ್ಯಾನಿನ್ ಮಾತ್ರವಷ್ಟೇ ಉಂಟು ಮಾಡದೆಂಬ ವಿಷಯವನ್ನು ಕೀಯೆವ್ ಪ್ರಯೋಗವು ಸ್ಪಷ್ಟಪಡಿಸಿತು. ಚಹಾಸಾರದಲ್ಲಿರುವ ವಿಭಿನ್ನ ವಸ್ತುಗಳು ಒಟ್ಟಾಗಿಯೇ ಸತ್ಪರಿಣಾಮವನ್ನು ಉಂಟುಮಾಡುತ್ತವೆ.

ಚಹಾದಿಂದ ಪಡೆಯಲಾದ 'ಕಟೇಟಿನ್' ವಸ್ತುಗಳನ್ನು ಮಾಸ್ಕೋದಲ್ಲಿ ಸೋವಿಯೆತ್ ವಿಜ್ಞಾನ ಅಕಾಡೆಮಿಯ ಜೀವರಸಾಯನ ಶಾಸ್ತ್ರ ಸಂಸ್ಥೆಯಲ್ಲಿಯೂ ಪರೀಕ್ಷಿಸಲಾಗಿದೆ. ರಾಸಾಯನಿಕವಾಗಿ ಈ ವಸ್ತುಗಳು 'ಪಿ' ಅನ್ನಾಂಗವನ್ನು ಹೋಲುತ್ತವೆಯೆಂಬುವನ್ನು ವಿಜ್ಞಾನಿಗಳು ಕಂಡುಹಿಡಿದರು. ಜೈವಿಕವಾಗಿಯೂ ಇವು ಸಕ್ರಿಯವಾಗಿರುತ್ತವೆಯೆಂಬುದನ್ನು ಇಲಿಗಳ ಮೇಲೆ ನಡೆಸಲಾದ ಪ್ರಯೋಗಗಳು ಸ್ಥಿರೀಕರಿಸಿವೆ. ಅಷ್ಟು ಮಾತ್ರವೇ ಅಲ್ಲ, 'ಸಿ' ಅನ್ನಾಂಗದಂತೆಯೇ ಚಹಾ ಕಟೇಟಿನ್ ವಸ್ತುಗಳೂ 'ಸಿ' ಅನ್ನಾಂಗದೊಟ್ಟಿಗೆ ಏಕಕಾಲದಲ್ಲಿಯೇ ಸೇವಿಸಿದಾಗ ಹೆಚ್ಚು ಪರಿಣಾಮಕಾರಿಯಾಗಿರುತ್ತವೆಯೆಂದು ಸಂಶೋಧಕರು ತೀರ್ಮಾನಿಸಿದ್ದಾರೆ. ಚಹಾದಲ್ಲೂ 'ಸಿ' ಅನ್ನಾಂಗವಿದೆ. ಹೊಸ ಚಹಾ ಎಲೆಯಲ್ಲಿ ನಿಂಬೆಹಣ್ಣು ಅಥವಾ ಕಿತ್ತಳೆ ರಸದಲ್ಲಿರುವುದಕ್ಕಿಂತಲೂ ಹೆಚ್ಚು 'ಸಿ' ಅನ್ನಾಂಗವಿರುತ್ತದೆ. 'ಪಿ' ಅನ್ನಾಂಗದ ವಿಷಯದಲ್ಲಿಯಂತೂ (ವಿಶೇಷವಾಗಿ ಹಸುರು ಚಹಾ) ಗಿಡಕ್ಕೆ ವಿಶೇಷ ಸ್ಥಾನವಿದೆ.

ಹೀಗಾಗಿ ಒಂದು ಲೋಟ ಹಾಗೂ ಬಟ್ಟಲಿನ ಚಹಾದಲ್ಲಿರುವ ವಸ್ತುಗಳು ಒಟ್ಟಾಗಿಯೇ ಮಾನವ ಆರೋಗ್ಯಕ್ಕೆ ಹೆಚ್ಚು ಪ್ರಯೋಜನಕಾರಿಯಾಗಿರುತ್ತವೆ. ಆಹಾರದಲ್ಲಿ ನಾಲ್ಕೈದು ಮುಖ್ಯ ವಸ್ತುಗಳು ಮಾತ್ರವೇ ಇವೆಯೆಂದೂ, ಅವುಗಳಲ್ಲಿ ಕ್ಯಾಫೀನ್ ಅತ್ಯಂತ ಮುಖ್ಯವಾದುದೆಂದೂ, ಅದರಿಂದಲೇ ಈ ಪೇಯಕ್ಕೆ ಅದ್ಭುತ ಗುಣ ಬಂದಿದೆಯೆಂದೂ ಈ ಶತಮಾನಾರಂಭದಲ್ಲಿ ಭಾವಿಸಲಾಗಿತ್ತು. ಈಗ ತಿಳಿದುಬಂದಿರುವ ಪ್ರಕಾರ, ಚಹಾದಲ್ಲಿ ಇರುವ ವಸ್ತುಗಳ ಸಂಖ್ಯೆಯು ಸುಮಾರು 130. ಅವುಗಳಲ್ಲಿ ಪ್ರಧಾನವಾದುವುಗಳನ್ನೂ, ಸಹಾಯಕವಾದುವುಗಳನ್ನೂ ಬೇರೆ ಬೇರೆ ವಿಂಗಡಿಸುವುದು ಹೆಚ್ಚು.

ಚಹಾ—ನಿಮ್ಮ ಔಷಧ

ರಕ್ತಚಾಪ, ರಕ್ತನಾಳಗಳ ಜಡ್ಡು ರೋಗ, ಸಂಧಿವಾತ ಮತ್ತು ಯಕೃತ್ತಿನ ಹಳೆಯ ವಾತ– ಈ ರೋಗಗಳ ಮೇಲೆ ಚಹಾದ ಗುಣಪರೀಕ್ಷೆಯನ್ನು ನಡೆಸಬೇಕೆಂದು ನಿರ್ಧರಿಸಲಾಯಿತು. ರೋಗಿಗಳ ವಯಸ್ಸು, ರೋಗದ ಸ್ವರೂಪ, ಹೃದಯದ ಸ್ಥಿತಿ, ಇತ್ಯಾದಿ ವಿಷಯಗಳನ್ನು ಲೆಕ್ಕಕ್ಕೆ ತೆಗೆದುಕೊಂಡು, ವಿಭಿನ್ನ ಪ್ರಮಾಣಗಳ ಚಹಾ ಸೇವನೆಯ ಚಿಕಿತ್ಸೆಗಳನ್ನು ಡಾ. ಎಮ್ಮಲೋಬ್ಲಿಷಿಷ್ವಿಲಿಯವರು ಗೊತ್ತುಪಡಿಸಿದರು. ಆರೋಗ್ಯಕ್ಕೆ ಅಪಾಯವು ಅತ್ಯಂತ ಕಡಿಮೆಯಾಗಿರುವಂತೆಯೂ, ಅತ್ಯಧಿಕ ಪ್ರಮಾಣದ ಸಮಾಚಾರ ಲಭಿಸುವಂತೆಯೂ, ಈ ಚಿಕಿತ್ಸೆಗಳನ್ನು ನಡೆಸಲಾಯಿತು.

ಈ ಚಿಕಿತ್ಸಾ ಪ್ರಯೋಗಕ್ಕಾಗಿ ಹಸುರು ಚಹಾವನ್ನು ಬಳಸಲಾಯಿತು. ಎಲೆಗಳನ್ನು ಬಾಡಿಸಿ ಬೇಗ ಒಣಗಿಸುವುದರಿಂದ ತಯಾರಿಸಲಾಗುವ ಹಸುರು ಚಹಾದಲ್ಲಿ ಅಮೂಲ್ಯ ಗುಣಗಳಿರುತ್ತವೆ. ಕಪ್ಪು ಚಹಾ ತಯಾರಿಸಲು ಎಲೆಗಳನ್ನು ಜಜ್ಜಿ ಒಣಗಿಸುವುದರಿಂದ ಅವು ಹೆಚ್ಚು ಹೆಚ್ಚಾಗಿ ಕಪ್ಪಾಗುತ್ತವೆ ಮತ್ತು ಬಂಧಕತೆಯನ್ನು ಕಳೆದುಕೊಳ್ಳುತ್ತವೆ. ಚಿಕಿತ್ಸಾ ಗುಣಾಂಶ ಪರೀಕ್ಷೆಗಾಗಿ ರೋಗಿಗಳಿಗೆ (ಅವರ ಸಮ್ಮತಿ ಪಡೆದು) ಬೇರಾವ ಔಷಧವನ್ನೂ ನೀಡದೆ ತಾತ್ಕಾಲಿಕವಾಗಿ, ಚಹಾ ಚಿಕಿತ್ಸೆಯನ್ನೇ ನಡೆಸಲಾಯಿತು. ಕೆಲವರಿಗೆ 'ಅದ್ಭುತ ಪೇಯ'ದಲ್ಲಿ ಉಂಟಾದ ಸ್ವಂತ ಭಾವಸ್ಫುರಣೆಯ ಭರವಸೆಯಿಂದಷ್ಟೇ ಗುಣದ ಮಾನಸಿಕ ಪರಿಣಾಮವುಂಟಾಗಬಹುದು ಅದುದರಿಂದಲೇ ಕೆಲವರಿಗೆ ಅವರಿಗರಿವಾಗದಂತೆಯೇ ಅದೇ ಬಣ್ಣದ ರುಚಿಯ ನಿರರ್ಥಕ, ನಿರಪಾಯಕರ ಪೇಯವನ್ನೂ ಪರೀಕ್ಷಾರ್ಥವಾಗಿ ನೀಡಲಾಯಿತು.

ನೂರಾರು ಮಂದಿ ರೋಗಿಗಳಿಗೆ ಚಹಾ ಚಿಕಿತ್ಸೆ ನಡೆಯಿತು. ಅದರಿಂದ ದೊರೆತ ಪರಿಣಾಮಗಳು ಉಭಯತ ರೋಗಿಗಳನ್ನೂ ಮತ್ತು ಚಿಕಿತ್ಸಕರನ್ನೂ ಬೆರಗುಗೊಳಿಸಿದುವು. ಸಂಧಿವಾತದ ರೋಗಿಗಳಲ್ಲಿಯೂ, ಯಕೃತ್ತಿನ ಹಳೆಯ ಉರಿಯೂತಗಳಲ್ಲಿಯೂ ಚಹಾದಿಂದ ಉಪಶಮನವು ಕಂಡುಬಂದಿತು. ರಕ್ತನಾಳಗಳ ಮೇಲ್ಪದರದ ಸ್ಥಿತಿಸ್ಥಾಪಕಶಕ್ತಿಯೂ ಹೆಚ್ಚಾಯಿತು. ಇದು ರಕ್ತನಾಳದ ಜಡ್ಡುರೋಗದ ಮತ್ತು ಹೆಚ್ಚು ರಕ್ತ ಒತ್ತಡ ರೋಗದ ಚಿಕಿತ್ಸೆಗೆ ಮಹತ್ವದ ವಿಷಯ. ಅಷ್ಟು ಮಾತ್ರವೇ ಅಲ್ಲದೆ, ಮಿದುಳಿನ ರಕ್ತಸ್ರಾವ ಮತ್ತು ಹೃದಯದ ಸ್ನಾಯುವಿಗೆ ರಕ್ತಪರಿಚಲನೆ ನಿಂತ ಕಾರಣ ಉಂಟಾದ ಕ್ಷೀಣ ಸ್ಥಿತಿ ಮುಂತಾದ ಗಂಭೀರ ಜಟಿಲ ಪರಿಸ್ಥಿತಿಗಳನ್ನು ತಪ್ಪಿಸುವುದಕ್ಕೂ ಇದರ ವಿಶೇಷ ಮಹತ್ವವಿದೆ. ಕೆಲವು ಸಂದರ್ಭಗಳಲ್ಲಿ ಕೇವಲ ಐದೇ ದಿನಗಳಲ್ಲಿ ರಕ್ತದ ಒತ್ತಡವು ಸಹಜಸ್ಥಿತಿಗೆ ಬಂದುದೂ ಕಂಡುಬಂದಿದೆ. ಚಹಾ ಪೇಯದ ವಿರುದ್ಧವಾಗಿ ರಕ್ತಚಾಪ ರೋಗಿಗಳಿಗಿರುವ ವಿರೋಧ ಭಾವನೆಗೆ ಯಾವ ಆಧಾರವೂ ಇಲ್ಲ. ಈ ಚಿಕಿತ್ಸೆಗೊಳಗಾದವರಲ್ಲಿ ಕ್ರಮಬದ್ಧವಾಗಿ ಚಹಾ ಸೇವಿಸುವ ಅಭ್ಯಾಸವಿದ್ದವರ ಸಂಖ್ಯೆ ತೀರಾ ಕಡಿಮೆಯಾಗಿತ್ತೆಂಬ ಅಂಶವೂ ಇಲ್ಲಿ ಉಲ್ಲೇಖನೀಯ.

ಜಾರ್ಜಿಯದಲ್ಲಿ ಚಹಾ ವ್ಯಾಪಕ ಪ್ರಮಾಣದಲ್ಲಿ ಬೆಳೆಯುತ್ತದೆಯಾದರೂ ಅಲ್ಲಿನವರು ಚಹಾ ಸೇವಿಸುವುದೇ ಅಪರೂಪ. ಅಲ್ಲಿನ ಜನರಿಗೆ ದ್ರಾಕ್ಷಾರಸದ ಕಡೆಗೇ ಹೆಚ್ಚು ಒಲವು. "ಅಭ್ಯಾಸವೇ ಎರಡನೆಯ ಪ್ರಕೃತಿ"ಯೆಂಬ ಅಭಿಪ್ರಾಯವೇ ಇದಕ್ಕೆ ಕಾರಣವೆಂದು ನೀವು ಹೇಳಬಹುದು. ಇಲ್ಲಿ ಮಾನವ ಸ್ವಭಾವಕ್ಕಿಂತಲೂ, ಪರಿಸರದ ಸ್ವರೂಪ ಮತ್ತು ಭೂಗುಣದ ಭೂ-ರಾಸಾಯನಿಕ ಲಕ್ಷಣಗಳು ಮಾನವ ಶರೀರ ವಿಜ್ಞಾನದ ಮೇಲೆ ವಿಶೇಷ ಪ್ರಭಾವವನ್ನು ಬೀರುತ್ತವೆ. ಮಧ್ಯ ಏಶಿಯದ ಜನರು ಹೆಚ್ಚಾಗಿ ಚಹಾ ಏಕೆ ಸೇವಿಸುತ್ತಾರೆ? ಅಲ್ಲಿ ಬೆಳೆಯುವ ಹಣ್ಣು ತರಕಾರಿಗಳಲ್ಲಿ, ಕಾಕಾಶಿಯ ಅಥವಾ ಮಧ್ಯಪಶ್ಚಿಮದ ಹಣ್ಣು ತರಕಾರಿಗಳಲ್ಲಿರುವುದಕ್ಕಿಂತಲೂ ಶೇಕಡ ೨೦–೩೦ ರಷ್ಟು ಕಡಮೆ ಪ್ರಮಾಣದಲ್ಲಿ 'ಪಿ' ಮತ್ತು 'ಸಿ' ಅನ್ನಾಂಗಗಳಿರುತ್ತವೆಯೆಂಬುದೇ ಅದಕ್ಕೆ ಕಾರಣ. ಮಧ್ಯ ಏಶಿಯದ ಹಸುಗಳು ನೀಡುವ ಹಾಲಿನಲ್ಲಿಯೂ ಸಹ 'ಸಿ' ಅನ್ನಾಂಗವು ಕಡಮೆ ಪ್ರಮಾಣದಲ್ಲಿರುತ್ತದೆ. ದೇಹದಲ್ಲಿ 'ಸಿ' ಅನ್ನಾಂಗದ ಸಂಗ್ರಹಕ್ಕೂ, ಆಹಾರ ಹೆಚ್ಚು ಚೆನ್ನಾಗಿ ಜೀರ್ಣವಾಗುವುದಕ್ಕೂ, ಚಹಾ ಸಹಾಯಕವಾಗುತ್ತದೆ. ಪರಂಪರೆಗೂ ಇದೇ ಕಾರಣ...." ಎಂದು ಎಂಗಲೋಬ್ಲಿಷ್ವಿಲಿಯವರು ವಿವರಿಸಿದರು. ಜಗತ್ತನ್ನು 'ಚಹಾ', 'ಕಾಫಿ' ಮತ್ತು 'ದ್ರಾಕ್ಷಾರಸ' ವಲಯಗಳೆಂದು ವಿಭಜಿಸುವುದರಿಂದ, ನಿರ್ದಿಷ್ಟ ಭೌತಿಕ ಪರಿಸ್ಥಿತಿಗಳಲ್ಲಿ ಪ್ರತಿಯೊಂದು ಪೇಯದ ಪ್ರಯೋಜನಗಳನ್ನು ಪರಿಶೀಲಿಸುವುದಕ್ಕೆ ವಿಜ್ಞಾನಿಗಳಿಗೆ ಸಹಾಯಕವಾಗುವುದು.

ಔಷಧದ ಪೆಟ್ಟಿಗೆಗೆ ಬದಲಾಗಿ 'ಸಮೋವರ್'

ಸಾಂಕ್ರಾಮಿಕ ರೋಗಗಳ ವ್ಯಾಪಕತೆಯ ಪರಿಶೀಲನೆಯ ಕಾರ್ಯವನ್ನು ತುರ್ಕ್‌ಮೇನಿಯದಲ್ಲಿ ಡಾ. ಸಬೆದೀರ್ಯೆವ್ ಅವರು ನಡೆಸಿದರು. ಚಹಾ ಹೆಚ್ಚು ಜನಪ್ರಿಯವಾಗಿರುವ ಈ ಪ್ರದೇಶದಲ್ಲಿ ಆಮಶಂಕೆಯು ಅಪರೂಪ. ಈ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಗಣರಾಜ್ಯದ ರಾಜಧಾನಿಯಾದ ಅಸ್ಟ್ರಾಬಾದಿನಲ್ಲಿ ಸಾಂಕ್ರಾಮಿಕ ರೋಗವಿಜ್ಞಾನ ಸಂಸ್ಥೆಯಲ್ಲಿಯೂ ಮಾಸ್ಕೋದ ಬೋಟ್ಕಿನ್ ಆಸ್ಪತ್ರೆಯಲ್ಲಿಯೂ ನಡೆಸಲಾದ ಚಿಕಿತ್ಸಾ ಪ್ರಯೋಗಗಳ ಪರಿಣಾಮವಾಗಿ, ಆಮಶಂಕೆಯ ಚಿಕಿತ್ಸೆಗೆ 'ಆಂಟಿಬಯೋಟಿಕ್' ಔಷಧಗಳಿಗಿಂತಲೂ ಚಹಾ ಹೆಚ್ಚು ಉಪಯುಕ್ತವೆಂದು ಕಂಡುಬಂದಿದೆ. ಅದು ತೀರಾ ನಿರಪಾಯಕರವಾದುದೂ ಹೆಚ್ಚು ಪರಿಣಾಮಕಾರಿಯಾದುದೂ ಆಗಿದೆ. ಹಸುರು ಚಹಾದಲ್ಲಿ ಅಧಿಕ ಏಕಾಣು ವಿನಾಶಕ ಗುಣವಿರುತ್ತದೆಯೆಂದೂ ವ್ಯಕ್ತಪಟ್ಟಿದೆ. ಚಿಕಿತ್ಸೆಯ ಕೆಲವೇ ದಿನಗಳ ತರುವಾಯ ಈ ರೋಗದ ಕೀಟಾಣುಗಳು ಮಾಯವಾಗಿ, 10 ದಿನಗಳಲ್ಲಿ ಸಂಪೂರ್ಣ ಗುಣ ಕಂಡುಬಂದಿದೆ. ಆರು ತಿಂಗಳ ತರುವಾಯ ವೈದ್ಯಕೀಯ ತನಿಖೆ ನಡೆದಾಗಲೂ ಈ ಜೀವಾಣುಗಳ ಅವಶೇಷಗಳೇನೂ ಕಂಡುಬರಲಿಲ್ಲ. ರಾಸಾಯನಿಕ ಔಷಧ ಸೇವನೆ ಮಾಡಿದವರಲ್ಲಿ ಎಷ್ಟೋ ಸಲ ಅವು ಹಾಗೆ ಕಂಡುಬರುತ್ತವೆ.

ಹೊಟ್ಟೆಯ ಮತ್ತು ಕರುಳಿನ ಉಗ್ರವಾದ ರೋಗಗಳಲ್ಲೂ, ಮಿದುಳಿನ ರಕ್ತಸ್ರಾವ ಹಾಗೂ ವೃದ್ಧಾಪ್ಯದಲ್ಲಿ ಲೋಮನಾಳಗಳ ಸೂಕ್ಷ್ಮ ಸ್ಥಿತಿಯಲ್ಲೂ ಚಿಕಿತ್ಸೆಗಾಗಿ ಹಸುರು ಚಹಾ ಗಟ್ಟಿ ಕಷಾಯವನ್ನು ಯಶಸ್ವಿಯಾಗಿ ಬಳಸಲಾಗಿದೆ. ಮೂತ್ರಕೋಶದಲ್ಲಿಯೂ, ಯಕೃತ್ತಿನಲ್ಲಿಯೂ ಮೂತ್ರ ಜನಕಾಂಗಗಳಲ್ಲಿಯೂ ಕಲ್ಲುಗಳು ರೂಪುಗೊಂಡಿರುವುದನ್ನು ತಪ್ಪಿಸುವುದಕ್ಕೆ ಚಹಾ ಉತ್ತಮ ಔಷಧವಾಗಿದೆ. ಉದಾಹರಣೆಗೆ ಹೇಳುವುದಾದರೆ, ಕ್ರಮಬದ್ಧವಾಗಿ ಹಸುರು ಚಹಾ ಸೇವಿಸುತ್ತಿರುವ ಚೀಣೀ ಜನರಿಗೆ ಇಂತಹ ರೋಗಗಳು ಬರುತ್ತಿಲ್ಲ. ಚಹಾ ಪೇಯವು ಕಾಫಿಯಂತಹುದಲ್ಲ. ಇದು ಚರ್ಮದ ಪ್ರಕ್ರಿಯೆಗೆ ಉತ್ತೇಜನವನ್ನು ನೀಡುತ್ತದೆ. ಬೆವರನ್ನು ಅಧಿಕ ಪ್ರಮಾಣದಲ್ಲಿ ಹೊರತಂದು ಚರ್ಮದ ರಂಧ್ರಗಳನ್ನು ಚೊಕ್ಕಟಗೊಳಿಸುತ್ತದೆ. ಅದರಲ್ಲಿ ಅಡಕವಾಗಿರುವ 'ಬಿ2' 'ಬಿ' ಮತ್ತು 'ಕೆ' ಅನ್ನಾಂಗಗಳು ಚರ್ಮದಲ್ಲಿ ಹೆಚ್ಚು ಸ್ಥಿತಿಸ್ಥಾಪಕ ಶಕ್ತಿಯನ್ನು ಉಂಟು ಮಾಡುತ್ತವೆ. ಚರ್ಮಕ್ಕೆ ಉತ್ತಮ ಬಣ್ಣವನ್ನೂ ಮತ್ತು ದೃಢತೆಯನ್ನೂ ನೀಡುತ್ತವೆ. ಅವು ಚರ್ಮದ ಕೆಳಕಡೆ ಮಚ್ಚೆಗಳು ರೂಪುಗೊಳ್ಳುವುದನ್ನು ತಪ್ಪಿಸುತ್ತವೆ.

ಚಹಾಪೇಯದ ವಿಸ್ಮಯಕಾರಕ ಗುಣಗಳ ಪಟ್ಟಿಯು ಇನ್ನೂ ಉದ್ದವಾಗಿದೆ. ಈ ಆರೋಗ್ಯಕರವಾದ ಪೇಯವು ಕೆಲವು ವಿಕಾಸಶೀಲ ದೇಶಗಳಿಗೆ–ತರಬೇತು ಪಡೆದ ವೈದ್ಯಕೀಯ ಸಿಬ್ಬಂದಿ ಮತ್ತು ಔಷಧಗಳ ಕೊರತೆಗಳಿರುವ ಈ ದೇಶಗಳಿಗೆ–ವಿಶೇಷ ಆಸಕ್ತಿಯದಾಗಿರಲೇಬೇಕು. 'ಯಾವಾಗಲೂ ಚಹಾ ಪೊಟ್ಟಣ ಇದ್ದೇ ಇರಲಿ' ಎಂಬ ಘೋಷಣೆಯು ಎಲ್ಲ ದೇಶಗಳಲ್ಲಿಯೂ ಅವಶ್ಯಕವಾದುದು. ಚಹಾದಿಂದ "ದೇಹದಲ್ಲಿ ತಾಜಾತನವುಂಟಾಗುತ್ತದೆ. ಹೃದಯ ಮೃದುವಾಗುತ್ತದೆ. ಆಲೋಚನೆಗೆ ಉತ್ತೇಜನವುಂಟಾಗುತ್ತದೆ ಮತ್ತು ಚೇತನವು ಬೆಳೆಯುತ್ತದೆ" ಎಂದು ಪುರಾತನ ಪಾಂಡುಲಿಪಿಗಳಲ್ಲಿ ಬರೆದಿಟ್ಟಿರುವುದೂ ಕಂಡುಬಂದಿದೆ. ನಮ್ಮ ಪೂರ್ವಜರು ಅದನ್ನು ಆರೋಗ್ಯವರ್ಧಕವೆಂದು ಭಾವಿಸಿದ್ದುದು ಸರಿಯೆಂದು ಇತ್ತೀಚಿನ ಸಂಶೋಧನೆ ವ್ಯಕ್ತಪಡಿಸುತ್ತದೆ. ಪ್ರಾಚ್ಯಖಂಡದ ಅನೇಕ ಕೃತಿಗಳಲ್ಲಿ ಅಲಂಕಾರಿಕ ಭಾಷೆಯಲ್ಲಿ ಅನೇಕ ಸಂದರ್ಭಗಳಲ್ಲಿ ಪ್ರಶಂಸಿಸಲಾಗಿರುವ ಈ ಚಹಾ ಪೇಯಕ್ಕೆ ಪ್ರಾಯಶಃ ಇನ್ನೂ ಹೆಚ್ಚು ಮನ್ನಣೆಯನ್ನು ಪಡೆಯುವ ಯೋಗ್ಯತೆ ಇದೆ. ●●

ಕೃಷಿ ಕ್ರಾಂತಿಯಿಂದ ನವಯುಗದ ನಾಂದಿ

ಭಾರತ ಸ್ವಾತಂತ್ರ್ಯ ಗಳಿಸಿದಾಗ ಕೃಷಿ ಆರ್ಥಿಕ ವ್ಯವಸ್ಥೆ ಸುಭದ್ರವಾಗಿರಲಿಲ್ಲ. ಆ ಕಾಲದಲ್ಲಿ ನಿರಂತರವಾದ ಭೀಕರ ಕ್ಷಾಮದ ಪರಂಪರೆಯಿದ್ದಿತು. 1770ರಲ್ಲಿ ಬಂಗಾಳದಲ್ಲಿ ಸಂಭವಿಸಿದ ಕ್ಷಾಮ ಪರಿಸ್ಥಿತಿಯಲ್ಲಿ ಒಂದು ಕೋಟಿ ಜನರು ಮರಣ ಹೊಂದಿದರು. 1877ರಲ್ಲಿ ನಡೆದ ಕ್ಷಾಮದಿಂದ 40 ಲಕ್ಷ ಜನ ಸತ್ತರು. ಸ್ವಾತಂತ್ರ್ಯೋದಯಕ್ಕೆ ನಾಲ್ಕು ವರ್ಷಗಳ ಮುಂಚೆ 1943ರಲ್ಲಿ ಬಂಗಾಳದ ಕ್ಷಾಮದಿಂದ 30 ಲಕ್ಷ ಜನ ಮಡಿದರು.

1967ರಲ್ಲಿ ಎಂಟು ರಾಜ್ಯಗಳಲ್ಲಿ ತೀವ್ರ ಬರಗಾಲ ಬಂದಾಗ ಭೀಕರ ಕ್ಷಾಮ ಸಂಭವಿಸಬಹುದೆಂಬ ಭೀತಿಯಿದ್ದಿತು. ಆದರೆ ಕೆಲವು ಕಾಲಾನಂತರ ವಿಶ್ವದ ಪತ್ರಿಕೆಗಳು ಈ ಸ್ಥಿತಿಯನ್ನು 'ಸಂಭವಿಸದಿದ್ದ ಕ್ಷಾಮ' ವೆಂದು ವರ್ಣಿಸಿದುವು. ಬರಗಾಲದಲ್ಲಿ ಹೆಚ್ಚಿನ ಉತ್ಪಾದನೆ ಮತ್ತು ನಿಯೋಜಿತ ಹಂಚಿಕೆಯಿಂದಾಗಿ ಸಂಭವಿಸಬಹುದಾಗಿದ್ದ ದುರಂತವನ್ನು ಯಶಸ್ವಿಯಾಗಿ ಪರಿಹರಿಸಲಾಯಿತು.

1949–50ರಲ್ಲಿ ದೇಶದಲ್ಲಿ 5. 40 ಕೋಟಿ ಟನ್ ಆಹಾರಧಾನ್ಯದ ಉತ್ಪಾದನೆಯಿದ್ದಿತು. ಇದು 1969–70ರಲ್ಲಿ 9. 95 ಕೋಟಿ ಟನ್‌ಗಳಿಗೆ ಏರಿತು. ಇದೇ ಅವಧಿಯಲ್ಲಿ ಆಹಾರಧಾನ್ಯ ಬೆಳೆಯ ಪ್ರದೇಶ 9 9 ಕೋಟಿ ಹೆಕ್ಟೇರ ಪ್ರದೇಶದಿಂದ 12. 3 ಕೋಟಿ ಹೆಕ್ಟೇರ್‌ಗೆ ವಿಸ್ತರಿಸಿತು. ಒಂದು ಹೆಕ್ಟೇರ್ ಪ್ರದೇಶದಲ್ಲಿ ತೆಗೆಯುವ ಬೆಳೆಯ ಪ್ರಮಾಣ 553 ಕಿಲೋ ಗ್ರಾಂನಿಂದ 805 ಕಿಲೋಗ್ರಾಂ ಹೆಚ್ಚಿತು.

ಪ್ರಮುಖ ಸಾಧನೆ

ಅಧಿಕ ಇಳುವರಿ ಬೀಜಗಳ ಬಳಕೆ, ವೈಜ್ಞಾನಿಕ ನೀರಾವರಿ ವಿಧಾನ, ಗೊಬ್ಬರ ಬಳಕೆ, ಕೀಟ ನಿಯಂತ್ರಣ, ವಿವಿಧ ಬೆಳೆ, ಯಾಂತ್ರಿಕ ಕೃಷಿ ವಿಧಾನ ಮತ್ತು ಈ ಕ್ರಮ ಕೈಗೊಳ್ಳಲು ಸಾಲ ವಿಸ್ತರಣೆ ಸೌಲಭ್ಯಗಳಿಂದ ಆಹಾರ ಉತ್ಪಾದನೆಯಲ್ಲಿ ಏರಿಕೆಯಾಗಿದೆ. ಇಂತಹ ಸತತ ಕ್ರಮಗಳಿಂದ ಭಾರತದ ಹಸಿರು ಕ್ರಾಂತಿ ಸಫಲವಾಗಿದೆ. 'ಈ ಹಸಿರು ಕ್ರಾಂತಿ ದೇಶದ ಇತರ ಕ್ಷೇತ್ರಗಳ ಸಾಧನೆಯಂತೆಯೇ ಮಾನವಕೋಟಿಗೂ ಪ್ರಮುಖ ಸಾಧನೆಯಾಗಿದೆ' ಎಂದು ವಿಶ್ವದ ಪತ್ರಿಕೆಗಳು ಹೊಗಳಿವೆ.

ಪ್ರಥಮ ಹಂತದಲ್ಲಿ ವಿದೇಶಗಳಿಂದ ಅಧಿಕ ಇಳುವರಿ ಬೀಜಗಳನ್ನು ಆಮದು ಮಾಡಿಕೊಳ್ಳಲಾಯಿತು. ದೇಶದ ವಿವಿಧ ಹವಾಮಾನ ಪರಿಸ್ಥಿತಿಗಳಿಗೆ ಅನುಗುಣವಾಗುವಂತಹ ವಿವಿಧ ಬಿತ್ತನೆ ಬೀಜಗಳ ಬಳಕೆಯಲ್ಲಿ ಭಾರತದ ಕೃಷಿ ವಿಜ್ಞಾನಿಗಳು ಸ್ಮರಣೀಯ ಪಾತ್ರ ವಹಿಸಿದ್ದಾರೆ.

ಇಂದು ಪಂಜಾಬಿನ ಕೆಲವು ಜಿಲ್ಲೆಗಳಲ್ಲಾಗಿರುವ ಗೋಧಿಯ ಉತ್ಪಾದನೆಯು ವಿಶ್ವದ ಅತ್ಯಧಿಕ ಗೋಧಿ ಬೆಳೆ ತೆಗೆಯುವ ಪ್ರದೇಶಗಳು ಸ್ಥಾಪಿಸಿರುವ ದಾಖಲೆಗಳಿಗೆ ಸಮನಾಗಿದೆ. ಅಕ್ಕಿ ಉತ್ಪಾದನೆಯು ಗೋಧಿಗಿಂತ ಹಿಂದುಳಿದಿತ್ತು. ಆದರೆ ಇಂದು ದೇಶದಾದ್ಯಂತ ವಿವಿಧ ಹವಾ ಪರಿಸ್ಥಿತಿಗಳಿಗೆ ಅನುಗುಣವಾದ ಎಂಟು ಹೊಸ ಭತ್ತದ ತಳಿಗಳನ್ನು ರೂಪಿಸಲಾಗಿದೆ.

1966–67ರಲ್ಲಿ ಪ್ರಪ್ರಥಮವಾಗಿ ವ್ಯಾಪಕ ಮಟ್ಟದಲ್ಲಿ ಅಧಿಕ ಇಳುವರಿ ಬೀಜಗಳ ಬಿತ್ತನೆ ಆರಂಭಿಸಲಾಯಿತು. 1966–67ರಲ್ಲಿ 19 ಲಕ್ಷ ಹೆಕ್ಟೇರ ಪ್ರದೇಶದಲ್ಲಿ ಅಧಿಕ ಇಳುವರಿ ಬೀಜ ಬಿತ್ತನೆಯಾಗಿದ್ದರೆ, 1969–70ರಲ್ಲಿ 1·10 ಕೋಟಿ ಹೆಕ್ಟೇರ ಪ್ರದೇಶದಲ್ಲಿ ಅಧಿಕ ಇಳುವರಿ ಬೆಳೆ ತೆಗೆಯಲಾಯಿತು. 1973–74ನೇ ಸಾಲಿನಲ್ಲಿ 2.5 ಕೋಟಿ ಹೆಕ್ಟೇರ ಪ್ರದೇಶದಲ್ಲಿ ಅಧಿಕ ಇಳುವರಿ ಬೆಳೆ ತೆಗೆಯುವ ಗುರಿಯಿದೆ.

ಮಿಶ್ರಬೆಳೆ

1950–51ರಲ್ಲಿ 1. 29ಕೋಟಿ ಹೆಕ್ಟೇರ ಪ್ರದೇಶದಲ್ಲಿ ಸಣ್ಣ ನೀರಾವರಿ ಕಾರ್ಯ ಕೈಗೊಳ್ಳಲಾಯಿತು. ಇದು 1968–69ರಲ್ಲಿ 1. 9 ಕೋಟಿ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಣಗೊಂಡಿತು. ಭೂಗರ್ಭ ಜಲವನ್ನು ವೈಜ್ಞಾನಿಕವಾಗಿ ಬಳಸಿಕೊಳ್ಳಲೆಂದು ಕೇಂದ್ರ ಸರ್ಕಾರವು ಮಂಡಲಿಯೊಂದನ್ನು ಸ್ಥಾಪಿಸಿದೆ. ಈಗ ಭೂಗರ್ಭ ಜಲ ಬಳಕೆಯ ಯೋಜನೆಯನ್ನು ಮೂರು ರಾಜ್ಯಗಳಲ್ಲಿ ಆರಂಭಿಸಲಾಗಿದೆ. ಇನ್ನೊಂದು ವರ್ಷದಲ್ಲಿ ಇನ್ನೂ ನಾಲ್ಕು ರಾಜ್ಯಗಳಿಗೆ ವಿಸ್ತರಿಸಿ ಮುಂದಿನ ಎರಡು ಮೂರು ವರ್ಷಗಳಲ್ಲಿ ಹನ್ನೊಂದು ರಾಜ್ಯಗಳಲ್ಲಿ ಆರಂಭಿಸಲಾಗುತ್ತದೆ.

ಅಧಿಕ ಇಳುವರಿ ಬೆಳೆಗಳಿಗೆ ಹೆಚ್ಚು ಪ್ರಮಾಣದ ಗೊಬ್ಬರ ಅಗತ್ಯವಾಗುತ್ತದೆ. ಈ ದಿಸೆಯಲ್ಲಿ ಕೈಗೊಂಡ ರಾಷ್ಟ್ರವ್ಯಾಪಿ ಯೋಜನೆಯ ಫಲವಾಗಿ 1968–69ರಲ್ಲಿ 18 ಲಕ್ಷ ಟನ್ ಗೊಬ್ಬರ ಉಪಯೋಗಿಸಲಾಯಿತು. ಬಳಕೆ ಪ್ರಮಾಣವನ್ನು 1973–74ನೇ ಸಾಲಿನಲ್ಲಿ 55 ಲಕ್ಷ ಟನ್‌ಗಳಿಗೇರಿಸುವ ಗುರಿಯಿದೆ.

ಕೀಟನಾಶಕ ಕೈಗಾರಿಕೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡಿ, ಮೂಲ ರಾಸಾಯನಿಕಗಳ ಆಮದನ್ನು ಸಡಿಲಗೊಳಿಸಿ ಸಸ್ಯ ರಕ್ಷಣಾ ರಾಸಾಯನಿಕಗಳ ತಯಾರಿಕೆಯಲ್ಲಿ ಸ್ವಯಂಪೂರ್ಣತೆ ಸಾಧಿಸಲಾಗಿದೆ. ಸಸ್ಯ ರಕ್ಷಣಾ ವಿಧಾನದಿಂದ 1965–66ರಲ್ಲಿ 1. 86ಕೋಟಿ ಹೆಕ್ಟೇರ್ ಪ್ರದೇಶ ಸೌಲಭ್ಯ ಪಡೆದಿತ್ತು. ಇದು 196 –69ರಲ್ಲಿ 4ಕೋಟಿ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸಿತು. ಚತುರ್ಥ ಯೋಜನೆಯಲ್ಲಿ 8 ಕೋಟಿ ಹೆಕ್ಟೇರ ಪ್ರದೇಶವು ಈ ಸೌಲಭ್ಯ ಪಡೆಯುವ ನಿರೀಕ್ಷೆಯಿದೆ.

ದೇಶದಾದ್ಯಂತ ಸಂಪೂರ್ಣವಾಗಿ ಹೊಸ ಬೀಜಗಳ ಬಳಕೆ ಆರಂಭವಾದ ನಂತರ ಮಿಶ್ರಬೆಳೆ ತೆಗೆಯುವುದರಿಂದ ಉತ್ಪಾದನೆ ಹೆಚ್ಚಿಸಬಹುದು. 1969–70ರಲ್ಲಿ 1 75 ಕೋಟಿ ಹೆಕ್ಟೇರ ಪ್ರದೇಶದಲ್ಲಿ ಮಿಶ್ರ ಬೆಳೆ ತೆಗೆಯಲಾಯಿತು. 1970—71ರಲ್ಲಿ ಇನ್ನೂ 96ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಿಶ್ರಬೆಳೆ ತೆಗೆಯುವ ನಿರೀಕ್ಷೆಯಿದೆ.

ಯಾಂತ್ರಿಕ ಕೃಷಿ ವಿಧಾನ

ಇಂದು ಭಾರತೀಯ ಬೇಸಾಯಗಾರ ಯಾಂತ್ರಿಕ ಕೃಷಿ ಆರಂಭಿಸಿದ್ದಾನೆ. ಎಲ್ಲಾ ರಾಜ್ಯಗಳಲ್ಲೂ ಕೃಷಿ–ಕೈಗಾರಿಕಾ ಕಾರ್ಪೋರೇಷನ್‌ಗಳನ್ನು ಸ್ಥಾಪಿಸಲಾಗಿದೆ. ಕೃಷಿ ಕಾರ್ಯಕ್ಕೆ ಬಂಡವಾಳ ನೀಡುವುದರಲ್ಲಿ ಸಾಂಪ್ರದಾಯಿಕ ಆರ್ಥಿಕ ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತವೆ.

1973–74ನೇ ಸಾಲಿನ ವೇಳೆಗೆ ಕೃಷಿ ಸಾಲ ನೀಡಿಕೆ ಸಂಘಗಳು 690 ಕೋಟಿ ರೂಪಾಯಿಯನ್ನು ಅಲ್ಪಾವಧಿ ಸಾಲವಾಗಿಯೂ, 90 ಕೋಟಿ ರೂಪಾಯಿಯನ್ನು

(ಒಂಭತ್ತನೇ ಪುಟ ನೋಡಿರಿ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ–

ಹೊಟೇಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಇದು ನಮ್ಮ ಭಾರತ—

ವಿಭಜನೆ ನಮ್ಮ ಸಂಸ್ಕೃತಿಯಲ್ಲ

ಚಂಡಿಗಡವನ್ನು ಪ್ರಧಾನಿ ಇಂದಿರಾ ಗಾಂಧಿಯವರು ಪಂಜಾಬಕ್ಕೆ ಕೊಟ್ಟುಬಿಟ್ಟರು. ಆ ಬಳಿಕ ಕೆಲವು ದಿನಗಳ ವರೆಗೆ ಪಂಜಾಬಿ ಹರಿಯಾಣಿಗಳ ನಡುವೆ ಒಂದು ಬಗೆಯ ಹೋರಾಟವೇ ಆರಂಭವಾಯ್ತು. ಇದು ಮಾನಸಿಕತೆಯನ್ನು ಮುರಿದು ಹಿಂಸಕ ರೂಪವನ್ನೂ ಹೊಂದಿತು. ಪಂಜಾಬಿ ಅಂಗಡಿಕಾರನೊಬ್ಬನ ಮೇಲೆ ಹರಿಯಾಣಿಗಳು ಆಕ್ರಮಣ ಮಾಡಿದರು. ಪೋಲೀಸರ ಆಗಮನದಿಂದ ಅವನ ಜೀವವುಳಿಯಿತು. ಅಂಗಡಿ ಲೂಟಿಯಾಗುವುದು ತಪ್ಪಿತು. (ಹರಿಯಾಣದ) ಜಾಟರ ವರ್ತನೆಯಿಂದ ನೊಂದ ಪಂಜಾಬಿ ಅಂಗಡಿಕಾರ ಅವರ ಬಗ್ಗೆ ಕಹಿ ಭಾವನೆಯಿಟ್ಟುಕೊಳ್ಳುವುದು ಸಹಜವೆನಿಸಿತು.

ಅಂಗಡಿಕಾರ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದ. ಅಂಗಡಿ ವ್ಯವಹಾರವನ್ನವನ ಮಗ ನೋಡಿಕೊಳ್ಳತೊಡಗಿದ.

ಒಂದು ದಿನ—

ಒಬ್ಬ ಜಾಟ ಬಂದು ಮಗನನ್ನು ಪ್ರಶ್ನಿಸಿದ—"ತಮ್ಮಾ, ಲಾಲಾ ಎಲ್ಲಿದ್ದಾರೆ?"

"ತಾವಾರು? ಅದೇನು ಕೆಲಸ?'

ಅಂಗಡಿಕಾರನ ಮಗ ಸಹಜವಾಗೇ ಪ್ರಶ್ನಿಸಿದ.

'ನಾನೊಬ್ಬ ಜಾಟ. ನನಗೆ ಅವರಲ್ಲಿ ಖಾಸಗಿ ಕೆಲಸವಿದೆ.'

ಜಾಟನೆಂಬ ಶಬ್ದ ಕೇಳುತ್ತಲೇ ಆ ಎಳೆಯನ ರಕ್ತ ಕುದಿಯತೊಡಗಿತು. 'ನಿನ್ನಂತಹ ಕಾಡು ಮನುಷ್ಯರು ನನ್ನ ತಂದೆಯ ಭೇಟಿ ಮಾಡ ಬಾರದು. ಅವರು ಪ್ರಾಣಾಂತಿಕ ಗಾಯಗೊಂಡು ಆಸ್ಪತ್ರೆಯಲ್ಲಿದ್ದಾರೆ.' ಹುಡುಗ ಒಂದೇ ಉಸಿರಿನಲ್ಲಿ ಹೇಳಿದ.

ಜಾಟ ದುಃಖಿತನಾದಂತೆ ಅನಿಸಿತು. ಆತ ಬಹುವಾಗಿ ಹೇಳಿದ; ಕಳಕಳಿಯಿಂದ ಯಾವ ಆಸ್ಪತ್ರೆಯೆಂದು ಪ್ರಶ್ನಿಸಿದ, ಉತ್ತರ ನೀಡುವಂತೆ ಹಲವು ಬಾರಿ ಪ್ರಾರ್ಥಿಸಿದ. ಕೊನೆಗೂ ಹುಡುಗ ಸೋತು ಆಸ್ಪತ್ರೆಯ ಹೆಸರು ತಿಳಿಸಿದ.

ರಾತ್ರೆ ಹೊತ್ತು ಮಗನು ಆಸ್ಪತ್ರೆಗೆ ಹೋದ. ತಂದೆಗೆ ಕೇಳಿದ. 'ಇಲ್ಲಿ ಬಂದ ಆ ಜಾಟನಾರು? ಏಕೆ ಬಂದಿದ್ದ ಅನಾಗರಿಕ?'

ಮಗನ ಮನೋದೆಸೆಯರಿತ ಗಾಯಾಳು ತಂದೆ ಉತ್ತರಿಸಿದ—'ಮಗು, ಅವನೊಬ್ಬ ರೈತ. ಎರಡು ಸಾವಿರ ರೂಪಾಯಿಗಳು ಅವನಿಗೆ ಬೇಕಿದ್ದವು. ನಾನು ಚೆಕ್ಕು ಬರೆದುಕೊಟ್ಟೆ."

'ಏನೆಂದಿರಿ? ಆ ಜಾಟನಿಗೆ ಚೆಕ್ಕು ಬರೆದುಕೊಟ್ಟಿರಿ! ಈ ಲೋಕ ಸಜ್ಜನರದ್ದಲ್ಲ. ಅದೇ ಜಾಟರು ಅಕಾರಣವಾಗಿ ನಿಮ್ಮನ್ನು ಆಕ್ರಮಣ ಮಾಡಿ ಈ ದೆಸೆಗೆ ಗುರಿಮಾಡಿದ್ದಾರೆ. ಹಾಗಿರುವಾಗ, ನೀವೇನು ತಮ್ಮತನವನ್ನು ತೋರಿಸಿದಿರಿ? ನಾವು ಪಂಜಾಬಿಗಳು; ಅವನು ಜಾಟ. ಏನು ಅಡವಿಟ್ಟ? ಯಾವ ದರದಲ್ಲಿ ಬಡ್ಡಿ?....''

ಪ್ರಶ್ನೆಗಳು ಮುಂದುವರಿಯುತ್ತಿದ್ದಂತೆ ತಂದೆ ತಡೆದು ಹೇಳಿದರು—'ಮಗು, ನಿನ್ನ ಉದ್ವೇಗ ತಿಳಿಯಿತು. ನೀನು ನನ್ನ ಏಕೈಕ ಪುತ್ರನಾಗಿರುವಂತೆಯೇ ಅವನೂ ಅವನ ತಂದೆಯ ಒಬ್ಬಂಟಿಗ ಮಗ. ಹಲವು ವರ್ಷಗಳಿಗೆ ಮೊದಲು ಅವನು ನಮ್ಮ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ. ನಮ್ಮಲ್ಲಿ ಸ್ವಾಮಿ-ಸೇವಕ ಸಂಬಂಧವಿರಲಿಲ್ಲ. ಸಹೋದರ ಭಾವನೆಯಿತ್ತು. ಪಂಜಾಬ-ಹರಿಯಾಣಗಳು ಬೇರೆ ಬೇರೆ ರಾಜ್ಯಗಳಾದ ಮೇಲೆ ಅವನು ಸಂತೋಷದಿಂದ ತನ್ನ ಮನೆಗೆ ಹೋಗಿ ಬೇಸಾಯಕ್ಕೆ ಆರಂಭ ಮಾಡಿದ. ಇದೀಗ ಅವನು ಪ್ರಾಣಾಂತಿಕವಾಗಿ ಆಸ್ಪತ್ರೆ ಸೇರಿದ್ದಾನೆ. ಹಾಗಿರುವಾಗ ಅವನಿಗೆ ನಾನು ಸಹಾಯ ಮಾಡದೆ ಹೋದರೆ ಹೇಗಾದೀತು? ನನ್ನನ್ನೇ ನಂಬಿ ಬಂದವನನ್ನು ಬರಿಕೈಯಿಂದ ಕಳಿಸುವುದು ಹೇಗೆ? ಸಹೋದರ ಸಂಬಂಧದಲ್ಲಿ ಅಡವು ಬಡ್ಡಿಗಳಿಗೇನು ಬೆಲೆಯಿದೆ?

"ಆದರೆ, ಅಪ್ಪ, ಅವನು ಜಾಟ....ಅದೇ ಜಾಟರು....

"ಏನಾಯ್ತು ಮಗು? ಜಾಟನಾದರೇನಂತೆ? ಅವನೂ ಮಾನವನಲ್ಲವೆ? ಯಾರೋ ಕೆಲವು ತಿಳುವಳಿಕೆಯಿಲ್ಲದವರು ವಾಸ್ತವಿಕತೆಯರಿಯದೆ ನನ್ನ ಮೇಲೆ ಕೈಮಾಡಿದರು ನಿಜ. ಆದರೆ, ಎಲ್ಲ ಜಾಟರನ್ನೂ ಅದೇ ಅಳತೆಗೋಲಿಂದ ಅಳೆಯಲಾದೀತೆ? ಮೊದಲು ಪಂಜಾಬ-ಹರಿಯಾಣಗಳು ಒಂದೇ ರಾಜ್ಯವಾಗಿದ್ದವು. ಮುಂದೆ ಯಾರ ಲಾಭಕ್ಕೋ ಪಾಲಾಯ್ತು. ರಾಜ್ಯ ತುಂಡಾಯಿತೆಂದ ಮಾತ್ರಕ್ಕೆ ಹೃದಯ-ಮನಸ್ಸುಗಳೂ ತುಂಡಾದುವೇನು? ನೆಲ ಅತ್ತ ಇತ್ತ ಎಂದು ಹೇಳಿದ ಮಾತ್ರಕ್ಕೆ ಮಾನವ ಸಂಬಂಧವೂ ಕಡಿದು ಹೋಯಿತೇನು? ಇದೀಗ ಚಂಡೀಗಡದ ಪ್ರಸಂಗ ನಡೆಯಿತು. ಇನ್ನೆಷ್ಟು ಬಗೆಯ ವಿಭಜನೆಗಳು ಮುಂದೆ ನಡೆಯಲಿವೆಯೋ ದೇವರೇ ಬಲ್ಲ. ಅವರೊಡನೆ ಮಾನವನೂ ತನ್ನ ಹೃದಯವನ್ನು ಚೂರು ಚೂರು ಮಾಡುತ್ತ ಹೋಗುತ್ತಾನೇನು? ಈ ಹೃದಯದ ವಿಭಜನೆ ಯಾವ ದೇಶದ ಸಂಸ್ಕೃತಿ? ನಾವು ಪಡೆದದ್ದು ಇದೇ ಶಿಕ್ಷಣವನ್ನೆ?"

ವಿಷಾದ — ಕರುಣಭಾವ ಪೂರ್ಣ ಮುಖದಲ್ಲಿ ತಂದೆ ಕೇಳಿದ ಪ್ರಶ್ನೆಗಳಿಗೆ ಮಗನಲ್ಲಿ ಉತ್ತರವಿರಲಿಲ್ಲ.

●●

ನಿಸ್ವಾರ್ಥ ಸೇವೆಯ ಪ್ರತೀಕ

ಗಡಿರಕ್ಷಣಾ ಪಡೆ

ನಮ್ಮ ರಕ್ಷಣಾ ಪಡೆ ದೇಶದ ಗಡಿಗಳನ್ನು ರಕ್ಷಿಸುತ್ತಿದೆ. ಅಷ್ಟೇ ಅಲ್ಲದೆ ಬಿಡುವಿನ ಹಾಗೂ ಸಾಮಾನ್ಯ ಪರಿಸ್ಥಿತಿಯಲ್ಲಿ ನಾಗರೀಕರಿಗಾಗಿ ರಕ್ಷಣಾ ಪಡೆಯು ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು ಪೂರ್ವ ಕಮ್ಯಾಂಡಿನ ಪ್ರಧಾನಾಧಿಕಾರಿಗಳಾದ ಲೆಫ್ಟಿನೆಂಟ್ ಜನರಲ್ ಜಗಜಿತ್ ಸಿಂಗ್ ಅರೋರ ಅವರು ಇತ್ತೀಚೆಗೆ ನಾಗಾಲ್ಯಾಂಡಿನ ನುಂಗಲಾ ಗ್ರಾಮಕ್ಕೆ ಭೇಟಿ ನೀಡಿದರು. ಅವರು ಅಲ್ಲಿಯ ಶಾಲಾ ಮಕ್ಕಳಿಗೆ ಫೂಟ್‌ಬಾಲ್, ವಾಲಿಬಾಲ್ ಇತ್ಯಾದಿ ಕ್ರೀಡಾ ವಸ್ತುಗಳನ್ನು ಉಚಿತವಾಗಿ ನೀಡಿದರು. ಗಡಿರಕ್ಷಣಾ ಪಡೆಯವರು ಇತ್ತೀಚೆಗೆ ಲೆಚಿಂಗ್ ತೆನ್‌ಗ್ನೌಪಾಲ್ ಗ್ರಾಮದಲ್ಲಿ ಹತ್ತು ಮಂದಿ ರೋಗಿಗಳಿಗೆ ವಸತಿ ಸೌಕರ್ಯ ಕಲ್ಪಿಸಬಹುದಾದ ಆಸ್ಪತ್ರೆಯೊಂದನ್ನು ನಿರ್ಮಿಸಿದ್ದಾರೆ. ಅಲ್ಲಿ ಸಾರ್ವಜನಿಕರಿಗೆ ಉಚಿತ ವೈದ್ಯಕೀಯ ನೆರವೂ ದೊರೆಯುವುದು,

ಗಡಿರಕ್ಷಣಾ ವಿಭಾಗದ ವೈದ್ಯಾಧಿಕಾರಿಗಳಾದ ಕ್ಯಾಪ್ಟನ್ ಓ. ಪಿ. ಶರ್ಮ ಅವರು ಕಿಫಿರ್ ಎಂಬ ಗ್ರಾಮದ ಮಹಿಳೆಯೊಬ್ಬಳಿಗೆ ಗರ್ಭಕೋಶ ಶಸ್ತ್ರಕ್ರಿಯೆ ಮಾಡಿದರು. ಅತ್ಯಂತ ಕಠಿಣ ಪರಿಸ್ಥಿತಿಯಲ್ಲೂ ಅವರು ತಾಯಿ ಮತ್ತು ಮಗುವಿನ ಜೀವವನ್ನು ಉಳಿಸಿದರು. ಇದೇ ರೀತಿ ಗಡಿರಕ್ಷಣಾ ದಳದ ವೈದ್ಯಕೀಯ ವಿಭಾಗ ನಾಗಾಲ್ಯಾಂಡ್ ಮತ್ತು ಮಣಿಪುರ ಜನತೆಯ ಆರೋಗ್ಯ ಸುಧಾರಣಾ ಕಾರ್ಯವನ್ನು ಕೈಗೊಂಡಿದೆ. ಈ ಕಾರ್ಯಕ್ರಮಗಳಿಂದಾಗಿ ಅಲ್ಲಿನ ಜನತೆಯ ಮರಣ ಪ್ರಮಾಣದಲ್ಲಿ ಇಳಿಮುಖವಾಗಿದೆ. ಆ ಪ್ರದೇಶಗಳ ಬೇಸಾಯ ಕ್ಷೇತ್ರದಲ್ಲಿ ಗಡಿರಕ್ಷಣಾ ಪಡೆ ತನ್ನದೇ ಆದ ಸೇವೆಯನ್ನು ಸಲ್ಲಿಸಿದೆ. ನವೀನ ರೀತಿಯ ಬೇಸಾಯ ಕುರಿತು ಪ್ರದರ್ಶನಗಳು, ಉತ್ತಮ ಬೀಜಗಳ ಹಂಚಿಕೆ, ಹೊಸ ಬೇಸಾಯ ವಿಧಾನಗಳಿಗೆ ಉತ್ತೇಜನ ನೀಡುವುದು ಇತ್ಯಾದಿ ಕ್ರಮಗಳನ್ನು ಕೈಗೊಂಡು ಬಡ ರೈತರ ಅಭಿವೃದ್ಧಿಗೆ ನೆರವಾಗುತ್ತಿದೆ. ಈ ಪಡೆಯ ಸಹಕಾರದಿಂದ ಆ ಪ್ರದೇಶಗಳಲ್ಲಿ ಹಸಿರು ತರಕಾರಿ ಹಾಗೂ ಕಬ್ಬು ಬೆಳೆಗಳನ್ನು ಪ್ರಾಯೋಗಿಕವಾಗಿ ಉತ್ಪಾದಿಸಲಾಗುತ್ತಿದೆ. ವೈದ್ಯಕೀಯ ಬೇಸಾಯ ಕ್ಷೇತ್ರಗಳ ಜೊತೆಗೆ ಶಿಕ್ಷಣ ರಂಗದಲ್ಲೂ ಈ ಪಡೆಯ ಸೇವೆ ಮಹತ್ವವಾದುದು. ಅಲ್ಲಿನ ಜನತೆಯನ್ನು ಸುಶಿಕ್ಷಿತರನ್ನಾಗಿ ಮಾಡಲು ಗಡಿರಕ್ಷಣಾಪಡೆ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದೆ.

●●

ಮನೆಯೆಂದಾದಲ್ಲಿ ಇರಲೇಬೇಕಾದ

ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ

ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್)

ಉಡುಪಿ, ದ. ಕ.

ಬೇಕಾಗಿದ್ದಾರೆ

ಕನಿಷ್ಠ 8ನೇ ತರಗತಿ ವರೆಗೆ ಓದಿದ ಕೆಲವು ಉತ್ಸಾಹಿ ಹುಡುಗರನ್ನು ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ನೀರು ಸಲೀಸಾಗೇ ಹರಿಯುತ್ತೆ

(ನಾಲ್ಕನೇ ಪುಟದಿಂದ)

"ಅದ್ಯಾಕೆ, ಅಷ್ಟರೊಳಗೆ ಇನ್ನೂ ಕೆಲವು ರಾಜ್ಯಗಳು ಸೇರಿಕೊಳ್ಳಬಹುದು.

'ಸೇರಿಕೊಳ್ಳಬಹುದೂನ್ನಿ. ಕರ್ನಾಟಕ ಗುಜರಾತಗಳೂ ಅದುವರೆಗೆ ಕಾಯಲೂ ಬಹುದು.'

'ಹ್ಞೂಂ. ಚುನಾವಣೆ–ಚುನಾವಣೇಂತ ಎಷ್ಟು ಹಣ ಖರ್ಚಾಗುತ್ತೆ!'

'ಏನು ಮಾಡೋದ್ರಿ, ಪ್ರಜಾಸತ್ತೆಯನ್ನು ಉಳಿಸಬೇಕಾದ್ರೆ ಇದು ನಡೆಯಲೇ ಬೇಕು.

"ಯಾವುದು?'

'ಗೊತ್ತಾಯ್ತು ಬಿಡಿ....'

'ಅದ್ಹೇಗಾಗುತ್ತೆ?'

'ಶೂ....'

–ಗೋರಾ.

●●

ಕೃಷಿ ಕ್ರಾಂತಿಯಿಂದ ನವಯುಗದ ನಾಂದಿ

(ಏಳನೇ ಪುಟದಿಂದ)

ಮಧ್ಯಮ ಅವಧಿ ಸಾಲವಾಗಿಯೂ ನೀಡುವ ನಿರೀಕ್ಷೆ ಇದೆ. ಈಗ ವಿವಿಧ ಸಂಸ್ಥೆಗಳ ಮೂಲಕ ಸಹಾಯ ಕಾರ್ಯಕ್ರಮ ಆರಂಭಿಸಲಾಗಿದೆ. ಸಹಕಾರಿ ಸಂಸ್ಥೆಗಳ ಡಿಬೆಂಚರ್ ಸಾಲಕ್ಕೆ ಕೇಂದ್ರ–ರಾಜ್ಯ ಸರ್ಕಾರಗಳು, ರಿಸರ್ವಬ್ಯಾಂಕ್, ಜೀವ ವಿಮಾ ಕಾರ್ಪೊರೇಷನ್ ಮತ್ತು ಸ್ಟೇಟ್‌ಬ್ಯಾಂಕ್ ಬೆಂಬಲ ನೀಡುತ್ತದೆ. ಸಣ್ಣ ನೀರಾವರಿ ಕಾರ್ಯಕ್ಕೆ ಕೃಷಿ ರಿಫೈನಾನ್ಸ್ ಕಾರ್ಪೊರೇಷನ್ ಸಹಾಯಧನ ನೀಡುವುದನ್ನು ಹೆಚ್ಚಿಸಿದೆ; ಇಲ್ಲದೆ ಉಗ್ರಾಣಗಳ ನಿರ್ಮಾಣಕ್ಕೆ ಸಹಾಯವೆಸಗುತ್ತಿದೆ.

ವಾಣಿಜ್ಯ ಬ್ಯಾಂಕುಗಳು ಕೃಷಿಗೆ ಹೆಚ್ಚು ಹಣ ನೀಡುತ್ತಿವೆ. 969ನೇ ಇಸವಿ ಜೂನ್ ಮಾಸಾಂತ್ಯದಲ್ಲಿ ವಾಣಿಜ್ಯಬ್ಯಾಂಕುಗಳು ನೀಡಿದ್ದ ಮುಂಗಡದಲ್ಲಿ 172 ಕೋಟಿ ರೂಪಾಯಿ ವಸೂಲಾಗಬೇಕಾಗಿತ್ತು; 1970ನೇ ಇಸವಿ ಜೂನ್ ಮಾಸಾಂತ್ಯದಲ್ಲಿ ಈ ಮೊತ್ತ 643 ಕೋಟಿ ರೂಪಾಯಿಗೇರಿತ್ತು.

●●

ಪುತ್ತೂರು IIIrd Adle. ಮುನ್ಸಿಫ್ ಕೋರ್ಟಿನಲ್ಲಿ

R. R. C. 2293/70

ಪದ್ಮನಾಭ ಯೆಡಪ್ಪಾಡಿತ್ತಾಯ —ಅರ್ಜಿದಾರ

ಚೆನ್ನಮ್ಮ ಕೂಡಾ —ಎದ್ರಿರು.

ಎದ್ರಿರು:– 3 ದುಗ್ಗ ಗೌಡ, 4 ನಾಗಪ್ಪ ಗೌಡ.

ಸದ್ರಿ 3, 4ನೇ ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ:–

69–70ನೇ ವರ್ಷದ ಗೇಣಿ ಕೇಳಿ ಅರ್ಜಿದಾರನು ನಿಮ್ಮ ವಗೈರೆಗಳ ಮೇಲೆ ಮಾಡಿದ ಈ ನಂಬ್ರ ತಾ. 16–6–71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಪರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಸ್ತಾಮಾಡಿ ಯುಕ್ತಕಂಡಂತೆ ತೀರ್ಮಾನಿಸಲಾದೀತು.

Sd/ M. Rammohan Rao

Advocate for petitioner

Puttur, 17-4-71.

ಕರ್ತವ್ಯ ವಿಮುಖರ ಅಕ್ಷೋಹಿಣೀ ಸೇನೆ

ಬಂಗ್ಲಾ ದೇಶದ ಹೋರಾಟದ ಬಗ್ಗೆ ಭಾರತ ತಳೆದಿರುವ ನೀತಿ ಪಾಕಿಸ್ತಾನಕ್ಕೆ ಅತ್ಯಂತ ಅಪ್ರಿಯ. ಆದುದರಿಂದ ತಾನು ಗೈಯ್ಯುತ್ತಿರುವ ನರಮೇಧದ ಪಾಪವನ್ನು ಮುಚ್ಚಿಟ್ಟುಕೊಂಡು, ಇದರಲ್ಲಿ ಭಾರತದ ಕೈವಾಡವೇ ಅಡಗಿದೆಯೆಂದು ತೋರಿಸ ಹೊರಟಿದ್ದಾರೆ ಯಾಹ್ಯಾಖಾನರು. ಬಂಗ್ಲಾ ದೇಶದ ರಾಜದ್ರೋಹಿಗಳಿಗೆ ಶಸ್ತ್ರಾಸ್ತ್ರಗಳನ್ನು ಭಾರತ ಸರಬರಾಜು ಮಾಡುತ್ತಿದೆಯೆಂದೂ ಭಾರತದ ಸೈನಿಕರು ಪಾಕ್ ಸೀಮೋಲ್ಲಂಘನ ಗೈಯ್ಯುತ್ತಿದ್ದಾರೆಂದೂ ನಾನಾ ಪ್ರಕಾರದ ಅಪಪ್ರಚಾರವನ್ನು ಮೆರಗುಗೊಟ್ಟು ಮುಂದುವರಿಸುತ್ತಿದ್ದಾರೆ ಅವರು.

ಆದರೆ, ಸತ್ಯ ಸಂಗತಿ ಇದಕ್ಕೆ ತೀರ ವಿರುದ್ಧ. ಪಾಕ್ ಸೈನಿಕರು ಭಾರತೀಯರನ್ನು ಕಾಲು ಕೆದರಿ ಜಗಳಕ್ಕೆ ಕರೆಯ ಹತ್ತಿದ್ದಾರೆ. ಗಡಿದಾಟಿದ್ದಾರೆ; ಪಾಕ್ ವಿಮಾನಗಳು ಭಾರತದ ವಾಯುಪ್ರದೇಶವನ್ನು ಮೀರಿ ಹಾರುತ್ತಿವೆ. ಕೆಲ ಪಾಕ್ ಸೈನಿಕರು ಭಾರತೀಯ ಗಡಿ ರಕ್ಷಕರಿಗೆ ಶರಣು ಬಂದ ಉದಾಹರಣೆಗಳೂ ಉಂಟು. ತನ್ನ ತಪ್ಪನ್ನು ಮುಚ್ಚಿಕೊಳ್ಳುವುದು ಪಾಕಿಸ್ತಾನಕ್ಕೆ ಬೇಕಾಗಿದೆ. ಆದುದರಿಂದ ಭಾರತದ ಮೇಲೆಯೇ ಅಲ್ಲ ಸಲ್ಲದ ಆರೋಪ ಹೊರಿಸಿ ಪಾಕ್ ರೇಡಿಯೋ ಪ್ರಸಾರ ಮಾಡುತ್ತದೆ.

ಬಂಗ್ಲಾ ನರಮೇಧಕ್ಕೆ ಕಾರಣಪುರುಷ ತಾನಲ್ಲವೆಂದು ಯಾಹ್ಯಾಖಾನರು ವೃಥಾ ನಂಬಿದ್ದಾರೆ. ಇದಕ್ಯಾರಾದರೂ ಕಾರಣರಿದ್ದರೆ, ಸ್ವಯಂ ಬಂಗಾಳಿಗಳೇ ಎಂದು ಅವರು ಉಗ್ಗಡಿಸಿದ್ದಾರೆ. ಭಾರತದ ಅವ್ಯಕ್ತ ಕೈವಾಡವೂ ಇದರಲ್ಲಿದೆಯೆನ್ನುತ್ತಾರೆ ಅವರು. ಅಂತೂ ತಪ್ಪುಗಾರ ತಾನಲ್ಲವೆಂದು ಸಿದ್ಧಪಡಿಸಲು ಬೇಕಾದ ಕಪಟ ನಾಟಕವನ್ನು ಅವರಾಡುತ್ತಾರೆ. ಬೆಂಕಿಯನ್ನು ಬಟ್ಟೆಯಲ್ಲಿ ಕಟ್ಟಿಕೊಳ್ಳುವುದು ಸಾಧ್ಯವಿಲ್ಲವೆಂದು ಅವರೇಕೆ ತಿಳಿಯದೆ ಹೋದರೋ!

○ ○○ ○

ಸಿಂಡಿಕೇಟು ಅಧ್ಯಕ್ಷಪೀಠವನ್ನು ಆಂಧ್ರದ ಡಿ. ಸಂಜೀವಯ್ಯನವರಿಗೆ ಒಪ್ಪಿಸಿತು–ಬ್ರಹ್ಮಾನಂದ ರೆಡ್ಡಿಯವರ ವಿರೋಧವೂ ಇಂದಿರಾ ಗಾಳಿಯಲ್ಲಿ ಹಾರಿಹೋಯ್ತು. ಸಿಂಡಿಕೇಟಿನ ಅಧ್ಯಕ್ಷಪೀಠವನ್ನು ಯಾರು ಏರಬೇಕು ಎಂಬುದು ಜಟಿಲ ಪ್ರಶ್ನೆಯಾಯ್ತು. ಕ್ರಾಂತಿ–ಉತ್ಕ್ರಾಂತಿ ಕಾಲದ ಅಧ್ಯಕ್ಷ ನಿಜಲಿಂಗಪ್ಪನವರು ರಾಜ್ಯಕೀಯದಿಂದಲೇ ನಿರ್ಗಮಿಸಲು ದೃಢನಿರ್ಧಾರ ಮಾಡಿದ್ದುಂಟು. ಸದ್ಯ ಅವರು ಪ್ರತ್ಯಕ್ಷ ರಾಜ್ಯಕೀಯದಿಂದ ಸನ್ಯಾಸ ಸ್ವೀಕರಿಸಲು ಬಯಸುವುದಿಲ್ಲ. ತರುಣ ಪೀಳಿಗೆಗೆ ಅಧ್ಯಕ್ಷ ಪೀಠ ತೆರವು ಮಾಡಬೇಕೆಂದು ಇಚ್ಛಿಸಿದ್ದಾರೆ.

ಪಕ್ಷದ ಉನ್ನತ ಹುದ್ದೆಗೆ 'ಯಾವ'ಯುವಕ'ನನ್ನು ಏರಿಸಬೇಕೆಂಬುದು ವಿವಾದಗ್ರಸ್ತ. ಪ್ರಾಯಃ ಸದ್ಯ ದುರ್ಬಲವಾದ ಸಿಂಡಿಕೇಟಿನ ಈ ಪೀಠಾರೋಹಣಕ್ಕೆ ಸಿದ್ಧರಿರುವವರ ಸಂಖ್ಯೆಯೂ ಕಡಿಮೆಯಿರಬಹುದು. ಛಾಯಾ ಪ್ರಧಾನಿ ಡಾ| ರಾಮಸುಭಾಗ ಸಿಂಗರ ಹೆಸರು ಮುಂದೆ ಬಂತು. ಇವರು ಮಧ್ಯಾವಧಿ ಚುನಾವಣೆಗಳಲ್ಲಿ ಸೋತವರು. ಆದುದರಿಂದ ಬೇಡವೆಂದವರೂ ಇದ್ದಾರೆ. ಸುಚೇತ ಕೃಪಲಾನಿಯವರು ಈಗ ಹಿಂದಿನ ಘಟಪ್ರಭಾವಶಾಲಿಯಾಗಿಲ್ಲ. ರಂಜನೀಯ ಮಹಿಳೆ ತಾರಕೇಶ್ವರಿ ಸಿಂಹರು ಚುನಾವಣೆಯಲ್ಲಿ ಸೋತವರಾದರೂ ಸಶಕ್ತರು. ಆದರೆ, ಪ್ರಧಾನಿ ಇಂದಿರೆಯ ಪ್ರಬಲ ವಿರೋಧಿಯಾಗಿರುವುದರಿಂದ ಸಿಂಡಿಕೇಟು ಈ ವಿರೋಧದ ಬಲದಿಂದ ಬೆಳೆಯಲಾರದೆಂಬುದರಿಂದ ಅವರ ಹೆಸರು ಅಡಿಗೆ ಬಿತ್ತು. ಅಷ್ಟಲ್ಲದೆ ಸದ್ಯ ಅವರು ಅನಾರೋಗ್ಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ ಮಾತ್ರ. ಸಿಂಡಿಕೇಟಿನ ಪ್ರಧಾನ ಕಾರ್ಯದರ್ಶಿಯಾಗಿರುವ ಸಾದಿಕ್ ಅಲಿಯವರ ಹೆಸರೂ ಮುಂದೆ ಬಂದಿದೆ. ಈ ಹೆಸರುಗಳಲ್ಲಿ ಸಾದಿಕ್‌ರ ಚೀಟಿಯೇ ಮೇಲೆ ಬೀಳಬಹುದು. ಸಿಂಗರೂ ತಲೆ ಕೊಡಬೇಕಾಗಬಹುದು. ಇವರಿಬ್ಬರನ್ನೂ ಬಿಟ್ಟು ಹೊಸಬರೊಬ್ಬರ ಆಯ್ಕೆಯ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು. ಇಷ್ಟರಲ್ಲೇ ಈ ಬಗ್ಗೆ ನಿರ್ಧಾರವಾಗಿರುತ್ತದೆ.

ನಿಜಲಿಂಗಪ್ಪನವರು ಮುಂದೇನು ಮಾಡುತ್ತಾರೆ? ರಾಜ್ಯಕೀಯ ಸಲಹೆಗಾರರಾಗಿ ಉಳಿಯುತ್ತಾರೆಯೆ? ಅಥವಾ ಮತ್ತೆ ರಾಜಕೀಯದಲ್ಲಿ ಸಕ್ರಿಯವಾಗಿ ಇಳಿಯುತ್ತಾರೆಯೆ? ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ಸಿಗೆ ವೀರೇಂದ್ರ ಪಾಟೀಲರು ಅಧ್ಯಕ್ಷರಾದದ್ದು ಸೋಜಿಗವೇ. ಯಾರು ಯಾರದೋ ಕೊರಳಿನ ಸುತ್ತ ಸುತ್ತುವರಿದು ಅನಿರೀಕ್ಷಿತವಾಗಿ ಮಾಲೆ ಪಾಟೀಲರದನ್ನು ಸುತ್ತಿತು. ಮುಂದೆ ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಒಂದು ವೇಳೆ ಸಿಂಡಿಕೇಟು ಬಹುಮತಗಳಿಸಿದರೆ, ಪಾಟೀಲರೇ ಮುಖ್ಯಮಂತ್ರಿಯಾಗುವ ಸಾಧ್ಯತೆ ಕಡಿಮೆ. ರಾಮಕೃಷ್ಣ ಹೆಗಡೆ ಆದರೂ ಆಗಬಹುದು. ಎಸ್ಸೆನ್ ಈ ಇಳಿ ಹರೆಯದಲ್ಲಿ ರಾಜ್ಯದ ರಾಜ್ಯಕೀಯದ ಸೂತ್ರಧಾರರಾಗುತ್ತಾರೆಯೆ? ಹೊಸ ಪೀಳಿಗೆಗೆ ಉತ್ತೇಜನ ಕೊಡುವವರು ಈ ಕೀಳು ಕೆಲಸಕ್ಕೆಂದೂ ಕೈಹಾಕಲಾರರು.

○ ○○ ○

ಕರ್ನಾಟಕದ ರಾಜ್ಯಪಾಲ ಶ್ರೀ ಧರ್ಮವೀರರದು ಎತ್ತಿದ ಕೈ. ಅವರು ಮಾಜಿ ಮುಖ್ಯಮಂತ್ರಿ ಪಾಟೀಲರನ್ನು ದಕ್ಷರೆಂದರು. ಅವರನ್ನು ರಾಷ್ಟ್ರಪತಿಗಳು ದಕ್ಷರೆಂದರು. ತಮ್ಮ ದಕ್ಷತೆಯನ್ನು, ಕಳಕಳಿಯನ್ನು ಹಲವೆಡೆ ತೋರಿಸಿಯೂ ತೋರಿಸಿದರು.

ವೀರೇಂದ್ರ ಪಾಟೀಲರ ಸರಕಾರ ಶಿಕ್ಷಕರ ಹಲವಾರು ಸಮಸ್ಯೆಗಳಿಗೆ ಪ್ರತಿಕೂಲ ನಿರ್ಧಾರಗಳನ್ನು ಕೈಗೊಂಡು ರಾಜಿನಾಮೆ ನೀಡಿತು. ಈ ನಿರ್ಧಾರಗಳಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಅಸಮಾಧಾನ ಮೂಡಿತು. ಉಭಯಾಸಕ್ತ ವಿಷಯಗಳ ಕುರಿತು ವಿಚಾರ ವಿನಿಮಯ ಮಾಡಲೆಂದು ಶಿಕ್ಷಕರ ಪ್ರತಿನಿಧಿಗಳು ಸಂದರ್ಶನ ನೀಡಬೇಕೆಂದು ಬರೆದುಕೊಂಡರು. ಇವೆಲ್ಲವನ್ನೂ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರೊಡನೆ ಚರ್ಚಿಸಬೇಕೆಂದು ಉತ್ತರ ಬಂತು. ಕಾರ್ಯದರ್ಶಿಯವರೊಡನೆ ಹಲವಾರು ಬಾರಿ ಚರ್ಚಿಸಿದರೂ ಪರಿಹಾರವಾಗದ ಸಮಸ್ಯೆಗಳಿಗೆ ರಾಜ್ಯಪಾಲರು ಆಸಕ್ತರಾಗಿಲ್ಲವೆಂದರೆ, ಶಿಕ್ಷಕರ ಮೇಲೆ ಅವರಿಗೆ ಅನುಕಂಪವಿಲ್ಲವೆಂದೇ ಅರ್ಥ.

ಇದು ಅವರ ಕೊಡಗು–ದಕ್ಷಿಣಕನ್ನಡ ಜಿಲ್ಲಾ ಸಂಚಾರದ ವೇಳೆಯೂ ವ್ಯಕ್ತವಾಯ್ತು. ಶಿಕ್ಷಕರ ಪ್ರತಿನಿಧಿಗಳೊಡನೆ ತ

ಹಾರ್ದಿಕ ಕೃತಜ್ಞತಾ ಸಮರ್ಪಣೆ

ತಾ. 13—5—71ರಂದು ಮಂಗಳೂರು ಪುರಭವನದಲ್ಲಿ ನಮ್ಮ ಪುತ್ರ **ಚಿ| ಜಯಶಂಕರನಿಗೆ** ಶ್ರೀಮತಿ ಸೀತು ಎಸ್. ಆಳ್ವ ಮತ್ತು ಮೇರಿಮಜಲು ಶ್ರೀ ಶ್ರೀನಿವಾಸ ಆಳ್ವರ ಪುತ್ರಿ **ಚಿ| ಸೌ| ರಮಾಳ** ಜತೆ ಜರಗಿದ ವಿವಾಹ ಸಮಾರಂಭಕ್ಕೆ ಸಾದರ ಪೂರ್ವಕವಾಗಿ ಊರು ಪರವೂರುಗಳಿಂದ ದಯವಿಟ್ಟು ಆಗಮಿಸಿ ಸಮಾರಂಭವನ್ನು ಚಂದಗಾಣಿಸಿ ವಧೂವರರನ್ನು ಆಶೀರ್ವದಿಸಿದ ಯಾವತ್ತೂ ಬಂಧು ಮಿತ್ರರಿಗೂ ಸಮಾರಂಭದ ಯಶಸ್ವಿಗಾಗಿ ಸರ್ವರೀತಿಯಿಂದ ಸಹಕರಿಸಿ ನೆರವಾದ ಸಮಸ್ತರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ರುಕ್ಮಿಣಿಪ್ರಿಯ ನಿವಾಸ
ನಾವೂರು.
(ಬೆಳ್ತಂಗಡಿ)

ಶ್ರೀಮತಿ ರುಕ್ಮಿಣಿ ಎನ್. ಶೇಕ
ಶ್ರೀ | ಬಿ. ನಾರಾಯಣ ಶೇಕ.

ಪುತ್ತೂರು ಮು. ಕೋರ್ಟಿನಲ್ಲಿ

R. R. C. 1146/70

ಪುಟ್ಟ ಗೌಡ —ಅರ್ಜಿದಾರ

ಕರಿಯ ಪೂಜಾರಿ ಸಹಾ —ಎದ್ರಿರು

3ನೇ ಎದ್ರಿ:– ಶೀನಪ್ಪ ಪೂಜಾರಿ, ಕರಿಯ ಪೂಜಾರಿ ಮಗ, ಅಲಂಕಾರು ಗ್ರಾಮ.

ಸದ್ರಿ 3ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

67–68ನೇ ವರ್ಷದ ಗೇಣಿ ಬಾಕಿಗೆ ಅರ್ಜಿದಾರನು ನಿಮ್ಮ ಮೇಲೆ ಕೂಡಾ ಮಾಡಿದ ಈ ಅರ್ಜಿಯನ್ನು ತಾ 26–5–71ಕ್ಕೆ ವಿಚಾರಣೆಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಪರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಸ್ತಾಮಾಡಿ ಯುಕ್ತಕಂಡಂತೆ ತೀರ್ಮಾನಿಸಲಾದೀತು.

Sd/– M. Rammohan Rao

Advocate for petitioner

Puttur, 15-5-71.

ಸ್ಥಾನಿಕ—ಶಿವಳ್ಳಿ ಬ್ರಾಹ್ಮಣ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ

ಇದೇ ತಾ. 9–5–1971ರಲ್ಲಿ ಮಧ್ಯಾಹ್ನ ಉಡುಪಿಯ ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ಜರಗಿದ ಸ್ಥಾನಿಕ ಶಿವಳ್ಳಿ ಬ್ರಾಹ್ಮಣ ಸಹ ಪಂಕ್ತಿ ಭೋಜನವು ಸಾರ್ವಜನಿಕವಾಗಿ ನಡೆದು ಇಲ್ಲಿಯ ಬ್ರಾಹ್ಮಣ್ಯದ ಇತಿಹಾಸದಲ್ಲೆ ಒಂದು ಹೊಸ ಅಧ್ಯಾಯವನ್ನು ತೆರೆಯಿತು. ಈ ಸಹಪಂಕ್ತಿ ಭೋಜನಕ್ಕೆ ಸುಮಾರು ಮೂರುವರೆ ಸಾವಿರ ಬ್ರಾಹ್ಮಣರು ಸೇರಿದ್ದರು. ಭೋಜನದ ಮೊದಲು ಕಾಣಿಯೂರು ಶ್ರೀ ಶ್ರೀ ಪಾದಂಗಳವರು ತಮ್ಮ ಮಠದ ಆರಾಧ್ಯ ದೇವತೆಯಾದ ಶ್ರೀ ನರಸಿಂಹ ದೇವರಿಗೆ ಅನಂತೇಶ್ವರದಲ್ಲಿ ವೇದೋಕ್ತ ವಿಧಿ ಪ್ರಕಾರ ಪೂಜೆಮಾಡಿ ಸ್ಥಾನಿಕ ಬ್ರಾಹ್ಮಣರಿಗೆ ತೀರ್ಥ ಪ್ರಸಾದವನ್ನಿತ್ತು ಅವರಿಗೂ ಶಿವಳ್ಳಿಯವರಿಗೂ ಇದ್ದ ಯಾವ ತೆರನಾದ ಪಂಕ್ತಿ ಭೇದವನ್ನೂ ಹೋಗಲಾಡಿಸಿದರು. ಉತ್ತಮ ರೀತಿಯಲ್ಲಿ ಈ ಸಮಾರಂಭವು ಜರಗಿತು.

ಸಾಯಂಕಾಲ 5 ಗಂಟೆಗೆ 'ಗೀತಾಂಜಲಿ' ಎಂಬ ಅದೇ ದಿನ ಉದ್ಘಾಟನೆಯಾದ ಶ್ರೀ ಶ್ರೀಗಳವರ ಕಟ್ಟಡದಲ್ಲಿ ಸಾರ್ವಜನಿಕ ಸಭೆಯು ಶ್ರೀ ಶ್ರೀಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಡಾ| ಪಿ. ಗುರುರಾಜ ಭಟ್ಟರಿಂದ ಪ್ರಕಟವಾದ "ಇತಿಹಾಸ"ವೆಂಬ ಹೊತ್ತಗೆಯು ಶ್ರೀ ಪೇಜಾವರ ಶ್ರೀಪಾದಂಗಳವರಿಂದ ಬಿಡುಗಡೆಯಾಯಿತು ಈ ಹೊತ್ತಗೆಯ ಸರ್ವ ಖರ್ಚನ್ನೂ ಬಿಲೆವೂರು ಶ್ರೀ ಶ್ಯಾಮರಾಯರು ವಹಿಸಿದ್ದರು. 'ಇತಿಹಾಸದ ಯಥಾರ್ಥತೆ' ಎಂಬ ಶ್ರೀ ಸೀತಾರಾಮ ನಾರಾಯಣಾಚಾರ್ಯ ಉಡುಪ ಎಂಬವರು ಬರೆದ ಪುಸ್ತಕದ ಸಮಸ್ಯಾತ್ಮಕ ಪ್ರಶ್ನೆಗಳಿಗೆ ಉತ್ತರವಾಗಿ ಹೊರ ಬಂದ ಹೊತ್ತಗೆ 'ಇತಿಹಾಸ'.

ಸಾರ್ವಜನಿಕ ಸಭೆಯು ಪಾವಂಜೆ ಶ್ರೀ ಶಾಸ್ತ್ರಿಗಳ ಪ್ರಾರ್ಥನೆಯಿಂದ ಪ್ರಾರಂಭವಾಯಿತು ಶ್ರೀ ಪಿ. ಕೃಷ್ಣರಾಯರು ಸ್ವಾಗತ ಭಾಷಣಮಾಡಿದರು. ಅನಂತರ ಶ್ರೀ ಶ್ರೀ ಪೇಜಾವರ ಸ್ವಾಮಿಗಳವರು 'ಇತಿಹಾಸ' ಹೊತ್ತಗೆಯನ್ನು ಬಿಡುಗಡೆ ಮಾಡುತ್ತಾ ಬ್ರಾಹ್ಮಣ ಸಮಾಜದ ಹಲವಾರು ಪಂಗಡಗಳೊಳಗಿನ ವೈಷಮ್ಯ, ಬೇಧ ಭಾವನೆ, ಅದೃಶ್ಯವಾಗಿ ಸಾಮರಸ್ಯ ಬೆಳೆಯುವುದರ ಪ್ರಾಮುಖ್ಯತೆಯನ್ನು ವಿವರಿಸಿದರು. ಸ್ವಾಮಿ ರಮಾನಂದಜೀಯವರು ಭಾರತೀಯ ಸಂಸ್ಕೃತಿಯ ಕುರಿತಾಗಿ ಭಾವಪೂರ್ಣವಾದ ಭಾಷಣಮಾಡಿದರು. ಡಾ| ಗುರುರಾಜ ಭಟ್ಟರು ತಮ್ಮ ನಿಯೋಜಿತ ಭಾಷಣದಲ್ಲಿ ತಾನುಮಾಡಿದ ಸಂಶೋಧನೆಯ ಒಂದು ಹಕ್ಕಿನೋಟವನ್ನು ಸಭಿಕರ ಮುಂದಿಟ್ಟು ಸ್ಥಾನಿಕರ ಪರವಾದ ಹಲವಾರು ಅಪವಾದಗಳು ತನ್ನ ಮೇಲೆ ಕೆಲವರು ತಿಳುವಳಿಕೆ ಇಲ್ಲದೇ ಹೊರಿಸಿದಕ್ಕೆ ಕಳವಳಿಯನ್ನು ವ್ಯಕ್ತಪಡಿಸಿದರು, ಮತ್ತು ಐತಿಹಾಸಿಕ ನಿಟ್ಟಿನಲ್ಲಿ ತಾನು ಕಂಡುಕೊಂಡ ವಿಷಯಗಳನ್ನು ಸಜ್ಜನರು ಮನಗಂಡು ಇದೀಗ ಶ್ರೀ ಶ್ರೀಗಳವರ ಮೂಲಕ ಆದ ಸುಧಾರಣೆಯನ್ನು ಶ್ಲಾಘಿಸಿ ಇಂತಹ ಸುಧಾರಣೆಗಳು ಹಲವಾರು ಆಗಿ ಸಮಾಜ ಕಲ್ಯಾಣವಾಗಲೆಂದು ಆಶಿಸಿದರು. ಈ ಸುಧಾರಣೆ ಜಿಲ್ಲೆಯ ಇತಿಹಾಸದಲ್ಲಿ ಒಂದು ವಿಶಿಷ್ಟ ಘಟ್ಟವೆಂದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಕಾಣಿಯೂರು ಶ್ರೀಪಾದಂಗಳವರು ಇನ್ನು ಮುಂದೆ ಸ್ಥಾನಿಕ ಬ್ರಾಹ್ಮಣರಿಗೂ ತನ್ನ ಶಿಷ್ಯರಿಗೂ ಯಾವ ಭೇದವೂ ಇಲ್ಲವೆಂದೂ ಅಂತಹ ಭೇದವಿರಬಾರದೆಂದೂ ತನ್ನ ಮಠಕ್ಕೆ ಯಾವ ರೀತಿಯ ಸಂಕೋಚವಿಲ್ಲದೇ ಸ್ಥಾನಿಕ ಬ್ರಾಹ್ಮಣರು ಬಂದು ಹೋಗಬಹುದೆಂದೂ, ಶ್ರೀಮದ್ವಾಚಾರ್ಯರು ಯಾವ ರೀತಿಯ ದ್ವೇಷ ಅಸೂಯೆಗಳಿಗೆ ಆಸ್ಪದಕೊಡಲಿಲ್ಲವೆಂದೂ ಹೇಳಿ ಎಲ್ಲರಿಗೂ ಭಗವದನುಗ್ರಹವಾಗುವುದೆಂದು ಆಶೀರ್ವದಿಸಿದರು.

ಸ್ಥಾನಿಕ ಸಂಘದ ಕಾರ್ಯದರ್ಶಿ ಶ್ರೀ ಅನಂತಕೃಷ್ಣರಾಯರು ಧನ್ಯವಾದ ಸಮರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

● ●

ವರು ವ್ಯವಹರಿಸಿದ ರೀತಿ—ತೋರಿದ ಅನಾಸಕ್ತಿಗಳು ಶಿಕ್ಷಣಕ್ಕೂ ತನಗೂ ಸಂಬಂಧವಿಲ್ಲವೆಂಬಂತಿವೆ. ಕರ್ತವ್ಯ ನಿಷ್ಠರಾದ ಕರ್ತವ್ಯದ ಬಗ್ಗೆ ಅಧಿಕಾರಿಗಳಿಗೆ ಉಪದೇಶಾತ್ಮಕ ಆದೇಶ ನೀಡುವ ರಾಜ್ಯಪಾಲರು ಶಿಕ್ಷಕ ಪ್ರತಿನಿಧಿಗಳಿಗೆ ಭೆಟ್ಟಿ ನೀಡಿ ಅವರ ಅಹವಾಲೆಗಳನ್ನು ಕೇಳುವುದೂ. ಸರಿಕಂಡರೆ ಅವನ್ನು ದೂರ ಮಾಡುವುದೂ ತನ್ನ ಕರ್ತವ್ಯವೆಂಬುದನ್ನು ಮರೆತುಬಿಟ್ಟರು. ಇದು ಕಾಲಗುಣವಿದ್ದರೂ ಇರಬಹುದು. ಅಥವಾ ಶಿಕ್ಷಕರ ದುರದೃಷ್ಟವೂ ಇರಬಹುದು.

ರಾಜ್ಯಪಾಲರು ಶಿಕ್ಷಕ ವರ್ಗದ ಬಗ್ಗೆ ಸಹಾನುಭೂತಿಪರ ನೀತಿ ತಳೆದಿಲ್ಲವೆಂಬುದು ದೃಢವಾಯ್ತು. ಶಿಕ್ಷಕರೆಂದರೆ 'ಕರ್ತವ್ಯ ವಿಮುಖರ ಅಕ್ಷೋಹಿಣೀ ಸೇನೆ' ಯೆಂಬುದು ಅವರ ಭಾವನೆಯಿದ್ದಿರಬಹುದು. ಇದನ್ನು ನ್ಯಾಯವೆಂದೇ ಬಗೆದರೂ ಈ ತಂಡವು ಕರ್ತವ್ಯಮುಖರಾಗುವಂತೆ ಮಾಡುವುದು ರಾಜ್ಯಪಾಲರ ಕರ್ತವ್ಯವೇ ತಾನೆ? ನಾಲ್ಕು ಒಳ್ಳೆಯ ಮಾತುಗಳಿಂದ ಕರ್ತವ್ಯ ಪಾಲನೆಯ ಪಾಠವನ್ನಾದರೂ ಅವರು ಹೇಳಬಾರದಿತ್ತೇ?

ಕೆಚ್ಚೆದೆಯಿಂದ, ಎಂಟೆದೆಯಿಂದ ಎಂಥ ಎಂಥದೋ ಸಾಧಿಸಿದ ಈ ಸಾಹಸಿ ರಾಜ್ಯಪಾಲರಿಗೆ ಶಿಕ್ಷಕರು ತೃಣಸಮಾನರಾಗಿ ಕಂಡದ್ದು ಸಹಜವೇ. ದುರ್ಬಲ, ದಲಿತ ವರ್ಗದ, ದಮನಗೊಂಡ ಈ ನೌಕರರನ್ನು ಹಿಂದಿನಿಂದಲೂ ಕಾಲಕಸವಾಗಿ ಸರಕಾರ ಕಾಣುತ್ತ ಬಂದಿದೆ. ರಾಜ್ಯಪಾಲರೂ ಇದಕ್ಕೆ ಅಪವಾದವಾಗಬೇಕಾಗಿಲ್ಲ. ಇನ್ನಾದರೂ ಶಿಕ್ಷಕರು ಆಂತರಿಕ ಭೇದ ನೀಗಿ ಒಂದಾಗಿ ತಮ್ಮ ಉದ್ಧಾರಕ್ಕೆ ಸೂತ್ರಕ್ರಮ ಕೈಗೊಳ್ಳಲು ಮುಂದಾದಾರೆ?

● ●

ಪುತ್ತೂರು IIIrd Adl. ಮುನ್ಸಿಫ್ ಕೋರ್ಟಿನಲ್ಲಿ

R. R. C. 2292/70

ಪದ್ಮನಾಭ ಯಡಪ್ಪಾಡಿತ್ತಾಯ—ಅರ್ಜಿದಾರ

ತಿಮ್ಮಪ್ಪ ರೈ ಸಹಾ —ಎದ್ರಿರು

4ನೇ ಎದ್ರಿ:—ರಾಮಣ್ಣ ಶೆಟ್ಟಿ, ಪಮ್ಮಕ್ಕೆ ಮಗ, ನೆಲ್ಯಾಡಿ ಗ್ರಾಮ.

ಸದ್ರಿ 4ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:

69–70ನೇ ವರ್ಷದ ಗೇಣಿ ಕೇಳಿ ಅರ್ಜಿದಾರನು ನಿಮ್ಮ ವಗೈರೆರ ಮೇಲೆ ಮಾಡಿದ ಈ ನಂಬ್ರ ತಾ. 17–8–71ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉಪಪರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರಿ ಶಿವ್ವಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/ **M. Rammohan Rao**

Advocate for Petitioner

Puttur.

ತಾ. 17–4–71.

ಕೃಷಿ ಕೈಗಾರಿಕಾಭಿವೃದ್ಧಿಗೆ ವಿಜಯಾ ಬೇಂಕು ನೆರವು

ವಿಜಯಾ ಬೇಂಕಿನ ಅಧ್ಯಕ್ಷ ಶ್ರೀ ಎಂ. ಸುಂದರರಾಮ ಶೆಟ್ಟಿ, ಅವರಿಗೆ ತಾ. ೩–೫–೭೧ ರಂದು ಕಾಸರಗೋಡಿನಲ್ಲಿ ನೀಡಲಾದ ಪೌರ ಸ್ವಾಗತದಲ್ಲಿ ಮಾತನಾಡುತ್ತಾ, ತಮ್ಮ ಬ್ಯಾಂಕು ಕೃಷಿ ಮತ್ತು ಉದ್ಯಮ ಅಭಿವೃದ್ಧಿಗೆ ನೆರವು ನೀಡುತ್ತದೆ. ಔದ್ಯಮಿಕ ಯೋಜನೆಗಳಿಗೆ ನೆರವಿನ ಸಾಲ ನೀಡುತ್ತದೆ. ಸಾರ್ವಜನಿಕರು ಇದರ ಪ್ರಯೋಜನ ಪಡೆಯಬೇಕು. ಬ್ಯಾಂಕುಗಳು ಈ ರೀತಿ ಸಾಲ ನೀಡುವುದರಿಂದ ಕೈಗಾರಿಕಾಭಿವೃದ್ಧಿ ಮತ್ತು ನಿರುದ್ಯೋಗ ನಿವಾರಣೆ ಎರಡು ಉದ್ದೇಶಗಳು ಸಾಧಿತವಾಗುತ್ತವೆ ಎಂದು ಅಭಿಪ್ರಾಯ ಪಟ್ಟರು. ವಿಜಯಾ ಬೇಂಕು ಸಮಾಜದ ದುರ್ಬಲ ವರ್ಗಕ್ಕೆ ಗಣನೀಯ ನೆರವು ನೀಡುತ್ತಿದೆ ಎಂದೂ ಶ್ರೀ ಶೆಟ್ಟಿ ತಿಳಿಸಿದರು.

ಶ್ರೀ ಮಹಾಬಲ ಭಂಡಾರಿಯವರು ಸ್ವಾಗತಿಸಿದರು. ರಾಜ್ಯಸಭಾ ಸದಸ್ಯ ಹಮೀದಾಲಿ ಶಮ್ನಾಡ್ ಅಧ್ಯಕ್ಷತೆ ವಹಿಸಿದ್ದರು. ಡಾ| ಕೆ. ಸಿ. ಆಳ್ವರು ಶ್ರೀ ಶೆಟ್ಟರಿಗೆ ಹಾರಾರ್ಪಣೆ ಗೈದರು.

ನಗರ ಸಭಾ ಸದಸ್ಯ ಶ್ರೀ ರಾಮಣ್ಣ ರೈ ಮಾತನಾಡುತ್ತಾ ಕಾಸರಗೋಡಿನ ಒಳ ಚರಂಡಿ ಯೋಜನೆಗಾಗಿ ರೂ. 40 ಲಕ್ಷ ವಿಜಯಾ ಬೇಂಕು ಸಾಲ ನೀಡಬೇಕೆಂದು ಕೋರಿದರು.

ಡಾ| ಕೆ. ವಿ. ಶೆಟ್ಟಿ ಮಾತನಾಡುತ್ತ ದಕ್ಷಿಣ ಕನ್ನಡದ ಕೈಗಾರಿಕೆ ಮತ್ತು ಆರ್ಥಿಕತೆ ಬೆಳವಣಿಗೆಗೆ ಮುಖ್ಯವಾಗಿ ಶ್ರೀ ಟಿ. ಎ. ಪೈ ಮತ್ತು ಶ್ರೀ ಸುಂದರರಾಮ ಶೆಟ್ಟರು ಕಾರಣರೆಂದು ಹೇಳಿದರು. ಶ್ರೀ ಕುಣಿಕುಳ್ಳಾಯ, ಶ್ರೀ ಮಾಧವ ರಾವ್, ಶ್ರೀ ವೆಂಕಪ್ಪ ರೈ ಶ್ರೀ ಕೋಝೋತ್ ನಾರಾಯಣನ್ ನಾಯರ್ ಮಾತನಾಡಿದರು.

ಸಮಾರಂಭವು ಕಾಸರಗೋಡಿನ ಸಹಕಾರಿ ಟೌನ್ ಬ್ಯಾಂಕಿನ ಹಾಲಿನಲ್ಲಿ ಜರಗಿದ್ದು ಈ ಸನ್ಮಾನ ಸಮಾರಂಭದಲ್ಲಿ ಕಾಸರಗೋಡಿನ ಪ್ರಮುಖ ನಾಗರಿಕರು ಭಾಗವಹಿಸಿದ್ದರು.

ಪುತ್ತೂರು IIIrd Adl. ಮುನ್ಸಿಫ್ ಕೋರ್ಟಿನಲ್ಲಿ

R. R. C 2003/70

ಪದ್ಮನಾಭ ಯಡಪ್ಪಾಡಿತ್ತಾಯ—ಅರ್ಜಿದಾರ

ತಿಮ್ಮಪ್ಪ ರೈ ಸಹಾ —ಎದ್ರಿರು

4ನೇ ಎದ್ರಿ: ರಾಮಣ್ಣ ಶೆಟ್ಟಿ, ಪಮ್ಮಕ್ಕೆ ಮಗ, ನೆಲ್ಯಾಡಿ ಗ್ರಾಮ.

ಸದ್ರಿ 4ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:

68–69ನೇ ವರ್ಷದ ಗೇಣಿ-ಕೇಳಿ ಅರ್ಜಿದಾರನು ನಿಮ್ಮ ವಗೈರೆರ ಮೇಲೆ ಮಾಡಿದ ಈ ನಂಬ್ರ 16–6–71ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ವಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- **M. Rammohan Rao**

Advocate for Petitioner.

Puttur,

ತಾ. 17–4–71.

ಸುರಗಿರಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮ ಕಲಶೋತ್ಸವ

ಕಿನ್ನಿಗೋಳಿಗೆ ಸಮೀಪದ ಅತ್ತೂರು, ಕೆಮ್ರಾಲ್, ಕಿಲೆಂಜೂರು ಗ್ರಾಮಗಳ ಸುರಗಿರಿ ಶ್ರೀ ಮಹಾಲಿಂಗೇಶ್ವರ ಪುನರ್‌ನಿರ್ಮಾಣವಾದ ನಿನೂತನ ದೇವಸ್ಥಾನದ ಬ್ರಹ್ಮ ಕಲಶಾಭಿಷೇಕವು ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಗಳವರ ಸಮಕ್ಷಮದಲ್ಲಿ ತಾ. ೧೨-೫-೭೧ರಂದು ಯಥಾವಿಧಿಯಾಗಿ ಜರಗಿತು. ಇದರ ಅಂಗವಾಗಿ ಏರ್ಪಡಿಸಲ್ಪಟ್ಟ ಸಾಂಸ್ಕೃತಿಕ-ಕಾರ್ಯಕ್ರಮವು ತಾ. ೧೧ರಂದು ರಾಷ್ಟ್ರ ಪ್ರಶಸ್ತಿ ವಿಜೇತ ಶ್ರೀ ಎಂ. ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಎಸ್. ಸುಬ್ರಹ್ಮಣ್ಯ ಶರ್ಮರು ಭಕ್ತಿಗೀತೆಗಳನ್ನು ಹಾಡಿದರು. ಶ್ರೀ ಸಿ. ಹೊಸಬೆಟ್ಟು ಅವರು ಭಾಷಣಮಾಡುತ್ತಾ ಶಾಶ್ವತ ಸುಖ ಶಾಂತಿ ದೊರೆಯಲು ಮಾನಸಿಕ ಸಂತೃಪ್ತಿಯೇ ಕಾರಣವೆಂದರು.

ಶ್ರೀ ಎಂ. ವಾಸುದೇವ ರಾಯರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಧರ್ಮಾಸಕ್ತಿ ಹಾಗೂ ವಿವೇಕ ಪರತೆಯಂತಹ ಸೌಜನ್ಯದ ಸದ್ಭಾವನೆಗಳು ನಮ್ಮ ಭಾರತೀಯಪರಂಪರೆಯ ವೈಶಿಷ್ಟ್ಯವೆಂದರು. ಜೀರ್ಣೋದ್ಧಾರ ಸಮಿತಿಯ ಕೋಶಾಧಿಕಾರಿ ಶ್ರೀ ಎ. ಶ್ರೀಧರ ಶೆಟ್ಟರು ಧನ್ಯವಾದ ಅರ್ಪಣೆ ಮಾಡಿದರು.

ಮರುದಿನದ ಕಾರ್ಯಕ್ರಮದ ಪ್ರಧಾನಾತಿಥಿಗಳಾಗಿ ಆಗಮಿಸಿದ ಶ್ರೀ ಪೇಜಾವರ ಶ್ರೀಪಾದಂಗಳವರು ಭಾಷಣಮಾಡುತ್ತಾ ವಿಶ್ವವೆಂಬ ಕಲ್ಪವೃಕ್ಷದ ಮೂಲಾಧಾರನಂತಿರುವ ಪರಮಾತ್ಮನ ಪಾದಮೂಲದಲ್ಲಿ ಭಕ್ತಿಯ ಹೊನಲನ್ನು ಹರಿಸಿದಾಗ ಸೊಗ ಸಂತಸಗಳ ಸಿಹಿ ಹಣ್ಣಿನ ಸವಿ ಸವಿಯಬಹುದಾಗಿವೆ ಎಂದರು. ಭಕ್ತಿಗೀತೆಗಳ ಹ ಮೇಳೆ ಶ್ರೀ ಶ್ರೀಧರ ಶೆಟ್ಟರು ವಂದಿಸಿದರು. ಎರಡು ದಿನವೂ ಕೊಡತ್ತೂರು ಅನಂತಪದ್ಮನಾಭ ಉಡುಪರು ಸ್ವಾಗತ ಭಾಷಣಮಾಡಿದ್ದರು.

ಒಂದು ವರುಷದೊಳಗೆ ಸುಮಾರು ಒಂದು ಲಕ್ಷ ರೂ. ವೆಚ್ಚದಲ್ಲಿ ನಿರ್ಮಿತವಾದ ಈ ದೇವಸ್ಥಾನದ ಪುನರ್ ನಿರ್ಮಾಣ ಕಾರ್ಯದಲ್ಲಿ ಊರವರ ಹಾಗೂ ಜೀರ್ಣೋದ್ಧಾರ ಸಮಿತಿಯ ವಿಶೇಷವಾಗಿ ಅಧ್ಯಕ್ಷ ಶ್ರೀ ಅನಂತಕೃಷ್ಣ ರಾವ್, ಕೋಶಾಧಿಕಾರಿ ಶ್ರೀ ಎ. ಶ್ರೀಧರ ಶೆಟ್ಟಿ, ಕಾರ್ಯದರ್ಶಿ ಶ್ರೀ ಕೆ. ಮಹಾಬಲ ಶೆಟ್ಟಿ, ಇವರ ದಕ್ಷ ನೇತೃತ್ವವು ಪ್ರಶಂಸನೀಯ ಎನ್ನಲಾಗಿದೆ ಸುಮಾರು ೩೫,೦೦೦ಕ್ಕಿಂತಲೂ ಹೆಚ್ಚಿನ ವೆಚ್ಚದಲ್ಲಿ ಇಲ್ಲಿಯ ಗರ್ಭಗುಡಿಯನ್ನು ನಿರ್ಮಿಸಿದ ಮುಂಬಯಿಯ ಶ್ರೀ ಎ. ಭೋಜ ಶೆಟ್ಟಿ ಮತ್ತು ಶ್ರೀ ಎ. ಬಾಬು ಶೆಟ್ಟಿ ಹಾಗೂ ಬಳಗದವರ ಕೊಡುಗೈಯ ನೀಡಿಕೆ ಮಹತ್ವಪೂರ್ಣವಾದುದೆನ್ನಲಾಗಿದೆ.

● ●

ರಾಜ್ಯದ ಹೈಸ್ಕೂಲುಗಳಿಗೆ ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ ಎಲ್. 4. 17–4/65–66ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಲಾಲ್ ಸಿಂಗನ ಕೊಲೆ

(ಎರಡನೇ ಪುಟದಿಂದ)

ಅಷ್ಟಕ್ಕೇ ಎಲ್ಲ ಮುಗಿಯಲಿಲ್ಲ. ಅದು ಅಲ್ಲಿಗೇ ನಿಲ್ಲಲಿಲ್ಲ. ಲಾಲ್ ಸಿಂಗ್ ಹೆಂಡತಿಯನ್ನು ಮರಳಿ ಹೊಂದಲು ಸನ್ನದ್ಧನಾದ ಮಹಾರಾಜರ ಲಹರಿಗೆ ಆತ ಮಾನವನ್ನೂ, ಮೂಲಭೂತ ಹಕ್ಕನ್ನೂ ಮಾರಲು ಅವನ ಮನಸ್ಸು ಹಿಂದೆಗೆಯಿತು. ಬ್ರಿಟಿಷ್ ಸರಕಾರದ ನೆರವಿನಿಂದ ಅದನ್ನು ಸಾಧಿಸಬಹುದು ಎಂದು ಆತ ಗ್ರಹಿಸಿದ.

ಮಹಾರಾಜರು ಕಣ್ಣು ಮುಚ್ಚಿಕೊಂಡು ಕುಳಿತಿರಲಿಲ್ಲ ಲಾಲ್‌ಸಿಂಗನ ಚಟುವಟಿಕೆಗಳನ್ನು ಅವರು ಸೂಕ್ಷ್ಮವಾಗಿ ಅಭ್ಯಸಿಸಲಾರಂಭಿಸಿದರು. ತಮ್ಮ ದಲೀಪಳ ಸಂಬಂಧ ಬೀದಿಯ ಮಾತಾಗುವುದು ಮಹಾರಾಜರಿಗೆ ಬೇಕಿರಲಿಲ್ಲ. ಅದರಿಂದ ತನ್ನ ಮಾನಕ್ಕೆ ಕುಂದೆಂಬುದನ್ನು ಅವರು ಅರಿತಿದ್ದರು ಬರಲಿರುವ ಅಪವಾದಗಳನ್ನು ಹತ್ತಿಕ್ಕಲು ಅವರು ಹಂಚಿಕೆ ಹಾಕಿದರು.

ಸಮಸ್ಯೆಯ ಪರಿಹಾರಕ್ಕೆ ಅವರು ಹುಡುಕಿ ತೆಗೆದ ಸುಲಭೋಪಾಯದ ವಿವರಕ್ಕೆ ಪುನಃ ಸರದಾರ ನಾನಕ ಸಿಂಗರ ದಿನಚರಿಯೇ ನಮಗೆ ಆಸರೆ. ಆ ಕುರಿತು ಅವರು ಹೀಗೆ ಉಲ್ಲೇಖಿಸಿದ್ದಾರೆ–

'–ಅಂದು ಮಹಾರಾಜರು ನನ್ನೊಡನೆ ಎರಡು ತಾಸುಗಳ ಕಾಲ ಸಂಭಾಷಿಸಿದರು. ಈ ಮಾತುಕತೆಯಿಂದ ಅವರು ನನ್ನಲ್ಲಿ ನಂಬುಗೆಯನ್ನಿಟ್ಟಿರುವುದು ಖಚಿತವಾಯಿತು.'

ಅನಂತರ ಅವರು ತಮ್ಮ ಅಂತರಂಗದಲ್ಲಿದ್ದುದನ್ನು ಬಹಿರಂಗ ಪಡಿಸಿದರು. ಲಾಲ್ ಸಿಂಗನು ಬದುಕಿರುವಷ್ಟು ದಿನ ತಮಗೆ ಶಾಂತಿ—ಸುಖ ಸಿಗುವುದು ಸಾಧ್ಯವಿಲ್ಲ ಎಂದು ತಿಳಿಸಿದರು. ಅವರ ಮಾತುಗಳನ್ನು ಕೇಳಿ ನಾನು ಅವಾಕ್ಕಾದೆ. ಅವರನ್ನೇ ನೋಡುತ್ತ ಕುಳಿತೆ ಅವರು ಪುನಃ ಆ ಮಾತನ್ನೇ ಉಚ್ಚರಿಸಿದರು.

ತಾವು ಪ್ರಭುಗಳು; ರಾಜ್ಯದ ರಾಜರು. ಕೆಲಸವನ್ನು ಹಗುರದ್ದೆಂದು ತಿಳಿಯಕೂಡದು. ಆದರಿಂದ ಅಪಖ್ಯಾತಿ, ಅಪಾಯ ಎರಡೂ ಬರುವ ಸಂಭವವಿದೆ ಎಂದು ನಾನೂ ಸೂಚಿಸಿದೆ.

ಮಹಾರಾಜರು ಅದಕ್ಕೊಪ್ಪಲಿಲ್ಲ. ತಮ್ಮ ಹಟ ಬಿಡಲಿಲ್ಲ. ಲಾಲ್ ಸಿಂಗನ ತೊಡರುಗಾಲನ್ನು ತೆಗೆಯಲು ನನಗೆ ಆಜ್ಞೆ ಮಾಡಿದರು. ನಾನು ಹಿಂದು ಮುಂದು ನೋಡಿದೆ; ಹಿಂದಲೇಟು ಹಾಕಿದೆ. ಕೊನೆಯಲ್ಲಿ ಅನ್ಯ ಮಾರ್ಗ ಕಾಣದೆ ಒಪ್ಪಿದೆ. ಗುರಿ ಸಾಧಿಸಲು ಸಹಕರಿಸುವುದಾಗಿ ಭರವಸೆ ಕೊಟ್ಟೆ.

ಬಾಯಿಂದ ಅಷ್ಟು ಬೀಳುವುದೇ ತಡ, ಮಹಾರಾಜರು ಚೆಕ್ಕು ಪುಸ್ತಕ ತರಿಸಿಕೊಂಡು, ನನ್ನ ಹೆಸರಿಗೆ 700೦- ರೂಪಾಯಿಗಳ ಚೆಕ್ಕು ಬರೆದು ಕೊಟ್ಟರು. ಆ ಚೆಕ್ಕನ್ನು ಮುರಿಸಿ, ಆ ಮೊತ್ತವನ್ನು ನಾನು ಪಡೆದೆ.

ಲಾಲ್ ಸಿಂಗನ ಕೊಲೆಯ ಯತ್ನ ಭರದಿಂದ ಸಾಗಿತು. ಲಾಲ್ ಸಿಂಗನನ್ನು ಪೂರೈಸಲು ಮಹಾರಾಜರು ಎರಡು ಪಿಸ್ತೂಲುಗಳನ್ನು ದಯಪಾಲಿಸಿದರು. ಅವುಗಳನ್ನು ಪ್ರಭುಗಳು ಹೇಳಿದವರ ಕೈಗೆ ಕೊಡಲು ನಾನಕರಿಗೆ ತಿಳಿಸಲಾಯಿತು. ಅವುಗಳಲ್ಲಿ ಒಂದನ್ನು ಉಜ್ಜಿರಸಿಂಗನಿಗೆ ಕೊಟ್ಟರು. ಪಿಸ್ತೂಲಿನ ಹಸ್ತಾಂತರದ ದಾಖಲೆಯನ್ನು ಠಾಣೆಯ ದಿನವಹಿಯಲ್ಲಿ ಬರೆದಿರಿಸಲು ಶಾಸಕರು ಮರೆಯಲಿಲ್ಲ.

ಅನಂತರ ಧುರಿಯಲ್ಲಿ ದೇಶಭ್ರಷ್ಟನಾಗಿ ಅಲೆಯುತಿದ್ದ ಗಂಧೂರ ಸಿಂಗನಿಂದ ಮಹಾರಾಜರು ನಾನಕರ ಮೂಲಕ ಸ್ವದೇಶಕ್ಕೆ ಮರಳಲು ಅನುಮತಿ ಯಾಚಿಸುವ ಅರ್ಜಿ ತರಿಸಿಕೊಂಡರು. ರಾಜಾಜ್ಞೆ ಸಿಗುವುದೇ ತಡ ಗಂಧೂರ ಸಿಂಗ ಪಾಟಿಯಾಲಕ್ಕೆ ಬಂದ. ಗಂಧೂರ ಸಿಂಗ್– ಲಾಲ್ ಸಿಂಗ್ ಬಹಳ ಕಾಲದ ಸ್ನೇಹಿತರು. ದಲೀಪಳಿಂದ ವಿಚ್ಛೇದನ ಹೊಂದಲು ಲಾಲ್ ಸಿಂಗನನ್ನು ಒತ್ತಾಯಿಸಲೆಂದೇ ಗಂಧೂರ ಸಿಂಗನನ್ನು ಕರೆಸಿಕೊಂಡುದು. ಉಜ್ಜಿರ ಸಿಂಗ್, ಗಂಧೂರ ಸಿಂಗ್, ಸರದಾರ ನಾನಕ್—ಎಲ್ಲ ಒಂದೆಡೆ ಕಲೆತರು. ಪ್ರಭು ಕಾರ್ಯ ನಿರ್ವಹಿಸಲು ಕಾರ್ಯಕ್ರಮ ಹಾಕಿಕೊಂಡರು. ಅದರ ವಿವರ ಕೈಗೆ ಸಿಕ್ಕಿದ ಮರುಗಳಿಗೆಯಲ್ಲಿ, ಭೂಪೇಂದ್ರ ಸಿಂಗರು ಯುದ್ಧ ಸಮಿತಿಯಲ್ಲಿ ಪಾಲ್ಗೊಳ್ಳಲು ಯುರೋಪಿಗೆ ಹೊರಟು ನಿಂತರು.

ಗಂಧೂರ ಸಿಂಗ್–ಲಾಲ್ ಸಿಂಗ್ ಪರಸ್ಪರ ಸಂಧಿಸಿದರು. ಆ ಭೆಟ್ಟಿಯ ಕಾಲದಲ್ಲಿ ಸ್ವದೇಶಕ್ಕೆ ಮರಳುವ ವಿಚಾರವನ್ನು ಮಹಾರಾಜರು ವಿರೋಧಿಸಿದರೆಂದೂ, ಆದರೆ ಬ್ರಿಟಿಷ್ ಸರಕಾರ ಅನುಗ್ರಹಿಸಿತೆಂದೂ ಸುಳ್ಳು ಹೇಳಿದ. ಅವನ ಮಾತನ್ನು ಲಾಲ್ ಸಿಂಗ್ ನಂಬಿದ. ನಂಬಿದ್ದು ಮಾತ್ರವಲ್ಲ, ಅವನಿಂದ ಪ್ರಚೋದಿತನಾಗಿ ಬ್ರಿಟಿಷ್ ಸರಕಾರದ ನೆರವಿನಿಂದ ಹೆಂಡತಿಯನ್ನು ಮರಳಿ ಪಡೆಯಲು ಉದ್ಯುಕ್ತನಾದ.

ಅದನ್ನು ಸಾಧಿಸಲು ಅವರು ಪರಸ್ಪರ ಸಂಧಿಸುವುದು ಅನಿವಾರ್ಯವಾಯಿತು. ಪತ್ನಿಯನ್ನು ಪುನಃ ಸಂಪಾದಿಸುವ ಪ್ರಯತ್ನವನ್ನು ಅತ್ತ ಮುಂದುವರಿಸುತಿದ್ದಂತೆ, ಇತ್ತ ಅವನ ಕೊಲೆಯ ಯತ್ನವೂ ಮುಂದುವರೆಯಿತು. ಫೋನು ಮೂಲಕ ಅವನನ್ನು ಕರೆಸಿಕೊಂಡು, ಯಾರಿಗೂ ತಿಳಿಯದಂತೆ ಅವನನ್ನು ಅಪಹರಿಸಿ, ಸರದಾರ ಗುರುನಾಮ ಸಿಂಗರ ಬಾವಿಯ ಬಳಿ ಉಜ್ಜಿರ ಸಿಂಗ್, ಗಂಧೂರ ಸಿಂಗ್, ಕೊಲ್ಲಲು ಮಸಲತ್ತು ನಡೆಸಿದರು.

1919ರ ಮಾರ್ಚಿ 28ರಂದು ಲಾಲ್ ಸಿಂಗನಿಗೆ ರಾತ್ರಿ ಒಂಭತ್ತರ ಸುಮಾರಿಗೆ ಒಂದು ಫೋನ್ ಕರೆ ಬಂತು. ಈ ಕರೆ ಕೊಟ್ಟವನು ಗಂಧೂರ ಸಿಂಗ್. ಆದರೆ ಫೋನಿನಲ್ಲಿ ಮಾತನಾಡುವಾಗ ಸ್ವರ ಬದಲಾಯಿಸಿದ. ತಾನು ದೆಹಲಿಯ ಪ್ರಸಿದ್ಧ ಕಂಟ್ರಾಕ್ಟರ್ ನಾರಾಯಣ ಸಿಂಗನೆಂದೂ, ದೆಹಲಿಯಿಂದ ಈಗ ತಾನೇ ಬಂದುದಾಗಿಯೂ, ಕೆಲವು ಮುಖ್ಯ ವಿಷಯಗಳನ್ನು ಚರ್ಚಿಸಬೇಕಾಗಿದೆಯೆಂದೂ, ಲಾಹೋರ್ ಗೇಟಿನ ಬಳಿ, ಬಂದು ಕಾಣಬೇಕೆಂದೂ ತಿಳಿಸಿದ. ಪುನಃ ದೆಹಲಿಗೆ ಹೋಗಬೇಕಾಗಿರುವುದರಿಂದ ತಪ್ಪದೆ ಬರಬೇಕೆಂದೂ ಸೂಚಿಸಿದ.

ಲಾಲ್ ಸಿಂಗ ಮನೆಯಿಂದ ಹೊರ ಬಿದ್ದ. ಸೈಕಲಿನಲ್ಲಿ ಲಾಹೋರ್ ಗೇಟಿನತ್ತ ಧಾವಿಸಿದ. ತನ್ನ ಮೇಲೆ ಬೀರಿದ ಮೋಸದ ಬಲೆಯನ್ನು ಆತ ತಿಳಿಯದಾದ. ಲಾಲ್ ಸಿಂಗ್ ಸೈಕಲು ತುಳಿಯುತ್ತ ಗಂಧೂರ ಸಿಂಗನ ಬಂಗಲೆಯನ್ನು ದಾಟಿ, ಇನ್ನೇನು ಲಾಹೋರ್ ಗೇಟಿನತ್ತ ತಿರುಗುತಿದ್ದ. ಅಷ್ಟರಲ್ಲಿ ಗಂಧೂರ ಸಿಂಗನ ಸಂಬಂಧಿ ಹರನಾಮ ಸಿಂಗ್ ಅವನನ್ನು ತಡೆದ. ಆತ ದೂರವಾಣಿಯಲ್ಲಿ ಮಾತನಾಡಿದವನು ಗಂಧೂರ ಸಿಂಗನೆಂದೂ, ರಹಸ್ಯ ಮಾತುಕತೆಗಳನ್ನು ನಡೆಸಬೇಕಾಗಿದೆಯೆಂದೂ, ಗಂಧೂರ ಸಿಂಗ್ ಅವನಿಗಾಗಿಯೇ ರೈಲ್ವೇ ಕ್ರಾಸಿಂಗ್ ಬಳಿ ಕಾಯುತ್ತಿರುವನೆಂದೂ ತಿಳಿಸಿದ. ಅಲ್ಲಿಂದ ಅವರಿಬ್ಬರು ಗಂಧೂರ ಸಿಂಗನಿರುವಲ್ಲಿಗೆ ಹೋದರು.

ಗಂಧೂರ ಸಿಂಗ್ ಅವರಿಬ್ಬರು ಬರುವುದನ್ನೇ ಕಾಯುತ್ತ ನಿಂತಿದ್ದ. ಲಾಲ್ ಸಿಂಗನನ್ನು ಕಂಡೊಡನೆಯೇ 'ತುಂಬ ಗುಟ್ಟಿನ ಮಾತುಗಳಿವೆ. ಎಲ್ಲಿ ಕುಳಿತು ಮಾತನಾಡುವುದು?' ಎಂದು ಗಂಧೂರ ಸಿಂಗ್ ಪ್ರಶ್ನಿಸಿದ. ಗುರುನಾಮ ಸಿಂಗರ ತೋಟವೇ ಪ್ರಶಸ್ತ ಸ್ಥಳವೆಂದು ಲಾಲ್ ಸಿಂಗ್ ಸೂಚಿಸಿದ.

ಗಿಡ ಮರಗಳು ಹುಲುಸಾಗಿ ಬೆಳೆದ ಆ ತೋಟವನ್ನು ಮೂವರೂ ಪ್ರವೇಶಿಸಿದರು. ತಾನು ಸೂಚಿಸಿದ ತಾಣದಲ್ಲಿ ಲಾಲ್ ಸಿಂಗ್ ಸಾವನ್ನು ಕಂಡ. ಮೊದಲು ಮಾತನಾಡಿಕೊಂಡಂತೆ ಗುರನಾಮ ಸಿಂಗ್ ಲಾಲ್ ಸಿಂಗನಿಗೆ ಹಿಂಬದಿಯಲ್ಲಿದ್ದುಕೊಂಡು ತಲೆಯ ಮೇಲೆ ಬಲವಾಗಿ ಹೊಡೆದ. ಅಷ್ಟರಲ್ಲಿ ಅಡಗಿ ಕುಳಿತ ಸ್ಥಳದಿಂದ ಇನ್ನಿಬ್ಬರು—ಕರ್ತಾರ ಸಿಂಗ್, ಧಲ್ಲೂ ಸಿಂಗ್– ನುಗ್ಗಿದರು. ಮೂವರೂ ಸೇರಿಕೊಂಡು ಲಾಲ್ ಸಿಂಗನನ್ನು ನೆಲಕ್ಕೆ ಕೆಡವಿಕೊಂಡರು. ಕತ್ತು ಹಿಸುಕಿ ಕೊಲ್ಲಲು ಯತ್ನಿಸಿದರು. ಆಕ್ರಮಣಕಾರರ ಹಿಡಿತದಿಂದ ಲಾಲ್ ಸಿಂಗ ಬಿಡಿಸಿಕೊಂಡು ಎದ್ದು ನಿಂತ. ನಿಲ್ಲುತಿದ್ದಂತೆಯೇ ಗಂಧೂರ ಸಿಂಗ, ತನ್ನ ಬಳಿ ಇಟ್ಟುಕೊಂಡಿದ್ದ ಪಿಸ್ತೂಲಿನಿಂದ, ನಾಲ್ಕು ಬಾರಿ ಗುರಿ ಇಟ್ಟು ಹೊಡೆದ. ಅವುಗಳಲ್ಲಿ ಎರಡು ಲಾಲ್ ಸಿಂಗನ ಎದೆಗೂ, ಇನ್ನೆರಡು ತಲೆಗೂ ತಗಲಿದುವು. ಆ ರಾತ್ರಿಯೇ ಲಾಲ್ ಸಿಂಗನ ಶವವನ್ನು ಅಲ್ಲಿಂದ ಸಾಗಿಸಿ, ಕಾದರ್ ಎನ್ನುವ ಹಳ್ಳಿಯ ಹತ್ತಿರದಲ್ಲಿ ಸುಟ್ಟು ಬೂದಿ ಮಾಡಿದರು.

ವಿದೇಶದಲ್ಲಿದ್ದ ಮಹಾರಾಜರಿಗೆ ಲಾಲ್ ಸಿಂಗನ ಸಾವಿನ ಸುದ್ದಿಯನ್ನು ಕೇಬಲ್ ಮೂಲಕ ತಿಳಿಸಲಾಯ್ತು. ಹಿಗ್ಗಿಹೋದ ಮಹಾರಾಜರು ಹತ್ತಿರದಲ್ಲಿದ್ದವರಿಗೆ ಸಿಹಿ ಹಂಚಿದರಂತೆ. ಹೇರಳ ಬಹುಮಾನಗಳ ವಿತರಣೆಯೂ ಆಯಿತು. ಇದು ಅನಂತರ ಬೆಳಕಿಗೆ ಬಂತು. ಅಂತೂ ದಲೀಪ್ ಮಹಾರಾಣಿಯಾದಳು.

ಲಾಲ್‌ಸಿಂಗ್ ಕಣ್ಮರೆಯಾಗಿರುವ ವರ್ತಮಾನವನ್ನು ಮರುದಿನ 10 ಗಂಟೆಯ ಸುಮಾರಿಗೆ ಗುರುನಾಮ ಸಿಂಗರ ಆಳು, ಜಿಲ್ಲಾ ರಕ್ಷಣಾಧಿಕಾರಿ ನಾನಕ ಸಿಂಗರಿಗೆ ತಿಳಿಸಿದ. ವರದಿಯನ್ನು ಠಾಣೆಯಲ್ಲಿ ತಿಳಿಸುವಂತೆ ಅವರು ಆ ಆಳು ಮಗನಿಗೆ ಹೇಳಿದರು.

ದಿವಾನ್ ದಯಾಳ್ ಕರ್ಮ ಈ ಮೊಕದ್ದಮೆಯ ವಿಚಾರಣೆಯಲ್ಲಿ ಎಲ್ಲಿಲ್ಲದ ಉತ್ಸಾಹ ತೋರಿಸಿದರು. ನಾನಕ ಸಿಂಗರ ದಿನಚರಿಯ ಪ್ರಕಾರ ಪಾಟಿಯಾಲಕ್ಕೆ ಬಂದ ದಿವಾನರು ನಾನಕ ಸಿಂಗರನ್ನು ತಮ್ಮ ಬಂಗಲೆಗೆ ಕರೆಸಿಕೊಂಡರು.5000 ·.00 ರೂಪಾಯಿಗಳ ಬಹುಮಾನವನ್ನೂ, ಇನ್ಸ್‌ಪೆಕ್ಟರ್ ಜನರಲ್ಲರ ಹುದ್ದೆಯ ಆಮಿಷವನ್ನೂ ನಾನಕರ ಮುಂದೆ ಒಡ್ಡಿದರು. ಹಿರಿಯ ಪೋಲಿಸ್ ಅಧಿಕಾರಿಯಾಗಿದ್ದ ನಾನಕ ಸಿಂಗರಿಗೆ ಮಹಾರಾಜರ ವಿರುದ್ಧ ಒಂದು ವರದಿ ತಯಾರಿಸಲು ಸೂಚಿಸಿದರು ಸ್ವಾರ್ಥ ಸಾಧನೆಗೆ ಆ ವರದಿಯನ್ನು ಬಳಸಲು ದಿವಾನರು ಸಂಕಲ್ಪಿಸಿದ್ದರು. ಕೋರ್ಟಿನ ಮುಂದು ಮಹಾರಾಜರನ್ನು ನಿಲ್ಲಿಸುವುದು ದಿವಾನರಿಗೆ ಬೇಕಿರಲಿಲ್ಲ. ಮಹಾರಾಜರನ್ನು ಆಟದ ಬೊಂಬೆಯಂತೆ ಕುಣಿಸುವುದು ಸಾಧ್ಯ ಎಂಬುದಾಗಿ ಅವರು ತರ್ಕಿಸಿದ್ದರು. ಇದು ನಾನಕ ಸಿಂಗರನ್ನು ಬುಟ್ಟಿಯಲ್ಲಿ ಹಾಕಿಕೊಳ್ಳಲು ದಿವಾನರು ನಡೆಸಿದ ಯತ್ನ.

ಆಗಲೇ ಒಂದು ಹೊಲಸು ಒಳ ಸಂಚಿನಲ್ಲಿ ನಾನಕ ಸಿಂಗ್ ಸಿಲುಕಿಕೊಂಡಿದ್ದ. ದಿವಾನರ ಸಲಹೆಯನ್ನು ನಾನಕ ನಿರಾಕರಿಸಿದ. ಅವರೀರ್ವರಲ್ಲಿ ವಿರಸ ಹುಟ್ಟಿತು.

ಲಾಲ್ ಸಿಂಗನ ನಾಪತ್ತೆಯ ಕುರಿತು ಭಾರತ ಸರಕಾರ ಪಂಜಾಬದ ಗುಪ್ತ ಪೋಲಿಸ್ ದಳದ ಮುಖೇನ ತನಿಖೆ ನಡೆಸುತ್ತಿತ್ತು.

ದುರಂತ ನಡೆದ ಸ್ವಲ್ಪ ಕಾಲದ ಮೇಲೆ

ಇನ್ನೊಂದು

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated; delicious food,
Comfortable rooms, Courteous service.

Attached bath rooms with running hot and cold water.
Telephone attached rooms.

NAVAYUGA 20-5-1971

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಮಹಾರಾಜರು ವಿದೇಶದಿಂದ ಬಂದರು. ಲಾಲ್ ಸಿಂಗನ ನಾಪತ್ತೆಯ ಸಂಬಂಧದಲ್ಲಿ ಪಾಟಿಯಾಲದ ಪೋಲಿಸರು ಯಾರನ್ನೂ ಬಂಧಿಸಿರಲಿಲ್ಲ. ನಾನಕಸಿಂಗ್, ಗಂಧೂರಸಿಂಗ, ಹರನಾಮ ಸಿಂಗ್, ಉಜ್ಗರ್ ಸಿಂಗ್, ಇನ್ನೂ ಸೆರೆಮನೆಯ ಹೊರಗೆ ಉಳಿದಿದ್ದರು. ಸತ್ಯ ಎಲ್ಲರಿಗೂ ತಿಳಿದಿತ್ತು. ಆದರೂ ಪತ್ತೆ ತರದೂದಿನ ನಾಟಕ ನಡೆಯುತ್ತಿತ್ತು. ಅಧಿಕೃತ ವರದಿ ಇನ್ನೂ ಸಿದ್ಧವಾಗಿರಲಿಲ್ಲ.

ಉಜ್ಗರ ಸಿಂಗ್, ಗಂಧೂರ ಸಿಂಗ್ ಮುಂಬಯಿಗೆ ಬಂದು ಪ್ರಭು ದರ್ಶನಕ್ಕೆ ಪ್ರಯತ್ನಿಸಿದರು. ಮಹಾರಾಜರಿಗೆ ಅವರನ್ನು ಕಾಣುವ ಆತುರ. ಲಾಲ್ ಸಿಂಗನ ಸಾವಿನ ಸವಿವರ ವರದಿಯನ್ನು ಅವರಿಂದ ತಿಳಿದುಕೊಳ್ಳಲು ಮಹಾರಾಜರು ಎಲ್ಲಿಲ್ಲದ ಉತ್ಸಾಹ ವ್ಯಕ್ತಪಡಿಸಿದರು. ದಿವಾನರ ಆದೇಶದಂತೆ ಈ ಭೆಟ್ಟಿ ರದ್ದಾಯಿತು. ಅವರನ್ನು ಕಾಣುವುದರಿಂದ ಅಪಾಯ ಸಂಭವಿಸಬಹುದೆಂದು ದಿವಾನರು ಎಚ್ಚರಿಕೆ ಕೊಟ್ಟರು.

ಪಾಟಿಯಾಲದ ಇನ್ಸ್‌ಪೆಕ್ಟರ್ ಜನರಲ್ ಶ್ರೀ ತಾರಾಚಂದರ ಮಾರ್ಗದರ್ಶನದಲ್ಲಿ ಕೊಲೆಯ ತನಿಖೆ ನಡೆಯಿತು. ಬೀದಿಯ ಮಾತಾಗಿದ್ದ ಈ ಕೊಲೆಗೆ ಸಂಬಂಧಿಸಿದ ಆರೋಪ ಸ್ಥಿರಪಡಿಸಲು, ಅಗತ್ಯ ಬೇಳುವ ದಾಖಲೆ ದೊರಕಿಸಿಕೊಳ್ಳಲು ಪೋಲಿಸರಿಗೆ ಕಾಲ ಹಿಡಿಯಿತು.

ಸರದಾರ ನಾನಕಸಿಂಗ ತನಗೊದಗಬಹುದಾದ ವಿಪತ್ತನ್ನು ಎಂದೋ ಕಂಡಿದ್ದ. ಮಹಾಜರ ಆಜ್ಞೆಯಂತೆ ಆತ ಕೆಲಸ ಪೂರೈಸಿದ್ದ. ಆದರೂ ತನಗೆ ಕಷ್ಟ ಗಂಟು ಬೀಳದಿರದು ಎಂದು ಮನಗಂಡಿದ್ದ. ಆತ ಪಾಟಿಯಾಲ ಬಿಟ್ಟು ಬಂದ. ಕೊಂಚ ಕಾಲ ಹೆಂಡತಿ ಮಕ್ಕಳೊಡನೆ ಗುಜರ್ ಖಾನ್ ಎನ್ನುವಲ್ಲಿ ನೆಲೆನಿಂತ. ಅಲ್ಲಿ ಆತ ತನ್ನ ದಿನಚರಿಯನ್ನು ಬರೆದು ಮುಗಿಸಿದ. ಅದಕ್ಕೆ ತನ್ನ ಮುದ್ರೆಯೊತ್ತಿ ಪತ್ನಿಯ ಕೈಗಿತ್ತು ಪಾಟಿಯಾಲಕ್ಕೆ ಹಿಂತಿರುಗಿದ.

"ಬದುಕಿ ಉಳಿದರೆ ನಾನೇ ಎಲ್ಲವನ್ನೂ ಕೋರ್ಟಿನ ಮುಂದೆ ಹೇಳುತ್ತೇನೆ. ಆದರೆ ಸತ್ಯ ನನ್ನೊಡನೆ ಸಾಯಬಾರದು. ನಿರಪರಾಧಿಗಳನ್ನು ಬಲಿ ತೆಗೆದುಕೊಳ್ಳುವ ಪ್ರಯತ್ನ ತಪ್ಪಬೇಕು. ಅದಕ್ಕಾಗಿಯೇ ಈ ದಿನಚರಿಯನ್ನು ಬರೆದಿರಿಸಿದ್ದೇನೆ.'

ಡೈರಿಯಲ್ಲಿ ಯಾವುದನ್ನೂ ಅವರು ಬಚ್ಚಿಡಲಿಲ್ಲ. ಲಾಲ್‌ಸಿಂಗನ ಕೊಲೆ ವಿಚಾರಣೆಯ ಕಾಲದಲ್ಲಿ ಆತನ ಡೈರಿ ಕೋರ್ಟಿನ ಮುಂದು ಬಂತು. ಡೈರಿಯಲ್ಲಿನ ಕೊನೆಯ ವಾಕ್ಯಗಳು ಇಂತಿದ್ದುವು.

"ಕೊಲೆಗಡುಕರು—ಉಜ್ಗರ ಸಿಂಗ್. ಗಂಧೂರ ಸಿಂಗ್, ಹರನಾಮಸಿಂಗ್. ಕೊಲೆಗೆ ಸಂಚು ನಡೆಸಿದವರು—ನಾನು ಮತ್ತು ಮಹಾಜರು. ಅವರ ಜೊತೆ ದಲೀಪಳೂ ಇದ್ದಳು. ಹೃದಯದ ಭಾರವನ್ನು ಕಡಿಮೆ ಮಾಡಿಕೊಳ್ಳಲು ಇದನ್ನು ನಡೆದಂತೆ ಬರೆದಿದ್ದೇನೆ. ಯಾರಿಗೂ ಅಂಜುವುದಿಲ್ಲ. ನನಗೆ ಅನ್ಯರ ಅನುಗ್ರಹ, ಅನುಕಂಪ ಎರಡೂ ಬೇಕಿಲ್ಲ. ಈ ಪಾಪ ಕೃತ್ಯದಲ್ಲಿನ ನನ್ನ ಪಾಲಿದೆ. ಅದನ್ನು ನಾನು ಮರೆಯುವುದಿಲ್ಲ. ದೇವರು ನನ್ನನ್ನು ಕ್ಷಮಿಸಿ ಉದ್ಧರಿಸಲಿ".

ಕೇಂದ್ರ ಸರಕಾರದ ಗುಪ್ತ ಪೋಲೀಸರು ತನಿಕೆ ನಡೆಸುತ್ತಿರುವರೆಂಬ ಸುಳಿವು ಸಿಕ್ಕಿದ್ದರಿಂದ ಲಾಲ್‌ಸಿಂಗನ ಕೊಲೆಯ ಆರೋಪ ಹೊರಿಸಿ, ನಾನಕ ಸಿಂಗ್, ಉಜ್ಗರ ಸಿಂಗ್, ಗಂಧೂರ್ ಸಿಂಗ್, ಹರನಾಮಸಿಂಗ್ ಇವರನ್ನು ದಸ್ತಗಿರಿ ಮಾಡಿ, ನ್ಯಾಯಾಲಯದ ಮುಂದೆ ನಿಲ್ಲಿಸಿದರು. ಪಾಟಿಯಾಲದ ಸರ್ವೋಚ್ಚ ನ್ಯಾಯಾಲಯ ಈ ಹತ್ಯಾಕಾಂಡದ ವಿಚಾರಣೆ ನಡೆಸಿತು. ಕೊಲೆಯಲ್ಲಿ ಮಹಾರಾಜರ ಕೈವಾಡವಿರುವುದು ನಿಚ್ಚಳವಾಗಿ ಮೂಡಿಬಂತು. ಆದರೆ ಅವರು ಕೋರ್ಟಿನ ವ್ಯಾಪ್ತಿಗೆ ಅತೀತರಿದ್ದರು. ಆದ್ದರಿಂದ ಕೋರ್ಟು ಮೌನ ತಳೆಯಿತು.

ಆರೋಪಿಗಳು ನಡೆಸಿದ ಕೊಲೆ ಉಗ್ರಸ್ವರೂಪದ್ದು. ವಿನಾಕಾರಣ ಚಾಣಕ್ಯೆಯಿಂದ ಲೆಖ್ಖಾಚಾರ ಹಾಕಿ ಮಾಡಿದ ಕ್ರೂರಕರ್ಮ. ನ್ಯಾಯಾಲಯ ಆರೋಪಿಗಳಿಗೆ ಜೀವಾವಧಿ ಕಠಿಣ ಶಿಕ್ಷೆ ವಿಧಿಸಿತು. ಹೇರಿದ ಆಪಾದನೆಗೂ ನೀಡಿದ ಶಿಕ್ಷೆಗೂ ಸಂಬಂಧವೇ ಇರಲಿಲ್ಲ. ತೀರ್ಪಿನ ಮುಖ್ಯ ಅಂಶಗಳು ಇಂತಿವೆ:

ಮೃತ ಲಾಲ್‌ಸಿಂಗನ ಪತ್ನಿ ಅರಮನೆಯಲ್ಲಿ ರಾಜರ ಜೊತೆಗಿರುವುದು ನಿಶ್ಚಯ. ನಾನಕಸಿಂಗ್, ಗಂಧೂರಸಿಂಗ್ ಮೃತ ಲಾಲ್‌ಸಿಂಗನಿಂದ ವಿಚ್ಛೇದನ ಪತ್ರ ಬರೆಸಿಕೊಳ್ಳಲು ಪ್ರಯತ್ನಿಸಿದರೆನ್ನುವುದು ಸಾಬೀತಾಗಿದೆ. ರಾಜ್ಯಭ್ರಷ್ಟನಾದ ಗಂಧೂರಸಿಂಗನನ್ನು ಪುನಃ ಕರೆಸಿಕೊಂಡು, ಅವನಿಗೆ ಪ್ರಭುಗಳ ಭೇಟಿಗೆ ಎಡೆಮಾಡಿಕೊಟ್ಟರೆಂಬುದು ನಿರ್ವಿವಾದ. ಮಹಾರಾಜರ ಆಜ್ಞೆಯಂತೆ ಗಂಧೂರಸಿಂಗನಿಗೆ ಬಂಧುವಿನ ಆಸ್ತಿಯಲ್ಲಿ ಸಮಭಾಗ ಸಿಕ್ಕಿತೆಂಬುದು ನಿರ್ವಿವಾದ. ಗಂಧೂರ ಸಿಂಗ್ ಉಜ್ಗರ ಸಿಂಗ್, ಹರನಾಮಸಿಂಗ್ ಕೊಲೆ ಮಾಡಿದವರೆನ್ನಲು ಯಾವ ಅಡ್ಡಿಯೂ ಇಲ್ಲ. ಸ್ವಾರ್ಥ ಸಾಧನೆಗಾಗಿ ಆರೋಪಿಗಳು ಈ ಕೃತ್ಯ ನಡೆಸಿದ್ದಾರೆ. ವಿಚಾರಣೆಯ ಕಾಲದಲ್ಲಿ ಆಪಾದಿತರು, ಅತ್ಯುನ್ನತ ಸ್ಥಾನದಲ್ಲಿರುವವರ ಚಾರಿತ್ರ್ಯದ ವಧೆಗೆ ನಡೆಸಿದ ಪ್ರಯತ್ನವನ್ನು ಕೋರ್ಟು ತೀವ್ರವಾಗಿ ಖಂಡಿಸುತ್ತದೆ."

ಹೀಗೆ ಮುಕ್ತಾಯಗೊಂಡಿತು ಲಾಲ್ ಸಿಂಗನ ಕೊಲೆ ಖಟ್ಲೆ. ತೀರ್ಪು ಹೊರಬಿದ್ದ ವರ್ಷದೊಳಗೆ, ಉಜ್ಗರ್ ಸಿಂಗ್, ಹರನಾಮಸಿಂಗ್, ಗಂಧೂರ ಸಿಂಗರ ಬಿಡುಗಡೆಯಾಯಿತು. ದಯಾಭಿಕ್ಷೆಯನ್ನಿತ್ತು ಮಹಾರಾಜರು ಅವರನ್ನೆಲ್ಲ ಬಂಧವಿಮುಕ್ತರನ್ನಾಗಿ ಮಾಡಿದರು. ಸರದಾರ ನಾನಕಸಿಂಗರು ಜೈಲಿನಲ್ಲಿ ಬಹಳ ಕಾಲ ಕೊಳೆಯಬೇಕಾಯಿತು. ಪಾಟಿಯಾಲದಲ್ಲಿ ನಿರಾಯುಧನನ್ನು ಗುಂಡಿಟ್ಟು ಕೊಲ್ಲುವುದಕ್ಕಿಂತಲೂ, ದಿನಚರಿ ಬರೆದಿಡುವುದು ಘೋರವಾದ ಅಪರಾಧ.

ಇದು ನಡೆದ ಹತ್ತು ವರ್ಷಗಳ ನಂತರ ದೇಶೀಯ ಸಂಸ್ಥಾನದ ಪ್ರಜೆಗಳ ಪ್ರಾತಿನಿಧಿಕ ಸಮಿತಿ ಪಾಟಿಯಾಲ ಮಹಾರಾಜರ ಮೇಲೆ ಆರೋಪಗಳ ಒಂದು ಪಟ್ಟಿಯನ್ನೇ ಸಿದ್ಧಪಡಿಸಿತು. ಆರೋಪಗಳ ವಿಚಾರಣೆಗೆ ಒಂದು ಆಯೋಗ ನೇಮಿಸಲು ಮಹಾರಾಜರು ವೈಸರಾಯರನ್ನು ಪ್ರಾರ್ಥಿಸಿದರು. ಅವರ ಅಪೇಕ್ಷೆಯಂತೆ ಫಿಟ್ಸ್ ಪ್ಯಾಟ್ರಿಕ್‌ರನ್ನು ವಿಚಾರಣೆಗೆ ಕೇಂದ್ರ ಸರಕಾರ ನೇಮಿಸಿತು. ಮಹಾರಾಜರ ಪರವಾಗಿ ಆಯೋಗದ ಮುಂದು ವಾದಿಸಲು ಅಖಿಲ ಭಾರತ ಖ್ಯಾತಿಯ ಸರ್ ಸಿ. ಪಿ, ಸರ್ ತೇಜ ಬಹದ್ದೂರ್ ಸಪ್ರು ಹಾಜರಾದರು. ಹೇಳಿ ಬರೆಸಿದ ಆ ವರದಿಯನ್ನು ಸರಕಾರ ಪ್ರಕಟಿಸಲಿಲ್ಲ.

ಆಯೋಗದ ನೇಮಕದಿಂದ ಲಾಭಹೊಂದಿದವರು ಅನೇಕರು ತಮಗೆ ಪ್ರತಿಕೂಲ ಇದ್ದವರನ್ನು-ನ್ಯಾಯವಾಗಿ ಅವರಿಗೆ ಸಲ್ಲಬೇಕಾದ್ದನ್ನು ಸಲ್ಲಿಸಿ-ಮಹಾರಾಜರು ಅನುಕೂಲರಾಗುವಂತೆ ಮಾಡಿ ಕೊಂಡರು. ಸರದಾರ ನಾನಕ ಸಿಂಗರು. ಆ ಆಯೋಗದ ಮುಂದು ಸಾಕ್ಷಿ ನುಡಿಯುವವರಿದ್ದರು. ಅದನ್ನರಿತ ಮಹಾರಾಜರು ಒಂದು ಹಂಚಿಕೆ ತೆಗೆದರು. ಆ ಹಂಚಿಕೆಯಂತೆ ನಾನಕ ಸಿಂಗರನ್ನು ಖಾಯಿಲೆಯ ನೆಪದಲ್ಲಿ ಜೈಲಿನಿಂದ ಆಸ್ಪತ್ರೆಗೆ ವರ್ಗಾಯಿಸುವುದು. ಆಸ್ಪತ್ರೆಯಿಂದ ಅವರು ತಲೆ ಮರೆಸಿಕೊಳ್ಳಬೇಕು. ಆಯೋಗದ ಮುಂದು ಹಾಜರಾಗ ಬಾರದು. ನಾನಕರು ಅದಕ್ಕೊಪ್ಪಿಕೊಂಡರು.

ಅವರಿಗೆ 50000-00 ರೂಗಳ ಭಕ್ಷೀಸ್ ಬೇರೆ ದೊರೆಯಿತು; ಬಂಧನ ತಪ್ಪಿತು.

●●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು-4

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು

ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ

ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 37

NAVAYUGA

27—5—1971

ರೂಪಾಯಿಗೆ ಬೆಲೆಯೇನಿದೆ?

ಇಪ್ಪತ್ತು ಪೈಸೆಯ ನಾಣ್ಯಗಳನ್ನು ಕೆಲವರು ಧಾರಾಳ ಸಂಗ್ರಹಿಸುತ್ತಾರೆಂಬ ವರದಿ ಕೆಲ ದಿನಗಳಿಗೆ ಮೊದಲು ಬಂತು. ಇದೇ ರೀತಿ ಇತರ ನಾಣ್ಯಗಳಿಗೂ ಕೆಲವೊಮ್ಮೆ ಭಾರೀ ಬೇಡಿಕೆ ಬಂದ ಉದಾಹರಣೆಗಳುಂಟು. ಭಾರತದ ಮಹಾನಗರಗಳಲ್ಲಿಯೂ ಚಿಲ್ಲರೆಯ ಅಭಾವ ನಿರ್ಮಾಣವಾದುದು ಸರ್ವ ವಿದಿತವೇ. ಚಿಲ್ಲರೆ ನಾಣ್ಯಗಳ ಬಳಕೆಯು ಹೆಚ್ಚಾದುದೇ ಇದಕ್ಕೆ ಕಾರಣವೆಂದು ಅಧಿಕಾರಾರೂಢರು ಹೇಳ ಬಹುದು. ಅದರೊಡನೆ ಚಿಲ್ಲರೆ ನಾಣ್ಯ ತಯಾರಿಕೆಯು ಆಮೆನಡಿಗೆಯಲ್ಲಿ ನಡೆಯುತ್ತಿರುವುದೂ ಲೋಹದಾಸೆಗಾಗಿ ನಾಣ್ಯಗಳನ್ನು ಬಳಸುತ್ತಿರುವುದೂ ಈ ಅಭಾವಕ್ಕೆ ಪೂರಕ ಕಾರಣಗಳು.

ನಾಣ್ಯಗಳನ್ನು ಸಂಗ್ರಹಿಸಿ, ಕರಗಿಸಿದಾಗ, ಆ ನಾಣ್ಯದ ಮುಖ ಬೆಲೆಗಿಂತ ಮೂರು-ನಾಲ್ಕು ಪಾಲು ಬೆಲೆ ಬಾಳುವ ಲೋಹ ದೊರೆಯುವುದು. ಅಂದರೆ, ನಾಣ್ಯಕ್ಕೆ ಬಳಸುವ ಲೋಹಗಳ ಬೆಲೆ ನಾಣ್ಯದ ಬೆಲೆಗಿಂತ ತುಂಬ ಜಾಸ್ತಿ. ನಾಣ್ಯ ತಯಾರಿಸುವ ವೇಳೆ ಇವೆರಡರ ನಡುವೆ ಹೆಚ್ಚಿನ ಅಂತರವಿರುವುದಿಲ್ಲ; ಅದು ಚಲಾವಣೆಗೆ ಬಂದ ಕೆಲವೇ ವರ್ಷಗಳಲ್ಲಿ ನಾಣ್ಯ ಚಲಾವಣೆಗಿಂತ ಲೋಹವಾಗಿ ಪರಿವರ್ತಿಸುವುದೇ ಲಾಭಪ್ರದವೆನಿಸುತ್ತದೆ. ಅಂದರೆ, ಮಧ್ಯಾವಧಿಯಲ್ಲಿ ಬೆಲೆಯೇರಿಕೆ ಅಷ್ಟು ಪಾಲು ಹೆಚ್ಚುತ್ತದೆ.

ಯುದ್ಧಕಾಲದಲ್ಲಿ ಮಾತ್ರ ಏರುತ್ತಿದ್ದ ಬೆಲೆಗಳು ಈಗ ಶಾಂತಿಕಾಲದಲ್ಲೂ ಏರುತ್ತಲೇ ಹೋಗುತ್ತಿವೆ. ದೇಶದಲ್ಲಿ ಆರ್ಥಿಕಾಭಿವೃದ್ಧಿ ಯೋಜನೆಗಳು ಆರಂಭವಾದೊಡನೆಯೇ ಜೀವನವೆಚ್ಚ ನೇರಕ್ಕೇ ಏರತೊಡಗಿವೆ. ಸರಕಾರ ಯೋಜನೆಯ ಹೆಸರಿನಲ್ಲಿ ಹೆಚ್ಚಿನ ಹಣ ಪೂರಯ್ಸುವುದು ಅಗತ್ಯವಾಯ್ತು. ೧೯೫೧ರವರೆಗೆ ಎರಡು ಸಾವಿರ ಕೋಟಿ ರೂಪಾಯಿಗಳನ್ನು ಸರಕಾರ ಪೂರಯ್ಸಿತ್ತು. ಈ ಮೊತ್ತ ಇಪ್ಪತ್ತೇ ವರ್ಷಗಳಲ್ಲಿ ಮೂರೂವರೆ ಪಟ್ಟು ಹೆಚ್ಚಾಯ್ತು. ಇದು ಸಂಪನ್ಮೂಲಗಳ ಹೆಚ್ಚಳದಿಂದಾದುದಲ್ಲ, ಕೊರತೆಯ ಆಯವ್ಯಯದಿಂದ. ಹಾಗಾಗಿ ನಮ್ಮ ರೂಪಾಯಿಯ ಬೆಲೆ ಬಹಳಷ್ಟು ಇಳಿದಿದೆ. ಬೆಲೆಯೇರಿದೆಯೆಂದರೆ, ರೂಪಾಯಿಯ ಬೆಲೆ ಕುಸಿದು ಬಿದ್ದಿದೆಯೆಂದೇ ಅರ್ಥ.

ಅಭಿವೃದ್ಧಿಶೀಲ ದೇಶಗಳಲ್ಲಿ ಹಣದುಬ್ಬರ ಸಹಜವೆಂದೂ ಹಣವನ್ನು ಭವಿಷ್ಯದಲ್ಲಿ ಫಲ ನೀಡುವ ಯೋಜನೆಗಳಲ್ಲಿ ವಿನಿಯೋಗಿಸಿದ್ದರಿಂದ ಅವುಗಳ ಪ್ರತಿಫಲ ದೊರೆತ ಬಳಿಕ ಸುಧಾರಣೆ ಸಾಧ್ಯವೆಂದೂ ಅಂದು ಹೇಳಲಾಯ್ತು. ಮೊದಲನೆಯ ಯೋಜನೆಯು ಆರಂಭವಾಗಿ ಇಪ್ಪತ್ತು ವರ್ಷಗಳು ಗತಿಸಿ ಹೋದುವು ಅದರ ಪ್ರಯೋಜನವು ಈ ಅವಧಿಯಲ್ಲಿ ದೇಶಕ್ಕೆ ಲಭ್ಯವಾಗಿರಲೇ ಬೇಕು; ಆದರೂ ನಮ್ಮ ಬಡತನ, ನಿರುದ್ಯೋಗ, ಹಣದುಬ್ಬರ, ಬೆಲೆಯೇರಿಕೆ ಮೊದಲಾದ ಸಮಸ್ಯೆಗಳು ಇಳಿಯುವ ಮಾತು ದೂರ, ಮತ್ತೂ ಮತ್ತೂ ಏರುತ್ತಲೇ ಇವೆ. ಭಾರತದ ರೂಪಾಯಿಯ ಕೊಳ್ಳುವ ಶಕ್ತಿ ಕಳೆದ ಹತ್ತು ವರ್ಷಗಳಲ್ಲಿ ಅರ್ಧಕ್ಕೆ ಅರ್ಧದಷ್ಟು ಕಡಮೆಯಾಗಿದೆ!

ಈ ಬಗೆಯ ರೂಪಾಯಿ ಬೆಲೆಯ ಕಡಿತ ಭಾರತಕ್ಕೆ ಮಾತ್ರ ಪರಿಸೀಮಿತವಲ್ಲವೆಂಬುದನ್ನು ಒಪ್ಪಿಕೊಳ್ಳಲೇಬೇಕು. ಆದರೆ, ಭಾರತದ ರೂಪಾಯಿಯು ಉಳಿದೆಲ್ಲ ದೇಶಗಳ ನಾಣ್ಯಗಳಿಗಿಂತ ಬೆಲೆ ಕಳೆದುಕೊಂಡಿದೆಯೆಂಬುದು ಹಗಲಿನಷ್ಟು ನಿಚ್ಚಳವಿದೆ. ಆಂತರಿಕ ಅಥವಾ ವಿದೇಶೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಲು ಅಸಮರ್ಥವಾದ ಸರಕಾರ ಕೊರತೆ ಧನದ ಕಾಮಧೇನುವಿಗೇ ಶರಣುಹೋಗಿ, ನೋಟುಗಳನ್ನು ಅಚ್ಚು ಮಾಡಬೇಕಾಯ್ತು.

ಹಣದುಬ್ಬರವನ್ನು ಎದುರಿಸುವುದು ಸರಕಾರದಿಂದ ಮಾತ್ರ ಸಾಧ್ಯ. ಉತ್ಪಾದನೆಯಲ್ಲಿ ತೀವ್ರ ಕಡಿತವಾಗಿ ಬೆಲೆಯೇರಿಕೆ ಅಂದು ನಡೆದಿಲ್ಲ. ಒಂದು ವೇಳೆ ಈ ರೀತಿ ಬೆಲೆಯೇರಿದ್ದಾದರೆ, ಅದು ನೆರೆಯ ನೀರಿನಂತೆ ನಾಲ್ಕು ದಿನವಿದ್ದು ಇಳಿಯಲೇ ಬೇಕಿತ್ತು. ಆಹಾರಾದಿ ಉತ್ಪಾದನೆಯಲ್ಲಿ ನಾವು ಗೌರಿಶಂಕರ ತಲಪಿದ್ದೇವೆನ್ನುವ ಮಂತ್ರಿ ಮಾಗಧರು ಏರುತ್ತಿರುವ ಆಹಾರ ಧಾನ್ಯಗಳ ಬೆಲೆಯನ್ನು ತಡೆಯಲು ಶಕ್ತರಾಗಿಲ್ಲ. ಸರಕಾರ ಹಣದ ಸರಬರಾಯಿ ನಿರಾತಂಕವಾಗಿ ಮಾಡುತ್ತದೆ; ಅದನ್ನು ಅಂಕಿತದಲ್ಲಿಡಲು ವಿಪರೀತ ಪ್ರಮಾಣದ ತೆರಿಗೆ ಹೇರುತ್ತದೆ; ತೆರಿಗೆ ಹಣವನ್ನು ಅವಾಸ್ತವಿಕ ವ್ಯವಹಾರಗಳಲ್ಲಿ ವಿನಿಯೋಗಿಸುತ್ತದೆ; ಇದರಿಂದ ಹಣ ಪೋಲಾಗಿ ಮತ್ತೆ ಜನತೆಯ ಕೈಸೇರುತ್ತದೆ. ಹೀಗೆ ಹಣ ಗಳಿಸುವ ಕೆಲವರು ನೀರಿನಂತೆ ಹಣ ಹರಿಯಬಿಡುವುದರಿಂದ ಸಾಮಾನ್ಯ ಜನತೆ ದಂಗುಬಡೆದು ನಿಲ್ಲಬೇಕಾಗುತ್ತದೆ. ಶೀಘ್ರ ಉತ್ಪಾದಕವಲ್ಲದ, ನಷ್ಟದಲ್ಲೇ ನಡೆಯಬಹುದಾದ ಉದ್ದಿಮೆಗಳಲ್ಲಿ ಸರಕಾರ ತೆರಿಗೆಯ ಹಣವನ್ನು ವಿನಿಯೋಗಿಸಿ ಮತ್ತಷ್ಟು ನಷ್ಟವನ್ನೇ ಅನುಭವಿಸುತ್ತದೆ. ಈ ನಷ್ಟವನ್ನು ಮತ್ತೆ ತೆರಿಗೆ ಹೇರಿಯೇ ಅದು ಕೂಡಿಸಬೇಕಾಗುತ್ತದೆ. ಆದುದರಿಂದ ಹಣದ ಚಲಾವಣೆ, ತೆರಿಗೆ-ವಿನಿಯೋಗ-ನಷ್ಟ-ಹೊಸ ತೆರಿಗೆ-ಮತ್ತು ಹಣದ ಚಲಾವಣೆಗಳ ಚಕ್ರ ಕಳೆದ ಇಪ್ಪತ್ತು ವರ್ಷಗಳಿಂದಲೂ ತಿರುಗುತ್ತಲೇ ಇದೆ.

ಸಮಾಜವಾದದ ಗೀಳು ಬಡೆದ ಸರಕಾರ ರಾಷ್ಟ್ರೀಕರಣ ನೀತಿಯನ್ನು ಅಪ್ಪಿಕೊಂಡಿದೆ. ರಾಷ್ಟ್ರೀಕೃತ ಉದ್ಯಮಗಳಲ್ಲಿ ಈಗಾಗಲೇ ಅನುಭವಿಸುತ್ತಿರುವ ಕೋಟ್ಯಂತರ ರೂಪಾಯಿಗಳ ನಷ್ಟವನ್ನು ಗಣನೆಗೆ ತಾರದೆ ಮತ್ತೂ ರಾಷ್ಟ್ರೀಕರಣದತ್ತ ನಾಗಾಲೋಟದಿಂದ ಹಾರುತ್ತಿವೆ. ಇದರ ಪರಿಣಾಮವೇನಾಗಬಹುದು? ಸಾರ್ವಜನಿಕ ಒಡೆತನದ ನಷ್ಟವನ್ನು ತುಂಬಿಕೊಡುವುದಕ್ಕಾಗಿಯೇ ಜನತೆ ತನ್ನ ಆದಾಯದ ಒಂದಂಶವನ್ನು ಮೀಸಲಿಡಬೇಕಾಗಬಹುದು.

ಬ್ಯಾಂಕುಗಳ ಮೇಲೆ ಸಾಮಾಜಿಕ ನಿಯಂತ್ರಣ ಸಾಲದೆಂದು ಪ್ರಧಾನಿ ಗಾಂಧಿಯವರು ೧೪ ಪ್ರಮುಖ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದರು. ರಾಷ್ಟ್ರೀಕರಣವನ್ನು ಬೆರಳೆಣಿಕೆಯಷ್ಟು ಜನರನ್ನು ಬಿಟ್ಟು, ಉಳಿದವರೆಲ್ಲರೂ ಸ್ವಾಗತಿಸಿದರು. ಈ ಬ್ಯಾಂಕುಗಳ ಕಾರ್ಯಸಾಧನೆ ಸಾಲದು. ರಾಷ್ಟ್ರೀಕರಣದ ಮೂಲೋದ್ದೇಶದಿಂದ ಇವುಗಳ ಸಾಧನೆ ಹರದಾರಿ ದೂರವಿದೆ ಎಂದು ಅರ್ಥಮಂತ್ರಿ ಚವನರೂ ಒಪ್ಪಿಕೊಂಡಿದ್ದಾರೆ. ಇದನ್ನಾದರೂ ಸುಧಾರಿಸಬಹುದು. ಆದರೆ, ಯಾವ ರಾಷ್ಟ್ರೀಕರಣವನ್ನು ಶ್ರೀ ಸಾಮಾನ್ಯನ ಉನ್ನತಿಗಾಗಿ, ಆತನ ಆರ್ಥಿಕ ಪುನಶ್ಚೇತನಕ್ಕಾಗಿ ಮಾಡಲಾಯಿತೋ ಅದುವೇ ಆತನ ತಲೆ ಮೇಲೆ ಭಾರವಾಗಿ ಪರಿಣಮಿಸುತ್ತದೆಂದು ಯಾರೂ ಕನಸಿನಲ್ಲೂ ಭಾವಿಸಿರಲಾರರು.

ಬ್ಯಾಂಕುಗಳ ರಾಷ್ಟ್ರೀಕರಣವಾದಾಗ, ಹಿಂದಿನ ಪಾಲುದಾರರಿಗೆ ಪರಿಹಾರಕೊಡಲಾಯ್ತು. ಈ ಪರಿಹಾರದ ಮೊತ್ತದ ಮೇಲಾಗುವ ಒಟ್ಟು ಬಡ್ಡಿಗಿಂತ ರಾಷ್ಟ್ರೀಕೃತ ಬ್ಯಾಂಕುಗಳು ಗಳಿಸುವ ಲಾಭ ಕಡಿಮೆಯಾಗುತ್ತದೆಂದೀಗ ವರದಿಯಾಗಿದೆ. ಬೇರೆ ಬೇರೆ ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ಕಾರ್ಯಕ್ಷೇತ್ರವನ್ನು ಮೊದಲು ವ್ಯಾಪಾರಿ ದೃಷ್ಟಿಯಿಂದ ವಿಸ್ತರಿಸುತಿದ್ದುವು; ಇಂದು ಸೇವಾದೃಷ್ಟಿಯಿಂದ ವಿಸ್ತರಿಸಲು ಮುಂದೆ ಬಂದಿವೆ. ಹಾಗಾಗಿ ಮೊದಲಿನಷ್ಟು ಲಾಭ ಗಳಿಸುವುದು ಸಾಧ್ಯವಾಗಲಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳೂ 'ಸೇವಾ ವಿಭಾಗ'ಕ್ಕೆ ಸೇರಿದವರೆಂದು ತಿಳಿದು ಅವುಗಳಿಗಾಗುವ ನಷ್ಟವನ್ನು ತೆರಿಗೆ ತೆತ್ತು ಶ್ರೀ ಸಾಮಾನ್ಯನೇ ಭರಿಸ ಬೇಕಾಗುತ್ತದೆ. ಇದರ ಸ್ಪಷ್ಟ ಚಿತ್ರ ಈ ಬಜೆಟ್ಟಿನಲ್ಲಿ, ತಪ್ಪಿದರೆ, ಮುಂದಿನ ಬಜೆಟ್ಟಿನಲ್ಲಿ ದೊರಕಿಯೇ ತೀರುತ್ತದೆ.

ರಾಜ ಮಹಾರಾಜರಿಗೆ ಸಲ್ಲುತ್ತಿರುವ ರಾಜಧನವನ್ನು ರದ್ದು ಮಾಡುವಂತೆ "ಪರಿಹಾರ"ವೆಲ್ಲವನ್ನೂ ನಿಲ್ಲಿಸಿ ಬಿಡುವ ಸುಗ್ರೀವಾಜ್ಞೆಯೂ ಸಮಾಜವಾದದಲ್ಲಿ ಅಸಾಧುವಾಗದು. 'ಸಮಾಜ ಕಲ್ಯಾಣಕ್ಕಾಗಿ ವಶಪಡಿಸಿಕೊಳ್ಳುವ ಯಾವುದೇ ಖಾಸಗಿ ಆಸ್ತಿಗೆ ಪರಿಹಾರ ನೀಡಲು ಸರಕಾರ ಬದ್ಧವಲ್ಲ'ವೆಂಬ ನೀತಿಯೂ ಸ್ವೀಕೃತವಾಗಬಹುದು. ಅಂದರೆ, ಸಮಾಜವಾದದ ಹೆಸರಿನಲ್ಲಿ ಸರಕಾರವು ಸ್ವೀಕರಿಸಿದ ಆರ್ಥಿಕ ನೀತಿಯ ಆಳ ಅರ್ಥ ಶಾಸ್ತ್ರಜ್ಞರಿಗೂ ತಿಳಿಯದು. ಸಮುದ್ರದಲ್ಲಿ ಮುಳುಗುವವನು ಹುಲ್ಲುಕಡ್ಡಿಯನ್ನಾದರೂ ಆಧರಿಸುವಂತೆ ಹಣದುಬ್ಬರದಲ್ಲಿ ಗೋತಾ ಹೊಡೆಯುತ್ತಿರುವ ಸರಕಾರ ಯಾವಕಾಲದಲ್ಲಿ ಯಾವ ಹೆಜ್ಜೆಯಿಡುವುದೆಂದೂ ನಂಬಲಾಗುವುದಿಲ್ಲ.

ಆದುದರಿಂದಲೇ ಕೊರತೆ—ಹಣದುಬ್ಬರ—ಬೆಲೆಯೇರಿಕೆಗಳಿಂದ ಭಾರತೀಯನಿಗೆ ಬಿಡುಗಡೆಯಿಲ್ಲ. ಆಕಾಶಕ್ಕೆ ಏಣಿಯಿಡುವ ನಮ್ಮ ಯೋಜನೆಗಳು ವಾಸ್ತವಿಕತೆಗೆ ಪ್ರಾಧ್ಯಾನ್ಯ ನೀಡಿದರೆ, ಸರಕಾರವು ಕೊರತೆ ಧನದ ಕಾಮಧೇನುವಿಗೆ ಶರಣು ಹೋಗುವುದನ್ನು ಬಿಟ್ಟು ಹಾಸಿಗೆಯಿರುವಷ್ಟೇ ಕಾಲು ಚಾಚುತ್ತ ಮುಂದರಿದರೆ, ರಾಷ್ಟ್ರೀಕರಣವೇ ಕಲ್ಪವೃಕ್ಷವೆಂಬ ನೀತಿಯನ್ನು ಬದಲಾಯಿಸಿ ಸಾಮಯಿಕತೆಯತ್ತ ಲಕ್ಷ್ಯಹರಿಸಿದರೆ, ಉಸಿರಾಡುವ ಅವಕಾಶ ದೊರೆತೀತು. "ಸರಕಾರಿ ಒಡೆತನ" ಮಾತ್ರದಿಂದಲೇ ಸಮಾಜವಾದ ವ್ಯವಹೃತವಾಗುವುದಿಲ್ಲ.

● ●

ಚರಿತ್ರಾರ್ಹ ಮೊಕದ್ದಮೆಗಳು—೩

ಜೋಡಿ ಕೊಲೆಗಳು

ಬರೆದವರು :– ಶ್ರೀ ಬಿ. ಕೃಷ್ಣ ಭಟ್, ಯಲ್‌ಯಲ್. ಬಿ., ಭದ್ರಾವತಿ.

1909ರ ಸುಮಾರಿನಲ್ಲಿ, ಮೀರತ್ತಿನಲ್ಲಿ ಎಡ್ವರ್ಡ ಫುಲ್ಲಂ, ಹಾಗೂ ಕ್ಲಾರ್ಕ ಪರಸ್ಪರ ಭೆಟ್ಟಿಯಾದರು. ಶ್ರೀ ಫುಲ್ಲಂ ಸೈನ್ಯ ಖಾತೆಯ ಲೆಕ್ಕ ಪತ್ರಗಳ ವಿಭಾಗದಲ್ಲಿ ಡೆಪ್ಯುಟಿ ಕಂಟ್ರೋಲರ್ ಆಗಿದ್ದರು. ಆಗ ಅವರಿಗೆ 44 ವರ್ಷ ಪ್ರಾಯ. ಕ್ಲಾರ್ಕ ಸೈನ್ಯ ಖಾತೆಯ ವೈದ್ಯಾಧಿಕಾರಿ. ಅವರಿಬ್ಬರ ಸ್ವಭಾವದಲ್ಲಿ ಸಾಮ್ಯ ಇರಲಿಲ್ಲ. ಅವರನ್ನು ಕೈ ಹಿಡಿದವರ ಗುಣಗಳಲ್ಲೂ ಧ್ರುವಗಳ ಅಂತರ. ಕುಲ, ಶೀಲ, ಬುದ್ಧಿಮತ್ತೆಯಲ್ಲಿ ಕ್ಲಾರ್ಕರಿಗೆ ಹೇಳಿಕೊಳ್ಳುವ ಅರ್ಹತೆ ಇರಲಿಲ್ಲ. ಶ್ರೀ ಫುಲ್ಲಂ ಮಿತಭಾಷಿ, ಸಂಪನ್ನರು, ಸಭ್ಯ ಗೃಹಸ್ಥರು.

ಶ್ರೀಮತಿ ಅಗಾಥಾ ಫುಲ್ಲಂ ಗಂಡನಿಗಿಂತ ವಯಸ್ಸಿನಲ್ಲಿ ಎಂಟು ವರ್ಷ ಚಿಕ್ಕವರು. ಫುಲ್ಲಂರೊಡನೆ ಅವಳ ಮದುವೆಯಾದಾಗ ಆಕೆಯ ಹರೆಯ ಹದಿಮೂರು. ಅವರ ಹಿರಿಯರು ಕಲ್ಕತ್ತೆಯವರು. ಅವಳು ಹುಟ್ಟಿದ್ದು, ಶಿಕ್ಷಣ ಪಡೆದಿದ್ದು ಅಲ್ಲಿಯೆ! ಬದುಕಿನ ರಹಸ್ಯಗಳ ಓನಾಮದ ಶಿಕ್ಷಣ ಅವಳಿಗೆ ಎಳವೆಯಲ್ಲಿ ದೊರಕಿತ್ತು. ಹಣ್ಣು-ಹೆಣ್ಣು ಎರಡೂ ಪರ್ವದಲ್ಲಿ ಬೇಗ ಮಾಗಿ ಹದವಾಗುವುದರಲ್ಲಿ ಅಚ್ಚರಿಯಿಲ್ಲ.

ವಯಸ್ಸಿನೊಡನೆ ಆಕೆಯ ಚೆಲುವು ಹೆಚ್ಚಿತು. ಆಕೆ ಹಾಗೆ ಅರಳಿದ್ದರಲ್ಲಿ ಆಶ್ಚರ್ಯವಿಲ್ಲ. ಆದರೆ ದುರದೃಷ್ಟ—ಆಕೆ ಸ್ವಾರ್ಥಿಯಾಗಿ ರೂಪುಗೊಂಡಳು. ಅವಳು ತನಗಾಗಿಯೇ ಬಾಳಿದಳು. ಬದುಕಿಗೆ ಬೇರಾವ ಧ್ಯೇಯವನ್ನೂ ಬಳಸಲಿಲ್ಲ. ಸ್ವಂತ ಯಶ, ಸುಖಕ್ಕೆ ಅವಳ ಬದುಕು ಮೀಸಲು. ಶ್ರೀಮತಿ ಕ್ಲಾರ್ಕ ಬಾಳನ್ನು ಹೀಗೆ ರೂಪಿಸಲಿಲ್ಲ. ಪತಿಗಿಂತಲೂ ವಯಸ್ಸಿನಲ್ಲಿ ಹಿರಿಯಳಾದ ಆಕೆ ಸ್ವಭಾವದಿಂದ ತುಂಬ ಸರಳೆ. ಗಂಡ ದಾರಿ ತಪ್ಪಿ ನಡೆದಾಗಲೂ ಅವನಲ್ಲಿ ಎಲ್ಲಿಲ್ಲದ ಅನುಕಂಪ. ತಾನು, ತನ್ನ ಗಂಡ, ತನ್ನ ಮಕ್ಕಳು, ತನ್ನ ಮನೆ—ಇದು ಅವಳ ಸರ್ವಸ್ವ! ಕಷವನ್ನು ಧೈರ್ಯದಿಂದ ಇದಿರಿಸುತ್ತಿದ್ದಳು. ನೋವನ್ನು ನುಂಗಿಕೊಳ್ಳುತ್ತಿದ್ದಳು.

ಕ್ಲಾರ್ಕ-ಫುಲ್ಲಂ ಸಂಧಿಸಿದ ವರ್ಷದ ನಂತರ ಅಗಾಥಾ ಮಗುವೊಂದಕ್ಕೆ ಜನ್ಮವಿತ್ತಳು. ಅದು ಆಕೆಯ ಚೊಚ್ಚಲ ಮಗುವಲ್ಲ. ಆ ಹೆರಿಗೆಯ ಕಾಲದಲ್ಲಿ ಡಾಕ್ಟರ್ ಕ್ಲಾರ್ಕ ಖುದ್ದು ಹಾಜರಿದ್ದರು. ಅನಂತರವೂ ಬಂದು ಹೋಗಿ ಮಾಡುತ್ತಿದ್ದರು. ಒದಗಿ ಬಂದ ಸಂದರ್ಭಗಳ ಒತ್ತಡದಿಂದ ರೋಗಿ-ವೈದ್ಯರೊಳಗೆ ಆತ್ಮೀಯತೆ, ಅನುರಾಗ ಹುಟ್ಟಿತು. ಅಗಾಥಾ ಈ ಪ್ರೇಮ ಬಂಧನದಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಅವಳಿಂದ ನುಣುಚಿಕೊಳ್ಳುವುದೂ ಆಗಲಿಲ್ಲ. ಅವಳ ಖಾಯಿಲೆ ವೈದ್ಯರ ಚಿಕಿತ್ಸೆಯಿಂದ ಗುಣಮುಖವಾಯಿತು. ಹಿಂದಿನ ಲವಲವಿಕೆ ಪುನಃ ಲಾಸ್ಯವಾಡಿತು. ಅದರೊಡನೆ ಕ್ಲಾರ್ಕರಲ್ಲಿನ ಅನುರಾಗವೂ ಬಲಿಯಲಾರಂಭಿಸಿತು.

ನವೆಂಬರ್ 1910ರಲ್ಲಿ ಕ್ಲಾರ್ಕರನ್ನು ದೆಹಲಿಗೆ ವರ್ಗಾಯಿಸಿದರು—ದೆಹಲಿ, ಮೀರತ್ತಿಗೆ ಹೇಳುವಷ್ಟು ದೂರದ ಊರಲ್ಲ. ವೈದ್ಯ-ರೋಗಿ ಇಬ್ಬರೂ ವಿರಹದ ನೋವನ್ನು ಅನುಭವಿಸಿದರು—ಆದರೂ ಈ ಬೇರ್ಪಡೆ ಅವರೀರ್ವರ ಪ್ರಣಯ ಜೀವನಕ್ಕೆ ರಂಗು-ರೂಪ ತಂದು ಕೊಟ್ಟಿತು.

ದೆಹಲಿಯಿಂದ ಡಾಕ್ಟರ್ ಕ್ಲಾರ್ಕ ಆಗ್ರಾಕ್ಕೆ ವರ್ಗವಾಗಿ ಹೋದರು. ದೆಹಲಿಯಲ್ಲಿರಲಿ, ಆಗ್ರಾದಲ್ಲಿ ವಾಸ್ತವ್ಯ ಹೂಡಿರಲಿ, ಕ್ಲಾರ್ಕರಿಗೆ ಮೀರತ್ತಿಗೆ ಬಂದು ಹೋಗಲು ಸಾಕಷ್ಟು ಬಿಡುವು ಸಿಗುತಿತ್ತು. ಒಂದಲ್ಲ, ಒಂದು ನೆವ ಹಿಡಿದು ಅವರು ಮೀರತ್ತಿಗೆ ಬರುತ್ತಿದ್ದರು ಬಂದವರು ಫುಲ್ಲಂ ಮನೆಯಲ್ಲಿ ಉಳಿಯುತ್ತಿದ್ದರು--ತನ್ನ ಹೆಂಡತಿಯಲ್ಲಿ ಡಾಕ್ಟರ್ ತೋರಿಸುತ್ತಿದ್ದ ಆಸಕ್ತಿಯನ್ನು ಗಮನಿಸದಿರುವಷ್ಟು ಪೆದ್ದರಿರಲಿಲ್ಲ ಶ್ರೀ ಫುಲ್ಲಂ ಅವರಲ್ಲಿ ಶಂಕೆಯುತ್ಪನ್ನವಾಯಿತು. ವೈದ್ಯ ಖಾತೆಯ ದಾಖಲೆಗಳನ್ನು ತರಿಸಿಕೊಂಡು ತನಿಖೆ ನಡೆಸಿದರು. ಕ್ಲಾರ್ಕರು ಮೀರತ್ ಭೇಟಿಗಳು ಅಧಿಕೃತ ಇರಲಿಲ್ಲ; ವೃತ್ತಿಗೂ ಸಂಬಂಧಿಸಿರಲಿಲ್ಲ. ಅವರು ಒಳ ಒಳಗೇ ಕುಪಿತರಾದರು. ಮಾತ್ಸರ್ಯವೂ ಮೂಡಿತು.

1911ರ ಜೂನ್ ತಿಂಗಳಲ್ಲಿ ಎಡ್ವರ್ಡ ಫುಲ್ಲಂ ಇದ್ದಕಿದ್ದಂತೆ ಬೇನೆ ಬಿದ್ದರು—ಆ ನಿಮಿತ್ತ ರಜ ತೆಗೆದುಕೊಳ್ಳುವುದು ಅನಿವಾರ್ಯವಾಯಿತು-ಹವ ಬದಲಾಯಿಸಿದರೆ ಹಿತವಾಗಬಹುದೆಂದು ಅವರು ಮುಸೋರಿಗೆ ಹೋದರು. ಹವೆಯ ಬದಲಾವಣೆಯಿಂದ ಅವರ ಪ್ರಕೃತಿಯಲ್ಲಿ ಏನೂ ಬದಲಾವಣೆಯಾಗಲಿಲ್ಲ ವಿಧಿಯಿಲ್ಲವೆ ಅವರು ಮೀರತ್ತಿಗೆ ಮರಳಿ ಬಂದರು. ಬಂದ ಕೆಲವು ತಿಂಗಳಲ್ಲಿ-ಜುಲ್ಯಾ ತಿಂಗಳಲ್ಲಿ-ಪುನಃ ಖಾಯಿಲೆ ಬಿದ್ದರು. ಬಿಸಿಲಿನ ಝಳಕ್ಕೆ ಹಾಗಾಗಿದೆ ಎಂದು ವೈದ್ಯರು ಅಭಿಪ್ರಾಯಪಟ್ಟರು. ಚಿಕಿತ್ಸೆಯ ಪರಿಣಾಮವಾಗಿ ಶ್ರೀ ಫುಲ್ಲಂ ಅಷ್ಟೋ-ಇಷ್ಟೋ ಚೇತರಿಸಿಕೊಂಡರು—ಆದರೆ ಕೆಲಸ ನಿರ್ವಹಿಸುವ ಶಕ್ತಿ ಉಳಿದಿರಲಿಲ್ಲ. ತಜ್ಞ ವೈದ್ಯರ ಮಂಡಳಿಯೊಂದು ಅವರನ್ನು ಪರೀಕ್ಷಿಸಿ, ನಿಯೋಜಿತ ಕೆಲಸ ನಿರ್ವಹಿಸಲು ಅನರ್ಹರು ಎಂದು ತೀರ್ಮಾನಿಸಿತು. 2-9-19 1ರಂದು ಅವರನ್ನು ವೈದ್ಯಕೀಯ ಅಭಿಪ್ರಾಯಕ್ಕನುಸರಿಸಿ ನಿವೃತ್ತಿಗೊಳಿಸಲಾಯಿತು. ಇಂಗ್ಲೆಂಡಿಗೆ ಮರಳಲು ಶ್ರೀ ಫುಲ್ಲಂ ಆರಂಭದಲ್ಲಿ ಆಸಕ್ತಿ ತೋರಿಸಿದರು. ಕೊನೆ ಗಳಿಗೆಯಲ್ಲಿ ಮನಸ್ಸು ಬದಲಾಯಿಸಿದರು. ಆಗ್ರಾದಲ್ಲಿ ನೆಲಸುವ ತೀರ್ಮಾನಕ್ಕೆ ಬಂದರು.

ಆಗ್ರಾ ತಲುಪಿದ ಎರಡು ದಿನಗಳ ನಂತರ—ಅಕ್ಟೋಬರ್ 10ರಂದು—ಅವರ ಖಾಯಿಲೆ ಉಲ್ಬಣಿಸಿತು. ಬಿಸಿಲಿನ ಝಳ ಅವರನ್ನು ಮತ್ತೊಮ್ಮೆ ಝಾಡಿಸಿತು. ಅಂದು ಸಂಜೆ ಅವರು ಕೊನೆಯುಸಿರೆಳೆದರು ಅವಸಾನ ಕಾಲದಲ್ಲಿ ಡಾಕ್ಟರ್ ಕ್ಲಾರ್ಕ ಅವರ ಬಳಿಯಿದ್ದರು. ಎಡ್ವರ್ಡರು ತಮ್ಮಲ್ಲಿಯೇ ಬಚ್ಚಿಟ್ಟುಕೊಂಡ ರಹಸ್ಯಗಳು ಅವರೊಡನೆ ಮಣ್ಣು ಸೇರಿದುವು.

ಅಗಾಥಾ ಪತಿಯ ಕಳೇಬರದ ಬಳಿ ಕುಳಿತು ಕಣ್ಣೀರು ಹರಿಸಿದಳು. ಶೋಕ ಸೂಚಕ ಕಪ್ಪು ಬಟ್ಟೆ ಧರಿಸಿದಳು. ಕೈಗೆ ಕಪ್ಪು ಬಟ್ಟೆಬಿಗಿದಳು. ಈ ವೇಶದಲ್ಲಿ ಪತಿಯ ಅಂತಿಮ ಯಾತ್ರೆಯಲ್ಲಿ ಭಾಗವಹಿಸಿದಳು.

ಮಾಗಿಯನ್ನು ನೆರಳಿನಂತೆ ಅನುಸರಿಸಿಕೊಂಡು ಬರುತ್ತಿದೆ ಸುಗ್ಗಿ. ಕೊರಡೂ ಆಗ ಕೊನರುತ್ತದೆ. ಸುಗ್ಗಿಯ ಸುಳಿವಿನೊಡನೆ ಎರಡಾದ ಅಗಾಥಾಳ ಹೃದಯ ಅರಳಿತು. ಆಗ್ರಾ ಸುಗ್ಗಿಯಲ್ಲಿ ಪ್ರೇಮಿಗಳ ಸ್ವರ್ಗ! ಅಗಾಥಾ-ಕ್ಲಾರ್ಕ ಕೂಡಿಯೇ ಸುಗ್ಗಿಯ ಹಿಗ್ಗನ್ನು ಅನುಭವಿಸಿದರು. ತಿಂಗಳ ಬೆಳಕಿನಲ್ಲಿ, ತಾಜ ಮಹಲ್, ಫತೇಪುರ ಸಿಕ್ರಿಗಳನ್ನು ನೋಡಿಕೊಂಡು ಬಂದರು. ಹೃದಯ ಹಗುರಾಗುವಂತೆ ಅಲೆದರು. ಪರಸ್ಪರಾನುರಾಗವೆಂಬುದೇ ಆರೋಗ್ಯಕರ. ಇದು ಸುಗ್ಗಿಯಲ್ಲಿ ಅಂಕುರಿಸಿದರೆ ಇನ್ನಷ್ಟು ಹಿತಕರ. ಈ ರಸ ಪ್ರವಾಹಕ್ಕೆ ಆಗ್ರಾದ ಸುಗ್ಗಿ ಹೇಳಿ ಮಾಡಿಸಿದ ಹವೆ.

ಶ್ರೀಮತಿ ಫುಲ್ಲಂ—ಶ್ರೀ ಕ್ಲಾರ್ಕರ ಪ್ರೇಮ ಈ ಹಿತ ವಾತಾವರಣದಲ್ಲಿ ಕೊನರಿ ಕುಡಿಯಿಟ್ಟು, ಹೂವಾಗಿ ಅರಳಿತು ಅದರ ಪರಿಮಳ ಸುತ್ತೆಲ್ಲ ಪಸರಿಸಿತು. ಜನ ಅದನ್ನು ಕಂಡರು; ಕಣ್ಣು ಮಿಟುಕಿಸಿದರು—ತಮ್ಮ—ತಮ್ಮಲ್ಲಿಯೇ ಆಡಿಕೊಂಡರು. ಯಾರೂ, ಏನೂ ಮಾಡುವಂತಿರಲಿಲ್ಲ. ಚಿರ ನಿದ್ರೆಯಲ್ಲಿ ಮಲಗಿದ್ದ ಎಡ್ವರ್ಡ ಫುಲ್ಲಂ ಗೋರಿಯಿಂದ ಎದ್ದು ಬರುವಂತಿರಲಿಲ್ಲ. ಪತಿಯ ಸಾವಿನ ದುಃಖವನ್ನು ಮರೆತು ಅಗಾಥಾ ಹಸನ್ಮುಖಿಯಾಗಿದ್ದಳು—ಡಾಕ್ಟರ್ ಕ್ಲಾರ್ಕ ಭಕ್ತಿಯ ಕನಸು ಕಾಣುತ್ತ ಕುಳಿತಿದ್ದ.

ಕ್ಲಾರ್ಕ—ಶ್ರೀಮತಿ ಫುಲ್ಲಂ ಪ್ರೇಮ ವ್ಯವಹಾರ ಯಾವ ಆತಂಕವೂ ಇಲ್ಲದೆ ಅಬಾಧಿತವಾಗಿ ನಡೆಯುತಿತ್ತು. ಆದರೆ ದುರ್ದೈವಿ ಶ್ರೀಮತಿ ಕ್ಲಾರ್ಕ ಬದುಕಿರುವುದು ಅದಕ್ಕೊಂದು ಅಡ್ಡಿಯಾಯಿತು. ತನ್ನ ಪತಿ ಅಗಾಥಾಳಲ್ಲಿ ತೋರಿಸಿದ ಆದರ, ಆಸಕ್ತಿ ಅವಳಿಗೆ ತಿಳಿಯದ ವಿಷಯವಲ್ಲ. ಅದು ಬೆಳೆದು ಬಂದ ರೀತಿಯನ್ನೂ ಅವಳು ಗಮನಿಸಿದ್ದಳು. ಆ ಕುರಿತು ಅವಳು ಒಳ-ಒಳಗೇ ಕೊರಗಿದ್ದಳು. ಕೊರಗಿ ಸೊರಗಿದ್ದಳು. ಎಡ್ವರ್ಡರ ಸಾವು ಅವಕ್ಕೆ ಮಂಗಳ ಹಾಡಬಹುದು ಎಂದು ನಿರೀಕ್ಷಿಸಿದ್ದಳು. ಆ ನಿರೀಕ್ಷೆಯೂ ಸುಳ್ಳಾಯಿತು.

ಅವಳು ಅದನ್ನು ಪ್ರತಿಭಟಿಸಬಹುದಿತ್ತು. ಪತಿಯಿಂದ ವಿಚ್ಛೇದನ ಹೊಂದಿ, ಅವರಿಬ್ಬರ ದಾರಿಯನ್ನು ಸುಗಮಗೊಳಿಸಬಹುದಿತ್ತು. ಆಕೆ ಇದಾವುದನ್ನೂ ಮಾಡಲಿಲ್ಲ ಅವರಿಬ್ಬರ ವ್ಯವಹಾರಕ್ಕೆ ಮೂಕ ಸಾಕ್ಷಿಯಾಗಿ ನಿಂತಳು.

17—11—1912ರ ರಾತ್ರಿ ಕಳ್ಳರು ಲೆಫ್ಟಿನೆಂಟ್ ಕ್ಲಾರ್ಕರ ಮನೆಯನ್ನು ನುಗ್ಗಿದರು. ಶ್ರೀಮತಿ ಕ್ಲಾರ್ಕರ ಬುರುಡೆಯನ್ನೊಡೆದು ಪರಾರಿಯಾದರು. ಕ್ಲಾರ್ಕರ ಮಕ್ಕಳನ್ನು ಬಲಿ ತೆಗೆದುಕೊಳ್ಳಲಿಲ್ಲ. ಮನೆಯಲ್ಲಿನ ಬೆಲೆ ಬಾಳುವ ಸಾಮಾನುಗಳನ್ನು ಮುಟ್ಟಲಿಲ್ಲ. ಮನೆಯಲ್ಲಿದ್ದ ನಾಯಿಯನ್ನು ಸ್ಪರ್ಶಿಸಿರಲಿಲ್ಲ ಈ ಕೃತ್ಯ ನಡೆದಾಗ ಕ್ಲಾರ್ಕ ಮನೆಯಲ್ಲಿರಲಿಲ್ಲ. ಸ್ನೇಹಿತರೊಬ್ಬರನ್ನು ಭೆಟ್ಟಿಯಾಗಲು ರೈಲು ನಿಲ್ದಾಣಕ್ಕೆ ತೆರಳಿದ್ದರು.

ಕ್ಲಾರ್ಕರು ಪೋಲಿಸರಿಗೆ ದೂರಿತ್ತರು. ಆಗ ಅವರನ್ನು ಅರಿಯದ ಜನವೇ ಇರಲಿಲ್ಲ. ಭಾರತೀಯ ವೈದ್ಯ ಖಾತೆಯಲ್ಲಿ ಅವರೊಬ್ಬರು ಪ್ರತಿಷ್ಠಿತ ಅಧಿಕಾರಿ—ಜೊತೆಗೆ ಸುರ ಸುಂದರಿಯಂತಿದ್ದ ಎಡ್ವರ್ಡರ ವಿಧವೆಯೊಡನೆ ಅವರಿಗಿದ್ದ ಅನೈತಿಕ ಸಂಬಂಧ. ಅದನ್ನೂ ತಿಳಿಯದವರಿರಲಿಲ್ಲ. ಅಷ್ಟರೊಳಗೆ ಅವರೀರ್ವರ ವ್ಯವಹಾರ ಸಾರ್ವಜನಿಕ ಆಸ್ತಿಯಾಗಿತ್ತು. ಪೋಲಿಸರು ಪ್ರಾರಂಭದಿಂದಲೂ ಅವರನ್ನು ಸಂಶಯಗ್ರಸ್ತ ದೃಷ್ಟಿಯಿಂದ ಕಾಣಲಾರಂಭಿಸಿದರು. ಕ್ಲಾರ್ಕರು ಫಿರ್ಯಾದು ಅವರನ್ನೇ ಪೇಚಿನಲ್ಲಿ ಬೀಳಿಸಿತು. ಅವರು ನೀಡಿದ ವಿವರಣೆಗಳಿಂದ ಉರುಳು ಇನ್ನಷ್ಟು ಬಿಗಿಯಿತು. ದೆಹಲಿ—ಮುಂಬಯಿಗಳ ಮಧ್ಯೆ ಆಗ್ರಾ ಸಿಗು

(ಹನ್ನೊಂದನೆ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
131 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7 3/8 % ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K

ಸಂಪುಟ : 50
ಸಂಚಿಕೆ : 37

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಮೂಲಭೂತ ಹಕ್ಕುಗಳಿಗೆ ಚ್ಯುತಿ ಬಂದೀತೆ ?

ಮೂಲಭೂತ ಹಕ್ಕುಗಳನ್ನು ಕಿತ್ತುಕೊಳ್ಳುವ ಅಥವಾ ಅವನ್ನು ಮೊಟಕು ಮಾಡುವ ಅಧಿಕಾರ ಸಂಸತ್ತಿಗಿಲ್ಲವೆಂಬ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯದಿಂದಾಗಿ ಕೆಲವೊಂದು ಆತಂಕಗಳು ರಾಜ್ಯ ಕೇಂದ್ರ ಸರಕಾರಗಳಿಗೆ ಬಂದಿವೆ. ರಾಜಧನ ರದ್ಧತಿಯನ್ನು ಸಾಧಿಸಲು ಮುಂದುವರಿದ ಕೇಂದ್ರ ಸರಕಾರವು ನ್ಯಾಯಾಲಯದಲ್ಲಿ ಪರಾಜಯ ಹೊಂದಬೇಕಾಯಿತು. ರಾಜಧನಾದಿಗಳು ಮಾಜಿ ರಾಜ–ಮಹಾರಾಜರ ಆಸ್ತಿ ಎಂದು ನ್ಯಾಯಾಲಯ ವರ್ಣಿಸಿತು. ತನ್ನ ಉಳಿವು–ಅಳಿವಿನ ಪ್ರಶ್ನೆಯೆಂದು ಶ್ರೀಮತಿ ಗಾಂಧಿಯವರು ಮೊನ್ನೆಯ ಚುನಾವಣಾ ವೇಳೆಯಲ್ಲಿ ಸಂವಿಧಾನ ಬದ್ಧ ವಿಧಾನಗಳಿಂದಲೇ ರಾಜಧನ ರದ್ಧತಿಯನ್ನು ಸಾಧಿಸಲಾಗುವುದೆಂದು ಘೋಷಿಸುತ್ತ ಬಂದರು. ಆದರೆ, ಇದನ್ನು ವ್ಯವಹೃತಗೊಳಿಸುವುದು ಹೇಗೆ ಎಂಬುದರ ಬಗ್ಗೆ ಈಗವರು ಚಿಂತಿತರಾಗಿದ್ದಾರೆ. ಕೇಂದ್ರದ ಸಚಿವ ಶ್ರೀ ಕೆಂಗಲ್ ಹನುಮಂತಯ್ಯನವರು ಕಾನೂನು ಸಚಿವರಾಗಿದ್ದಾಗ, ನ್ಯಾಯಾಲಯಗಳು ಪುಸ್ತಕದ ನ್ಯಾಯವನ್ನು ಹೇಳುವುದರ ಬದಲು ಸಾಮಾಜಿಕ ನ್ಯಾಯದಾನ ಮಾಡಬೇಕೆಂದು ಹೇಳಿದ್ದುಂಟು. ಜನಪ್ರಿಯ ಸರಕಾರದ ಪ್ರತಿ ಕಾನೂನು ಜನಹಿತ ಚಿಂತನೆಯನ್ನೇ ಮಾಡುವುದಾದುದರಿಂದ, ಅದು ಸಾಮಾಜಿಕವಾಗಿ ನ್ಯಾಯಬದ್ಧವೆಂದವರ ಅಭಿಪ್ರಾಯವಾಗಿದ್ದಿರಬಹುದು. ನ್ಯಾಯಾಲಯಗಳು ಸಂಸತ್ತಿನ ನಿರ್ಣಯವನ್ನು ಮೀರಿ ಹೋಗಬಾರದೆಂದೇ ಇವರರ್ಥ. ಶಾಸಕಾಂಗ – ಕಾರ್ಯಾಂಗ– ನ್ಯಾಯಾಂಗಗಳ ಪ್ರತ್ಯೇಕತೆಯಿಂದ ಸಾಮಾಜಿಕ ನ್ಯಾಯವಾಗುವುದಿಲ್ಲವೆಂಬ ಅಭಿಪ್ರಾಯ ಅಷ್ಟೊಂದು ಸಾಧುವಾಗದು. ಬಹುಮತದ ನಿರ್ಣಯವು ಗಂಡಾಂತರಕಾರಿಯಾಗುವ ಉದಾಹರಣೆಗಳೂ ಇಲ್ಲದಿಲ್ಲ. ಸರಕಾರದ ನೀತಿಯು ಚಿರ ಚಂಚಲವಾಗಿದ್ದು ನ್ಯಾಯದ ಅರ್ಥವ್ಯಾಪ್ತಿಯೂ ಅದರ ಚೌಕಟ್ಟಿಗೆ ಸೇರಿದರೆ, ಜನಜೀವನನೆಂದೂ ಸುಸ್ಥಿರವಾಗುವುದಿಲ್ಲ.

ರಾಜ–ಮಹಾರಾಜರು ತಮ್ಮ ಆಸ್ತಿಯನ್ನು ಸಾರ್ವಜನಿಕ ವಿಶ್ವಸ್ಥನಿಧಿಯನ್ನಾಗಿ ಮಾರ್ಪಡಿಸಲೀಗ ಮುಂಬಂದಿದ್ದಾರೆ. ಸಮಯದ ಕರೆಯನ್ನವರು ಕೇಳಹತ್ತಿದ್ದಾರೆ. ಆದರೆ, ಶ್ರೀಮತಿ ಗಾಂಧಿಯವರು ಅದರಲ್ಲಿ ಆಸಕ್ತರಾದಂತೆ ಕಾಣಿಸುವುದಿಲ್ಲ. ರಾಜಧನ ರದ್ಧತಿಯ ಪ್ರಶ್ನೆ ಆಕೆಯನ್ನಂದು ಕೆರಳಿದ ಸಿಂಹಿಣಿಯನ್ನಾಗಿಸಿತ್ತು. ಸಾರ್ವಜನಿಕ ಟ್ರಸ್ಟ್ ಆಗಿ ರಾಜರ ಆಸ್ತಿ ರೂಪುಗೊಂಡರೂ ಅದರ ಮೇಲೆ ರಾಜರ ಅಧಿಕಾರ ಕೇಂದ್ರೀಕೃತವಾಗಿ ತಾನು ಬಯಸುವ ಸಾಮಾಜಿಕ ನ್ಯಾಯ ಲಭ್ಯವಾಗದೆಂಬ ಭಾವನೆ ಆಕೆಯಲ್ಲಿ ಮೂಡಿರಲೂಬಹುದು. ಅದಕ್ಕಿಂತ ಹೆಚ್ಚಾಗಿ, ತನ್ನ ಮುಖಕ್ಕೆ ಮಸಿ ಬಳೆದ ಈ ಪ್ರಶ್ನೆಗೆ ಸಂವಿಧಾನ ಬದ್ಧತೆಯನ್ನು ತಂದುಕೊಡುವುದೇ ಆಕೆಗೆ ಹಿತವೆನಿಸಿರಬಹುದು. ಇದನ್ನೇ ಒಂದು ವರ್ಷದಿಂದಲೂ ಆಕೆ ಉಚ್ಚರಿಸುತ್ತ ಬಂದಿದ್ದಾರೆ. ಆದರೆ, ರಾಜ–ಮಹಾರಾಜರ ಆಸ್ತಿಯೆಂದು ನ್ಯಾಯಾಂಗದ ಬಹುಮತದ ಅಭಿಪ್ರಾಯ. ಶ್ರೀಮತಿಯವರು ರಾಜಧನವನ್ನು ಕಾನೂನು ರೀತ್ಯಾ ನಿಲ್ಲಿಸುವುದಾದರೆ, ಆಸ್ತಿಯ ಹಕ್ಕನ್ನು ಕಸಿದುಕೊಳ್ಳಲೇಬೇಕು. ಚುನಾವಣೆಯ ಸಮಯ 'ಆಸ್ತಿ ಹಕ್ಕನ್ನು ಕಸಿದುಕೊಳ್ಳುವುದಿಲ್ಲವೆಂದು ಜನತೆಗೆ ಆಶ್ವಾಸನೆ ನೀಡಿದ್ದ ಪ್ರಧಾನಿಯವರು ಆಸ್ತಿಗೊಂದು ಉಚಿತವಾದ ಮಿತಿ ಹೇರುವುದಕ್ಕೆ ತನ್ನ ಪಕ್ಷ ಬಯಸುವುದನ್ನೂ ಬಹಿರಂಗಪಡಿಸಿದ್ದರು. ಇದೀಗ, ಸಂವಿಧಾನವನ್ನು ಕಾಲ್ಚೆಂಡಾಗಿ ಪರಿವರ್ತಿಸಬಲ್ಲ ಬಹುಮತವನ್ನು ಆಕೆ ಗಳಿಸಿದ್ದರಿಂದ ಯಾವುದೇ ಸಂವಿಧಾನ ತಿದ್ದುಪಡಿ ಮಸೂದೆ ನಿರಾತಂಕವಾಗಿ ಸ್ವೀಕೃತವಾಗುವುದರಲ್ಲಿ ಸಂದೇಹವಿಲ್ಲ. ಮೂಲಭೂತ ಅಧಿಕಾರಗಳನ್ನು ತಿದ್ದುಪಡಿ ಮಾಡುವ ಅಥವಾ ಅವನ್ನು ಮಿತಗೊಳಿಸುವ ಅಧಿಕಾರವನ್ನು ಈಗ ಸಂಸತ್ತು ತನ್ನ ಕೈಗಳಿಗೆ ತೆಗೆದುಕೊಳ್ಳಬಯಸುತ್ತದೆ. ನ್ಯಾಯಾಲಯಗಳ ಹಿಂದಿನ ತೀರ್ಮಾನಗಳಿಂದ ಈ ಅಧಿಕಾರವನ್ನು ಗಳಿಸಿಕೊಳ್ಳದೆ ತಾನು ಬಯಸುವ 'ಸಾಮಾಜಿಕ ನ್ಯಾಯ' ಒದಗಿಸುವುದು ಸಾಧ್ಯವಿಲ್ಲವೆಂದು ಕೇಂದ್ರದ ಕಾನೂನು ತಜ್ಞರು ತಲೆಕೆರೆದು ನಿರ್ಣಯಕ್ಕೆ ಬಂದಿದ್ದಾರೆ. "ಆಸ್ತಿಯನ್ನು ಸಂಪೂರ್ಣ ಕಿತ್ತುಕೊಳ್ಳುವುದಿಲ್ಲ; ಅದಕ್ಕೆ ಮಿತಿ ಮಾತ್ರ ಹೇರಲಾಗುವುದು, ಹಾಗೆಯೇ ಸಾಮಾಜಿಕ ನ್ಯಾಯವನ್ನನುಸರಿಸಿ, ಮೂಲಭೂತ ಹಕ್ಕುಗಳನ್ನೂ ಮೊಟಕುಮಾಡಬಹುದು, ವಿಸ್ತರಿಸಬಹುದು" ಇದು ಈಗಿನ ನಿಲುವು. ಅಂದರೆ, ಆಸ್ತಿ ಮತ್ತು ಮೂಲಭೂತ ಅಧಿಕಾರಗಳನ್ನು ಕಸಿದುಕೊಳ್ಳುವ ಅಧಿಕಾರವೂ ತನಗೆ ಬೇಕು ಎಂಬುದು ಸರಕಾರದ ಇಚ್ಛೆ.

ಈ ನಿಲುವುಯಿಂದ ಪ್ರಜೆಗಳಿಗೆ ನೆಮ್ಮದಿ ಲಭ್ಯವಾದೀತೆ? ರಾಜಧನ ರದ್ಧತಿ ಅಥವಾ ಆಸ್ತಿಯ ಮೇಲೊಂದು ಮಿತಿ ಹಾಕುವುದು ಇಂದಿನ ಸರಕಾರದ ಗೌರವದ ಪ್ರಶ್ನೆಯಾಗಿರಬಹುದು; ಇದರಿಂದ ಸಾಮಾಜಿಕ ನ್ಯಾಯದಾನದ ದಾರಿಯಲ್ಲಿ ಅದೊಂದು ಕಿಲೋಮೀಟರ್ ಮುಂದುವರಿಯಲೂಬಹುದು. ಆದರೆ, ಸಂವಿಧಾನವು ನಾಗರಿಕರಿಗೆ ಕೊಡಮಾಡಿದ ಅಧಿಕಾರಗಳನ್ನು ಬಹುಮತ ಗಳಿಸಿದ ಪಕ್ಷದ ಇಚ್ಛೆಯಂತೆ ತಿದ್ದುಪಡಿ ಮಾಡುತ್ತಲೇ ಹೋದರೆ, ಮುಂದೆಲ್ಲಿಯ ವರೆಗೆ ಮುಟ್ಟಬಹುದು? ಹೇಗೆ ಹೇಗೋ ಚುನಾವಣೆಗಳಲ್ಲಿ ಗೆದ್ದು ಬಂದ ಕೆಲವರು ಕೋಟಿ ಕೋಟಿ ನಾಗರಿಕರ ಮೇಲೆ ಸವಾರಿ ಮಾಡುವಂತಾಗದೆ? ಮೂಲಭೂತ ಹಕ್ಕುಗಳಲ್ಲಿ ಒಂದೊಂದನ್ನೇ ಕಿತ್ತುಕೊಳ್ಳುತ್ತ ಮುಂದರಿದರೆ, ನಾಗರಿಕರ ಗತಿಯೇನು? ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಸರಕಾರದ ಕೈಗೊಂಬೆಗಳಾಗಿಯೇ ಅವರು ಉಳಿಯುವಂತಾದರೆ, ಸ್ವಾತಂತ್ರ್ಯದ ಪ್ರಯೋಜನವೇನು? ವಾಕ್ ಸ್ವಾತಂತ್ರ್ಯ, ಅಭಿಪ್ರಾಯ ಪ್ರಕಟಣಾ ಸ್ವಾತಂತ್ರ್ಯ ಪೂಜಾ ಸ್ವಾತಂತ್ರ್ಯಾದಿಗಳನ್ನೂ ಬಹುಮತದ ಬಲದಿಂದ ಸರಕಾರ ಕಿತ್ತುಕೊಳ್ಳುವುದಿಲ್ಲವೆಂದೇನು ಅಭಯ? ಶ್ರೀಮತಿ ಗಾಂಧಿಯವರು ಇಷ್ಟು ಮುಂದೆ ಹೋಗಲಾರರು. ಸಂಸತ್ತು ಜನರಿಂದ ಚುನಾಯಿತವಾಗಿದ್ದು ಅದರ ಪರಮಾಧಿಕಾರವನ್ನು ಪ್ರದರ್ಶಿಸುವುದು ಆಕೆಯ ಉದ್ದೇಶವಿರಬಹುದು. ಆದಕ್ಕೆಂದೇ ಈ ಬಗೆಯ ಅಧಿಕಾರವನ್ನು ಸಂಸತ್ತು ಪಡೆಯಬೇಕೆಂದವರು ಬಯಸಿರಬಹುದು. ಹಾಗಿದ್ದರೂ ಮಂಗನ ಕೈಯಲ್ಲಿ ದೀಟಿಗೆ ಕೊಟ್ಟನೇಲೆ ಅದು ತನ್ನ ಮನೆಯನ್ನೂ ಸುಟ್ಟೀತು. ಅದರೂ ಒಂದು ಸಂದೇಹ– ಮೂಲಭೂತ ಹಕ್ಕುಗಳಿಗೆ ತಿದ್ದುಪಡಿ ಸೂಚಿಸುವ ಅಧಿಕಾರ ಸಂಸತ್ತಿಗೆ ಕೊಡುವಂತೆ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಅಧಿಕಾರ ಸಂಸತ್ತಿಗಿದೆಯೇ. ಮೌಲಿಕ ಹಕ್ಕನ್ನು ಮೊಟಕು ಮಾಡುವುದು ಸಂವಿಧಾನಬದ್ಧವಾಗುವುದಿಲ್ಲ! ತಿದ್ದುಪಡಿ ಮಸೂದೆ ಸಂವಿಧಾನ ಬದ್ಧವಾಗಿಯೇ ಇರಬೇಕಾದದ್ದು ಅವಶ್ಯ.

ಜಿ. ವಿ. ಹಳ್ಳಿಕೇರಿ

ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರ ಅಧ್ವರ್ಯುಗಳಲ್ಲಿ ಒಬ್ಬರಾದ ಶ್ರೀ ಜಿ. ವಿ. ಹಳ್ಳಿಕೇರಿಯವರು ತಮ್ಮ ೬೩ನೆಯ ವಯಸ್ಸಿನಲ್ಲಿ ನಿಧನರಾದರು. ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಹೊಸರಿತ್ತಿಯಲ್ಲಿ ಜನನ, ಹೈಸ್ಕೂಲಿನವರೆಗಿನ ಶಿಕ್ಷಣ, ಮಹಾತ್ಮಾ ಗಾಂಧಿಯವರಿಂದ ಆಕರ್ಷಣ, ೧೯೩೦ರ ಸತ್ಯಾಗ್ರಹದಲ್ಲಿ ವಹಿಸಿದ್ದ ಪಾತ್ರ ಅವಿಸ್ಮರಣೀಯ. ಹುಟ್ಟಿನಿಂದಲೇ ಹೋರಾಟ ಪ್ರಿಯತೆ, ಉತ್ತರ ಕರ್ನಾಟಕ ತುಂಬ ಜನಪ್ರಿಯತೆ, ಹಲವು ವರ್ಷ ಸೆರೆಮನೆವಾಸ, ಜನಮನ ಹೃದಯಗಳಲ್ಲಿ ಸದಾವಾಸ. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಕರ್ನಾಟಕ ಏಕೀಕರಣದ ಪ್ರಶ್ನೆ. ಕನ್ನಡ ಕುಲಪುರೋಹಿತ ಆಲೂರರ ಹೆಗಲಿಗೆ ಹೆಗಲು–ಕಾರ್ಯದಲ್ಲಿ ಸಿದ್ಧಿ, ಹಳ್ಳಿಕೇರಿಗೆ ತೃಪ್ತಿ. ಮಹಾರಾಷ್ಟ್ರ—ಕರ್ನಾಟಕ ಸೀಮಾ ವಿವಾದ ಮಹಾಜನ ಆಯೋಗ ನೇಮಕ; ಹಳ್ಳಿಕೇರಿಯವರಿಂದ ವಿರೋಧ–ಜನತೆ ಹೃತ್ಪೂರ್ವಕ ಸಮಾಯಕ.

ಜನಸೇವಾದೀಕ್ಷಿತರಾದ ಶ್ರೀ ಹಳ್ಳಿಕೇರಿಯವರು ಶಾಸಕರಾದದ್ದು ೧೯೫೨ರಲ್ಲಿ! ೬೪ರಲ್ಲಿ ವಿಧಾನ ಪರಿಷತ್ತಿನ ಸಭಾಪತಿ. ೬೬ರಲ್ಲಿ ನಿವೃತ್ತಿ; ಪರಿಷತ್ತಿಗೆ ಪುನರಾಯ್ಕೆ, ೬೮ರಲ್ಲಿ ಮತ್ತೊಮ್ಮೆ ಸಭಾಪತಿ. ಈ ನಡುವೆ ಖಾದಿ ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷತೆ. ಜೀವನ ಶಿಕ್ಷಣದಲ್ಲಿ ಆಸಕ್ತಿ–ಮಹಾತ್ಮಾ ಗಾಂಧಿ ಜೀವನ ಶಿಕ್ಷಣ ಸಂಸ್ಥೆಯ ಸ್ಥಾಪನೆ. ಕಾಂಗ್ರೆಸ್ ವಿಘಟನೆಯ ನಂತರ ಹಳ್ಳಿಕೇರಿ ಸಿಂಡಿಕೇಟಿನತ್ತ. ನಿಲ–ಜಲವಿವಾದದಲ್ಲಿ ಕೇಂದ್ರ ನೀತಿಯ ವಿರುದ್ಧ ಪ್ರತ್ಯೇಕತೆಯ ಬೆದರಿಕೆ! ಕೊನೆಯ ಗಳಿಗೆಯಲ್ಲಿ ಪತ್ರಿಕೆ "ಜನಮತ"ದ ಆರಂಭ. ಕಾಂಗ್ರೆಸ್–ರಾಜ್ಯಗಳಿಗೆ ಅವರು ಸಲ್ಲಿಸಿದ ಸೇವೆ ಅಸಾಧಾರಣ; ಅದುದರಿಂದಲೇ ಉತ್ತರ ಕರ್ನಾಟಕಕ್ಕೆ ಅವರು 'ಯಜಮಾನ'!

ವಿಧಿಯಿಂದ ಅವರ ಆಲಿಂಗನ. ಮೃತರ ಆತ್ಮ ಚಿರಶಾಂತಿ ಹೊಂದಲಿ; ನಮಗೆಲ್ಲ ಕ್ರಿಯಾಪ್ರೇರಕ ಶಕ್ತಿಯಾಗಿ ಪರಿಣಮಿಸಲಿ.

● ●

ಗೇಹರಾಜ್ಯದಲ್ಲಿ

ರಾಂಗ್ ಪರ್ಸನ್ ಪ್ಲೀಸ್...

'ಅಲ್ಲಾರೀ....'

'ಏನು?'

'ನೋಡಿ, ಬಂಗ್ಲಾದೇಶವನ್ನು ತನ್ನ ವಸಾಹತುವನ್ನಾಗೇ ಇರಿಸಿಕೊಳ್ಳುವ ಭರದಲ್ಲಿ ಅಲ್ಲಿ ಪಾಕಿ ಪಡೆಗಳು ಹೋರಾಡಲಿ ....'

'ಹ್ಞೂಂ, ಹೋರಾಡಲಿ ......'

'ಆದರೆ, ಅವು ಭಾರತದ ಗಡಿಯನ್ನೇಕೆ ಉಲ್ಲಂಘಿಸುತ್ತವೆ?'

'ತಪ್ಪು ಮನುಷ್ಯನಲ್ಲಿ ಪ್ರಶ್ನೆ ಕೇಳಿದೆಯಲ್ಲಾ ನೀನು?'

'ಹಾಗಂದ್ರೆ .."

"ರಾಂಗ್ ಪರ್ಸನ್ ಪ್ಲೀಸ್....'

'ಏನೂಂತೀರಾ ನೀವು?'

'ಅಲ್ವೆ, ಯಾರಲ್ಲಿ ಪ್ರಶ್ನೆ ಕೇಳ್ಬೇಕಾಗಿತ್ತೋ ಅವ್ರಲ್ಲಿ ಕೇಳ್ಬೇಕಿತ್ತು. ಯಾರ್ಯಾರಲ್ಲೆಲ್ಲ ಪ್ರಶ್ನೆ ಕೇಳಿದ್ರೆ ಏನುತ್ರ ಬಂದೀತು?'

'ಸಾಕು ಬಿಡೀಂದ್ರೆ.... ಕಲ್ಪನಾ ಕುದುರೆಯನ್ನು ನೇರ ದಾರಿಯಲ್ಲಿ ಓಡಿಸುವ ಹೆನ್ಮ್ಯ .."

"ಏ, ಸಾಕು ಮಾಡೆ ...'

'ಏಕೆ?'

'ನಿನ್ನ ಪ್ರಶ್ನೆಗೆ ಉತ್ರ ಕೊಡೋ ಯತ್ನ ಮಾಡ್ತೇನೆ ..'

'ಹ್ಞೂಂ .. ಹೇಳಿ ನೋಡೋಣ'

". .. ನೋಡು, ಬಂಗ್ಲಾ ದೇಶದಲ್ಲಿನ ೧೦–೧೫ ಲಕ್ಷ ಜನರನ್ನು ಯಾಹ್ಯಾ ಖಾನರು ಸರ್ವಾಧಿಕಾರಕ್ಕಾಗಿ ಬಲಿ ತೆತ್ತಿದ್ದಾರೆ. ಈ ಕಗ್ಗೊಲೆಯು ಜಗತ್ತಿಗೆ ತಿಳಿಯಬಾರದೆಂದು, ಕೊಲೆಯ ಆರೋಪವನ್ನು ಭಾರತದ ತಲೆಗೆ ಏರಿಸಬೇಕೆಂದು ಅವರು ನಮ್ಮನ್ನು ಕೆಣಕುತಿದ್ದಾರೆ....'

"ಅಲ್ರಿ, ಪಾಕಿ ಪಡೆಗಳು ನಮ್ಮ ಗಡಿಯನ್ನು ದಾಟಿದುವು; ಗಡಿಯೊಳಗೆ ಶೆಲ್ ದಾಳಿ ಮಾಡಿದುವು, ಗುಂಡಿನ ಮಳೆ ಸುರಿಸಿದುವು. ಗಡಿರಕ್ಷಕ ದಳದ ದೋಣಿಯನ್ನು ಮುಳುಗಿಸಿದುವು....ಆದರೂ ..."

'ನಾವು ಎಚ್ಚರಿಕೆ ಕೊಡಲಿಲ್ಲವೇನು? ಪ್ರತಿಭಟನೆ ಸೂಚಿಸಲಿಲ್ಲವೇನು?"

'ಅಲ್ರಿ, ನಿಮ್ಮ ಎಚ್ಚರಿಕೆ—ಪ್ರತಿಭಟನೆಗಳನ್ನು ಯಾಹ್ಯಾಖಾನರು ಆಗಲೇ ಕಸದ ಬುಟ್ಟಿಗೆಸೆದಿದ್ದಾರೆ....'

"ಅದು ಅವರ ದುಷ್ಟತನ . '

'ಅದು ಹೌದೂನ್ನಿ. ಆದರೆ, ನಾವೇನು ಮಾಡಬೇಕೂಂತ?'

'ಮಾಡೋದೇನು? ಕಾಯುತ್ತ ನೋಡುವುದು'

'ಏನನ್ನು?'

'ಪಾಕಿ ದೌರ್ಜನ್ಯವನ್ನು—'

"ಅಲ್ರಿ, ನಮ್ಮ ಸೀಮೋಲ್ಲಂಘನಕ್ಕೆ ಪ್ರತಿಯಾಗಿ ಯಾಕೆ ಕಾರ್ಯಾಚರಣೆ ಮಾಡಬಾರದು?"

'ಮಾಡ ಬಹುದೂನ್ನು. ಆದರೆ, ಇದರಿಂದ ಯುದ್ಧ ನಿಲುಗಡೆಯಾಗುವುದಿಲ್ಲ ಅದು ಬೆಳೆದು ಮತ್ತೊಂದು ಜಾಗತಿಕ ಸಮರವಾಗಲೂ ಬಹುದು....'

'ಅದಕ್ಕಾಗಿ ಷಂಡತನ... '

'ಇದು ಷಂಡತನವಲ್ಲ ಕಣೇ, ರಾಜ್ಯನೀತಿ.'

"ಇದೆಂಥದೋ...."

"ನೋಡಮ್ಮ, ಶಿಶುಪಾಲ ನೂರು ಬಾರಿ ಬೈದಾಗಲೂ ಕೃಷ್ಣ ಸಹಿಸಿಕೊಂಡು ಸುಮ್ಮಗಿದ್ದನಂತೆ. ನೂರೊಂದನೆಯ ಬಾರಿ ನಿಂದನೆ ಕೇಳಿದೊಡನೆಯೇ ತನ್ನ ಚಕ್ರ ಪ್ರಯೋಗಿಸಿ ಕತ್ತು ಕತ್ತರಿಸಿದನಂತೆ ..."

"ಅದೆಂಥದೋ ಕೃಷ್ಣ ಅವನಮ್ಮನಿಗೆ ಮಾತು ಕೊಟ್ಟಿದ್ದನಂತೆ. ಆ ಮಾತನ್ನುಳಿಸಿಕೊಳ್ಳೋದಕ್ಕಾಗಿ...."

'ಅದು ಸರೀನ್ನು. ಹಾಗೇ ನಾವೂನೂ ಒಂದೊಂದು ಕೋಪಕ್ಕೆ ಒಂದೊಂದು ಬಾವಿ ಹಾರೋದು ಸಾಧ್ಯವೆ? ಪಾಕಿಗಳ ದುರಾಚಾರ ನಡೆದ ಕೂಡ್ಲೆ ನಾವೂ ಯುದ್ಧ ಮಾಡುವುದಾದ್ರೆ ಅದಕ್ಕೆ ಆರಂಭ-ಅಂತ್ಯವೆಂಬವು ಇಲ್ಲವಾದಾವು ...'

'ಹ್ಞೂನ್ನಿ ಬಂಗ್ಲಾ ಹೋರಾಟಕ್ಕೆ ಭಾರತವನ್ನು ಪ್ರತ್ಯಕ್ಷವಾಗಿ ಎಳೆತರುವುದೇ ಪಾಕಿನುದ್ದೇಶವೆನ್ನುತ್ತೀರಾ?'

'ಹಾಗೆ ಎಳೆದು ತಂದು ಬಂಗ್ಲಾ ಪ್ರಜೆಗಳನ್ನು ಕೊಂದವರು ನಾವಲ್ಲ, ಭಾರತೀಯ ಪಡೆಗಳೆಂದು ಹೊಣೆಗಾರಿಕೆ ಹಾರಿಸಿಕೊಳ್ಳುವ ಕುತಂತ್ರ....'

'ಓ ಅದಕ್ಕೇ ಉಗುರು ಕೆದರಿ ಜಗಳಕ್ಕೆ ಕರೆದರೂ ಭಾರತ ರೋಮ ಅಲುಗಾಡಿಸುವುದಿಲ್ಲ....'

'ಹಾಗೇನೂ ಇಲ್ಲ....'

'ಮತ್ತೆ?'

'ಅತ್ಯಂತ ಅನಿವಾರ್ಯ ಪರಿಸ್ಥಿತಿ ಬಂದೊದಗದೆ ಭಾರತ ಕೈಯೆತ್ತುವುದಿಲ್ಲ....'

'ಅದು ಸರಿ....'

'ಯಾವುದು?'

'ನೋಡಿ, ಬೆಂಗ್ಳೂರಿನಲ್ಲಿ ಕೆಲವು ತರುಣ ಕಳ್ಳರನ್ನು ಸೆರೆಹಿಡಿದ್ರಂತೆ, ..'

'ಏನಾಯ್ತು ?'

'ಆಗೋದೇನೂ ಇಲ್ಲಾನ್ನಿ. ಏಕೆ ಹೇಳಿದೇಂದ್ರೆ, ಈ ತರುಣರೆಲ್ಲ ಪೋಲೀಸು ಸಿಬ್ಬಂದಿಯ ಮಕ್ಕಳಂತೆ, ಸಂಬಂಧಿಗಳಂತೆ.'

"ಚಲೋದಾಯ್ತು...."

'ಯಾಕೆ?'

'ಅಲ್ವೆ, ಪೋಲೀಸು ಸಬ್ಬಿನಾಸಪೆಟ್ಟರ ಮಗನಾದರೇನು, ಹೆಡ್ಡ ಕನಿಷ್ಟ ಬಲ್ಲ್ಯಿಯ ಸಂಬಂಧಿಯಾದರೇನು, ಅವರು ಕಳ್ಳತನ ಮಾಡಬಾರದೆಂದಿದೆಯೇನು?'

"ಹಾಗಲ್ಲಾರಿ, ಆದ್ರೂ ..."

'ನೋಡಮ್ಮ, ಸಂಜಯ ಗಾಂಧಿ ಇಂದಿರಾ ಗಾಂಧಿ ಮಗನೆಂದ ಮಾತ್ರಕ್ಕೆ ಕಾರು ತಯಾರೀಸೋ ಲೈಸನ್ಸು ಪಡೀಬಾರ್ದು ಅನ್ನೋದನ್ನು ಯಾವ ಕಾನೂನು ಹೇಳುತ್ತೆ? ಮುರಾರ್ಜಿ ಭಾಯಿ ಮಗ ಕಾಂತೀಲಾಲ ಉದ್ಯಮದಲ್ಲಿ ದುಡ್ಡುಗಳಿಸ ಬಾರ್ದನ್ನೋದು ಯಾವ ನ್ಯಾಯ? ಹಾಗೆ ಪೋಲೀಸು ಸಿಬ್ಬಂದಿ ಮಕ್ಕ-ಮರಿಗಳು ಕಳ್ಳತನ ಮಾಡೋದು ಕಾನೂನಿಗೆ ವಿರೋಧವಿರಬಹುದು—ಸಿಕ್ಕಿಬಿದ್ರೆ. ಆದ್ರೆ ಕಳ್ಳತನದಿಂದ ಅವ್ರನ್ನು ಮಾತ್ರ ಹೊರಗಿಡುವ ಯಾವ ಕಾನೂನು ಇದೆ?"

'ಹಾಗಲ್ಲಾರೀ ಬೇಲಿಯೇ ಹೊಲ ಮೇದರೆ ...'

'ಬೇಲಿಯೆಲ್ಲಿ ಹೊಲ ಮೇಯುತ್ತೆ? ಬೇಲಿ ಚಿಗುರಿ ಅದು ಮೇಯಿತು ..'

'ಇರ್ಬಹುದು. ತಾಯ್ತಂದೆಗಳ ಪ್ರೋತ್ಸಾಹ ಇಲ್ಲದೆ ಇದ್ರೆ ಮಕ್ಕಳು ಕಳ್ಳತನ ಮಾಡೋದಿಲ್ಲ ..'

"ಇದು ಸುಳ್ಳು ಮಕ್ಕಿಗೂ ಆತ್ಮಸಾಕ್ಷಿ ಇದೆ ಇಂದಿರಾ ಗಾಂಧಿ ಪ್ರತಿದಿನ ಮೂವತ್ತು ಸಾವಿರ ರೂಪಾಯಿ ಖರ್ಚು ಮಾಡಿ ಮಜಾ ಮಾಡೋದನ್ನು ಕೇಳಿದಾಗ ಈ ತರುಣರು ಮೂವತ್ತು ರೂಪಾಯಾದ್ರೂ ಗಳ್ಸಿ ಮಜಾ ಮಾಡೋ ಬಯಕೆಪಟ್ಟರೆ ತಪ್ಪೇನು? ಮನೆಯಲ್ಲಿ ಅನುಕೂಲವಿಲ್ಲದಾಗ ಹೊರಗೆ ಕಣ್ಣು ಹರಿಸುವುದು ಸಹಜವಲ್ಲವೇನು?'

'ಅಲ್ರಿ, ಹಾಸಿಗೆಯುದ್ದ ಇರುವಷ್ಟೇ ಕಾಲು ಚಾಚಬೇಕು . '

'ಇದೇನ್ ಹೇಳ್ತೀಯ? ದೇಶವೇ ಹಾಸಿಗೆ ವಿದೇಶದಿಂದ ತಂದು ಹಾಸಿಕೊಂಡು

(ಒಂಬತ್ತನೇ ಪುಟ ನೋಡಿರಿ)

ಕುಟುಂಬ ಯೋಜನೆಯಿಂದ ಸಂಸಾರದ ಖರ್ಚು ಕಡಿಮೆ

ಚಾರುಚಯನ
ಸಿಂಡಿಕೇಟಿನ ಶ್ರೀಮುಖ ಬೆಳಗೀತೆ?

ಸಿಂಡಿಕೇಟಿನ ಮುಂಬಯಿ ಅಧಿವೇಶನ ಇದು ಹಲವು ರೀತಿಗಳಿಂದ ಭಿನ್ನವಾಗಬಹುದೆಂಬ ನಿರೀಕ್ಷೆ.

ಹಿಂದೆ ಉತ್ತರ ಪ್ರದೇಶದ ಲಕ್‌ನೌದಲ್ಲಿ ಅದು ಸಮಾವೇಶಗೊಂಡಾಗ ಅದರ ಲಕ್—ಅದೃಷ್ಟ—ಖುಲಾಯಿಸೀತೇ ಎಂಬ ಊಹೆ ಎದ್ದಿತು. ಮೈತ್ರಿಕೂಟವೇನೋ ರಚನೆಯಾಯ್ತು; ಪರಿಣಾಮ ಪಕ್ಷವು ಅದ್ವಿತೀಯ ಸೋಲೊಪ್ಪಿಕೊಳ್ಳಲಾಯ್ತು.

ಮುಂಬಯಿ ಅಧಿವೇಶನವೂ ಅಷ್ಟೆ. ಮುಂಬರುವ—ಪಕ್ಷಕ್ಕೆ ನವ ಜೀವಸತ್ವ ತುರುಕುವ—ಪ್ರಯತ್ನಗಳು ನಡೆಯುತ್ತವೆ ಎಂಬ ಕಲ್ಪನೆಯಿತ್ತು.

ಮಧ್ಯಾವಧಿ ಚುನಾವಣೆಗಳಲ್ಲಿ ಸಿಂಡಿಕೇಟ್ ಗೋರಿಯನ್ನು ಇಂಡಿಕೇಟ್ ಕಟ್ಟಿ ಅಟ್ಟಹಾಸಗೆಯ್ದಿತು. ದಶಾಂಶಗಳ ಆರ್ಥಿಕ ನೀತಿಯನ್ನು ಸ್ವೀಕರಿಸಿದ್ದ ಕಾಂಗ್ರೆಸ್ ಪಕ್ಷದ ಎರಡು ತುಕುಡಿಗಳೂ ಅದೇ ನೀತಿಯನ್ನು ಅಪ್ಪಿಕೊಂಡಿವೆ.

ಈ ಕಾಮಧೇನು ನಮ್ಮದು. ಅದನ್ನು ಕರೆಯುವವರು ಮಾತ್ರ ಅವರಾದರೆಂದು ಸಿಂಡಿಕೇಟು ನೊಂದುಕೊಳ್ಳುತ್ತದೆ. ಏಕೆಂದರೆ, ಇದು ಅಧಿಕಾರದಿಂದ ವಂಚಿತ.

ಕಾಮಧೇನೂ ನಮ್ಮದೇ, ಅದನ್ನು ಕರೆಯುವವರೂ ನಾವೇ ಎನ್ನುತ್ತದೆ ಇಂಡಿಕೇಟು— ಅಧಿಕಾರ ತನ್ನ ಕೈಯಲ್ಲಿರುವುದರಿಂದ.

ರಾಜಧನ ರದ್ಧತಿ, ಬ್ಯಾಂಕುಗಳ ರಾಷ್ಟ್ರೀಕರಣ, ಸಾಮಾನ್ಯ ವಿಮೆಯ ರಾಷ್ಟ್ರೀಕರಣ ಮುಂತಾದ ಹಲವಾರು ಕ್ರಮಗಳು ಕಾಂಗ್ರೆಸ್ಸಿನ ದಶಾಂಶ ಅರ್ಥಪ್ರಣಾಳಿಗೆ ಸೇರಿದವು.

ಇಂಡಿಕೇಟು ಅವನ್ನು ಕ್ಷಿಪ್ರ ಕಾರ್ಯಾಚರಣೆಗೆ ತರಲು ಸಲ್ಲುವ- ಸಲ್ಲದ ಕ್ರಮ ಕೈಕೊಂಡಿತು. 'ಇಷ್ಟೊಂದು ಗಡಿಬಿಡಿಯೇ ತಕ್ಕ?' ಎಂದು ಕೇಳುವುದು ಸಿಂಡಿಕೇಟಿನ ಜಾಯಮಾನವಾಗಿ ಬಂತು.

ಪ್ರತಿಯೊಂದಕ್ಕೂ ಇಂಥದೇ ಸವಾಲು ಮುಂದೆ ಬರುವಾಗ ಶ್ರೀ ಸಾಮಾನ್ಯನಿಗೆ ಸಂದೇಹ. ದಶಾಂಶ ಅರ್ಥ ಪ್ರಣಾಳಿ ಕಾಗದ ಪತ್ರಗಳಲ್ಲಿ ಮಾತ್ರವೇ ಉಳಿಯಬೇಕೆಂಬುದೇ ಅದರ ನೀತಿಯೆ?

'ಪ್ರಗತಿ ಪರ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕೆಲವು ಪಕ್ಷೀಯ ಆಸಕ್ತ ಹಿತಾಸಕ್ತಿಗಳು ತನ್ನ ಕೈತಡೆಯುತಿದ್ದುವು' ಎಂಬ ಶ್ರೀಮತಿ ಗಾಂಧಿಯ ಅಂದಿನ ಉದ್ಗಾರ ಸತ್ಯವಿರಬಹುದೆ? 'ಈಗೇಕೆ? ಮುಂದೆನೋಡೋಣ' ಎಂದವರನ್ನು ಅವು ತಡೆಯುತಿದ್ದವೆ?

ಅದೇನಿದ್ದರೂ ದಶಾಂಶ ಅರ್ಥ ನೀತಿಯನ್ನು ಇಂಡಿಕೇಟ್ ಸರಕಾರ ಒಂದೊಂದಾಗಿ ಕಾರ್ಯಗತಗೊಳಿಸುತ್ತಿದೆ. ಅದು ಒಳ್ಳೆಯದಕ್ಕೇ ಇರಲಿ; ಕೆಟ್ಟದಕ್ಕೇ ಇರಲಿ ಕಾಂಗ್ರೆಸ್ ಜನತೆಗಿತ್ತಿದ್ದ ಭರವಸೆಗಳನ್ನು ಈಡೇರಿಸುತ್ತಿದೆ.

ಸಿಂಡಿಕೇಟ್ ಈ ದಿಸೆಯಲ್ಲಿ ಅಸಹಾಯಕವಿದೆ. ಸಿಂಡಿಂಡಿಕೇಟ್‌ಗಳ ನೀತಿಯೊಂದೇ ಆದರೂ ಇಂಡಿಕೇಟಿನಿಂದ ತನ್ನ ಭಿನ್ನತೆ ಪ್ರದರ್ಶಿಸಲೆಂದೇ ಅದು 'ಇಂದೇ ಏಕೆ?'. ಎನ್ನುತ್ತದೆ.

ಆದರೆ, ಈಯೊಂದು ಪ್ರಶ್ನೆಯಿಂದ ಅದು ಏನನ್ನೂ ಗಳಿಸುವುದಿಲ್ಲ. ಬಂಡವಳಶಾಹಿಗಳ ಬೆಂಬಲವನ್ನದು ಆದೆಂದೋ ಕಳೆದುಕೊಂಡಿದೆ; ಶ್ರೀಸಾಮಾನ್ಯರ ಬೆಂಬಲಕ್ಕೆರವಾಗಲು ಈ ಪ್ರಶ್ನೆ ಕಾರಣವಾಗಿದೆ. ಇತೋಭ್ರಷ್ಟಃ ತತೋಭ್ರಷ್ಟಃ ಎಂಬಂತಾದ ಸಿಂಡಿಕೇಟಿಗೆ ಭವಿಷ್ಯವಿದೆಯೇ?

ದಶಾಂಶ ಆರ್ಥಿಕ ಕ್ರಮಗಳನ್ನು ಇಂಡಿಕೇಟೂ ಸ್ವೀಕರಿಸಿದ್ದರಿಂದ, ಅವನ್ನು ಕಾರ್ಯಗತ ಮಾಡ ಹೊರಟಿರುವುದರಿಂದ ಸಿಂಡಿಕೇಟು ಅದನ್ನೇ ನಂಬಿ ಕುಳಿತರೆ, ಬಾಯಿಗೆ ಕೈಹಿಡಿದುಕೊಳ್ಳಬೇಕಾಗುತ್ತದೆ.

ಅದಕ್ಕೂ ಕ್ರಾಂತಿಕಾರಿಯಾದ, ಸಮಾಜವಾದಿಯಾದ ಅರ್ಥ ನೀತಿಯನ್ನದು ರೂಪಿಸಬೇಕು. ಸದ್ಯ ಅವನ್ನು ಕಾರ್ಯಗತ ಮಾಡಬೇಕಾದ ಹೊಣೆಗಾರಿಕೆಯದಕ್ಕಿಲ್ಲ. ಇದು ಒಂದು ರೀತಿಯಿಂದ ಅದರ ಸುದೈವ.

ಆದರೆ, ಕ್ರಾಂತಿಕಾರಿ ನೀತಿಯನ್ನು ರೂಪಿಸಲು ಅದು ಮುಂದೆ ಬಂದಿದೆಯೆ?

ಶ್ರೀ ನಿಜಲಿಂಗಪ್ಪನವರು ಸಿಂಡಿಕೇಟ್ ಅಧ್ಯಕ್ಷ ಪದದಿಂದ ನಿವೃತ್ತರಾಗುವುದು ಎಂದೋ ಬಹಿರಂಗವಾದ ಸತ್ಯ. ತನಗಿಂತ ಎಳೆಯರೂ ಸಮರ್ಥರೂ ಶಕ್ತಿಸಂಪನ್ನರೂ ಆ ಹುದ್ದೆಗೇರಬೇಕೆಂಬುದು ಅವರ ಆಶಯ.

ಹೊಸ ಅಧ್ಯಕ್ಷರ ಆಯ್ಕೆಯ ಕೆಲಸ ಸುಗಮವಾಗಲಿಲ್ಲ ಹಲವಾರು ಹೆಸರುಗಳು ಮುಂದೆ ಬಂದುವು. ರಾಮಸುಭಗ ಸಿಂಗ್, ರವೀಂದ್ರ ವರ್ಮ, ಚೌಧರಿ, ಕಾಮರಾಜ, ಹೀಗೆ ರಾಜ್ಯಕೀಯಾರ್ಥದ ಯುವಕರೂ ಹಳೆಯರೂ ಸೇರಿದರು.

ಒಮ್ಮತದ ನಿರ್ಧಾರ ಅಸಾಧ್ಯವಾಯ್ತು.

ಎಸ್ಸೆನ್‌ಗೆ ಉತ್ತರಾಧಿಕಾರಿಯನ್ನು ಹೆಸರಿಸುವ ಅಧಿಕಾರ ಬಂತು.

ಅವರು ಸಾದಿಕ್ ಅಲಿಯನ್ನು ಸೂಚಿಸಿದರು—ಆಯ್ಕೆಯೇನೋ ಒಮ್ಮತದಿಂದಾಯ್ತು.

ಸಾದಿಕ್ ಅಲಿಯವರ ಪಕ್ಷನಿಷ್ಠೆಯಲ್ಲಿ ಪ್ರಶ್ನೆಯಿಲ್ಲ; ಪಕ್ಷಕ್ಕೆ ಹೊಸ ಕ್ರಾಂತಿಕಾರಿ ತಿರುವನ್ನು ನೀಡುವ ಶಕ್ತಿ ಅವರಿಗಿದೆಯೆ?

ಸೇವೆಯ ಮಂತ್ರಸರಸ. ಲೇಖನ ಮಾತ್ರದಿಂದ ಸಂಜೀವಿನೀ ಪ್ರಯೋಗ ಸಾಧ್ಯವಾದೀತೆ? ಅಲಿಯವರು ನಿಜಲಿಂಗಪ್ಪ-ಕಾಮರಾಜರಿಗಿಂತ ವಯಸ್ಸಿನಲ್ಲಿ ಕಿರಿಯರು ಎಂಬೊಂದಂಶವನ್ನು ಬಿಟ್ಟರೆ, ಉಳಿದೆಲ್ಲಂಶಗಳಲ್ಲಿ ಆಯ್ಕೆ ಸಮಂಜಸವಲ್ಲವೆನ್ನುತ್ತಾರೆ ಹೆಚ್ಚಿನವರು.

ಸಾದಿಕರ ಆಯ್ಕೆ ತಾತ್ಕಾಲಿಕವಿರಬಹುದು. ಆದರೆ, ತನ್ನ ಅವಧಿಯಲ್ಲಿ ಅವರು ಪಕ್ಷದ ನೀತಿಯನ್ನು ಅತ್ಯಧಿಕ ಕ್ರಾಂತಿಕಾರಿಯಾಗಿಸಬೇಕಾಗಿದೆ. ಇದಾಗದೆ ಹೋದರೆ, ಪಕ್ಷದ ಭವಿಷ್ಯ ಅಂಧಕಾರಮಯವಾಗುತ್ತದೆ.

ಹೊಸ ಅಧ್ಯಕ್ಷರ ಆಯ್ಕೆಯಿಂದ ಅನೇಕರು ನಿರಾಶೆಗೊಂಡಿದ್ದಾರೆಂದು ಹೇಳಲಾಗುತ್ತದೆ. ಅವರ ನಿರಾಶೆಯನ್ನು ದೂರಮಾಡಿ, ಪಕ್ಷಾಂತರಕ್ಕೆ ಆಸ್ಪದ ದೊರೆಯದಂತೆ ನೋಡಿಕೊಳ್ಳುವುದೇ ಅಲಿಯವರ ಮೊದಲ ಕರ್ತವ್ಯವಾಗಬೇಕು.

ಕರ್ನಾಟಕ ಮತ್ತು ಗುಜರಾತಗಳಲ್ಲಿ ವಿಧಾನ ಸಭೆಗೆ ಚುನಾವಣೆಗಳು ನಡೆಯಲಿವೆ ಇವುಗಳಲ್ಲಿ ಸಿಂಡಿಕೇಟು ತನ್ನ ಕಳೆದುಕೊಂಡ ಸ್ಥಾನವನ್ನು ಮತ್ತೆ ಪಡೆಯಬೇಕಾಗಿದೆ ನೀತಿ ದಶಾಂಶ; ಕಾರ್ಯಾಚರಣೆ ಇಂದೇಕೆ?' ಮಾತ್ರವಾದರೆ, ಈ ಗೆಲು ಸಾಧ್ಯವೆನಿಸುವುದಿಲ್ಲ.

ರಾಜ್ಯಗಳಲ್ಲೀಗ ರಾಷ್ಟ್ರಪತಿಗಳ ಆಡಳಿತವಿರುವುದರಿಂದ ಹಿಂದಿನ ಸರಕಾರಗಳ ಹಲವಾರು ಹುಳುಕುಗಳು ಬಹಿರಂಗಗೊಂಡು, ಜನಾಭಿಪ್ರಾಯ ರೂಪಿಸುವುದೂ ಅಸಾಧ್ಯವಲ್ಲ.

ಪಕ್ಷದ ಸದಸ್ಯರಲ್ಲಿ 'ಪಕ್ಷವು ಸಚೇತನವಾಗಿದೆ' ಎಂಬ ಭರವಸೆ ಮೂಡಿಸಬೇಕು; ಇಲ್ಲವಾದರೆ, ಬಹುಳ ಪಕ್ಷದ ಚಂದ್ರನಂತೆ ಸಿಂಡಿಕೇಟು ಕ್ಷಯಿಸುತ್ತಲೇ ಹೋಗುತ್ತದೆ.

ಅಸಮಾಧಾನಗಳನ್ನಷ್ಟೆ ಬೆಳೆಸುತ್ತ ಹೋದರೆ, ಅದರಿಂದ ಪಕ್ಷದ ಶಕ್ತಿ ಹ್ರಾಸವಾಗುತ್ತ ಹೋಗುತ್ತದೆ. ನೀತಿಯೂ ಇಲ್ಲ; ಶಕ್ತಿಯೂ ಇಲ್ಲವಾಗುತ್ತದೆ.

ಕ್ಷಿಪ್ರ ಕಾರ್ಯಾಚರಣೆಗೊಳಪಡುವ ಕ್ರಾಂತಿಕಾರಿ ಅರ್ಥನೀತಿಯಷ್ಟೇ ಇಂದು ಯುವಜನಪ್ರಿಯವಾಗುತ್ತದೆ. ಇಂಡಿಕೇಟಿಗಿಂತಲೂ ಈ ದಿಸೆಯಲ್ಲಿ ಒಂದು ಹೆಜ್ಜೆ ಮುಂದಿಡದೆ ಹೋದರೆ ಸಿಂಡಿಕೇಟು ಪುನಶ್ಚೇತನಗೊಳ್ಳುವುದು ಸಾಧ್ಯವಿಲ್ಲ.

ಮಧ್ಯಾವಧಿ ಚುನಾವಣೆಗಳ ವೇಳೆ ಮುಖಕ್ಕೆರಚಿಕೊಂಡ ಕೆಸರನ್ನು ತೊಳೆದುಕೊಳ್ಳುವುದು ಸಾಧ್ಯವಿಲ್ಲ.

ಈ ಕೆಸರು ತೊಳೆದು ಅದು ತನ್ನ ಶ್ರೀಮುಖವನ್ನು ತೋರಿಸುವಂತೆ ಮಾಡುವುದೇ ಸಾದಿಕ್ ಅಲಿಯವರ ಪ್ರಥಮ ಕರ್ತವ್ಯ.

ಇದು ಸಾಧ್ಯವೆನಿಸೀತೆ?

●●

ನವಯುಗದ ಸುವರ್ಣ ಮಹೋತ್ಸವ

ನಿವೇದನೆ

ಇದೇ 1971ನೆಯ ವರ್ಷಕ್ಕೆ, ನಾಡಿನ ಜನಪ್ರಿಯ ಸಾಪ್ತಾಹಿಕ 'ನವಯುಗ' ತನ್ನ ಸಾರ್ಥಕ ಜೀವನದ ಐವತ್ತು ವರ್ಷಗಳನ್ನು ಕಳೆದು ತನ್ನ ಚಿನ್ನದ ಹಬ್ಬದ ವರ್ಷಕ್ಕೆ ಕಾಲಿರಿಸಿದೆ. ಈ ಶುಭ ಸಂದರ್ಭದಲ್ಲಿ ನಾಡಿನ ಸಾರ್ವಜನಿಕ ಅಭಿಪ್ರಾಯದ ಈ ನಿರೂಪಣ ಮತ್ತು ರೂಪಣದಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಪತ್ರಿಕೋದ್ಯಮಿಗಳು, ಲೇಖಕರು ಮತ್ತು ಸರ್ಕಾರದ ಮುಂದಾಳುಗಳನ್ನು ಒತ್ತಟ್ಟಿಗೆ ಸೇರಿಸಿ ಭಾರತೀಯ ಪ್ರಜಾಪ್ರಭುತ್ವದ ಯಶಸ್ಸಿಗಾಗಿ ನಾವು ಇನ್ನೂ ಮಾಡಬೇಕಾದ ಕೆಲಸ, ಹಿಡಿಯಬೇಕಾದ ದಾರಿಯ ಕುರಿತು ಚರ್ಚೆ ನಡೆಸಲು ಅನುಕೂಲ ಕಲ್ಪಿಸುವ ಬಯಕೆ ನಮ್ಮದು. "ನವಯುಗ"ದ ಚಿನ್ನದ ಹಬ್ಬ ನಮ್ಮ ರಾಜ್ಯದ ಸರ್ವತೋಮುಖ ಬೆಳವಣಿಗೆಯ ಸೂತ್ರಗಳನ್ನು ಕಂಡುಕೊಳ್ಳಲು ನೆರವಾಗುವಂತೆ ಆ ಹಬ್ಬವನ್ನು ಒಂದು ಸಾಂಸ್ಕೃತಿಕ ಉತ್ಸವವಾಗಿ ಆಚರಿಸಬೇಕೆಂದು ನಾವು ನಿರ್ಧರಿಸಿರುತ್ತೇವೆ. ಈ ಬಗ್ಗೆ ಈಗಾಗಲೇ ಪ್ರಾತಿನಿಧಿಕ ಸಮಾರಂಭ ಸಮಿತಿಯನ್ನು ರಚಿಸಲಾಗಿದೆ.

ನಮ್ಮ ಕೆಲವು ಆಪ್ತ ಸ್ನೇಹಿತರು ಈ ಚಿನ್ನದ ಹಬ್ಬದ ವರ್ಷದಲ್ಲಿ 'ನವಯುಗ'ದ ನವೀಕರಣವೂ ನಡೆಯಬೇಕೆಂದು ಸೂಚಿಸಿದ್ದಾರೆ. ಆಧುನಿಕ ಯುಗಕ್ಕೆ ಹೊಂದಿಕೊಳ್ಳುವ ಲೇಖನ, ಶೀರ್ಷಿಕೆ, ಮತ್ತು ಚಿತ್ರಗಳ ಮೂಲಕ ರಾಜ್ಯದ ಜನತೆಯ ಓದಿಕೆಯ ಹಸಿವನ್ನು ನೀಗಿಸುವ ಆಕರ್ಷಕ ವಿಧಾನಗಳನ್ನು ಅನುಸರಿಸಬೇಕಾಗಿದೆ. ಜನರಲ್ಲಿ ವೈಜ್ಞಾನಿಕ ಮನೋವೃತ್ತಿ ಕುದುರುವಂತೆ ವಿಜ್ಞಾನ ಲೇಖನಗಳ ವ್ಯಾಪ್ತಿಯನ್ನು ಹಿಗ್ಗಿಸಬೇಕಾಗಿದೆ ಸಾಮಾಜಿಕ ರಾಜಕೀಯ ಪ್ರಶ್ನೆಗಳಿಗೆ ಜನ ಸ್ವತಂತ್ರವಾಗಿಯೂ ವಿವೇಕಪೂರ್ಣವಾಗಿಯೂ ಉತ್ತರಿಸುವಂತೆ ಪ್ರೇರಿಸಬೇಕಾಗಿದೆ. ದೈನಂದಿನ ವರ್ತಮಾನಪತ್ರಗಳು ಸುದ್ದಿ ಸಂಗ್ರಹದ ಮೇಲೆ ಹೆಚ್ಚಾಗಿ ಕಣ್ಣಿಟ್ಟಿರುವುದರಿಂದ, ಅಭಿಪ್ರಾಯ ರೂಪಣದ ಕೆಲಸ ಸಾಪ್ತಾಹಿಕಗಳ ಮೂಲಕವೇ ನಡೆಯಬೇಕಾದ ಪ್ರಸಂಗದಲ್ಲಿ ನವಯುಗ ತನ್ನಪಾತ್ರವನ್ನು ಹೊಸದಾಗಿ ನಿರ್ಧರಿಸಿಕೊಳ್ಳಬೇಕಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಹೇಗೋ ಹಾಗೆ ಅನಂತರವೂ 'ನವಯುಗ'ವು ತನ್ನತನವನ್ನು ಕಾಯ್ದುಕೊಂಡು ವಿಶಿಷ್ಟ ರೀತಿಯ ಬರವಣಿಗೆಯಿಂದ ತನ್ನ ಸತ್ಯವನ್ನೂ, ಸತ್ವವನ್ನೂ ಕಾಪಾಡಿಕೊಂಡು ಬಂದಿರುವುದನ್ನು ತಾವು ಗಮನಿಸಿರಬಹುದು. ಅನಾಕರ್ಷಕವಾದ ರಾಷ್ಟ್ರೀಯ ಪುನಾರಚನೆಯ ಕಾರ್ಯದಲ್ಲಿ 'ನವಯುಗ' ಆಡಂಬರವಿಲ್ಲದೆ, ಸದ್ದುಗದ್ದಲವಿಲ್ಲದೆ ನಡೆಸಿದ ಕರ್ತವ್ಯವನ್ನು ತಾವು ಮೆಚ್ಚಿಕೊಂಡಿರುವಿರೆಂದು ನಮ್ಮ ಭಾವನೆ.

'ನವಯುಗ'ದ ನವೀಕರಣದ ಯೋಜನೆ ಸಾರ್ವಜನಿಕರ ಆರ್ಥಿಕ ಬೆಂಬಲವಿಲ್ಲದೆ ಅಸಾಧ್ಯ. ನವಯುಗದ ಶ್ರೇಯಃಕಾಂಕ್ಷಿಗಳಾದ ತಮ್ಮಂಥವರಿಂದ, ತಮ್ಮ ಸ್ನೇಹಿತ ವರ್ಗದಿಂದ ದೊರೆಯುವ ಸಹಾಯವನ್ನು ನಾವು ಸಂತೋಷದಿಂದ ಸ್ವೀಕರಿಸುತ್ತೇವೆ.

ಇತಿ ಭವದೀಯ

ನವಯುಗ ಆಫೀಸು,
ಉಡುಪಿ.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ-ಸಂಪಾದಕ

ಗಂಡು ಕಾಂಗ್ರೆಸ್-ಹೆಣ್ಣು ಕಾಂಗ್ರೆಸ್‌ಗಳ ನಿಬ್ಬಣಿಗರು

ಅದೆಂದೂ ಘಟಿಸದಿರುವದೆಲ್ಲಾ ಘಟಿಸುತ್ತಿರುವ ಕಾಲ ಇದು. ಹಿಂದೆ ಕಾಂಗ್ರೆಸ್ಸಿನಿಂದ ಅದರ ಅಧ್ಯಕ್ಷರಿಗೆ ಅರ್ಧಚಂದ್ರ ಪ್ರಯೋಗ ನಡೆಯುತ್ತಿತ್ತು. ಸ್ಸಾ ಅಂದರೆ ಘುಸ್ಸ್ ಅನ್ನುತ್ತಿದ್ದ ಸ್ವಾತಂತ್ರ್ಯ ಸೇನಾನಾಯಕ ಶೂರ ಸುಭಾಶ್ಚಂದ್ರ ಬೋಸ್‌ರವರನ್ನು ಲೀಲಾಜಾಲವಾಗಿ ಅಧ್ಯಕ್ಷಸ್ಥಾನದಿಂದ ಹಿಂದೆ ಹೊಡೆದಟ್ಟಲಾಗಿತ್ತು. ಪುರುಷೋತ್ತಮ ದಾಸ ತಂಡನರನ್ನು ತಂಡವಾಗಿ ಹಿಂಬದಿಗೆ ತಳ್ಳಿಬಿಡಲಾಗಿತು. ಇವು ಎರಡು ಧ್ರುವಗಳಿಗೆ ಉದಾಹರಣೆ. ಸುಭಾಸ್ ಬಾಬೂರವರಿಂದಾಗಲೀ ಪುರುಷೋತ್ತಮರಿಂದಾಗಲೀ ಬಂಡುಗಾರರನ್ನು ಬಡಿದು ಪಕ್ಷವನ್ನು ಪಕ್ಷವಾಗಿಟ್ಟುಕೊಳ್ಳಲು ಸಾಧ್ಯವಾಗದ ರೀತಿಯಲ್ಲಿ ಒಳಗಿದ್ದ ಸರ್ವಾಧಿಕಾರೀ ಮನೋಭಾವನೆಯ ಮಹತ್ವಾಕಾಂಕ್ಷಿಗಳು ಮಸಲತ್ತು ನಡೆಯಿಸಿ, ಪಕ್ಷವನ್ನು ತಮ್ಮ ಮುಷ್ಟಿಯೊಳಗಿಟ್ಟುಕೊಂಡಿದ್ದರು. ಹಿಂದಕ್ಕೆ ಈ ಕೆಲಸವನ್ನು ಜವಾಹರಲಾಲ ನೆಹ್ರೂಜೀಯವರು ಮಾಡುತ್ತಿದ್ದರು. ಅವರ ಕಾಲವಾದ ಮೇಲೆ ಅವರ ಮುದ್ದಿನ ಏಕೈಕ ಮಗಳು ಆ ಸ್ಥಾನಕ್ಕೆ ಬಂದರು. ಇಂದಿರಾ ಗಾಂಧೀಜೀಯವರು ತಮ್ಮ ಪರಂಪರೆಯ ಕುರಿತು ಪ್ರಶಂಸಿಸಿಕೊಳ್ಳುವ ಪರಿಪಾಠವನ್ನಿಟ್ಟುಕೊಂಡಿದ್ದಾರೆ ಹಾಗೆಂದೇ ಪರಂಪರಾನುಗತ ಚಟುವಟಿಕೆಗಳನ್ನು ಬಿಟ್ಟುಕೊಡಲು ಸಾಧ್ಯ ಇಲ್ಲದವರಾಗಿದ್ದಾರೆ. ಅದೇ ದಿಸೆಯಲ್ಲಿ ಧಾವಿಸಿ ಕಾಂಗ್ರೆಸ್ಸಿನ ಅಧ್ಯಕ್ಷ ನಿಜಲಿಂಗಪ್ಪನವರನ್ನು ಗಲ್ಲಿಪಾಲು ಮಾಡಲು ಅವರು ಮುಂದಡಿಯಿಟ್ಟರು. ಹಿಂದೆ ಸಂಭವಿಸದೆ ಇದ್ದದ್ದು ಈಗ ಸಂಭವಿಸಿತು. ನಿಜಲಿಂಗಪ್ಪನವರು ಇಂದಿರಾ ಗಾಂಧಿಯವರನ್ನು ಕಾಂಗ್ರೆಸ್ಸಿನಿಂದ ಹೊರತಳ್ಳಿದರು. ತುಳಿಯಲ್ಪಟ್ಟ ಸರ್ಪ ಸುಮ್ಮಗಿದ್ದೀತೇ? ಪೆಟ್ಟು ತಗಲಿದ ಹೆಣ್ಣು ಹುಲಿ ಸುಮ್ಮಗುಳಿದೀತೇ? ಒಲಿದರೆ ನಾರಿ, ಅದೇ ಮುನಿದರೆ ಮಾರಿಯಲ್ಲವೇ? ಇಂದಿರಾ ಗಾಂಧೀಜೀಯವರು ತಮ್ಮ ಹಿಂಬಾಲಕರ ಸಹಾಯದಿಂದ ನಿಜಲಿಂಗಪ್ಪನವರನ್ನು 'ಕಾಂಗ್ರೆಸ್ಸಿ'ನಿಂದ ಹೊರ ಹಾಕಿದರು. ಈಗ ಯಾವದು ನಿಜ ಕಾಂಗ್ರೆಸ್ಸೆನ್ನುವುದನ್ನು ನ್ಯಾಯಾಲಯಕ್ಕೂ ಹೇಳಲು ಕ್ಲಿಷ್ಟವಾಗಿದೆ; ಸಮಸ್ಯೆ ಅಷ್ಟು ಸೂಕ್ಷ್ಮವಾಗಿದೆ. ಚುನಾವಣಾ ಅಧಿಕಾರಿಗಳು ಸಂಸ್ಥಾ ಕಾಂಗ್ರೆಸ್ಸನ್ನು ನಿಜಲಿಂಗಪ್ಪನವರ ಕಾಂಗ್ರೆಸ್ಸೆಂದಿನ್ನಾರೆಯೇ ವಿನಃ ನಿಜ ಕಾಂಗ್ರೆಸ್ಸೆಂದಿರುವದಿಲ್ಲ. ಇನ್ನು ನ್ಯಾಯಾಲಯ ಏನೋ ಹೇಳುತ್ತದೋ ನೋಡಬೇಕು.

ನಿಜಲಿಂಗಪ್ಪನವರು ಇಂದಿರಾಜೀಯವರನ್ನು ಕಾಂಗ್ರೆಸ್ಸಿನಿಂದ ಹೊರ ತಳ್ಳಿದ ಮೇಲೆ, ಆನಂತರ, ಇಂದಿರಾಜೀಯವರ ಹಿಂಬಾಲಕರು ನಿಜಲಿಂಗಪ್ಪನವರನ್ನು ಕಾಂಗ್ರೆಸ್ಸಿನಿಂದ ಹೊರ ತಳ್ಳಿದ ಮೇಲೆ ಕಾಂಗ್ರೆಸ್ಸ್ ಇಬ್ಭಾಗವಾಯಿತು, ಅದಕ್ಕಿಂತಲೂ, ಒಡೆಯಿತು. ಜವಾಹರಲಾಲರ ಕಾಲದಲ್ಲಿ ಅವರಿಗೆ ಬೇಡವೆನಿಸಿದ ಅಧ್ಯಕ್ಷರನ್ನು ಅವರು ಹೊರಗಟ್ಟಿ ಬಿಡುತ್ತಿದ್ದರು. ಇಲ್ಲಿ ಹಾಗಾಗಲಿಲ್ಲ. ಇಬ್ಬರೂ ಆಯಾಯಾ ಸ್ಥಾನಗಳಿಗೆ ಅಂಟಿಕೊಂಡು ನಿಂತು ಬಿಟ್ಟರು. ತ್ರಿಶಂಕುವನ್ನು ಕಂಡು ಇವರಿಬ್ಬರೂ ನಕ್ಕಿರಬಹುದು. ತ್ರಿಶಂಕುವಿಗಿಂತ ಇವರ ಸ್ಥಾನ ಭದ್ರವಾಗಿತ್ತು. ಇವರಿಬ್ಬರ ಸ್ಥಾನವನ್ನು ಭದ್ರಗೊಳಿಸಲು ಇಬ್ಬರ ಹಿಂದೆಯೂ ಬೆಂಬಲ ನೀಡುವವರು ಬೇಕಾದಷ್ಟು ಮಂದಿ ಇದ್ದರು. ಈ ಎರಡು ಬಣಗಳು, ಇಬ್ಬಣಗಳು ದಿಬ್ಬಣಕ್ಕೆದುರಾಗಿ ಬೆಂಬಲಿಗರು ಪ್ರಯಾಸ ಪಟ್ಟಂತೆ ಒಗ್ಗಟ್ಟಿಗಾಗಿ ಶ್ರಮಿಸಿದವರೂ ಇದ್ದಾರೆ. ವಿಧಿ ಲಿಖಿತ ಅದೇನಿದೆಯೋ!

ಖಂಡಿತ ಕಾಂಗ್ರೆಸ್ಸ್ ತನ್ನ ಕಾಲ ಮೇಲೆ ನಿಲ್ಲುವ ಬಲವನ್ನು ಕಳೆದುಕೊಂಡಿತು. ನಿಜಲಿಂಗಪ್ಪನವರ ಸಂಸ್ಥಾ ಕಾಂಗ್ರೆಸ್ಸ್ ಪುರುಷ ಕಾಂಗ್ರೆಸ್ಸ್, ಗಂಡು ಕಾಂಗ್ರೆಸ್ಸ್ ಅಥವಾ ಮಿಸ್ಟರ್ ಕಾಂಗ್ರೆಸ್ಸ್‌ದಲ್ಲಿ ಆಗಿನ ಜಗಜೀವನರಾಮರಾಯರ ಇಂದಿರಾ ಕಾಂಗ್ರೆಸ್ಸ್ ಪ್ರಕೃತಿ ಕಾಂಗೆಸ್ಸ್, ಹೆಣ್ಣು ಕಾಂಗ್ರೆಸ್ಸ್ ಅಥವಾ ಮಿಸೆಸ್ (ಮಿಸ್ ಅಲ್ಲ) ಕಾಂಗ್ರೆಸ್ಸಾಗಿ ಬಿಟ್ಟಿತು. ಹೆಣ್ಣಾಗಿ ಕಾಡಿತಂತೆ ಮಾಯೆ! ಹಾಗೆಯೇ ಹೆಣ್ಣು ಕಾಂಗ್ರೆಸ್ಸಾಗಿ ಕಾಡಿತು ಗಂಡು ಕಾಂಗ್ರೆಸ್ಸಿಗೆ. ದಾಂಪತ್ಯವಿಚ್ಛೇದನ ನಡೆದೊಡನೆ ಹೆಣ್ಣಿನ ಹಿಂದೆಯೂ ಗಂಡಿನ ಮುಂದೆಯೂ ಅಲೆದಾಡುವವರ ಸಂಖ್ಯೆ ಹೆಚ್ಚಾಗುವಂತೆ, ಹೆಣ್ಣು ಕಾಂಗ್ರೆಸ್ಸ್ ಹಾಗೂ ಗಂಡು ಕಾಂಗ್ರೆಸ್ಸ್‌ಗಳ ಹಿಂದೆ ಇತರ ರಾಜಕೀಯ ಪಕ್ಷಗಳವರೂ ಮುಖಂಡರೂ ಅಲೆದಾಡಿದರು. ಹೆಣ್ಣು ಕಪ್ಪು ಬಣ್ಣವುಳ್ಳವರಿಗೆ ಹಾಗೂ ದಾಂಢಿಗಳಿಗೆ ಸುಲಭವಾಗಿ ಮನ ಒಲಿಯುವಂತೆ, ಗಂಡು ಬೆಳ್ಳನೆಯ ತೆಳ್ಳನೆಯ ಲತಾಂಗಿಯರಿಗೆ ಸುಲಭವಾಗಿ ಮನ ಸೋಲುತ್ತಾರಂತೆ. ರಾಜಕೀಯ ಪಕ್ಷಗಳು ಇದಕ್ಕೆ ಅಪರಾಧವಲ್ಲ. ಇಂದಿರಾಜೀಯವರ ಹೆಣ್ಣು ಕಾಂಗ್ರೆಸ್ಸು ಕಮ್ಯೂನಿಸ್ಟ್, ಮುಸ್ಲಿಂ ಲೀಗು, ದ್ರಾವಿಡ ಮುನ್ನೇಟ್ರ ಕಳ್ರಗಂ ಮುಂತಾದ ಕಪ್ಪಣ್ಣ-ಕೆಂಪಣ್ಣರತ್ತ ಒಲಿಯಿತು. ನಿಜಲಿಂಗಪ್ಪನವರ ಕಾಂಗ್ರೆಸ್ಸು ಭಾರತೀಯ ಜನಸಂಘ ಹಾಗೂ ಸ್ವತಂತ್ರ ಪಾರ್ಟಿಯತ್ತ ಕಣ್ಣುಹಾಯಿಸಿತು. ಚುನಾವಣಾ ಚಂಡಮಾರುತ ಬೀಸಿದಾಗ ಅವು ಒಂದಾದುವು. ಆದರೂ ಗಂಡು ತನ್ನ ಗಡಸುತನವನ್ನು ಬಿಡಲಿಲ್ಲ. ಹೆಣ್ಣು ಅದೆಂತಹ ಏರ್ಪಾಡು-ಮಾರ್ಪಾಡುಗಳಿಗೂ ಅಳವಡಿಸಿಕೊಳ್ಳಲು ಸಿದ್ಧ. ಪುರುಷ ಹಾಗಲ್ಲ ಅದೇ ರೀತಿ ಇಂದಿರಾ ಕಾಂಗ್ರೆಸ್ಸು ಮದರಾಸು ಯಾನೆ ತಮಿಳ್ನಾಡಿನ ವಿಧಾನ ಸಭೆಗೆ ಸ್ಪರ್ಧಿಸಲು ಸ್ಥಾನ ಕೊಡದಿದ್ದರೂ ಚಿಂತಿಲ್ಲ, ಲೋಕಸಭೆಯ ಒಂಭತ್ತು ಸ್ಥಾನಗಳಿಗೆ ಸ್ಪರ್ಧಿಸಲು ಅವಕಾಶ ಕೊಟ್ಟರೆ ಸಾಕೆಂದು ದ್ರಾ.ಮು.ಕ.ದೊಂದಿಗೆ ಒಪ್ಪಂದ ಮಾಡಿಕೊಂಡಿತು. ಗಂಡು ಕಾಂಗ್ರೆಸ್ಸ್ ಹಾಗಲ್ಲ ಅದರ ದುರ್ಯೋಧನನ ದುರಹಂಕಾರ ಇನ್ನೂ ದಮನವಾಗಿರುವದಿಲ್ಲ. ದುರ್ಯೋಧನನು ಪಾಂಡವರಿಗೆ ಐದೂರುಗಳು ಹಾಗಿರಲಿ ಸೂಜಿ ಮೊನೆ ಊರುವಷ್ಟು ಸ್ಥಳವನ್ನು ಬಿಟ್ಟು ಕೊಡಲಾರೆನೆಂದು ಹೇಳಿರುವಂತೆ ನಿಜಲಿಂಗಪ್ಪನವರ ಕಾಂಗ್ರೆಸ್ಸು ಭಾರತೀಯ ಜನ ಸಂಘಕ್ಕೆ ವಿಧಾನ ಸಭೆಯ ಐದು ಸ್ಥಾನಗಳಿಗೆ ಹಾಗಿರಲಿ ಲೋಕಸಭೆಯ ಒಂದು ಸ್ಥಾನಕ್ಕೂ ಸ್ಪರ್ಧಿಸಲು ಅವಕಾಶ ಕೊಡುವದಿಲ್ಲವೆಂದು ಹಟ ಹಿಡಿಯಿತು. ಅಷ್ಟೇ ಅಲ್ಲ. ಆರಂಭದಲ್ಲೇ ಅಪಶಕುನವೆಂಬಂತೆ ಚುನಾವಣಾ ಮೈತ್ರಿಯ ಮಾತು ಕೇಳಿ ಬಂದಾಗಲೇ ಮೈಸೂರಿನಲ್ಲೂ (ಕರ್ನಾಟಕದಲ್ಲೂ) ಗುಜರಾಥಿನಲ್ಲೂ ಒಡಂಬಡಿಕೆ ಇಲ್ಲವೆಂದು ಅಲ್ಲಿಯ ಮುಖಂಡರು ಮೂಗು ಮುರಿಯುವಂತೆ ಹೇಳಿಬಿಟ್ಟರು ಹಾಗಾದಲ್ಲಿ ಉತ್ತರಪ್ರದೇಶ, ಮಧ್ಯಪ್ರದೇಶ, ಬಿಹಾರ್, ಡಿಲ್ಲಿ....ಗಳಲ್ಲಿ ಕಾಂಗ್ರೆಸ್ಸಿನೊಂದಿಗೆ ಒಪ್ಪಂದವಿಲ್ಲವೆಂದು ಭಾರತೀಯ ಜನಸಂಘ ಹೇಳಿದ ಮೇಲೆ ಕರ್ನಾಟದಲ್ಲಿ ಉತ್ತಮ ರೀತಿಯ ಮೈತ್ರಿಯುಂಟಾಯಿತು. ಡಿಲ್ಲಿ-ಮಹಾರಾಷ್ಟ್ರ-ತಮಿಳ್ನಾಡು ಹೀಗೆ ಅಲ್ಲಲ್ಲಿ-ಎಲ್ಲೆಲ್ಲೂ ಒಡಂಬಡಿಕೆ ಹಸಿಬಿಸಿಯಾಗಿದ್ದುದರಿಂದ ಹೊರಬಂದವರು, ಒಳಪ್ರವೇಶಿಸಲು ಅವಕಾಶ ಸಿಗದಿದ್ದವರು ಇಂತಹ ಅತೃಪ್ತ ಅಧಿಕಾರ ಲಾಲಸಿಗಳು ಬಂಡೆದ್ದು ಬಿಟ್ಟರು. ನಿಜಲಿಂಗಪ್ಪ-ಮುರಾರ್ಜಿ-ಅಟಲ ಬಿಹಾರಿ ವಾಜಪೇಯಿ-ರಾಜನಾರಾಯಣ ಅದೆಷ್ಟು ಪ್ರಯತ್ನಿಸಿದರೂ ಅದೊಂದು ಸೋರುವ ಛತ್ರವಾಗಿ ಮೈತ್ರಿ ರಚನೆಯಾಯಿತು. ಏನೋ ಆಯಿತು. ಚುನಾವಣಾ ಚಂಡಮಾರುತ ಬೀಸಿ ಶಾಂತವಾದ ಮೇಲೆ, ಇಂದಿರಾ ಜಾಲ ಬೀಸಲ್ಪಟ್ಟ ಮೇಲೆ ಈಗ ನಿದ್ದೆಯಿಂದೆಚ್ಚತ್ತವರಂತೆ ಸಂಸ್ಥಾ ಕಾಂಗ್ರೆಸ್ಸಿಗರು ಗಡಬಡಿಸಲಾರಂಭಿಸಿದ್ದಾರೆ.

—ಶ್ರೀ ಶಿವಶಂಕರ

●●

ರಾಜ್ಯದ ಹೈಸ್ಕೂಲುಗಳಿಗೆ
ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65-56ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಮಹಾಪುರುಷರ ವಾಣಿಗಳು

ಯಾರು ಜೀವಂತವಿರುವಾಗಲೇ ತನ್ನನ್ನು ಇಲ್ಲದಂತೆ ಮಾಡಿಕೊಳ್ಳುತ್ತಾರೋ ಅವರು ಸತ್ತರೂ ಸಹ ಜೀವಂತ ಇರುತ್ತಾರೆ. (ರಿಯೋಜ)

ಜಗತ್ತಿನಲ್ಲಿ ಎಲ್ಲಿಯವರೆಗೆ ಯಾರಾದರೂ ಒಬ್ಬ ಮನುಷ್ಯ ಪರಾಧೀನ ಇರುವನೊ ಅಲ್ಲಿಯ ವರೆಗೆ ಯಾವ ದೇಶವೂ ಸ್ವಾಧೀನ (ಸ್ವತಂತ್ರ) ಇರಲಾರದು.

(ಜವಾಹರಲಾಲ ನೆಹರು)

ಮನುಷ್ಯನಿಗೆ ಎರಡು ವಸ್ತುಗಳನ್ನು ಪರಮಾತ್ಮನು ಕೊಟ್ಟದ್ದಾನೆ. ಒಂದನೆಯದು ಬುದ್ಧಿ, ಎರಡನೆಯದು ಕೈ. ಪ್ರಪಂಚವನ್ನು ತಿಳಿದುಕೊಳ್ಳಲಿಕ್ಕೆ ಬುದ್ಧಿ ಕೊಟ್ಟದ್ದಾನೆ. ಪ್ರಪಂಚವನ್ನು ಬದಲಿಸುವ ಸಲುವಾಗಿ ಕೈ ಕೊಟ್ಟದ್ದಾನೆ.

(ದಾದಾ ಧರ್ಮಾಧಿಕಾರಿ)

ಜಾಗ್ರತಿ ಎಂದರೆ ಪರಮಾತ್ಮನ ಅಖಂಡ ಅನುಸಂಧಾನದ ಅನುಭೂತಿ.

(ಗಾಂಧೀಜಿ)

●●

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging.
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ರಾಜಕೀಯ ಶುದ್ಧೀಕರಣ

ಬಂಗ್ಲಾದೇಶದಲ್ಲಿ ಪಾಕಿಸ್ತಾನ ನಡೆಸುತ್ತಿರುವ ನರಮೇಧದ ಚಿಂತೆ ಅಧ್ಯಕ್ಷ ಯಾಹ್ಯಾಖಾನರಿಗಿಲ್ಲ. ಬಡ ಜನತೆಯನ್ನು ನೋಸಗೊಳಿಸಿ ತಮ್ಮ ಆಡಂಬರ ಪ್ರದರ್ಶಿಸುವುದೇ ಸರ್ವಾಧಿಕಾರಿಗಳು ನಡೆದುಬಂದ ದಾರಿ. ಪ್ರತಿ ಕ್ಷಣದಲ್ಲೂ ಬಂಗ್ಲಾದೇಶದ ಪ್ರಜೆಗಳನ್ನು ಪಾಕ್ ಸೈನಿಕರು ಕೊಲ್ಲುತ್ತಿದ್ದಾರೆ. ಸೈನಿಕರಲ್ಲೂ ಅಸು ಬಲಿಕೊಟ್ಟವರಿದ್ದಾರೆ. ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಬಂಗ್ಲಾ ಜನರು ಭಾರತಕ್ಕೆ ಓಡಿಬರುತ್ತಿದ್ದಾರೆ—ಆಶ್ರಯ ಬೇಡಿಕೊಂಡು.

ಮಾನವತೆಯೆಂದರೇನೆಂದು ಕಂಡು ಕೇಳರಿಯದ ಬಂಗ್ಲಾದೇಶೀಯರನ್ನು ಭಾರತ ಕಣ್ಣಿಕರದಿಂದ ಕಂಡಿದೆ. ನಿರಾಶ್ರಿತರಿಗೆ ಆಶ್ರಯ ನೀಡುವಲ್ಲಿ ಅತ್ಯಂತ ಉದಾರವಾಗಿ ವರ್ತಿಸಿದೆ. ಪ್ರಧಾನಿ ಗಾಂಧಿಯವರು ತಾನೇ ಈ ನಿರಾಶ್ರಿತರ ಶಿಬಿರಗಳನ್ನು ಸಂದರ್ಶಿಸಿ, ಬಂಗ್ಲಾದೇಶದ ಪ್ರಜೆಗಳ ಸುಖದುಃಖಗಳಲ್ಲಿ ಕೆಲಘಳಿಗೆ ಭಾಗಿಯಾದರು. ಅವರಿಗೆ ಶಕ್ಯವಿದ್ದ ಎಲ್ಲ ನೆರವನ್ನು ನೀಡುವ ಭರವಸೆ ನೀಡಿದರು. ಅವರ ಸಂಕಟಕ್ಕೆ ಸಹಾನುಭೂತಿ ವ್ಯಕ್ತಪಡಿಸಿದರು.

ಬಂಗ್ಲಾದೇಶ್ ನಿರಾಶ್ರಿತರ ನೆರವಿಗೆ ಭಾರತೀಯರು ಕೊಡುಗೈ ದಾನ ಮಾಡಹತ್ತಿದ್ದಾರೆ. ಈ ಕಾರ್ಯಕ್ಕೆ ವಿದೇಶಗಳಿಂದಲೂ ಅಂತಾರಾಷ್ಟ್ರೀಯ ಮೂಲಗಳಿಂದಲೂ ಅಧಿಕ ಸಹಾಯ ದೊರೆಯಬೇಕಾದುದು ನ್ಯಾಯ. ಈಗಾಗಲೇ ಐವಾರು ಲಕ್ಷ ನಿರಾಶ್ರಿತರು ಭಾರತದಲ್ಲಿ ಆಶ್ರಯ ಪಡೆದಿದ್ದಾರೆ. ಹತ್ತಾರು ಲಕ್ಷ ಬಂಗ್ಲಾದೇಶೀಯರನ್ನು ಯಾಹ್ಯಾಖಾನರು ಕಗ್ಗೊಲೆ ಮಾಡಿದ್ದಾರೆ. ನಂದನವನವಾಗಿದ್ದ ಬಂಗ್ಲಾದೇಶವನ್ನು ಸ್ಮಶಾನ ಮಾಡುವಲ್ಲಿ ಪಾಕ್ ಸೈನಿಕರು ಸೊಂಟ ಕಟ್ಟಿದ್ದಾರೆ. ಯಾಹ್ಯಾರ ಈ ದುಷ್ಕೃತಿಯನ್ನು ಖಂಡಿಸಲು ನಾಗರಿಕ ಜಗತ್ತಿನ ನಾಲಗೆ ಮುರುಟಿಹೋಗಿದೆ. ತಡೆಯಲು ಕೈ ಮುರಿದಿದೆ. ಇದು ಜಗತ್ತಿನ ಎಂಟನೆಯ ವಿಸ್ಮಯವಲ್ಲವೆ?

ooo ooo

ಸುಯೇಜಧೀರ ನಸ್ಸೇರರ ಮರಣಾನಂತರ ಸಂಯುಕ್ತ ಅರಬ ಗಣರಾಜ್ಯ ಭಾರಿ ವಿಘ್ನವಿಡ್ಡೂರಗಳನ್ನು ಎದುರಿಸಹತ್ತಿದೆ. ಇಸ್ರೇಲ್—ಅರಬ ರಾಷ್ಟ್ರಗಳ ವಿವಾದವು ಇವನ್ನು ಮತ್ತಷ್ಟು ಹೆಚ್ಚಿಸಿದೆ. ನಸ್ಸೇರರು ಈ ವಿವಾದಕ್ಕೆ ಯಾವುದೇ ಪರಿಹಾರದ ದಾರಿ ತೋರಿಸಲು ಅಶಕ್ತರಾದರು. ಅವರ ಒಲವು ರಶ್ಯದತ್ತ ವಾಲಿದ್ದೇ ಇದಕ್ಕೆ ಕಾರಣ.

ನಸ್ಸೇರರ ಉತ್ತರಾಧಿಕಾರಿಯ ಆಯ್ಕೆ ಏನೋ ಸುಗಮವಾಗೇ ನಡೆದು ಅನ್ವರ್ ಸಾದತ್ ಆಯ್ಕೆಗೊಂಡರು. ಹೋರಾಟದಿಂದ ಮನನೊಂದ ಸಾದತ್ ವಿವಾದವನ್ನು ಗೌರವದಿಂದ ಪರಿಹರಿಸಿಕೊಳ್ಳಲು ಸಿದ್ಧರಿದ್ದರು. ಆದರೆ, ಅವರ ಸಹೋದ್ಯೋಗಿಗಳಲ್ಲಿ ಕೆಲವರು ಇದಕ್ಕೆ ತಯಾರಿರಲಿಲ್ಲ. ಅರಬ—ಯೆಹೂದಿಗಳ ದ್ವೇಷ ಇಂದು ನಿನ್ನೆಯದ್ದೆಂದು ಹೇಳಲಾಗದು; ಅನಾದಿಯಿಂದಲೂ ಬಂದುದು. ಆದುದರಿಂದ ಸಾದತ್ತರ ವಿರೋಧಿ ಗುಂಪೊಂದು ಒಳಗಿಂದೊಳಗೆ ತಲೆಯೆತ್ತಿತ್ತು. ಸುದೈವದಿಂದ ಇದರ ಸುಳಿವು ಸಾದತ್ತರಿಗೆ ತಿಳಿದುಹೋಯ್ತು.

ಇದೀಗ ಸಾದತ್ತರು ತನ್ನ ರಾಜ್ಯಕೀಯ ವಿರೋಧಿಗಳ ಬೇಟೆಯಲ್ಲಿ ತೊಡಗಿದ್ದಾರೆ. ಇವರಲ್ಲಿ ಹಳೆಯ ಹುಲಿಗಳೂ ಸೇರಿವೆ. ನಸ್ಸೇರರ ವಿಧೇಯ ಬಂಟರೂ ಸಂಯುಕ್ತ ಅರಬ ಪ್ರಜಾರಾಜ್ಯದ ಉಪಾಧ್ಯಕ್ಷರೂ ಆದ ಆಲಿಸಾಬ್ರಿಯವರೂ ಇವರಲ್ಲಿ ಒಬ್ಬರು. ಸಂಶಯ ದೃಷ್ಟಿಯಿಂದ ಇವರನ್ನೂ ಇತರ ಹಲವು ಮಂತ್ರಿಗಳನ್ನೂ ಈ ಮೊದಲೇ ಗೃಹಬಂಧನದಲ್ಲಿಡಲಾಗಿದ್ದು ಇದೀಗ ಜೇಲಿಗೆ ಕಳಿಸಲಾಗಿದೆ. ಅನುಮಾನಾಸ್ಪದ ವ್ಯಕ್ತಿಗಳನ್ನು ಉಚ್ಚಾಟನೆ ಮಾಡುವ ಕಾರ್ಯ ನಿರಂತರವಾಗಿ ನಡೆದುಬರುತ್ತಿದೆ. ತನ್ನ ವಿಶ್ವಾಸಕ್ಕೆ ಪಾತ್ರರಾದವರನ್ನೇ ವಿವಿಧ ಹುದ್ದೆಗಳಲ್ಲಿ ನೇಮಿಸುವುದು ತನ್ನ ಅಧಿಕಾರವನ್ನು ನಿರಾತಂಕವಾಗಿ ಮುಂದುವರಿಸುವುದು ಸಾದತ್ ಮನೀಷೆ.

ಸದ್ಯ ಅನ್ವರ್ ಸಾದತ್ ಸಮಗ್ರ ಪೋಲೀಸು ಪಡೆಯ ಮೇಲೆ ತನ್ನ ನೇರ ಅಧಿಕಾರ ಹೊಂದಿದ್ದಾರೆ. ತನಗೆ ಅತ್ಯಂತ ಸಮೀಪದವರಾದ ಮೆ| ಜ| ಮಹಮ್ಮದ್ ಹುಸೇನ್ ಫಾಸ್ಲಿಯವರನ್ನು ಸೇನೆಯ ದಂಡನಾಯಕರೆಂದು ನೇಮಿಸಿದ್ದಾರೆ ಮತ್ತೊಬ್ಬ ನಿಕಟವರ್ತಿ ಮಾಜಿ ದಂಡನಾಯಕ ಜ| ಸಾದಿಕ್‌ರನ್ನು ವಿದೇಶ ಸಚಿವರಾಗಿ ಮಾಡಿದ್ದಾರೆ. ಇದೇ ಬಗೆಯಲ್ಲಿ ತನಗೆ ಅನುಕೂಲರಾದವನ್ನು ಕೂಡಿ ವಿರೋಧಿಗಳಾದವರನ್ನು ಎದುರಿಸಲು ಸಾದತ್ ನಿಶ್ಚಯಿಸಿದ್ದಾರೆ. ದೇಶದ್ರೋಹ ಆರೋಪ ಹೊತ್ತ ತನ್ನ ವಿರೋಧಿಗಳನ್ನು ಬಹಿರಂಗ ವಿಚಾರಣೆಗೆ ಗುರಿ ಮಾಡಲಾಗುವುದೆಂದು ಅವರು ಹೇಳುತ್ತಾರೆ. ಈ ವಿಚಾರಣೆ ಲಷ್ಕರೀ ರೀತಿಯಲ್ಲಿ ನಡೆಯುವುದೇ, ಪ್ರಜಾತಂತ್ರಾತ್ಮಕ ರೀತಿಯಲ್ಲಿ ನಡೆಯುವುದೇ ಕಾದು ನೋಡಬೇಕಷ್ಟೆ.

o o o

ಶಿಕ್ಷಣ ಮತ್ತು ಶಿಕ್ಷಕರ ಹಲವಾರು ಸಮಸ್ಯೆಗಳನ್ನು ಚರ್ಚಿಸಲು ರಾಜ್ಯಪಾಲರ ಭೇಟಿಯನ್ನು ಶಿಕ್ಷಕ ಪ್ರತಿನಿಧಿಗಳು (ಎಮ್ಮೆಲ್ಸಿ) ಬಯಸಿ ಬರೆದ ಪತ್ರದತ್ತ ರಾಜಪಾಲರು ತಿರಸ್ಕಾರ ತೋರಿದರೆಂದು ಪತ್ರಿಕೆಗಳಲ್ಲಿ ವರದಿಯಾಯ್ತು. ಈಯೆಲ್ಲ ಸಂಗತಿಗಳನ್ನು ಶಿಕ್ಷಣ ವಿಭಾಗದ ಕಾರ್ಯದರ್ಶಿಯವರಲ್ಲಿ ಚರ್ಚಿಸಬೇಕೆಂದು ಅವರಿಗೆ ಉತ್ತರ ಬಂದಿತೆಂದು ಹೇಳಲಾಯ್ತು. ರಾಜ್ಯಪಾಲರ ಈ ವರ್ತನೆ ಶಿಕ್ಷಕರಿಗೆ ಮಾಡಿದ ಅಪಮಾನವೆಂದೂ ತಿಳಿಯಲಾಯ್ತು.

ಇದೇ ರಾಜ್ಯಪಾಲರು ಇತ್ತೀಚೆಗೆ ರಾಜ್ಯದ ಪ್ರಾಥಮಿಕ ಶಿಕ್ಷಕರ ನಿಯೋಗವೊಂದಕ್ಕೆ ಸಂದರ್ಶನ ನೀಡಿದ ವಾರ್ತೆ ಪತ್ರಿಕೆಗಳಲ್ಲಿ ವರದಿಯಾಯ್ತು. ರಾಜ್ಯಪಾಲರು ಈ ನಿಯೋಗದ ಮನವಿಗಳನ್ನು ಸರಕಾರವು ಸಹಾನುಭೂತಿಯಿಂದ ಪರಿಶೀಲಿಸುವುದೆಂಬ ಭರವಸೆ ನೀಡಿದರೆಂದೂ ವರದಿಯಾಯ್ತು. ಈ ಸಹಾನುಭೂತಿ ಯಾವ ರೂಪದಲ್ಲಿ ವ್ಯಕ್ತವಾಗಬಹುದೆಂಬ ಪ್ರಶ್ನೆ ಬೇರೆ. ಅಂತೂ ಶಿಕ್ಷಕ ಕ್ಷೇತ್ರದ ಎಮ್ಮೆಲ್ಸಿಗಳಿಗೆ ದೊರೆಯದ ಸಂದರ್ಶನ ಪ್ರಾಥಮಿಕ ಶಿಕ್ಷಕರ ನಿಯೋಗಕ್ಕೆ ದೊರೆಯಿತಲ್ಲಾ ಎಂದು ಸಮಾಧಾನ.

ಈ ನಡುವೆ ಶಿಕ್ಷಕ ಕ್ಷೇತ್ರದ ಎಮ್ಮೆಲ್ಸಿಗಳಿಗೂ ಭೆಟ್ಟಿ ನೀಡುವ ಭರವಸೆ ಬಂದಿದೆಯೆಂದೂ ಕಿಂವದಂತಿ.ಇದು ನಿಜವಾದರೆ, ರಾಜ್ಯಪಾಲರ ನಿಲುಮೆಯಲ್ಲಿ ಬದಲಾವಣೆಯಾಗಲು ಕಾರಣವೇನು? ಕಾರ್ಯದರ್ಶಿಯವರೊಡನೆ ಹಲವು ಬಾರಿ ಚರ್ಚಿಸಿದರೂ ಪರಿಹಾರಗೊಳ್ಳದ ಸಮಸ್ಯೆಗಳಿವೆಯೆಂದು ತಿಳಿದುಕೊಂಡು ಈ ರೀತಿಮಾಡಿದರೆ? ಪತ್ರಿಕೆಗಳಲ್ಲಿನ ಹೇಳಿಕೆಗಳಿಂದ ನಿಲುಮೆ ಬದಲಾಯಿಸಿದರೆ ಅಥವಾ ಮೊದಲು ಬಂದ ಉತ್ತರವು ರಾಜ್ಯಪಾಲರ ಗಮನಕ್ಕೇ ಹೋದದ್ದಿಲ್ಲವೆ?

ರಾಜ್ಯಪಾಲರ ಆಸಕ್ತಿ ಕಾರ್ಯಕ್ಷಮತೆಯನ್ನು ರಾಷ್ಟ್ರಪತಿಗಳೂ ಪ್ರಶಂಸಿಸಿದ್ದಾರೆ. ಅವರು ಶಿಕ್ಷಣವನ್ನೂ ಶಿಕ್ಷಕರನ್ನೂ ಸಹಾನುಭೂತಿಯಿಂದ ನೋಡುತ್ತಾರೆನ್ನುವುದಕ್ಕೆ ಸರಕಾರವೇ ಶಿಕ್ಷಕರಿಗೆ ನೇರವಾಗಿ ವೇತನ ನೀಡುವ ಯೋಜನೆಯನ್ನು ಪರಿಶೀಲಿಸುತ್ತಿರುವುದೇ ಸಾಕ್ಷಿ. ಆದರೆ, ಬರಿಯ ಸಹಾನುಭೂತಿಯಿಂದ ಹೊಟ್ಟೆ ತುಂಬುವುದಿಲ್ಲ. ತುಕೋಳ ಆಯೋಗವು ಶಿಕ್ಷಕರಿಗೆ ಮಾಡಿನ ಹಲವಾರು ಅನ್ಯಾಯಗಳನ್ನು ಅವರು ಸರಿಪಡಿಸಬೇಕು; ಅವರ ಸಮಸ್ಯೆಗಳ ವಾಸ್ತವಿಕತೆಯತ್ತ ಶೀಘ್ರ ಗಮನ ಹರಿಸಬೇಕು; ಅವನ್ನು ದೂರಮಾಡಬೇಕು. ● ●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ

ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಹಣದ ಸಮಸ್ಯೆ—
ಜನರ ಟೀಕೆ ಗಮನಿಸದಿರಿ!

ಇತ್ತೀಚೆಗೆ ಇಂಗ್ಲೆಂಡಿನ ಒಬ್ಬ ವಿನೋದಗಾರ ಲಂಡನ್ನಿನ 'ಡೇಲಿ ಸ್ಕೆಚ್' ಪತ್ರಿಕೆಗೆ ಒಂದು ಲೇಖನ ಬರೆದು ಹಣದ ಸಮಸ್ಯೆಯನ್ನು ಕುರಿತು ಕೆಳಗಿನಂತೆ ಪೃಥಃಕರಣಮಾಡಿದ್ದಾನೆ.

* ಮನುಷ್ಯನು ಹಣದ ಬೆನ್ನು ಹತ್ತಿಹೋದರೆ ಅವನಿಗೆ ಹಣದ ಹುಚ್ಚು ಹಿಡಿದಿರುತ್ತದೆ.

* ಅವನು ಹಣವನ್ನು ತನ್ನ ಬಳಿಯಲ್ಲಿಯೇ ಇಟ್ಟುಕೊಂಡರೆ ಆತ ಬಂಡವಾಳವಾದಿ ಎನಿಸುತ್ತಾನೆ.

* ಆತನೇನಾದರೂ ಹಣ ಖರ್ಚು ಮಾಡಿದನೋ, ಅವನು ದುಂದುಗಾರನೆನಿಸುತ್ತಾನೆ.

* ಅವನಿಗೆ ಹಣ ಯಾವುದರಿಂದಲೂ ಬಾರದಿದ್ದರೆ ಅವನು ಮಹತ್ವಾಕಾಂಕ್ಷೆ ಇಲ್ಲದ ಮನುಷ್ಯನೆನಿಸುತ್ತಾನೆ.

* ಅವನು ಹಣಕ್ಕಾಗಿ ದುಡಿಯದೆ ಅದನ್ನು ಪಡೆದರೆ ಆತ ಪರೋಪಜೀವಿ ಎನಿಸುತ್ತಾನೆ.

* ದೀರ್ಘವಾದ ಇಡಿಯ ಜೀವಮಾನದಲ್ಲೆಲ್ಲ ದುಡಿದು ಕಷ್ಟಪಟ್ಟು ಅವನು ಹಣ ಸಂಪಾದನೆ ಮಾಡಿದರೆ, ಜನರು ಅವನನ್ನು ಜೀವನದಲ್ಲಿ ಏನನ್ನೂ ಅನುಭವಿಸದೇ ಇರುವ ಮೂರ್ಖನೆನ್ನುತ್ತಾರೆ.

—ಜನರು ಇವೆಲ್ಲ ಮಾತುಗಳನ್ನು ಹೇಳುತ್ತಿರುವುದು ನಿಜ. ಹಾಗೆ ನೋಡಿದರೆ, ಏನಾದರೂ ಒಂದರ ಬಗೆಗೆ ಪ್ರತಿಯೊಬ್ಬನೂ ಯಾವುದಾದರೂ ಒಂದು ಮಾತು ಹೇಳಿಯೇ ಹೇಳುತ್ತಾನೆ.

ಹಾಗಾದರೆ, ಇದಕ್ಕೆ ಪರಿಹಾರವೇನು? ಇದೇ ಪರಿಹಾರ: ಯಾವುದು ಸರಿಯಾದ ಹಾದಿ ಎಂಬುದನ್ನು ಒಮ್ಮೆ ಗೊತ್ತುಮಾಡಿಕೊಳ್ಳಬೇಕು. ಮಿಕ್ಕುಳಿದವರು ಏನು ಹೇಳುತ್ತಾರೋ ಎಂಬುದನ್ನು ಪರಿಗಣಿಸದೆ ಅದನ್ನು ಅನುಸರಿಸಿ ನಡೆಯಬೇಕು ನೀವು ಸರಿಯಾದ ಹಾದಿಯಲ್ಲಿದ್ದರೆ ಅವರ ಟೀಕೆಯು ನಿಮಗೆ ಒಂದು ಪ್ರಚೋದನೆ ಎನಿಸುತ್ತದೆ.

—ಪ್ರ.

● ●

ಶ್ರೀ ಸುಬ್ಬಯ್ಯ ನಾಯಕರ ನಿಧನ

ಮಂಗಳೂರು ಪಮುನೀರು ಹಂಚು ಕಾರ್ಖಾನೆ, ವಿಶ್ವ ಭವನ ಹಾಗೂ ಹೊಟೇಲ್ ವುಡ್‌ಸೈಡ್‌ಗಳ ಸ್ಥಾಪಕ ಶ್ರೀ ಪಿ. ಸುಬ್ಬಯ್ಯ ನಾಯಕರು ಇದೇ ತಾ. 17-6-71ರಂದು ತಮ್ಮ 77ನೆ ವರುಷ ವಯಸ್ಸಿನಲ್ಲಿ ನಿಧನರಾದರು. ದಿವಂಗತರು ಸತತ ಪರಿಶ್ರಮಿಗಳೂ ಉದ್ಯಮಶೀಲರೂ ಆಗಿ ಜನಪ್ರಿಯತೆಗಳಿಸಿದ್ದರು.

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ. ಯನ್ನು ಪಡೆಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ಭಾರತೀಯ ಭಾಷೆಗಳ ಶೋಚನೀಯತೆ

ಜಗತ್ತಿನಲ್ಲಿ ಸುಮಾರು ೨೭೯೬ ಭಾಷೆಗಳಿವೆ. ಇವುಗಳಲ್ಲಿ ಲ್ಯಾಟಿನ್, ಗ್ರೀಕ್ ಹಿಟಾಹಿಟ್ ಮತ್ತು ಆರಾರಮಾಯಿಕ್ ಮೊದಲಾದ ಮೃತ ಭಾಷೆಗಳನ್ನು ಕೂಡಿಸಿಲ್ಲ. ಈ ಭಾಷೆಗಳಲ್ಲಿ ೫ ಕೋಟಿಗಿಂತ ಹೆಚ್ಚು ಜನರಾಡುವ ಭಾಷೆಗಳು ಬರಿಯ ಹದಿಮೂರು. ಈ ಹದಿಮೂರು ಭಾಷೆಗಳನ್ನು ಆಡುವವರು ಎಷ್ಟು ಮಂದಿ?

ಚೀನೀ—	೬೦	ಕೋಟಿ
ಹಿಂದಿ + ಉರ್ದು	೨೮	,,
ಇಂಗ್ಲಿಷ್	೨೫	,,
ಸ್ಪೆನಿಶ್	೧೫	,,
ರಶ್ಯನ್	೧೩	,,
ಜರ್ಮನ್	೧೦	,,
ಜಪಾನಿ	೧೦	,,
ಫ್ರೆಂಚ್	೮	,,
ಇಂಡೋನೇಶ್ಯನ್	೮	,,
ಪೋರ್ಚುಗೀಸ್	೮	,,
ಅರಬ್ಬಿ	೭	,,
ಬಂಗಾಳಿ	೬	,,
ಇಟಾಲಿಯನ್	೬	,,

ಪ್ರಪಂಚದ ಜನಸಂಖ್ಯೆಯ ಮೂರರಲ್ಲಿ ಎರಡಂಶದಷ್ಟು ಜನರು ಬರಿಯ ಈ ೧೩ ಭಾಷೆಗಳಲ್ಲೇ ತಮ್ಮ ವ್ಯವಹಾರಗಳನ್ನು ನಡೆಸಬಲ್ಲರೆಂಬುದು ಮೇಲಿನ ವಿವರಣೆಗಳಿಂದ ಸಿದ್ಧವಾಗುತ್ತದೆ. ಈ ಭಾಷೆಗಳು ಸುಮಾರು ೬೫ ದೇಶಗಳ ರಾಷ್ಟ್ರಭಾಷೆಗಳಾಗಿವೆ. ವಿಜ್ಞಾನ, ಕಲೆ, ರಾಜನೀತಿ, ವಾಣಿಜ್ಯ ಎಲ್ಲವುಗಳ ಮಾಧ್ಯಮ ಭಾಷೆಗಳಾಗಿವೆ.

ಭಾಷೆಗಳಲ್ಲಿ ಪ್ರಮುಖ ಭಾಷೆಯಾವುದು? ಜಗತ್ತಿನ ಜನಸಂಖ್ಯೆಯ ಪ್ರತಿ ನಾಲ್ಕರಲ್ಲಿ ಒಬ್ಬನಾಡುವ ಚೀನೀ ಭಾಷೆ. ಎರಡನೆಯ ಸ್ಥಾನವನ್ನು ಭಾರತದ ಹಿಂದಿ ಪಡೆಯುತ್ತದೆ. ಆದರೆ ಈ ರೀತಿ ನಿರ್ಣಯಕ್ಕೆ ಬರುವುದು ತಪ್ಪು. ಭಾಷೆ ಬರಿದೆ ಆಡುವುದಕ್ಕೆ ಮಾತ್ರ ಉಪಯೋಗಿಯಲ್ಲ.

ಒಂದು ಭಾಷೆಯಲ್ಲಿ ನಡೆಯುವ ಲೇಖನಕಾರ್ಯ ಮತ್ತು ತುಂಬಿದ ಜ್ಞಾನದ ಪ್ರಮಾಣವು ಭಾಷೆಗಳ ಪ್ರಾಮುಖ್ಯವನ್ನು ನಿರ್ಧರಿಸುವಲ್ಲಿ ಮಹತ್ವದ ಅಂಶ. ಈ ದೃಷ್ಟಿಯಿಂದ ಮೇಲಿನ ಭಾಷೆಗಳ ಗತಿಯೇನು? ಕೆಳಗೆ ಆಯಾ ಭಾಷೆಗಳಲ್ಲಿ ಪ್ರಕಟವಾಗುತ್ತಿರುವ ಸಮಾಚಾರ ಪತ್ರಗಳ ಸಂಖ್ಯೆಯಿದೆ:

ಇಂಗ್ಲಿಷ್	೨,೪೩೦
ಸ್ಪೆನಿಷ್	೧,೦೦೦
ಜರ್ಮನ್	೬೭೦
ಚೀನೀ	೩೫೦
ಭಾರತೀಯ ಭಾಷೆಗಳು	೩೦೦
ಫ್ರೆಂಚ್	೨೭೦
ಪೋರ್ಚುಗೀಸ್	೨೬೦
ರಶ್ಯನ್	೨೫೦
ಜಪಾನಿ	೧೬೦
ಡಚ್	೧೪೦
ಇಟಾಲಿಯನ್	೧೩೦

೨೫ ಕೋಟಿ ಜನರ ಇಂಗ್ಲಿಷ್ ಭಾಷೆಯಲ್ಲಿ ಎರಡೂವರೆ ಸಾವಿರ ಸಮಾಚಾರ ಪತ್ರಿಕೆಗಳು ಅಚ್ಚಾದರೆ, ೬೦ ಕೋಟಿ ಜನರ ಚೀನಿಯಲ್ಲಿ ೩೫೦ ಮಾತ್ರ! ಜಪಾನ್ ನಮಗಿಂತ ಮುಂದೆ ಇದೆ. ನಮ್ಮದು ಜನಸಂಖ್ಯೆಯಲ್ಲಿ ಎರಡನೆಯ ಸ್ಥಾನ, ಪತ್ರಿಕಾ ಪ್ರಕಟಣೆಯಲ್ಲಿ ಐದನೆಯದು.

ವಿವಿಧ ಭಾಷೆಗಳಲ್ಲಿ ಎಷ್ಟೆಷ್ಟು ಪುಸ್ತಕಗಳು ಅಚ್ಚಾಗುತ್ತವೆ ಎಂಬುದನ್ನೂ ಪರಿಶೀಲಿಸಬಹುದು. ಚೀನೀ ಭಾಷಾ ಗ್ರಂಥಗಳ ಸಂಖ್ಯೆ ದೊರೆಯುವುದಿಲ್ಲ.

ರಶ್ಯನ್	೪೮	ಸಾವಿರ
ಇಂಗ್ಲಿಷ್	೪೨	,,
ಜರ್ಮನ್	೩೪	,,
ಜಪಾನಿ	೨೫	,,
ಫ್ರೆಂಚ್	೧೬	,,
ಸ್ಪೆನಿಷ್	೧೫	,,
ಇಟಾಲಿಯನ್	೧೩	,,
ಪೋರ್ಚುಗೀಸ್	೮	,,
ಸ್ವೀಡಿಶ್	೬	,,
ರುಮಾನಿಯನ್	೬	,,

ಈ ಪಟ್ಟಿಯಂತೆ ಅತ್ಯಧಿಕ ಪುಸ್ತಕಗಳು ರಶ್ಯನ್ ಭಾಷೆಯಲ್ಲಿ ಅಚ್ಚಾಗುತ್ತವೆ. ಎರಡನೆಯ ಸ್ಥಾನ ಇಂಗ್ಲಿಷಿಗೆ. ೧೩ ಕೋಟಿ ರಶ್ಯನರು ೪೮ ಸಾವಿರ ಪುಸ್ತಕ ಪ್ರಕಾಶಿಸಿದರೆ ೨೫ ಕೋಟಿ ಇಂಗ್ಲಿಷರು ೪೨ ಸಾವಿರ ಪುಸ್ತಕಗಳನ್ನು ಬೆಳಕಿಗೆ ತರುತ್ತಾರೆ. ಅಂದರೆ ಅರ್ಧಾಂಶದಷ್ಟು! ಎಂಟು ಕೋಟಿ ಪೋರ್ಚುಗೀಸರು ಎಂಟು ಸಾವಿರ ಪುಸ್ತಕಗಳನ್ನು ಅಚ್ಚು ಹಾಕುತ್ತಾರೆ!

ಇತರ ಎಲ್ಲ ಭಾಷೆಗಳಲ್ಲಿ ಮುದ್ರಣಗೊಳ್ಳುವ ಗ್ರಂಥಗಳ ಸಂಖ್ಯೆ ೩೧ ಸಾವಿರವೆಂದಾಗ, ಭಾರತೀಯ ಭಾಷೆಗಳ ಶೋಚನೀಯತೆ ವೇದ್ಯವಾಗುತ್ತದೆ.

ತಾಂತ್ರಿಕ ಪುಸ್ತಕಗಳ ಪ್ರಕಟಣೆಯತ್ತ ಗಮನ ಹರಿಸೋಣ.

ರಶ್ಯನ್	–	೨೮	ಸಾವಿರ
ಇಂಗ್ಲಿಷ್	–	೯	,,
ಜರ್ಮನ್	–	೬	,,
ಜಪಾನಿ	–	೪	,,
ಇಟಾಲಿಯನ್		೨	,,
ಫ್ರೆಂಚ್	–	೩	,,
ಸ್ಪೆನಿಶ್	–	೨	,,

ರಶ್ಯನ್ ಭಾಷೆಯಲ್ಲಿ ಉಳಿದೆಲ್ಲ ಭಾಷೆಗಳಲ್ಲೂ ಪ್ರಕಟವಾಗುವ ಒಟ್ಟು ಪುಸ್ತಕಗಳಿಗಿಂತಲೂ ಹೆಚ್ಚು ತಾಂತ್ರಿಕ ಪುಸ್ತಕಗಳು ಅಚ್ಚಾಗುತ್ತಿವೆ! ತಾಂತ್ರಿಕ ಮತ್ತು ವೈಜ್ಞಾನಿಕ ಜ್ಞಾನಕ್ಕಾಗಿ ಇಂಗ್ಲಿಷ್ ಕಲಿಯಬೇಕೆಂದಿಲ್ಲ, ರಶ್ಯನ್ ಕಲಿಯುವುದೇ ಉತ್ತಮ. ಜಪಾನದಲ್ಲಿ ಇದರ ಬೆಳವಣಿಗೆ ತೀವ್ರವಾಗಿ ಬೆಳೆಯುತ್ತ ಬರುತ್ತಿದೆ.

ಒಂದು ಭಾಷೆಯ ಕೃತಿಗಳು ಇತರ ಭಾಷೆಗಳಿಗೆ ಅನುವಾದಿತವಾದರೂ ಅದರ ಮಹತ್ವ ಹೆಚ್ಚುತ್ತದೆ. ಪ್ರತಿ ವರ್ಷವೂ ಸುಮಾರು ೩೦೦೦೦ ಗ್ರಂಥಗಳು ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಳ್ಳುತ್ತವೆ. ಇವುಗಳಲ್ಲಿ ಸೇ. ೩೩ ಇಂಗ್ಲಿಷಿನಿಂದ, ಸೇ. ೧೫ ರಶ್ಯನ್ನಿಂದ, ಸೇ. ೧೩ ಫ್ರೆಂಚಿನಿಂದ, ಸೇ. ೧೦ ರಷ್ಟು ಜರ್ಮನ್‌ನಿಂದ ಅನುವಾದಹೊಂದುತ್ತವೆ.

ಯಾವ ಭಾಷೆಯು ಎಷ್ಟು ದೇಶಗಳಲ್ಲಿ ಪ್ರಯೋಜನಕ್ಕೆ ಬರುತ್ತದೆ ಎಂಬುದೂ ಒಂದಂಶ. ಸ್ಪೆನಿಷ್ ಭಾಷೆಗೆ ಇಲ್ಲಿ ಅಗ್ರಗಣ್ಯ ಸ್ಥಾನ. ಕೊಲಂಬಸ ಮತ್ತಿತರ ಸಾಹಸಿ ಸಂಶೋಧಕರಿಂದಾಗಿ ಈ ಭಾಷೆ ೨೦ ದೇಶಗಳಲ್ಲಿ ಹರಡಿದೆ. ಇಂಗ್ಲಿಷ್ ೧೫ ದೇಶಗಳ ರಾಷ್ಟ್ರಭಾಷೆ. ೧೩ ದೇಶಗಳಲ್ಲಿ ಅರಬ್ಬಿ, ೯ ದೇಶಗಳಲ್ಲಿ ಫ್ರೆಂಚ್, ಮೂರು ದೇಶಗಳಲ್ಲಿ ಜರ್ಮನ್ ನಡೆಯಬಲ್ಲುದು.

ಮೇಲಿನ ಐದು ಭಾಷೆಗಳನ್ನು ಕಲಿತುಕೊಂಡರೆ, ದುಭಾಷಿಯಿಲ್ಲದೇನೇ ನಾವು ಜಗತ್ತಿನ ೬೦ ದೇಶಗಳನ್ನು ಸಂಚರಿಸಿ ಸಂತೋಷಪಡಬಹುದು. ಈ ಐದು ಭಾಷೆಗಳ ಮಾಧ್ಯಮದಿಂದ ಜಗತ್ತಿನ ಸೇ. ೩೦ರಷ್ಟು ನಾಗರಿಕರೊಂದಿಗೆ ಸಂಪರ್ಕ ಸಾಧಿಸಬಹುದು. ಸೇ. ೮೦ರಷ್ಟು ಪುಸ್ತಕ—ಪತ್ರಿಕೆಗಳನ್ನು ಓದಿಕೊಳ್ಳಬಹುದು.

ಅಂದರೆ, ನಾವು, ಭಾರತೀಯರು, ಇನ್ನೂ ಪಾತಳಿಯಲ್ಲೇ ನವೆಯುತಿದ್ದೇವೆ!

● ●

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 72303
2 72304

Grams: HOST. SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು—4

ಬಸ್ರೂರು ಹಿಂದೂ ಶಾಲಾ ಸಂಘದ ವಜ್ರ ಮಹೋತ್ಸವ

ತಾ. ೯-೫-೬೧ರಂದು ಬಸ್ರೂರು ಹಿಂದೂ ಶಾಲಾ ಸಂಘದ ವಜ್ರ ಮಹೋತ್ಸವ ಸಮಾರಂಭವು ಮುಖ್ಯ ಅತಿಥಿಯಾಗಿ ವಿಜಯಾ ಬ್ಯಾಂಕ್ ಅಧ್ಯಕ್ಷ ಶ್ರೀ ಎಂ. ಸುಂದರರಾಮ ಶೆಟ್ಟಿ ಹಾಗೂ ಕೆನರಾ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಪಿ. ಜೆ. ಪ್ರಭು ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಶಾಲೆಯ ಹಳೆ ವಿದ್ಯಾರ್ಥಿ ಹಾಗೂ ಸಂಘದ ವಜ್ರಮಹೋತ್ಸವ ಸಮಿತಿ ಅಧ್ಯಕ್ಷ ಶ್ರೀ ಬಿ. ವಿ. ಭಂಡಾರಿಯವರು ಸ್ವಾಗತಿಸಿದರು. ಸಮಿತಿಯ ಉಪಾಧ್ಯಕ್ಷ ಡಾ। ಬಸ್ರೂರು ಭುಜಂಗ ಹೆಗ್ಡೆಯವರು ಸಂದೇಶಗಳನ್ನು ಓದಿದರು. ಕುಂದಾಪುರ ತಾ. ಅಭಿವೃದ್ಧಿ ಮಂಡಳಿಯ ಅಧ್ಯಕ್ಷರೂ ಶಾಲಾ ಕರೆಸ್ಪೊಂಡೆಂಟರೂ ಆದ ಶ್ರೀ ಬಿ. ವೀರ ರಾಜೇಂದ್ರ ಹೆಗ್ಡೆಯವರು ವಜ್ರ ಮಹೋತ್ಸವದ ಹಿನ್ನೆಲೆಯನ್ನು ವಿವರಿಸಿ, ಈ ಶಾಲೆಯಲ್ಲಿ ಕಲಿತವರು ಅನೇಕರು ರಾಷ್ಟ್ರದ ಸೇವೆಯಲ್ಲಿ ಉನ್ನತ ಸ್ಥಾನಗಳಲ್ಲಿರುವುದನ್ನು ತಿಳಿಸಿದರು.

ಈ ಸಂದರ್ಭದಲ್ಲಿಯೇ ಕೆಲವು ನಿವೃತ್ತ ಅಧ್ಯಾಪಕರುಗಳಾದ ಶ್ರೀ ಎಚ್. ಕೋಟಿಯಣ್ಣ ಶೆಟ್ಟಿ, ಶ್ರೀ ಬಿ. ಶಂಕರರಾಯ, ಶ್ರೀ ಬಿ. ದಾಸಪ್ಪ ಉಪಾಧ್ಯಕ್ಷ, ಶ್ರೀ ಬಿ. ಲಕ್ಷ್ಮೀನಾರಾಯಣ ಕಾಮತ್, ಶ್ರೀ ಅನಂತ ಕಾಮತ್ ಇವರುಗಳನ್ನು ಪ್ರಧಾನ ಅತಿಥಿ ಹಾರಾರ್ಪಣೆ ಮಾಡಿ ಸನ್ಮಾನಿಸಿದರು.

ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಎಸ್. ಶಿವರಾಮ ಶೆಟ್ಟಿಯವರು ಶಾಲಾ ಸಂಘದ ವರದಿಯನ್ನು ಓದಿ ಬಸ್ರೂರಿನಲ್ಲಿ ಸಂಘದ ಆಶ್ರಯದಲ್ಲಿ ಜ್ಯೂನಿಯರ್ ಕಾಲೇಜು ಒಂದನ್ನು ಆರಂಭಿಸಲು ನಿರ್ಧರಿಸಿರುವುದಾಗಿ ತಿಳಿಸಿದರು.

ಪ್ರಧಾನ ಅತಿಥಿ ಶ್ರೀ ಎಂ. ಸುಂದರರಾಮ ಶೆಟ್ಟರು ಮಾತನಾಡುತ್ತಾ, ಇಂದಿನ ಯುವಕರಲ್ಲಿ ಕಂಡುಬರುವ ನಿರುತ್ಸಾಹ ನಿರಾಶೆಗಳಿಗೆ ಮುಖ್ಯ ಕಾರಣ ನಮ್ಮ ಈಗಿನ ಶಿಕ್ಷಣ ಪದ್ಧತಿ. ಶಿಕ್ಷಣ ವೃತ್ತಿ ಮೂಲವಾಗಿರಬೇಕು. ಹಾಗಿದ್ದರೆ ಮಾತ್ರ ನಿರುದ್ಯೋಗ ಸಮಸ್ಯೆ ತೊಲಗಿ ದೇಶದ ಯುವ ಜನಾಂಗದಲ್ಲಿ ನೆಮ್ಮದಿಯುಂಟಾದೀತು ಎಂದರು. ಶ್ರೀ ಶೆಟ್ಟರು ವಿಜಯಾ ಬ್ಯಾಂಕಿನ ಪರವಾಗಿ ರೂ. ೫೦೦|-ರ ಕಾಣಿಕೆಯಿತ್ತರು.

ಅಧ್ಯಕ್ಷ ಶ್ರೀ ಕೆ. ಪಿ. ಜೆ. ಪ್ರಭುರವರು ಮಾತನಾಡಿ ವಜ್ರ ಮಹೋತ್ಸವ ಸಮಿತಿಗೆ ಕೆನರಾ ಬ್ಯಾಂಕು ರೂ. 1001ರ ಸಹಾಯ ನೀಡುವುದಾಗಿ ಭರವಸೆಯಿತ್ತರು.

ಸಮಿತಿಯ ಉಪಾಧ್ಯಕ್ಷ ಶ್ರೀ ಎಚ್. ರಾಮಕೃಷ್ಣ ಕಾಮತರು ವಂದನಾರ್ಪಣೆಗೈದರು. ಅಂತ್ಯದಲ್ಲಿ ವಿಶಿಷ್ಟ ಮನರಂಜನಾ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು.

● ●

ಶ್ರೀ ಡಿ ಎಲ್ ಎನ್. ಅವರ ನಿಧನಕ್ಕೆ ಕಂಬನಿ

ಕನ್ನಡ ಸಾಹಿತ್ಯದ ಮುನ್ನಡೆಗೆ ಹಿನ್ನೆಲೆಯಾಗಿರುವ ವಿಮರ್ಶೆ ಸಂಶೋಧನೆ (ಗ್ರಂಥ ಸಂಶೋಧನೆ) ವಗೈರೆ ಬೃಹತ್ಕಾರ್ಯಗಳನ್ನು ಸಾಧಿಸಿದ ಹಾಗೂ ಸಾಧಿಸುವವರಿಗೆ ಪ್ರೋತ್ಸಾಹಕರೂ ಮಾರ್ಗದರ್ಶಕರೂ ಆದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು (ನಿವೃತ್ತ ಪ್ರಾಧ್ಯಾಪಕರು) ಇದೇ ತಾ. 7ರಲ್ಲು ಕಾಲಾಧೀನರಾದರೆಂಬುದು ಅವರ ಬಂಧು ಮಿತ್ರರಿಗೂ, ಶಿಷ್ಯ ಕೋಟಿಗೂ ಅಪಾರ ದುಃಖದಾಯಕವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸುವ ಕನ್ನಡ ಕನ್ನಡ ಕೋಶದ ಪ್ರಧಾನ ಸಂಪಾದಕರಾದ ಶ್ರೀಯುತರು ಆ ಮೊದಲು ಹಲವಾರು ಕೃತಿಗಳ ಸಂಪಾದಕರಾಗಿದ್ದರು. ಸಾಧಾರಣ ೬೦ ಲೇಖನಗಳನ್ನು ಬರೆದಿದ್ದರು. ಕೆಲವರಿಗೆ 'ಮುನ್ನುಡಿಯ' ಮೂಲಕ ಆದರ್ಶರಾಗಿದ್ದರು. ಇವೆಲ್ಲ ಕೃತಿಗಳು ಒಂದು ಸಂಕಲನವಾಗಿ ಪ್ರಕಟವಾಗಲಿದೆಯಂತೆ! (ಉಪಾಯನವೆಂಬ ಸಂಭಾವನ ಗ್ರಂಥದಲ್ಲಿ ಆ ಲೇಖನದ ಪಟ್ಟಿಯಿದೆ.) ಶ್ರೀಯುತರ ಆತ್ಮಕ್ಕೆ ಸದ್ಗತಿಯೊದಗಲಿ!

ಸುರತ್ಕಲ್ಲು ವೆಂಕಟರಾಯಾಚಾರ್ಯ.

● ●

ರಾಂಗ್ ಪರ್ಸನ್ ಪ್ಲೀಸ್

(ನಾಲ್ಕನೇ ಪುಟದಿಂದ)

ಶಾಲು ಚಾಚೋದ್ರಲ್ಲಿ ಮಗ್ನವಾಗಿರುವಾಗ..."

'ಹ್ಞೂಂ.... ಆದ್ರೂ ತಮ್ಮ ಮನಸ್ಸನ್ನು, ಇಂದ್ರಿಯಗಳನ್ನು ನಿಗ್ರಹಿಸುವುದು ......"

'ಅಯ್ಯೋ, ಅದ್ಯಾಕೆ ಹೇಳ್ತೀಯ? ವಿಶ್ವಾಮಿತ್ರ, ಪರಾಶರರಂತಹ ಸರ್ವ ಬಿಟ್ಟ ಸನ್ಯಾಸಿಗಳೇ ಮನಸ್ಸನ್ನು ಸಡಿಲ ಬಿಟ್ಟು ಆತ್ಮಸಾಕ್ಷಿಯನ್ನು ಅಪ್ಪಿಕೊಂಡರೆಂದ ಮೇಲೆ ಈ ನವತರುಣರದ್ದೇನು?'

'ಆಯ್ತಪ್ಪ, ನೀವನ್ನೋದನ್ನು ಒಪ್ಪಿಬಿಡೋಣ. ಆದ್ರೆ ನೋಡಿ....'

'ಏನು?'

'ಈ ಕಳ್ಳರ ಪಡೆಯೆಲ್ಲ ಮೂಗಡಿ ರಸ್ತೆ ಸ್ಟೇಶನ್ನಿಗೆ ಸೇರಿದ್ದು. ಅವ್ರನ್ನು ಹಿಡಿದವ್ರು ಮಲ್ಲೇಶ್ವರಂ, ರಾಜಾಜಿ ನಗರ....'

'ಅದು ಸರೀನ್ನು. ತಮ್ಮ ಮಕ್ಕಳನ್ನು ತಾವೇ ಹಿಡಿಯೋದು ಹೇಗೆ? ಒಂದ್ವೇಳೆ ಗಂಡು ಮನಸ್ಸು ಮಾಡಿದ್ರೂ, ಅದು ಹೆಣ್ಣು ಹೃದಯವನ್ನು ಹೇಗೆ ಸಮಾಧಾನ ಮಾಡಬೇಕು? ಅತೃಪ್ತ ಹೆಣ್ಣು ಹುಲಿಯೊಡನೆ ಗಂಡು ಸಿಂಹವಾದರೂ ಹೇಗೆ ಬದುಕೀತು?'

'ಅಲ್ರಿ, ಈ ಸ್ಟೇಶನ್ನು– ಈ ಟೇಶನ್ನುಗಳ ನಡುವೆ ಜಗಳವಿದೆಯೋ ಅಂತ....'

'ಇದುವರೆಗೆ ಇಲ್ಲದಿದ್ರೂ ಇನ್ನು ಆರಂಭವಾಗಬಹುದಲ್ಲ?'

'ಯಾಕೆ?'

'ತಮ್ಮವರನ್ನು ಹಿಡಿದದ್ದರ ಪ್ರತೀಕಾರ ಮಾಗಡಿ ರಸ್ತೆಯವ್ರು ಮಾಡದಿರುತ್ತಾರೆಯೆ?'

'ಬಂಧಿತರೆಲ್ಲ ನಿರಪರಾಧಿಗಳೆಂದು ಹೇಳಿದರೆ ಸರಿ....'

'ಅಲ್ಲಿಗೆ ಉಭಯ ಪಕ್ಷಗಳಲ್ಲಿ ಗೌರವದ ಒಪ್ಪಂದವಾದಂತಾಗುವುದು....'

'ಹಾಗೆ ಮಾಡದೆ ಹೋದ್ರೆ ಬೇರೆ ಗತಿಯುಂಟೆ' ಕಾಲೇಜು ಟ್ರಸ್ಟಿಯ ಮಗನನ್ನು ಡಿಸ್‌ಮಿಸ್ ಮಾಡೋ ಎದೆಗಾರಿಕೆ ಯಾವ ಪ್ರಿನ್ಸಿಪಲ್ಲಿಗಿದೆ?'

"ಅಲ್ಲವೆ?"

'ಅಂದ ಹಾಗೆ ರಾಜ್ಯಪಾಲ ಧರಮವೀರರು ಖಾಸಗಿ ಶಾಲೆಗಳತ್ತ ತನ್ನ ಬಾಂಬೆಸೆದಿದ್ದಾರೆ....

'ಇಲ್ಲಿ ಬಿಡೀ. ಹೀಗೇ ಹಿಂದೆ ಎಷ್ಟೋ ಜನರು ಕಣ್ಣಿಟ್ಟಿದ್ದಾರೆ. ಅದು ಊರವರ ತೃಪ್ತಿಗಾಗಿ ಮಾತ್ರ....'

'ಅಲ್ರಿ, ಧರಮವೀರರು ಯಾರನ್ನು ತೃಪ್ತಿಪಡಿಸಬೇಕು?'

"ಯಾರನ್ನೂ ಇಲ್ಲಾನ್ನಿ. ಆದ್ರೂ ಖಾಸಗಿ ಶಾಲೆಗಳನ್ನು ಸರಕಾರ ವಹಿಸಿಕೊಳ್ಳುವುದಂತೂ ಸಾಧ್ಯವಿಲ್ಲವೆಂದ ಮೇಲೆ ಬರಿಗಣ್ಣಿನಿಂದ ಎಷ್ಟು ದೂರ ನೋಡಬಹುದು?"

"ಪಾಠದಂಗಡಿಗಳು ಎಂದವರು ಶಾಲೆಗಳನ್ನು ಕರೆದಿದ್ದಾರೆ...."

"ಪಾಠದಂಗಡಿಗಳಲ್ಲಿ ಕೇಳಿದ ಹಣತೆತ್ತರೆ ಪಾಠಗಳಾದರೂ ದೊರೆಯುತ್ತವೆ. ಆದರೆ, ಸರಕಾರದ ಉಚಿತ ಪಾಠದಂಗಡಿಗಳು ಉಚಿತ ಮದ್ದಿನಂಗಡಿಗಳು ಇ. ಇ. ಸಾರ್ವಜನಿಕ ಮೂತ್ರಿಗಳಾಗಿ ಬಿಟ್ಟಿವೆಯಲ್ಲ? ಒಬ್ಬ ಅಧಿಕಾರಿಯನ್ನು ಸಮಜಾಯಿಷಿ ಕೇಳಿದರೆ, ಒಬ್ಬ ಎರಡನೆ ದರ್ಜೆ ಅಧಿಕಾರಿಯ ಭಡ್ತಿ ತಡೆಹಿಡಿದರೆ, ಒಬ್ಬ ಮೂರನೆ ದರ್ಜೆ ನೌಕರನನ್ನು ಸಸ್ಪೆಂಡು ಮಾಡಿದರೆ, ಒಬ್ಬ ನಾಲ್ಕನೆ ದರ್ಜೆಯವನನ್ನು ಡಿಸ್‌ಮಿಸ್ ಮಾಡಿದರೆ ಮುಗೀತೇನು?'

'ಹ್ಞೂಂ...."

'ಏನು?'

'ಏನೂ ಇಲ್ಲಾನ್ನಿ. ರಾಂಗ್ ಪರ್ಸನ್ ಪ್ಲೀಸ್...."

'ಪರ್ಸನ್ ಅಲ್ಲ ಕಣೇ....'

'ಹ್ಞೂಂ....'

—ಗೋರಾ.

ಭಾರತದ ನೌಕಾಪಡೆಯ ಹಿರಿಯ ಪರಂಪರೆ

ಭಾರತ ಮತ್ತು ಇಜಿಪ್ಟ್ ಅನಾದಿ ಕಾಲದಿಂದಲೂ ಹಡಗು ಸಾರಿಗೆಗೆ ಖ್ಯಾತನಾಗಿವೆ. ಋಗ್ವೇದ ಮತ್ತು ಇತರ ಪುರಾತನ ಸಾಹಿತ್ಯ, ಪ್ರಾಚೀನ ಅವಶೇಷಗಳು ಹಾಗೂ ಶಿಲ್ಪಕಲೆ ಭಾರತ ಮತ್ತು ದೂರದ ರಾಷ್ಟ್ರಗಳ ನಡುವೆ ಪುರಾತನ ಕಾಲದಿಂದಲೂ ನೌಕಾ ಸಾರಿಗೆ ಸಂಪರ್ಕ ಇದ್ದಿತೆಂಬುದನ್ನು ಸ್ಪಷ್ಟಪಡಿಸುತ್ತವೆ. ನಮ್ಮ ದೇಶದ ನೌಕಾ ಸಾರಿಗೆಯು ಹಿನ್ನೆಲೆ ಪ್ರಬಲವಾಗಿದ್ದಾಗಲೂ, ನೌಕಾ ಸಾರಿಗೆಯ ಸುವ್ಯವಸ್ಥಿತ ಸಂಘಟನೆ ಆರಂಭವಾದದ್ದು ದೇಶಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ಎಂದು ಹೇಳಬಹುದು. ಇಂದು ಭಾರತ ಸಮುದ್ರದ ಮೂಲಕ ವ್ಯಾಪಾರಮಾಡುವ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿ ನಾವೆಲ್ಲರೂ ಅಭಿಮಾನಪಟ್ಟುಕೊಳ್ಳುವಂತಾಗಿದೆ. ಪ್ರತಿವರ್ಷ ಏಪ್ರಿಲ್ 5ರಂದು ರಾಷ್ಟ್ರೀಯ ನೌಕಾ ಸಾರಿಗೆ ದಿನವನ್ನು ಆಚರಿಸಲಾಗುತ್ತದೆ. ಅಂದು ಈ ಕ್ಷೇತ್ರದಲ್ಲಿ ಸಾಧಿಸಲಾದ ಪ್ರಗತಿಯನ್ನು ದೇಶವು ಅವಲೋಕಿಸುತ್ತದೆ. ಪ್ರತಿವರ್ಷದಂತೆ ಈ ಸಲವೂ ಏಪ್ರಿಲ್ 5ರಂದು ನೌಕಾ ಪಡೆಯ ದಿನವನ್ನು ಆಚರಿಸಲಾಯಿತು. ವಾಣಿಜ್ಯ ನೌಕಾ ಪಡೆಯ ದಿನವು ಅಂದೇ ಆಚರಿಸಲ್ಪಟ್ಟಿತು. ಐವತ್ತೆರಡು ವರ್ಷಗಳ ಹಿಂದೆ ಭಾರತದ ಮೊತ್ತ ಮೊದಲನೆಯ ಹಡಗು "ಎಸ್. ಎಸ್. ಲಾಯಲ್ಟಿ" ನೀರಿಗೆ ಇಳಿದು ಬ್ರಿಟನ್‌ಗೆ ತನ್ನ ಜಲಯಾನವನ್ನು ಪ್ರಾರಂಭಿಸಿತು.

ಕಳೆದ ಎರಡು ದಶಕಗಳಲ್ಲಿ ಭಾರತದ ಹಡಗು ಕೈಗಾರಿಕೆ ಅತ್ಯಂತ ಪ್ರಶಂಸನೀಯ ರೀತಿಯಲ್ಲಿ ಬೆಳೆದು ಬಂದಿದೆ. ದೇಶದ ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಭಾರತದ ಹಡಗುಗಳ ಟನ್‌ಮಾನ 1.92 ಲಕ್ಷ ಜಿ. ಆರ್. ಟಿ ಗಳಷ್ಟಿತ್ತು. ಈ ಎಲ್ಲಾ ಸಾಮರ್ಥ್ಯವನ್ನು ಬಹುತೇಕ ಕರಾವಳಿಯಲ್ಲಿನ ವ್ಯಾಪಾರಕ್ಕಾಗಿ ವಿನಿಯೋಗಿಸಲಾಯಿತು. ಅಲ್ಲದೆ ಬರ್ಮಾ ಮತ್ತು ಸಿಲೋನ್ ಇವೇ ಮೊದಲಾದ ನೆರೆಯ ರಾಷ್ಟ್ರಗಳೊಂದಿಗೂ ವ್ಯಾಪಾರ ನಡೆಯುತ್ತಿತ್ತು. ಸ್ವಾತಂತ್ರ್ಯನಂತರ ಪರಿಸ್ಥಿತಿ ಸುಧಾರಿಸಿದೆ. ಇಂದು ನಮ್ಮ ದೇಶದ ಹಡಗುಗಳ ಟನ್‌ಮಾನ 24.57 ಲಕ್ಷ ಜಿ ಆರ್. ಟಿ. ತಲುಪಿದೆ. ಇದರಲ್ಲಿ 19,74,569 ಜಿ. ಆರ್. ಟಿ. ಸಾಗರೋತ್ತರ ವ್ಯಾಪಾರಕ್ಕಾಗಿ ಮೀಸಲಾಗಿದೆ. ಇಂದು ನಮ್ಮ ದೇಶದ ಹಡಗು ಪಡೆಯಲ್ಲಿ ತೀವ್ರಗಾಮಿಯಾದ ಹಾಗೂ ಅತ್ಯಂತ ಆಧುನಿಕವಾದ ಹಡಗುಗಳಿವೆ. ಸ್ಪರ್ಧಾತ್ಮಕವಾದ ಅಂತರರಾಷ್ಟ್ರೀಯ ಜಲಮಾರ್ಗಗಳಲ್ಲಿ ಅವು ಸಂಚರಿಸುತ್ತಿವೆ. ನಾಲ್ಕನೆ ಯೋಜನೆಯಲ್ಲಿ ಭಾರತದ ಹಡಗು ಸಾರಿಗೆಯು ಟನ್ ಮಾನ 40 ಲಕ್ಷ ಜಿ. ಆರ್. ಟಿ.ಗಳಷ್ಟು ಆಗಲಿದೆ.

ನೌಕೆಗಳಲ್ಲಿ ತರಪೇತಿ ಸೌಕರ್ಯ

ಹಡಗು ಕೈಗಾರಿಕೆಯು ಸಮತೂಕವಾದ ಹಾಗೂ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ನಾವಿಕರಿಗೆ ಅಧಿಕಪ್ರಮಾಣದಲ್ಲಿ ತರಪೇತಿ ಸೌಕರ್ಯಗಳನ್ನು ಕಲ್ಪಿಸಬೇಕಾಗುತ್ತದೆ. ಈ ಒಂದು ಅವಶ್ಯಕತೆಯನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ದೇಶದಲ್ಲಿ ಹಡಗು ಸಾರಿಗೆಯ ಟನ್‌ಮಾನ ಏರಿದಂತೆ ತರಪೇತಿ ಸೌಕರ್ಯಗಳನ್ನು ಕಲ್ಪಿಸಲಾಯಿತು. ಸ್ವಾತಂತ್ರ್ಯಪೂರ್ವದ ಸಮಯದಲ್ಲಿ ಡಫರಿನ್ ಎಂಬ ಒಂದೇ ಒಂದು ತರಪೇತಿ ನೌಕೆ ಇದ್ದಿತು. ಸ್ವಾತಂತ್ರ್ಯನಂತರ ಆರು ತರಪೇತಿ ನೌಕೆಗಳಿವೆ. ಈ ಪೈಕಿ ಮೂರು ತರಪೇತಿ ಸಂಸ್ಥೆಗಳು ವಾಣಿಜ್ಯ ನೌಕೆಗಳ ಅಧಿಕಾರಿಗಳಿಗೆ ತರಪೇತಿಯನ್ನು ನೀಡುತ್ತಿವೆ. ಸುಮಾರು 2.11 ಕೋಟಿ ರೂ. ವೆಚ್ಚಮಾಡಿ ಹಿಂದೂಸ್ತಾನ್ ಹಡಗು ಕಟ್ಟೆಯಲ್ಲಿ ಹೊಸ ತರಪೇತಿ ನೌಕೆಯೊಂದನ್ನು ನಿರ್ಮಿಸಲಾಗುತ್ತಿದೆ. ಪ್ರಸ್ತುತ ವರ್ಷದ ಅಂತ್ಯದ ವೇಳೆಗೆ ಡಫರಿನ್ ನೌಕೆಗೆ ಬದಲಾಗಿ ಈ ಹೊಸ ನೌಕೆ ಬಳಕೆಗೆ ಬರುವುದು. ಇದರಿಂದಾಗಿ ನೌಕೆಗಳಲ್ಲಿ ಪ್ರತಿವರ್ಷ 125 ಮಂದಿ ಕೆಡೆಟ್‌ಗಳಿಗೆ ತರಪೇತಿ ದೊರೆಯುವುದು. ಉನ್ನತಾಧಿಕಾರ ಮಂಡಳಿಯೊಂದು ವಾಣಿಜ್ಯ ನೌಕೆಗಳ ಮತ್ತು ಇತರ ನೌಕೆ ಅಧಿಕಾರಗಳ ತರಬೇತಿ ಕಾರ್ಯದಲ್ಲಿ ಸಮನ್ವಯವನ್ನು ಸಾಧಿಸುತ್ತಿದೆ.

ನಾವಿಕರ ಕಲ್ಯಾಣ

ನಾವಿಕರ ಕಲ್ಯಾಣ ಬಹುದಿನದ ಬಯಕೆಯಾಗಿತ್ತು. ಈ ಬಯಕೆಯನ್ನು ಈಡೇರಿಸುವುದಕ್ಕಾಗಿ 1956ರಲ್ಲಿ ಒಂದು ರಾಷ್ಟ್ರೀಯ ಕಲ್ಯಾಣ ಮಂಡಳಿಯನ್ನು ಸ್ಥಾಪಿಸಲಾಯಿತು. ಈ ಮಂಡಳಿಯು ನಾವಿಕರ ಹಿತರಕ್ಷಣೆ ವಿಷಯಗಳಲ್ಲಿ ಹಾಗೂ ಅವರಿಗೆ ವಸತಿ ಸೌಕರ್ಯ ಕ್ಲಬ್‌ಗಳು, ಕ್ಯಾಂಟೀನ್‌ಗಳು ಮತ್ತು ವೈದ್ಯಕೀಯ ಹಾಗೂ ಶಿಕ್ಷಣ ಸೌಕರ್ಯಗಳು ಇತ್ಯಾದಿಗಳನ್ನು ನೀಡುವ ಬಗ್ಗೆ ಸರಕಾರಕ್ಕೆ ಸಲಹೆ ಕೊಡುತ್ತದೆ. ನಾವಿಕರ ಕಲ್ಯಾಣ ಕೇಂದ್ರಗಳು ಮುಂಬೈ, ಕಲ್ಕತ್ತ, ಮದ್ರಾಸ್, ಸಿಡ್ನಿ, ಲಂಡನ್, ಲಿವರ್‌ಪೂಲ್, ಮತ್ತು ಗ್ಲಾಸ್‌ಗೋ ಮುಂತಾದ ಬಂದರುಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಲಂಡನ್ನಿನಲ್ಲಿರುವ ಕಛೇರಿಯು ನಿರುದ್ಯೋಗಿಗಳಾದ ಭಾರತದ ನಾವಿಕರಿಗೆ ಕಳೆದ ವರ್ಷ ವಿದೇಶೀ ಹಡಗುಗಳಲ್ಲಿ 1100 ಉದ್ಯೋಗಗಳನ್ನು ದೊರಕಿಸಿ ಕೊಟ್ಟಿತು. ಮುಂಬೈ ಮತ್ತು ಕಲ್ಕತ್ತಾ ನಗರಗಳಲ್ಲಿರುವ ನಾವಿಕರ ಉದ್ಯೋಗ ವಿನಿಮಯ ಕಛೇರಿಗಳು ವ್ಯಾಪಾರಿ ನೌಕೆಗಳಲ್ಲಿನ ನಾವಿಕರಿಗೆ ಸೂಕ್ತ ಉದ್ಯೋಗಗಳನ್ನು ದೊರಕಿಸಿಕೊಡಲು ಸಹಾಯ ಮಾಡುತ್ತವೆ. ನಾವಿಕರ ಕಲ್ಯಾಣ ಮಂಡಳಿ ಅನೇಕ ಹಿತ ರಕ್ಷಣಾ ಕಾರ್ಯಕ್ರಮಗಳ ಮೂಲಕ ನಾವಿಕರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದೆ.

●●

ಹಳೆ ವಿದ್ಯಾರ್ಥಿಗಳ ದಿನಾಚರಣೆ

ಬಸ್ರೂರು ಹಿಂದೂ ಶಾಲಾ ವಜ್ರ ಮಹೋತ್ಸವದ ಅಂಗವಾಗಿ ತಾ. 10ರಂದು ಡಾ| ಟಿ. ಎಂ.ಎ. ಪೈಗಳ ಅಧ್ಯಕ್ಷತೆಯಲ್ಲಿ ಶಾಲಾ ಹಳೆ ವಿದ್ಯಾರ್ಥಿಗಳ ದಿನಾಚರಣೆಯು ಆಚರಿಸಲ್ಪಟ್ಟಿತು. ಶ್ರೀ ಬಿ. ವಿ. ಭಂಡಾರಿಯವರು ಸ್ವಾಗತಿಸಿದ ಬಳಿಕ ಶ್ರೀ ಬಿ.ವಿ.ಆರ್. ಹೆಗ್ಡೆಯವರು ಈ ಸಂಸ್ಥೆ ಬೆಳೆದು ಬಂದ ರೀತಿಯನ್ನು ವಿವರಿಸಿದರು.

ಶ್ರೀ ಎಸ್. ಎಸ್. ಶೆಟ್ಟರು ಸಂದೇಶವಾಚನ, ಶ್ರೀ ಬಿ.ವಿ. ಬಟ್ಟರು ವರದಿವಾಚನ ಮಾಡಿದರು. ಶ್ರೀಮತಿ ಶಾರದಾ ಎಂ. ಪೈಯವರು ಬಹುಮಾನ ವಿತರಣೆ ಗೈದರು. ಹಳೆ ವಿದಾರ್ಥಿ ಹಾಗೂ ಸಿಂಡಿಕೇಟ್ ಬೇಂಕಿನ ಡಿವಿಜನಲ್ ಮೇನೇಜರ್ ಶ್ರೀ ಎಚ್. ವಿ. ಕಾಮತರು ಸ್ವಸ್ತಿವಾಚನಮಾಡಿದರು. ಅಧ್ಯಕ್ಷ ಪೈಗಳು ಬಸ್ರೂರಿನಲ್ಲಿ ಕಾಲೇಜು ಸ್ಥಾಪಿಸಲು ಸಂಘವು ಕೈಗೊಂಡ ನಿರ್ಧಾರವನ್ನು ಸ್ವಾಗತಿಸಿ ತಮ್ಮಿಂದಾಗುವ ಸಹಾಯದ ಭರವಸೆ ವ್ಯಕ್ತಪಡಿಸಿದರು. ಅಂತ್ಯದಲ್ಲಿ ಶ್ರೀ ವಿ. ಶಂಕರ ರಾಯರು ಧನ್ಯವಾದಗಳನ್ನರ್ಪಿಸಿದರು.

ಶಾಲಾ ಕಟ್ಟಡದ ಉದ್ಘಾಟನೆ

ಗ್ರಾಮಗಳ ಹಿರಿಮೆಗೆ ಅಲ್ಲಿನ ಎತ್ತರದ ಸೌಧದ ಕಟ್ಟಡಗಳ ಸಂಖ್ಯೆಯು ಹೇತುವಾಗಿರದೆ ಆ ಪ್ರದೇಶದ ಅಂದದ ದೇವಮಂದಿರ ಹಾಗೂ ಚಂದದ ವಿದ್ಯಾಮಂದಿರಗಳೇ ಕಾರಣಗಳಾಗಿವೆ. ವಿಶ್ವವು ಬೆಳಗಲು ಹೇಗೆ ಸೂರ್ಯ ಹಾಗೂ ಚಂದ್ರರು ಕಾರಣಕರ್ತರೋ ಹಾಗೆಯೇ ಊರು ಕಂಗೊಳಿಸಲು ಈ ವಿದ್ಯಾಮಂದಿರ ಹಾಗೂ ದೇವಮಂದಿರಗಳು ಪ್ರದಾನ ಸಾಧನಗಳಿವೆ ಎಂದು ಕಿನ್ನಿಗೋಳಿಗೆ ಸಮೀಪದ ಪಂಜ-ಕೈಕುಡೆ ಗ್ರಾಮಗಳ ನವನಿರ್ಮಿತ ಸರಕಾರಿ ಪ್ರೌಢ ಪ್ರಾಥಮಿಕ ಶಾಲಾ ಭವನದ ಉದ್ಘಾಟನೆಯನ್ನು, ಜ್ಯೋತಿಯನ್ನು ಬೆಳಗಿಸುವ ಮೂಲಕ, ಗೈದ ಶ್ರೀ ಶ್ರೀ ಪೇಜಾವರ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಅಪ್ಪಣೆಕೊಡಿಸಿದರು.

ಪ್ರಾರಂಭದಲ್ಲಿ ಮಂಗಳೂರು ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಪ್ರಭಾಕರ ರೈಗಳು, ಸದಸ್ಯರಾದ ಶ್ರೀಗಳಾದ ಎಸ್. ನಾರಾಯಣ ಸನಿಲ್, ಎ. ಶ್ರೀಧರ ಶೆಟ್ಟಿ, ಶಾಲಾಭವನ ನಿರ್ಮಿತಿಯ ಕಾರ್ಯದರ್ಶಿ ಶ್ರೀ ಪಿ. ಭೋಜ ಶೆಟ್ಟಿ ಮೊದಲಾದ ಪ್ರಮುಖರು ಅಧಿಕ ಸಂಖ್ಯೆಯಲ್ಲಿ ನೆರೆದ ಊರವರೊಂದಿಗೆ ವಾದ್ಯ ವೈಭವದೊಂದಿಗೆ ಶ್ರೀಗಳವರನ್ನು ಬರಮಾಡಿಕೊಂಡರು. ಶ್ರೀ ಕೊಡತ್ತೂರು ಅನಂತಪದ್ಮನಾಭ ಉಡುಪರು ಸ್ವಾಗತ ಭಾಷಣಮಾಡಿದರು.

ಶ್ರೀ ಪಿ. ಭೋಜ ಶೆಟ್ಟರು ಶಾಲಾಭವನ ನಿರ್ಮಾಣಕ್ಕೆ ಸಂಬಂಧಿಸಿದ ಸಂಕ್ಷಿಪ್ತ ವರದಿಯನ್ನು ಒಪ್ಪಿಸಲು ಶಾಲಾ ಪ್ರಧಾನಾಧ್ಯಾಪಕ ಶ್ರೀ ಶ್ರೀಧರ ದೇವಾಡಿಗರು ವಿದ್ಯಾ ಸಂಸ್ಥೆಯ ಸ್ಥೂಲ ವಿವರಣೆಗಳನ್ನು ಓದಿ ಹೇಳಿದರು.

ಡಾ| ಸಂಜೀವನಾಥ್ ಐಕಳ್‌ರು ಹಿತಚಿಂತಕರ ಪರವಾಗಿ ಮಾತನಾಡಿ ಈ ಪ್ರೌಢ ಪ್ರಾಥಮಿಕ ಶಾಲೆ ಶ್ರೀಗಳವರ ದಿವ್ಯ ಆಶೀರ್ವಾದದಿಂದಾಗಿ ನಿಕಟ ಭವಿಷ್ಯದಲ್ಲೇ ಪ್ರೌಢ ಶಾಲೆಯಾಗಿ ಪರಿಣಮಿಸಲೆಂದು ಹಾರೈಸಿದರು.

ಶ್ರೀ ಎ. ಶ್ರೀಧರ ಶೆಟ್ಟರು ಧನ್ಯವಾದಾರ್ಪಣೆ ಗೈದರು.

READ &
ADVERTISE IN
NAVAYUGA WEEKLY

ಕೆಂಪು ಚೀಣಾ ಮತ್ತು ಬಂಗ್ಲಾ ದೇಶ

ಕೆಂಪು ಚೀಣಾದ ರಾಜನೀತಿಯೇ ವಿಚಿತ್ರ. ಪಾಕಿಸ್ತಾನ ಪೂರ್ವ ಬಂಗಾಳದಲ್ಲಿ ನಡೆಸುತ್ತಿರುವ ಅಮಾನುಷ ಕೃತ್ಯಗಳಿಗೆ ಕೆಂಪು ಚೀಣಾ 'ಪಂಚಶೀಲ'ದಲ್ಲಿ ಸಮರ್ಥನೆ ಪಡೆದಿದೆ. ಅದೂ ಅಲ್ಲದೆ, ಬಂಗ್ಲಾದೇಶದಲ್ಲಿ ನಡೆಯುತ್ತಿರುವ ಪೈಶಾಚಿಕ ಕೃತ್ಯಗಳಿಗೆ 'ವಸಾಹತುಶಾಹಿ' ಭಾರತವೇ ಕಾರಣ ಎಂದಿತು; ಮತ್ತು ಭಾರತ ಪಾಕಿಸ್ತಾನದ ಭದ್ರತೆಯನ್ನೇ ಅಲುಗಾಡಿಸುತ್ತದೆ ಎಂದು ನಿಂದಿಸಿತು. ರಷ್ಯಾದ ಅಧ್ಯಕ್ಷರು, ಬಂಗ್ಲಾದೇಶಕ್ಕೆ ಸಂಬಂಧಿಸಿದಂತೆ ಸರ್ವಾಧಿಕಾರಿ ಯಾಹ್ಯಾಖಾನ್ ಅವರಿಗೆ ಓಲೆಯೊಂದನ್ನು ಬರೆದರು. ಅದನ್ನು ಪೀಕಿಂಗ್, ಪಾಕಿಸ್ತಾನದ ಆಂತರಿಕ ವ್ಯವಹಾರದಲ್ಲಿ ರಷ್ಯ ಹಸ್ತಕ್ಷೇಪ ಮಾಡುತ್ತಿದೆ ಎಂದು ಟೀಕಿಸಿತು. ಅವರ ಪ್ರಕಾರ ಬಂಗ್ಲಾದೇಶದ ಜನತೆಯ ಬಗ್ಗೆ ಅನುಕಂಪ ತೋರಿಸುವವರೆಲ್ಲಾ ಪಾಕಿಸ್ತಾನದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವವರೆ ಹಾಗೂ ಪಾಕಿಸ್ತಾನದ ರಾಷ್ಟ್ರೀಯ ಐಕ್ಯಮತ್ಯ ಮತ್ತು ಭದ್ರತೆಯ ವಿನಾಶಕರೇ ಎಂದಂತಾಯಿತು.

ಬಂಗ್ಲಾದೇಶದ ಜನತೆ, ಕೆಂಪು ಚೀಣಾ ತಾತ್ವಿಕ ಕಾರಣಗಳಿಗಾದರೂ ತಮಗೆ ನೆರವು ನೀಡಬಹುದೆಂದು ನಂಬಿದ್ದರು. ಆದರೆ ಲಷ್ಕರಿಶಾಹಿ ಪಾಕಿಸ್ತಾನಕ್ಕೆ ಪೀಕಿಂಗ್ ಸಹಾನುಭೂತಿ ನೀಡಿತು. ಮತ್ತು ಬಂಗ್ಲಾದೇಶದ ಜನತೆಗೆ ಸಹಾನುಭೂತಿ ವ್ಯಕ್ತಪಡಿಸಿದ ರಾಷ್ಟ್ರಗಳನ್ನು ಟೀಕಿಸಿತು.

ವಿರೋಧಾಭಾಸ

ಇತರ ರಾಷ್ಟ್ರಗಳ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡುವುದೇ ಚೀಣ ಇತಿಹಾಸದ ವೈಶಿಷ್ಟ್ಯ. 'ಪಂಚಶೀಲ'ದ ತತ್ವಗಳಾದ ಸಹಬಾಳ್ವೆ ಮತ್ತು ಇತರ ದೇಶಗಳ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡದಿರುವುದು ಇವೇ ಮೊದಲಾದ ತತ್ವಗಳನ್ನು ಕೆಂಪು ಚೀಣಾ ಅಧ್ಯಕ್ಷ ಮಾವೋ ಆಜ್ಞೆ ಮೇರೆಗೆ ಶಿರಸಾವಹಿಸಿ ಪಾಲಿಸುತ್ತಿದೆ. ಆದರೆ 'ವಸಾಹತುಶಾಹಿ ಭಾರತ ಪೂರ್ವ ಬಂಗಾಳದಲ್ಲಿ ಯಾಕೆ ತಲೆ ಹಾಕುತ್ತಿದೆ? ಎಂದು ಪೀಪಲ್ಸ್ ಡೈಲಿ ವರದಿ ಮಾಡಿತು.

ಕೆಂಪು ಚೀಣಾ, ನಾಗಾ ಮತ್ತು ಮಿಜೋ ದಂಗೆಕೋರರಿಗೆ ಸಹಕಾರವು ನೀಡಿ ಭಾರತದ ಆಂತರಿಕ ವ್ಯವಹಾರದಲ್ಲಿ ಕೈಹಾಕಲಿಲ್ಲವೆ? ಬಯಾಫ್ರ, ಉತ್ತರ ಐರ್ಲೆಂಡ್, ಜೆಕೊಸ್ಲೊವಾಕಿಯ ಮತ್ತು ಪೋಲೆಂಡ್, ಈ ದೇಶಗಳ ಬಗ್ಗೆ ಕೆಂಪು ಚೀಣಾ ನಡೆದುಕೊಂಡ ರೀತಿ ಅದು ಇತರ ರಾಷ್ಟ್ರಗಳ ಆಂತರಿಕ ವ್ಯವಹಾರದಲ್ಲಿ ಕೈಹಾಕಿದೆ ಎನ್ನುವುದಕ್ಕೆ ಒಂದು ನಿದರ್ಶನ.

ನೈಜೀರಿಯಾ ಫೆಡರೇಶನ್‌ಗೆ 1966ರಲ್ಲಿ ಅಮೇರಿಕಾ, ರಷ್ಯಾ ಮತ್ತು ಇಂಗ್ಲೆಂಡ್ ಸಹಾನುಭೂತಿ ವ್ಯಕ್ತಪಡಿಸಿ ಹೊರಡಿಸಿದ ಪ್ರಕಟಣೆಯನ್ನು ಕೆಂಪು ಚೀಣಾ ಖಂಡಿಸಿತು ಮುಂದುವರಿಯುತ್ತಾ ಉತ್ತರ ನೈಜೀರಿಯಾದ ವಸಾಹತುಶಾಹಿ ಆಂಗ್ಲ ಸಾಮಂತರಾದ ಹಾಸ ಮತ್ತು ಪುಲಾನಿ ವರ್ಗದ ಜನರು, ನೈಜೀರಿಯಾದ ಸರ್ಕಾರವನ್ನು ಅಧೀನದಲ್ಲಿ ಇಟ್ಟುಕೊಂಡಿದ್ದರು. ಈ ವಸಾಹತುಶಾಹಿ ಆಂಗ್ಲ ಸಾಮಂತರ ನಿರಂಕುಶ ಪ್ರಭುತ್ವದಿಂದ ರೊಚ್ಚಿಗೆದ್ದ ನೈಜೀರಿಯಾದ ಪೂರ್ವ ವಲಯದ ಜನರು 1967 ಮೇ 30ರಂದು ಬಯಾಫ್ರದ ಸ್ವಾತಂತ್ರ್ಯವನ್ನು ಘೋಷಿಸಿದರು ಎಂದು ಕೆಂಪು ಚೀಣಾ ಪ್ರಕಟಣೆಯೊಂದನ್ನು ಹೊರಡಿಸಿತು. ಆದರೂ ಬಂಗ್ಲಾದೇಶದ ಪ್ರಕರಣದಲ್ಲಿ ಕಡೆಗಣಿಸಿ ದಂಡಿನ ಆಡಳಿತಗಾರ ಯಾಹ್ಯಾಖಾನ್ ಅವರಿಗೆ ಬೆಂಬಲ ನೀಡಿದೆ. ಹಾಗೂ ಯಾಹ್ಯಾಖಾನ್ ಅವರನ್ನು ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ರಾಷ್ಟ್ರಗಳ ಜನ್ಮ ಶತ್ರು ಎಂದು ಪ್ರಶಂಸಿಸಿ ವರದಿ ಮಾಡಿದೆ.

ಭಾರತ, ಭೌಗೋಲಿಕ ಸಾಮೀಪ್ಯವನ್ನೆ ಕಾರಣವಾಗಿಟ್ಟುಕೊಂಡು, ಪಾಕಿಸ್ತಾನದ ಆಂತರಿಕ ವ್ಯವಹಾರದಲ್ಲಿ ತಲೆಹಾಕಿದೆ ಎಂದು ಪೀಪಲ್ಸ್ ಡೈಲಿ ವರದಿ ಮಾಡಿತು. ಆದರೆ ಇದೇ ಪೀಪಲ್ಸ್ ಡೈಲಿಯ ಇನ್ನೊಂದು ವರದಿ ಅಮೇರಿಕಾದ ಅಧ್ಯಕ್ಷ ನಿಕ್ಸನ್ ಅವರಿಗೆ ಲಾವೋಸ್‌ನ ವಿಷಯದಲ್ಲಿ ಎಚ್ಚರಿಕೆಯನ್ನೀಡುತ್ತಾ 'ಲಾವೋಸ್, ದಕ್ಷಿಣ ಅಮೇರಿಕ ಅಥವಾ ಯೂರೋಪಿನ ವಾಯುವ್ಯ ದಿಕ್ಕಿನಲ್ಲಿಲ್ಲ. ಲಾವೋಸ್ ಉತ್ತರ ಇಂಡೋಚೀನಾದಲ್ಲಿದೆ. ಚೀಣಾ ಮತ್ತು ಲಾವೋಸ್ ಹಲವಾರು ಬೆಟ್ಟಗುಡ್ಡಗಳಿಂದಲೂ ಝರಿ ಹೊಳೆಗಳಿಂದಲೂ ಹಾಗೂ ಸಾಮಾನ್ಯ ಗಡಿಗಳಿಂದಲೂ ಬಹಳ ಸಮೀಪವಾಗಿವೆ. ಅಮೇರಿಕಾ, ಲಾವೋಸ್, ರಾಜಕೀಯದಲ್ಲಿ ತಲೆಹಾಕಿದೆ. ಆದರೆ, ಕೆಂಪು ಚೀಣಾದ ಜನತೆ ತಟಸ್ಥರಾಗಿ ಉಳಿಯಲಾರರು." ಎಂದು ಪ್ರಕಟಣೆ ಒಂದನ್ನು ಹೊರಡಿಸಿತು. ತಾನು ಹಿಡಿದ ಮೊಲಕ್ಕೆ ಮೂರೇ ಕಾಲು ಎನ್ನುವ ಚೀಣಾದ ಕುತರ್ಕ ನಿಜವಾಗಿಯೂ ಒಂದು ವಿಚಿತ್ರ.

ಇದೇ ಭೌಗೋಳಿಕ ಸಾಮೀಪ್ಯ ಭಾರತಕ್ಕೂ ಅನ್ವಯಿಸುತ್ತದೆ ಎಂದು ಯಾಕೆ ಚೀಣಾ ಎಣಿಸುವುದಿಲ್ಲ? ಭಾರತದಂತೆ, ದಿನವೊಂದಕ್ಕೆ ಸಾವಿರಾರು ನಿರಾಶ್ರಿತರ ಸಮಸ್ಯೆಗಳನ್ನು ಕೆಂಪು ಚೀಣಾ ಎದುರಿಸಬೇಕಾಗಿಲ್ಲ. ಇತ್ತೀಚಿಗೆ ಚೌ-ಎನ್-ಲ್ಯಾಯ್ ಅವರು ಯಾಹ್ಯಾಖಾನ್ ಅವರಿಗೆ ಕಳುಹಿಸಿದ ಒಂದು ವಿಶೇಷ ಸಂದೇಶದಲ್ಲಿ ಬಂಗ್ಲಾದೇಶದ ಜನತೆಯ ವಿಮೋಚನಾ ಸಮರವನ್ನು ಒಂದು ಚಿಕ್ಕ ಗುಂಪಿನ ದಂಗೆ ಎಂದಿರುವುದು ಶೋಚನೀಯ. ಪೂರ್ವ ಪಾಕಿಸ್ತಾನದಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಷೇಕ್ ಮುಜಿಬುರ್ ರಹಮಾನ ಅವರ ಅವಾಮಿಲೀಗ್ ಬಹುಮತದಿಂದ ಚುನಾಯಿತವಾದದ್ದು ಮಾತ್ರವಲ್ಲದೆ ಪಾಕಿಸ್ತಾನದ ಸಂವಿಧಾನಸಭೆಯಲ್ಲೂ ಬಹುಮತ ಪಡೆದಿತ್ತು ಎನ್ನುವುದನ್ನು ಕೆಂಪು ಚೀಣಾಕ್ಕೆ ನೆನಪು ಮಾಡಿಕೊಡುವುದು ಅವಶ್ಯಕ. ಇದೇ ವಾರ್ತೆಯನ್ನು ಕೆಂಪು ಚೀನಾದ "ನ್ಯೂಚೈನಾ ನ್ಯೂಸ್ ಏಜನ್ಸಿ" ಡಿಸೆಂಬರ್ 21ರಂದು ಪ್ರಕಟಿಸಿತು. ಬಂಗ್ಲಾದೇಶದ ಜನಸಂಖ್ಯೆ ಏಳುವರೆ ಕೋಟಿ. ಆದರೆ ಪಶ್ಚಿಮ ಪಾಕಿಸ್ತಾನದ ಜನಸಂಖ್ಯೆ ಬರೀ 5.81 ಕೋಟಿ. ಆದರೂ ಹೆಚ್ಚು ಜನಸಂಖ್ಯೆಯುಳ್ಳ ಬಂಗ್ಲಾದೇಶದ ವಿಮೋಚನಾ ಸಮರ ಕೆಂಪು ಚೀಣಾಕ್ಕೆ ಒಂದು ಚಿಕ್ಕ ಗುಂಪಿನ ದಂಗೆ! ಚುನಾವಣೆ ಮತ್ತು ಪ್ರಜಾಪ್ರಭುತ್ವ ಚೀಣಾದ ಸರ್ವಾಧಿಕಾರಿ ನೀತಿಗೆ ತದ್ವಿರುದ್ಧ.

ಕೆಂಪು ಚೀಣಾದ ಪೀಪಲ್ಸ್ ಡೈಲಿಯ ವರದಿ ಬಂಗ್ಲಾ ಜನತೆಗೆ ಸಹಾನುಭೂತಿ ವ್ಯಕ್ತಪಡಿಸಲಿಲ್ಲ. ಆದರ ಬದಲು ಲಷ್ಕರಿಶಾಹಿ, ಕಮ್ಯುನಿಸ್ಟ್ ವಿರೋಧಿ ಒಪ್ಪಂದ ಕೂಟದ ಸದಸ್ಯ ರಾಷ್ಟ್ರವಾದ ಪಶ್ಚಿಮ ಪಾಕೀಸ್ತಾನವನ್ನು 'ಕ್ರಾಂತಿಕಾರಿ ಹಾಗೂ ವಸಾಹತು ಶಾಹಿ ವಿರೋಧಿ' ಎಂದು ಪ್ರಶಂಸಿತು.

ಕೆಂಪು ಚೀಣಾ ದೂರದ ಬಯಾಫ್ರದ ಪ್ರತ್ಯೇಕತೆಗೆ ಬೆಂಬಲವನ್ನು ವ್ಯಕ್ತಪಡಿಸಿತು; ಸೋಲೇಂಡಿನಲ್ಲಾದ ಗಲಭೆಯನ್ನು ಕ್ರಾಂತಿ' ಎಂದು ಬಣ್ಣಿಸಿತು; ಆದರೆ ನೆರೆಯ ಬಂಗ್ಲಾದ ಜನತೆಯ "ವಿಮೋಚನಾ ಹೋರಾಟಕ್ಕೆ" ಬೆನ್ನು ತಿರುಗಿಸಿತು

ಚೌಎನ್‌ಲಾಯ್ ಅವರು ಯಾಹ್ಯಾಖಾನ್ ಅವರಿಗೆ ಕಳುಹಿಸಿದ ಸಂದೇಶವನ್ನು ಪಾಕೀಸ್ತಾನ ಪ್ರಕಟಣೆ ಮಾಡಿದ್ದರೂ ಕೆಂಪು ಚೀಣಾ ಅದನ್ನು ಪ್ರಕಟಿಸಲಿಲ್ಲ. ಈಗಲಾದರೂ ತಾವೊಂದು ಅನೈತಿಕ ಹಾಗೂ ಪಾಶವೀಕೃತ್ಯಕ್ಕೆ ಸಹಕಾರ ನೀಡಿದ್ದೇವೆ ಎಂದು ಕೆಂಪು ಚೀಣಾಕ್ಕೆ ಮನದಟ್ಟಾಗಿದೆ ಎಂದು ಕಾಣುತ್ತದೆ.

—ಶ್ರೀ ಪಿ. ಪಿ. ರಾಮಚಂದ್ರನ್

(ಆಕಾಶವಾಣಿ ಸೌಜನ್ಯ)

ಕಾರ್ಕಳ ಮುನ್ಸಿಫ ಕೋರ್ಟಿನಲ್ಲಿ

I. A. 1 O.S. 1/1970

ಲೂವಿಸ ಕಡ್ರೋಸ— ಅರ್ಜಿದಾರ

ಶ್ರೀನಿವಾಸ ಶೆಟ್ಟಿ ವಗೈರೆ— ಎದ್ರಿರು

3. ಚಂದ್ರಾವತಿ-ಜಿನರಾಜ ಶೆಟ್ರ ಮಗಳು, ಕಾರ್ಕಳ ತಾಲ್ಲೂ ಪುತ್ತಿಗೆ ಗ್ರಾಮದ ಪಂಜೇಲ ಬಲ್ಲಾಳ ಮನೆಯಂಬಲ್ಲಿರುವವಳು—

3ನೇ ಎದ್ರಿಳಾದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ಮೇಲಿನ ದಾವೆಯಲ್ಲಿ ತಾ. 20-7-1970 ಲ್ಲು ಆದ ಪ್ರಿಲಿಮಿನರಿ ಡಿಕ್ರಿಗೆ ಅನುಸರಿಸಿ ಸ್ಥಿರಾಸ್ತಿ ಯೇಲಂ ಬಗ್ಗೆ ಫೈನಲ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರನು ದಾಕ್ಲು ಮಾಡಿದ ಸದ್ರಿ ಅರ್ಜಿಯು ತಾ. 11-6-1971ಕ್ಕೆ ನಿಮ್ಮ ಹಾಜ್ರಿ ಬಗ್ಗೆ ಇಡೋಣಾಗಿಯದೆ. ಆ ಕುರಿತು ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath

Advocate for Petitioner

Karkala, 20-5-1971.

ಕಿರಿಯರ ಹಿರಿಯ ಸಾಧನೆ!

ಜ್ಯೂನಿಯರ್ ಪಿಟ್, ಇಪ್ಪತ್ತನಾಲ್ಕನೆಯ ವಯಸ್ಸಿನಲ್ಲಿ ಇಂಗ್ಲೆಂಡದ ಪ್ರಧಾನ ಮಂತ್ರಿ ಆಗಿದ್ದನು.

o o o

ಜಾನ್ ಕೆನೆಡಿಯವರು ತಮ್ಮ 23ನೆಯ ವಯಸ್ಸಿನಲ್ಲಿ "ಇಂಗ್ಲೇಂಡ್ ಮಲಗಿತ್ತೇಕೆ?" ಎನ್ನುವ ಪುಸ್ತಕ ಬರೆದರು.

o o o

ಜೇನ್ ಆಸ್ಟಿನ್, ಅವಳಿಗೆ ಕೀರ್ತಿ ತಂದು ಕೊಟ್ಟ ಕಾದಂಬರಿ, ಪ್ರೈಡ್ ಎಂಡ್ ಪ್ರೆಜ್ಯುಡಿಸ್ ತನ್ನ 21ನೆಯ ವಯಸ್ಸಿನಲ್ಲಿ ಬರೆದಳು.

o o o

ಇಪ್ಪತ್ತನೆಯ ವಯಸ್ಸಿನಲ್ಲಿ ಲಾರ್ಡ್ ನೆಲ್ಸನ್ ಲೆಫ್ಟಿನೆಂಟ್ ಕಮಾಂಡರ್ ಆಗಿದ್ದನು.

o o o

ನಿಕ್ ಡ್ಯಾಮೊನ್- ಎಂಬಾತನು ತನ್ನ ಇಪ್ಪತ್ತನೆಯವಯಸ್ಸಿನಲ್ಲಾಗಲೇ ವಾರಕ್ಕೆ ೮೦,೦೦೦ ರೂ.ಗಳನ್ನು ಗಳಿಸುತ್ತಿದ್ದನು.

o o o

ಕಾರ್ಲ ವಿಟ್ಟೇ ತನ್ನ ೧೪ನೆಯ ವಯಸ್ಸಿನಲ್ಲಿಯೇ ಪಿ. ಎಚ್. ಡಿ. ಆಗಿದ್ದನು.

o o o

ಎರ್ವಿನ್ ಕ್ಯಾನಹಂ ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಯುದ್ಧರಂಗದ ಸುದ್ದಿಗಾರನಾಗಿದ್ದನು.

o o o

ಲಿಯೋನರ್ ಮೊಡೆಲ್ ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಬ್ರಿಟಿಷ್ ಕಡಲ್ಗಾಲುವೆಯನ್ನು ಈಜಿದನು.

o o o

ಅಲೆಗ್ಝಾಂಡರ್ ಪೋಪ್ ತನ್ನ ಹನ್ನೆರಡನೆಯ ವಯಸ್ಸಿನಲ್ಲಿಯೇ ವಿಮರ್ಶೆಯ ಮೇಲೆ ಪ್ರಬಂಧವೊಂದನ್ನು ಬರೆದನು.

o o o

ತನ್ನ ಹತ್ತನೆಯ ವಯಸ್ಸಿನಲ್ಲಿಯೇ ಜಾನ್‌ಸ್ಟುಅರ್ಟ್‌ಮಿಲ್ ಪ್ಲೇಟೋ ಹಾಗೂ ಡೆಮೊಸ್ಥೆನೀಸ್‌ರ ಕೃತಿಗಳನ್ನು ಓದಿದ್ದ.

—ಶ್ರೀ.

●●

ಬಸ್ರೂರು ಹಿಂದೂ ಶಾಲಾ ವರ್ಧಂತ್ಯುತ್ಸವ

ತಾ.8-5-71ರಂದು ಬಸ್ರೂರಿನ ಹಿಂದೂ ಶಾಲಾ ವಾರ್ಷಿಕೋತ್ಸವ ಹಾಗೂ ಚಂದಮ್ಮ ಹೆಗ್ಗಡ್ತಿ ಕಲಾಮಂಟಪದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಎಂ. ಮಧ್ವರಾಜರು ಮಾತನಾಡುತ್ತಾ, ಬಸ್ರೂರಿಗೆ ತಿರುಗಿ ಸುವರ್ಣ ದಿನಗಳು ಬರಲಿವೆಯೆಂದೂ ಹಿಂದೂ ಶಾಲೆಯ ಹಳೆ ವಿದ್ಯಾರ್ಥಿಗಳೆಲ್ಲ ಮಹಾನುಭಾವರುಗಳಾಗಿದ್ದು ಅವರೆಲ್ಲ ಪ್ರಯತ್ನಿಸಿದರೆ ಇದು ಸಾಧ್ಯ ಎಂದೂ ತಿಳಿಸಿದರು.

ವಜ್ರ ಮಹೋತ್ಸವದ ಸವಿ ನೆನಪಿಗಾಗಿ ನೂತನವಾಗಿ ನಿರ್ಮಿಸಲಾದ 'ಚಂದಮ್ಮ ಹೆಗ್ಗಡ್ತಿ ಕಲಾಮಂಟಪ'ವನ್ನು ದ.ಕ. ಜಿಲ್ಲಾಧಿಕಾರಿ ಶ್ರೀ ಟಿ.ಜಿ. ರಾಮಕೃಷ್ಣನ್‌ರವರು ಉದ್ಘಾಟಿಸಿದರು.

ಪ್ರಾರಂಭದಲ್ಲಿ ಶಾಲಾ ಕರೆಸ್ಪೋಂಡೆಂಟ್ ಶ್ರೀ ಬಿ.ವಿ.ಆರ್. ಹೆಗ್ಡೆಯವರು ಸ್ವಾಗತಿಸಿದರು. ವರದಿಯನ್ನು ಮುಖ್ಯೋಪಾಧ್ಯಾಯ ಶ್ರೀ ಎಸ್. ಎಸ್. ಶೆಟ್ಟರೂ ಹಿರಿಯ ಪ್ರಾಥಮಿಕ ಶಾಲೆಯ ವರದಿಯನ್ನು ಮುಖ್ಯೋಪಾಧ್ಯಾಯ ಶ್ರೀ ಕೆ. ಎಲ್. ಮಧ್ಯಸ್ಥರೂ ಓದಿದರು.

ಶ್ರೀಮತಿ ಮನೋರಮಾ ಮಧ್ವರಾಜ್ ಬಹುಮಾನ ವಿತರಣೆಗೈದರು. ಕೆನರಾ ಬ್ಯಾಂಕಿನ ಡೆಪ್ಯುಟಿ ಜ। ಮೆನೇಜರರಾದ ಶ್ರೀ ಬಿ.ವಿ. ಭಂಡಾರಿಯವರು ತನ್ನ ಮಾತೃ ಶಾಲೆಯ ಕುರಿತು ಸ್ವಸ್ತಿವಾಚನ ಗೈದರು. ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಬಸ್ರೂರನ್ನು ಪುನಃ ವೈಭಕ್ಕೆ ತರಲು ಹಳೆ ವಿದ್ಯಾರ್ಥಿಗಳಿಗೆ ಕರೆಯಿತ್ತರು. ಪಂಚಾಯತ್ ಅಧ್ಯಕ್ಷ ಶ್ರೀ ಬಿ. ಅಪ್ಪಣ್ಣ ಹೆಗ್ಗೆಯವರು ವಂದನಾರ್ಪಣೆ ಮಾಡಿದರು.

ಜೋಡಿ ಕೊಲೆಗಳು

(ಎರಡನೇ ಪುಟದಿಂದ)

ವುದಾದರೂ ಹೇಗೆಂಬುದು ಪೋಲಿಸರಿಗೆ ಹೊಳೆಯದಿರಲಿಲ್ಲ. ಅವರ ಹೇಳಿಕೆ ಅವರನ್ನು ಅಪಾಯದ ಅಂಚಿನಲ್ಲಿ ತಂದು ನಿಲ್ಲಿಸಿತು.

ಪೋಲಿಸರು ಕ್ಲಾರ್ಕರನ್ನು ಬಂಧಿಸಿದರು. ಅವರ ಮೇಲೆ ಪತ್ನಿಯ ಕೊಲೆಯ ಆರೋಪ ಹೊರಿಸಿದರು. ಅನಂತರ ಬಿರುಸಿನ ತನಿಖೆ ನಡೆಯಿತು. ಆಗ್ರಾ—ಕ್ಲಾರ್ಕ ಸಂಬಂಧಕ್ಕೂ, ಶ್ರೀಮತಿ ಕ್ಲಾರ್ಕರ ಕೊಲೆಗೂ ಸಂಬಂಧವಿರಬೇಕೆಂದು ಅವರು ತರ್ಕಿಸಿದರು. ಅದು ಬೆಳೆದು ಬಂದ ಸ್ಥಳಗಳಲ್ಲಿ—ಮೀರತ್, ದೆಹಲಿ, ಆಗ್ರಾ—ದಾಖಲೆಗಳನ್ನು ಹುಡುಕಲು ಶೋಧನಡೆಸಿದರು. ಸುಳಿವು ಹತ್ತಲಿಲ್ಲ. ಸಂದರ್ಭ ಸಾಕ್ಷ್ಯವೂ ಕೈಗತವಾಗಲಿಲ್ಲ.

ಅಷ್ಟರಲ್ಲಿ ಅನಿರೀಕ್ಷಿತ ಘಟನೆಯೊಂದು ಸಂಭವಿಸಿತು. ತನಿಖಾಧಿಕಾರಿಗಳು ಶ್ರೀಮತಿ ಫುಲ್ಲಂ ಮನೆಯ ಶೋಧಕ್ಕೆ ಹೊರಟರು. ಇದು ಅವರು ತಡವಾಗಿಯೇ ತೆಗೆದುಕೊಂಡ ತೀರ್ಮಾನ. ಝಡತಿಯ ಕಾಲದಲ್ಲಿ ಕೊಲೆಗೆ ಸಂಬಂಧಿಸಿದ ಕುರುಹುಗಳು ಅಲ್ಲಿ ಸಿಗಲಿಲ್ಲ. ಬಂದ ದಾರಿಗೆ ಸುಂಕವಿಲ್ಲವೆಂದು ಅವರು ಮನೆ ಬಿಡುವುದರಲ್ಲಿದ್ದರು. ಹೊರ ಬರುವ ಮೊದಲು ಶ್ರೀಮತಿ ಫುಲ್ಲಂ ಶಯ್ಯಾಗೃಹವನ್ನೊಮ್ಮೆ ಪ್ರವೇಶಿಸಿದರು. ಅವಳು ಮಲಗುವ ಹಾಸಿಗೆಯ ಮೇಲೆ ಕೈಯಾಡಿಸಿದರು. ಹಾಸಿಗೆಯ ಕೆಳಗೆ ಪುಟ್ಟ ಪೆಟ್ಟಿಗೆ ಇರುವಂತೆ ಕಂಡುಬಂತು. ಅದನ್ನೆತ್ತಿ ನೋಡಿದರೆ, ಅಲ್ಲೊಂದು ನಿಧಿಯೇ ಅವರಿಗಾಗಿ ಕಾದಿತ್ತು. ಅದೊಂದು ಪತ್ರಗಳನ್ನಿಡುವ ಪುಟ್ಟ ಪೆಟ್ಟಿಗೆ–ಅದನ್ನು ಬಿಚ್ಚಿದಾಗ ಪ್ರಣಯ ಪತ್ರಗಳ ಒಂದು ಪಿಂಡಿಯೇ ಕೈಗೆ ಸಿಕ್ಕಿತು. ನಾನ್ನೂರಕ್ಕೂ ಹೆಚ್ಚು ಪತ್ರಗಳು ಅದರಲ್ಲಿದ್ದುವು. ಅದು ಕ್ಲಾರ್ಕರಿಗೆ ಆಕೆ ಬರೆದಿದ್ದ ಪತ್ರಗಳು; ಕ್ಲಾರ್ಕರು ಮೀರತ್ ಬಿಟ್ಟಾಗಿನಿಂದ, ಆಕೆ ಆಗ್ರಾದಲ್ಲಿ ಅವನನ್ನು ಕೂಡಿಕೊಳ್ಳುವ ಕಾಲದವರೆಗೂ ಆ ಕಾಗದಗಳು ಚಾಚಿದ್ದುವು. ಪೋಲೀಸರಿಗೆ ಅವುಗಳನ್ನೋದಲು ಕಾಲ ಹಿಡಿಯಿತು. ಅಮೂಲಾಗ್ರ ಅಭ್ಯಸಿಸಿ ಅವರು, ಶ್ರೀಮತಿ ಫುಲ್ಲಂರನ್ನೂ ಬಂಧಿಸಿದರು. ಅವಳ ಮೇಲೂ ಕೊಲೆಯ ಆರೋಪಹೊರಿಸಿ ನ್ಯಾಯಸ್ಥಾನದ ಮುಂದು ನಿಲ್ಲಿಸಿದರು.

ಅವರಿಬ್ಬರ ವಿಚಾರಣೆ ಆಗಿನ ನಿಯಮದಂತೆ ಅಲಹಾಬಾದ್ ಹೈಕೋರ್ಟಿನಲ್ಲಿ ಜ್ಯೂರಿಗಳ ಸಮಕ್ಷಮ ನಡೆಯಿತು. ಶ್ರೀಮತಿ ಕ್ಲಾರ್ಕ, ಶ್ರೀ ಎಡ್ವರ್ಡ ಫುಲ್ಲಂರ ಕೊಲೆಯ ಆರೋಪ ಅವರಿಬ್ಬರ ಮೇಲೂ ಮಾಡಲಾಗಿತ್ತು.

ತನ್ನ ಕತ್ತಿಗೆ ಬಿಗಿದ ಉರುಳು ಬಿಗಿಯಾಗುತ್ತಿರುವುದನ್ನು ಗಮನಿಸಿ, ಬದುಕುವಾಸೆಯಿಂದ, ಮಾಡಿದ ಅಪರಾಧವನ್ನು ಒಪ್ಪಿಕೊಂಡು, ತನ್ನನ್ನು ಮಾಫಿ ಸಾಕ್ಷಿಯಾಗಿ ಸ್ವೀಕರಿಸಲು ಶಿಫಾರಸು ಮಾಡಬೇಕೆಂದು ಅಲಹಾಬಾದಿನ ಮ್ಯಾಜಿಸ್ಟ್ರೇಟರಿಗೆ ಮನವಿ ಮಾಡಿಕೊಂಡಳು.

ಕೇಸಿನ ರುಜುವಾತಿಗೆ ಅವಳ ನೆರವು ಸರಕಾರಕ್ಕೆ ಬೇಕಾಗಿರಲಿಲ್ಲ. ಅವಳು ಬರೆದ ನಾನೂರು ಪತ್ರಗಳು ಸಾಕ್ಷಿ ನುಡಿಯಲು ಎದ್ದು ಬಂದಿರುವಾಗ ಪೋಲಿಸರಿಗೆ ಅವಳ ಸಾಕ್ಷ್ಯ ಅನಗತ್ಯವಿತ್ತು.

ಅವಳ ಅರ್ಜಿ ತಿರಸ್ಕೃತವಾಯಿತು.

ಎಡ್ವರ್ಡ್ ಫುಲ್ಲಂ ಕೊಲೆಯ ವಿಚಾರಣೆ 27-7-1913ರಲ್ಲಿ ಜ್ಯೂರಿಗಳ ಸಮ್ಮುಖದಲ್ಲಿ ಪ್ರಾರಂಭವಾಯಿತು. ಆರೋಪಿಗಳ ಪರ ಸುಪ್ರಸಿದ್ಧ ಕ್ರಿಮಿನಲ್ ಲಾಯರ್ ರೋಸ್ ಅಲ್‌ಸ್ಟನ್ ಹಾಜರಾದರು.

ಶ್ರೀಮತಿ ಫುಲ್ಲಂ ಕ್ಲಾರ್ಕರಿಗೆ 'ಶ್ರೀಮತಿ ಕ್ಲಾರ್ಕಸನ್' ಎಂಬ ಹೆಸರಿನಲ್ಲಿ ಬರೆದ ಪತ್ರಗಳು ಒಂದೊಂದಾಗಿ ಕೋರ್ಟಿನ ಮುಂದು ಬಂದವು. ಆ ಕಾಗದಗಳು ಪದರು ಪದರಾಗಿ ಎಡ್ವರ್ಡರ ಕೊಲೆಯ ವಿವರಗಳನ್ನು ತಿಳಿಸಿದುವು. ದೆಹಲಿಯಲ್ಲಿದ್ದ ಕ್ಲಾರ್ಕರಿಗೆ ಆಕೆ ದಿನವೂ ಕಾಗದ ಬರೆಯುತ್ತಿದ್ದಳು. ದೆಹಲಿಯಿಂದ ಆಗ್ರಾಕ್ಕೆ ವರ್ಗವಾಗಿ ಹೋದನಂತರವೂ ಅವರೊಳಗಿನ ಕಾಗದಗಳ ಓಡಾಟ ತಪ್ಪದೆ ನಡೆಯುತ್ತಿತ್ತು. ಶನಿವಾರ–ಭಾನುವಾರಗಳು ರಜಾ ದಿನಗಳು. ಆ ದಿನಗಳಲ್ಲಿ ಎಡ್ವರ್ಡರು ಮನೆಯಲ್ಲಿರುತ್ತಿದ್ದರು. ಅದ್ದರಿಂದ ಆ ಎರಡು ದಿನ, ಅವರ ಪ್ರಣಯ ಪತ್ರಗಳಿಗೆ ವಿರಾಮದ ದಿನ. ಆಕೆಯೇ ಅಂಚೆಯ ಕಚೇರಿಗೆ ಹೋಗಿ ಬಂದು ಮಾಡುತ್ತಿದ್ದಳು. ಕ್ಲಾರ್ಕರಿಂದ ಬಂದ ಪ್ರತಿಯೊಂದು ಕಾಗದವನ್ನೂ ಅವಳೇ ಸ್ವೀಕರಿಸುತ್ತಿದ್ದಳು. ತಾನು ಬರೆದುದನ್ನು ತಾನೇ ಒಯ್ದು ಅಂಚೆಗೆ ಹಾಕುತ್ತಿದ್ದಳು.

ಆಗ್ರಾದಲ್ಲಿರಲಿ, ದೆಹಲಿಯಲ್ಲಿರಲಿ, ಕ್ಲಾರ್ಕರು ಪ್ರತಿ ಬ್ರಹಸ್ಪತಿ ವಾರ ಮೀರತ್ತಿನಲ್ಲಿ ಹಾಜರು. ಹಾಗೆ ಬಂದವರು ಶ್ರೀಮತಿ ಫುಲ್ಲಂ ಜೊತೆ ಸಂಜೆಯ ತನಕ ಇದ್ದು ಹೋಗುತ್ತಿದ್ದರು.

ಆ ಓಲೆಗಳಲ್ಲಿ ಅವರೊಳಗಿದ್ದ ಒಲವು ಮಾತ್ರ ಹರಿದುಬಂದಿರಲಿಲ್ಲ. ಅದು ನಿರಾತಂಕವಾಗಿ ನಡೆಯಲು ನಡೆಸಿದ ಹೊಲೆಗೆಲಸಗಳೂ ಮೂಡಿದ್ದುವು. ಅಷ್ಟೇ ಅಲ್ಲ, ಕ್ಲಾರ್ಕರು ಬಿತ್ತಿದ ಬೀಜ ಅನುಕೂಲ ಹವೆಯಲ್ಲಿ ಮೊಳಕೆಯೊಡೆದುದೂ ಬಯಲಾಯಿತು.

ಕಾಗದ ಒಂದರಲ್ಲಿ ಹೀಗಿತ್ತು—

'ಪ್ರಿಯ ಹ್ಯಾರಿ, ನನ್ನ ಮುದ್ದಿನ ಮುದ್ದೆ, ನನ್ನ ಮನಸ್ಸಿನ ಆತಂಕ, ಈಗ ಬರಿಯ ಆತಂಕವಾಗಿ ಉಳಿಯಲಿಲ್ಲ. ಯಾವುದನ್ನು ನೆನಸಿ ನಾನು ಅಂಜಿಕೊಂಡೆನೋ ಅದೇ ಈಗ ತಳವೂರಿ ನಿಂತಿದೆ. ನಾನು ಪುನಃ ಬಯಸದ, ಬೇಡದ ಸುಳಿಯಲ್ಲಿ ಸಿಲುಕಿರುವೆ. ಕಳೆದೆರಡು ದಿನಗಳಿಂದ ನನ್ನ ದೇಹ ಸ್ಥಿತಿ ಚೆನ್ನಾಗಿಲ್ಲ. ಸಂಜೆಯ ಸಮಯ ಎಲ್ಲಿಲ್ಲದ ದೇಹಾಲಸ್ಯ ಕಾಣಿಸಿಕೊಳ್ಳುತ್ತದೆ. ನಿನ್ನೆ ಸಂಜೆ ಅದು ಸ್ಪಷ್ಟವಾಯಿತು. ನಾನು ಎರಡು ಬಾರಿ ವಾಂತಿ ಮಾಡಿದೆ. ಆಗ ಎಡ್ಡಿ ಮನೆಯಲ್ಲಿದ್ದರು. ನಾನು ವಾಂತಿ ಮಾಡಿದ್ದನ್ನು ಕಂಡು ಆತ ನಕ್ಕ. ನಗು ನಗುತ್ತಲೇ ಆತ 'ನೀನು ಬಸಿರಿ ಎಂಬುದು ಈಗ ಖಚಿತವಾಯಿತು' ಎಂದು ಉದ್ಗರಿಸಿದರು. ನನ್ನ ಪ್ರಿಯ ಬಚ್ಚು, ನಾನು ಪುನಃ ಗರ್ಭಿಣಿ. ಅದರಲ್ಲಿ ಅನುಮಾನವಿಲ್ಲ. ಅದನ್ನು ನೆನೆದು ನಾವು ಹಲ್ಲು ಕಡಿಯಬಹುದು. ಆದರೆ ಅನುಭವಿಸದೆ ಇರುವಂತಿಲ್ಲ. ಹೀಗಾಗಬಾರದೆಂದು ನಾವು ಹೆಣಗಿದೆವು. ದೈವದ ಮುಂದು ನಮ್ಮ ಪ್ರಯತ್ನ ಎಲ್ಲಿ ನಡೆಯುತ್ತದೆ.'

ಶ್ರೀಮತಿ ಫುಲ್ಲಂ ಸಹಾಯಕ್ಕೆ ಅವಳ ಪ್ರಿಯಕರ ಧಾವಿಸಿ ಬಂದ. ಆತ ವೃತ್ತಿಯಿಂದ ವೈದ್ಯ. ಅಪಘಾತಗಳನ್ನು ತಪ್ಪಿಸುವ ವಿದ್ಯೆ ಅವರಿಗೆ ಕರಗತವಾಗಿತ್ತು. ಅದು ಸಂಭವಿಸಿದಲ್ಲಿ ಪ್ರಥಮ ಚಿಕಿತ್ಸೆ ಕೊಡುವ ಕ್ರಮ ಅವರಿಗೆ ತಿಳಿದಿತ್ತು. ಶ್ರೀಮತಿ ಫುಲ್ಲಳ ಸಮಸ್ಯೆಯನ್ನು ಅವರು ಸುಲಭವಾಗಿ ಬಿಡಿಸಿದರು. ನಿಂತ ನೀರು, ಕ್ಲಾರ್ಕರು ಕುಡಿಸಿದ ಔಷಧಿಯೊಡನೆ ಬೆರೆತು – ಕಾಣಿಸಿಕೊಂಡಂತೆ ಕರಗಿಹೋಯಿತು–ಎಡ್ವರ್ಡರ ಆರೋಗ್ಯ ಸುಧಾರಣೆಗೆ ಶಕ್ತಿವರ್ಧಕ ಟಾನಿಕ್ ಅಗತ್ಯವೆಂದು ಅವರೀರ್ವರು ಮನಗಂಡರು. ಒಂದು ಗುರುವಾರ ಮಾಮೂಲಿನಂತೆ ಅವರು ಸೇರಿಕೊಂಡಾಗ, ಆ ಕುರಿತು ವಿಚಾರ–ವಿನಿಮಯ ನಡೆಯಿತು. ತಾನು ಸೂಚಿಸಿದ ಔಷಧಿಯನ್ನು ಹೇಗೆ, ಯಾವ ಪ್ರಮಾಣದಲ್ಲಿ ಕೊಡಬೇಕೆಂಬುದನ್ನು ತಿಳಿಹೇಳಲು ಮರೆಯಲಿಲ್ಲ. ವೈದ್ಯರ ಸಲಹೆಯಂತೆ ಆ ಔಷಧಿಯನ್ನು ಶ್ರೀಮತಿ ಫುಲ್ಲಂ ಪತಿಗೆ ಕೊಡುತ್ತಾ ಬಂದಳು. ಬೇನೆಯ ನಿವಾರಣೆಗೆ ಈ ಸತತ ಪ್ರಯತ್ನ ನಡೆಯಿತು. ಡಾಕ್ಟರ್ ಕ್ಲಾರ್ಕರು ಕೊಟ್ಟ ಮಿಶ್ರಣದ ಸೇವನೆಯಿಂದ ಎಡ್ವರ್ಡರ ದೇಹದಲ್ಲಾದ ಪ್ರತಿಕ್ರಿಯೆಯನ್ನು ಅವಳು ಇನ್ನೊಂದು ಕಾಗದದಲ್ಲಿ ಹೀಗೆ ವಿವರಿಸಿದ್ದಳು.

'ನಲ್ಮೆಯ ನಲ್ಲ,

ನಿನ್ನೆ ನೀನು ಹೇಳಿದ ಮಿಶ್ರಣ ಕೊಟ್ಟಿರುವೆ. ಆದರೆ ನಿರೀಕ್ಷಿಸಿದ ಪರಿಣಾಮ ಕಾಣಲಿಲ್ಲ. ನೀನು ಕೊಟ್ಟ ಔಷಧಿಗೆ ಕೆಲಸ ಮಾಡಲು ಶತಮಾನಗಳು ಬೇಕೇನೋ? ನನ್ನ ಮುದ್ದು ಮರಿ, ನೀನು ತುಂಬ ಜಾಣ. ಹೊಸತೊಂದನ್ನು ಹುಡುಕಿ ಹಿಡಿ. ಫಲಕ್ಕಾಗಿ ನಾನು ಶತಮಾನ ಕಾಯಲಾರೆ".

ಇನ್ನೊಂದು ಕಾಗದದ ಒಕ್ಕಣೆ ಹೀಗಿತ್ತು–

'ನೀನು ಇಲ್ಲಿದ್ದಾಗ ಕೊಟ್ಟ ಪುಡಿಯನ್ನು ಇಂದು ಕುಡಿಸಿದೆ. ಆದರೆ ಏನೂ ಪ್ರಯೋಜನ ಇಲ್ಲ. ಆ ಪುಡಿ ತೀರ ಸಪ್ಪೆ. ಶೀಘ್ರ ಪರಿಹಾರಕ್ಕೆ ಉಪಾಯ ಹುಡುಕು'

ಆಕೆಯ ಮುದ್ದುಮರಿ ಕ್ಲಾರ್ಕ ಕಾಗದದಿಂದ ಉತ್ತೇಜಿತರಾದರು. ಅವರಿಗೂ ಶತಮಾನ ಕಾಲ ಕಳೆಯುವುದು ಬೇಕಿರಲಿಲ್ಲ. ಪರಿಣಾಮಕಾರಿ ಔಷಧಿಯನ್ನು ಒಂದು ಗುರುವಾರ ಅವರು ಆಕೆಯ ಕೈಯಲ್ಲಿಟ್ಟರು–

ಅದರಿಂದ ಪುಲಕಿತಳಾದ ಶ್ರೀಮತಿ ಫುಲ್ಲಂ ಬರೆದ ಮರುದಿನದ ಪತ್ರ ಹೀಗಿತ್ತು–

"ನಿನ್ನೆ ನೀನು ಇಲ್ಲಿ ಕಳೆದ ಸಂಜೆ ನಿನಗೆ

ಹನ್ನೊಂದು

ಮನೆಯಿಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ
ಮನೆ-ಮದ್ದು
ಬೆಲೆ: ರೂ. 2-00

ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ
ಗೀತೆಯ ಕೈಗನ್ನಡಿ
ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy
ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.
ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

NAVAYUGA 27-5-1971

Registered with the Registrar of News Papers for India under No R. N. 3546/'57

REGD. No. B. G. 176
LICENCE No. 33
Licensed to Post without Prepayment

ಹಿಡಿಸಿತೇ? ಸಂಜೆಯ ಸ್ವಚ್ಛ ಹವೆಯಲ್ಲಿ ನಾವು ನಡೆಸಿದ ವಾಹನ ಸಂಚಾರ, ತಿಂಗಳ ಬೆಳಕಿನಲ್ಲಿ 'ಪ್ರಣಯಿಗಳ ಒಣಿ'ಯಲ್ಲಿ ವಿಹರಿಸಿದ ಕಾಲ ತುಂಬ ಹಿತವಾಗಿತ್ತು–ಜೊತೆಯಲ್ಲಿ ನಾವು ಕಳೆದ ಕಾಲ, ನಡೆಸಿದ ಸರಸ ಸಲ್ಲಾಪ, ನಿನ್ನಲ್ಲಿ ಹರ್ಷೋಲ್ಲಾಸ ತಂದಿರ ಬೇಕು. ನನಗೆ ಸ್ವರ್ಗ ಸಿಕ್ಕಿದ ಹಿಗ್ಗು. ಅಂತಹ ದಿನ ಬೇಗಬರಲಿ ಎಂದು ಬಯಸುವ, ಬಚ್ಚಿ'

ಎಡ್ವರ್ಡರನ್ನು ವಿಷ ಉಣಿಸಿ ಕೊಲ್ಲಲು ನಿರ್ಧರಿಸಿದ ಮುಹೂರ್ತದ ಹಂತದಲ್ಲಿ ಆಕೆ ಕ್ಲಾರ್ಕರನ್ನು ಹೀಗೆ ಪ್ರಶ್ನಿಸಿದಳು,

'ಪ್ರಿಯ ಹ್ಯಾರಿ, ಬಿಸಿಲಿನ ಝಳಕ್ಕೆ ಸಿಕ್ಕು ಬಿದ್ದು ಸತ್ತರೆ, ರೋಗಿಯ ಮುಖ ಕಪ್ಪಿಡುತ್ತದೆಯೋ? ವಿಕೃತಗೊಳ್ಳುತ್ತದೆಯೋ? ಕಂಪನ ಕಾಣಿಸಿಕೊಳ್ಳುತ್ತದೆಯೋ? ಆ ಸಾವಿನಲ್ಲಿ ನೋವು – ನರಳಾಟ ಇದೆಯೋ? ರೋಗಿಯ ಪ್ರಜ್ಞೆ ತಪ್ಪುತ್ತದೆಯೋ? ಮರು ಟಪ್ಪಾಲಿಗೆ ಬರೆಯಲು ಮರೆಯದಿರು'

ಅವುಗಳಿಗೆ ಕ್ಲಾರ್ಕರು ಬರೆದ ಉತ್ತರಗಳು ಬೆಳಕಿಗೆ ಬರಲಿಲ್ಲ. ಅವರು ಬರೆದ ಒಂದು ಪತ್ರವನ್ನೂ ಅವಳು ತನ್ನ ಬಳಿ ಇಟ್ಟುಕೊಳ್ಳಲಿಲ್ಲ. ಅವರಿಂದಾಗುವ ಅನರ್ಥವನ್ನು ಅವಳು ಮನಗಂಡಿದ್ದಳು. ಆದರೆ ಕ್ಲಾರ್ಕರಿಗೆ ತಾನು ಬರೆದ ಪತ್ರಗಳನ್ನು ತನ್ನ ಬಳಿ ಇಟ್ಟುಕೊಳ್ಳುವ ಹೊಣೆ ಹೊತ್ತಳೋ ಅದು ಊಹೆಗೂ ನಿಲುಕದ ಸಂಗತಿ ಈ ಕಾಗದಗಳ ಕಟ್ಟು ಕಂಡವರ ಕೈಸೇರಿದರೆ ತಮ್ಮಿಬ್ಬರಿಗೆ ಮರಣ ತಪ್ಪಿದಲ್ಲ ಎನ್ನುವುದನ್ನು ತಿಳಿಯದಷ್ಟು ಮೂರ್ಖೆ ಆಕೆ ಇರಲಿಲ್ಲ.

ಜುಲೈ 27ರಂದು ಶ್ರೀ ಎಡ್ವರ್ಡ ಬಿಸಿಲಿನ ತಾಪಕ್ಕೆ ಸಿಲುಕಿ ಹೇಗೆ ಬೇನೆ ಬಿದ್ದರೆನ್ನುವುದು ಆಕೆ ಜುಲೈ 25ರಂದು ಬರೆದ ಪತ್ರ ಚಿತ್ರಿಸಿತ್ತು.

'ನೀನು ಕೊಟ್ಟ ಔಷಧಿಯನ್ನು ಗುರುವಾರ ರಾತ್ರಿಯ ಆಹಾರದಲ್ಲಿ ಬೆರಸಿ ಕೊಡಲು ನಿರ್ಧರಿಸಿರುವೆ ಅಡಿಗೆಯವನಿಗೆ ವಿಶೇಷ ಅಡುಗೆ ತಯಾರಿಸಲು ಆದೇಶ ಕೊಟ್ಟಿರುವೆ. ನೀನು ಅಂದು ನನ್ನ ಜೊತೆ ಇರುವೆಯಷ್ಟೆ! ರುಚಿಯಲ್ಲಿನ ವ್ಯತ್ಯಾಸಕ್ಕೆ ನೀನೊಂದು ನೆಪ ತೆಗೆದು, ಸತ್ಯವನ್ನು ಮರೆಮಾಚು. ಅದರಿಂದ ಅನುಮಾನದ ನಿರಸನ ಆಗುತ್ತದೆ. ಬೆರಸಿರುವುದು ಮಾರಕ ದ್ರಾವಕ ಎನ್ನುವ ಗುಮಾನಿ ಎಡ್ಡಿಗೆ ಬರುವುದಿಲ್ಲ. ನೀನು ಹಿಂದೆ ವಾಸವಾಗಿದ್ದ ಮನೆಯ ಮುಂಭಾಗದಲ್ಲಿ ನಡೆಯುವ ಪಂದ್ಯಕ್ಕೆ ಹೋಗುವ ಕಾರ್ಯಕ್ರಮದಲ್ಲಿ ಬದಲಾವಣೆ ಇಲ್ಲವಷ್ಟೆ! ಇಲ್ಲಿ ಇನ್ನೂ ಮಳೆ ಆಗಿಲ್ಲ. ಬಿಸಿಲಿನ ತಾಪ ಹೆಚ್ಚಿದೆ. ತಾಳಲಾರದ ಸೆಖೆ. ಉಬ್ಬೆಗಿಟ್ಟಂತೆ ಆಗುತ್ತಿದೆ ಅವರ ಬಾಧೆಗೆ ಹೀಗಾಯಿತೆಂದು ಹೇಳಿದರೆ ನಂಬಲು ಇಂಬು ಇದೆ. ಅಲ್ಲವೇ ನನ್ನ ಮರಿ? ಈ ವ್ಯವಹಾರಕ್ಕೆ ಮಂಗಳ ಹಾಡಲು ಬೃಹಸ್ಪತಿವಾರ ಕೊನೆಯ ಮುಹೂರ್ತ. ಅದು ನಿನಗೆ ಸಮ್ಮತವಷ್ಟೆ?'

ಅದನ್ನು ಸೇವಿಸಿದ ಎಡ್ವರ್ಡರ ಸ್ಥಿತಿ ಏನಾಯಿತೆಂಬುದು ಹಿಂದೆ ತಿಳಿಸಿದೆ. ಅವರ ದೇಹಸ್ಥಿತಿ ಕೆಟ್ಟಿತು. ಕೆಲಸದಿಂದ ನಿವೃತ್ತಿಗೊಳಿಸಲಾಯಿತು. ಈ ಚಿಕಿತ್ಸೆಯನ್ನು ಅವರು ಆಗ್ರಾ ತಲುಪಿದಂದೇ ಪುನಃ ನೀಡಲಾಯಿತು. ಅದರ ಪರಿಣಾಮವಾಗಿ ಎಡ್ವರ್ಡ್ ಫುಲ್ಲಂ ತೀರಿಕೊಂಡರು ಅವರ ಸಾವು ಸುಖಮಯವಾಗಲು ಡಾಕ್ಟರ್ ಕ್ಲಾರ್ಕ ಸಹಕರಿಸಿದರು.

ಅವರ ಅವಸಾನ ಕಾಲದ ಚಿತ್ರವನ್ನು, ಫುಲ್ಲಂ ದಂಪತಿಗಳ ಪುಟ್ಟ ಮಗಳು ಕ್ಯಾಥಲೀನ್ ಕೋರ್ಟಿನಲ್ಲಿ ಹೀಗೆ ಚಿತ್ರಿಸಿದಳು.

ಸಾಕ್ಷ್ಯ ನುಡಿಯುವಾಗ ಅವಳ ಕಣ್ಣುಗಳಿಂದ ನೀರು ಧಾರೆ ಧಾರೆಯಾಗಿ ಹರಿಯುತ್ತಿತ್ತು. ಜ್ಯೂರಿಗಳು ಕೇಳಿದ್ದಕ್ಕೆ 'ನಮ್ಮ ತಂದೆ ನನ್ನನ್ನು ಕರೆದು, ಪ್ರಿಯ ಕ್ಯಾಥಲೀನ್ ನಾನು ಹೋಗುತ್ತೇನೆ. ನೀನು ಒಳ್ಳೆಯವಳಾಗಿ ಬಾಳು. ಹಾಗೆ ಬಾಳಿದರೆ ದೇವರು ಹರಸುತ್ತಾನೆ. ಲಿಯೋಗೆ ನನ್ನ ಪ್ರೀತಿಯನ್ನು ಮುಟ್ಟಿಸು. ಆತ ಇಲ್ಲದ್ದನ್ನು ಹಚ್ಚಿಕೊಳ್ಳುವುದು ಬೇಡ."

ಸ್ವಲ್ಪ ಬಿಟ್ಟು ಅವರು 'ಅಮ್ಮ ಎಲ್ಲಿ?' ಎಂದು ನನ್ನನ್ನು ಪ್ರಶ್ನಿಸಿದರು.

'ಊಟದ ಮನೆಯಲ್ಲಿದ್ದಾಳೆ. ಕರೆಯಲಾ?' ಎಂದು ಕೇಳಿದೆ.

'ಬೇಡ ಮರಿ. ತೊಂದರೆ ತೆಗೆದುಕೊಳ್ಳಬೇಡ. ನನಗೆ ಅವಳ ಅಗತ್ಯವಿಲ್ಲ' ಎಂದು ಉದ್ಗರಿಸಿದರು. ಅಷ್ಟರಲ್ಲಿ ಡಾಕ್ಟರ್ ಕ್ಲಾರ್ಕ ಕೋಣೆಯೊಳಕ್ಕೆಬಂದರು. ಚುಚ್ಚುಮದ್ದು ಕೊಟ್ಟರು. ಅದರಿಂದ ಅವರು ಅನುಭವಿಸುತ್ತಿದ್ದ ವೇದನೆ ನಿಂತಿತು.

ಆ ಚುಚ್ಚುಮದ್ದಿನಲ್ಲಿ ವಿಷ ಬೆರಸಿತ್ತೆಂದು ತಿಳಿಸುವ ಅಗತ್ಯವಿಲ್ಲ

ಅವರ ಹೇಳಿಕೆಯ ಕಾಲದಲ್ಲಿ ಪ್ರಣಯಿನಿಯ ಪ್ರಾಣ ಉಳಿಸಲು ಡಾಕ್ಟರ್ ಕ್ಲಾರ್ಕ್ ಸರ್ವ ಸಾಹಸ ಮಾಡಿದರು. ಎಡ್ವರ್ಡರ ಸಾವಿನ ಸಂಪೂರ್ಣ ಹೊಣೆಯನ್ನು ಹೊತ್ತುಕೊಂಡರು. ಶ್ರೀಮತಿ ಫುಲ್ಲಂಳ ಮೇಲೆ ಚಕಾರ ಶಬ್ದ ಎತ್ತಲಿಲ್ಲ. ಎಲ್ಲವನ್ನೂ ತನ್ನ ನಿರ್ದೇಶನದಂತೆ ಆಕೆ ನಡೆಸಿದಳು. ಅವಳ ಮೇಲೆ ನನಗಿದ್ದ ಪ್ರಭಾವಕ್ಕೆ ಬಲಿಯಾಗಿ ಅವಳು ಹಾಗೆ ಮಾಡಿದಳು. ಅವಳದು ತಪ್ಪಿಲ್ಲ. ಅಪರಾಧ ನನ್ನಿಂದ ನಡೆಯಿತು ಎಂದು ತಿಳಿಸಿದರು.

ಈ ಹೇಳಿಕೆಯ ನಂತರ ಅವರ ಲಾಯರಿಗೆ ವಾದಿಸಲು ಏನೂ ಉಳಿಯಲಿಲ್ಲ. ಅವರ ಬಾಯಿ ಕಟ್ಟಿತು. ಜ್ಯೂರಿಗಳ ಕೆಲಸ ಹಗುರಾಯಿತು. ತೀರ್ಮಾನಕ್ಕೆ ಬರಲು ಸಮಯ ಹಿಡಿಯಲಿಲ್ಲ. ಶ್ರೀಮತಿ ಫುಲ್ಲಂ—ಡಾಕ್ಟರ್ ಕ್ಲಾರ್ಕ ತಪ್ಪಿತಸ್ಥರು ಎಂದು ಅವರು ಅಭಿಪ್ರಾಯಕೊಟ್ಟರು.

ಇಬ್ಬರಿಗೂ ಮರಣದಂಡನೆ ವಿಧಿಸಲಾಯಿತು.

ಶ್ರೀಮತಿ ಕ್ಲಾರ್ಕರ ಕೊಲೆ ನಡೆಸಿದ ಆರೋಪದಲ್ಲಿಯೂ ಅವರಿಗೆ ಮರಣದಂಡನೆ ಶಿಕ್ಷೆ ವಿಧಿಸಲ್ಪಟ್ಟಿತು. ವಿಚಾರಣೆಯ ಕಾಲದಲ್ಲಿ ಇಷ್ಟು ವಿಷಯ ಹೊರಬಿತ್ತು –ಬುದ್ಧ, ಸಖ,ರಾಮಲಾಲ್, ಮೋಹನ ಎನ್ನುವವರನ್ನು ಕ್ಲಾರ್ಕ ಪತ್ನಿಯ ಕೊಲೆಗೆ ಹಣಕೊಟ್ಟು ನೇಮಿಸಿದ್ದರು. ಆ ಕೆಲಸಕ್ಕೆ 200–00 ರೂಪಾಯಿಗಳನ್ನು ಕೊಡಲು ಕ್ಲಾರ್ಕ ಒಪ್ಪಿಕೊಂಡಿದ್ದರು. ನಿಯೋಜಿತ ಕೆಲಸಕ್ಕೆ 100-00 ರೂ.ಗಳ ಮುಂಗಡ ಕೊಡಲಾಗಿತ್ತು. ಆ ಮುಂಗಡವನ್ನು ಶ್ರೀಮತಿ ಫುಲ್ಲಂ ಪಾವತಿ ಮಾಡಿದ್ದಳು. ಅವಳಿಟ್ಟ ದಾಖಲೆಗಳಿಂದ ಅದು ಸ್ಥಿರಪಟ್ಟಿತು. ಹಂತಕರಲ್ಲಿ ಒಬ್ಬನಾದ ಬುದ್ಧನಿಗ ಕ್ಷಮೆ ಕೊಡಿಸಿ, ಮಾಫಿ ಸಾಕಿಯಾಗಿ ತೆಗೆದುಕೊಳ್ಳಲಾಯಿತು. ಅತನ ಬಾಯಿಂದ ಎಲ್ಲ ವಿವರಗಳು ದೊರೆತವು. ನಿಸ್ಸಂದೇಹ ಸಾಕ್ಷಿ ಬರಲಿಲ್ಲವೆಂದು ರಾಮಲಾಲನಿಗೆ ಬಿಡುಗಡೆಯಾಯಿತು.

ಅನಂತರ ಡಾಕ್ಟರ್ ಕ್ಲಾರ್ಕರನ್ನು ಗಲ್ಲಿಗೇರಿಸಲಾಯಿತು – ಅವರೊಡನೆ ಸಖ, ಮೋಹನ ನೇಣುಗಂಬವನ್ನೇರಿದರು.

ಎರಡು ಬಾರಿ ಮರಣ ದಂಡನೆಗೆ ಗುರಿಯಾದ ಶ್ರೀಮತಿ ಫುಲ್ಲಂ, ಆ ಶಿಕ್ಷೆಯನ್ನು ಅನುಭವಿಸಲಿಲ್ಲ. ವಿಚಾರಣೆಯ ಕಾಲದಲ್ಲಿ ಅವಳು ಗರ್ಭಿಣಿಯಾಗಿದ್ದಳು. ಇನ್ನೂ ಹುಟ್ಟದಿರುವ ಹೊಟ್ಟೆಯಲ್ಲಿದ್ದ ಶಿಶುವಿನ ಭಾಗ್ಯ–ಅದು ವ್ಯಭಿಚಾರದಿಂದ ಜನಿಸಿದ್ದರೂ–ಕಾಯಿದೆಗೆ ಎಲ್ಲಿಲ್ಲದ ಗೌರವ.

ಬಸುರಿಯರನ್ನು ಮರಣ ದಂಡನೆಗೆ ಗುರಿಗೊಳಿಸುವಂತಿಲ್ಲ.

ವಿಚಾರಣೆಯ ಕಾಲದಲ್ಲಿ ಶ್ರೀಮತಿ ಫುಲ್ಲಂ ಹೊಟ್ಟೆಯಲ್ಲಿ ಬೆಳೆಯುತಿದ್ದ–ಅನಂತರ ಜನ್ಮವೆತ್ತ – ಮಗುವಿನ ವಿಚಾರದಲ್ಲಿ ಲೋಕ ಹೆಚ್ಚಿಗೆ ಕೇಳಲಿಲ್ಲ. ಆದರೆ ಒಂದು ಮಾತು ಸತ್ಯ. ಅದು ತಾಯಿಯ ಜೀವವನ್ನು ಉಳಿಸಿತು. ಅದಕ್ಕಾಗಿಯೋ ಅದು ಜನ್ಮ ತಳೆಯಿತು.

ಶ್ರೀಮತಿ ಫುಲ್ಲಂ ಬಹಳ ಕಾಲ ಬಂಧನದಲ್ಲಿಯೂ ಇರಲಿಲ್ಲ.

1914ರ ಮೇ ತಿಂಗಳಲ್ಲಿ ಆಕೆ ನೈನಿ ಸೆರೆಮನೆಯಲ್ಲಿ ಕೊನೆಯುಸಿರೆಳೆದಳು.

● ●

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ.ಕ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಬೇಕಾಗಿದ್ದಾರೆ

ಕನಿಷ್ಠ 8ನೇ ತರಗತಿ ವರೆಗೆ ಓದಿದ ಕೆಲವು ಉತ್ಸಾಹಿ ಹುಡುಗರನ್ನು ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 38

NAVAYUGA

3—6—1971

ಪಾಕಿಸ್ತಾನದ ಮೇಲೊಂದು — ಕ್ಷ ಕಿರಣ

ಅಪಮೌಲ್ಯದ ಅಪಖ್ಯಾತಿ

ಪಾಕಿಗೆ ಈಗ ಅಪಮೌಲ್ಯದ ಕಾಲ. ಬಂಗ್ಲಾದೇಶದಲ್ಲಿ ನರಮೇಧ ನಡೆಸಿ ರಾಜಕೀಯ ಅಪಮೌಲ್ಯವನ್ನು ಅನುಭವಿಸಿರುವ ಅದು, ರೂಪಾಯಿಯ ಅಪಮೌಲ್ಯಕ್ಕೆ ಸಜ್ಜಾಗುತ್ತಿದೆ. "ಬಂದದ್ದೆಲ್ಲ ಬರಲಿ ದಂಡಿನ ದಯೆಯೊಂದಿರಲಿ" ಎಂದು ಯಾಹ್ಯಾಖಾನರಿಗೆ ದಂಡಿನದೇ ಚಿಂತೆ. ಅದನ್ನು ಬಲಪಡಿಸಲು ಯುರೋಪ್, ಪಶ್ಚಿಮಏಷ್ಯಾ ಹಾಗೂ ಲ್ಯಾಟಿನ್ ಅಮೇರಿಕದ ರಾಷ್ಟ್ರಗಳಿಂದ ಶಸ್ತ್ರಾಸ್ತ್ರಗಳನ್ನು ಕೂಡಿಹಾಕುವ ಪ್ರಯಾಸ. ಅವರ ಕದನ ಕುತೂಹಲದಿಂದ ಪಾಕ್ ಅರ್ಥವ್ಯವಸ್ಥೆ ಕುಸಿದಿದೆ. ಬಂಗ್ಲಾದೇಶದ ನಿಷ್ಪಾಪ ಜೀವಿಗಳ ಮೇಲೆ ನಡೆಸಿದ ಅಮಾನುಷ ದಬ್ಬಾಳಿಕೆ ಪಾಕಿಸ್ತಾನಕ್ಕೆ ಅಪಕೀರ್ತಿಯನ್ನು ತಂದಿದೆ. ಅದರ ಅರ್ಥವ್ಯವಸ್ಥೆಗೆ ಈ ಆಕ್ರಮಣ ಒಂದು ಹೊರಲಾಗದ ಹೊರೆಯಾಗಿದೆ.

ಅಂತಾರಾಷ್ಟ್ರೀಯ ಪೇಟೆಗಳಲ್ಲಿ ಪಾಕಿಸ್ತಾನಿನ ರೂಪಾಯಿಯ ಮೌಲ್ಯ ಗಣನೀಯವಾಗಿ ಇಳಿದಿದೆ ಎಂದು ಪಾಕಿಸ್ತಾನದ ಪತ್ರಿಕಾ ವರದಿಗಳಿಂದ ಗೊತ್ತಾಗಿದೆ. ವಿದೇಶ ವಿನಿಮಯ ದರದ ರೀತ್ಯ ಒಂದು ಅಮೇರಿಕನ್ ಡಾಲರಿಗೆ ಪಾಕಿಸ್ತಾನ್ 4.76 ರೂಪಾಯಿ ಕೊಡಬೇಕು. ಇದು ಅಧಿಕೃತ ವಿನಿಮಯ ದರ ಆದರೆ ವಾಸ್ತವವಾಗಿ ಈಗ 11ರಿಂದ 14 ರೂಪಾಯಿಗಳನ್ನು ಅದು ಕೊಡುತ್ತದೆ. ಯಾವುದೇ ಕ್ಷಣದಲ್ಲೇ ಆಗಲಿ ಪಾಕಿಸ್ತಾನಿ ರೂಪಾಯಿಯ ಅಪಮೌಲ್ಯವಾಗಲಿದೆ ಎಂದು ಪಾಕ್ ಪತ್ರಿಕೆಗಳು ಬರೆದಿವೆ.

ಇದು ಪಾಕಿಸ್ತಾನದ ಪತ್ರಿಕೆಗಳ ಮಾತಾಯಿತು. ಇನ್ನು ಅಮೇರಿಕಾದ "ನ್ಯೂಸ್‌ವೀಕ್' ಪತ್ರಿಕೆ ಪಾಕಿಸ್ತಾನದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಏನು ಹೇಳಿದೆ ಎಂಬುದನ್ನು ನೋಡೋಣ. 'ಪಾಕ್ ರೂಪಾಯಿಯ ಬೆಲೆ ಬಹಳಷ್ಟು ಕಡಿಮೆಯಾಗಿದೆ. ಫೆಬ್ರುವರಿ ತಿಂಗಳಲ್ಲಿ ವಿನಿಮಯ ದರ, ಒಂದು ಡಾಲರಿಗೆ ಪಾಕಿಸ್ಥಾನ್ 9.10 ರೂಪಾಯಿ ಕೊಡುತ್ತಿತ್ತು ಎಪ್ರಿಲ್ ತಿಂಗಳ ಆದಿ ಭಾಗದಲ್ಲಿ 11.20 ರೂಪಾಯಿಗಳನ್ನು ಕೊಟ್ಟಿದೆ.'

ಕರಾಚಿಯ ಜಂಗ್ ಪತ್ರಿಕೆ ಪಾಕ್ ರೂಪಾಯಿಯ ಅಪಮೌಲ್ಯದ ಬಗ್ಗೆ ಬರೆಯುತ್ತಾ 'ಬೇರೂತಿನ ಅಂತಾರಾಷ್ಟ್ರೀಯ ಪೇಟೆಯಲ್ಲಿ ಪಾಕ್ ರೂಪಾಯಿಯ ಮುಖ ಬೆಲೆ ಶೇಕಡ 35ರಷ್ಟು ಕಡಿಮೆಯಾಗಿದೆ. ಸೌದಿ ಅರೇಬಿಯಾದಲ್ಲಿ ಅದು ಇನ್ನೂ ಕಡಿಮೆ ಎಂದು ಬರೆದಿದೆ. ಲಾಹೋರಿನ 'ನವಾ-ಇ-ವಕ್ತ್' ಈ ಪತ್ರಿಕೆಯ ಜೆದ್ದಾದಲ್ಲಿರುವ ವರದಿಗಾರರ ಪ್ರಕಾರ ಸೌದಿ ರಾಯಲ್ ದರದಲ್ಲಿ ಪಾಕ್ ರೂಪಾಯಿಯ ಮುಖ ಬೆಲೆ ಅಧಿಕೃತ ದರಕ್ಕಿಂತ ಶೇಕಡ 30ರಷ್ಟು ಇಳಿದಿದೆ. ವಿದೇಶಿ ವಿನಿಮಯ ಸಂಪಾದನೆ ಸಂಪೂರ್ಣವಾಗಿ ನಿಂತು ಹೋಗಿರುವುದರಿಂದ ಇಸ್ಲಾಮಾಬಾದ್ ಅಸಾಮಾನ್ಯ ತೊಂದರೆಗಳನ್ನು ಅನುಭವಿಸುತ್ತಿದೆ. ಅದರ ಫಲವಾಗಿ ರೂಪಾಯಿಯ ಮೌಲ್ಯದಲ್ಲಿ ಖೋತಾ ಆಗಿದೆ.

ಪರಾವಲಂಬನ ಪ್ರಾರಂಭ

ಹೊರದೇಶಗಳಿಂದ ಶಸ್ತ್ರಾಸ್ತ್ರ ತರಲು ಅದು ಹಣವನ್ನು ಸುರಿಯಬೇಕಾಗಿದೆ. ಬಂಗ್ಲಾದೇಶವನ್ನು ಎದುರು ಹಾಕಿಕೊಂಡಿರುವುದರಿಂದ ಪಾಕಿಸ್ತಾನಕ್ಕೆ ಪರಾವಲಂಬನದ ದಿನಗಳು ಪ್ರಾರಂಭವಾಗಿವೆ. ಪಶ್ಚಿಮ ಪಾಕಿಸ್ತಾನ, ದಿನನಿತ್ಯ ಬೇಕಾಗುವ ಟೀ, ಉಪ್ಪು, ಸೆಣಬು, ಇತ್ಯಾದಿ ವಸ್ತುಗಳನ್ನು ಈಗ ಪರದೇಶಗಳಿಂದ ತರಿಸಿಕೊಳ್ಳಬೇಕಾಗಿದೆ. ವಿದೇಶಿ ನೆರವು ಬರುತ್ತಿಲ್ಲವಾದ್ದರಿಂದ ಪರಿಸ್ಥಿತಿ ಉಲ್ಬಣಿಸಿದೆ.

ಬಂಗ್ಲಾದೇಶದ ಸೈನಿಕ ಕಾರ್ಯಾಚರಣೆಗಾಗಿ ಪಾಕಿಸ್ತಾನದ ಮಿಲಿಟರಿ ಪ್ರಭುಗಳು ದಿನಕ್ಕೆ ಒಂದು ಕೋಟಿ ರೂಪಾಯಿ ವೆಚ್ಚ ಮಾಡುತ್ತಿದ್ದಾರೆ. ಲಂಡನ್ನಿನಲ್ಲಿರುವ ಮಹತ್ವದ ವಿಷಯಗಳ ಅಧ್ಯಯನ ಸಂಸ್ಥೆಯ ತಜ್ಞರು ನೀಡಿರುವ ಈ ಅಂಕಿ ಅಂಶಗಳು ಪಾಕಿಸ್ತಾನದ ಆರ್ಥಿಕ ನೀತಿಗೆ ಕನ್ನಡಿ ಹಿಡಿದಿವೆ. ಮಧ್ಯಮ ಪ್ರಮಾಣದ ಯುದ್ಧದಲ್ಲಿ ಪ್ರತಿಯೊಬ್ಬ ಸೈನಿಕನಿಗೆ ತಲಾ 75ರೂ ವೆಚ್ಚ ತಗಲುತ್ತದೆ ಎಂಬ ಆಧಾರದ ಮೇಲೆ ಈ ಅಂದಾಜು ಮಾಡಲಾಗಿದೆ. ಪೂರ್ವ ಬಂಗಾಳಿನಲ್ಲಿ 80 ಸಾವಿರ ಪಾಕ್ ಸೈನಿಕರಿದ್ದಾರೆ ಎಂದು ಲೆಕ್ಕಹಾಕಿದರೆ ಈ ಅಂದಾಜು ಕೊನೆಯ ಪಕ್ಷ 60 ಲಕ್ಷ ರೂಪಾಯಿಗಳಷ್ಟಾಗುತ್ತದೆ ಎಂದು ಈ ತಜ್ಞರ ಅಭಿಪ್ರಾಯ.

ವಿಮಾನ ಸಾರಿಗೆ ಹಾಗೂ ಬಾಂಬು ದಾಳಿಗಳಿಗಾಗಿ ಪಾಕ್ ಆಡಳಿತಗಾರರು ಇನ್ನೂ ಹೆಚ್ಚಿನ ವೆಚ್ಚ ಮಾಡುತ್ತಿದ್ದಾರೆ. ಒಂದು ಕೈಬಾಂಬನ್ನು ತಯಾರಿಸಲು 95 ರೂ. ವೆಚ್ಚ ತಗಲುತ್ತದೆ. ಹೀಗಿರುವಾಗ ಆಯುಧಗಳು ಮದ್ದು ಗುಂಡುಗಳು ಇತ್ಯಾದಿಗಳ ತಯಾರಿಕೆಗೆ ಪಾಕಿಸ್ತಾನ ಎಷ್ಟು ವೆಚ್ಚ ಮಾಡುತ್ತಿದೆ ಎಂಬುದನ್ನು ಯಾರು ಬೇಕಾದರೂ ಊಹಿಸಬೇಕಾದ ಸಂಗತಿಯಾಗಿದೆ.

ಸೈನ್ಯ ಸಾರಿಗೆಯು ಪಾಕಿಸ್ತಾನಕ್ಕೆ ಅಷ್ಟೇ ದುಬಾರಿಯಾಗಿದೆ. ಈಗ ಪಾಕಿಸ್ತಾನದ ವಿಮಾನಗಳು ಭಾರತದ ದಕ್ಷಿಣಾಪಥವನ್ನು ಪ್ರದಕ್ಷಿಣೆ ಹಾಕಿ ಪೂರ್ವ ಬಂಗಾಳಿಗೆ ಸೈನಿಕರನ್ನು ಸಾಗಿಸ ಬೇಕಾದರೆ ಒಬ್ಬ ಸೈನಿಕನಿಗೆ ತಲಾ 900 ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಇಂಧನ ಪಡೆಯಲು ಬಾಂಕಾಕಿಗೆ ಹೋಗಿಬರುವುದಾದರೆ ಇದರ ಮೇಲೆ ಮತ್ತೆ 30 ರೂಪಾಯಿ ಖರ್ಚುಮಾಡಬೇಕು.

ಭಾರತ ತನ್ನ ವಾಯು ಪ್ರದೇಶದಲ್ಲಿ ಪಾಕ್ ವಿಮಾನಗಳ ಹಾರಾಟವನ್ನು ಪ್ರತಿಬಂಧಿಸಿದ ಬಳಿಕ ಪಾಕ್ ಇಂಟರ್‌ನ್ಯಾಷನಲ್ ಸಂಸ್ಥೆಯವರು ತಮ್ಮ ವಿಮಾನ ಸಾರಿಗೆಯಲ್ಲಿ ಆಗಬಹುದಾದ ನಷ್ಟವನ್ನು ಅಂದಾಜು ಮಾಡಿದರು. ಈ ಅಂದಾಜಿನ ಆಧಾರದ ಮೇಲೆಯೆ ಈ ವೆಚ್ಚದ ವಿವರಗಳನ್ನು ರೂಪಿಸಲಾಗಿದೆ. ದುಬಾರಿಯಾದ ಸಾರಿಗೆ ವೆಚ್ಚದ ಜೊತೆಗೆ ಪಾಕಿಸ್ತಾನ್ ಪೂರ್ವ ಬಂಗಾಳದಲ್ಲಿ ಸಂಪರ್ಕ ಮಾಧ್ಯಮಗಳನ್ನು ಸುಸ್ಥಿತಿಯಲ್ಲಿ ಇಡಲೂ, ಪ್ರಚಾರ ಸಮರದ ಬಿಸಿಯನ್ನು ಕಾದುಕೊಳ್ಳಲೂ ಅಗಣಿತ ಹಣವನ್ನು ವೆಚ್ಚ ಮಾಡುತ್ತಿವೆ.

ಪಾಕ್ ಪ್ರಜೆಗಳ ಅಣಕ

ಪಾಕಿಸ್ತಾನದಲ್ಲಿ ಇನ್ನೊಂದು ತೊಂದರೆಗಳಿವೆ. ಜನರು ಅದರ ಕಡೆಗೆ ಗಮನ ಕೊಡದಂತೆ ಮಾಡಲು ಪಾಕ್ ಮಿಲಿಟರಿ ಆಡಳಿತಗಾರರು ಎಲ್ಲಾ ರೀತಿಯಿಂದಲೂ ಯುದ್ಧದ ವಾತಾವರಣವನ್ನು ಸೃಷ್ಟಿಸಿದ್ದಾರೆ. ಲಾಹೋರ್ ಮತ್ತು ಪಶ್ಚಿಮ ಪಾಕಿಸ್ತಾನದ ಅನೇಕ ನಗರಗಳಲ್ಲಿ ದಾಳಿಯ ಮುನ್ನೆಚ್ಚರಿಕೆ ಕ್ರಮಗಳಾದ 'ಬ್ಲಾಕ್ ಔಟ್' ಇತ್ಯಾದಿಗಳನ್ನು ಬಿರುಸಿನಿಂದ ಅನುಸರಿಸಲಾಗುತ್ತಿದೆ. ಇನ್ನೇನು ದೆಹಲಿಯಿಂದ ಇಷ್ಟರಲ್ಲಿ ದಾಳಿ ಆಗಲಿದ್ದೆ ಎಂದು ಪಾಕಿಸ್ತಾನದ ಪ್ರಜೆಗಳಲ್ಲಿ ಭೀತಿಯನ್ನು ಉಂಟುಮಾಡುವುದೇ ಈ ಕ್ರಮಗಳ ಉದ್ದೇಶವಾಗಿದೆ. ಪಾಕಿಸ್ತಾನದ ಪ್ರಜೆಗಳು ಇದನ್ನು ಬಲ್ಲರು. ಮಿಲಿಟರಿ ಆಡಳಿತಗಾರರು ಕೈಗೊಂಡಿರುವ ಸಮರ ಕಾಲದ ಚಟುವಟಿಕೆಗಳ ಬಗ್ಗೆ ಅವರು ಗಂಭೀರವಾಗಿ ಆಲೋಚಿಸುತ್ತಿಲ್ಲ. ಈ ಚಟುವಟಿಕೆಗಳನ್ನು ಅಣಕು ಚಟುವಟಿಕೆಗಳೆಂದು ಅವರು ತಿಳಿದುಕೊಂಡಿದ್ದಾಗಿ ನವಾಯಿ ವಕತ್ ಪತ್ರಿಕೆ ಖೇದವನ್ನು ವ್ಯಕ್ತಪಡಿಸಿದೆ. ಪಾಕ್ ಪ್ರಜೆಗಳು ಯುದ್ಧದ ಪರಿಸ್ಥಿತಿಯ ಬಗ್ಗೆ ಲಘುವಾದ ಮನೋಭಾವವನ್ನು ತಳೆಯಬಾರದೆಂದು ಹೇಳಿದೆ. ಇದು ಪಾಕಿಸ್ತಾನದ ಜನತೆ ಪೂರ್ವ ಬಂಗಾಳದಲ್ಲಿ ದಂಡಿನ ಆಡಳಿತಗಾರರು ನಡೆಸಿರುವ ದಬ್ಬಾಳಿಕೆಯ ಬಗ್ಗೆ ಅಸಮಾಧಾನಗೊಂಡಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಪಶ್ಚಿಮ ಪಾಕಿಸ್ತಾನದ ಅನೇಕ ಕಡೆಗಳಿಂದ ಅಶಾಂತಿಯ ವರದಿಗಳು ಬಂದಿವೆ. ದಂಡಿನ ಆಡಳಿತಗಾರರಿಗೆ ಇದರಿಂದ ಭೀತಿ ಉಂಟಾಗಿದೆ. ಅಕ್ರಮ ಶಸ್ತ್ರಾಸ್ತ್ರಗಳ ತನಿಖೆಗೆ ಅವರು ಆಜ್ಞೆ ಮಾಡಿದ್ದಾರೆ.

—"ವಿಶ್ಲೇಷಕ"

●●

ಯಾರು ಎರಡನೆಯವರ ದೋಷ ನೋಡುತ್ತಾನೊ ಅವನು ಅಧಮ. ಯಾರು ಎರಡನೆಯವರ ಗುಣ ಮತ್ತು ದೋಷ ಎರಡೂ ನೋಡುತ್ತಾನೊ ಅವನು ಮಧ್ಯಮ. ಯಾರು ಎರಡನೆಯವರ ಕೇವಲ ಗುಣವನ್ನೇ ನೋಡುತ್ತಾನೊ ಅವನು ಉತ್ತಮ. ಯಾರು ಎರಡನೆಯವರ ಚಿಕ್ಕ ಗುಣಗಳ ವಿಸ್ತಾರವನ್ನು ಮಾಡುತ್ತಾನೋ ಅವನು ಉತ್ತಮೋತ್ತಮ. (ಮಾಧವದೇವ)

ಶಾಂತಿಸೇನೆಯ ಸದಸ್ಯ ಪುರುಷ ಅಥವಾ ಸ್ತ್ರೀ ಇರಲಿ ಅಹಿಂಸೆಯಲ್ಲಿ ಅವರ ಜೀವಿತ ವಿಶ್ವಾಸ ಇರಲಿಕ್ಕೇ ಬೇಕು. ಇದು ಯಾವಾಗ ಸಂಭವವಾಗುತ್ತದೆಂದರೆ ಈಶ್ವರಲ್ಲಿ ಅವರಿಗೆ ಜೀವಿತ ವಿಶ್ವಾಸವಾದಾಗ.

ಪ್ರಾಣವಾನ್ ಮನುಷ್ಯ ಎಂದರೆ ಅವನು ಪರಮೇಶ್ವರ ತೇಜದ ಆವಿಷ್ಕಾರ. ಆದ್ದರಿಂದ ಅದು ಸತ್ಯ. [ಗಾಂಧೀ]

ಮನಸ್ಸಿನಲ್ಲಿ ಸತ್ಯ ಶೋಧನೆಯ ತಳಮಳದ ಅನುಭವ ಇದರಲ್ಲಿಯೇ ಮಾನವತೆಯ ಮುಕ್ತಿ ಮತ್ತು ಸಫಲತೆ ಇದೆ.

[ಜಿ. ಕೃಷ್ಣಮೂರ್ತಿ]

ಚರಿತ್ರಾರ್ಹ ಮೊಕದ್ದಮೆಗಳು – ೪

ಕೊಲೆಯೋ ಆತ್ಮಹತ್ಯೆಯೋ?

ಬರೆದವರು: ಬಿ. ಕೃಷ್ಣಭಟ್, ಭದ್ರಾವತಿ

ಅಮೃತಸರದ ಸೆಷನ್ಸ್ ಜಡ್ಜಿಗಳು 13—5—1911ರಂದು ರಾಣಿ ಭಗವಾನಳಿಗೆ ಮರಣದಂಡನೆಯ ಶಿಕ್ಷೆ ವಿಧಿಸಿದರು. ಅವಳ ಪರಿಚಾರಿಕೆಯರಿಗೆ ಏಳು ವರ್ಷಗಳ ಕಠಿಣ ಸಜ ಅನುಭವಿಸಲು ಆಜ್ಞೆ ಮಾಡಿದರು. ಈ ತೀರ್ಮಾನ ಕೇಳಿದ ಅಮೃತಸರದ ಜನತೆ ತತ್ತರಿಸಿತು. ಮೊಕದ್ದಮೆಯ ಬಗ್ಗೆ ಪ್ರಾಂತದ ಜನತೆಯ ಕುತೂಹಲ ಕೆರಳಿತು.

ರಾಣಿ ಭಗವಾನ್ ಶ್ರೀಮಂತ ವಿಧವೆ. ಖಾನ್ ಚಂದ ಆಕೆಯ ಜಾರ. ತನ್ನ ಜಾರನನ್ನು ವಿಷ ಉಣಿಸಿ ಕೊಂದಳೆಂಬುದು ಅವಳ ಮೇಲೆ ಬಂದ ಆರೋಪ. ಖಾನ್ ಚಂದನ ಕಳೇಬರವನ್ನು ಕಾಣದಂತೆ ಮಾಡಲು ಪ್ರಯತ್ನಿಸಿದರೆಂಬುದು ಸೇವಕಿಯರ ಮೇಲೆ ಬಂದ ಆಪಾದನೆ.

ರಾಣಿಯ ಅಮೃತಸರದ ಬಂಗಲೆಯಲ್ಲಿ ಖಾನ್‌ಚಂದ ಬಿಳಿಯ ಪಾಷಾಣ ಸೇವನೆಯಿಂದ ಸತ್ತನೆಂಬುದು ನಿರ್ವಿವಾದ. ಅವರು ಪರಸ್ಪರ ಸಂಧಿಸಿದ್ದು ಪವಿತ್ರ ಯಾತ್ರಾಸ್ಥಳ ಹರಿದ್ವಾರದಲ್ಲಿ. ಈ ಪರಿಚಯ ನಿಕಟ ಸಂಬಂಧದಲ್ಲಿ ಮುಕ್ತಾಯಗೊಂಡಿತು.

1910ರಲ್ಲಿ ರಾಣಿ ಹರಿದ್ವಾರಕ್ಕೆ ಬಂದಳು. ಪೂಂಚ್ ರಾಜರಿಗೆ ಸೇರಿದ ಬಂಗಲೆಯಲ್ಲಿ ಬಿಡಾರ ಹೂಡಿದಳು. ಆ ಪಾವನ ಕ್ಷೇತ್ರದಲ್ಲಿ ಆಕೆ ಮೂರು ತಿಂಗಳ ಕಾಲ ಉಳಿದಳು–ಜುಲೈನಿಂದ ಸೆಪ್ಟೆಂಬರ್‌ವರೆಗೆ–ಖಾನ್‌ಚಂದ ಆ ಬಂಗಲೆಯಲ್ಲಿ ಜವಾನ. ಅವನಿಗೆ ತಿಂಗಳೊಂದರ ಹತ್ತು ರೂಪಾಯಿ ಸಂಬಳ ಸಿಗುತ್ತಿತ್ತು. ಮೊದಲ ಬಾರಿಗೆ ರಾಣಿ ಅವನನ್ನು ಕಂಡಿದ್ದು ಇಲ್ಲಿಯೇ!

ಆಕೆ ಹರಿದ್ವಾರಕ್ಕೆ ಬಂದ ಹೊಸತರಲ್ಲಿ ಆತ ಭೂಮಿಗಿಳಿದು ಹೋಗಿದ್ದ. ಅವನ ಹೆಂಡತಿ ಆಗ ತಾನೆ ತೀರಿಕೊಂಡಿದ್ದಳು.

ಆಕೆ ವಿಧವೆ–ಆತ ವಿಧುರ.

ಅವರೊಳಗೇನು ನಡೆಯಿತೆಂಬುದು ಊಹೆಗೆ ನಿಲುಕದ ವಿಷಯವಲ್ಲ.

ಪ್ರೌಢೆಯಾದ ರಾಣಿಗೆ ಸ್ಫುರದ್ರೂಪಿ ತರುಣ ಖಾನ್‌ಚಂದನಲ್ಲಿ ಎಲ್ಲಿಲ್ಲದ ಅನುಕಂಪ. ಆಗ ಆತ ಇಪ್ಪತ್ತೆಂಟರ ಹರಯದವ. ಅವಳು ಅವನಿಗಿಂತ ಆರು ವರ್ಷ ಹಿರಿಯಳು. ಆಕೆ ಆತನಲ್ಲಿ ಉಡುಗಿ ಹೋಗಿದ್ದ ಉತ್ಸಾಹವನ್ನು ತುಂಬಿಸಿದಳು.

ಆಕೆ ಅಲ್ಲಿದ್ದಾಗಲೇ ಗೆಳೆಯನೊಬ್ಬ ಖಾನ್‌ಚಂದನನ್ನು ಎಚ್ಚರಿಸಿದ. ನೀನು ಹೀಗೆ ವರ್ತಿಸಿದರೆ ಕೆಲಸ ಕಳೆದುಕೊಳ್ಳುವೆ ಎಂದು ತಿಳಿಸಿದ. ಖಾನ್‌ಚಂದ ಮಾಲಕರ ಆಗ್ರಹಕ್ಕೆ ಬಲಿಯಾದ. ಆತ ಖಂಡಿತ ಕೆಲಸ ಕಳೆದುಕೊಳ್ಳುವುದರಲ್ಲಿದ್ದ. ಅಷ್ಟರೊಳಗೆ ಕೆಲಸಕ್ಕೆ ರಾಜಿನಾಮೆ ಬರೆದು ಹಾಕಿದ. ಇದು ನಡೆದುದು 1910ರ ನವೆಂಬರಿನಲ್ಲಿ. ರಾಣಿ ಆತನಿಗೆ ತನ್ನ ಬಳಿ ಕೆಲಸ ಕೊಡಿಸುವ ಆಸೆ ಹುಟ್ಟಿಸಿದಳು. ಇದು ಆಕೆ ಅವನಿಗೆ ಬರೆದ ಪತ್ರಗಳಿಂದ ತಿಳಿಯಿತು. ಅನಂತರವೂ ಅವರೀರ್ವರೊಳಗೆ ಪತ್ರಗಳು ಓಡಾಡಿದುವು. ಹಾಗೆ ಬರೆದ ಒಂದು ಪತ್ರದ ಜೊತೆಗೆ ರಾಣಿ ತನ್ನ ಫೋಟೋ ಕೂಡ ಕಳುಹಿಸಿಕೊಟ್ಟಿದ್ದಳು. ಆಶ್ಚರ್ಯದ ವಿಷಯವೆಂದರೆ–ಅದು ಬುರುಕಿ ಹಾಕಿ ಕೊಂಡು ತೆಗೆಸಿದ ಭಾವ ಚಿತ್ರ. ಸಂಪ್ರದಾಯಶೀಲ ಮನೆತನಕ್ಕೆ ಸೇರಿದ ವಿಧವೆಯೊಬ್ಬಳು ತೀರ ಅಪರಿಚಿತನಾದ ಖಾನ್‌ಚಂದನಿಗೆ ಆ ಭಂಗಿಯಲ್ಲಿ ತೆಗೆಸಿದ ಫೋಟೋ ಕಳಿಸಿರುವುದನ್ನು ನೋಡಿದರೆ, ಅವರೊಳಗಿನ ಸಂಬಂಧವನ್ನು ತರ್ಕಿಸುವುದು ಬಹು ಸುಲಭದ ಕೆಲಸ. ಪತ್ರಗಳಲ್ಲಿನ ಕೆಲ ಭಾಗಗಳು—ಅವರೊಳಗಿದ್ದ ಅನೈತಿಕ ಸಂಬಂಧಕ್ಕೆ ಸಾಕ್ಷಿ ನುಡಿಯುತ್ತಿದ್ದುವು—

ಪತ್ರಗಳಲ್ಲಿನ ಬಹು ಭಾಗ ನೀರಸ, ಸಪ್ಪೆ. ಸಾಮಾನ್ಯ ವಿಷಯಗಳ ಉಲ್ಲೇಖ. ಅವುಗಳಿಂದ ಅವರೀರ್ವರಲ್ಲಿ ಸಲುಗೆ ಇತ್ತೆಂಬುದು ಹೊಳೆಯುತ್ತಿತ್ತು. ಆದರೆ ರಾಣಿ ತನ್ನ ಇನಿಯನ ಬಗ್ಗೆ ಅತ್ಯಾಸಕ್ತಿ ತೋರಿಸಿದ್ದು ಕಂಡು ಬರುವುದಿಲ್ಲ. ಆಕೆ ಆತನನ್ನು ದೂರವಿಡಲು ಪ್ರಯತ್ನಿಸಿದ್ದು ಸ್ಪಷ್ಟವಾಗಿ ಕಾಣುತಿತ್ತು. ಅವನೊಡನೆ ಅವಳು ಹರಿದ್ವಾರದಲ್ಲಿರುವಷ್ಟು ದಿನ ಚೆನ್ನಾಗಿದ್ದಳು. ಅದನ್ನು ಅಷ್ಟಕ್ಕೇ ಸೀಮಿತಗೊಳಿಸಿದ್ದಳು. ಆಕೆ ಆಗಾಗ್ಗೆ ಅವನಿಗೆ ಉಡುಗೊರೆಗಳನ್ನು ಕಳುಹಿಸುತ್ತಿದ್ದಳು. ಅವುಗಳೋ, ತೀರ ಸಾಮಾನ್ಯವಾದವು—ಬಟ್ಟೆ–ಬರೆ, ಸಾಬೂನು, ಔಷಧಿ—ಶ್ರೀಮಂತಳಾದ ರಾಣಿ, ಬಡವನಾದ ತನ್ನ ಇನಿಯನಿಗೆ ಇವುಗಳನ್ನು ಉಡುಗೊರೆಯಾಗಿ ಕಳಿಸುತ್ತಿದ್ದಳೇ?

ಒಂದು ಪತ್ರದಲ್ಲಿ ಆಕೆ ಖಾನ್‌ಚಂದನ ಹೆಂಡತಿಯ ಸಾವಿನ ಸುದ್ದಿ ಎತ್ತಿದ್ದಳು. ನೀನು ಕೆಲಸಕ್ಕೆ ಅರ್ಜಿ ಬರೆದುಕೋ ಅಣ್ಣನಿಗೆ ಹೇಳಿ ನನ್ನ ಬಳಿಯೇ ಕೆಲಸ ಕೊಡಿಸುವೆ. ಕೆಲಸ ಸಿಕ್ಕಿದರೆ, ಬೇರೊಬ್ಬಳು ಹೆಂಡತಿ ಬರುತ್ತಾಳೆ ಈ ಕಾರಣಕ್ಕೆ ಖಿನ್ನನಾಗುವುದು ಬೇಡ ಎಂದು ಸಂತೈಸಿದ್ದಳು. 1911ರ ಫೆಬ್ರವರಿಯಲ್ಲಿ ಬರೆದ ಪತ್ರದಲ್ಲಿ ನೀನು ಹುಟ್ಟೂರಿಗೆ ಹೋಗಿ ಬಾ. ಆರೋಗ್ಯ ಸುಧಾರಿಸಲಿ. ಆ ಮೇಲೆ ಅಮೃತಸರಕ್ಕೆ ಬಾ. ಕೆಲಸ ದೊರಕಿಸುವೆ. ಖಂಡಿತ ಮೋಸ ಮಾಡುವುದಿಲ್ಲ. ಆದರೆ ಬಂದಾಗ ಮನೆಯಲ್ಲಿರುವುದು ಸಾಧ್ಯವಿಲ್ಲ ಎಂದು ತಿಳಿಸಿದ್ದಳು

ಆತ ಆಕೆಗೆ ಬರೆದ ಪತ್ರಗಳಲ್ಲಿ ತನ್ನ ಪ್ರೇಮವನ್ನು ಬಹಿರಂಗಗೊಳಿಸಿದ್ದ. ಆಕೆಯ ಪ್ರೇಮದಿಂದ ವಂಚಿತನಾದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಬೆದರಿಕೆ ಹಾಕಿದ್ದ. ಆ ಕೊನೆಯ ಪತ್ರವನ್ನು ಖಾನ್‌ಚಂದ ಫೆಬ್ರವರಿ 14ರಂದು ಬರೆದ ಅದು ಅವನ ಅಂತರಂಗಕ್ಕೆ ಕನ್ನಡಿ ಹಿಡಿಯುತ್ತದೆ.

'ನನ್ನ ಬದುಕನ್ನು ನಾನು ನಿನ್ನ ಪದಮೂಲದಲ್ಲಿ ಸಮರ್ಪಿಸಿದೆ. ನನ್ನಿಂದ ಏನನ್ನು ಪಡೆಯ ಬಹುದಿತ್ತೋ ಅದನ್ನು ನೀನು ಹೊಂದಿದೆ. ಈಗ ಬೇಕೆಂತ ದೂರ ತಳ್ಳುತ್ತಿರುವೆ ನೀನು, ಈ ನಿನ್ನ ಬಡ ಸೇವಕನ ಬೆಲೆಯನ್ನು ಕಟ್ಟಲಾರದೆ ಹೋದೆ–ನಾನು ಕಾಯಿಲೆಯಿಂದ ನರಳುತ್ತಿದ್ದೇನೆ. ನಿನ್ನ ಆಜ್ಞೆಯನ್ನು ಕಾಯುತ್ತಿದ್ದೇನೆ–ಬಾ ಎಂದರೆ ಬರುವೆ–ಅದು ಬರುವುದರಲ್ಲಿ ನಾನು ಸತ್ತರೆ—?ಸತ್ತರೂ ಸಾಯಬಹುದು ಹೀಗೆ ಬದುಕುವುದಕ್ಕಿಂತ ಸಾಯುವುದು ಕ್ಷೇಮಕರ. ನಿನ್ನ ಅಣತಿ ಬರಲಿಲ್ಲ. ಅದನ್ನು ನಿರೀಕ್ಷಿಸುತ್ತ ಇಲ್ಲಿಯೋ, ಮಾರ್ಗಮಧ್ಯ ರೈಲಲ್ಲಿಯೋ, ನಿನ್ನ ಸುಂದರ ಸೌಧದ ಹೆಬ್ಬಾಗಿಲಲ್ಲೋ ನಾನು ಸಾಯುವುದು ಖಚಿತ. ಆದರೆ ನನಗೆ ಹಾಗೆ ಸಾಯಲು ಮನಸ್ಸಿಲ್ಲ. ನನ್ನ ಪ್ರೀತಿ ಪಾತ್ರೆ, ನಿನ್ನ ನೆಪದಲ್ಲಿ ನಾನು ಅನುಭವಿಸುವ ನೋವು, ನನ್ನ ಆಯುಸ್ಸನ್ನು ಮಿತಿಗೊಳಿಸಿದೆ ನೀನೇಕೆ ನಿರ್ದಯಳಾದೆ—? ಈ ಪಾಪಿಗೆ ನಿನ್ನ ಪದಮೂಲದಲ್ಲಿ ಸಾಯಲು ಆಸ್ಪದ ಕೊಡು"

ಹರಿದ್ವಾರದಲ್ಲಿ ನಡೆದುದನ್ನು ರಾಣಿ ಮರೆಯಲು ಯತ್ನಿಸುವಂತೆ ಕಾಣುತಿತ್ತು. ಅವಳ ಮಟ್ಟಿಗೆ ಆ ಕಾವು ಇಳಿದಿತ್ತು. ಅವನ ಮೇಲಿನ ಆಸಕ್ತಿ ಕ್ಷೀಣಿಸುತ್ತ ಬಂದಿತ್ತು. ಖಾನ್‌ಚಂದನ ಆತ್ಮಹತ್ಯೆಯ ಬೆದರಿಕೆಯನ್ನು ಆಕೆ ಕಿವಿಗೆ ಹಾಕಿಕೊಳ್ಳಲಿಲ್ಲ. ಈ ಸ್ನೇಹ ಸಂಬಂಧವನ್ನು ಮುಂದುವರಿಸಲು ಅವಳು ಸಿದ್ಧಳಿದ್ದಂತೆ ಕಂಡು ಬರುವುದಿಲ್ಲ—ಅದನ್ನು ಅವಳು ತನ್ನ ನಡತೆಯಿಂದಲೂ ತೋರಿಸಿದಳು. ಖಾನ್‌ಚಂದ ಅವಳಿಗಾಗಿ ಹರಿದ್ವಾರದಿಂದ ಅಮೃತಸರಕ್ಕೆ ಬಂದಿದ್ದ. ಆದರೆ ಅವನಿಗೆ ಒಂದೊಂದು ಸಲ ಬಂದಾಗ ಒಂದೊಂದು ಮಾದರಿಯ ಆದರ ದೊರಕಿತು—ಮೊದಲಿನ ಪ್ರೀತಿ–ವಿಶ್ವಾಸ ಮರು ಬಾರಿಗೆ ಬಂದಾಗ ಇರಲಿಲ್ಲ.

ಖಾನ್ ಚಂದ, ಅವಳ ಅಮೃತಸರದ ಮಹಲು 'ಹವೇಲಿ'ಗೆ ಬಂದುದು 1910ರ ಅಕ್ಟೋಬರಿನಲ್ಲಿ. ಆಗ ಅವನಿಗೆ ಲಭಿಸಿದ್ದು ರಾಜಭೋಗ. ಮುಖ್ಯ ಅತಿಥಿಗಳ ಕೋಣೆಯಲ್ಲಿ ಅವನನ್ನು ಇಳಿಸಿಕೊಳ್ಳಲಾಗಿತ್ತು. ಆ ಕೋಣೆ ಆಕೆಯ ಮಲಗುವ ಮನೆಗೆ ಹೊಂದಿಕೊಂಡಿತ್ತು. ಆತ ಅಲ್ಲಿ ಎಂಟು ದಿನ ಇದ್ದು ಹೋಗಿದ್ದ.

1911ರಜನವರಿಯಲ್ಲಿ,ಎರಡನೆ ಬಾರಿಗೆ ಬಂದವನು ಹೆಚ್ಚು ದಿನ ವಾಸ್ತವ್ಯ ಹೂಡಿದ್ದ. ಈ ಸಲ ಅವನಿಗೆ ಹಿಂದಿನ ರಾಜಾತಿಥ್ಯ ದೊರಕಲಿಲ್ಲ. ಆತನನ್ನು ಮನೆಯಿಂದ ದೂರದಲ್ಲಿದ್ದ, ಸಾಮಾನ್ಯ ದರ್ಜೆಯ ಮನೆಯೊಂದರಲ್ಲಿ ಇಳಿಸಿಕೊಳ್ಳಲಾಯಿತು ಅವನನ್ನು ರಾಣಿ ತಾತ್ಸಾರದಿಂದಲೇ ಕಂಡಳು. ಆತ ಅಮೃತಸರ ಸೇರಿದ ಎರಡು ದಿನಗಳಲ್ಲಿ ಆಕೆ ಮಜೀಥಿಯಾಕ್ಕೆ ಪಯಣ ಹೊರಟಳು.

ಖಿನ್ನನಾದ ಖಾನ್ ಚಂದ, ಕೆಲ ಕಾಲ ಅಲ್ಲಿದ್ದು ಹರಿದ್ವಾರಕ್ಕೆ ಹಿಂದಿರುಗಿದ. ಹಿಂದಿರುಗಿದವನು ಸುಮ್ಮನೆ ಕುಳಿತುಕೊಳ್ಳಲಿಲ್ಲ. ರಾಣಿಯನ್ನು ಜಿಗಣೆಯಂತೆ ಅಂಟಿಕೊಂಡ. ಅಮೃತಸರಕ್ಕೆ ಬರಲು ಅನುಮತಿ ಕೊಡಬೇಕೆಂದು ಪ್ರಾರ್ಥಿಸಿದ. ಅದರ ವಿವರವನ್ನು ಹಿಂದೆಯೇ ಕೊಟ್ಟಿದೆ. ಆದರೆ ರಾಣಿಯಿಂದ ಅನುಕೂಲದ ಉತ್ತರ ಬರಲಿಲ್ಲ. ಬರುವುದೇ ಬೇಡವೆಂದು ಅವಳು ತಿಳಿಸಿದಳು. ಅವಳ ಇಚ್ಛೆಗೆ ವಿರುದ್ಧವಾಗಿ ಖಾನ್‌ಚಂದ ಫೆಬ್ರವರಿ 19ರ ಬೆಳಗಿನ ೯ ಗಂಟೆಯ ಸಮಯಕ್ಕೆ ರಾಣಿಯ ಬಂಗಲೆಯ ಮುಂದು ಪ್ರತ್ಯಕ್ಷನಾದ. ರಾಣಿಗೆ ಕಸಿವಿಸಿಯಾಯಿತು; ಆಕೆ ಕೋಪಗೊಂಡಳು. ಅವನನ್ನು ನೋಡಲು ನಿರಾಕರಿಸಿದಳು. ಮನೆಯೊಳಕ್ಕೆ ಸೇರಿಸಲಿಲ್ಲ. ಅವನನ್ನು ಅಲ್ಲಿಂದೋಡಿಸಲು ಕೆಲಸದವರಿಗೆ ತಿಳಿಸಿದಳು. ಖಾನ್‌ಚಂದ ಜಗ್ಗಲಿಲ್ಲ. ಸತ್ಯಾಗ್ರಹದ ಬೆದರಿಕೆ ಹಾಕಿದ. ಹೆಬ್ಬಾಗಿಲ ಮುಂದು ಧರಣಿ ನಡೆಸುವುದಾಗಿ ಕೂಗಿಕೊಂಡ.

ರಾಣಿ ನಖ–ಶಿಖಾಂತ ಉರಿದಳು. ಆದರೆ ಏನೂ ಮಾಡುವಂತಿರಲಿಲ್ಲ, ಗುಲ್ಲೆಬ್ಬಿಸಿದರೆ ಆತ ತನ್ನ ಹೆಸರಿಗೆ ಮಸಿ ಬಳಿಯುವುದು ಖಚಿತವೆಂದು ಅಂಜಿ ಸುಮ್ಮನಿದ್ದಳು. ಖಾನ್‌ಚಂದ ಅವಳ ಪಾಲಿಗೆ ನುಂಗಲಾರದ ತುತ್ತು ಆದ.

ಮರುದಿನ ರಾತ್ರಿ ಖಾನ್ ಚಂದ ತೀರಿಕೊಂಡ. ಅವನಿಗೆ ಹಾಲಿನಲ್ಲಿ ಪಾಷಾಣ ಬೆರಸಿ ಕೊಡಲಾಯಿತು. ಹಾಲು ಕುಡಿದ ಸ್ವಲ್ಪ ಹೊತ್ತಿನಲ್ಲಿ ಆತ ನರಳಲಾರಂಭಿಸಿದ. ಅವನ ಆರ್ತನಾದವನ್ನು ಸೇವಕರು

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
131 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7 1/2 % ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮನ್.

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K

ಸಂಪುಟ : 50
ಸಂಚಿಕೆ : 38

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಸಮಾಜವಾದಕ್ಕೆ ವಿರುದ್ಧವಾದ ಬಜೆಟ್ಟು

ಇಂದಿರಾ ಸಮಾಜವಾದದಲ್ಲಿ ದೃಢ ನಿಷ್ಠೆಯುಳ್ಳ ವ್ಯಕ್ತಿಯೆಂದು ಹೇಳಿ ಶ್ರೀ ಚವನರಿಂದ ಗೃಹಶಾಖೆಯನ್ನು ತಪ್ಪಿಸಿ ವಿತ್ತಶಾಖೆಯನ್ನು ಅವರಿಗೆ ಕೊಡಲ್ಪಾಯ್ತು. ಮಧ್ಯಾವಧಿ ಚುನಾವಣಾನಂತರವೂ ಅವರಿಗೆ ಅದೇ ಶಾಖೆಯು ದೊರೆಯಿತು. ಶ್ರೀ ಚವನರು ಮಾರ್ಚಿಯಲ್ಲಿ ತಾತ್ಕಾಲಿಕ ಮುಂಗಡಪತ್ರವನ್ನು ಮಂಡಿಸುವ ವೇಳೆ ಪೂರ್ಣ ಬಜೆಟ್ಟಿನಲ್ಲಿ ತೆರಿಗೆ ಹೇರುವುದರ ಸೂಚನೆಯನ್ನು ನೀಡಿದ್ದರು. ಸಮಾಜವಾದವನ್ನು ಅತಿ ಶೀಘ್ರದಲ್ಲಿ ಜ್ಯಾರಿಗೆ ತರುವುದಕ್ಕೆ ಬಜೆಟ್ಟು ಸಾಧಕವಾಗುವುದೆಂದೂ ಹೇಳಲಾಯ್ತು. ಸಮಾಜವಾದವನ್ನು ಜ್ಯಾರಿಗೆ ತರಲು ಕ್ಷಿಪ್ರ ಪ್ರಯತ್ನ ಮಾಡುವಲ್ಲಿ ಈಗ ಪ್ರಧಾನಿಯವರ ಕೈಗಳನ್ನು ಯಾರೂ ತಡೆಯುವವರಿಲ್ಲ; ಆದುದರಿಂದ ಬಡವರ ಉದ್ಧಾರ ಸಾಧನೆಗೆ ಅನುಕೂಲವಾದ ಅರ್ಥ ವ್ಯವಸ್ಥೆಯನ್ನು ವಿತ್ತ ಸಚಿವರು ಈ ಬಾರಿ ಘೋಷಿಸುವರೆಂದು ಅವರಿಗೆ ಮತ ನೀಡಿದವರೂ ನೀಡದವರೂ ನಿರೀಕ್ಷಿಸಿಕೊಂಡಿದ್ದರು. ಆದರೆ, ಶ್ರೀ ಚವನರ ಈ ಸಂಪೂರ್ಣ ಬಜೆಟ್ಟು ಪರ್ವತ ಪ್ರಸವ ಮಾತ್ರವಾಯ್ತು; ಬಡವರ ಮೇಲೆಯೇ ಹೆಚ್ಚಿನ ಹೊರೆ ಹೊರಿಸಿ ಅವರನ್ನೇ ಮತ್ತೂ ಮತ್ತೂ ಸುಲಿಯುವ ದಾರಿಯು ಇನ್ನೊಂದು ಮೈಲುಗಲ್ಲಾಯ್ತು; ಹಿಂದಿನ 'ಪ್ರತಿಗಾಮಿ'ಗಳ ಬಜೆಟ್ಟಿನ ಮತ್ತೊಂದು ರೂಪವಾಯ್ತು.

ಶ್ರೀ ಚವನರು ಬಜೆಟ್ಟನ್ನು ಮಂಡಿಸುತ್ತ ಸಮಾಜವಾದದ ಬಗ್ಗೆ, ಸಮಾಜವಾದೀ ವಿತ್ತವ್ಯವಸ್ಥೆಯ ಬಗ್ಗೆ ಭಾರೀ ಮಾತಾಡಿ ಬರಿಯ ಕಂಠ ಶೋಷಣೆಯನ್ನು ಮಾಡಿಕೊಂಡರು. ಮಾತಿಗೂ ಕೃತಿಗೂ ಏನೇನೂ ಸಂಬಂಧವಿಲ್ಲವೆಂಬುದನ್ನವರು ಮರುಕ್ಷಣದಲ್ಲೇ ತೋರಿಸಿಕೊಟ್ಟರು. ಕೆಳಮಟ್ಟದ ಪ್ರಜೆಗಳಿಗೆ ಸಾಧ್ಯವಾದ ಅಧಿಕಾಧಿಕ ಪರಿಹಾರವೊದಗಿಸುವುದು ಮತ್ತು ಶ್ರೀಮಂತರಿಂದ ದೇಶದ ಅಭಿವೃದ್ಧಿಗಾಗಿ ಹೆಚ್ಚೆಚ್ಚು ಹಣ ಕೂಡಿಸುವುದು ತಮ್ಮ ಉದ್ದೇಶವೆಂದ ಚವನರು ಇದರಲ್ಲಿ ಎಷ್ಟು ಸಫಲರಾಗಿದ್ದಾರೆಂದು ಅವರೇ ಹೇಳಬೇಕು. ಅವರು ವಿಲಾಸಿ ವಸ್ತುಗಳೆಂದು ಪರಿಗಣಿಸಿದ ಬ್ರೆಡ್ಡು, ಸಾಬೂನು, ಸಿದ್ಧ ಉಡುಪು, ಸಿಗರೇಟು ಮತ್ತು ಪೆಟ್ರೋಲುಗಳೇ ಅವರ ಲೆಕ್ಕಾಚಾರ ತಲೆಕೆಳಗಾಗಲು ಕಾರಣವಾಗಿವೆ. ಇವೆಲ್ಲವೂ ಒಂದು ಕಾಲದಲ್ಲಿ ನಿಜಕ್ಕೂ ಭೋಗ ವಸ್ತುಗಳೇ ಆಗಿದ್ದುವೆಂಬುದು. ಆದರೆ, ಇಂದು ಬಡವರಲ್ಲಿ ಬಡವರೂ ಬ್ರೆಡ್ಡು ತಿನ್ನುತ್ತಾರೆ, ಮೈಗೆ ಬಟ್ಟೆ ಸಾಬೂನು ತಿಕ್ಕುತ್ತಾರೆ, ಸಿದ್ಧ ಉಡುಪುಗಳನ್ನು ತೊಡುತ್ತಾರೆ, ಸಿಗರೇಟು ಸೇದುತ್ತಾರೆ, ವಾಹನಗಳಲ್ಲಿ ಪ್ರಯಾಣ ಮಾಡುತ್ತಾರೆ. ಮೇಲೆ ಹೇಳಿದ ವಸ್ತುಗಳ ಮೇಲೆ ತೆರಿಗೆ ಹೆಚ್ಚಿದ್ದರಿಂದ ಇದರ ಪರಿಣಾಮ ಹೆಚ್ಚಾಗಿ ಬೀಳುವುದು ಕೆಳವರ್ಗದ ಶ್ರೀ ಸಾಮಾನ್ಯನ ಮೇಲೆಯೇ ಎಂಬುದು ಸ್ವಯಂವೇದ್ಯ–ಇದು ನೇರ ತೆರಿಗೆಗಳ ಮಾತಾಯ್ತು. ಅಪ್ರತ್ಯಕ್ಷ ತೆರಿಗೆಗಳ ಪರಿಣಾಮವೂ ಶ್ರೀಸಾಮಾನ್ಯರನ್ನು ಕಾಡದಿರುವುದು ಸಾಧ್ಯವೇ ಇಲ್ಲ. ಹೊಸ ತೆರಿಗೆಗಳಿಂದ ಸರಕಾರ ೧೭೭ ಕೋಟಿ ರೂಪಾಯಿ ಕೂಡಿಸುತ್ತದೆ; ಆದರೂ ಮತ್ತೆ ೨೨೦ ಕೋಟಿ ರೂಪಾಯಿ ಖೋತ್ತ ಉಳಿಯುತ್ತದೆ. ಈ ಖೋತಾ ತುಂಬಿಸಲು ಕೊರತೆ ಧನವನ್ನು ಬಳಸಿಕೊಳ್ಳುವುದು ಸಹಜವಾದುದರಿಂದ ಹಣದ ಉಬ್ಬರವು ಮತ್ತೂ ಏರುತ್ತದೆ; ಬೆಲೆಗಳೂ ಏರುತ್ತವೆ. ಸರಕಾರದಹೊಸ ತೆರಿಗೆಗಳಿಂದ ಶ್ರೀ ಸಾಮಾನ್ಯನ ಮೇಲೆ ಯಾವ ಪರಿಣಾಮವೂ ಬೀಳುವುದಿಲ್ಲ. ಬಿದ್ದರೂ ಅದು ಅಗಣ್ಯವೆಂದರೂ ಇದು ನೂರಕ್ಕೆ ನೂರರಷ್ಟು ಸುಳ್ಳಿನ ಕಂತೆ. ಬೆಲೆಯೇರಿಕೆಯನ್ನು ಸರಕಾರ ತಡೆಯಲು ಸರ್ವ ಕ್ರಮಗಳನ್ನೂ ಕೈಗೊಳ್ಳುತ್ತದೆಂಬ ಭರವಸೆ ಕಾಗದ ಪತ್ರಗಳಲ್ಲೇ ಉಳಿಯಿತು. ಸಂಬಳಗಾರರಿಗೆ ಆದಾಯ ತೆರಿಗೆಗೊಳಪಡುವ ಕನಿಷ್ಠಮಿತಿಯಲ್ಲಿ ರೂ ಒಂದು ಸಾವಿರ ಹೆಚ್ಚಿಸಿ ರೂ. ೧೫ಸಾವಿರದ ನಂತರ ಸರ್ ಛಾರ್ಜು ಹೇರಿ ನಷ್ಟವನ್ನು ತುಂಬಿಕೊಳ್ಳುವ ಪ್ರಯತ್ನ ಬಜೆಟ್ಟಿನಲ್ಲಿ ನಡೆದಿದೆ. ಇಂದಿನ ಧಾರಣೆವಾಸಿಯಲ್ಲಿ ಶ್ರೀಮಂತರು ಯಾರು ಬಡವರು ಯಾರು ಎಂಬುದೂ ಮಹತ್ವದ ಪ್ರಶ್ನೆ. ಕಂಪೆನಿಗಳ ಉನ್ನತ ಅಧಿಕಾರಿಗಳ ಸಂಬಳ ಸಂಬಂಧದಲ್ಲಿ ಮಿತಿಯನ್ನು ಹೇರಿದ ವಿತ್ತ ಸಚಿವರು ಸಚಿವರು ಹಾಗೂ ಮತ್ತಿತರ ವಿಶಿಷ್ಟ ಪರಿಸರದಲ್ಲಿರುವವರ ತೆರಿಗೆಗೊಳಪಡದ ಆದಾಯಗಳಿಗೆ ಯಾವ ಮಿತಿಯನ್ನೂ ಹೇರಲಿಲ್ಲ. ಇದನ್ನು ಸಮಾಜವಾದಿ ಕ್ರಮವೆನ್ನುವುದು ಸಾಧ್ಯವಿಲ್ಲ. ಹಣ ಹೂಡಿಕೆಗೊಂದು ಹೆಚ್ಚಿನ ಉತ್ತೇಜನ ನೀಡಿದ ಅಂಶವನ್ನು ಉಳಿದರೆ, ಬಜೆಟ್ಟು ಮತ್ತೇನೂ ಜನತೆಗೆ ಸುಖ ತಂದುಕೊಡಲಿಲ್ಲವೆಂದೇ ಹೇಳಬೇಕು.

ಸರಕಾರವು ದೊಡ್ಡದೊಡ್ಡ ಉದ್ಯಮಗಳಲ್ಲಿ ಬಂಡವಳ ಹೂಡಿದೆ. ದೇಶದ ದುರದೃಷ್ಟದಿಂದ ಇವುಗಳಲ್ಲಿ ಹೆಚ್ಚಿನವು ನಷ್ಟದಲ್ಲೇ ಮುಂದುವರಿಯುತ್ತಿವೆ. ಸಮಾಜವಾದದ ಗೀಳಿನಲ್ಲಿ ನಾವು ಇನ್ನೂ ಇನ್ನೂ ರಾಷ್ಟ್ರೀಕರಣದತ್ತಲೇ ಹೋಗುತ್ತೇವೆ; ನಷ್ಟ ಸುಧಾರಿಸಿಕೊಳ್ಳುವಲ್ಲಿ ಅಸಮರ್ಥರಾಗಿದ್ದೇವೆ. ಆದುದರಿಂದ ಕೊರತೆ—ಅದನ್ನು ತುಂಬಿಕೊಳ್ಳಲು ಹೆಚ್ಚಿನ ತೆರಿಗೆ—ಕೊರತೆ ಧನ ವಿನಿಯೋಗ. ಪರಿಣಾಮವಾಗಿ ಹಣದ ಉಬ್ಬರ—ಬೆಲೆಯೇರಿಕೆ. ಬಂಗ್ಲಾದೇಶದ ವಿದ್ಯಮಾನಗಳು, ಅಲ್ಲಿಂದ ಬಂದ ಲಕ್ಷಾಂತರ ನಿರಾಶ್ರಿತರ ಪರಿಹಾರ ಕಾರ್ಯಗಳ ಪರೋಕ್ಷ ಪರಿಣಾಮ ಈ ವರ್ಷವೇ ನಮ್ಮ ಮೇಲಾಗಲಿದೆ. ಹಾಗಾಗಿ ಅಭಾವ ಪರಿಸ್ಥಿತಿ, ಅರ್ಥವ್ಯವಸ್ಥೆಯಲ್ಲಿ ಕುಸಿತ, ಧಾರಣೆವಾಸಿಗಳಲ್ಲಿ ಏರಿಕೆ ಅನಿವಾರ್ಯವೇ. ಈಗ ಶ್ರೀ ಚವನರು ಗಣಪತಿಯನ್ನು ಮಾಡಹೊರಟು ಹನುಮಂತನನ್ನೇ ತಯಾರಿಸಿದ್ದರಿಂದ ಬಡಜನರ ಗೋಳಿನ ಕಥೆ ಈ ವರ್ಷವೂ ಮುಂದುವರಿಯುವುದು ಕಂಡಿತವೇ. ಇಂಡಿಕೇಟಿಗೂ ಇಂದಿರಾ ಗಾಂಧಿಗೂ ಬಡ ಜನರ ಮೇಲೆಷ್ಟು ಕನಿಕರವಿದೆಯೆಂಬುದನ್ನು ಈ ಬಜೆಟ್ಟು ಮತ್ತು ಅದರಿಂದ ಆಗುವ ಪರಿಣಾಮಗಳು ಸಾರಿಹೇಳುತ್ತವೆ; ಏಕೆಂದರೆ, ಈ ಬಜೆಟ್ಟಿನಿಂದ ಅಭಿವೃದ್ಧಿಸಾಧನೆಗೆ ತೀವ್ರ ಉತ್ತೇಜನ ದೊರೆಯುವುದಿಲ್ಲ; ಸಮಾಜವಾದ ಸ್ಥಾಪನೆಯಾಗುವುದಿಲ್ಲ; ಬಡಜನರ ಉದ್ಧಾರವಂತೂ ಇಲ್ಲವೇ ಇಲ್ಲ.

ಆತ್ಮಗೌರವವೆಷ್ಟು?

ರಾಜ್ಯಕೀಯದಿಂದ ನಿವೃತ್ತರಾಗಿ ಸರ್ವೋದಯಕ್ಕಾಗಿಯೇ ತಮ್ಮ ಜೀವಮಾನವನ್ನು ಮುಡುಪಿಟ್ಟ ಜಯಪ್ರಕಾಶ ನಾರಾಯಣರು ತಮ್ಮ ಸಮರ್ಥ ವ್ಯಕ್ತಿತ್ವವನ್ನು ತಪ್ಪು ದಾರಿಯಲ್ಲೇ ಒಯ್ದುಕೊಂಡವರು. ಅವರು ಕಾಂಗ್ರೆಸ್ಸನ್ನು ಬಿಟ್ಟು ಹೋಗದೆ ಇರುತ್ತಿದ್ದರೆ, ಕಾಂಗ್ರೆಸ್ಸಿನ ಹಾಗೂ ದೇಶದ ದಾರಿಯೇ ಬೇರೆಯಾಗುತ್ತಿತ್ತು. ಸಮಾಜವಾದದಲ್ಲಿ ಅತ್ಯಂತ ದೃಢ ನಂಬಿಕೆಯಿಟ್ಟಿರುವ ಶ್ರೀ ಜಯಪ್ರಕಾಶ ನಾರಾಯಣರಿಗೆ ರಾಜ್ಯಕೀಯವೇ ಬೇಸರ ತರಿಸಿತು; ಅವರು ಆಚಾರ್ಯ ವಿನೋಬಾರ ಸರ್ವೋದಯ ಕಾರ್ಯಕ್ರಮಗಳಲ್ಲಿ ಕೂಡಿಕೊಂಡರು. ಅವರು ರಾಜ್ಯಕೀಯವನ್ನು ಬಿಟ್ಟರೂ ರಾಜ್ಯಕೀಯ ಅವರಿಂದ ದೂರವಾಗಲಿಲ್ಲ. ಆಗಾಗ ಬೇಸರಿಕೆ ಕಳೆಯಲೆಂದೆಂಬಂತೆ ರಾಜ್ಯಕೀಯದಲ್ಲೂ ತಲೆ ಹಾಕುತ್ತಿದ್ದರು. ಶ್ರೀ ಜಾಕೀರ ಹುಸೇನರ ನಂತರ ಅವರನ್ನು ರಾಷ್ಟ್ರಪತಿ ಸ್ಥಾನಕ್ಕೆ ಎಳೆದು ತರುವ ಸಾಹಸ ಮಾಡಿದವರೂ ಇದ್ದಾರೆ. ಆದರೆ, ಯಾವುದರಿಂದಲೂ ಏಳದೆ ಬೀಳದೆ ತನಗೆ ಸರಿಕಂಡ ದಾರಿಯಲ್ಲಿ ಮುಂದುವರಿಯುವುದು ಜೆ. ಪಿ.ಯವರ ಜಾಯಮಾನ.

ಭಾರತದಲ್ಲಿನ್ನೂ ಗೌರವಾರ್ಹರಾಗಿರುವ ಜೆ. ಪಿ.ಯವರು ಹೆಲ್ಸಿಂಕಿಯಲ್ಲಿ ನಡೆಯಲ್ಲಿದ್ದ ಸಮಾಜವಾದಿ ವೇದಿಕೆಯೊಂದರಲ್ಲಿ ಭಾಷಣ ಮಾಡಲಿದ್ದರು. ಇದು ಅವರಾಗಿ ಇಟ್ಟುಕೊಂಡದ್ದಲ್ಲ; ವೇದಿಕೆಯವರೇ ಆಹ್ವಾನ ನೀಡಿ ಕರೆದಿದ್ದರು. ಆದರೆ, ದುರದೃಷ್ಟದಿಂದ, ವೇದಿಕೆಯು ಜೆ. ಪಿ.ಯವರಿಗೆ ತಾನು ನೀಡಿದ್ದ ಆಹ್ವಾನವನ್ನು ಹಿಂದೆ ತೆಗೆದುಕೊಂಡಿತು. ವಿದೇಶವೊಂದರಲ್ಲಿ ನಡೆದ ಈ ಘಟನೆ ಜೆ. ಪಿ.ಯವರ ಕಪಾಲಕ್ಕೆ ಹೊಡೆದಂತೆ; ಮಾತ್ರವಲ್ಲ, ದೇಶದ ಗೌರವಕ್ಕೆ ಧಕ್ಕೆ ಕೊಟ್ಟಂತೆ ಎನ್ನುವುದು ಸಹಜ. ಇತ್ತೀಚೆಗಿನ ಕೆಲವು ವರ್ಷಗಳಿಂದ ಜಗತ್ತಿನಲ್ಲಿ ನಾವು ನಮಗಿದ್ದ ಸ್ಥಾನಮಾನಗಳನ್ನು ಕಳೆದುಕೊಳ್ಳುತ್ತಲಿದ್ದೇವೆ ಎಂಬುದಕ್ಕೆ ಕೆಲವು ನಿದರ್ಶನಗಳು ಕಂಡುಬಂದಿವೆ. ಜೆ.ಪಿ.ಯಂತಹ ನಿರ್ದಲೀಯ ನಾಯಕನಿಗಾದ ಅಪಮಾನ ನಮ್ಮನ್ನು ವಿದೇಶಗಳು ಯಾವ ನಿಟ್ಟಿನಲ್ಲಿ ನೋಡುತ್ತಿವೆಯೆಂಬುದನ್ನು ಪ್ರತಿಬಿಂಬಿಸುತ್ತದೆ.' ನಮ್ಮ ಸ್ವದೇಶ ನೀತಿಯಂತೂ ಗತಿಕೆಟ್ಟಿದೆ; ವಿದೇಶ ನೀತಿಯೂ ದಿವಾಳಿಯೆದ್ದಿದೆ' ಎಂದು ಕೆಲವು ಬುದ್ಧಿಜೀವಿಗಳಾಡುವುದರಲ್ಲಿ ಸತ್ಯಾಂಶವಿದೆಯೆ? ಜೆಪಿಗೆ ಮಾಡಿದ ಅಪಮಾನಕ್ಕೆ ಪ್ರತಿಯಾಗಿ ನಾವು ಅನ್ಯಕ್ರಮ ಕೈಕೊಳ್ಳಬಹುದು— ಪೆಟ್ಟು ಕೊಟ್ಟವನಿಗೆ ಮರುಪೆಟ್ಟು ಕೊಡಬಹುದು; ಆದರೆ ತಿಂದ ಪೆಟ್ಟು ಮಾಯುವುದಿಲ್ಲ; ಅಪಮಾನವನ್ನು ದುಬಾರಿ ಬೆಲೆಯ ಸೋಪಿನಿಂದ ತೊಳೆದರೂ ಹೋಗುವುದಿಲ್ಲ.

●●

ಗೇಹರಾಜ್ಯದಲ್ಲಿ

ಕನ್ನ ಪ್ರಪಾತದಲ್ಲುರುಳಿಹೋಯ್ತು

'ಕೇಳಿದ್ಯೇನೆ?'

'ಏನು?'

"ಸ್ಟೇಟ್ ಬ್ಯಾಂಕಿನ ದೆಹಲಿ ಶಾಖೆಯಲ್ಲಿ ಅರುವತ್ತು ಲಕ್ಷ ರೂಪಾಯಿಗಳ ಹಗಲು ದರೋಡೆಯೊಯ್ತಂತೆ!"

'ಅರುವತ್ತು ಲಕ್ಷ! ಅಬ್ಬಾ....

'ಅದೂ ಒಬ್ಬನೇ ಒಬ್ಬ ರಾಜಾ ಕಳ್ಳನಿಂದ....'

"ಭಾರೀ ಚಲಾಕಿಯಿರಬೇಕು."

'ಚಾಲಾಕಿಯೇನೋ ಇರಬಹುದೂನ್ನು. ಆದ್ರೂ ಆತನಿಗೆ ನಾಮಬಲ ಭಾರೀಯಿತ್ತು ಅಂತೆ....'

'ಅಂದ್ರೆ?'

'ಪ್ರಧಾನಿ ಇಂದಿರಾ ಗಾಂಧಿ ಹೆಸ್ರು ಹೇಳಿ ಆತ ಹಣ ತಕ್ಕೊಂಡನಂತೆ....'

'ಅಲ್ರಿ, ಚೆಕ್ಕು ಇಲ್ಲದೇನೇ ಹಣ ಕೊಡೋದುಂಟೆ?"

'ಉಂಟೇ ಅಂದ್ರೇನು, ಈಗ ಉಂಟೂಂತಾಯ್ತಲ್ಲ? ತೀವ್ರ ಅಗತ್ಯದ ಕೆಲಸಕ್ಕಾಗಿ ಬೇಕಾಗಿದೇಂತ ಪ್ರಧಾನಿಯ ಜನ ಬಂದೊಡನೆಯೇ ಹಣ ಕೊಡುವ ಪರಿಪಾಠವಿದೆ ಅಂದ ಹಾಗಾಯ್ತು....'

'ಅಗ್ಲಿ, ಜನವಾದ್ರೂ ಚಿರಪರಿಚಿತನಿರಬೇಡವೆ?'

'ಅಂದ್ರೆ, ಹೆಡ್ ಕ್ಯಾಷಿಯರ್–ಪ್ರಧಾನಿಯವರ ನಡುವೆ ಸುಮಧುರ ಸಂಬಂಧವಿರಬೇಕೂಂತಾಯ್ತು. ಇಲ್ಲವಾದ್ರೆ ಪ್ರಧಾನಿ ಹೆಸ್ರು ಹೇಳಿದೊಡನೆಯೇ ಅಷ್ಟು ದೊಡ್ಡ ಮೊತ್ತ ಎತ್ತಿಕೊಡುವಷ್ಟು ಮೂರ್ಖರು ಇರ್ತಾರೆಯೆ?'

"ಇದೇ ರೀತಿ ಇದಕ್ಕೆ ಮೊದಲೂ ಅನೇಕ ಬಾರಿ ಪ್ರಧಾನಿಯೇ ಹಣ ತರಿಸಿರಬಹುದು.'

"ಈ ರಹಸ್ಯವನ್ನು ಭೇದಿಸಿದವನೊಬ್ಬ ಈಗಿನ ವಂಚನಾಪ್ರಕರಣದ ನಾಯಕತ್ವ ವಹಿಸಿರಬಹುದು.'

'ಪಾಪ, ಆತ ಖಳನಾಯಕನಾಗಿಬಿಟ್ಟ.......'

'ಹ್ಞೂಂ.... ಅಲ್ಲ, ಅರುವತ್ತು ಲಕ್ಷ ರೂಪಾಯಿ ವಂಚಿಸಿದ ಅವ ತಪ್ಪಿಸಿಕೊಳ್ಳುವಲ್ಲಿ ಹೆಚ್ಚಿನ ಮುತುವರ್ಜಿ ಮಾಡಿದಂತಿಲ್ಲ.'

"ಬಹುಶಃ ಸಾಕಷ್ಟು ಪಳಗಿದವನಿರಲಾರನೆಂದು ತೋರುತ್ತೆ....'

'ರಾಜಾ ಕಳ್ಳನಾಗೇ ಬಂದ; ರಾಜಾ ಕೈದಿಯಾಗೇ ಸಿಕ್ಕಿಹಾಕಿಕೊಂಡ.'

'ಬೊಂಬಾಯಿ—ಬೆಂಗ್ಳೂರು ಕಡೆ ಸಾವಿರ ರೂಪಾಯಿ ಕಳ್ಳನನ್ನು ಹಿಡೀಬೇಕಾದ್ರೆ, ನೂರಾರು ರೂಪಾಯಿಗಳ ಪೆಟ್ರೋಲು ಸುಡಬೇಕಾಗುತ್ತೆ....'

'ಅಂದ್ರೆ ದೆಹಲಿ ಪೋಲೀಸರು ಕರ್ತವ್ಯನಿಷ್ಠರು, ಚತುರರೆಂದು ಹೇಳುತ್ತೀಯೇನು?'

'ಅಲ್ಲವೇ ಮತ್ತೆ? ನಮ್ಮಲ್ಲಾಗುತ್ತಿದ್ದರೆ, ವರ್ಷವಿಡಿ ಹುಡುಕಿದರೂ ಆತ ಸಿಗುತ್ತಿರಲಿಲ್ಲ....'

'ಒಂದ್ವೇಳೆ ಸಿಕ್ಕಿದರೂ ಒಂದೆರಡು ಲಕ್ಷ ಹಂಚಿ ಬಿಟ್ಟು ತಪ್ಪಿಸಿಕೊಳ್ಳುತ್ತಿದ್ದ....'

'ಹಾಗೆಲ್ಲ ಅನ್ನಬೇಡಿ. ನೋಡಿ, ಈ ವಂಚನಾ ಪ್ರಕರಣದಲ್ಲಿ ಪ್ರಧಾನಿಯ ಹೆಸರು ಸೇರಿಕೊಂಡದ್ದರಿಂದ ಅಷ್ಟು ಬೇಗ ತಪಾಸಣೆ ನಡೆಯಿತು. ದುರದೃಷ್ಟಕ್ಕೆ ಸಂಸತ್ತು ಬೇರೆ ಅಧಿವೇಶನ ಸೇರಿತ್ತು....'

'ಅದು ಸರೀನ್ನು. ಆದರೆ, ಮರುದಿನವಿತ್ತ ಸಚಿವ ಶ್ರೀ ಚವಣರು ಈ ಪ್ರಕರಣದಲ್ಲಿ ಪ್ರಧಾನಿಯ ಕೈವಾಡವೇನೂ ಇಲ್ಲವೆಂದೂ ಆಕೆಯ ಹೆಸರನ್ನು ಬಳಸಬಾರದೆಂದೂ ಹೇಳಿಕೆ ನೀಡಿದ್ದರಲ್ಲ....?'

'ಹ್ಞೂಂ. ಜನರನ್ನು ತಪ್ಪುದಾರಿಯಿಂದ ಸರಿದಾರಿಗೆ ತರ ಬೇಕಲ್ಲ?'

'ಅಲ್ವೆ, ಪ್ರಕರಣದಲ್ಲಿ ಪ್ರಧಾನಿಯ ಹೆಸರನ್ನು ಎಳೆದು ತಂದವರು ಯಾರು?'

'ಬ್ಯಾಂಕಿನ ಹೆಡ್ ಕ್ಯಾಷಿಯರ್ ಅಥವಾ ವಂಚಕರು....'

'ಅವರು ಪ್ರಧಾನಿಯ ಹೆಸರನ್ನೇಕೆ ಬಳಸಬೇಕು?'

'ಆಕೆಯ ಹೆಸರನ್ನು ಕೆಡಿಸುವುದಕ್ಕಾಗಿಯೇ ಇರಬಹುದು....'

'ನೋಡು, ಕಾಷಿಯರ್‌ಗೆ ಪ್ರಧಾನಿಯ ಹೆಸ್ರು ಕೆಡಿಸಬೇಕಾಗಿದ್ರೆ, ವಂಚಕನನ್ನು ತಪ್ಪಿಸ ಬಹುದಿತ್ತಲ್ಲ? ವಂಚಕನಿಗೆ ಕೆಡಿಸಬೇಕೆಂದಿದ್ರೆ, ಕ್ಯಾಷಿಯರ್‌ನಿಂದ ಪ್ರಧಾನಿ ಹಣತರಿಸುತಿದ್ದುದು ಇಡೆಯೆಂದಾಯ್ತಲ್ಲಾ....'

'ಎಂಥದೋ ಅದೆಲ್ಲ ವಕಾಲತ್ತು ನನಗೇನು ಗೊತ್ತು?'

'ದೆಹಲಿಯ ಸನ್ಯಾಸಿಯೊಬ್ಬನ ಆಶ್ರಮದಲ್ಲಿ ಒಟ್ಟು ಸೇರಿದ್ದ ನೂರಾರು ಜೀಪುಗಳ ಪ್ರಸಂಗದಲ್ಲೂ ಅಂದೊಮ್ಮೆ ಪ್ರಧಾನಿಯ ಹೆಸರು ಬಳಸಲಾಯ್ತು. ಆಗಲೂ ಇದೇ ರೀತಿ ಹೇಳಿದರು. ಆದರೆ, ಆ ಜೀಪುಗಳೆಲ್ಲ ಚುನಾವಣಾ ರಂಗಕ್ಕೆ ಇಳಿದುವು. ಈಗ ಹಣದ ಪ್ರಶ್ನೆಯೂ ಅಷ್ಟೆ....'

'ಏನು?'

'ಆಕೆ ಅಕ್ರಮವಾಗಿ ಹಣತರಿಸುತಿದ್ದುದನ್ನೂ ಸಮರ್ಥಿಸುತ್ತದೆ....'

'ಇರಲಿ ಬಿಡಿ. ನಮಗ್ಯಾಕೆ, ಹಣ ಯಾರದ್ದೋ, ಕೊಟ್ಟವರು ಯಾರೋ ಕೊಂಡವರು ಯಾರೋ ಕೇಡು ಯಾರಿಗೋ—'

'ಕಾದು ನೋಡೋಣ....'

'ಅಲ್ರಿ, ಇಂಡಿಕೇಟಿನ ಸಾಂಸತ್ತಿಕ ಮಂಡಳಿ ಸಚಿವರಾಗಿರುವವರೆಲ್ಲ ಪಕ್ಷದ ತಮ್ಮ ಹುದ್ದೆಗಳಿಗೆ ರಾಜಿನಾಮೆ ನೀಡಬೇಕೆಂದು ಕೇಳಿಕೊಂಡಿತಂತೆ....'

'ಸರಿತಾನೇ. ಅದು ಹಳೆಯ ನೀತಿ. ಯೋಗ್ಯವಾದದ್ದು. ತಂತಮ್ಮ ಹುದ್ದೆಗಳಲ್ಲಿಯೇ ಪೂರ್ಣಾವಧಿ, ದುಡಿಯಲು ಇದು ಅಗತ್ಯ....'

"ಅದು ಸರೀನ್ನಿ. ಆದ್ರೆ ನೋಡಿ, ಜಗಜ್ಜೀವನ ರಾಮರು ಅಧ್ಯಕ್ಷಗಿರಿಯನ್ನೂ ಸಚಿವತನವನ್ನೂ, ಏಕಕಾಲದಲ್ಲಿ ಅನುಭವಿಸುತ್ತಿದ್ದರು."

'ಹೌದು.'

"ಆಗ ಈ ಬಗೆಯ ಆದೇಶ ಹೊರಡಿಸಲಿಲ್ಲ...."

'ಇಲ್ಲ....'

'ಯಾಕೆ?'

"ಯಾಕೆ ಅಂದ್ರೆ? ಜಗಜ್ಜೀವನ ರಾಮರಿಗೆ ಅಧ್ಯಕ್ಷ ಗಿರಿ ಯಾಕೆಬೇಕು? ಒಂದನ್ನು ಳಿಸಿಕೊಳ್ಳಬೇಕೆಂದು ಆದೇಶ ನೀಡಿದ್ದರೆ, ಅವರು ಮಂತ್ರಿತನವನ್ನೇ ಉಳಿಸುತ್ತಿದ್ದರು. ಪಾಪ, ಅಧ್ಯಕ್ಷಗಿರಿಗೆ ಯಾರನ್ನು ಹುಡುಕ ಬೇಕು?"

'ಆದರೆ ಈಗ?'

"ಈಗ ಏನು? ಸಂಜೀವಯ್ಯನವರು ಇನ್ನು ಮಂತ್ರಿಪಟ್ಟ ಬೇಡದಂತೆ ಬೇಲಿ ಹಾಕಿಯಾಯ್ತು.'

'ಹ್ಞೂಂ, ಅದು ಹೌದೂನ್ನಿ. ಆದ್ರೆ, ಇದರಿಂದ ಬೇರ್ಯಾರಿಗೂ ಹೆಚ್ಚಿನ ತೊಂದ್ರೆ ಇಲ್ಲ. ಉತ್ತರ ಪ್ರದೇಶದ ಕಮಲಾಪತಿ ತ್ರಿಪಾಠಿಗೆ ಮಾತ್ರ....'

'ಏನು?'

'ನೋಡಿ, ಅವ್ರು ಪ್ರಾದೇಶಿಕ ಇಂಡಿಕೇಟಧ್ಯಕ್ಷರಾಗಿದ್ದುದರಿಂದ, ಸಿಂಡಿಕೇಟಿಗರನ್ನು ಎಳೆದು ತಮ್ಮ ಉದರ ಉಬ್ಬಿಸಿ ಮತ್ತೆ ಈ ಇಳಿ ಹರೆಯದಲ್ಲಾದರೂ ಮುಖ್ಯಮಂತ್ರಿಯಾದರು.'

'ಆಗಲಮ್ಮ....'

'ಇನ್ನು ಅಧ್ಯಕ್ಷಗಿರಿ ಬೇರೆಯವರಿಗೆ ಒಪ್ಪಿಸಿದರೆ, ಆದರಿಂದ ತ್ರಿಪಾಠಿ ಸಿಂಹಾಸನದ ದೃಢತೆಗೆ ಭಂಗ ಬರುವುದಿಲ್ಲಾಂತ ಗ್ಯಾರಂಟಿಯೇನು?'

'ಅಲ್ವೆ, ಯಾರದ್ದು ಯಾವ ಗ್ಯಾರಂಟಿ? ಮೊನ್ನೆ ನೋಡು, ಜೋಗಫಾಲ್ಸ ಹೋಟಲ್ಲಿನಲ್ಲಿ ಒಂದೇ ಕುಟುಂಬದ ಐವರು ಆತ್ಮಹತ್ಯೆ ಮಾಡಿಕೊಂಡರಂತೆ....'

"ಹೌದೆ?"

'ಇವ್ರಲ್ಲಿ ಒಬ್ಬಳಿಗೆ ಮದುವೆಯೂ ನಿಶ್ಚಯವಾಗಿತ್ತಂತೆ!'

'ಯಾಕಂತೆ?'

'ಮದ್ವೆ ನಿಶ್ಚಯ ಯಾಕೆ ಅಂದ್ರೆ....'

'ಛಿ.... ನಿಮ್ಮದೊಂದು.... ಆತ್ಮಹತ್ಯೆಯಾಕೇಂತ....'

'ಯಾರಿಗ್ಗೊತ್ತು? ಇದಕ್ಕೆ ಯಾರೂ ಹೊಣೆಗಾರರಲ್ಲರೆಂದು ಬರೆದ ಚೀಟಿಯೊಂದು ದೊರಕಿದೆಯಂತೆ....'

"ಅಲ್ರಿ, ಇದು ಹೋಟಲ್ಲಲ್ಲಿ, ವಿಷಪ್ರಾಶನ ಮಾಡಿ. ಕೆಲದಿನಗಳಿಗೆ ಮೊದಲೊಬ್ಬ ಹುಡುಗಿ ಜೋಗಕ್ಕೇ ನೆಗೆದು ಸತ್ತುಕೊಂಡಳಲ್ಲಾ....'

'ಹ್ಞೂಂ.... ಪರೀಕ್ಷೆಯಲ್ಲಿ ಮೇಸ್ಟ್ರು ಪಾಸು ಮಾಡಲಿಲ್ಲಾಂತ....'

'ಏನು'

'ಆಂಧ್ರ ಬೇಕೂಂತ ಪೊಟ್ಟಿಲು ರಾಮುಲು ಅಮರರಾದರು. ಪಯೊಳು ನೆಹರುರವರ ಕಠಿನ ಹೃದಯವೂ ಕರಗಿ ನೀರಾಗಿ ಆಂಧ್ರ ರಚನೆಯಾದದ್ದು ಮಾತ್ರವಲ್ಲ, ಕೇಳಿದವರಿಗೆಲ್ಲ ಒಂದೊಂದು ರಾಜ್ಯ ನೀಡಲು ಅವರು ನಿರ್ಧರಿಸಿದರು....'

'ಕೇಳಿದವರಿಗೆಲ್ಲ....ಹ್ಞೂ....'

"ಹಾಗೆ, ನಮ್ಮ ಉದಾರಿ, ಕರುಣಾಳು ಇಂದಿರಾ ಗಾಂಧಿ ಮನಸ್ಸು ಈ ಹುಡುಗಿಯ ಬಲಿದಾನದಿಂದ ಕರಗಿ ಪರೀಕ್ಷೆಗಳನ್ನೇ ರದ್ದು ಮಾಡಲಿಲ್ಲವಲ್ಲಾಂತ....'

"ಸರಿಹೋಯ್ತು ಬಿಡು. ಫೇಲು ಮಾಡಿದ್ದ ಮೇಸ್ಟರು. ಅವರ ಹೃದಯ ಕರಗಿ ನೀರಾಗಿ ಅವರೂ ನೀರಾಗಿ ಆ ನೀರಿನಲ್ಲಿ ಫೇಲಾದವರೆಲ್ಲರೂ ಬಳಕೊಂಡು ಮೇಲಿನ ತರಗತಿಗೆ ಹೋಗಬೇಕು....'

'ಅದು ಹ್ಯಾಗೇರಿ? ಮೇಸ್ಟರನ್ನು ಕೇಳುವವರಿಲ್ಲನೆ? ಸರ್ಕಾರವೇ ಪರೀಕ್ಷೆಯಿಲ್ಲಾಂತ ಮಾಡಿದ್ರೆ....'

'ಪಾಪ ಆ ಹುಡುಗಿ ಏನು ಸುಂದರ ಕನಸು ಕಾಣುತಿತ್ತೋ ಏನೋ....ಪರೀಕ್ಷೆ ಪ್ಯಾಸು....ಎಸ್ಸೆಸ್ಸೆಲ್ಸೀಲಿ ಫಸ್ಟ್ ರ್‍ಯಾಂಕು–ಕಾಲೇಜಿನಲ್ಲಿ ಸ್ಕಾಲರ್‌ಶಿಪ್ಪು– ಫ್ರೆಂಡ್ಸ್ ಸರ್ಕಲ್, ಫ್ಯಾಶನ್ ಪರೇಡ್– ಎಂಬಿಬಿಯಸ್– ಕೈಹಿಡಿಯೋಕೆ ನಾಯಿಗಳ ಸಂತೆ ಸೇರುತ್ತೆ.... ಎಲ್ಲವನ್ನೂ ಒಂದೊಂದು ಲಾತು ಕೊಟ್ಟು ಓಡಿಸಬೇಕು....ಫಾರಿನ್‌ಗೆ ಹೋಗ್ಬೇಕು.... ಇಂದಿರಾ ಗಾಂಧೀ ನಂತ್ರ....'

'ಓಯ್ ಸಾಕು ಬಿಡೀಂದ್ರೆ........ ಹಗಲುಗನಸು ಕಾಣೋದ್ರಲ್ಲಿ ನೀವೇ ಜಾಣರೂಂತ ಚೆನ್ನಾಗಿ ಗೊತ್ತು. ಆದ್ರೆ ನೋಡಿ, ಪಾಪ, ಅದೇನನ್ನು ಕಂಡಿದ್ರೂ ಅದು ಪ್ರಪಾತದಲ್ಲಿ ಉರುಳಿ ಹೋಯ್ತಲ್ಲಾ...."

"ಹೌದೂಂತೇನೆ...."

"ಏನು?"

'ಆಶಿ ಅರಸಿನ ಎಲ್ಲ ಪ್ರಪಾತಕ್ಕೆ ಇಳೀಬಿತ್ತು, ಬಳ್ಕೊಂಡು ಹೋಯ್ತು....'

'ಯಾರದ್ದು?'

'ಎಲ್ರದ್ದೂನೂ....'

'ಹೇಗೆ?'

'ಬಂಗ್ಲಾ ನಿರಾಶ್ರಿತರನ್ನು ಸಾಕುವುದೆಂದ್ರೆ ಸುಮ್ಗೇನು? ನಮ್ಮ ಲೆಕ್ಕಾಚಾರವೆಲ್ಲ ತಪ್ಪಾಯ್ತು....'

'ಇದ್ದದ್ದೇ ಬಿಡು....'

'ಏನು?'

'ಇದು....'

—ಗೋರಾ

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

-ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

ಕಾಂಗ್ರೆಸ್ ಬಣದ ಸ್ವಾಹಾ ನೀತಿ

ನಿಜಲಿಂಗಪ್ಪನವರು ಇಂದಿರಾಜಾಲದ ಮೋಹಕ್ಕೊಳಗಾಗದೆ ನಿಂತಾಗ ಸದೋಬಾ ಪಾಟೀಲ, ಮುರಾರ್ಜಿ, ಕಾಮರಾಜ, ತಾರಕೇಶ್ವರಿ ಸಿಂಹ, ರಾಮ ಸುಭಾಗ ಸಿಂಹ, ಯಸ್. ಯಸ್. ಯನ್. ಮಿಶ್ರ, ಶ್ರೀಮತಿ ಕೌರ್ ಮುಂತಾದವರು ಅವರ ಹಿಂದುಗಡೆ ನಿಂತರಲ್ಲದೆ ಮೈಸೂರು ಹಾಗೂ ಗುಜರಾತಿನ ಆಗಿನ ಸಚಿವ ಸಂಪುಟ ಸಂಪೂರ್ಣ ಸಹಕಾರವನ್ನೀಡಿದುವು. ಪಕ್ಷವನ್ನು ಭಾಗಮಾಡಿದವರಿಗೆ ಇದನ್ನು ಸೋಲುಮಾಡದಿರಲು ಸಾಧ್ಯವಾಗುತ್ತದೆಯೇ? ಚುನಾವಣೆಯ ನಂತರ ಎರಡೂ ರಾಜ್ಯಗಳ ಮಂತ್ರಿಮಂಡಲ ಮಣ್ಣುಪಾಲಾಯಿತು ಇಂದಿರಾ ಜಾಲದಲ್ಲಿ ಸಂಸ್ಥಾ ಕಾಂಗ್ರೆಸ್ಸಿಗರು ಸಿಕ್ಕಿಬಿದ್ದರು. ಅವರೆಲ್ಲರೂ ನಿಜಲಿಂಗಪ್ಪನವರನ್ನು ಬಿಟ್ಟು ಇಂದಿರಜ್ಜಿಯವರಿಗೆ ಜಯಕಾರ ಹಾಕಲು ಹೊರಟರು ಗೆದ್ದೆತ್ತಿನ ಬಾಲ ಹಿಡಿಯುವದು ಹಿಂದಿನ ಅಭ್ಯಾಸವಾದಲ್ಲಿ ಗೆದ್ದ ದನದ ಬಾಲ ಹಿಡಿಯುವದು ಹೊಸ ಅಭ್ಯಾಸವಾಗಿ ಬಿಟ್ಟಿತು. ಸಂಸ್ಥಾಕಾಂಗ್ರೆಸ್ ಸುಸ್ತಾಗಿ ಹೋಯಿತು. ಮೈಸೂರಿನಲ್ಲಿ ನಾಗಪ್ಪ ಆಳ್ವ ಹಾಗೂ ಕೇಂದ್ರದಲ್ಲಿ ನಿಜಲಿಂಗಪ್ಪನವರು ತಮ್ಮ ಸ್ಥಾನವನ್ನು ಬಿಟ್ಟುಕೊಡಲು ಅವಸರಪಟ್ಟು, ನಾಗಪ್ಪ ಆಳ್ವರು ಅದಾಗಲೇ ತಪ್ಪಿಸಿಕೊಂಡರು. ಈ ಅವಸರ ಯಾತಕ್ಕೆ? ಅವರಿಗೂ ಅಧಿಕಾರ ಅಥವಾ ಪದವಿಯ ಮೇಲೆ ಆಶೆ ಇಲ್ಲವೇನು? ಅವರು ರಾಜಕೀಯ ಸನ್ಯಾಸಿಗಳಾಗುತ್ತಾರೇನು? ರಾಜಕೀಯಕ್ಕೆ ದೊಡ್ಡ ನಮಸ್ಕಾರ ಹಾಕುತ್ತಾರೇನು? ಅದನ್ನು ಹಿಂದೆಯೇ ಮಾಡಬಹುದಾಗಿತ್ತಲ್ಲವೇ? ಕಾಂಗ್ರೆಸ್ ಎರಡಾಗಿ ಕಮ್ಯೂನಿಸ್ಟರ ಹಾಗೂ ಪ್ರಾ. ಮು. ಕ. ದವರ ಕರಗಳನ್ನು ಬಲಪಡಿಸುವ ಬದಲು ಕಾಂಗ್ರೆಸ್ಸ್ ಒಂದಾಗಿಯೇ ಇರಬಹುದಾಗಿತ್ತಲ್ಲವೇ? ಕಮ್ಯೂನಿಸ್ಟರು ಕಾಂಗ್ರೆಸ್ಸಿನೊಳಗೆ ನುಗ್ಗಿದರೂ ಹೆಸರಿನಲ್ಲಿ ಕಾಂಗ್ರೆಸ್ಸಾಗಿಯೇ ಇರುತ್ತಿದ್ದರು. ಇಷ್ಟೆಲ್ಲ ಆದ ಮೇಲೆ ಈ ಪ್ರಮುಖರೇತಕ್ಕೆ ಮುಖ ಮುಖ ನೋಡಿಕೊಳ್ಳಲಾರಂಭಿಸಿದ್ದಾರೆ? ಇಂದಿರಾ ಅನುಸಾರಕರು ನಿಜಲಿಂಗಪ್ಪನವರನ್ನು ಮುದ್ರೆಯಂತೆ ಉಪಯೋಗಿಸಲು ಗವಣಿಸುತ್ತಿದ್ದಂತೆ ನಿಜಲಿಂಗಪ್ಪನವರ ಅನುಯಾಯಿಗಳು ಕೂಡಾ ಅವರನ್ನು ಮುದ್ರೆಯಂತೆ ಉಪಯೋಗಿಸಲು ಅವರ ಹಿಂದೆ ನಿಂತರು. ಈಗ ತಮ್ಮ ಬೇಳೆ ಬೇಯದಿರುವದನ್ನು ಕಂಡು ಅವರು ಅಧ್ಯಕ್ಷರಿಗೆ ಅಷ್ಟು ಹಿಡಿ ಶಾಪ ಹಾಕಲಾರಂಭಿಸಿದ್ದಾರೆ.

ನಿಜಲಿಂಗಪ್ಪನವರ ಹಿಂದೆ ನಿಂತವರ್ಯಾರು? ಎಲ್ಲಾ ಮಾಜಿ ಮಂತ್ರಿಗಳು. ಇಂದಿರಾಗಾಂಧಿಯ ಹಿಂದುಗಡೆ ನಿಂತವರು ಆಗಿದ್ದ ಅಮಾತ್ಯರು, ಅವರು ಮುಂದಕ್ಕೆ ಮಂತ್ರಿಗಳಾಗಿ ಬರುವ ಆಶೆಯಿಂದ ನಿಜಲಿಂಗಪ್ಪನವರಿಗೆ ಜಯಕಾರ ಹಾಕಿದರು. ತಮ್ಮ ಸ್ಥಾನಗಳನ್ನುಳಿಸಿಕೊಂಡು ಮುಂದಕ್ಕೆ ಮಂತ್ರಿಗಳಾಗಿ ಬರಲಿಚ್ಛಿಸಿದವರು ಇಂದಿರಜ್ಜಿಯವರ ಇಂಕ್ವಿಲಾಬಿಗೆ ಜಿಂದಾಬಾದೆಂದರು. ಈಗ ಇಬ್ಬಣಗಳಲ್ಲೂ ಅಡಿಗೆ ಬಿದ್ದವರು, ಮೂಲೆ ಪಾಲಾಗಿಸಲ್ಪಟ್ಟವರು ಎದುರು ಪಕ್ಷಗಳವರ ಗಮನವನ್ನು ಸೆಳೆದುಕೊಳ್ಳಲು ಪ್ರಯತ್ನಿಸುವದರಲ್ಲಿ ಆಶ್ಚರ್ಯವಿರುವದಿಲ್ಲ. ಅಂತಹವರೀಗ ಬಾಯಿ ತೆರೆಯಲಾರಂಭಿಸಿದ್ದಾರೆ.

ಸಂಸ್ಥಾ ಕಾಂಗ್ರೆಸ್ಸಿನ ಪತನಕ್ಕೆ ಮೈತ್ರಿ ಕಾರಣವೆಂದು ಈಗ ಹೇಳಲಾಗುತ್ತಿದೆ. ಸಖ್ಯ ಬೆಳೆಸುವ ಮುಂಚೆ ಬೆಂಗಳೂರಿನ ನಗರ ಸಭಾ ಚುನಾವಣೆಯಲ್ಲಿ ನಡೆದದ್ದೇನು? ಆಗ ಸಂಸ್ಥಾ ಕಾಂಗ್ರೆಸ್ ಅಲ್ಲಿ ಅಧಿಕಾರದಲ್ಲಿತ್ತು. ಆ ಮೇಲೆ ಈಗ ಮೈತ್ರಿಗೆ ತಿಲಾಂಜಲಿ ಬಿಟ್ಟ ಮೇಲೆ ಡಿಲ್ಲಿ ನಗರಸಭಾ ಚುನಾವಣೆಯಲ್ಲಿ ನಡೆದದ್ದೇನು? ಎರಡು ಸ್ಥಳಗಳಲ್ಲೂ ಅವರ ಕಾಲು ಜಾರಿದೆ. ಅದರ ಬದಲು ಸಖ್ಯ ಬೆಳೆಸದೆನೇ ಬೆಂಗಳೂರು ನಗರ ಸಭೆಯಲ್ಲಿ ಭಾರತೀಯ ಜನಸಂಘ ಪ್ರವೇಶಿಸಿರುತ್ತದೆ ಮತ್ತೆ, ಒಪ್ಪಂದ ಕ್ಕೊಪ್ಪದೆ ಹೋದಮೇಲೆ ಡಿಲ್ಲಿ ನಗರಸಭೆಯಲ್ಲಿ ಇನ್ನಷ್ಟು ಅಧಿಕ ಸ್ಥಾನಗಳನ್ನು ಪಡೆದು ಅಧಿಕಾರವನ್ನು ಅಂಗೈಯಲ್ಲಿಟ್ಟುಕೊಂಡಿರುತ್ತದೆ. ಇಂದಿರಜ್ಜಿಯವರ ಕಮ್ಯೂನಿಸ್ಟ್ ಮನೋಭಾವನೆ, ಸರ್ವಾಧಿಕಾರೀ ಗುಣವನ್ನು ಮಾತ್ರ ಈ ರಾಜಕೀಯೋದ್ಯಮಿಗಳು ಎದುರಿಸುತ್ತಿದ್ದಲ್ಲಿ ಅಂದೇ ರಾಜಕೀಯದಿಂದ ದೂರಕ್ಕುಳಿದು ಭಾರತೀಯ ಜನಸಂಘಕ್ಕೆ ಕಣವನ್ನು ಬಿಟ್ಟುಕೊಡುತ್ತಿದ್ದರು. ಶ್ವಾನ ತಾನಾಗಿ ಹುಲ್ಲು ತಿನ್ನುವದಿಲ್ಲ, ಅಲ್ಲದೆ, ದನಕ್ಕೂ ಮೇಯಲು ಬಿಡುವದಿಲ್ಲ. ಪರಿಸ್ಥಿತಿ ಹಾಗಾಯಿತು. ಭಾರತೀಯ ಜನಸಂಘಕ್ಕೂ ಬಿಟ್ಟುಕೊಡಲಿಲ್ಲ, ಚೆನ್ನಾಗಿ ಮೈತ್ರಿಕೂಟವನ್ನೂ ರಚಿಸಲಿಲ್ಲ. ಈಗ ಸೋತ ಮೇಲೆ ಯದ್ವಾತದ್ವ ಆಡಲಾರಂಭಿಸಿದ್ದಾರವರು. ಅನುತ್ತೀರ್ಣನಾದ ವಿದ್ಯಾರ್ಥಿಯು ಎಲ್ಲಾ ತಪ್ಪನ್ನೂ ಉಪಾಧ್ಯಾಯರ ತಲೆಯ ಮೇಲೆ ಹಾಕುವಂತೆ ಸೋತ ಕಾಂಗ್ರೆಸ್ಸಿಗರು ಅಧ್ಯಕ್ಷರ ತಲೆಯ ಮೇಲೆ ತಪ್ಪಿನ ಹೊರೆಯ ಭಾರವನ್ನು ಹೇರಿಸುತ್ತಿದ್ದಾರೆ. ಇದರಿಂದ ಬೇಸತ್ತ ನಿಜಲಿಂಗಪ್ಪನವರು ಸಂಸ್ಥಾ ಕಾಂಗ್ರೆಸ್ಸಿನಿಂದ ಕಾಲೆಳೆದುಕೊಳ್ಳುವದಕ್ಕೆ ಪ್ರಯತ್ನಿಸುವದರಲ್ಲಿ ತಪ್ಪೇನಿದೆ?

ತಮ್ಮ ಪತನಕ್ಕೆ ಬೇಂಕ್ ರಾಷ್ಟ್ರೀಕರಣಕ್ಕೆ ವಿರುದ್ಧ ಪ್ರಚಾರ ನಡೆಸಿರುವದೇ ಕಾರಣವೆಂದು ಕುಂಭಕರ್ಣನ ಬಳಿ ಸಮಾಲೋಚನೆ ನಡೆಸಿ ಬಂದಿರುವ ತಾರ(ರ)ಕೇಶ್ವರಿ ಸಿಂಹ ಹೇಳಲಾರಂಭಿಸಿದ್ದಾರೆ. ದೇಶದಲ್ಲಿ ಬೇಕಾದಷ್ಟು ದೇಶೀಯ–ವಿದೇಶೀಯ ಬೇಂಕ್‌ಗಳಿವೆ ಅದರಲ್ಲಿ ಇಂದಿರಜ್ಜಿಯವರು ದೇಶೀಯ ಅಥವಾ ರಾಷ್ಟ್ರೀಕರಣ ಅರ್ಥಾತ್ ಸರಕಾರೀಕರಣಗೊಳಿಸಿದ್ದು ಕೇವಲ ಹದಿನಾಲ್ಕು ಬೇಂಕ್‌ಗಳನ್ನು. ಈ ಹದಿನಾಲ್ಕು ಬೇಂಕ್‌ಗಳು ಮಾಡಿರುವ ಅಪರಾಧವಾದರೂ ಏನು? ಒಳಗಿನ ಗುಟ್ಟು ಇಂದಿರಜ್ಜಿಗನೇ ಗೊತ್ತು. ರಾಷ್ಟ್ರೀಕರಣಗೊಳಿಸಬೇಕಾಗಿರುವದು ಪರದೇಶೀ ಬೇಂಕ್‌ಗಳನ್ನು. ಯಾಗೇತಕ್ಕೆ ಮಾಡಲಿಲ್ಲ? ಅದರ ರಹಸ್ಯ ಬೀದಿ ಬಿಕಾರಿಗಳಿಗೇನು ಗೊತ್ತು? ಹಾಗೇ ಇರಬೇಕು. ಕಸಾಯಿಗಾರ ಹುಡುಕುವದಾದರೂ ಕೊಬ್ಬಿದ ಕುರಿಗಳನ್ನು. ಎಲುಬುಗೂಡಿನ ಪ್ರಾಣಿ ಯಾರಿಗಾದರೂ ಬೇಕೇನು? ಹಾಗೆಯೇ ಬೀಳಲಾಗಿರುವ ಬೇಂಕ್‌ಗಳು ಇಂದಿರಜ್ಜಿಯವರಿಗೆ ಬೇಕಾಗಿಲ್ಲ. ಅದರಲ್ಲೂ ಚುನಾವಣೆಯದುರಿನಲ್ಲಿ ಬೇಡವೇ ಬೇಡ. ಬೀಳಲಾಗಿರುವ ಮೋಸಕ್ಕೊಳಗಾಗಿರುವ ಬೇಂಕ್‌ಗಳನ್ನು ವಶಪಡಿಸಿಕೊಂಡು ಉತ್ತಮ ರೀತಿಯಲ್ಲಿ ನಡೆಸುವದು ಗೊಡ್ಡು ಸಂಪ್ರದಾಯ, ಪ್ರಗತಿಗೆ ವಿರುದ್ಧ! ಇಂದಿರಜ್ಜಿಯವರ ಈ ಸಂಪ್ರದಾಯ ವಿರೋಧಿ ಗುಣವನ್ನೀಗ ವಿದ್ಯೆಯಿಂದೆಚ್ಚೆತ್ತಿರುವ ತಾರಕೇಶ್ವರಿಯವರು ಕಂಡುಕೊಂಡಿದ್ದಾರೆ. ಗಾಢನಿದ್ದೆಯಿಂದೆ

(ಎಂಟನೇ ಪುಟ ನೋಡಿರಿ)

ಉತ್ಸವಗಳ ನಾಡು - ನೇಪಾಳ

ಲೇಖಕರು:
ಶ್ರೀ ಎಚ್. ಎಂ. ನಾರಾಯಣ ಭಟ್.

ಅನಂತ ಶಿಖರಗಳ–ಕಣಿವೆಗಳ ಹಿಮಾವೃತ ತಪ್ಪಲುಗಳ ನಿಸರ್ಗ ಸೌಂದರ್ಯದ ನೆಲೆವೀಡೆಂದು ಹೆಸರಾಂತ ನೇಪಾಳದ ಜನರು ಸತ್ಯಶೀಲರು, ಸ್ವಾಮಿನಿಷ್ಠರು ಮತ್ತು ಸ್ವಾತಂತ್ರ್ಯಪ್ರಿಯರು. ಎಂತಲೇ ಭಾರತೀಯರಂತೆ ಬ್ರಿಟಿಷರ ಅಧೀನಕ್ಕೊಳಗಾಗಬೇಕಾದ ದುರ್ದೆಶೆ ಇವರನ್ನು ಬಾಧಿಸಿಲ್ಲ. ಪ್ರಾಕೃತಿಕವಾಗಿಯೇ ಉತ್ತರಪ್ರದೇಶದಲ್ಲಿನ ಇವರು ಉನ್ನತ ಮಟ್ಟದ ಉತ್ಸಾಹಶೀಲರೂ ಉಲ್ಲಾಸಪ್ರಿಯರೂ ಆಗಿರುವರು. ನೇಪಾಳದಲ್ಲಿ ನಿತ್ಯಲೂ ಎಂಬಂತೆ ಉತ್ಸವ ಕಾಲದ ಉತ್ಸಾಹವೂ ಕಳೆ ದುಂಬಿರುತ್ತದೆ.

ಅನೇಕ ಶತಮಾನಗಳಿಂದಲೂ ಈ ಜನರ ಆಚಾರ-ಧರ್ಮ ಪರಂಪರೆ ಹೆಚ್ಚಿನ ಅಡೆತಡೆಗಳಿಲ್ಲದೆ ಪರಿಪಾಲಿಸಲ್ಪಡುತ್ತಿದೆ. ಹವಾಮಾನಕ್ಕನುಗುಣವಾದ ವೇಷಭೂಷಣಗಳು–ಜೀವನವಿಧಾನಗಳು ಹೆಚ್ಚಿನ ಪರಿಷ್ಕಾರಕ್ಕೆ ವಿಧೇಯವಾಗದೆ ವಿಶಿಷ್ಟ ರೀತಿಯದಾಗಿವೆ. ಔದ್ಯೋಗಿಕ ಸಮಾರಂಭಗಳಲ್ಲಿ ಮಾತ್ರವೇ ಬಿಳಿ ಷರ್ಟು ಮತ್ತು ಕಪ್ಪು ಟೋಪಿ ಧಾರಿಗಳಾಗಿ ಭಾಗವಹಿಸುವ ನೇಪಾಳೀಯ ಯುವಕ ಯುವತಿಯರೂ ಪಾಶ್ಚಾತ್ಯ ವೇಷಧಾರಣೆಯನ್ನು ಸಾಮೂಹಿಕವಾಗಿ ಅನುಸರಿಸುವ ಮೋಹ ಪ್ರಕಟಿಸಿಲ್ಲ.

ಸ್ವಯಂ ಜಟ್ಟಿಯಿರುವ ಕೋಟು ಮತ್ತು ವರ್ಣ ರಂಜಿತ ಮುಂಡಾಸುಧಾರಿಗಳಾಗಿ ಗ್ರಾಮೀಣರು ಅಸಾಮಾನ್ಯ ಭಾರದ ಹೊರೆಯನ್ನು ಹೇರಿಕೊಂಡು ಸಂತೆಗಳಿಗೆ ತೆರಳುವ ಆಕರ್ಷಕ ದೃಶ್ಯ ಚಿರಸ್ಮರಣೀಯ.

ನವ ನಾಗರೀಕತೆಯ ಸೋಂಕು ತಗಲಿದ ನಾರಿಯರು ಸೀರೆ ಕುಪ್ಪಸಧಾರಿಗಳಾಗತೊಡಗಿದ್ದಾರೆ. ಮಿಕ್ಕವರು ನೆರಿಗವಾನು ಮತ್ತು ರವಕೆ–ಧಾವಣಿ ಧರಿಸುವರು. ವರ್ಣರಂಜಿತ ಮುಂಡಾಸುಧಾರಿ ಮಹಿಳೆಯರೂ ವಿರಳವಲ್ಲ. ಶರೀರ ಶೃಂಗಾರ ಕಲಾವಿಲಾಸಿಗಳೇ ಹೆಚ್ಚು; ಆಭರಣಗಳಲ್ಲಿಯೂ ವಿಶೇಷ ಮೋಹ.

ಸಣ್ಣ ಮಕ್ಕಳು ಆರೇಳು ವಯಸ್ಸಾದರೂ ತಾಯಂದಿರ ಮೊಲೆಹಾಲು ಹೀರುವುದು ನೇಪಾಳದಲ್ಲಿ ಸಾಧಾರಣ. ಮಗು "ಮೊಲೆ ಮರೆಯುವ" ತನಕವೂ ತಾಯಿ ಗರ್ಭವತಿಯಾಗಳೆಂಬ ವಿಶ್ವಾಸವೇ ಈ ಪದ್ಧತಿಗೆ ಪ್ರೇರಕಶಕ್ತಿಯೆನ್ನಲಾಗಿದೆ. ಕುಟುಂಬಯೋಜನಾ ಖಾತೆಯವರು ಈ ಕುರಿತು ವಿಶೇಷ ಸಂಶೋಧನೆ ನಡೆಸಿರುವರೋ ತಿಳಿಯದು.

ಮಾತೃ ದೇವೋ ಭವ

ಮಾತೃ ದೇವೋ ಭವ, ಪಿತೃ ದೇವೋ ಭವ, ಗುರು ದೇವೋ ಭವ....ಹೀಗೆಲ್ಲಾ ನಮ್ಮ ಪ್ರಾಚೀನ ಸಂಸ್ಕೃತಿ ಸಾರಿದೆಯಾದರೂ ಇಂತಹ ಅಮೃತವಾಣಿಯನ್ನು ಪರಿಪಾಲಿಸುವುದರಲ್ಲಿ ನೇಪಾಳೀಯರು ನಮ್ಮಿಂದ ಎಷ್ಟೋ ಹೆಜ್ಜೆ ಮುಂದಿದ್ದಾರೆ. (ಅಥವಾ ಹಿಂದೆ?) ಅಲ್ಲಿ ಮಕ್ಕಳು ತಾಯಂದಿರನ್ನೂ ತಂದೆ–ಗುರುಗಳನ್ನೂ ದೇವರೆಂದೇ ಭಾವಿಸಿ ಪೂಜಿಸುವದಿದೆ.

ವೈಶಾಖ ಮಾಸದಲ್ಲಿ "ಮಾತಾ ತೀರ್ಥಸ್ನಾನ"ವೆಂದು ಕರೆಯಲ್ಪಡುವ ಆಚರಣೆಯಿದೆ. ಪ್ರತಿಯೊಬ್ಬರೂ ಅಂದು ಮಾತೃದೇವಿಗೆ ಫಲವಸ್ತುಗಳನ್ನೂ ಸಿಹಿತಿಂಡಿಗಳನ್ನೂ ಕಾಣಿಕೆ ಸಮರ್ಪಿಸಿ ಪೂಜಿಸಿ ದೇವಿಯ ಆಶೀರ್ವಾದ ಹೊಂದುವರು. ತಾಯಿಯನ್ನು ಕಳಕೊಂಡವನು ತಾಯಿಯನ್ನು ಸ್ಮರಿಸಿ. ಮಾತಾನದಿಯಲ್ಲಿ ತೀರ್ಥಸ್ನಾನ ಮಾಡುವನು.

"ಗೋಕರ್ಣ ಅವಿನಾಶಿನಿ" ಎಂಬ ಆಚರಣೆಯು ಪಿತೃಪೂಜೆಗೆ ಸಂಬಂಧಿಸಿದ ದಿನ. ಆ ದಿನ ಫಲವಸ್ತು–ಖಾದ್ಯಗಳ ಕಾಣಿಕೆ ಮತ್ತು ಪೂಜೆ ತಂದೆಗೆ! ತಂದೆಯ ಆಶೀರ್ವಾದ ಗಳಿಸಿದವನೇ ಧನ್ಯ—ಸಂತೃಪ್ತ! ತಂದೆಯನ್ನು ಕಳಕೊಂಡವನು ಆತನನ್ನು ಸ್ಮರಿಸಿ ಗೋಕರ್ಣನದಿಯಲ್ಲಿ ತೀರ್ಥಸ್ನಾನ ಮಾಡುವನು

ಬಹು ಪತ್ನಿತ್ವ

ನೇಪಾಳದಲ್ಲಿ "ಬಹು ಪತ್ನಿತ್ವ" ಸಂಪ್ರದಾಯವಿದೆ. ಪುರುಷನಿಗೆ ಸಾಧಾರಣವಾಗಿ ಎರಡರಿಂದ ಆರರ ತನಕ ಪತ್ನಿಯರಿರುವುದಿದೆ. ಪತ್ನಿಯರ ಸಂಖ್ಯೆಯಿಂದಲೂ ಓರ್ವನ ಆರ್ಥಿಕ ಪರಿಸ್ಥಿತಿಯನ್ನು ಗ್ರಹಿಸಬಹುದಾಗಿದೆ. 'ಎರಡು ಹೆಂಡಿರ ಗಂಡ ಎಡೆ ದಾರಿಯಲ್ಲಿ ಬಿದ್ದ'ನೆಂಬ ನಮ್ಮೂರ ನಾಣ್ಣುಡಿ ನೇಪಾಳವನ್ನು ಆಕ್ರಮಿಸಿಲ್ಲ. ಒಂದಕ್ಕಿಂತಲೂ ಹೆಚ್ಚು ಪತ್ನಿಯರನ್ನು ಪ್ರತ್ಯಪ್ರತ್ಯೇಕ ಭವನಗಳಲ್ಲಿರಿಸಿ ಅವರಿಗೆ ಸೇವಿಕೆಯರನ್ನೂ ನಿತ್ಯ ಜೀವನ ವೆಚ್ಚವನ್ನೂ ವಹಿಸಿ ನಿರ್ದಿಷ್ಟ ಕಾರ್ಯಕ್ರಮಕ್ಕನುಸಾರವಾಗಿ ಸಂದರ್ಶಿಸಿ ಮೇಲ್ವಿಚಾರಣೆ ಮಾಡಿ ಈ ಮಂದಿಯರ ಕುಟುಂಬ ಪೋಷಣೆ ಸಾಗಿಸುವುದು ಸಾಮಾನ್ಯ ಕೆಲಸವಲ್ಲ. ಶ್ರೀಮಂತರೂ ಸಮರ್ಥರೂ ಆದವರು ಮಾತ್ರವೇ ಇಂತಹ ಸಾಹಸಕ್ಕೆ ಸಿದ್ಧರಾಗುವರು.

ಹಾಗಾದರೆ, ಬಹುಪತ್ನಿತ್ವದ ಸೋಗಿನಲ್ಲಿ ಒಬ್ಬನ ಪತ್ನಿಯನ್ನು ಬೇರೊಬ್ಬನು ಹಾರಿಸಿ ಕೊಂಡ್ಯೊದರೆ? ಹಾಗೆ ಹಾರಿಸಿದವನು ನಷ್ಟ ಪರಿಹಾರ ಧನವಿತ್ತರೆ ಮೊದಲ ಗಂಡನು ಸಂತೃಪ್ತನಾಗುವುದೂ ಇದೆ.

ಗಂಡ—ಹೆಂಡಿರ ಜಗಳ ಬಲಿತಾಗ ಗಂಡನು ರೋಷಾಕ್ರಾಂತನಾಗಿ ಶಪಿಸುವುದು ಹೀಗೆ:– 'ನಿನ್ನನ್ನು ಕದ್ದುಕೊಂಡು ಹೋಗಲೂ ಯಾರೂ ಇಲ್ಲದಾಯ್ತೆ? ಅದೇ ನನ್ನ ಗ್ರಹಚಾರ!....'

ಬೌದ್ಧ ಸಂಸ್ಕೃತಿ

೧೩ನೇ ಶತಮಾನದ ಕೊನೆ ತನಕವೂ ಟಿಬೇಟಿನ ಬೌದ್ಧಮತ ನೇಪಾಳದಲ್ಲಿ ಆಚರಣೆಯಲ್ಲಿದ್ದುದು. ಈ ಮತದ ಬೆಳವಣಿಗೆಯನ್ನು ತಡೆಯಲು ಹಿಂದೂ ಆಡಳಿತಗಾರರು ವಿಫಲ ಪರಿಶ್ರಮ ಗೈದಿದ್ದರು. ಇಂದಿಗೂ ವರ್ತಕ ವರ್ಗದವರನೇಕರೂ ಬೌದ್ಧರು. ಇವರನ್ನು 'ಉದಾಸ್' ಎನ್ನುವರು. ಈ ವರ್ಗದ ಜನರ ಹಿರಿಯರು ಹಿಂದಿನ ಕಾಲದಲ್ಲಿ ವ್ಯಾಪಾರಕ್ಕಾಗಿ ಆಗಾಗ ಟಿಬೇಟನ್ನು ಸಂದರ್ಶಿಸುತ್ತಿದ್ದರು. ಅಲ್ಲಿ ಕೆಲವರು ವಿವಾಹ ಬಂಧ ಬೆಳೆಸಿ ಬೌದ್ಧಮತವನ್ನು ಅನುಸರಿಸಿದ್ದಿರಬೇಕು. ಇವರು ತಂತಮ್ಮ ಹೆಂಡಿರನ್ನು ಕರೆತರಲು ನೇಪಾಳ ಸರಕಾರ ಅಂದು ಅನುಮತಿಸಿರಲಿಲ್ಲ. ಸಾಲದುದಕ್ಕೆ ಟಿಬೇಟಿನಲ್ಲಿ ವಿವಾಹಿತರಾದ ಪುರುಷರು ಸ್ವದೇಶಕ್ಕೆ ಮರಳಿದಾಗ ಅವರಿಗೆ ಪುಣ್ಯಾಹಾರ್ಚನೆ—ಪ್ರಾಯಶ್ಚಿತ್ತ ಇತ್ಯಾದಿಗಳನ್ನೂ ವಿಧಿಸುವ ಸಾಮಾಜಿಕ ನಿಬಂಧನೆಗಳೂ! ಇವೆಲ್ಲವನ್ನೂ ಸಹಿಸಿಯೂ ದರೂ ಈ ವರ್ತಕರು ನೇಪಾಳದ ಕುಶಲ ಕಲಾಕೃತಿಗಳಾಗಿ ಪ್ರಖ್ಯಾತವಾದ ಲೋಹದ ಪ್ರತಿಮೆಗಳನ್ನೂ ಘಂಟೆ ಮತ್ತಿತರ ಸಾಧನಗಳನ್ನೂ ನೇಪಾಳದಿಂದ ಹೊರಕ್ಕೆ ಸಾಗಿಸಿ ವಿಕ್ರಯಿಸುತ್ತಿದ್ದರು ಈ ಉದ್ಯಮದಿಂದ ಉತ್ಪಾದಕರಿಗೂ ವರ್ತಕರಿಗೂ ಲಾಭವಿತ್ತು ಆದ್ದರಿಂದ ಸಮಾಜವು ಈ ವರ್ತಕರನ್ನು ಬಹಿಷ್ಕರಿಸಿಯೂ ಇರಲಿಲ್ಲ.

ಮತ ಪರಿವರ್ತನೆಗೆ ಉಪಕ್ರಮಿಸುವುದು ನೇಪಾಳದಲ್ಲಿ ಶಿಕ್ಷಾರ್ಹ ಅಪರಾಧ. ಈ ನಿಬಂಧನೆ ಎಲ್ಲಾ ಮತಗಳ ಮಟ್ಟಿಗೂ ಅನ್ವಯಿಸುತ್ತದೆ.

ನೇಪಾಳದ ಜನರು ಸ್ವಾಭಾವಿಕವಾಗಿಯೇ ಪರ್ವತಾರೋಹಣ ಕಲಾ ಪ್ರವೀಣರು. ಬೆಸ್ತರು ಸಮುದ್ರ ಯಾನದಲ್ಲಿಯೂ ಮೂರ್ತೆದಾರರು ತೆಂಗು–ತಾಳೆಮರ ಹತ್ತುವುದರಲ್ಲಿಯೂ ಪ್ರವೀಣರಲ್ಲವೆ? ಎವರೆಸ್ಟ್ ಶಿಖರವನ್ನೇರಿದವರಲ್ಲಿ ಷೆರ್ಪಾ ತೇನ್ಸಿಂಗರು ಪ್ರಖ್ಯಾತಿ ಪಡೆದವರು.

ಮಹಾಕ್ಷೇತ್ರಗಳು

ರಾಜಧಾನಿಯಾದ ಕಾಟ್ಮಂಡುವಿನಿಂದ ನಾಲ್ಕು ಮೈಲಿ ಪೂರ್ವಕ್ಕೆ ಒಂದು ಶಿಖರದಲ್ಲಿ "ಬೋಧನಾಥಸ್ತೂಪ"ವಿದೆ. ಇದು ನೇಪಾಳದಲ್ಲಿ ಅತ್ಯುನ್ನತವಾದದ್ದು—ಇಪ್ಪತ್ತು ಶತಮಾನ ಪ್ರಾಯದ ಈ ಗೋಪುರದ ತುದಿಯಲ್ಲಿನ ಚದುರಾಕೃತಿಯ ಕಿರೀಟದಿಂದ ನಾಲ್ಕೂ ದಿಕ್ಕುಗಳನ್ನು ದಿಟ್ಟಿಸಿ ನೋಡುವ ಎರಡೆರಡು ವಿಶಾಲವೂ ಜಾಗೃತವೂ ಆದ ಕಣ್ಣುಗಳಿವೆ. ಈ ನೇತ್ರ ಗೋಪುರವು ಸಂದರ್ಶಕರ ಕುತೂಹಲವನ್ನು ಕೆರಳಿಸುತ್ತವೆ.

ಎರಡು ಮೈಲಿ ಪಶ್ಚಿಮಕ್ಕಿರುವ "ಸ್ವಯಂಭೂನಾಥ" ಕ್ಷೇತ್ರವೂ ಅಷ್ಟೇ ಪ್ರಾಚೀನ. ಇದರ ಬಳಿ ಬೌದ್ಧ ಮಂದಿರಗಳೂ, ಗೊಂಬೆಗಳೂ, ಸನ್ಯಾಸಿ ಮಠಗಳೂ, ಪ್ರಾಚೀನ ವಿಗ್ರಹಗಳೂ ಲೋಹಗಳ ಕಲಾಕೃತಿಗಳೂ ತುಂಬಿವೆ.

ಸಿಡುಬಿನ ಅಧಿದೇವತೆಯೆಂದು ಪೂಜಿಸಲ್ಪಡುವ 'ಶೀತಳಾದೇವಿ'ಯ ಮಂದಿರವೂ ಪಕ್ಕದಲ್ಲಿಯೇ ಇದೆ.

'ತುಂಡೀಖೇಲ್'ನಲ್ಲಿ ವ್ಯಾಯಾಮ, ವಿನೋದ ವಿಹಾರ, ಕುದುರೆ ಓಟ ಸ್ಪರ್ಧೆ, ವಸ್ತು ಪ್ರದರ್ಶನ ಇತ್ಯಾದಿಗಳು ಸಾಧಾರಣ. 'ದುರ್ಗಾ ಪೂಜೆ' ವೇಳೆ–ದಸರಾ ಹಬ್ಬದ ಒಂಭತ್ತನೇ ದಿನ ಭದ್ರಕಾಳಿಗೂ ಭೈರವನಿಗೂ 'ಪ್ರಾಣಿಬಲಿ' ಅರ್ಪಿಸುವುದೂ ಇಲ್ಲಿ!

ಉತ್ಸವಗಳು

ನೇಪಾಳದಲ್ಲಿ ಅನುಷ್ಠಾನದಲ್ಲಿರುವುದು ವಿಕ್ರಮ ಶಕ. ವೈಶಾಖ ಮಾಸದ ಮೊದಲ ದಿನವೇ 'ಯುಗಾದಿ' ಹಬ್ಬ. ಫಾಲ್ಗುಣ

ನೀವಿನ್ನೂ ಮತದಾರರಾಗಿಲ್ಲವೆ?

1—1—1971ರಲ್ಲಿ 21 ವರ್ಷ ವಯಸ್ಸಾಗಿರುವ ಭಾರತೀಯ ನಾಗರಿಕರು ಯಾರೂ ಈ ಅವಕಾಶ ಕಳೆದುಕೊಳ್ಳಬಾರದು

ಮತದಾರರ ಪಟ್ಟಿ ತಯಾರಿಸುವ ಕಾರ್ಯಕರ್ತರು ಈಗ ಮನೆಮನೆಗೆ ಭೇಟಿ ಕೊಡುತ್ತಿದ್ದಾರೆ. ಅವರು ನಿಮ್ಮ ಮನೆಗೆ ಬಂದಾಗ ಅರ್ಹರಾಗಿರುವ ಎಲ್ಲರನ್ನೂ ಪಟ್ಟಿಯಲ್ಲಿ ಸೇರಿಸಿರಿ. ಮತದಾರರ ಕಾರ್ಡನ್ನು ಕೇಳಿ ಪಡೆಯಿರಿ. ಈ ಕಾರ್ಡನ್ನು ಸುರಕ್ಷಿತವಾಗಿಟ್ಟುಕೊಳ್ಳಿರಿ.

ಕಾರ್ಯಕರ್ತರು ನಿಮ್ಮ ಮನೆಯನ್ನು ಸಂದರ್ಶಿಸದೆ ಇದ್ದಲ್ಲಿ ಹಾಗೂ ಮತದಾರರ ಕಾರ್ಡನ್ನು ಕೊಡದೆ ಇದ್ದಲ್ಲಿ ಸಮೀಪವಿರುವ ತಹಶೀಲ್ದಾರರಿಗೆ ಅಥವಾ ಬಿ. ಡಿ. ಒ.ಗೆ ಇಲ್ಲವೆ ರೆವಿನ್ಯೂ ಆಫೀಸರರಿಗೆ ತಿಳಿಸಿರಿ.

ಎಸ್. ಪಿ. ಸೆನ್‌ವರ್ಮಾ
ಚೀಫ್ ಇಲೆಕ್ಷನ್ ಕಮಿಷನರ್
ಫಾರ್ ಇಂಡಿಯಾ

davp 71/56

ನೂಸದ ಏಳನೇ ದಿನ "ರಾಷ್ಟ್ರೀಯ ಪ್ರಜಾತಂತ್ರ ದಿನ". ವಿಕ್ರಮ ಸಂವತ್ಸರ-2007ರ ಫಾಲ್ಗುಣ ಏಳರಂದು ತ್ರಿಭುವನ ಮಹಾರಾಜರು ತಮ್ಮ ಪ್ರಜೆಗಳ ಬೆಂಬಲದಿಂದ "ರಾಣಾ"ರ ಸ್ವೇಚ್ಛಾಧಿಪತ್ಯವನ್ನು ಕೊನೆಗೊಳಿಸಿದ್ದರು.

ಉತ್ಸವಗಳ ಪೈಕಿ 'ಶಿವರಾತ್ರಿ' ಪ್ರಧಾನವಾದುದು. ಶ್ರೀ ಪಶುಪತಿನಾಥ ದೇವಾಲಯದಲ್ಲಿ ಅಂದು ಎಲ್ಲಿಲ್ಲದ ವಿಜೃಂಭಣೆ. ಆ ವೇಳೆಗೆ ವಿವಿಧ ರಾಷ್ಟ್ರಗಳಿಂದಲೂ ಬಹುಸಂಖ್ಯೆಯಲ್ಲಿ ಸಂದರ್ಶಕರು ಆಕರ್ಷಿಸಲ್ಪಡುವರು. 'ಮಹಾದೀಪ', "ಅಖಂಡದೀಪ", 'ಲಕ್ಷದೀಪ' (ಲಕ್ಷ ಬತ್ತಿ) ಇತ್ಯಾದಿ ಘೋಷಗಳೊಂದಿಗೆ ಸಂಕೀರ್ತನೆ-ಆರಾಧನೆಗಳಲ್ಲಿ ತಲ್ಲೀನರಾಗಿ ಭಕ್ತಾದಿಗಳೆಲ್ಲ ಜಾಗರಣೆ ಮಾಡುವರು.

'ದಶಾಯನ್'-ದಸರಾ ಹದಿನೈದು ದಿನಗಳವರೆಗೂ ವಿಸ್ತರಿಸಿರುತ್ತದೆ. ಶ್ರೀರಾಮನು ರಾವಣನನ್ನು ನಿಗ್ರಹಿಸಿದ ದಿನದ ಸ್ಮರಣೆಗಾಗಿ ಭಾರತದ ಹಲವೆಡೆಗಳಂತೆ ನವರಾತ್ರಿ ಆಚರಿಸಲ್ಪಡುತ್ತಿದೆ. 'ದುರ್ಗಾ ಪೂಜೆ'ಗಾಗಿಯೇ ಮುಡಿಪಾದ ಈ ದಿನಗಳಲ್ಲಿ ದೇವಿ-ದುರ್ಗೆ-ಭವಾನಿ-ಭಗವತಿ-ಲಕ್ಷ್ಮಿ-ಸರಸ್ವತಿ ಇತ್ಯಾದಿ ಹೆಸರಿನಲ್ಲಿ ಜಗನ್ಮಾತೆಗೆ ಪೂಜೆಗಳಾಗುತ್ತವೆ.

'ಮಹಾಷ್ಟಮಿ' ಅಥವಾ 'ಕಾಳರಾತ್ರಿ' ಎಂಬ ಉತ್ಸವವು ಶ್ರೀ ದುರ್ಗಾ ಭವಾನಿ ಕ್ಷೇತ್ರದಲ್ಲಿ ಜರಗುತ್ತದೆ. ವಿಶಿಷ್ಟ ಆಚರಣೆಗಳೊಂದಿಗೆ ಆಡುಗಳನ್ನೂ ಕೋಣಗಳನ್ನೂ ದೇವಿಗೆ 'ಬಲಿ' ಅರ್ಪಿಸುವುದಿದೆ.

'ದುರ್ಗಾ ಪೂಜೆ'ಯ ದಿನಗಳಲ್ಲಿ ತಾಂತ್ರಿಕ ಬುದ್ಧ ಮತಾವಲಂಬಿಗಳು ತಂತಮ್ಮ 'ಖಡ್ಗ ಯಾತ್ರೆ'ಗಳನ್ನು ಪೂರೈಸುವರು.

"ಹೋಳಿ" ಹಬ್ಬವು ವಿನೋದಗಳ ಹಾಗೂ ಆಹ್ಲಾದ ಪ್ರಕಟಣಾ ದಿನಗಳು. ಹಳೆಯ ವಸಂತಪುರ ಅರಮನೆಯ ವಠಾರದಲ್ಲಿ ಸಿಂಹಾಸನ ಮಂದಿರದ ಅಂಗಳದಲ್ಲಿ ತಳಿರುತೋರಣಗಳಿಂದ ಅಲಂಕೃತವಾದ-ಒಂದು ದೊಡ್ಡ ಕಂಬವನ್ನು ನಾಟಿ, ಅದರ ತುದಿಯಲ್ಲಿ ವರ್ಣರಂಜಿತ ಕೊಡೆಯನ್ನಿರಿಸುವದರೊಂದಿಗೆ ಈ ಹಬ್ಬ ಪ್ರಾರಂಭ.ಎಂಟು ದಿನಗಳ ಈ ಹಬ್ಬದ ವೇಳೆ ವಿವಿಧ ಬಣ್ಣಗಳ ನೀರನ್ನು ಜನರು ಅತ್ತಿತ್ತ ಪರಸ್ಪರ ಓಕುಳಿ ಅಥವಾ ಸಿಂಪನೆ ಮಾಡುವುದರಲ್ಲೇರ್ಪಡುವ ವಿಧಾನಗಳೇ ಇದರ ವಿನೋದ. ಎಂಟನೇ ದಿನ ಧ್ವಜಸ್ತಂಭವನ್ನು ಮುಗುಚಿಹಾಕಿ ಅದಕ್ಕೆ ಬೆಂಕಿ ಹಚ್ಚುವರು. ಹಾಗೆ ಆ ಕಂಬ ಬೂದಿಯಾಗುವುದರೊಂದಿಗೆ "ಕಾಮದಹನ" ಸಮಾರಂಭವು ಸಮಾರೋಪಗೊಳ್ಳುವುದು

"ತಿಹಾರ್" (ದೀಪಾವಳಿ) ಹಬ್ಬ ಐದು ದಿನ. ಮಹಾಲಕ್ಷ್ಮಿಯ ಪೂಜೆ ಸಹಿತ ವಿವಿಧ ಕಾರ್ಯಕ್ರಮಗಳು. ಸಮೃದ್ಧಿಯ ಹಬ್ಬ. ಮೊದಲ ದಿನ ಕಾಗೆಗಳಿಗೆ ಆಹಾರ ದಾನ' (ಕಾಕತಿಹಾರ್) ಕಾಗೆಯು ಯಮದೂತನೆಂಬ ವಿಶ್ವಾಸದಿಂದ ಆತನ ಪ್ರೀತ್ಯರ್ಥ ಈ ಅನ್ನದಾನ.

ಎರಡನೇ ದಿನ 'ಶುನಕ ತಿಹಾರ್'— ನಾಯಿಗಳಿಗೆ ಔತಣ ನೀಡುವ ಹಬ್ಬ. ನಾಯಿಗಳ ಕೊರಳಿಗೆ ಹೂಮಾಲೆ ಹಾಕಿ ಮೆರವಣಿಗೆ ಬೇರೆ! ನಾಯಿಯು ಯಮಧರ್ಮರಾಯನ ದ್ವಾರಪಾಲಕನಾದ ಭೈರವನ ವಾಹನವೆಂಬ ವಿಶ್ವಾಸ ಈ ಆಚರಣೆಗೆ ಪ್ರೇರಕವಾಗಿರಬೇಕು.

"ಗಾಯ್ ತಿಹಾರ್" (ಗೋಪೂಜೆ) ಮೂರನೇ ದಿನ. ಗೋವುಗಳು ಮಹಾಲಕ್ಷ್ಮಿಯ ಅವತಾರ—ಭಾಗ್ಯಸೂಚಕ.

ನಾಲ್ಕನೇ ದಿನ "ಮಕ್ಕಳ ಹಬ್ಬ" (ಬಾಲತಿಹಾರ್). ಬಾಲಿಕೆಯರೂ ಬಾಲಕರೂ ಗುಂಪು ಗುಂಪಾಗಿ ಹಾಡಿ ನಲಿದು ಮನೆಮನೆಗಳನ್ನೂ ಸಂದರ್ಶಿಸುವರು; ಕರೆದು ಸತ್ಕರಿಕೊಡುವ ಖಾದ್ಯಗಳನ್ನೂ ನಾಣ್ಯಗಳನ್ನೂ ಸ್ವೀಕರಿಸುವರು.

ಕೊನೆಯ ದಿನ ಸಹೋದರ-ಸಹೋದರಿಯರಿಗಾಗಿಯೇ ಮೀಸಲು. ಪರಸ್ಪರ ಸಂದರ್ಶನ, ಕುಶಲ ಪ್ರಶ್ನೆ, ವಿನೋದ, ಉಡುಗೊರೆ, ಔತಣ ಸತ್ಕಾರ.... ಇತ್ಯಾದಿ.

ಹಬ್ಬದ ದಿನಗಳಲ್ಲಿ ದೀಪಾಲಂಕಾರ ಎಲ್ಲಾ ಮನೆಗಳಲ್ಲಿಯೂ ವಿಶೇಷ.

ತುಳಸೀ ಪೂಜೆ

"ಶ್ರೀಹರಿಬೋಧಿನಿ ಏಕಾದಶಿ" ದಿನದಂದು ಜನರು ತುಳಸೀಗಿಡಗಳನ್ನು ಪೂಜಿಸುವರು. ಉಪವಾಸ ವ್ರತವೂ! ಆ ದಿನ ಶ್ರೀನಾರಾಯಣ ಬುದ್ಧ ನೀಲಕಂಠ ಕ್ಷೇತ್ರದಲ್ಲಿ ವಿಶೇಷ. ಮಹಾವಿಷ್ಣುವು ನಾಲ್ಕು ದಿನಗಳ ಯೋಗನಿದ್ರೆಯಿಂದ ಎಚ್ಚರಗೊಳ್ಳುವ ದಿನ ಅದೆಂಬ ವಿಶ್ವಾಸ.

"ಬಾಲಚತುರ್ದಶಿ"ಯಂದು ಶ್ರೀ ಪಶುಪತಿನಾಥ ಕ್ಷೇತ್ರದ ಸಮೀಪವಿರುವ "ಮೃಗಸ್ಥಲಿ" ಎಂಬ ವನ ಪ್ರದೇಶವನ್ನು ಪ್ರವೇಶಿಸಿ ಅಲ್ಲಿ ಅಕ್ಕಿ, ಹೂ, ಹಣ್ಣು ಮತ್ತಿತರ ನೈವೇದ್ಯಗಳನ್ನು ಸಮರ್ಪಿಸಿ ಜನರು ಪೂಜಿಸುವರು. ಪ್ರಾಯಶಃ ವನಪೂಜೆ—ಪಿತೃಗಾರಾಧನೆ ಈ ಆಚರಣೆಯ ಹಿಂದಿರಬೇಕು. ಅರಣ್ಯದಲ್ಲಿ ದೀಪಾರಾಧನೆ—ಭಜನೆ—ಸಂಕೀರ್ತನೆ—ರಾತ್ರಿಯಿಡೀ ವನವಾಸವೂ ಜಾಗರಣೆಯೂ!

"ಧಾನ್ಯಪೂರ್ಣಿಮಾ" ಸಾಮಾನ್ಯವಾಗಿ ನಮ್ಮಲ್ಲಿ ನವಾನ್ನ ಭೋಜನಕ್ಕೆ ಸಮಾನ.

"ನಾಗರಪಂಚಮಿ"ಯಂದು ಮನೆ ಹೊಸ್ತಿಲುಗಳಲ್ಲಿ ನಾಗನ ಚಿತ್ರಗಳನ್ನು ಬರೆದು ಶೃಂಗರಿಸಿ ಸರ್ಪಾರಾಧನೆ.

ಬಯಲುಗಳಲ್ಲಿ ಭತ್ತದ ಬೇಸಾಯ ಮುಗಿದಾಗ "ಘಂಟಾಕರ್ಣ" ಎಂಬ ಹೆಸರ ಉತ್ಸವ.

"ಗಾಯ್ ಯಾತ್ರ" (ದನಗಳ ಮೆರವಣಿಗೆ) ಎಂಟು ದಿನಗಳ ಹಬ್ಬ. ಗೋವುಗಳಿಗೆ ಹಾರಗಳನ್ನು ತೊಡಿಸಿ ಘೋಷಯಾತ್ರೆಯಲ್ಲಿ ಒಂದು ವಿಶೇಷವೆಂದರೆ- ಯಾವುದಾದರೂ ಮನೆಯಲ್ಲಿ ಆ ವರ್ಷ ಯಾರಾದರೂ ದೈವಾಧೀನರಾಗಿದ್ದರೆ ಹಾಗೆ ಮೃತಪಟ್ಟ ಮನೆಗಳಿಂದ ಗೋವುಗಳ ಮುಖವಾಡ ಧರಿಸಿದವರೂ ಇದೇ ಘೋಷ ಯಾತ್ರೆಯಲ್ಲಿ ಸೇರಿರುವುದು! ಕೊಂಬುಗಳನ್ನು ಕುಲುಕಿ ನಡೆಯುವ ಗೋವುಗಳೂ ಗೋಮುಖ ಧಾರಿಗಳಾಗಿ ತಲೆಯಲ್ಲಾಡಿಸಿ ನರ್ತಿಸುತ್ತಲೂ ಹಾಡುತ್ತಲೂ ಹರ್ಷಾರವಗಳನ್ನೆಬ್ಬಿಸುತ್ತಲೂ ಬೀದಿಬೀದಿಗಳಲ್ಲಿ ಹಾದುಹೋಗುವ ಈ ಮೆರವಣಿಗೆ ಹೃದಯಹಾರಿ ದೃಶ್ಯ.

ಹೀಗೆಯೇ "ಘೋಡಾ ಯಾತ್ರ" (ಕುದುರೆ ಮೆರವಣಿಗೆ)ಯೂ ಇದೆ. ಆ ವೇಳೆ ಕುದುರೆ ಜೂಜುಗಳಿಗೂ ಅವಕಾಶ. ಶ್ರೀ ಭದ್ರಕಾಳಿ ಕನಕೇಶ್ವರಿ ಮತ್ತು ರಕ್ತಕಾಳಿಯರ ರಥೋತ್ಸವಗಳೂ ಇದೇ ವೇಳೆ.

"ಇಂದ್ರಯಾತ್ರ" ಕಾರ್ಯಕ್ರಮಗಳಲ್ಲಿ ಕೋಣಗಳ ಓಟದ ಸ್ಪರ್ಧೆಯೂ ಇದೆ. ಕೋಣಗಳ ಮಟ್ಟಿಗೆ ಈ ಸ್ಪರ್ಧೆ ಜೀವನ್ಮರಣ ಪ್ರಶ್ನೆ, ಕಾರಣ, ಸ್ಪರ್ಧೆಯಲ್ಲಿ ಸೋಲುವ ಮಹಿಷನನ್ನು ಭೈರವನಿಗೆ 'ಬಲಿ' ಸಮರ್ಪಿಸುವುದು ವಾಡಿಕೆ.

ಶುಚೀಕರಣ ಹಬ್ಬ

'ಸಿತ್ತಿ' ಹಬ್ಬದಂದು ನೇಪಾಳದ ವಿವಿಧ ಜಲಾಶಯಗಳ ಶುದ್ಧೀಕರಣ. ವಿಷ್ಣುಮತಿ ನದೀ ತೀರದಲ್ಲಿ ಸಂಭ್ರಮದ ಉತ್ಸವಾಚರಣೆ. ಶುಚೀಕರಣ- ರಾಜ್ಯದ ಆರೋಗ್ಯ ರಕ್ಷಣೆಯೇ ಈ ಆಚರಣೆಗೆ ಪ್ರೇರಕ ಶಕ್ತಿ.

"ಪಂಚದಾನ ಯಾತ್ರ" ಬೌದ್ಧರಿಗೇ ಮೀಸಲು. ಮುಂಡನವಾದ ತಲೆ; ಪೀತಾಂಬರ ಧಾರಿಗಳಾಗಿ ಕೈಯಲ್ಲಿ ಭಿಕ್ಷಾಪಾತ್ರ ಸಹಿತ ಬುದ್ಧ ಸನ್ಯಾಸಿಗಳು ಸಂದರ್ಶಿಸುವ ಮನೆಮನೆಗಳಲ್ಲಿಯೂ ಗೃಹಿಣಿಯರು ಸಂತೋಷದ ಸಾರ್ಥಕ್ಯ ಭಾವದಿಂದ- ಪರಿವ್ರಾಜಕನ ಭಿಕ್ಷಾಪಾತ್ರವನ್ನು ಧಾನ್ಯಗಳಿಂದ ತುಂಬುವರು.

ಬುದ್ಧ ಜಯಂತಿ, ಕೃಷ್ಣಾಷ್ಟಮಿ, ರಾಮನವಮಿ, ಇತ್ಯಾದಿ ಅನೇಕ ಇತರಹಬ್ಬಗಳೂ ಆಚರಣೆಯಲ್ಲಿವೆ.

(– ಸಂಗ್ರಹ)

● ●

ಪರಿವರ್ತನವೇ ಸೃಷ್ಟಿ ಜೀವನ ಆಗಿರುತ್ತದೆ. ಸ್ಥಿತವಾಗಿರುವುದು ಮೃತ್ಯು ನಿಶ್ಚೇಷ್ಟ ಶಾಂತಿ ಮರಣವಾಗಿರುತ್ತದೆ.

(ಜಯಶಂಕರ ಪ್ರಸಾದ)

ವಿಲಂಬ ಮಾಡುವುದಾದರೆ ಭಗ್ನಿಯರಲ್ಲಿ ನನ್ನ ಅಭಿರುಚಿಯಿಲ್ಲ. ನನ್ನ ಅಭಿರುಚಿ ಪೂರಾ ಕೆಲಸ ಮಾಡುವುದರಲ್ಲಿರುತ್ತದೆ. (ಜವಾಹರಲಾಲ ನೆಹರು)

ಇಲ್ಲಿಯವರೆಗೆ ಯಾವ ಮನುಷ್ಯನೂ ನಕಲು ಮಾಡಿ ಮಹಾನ್ ಪುರುಷನಾಗಿಲ್ಲ.

(ಜಾನ್‌ಸನ್)

ನವಯುಗ

ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!



ಕಾಂಗ್ರೆಸ್ ಬಣದ ಸ್ವಾಹಾ ನೀತಿ

(ಐದನೇ ಪುಟದಿಂದ)

ಚ್ಚತ್ತ್ರ ತಾರಕೇಶ್ವರಿ ಪುನಃ ರಾಜಕೀಯಾ ಗಸದಲ್ಲಿ ತಾರೆಯಾಗಬೇಕೆಂದಿದ್ದಾರೆ ಅವರಿರುವವಾದರೂ ಇನ್ನೇತಕ್ಕೆ?

ಹೀಗೆ ಬೇಂಕ್ ರಾಷ್ಟ್ರೀಕರಣ, ಮೈತ್ರಿ, ಇಂದಿರಾ ಹಟಾವೋಗಳೇ ತಮ್ಮನ್ನು ಬೀಳಿಸಿದವೆಂದು ಕಂಡುಕೊಂಡಿರುವ ಪತಿತ ಸಂಸ್ಥಾಕಾಂಗ್ರೆಸ್ಸಿಗರು ಇದರ ಹೊಣೆಯ ಹೊರೆಯನ್ನು ವಯೋವೃದ್ಧ ನಿಜಲಿಂಗಪ್ಪಾದಿಗಳ ತಲೆಯ ಮೇಲೆ ಹೊರಿಸುತ್ತಿದ್ದಾರೆ. ಸಂಸ್ಥಾ ಕಾಂಗ್ರೆಸ್ಸಿನ ಪತಿತರೀಗ ತಮ್ಮೊಳಗೆ ಹೊಡೆದಾಡಿಕೊಳ್ಳಲು ಪ್ರಾರಂಭಿಸಿದ್ದಾರೆ. ಯಸ್. ಎನ್. ಮಿಶ್ರಾ ಹಾಗೂ ಯಸ್. ಕೆ ಪಾಟೀಲರು ನಡೆದುಕೊಂಡಿರುವ ರೀತಿ ಇದಕ್ಕೊಂದು ಹೊಸ ಉದಾಹರಣೆ. ನಿಜಲಿಂಗಪ್ಪನವರು ತಪ್ಪಿಸಿಕೊಳ್ಳಲು ನೋಡುತ್ತಿರುವಂತೆ ಆ ಸ್ಥಾನಕ್ಕೇರಲು ಹಲವರಿಗೆ ಆಕೆ ಇರುವನು ಸ್ವಾಭಾವಿಕವೇ ಇದೆ ಪಾಟೀಲರು ಕೆಲವಾರು ಹೆಸರುಗಳನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಿರುವರು. ಅದರಲ್ಲಿ ಮಿಶ್ರರವರ ಹೆಸರು ಇಲ್ಲ. ಮಿಶ್ರರವರಿಂದ ಸುಮ್ಮಗಿರಲು ಸಾಧ್ಯವೇ? ಅವರು ಪಾಟೀಲರ ಮೇಲೆ ಅಪಪ್ರಚಾರಕ್ಕಾರಂಭಿಸಿದರು. ಪಾಟೀಲರು ಪಾಟೀಸವಾಲು ಹಾಕಿ ಮಿಶ್ರರ ಬಾಯಿ ಮುಚ್ಚಿಸಿದರು ಒಳ್ಳೆ ಮಿಶ್ರರ ರಾಜಕೀಯವಿದು!

ಹಳೆ ತಲೆಗಳು ಪದವಿ ತ್ಯಜಿಸಲೂ ಹೊಸ ತಲೆಗಳು ಅದನ್ನು ಗಿಟ್ಟಿಸಿಕೊಳ್ಳಲು ಷಡ್ಯಂತ್ರ ನಡೆಸುವುದಕ್ಕೂ ಆಗಲೇ ಆರಂಭಿಸಿಬಿಟ್ಟಿದ್ದಾರೆ. ಕಾಂಗ್ರೆಸ್ಸಿಗೆ ಇದೇನೂ ಹೊಸತಲ್ಲ, ಬಾಬು ಅರವಿಂದ ಘೋಷ, ಕೇಶವ ಬಲಿರಾಂ ಹೆಡ್ಗೇವಾರ್, ಕೃಪಲಾನಿ, ರಾಜಾಜಿ ಮುಂತಾದವರನ್ನು ಕಾಂಗ್ರೆಸ್‌ನಿಂದ ಕಾಂಗ್ರೆಸ್ಸಿಗರೇ ಓಡಿಸಿಬಿಟ್ಟಿರುವುದಿಲ್ಲವೇನು? ಅಧ್ಯಕ್ಷ ಸ್ಥಾನಕ್ಕಾಗಿ ಪೈಪೋಟಿ ನಡೆದು ಸ್ವತಃ ಮೋಹನದಾಸ ಕರಮಚಂದ ಗಾಂಧೀಜೀಯವರೇ ಪಟ್ಟಾಭಿಯ ಪರಾಭವ ತನ್ನ ಸೋಲೆಂದು ಅಭಿಪ್ರಾಯ ವ್ಯಕ್ತಪಡಿಸಿರುವಾಗ ಬಾವೀ ನಾಲ್ಕಾಣೆ ಅಂದರೆ ಇಪ್ಪತ್ತೈದು ಕಾಸಿನ ಕಾಂಗ್ರೆಸ್ಸಿಗರು ಕಾಂಗ್ರೆಸ್ ಮಾಡದೆ ಸುಮ್ಮಗಿರುವುದುಂಟೇನು?

ಮೊಸರನ್ನ ತಿಂದ ತೋಳ ತನ್ನ ಕೈಯನ್ನು ಮೇಕೆಯ ಮುಖಕ್ಕೆ ತಾಗಿಸಿತ್ತಂತೆ. ಇಲ್ಲಿ ಪಟ್ಟ ತಿಂದ ಸಂಸ್ಥಾ ಕಾಂಗ್ರೆಸ್ಸಿಗರು ಪಾಪದ ಮುಖಂಡರಮುಖಕ್ಕೆ ತಾಗಿಸುತ್ತಿದ್ದಾರೆ ಸಂಸ್ಥಾ ಕಾಂಗ್ರೆಸ್ಸಿಗರು ಈಗ ಅಂತರಿಕ ಕಲಹಕ್ಕೆ ಸೊಂಟಕಟ್ಟಿದ್ದಾರೆ. ತಮ್ಮ ಸೋಲಿನ ನೈಜಕಾರಣವೇನೆಂಬುದನ್ನು ಕಂಡುಕೊಳ್ಳಲು ಅವರು ಸಿದ್ಧರಿಲ್ಲ ನಿರಾಶೆಯ ಅಂಧಕಾರವನ್ನೇ ಅವರೆಲ್ಲೆಲ್ಲೂ ಕಾಣುತ್ತಿದ್ದಾರೆ. ಇದೀಗ ಭಾರತದ ರಾಜಧಾನಿ ಡಿಲ್ಲಿಯಲ್ಲಿ ರಾಜಕೀಯ ಉತ್ಸಾಹ, ಧೈರ್ಯದ ದೀಪ ಕಂಡು ಬಂದಿದೆಯಾದರೂ ಸಂಸ್ಥಾ ಕಾಂಗ್ರೆಸ್ಸಿಗರು ತಾವು ಕಾಳರಾತ್ರಿಯಲ್ಲಿರುವದಾಗಿಯೂ ಇಂದಿರಾ ಕಾಂಗ್ರೆಸ್ಸಿನ ಡೇರೆಯಲ್ಲಿ ಮಾತ್ರ ಬೆಂಕಿ ಕಂಡುಬರುತ್ತಿದೆಯೆನ್ನುತ್ತಿದ್ದಾರೆ

ಆ ಡೇರೆಯಲ್ಲಿರುವ ಇಂದಿರಾ ರಾಣಿಯವರಾದರೂ ಸುಮ್ಮಗೆ ಪ್ರೇಕ್ಷಕರಾಗಿ ಉಳಿದಿರುವುದಿಲ್ಲ. ಅವರು ಮೈಸೂರು, ಗುಜರಾಥಿನಲ್ಲಿದ್ದ ಸಂಸ್ಥಾ ಕಾಂಗ್ರೆಸ್ಸಿನ ಮಂತ್ರಿಮಂಡಲವನ್ನು ಗುಡಿಸಿಬಿಟ್ಟಿತು ಇನ್ನು ಆ ಪಕ್ಷವನ್ನು ಬುಡಸಹಿತ ಕಿತ್ತೊಗೆಯಲು ಸೆರಗು ಬಿಗಿದುಕೊಂಡಿರುವರು. ಅದಕ್ಕೆ ಸರಿಯಾಗಿ ಉರಿಯುತ್ತಿರುವ ಕಾಡ್ಗಿಚ್ಚಿಗೆ ಗಾಳಿ ಬೀಸುವಂತೆ ಸಂಸ್ಥಾ ಕಾಂಗ್ರೆಸ್ಸಿಗರೇ ಇಂದಿರಾಗ್ನಿಗೆ ಗಾಳಿ ಹಾಕುತ್ತಿದ್ದಾರೆ. ಸಂಸ್ಥಾ ಕಾಂಗ್ರೆಸ್ಸನ್ನು ಆಡಳಿತ ಕಾಂಗ್ರೆಸ್ಸ್ ಸ್ವಾಹಾ ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ ಇತ್ತ ಒಡೆದ ಕಾಂಗ್ರೆಸ್ಸ್ ನುಚ್ಚುನೂರಾಗಲು ಪ್ರಯತ್ನಿಸುತ್ತಿದೆ ಸಂಸ್ಥಾ ಕಾಂಗ್ರೆಸ್ಸ್ [illegible] ಪ [illegible] ಸ [illegible] ಸುತ್ತಿ [illegible] ಪ್ರಶ್ನೆಗೆ ಅವಕಾಶ [illegible] ಗಿದೆ [illegible] ರ ಮಿಶ್ರನ ಕಾಲದ [illegible] ಪಾಲಾಗಿರುವಂತೆ [illegible] ಗಿರುವಂತೆ [illegible] ತ್ರಿವೆ

—ಶಿವಶಂಕರ

ಇಳಾ ಬೇಸಾಯದಲ್ಲೊಂದು ಹೊಸ ಪ್ರಯೋಗ

'ಇಳಾ ಬೇಸಾಯ ಪದ್ಧತಿ' ಕೃಷಿ ಕ್ಷೇತ್ರದಲ್ಲೊಂದು ಹೊಸ ಪ್ರಯೋಗ- ಕೊಟ್ಟರತಾ ಸಮುದಾಯ ಅಭಿವೃದ್ಧಿ ಬ್ಲಾಕಿನ ಕರೀಪ್ರಾ ಪಂಚಾಯತಿಯವರು ಈ ಹೊಸ ಪ್ರಯೋಗವನ್ನು ಆರಂಭಿಸಿದ್ದಾರೆ. ಭತ್ತದ ಇಳುವರಿಯನ್ನು ಎರಡರಷ್ಟು ಅಥವಾ ಅದಕ್ಕಿಂತ ಹೆಚ್ಚಿಸಲು ಈ ಹೊಸ ಪದ್ಧತಿ ಅತ್ಯಂತ ಸಹಾಯಕವಾಗುವುದು. ಉತ್ಪಾದನಾ ಅಭಿವೃದ್ಧಿಗೆ ಅಧಿಕ ಪ್ರೋತ್ಸಾಹ ನೀಡುವ ಈ ವ್ಯವಸ್ಥೆ ಜಂಟಿ ಬೇಸಾಯ ಅಥವಾ ಸಾಮೂಹಿಕ ಬೇಸಾಯ ವ್ಯವಸ್ಥೆಗಿಂತ ಭಿನ್ನವಾಗಿದೆ ಈ ವ್ಯವಸ್ಥೆಯ ಒಂದು ವೈಶಿಷ್ಟ್ಯ ಏನೆಂದರೆ, ರೈತರು ಪರಸ್ಪರ ಒಪ್ಪಿಗೆಯಿಂದ ಉತ್ಪಾದನೆಯ ಒಂದು ಸಾಮಾನ್ಯ ಕ್ರಮವನ್ನು ಅನುಸರಿಸುತ್ತಿದ್ದಾರೆ. ಒಂದು ಬ್ಲಾಕನ್ನು ಆರಿಸಿಕೊಂಡು ಏಕಕಾಲದಲ್ಲಿಯೇ ಅಧಿಕ ಫಸಲು ನೀಡುವ ಬೀಜಗಳನ್ನು ಬಿತ್ತುತ್ತಾರೆ ಇಂತಹ ಪದ್ಧತಿಯಲ್ಲಿ ತನ್ನ ಜಮೀನುಗಳ ಮೇಲೆ ರೈತ ಹೊಂದಿರುವ ವೈಯಕ್ತಿಕ ಒಡೆತನಕ್ಕೆ ಯಾವುದೇ ಚ್ಯುತಿ ಬರುವುದಿಲ್ಲ. ರೈತನಿಗೆ ಸಕಾಲದಲ್ಲಿ ರಾಸಾಯನಿಕ ಗೊಬ್ಬರ, ಮತ್ತು ಸೌಕರ್ಯಗಳು ಲಭಿಸುತ್ತವೆಯಲ್ಲದೇ ತನ್ನ ಹೊಲವನ್ನೇ ಅವನು ಉಳುತ್ತಾನೆ.

ಕರಿಪ್ರಾ ಪಂಚಾಯತ ಪ್ರದೇಶ 9 ಚದುರು ಮೈಲು ವಿಸ್ತಾರವಾಗಿದೆ. ಜನಸಂಖ್ಯೆ 1961ರ ಜನಗಣತಿಯ ಅಂಕಿ-ಅಂಶಗಳ ಪ್ರಕಾರ ಹೇಳುವುದಾದರೆ, 18,0''0 ದಷ್ಟಿದೆ. ಎರಡು ಬೆಳೆ ತೆಗೆದುಕೊಳ್ಳಲು ಬರುವಂತಹ 750 ಎಕರೆ ಭೂಮಿಯಿದೆ. ಈ ಪಂಚಾಯತಿ ಪ್ರದೇಶದಲ್ಲಿ 1,700 ಮಂದಿ ಸಣ್ಣ ಹಿಡುವಳಿದಾರರಿದ್ದಾರೆ. ಪ್ರತಿಯೊಬ್ಬರು 3ಎಕರೆ ಜಮೀನು ಹೊಂದಿದ್ದಾರೆ. 1969ರಲ್ಲಿ ಸುಮಾರು 118 ಎಕರೆ ಪ್ರದೇಶದಲ್ಲಿ ಅಧಿಕ ಇಳುವರಿ ಕೊಡುವ ಬೀಜಗಳನ್ನು ಬಿತ್ತಲಾಯಿತು. ಇನ್ನುಳಿದ 632 ಎಕರೆ ಜಮೀನು 1,425 ಮಂದಿ ರೈತರ ಒಡೆತನದಲ್ಲಿದ್ದಿತು ಈ ರೈತರು ತಮ್ಮ ಒಡೆತನದಲ್ಲಿನ ಜಮೀನಿನಲ್ಲಿ ಸ್ಥಾನಿಕ ಭತ್ತದ ನಮೂನೆಗಳಿಂದ ಬೆಳೆ ತೆಗೆದುಕೊಳ್ಳುತ್ತಿದ್ದರು. ನಿರ್ದಿಷ್ಟವಾದ ಒಂದು ಮಟ್ಟಕ್ಕಿಂತಲೂ ಹೆಚ್ಚಿನ ಉತ್ಪಾದನೆ ಸಾಧ್ಯವಾಗಿರಲಿಲ್ಲ. ಉತ್ಪಾದನೆ ತೀರ ಕಡಿಮೆ ಎಂದರೆ ಎಕರೆಗೆ 600 ಕೆ ಜಿ ಗಳಷ್ಟಿದ್ದಿತು ಸಂಪ್ರದಾಯಸ್ಥ ರೈತರು ಹೊಸದೊಂದು ಬೇಸಾಯ ವ್ಯವಸ್ಥೆಗೆ ಹೊಂದಿಕೊಳ್ಳುವಂತೆ ಮಾಡುವ ಕೆಲಸ ಸುಲಭವಾಗಿರಲಿಲ್ಲ. ಬೇಸಾಯದ ಬಗ್ಗೆ ಅವರಲ್ಲಿ ಆಳವಾಗಿ ಬೇರೂರಿದ್ದ ಹಳೆಯ ಕಲ್ಪನೆಗಳನ್ನು ನಿವಾರಿಸಿ, ಅಧಿಕ ಇಳುವರಿ ಹೊಸ ಬಿತ್ತನೆಯ ಬೀಜಗಳ ಬಳಕೆಗೆ ಹೊಂದಿಕೊಳ್ಳುವಂತೆ ಮಾಡಬೇಕಾಗಿದ್ದಿತು.

ನೀರಾವರಿ ಸೌಕರ್ಯಗಳ ಅಭಾವ, ಸಕಾಲದಲ್ಲಿ ರಾಸಾಯನಿಕ ಗೊಬ್ಬರಗಳನ್ನು ಖರೀದಿ ಮಾಡಲು ಹಣಕಾಸಿನ ಅಡಚಣೆ ಹಾಗೂ ಹಳೆಯ ಕಾಲದ ಬೇಸಾಯ ಪದ್ಧತಿ ಇತ್ಯಾದಿ ಬೇಸಾಯದ ಉತ್ಪಾದನೆ ಕಡಿಮೆಯಾಗಲು ಕಾರಣವಾಗಿದ್ದವು. ಭತ್ತದ ಎರಡು ಬೆಳೆಗಳನ್ನು ತೆಗೆದುಕೊಂಡಾಗಲೂ ಉತ್ಪಾದನೆ 1165 ಮೆಟ್ರಿಕ್ ಟನ್‌ಗಳಷ್ಟಿದ್ದಿತು. ಹೊಸ ವಿಧಾನದ ಉಪಯುಕ್ತತೆಯನ್ನು ಮನವರಿಕೆ ಮಾಡಿಕೊಡುವುದಕ್ಕಾಗಿ ಪಂಚಾಯತಿ ದಿಟ್ಟತನದಿಂದ ಮುನ್ನಡೆಯಿತು. ಪಂಚಾಯತಿಯ ಪ್ರಚಾರಕರು ಮನೆ ಮನೆಗೂ ಹೋಗಿ ಹೊಸ ಪದ್ಧತಿಯ ಪ್ರಯೋಜನವನ್ನು ವಿವರಿಸಿದರು. ಆಸಕ್ತರಾದ ಎಲ್ಲ ರೈತರನ್ನೂ ಒಂದೆಡೆ ಸೇರಿಸಿ ಹೊಸ ಬೇಸಾಯ ವ್ಯವಸ್ಥೆಯ ವಿಷಯದಲ್ಲಿ ಒಂದು ಒಪ್ಪಂದಕ್ಕೆ ಬರಲಾಯಿತು ಭತ್ತದ ಬೆಳೆಯ ಪ್ರದೇಶವನ್ನು ಒಂಭತ್ತು ಇಳಾಗಳಲ್ಲಿ ವಿಭಾಗಿಸಲಾಯಿತು. ಪ್ರತಿಯೊಂದು ಇಳಾ, ರೈತರ ಸಮಿತಿಯ ನಿಯಂತ್ರಣದಲ್ಲಿತ್ತು ಪಂಚಾಯತ ಮಟ್ಟದಲ್ಲಿ ಸಮನ್ವಯ ಸಾಧಿಸಲು ಒಂದು ಕೇಂದ್ರ ಮೇಲ್ವಿಚಾರಣಾ ಸಮಿತಿಯೂ ಇದ್ದಿತು. 1969-70ರ ಮೊದಲ ಸುಗ್ಗಿಯ ಕಾಲದಲ್ಲಿ ಪ್ರಯೋಗಕ್ಕಾಗಿ 10 ಎಕರೆ ವಿಸ್ತೀರ್ಣದ ಒಂದು ಇಳಾವನ್ನು ಆರಿಸಿಕೊಳ್ಳಲಾಯಿತು. ಈ ಇಳಾದಲ್ಲಿನ ಎಲ್ಲಾ ರೈತರೂ, ಒಂದೇ ಬಗೆಯ ಬಿತ್ತನೆಯ ಬೀಜಗಳನ್ನು ಉಪಯೋಗಿಸಿದರಲ್ಲದೇ ಎಲ್ಲಾ [illegible]

ಹೆಚ್ಚಿ [illegible] ಉತ್ಪಾದನೆ

[illegible] ಮು [illegible] ಗಳ [illegible] ಆದ್ದರಿಂದಾಗಿ ಬೇಸಾಯ ಉತ್ಪಾದನೆ 2ಪ [illegible] ಕೆ [illegible] ಯ ಮತ್ತೆ 30 ಎಕರೆಗಳನ್ನು ಇಳಾ [illegible] ಸರ್ಕಾರದ ಪ್ರೋತ್ಸಾಹದಿಂದ ಉತ್ತೇಜನ ಪಡೆದ ಕರಿಪ್ರಾ ಪಂಚಾಯಿತಿ ಮುಂದಿನ ಸುಗ್ಗಿಯ ಮತ್ತು 500 ಎಕರೆ ಜಮೀನನ್ನು ಹೊಸ ಬೇಸಾಯ ಪದ್ಧತಿಗೆ ಒಳಪಡಿಸಲು ಉದ್ದೇಶಿಸಿದೆ. ಈ ಪಂಚಾಯತಿಯ ಸಾಧನೆಯಿಂದಾಗಿ ಇತರ ಪಂಚಾಯತಿಗಳೂ ಮಾರ್ಗದರ್ಶನ ಪಡೆದಿವೆ. ●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

READ &
ADVERTISE IN
NAVAYUGA WEEKLY

ಬಾರುಬಡಿಯುವ

ಪೈಸೆಗಿಂತ ಕಲ್ಲುಹರಳು ಭಾರ

ಸಿಂಡಿಕೇಟಿನ ನಾಯಕಮಣಿ ನೀಲಂ ಸಂಜೀವ ರೆಡ್ಡಿ. ಕಾಂಗ್ರೆಸ್‌ನ ಒಂದು ಬಣ ಇವರನ್ನು ರಾಷ್ಟ್ರಪತಿ ಹುದ್ದೆಗೆ ಆರಿಸಿತು. ಇದು ಪ್ರಧಾನಿ ಗಾಂಧಿಗೆ ಅಪ್ರಿಯವೆನಿಸಿತು. ಅವರು ಆತ್ಮಸಾಕ್ಷಿಯನ್ನು ಜಾಗೃತಗೊಳಿಸಿದರು. ಶ್ರೀ ವರಾಹಗಿರಿ ವೆಂಕಟಗಿರಿಯವರನ್ನು ಗೆಲ್ಲಿಸಿದರು.

ಮೊದಲಿದ್ದ ಲೋಕಸಭಾ ಸ್ಪೀಕರ್ ಪದವಿಗೂ ರಾಜಿನಾಮೆ ಕೊಟ್ಟು ಸ್ಪರ್ಧೆಗಿಳಿದು ಸೋತರು ನೀಲಂ. ತಾತ್ಕಾಲಿಕ ರಾಷ್ಟ್ರಪತಿತನಕ್ಕೆ ಮತ್ತು ಉಪರಾಷ್ಟ್ರಪತಿ ಹುದ್ದೆಗೆ ರಾಜಿನಾಮೆ ನೀಡಿ ರಣಕ್ಕಿಳಿದು ಗೆದ್ದರು ವರಾಹಗಿರಿ. ಒಬ್ಬರ ಇದ್ದುದನ್ನೂ ಕಳೆದುಕೊಂಡರು; ಇನ್ನೊಬ್ಬರು ಬಯಸಿದ್ದನ್ನು ಗೆದ್ದುಕೊಂಡರ ಒಬ್ಬರಿಗೆ ಇಂದಿರಾ ರೊಚ್ಚು, ಮತ್ತೊಬ್ಬರಿಗೆ ಮೆಚ್ಚು.

ಕಾಂಗ್ರೆಸ್ ವಿಘಟನಾನಂತರ ನೀಲಂ ಸಿಂಡಿಕೇಟಿನಲ್ಲಿ ಉಳಿದರು; ಒಂದೊಮ್ಮೆ ಆಂಧ್ರದಲ್ಲಿ ತನ್ನ ಕೈವಾಡದ ಭೀಮಕಾಯ ಪ್ರದರ್ಶಿಸಿದ ಅವರು ತನ್ನ ದೇಶದಲ್ಲೇ ಅನಾಥರಾದರು. ಸಚಿವ, ಮುಖ್ಯ ಸಚಿವ, ಕೇಂದ್ರ ಸಚಿವ, ಕಾಂಗ್ರೆಸ್ ಅಧ್ಯಕ್ಷ, ಲೋಕಸಭಾಧ್ಯಕ್ಷ—ಹೀಗೆ ಹತ್ತಾರು ಉನ್ನತೋನ್ನತ ರಾಜ್ಯಕೀಯ ಸ್ಥಾನದಲ್ಲಿದ್ದೇ ಕುದಲು ನರೆತುಹೋದ ನೀಲಂ—ಇದೀಗ ಸಿಂಡಿಕೇಟಿಗೂ ರಾಜಿನಾಮೆ ನೀಡಿದರು.

'ಹೋಗುವವರೆಲ್ಲ ಹೋಗಲಿ, ನಮಗೆ ಇರುವವರೇ ಸಾಕು' ಎಂದು ಎಸ್ಸೆನ್ ಪುನರುಚ್ಚರಿಸಬಹುದು—ಸುದೈವದಿಂದ ಈಗವರು ಅಧಿಕಾರದಲ್ಲಿಲ್ಲ ತಾನೆ? ಸಾದಿಕ್ ಅಲಿ ಅಧ್ಯಕ್ಷಗಿರಿಗೆ ಬಂದ ಮೇಲೆ ಸಿಂಡಿಕೇಟಿಗೆ ಬಡಿದ ಮೊದಲ ಹೃದಯಾಘಾತ ವಿದು.

ಸಾದಿಕ್ ಅಲಿ ಏನು ಹೇಳುತ್ತಾರೆ? ಹೇಳುವುದೇನಿದೆ? ಮಠಾಧಿಪತಿ ಸನ್ಯಾಸಿಗಳು ಗೃಹಸ್ಥರಾಗಲು ಹಾತೊರೆದು ಪೀಠ—ಸನ್ಯಾಸ ಮಾಡಿದ', ಅವರ ಮೇಲೆ ಬಲಾತ್ಕಾರ ಹೇರಲಾದೀತೇ? ರಾಜ್ಯಕೀಯ ವ್ಯಕ್ತಿಗಳು ಪಕ್ಷದ ಸದಸ್ಯತನಕ್ಕೆ ರಾಜಿನಾಮೆ ನೀಡಿದರೆ ತಿರಸ್ಕರಿಸಲಾದೀತೆ? ಇದರ ತಿರಸ್ಕಾರ—ಪುರಸ್ಕಾರಗಳೆರಡರ ಪರಿಣಾಮ ಏಕರೀತಿಯದೇ.

ನೀಲಂ ರಾಜಿನಾಮೆಯ ಉದ್ದೇಶವೇನು? 'ನಮ್ಮನ್ನು ಸಮಾಜವಾದಿಗಳೆಂದು ಎಷ್ಟು ಗಟ್ಟಿಯಾಗಿ ಕೂಗಿಕೊಂಡರೂ ಜನ ನಂಬುವುದಿಲ್ಲ' ಎಂದವರ ವ್ಯಥೆ. ಸಾದಿಕ್ ಹೇಳಿದ ಅವರ 'ಬಹುದಿನದ ವ್ಯಥೆ' ಇದೇ ಇರಬಹುದು.

ಸಮಾಜವಾದಿ ಕಾಮಧೇನುವನ್ನು ಸ್ವರ್ಗಲೋಕದಿಂದ ತರುವ ವೇಳೆ, ನೀಲಂ, ಕಾಮರಾಜ್, ಎಸ್ಸೆನ್, ಪಾಟೀಲ್, ದೇಸಾಯಿ, ಘೋಷ್, ಮಿಶ್ರ ಎಲ್ಲರೂ ಕೊರಳ ಸರಪಳಿ ಹಿಡಿದಿದ್ದರು. ಆದರೆ, ಇಂದದರ ಹಾಲು ಇವರಾರಿಗೂ ಲಭ್ಯವಿಲ್ಲ. ಇದೇ ನೀಲಂ ವ್ಯಥೆಯಿರಬಹುದೆ?

ನೀಲಂ ಸಂಜೀವ ರೆಡ್ಡಿಯವರು ಮುಂದೇನು ಮಾಡುತ್ತಾರೆ? ಅವರು ಇಂಡಿಕೇಟ್ ಸೇರುತ್ತಾರೆಯೇ ಎಂದು ಕೇಳುವುದು ತಪ್ಪಾದೀತು. ಅವರನ್ನು ಇಂಡಿಕೇಟ್ ಮಾಡುತ್ತಾರೆಯೇ ಎಂದು ಕೇಳಿದರೆ ಒಪ್ಪಾದೀತು.

ಉಚಿತಕಾಲದಲ್ಲಿ ರಾಷ್ಟ್ರವು ತನ್ನ ಸೇವೆ ಬಯಸಿದರೆ....! ರಾಜ್ಯಕೀಯ ಜಡ್ಡು ಬಡಿದ ನಾಯಕರೆಲ್ಲರೂ ತಾವೇ ರಾಷ್ಟ್ರವೆಂದು ನಂಬಿಕೊಂಡಿರುವ ತ್ರಿಕಾಲಜ್ಞಾನಿಗಳು. ಆದುದರಿಂದಲೇ ರಾಷ್ಟ್ರವೆಂಬ ತವು ಬಯಸಿದೊಡನೆಯೇ ಅವರು ತಲೆಯೆತುತ್ತಾರೆ, ಮುಳುಗುತ್ತಾರೆ—ಅಮೆವರ್ತನೆಗೆ ಇವರು ಮತ್ತೊಂದು ಹೆಸರು.

ಕಾಂಗ್ರೆಸ್ ಈ ಬಣ ಹಳೆಯ ಹುಲಿಗಳದ್ದು. ಪ್ರಗತಿ ವಿರೋಧಿಗಳದ್ದು ಎನ್ನುತ್ತದೆ ಇನ್ನೊಂದು ಬಣ. ಈಗೀಗ ಈ ಬಣವೇ ಆತ್ಮನಿಂದೆಗೆ ಗುರಿಯಾಗಿದೆ. ಹಳೆಯ ಹುಲಿಗಳೂ ಇದರಿಂದ ದೂರವಿದ್ದು ಗುರಿನ್ನಹತ್ತಿವೆ. ನೀಲಂ ಮೊದಲಿಗರು. ಇವರ ಹಿಂದೆ....?

○ ○ ○

ಕೆಂಗಲ್ ಹನುಮಂತಯ್ಯನವರ ಮೊದಲ ರೇಲ್ವೆ ಬಜೆಟ್ಟು ಕೊರತೆಯದ್ದು. ಮೂವತ್ತೈದು ಕೋಟಿಗಳ ಕೊರತೆಯನ್ನು ತುಂಬಿಕೊಳ್ಳಲು ಅವರು 'ಈಷತ್ ಕಿಂಚಿತ್' ದರಗಳನ್ನು ಏರಿಸಿದರು. ರೇಲ್ವೆಗಳಲ್ಲಿ ಬಳಸುವ ಸಾಮಾನು ಸರಂಜಾಮುಗಳ ಬೆಲೆಯಲ್ಲಿ ಏರಿಕೆಯಾಗಿರುವುದರಿಂದ, ನೌಕರರ ವೇತನ-ಭತ್ತೆಗಳು ಹೆಚ್ಚಿದ್ದರಿಂದ ಇದು ಅನಿವಾರ್ಯ.

ರೈಲ್ವೆ ಸಚಿವರ ಮಾದ ಒಪ್ಪತಕ್ಕದ್ದೇ. ಮೊದಲೇ ಟಿಕೇಟು ರಹಿತ ಪ್ರಯಾಣಿಕರ ಯಾತ್ರಾ ಸ್ಪೆಷಲ್ ಆಗಿರುವ ನಮ್ಮ ರೇಲ್ವೆಗಳು ಕೊಡುವವರ ಮುಂದೆಯೇ ಕೈಚಾಚುವುದರಲ್ಲಿ ಅನ್ಯಾಯವೇನಿದೆ? ಈ ಸಾಗಾಣಿಕೆ-ಯಾತ್ರಾದರಗಳ ಹೆಚ್ಚಳ ಅಗಣ್ಯ—ಅತ್ಯಲ್ಪ. ಒಂದೆರಡು ಪೈಸೆಗಳಿಗಿಂತ ಒಂದೆರಡು ಕಲ್ಲು ಹರಳುಗಳೇ ಭಾರದಲ್ಲಿಯೂ ಬೆಲೆಯಲ್ಲಿಯೂ ಅಧಿಕವೆನಿಸಿರುವ ಈ ಕಾಲದಲ್ಲಿ ಏರಿಕೆ ಯಾವ ಲೆಕ್ಕ?

ಈ ಏರಿಕೆ ಹೇರಿಯೂ ಪ್ರಸಕ್ತ ಸಾಲಿನಲ್ಲಿ ಏಳು ಕೋಟಿ ಕೊರತೆ ಉಳಿಯುವುದೆಂದ ಮೇಲೆ ದರದೇರಿಕೆ ನಿಜಕ್ಕೂ ಕಡಿಮೆ—ಕ್ಷುಲ್ಲಕ—ಮುಂದಿನ ವರ್ಷ ಮತ್ತೊಂದಿಷ್ಟು ಏರಿಸುವುದು ಅಗತ್ಯವಾಗಬಹುದು.

ಇಂದು ೨೦ ಕಿಲೊಮೀಟರಿಗೆ ಎರಡು ಪೈಸೆ; ಏರಿಸದೆ ಹೋದರೆ, ಮುಂದಿನ ವರ್ಷ ಐದು ಪೈಸೆಯಷ್ಟು ಏರಿಸಬೇಕಾಗಬಹುದು!

ಇದೇನು ಮಹಾ? ಕಿಲೋಗೆ ಕಾಲು ಪೈಸೆ! ತೀರ ಅಗಣ್ಯವಲ್ಲವೆ?

ಹಂತ ಹಂತವಾಗಿ ಸಮಾಜವಾದವನ್ನು ಜ್ಯಾರಿಗೆ ತರುವವರು ನಾವು- ಎಲ್ಲ ಕ್ಷೇತ್ರಗಳಲ್ಲಿಯೂ. ಜೀವನ ಮಟ್ಟವನ್ನು ಹಂತ ಹಂತವಾಗಿ ಏರಿಸುವವರು ನಾವು.

ಸಮಾಜವಾದವನ್ನು ರಾತ್ರಿ ಬೆಳಗಾಗುವುದರೊಳಗೆ ತರಲಾಗದು. ಮತ್ತೆ ಜೀವನ ಮಟ್ಟದ ಏರಿಕೆ? ಅದೂ ಹಂತ ಹಂತವೆ.—ಇದಕ್ಕೆ ಸಂಜೀವಿನಿ ಶಕ್ತಿ ನೀಡುವುದು ಬಜೆಟ್.

ಕರತೆರುವುದು ನಾಗರಿಕರ ಧರ್ಮ—ಈ ಧರ್ಮಪಾಲಿಸಲೆಂದು ಕರಾಕರಿಸುವುದು ಸರಕಾರದ ಕರ್ತವ್ಯ.

ಹಂತಹಂತವಾಗಿ ಕರವೇರಿಕೆ, ಬೆಲೆಯೇರಿಕೆಯಿಂದಲೇ ಜನತೆಯ ಕೊಡುವ-ಕೊಳ್ಳುವ ಶಕ್ತಿ ಹಂತ ಹಂತವಾಗಿ ಏರುತ್ತ ಹೋಗುತ್ತದೆ—ಆಗ ಜೀವನ ಮಟ್ಟವೇರುತ್ತದೆ-ಸಮಾಜವಾದ ನಮ್ಮದಾಗುತ್ತದೆ.

ಇದು ನಮ್ಮ ಭ್ರಮೆ? ನಮ್ಮ ಸರಕಾರದ—ರಾಜ್ಯಕೀಯ ನಾಯಕರ ವಿಭ್ರಮೆ?

ಆಡಳಿತದಲ್ಲಿ ಮಿತವ್ಯಯದ ಪ್ರಶ್ನೆ ಹಳೆಯದು. ಅದನ್ನು ಸಾಧಿಸುತ್ತಲೇ ಬಂದಿದ್ದೇವೆ. ಪ್ರಧಾನಿ ಪ್ರತಿ ದಿನ ಮೂವತ್ತು ಸಾವಿರ ವೆಚ್ಚ ಮಾಡುತ್ತಿದ್ದಾರೆ.-ಇದು ಅಪವ್ಯಯವಲ್ಲ, ಮಿತವ್ಯಯ.

ಐವತ್ತು ಸಾವಿರನಾದರೂ ಕಡಿಮೆಯಲ್ಲವೆ? ಎಲ್ಲವೂ ಏರುತ್ತಿದೆ—ಅವರದ್ದೂ ಏರಬೇಡವೆ? ಏರುತ್ತದೆ. ಏರುತ್ತಲೇ ಇದೆ. ನೆರೆಯ ನೀರಿನಂತೆ ಬೆಲೆಯೇರಿಕೆ ಶುಕ್ರಲೋಕದತ್ತ ಏರುತ್ತಿದೆ. ಇದು ಅಪರಿಹಾರ್ಯ—ಅನಿವಾರ್ಯ—ಉಳ್ಳವರಿಂದಪಡೆದು ಇಲ್ಲದವರಿಗೆ ಕೊಡುವುದೇ ಸಮಾಜವಾದ ತಾನೆ? ಉಳ್ಳವರು ಪ್ರಜೆಗಳು; ಇಲ್ಲದವರು ನಾಯಕರೆ?

○ ○ ○

ಕೇಂದ್ರದ ಸಚಿವಖಾತೆಗಳಿಗೆ ಹಿಂದಿ ಅಭಿದಾನ (ಹೆಸರು)ಗಳನ್ನು ನೀಡಿ ರಾಷ್ಟ್ರಪತಿ ಹೆಸರಿನಲ್ಲಿ ಆಜ್ಞೆ ಹೊರಟಿತು.

'ಹಿಂದಿ' ಎಂಬುದರ ಹಿಂದೆ ಎಂದಿನಿಂದಲೋ ಅಂಡಲೆಯುತ್ತಿರುವ ದ್ರಾಮುಕಕ್ಕೆ ಮತ್ತೊಂದು ಛೇಡಿಸುವ ಅವಕಾಶ ಲಭ್ಯಮಾನವಾಯ್ತು.

ಸುರುವಾಯ್ತು—ವಿರೋಧ, ಪ್ರತಿರೋಧ—ಅವರೋಧ—ಅಸಮಂಜಸ, ಅಸಮಾನ, ಅಪಮಾನಗಳ ಜಪಮಾಲಿಕೆ. ಸಭಾತ್ಯಾಗ—ಆಕ್ರೋಶಗಳ ಸರಮಾಲಿಕೆ.

'ದ್ರಾಮುಕ'ದ ಹಿಂದಿ ವಿರೋಧ ಅಗ್ನಿ ಕಾಂಗ್ರೆಸ್ ವಿಘಟನಾ ನಂತರ ತುಸು ಶಾಂತ; ಅದನ್ನು ಪ್ರಜ್ವಲಿಸದೆ ಹೋದರೆ. ಹಿಂದಿ ಅತಿರೇಕವಾದಿ ಬುಜುರ್ಗಗಳಿಗೆ ಮನಶ್ಯಾಂತಿಯೆಲ್ಲಿ?

ಶಾಲೆ—ಕಾಲೇಜುಗಳು ಸದ್ಯ ಆರಂಭವಾಗಿವೆ—ಆಗುತ್ತಲಿವೆ. ಈ ವೇಳೆಗೆ ಸರಿಯಾಗಿ ಏನಾದರೊಂದು ಚಳುವಳಿಯ ದಾರಿ ತೆರವು ಮಾಡಬೇಕು ತಾನೆ?

ಆರಂಭ ತಮಿಳುನಾಡಿನಲ್ಲಿ, ಪ್ರಸಾರ ಆಂಧ್ರ—ಕೇರಳಗಳಲ್ಲಿ. ಪರಿಣಾಮ ಬೆಂಗಳೂರಲ್ಲಿ. ಆದುದರಿಂದಲೇ ಬೆಂಗಳೂರು ನಗರದಲ್ಲಿ ನೂರು ಹಿಂದೀ ಪ್ರಚಾರ ಸಂಸ್ಥೆಗಳು—ಎಲ್ಲವುಗಳ ಪರೀಕ್ಷೆಗೂ ಸರಕಾರದ ಮಾನ್ಯತೆ ಉದಾರತೆ.

ಕಾಲೇಜು ಮೆಟ್ಟಲು ಹತ್ತಿ ಇಳಿದವನೊಡನೆ ಏನ್ಮಾಡ್ತೀಯ? ಅಂದ್ರೆ. ಬೆಳಿಗೆ ಹಿಂದಿ ಕಲಿಯೋದು, ಸಂಜೆ ಬೀದಿಯಲೆಯೋದು ಅನ್ನೋದೆ!

ಹಿಂದೀ ಅಭಿಧಾನದ ಹೆಸರಲ್ಲಿ ಮತ್ತೊಮ್ಮೆ ದೇಶ ಗೌರವಕ್ಕೆ ಅಪಚಾರವಾದೀತೆ? ಆಗದಿರಲೆಂದೇ ಸಚ್ಚಾ ಹಿಂದೀ ಭಾಷಾಭಿಮಾನಿಗಳ ಹಾರಯ್ಕೆ. ●

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0–75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ಮಾದರಿ ಶಿಕ್ಷಕ

ಗೋವಿಂದರಾವ್ ವೃತ್ತಿಯಲ್ಲಿ ಶಿಕ್ಷಕ. ಆತನಿಗೆ ವಿವಾಹವಾಗಿ ಇಪ್ಪತ್ತೊಂದು ವರ್ಷಗಳು ಕಳೆದಿವೆ. ವಿವಾಹದ ನಂತರ ಸಂಯಮ ಜೀವನ ನಡೆಸಲು ನಿರ್ಧರಿಸಿ ಅದರಂತೆ ನಡೆದ. ಈಗ ಆತನ ಸಂಸಾರ ಸುಖ ಸಂತೋಷಗಳ ನೆಲೆವೀಡು. ಇದಕ್ಕೆ ಗೋವಿಂದರಾವ್ ಕುಟುಂಬಯೋಜನೆ ಅನುಸರಿಸಿದ್ದೇ ಕಾರಣವಾಗಿದೆ. ಇಂದು ಆತನಿಗೆ ಇಬ್ಬರೇ ಮಕ್ಕಳು. ಅಲ್ಲಿಗೆ ಆತ ತನ್ನ ಸಂಸಾರವನ್ನು ನಿಯಂತ್ರಿಸಿದ್ದಾನೆ. ವಿವಾಹವಾದ ಐದು ವರ್ಷಗಳ ನಂತರ ಆತನಿಗೆ ಗಂಡುಮಗುವೊಂದಾಯಿತು. ಇದಾದ ಆರುವರ್ಷಗಳಲ್ಲಿ ಹೆಣ್ಣುಮಗುವೊಂದಾಯಿತು. 'ಬ್ರಿಟೀಷರೇ ಭಾರತವನ್ನು ಬಿಟ್ಟು ತೊಲಗಿರಿ' ಚಳುವಳಿಯಲ್ಲಿ ಭಾಗವಹಿಸಿ ಗೋವಿಂದರಾವ್ ಬಂಧಿತನಾಗಿದ್ದ. ಜೈಲುವಾಸ ಅನುಭವಿಸುತ್ತಿದ್ದಾಗ ಆತ 'ಬ್ರಹ್ಮಚರ್ಯ'ದ ಬಗ್ಗೆ ಅನೇಕ ಪುಸ್ತಕಗಳನ್ನೂ ಓದಿ ವಿವಾಹನಂತರ ಸಂಯಮ ಜೀವನ ನಡೆಸಲು ನಿರ್ಧಾರ ಕೈಗೊಂಡಿದ್ದ. ತನ್ನ ೨೧ವರ್ಷದಲ್ಲಿ ತನ್ನ ನಿರ್ಧಾರ ಸಾಧನೆ ಬಗ್ಗೆ ಆತನಿಗೆ ಹೆಮ್ಮೆ.

ಸಣ್ಣ ಕುಟುಂಬದಿಂದ ಲಭಿಸುವ ಸುಖ ಸಂತೋಷಗಳನ್ನು ಸ್ವತಃ ಅನುಭವಿಸುತ್ತಿರುವ ಆತ ಈಗ ತನ್ನ ನೆರೆಹೊರೆಯವರನ್ನು ಹಾಗೂ ಮಿತ್ರರಿಗೆ ಸಣ್ಣ ಕುಟುಂಬಗಳ ಬಗ್ಗೆ ವಿವರಣೆ ನೀಡಿ ಅವರ ಮನವೊಲಿಸುವ ಕಾರ್ಯ ಕೈಗೊಂಡಿದ್ದಾನೆ. ಇದು ತನ್ನ ಪವಿತ್ರ ಕರ್ತವ್ಯಗಳಲ್ಲಿ ಒಂದೆಂದೂ ಭಾವಿಸಿದ್ದಾನೆ. ಬಡತನಕ್ಕೆ ಬೆಳೆಯುತ್ತಿರುವ ಜನಸಂಖ್ಯೆಯೇ ಮುಖ್ಯ ಕಾರಣ. ದೇಶವಲ್ಲ ಎಷ್ಟೇ ಪ್ರಗತಿಯನ್ನು ಸಾಧಿಸಲಿ ಜನಸಂಖ್ಯಾ ಸ್ಫೋಟನದಿಂದಾಗಿ ಅವರ ಫಲ ನಿರರ್ಥಕವಾಗುತ್ತಿದೆ. ನಮ್ಮ ವಿವಿಧ ಸಮಸ್ಯೆಗಳಿಗೆ ಕುಟುಂಬಯೋಜನೆಯೊಂದೇ ಮಾರ್ಗ ಎಂಬುದನ್ನು ಆತ ಚೆನ್ನಾಗಿ ಅರಿತಿದ್ದಾನೆ. ಈ ಅರಿವೇ ಆತನಿಗೆ ಕುಟುಂಬಯೋಜನೆಯ ಸಂದೇಶಗಳು ತನ್ನ ಮಿತ್ರರಿಗೆ ನೆರೆಹೊರೆಯವರಿಗೆ ತಿಳಿಸಲು ಸ್ಫೂರ್ತಿಯನ್ನು ನೀಡಿದೆ. ನೀತಿಬೋಧನೆಗಿಂತ ಒಂದು ಉದಾಹರಣೆ ಲೇಸು ಎಂಬಂತೆ ಕುಟುಂಬಯೋಜನೆಗಾಗಿ ತಾನೂ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡಿದ್ದಾನೆ. ಈಗಾಗಲೇ ತನ್ನದು ನಿಯಂತ್ರಣ ಕುಟುಂಬವಾದರೂ ಇತರರಿಗೆ ಮಾರ್ಗದರ್ಶನ ನೀಡುವ ದೃಷ್ಟಿಯಿಂದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾನೆ. ಗೋವಿಂದರಾಯನ ಪ್ರಯತ್ನದಿಂದಾಗಿ ತನ್ನ ಶಾಲೆಯ ಕುಟುಂಬಯೋಜನೆ ಮಾಡಿಸಿಕೊಳ್ಳಲು ಅರ್ಹರಾದ ಆರುಮಂದಿ ಶಿಕ್ಷಕರೂ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಉಳಿದ ನಾಲ್ಕುಮಂದಿ ಸದ್ಯದಲ್ಲಿ ಅರ್ಹರಲ್ಲ. ಶಾಲೆಯ ಮುಖ್ಯೋಪಾಧ್ಯಾಯರಾಗಿರುವುದರಿಂದಲೂ ಗೋವಿಂದರಾಯ ತನ್ನ ಹಳ್ಳಿಯಲ್ಲಿ ಜನಪ್ರಿಯವ್ಯಕ್ತಿ. ಆತನ ಮಾತಿನಲ್ಲಿ ವಿಶ್ವಾಸದಿಂದಾಗಿ ಈ ವರೆಗೆ ಹಳ್ಳಿಯ ೪೧ಮಂದಿ ದಂಪತಿಗಳು ಕುಟುಂಬಯೋಜನೆಗಾಗಿ ಶಸ್ತ್ರ ಚಿಕಿತ್ಸೆಮಾಡಿಸಿಕೊಂಡಿದ್ದಾರೆ. ತನ್ನ ಈ ಸಾಮಾಜಿಕ ಸೇವೆಯಿಂದಾಗಿ ಆತನಿಗೆ ಸುಖವೂ ಸಿಗುತ್ತದೆ. ಸಮಾಜಕ್ಕೆ ಮುಖ್ಯವಾಗಿ ತನ್ನ ಗ್ರಾಮದ ಜನತೆಗೆ ಅನುಕೂಲವನ್ನು ನೀಡುವ ಫಲವನ್ನು ಆತ ಸ್ವಾಗತಿಸುತ್ತಾನೆ.

●●

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ, ಮಂಗಳೂರು

R. A. No. 1/1970

ಗಿರಿಜ ಹೆಗ್ಗಡ್ತಿ ಮತ್ತು ಇತರರು
—ಅಪೀಲಾಂಟರು

ಮತ್ತು

ರಾಜೀವಿ ಹೆಗ್ಗಡ್ತಿ ಮತ್ತು ಇತರರು
—ರೆಸ್ಪೋಂಡೆಂಟರು

ರೆಸ್ಪೋಂಡೆಂಟರು:—

3. ಶ್ರೀ ಸಂಜೀವ ಹೆಗ್ಡೆ, 4. ಜಗನ್ನಾಥ ಹೆಗ್ಡೆ, 5. ಶ್ರೀಧರ ಹೆಗ್ಡೆ, 6. ಸದಾಶಿವ ಹೆಗ್ಡೆ, 7. ಶಿವರಾಮ ಹೆಗ್ಡೆ —ಮುತ್ತಕ್ಕೆ ಹೆಗ್ಗಡ್ತಿ ಮಕ್ಕಳು, ಉಡುಪಿ ತಾಲೂಕು ಬೊಮ್ಮರಬೆಟ್ಟು ಗ್ರಾಮದಲ್ಲಿರುವವರು.

9. ಬಾಲಕೃಷ್ಣ, 10. ಸರಸ್ವತಿ—ಮೈನರ್, ಗಾರ್ಡಿಯೂನ್ ಆಗಿ ಶೀನಪ್ಪ ಶೆಟ್ಟಿ, ಉಡುಪಿ ತಾಲೂಕು ಹಂದಾಡಿ ಗ್ರಾಮದಲ್ಲಿರುವವರು.

12 ಸಿದ್ದಕ್ಕೆ ಹೆಗ್ಗಡ್ತಿ, ಭ್ಯಾಮು ಹೆಗ್ಗಡ್ತಿಯ ಮಗಳು. 13. ಶೀಲಾವತಿ ಹೆಗ್ಗಡ್ತಿ, ಸಿದ್ದಕ್ಕೆ ಹೆಗ್ಗಡ್ತಿಯ ಮಗಳು. 14. ಸತೀಶ, 15. ಬೇಬಿ—ಮೈನರರು, ಗಾರ್ಡಿಯೂನ್ ಆಗಿ ಶೀಲಾವತಿ ಹೆಗ್ಗಡ್ತಿ, ಉಡುಪಿ ತಾಲ್ಲೂಕು ಬೊಮ್ಮರಬೆಟ್ಟು ಗ್ರಾಮದಲ್ಲಿರುವವರು.

24. ರತ್ನ ಹೆಗ್ಗಡ್ತಿ, ಸೀತಮ್ಮ ಹೆಗ್ಗಡ್ತಿಯ ಮಗಳು. 25. ದಯಾನಂದ, 26. ದೇವದಾಸ—ಮೈನರರು, ಗಾರ್ಡಿಯೂನ್ ಆಗಿ ರತ್ನ ಹೆಗ್ಗಡ್ತಿ, ಉಡುಪಿ ತಾಲ್ಲೂಕು ಕರಂಗಲ್ಪಾಡಿ ಗ್ರಾಮದ ದೊಡ್ಡಮನೆಯಲ್ಲಿರುವವರು.

27. ರುಕ್ಮಿಣಿ ಹೆಗ್ಗಡ್ತಿ, ನರ್ಸಿ ಹೆಗ್ಗಡ್ತಿಯ ಮಗಳು. 28 ಬಾಬುಕರ, 29. ಆನಂದಿ, 30. ಪ್ರಫುಲ್ಲ, 31. ಪ್ರಭಾಕರ, 32. ವಸಂತಿ—ಮೈನರರು, ಗಾರ್ಡಿಯೂನ್ ಆಗಿ ರುಕ್ಮಿಣಿ ಹೆಗ್ಗಡ್ತಿ, ಉಡುಪಿ ತಾಲ್ಲೂಕು ಪೆರ್ಡೂರು ಗ್ರಾಮದಲ್ಲಿರುವವರು.

ಇವರಿಗೆ ತಿಳಿಸುವುದೇನೆಂದ್ರೆ—

ಮೇಲ್ಕಾಣಿಸಿದ ರೆಸ್ಪೋಂಡೆಂಟರುಗಳಾದ ನಿಮ್ಮ ವಗೈರೆರ ಮೇಲೆ ಅಪೀಲಾಂಟರು ಉಡುಪಿ ಸಿವಿಲ್ ಕೋರ್ಟಿನ R. I. A. No. 62/1964 in O. S. 100/1961ರ ತಾ. 18-9-69 ಡಿಕ್ರಿ ಮೇಲೆ ಈ ಅಪೀಲುಮಾಡಿರುತ್ತಾರೆ. ನೀವು ತಾರೀಕು 12-7-1971ಕ್ಕೆ 11 ಗಂಟೆಗೆ ಖುದ್ದಾಗಲೀ, ಯಾ ವಕೀಲರ ಮುಖಾಂತರ ಈ ಕೋರ್ಟಿನಲ್ಲಿ ಹಾಜರಾಗದಿದ್ದಲ್ಲಿ ನಿಮ್ಮನ್ನು ಶಿಕ್ಷ್ಯಾಮಾಡಿ ಅಪೀಲು ತೀರ್ಮಾನಿಸಲಾಗುವುದು.

(By order of the Court)

(Sd) K. Rajaram Hegde

ಅಪೀಲಾಂಟರ ಕಡೆ ಎಡ್ವೋಕೇಟ್

ಮಂಗಳೂರು, 26-5-1971.

ಅಭಿನಂದನೆ—ಮನವಿ ಅರ್ಪಣೆ

ಪಣಂಬೂರು, ಬೈಕಂಪಾಡಿ, ಕುಳಾಯಿ, ತಣ್ಣೀರು ಬಾವಿ, ಹೊಸಬೆಟ್ಟು ಮತ್ತು ಕಾಟಿಪಳ್ಳ-ಕೃಷ್ಣಾಪುರ ಪುನರ್ನಿವೇಶನ ಕಾಲೋನಿಯ ಗ್ರಾಮಸ್ಥರ ಪತಿಯಿಂದ ಜಿಲ್ಲೆಯ ಲೋಕಸಭಾ ಸದಸ್ಯರುಗಳಾದ ಶ್ರೀ ಕೆ. ಕೆ. ಶೆಟ್ಟಿ ಮತ್ತು ಶ್ರೀ ಪಿ. ರಂಗನಾಥ ಶೆಣೈ ಮತ್ತು 1968, 69 ಮತ್ತು 1970ರಲ್ಲಿ ಉತ್ಕೃಷ್ಟ ರಫ್ತುದಾರರೆಂದು ರಾಜ್ಯ ಸರಕಾರದಿಂದ ರಜತಫಲಕ ಹಾಗೂ ಪ್ರಶಸ್ತಿ ಪಡೆದ ಶ್ರೀ ಕಲ್ಬಾವಿ ವೆಂಕಟರಾವ್ ಮತ್ತು ಸಹೋದರರನ್ನು ಅಭಿನಂದಿಸುವ ಮತ್ತು ಸ್ಥಳೀಯ ಸಮಸ್ಯೆಗಳನ್ನು ವಿವೇಚಿಸುವ ಸಾರ್ವಜನಿಕ ಸಭೆಯೊಂದು ಕುಳಾಯಿ ಚಿತ್ರಾಪುರ ದೇವಸ್ಥಾನದ ಕಲ್ಯಾಣ ಮಂದಿರದಲ್ಲಿ ಇತ್ತೀಚೆಗೆ ದ. ಕ. ಜಿಲ್ಲಾ ಕಾಂಗ್ರೆಸಿನ ಕನ್ವೀನರ್ ಶ್ರೀ ಎ. ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು.

ಆಮಂತ್ರಿತ ಮುಖ್ಯ ಅತಿಥಿಗಳನ್ನು ಸ್ವಾಗತಿಸಿ ಅರು ಗ್ರಾಮಸ್ಥರ ಪರವಾಗಿ ಸ್ವಾಗತ ಸಮಿತಿಯ ಅಧ್ಯಕ್ಷ ಚಂದ್ರಹಾಸ ಶೆಟ್ಟರು ಅತಿಥಿಗಳಿಗೆ ಹಾರಾರ್ಪಣೆಗೈದರು. ಶ್ರೀ ಶ್ರೀನಿವಾಸ ರಾಯರು ಸ್ವಾಗತ ಭಾಷಣಮಾಡುತ್ತಾ ಸ್ಥಳೀಯ ಸಮಸ್ಯೆಗಳನ್ನು ವಿವರಿಸಿದರು.

ಕಾಟಿಪಳ್ಳದ ಶ್ರೀ ನಾರಾಯಣ ರಾಯರು ಮನವಿ ಓದಿ ಕಾಟಿಪಳ್ಳ, ಕೃಷ್ಣಾಪುರವನ್ನು ಕೂಡಲೇ ನೋಟಿಫೈಡ್ ಪ್ರದೇಶವೆಂದು ಘೋಷಿಸುವಂತೆ ಒತ್ತಾಯಿಸಬೇಕಾಗಿ ವಿನಂತಿಸಿದರು. ಹಲವಾರು ಸ್ಥಳೀಯ ಸಮಸ್ಯೆಗಳನ್ನು, ಕೋರಿಕೆಗಳನ್ನು ಲೋಕಸಭಾ ಸದಸ್ಯರ ಮುಂದಿಡಲಾಗಿತ್ತು.

ಮುಖ್ಯ ಅತಿಥಿಗಳೂ ಸಿಂಡಿಕೇಟ್ ಬೇಂಕಿನ ಡೈರೆಕ್ಟರರೂ ಆದ ಡಾ। ಎಂ. ಬಿ. ಮಹಮ್ಮದ್‌ರವರು ಬೇಂಕ್ ರಾಷ್ಟ್ರೀಕರಣದಿಂದಾದ ಪ್ರಯೋಜನಗಳನ್ನು ವಿವರಿಸಿದರು. ಅನಂತರ ದ. ಕ. ಜಿಲ್ಲಾ ಕೇಂದ್ರ ಸಹಕಾರಿ ಬೇಂಕಿನ ಅಧ್ಯಕ್ಷ ಶ್ರೀ ಬಿ. ನಾರಾಯಣ ನಾಯಕ್, ಆ.ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಜಿ. ರಾಮಚಂದ್ರ ಭಟ್ ಮೊದಲಾದವರು ನೂತನಾಡಿ ಸ್ಥಳೀಯ ಸಮಸ್ಯೆಗಳನ್ನು ವಿವರಿಸಿದರು.

ಶ್ರೀ ಕೆ. ಕೆ. ಶೆಟ್ಟರು ಮನವಿಗೆ ಉತ್ತರ ನೀಡುತ್ತಾ ರಾಜ್ಯಪಾಲರು ರಾಜ್ಯದ ಸಮಸ್ಯೆಗಳನ್ನು ಚರ್ಚಿಸುವರೆ ಕರೆದ ಸಭೆಯಲ್ಲಿ ಈ ಪ್ರದೇಶದ ಜನರ ಕೋರಿಕೆಗಳನ್ನು ಮುಂದಿರಿಸಿ ಅವುಗಳನ್ನು ಈಡೇರಿಸುವ ಕುರಿತು ಪ್ರಯತ್ನಿಸುವುದಾಗಿ ಭರವಸೆಯಿತ್ತರು.

ಶ್ರೀ ಕಲ್ಬಾವಿ ವೆಂಕಟ ರಾವ್ ಸಹೋದರರಿಗೆ ಊರ ಅಭಿಮಾನಿಗಳ ಪರವಾಗಿ ಪಟೇಲ್ ಶ್ರೀ ಶ್ರೀನಿವಾಸ ರಾಯರು ಸನ್ಮಾನ ಪತ್ರ ಓದಿದರು. ಅಧ್ಯಕ್ಷರು ಈ ಸನ್ಮಾನ ಪತ್ರವನ್ನು ಶ್ರೀ ಕಲ್ಬಾವಿ ಸಹೋದರರಿಗೆ ಒಪ್ಪಿಸಿದರು.

ಶ್ರೀ ಕಲ್ಬಾವಿ ವೆಂಕಟರಾವ್‌ರವರು ಮಾತನಾಡುತ್ತಾ ಕರ್ತವ್ಯವನ್ನು ಮಾತ್ರ ಮಾಡಿದ ತಮ್ಮನ್ನು ಸನ್ಮಾನಿಸಿದುದಕ್ಕಾಗಿ ಕೃತಜ್ಞತೆಗಳನ್ನು ಅರ್ಪಿಸಿ ಎಲ್ಲರ ಆಶೀರ್ವಾದ ಸಹಕಾರಗಳನ್ನು ಕೋರಿದರು.

ಶ್ರೀ ಪೇಜಾವರ ಶ್ರೀಪಾದಂಗಳವರು ಅನುಗ್ರಹ ಭಾಷಣಮಾಡಿ ಫಲ ಮಂತ್ರಾಕ್ಷತೆ ವಿತರಣೆಗೈದು ಹರಸಿದರು. ಅಂತ್ಯದಲ್ಲಿ ಶ್ರೀ ಎಕ್ಕಾರು ಕೃಷ್ಣರಾಯರು ಧನ್ಯವಾದ ಅರ್ಪಿಸಿದರು.

ಕೊರಂಗ್ರಪಾಡಿ ಶಾಲಾ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭ

ಉಡುಪಿಗೆ ಸಮೀಪದ ಕೊರಂಗ್ರಪಾಡಿ ಸರಕಾರಿ ಹಾಯರ್ ಪ್ರೈಮರಿ ಶಾಲೆಗಾಗಿ ನವೀನವಾಗಿ ಕಟ್ಟಿಸಲ್ಪಟ್ಟ ಸರಕಾರ ಹಾಗೂ ಸಾರ್ವಜನಿಕರ ನೆರವಿನಿಂದ ಮತ್ತು ಬೊಂಬಾಯಿಯ ಜಗನ್ನಾಥ ಎಜ್ಯುಕೇಶನ್ ಸೊಸೈಟಿಯವರಿಂದ ದಾನಕೊಡಲ್ಪಟ್ಟ ಕೊರಂಗ್ರಪಾಡಿ ಪಟೇಲ್ ಕೆ. ಜಗನ್ನಾಥ ಶೆಟ್ಟಿ ಸ್ಮಾರಕ ಕಟ್ಟಡದ ಉದ್ಘಾಟನೆಯನ್ನು ತಾ.೨೮-೫-೭೧ನೇ ಸಂಜೆ ಶ್ರೀ ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ನೆರವೇರಿಸಿದರು. ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯಾದ ನಂತರ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಕೆ. ಬಾಲಕೃಷ್ಣ ಶೆಟ್ಟರು ಸ್ವಾಗತ ಭಾಷಣಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಕೇಶವ ಕುಡ್ವರು ಶಾಲಾ ವರದಿಯನ್ನೂ, ಕಟ್ಟಡ ರಚನಾ ಸಮಿತಿಯ ವರದಿಯನ್ನೂ, ಸಂದೇಶಗಳನ್ನೂ ಓದಿದರು. ಉದ್ಘಾಟಕ ಶ್ರೀ ಪಾದಂಗಳವರು ಅನುಗ್ರಹ ಭಾಷಣಮಾಡುತ್ತಾ, ಜ್ಞಾನ ಪ್ರಸಾರವು ಅತೀ ಮಹತ್ವವಾದುದೆಂದೂ ಮಾನವನು ದಾನವನಾಗದೆ ನೈಜ ಮಾನವನಾಗಿ ಬಾಳುವಂತಾಗಬೇಕೆಂದೂ ಭಾರತೀಯ ಸಂಸ್ಕೃತಿಯನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕೆಂದೂ ಯಾವುದೇ ಉದ್ಯೋಗದಲ್ಲಿ ಮೇಲು ಕೀಳು ಇಲ್ಲವೆಂದೂ ಹೇಳಿ ಊರವರು ಮತ್ತು ಪರವೂರವರು ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ನೆರವುಕೊಟ್ಟುದಕ್ಕಾಗಿ ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು. ಜಗನ್ನಾಥ ಎಜ್ಯುಕೇಶನ್ ಸೊಸೈಟಿಯ ಅಧ್ಯಕ್ಷ ಶ್ರೀ ಎಸ್. ಜಿ. ಶೆಟ್ಟರು ನಿಯೋಜಿತ ಭಾಷಣ ಮಾಡುತ್ತಾ, ತಮ್ಮ ಸೊಸೈಟಿಯು ಊರಿನ, ತಾಲೂಕಿನ ಹಾಗೂ ಜಿಲ್ಲೆಯ ವಿದ್ಯಾ ಸಂಸ್ಥೆಗಳಿಗೆ ಸಾಧ್ಯವಾದಷ್ಟು ನೆರವುಕೊಡುವ ಧ್ಯೇಯೋದ್ದೇಶಗಳಿಂದ ಸ್ಥಾಪಿತವಾಗಿರುವುದೆಂದೂ ಈ ಶಾಲೆಗೆ ಒಂದು ಕೊಠಡಿ ಹಾಗೂ ಒಂದು ಧ್ವಜಸ್ತಂಭವನ್ನು ನಮ್ಮ ಸೊಸೈಟಿ ದಾನವಾಗಿ ಕೊಟ್ಟಿರುವುದಲ್ಲದೆ ಮುಂದಕ್ಕೂ ಹೆಚ್ಚಿನ ಸಹಕಾರ ಕೊಡಲು ಪ್ರಯತ್ನಿಸುವುದಾಗಿಯೂ ಊರವರೂ ಈ ಶಾಲೆಯ ಉನ್ನತಿಗಾಗಿ ಒಕ್ಕಟ್ಟಿನಿಂದ ಸಹಕರಿಸಲು ಮುಂದಾಗಬೇಕೆಂದೂ ಕೇಳಿಕೊಂಡರು. ಅಲ್ಲದೆ ಶಾಲಾ ಕಟ್ಟಡದ ರಚನಾ ಕಾರ್ಯದಲ್ಲಿ ಹಗಲಿರುಳು ಪ್ರಾಮಾಣಿಕವಾಗಿ ದುಡಿದ ಶಾಲಾ ಉಪಾಧ್ಯಾಯ ಶ್ರೀ ಕೆ. ಸುಂದರ ಶೆಟ್ಟರಿಗೆ ಬಹುಮಾನವೊಂದನ್ನು ಶ್ರೀ ಪಾದಂಗಳವರ ದಿವ್ಯಹಸ್ತದಿಂದ ಕೊಡಿಸಿದರು. ಶ್ರೀ ಎಂ. ಮಧ್ವರಾಜರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಶ್ರೀ ಪೇಜಾವರ ಮಠಾಧೀಶರು ಇಂತಹ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿ ಜ್ಞಾನ ಪ್ರಸಾರ ಮಾಡುತ್ತಿರುವುದು ಪ್ರಶಂಸನೀಯವೆಂದೂ ಊರ ಬೆಳವಣಿಗೆಗೆ ಶಾಲೆ, ರಸ್ತೆ, ಆಸ್ಪತ್ರೆ ಅತೀ ಅಗತ್ಯವೆಂದೂ ಊರವರ ಮುಖ್ಯವಾಗಿ ಜಗನ್ನಾಥ ಎಜ್ಯುಕೇಶನ್ ಸೊಸೈಟಿಯ ಅಧ್ಯಕ್ಷ ಶ್ರೀ ಎಸ್. ಜಿ. ಶೆಟ್ಟರ ಸಹಕಾರದಿಂದ ಅತ್ಯಲ್ಪ ಸಮಯದಲ್ಲಿ ಇಂತಹ ಉತ್ಕೃಷ್ಟ ಕಟ್ಟಡ ನಿರ್ಮಾಣವಾದದ್ದಕ್ಕೆ ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು. ಅನಂತರ ಧನ್ಯವಾದ ಸಮರ್ಪಣೆ ವಿವಿಧ ವಿನೋದಾವಳಿಗಳಾದವು.

ಬೆಳಿಗ್ಗೆ ಜಗನ್ನಾಥ ಎಜ್ಯುಕೇಶನ್ ಸೊಸೈಟಿಯವರು ದಾನವಾಗಿತ್ತ ಧ್ವಜಸ್ತಂಭದ ಉದ್ಘಾಟನೆಯನ್ನು ಶಾಲಾ ಪರೀಕ್ಷಾಧಿಕಾರಿ ಶ್ರೀ ರಾಮ್ ಭಟ್ಟರು ನೆರವೇರಿಸಿ ಧ್ವಜಾರೋಹಣಮಾಡಿದರು. ಆಟೋಟಗಳ ಸ್ಪರ್ಧೆ ಜರಗಿ ಸಿಹಿತಿಂಡಿಗಳ ವಿತರಣೆ ನಡೆಯಿತು.

●●

ತೊಂದರೆ (ಕಷ್ಟ)ಗಳು ನಮಗೆ ಆತ್ಮಜ್ಞಾನವನ್ನು ಒದಗಿಸಿಕೊಡುತ್ತವೆ. ನಾವು ಯಾವ ಮಣ್ಣಿನಿಂದ ಆಗಿರುತ್ತೇವೆಂಬುದನ್ನು ಅವು ನಮಗೆ ತೋರಿಸಿಕೊಡುತ್ತವೆ.

(ಜವಾಹರಲಾಲ ನೆಹರು)

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27

Phone No.— 1 72303 / 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಕೊಲೆಯೋ ಆತ್ಮಹತ್ಯೆಯೋ?

ಶ್ರೀ

(ಎರಡನೇ ಪುಟದಿಂದ)

ಕೇಳಿದರು. ನರಳುತ್ತಿರುವುದನ್ನು ಕಣ್ಣಾರೆ ಕಂಡರು. ಆದರೆ ಅವರ ಹೃದಯ ಕರಗಲಿಲ್ಲ. ಯಾರೂ ಸಹಾನುಭೂತಿ ತೋರಿಸಲಿಲ್ಲ.

ಬೆಳಗಿನ ಝಾವ, ಅವನ ಹೆಣವನ್ನು ರುದ್ರಭೂಮಿಗೆ ಸಾಗಿಸುತ್ತಿದ್ದಾಗ, ಪೋಲೀಸರು ರಾಣಿಯನ್ನೂ ಆಕೆಯ ಸೇವಕಿಯರನ್ನೂ ಬಂಧಿಸಿದರು.

ರಾಣಿಯ ದಸ್ತಗಿರಿಯ ನಂತರ ಪೋಲೀಸರು ಆಕೆಯ ಮನೆಯನ್ನು ಶೋಧಿಸಿದರು. ಶೋಧನೆಯ ಕಾಲದಲ್ಲಿ ಆಕೆಯ ಮಲಗುವ ಕೋಣೆಯಲ್ಲಿ ಮೂರು ಚಿಕ್ಕ ಪೊಟ್ಟಣಗಳು ಸಿಕ್ಕವು. ಅವನ್ನು ತಜ್ಞರ ಪರೀಕ್ಷೆಗೆ ಕಳುಹಿಸಲಾಯಿತು. ಅವರ ಅಭಿಪ್ರಾಯದಂತೆ ಅದು ಹಳದಿ ಪಾಷಾಣ. ಮರಣೋತ್ತರ ಶವ ಪರೀಕ್ಷೆಯಿಂದ ಪಾಷಾಣದ ಪ್ರಯೋಗವಾಗಿರುವುದು ಸ್ಥಿರಪಟ್ಟಿತು. ತನ್ನನ್ನು ಪೀಡಿಸಿ, ತನ್ನ ಮರ್ಯಾದೆಗೆ ಕಳಂಕ ತರುತ್ತಿದ್ದ ತನ್ನ ಜಾರನನ್ನು ರಾಣಿ ಕೊಲ್ಲಿಸಿರಬಹುದು ಅಥವಾ ಕೊಂದಿರಬಹುದು. ಇದು ಅಸಂಭವ ಇರಲಿಲ್ಲ.

ರಾಣಿ ತಪ್ಪಿತಸ್ಥಳೆಂದು ಸೆಷನ್ಸ್ ಜಡ್ಜಿಗಳು ಶಿಕ್ಷೆಕೊಟ್ಟರು. ತೀರ್ಪಿನಲ್ಲಿ ಅವರು ತಮ್ಮ ನಿಲುವನ್ನು ಹೀಗೆ ಸಮರ್ಥಿಸಿಕೊಂಡರು. ಹೊರಬಾಗಿಲಲ್ಲಿ ನಿರಶನ ವ್ರತ ಹಿಡಿದು ಕುಳಿತಿದ್ದ ಖಾನ್‌ಚಂದನನ್ನು ರಾಣಿ ರಾತ್ರಿಯಲ್ಲಿ ಒಳ ಕರೆತರಲು ಸೂಚಿಸಿರಬೇಕು. ಆಕೆಯ ಸೇವಕಿಯರು ಈ ಕೆಲಸ ನಿರ್ವಹಿಸಿರಬೇಕು. ಆತ ಕಳ್ಳನಲ್ಲ; ದರೋಡೆಖೋರನಲ್ಲ. ಅವನ ಬಳಿ, ಅವರು ಬಳಸುವ ಯಾವ ಆಯುಧಗಳೂ ಇರಲಿಲ್ಲ. ಇದ್ದಿದ್ದರೆ ಆತ ಸ್ವಪ್ರಯತ್ನದಿಂದ ಸೌಧಕ್ಕೆ ಪ್ರವೇಶ ದೊರಕಿಸಿಕೊಂಡ ಎಂದು ವಾದಿಸಬಹುದಿತ್ತು. ಆತ ಮಹಡಿಯ ಮುಂಭಾಗದ ಬಿಸಿಲು ಮುಚ್ಚಿನಲ್ಲಿ ತನ್ನ ಅಂತ್ಯ ಕಂಡ ಎಂಬುದು ಹೇಳಿಕೆಗಳಿಂದ ಹೊರಬಿದ್ದಿದೆ. ಮನೆಯೊಳಕ್ಕೆ ಕರೆಸಿಕೊಂಡ ರಾಣಿ ಮನದಂಗಳಕ್ಕೂ ಬರಮಾಡಿಕೊಂಡಳೆಂದು ಭ್ರಮಿಸಿ ಖಾನ್‌ಚಂದ, ಆಕೆ ಕೊಟ್ಟ ವಿಷ ಬೆರಸಿದ ಹಾಲನ್ನು ಕುಡಿದಿರಬೇಕು.

ಫೆಬ್ರವರಿ ೭೧ರ ರಾತ್ರಿ ನಡೆದ ಘಟನೆಗಳನ್ನು ನ್ಯಾಯಾಧೀಶರು. ಹೀಗೆ ಕ್ರೋಢೀಕರಿಸಿದರು. "ಖಾನ್‌ಚಂದನನ್ನು ಮಹಲಿಗೆ ಕರೆಸಿಕೊಂಡು, ರಾಣಿ ಅವನನ್ನು ಸವಿಮಾತಿನಿಂದ ಸರಿ ದಾರಿಗೆ ತರಲು ಪ್ರಯತ್ನಿಸಿರಬೇಕು. ಸರಿದ್ವಾರಕ್ಕೆ ಹಿಂತಿರುಗಲು ಹೇಳಿರಬೇಕು. ಆತ ಕಪಿ ಮುಷ್ಟಿಯನ್ನು ಸಡಿಲಿಸದೆ ಪಟ್ಟು ಹಿಡಿದು ಕುಳಿತಿರಬೇಕು ಈ ಪೀಡೆಯನ್ನು ತೊಲಗಿಸಲು ಬೇರೆ ಮಾರ್ಗ ಕಾಣದೆ ರಾಣಿ ಅವನನ್ನು ಅಂದೇ ಮುಗಿಸಿಬಿಡುವ ನಿರ್ಧಾರಕ್ಕೆ ಬಂದಿರಬೇಕು. ಬಹಿರಂಗದಲ್ಲಿ ಒಲವನ್ನು ತೋರಿಸಿ, ಖಾನ್‌ಚಂದನಿಗೆ ವಿಷ ಬೆರಸಿದ ಹಾಲನ್ನು ಕುಡಿಯಲು ಕೊಟ್ಟಿರಬೇಕು. ರಾಣಿ ಪ್ರಸನ್ನಳಾದಳು ಎಂದು ತಿಳಿದು ಆತ ಹಾಲನ್ನು ಸೇವಿಸಿರಬೇಕು. ಅನಂತರ ಉರಿ ಕಾಣಿಸಿಕೊಂಡಿರಬೇಕು. ಮನೆಯಿಂದ ಹೊರ್ಹೊರಲು ಪ್ರಯತ್ನಿಸಿ ವಿಫಲನಾದಾಗ, ಬಿಸಿಲು ಮಚ್ಚಿಗೆ ಬಂದು ಸಹಾಯಕ್ಕಾಗಿ ಕಿರುಚಿರಬೇಕು. ಅಲ್ಲಿಯೇ ಆತ ಕುಸಿ ಬಿದ್ದುದು. ಹಾಗೆ ಸತ್ತು ಬಿದ್ದವನನ್ನು ರಾಣಿ ಸೇವಿಕೆಯರ ಸಹಾಯದಿಂದ ಒಳ ಮನೆಗೆ ಸಾಗಿಸಿರಬೇಕು. ಈ ಒಳ ಮನೆಯಲ್ಲಿ ಆತನ ಮುಂಡಾಸ ಪೋಲಿಸರಿಗೆ ಸಿಕ್ಕಿದೆ.'

ಈ ತೀರ್ಪಿನ ವಿರುದ್ಧ ರಾಣಿ ಲಾಹೋರಿನ ಹೈಕೋರ್ಟಿಗೆ ಅಪೀಲು ಹೋದಳು. 3—7—11ರಲ್ಲಿ ಮುಖ್ಯ ನ್ಯಾಯಮೂರ್ತಿ ಶ್ರೀ ಕೆನ್ಸಿಂಗ್‌ಟನ್ ಮುಂದೆ ವಾದ–ಪ್ರತಿವಾದಗಳು ನಡೆದವು-ಲಾಹೋರಿನ ಅಂದಿನ ಪ್ರಸಿದ್ಧ ಕ್ರಿಮಿನಲ್ ಲಾಯರ್ ಶ್ರೀ ಶಾದಿಲಾಲ್ ರಾಣಿಯ ಪರ ಹಾಜರಾದರು.

ರಾಣಿಯ ಅಮೃತಸರ ಮನೆಯ ಮಾದರಿಯನ್ನು ಕೋರ್ಟಿನ ಮುಂದೆ ಇಡಲಾಯಿತು. ವಕೀಲರ ಅಪೇಕ್ಷೆಯಂತೆ ನ್ಯಾಯ ಮೂರ್ತಿಗಳು 'ಹವೇಲಿ'ಯನ್ನು ಖುದ್ದು ಬಂದು ಪರೀಕ್ಷಿಸಿದರು.

ಖಾನ್‌ಚಂದ ಜೀವದಿಂದಿಲ್ಲವೆಂಬುದು ನಿಶ್ಚಯ. ಆತನ ಮರಣ ಪಾಷಾಣ ಪ್ರಯೋಗದಿಂದ ಸಂಭವಿಸಿತೆಂಬುದು ಅಸಂದಿಗ್ಧ. ಆತನಿಗೆ ವಿಷ ಕುಡಿಸಿದ್ದನ್ನು ಕಂಡವರಿರಲಿಲ್ಲ. ರಾಣಿಯೇ ಕೈಯಾರೆ ಕೊಟ್ಟಳೆಂಬುದಕ್ಕೆ ಪ್ರತ್ಯಕ್ಷದರ್ಶಿಯಿಲ್ಲ. ಆದ್ದರಿಂದ ನ್ಯಾಯಾಲಯದ ಮುಂದಿದ್ದುದು ಸಂದರ್ಭಸಾಕ್ಷ್ಯ. ಆದರೆ ಅದು ಬಲವತ್ತರವಾಗಿತ್ತು. ಆರೋಪಿಗಳು ತಪ್ಪಿತಸ್ಥರೆಂಬುದನ್ನು ಬೊಟ್ಟು ಮಾಡಿ ತೋರಿಸುವಷ್ಟು ಬಲವಂತವಿತ್ತು. ಆತ್ಮಹತ್ಯೆಗೆ ಅವಕಾಶವೇ ಇಲ್ಲವೆಂಬುದು ಸಿದ್ಧವಾದರೆ, ಕೊಲೆ ಗೈದರೆಂಬುದು ಸ್ಥಾಪಿತವಾದಂತೆ. ಸೆಷನ್ಸ್ ಜಡ್ಜರ ಮುಂದು ನ್ಯಾಯ ನಿರ್ಣಯಕ್ಕೆ ಕುಳಿತ ಪಂಚರು—ಕೊಲೆಯೂ ಇರಬಹುದು; ಆತ್ಮಹತ್ಯೆಯೂ ಆಗಿರಬಹುದು—ಎಂಬ ಒಮ್ಮತಕ್ಕೆ ಬಂದಿದ್ದರು. ಅವರ ಅಭಿಪ್ರಾಯವನ್ನು ತಳ್ಳಿ ಹಾಕಿ, ನ್ಯಾಯಾಧೀಶರು ಆಪಾದಿತರಿಗೆ ಶಿಕ್ಷೆ ವಿಧಿಸಿದ್ದರು.

ಶ್ರೀ ಶಾದೀಲಾಲರು ಸೆಷನ್ಸ್ ಜಡ್ಜಿಗಳು ಕೊಟ್ಟ ಕಾರಣಗಳನ್ನು ಖಂಡ–ತುಂಡ ಖಂಡಿಸಿದರು. ತರ್ಕದಲ್ಲಿನ ತಪ್ಪುಗಳನ್ನು ಎತ್ತಿ ತೋರಿಸಿದರು. ಕೊಲೆಯಲ್ಲ, ಖಂಡಿತ ಆತ್ಮಹತ್ಯೆ ಎನ್ನುವವರೆವಿಗೂ ವಾದ ಮುಂದುವರಿಯಿತು.

ಶ್ರೇಷ್ಠ ನ್ಯಾಯ ಮೂರ್ತಿಗಳು ತಮ್ಮ ತೀರ್ಪಿನಲ್ಲಿ 'ರಾಣಿಯ ಮಹಲಿನ ಬಿಸಿಲು ಮಚ್ಚಿಗೆ ಹೋಗಲು ಮೂರು ಕಡೆಯಲ್ಲಿ ಮೆಟ್ಟಲುಗಳಿವೆ. ಆ ಮೂರು ದಾರಿಗಳನ್ನು ಖಾನ್‌ಚಂದ ತಿಳಿದಿದ್ದ. ಆತ ಅಲ್ಲಿಗೆ ಅಪರಿಚಿತನಲ್ಲ. ತಿಂಗಳ ಕಾಲ ಆ ಮನೆಯಲ್ಲಿ ನೆಲಸಿದ್ದ. ಆ ಸ್ಥಳ ತಲುಪಲು ನಿರ್ಧರಿಸಿದ ಆತನಿಗೆ, ರಾತ್ರಿಯಲ್ಲಿ ಆ ತಾಣ ತಲುಪುವುದು ಪ್ರಯಾಸದ ವಿಷಯವಲ್ಲ. ಖಾನ್‌ಚಂದ ಬಿಸಿಲು ಮಚ್ಚನ್ನು ಮೆಟ್ಟಲಿನ ಮೂಲಕ ತಲುಪಿರ ಬೇಕು. ಖಾನ್‌ಚಂದನನ್ನು ರಾಣಿ ಹೆಬ್ಬಾಗಿಲಿನಿಂದ ಮನೆಯೊಳಕ್ಕೆ ಅಪಹರಿಸಿ ಕೊಂಡೊಯ್ದಳೆಂಬ ವಾದವೂ ಸಮಂಜಸವೆನಿಸುವುದಿಲ್ಲ. ವಾದಕ್ಕೆ ಒಪ್ಪಿಕೊಂಡರೂ, ವಿಷ ಉಣಿಸಿದ್ದು ತಿಳಿದ ಬಳಿಕ ಖಾನ್‌ಚಂದ ಸುಮ್ಮನಿದ್ದುದು ಆಶ್ಚರ್ಯದ ಸಂಗತಿ. ಆತ ಹೊರಗಿನವರನ್ನು ಸಹಾಯಕ್ಕೆ ಕರೆಯುತ್ತಿದ್ದ. ರಾಣಿಯನ್ನೂ ಆಳು–ಕಾಳುಗಳನ್ನೂ ಜರೆಯದಿರುತ್ತಿರಲಿಲ್ಲ. ಸುತ್ತು–ಮುತ್ತಲಿನ ಜನ ಸೇರುವಂತೆ ಅರಚಿಕೊಳ್ಳುತ್ತಿದ್ದ. ರಾಣಿಯೇ ಮಾಡಿರುವುದು ನಿಜವಿದ್ದರೆ ಅವಳ ಹೆಸರೆತ್ತಿ ಆಕ್ಷೇಪದ ಮಾತನಾಡುತ್ತಿದ್ದ.

ಬಿಳಿಯ ಪಾಷಾಣ ಸೇವನೆಯಿಂದ ಖಾನ್‌ಚಂದ ಅಸು ನೀಗಿದ–ಇದು ತಜ್ಞರ ಅಭಿಪ್ರಾಯ. ರಾಣಿಯ ಶಯ್ಯಾಗೃಹದಲ್ಲಿ ಸಿಕ್ಕಿದ್ದು ಹಳದಿ ಪಾಷಾಣ. ರಾಣಿಯ ಬಳಿ ಎರಡು ಬಗೆಯ ಪಾಷಾಣಗಳಿದ್ದುವೆಂಬುದಕ್ಕೆ ರುಜುವಾತು ಇಲ್ಲ. ಹಳದಿ ಪಾಷಾಣ ಆ ಕೋಣೆಯಲ್ಲಿದ್ದ ಮಾತ್ರದಿಂದ, ಬಿಳಿ ಪಾಷಾಣ ಇಟ್ಟುಕೊಂಡಿದ್ದಳೆಂದು ಹೇಳುವುದು ಸರಿಯಲ್ಲ. ಅಲ್ಲದೆ ಪಾಷಾಣ ಸಿಕ್ಕಿದ್ದು ಕೋಣೆಯ ಒಂದು ಭಾಗದಲ್ಲಿದ್ದ ಕವಾಟದಲ್ಲಿ. ರಾಣಿಯ ಹೊರತು ಅನ್ಯರಿಗೆ ಸಿಗದಿರುವ ಸ್ಥಳವೂ ಅಲ್ಲ. ಇಲ್ಲಿಯೂ ಸಮಸ್ಯೆ ಗಂಭೀರವಾಗಿದೆ.

ಕೊನೆಯದಾಗಿ ತೀರಿಕೊಂಡ ಖಾನ್‌ಚಂದ ತನ್ನ ಬಳಿ ಬಿಳಿಯ ಪಾಷಾಣ ಇಟ್ಟುಕೊಂಡಿಲ್ಲವೆಂಬ ನಿರ್ಧಾರಕ್ಕೆ ಹೇಗೆ ಬರುವುದು? ಒಂದು ಪುಟ್ಟ ಪೊಟ್ಟಣ ಕೈಯಲ್ಲಿ ಹಿಡಿದುಕೊಂಡು ಆತ ಹವೇಲಿಯನ್ನು ಪ್ರವೇಶಿಸಿರ ಬಾರದೇಕೆ? ಆಕೆ ಉಪೇಕ್ಷಿಸಲು,—ಅವಳಿಗೆ ತಿಳಿಯದಂತೆ-ಕೊಟ್ಟಿದ್ದ ಹಾಲಿನಲ್ಲಿ ಹಾಕಿ ಕುಡಿದಿರ ಬಹುದು. ಇದು ಅಸಾಧ್ಯದ ಮಾತು ಅಲ್ಲ. ಆತ ವಿಷ ಒಯಿದೇ ಇಲ್ಲ ಎಂದು ಯಾವ ಆಧಾರದ ಮೇಲೆ ಬರುವುದು. ಸತ್ತ ಒಂದೂವರೆ ದಿನದ ಮೇಲೆ ಅವನ ಬಟ್ಟೆ–ಬರೆಗಳ ಝಾಡಿತಿಯಾಯಿತು. ಆಗ ಬಿಳಿಯ ಪಾಷಾಣ ಒಯ್ದ ಚಿಹ್ನೆಗಳು ಉಳಿಯುವುವಾದರೂ ಹೇಗೆ? ಇಲ್ಲಿಯೂ ಶಂಕೆ ತನ್ನ ಅಂಕಿತ ಹಾಕಿತು.

ಹೈಕೋರ್ಟು ಈ ಕಾರಣಗಳನ್ನು ಕೊಟ್ಟು, ರಾಣಿ ಭಗವಾನ್ ಮತ್ತು ಆಕೆಯ ಸೇವಕಿಯರನ್ನು ಬಿಡುಗಡೆ ಮಾಡಲು ಆಜ್ಞೆ ಹೊರಡಿಸಿತು. ●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ರಾಜ್ಯದ ಹೈಸ್ಕೂಲುಗಳಿಗೆ
ನವಯುಗ
ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17–4/65–66ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.
2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/– ಮಾತ್ರ.
ಮೆನೇಜರ್, ನವಯುಗ, ಉಡುಪಿ.

ಸಿಗುತ್ತವೆ
ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

NAVAYUGA 3-6-1971

Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 33
Licensed to Post without Prepayment

ಹೆರಿಗೆಯ ಖಚಿತ ಕಾಲವನ್ನು ಹೇಳಬಹುದು

ಲೇಖಕರು : ಡಾ| ಎಲ್. ಪೆರ್ಸಿಯಾನಿನೋವ್.

ಕೆಲವು ಕಾಲದ ಹಿಂದೆ ಹಲವಾರು ಪಾಶ್ಚಾತ್ಯ ಪತ್ರಿಕೆಗಳು ವರ್ಣ ಛಾಯೊಚಿತ್ರಗಳ ಒಂದು ಮಾಲಿಕೆಯನ್ನು ಪ್ರಕಟಿಸಿದುವು. ಮೊದಲ ವಾರಗಳಿಂದ ಆರಂಭಿಸಿ ಹೆರಿಗೆ ಆಗುವ ಕ್ಷಣದವರೆಗೆ ಮನುಷ್ಯ ಗರ್ಭವು ಹೇಗೆ ಬೆಳೆಯುತ್ತದೆ ಎಂಬುದನ್ನು ಈ ಚಿತ್ರಗಳು ತೋರಿಸುತ್ತಿದ್ದುವು. ಲಭ್ಯವಿರುವ ಈ ಆಧುನಿಕ 'ಒಳನೋಟ'ದ ವಿಧಾನವು ಮನುಷ್ಯ ಜೀವಿಯ ಒಂದು ಅತ್ಯಂತ ರಹಸ್ಯ ಅವಧಿಯ ಮೇಲಿನ ಪರದೆಗಳನ್ನೆಲ್ಲ ಮೇಲೆತ್ತಿದೆ.

ಈ ಚಿತ್ರಗಳು ಅದೆಷ್ಟೇ ಕೋಲಾಹಲಕಾರಿಯಾಗಿದ್ದರೂ, ಕಣ್ಣು ಕೋರೈಸುವಂತಿದ್ದರೂ ಇವುಗಳ ಮೌಲ್ಯ ಮಾತ್ರ ನಮಗೆ, ಪ್ರಸವ ಶಾಸ್ತ್ರಜ್ಞರಿಗೆ, ಕೇವಲ ಸಮಾಚಾರ ಸ್ವರೂಪದ್ದು ಮತ್ತು ಶಾಸ್ತ್ರೀಯವಲ್ಲದೆ ಪ್ರಾತ್ಯಕ್ಷಿಕವಲ್ಲ. ಗರ್ಭಿಣಿ ಸ್ತ್ರೀಯನ್ನು ಆಕೆಯ ಕೊನೆಯ ತಿಂಗಳುಗಳಲ್ಲಿ ಸಾಧ್ಯವಿರುವಷ್ಟು ಕಡಮೆ ಪರೀಕ್ಷೆಗಳಿಗೆ ಒಳಪಡಿಸಬೇಕು, ವಿಶೇಷವಾಗಿ ಸಂಕೀರ್ಣವೂ ಪುನರಾವೃತ್ತಿಯಾಗುವಂಥವೂ ಆದ ಪರೀಕ್ಷೆಗಳು ತೀರಾ ಅನಪೇಕ್ಷಣೀಯವಾಗಿವೆ. ಈ ಕಾರಣದಿಂದಲೇ ಸೋವಿಯೆತ್ ಪ್ರಸವ ಶಾಸ್ತ್ರಜ್ಞರು ಹೊಟ್ಟೆಯಲ್ಲಿ ರಂಧ್ರದ ಮೂಲಕ ಒಳ ಹೊಕ್ಕು ಸೂಕ್ಷ್ಮವಾಗಿ ಪರೀಕ್ಷಿಸುವ ವಿಧಾನದಿಂದ ದೂರವಿದ್ದಾರೆ.

ಅದೇ ಕಾಲಕ್ಕೆ ಗರ್ಭಿಣಿ ಮಾತೆಯ ಆಂತರಿಕ ಅವಯವಗಳ ಸ್ಥಿತಿಗತಿ, ಗರ್ಭಾಶಯದಲ್ಲಿ ನಡೆದಿರುವ ಪ್ರಕ್ರಿಯೆ ಮೊದಲಾದುವು ನಮಗೆ ತಿಳಿದಿವೆ. ಪ್ರಸವ ವೇದನೆ ಕಾಲದಲ್ಲಿ ಸಂಭವನೀಯ ತೊಂದರೆಗಳ ಬಗ್ಗೆ ಮತ್ತೆ ಕೂಸು ಅಸ್ತಿತ್ವಕ್ಕೆ ಬರುವ ಉಷಃಕಾಲದಲ್ಲಿ ಅದಕ್ಕೆ ಕಾದಿರಬಹುದಾದ ಕಾಹಿಲೆಗಳ ಬಗ್ಗೆ ಊಹಿಸಲು ಇಂಥ ಸಮಾಚಾರವು ನಮ್ಮನ್ನು ಸಾಧ್ಯಗೊಳಿಸುತ್ತವೆ. ಈ ಕಾರಣದಿಂದಲೇ ವಿಕಾಸಗೊಳಿಸಿರುವ ರೇಡಿಯೊ-ಟೆಲೆಮೆಟ್ರಿಕ್ ಸಮೀಕ್ಷಾ ವಿಧಾನದಲ್ಲಿ ಅಷ್ಟೊಂದು ಆಸಕ್ತಿಯು ಕಂಡುಬರುತ್ತಿದೆ. ಈ ವಿಧಾನವು ಹೀಗಿದೆ:.

ರೇಡಿಯೊ-ಟೆಲಿಮೆಟ್ರಿ ಎಂಬ ಪದ ಪ್ರಯೋಗವನ್ನು ಪ್ರತಿಯೊಬ್ಬರೂ ಕೇಳಿದ್ದಾರೆಂದು ನಾನು ತಿಳಿಯುತ್ತೇನೆ. ದೂರದಲ್ಲಿದ್ದುಕೊಂಡೇ ವ್ಯೋಮಯಾತ್ರಿಗಳ, ಮುಳುಕರ ಮತ್ತು ಅತ್ಲೆಟುಗಳ ಸ್ಥಿತಿಗತಿಗಳನ್ನು ಸಮೀಕ್ಷಿಸಲು ಈ ತಂತ್ರದಿಂದ ಸಾಧ್ಯವಿದೆ. ಪ್ರಸವ ಶಾಸ್ತ್ರದಲ್ಲೂ ಈ ತಂತ್ರವನ್ನು ಉಪಯೋಗಿಸುವಂಥ ಒಂದು ವಿಧಾನವನ್ನು ಈಗ ರಚಿಸಲಾಗಿದೆ.

ಪ್ರಸವವು ಆರಂಭವಾಗುವುದಕ್ಕೆ ಸ್ವಲ್ಪ ಕಾಲ ಮುಂಚೆ ಒಂದು ಸೂಕ್ಷ್ಮವಾದ ರೇಡಿಯೋ ಕ್ಯಾಪ್ಸೂಲ (ಗುಳಿಗೆ) ನ್ನು ವೇದನಾ ರಹಿತವಾಗಿ ಗರ್ಭಾಶಯದೊಳಗೆ ಸೇರಿಸಲಾಗುತ್ತದೆ. ಇದು ಗರ್ಭಾಶಯದೊಳಗಿನ ಒತ್ತಡವನ್ನು ಅಳೆದು ದಾಖಲೆ ಮಾಡುವ ಉಪಕರಣಕ್ಕೆ ಸಂಜ್ಞೆಗಳನ್ನು ಕಳಿಸಿಕೊಡುತ್ತದೆ. ಪ್ರಸವವೇದನೆ ಯಾವಾಗ ಆರಂಭವಾಗುತ್ತದೆಯೆಂಬುದನ್ನು ನಿಷ್ಕರ್ಷವಾಗಿ ಹೇಳಲು ಹಾಗೂ ಮಹಿಳೆ ಈ ಘೋರ ಪರೀಕ್ಷೆಗೆ ಎಷ್ಟರ ಮಟ್ಟಿಗೆ ಸಿದ್ಧಳಾಗಿದ್ದಾಳೆ ಎಂಬುವನ್ನು ತಿಳಿಯಲು ರೇಡಿಯೊ ಟೆಲಿಮೆಟ್ರಿಕ್ ಮಾಹಿತಿಯು ನಮ್ಮನ್ನು ಶಕ್ತಗೊಳಿಸುತ್ತದೆ. ಆಗ ಡಾಕ್ಟರರು ನಿರ್ಧರಿಸಿ ಅಗತ್ಯವಾದ ಹೆರಿಗೆ ಸಲಕರಣೆಗಳೊಡನೆ ಮುಂಚಿತವಾಗಿ ಸಿದ್ಧಗೊಂಡು ನಿಲ್ಲಬಹುದು. ವಿದ್ಯುತ್-ಹೃತ್ಚಲನ ಲೇಖಕ ಮತ್ತು ಬೇರೆ ಸಲಕರಣೆಗಳು ಪಡೆದ ಮಾಹಿತಿಯೊಂದಿಗೆ ಟೆಲಿಮೆಟ್ರಿಕ್ ವಾಚನಗಳನ್ನು ತಾಳೆ ಹಾಕಿ ಇನ್ನೂ ಹುಟ್ಟದಿರುವ ಕೂಸಿನ ಸ್ಥಿತಿಗತಿಯ ಬಗ್ಗೆ ಬಹಳಷ್ಟು ವಾಸ್ತವಿಕ ಮಾಹಿತಿಯನ್ನು ಪಡೆಯಲು ಸಾಧ್ಯವಿದೆ.

ನಮ್ಮ ಪೀಠದಲ್ಲಿ ಈಗಾಗಲೇ ಇಂಥ ಪರೀಕ್ಷೆಗಳನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಗುತ್ತಿದೆ. ಗಣಿತ ಶಾಸ್ತ್ರ, ಪ್ರಸವ ವಿಜ್ಞಾನ ಮತ್ತು ಸ್ತ್ರೀರೋಗ ಶಾಸ್ತ್ರಗಳಂಥ ನಿಷ್ಕರ್ಷ ವಿಜ್ಞಾನಗಳನ್ನು ಬಳಸಿಕೊಳ್ಳುವುದಕ್ಕೆ ರೇಡಿಯೊ-ಟೆಲಿಮಿಟ್ರಿಯು ನಮ್ಮ ಅವಕಾಶಗಳನ್ನು ವಿಶಾಲಗೊಳಿಸುತ್ತದೆ. ರೇಡಿಯೋ ಕ್ಯಾಪ್ಸೂಲಿನಿಂದ ಪಡೆದ ಮಾಹಿತಿಯನ್ನು ಗಣಿತ ಲೆಕ್ಕಾಚಾರದ ಭಾಷೆಗೆ ತರ್ಜುಮೆಗೊಳಿಸಿ, ಒಂದು ವಿದ್ಯುತ್ ಗಣಕದ 'ಮಿದುಳಿ'ಗೆ ನೀಡಿದರೆ, ಅನಂತರ ಅದು ಸಮಾಲೋಚಕ ಪ್ರಸವ ಶಾಸ್ತ್ರಜ್ಞನ ಪಾತ್ರವನ್ನು ನಿರ್ವಹಿಸಲಾರಂಭಿಸುತ್ತದೆ. ನಿದಾನ ಮಾಡುತ್ತದೆ, ಪ್ರಸವ ವೇದನೆಯ ಕಾಲದ ಬಗ್ಗೆ 'ಕಣಿ' ಹೇಳುತ್ತದೆ, ಅಗತ್ಯವಾದ ಯಾವ ಔಷಧಗಳನ್ನು, ಉತ್ತೇಜಕಗಳನ್ನು ಆರಿಸಿಕೊಳ್ಳಬೇಕು ಮತ್ತು ಪ್ರಯೋಗಿಸಬೇಕು ಎಂಬುದನ್ನೆಲ್ಲ ತಿಳಿಸುತ್ತದೆ.

ಪ್ರಸವಶಾಸ್ತ್ರ ಮತ್ತು ಸ್ತ್ರೀ ರೋಗ ಚಿಕಿತ್ಸೆಯ ಕ್ಷೇತ್ರದಲ್ಲಿ ವಿದ್ಯುತ್ ಗಣಕಗಳ ಕಾರ್ಯಕ್ಕೆ ಇರುವ ವಿಸ್ತೃತ ಪ್ರತೀಕ್ಷೆಗಳನ್ನು ನಮ್ಮ ಅನುಭವವು ತೋರಿಸಿಕೊಟ್ಟಿದೆ.

ಕುಟುಂಬ ಯೋಜನೆಯಲ್ಲಿ ರಜಪುತ್ರರ ಆಸಕ್ತಿ

ರಜಪುತ್ರರು ಧೈರ್ಯ ಸಾಹಸಗಳಿಗೆ ಹೆಸರಾದವರು. ಇಟ್ಟ ಹೆಜ್ಜೆ ಹಿಂದೆಗೆಯದ ಗಂಡೆದೆಯ ವೀರರು. ತಮ್ಮ ಸಮಾಜ ಹಾಗೂ ಸಂಪ್ರದಾಯಗಳಿಗೆ ಅಪಮಾನವಾಗುವ ಏನನ್ನೂ ಅವರು ಸಹಿಸರು. ಗುಜರಾತು ರಾಜ್ಯದ ಮೆಹಸಾನಾ ಜಿಲ್ಲೆಯ ಮೋತಿ ಚಂದೂರದಲ್ಲಿನ ರಜಪುತ್ರರಲ್ಲೂ ಈ ಗುಣಗಳು ಇಲ್ಲದಿಲ್ಲ. ಅಲ್ಲಿನ ಜನ ಕುಟುಂಬಯೋಜನೆಯ ಶಸ್ತ್ರ ಚಿಕಿತ್ಸೆ ಬಗ್ಗೆ ತಪ್ಪು ತಿಳಿವಳಿಕೆಯನ್ನು ಹೊಂದಿದ್ದರು. ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳುವವರು ತಮ್ಮ ಪುರುಷತ್ವವನ್ನು ಕಳೆದುಕೊಳ್ಳುವರೆಂದು ಅವರು ನಂಬಿದ್ದರು. ಶಿಕ್ಷಣದಿಂದಾಗಲಿ ಅಥವಾ ಪ್ರಚಾರ ಕಾರ್ಯಗಳಿಂದಾಗಲಿ ಈ ಭಾವನೆಯನ್ನು ತೊಡೆದು ಹಾಕುವುದು ಅಸಾಧ್ಯದ ಮಾತಾಗಿತ್ತು. ಆದರೆ ಆಗ ಹಳ್ಳಿಯ ಉಪ ಸರಪಂಚನಾಗಿದ್ದ ಚತ್ತಾರ್‌ಸಿಂಗ್‌ನಿಂದ ಈ ಕಾರ್ಯ ಸಾಧ್ಯವಾಯಿತು. ಕುಟುಂಬ ಯೋಜನೆಯಿಂದ ಲಭ್ಯವಾಗುವ ಅನುಕೂಲಗಳ ಬಗ್ಗೆ ಆತನಿಗೆ ಕುಟುಂಬ ಯೋಜನಾ ಇಲಾಖೆಯ ಅಧಿಕಾರಿಗಳು ತಿಳಿಸಿದರು. ಹಳ್ಳಿಯ ಜನತೆ ತನ್ನ ಮಾತಿಗೆ ಬೆಲೆ ಕೊಡುವರೆಂಬ ವಿಶ್ವಾಸ, ಚತ್ತಾರ್‌ಸಿಂಗ್‌ನಿಗೆ ಇದ್ದಿತಾದರೂ ತಾನು ಅವರಿಗೆ ಮಾರ್ಗ ದರ್ಶಕನಾಗಬೇಕೆಂದು ನಿರ್ಧರಿಸಿದ. 38 ವರ್ಷದ ಚತ್ತಾರ್ ಸಿಂಗ್ ಆ ವೇಳೆಗಾಗಲೇ ಆರು ಮಕ್ಕಳ ತಂದೆ. ಬೇಸಾಯ ಆತನ ವೃತ್ತಿ. ತನಗೆ ಈಗಿರುವ ಆರು ಮಕ್ಕಳು ಸಾಕು ಎಂದು ನಿರ್ಧರಿಸಿ ಕುಟುಂಬ ಯೋಜನೆ ಹಾಗೂ ಅದನ್ನು ಅನುಸರಿಸಲು ಇರುವ ವಿವಿಧ ವಿಧಾನಗಳ ಬಗ್ಗೆ ಇದ್ದ ತಪ್ಪು ತಿಳುವಳಿಕೆಯನ್ನು ತಿದ್ದಿಕೊಂಡು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ. ಚತ್ತಾರ್‌ಸಿಂಗ್ ಈ ಮಾರ್ಗದರ್ಶನ ಇಡೀ ಹಳ್ಳಿಯನ್ನೇ ಪರಿವರ್ತಿಸಿತು. ಹಳ್ಳಿಯ ಜನತೆಗೆ ಇದ್ದ ತಪ್ಪು ತಿಳುವಳಿಕೆ ಮಾಯವಾಯಿತು. ಹಳ್ಳಿಗೆ ಮೊದಲಿಗನಾಗಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡನಲ್ಲದೆ ಜನತೆಯ ಮನವೊಲಿಸುವ ಕಾರ್ಯಕ್ಕಾಗಿ ಆತ ಹಣವನ್ನು ತೆಗೆದುಕೊಳ್ಳುವುದಿಲ್ಲ. ಸಮಾಜ ಕಲ್ಯಾಣಕ್ಕಾಗಿ ದುಡಿಯುವುದೇ ತನಗೆ ಸಂತೋಷ ಎನ್ನುತ್ತಾನೆ ಆತ.

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು
ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಆಗಾಗ್ಗೆ ಹೊಸ ಹೊಸ ಸ್ಟೋಕಿನಿಂದ
ಕೊಲಿಟಿಯಲ್ಲಿ, ಸ್ಟಾಜನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರೆಟ ತೂಕದಲ್ಲಿ
ಬೇಕಾದವರು ಮುಂದಾಗಿ ಬಂದು ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 444/1970

ರಾಜುಬುಂಟ —ವಾದಿ
ಚೆನ್ನಪ್ಪ ಶೆಟ್ಟಿ ಸಹಾ —ಪ್ರತಿವಾದಿರು

ಸದ್ರಿ ದಾವೆಯ 2ನೇ ಪ್ರತಿವಾದಿ ಕಾರ್ಕಳ ತಾಲ್ಲು ಮೂಂಟ್ರಾಡಿ ಗ್ರಾಮದ ಬನ್ನೊಟ್ಟು ಎಂಬಲ್ಲಿರುವ ಶಿವಯ್ಯ ಆಳ್ವರ ಮೊಂಮಗ ಅನಂತ ರಾಜ ಆಳ್ವರಿಗೆ—

ವಾದಿ ಆಸ್ತಿಯಿಂದ ಮರಗಳನ್ನು ಕಡದ ನಷ್ಟದ ಬಾಬ್ತು ರೂಪ್ಯ 1500|- ಬರಮಾಡಿಕೊಳ್ಳುವರೆ ವಾದಿಯು ದಾಕ್ಲು ಮಾಡಿದ ಈ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾರೀಕು 5-6-1971ಕ್ಕೆ ಇಟ್ಟದ್ದು ನೀವು ಸದ್ರಿ ದಿನ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

K. Sunder Hegde
ವಾದಿ ಕಡೆ ಎಡ್ವೊಕೇಟ್

ಕಾರ್ಕಳ, 24-5-1971.

ಬೇಕಾಗಿದ್ದಾರೆ

ಕನಿಷ್ಠ 8ನೇ ತರಗತಿ ವರೆಗೆ ಓದಿದ ಕೆಲವು ಉತ್ಸಾಹಿ ಹುಡುಗರನ್ನು ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi. S. India.

ಸುವರ್ಣೋತ್ಸವ ವರ್ಷ

NAVAYUGA

ಸಂಪುಟ 50
ಸಂಚಿಕೆ 39

10—6—1971

ಪಾಕಿಸ್ತಾನದ ಮೇಲೊಂದು ಕ್ಷ-ಕಿರಣ

ಫ್ಯಾಶನ್ ಪರೇಡಿನಲ್ಲಿ ವಿರಸ ಪ್ರಸಂಗ

ಭಾವೈಕ್ಯವೇ ಫ್ಯಾಶನ್ ಪ್ರದರ್ಶನದ ಗುರಿ. ಪಾಕಿಸ್ತಾನದ ಮಟ್ಟಿಗೆ ಈ ಮಾತು ಹುಸಿ. ಮೈತ್ರಿಗೆ ಹುಳಿಹಿಂಡಲು ಅವರಿಗೆ ಇದೊಂದು ಅಮೃತ ಗಳಿಗೆ. ಲಾಹೋರಿನಲ್ಲಿ ನಡೆದ ಘಟನೆಯಿಂದ ಈ ಮಾತಿಗೆ ಪುಷ್ಟಿ. ಇತ್ತೀಚೆಗೆ ಲಾಹೋರಿನಲ್ಲಿ ಫ್ಯಾಶನ್ ಪ್ರದರ್ಶನ ನಡೆಯಿತು. ಈ ಫ್ಯಾಶನ್ ಪರೇಡಿನಲ್ಲಿ, ಅರಬ ಸಂಸ್ಕೃತಿಗೆ ಅವಮಾನವಾಯಿತೆಂದು ಅರಬ ವಿದ್ಯಾರ್ಥಿಗಳ ಅಬ್ಬರ, ಗಲಾಟೆ. ಕೊನೆಗೆ ಫ್ಯಾಶನ್ ಪ್ರದರ್ಶನವೇ ಗೊಂದಲದಲ್ಲಿ ಮುಕ್ತಾಯವಾಯಿತು. ಇದು ನಮ್ಮ ವರದಿಯಲ್ಲ. 'ಪಾಕಿಸ್ತಾನ್ ಟೈಮ್ಸ್' ಪತ್ರಿಕೆಯದೇ ವರದಿ. ಈ ಪತ್ರಿಕೆಯ ಮಾತಿನಲ್ಲೇ ಕೇಳಿ. ಅದು ನಡೆದದ್ದು ಹೀಗೆ:

'ಇತ್ತೀಚೆಗೆ ಲಾಹೋರಿನ ಹೋಟೆಲ್ ಒಂದರಲ್ಲಿ ಫ್ಯಾಶನ್‌ಪ್ರದರ್ಶನ ನಡೆಯಿತು. ಫ್ಯಾಶನ್ ಪರೇಡ್‌ನಲ್ಲಿ ಇಬ್ಬರು ಪಾಕ್ ಹುಡುಗಿಯರು ಅರಬ ಮಹಿಳೆಯರಂತೆ ಉಡುಪು ಧರಿಸಿದ್ದರು ಬೆಲೆನೆಣ್ಣನಂತೆ. ಅಸಹ್ಯಕರ ಉಡುಪು ಧರಿಸಿದ ಈ ಹುಡುಗಿಯರು ಕೈಯಲ್ಲಿ ಎರಡು ಪಾನಬಟ್ಟಲುಗಳನ್ನು ಹಿಡಿದು ಪರೇಡಿನಲ್ಲಿ ಪ್ರತ್ಯಕ್ಷವಾದರು. ಈ ದೃಶ್ಯ ಅರಬ ಮಹಿಳೆಯರ ಉಡುಪನ್ನು ಪ್ರದರ್ಶಿಸುವುದಾಗಿತ್ತು. ಸಮಾರಂಭದಲ್ಲಿ ಹಾಜರಿದ್ದ ಅರಬ ವಿದ್ಯಾರ್ಥಿಗಳಿಗೆ ಈ ದೃಶ್ಯವನ್ನು ಕಂಡು ಗಾಬರಿಯಾಯಿತು. ಇದು ಅರಬ್ ಉಡುಪಿನ ರೀತಿಯೆ? ಎಂದು ತಬ್ಬಿಬ್ಬಾದರು. ತಮ್ಮ ಸಂಸ್ಕೃತಿಗೆ ಈ ರೀತಿ ಅಪಚಾರವಾಗುವುದನ್ನು ಕಂಡು ಅವರಿಗೆ ಸಹಿಸಲು ಆಗಲಿಲ್ಲ. ಫ್ಯಾಶನ್ ಪರೇಡಿನಲ್ಲಿ ಕೋಲಾಹಲವೆದ್ದಿತು. ಕೊನೆಗೆ ಅದು ಗೊಂದಲದಲ್ಲಿ ಮುಕ್ತಾಯವಾಯಿತು. ಮೊದಲಿನಿಂದಲೂ ಅಷ್ಟಕ್ಕಷ್ಟೇ ಇದ್ದ ಅರಬರು—ಪಾಕಿಸ್ತಾನಿಗಳು ಈ ಘಟನೆಯಿಂದ 'ಪೂರ್ವ—ಪಶ್ಚಿಮ' ಎನ್ನುವಂತಾಗಿದ್ದಾರೆ.

ಪ್ರದರ್ಶನದಲ್ಲಿ ಕೋಲಾಹಲವೆಬ್ಬಿಸಿದ ಬಳಿಕ ಅರಬ ವಿದ್ಯಾರ್ಥಿಗಳು ಹೋಟೆಲ್ ಮುಂಭಾಗದಲ್ಲಿ ಮತಪ್ರದರ್ಶನ ನಡೆಸಿದರು.

ಅರಬ್ ರಾಷ್ಟ್ರಗಳ 'ಮಿತ್ರ'ನೆಂದು ಹೇಳಿಕೊಳ್ಳುವ ಪಾಕಿಸ್ತಾನದಲ್ಲಿ ಅರಬ್ ವಿರೋಧಿ ಕಾರ್ಯಚಟುವಟಿಕೆ ನಡೆಯುತ್ತಿರುವುದನ್ನು ಈ ಕೂಡಲೇ ನಿಲ್ಲಿಸಬೇಕೆಂದು ಅರಬ ವಿದ್ಯಾರ್ಥಿಗಳು ಪಾಕ್ ಸರ್ಕಾರಕ್ಕೆ ಒತ್ತಾಯಪಡಿಸಿದ್ದಾರೆ. ಇದು ಪಾಕಿಸ್ತಾನ್ ಟೈಮ್ಸ್ ವರದಿ.

ಗುರಿ ತಲುಪುವ ಮೊದಲೇ ಸ್ಫೋಟ

ಬಂಗ್ಲಾ ದೇಶದಲ್ಲಿ ಪಾಕ್ ಸೇನಾನಿಗಳು ನಡೆಸಿರುವ ನರಮೇಧ ಈಗೀಗ ಮುಸ್ಲಿಂ ರಾಷ್ಟ್ರಗಳ ಗಮನಕ್ಕೂ ಬಂದಿದೆ ಎಂಬುದು ಅಲ್ಲಿನ ಪತ್ರಿಕಾವರದಿಗಳಿಂದ ಗೊತ್ತಾಗಿದೆ. ಸುಡಾನಿನ ಅತ್ಯಧಿಕ ಪ್ರಸಾರವುಳ್ಳ ಪತ್ರಿಕೆಯಾದ 'ಎಲ್ ಸಫಾ' ಪೂರ್ವಪಾಕಿಸ್ತಾನದಲ್ಲಿ ನಡೆದಿರುವ ಹೋರಾಟ ಪ್ರತ್ಯೇಕತೆಗಾಗಿ ನಡೆದಿರುವ ಹೋರಾಟವೆಂಬ ಪಾಕಿಸ್ತಾನದ ವಾದವನ್ನು ತಿರಸ್ಕರಿಸಿದೆ. ಪೂರ್ವ ಬಂಗಾಳದಲ್ಲಿ ಪಾಕ್ ಪ್ರಭುಗಳು ನಡೆಸಿರುವ ನರಹತ್ಯೆಯಿಂದ ಧಾರ್ಮಿಕ ಆದರ್ಶದ ಅಡಿಪಾಯದ ಮೇಲೆ ಮುಸ್ಲಿಂ ರಾಷ್ಟ್ರ ಕಟ್ಟುವ ಅಸಹಜ ಪ್ರಯೋಗವೊಂದು ಗುರಿಮುಟ್ಟುವ ಮೊದಲೇ ಸ್ಫೋಟಗೊಂಡಿದೆ ಎಂದು ಈ ಪತ್ರಿಕೆ ಅಭಿಪ್ರಾಯಪಟ್ಟಿದೆ.

'23 ವರ್ಷಗಳ ಹಿಂದೆ ಪಾಕಿಸ್ತಾನವೆಂಬ ಹೆಸರಿನ ಯಾವ ದೇಶವೂ ಇರಲಿಲ್ಲ ಎಂಬುದನ್ನು ನೆನಪಿಡಬೇಕು. ಒಂದಕ್ಕೊಂದು ಸಾವಿರ ಮೈಲು ಅಂತರದಲ್ಲಿರುವ ಎರಡು ವಿಭಾಗಗಳನ್ನು ಒಂದುಗೂಡಿಸಿದ ಬಳಿಕ ಪಾಕಿಸ್ತಾನದ ಅಸ್ವಾಭಾವಿಕ ರೀತಿಯಲ್ಲಿ ಜನ್ಮ ತಾಳಿದೆ. ಇದೊಂದು ಧಾರ್ಮಿಕ ಆಧಾರದ ರಾಷ್ಟ್ರವನ್ನು ಕಟ್ಟಲು ನಡೆದ ಅಪೂರ್ವ ಪ್ರಯೋಗ. ಯಾರ ಸಹಾಯವೂ ಇಲ್ಲದೆ ಸ್ವಯಂ ಪಾಕಿಸ್ತಾನವೇ ಈ ಪ್ರಯೋಗವನ್ನು ಸ್ಫೋಟಗೊಳಿಸಿದೆ. ಇಂತಹ ಪರಿಸ್ಥಿತಿಯ ಸೃಷ್ಟಿಗೆ, ಜ. ಯಾಹ್ಯಾಖಾನರೇ ಹೊಣೆಗಾರರಾಗಿದ್ದಾರೆ' ಎಂದು ಎಲ್ ಸಫಾ ತಿಳಿಸಿದೆ

ಪೂರ್ವ ಬಂಗಾಳದಲ್ಲಿ ನಡೆದ ಹೋರಾಟ, ಪ್ರತ್ಯೇಕತೆಗಾಗಿ ನಡೆದ ಹೋರಾಟವಲ್ಲ. ಮುಜೀಬುರ ರೆಹಮಾನರು ನಿಜವಾದ ಜನತಾ ಪ್ರತಿನಿಧಿ. ಅವರ ಪಕ್ಷ ಇತ್ತೀಚಿನ ಚುನಾವಣೆಗಳಲ್ಲಿ ನೂರಕ್ಕೆ 98ರಷ್ಟು ಮತಗಳನ್ನು ಗಳಿಸಿತು. ಈ ಮಾತನ್ನು ಯಾಹ್ಯಾಖಾನರು ಮಾತ್ರವಲ್ಲ, ಇಡೀ ಪಶ್ಚಿಮ ಪಾಕಿಸ್ತಾನವೇ ಒಪ್ಪಿಕೊಂಡಿದೆ. ಕಾರಣ, ಮುಜೀಬುರ್ ರೆಹಮಾನರ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕು. ಅವರೇ ನಿಜವಾದ ಜನತಾ ಪ್ರತಿನಿಧಿ ಎಂದು ಈಪತ್ರಿಕೆ ತನ್ನ ಸುದೀರ್ಘವಾದ ಲೇಖನದಲ್ಲಿ ಸ್ಪಷ್ಟಪಡಿಸಿದೆ.

ಪೂರ್ವ ಬಂಗಾಳದಲ್ಲಿ ಪಾಕಿಸ್ತಾನವು ಸುವ್ಯವಸ್ಥಿತ ರೀತಿಯಲ್ಲಿ ಜನತೆಯ ಕಗ್ಗೊಲೆ ನಡೆಸಿದೆ ಎಂದು ಹೇಳಿ ಸಿರಿಯದ ಅಲ್‌ಥವಾರಾ ಪತ್ರಿಕೆ ಉಗ್ರವಾಗಿ ಖಂಡಿಸಿದೆ. ಈ ಪತ್ರಿಕೆ ರಾಷ್ಟ್ರೀಯ - ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಸರ್ಕಾರದ ಅಭಿಪ್ರಾಯವನ್ನು ಪ್ರತಿನಿಧಿಸುತ್ತಿದೆಯಾದ್ದರಿಂದ ಈ ಮಾತಿಗೆ ವಿಶೇಷ ಮಹತ್ವ. ಪತ್ರಿಕೆ ಇನ್ನೂ ಮುಂದುವರಿದು ಪಾಕಿಸ್ತಾನದ ವರ್ತನೆಯಿಂದಾಗಿ ಪೂರ್ವಬಂಗಾಳದ ಪ್ರತ್ಯೇಕತೆ ಅನಿವಾರ್ಯವಾಗಿ ಪರಿಣಮಿಸಿದೆ. ರಾಜಕೀಯ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಬಂದೂಕವನ್ನು ಬಳಸಿಕೊಂಡಿರುವುದು, ಯಾದವೀಯುದ್ಧಕ್ಕೆ ನಾಂದಿಯಾಗಿದ್ದು, ಪಾಕಿಸ್ತಾನ ಈ ಪ್ರಮಾದಕ್ಕಾಗಿ ಭಾರೀ ಬೆಲೆ ತೆರ ಬೇಕಾಗುತ್ತದೆ ಎಂದು ಬರೆದಿದೆ.

ಪಾಕಿಸ್ತಾನದ ಮಿಲಿಟರಿ ನಾಯಕರ ಉದ್ದೇಶ ಎಂದೂ ಪ್ರಾಮಾಣಿಕವಾಗಿರಲಿಲ್ಲ. ನೈಜವಾದ ರಾಜಕೀಯ ಪರಿಸ್ಥಿತಿ ಏರ್ಪಡುವುದು ಅವರಿಗೆ ಬೇಕಾಗಿರಲಿಲ್ಲ. ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲೂ ಅವರು ಪಾಕಿಸ್ತಾನಿಗಳಿಗೆ ಅಸ್ಪದಕೊಡಲಿಲ್ಲ. ದಂಡಿನ ಆಡಳಿತಗಾರರು ನಿರ್ಮಿಸಿರುವ ಪರಿಸ್ಥಿತಿ ಪಾಕಿಸ್ತಾನಕ್ಕೆ ಅತ್ಯಂತ ಕಷ್ಟಕಾರಿಯಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ ಎಂದು 'ಎಲ್—ಸಫಾ' ಅಭಿಪ್ರಾಯಪಟ್ಟಿದೆ.

ಅಳಿಸಲಾಗದ ಕಳಂಕ

ಕುವೈತಿನ ಪ್ರಮುಖ ಅರಬ್ಬಿ ದಿನಪತ್ರಿಕೆ "ಅಖಬಾರ ಅಲ್ ಕುವೈತ್" ಪತ್ರಿಕೆ ಬಂಗ್ಲಾ ದೇಶದ ನರಹತ್ಯೆಯನ್ನು ಖಂಡಿಸುತ್ತಾ ಸಹೋದರ-ಸಹೋದರರಲ್ಲಿ ವೈರ ಬೆಳೆಸಿ ಅವರನ್ನು ಕಗ್ಗೊಲೆಯಲ್ಲಿ ತೊಡಗುವಂತೆ ಮಾಡಿದ ಸೇನಾಧಿಕಾರಿಗಳನ್ನು ಮುಂಬರುವ ಜನಾಂಗ ಖಂಡಿತವಾಗಿಯೂ ಕ್ಷಮಿಸದು'-ಪಾಕಿಸ್ತಾನದ ಈ ದಂಡಿನ ಅಧಿಕಾರಿಗಳು ಪೂರ್ವ ಬಂಗಾಳದಲ್ಲಿ ನರಹತ್ಯೆಯ ಜೊತೆಗೆ ಪಾಕಿಸ್ತಾನದ ಮುಖಕ್ಕೆ ಅಳಿಸಲಾಗದ ಮಸಿ ಬಳಿದಿದ್ದಾರೆ. ಎಂದು ಹೇಳಿದೆ.

"ಪೂರ್ವಬಂಗಾಳದಲ್ಲಿ ಪಾಕಿಸ್ತಾನ ನಡೆಸಿರುವ ಸಾಮೂಹಿಕ ಕಗ್ಗೊಲೆಯಿಂದ ನಮಗೆ ಅತೀವ ದುಃಖವಾಗಿದೆ. ಚುನಾವಣಾ ನಂತರ ಉದ್ಭವಿಸಿದ ಸಮಸ್ಯೆಗಳೇ ಪಾಕಿಸ್ತಾನದಲ್ಲಿ ಈಗ ನಡೆದಿರುವ ಘರ್ಷಣೆಯ ಮೂಲ. ಚುನಾವಣೆಯಲ್ಲಿ ಗೆದ್ದರೆ, ಪೂರ್ವಪಾಕಿಸ್ತಾನಕ್ಕೆ ಸ್ವಯಮಾಡಳಿತವನ್ನೂ ತಂದುಕೊಡುವುದಾಗಿ ಶೇಖ ಮುಜೀಬುರ್ ರೆಹಮಾನರು ತಮ್ಮ ಮತದಾರರಿಗೆ ಆಶ್ವಾಸನ ನೀಡಿದ್ದರು. ಅವರ ಪಕ್ಷವೇ ಅತ್ಯಧಿಕ ಬಹುಮತದಿಂದ ಗೆದ್ದಿತು; ಎಂದು ಅಖ್ಬಾರ್-ಅಲ್-ಕುವೈತ್ ಹೇಳಿದೆ.

ಅಫ್ಘಾನಿಸ್ತಾನದ ಪ್ರಮುಖ ದಿನಪತ್ರಿಕೆಯಾದ 'ಅನ್ಫಾನ ಮಿಲ್ಲಿತ್' ಸಾಮಾನ್ಯವಾಗಿ ಸರ್ಕಾರದ ಮುಖ್ಯಪತ್ರಿಕೆಯೆಂದೇ ಭಾವಿಸಲಾಗುತ್ತಿದೆ. ಈ ಪತ್ರಿಕೆಯು ವಿಶ್ವದ ರಾಷ್ಟ್ರಗಳು, ಮುಖ್ಯತಃ ನೆರೆಯ ರಾಷ್ಟ್ರಗಳು ಬಂಗ್ಲಾ ದೇಶದ ಸ್ವಾತಂತ್ರ್ಯಕ್ಕೆ ಮನ್ನಣೆ ನೀಡಬೇಕೆಂದೂ ಕರೆ ನೀಡಿದೆ. ಬಂಗ್ಲಾ ದೇಶದ ಪ್ರಕರಣದಲ್ಲಿ ವಿಶ್ವದ ರಾಷ್ಟ್ರಗಳನ್ನು ತಪ್ಪುದಾರಿಗೆ ಎಳೆಯಲು ಪ್ರಯತ್ನಿಸಿದ ಪಾಕಿಸ್ತಾನಕ್ಕೂ ಅದೂ ಛೀಮಾರಿ ಹಾಕಿದೆ. ದೊಡ್ಡ ರಾಷ್ಟ್ರಗಳು ಈ ಸಮಸ್ಯೆಯತ್ತ ವಾಸ್ತವಿಕ ದೃಷ್ಟಿಯಿಂದ ನೋಡ ಬೇಕೆಂದೂ ಪಾಕಿಸ್ತಾನದ ಅಪಪ್ರಚಾರಕ್ಕೆ ಮರುಳಾಗಬಾರದೆಂದೂ ಬುದ್ಧಿವಾದ ಹೇಳಿದೆ.

—ವಿಶ್ಲೇಷಕ

●●

ಈ 'ನಾನು' ಎಂಬುದು ಎಲ್ಲಿಂದ ಉದಯವಾಗುತ್ತದೆ ಎಂಬುದಾಗಿ ಹುಡುಕುವವನಿಗೆ ಅಹಂಕಾರವು ನಾಶವಾಗುತ್ತದೆ. ಇದೇ ನಿಜವಾದ ಆತ್ಮವಿಚಾರಣೆ.

ಬಡವರ ಸಲುವಾಗಿ ಕೆಲಸ ಸೇವೆ ಮಾಡುವದಕ್ಕಿಂತ ಹೆಚ್ಚಿನ ಈಶ್ವರೋಪಾಸನೆ ಮತ್ತು ಪದ್ಧತಿಯನ್ನು ಬಿಟ್ಟು ನಾನು ಬೇರೆ ಯಾವದನ್ನೂ ಯೋಚಿಸಿಲ್ಲ. (ಗಾಂಧಿ)

ಚರಿತ್ರಾರ್ಹ ಮೊಕದ್ದಮೆಗಳು—೫

ಮೂಕ ಬಲಿ

ಬರೆದವರು: ಶ್ರೀ ಬಿ.ಕೃಷ್ಣ ಭಟ್, ಯಲ್.ಯಲ್.ಬಿ., ಭದ್ರಾವತಿ.

ಗಂಡ ಹೆಂಡಿರಾಗಿ ಕೂಡುವುದು ಋಣಾನುಬಂಧದಿಂದ. ಹಾಗೆ ಇಲ್ಲಿ ಬಂಧಿಸಲ್ಪಟ್ಟವರು ಸ್ವರ್ಗದಲ್ಲಿ ಸತಿ—ಪತಿಗಳಾಗಿ ಬಾಳುತ್ತಾರೆ—ಇದು ನಮ್ಮಲ್ಲಿ ಬೇರು ಬಿಟ್ಟ ನಂಬಿಕೆ.

ಆ ಆಧಾರದ ಮೇಲೆ ಬೆಳೆದು ನಿಂತುಕೊಂಡಿತು—ಪತಿಯ ಚಿತೆಯಲ್ಲಿ ಬದುಕಿದ್ದ ಸತಿಯನ್ನು ಜೀವಂತ ದಹಿಸುವ—ಅನಿಷ್ಟ ಪದ್ಧತಿ.

ಇದಕ್ಕೆ ನಾವು ಕೊಟ್ಟುಕೊಂಡ ಹೆಸರು 'ಸತಿ ಹೋಗುವುದು'

ಅದೊಂದು ಪವಿತ್ರ ಕಾರ್ಯ. ಗಂಡನ ಪಾರ್ಥಿವ ಶರೀರವನ್ನು ದಹಿಸಲು ಹಚ್ಚಿದ ಚಿತೆಯಲ್ಲಿ, ತನ್ನ ದೇಹವನ್ನೊಪ್ಪಿಸಿಕೊಂಡು —ಅವನೊಡನೆ ಪರಲೋಕಕ್ಕೆ ತೆರಳುವುದು ಕೈಹಿಡಿದವಳ ಕರ್ತವ್ಯ.

ಇದು ನಮ್ಮಲ್ಲಿ ಬಲಿದು ಬಂದ ಕುರುಡು ನಂಬಿಗೆ. ಹೀಗೆ ಸತ್ತರೆ ಆ ಸತಿಗೆ ಸದ್ಗತಿ. ಹಾಗೆ ಸಾಯಹೊರಡುವುದು ಅವಳ ಪತಿಧರ್ಮಕ್ಕೆ ಸಾಕ್ಷಿ.

ಬಡಪಾಯಿಯನ್ನು ಚಿತೆಗೇರಿಸಿದವರಿಗೆ —ಧರ್ಮ ರಕ್ಷಿಸಿದೆವು—ಎನ್ನುವ ಸಮಾಧಾನ ಸದ್ಗತಿ ಸಿಗುತ್ತದೆ ಎನ್ನುವ ಅಚಲಶ್ರದ್ಧೆ ಚಿತಾಗ್ನಿಯಲ್ಲಿ ಧುಮುಕಲು ನಿಂತ ಮುಗ್ಧೆಯದು.

ಈ ಅನಿಷ್ಟ ಪದ್ಧತಿ ನಮ್ಮ ಸಮಾಜಕ್ಕೆ ಅಂಟಿಕೊಂಡ ಕಳಂಕ. ಅದನ್ನು ನಿರೋಧಿಸುವ ಶಾಸನ ಬಂದರೂ ಮೂಕಬಲಿ ನಿಲ್ಲಲಿಲ್ಲ ಸಂಪತಿಯ ಸಾವು ಅದಕ್ಕೊಂದು ನಿದರ್ಶನ.

ಸಂಪತಿ ಕೌರ್—ಅದು ಅವಳ ಪೂರ್ಣ ಹೆಸರು. ಅವಳ ಹಿರಿಯರ, ಬಂಧುಗಳ, ಬಾಲ್ಯದ ವಿವರಗಳು ಸಿಗುವುದಿಲ್ಲ. ಹತ್ತರ ಹೊಸ್ತಿಲು ದಾಟುವುದರೊಳಗೆ ಆಕೆ ಹುಟ್ಟಿದ ಮನೆಯನ್ನು ಬಿಟ್ಟು ಪತಿ ಗೃಹ ಸೇರಿದಳು. ಅವಳ ಮದುವೆ ಸಿದ್ಧೇಶ್ವರ ಪಾಂಡೆಯ ಜೊತೆ ನಡೆಯಿತು. ಅವನಿಗೋ ಮದುವೆಯಾಗುವ ವಯಸ್ಸು ಸಂದಿತ್ತು. ಜೊತೆಗೆ ಅನಾರೋಗ್ಯ ಬೇರೆ- ಆ ಪತಿಯೊಡನೆ ಅವಳು ಕಳೆದುದು ಹತ್ತು ವರ್ಷ ಹಾಸುಗೆ ಹಿಡಿದು ಮಲಗಿದ ಆ ಗಂಡನಿಂದ ಯಾವ ಭೋಗ ಭಾಗ್ಯವನ್ನೂ ಅವಳು ಪಡೆಯಲಿಲ್ಲ. ದುಡಿಮೆಯಷ್ಟು ಸಿಕ್ಕಿತು. ಅವಳ ಬಾಳು ಹೂವಿನಂತೆ ಅರಳಿ, ಹಾಗೆಯೇ ಬಾಡಿ ಹೋಯಿತು. ಪತಿಯಿಂದ ಅವಳು ಏನನ್ನೂ ಹೊಂದಲಿಲ್ಲ. ಹೊಂದಲಿಲ್ಲ ಎನ್ನುವ ಕೊರಗು ಅವಳನ್ನು ಬಾಧಿಸಲಿಲ್ಲ. ಆ ಗಂಡನನ್ನು ಎರಡು ತಿಂಗಳ ಕಾಲ ನಿಷ್ಠೆಯಿಂದ ಅಹೋರಾತ್ರಿ ಉಪಚರಿಸಿದಳು. ಹಾಸುಗೆಯಲ್ಲಿ ಮಾಡಿದ ಮಲ–ಮೂತ್ರವನ್ನು ತೆಗೆದಳು. ಅವನ ಮಲಿನ ಬಟ್ಟೆಗಳನ್ನು ಸ್ವಚ್ಛಗೊಳಿಸಿದಳು. ಆ ಸೇವೆಯಿಂದ ಜಿಗುಪ್ಸೆ ತಳೆಯಲಿಲ್ಲ. ಅವನ ಉಪಚಾರದಲ್ಲಿ ಅವಳು ಪ್ರದರ್ಶಿಸಿದ ಶ್ರದ್ಧೆ ಭಕ್ತಿಯ ಹಂತಕ್ಕೇರಿತು. ಅದನ್ನು ಕೇಳುವಾಗ ಮನಸ್ಸಿಗೆ ಮಂಕು ಕವಿಯುತ್ತದೆ; ಮಾತು ಮೂಕವಾಗುತ್ತದೆ. ಅವಳ ಬಗ್ಗೆ ಗೌರವ ಉತ್ಪನ್ನವಾಗುತ್ತದೆ.

21–11–1927ರಲ್ಲಿ ಸಿದ್ಧೇಶ್ವರ ಪಾಂಡೆ ವಿಧಿ ವಶನಾಗುತ್ತಾನೆ–ಆಗ ಅವಳ ವಯಸ್ಸು ಹತ್ತೊಂಭತ್ತು. ಸತ್ತ ಪತಿಯನ್ನು ಹಿಂಬಾಲಿಸುವ ನಿರ್ಧಾರಕ್ಕೆ ಅವಳು ಬರುತ್ತಾಳೆ. ಬೆಳೆದು ಬಂದ ಪರಿಸರ, ಬೆಳೆಸಿಕೊಂಡ ವಿಚಾರಗಳು, ಪ್ರಜಲಿತವಿದ್ದ ಅಂಧ ಶ್ರದ್ಧೆಗಳು ಅವಳ ನಿರ್ಧಾರಕ್ಕೆ ಪುಟ ಕೊಡುತ್ತವೆ. ಅವಳ ಪತಿಯ ಅಣ್ಣ–ತಮ್ಮಂದಿರು ಅವಳಿಗೆ ಉತ್ತೇಜನ ಕೊಡುತ್ತಾರೆ–ಅವರ ಬೋಧನೆಯಿಂದ ಅವಳ ಸಂಕಲ್ಪ ಸ್ಥಿರಗೊಳ್ಳುತ್ತದೆ. ಅವಳಿಗೋ—? ಮಾರ್ಗದರ್ಶನ ಮಾಡುವವರಿರಲಿಲ್ಲ- ಇದ್ದವನೊಬ್ಬ ತಮ್ಮ ಅವನಿಗೋ, ವಯಸ್ಸು ಹದಿನಾರು. ಇನ್ನೊಬ್ಬಳು ಪ್ರಪಂಚವನ್ನರಿಯದ ಮನೆಯ ಕಲಸದವಳು..ಈ ಅಪ್ರಬುದ್ಧರು ಅವಳ ಬಲಿದಾನಕ್ಕೆ ಉತ್ಸುಕರಾಗಿದ್ದರು.

ನವೆಂಬರ್ 22ರಂದು-ಬೆಳಕು ಹರಿಯುವುದಕ್ಕೂ ಮುನ್ನ–ಸಿದ್ಧೇಶ್ವರ ಪಾಂಡೆಯ ಅಂತ್ಯಯಾತ್ರೆ ಅವರ ಮನೆಯಿಂದ ಹೊರಟಿತು. ಆ ಮೆರವಣಿಗೆಯಲ್ಲಿದ್ದವರು ಹದಿನೈದು ಮಂದಿ. ಅವರ ಮನೆಯಿಂದ ಗಂಗೆಯ ದಡದಲ್ಲಿದ್ದ ರುದ್ರ ಭೂಮಿಗೆ ಎರಡು ಮೈಲಿಗಳ ಅಂತರ. ಕಟ್ಟಿದ್ದ ಚಟ್ಟದಲ್ಲಿ ಸಿದ್ಧೇಶ್ವರ ಪಾಂಡೆಯ ಶವವನ್ನು ಇಟ್ಟಿದ್ದರು. ಪತಿಯ ತಲೆಯನ್ನು ತೊಡೆಯಲ್ಲಿರಿಸಿಕೊಂಡು ಚಟ್ಟದ ಮೇಲೆ ಕುಳಿತ್ತಿದ್ದಳು ಸಂಪತಿ. ಅವಳ ಮುಖ ಬಿಳಿಚಿಕೊಂಡಿತ್ತು. ಕಣ್ಣುಗಳು ಊದಿ ಕೊಂಡಿದ್ದವು–ನಿಸ್ತೇಜ, ನಿರ್ಜೀವ ಮೂರ್ತಿಯಂತೆ ಅವಳು ಕಾಣುತ್ತಿದ್ದಳು. ಶವವನ್ನು ಹೊತ್ತುಕೊಂಡು ಹೋಗುತ್ತಿದ್ದವರನ್ನು ಹಿಂಬಾಲಿಸುತ್ತಿದ್ದ ಗುಂಪು 'ಸತೀ ಮಾತಾಕೀ ಜೈ!' ಎಂದು ಜಯಕಾರ ಹಾಕಿತು.

ರುದ್ರ ಭೂಮಿ ತಲುಪಲು ಅವರು ಇನ್ನೂ ಕೆಲವು ದೂರ ಕ್ರಮಿಸ ಬೇಕಿತ್ತು. ಅಷ್ಟರಲ್ಲಿ ಬೆಳಕು ಹರಿಯಿತು. ರಾತ್ರಿಯ ಕೆಲಸ ಮುಗಿಸಿ ಮನೆಯತ್ತ ಹೊರಟಿದ್ದ ಪೋಲಿಸ್ ಪೇದೆ— ರಘುವೀರಸಿಂಗ— ಈ ದೃಶ್ಯವನ್ನು ಕಂಡ. ಹುಟ್ಟಿನಿಂದ ರಜಪೂತನಾದ ಆತ ಈ ಅಲೌಕಿಕ ದೃಶ್ಯದಿಂದ ಅಚ್ಚರಿಗೊಂಡ. ಸತಿ ಹೋದ ಕತೆಗಳನ್ನು ಆತ ಬಾಲ್ಯದಲ್ಲಿ ಕೇಳಿದ್ದ—ಸಹಗಮನದ ಸುದ್ದಿ ಅವನಿಗೆ ಹೊಸದಲ್ಲ. ಆದರೆ ನಂಬಲೂ ಸಾಧ್ಯವಿಲ್ಲದ ಆ ದೃಶ್ಯ ನೋಡಿ ಅವನ ರಜಪೂತ ರಕ್ತ ಉಕ್ಕಿತು. ಅಂತರಂಗದಲ್ಲಿ ಆನಂದ ಉಕ್ಕಿ ಹರಿದರೂ, ಆತ ಕರ್ತವ್ಯವನ್ನು ಮರೆಯಲಿಲ್ಲ. ಆತ ಅಂತ್ಯಯಾತ್ರೆಯನ್ನು ತಡೆದ. ಸಂಪತಿಗೂ ಉಳಿದವರಿಗೂ ಕಾಯಿದೆಯನ್ನು ವಿವರಿಸಿದ, ಆತ ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ಆತ ಠಾಣೆಗೆ ಧಾವಿಸಿ ಬಂದು, ಇದ್ದ ಸಂಗತಿಯನ್ನು ಅರಿಕೆ ಮಾಡಿಕೊಂಡ. ಠಾಣೆಯಲ್ಲಿದ್ದ ದಫೆದಾರ, ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಬಂದು, ಮೆರವಣಿಗೆಯನ್ನು ತಡೆದು ನಿಲ್ಲಿಸಿದ. ಅಷ್ಟರಲ್ಲಿ ಅಂತ್ಯಯಾತ್ರೆ ರುದ್ರಭೂಮಿಯನ್ನು ಸಮೀಪಿಸಿತ್ತು. ಇತರ ಪೋಲಿಸ್ ಅಧಿಕಾರಿಗಳೂ ವರ್ತಮಾನ ತಿಳಿದು ಸ್ಥಳಕ್ಕೆ ಬಂದರು.

ಅವರು ಸಂಪತಿಯನ್ನೂ,ಅವಳ ಪತಿಯ ಬಂಧುಗಳನ್ನೂ ಸರಿ ದಾರಿಗೆ ತರಲು ಹೆಣಗಿದರು. ಸಿದ್ಧೇಶ್ವರನ ಹೆಣ ಕೊಳೆತು ನಾರುವಂತೆ ಮಾಡುತ್ತೇವೆ. ಶವ ಸಂಸ್ಕಾರಕ್ಕೆ ಅವಕಾಶ ಕೊಡುವುದಿಲ್ಲ. ಕೇಸು ಹಾಕಿ ಕೋರ್ಟಿಗೆ ಎಳೆಯುತ್ತೇವೆ ಎಂದು ಹೆದರಿಸಿದರು.

ಸಂಪತಿ ಒಪ್ಪಿಕೊಂಡಳು, ಸತಿ ಹೋಗುವ ಸಂಕಲ್ಪವನ್ನು ಸಡಿಲಿಸಿದಳು. ಶಾಸನಕ್ಕೆ ಶರಣಾದಳು. ಚಟ್ಟದಿಂದ ಇಳಿದಳು. ತವರಿಗೆ ಹೋಗಲು ಒಪ್ಪಿಕೊಂಡಳು. ಅಲ್ಲಿಂದ ಅವಳ ತಾಯಿಯ ಮನೆಗಿದ್ದುದು ಎರಡು ಮೈಲು. ಅವಳು ಅಲ್ಲಿಗೆ ಹೋಗಲೆಂದು ಹೊರಟಳು. ಅವಳ ತಮ್ಮ-ಮುರಲೀಧರ, ಇನ್ನೊಬ್ಬ ಅಪ್ರಬುದ್ಧ ಯುವಕ ಜಗದೇವ ಸ್ಥಳದಲ್ಲುಳಿದರು. ಸಿದ್ಧೇಶ್ವರನ ಬಂಧುಗಳು ಶವವನ್ನು ರುದ್ರಭೂಮಿಗೆ ಹೊತ್ತು ತಂದರು.

ಪೋಲಿಸರು ಅನಾಹುತ ತಪ್ಪಿಸಿದೆವು ಎಂದು ನಿಟ್ಟುಸಿರು ಬಿಟ್ಟರು-ಸಂಪತಿ ಅಷ್ಟರಲ್ಲಿ ಅವಳ ಮನಸ್ಸನ್ನು ಬದಲಾಯಿಸಿದ್ದಳು. ಆದರೆ ಪಾಂಡೆ ಸೋದರರ ಹೃದಯ ಪರಿವರ್ತನೆಯಾಗಿರಲಿಲ್ಲ — ತೀರಿಕೊಂಡ ಸೋದರನನ್ನು, ಅವನ ಹೆಂಡತಿ ಹಿಂಬಾಲಿಸಬೇಕೆಂಬ ಅವರ ಬಯಕೆಯಲ್ಲಿ ಎಳ್ಳು ಕಾಳಿನ ವ್ಯತ್ಯಾಸ ಆಗಿರಲಿಲ್ಲ. ಸಂಪತಿ ಹಿಂದುಳಿಯಲು ನಿರ್ಧರಿಸಿದ್ದು, ಕಾಯಿದೆ ಸತಿ ಹೋಗುವುದನ್ನು ಪ್ರತಿಬಂಧಿಸಿದ್ದು—ಅವರಿಗೆ ಹೊರಗಿನ ವಿಷಯ.

ಸಂಪತಿ, ಆ ಸ್ಥಿತಿಯಲ್ಲಿ ಅಲ್ಲಿಂದ ನಡೆದು ಹೋಗುವಷ್ಟು ಶಕ್ತಳಿರಲಿಲ್ಲ. ಅವಳನ್ನೊಯ್ಯಲು ಒಂದು ಎಕ್ಕಾ ಬಂಡಿಯ ಅವಶ್ಯಕತೆಯಿತ್ತು. ಅದನ್ನು ತರ್ಕಿಸಿದ ಹಿರಿಯ ಪಾಂಡೆ ಎಕ್ಕಾ ತರಲು ತಮ್ಮ ವಿದ್ಯಾಸಾಗರವನ್ನು ನಿಯೋಜಿಸಿದ. ಆತ ತಂದ ಎಕ್ಕಾ ಬಂಡಿಯಲ್ಲಿ ಸಂಪತಿ ಸ್ವಗ್ರಾಮಕ್ಕೆ ಹೊರಟಳು. ಗಾಡಿ ಅವಳ ಊರಿಗೆ ತಿರುಗುವ ತಿರುವಿನ ತನಕ ಬಂತು. ಬಂಡಿಯವನು, ಹಿರಿಯ ಪಾಂಡೆಯ ಆದೇಶದಂತೆ, ಗಾಡಿಯನ್ನು ಗಂಗೆಯ ಏರಿಯ ಮೇಲೆ—ಊರಿಗೆ ತಿರುಗುವ ಬದಲು – ಹೊಡೆದು, ಪುನಃ ರುದ್ರಭೂಮಿಗೆ ಅವಳನ್ನು ತಂದಿಳಿಸಿದ. ಅವನು ಬರುವುದರೊಳಗಾಗಿ ಪಾಂಡೆ ಕುಟುಂಬ ಅಲ್ಲಿ ಜಮಾಯಿಸಿತ್ತು.

ಪುನಃ ಸಂಪತಿ ರುದ್ರ ನಾಟಕದ ನಾಯಿಕೆಯಾದಳು. ಅವಳನ್ನು, ಅವಳ ಮೈದುನರು "ಸತೀಮಾತಾ" ಎಂದು ಹಾಡಿ ಹೊಗಳಿದರು–ಅವಳು ಅದರಿಂದ ಪುಲಕಿತಳಾದಳು. ಅಷ್ಟರಲ್ಲಿ ಸೂರ್ಯ ನಡುನೆತ್ತಿಗೆ ಬಂದಿದ್ದ. ಈ ವಿಚಿತ್ರ ವಿದ್ಯಮಾನಗಳನ್ನು ಆತ ಕಣ್ತೆರೆದು ನೋಡುತಿದ್ದ – ಗ್ರಾಮಕ್ಕೆ ಗ್ರಾಮವೇ ಅಲ್ಲಿ ಸೇರಿತ್ತು. ಈ ಅಚ್ಚರಿಯನ್ನು ಪ್ರತ್ಯಕ್ಷ ನೋಡಲು ಸಹಸ್ರ ಸಂಖ್ಯೆಯಲ್ಲಿ ಜನ ಕಾದು ನಿಂತಿತ್ತು.

ಹೇಗೋ ಇದು ಪೋಲಿಸರ ಕಿವಿಗೆ ಬಿತ್ತು. ಅವರು ಸ್ಥಳಕ್ಕೆ ಧಾವಿಸಿ ಬಂದರು. ಸಂದರ್ಭ ಎದುರಿಸಲು ಅಗತ್ಯಬೀಳುವ ಪಡೆಯನ್ನು ತಂದಿದ್ದರು. ಉದ್ವಿಗ್ನಗೊಂಡ ಜನ, ಅವರ ವಿವೇಕದ ಮಾತಿಗೆ ಕಿವಿಕೊಡಲಿಲ್ಲ. ಅವರ ಸಲಹೆಗೆ ಬೆಲೆಯೂ ಬರಲಿಲ್ಲ. ಪಾಂಡೆ ಬಂಧುಗಳು ಸೇರಿದ್ದ ಗುಂಪನ್ನು ಪ್ರಚೋದಿಸಿದರು. ಈ ಉದ್ರಿಕ್ತ ವಾತಾವರಣದಲ್ಲಿ ಸಂಪತಿಯ ಸಡಿಲಾದ ಸಂಕಲ್ಪ, ಮತ್ತೆ ಗಟ್ಟಿಯಾಯಿತು.

ಆಕೆ ಗಂಗೆಯಲ್ಲಿ ಮಿಂದು ಬಂದಳು. ಹೆರಳ ರಾಶಿಯನ್ನು ಬಾಚಿ ಮುಡಿಗಟ್ಟಿದಳು. ಹೂ ಮುಡಿದುಕೊಂಡಳು. ನಿರಾಭರಣ ಸುಂದರಿಯಾಗಿ ಆ ಜನ ಸ್ತೋಮದ ಇದಿರು ನಿಂತಳು. ತನ್ನ ಪಯಣಕ್ಕೆ ಅಣಿಯಾದಳು.

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
131 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಜಿಎಸ್‌ಎಫ್‌ಸಿಯ
ಅಮೋನಿಯಂ ಸಲ್ಫೇಟ್‌ದಲ್ಲಿ
ನೈಟ್ರೋಜನ್‌ದ ಹೊರತು ಎಲ್ಲ ಬೆಳೆಗಳಿಗೂ ಲಾಭದಾಯಕವಾದ ಗಂಧಕವೂ (ಸಲ್ಫರ್-23·7%) ಸಮಾವೇಶವಾಗಿರುತ್ತದೆ ಎಂಬುದು ನಿಮಗೆ ಗೊತ್ತಿದೆಯೇ?

ಬೆಳೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಗಂಧಕವು ದೊರೆಯದಿದ್ದಲ್ಲಿ ಸಸಿಗಳು ಹಳದಿಯಾಗುತ್ತವೆ ಮತ್ತು ಸತ್ವಹೀನ-ವಾಗುತ್ತವೆ. ಇದರಿಂದ ಉತ್ಪಾದನೆಯೂ ಕಡಿಮೆಯಾಗುತ್ತದೆ.

★ ★ ★

ಪ್ರತಿಯೊಂದು ಬೆಳೆಗಾಗಿ ತಳದ ಫರ್ಟಿಲೈಸರ್ ಎಂದು ಜಿಎಸ್‌ಎಫ್‌ಸಿಯ ಗಂಧಕಯುಕ್ತ ಅಮೋನಿಯಂ ಸಲ್ಫೇಟ್ ಉಪಯೋಗಿಸಿರಿ. ನೈಟ್ರೋಜನ್‌ನ ಅಧಿಕ ಪ್ರಮಾಣದ ಆವಶ್ಯಕತೆ ಇದ್ದರೆ ಜಿಎಸ್‌ಎಫ್‌ಸಿ 'ಸಮೃದ್ಧ' ಯೂರಿಯಾ ಉಪಯೋಗಿಸಿರಿ.

★ ★ ★

ಮೇಲಿನ ಫರ್ಟಿಲೈಸರ್ ಎಂದು ಜಿಎಸ್‌ಎಫ್‌ಸಿಯ 'ಸಮೃದ್ಧ' ಯೂರಿಯಾ ಕಂತುಗಳಲ್ಲಿ ಕೊಡಿರಿ.



ಜಿಎಸ್‌ಎಫ್‌ಸಿಯ ಲಾಭದಾಯಕ ಗಂಧಕಯುಕ್ತ ಅಮೋನಿಯಂ ಸಲ್ಫೇಟ್ ಮತ್ತು 'ಸಮೃದ್ಧ' ಯೂರಿಯಾ ಫರ್ಟಿಲೈಸರ್‌ಗಳ ಆವಶ್ಯಕತೆಗಳಿಗಾಗಿ ಮೈಸೂರು ಫರ್ಟಿಲೈಸರ್ಸ್ ಕಂಪೆನಿ 6, ಲಿಂಘಿ ಚೆಟ್ಟಿ ಸ್ಟ್ರೀಟ್, ಮದ್ರಾಸ್-1. ಸಂಪರ್ಕ ಸಾಧಿಸಿರಿ ಇಲ್ಲವೆ ಬರೆಯಿರಿ:

ಜನರಲ್ ಮ್ಯಾನೇಜರ್ (ಕಾಮರ್ಸ್)
ಗುಜರಾತ್ ಸ್ಟೇಟ್ ಫರ್ಟಿಲೈಸರ್ಸ್ ಕಂಪೆನಿ ಲಿಮಿಟೆಡ್
ಫರ್ಟಿಲೈಸರ್ ನಗರ್,
ಜಿಲ್ಲಾ: ಬರೋಡಾ

GSFC/71/MY/K

ಗೇಹರಾಜ್ಯದಲ್ಲಿ

ಸಿಗದವರು ಬಯ್ದರು, ಸಿಗದವರು ಭಂಗಿಸಿದರು

ರಾಜ್ಯಪಾಲರ ಮೇಲೂ ಆಪಾದನೆ ಹಾಕಿ ಗೆದ್ದುಬಿಟ್ರಲ್ಲಾ ನಮ್ಮ ಎಂಪಿಗಳು ....'

"ಏನೋಪ್ಪ ಕರ್ನಾಟಕದ ಆಡಳಿತಕ್ಕೆ ತಗಲಿದ್ದ ಕಲಂಕವನ್ನು ತೊಳೆದೇಬಿಡುವ ಭೀಷ್ಮಪ್ರತಿಜ್ಞೆ ಮಾಡಿದ್ದರು ಅವರು...."

'ಅದು ಇರಬಹುದೂನ್ನಿ. ಕಲಂಕ ತೊಳೆಯೋಕೆ ಹೊರಟದ್ದೂ ಇದೆ ಅನ್ನಿ. ಅದರೂ ಅವರ ವರ್ತನೆ ಮಾತ್ರ ಆರಂಭದಿಂದಲೂ ಏಕಪಕ್ಷೀಯವಾಗಿದ್ದಂತಿತ್ತು...."

'ಅಲ್ಲವೇ ಮತ್ತೆ? ವೀರೇಂದ್ರ ಪಾಟೀಲರು ರಾಜೀನಾಮೆ ನೀಡಿದ ಕೂಡಲೇ ವಿರೋಧಿಪಕ್ಷದ ಸಹಾಯಕ ಸಿದ್ಧವೀರಪ್ಪನವರು ಸರಕಾರ ರಚಿಸುವುದಕ್ಕೆ ತುದಿಗಾಲಲ್ಲಿ ನಿಂತಿದ್ದರು....'

'ರಾಜೀನಾಮೆ ಕೊಡುವುದಕ್ಕೆ ಮೊದಲೇ ಅವರು ಸಿದ್ಧರಿದ್ದರಂತೆ....'

'ಆದರೆ ನೋಡು, ಸರಕಾರ ರಚಿಸೋದೆಂದ್ರೆ ತಮಾಷೆಯಲ್ಲ. ಅಂತಹ ತಮಾಷೆಯೆಲ್ಲ ನಡೆಯೋದಕ್ಕೆ ಅವಕಾಶ ಕೊಡೋ ಮೂರ್ಖ ತಾನಲ್ಲಾಂತ ಪ್ರಥಮ ಚುಂಬನದಲ್ಲೇ ಹಲ್ಲು ಮುರಿಯೋಕೆ ಕೈಯೆತ್ತಿದ್ದೇ?"

'ಅಲ್ಲಾರಿ, ಇದು ದೇವರಾಜ ಅರಸರಿಗೆ ಭಾರೀ ಒಳ್ಳೆಯದಾಯ್ತಲ್ಲ? ಒಂದ್ವೇಳೆ ರಾಜ್ಯಪಾಲ ಧರ್ಮವೀರರು ಸಿದ್ಧವೀರಪ್ಪನವರಿಗೆ 'ಹ್ಞಂ' ಅನ್ನುತಿದ್ದರೆ, ಅರಸರಿಗೆ ಭಾರೀ ಅನ್ಯಾಯವಾಗುತಿತ್ತು....'

"ಅದು ನಿಜಾನ್ನು. ಆದ್ದರಿಂದಲೇ ದೇವರಾಜ-ಸಿದ್ಧವೀರಪ್ಪ ಉರುಸ್ ಡಿಯೆನ್-ದೇಸಿ ಸಮರ ನಡೆಯಿತು. ಆ ಧರಲ್ಲಿ ಎಸ್ಸ್ ನಿಶ್ಯರ್ತವಾಗಿ ಸೋಲೊಪ್ಪಿಕೊಳ್ಳಬೇಕಾಯ್ತು....'

'ಅಲ್ಲಾರಿ, ಡಿಲ್ಲಿ ದೊರೆಗಳು ಬೇಕು ಬೇಕೆಂತಲೇ ನಿರ್ಣಯ ಮಾಡುವುದನ್ನು ಮುಂದೆ ಹಾಕುತ್ತ ಹೋದಂತೆ ಇಕ್ಕಡೆಯವರಿಗೂ ಸಮರ ಸಿದ್ಧತೆಗೆ ಸಾಕಷ್ಟು ಅವಕಾಶವೇನೋ ಇತ್ತು; ಆದರೆ, ಯುವಕ ನಾಯಿಗಳನ್ನು ಸಿದ್ಧವೀರಪ್ಪನವರ ಮೇಲೆ ಛೂಬಿಟ್ಟದ್ದರಿಂದ ಅವರು ಅಶಕ್ತರಾಗಿ ಹೋದರು....'

'ಅದೇ ವೇಳೆಗೆ ಕಾಯಲಾರೆನು ಸಿದ್ಧವೀರಪ್ಪ, ತನ್ನಿ ನಿಮ್ಮ ಬಹುಮತದ ಪಟ್ಟಿ .... ಮತ್ತು ನಾಯಕತ್ವದ ದಂಡ ಅನ್ನೋದೇ ರಾಜ್ಯಪಾಲರು!

'ಸಾಯುತ್ತಿರುವ ಹುಲಿಗೆ ಮತ್ತೊಂದು ಗುಂಡು ಎಸೆದುಬಿಟ್ಟರು....'

'ಪಾಪ, ಅವರಿಗೆ ಬಹುಮತವೂ ಬರಲಿಲ್ಲ; ನಾಯಕತ್ವವೂ ಉಳಿಯಲಿಲ್ಲ....'

'ಕೇಂದ್ರದ ಇಂಡಿಕೇಟು ಯಾವ ನಿರ್ಧಾರವನ್ನೂ ಕೈಕೊಳ್ಳದಿರುವಾಗಲೇ ಕೇಂದ್ರ ಸರಕಾರ ರಾಷ್ಟ್ರಪತಿ ಆಳಿಕೆಗೆ ಒಪ್ಪಿಕೊಂಡಿತು....'

"ಮುಂದೆ ಅಸೆಂಬ್ಲಿಯೂ ಬರ್ಖಾಸ್ತಾಯ್ತು....'

"ಅಲ್ಲಾರಿ, ನೋಡಿ....'

'ಏನು? ಆವೇಳೆ ದೇವರಾಜರಿಗೆ ಬೇಕಾದಂತೆ, ಬೇಕಾಗಿಯೋ ಬೇಡವಾಗಿಯೋ ನಡೆದುಕೊಂಡವರ ಮೇಲೆ ಈಗೇಕೆ ದೇವರಾಜಾದಿಗಳು ಉರಿ ಕಾರುತಿದ್ದಾರೇಂತ....'

'ಅಯ್ಯೋ, ನೀನೊಬ್ಬಳು..ತಾನು ಮುಖ್ಯಮಂತ್ರಿಯಾಗೋದಿದ್ರೆ ದೇವರಾಜರು ಬಹುಮತ ತೋರಿಸಿಕೊಡುತ್ತಿದ್ದರು. ಅದಕ್ಕೆ ರಾಜ್ಯಪಾಲರು ಕಲ್ಲು ಹಾಕಿದರಲ್ಲಾ..'

'ಅದು ಹೇಗೆ?'

'ಹೇಗೆಂದರೇನು? ಉತ್ತರ ಪ್ರದೇಶದಲ್ಲಿ ಕಮಲಾಪತಿ ತ್ರಿಪಾಠಿ ಮುಖ್ಯಮಂತ್ರಿಯಾಗಬಹುದಾದರೆ, ಕರ್ನಾಟಕದಲ್ಲಿ ದೇವರಾಜ ಅರಸರೂ ಮುಖ್ಯಮಂತ್ರಿಯಾಗಬಾರದೇಕೆ?'

'ಆಗಬಹುದೂನ್ನಿ, ಆದರೆ, ನಾಯಕತ್ವ ಅವರಿಗಿರಲಿಲ್ಲ ...'

'ರಾಜ್ಯಪಾಲರಿಗೇಕಷ್ಟು ಆತುರ? ದೇವರಾಜರು ದೆಹಲಿಯಿಂದ ಮರಳುವುದಕ್ಕೆ ಮೊದಲೇ ಅವರೇಕೆ ನಿರ್ಧರಿಸಿದರು? ಅನಂತ್ರವಾಗಿದ್ರೆ, ಪಕ್ಷಾಂತರ ಪ್ರಿಯರಿಗೆಲ್ಲ ಕರಾರುವಾಕ್ಕಾಗಿ ಹೇಳಿ....'

'ಏನು?'

'ನನ್ನನ್ನು ನಾಯಕನನ್ನಾಗಿ ಆರಿಸೋದಿದ್ರೆ ಮಾತ್ರ ಸೀಟು....'

'ಬರೋಬರಿ ಬರೋಬರಿ, ಅಲ್ಲಾರಿ, ಅರಸರು ಅಷ್ಟೂ ಅಧಿಕಾರಪ್ರಿಯರೇನು?'

'ಅಲ್ಲವೆ, ಅಧಿಕಾರ ಯಾರಿಗೆ ಬೇಡ? ಸಿಗದ ದ್ರಾಕ್ಷೆ ಹುಳಿಯೆಂದ ನರಿಗಳೇ ಹೆಚ್ಚು....'

'ಅಂದ್ರೆ, ನಾಳೆ ನೀವೂ....'

'ಏನಂತೀಯೊ ನೀನು? ತಿರುಕನೂ ಮುರುಕು ಧರ್ಮಶಾಲೆಯಲ್ಲಿ ಮಲಗಿ ರಾಜನಾದ ಸ್ವಪ್ನ ಕಂಡನೆಂದಾಗ...."

'ಅವನು ಕಂಡದ್ದು ಕನಸು.'

'ಮನಸ್ಸಿನಲ್ಲಿದ್ದದ್ದೇ ಕನಸಾಗಿ ಕಾಣುವುದಂತೆ....'

'ಹಾಗಾದ್ರೆ, ನೀವೂ ಮಂತ್ರಿಯಾಗೋ ಕನಸ್ನು ಕಂಡಿದ್ದೀರಾ?'

'ಇಲ್ಲಮ್ಮ, ಇಲ್ಲ. ನಮ್ಮಂಥೋರಿಗೆ ಅಂತಹ ಕನಸು ಯಾಕೆ ಬೀಳ್ಬೇಕು?

'ಅಂದ್ರೆ ನಿಮ್ಗೆ ಮಂತ್ರಿಯಾಗೋ ಆಸೆಯಿಲ್ಲ....'

'ಬಡವನ ಸಿಟ್ಟು ದವಡೆಗೆ ಕೇಡು ಅಂತಾರೆ ನೋಡು, ನಾವೆಲ್ಲ ಯಾವ ಆಸೆ ಇಟ್ಟುಕೊಂಡ್ರೂ ಅದು ಕನಸನ್ನೂ ಕಾಣದಷ್ಟು ಪಾಪಿಗಳು.'

'ಅಂದ್ರೆ ತಿರುಕ ಕನಸಿನಲ್ಲಾದೂ ರಾಜನಾದ; ನಾವು ಕನಸು ಕಾಣಲಾಗದಷ್ಟು ದುರ್ಭಾಗ್ಯಶಾಲಿಗಳು ಅಂದ ಹಾಗಾಯ್ತು....'

'ಅಲ್ಲವೆ ಮತ್ತೆ?'

"ಹ್ಞಂ ಹೌದೂನ್ನಿ, ರಾಜನ ಬಗ್ಗೆ ಕಲ್ಪನೆಯೇ ಇಲ್ಲದವನು ಅದರ ಬಗ್ಗೆ ಕನಸು ಕಾಣುವುದಾದ್ರೂ ಹೇಗೆ?'

"ತಾಯಿಕಷ್ಟೆ ಹೋರಿಯಾದಂತೆ...."

'ಭಾರಿ ಭಲೋಕ್ತಿ ಹೇಳಿದೆ....'

'ಅದಿರ್ಲಿ. ಅಲ್ಲಾರಿ, ರಾಜ್ಯಪಾಲ ಧರ್ಮವೀರರ ಮೇಲೆ ಎಂಪಿಗಳಿಗೇನು ಮುನಿಸು?'

"ಅಲ್ವೆ, ಎಂಪಿಗಳಿಗೆ ಮಾತ್ರವಲ್ಲ, ಇಂಡಿಕೇಟಿಗರೆಲ್ಲರಿಗೂ ಈಗ ಅವರೆಂದರೆ ಆಗೋದಿಲ್ಲ."

"ಅದೇ ಯಾಕೇಂತ?"

'ಯಾಕೆ ಅಂದ್ರೆ? ನೋಡು, ಅವರು ರಾಜ್ಯಪಾಲರು- ಈಗ ರಾಷ್ಟ್ರಪತಿಗಳ ಪರವಾಗಿ ಮೂರು ಕೋಟಿ ಕನ್ನಡಿಗರ ಯೋಗಕ್ಷೇಮವನ್ನು ತಮ್ಮ ಹೆಗಲಲ್ಲಿ ಹೊತ್ತುಕೊಂಡವರು....'

"ಸರಿ...."

'ಅವರಿಗೆ ಪಕ್ಷವಿಲ್ಲ, ಪಂಗಡವಿಲ್ಲ....'

"ಹೌದು...."

'ನಿಷ್ಪಕ್ಷಪಾತಿಗಳಾಗಿರಬೇಕಾದ ಅವರು ಪಕ್ಷಪಾತಿಗಳಂತೆ ವರ್ತಿಸಿದರೆ ಹೇಗೆ?'

'ಅವರೇನು ಪಕ್ಷಪಾತ ಮಾಡಿದರೂಂತ?'

"ಅಲ್ವೆ, ರಾಜ್ಯಪಾಲರು ತನ್ನ ಸರ್ವಾಧಿಕಾರದಲ್ಲಿ ಹಲವಾರು ಬೋರ್ಡುಗಳನ್ನು ನಾಮಕರಣ ಮಾಡಿದರು. ಇವುಗಳಲ್ಲಿ ಸಿಂಡಿಕೇಟಿನವರನ್ನೇ ನಾಮಕರಣ ಮಾಡಿದರೆಂದು ಒಂದು ಅಪವಾದ....'

"ಮಾತಿಗೆ ಹೇಳ್ತೀನೆ. ಯೋಗ್ಯತೆ-ಅರ್ಹತೆಗಳಿಗೆ ಯಾವ ಪಕ್ಷಪಾತ? ಅಂತಹ ಯೋಗ್ಯರನ್ನು ರಾಜ್ಯಪಾಲರು ನಾಮಕರಣ ಮಾಡಿದ್ದರೆ ಅದ್ರಲ್ಲಿ ತಪ್ಪೇನು?'

'ನೋಡಮ್ಮ, ಅದಕ್ಕೇ ನಿನಗೆ ಬುದ್ಧಿಯಿಲ್ಲ ಅನ್ನೋದು....'

'ಯಾಕೆ?'

"ಅಲ್ಲ, ಪ್ರಜಾಪ್ರಭುವೆನಿಸಲು ಸುಳ್ಳು ಹೇಳುವ ಯೋಗ್ಯತೆಯೊಂದೇ ಸಾಕಾಗಿರುವಾಗ, ಬೋರ್ಡುಗೀರ್ಡುಗಳಿಗೆ ಇನ್ನೆಂತಹ ಯೋಗ್ಯತೆ ಬೇಕು'

'ಸುಳ್ಳು ಹೇಳುವವರು ಪ್ರಜಾಪ್ರಭುವಾಗುತ್ತಾರೇನು?'

"ಪ್ರಜಾಪ್ರಭುವಾಗಲು ಪ್ರಜೆಗಳ ಮತಗಿಟ್ಟಿಸಬೇಕು; ಮತ ಗಿಟ್ಟಿಸಬೇಕಾದರೆ, ಪ್ರಜೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು; ಇದಕ್ಕಿರುವ ಸಂಜೀವಿನಿ ಅಂದ್ರೆ ಸುಳ್ಳು ಮಾತ್ರ...."

'ಅದು ಹೇಗೇರಿ, ಸುಳ್ಳು ಹೇಳಿದರೆ ನಂಬುತ್ತಾರಾ?'

'ನ ಬ್ರೂಯಾತ್ ಸತ್ಯಮಪ್ರಿಯಂ ಅಲ್ಲವೆ? ಓಟು ಕೇಳುವಾಗ, ಬಿರ್ಲಾ ಟಾಟಾರ ಸಂಪತ್ತು ದೋಚಿ ತಂದು ನಿಮಗೆಲ್ಲ ಹಂಚುತ್ತೇನೆಂದರೆ, ಜನಕ್ಕೆ ವಿಶ್ವಾಸ ಹುಟ್ಟುತ್ತೆ. ಒಂದು ರೂಪಾಯನ್ನು ನಾಲ್ಕೋ ಐದೋ ಮಾಡಿಕೊಡ್ತೇನೆ ಅಂದವನಿಗೆ ನಾವಿರಗಟ್ಟಲೆ ಸುರಿದವರಿಲ್ವೆ ಹಾಗೆ ....'

'ಅಂತ ಯೋಗ್ಯತೆ ಎಲ್ರಿಗೂ ಇದೇ ಅನ್ನಿಸುತ್ತೆ...."

"ಇರಬಹುದೂನ್ನು. ಇಂಡಿಕೇಟಿಗರೆಲ್ರಿಗೂ ಬೋರ್ಡಿನ ಪದಧರರಾಗುವ ಯೋಗ್ಯತೆಯಿರುವಾಗ ಅವರ ಯೋಗ್ಯತೆಯನ್ನು ಗುರುತಿಸುವ ಯೋಗ್ಯತೆ ರಾಜ್ಯಪಾಲರಿಗೆ ಇಲ್ಲವಾಗಿರುವಾಗ....'

'ಅಷ್ಟು ಮಾತ್ರವಲ್ಲ ನೋಡಿ, ರಾಜ್ಯಪಾಲರು ವೀರೇಂದ್ರ ಪಾಟೀಲರನ್ನೂ ಅವರ ಸರಕಾರವನ್ನೂ ಭಾರೀ ಭಾರೀ ಹೊಗಳಿದ್ದೂ ಉಂಟು.'

'ಇದೆಲ್ಲ ಅವರಿಗೆ ಬೇಡವಾದದ್ದಲ್ಲವೆ? ಸರಕಾರವನ್ನು ಅದರಷ್ಟಕ್ಕೇ ಬಿಟ್ಟು, ರಾಜಭವನದಲ್ಲಿ ಸುಖನಿದ್ರೆ ಮಾಡುವುದನ್ನು ಬಿಟ್ಟು ಹೀಗೆಲ್ಲ ಮಾಡಿದ್ರೆ ದೂರದೇನು ಮಾಡ್ಬೇಕು?'

'ಅಲ್ರಿ, ರಾಜ್ಯಪಾಲರನ್ನು ಇಂದಿರಾ ಗಾಂಧಿ ದೆಹಲಿಗೆ ಕರೆಸಿಕೊಂಡ್ರಂತಲ್ಲಾ?'

"ಹ್ಞಂ.... ಸೆಂಟ್ ಪರ್‌ಸೆಂಟ್ ದಿಗ್ವಿಜಯ ಸಾಧಿಸಿದವರ ಮಾತನ್ನು ತೆಗೆದು ಹಾಕುವುದು ಹೇಗೆ?'

'ಅಲ್ಲ, ಹೀಗೆಲ್ಲ ಆಡಳಿತೆಯಲ್ಲಿ ಹೊರಗಿನವರು ಹಸ್ತಕ್ಷೇಪ ಮಾಡುತ್ತ ಹೋದರೆ....'

"ಅಲ್ವೆ, ಇಲ್ಲಿ ಹೊರಗಿನವರು ಯಾರೂಂತ?"

'ಎಂಪಿಗಳು....'

'ನೋಡಮ್ಮ, ಈಗ ನಮ್ಮನ್ನಾಳುವುದು ರಾಷ್ಟ್ರಪತಿಗಳು; ಶಾಸನಾಧಿಕಾರ ಪಾರ್ಲಿಮೆಂಟಿಗೆ. ಹಾಗಿರುವಾಗ ಎಂಪಿಗಳ ಹಸ್ತಕ್ಷೇಪ ಸುಸ್ವಾಗು....'

'ಇದರಿಂದ ಆಡಳಿತೆಗೆ ಭಂಗ ಬರುವುದಿಲ್ಲವೆ?'

'ಸಮರ್ಥ ಆಡಳಿತೆ ಬೇಕಾಗಿರುವುದು ಜನರಿಗೆ ಮಾತ್ರ; ಏಕೆಂದರೆ ಅವರು ಅಸಮರ್ಥರು. ಎಂಪಿ ಎಮ್ಮೆಲ್ಯೆಗಳೆಲ್ಲ ಸರ್ವಸಮರ್ಥರೇ ತಾನೆ?'

'ಮತ್ತೆ ನೋಡಿ, ಬೋರ್ಡುಗೀರ್ಡುಗಳ ನಾಮಕರಣ ಏಕ ಪಕ್ಷೀಯ ಮಾತ್ರವಲ್ಲ, ಏಕನಗರೀಯವಾಯಿತೆಂದೂ ದೂರುವವರಿದ್ದಾರೆ.'

'ಸಾಕಲ್ಲ ಇಷ್ಟು....'

'ಏನು?'

'ಹಾರುವವರ ಕಥೆಯಾಯ್ತು....'

"ಏನಂತೆ?"

"ಸಿಗದ ಹಾರುವೇತರರೂ ಬಯ್ದರು; ಸಿಕ್ಕ ಹಾರುವರೂ ಬಯ್ದರು...."

'ಹ್ಞಂ....ಅದು ಹಾಗೇನೇ....'

"ಯಾವುದು?"

'ಇದು ...'

'....ಹೌದು....'

— ಗೋರಾ.

●●

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R.R.C. 2387/70

Between:

ಶಿವರಾಮ ಉಪಾಧ್ಯಾಯ —ಅರ್ಜಿದಾರ

ಮತ್ತು

ರಾಮಣ್ಣ ಗೌಡ ಕೂಡಾ —ಎದ್ರಿರು

೬ನೇ ಎದ್ರಿಗೆ: ರಾಮಕ್ಕ, ಸಾಂತ ಗೌಡರ ಮಗಳು, ಆಲಂಕಾರು ಗ್ರಾಮ, ಪುತ್ತೂರು ತಾಲೂಕು.

ಮೇಲಿನ ನಂಬ್ರವು ಗೇಣಿ ಬಾಕಿ ಬಗ್ಗೆ ಅರ್ಜಿದಾರನು ಸದರಿ ಕೋರ್ಟಿಗೆ ಅರ್ಜಿ ಮಾಡಿದ್ದಾಗಿರುತ್ತದೆ. ಇದರ ವ್ಯಾದೆಯು ತಾರೀಕು 6-7-1971ಕ್ಕೆ ಇಟ್ಟಿರುತ್ತದೆ. ಆ ದಿವಸ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉಜಾಪರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಶಿವ್ಯಾ ಮಾಡಿ ದಾವೆಯನ್ನು ತೀರ್ಮಾನಿಸಲಾದೀತು ಎಂತ ಕೋರ್ಟಿನ ಹುಕುಂ ಮೇರೆಗೆ ನಿಮಗೆ ಈ ಮೂಲಕ ತಿಳಿಯಪಡಿಸೋಣಾಗಿದೆ.

Sd/- K. T. Bhat
Advocate for Petitioner

Puttur, S.K.
Date: 1-6-71.

ಗಜೇಂದ್ರ ಮೋಕ್ಷದ ಗಂಡಕ್ ನದಿ

ಗಂಡಕ್ ನದಿಗೆ ನೇಪಾಳದಲ್ಲಿ ನಾರಾಯಣಿ ಎಂದು ಹೆಸರು. ನಾರಾಯಣಿಯ ಉಪಶಾಖೆಯಿಂದ 5 ಮೈಲುಗಳ ಅಂತರದಲ್ಲಿ ಗಜೇಂದ್ರನನ್ನು ಮೊಸಳೆಯು ಹಿಡಿದ ಸ್ಥಳವಿದೆ. ಗಜೇಂದ್ರ ಮೋಕ್ಷದ ಖ್ಯಾತಿಯ ಈ ಸ್ಥಳದಲ್ಲಿಯೇ ಎರಡುಸಾವಿರದ ನಾಲ್ಕುನೂರ ಮುವತ್ತೇಳು ಅಡಿಗಳಷ್ಟು ಉದ್ದವಾದ ಗಂಡಕ್ ಅಣೆಕಟ್ಟು ಕಂಗೊಳಿಸುತ್ತದೆ. ಗಂಡಕ್ ನದಿಯು ಮಳೆಯ ಅಭಾವವಿರುವ ಪ್ರದೇಶಗಳ ಮೂಲಕ ಹರಿಯುತ್ತಿದೆ. ಈ ಪ್ರದೇಶಗಳಲ್ಲಿ ವಾಸಿಸುವ ಜನರು ಪದೇ ಪದೇ ಸಂಭವಿಸುತ್ತಿದ್ದ ಕ್ಷಾಮಡಾಮರಗಳಿಂದ ಲೆಕ್ಕವಿಲ್ಲದಷ್ಟು ಕಷ್ಟವನ್ನು ಅನುಭವಿಸುತ್ತಿದ್ದರು. ಗಂಡಕ್ ಅಣೆಕಟ್ಟಿನ ಕಾರ್ಯಯೋಜನೆ ಈಗ ಅವರಿಗೆ ಒಂದು ವರವಾಗಿ ಪರಿಣಮಿಸಿದೆ. ಈ ಕಾರ್ಯಯೋಜನೆ ಬಿಹಾರಿನ 25.45 ಲಕ್ಷ ಎಕರೆಗಳನ್ನೂ ಉತ್ತರಪ್ರದೇಶದ 8.31 ಲಕ್ಷ ಎಕರೆಗಳನ್ನೂ ನೇಪಾಳಿನ 1.5 ಲಕ್ಷ ಎಕರೆಗಳನ್ನೂ ನೀರಾವರಿ ಸೌಕರ್ಯಗಳ ಮೂಲಕ ಫಲಭರಿತವಾಗಿಸಿದೆ. ಭಾರತದ ಪ್ರಥಮ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ್ ಅವರಿಂದಲೇ ಈ ಅಣೆಕಟ್ಟು ಅಸ್ತಿತ್ವಕ್ಕೆ ಬಂದಿತು. ಸರಣ, ದಿಯೋರಿಯಾ ಮತ್ತು ಗೋರಕಪುರ ಜಿಲ್ಲೆಗಳ ಜನರು ಆಗಾಗ್ಗೆ ಬೆಳೆಗೇಡಾಗಿ ತುಂಬ ಕಷ್ಟ ಪಡುವುದನ್ನು ಕಂಡು ದಿವಂಗತ ಡಾ. ರಾಜೇಂದ್ರ ಪ್ರಸಾದರ ಮನ ಕರಗಿತು. ಅವರು ಕೂಡಲೆ ಉತ್ತರ ಪ್ರದೇಶ, ಬಿಹಾರ ರಾಜ್ಯಸರ್ಕಾರಗಳ ಹಾಗೂ ಕೇಂದ್ರ ಸರ್ಕಾರಗಳ ಪ್ರತಿನಿಧಿಗಳನ್ನು ಒಂದೆಡೆಗೆ ಸೇರಿಸಿ ಈ ಕಷ್ಟ ನಿವಾರಣೆಯ ಮಾರ್ಗೋಪಾಯಗಳ ಬಗ್ಗೆ ಚರ್ಚಿಸಿದರು. ಗಂಡಕ್ ನದಿಯಿಂದ ಕಾಲುವೆಗಳನ್ನು ನಿರ್ಮಿಸಿ ಈ ಪ್ರದೇಶಗಳಲ್ಲಿನ ಜನರ ಭವಣೆಯನ್ನು ನೀಗಿಸಬೇಕೆಂದು ಅವರು ಒತ್ತಾಯ ಮಾಡಿದರು. ಹೀಗೆ ಗಂಡಕ್ ನದಿ ಯೋಜನೆ ಮೂರ್ತರೂಪ ಪಡೆಯಿತು. ಮೊದಲು ಸಿದ್ಧಪಡಿಸಲಾದ ಈ ಯೋಜನೆ ಈಗ ವಿಸ್ತಾರಗೊಂಡಿದೆ. ಬಿಹಾರಿನ ಚಂಪಾರಣ್ಯ, ಮುಜಫರ್‌ಪುರ ಮತ್ತು ದರಭಾಂಗ ಈ ಜಿಲ್ಲೆಗಳು ಹಾಗೂ ನೇಪಾಳಿನ ನಾಲ್ಕು ಜಿಲ್ಲೆಗಳು ಈ ಕಾರ್ಯಯೋಜನೆಗೆ ಒಳಪಟ್ಟಿವೆ. ಗಂಡಕ್ ನದಿ ಯೋಜನೆಯ ನಿವೇಶನ ಹಾಗೂ ಅದರ ಕಾರ್ಯಾಚರಣೆ ಸಂಬಂಧಿಸಿದಂತೆ 1959ರ ಡಿಸೆಂಬರ್ ತಿಂಗಳಲ್ಲಿ ಭಾರತ ಹಾಗೂ ನೇಪಾಳ ದೇಶಗಳು ಒಪ್ಪಂದ ಒಂದಕ್ಕೆ ಸಹಿ ಹಾಕಿದವು. 1960ರ ಮೇ ತಿಂಗಳಲ್ಲಿ ಗಂಡಕ್ ನದಿ ಕಾರ್ಯಯೋಜನೆ ಪ್ರಾರಂಭವಾಯಿತು. ಗಂಡಕ್ ನದಿ ಯೋಜನೆ ದೇಶದಲ್ಲಿ ಅತಿದೊಡ್ಡ ನೀರಾವರಿ ಯೋಜನೆಗಳಲ್ಲಿ ಒಂದಾಗಿದೆ. ಅಣೆಕಟ್ಟು ಹಾಗೂ ಎರಡು ಪ್ರಧಾನ ಕಾಲುವೆಯ ಜಾಲಗಳು ಮತ್ತು ವಿದ್ಯುಚ್ಛಕ್ತಿ ಕೇಂದ್ರ ಇತ್ಯಾದಿ ಈ ಯೋಜನೆಯಲ್ಲಿವೆ.

ಭಾರತ ನೇಪಾಳ ಮೈತ್ರಿಯ ಸಂಕೇತ

ನೇಪಾಳಿನ ದೊರೆ ಮಹೇಂದ್ರ ಅವರು 1964ರ ಮೇ ತಿಂಗಳಲ್ಲಿ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅವರ ಸಮ್ಮುಖದಲ್ಲಿ ಗಂಡಕ್‌ನದಿಅಣೆಕಟ್ಟಿನ ಯೋಜನೆಗೆ ಅಡಿಪಾಯವನ್ನು ಹಾಕಿದರು. ಅಗ ಆರಂಭವಾದ ನಿರ್ಮಾಣ ಕಾರ್ಯ 5 ವರ್ಷಗಳಲ್ಲಿ ಪೂರ್ಣಗೊಂಡಿತು. ಈ ಕಾರ್ಯಯೋಜನೆಯ ಅರ್ಧಭಾಗ ನೇಪಾಳಿನಲ್ಲೂ ಇನ್ನರ್ಧಭಾಗ ಭಾರತದಲ್ಲೂ ಇದೆ. ಭಾರತ ಹಾಗೂ ನೇಪಾಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪರಸ್ಪರ ಸಹಕಾರ ಹಾಗೂ ಮೈತ್ರಿಯುತ ಸಂಬಂಧಗಳನ್ನು ಹೊಂದಿವೆ ಎಂಬುದಕ್ಕೆ ಗಂಡಕ್ ಅಣೆಕಟ್ಟು ಒಂದು ಸಂಕೇತವಾಗಿದೆ. ಗಂಡಕ್ ಅಣೆಕಟ್ಟಿನ ನಿವೇಶನಕ್ಕೆ ಭೈಂಸ್ ಲೋಟ್ ಎಂದು ಕರೆಯಲಾಗುತ್ತಿತ್ತು. ಅಂದರೆ ಎಮ್ಮೆಗಳು ಮೇಯುವ ಸ್ಥಳವೆಂದು ಇದರ ಅರ್ಥ. ಈಗ ಅದರ ಮೊದಲಿನ ಹೆಸರು ಮಾಯವಾಗಿ ಅಲ್ಲಿ ವಾಲ್ಮೀಕಿ ನಗರ ತಲೆಯೆತ್ತಿದೆ. ತಮಸಾ ನದಿಯ ದಡದ ಮೇಲೆ ಆಶ್ರಮವನ್ನು ಕಟ್ಟಿ ಅಲ್ಲಿಯೇ ವಾಸಿಸುತ್ತಿದ್ದ ವಾಲ್ಮೀಕಿ ಋಷಿಗಳ ಗೌರವಾರ್ಥವಾಗಿ ಈ ಸ್ಥಳಕ್ಕೆ ಅವರ ಹೆಸರು ಕೊಡಲಾಗಿದೆ. ವಾಲ್ಮೀಕಿ ಋಷಿಗಳ ಆಶ್ರಮವಿದ್ದಿತೆಂದು ಹೇಳಲಾಗುತ್ತಿರುವ ಈ ಸ್ಥಳದಲ್ಲಿಯೇ ತಮಸಾ ನದಿ ಮಂಜುಳ ನಿನಾದ ಮಾಡುತ್ತಾ ಹರಿಯುತ್ತಿದೆ. ವಾಲ್ಮೀಕಿ ಆಶ್ರಮ ತಮಸಾ, ಸೋನಾ ಹಾಗೂ ಗಂಡಕ್ ನದಿಗಳ ತ್ರಿವೇಣಿ ಸಂಗಮದಲ್ಲಿದೆ. ಈಗಿನ ಅಂದಾಜಿನ ಪ್ರಕಾರ ಗಂಡಕ್ ನದಿ ಕಾರ್ಯಯೋಜನೆ 1976ರ ಹೊತ್ತಿಗೆ 35 ಲಕ್ಷ ಎಕರೆಗಳಷ್ಟು ಜಮೀನಿಗೆ ನೀರುಣ್ಣಿಸುವ ಸಾಮರ್ಥ್ಯವನ್ನು ಪಡೆಯಲಿದೆ. ಒಟ್ಟು 120 ಕೋಟಿ ರೂಪಾಯಿಯ ಬಂಡವಾಳವನ್ನು ತೊಡಗಿಸಲಾಗುವುದು. ಗಂಡಕ್ ನದಿಯ ಪೂರ್ವ ಹಾಗೂ ಪಶ್ಚಿಮ ದಂಡೆಯ ಕಾಲುವೆಗಳಿಂದ ಈಗಾಗಲೇ ಭಾಗಶಃ ನೀರಾವರಿ ಆರಂಭವಾಗಿದ್ದು ಅದ್ಭುತವಾದ ಬದಲಾವಣೆಗಳನ್ನು ತಂದಿದೆ.

ಗಂಡಕ್ ನದಿಯ ಅಣೆಕಟ್ಟಿನಿಂದಾಗಿ ಚಂಪಾರಣ್ಯ ಜಿಲ್ಲೆಯ ಬೇಸಾಯ ಭೂಮಿ ಅಸಾಧಾರಣವಾದ ರೀತಿಯಲ್ಲಿ ಪರಿವರ್ತನೆ ಹೊಂದಿದೆ. ತ್ರಿವೇಣಿ ಕಾಲುವೆಯಿಂದ ನೀರಾವರಿ ಸೌಕರ್ಯ ದೊರೆಯುತ್ತಿರುವುದೇ ಇಂತಹ ಪರಿವರ್ತನೆಗೆ ಕಾರಣ. ಹಿಂಗಾರಿ ಬೆಳೆ ಚಂಪಾರಣ್ಯ ಜಿಲ್ಲೆಯಲ್ಲಿ ಅಷ್ಟೊಂದು ಜನಪ್ರಿಯವಾಗಿರಲಿಲ್ಲ. ಈ ವರ್ಷ ಈ ಬೆಳೆಯನ್ನು ತೆಗೆದುಕೊಳ್ಳಲಾಗುತ್ತಿರುವ ಪ್ರದೇಶದ ವಿಸ್ತೀರ್ಣ ಹೆಚ್ಚಿದೆ. ಸುಮಾರು 3‌0 ಸಾವಿರ ಎಕರೆಯ ಭೂಮಿಗೆ ನೀರಾವರಿ ಸೌಕರ್ಯ ದೊರೆಯಿತು. ಈ ಪ್ರದೇಶದಲ್ಲಿ ಬೆಳೆ ಉತ್ತಮವಾಗಿರುವುದರಿಂದ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಬೆಲೆಯ ಗೋಧಿಯನ್ನು ಹೆಚ್ಚಿಗೆ ಉತ್ಪಾದಿಸುವ ನಿರೀಕ್ಷೆ ಇದೆ. ಉತ್ತಮವಾದ ಬೆಳೆಗಳಿಗೆ ದೊರೆಯುತ್ತಿರುವ ಒಳ್ಳೆಯ ಬೆಲೆ, ನೀರಾವರಿ ಸೌಲಭ್ಯಗಳು ಹಾಗೂ ರೈತರಿಗೆ ಕಾಲಕಾಲಕ್ಕೆ ಸಿಗುತ್ತಿರುವ ಉತ್ತಮ ಬಿತ್ತನೆ ಬೀಜಗಳು, ಅಗತ್ಯವಾದಾಗ ದೊರೆಯುತ್ತಿರುವ ಹಣಕಾಸಿನ ನೆರವು ಇತ್ಯಾದಿಗಳಿಂದಾಗಿ ಹಿಂಗಾರಿ ಪೈರನ್ನು ಹೆಚ್ಚು ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಗಂಡಕ್ ಅಣೆಕಟ್ಟಿನ ಕಾರ್ಯಯೋಜನೆಯ ನೆರೆಗೆ ಹಳ್ಳಿಗಳಲ್ಲಿ ಕಾಲುವೆಗಳನ್ನು ನಿರ್ಮಿಸುವ ಕಾರ್ಯ ಭರದಿಂದ ನಡೆದಿದೆ. ಇದರಿಂದಾಗಿ ಸುಮಾರು ಒಂದು ಲಕ್ಷ ಎಕರೆಗಳಷ್ಟು ಹಿಂಗಾರಿ ಪೈರಿನ ಜಮೀನಿಗೆ

(ಎಂಟನೇ ಪುಟ ನೋಡಿರಿ)



davp 70/661

ನಿರುದ್ಯೋಗ ಸಮಸ್ಯೆ

ಲೇಖಕರು: ಶ್ರೀ ನಯನಾಭಿರಾಮ ಉಡುಪ, ವಿಶಾರದ.

ಪ್ರತಿಯೊಂದು ದೇಶದಲ್ಲೂ ತನ್ನದೇ ಆದ ಹಲವಾರು ಸಮಸ್ಯೆಗಳೇನೋ ಇವೆ. ಆದರೆ ಭಾರತದಲ್ಲಿದ್ದಷ್ಟು ಸಮಸ್ಯೆಗಳು ಬೇರೆಲ್ಲೂ ಇರವು. ಹಾಗಾಗಿ ನಮ್ಮ ದೇಶವನ್ನು ಸಮಸ್ಯೆಗಳ ತವರೂರೆಂದರೂ ತಪ್ಪಾಗದು. ಒಂದಕ್ಕಿಂತ ಒಂದು ಸಮಸ್ಯೆ ಬಿಡಿಸಿದಷ್ಟು ಜಟಿಲವಾಗುವಂತಹ ಸಮಸ್ಯೆಗಳೇ ನೂರಾರು. ಒಂದು ಸಮಸ್ಯೆಯನ್ನು ಸಮಾಧಾನಿಸಲು ಹೊರಟಾಗ ಜೊತೆಗೇನೇ ಮತ್ತೆ ಹಲವಾರು ಸಮಸ್ಯೆಗಳು ಹೆಡೆಬಿಡಿಸತೊಡಗುವುವು. ಈ ಎಲ್ಲಾ ಸಮಸ್ಯೆಗಳಿಗಿಂತಲೂ ಘನ ಘೋರವಾದ ಸಮಸ್ಯೆಯೆಂದರೆ ನಿರುದ್ಯೋಗ ಸಮಸ್ಯೆ. "ಉದ್ಯೋಗಂ ಪುರುಷ ಲಕ್ಷಣಂ". ಎಷ್ಟರವರೆಗೆ ಮಾನವನಿಗೆ ಸೂಕ್ತವಾದ ಉದ್ಯೋಗ ದೊರಕುವುದಿಲ್ಲವೋ, ಅಷ್ಟರತನಕ ಆತ ಸುಖಿಯಾಗಿರಲಾರ. ಕಷ್ಟಪಟ್ಟರೆನೆ ಇಷ್ಟ ಸಿಗಬಹುದಾಗಿದ್ದತ್ತು, ಕೈ ಕೆಸರಾದರೆನೆ ಬಾಯಿಗೆ ಮೊಸರು ದೊರಕೀತು!

ಈ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುವುದಕ್ಕಿಂತಲೂ ಮಿಗಿಲಾಗಿ ದಿನದಿಂದ ದಿನಕ್ಕೆ ಭೀಕರ ರೂಪವನ್ನು ತಾಳುತ್ತಿರುವುದು ಖೇದಕರ. ಇದಕ್ಕೆ ಮೂಲ ಕಾರಣ ಏರುತ್ತಿರುವ ಜನಸಂಖ್ಯೆ. ಈಗಿದ್ದ ಜನಸಂಖ್ಯೆಯನ್ನು ಗಮನದಲ್ಲಿಟ್ಟು, ಪಂಚವಾರ್ಷಿಕ ಯೋಜನೆಯ ಮೂಲಕ ಒಂದೆರಡು ದಶಕದೊಳಗೆ, ಸರ್ವರಿಗೂ ಔದ್ಯೋಗಿಕ ಸೌಖ್ಯರ್ಯವನ್ನು ಒದಗಿಸಲೆಂದು ಹವಣಿಸಿದಾಗ, ಮತ್ತೆ ಆ ಅವಧಿಯಲ್ಲಿ ಹೆಚ್ಚಿನ ಜನ ಸಂಖ್ಯೆಯಿಂದಾಗಿ ಯೋಜನೆ ಯೋಚನೆಗಳೆಲ್ಲವೂ ಅಡಿಮೇಲಾಗುವುವು. ಸ್ವಾತಂತ್ರ್ಯ ಸಿಗುವ ಮೊದಲು ವರಕವಿ ಬೇಂದ್ರೆಯವರೆಂದಂತೆ ಲೆಕ್ಕಕ್ಕೆ 31 ಕೋಟಿಯಿದ್ದ ಜನಸಂಖ್ಯೆ, ನಲ್ವತ್ತು ಕೋಟಿಯನ್ನು ದಾಟಿ ಕಳೆದ ಬಾರಿಯ ಜನಗಣನಾವಸರದಲ್ಲಿ ೬೦ ಕೋಟಿಗೆ ಏರಿ; ಈ ಬಾರಿ ೬೧ ಕೋಟಿಗೆ ಹತ್ತಿರವಾಗಿದೆ.

ಹೀಗೆ ಕಲ್ಪನೆಗೂ ಎಟಕದ ರೀತಿಯಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗನುಗುಣವಾಗಿ ಉದ್ಯೋಗಗಳ ಅನುಕೂಲತೆ ಹೆಚ್ಚದ ಕಾರಣದಿಂದಾಗಿ, ನಿರುದ್ಯೋಗದ ಸಮಸ್ಯೆಯೇ ನಿವಾರಣೆಯಾಗದಿದೆ. "ಹುಚ್ಚು ಬಿಡದೆ ಮದುವೆಯಾಗದು. ಮದುವೆಯಾಗದೆ ಹುಚ್ಚು ಬಿಡದು" ಎಂಬ ಗಾದೆಯಂತೆ ಹೆಚ್ಚುತ್ತಿರುವ ಜನಸಂಖ್ಯೆ ಸ್ಥಿಮಿತಕ್ಕೆ ಬರದೆ ಉದ್ಯೋಗಾನುಕೂಲತೆಯ ಯೋಜನೆಯೂ ಪ್ರಯೋಜನಕ್ಕೆ ಬರದಿದೆ. ಯೂವ ದೇಶದ ಜನ ನಿರುದ್ಯೋಗಿಗಳಾಗಿರುವರೋ ಆ ಜನರು ನಿರುಪಾಯರಾಗಿ, ಜೀವನೋಪಾಯವನ್ನು ಮನಗಾಣದೆ ಕಳ್ಳರೋ ಕಾಕರೋ ಆಗಿ; ಲಂಚಕೋರರೊ ದರೋಡೆಕೋರರೊ ಎನಿಸಿ ದೇಶದ್ರೋಹಿಗಳಾಗುವ ಸಂಭವವಿದೆ.

'An Empty mind is a devils Workshop' ಕೆಲಸವಿಲ್ಲದಾಗ ಮಿದುಳಿನಲ್ಲಿ ಬೇಡವಾದ ನೂರಾರು ಯೋಚನೆಗಳು ಬಂದು ಬೆಳಗಿ ತೊಳಗಬೇಕಾದ ಬಾಳು ಹಾಳು ಹೊಲಸಾದರೆ ನೋಜಿಗವಿಲ್ಲ. ಕೂಳಿಗೂ ದಾರಿಕಾಣದಾಗ ನಿರುದ್ಯೋಗಿ ಸುಳ್ಳು ಹೇಳಲು ಹೇಸಲಾರ; ಕೊಳ್ಳೆ ಹೊಡೆಯಲೂ ಹಿಂಜರಿಯಲಾರ. ಸರ್ವ ಸಾಮಾನ್ಯನಾದವನು ಅಥವಾ ನಿರಕ್ಷರಕುಕ್ಷಿಯಾದವರು ನಿರುದ್ಯೋಗಿಯಾದರೆ; ಇಷ್ಟೆಲ್ಲಾ ಅನಾಹುತವಿದ್ದರೆ ಸಾಕ್ಷರನಾದವನು ನಿರುದ್ಯೋಗಿಯಾದಾಗ ಆಗುವ ಅನಾಹುತ ಅಪಾರ. ಸಾಕ್ಷರನಾದವ ಕೆಲಸವಿಲ್ಲದವನಾಗಲು; ರಾಕ್ಷಸನಾಗಿ ಕಂಡರೂ ಆಶ್ಚರ್ಯವಿಲ್ಲ. ಸದ್ಯದ ಲೆಕ್ಕಾಚಾರ ಪ್ರಕಾರ ಲಕ್ಷ ಲಕ್ಷ ನವಯುವಕರು ಪದವೀಧರರಾಗಿಯೂ ನಿರುದ್ಯೋಗಿಗಳಾಗಿದ್ದಾರೆಂದರೆ ಇದಕ್ಕಿಂತ ಲಜ್ಜೆಯ ಸಂಗತಿ ದೇಶಕ್ಕೆ ಬೇರೇನು? ಅದರಲ್ಲೂ ಎರಡು ಮೂರು ಲಕ್ಷದಷ್ಟು ಮಂದಿ ಸಾವಿರಾರು ರೂಪಾಯಿ ವೆಚ್ಚಗೈದು ಇಂಜಿನಿಯರರೆನಿಸಿಯೊ, ವೈದ್ಯರಾಗಿಯೋ ಅಥವಾ ಸ್ನಾತಕೋತ್ತರ ಪದವಿಯಷ್ಟು ಕಲಿತೂ ನಿರುದ್ಯೋಗಿಗಳಾಗಿದ್ದಾರೆಂದರೆ ತಲೆತಗ್ಗಿಸಲೇಬೇಕಾದ ವಿಚಾರ. ಇನ್ನೊಂದು ದೃಷ್ಟಿಯಿಂದ ಹೇಳುವುದಿದ್ದರೆ, ಇಂತಹ ಉಚ್ಚ ವಿದ್ಯಾಪಾರಂಗತರೂ ನಿರುದ್ಯೋಗಿಗಳಾಗಿರಲು ಮುಖ್ಯ ಕಾರಣ ಈಯಲಾಗುವ ಶಿಕ್ಷಣದಲ್ಲಿರುವ ಕುಂದುಕೊರತೆ. ಹೆಚ್ಚೆಚ್ಚು ಕಲಿತಂತೆಲ್ಲಾ ದುಡಿದು ದಣಿದು, ಮೈ ಬೆವರಿಳಿಸಿ ಮಾಡುವ ಕೆಲಸವನ್ನು ಅಗೌರವದ ಉದ್ಯೋಗವೆಂದು ಭಾವಿಸುವ ಕಾರಣ ಈ ನಿರುದ್ಯೋಗ ಸಮಸ್ಯೆ ಭೀಕರವಾಗುತ್ತಿದೆ. ವಿದ್ಯಾವಂತರಾದಂತೆಲ್ಲಾ ಹೊಲಗದ್ದೆಗಳ ಕೆಲಸದಲ್ಲಿ ಹೇಸುವ ಪ್ರವೃತ್ತಿ ಗೌರವದಸಂಗತಿಯಲ್ಲ. ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಿದಂತೆ ಕೃಷಿರಂಗದಲ್ಲೂ ದುಡಿಯುವವರ ಸಂಖ್ಯೆ ಕಡಿಮೆಯಾಗುತ್ತಲೇ ಹೋಗುತ್ತಿದೆ.

ಕೃಷಿ ಪ್ರಧಾನವಾದ ದೇಶದಲ್ಲಿ ಕೃಷಿಗೆ ಸಂಬಂಧಿಸಿದ ಉದ್ಯೋಗವನ್ನು ಕೀಳೆಂದು ಭಾವಿಸಿದಾಗ ಅಂದರೆ ಈ ಉದ್ಯೋಗ ಕಲಿತವರು ಮಾಡುವ ಉದ್ಯೋಗವಲ್ಲವೆಂದು ಭಾವಿಸಿದಾಗ ನಿರುದ್ಯೋಗವು ನಿವಾರಣೆಯಾಗುವುದು ಕನಸಿನಗಂಟೆ ಸರಿ.

ಉದ್ಯೋಗವೆಂದಾಗ ಕುರ್ಸಿಯಲ್ಲಿ ಕುಳಿತು ಮೇಜಿಯ ಮೂಲಕವಾಡುವ ಉದ್ಯೋಗವೇ ನಿಜವಾದ ಉದ್ಯೋಗ; ಗೌರವದ ಉದ್ಯೋಗ, ಘನತೆಯ ಉದ್ಯೋಗ; ಹೆಮ್ಮೆಯ ಉದ್ಯೋಗ, ಹೆಚ್ಚು ಸಂಬಳ ಸಿಗುವ ಉದ್ಯೋಗ—ಎಂಬೀ ಭಾವನೆಗಳಿರುವ ತನಕ ಅದರಲ್ಲೂ ಕೃಷಿ ಪ್ರಧಾನವಾದ ನಮ್ಮ ರಾಷ್ಟ್ರದಲ್ಲಿ ನಿರುದ್ಯೋಗದ ನಿವಾರಣೆಯಾಗದು. ಸ್ವಾವಲಂಬೀ ಜೀವನದ ಮಹತ್ವದ ಅರಿವು ಆಗದವರ ತನಕ ಉದ್ಯೋಗಿಯಾಗಿರಬೇಕಾದ ತಿಳಿವು ಬೆಳೆಬಾಳದು.

ಕಾಯಕವೇ ಕೈಲಾಸವೆಂಬಂತೆ; ದುಡಿಮೆಯೆ ದೇವರೆಂಬ ಭಾವನೆ, 'work is woship' ಎಂಬ ವಿವೇಕೋದಯವಾದಾಗ ನಿರುದ್ಯೋಗವು ನಿವಾರಣೆಯಾಗದಿರದು. ಮನಸ್ಸಿದ್ದರೆ ಮಾರ್ಗವಿದೆಯಂತೆ. ಮನಸ್ಸಿದ್ದರೆ ದುಡಿಯಲು ಅವಕಾಶವಿಲ್ಲದಿಲ್ಲ. ಕೈಗೊಂಡ ಕೆಲಸದಲ್ಲಿ ಎಲ್ಲಿಯ ತನಕ ಮನಃಪೂರ್ವಕ ದುಡಿಯುವ ಪ್ರವೃತ್ತಿ ಬೆಳೆಯುವುದಿಲ್ಲವೋ ಅಲ್ಲಿಯ ತನಕ ದುಡಿಯುವವನಿಗೆ ನೆಮ್ಮದಿ ದೊರಕದು. ದೇಶದ ಏಳಿಗೆಯಾಗದು. ಸೋಮಾರಿಗಳಾಗಿ ಜೀವಗಳ್ಳರೆನಿಸಿದ, ವೈಗಳ್ಳರಾಗಿರುವ ನೂರಾರು ಜನರ ಬದಲು ತೊಡಗಿದುದನ್ನು ಕೊನೆತನಕ ಈಡೇರಿಸುವ ಕೆಚ್ಚೆದೆಯ ಮೂರು ಜನ ಲೇಸು. ಕಡುದುಡಿಮೆಯನ್ನೇ ದೇವರೆಂದು ಬಗೆದಾಗ, ಬೆವರ ನೀರನ್ನೇ ಗಂಗಾಸ್ನಾನವೆಂದು ತಿಳಿದಾಗ ಸೊಗ ಸಂತಸದ ವರದಾನವಾಗದಿರದು.

ಹೀಗೆ ದೇಶದ ನವಯುವಕರು ಸ್ವಾವಲಂಬಿಗಳಾಗಲು ಹಾತೊರೆದು ನಿರುದ್ಯೋಗವನ್ನು ನಿವಾರಿಸಬೇಕಾದ ಆವಶ್ಯಕತೆ ಈ ಹಿಂದಿಗಿಂತಲೂ ಇಂದು ಹೆಚ್ಚಿದೆ.

● ●

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

Gram; VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಹರಿದಾಸರ ಗೀತೆಗಳ ವಿಚಾರ

(ವಿಚಾರಾತ್ಮಕ)

[ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು.]

ಹರಿದಾಸರೆಂದರೆ ವೈಷ್ಣವರೆಂಬ–ಭಾಗವತ ಪಂಥದ ಜನರೆಂದು ಮೌಲಿಕವಾಗಿ ತಿಳಿಯುತ್ತದೆ. ಪರಂತು ಈ ಹೆಸರು ಕೇವಲ ಮಾಧ್ವ ಪಂಥದಲ್ಲಿದ್ದು, ದೇಶೀಯ (ಕನ್ನಡ) ಭಾಷೆಯಲ್ಲಿ ಗೀತೆಗಳನ್ನು ಬರೆದ, 'ವ್ಯಾಸಕೂಟ'ದಿಂದ ಬೇರೆಯಾದ, 'ದಾಸಕೂಟ'ದವರಿಗೇನೇ ಹೇಳುವ ರೂಢಿಯಾಗಿದೆ! ಈ ಹೆಸರಿಗೆ–ಈ ಬಗೆತಕ್ಕೆ–ತತ್ಪೂರ್ವದ ಕೃತಿಗಳೂ, ಉಲ್ಲೇಖಗಳೂ ಮೂಲ—ಆಧಾರವಾಗಿರುವುವೆಂಬುದನ್ನು ಮರೆಯಲಾಗದು. ಆ ಮೇರೆಗೆ, ವ್ಯಾಸ ಕೂಟವೆಂದರೆ ಸಂಸ್ಕೃತಭಾಷೆಯಲ್ಲಿ ಹರಿಭಕ್ತಿಗೀತೆಗಳನ್ನು (ಹಾಗೂ ತತ್ತ್ವವಿಚಾರಗಳನ್ನು) ಬರೆದವರೆಂದೂ; 'ದಾಸಕೂಟ'ದವರೆಂದರೆ ಕನ್ನಡದಲ್ಲಿ ಹರಿಗೀತೆಗಳನ್ನು (ಮತ್ತು ತಾತ್ತ್ವಿಕ ಕೃತಿಗಳನ್ನು) ರಚಿಸಿದವರೆಂದೂ ತಿಳಿಯುವ—ವಿಭಜಿಸುವ—ಹೆಸರಿಸುವ—ರೀತಿ ಪ್ರಾಚೀನವಾಗಿಲ್ಲ! ಆ ಹೆಸರಿಕೆಗಳು ನಡುಗಾಲದಲ್ಲಿ ನಡುಗಾಲದಿಂದ ಬಳಕೆಗೆ ಬಂದುವಷ್ಟೆ!) ಅಂತೆ, ಹರಿದಾಸರ ಗೀತೆಗಳೆಂದರೆ, ಸಂಸ್ಕೃತ ಹಾಗೂ ದೇಶೀಯ (ಕನ್ನಡ, ಇ.) ಭಾಷೆಗಳಲ್ಲಿ ರಚಿಸಿದವುಗಳೆಲ್ಲ ಸೇರುತ್ತವೆ!

ಸಂಸ್ಕೃತವು ಸಂಪೂರ್ಣವಾದುದು, ಪ್ರಾಚೀನವಾದುದು; ಅದರಲ್ಲಿ ಬರೆದ ಕೃತಿಗಳು ದೇವರುಗಳಿಗೆ ಅತ್ಯಂತ ಪ್ರಿಯವಾದುವೆಂಬ ವಿಚಾರ ಪ್ರಾಚೀನದಿಂದಲೂ ಭಾರತೀಯರೆಲ್ಲರಲ್ಲಿ ಸ್ವೀಕೃತವಾಗಿತ್ತು. ಆ ಪೂಜ್ಯ ಭಾಷೆಯೊಂದಿಗೆ ಪ್ರಾಕೃತಾದಿಗಳ ಬೆದರಿಕೆಯಿಂದಲೇ ಪ್ರಾಚೀನ ಗದ್ಯ–ಪದ್ಯ–ಚಂಪೂರೂಪದ ಸಾಹಿತ್ಯ ಕೃತಿಗಳು ರಚಿತವಾಗಿವೆಯೆಂಬುದನ್ನು ಇಲ್ಲಿ ನೆನೆಯಬೇಕು ಅಂದರೆ, ಸಂಸ್ಕೃತದಂತೆ ಪ್ರಾಕೃತಾದಿಗಳೂ ಸಮಾದರಣೀಯಗಳೆಂದು ಜನರಲ್ಲಿ ಪ್ರಚುರಗೊಂಡವು. ಆ ತರದಲ್ಲೆ, ದೇಶೀಯ ಭಾಷೆಗಳಲ್ಲೂ ಕೃತಿಗಳನ್ನು ರಚಿಸಿದರೆ; ನಿತ್ಯ, ನೈಮಿತ್ತಿಕ, ಕಾಮ್ಯಗಳಲ್ಲಿ ಬಳಸುವಲ್ಲಿ (ಹಾಗೂ ಸಾಮಾನ್ಯ ಜನತೆಯು ನಿತ್ಯತಃ ಹೇಳುವಲ್ಲಿ) ಅವಕಾಶವಿದೆಯೆಂದು ರಚನೆಗೊಂಡವು.

ಕನ್ನಡದ ಕಾವ್ಯಗಳಲ್ಲಿ ಕಾಣುವ ದೇವತಾಸ್ತುತಿಗಳೂ, ಗ್ರಂಥಾಂತರದ ದೇವತಾಸ್ತುತಿಗಳೂ ಬಹುಶಃ ಸಾಮಾನ್ಯ ಜನರಿಗೆ ನಿತ್ಯಶಃ ಹಾಡಲು ತಕ್ಕುವೆಂದೇ ರಚಿತವಾಗಿರಬೇಕು. ಅಲ್ಲವೆ, ಅಂತಹವನ್ನು ಜನರು ಆದರದಿಂದ ನಿತ್ಯವೂ ಬಾಯ್ದೆರೆ ಹೇಳಲು ತೊಡಗಿರಬೇಕು. (ತಮಿಳಿನಲ್ಲಿ ಬರೆದ, ಆಳ್ವಾರ್ ಮೊದಲಾದವರ ಭಕ್ತಿಗೀತೆಗಳೂ ಇದೇ ಮಾದರಿಯಲ್ಲಿ ಬರೆದುವು, ಜನಾದರಣೀಯವಾದುವು ಎನ್ನಲಡ್ಡಿಯಿಲ್ಲ!) ಪ್ರಕೃತ ವಿಷಯವೆಂದರೆ, ಹರಿದಾಸರ ಗೀತೆಗಳ ಮೂಲ—ಪ್ರಾಚೀನ—ವಿಚಾರವಾಗಿ ಕೆಲವು ಉಲ್ಲೇಖಗಳನ್ನು ಸಂಕಲಿಸಿ, ಸಂಸ್ಕೃತದಿಂದ ಕನ್ನಡಕ್ಕೆ ಅವು ಹರಿದು ಬಂದ ರೀತಿಯನ್ನು ತುಸ ವಿಶ್ಲೇಷಿಸಿ, ವಿವರಿಸುವುದಾಗಿದೆ. ಕನ್ನಡದಲ್ಲಿ ಹರಿಗೀತೆಗಳನ್ನು ಬರೆಯಲು ಇಂತಹವು ಆದರ್ಶಗಳಾಗಿವೆಯೆಂಬುದಕ್ಕೆ ಇವು ಸಾಕ್ಷಿಗಳಾಗಿವೆ.

೧) **ಶ್ರೀ ಶಂಕರಾಚಾರ್ಯರು** ಕೇರಳದ ಕಾಲಡಿ(ಟಿ)ಯಲ್ಲಿ ಜನಿಸಿದರೂ, ಭಾರತದಲ್ಲೆಡೆ ಅವರು ಸಂಚರಿಸಿದ್ದರು. ಆ ಮೇರೆಗೆ ಬೇರೆಬೇರೆಡೆ ಅವರು ಸ್ಥಾಪಿಸಿದ 4 ಮಠಗಳ ಉಲ್ಲೇಖಗಳಿವೆ; ಕೆಲವೆಡೆ ಅವರು ಪ್ರತಿಷ್ಠಾಪಿಸಿದ ದೇವ–ದೇವಿಯರ ಗುಡಿಗಳ ಬಗೆಗೆ ಹೇಳಿಕೆಗಳೂ ಇವೆ.

ಶ್ರೀ ಶಂಕರಾಚಾರ್ಯರು ಕ್ರಿಸ್ತಾಬ್ದ 8ನೆ ಶತಕದಲ್ಲಿದ್ದರು. ಅವರು ಪ್ರಸ್ಥಾಪಿಸಿದ ಮತಗಳು ಆರು! ಅದುಕಾರಣ, ಅವರಿಗೆ 'ಷಡ್ ದರ್ಶನಾಚಾರ್ಯ'ರೆಂಬ ಬಿರುದು' ಇದೆ.

ಆ ಆರು ಮತ (ದರ್ಶನ)ಗಳಲ್ಲಿ ವಿಷ್ಣು ಪಾರಮ್ಯವೂ—ವೈಷ್ಣವ ತತ್ತ್ವವೂ ಒಂದಾಗಿದೆ. ಇದಕ್ಕೆ ಅನುಬಂಧವಾಗಿ, ಶ್ರೀ ಶಂಕರಾಚಾರ್ಯರು ರಚಿಸಿದ ಶ್ರೀ ವಿಷ್ಣುವಿನ ಸ್ತೋತ್ರಾದಿಗಳು ಕಾಣುತ್ತವೆ: (೧) 'ಅಚ್ಯುತಾಚ್ಯುತ ಹರೇಪರಮಾತ್ಮನ್ ರಾಮ ಕೃಷ್ಣ ಪುರುಷೋತ್ತಮ ವಿಷ್ಣೋ || ವಾಸುದೇವ ಭಗವನ್ನನಿರುದ್ಧ ಶ್ರೀಪತೇ ಶಮನು ದುಃಖಮಶೇಷಂ' ಎಂದು ಮೊದಲಾದ ಎಂಟು ಪದ್ಯಗಳ ಸ್ತುತಿಯು ಬಲು ರಮಣೀಯವದೆ (ಈ ಅಷ್ಟಕದಲ್ಲಿ ಕೊನೆಯ ಸಾಲು ಪುನರಾವರ್ತಿಯಾಗಿ—ಒಂದೇ ತರನಾಗಿದ್ದು– ಭಾವುಕರಿಗೆ ಹೃದ್ಯವಾಗಿದೆ).

೨) ಅಚ್ಯುತಾಷ್ಟಕವೆಂಬ ಇನ್ನೊಂದು ಸ್ತುತಿಯಲ್ಲಿ ತಿಳಿಯಾದ ನುಡಿಗಳಿದ್ದು ಆ ಹೆಸರು ಚೆನ್ನಾಗಿ ಅದಕ್ಕೆ ಒಪ್ಪುತ್ತದೆ. "ಅಚ್ಯುತಂಕೇಶವಂರಾಮನಾರಾಯಣಂಕೃಷ್ಣ ದಾಮೋದರಂ ವಾಸುದೇವಂ ಹರಿಂ| ಶ್ರೀಧರಂ ಮಾಧವಂ ಗೋಪಿಕಾವಲ್ಲಭಂ ಜಾನಕೀನಾಯಕಂ ರಾಮಚಂದ್ರಂ ಭಜೇ" ಎಂಬುದಾಗಿ ತೊಡಗಿದ ಈ ಸ್ತುತಿಯಲ್ಲಿ ರಾಮ-ಕೃಷ್ಣರ ದಿವ್ಯ ಚರಿತ್ರೆಗಳನ್ನು ಸ್ಮರಣೆಯೇ ಹೆಚ್ಚಾಗಿದೆ.

೩) 'ಷಟ್ಪದಿ'ಯೆಂಬ ಆರು ಪದ್ಯಗಳಲ್ಲಿ ದೇವತಾ ಸ್ತುತಿಯೊಂದಿಗೆ– ಭಾವುಕತೆಯೂ – ತಾತ್ತ್ವಿಕವೂ ಬೆರಸಿದೆ.

ಇದರಲ್ಲಿಯ ವೃತ್ತವೂ ಬೇರೆಯಾಗಿದೆ. 'ಅವಿನಯಮಪನಯ ವಿಷ್ಣೋ, ದಮಯ ಮನಃ ಶಮಯ ವಿಷಯಮೃಗತೃಷ್ಣಾಂ| ಭೂತದಯಾಂ ವಿಸ್ತಾರಯ, ತಾರಯ ಸಂಸಾರ ಸಾಗರತಃ' ಎಂದು ಮೊದಲಾಗುವ ಈ ಸ್ತುತಿಯಲ್ಲಿ ಹಿತೋಪದೇಶವೂ ಅಡಗಿದೆ. 'ಸತ್ಯಪಿ ಭೇದಾಪಗಮೆ ನಾಥ ತವಾಹಂ, ನ ಮಾಮಕೀನ ಸ್ತ್ವಂ, ಸಾಮುದ್ರೋಹಿ ತರಂಗಃ, ಕ್ವಚನ ಸಮುದ್ರೋ ನ ತಾರಂಗಃ ಎಂಬಲ್ಲಿ 'ಬಿಂಬ–ಪ್ರತಿಬಿಂಬ' ನ್ಯಾಯದಂತೆ ದೇವ–ಜೀವಗಳ ಸಂಬಂಧವೂ ಸೂಚ್ಯವದೆ. 'ಮಮೈವಾಂಶೋ ಜೀವಲೋಕೇ ಜೀವಭೂತಃ' ಎಂಬ ಗೀತೆಯಂತೆ, ದೇವಾಂಶನೇ ಜೀವನಲ್ಲದ, ಜೀವಾಂಶವು ದೇವನಲ್ಲೆಂದು ಇಲ್ಲಿ ಸ್ಪಷ್ಟಿಸಲಾಗಿದೆ. 'ದೇವ ಜೀವರ ಸಮತೆ'ಯ ಬಾಹ್ಯಾರ್ಥವು ಇಲ್ಲಿ ತೀರಾ ಕೈಬಿಡಲಾಗಿದೆ! ಶಂಕರಾಚಾರ್ಯರ ಇತರ ಕೃತಿಗಳ ವಾಕ್ಯಗಳಲ್ಲೂ ಇಂತಹ ವಿಭೇದ ವಚನಗಳಿವೆ!

"ನಾರಾಯಣ ಸ್ತೋತ್ರ"ವೆಂಬುದು 'ಧ್ರುವ (ಪಲ್ಲವಿ)' ಹಾಗೂ ಮೂವತ್ತು ನೊಲ್ಲುಗಳುಳ್ಳ ಹಾಡು 'ಶ್ರೀ ಮಚ್ಛಂಕರಾಚಾರ್ಯ ವಿರಚಿತ"ವೆಂದು ಮುದ್ರಿತವದೆ. (ಈ ಹಾಡಿನ ಪಲ್ಲವಿಯೇ ಪ್ರತಿ ನೊಲ್ಲಿನ ಉತ್ತರಾರ್ಧವದೆ.) ಆದರೆ ಈ ಸ್ತುತಿಯ ಕೊನೆಗೆ 'ಭಾರತಿಯ ತಿವರಶಂಕರ'ನೆಂದಿರುವುದರಿಂದ; ಇದು ಈ ಮೊದಲಿನವುಗಳಂತೆ ಆದ್ಯ ಶಂಕರಾಚಾರ್ಯರ ಸತ್‌ಕೃತಿಯಾಗಿಲ್ಲೆಂದು ಕಾಣುತ್ತದೆ [ನಾರಾಯಣ ನಾರಾಯಣ ಜಯ ಗೋವಿಂದ ಹರೇ ನಾರಾಯಣ ನಾರಾಯಣ ಜಯಗೋಪಾಲ ಹರೇ| ಎಂಬುದು ಇದರ ಪಲ್ಲವಿ].

೪. ವಿಷ್ಣುವಿನ 'ಪಾದಾದಿ ಕೇಶ ಪರ್ಯಂತ' ಅಂಗಾಗಗಳ, ಆಯುಧಾದಿಗಳ ವರ್ಣನೆಯುಳ್ಳ, ೫೧ ಪದ್ಯಗಳುಳ್ಳ ಬಲು ಚೆನ್ನಾದ ಸ್ತುತಿಯಿದೆ.

'ಲಕ್ಷ್ಮೀಭರ್ತುಃ ಭುಜಾಗ್ರೇ ಕೃತವಸತಿ'ಯಾದ ಚಕ್ರಾಯುಧದ ವರ್ಣನೆಯಿಂದ ಈ ಸ್ತೋತ್ರ ಪ್ರಾರಂಭವಾಗಿದೆ, [ಶ್ರೀ ರಾಮ, ಕೃಷ್ಣಾದಿ ವಿಷ್ಣುವಿನ ಅವತಾರಗಳ-ಪ್ರಾದುರ್ಭಾವಗಳ ಸ್ತೋತ್ರವಿದೆಯೋ? ಇಲ್ಲವೋ? ಹೀಗೇ ಪರಿಶೀಲಿಸಬೇಕಾಗಿದೆ). ಅಂತೂ, ಶ್ರೀ ಶಂಕರಾಚಾರ್ಯರು ರಚಿಸಿದ ಈ ಮೇಲಿನ ನಾಲ್ಕು ಸ್ತುತಿಗಳಲ್ಲಿ ವಿಷ್ಣುವಿನ ಮಹಿಮೆ ಸರಸವಾಗಿ ಹೇಳಿದೆ. ಭಾವುಕರು ನಿತ್ಯವೂ ಇಂತಹ ಸ್ತುತಿ ಹೇಳುತ್ತಿದ್ದರೆ, ಮನಸ್ಸಿಗೆ ಹಿತವಾಗಿ, 'ಸಚ್ಚಿದಾನಂದ' ರೂಪನು ಅನುಗ್ರಹಿಸುವನೆಂಬುದು ನಿಸ್ಸಂದೇಹ! ಶ್ರೀ ಶಂಕರಾಚಾರ್ಯರಚಿತ ಈ ಸ್ತುತಿಗಳೇ ಹರಿಭಕ್ತಿಗೀತೆಗಳ ಸಂಸ್ಕೃತ ಭಾಷಾ ರಚನೆಗೆ ಮೌಲಿಕಗಳು; ಆದರ್ಶಗಳು ಎನ್ನಲಡ್ಡಿಯಿಲ್ಲ!

೨. ಶ್ರೀ ಶಂಕರಾಚಾರ್ಯರ ಶಿಷ್ಯರಾದ ಹಸ್ತಾಮಲಕಾಚಾರ್ಯರು 'ರಜತ ಪೀಠಪುರಾ'ದಿ ಕ್ಷೇತ್ರಗಳಲ್ಲಿ 'ಕೃಷ್ಣಾದಿ' ಪ್ರತಿಷ್ಠೆ ಮಾಡಿದರೆಂದು 'ಆನಂದಗಿರಿ'ಯು ಬರೆದ "ಶಂಕರ ವಿಜಯ"ದಲ್ಲಿದೆ. ಉಡುಪಿಯಲ್ಲಿ ಶ್ರೀ ಮಧ್ವಾಚಾರ್ಯರು ಬಾಲಕೃಷ್ಣಮೂರ್ತಿಯನ್ನು ತಂದು ಪ್ರತಿಷ್ಠಾಪಿಸುವ ಮೊದಲೇ,ಈ ಮೇಲೆಂದ'ವೇಣುಗೋಪಾಲನ' ವಿಗ್ರಹವು ಇದ್ದಿತು.ಅದುಇಂದೀಗಲೂ ಕೃಷ್ಣನ ಗುಡಿಯಲ್ಲಿಯೆ— ಪೂಜಾದಿಗಳಿಲ್ಲದೆ–ಸುಮ್ಮನಿರಿಸಲಾಗಿದೆಯೆಂದು ಕೇಳುತ್ತದೆ. ಕೃಷ್ಣ ಮಂದಿರದ ಪೂರ್ವದಿಕ್ಕಿನ ಬಾಗಿಲೊಳಗೆ ಪ್ರವೇಶಿಸುವಾಗ (ವಿಜಯದಶಮಿಯೆಂದು 'ಕದಿರು' ತರುವಾಗ ಒಮ್ಮೆಗೆ ಈ ಬಾಗಿಲು ತೆರೆಯುವುದಂತೆ), ಈ ವಿಗ್ರಹ ಕಾಣಬಹುದು. ದ. ಕ. | ಜಿಲ್ಲೆಯಲ್ಲಿರುವ ಪ್ರಾಚೀನ ವಿಷ್ಣು ಮಂದಿರಗಳಲ್ಲಿ ವಿಷ್ಣುವಿನ ಅವತಾರಗಳ ವಿಗ್ರಹಗಳಲ್ಲಿ—ಉಡುಪಿಯಲ್ಲಿ ಹಸ್ತಾಮಲಕಾಚಾರ್ಯರು ನಿಲ್ಲಿಸಿದ ಕೃಷ್ಣ (ವೇಣುಗೋಪಾಲ ನ ವಿಗ್ರಹವೇ ಪ್ರಪ್ರಾಚೀನವಾಗಿದೆ. ಅಂದರೆ, ಹರಿಭಕ್ತಿಯ ಪ್ರಸಾರವೂ ಎಲ್ಲೆಡೆಯಾಗುವಂತೆ, ಶ್ರೀ ಶಂಕರಾಚಾರ್ಯರು ಸ್ತೋತ್ರಗಳನ್ನು ರಚಿಸಿದ್ದಂತೆ; ಅವರ ಶಿಷ್ಯರು ದೇವಾಲಯಗಳನ್ನು ಸ್ಥಾಪಿಸಿದರೆಂದು ತಿಳಿಯಬಹುದು. ಅಂದ ಮೇಲೆ, ಇಲ್ಲೂ (ಕನ್ನಡದಲ್ಲಿ) ಹರಿಭಕ್ತರು ಅನೇಕರಿದ್ದರು; ಹರಿಗೀತೆಗಳನ್ನು ದೇವರ ಅನುಗ್ರಹಕ್ಕಾಗಿ ಪಠಿಸುತ್ತಿದ್ದರೆಂದೂ ಹೇಳಲಡ್ಡಿಯಿಲ್ಲ! ಅವು ಹೆಚ್ಚಾಗಿ ಸಂಸ್ಕೃತ ಭಾಷೆಯಲ್ಲಿ ಬರೆದುವಾಗಿದ್ದರೂ ಕೆಲವಾದರೂ ದೇಶಿಯ ಭಾಷೆ (ಕನ್ನಡ, ಇ) ಗಳಲ್ಲಿ ಬರೆದುವೂ ಇದ್ದಿರಬೇಕು. ಇತರತ್ರ (ತಮಿಳು, ಇ) ನಾಡುಗಳಲ್ಲಿ ಆಯಾ ಪ್ರಾಂತಿಯ ಭಾಷೆಗಳಲ್ಲಿ ದೇವರ ಸ್ತುತಿಗಳಿದ್ದಂತೆ; ಕನ್ನಡ ಜನರಲ್ಲಿ (ಅವರ ಭಾಷೆಯಲ್ಲೂ) ಪರಂಪರೆಯಾಗಿ ಬಳಕೆಯಿದ್ದ ಗೀತೆಗಳು ಇರಲೇಬೇಕಾಗಿವೆ. ಅವೆಲ್ಲಾ ಇಂದಿಗೆ ಲಭ್ಯವಿಲ್ಲೆಂದೊಡನೆ, ಅವು ಇರಲೇ ಬಾರದೆಂದಿಲ್ಲ! ಇನ್ನಾದರೂ ತಮ್ಮತನದಿಂದ ಅಂತಹ ಸತ್ಕೃತಿಗಳ—ಸದ್ವಿಚಾರಗಳ ಸಂಗ್ರಹಕ್ಕೆಳಸಿದಲ್ಲಿ ನಮ್ಮ ಪ್ರಾಚೀನ ವಿಚಾರ-ಕೃತಿ ತಿಳಿಯಲು ಸಾಧ್ಯವಿದೆ! ಈ ಬಗೆಯ ಊಹನೆಗೆ ಇನ್ನು ಮುಂದೆ ಬರೆದ ಕೆಲವು ವಿಷಯಗಳು ಉಪಷ್ಟಂಭಕವಾಗ ಬಲ್ಲುವು!

೩) ಶ್ರೀರಾಮಾನುಜಾಚಾರ್ಯರ ಕಾಲಕ್ಕಿಂತ ಪೂರ್ವದಲ್ಲಿ ಕರ್ನಾಟಕದಲ್ಲಿ ಭಾಗವತ ಸಂಪ್ರದಾಯವು ಪ್ರಚಲಿತವಿತ್ತೆಂದು ತಿಳಿಯಬಹುದು. ಇವರಲ್ಲಿ ಪ್ರಭೇದಗಳಿಷ್ಟಿದ್ದವೆಂಬುದನ್ನು ಎಣಿಸಲು ಬರುವುದಿಲ್ಲ. ಲಕ್ಕುಂಡಿಯ ಶಾಸನಗಳಲ್ಲಿ ಲೊಕ್ಕಿಗೊಂಡಿ ಮಹಾಗ್ರಹಾರದ ಸಾವಿರ ಮಹಾಜನರು 'ವೈಷ್ಣವ ಗೀತಿಕಾ ಮನೋಹರ'ರಾಗಿದ್ದರೆಂದು ಹೇಳಿದೆ. ಇದರಿಂದ, ಭಗವದ್ಗೀತೆ

(ಒಂಭತ್ತನೇ ಪುಟ ನೋಡಿರಿ)

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!
ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಷನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=
ಐಡಿಯಲ್ ಫೋಟೋ ಹೌಸ್ PHONE: 3131
ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1
Tele: GOLDKING Estd: 1947 Phone: 3242 Res: 3272

ಗಜೇಂದ್ರ ಮೋಕ್ಷದ ಗಂಡಕ್ ನದಿ

(ಐದನೇ ಪುಟದಿಂದ)

ನೀರಾವರಿಯನ್ನು ಒದಗಿಸಲು ಸಾಧ್ಯವಾಗಲಿದೆ. ಚಂಪಾರಣ್ಯದ ರೈತರು ಅಲ್ಪಕಾಲದಲ್ಲಿ ಸುಮಾರು ಆರುನೂರು ಗ್ರಾಮ ಕಾಲುವೆಗಳನ್ನು ಅಗೆದಿದ್ದಾರೆ. ಹೊಸ ಕಾಲುವೆಗಳನ್ನು ತೋಡಲು ಹಾಗೂ ಅವುಗಳಿಂದ ಪ್ರಯೋಜನವನ್ನು ಪಡೆಯಲು ಪಂಚಾಯತ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗಿದೆ. ಉತ್ತರ ಪ್ರದೇಶದ ದಿವೋರಿಯೂ ಜಿಲ್ಲೆಯಲ್ಲಿ ಗಂಡಕ್ ನದಿಯ ಪಶ್ಚಿಮ ದಂಡೆಯ ಕಾಲುವೆ ಸುಮಾರು 60 ಸಾವಿರ ಎಕರೆಗಳಷ್ಟು ಭೂಮಿಗೆ ನೀರುಣ್ಣಿಸಿದೆ.

ಕಾಲುವೆಗಳ ಜಾಲ

ಗಂಡಕ್ ನದಿಯ ಅಣೆಕಟ್ಟಿನ ಪೂರ್ವ ದಂಡೆಯ ಕಾಲುವೆಗಳಿಂದ ಬಿಹಾರದ ಚಂಪಾರಣ್ಯ, ದರಭಾಂಗ್ ಮತ್ತು ಮುಜಫರಪುರ ಜಿಲ್ಲೆಗಳ 17.54 ಲಕ್ಷ ಎಕರೆಗಳಿಗೆ ಮತ್ತು ನೇಪಾಳಿನ ಪರಸ, ಬಾರ್ ಮತ್ತು ರಾವುತ ಹಾತ್ ಜಿಲ್ಲೆಗಳ ಸುಮಾರು 1.03 ಲಕ್ಷ ಎಕರೆಗಳಿಗೆ ನೀರಾವರಿ ಸೌಲಭ್ಯ ದೊರೆಯಲಿದೆ. ಸುಮಾರು 155 ಮೈಲುಗಳಷ್ಟು ಉದ್ದವಾಗಿರುವ ಪೂರ್ವದಂಡೆಯ ಈ ಕಾಲುವೆಗೆ ತಿರಹೂತ್ ಕಾಲುವೆಯೆಂದು ಕರೆಯುತ್ತಾರೆ. ತಿರಹೂತಿನ ಪ್ರಧಾನ ಕಾಲುವೆಯಿಂದ ಪ್ರಾರಂಭವಾಗುವ ದೋಣಿ ಕಾಲುವೆ 61 ಮೈಲಿಗಳ ವರೆಗೆ ನೇಪಾಳಿನ ಪರ್ವತ ಪ್ರದೇಶಗಳ ಮೂಲಕ ಹಾಯ್ದು ಮುಂದೆ ಮುಂದೆ ಹೋಗುತ್ತದೆ. ನೇಪಾಳ ಪ್ರದೇಶವನ್ನು ಪ್ರವೇಶಿಸಿದ ಬಳಿಕ ಈ ಕಾಲುವೆಯು ನೇಪಾಳಿನ ಪೂರ್ವದಂಡೆಯ ಕಾಲುವೆಯಾಗಿ ಮಾರ್ಪಡುತ್ತದೆ. ಮುಂದೆ 51 ಮೈಲಿಗಳ ಅಂತರವನ್ನು ಕ್ರಮಿಸುತ್ತದೆ. ಈ ಕಾಲುವೆಗೆ ಸಂಬಂಧಿಸಿದ ನಿರ್ಮಾಣಕಾರ್ಯವು ಬಹುಮಟ್ಟಿಗೆ ಪೂರ್ಣಗೊಂಡಿದ್ದು ಮುಂದಿನ ಖಾರೀಫ್ ಸುಗ್ಗಿಯಿಂದ ಪೈರುಗಳಿಗೆ ನೀರು ದೊರೆಯಲಿದೆ. 61 ಮೈಲಿಗಳಷ್ಟು ಉದ್ದವಾಗಿರುವ ಡೋನ್ ಕಾಲುವೆಯ 46 ಮೈಲಿಗಳಷ್ಟು ವಿಸ್ತೀರ್ಣ ಈಗಾಗಲೇ ಪೂರ್ಣಗೊಂಡಿದ್ದು, ಕಾರ್ಯ ಪ್ರಾರಂಭ ಮಾಡಿದೆ. ಗಂಡಾಳ್ ಸೇತುವೆಯಿಂದ ಪ್ರಾರಂಭವಾಗಿ 85 ಮೈಲು ದೂರಹೋಗುವ ತಿರಹೂತ್ ಕಾಲುವೆಯ ನಿರ್ಮಾಣ ಕಾರ್ಯವು ಪ್ರಗತಿಪರವಾಗಿ ನಡೆದಿದೆ. ಗಂಡಕ್ ನದಿಯ ಪಶ್ಚಿಮ ದಂಡೆಯ ಕಾಲುವೆಯು 120 ಮೈಲು ಉದ್ದವಾಗಿದ್ದು ಅದರ ನಿರ್ಮಾಣ ಕಾರ್ಯವು ಮುಗಿದಿದೆ. ಈಗ ಉತ್ತರ ಪ್ರದೇಶದಲ್ಲಿ ದಿವೋರಿಯೂ ಕಾಲುವೆಯ ಮೂಲಕ ಬಹುತೇಕ ಪ್ರದೇಶಕ್ಕೆ ಈ ಕಾಲುವೆ ನೀರನ್ನು ಒದಗಿಸುತ್ತದೆ. ನೇಪಾಳದಲ್ಲಿ 11ವರೆ ಮೈಲಿಗಳು ಹಾಗು ಉತ್ತರ ಪ್ರದೇಶಗಳಲ್ಲಿ 68 ಮೈಲಿಗಳ ವರೆಗೆ ಮುಂದೆ ಸಾಗಿದ ನಂತರ ಪಶ್ಚಿಮ ದಂಡೆಯ ಕಾಲುವೆ ಸರಣ್ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಕಾಲುವೆಯ ನೇಪಾಳದ ವಿಭಾಗ ಈಗಾಗಲೇ ಪೂರ್ಣಗೊಂಡಿದೆ. ಇದರಿಂದ ಪ್ರತ್ಯೇಕ ಶಾಖೆಯೊಂದು ಹೊರಟು ಪಶ್ಚಿಮ ನೇಪಾಳದ ಭೈರವ ಜಿಲ್ಲೆಯ ಸುಮಾರು 40,000 ಎಕರೆ ಜಮೀನಿಗೆ ನೀರನ್ನು ಪೂರೈಸಲಿದೆ.

ಜಲವಿದ್ಯುತ್ ಕೇಂದ್ರ

ಭಾರತದ ಎಂಜಿನಿಯರರು ಮತ್ತು ತಂತ್ರಜ್ಞರು ಸುರಜ್‌ಪುರ ಜಲವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯವನ್ನು 1972ರೊಳಗಾಗಿ ಪೂರ್ಣಗೊಳಿಸಲು ನಿಷ್ಠೆಯಿಂದ ಶ್ರಮಿಸುತ್ತಿದ್ದಾರೆ. ತಲಾ 5,000 ಕಿಲೋವಾಟ್ ಸಾಮರ್ಥ್ಯವುಳ್ಳ ಮೂರು ವಿದ್ಯುಚ್ಛಕ್ತಿ ಘಟಕಗಳು ಇರುವುವು, ಈ ಕೇಂದ್ರದ ಸ್ಥಾಪಿತ ಉತ್ಪಾದನಾ ಸಾಮರ್ಥ್ಯ 15 ಮೆಗವಾಟ್‌ಗಳು. ಸುರಜಪುರ ವಿದ್ಯುಚ್ಛಕ್ತಿ ಕೇಂದ್ರದ ಸಿವಿಲ್ ಕೆಲಸ ಕಾರ್ಯಗಳು 100ಕ್ಕೆ 80ರಷ್ಟು ಪೂರ್ಣಗೊಂಡಿವೆ. 3 ಕೋಟಿ ರೂಪಾಯಿ ಬೆಲೆಯ ಟರ್ಬೈನ್ ಮತ್ತು ಜನರೇಟರ್ ಯಂತ್ರಗಳು ಈಗಾಗಲೇ ವಿದ್ಯುತ್ ಕೇಂದ್ರಕ್ಕೆ ಬಂದಿವೆ. ಈ ಕೇಂದ್ರದ ಒಟ್ಟು ವೆಚ್ಚ 5 ಕೋಟಿ ರೂಪಾಯಿ ಎಂದು ಅಂದಾಜು ಮಾಡಲಾಗಿದೆ. ನೇಪಾಳದಲ್ಲಿ ನದಿ ಕಾಲುವೆಗಳನ್ನು ನಿರ್ಮಿಸಲು ತಗಲುವ ವೆಚ್ಚವನ್ನು ಭಾರತ್ ಸರ್ಕಾರವೇ ವಹಿಸಿಕೊಂಡಿದೆ. ಈ ಕೇಂದ್ರದ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಅದೇ ನೋಡಿಕೊಳ್ಳುವುದು. ವಿದ್ಯುಚ್ಛಕ್ತಿ ಕೇಂದ್ರದ ಒಟ್ಟು ಉತ್ಪಾದನಾ ಸಾಮರ್ಥ್ಯದ ಶೇಕಡ 60 ರಷ್ಟು ಕಾರ್ಯಗತವಾದ ಕೂಡಲೇ ಭಾರತ ಸರ್ಕಾರವು ಈ ವಿದ್ಯುಚ್ಛಕ್ತಿ ಕೇಂದ್ರವನ್ನು ನೇಪಾಳಿಗೆ ವಹಿಸಿಕೊಡುವುದು. ವಿದ್ಯುಚ್ಛಕ್ತಿ ಪೂರೈಕೆ ಆರಂಭವಾದ ಕೂಡಲೇ ನೇಪಾಳಿನ ಜನಜೀವನದಲ್ಲಿ ಅದ್ಭುತ ಪರಿವರ್ತನೆಯಾಗಲಿದೆ. ಗಂಡಕ್ ನದಿಯ ಕಾಲುವೆಗಳಿಂದ ನೇಪಾಳಿನಲ್ಲಿ ವಾರ್ಷಿಕ ಬೇಸಾಯ ಉತ್ಪಾದನೆ ಸುಮಾರು 1 ಕೋಟಿ ರೂಪಾಯಿಗಳಷ್ಟು ಹೆಚ್ಚುವುದೆಂದು ನಿರೀಕ್ಷಿಸಲಾಗಿದೆ ಇದರಿಂದ ನೇಪಾಳದ ಆರ್ಥಿಕ ಭಾಗ್ಯೋದಯ ಆರಂಭವಾಗಲಿದೆ.

●●

ಖಗೋಳ ವಿಜ್ಞಾನ ಜನಕ: ಆರ್ಯ ಭಟ್ಟ

ಭೂಮಿಯ ಆಕಾರ ಯಾರಿಗೆ ತಿಳಿಯದು? ಅದು ಗುಂಡಾಗಿದೆ ಎಂದು ಚಿಕ್ಕ ಮಗು ಸಹಾ ಹೇಳಬಲ್ಲದು. ಪೃಥ್ವಿ ಚೆಂಡಿನಾಕಾರದಲ್ಲಿರುವುದನ್ನು ಪ್ರಥಮ ಬಾರಿಗೆ ಪಾಟ್ನಾದ ಖಗೋಳವಿಜ್ಞಾನಿಯಾದ ಆರ್ಯಭಟ್ಟ ತಮ್ಮ 23ನೆಯ ವಯಸ್ಸಿನಲ್ಲಿ ಕಂಡುಹಿಡಿದರು. ಆರ್ಯಭಟ್ಟರ ಮೊದಲ ಹೆಸರು ಕುಸುಮಪುರ. ಕ್ರಿ.ಶ.476ರ ಸುಮಾರಿನಲ್ಲಿ "ಆರ್ಯಭಟ್ಟೀಯಂ" ಎಂಬ ಖಗೋಲ ಶಾಸ್ತ್ರ ಗ್ರಂಥವನ್ನು ರಚಿಸಿದರು. ಅಂದಿನ ಸಮಕಾಲೀನ ಪಾಶ್ಚಾತ್ಯರಿಗೆ ಇದು ತಿಳಿಯದಿರಲಿಲ್ಲ. ಅನೇಕ ವರ್ಷಗಳ ನಂತರ ಈ ಗ್ರಂಥಕ್ಕೆ ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚಿನ ಮಾನ್ಯತೆ ದೊರೆಯಿತು.

ಇತ್ತೀಚೆಗೆ ಪಾಟ್ನಾದಲ್ಲಿ ಈ ಮಹನೀಯರ ಜನ್ಮವರ್ಧಂತಿಯನ್ನು ಆಚರಿಸಲಾಯಿತು. ಖಗೋಳ ಶಾಸ್ತ್ರವಷ್ಟೇ ಅಲ್ಲದೆ ಗಣಿತಶಾಸ್ತ್ರ, ಬೀಜಗಣಿತ, ರೇಖಾಗಣಿತಗಳಲ್ಲಿ ಅವರು ಪಂಡಿತರಾಗಿದ್ದರು. ತತ್ವಶಾಸ್ತ್ರ ಮತ್ತು ಧರ್ಮ ಇವುಗಳ ಬಗ್ಗೆ ಆದಿಗುರು ಶಂಕರರ ಬೋಧನೆ ಎಷ್ಟೇ ಮಹತ್ವದ್ದೋ ಖಗೋಲ ಶಾಸ್ತ್ರದಲ್ಲಿ ಆರ್ಯಭಟ್ಟರ ಸಾಧನೆಯೂ ಅಷ್ಟೇ ಮಹತ್ವಪೂರ್ಣವಾದದ್ದು. ಶಂಕರರು ಮತ್ತು ಆರ್ಯಭಟ್ಟ ಇವರಿಬ್ಬರೂ ತಮ್ಮ ಕಿರಿಯತನದಲ್ಲೇ ಜನಪ್ರಿಯತೆಯನ್ನೂ ಗಳಿಸಿದರು.

ಆರ್ಯಭಟ್ಟರ ಪ್ರತಿಭೆ ದೇಶದಲ್ಲಿ ಹರಡಿದ ಕೂಡಲೇ ಅನೇಕರು ಆತನ ಶಿಷ್ಯರಾದರು. ಕೇರಳದಿಂದ ಹೆಚ್ಚು ಮಂದಿ ಅವರ ಬಳಗಕ್ಕೆ ಸೇರಿದರು. ಕುಸುಮಪುರಕ್ಕೆ ಬಂದು ಅವರ ಗ್ರಂಥವನ್ನು ಪಠಿಸಿ ತಮ್ಮ ರಾಜ್ಯಕ್ಕೆ ಅದನ್ನು ಕೊಂಡೊಯ್ದರು. ಆರ್ಯಭಟ್ಟರ ವಿಜ್ಞಾನಶಾಸ್ತ್ರ ಕೇರಳದಲ್ಲಿ ಇಂದೂ ಹೆಚ್ಚು ಆಕರ್ಷಿತವಾಗಿರಲು ಇದೇ ಕಾರಣವಿರಬೇಕು.

ಆರ್ಯಭಟ್ಟರ ನಿಧನದ ನಂತರ ಅವರ ಕೀರ್ತಿ ದಕ್ಷಿಣದಲ್ಲಿ ಪ್ರಭಲವಾಯಿತು. ಅವರ ನಂತರ ಬಂದ ಮೊದಲನೇ ಭಾಸ್ಕರ ಶಂಕರನಾರಾಯಣ, ಸೂರ್ಯದೇವ, ನೀಲಕಾಂತ ಇವರೆಲ್ಲರೂ ಕೇರಳ ರಾಜ್ಯಕ್ಕೆ ಸೇರಿದವರು. ಆರ್ಯಭಟ್ಟರ ಕೃತಿಗಳಿಗೆ ಹೆಚ್ಚು ಹೆಸರು ಬರಲು ಇವರೂ ಕಾರಣರು. ವಿಶ್ವದಲ್ಲಿ ಸಂಶೋಧಕರು, ವಿಜ್ಞಾನಿಗಳು ಮತ್ತು ತತ್ವಜ್ಞರ ಪ್ರಭಾವ ಹೆಚ್ಚುಗುತ್ತಿದ್ದ ಕಾಲದಲ್ಲಿ ಜನ್ಮತಾಳಿದ ಆರ್ಯಭಟ್ಟರಿಗೆ ಅಂದಿನ ಸನ್ನಿವೇಶವೂ ಹೆಚ್ಚು ಸಹಾಯಮಾಡಿತು. ಭಾರತದಲ್ಲಿ ಕ್ರಿ. ಪೂ. 700ರಿಂದ 600ರವರೆಗಿನ ಕಾಲದಲ್ಲಿ ವೈಚಾರಿಕ ಕ್ರಾಂತಿ ನಡೆಯಿತು. ಪಾಣಿನಿ ಸುಶ್ರುತ ಬುದ್ಧ, ಮಹಾವೀರ, ಪತಾಂಜಲಿ, ನಾಗಾರ್ಜುನ ಚರಕ, ಅಶ್ವಘೋಷ, ದಂಡಿನ್, ಭವಭೂತಿ, ಬಾಣ, ಕಾಳಿದಾಸ ಆ ವೈಚಾರಿಕ ಕ್ರಾಂತಿಗೆ ಮೂಲಪುರುಷರು

ಅಂದಿನ ಸಮಾಜದ [illegible] ಬನೇ [illegible] ಗಣಿತ ಮುಖ್ಯ [illegible] ಆರ್ಯಭಟ್ಟರಲ್ಲಿ ಸ್ವಪ್ರತಿಭೆ ಇತ್ತು. ಖಗೋಳ ವಿಜ್ಞಾನ ಮತ್ತು ಗಣಿತಶಾಸ್ತ್ರಕ್ಕೆ [illegible] ರೂಪ ನೀಡಿದರು. 'ಖಗೋಳವಿಜ್ಞಾನವನ್ನು [illegible]ಗಿ ಅಧ್ಯಯನ ಮಾಡಿ' ಆಡಚಣೆಗಳನ್ನು ಎದುರಿಸಿ ಮುನ್ನಡೆದಿದೆ. ದೇವರ ಅನುಗ್ರಹ ಮತ್ತು ನನ್ನ ಬುದ್ಧಿಶಕ್ತಿಯಿಂದ ಕಾರ್ಯಸಾಧನೆಯಾಯಿತು ಎಂದು ಆರ್ಯಭಟ್ಟರು ತಮ್ಮ ಗ್ರಂಥದಲ್ಲಿ ತಿಳಿಸಿದ್ದಾರೆ. ಕುಸುಮಪುರ ಆರ್ಯಭಟ್ಟರಿಗಿಂತ ಮೊದಲೇ ಗಣಿತಶಾಸ್ತ್ರ ಮತ್ತು ಖಗೋಳ ವಿಜ್ಞಾನಗಳಿಗೆ ತೌರಾಗಿತ್ತು.

ಆರ್ಯಭಟ್ಟರನ್ನು ಪ್ರಾಚೀನ ಮತ್ತು ಆಧುನಿಕ ಯುಗಗಳ ಖಗೋಳವಿಜ್ಞಾನದ ಕೊಂಡಿ ಎಂದೂ ಬಣ್ಣಿಸಿದ್ದಾರೆ. ಗಣಿತಶಾಸ್ತ್ರ, ರೇಖಾಗಣಿತ, ಕ್ಷೇತ್ರಗಣಿತ, ತ್ರಿಕೋಣ ಗಣಿತಶಾಸ್ತ್ರ ಮತ್ತಿತರ ಗಣಿತಶಾಸ್ತ್ರಗಳಲ್ಲಿ ಅವರ ಸಾಧನೆ ಅದ್ಭುತವಾದದ್ದು. ಉಪರಿವೃತ್ತಕಲ್ಪ ವಿಜ್ಞಾನದ ಜನಕರೆಂದು ಪ್ರಸಿದ್ಧರಾಗಿರುವ ಆರ್ಯಭಟ್ಟರು ಬಹುಶಃ ಪೃಥ್ವಿಯು ತನ್ನ ಅಕ್ಷದ ಮೇಲೆ ಸೂರ್ಯನ ಸುತ್ತ ತಿರುಗುವುದೆಂದು ತಿಳಿಸಿದವರಲ್ಲಿ ವಿಶ್ವದಲ್ಲೇ ಮೊದಲಿಗರಿರಬೇಕು.

●●

ನೀವಿನ್ನೂ ಮತದಾರರಾಗಿಲ್ಲವೆ?

1—1—1971ರಲ್ಲಿ 21 ವರ್ಷ ವಯಸ್ಸಾಗಿರುವ ಭಾರತೀಯ ನಾಗರಿಕರು ಯಾರೂ ಈ ಅವಕಾಶ ಕಳೆದುಕೊಳ್ಳಬಾರದು

ಮತದಾರರ ಪಟ್ಟಿ ತಯಾರಿಸುವ ಕಾರ್ಯಕರ್ತರು ಈಗ ಮನೆಮನೆಗೆ ಭೇಟಿ ಕೊಡುತ್ತಿದ್ದಾರೆ. ಅವರು ನಿಮ್ಮ ಮನೆಗೆ ಬಂದಾಗ ಅರ್ಹರಾಗಿರುವ ಎಲ್ಲರನ್ನೂ ಪಟ್ಟಿಯಲ್ಲಿ ಸೇರಿಸಿರಿ. ಮತದಾರರ ಕಾರ್ಡನ್ನು ಕೇಳಿ ಪಡೆಯಿರಿ. ಈ ಕಾರ್ಡನ್ನು ಸುರಕ್ಷಿತವಾಗಿಟ್ಟುಕೊಳ್ಳಿರಿ.

ಕಾರ್ಯಕರ್ತರು ನಿಮ್ಮ ಮನೆಯನ್ನು ಸಂದರ್ಶಿಸದೆ ಇದ್ದಲ್ಲಿ ಹಾಗೂ ಮತದಾರರ ಕಾರ್ಡನ್ನು ಕೊಡದೆ ಇದ್ದಲ್ಲಿ ಸಮೀಪವಿರುವ ತಹಶೀಲ್ದಾರರಿಗೆ ಅಥವಾ ಬಿ. ಡಿ. ಒ.ಗೆ ಇಲ್ಲವೆ ರೆವಿನ್ಯೂ ಅಫೀಸರರಿಗೆ ತಿಳಿಸಿರಿ.

ಎಸ್. ಪಿ. ಸೆನ್‌ವರ್ಮಾ
ಚೀಫ್ ಇಲೆಕ್ಷನ್ ಕಮಿಷನರ್
ಫಾರ್ ಇಂಡಿಯಾ

davp 71/56

ಹರಿದಾಸರ ಗೀತೆಗಳ ವಿಚಾರ

(ಏಳನೇ ಪುಟದಿಂದ)

ಯಲ್ಲಿ ಉಕ್ತವಾದ ಭಾಗವತ ಧರ್ಮಗಳನ್ನು ಆಚರಿಸುವ ವಿಷ್ಣುಭಕ್ತರು ಭಾಗವತರೆಂದು ಕರೆಯಿಸಿ ಕೊಳ್ಳಲ್ಪಡುತ್ತಿದ್ದರೆಂದು ತಿಳಿಯಬಹುದು.(ಕರ್ನಾಟಕದ ಹರಿದಾಸ ಸಾಹಿತ್ಯ: ಶ್ರೀ ಆರ್. ಎಸ್. ಪಂಚಮುಖಿ ಪುಟ. 27).

'ಉತ್ಪನ್ನಾ ದ್ರಾವಿಡೇ ಸಾಹಂ ವೃದ್ಧಿಂ ಕರ್ಣಾಟಕೇಗತಾ' (ಪದ್ಮಪು. ಉ. ಕಾಂ ೧—೮೮) ಈ ಪದ್ಮ ಪುರಾಣದ ವಚನವು ಭಕ್ತಿಯ ಪ್ರವಾಹವು ಹಿಂದು ಸ್ಥಾನದಲ್ಲಿ ಹೇಗೆ ಹರಿಯಿತೆಂಬುದನ್ನು ಐತಿಹಾಸಿಕವಾಗಿ ತಿಳಿಸಿಕೊಡುತ್ತದೆ. ಭಾಗವತ ಭಕ್ತಿಯ ಮೂಲ ಸ್ವರೂಪವು ಮರೆಮಾಚಿ ಕೆಲಕಾಲಾನಂತರ ದ್ರವಿಡದೇಶದ ವೈಷ್ಣವ ಸಾಧುಸಂತರಲ್ಲಿ (ಕ್ರಿ. ಶ. ೬-೧೨ನೆಯ ಶತಮಾನ) ಮತ್ತೆ ಉದಯಹೊಂದಿತ್ತು; ಕರ್ನಾಟಕದ ಹರಿದಾಸರಲ್ಲಿ ಬೆಳೆಯಿತು, (ಅದೇ.ಪುಟ ೩೦).

೬ನೆಯ ಶತಕಾನಂತರ ಪಂಡರಪುರ ಗ್ರಾಮದ ಮತ್ತು ವಿಠ್ಠಲನ ಉಲ್ಲೇಖವು ಶಕ ೧೧೯೫ರ ಅದೇ ದೇವಾಲಯದ ಒಂದು ಕಲ್ಲಿನ ತೊಲೆಯ ಮೇಲೆ ಕೊರೆಯಲ್ಪಟ್ಟ ಲಿಪಿಯಲ್ಲಿ ಈ ಕೆಳಗಿನಂತೆ ಬಂದಿದೆ: "ಹೊಯ್ಸಳ ಮಹಾರಾಜ .... ವೀರ ಸೋಮೇಶ್ವರ ದೇವರಸರ ಸಕವರ್ಷ ೧೧೯೫ನೆಯ ದುರ್ಮುಖಿ ಸಂವತ್ಸರದ ಮಘ್ಯ ಬಹುಳ ಏಕಾದಶಿ ಉತ್ತರಾಯಣ ಸಂಕ್ರಾಂತಿಯಲು ಪಂಡರಗೆಯ ಶ್ರೀ ವಿಠಲ ದೇವರಿಗೆ...." ಮತ್ತು "ಭೀಮರಥೀ ನದೀ ತೀರ ಸುಸನಿವಿಷ್ಟ ಪಂಡರಗೆ ನಾಮಾನಂ ಮಹಾಗ್ರಾಮಮಧಿವಸತೇ ಪುಂಡರೀಕ ಮುನಿಮನಃ ಕುಮುದ ವಿಕಾಸ ಸುಧಾಕರಾಯ ಭಗವತೇ ಶ್ರೀ ವಿಠಲ ದೇವಾಯ" (ಈ ಶಾಸನ ಪ್ರಕಟವಾಗಿಲ್ಲ, ನನ್ನ ಹತ್ತಿರಿದ್ದ ಕಾಗದದ ಪ್ರತಿಯಿಂದ ಎತ್ತಿಬರೆದಿದೆ)

"ಶಕ ೧೧೭೧, ಸೌಮ್ಯ ಸಂವತ್ಸರದ ಬೆಂಡಿಗೇರಿ ತಾಮ್ರ ಶಾಸನದಲ್ಲಿ ಪಂಡರಪುರಕ್ಕೆ 'ಪೌಂಡರೀಕ ಕ್ಷೇತ್ರ'ವೆಂದೂ, ವಿಠಲನಿಗೆ 'ವಿಷ್ಣು' ಎಂದೂ ಹೆಸರು ಬಂದಿವೆ. (I. A. Vl. XV pp. 68-75). [ಈಯೆರಡು ಶಾಸನಗಳಲ್ಲಿ ಮೊದಲನೆಯದು ಸಾಧಾರಣ ಇಸ್ವಿ 1237ರಲ್ಲೂ, ಮತ್ತಿನದು ಇ. 1259ರಲ್ಲೂ ಹೇಳಿದಂತಿದೆ. ಈ ವರ್ಷದ ಈ ಶಾಸನವುಳ್ಳ ಈ ಕ್ಷೇತ್ರದ ಮಹಿಮೆ, ಈ ಮೊದಲಿನಂತೆ ಪ್ರಸ್ತಾರವಾಗಿತ್ತೆಂದು ಮಾತ್ರ ಇಲ್ಲಿ ತಿಳಿಯಬೇಕು.] (ಅದೇ ಪು. 44).

ಈ ತರದಲ್ಲಿ, ಪಂಡರಿಪುರದ- ಅಲ್ಲಿಯ ವಿಠಲನ ಹಾಗೂ ವಿಷ್ಣುಭಕ್ತಿಯ ಊರ್ಜಿತ ರೀತಿಯು ಈ ಶತಕದ ಹಿಂದೆ-ಮುಂದೆ ಕೂಡಾ ಸಂದಿದೆಯೆಂಬುದೇ ಇಲ್ಲಿ ಸ್ಪಷ್ಟಪಡಬೇಕಾಗುತ್ತದೆ: ಕ್ರಿ. ಶ. ೧೩ನೇ ಶತಕದ ಕಡೆಯ ಭಾಗದಲ್ಲಿ ದೇವಗಿರಿ ಯಾದವ ರಾಮಚಂದ್ರ ದೇವರಾಜನ ಆಸ್ಥಾನದಲ್ಲಿ ಹೇಮಾದ್ರಿಯ 'ಚತುರ್ವರ್ಗ ಚಿಂತಾಮಣಿಯಲ್ಲಿ,

'ಬೈಮ್ಯಾಶ್ಚ ತತೇ ದೇವಿ ದಕ್ಷಿಣೇ
ತೀರ್ಥಂ ಮುತ್ತಮಂ |
.... ಪೌಂಡರೀಕಮಿತಿ ಖ್ಯಾತಂ
ತತ್ತೀರ್ಥ ಕ್ಷೇತ್ರಪೂಜಿತಂ |

ಪಾಂಡುರಂಗಶ್ಚ ತತ್ರಾಸ್ತೇ ಮೂರ್ತಿಮಾನ್ ದೇವತೋತ್ತಮಾ" ಎಂದಿದೆ. ಈ ಉಲ್ಲೇಖಗಳಿಂದ ಪಂಡರಪುರವು ವಿಷ್ಣು ಕ್ಷೇತ್ರವಾಗಿತ್ತೆಂದು ಪರಂಪರೆ ಕ್ರಿ. ಶ. ೧೩ನೆಯ ಶತಮಾನದ ಕೊನೆಯವರೆಗೂ ಜಾಗರೂಕವಾಗಿತ್ತೆಂದು ತಿಳಿಯಬರುತ್ತದೆ. (ಅದೇ ಪುಟ 46).

ಳ) ರುದ್ರ ಭಟ್ಟನು ಹೊಯ್ಸಳ ವೀರ ಬಲ್ಲಾಳನ ಕಾಲದಲ್ಲಿ ಸುಮಾರು ಇ.1185 ರಲ್ಲಿ ಇದ್ದನು. ಇವನು ಆ ಆಸ್ಥಾನದ ಚಂದ್ರಮೌಳಿಯೆಂಬವನಿಂದ ಉತ್ತೇಜಿತನಾಗಿ; ವಿಷ್ಣು ಪುರಾಣ, ಭಾಗವತಗಳಲ್ಲಿರುವ ಕೃಷ್ಣಲೀಲೆಯನ್ನು ವಿಸ್ತರಿಸಿ 'ಜಗನ್ನಾಥ ವಿಜಯ'ವೆಂಬ ಮಹಾಕಾವ್ಯವನ್ನು ನಿರ್ಮಿಸಿದ್ದಾನೆ. 'ಕಾವ್ಯಸಮಾಧಿಯಿಂ ಪರಂಜ್ಯೋತಿ ಮುಕುಂದನೆನ್ನ ಬಗೆಯೊಳ್ ನಿಲೆ ನಿರ್ಮಳ ತತ್ತ್ವಬೋಧ ಮುದ್ಯೋತಿಪುದೆಂದು ಬಯಸಿ ಪೇಳಲೊಡರ್ಚಿಡೆ ನೀ ಪ್ರಬಂಧಮಂ'' (1-17) ಎಂದು ಕವಿ ಹೇಳಿದ್ದಾನೆ.

ಭಕ್ತಿರಸದ ಸಂದರ್ಭಗಳಲ್ಲಿಅವನ ಪ್ರತಿಭೆ ಕಾವುಗೊಳ್ಳುತ್ತದೆ. ಆಗ ಅಕ್ರೂರನಿಂದ ಮಾಡಿಸಿದಂತೆ ಸುದೀರ್ಘವಾದ ವಿಷ್ಣು ಜಯಗಾನವನ್ನು ಮಾಡಿಸುತ್ತಾನೆ. .(೫—೧೧೩) ಇಂಥಲ್ಲಿ ಒಮ್ಮೊಮ್ಮೆ ಕಾವ್ಯಗುಣಕ್ಕಿಂತ ಭಕ್ತಿಭಾವಕ್ಕೆ ಪ್ರಾಮುಖ್ಯತೆ ಬರುತ್ತದೆ.

ರುದ್ರಭಟ್ಟನು ಸ್ಮಾರ್ತ ವೈದಿಕ ಬ್ರಾಹ್ಮಣ, ಅಲ್ಲದೆ ಹರಿಹರರಲ್ಲಿ ಭೇದವನ್ನು ಮನ್ನಿಸದ ಭಾಗವತ ಸಂಪ್ರದಾಯಿ, ವಿಶಾಲವಾದ ಭಾಗವತ ದೃಷ್ಟಿ, ಉಪನಿಷದ್ದರ್ಶನ, ಅವನ ಕಾವ್ಯದಲ್ಲಿ ಹೆಜ್ಜೆಹೆಜ್ಜೆಗೆ ಮೂಡಿಬಂದಿವೆ. "ಜಗಮಂ ನುಂಗುವ ಶೂಲಿ ನೀನೆ,ಜಗಮಂ ಮಾಳ್ಪಬ್ಜಜಂ ನೀನೆ ತಜ್ಜಗಮಂ ರಕ್ಷಿಪ ವಿಷ್ಣು ನೀನೆ....ನಿನ್ನಿಂ ಭಿನ್ನವಾಗಿರ್ಪ ವಸ್ತುಗಳಿಲ್ಲ....ಎಂದುದು ಉಲ್ಲೇಖವು.(ಕ. ಸಾ.)ಚರಿತ್ರೆ ವೈಷ್ಣವ ಕತೆಗಳನ್ನು ಬರೆದ ಕವಿಗಳಲ್ಲಿ ರುದ್ರಭಟ್ಟನು ಸರ್ವಾದರಣೀಯನು. ವಿಷ್ಣುಭಕ್ತಿಯ ಪ್ರಸಾರವು ಇಂಥ ಸತ್‌ಕೃತಿಗಳಲ್ಲಿ ಪಡಿಮೂಡಿದೆ. ಈ ಸತ್ ಕಾವ್ಯದ ಪ್ರಸಾರವೇ ವಿಷ್ಣು ಪಾರಮ್ಯದತ್ತ ಜನತೆಯನ್ನು ಸಾಗಿಸುತ್ತದೆ!

೫) 13ನೆ ಶತಕದಲ್ಲಿದ್ದ (1200-78 ಇಸ್ವಿ)ಶ್ರೀಮಧ್ವಾಚಾರ್ಯರು ರಚಿಸಿದ 'ದ್ವಾದಶ ಸ್ತೋತ್ರ'ವು ಇಲ್ಲಿ ಉದಾಹರಣೀಯವದೆ. ಏಕೆಂದರೆ, ಈ ಗೀತೆಗಳು ರಾಗತಾಳಗಳುಳ್ಳ ರೀತಿ ಕೇಳುವಂತೆ, ವಿವಿಧ ವೃತ್ತಗಳಲ್ಲಿದ್ದು, ತಾತ್ವಿಕದಂತೆಯೆ ಲೌಕಿಕ ಸಾಮಾನ್ಯದ ವಿಚಾರಗಳಿಂದ ಜತೆಗೂಡಿದೆ; 'ವಂದೇ ವಂದ್ಯಂ ಸದಾನಂದಂ' 'ಸುಜನೋದಧಿ ಸಂವೃದ್ಧಿ ಪೂರ್ಣಚಂದ್ರಃ' ಎಂಬಂತೆರಡು ಅಧ್ಯಾಯಗಳಿವೆ. ಮೂರನೆಯದರಲ್ಲಿ, "ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದ ವಿನಮ್ರಧಿಯಾ ಸತತಂ"; "ನಿಜಪೂರ್ಣ ಸುಖಾಮಿತ ಬೋಧತನುಃ ಪರಶಕ್ತಿರನಂತ ಗುಣಃ ಪರಮಃ' 'ವಾಸುದೇವಾಪರಿಮೇಯ ಸುಧಾಮನ್ ಶುದ್ಧ ಸದೋದಿತ ಸುಂದರೀ ಕಾಂತ" ಎಂಬಂತೆ ಎಂದು ಪ್ರಾರಂಭವಾದ ಮೂರು ಅಧ್ಯಾಯಗಳಿವೆ.

ಆರನೆಯದರಲ್ಲಿ ದಶಾವತಾರಗಳ ವರ್ಣನೆಯಿದೆ: "ಮತ್ಸ್ಯಕರೂಪ ಲಯೋದ ವಿಹಾರಿನ್ ವೇದವಿನೇತೃ ಚತುರ್ಮುಖ ವಂದ್ಯ", ಇ. ಏಳನೆಯದು, "ವಿಶ್ವಸ್ಥಿತಿ ಪ್ರಳಯ ಸರ್ಗ ಮಹಾ ವಿಭೂತಿ ವೃತ್ತಿ ಪ್ರಕಾಶನಿಯ ಮಾವೃತಿಬಂಧಮೋಕ್ಷಾಃ| ಯಸ್ಯಾ ಅಪಾಂಗಲವಮಾತ್ರತ ಊರ್ಜಿತಾಸಾ| ಶ್ರೀರ್ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ' ಎಂಬ ಪದ್ಯಾರಂಭವುಳ್ಳದು. ಇಲ್ಲಿಯ ನಾಲ್ಕನೆಯ ಪಾದ ಎಲ್ಲಾ (8) ಪದ್ಯಗಳಲ್ಲಿದ್ದು, 'ಲಕ್ಷ್ಮಿಯು ಆವನ ಕಟಾಕ್ಷದಿಂದಲೇ ಬಲವತಿಯೋ ಅಂತಹ ಅಜಿತನನ್ನು ನಮಿಸುವೆನು ಎಂಬಾಶಯದಲ್ಲಿದೆ.

'ವಂದಿತಾಶೇಷ ವಂದ್ಯೋರು ವೃಂದಾರಕಂ| ಚಂದನಾಚರ್ಚಿತೋದಾರ ಪೀನಾಂಸಕಂ" ಎಂಬಂತೆ ಎಂಟನೆಯ ಅಧ್ಯಾಯದಲ್ಲಿ, ಅನುಸ್ವಾರ, ದೀರ್ಘ ಸ್ವರಾದಿಗಳಿಂದ ಗತಿ ವೈವಿಧ್ಯವನ್ನೊಳಗೊಂಡು ಹೃದ್ಯವಾಗಿದೆ. ಆದರೆ, ಅದರೊಂದಿಗೆ ಪ್ರತಿ ಸೊಲ್ಲಿನ ಕೊನೆಗೆ 'ಪ್ರೀಣಯಾಮೋ ವಾಸುದೇವಂ ದೇವತಾ ಮಂಡಲಾಖಂಡ ಮಂಡನಂ' ಎಂಬ ಪಲ್ಲವಿಯಂತಿದೆ! ಒಂಭತ್ತನೆಯ ಅಧ್ಯಾಯದಲ್ಲಿ "ಅತಿಮತ ತಮೋಗಿರಿ ಸತತ ವಿಭೇದನ ಪಿತಾಮಹಭೂತಿದ ಗುಣಗಣನಿಲಯ' ಎಂಬಂತೆ ಅರೆವಾಸಿ ಪದ್ಯದ ಮುಂದುಗಡೆ (ಎಲ್ಲಾ ಪದ್ಯದ ಉತ್ತರಾರ್ಧವಾಗಿ), 'ಶುಭತಮ ಕಥಾಶಯ ಪರಮಸದೋದಿತ ಜಗದೇಕ ಕಾರಣ ರಾಮ ರಮಾರಮಣ' ಎಂಬುದು ಪುನರುಕ್ತಿಯಾಗಿದೆ. ಹತ್ತನೆಯ ಅಧ್ಯಾಯದಲ್ಲೂ "ಅವ ನಃ ಶ್ರೀಪತಿರಧಿಕೇಶಾದಿ ಭವಾದೇ" ಎಂಬಂತಹ ಪೂರ್ವಾರ್ಧ ಶ್ಲೋಕಗಳ ಮುಂಗಡೆಗೆ "ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯಮೇತೇ' ಎಂಬ ಬೇಡಿಕೆಯು ಪುನಃ ಪುನಃ ಹೇಳಿದೆ. ಹನ್ನೊಂದನೆಯದರಲ್ಲಿ ಪುನಃ ಅನುಷ್ಟುತ್ ವೃತ್ತವೇ ತೊಡಗಿದೆ, 'ಉದೀರ್ಣಮಜರಗಂ ದಿವ್ಯಮಮೃತಸ್ಸಂದ್ಯಧೀಶಿತುಃ ಎಂಬಂತಹ ಪೂರ್ವಾರ್ಧವೂ, 'ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಧಿ ವಂದಿತಂ'ಎಂಬ ಪುನರುಕ್ತಿಯ ಉತ್ತರಾರ್ಧವೂ ಇದೆ. ಮತ್ತೆ,ಕೊನೆಯ(12ನೆಯ) ಅಧ್ಯಾಯದಲ್ಲಿ'ಆನಂದಮು ಕುಂದಾರವಿಂದ ನಯನ' ಎಂಬಂತಹ ಪೂರ್ವಾರ್ಧಗಳೂ, 'ಆನಂದ ತೀರ್ಥ ಪರಾನಂದ ವರದ' ಎಂಬ ಪುನರುಕ್ತಿಯುಳ್ಳ ಉತ್ತರಾರ್ಧಗಳೂ ಇವೆ! ಒಂದು ನೂರ ಮೂವತ್ತು ವಿವಿಧ ವೃತ್ತಗಳಲ್ಲಿರುವ ಈ ಸ್ತೋತ್ರ ಶ್ರೀ ಕೃಷ್ಣನ ಪ್ರತಿಮಾ ನಯನದ ಕಾಲದಲ್ಲಿ ಹೇಳಿದುದೆಂದೂ, 'ವಿಷಹರಣ'ಕ್ಕಾಗಿ ಬಳಸಲಾಗಿದೆಯೆಂದೂ ಹೇಳುತ್ತಾರೆ.

'ಅಂಬರಗಂಗಾ ಚುಂಬಿತ ಪಾದಃ|ಪದತಲ ವಿಲುಲಿತ ಗುರುತರ ಶಕಟಃ ಎಂಬ ಎರಡು ಶ್ಲೋಕ (ವೃತ್ತಗಳ) ಕಂದುಕ ಸ್ತೋತ್ರವೂ ಶ್ರೀಮಧ್ವಾಚಾರ್ಯರಿಂದ ರಚಿತವೆನ್ನುತ್ತಾರೆ. ಅಂತೆ, ಲಘುತಮ ಪದಗಳಿಂದ ಸರಳವಾಗಿಯೂ ಹಾಗೂ ದೇವನ ವಿವಿಧ ರೂಪ ಗುಣಗಳ ವರ್ಣನೆಯುಳ್ಳದಾಗಿಯೂ ತಾತ್ತ್ವಿಕ ಸಾರವಾಗಿಯೂ ಇರುವ ಈ ದ್ವಾದಶಸ್ತೋತ್ರವು ಹರಿದಾಸರ ಗೀತೆಗಳ ಸಾಲಿನಲ್ಲಿ ಉತ್ತಮವದೆ. ಇಲ್ಲಿ ಅಲ್ಲಲ್ಲಿ ಕಾಣುವ ಪಲ್ಲವಿ, ಪುನರುಕ್ತ ಪಂಕ್ತಿಗಳು ಇವುಗಳು 'ಗೀತ'ಗಳೆನ್ನುವುದಕ್ಕೆ ಸಾಕ್ಷಿಗಳಾಗಿವೆ!

ಶ್ರೀ ಮಧ್ವಾಚಾರ್ಯರು ಕೇವಲ ನಿವೃತ್ತಿಮಾರ್ಗ ಪ್ರವರ್ತಕರಲ್ಲ, ಕೇವಲ ಐಹಿಕದ ಸುಖಾನುಭೂತಿಯನ್ನು ಮೆಚ್ಚಿದವರೂ ಅಲ್ಲ; 'ಪ್ರಯತ್ನ ಮೇಕಮಗ್ರತೋ ವಿಧಾಯ ಭೂತಿಮಾಪ್ನುಮಃ, ಎಂಬ ಮಾತು ಹೇಳಿದವರು! ಆಸೇತು ಹಿಮಾಚಲ ಪರ್ಯಂತವಾಗಿ ಸಂಚರಿಸಿ, ಜೀವನ ಮುಕ್ತಿಗೆ ಭಕ್ತಿಯೇ ಸಾಧನವೆಂದು ಸಾರಿದ ಮಹಾತ್ಮರು, ಶ್ರೀ ಮಧ್ವಾಚಾರ್ಯರು! 'ಅಮಲಾ ಭಕ್ತಿಶ್ಚ ತತ್ ಸಾಧನಂ' ಎಂದು ಕೇಳುತ್ತದೆಯಲ್ಲವೇ?

ಉಡುಪಿ ಅಷ್ಟಮಠಗಳ ಸ್ವಾಮಿಗಳವರಿಗೆ ಶ್ರೀ ಮಧ್ವಾಚಾರ್ಯರು ನಿತ್ಯಪೂಜೆಗಾಗಿ ಅನುಗ್ರಹಿಸಿದರೆ ಮೂಲ ಮೂರ್ತಿಗಳಲ್ಲಿ ಮೂರು ವಿಠಲನ ಮೂರ್ತಿಗಳಿವೆಯೆಂಬುದರಿಂದ, ಶ್ರೀ ಮಧ್ವಾಚಾರ್ಯರು ಶ್ರೀ ವಿಠಲನ ಭಕ್ತಾಗ್ರೇಸರರೆಂದು ಹೇಳ ಬೇಕಾತ್ತದೆ!

ಉಪಸಂಹಾರ

ಎಂಟನೆಯ ಶತಕದಿಂದ ಮೊದಲ್ಗೊಂಡು, 1೬ನೆಯ ಶತಕದ ಕೊನೆಯವರೆಗೆ ಹರಿಭಕ್ತಿಗೀತೆಗಳ ರಚನೆ–ಪ್ರಸಾರಗಳ ಬಗೆಗೆ ತುಸ ವಿವರಿಸಿ ಇಲ್ಲಿ ಬರೆಯಲಾಗಿದೆ. ಅಂದರೆ, ಇಂತಹವೇ ಹರಿದಾಸರ ಗೀತೆಗಳ ರಚನೆಗೆ ಮೂಲ ನಿದಾನಗಳೆಂದರೆ, ತಪ್ಪಾಗಲಾರದು! ಸಂಸ್ಕೃತವಾಗಲೀ, ಕನ್ನಡವಾಗಲೀ, ದೇವರ ಮಹಿಮೆಯನ್ನು 'ಮನಂಬುಗು'ವಂತೆ ವಿವರಿಸಿ, ಜನಾದರಣೀಯ ಕೃತಿಗಳನ್ನು ರಚಿಸಿದವರು ಲೌಕಿಕರ ಹಿತರಕ್ಷಕರೆನ್ನುವುದು! 'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ| ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ' ಎಂಬ ಗೀತೋಕ್ತಿಯು ಇಂತಹ ಸತ್ಕಾರ್ಯಗಳ ಪ್ರವರ್ತಕರನ್ನು ಹಾಗೂ ತದನುವರ್ತಿಗಳನ್ನು ಕುರಿತು ಹೇಳಿದುದಾಗಿದೆ! ಶ್ರೀ ಮಧ್ವರ ವಾಕ್ಯ ಇಲ್ಲಿ ಸ್ಮರಣೀಯವು:

"ಹರಿರೇವ ಪರೋ
ಹರಿರೇವ ಗುರುಃ|
ಹರಿರೇವ ಜಗತ್
ಪಿತೃಮಾತೃ ಗತಿಃ||"(ದ್ವಾ. ಸ್ತೋ.)

●●

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65-66ರ ಪತ್ರದಂತೆ ತರಿಸಿಕೊಳ್ಳಲು ಶಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/– ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಸಂಪುಟ: 50 **ನವಯುಗ** ಸಂಚಿಕೆ: 39

ಉತ್ಸಾಹದ ಮೇಲೆ ನೀರೇಕೆ ಚೆಲ್ಲಿತು ?

ಬಂಗ್ಲಾದೇಶದ ಬಗ್ಗೆ ಆರಂಭದಲ್ಲಿ ತೋರಿಸಿದ ಉತ್ಸಾಹ, ಉದ್ರೇಕ ಮತ್ತು ಆವೇಶಾದಿಗಳನ್ನು ಭಾರತ ಸರಕಾರ ಮಧ್ಯಾವಧಿಯಲ್ಲಿ ತೋರುತ್ತಿರುವಂತೆ ಗೋಚರವಾಗುವುದಿಲ್ಲ. ಆಕಾಶವಾಣಿಯು ತನ್ನ ವಾರ್ತಾ ಪ್ರಸಾರದ ಬಹ್ವಂಶವನ್ನು ಬಂಗ್ಲಾದೇಶೀಯರ ವಿಜಯಗಾಥೆಗೇ ಮೀಸಲಿಟ್ಟ ದಿನಗಳಿದ್ದುವು. ಪಂ. ನೆಹರೂರವರು ಸುಯೋಜ ಕಾಲುವೆಯ ಒಡೆತನ ಐಗುಪ್ತಕ್ಕೇ ಸೇರಿದ್ದೆಂದೂ ಫ್ರೆಂಚ—ಆಂಗ್ಲ ಪಡೆಗಳ ಸೈನಿಕ ಕಾರ್ಯಕ್ರಮ ಆಕ್ರಮವೆಂದೂ ಸಾರಿ, ವಿಶ್ವದ ಮಹಾರಾಷ್ಟ್ರಗಳ ಹೃದಯಸ್ತಂಭನಕ್ಕೆ ಅಂದು ಕಾರಣ ಪುರುಷರಾದರು. ಇದರಿಂದಾಗಿ, ಕೆಲವೇ ದಿನಗಳಲ್ಲಿ ಯುದ್ಧ ಸ್ತಂಭನವೂ ಆಯ್ತು. ಬಂಗ್ಲಾದೇಶದ ಹೋರಾಟವು ಮಾನ್ಸೂನು ಆರಂಭವಾಗುವುದರೊಳಗೆ ಕೊನೆಗೊಳ್ಳಬಹುದೆಂಬ ಹೇರಾಸೆಯಿತ್ತು. ಪಾಕ್ ಪಡೆಗಳು ಸೋಲುಣ್ಣುತ್ತವೆ; ಯಾಹ್ಯಾಖಾನರು ಬಂಗ್ಲಾ ದೇಶ ಭಕ್ತರ ಮುಂದೆ ಅನಿವಾರ್ಯವಾಗಿ ತಲೆಬಾಗುತ್ತಾರೆಂದು ಮುಂತಾಗಿ ನಂಬಿಕೆಯಿತ್ತು. ಆದರೆ, ಮಾನ್ಸೂನು ತೀವ್ರವಾಗುತ್ತ ಹೋಗುತ್ತಿದ್ದಂತೆ ಬಂಗ್ಲಾ ದೇಶವೂ ರುದ್ರಭೂಮಿಯಾಗಿ ಪರಿವರ್ತನೆಗೊಳ್ಳುತ್ತ ನಡೆಯುತ್ತಿದೆ. ಹೋರಾಟ ಕೊನೆಗೊಳ್ಳುವುದರ ಬದಲು ಮತ್ತೂ ಮತ್ತೂ ತೀವ್ರತರವಾಗಿಯೇ ಮುಂದರಿಯುತ್ತಿದೆ.

ಜಗತ್ತಿನ ಭವಿಷ್ಯ ಬರೆಯುವ ಗುತ್ತಿಗೆದಾರ ಮಹಾರಾಷ್ಟ್ರಗಳ ವರ್ತನೆಯೇ ಇದಕ್ಕೆ ಕಾರಣವೆನ್ನುವುದು ನಿಸ್ಸಂಶಯ. ವಿಯತನಾಮದ ಅವಿಚ್ಛಿನ್ನ ಹೋರಾಟದಲ್ಲಿ ಬಹುರೂಪದಿಂದ ಭಾಗವಹಿಸಿದ ಅಮೆರಿಕೆಯು ಬಂಗ್ಲಾದೇಶದ ವಿದ್ಯಮಾನಗಳಲ್ಲಿ ಬಂಗಾಳಿಗಳ ಸ್ವಾತಂತ್ರ್ಯಾಭಿಲಾಷೆಗೆ ಸಹಾನುಭೂತಿ ತೋರಿಸುವುದಿಲ್ಲ; ತನ್ನ ಮಿತ್ರರಾಷ್ಟ್ರವಾದ ಪಾಕಿಸ್ತಾನದ ಬಗ್ಗೆ ಕಟುವಾಗಿ ಆಡಬಯಸುವುದಿಲ್ಲ. ಸೋವಿಯತ್ತು ಅಮೆರಿಕೆಗಿಂತ ತುಸು ಮುಂದಿರುವುದು ನಿಜವಾದರೂ ಯಾಹ್ಯಾಖಾನರ ಮೇಲೆ ಒತ್ತಾಯ ಹೇರಲು ಅದೆಂದೂ ತಯಾರಾಗಿಲ್ಲ. ಇಂಗ್ಲೆಂಡು-ಫ್ರಾನ್ಸ್‌ಗಳಿಗೆ ಈ ಘಟನೆಗಳಲ್ಲಿ ಲೇಶ ಆಸಕ್ತಿಯೇ ಇಲ್ಲ. ತಂತಮ್ಮ ಸಮಸ್ಯೆಗಳಿಂದಲೇ ತತ್ತರಿಸಿ ಹೋಗಿರುವ ಈ ದೇಶಗಳು 'ಪಾಕಿಸ್ತಾನದ ಆಂತರಿಕ ವಿದ್ಯಮಾನ'ವೆಂದು ಸುಮ್ಮನ್ನಿಳಿದಿವೆ. ಅರಬರಾಷ್ಟ್ರಗಳಾದರೋ ಗಂಭೀರ ಮೌನ ವ್ರತ ಧರಿಸಿವೆ. 'ಬಂಗ್ಲಾದ ಹೋರಾಟ ಬೇಗನೇ ಕೊನೆಗೊಳ್ಳಬೇಕು' ಎಂಬುದು ಜಾಗತಿಕ ಅಭಿಪ್ರಾಯ. ಆದರೆ, ಹೇಗೆ ಕೊನೆಗೊಳ್ಳಬೇಕು' ಎಂಬುದು ಮಾತ್ರ ಪ್ರಶ್ನಾರ್ಥಕವಾಗೇ ಉಳಿಯುತ್ತಿದೆ. ಆದುದರಿಂದಾಗಿ ಬಂಗ್ಲಾದೇಶೀಯರ ಸ್ವಾತಂತ್ರ್ಯ ಹೋರಾಟಕ್ಕೆ ವಿದೇಶಗಳಿಂದ ನಿರೀಕ್ಷಿತ ಬೆಂಬಲ ಲಭಿಸಲಿಲ್ಲ. ಏನೇನೋ ಕಾರಣಗಳಿಂದ ಬಂಡುಗಾರರು ಚಿಸಿದ ಸರಕಾರಕ್ಕೆ ನಾಲ್ಕಾರು ದಿನಗಳಲ್ಲೇ ಮನ್ನಣೆ ನೀಡಿದ ಇತಿಹಾಸ ಹೊಂದಿರುವ ರಾಷ್ಟ್ರಗಳೂ ಬಂಗ್ಲಾದೇಶಕ್ಕೆ ಮಾನ್ಯತೆ ನೀಡಲು ಮೂರು ತಿಂಗಳ ನಂತರವೂ ಹಿಂದೆ ಮುಂದೆ ನೋಡುತ್ತಿರುವುದು ಅತ್ಯಂತ ಸೋಜಿಗವೆನ್ನಬಹುದು. ಭಾರತ ಸರಕಾರವಾದರೂ ಮನ್ನಣೆ ನೀಡುವ ಪ್ರಶ್ನೆಯ ಬಗ್ಗೆ ಗಂಭೀರ ಪರ್ಯಾಲೋಚನೆಯಲ್ಲಿ ಮುಳುಗಿದೆಯೇ ಹೊರತು ಮೇಲೆದ್ದು ಬರುವ ಲಕ್ಷಣಗಳು ನಿಕಟ ಭವಿಷ್ಯದಲ್ಲಿಲ್ಲ.

ಬಂಗ್ಲಾ ವಿದ್ಯಮಾನಗಳು ವಿಶ್ವಕ್ಕೆ ಮಾನ್ಯವೆಂದು ಅದರ ಮೌನದಿಂದ ತಿಳಿಯಲಾಗದು. ಸರ್ವೇಸಾಮಾನ್ಯವಾಗಿ ಎಲ್ಲಾ ದೇಶಗಳಲ್ಲಿಯೂ ಬಂಗ್ಲಾಪರರು ಇದ್ದಾರೆ; ಸಹಾನುಭೂತಿ ಪ್ರದರ್ಶಿಸಿದ್ದಾರೆ; ಹೋರಾಟವು ಕೊನೆಗೊಳ್ಳುವಂತೆ ತಂತಮ್ಮ ಸರಕಾರಗಳು ಪ್ರಭಾವ ಬೀರಬೇಕೆಂದು ಬಯಸಿದ್ದಾರೆ. ಆದರೆ, ಮಾನವತೆಯನ್ನು ಮಾತು ಮತ್ತು ಸಂಪತ್ತುಗಳ ಮೂಲಕ ಪ್ರದರ್ಶನಕ್ಕಿಟ್ಟು ಕೃತಿಯಿಂದ ನುಸುಳಿಕೊಳ್ಳುವ ಈ ರಾಷ್ಟ್ರಗಳಿಗೇನನ್ನಬೇಕು? ಯಾಹ್ಯಾಖಾನರು ಅಜಾತಶತ್ರು–ಅವರಿಗೆ ಸೋವಿಯತ್ತು ಸೋದರ ಮಾವನಂತೆ, ಇಂಗ್ಲೆಂಡು ತಂದೆಯಂತೆ, ಅಮೆರಿಕೆ ಸಾಕು ತಂದೆಯಂತೆ, ಕೆಂಪು ಚೀನಾ ಹೆಣ್ಣು ಕೊಟ್ಟ ಮಾವನಂತೆ, ಅರಬ ಜಗತ್ತು ಅವರ ಕುಟುಂಬ .. ಹೀಗೆ ಎಲ್ಲರೂ ಅವರಿಗೆ ಬೇಕಾದವರು; ಅವರ ಏಕಮೇವ ಶತ್ರುವೆಂದರೆ ಭಾರತ ಮಾತ್ರ. ಈ ಬಗೆಯ ಸಂಬಂಧದಿಂದ ತಾನೇನು ಮಾತಾಡಿದರೆ, ತನ್ನ ಸಂಬಂಧ ಜಾರಿಹೋಗುವುದೇನೋ ಎಂಬ ಭೀತಿ ಮಹಾರಾಷ್ಟ್ರಗಳಿಗೆ. ಕೆಂಪು ಚೀನಾವು ಯಾಹ್ಯಾಖಾನರು ಬಯಸುವ ಎಲ್ಲ ಬಗೆಯ ಸಹಾಯವನ್ನು ನೀಡುತ್ತಿದೆ. ಅಮೆರಿಕೆಯಾಗಲಿ, ರಶ್ಯವಾಗಲೀ ತನ್ನ ವಿರುದ್ಧ ತುಟಿ ಬಿಚ್ಚಿದರೆ, ಯಾಹ್ಯಾ ಅವನ್ನು ತಿರಸ್ಕರಿಸಿ ಕೆಂಪು ಚೀನಾವನ್ನು ಬಿಗಿಯಾಗಿ ಅಪ್ಪಿಬಿಡುತ್ತಾರೆ. ಇದು ಅವರಿಗೆ ಇಷ್ಟವಿಲ್ಲ. ತಮ್ಮ ರಾಜ್ಯಕೀಯ ಬೇಳೆ ಬೇಯಬೇಕಾದರೆ, ಅಮೆರಿಕೆ–ರಶ್ಯಗಳೆರಡಕ್ಕೂ ಪಾಕಿಸ್ತಾನ ಉಳಿಯಬೇಕು.

ಇದರ ಪರಿಣಾಮ ನಮಗೆ ಬೇಡವಾದರೂ ನಮ್ಮ ಮೇಲಾಗ ಹತ್ತಿದೆ. ಬಂಗ್ಲಾದೇಶದಿಂದ ಲಕ್ಷಾಂತರ ನಿರಾಶ್ರಿತರು ಓಡಿಬಂದು ಭಾರತದಲ್ಲಿ ಆಶ್ರಯ ಬಯಸುತ್ತಿದ್ದಾರೆ. ಇದರ ಪುನರ್ವಸತಿಯನ್ನು ಮಾನವತೆಯ ಹೆಸರಿನಲ್ಲಿ ನಾವು ಮಾಡಲೇಬೇಕಾಗಿದೆ. ಇತರ ದೇಶಗಳೂ ವಿಶ್ವರಾಷ್ಟ್ರಸಂಸ್ಥೆಯೂ ಈ ದಿಸೆಯಲ್ಲಿ ನೆರವಾಗಬಹುದಷ್ಟೇ; ಆದರೂ ಸಂಪೂರ್ಣ ಹೊಣೆಗಾರಿಕೆ ನಮ್ಮ ತಲೆಯ ಮೇಲೆಯೇ ಎಂಬುದನ್ನು ತಳ್ಳಿಹಾಕಲಾಗುವುದಿಲ್ಲ. 'ಭಾರತಕ್ಕೆ ಓಡಿ ಹೋದವರು ಪಾಕಿಸ್ತಾನಕ್ಕೆ ಮರಳಲಿ' ಎಂದು ಯಾಹ್ಯಾಖಾನರು ಘೋಷಿಸಿದರೂ ಅದು ಕಾರ್ಯರೂಪಕ್ಕೆ ಬರುವುದಿಲ್ಲ. ಅದರ ಮೇಲೆ ಪಾಕ್ ಸೈನಿಕ ಪಡೆ ಭಾರತದ ಗಡಿರಕ್ಷಕರ ಮೇಲೆ ಅವ್ಯಾಹತವಾಗಿ ಗುಂಡು ಹಾರಿಸುತ್ತಿದೆ. ಇದರಿಂದ ಹಲವು ಸಿಪಾಹಿಗಳು ತಮ್ಮ ಪ್ರಾಣಕ್ಕೆರವಾದರು. ನಮ್ಮವರೂ ಪ್ರತಿಯಾಗಿ ಗುಂಡುಹಾರಿಸುವುದರಲ್ಲೇ ತೃಪ್ತರಾಗಿದ್ದಾರೆ. ಗಡಿದಾಟಿ ಬಂದವರನ್ನು ಬೆನ್ನಟ್ಟಿ ಹೊಡೆದಟ್ಟಲು ಅವರಿಗೆ ಆದೇಶವಿಲ್ಲ. ಪ್ರಧಾನಮಂತ್ರಿಗಳೂ ಸಂರಕ್ಷಣಾ ಸಚಿವರೂ 'ನಾವು ಆಕ್ರಮಣವನ್ನು ಸಹಿಸಲಾರೆವು; ಶತ್ರುಗಳನ್ನು ಎದುರಿಸಲು ಸರ್ವಶಕ್ತರು' ಎಂದು ಭರವಸೆ ನೀಡುತ್ತಲೇ ಬಂದಿದ್ದಾರೆ. ಗಡಿ ಪ್ರದೇಶದಲ್ಲಿ ಈಗ ಅತ್ಯಂತ ಗಂಡಾಂತರದ ಪರಿಸ್ಥಿತಿ ತಲೆದೋರಿದೆಯೆಂಬುದು ನಿಸ್ಸಂಶಯ. ಹೇಗಾದರೂ ಮಾಡಿ ಭಾರತದ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದಿರುವ ಪಾಕಿಸ್ತಾನಿ ಸೈನಿಕರು ನಮ್ಮನ್ನು ಕಾಲು ಕೆದರಿ ಜಗಳಕ್ಕೆಳೆಯಬಯಸಿದ್ದಾರೆ. ಅವರಿಗೆ ಕೆಂಪುಚೀನದ ಸಂಪೂರ್ಣ ಒತ್ತಾಸೆಯೂ ಇದೆ. ಜಾಗತಿಕ ರಾಷ್ಟ್ರಗಳ ಮೌನ ಮತ್ತು ಕೆಂಪು ಚೀನಾದ ವರ್ತನೆ ಭಾರತದ ಉತ್ಸಾಹವನ್ನು ತಗ್ಗಿಸಿವೆ. ಆದುದರಿಂದಲೇ ಬಂಗ್ಲಾದೇಶಕ್ಕೆ ಭಾರತವಿನ್ನೂ ಮನ್ನಣೆ ನೀಡಿಲ್ಲ; ಹಿಂದೆ ತೋರಿದಷ್ಟು ಆವೇಶವಿಂದು ಉಳಿದಿಲ್ಲ. ಅದಿಯ ಮುಂದಿಟ್ಟು ಈಗ ಹಿಂದಿಡುವುದರಿಂದ ದೇಶದ ಗೌರವ ಹೆಚ್ಚಿದಂತಾಗಲಿಲ್ಲ. ಮಹಾರಾಷ್ಟ್ರಗಳನ್ನು ಮೆಚ್ಚಿಸಿ, ಮಾನವತೆಯನ್ನು ನೆಮ್ಮುವಂತೆ ಮಾಡುವ ಪ್ರಯತ್ನವನ್ನು ನಾವೆಂದೋ ಮಾಡಬೇಕಾಗಿತ್ತು.

●●

ಕೃಷ್ಣಾಪುರ ಮಠದ ಉತ್ತರಾಧಿಕಾರಿಯಾಗಿ ವಟು ರಮಾಪತಿ ಸನ್ಯಾಸದೀಕ್ಷೆ

ಉಡುಪಿಯ ಶ್ರೀ ಕೃಷ್ಣಾಪುರ ಮಠದ ದ್ವಂದ್ವ ಮಠಾಧಿಪತಿಗಳಾದ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀಪಾದರು ತಾರೀಕು 8-6-71ರಂದು ರಮಾಪತಿ ಎಂಬ ವಟುವಿಗೆ ಸನ್ಯಾಸದೀಕ್ಷೆಯಿತ್ತು ಶ್ರೀ ವಿದ್ಯಾಸಾಗರ ತೀರ್ಥ ಶ್ರೀಪಾದರೆಂಬ ಅಭಿದಾನದಿಂದ ಕೃಷ್ಣಾಪುರ ಮಠಾಧಿಪತಿಯನ್ನಾಗಿ ನೇಮಿಸಿದರು.

ಎಪ್ರಿಲ್ 16ರಂದು ಕೃಷ್ಣಾಪುರ ಮಠದ ಹಿಂದಿನ ಶ್ರೀಪಾದರಾಗಿದ್ದ ಶ್ರೀ ವಿದ್ಯಾರತ್ನ ತೀರ್ಥರು ಹರಿಪದ ಸೇರಿದ್ದರಿಂದ ಈ ದೀಕ್ಷೆ ನೀಡಲಾಯಿತು. ಈ ಸಮಾರಂಭವು ವಿಧ್ಯುಕ್ತವಾಗಿ ಪಾಡಿಗಾರಿನಲ್ಲಿರುವ ಶ್ರೀ ಮಠದಲ್ಲಿ ಪುತ್ತಿಗೆ ಶ್ರೀಪಾದರ ನೇತೃತ್ವದಲ್ಲಿ ಜರಗಿತು.

ಸನ್ಯಾಸ ದೀಕ್ಷೆ ಪಡೆದ ವಟು ರಮಾಪತಿಯವರು ಹರಿಪದವನ್ನೈದಿದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರ ಪೂರ್ವಾಶ್ರಮದ ಸಹೋದರ ಶ್ರೀ ಟಿ. ಶ್ರೀಪತಿ, ಬಿ.ಎ. ಇವರ ಪ್ರಥಮ ಪುತ್ರ. 1958ರಲ್ಲಿ ಇವರ ಜನನ. ವಟುವಿನ ತಾಯಿ ಶ್ರೀಮತಿ ಜಾನಕಿ. ಮುನ್ಸಿಪಲ್ ನಾರ್ತ್ ಹಾಗೂ ಹೈಸ್ಕೂಲಿನಲ್ಲಿ ಇವರ ವಿದ್ಯಾಭ್ಯಾಸ 8ನೇ ತರಗತಿ ವರೆಗೆ ನಡೆದಿತ್ತು.

ಶ್ರೀ ಮಧ್ವಾಚಾರ್ಯರಿಂದ ಆಶ್ರಮದೀಕ್ಷೆ ಪಡೆದಿದ್ದ ಶ್ರೀ ಜನಾರ್ದನ ತೀರ್ಥರೇ ಮೊದಲಿಗರಾಗಿರುವ ಕೃಷ್ಣಾಪುರದ ಯತಿ ಪರಂಪರೆಯಲ್ಲಿ ಈಗಿನ ಶ್ರೀ ವಿದ್ಯಾಸಾಗರ ತೀರ್ಥರು 34ನೆಯವರಾಗಿದ್ದಾರೆ.

ಸಿಂಡಿಕೇಟ್ ಬ್ಯಾಂಕಿನಲ್ಲಿ ವಿಮಾ ಸಂಯೋಜಿತ ಉಳಿತಾಯ ಯೋಜನೆ ಪ್ರಾರಂಭ

ಸಿಂಡಿಕೇಟ್ ಬೇಂಕಿನ ಕಸ್ಟೋಡಿಯನ್ ಶ್ರೀ ಕೆ.ಕೆ. ಪೈ ಅವರು ಜೂನ್ 1ರಂದು ತಮ್ಮ ಮಣಿಪಾಲ ಶಾಖೆಯಲ್ಲಿ ಜೀವವಿಮಾ ಕಾರ್ಪೊರೇಶನ್ ಸಹಕಾರದಿಂದ ಪ್ರಾರಂಭಿಸಿದ 'ವಿಮಾ ಸಂಯೋಜಿತ ಸೇವಿಂಗ್ಸ್ ಬೇಂಕು ಠೇವಣಿ ಯೋಜನೆಯನ್ನು ಉದ್ಘಾಟಿಸಿದರು. ಶ್ರೀ ಎಸ್. ಆತ್ಮಾನಂದ ನಾಯಕರು ಯೋಜನೆಯ ಪ್ರಥಮ ಅಕೌಂಟ್ ತೆರೆದರು.

ಶ್ರೀ ಕೆ. ಕೆ. ಪೈಯವರು ಪತ್ರಿಕಾ ವರದಿಗಾರರಿಗೆ ಯೋಜನೆಯ ವಿವರಗಳನ್ನು ನೀಡುತ್ತಾ "ಸಿಂಡಿಕೇಟ್ ಬೇಂಕ್ [ಎಲ್ಐಸಿಯ ನೆರವಿನೊಡನೆ ವಿಮಾ ಸೌಲಭ್ಯವೊದಗಿಸುವ ಈ ಯೋಜನೆಯನ್ನು ಜ್ಯಾರಿಗೆ ತಂದ ಮೊದಲ ಬೇಂಕು ಆಗಿದೆ. ವಿಮಾ ಸಂಯೋಜಿತ ಡಿಪಾಸಿಟ್ ಎಕೌಂಟ್ ತೆರೆದ ಪ್ರತಿಯೊಬ್ಬರಿಗೂ ಹೆಚ್ಚಿನ ವೆಚ್ಚವಿಲ್ಲದೆ ತಕ್ಷಣದಿಂದಲೇ ವಿಮಾ ಸೌಲಭ್ಯ ದೊರೆಯುವುದು" ಎಂದು ತಿಳಿಸಿದರು. ಕಡಿಮೆ ಆದಾಯದ ಗುಂಪಿನವರಿಗೆ ವಿಮಾ ಸೌಲಭ್ಯ ವಿಸ್ತರಿಸುವುದಕ್ಕೆ ಈ ಯೋಜನೆಯ ಉದ್ದೇಶವಾಗಿದೆ ಎಂದೂ ಅವರು ವಿಶದಪಡಿಸಿದರು.

●●

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 72303 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಬೇಕಾಗಿದ್ದಾರೆ

ಕನಿಷ್ಠ 8ನೇ ತರಗತಿ ವರೆಗೆ ಓದಿದ ಕೆಲವು ಉತ್ಸಾಹಿ ಹುಡುಗರನ್ನು ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಮೂಕ ಬಲಿ

(ಎರಡನೇ ಪುಟದಿಂದ)

ತನ್ನ ಪತಿಯನ್ನು ತಾನು ಹೊಂದುವೆ ಎನ್ನುವ ಅಚಲ ವಿಶ್ವಾಸ ಅವಳಲ್ಲಿತ್ತು. ಅಲ್ಲಿ ಕಲಿತ ಮೂರ್ಖ ಸಂತತಿ ಅವಳ ನಿಲುವಿಗೆ ಉಕ್ಕು ಬರುವಂತೆ ಮಾಡಿತು — ಅದಕ್ಕೆ ಪೂರಕವಾಗಿ ಒದಗಿ ಬಂತು ಪಾಂಡೆ ಬಂಧುಗಳ ಕುಟಿಲ ನೀತಿ.

ಸಂಪತಿ ಚಿತೆಯ ಮೇಲೆ ಕುಳಿತಳು. ಪತಿಯ ತಲೆಯನ್ನು ತೊಡೆಯ ಮೇಲೆ ಇರಿಸಿಕೊಂಡಳು. ಭುಗಿಲೆಂದು ಬಂದು ತಗುಲಿತು ಬೆಂಕಿಯ ಜ್ವಾಲೆ.

ಹೀಗಾದೀತು ಎಂಬುದು ಅವಳಿಗೆ ತಿಳಿದಿರಲಿಲ್ಲವೇ? ಚಿತಾಗ್ನಿ ಅವಳನ್ನು ಸ್ಪರ್ಶಿಸದೆಂದು ಭ್ರಮಿಸಿದ್ದಳೇ? ಸತಿ ಹೋಗುವುದು ಎಂದರೆ ಏನೆಂದುಕೊಂಡಿದ್ದಳು? ಬೆಂಕಿಯ ಸೋಂಕು ಇಲ್ಲ; ನೋವಿನ ಬಾಧೆ ಇಲ್ಲ ಎಂದವಳು ಕಲ್ಪಿಸಿಕೊಂಡಿದ್ದಳೇ? ತನಗೆ ತಿಳಿಯದಂತೆ, ತಾನೂ ಪತಿಯ ಜೊತೆ ಸ್ವರ್ಗದತ್ತ ತೆರಳುವುದೆಂದು ಯೋಚಿಸಿದ್ದಳೇ?

ಆಗಿನ ಅವಳ ಸ್ಥಿತಿಯನ್ನು ಕೈಕೊಂಡ ಕೊನೆಯ ಯಾತ್ರೆಯ ಕತೆಯನ್ನು ಹೇಳಲು ಅವಳು ಉಳಿಯಲಿಲ್ಲ.

ಸಹಿಸುವಷ್ಟರ ತನಕ ಸಹಿಸಿದಳು. ಅಗ್ನಿ ಜ್ವಾಲೆಗೆ ತನ್ನನ್ನು ಅರ್ಪಿಸಿಕೊಳ್ಳುತ್ತ ಚಿತೆಯ ಮೇಲೆ ಕುಳಿತಳು. ಬೇಗೆ, ಬವಣೆ ಎರಡೂ ಹೆಚ್ಚಿತು. ತಡೆಯುವುದಾಗಲಿಲ್ಲ. ಚಿತೆಯಿಂದ ಗಂಗೆಗೆ ಧುಮುಕಿದಳು. ನೀರಿನಲ್ಲಿ ಧುಮುಕಲು ಸೀರೆಗೆ ತಗುಲಿಕೊಂಡ ಬೆಂಕಿ ಆರಿತು. ಆದರೆ ನಖ-ಶಿಖಾಂತ ಸುಟ್ಟ ಗಾಯದ ಉರಿಯನ್ನು ಉಪಶಮನಗೊಳಿಸುವುದು ತಾಯಿ ಗಂಗೆಗೂ ಸಾಧ್ಯವಾಗಲಿಲ್ಲ. ಅರ್ಧ ಸುಟ್ಟ ಹೆಣವನ್ನು ನದಿಯಲ್ಲಿ ಮುಳುಗೇಳುತಿದ್ದ ಅವಳತ್ತ ಅವಳ ಮೈದುನರು ಎಸೆದರು. ಮುಣುಗಿ ಸಾಯಲು ಕೂಗಿ ಹೇಳಿದರು. ಆದರೆ ಅವಳೊತ್ತಟ್ಟು, ಹೆಣವೊತ್ತಟ್ಟು ಆಯಿಯಿತು. ಸಿದ್ದೇಶ್ವರನ ಹೆಣ ಮೊಸಳೆಗಳಿಗೆ ಉಣಿಸಾಯಿತು. ಸಂಪತಿ ಮೊಸಳೆಗಳ ಬಾಯಿಗೆ ಬೀಳಲಿಲ್ಲ. ಹೇಗೊ ದಡ ಸೇರಿದಳು.

ಆಕೆ ಹೊಳೆಯ ದಡದಲ್ಲಿ ಅನ್ನ ನೀರಿಲ್ಲದೆ ಎರಡು ದಿನ ನರಳಾಡಿದಳು. ಜನ ಪೋಲೀಸರನ್ನು ಅವಳ ಬಳಿ ಸುಳಿಯಲು ಬಿಡಲಿಲ್ಲ. ಆ ಗುಂಪನ್ನು ಚದುರಿಸಲು ಜಿಲ್ಲೆಯ ರಕ್ಷಣಾಧಿಕಾರಿಗಳೇ ಬರಬೇಕಾಯಿತು. ಅವಳನ್ನು ಸುರಕ್ಷಿತ ಸ್ಥಳವೆಂದು ಜೈಲಿಗೊಯ್ದರು. ಚಿಕಿತ್ಸೆ ನಡೆಸಿದರು. ಆದರೆ ಕಾಲ ಮಿಂಚಿ ಹೋಗಿತ್ತು. ಮರುದಿನ ಅನುಭವಿಸುತ್ತಿದ್ದ ಯಮಯಾತನೆಯಿಂದ ಅವಳು ವಿಮೋಚನೆ ಹೊಂದಿದಳು.

ಇಲ್ಲಿಗೆ ಇದು ಮುಗಿಯಲಿಲ್ಲ. ಪೋಲಿಸರು ಈ ಸಂಬಂಧದಲ್ಲಿ ಕೇಸು ದಾಖಲೆ ಮಾಡಿಕೊಂಡು ಅನೇಕರನ್ನು ಬಂಧಿಸಿದರು. ಸಂಪತಿಯ ತಮ್ಮ, ಭಾವ-ಮೈದುನರು, ಇನ್ನು ಕೆಲವರು ಆರೋಪಿಗಳಲ್ಲಿ ಮುಖ್ಯರು. ಬಂಡಿಯಾಳನ್ನೂ ಬಂಧಿಸದೆ ಬಿಡಲಿಲ್ಲ. **ಈ ಆರೋಪಿಗಳ ವಿಚಾರಣೆ ಪಾಟ್ನದ ಸೆಷನ್ಸ್ ಜಡ್ಜಿಗಳ** ಮುಂದು ನಡೆಯಿತು. ಜ್ಯೂರಿಗಳು ಅಪಾದಿತರು ನಿರಪರಾಧಿಗಳು ಎಂಬ ಅಭಿಪ್ರಾಯ ಕೊಟ್ಟರು. ಅಪಾದಿತರಲ್ಲಿ ಆರು ಮಂದಿಯನ್ನು ಜಡ್ಜರು ಅವರ ಮತದಂತೆ ಖುಲಾಸೆ ಮಾಡಿದರು. ಉಳಿಕೆಯವರ ವಿಚಾರದಲ್ಲಿ ಅವರ ಅಭಿಪ್ರಾಯವನ್ನು ಅಲ್ಲಗಳೆದು, ಹೈಕೋರ್ಟು ಪರಾಮರ್ಶೆಗೆ ಕಳುಹಿಸಿಕೊಟ್ಟರು.

ಮುಖ್ಯ ನ್ಯಾಯಾಧೀಶ ಶ್ರೀ ಟೆರೆಲ್ಲರ ಮುಂದು ಈ ಕೇಸು ಇತ್ಯರ್ಥಕ್ಕೆ ಬಂತು. ಆರೋಪಿಗಳ ಪರ ಶ್ರೀ ಪಗ್, ಶ್ರೀ ಜಯಸ್ವಾಲ್ ಹಾಜರಾದರು.

ಅವರ ವಾದದ ತಿರುಳು ಹೀಗಿತ್ತು— ಜ್ಯೂರಿಗಳ ಅಭಿಪ್ರಾಯಕ್ಕೆ ಬೆಲೆ ಕೊಡಬೇಕು. ಬೆಲೆ ಕೊಡುವುದು. ನ್ಯಾಯಾಲಯದ ಪರಮ ಧರ್ಮ. ಜ್ಯೂರಿಗಳನ್ನಾಗಿ ಆಯ್ಕೆ ಮಾಡುವಾಗ, ಪಾಂಡಿತ್ಯ, ನ್ಯಾಯಪರತೆ, ವಿಚಾರ ಶೀಲತೆಗಳನ್ನು ಅಳತೆಗೋಲಾಗಿ ಬಳಸುವುದು ಪದ್ಧತಿ. ಅಂತಹ ನ್ಯಾಯ ಪರರ ಒಮ್ಮತಕ್ಕೆ ಕೋರ್ಟು ತಲೆಬಾಗುವುದು ಸತ್ಸಂಪ್ರದಾಯ. ಈ ವಾದವನ್ನು ತಳ್ಳಿ ಹಾಕುತ್ತ ಮುಖ್ಯ ನ್ಯಾಯಾಧೀಶರು ಹೀಗೆ ಉದ್ಗರಿಸಿದರು. 'ವಿವೇಕ-ಧೈರ್ಯ, ತಿಳುವಳಿಕೆಯ ಬಾಹ್ಯ ಲಕ್ಷಣ ಇವುಗಳ ಅಭಾವವನ್ನು ನಾವು ಈ ಕೇಸಿನ ಜ್ಯೂರಿಗಳಲ್ಲಿ ಗುರುತಿಸಿದ್ದೇವೆ. ಜ್ಯೂರಿಗಳಲ್ಲಿ, ಮಾತ್ರವಲ್ಲ ಎಲ್ಲ ಸತ್ಪ್ರಜೆಗಳಲ್ಲಿಯೂ ಇರಬೇಕಾದ ಲಕ್ಷಣ.

ಆರೋಪಿಗಳನ್ನು ಕಷ್ಟಕ್ಕೆ ಗುರಿಗೊಳಿಸಲು ಇದು ಪೋಲಿಸರು ಹುಟ್ಟು ಹಾಕಿದ ಕಟ್ಟು ಕತೆ—ವಕೀಲರು ಎತ್ತಿ ಆಡಿದ ಇನ್ನೊಂದುವಾದ. ಈ ವಾದವನ್ನು ತೀರ್ಪಿನಲ್ಲಿ ಹೀಗೆ ವಿಮರ್ಶಿಸಲಾಯಿತು. 'ಈ ದಾರುಣ ಘಟನೆ ಪೋಲಿಸರ ಕಣ್ಣ ಮುಂದೆ ಘಟಿಸಿತು. ಅವರು ಬರಿಯ ಮೂಕ ಪ್ರೇಕ್ಷಕರು. ಧೈರ್ಯ ಮಾಡಿದ್ದರೆ ಅವರು ಸಂಪತಿಯ ಪ್ರಾಣ ರಕ್ಷಣೆ ಮಾಡಬಹುದಿತ್ತು. ಕರ್ತವ್ಯ ಪಾಲನೆಯಲ್ಲಿ ಪೋಲಿಸರು ಜಾರಿದರೆಂಬುದು ನಿರ್ವಿವಾದ. ಅವರ ಹೇಳಿಕೆಗಳನ್ನು ಯಾರೂ ಆಕ್ಷೇಪಿಸುವಂತಿಲ್ಲ. ಆ ಹೇಳಿಕೆಗಳಲ್ಲಿ ಸತ್ಯ—ಸ್ಥೈರ್ಯ ಎರಡೂ ಅಡಕವಾಗಿವೆ.'

ಸಂಪತಿಯನ್ನು ಬಂದು ಸೋಂಕಿದ್ದು ಒಂದು ಅಲೌಕಿಕ ಜ್ವಾಲೆ ಎಂಬ ವಾದವನ್ನು ನ್ಯಾಯಾಧೀಶರು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. 'ಅದು ಪಾಂಡೇ ಬಂಧುಗಳ ಕೈ ಚಳಕವೆಂದು ಸ್ಪಷ್ಟ ಪಡಿಸಿದರು. ಬೆಂಕಿಯ ನಾಲಗೆಯಿಂದ, ಜೀವ ರಕ್ಷಿಸಿಕೊಳ್ಳಲು ಆ ಬಡಪಾಯಿ ಹುಡುಗಿ ನೀರಿಗೆ ಧುಮುಕಿದಳು. ಅವಳು ಬದುಕುವುದು ಅವರಿಗೆ ಬೇಡವಿತ್ತು ಅವಳು ಜೀವಿಸುವುದರಿಂದ ಅವರ ಕತ್ತಿಗೆ ಸುತ್ತಿದ್ದ ಉರುಳು ಇನ್ನಷ್ಟು ಬಿಗಿಯಾಗುತಿತ್ತು—ಅದನ್ನು ಮನಗಂಡು, ಅವರು ಅವಳನ್ನು ಹೆದರಿಸಿದರು. ಮುಣುಗಲು ಒತ್ತಾಯಿಸಿದರು. ಅವಳು ಬದುಕುವುದರಿಂದ ತಮ್ಮ ನಾಟಕ ಬಯಲಿಗೆ ಬರುವ ಭಯ ಅವರನ್ನು ಕಾಡುತ್ತಿತ್ತು'. ನ್ಯಾಯಮೂರ್ತಿಗಳು ವಕೀಲವಾದ ವೈಖರಿಗೆ ಜಗ್ಗಲಿಲ್ಲ. ಆರೋಪಿಗಳು ಅನುಕಂಪಕ್ಕೆ ಅರ್ಹರೆಂಬ ವಕೀಲರ ಮನವಿಯಿಂದಲೂ ಜಡ್ಜರು ಚಲ-ವಿಚಲರಾಗಲಿಲ್ಲ.

ಅವರು ನ್ಯಾಯಪೀಠದಿಂದ ಇಳಿದರು. ವಕೀಲರ ಜೊತೆ ಜೈಲಿಗೆ ಭೆಟ್ಟಿಕೊಟ್ಟರು. ಆರೋಪಿಗಳನ್ನೂ ಅಪಾದ ಮಸ್ತಕ ಪರಿಶೀಲಿಸಿದರು. ಅವರನ್ನು ವೈದ್ಯ ಪರೀಕ್ಷೆಗೆ ಗುರಿಪಡಿಸಿದರು. ಸಂಪತಿಯ ನರಳಾಟ, ಚೀರಾಟದಿಂದಲೂ ಹೃದಯ ಕರಗದ ನಿರ್ದಯಿಗಳನ್ನು ಕಾಣುವ ಕುತೂಹಲ ನ್ಯಾಯಾಧೀಶರಿಗೆ. ಅಪಾದಿತರಲ್ಲಿ ನಯಸ್ಸಾದವರೂ ಇದ್ದರು. ಆದರೆ ವಯಸ್ಸಿನೊಡನೆ ಅವರ ಹೃದಯ ಮಾಗಿರಲಿಲ್ಲ; ಬುದ್ಧಿ ಬಲಿದಿರಲಿಲ್ಲ. ಅವರು ಮತಾಂಧರಿರುವಂತೆ ಕಂಡುಬಂತು.

ಸಾಕ್ಷ್ಯ ಸಾಹಿತ್ಯ, ಸಂದರ್ಭಗಳು ಅಪಾದಿತರಿಗೆ ಪ್ರತಿಕೂಲವಿದ್ದುವು ವಕೀಲರ ದಯಾ ಯಾಚನೆಯಿಂದ ನ್ಯಾಯಮೂರ್ತಿಗಳು ವಿಚಲಿತರಾಗಲಿಲ್ಲ. ಅಪಾದಿತರ ಎಳೆಯ ವಯಸ್ಸು ಅವರಲ್ಲಿ ಅನುಕಂಪ ಹುಟ್ಟಿಸಲಿಲ್ಲ.

ಅವರ ಪ್ರಾಣ ರಕ್ಷಣೆಗೆ ಕೊನೆಯಲ್ಲಿ ನೆರವಾಗಿ ಬಂದುದು ಸಂಪತಿಯ ಸಮಾಧಿ. ನ್ಯಾಯಮೂರ್ತಿಗಳು ಅಲ್ಲಿಗೂ ಪಾದಬೆಳೆಸಿದರು.

ರಿಕ್ಷಾ ಬಂಡಿಯವನನ್ನು, ಕೆಲಸದವಳನ್ನು ಪಾತ್ರ ಚಿಕ್ಕದೆಂದು ಪರಿಗಣಿಸಿ-ಒಂದು ವರ್ಷದ ಶಿಕ್ಷೆಗೆ ಗುರಿಪಡಿಸಿದರು. ಅಪ್ರಾಪ್ತ ವಯಸ್ಸಿನವರೆಂದು ಮುರಲೀಧರ, ವಿದ್ಯಾಸಾಗರರಿಗೆ—ಮುಂದೆ ಒಳ್ಳೆಯ ಪರಿಸರದಲ್ಲಿಒಳ್ಳೆಯವರಾಗಬಹುದೆಂಬ ಆಶಯ ವ್ಯಕ್ತಪಡಿಸಿ,-5 ವರ್ಷದ ಕಠಿಣ ಸಜೆ ಕೊಟ್ಟರು. ಸಂಪತಿಯ ಮೈದುನರು— ಸಹದೇವ, ಕೇಶವ, ಲಕ್ಷ್ಮಣ, ಹರದೇವರಿಗೆ-ಹತ್ತು ವರ್ಷದ ಶಿಕ್ಷೆ ವಿಧಿಸಿದರು.

ತೀರ್ಪಿನ ಕೊನೆಯ ಭಾಗ ಇಂತಿದೆ—

ಈ ಹೀನ ಕೃತ್ಯ ಮಾಡಿದವರಿಗೆ ತಕ್ಕ ಶಾಸ್ತಿಯಾಗಬೇಕು. ಬಡ ಹುಡುಗಿಯೊಬ್ಬಳ ಚಿತ್ರವಧೆಯಾಗಿದೆ. ಅವಳಿಗೆಸಗಿದ ಅಪರಾಧದ ಸೇಡನ್ನು ಸ್ವಲ್ಪ ಮಟ್ಟಿಗಾದರೂ ನಾವು ತೀರಿಸಬೇಕು. ವಿವೇಕಕ್ಕೆ ಶರಣಾಹೋಗದ ಮೂರ್ಖರನ್ನು, ದಂಡದ ಮೂಲಕ ಸರಿದಾರಿಗೆ ತರುವ ಪ್ರಯತ್ನ ನಡೆಯಬೇಕು. ನಾವು ದಂಡಿಸುತ್ತಿರುವುದು ಅವರ ದೇಹವನ್ನು. ಈ ದಂಡನೆಯಿಂದ ಆರೋಪಿಗಳ ಪಾಪ ಕ್ಷಾಲನೆಯಾಗದು. ನಾವುಕೊಟ್ಟ ಶಿಕ್ಷೆಯನ್ನನುಭವಿಸಿ, ಜೈಲಿನಿಂದ ಹೊರಬಂದಲ್ಲಿ ಈ ಆರೋಪಿಗಳು ಮೊದಲು ಮಾಡಬೇಕಾದ ಕೆಲಸ – ಸಂಪತಿಯ ಸಮಾಧಿಗೆ ಯಾತ್ರೆ ಹೊರಡುವುದು. ಅಲ್ಲಿ ಪುಷ್ಪಾಲಂಕೃತವಾದ ಅವಳ ಸಮಾಧಿಯ ಬಳಿ ಕುಳಿತು, ತಮ್ಮ ಕಲುಷಿತ ಆತ್ಮಗಳನ್ನು ಉದ್ಧರಿಸುವಂತೆ ದೇವರಲ್ಲಿ ಕೇಳಿಕೋ ಎಂದು ಸಮಾಧಿಸ್ಥಳಾದ ಸಂಪತಿಯನ್ನೇ ಅನನ್ಯ ಭಾವದಿಂದ ಪ್ರಾರ್ಥಿಸುವುದು."

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

NAVAYUGA 10-6-1971

Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಬಜೆಟ್ ಭವಿಷ್ಯ

ಭಾರೀ ಬೆಲೆಯೇರಿಕೆಯ ಮುನ್ಸೂಚನೆ

ಬರಲಿದೆ ಬರಲಿದೆ, ಸಮಾಜವಾದಿ ಸ್ವರೂಪದ ಬಜೆಟ್ಟು ಬರಲಿದೆ. ತನ್ನ ವಿಶ್ವರೂಪದಲ್ಲಿ ಮೇ ತಿಂಗಳಲ್ಲಿ ಎಂದು ಮಾರ್ಚಿಯಲ್ಲಿ ಹೇಳಲಾಯ್ತು.

ಹೇಳಿದಂತೆ ಬಂತೇ ಬಂತು ಏನು ತಂತು?

ಸಮಾಜವಾದವೊಂದನ್ನು ಬಿಟ್ಟು ಉಳಿದೆಲ್ಲವನ್ನೂ ತಂತು.

ಹೇಗೆ? ಏಕೆ?

೧೭೭ ಕೋಟಿ ರೂಪಾಯಿಗಳ ತೆರಿಗೆ ಕೂಡಿಸುವ ಭರದಲ್ಲಿ ಅರ್ಥಸಚಿವ ಚವಣರು ಭೋಗ ವಿಲಾಸ ಸಾಮಗ್ರಿಗಳು ಇತ್ಯಾದಿಗಳ ಮೇಲೆ ಭಾರಿ ತೆರಿಗೆ ಹೇರಿದರು.

ಶ್ರೀ ಸಾಮಾನ್ಯ ಮೈಗೆ ಟ್ಯಾಲೆಟ್ ಸೋಪು ಹಚ್ಚಬಾರದು, ಸೀಗೇ ಪುಡಿಯನ್ನೋ ಕಡ್ಲೆ ಹಿಟ್ಟನ್ನೋ ಮೈಗೆ ತಿಕ್ಕಿ ಮೈಲಿಗೆ ತೆಗೆಯಬೇಕು. ಇವನನ್ನು ಉದ್ಧಾರ ಮಾಡುವುದಕ್ಕೆ ಸೋಪು ಬಳಸುವವರು ಹೆಚ್ಚಿನ ತೆರಿಗೆ ತೆರಬೇಕು.

ಶ್ರೀ ಸಾಮಾನ್ಯ ಮೈದಾ ಮತ್ತು ಅದರ ಉತ್ಪನ್ನಗಳನ್ನು ಬಳಸಬಾರದು. ಬ್ರೆಡ್ಡು—ಬಿಸ್ಕೀಟುಗಳು ವಿಲಾಸಗಳ ತಿಂಡಿಗಳು. ಅವನು ಅಕ್ಕಿ-ರಾಗಿ ಹಿಟ್ಟಿನ ಮುದ್ದೆಗಳನ್ನೇ ತಿನ್ನುತ್ತಿರಬೇಕು.

ಪೆಟ್ರೋಲ್ ಚಾಲಿತ ವಾಹನಗಳಲ್ಲಿ ಶ್ರೀ ಸಾಮಾನ್ಯ ಪ್ರಯಾಣ ಮಾಡಬಾರದು ಜೀವ ಹೋಗುವಂತಹ ಪರಿಸ್ಥಿತಿಯಲ್ಲೂ ಆತನು ಡೀಸಿಲ್ ವಾಹನಗಳನ್ನೋ ಬೈಲ್‌ಗಾಡಿಯನ್ನೋ ಉಪಯೋಗಿಸ ಬೇಕು.

ಶ್ರೀ ಸಾಮಾನ್ಯನು ಖಾಕಿಸಿಗರೇಟುಗಳನ್ನೇ ಸೇದಿ ತೃಪ್ತಿಪಡಬೇಕು. ಬಿಳಿಯ ಸಿಗರೇಟುಗಳು ಭೋಗ ವಸ್ತುಗಳು. ಈ ಇಂದ್ರಲೋಕದ ವೈಭವವನ್ನು ಅನುಭವಿಸಬೇಕೆಂದು ಶ್ರೀಸಾಮಾನ್ಯ ಬಯಸಿದರೆ, ಅದಕ್ಕೊಂದು ಹೆಚ್ಚಿನ ಬೆಲೆ ತೆರಲೇ ಬೇಕು.

ಕೃಷಿಗೆ ಯಂತ್ರ ಬಳಸುವವರು ರಾಸಾಯನಿಕಗಳನ್ನುಪಯೋಗಿಸುವವರು ಶ್ರೀಮಂತರೇ. ಶ್ರೀ ಸಾಮಾನ್ಯ ರೈತರು ತಮ್ಮ ಓಬೀರಾಯನ ಕಾಲದ ಬೇಸಾಯ ಪದ್ಧತಿಯನ್ನೇ ಮುಂದುವರಿಸಬೇಕು—ಇದನ್ನೇ ಪ್ರಗತಿಯೆಂದು ತಿಳಿಯಬೇಕು ಏಕೆಂದರೆ ಅವರು ಪ್ರಗತಿವಾದಿಗಳಿಗೆ ಮತ ನೀಡಿದ್ದಾರೆ.

ಧೂಮಪಾನಾಸಕ್ತರಿಗೆ ದೇಶಸೇವೆ ಮಾಡುವ ಉತ್ತಮ ಅವಕಾಶವನ್ನು ತಾವು ಒದಗಿಸಿ ಕೊಟ್ಟಿರುವುದಾಗಿ ವಿತ್ತ ಸಚಿವರ ಹೇಳಿಕೆ.

ಬಹಳ ಹಿಂದೆ—ದೇಶದಲ್ಲಿ ವಿದೇಶೀ ಬಹಿಷ್ಕಾರದ ಚಳುವಳಿ ನಿರಾತಂಕವಾಗಿ ಸಾಗುತ್ತಿತ್ತು. ಮಳಿಗೆಗಳಿಂದ ವಿದೇಶಿ ಬಟ್ಟೆಗಳನ್ನು ತಂದು ಅಗ್ನಿಗಾಹುತಿ ಮಾಡುತ್ತಿದ್ದರು. ಅಲ್ಲೇ ಮಹನೀಯರೊಬ್ಬರು ತಾವು ಸೇದುವ ಸಿಗರೆಟ್ಟಿನ ಬಗ್ಗೆ ಮಾತಾಡುತ್ತಿದ್ದರು. ಇದು ವಿದೇಶಿ ನಾನು ಅದನ್ನು ಸುಟ್ಟು ವಿದೇಶೀ ಬಹಿಷ್ಕಾರ ಚಳುವಳಿಯಲ್ಲಿ ಸಕ್ರಿಯ ಭಾಗ ವಹಿಸುತ್ತಿದ್ದೇನೆ

ಧೂಮಪಾನದಿಂದ ಆರೋಗ್ಯಕ್ಕೆ ಹಾನಿಯೆಂದು ವೈದ್ಯರು ಧಡಿಗಂಟಲಲ್ಲಿ ಹೇಳ ಹತ್ತಿದ್ದಾರೆ. ಪ್ರತಿ ಸಿಗರೇಟು ಪ್ಯಾಕಿನಲ್ಲೂ 'ಇದು ವಿಷ'ವೆಂದು ಸೂಚಿಸುವ ಚೀಟಿ ಹಚ್ಚಬೇಕೆಂದು ಕೆಲವೆಡೆ ಕೇಳಿಕೆಯಿದೆ. ಧೂಮಪಾನದ ವಿರುದ್ಧ ಚಳುವಳಿಯೂ ಸಂಘಟಿಸಲ್ಪಟ್ಟಿದ್ದಿದೆ ನಮ್ಮ ವಿತ್ತ ಮಂತ್ರಿಗಳು ಧೂಮಪಾನ ಚಳುವಳಿಯು ದೇಶ ಸೇವೆಗೆ ಪೂರಕವೆಂದು ಹೇಳ ಹೊರಟಿದ್ದಾರೆ.

ಆರೋಗ್ಯವನ್ನು ಕೆಡಿಸಿಯಾದರೂ ದೇಶ ಸೇವೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ಮದ್ಯಪಾನವನ್ನು ನಿಷೇಧಿಸಲಾಗದೆ, ಅದನ್ನು ಪ್ಯಾರಿಗೆ ತಂದು ಜನರ ಆರೋಗ್ಯ ಬುದ್ಧಿಗಳನ್ನು ಅಪಹರಿಸಿ ಯೋಜನೆಗಳಿಗೆ ಹಣ ಕೂಡಿಸಿದ ಸರಕಾರಕ್ಕೆ ಇದು ನಾಚಿಕೆಗೇಡೇನೂ ಅಲ್ಲ. ಲಾಟರಿ ಎತ್ತಿ ಜೂಜಾಟಕ್ಕೆಳಸಿ ಹಣ ಕೂಡಿಸುವ ಸರಕಾರಕ್ಕೆ ಲಜ್ಜೆಯ ವಿಷಯವಲ್ಲ.

ನಾಚಿಕೆಯ ವಿಷಯವೆಂದರೆ, ಶ್ರೀ ಸಾಮಾನ್ಯನೂ ಸೇರಿದಂತೆ ನಾಗರಿಕರನ್ನು ನೈತಿಕವಾಗಿ, ಬೌದ್ಧಿಕವಾಗಿ ಶಾರೀರಿಕವಾಗಿ ದುರ್ಬಲಗೊಳಿಸಿ ಅವರಿಂದ ಸುಲಿದ ರಾಶಿ ರಾಶಿ ಸಂಪತ್ತು ಕೆಲವೇ ಬಕಾಸುರರ ಹೊಟ್ಟೆ ಸೇರುತ್ತಿರುವುದು!

ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ತೋರಿಸುವ ಉತ್ಸಾಹದ ಒಂದು ಪಾಲು ಅದರ ವಿನಿಯೋಗದಲ್ಲಿ ಸರಕಾರ ತೋರುವುದಿಲ್ಲ. ಯೋಜನೆಗಳ ಹೆಸರಲ್ಲಿ ಕೋಟಿಗಟ್ಟಲೆ ವೆಚ್ಚವಾಗುತ್ತಿದೆಯೋ ಹೊರತು, ಅದರ ನಿಜಲೆಕ್ಕ ಭಗವಂತನಿಗೇ ಗೊತ್ತು.

ಭೋಗ ವಿಲಾಸ ವಸ್ತುಗಳ ಮೇಲೆ ಅಧಿಕ ಕರ ಹೇರಿ ಶ್ರೀ ಸಾಮಾನ್ಯನಿಗೆ ಅವುಗಳನ್ನು ಬಳಸಲು ನಿಷೇಧ ವಿಧಿಸಿದರೆ, ರೂ. ೨೦೦ ಕೋಟಿ ಕೊರತೆಯನ್ನು ತೋರಿಸಿ ಅರ್ಥ ಸಚಿವರು ಉಳಿದ ಆವಶ್ಯಕ ಪದಾರ್ಥಗಳನ್ನೂ ಎಟುಕದಂತೆ ಮಾಡಿದ್ದಾರೆ.

ಈ ಕೊರತೆ ತುಂಬುವುದು ಹೇಗೆ? ರೂಪಾಯಿ ನೋಟನ್ನು ಅಚ್ಚು ಮಾಡುವುದೊಂದೇ ಇದಕ್ಕಿರುವ ಉಪಾಯ.

ಇದರಿಂದ ಹಣ ಚಲಾವಣೆಯ ಸಮುದ್ರದಲ್ಲಿ ಸುಂಟರ ಗಾಳಿ ಏಳುತ್ತದೆ; ಒಡನೆ ವಸ್ತುಗಳ ಬೆಲೆಯನ್ನು ಮತ್ತಷ್ಟು ಎತ್ತರಕ್ಕೆ ಹಾರಿಸುತ್ತದೆ.

ಶ್ರೀ ಸಾಮಾನ್ಯ ಅವುಗಳ ಗಾಳಿಪಟದಾಟ ನೋಡುತ್ತ ಕಣ್ ಕಣ್ ಬಿಡುವುದು ತಪ್ಪುವುದಿಲ್ಲ.

ಬಂಗ್ಲಾದೇಶದ ನಿರಾಶ್ರಿತರ ಪುನರ್ನಿವೇಶನ ಕಾರ್ಯ ನಮ್ಮ ಕರ್ತವ್ಯ. ವಿಶ್ವದ ಮಾನವತಾವಾದಿಗಳು ಕೈಕಟ್ಟಿ ಕುಳಿತರೂ ನಾವು ಉದಾರರು. ಅತ್ಯುದಾರರು.

ಬಂಗ್ಲಾದೇಶವಿಂದು ಸ್ಮಶಾನ ಸದೃಶವಾದುದರಿಂದ ಅಲ್ಲಿ ಮುಂದಿನ ವರ್ಷ ಭೀಕರ ಬರಗಾಲ ಬರುವುದು ಸಹಜವೇ. ಬಂಗ್ಲಾದೇಶೀಯರು ಭತ್ತ ರಾಗಿ ಬೆಳೆದರೂ ಪಾಕ್ ಪಡೆಗಳು ಅವನ್ನು ನಾಶಮಾಡುವುದೂ ಸಹಜವೇ.

ಆಗ, ಭಾರತ ಸರಕಾರ ಸುಮ್ಮನಿರುವುದಾದೀತೆ? ಅಥವಾ ಭಾರತೀಯರು ಸುಮ್ಮಗುಳಿದಾರೆ? ನಾನಾ ಮಾರ್ಗಗಳಿಂದ ಆವಶ್ಯಕ ಪದಾರ್ಥಗಳು ಬಂಗ್ಲಾದೇಶಕ್ಕೆ ಹರಿದೇ ಹೋಗುತ್ತವೆ.

ಇಲ್ಲಿ ಅಭಾವ ಪರಿಸ್ಥಿತಿ ಪರಿಣಾಮ—ಇನ್ನೂ ಬೆಲೆಯೇರಿಕೆ.

ಶ್ರೀ ಸಾಮಾನ್ಯನು ೧೫ ಮೀಟರ್‌ಗಿಂತ ದೂರ ರೇಲಿನಲ್ಲಿ ಪ್ರಯಾಣ ಮಾಡಬಾರದೆಂದು ವಿಧಿಸಿದ ರೇಲ್ವೆ ಸಚಿವರು ಆತನಿಗೆ ಮತ್ತಾವ ದಾರಿಯನ್ನೂ ತೋರಿಸಿಕೊಡಲಿಲ್ಲ.

ಸಮಾಜವಾದದ ಹೆಸರಿನಲ್ಲಿ, ಸಮಾಜದ ಮುಖ್ಯಾಂಗವಾದ ಮಧ್ಯಮ ವರ್ಗದ ತಲೆಯ ಮೇಲೆ ಕಡೆಯುವ ಕಲ್ಲನ್ನಿಟ್ಟು, ಬಡ ವರ್ಗವನ್ನು ಮೆಟ್ಟಿದ್ದಾರೆ, ಸಚಿವರು.

ಆರ್ಥಿಕರಂಗ ಪುನಶ್ಚೇತನಗೊಳ್ಳಬೇಕೆಂಬುದು ಇನ್ನೂ ಮಾತಿನಲ್ಲೇ ಉಳಿದಿದೆ; ಕೃತಿಗಿಳಿಯಲಿಲ್ಲ. ಮಿತವ್ಯಯದ ಮಾತ ಬರಲಿಲ್ಲ; ತೆರಿಗೆವಸೂಲಿಯ ಕರ್ತವ್ಯದ ಕರೆ ಕೇಳಿಸಲಿಲ್ಲ. ಮಂತ್ರಿಯೊಬ್ಬನು ನಾಲ್ಕು ಲಕ್ಷ ರೂಪಾಯಿಗಳನ್ನು ನಿರಾತಂಕವಾಗಿ ವೆಚ್ಚ ಮಾಡಬಹುದಾದರೆ, ದೇಶದಲ್ಲಿ ಸಮಾಜವಾದ ಹೇಗೆ ಬಂದೀತು, ಯಾಕೆ ಬಂದೀತು?

ದೇಶದ ಪ್ರಜೆಯ ಸರಾಸರಿ ಆಯ ಇನ್ನೂ ನಾಲ್ಕು ನೂರನ್ನು ಮುಟ್ಟಲಿಲ್ಲದಿರುವಾಗ!

●

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. 147/1970

ನಾರಾಯಣ ಶೆಟ್ಟಿ —ವಾದಿ

N. ಲಕ್ಷ್ಮಣ ಹೆಗ್ಡೆ—ಪ್ರತಿವಾದಿ

ಕಾರ್ಕಳ ಕಸಬಾ ಸಾಲ್ಮಾರದಲ್ಲಿರುವ ನಾರಾವಿ ಕೃಷ್ಣ ಹೆಗ್ಡೆರ ಮಗ Hotel-keeper N. ಲಕ್ಷ್ಮಣ ಹೆಗ್ಡೆರಿಗೆ

ಡಿಮಾಂಡು ಪ್ರೊಮಿಸರಿ ನೋಟಿನ ಬಾಬ್ತು ರೂ. 233/- ಬರಮಾಡಿಕೊಳ್ಳುವರೆ ವಾದಿಯು ದಾಖ್ಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 16_6_1971 ಕ್ಕೆ ಇಟ್ಟದ್ದು ನೀವು ಸದ್ರಿ ದಿನ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉತ್ತರಿಸ ತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

K. S. Hegde
ವಾದಿ ಕಡೆ ಎಡ್ವೋಕೇಟ್

Karkala, 30-5-1971.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಇಲ್ಲವಾದರೆ ಅನಿವಾರ್ಯವಾಗಿ ನಾವು ಮಾಡುವ ವಿ. ಪಿ.ಯನ್ನು ಪಡಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Edited, Printed & Published by K. H. Shetty at the Navayuga Press, Udipi, S. India.

ಸುವರ್ಣೋತ್ಸವ ವರ್ಷ

ನವಯುಗ

ಸಂಪುಟ 50
ಸಂಚಿಕೆ 40

NAVAYUGA

17—6—1971

ಚಾರುಚಯನ :

ದಾನವತೆ ವಿಜಯ ಸಾಧಿಸಬೇಕೆ?

ಪಾಕಿಸ್ತಾನದಲ್ಲಿ ಅಂತಃಕಲಹ, ಬಂಗ್ಲಾ ದೇಶೀಯರಿಂದ ಸ್ವತಂತ್ರ ಬಂಗ್ಲಾದೇಶದ ಘೋಷಣೆ, ಇದಕ್ಕೆ ಕಾರಣ ಪಶ್ಚಿಮ ಪಾಕಿಸ್ತಾನದ ಶೋಷಣೆ.

ಅಧ್ಯಕ್ಷ ಯಾಹ್ಯಾ ಬಂಗ್ಲಾವನ್ನು ಸದೆಬಡಿಯಲು ಬದ್ಧಕಟಿ. ದೇಶ ಸ್ಮಶಾನವಾದ..ರೂ ಸರಿಯೇ. ಪೂರ್ವ ಪಾಕಿಸ್ತಾನ ಬಂಗ್ಲಾ ದೇಶೀಯರ ಕಬ್ರಸ್ತಾನವಾದರೂ ಸರಿಯೇ ತನ್ನ ಸೈನ್ಯಶಕ್ತಿಯಲ್ಲಿ ಅವರಿಗೆ ಭಾರಿ ವಿಶ್ವಾಸ.

ಅಮೆರಿಕೆ, ರಶ್ಯ, ಕೆಂಪು ಚೀನ, ಅರಬ ಕುಟುಂಬಗಳು ತನಗೆ ನೀಡಿದ ಎರವಲು ಶಕ್ತಿ ಸ್ಥಿರಶಕ್ತಿಯೆಂದವರ ದೃಢ ನಂಬುಗೆ. ಕಡಿಮೆಯೆನಿಸಿದರೆ, ಅವರು ಮತ್ತೂ ಕೊಡಬಹುದು. ಕೆಂಪು ಚೀನಾವಂತೂ ಇದೆಕೋ ಎನ್ನುತ್ತದೆ; ಸೈನಿಕರಿಗೆ ತರಬೇತಿಯನ್ನೂ ನೀಡುತ್ತದೆ.

ಪಾಕ್ ದೌರ್ಜನ್ಯ ಪರಮಾವಧಿ ತಲಪಿದೆ; ಬಂಗ್ಲಾ ದೇಶೀಯರ ಮನಸ್ಸು ಮುರಿದಿದೆ.

ಪಾಕ್ ಸೈನಿಕರಿಂದ ತಮ್ಮ ಜೀವ ರಕ್ಷಣೆಗಾಗಿ ಬಂಗ್ಲಾದೇಶೀಯರು ಹೋರಾಡುತಿದ್ದಾರೆ. ಹೆಂಗಸರು ಮಕ್ಕಳು—ಮುದುಕರು ನಿರಾಶ್ರಿತರಾಗಿ ಹೋಗಿದ್ದಾರೆ, ಭಾರತಕ್ಕೆ ಓಡಿಬಂದಿದ್ದಾರೆ.

ಹೀಗೆ ಓಡಿಬಂದ ನಿರಾಶ್ರಿತರ ಸಂಖ್ಯೆ ಈಗಾಗಲೇ ೮೦ ಲಕ್ಷವನ್ನು ಮೀರಿದೆ—ಇದು ಅಧಿಕೃತ ಸಂಖ್ಯೆ. ಅನಧಿಕೃತ ಸಂಖ್ಯೆ ಇನ್ನೂ ಕೆಲನಾರು ಲಕ್ಷಗಳಷ್ಟು ಹೆಚ್ಚಿರಲೇಬೇಕು.

ಈ ಸಂಖ್ಯೆಯೇನೂ ಕಡಮೆಯಲ್ಲ. ನಮ್ಮ ೫೫ ಕೋಟಿ ಜನ ಸಂಖ್ಯೆಯ ಬೃಹತ್ ಸಮಸ್ಯೆಗಳೊಡನೆ ಈ ೮೦ ಲಕ್ಷ ನಿರಾಶ್ರಿತರ ಸಮಸ್ಯೆಗಳನ್ನೂ ಎದುರಿಸಬೇಕಾದ ಮಾನವ ಕರ್ತವ್ಯ ನಮ್ಮ ಮೇಲೆ.

ಭಾರತ ವಿಭಜನೆಯ ವೇಳೆ ಮತ್ತು ಆನಂತರದ ಹಲವು ಸಂದರ್ಭಗಳಲ್ಲೂ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ನಿರಾಶ್ರಿತರು ಬಂದಿರಲಾರರು.

ಪಾಕ್ ನಿರಾಶ್ರಿತರಿಗೆ ಪುನರ್ವಸತಿಯನ್ನೊದಗಿಸುವ ಹೊಣೆಗಾರಿಕೆ ನೈತಿಕವಾಗಿ ಭಾರತದ್ದೇ. ಆದರೆ, ಈ ಸಾಗರೋಪಮ ನಿರಾಶ್ರಿತರನ್ನು ನೆಲೆ ನಿಲ್ಲುವಂತೆ ಮಾಡುವುದು ಬರಿಯ ಭಾರತದಿಂದ ಅಸಾಧ್ಯ.

ಅವರಿಗೆ ವಸತಿ, ಅಶನ, ವಸನ ಚಿಕಿತ್ಸೆಗಳನ್ನು ಕಲ್ಪಿಸಿಕೊಡುವಲ್ಲಿ ಜಾಗತಿಕ ನೆರವಿನ ಅಗತ್ಯವಿದ್ದೇ ಇದೆ.

ಪ್ರಧಾನಿ ಇಂದಿರಾ ಗಾಂಧಿಯವರು ಬಂಗಾಳಕ್ಕೆ ಸಂದರ್ಶನ ನೀಡಿದರು. ನಿರಾಶ್ರಿತರನ್ನು ಹೇಗೆ ನೆಲೆಗೊಳಿಸಬಹುದೆಂಬುದನ್ನು ಪರಿಶೀಲಿಸುವುದೇ ಅವರ ಭೆಟ್ಟಿಯ ಉದ್ದೇಶ.

ನಿರಾಶ್ರಿತರು ಪೂರ್ವಬಂಗಾಳದ ಸರಕಾರಕ್ಕೆ ದೊಡ್ಡ ತಲೆನೋವು. ಇವರ ಪುನರ್ವಸತಿಯನ್ನು ಕೇಂದ್ರವೇ ಮಾಡಬೇಕು ಎಂಬುದು ಮುಖ್ಯಮಂತ್ರಿ ಅಜಯ ಮುಖರ್ಜಿಯ ಖಚಿತಾಭಿಪ್ರಾಯ.

ಒಂದು ವೇಳೆ ಕೇಂದ್ರವು ಈ ಬಗೆ ಪರಿಪೂರ್ಣ ಆಸಕ್ತಿ ತೋರಿಸದೆ ಹೋದರೆ, ತಾನು ರಾಜಿನಾಮೆ ನೀಡುವುದಾಗಿ ಬೆದರಿಕೆ ಬೇರೆ.

ಸಂರಕ್ಷಣಾ ಸಚಿವ ಜಗಜ್ಜೀವನರಾಮರ ಕಾಲಡಿಯ ನೆಲವೇ ಕುಸಿದುಹೋಗಿದೆ; ಶ್ರೀಮತಿ ಗಾಂಧಿಯ ಕೈಕಾಲುಗಳು ನಡುಗಹತ್ತಿವೆ.

ಭಾರತವಿದುವರೆವಿಗೂ ಹತ್ತು-ಹಲವು ಸಮಸ್ಯೆಗಳನ್ನೆದುರಿಸಿದೆ; ದಿಟ್ಟತನದಿಂದ, ತನ್ನ ಶಕ್ತಿ ಸರ್ವಸ್ವವನ್ನೂ ಕೇಂದ್ರೀಕರಿಸಿ ಅದು ಯಶ ಗಳಿಸಿದೆ.

ಆದರೆ, ಈ ಬಂಗ್ಲಾ ನಿರಾಶ್ರಿತರ ಸಮಸ್ಯೆ ಪರಿಹಾರವೆಂದರೆ ಸಾಗರವನ್ನು ಈಸಿ ದಾಟುವಂತೆ ಎನಿಸಹತ್ತಿದೆ.

ಬಂಗ್ಲಾದೇಶವಲ್ಲಿ ಯಾಹ್ಯಾಖಾನರು ಕ್ಷಣಕ್ಷಣಕ್ಕೂ ನರಮೇಧವನ್ನು ಮುಂದುವರಿಸುತಿದ್ದಾರೆ. ಅವರ ಸ್ನೇಹಿತರೆಲ್ಲ ಕೈಕಟ್ಟಿ ಷಂಡರಾಗಿ ನೋಡುತ್ತಿದ್ದಾರೆ.

ಜನಮೇಜಯನ ಸರ್ಪಮೇಧದ ನೆನಪು ಬರುತ್ತಿದೆ. ಅದಕ್ಕೊಂದು ಕೊನೆಯಾದರೂ ಬಂತು; ಇದಕ್ಕೆ ಇನ್ನೂ ಕೊನೆಯಾಗಿಲ್ಲ.

ನೆರೆಯ ನೀರ ಪ್ರವಾಹದಂತೆ ನಿರಾಶ್ರಿತರ ಪ್ರವಾಹ ಭಾರತದತ್ತ ಹರಿಯುತ್ತಿದೆ. ಸಾಗರದ ತೆರೆಗಳಂತೆ ಭಾರತದ ಗಡಿಗೆ ಅಪ್ಪಳಿಸಿ ಬಯಲಲ್ಲಿ ಹರಡುತ್ತಿದೆ.

ಇದಕ್ಕೇನು ಪರಿಹಾರ?

ವಿಶ್ವದ ಸಂಪನ್ನ ದೇಶಗಳು ಆರ್ಥಿಕವಾಗಿ ನಿರಾಶ್ರಿತರಿಗೆ ನೆರವು ನೀಡಬಹುದು. ಇಷ್ಟರಿಗೆ ಸಾಕು? ಭೀಮನೊಡಲಿಗೆ ಕಾಸಿನ ಮಜ್ಜಿಗೆ ಮಾತ್ರ.

ನಿರಾಶ್ರಿತರು ದೇಶದ ನಾಗರಿಕರೊಂದಿಗೆ ಬೆರೆತು ಹೋದರೆ, ದೇಶಕ್ಕೆ ಅಪಾಯ. ಶಾಂತಿ-ಶಿಸ್ತು ಪಾಲನೆಯಲ್ಲಿ ಜೀವ ನಿರುಪಾಯ.

ಅವರಿಗೆ ಶಕ್ಯವಿದ್ದಲ್ಲೆಲ್ಲ ಪ್ರತ್ಯೇಕ ಶಿಬಿರ ಕಟ್ಟಬೇಕು; ಜೀವನಾವಶ್ಯಕ ಸೌಲಭ್ಯಗಳನ್ನು ಕಲ್ಪಿಸಬೇಕು. ಇವಕ್ಕಾಗಿ ಹಣ ಬೇಕು, ಜನಬೇಕು.

ಜನವಾದರೂ ದೊರೆತೀತು, ಹಣ? ನಮ್ಮ ಬಜೆಟ್ಟಿನಲ್ಲಿ ೬೦ ಕೋಟಿ ರೂಪಾಯಿಗಳನ್ನು ವಿಂಗಡಿಸಿಟ್ಟಿದೆ, ಇದು ಎಲ್ಲಿಯ ತನಕ ಸಾಕು? ಭಾರತ ಬೇಡದ ಬಯಸದ ಸಮಸ್ಯೆಯೊಂದನ್ನು ಅಧ್ಯಕ್ಷ ಯಾಹ್ಯಾ ಖಾನರು ತಂದೊಡ್ಡಿದರು.

ಅಯೂಬಖಾನರು ಶಸ್ತ್ರಾಸ್ತ್ರಗಳೊಡನೆ ಭಾರತದೊಡನೆ ಹೋರಾಡಿದರೆ, ಯಾಹ್ಯಾಖಾನರು ಈ ರೀತಿಯ ಹೋರಾಟವನ್ನು ತಂದುಹಾಕಿದರು.

ಈ ಹೊಣೆ ಯಾಹ್ಯಾಖಾನರದ್ದೇ ಎಂಬುದು ನಿಸ್ಸಂಶಯ. ಆದರೆ, ಹೊಣೆಯನ್ನು ಯಾರೊಬ್ಬರ ಮೇಲಾದರೂ ಹೊರಿಸಿದ ಮಾತ್ರಕ್ಕೆ ಪಾರಾಗುವುದು ಸಾಧ್ಯವಿಲ್ಲ. ಸಮಸ್ಯೆಯ ಸುಳಿಯಲ್ಲಿ ನವೆಯುವುದು ತಪ್ಪುವುದಿಲ್ಲ.

ಭಾರತ-ಪಾಕ್ ಗಡಿಯೂ ಶಾಂತವಾಗಿಲ್ಲ. ಗಡಿಯುದ್ದಕ್ಕೂ ಪಾಕ್ ಸೈನಿಕರು ತುಂಬಿಹೋಗಿದ್ದಾರೆ.

ಯಾಹ್ಯಾಖಾನರಿಗೆ ಭಾರತದ ಮೇಲೆ ಮುನಿಸು. ಬಂಗ್ಲಾದೇಶ ಸ್ವಾತಂತ್ರ್ಯ ಸಂಗ್ರಾಮಕ್ಕೆ ಅದು ಬೆಂಬಲ ನೀಡುವುದೆ?

ಮೊದಲೆ ಸರ್ಪ; ಈಗ ಅದರ ಅಭಿಮಾನಕ್ಕೆ ಗಾಯ; ಹೆಡೆಯರಳಿಸಿ ಬುಸುಗುಟ್ಟಿ ಕಡಿಯಲೆಂದೇ ಆಶಯ.

ನಿರಾಶ್ರಿತರ ಹೊರೆ ಹೊರಲಾರದೆ ಭಾರತ ಬಂಗ್ಲಾದೇಶಕ್ಕೆ ಮನ್ನಣೆ ನೀಡುವುದೆ? ಸೈನಿಕ ಸಹಾಯ ಕೊಡುವುದೆ?

ಕೊಟ್ಟಿತೆಂದರೆ, ಪಾಕ್-ಭಾರತ ಯುದ್ಧ ಸುನಿಶ್ಚಿತ. ಯಾಹ್ಯಾ ಇದನ್ನೇ ಕಾಯುತಿದ್ದಾರೆ.

ವಿಶಾಲ ಜಗತ್ತಿನ ಮಾನವತಾವಾದಿಗಳು, ಸುಸಂಸ್ಕೃತರು, ಸುನಾಗರಿಕರು, ಶ್ರೀಮಂತರು, ಬುದ್ಧಿಜೀವಿಗಳು ಅವರು ಇವರು ಎಲ್ಲರೂ ಯಾಹ್ಯಾ ನರಮೇಧ ನೋಡಲಾಗದೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದಾರೆ. ಇದರಿಂದಲೇ ತೃಪ್ತರಾಗಿದ್ದಾರೆ.

ಆದರೆ, ನರಮೇಧ ತಡೆಯುವ ಇಚ್ಛೆಯಾರೊಬ್ಬರಿಗೂ ಇದ್ದಂತಿಲ್ಲ.

ಅಧಿಕಾರಾರೂಢರು, ಶಕ್ತಿಸಂಪನ್ನರು ಯಾಹ್ಯಾ ಅನ್ಯಾಯವನ್ನು ರಾಕ್ಷಸೀ ಕೃತ್ಯವನ್ನು ತಡೆಯಲು ಇಚ್ಛಿಸಿಲ್ಲ.

ಇದೇಕೆ ಹೀಗೆ?

ಜನನಾಯಕರಿಗೆ ಅರಿಯದ ಈ ಪ್ರಶ್ನೆಯನ್ನು ಜಗನ್ನಾಯಕನೇ ಉತ್ತರಿಸಬೇಕು.

ಅದುವರೆಗೂ ಭಾರತದ ಪ್ರಗತಿಯನ್ನು ಅನಿವಾರ್ಯವಾಗಿ ತಡೆಹಿಡಿಯಲೇಬೇಕು.

ಪಾಕ್ ನಾಯಕರು ತಮ್ಮ ದೇಶವನ್ನು ಬೆಳೆಸಲಿಲ್ಲ. ಇತರ ದೇಶ ಬೆಳೆಯುವುದನ್ನೂ ಅವರಿಂದ ನೋಡಲಾಗುವುದಿಲ್ಲ. ಅವರು ತೊಡಗಿದ ಈ ನರಮೇಧ ಅವರನ್ನೂ ನಮ್ಮನ್ನೂ ಒಂದಾಗಿ ಪಾತಳಿಗಿಳಿಸುತ್ತದೆ.

ವಿಶಾಲ ಜಗತ್ತಿನ ಜನನಾಯಕರು ಗಂಭೀರತೆಯನ್ನು ಬದಿಗಿಡಬೇಕು; ಯಾಹ್ಯಾಖಾನರ ಕೈ ತಡೆಯಬೇಕು; ನರಮೇಧವನ್ನು ಕೊನೆಗಾಣಿಸಬೇಕು. ಅದು ಆಂತರಿಕ ವ್ಯವಹಾರವೆಂದು ಸುಮ್ಮನುಳಿದರೆ, ಮಾನವತೆಯ ಮೇಲೆ ದಾನವತೆ ವಿಜಯ ಸಾಧಿಸುತ್ತದೆ. ●●

ಪ್ರಜೆಗಳ ಮುಂದೆ ಅನೇಕ ಅಭಿಪ್ರಾಯಗಳನ್ನು ಇಡುವುದರಿಂದ ಅವರ ಬುದ್ಧಿ ಭೇದವಾಗಿ ಬಿಡುತ್ತದೆ. ಇಲ್ಲಿಯ ಪ್ರಜೆಗಳು ಮೊದಲಿನಿಂದಲೇ ಜಡವೃತ್ತಿಯವರು. ನೇಲಾಗಿ ಈ ರೀತಿ ಬುದ್ಧಿಭೇದ ಉಂಟಾದ ಮೇಲೆ ಕೇಳುವುದೇನು? ಜಡತೆಯು ಇನ್ನಷ್ಟು ಹೆಚ್ಚುವುದು. ಭಿನ್ನ ಭಿನ್ನ ಪಕ್ಷಗಳು ಪರಸ್ಪರರ ಖಂಡನೆ ಮಾಡುತ್ತಾ ಉಳಿದರೆ ಪ್ರಜೆಗಳ ಶ್ರದ್ಧೆಯು ಸ್ಥಿರವಾಗದು.

०० ०० ००

ಈಗ ಚಿಕ್ಕ ಚಿಕ್ಕ ರಾಷ್ಟ್ರಗಳು ಬದುಕಿರಲಾರವು. ಅದರಂತೆ ಚಿಕ್ಕ ಚಿಕ್ಕ ಮನೆತನಗಳು ಸಹ ಬದುಕಿರಲಾರವು. ಮುಂದಕ್ಕೆ ಇಡೀ ಊರನ್ನು ಒಂದು ಕುಟುಂಬವೆಂದು ತಿಳಿದು ನಡೆದರೆಯೇ ಮಾತ್ರ ಉಳಿಗಾಲ.

ಚರಿತ್ರಾರ್ಹ ಮೊಕದ್ದಮೆಗಳು-೬

ಶಂಷದೆಯ ಕೊಲೆ

ಬರೆದವರು: ಶ್ರೀ ಬಿ. ಕೃಷ್ಣ ಭಟ್, ಭದ್ರಾವತಿ

ಮಹಮದ್ ನವಾಜ್ ಖಾನ್ 1911ರಲ್ಲಿ ಝುಂಗಿನಲ್ಲಿ ಜನಿಸಿದರು ಅವರು ಅವರ ತಂದೆ—ಮೆಹರ್ ಹಕ್ ನವಾಜ್ ಖಾನರ—ಯ ಒಬ್ಬನೇ ಮಗ. ಹುಟ್ಟಿದ ಕೆಲ ವರ್ಷಗಳಲ್ಲಿ ಅವರು ತಂದೆಯನ್ನು ಕಳೆದುಕೊಂಡರು. ಅವರ ತಂದೆಗೆ ಇಬ್ಬರು ಹೆಂಡಿರು. ತಾಯಿ, ಬಲತಾಯಿ ಇಬ್ಬರೂ ಅವರನ್ನು ಪ್ರೀತಿಯಿಂದ ಪಾಲನೆ ಮಾಡಿದರು.

ಅವರದು ನವಾಬರ ಮನೆತನ. ತಂದೆ ಮಗನಿಗೆ ಹೇರಳ ಸಂಪತ್ತನ್ನು ಬಿಟ್ಟು ಹೋಗಿದ್ದರು. ಪಂಜಾಬಿನಲ್ಲೇ ಅತಿದೊಡ್ಡ ಜಹಗೀರಿ ಅವರದು. ಅದರಿಂದ ಹೇರಳ ಆದಾಯ ಬರುತಿತ್ತು. ಪಂಜಾಬಿನಲ್ಲೇ ಅತಿ ದೊಡ್ಡ ಜಹಗೀರಿ ಅವರದು. ಅದರಿಂದ ಪಂಜಾಬಿನ ಅನೇಕ ರಾಜ ಮನೆತನದವರಿಗೆ, ಅವರ ಆದಾಯವಿರಲಿಲ್ಲ. ಅವರಿಗೆ ಸುಖ-ಸವಲತ್ತುಗಳಿಗೆ ಕೊರತೆಯಿಲ್ಲ.

ಬಾಲ್ಯವಲ್ಲೆ ಅವರಿಗೆ ಸಿಕ್ಕಿದ್ದು ಒಳ್ಳೆಯ ಶಿಕ್ಷಣ. ಹಲವರನ್ನು ಪಳಗಿಸಿದ ಶ್ರೇಷ್ಠ ದರ್ಜೆಯ ಐರೋಪ್ಯ ಶಿಕ್ಷಕರು ಅವರಿಗೆ ದೊರೆತರು. ಆ ದಿನಗಳಲ್ಲಿ ಪಂಜಾಬಿನ ಆ ವ್ಯಂತ ಹರಡಿದ್ದ ರಾಜ ಮನೆತನದ ಹೊಸ ಪೀಳಿಗೆಯವರು ಬರ್ಬರತೆಯ ಸಾಕಾರ ಸ್ವರೂಪರು. ಅವರನ್ನು ಸಭ್ಯ ಪ್ರಜೆಗಳನ್ನಾಗಿ ರೂಪಿಸಿದ ಕೀರ್ತಿ ಲಾಹೋರಿನ ಅಚಿಸನ್ ಕಾಲೇಜಿಗೆ—ಆ ಕಾಲೇಜಿನಲ್ಲಿ ಅವರು ಉಚ್ಚ ಶಿಕ್ಷಣ ಪಡೆದರು. ಕಲಿಯುವಿಕೆಯಲ್ಲಿ ಹೇಳುವ ಬುದ್ಧಿಮತ್ತೆಯನ್ನು ಅವರು ಪ್ರದರ್ಶಿಸಲಿಲ್ಲ. ಆದರೂ ಓರಗೆಯವರ, ಗುರುಗಳ ಪ್ರೀತಿ-ವಾತ್ಸಲ್ಯಗಳನ್ನು ಗಳಿಸಿಕೊಂಡಿದ್ದರು. ಒಳ್ಳೆಯತನ, ಸಭ್ಯತೆಗಳಿಗೆ ಅವರು ಹೆಸರು ಸಂಪಾದಿಸಿದ್ದರು. ಅವರು ನೋಡಲು ಸ್ಫುರದ್ರೂಪಿ.

ವಿದ್ಯೆ-ಸಂಪತ್ತು-ರೂಪು, ಮೂರನ್ನೂ ಅವರು ಪಡೆದು ಬಂದಿದ್ದರು. ಅವರಿನ್ನೂ ಕಾಲೇಜಿನಲ್ಲಿದ್ದಾಗಲೇ ಅನೇಕ ತಾಯಂದಿರಿಗೆ ಅವರನ್ನು ಅಳಿಯ ಮಾಡಿಕೊಳ್ಳುವ ಆಸೆ. ಹೀಗೆ ಕಣ್ಣು ಹಾಕಿದವರು ಹಲವರು. ಬುಟ್ಟಿಯೊಳಗೆ ಬೀಳಿಸಿಕೊಂಡವರು ಪಂಜಾಬಿನ ಶಿಕ್ಷಣ ಮಂತ್ರಿ ಶ್ರೀ ಮಿಯಾನ್ ಫಜ್ಲ-ಇ-ಹುಸೇನರ ಪತ್ನಿ. ಶ್ರೀ ಹುಸೇನರ ಮಗಳೊಡನೆ ಅವರ ಮದುವೆ ವಿಜೃಂಭಣೆಯಿಂದ ನಡೆಯಿತು. ಮಹಮದ್ ನವಾಜ್ ಮನಸ್ಸು ಮಾಡಿದ್ದರೆ ಏನೂ ಆಗಬಹುದಿತ್ತು. ರೂಪವತಿಯೂ ಸುಶಿಕ್ಷಿತಳೂ ಆದ ಬೀಬಿ ಮನೆಯಲ್ಲಿದ್ದಳು. ಖರ್ಚು ಮಾಡಲು- ಮಾಡಿದರೂ ಮುಗಿಯದ- ಕೈತುಂಬ ಹಣ. ಪ್ರತಿಷ್ಠಿತ ಮಾವ ಬೇರೆ ದೊರಕಿದ್ದ. ಅವರ ಪ್ರಭಾವ, ತನ್ನ ಹಣ, ಎರಡನ್ನೂ ಬಳಸಿಕೊಂಡು ಸಾರ್ವಜನಿಕ ಜೀವನದಲ್ಲಿ ಸ್ಥಾನ-ಮಾನ ಸಂಪಾದಿಸಬಹುದಿತ್ತು. ಆದರೆ ಅವರ ಜಾಯಮಾನಕ್ಕೆ ಅದು ದಕ್ಕಲಿಲ್ಲ.

ಅವರು ದಾರಿ ತಪ್ಪಿದರು; ದುರ್ವ್ಯಸನಗಳಲ್ಲಿ ಮುಳುಗಿದರು-ಕುಡಿತ, ಹಾದರಕ್ಕೆ ಹಣವನ್ನು ಹೊಳೆಯಂತೆ ಹರಿಸಿದರು-ಒಮ್ಮೆ ಜಾರಿ ಬಿದ್ದ ಅವರು, ಆ ಜಾರುದಾರಿಯಲ್ಲಿ ಪ್ರವಾಹದತ್ತ ಸಾಗಿದರು. ಕೈ ಹಿಡಿದು ನಡೆಯಿಸುವ ಹೆಂಡತಿ ಮಗುವೊಂದಕ್ಕೆ ಜನ್ಮವಿತ್ತಳು. ಕೂಸು ಹುಟ್ಟಿದ ಮೇಲಾದರೂ ಅವರು ಸರಿ ದಾರಿಗೆ ಬರಬಹುದು, ಹೊರಚಾಳಿ ಕುಡಿತ ನಿಲ್ಲಬಹುದು ಎಂದು ತರ್ಕಿಸಿದ್ದ ಬಳಗದವರು ನಿರಾಶರಾದರು. ಅಪಾರ ಸಂಪತ್ತು ಖರ್ಚಿಗೆ ಸಾಲದೆ ಬಂತು. ಅವರು ಸಾಲ ಎತ್ತಿದರು. ಆಸ್ತಿ-ಪಾಸ್ತಿಗಳನ್ನು ಅಡ ಹಾಕಿ ದುಂದುಗಾರಿಕೆಯ ಜೀವನ ಮುಂದುವರಿಸಿದರು ದೇಹ ರೋಗಗಳ ಆಗರವಾಯಿತು. ತುಂಬು ತಾರುಣ್ಯದಲ್ಲಿ ಮುಪ್ಪು ಅವರನ್ನಪ್ಪಿತು. ಅವರು ಹೆಂಡತಿಯನ್ನು ವಿಧಿವತ್ತಾಗಿ ತೊರೆದರು. ಇನ್ನೊಬ್ಬಳನ್ನು ಮದುವೆಯಾದರು. ಅವಳ ಪುಣ್ಯ—ಮದುವೆಯಾದ ವರ್ಷದೊಳಗೆ ತೀರಿಕೊಂಡಳು.

1941ರ ಅಕ್ಟೋಬರ್ 23ರಂದು ಅವರು ಚಿಕಿತ್ಸೆಗೆಂದು ಲಾಹೋರಿಗೆ ಬಂದರು. ಲಾಹೋರಿನ ಫಲೆಟ್ಟಿ ಹೋಟೆಲಲ್ಲಿ ಇಳಿದು ಕೊಂಡರು. ಅವರ ದೌರ್ಬಲ್ಯವನ್ನು ತಿಳಿದಿದ್ದ ಜನ, ಶಂಷದೆಯನ್ನು ಅವರ ಬಳಿಗೆ ಕರೆತಂದರು. ಆಕೆ ವೃತ್ತಿಯಿಂದ ನರ್ತಕಿ, ಮೈಯನ್ನು ಮಾರಿ, ಶ್ರೀಮಂತರ ಮನ ತಣಿಸುವುದು ಅವಳ ಕುಲ ಕಸುಬು. ಆಕೆ ನವಾಬರ ಮುಂದು ನರ್ತಿಸಿದಳು; ಹಾಡಿದಳು. ಅವಳ ರೂಪು-ಯೌವನ, ಬೆಡಗು-ಬಿನ್ನಾಣಗಳಿಗೆ ನವಾಬರು ಸೋತರು. ಆ ರಾತ್ರಿಯನ್ನು ಅವಳು ಅವರೊಡನೆ ಕಳೆದಳು. ಆಗ ಶಂಷದೆಯ ವಯಸ್ಸು ಹದಿನೈದು. ತೃಪ್ತರಾದ ನವಾಬರು ಅಂದಿನ ರಾತ್ರಿಯೊಂದಕ್ಕೆ ಅವಳಿಗೆ ಕೊಟ್ಟ ತಲುಬು ಬರಿಯ 1700—00 ರೂಪಾಯಿಗಳು. ಆಕೆಗೋ-ಭಾಗ್ಯ ತನ್ನ ಕಾಲ ಬುಡದಲ್ಲಿ ಕಳಚಿ ಬಿದ್ದಂತೆ ಭಾಸವಾಯಿತು-ತನ್ನ ಜೊತೆ ಮುಲ್ತಾನಿಗೆ ಬರುವಂತೆ ನವಾಬರು ಅವಳನ್ನು ಒತ್ತಾಯಿಸಿದರು.

ಕೇಳದೆಯೆ ಹಿಡಿ ಹೊನ್ನು ಸುರಿಸುವ ರಕ್ಷಕ ದೊರೆತಾಗ ಅವಳೆಲ್ಲಿ ಒಲ್ಲೆ ಎನ್ನುತ್ತಾಳೆ; ಅವಳು ಒಪ್ಪಿಕೊಂಡಳು. ಮರುದಿನ-ನವೆಂಬರ್ ಏಳರಂದು-ನವಾಬರು ಪರಿವಾರ ಸಮೇತ ಮುಲ್ತಾನಿಗೆ ಹೊರಟರು. ಶಂಷದೆ, ಅವಳಣ್ಣ ತಲೀಬ್, ನವಾಬರು ಮೊದಲ ತರಗತಿಯಲ್ಲಿ ಕುಳಿತರು. ಸೇವಕರು ಮೂರನೆಯ ದರ್ಜೆಯ ಡಬ್ಬಿಯಲ್ಲಿ ಸ್ಥಳ ದೊರಕಿಸಿ ಕೊಂಡರು. ಮಾರ್ಗ ಮಧ್ಯದಲ್ಲಿ ನವಾಬರಿಗೆ ಕಾಯಿಲೆ ಕಾಣಿಸಿಕೊಂಡಿತು. ಖಾನೇವಾಲದಲ್ಲಿ ಬೆಳಿಗ್ಗೆ 4ರ ಸುಮಾರಿಗೆ ನವಾಬರ ಆರೋಗ್ಯ ಕೆಟ್ಟಿತು. ಈ ಕಾರಣದಿಂದ ಅವರೆಲ್ಲ ಅಲ್ಲಿ ರೈಲಿನಿಂದಿಳಿದರು. ಮುಲ್ತಾನಿಗೆ ಹೋಗುವ ಬದಲು ಝುಂಗಿಗೆ ಹೋಗುವುದೆಂದು ನಿಶ್ಚೈಸಿ, ಇನ್ನೊಂದು ಗಾಡಿಯಲ್ಲಿ ಕುಳಿತರು- ನವೆಂಬರ್ 8ರ ಮಧ್ಯಾಹ್ನ 11-3.ರ ಸುಮಾರಿಗೆ ನವಾಬರ ಪರಿವಾರ ಝುಂಗ್ ತಲುಪಿತು.

ನವಾಬರು ಹಿರಿಯರ ಸೌಧ ಪ್ರವೇಶಿಸಿದಾಗ, ಅವರ ಹೆಸರಿನ ದೂರದ ಸಂಬಂಧಿ ಅಲ್ಲಿ ಬಿಡದಿ ಬಿಟ್ಟಿದ್ದ. ಆತ ಮಾಲಿಕರು ಮನೆಗೆ ಬಂದುದೇ ತಡ, ಮನೆಯನ್ನು ಖಾಲಿ ಮಾಡಿ, ಅನತಿ ದೂರದಲ್ಲಿದ್ದ ಒಂದು ಡೇರೆಯಲ್ಲಿ ವಾಸ್ತವ್ಯ ಹೂಡಿದ. ಆ ದಿನ ಬಂಗಲೆಯಲ್ಲಿದ್ದವರು ನಾಲ್ಕು ಮಂದಿ-ಶಂಷದೆ, ತಲೀಬ್, ನವಾಬರು, ಅವರ ನಂಬುಗೆಯ ಆಳು ಮಹಮದ್ ಹುಸೇನ್.

ಸಂಜೆ 5ರ ತನಕ ನವಾಬರ ಜೊತೆ ಶಂಷದೆ ಹರಟೆ ಹೊಡೆಯುತ್ತ ಒಳ ಕೋಣೆಯಲ್ಲಿ ಕುಳಿತ್ತಿದ್ದಳು. ಆ ಸುಮಾರಿಗೆ ನವಾಬರಿಗೆ ವಿಶ್ರಾಂತಿ ತೆಗೆದುಕೊಳ್ಳುವ ಇಚ್ಛೆಯಾಯಿತು. ಅವರು ಆಳು—ಕಾಳುಗಳನ್ನು ಕಳುಹಿಸಿದರು. ಅನಂತರ ಶಂಷದೆಯ ಜೊತೆ ಶಯನಗೃಹಕ್ಕೆ ತೆರಳಿದವರು ರಾತ್ರಿ 10ರ ಸುಮಾರಿಗೆ ಅವರಿಬ್ಬರಿಗೂ ಅಲ್ಲಿಯೇ ಊಟ ಬಡಿಸಲಾಯಿತು. ಅವರಿಬ್ಬರ ಊಟ ಮುಗಿದ ನಂತರ ಮಹಮದ್ ಹುಸೇನ್ ತನ್ನ ಮನೆಗೆ ಹೊರಟು ಹೋದ.

ರಾತ್ರಿ ಒಂದರ ಸುಮಾರಿಗೆ 'ಮಹಮದ್ ಹುಸೇನ್ ಕು ಬುಲಾವೋ' ಎಂದು ನವಾಬರು ಕೂಗಿ ಕೊಂಡುದು ಅಡಿಗೆಯ ಮನೆಯಲ್ಲಿದ್ದ ಗಾಮನ್ನಿಗೆ ಕೇಳಿಸಿತು ಆ ಕೂಗಿನಿಂದ ಎಚ್ಚರಗೊಂಡ ಸೇವಕರು ನವಾಬರ ಶಯನಾಗಾರದ ಹತ್ತಿರ ಧಾವಿಸಿದರು. ಕಿಟಿಕಿಯ ಮೂಲಕ ಇಣಿಕಿ ನೋಡಿದರು. ಶಂಷದೆ-ನವಾಬರು ಒಂದೇ ಹಾಸಿಗೆಯನ್ನು ಹಂಚಿಕೊಂಡು ಮಲಗಿದ್ದರು. ಕೋಣೆಯಲ್ಲೊಂದು ದೀಪ ಉರಿಯುತ್ತಿತ್ತು. ಶಂಷದೆಯ ದಿಂಬು ರಕ್ತದಲ್ಲಿ ನೆನೆದಿತ್ತು. ನೆಲದ ಮೇಲೊಂದು ರಿವಾಲ್ವರ್ ಬಿದ್ದಿತ್ತು. ಆ ಸಮಯಕ್ಕೆ ಸ್ಥಳೀಯ ನವಾಬರ ಸಂಬಂಧಿ ಅಲ್ಲಿಗೆ ಬಂದರು. ಆದರೆ ಕೋಣೆಯನ್ನು ಪ್ರವೇಶಿಸಲು ಅವರು ನಿರಾಕರಿಸಿದರು. ಅವರ ಸಲಹೆಯಂತೆ ಮನೋಹರಲಾಲ್ ಎನ್ನುವ ವಕೀಲರನ್ನು ಅನಂತರ ಬಂಗಲೆಗೆ ಕರೆಸಿಕೊಳ್ಳಲಾಯಿತು. ಈ ವಿವರಗಳನ್ನು ಕೋರ್ಟಿನಲ್ಲಿ ಗಾಮನ್ ಅನಂತರ ತಿಳಿಸಿದ.

ಮನೋಹರಲಾಲರನ್ನು ಕೂಡಿಕೊಂಡು ಮಹಮದ್ ನವಾಜ್ II, ಮಹಮದ್ ಹುಸೇನ್ ಪುನಃ ನವಾಬರ ಶಯನಗೃಹಕ್ಕೆ ಬಂದರು. ಕಿಂಡಿಯ ಮೂಲಕ ನವಾಬರನ್ನು ವಿಚಾರಿಸಲು "ಶಂಷದೆ ಹೊರಟುಹೋದಳು" ಎಂದಿಷ್ಟೆ ನವಾಬರು ತಿಳಿಸಿದರು.

ಅಲ್ಲಿಂದ ಆ ಮೂವರು ಸ್ಥಳೀಯ ಮ್ಯಾಜಿಸ್ಟ್ರೇಟರ ಮನೆಗೆ ಹೋದರು. ಅವರನ್ನು ಕಂಡ ಮೇಲೆ, ರಕ್ಷಣಾಧಿಕಾರಿಗಳ ಭೆಟ್ಟಿ ಮಾಡಿದರು ಅನಂತರ ಜಿಲ್ಲಾಧಿಕಾರಿಗಳನ್ನೂ ನೋಡಿದರು. ಈ ಭೆಟ್ಟಿಗಳ ಹಿಂದಿದ್ದ ರಹಸ್ಯ ಬಯಲಾಗಲಿಲ್ಲ. ಅನಂತರ ಅವರೆಲ್ಲ ಪೋಲಿಸ್ ಠಾಣೆಗೆ ಹೋಗಿ ಒಂದು ಫಿರ್ಯಾದನ್ನು ನವೆಂಬರ್ 9ರಂದು ಬೆಳಗ್ಗಿನ 3-30ರ ಸುಮಾರಿಗೆ ಕೊಟ್ಟರು. ಈ ಫಿರ್ಯಾದಿಯಲ್ಲಿ ನವೆಂಬರ 7 ಮತ್ತು 8ರ ಘಟನೆಗಳ ವಿವರ ಇತ್ತು. ಜೊತೆಗೆ ಶಂಷದೆ ಸತ್ತುಬಿದ್ದಿರುವ ವಾರ್ತೆಯೂ ಸೇರಿತ್ತು. ಆದರೆ ಅದರಲ್ಲಿ ನಮೂದಿಸಿದ ಸಂಗತಿಗಳಲ್ಲಿ ಆಶ್ಚರ್ಯದ್ದು—ನವಾಬರು ಇನ್ನೂ ಸತ್ತ ಶಂಷದೆಯ ದೇಹವನ್ನು ಅಪ್ಪಿಕೊಂಡೇ ಮಲಗಿರುವರೆಂಬುದು —

ಸಬ್ ಇನ್ಸ್‌ಪೆಕ್ಟರ್ ಅಲಿ ಹಸನ್ ಅವರೆಲ್ಲರ ಹೇಳಿಕೆಗಳನ್ನು ಬರೆದುಕೊಂಡರು. ಅವರು ಅಲ್ಲಿಂದ ಝುಂಗ್ ಬಂಗಲೆಗೆ ಬಂದರು. ಬಂಗಲೆಯನ್ನು ತಲುಪಿದಾಗ ಬೆಳಗಿನ 5-15 ಆಗಿತ್ತು. ಅವರು ಬಂದಾಗಲೂ ನವಾಬರು ಶಂಷದೆಯ ಜೊತೆ ಮಲಗಿದ್ದರು. ರಿವಾಲ್ವರು ನೆಲದಲ್ಲಿತ್ತು. ಸಬ್ ಇನ್ಸ್‌ಪೆಕ್ಟರರು ರಿವಾಲ್ವರನ್ನು ಕೈಗೆತ್ತಿಕೊಂಡರು; ಮೂಸಿನೋಡಿದರು. ಸ್ವಲ್ಪ ಸಮಯದ ಹಿಂದೆ ಅದನ್ನು ಬಳಸಿರುವಂತೆ ಕಾಣಿಸಿತು. ಅದನ್ನು ಬಿಚ್ಚಿನೋಡಿದಾಗ ಅದರಲ್ಲಿ ಉಪಯೋಗಿಸದೆ ಉಳಿದಿರುವ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
131 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:- **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, **ಬೆಂಗಳೂರು-1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ–ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 40

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦–೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಬಂಗ್ಲಾ ನಿರಾಶ್ರಿತರು ಮರಳಲು ಬಂದವರಲ್ಲ

ಭಾರತ ಸರಕಾರವು, ಮುಖ್ಯವಾಗಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ತಿಳಿದುಕೊಂಡಂತೆ, ಬಂಗ್ಲಾದೇಶದ ವಿದ್ಯಮಾನವು ಹೂರಣಗಡುಬು ಆಗದೆ ಉಕ್ಕಿನ ಕಡಲೆಯಾಗಿ ಪರಿಣಮಿಸಿದೆ. ಚಿರಳಿಕೆಯ ದಿನಗಳಲ್ಲೇ ಯಾಹ್ಯಾಖಾನರು ಪೂರ್ವ ಬಂಗ್ಲಾದ ಸ್ವಾತಂತ್ರ್ಯಯೋಧರ ಮುಂದೆ ತಲೆಬಾಗುವರೆಂದೂ, ಅವರ ಮೇಲೆ ಅಂತಾರಾಷ್ಟ್ರೀಯ ಒತ್ತಡ ಬೀಳುವುದೆಂದೂ ಅವರು ನಂಬಿ ಈಗ ಸಂಪೂರ್ಣ ಮೋಸಹೋದರು. ಮಾನವತಾವಾದದ ಮುಖವಾಡ ಹೊದ್ದುಕೊಂಡಿರುವ ಶ್ರೀಮಂತ ರಾಷ್ಟ್ರಗಳ ವರ್ತನೆ ಅವರನ್ನು ಈಗ ಭಾರಿ ಪೇಚಿನಲ್ಲಿ ಸಿಕ್ಕಿಸಿದೆ. ಶ್ರೀಮತಿಯವರು ಅದೇನನ್ನೋ ನಂಬಿ ಹೆಜ್ಜೆ ಮುಂದೆಯಿಟ್ಟರು. ಇದೀಗ ಅದವರಿಗೆ ನುಂಗಲಾರದ ತುತ್ತಾಗಿದೆ; ಮುಂದೂ ಇಲ್ಲ; ಹಿಂದೂ ಇಲ್ಲ ಎಂದಾಗಿದೆ. ಆದುದರಿಂದಲೇ ಅವರು ಬಂಗ್ಲಾದೇಶದ ಸರಕಾರಕ್ಕೆ ಮನ್ನಣೆ ನೀಡಲು ಹೆದರುತ್ತಾರೆ—ಮುಂದಿನ ಪರಿಣಾಮಗಳಿಂದವರು ಕಂಗಾಲಾಗಿದ್ದಾರೆ. ನೀಡದಿರಲು ಅವರ ಮಾನವತಾಪ್ರೇಮಿ ಹೃದಯ ಕರಗಿಹೋಗುತ್ತಿದೆ. ಲಕ್ಷ—ಲಕ್ಷ ಸಂಖ್ಯೆಯಲ್ಲಿ ಬಂಗ್ಲಾದೇಶದ ನಿರಾಶ್ರಿತರು ಭಾರತದ ಗಡಿ ದಾಟಿಯೊಳಕೆ ಬರುತ್ತಿದ್ದು ಇವರ ಪುನರ್ವಸತಿಯೇ ಅವರ ತಲೆ ತಿನ್ನತೊಡಗಿದೆ.

ಸರದಾರ ವಲ್ಲಭ ಭಾಯಿ ಪಟೇಲರು ಕಾಶ್ಮೀರದಲ್ಲಿ ಭಾರತೀಯರನ್ನು ನೆಲೆಗೊಳಿಸಲು ಬಯಸಿದ್ದರು. ಜನಸಂಖ್ಯೆಯಲ್ಲಿ ಸಣ್ಣದಾದ ಈ ರಾಜ್ಯಕ್ಕೆ ಕಿಕ್ಕಿರಿದ ಜನಸ್ತೋಮವಿರುವ ರಾಜ್ಯದ ನಾಗರಿಕರನ್ನು ನೆಲೆಗೊಳಿಸುವುದರಿಂದ ಒಂದು ಕಲ್ಲಿನಿಂದ ಎರಡು ಹಣ್ಣು ಉದುರಿಸಿದಂತಾಗುತ್ತದೆಂದು ಅವರ ಲೆಕ್ಕಾಚಾರ. ಆದರೆ, ಪ್ರಧಾನಿಯಾಗಿದ್ದ ಪಂ. ನೆಹರೂರವರ ನೀತಿಯೇ ಬೇರೆ ದಾರಿ ಹಿಡಿಯಿತು. ಅದು "ಕಾಶ್ಮೀರ ಪ್ರಶ್ನೆ"ಯನ್ನು ಜಗತ್ತಿಗೆ ನೀಡಿತು. ಬುಟ್ಟಿಯಲ್ಲಿ ಅಡಗಿರುವ ಸರ್ಪವಾಗಿ ನಮ್ಮ ಬಗ್ಗೆ ದ್ವೇಷಾಸೂಯೆಗೊಂಡಿರುವವರ ಕೈ ಸೇರಿತು. ಇದೀಗ ಅದಕ್ಕೆ ವರ್ಷ ಇಪ್ಪತ್ತೆರಡು ಕಳೆದರೂ ಇನ್ನೂ ತಾನಿದ್ದೇನೆಂದು ಹೆಡೆಯರಳಿಸುತ್ತಿದೆ. ಇದೇ ಬಗೆಯ ನೆಹರೂ ನೀತಿಯನ್ನು ಅವರ ಮಗಳೂ ಬಂಗ್ಲಾದೇಶದ ಬಗ್ಗೆ ಅನುಸರಿಸಿದರೆನ್ನಬಹುದೆ? ಈಗಾಗಲೇ ಬಂದಿರುವ ಬಂಗ್ಲಾ ನಿರಾಶ್ರಿತರ ಸಂಖ್ಯೆ ೬೦ ಲಕ್ಷವನ್ನು ಮಿಕ್ಕಿದೆ; ಪ್ರತಿದಿನವೂ ಸುಮಾರು ಒಂದು ಲಕ್ಷದಷ್ಟು ನಿರಾಶ್ರಿತರು ಬರುತ್ತಿದ್ದಾರೆ. ಹೀಗೆ ಇನ್ನೂ ಕೆಲಕಾಲ ಮುಂದುವರಿಯುತ್ತದೆ. ಇವರಿಗಾಗಿ ದಿನನಿತ್ಯ ತಲಾ ಒಂದು ರೂಪಾಯಿಯಷ್ಟು ವೆಚ್ಚವಾಗುತ್ತದೆ—ಇದು ಸರಕಾರದ ಅಧಿಕೃತ ಲೆಕ್ಕಾಚಾರ. ನಿರಾಶ್ರಿತರ ಪ್ರವಾಹಕ್ಕೆ ತಡೆಯೊಡ್ಡುವುದು ಸಾಧ್ಯವಿಲ್ಲ. ಒಡ್ಡದೆ ಹೋದರೆ, ನಮ್ಮ ಅರ್ಥವ್ಯವಸ್ಥೆ ತಲೆಕೆಳಗು. ಪರಿಸ್ಥಿತಿಯು ಗಂಭೀರವಾಗಿದೆಯೆಂಬುದನ್ನು ಪ್ರಧಾನಿ ತಿಳಿಯದವರಲ್ಲ. ವಿಶಾಲ ಜಗತ್ತಿನ ಮಾನವತಾವಾದಿಗಳ ಸಹಾನುಭೂತಿಯನ್ನು ಆಕೆ ಪಡೆದಿರಬಹುದು. ಆದರೆ, ನಿರಾಶ್ರಿತರ ಪ್ರವಾಹವನ್ನು ನಿಲ್ಲಿಸಲು ಅವರ್ಯಾರೂ ಹೆಚ್ಚಿನ ಪರಿಣಾಮಕಾರಿ ಕಾಳಜಿ ವಹಿಸಲು ಸಿದ್ಧರಿಲ್ಲ. ಶ್ರೀಮಂತ ರಾಷ್ಟ್ರಗಳು ಹಣದ ಸಹಾಯ ನೀಡಬಹುದು. ಹಾಗೆಂದು ಇಡಿಯ ಬಂಗ್ಲಾದೇಶವೇ ಬಂಗಾಳ–ಅಸ್ಸಾಮುಗಳ ನೆಲೆಗೆ ಓಡಿಬರುವುದನ್ನು ಸಹಿಸಿಕೊಂಡಿರಬೇಕೆ?

ನಿರಾಶ್ರಿತರ ಆಗಮನದಿಂದ ನೂರು ಪ್ರಶ್ನೆಗಳು ತಲೆಹಾಕುತ್ತವೆ. ಅರ್ಥವ್ಯವಸ್ಥೆಯನ್ನು ಅದು ಹೋಗಬಹುದಾದ ದಾರಿಯಲ್ಲೇ ಹೋಗಗೊಡಬೇಕಷ್ಟೆ. ಆದರೆ, ನೆರೆಯ ನೀರಿನೊಡನೆ ಹಾವು ಕರಡಿಗಳೂ ಬಂದು ಊರು ಹೊಗುವುದುಂಟು. ಪಾಕ್ ಗೂಢಚಾರರು, ಭಾರತ ದ್ವೇಷಿಗಳು ನಿರಾಶ್ರಿತರ ವೇಶದಲ್ಲಿ ಬರುವ ಸಾಧ್ಯತೆಗಳಿವೆ. ಇವರು ನಿರಾಶ್ರಿತರ ವಸತಿಗಳಲ್ಲಿ ಗೊಂದಲವೆಬ್ಬಿಸಿ, ದೇಶದಲ್ಲಿ ಅಶಾಂತಿಯನ್ನೂ ದೇಶಕ್ಕೆ ಅಪಖ್ಯಾತಿಯನ್ನೂ ತಂದುಹಾಕುವುದು ತೀರ ಸಂಭವನೀಯವೇ. ಭಾರತವನ್ನು ತನ್ನ ಆಜನ್ಮ ಶತ್ರುವೆಂದು ನಂಬಿಬಂದಿರುವ ಪಾಕಿಸ್ತಾನಿಗಳೂ ಇಂದಿಗೂ ಕೋಟಿ ಸಂಖ್ಯೆಯಲ್ಲಿದ್ದಾರೆ. ದೇಶದೊಳಗಿರುವ ಕೆಲವು ದ್ರೋಹಿಗಳು ಇವರಿಗೆ ಒತ್ತಾಸೆ ನೀಡುತ್ತಾರೆ. ಮಾಜಿ ಶಾಸಕರು–ಮಂತ್ರಿಗಳು ಪಾಕ್ ಪರ ಗೂಢಚರ್ಯೆಯಲ್ಲಿ ತೊಡಗಿದ್ದರೆಂದ ಮೇಲೆ ಇನ್ನೇನು ಹೇಳಬೇಕು? ಆದುದರಿಂದ ನಿರಾಶ್ರಿತರನ್ನು ಒಂದೆಡೆ ಕೇಂದ್ರೀಕರಿಸುವುದು ಅಪಾಯವೆಂದು ಬಗೆದು ಕೇಂದ್ರ ಸರಕಾರ ಅವರ ಪುನರ್ನಿವೇಶನಕ್ಕೆ ಬೇರೆ ಬೇರೆ ರಾಜ್ಯಗಳ ನೆರವನ್ನು ಕೋರಿದೆ. ಈ ನಿರ್ಗತಿಕರನ್ನು ರಾಜ್ಯಗಳಲ್ಲಿ ತುಕಡಿ ತುಕಡಿಯಾಗಿ ನೆಲಸುವಂತೆ ಮಾಡುವ ಗುರಿ ಅದರದ್ದು. ಈ ಸಂಬಂಧದಲ್ಲಿ ಮಧ್ಯಪ್ರದೇಶಾದಿ ಒಂದೆರಡು ರಾಜ್ಯಗಳು ಮುಂದೆ ಬಂದಿವೆಯೆಂದೂ ವರದಿಯಾಗಿದೆ. ಕೇಂದ್ರದ ಒತ್ತಾಯದ ಮೇಲೆ ಅಥವಾ ಸ್ವ ಉತ್ಸಾಹದಿಂದ ಇತರ ರಾಜ್ಯಗಳೂ ಕಾಲಕ್ರಮದಲ್ಲಿ ಮುಂದೆ ಬರಬೇಕಾಗುತ್ತದೆ. ಒಂದೂವರೆ ದಶಕಕ್ಕೆ ಮೊದಲು ಟಿಬೇಟಿನ ಮೇಲೆ ಕೆಂಪು ಚೀನಾ ಶುದ್ಧೀಕರಣ ಜಾಲ ಬೀಸಿದಾಗ ನಿರಾಶ್ರಿತರಾಗಿ ಬಂದ ಟಿಬೇಟಿಯನ್ನರು ಇಲ್ಲಿಯೇ ಖಾಯಂ ಆಶ್ರಿತರಾಗಿ ಹೋದರು. ವಿವಿಧ ರಾಜ್ಯಗಳಲ್ಲಿ ಅವರಿಗೆ ವಸತಿ–ಉದ್ಯೋಗಗಳನ್ನು ಕಲ್ಪಿಸಿ ಕೊಡಲಾಯ್ತು. ಇದಕ್ಕೆ ಮೊದಲೂ ಪಾಕಿಸ್ತಾನದಿಂದ ಬಂದಿದ್ದ ನಿರಾಶ್ರಿತರೆಲ್ಲರೂ ಇಲ್ಲೇ ಭದ್ರವಾಗಿ ತಳವೂರಿದರು. ಅವರ ಸಂತಾನವು ವರ್ಷ ವರ್ಷ ಬೆಳೆಯುತ್ತಲೇ ಬಂದಿದೆ.

ಪಾಕ್ ಅಧ್ಯಕ್ಷ ಯಾಹ್ಯಾಖಾನರು ನಿರಾಶ್ರಿತರೆಲ್ಲರೂ ಹಿಂದಿರುಗಿ ಬರಬೇಕೆಂದು ಕರೆ ನೀಡಿದರು. ಪೂ. ಪಾಕಿಸ್ತಾನದ ಮಿಲಿಟರಿ ಗವರ್ನರ ಟಿಕ್ಕಾಖಾನರೂ ಇಂಥದೇ ಆಮಂತ್ರಣ ನೀಡಿ, ಅವರಿಗೆ ಸಕಲ ಅನುಕೂಲತೆಗಳನ್ನು ಕಲ್ಪಿಸುವುದಾಗಿ ಹೇಳಿದರು. ಆದರೆ ಬಂಗ್ಲಾ ನಿರಾಶ್ರಿತರು ಮರಳುವುದು ಒತ್ತಟ್ಟಗಿರಲಿ, ಇನ್ನೂ ಇನ್ನೂ ಓಡಿಬರುತ್ತಿದ್ದಾರೆ. ಹಾಗಿರುವಾಗ ನಿರಾಶ್ರಿತರು ಶಾಶ್ವತವಾಗಿ ಭಾರತದಲ್ಲಿಯೇ ನೆಲೆನಿಲ್ಲುವ ಇರಾದೆ ಹೊಂದಿದ್ದಾರೆಂದು ತಿಳಿಯಬಹುದು. ಪಾಕ್ ನಾಯಕರ ಕೈಗಳಿಂದ ತಲೆಯುಳಿಸಿಕೊಂಡು ಬಂದಿರುವ ಅವರು ಮತ್ತೆ ಅವರ ಕತ್ತಿಗೆ ಕತ್ತೊಡ್ಡಲು ಬಯಸುವುದಿಲ್ಲ. ವಿದೇಶಮಂತ್ರಿ ಸ್ವರ್ಣಸಿಂಗರು ಇಂತಹ ಪರಿಸ್ಥಿತಿಯಲ್ಲಿ ವಿದೇಶಾಭಿಪ್ರಾಯ ಸಮನ್ವಯಕ್ಕಾಗಿ ವಿಶ್ವ ಪರ್ಯಟನಕ್ಕಾರಂಭಿಸಿದ್ದಾರೆ. ಶ್ರೀ ಸಿಂಗರು ಏನು ಅನುಭವ ಪಡೆಯಬಹುದು? "ಭಾರತವು ಎದುರಿಸುತ್ತಿರುವ ನಿರಾಶ್ರಿತರ ಪ್ರಶ್ನೆ ಬಹಳ ಕಳವಳಕಾರಕ. ಇವರ ಪುನರ್ವಸತಿಗಾಗಿ ಮಾನವತಾವಾದಿಗಳು ಮುಕ್ತ ಹಸ್ತದಿಂದ ಸಹಾಯ ಮಾಡಬೇಕು. ಈ ನಿರಾಶ್ರಿತರು ಪೂರ್ವಪಾಕಿಸ್ತಾನಕ್ಕೆ ಆದಷ್ಟು ಕ್ಷಿಪ್ರದಲ್ಲಿ ಮರಳುವಂತೆ ಮಾಡಬೇಕು. ಅದಕ್ಕೆ ಅನುಕೂಲ ವಾತಾವರಣ ಮಾಡುವಂತಾಗಬೇಕು.' ಮೊದಲಿಗೆ ಬಂಗ್ಲಾ ದೇಶದ ಸ್ವಾತಂತ್ರ್ಯಯುದ್ಧ ದಮನಗೊಳ್ಳಬೇಕು; ಮಿಲಿಟರಿ ಶಾಸನದ ಬೆದರಿಕೆಯಿಂದ ನಿರಾಶ್ರಿತರು ಭಾರತದಲ್ಲೇ ಸ್ಥಿರವಾಗಿ ನೆಲೆನಿಲ್ಲಬೇಕು! ತನ್ನ ದಿಗ್ವಿಜಯದ ಗುಂಗಿನಲ್ಲಿ ಪ್ರಧಾನಿ ತಾನಾಗಿ ಕರೆದುಕೊಂಡ ಮಾರಿಯಿದು. ಕಾಶ್ಮೀರದ ವ್ಯಾಧಿಯಂತೆಯೇ ಬಂಗ್ಲಾ ಬೇನೆಯಿಂದ ಭಾರತ ಚೇತರಿಸಿಕೊಳ್ಳಲು ದೀರ್ಘಕಾಲ ಬೇಕು.

ಯೋಜನಾಪ್ರಿಯರು

ಮಗುವಿಗಿಂತ ಮೊದಲು ಕುಲಾವಿ ಹೊಲಿದಿಡುವುದು ಸಂಪ್ರದಾಯವೋ ಬಯಕೆ ಬೇನೆ ಅಭಿವ್ಯಕ್ತವಾಗುವ ಶುಭಾವವೋ ಇರಬಹುದು. ಬೇಕೆಂಬಾಗ ಕುಲಾವಿಯೊದಗಿಸಬಲ್ಲ ರೆಡಿಮೇಡ್ ಡ್ರೆಸ್‌ಗಳ ಅಂಗಡಿಗಳು ಮುಕ್ಕಾಲಿಗೆ ಮೂರಾಗಿರುವ ಈ ಕಾಲದಲ್ಲಿ ಅದು ಶುದ್ಧ ಕಂದಾಚಾರ. 'ಕುದುರೆಗೆ ಮೊದಲು ಹುರುಳಿ'ಯ ಕಥೆಯೂ ಹಾಗೇ ಇರಬೇಕು. ಇವೆರಡೂ ಅನಗತ್ಯವವುಗಳೆಂಬ ಭಾವನೆ ಬಂದು ಬಹುಕಾಲವಾಗಿರಬಹುದು. ಇದನ್ನೂ ಮೀರಿಸುವ ಹೊಸ ಸಂಪ್ರದಾಯವೊಂದರ ನಿರ್ಮಾಣ ಈಗ ಆಗಲಿದೆಯೆನಿಸುತ್ತದೆ. ಕಾರ್ಯಾಚರಣೆಗಿಂತ ಯೋಜನೆಗೆ ಅಧಿಕ ಮಹತ್ವ ನೀಡುವ ನಮ್ಮ ಸಮಾಜವಾದಿ ದೇಶದ ಹೊಸಪೇಟೆಯ ಬಳಿ ಉಕ್ಕಿನ ಕಾರಖಾನೆಯೊಂದನ್ನು ಸ್ಥಾಪಿಸಲು ಕೇಂದ್ರ ಸರಕಾರ ನಿರ್ಧರಿಸಿ ಒಂದು ವರ್ಷ ಕಳೆಯಿತು. ಇದೀಗ ಈ 'ಯೋಜನೆಯ' ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಕೇಂದ್ರದ ಇಂಜಿನಿಯರಿಂಗ್ ಮತ್ತು ಡಿಸೈನ್ಸ್ ಸಂಸ್ಥೆ ಆರಂಭ ಮಾಡಿದೆ. ಇದು ವರದಿ ಸಲ್ಲಿಸಲು ಕಡಿಮೆಯೆಂದರೆ, ಇನ್ನೂ ಏಳೆಂಟು ತಿಂಗಳುಗಳು ಬೇಕಾಗಬಹುದೆಂದು ಹೇಳಲಾಗುತ್ತಿದೆ. ಅಂದರೆ ಕಾರಖಾನೆಯ ಕಾರ್ಯಾರಂಭವಾಗಲು ಸುಮಾರು ಒಂದು ವರ್ಷ ವಿಡೆಯೆಂದ ಹಾಗಾಯ್ತು. ಆಗ ಉದ್ಘಾಟಿತವಾಗಲಿರುವ ಕಾರಖಾನೆಯ ಆರಂಭೋತ್ಸವವನ್ನು ಯಾರ ದಿವ್ಯ ಅಮೃತ ಹಸ್ತ–ಪಾದಗಳಿಂದ ಮಾಡಿಸಬೇಕೆಂಬ ಬಗ್ಗೆ ಈಗಿಂದೀಗಲೇ ಚರ್ಚಾಸ್ಪರ್ಧೆಯೆದ್ದಿದೆ. ●

ಗೇಹರಾಜ್ಯದಲ್ಲಿ

ಅಶುಭಸ್ಯ ಕಾಲಹರಣಮ್

"ಏನಂತೆ, ಮುಖಾರವಿಂದದಲ್ಲಿ ಉತ್ಸಾಹದ ಬಾಲ ಭ್ರಮರಗಳು ಹಾರಲಪ್ಪಳಿಸುತ್ತಿವೆ?"

'ನಿಮ್ಮ ತಲೆ, ಅಲ್ಲ, ಬಾಗಿಲು ದಾಟ ತೂಂತಾದ್ರೆ ಸುರುವಾಯ್ತು ನಿಮ್ದೊಂದು'

'ಹಾಗಲ್ಲವೇ, ಏನೋ ಮುಖದಲ್ಲಿ ರಹಸ್ಯ ಭೇದ ಮಾಡುವ ಲವಲವಿಕೆ ತುಂಬಿ ತುಳುಕಾಡುತ್ತಿದೆ.'

"ಮತ್ತೆ ಸುರುಮಾಡಿದ್ರಲ್ಲಾ, ಅಲ್ಲ, ಮಳೆಗಾಲ ಹೇಗೂ ಬಂತು. ಎಲ್ಲಾದ್ರೂ ನಾಟಕದ ಖಯಾಲಿ ಹಿಡಿಯಿತೋಂತ...'

'ಅಲ್ವೇ, ಮಳೆಗಾಲದಲ್ಲಿ ನಾಟಕ ಮಾಡಿದವ್ರ ಭಂಡಾರ ಸೋರಿ ಹೋದೀತು....'

'ಅಲ್ರಿ ಮಳೆಗಾಲದಲ್ಲಿ ಯಾಕೆ ಆಡ್ಬೇಕು? ಈಗ ರಿಹರ್ಸಲ್ಲು ಎಲ್ಲಿ ಆರಂಭ ಮಾಡ್ಬಿಟ್ರೇಂತ ...'

'ಅಲ್ಲ, ನನಗೂ ನಾಟಕಕ್ಕೂ ಯಾವ ಬಾದರಾಯಣ ಸಂಬಂಧಾಂತ..'

'ಅದೆಲ್ಲ ನನ್ಗೆಗೆ ಗೊತ್ತಾಗ್ಬೇಕು? ನಿಮ್ಮ ಮಾತುಗಾರಿಕೆ ನೋಡುವಾಗ ಹಾಗೆ ಅನ್ನಿಸ್ತು ...'

"ಹ್ಞೂಂ ..ಅಂತೂ ನಾಲ್ಕು ಚೆನ್ನಾಗಿ ಮಾತ್ನಾಡಿದ್ರೂ ನಿಂಗೆ ನಾಟಕವೆನಿಸುತ್ತೇಂತಾಯ್ತು...."

'ನೋಡಿ, ಮಾತಿಗೆ ಬೇಕಾದ್ದು ಸರಳತೆ ಅಂತೆಂತಾರೆ ಈಗಿನವ್ರು....'

'ಅಯ್ಯಮ್ಮ, ಅದಿರ್ಲಿ, ಏನು ಹೇಳ್ಬೇಕೂಂತಿದ್ದೆ?'

'ಯಾರು?'

'ನೀನು....'

'ನಾನೆ' ಅಲ್ಲ ನೋಡಿ, ರಷ್ಯದವ್ರು ಆಕಾಶದಲ್ಲಿ ನಗರ ಕಟ್ಟುತ್ತಾರಂತಲ್ಲ?'

"ಹೌದು...."

"ಅದು ಹೇಗೇಂತ?"

"ನೋಡು, ಅವ್ರು ಎರಡು ತಿಂಗಳುಗಳಿಗೆ ಮೊದಲೇ ಸೆಲ್ಯೂಟ್ ಎಂಬ ಬಾಹ್ಯಾಕಾಶ ನಿಲ್ದಾಣವನ್ನು ಹಾರಿಸಿದ್ರು?

'ಅದು ನಿಲ್ದಾಣವೇ ಅಥವಾ ಪ್ರಯೋಗಾಲಯವೆ?'

'ಅದು ವಾಸ್ತವಿಕವಾಗಿ ನಿಲ್ದಾಣ. ಆದರೆ, ರಷ್ಯ ತನ್ನ ಮುಂದಿನ ಕಾರ್ಯಕ್ರಮಗಳಿಗೆ ಅದನ್ನು ಪ್ರಯೋಗಾಲಯವಾಗಿಯೂ ಉಪಯೋಗಿಸುತ್ತೆ .'

'ಹ್ಞೂಂ ..'

'ಮೊನ್ನೆ ರಶ್ಯನ್ ಉಪಗ್ರಹ ಸೋಯೆಜ್—೧೧ರ ಮೂವರು ಖೇಚರರು ತಮ್ಮ ಗಗನ ನೌಕೆಯನ್ನು ಬಿಟ್ಟು ಸೆಲ್ಯೂಟನ್ನು ನಿರಪಾಯರಾಗಿ ಸೇರಿಕೊಂಡರು. ಇದರಿಂದ ಅಂತರಿಕ್ಷದಲ್ಲಿ ನಿಲ್ದಾಣ ಕಟ್ಟುವಲ್ಲಿ ಅವರು ಶಕ್ತರಾದರು ...'

'ಅದು ಹೌದು. ಇನ್ನೂ ಹಲವಾರು ಸೋಯೆಜ್‌ಗಳನ್ನು ಹಾರಿಸುತ್ತಾರಂತೆ ಆಕಾಶದಲ್ಲೇ ಕಾಲೊನಿ ಕಟ್ಟುತ್ತಾರಂತೆ, ಮುಂದದು ನಗರವಾಗುತ್ತಂತೆ ...'

"ಅದೂ ಸಾಧ್ಯವೆನ್ನು. ಭೂಮಿಯಲ್ಲಿ ಕಟ್ಟಿ ಅವನ್ನು ಅಂತರಿಕ್ಷಕ್ಕೆ ಹಾರಿಸ ಬೇಕಾಗುತ್ತೆ ..."

"ಯಾಕೆ? ಅಂತರಿಕ್ಷದಲ್ಲೇ ನಿಂತು ಕಟ್ಟಬಾರದೇಕೆ?"

'ಬಾರದೂಂತೇನೂ ಇಲ್ಲ ಅದಕ್ಕೆ ಇನ್ನೂ ತುಸು ವಿಜ್ಞಾನ ಬೆಳೆಯಬೇಕು ...'

"ಬೆಳೆಯುತ್ತೆ ಬಿಡಿ. ಮೊನ್ನೆ ಮೊನ್ನೆಯವರೆಗೆ ಅಸಾಧ್ಯಾಂತ ಇದ್ದದ್ದು ಇಂದು ಸಾಧ್ಯವೆನಿಸಲಿಲ್ಲವೆ?"

"ಹ್ಞಾಂ ಹಾಗೂ ಆಗ ಬಹುದು. ."

"ನೋಡಿ, ನನಗೆ..."

"ಏನು?"

"ಅಲ್ಲ, ನಮ್ಮವರಲ್ಲಿ ಕೆಲವರ ವರ್ತನೆ ನೋಡಿ ನಗುವು ಬರುತ್ತದೆ ."

'ಯಾಕೆ?'

'ಏನಂದ್ರೆ, ರಾಮಾಯಣ ಕಾಲದಲ್ಲಿ ವಿಮಾನವಿತ್ತು ಅಂತ ಅಂದ್ರೆ, ಅದೆಲ್ಲ ಸುಳ್ಳು ಅಂತಾರೆ. ಹನುಮಂತ ಸೂರ್ಯಗ್ರಹವನ್ನು ಮುಟ್ಟಲು ನಭೋ ಮಂಡಳಕ್ಕೆ ಹಾರಿದ ಅಂದ್ರೆ ಅಸಂಬದ್ಧ ಪ್ರಲಾಪ ಅಂತಾರೆ. ಬಲಿ ಪಾತಾಳ ಲೋಕದಲ್ಲಿದ್ದಾನೆ ಅಂದ್ರೆ ನಮ್ಮನ್ನೇ ಬಲಿಗೊಡಗುತ್ತಾರೆ ಪಾತಾಳ-ಭೂಮಿ-ಅಂತರಿಕ್ಷಗಳಲ್ಲಿ ತಾರಾಕ್ಷ ಸಹೋದರರು ತ್ರಿಪುರಗಳನ್ನು ಕಟ್ಟಿಸಿದರು ಅಂದ್ರೆ ಮೂಗು . ಮುರಿಲಿಯಕ್ಕೆ ಬರುತ್ತಾರೆ....'

'ಅಲ್ವೆ, ಅದೆಲ್ಲ ಕಟ್ಟುಕತೆ..

ಭೋಪಾಲದಲ್ಲಿ ತನ್ನ ಅಂಗಡಿಯಲ್ಲಿ ಕೆಲಸಮಾಡುತ್ತಿರುವ ಶ್ರೀ ಅಬ್ದುಲ್ ಅಜುಂ ಓರ್ವ ಮೋಟ್ಟೆಗಾರ. ಅವನು ಅವಶ್ಯಕ ಸಾಮಗ್ರಿಗಳನ್ನು ಖರೀದಿಸಲು ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ರೂ. ೫೦೦ ಪಡೆದಿದ್ದಾನೆ.

'ಯಾಕೆ ಹಾಗಾಗ್ಬೇಕು? ಈಗ ಅಂತರಿಕ್ಷದಲ್ಲೂ ನಗರ ಸ್ಥಾಪನೆ ಸಾಧ್ಯವಾಗಿರುವಾಗ ...

'ಅದು ಆಗ ...'

'ನೋಡಿ, ನಾಗರಿಕತೆಯೊಂದೊಂದು ಕಾಲದಲ್ಲಿ ಒಂದೊಂದು ದೇಶದಲ್ಲಿ ಪರಾಕಾಷ್ಠೆಗೇರುತ್ತದೆ, ಏಳು-ಬೀಳು ಸಹಜ ತಾನೆ? ಒಂದು ಕಾಲದಲ್ಲಿ ನಮ್ಮ ದೇಶದ ನಾಗರಿಕತೆ ಉನ್ನತ ದೆಸೆಯಲ್ಲಿತ್ತೆಂದು ಇತಿಹಾಸ ತಜ್ಞರೇ ಹೇಳುತ್ತಾರಲಾ?'

'ಹ್ಞೂಂ ... ಇತಿಹಾಸವು ಪುನರಾವರ್ತನೆ ಹೊಂದುತ್ತಿರುತ್ತದೆ ಎಂಬುದು ಸತ್ಯಾಂಶ ನೀನನ್ನುವುದಲ್ಲಾ?'

'ನಾನೊಂತೇನು? ಎಲ್ಲರೂ ಹಾಗೇ ಅಂತಾರಲ್ಲಾ?'

'ಹ್ಞೂಂ, ವಿಜ್ಞಾನ ಬೆಳೆದು ಬಂದಂತೆಲ್ಲ ಆಕಾಶದಲ್ಲೇ ಹಲವಾರು ಗ್ರಾಡ್‌ಗಳೂ ವಿಲ್ಲೆಗಳೂ ನಿರ್ಮಾಣಗೊಳ್ಳುತ್ತವೇನ್ನು. ಆ ಮೇಲೆ ಈ ಹಳೆಯ ಪುರ-ನಗರಂಗಳನ್ನು ಯಾರು ಕೇಳ್ತಾರೆ?'

'ಅಂದ್ರೆ ಸದ್ಯ ಅಮೆರಿಕೆ, ರಷ್ಯ, ಬ್ರಿಟನ್ ಇತ್ಯಾದಿ ದೇಶಗಳಿಗೆ ವಲಸೆ ಹೋಗುತ್ತಿರುವ ನಮ್ಮ ಪ್ರತಿಭಾಸಂಪನ್ನರು ಆಗ ..'

'ಹ್ಞೂಂ. ವಿದ್ವಾನ್ ಸರ್ವತ್ರ ಪೂಜ್ಯತೇ'

'ಹಾಗಲ್ಲಾರಿ. ವಿದ್ವತ್ತಿನ ಅರ್ಥದಲ್ಲಿ ಮಾತ್ರ ಬದಲಾವಣೆ ಹೊಂದಿದೆ.'

'ಪರಿಸ್ಥಿತಿಗೆ ಹೊಂದಿಕೊಂಡು.'

"ಹ್ಞೂಂ ..."

'ಅಲ್ವೆ, ಅದ್ರಲ್ಲಿ ವಿಶೇಷವಾದ್ದೂ ಏನೂಂತ?'

'ಯಾಕೆ?'

"ನೋಡು, ಸಮಾಜ ತೀವ್ರಗತಿಯಲ್ಲಿ ಬದಲಾಗುತ್ತಿರುವಾಗ, ಸಾಮಾಜಿಕ ಪರಿಸ್ಥಿತಿಗಳೂ ಬದಲಾಗುತ್ತಿರುವುದು ಸಹಜ.

"ಹ್ಞಾನ್ನಿ ."

'ನಮ್ಮ ರಾಜಭವನಗಳೂ ಪರಿಸ್ಥಿತಿಗೆ ಹೊಂದಿಕೊಂಡು ಬದಲಾಗಲಿವೆಯಂತೆ....'

'ಅಲ್ಲಾರೀ, ತಮಿಳು ನಾಡಿನ ಸರಕಾರ ಹಿಂದಿನ ರಾಜಭವನವನ್ನು ಈಗಿನ ರಾಜ್ಯಪಾಲರಿಗೆ ಬಿಟ್ಟುಕೊಡಲು ಒಪ್ಪಲಿಲ್ಲವಂತೆ ....'

"ಹೌದೂನ್ನು. . ರಾಜ್ಯಪಾಲರಿಗೆ ಸಣ್ಣ ಭವನ ಸಾಕೂಂತ ಅವರ ಅಭಿಪ್ರಾಯ."

"ಮತ್ತೆ?"

'ಮತ್ತೇನು, ಕೇಂದ್ರ ಸರಕಾರ ನಡುವೆ

(ಒಂಬತ್ತನೇ ಪುಟ ನೋಡಿರಿ)

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex. C. 123/1971 O. S 22/1969

ರುಕ್ಮಿಣಿ—ಅರ್ಜಿದಾರೆ

ಮತ್ತು

ಉಂಮಕ್ಕೆ, ಕೊರಪೊಳು ಹೆಂಗ್ಸಿನ ಮಗಳು, ಪುತ್ತೂರು ತಾಲ್ಕು ಪಡುವನ್ನೂರು ಗ್ರಾಮದಲ್ಲಿ —ಎದ್ರಿ.

ಇವರೀಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಮೇಲೆ ಹೇಳಿದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ಅರ್ಜಿದಾರಳು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾಳೆ. ಆದುದರಿಂದ ಏಲಂನ ಷರತ್ತುಗಳನ್ನು ನಿರ್ಣಯಿಸುವ ಬಗ್ಗೆ ಸದ್ರಿ ವ್ಯವಹರಣೆಯು ತಾ. 14-7-1971ಕ್ಕೆ ಇಟ್ಟಿರುತ್ತದೆಯೆಂತ ಈ ಮೂಲಕ ನಿಮಗೆ ತಿಳಿಸೋಣಾಗಿಯದೆ.

(Sd) B. Ishwara Bhat,
Advocate for Petitioner

ಪುತ್ತೂರು, ತಾ. 11-6-71.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಅಭಿಪ್ರಾಯ

ಅಸಮರ್ಥನೀಯ ಹಸ್ತಕ್ಷೇಪ

ಕರ್ನಾಟಕ ರಾಜ್ಯಪಾಲ ಶ್ರೀ ಧರ್ಮವೀರರು ಆಡಳಿತೆಯಲ್ಲಿ ವಿಚಕ್ಷಣರು. ಶ್ರೀ ವೀರೇಂದ್ರ ಪಾಟೀಲರ ಸಂಪುಟವು ರಾಜೀನಾಮೆಯಿತ್ತ ಬಳಿಕದ ಕೆಲವು ದಿನಗಳಲ್ಲಿ ಅವರು ಕಣ್ಣು ಮುಚ್ಚಲಿಲ್ಲ.

ಬಹುಮತ ಕಳೆದುಕೊಂಡ ಸರಕಾರವು ಒಂದೆರಡು ದಿನಗಳವರೆಗೆ "ಬದಲಿ ವ್ಯವಸ್ಥೆಯಾಗುವವರೆಗೆ" ಎಂಬ ನೆಪದಲ್ಲಿ ಮುಂದುವರಿಸಿದ್ದೇ ಹೊರತು ಅದಕ್ಕಿಂತ ಹೆಚ್ಚು ದಿನವಲ್ಲ. ಪಶ್ಚಿಮ ಬಂಗಾಳದಲ್ಲಿ ಸರಕಾರ ಅಲ್ಪಮತೀಯವೆಂದು ಮನವರಿಕೆಯಾದೊಡನೆಯೇ ಇವರೇ ಧರ್ಮವೀರರು ವಿಧಾನ ಸಭೆಯನ್ನೆದುರಿಸಲು ಕೇಳಿಕೊಂಡರು. ಮುಖ್ಯಮಂತ್ರಿ ಇದಕ್ಕೆ ತಯಾರಿಲ್ಲದ್ದರಿಂದ ಸಂಪುಟವನ್ನೇ ವಜಾ ಮಾಡಿದ ಧೀರರು.

ಪ್ರಜಾಸತ್ತೆಯ ಹೆಸರಿನಲ್ಲಿ ಪ್ರಜೆಗಳಿಗೆ ಅಪಚಾರವಾಗ ಬಾರದೆಂಬುದು ಅವರ ಮನೀಷೆ, ಅದಕ್ಕೆಂದೇ ತೀವ್ರಕ್ರಮಗಳ ವ್ಯವಹರಣೆ.

ಕರ್ನಾಟಕದಲ್ಲಿ ಇಂಡಿಕೇಟಿನ ಆಂತರಿಕ ಕಲಹದಿಂದ ಪರ್ಯಾಯ ಸರಕಾರ ರಚನೆಯ ಪ್ರಶ್ನೆಗೆ ಬೇಗನೆ ಉತ್ತರ ಸಿಗಲಿಲ್ಲ. ಆ ತನಕ ಶ್ರೀ ಧರ್ಮವೀರರೂ ಕಾಯಲಿಲ್ಲ. ಮೊದಲಿಗೆ ವಿಧಾನ ಸಭೆಯನ್ನು ಅಮಾನತ್ತು ಮಾಡಿದರು; ಮುಂದೆ ಬರಖಾಸ್ತು ಮಾಡಿದರು.

ಈ ಬಗ್ಗೆ ಯಾರಲ್ಲೂ ಭಿನ್ನಮತವಿಲ್ಲ. ಆದರೆ, ರಾಜ್ಯಪಾಲರು ಯಾವ ಸಲಹೆಗಾರರನ್ನೂ ನೇಮಿಸಿಕೊಳ್ಳದೆ ರಾಷ್ಟ್ರಪತಿ ಆಳಿಕೆಯ ಹೆಸರಲ್ಲಿ ಆಡಳಿತೆಯಲ್ಲಿ ತಪ್ಪು ದಾರಿ ಹಿಡಿದಿದ್ದಾರೆ-ಎಂಬುದು ದೊಡ್ಡ ದೂರು.

ಹಲವಾರು ಸಮಿತಿ-ಮಂಡಳಿಗಳಿಗೆ ಸಿಂಡಿಕೇಟಿಗರನ್ನೇ ನೇಮಿಸಿದ್ದಾರೆ; ಪ್ರಾದೇಶಿಕ ಪ್ರಾತಿನಿಧ್ಯ ನೀಡಲಿಲ್ಲ ಎಂದು ಮುಂತಾದ ದೂರುಗಳು.

ಹಿಂದಿನ ಸರಕಾರದ ನೀತಿಯನ್ನೇ ಮುಂದುವರಿಸಿಕೊಂಡು ಹೋಗುವ ನೀತಿಯಿಂದ ಅವರು ಸಿಂಡಿಕೇಟಿನ ಪಕ್ಷಪಾತಿಗಳಾಗಿ ನಡೆದುಕೊಳ್ಳುತ್ತಿದ್ದಾರೆ-ಇದು ಮುಖ್ಯವಾಗಿ ಇಂಡಿಕೇಟಿಗರ ದೂರು.

ಶ್ರೀ ಧರ್ಮವೀರರು ಶ್ರೀ ವೀರೇಂದ್ರ ಪಾಟೀಲರನ್ನು ಬಹಿರಂಗವಾಗಿಯೇ ಹೊಗಳಿದ್ದುಂಟು. ಅವರನ್ನು ಸರ್ವ ಸಮರ್ಥ ಆಡಳಿತಗಾರರೆಂದು ಪ್ರಶಂಸಿಸಿದ್ದುಂಟು.

ಗುಣಕ್ಕೆ ಮತ್ಸರ ಪಡುವುದು ಯಾರಿಗೂ ಒಳ್ಳೆಯದಲ್ಲ. ಶ್ರೀ ಪಾಟೀಲರ ರಾಜ್ಯಕೀಯ ವಿರೋಧಿಗಳೇ ಅವರ ದಕ್ಷತೆಗೆ ಪ್ರಶಸ್ತಿ ನೀಡಿದ್ದುಂಟು.

ರಾಜ್ಯಪಾಲರು ಪಕ್ಷಪಾತತನ ತೋರಿಸುತ್ತಿದ್ದಾರೆಂಬ ದೂರು ಡಿಲ್ಲಿಯ ವರೆಗೂ ಹೋಯ್ತು; ಪ್ರಧಾನಿ ಗಾಂಧಿಯವರು ರಾಜ್ಯಪಾಲರನ್ನು ಕರೆಸಿದರು. ದೂರುಗಾರರು ದೂರಿದರು—ಮಾತುಕತೆ ನಡೆದುವು—ವಿವರ ಅನಗತ್ಯ.

ಒಟ್ಟಿನಲ್ಲಿ "ಭಿನ್ನಾಭಿಪ್ರಾಯ"ಗಳು ದೂರವಾದುವು. ಅಕ್ರಮ ನೇಮಕಗಳ ಪುನರ್ವಿಮರ್ಶೆ ಮಾಡುವದಾಗಿ ರಾಜ್ಯಪಾಲರು ಆಶ್ವಾಸನೆ ನೀಡಿದರು.

'ಅಕ್ರಮ ನೇಮಕ' ಅಂದರೇನು? ನೇಮಕಗಳಲ್ಲಿ ಸಿಂಡಿಕೇಟಿಗರಿಗೆ ಪ್ರಾಶಸ್ತ್ಯ ನೀಡಿದ್ದು; ಅರ್ಥಾತ್ ಇಂಡಿಕೇಟಿಗರನ್ನು ಕಡೆಗಣಿಸಿದ್ದು.

ಅರ್ಹತೆ ಯಾವುದೇ ಒಂದು ಪಕ್ಷಕ್ಕೆ ಮಾತ್ರ ಮೀಸಲಾದುದಲ್ಲ. ಸಮರ್ಥರು ಸಿಂಡಿಕೇಟಿನಲ್ಲೂ ಇದ್ದಾರೆ. ಇಂಡಿಕೇಟಿನಲ್ಲೂ ಇದ್ದಾರೆ; ಉಳಿದ ಪಕ್ಷ ಸಂಗಡಗಳಲ್ಲೂ ಇಲ್ಲವೆಂದು ಹೇಳುವುದು ದಾರ್ಷ್ಟ್ಯದ ಮಾತು. ಹಾಗೆಂದು ಎಲ್ಲರನ್ನೂ ನೇಮಿಸಿಕೊಳ್ಳಲಾದೀತೆ?

ರಾಜ್ಯಪಾಲರಾಗಿ ನೇಮಕಗೊಳ್ಳಲಿರುವ ಅರ್ಹತೆಯೇನು? ಪ್ರತ್ಯಕ್ಷ ರಾಜ್ಯಕೀಯದಲ್ಲಿ ದುಡಿಯಲಾಗದ ಅಶಕ್ತರಿಗೆ 'ನಿವೃತ್ತಿವೇತನ'ದ ವ್ಯವಸ್ಥೆಯುದಾಗಿತ್ತು ಒಂದು ಕಾಲ.

ಆಡಳಿತ ಪಕ್ಷದ ಟಿಕೇಟು ಸಿಗದ ಹುಡುಗಾ ವ್ಯಕ್ತಿಗಳನ್ನು ತೃಪ್ತಿಪಡಿಸುವ ಸಂಸ್ಥಾನಗಳಿವು. ಸೋತ ಮಂತ್ರಿ ಮಹೋದಯರನ್ನು ತೃಪ್ತಿಪಡಿಸುವ ಸಂತರ್ಪಣಾಸ್ಥಳಗಳಿವು.

ರಾಯಭಾರಿ—ರಾಜ್ಯಪಾಲಕ ಹುದ್ದೆಗೆ ಯಾವ ನಿಬಂಧನೆಯೂ ಇಲ್ಲ. ತಮ್ಮ ಕಣ್ಣಿಗೆ ಕೈಹಾಕಿ ತೂತಮಾಡುವವರನ್ನು, ತಮಗಿಂತ ಪ್ರಬಲರಾದವರನ್ನು, ತಮಗೆ ಎದುರು ಬೀಳುವವರನ್ನು ದೂರವಿಟ್ಟು ಹತಪ್ರಭರನ್ನಾಗಿ ತಮ್ಮ ದಾರಿಯನ್ನು ನಿರಾತಂಕವಾಗಿ ಮಾಡಲು ರಾಜ್ಯಕೀಯ ನಾಯಕರು ಈ ಹುದ್ದೆಗಳನ್ನು ಬಳಸಿಕೊಂಡದ್ದುಂಟು. ಇಂದಿಗೂ ಬಳಸಿಕೊಳ್ಳಲಾಗುತ್ತಿದೆ. ಸರಕಾರವು ನೇಮಿಸುವ ಹಲವಾರು ಸಮಿತಿಗಳ ಪಾಡೂ ಇದೇ.

ಆಡಳಿತ ಪಕ್ಷವು ಸ್ವಪಕ್ಷಪಾತವನ್ನು ಮಾಡಿಯೇ ಮಾಡುತ್ತದೆ. ಸದಸ್ಯರ ಒಳಿತು ದರಲ್ಲಿದೆಯೆನ್ನುವದಕ್ಕಿಂತ ಅಧಿಕಾರಾರೂಢರ ಯೋಗಕ್ಷೇಮವಿದರಲ್ಲಿದೆಯೆನ್ನುವುದು ಅಧಿಕ ಸಮಂಜಸ.

ಶ್ರೀ ಮುರಾರ್ಜಿ ದೇಸಾಯಿಯವರನ್ನೇ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ನೇಮಿಸಲಿಲ್ಲವೆ? ಈ ಭಾಯಿ ಕೊನೆಗೂ ಮಂತ್ರಿತನವನ್ನು ಗಿಟ್ಟಿಸಿಕೊಂಡ ಬಳಿಕ ಶ್ರೀ ಕೆಂಗಲ್ ಹನುಮಂತಯ್ಯನವರನ್ನು ಅಧ್ಯಕ್ಷರೆಂದು ಮಾಡಲಿಲ್ಲವೆ?

ಒಂದೇ ಪಕ್ಷಕ್ಕೆ ಸೇರಿದವರನ್ನು ಅಧಿಕ ಸಂಖ್ಯೆಯಲ್ಲಿ ರಾಜ್ಯಪಾಲರಾಗಿ, ರಾಯಭಾರಿಯಾಗಿ, ವಿವಿಧ ಸಮಿತಿ-ಮಂಡಳಿಗಳ ಸದಸ್ಯರಾಗಿ ನೇಮಿಸುವುದು ಪಕ್ಷೀಯ ಸರಕಾರ ನಡೆದು ಬಂದ ದಾರಿ.

ಇದನ್ನು ಇದುವರೆಗೂ ಯಾರೂ ಯಾವರೀತಿಯಲ್ಲೂ ಆಕ್ಷೇಪಿಸಲಿಲ್ಲ. ರಾಜ್ಯಪಾಲರು ಇದೇ ದಾರಿಯನ್ನು ತುಳಿದರೆಂದು ಆಕ್ಷೇಪವೇಕೆ?

ಇಂದು ಪಕ್ಷಾಂತರದ ಬೇನೆ ಉಲ್ಬಣವಾಗಿದೆ. ಯಾರು ಯಾವ ಪಕ್ಷಕ್ಕೆ ಸೇರಿದವರೆಂಬುದು ಪ್ರಾಯಃ ಆಯಾ ವ್ಯಕ್ತಿಗಳಿಗೇ ಗೊತ್ತಿಲ್ಲ. 'ಊಟ ಕೌರವರಲ್ಲಿ, ಪಕ್ಷ ಪಾಂಡವರಲ್ಲಿ' ಎನ್ನುವವರೇ ಅಧಿಕ ಇದ್ದಾರೆ.

ತಮ್ಮ ಸ್ವಾರ್ಥ ಸಿದ್ಧಿಗಾಗಿ ಒಂದು ಪಕ್ಷದಲ್ಲಿ ಉಳಿದು ನಿಷ್ಠೆಯನ್ನೊಂದು ಪಕ್ಷದಲ್ಲಿ ಇಟ್ಟುಕೊಂಡಿರುವವರೂ ಇಲ್ಲವೆ?

ರಾಜ್ಯಪಾಲರಿಗೆ ರಾಜ್ಯಕೀಯ ಅನಗತ್ಯ. ಸಮರ್ಥ ಯೋಗ್ಯತಾ ಸಂಪನ್ನ ವ್ಯಕ್ತಿಯಾಗಿದ್ದರೆ ಸಾಕು. ಅವರು ಒಂದೇ ಪಕ್ಷಕ್ಕೆ ಸೇರಿದವರಾಗಿದ್ದರೆ, ಅದು ಯಾರ ತಪ್ಪು? ಪಕ್ಷಾಂತರ ಮಾಡಿಸಿ ನೇಮಕ ಮಾಡಿಕೊಳ್ಳಬೇಕೆ?

ಆಡಳಿತೆಯಲ್ಲಿ ಹಸ್ತಕ್ಷೇಪ ಮಾಡುವುದೆಂದರೆ ಹೀಗೆಯೇ ತಾನೆ? "ನೆಂಟರ ನಾಲೆ ಪ್ರೀತಿ; ಅಕ್ಕಿಯ ಮೇಲೆ ಆಸೆ" ಎಂಬಂತೆ ವರ್ತಿಸಿದರೆ ಯಾವುದೂ ಸಾಧ್ಯವಾಗುವುದಿಲ್ಲ.

ಪಕ್ಷದ ಟಿಕೇಟಿಗೆ ಗೆಲ್ಲುವ ಯೋಗ್ಯತೆಯೊಂದೇ ಮಾನದಂಡವಾಗಿರಬಹುದು; ಆದರೆ, ಎಲ್ಲವನ್ನೂ ಇದೇ ಮಾನದಂಡದಿಂದ ಅಳೆಯುವುದು ಅನ್ಯಾಯವಾಗುತ್ತದೆ.

ಕೇಂದ್ರದಲ್ಲಿ ಇಂದಿರಾ ಗಾಂಧಿಯಿದ್ದಾರೆ. ಅವರಿಗೆ ನೂರಕ್ಕೆ ನೂರು ವಿಜಯ ತಂದು ಕೊಟ್ಟ ರಾಜ್ಯ ಕರ್ನಾಟಕ. ಆದ್ದರಿಂದ ಇಲ್ಲಿನ ಇಂಡಿಕೇಟಿಗರು ದೂರಿದ್ದನ್ನು ಶ್ರೀಮತಿ ಗಾಂಧಿ ಕೇಳದಿರುವುದು ಸಾಧ್ಯವಿಲ್ಲ; ಚುನಾವಣೆ ಬೇರೆ ನಡೆಯಲಿದೆ.

ಪ್ರಜಾಪ್ರತಿನಿಧಿಗಳ ಆಡಳಿತ ಹಸ್ತಕ್ಷೇಪ ಉತ್ತಮ ಆಡಳಿತಕ್ಕೆ ಅಸಮರ್ಥನೀಯವೆನಿಸುತ್ತದೆ. ತಾವು ಹೇಳಿದ್ದಾಗುತ್ತದೆಂದು ನಡೆದುಕೊಳ್ಳುವುದು ತೀರ ಅನುಚಿತವೆನಿಸುತ್ತದೆ.

●●

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟರುಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಪುತ್ತೂರು II ಎಡಿಶನಲ್
ಮು. ಕೋರ್ಟಿನಲ್ಲಿ

Ex. C No. 109/71
O.S 358/68

ಜೋಮುಣ್ಣ ಯಾನೆ ಶಿವಣ್ಣ ಗೌಡ—ಅರ್ಜಿದಾರ

ಮತ್ತು

ಲೈತಪ್ಪ ಗೌಡ ಸಹಾ —ಎದ್ರಿರು

1. ಅತ್ತಪ್ಪ ಗೌಡ, ಅಣ್ಣಪ್ಪ ಗೌಡರ ಮಗ
2. ನಾಗಪ್ಪ ಗೌಡ, ಅತ್ತಪ್ಪ ಗೌಡರ ಮಗ.

ಇಬ್ಬರೂ ಸುಳ್ಯ ತಾಲೂಕು ಮಂಡೆಕೋಲು ಗ್ರಾಮದ ಕುತ್ಯಾಡಿ ಎಂಬಲ್ಲಿ ಪೋಸ್ಟ್ ಮಂಡೆಕೋಲು (ದ. ಕ.)

ಅರ್ಜಿದಾರನು ಮಾಡಿದ ಮೇಲಿನ ಅಮಲ್ದಾರಿಯು ನಿಮ್ಮ ಹಾಜರಾತಿ ಬಗ್ಗೆ ತಾ. 8-7-71ರಲ್ಲು ವ್ಯಾದೆ ಇಟ್ಟರುತ್ತದೆ. ಈ ದಿನ್ನ ಖುದ್ದು ಯಾ ವಕೀಲರ ಮುಖಾಂತರ ಉಪಸ್ಥಿತರಿಸತಕ್ಕದ್ದು. ತಪ್ಪಿದರೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

(By order of the Court)

A. Radhakrishna Gowda
Advocate for Petitioner

Puttur, S. K. 9—6—71

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಪುತ್ತೂರು II ಎಡಿಶನಲ್
ಮುನ್ಸಿಫ್ ಕೋರ್ಟಿನಲ್ಲಿ

Ex. C. 104/71 in O. S. 449/69

N. ಚಂದ್ರಶೇಖರ ಭಟ್ಟ—ಅರ್ಜಿದಾರ(ವಾದಿ)
K.S. ಅನಂತಕೃಷ್ಣ ರಾವ್—ಎದ್ರಿ(ಪ್ರತಿವಾದಿ)

K. S. ಅನಂತಕೃಷ್ಣ ರಾವ್, S/o ಇಜ್ಜಾವು ಸುಬ್ಬರಾವ್, ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲ್ಲೂಕು ಪಳ್ಳೇನೇರಂಕಿ ಗ್ರಾಮ, P.O. ಪಳ್ಳೇನೇರಂಕಿ—ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದ್ರೆ—

ಮೇಲ್ಕಾಣಿಸಿದ ಅಮಲ್ದಾರಿಯಲ್ಲಿ ಡಿಕ್ರಿ ಹಣ ಸಂದಾಯ ಮಾಡದೆ ಬಾಕಿಮಾಡಿಕೊಂಡಿರುವುದರಿಂದ ನಿಮ್ಮನ್ನು ಕೈಹಿಡಿ ವಾರಂಟಿನಲ್ಲಿ ಹಿಡಿತರಿಸಿ ಸಿವಿಲ್ ಜೈಲಿಗೆ ಯಾಕೆ ರವಾನಿಸ ಕೂಡದು ಎಂಬುದಕ್ಕೆ ಸಬಬುಕೊಡಲು ತಾ. 8-7-71ಕ್ಕೆ ಈ ಕೋರ್ಟು ಮುಂದೆ ಬೆಳಗ್ಗೆ ಗಂಟೆ 11ಕ್ಕೆ ನೀವು ಹಾಜ್ರಾಗಿ ಉದಹರಿಸಿಕೊಳ್ಳಲು ತಪ್ಪಿದರೆ ನಿಮ್ಮನ್ನು ಏಕಪಕ್ಷೀಯ ತೀರ್ಮಾನಿಸಿ ಶಿಕ್ಷಿಸಲಾಗುವುದು.

ಕೋರ್ಟು ಹುಕುಂ ಪ್ರಕಾರ

V. M. BHAT *B.A., LL.B.*
Advocate for Petr.

ಪುತ್ತೂರು, 8-6-71.

ಕಾಸೆಂದರೆ ಶ್ಯ, ಮಾತೆಂದರೆ ಬ್ರಹ್ಮಾಂಡ!

ಅಂದು, ಕೇವಲ ಮೂರು ತಿಂಗಳ ಹಿಂದೆ, ಲೋಕಸಭಾ ಚುನಾವಣೆಯ ಸಮೂಜವಾದದ ಮೂದರಿವಾದದ ಅನಭಿಷಿಕ್ತ ಮಹಾರಾಣಿ ಇಂದಿರಾ ಗಾಂಧಿಯವರು ಬಡವರ ಬಂಧು ತಾನೆಂದು ಗುಡುಗಿಕೊಂಡಾಗ ಆ ಗುಡುಗಿನ ಶಬ್ದವನ್ನು ಕೇಳಿ ಶ್ರೀಸಾಮಾನ್ಯನೆಂಬ ನವಿಲು ಗರಿಬಿಚ್ಚಿ ನರ್ತಿಸಿತು. ಚುನಾವಣಾ ಚಂಡಮಾರುತ ಬಹು ವೇಗ, ಭಾರೀ ಭಯಂಕರವಾಗಿ ಬೀಸಿ ಇಂದಿರಾಜಾಲವನ್ನು ಬೀಸಿಬಿಟ್ಟಿತು. ಅಂದಿನ ಮೋಡಗಳು ಅದೆಲ್ಲೋ ಚದರಿಹೋದುವು. ಗುಡುಗಿನ ಶಬ್ದವೂ ನಿಂತುಹೋಯಿತು. ನವಿಲು ನರ್ತಿಸಿದ್ದೇ ಬಂತು. ಅದರ ಗರಿಗಳನ್ನು ಕತ್ತರಿಸಬೇಕಾಗಿ ಬಂದ ಯಿತು. ಅಂದು ಕಂಡು ಬಂದದ್ದು ನೈಜ ಮೋಘವಲ್ಲ. ಅದು ಇಂದಿರಾದೇವಿಯವರ ವಿಮಾನ. ಗುಡುಗು ಇಂದಿರಾಜೀಯವರ ಪಿತ್ರಾರ್ಜಿತ ಸೊತ್ತು. ಕೇವಲ ಭ್ರಮೆಯಿಂದ ಭೋಳೇ ನವಿಲು ಹುಚ್ಚುತನದಿಂದ ನರ್ತಿಸಿತೆಂಬುದನ್ನು ಸ್ಪಷ್ಟಪಡಿಸಲು ಕೇವಲ ಮೂರೇ ಮೂರು ತಿಂಗಳು ಸಾಕಾದುವು.

ಆಗ, ಇಂದಿರಾಜೀಯವರ ಇನಿದಾದ ಮನಸ್ಸನ್ನಾಕರ್ಷಿಸುವ ಭಾಷಣವನ್ನು ಕೇಳಿದಾಗ, ಕಾರ್ಮಿಕರ–ಶ್ರಮಿಕರ ಮನಸ್ಸಿನ ಮಲ್ಲಿಗೆ ಅರಳಿತು. ಇನ್ನು ಅಧಿಕಾರಶಾಹಿಯ ಅಹಂಕಾರ–ದರ್ಪಗಳಿಗೆ ಮಣಿಯಬೇಕಾಗಿಲ್ಲ; ಕೈತುಂಬ ಸಂಬಳ ಸಿಗುತ್ತದೆ—ಮುಗಿಲ ಮಲ್ಲಿಗೆ ಘಮಘಮಿಸಿತ್ತು. ಮುಗಿಲ ಮಲ್ಲಿಗೆಯನ್ನು ಮುಡಿದುಕೊಳ್ಳುವ ಸೌಭಾಗ್ಯವತಿ ಆದಾರು? ಕೇಂದ್ರ ಸರಕಾರದ ಉದ್ಯೋಗಸ್ಥರು ಚುನಾವಣೆ ಮುಗಿದೊಡನೆ, ಇಂದಿರಕ್ಕ ಸಿಂಹಾಸನವನ್ನು ಅಲಂಕರಿಸಿದೊಡನೆ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಬಿಡುತ್ತಾರೆ. ಮತ್ತೆ, ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆ ಬರುವದು ಸಹಜ ತಾನೇ! ರಾಜ್ಯಸರ್ಕಾರಗಳು ಅಂತೆಯೇ ವರ್ತಿಸುತ್ತವೆಂದು ಅಂದು ನೌಕರ ಬಳಗ ಭಾವಿಸಿಕೊಂಡಿತ್ತು. ಇದು ಕೇವಲ ಭ್ರಮೆಯೆಂಬುದನ್ನು ಇಂದಿರಾ ಗಾಂಧಿಯವರು ಸ್ಪಷ್ಟಪಡಿಸಿದರು. ವಿಶಾಲ ಕೇಂದ್ರ ಸರಕಾರದ ಉದ್ಯೋಗಸ್ಥರು ಸುಮ್ಮನುಳಿದರು. ಆಂಧ್ರ ಪ್ರದೇಶದ ಶ್ರಮಿಕರು ಸುಮ್ಮಗುಳಿಯಲಿಲ್ಲ.

ಇಷ್ಟಾಗುವಾಗ ಆಂಧ್ರ ಸರಕಾರದ ಶ್ರಮಿಕರು ತಮ್ಮ ಬೇಡಿಕೆಗಳನ್ನು ತಮ್ಮ ಸರಕಾರದ ಮುಂದಕ್ಕಿಟ್ಟರು. ಕಾರ್ಮಿಕರ ಸರಕಾರ ತಕ್ಕ ಕ್ರಮ ಕೈಗೊಳ್ಳುವದೆಂದು ಅವರು ಭಾವಿಸಿಕೊಂಡಿದ್ದರು. ಚುನಾವಣೆಯ ಸಮಯ ಅಷ್ಟೆಲ್ಲ ಆಶ್ವಾಸನೆಗಳನ್ನು ಧಾರಾಳವಾಗಿ ಕೊಟ್ಟಿದ್ದರಲ್ಲವೇ! ಪೂರ್ವಕ್ಕೂ ಪಶ್ಚಿಮಕ್ಕೂ ವ್ಯತ್ಯಾಸ ಇದೆಯೆಂಬುವದನ್ನು ಅವರಂದು ಮರೆತುಬಿಟ್ಟಿದ್ದರು. ತಮ್ಮ ಆಶಾದೇವಿ, ಭಾಗ್ಯದೇವಿ.... ಇಂದಿರಾದೇವಿ ಕೊಟ್ಟ ವಾಕ್ಯಕ್ಕೆ ತಪ್ಪಿ ನಡೆಯಲಾರರೆಂದು ಅವರು ಯೋಚಿಸಿಕೊಂಡಿದ್ದರು.

ಈಗ ಒಂದೂವರೆ ತಿಂಗಳ ಕಾಲ ಬಿಡದೆ ಹೋರಾಟ ನಡೆಯಿತಾದರು ಶ್ರಮಿಕರ ಶ್ರಮಕ್ಕೆ ಫಲ ಕಂಡು ಬರಲಿಲ್ಲ. ಅಧಿಕಾರಶಾಹಿ ಅಲ್ಲಾಡುವಂತೆ ಕಂಡುಬರಲಿಲ್ಲ. ಕೆಲವಾರು ಕಾರ್ಮಿಕರ ಉಪವಾಸದಿಂದೇನು ಪ್ರಯೋಜನ? ಎಲ್ಲರೂ ಉಪವಾಸ ಮಾಡಲಿ ಅಕ್ಕಿ ಉಳಿಯುತ್ತದೆನ್ನುವದೇ ಸಚಿವ ಸಂಪುಟದ ಅಭಿಪ್ರಾಯ. ಕಾರ್ಮಿಕ ಬಳಗವೂ ಬಿಟ್ಟುಕೊಡುವ ಹಾಗೆ ಕಂಡು ಬರುವದಿಲ್ಲ.

ಉರುಳುತ್ತಿವೆ ದಿನಗಳು ಮಾತ್ರ–ಯಾರಿಗೂ ಕಾದು ನಿಲ್ಲದೆ. ಆಂಧ್ರವು ಕೇಂದ್ರದತ್ತ, ಕೇಂದ್ರವು ಆಂಧ್ರದತ್ತ ಕೈತೋರಿಸುತ್ತ ಒಂದೂವರೆ ತಿಂಗಳ ಕಾಲ ಕಳೆದುವು. ಕಾರಾಗೃಹದೊಳಗಿರುವ ಕಾರ್ಮಿಕರು ಬಂಧನದಲ್ಲೂ, ಸೆರೆಮನೆಯ ಹೊರಗಿರುವ ಶ್ರಮಿಕರು ಹೊರಗೂ....ಅಧಿಕಾರಕ್ಕಾಗಿ ಸಂಚು ನಡೆಸುತ್ತಿರುವ ಸಚಿವ ಸಂಪುಟ ಆಯಾಯ ರಾಜಧಾನಿಗಳಲ್ಲೂ....ಸಂಪು–ಸಂಚು....ರಾತ್ರಿ–ಹಗಲು ಉರುಳುತ್ತಾ ಇವೆ. ಯಾರ ಕುತ್ತಿಗೆ ಆ ಉರುಳಿಗಾಗಿ ಇದೆಯೋ! ಅಂತೂ ಚುನಾವಣಾ ಪ್ರಚಾರಕ್ಕೂ ನೈಜ ಕೃತಿಗೂ ಸಂಬಂಧವಿಲ್ಲ. ಚುನಾವಣಾ ಪ್ರಚಾರದಲ್ಲಿ ಹುರುಳಿಲ್ಲವೆಂಬುದು ಸ್ಪಷ್ಟವಾಯಿತು. ಆದರೂ ಇಷ್ಟು ಕೋಟಿಗಟ್ಟಲೆ ಜನರಿಗೆ ಹುರುಳಿ ತಿನ್ನಿಸಿಬಿಟ್ಟೆವೆಂಬ ಆತ್ಮತೃಪ್ತಿಯಿಂದ 'ಆತ್ಮಸಾಕ್ಷಾತ್ಕಾರ' ಪಡೆದಿರುವ ಇಂದಿರಾ ಕಾಂಗ್ರೆಸ್ಸಿಗರು ಹೊಟ್ಟೆಯುಜ್ಜಿಕೊಳ್ಳುತ್ತ ತೇಗುಬಿಡುತ್ತಿದ್ದಾರೆ ಇದನ್ನು ಜೀರ್ಣಿಸಿಕೊಳ್ಳಲು ಸಾಧ್ಯವೇ? ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವದೆಂದರೆ ಉಪಾಹಾರ ಸೇವಿಸಿದಂತೆಯೇನು? ಆಲೋಚನೆ ಮಾಡುವ ಆವಶ್ಯಕತೆ ಯಾದರೂ ಏನು? ಆಗ ಇನ್ನೊಂದು ಘೂಮಂತ್ರವನ್ನು ಹಾಕಿದರಾಯಿತು.

ಗರೀಬಿ ಹಟಾವೋ—ಬಡತನ ತೊಲಗಿಸಿರಿ (ಓಡಿಸಿರಿ)....ಗಡಬಡಿಸಿದಾಗ ಇಂದಿರಾ ಕಾಂಗ್ರೆಸ್ಸಿನಿಂದ ಮಾತ್ರ ಇದು ಸಾಧ್ಯವೆನ್ನುವ ಪ್ರಚಾರ ವೈಖರಿ ಮೋಡಿ ಹಾಕಿಬಿಟ್ಟಿತು. ಇದು ಬೇರೆಯವರಿಗೆ ಹೇಳುವ ಮಾತು. ಕಾರ್ಯಾಚರಣೆಗಾಗಿ ಅಲ್ಲವೆನ್ನುವ ಅರ್ಥ ಅಂದು ಅರಿವಾಗಲಿಲ್ಲ. ಇದೀಗ ಇಂದಿರಾ ಗಾಂಧಿಯವರೂ ಚಿ. ಅಥವಾ ಪಿ. ಸುಬ್ರಹ್ಮಣ್ಯಂರೂ, ಜಗಜೀವನರಾಮರಾಯರೂ ಬಡತನ ಇಂದು ನಿನ್ನೆಯದಲ್ಲ, ರಾಮರಾಜ್ಯದಲ್ಲೂ ಇತ್ತು, ರಾವಣ ರಾಜ್ಯದಲ್ಲೂ ಇದ್ದೇ ಇರುತ್ತದೆ, ಮುಂದಕ್ಕೂ ಇರುತ್ತದೆನ್ನುವ ಆಶ್ವಾಸನೆಯನ್ನು ಕೊಡಲು ಧೈರ್ಯವಾಗಿ ಮುಂದಕ್ಕೆ ಬಂದಿದ್ದಾರೆ. ಅವರ ಬಿಚ್ಚು ನುಡಿಗಾಗಿ ಅವರನ್ನು ಪ್ರಶಂಸಿಸಲೇಬೇಕು. ಅದನ್ನು ಕೇಳಿದ ಮೇಲೂ ಸರಕಾರೀ ಶ್ರಮಿಕರು ಹೆಣಗಾಡುತ್ತಿದ್ದಾರೆಂದರೆ ಸರಕಾರವು ವಿದ್ಯುತ್ ಸ್ಮಶಾನಕ್ಕೆ ಸಿದ್ಧತೆ ನಡೆಸಬೇಕಾಗುತ್ತದೆ. ಅಂದು ಇಂದಿರಾಜೀಗೆ ಜಯಕಾರ ಹಾಕಿದವರು ಕೈಕಟ್ಟಿ ಅವರ ಪ್ರಯತ್ನಗಳಿಗೆ ಯಶಸ್ಸು ಕೋರುವುದನ್ನು ಬಿಟ್ಟು ಬೇಡಿಕೆಗಳನ್ನು ಮುಂದಿಟ್ಟು ಬೇಡಿಕೆಗಳಿಗೆ ಕೈ ಮುಂದೆ ಮಾಡುವದು ಯಾವ ನ್ಯಾಯ? ಉಳುವವನಿಗೆ ಹೊಲ........ನೆಲ ಇಲ್ಲದವನಿಗೆ ಭೂಮಿ.... ಬಡ ಜನತೆಯ ಕಣ್ಣಿಗೆ ಮಣ್ಣೆರಚಲು ಕಮ್ಯೂನಿಸ್ಟರೂ ಸಂಯುಕ್ತ ಹಾಗೂ ಸಮಾಜವಾದಿಗಳೂ ಚುನಾವಣೆಯ ಸಮಯ ಸದ್ದನ್ನೆಬ್ಬಿಸಿ ಗಮನವನ್ನು ಸೆಳೆದುಕೊಳ್ಳಲು ಪ್ರಯತ್ನಿಸಿದುವು. ಅದು ನ್ಯಾಯಪೂರ್ಣವೆಂದು ಬಡವರ ಬಂಧು ಇಂದಿರಾಗಾಂಧಿಯವರೂ ಹೇಳಿದರು. ನಕ್ಸಲೀಯರ ರಾಕ್ಷಸೀಯ ಕೃತ್ಯಗಳನ್ನು ಪ್ರಶಂಸಿದವರು ಇವಕ್ಕ ಪ್ರಶಸ್ತಿಪತ್ರವನ್ನೀಯುವದೇನೂ ಅಚ್ಚರಿಯಲ್ಲ! ಇವೆಲ್ಲವುಗಳ ಗುರಿ ಒಂದೇ; ಸೋಷ್ಯಾಲಿಸಮೆಂದು ಅವರು ಸಾರಿದರು. ಆದರೆ ಇಂದಿರಾಜೀಯವರಿಗೆ ಸೇರಿದ ನೆಲದಲ್ಲಿ ಡೇರೆ ಹೊಡೆಯಲು ಹೋದಾಗ ಪೋಲೀಸರು ಅವರನ್ನು ಓಡಿಸಿಬಿಟ್ಟರು. ಉಳುವವನಿಗೆ ತಾನೇ ಹೊಲ? ಅಂದರೆ ಅದನ್ನು ಅದ್ಯಾರು ನೋಡಿಕೊಳ್ಳುತ್ತಿದ್ದಾರೋ ಅವರಿಗೆ ಬಿಟ್ಟುಕೊಡದೆ ಬೇರೆಯವರಿಗೆ ಬಿಟ್ಟುಕೊಡುವದು ನ್ಯಾಯವಿರುವದಿಲ್ಲ. ಇಂದಿರಮ್ಮನವರ ಇಸ್ರಾದೆ ಇದೂ ಅಲ್ಲ, ಅದೂ ಅಲ್ಲ. ಆ ನೆಲವನ್ನು ಬಿಟ್ಟುಕೊಡಲು ಅವರು ಸಿದ್ಧರಿಲ್ಲ. ಅದನ್ನು ಅರಿತುಕೊಂಡೂ ಇಂದಿರಜ್ಜಿಯವರಿಗೆ ಜಯವಾಗಲೆಂದು ಶ್ರಮಿಸಿ ಈಗ ಬಂಧಿಖಾನೆಯ ಬಂಧುಗಳಾವದರಲ್ಲಿಭಾಗ್ಯವೇನಿದೆ? ಪಾಲಿಗೆ ಬಂದ ಪಂಚಾಮೃತವನ್ನು ಸ್ವೀಕರಿಸಿ ಮೃತರಾಗುವದೇ ಸರಿಯಲ್ಲವೇನು?

ಹಾಗಿದ್ದರೂ ಜೀವಿಸಲಿಕ್ಕಾಗಿ, ಬದುಕಲಿಕ್ಕಾಗಿ ಶ್ರಮಿಕರು ಶ್ರಮಿಸುತ್ತಿದ್ದಾರೆ. ಅದರ ಲಾಭವನ್ನು ಪಡೆದುಕೊಳ್ಳಲು ಕಮ್ಯೂನಿಸ್ಟರು ಕರಚಾಚಿರುವರು. ಯಾರು ಅಂದು ಇಂದಿರಾಜೀಯವರ ಕರಗಳನ್ನು ಬಲಪಡಿಸಬೇಕೆಂದಿದ್ದರೋ ಅದೇ ಕಮ್ಯೂನಿಸ್ಟರು ಇಂದು ಇಂದಿರಾಜೀಯವರನ್ನು ಮಿಥ್ಯ ಸಮಾಜವಾದಿಯೆಂದು ಹೇಳುತ್ತಿದ್ದಾರೆ. ಅವರಿಗೆ ಇಂದಿರಜ್ಜಿಯೂ ಬೇಕಾಗಿಲ್ಲ, ಶ್ರಮಿಕರೂ ಬೇಕಾಗಿಲ್ಲ. ಅವರಿಗೆ ಬೇಕಾಗಿರುವದು ಒಂದೇ ಒಂದು— ಅದುವೇ ಅಧಿಕಾರ. ಭಾರತದ ಬಾನಲ್ಲಿ ಕೆಂಬಾವುಟವನ್ನು ಹಾರಿಸಲು ಆ ಕೆಂಭೂತಗಳು ಹವಣಿಸುತ್ತಿವೆ. ಕಾರ್ಮಿಕರಿಗೆ ಇದು ಇಂದು ಸ್ಪಷ್ಟವಾಗಿ ತಿಳಿದು ಬರುತ್ತವೆ. ಆಂಧ್ರರು ಸರಕಾರೀ ಉದ್ಯೋಗಸ್ಥರ ಪ್ರಯತ್ನಕ್ಕೆ ಪ್ರೋತ್ಸಾಹವೆನ್ನುತ್ತಿರುವ ಕಮ್ಯೂನಿಸ್ಟರು ಕೇರಳದಲ್ಲಿ ಮಾಡಿರುವದೇನು? ಅಲ್ಲಿ ಸಂಪು ನ್ಯಾಯಬಾಹಿರವಿದೆ ಅವರ ಅಧಿಕಾರ ಇರುವಲ್ಲಿ ಸತ್ಯಾಗ್ರಹ–ಸಂಪು ಎಲ್ಲವೂ ಸತ್ತು ಸುಣ್ಣವಾಗಿರಬೇಕು. ರಷ್ಯಾದಲ್ಲೇ, ಚೈನಾದಲ್ಲೇ ಸಂಪು ನ್ಯಾಯಬಾಹಿರವೆಂದಿರುವಾಗ ಅವರ ಶಿಷ್ಯರು ಅದನ್ನು ತಾನೇ ಇಲ್ಲೂ ತರಲು ಪ್ರಯತ್ನಿಸುವರು! ಸರಕಾರೇತರ ಕಾರ್ಖಾನೆಗಳಲ್ಲಿ, ಕಾರ್ಯಾಲಯಗಳಲ್ಲಿ ಸಂಪು ನಡೆದಾಗ ತಂಪುಂಟು ಮಾಡಿದ ಕಮ್ಯೂನಿಸ್ಟರು ಸರಕಾರೀ ರಂಗದಲ್ಲಿ ಸಂಪೆಂದೊಡನೆ ಅದನ್ನು ಸದೆಬಡಿದರು! ಇಂತಹವರು ಆಂಧ್ರದ ಸರಕಾರೀ ನೌಕರಿಗಾಗಿ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ.

ಆಂಧ್ರ ಸರಕಾರದ ಉದ್ಯೋಗಸ್ಥರ ಶಾಂತಿಯುತ ಹೋರಾಟ, ಕೇಂದ್ರ ಸರಕಾರೀ ಉದ್ಯೋಗಸ್ಥರ ನಿರ್ಜೀವ ಸೆಣಸಾಟ ನಮ್ಮೆರಡು ಕಣ್ಣನ್ನೂ ತೆರೆಸಿವೆ. ಬಡತನವನ್ನು ತೊಲಗಿಸಿರೆನ್ನುವದು ಇತರರಿಗೆ ಹೇಳಲಿಕ್ಕಾಗಿ ಇದೆ ವಿನಃ ಕಾರ್ಯರೂಪಕ್ಕೆ ತರಲಿಕ್ಕಾಗಲಿಲ್ಲ. ತಮ್ಮ ಆಸನದ ಭದ್ರತೆಗಾಗಿ ಇಂದು ಬಳಸಿಕೊಳ್ಳಲಾಗುತ್ತಿದೆ. ಇದೀಗ ಹೊಸ ಕರಗಳ ಕುರಿತು ಹೇಳುವಾಗಬಡವರ ಮೇಲೆ ತೆರಿಗೆಯ ಭಾರ ಬೀಳುವುದಿಲ್ಲವೆಂದು ಇಂದಿರಾಜೀಯವರ ತಜ್ಞರು ಪ್ರಚಾರನಡೆಸುತ್ತಿದ್ದಾರೆ ಅವರು ಉಪಯೋಗಿಸುವ ಕೆಲವು ಪೈಸೆ ಬೆಲೆಯುಳ್ಳ ವಸ್ತುಗಳ ಮೇಲೆ ಕೇವಲ ಕೆಲವು ಪೈಸೆ ಹೊಸ ತೆರಿಗೆ ಹಾಕಲಾಗಿದೆಯಂತೆ! ಅಂದರೆ ಪೈಸಾ ಬೆಲೆ ಬಾಳುವದಕ್ಕೆ ಬಡವರ ಮೇಲೆ ಕರುಣೆ ತೋರಿಸಲಿಕ್ಕಾಗಿ ದಯೆಯಿಂದ ಕನಿಕರಪಟ್ಟು ರೂಪಾಯಿ ಟೇಕ್ಸ್ ಹಾಕಿರುವದಿಲ್ಲ! ಎಂತಹ ಮಾತು! ಎಷ್ಟು ಮೊನಚಾದ ಮಾತು! ಅಲ್ಲವೇ ಮತ್ತೆ— ಅನುಲು ಪದಾರ್ಥಗಳ ಮೇಲೆ ತೆರಿಗೆಯ ಭಾರ ಬಿದ್ದಿರುವದಿಲ್ಲವಲ್ಲವೇನು? ಬಡವರಿ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಕಾಮನ್‌ವೆಲ್ತ್ ಬಾಂಧವ್ಯ ಹೇಗೆ ನಡೆಯುತ್ತದೆ?

ಕೂಲಂಕಷ ವಿವೇಚನೆಯಿಲ್ಲದೆ ನಾಲಿಗೆ ಸಡಿಲು ಬಿಡುವುದು ರಾಜ್ಯಕಾರಣಿಗಳಿಗೆ ಬಂದ ರಕ್ತಗತ ಗುಣ. ಅದೊಂದು ಸೋಂಕು ರೋಗ. ಈ ರೋಗದಿಂದ ರಾಜ್ಯಕೀಯ ರಂಗದ ಅತಿರಥ—ಮಹಾರಥರೂ ದೂರವಾಗುವುದಿಲ್ಲ ಕಾಮನ್‌ವೆಲ್ತಿನ ರಾಣಿ ಬ್ರಿಟನ್. ಇದರ ಪ್ರಧಾನ ಮಂತ್ರಿಯು ಮತೆಂದರೆ, ಬೀದಿ ಬಸವಣ್ಣನ ಉದ್ಗಾರವೆಂದು ತೆಗೆದು ಹಾಕುವಂತಿಲ್ಲ. ಅಸಂಪೂರ್ಣ ಜ್ಞಾನದಿಂದ, ತಪ್ಪು ಮಾರ್ಗದರ್ಶನದಿಂದ ಇಂತಹ ಮಹಾ ವ್ಯಕ್ತಿಗಳೂ ನಾಲಿಗೆ ಸಡಿಲಬಿಡುತ್ತಾರೆ, ಮಹಾ ಪ್ರಮಾದ ಮಾಡುತ್ತಾರೆ.

೧೯೬೫ರಲ್ಲಿ ಭಾರತ–ಪಾಕಿಸ್ತಾನಗಳ ನಡುವೆ ಯುದ್ಧ ನಡೆಯಿತು ಪಾಕಿಸ್ತಾನಿ ಸೇನೆಯು ಭಾರತದ ಗಡಿಯನ್ನು ಉಲ್ಲಂಘಿಸಿ ಮೊತ್ತಮೊದಲಿಗೆ ಆಕ್ರಮಣ ಮಾಡಿತು ಆಗ ಭಾರತದ ಪ್ರಧಾನ ಮಂತ್ರಿಯಾಗಿದ್ದ ಶ್ರೀ ಲಾಲಬಹದ್ದೂರ್ ಶಾಸ್ತ್ರಿಯವರು ಆಕ್ರಮಣಕಾರರನ್ನು ಹೊಡೆದಟ್ಟಲು, ಗಡಿರಕ್ಷಣೆಗೆ ಅಗತ್ಯವಾದ ಸೈನಿಕ ಕಾರ್ಯಾಚರಣೆಗಳಿಗೆ ಆಜ್ಞಾಪಿಸಿದರು. ಪಾಕಿಸ್ತಾನದ ಸರ್ವಾಧಿಕಾರಿ ಅಯೂಬಖಾನರು ಅನ್ಯಾಯವಾಗಿ ಅತಿಕ್ರಮಣ ಮಾಡಿದ್ದರೆಂದು ಎಲ್ಲರೂ ಅರಿತಿದ್ದರು ಆದರೆ ಕಾಮನ್‌ವೆಲ್ತ ರಾಣಿ ಬ್ರಿಟನ್ನಿನ ಪ್ರಧಾನಿಯವರ ಹೇಳಿಕೆ ಜಗತ್ತನ್ನೇ ದಂಗು ಪಡಿಸಿತ್ತು.

ಆಗ ಶ್ರೀ ಹೆರಾಲ್ಡ್ ವಿಲ್ಸನ್ನರು ಬ್ರಿಟನ್ನದ ಪ್ರಧಾನಿಯಾಗಿದ್ದರು. ಸಂಪ್ರದಾಯವಾದಿಗಳಾದ ವಿಲ್ಸನ್ನರು ಪಾಕಿಸ್ತಾನಕೆ ತೀರ ಹತ್ತಿರದವರು, ಆದುದರಿಂದ ಭಾರತಕ್ಕೆ ದೂರದವರು. ವಿಶ್ವದ ರಾಜ್ಯಕೀಯದಲ್ಲಿ ಭಾರತವಾಡಿದ ಪಾತ್ರ, ಪಡೆದ ಗೌರವದ ಸ್ಥಾನಮಾನಗಳಿಗಾಗಿ ನೊಂದವರು. ಬ್ರಿಟನ್ನಿನ ನೀತಿಯೇ ಪಾಕ್ ಪರ, ಭಾರತಕ್ಕೆ ಅಹಿತಕಾರಿ ಕಾಮನ್‌ವೆಲ್ತ್ ಕೂಟದ ಎರಡು ರಾಷ್ಟ್ರಗಳನ್ನು ಅವರು ತೂಗುತ್ತಿದ್ದ ತಕ್ಕಡಿಗಳೇ ಬೇರೆ ಬೇರೆ ಪ್ರಧಾನಿಯವರ ಕಛೇರಿಯಲ್ಲೂ ಕೆಲವು ಪೂರ್ವಗ್ರಹ ಪೀಡಿತರು ಇದ್ದಾರೆಂಬುದೀಗ ಬಹಿರಂಗವಾಗಿದೆ

೧೯೬೫ರ ಸಪ್ತೆಂಬರ ೬ರಂದು ಪ್ರಧಾನಿ ವಿಲ್ಸನ್ನರು ಬ್ರಿಟಿಷ್ ಪಾರ್ಲಿಮೆಂಟಿನಲ್ಲೊಂದು ಹೇಳಿಕೆ ನೀಡಿ ಭಾರತವೇ ಮೊದಲಿಗೆ ಪಾಕಿಸ್ತಾನದ ಮೇಲೆ ಆಕ್ರಮಣ ಆರಂಭ ಮಾಡಿತು ಎಂದು ಹೇಳಿದರು. ಈ ಹೇಳಿಕೆಗೆ ಆ ಕಾಲಕ್ಕೇ ವಿರೋಧ ಹೊರಪಟ್ಟಿತ್ತು ಇದು ಅಸತ್ಯವಾದುದೆಂದು ಸತ್ಯ ಸಂಗತಿ ತಿಳಿದವರು ಅರಿತಿದ್ದರು. ವಿಲ್ಸನ್ನರೂ ತಮ್ಮ ತಪ್ಪನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡಿದರು

ವಿಲ್ಸನ್ನರು ಈ ರೀತಿಯ ತಪ್ಪು ಹೇಳಿಕೆ ನೀಡಲು ಕಾರಣಗಳಾವವು? ಪಾಕ್ ರಾಯಭಾರಿ ಕಛೇರಿಯು ಎಡೆಬಿಡದೆ ಭಾರತದ ಬಗ್ಗೆ ಅಪಪ್ರಚಾರ ನಿರತವಾಗಿದೆ, ಸತ್ಯವನ್ನು ಬಚ್ಚಿಟ್ಟು ಭಾರತವೇ ತಪ್ಪುಗಾರನೆಂದು ಜರೆಯುತ್ತ ಬಂದಿದೆ. ಇದನ್ನು ಬ್ರಿಟಿಷ್ ಪೂರ್ವಗ್ರಹ ಪೀಡಿತ ಅಧಿಕಾರಿಗಳು ಸತ್ಯವೆಂದು ಬಗೆದರು ಪ್ರಧಾನಿಯವರಿಗೆ ತಪ್ಪು ತಿಳುವಳಿಕೆ ನೀಡಿದರು. ಅವರು ತಪ್ಪು ಹೇಳಿಕೆ ಹೊರಡಿಸಿದರು—ಈ ವಿಷಯವನ್ನು ವಿಲ್ಸನ್ನರು ಈಗೀಗ ಬರೆದಿರುವ 'ಅಧಿಕಾರದಲ್ಲಿ ಆರು ವರ್ಷ'ವೆಂಬ ಪುಸ್ತಕದಲ್ಲಿ ಬಹಿರಂಗ ಮಾಡಿದ್ದಾರೆ. ಕಾಮನ್‌ವೆಲ್ತ್ ಬಾಂಧವ್ಯ ಕಛೇರಿಯ ಅಧಿಕಾರಿಗಳೇ ಈ ತಪ್ಪು ಹೇಳಿಕೆ ಹೊರಡುವಂತಾಗಲು ಬಾಧ್ಯವೆಂದು ನಮೂದಿಸಿದ್ದಾರೆ ಈ ಕಛೇರಿಯು ಕಾಮನ್‌ವೆಲ್ತ್ ಬಾಂಧವ್ಯವನ್ನು ಹೇಗೆ ಉಳಿಸುತ್ತಿದೆ ಎಂಬುದಕ್ಕೆ ಈ ಘಟನೆಯೊಂದು ಉದಾಹರಣೆ.

oo oo oo

ಬಂಗ್ಲಾ ದೇಶದಲ್ಲಿ ಯಾಹ್ಯಾಖಾನರು ಆರಂಭಿಸಿದ ಸಾಮೂಹಿಕ ನರಮೇಧಕ್ಕೆ ಹತ್ತು ವಾರಗಳು ತುಂಬುತ್ತ ಬಂದರೂ ಚಕಾರವೆತ್ತದ ಹೆಗ್ಗಳಿಕೆ ಅರಬ ರಾಷ್ಟ್ರಗಳದ್ದು. ಇವರ ತಂಡದಲ್ಲೇ ಶೇಖ ಅಬ್ದುಲ್ಲಾರೂ ಸೇರಿದ್ದು ಅನ್ಯಾಯವಲ್ಲ ಬಹುಬಣ್ಣದ ವ್ಯಕ್ತಿತ್ವ ಹೊಂದಿರುವ ಶೇಖ ಅಬ್ದುಲ್ಲಾರಿಗೆ ಏನು ಬೇಕು ಎಂಬುದು ಅವರಿಗೇ ತಿಳಿಯದು; ಕಾಶ್ಮೀರದಲ್ಲಿ, ಭಾರತದಲ್ಲಿ, ವಿಶ್ವದಲ್ಲಿ ಏನೇನು ನಡೆಯುತ್ತಿದೆ ಎಂಬುದೂ ಅವರಿಗೆ ತಿಳಿಯದು. ಅವರಿನ್ನೂ "ಸ್ವತಂತ್ರ ಕಾಶ್ಮೀರದ' ಕನಸು ಕಾಣುತ್ತಿದ್ದಾರೆಯೋ ಅಥವಾ ಕಾಶ್ಮೀರವನ್ನು ಭಾರತದಿಂದ ಪ್ರತ್ಯೇಕಿಸಿ ಪಾಕಿಸ್ತಾನಕ್ಕೆ ನೀಡಲು ಬಯಸುತ್ತಿದ್ದಾರೆಯೋ ಎಂಬುದೂ ಅಸ್ಪಷ್ಟ.

ಸತ್ಯ ಸಂಗತಿಯನ್ನು ಮರೆಮಾಚದೆ ವಿರೂಪಗೊಳಿಸದೆ, ತಮ್ಮ ಹೆಗ್ಗಳಿಕೆ ಪ್ರಕಟವಾಗುವುದಿಲ್ಲವೆಂದು ಅಬ್ದುಲ್ಲಾ ಸಾಹೇಬರಿಗೆ ಚೆನ್ನಾಗಿ ಗೊತ್ತು ಆದುದರಿಂದ ಅವರು ಬಂಗ್ಲಾ ದೇಶದ ಸ್ವಾತಂತ್ರ್ಯ ಹೋರಾಟದ ಮೂಲ ಕಾರಣವೆಲ್ಲವನ್ನೂ ಅಡಗಿಸಿಟ್ಟು, ಅದು ದೇಶವನ್ನು ಛಿದ್ರಗೊಳಿಸುವ ದುಷ್ಟ ಪ್ರಯತ್ನವೆಂದೂ ಇದನ್ನು ಯಾರೊಬ್ಬರೂ ಸಹಿಸಲಾರರೆಂದೂ ಹೇಳಿದ್ದಾರೆ. ಇಷ್ಟರಿಂದಲೇ ಇವರು ತೃಪ್ತರಾಗಲಿಲ್ಲ. ಬಂಗ್ಲಾದೇಶದ ವಿಚ್ಛಿದ್ರಕಾರಕ ಶಕ್ತಿಗಳಿಗೆ ಉತ್ತೇಜನ ನೀಡುವ ಭಾರತವು ಕಾಶ್ಮೀರಿಗಳಿಗೆ ಸ್ವಾತಂತ್ರ್ಯವನ್ನು ನೀಡಲೇಕೆ ನಿರಾಕರಿಸುತ್ತಿದೆ ಎಂದು ನಂಜು ಬೇರೆ ಕಾರಿದ್ದಾರೆ.

ಪಶ್ಚಿಮ ಪಾಕಿಸ್ತಾನವು ಬಂಗ್ಲಾವನ್ನು ಶೋಷಿಸುತ್ತ ಬಂದು ತನ್ನ ಡೊಳ್ಳು ತುಂಬಿಸಿಕೊಂಡಿದೆ, ಇದರಿಂದ ಬಂಗ್ಲಾಗಳು ರೊಚ್ಚಿಗೆದ್ದು ಶೋಷಣೆಯ ವಿರುದ್ಧ ಕೈಯೆತ್ತಿದ್ದಾರೆ ಎಂಬ ಸತ್ಯವನ್ನು ಶೇಖ ಅಬ್ದುಲ್ಲಾ ಅರಿಯದವರಲ್ಲ ಆದರೆ, ಅದನ್ನು ಒಪ್ಪಿಕೊಳ್ಳಲು ಅವರ ಹಿರಿಗನಸು ಅಡ್ಡ ಬರುತ್ತದೆ. ಭಾರತದಿಂದ ಕಾಶ್ಮೀರ ಪ್ರತ್ಯೇಕವಾಗಬೇಕು, ತಾನವರ ಕೊಳಗಳಲ್ಲಿ, ನಂದನವನಗಳಲ್ಲಿ ಸ್ವೈರವಾಗಿ ವಿಹರಿಸಬೇಕು— ಒಂದು ವೇಳೆ ಇದು ಸಾಧ್ಯವಾಗದೆ ಹೋದರೆ, ಅದು ಪಾಕಿಸ್ತಾನಕ್ಕಾದರೂ ಸೇರಬೇಕು—ಇದವರ ಇಂಗಿತ. ಇದಕ್ಕನುಸಾರವಾಗಿ ಅವರು ಹಲವು ಕೃತ್ರಿಮ ನೀತಿಯನ್ನು ಆರಂಭಿಸಿದ್ದಾರೆ; ಇದವರ ಸ್ವಭಾವ.

ಬಂಗ್ಲಾದ ಸ್ವಾತಂತ್ರ್ಯ ಹೋರಾಟ ವಿಚ್ಛಿದ್ರ ಪ್ರಿಯರ ಕೈವಾಡ; ಕಾಶ್ಮೀರದ ಸ್ವಾತಂತ್ರ್ಯ ಹೋರಾಟ ಪ್ರತ್ಯೇಕತಾ ಪ್ರಿಯರ ಹೋರಾಟ ಎಂದು ವರ್ಣಿಸುವ ಈ ವ್ಯಕ್ತಿ ಕಣ್ಣನ್ನೂ ತನ್ನ ಹೆಸರನ್ನೂ ಮತ್ತಷ್ಟು ಕೆಡಿಸಿಕೊಂಡಿದ್ದಾರೆ. ತಾವು 'ಭಾರತ ದೇಶದ ಪ್ರಜೆ' ಎಂದೂ ಒಪ್ಪಿಕೊಳ್ಳಲು ಸಿದ್ಧರಾಗದ ಇವರಿಂದ ಭಾರತವೇನನ್ನಾದರೂ ಬಯಸಿದರೆ ಮೂರ್ಖತನವಾಗುತ್ತದೆ. ಭಾರತದ ವಿದೇಶ ಸಚಿವರು ವಿಶ್ವ ಪರ್ಯಟನಾ ತತ್ಪರರಾಗಿರುವ ಈ ಸಮಯದಲ್ಲೇ ಶೇಖ ಅಬ್ದುಲ್ಲಾರ ಹೇಳಿಕೆ ಹೊರಟದ್ದು ಕಾಕತಾಳೀಯವಲ್ಲ ತನಗಿನ್ನೂ ವಿಶ್ವನಾಯಕತನದಲ್ಲಿ ಪಾಲಿದೆಯೆಂದು ನಂಬಿರುವ ಹಲ್ಲುಡಿದ ಹುಲಿಯ ತಲೆಕೆಳಗು ವ್ಯಾಪಾರ ಮಾತ್ರ.

oo oo oo

ಉತ್ತರ ಪ್ರದೇಶದಲ್ಲಿ ಸಿಂಡಿಕೇಟ್ ನೇತೃತ್ವದ ಸಂಯುಕ್ತ ವಿಧಾಯಕ ದಳದ ಸರಕಾರವನ್ನು ಉರುಳಿಸುವಲ್ಲಿ ಇಂಡಿಕೇಟಿನ ಕಮಲಾಪತಿ ತ್ರಿಪಾಠಿಯವರು ಶಕ್ತರಾದರು ಹಲಸಿನಹಣ್ಣು ಕೊಳೆಯುವಂತೆ ಸಂವಿದವು ಕ್ಷೀಣ ಕ್ಷೀಣವಾಗುತ್ತಲೇ ನಡೆಯಿತು ಇದೇ ರೀತಿ ಬಿಹಾರದಲ್ಲಿ ಎಸ್ಸೆಸ್ಪಿಯ ಕರ್ಪೂರಾಕುರ್ ಕೂಡಾ ನೂಜ ಮುಖ್ಯಮಂತ್ರಿಯೆನಿಸಿದರು ಪ್ರಧಾನ ಮಂತ್ರಿಯ ಪರಮಾನುಗ್ರಹದಿಂದ ಹಿಂದೊಮ್ಮೆ ಮುಖ್ಯಮಂತ್ರಿಯಾಗಿದ್ದ ಬೋಲಾ ಪಸ್ವಾನ ಶಾಸ್ತ್ರಿಯವರು ಮತ್ತೊಮ್ಮೆ ಆ ಹುದ್ದೆಗೇರಿದರು. ಇಷ್ಟರಿಂದಲೇ ತೃಪ್ತರಾಗದ ಶಾಸ್ತ್ರಿ ತಾನೂ ಸದ್ಯದಲ್ಲಿ ಇಂಡಿಕೇಟ್ ಸೇರುವ ಸಾಧ್ಯತೆಯನ್ನೂ ಬಯಲಿಗೆಳೆದಿದ್ದಾರೆ.

ದೇಶದ ರಾಜ್ಯಕೀಯವನ್ನು ಗಮನಿಸುವಾಗ, "ಪಕ್ಷಾಂತರ"ದ ಪಿಡುಗು ಸದ್ಯ ಕೊನೆಕಾಣುವುದಿಲ್ಲವೆನಿಸುತ್ತದೆ. ಇದು ಬಹು ಸಮಯದವರೆಗೂ ಮುಂದರಿಯುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು. ಹತ್ತಾರು ಕೋಣೆಗಳಿರುವ ಮನೆಯಲ್ಲಿ ದಿನಕ್ಕೊಂದು ಕೋಣೆಯನ್ನು ಬಳಸುವಂತೆ ಹತ್ತಾರು ರಾಜ್ಯಕೀಯ ಪಕ್ಷಗಳಲ್ಲಿ ಒಂದಷ್ಟಷ್ಟು ಕಾಲವಿದ್ದು ತಮ್ಮ ಸ್ವಾರ್ಥ ಸಿದ್ಧಿಗಾಗಿ ಪ್ರಯತ್ನಿಸುವುದು ಸಹಜ ಶ್ರೀಮತಿ ಇಂದಿರಾ ಗಾಂಧಿಯವರ ಹೆಸರು ಬೀರಿದ ಸಮ್ಮೋಹನದಲ್ಲಿ ಅವರ ಹೆಸರಿನ ಬಲದಿಂದಲೇ ಮೇಲೇರ ಬಯಸುವವರಿಗೇನೂ ಕಡಮೆಯಿಲ್ಲ.

ಬಹುಜನರು ನಡೆದದ್ದೇ ದಾರಿಯಾಗುತ್ತಿದೆ ಗೆದ್ದು ಬಂದವರೇ ಜನಪ್ರಿಯರೆನಿಸುತ್ತಾರೆ. ಬೋಲಾಪಸ್ವಾನ್ ಶಾಸ್ತ್ರಿಗಳ ಪ್ರಗತಿವಾದಿ ವಿಧಾಯಕ ದಳದ ಸರಕಾರ ಹಿಂದಿನ ಸರಕಾರಗಳಿಗಿಂತ ಹೆಚ್ಚಿನ ಆಯುಷ್ಯ ಪಡೆಯುತ್ತದೆ ಇಯೊಂದು ಸಮಾಧಾನವಲ್ಲದೆ ಈ ರಾಜ್ಯಕೀಯ ಸ್ಥಿತ್ಯಂತರದಿಂದ ಮತ್ತಾವ ಪ್ರಯೋಜನವೂ ಇಲ್ಲ.

●●

ಗೆ ಅದು ಸಾಲದೇನು? ಕುಡಿಯಲಿ ಬೇಕಾದಷ್ಟು, ಬೋಧವಿಲ್ಲದೆ ಪ್ರಜ್ಞಾಶೂನ್ಯರಾಗಿ ಐದುವರ್ಷ ಮಲಗಿಕೊಂಡಿರಲಿ, ಅನಂತರ ಚುನಾವಣೆಯ ಸಮಯ ಎದ್ದು ಇಂದಿರಾ ಪಕ್ಷಕ್ಕೆ ಮತದಾನ ಮಾಡಲಿ. ಮತ್ತೆ ಕುಡಿಯಲಿ, ಮಲಗಲಿ, ಏನೇ ಮಾಡಲಿ, ಅಂತೂ ಸರಕಾರದ ಬಳಿ ಸರಕಾರೀ ನೌಕರರು ಕಾಸು ಕೇಳಬಾರದು. ಕಾಸೆಂದರೆ-ಶ್ಯ! ಅದರೆ ಮಾತು–ಬ್ರಹ್ಮಾಂಡದಷ್ಟು, ಕಾಸೂ ಬ್ರಹ್ಮಾನಂದರೆಡ್ಡಿ ಹಾಗೂ ಇಂದಿರಾ ಗಾಂಧಿಯವರು ಇದನ್ನು ಸ್ಪಷ್ಟಪಡಿಸಿದ್ದಾರೆ.

—ಶ್ರೀ ಶಿವಶಂಕರ



ಹರಿದಾಸರ ಗೀತೆಗಳ ವಿಚಾರ-೨

[ಅನುಬಂಧ]

ಲೇಖಕರು: ಶ್ರೀ ಕೆ. ವೆಂಕಟರಾಯಾಚಾರ್ಯ.

ಹರಿಭಕ್ತಿಯ ಆನೂಚಾನ ರೀತಿಯನ್ನು ಕುರಿತು ಬರೆದ ಈ ಲೇಖನಕ್ಕೆ ಅನುಬಂಧವಾಗಿ ಒಂದು ವಿಷಯವನ್ನು ಎತ್ತಿ ಬರೆಯಬೇಕಾಗಿದೆ. ಏನೆಂದರೆ, ಶ್ರೀ ಎಲ್. ಬಸವರಾಜು ಎಂಬವರು 'ಶಿವದಾಸ ಗೀತಾಂಜಲಿ'ಯೆಂಬ ಪುಸ್ತಕದ ಪ್ರಥಮ ಮುದ್ರಣದ ಆವೃತ್ತಿಯಲ್ಲಿ (ಇ 19?3) 'ಬಸವಾದಿ ಪ್ರಮಥರ ಹಾಡುಗಳು' ಎಂಬ ಬಗೆಗೆ ಬರೆಯುತ್ತಾ, ಪ್ರಸ್ತಾವಾಂತರವನ್ನು ಉಲ್ಲೇಖಿಸಿದ್ದಾರೆ ಅವುಗಳನ್ನು ಪರಿಶೀಲಿಸುವುದು ಅಪ್ರಸ್ತುತವಾಗಲಾರದೆಂದು ಭಾವಿಸುತ್ತೇನೆ

೧) 'ಗೀತೆ (ಹಾಡು)ಗಳ ಆಕರ ಮತ್ತು ಕರ್ತೃಗಳು ಎಂಬೀ ಪ್ರಕರಣದಲ್ಲಿರುವ ಮಾತುಗಳು (ಪುಟ ೬೭) ಇದೇ ಭಾರತೀಯ ಸಾಹಿತ್ಯಕ್ಕೆ 'ವಚನ' ವೆಂಬ ಅಭೂತಪೂರ್ವ ಕಾಣಿಕೆಯನ್ನು ಕೊಟ್ಟ ಶಿವದಾಸರು ತಮ್ಮ ಕಾಲಕ್ಕೆ ಅಥವಾ ತತ್ಪೂರ್ವಕ್ಕೆ ಕನ್ನಡದಲ್ಲಿಲ್ಲದಿದ್ದ ಹಾಡುಗಳನ್ನೂ ಬರೆಯಲೂ ಮೊದಲಿಗರಾದರು.. ಮುಂದೆ 15-16ನೇ ಶತಮಾನಗಳಲ್ಲಿ ಹರಿದಾಸರು ಯಾವ ಕೀರ್ತನ ಸಾಹಿತ್ಯ ಪ್ರಕಾರದಿಂದ ಇಡೀ ದಕ್ಷಿಣ ಭಾರತದ ಸಂಗೀತ ಮತ್ತು ಸಾಹಿತ್ಯ ಪ್ರಪಂಚಗಳೆರಡರಲ್ಲೂ ಅದ್ವಿತೀಯ ಕೀರ್ತಿಯನ್ನು ಗಳಿಸಿದರೋ ಆ ಕೀರ್ತನ ಪ್ರಕಾರಕ್ಕೆ 12ನೆ ಶತಮಾನದ ಬಸವಾದಿ ಶಿವದಾಸರ ಈ ಗೀತಾ (ಹಾಡುಗಳ) ಪ್ರಕಾರವೇ ಮೂಲವೂ ಮಾದರಿಯೂ ಆಗಿದ್ದುವು.

೨) ಹರಿದಾಸರ ಕೀರ್ತನೆಗಳಂತಹ ಯಾವ ಸಾಹಿತ್ಯ ಪ್ರಕಾರವನ್ನು ನಾವು ಹಾಡು ಎಂದು ಕರೆಯುತ್ತಿದ್ದೇವೋ, ಅದನ್ನು ವಚನವೆಂದೇ ಮೊದಲಿಗೆ ಕರೆಯುವ ರೂಢಿಯಿದ್ದು, ಆ ಮೇಲೆ-ಖಚಿತತೆಗೋ ಸ್ವರ-ಛಂದೋಗಂಧಿ ಮಾತ್ರವಾದ ವಚನಗಳನ್ನು ಬಿಟ್ಟು, ಛಂದೋ ಬದ್ಧವಾದ ಮತ್ತು ರಾಗತಾಳ ಸಹಿತವಾದ ಹಾಡುಗಳನ್ನು ಮಾತ್ರ ನಿರ್ದೇಶಿಸಲು 'ಸ್ವರ ವಚನ', 'ಸ್ವರ ಪದ' ಎಂದು ಕರೆದರು (ಅದೇ ಪು ೬೨)

೩) ಬಸವಣ್ಣನಿಗಿಂತ ಪೂರ್ವದ (ಶಿವದಾಸರ) ಒಂದು ಹಾಡೂ ದೊರೆಕಿಲ್ಲ (ಪುಟ 103, ಮತ್ತು 109 ನೋಡಿ) ಬಸವನ ಸಮಕಾಲಿಕನಾದ ಸಕಳೇಶ ಮಾದರಸ ರಚಿತ ಒಂದು ಹಾಡು ತ್ರಿಪದಿಯಲ್ಲಿದೆ (ಪುಟ 144ರಲ್ಲಿ ಆ ಹಾಡು ಇದೆ) ಈ ಸಕಳೇಶ ಮಾದರಸನ ಬಗೆಗೆ ಪಾಲ್ಕುರಿಕೆ ಸೋಮನಾಥನು ಬರೆದ ಸಂಗೀತಾದಿಗಳ ವಿವರಣೆಯಲ್ಲಿದೆ (ಅದೇ. ಪು. 103)

೪) ಹರಿಹರನ ರಗಳೆಯೊಂದರಲ್ಲಿರುವಂತೆ, ಹಾಡು ಹೇಳುವಾಗ ಸಂಗೀತ ಕೂಟದವರೂ ನೃತ್ಯಗಾರರೂ ಇದ್ದರೆಂದು ತಿಳಿಯುತ್ತದೆಂಬುದಕ್ಕೆ 2 ಉದಾಹರಣೆಗಳಿವೆ. ಇಂತಹ ನೃತ್ಯಕ್ಕೆ 'ಕೇಳಿಕೆ'ಯೆನ್ನುತ್ತಾರೆಂದೂ ಬರೆದಿದೆ (ಪುಟ 108)

ಮುಖ್ಯವಾಗಿರುವ ಈ ನಾಲ್ಕು ವಿಷಯಗಳು ಅಷ್ಟು ಸುಪ್ರಧಾನವಾಗಿರುವಂತಿಲ್ಲ! ಶ್ರೀ ಮಧ್ವಾಚಾರ್ಯರ ಕಾಲ (1238-131?)ಕ್ಕಿಂತ ಕನ್ನಡದಲ್ಲಿ ಹರಿದಾಸ ಸಾಹಿತ್ಯವು—ಹಿಂದಿನದೆನ್ನಲು ಆಧಾರವೇ ಇಲ್ಲ ನರಹರಿ ತೀರ್ಥರ ಒಂದೇ ಒಂದು ಹಾಡು ಉಪಲಬ್ಧವಿದೆ (ಪುಟ 77ರ ಟಿಪ್ಪಣಿ) ಎಂಬಲ್ಲಿ, ನಾವೆಂದಂತೆ ಮಧ್ವಾಚಾರ್ಯರ ಕಾಲ 1200-78 ಆಗಿರಬೇಕು, ನರಹರಿ ತೀರ್ಥರು ಒಂದೇ ಒಂದು ಹಾಡು ಬರೆದವರಲ್ಲ, ಹಾಡುಗಳನ್ನು ಬರೆದುದು ಕವಿಚರಿತೆಯಿಂದ ತಿಳಿಯುತ್ತದೆ "ಇಂತು" ಮರುಳಾದೆನೆಂಬುದೇ ಅವರೂ ಇವರೂ ಎತ್ತಿ ಬರೆದಿದ್ದಾರೆ 'ಹರಿಯೇ ಇದು ಸರಿಯೇ?' ಎಂಬ ಹಾಡನ್ನು ಬರೆದಿದ್ದಾನೆ. (ಕ.ಸಾ ಚರಿತ್ರೆ ಶ್ರೀಂ ಶ್ರೀ ಮುಗಳಿ) ಶ್ರೀ ಮಧ್ವಾಚಾರ್ಯರಿಗಿಂತ ಹಿಂದೆ, ಕನ್ನಡದಲ್ಲಿ ಬಸವನ ಸಮಕಾಲಿಕನೆಂಬ ಸಕಳೇಶ ಮಾದರಸನು ರಚಿಸಿದುದೆಂಬಂತೆ (ಅದು ಹಾಡೆಂದೇ ರಚಿಸಿ ಹಾಡಿದಂತಿಲ್ಲ!), ವೈಷ್ಣವ ಕವಿಗಳ ಕೃತಿಗಳ ಭಕ್ತಿಗೀತೆಗಳು ಇಲ್ಲಿ ನೆನಪಿಸಬೇಕಾಗಿವೆ, ಅವರಲ್ಲೂ ರುದ್ರಭಟ್ಟನ 'ಜಗನ್ನಾಥ ವಿಜಯ'ವಂತೂ ವಿಷ್ಣುಭಕ್ತಿಯ ಕಾವಿ'ನಿಂದ ಕೂಡಿದೆಯೆಂದೇ ಈ ಮೊದಲು ಹೇಳಿದೆ. ಶಿಶುಪಾಲನು ಮಾಡುವ ಕೃಷ್ಣನಿಂದೆಯಲ್ಲೂ ವ್ಯಂಗ್ಯವಾಗಿ ಹರಿಯ ಅವತಾರಗಳ ವರ್ಣನೆಯಿದೆ [ಕ ಕ ಚ] ಆದೆಲ್ಲಾ ಸಂಸ್ಕೃತ ಪ್ರಚುರವುಳ್ಳ ಚಂಪೂ ಕಾವ್ಯದಲ್ಲಿ ಬಂದ ಮಾತ್ರಕ್ಕೆ ಅವುಗಳ ಭಕ್ತಿ ಸಾಹಿತ್ಯ ಮೌಲ್ಯವೇನೂ ಕಡಿಮೆಯಾಗಲಾರದು ಅಂದರೆ, ಅವಕ್ಕೆ ರಾಗ—ತಾಳಗಳನ್ನು ಹಚ್ಚುವುದಕ್ಕೆ ಡೆಯಿದೆ ವಚನವು ಛಂದೋಗಂಧಿಯಾದ ಛಂದೋಬದ್ಧವಾಗಿರುವುದೇ ಹಾಡು(ಗೀತೆ)ಯೆಂದಮೇಲೇ 'ತ್ರಿಪದಿ'ಯ ರೂಪಕ್ಕೆ (ಸಕಳೇಶ ಮಾದರಸನ ಕೃತಿಗೆ! ರಾಗ ತಾಳ ಹಚ್ಚಿರಲೇ ಬೇಕಾಗಿಲ್ಲ) ಆ ಬದಲು ವಿವಿಧ ವೃತ್ತಗಳ ಕಾವ್ಯಭಾಗಗಳೂ ಪ್ರವಚನಕ್ಕೆ ರಾಗ-ತಾಳಗಳನ್ನು ಹಚ್ಚಿರುವುದು ಸಾಜವದೆ! ಹರಿಹರನೆಂದ 'ಹಾಡು' ನೃತ್ಯಕ್ಕೆ ಅಳವಡಿಸುವ ಕಾರಣ ಅದು ಭಕ್ತಿಗೀತೆಯೆನ್ನಲು ಬರುವುದಿಲ್ಲ! ಆದುದರಿಂದ, ಶಿವದಾಸರ ಕೃತಿಗಳೇ ಹರಿದಾಸರ ಕೃತಿರಚನೆಗೆ ಮೂಲ ಮಾದರಿಯೆನ್ನುವುದು ಕೇವಲ ಸ್ವಾಭಿಮಾನದ ಮಾತಾಗಿದೆ ಅಂತೆ, ಶಿವಶರಣರಿಗೆ "ಶಿವದಾಸ"ರೆನ್ನುವುದೂ ಆಭಾಸಕರವಾಗಿದೆ. "ಶರಣ"ನೆಂದರೂ "ದಾಸನೆಂದಂತೆ" ಎನಿಸಿದರೂ, "ಶರಣಸತಿ-ಲಿಂಗಪತಿ"ಯೆಂಬಂತಹ ನುಡಿಗಟ್ಟುಗಳಂತೆ 'ಶಿವಶರಣ'ನೆಂದೂ, 'ಹರಿದಾಸ'ನೆಂದು ಹೇಳುವುದೇ ಪ್ರಾಚೀನದಿಂದಲೂ ಬಂದುದಾಗಿದೆ. 'ಹರಿಶರಣ'ನೆಂದು ಸಮಸ್ತಪದದ ನಿರೂಪಣೆ ಪ್ರಾಚೀನದಿಂದಲೂ ಕಾಣುವುದಿಲ್ಲ, ಶಿವದಾಸ'ನೆಂಬ ಸಮಸ್ತಪದವೂ ಹಾಗೇ ತೋರುವುದಿಲ್ಲ ಆ ಮೇರೆಗೆ ಕೇವಲ ಶಬ್ದ ಚಮತ್ಕಾರದಿಂದ, ಅರ್ಥ ವೈಶಾಲ್ಯದ ವೈಖರಿಯಿಂದ, ಸಮತೋಲನದ ಅಭಾವದಿಂದ, ಅಸೌಹಾರ್ದದಿಂದ ಈ ಮೇಲಿನ ವಿವಾದವು ಸರಿಯೆನ್ನಿಸದು.

ಕನ್ನಡ ಸಾಹಿತ್ಯದಲ್ಲಿ ಹಲವಾರು ಕೃತಿಗಳು ದೊರಕಿಲ್ಲ. ಅವುಗಳ ಅಭಾವ ರೂಪದ ಪರಿಸ್ಥಿತಿಯಲ್ಲಿ, ಇತರರಿಗಿಂತ ತಾವೇ ಮೇಲೆಂಬಂತೆ, ಇತರರಿಗೆ ತಾವೇ ಮಾರ್ಗದರ್ಶಕರೆಂಬಂತೆ ಬರೆಯುವುದು ಸಾಧುವಾಗದು! ಅದು ಕಾರಣ 'ಆತ್ಮವತ್ ಸರ್ವಭೂತಾನಿ' ಎಂಬಂತೆ, ಸೌಜನ್ಯದಿಂದ ಸ್ವಾಭಿಮಾನ—ಸಂಭಾವನೆಗಳ ದೂಷಣಗಳಲ್ಲಿ ಸಿಲುಕದೆ, ಸಾಹಿತ್ಯದ ಪರಾಮರ್ಶೆಗೆಳಸುವುದೇ ಅಪೇಕ್ಷಣೀಯವಾದೆ! ವೈಷ್ಣವ ಸಾಹಿತ್ಯದಲ್ಲಿ ವಿಷ್ಣು ಭಕ್ತಿಗೀತೆಯ ರಚನೆಯೂ ಶೈವಕ್ಕಿಂತ ಅರ್ವಾಚೀನವಾಗಿಲ್ಲ! ● ●

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C 2103/70

ಕಾವೇರಮ್ಮ — ಅರ್ಜಿದಾರಳು

vs

B K. ರಘು ಕೂಡಾ—ಎದ್ರಿರು

೩ನೇ ಎದ್ರಿ:-ಸೀತಮ್ಮ W/o ಕಲ್ಲಾರೆ ತಿಂಮಪ್ಪ, ಪುತ್ತೂರು ಕಸಬಾ–

ಮೇಲಿನ ಕೇಸಿನ ಅರ್ಜಿಯು ತಾ. 20-7-1971 ರಲ್ಲು ನಿಮ್ಮ ಹಾಜರಾತಿ ಬಗ್ಗೆ ಮತ್ತು ಆಕ್ಷೇಪಗಳಿದ್ದಲ್ಲಿ ದಾಖಲುಮಾಡುವರೆ ವ್ಯಾದೆ ಇರುತ್ತದೆ. ಆದುದರಿಂದ ನೀವು ಆ ದಿವಸ ಬೆಳಗ್ಯೆ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಏಕ್ಸಪಾರ್ಟಿ ಮಾಡಿ ದಾವೆಯನ್ನು ತೀರ್ಮಾನಮಾಡಲಾದೀತು ಎಂತ ಈ ಮೂಲಕ ಕೋರ್ಟಿನ ಹುಕ್ಕುಂ ತಿಳಿಸಲಾಗಿದೆ.

SD/- N. Subramanyam
Adv for Petitioner
Puttur, S. K., 9-6-71.

ಹಸಿರು ಕ್ರಾಂತಿಯಿಂದ ಹೊನ್ನಿನ ಹೊಳೆ



ತನ್ನ ಐ ಆರ್-8 ಗದ್ದೆಯಲ್ಲಿ ಒಬ್ಬ ಕೃಷಿಕ.

ಭಾರತದ ಆಹಾರಧಾನ್ಯಗಳ ಉತ್ಪಾದನೆ 1949-50ರಲ್ಲಿ 54.? ಕೋಟಿ ಟನ್ ಗಳಷ್ಟಿತ್ತು. ಇದು 1969-70ರಲ್ಲಿ 9.95 ಕೋಟಿ ಟನ್ ಗಳಿಗೆ ಏರಿತು. ಇದೇ ಅವಧಿಯಲ್ಲಿ ಆಹಾರಧಾನ್ಯಗಳನ್ನು ಬೆಳೆಯುವ ಪ್ರದೇಶ 9.9 ಕೋಟಿ ಹೆಕ್ಟೇರ್ ನಿಂದ 12.? ಕೋಟಿ ಹೆಕ್ಟಾರ್ ಗಳಷ್ಟು ಹೆಚ್ಚಿತು ಗಮನಾರ್ಹವಾದ ವಿಷಯವೆಂದರೆ, ಒಂದು ಹೆಕ್ಟಾರ್ ನಲ್ಲಿ ಆಹಾರ ಉತ್ಪಾದನೆ 5?3 ಕಿ ಗ್ರಾಂ ನಿಂದ 805 ಕಿ.ಗ್ರಾಂಗಳಷ್ಟು ಏರಿತು

ಮೊದಲಾಗಿ ಅಧಿಕ ಇಳುವರಿ ಕೊಡುವ ಬೀಜಗಳನ್ನು 196?—6 ರಲ್ಲಿ ಬಳಸಲಾಯಿತು ಈ ಬೀಜಗಳನ್ನು 1966—67ರಲ್ಲಿ 19 ಲಕ್ಷ ಹೆಕ್ಟಾರುಗಳಲ್ಲಿ ಆಹಾರ ಉತ್ಪಾದನೆಗಾಗಿ ಬಳಸಲಾಯಿತು 1970—71ರಲ್ಲಿ ಈ ಬೀಜಗಳನ್ನು 1.4 ಕೋಟಿ ಹೆಕ್ಟಾರ್ ಪ್ರದೇಶಗಳಲ್ಲಿ ಬಿತ್ತಲಾಯಿತು

ಸಣ್ಣ ನೀರಾವರಿ ಯೋಜನೆಗಳು 1950—51ರಲ್ಲಿ 1-29 ಕೋಟಿ ಹೆಕ್ಟಾರಗಳಷ್ಟು ಪ್ರದೇಶಕ್ಕೆ ನೀರಾವರಿ ಸೌಕರ್ಯ ನೀಡಿದವು 1969—70ರ ಅಂತ್ಯದಲ್ಲಿ 1.96 ಕೋಟಿ ಹೆಕ್ಟಾರಗಳು ಈ ಯೋಜನೆಗಳಿಂದ ಲಾಭ ಪಡೆಯಿತು

ಪುಷ್ಟಿಕರ ರಾಸಾಯನಿಕ ಗೊಬ್ಬರದ ಬಳಕೆ 1968-69ರಲ್ಲಿ 17.6 ಲಕ್ಷ ಟನ್ ಗಳಷ್ಟು ಏರಿದೆ. ಈ ಗೊಬ್ಬರದ ಬಳಕೆ 1970-71ರಲ್ಲಿ ಸುಮಾರು 2? ಲಕ್ಷ ಟನ್ ಗಳಿಗೆ ಏರುವ ನಿರೀಕ್ಷೆ ಇದೆ.

1965-66ರಲ್ಲಿ ಸಸ್ಯ ರಕ್ಷಣಾ ಕ್ರಮಗಳಿಂದ 1.8? ಕೋಟಿ ಹೆಕ್ಟಾರ್ ಗಳಿಗು ಹಾಗೂ 1968-69ರಲ್ಲಿ 4 ಕೋಟಿ ಹೆಕ್ಟಾರ್ ಗಳಿಗೂ ಪ್ರಯೋಜನವಾಗಿದೆ. 1970-71ರಲ್ಲಿ 5.20 ಕೋಟಿ ಹೆಕ್ಟಾರ್ ಪ್ರದೇಶ ಈ ಕಾರ್ಯಕ್ರಮದಿಂದ ಪ್ರಯೋಜನ ಹೊಂದುವುದು

ಅಧಿಕ ಇಳುವರಿ ಕೊಡುವ ಹೊಸಬೀಜಗಳೆ ಬೀಜವನ್ನು ಸ್ಥಾನಾಂತರಗೊಳಿಸಿವೆ. ನಂತರ,ಅನೇಕ ಹಾಗೂ ವಿವಿಧ ಬೆಳೆಗಳಿಂದ ಅಧಿಕ ಉತ್ಪಾದನೆಯನ್ನು ಪಡೆಯಲಾಗುತ್ತಿದೆ. ಈ ಕ್ರಮವನ್ನು ಪ್ರಥಮವಾಗಿ 1967-68ರಲ್ಲಿ ಅನುಕರಿಸಲಾಯಿತು. ಈ ವಿಧಾನ 1969-70ರಲ್ಲಿ 1.75 ಕೋಟಿ ಹೆಕ್ಟಾರಗಳಷ್ಟು ಏರಿತು ಭಾರತೀಯ ರೈತರು, ಈಗ ಬೇಸಾಯದಲ್ಲಿ ಯಂತ್ರೋಪಕರಣಗಳನ್ನು ಉಪಯೋಗಿಸತೊಡಗಿದ್ದಾರೆ ಬೇಸಾಯವನ್ನು ಯಾಂತ್ರೀಕರಣ ಮಾಡಲು ಬೇಕಾಗುವ ಅತ್ಯಾವಶ್ಯಕ ವಸ್ತುಗಳು ಈಗ ಆಮದು ಮಾಡುವುದರ ಮೂಲಕ ರೈತರ ಬೇಡಿಕೆಯನ್ನು ಪೂರೈಸಲಾಗುವುದಾದರೂ, ಈ ಯಂತ್ರಗಳನ್ನು ನಮ್ಮ ದೇಶದಲ್ಲೂ ಉತ್ಪಾದಿಸಲು ಪ್ರಯತ್ನಗಳು ನಡೆಯುತ್ತಿವೆ ●

ಅಶುಭಸ್ಯ ಕಾಲ ಹರಣಮ್

(ನಾಲ್ಕನೇ ಪುಟದಿಂದ)

ಕೈಹಾಕಿ ಪ್ರಶ್ನೆಗೆ ತಡೆ ನೀಡಿತು. ಈ ಯೆಲ್ಲ ಸಂಗತಿಯನ್ನೂ ರಾಷ್ಟ್ರೀಯ ಮಟ್ಟದಲ್ಲಿ ಪರಿಶೀಲಿಸಬೇಕೆಂದು ಹೇಳಿತು....'

'ಸದ್ಯ ಶ್ರೀ ಕೆ. ಕೆ. ಶಹಾರಿಗೆ ದೊಡ್ಡ ರಾಜ ಭವನವೇ ಸಿಕ್ಕಿತು....'

'ಸಿಕ್ಕಿತು ಏನು? ಪ್ರವೇಶೋತ್ಸವವಾಯ್ತು; ಇನ್ನು ನಿರ್ಗಮನೋತ್ಸವ ಯಾವಾಗೆಂದು ನೋಡಬೇಕು.'

'ಅಲ್ಲ, ಒಂದು ರೀತಿಯಿಂದ ರಾಜ್ಯಪಾಲರು ಮಂತ್ರಿಗಳಿಗೆ ಕಡಿಮೆಯವರು....'

'ಹೇಗೆ?'

'ನೋಡಿ, ರಾಜ್ಯಪಾಲರನ್ನು ಸೂಚಿಸುವವರು, ಒಪ್ಪಿಕೊಳ್ಳುವವರು ಮಂತ್ರಿಗಳು ಅವರು ಸೂಚಿಸದಿದ್ದರೆ, ಇವರು ಒಪ್ಪಿಕೊಳ್ಳದಿದ್ದರೆ ರಾಜ್ಯಪಾಲರಿದ್ದಾರೆಯೆ?...'

'ಕಂಡಿತಕ್ಕೂ ಇಲ್ಲ....'

'ಅದ್ರ ಮೇಲೆ, ರಾಜ್ಯಪಾಲರಾಗುವವರು ಯಾರು? ಚುನಾವಣೆಯ ಕಣದಲ್ಲಿ ಧುಮುಕಲಾರದ ಅಂಜು ಗುಳಿಗಳು, ಮಂತ್ರಿತನದಿಂದ ವಂಚಿತರಾದ ಶಾಸಕರು, ಚುನಾವಣೆ ಸೋತವರು....'

"ಸಾಕು ಬಿಡೇ...."

- "ಅವ್ರೆಲ್ಲ ರಾಜಭವನದಲ್ಲಿರಬೇಕೆಂದು ಮಂತ್ರಿಗಳು ಬಯಸಿದರೆ ಅದ್ರಲ್ಲಿ ತಪ್ಪೇನು ಬಂತು?"

'ತಪ್ಪೇನಿಲ್ಲಾನ್ನು. ನೋಡು, ನಮ್ಮ ಗಡಿಯಲ್ಲಿ ಚೀನೀ ಸೇನೆಯೂ ಜಮಾವಣೆ ಯಾಗಿದೆಯಂತೆ....'

"ಸರಿ ಹೋಯ್ತು. ಪಾಕ್ ಸೇನೆ ಮೊದಲೇ ಆಕ್ರಮಣ ಮನೋವೃತ್ತಿ ತೋರುತ್ತಿದೆ..."

'ಹಾಗಿದ್ದರೂ ಪ್ರಧಾನಿ ತಾನು ಪಾಕಿಸ್ತಾನಕ್ಕೆ ಅನುಸರೆಯ ತೋರುತ್ತಿಲ್ಲ ಅಂತಾರೆ ...'

'ಅವರು ಹೇಗೆ ತೋರುತ್ತಾರೆ? ಆಕಾಶವಾಣಿ ಮತ್ತು ಪ್ರಸಾರಖಾತೆಯ ಅತ್ಯಂತ ಕಠೋರ ಶಬ್ದಗಳಿಂದಲೇ ಪಾಕ್ ದೌರ್ಜನ್ಯವನ್ನು ಖಂಡಿಸುತ್ತದೆ....'

'ನೋಡಮ್ಮ, ಶಸ್ತ್ರಾಸ್ತ್ರಗಳಿಗೂ ಜಗದವ್ರು ನಮ್ಮ ಮಾತಿನ ಗುಂಡುಗಳ ಮುಂದೆ ತಲೆಬಾಗುವುದುಂಟೆ?'

'ಪಾಕಿಸ್ತಾನದ ಮೇಲೆ ಭಾರತವೊಂದು ವೇಳೆ ಯುದ್ಧ ಸಾರಿದರೆ, ನೆರವಿಗಿರಲೆಂದು ಚೀನ....'

'ಹ್ಞೂಂ. ಇರಬಹುದೂನ್ನು. ಬಂಗ್ಲಾದೇಶದ ನಿರಾಶ್ರಿತರ ಪ್ರವಾಹ ಹರಿಯುತ್ತಿರುವುದನ್ನು ಕಂಡೂ ಕಂಡೂ ಬರಿಯ ಆ ಪಾಕ್ ಆಂತರಿಕ ಪ್ರಶ್ನೆಯೆಂದು ಇರುವುದು ಸಾಧ್ಯವಿಲ್ಲ. ಆದ್ದರಿಂದ, ಇದೇ ರೀತಿ ಮುಂದುವರಿದರೆ, ರಾಜ್ಯಕೀಯ ದೃಷ್ಟಿಯಿಂದಲಾದರೂ ಬಂಗ್ಲಾದೇಶಕ್ಕೆ ಮನ್ನಣೆ ಕೊಡಬೇಕಾಗುವುದು....'

'ವಿದೇಶ ಮಂತ್ರಿ ಸಿಂಗರು ಜಾಗತಿಕ ಸಂಚಾರದ ವೇಳೆ ವಿವಿಧ ರಾಷ್ಟ್ರಗಳ ಅಭಿಪ್ರಾಯಗಳನ್ನು ಸಮೀಕರಿಸಿಕೊಳ್ಳಬಹುದು.'

"ಅದರ ಆಧಾರದ ಮೇಲೆ ನಿರ್ಣಯ ತೆಗೆದುಕೊಳ್ಳಬಹುದು."

'ಹ್ಞೂಂ....'

'ಏನು?'

'ಮತ್ತೇನನ್ನೋದು? ಅಂತೂ...'

'ಅಂತೂ ಇಲ್ಲ, ಇಂತೂ ಇಲ್ಲ.'

'ಅದ್ರ ಜತೆಗೇ ಮುಂತೂ ಇಲ್ಲಾನ್ನಿ..'

'ಛೆ....ಛೆ....ಶಾಂತಂ ಪಾಪಂ ಶಾಂತಂ ಪಾಪಂ ...'

'ಮತ್ತೇನು — ಅಶುಭಸ್ಯ ಕಾಲ ಹರಣಂನ್ಮೇ?'

"ಕಾಲ ಹರಣಮ್ಮಲ್ಲ, ಕಾಲ ಹೂರಣಂ...."

'ಅಲ್ರಿ, ತಂಗ್ಳು ಹೂರಣದಿಂದ ಹೋಳಿಗೆ ಮಾಡಿದ್ರೆ ಮತ್ತೇನಾಗುತ್ತೆ?'

'ಹ್ಞೂಂ...'

'ಏನು?'

'ಏನೂ ಇಲ್ಲಾನ್ನು. ಮತ್ತೆ ಮಳೆ ಸುರುವಾಯ್ತು ...'

'ಛಳಿಗಾಳಿ ಬೇರೆ....'

"ಹ್ಞೂಂ .."

—ಗೋರಾ.

●●

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 1954/1970

- ಕೃಷ್ಣ ಭಟ್ಟ — ಅರ್ಜಿದಾರ

ಅಬೋಕ್ಕರೆ ಬ್ಯಾರಿ,ಅಬ್ಬಾಸು ಬ್ಯಾರಿಯ ಮಗ, ಪುತ್ತೂರು ಕಸಬಾ ಪಲ್ಲಡ್ಕ —ಎದ್ರಿ

ಯವರೀಗೆ ಕೋರ್ಟು ಹುಕ್ಮಂ ಪ್ರಕಾರ ತಿಳಿಸುವುದೇನೆಂದರೆ—

ಅರ್ಜಿದಾರನು ಗೇಣಿ ಬಾಕಿ ವಗೈರೆ ಕುರಿತು ಮಾಡಿದ ಮೇಲ್ಕಂಡ ವ್ಯವಹರಣೆಯ ತಾರೀಕು 17-7-71ಕ್ಕೆ ಯಿಟ್ಟಿರುವುದರಿಂದ ಅದಕ್ಕೆ ಆಕ್ಷೇಪಣೆಗಳಿದ್ರೆ ಸದ್ರಿ ದಿವಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಹ ವ ವಕೀಲರ ಮುಖಾಂತ್ರ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸೋಣಾಗಿಯದೆ.

(Sd) Badekil Ishwara Bhat

Advocate for Petitioner

ಪುತ್ತೂರು, ತಾ.8-6-71.

ಹಸಿರು ಕ್ರಾಂತಿಯಿಂದ - ಬಾಳು ಬಂಗಾರ

ಕಳೆದ ವರ್ಷದ ಸೆಪ್ಟೆಂಬರ್ ತಿಂಗಳು ಮೇರೆದಪ್ಪಿ ಬಂದ ಪ್ರವಾಹಗಳಿಂದಾಗಿ, ಪಶ್ಚಿಮ ಬಂಗಾಳಿನ ಹೂಗ್ಲಿ ಜಿಲ್ಲೆಯ ಜನರ ಬಾಳು ಗೋಳಿನ ಕಥೆಯಾಯಿತು. ಬೆಳೆಗಳು ನಷ್ಟವಾದವು. ಸುಮಾರು ಹದಿನಾಲ್ಕು ಕೋಟಿ ರೂ. ಬೆಲೆಯ ಅಮನ ಭತ್ತ ಪ್ರವಾಹಗಳಿಗೆ ಸಿಕ್ಕಿ ಧ್ವಂಸವಾಯಿತು. ಪ್ರವಾಹಗಳ ಬಳಿಕ ಪರಿಹಾರ ಕಾರ್ಯ ಆರಂಭವಾಯಿತು. ಅಧಿಕಾರಿಗಳು ಮನೆ-ಮಾರುಗಳನ್ನು ಕಳೆದುಕೊಂಡು ದುಃಖಪೀಡಿತರಾದ ಜನರಿಗೆ ಪುನಃವಸತಿ ಕಲ್ಪಿಸಿ ಕೊಡಲು ಮುಂದೆ ಬಂದರು. ಶೀಘ್ರದಲ್ಲೇ ಫಸಲು ಬರುವ ಹಿಂಗಾರು ಬೆಳೆಯ ಬೃಹತ್ ಕಾರ್ಯಕ್ರಮವನ್ನು ಸಿದ್ಧಪಡಿಸಿದರು. ಸರ್ಕಾರ ಉದಾರವಾದ ರೀತಿಯಲ್ಲಿ ರೈತರಿಗೆ ಸಾಲವನ್ನು ನೀಡಿತು. ಗೊಬ್ಬರ ಮತ್ತಿತರ ವಸ್ತುಗಳನ್ನು ಪೂರೈಸಿತು. ಸಕಾಲದಲ್ಲಿ ಒದಗಿ ಬಂದ ಸಹಾಯ ರೈತರಲ್ಲಿ ವಿಶ್ವಾಸವನ್ನು ಮೂಡಿಸಿತು. ಇದರಿಂದ ಹೂಗ್ಲಿ ಜಿಲ್ಲೆಯಲ್ಲಿ ಈಗಾಗಲೇ ಆರಂಭವಾಗಿರುವ ಹಸಿರು ಕ್ರಾಂತಿಯನ್ನು ಅಲ್ಲಿಯ ರೈತರು ಇನ್ನಷ್ಟು ಹುಮ್ಮಸ್ಸಿನಿಂದ, ದೃಢ ನಿರ್ಧಾರದಿಂದ ಮುಂದುವರಿಸಿಕೊಂಡು ಹೋಗುವರೆಂಬುದು ಖಚಿತವಾಗಿದೆ. ಸಾಂಪ್ರದಾಯಿಕವಾಗಿ ಭತ್ತವನ್ನು ಬೆಳೆಯುತ್ತಿದ್ದ ಪ್ರದೇಶಗಳಲ್ಲಿ ಈಗ ಗೋಧಿಯನ್ನು ಬೆಳೆಯಲಾಗುತ್ತಿದೆ.

ನೀರಾವರಿ ಸೌಕರ್ಯಗಳು

ಜಿಲ್ಲೆಯಲ್ಲಿ ನೀರಾವರಿ ಸೌಕರ್ಯಗಳು ಹೆಚ್ಚಿರುವುದರಿಂದ ಹೆಚ್ಚು ಹೆಚ್ಚು ಬೆಳೆ ತೆಗೆದುಕೊಳ್ಳಲಾಗುತ್ತಿದೆ ಪ್ರವಾಹದ ಹಾವಳಿಯಿಂದ ತೊಂದರೆಗೀಡಾಗಿರುವ ಪ್ರದೇಶಗಳಲ್ಲಿ ಈಗಾಗಲೇ 1600 ಕೊಳವೆ ಬಾವಿಗಳನ್ನು ನಿರ್ಮಿಸಲಾಗಿದೆ. ಇನ್ನು 200 ನಿರ್ಮಾಣದ ಹಂತದಲ್ಲಿವೆ. ಸುಮಾರು 3000 ಪಂಪ್‌ಸೆಟ್‌ಗಳನ್ನು ಹಂಚಲಾಗಿದೆ. ಹೂಗ್ಲಿ ಜಿಲ್ಲೆಗಾಗಿ ನದಿಯಿಂದ ನೀರೆತ್ತುವ 20 ನೀರಾವರಿ ಕಾರ್ಯ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ.

'ಬೋರೋ' ಒಡ್ಡುಗಳ ನಿರ್ಮಾಣ ಕಾರ್ಯದಿಂದಾಗಿ ಅಧಿಕ ಇಳುವರಿ ಕೊಡುವ "ಬೋರ್" ಭತ್ತ ಹಾಗು ಗೋಧಿಯ ಬೇಸಾಯಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತಿದೆ. 20,000ಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಈ ಜಾತಿಯ ಭತ್ತ ಮತ್ತು ಗೋಧಿಗಳನ್ನು ರೈತರು ಬೆಳೆಯುತ್ತಿದ್ದಾರೆ. ಇದರಿಂದ 10 ಕೋಟಿ ರೂ.ಗಳಷ್ಟು ಹೆಚ್ಚು ವರಮಾನ ಬಂದಿದೆ.

ಹೂಗ್ಲಿ ಜಿಲ್ಲೆಯಲ್ಲಿ ಅಕ್ಕಿ ಜನರ ಮುಖ್ಯ ಆಹಾರ. ಸುಮಾರು 4.93 ಲಕ್ಷ ಎಕರೆಗಳಲ್ಲಿ ಅಕ್ಕಿಯನ್ನು ಬೆಳೆಯಲಾಗುತ್ತಿದೆ. ಅಕ್ಕಿಯ ನಂತರ ಮಹತ್ವದ ಬೆಳೆಯೆಂದರೆ ಸೆಣಬು. 58,000 ಎಕರೆಗಳಲ್ಲಿ ಇದನ್ನು ಬೆಳೆಯುತ್ತಾರೆ. ತರಕಾರಿ ಉತ್ಪಾದನೆಯೂ ಈ ಜಿಲ್ಲೆಯಲ್ಲಿ ಅಷ್ಟೇ ಜನಪ್ರಿಯವಿದ್ದು, ತರಕಾರಿಗಳಿಗೆ ಉತ್ತಮ ಬೇಡಿಕೆಯಿದೆ.

ಈ ವರ್ಷ ಹೂಗ್ಲಿ ಜಿಲ್ಲೆಯಲ್ಲಿ ಬೋರೋ ಭತ್ತದ ಕೃಷಿ ಅತ್ಯಂತ ಪ್ರೋತ್ಸಾಹದಾಯಕವಾಗಿದೆ. ಮೊದಲು ಬೋಳು-ಬೋಳಾಗೆ ಕಂಡುಬರುತ್ತಿದ್ದ ಹೊಲ-ಗದ್ದೆಗಳು ಈಗ ಹಚ್ಚ — ಹಸಿರಿನಿಂದ ಸುಂದರವಾಗಿ ಕಾಣಿಸುತ್ತವೆ. ಭೂಮಿಯ ಮೇಲ್ಮೈ ಲಕ್ಷಣವೂ ಬದಲಾಗಿದೆ. ಕೇವಲ ಈ ವರ್ಷದಲ್ಲೇ ಸುಮಾರು 75,000 ಎಕರೆ ಜಮೀನಿನಲ್ಲಿ 'ಬೋರೋ' ಭತ್ತ ಬೆಳೆಯಲಾಗಿದೆ.

ರಾಸಾಯನಿಕ ಗೊಬ್ಬರಗಳು

ಅಧಿಕ ಇಳುವರಿ ಕೊಡುವ ಬೀಜಗಳ ಪ್ರಸ್ತಾಪ ಬಂದಾಗಲೆಲ್ಲ ರಾಸಾಯನಿಕ ಗೊಬ್ಬರಗಳ ಮಾತು ಬಂದೇ ಬರುತ್ತದೆ. ಅವೆರಡೂ ಅವಳಿ ಇದ್ದಂತೆ. ಹೂಗ್ಲಿ ಜಿಲ್ಲೆಯಲ್ಲೀಗ ಸುಧಾರಿಸಿದ ಬಿತ್ತನೆಯ ಬೀಜಗಳ ಬಳಕೆಯ ಜೊತೆಗೆ ರಾಸಾಯನಿಕ ಗೊಬ್ಬರದ ಉಪಯೋಗವೂ ಹೆಚ್ಚಿದೆ.

ಈ ವರ್ಷ ರಾಸಾಯನಿಕ ಗೊಬ್ಬರದ ಖರೀದಿಗಾಗಿ 35 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ರೈತರ ಉತ್ಸಾಹವನ್ನು ಕಂಡು ಇನ್ನೂ ಹೆಚ್ಚು ನೀರಾವರಿ ಯೋಜನೆಗಳನ್ನು ಕಲ್ಪಿಸುವ ಯತ್ನಗಳು ಭರದಿಂದ ನಡೆದಿವೆ 'ಸಣ್ಣ ರೈತರ ಅಭಿವೃದ್ಧಿ ಯೋಜನೆ'ಯ ಚೌಕಟ್ಟಿನಲ್ಲಿ ಈ ಉದ್ದೇಶಕ್ಕಾಗಿ ಈಗಾಗಲೇ 6.5ಕೋಟಿ ರೂ.ಗಳನ್ನು ವಿನಿಯೋಗಿಸಲಾಗಿದೆ. ಹೂಗ್ಲಿ ಜಿಲ್ಲೆಯಲ್ಲಿ ಹೀಗೆ ಹಸಿರುಕ್ರಾಂತಿ ಆರಂಭವಾಗಿದೆ. ಅಲ್ಲಿಯ ಜನಜೀವನವನ್ನು ಸುಂದರವಾಗಿ ಸುಖಮಯವಾಗಿಮಾಡಿದೆ.

●●

ನವಯುಗ ಸುವರ್ಣ ಮಹೋತ್ಸವ

ಸ್ಥಾಪನೆ: 1921 | ಚಿನ್ನದ ಹಬ್ಬ: 1971

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 200 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ.!

ದಯಮಾಡಿ

ನಿಮ್ಮ ಬಾಕಿ ಚಂದಾ ಹಣವನ್ನು ಕಳುಹಿಸಿರಿ

READ & ADVERTISE IN NAVAYUGA WEEKLY

ಯೋಗ್ಯತೆಗೆ ತಕ್ಕ ಸ್ಥಾನ

ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಎಚ್. ಡಿ. ಎಸ್ ಪೈ ಅಧಿಕಾರ ಸ್ವೀಕಾರ.

ಸಿಂಡಿಕೇಟ್ ಬೇಂಕಿನಲ್ಲಿ ಮೂವತ್ತು ವರುಷ ಕಾಲ ಪ್ರಾಮಾಣಿಕ ಹಾಗೂ ದಕ್ಷ ಸೇವೆ ಸಲ್ಲಿಸಿ ಅತ್ಯಂತ ಜನಪ್ರಿಯತೆ ಗಳಿಸಿರುವ ಶ್ರೀ ಎಚ್ ಡಿ ಎಸ್ ಪೈಯವರು ಇದೇ ತಾ 14ರಿಂದ ಸಿಂಡಿಕೇಟ್ ಬೇಂಕಿನ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ ಸುಮಾರು ಹದಿಮೂರು ವರುಷ ಮಂಗಳೂರು ಹಂಪನಕಟ್ಟೆ ಶಾಖೆಯಲ್ಲೂ,ಹಲವು ತಿಂಗಳು ಮುಂಬಯಿಯಲ್ಲೂ, 6-7 ವರುಷ ಬೆಂಗಳೂರಿನ ಗಾಂಧಿನಗರ ಶಾಖೆಯಲ್ಲೂ, ಮೆನೇಜರರಾಗಿ ಬೇಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿದು ಸರ್ವಜನಪ್ರಿಯರಾಗಿ ದಾಖಲೆ ಸ್ಥಾಪಿಸಿದ ಕೀರ್ತಿ ಶ್ರೀ ಪೈಗಳದ್ದು. ಸದಾ ನಗುಮುಖದ ಸೇವಾದೀಕ್ಷಾ ಬದ್ಧರಾದ ಶ್ರೀ ಪೈಗಳು ಗಾಂಧಿನಗರ ಶಾಖೆಯಲ್ಲಿ ಸುಮಾರು ನಲುವತ್ತು ಸಾವಿರದಷ್ಟು ಲೆಕ್ಕದ ಖಾತೆಗಳನ್ನಷ್ಟೇ ತೆಲ್ಲದೆ ಹತ್ತು ಕೋಟಿಗೂ ಹೆಚ್ಚಿನ ಡಿಪೋಸಿಟ್ಟನ್ನು ಗಳಿಸಿರುವುದು ಶ್ರೀ ಪೈಗಳ ಅಸಾಧಾರಣ ಯೋಗ್ಯತೆಯ ದ್ಯೋತಕವಾಗಿದೆ. ಚತುರ ಬೇಂಕ್ ಶಾಖಾ ಮೆನೇಜರರಾಗಿದ್ದ ಇವರಿಗೆ ಸಾರ್ವಜನಿಕ ಚಟುವಟಿಕೆ ಸಾಹಿತ್ಯ ಸಾಂಸ್ಕೃತಿಕ ಮೊದಲಾದ ವಿವಿಧ ರಂಗಗಳಲ್ಲಿಯೂ ವಿಶೇಷ ಅಭಿಮಾನ ಆಸಕ್ತಿ ಇವರು ಬೆಂಗಳೂರಿಂದ ಮಣಿಪಾಲಕ್ಕೆ ವರ್ಗಾಯಿಸಲ್ಪಟ್ಟಾಗ ಬೆಂಗಳೂರಲ್ಲಿ ಹಲವು ವಿದಾಯ ಸತ್ಕಾರಗಳು ಜರಗಿ ಶ್ರೀ ಪೈಗಳ ಮುತ್ಸದ್ದಿತನವನ್ನು ಕೊಂಡಾಡಲಾಯಿತು ಬೆಂಗಳೂರಿನ ಸಿಂಡಿಕೇಟ್ ಬ್ಯಾಂಕಿನ 26 ಶಾಖೆಗಳ ಆಫೀಸರರುಗಳೂ, ಕಸ್ಟೋಡಿಯನ್ ಶ್ರೀ ಕೆ ಕೆ. ಪೈಗಳ ಅಧ್ಯಕ್ಷತೆಯಲ್ಲಿ ವಿದಾಯ ಸತ್ಕಾರವಿತ್ತು ಮನ್ನಿಸಿದರಲ್ಲದೆ ಮಾಜಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಅಧ್ಯಕ್ಷತೆಯಲ್ಲಿ ಶ್ರೀ ಪೈಗಳ ಬೆಂಗಳೂರಿನ ಅತ್ಯಧಿಕ ಅಭಿಮಾನಿಗಳು ವಿದಾಯ ಸತ್ಕಾರವನ್ನು ಏರ್ಪಡಿಸಿ ಅವರಿಗೆ ಉಜ್ವಲ ಭವಿಷ್ಯವನ್ನು ಕೋರಿದರು ಸದಾ ಕ್ರಿಯಾಶೀಲರೂ ಜನಸಂಕರ್ಪ ಪ್ರಿಯರೂ ಆದ ಶ್ರೀ ಪೈಗಳು ನೂತನ ಅಧಿಕಾರಕ್ಕೆ ನೇಮಕಗೊಂಡುದು ಯೋಗ್ಯ ಮತ್ತು ಶ್ಲಾಘ್ಯವಿದೆ.

●●

NAVAYUGA ENTERPRISE LTD.

Registered Office:
PALUKOTE, UDIPI

NOTICE

The register of members and Share transfer books of the Company will remain closed from 15th June to 10th July, 1971 (both days inclusive).

(By order of the Board)

K. Honnayya Shetty,
Managing Director.

Udipi. Date 28-5-1971.



ನಿರ್ಮಾತೃ ಶ್ರೀ ವಾದಿರಾಜರವರ "ಸೀತಾ" ಚಿತ್ರದ ದೃಶ್ಯವೊಂದರಲ್ಲಿ ಕಲ್ಪನಾ ಮತ್ತು ಗಂಗಾಧರ್

ಉಡುಪಿಯಲ್ಲಿ ಯಕ್ಷಗಾನ ತರಬೇತಿ ಕೇಂದ್ರದ ಉದ್ಘಾಟನೆ

ಇದೇ ಕಳೆದ ತಾ 30 6 71ರಂದು ಉಡುಪಿ ಎಂ.ಜಿ ಎಂ ಕಾಲೇಜಿನ ಸಮೀಪದ ಕಟ್ಟಡದಲ್ಲಿ ದೆಹಲಿ ಸಂಗೀತ ನಾಟಕ ಅಕಾಡೆಮಿಯ ಆಶ್ರಯದಲ್ಲಿ ಉಡುಪಿ ರೋಟರಿ ಕ್ಲಬ್‌ನ ಅಧ್ಯಕ್ಷ ಶ್ರೀ ಪಿ ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಉಡುಪಿ ಯಕ್ಷಗಾನ ಕೇಂದ್ರದ ಉದ್ಘಾಟನೆಯನ್ನು ಹಿರಿಯ ಕಲಾವಿದ ಶ್ರೀ ವೀರಭದ್ರ ನಾಯಕರು ನೆರವೇರಿಸಿದರು ಪ್ರಾರ್ಥನೆಯಾದ ಬಳಿಕ ಡೈರೆಕ್ಟರ್ ಶ್ರೀ ಕು ಶಿ. ಹರಿದಾಸ ಭಟ್ಟರು ಸ್ವಾಗತಿಸಿ ಶ್ರೀ ವೀರಭದ್ರ ನಾಯಕರು ಈ ಕೇಂದ್ರದ ಗುರುಗಳಾಗಿರುವರೆಂದು ತಿಳಿಸಿದರು

ಶ್ರೀ ವೀರಭದ್ರ ನಾಯಕರು ಉದ್ಘಾಟಿಸುತ್ತಾ, ಹಿಂದೆ ತಾವು ಯಕ್ಷಗಾನ ರಂಗವನ್ನು ಪ್ರವೇಶಿಸಿದ ಕಾಲವನ್ನು ಸ್ಮರಿಸಿ ಇಂದು ಅಳಿದು ಹೋಗುತ್ತಲಿರುವ ಈ ಕಲೆಯನ್ನು ಪುನರ್ಜೀವನಗೊಳಿಸುವುದು ಸ್ವಾಗತಾರ್ಹವೆಂದರು

ಡಾ। ಟಿ ಎಂ ಎ ಪೈಗಳು ಮಾತಾಡುತ್ತ ಅವನತಿಯ ದಾರಿಯಲ್ಲಿರುವ ಈ ಕಲೆ ನಮ್ಮ ಕಾಲದಲ್ಲೇ ಪ್ರಗತಿಗೊಳ್ಳಲಿ ಎಂದು ಹಾರೈಸಿದರು

ಶ್ರೀಗಳಾದ ಕೆ ಎಸ್. ಉಪಾಧ್ಯಾಯ, ಆರ್ ಕೆ ಸಂಜೀವ ರಾವ್, ಎಂ ಎಂ ಹೆಗ್ಡೆ ಮೊದಲಾದವರು ಯಕ್ಷಗಾನದಲ್ಲಿ ಸಂಪ್ರದಾಯಿಕವಾದ ಹಿಂದಿನ ವಿಶಿಷ್ಟ ಪರಂಪರೆಗಳನ್ನು ಕೈಬಿಡದೆ ಕಲೆಯನ್ನು ಬೆಳೆಸಬೇಕೆಂದು ಹೇಳಿದರು.

ದಿಲ್ಲಿಯ ಸಂಗೀತ ನಾಟಕ ಅಕಾಡೆಮಿ ಮತ್ತು ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಅವರ ಸಂಯುಕ್ತ ಆಶ್ರಯದಲ್ಲಿ ಈ ಕೇಂದ್ರ ನಡೆಯುವುದು ಡಾ। ಕೆ. ಶಿವರಾಮ ಕಾರಂತ, ಶ್ರೀ ಕೆ ಕೆ ಹೆಬ್ಬಾರ, ಶ್ರೀ ಟಿ. ಎ ಪೈ, ಶ್ರೀ ಎಸ್ ಎನ್ ಮೂಡಬಿದ್ರಿ, ಶ್ರೀ ಟಿ ರಮೇಶ ಯು ಪೈ, ಪ್ರೊ। ಬಿ ವಿ ಆಚಾರ್ಯ, ಶ್ರೀ ಕೆ ಪ್ರಭಾಕರ ಪೈ ಮತ್ತು ಶ್ರೀಮತಿ ಮಾರ್ಥಾ ಏಶ್ವನ್ ಇವರುಗಳು ಸಲಹೆಗಾರರಾಗಿದ್ದಾರೆ.

ಮೈಸೂರಲ್ಲಿ ಅಳಿಕೆ ರಾಮಯ್ಯ ರೈಯವರಿಗೆ ಸನ್ಮಾನ

ದಕ್ಷಿಣ ಕನ್ನಡದ ಪ್ರಸಿದ್ಧ ಯಕ್ಷಗಾನ ಕಲಾವಿದರೂ, ರಾಜ್ಯ ಸರಕಾರದ ಪ್ರಶಸ್ತಿ ವಿಜೇತರೂ ಆದ ಶ್ರೀ ಅಳಿಕೆ ರಾಮಯ್ಯ ರೈಯವರನ್ನು ಮೈಸೂರಲ್ಲಿ ಸನ್ಮಾನ ಸಮಿತಿಯವರು ತಾ. 11-6-71ರಂದು ರಂಗಾಚಾರ್ಲು ಪುರಭವನದಲ್ಲಿ ಸನ್ಮಾನಿಸಿ ಗೌರವಿಸಿದರು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಡಿ. ಜವರೇಗೌಡರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಮಧ್ಯಪ್ರದೇಶದ ರಾಜ್ಯಪಾಲರಾಗಿದ್ದ ಶ್ರೀ ಕೆ. ಸಿ ರೆಡ್ಡಿಯವರು ಪ್ರಧಾನ ಅತಿಥಿಯಾಗಿ ಆಗಮಿಸಿ ಶ್ರೀ ರೈಯವರಿಗೆ ಸಮಿತಿಯ ಪರವಾಗಿ ರೇಶ್ಮೆ ಶಾಲನ್ನು ಹೊದಿಸಿ ಗೌರವಿಸಿದರು. ಸನ್ಮಾನ ಸಮಿತಿಯ ಕಾರ್ಯದರ್ಶಿ ಎ.ರಾಮಣ್ಣನವರು ಸ್ವಾಗತಿಸಿ ಶ್ರೀ ರೈಯವರ ಪರಿಚಯಮಾಡುತ್ತಾ ಅವರು ಯಕ್ಷಗಾನ ಕಲೆಗೆ ನಲವತ್ನಾಲ್ಕು ವರುಷ ಸಲ್ಲಿಸಿದ ಸೇವೆಯನ್ನು ವಿವರಿಸಿದರು ಉಪಾಧ್ಯಕ್ಷ ಶ್ರೀ ಬಿ ಸಿ ಲಿಂಗಯ್ಯನವರು ಸನ್ಮಾನ ಪತ್ರವನ್ನು ಒಪ್ಪಿಸಿದರು. ಶ್ರೀ ಬಿ ಎನ್ ತಂತ್ರಿಯವರು ವಂದನೆಗಳನ್ನರ್ಪಿಸಿದರು. ಸಮಾರಂಭದ ಅಂಗವಾಗಿ ರೈ ತಂಡದವರಿಂದ ಯಕ್ಷಗಾನ ಪ್ರದರ್ಶನ ಜರಗಿತು.

ಎಂ ಜಿ. ಎಂ. ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ

ಉಡುಪಿಯ ಎಂ ಜಿ ಎಂ ಕಾಲೇಜಿನಲ್ಲಿ ೪೦ ದಿನಗಳ ವರೆಗೆ ನಡೆದ ಜೀವಶಾಸ್ತ್ರದ ಬೇಸಿಗೆ ಶಿಬಿರವು ತಾ ೧೧ರಂದು ಮುಕ್ತಾಯವಾಯಿತು. ಕೆ.ಎಂ ಸಿ ಯ ಡೀನ್ ಡಾ। ಕೃಷ್ಣರಾಯರು ತಮ್ಮ ಸಮಾರೋಪ ಭಾಷಣದಲ್ಲಿ ಅಧ್ಯಾಪಕರು ಯಾವಾಗಲೂ ವಿದ್ಯಾರ್ಥಿಗಳಂತೆ ಅಧ್ಯಯನಮಾಡುತ್ತಿರಬೇಕಾದ ಅವಶ್ಯಕತೆಯನ್ನು ಹೇಳಿದರು. ವಿಖ್ಯಾತ ಸಸ್ಯ ಶಾಸ್ತ್ರಜ್ಞ ಡಾ। ಸಿಂಗರು ಶಿಬಿರದಲ್ಲಿ ಪಾಲುಗೊಂಡ ಅಧ್ಯಾಪಕರು ತಮ್ಮ ಜ್ಞಾನ ತೃಷೆಯನ್ನು ಜಾಗೃತವಾಗಿರಿಸಿಕೊಳ್ಳಬೇಕೆಂದರು. ಅಧ್ಯಕ್ಷತೆ ವಹಿಸಿದ್ದ ಪ್ರಿನ್ಸಿಪಾಲ್ ಕು ಶಿ ಹರಿದಾಸ ಭಟ್ಟರು ಸೆಕೆಂಡರಿ ಶಾಲಾಮಟ್ಟದ ವಿದ್ಯಾರ್ಥಿಗಳಲ್ಲಿ ವಿಜ್ಞಾನದಲ್ಲಿ ಆಸಕ್ತಿ ಕುದುರಿಸಬೇಕಾದ ಅಗತ್ಯವನ್ನು ವಿವರಿಸಿ ಬೇಸಿಗೆಯ ರಜಾ ವೇಳೆ ಬೋಧಿಸಲು ಸಿದ್ಧರಾದ ತಮ್ಮ ಅಧ್ಯಾಪಕರಿಗೆ ಕೃತಜ್ಞತೆ ಸೂಚಿಸಿದರು ಆರಂಭದಲ್ಲಿ ಶಿಬಿರದ ಡೈರೆಕ್ಟರ್ ಶ್ರೀ ಕೆ ಕೆ ಈಶ್ವರನ್ ವಂದನೆ ಸಲ್ಲಿಸಿದರು. ಡಾ। ಎಚ್ ಶಾಂತಾರಾಮ್ ಸ್ವಾಗತ ಕೋರಿದರು. ಈ ಶಿಬಿರದಲ್ಲಿ [illegible] ಮಂದಿ ಶಿಕ್ಷಕರು ಭಾಗವಹಿಸಿದ್ದರು

ಹೊಸ ಜಿಲ್ಲಾಧಿಕಾರಿ

ದ ಕ ಜಿಲ್ಲಾಧಿಕಾರಿ ಶ್ರೀ ಟಿ ಜಿ. ರಾಮಕೃಷ್ಣನ್‌ರವರನ್ನು ಬೆಂಗಳೂರು ವಾಣಿಜ್ಯ ತೆರಿಗೆಗಳ ಡೆಪ್ಯುಟಿ ಕಮಿಷನರ್‌ರನ್ನಾಗಿ ನೇಮಿಸಲಾಗಿದೆ.

ಲಿಂಗಸೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಶ್ರೀ ಎಸ್ ಎ ಮುತ್ತಣ್ಣನವರಿಗೆ ಸೀನಿಯರ್ ಐ ಎ.ಎಸ್. ದರ್ಜೆಯಲ್ಲಿ ಅಫಿಸಿಯೇಟ್‌ಮಾಡಲು ಬಡ್ತಿ ನೀಡಿ ದ ಕ ಜಿಲ್ಲಾಧಿಕಾರಿಗಳನ್ನಾಗಿ ವರ್ಗಾಯಿಸಲಾಗಿದೆ.

ಶಂಷದೆಯ ಕೊಲೆ

(ಎರಡನೇ ಪುಟದಿಂದ)

ನಾಲ್ಕು ತೋಟಾಗಳಿದ್ದುವು. ಎರಡನ್ನು ಅದೇ ಠಾಣೇ ಉಪಯೋಗಿಸಿದಂತೆ ಕಂಡು ಬಂತು. ಕೋಣೆಯ ಒಂದು ಭಾಗದಲ್ಲಿ ತುಂಬಿಟ್ಟ ಪಿಸ್ತೂಲೂ, ರೈಫಲ್ಲೂ ಅವರಿಗೆ ಸಿಕ್ಕಿತು. ಸಬ್ ಇನ್ಸ್‌ಪೆಕ್ಟರ್ ಹೋದಾಗಲೂ ಕೋಣೆಯಲ್ಲಿ ದೀಪ ಉರಿಯುತಿತ್ತು.

ಪೋಲಿಸರು ಎಂಬುದನ್ನು ಗಮನಿಸದೆ ನವಾಬರು ಶಂಷದೆಯ ಪಕ್ಕದಲ್ಲಿ ಮಲಗಿದ್ದರು. ಆರುಗಂಟೆಗೆ ಜಿಲ್ಲಾ ಉಪರಕ್ಷಣಾಧಿಕಾರಿಗಳು ಬಂದರು. ಆಗಲೂ ನವಾಬರು ನರ್ತಕಿಯನ್ನಪ್ಪಿಕೊಂಡೇ ಮಲಗಿದ್ದರು. ಶಂಷದೆ ಮಲಗಿದ್ದ ಭಾಗದ ಗೋಡೆಯಲ್ಲಿ ನೆಲದಿಂದ ಆರೂಕಾಲಡಿ ಎತ್ತರದಲ್ಲಿ ಗುಂಡು ತಾಕಿದ ಗುರುತು ಇತ್ತು. ಕಿಟಕಿಯ ಸಮೀಪ, ಒಂದು ಪೆಟ್ಟಿಗೆಯ ಕೆಳ ಭಾಗದಲ್ಲಿ, ಬಳಸಿದ ತೋಟಾ ಬಿದ್ದಿತ್ತು. ಆದರೆ ಇನ್ನೊಂದು ಸಿಗಲಿಲ್ಲ. ಛಾಯಾಗ್ರಾಹಕರನ್ನು ಕರೆಸಿಕೊಂಡು, ಸ್ಥಳದ ಕೆಲವು ಫೋಟೋಗಳನ್ನು ವಿವಿಧ ಕೋನಗಳಿಂದ ತೆಗೆದುಕೊಳ್ಳಲಾಯಿತು. ತೆಗೆಸಿದ ಫೋಟೋಗಳಲ್ಲಿ ಮೊದಲನೆಯದು—ಲೈಲಾ—ಮಜ್ನು ಮಲಗಿದ ಭಂಗಿಯದು.

ಬೆಳಿಗ್ಗೆ 10ರ ಸುಮಾರಿಗೆ ನವಾಬರು ಶಂಷದೆಯನ್ನು ಬಿಟ್ಟಿದ್ದರು—ಅವರ ಕಿಸೆಯಲ್ಲಿ ಹತ್ತು ಸಾವಿರ ರೂಪಾಯಿನ ಎರಡು ನೋಟುಗಳು, ಸಾವಿರ ರೂಪಾಯಿನ ಐದು ನೋಟುಗಳು ಸಿಕ್ಕಿದುವು. ಜೊತೆಗಿತ್ತು ಬೆಲೆ ಬಾಳುವ ಬಂಗಾರದ ತೋಡಾ.

ಪೋಲಿಸರು ನವಾಬರನ್ನು ಬಂಧಿಸಿ, ಅಂದೇ ಜೈಲಿಗೆ ಕಳುಹಿಸಿ ಕೊಟ್ಟರು. ಅವರು ಮೂರು ವಾರ ಜೈಲಿನಲ್ಲಿದ್ದರು. ಅಷ್ಟರಲ್ಲಿ ಝುಂಗಿನ ಸೆಷನ್ಸ್ ಜಡ್ಜಿಗಳು ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರು. ಆ ಆಜ್ಞೆಯ ವಿರುದ್ಧ ಸರಕಾರ ಅಪೀಲು ಹಾಕಿತು. ಹೈಕೋರ್ಟು ಕೆಳ ಕೋರ್ಟಿನ ತೀರ್ಮಾನವನ್ನು ರದ್ದುಗೊಳಿಸಿ, ಆರೋಪಿ ನವಾಬರನ್ನು ಜೈಲಿಗೆ ಕಳುಹಿಸಿ ಕೊಡುವಂತೆ ಆದೇಶ ನೀಡಿತು. ಅಷ್ಟರೊಳಗೆ ನವಾಬರ ಆರೋಗ್ಯ ತೀರ ಹದಗೆಟ್ಟಿತ್ತು. ಅವರನ್ನು ಜೈಲಿಗೆ ಕಳಿಸಲಿಲ್ಲ. ಚಿಕಿತ್ಸೆಗೆಂದು ಮೇಯೋ ಆಸ್ಪತ್ರೆಗೆ ಸೇರಿಸಲಾಯಿತು.

1942ರ ಫೆಬ್ರವರಿ 12ರಂದು ಶಂಷದೆಯ ಕೊಲೆಯ ತನಿಖೆಯನ್ನು ನಡೆಸಲು ಸೆಷನ್ಸ್ ಜಡ್ಜಿಗಳಿಗೆ ದಾಖಲೆಗಳನ್ನು ಮ್ಯಾಜಿಸ್ಟ್ರೇಟರು ಕಳುಹಿಸಿಕೊಟ್ಟರು. ಝುಂಗಿನಲ್ಲಿ ನವಾಬರಿಗೆ ಬೇಕಾದವರು ಬಹಳ ಮಂದಿ. ಸಾಲದ್ದಕ್ಕೆ ಆಗರ್ಭ ಶ್ರೀಮಂತರು. ಜೊತೆಗೆ ಸಂಪಾದಿಸಿಕೊಂಡ ವರ್ಚಸ್ಸು. ಅವರು ಸಾಕ್ಷಿಗಳನ್ನು ತಿರುಗಿಸಲು ಪ್ರಯತ್ನಿಸುತ್ತಿದ್ದಾರೆ ಎನ್ನುವ ಪುಕಾರು ಬೇರೆ ಎದ್ದಿತು. ಆದ್ದರಿಂದ ಕೇಸಿನ ತನಿಖೆ ಝುಂಗಿನ ಹೊರಗಿರುವ ಸೆಷನ್ಸ್ ಜಡ್ಜಿಗಳ ಕೋರ್ಟಿನಲ್ಲಿ ಆಗ ಬೇಕೆಂದೂ, ಕೇಸಿನ ವರ್ಗಾವಣೆ ನ್ಯಾಯ ಪಾಲನೆಯ ದೃಷ್ಟಿಯಿಂದ ಅನಿವಾರ್ಯವೆಂದೂ, ಹೈಕೋರ್ಟಿಗೆ ಅರ್ಜಿ ಹಾಕಿಕೊಳ್ಳಲಾಯಿತು. ಅದನ್ನು ಹೈಕೋರ್ಟು ಎತ್ತಿ ಹಿಡಿಯಿತು. ನವಾಬರ ಮೇಲಿದ್ದ ಕೇಸು ಲಾಹೋರಿನ ಸೆಷನ್ಸ್ ಜಡ್ಜಿಗಳ ಮುಂದೆ ವಿಚಾರಣೆಗಾಗಿ ಬಂತು. ಅದು ಸಾರ್ವಜನಿಕ ಕುತೂಹಲವನ್ನು ಕೆರಳಿಸಿತು.

ಝುಂಗಿನ ಸಿವಿಲ್ ಸರ್ಜನರು ಶಂಷದೆಯ ಶವ ಪರೀಕ್ಷೆ ನಡೆಸಿದ್ದರು. ಅವರ ಹೇಳಿಕೆಯನ್ನು ಮೊದಲು ತೆಗೆದುಕೊಳ್ಳಲಾಯಿತು. ಶವ ಪರೀಕ್ಷೆಯ ಕಾಲದಲ್ಲಿ ಶಂಷದೆಯ ಕುತ್ತಿಗೆಯ ಎಡ ಭಾಗದಲ್ಲಿ ಗುಂಡೇಟಿನ ಗುರುತನ್ನು ಕಂಡುದಾಗಿ ತಿಳಿಸಿದರು. ಗುಂಡು ತಗುಲಿದಾಗ ಮೃತಳು ಬಲ ಮಗ್ಗುಲಾಗಿ ಮಲಗಿದ್ದಳೆಂದು ಅಭಿಪ್ರಾಯಪಟ್ಟರು. ಆದರೆ ದೇಹವನ್ನು ಪ್ರವೇಶಿಸಿದ ಗುಂಡು ಸಿಗಲಿಲ್ಲವೆಂದು ಹೇಳಿದರು. ಆದರೆ ಅದು ಮೃತಳ ಕಿವಿಯ ಮೂಲಕ ಹೊರಬಂದಿದ್ದರೂ, ಬಂದಿರ ಬಹುದೆಂದೂ, ಕಿವಿಯಲ್ಲಿ ರಕ್ತ ಸೋರಿದ್ದುದಾಗಿಯೂ ಸಾಕ್ಷಿ ನುಡಿದರು. ದೇಹವನ್ನು ಹೊಕ್ಕ ಗುಂಡು, ಖಚಿತವಾಗಿ ಹೊರ ಬರದದೆ ಎಂದು ಹೇಳುವಂತಿಲ್ಲವೆಂದೂ, ಶರೀರದೊಳಗಿನ ಯಾವುದಾದರೊಂದು ಗುಳಿಯಲ್ಲಿ ಸಿಲುಕಿರಬಹುದೆಂದೂ ಅಭಿಪ್ರಾಯಪಟ್ಟರು.

ಎರಡನೆಯ ಸಾಕ್ಷಿ ಇನ್ನೊಬ್ಬರು ವೈದ್ಯರು. ಅವರು ಶಂಷದೆಯ ಶವವನ್ನು ಎರಡನೆಯ ಬಾರಿಗೆ ಪರೀಕ್ಷಿಸಿದವರು. ಮ್ಯಾಜಿಸ್ಟ್ರೇಟರ ಆಜ್ಞೆಯಂತೆ ಶಂಷದೆಯ ಹೆಣವನ್ನು ಹೂತಿಟ್ಟ ಸ್ಥಳದಿಂದ ಅಗೆಯಲಾಯಿತು. ಅದು ನಡೆದುದು ಡಿಸೆಂಬರ್ ಇಪ್ಪತ್ತರಂದು. ಎರಡನೆಯ ಬಾರಿ ಶವ ಪರೀಕ್ಷೆ ನಡೆಸಿದಾಗ–ಈ ವೈದ್ಯರಿಗೆ–ಶಂಷದೆಯ ದೇಹವನ್ನು ಪ್ರವೇಶಿಸಿದ ಗುಂಡು ದೊರಕಿತು ಅವರು ಇನ್ನೊಂದು ಸಂಗತಿಯನ್ನೂ ಹೊರಗೆಡವಿದರು. ರಾತ್ರಿ ಹತ್ತರ ಸುಮಾರಿಗೆ ಮಾದಕ ಸೇವನೆಮಾಡಿದ ಮನುಷ್ಯನನ್ನು ಮರುದಿನ ಮಧ್ಯಾಹ್ನ 2—3ರ ಸುಮಾರಿಗೆ ಪರೀಕ್ಷಿಸಿದರೆ ಕುಡಿದ ಲಕ್ಷಣಗಳು ಕಂಡುಬರಲಾರವು ಎಂದು ಅಧಿಕಾರವಾಣಿಯಿಂದ ಹೇಳಿದರು. ನವಾಬರ ನೆಚ್ಚಿನ ಬಂಟ ಹಿಂದೆಕೊಟ್ಟ ವಿವರವನ್ನು ಕೋರ್ಟಿಗೆ ತಿಳಿಸಿದ.

ಅನಂತರ 2ನೆಯ ಮಹಮದ್ ನವಾಬರ ಹೇಳಿಕೆಯನ್ನು ತೆಗೆದುಕೊಳ್ಳಲಾಯಿತು. ಆತ ತಾನು ಆ ರಾತ್ರಿ ತನ್ನ ಡೇರೆಯಲ್ಲಿ ಉಂಡು ಮಲಗಿದ್ದೆ. ನವಾಬರ ನೌಕರನನ್ನು 'ನವಾಬರು ಕರೆಯುತ್ತಾರೆ' ಎಂದೆಬ್ಬಿಸಿದ. ಬಟ್ಟೆ-ಬರೆ ಧರಿಸಿಕೊಳ್ಳಲು ಕೊಂಚಕಾಲ ಹಿಡಿಯಿತು. ನಾನು ಇನ್ನೂ ಆ ಆವರಣವನ್ನು ತಲುಪಿರಲಿಲ್ಲ. ಅಷ್ಟರಲ್ಲಿ ಗುಂಡಿನ ಸದ್ದು ಕೇಳಿಸಿತು. ಗಾಮನ್ ಮತ್ತು ದಾರ್‌ಸಿಂಗ್ ನನ್ನಿಂದ ಎಷ್ಟೋ ಮುಂದಿದ್ದರು. ನವಾಬರ ಮಲಗುವ ಕೋಣೆಯ ಒತ್ತಿಗಿದ್ದ ಬಚ್ಚಲು ಮನೆಯ ಬಾಗಿಲು ಅರ್ಧ ತೆರೆದಿತ್ತು. ಬಾಗಿಲನ್ನು ಒಳಗಿನಿಂದ ಭದ್ರಪಡಿಸಿರಲಿಲ್ಲ. ಆ ಬಾಗಿಲಿನ ಮೂಲಕ ನವಾಬರು ಮಲಗಿದ್ದಲ್ಲಿಗೆ ಹೋದೆ. ಇಬ್ಬರೂ ಒಟ್ಟಿಗೆ ಮಲಗಿದ್ದರು. ಶಂಷದೆಯ ತಲೆಕೆಳಗಿನ ದಿಂಬು ರಕ್ತದಿಂದ ಒದ್ದೆಯಾಗಿತ್ತು. ಆರೋಪಿಯ ಕಣ್ಣುಗಳು ಮುಚ್ಚಿದ್ದುವು. ಕೋಣೆಯಲ್ಲಿ ಉರಿಯುತಿದ್ದ ದೀಪದ ಬೆಳಕಿನಲ್ಲಿ ತಾನು ಇದನ್ನು ಕಂಡೆ ಎಂದು ಆತ ತಿಳಿಸಿದ.

ಅವನನ್ನು ಅಲ್ಲಾಡಿಸಲು ಆರೋಪಿಯ ಲಾಯರ್ ಸರ್ವ ಸಾಹಸ ಮಾಡಿದರು. ಪಾಟೀ ಸವಾಲಿಗೆ ಉತ್ತರ ಕೊಡುತ್ತ ಆತ ಆರೋಪಿ ಪಾನಾಸಕ್ತನೆಂಬುದನ್ನು ಒಪ್ಪಿಕೊಂಡ. ಅಂದು ಬೆಳಿಗ್ಗೆ ಏಳರಿಂದ ರಾತ್ರಿ ಹತ್ತರವರೆಗೂ ಆರೋಪಿ ಕುಡಿಯುತ್ತಲೇ ಇದ್ದುದಾಗಿ ಆತ ತಿಳಿಸಿದ. ತನಗೂ—ಆರೋಪಿಗೂ ಮನಸ್ತಾಪ ಇರುವುದನ್ನೂ 2ನೆಯ ಮಹಮದ್ ನವಾಜ್ ಅಲ್ಲಗಳೆಯಲಿಲ್ಲ. ಆಪಾದಿತನ ಮನಸ್ಸಿನ ವರ್ತನೆಯಿಂದ ಜಿಗುಪ್ಸೆಗೊಂಡು ಕೋರ್ಟಿನಲ್ಲಿ ವ್ಯವಹರಿಸಿರುವುದೂ ನಿಜವೆಂದ. ಆರೋಪಿಯ ತಾಯಿ ತನ್ನನ್ನು ನವೆಂಬರ್ 9ರಂದು ಕೆಲಸದಿಂದ ನಿವೃತ್ತಿ ಗೊಳಿಸಿದ್ದೂ ಸತ್ಯವೆಂದ.

'ರಾತ್ರಿ ಹತ್ತರ ತನಕ ತಾನೂ ನವಾಬರ ಕಾಲೊತ್ತುತ್ತ ಅವರ ಕೋಣೆಯಲ್ಲಿದ್ದೆ. ಅವರು ನನಗೆ ಮಲಗಿ ಕೊಳ್ಳಲು ಸೂಚನೆ ಕೊಟ್ಟರು. ಆಗ ನವಾಬರೂ, ಮೃತಳೂ ಒಂದೇ ಹಾಸುಗೆಯಲ್ಲಿದ್ದರು. ನಾನು ಹೊರ ಬರುತ್ತಲೇ ಅವರು ಒಳಗಿನಿಂದ ಅಗಣಿ ಹಾಕಿಕೊಂಡರು. ನಮ್ಮ ಸಾಹುಕಾರರಿಗೆ ದೀಪವಿರಿಸಿಕೊಂಡೇ ನಿದ್ದೆ ಹೋಗುವ ಅಭ್ಯಾಸ'—ಇದು ಅಡಿಗೆಯಾಳು ಕೊಟ್ಟ ಹೇಳಿಕೆ. ಇವರ ಜೊತೆಯಲ್ಲಿ ಇನ್ನಿಬ್ಬರು ತರುಣಿಯರ ಸಾಕ್ಷ್ಯವನ್ನೂ ತೆಗೆದುಕೊಳ್ಳಲಾಯಿತು. ವೃತ್ತಿಯಿಂದ ಜೋರಾ, ಖೈರಾನ್—ನಿತ್ಯ ಸುಮಂಗಲಿಯರು. ನವೆಂಬರ್ 8ರ ಸಂಜೆ ನವಾಬರು ತಮ್ಮನ್ನು ಬಂಗಲೆಗೆ ಕರೆಸಿಕೊಂಡರೆಂದೂ, ಆಗ ಶಂಷದೆ ಅವರ ಬಳಿಯಿದ್ದಳೆಂದೂ ಅವರು ನುಡಿದರು. ನಾವು ಅವರ ಮುಂದೆ ಹಾಡಿ—ಕುಣಿದು ಮಾಡಿದೆವು. ಅದರಿಂದ ಉತ್ತೇಜಿತರಾದ ನವಾಬರು ಶಂಷದೆಯನ್ನು ಹಾಡಲು ಒತ್ತಾಯಿಸಿದರು. ಆಕೆ ನಿರಾಕರಿಸಿದಳು. ನವಾಬರು ಅದರಿಂದ ಸಿಟ್ಟಿಗೆದ್ದಂತೆ ಕಂಡು ಬಂತೆಂದು ಅವರು ವಾಗ್ಮೂಲ ಕೊಟ್ಟರು. ಮೃತಳ ಅಣ್ಣ ತಲೀಬ್ ಉಳಿಕೆಯವರ ಹೇಳಿಕೆಯನ್ನು ಸಮರ್ಥಿಸಿದ. ತನ್ನ ತಂಗಿಗೆ ಆರೋಪಿಯ ಜೊತೆಗಿರುವುದು ಪ್ರಿಯವಾಗಿತ್ತು. ಅವರ ನಡತೆಯ ಕುರಿತು ಅವಳು ಆಕ್ಷೇಪಿಸದ ಮಾತೆತ್ತಿರಲಿಲ್ಲ. ಇವು ಸರಕಾರಿ ವಕೀಲರು ಅವನ ಬಾಯಿಯಿಂದ ಹೊರಡಿಸಿದ ಉತ್ತರ.

ಸಾಕ್ಷಿಗಳ ವಿಚಾರಣೆಯ ನಂತರ ಆರೋಪಿಯ ಹೇಳಿಕೆಯನ್ನು ತೆಗೆದುಕೊಳ್ಳಲಾಯಿತು. ನವಾಬರು ತಮ್ಮ ಮೇಲೆ ಬಂದ ಆರೋಪವನ್ನು ಅಲ್ಲಗಳೆದರು.

ಜೋರಾ—ಖೈರಾನರ ಹೇಳಿಕೆಯನ್ನು ಕಟ್ಟುಕತೆಯೆಂದರು. ಅಂದು ಸಂಜೆ ಸಿಟ್ಟಿಗೆದ್ದ ಎನ್ನುವುದನ್ನು ನಿರಾಕರಿಸಿದರು. ರಿವಾಲ್ವರನ್ನು ತನ್ನದೆಂದೂ, ಬೆಳಗ್ಗೆ 10ರ ತನಕ ಶಂಷದೆಯ ಜೊತೆ ಮಲಗಿದ್ದುದೂ ನಿಜವೆಂದರು. ಅದಕ್ಕೆ ಅವರೊಂದು ವಿವರಣೆಯನ್ನು ನೀಡಿದರು. ಹಾಗೆ ಮಲಗಿಕೊಳ್ಳದೆ, ಕೋಣೆಯಿಂದ ಹೊರ ಬಂದಿದ್ದರೆ ತನ್ನ ಖೂನಿ ಖಂಡಿತ ಎಂದು ಲಾಯರ್ ಮನೋಹರಲಾಲ್ ಎಚ್ಚರಿಕೆಕೊಟ್ಟರು. ಈ ಕಾರಣದಿಂದ ಹಾಗೆ ಬಿದ್ದುಕೊಂಡಿದ್ದೆ ಎಂದು ತಿಳಿಸಿ ತಮ್ಮ ಪರ ಯಾರನ್ನೂ ವಿಚಾರಣೆಮಾಡುವುದಿಲ್ಲವಾಗಿ ನಿವೇದಿಸಿಕೊಂಡರು.

ಕೊಲೆಮಾಡಿದ್ದರೆನ್ನುವುದಕ್ಕೆ ನೇರ ಸಾಕ್ಷಿ ಇರಲಿಲ್ಲ. ಆದ್ದರಿಂದ ತಮ್ಮ ಪರ ಯಾರನ್ನೂ ಸಾಕ್ಷಿಯಾಗಿ ಕೋರದಿರುವುದು ಒಳ್ಳೆಯದೆಂದು ಅವರ ಲಾಯರ್ ಸಲಹೆ ಮಾಡಿರಬೇಕು. ಶಂಷದೆಯನ್ನು ಕೊಲ್ಲುವುದಕ್ಕೆ ನವಾಬರಿಗೆ ಯಾವ ಬಲವತ್ತರವಾದ ಕಾರಣವೂ ಇರಲಿಲ್ಲ. ಬಚ್ಚಲು ಮನೆಯ ಬಾಗಿಲಿನ ಮೂಲಕ–ಒಳಗಿನ ಅಗಣಿ ಹಾಕಿಲ್ಲವಾದ್ದರಿಂದ–ಯಾರೋ ಮೂರನೆಯವರು ಪ್ರವೇಶಿಸುವುದು ಸಾಧ್ಯವಿತ್ತು. ಆ ಮೂರನೆಯವರೇಕೆ ಈ ಕೆಲಸಮಾಡಿರಬಾರದು? ಈ ಅನುಮಾನದ ಲಾಭಪಡೆದು ನವಾಬರನ್ನು ಬಚಾಯಿಸುವ ಪ್ರಯತ್ನ ಲಾಯರದು.

ಪಂಚರು ಆರೋಪ ಸಾಬೀತಾಗಿಲ್ಲವೆಂದರು. ಆಪಾದಿತರು ಬಿಡುಗಡೆಗೆ ಅರ್ಹರೆಂದರು. ಆದರೆ ಸೆಷನ್ಸ್ ಜಡ್ಜಿಗಳು ಅವರ ಅಭಿಮತವನ್ನು ಅಂಗೀಕರಿಸಲಿಲ್ಲ. ನವಾಬರು ತಪ್ಪಿತಸ್ಥರು ಎಂಬ ತೀರ್ಮಾನಕ್ಕೆ ಬಂದರು. ನ್ಯಾಯಾಧೀಶರು ತಮಗೆ ನಾಲ್ಕು ಸವಾಲುಗಳನ್ನು ಹಾಕಿಕೊಂಡರು ಅನಂತರ ಆ ಸವಾಲುಗಳಿಗೆ ಉತ್ತರ ಕೊಡುತ್ತ ಬಂದರು.

1) ಆರೋಪಿ ಶಂಷದೆಯನ್ನು ಗುಂಡಿಟ್ಟು ಕೊಂದಿರಬೇಕು 2) ಮೂರನೆಯವರಾರೋ ಅವರು ಮಲಗಿದ ಮನೆ ನುಗ್ಗಿ ಆ ವರತ್ತ ಗುಂಡು ಹಾರಿಸಿರಬೇಕು. ಮಲಗಿದ ಇಬ್ಬರಲ್ಲಿ ಒಬ್ಬರನ್ನು ಗುಂಡಿಟ್ಟು ಕೊಲ್ಲುವುದು ಆತನ ಉದ್ದೇಶವಿರಬೇಕು.

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

NAVAYUGA 17-6-1971

Registered with the Registrar
of News Papers for India
under No R. N. 3546/'57

REGD. No. B. G. 176
LICENCE No. 33
Licensed to Post without Prepayment

3) ಮೃತಳು ಆತ್ಮಹತ್ಯೆ ಮಾಡಿಕೊಂಡಿರಬೇಕು. 4) ಆರೋಪಿಯ ಅನುದ್ದೇಶಿತ ನಡತೆಯಿಂದ ಆಕಸ್ಮಿಕ ಸಂಭವಿಸಿರಬೇಕು.

ಶಂಷದೆ ಆತ್ಮಹತ್ಯೆ ಮಾಡಿಕೊಂಡಳೆನ್ನಲು ಬರುವುದಿಲ್ಲ. ಆವಳಿಗೆ ಜೀವನದಲ್ಲಿ ಜಿಗುಪ್ಸೆ ಹುಟ್ಟಿರಲಿಲ್ಲ. ಆತ ಕೊಟ್ಟ ದುಡ್ಡಿನಿಂದ ಅವಳು ತೃಪ್ತಳಾಗಿದ್ದಳು. ನವಾಬರೊಡನಿರಲು ಸಂತೋಷದಿಂದಲೇ ಝುಂಗಿಗೆ ಬಂದಿದ್ದಳು. ಅಲ್ಲದೆ ಅವಳು ವೃತ್ತಿಯಿಂದ ವಾರಾಂಗನೆ. ನವಾಬರಂತಹ ಸೊಗಸುಗಾರ ಆವಳಿಗೆಲ್ಲಿ ಗಂಟುಬೀಳಬೇಕು? ಅಲ್ಲದೆ ತನ್ನ ವಿಟನ ಜೊತೆ ರೂ. 25000.00 ಇರುವುದನ್ನು ಅವಳು ಬಲ್ಲಳು. ಬೇಡಿದರೆ ಅಷ್ಟನ್ನೂ ಕೊಡುವ ಧಾರಾಳಿ ಎಂಬುದು ಅವಳಿಗೆ ತಿಳಿದಿತ್ತು. ಹೀಗಿರುವಾಗ ಅವಳೇಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ–ಇದಲ್ಲದೆ ಆತ್ಮಹತ್ಯೆಯೇ ನಿಜವಿದ್ದಲ್ಲಿ ರಿವಾಲ್ವರು ನೆಲದಲ್ಲಿರುವುದು ಸಾಧ್ಯವಿಲ್ಲ. ಅವಳ ಕೈಯಲ್ಲೋ ಹಾಸುಗೆಯಲ್ಲೋ ಇರಬೇಕಿತ್ತು. ಇದು ಖಂಡಿತ ಆತ್ಮಹತ್ಯೆಯಲ್ಲ, ತಜ್ಞರ ಅಭಿಪ್ರಾಯ ಈ ನಿಲುವಿಗೆ ಪುಷ್ಟಿ ಕೊಡುತ್ತದೆ.

ಇದನ್ನು ಆಕಸ್ಮಿಕವೆನ್ನಲು ಬರುವುದಿಲ್ಲ. ಕುಡಿದು ಮತ್ತರಾದ ನವಾಬರು ಆಟವಾಡಲೆಂದು ರಿವಾಲ್ವರು ಎತ್ತಿ ಕೊಂಡರೇ? ಹಾಗೆ ಆಡುತಿದ್ದಾಗ ಅನುದ್ದೇಶಿತವಾಗಿ ಗುಂಡೊಂದು ಸಿಡಿಯಿತೇ? ಒಂದೇ ಒಂದು ಆಸ್ಫೋಟನೆಯಾಗಿದ್ದರೆ, ಇದ್ದರೂ ಇರಬಹುದೆಂದು ಒಪ್ಪಬಹುದಿತ್ತು. ಆದರೆ ಎರಡು ಬಾರಿ ರಿವಾಲ್ವರನ್ನು ಯಾಕೆ ಬಾರಿಸಿದರು? ಒಂದಾದ ಮೇಲೆ ಒಂದರಂತೆ ಗುಂಡು ಹಾರಲು, ರಿವಾಲ್ವರನ್ನು ಅದುಮಬೇಕಲ್ಲವೇ? ಎರಡು ಬಾರಿ ಹಾರಿದ್ದರಿಂದ ಆಕಸ್ಮಿಕ ಎನ್ನಲು ಬರುವುದಿಲ್ಲ. ತಜ್ಞರು ಈ ವಿಷಯದಲ್ಲಿ ಈ ಅಭಿಪ್ರಾಯಕ್ಕೇ ಬಂದಿರುತ್ತಾರೆ. ಆದ್ದರಿಂದ ಅನುದ್ದೇಶಿತ ಎನ್ನುವ ವಾದನಲ್ಲಿ ಹುರುಳಿಲ್ಲ.

ಈ ಕೃತ್ಯವನ್ನು ಬೇರೆ ಯಾರಾದರೂ ಮಾಡಿರಬಹುದೇ? ಅವಕಾಶವಿದೆ ಎಂಬುದು ನಿಜವಾದರೂ, ಅದನ್ನು ಖಂಡಿತ ಬೇರೆಯವರು ಮಾಡಿಲ್ಲ. ನವಾಬರ ಕೂಗು ಕೇಳಿ, ಅವರ ಮಲಗುವ ಮನೆಯತ್ತ ಧಾವಿಸಿ ಬಂದವರು ಹಲವರು. ಅವರು ಬರುತ್ತದ್ದಂತೆಯೇ ಗುಂಡು ಹಾರಿದ ಸದ್ದನ್ನು ಕೇಳಿದರು. ಅವರನ್ನು ಕೂಗುವುದಕ್ಕೂ ಮೊದಲು, ಮೊದಲನೆಯ ಗುಂಡು ಹಾರಿರಬೇಕು. ಎರಡೂ ಒಂದೇ ರಿವಾಲ್ವರಿಂದ ಹಾರಿದವು. ಆ ಮೊದಲನೆಯದನ್ನು ಯಾರು ಹಾರಿಸಿದರು? ಸದ್ದು ಕೇಳಿ ಬರುವುದಕ್ಕೂ, ಸಾಕ್ಷಿಗಳು ಬರುವುದಕ್ಕೂ ಹೆಚ್ಚಿನ ಸಮಯ ಹಿಡಿಯಲಿಲ್ಲ. ಹೊರಗಿನವನೊಬ್ಬರು ಈ ಗುಂಡನ್ನು ಹಾರಿಸಿದ್ದರೆ, ಆತ ಯಾರ ಕೈಗೂ ಸಿಗದೆ, ಸ್ಥಳದಿಂದ ಪರಾರಿಯಾಗುವುದು ಹೇಗೆ–? ಬಂದವರಿಗೆ ನವಾಬರು ತಿಳಿಸಿದ ಮಾತು ಅವರ ತಪ್ಪನ್ನು ಸ್ಥಿರಪಡಿಸುತ್ತದೆ. ಶಂಷದೆ ತೀರಿಹೋದಳು ಎನ್ನುವ ಬದಲು 'ಕೊಲೆಗಡುಕನನ್ನು ಹಿಡಿದುಕೊಳ್ಳಿ, ಓಡಿಹೋಗುತಿದ್ದಾನೆ' ಎಂದು ಆರ್ಭಟಿಸುತಿದ್ದರು. ಮಹಮುದ್ ನವಾಬರ ಸಂಬಂಧಿ ಈ ಕೃತ್ಯ ನಡೆಸಿದನೇ? ತೀರ ಅಸಂಭವ. ನವಾಬರು ಅಂದು ಝುಂಗಿಗೆ ಬರುವುದೇ ಆತನಿಗೆ ತಿಳಿದಿರಲಿಲ್ಲ. ಆದ್ದರಿಂದ ಯಾವ ಸಿದ್ಧತೆಯನ್ನೂ ಆತ ಮಾಡಿಕೊಂಡಿರಲು ಸಾಧ್ಯವಿಲ್ಲ. ನವಾಬರ ನೌಕರರು ಅವರಿಗೆ ಕೈಕೊಟ್ಟರೇ? ನವಾಬರು ಆ ಕುರಿತು ಚಕಾರ ಶಬ್ದ ಎತ್ತಲಿಲ್ಲ. ಅವರಲ್ಲಿ ಯಾರನ್ನೂ ಶಂಕಿಸುವಂತಿಲ್ಲ. ನವಾಬರು ಶಂಕಿಸಿದ್ದರೆ, ಅದನ್ನವರು ಹೇಳದೆ ಬಿಡುತ್ತಿರಲಿಲ್ಲ;

ಸೆಷನ್ಸ್ ಜಡ್ಜಿಗಳು ನವಾಬರಿಗೆ ಜೀವಾವಧಿ ಶಿಕ್ಷೆ ವಿಧಿಸಿದರು. ಅವರನ್ನು ಪ್ರಥಮ ವರ್ಗದ ಕೈದಿಯನ್ನಾಗಿ ಪರಿಗಣಿಸಲಾಯಿತು. ಶಿಕ್ಷೆಯನ್ನನುಭವಿಸಲು ನವಾಬರು ಜೈಲಿಗೆ ಹೋಗಲಿಲ್ಲ. ಅವರನ್ನು ಕೋರ್ಟಿನಿಂದ ಮೇಯೋ ಆಸ್ಪತ್ರೆಗೆ ಒಯ್ಯಲಾಯಿತು.

6—6—42ರಂದು ಸೆಷನ್ಸ್ ಜಡ್ಜಿಗಳ ತೀರ್ಪು ಹೊರಬಿತ್ತು. ಈ ತೀರ್ಪಿನ ವಿರುದ್ಧ ನವಾಬರು ಹೈಕೋರ್ಟಿಗೆ ಅಪೀಲು ಹಾಕಿಕೊಂಡರು. ಅವರ ಅಪೀಲನ್ನು, ರಜೆಯಿಂದ ಬಂದೊಡನೆಯೇ ಕೇಳುವುದಾಗಿ ಹೇಳಿ, ಶ್ರೇಷ್ಠ ನ್ಯಾಯಾಧೀಶ ಸರ್ ಡಗ್ಲಸ್ ಯಂಗ್, ಕಾಶ್ಮೀರಕ್ಕೆ ಹೊರಟು ಹೋದರು. ಹಾಗೆ ಹೋದವರು ಜುಲೈ ೬ರಂದು ಲಾಹೋರಿಗೆ ಮರಳಿ ಬಂದರು. ಅದರ ಹಿಂದಿನ ದಿನ,—ಜುಲೈ 7ರ ರಾತ್ರಿ—ಮಹಮುದ್ ನವಾಜ್ ಮೇಯೋ ಆಸ್ಪತ್ರೆಯಲ್ಲಿ ವಿಧಿವಶರಾದರು. ಮನುಷ್ಯ ನಿರ್ಮಿತ ಕಾಯಿದೆ ವಿಧಿಸಿದ ಶಿಕ್ಷೆಯನ್ನು ಅನುಭವಿಸಲು ಅವರು ಬದುಕಿ ಉಳಿಯಲಿಲ್ಲ. ದೈವದ ಕಟ್ಟಳೆಯನ್ನು ಮೀರಿ ನಡೆಯುವುದು ಅವರಿಂದಾಗಲಿಲ್ಲ.

ಮಹಮುದ್ ನವಾಜರು ಬದುಕಿ ಉಳಿಯುತಿದ್ದರೆ, ಅವರ ಅಪೀಲು ಹೇಗೇ ಇತ್ಯಗೊಳ್ಳುತಿತ್ತು ಎಂದು ಹೇಳುವುದು ಪ್ರಯಾಸದ ಕೆಲಸ. ಈಗ ನವಾಬರೂ, ಅವರ ಪ್ರೇಯಸಿ ಶಂಷದೆ ಜೀವಂತವಿಲ್ಲ. ಅಂದಿನ ರಾತ್ರಿ ಅವರೀರ್ವರಲ್ಲಿ ವಿರಸಕ್ಕೆ ಏನು ಕಾರಣವಾಯಿತೆಂಬುದನ್ನು ಹೇಳಲು ಅವರಿಬ್ಬರೂ ಶಕ್ತರಿದ್ದರು. ಈ ರಹಸ್ಯ ಅವರೊಡನೇ ಮಣ್ಣಿನಲ್ಲಿ ಬೆರೆತು ಹೋಯಿತು. ಸತ್ಯವನ್ನು ತಿಳಿದವರೇ ಉಳಿಯಲಿಲ್ಲ. ಶಂಷದೆಯ ಯಾವ ನಡತೆ ನವಾಬರನ್ನು ಉದ್ರೇಕಿಸಿತು ಎಂಬದು ಇಂದಿಗೂ ನಿಗೂಢ ಸಮಸ್ಯೆಯಾಗಿ ಉಳಿದಿದೆ.

ಅದು ಹೀಗೆ ನಡೆದಿರಬೇಕು.

ಶಂಷದೆ ಸ್ಫುರದ್ರೂಪಿ. ಆವಳದು ಹೇಳಿ ಮಾಡಿಸಿದ ಅಂಗಾಂಗಗಳು ಅವಳು ವಿಲಾಸಪ್ರಿಯೆ, ಕೆಣಕುವ ಸ್ವಭಾವದವಳು ಇಬ್ಬರೇ ಇದ್ದಾಗ ಆವಳು ನವಾಬರನ್ನು ರೇಗಿಸಿರಬೇಕು. 'ನವಾಬರ ದೌರ್ಬಲ್ಯವನ್ನು ಕಂಡು ನಕ್ಕಿರಬೇಕು. ನವಾಬರಿಗೋ ಮಾನಸಿಕವಾಗಿ ಆವಳನ್ನು ಅನುಭವಿಸುವ ಆಸೆ. ಆದರೆ ದೈಹಿಕ ಅಸಾಮರ್ಥ್ಯ ಅದನ್ನು ತೀರಿಸಿಕೊಳ್ಳಲು ಅಡ್ಡಿಯಾಗುತಿತ್ತು. ಅವಳಲ್ಲಿ ಸುಖೋಪಭೋಗದ ಬಯಕೆಯನ್ನು ಉದ್ರೇಕಿಸಿ, ಸುಖ ಕೊಡುವ ಭಾಗ್ಯದಿಂದ ವಿವಂಚಿತರಾದ ನವಾಬರನ್ನು ಕಂಡು ಅವಳು ನಕ್ಕಿರಬೇಕು; ಹಾಸ್ಯ ಮಾಡಿರಬೇಕು. ಹತ್ತಿರಕ್ಕೆ ಬಂದ ಕ್ಲೀಬರಾದ ನವಾಬರನ್ನು 'ತೆಪ್ಪಗೆ ಬಿದ್ದಿರು' ಎಂದು ದಬ್ಬಿರಬೇಕು ಆದರಿಂದ ಪಾನದ ಅಮಲಿನಲ್ಲಿದ್ದ ನವಾಬರು ಕೋಪಗೊಂಡಿರಬೇಕು. ಕೋಪದಲ್ಲಿ ದಿಂಬಿನ ಕೆಳಗಿಟ್ಟುಕೊಂಡಿದ್ದ ರಿವಾಲ್ವರನ್ನು ಕೈಗೆತ್ತಿಕೊಂಡು ಗುರಿಯಿಟ್ಟು ಹೊಡೆದಿರಬೇಕು.

ಏನು ಮಾಡುತ್ತಿರುವೆನೆಂಬ ಅರಿವೇ ನವಾಬರಿಗಿರಲಿಲ್ಲ ಅವಳ ನಗುವನ್ನು ನಿಲ್ಲಿಸುವ ಉದ್ದಿಶ್ಯದಿಂದ ಈ ಕೃತ್ಯವೆಸಗಿರಬೇಕು.

ಶಂಷದೆ ಇನ್ನು ನವಾಬರತ್ತ ನೋಡಿ ಕಿಲಕಿಲನೆ ನಗುವಂತಿಲ್ಲ.

●●

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2–00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ ಬೆಲೆ ರೂ. 1–50

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2–00

Letter Writing Made Easy
ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು–4

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ 50
ಸಂಚಿಕೆ 41

NAVAYUGA

24—6—1971

ಚಾರುಚಯನ

ರಾಜ್ಯಕೀಯದ ಹೊಸ ಫ್ಯಾಶನ್

ಎರಡು ವರ್ಷಗಳಿಗೆ ಮೊದಲು ಕಾಂಗ್ರೆಸ್ಸಿನ ಒಂದು ಗುಂಪು ಎಐಸಿಸಿ ಕರೆಯುವ ಬೇಡಿಕೆಯನ್ನು ಕಾರ್ಯಾಂಗಕ್ಕೆ ಕಳಿಸಿತು. ಅವರ ಹಿಂದೆ ಮುಂದೆ ಸುತ್ತಮುತ್ತ ಯಾವ ಉದ್ದೇಶವೇ ಇರಲಿ, ಕಾರ್ಯಾಂಗವು ಆ ಬೇಡಿಕೆಯನ್ನು ಅಲ್ಲಗಳೆದು ಕಸದ ಬುಟ್ಟಿಗೆ ತಳ್ಳಿತು.

'ಬೇಡಿಕೆದಾರ'ರು ಸುಮ್ಮನಾಗಲಿಲ್ಲ. ಕಾರ್ಯಾಂಗದ ನಾಯಕತ್ವಕ್ಕೆ ಎದುರು ನಿಂತರು. ಇವರ ನಾಯಕತ್ವ ಪ್ರಧಾನಿ ಇಂದಿರಾಗಾಂಧಿಯೇ ವಹಿಸಿದರು. ಸರ್ವಶ್ರೀ ಜಗಜ್ಜೀವನರಾಮ, ಫಕ್ರುದ್ದೀನ್ ಅಲಿ ಅಹಮ್ಮದ್ ಮೊದಲಾದ ಮುದಿ ಯುವಕರೂ ಮೋಹನಧಾರಿಯಾ ಚಂದ್ರಶೇಖರ್ ಮೊದಲಾದ ನಡು ಯುವಕರೂ ಅವರಿಗೆ ಆಧಾರವಾಗಿ ನಿಂತರು.

'ಪಕ್ಷದ ಉನ್ನತ ನಾಯಕರ ಪ್ರತಿಗಾಮಿತನವನ್ನೂ ಪ್ರಗತಿ ವಿರೋಧಿ ನೀತಿಯನ್ನೂ ವಿರೋಧಿಸುವುದಕ್ಕಾಗಿ ಬಂಡೇಳುತ್ತಿದ್ದೇವೆ' ಎಂಬ ಅಭಿಪ್ರಾಯವನ್ನು ದೇಶದಲ್ಲಿ ಹರಡಿದರು.

ಈಗ ಕೈ ಕಟ್ಟಿಕೊಂಡಿರುವುದು ಕಾರ್ಯಾಂಗಕ್ಕೂ ಸಾಧ್ಯವಾಗಲಿಲ್ಲ. ಅದು ಪ್ರಧಾನಿ ಇಂದಿರಾ ಗಾಂಧಿಯವರನ್ನೇ ಪಕ್ಷದ ಸದಸ್ಯತನದಿಂದ ಕಿತ್ತು ಹಾಕಿತು; ಆಕೆಯ ಸ್ಥಾನದಲ್ಲಿ ಮತ್ತೊಬ್ಬ ನಾಯಕನನ್ನು ಆರಿಸಲು ಶಾಸಕಾಂಗಕ್ಕೆ ಕರೆನೀಡಿತು.

ನಾಯಕರ ಆಯ್ಕೆಯೇನೋ ನಡೆಯಿತು; ಆದರೆ, ಪ್ರಧಾನಿ ಪದ ಮಾತ್ರ ಆ ನಾಯಕನಿಗೆ ಅಲಭ್ಯವಾಯ್ತು. ಶ್ರೀಮತಿ ಇಂದಿರಾ ಗಾಂಧಿಯವರಲ್ಲೇ ಅಧಿಕ ಮಂದಿ ಶಾಸಕರು ವಿಶ್ವಾಸ ತೋರಿಸಿ ಪ್ರತ್ಯೇಕ ಸಭೆ ಸೇರಿ ಆಕೆಯನ್ನೇ ತಮ್ಮ ನಾಯಕನೆಂದು ಒಪ್ಪಿಕೊಂಡರು; ತಮ್ಮ ಬೆಂಬಲವಾಕೆಗೆ ಶ್ರೀ ರಾಮ ರಕ್ಷೆಯೆಂದು ಭರವಸೆ ನೀಡಿದರು.

ಏಕೈಕ ಕಾಂಗ್ರೆಸ್ಸು ಎರಡು ಹೋಳಾಯ್ತು.

ದೇಶದ ಇನ್ನೊಂದು ಪಕ್ಷ ಸಂಯುಕ್ತ ಸಮಾಜವಾದಿ. ಈ ವರ್ಷ ನಡೆದ ಮಧ್ಯಾವಧಿ ಚುನಾವಣೆಗಳ ನಂತರ ಇದರ ಶಕ್ತಿ ಕುಂದಿದಂತೆ ಭಾಸವಾಗಿದೆ. ಈ ಶಕ್ತಿಹ್ರಾಸ ಎಸ್ಸೆಸ್ಪಿಗೆ ಮಾತ್ರವಲ್ಲ, ದೇಶದ ಇಂಡಿಕೇಟೇತರ ಪಕ್ಷಗಳಿಗೂ ಸಹಜವಾಗಿ ಬಡೆದ ಮಹಾವ್ಯಾಧಿ-ಪಕ್ಷವಾತ.

ಪ್ರಜಾಸಮಾಜವಾದಿ ಪಕ್ಷದೊಡನೆ ಸಂಯುಕ್ತ ಸಮಾಜವಾದಿ ಪಕ್ಷವು ವಿಲೀನ ಹೊಂದುವುದು ನಿರ್ಧಾರದ ಗಟ್ಟ ತಲಪಿತು. ಪ್ರಸವಾದ ಶಾಸಕರೂ ಸದಸ್ಯರೂ ಅಲ್ಲಲ್ಲಿ ಅಧಿಕ ಸಂಖ್ಯೆಯಲ್ಲಿ ಇಂಡಿಕೇಟಿಗೆ ಪಕ್ಷಾಂತರಗೊಳ್ಳುತ್ತಿದ್ದಾರೆ. ಸಂಸವಾ ಪಕ್ಷವೂ ಇಂತಹ ಪಕ್ಷಾಂತರಕ್ಕೆ ಅಪವಾದವಾಗಿ ಉಳಿದಿಲ್ಲ.

ಮತ್ತೆ ಎರಡು ಪಕ್ಷಗಳ ವಿಲೀನತೆ ಹೇಗೆ? ಪ್ರಾಯಃ ಎರಡೂ ಪಕ್ಷಗಳ ಬೆರಳೆಣಿಕೆಯ ಸದಸ್ಯರನ್ನುಳಿದು ಉಳಿದವರೆಲ್ಲ ಇಂಡಿಕೇಟಿನ ವಿಶಾಲ ಗರ್ಭದಲ್ಲಿ ಸಮಾವೇಶಗೊಳ್ಳುವರೇನೋ!

ಸಂಸವಾ ಪಕ್ಷದ ಭದ್ರಕೋಟೆಗಳಲ್ಲಿ ಉತ್ತರ ಪ್ರದೇಶವೊಂದು. ಇಂಡಿಕೇಟಿನ ವಿರುದ್ಧ ಸಿಂಡಿಕೇಟು ಹೂಡಿದ ಮಂತ್ರಿಮಂಡಲ ರಚನಾ ಹೋರಾಟದಲ್ಲಿ ಸಂಸವಾವೂ ಪಾಲ್ಗೊಂಡಿತು. ಹೋರಾಟ ಹಲವು ಸಮಗಾರರ ನೆರವಿನಿಂದ ಸಫಲವಾಯ್ತು; ಆದರೆ, ಆರೇ ತಿಂಗಳುಗಳೊಳಗೆ ಸಮಗಾರರೆಲ್ಲರೂ ಚರ್ಮದ ಹದಗೆಡಿಸಿದರು; ಅಜಾತ ಶತ್ರು ದೇವತಾ ಮನುಷ್ಯ ತ್ರಿಭುವನ ನಾರಾಯಣ ಸಿಂಗರ ಹೆಸರು-ಗೌರವವನ್ನು ಅಂಥ ತಮಸ್ಸಿಗೆ ದಬ್ಬಿದರು.

ರಾಜನಾರಾಯಣ್ ಸಂಸವಾ ಪಕ್ಷಕ್ಕೆ ಸೇರಿದವರಾದರೂ ಬಹು ಬಣ್ಣದ ಮನುಷ್ಯ. ಪ್ರಧಾನಿ ಇಂದಿರಾ ಗಾಂಧಿಯು ಮೊನ್ನಿನ ಮಧ್ಯಾವಧಿ ಚುನಾವಣೆಯಲ್ಲಿ ರಾಯ್‌ಬರೇಲಿ ಕ್ಷೇತ್ರವಲ್ಲ ನಿಂತರು. ಆಕೆಯನ್ನು ಎದುರಿಸಲು ಸಶಕ್ತ ವ್ಯಕ್ತಿಯೊಂದು ಚತುರ್ಪಕ್ಷ ಕೂಟಕ್ಕೆ ಬೇಕಾಯ್ತು.

ದೊಡ್ಡ ದೊಡ್ಡ ರಾಜಕೀಯ ಕನಸು ಕಾಣುತ್ತಿದ್ದ ಚರಣಸಿಂಗರು ಇದಕ್ಕೆ ತಕ್ಕ ವ್ಯಕ್ತಿಯೆಂದು ನಂಬಲಾಯ್ತು. ಚರಣಸಿಂಗರು ಮನಸ್ಸು ಮಾಡಿದ್ದರೆ ನಿಲ್ಲಬಹುದಿತ್ತು; ತುಸು ಪ್ರಯತ್ನ ಶೀಲರಾಗಿದ್ದರೆ, ಗೆಲ್ಲಲೂ ಬಹುದಿತ್ತು.

ಆದರೆ, ಸಿಂಗರಿಗೆ ಇಂದಿರಾ ಗಾಂಧಿ ಸೋಲುವುದು ಬೇಕಾಗಿರಲಿಲ್ಲ; ಏಕೆಂದರೆ, ಸಿಂಡಿಕೇಟ್ ನಾಯಕತ್ವದ ಮೈತ್ರಿಕೂಟ ಗೆಲ್ಲಲಾರದೆಂದೇ ಅವರು ಅಂದೇ ನಂಬಿದ್ದರು. ಆದುದರಿಂದಲೇ ಅವರು ಮೈತ್ರಿಕೂಟದಿಂದ ದೂರ ನಿಂತರು; ಇಂಡಿಕೇಟಿನೊಡನೆಯೂ ಅವರ ಹೊಕ್ಕು ಬಳಕೆ ಕಡಮೆಯಾಗಲಿಲ್ಲ.

ಯಾವುದಕ್ಕೂ ಸಿದ್ಧವಿರುವ ವ್ಯಕ್ತಿ ಉತ್ತರದಲ್ಲಿ ರಾಜನಾರಾಯಣ್. 'ಯಾರು ನಿಲ್ಲದೆ ಹೋದರೂ ಚಿಂತೆ ಬೇಡ, ನಾನಿದ್ದೇನೆ' ಎಂದರು. ಮರಗಳಿಲ್ಲದೆಡೆ ಏರಂಡವೂ ಮರವಾಗುತ್ತದೆ ಎಂದರು ಅವರಿಗಾಗದವರು.

ರಾಜನಾರಾಯಣರ ಬಗ್ಗೆ ಪ್ರಧಾನಿ ಇಂದಿರಾ ಒಂದು ಮಾತು ಹೇಳಿದ್ದರು; ನನ್ನ ಗೌರವವನ್ನು ನನ್ನ ವ್ಯಕ್ತಿತ್ವವನ್ನು ಕೊಲೆ ಮಾಡಲೆಂದೇ ರಾಜನಾರಾಯಣರನ್ನು ನನ್ನೆದುರು ನಿಲ್ಲಿಸಲಾಗಿದೆ. ಇದು ರಾಜನಾರಾಯಣರ ಬಗ್ಗೆ ವ್ಯಾಖ್ಯಾನ ಮಾಡುತ್ತದೆ.

ಇವರಿಗೂ ಹಲವು ಅನುಯಾಯಿಗಳಿದ್ದಾರೆ. ಏನಾದರೂ ಅವರಿಗೆ ಮಾಡುತ್ತಲೇ ಇರಬೇಕು. ಭೂಗ್ರಹಣ ಚಳುವಳಿಯಲ್ಲಿ ಅವರ ಪಾತ್ರ ಹಿರಿದೋ ಹಿರಿದು.

ಉತ್ತರ ಪ್ರದೇಶದ ಸಂಸವಾ ಅಧಿವೇಶನವೊಂದನ್ನು ಅವರು ಕರೆದರು. ಇದಕ್ಕೆ ರಾಜ್ಯಮಟ್ಟದ ಅಧ್ಯಕ್ಷ ಉಗ್ರಸೇನ'ರ ಉಗ್ರ ವಿರೋಧವಿತ್ತು. ರಾಷ್ಟ್ರ ಮಟ್ಟದ ಕಾರ್ಯದರ್ಶಿ ಜಾರ್ಜ್ ಫೆರ್ನಾಂಡಿಸರ ಸಹಾನುಭೂತಿಯಿರಲಿಲ್ಲ ಇವರಿಬ್ಬರೂ ಇಂತಹ ಅಧಿವೇಶನ ಸೇರಬಾರದೆಂದು ಆದೇಶ ನೀಡಿದ್ದರು.

ಫೆರ್ನಾಂಡಿಸ್ ಮಾಜಿ ಎಂಪಿ. ರಾಜನಾರಾಯಣ್ ಇಂದಿಗೂ ಎಂಪಿ ಶಿಪ್ಪುಉಳಿಸಿಕೊಂಡಿರುವವರು. ತಮ್ಮವರನ್ನು ಕಲೆ ಹಾಕಿದರು. ಅಧಿವೇಶನದ ಉದ್ಘಾಟನೆಗೆ ರಾಷ್ಟ್ರಮಟ್ಟದ ಅಧ್ಯಕ್ಷ, ಕರ್ಪೂರೀ ಠಾಕುರರನ್ನೇ ಆಹ್ವಾನಿಸಿದರು.

ಬಿಹಾರದ ಠಾಕುರಿಶನವನ್ನು ಉಳಿಸಿಕೊಳ್ಳಲಾರದೆ ಚಡಪಡಿಸಿ ಕೊನೆಗೂ ರಾಜಿನಾಮೆ ನೀಡಿ ಶೋಕ ದಿನವಾಚರಿಸುತ್ತಿರುವ ಕರ್ಪೂರಿಠಾಕುರರಿಗೆ ಅದೇನೆನಿಸಿತೋ ಉದ್ಘಾಟನೆಗೆ ಹೊರಡಲೇ ಇಲ್ಲ; ಆದರೂ ಅಧಿವೇಶನ ನಿಲ್ಲಲಿಲ್ಲ.

ಒಬ್ಬರು ಉದ್ಘಾಟಿಸಿದರು, ಇನ್ನೊಬ್ಬರು ಅಧ್ಯಕ್ಷತೆ ವಹಿಸಿದರು....ಹೀಗೆ ಒಬ್ಬೊಬ್ಬರು ಒಂದೊಂದು ಮಾಡಿದರು. ಅಧಿವೇಶನ ಮುಗಿಯಿತು. ರಾಜ್ಯದ ಸುಮಾರು ೪೫೦ ಸದಸ್ಯರು ಭಾಗವಹಿಸಿದರೆಂದು ವರದಿಯಾಯ್ತು.

ಈ ಅವಿಧೇಯತೆಯನ್ನು ಉಗ್ರಸೇನಾದಿಗಳೆಂತು ಸಹಿಸಿಯಾರು? ಕೂಡಲೇ ಪಿಸಿಯನ್ನು ಕರೆದರು. ನಾಯಕತ್ವದ ಆದೇಶವನ್ನು ಕಡೆಗಣಿಸಿ ಅದರ ಮುಖಕ್ಕೆ ಮಸಿ ಬಳಿದ ರಾಜನಾರಾಯಣರನ್ನು ಪಕ್ಷದಿಂದ ಕಿತ್ತು ಹಾಕುವ ನಿರ್ಣಯ ಮಾಡಿದರು. ಇದನ್ನು ಕಾರ್ಯಕೃತಗೊಳಿಸಲು ಕೇಂದ್ರೀಯ ನಾಯಕತ್ವವನ್ನು ಕೇಳಿಕೊಂಡರು.

ರಾಜನಾರಾಯಣ್ ಮಾಡಿದ ತಪ್ಪೇನೆಂಬುದು ಮುಖ್ಯವಲ್ಲ; ಅವರನ್ನು ಏಕೆ ಪಕ್ಷದಿಂದ ಹೊರದಬ್ಬಬೇಕೆಂಬುದು ಮುಖ್ಯ.

ನಾಡಿನಲ್ಲಿನ ಸಮಾಜವಾದಿ ಪಕ್ಷಗಳನ್ನೆಲ್ಲ ಒಂದುಗೂಡಿಸುವ ಪ್ರಯತ್ನವನ್ನು ಸಂಸವಾ ಮಾಡುತ್ತಿದೆ. ರಾಜನಾರಾಯಣ್ ಇದನ್ನು ವಿರೋಧಿಸುತ್ತಾರೆ! ಪ್ರಯತ್ನಕ್ಕೆ ತಕ್ಕ ವೇದಿಕೆ ನಿರ್ಮಾಣವಾಗಬೇಕಾದರೆ, ರಾಜನಾರಾಯಣ್ ಹೊರ ಹೋಗಬೇಕು.

ಅವರ ಚಟುವಟಿಕೆಗಳು ಪಕ್ಷರೋಧಿಯಾಗಿವೆ. ಇನ್ನೂ ಕೆಲಕಾಲ ಅವರನ್ನು ಪಕ್ಷದಲ್ಲಿ ಉಳಿಯಗೊಟ್ಟರೆ, ಪಕ್ಷ ವಿರೋಧಿಗಳ ಕೈವಾಡವು ಬಲಿತು ಹೋಗಿ ಪಕ್ಷವು ಪಕ್ಷವಿರೋಧಿ ಪಕ್ಷವಾಗುವುದು ಅವರ ಕಾರ್ಯ—ಚಟುವಟಿಕೆಗಳು ಸಮಾಜವಾದಕ್ಕೆ ವಿರುದ್ಧವಾದುವುಗಳು. ಅವರನ್ನು ಹೊರ ಹಾಕದೆ ಹೋದರೆ ಸಮಾಜವಾದದ ಗುತ್ತೇದಾರಿಕೆಯು ತುಸುಕೂ ಸಂಸವಾ ಪಕ್ಷಕ್ಕೆ ದಕ್ಕಲಾರದು.

ಅವರನ್ನು ಮಾತ್ರವಲ್ಲ, ಅನಧಿಕೃತವಾಗಿ, ಪಕ್ಷದ ನಾಯಕರ ಆದೇಶಕ್ಕೆ ವಿರೋಧವಾಗಿ ಅಲಹಾಬಾದದಲ್ಲಿ ಸೇರಿದ ರಾಜನಾರಾಯಣ್ ಸಮಾವೇಶದಲ್ಲಿ ಪಾಲ್ಗೊಂಡವರೆಲ್ಲರನ್ನೂ ಕಿತ್ತುಹಾಕಬಾರದೇಕೆ?

ಕಾಂಗ್ರೆಸ್ ಹೋಳಿಕೊಟ್ಟ ಪಕ್ಷ ನಾಯಕತ್ವ ವಿರೋಧವಿಂದು ಎಲ್ಲ ಪಕ್ಷಗಳಿಗೂ ಕರಗತವಾದ ಫ್ಯಾಶನ್. ನಾಯಕತ್ವ ಬೇಕೇ ಬೇಡವೇ, ನಾಯಕತ್ವ ಹೇಗಿರಬೇಕು ಎಂದು ಮುಂತಾಗಿ ಪುನರ್ವಿಮರ್ಶೆ

(ಹನ್ನೆರಡನೇ ಪುಟ ನೋಡಿರಿ)

ಚರಿತ್ರಾರ್ಹ ಮೊಕದ್ದಮೆಗಳು—೨

ಸತ್ತವ ಬದುಕಿ ಬಂದ

ಬರೆದವರು:— ಶ್ರೀ ಬಿ. ಕೃಷ್ಣ ಭಟ್, ಭದ್ರಾವತಿ.

ವರ್ಮಾಂಟ, ದಕ್ಷಿಣ ಅಮೆರಿಕೆಯಲ್ಲಿದೆ. ಆ ಪ್ರಸಿದ್ಧ ನಗರದಲ್ಲಿ ಬೋರ್ನಿ ಕುಟುಂಬದವರು ವಾಸ ಮಾಡುತಿದ್ದರು. ಅವರದು ಪುಟ್ಟ ಸಂಸಾರ ಇದ್ದವರು ಮೂರು ಮಂದಿ–ಸ್ಟೀಫನ್, ಜೆಸ್ಸಿ, ಮತ್ತು ಅವರ ಬೆನ್ನಿಗೆ ಬಂದ ತಂಗಿ ಸ್ಯಾಲಿ ಆಗಲೇ ಸ್ಯಾಲಿಯ ಮದುವೆಯೂ ಆಗಿತ್ತು ಅವಳ ಗಂಡನ ಹೆಸರು ಕಾಲ್ವಿನ್ ದಂಪತಿಗಳಿಗೆ ಲೂಯಿಸ್ ಎನ್ನುವ ಮಗನಿದ್ದ.

ಸ್ಟೀಫನ್—ಜೆಸ್ಸಿ ನೆರೆ—ಹೊರೆಯಲ್ಲಿ ಪ್ರಸಿದ್ಧಿ ಗಳಿಸಿದ್ದರು ಅವರಿಬ್ಬರ ಹಾವಳಿ ಪುಂಡಾಟ ಎಲ್ಲೆ ಮೀರಿತ್ತು. ಆದ್ದರಿಂದ ಅವರನ್ನು ಕಂಡರೆ ಯಾರಿಗೂ ಆಗುತ್ತಿರಲಿಲ್ಲ

ವಿವಾಹಾನಂತರ ಸ್ಯಾಲಿ ಬೇರೆ ಮನೆ ಮಾಡಿರಲಿಲ್ಲ ಅಣ್ಣಂದಿರ ಜೊತೆ ಬಾಳುವೆ ನಡೆಸುತ್ತಿದ್ದಳು ಅಣ್ಣಂದಿರಿಗೋ—ಇನ್ನೂ ಮದುವೆಯಿಲ್ಲ ಈ ಗಂಡು ಗೋವಿಗಳನ್ನು ಕೈ ಹಿಡಿಯುವ ಧೈರ್ಯ ಯಾರೂ ಮಾಡಿರಲಿಲ್ಲ ಕಾಲ್ವಿನ್ ಬುದ್ಧಿ ಸರಿಯಿರಲಿಲ್ಲ ಆತ ವಿಚಿತ್ರವಾಗಿ ವರ್ತಿಸುತ್ತಿದ್ದ—ಆಗಾಗ್ಗೆ ಮನೆಯಿಂದ ಹೊರ ಹೋಗುತ್ತಿದ್ದ ದಿನಗಟ್ಟಲೆ ಮನೆಯಿಂದ ಹೊರಗಿರುತ್ತಿದ್ದ. ಹಾಗೆಂದು ಅವನಿಗೆ ಹೊರ ಚಾಳಿಗಳಿರಲಿಲ್ಲ. ಮರಳಿ ಬಂದಾಗ ಅವನನ್ನು ಪ್ರಶ್ನಿಸಿದರೆ, ಅದಕ್ಕೆ ಸರಿಯಾದ ಉತ್ತರ ಅವನಿಂದ ಸಿಗುತ್ತಿರಲಿಲ್ಲ

1812 ನೇ ತಿಂಗಳಲ್ಲಿ ಕಾಲ್ವಿನ್ ಇದ್ದಕ್ಕಿದ್ದಂತೆ ಅದೃಶನಾದ ಬಹಳ ದಿನಗಳಾದರೂ ಮನೆಗೆ ಮರಳಿ ಬರಲಿಲ್ಲ ಅವನನ್ನು ಬಲ್ಲ ಊರಿನ ಜನ ಸ್ವಲ್ಪ ಕಾಲ ಸುಮ್ಮನಿದ್ದರು. ಆದರೆ ಕಾಲ್ವಿನ್ ಸುಳಿವು ಸಿಗದಿರಲು ಅವರು ಜೆಸ್ಸೀ-ಸ್ಟೀಫನ್ನರನ್ನು ಅನುಮಾನದಿಂದ ಕಾಣಲಾರಂಭಿಸಿದರು. ಅವರೀರ್ವರ ಕೈವಾಡ ಇರುವುದಾಗಿ ಶಂಕಿಸಿದರು.

ಇದು ನಡೆದ ಎಷ್ಟೋ ಕಾಲದ ಮೇಲೆ, ಬೋರ್ನಿ ಕುಟುಂಬ ವಾಸವಾಗಿದ್ದ ಮನೆಗೆ ಅನತಿ ದೂರದಲ್ಲಿ ಕಾಲ್ವಿನ್ ಧರಿಸುತ್ತಿದ್ದ ಟೊಪ್ಪಿಗೆ ಸಿಕ್ಕಿತು. ಅಷ್ಟರಲ್ಲೇ ಅದು ಚಿಂದಿಯಾಗಿತ್ತು. ಆ ಸ್ಥಳದಲ್ಲೇ ನಾಯಿಯೊಂದು ಎಲುಬಿನ ಚೂರುಗಳನ್ನು ಮರದ ಪೊಟರೆಯಿಂದ ಹೊರಗೆಳೆಯುತ್ತಿತ್ತು ಜನ ಅದನ್ನು ನೋಡಿದರು. ಪೋಲೀಸರಿಗೆ ವರದಿ ಹೋಯಿತು ಅವರು ಬಂದರು. ಚಿಂದಿಯಾದ ಟೊಪ್ಪಿಗೆಯನ್ನೂ ಎಲುಬಿನ ಚೂರುಗಳನ್ನೂ ವಶಪಡಿಸಿಕೊಂಡರು ಶೇಖರಿಸಿದ ಎಲುಬುಗಳನ್ನು ತಜ್ಞರೆಡೆಗೆ ಕಳುಹಿಸಿಕೊಟ್ಟರು ಐದು ಜನ ಪರಿಣತ ವೈದ್ಯರು ಮೂಳೆಗಳನ್ನು ಪರೀಕ್ಷಿಸಿ ಅವು ಮನುಷ್ಯನವು ಎಂದರು

ಇದು ಕೈಗತವಾದ ತಕ್ಷಣ ಪೋಲೀಸರು ಜೆಸ್ಸಿಯನ್ನು ಬಂಧಿಸಿದರು ಒಂದು ಚಾಕು, ಕಿರುಗತ್ತಿ, ಕಾಲ್ವಿನ್ ಬಳಸುತ್ತಿದ್ದ ಎನ್ನಲಾದ ಗುಂಡಿಯನ್ನೂ ಅವನಿಂದ ವಶಪಡಿಸಿಕೊಂಡರು

ಪೋಲೀಸರ ವಶದಲ್ಲಿದ್ದಾಗ ಜೆಸ್ಸಿ—ಅವರ ಹಿಂಸೆಯನ್ನು ತಡೆಯಲಾರದೆ– ಒಂದು ಹೇಳಿಕೆ ಕೊಟ್ಟ ನನ್ನ ಅಣ್ಣ ಸ್ಟೀಫನ್ನನಿಗೂ—ಕಾಲ್ವಿನ್ನನಿಗೂ ಜಗಳವಾಯಿತು ಆ ಜಗಳದಲ್ಲಿ ಕಾಲ್ವಿನ್ನನನ್ನು ಅಣ್ಣ ಸ್ಟೀಫನ್ ಹೊಡೆದ ಒಂದು ಹೊಡೆತ ದೊಣ್ಣೆಯಿಂದ, ಇನ್ನೊಂದು ಕಲ್ಲಿನಿಂದ ಎರಡೂ ಏಟುಗಳೂ ಭಾವನ ತಲೆಗೇ ಬಿದ್ದವು ಕಾಲ್ವಿನ್ನನ ಬುರುಡೆಯೊಡೆಯಿತು. ಆತ ಸತ್ತುಬಿದ್ದ ಆದರೆ ಆ ದೇಹವನ್ನು ಆತ ಹೇಗೆ ವಿಲೇವಾರಿ ಮಾಡಿದ ಎಂಬುದು ತನಗೆ ತಿಳಿಯದು ಎಂದು ಹೇಳಿದ ಆ ಹೇಳಿಕೆಯ ಆಧಾರದ ಮೇಲೆ ಪೋಲೀಸರು ಸ್ಟೀಫನ್ನನ್ನು ಬಂಧಿಸಿದರು—ಇಬ್ಬರ ಮೇಲೂ ಕೊಲೆಯ ಆರೋಪ ಹೊರಿಸಿದರು.

ವಿಚಾರಣೆ ಆರಂಭವಾಯಿತು.

ಕೋರ್ಟಿನಲ್ಲಿ ತನ್ನ ಮೇಲೆ ಬಂದ ಆಪಾದನೆಗಳನ್ನು ಸ್ಟೀಫನ್ ಅಲ್ಲಗಳೆದ. ಕೊನೆಯಲ್ಲಿ ಒತ್ತಾಯಕ್ಕೆ ಮಣಿದು ತಪ್ಪನ್ನು ಒಪ್ಪಿಕೊಂಡ ತಾನು ಹೊಡೆದು ಕೊಂದೆನೆಂದೂ ಶವವನ್ನು ಬೇಲಿಯಲ್ಲಿ ಬಚ್ಚಿಟ್ಟೆನೆಂದೂ ತಿಳಿಸಿದ ಅವನ ಹೇಳಿಕೆಯಿಂದ, ಪರಿಣಾಮ ಭೀಕರ ರೂಪು ತಳೆಯಿತು.

ವಿಚಾರಣೆಯ ಕಾಲದಲ್ಲಿ ಬಂದುದು ಬರಿಯ ಸಂದರ್ಭ ಸಾಕ್ಷ್ಯ. ಕಾಲ್ವಿನ್ನನ ಮಗ ತನ್ನ ತಂದೆಯನ್ನು ಸ್ಟೀಫನ್ ಹೊಡೆದುಕೊಂದನೆಂದೂ, ಬಹಿರಂಗಪಡಿಸಿದರೆ, ನಿನಗೂ ಇದೇ ಗತಿ ಕಾಣಿಸುವೆನೆಂದೂ ಬೆದರಿಕೆ ಹಾಕಿದನೆಂದೂ ನ್ಯಾಯಸ್ಥಾನದ ಮುಂದು ತಿಳಿಸಿದ

ಒಂದು ತಾಸಿನ ಚರ್ಚೆಯ ನಂತರ ಜ್ಯೂರಿಗಳು ಒಮ್ಮತಕ್ಕೆ ಬಂದರು. ಆರೋಪಿಗಳು ತಪ್ಪಿತಸ್ಥರು ಎಂಬ ನಿರ್ಧಾರಕ್ಕೆ ಬಂದರು. ನ್ಯಾಯಮೂರ್ತಿಗಳು ಅವರಿಬ್ಬರಿಗೂ ಮರಣದಂಡನೆ ವಿಧಿಸಿದರು. ಅವರನ್ನು ವಧಿಸುವ ದಿನವನ್ನು 28 1–1820 ಎಂದು ನಿಗದಿ ಮಾಡಲಾಯಿತು. ತಮ್ಮ ಮೇಲೆ ಹೊರಿಸಿದ ಆರೋಪ, ವಿಧಿಸಿದ ಶಿಕ್ಷೆ ಎರಡನ್ನೂ ಅಣ್ಣ—ತಮ್ಮಂದಿರು ಪ್ರತಿಭಟಿಸಿದರು ತಾವು ನಿರಪರಾಧಿಗಳೆಂದು ಹೇಳುತ್ತಲೇ ಬಂದರು.

ನಿಜಕ್ಕೂ ಅನ್ಯಾಯವಾಗಿದ್ದರೆ, ಅವರನ್ನು ರಕ್ಷಿಸಬೇಕೆನ್ನುವ ಬಯಕೆ ಹಲವರಲ್ಲಿ ಹುಟ್ಟಿತು ಅವರು ತಮ್ಮೊಳಗೇ ವಿಚಾರ ವಿನಿಮಯ ನಡೆಸಿಕೊಂಡರು. ಈ ಸುಮಾರಿಗೆ ವರ್ಮಾಂಟಿನ ಶಾಸನ ಸಭೆಯ ಅಧಿವೇಶನ ನಡೆಯುತಿತ್ತು ಆರೋಪಿಗಳ ಪರವಾಗಿ ಊರಿನ ಜನ—ಶಾಸನ ಸಭೆಯ ಸದಸ್ಯರಿಗೊಂದು—ಅರ್ಜಿ ಗುಜರಾಯಿಸಿದರು. ಶಾಸಕರು ವಿದ್ಯಮಾನವನ್ನು ಚರ್ಚಿಸಿ, ಬಹುಮತದಿಂದ ಜೆಸ್ಸಿ ನಿರಪರಾಧಿ ಎಂದು ತೀರ್ಮಾನಿಸಿ, ಅವನ ಬಿಡುಗಡೆಗೆ ದಾರಿ ಮಾಡಿ ಕೊಟ್ಟರು.

ಆದರೆ ಸ್ಟೀಫನ್ನನಿಗೆ ವಿಧಿಸಿದ ಶಿಕ್ಷೆ ನ್ಯಾಯ ಸಮ್ಮತವೆಂದು ಪರಿಗಣಿಸಿ ಮಧ್ಯೆ ಪ್ರವೇಶಿಸಲು ನಿರಾಕರಿಸಿತು ಅವರ ತೀರ್ಮಾನದಿಂದ ಸ್ಟೀಫನ್ ಭೂಮಿಗಿಳಿದು ಹೋದ

ಆಗ ಅವನಿಗೊಂದು ಯೋಚನೆ ಹೊಳೆಯಿತು.

ಆತ ತನ್ನ ಲಾಯರನ್ನು ಜೈಲಿಗೆ ಕರೆಸಿಕೊಂಡ ಊರಿನ ಪ್ರಮುಖ ಪತ್ರಿಕೆಗಳಲ್ಲಿ ಒಂದು ಪ್ರಕಟಣೆ ಹೊರಡಿಸಲು ಪ್ರಾರ್ಥಿಸಿದ ಲಾಯರೂ—ಪತ್ರಿಕೆಯ ಸಂಪಾದಕರೂ ಅವನ ಪ್ರಾರ್ಥನೆಯನ್ನು ಕೇಳ ನಕ್ಕರು—ಅವನ ಒತ್ತಾಯಕ್ಕೆ ಮಣಿದು 2೯—11—1919ರ ವರ್ಮಾಂಟಿನ 'ಹೆರಾಲ್ಡ್' ಪತ್ರಿಕೆಯಲ್ಲಿ ಪ್ರಕಟಣೆಯನ್ನು ಅಚ್ಚು ಹಾಕಿಸಿದರು. ಆ ಪ್ರಕಟಣೆ ದಕ್ಷಿಣ ಅಮೆರಿಕೆಯ ಪತ್ರಿಕಾ ಪ್ರಪಂಚದ ಗಮನವನ್ನು ಸೆಳೆಯಿತು ಅವರು ತಮ್ಮ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಪುನಃ ಮುದ್ರಿಸಿ, ಹೆಚ್ಚಿನ ಪ್ರಚಾರಕ್ಕೆ ಎಡೆ ಮಾಡಿ ಕೊಟ್ಟರು.

ಆಗ ಒಂದು ಪವಾಡವೇ ನಡೆಯಿತು ಪತ್ರಿಕೆಯಲ್ಲಿ ಬಂದ ಪ್ರಕಟಣೆಯ ವಿವರವನ್ನು ಯಾರೋ ಒಬ್ಬರು ಗಟ್ಟಿಯಾಗಿ ಓದುತ್ತಿದ್ದರು. ಅದನ್ನು ಕೇಳುತ್ತ ನಿಂತಿದ್ದರು ರಸ್ತೆಯ ಅಂಚಿನಲ್ಲಿ ಇನ್ನಿಬ್ಬರು—ಆ ವಿವರಗಳನ್ನು ಕೇಳಿದ ಅವರಲ್ಲೊಬ್ಬನು, ಈ ಚಹರೆಯ ವ್ಯಕ್ತಿ ತನ್ನ ಭಾವನ ತೋಟದಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದ. ಒಂದು ದಿನ ಪತ್ರಿಕೆಯಲ್ಲಿ ಪ್ರಕಟಿಸಲೆಂದು ಈ ವರ್ತಮಾನವನ್ನು ಕಳುಹಿಸಿ ಕೊಟ್ಟ.

ಆತ ಕೊಟ್ಟ ವದಂತಿಯ ಆಧಾರದ ಮೇಲೆ ಪೋಲಿಸರು ಕಾಲ್ವಿನನ ಶೋಧ ಹಚ್ಚಿದರು ಆತ ವರ್ಮಾಂಟಿಗೆ ಬರುವುದಿಲ್ಲವೆಂದ ಬಹಳ ಪ್ರಯಾಸದಿಂದ ಪೋಲಿಸರು ಅವನನ್ನು ವರ್ಮಾಂಟಿಗೆ ಕರೆತಂದರು; ಕೋರ್ಟಿನ ಮುಂದು ನಿಲ್ಲಿಸಿದರು.

ಆತನೇ ಕಾಣೆಯಾದ ಕಾಲ್ವಿನ್ ಎಂದು ಖಚಿತ ಪಡಿಸಿಕೊಳ್ಳಲು ಹಲವು ಪ್ರಶ್ನೆಗಳನ್ನು ಹಾಕಲಾಯಿತು. ಅವನಿಂದ ನಿಸ್ಸಂದೇಹದ ಉತ್ತರಗಳು ಬಂದುವು—ಮಗ, ಹೆಂಡತಿ, ಗ್ರಾಮದ ಜನ ಅವನನ್ನು ಗುರುತಿಸಿದರು ಅವನೂ ಅವರನ್ನು ಗುರುತಿಸಿದ. ಯಾವ ಸಂದೇಹವೂ ಉಳಿಯಲಿಲ್ಲ

ಜೆಸ್ಸಿ—ಸ್ಟೀಫನ್—ಅಣ್ಣ-ತಮ್ಮಂದಿರ ಬಿಡುಗಡೆಯಾಯಿತು. ●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ-ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ, ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು—4

ರೂರಲ್ ಡಿಸ್ಪೆನ್ಸರಿಯ ಉದ್ಘಾಟನೆ

ತಾ. ೮-೬-೬೧ರಂದು ನಾಡ್ಪಾಲು ಪಂಚಾಯತ್ ಕ್ಷೇತ್ರದ ಸೋಮೇಶ್ವರ ಪೇಟೆಯಲ್ಲಿ ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಳಿಯ ವತಿಯಿಂದ ಶ್ರೀ ಎನ್. ಮೋಹನದಾಸ ಅಧ್ಯಕ್ಷತಾಯದಿಂದ ಶ್ರೀ ಬೇಳಂಜೆ ವಿಠಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ರೂರಲ್ ಡಿಸ್ಪೆನ್ಸರಿಯೊಂದು ಉದ್ಘಾಟಿಸಲ್ಪಟ್ಟಿತು. ಶ್ರೀ ತಿಂಗಳೆ ರವೀಂದ್ರ ಹೆಗ್ಡೆ ಸ್ವಾಗತಿಸಿದರು. ಶ್ರೀ ಪಿ.ಎಲ್. ಡೇಸಾ ಧನ್ಯವಾದವಿತ್ತರು.

ಪ್ರತಿ ಗುರುವಾರ ಪ್ರಕಟವಾಗುವ ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 50
ಸಂಚಿಕೆ : 41

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 10
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ : ೦-೨೦

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ರಾಜ್ಯಗಳ ಮಧ್ಯಕಾಲೀನ ಚುನಾವಣೆಗಳು ಮುಂದಕ್ಕೆ?

ಕರ್ನಾಟಕದಲ್ಲಿನ ವೀರೇಂದ್ರ ಪಾಟೀಲರ ಸಂಪುಟ ರಾಜಿನಾಮೆ ಕೊಟ್ಟಾಗ ಇಂಡಿಕೇಟಿನ ಸಿದ್ಧವೀರಪ್ಪನವರು ಪರ್ಯಾಯ ಸರಕಾರ ರಚಿಸುವ ತರಾತುರಿಯಲ್ಲಿದ್ದಾಗ, ಅದೇ ಇಂಡಿಕೇಟಿಗೆ ಸೇರಿದವರದ್ದೊಂದು ಗುಂಪು ಮರುಚುನಾವಣೆಯನ್ನು ಎದುರಿಸಲು ಸೊಂಟಕಟ್ಟಿದಾಗ, ಮೊನ್ಸೂನ್ ಆರಂಭವಾಗುವುದಕ್ಕೆ ಮೊದಲೇ ಮಧ್ಯಾವಧಿ ಚುನಾವಣೆಗಳು ನಡೆದುಬಿಡುತ್ತವೇನೋ ಎನ್ನಿಸಿತ್ತು. ವಿಧಾನಸಭೆಯ ವಿಸರ್ಜನೆಯ ನಂತರ ರಾಜ್ಯಪಾಲರು ಅಕ್ಟೋಬರ—ನವಂಬರಕ್ಕೆ ಮೊದಲು ಚುನಾವಣೆ ಸಾಧ್ಯವಾಗದು ಎಂದು ಹೇಳಿದರು. ಇದೀಗ ಮತದಾರರ ಯಾದಿಯ ಪರಿಷ್ಕರಣ ಕಾರ್ಯ ಆರಂಭವಾಗಿದೆ. ಅದಿನ್ನು ಅಂತಿಮವಾಗಿ ಸಿದ್ಧವಾಗಬೇಕು; ಮುದ್ರಣಗೊಳ್ಳಬೇಕು. ಅಷ್ಟಾಗಲು ಇನ್ನೂ ಎರಡು-ಮೂರು ತಿಂಗಳ ಕಾಲ ಅವಶ್ಯ ಬೇಕು. ಕೇಂದ್ರ ಸರಕಾರ ಬಯಸಿದರೆ, ನವಂಬರದೊಳಗೆ ಚುನಾವಣೆ ನಡೆಸುವುದು ತಾಪದಾಯಕವಾಗದು. ಲೋಕಸಭೆಯನ್ನು ವಿಸರ್ಜಿಸಿದ ಎರಡೇ ತಿಂಗಳುಗಳಲ್ಲಿ ಚುನಾವಣೆ ನಡೆಯಲು ಸಾಧ್ಯವಾಗುವಾಗ ವಿಧಾನಸಭೆಗೆ ನವಂಬರದಲ್ಲಾದರೂ ಚುನಾವಣೆ ನಡೆಯುವುದು ಅಶಕ್ಯವೇನಲ್ಲ. ಆದರೆ, ಕೇಂದ್ರ ಸರಕಾರವು ಮುಂದಿನ ವರ್ಷದ ಜನವರಿ-ಫೆಬ್ರವರಿಗೆ ಮೊದಲು ಚುನಾವಣೆ ನಡೆಸಲು ಉತ್ಸುಕವಾಗಿಲ್ಲವೆಂದೀಗ ವರದಿಗಳು ಬಂದಿವೆ.

ಈಗ ಚುನಾವಣೆಗಳು ನಡೆಯಬೇಕಾದ ರಾಜ್ಯಗಳ ಸಂಖ್ಯೆ ಹೆಚ್ಚಿದೆ. ಗುಜರಾಥ ಮತ್ತು ಪಂಜಾಬಗಳ ವಿಧಾನಸಭೆಗಳೂ ಬರ್ಖಾಸ್ತುಗೊಂಡಿರುವುದರಿಂದ ಅಲ್ಲಿಯೂ ಚುನಾವಣೆಯಾಗಬೇಕು. ಒರಿಸ್ಸಾದಲ್ಲಿನ ಸ್ವತಂತ್ರ-ಉತ್ಕಲ ಕಾಂಗ್ರೆಸ್-ಜಾರ್ಖಂಡ್ ಸಂಯುಕ್ತರಂಗವನ್ನು ಒಡೆಯುವ ಕುತಂತ್ರದಲ್ಲಿ ಇಂಡಿಕೇಟ್ ಯಶಗಳಿಸಿದರೆ, ಅಲ್ಲಿಯೂ ಮತ್ತೆ ಚುನಾವಣೆ ಏರ್ಪಡಬೇಕಾದೀತು. ಬಂಗ್ಲಾ ನಿರಾಶ್ರಿತರ ಪ್ರವಾಹವನ್ನು ತಡೆಯುವಲ್ಲಿ ಕೇಂದ್ರ ಸರಕಾರ ತನ್ನ ಶಕ್ತಿ ಸರ್ವಸ್ವವನ್ನೂ ಕೇಂದ್ರೀಕರಿಸದೆ ಹೋದರೆ, ಪಶ್ಚಿಮ ಬಂಗಾಳದ ಅಜಯ ಮುಖರ್ಜಿ ಭಾರ ಹೊರಲಾರದೆ ರಾಜಿನಾಮೆ ಕೊಟ್ಟರೂ ಕೊಡಬಹುದು. ಇಂಡಿಕೇಟು ತನ್ನಲ್ಲೇ ನಾಯಕನನ್ನು ಆರಿಸಿಕೊಳ್ಳಲು ಅಶಕ್ತವಾದುದರಿಂದ ಮತ್ತೆ ಅದು ಜನತೆಯಲ್ಲಿ ನಿಚ್ಚಳ ಬಹುಮತ ಕೇಳ ಬಹುದು. ಬಿಹಾರದಲ್ಲೂ ಬೋಲಾ ಪಸ್ವಾನ್ ಶಾಸ್ತ್ರಿಯವರು ಇಂಡಿಕೇಟಿಗೆ ಸೇರದೆ ಹೋದರೆ, ಅವರ ಸರಕಾರವೂ ಉರುಳಿದರೆ ವಿಸ್ಮಯವಿಲ್ಲ. ಸ್ಥಾನಬದ್ಧತಾ ಶಾಸನವನ್ನು ಮತ್ತೆ ಕೈಗೆತ್ತಿಕೊಂಡ ಇಂಡಿಕೇಟಿನೊಡನೆ ಕೇರಳದ ಅಚ್ಯುತ ಮೆನನ್ನರ ದಾಂಪತ್ಯವೆಷ್ಟು ದಿನವೆಂದೂ ಹೇಳಲಾಗದು. ಆದರ ಜತೆಯಲ್ಲೇ ದಕ್ಷಿಣದ ಮಹಾರಾಷ್ಟ್ರ ಮತ್ತು ಆಂಧ್ರಗಳಲ್ಲಿ, ಉತ್ತರದ ಮಧ್ಯಪ್ರದೇಶ ಹರಿಯಾಣಗಳಲ್ಲಿ ಪೂರ್ವದ ಅಸಾಮದಲ್ಲಿ ಮುಂದಿನ ವರ್ಷಾರಂಭದಲ್ಲಿ ಸಹಜವಾಗಿಯೇ ಚುನಾವಣೆ ನಡೆಯಬೇಕು. ಬಂಗ್ಲಾದೇಶದ ನಿರಾಶ್ರಿತರ ಪುನರ್ನಿವೇಶನದ ಹೊಣೆಗಾರಿಕೆಯನ್ನು ಮುಂದೆ ಮಾಡಿ, ಆರ್ಥಿಕ ಪ್ರಗತಿಯ ಅಧೋಗತಿಯನ್ನು ಸಮರ್ಥಿಸಿ ಮತದಾರರ ಮನವೊಲಿಸುವುದು ಕಷ್ಟಸಾಧ್ಯವಲ್ಲ. ಈ ಮನವೊಲಿಸುವಿಕೆಯನ್ನು ಬೇರೆಬೇರೆ ಸಮಯದಲ್ಲಿ ಮಾಡುವುದಕ್ಕಿಂತ ಅವಶ್ಯವಿದ್ದೆಡೆಯೆಲ್ಲಾ ಏಕಕಾಲದಲ್ಲೇ ಕೈಕೊಂಡು ಮತ್ತೊಮ್ಮೆ ಬಿರುಗಾಳಿಯೆಬ್ಬಿಸಿ ಮತದರಲೆಗಳನ್ನು ತಮ್ಮ ಬುಟ್ಟಿಗೆ ತೂರಿಕೊಳ್ಳುವುದು ಉತ್ತಮ ಪಕ್ಷವೆಂಬುದೀಗ ಇಂಡಿಕೇಟಿಗರಿಗೆ ಅನಿಸ ಹತ್ತಿದೆ. ಒಂದು ವರ್ಷದ ಸಮಾಜವಾದ ಬಂಗ್ಲಾ ಪ್ರವಾಹದಲ್ಲಿ ಮುಳುಗಿ ಹೋಯ್ತೆಂಬ ನೆಪದ ಸಂಪೂರ್ಣ ಪ್ರಯೋಜನ ಪಡೆಯುವುದು ಅಸಹಜವಾಗುವುದಿಲ್ಲವೆಂದವರಿಗೆ ಮನವರಿಕೆಯಾಗಿದೆ.

ಇದಕ್ಕೆ ಪೂರಕವೆಂಬಂತೆ ಇಂಡಿಕೇಟಿನೊಳಗೂ ಒಂದು ವಿಧದ ಅಂತಃಕಲಹ ಹುಟ್ಟಿಕೊಂಡಿದೆ. ಇದು ಕೆಲವೆಡೆ ಹೊರಪಟ್ಟಿದೆ; ಇನ್ನು ಕೆಲವೆಡೆ ಬೂದಿಯೊಳಗಣ ಕೆಂಕಿಯಂತಿದೆ. ಸ್ಥಾನಬದ್ಧತಾ ಶಾಸನವನ್ನು ಇಂಡಿಕೇಟಿಗರಲ್ಲಿ ಉಳಿದವರೆಲ್ಲ ಸ್ವಾಗತಿಸಿದರೂ ನಹತಾ ಅವರು ಅದನ್ನು ಖಂಡತುಂಡವಾಗಿ ವಿರೋಧಿಸಿದ್ದು ಅವರ ಮನೋಧರ್ಮವನ್ನು ತೋರಿಸುತ್ತದೆ ಅದೇ ರೀತಿಯ ಮಿಶ್ರಪ್ರತಿಕ್ರಿಯೆಯು ಬಜೆಟ್ಟಿನ ಮೇಲೂ ತೋರಿತ್ತು. ಇನ್ನು ವಿವಿಧ ರಾಜ್ಯಗಳ ವಿಷಯ ಹೇಳುವುದಾದರೆ, ಕರ್ನಾಟಕದಷ್ಟು ಇಂಡಿಕೇಟಿಗರ ಹುಳುಕು ಮತ್ತೆಲ್ಲಿಯೂ ಹೊರ ಪಟ್ಟಿಲ್ಲ. ಸಿಂಡಿಕೇಟ್ ಮಂತ್ರಿ ಮಂಡಲದಲ್ಲಿದ್ದ, ಚುನಾವಣೆಗೆ ಮೊದಲು ಇಂದಿರಾಗಾಳಿಗೆ ಹಾರಿ ಹೋದ ಪುಟ್ಟಸ್ವಾಮಿಯವರನ್ನು ಪಕ್ಷದ ಸಂಬಂಧ ವಿಚಾರ ವಿನಿಮಯಕ್ಕೆ ದೆಹಲಿಗೆ ಕರೆಯಲಾಗಿದೆಯೆಂದು ವರದಿ ಬಂತು; ಪುಟ್ಟಸ್ವಾಮಿಯವರಿಗೆ ಇನ್ನೂ ಪಕ್ಷದ ಸದಸ್ಯತ್ವವನ್ನೇ ನೀಡಿಲ್ಲದಿರುವಾಗ ಅವರೊಡನೆ ಎಂಥ ಮಾತುಕತೆ? ಎಂದು ಕೇಳುತ್ತಾರೆ ಕೆಲವರು. ಕೇಂದ್ರದ ನೀತಿ ರಾಜ್ಯದಲ್ಲಿ ವಿರೋಧ ತೋರಿಸಹತ್ತಿದೆ. ಸಿದ್ಧವೀರಪ್ಪ-ದೇವರಾಜ ಅರಸರು ಕೇಂದ್ರಾದೇಶದ ಮುಂದೆ ತಲೆವಾಗಿ ಒಮ್ಮೆಗೆ ತೆಪ್ಪಗುಳಿದರೂ ಅವರ ನಡುವಣ ವಿರಸಪ್ರಕರಣ ಹೊಟ್ಟೆಯೊಳಗೆ ತಣ್ಣಗಾದಂತೆನಿಸಿದರೂ ಮುಂದಿನ ಚುನಾವಣೆಗಳ ವೇಳೆ ಅದು ಹೆಡೆಗೆಡುವುದು ನಿಶ್ಚಿತ. ಆದಿಯಿಂದಲೂ ಗುಂಪುಗಾರಿಕೆಗೆ ಹೆಸರಾದ ಕರ್ನಾಟಕದ ಕಾಂಗ್ರೆಸ್ಸಿನಲ್ಲಿ ನಿಜಲಿಂಗಪ್ಪನವರ ಗುಂಪು ಇನ್ನುಳಿದ ಗುಂಪುಗಳನ್ನು ಮೆಟ್ಟಿ ಒಂದು ದಶಕದ ಸ್ಥಿರ ಸರಕಾರವನ್ನು ಕನ್ನಡಿಗರಿಗೆ ನೀಡಿತ್ತೆಂಬುದನ್ನು ಅವರ ವಿರೋಧಿಗಳೂ ಒಪ್ಪಬೇಕಾದದ್ದೇ. ಶ್ರೀಮತಿ ಗಾಂಧಿಯವರು ತನ್ನ ವ್ಯಕ್ತಿತ್ವ ಮತ್ತು ಘೋಷಣೆಯ ಬಲದಿಂದ ತನ್ನ ವಿರೋಧಿಗಳ ಬಲಗುಂದಿಸುವಲ್ಲಿ ಸಫಲರಾದರೆಂದೇ ಹೇಳೋಣ; ಆದರೆ, ತನ್ನ ಸೆರಗಿನಾಸರೆಯಲ್ಲಿರುವವರ ಯಾದವೀಕಲಹವನ್ನು ಕೊನೆಗಾಣಿಸಿ ಹೃದಯಪೂರ್ವಕ ಒಮ್ಮತವನ್ನು ಸಾಧಿಸಲು ಶಕ್ತರಾಗುವುದಿಲ್ಲ ಸದ್ಯ ಬಂಗ್ಲಾ ನಿರಾಶ್ರಿತರ ಕಡೆಗೆ ಹೆಚ್ಚಿನ ಗಮನಹರಿಸಬೇಕಾಗಿರುವುದರಿಂದ ನವಂಬರದ ಹೊತ್ತಿಗೆ ತೇಪೆ ಕಾರ್ಯ ನಡೆಯುವುದು ಆಕೆಯಿಂದ ಸಾಧ್ಯವಿಲ್ಲ. ಆದುದರಿಂದ ವಿಧಾನಸಭಾ ಚುನಾವಣೆಗಳು ಮುಂದಿನ ಜನವರಿ-ಫೆಬ್ರವರಿಗೆ ಮೊದಲು ನಡೆಯುವುದಿಲ್ಲ. ಬಂಗ್ಲಾದೇಶದ ಪ್ರಶ್ನೆ ಯುದ್ಧಸ್ವರೂಪ ಹೊಂದಿದರೆ ಅದು ಮತ್ತೂ ಮುಂದೆ ಹೋಗಬಹುದು. "ರಾಷ್ಟ್ರಪತಿ ಆಳಿಕೆಯೇನೂ ನಾಲ್ಕು ದಿನ ಬಂದು ಹೋಗುವಂಥದ್ದಲ್ಲ. ಅದು ಸಾಕಷ್ಟು ದೀರ್ಘಕಾಲ ಮುಂದುವರಿಯುತ್ತದೆ" ಎಂದ ರಾಜ್ಯಪಾಲ ಧರ್ಮವೀರರ ಆ ಸಮಯದ ಉದ್ಗಾರ ಸಂಪೂರ್ಣ ಅರ್ಥವತ್ತಾಗಿದೆಯೆನಿಸುತ್ತದೆ. ಪಕ್ಷದ ಹಿತದಲ್ಲಿ ಪ್ರಜಾಸತ್ತೆಗೆ ಕೇಡಾಗುತ್ತದೆ.

ಟೂರಿಸ್ಟ್ ಬಸ್ಸುಗಳು

ಟೂರಿಸ್ಟ್ ಬಸ್ಸುಗಳೆಂದು ಪರವಾನಿಗೆ ಪಡೆದುಕೊಂಡು ಪ್ರತಿನಿತ್ಯ ಬೆಂಗಳೂರು—ಮಂಗಳೂರು ಮೊದಲಾದ ಹಿರಿಯ ನಗರಗಳಿಂದ ದೂರದೂರಕ್ಕೆ ಹಲವಾರು ಬಸ್ಸುಗಳು ಓಡುತ್ತಿರುವುದು, ಈ ಬಸ್ಸುಗಳಲ್ಲಿಯೂ ತಿಂಗಳಿಗೆ ಮೊದಲೇ ಸೀಟುಗಳು ಬುಕ್ಕಾಗಿರುವುದು ಸರ್ವಶ್ರುತ. ಜನಪ್ರಿಯ ಸರಕಾರವಿರುವಾಗಲೇ ಟೂರಿಸ್ಟೆಂದು ಹೇಳಿ ಪ್ರಯಾಣಿಕರನ್ನೊಯ್ಯುತ್ತಿವೆಯೆಂಬ ದೂರು ಇವುಗಳ ಮೇಲಿತ್ತು; ಇವುಗಳ ಮಾಲಿಕರಿಗೆ ಸಚಿವರು ಎಚ್ಚರಿಕೆ ನೀಡಿದ್ದೂ ಉಂಟು. ಯಾವುದೇ ಕ್ರಮ ಕೈ

(ಹತ್ತನೇ ಪುಟ ನೋಡಿರಿ)

ಕೃತಜ್ಞತಾ ಸಮರ್ಪಣೆ

ನಮ್ಮ ಪುತ್ರ, ವ ಡಾ| ಎಂ. ಡಿ. ಅಡಪ್ಪರ ಅಳಿಯ ಚಿ|ಶರತ್ ಕುಮಾರನಿಗೆ ಶ್ರೀಮತಿ ಮತ್ತು ಶ್ರೀ ಕೆ. ಎ. ಪೂಂಜ, ಕರಿಯಂಗಳಗುತ್ತು ಇವರ ಪುತ್ರಿ ಕುಮಾರಿ ಜ್ಯೋತಿಯೊಂದಿಗೆ ತಾ.18-6-71ರಂದು ಮಂಗಳೂರು ಪುರಭವನದಲ್ಲಿ ಜರಗಿದ ವಿವಾಹ ಸಮಾರಂಭಕ್ಕೆ ಪ್ರೀತಿ ವಿಶ್ವಾಸಗಳಿಂದ ಊರು ಪರವೂರುಗಳಿಂದಲೂ ಹೊರ ಜಿಲ್ಲೆಗಳಿಂದಲೂ ದಯಮಾಡಿ ಬಂದು ಸಮಾರಂಭವನ್ನು ಚಂದಗಾಣಿಸಿ ವಧೂವರರನ್ನು ಹರಸಿದ ಹಾಗೂ ಶುಭ ಸಂದೇಶಗಳನ್ನು ಕಳಿಸಿದ ಬಂಧು ಭಗಿನಿಯರಿಗೂ ಹಿತೈಷಿ ಮಿತ್ರರಿಗೂ ಸಮಾರಂಭದ ಯಶಸ್ಸಿಗಾಗಿ ನೆರವಾಗಿ ಸಹಕರಿಸಿದ ಸಮಸ್ತರಿಗೂ ಈ ಮೂಲಕ ನಮ್ಮ ಹಾರ್ದಿಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ.

ದಿವ್ಯದರ್ಶನ
ಕದ್ರಿ, ಮಂಗಳೂರು-4

ಶ್ರೀಮತಿ ಮತ್ತು ಡಾ| ಕೆ. ಬಿ. ಶೆಟ್ಟಿ.

ಗೇಹರಾಜ್ಯದಲ್ಲಿ

ತುಕ್ಕು ಹಿಡಿದ ಕತ್ತಿ ನಮ್ಮದು

'ನೋಡಿ, ಈ ವರ್ಷವಾದ್ರೂ ನಮ್ಮ ಶಿಕ್ಷಣ ಮಟ್ಟ ಉನ್ನತಿಯ ದಾರಿಯಲ್ಲಿದೆ ಅನ್ನಬಹುದಲ್ಲ?'

'ಅಲ್ವೆ, ಎಲ್ಲಾ ಬಿಟ್ಟು; ಭಂಗಿ ನೆಟ್ಟ ಅಂದಂತೆ ಏಕ್‌ಸಾನ್ ಶಿಕ್ಷಣರಂಗದ ಉನ್ನತಿ—ಅವನತಿಯ ಬಗ್ಗೆ ವ್ಯಾಖ್ಯಾನ ಸುರು ಮಾಡಿದಿಯಲ್ಲಾ, ಏನು ಸೂರ್ಯ ಪಡುಗಡಲಲ್ಲಿ ಮೂಡಿದನೇನು?'

'ಅಲ್ರಿ, ಸೂರ್ಯ ಯಾಕೆ ಪಡುಗಡಲಲ್ಲಿ ಮೂಡಬೇಕೂಂತ? ಲೋಕದ ವಿಚಾರನೆಲ್ಲ ಹೇಳ್ತಾರೆ, ಓದ್ತಾರೆ, ನಮ್ಮ ಸಂಗ್ತಿಯೇನೂಂತ ಗೊತ್ತೇ ಇಲ್ಲ'

'ಗೊತ್ತಿಲ್ಲಾದ್ರೇನಂತೆ, ಸದ್ಯ ಗೊತ್ತು ಮಾಡೋಕೆ ನೀನಾದ್ರೂ ಇದ್ದೀಯಲ್ಲ....'

"ಹ್ಞಾಂ, ಇದ್ದೇನೆ; ಇಲ್ಲದೆ ಮತ್ತೆ ಸ್ವಾಮ್ಯೇಕೇನು?'

'ಅಯ್ಯಯ್ಯೊ....ಏನಿದು ಅಪಭಾಷಿತ? ಶಾಂತಂ ಪಾಪಂ....'

"ಮತ್ತಿನ್ನೇನೆನ್ನಬೇಕೂಂತ? ನೋಡಿ ಈ ಬಾರಿ ಕರ್ನಾಟಕರಾಜ್ಯದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಶೇಕಡಾ ೪೦ರಷ್ಟು ಉತ್ತೀರ್ಣತೆ ಕಂಡು ಬಂದಿದೆಯಂತೆ. ಇದು ಪ್ರಗತಿಯಲ್ಲವೇನು?'

'ಹ್ಞಾಂ. ನಿಜಕ್ಕೂ ಪ್ರಗತಿಯೇ. ಪ್ರಾಯಃ ಕಳೆದ ಕೆಲವು ವರ್ಷಗಳಲ್ಲಿ ಮೂವತ್ತು ನಲುವತ್ತರ ನಡುವೆಯೇ ನೇಲಾಡುತ್ತಿತ್ತು.'

'ಅಂದರೆ ನಮ್ಮ ಶಿಕ್ಷಣ ಮಟ್ಟ ಏರಿದೆಯಲ್ಲವೇ?'

'ಮಟ್ಟ ಏರಿದೆಯೋ ಮಟ್ಟಸವಾಗಿದೆಯೋ ದೇವರೇ ಹೇಳಬೇಕು....'

'ಯಾಕೆ ಹಾಗಂತೀರಾ?'

"ಅಲ್ವೆ, ಈ ಬಾರಿ ಪ್ರತಿ ಸಬ್‌ಜೆಕ್ಟ್‌ನಲ್ಲೂ ನೂರಕ್ಕೆ ಇಪ್ಪತ್ತೈದರಷ್ಟು ಮಾರ್ಕುಗಳು ನ್ಯೂಟೈಪ್ ಅಥವಾ ಅಬ್ಜಕ್ಟಿವ್ ಟೈಪಿನ ಪ್ರಶ್ನೆಗಳಿಗೆ.'

'ಅಂದರೆ?'

'ಒಂದು ಪ್ರಶ್ನೆ ಕೇಳುವುದು; ಅದಕ್ಕೆ ನಾಲ್ಕು ಉತ್ತರ ರೂಪದಲ್ಲಿ ಕೊಡುವುದು; ಈ ನಾಲ್ಕರಲ್ಲಿ ಸರಿಯಾದುದನ್ನೋ ಸರಿಗೆ ಸಮೀಪವಾದುದನ್ನೋ ಆರಿಸಿ ಬರೆಯಿರಿ ಎನ್ನುವುದು....'

'ಏನಾಯ್ತು? ಉತ್ತರ ಗೊತ್ತಿಲ್ಲದವ್ರು ಹೇಗೆ ಆರಿಸಬಲ್ಲರು?'

'ಅದೇ ಅನ್ನೋದು. ಅವರ್ಯಾಕೆ ಆರಿಸಬೇಕು? ಆಚೆ ಈಚೆ ಕುಳಿತ ಬುದ್ಧಿವಂತನೊಡನೆ ಕೈ-ಕಣ್ಣುಗಳಿಂದ ಉತ್ತರ ತಿಳಿದುಕೊಳ್ಳಬಹುದು. ದಯಾವಂತ ಸೂಪರ್‌ವೈಜರ್ ತಾನೇ ಎ ಬಿ ಸಿ ಹಾಕಿಕೊಡಬಹುದು. ಕರುಣಾಳು ಮೌಲ್ಯಮಾಪಕನೂ ಇದೇ ರೀತಿ ಕರುಣೆ ತೋರಿಸಬಹುದು.'

'ಹಾಗೆಲ್ಲಾ ಮಾಡಿದರೆ ಸುಮ್ಮನಿರ್‍ತಾರೆಯೇ?'

'ಮಾಡ್ತಾರೆಂದದ್ದಲ್ಲ; ಹೀಗೆಲ್ಲಾ ಆಗೋಕೆ ಅವಕಾಶ ಸಾಕಷ್ಟಿವೆ. ಒಂದೊಂದು ಸಬ್ಜೆಕ್ಟಿಗೂ ಇಪ್ಪತ್ತೈದು ಗ್ರೇಸ್ ಮಾರ್ಕನ್ನು ಮೌಲ್ಯಮಾಪಕರಾದಿ ಕೊಟ್ಟರೆ, ಉಳಿದ ಹತ್ತನ್ನು ಸೆಕೆಂಡರಿ ಬೋರ್ಡು ದಾನಮಾಡಿದರೆ, ನಮ್ಮ ಶಿಕ್ಷಣ ಮಟ್ಟ ನೂರಕ್ಕೆ ನೂರರಷ್ಟು ಏರುತ್ತದೆ....'

'ಹ್ಞಾಂ. ಅಂತೂ ನೀವೊಬ್ಬರು ಟೀಕಾಕಾರರು. ಆಪ್‌ಷನಲ್ಸು ಇರುವಾಗ ಹೊರೆ ಭಾರವೆಂದ್ರಿ. ಈಗ ಪರೀಕ್ಷಾಕ್ರಮ ಸರಿಯಲ್ಲ ಅನ್ತೀರಿ....'

'ಪರೀಕ್ಷಾ ಕ್ರಮ ಸರಿಯಲ್ಲ ಅನ್ನೋದು ನಾನೊಬ್ಬನೇ ಅಲ್ಲ; ಲೋಕವೇ ಹೇಳ್ತಿದೆ. ಆದ್ರೆ ಸರಿಯಾದ ಕ್ರಮ ಯಾವುದು ಅನ್ನೋದೇ ಅಗೋಚರ....'

'ಆಯ್ತಪ್ಪ, ಇನ್ನು ಹಿಂದಿನ ಕಾಲದಂತೆ ಒಬ್ಬೊಬ್ಬರಿಗೆ ಒಂದೊಂದು ಪ್ರಶ್ನೆ ಕೇಳಿ ಪರೀಕ್ಷೆ ಮಾಡೋಣ.'

"ಪರೀಕ್ಷೆಗೆ ಮೊದಲು ಶಿಕ್ಷಣದ ವಿಷಯಗಳ ಹೊರೆ ಕಡಿಮೆಯಾಗ್ಬೇಕು. ಆಪ್‌ಷನಲ್ಸನ್ನು ಕಿತ್ತು ಹಾಕಿದ್ರು; ಆ ವಿಷಯಗಳನ್ನೆಲ್ಲ ಉಳಿದ ಸಬ್‌ಜೆಕ್ಟುಗಳಲ್ಲೇ ತೂರಿಬಿಟ್ಟರು. ಎರಡು ಚೀಲಗಳಲ್ಲಿ ತುಂಬಿದ್ದ ಭಾರವನ್ನು ಒಂದರಲ್ಲೆ ತುರುಕಿಸಿಟ್ಟ ಮಾತ್ರಕ್ಕೆ ಚೀಲವೇನೋ ಕಡಿಮೆಯಾಯ್ತು; ಭಾರ ಕಡಿಮೆಯಾಗಲಿಲ್ಲ.'

'ಆಯ್ತು. ಆದ್ರೆ ನೋಡಿ ಮೈಸೂರು ವಿಶ್ವವಿದ್ಯಾಲಯದ ಪಿಯುಸಿಯಲ್ಲೂ ಉತ್ತೀರ್ಣತೆಯ ಪ್ರತಿಶತ ಏರಿದೆಯಂತೆ....'

"ಹೌದು. ಕಳೆದ ವರ್ಷ ೨೨ ಇದ್ದದ್ದು ಈ ವರ್ಷ ೨೪ ಆಗಿದೆಯಂತೆ...."

"ಇದಕ್ಕೇನನ್ನುತ್ತೀರಿ?"

"ಕನ್ನಡ ಮಾಧ್ಯಮದ ಪರಿಣಾಮ ಅಂತೇನೆ...."

'ನಿಮಗೊಂದು ಕನ್ನಡದ ಮೋಹ...."

'ಅಲ್ವೆ, ಕೆಲವರಿಗೆ ಇಂಗ್ಲಿಷ್ ಮೋಹ, ಕಾಲೇಜಿನ ಮಮತೆ. ಆದ್ರೆ ನಾನು ಕೇಳ್ತೀನೆ—ಕಾಲೇಜುಗಳೆಲ್ಲ ಸುಂಸುಮ್ನೆ ಅಂಥ....'

"ಯಾಕೆ?"

'ನೋಡು, ನಮ್ಮ ಜನಕ್ಕೆ ಹುಚ್ಚು. ಪಿಯುಸಿ ಊರಿನ ಹಾಯರ್ ಸೆಕೆಂಡರಿಯಲ್ಲಿದ್ದರೂ ದೂರದ ಕಾಲೇಜಿಗೇ ಹೋಗಬೇಕೂಂತಾರೆ....'

'ಹೌದು, ಅಲ್ಲಿ ಚೆನ್ನಾಗಿ ಕಲಿಸ್ತಾರೆ....'

"ಅದೇ ಅಂದದ್ದು. ಅಲ್ಲಿ ಕಲಿಸೋದ್ರಿಂದ್ಲೇ ರ್‍ಯಾಂಕುಗಳೆಲ್ಲ ಅವರ ಕೈಯಿಂದ ತಪ್ಪಿಹೋಗ್ತಿರೋದು ..."

'ಅಯ್ಯೋ ಏನಂತೀರಾ ನೀವು?"

'ಗಾಬರಿ ಮಾಡಿಕೊಳ್ಳಬೇಡ; ನೋಡು, ಮೈಸೂರು ವಿಶ್ವವಿದ್ಯಾಲಯದ ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ ಮೊದಲನೇ ರ್‍ಯಾಂಕ್ ಪಡೆದವನು ಉರ್ವದ ಕೆನರಾ ಹೈಸ್ಕೂಲಿನ ಸುಧಾಕರನೆಂಬವನು. ಮತ್ತೆ ಕಾಲೇಜುಗಳೆಲ್ಲ ಯಾಕೇಂತ? ಅಲ್ಲಿ ನವ್ರ ಡಬ್ಬಲ್ ಎಮ್ಮೆ, ಪಿಎಚ್‌ಡಿಯೆಲ್ಲ ಯಾಕೇಂತ?"

"ಅಲ್ರಿ, ಎಲ್ಲೋ ಅವನೊಬ್ಬ ಅತ್ಯಂತ ಪ್ರತಿಭಾವಂತನಿರಬಹುದು...."

'ರ್‍ಯಾಂಕು ಬರಬೇಕಾದರೆ, ಪ್ರತಿಭೆಯೂ ಬೇಕೆನ್ನು. ಅದ್ರ ಮೇಲೆ ೪ನೆಯ ರ್‍ಯಾಂಕು ಆದಮಾರಿಗೆ, ಐದನೆಯದನ್ನು ಹಂಚಿಕೊಂಡ ನಾಲ್ವರಲ್ಲಿ ಇಬ್ಬರು ಹಾಯರ್ ಸೆಕೆಂಡರಿಯವರು, ಎಂಟನೆಯವರೂ ಅವರೇ."

'ಓಹೋ....'

'ನೋಡು, ಒಟ್ಟು ೧೦ ರ್‍ಯಾಂಕುಗಳನ್ನು ೧೩ ಜನ ಪ್ರತಿಭಾವಂತರು ಹಂಚಿಕೊಂಡರು. ಈ ಹದಿಮೂರರಲ್ಲಿ ಐದನ್ನು ಹಾಯರ್ ಸೆಕೆಂಡರಿಯವರೇ ಪಡೆದದ್ದು ಚಿಲ್ಲರೆ ವಿಷಯವೇನು?'

'ಅದು ಅಲ್ಲಾನ್ನಿ. ಆದರೂ ಕಾಲೇಜು ಅಂದ್ರೆ ದೊಡ್ಡ ಸಂಸ್ಥೆ. ಅಲ್ಲಿನವರೆಲ್ಲ ಮಹಾಪಂಡಿತರು....'

'ಪಂಡಿತಗಿರಿ ಪ್ರದರ್ಶನಕ್ಕೆ ಮಾತ್ರವಲ್ಲ ನೋಡು; ವಿದ್ಯಾರ್ಥಿಗಳಿಗೆ ಅದರ ಸಂಪೂರ್ಣ ಪ್ರಯೋಜನ ದೊರೆಯಬೇಕು....'

'ಅಲ್ರಿ, ಅಲ್ಲಿ ಇಂಗ್ಲಿಷ್ ಇರುತ್ತೆ. ಇಂಗ್ಲಿಷಿನಲ್ಲೇ ಕಾತುಕೋ ಬೇಕು, ನಿಲ್ಲಬೇಕು....'

"ಅದೇ ಅಂದದ್ದು. ನಿನ್ನಂಥವ್ರಿಗೆ ಇಂಗ್ಲಿಷ್ ಮೋಹ ಬೇರೆ. ಕನ್ನಡದಲ್ಲೇ ಲಕ್ಷಣವಾಗಿ ನಾಲ್ಕು ಮಾತಾಡೋಕೆ ಬರೆಯೋಕೆ ಬರದವ್ರು ಇಂಗ್ಲಿಷ್ ಬೇರೆ ಕಲೀತಾರೆ—ಲಂಡನ್ನಿಗೋ ಅಮೇರಿಕಕ್ಕೋ ಕಳಿಸಿ ಬಿಟ್ರೆ ಎಲ್ಲಾ ಇಂಗ್ಲೀಷು ಆಗಿ ಬಿಡುತ್ತೆ."

'ಅಲ್ರಿ, ನಿಮಗ್ಯಾಕಿಷ್ಟು ಅದ್ರಮೇಲೆ ಸಿಟ್ಟೂಂತ....'

"ಸಿಟ್ಟು ಎಲ್ಲಿಯದು? ಇಂಗ್ಲಿಷ್ ಇಂಗ್ಲಿಷ್ ಅಂತ ಜೀವ ಬಿಡೋದು ಮಾತ್ರ ಸರಿಯಲ್ಲ ಅಂತ....ಕನ್ನಡ ಮಾಧ್ಯಮಕ್ಕೆ ಅಡ್ಡಿ ತರುವುದು ಸರಿಯಲ್ಲಾಂತ...."

'ಯಾರು ಅಡ್ಡಿ ತರ್‍ತಾರೆ? ಇಂಗ್ಲಿಷೇ ಬೇಕೆನ್ನುತ್ತಾರೆ ಮಕ್ಕಳು....'

"ಮಕ್ಕಳ್ಯಾಕೆ ಹೇಳ್ತಾರೆ? ಅವ್ರ ಹೆತ್ತವ್ರು ಹೇಳ್ತಾರೆ. ಅವರ್ಯಾಕೆ ಹೇಳ್ತಾರೆ—ಇಂಗ್ಲಿಷಿನ ಗುತ್ತೇದಾರರು ಹೇಳ್ತಾರೆ. ಆಡು ಹಳ್ಳಕ್ಕೆ ಬಿದ್ರೆ ಕುರಿಗಳೂ ಹಳ್ಳಕ್ಕೆ. ಬಾಲಕತ್ತರ್‍ಸಿಕೊಂಡ ನರೀಕತೆ ನೆನಪಾಗುತ್ತೆ'

'ಅದು ಹೌದೂನ್ನಿ. ಶಿಕ್ಷಣ ಮಾಧ್ಯಮ ಕನ್ನಡವಾಗದೆ ಕನ್ನಡ ಬೆಳೆಯುವುದಿಲ್ಲ.'

"ಅದಕ್ಕೆ ಕನ್ನಡ ಆಡಳಿತ ಭಾಷೆಯಾಗಬೇಕು; ಎಲ್ಲ ವ್ಯವಹಾರಗಳು ಕನ್ನಡದಲ್ಲೇ ನಡೆಯಬೇಕು. ಮರಾಠಿ ಜನರಲ್ಲಿ ಇರುವ ಭಾಷಾಭಿಮಾನದ ಒಂದಂಶ ನಮ್ಮಲ್ಲಿದ್ದಿದ್ದರೆ ..."

"ಅಲ್ರಿ, ಸಂಕುಚಿತ ಭಾಷಾಭಿಮಾನ ರಾಷ್ಟ್ರದ ಐಕ್ಯಕ್ಕೆ ಮಾರಕವಲ್ಲವೇನು?"

'ಸಂಕುಚಿತ ಭಾಷಾಭಿಮಾನ ನಮಗೆ ಬೇಡ. ವಿಶಾಲ ಭಾಷಾಭಿಮಾನ ಬೇಕು. ಕನ್ನಡದ ಬಗ್ಗೆ ಪ್ರಥಮದರ್ಜೆಯ ಅಧಿಕಾರಿಯಿಂದ ತೊಡಗಿ ಪೇದೆಯ ತನಕವೂ ಸಂಕುಚಿತ ನಿರಭಿಮಾನವಿರುವಾಗ ಇದಕ್ಕೆ ಅವಕಾಶವೆಲ್ಲಿ?'

"ಬಹಳ ಶೋಚನೀಯ...."

'ಆದುದರಿಂದಲೇ ಕನ್ನಡ ಬಳೆಯೋದಿಲ್ಲ. ಕತ್ತಿಯಿಂದ ಕಡಿದಷ್ಟು ಅದು ಹರಿತವಾಗುತ್ತದೆ; ಇಲ್ಲವಾದರೆ ತುಕ್ಕು ಹಿಡಿದು ತನ್ನ ಕಸುವನ್ನು ಕಳೆದುಕೊಳ್ಳುತ್ತದೆ....'

'ಅದು ಸರೀನ್ನಿ. ಆದ್ರೂ ನಮ್ಮ ಜನಕ್ಕೆ ಅದರ ಸುಳಿವೇ ದೊರೆಯುವುದಿಲ್ಲ.'

'ದಾಸ್ಯದಲ್ಲೇ ಸುಖವಿದೆಯೆಂದು ನಂಬುವ ಹಳೆಯ ತಲೆಗಳಿರುವವರೆಗೆ ಸತ್ಯ ಮನವರಿಕೆಯಾಗುವುದಿಲ್ಲ. ತನ್ನ ಮರೆಯ ಕಂಪನರಿಯದೆ ಅದನ್ನೆ ಹೊರಗೆ ಹುಡುಕುವ ಮೃಗದ ಪಾಡು ನಮ್ಮದೆಂದರು ಗೋವಿಂದ ಪೈ. ಆ ಮರೆಯ ಕಂಪನ್ನು ಅನುಭವಿಸುವ ದಿನ ಬಂದೇ ಬರುತ್ತದೆ.'

"ಬರಲಿ. ಬರಲೇ ಬೇಕು ತಾನೆ?"

"ನಮ್ಮ ರಾಜ್ಯದ ರಾಜ್ಯಕೀಯ ಸಂಕುಚಿತ ಜಾತೀಯವಾದಿಗಳ ಗುತ್ತೇದಾರಿಕೆಯಂತಾಗಿ ಹೋಗಿದೆಯೆನ್ನುತ್ತಾರೆ ಇಂಡಿಕೇಟಿನ ರಾಜ್ಯನಾಯಕ ದೇವರಾಜ ಅರಸು. ಅದೇ ರೀತಿಯಲ್ಲಿ ನಮ್ಮ ರಾಜ್ಯದ ಶಿಕ್ಷಣ ರಂಗವೂ ಕೆಲವೇ ಸಂಕುಚಿತ ಇಂಗ್ಲಿಷ್ ಮೋರೆಗಳ ಗುತ್ತೇದಾರಿಕೆಯಲ್ಲಿವೆ. ವಿಶ್ವ ವಿದ್ಯಾಲಯ ಕನ್ನಡ ಮಾಧ್ಯಮವನ್ನೇ ಜ್ಯಾರಿಗೆ ತರಲು ಸೊಂಟ ಕಟ್ಟಿದ್ದರೆ ಈ ಗುತ್ತೇದಾರರು ಅವರನ್ನು ತಡೆಹಿಡಿಯುತ್ತಾರೆ...."

(ಒಂಭತ್ತನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
131 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}\%$ ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ:

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ವಿಶೇಷ ಲೇಖನ ಬಂಗ್ಲಾದೇಶದ ಸ್ಥಿತಿಯ ಬಗ್ಗೆ ಪ್ರಧಾನಮಂತ್ರಿಗಳ ಹೇಳಿಕೆ

ಬಂಗ್ಲಾದೇಶದ ಪರಿಸ್ಥಿತಿಯನ್ನು ಕುರಿತು ಇತ್ತೀಚೆಗೆ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಲೋಕಸಭೆಯಲ್ಲಿ ಮಾಡಿದ ಭಾಷಣ

ಪಾರ್ಲಿಮೆಂಟ್ ಬಿಡುವಿನ ಏಳುವಾರಗಳಿಂದಲೂ ಬಂಗ್ಲಾದೇಶದಲ್ಲಿ ಮುಂದುವರಿಯುತ್ತಿರುವ ದಾರುಣಸ್ಥಿತಿಯು ಇಡೀ ಭಾರತ ಜನತೆಯ ಗಮನವನ್ನು ಸೆಳೆದಿದೆ. ಕಳೆದ ಮಾರ್ಚ್ ತಿಂಗಳಲ್ಲಿ ನಾವು ಆಶಾದಾಯಕ ವಾತಾವರಣದಲ್ಲಿ ಸಮಾವೇಶಗೊಂಡಿದ್ದೆವು ಎಂಬುದನ್ನು ಗೌರವಾನ್ವಿತ ಸದಸ್ಯರು ಸ್ಮರಿಸಿಕೊಳ್ಳಬಹುದು. ನಮ್ಮ ದೇಶ ತ್ವರಿತವಾದ ಆರ್ಥಿಕ ಪ್ರಗತಿಗೆ ಸಿದ್ಧವಾಗಿದೆ ಮತ್ತು ಅನಾದಿಕಾಲದಿಂದ ಬಂದ ನಮ್ಮ ಜನರ ಬಡತನವನ್ನು ನಿವಾರಿಸಲು ದೃಢಸಂಕಲ್ಪ ತಾಳಿದೆ ಎಂದು ನಮಗೆ ಆಗ ಅನಿಸಿತು. ನಾವು ಈ ಕಾರ್ಯದಲ್ಲಿ ತೊಡಗಿರುವಾಗ ಇನ್ನೊಂದು ಹೊಸ ಹಾಗೂ ವಿರಾಟರೂಪದ ಸಮಸ್ಯೆಯನ್ನು ಎದುರಿಸಬೇಕಾಗಿ ಬಂದಿದೆ. ಈ ಸಮಸ್ಯೆಯನ್ನು ನಾವು ನಿರ್ಮಿಸಿಲ್ಲ.

ಇದೇ ಮೇ 15 ಮತ್ತು 16ರಂದು ನಾನು ಅಸ್ಸಾಂ, ತ್ರಿಪುರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ನಿರಾಶ್ರಿತರ ಶಿಬಿರಗಳಿಗೆ ಭೇಟಿನೀಡಿದೆ. ಬಂಗ್ಲಾದೇಶದ ನಿರಾಶ್ರಿತರ ಕಷ್ಟನಷ್ಟಗಳನ್ನು ಕಣ್ಣಾರೆ ಕಾಣುವುದು, ಪಾರ್ಲಿಮೆಂಟಿನ ಹಾಗೂ ದೇಶದ ಜನತೆಯ ಸಹಕಾರ ಮತ್ತು ಸಹಾನುಭೂತಿಯನ್ನು ವ್ಯಕ್ತಪಡಿಸುವುದು ಮತ್ತು ನಿರಾಶ್ರಿತರ ಅಗತ್ಯಗಳಿಗಾಗಿ ಮಾಡಿದ ವ್ಯವಸ್ಥೆಯನ್ನು ತಿಳಿಯುವುದು ನನ್ನ ಭೇಟಿಯ ಮುಖ್ಯ ಉದ್ದೇಶವಾಗಿತ್ತು. ಆದರೆ ಎಲ್ಲಾ ಇತರ ಎಲ್ಲಾ ಶಿಬಿರಗಳಿಗೆ ಭೇಟಿ ನೀಡಲು ಸಾಧ್ಯವಾಗಲಿಲ್ಲ. ಲಭ್ಯವಿರುವ ಎಲ್ಲಾ ಕಟ್ಟಡಗಳು, ಶಾಲೆಗಳು ಮತ್ತು ತರಬೇತಿ ಕೇಂದ್ರಗಳಲ್ಲಿ ನಿರಾಶ್ರಿತರಿಗೆ ವಸತಿ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು. ಈಗಾಗಲೇ ನಿರ್ಮಿತವಾಗಿರುವ 335 ಶಿಬಿರಗಳಲ್ಲಿ ಸಾವಿರಾರು ಡೇರೆಗಳು ನಿರ್ಮಾಣವಾಗಿವೆ. ತಾತ್ಕಾಲಿಕ ಛಾವಣಿಗಳನ್ನು ಕಟ್ಟಲಾಗುತ್ತಿತ್ತು. ಈ ವಿವಿಧ ಕ್ರಮಗಳನ್ನು ಕೈಗೊಂಡಾಗಿದೆ. ಆದರೂ ನಿರಾಶ್ರಿತರಿಗೆ ಪೂರ್ಣವಾಗಿ ವಸತಿ ಸೌಕರ್ಯವನ್ನು ಒದಗಿಸಲು ಇನ್ನೂ ಸಾಧ್ಯವಾಗಿಲ್ಲ. ಜಿಲ್ಲಾ ಅಧಿಕಾರಿಗಳು ಈ ಬಗ್ಗೆ ತುಂಬ ಶ್ರಮವಹಿಸುತ್ತಿದ್ದಾರೆ. ಈಗಾಗಲೇ ಗಡಿದಾಟಿ ಬಂದವರಿಗೆ ವಸತಿಕಾರ್ಯವನ್ನು ಕೈಗೊಳ್ಳುತ್ತಿರುವಾಗ ಪ್ರತಿದಿನ ಸುಮಾರು 60,000 ಹೆಚ್ಚಿನ ನಿರಾಶ್ರಿತರು ಭಾರತಕ್ಕೆ ವಲಸೆ ಬರುತ್ತಿದ್ದಾರೆ.

ಅತ್ಯಲ್ಪಕಾಲದಲ್ಲಿ ಇಷ್ಟೊಂದು ಹೆಚ್ಚಿನ ನಿರಾಶ್ರಿತರು ವಲಸೆ ಬಂದಿರುವುದು ಇತಿಹಾಸದಲ್ಲೇ ಕಂಡಿಲ್ಲ. ಕಳೆದ ಎಂಟು ವಾರಗಳಲ್ಲಿ ಸುಮಾರು 35 ಲಕ್ಷ ನಿರಾಶ್ರಿತರು ಭಾರತಕ್ಕೆ ಬಂದಿದ್ದಾರೆ. ಅವರಲ್ಲಿ ಹಿಂದೂಗಳಿದ್ದಾರೆ, ಮುಸ್ಲಿಂರಿದ್ದಾರೆ, ಕ್ರೈಸ್ತರಿದ್ದಾರೆ, ಬೌದ್ಧರಿದ್ದಾರೆ, ಮುದುಕರು, ಯುವಕರು, ಕಿರಿಯರು ಹೀಗೆ ಎಲ್ಲ ವಯಸ್ಸಿನವರಿದ್ದಾರೆ. ಸಮಾಜದ ನಾನಾ ವರ್ಗಗಳ ಜನಸಮೂಹವನ್ನು ಅಲ್ಲಿ ಕಾಣಬಹುದು. ಪಾಕ್ ಮಿಲಿಟರಿ ಭಯೋತ್ಪಾದಕ ಕೃತ್ಯಗಳಿಂದಾಗಿ ತಮ್ಮ ದೇಶವನ್ನು ತ್ಯಜಿಸಿ ಬಂದಿದ್ದಾರೆ.

ನಿರಾಶ್ರಿತರಲ್ಲಿ ಅನೇಕರು ಗಾಯಗೊಂಡಿದ್ದಾರೆ. ಅವರಿಗೆ ಶೀಘ್ರ ವೈದ್ಯಕೀಯ ನೆರವಿನ ಅಗತ್ಯವಿದೆ. ನಾನು ಇಂತಹವರಲ್ಲಿ ಹಲವರನ್ನು ತ್ರಿಪುರ ಮತ್ತು ಪಶ್ಚಿಮಬಂಗಾಳದ ಆಸ್ಪತ್ರೆಗಳಲ್ಲಿ ಕಂಡೆ. ನಮ್ಮ ಗಡಿರಾಜ್ಯಗಳಲ್ಲಿ ವೈದ್ಯಕೀಯ ಸೌಲಭ್ಯಗಳ ಮೇಲೆ ಹೊರಲಾರದಷ್ಟು ಭಾರ ಬಿದ್ದಿದೆ. ಈ ರಾಜ್ಯಗಳ ವಿವಿಧ ಆಸ್ಪತ್ರೆಗಳಲ್ಲಿ ರೋಗಿಗಳಿಗಾಗಿ 1100 ಹೆಚ್ಚು ಹಾಸಿಗೆಗಳನ್ನು ಒದಗಿಸಲು ಬೇಕಾಗುವ ಸಲಕರಣೆಗಳನ್ನು ನೀಡಲಾಗಿದೆ. ಇದೇ ಅಲ್ಲದೆ ರಾಜಸ್ಥಾನ ಸರ್ಕಾರದ ಕೊಡುಗೆಯಾದ ಸಂಚಾರಿ ಆಸ್ಪತ್ರೆಯಲ್ಲಿ 400 ಹಾಸಿಗೆಗಳ ಅನುಕೂಲವಿದೆ. ಶಸ್ತ್ರಚಿಕಿತ್ಸಾ ನಿಪುಣರು, ವೈದ್ಯಕೀಯ ಅಧಿಕಾರಿಗಳು, ನರ್ಸ್‌ಗಳು ಮತ್ತಿತರ ಸಾರ್ವಜನಿಕ ಆರೋಗ್ಯ ತಜ್ಞರ ವಿಶೇಷ ತಂಡಗಳನ್ನು ಈ ಶಿಬಿರಗಳಿಗೆ ಕಳುಹಿಸಲಾಗಿದೆ. ನೀರಿನ ಪೂರೈಕೆಗೆ ವಿಶೇಷ ಆದ್ಯತೆ ನೀಡಲಾಗಿದ್ದು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕ್ರಮಗಳನ್ನು ಹೆಚ್ಚು ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ. ನಿರಾಶ್ರಿತರ ಸಮಸ್ಯೆಯನ್ನು ಎದುರಿಸುತ್ತಿರುವ ಈ ನಮ್ಮ ಗಡಿರಾಜ್ಯಗಳಲ್ಲಿ ಸ್ಥಳೀಯ ಆಡಳಿತ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಯೋಜನೆಗಳಿಗೆ ನೀಡಲಾಗುತಿದ್ದ ಗಮನವನ್ನೀಗ ನಿರಾಶ್ರಿತರ ಶಿಬಿರಾಡಳಿತ, ಅವರ ಅಗತ್ಯಗಳ ಪೂರೈಕೆ ಮತ್ತು ರಕ್ಷಣೆ ಕಾರ್ಯಕ್ರಮಗಳಿಗೆ ಹರಿಸಲಾಗಿದೆ. ನಿರಾಶ್ರಿತರ ತೊಂದರೆಗಳು ತಮ್ಮ ತೊಂದರೆಗಳೇ ಎಂದು ಅಲ್ಲಿನ ಜನತೆ ಭಾವಿಸಿದ್ದಾರೆ. ಕೋಮು ಗಲಭೆಗಳನ್ನು ಎಬ್ಬಿಸಲು ಸನ್ನಾಹಮಾಡಿರುವ ಪಾಕ್ ಪ್ರಚೋದಕರ ವಿರುದ್ಧ ನಮ್ಮ ಜನತೆ ದೃಢವಾಗಿದ್ದಾರೆ. ಈ ಸ್ಥಿರ ಮನೋಭಾವ ಮುಂದೆ ಎಂದೆಂದೂ ಮುಂದುವರಿಯುವುದೆಂಬ ಪೂರ್ಣ ನಂಬಿಕೆ ನನಗಿದೆ.

ಪ್ರಸ್ತುತ ಅಂದಾಜಿನ ಪ್ರಕಾರ ನಿರಾಶ್ರಿತರ ಆಹಾರ ಮತ್ತು ವಸತಿ ಇವುಗಳಿಗಾಗಿ ಮುಂದಿನ ಆರು ತಿಂಗಳಲ್ಲಿ ಕೇಂದ್ರದ ಖಜಾನೆಯೊಂದರಿಂದಲೇ 180 ಕೋಟಿ ರೂಗಳು ವೆಚ್ಚವಾಗುವ ನಿರೀಕ್ಷೆ ಇದೆ. ಇದು ಅನಿರೀಕ್ಷಿತ ಭಾರವಾಗಿದೆ. ಬಂಗ್ಲಾದೇಶದ ನಿರಾಶ್ರಿತರು ತಮ್ಮ ಕಷ್ಟಗಳನ್ನು ಎದುರಿಸಿದ ರೀತಿ ಮತ್ತು ಅವರು ತಮ್ಮ ಭವಿಷ್ಯದಲ್ಲಿ ಇಟ್ಟುಕೊಂಡಿರುವ ವಿಶ್ವಾಸ ಇವುಗಳನ್ನು ಕಂಡು ನನಗೆ ಹೆಚ್ಚು ಮೆಚ್ಚಿಕೆಯಾಗಿದೆ. ಬಂಗ್ಲಾದೇಶದಲ್ಲಿ ನಡೆದ ಘಟನೆಗಳಿಗೆ ಮತ್ತು ಭಾರತಕ್ಕೆ ಸಂಬಂಧ ಕಲ್ಪಿಸುವುದು ತಿಳಿಗೇಡಿತನ. ಬಂಗ್ಲಾದೇಶದ ಸ್ವಾತಂತ್ರ್ಯಯೋಧರಿಗೆ ಮತ್ತು ಅವರ ಆಶೋತ್ತರಗಳಿಗೆ ಅಪಮಾನದ ವಿಷಯವಾಗುವುದು. ಈ ರೀತಿಯ ಇಲ್ಲದ ಸಂಬಂಧ ಕಲ್ಪಿಸುವುದು ಭಾರತವನ್ನು ಯಜ್ಞಪಶುವನ್ನಾಗಿ ಮಾಡುವ ಪಾಕ್‌ನ ಒಳಸಂಚಾಗಿದೆ. ಸತ್ಯ ಸಂಗತಿಯನ್ನು ಜಗತ್ತಿಗೆ ಮರೆಮಾಚುವ ಕುತಂತ್ರವಿದು. ಈ ಕಪಟವನ್ನು ಜಗತ್ತಿನ ಎಲ್ಲ ಪತ್ರಿಕೆಗಳೂ ಚೆನ್ನಾಗಿ ಅರಿತಿವೆ.

ನಮ್ಮ ರಾಷ್ಟ್ರಕ್ಕೆ ಸಂಬಂಧಿಸಿದ ವಿವಿಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಷಯಗಳನ್ನು ಲೋಕಸಭೆಯಲ್ಲಿ ವಿಚಾರ ಮಾಡಲಾಗಿದೆ. ಆದರೆ ಅವು ಬಂಗ್ಲಾದೇಶದಂತಹ ಘಟನೆಗಳಷ್ಟು ವಿಷಾದವಾಗಿರಲಿಲ್ಲ. ಇಂತಹ ಕಠಿಣ ಪರಿಸ್ಥಿತಿ ಒದಗಿರುವುದರಿಂದ ಅದರ ಎಲ್ಲಾ ಅಂಶಗಳನ್ನು ಲೋಕಸಭೆಗೆ ಮತ್ತು ದೇಶದ ಜನತೆಗೆ ವಿವರಿಸುವುದು ಅತ್ಯಗತ್ಯ.

ಕಳೆದ ಇಪ್ಪತ್ತಮೂರು ವರ್ಷಗಳಿಗಿಂತ

(ಎಂಟನೇ ಪುಟ ನೋಡಿರಿ)

ವಾಸ್ತವಿಕತೆಯನ್ನು ಮಾನ್ಯಮಾಡಬೇಕು

ಭಾರತದ ವಿದೇಶ ಸಚಿವ ಸರ್ದಾರ ಸ್ವರ್ಣಸಿಂಗರು ವಿದೇಶ ಸಂಚಾರಕ್ಕೆ ತೊಡಗಿದ್ದಾರೆ. ಬಂಗ್ಲಾದೇಶದ ವಿದ್ಯಮಾನ, ಅಲ್ಲಿಂದ ಭಾರತಕ್ಕೆ ಬರುತ್ತಿರುವ ಲಕ್ಷಾಂತರ ನಿರಾಶ್ರಿತರ ದಯನೀಯ ಭಾವ, ಇದರಿಂದ ಭಾರತವು ಎದುರಿಸಬೇಕಾಗಿಬಂದ ವ್ಯಾವಹಾರಿಕ ಹಾಗೂ ಮಾನವಿಕ ಅಡ್ಡಿಗಳನ್ನು ಅಲ್ಲಿನ ದೊಡ್ಡ ತಲೆಗಳಿಗೆ ತೂಗಿಸುವುದು; ಬಂಗ್ಲಾ ದೇಶದ ಸುಸ್ಪಷ್ಟ ಮತ್ತು ಖಚಿತ ಚಿತ್ರವನ್ನು ಅವರಿಗೆ ತೋರಿಸುವುದು ಅವರ ಪ್ರಧಾನೋದ್ದೇಶ. ಬಂಗ್ಲಾ ನಿರಾಶ್ರಿತರ ಪುನರ್ನಿವೇಶನದ ಬಗ್ಗೆ ಸಹಾಯ ನೀಡುವಂತೆ ಅವರನ್ನು ಹುರಿದುಂಬಿಸುವುದೂ ಅವರ ಯಾತ್ರೆಯ ಇನ್ನೊಂದು ಉದ್ದೇಶ.

ನಿರಾಶ್ರಿತರ ಸಮಸ್ಯೆಯೆಷ್ಟು ಉಲ್ಬಣವಾಗಿದೆಯೆಂಬುದನ್ನು ರಾಜ್ಯಸಭೆಯಲ್ಲಿ ಸಿಂಡಿಕೇಟ್ ನಾಯಕ ಎಂ. ಎಸ್. ಗುರುಪಾದ ಸ್ವಾಮಿಯವರು ಅಂಕೆಸಂಖ್ಯೆಗಳ ಆಧಾರಕೊಟ್ಟು ವಿವರಿಸಿದ್ದಾರೆ. ೧೯೬೫ರಲ್ಲಿ ಅಯ್ಯೂಬಖಾನರು ಭಾರತದೊಂದಿಗೆ ಸಮರ ಹೂಡಿದಾಗ, ಯುದ್ಧಕ್ಕೆಂದು ನಾವು ೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆವು. ಬಂಗ್ಲಾದೇಶದಿಂದ ನಿರಾಶ್ರಿತರ ಪ್ರವಾಹ ಹರಿದು ಬಂದುದರಿಂದ ಅದಕ್ಕೆಂದು ಆರು ನೂರುಕೋಟಿ ರೂಪಾಯಿಗಳು ಈ ವರ್ಷ ನೀರುಪಾಲಾಗಲಿವೆ! ಈ ಆರುನೂರು ಕೋಟಿಯಿಂದ ನಾವು ಎಂಥೆಂಥದೋ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ದೇಶದ ಸಾಂಪತ್ತಿಕ ಉನ್ನತಿಯನ್ನು ಸಾಧಿಸುವುದು ಸಾಧ್ಯವಿತ್ತು. ಯಾಹ್ಯಾಖಾನರ ಬಂಗ್ಲಾದೇಶ ನೀತಿಯಿಂದ ಬಡವಾದವರು ನಾವು!

ಬಂಗ್ಲಾದೇಶದ ಪ್ರಶ್ನೆ ಪಾಕಿಸ್ತಾನದ 'ಆಂತರಿಕ ಪ್ರಶ್ನೆ'ಯಾಗಿದ್ದ ಕಾಲ ದಿನಗಳೆದಂತೆ ದೂರದೂರ ಹೋಗತೊಡಗಿದೆ. ನಿರಾಶ್ರಿತರ ಜಾಲ ಭಾರತದಲ್ಲಿ ಬೇರುಬಿಡುತ್ತಿರುವಂತೆ ಅದು ಭಾರತದ ಸಮಸ್ಯೆಯಾಗಿಯೇ ಪರಿಣಮಿಸಹತ್ತಿದೆ. ಯಾಹ್ಯಾಖಾನರು ತಾವಾಗಿ ಈ ಪ್ರಶ್ನೆಗೆ ರಾಜ್ಯಕೀಯ ಪರಿಹಾರವನ್ನರಸುವುದರಲ್ಲಿ ಸಂಪೂರ್ಣ ವಿಫಲರಾದರು; ಅವರ ಮಿತ್ರ ರಾಷ್ಟ್ರಗಳವರಿಷ್ಟರೂ ಅಂತಹ ಪರಿಹಾರ ಹುಡುಕಿಕೊಡುವುದರಲ್ಲಿ ಅಸಮರ್ಥರಾದರು ಅಥವಾ ಮೌನಿಗಳಾದರು. ಆದುದರಿಂದ ಈ ಪ್ರಶ್ನೆ ಸದ್ಯಕ್ಕೆ ಉತ್ತರಿಸಲ್ಪಡುವುದೆಂಬ ಭಾವನೆ ಯಾರಾದರೂ ಇಟ್ಟುಕೊಂಡಿದ್ದರೆ, ಅದು ತಪ್ಪಾಗುವುದು.

ಆದುದರಿಂದಲೇ ಗುರುಪಾದ ಸ್ವಾಮಿಯವರು ಹೇಳುತ್ತಾರೆ— "ಬಂಗ್ಲಾ ದೇಶದ ಪ್ರಜೆಗಳ ಆಶಯವನ್ನು ದಮನಿಸುವ ರಾಜ್ಯಕೀಯ ಪರಿಹಾರ ಅನಗತ್ಯ. ನಮ್ಮ ಬಂಗ್ಲಾ ನೀತಿಯೇನೆಂಬುದನ್ನು ಮೊದಲು ಸ್ಫುಟಗೊಳಿಸಬೇಕು. ಬಂಗ್ಲಾದೇಶವನ್ನು ಮಾನ್ಯಮಾಡಿ, ಸೈನಿಕ ಕಾರ್ಯಾಚರಣೆಯ ಮೂಲಕವಾದರೂ ನಿರಾಶ್ರಿತರ ಪ್ರವಾಹವನ್ನು ತಡೆಹಿಡಿಯಬೇಕು." ಇದಕ್ಕೆ ಅವರು ಸಮರ್ಥನೆಯನ್ನೂ ನೀಡಿದ್ದಾರೆ. "ಟಿಬೇಟಿನ ಪ್ರಶ್ನೆಯಲ್ಲಿ ನಮ್ಮ ನೆರವಿಗೆ ಯಾರು ಬಂದರು? ಪಾಕ್–ಭಾರತ ಯುದ್ಧದ ವೇಳೆ ಜಾಗತಿಕ ಅಭಿಪ್ರಾಯ ಹೇಗೆ ರೂಪುಗೊಂಡಿತು?"

ಗುರುಪಾದ ಸ್ವಾಮಿಯವರು ಇನ್ನೂ ಒಂದು ಹೆಜ್ಜೆ ಮುಂದುವರಿದಿದ್ದಾರೆ. ಬಂಗ್ಲಾದೇಶ 'ವಾಸ್ತವಿಕ'ವೆಂದೂ ಅದನ್ನು ಮನ್ನಿಸುವುದರಿಂದ 'ವಾಸ್ತವಿಕತೆ'ಯನ್ನು ಒಪ್ಪಿಕೊಂಡಂತಾಗುತ್ತವೆ ಮಾತ್ರವೆಂದೂ ಅವರು ತಿಳಿಯ ಹೇಳಿದ್ದಾರೆ. ಈ ಮಾತುಗಳು ತುಟಿಮೀರಿದವುಗಳಲ್ಲವೆಂದು ಗೊತ್ತಿದ್ದೂ ಅದನ್ನು ಬಹಿರಂಗವಾಗಿ ಒಪ್ಪಿಕೊಳ್ಳಲು ನಮ್ಮ ಸರಕಾರ ಸದ್ಯ ತಯಾರಿಲ್ಲ.

೦ ೦ ೦

ರಾಜ್ಯಕೀಯದ ಗೊತ್ತುಗುರಿ ಮೂರಾಬಟ್ಟೆಯಾಗಿ ಸರಿಯಹತ್ತಿದೆ. ಪಂಜಾಬದಲ್ಲಿ ವಿಧಾನ ಸಭೆ ಸೇರುವುದರ ಪೂರ್ವ ಸಂಧ್ಯೆಯಲ್ಲೇ ಮುಖ್ಯಮಂತ್ರಿ ಪ್ರಕಾಶ್‌ಸಿಂಗ್ ಬಾದಲ್ಲರು ರಾಜಿನಾಮೆ ನೀಡಿ, ವಿಧಾನ ಸಭೆಯನ್ನು ವಿಸರ್ಜಿಸುವ ಸಲಹೆಯನ್ನು ನೀಡಿದರು. ರಾಜ್ಯಪಾಲ ಡಿ. ಸಿ. ಪಾವಟೆಯವರು ಅದನ್ನು ಒಪ್ಪಿಕೊಂಡರು; ಮುಂದೆ, ರಾಷ್ಟ್ರಪತಿಗಳಿಗೆ ವರದಿ ಸಲ್ಲಿಸಿದರು. ಇದರಲ್ಲಿ ನಡೆಯಬಾರದ್ದು ಅಥವಾ ನಡೆಯಲಾರದ್ದು ಏನೂ ಇಲ್ಲ. ಆದರೆ, ಇಂಡಿಕೇಟೆಗರು ರಾಜ್ಯಪಾಲರು 'ತೀರ ಅವಸರವಾಗಿ ವರ್ತಿಸಿದ್ದಾರೆ; ತನ್ಮೂಲಕ ಸಂವಿಧಾನವನ್ನೂ ಉಲ್ಲಂಘಿಸಿದ್ದಾರೆ' ಎಂದು ದೂರಿದ್ದಾರೆ. ರಾಜ್ಯಪಾಲರ ಆತುರತೆಯನ್ನು ಪ್ರತಿಭಟಿಸಿ ಪ್ರಧಾನ ಮಂತ್ರಿಗೂ ರಾಷ್ಟ್ರಪತಿಗೂ ವ್ಯರ್ಥ ಮನವಿಯರ್ಪಿಸಿದ್ದಾರೆ.

ಇವರ ಆರೋಪವೊಂದೇ ಒಂದು. ಬಾದಲ್ಲರು ರಾಜಿನಾಮೆ ನೀಡಿದ ಬಳಿಕ, ಪರ್ಯಾಯ ಸರಕಾರ ರಚಿಸಲು ಇತರ ಪಕ್ಷಗಳು ಸಮರ್ಥರಿದ್ದಾವೆಯೋ ಎಂದು ಅವುಗಳನ್ನು ಕೇಳಬೇಕಿತ್ತು. ಅದನ್ನು ಮಾಡದೆ ರಾಜ್ಯಪಾಲರು ಪ್ರಜಾಸತ್ತೆಯನ್ನು ಸದೆಬಡಿದಿದ್ದಾರೆ; ರಾಜ್ಯಕೀಯ ಪಕ್ಷಪಾತಮಾಡಿದ್ದಾರೆ; ಏಕ ಪಕ್ಷೀಯ ನಿರ್ಧಾರಕ್ಕೆ ಬಂದು ಪ್ರಜಾಸತ್ತೆಯನ್ನು ಅಪಮಾನ ಮಾಡಿದ್ದಾರೆ; ಅದರ ಗೋಣು ಮುರಿದು ಸರ್ವಾಧಿಕಾರವನ್ನು ಪ್ರದರ್ಶಿಸಿದ್ದಾರೆ. ಕೇಂದ್ರದಲ್ಲಿ ಪ್ರಧಾನಮಂತ್ರಿಯೂ ರಾಜ್ಯಪಾಲರು ಕೈಕೊಂಡ ಕ್ರಮಗಳ ಪೂರ್ವಸೂಚನೆ ತಮಗೆ ಬರಲಿಲ್ಲವೆಂಬುದನ್ನು ಒಪ್ಪಿಕೊಂಡರು. ಸಾಮಾನ್ಯವಾಗಿ ಮಹತ್ವದ ರಾಜ್ಯಕೀಯ ವಿದ್ಯಮಾನಗಳನ್ನು ರಾಜ್ಯಪಾಲರು ರಾಷ್ಟ್ರಪತಿಗಳ ಗಮನಕ್ಕೆ ತರುವುದು ಸಂಪ್ರದಾಯವಾದರೂ ಅವರು ಕೇಂದ್ರ ಸರಕಾರದಿಂದ ನಿರ್ದೇಶನ ಪಡೆಯುವ ಅಗತ್ಯವಿಲ್ಲ; ಸಂವಿಧಾನದಿಂದ ನಿರ್ದೇಶನ ಪಡೆದರೆ ಸಾಕು ಎಂದವರು ಪಾವಟೆಯವರ ಮೇಲಿನ ಅಪರಾಧದ ಹೊರೆಯನ್ನು ಇಳಿಸದರು. ಆದರೆ, ಅವರಿಗೂ ಅವರ ಪಕ್ಷದವರಿಗೂ ಪಾವಟೆ ಕ್ರಮ ಅಪ್ರಿಯವಾಗಿತ್ತೆಂದು ಅವರ ಮಾತುಗಳಿಂದಲೇ ತಿಳಿಯಬಹುದು.

ರಾಜ್ಯಪಾಲರು ನಿರ್ಧಾರ ಕೈಕೊಳ್ಳಲು ಒಂದೆರಡು ದಿನ ತಳುವಿದ್ದರೆ, ಇಂಡಿಕೇಟು ತನ್ನ ಇಂಗಿತವನ್ನು ಸಾಧಿಸಲು ಸಮರ್ಥವಾಗುತಿತ್ತೋ ಏನೋ! ಪಕ್ಷಾಂತರಕ್ಕೆ ಉತ್ತೇಜನ ನೀಡಿ, ತಾನಾಗಿಯಲ್ಲವಾದರೂ ಗುರ್ನಾಮ್ ಸಿಂಗರನ್ನೂ ಕೂಡಿಕೊಂಡು ಅಧಿಕಾರಸೂತ್ರ ಹಿಡಿಯಲು ಸಾಧ್ಯವಾಗಬಹುದಿತ್ತೋ ಏನೋ! ಆದರೆ, ಹ್ಞಾಂ ಹ್ಞೂಂ ಎನ್ನುವುದರೊಳಗೆ ರಾಜ್ಯಪಾಲರು ವಿಧಾನಸಭೆಯನ್ನೂ ವಿಸರ್ಜಿಸಿ ಕೈಗೆ ಬರಲಿದ್ದ ಹಕ್ಕಿಯನ್ನು ಶ್ಯೂ ಎಂದು ಓಡಿಸಿಬಿಟ್ಟರು.

ನಿಜವಾಗಿ ರಾಜ್ಯಪಾಲರ ಕ್ರಮ ಅವಸರವಾದುದೆ? ಒಂದು ಸರಕಾರ ರಾಜಿನಾಮೆ ನೀಡಿದಾಗ, ಪರ್ಯಾಯ ಸರಕಾರ ರಚನೆಗೆ ಸಾಧ್ಯವಿದ್ದರೆ, ಅವಕಾಶ ಕಲ್ಪಿಸುವುದು ಅವರ ಧರ್ಮ. ಆದರೆ, ಪಂಜಾಬದಲ್ಲಿನ ಯಾವ ಪಕ್ಷ ಅಥವಾ ಪಕ್ಷಕೂಟ ಬಹುಮತಗಳಿಸಿಲ್ಲವೆಂದವರಿಗೆ ಮೊದಲೇ ಖಚಿತವಾಗಿರುವಾಗ, ಒಂದುವೇಳೆ ಅದು ಬಹುಮತಗಳಿಸಿದ್ದರೂ ಅದು ಬರಿಯ ತೋರಿಕೆಯದು ಮಾತ್ರವೆಂದು ತಿಳಿದಿರುವಾಗ ಅಂತಹವುಗಳಿಗೆ ಸರಕಾರ ರಚಿಸಲು ಅವಕಾಶ ನೀಡಿ, ಪ್ರಜಾಸತ್ತೆಯನ್ನು 'ವಿನೋದದ ವಿಷಯ'ವನ್ನಾಗಿ ಮಾಡಲು ಅವರು ನಿರ್ಧರಿಸಬೇಕಾಗಿಲ್ಲ. ಇಂತಹ ನಿರ್ಧಾರ ಕೈಗೊಳ್ಳುವ ಸಂಪೂರ್ಣ ಹೊಣೆ ಅವರಿಗಿದೆ; ಇದಕ್ಕೆ ಕೇಂದ್ರ ಸರಕಾರದ ಅನುಮತಿಯಾಗಲೀ ರಾಷ್ಟ್ರಪತಿಯವರ ಆದೇಶವಾಗಲೀ ಅವರಿಗೆ ಅನಗತ್ಯ.

ಪಂಜಾಬದ ವಿದ್ಯಮಾನಗಳು ಏನನ್ನು ಸೂಚಿಸ ಹತ್ತಿವೆ? ಪಕ್ಷಾಂತರಿಗಳ ಉಪಟಳದಿಂದ ರಾಜ್ಯವನ್ನು ಪಾರುಮಾಡಿದ ರಾಜ್ಯಪಾಲರು 'ಸರ್ವಾಧಿಕಾರಿಯಾಗಿ ವರ್ತಿಸಿದ್ದಾರೆ' ಎಂಬ ಆರೋಪ ಹೊರಬೇಕಾಯ್ತು. ವಿಧಾನ ಸಭೆಯನ್ನು ವಿಸರ್ಜಿಸದೆ ಇರುತಿದ್ದರೆ 'ಕೇಂದ್ರ ಸರಕಾರದ ಏಜಂಟರಾಗಿದ್ದಾರೆ' ಎಂಬ ಮಾತು ಹೊರಡುತಿತ್ತು. ಹೇಳುವವರು ಏನೇ ಹೇಳಲಿ, ಪಂಜಾಬಿನ ರಾಜ್ಯಪಾಲ ಪಾವಟೆಯವರು ದಿಟ್ಟ ಸಮಯೋಚಿತ ಮಾರ್ಗದರ್ಶನಮಾಡಿದ್ದಾರೆ. ಪಕ್ಷಾಂತರ ರೋಗವು ಹರಡದಂತೆ ಅದಕ್ಕೆ ಉತ್ತೇಜನ ದೊರೆಯದಂತೆ ಬಲವಾದ ಇಂಜೆಕ್ಷನ್ನು ನೀಡಿ, ರಾಜ್ಯಕೀಯ ಅಸ್ಥಿರತೆಯನ್ನು ಅಳಿಸಲು ತನ್ನ ಕೈಯ ಮದ್ದು ಬಳಸಿದ್ದಾರೆ.

೦ ೦ ೦

ಮೈಸೂರು ವಿಶ್ವವಿದ್ಯಾಲಯದ ಪಿಯುಸಿ ಪರೀಕ್ಷೆಗೆ ಸಂಬಂಧಪಟ್ಟ ಕೆಲವೊಂದು ಉತ್ತರಪತ್ರಿಕೆಗಳು ಅಂಚೆಯಲ್ಲಿ ಕಾಣೆಯಾಗಿವೆಯೆಂದು ವರದಿಯಾಗಿದೆ. ಅಂಚೆಯ ಅಧಿಕಾರಿಗಳು ಈ ಕಟ್ಟುಗಳನ್ನು ಶೋಧಿಸಲು ಆರಂಭಮಾಡಿದರೆಂದೂ ಇದುವರೆಗೂ ಅವು ದೊರೆತಿಲ್ಲವೆಂದೂ ತಿಳಿದುಬಂದಿದೆ. ಅವು ನಿಕಟ ಭವಿಷ್ಯದಲ್ಲಿ ದೊರೆಯುವ ಆಶೆಬಿಟ್ಟ ವಿಶ್ವವಿದ್ಯಾಲಯ ಆ ಪರೀಕ್ಷೆಯನ್ನು ಅವುಗಳ ಮಟ್ಟಿಗೆ ರದ್ದುಮಾಡಿ ಮರುಪರೀಕ್ಷೆಗೆ ಏರ್ಪಾಟು ಮಾಡಿದೆ. ಉತ್ತರ ಪುಸ್ತಕಗಳ ಕಟ್ಟುಗಳ ಭವಿಷ್ಯ ತಿಳಿಯುವ ವರೆಗೆ ವಿದ್ಯಾರ್ಥಿಗಳ ಭವಿಷ್ಯವನ್ನು ತಡೆಹಿಡಿಯುವುದು ಅವರಿಗೆ ಸಾಧುವೆಂದೆನಿಸಲಿಲ್ಲ.

ಯಾವ ತಪ್ಪೂ ಮಾಡದ ವಿದ್ಯಾರ್ಥಿಗಳಿಗೆ ಈಗ ಎರಡನೆಯ ಬಾರಿ ಪರೀಕ್ಷೆ ನಡೆಸುವುದು ಸಾಧುವೆ? ಇದರಿಂದ ಹಲವು ಪ್ರಶ್ನೆಗಳು ಉದ್ಭವಿಸುತ್ತವೆ. ಪರೀಕ್ಷೆ ಕಳೆಯಿತೆಂದು ಪುಸ್ತಕಗಳನ್ನು ಕಟ್ಟಿಟ್ಟು, ಏಶೋಆರಾಮವಾಗಿದ್ದವರು ಮರುಪರೀಕ್ಷೆಯಲ್ಲಿ ಹೇಗೆ ಉತ್ತರಿಸಿಯಾರು? ಅಂದಿನ ಪ್ರಶ್ನಪತ್ರಿಕೆ – ಇಂದಿನ ಪ್ರಶ್ನಪತ್ರಿಕೆಗಳಲ್ಲಿ ಸರಳತೆ—ಕಠಿನತೆಯಿರುವುದಿಲ್ಲವೆ? ಅಂದು ಹಾಜರಾದವನು ನಾನಾ ಕಾರಣಗಳಿಂದ ಇಂದು ಹಾಜರಾಗದಿರಬಾರದೆ?.... ಹೀಗೆಯೇ ಪ್ರಶ್ನಮಾಲೆ ಮುಂದುವರಿಯುತ್ತದೆ. ಆದರೂ ಪ್ರಶ್ನಪತ್ರಿಕೆ ಬಹಿರಂಗವಾದರೆ, ಎಲ್ಲ ಪರೀಕ್ಷೆಗಳನ್ನೂ ಮತ್ತೊಮ್ಮೆ ನಡೆಸುವ ಪರಿಪಾಠದ ತೊಂದರೆಯನ್ನು ಸಹಿಸಿಕೊಳ್ಳುವಂತೆ ವಿದ್ಯಾರ್ಥಿಗಳು ಈ ತೊಂದರೆಯನ್ನೂ ಸಹಿಸಿಕೊಳ್ಳಬೇಕು. ಇದು ಅನಿವಾರ್ಯ.

ಅದೇನಿದ್ದರೂ ಈ ಮರುಪರೀಕ್ಷೆಗೊಳಗಾದ ವಿದ್ಯಾರ್ಥಿ ಮತ್ತವರ ಪಾಲಕರ ಮಾನಸಿಕ ಪೀಡೆಗೆ ಪರಿಹಾರವಿಲ್ಲ. ಪರಿಣಾಮ ವಿಷಾದದಾಯಕವಾಗಿ ಪರಿಣಮಿಸಿದರೆ, ಈ ಕ್ಲೇಶ ಮತ್ತಷ್ಟು ಬಲವಾಗುತ್ತದೆ. ಇಂತಹ ರೋಗಜನಕ ಅಂ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 / 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಪಕ್ಷಾಂತರ ಪಿಸ್ತೂಲು

(ಭಾರತ ನಿರ್ಮಿತ)

ಲೋಕಸಭೆಗೆ ನಡೆದ ಮಧ್ಯಾವಧಿ ಚುನಾವಣೆಗಳ ನಂತರ ದೇಶದ ರಾಜ್ಯಕೀಯದ ದಾರಿ ಬದಲಾಗಿದೆಯೆಂಬುದು ಸರ್ವವೇದ್ಯ. ಶ್ರೀಮತಿ ಇಂದಿರಾ ಗಾಂಧಿಯವರಲ್ಲಿ ಅಥವಾ ಅವರ ನಾಯಕತ್ವದ ಪಕ್ಷದಲ್ಲಿ ಭಾರತೀಯರು ಅನುಕೂಲಾಭಿಪ್ರಾಯ ತೋರಿದ್ದಾರೆಂಬುದು ಮತ ಪೆಟ್ಟಿಗೆಗಳಿಂದ ಅಭಿವ್ಯಕ್ತ. ಮತಚೀಟಿ ಸಂಬಂಧದ ವಿವಾದಗಳನ್ನು ಬದಿಗಿಟ್ಟರೆ, ಇಂಡಿಕೇಟು ತುಂಬಿ ತುಳುಕಾಡುವ ಮತಗಳಿಸಿದೆಯೆಂಬುದೂ ಸುಸ್ಪಷ್ಟ.

ತಮ್ಮ ಚುನಾವಣಾ ಪ್ರಚಾರ ಭಾಷಣಗಳಲ್ಲಿ ಇಂಡಿಕೇಟ್ ನಾಯಕರು ತಮ್ಮದಲ್ಲದ ಅಥವಾ ತಮಗೆ ಸಮ್ಮತವಲ್ಲದ ರಾಜ್ಯಸರಕಾರಗಳನ್ನು ಉರುಳಿಸಲು ಪ್ರಯತ್ನಿಸುತ್ತಿರುವ ಸೂಚನೆಯನ್ನೂ ನೀಡಿದ್ದರು. "ಪ್ರಜಾಸತ್ತೆ ಮತ್ತು ಸಮಾಜವಾದಗಳ ಗುತ್ತಿಗೆ ಹಿಡಿದವರು ತಾವು ಮಾತ್ರ; ಉಳಿದವರದ್ದೆಲ್ಲ ನಕಲಿ' ಎಂಬಂಥ ಹೆಗ್ಗಳಿಕೆ ಹೇಳಿಕೊಂಡರು. ಜನ ಅದಕ್ಕೆ ಮರುಳಾದುದು ಅಸ್ವಾಭಾವಿಕವಲ್ಲ. ಶೀಲ–ಚಾರಿತ್ರ್ಯಗಳಿಲ್ಲದ ರಾಜ್ಯಕೀಯದ ಆಳವನ್ನು ನೋಡುವಷ್ಟು ವಿವೇಕ—ತಾಳ್ಮೆ ಶ್ರೀಸಾಮಾನ್ಯನಿಗಿಲ್ಲ.

ದಿಲ್ಲಿಯಲ್ಲಿ ಶ್ರೀಮತಿ ಗಾಂಧಿ ಪ್ರಧಾನಿಯಾಗಿ ಮತ್ತೊಂದು ಬಾರಿ ಪ್ರತಿಜ್ಞಾವಿಧಿ ಸ್ವೀಕರಿಸುವಾಗಲೇ ಬೆಂಗಳೂರಲ್ಲಿ ಶ್ರೀ ವೀರೇಂದ್ರ ಪಾಟೀಲರು ರಾಜಿನಾಮೆ ನೀಡಿದರು. ಇದು ಕಳೆದು ಮತ್ತೊಂದೆರಡು ವಾರ ಕಳೆಯುವಷ್ಟರಲ್ಲಿ, ಗುಜರಾತದ ಶ್ರೀ ಹಿತೇಂದ್ರ ದೇಸಾಯಿಯವರ ಗ್ರಹಚಾರ ವಕ್ರವಾಯ್ತು. ಒಮ್ಮೆಗೆ ಅವರು ಸುಧಾರಿಸಿಕೊಂಡರೂ ಮುಂದೆರಡು ವಾರಗಳಲ್ಲೇ ರಾಜಿನಾಮೆ ಕೊಡಲೇ ಬೇಕಾಯ್ತು. ಈ ನಡುವೆ ಉತ್ತರ ಪ್ರದೇಶದ ಶ್ರೀ ತ್ರಿಭುವನ ನಾರಾಯಣ ಸಿಂಗರೂ ರಾಜಿನಾಮೆ ನೀಡುವ ಪ್ರಸಂಗ ಒದಗಿತು. ಬಿಹಾರದ ಶ್ರೀ ಕರ್ಪೂರಿ ಠಾಕುರ್ ಅಧಿಕಾರ ತ್ಯಾಗ ಮಾಡುವುದು ಅನಿವಾರ್ಯವಾಯ್ತು. ಇದೀಗ, ಪಂಜಾಬದ ಶ್ರೀ ಪ್ರಕಾಶ ಸಿಂಗ ಬಾದಲ್ ಐದನೆಯವರಾಗಿ ಅವರೆಲ್ಲರನ್ನು ಹಿಂಬಾಲಿಸ ಬೇಕಾಯ್ತು.

ಕರ್ನಾಟಕ—ಗುಜರಾತಗಳು ಕಾಂಗ್ರೆಸ್ ವಿಭಜನಾನಂತರ ಶ್ರೀಮತಿ ಗಾಂಧಿಗೆ ಪಾರ್ಶ್ವಶೂಲೆಯಂತೆ ಉಳಿದುಕೊಂಡಿದ್ದ ಸರಕಾರಗಳು. ಉತ್ತರ ಪ್ರದೇಶದಲ್ಲಿ ಸಿಂಡಿಕೇಟ್ ನೇತೃತ್ವದ ಸರಕಾರವಿತ್ತು. ಬಿಹಾರದಲ್ಲಿ ಇಂಡಿಕೇಟ್ ಸಹಭಾಗವಿಲ್ಲದ ಆಡಳಿತವಿತ್ತು. ಪಂಜಾಬದಲ್ಲೂ ಹಾಗೇನೇ. ಪಂಜಾಬದಲ್ಲಿನ ವಿಧಾನ ಸಭೆಗೆ ಮಧ್ಯಾವಧಿ ಚುನಾವಣೆ ನಡೆದ ಬಳಿಕ ಅಕಾಲಿದಳದ ಶ್ರೀ ಗುರ್ನಾಮ್ ಸಿಂಗರು ಸರಕಾರ ರಚಿಸಿದರು. ಆದರೆ, ಮುಖ್ಯಮಂತ್ರಿಯು ಅಕಾಲಿದಳದ ಸಂಕುಚಿತ ನೀತಿಯನ್ನು ಅನುಸರಿಸಲು ನಿರಾಕರಿಸಿದಾಗ ಶ್ರೀ ಸಿಂಗರನ್ನು ಪಕ್ಷದಿಂದ ಕಿತ್ತು ಹಾಕಿದರು. ತನ್ನ ಬೆಂಬಲಿಗರೊಡನೆ ಇಂಡಿಕೇಟಿನ ಬೆಂಬಲ ಪಡೆಯಲು ಅವರು ದೆಹಲಿಗೆ ಹಾರಿ ಮರಳುವುದೊಡನೆ ಅವರ ಹಕ್ಕಿಗಳೂ ಅಕಾಲಿದಳದಲ್ಲಿ ಸಮಾವೇಶಗೊಂಡು, ಶ್ರೀ ಬಾದಲ್ ಜನಸಂಘದ ನೆರವಿನಲ್ಲಿ ಮುಖ್ಯಮಂತ್ರಿಯೆನಿಸಿ ಬಿಟ್ಟರು. ಇದನ್ನು ಶ್ರೀ ಗುರ್ನಾಮ್ ಸಿಂಗರೂ ಇಂಡಿಕೇಟಿಗರೂ ಸಹಿಸುವುದು ಹೇಗೆ ಸಾಧ್ಯ? ಬಹಳ ದಿನಗಳ ಹಿಂದೆ ಫಿರಂಗಿಗೆ ಬೆಂಕಿಯಿಟ್ಟಿದ್ದರೂ ಕೋಟೆಯೀಗ ತಾನೇ ಒಡೆಯಿತು.

ಕರ್ನಾಟಕ ಮತ್ತು ಗುಜರಾತಗಳಲ್ಲಿ ಇಂಡಿಕೇಟು ಸರಕಾರ ರಚಿಸಲು ಆಡಿದ ತದಿಗಿಣ ಸುಪರಿಚಿತ. ಆದರೆ, ಅವರ ಆಶೆ ಮಾತ್ರ ಈಡೇರಲಿಲ್ಲ. ಅಲ್ಲಿ ರಾಷ್ಟ್ರಪತಿ ಆಳಿಕೆಯನ್ನು ಹೇರಲಾಯ್ತು. ಉತ್ತರ ಪ್ರದೇಶದಲ್ಲಿ ಇಂಡಿಕೇಟೇ ಸರಕಾರ ರಚಿಸಲು ಸಮರ್ಥವಾಯ್ತು. ಬಿಹಾರದಲ್ಲಿ ಸನ್ನೆ ಮಾಡಿದೊಡನೆಯೇ ಇಂಡಿಕೇಟ್ ಸೇರಲಿರುವ ಶ್ರೀ ಭೋಲಾ ಪಾಸ್ವಾನ್ ಶಾಸ್ತ್ರಿಯವರು ಮುಖ್ಯಮಂತ್ರಿಯಾದರು. ಪಂಜಾಬಿನಲ್ಲೂ ಇಂಡಿಕೇಟಿಗರು ಪರ್ಯಾಯ ಸರಕಾರ ರಚಿಸಲು ಅಶಕ್ತರಾಗಿರುವುದರಿಂದ ರಾಜ್ಯಪಾಲರ ಸಲಹೆಯ ಮೇರೆಗೆ ರಾಷ್ಟ್ರಪತಿ ಆಳಿಕೆ ಹೇರಲಾಯ್ತು. ೧೯೬೭ರ ಫೆಬ್ರವರಿಯಿಂದ ಇದುವರೆಗೆ ಪಂಜಾಬದಲ್ಲಿ ನಾಲ್ಕು ಸರಕಾರಗಳು ಉರುಳಿದುವು. ಒಂಪಾರು ತಿಂಗಳ ಕಾಲ ರಾಷ್ಟ್ರಪತಿ ಆಳಿಕೆಯೂ ಇತ್ತು.

ಇಂಡಿಕೇಟಿನ ಕಣ್ಣು ಒರಿಸ್ಸಾದತ್ತ ಸರಿದಿದೆ. ಅಲ್ಲೀಗ 'ಸ್ವತಂತ್ರಪಕ್ಷ', ಉತ್ಕಲ ಕಾಂಗ್ರೆಸ್ ಮತ್ತು ಜಾರ್ಕಂಡ್ ಪಕ್ಷಗಳ ಸಂಯುಕ್ತ ಸರಕಾರವಿದೆ. ಇದನ್ನು ಪ್ರಜಾಸತ್ತಾತ್ಮಕ ಮತ್ತು ನ್ಯಾಯಬದ್ಧ ವಿಧಾನಗಳಿಂದ ಉರುಳಿಸಲಾಗುವುದೆಂದು ಅಲ್ಲಿನ ಇಂಡಿಕೇಟ್ ಅಧ್ವರ್ಯ ಶ್ರೀ ವಿನಾಯಕ ಆಚಾರ್ಯರು ಬಹಿರಂಗವಾಗಿಯೇ ಹೇಳತೊಡಗಿದ್ದಾರೆ. ಈ ವಿಧಾನಗಳು ಯಾವುವು ಎಂದು ಬೇರೆ ಹೇಳಬೇಕಾಗಿಲ್ಲ. ಶತ್ರುದಳವನ್ನು ಒಡೆಯುವುದೂ ಶತ್ರುವನ್ನು ಮಿತ್ರನನ್ನಾಗಿ ಮಾಡಿಕೊಳ್ಳುವುದೂ ರಾಜತಂತ್ರಕ್ಕೆ ಅಪಚಾರವಲ್ಲ. ಆದರೆ, ಅದನ್ನೇ ಹೋಲುವ ವಿಪಕ್ಷವನ್ನು ಒಡೆಯುವುದೂ ಪಕ್ಷಾಂತರಕ್ಕೆ ಪ್ರೋತ್ಸಾಹ ನೀಡುವುದೂ ಪ್ರಜಾ ಸತ್ತಾತ್ಮಕ ಮತ್ತು ನ್ಯಾಯಬದ್ಧ ವಿಧಾನಗಳೆ? ಶತ್ರು ಮತ್ತು ವಿಪಕ್ಷಗಳು ಪರ್ಯಾಯ ನಾಮಗಳಾಗುವುದು ಸಾಧ್ಯವಿದೆಯೆ?

ಇದುವರೆಗಿನ ವಿದ್ಯಮಾನಗಳನ್ನು ಅವಲೋಕಿಸುವಾಗ, ಇಂಡಿಕೇಟು ತನ್ನದಲ್ಲದ ಸರಕಾರಗಳು ದೇಶದ ಯಾವ ಮೂಲೆಯಲ್ಲೂ ಇರಬಾರದೆಂದು ದೃಢ ನಿಶ್ಚಯ ಮಾಡಿದೆಯೆನಿಸುತ್ತದೆ. ಆದುದರಿಂದಲೇ ಅದು ಬಂಗಾಳದಲ್ಲಿ ಶ್ರೀ ಅಜಯ ಮುಖರ್ಜಿಯವರ ಕೊರಳಿಗೆ ಮುಖ್ಯ ಮಂತ್ರಿ ಮಾಲೆ ಹಾಕಲು ಮುಂದುವರಿಯಿತು; ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರಕ್ಕೆ ಬೆಂಬಲ ನೀಡಿತು. ತಮಿಳು ನಾಡಿನಲ್ಲಿ ದ್ರಾಮುಕವನ್ನು ಮೆಚ್ಚಿಸಿಕೊಂಡಿತು. ತನ್ನೆಲ್ಲಾ ಫಿತೂರಿಗೆ ಅದು ಅನುಸರಿಸಿದ ಏಕ ಮೇವ ನೀತಿ ಪಕ್ಷಾಂತರ. ಪಕ್ಷಾಂತರಕ್ಕೆ ಪ್ರೋತ್ಸಾಹ ನೀಡಿದ್ದರಿಂದಲೇ ಶ್ರೀ ಕಮಲಾಪತಿ ತ್ರಿಪಾಠಿಯವರು ಯೌವನದಲ್ಲಿ ಕಂಡಿದ್ದ ಮುಖ್ಯಮಂತ್ರಿಯಾಗುವ ಕನಸನ್ನು ಈ ಇಳಿ ವಯಸ್ಸಿನಲ್ಲಾದರೂ ನನಸು ಮಾಡಿಕೊಳ್ಳುವುದು ಸಾಧ್ಯವಾಯ್ತು. ಈ ಬಗೆಯ ಪಕ್ಷಾಂತರ ಪೀಡೆಗಳಿಗೆ ಈ ಐದು ವರ್ಷಗಳಲ್ಲಿ ಕುತ್ತಾಗಿ ಸತ್ತು ಹೋದ ಮಂತ್ರಿಮಂಡಳಗಳ ಸಂಖ್ಯೆಯನ್ನು ಗಮನಕ್ಕೆ ತಂದುಕೊಂಡರೆ, ಇದು ದೇಶದ ರಾಜ್ಯಕೀಯಕ್ಕೇ ಅಂಟಿದ ಮಹಾಪೀಡೆಯೆನ್ನಲೇ ಬೇಕಾಗುತ್ತದೆ. ಇದರಿಂದ ಆಡಳಿತಕ್ಕೊಂದು ಸ್ಥಿರತೆಯಿಲ್ಲ; ಅಭಿವೃದ್ಧಿ ಕಾರ್ಯಗಳಿಗೆ ಗತಿಮತಿಯಿಲ್ಲ. ಅನ್ಯಾಯ—ಅತ್ಯಾಚಾರ—ಸ್ವಜನ ಪಕ್ಷಪಾತ ಮೊದಲಾದ ಪ್ರಜಾಸತ್ತಾ ವಿರೋಧಿ ಕೃತಿಗಳಿಗೆ ಇತಿಮಿತಿಯಿಲ್ಲ.

ಪಕ್ಷಾಂತರವು ಗಂಡಾಂತರಕಾರಿಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಅಂತರಂಗದಲ್ಲಿ ತಮ್ಮ ಸ್ವಾರ್ಥಸಿದ್ಧಿಗಾಗಿ ಅದನ್ನೇ ಪ್ರೋತ್ಸಾಹಿಸುತ್ತಾರೆ. ಇದು ಖಂಡನೀಯ; ದೇಶದ ಗೌರವವನ್ನು ಮೂರು ಕಾಸಿಗೆ ಮಾರುವ ಅತ್ಯಂತ ಅವಹೇಳನಾತ್ಮಕ ನೀತಿ. ವ್ಯಕ್ತಿಗೆ ತನ್ನ ಅಭಿಪ್ರಾಯಗಳನ್ನು ಬದಲಿಸುವ ಸ್ವಾತಂತ್ರ್ಯ ಪ್ರಜಾಸತ್ತೆಯಲ್ಲಿದೆ, ನಿಜ. ಆದರಿಂದ ಅವನು ಪಕ್ಷಾಂತರ ಮಾಡಿದಾಗ ಅದನ್ನು ತಡೆಯುವುದು ಸಾಧ್ಯವಿಲ್ಲ. ಆದರೆ, ತನ್ನ ಅಭಿಪ್ರಾಯವನ್ನು ಓತಿಯಂತೆ ದಿನ ದಿನವೂ ಬದಲಾಯಿಸುತ್ತ ಹೋಗುವುದರಿಂದ ದೇಶದ ಪ್ರಜೆಗಳಿಗೆ ತೊಂದರೆಯಾಗುತ್ತದೆಯೆಂಬ ಕಟು ಸತ್ಯವನ್ನೂ ಅಲ್ಲಗಳೆಯಲಾಗುವುದಿಲ್ಲ.

ಆದುದರಿಂದ ಪಕ್ಷಾಂತರವನ್ನು ಕಾನೂನು ರೀತ್ಯಾ ನಿಷೇಧಿಸುವುದು ಎಷ್ಟು ಅಗತ್ಯವೆಂಬುದು ಮನವರಿಕೆಯಾಗುತ್ತದೆ. ಕರ್ನಾಟಕ, ಉತ್ತರ ಪ್ರದೇಶ, ಗುಜರಾತ, ಬಿಹಾರ, ಪಂಜಾಬ ಮತ್ತು ಕೆಲವೇ ದಿನಗಳಲ್ಲಿ ಉತ್ಕಲ—ಹೀಗೆ ಮೂರು ತಿಂಗಳಲ್ಲಿ ಆರು ಸರಕಾರಗಳನ್ನು ಉರುಳಿಸಿದ ಇಂಡಿಕೇಟಿನ ಕಚ್ಚೆದೆಯಲ್ಲಿ ಕೆಚ್ಚು ತುಂಬಿದ 'ಪಕ್ಷಾಂತರ ಪಿಸ್ತೂಲ'ನ್ನು ಹಿಡಿಯುವುದು ನ್ಯಾಯ ಬಾಹಿರವೆಂಬುದನ್ನು ಎತ್ತಿತೋರಿಸುತ್ತದೆ. ಹೀಗಾಗುವವರೆಗೆ ಈ ಪಿಸ್ತೂಲು ತನ್ನ ಅನೀತಿಯ ಅಸ್ಥಿರಕಾರಕ ವಾತಾವರಣವನ್ನು ನಿರ್ಮಿಸುತ್ತ ಹೋಗುತ್ತದೆ; ದೇಶದ ರಾಜ್ಯಕೀಯ ಅಡ್ಡ ಕುರುದಾರಿಯಲ್ಲೇ ಮುಂದುವರಿದು ಅಲ್ಪಾವಧಿಯಲ್ಲಿ ಸಂಪೂರ್ಣ ಅರಾಜಕವಾಗುತ್ತದೆ. ಸ್ವಲಾಭಕ್ಕಾಗಿ ಇತರ ಪಕ್ಷಗಳಿಗೆ ಬೆಂಬಲ ತೋರಿಸುವುದನ್ನು ಶಾಸನ ಮೂಲಕ ನಿಷೇಧಿಸುವುದರ ಯುಕ್ತಾಯುಕ್ತತೆಯನ್ನೂ ಪರಿಶೀಲಿಸಬೇಕಾಗಿದೆ.

ಅದಕ್ಕೆ ತೀವ್ರ ಆಲೋಚನೆ ಬೇಕಾಗುತ್ತದೆ. ಆದರೆ, ಒಂದು ವೇಳೆ ಪಕ್ಷಾಂತರವನ್ನು ರಾಜ್ಯಕೀಯ ವ್ಯಕ್ತಿಗಳ ಹಕ್ಕೆಂದು ಒಪ್ಪಿಕೊಳ್ಳುವುದಾದರೆ, ಅವರು ಪಕ್ಷಾಂತರಗೊಂಡೊಡನೆ ಆ ಪಕ್ಷದ ಬಲದಿಂದ ಹೊಂದಿದ ಎಲ್ಲ ಸ್ಥಾನ-ಮಾನಗಳನ್ನೂ ಬಿಟ್ಟುಕೊಡಬೇಕೆಂದು ಶಾಸನವೇಕೆ ಮಾಡಬಾರದು? ಶಾಸಕರು ಪಕ್ಷಾಂತರಗೊಂಡಾಗ ಇಂದೇನು ಮಾಡುತ್ತಾರೆ? ಪಕ್ಷದಲ್ಲಿ ತಾನು ಹೊಂದಿದ್ದ ಸ್ಥಾನಗಳಿಗೆ ರಾಜಿನಾಮೆ ಕೊಡುತ್ತಾರೆ; ಆದರೆ, ಶಾಸಕತನವನ್ನು ಮಾತ್ರ ಇಟ್ಟುಕೊಳ್ಳುತ್ತಾರೆ; ಅವರಿಗೆ ಬೇಕಾದುದಾದರೂ ಇದೆ.

ಕೇಂದ್ರದ ಇಂಡಿಕೇಟ್ ಸರಕಾರ ಈ ದಿಸೆಯಲ್ಲಿ ಬಹಳ ಮುಂದಗತಿಯಲ್ಲಿದೆ. ಅದು ಆಲೋಚನೆಯಲ್ಲೇ ಮುಳುಗಿದೆ. ಎಲ್ಲ ರಾಜ್ಯಗಳಲ್ಲೂ ತನ್ನ ಬೇರು ಬಲವಾಗಿ ಹರಡಿದ ಬಳಿಕ ಒಮ್ಮಿಂದೊಮ್ಮೆಲೇ ಪಕ್ಷಾಂತರಕ್ಕೆ ನಿಷೇಧ ಒಡ್ಡಬಹುದು. ಬಹುಮತದಿಂದ ದೇಶದ ರಾಜ್ಯಕೀಯದಲ್ಲಿ ಶೀಲ-ಚಾರಿತ್ರ್ಯಗಳನ್ನು ತುಂಬುವ ಕಲೆಗಾರಿಕೆ ಕರಗತವಾಗಿರುವುದರಿಂದಲೇ ಶ್ರೀಸಾಮಾನ್ಯ ಅಂಜಬೇಕಾಗಿದೆ.

●●

ಚೆ ಇಲಾಖೆಯೇನು ತಾನೇ ಮಾಡಬಹುದು? ರಿಜಿಸ್ಟ್ರಿಯಾದ ಪಾರ್ಸೆಲುಗಳನ್ನು ಬಟವಾಡೆ ಮಾಡುವ ಹೊಣೆಗಾರಿಕೆಯದರದ್ದು ನಿಜ. ಆದರೆ, ಒಂದುವೇಳೆ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಂಡರೆ ಪರಮಾವಧಿ ರೂ. ೫೦ ಅಪರಾಧ ದಂಡ ತೆರಲು ಅದು ಬದ್ಧ.

ಸುಮಾರು ಐನೂರು ವಿದ್ಯಾರ್ಥಿಗಳ ಮತ್ತವರ ಒಂದು ಸಾವಿರ ಪಾಲಕರ ಮನೋವ್ಯಥೆಗೆ ಅಂಚೆ ವಿಭಾಗ ರೂ. ನೂರು ಪರಿಹಾರ ನೀಡುತ್ತದೆ. ಚಾಲಕನ ತಪ್ಪಿನಿಂದ ಅಪಘಾತಕ್ಕೀಡಾಗಿ ಮೃತನಾದವನ ಕುಟುಂಬಕ್ಕೆ ರೂ. ಸಾವಿರ ಪರಿಹಾರ. ಕಳೆದುಕೊಂಡ ಕಾಲಿಗೆ ರೂ. ಐವತ್ತರ ಪರಿಹಾರ. ನಾವು ಆರ್ಥಿಕತೆಯ ದಾಸ್ಯದಲ್ಲಿ ತೃಪ್ತರೆಂದು ಇವೆಲ್ಲ ಸಾರಿ ಹೇಳುತ್ತಿಲ್ಲವೆ?

●●

ಕುಂದಾಪುರ ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O.S 66/69

ಸಾಂತಪ್ಪ ಪೈ— ವಾದಿ

ಪಾವ್ಲು ಸುವಾರ(ಪೌತಿ)ಸಹಾ—ಪ್ರತಿವಾದಿರು

ವಾದಿರ ಕಡೆಯಿಂದ ಈ ಮೂಲ್ಕ ಜಾಹೀರ ಮಾಡಿಕೊಳ್ಳುವದೇನೆಂದ್ರೆ—

1 (b) ಫೀಟರ್ ಸುವಾರಿ, 1 (f) ಲಿಗೋರಿ ಸುವಾರಿ— ಪಾವ್ಲು ಸುವಾರಿಯ ಮಕ್ಕಳು.

ಉಡ್ಪಿ ತಾಲ್ಕು ಕಚ್ಚೂರು ಗ್ರಾಮದ ಪಾಲಿಕೋಡಿಯಲ್ಲಿರುವವರು.

ವಾದಿಯು ಇಂಜಕ್ಷನ್ ನಷ್ಟ ವಗೈರೆ ನಿವೃತ್ತಿ ಕೇಳಿ ಮಾಡಿದ ಮೇಲಿನ ದಾವೆಯು ತಾ. 30–7–71ಕ್ಕೆ ಅಖೈರ ತನ್ಕಿಗೆ ಯಿಡೋಣಾಗಿಯದೆ. ಆ ಕುರಿತು ನಿಮ್ಮ ಉದಾಹರಣೆಯುದ್ರೆ ಸದ್ರಿ ದಿನ್ಸ ಮೇಲ್ಕಂಡ ಕೋರ್ಟು ಮುಂದೆ ಪೂರ್ವಾಹ್ನ 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಯೇಕ ಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿ ಕಡೆಯಿಂದ ಈ ಮೂಲ್ಕ ತಿಳಿಯಪಡ್ಸಿದೆ.

M. M. Hebbar
Advocate for Plff.

Kundapur. Date 15-6-71

ದಯಮಾಡಿ

ನಿಮ್ಮ ಬಾಕಿ ಚಂದಾ

ಹಣವನ್ನು ಕಳುಹಿಸಿರಿ

ಬಂಗ್ಲಾದೇಶದ ಸ್ಥಿತಿಯ ಬಗ್ಗೆ ಪ್ರಧಾನಮಂತ್ರಿಗಳ ಹೇಳಿಕೆ

(ಐದನೇ ಪುಟದಿಂದ)

ಹೆಚ್ಚಿನ ಕಾಲದಿಂದಲೂ ಪಾಕ್‌ನ ಆಂತರಿಕ ವ್ಯವಹಾರಗಳಲ್ಲಿ ತಲೆಹಾಕಲು ಪ್ರಯತ್ನಿಸಿಲ್ಲ. ಆದರೂ ಪಾಕ್ ಹಾಗಿಲ್ಲ. ಈಗಲೂ ಸಹಾ ನಾವು ಅಲ್ಲಿನ ಆಂತರಿಕ ವ್ಯವಹಾರಗಳಲ್ಲಿ ಆಸಕ್ತಿಯನ್ನು ಹೊಂದಿಲ್ಲ. ಆದರೆ ನೈಜ ಸಂಗತಿ ಏನು? ಪಾಕ್‌ನ ಆಂತರಿಕ ಸಮಸ್ಯೆ ಯಾವುದಿದೆಯೋ ಅದು ಭಾರತದ ಆಂತರಿಕ ಸಮಸ್ಯೆಗೆ ಕಾರಣವಾಗಿದೆ. ಆದ್ದರಿಂದ ತನ್ನ ಗಡಿಯ ಹೆಸರಿನಲ್ಲಿ ಭಾರತದ ಲಕ್ಷಾಂತರ ಮಂದಿಯ ಶಾಂತಿ ಮತ್ತು ಹಿತವನ್ನು ಕೆಡಿಸುತ್ತಿರುವ ಪಾಕ್ ಕೃತ್ಯಗಳನ್ನೂ ಖಂಡಿಸಲು ಭಾರತಕ್ಕೆ ಹಕ್ಕಿದೆ. ಭಾರತಕ್ಕೆ ಸಮಸ್ಯೆಯನ್ನು ನೀಡಿ ತನ್ನ ರಾಜಕೀಯ ಮತ್ತಿತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಬಿಡಲಾಗದು.

ಬಂದೂಕಿನ ತುಟಿಯಿಂದ ಲಕ್ಷಾಂತರ ಜನತೆಯನ್ನು ತನ್ನ ದೇಶದಿಂದ ಹೊರದೂಡಲು ಪಾಕ್‌ಗೆ ಹಕ್ಕಿದೆಯೇ? ನಮಗೆ ಇದು ಅಸಹನೀಯ ಕೃತ್ಯ. ದುರದೃಷ್ಟ ನಿರಾಶ್ರಿತರಿಗೆ ಸೌಲಭ್ಯಗಳನ್ನು ನೀಡುತ್ತಿರುವ ಭಾರತದ ಗಡಿಗಳಿಗೆ ಮತ್ತಷ್ಟು ಜನರನ್ನು ದೂಡುವುದು ಪಾಕ್‌ಗೆ ತರವಲ್ಲ.

ಸ್ಥೈರಣೆಯ ವಿಷಯದಲ್ಲಿ ಭಾರತಕ್ಕೆ ಹೆಸರಿದೆ. ಅಸಹನೀಯ ಕೃತ್ಯಗಳ ಬಗ್ಗೆ ನಾವು ಪಶ್ಚಾತ್ತಾಪ ಪಟ್ಟಿದ್ದೇವೆ. ನಮ್ಮ ದೇಶ, ನಮ್ಮ ಜನತೆ, ಶಾಂತಿಯ ಪಾಲನೆಗಾಗಿ ಪಣ ತೊಟ್ಟಿದ್ದಾರೆ. ಯುದ್ಧವೆಂದೂ ಅವರಿಗೆ ಬೇಡವಾಗಿದೆ. ಆದರೆ ಅದಕ್ಕಿಂತ ಹೆಚ್ಚಿನ ಭಾರವನ್ನು ಹೊರಬೇಕಾಗಬಹುದೆಂಬುದನ್ನು ನಮ್ಮ ಜನತೆಗೆ ತಿಳಿಯಬಯಸುತ್ತೇವೆ.

ನಿರಾಶ್ರಿತರ ಸಮಸ್ಯೆ ಕೇವಲ ಅಸ್ಸಾಂ, ಮೇಘಾಲಯ, ತ್ರಿಪುರ ಮತ್ತು ಪಶ್ಚಿಮ ಬಂಗಾಳಗಳ ಸಮಸ್ಯೆಯಲ್ಲ ಇದು ರಾಷ್ಟ್ರೀಯ ಸಮಸ್ಯೆ. ಇದೊಂದು ಇನ್ನೂ ಹೇಳಬೇಕೆಂದರೆ ಅಂತರಾಷ್ಟ್ರೀಯ ಸಮಸ್ಯೆಯೂ ಗಿದೆ.

ನಮ್ಮ ಈ ಸಮಸ್ಯೆಯ ಬಗ್ಗೆ ಇಡೀ ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿರುವ ನಮ್ಮ ಪ್ರತಿನಿಧಿಗಳು ಮತ್ತು ಭಾರತದಲ್ಲಿರುವ ವಿವಿಧ ರಾಷ್ಟ್ರಗಳ ರಾಯಭಾರಿಗಳ ಮೂಲಕ ತಿಳಿಸಬೇಕಾಗಿದೆ. ನಾವು ವಿಶ್ವಸಂಸ್ಥೆಗೂ ಮನವಿಯನ್ನು ಸಲ್ಲಿಸಿದ್ದೇವೆ. ಈ ಸಮಸ್ಯೆಯ ನೈಜಚಿತ್ರ ಹಲವು ರಾಷ್ಟ್ರಗಳಿಗೆ ಈಗಾಗಲೇ ಮನದಟ್ಟಾಗಿದೆ. ಆದರೂ ಇಂತಹ ಘೋರ ಕೃತ್ಯದ ಬಗ್ಗೆ ಬಹಳ ಕಾಲ ಜಗತ್ತಿನ ದೇಶಗಳು ತಮ್ಮ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸುವುದಕ್ಕಾಗಿ ನಾನು ನಿಮ್ಮಂತೆಯೇ ಅತೃಪ್ತಳಾಗಿದ್ದೇನೆ

ಭಾರತ ಮಾತ್ರವಲ್ಲ ಎಲ್ಲ ದೇಶಗಳೂ ತಮ್ಮ ಹಿತಾಸಕ್ತಿಗಳನ್ನು ಗಮನಿಸಬೇಕು. ಆದರೆ ಉದ್ದೇಶಪೂರ್ವಕವಾಗಿ ಶಾಂತಿಯನ್ನು ಕೆಡಿಸಿ ಮಾನವೀಯವಲ್ಲದ ಕೃತ್ಯಗಳಲ್ಲಿ ತೊಡಗಿದ ಬಗ್ಗೆ ಪಾಕ್ ಮಿಲಿಟರಿ ಅಧಿಕಾರಕ್ಕೆ ನನ್ನ ವಿರೋಧವಿದೆ. ಪಾಕ್ ಮಿಲಿಟರಿ ಅಧಿಕಾರಿಗಳು ಭಾರತ ಪ್ರತಿನಿಧಿಸುತ್ತಿರುವ ವಿಶ್ವದ ಬಹುಸಂಖ್ಯಾ ಅಧಿಕಾರಿಗಳ ಜನರಿಗೆ ಗಂಡಾಂತರವನ್ನು ಒಡ್ಡುತ್ತಿದ್ದಾರೆ.

ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್ ಉಥಾಂಟರ ಮನವಿಯನ್ನು ನಾವು ಸ್ವಾಗತಿಸಿದ್ದೇವೆ. ವಿವಿಧ ದೇಶಗಳು ಆ ಕರೆಗೆ ನೀಡಿರುವ ಪ್ರತಿಕ್ರಿಯೆಯು ನಮಗೆ ತುಂಬ ಸಂತೋಷವಾಗಿದೆ. ಆದರೆ ಕಾಲದ ಅಂತರ ಮುಖ್ಯವಾದ್ದು. ಲಕ್ಷಾಂತರ ಮಂದಿ ನಿರಾಶ್ರಿತರಿಗೆ ಪರಿಹಾರವನ್ನು ಒದಗಿಸುವುದು ಸಮಸ್ಯೆಯ ಕೇವಲ ಒಂದುಭಾಗ. ಪರಿಹಾರ ಕಾರ್ಯಶಾಶ್ವತವಾದುದಲ್ಲ. ಅದನ್ನು ನಾವು ಅಪೇಕ್ಷಿಸುವುದೂ ಇಲ್ಲ. ನಿರಾಶ್ರಿತರು ಮುಂದೆಯೂ ಬರುವುದನ್ನು ತಡೆಯುವಂತಹ ವಾತಾವರಣವನ್ನು ಕಲ್ಪಿಸಬೇಕು. ಅವರು ತಮ್ಮ ಸ್ವದೇಶಕ್ಕೆ ವಾಪಸ್ಸಾಗುವಂತೆ ಮಾಡಬೇಕು. ಅವರಿಗಾಗಿ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು. ಈ ರೀತಿ ಮಾಡದಿದ್ದಲ್ಲಿ ಈ ಉಪಖಂಡದಲ್ಲಿ ಶಾಂತಿ, ಅಥವಾ ಸ್ಥಿರತೆ ನೆಲಸುವುದಿಲ್ಲ. ಈ ಬಗ್ಗೆ ಗಮನ ನೀಡಲು ವಿದೇಶಗಳಿಗೆ ನಾವು ಮನವಿ ಸಲ್ಲಿಸಿದ್ದೇವೆ ಜಗತ್ತಿನ ರಾಷ್ಟ್ರಗಳು ಈ ಬಗ್ಗೆ ಗಮನ ಹರಿಸದಿದ್ದಲ್ಲಿ ನಮ್ಮ ಸಂರಕ್ಷಣೆ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅಗತ್ಯವಾದ ಎಲ್ಲ ಕ್ರಮಗಳನ್ನು ನಾವೇ ಕೈಗೊಳ್ಳಬೇಕಾಗುವುದು

ಬಂಗ್ಲಾದೇಶದ ಸಮಸ್ಯೆಯನ್ನು ಮಿಲಿಟರಿ ಪರಿಹಾರದಿಂದ ಬಗೆಹರಿಸಲು ಸಾಧ್ಯವಿಲ್ಲ. ರಾಜಕೀಯ ಮಾರ್ಗವನ್ನು ಹುಡುಕಬೇಕು. ಅದಕ್ಕೆ ಈ ಬಗ್ಗೆ ಪ್ರಭಾವಿ ರಾಷ್ಟ್ರಗಳು ಮುಂದೆಬರಬೇಕು. ವಿಶ್ವದ ಅಭಿಪ್ರಾಯ ದೊಡ್ಡಶಕ್ತಿ. ಅತಿಶಕ್ತಿಯುತರ ಮೇಲೂ ಅದು ಪ್ರಭಾವ ಬೀರುವುದು. ದೊಡ್ಡ ರಾಷ್ಟ್ರಗಳಿಗೆ ಹೆಚ್ಚಿನ ಜವಾಬ್ದಾರಿ ಇದೆ. ಆ ರಾಷ್ಟ್ರಗಳು ತಮ್ಮ ಜವಾಬ್ದಾರಿಯನ್ನರಿತು ಕಾರ್ಯ ನಿರ್ವಹಿಸಿದರೆ ನಮ್ಮ ದೇಶದಲ್ಲಿ ಶಾಂತಿ ಚಿರವಿರುವುದು.

ಪ್ರಸ್ತುತ ಸರಿಸ್ಥಿತಿಯನ್ನು ದಕ್ಷ ರಾಜಕೀಯ ಮಾರ್ಗಗಳಿಂದ ಪರಿಹರಿಸಲು ಸಾಧ್ಯವಿಲ್ಲ. ಅಲ್ಲಿ ಬರುವ ವಿಷಯಗಳು ಎಲ್ಲರಿಗೂ ಅನ್ವಯಿಸಿದ್ದಾಗಿವೆ. ಪಾರ್ಲಿಮೆಂಟ್ ಮತ್ತು ನಮ್ಮ ದೇಶದ ಜನತೆ ಇಂತಹ ತೊಂದರೆಗಳನ್ನು ಸಹಿಸಿಕೊಳ್ಳುವರೆಂದು ನಾನು ನಂಬಿದ್ದೇನೆ. ಇದಾದರೆ ನಿರಾಶ್ರಿತರಿಗೆ ಹಾಗೂ ಲಕ್ಷಾಂತರ ಭಾರತೀಯರಿಗೆ ತಾತ್ಕಾಲಿಕ ಪರಿಹಾರವನ್ನು ಒದಗಿಸಲು ಸಾಧ್ಯವಿದೆ.

ಈ ಎಲ್ಲವೂ ನಮ್ಮ ಮೇಲೆ ಹೆಚ್ಚಿನ ಭಾರವನ್ನು ಹೊರಿಸಿವೆ. ನಾವು ಅನೇಕ ತ್ಯಾಗಗಳನ್ನು ಮಾಡಬೇಕಾಗುವುದು. ನಮ್ಮ ಕಾರ್ಖಾನೆಗಳು ಮತ್ತು ಕೃಷಿರಂಗದಲ್ಲಿ ಉತ್ಪಾದನೆಯನ್ನೂ ಹೆಚ್ಚಿಸಬೇಕು. ರೈಲ್ವೆಗಳು ಮತ್ತು ಸಾಧನ ಸಂಪರ್ಕಗಳು ಅನಿರ್ಬಂಧಿತವಾಗಿ ಕಾರ್ಯನಿರ್ವಹಿಸಬೇಕು. ಪ್ರಾದೇಶಿಕ ಹಿತಾಸಕ್ತಿಗಳಿಗಾಗಿ ಹೋರಾಡುವ ಕಾಲ ಇದಲ್ಲ. ನಮ್ಮ ಆರ್ಥಿಕ ಸಾಮಾಜಿಕ ಮತ್ತು ರಾಜ್ಯಕೀಯ ಬೆಳವಣಿಗೆಗಾಗಿ ಎಲ್ಲವನ್ನೂ ಹತೋಟಿಯಲ್ಲಿಟ್ಟುಕೊಂಡಿರಬೇಕು. ರಾಷ್ಟ್ರೀಯ ಐಕ್ಯಮತ್ಯದಲ್ಲಿ ಮತ್ತೊಮ್ಮೆ ವಿಶ್ವಾಸವನ್ನು ತುಂಬಬೇಕು. ದೇಶದ ಪ್ರತಿ ನಾಗರೀಕನು, ಪ್ರತಿಮನುಷ್ಯ, ಪ್ರತಿಮಹಿಳೆಯೂ ಪ್ರತಿಮಗುವೂ ತ್ಯಾಗ ಮನೋಭಾವವನ್ನು ಹೊಂದಬೇಕು. ಇದು ನಮ್ಮ ರಾಷ್ಟ್ರಕ್ಕೆ ಸಾಧ್ಯ, ಎಂದು ನಾನು ಭಾವಿಸಿದ್ದೇನೆ.

●●

ಸ್ವಾತಂತ್ರ್ಯವನ್ನು ಸದಾಚಾರೀ ಮನುಷ್ಯನೇ ಮನಃಪೂರ್ವಕವಾಗಿ ಪ್ರೀತಿಸುತ್ತಾನೆ ಇತರರು ಸ್ವತಂತ್ರತೆಯನ್ನಲ್ಲ ಸ್ವಚ್ಛಂದತೆಯನ್ನು ಅಪೇಕ್ಷಿಸುತ್ತಾರೆ.

ಸೂರ್ಯಕಿರಣ ಮತ್ತು ಸತ್ಯ ಇವುಗಳನ್ನು ಹೊರಗಿನ ಯಾವುದೇ ಸ್ಪರ್ಶಗಳಿಂದ ಕೆಡಿಸುವದು ಅಸಂಭವವಿರುತ್ತದೆ.

(ಮಿಲ್ಟನ್)

ನವಯುಗದ ಸುವರ್ಣ ಮಹೋತ್ಸವ

ನಿವೇದನೆ

ಇದೇ 1971ನೆಯ ವರ್ಷಕ್ಕೆ, ನಾಡಿನ ಜನಪ್ರಿಯ ಸಾಪ್ತಾಹಿಕ 'ನವಯುಗ' ತನ್ನ ಸಾರ್ಥಕ ಜೀವನದ ಐವತ್ತು ವರ್ಷಗಳನ್ನು ಕಳೆದು ತನ್ನ ಚಿನ್ನದ ಹಬ್ಬದ ವರ್ಷಕ್ಕೆ ಕಾಲಿರಿಸಿದೆ. ಈ ಶುಭ ಸಂದರ್ಭದಲ್ಲಿ ನಾಡಿನ ಸಾರ್ವಜನಿಕ ಅಭಿಪ್ರಾಯದ ಈ ನಿರೂಪಣ ಮತ್ತು ರೂಪಣದಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಪತ್ರಿಕೋದ್ಯಮಿಗಳು, ಲೇಖಕರು ಮತ್ತು ಸರ್ಕಾರದ ಮುಂದಾಳುಗಳನ್ನು ಒತ್ತಟ್ಟಿಗೆ ಸೇರಿಸಿ ಭಾರತೀಯ ಪ್ರಜಾಪ್ರಭುತ್ವದ ಯಶಸ್ಸಿಗಾಗಿ ನಾವು ಇನ್ನೂ ಮಾಡಬೇಕಾದ ಕೆಲಸ, ಹಿಡಿಯಬೇಕಾದ ದಾರಿಯ ಕುರಿತು ಚರ್ಚೆ ನಡೆಸಲು ಅನುಕೂಲ ಕಲ್ಪಿಸುವ ಬಯಕೆ ನಮ್ಮದು "ನವಯುಗ"ದ ಚಿನ್ನದ ಹಬ್ಬ ನಮ್ಮ ರಾಜ್ಯದ ಸರ್ವತೋಮುಖ ಬೆಳವಣಿಗೆಯ ಸೂತ್ರಗಳನ್ನು ಕಂಡುಕೊಳ್ಳಲು ನೆರವಾಗುವಂತೆ ಆ ಹಬ್ಬವನ್ನು ಒಂದು ಸಾಂಸ್ಕೃತಿಕ ಉತ್ಸವವಾಗಿ ಆಚರಿಸಬೇಕೆಂದು ನಾವು ನಿರ್ಧರಿಸಿರುತ್ತೇವೆ. ಈ ಬಗ್ಗೆ ಈಗಾಗಲೇ ಪ್ರಾತಿನಿಧಿಕ ಸಮಾರಂಭ ಸಮಿತಿಯನ್ನು ರಚಿಸಲಾಗಿದೆ.

ನಮ್ಮ ಕೆಲವು ಆಪ್ತ ಸ್ನೇಹಿತರು ಈ ಚಿನ್ನದ ಹಬ್ಬದ ವರ್ಷದಲ್ಲಿ 'ನವಯುಗ'ದ ನವೀಕರಣವೂ ನಡೆಯಬೇಕೆಂದು ಸೂಚಿಸಿದ್ದಾರೆ. ಆಧುನಿಕ ಯುಗಕ್ಕೆ ಹೊಂದಿಕೊಳ್ಳುವ ಲೇಖನ, ಶೀರ್ಷಿಕೆ, ಮತ್ತು ಚಿತ್ರಗಳ ಮೂಲಕ ರಾಜ್ಯದ ಜನತೆಯ ಓದಿಕೆಯ ಹಸಿವನ್ನು ನೀಗಿಸುವ ಆಕರ್ಷಕ ವಿಧಾನಗಳನ್ನು ಅನುಸರಿಸಬೇಕಾಗಿದೆ. ಜನರಲ್ಲಿ ವೈಜ್ಞಾನಿಕ ಮನೋವೃತ್ತಿ ಕುದುರುವಂತೆ ವಿಜ್ಞಾನ ಲೇಖನಗಳ ವ್ಯಾಪ್ತಿಯನ್ನು ಹಿಗ್ಗಿಸಬೇಕಾಗಿದೆ. ಸಾಮಾಜಿಕ ರಾಜಕೀಯ ಪ್ರಶ್ನೆಗಳಿಗೆ ಜನ ಸ್ವತಂತ್ರವಾಗಿಯೂ ವಿವೇಕಪೂರ್ಣವಾಗಿಯೂ ಉತ್ತರಿಸುವಂತೆ ಪ್ರೇರಿಸಬೇಕಾಗಿದೆ. ದೈನಂದಿನ ವರ್ತಮಾನಪತ್ರಗಳು ಸುದ್ದಿ ಸಂಗ್ರಹದ ಮೇಲೆ ಹೆಚ್ಚಾಗಿ ಕಣ್ಣಿಟ್ಟಿರುವುದರಿಂದ, ಅಭಿಪ್ರಾಯ ರೂಪಣದ ಕೆಲಸ ಸಾಪ್ತಾಹಿಕಗಳ ಮೂಲಕವೇ ನಡೆಯಬೇಕಾದ ಪ್ರಸಂಗದಲ್ಲಿ ನವಯುಗ ತನ್ನಪಾತ್ರವನ್ನು ಹೊಸದಾಗಿ ನಿರ್ಧರಿಸಿಕೊಳ್ಳಬೇಕಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಹೇಗೋ ಹಾಗೆ ಅನಂತರವೂ 'ನವಯುಗ'ವು ತನ್ನತನವನ್ನು ಕಾಯ್ದುಕೊಂಡು ವಿಶಿಷ್ಟ ರೀತಿಯ ಬರವಣಿಗೆಯಿಂದ ತನ್ನ ಸತ್ಯವನ್ನೂ, ಸತ್ವವನ್ನೂ ಕಾಪಾಡಿಕೊಂಡು ಬಂದಿರುವುದನ್ನು ತಾವು ಗಮನಿಸಿರಬಹುದು ಅನಾಕರ್ಷಕವಾದ ರಾಷ್ಟ್ರೀಯ ಪುನಾರಚನೆಯ ಕಾರ್ಯದಲ್ಲಿ 'ನವಯುಗ' ಆಡಂಬರವಿಲ್ಲದೆ, ಸದ್ದುಗದ್ದಲ್ಲವಿಲ್ಲದೆ ನಡೆಸಿದ ಕರ್ತವ್ಯವನ್ನು ತಾವು ಮೆಚ್ಚಿಕೊಂಡಿರುವಿರೆಂದು ನಮ್ಮ ಭಾವನೆ.

'ನವಯುಗ'ದ ನವೀಕರಣದ ಯೋಜನೆ ಸಾರ್ವಜನಿಕರ ಆರ್ಥಿಕ ಬೆಂಬಲವಿಲ್ಲದೆ ಅಸಾಧ್ಯ. ನವಯುಗದ ಶ್ರೇಯಃಕಾಂಕ್ಷಿಗಳಾದ ತಮ್ಮಂಥವರಿಂದ, ತಮ್ಮ ಸ್ನೇಹಿತ ವರ್ಗದಿಂದ ದೊರೆಯುವ ಸಹಾಯವನ್ನು ನಾವು ಸಂತೋಷದಿಂದ ಸ್ವೀಕರಿಸುತ್ತೇವೆ.

ಇತಿ ಭವದೀಯ

ನವಯುಗ ಆಫೀಸು,
ಉಡುಪಿ.

ಕೆ. ಹೊನ್ನಯ್ಯ ಶೆಟ್ಟಿ
ಸಂಚಾಲಕ-ಸಂಪಾದಕ

ರಾಜ್ಯದ ಹೈಸ್ಕೂಲುಗಳಿಗೆ

ನವಯುಗ

ಮೈಸೂರು ರಾಜ್ಯದ ಡಿ. ಪಿ. ಐ.ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17–4/65–66ರ ಪತ್ರದಂತೆ ತರಿಸಿಕೊಳ್ಳಲು ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

2 ವಿಶೇಷ ಸಂಚಿಕೆ ಸಹಿತ ವಾರ್ಷಿಕ ಚಂದಾ ರೂ. 10/– ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಬೇಕಾಗಿದ್ದಾರೆ

ಅನುಭವಸ್ಥ ಕಂಪೋಸಿಟರರು

ಸಂಬಳ ಯೋಗ್ಯತಾನುಸಾರ

ವಿಚಾರಿಸಿರಿ:—

ನವಯುಗ ಪ್ರೆಸ್, ಉಡುಪಿ.

ಮತೀಯ ಮಾರಿಬೇನೆಗೆ ಮಹಾಮದ್ದು

ಡ್ರ್‍ಡ್ರ... ಒಂದು ಬಂಡಿ ಹೋಗುತ್ತಿತ್ತು. ಟಣ್-ಟಣ್....ಎದುರು ದಿಕ್ಕಿನಿಂದ ಸೈಕಲ್ ಬರುತ್ತಿತ್ತು. ಡಕ್ಕ್.... ಒಂದಕ್ಕೊಂದು ಡಿಕ್ಕಿ, ವಾಹನಗಳು ಮಾತ್ರ ಡಿಕ್ಕಿಹೊಡೆದುಕೊಂಡುದಲ್ಲ, ಅದರ ಪರಿಣಾಮ ವಾಹನಗಳಲ್ಲಿದ್ದವರು ಹೊಡೆದುಕೊಂಡರು. ಅಷ್ಟಕ್ಕೆನೇ ಅದರ ಅಂತ್ಯವಾಗಲಿಲ್ಲ. ಅದೊಂದು ಮತೀಯ ಮಾರಾಮಾರಿಗೆ ಆಸ್ಪದವನ್ನುಂಟುಮಾಡಿತು. ಸಿಡಿಮದ್ದಿನ ಬಳಿ ಬೆಂಕಿಯ ಕಿಡಿ ಹೋದರೂ ಸರಿ; ಮುಗಿಯಿತು. ಸಿಡಿದೇ ಹೋಗುತ್ತದೆ. ಹಾಗೆನೇ ಬಂಡಿಯಲ್ಲಿದ್ದವ ಮತೀಯ ಸಿಡಿಮದ್ದಿಗೆ ಅವಘಡದ ಬೆಂಕಿಯ ಕಿಡಿಯನ್ನು ತಾಗಿಸಿದ. ಬಂಡಿಯಲ್ಲಿ 'ಪವಿತ್ರ ಖುರಾನಿ'ನ ಪ್ರತಿಯೊಂದಿತ್ತೆಂದೂ ಕಾಫಿರನು ಉದ್ದೇಶಪೂರ್ವಕವಾಗಿ ಡಿಕ್ಕಿ ಹೊಡೆದ ಕಾರಣ ಅದು ರಸ್ತೆಯ ಮೇಲೆ ಬಿತ್ತೆಂದೂ ಮಿಥ್ಯಪ್ರಚಾರ ನಡೆಸಿದ. ಕಾಮಾಂಧರಿಗೂ ಮತಾಂಧರಿಗೂ ಮದಾಂಧರಿಗೂ ಕಣ್ಣು ಕಾಣಿಸುವುದಿಲ್ಲವಂತೆ. ಹಾಗೆನೇ ಬಂಡಿಯಲ್ಲಿದ್ದದ್ದು ಕೇವಲ ಹಳೆಯ ಕಾಗದಗಳ ರಾಶಿಯೆಂಬುದು ಶ್ರೀಸಾಮಾನ್ಯನ ಕಣ್ಣಿಗೆ ಕಾಣುತ್ತಿದ್ದರೂ ಮತಾಂಧರಿಗೆ ರಸ್ತೆಯಲ್ಲೆಲ್ಲಾ ಖುರಾನುಗಳೇ ಕಂಡುಬಂದುವು. 'ಪವಿತ್ರ ಖುರಾನಿ'ಗೆ ಹಳೆಯ ಕಾಗದಗಳ ರಾಶಿಯೇ ತಕ್ಕ ಸ್ಥಳವೇನೆಂದು ಮತಾಂಧರು ಯೋಚಿಸಲಿಲ್ಲ. ಪಕ್ಡೋ, ಮಾರ್ ಕಾಫಿರ್ನ್ಲೋ... ಬೊಬ್ಬೆ ಕೇಳಿಬಂತು. ಕರ್ಣನಗರದ ಕರುಣಾಜನಕ ಕಥೆ, ಗುಜರಾಥಿನ ಗುಡುಗಿನ ಶಬ್ದ ಕೇಳಿಬಂತು. ಅದು ಕೆಲವರಿಗೆ ಮರೆತು ಹೋಗಿರಬಹುದು. ಅದನ್ನು ಇತ್ತೀಚೆಗೆ ಗುಜರಾಥಿನ ಸರಕಾರ ಜ್ಞಾಪಕಪಡಿಸಿಕೊಟ್ಟಿರುತ್ತದೆ. ನ್ಯಾಯಾಧಿಪತಿ ಜಗನ್ಮೋಹನ ರೆಡ್ಡಿಯವರು ಬಹಳ ಜಾಗರೂಕತೆಯಿಂದ ಯಾರ ಮನಸ್ಸಿಗೂ ಬಹಳ ನೋವಾಗದ ರೀತಿ, ನ್ಯಾಯಕ್ಕೂ ಬಹಳ ಅಪಚಾರವಾಗದ ರೀತಿಯಲ್ಲಿ ವರದಿಯನ್ನು ಅರ್ಪಿಸಿದ್ದು ಗುಜರಾಥ ಸರಕಾರ ಅದನ್ನು ಮೆಲ್ಲನೆ ಪ್ರಕಟಿಸಿದೆ.

ಆ ವರದಿ ಪ್ರಕಟವಾಗುತ್ತಿದ್ದಂತೆ ಅಂತಹ ನೈಜ ಘಟನೆಯ ವರದಿಗಳು ಬರಲಾರಂಭಿಸಿದುವು. ಪೂರ್ವ ಬಂಗಾಲದ ರಾಜಶಾಹಿಯಲ್ಲಿ ಯಾಹ್ಯಾಖಾನನ ತಾನಾಶಾಹಿ ನಡೆಯಿತು. ಅಲ್ಲಿದ್ದ ಆಸ್ಪತ್ರೆ, ಮನೆ, ಮಸೀದಿ, ಮದರಸಾ.... ಎಲ್ಲವೂ ಸ್ವಾಹಾವಾಯಿತು. ಮಸೀದಿಗಳಲ್ಲಿದ್ದ ಖುರಾನಿನ ಪ್ರತಿಗಳು ಸುಟ್ಟು ಬೂದಿಯಾದುವು. ಅಲ್ಲಿಯ ಮತಪ್ರೇಮಿಗಳ ಬಳಿ ಅದೆಂತಹ ಅತ್ಯಮೂಲ್ಯ ಖುರಾನಿನ ಪ್ರತಿಗಳಿದ್ದುವೆಲ್ಲಾ ಚರಂಡಿಯ ಪಾಲಾದುವು. ಭಷಾನಿ, ಅಮೀರ್ ಮುಖಂಡ—ಚೈನಿ ಚೇಲಾರ ಬಳಿ ಇದ್ದ ಖುರಾನಿನ ಪ್ರತಿಯೊಂದು ಬೇರಾರ ಬಳಿಯೂ ಪಾಕಿಸ್ತಾನದಲ್ಲೇ ಇಲ್ಲವೆನ್ನಲಾಗುತ್ತಿದೆ. ಅವರ ಬಳಿ ಮತೀಯ ಗ್ರಂಥಗಳು ಹೇರಾಳವಾಗಿದ್ದುವು. ಅವೆಲ್ಲವೂ ಮಣ್ಣುಪಾಲಾದುವು. ಪೂರ್ವ ಬಂಗಾಲದವರ ಆಶೆ-ಆಕಾಂಕ್ಷೆಗಳೆಲ್ಲವೂ ಮಣ್ಣುಪಾಲಾಗುತ್ತಿದೇನೋ ನಿಜ.

ಹಳೆಯ ಕಾಗದದ ಖುರಾನ್ ಹಗರಣ ನಡೆದಾಗ ಎಲ್ಲೆಲ್ಲೂ ಖಂಡನಾ ಸಭೆಗಳು ನಡೆದುವು. ಇಸ್ಲಾಮನ್ನೆದುರಿಸಿದವರನ್ನು ಕೊಲ್ಲಲಾಗುವುದು; ಖುರಾನಿಗೆ ಡಿಕ್ಕಿ ಹೊಡೆದವನನ್ನು ಅವರಂಗಜೇಬನ ಬಳಿ ತಾನೇ ಕಳಿಸಬೇಕು! ಹಗರಣ ಹುಟ್ಟಿದ್ದು ರಾಮಾಯಣವನ್ನು ತುಳಿಯುವುದಕ್ಕೂ ರಾಮಾಯಣವನ್ನು ಹೇಳುತ್ತಿದ್ದ ಸಂತರನ್ನು ಅವಮಾನಗೊಳಿಸುವದಕ್ಕೂ ಮಾತ್ರವಲ್ಲ, ಜಗತ್ತಿನಲ್ಲೇ ಪ್ರಸಿದ್ಧಿಹೊಂದಿರುವ ಜಗನ್ನಾಥನ ಮಂದಿರವನ್ನೂ ನಾಶಮಾಡಲೂ ಹಾಹಾಕಾರವೆದ್ದಿತು. ಆದರೆ ನಿಜವಾಗಿ ಖುರಾನಿನ ಹಾಗೂ ಇತರ ಮತೀಯ ಗ್ರಂಥಗಳು ಮಣ್ಣುಪಾಲಾದಾಗ ಛಕಾರ ಎಲ್ಲೂ ಸ್ಪಷ್ಟವಾಗಿ ಕೇಳಿಬರಲಿಲ್ಲ. ಕಣ್ಣೀರುಗರೆಯುತ್ತ, ಭಸಾನಿಯವರು ಅದೆಲ್ಲವನ್ನೂ ಸಂಗ್ರಹಿಸಬೇಕಾದರೆ ಮೂರು ವರ್ಷಗಳೂ ಸಾಲವೆಂದು ನಿಟ್ಟುಸಿರು ಬಿಟ್ಟರು. ಆ ನಿಟ್ಟುಸಿರು ಅದ್ಯಾವ ಮತಾಂಧನ ಕಿವಿಗೆ ಕೇಳಿಸುತ್ತದೆ! ಯಾಹ್ಯಾಖಾನನಿಗೆ ಅಯ್ಯಯ್ಯೊ ಅನ್ನುವದೇ? ಅದೂ ತಪ್ಪು! ಮತ್ತೆ? ಮೌನ! ಮೌನ!

ಹಿಂದೊಮ್ಮೆ, ಅದೂ ಬಹಳ ಸಮಯವೇನೂ ಆಗಿರುವದಿಲ್ಲ. ಛತ್ರಪತಿ ಶಿವಾಜಿ ಮಹಾರಾಜರು ಕೋಟೆಯನ್ನು ವಶಪಡಿಸಿಕೊಂಡಾಗ ಅವರಿಗೊಂದು ಖುರಾನಿನ ಪ್ರತಿ ದೊರಕಿತು. ಅವರದನ್ನು ಹಾಳುಗೆಡವಲಿಲ್ಲ. ಅವರು ಅವರಂಗಜೇಬನ ಅಂದರೆ ಇಂದಿನ ಯಾಹ್ಯಾಖಾನನ ಪರಂಪರೆಗೆ ಸೇರಿದವರಾಗಿರಲಿಲ್ಲ. ಹಿಂದೂದೇಶದಲ್ಲಿ ಹಿಂದೂ ಸಾಮ್ರಾಜ್ಯವನ್ನು ಅವರು ಪುನರ್‌ಸ್ಥಾಪಿಸಿದವರು. ಆದುದರಿಂದಲೇ ಕೈಗೆ ಸಿಕ್ಕಿದ ಖುರಾನಿನ ಪ್ರತಿಯನ್ನು ಹಾಳುಮಾಡದೆ ಗೌರವದಿಂದ ಅದರ ಸ್ವಂತದಾರನ ಬಳಿಗೆ ಕಳುಹಿಸಿಕೊಟ್ಟರು. ನೈಜ ಮತಾಭಿಮಾನಿ, ಮತಾನುಯಾಯಿಗೆ ತಾನೇ ನಿಜವಾಗಿ ಮತದ ಮಹತ್ವ ಗೊತ್ತಿರುವದು? ಮತಾಂಧ – ಮದಾಂಧರಿಗೆ ಗೊತ್ತಿರುವದಾದರೂ ಏನು? — ನಾಶಮಾಡುವದೊಂದೇ ಅವರಿಗೆ ಗೊತ್ತು.

ಮತೀಯ ಮಹತ್ವವೆಂದರೆ ಒಂದೇ ದಿಕ್ಕಿನಿಂದ ಬಂಡಿಗಳು ಹೋಗುವ ಮಾರ್ಗವಲ್ಲ. ಆದುದರಿಂದಲೇ, ಅದನ್ನರಿತುಕೊಂಡಿದ್ದ ಛತ್ರಪತಿ ಶಿವಾಜಿ ಮಹಾರಾಜರು ಗೋವಧೆಯನ್ನು ಸ್ವಲ್ಪ ಸಹಾ ಸಹಿಸುತ್ತಿರಲಿಲ್ಲ. ಅದ್ಯಾವ ದೇವಸ್ಥಾನವನ್ನೂ ನಾಶಮಾಡುವ ಹುಚ್ಚು ಧೈರ್ಯ ಆಗ ಯಾರಿಗೂ ಇರಲಿಲ್ಲ. ಇನ್ನು ರಾಮಾಯಣವನ್ನು ಮೆಟ್ಟುವ ಅಥವಾ ಸಂತರನ್ನು ಅಪಮಾನಗೊಳಿಸುವ ವಿಷಯ ಹಾಗಿರಲಿ. ಅದು ಹಿಂದೂರಾಷ್ಟ್ರ. ಪರಮ ಪವಿತ್ರ ಭಗವಾ ಧ್ವಜ ಬಾನಲ್ಲಿ ವೈಭವದಿಂದ ಹಾರಾಡುತ್ತಿರುವಾಗ ಮತೀಯ ಮಾರಾಮಾರಿಗೆ ಆಸ್ಪದ ಸಿಗಲಾರದು. ನವನಾಗರೀಕತೆಯ ಥಳಕು ಬೆಳಕಿನ ಮೋಹಕ್ಕೊಳಗಾಗಿರುವ ನಮಗೆ ಆ ಹಿತ್ತಲ ಗಿಡ ಮದ್ದಾಗಿ ಕಂಡುಬರುವದಿಲ್ಲ. ಅದನ್ನು ಮಾತ್ರೆಯ ರೂಪದಲ್ಲಿ ದೊಡ್ಡ ಅಂಗ್ಲ ಹೆಸರಿನ ಪಟ್ಟಿಯನ್ನು ತಾಗಿಸಿ, ದುಬಾರಿ ಬೆಲೆಗೆ ತೆಗೆದುಕೊಂಡರೆನೇ ನಮ್ಮ ಮನಸ್ಸಿಗೆ ತೃಪ್ತಿ. ಆ ಬೇನೆ ತಾತ್ಕಾಲಿಕವಾಗಿ ಗುಣವಾದಂತೆ ಕಂಡುಬಂದು ಬೇರೊಂದೆಡೆ ಬೇರೊಂದು ರೂಪವನ್ನು ತಾಳುತ್ತದೆ. ಹಾಗೆನೇ ಒಂದೆಡೆ ನಡೆದ ಮತೀಯ ಮಾರಾಮಾರಿಗೆ ಸೆಕ್ಯೂಲರಿಸಮಿನ ಹೆಸರಿನಲ್ಲಿ "ಹಿಂದೂ"ಗಳನ್ನು ಹೀಗಳೆದು, "ಮುಸಲ್ಮಾನ"ರನ್ನು ತೃಪ್ತಿಗೊಳಿಸಿ ತಾತ್ಕಾಲಿಕವಾಗಿ ಉಪಶಮನ ಕಾಣಲಾಗುತ್ತದೆ. ರಕ್ತದ ರುಚಿಕಂಡ ಹುಲಿ ಸುಮ್ಮಗಿರುವದುಂಟೇ? ಮತೀಯ ಹುಲಿಯೂ ಅಷ್ಟೇ. ಅದು ರುಚಿಕಂಡಿದೆ. ಅದನ್ನೇ ನ್ಯಾಯಾಧಿಪತಿಯವರೊಬ್ಬರು ಸೆಕ್ಯೂಲರಿಸಂ ಸರಕಾರಕ್ಕಾಗಿಯೇ ಕಂಡುಹಿಡಿದಿದ್ದಾರೆ. ಇಪ್ಪತ್ತಮೂರು ಮತೀಯ ಮಾರಾಮಾರಿಗಳ ಪಟ್ಟಿಯನ್ನು ಅವರ ಕೈಗೊಪ್ಪಿಸಿ ಅದಕ್ಕೆ ಯಾರು ಕಾರಣ ಅನ್ನುವದನ್ನು ಕಂಡುಹಿಡಿದು ತಿಳಿಸಬೇಕೆಂದು ಮುಸ್ಲಿಂ-ಕ್ರಿಸ್ತ ಸದಸ್ಯರಿದ್ದ ಸಮಿತಿಯನ್ನುಂಟುಮಾಡಿ ಅವರನ್ನು ಕಳುಹಿಸಲಾಯಿತು. ಕೊನೆಯಲ್ಲಿ, ಮತೀಯ ಮಾರಾಮಾರಿಗೆ, ಆ ಮಾರಿಬೇನೆಗೆ ಮತಾಂಧತೆಯೇ ಕಾರಣವೆನ್ನುವದನ್ನು ಆ ಸಮಿತಿ ಸ್ಪಷ್ಟಪಡಿಸಿರುತ್ತದೆ. ಆ ಮಾರಿಬೇನೆ ಉಲ್ಬಣಿಸುವಂತೆ ಮಾಡಿದವರ್‍ಯಾರು? ಹಿಂದೂ ಹಂತಕರು! ಹಿಂದೂತ್ವವನ್ನು ನಾಶಮಾಡುತ್ತೇನೆಂದು ಸೆರಗು ಸೆಳೆದು ಕಟ್ಟಿಕೊಂಡವರೇ, ಆ ಸೆರಗಿನ ಆಶ್ರಯವನ್ನು ಪಡೆದುಕೊಂಡವರೇ ಇದ್ದಾರೆ. ಈ ಬೇನೆಯನ್ನು ಹೋಗಲಾಡಿಸಬೇಕೆಂಬ ಮನಸ್ಸಿದ್ದಲ್ಲಿ ತಕ್ಕ ಔಷಧಿಯನ್ನು ನಾವು ತೆಗೆದುಕೊಳ್ಳಲೇಬೇಕು.

—ಶ್ರೀ ಎಂ. ಶಿವಶಂಕರ

● ●

ತುಕ್ಕು ಹಿಡಿದ ಕತ್ತಿ ನಮ್ಮದು

(ನಾಲ್ಕನೇ ಪುಟದಿಂದ)

'ಹೋಗಲಿ ಬಿಡಿ. ಯಾವ ಕಾಲಕ್ಕೇ ಏನಾಗಬೇಕೋ ಅದು ಆಗಿಯೇ ತೀರುತ್ತೆ. ನುಗ್ಗಿ ಬರುವ ಬೆಂಕಿಯ ನೆರೆಯನ್ನು ತಡೆಹಿಡಿಯುವುದು ಯಾರಿಂದ ಸಾಧ್ಯ?'

"ನಾವು ಭಾಗ್ಯದ ಮೇಲೆಯೇ ಭಾರ ಹಾಕಿ ಬಿಡುತ್ತೇವೆ; ಕೈಕಟ್ಟಿಕೊಳ್ಳುತ್ತೇವೆ"

'ಅದಿಲ್ಲಿ, ನೋಡಿ ಎಲ್ಲೋ ಒಬ್ಬಾಕೆ ಒಂಬತ್ತು ಮಕ್ಕಳನ್ನು ಹೆತ್ತಳಂತೆ....'

'ಹ್ನೂಂ....ಅದು ಆಸ್ಟ್ರೇಲಿಯಾದಲ್ಲಿ ಅದರೇನು? ಒಂದೂ ಬದುಕುವ ಆಸೆಯಿಲ್ಲವಂತೆ. ಕಳೆದ ವರ್ಷವೋ ಏನೋ ಒಬ್ಬಾಕೆ ಎಂಟು ಮಕ್ಕಳಿಗೆ ಜನ್ಮ ನೀಡಿದ್ದಳಲ್ಲಾ....'

"ಹ್ನೂಂ .ಅದಕ್ಕೂ ಕೆಲವು ವರ್ಷಗಳಿಗೆ ಮೊದಲು ನವಗ್ರಹಯೋಗವಾದದ್ದು..'

'ಅದೀಗ ಖರೆ....'

"ಏನು? ಗ್ರಹಗಳ ಯೋಗಗಳಲ್ಲಿ ನವಗ್ರಹ, ಅಷ್ಟಗ್ರಹ, ಸಪ್ತಗ್ರಹ ಯೋಗಗಳೂ ಅಪರೂಪ. ಹಾಗೇನೇ ಹೆರಿಗೆಯಲ್ಲೂ. ಅವರೂ ನೋಡು, ಗಾಂಧಾರಿ ನೂರೊಂದು ಮಕ್ಕಳಿಗೆ ಜನ್ಮ ಕೊಟ್ಟಳು; ಅವರೆಲ್ಲ ಬದುಕಿದರು...'

'ಅದೇ ನೋಡಿ, ಆಕೆಯ ದುರದೃಷ್ಟಕ್ಕೆ ನಾಂದಿ ಹಾಡಿದ್ದು. ಅಷ್ಟು ಜನ ಮಕ್ಕಳಿದ್ದು ಆಕೆಗೇನು ಸುಖಬಂತು?'

'ಸುಖದುಃಖವೆಲ್ಲ ಅವರವರು ಪಡೆದುಕೊಂಡು ಬಂದದ್ದು....'

"ಮತ್ತೂ ನೀವು ಅಲ್ಲಿಗೇ ಬಂದಿರಿ .."

"ಎಲ್ಲಿಗೆ?"

'ಅದೇ ಅಲ್ಲಿಗೆ....ಅಂದ್ರೆ ...ಇಲ್ಲಿಗೆ....'

'ಹ್ನೂಂ. ಮತ್ತಿನ್ನೆಲ್ಲಿಗೆ ಹೋಗೋದು?'

—ಗೋರಾ.

● ●

ಉಡುಪಿ ರೋಟರಿ ಕ್ಲಬ್‌ನಲ್ಲಿ ಸಾಯಿಬಾಬಾ ಕುರಿತು ಭಾಷಣ

ತಾ. ೧೫-೬-೭೮ರಂದು ಎಂ.ಜಿ.ಎಂ. ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ಎಚ್. ಸುಂದರರಾಯರು ಉಡುಪಿ ರೋಟರಿ ಕ್ಲಬ್ಬಿನ ಸಭೆಯಲ್ಲಿ ಅಧ್ಯಕ್ಷ ಶ್ರೀ ಪಿ ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಸತ್ಯಸಾಯಿಬಾಬಾರ ಕುರಿತು ಉಪನ್ಯಾಸವಿತ್ತರು.

ಶ್ರೀ ರಾಯರು ತಮ್ಮ ಭಾಷಣದಲ್ಲಿ ಬಾಬಾರವರು ಹಳ್ಳಿಗರಾಗಿದ್ದು ಯಾವ ಅಭ್ಯಾಸಮಾಡದೇ ಇದ್ದರೂ ಅವರ ಜ್ಞಾನ ಅಗಾಧವಾದುದೆಂದೂ ಮನುಷ್ಯನ ಮನಸ್ಸಿನ ಪರಿಳಿತಗಳನ್ನು ಅವರು ಕನ್ನಡಿಯಲ್ಲಿ ಕಂಡಂತೆ ಕಾಣಬಲ್ಲರೆಂದೂ ಹೇಳಿ ಬಾಬಾರವರ ಪವಾಡಗಳ ಕುರಿತು ಪ್ರಸ್ತಾಪಿಸಿದರು.

ಆರಂಭದಲ್ಲಿ ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ವಿದ್ಯಾಕ್ಷೇತ್ರದಲ್ಲಿ ಶ್ರೀ ಸುಂದರರಾಯರು ಸಲ್ಲಿಸಿದ ಅಮೋಘ ಸೇವೆಯನ್ನು ಸ್ಮರಿಸಿ ಅವರ ವ್ಯಕ್ತಿತ್ವ ಆದರ್ಶಗಳನ್ನು ಹಿಡಿದೆತ್ತಿ ಅವರ ಪರಿಚಯಮಾಡಿದರು. ಕೆ. ಎಂ. ಸಿ. ಯ ಡೀನ್ ಡಾ। ಕೃಷ್ಣರಾಯರು ವಂದಿಸಿದರು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

'ಸೋವಿಯೆತ್ ಲ್ಯಾಂಡ್' ಪುರಸ್ಕಾರಗಳ ಯೋಜನೆ

ಭಾರತ–ಸೋವಿಯೆತ್ ಸ್ನೇಹ ಮತ್ತು ಅಂತಾರಾಷ್ಟ್ರೀಯ ಶಾಂತಿ ಸಂಬಂಧವಾಗಿ ವಿಭಿನ್ನ ಕ್ಷೇತ್ರಗಳಲ್ಲಿ ನೀಡಲಾದ ಗಣನೀಯ ಕಾಣಿಕೆಗೆ "ಸೋವಿಯೆತ್ ಲ್ಯಾಂಡ್" ನೆಹರೂ ಪುರಸ್ಕಾರ ಸಮಿತಿಯು ಈ ವರ್ಷ 23 ಪುರಸ್ಕಾರಗಳನ್ನು ನೀಡುವುದು.

ಲೇಖಕರು, ಕಾದಂಬರಿಕಾರರು, ಕವಿಗಳು ರಚಿಸಿದ ಅತ್ಯುತ್ತಮ ಸಾಹಿತ್ಯ ಕೃತಿಗಳಿಗಾಗಿಯೂ, ಪತ್ರಿಕೋದ್ಯಮ ಕೃತಿಗಳು (ಪುಸ್ತಕಗಳು, ಲೇಖನ ಸಂಗ್ರಹಗಳು ಮತ್ತು ಛಾಯಾಚಿತ್ರ ಮಾಲಿಕೆಗಳು) ಮತ್ತು ರಷ್ಯನ್ ಹಾಗೂ ಸೋವಿಯೆತ್ ಕ್ಲಾಸಿಕ್‌ಗಳನ್ನು ಭಾರತೀಯ ಭಾಷೆಗಳಿಗೆ ಭಾಷಾಂತರಕ್ಕಾಗಿಯೂ ಮತ್ತು ರಚನಾತ್ಮಕ ಕ್ಷೇತ್ರಗಳಲ್ಲಿ ಮಾಡಲಾದ ಅತ್ಯುತ್ತಮ ಕಾರ್ಯ (ಕಲೆ, ಶಿಲ್ಪ, ವಾಸ್ತುಶಿಲ್ಪ, ಇತ್ಯಾದಿ) ಕ್ಕಾಗಿಯೂ, 8,000 ರೂಪಾಯಿಗಳ ನಾಲ್ಕು ಬೇರೆ ಬೇರೆ ಪುರಸ್ಕಾರಗಳಿರುವುವು. ಅವುಗಳ ಹೊರತಾಗಿ 3000 ರೂಪಾಯಿಗಳ ನಾಲ್ಕು ಬೇರೆ ಬೇರೆ ಪುರಸ್ಕಾರಗಳಿರುತ್ತವೆ. ಈ ನಗದು ಪುರಸ್ಕಾರಗಳ ಜೊತೆಗೆ, ಎಲ್ಲ ಎಂಟು ಮಂದಿ ವಿಜೇತರೂ ಸೋವಿಯೆತ್ ಒಕ್ಕೂಟದಲ್ಲಿ ಎರಡು ವಾರಗಳ ಪ್ರವಾಸದ ಸೌಲಭ್ಯವನ್ನೂ ಪಡೆಯುವರು. 1,500 ರೂಪಾಯಿಗಳ ಮೌಲ್ಯದ ಹತ್ತು ಅಧಿಕ ಪುರಸ್ಕಾರಗಳೂ ಇರುತ್ತವೆ.

10—13 ವರ್ಷ ವಯೋಮಿತಿಯ ಮಕ್ಕಳಿಗಾಗಿ ಈ ವರ್ಷ ಹೊಸ ಯೋಜನೆಯೊಂದನ್ನು ಜಾರಿಗೆ ತರಲಾಗಿದೆ. ಸೋವಿಯೆತ್ ಲ್ಯಾಂಡ್ ಪತ್ರಿಕೆಯಲ್ಲಿಯೂ, ಅದರ ಭಾರತೀಯ ಸಂಸ್ಕರಣಗಳಲ್ಲೂ ಪ್ರಕಟವಾಗುವ ಒಂದು ಕತೆಗೆ ಚಿತ್ರಗಳನ್ನು ರಚಿಸಬೇಕಾಗುವುದು. (ಕತೆಯ ಹೆಸರು, ಅದು ಪ್ರಕಟವಾಗುವ ಸಂಚಿಕೆ ನಂಬರುಗಳನ್ನು ಈ ಸ್ಪರ್ಧೆಯಲ್ಲಿ ಭಾಗವಹಿಸುವವರಿಗಾಗಿ ಹೊರಡಿಸಲಾಗುವ 'ಫೋಲ್ಡರ್'ನಲ್ಲಿ ನೀಡಲಾಗುವುದು.) ಚಿತ್ರಕಲಾ ಸ್ಪರ್ಧೆಯಲ್ಲಿ ಅತ್ಯುತ್ತಮ ಕೃತಿಗಳಿಗೆ ಐದು ಪುರಸ್ಕಾರಗಳನ್ನು ನೀಡಲಾಗುವುದು. ಈ ಪುರಸ್ಕಾರ ವಿಜೇತರು ಕಪ್ಪು ಕಡಲಿನ ಕ್ರಿಮಿಯಾ ತೀರದಲ್ಲಿರುವ ಜಗತ್‌ಪ್ರಸಿದ್ಧ 'ಆರ್ಟೆಕ್' ಯುವ "ಪಿಯೊನೇರ್" ಶಿಬಿರದಲ್ಲಿ ಉಚಿತವಾಗಿ ಒಂದು ತಿಂಗಳು ಸಮಯವನ್ನು ಉಪಯುಕ್ತ ಆಟಪಾಟಗಳಲ್ಲಿ ಕಳೆಯುವರು.

'ಸೋವಿಯೆತ್ ಲ್ಯಾಂಡ್' ನೆಹರೂ ಪುರಸ್ಕಾರಗಳನ್ನು ಪಂಡಿತ ಜವಾಹರಲಾಲ್ ನೆಹರೂ ಅವರ ನಿಧನದ ತರುವಾಯ 1964ರಲ್ಲಿ ಸ್ಥಾಪಿಸಲಾಯಿತು. "ಸೋವಿಯೆತ್ ಲ್ಯಾಂಡ್" ನೆಹರೂ ಪುರಸ್ಕಾರ ಸಮಿತಿಯು ಈ ಪುರಸ್ಕಾರಗಳಿಗಾಗಿ ಲೇಖಕರನ್ನೂ, ಪತ್ರಿಕೋದ್ಯಮಿಗಳನ್ನೂ ಆಯ್ಕೆ ಮಾಡುತ್ತದೆ. ಈ ಸಮಿತಿಯಲ್ಲಿ ಗಣ್ಯ ಭಾರತೀಯ, ಸೋವಿಯೆತ್ ಧೀಮಂತ ವ್ಯಕ್ತಿಗಳೂ, ಸಾಹಿತಿಗಳೂ ಇದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರು ಈ ಸಮಿತಿಯ ಆಶ್ರಯದಾತೆಯಾಗಿದ್ದಾರೆ. ಶ್ರೀ ಕೆ. ಪಿ. ಎಸ್. ಮೆನನ್ ಅವರು ಅದರ ಅಧ್ಯಕ್ಷರಾಗಿದ್ದಾರೆ.

ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:–

ದಕ್ಷಿಣ ಪ್ರಾದೇಶಿಕ ಸಲಹಾ ಮಂಡಲಿ,
ದೃಢತರ ಸೋವಿಯೆತ್ — ಭಾರತ
ಮೈತ್ರಿ ನಿಧಿ, 44 ತ್ಯಾಗರಾಯ ರಸ್ತೆ,
ಮದ್ರಾಸ್–17.

● ●

(ಮೂರನೇ ಪುಟದಿಂದ)

ಕೊಳ್ಳುವುದು ಆಗಲೂ ಸಾಧ್ಯವಿತ್ತು. ಆದರೆ, ಅದು ಹಾಗೆ ಮಾಡಲು ಮುಂದಾಗದೆ ಇರುವುದಕ್ಕೆ ಕಾರಣ ಅವು ಜನತೆಗೆ ಸಾರಿಗೆ ವ್ಯವಸ್ಥೆಯೊದಗಿಸುತ್ತವೆ ಎಂಬುದೊಂದು; ಸರಕಾರದ ಸಾರಿಗೆ ಮಂಡಳಿಯಿಂದ ಇದು ಅಸಾಧ್ಯವೆಂಬುದಿನ್ನೊಂದು. ರಾಷ್ಟ್ರಪತಿ ಆಳಿಕೆಯ ವೇಳೆ ಮೊನ್ನೆ ಮೊನ್ನೆ ಕೆಲವೊಂದು ಇಂತಹ ಬಸ್ಸುಗಳ ಯಾತ್ರೆ ಶಾಸನ ವಿರೋಧಿಯೆಂದು ತಡೆಯಲಾಯಿತು. ಕಾನೂನು–ಪರ್ಮಿಟ್ಟುಗಳ ರಾಜ್ಯದಲ್ಲಿ ಬಸ್ಸುಗಳ ಈ ಸೆರೆ ನ್ಯಾಯೋಚಿತವಾದದ್ದು.

ಕಾನೂನು—ಕಟ್ಟಲೆಗಳು ಮಾನವ ನಿರ್ಮಿತ; ಆತನಿಗಾಗಿಯೇ. ರಾಷ್ಟ್ರೀಕೃತ ಮಾರ್ಗಗಳಲ್ಲಿ ಸರಕಾರ ಖಾಸಗಿ ಬಸ್ಸುಗಳನ್ನು ಓಡಿಸಲು ಅನುಮತಿ ನೀಡುವುದಿಲ್ಲ, ಪ್ರಯಾಣಿಕರ ಆವಶ್ಯಕತೆ ನೀಗಿಸುವಷ್ಟು ಬಸ್ಸುಗಳನ್ನು ರಾಜ್ಯ ಸಾರಿಗೆ ಮಂಡಳಿ ಓಡಿಸುವುದಿಲ್ಲ. ಆಗ ಪ್ರಯಾಣಿಕರೇನು ಮಾಡಬೇಕು? ದೂರ ದೂರ ಊರುಗಳೊಡನೆ ಜನ ಸಂಪರ್ಕ ದಿನೇ ದಿನೇ ಹೆಚ್ಚಾಗುತ್ತಿರುವಾಗ, ಅವರಿಗೆ ಪ್ರಯಾಣ ಸೌಕರ್ಯವೂ ಅಗತ್ಯವಾಗಿದೆ. ಸಾರಿಗೆ ಮಂಡಳಿಯು ಬಸ್ಸುಗಳನ್ನು ಕನಿಷ್ಠ ಪ್ರಮಾಣದಲ್ಲಿ, ಕನಿಷ್ಠ ಸೌಲಭ್ಯಗಳೊಡನೆ ಓಡಿಸುತ್ತಿದೆ. ಜನತೆಗೆ ಕನಿಷ್ಠ ವೆಚ್ಚದಲ್ಲಿ ಸುವ್ಯವಸ್ಥಿತವಾದ ಸಾರಿಗೆ ವ್ಯವಸ್ಥೆ ಕಲ್ಪಿಸುವುದು ರಾಷ್ಟ್ರೀಕರಣದ ನೀತಿಯಾದರೂ ಇದೆಂದೋ ತಿಪ್ಪೆಗೆ ಸೇರಿದೆ. ಖಾಸಗಿ ಬಸ್ಸುಗಳ ಒಡೆಯರು ಸ್ಪರ್ಧಾಮನೋಭಾವದಿಂದ ಸಾರಿಗೆ ವ್ಯವಸ್ಥೆ ಮಾಡುತ್ತಿದ್ದಾರೆಂಬುದೂ ಇದರಿಂದ ಅವರು ತುಂಬ ಲಾಭಗಳಿಸುತ್ತಿದ್ದಾರೆಂದೂ ಅನುಭವವೇದ್ಯ. ಮಂಗಳೂರು ಕಡೆಯಿಂದ ಬೊಂಬಾಯಿ ನಗರಕ್ಕೆ ಹೋಗುವ ಟೂರಿಸ್ಟು ಬಸ್ಸುಗಳಲ್ಲಿಯೂ ಒಂದು ಒಂದೂವರೆ ತಿಂಗಳು ಮೊದಲೇ ಸೀಟು ಬುಕ್ ಮಾಡಬೇಕಾಗಿದೆಯೆಂದು ಹೇಳಲಾಗುತ್ತಿದೆ. ಬೊಂಬಾಯಿಗೆ ಹೋಗುವವರ ಸಂಖ್ಯೆಯನ್ನು ಇದರಿಂದ ಅನುಮಾನಿಸಬಹುದು. ಇವರೆಲ್ಲರೂ ವಿಹಾರಾರ್ಥವಾಗಿಯೇ ಬೊಂಬಾಯಿಗೆ ಹೋಗುತ್ತಾರೆಂದು ನಂಬುವುದು ಮೂರ್ಖತನವಾಗುವುದು. ಸರಕಾರಕ್ಕೆ ಇದೆಲ್ಲ ತಿಳಿಯದ ಸಂಗತಿಯಲ್ಲ ಆದರೆ 'ತನಗೆ ಮಾಡಲು ಶಕ್ತಿಯಿಲ್ಲವಾದರೂ ಇತರರಿಗೆ ಮಾಡಗೊಡ'ದ ಅದರ ನೀತಿ ಜನತೆಯನ್ನು ವಿವಂಚನೆಗೆ ಗುರಿಮಾಡುತ್ತದೆ; ತೊಂದರೆಗೊಳಪಡಿಸುತ್ತದೆ. ರಾಷ್ಟ್ರೀಕರಣದ ನೀತಿಯನ್ನು ಇನ್ನೂ ಇನ್ನೂ ವಿಸ್ತರಿಸುವ ಹುಚ್ಚು ಹವ್ಯಾಸವನ್ನದು ಬಿಟ್ಟು ಬಿಡಬೇಕು. ರಾಷ್ಟ್ರೀಕೃತ ಮಾರ್ಗಗಳಲ್ಲಿಯೂ ದೂರ ದೂರದ ಊರುಗಳಿಗೆ ಪ್ರಯಾಣಿಕರ ಬಸ್ಸುಗಳನ್ನು ಓಡಿಸಲು ಖಾಸಗಿ ಬಸ್ಸು ಮಾಲಿಕರಿಗೆ ಉದಾರವಾಗಿ ಪರವಾನಿಗೆ ಕೊಡಬೇಕು. ಇಲ್ಲವೇ ಸಾರಿಗೆ ಮಂಡಳಿಯು ತಾನೇ ಬೇಕಷ್ಟು ಬಸ್ಸುಗಳನ್ನು ಓಡಿಸಬೇಕು. ಇವೆರಡರಲ್ಲಿ ಒಂದನ್ನು ಮಾಡದಿದ್ದರೆ, ನಮ್ಮದು ಸುಖೀರಾಜ್ಯವಲ್ಲ, ಸುಖವಿಲ್ಲದ ರಾಜ್ಯವಾಗುತ್ತದೆ

● ●

ಎಂ. ಜಿ. ಎಂ. ಕಾಲೇಜ್ ಗ್ರಂಥ ಭಂಡಾರದ ರೆಫರೆನ್ಸ್ ವಿಭಾಗದ ಉದ್ಘಾಟನೆ

ಉಡುಪಿ ಎಂ. ಜಿ. ಎಂ. ಕಾಲೇಜಿನ ಗ್ರಂಥ ಭಂಡಾರದ ರೆಫರೆನ್ಸ್ ವಿಭಾಗದ ಉದ್ಘಾಟನೆಯನ್ನು ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ಪ್ರೊ। ಎಚ್. ಸುಂದರರಾಯರು ತಾ. ೧೫–೬–೭೧ರಂದು ನೆರವೇರಿಸಿದರು. ಅವರು, ವಿದ್ಯಾರ್ಥಿಗಳು ಗ್ರಂಥ ಭಂಡಾರಗಳಲ್ಲಿ ಒದಗಿಸಲಾಗುವ ಸೌಲಭ್ಯದ ಉಪಯೋಗ ಪಡೆದು ತಮ್ಮ ಜ್ಞಾನ ಭಂಡಾರ ತುಂಬಿಕೊಳ್ಳಬೇಕೆಂದರು. ಆರಂಭದಲ್ಲಿ ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿದರು. ಗ್ರಂಥಾಗಾರ ಅಧಿಕಾರಿ ಶ್ರೀ ರತ್ನಾಕರ ಪೈಯವರು ವರದಿ ಅರ್ಪಿಸಿ ಭಂಡಾರದಲ್ಲಿ ೩೬,೦೦೦ ಗ್ರಂಥಗಳಿವೆಯೆಂದರು. ಅಂತ್ಯದಲ್ಲಿ ಶ್ರೀ ರಾಮ ಭಟ್ಟರು ಧನ್ಯವಾದ ಅರ್ಪಿಸಿದರು.

ಪುತ್ತೂರು IIIrd Adle. ಮುನ್ಸಿಫ್ ಕೋರ್ಟಿನಲ್ಲಿ

R. R. C. 302/70

ಪುಟ್ಟ ಗೌಡ — ಅರ್ಜಿದಾರ
ಕರಿಯ ಪೂಜಾರಿ ಕೂಡಾ — ಎದ್ರಿರು

6ನೇ ಎದ್ರಿ:–ಶೇಷಪ್ಪ ಪೂಜಾರಿ, ಕರಿಯ ಪೂಜಾರಿ ಮಗ, ಅಲಂಕಾರು ಗ್ರಾಮ.

ಸದ್ರಿ 3ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ–

65–66ನೇ ವರ್ಷದ ಗೇಣಿ ಬಾಕಿಗೆ ಅರ್ಜಿದಾರನು ನಿಮ್ಮ ಮೇಲೆ ಕೂಡಾ ಮಾಡಿದ ಈ ಅರ್ಜಿಯನ್ನು ತಾ. 26.7 71ಕ್ಕೆ ನಿಮ್ಮ ನೋಟೀಸಿಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಪ್ಪಾಯಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M. Rammohan Rao
Advocate for petitioner

ತಾ. 17—6—71.

ಪುತ್ತೂರು IInd Adle. ಮುನ್ಸಿಫ್ ಕೋರ್ಟಿನಲ್ಲಿ

Ex. C. 401/69 (O. S. 99/65)

B. ಅನಂತ್ರಾಜ ಶೆಟ್ಟಿ—ಅರ್ಜಿದಾರ
ಕಮಲಾವತಿ ಕೂಡಾ—ಎದ್ರಿರು

2ನೇ ಎದ್ರಿ:– ರತ್ನರಾಜ, ಶಾಂತಿರಾಜ ಇಂದ್ರರ ಮಗ, ಜೈನರ ಪೇಟೆ, ವಿಟ್ಲ ಕಸಬಾ.

ಸದ್ರಿ 2ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಕೃತಗಳ ಹಕ್ಕನ್ನು ಜಪ್ತು ಪಡಿಸಿದ್ದರ ಬಾಬ್ತು ಪ್ರೋಹಿಬಿಟರಿ ಓರ್ಡರ ನೋಟೀಸಿನ ಬಗ್ಗೆ ತಾ. 14–7–71ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಪ್ಪಾಯಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao
Advocate for petitioner

Puttur, 17-6-71.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

I. A. III O. S. 159/70

ರುಕ್ಮಿಣಿ ಅಮ್ಮ —ಅರ್ಜಿದಾರ
ಗೌರಮ್ಮ ಕೂಡಾ —ಎದ್ರಿರು

3ನೆ ಎದ್ರಿ:– ಸುಬ್ಬ ರಾವ್, ಗಂಗಾಧರಯ್ಯನ ಮಗ, ಬೀರಾವು, ಕಬಕ ಗ್ರಾಮ.

ಸದ್ರಿ 3ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಈ ದಾವೆಯಲ್ಲಾದ ಪ್ರಿಲಿಮಿನರಿ ಡಿಕ್ರಿಗನುಸರಿಸಿ ದಾವಾ ಆಸ್ತಿ ಮಾರಾಟದಿಂದ ಡಿಕ್ರಿ ಹಣ ವಸೂಲು ಪಡೆಯುವ ಕುರಿತು ಫ್ಯಾನಲ್ ಡಿಕ್ರಿಗೆ ಹುಕುಂ ಆಗಬೇಕಾಗಿ ಕೊಟ್ಟ ಅರ್ಜಿಯ ನೋಟೀಸಿಗೆ ತಾ. 6.7.71ಕ್ಕೆ ಉಂಟು. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಪ್ಪಾಯಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao
Advocate for petitioner

Puttur, 17-6-71

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

I. A. II O. S. 183/70

ಉದಯಶಂಕರ —ಅರ್ಜಿದಾರ
ಗೌರಮ್ಮ ಕೂಡಾ —ಎದ್ರಿರು

3ನೇ ಎದ್ರಿ:– ಸುಬ್ಬರಾವ್, ಗಂಗಾಧರಯ್ಯನ ಮಗ, ಬೀರಾವು, ಕಬಕ ಗ್ರಾಮ.

ಸದ್ರಿ 3ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ-

ಈ ದಾವೆಯಲ್ಲಾದ ಪ್ರಿಲಿಮಿನರಿ ಡಿಕ್ರಿಗನುಸರಿಸಿ ದಾವಾ ಆಸ್ತಿ ಮಾರಾಟದಿಂದ ಡಿಕ್ರಿ ಹಣ ವಸೂಲುಪಡೆಯುವ ಕುರಿತು ಫ್ಯಾನಲ್ ಡಿಕ್ರಿಗೆ ಹುಕುಂ ಆಗಬೇಕಾಗಿ ಕೊಟ್ಟ ಅರ್ಜಿಯ ನೋಟೀಸಿಗೆ ತಾ. 6.7.71ಕ್ಕೆ ಉಂಟು. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಪ್ಪಾಯಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao
Advocate for petitioner

Puttur, 17—6—71.

ACKNOWLEDGEMENT

We hereby acknowledge with a sense of gratitude the large number of greetings we received from our numerous friends and relatives from different parts of the country and thank all those who have very kindly, been present at the time of our wedding on 31st May, 1971 in Town Hall, Mangalore.

Our inability to acknowledge the large number of greetings separately and thank those who have attended the function individually, is very much regretted.

Mr. Premnath N. Shetty
Management Specialist
(President, M/s. Tulucon
Private Limited, Mangalore.)

Mrs. Aruna P. Shetty
D/o Smt. & Sri
A. Somappa Rai,
Moodabidri.

ವಿಚಾರಾರ್ಹ ಪ್ರಶ್ನೆ

ಬಂಗ್ಲಾ ದೇಶದ ಮನ್ನಣೆಯೇಕೆ?

ನ್ಯಾಯದಲ್ಲಿ ಹಲವು ಹನ್ನೊಂದು ವಿಧ. ನ್ಯಾಯಗಳ ಪಂಕ್ತಿಯೆ ಹಲವಾರು ತರ. ಜಿಲ್ ನ್ಯಾಯ ಜಿಲ್‌ಪಟ್ ನ್ಯಾಯ. ಖಾಜಿ ನ್ಯಾಯ. ಹಿಂದೊಂದು ನ್ಯಾಯ ಮುಂದೊಂದು ನ್ಯಾಯ. ಕಾಣದಿದ್ದಾಗ ಒಂದು ನ್ಯಾಯ, ಕಂಡಾಗ ಒಂದು ನ್ಯಾಯ-ಹೀಗೆ ಆ ನ್ಯಾಯಗಳ ಹೆಸರು ಮತ್ತು ರೀತಿ ನೀತಿ ವಾಚಕರಿಗೆ ಬರವೆ ಇರುವುದರಿಂದ ಅದರ ಉಲ್ಲೇಖನ ಇಲ್ಲಿ ಬೇಡ. ಇಲ್ಲಿ ನಾವು ಉಲ್ಲೇಖಿಸುವುದು ರಾಷ್ಟ್ರ ರಾಜ್ಯದಲ್ಲಿ ಕಂಡು ಬರುವ ವಸ್ತು ಸ್ಥಿತಿ ರಹಿತವಾದ ನ್ಯಾಯಗಳನ್ನು ಅನುಸರಿಸುವ ಪರಿಯನ್ನು. ಹೆಚ್ಚಾಗಿ ಜನರು ಅನುಸರಿಸುವುದು ಎರಡು ವಿಧದ ನ್ಯಾಯವನ್ನು ಅಂದರೆ ತಮಗಾದರೆ ಒಂದು ರೀತಿಯ ಈ ನ್ಯಾಯ, ಪರರಿಗಾದರೆ ಮತ್ತೊಂದು ರೀತಿಯ ಆ ನ್ಯಾಯ. ಈ ಸ್ವಾರ್ಥ ಸ್ವಭಾವದ ತಮ್ಮ ಲಾಭದ ಪ್ರೇಮವು ಎಷ್ಟು ವಿದ್ಯಾವಂತ ತತ್ವಜ್ಞಾನಿಯಲ್ಲಾದರೂ ಬಿಡದೆ ಅಂಟಿಕೊಂಡ ಇಂದಿನ ಹೃದಯ ರೋಗವೆಂದು ಹೇಳಬಹುದು-ಹೆಚ್ಚೇಕೆ, ಈ ಹೃದಯ ಸಂಕುಚಿತತನದ ರೋಗವು ನಮ್ಮ ರಾಷ್ಟ್ರದ ವಿದ್ಯಾವಂತ ಅವಿದ್ಯಾವಂತ ಜನರಲ್ಲಷ್ಟೆ ಇದ್ದುದಲ್ಲ ಮುಂದುವರಿದ ರಾಷ್ಟ್ರದ ವಿಶ್ವಮಟ್ಟದ ಧುರೀಣರಿಂದ ನಮ್ಮ ನಿಮ್ಮ ಗ್ರಾಮಮಟ್ಟದ ಶ್ರೀಸಾಮಾನ್ಯರವರೆಗೂ ಇದೆ ಎನ್ನಬಹುದು—ನಾವು ಪ್ರಸಕ್ತವಾಗಿ ಮೇಲೆ ನಿರೂಪಿಸಿದ ಬಗೆಯ ನ್ಯಾಯವನ್ನು ಬಂಗ್ಲಾದೇಶದ ಬಗ್ಗೆ ಅನುಸರಿಸ ಬೇಕೆಂದು ಕೆಲ ಸಂಸತ್ ಸದಸ್ಯರು ಒತ್ತಾಯಿಸುವುದು ಸರಿಯೇ ಎಂದು ಮಥಿಸುವ.

ಬಂಗ್ಲಾ ದೇಶಕ್ಕೆ ಮನ್ನಣೆ ನೀಡಬೇಕೆ ಬೇಡವೇ ಎಂಬ ಪ್ರಶ್ನೆಯಲ್ಲಿ ಬಹುಮಂದಿಯರು ಮನ್ನಣೆ ನೀಡಬೇಕೆಂದು ಒತ್ತಾಯಿಸಿದರೂ ಇದನ್ನು ಮಥನಕ್ಕೆ ತೆಗೆದುಕೊಂಡು ನೋಡಿದರೆ ನಾವು ಬಂಗ್ಲಾ ದೇಶಕ್ಕೆ ಮಾನ್ಯತೆ ಕೊಡುವುದರಿಂದ ಪರದೇಶದ ವಿಷಯದಲ್ಲಿ ನಾವು ಎರಡು ಬಗೆಯ ನ್ಯಾಯವನ್ನು ಅನುಸರಿಸಿದಂತಾಗುತ್ತದೆ. ಇಂತಾದರೆ ನಮ್ಮ ವಿದೇಶಾಂಗ ನೀತಿಯ ಬೆಲೆ ಇಳಿದಂತೆ—ಅಲ್ಲದೆ ರಾಜಾಜಿಯವರು ಹೇಳಿದಂತೆ ಪಾಕಿಸ್ತಾನದ ಮೇಲ್ನೋಟದ ಈ ಯಾದವೀ ಕಲಹದಲ್ಲಿ ನಾವು ಮುಂದಾಗುವ ಪರಿಣಾಮವನ್ನು ವಿವೇಚಿಸದೆ ಕೈಹಾಕಿ ಬಂಗ್ಲಾದೇಶಕ್ಕೆ ಮನ್ನಣೆ ನೀಡುವುದರಲ್ಲಿ ಮುಂದೋಡುವುದು ತರವಲ್ಲ. ಇದರಿಂದ ಅಪರೋಕ್ಷವಾಗಿ ನಮ್ಮ ಕಾಲ ಮೇಲೆ ನಾವು ಕಲ್ಲು ಹಾಕಿಕೊಂಡ ಪರಿಣಾಮ ಆಗುತ್ತದೆ. ಇದನ್ನು ಸಾವಿರ ಪರಿಯಿಂದ ವಿವರಿಸ ಬಹುದು.

ಇಂದು ಸತ್ಯ, ಧರ್ಮ, ನ್ಯಾಯ ನೀತಿಯೆಂತೇ ಇದ್ದರೂ ವಿಶ್ವರಾಜಕೀಯಾಟದ ಪೂರ್ವ ಪಾಕ್ ಪಶ್ಚಿಮ ಪಾಕ್ ವ್ಯವಹಾರದಲ್ಲಿ ನಾವು ಕೈಹಾಕಿ ಪೂರ್ವ ಪಾಕ್ ಪ್ರತ್ಯೇಕ ರಾಷ್ಟ್ರವೆಂಬುದಕ್ಕೆ ಮನ್ನಣೆ ಕೊಡುವುದರಿಂದ ಅದರ ಅಂತರಿಕ ವ್ಯವಹಾರದಲ್ಲಿ ಕೈಹಾಕಿದರೆಂದೂ ಪಾಕಿಗೆ ಅಪಪ್ರಚಾರ ನಡೆಸಲು ದಾರಿಯಾಗುವುದು.

ಇಂಥ ಹತ್ತಾರು ಪರಿಣಾಮವಾಗುವಾಗ ಇದನ್ನೆಲ್ಲ ನಾವು ವಿವೇಚಿಸದೆ ಒಮ್ಮಿಂದೊಮ್ಮೆಲೆ ನಾವು ಪಾಕ್ ವ್ಯವಹಾರದಲ್ಲಿ ಕೈಹಾಕಿ ಮುಜೀಬುರ್ ಸರ್ಕಾರಕ್ಕೆ ಮನ್ನಣೆಯಿತ್ತರೆ ಕಂಡು ಕಾಣದ ಹತ್ತಾರು ರೀತಿಯಿಂದ ಅದರ ದುಷ್ಪರಿಣಾಮ ನಮ್ಮ ಭಾರತ ಸರ್ಕಾರದ ಮೇಲಾಗುವುದು ನಿದರ್ಶನಕ್ಕೆ ಈ ರೀತಿಯಲ್ಲಿಯಲ್ಲದಿದ್ದರೂ ಬೇರೆ ರೀತಿಯಲ್ಲಿ ಆದರೂ ನಮ್ಮಲ್ಲಿಯೇ ಇದ್ದೆ ಇದ್ದಾರಲ್ಲ ಪ್ರತ್ಯೇಕತೆಯನ್ನು ಬಯಸುವವರು? ರೀತಿ ನೀತಿ, ಆಚಾರ ವಿಚಾರ ಅಲ್ಲಿ ಇಲ್ಲಿ ಬೇರೆ ಬೇರೆಯಾಗಿ ಇದ್ದರೂ ನೈತಿಕತೆ ದೃಷ್ಟಿಯಿಂದ ಈ ಇಬ್ಬರೂ ಒಡೆದ ಬಾಳಿನ ಹಾರೈಕೆಯವರು. ಅಂತಿರುವಾಗ ಅಲ್ಲಿ ನಾವು ಪೂರ್ವ ಬಂಗಾಳಿಗಳ ಬೆನ್ನು ಹಿಡಿದುಕೊಂಡರೆ ನಮ್ಮಲ್ಲಿನ ಕೂಡಿ ಬಾಳದವರನ್ನು ನಮ್ಮ ಶತ್ರು ರಾಷ್ಟ್ರಗಳು ಪ್ರೋತ್ಸಾಹಿಸಿದರೆ ಆಶ್ಚರ್ಯವಿಲ್ಲ. ನಾವು ಮಾತಾಡುವಂತೂ ಇಲ್ಲ ಮಾಡಿದ್ದುಣ್ಣೊ ಮಹರಾಯ—ಇಂದಿರಾ ಗಾಂಧಿಯವರು ಹೇಳಿದ್ದಾರೆ—ದುಡುಕಿ ಈ ವ್ಯವಹಾರದಲ್ಲಿ ಕೈ ಹಾಕುವುದು ಬೇಡವೆಂದು- ಮನ್ನಣೆಯ ವಿಷಯದಲ್ಲಿ ವಿಶ್ವ ಬಣದ ಮಹಾರಾಷ್ಟ್ರಗಳು ಮತ್ತು ವಿಶ್ವಸಂಸ್ಥೆಯು ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಹಿಂದು ಮುಂದು ನೋಡುತ್ತಿರುವಾಗ ನಾವು ಈ ವಿಷಯದಲ್ಲಿ ಮುಂದೊತ್ತಿ ನಡೆಯುವುದು ತರವಲ್ಲ.

—ಐ. ಎಚ್. ಶಾಂತಾರಾಮ ಶೆಟ್ಟಿ,
ಬ್ರಹ್ಮಾವರ.

● ●

ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್

ಉಡುಪಿಯ ಈ ಹಿರಿಯ ಕ್ಲಬ್ಬಿನ ಸರ್ವ ಸಮಸ್ತರ ಸಭೆಯು ಇತ್ತೀಚೆಗೆ ಜರಗಿ ಶ್ರೀ ಬೇಳಂಜೆ ಸಂಜೀವ ಹೆಗ್ಡೆಯವರನ್ನು ಕ್ಲಬ್ಬಿನ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ನಿವೃತ್ತರಾಗಲಿರುವ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಸಭಾಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ ಮೋಹನದಾಸ ಬಾಳಿಗರು ವಾರ್ಷಿಕ ವರದಿಯನ್ನು ಓದಿದರು. ಸಹಾಯಕ ಕಾರ್ಯದರ್ಶಿ ಶ್ರೀ ಟಿ. ಪಿ. ಆಚಾರ್ಯರು ಒಪ್ಪಿಸಿದ ಲೆಕ್ಕಪತ್ರಗಳನ್ನು ಮಂಜೂರುಮಾಡಲಾಯಿತು. ಶ್ರೀ ಮಧ್ವರಾಜರು ವರ್ಷಾವಧಿಯಲ್ಲಿ ಸದಸ್ಯರು ಕ್ಲಬ್ಬಿನ ಏಳಿಗೆಗಾಗಿ ತನಗಿತ್ತ ಸಹಕಾರವನ್ನು ಸ್ಮರಿಸಿದರು. ಇತರ ಪದಾಧಿಕಾರಿಗಳು ಪುನರಾಯ್ಕೆಯಾದರು.

ಧರ್ಮಸ್ಥಳ ಚಂದ್ರನಾಥ ರೈಸ್ ಮಿಲ್ ಉದ್ಘಾಟನೆ

ಧರ್ಮಸ್ಥಳದಲ್ಲಿ ಶ್ರೀ ಧರ್ಮಸ್ಥಳ ಚಂದ್ರನಾಥ ರೈಸ್ ಮಿಲ್ ಇತ್ತೀಚೆಗೆ ಶ್ರೀಮತಿ ಶೋಭಾ ಬಲ್ಲಾಳರ ಅಧ್ಯಕ್ಷತೆಯಲ್ಲಿ ಎಡ್ವಕೇಟ್ ಶ್ರೀ ರಾಜೇಂದ್ರ ಶೆಟ್ಟರಿಂದ ಉದ್ಘಾಟಿಸಲ್ಪಟ್ಟಿತು.

ಶ್ರೀ ಡಿ. ಸುರೇಂದ್ರ ಕುಮಾರರು ಸ್ವಾಗತಿಸಿದರು. ಶ್ರೀ ನಿರ್ಮಲ ಕುಮಾರರು ಸಂದೇಶಗಳನ್ನೋದಿದರು. ಶ್ರೀ ಭಾಸ್ಕರಂ ಶೇಷಾಚಾರ್ಯರು ಶುಭ ಹಾರೈಸಿದರು. ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರೂ, ಅವರ ಮಾತೃಶ್ರೀಯವರೂ ಹರಸಿದರು.

ಶ್ರೀಗಳಾದ ಕೆ. ಸೂರ್ಯನಾರಾಯಣ ರಾವ್ ಮತ್ತು ಎಂ. ಕೃಷ್ಣಸ್ವಾಮಿ ಶುಭ ಹಾರೈಸಿದರು. ಶ್ರೀ ಡಿ. ಈಶ್ವರಯ್ಯ ಧನ್ಯವಾದ ಅರ್ಪಿಸಿದರು.

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ
ಮನೆ-ಮದ್ದು
ಬೆಲೆ: ರೂ. 2-00

ಪ್ರತಿಯೊರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ
ಗೀತೆಯ ಕೈಗನ್ನಡಿ
ಪಾಕೆಟ್ ಎಡಿಶನ್ ಬೆಲೆ ರೂ. 1-50

ಸುಲಭದಲ್ಲಿ ಇಂಗ್ಲಿಷ್
ಇಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy
ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.



ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—
ಮಿತ ಸಂತತಿ
ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ

NAVAYUGA 24-6-1971

Registered with the Registrar
of News Papers for India
under No R. N. 3546/'57

REGD. No. B. G. 176
LICENCE No. 33
Licensed to Post without Prepayment

ಸಿಹಿಮೂತ್ರಕ್ಕೆ ಹೆದರಬೇಕಾಗಿಲ್ಲ

ಲೇ :— ಶ್ರೀ ಬಿ. ವಿ. ನಾಯಕ್

ಇಂದು ಹೆಚ್ಚಿನ ಜನರು ಸಿಹಿಮೂತ್ರ ರೋಗಕ್ಕೆ ಬಲಿಯಾಗುತ್ತಿದ್ದಾರೆ. ಇದು ಸಾಮಾನ್ಯ ರೋಗವಾದರೂ ಸೂಕ್ತ ಚಿಕಿತ್ಸೆ ಅಗತ್ಯ. ಈ ರೋಗದಿಂದ ರೋಗಿಯ ಮೇಲೆ ಆಗುವ ಪರಿಣಾಮ ಆತ ಅನುಸರಿಸುವ ಚಿಕಿತ್ಸಾ ಕ್ರಮವನ್ನು ಹೊಂದಿಕೊಂಡಿದೆ.

ಸಿಹಿಮೂತ್ರ ಇದು ಅತ್ಯಂತ ಹಳೆಯ ರೋಗಗಳಲ್ಲಿ ಒಂದಾಗಿದೆ. ಈ ರೋಗಕ್ಕೆ ವೃತ್ತಿಯ ಮತ್ತು ವಯಸ್ಸಿನ ನಿರ್ಬಂಧವಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಗಂಡಸರಿಗಿಂತ ಹೆಚ್ಚಾಗಿ ಹೆಂಗಸರೂ, ಭಾರತದಲ್ಲಿ ಹೆಂಗಸರಿಗಿಂತ ಗಂಡಸರೂ ಈ ರೋಗಕ್ಕೆ ತುತ್ತಾಗುತ್ತಿದ್ದಾರೆ. ಸಾಮಾನ್ಯವಾಗಿ ಈ ರೋಗವು 40ರಿಂದ 50 ವಯಸ್ಸಿನವರಲ್ಲಿ ಹೆಚ್ಚು. ತರುಣ ತರುಣಿಯರಲ್ಲೂ ಈ ರೋಗವನ್ನು ಅಪರೂಪವಾಗಿ ಕಾಣಬಹುದು. ಭಾರತದಲ್ಲಿ ಪ್ರತಿ ನೂರು ಜನರಲ್ಲಿ ಕನಿಷ್ಟ ಇಬ್ಬರಿಗಾದರೂ ಸಿಹಿಮೂತ್ರರೋಗವಿದೆ ಎಂಬುದಾಗಿ ಅಂದಾಜು ಮಾಡಲಾಗಿದೆ. ಮಿತಿಮೀರಿದ ಆಹಾರ ಸೇವನೆಯೇ ಈ ರೋಗಕ್ಕೆ ಮೂಲಕಾರಣವೆಂದು ಕಂಡುಕೊಂಡಿದ್ದಾರೆ.

ನಾವು ಸೇವಿಸಿದ ಆಹಾರದಲ್ಲಿನ ಕಾರ್ಬೋಹೈಡ್ರೇಟುಗಳು ಸಕ್ಕರೆಯಾಗಿ ಪರಿವರ್ತನೆಗೊಂಡು ರಕ್ತದಲ್ಲಿ ಸೇರುವುದು. ರಕ್ತದಲ್ಲಿನ ಸಕ್ಕರೆಯು ದಹನವಾಗಿ ದೇಹಕ್ಕೆ ಶಾಖ ಮತ್ತು ಶಕ್ತಿಯನ್ನು ಒದಗಿಸುತ್ತದೆ. ಸಕ್ಕರೆಯು ದಹನವಾಗಬೇಕಾದರೆ ಇನ್ಸುಲಿನ್ ಎಂಬ ದ್ರವವು ರಕ್ತಕ್ಕೆ ಸೇರಬೇಕು. ಜಠರದ ಹಿಂಬದಿಯಲ್ಲಿರುವ ಲ್ಯಾಂಗಲ್ ಹ್ಯಾನನ ಗ್ರಂಥಿಗಳಿಂದ ಸ್ರವಿಸಲ್ಪಡುವ ಈ ದ್ರವವು ಸಾಕಷ್ಟು ಪ್ರಮಾಣದಲ್ಲಿ ಉತ್ಪನ್ನವಾಗದೇ ಹೋದರೆ ರಕ್ತದ ಸಕ್ಕರೆಯು ಸಂಪೂರ್ಣ ದಹನವಾಗದೇ ಉಳಿದ ಅಂಶ ಮೂತ್ರಪಿಂಡಗಳ ಮೂಲಕ ಮೂತ್ರದಲ್ಲಿ ಹೊರ ಹೋಗುತ್ತದೆ. ಇದೇ ಡಯಾಬಿಟಿಸ್ ಅಥವಾ ಸಿಹಿಮೂತ್ರ ರೋಗ. ಈ ರೋಗವನ್ನು ಕೆಲವು ಚಿಹ್ನೆಗಳಿಂದ ಗುರುತಿಸಬಹುದು

1] ದೇಹದ ಬಲ ಮತ್ತು ತೂಕ ಕಡಿಮೆಯಾಗುವುದು.

2] ಹೆಚ್ಚು ಮೂತ್ರ ವಿಸರ್ಜನೆ,ಹೆಚ್ಚು ಹಸಿವು ಬಾಯಾರಿಕೆಯಾಗುವುದು.

3] ಬೇಗ ಗುಣವಾಗದ ಗಾಯಗಳು.

4) ಚರ್ಮದ ಮೇಲೆ ಕುರುಗಳು, ಮೊಡವೆಗಳು, ಜೋಮುಹಿಡಿಯುವುದು, ತಲೆ ತಿರುಗುವುದು.

5) ಮಲಬದ್ಧತೆ ಮತ್ತು ನಿದ್ರೆ ಬಾರದಿರುವಿಕೆ—ಇವೇ ಮುಖ್ಯವಾದವುಗಳು.

ರೋಗದ ಇರುವಿಕೆಯು ಬಹು ಸಮಯದವರೆಗೆ ತಿಳಿದು ಬರುವುದಿಲ್ಲ. ಆದಕಾರಣ ಆಗಾಗ್ಗೆ ಮೂತ್ರ ಪರೀಕ್ಷೆ ಮಾಡಿಸಿಕೊಳ್ಳುವುದು ಒಳಿತು. ಮೂತ್ರ ಪರೀಕ್ಷೆಗಾಗಿ 'ಕ್ಲಿನಿಟೆಸ್ಟ್' ವಿಧಾನವನ್ನು ಅನುಸರಿಸ ಬಹುದು. ಒಂದು ಚಿಕ್ಕ ಪ್ರಣಾಳದಲ್ಲಿ ಐದು ಹನಿ ಮೂತ್ರವನ್ನು ತೆಗೆದುಕೊಂಡು ಹತ್ತು ಹನಿ ನೀರನ್ನು ಬೆರೆಸಿ ಒಂದು "ಕ್ಲಿನಿಟೆಸ್ಟ್" ಮಾತ್ರೆಯನ್ನು ಹಾಕಬೇಕು. ಆಗ ಮೂತ್ರದಲ್ಲಿ ಬದಲಾವಣೆಯಾಗುವುದನ್ನು ಗಮನಿಸ ಬಹುದು. ಅದು ನೀಲ ಅಥವಾ ಸ್ವಲ್ಪ ಹಸುರು ಬಣ್ಣಕ್ಕೆ ತಿರುಗಿದರೆ ಮೂತ್ರದಲ್ಲಿ ಸಕ್ಕರೆ ಇಲ್ಲವೆಂದು ನಿರ್ಧರಿಸಬಹುದು.

ಬದಲಾವಣೆ ಮತ್ತು ಸಕ್ಕರೆಯ ಪ್ರಮಾಣವನ್ನು ತಿಳಿಸುವ ಪಟ್ಟಿ:-

೧) ಹಳದಿ ಹಸಿರು ಬಣ್ಣಕ್ಕೆ ತಿರುಗಿದರೆ 0.3%ಕ್ಕಿಂತಲೂ ಕಡಿಮೆ ಸಕ್ಕರೆಯಿರುತ್ತದೆ.

೨) ಹಸಿರು ಹಳದಿ ಬಣ್ಣಕ್ಕೆ ತಿರುಗಿದರೆ 0.5%ರಿಂದ 1%ರಷ್ಟು ಸಕ್ಕರೆಯಿರುತ್ತದೆ.

೩) ಹಳದಿ ಬಣ್ಣ 1%ರಿಂದ 2%ರಷ್ಟು

೪) ಕಿತ್ತಳೆ ಅಥವಾ ಕೆಂಪು ಬಣ್ಣ 2%ಕ್ಕಿಂತ ಹೆಚ್ಚು ಸಕ್ಕರೆಯಿರುತ್ತದೆ.

ಡಯಾಬಿಟಿಸ್ ಅಥವಾ ಸಿಹಿಮೂತ್ರ ರೋಗಿಗಳ ಆಹಾರವನ್ನು ಆಯ್ಕೆ ಮಾಡುವಾಗ ಮೂರು ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅವಶ್ಯ.

೧) ರಕ್ತದಲ್ಲಿ ಸಕ್ಕರೆಯು ಯೋಗ್ಯ ಪ್ರಮಾಣದಲ್ಲಿರಬೇಕು.

೨) ಮೂತ್ರವು ಸಕ್ಕರೆ ರಹಿತವಾಗಿರಬೇಕು.

೩) ಸರಿಯಾದ ದೇಹ ತೂಕವನ್ನು ಪಡೆದಿರಬೇಕು.

ನಮ್ಮ ದೇಹ ತೂಕದ ಒಂದು ಕಿ.ಗ್ರಾಂಗೆ 25 ಕ್ಯಾಲೊರಿಗಳನ್ನು (ಕ್ಯಾಲೊರಿ ಇದು ಶಾಖದ ಮಾನ) ಒದಗಿಸುವ ಆಹಾರ ಅಗತ್ಯವಿರುತ್ತದೆ. ಒಟ್ಟು ಆಹಾರದ ಶೇಕಡಾ 40 ಭಾಗ ಕಾರ್ಬೋಹೈಡ್ರೇಟ್ ಮತ್ತು ದೇಹ ತೂಕದ ಒಂದು ಪೌಂಡಿಗೆ 0.5ಗ್ರಾಂ ಪ್ರೋಟೀನ್ ಅಗತ್ಯವಿದೆ. ಉಳಿದ ಭಾಗವನ್ನು ಕೊಬ್ಬುಗಳಿಂದ ಭರ್ತಿಮಾಡಬೇಕು ಸಿಹಿಮೂತ್ರ ರೋಗಿಗಳು ಪ್ರಾಣಿಮೂಲ ಕೊಬ್ಬುಗಳನ್ನು ಸೇವಿಸುವುದು ಉತ್ತಮ. ಸಾಮಾನ್ಯವಾಗಿ 150 ಗ್ರಾಂ ಕಾರ್ಬೋಹೈಡ್ರೇಟ್, 60 ಗ್ರಾಂ ಪ್ರೋಟೀನ್, 75 ಗ್ರಾಂ ಕೊಬ್ಬು ದೇಹಕ್ಕೆ ಅಗತ್ಯವಿದೆ.

ಕ್ಯಾರೆಟ್, ಸೊಪ್ಪು, ಮೂಲಂಗಿ, ಟೊಮೆಟೊ, ಬದನೆ, ಕುಂಬಳಕಾಯಿ, ಬೆಂಡೆ ಮೊದಲಾದುವುಗಳನ್ನು ಸೇವಿಸಬಹುದು. [ಶೇಕಡಾ 6ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಾರ್ಬೋಹೈಡ್ರೇಟ್ ಇರುವ ತರಕಾರಿಗಳು]ಕಾರ್ಬೋಹೈಡ್ರೇಟಿನ ಪ್ರಮಾಣ ಹೆಚ್ಚಾಗಿರುವ ವಸ್ತುಗಳಾದ ಸಕ್ಕರೆ, ಬೆಲ್ಲ, ಶರಬತ್ತು, ಕಲ್ಲುಸಕ್ಕರೆ, ಇವುಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಸಿಹಿಯನ್ನು ಅಪೇಕ್ಷಿಸುವವರು ಸ್ವಲ್ಪ ಪ್ರಮಾಣದಲ್ಲಿ ಸ್ಯಾಕರಿನ್ ಉಪಯೋಗಿಸಬಹುದು.

ಡಯಾಬಿಟಿಸ್ ರೋಗಿಗಳು ಅತ್ಯಂತ ಎಚ್ಚರಿಕೆಯಿಂದಿರಬೇಕು. ಯಾವಾಗಲೂ ಪಾದರಕ್ಷೆಗಳನ್ನು ಉಪಯೋಗಿಸಲೇಬೇಕು. ಉಗುರುಗಳನ್ನು ತೆಗೆಯುವಾಗ ಗಾಯಗಳಾಗದಂತೆ ಎಚ್ಚರವಹಿಸಬೇಕು. ಏಕೆಂದರೆ ಅವರಿಗೆ ಸಾಕಷ್ಟು ನಿರೋಧಕ ಶಕ್ತಿಯಿರುವುದಿಲ್ಲ. ರಕ್ತ ಪರೀಕ್ಷೆಯಿಂದಾಗಲೀ, ಮೂತ್ರಪರೀಕ್ಷೆಯಿಂದಾಗಲಿ ಇನ್ಸುಲಿನ ಪ್ರಮಾಣವನ್ನು ನಿರ್ಧರಿಸಿಕೊಂಡು ಇಂಜೆಕ್ಷನ್ ತೆಗೆದುಕೊಳ್ಳಬೇಕು.

ಡಯಾಬಿಟಿಸ್ ರೋಗಿಗಳು ಮೂರ್ಛೆ ಹೋಗುವ ಸಂದರ್ಭಗಳುಂಟು. ಇಂತಹ ಯಾವುದೇ ತೊಡಕಿನ ಸಂದರ್ಭಗಳಲ್ಲಿ ನಿರ್ಲಕ್ಷ್ಯ ಮಾಡದೆ, ಅಯೋಗ್ಯ ಜನರ ಸಲಹೆಗಳನ್ನು ಕೇಳದೆ, ಸೂಕ್ತ ವೈದ್ಯರ ಸಲಹೆ ಪಡೆದು ಎಚ್ಚರಿಕೆ ವಹಿಸಿದರೆ ಪರರಂತೆ ಜೀವನದ ಎಲ್ಲ ರಂಗಗಳಲ್ಲಿ ಸುಖಜೀವನ ಸಾಧ್ಯ.

ರಾಜ್ಯಕೀಯದ ಹೊಸ ಫ್ಯಾಶನ್

(ಒಂದನೇ ಪುಟದಿಂದ)

ಮಾಡಬೇಕಾಗಿ ಬಂದಿದೆ.

ಸಂವಿಧಾನ ರಾಷ್ಟ್ರದ ಚೆಂಗೋಲು. ಇದಿಲ್ಲದೆ ಹೋದರೆ, ಆಡಳಿತೆ ಬಿರುಗಾಳಿಯಿದ್ದ ಸಮುದ್ರದಲ್ಲಿ ನವೆಯುವ ದೋಣಿಯಂತಾದೀತು.

ಆದರೆ, ಇತ್ತೀಚೆಗೆ ಅಭಿಪ್ರಾಯ ಬದಲಾಗುತ್ತಿದೆ. ಸಂವಿಧಾನದ ಕಟ್ಟುಪಾಡುಗಳು ಪ್ರಗತಿಗೆ, ಸಮಾಜವಾದಕ್ಕೆ ಅಡ್ಡಿ ಆತಂಕವೊಡ್ಡುತ್ತವೆಯೆಂದು ಹೇಳಲಾಗುತ್ತದೆ. ಇದಕ್ಕೆ ಅನಪೇಕ್ಷಣೀಯ ಪ್ರಚಾರವನ್ನೂ ನೀಡಲಾಗುತ್ತದೆ.

ದೇಶದ ಆಡಳಿತೆಗೊಂದು ಚುಕ್ಕಾಣಿ ಬೇಡವೆ? ದಿಕ್‌ಸೂಚಿ ತೋರಿಸುವದೇನೋ ಉತ್ತರ ದಿಕ್ಕನ್ನು. ಚುಕ್ಕಾಣಿಯ ಸಹಾಯದಿಂದಲೇ ಗುರಿ ಸೇರ ಬೇಕು; ಚುಕ್ಕಾಣಿಯೇ ಸರಿಯಿಲ್ಲವೆಂದು ದೂರುವುದು ತಮಗಿಂತ ಬಲ್ಲಿದನಿಲ್ಲವೆಂಬ ಮಿಥ್ಯಾಭಿಮಾನ ಮಾತ್ರವಾಗದೆ?

ಡ್ರೈವಿಂಗ್ ಬಾರದವನ ಕೈಯಲ್ಲಿ ಸ್ಟೀರಿಂಗು ಇದ್ದರೇನು? ಗಾಡಿ ಚಲಿಸ ಬಲ್ಲುದೆ? ಪರಸ್ಪರ ದ್ವೇಷಾಸೂಯೆ ಸಾಧಿಸ ಹೊರಟ ರಾಜ್ಯಕೀಯ ನಾಯಕರು ದೇಶವನ್ನು ಸಮಾಜವಾದದತ್ತ ಕೊಂಡೊಯ್ಯಬಾಪರೆ?

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant. Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

Edited, Printed & Published by K. H. Shetty at the Navayuga Press, Udipi. S. India.